
ಕನ್ನಡ ಜಾನಪದ ನಿಘಂಟು

ಪದಸಂಸ್ಕೃತಿ ಕೋಶ

ಸಂಪುಟ ಮೂರು

ಪ್ರಧಾನ ಸಂಪಾದಕ : ಪ್ರೊ. ಡಿ. ಬಿ. ನಾಯಕ

ಸಂಪಾದಕ : ಡಾ. ರಾಮೇಗೌಡ (ರಾಗೌ)



ಆರ್ಥಿಕ ನೆರವು

ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಬೆಂಗಳೂರು

ಕನ್ನಡ ಜಾನಪದ ನಿಘಂಟು

ಪದಸಂಸ್ಕೃತಿ ಕೋಶ

ಆರ್ಥಿಕ ನೆರವು

ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಬೆಂಗಳೂರು

ಕನ್ನಡ ಜಾನಪದ ನಿಘಂಟು

ಪದಸಂಸ್ಕೃತಿ ಕೋಶ

ಸಂಪುಟ ಮೂರು

(ಕು – ಖೌ)

ಪ್ರಧಾನ ಸಂಪಾದಕ

ಪ್ರೊ. ಡಿ. ಬಿ. ನಾಯಕ

ಸಂಪಾದಕ

ಡಾ. ರಾಮೇಗೌಡ (ರಾಗೌ)

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ ೫೮೧ ೧೯೭

KANNADA JĀNAPADA NIGHANTU, VOL. THREE (KU-KHAU)
Pada Samskritikōśa : *Dictionary of Kannada Folklore*

Chief Editor
Prof. D. B. Naik
Vice Chancellor
Karnataka Janapada Vishwavidyalaya
Gotagodi - 581 197

Editor
Prof. Ramegowda (Rāgow)
Retd. Professor of Kannada
Kuvempu Institute of Kannada Studies
University of Mysore; 144, Kalidasa Road
Jayalakshmipuram, Mysore - 570 012

Published by
Prof. D. B. Naik
Director
Center for Extension and Consultancy
Karnataka Janapada Vishwavidyalaya
Gotagodi 581197, Shiggavi Taluk, Haveri District, Karnataka
www.janapadauni.in
Ph: 0836-2255180

Pages : xcii + 784 + 16
First Impression : 2017
Price : 1,000/-
ISBN : 978-93-83149-78-0

ಪುಟಗಳು : xcii + ೭೮೪ + ೧೬
ಬೆಲೆ : ೧,೦೦೦/-

ಪುಸ್ತಕ ದೊರೆಯುವ ಸ್ಥಳ:
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ ೫೮೧೧೯೭
ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ, ಕರ್ನಾಟಕ

ಅಕ್ಷರ ಜೋಡಣೆ ಮತ್ತು ಪುಟವಿನ್ಯಾಸ:
ಶ್ರೀಮತಿ ಡಿ. ಪಿ. ಶಿಲ್ಪ

ಮುದ್ರಣ:
ರಾಜಾ ಪ್ರಿಂಟರ್ಸ್, ಬೆಂಗಳೂರು
ದೂ. ೦೮೦-೨೨೨೩೪೦೬೬, ೯೪೪೮೪೭೪೦೬೬



ಸಿದ್ದರಾಮಯ್ಯ
ಮುಖ್ಯಮಂತ್ರಿ

ವಿಧಾನ ಸೌಧ
ಬೆಂಗಳೂರು – 560 001

ಸಂದೇಶ

ಪದಸಂಸ್ಕೃತಿ ಪ್ರಧಾನವಾದ ಕನ್ನಡ ಜಾನಪದ ನಿಘಂಟು ಯೋಜನೆಯ ಮೂಲಕ ಮೂರನೆಯ ಸಂಪುಟವನ್ನು ಸಿದ್ಧಪಡಿಸಿ, ಪ್ರಕಟಿಸುತ್ತಿರುವ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕಾರ್ಯ ಅಭಿನಂದನೀಯ ಹಾಗೂ ಅನುಕರಣಯೋಗ್ಯ.

ಈ ನಿಘಂಟು ಕೃತಿ ಸಂಪುಟವು ಕೇವಲ ಶಬ್ದಕ್ಕೆ ಅರ್ಥ ತಿಳಿಸುವ ಕೋಶವಾಗಿರದೆ ಶಬ್ದ ಅಥವಾ ಶಬ್ದಾರ್ಥದ ಮೂಲಕ ಒಂದು ಸಂಸ್ಕೃತಿ ಪರಂಪರೆಯನ್ನು ಕಟ್ಟಿಕೊಡುವ ವಿಶಿಷ್ಟ ಪದಸಂಸ್ಕೃತಿ ಕೋಶವಾಗಿದೆ. ಮುಖ್ಯವಾಗಿ ಈ ನಿಘಂಟು ಜನಪದ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಹಾಗೂ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಮುದಾಯಗಳಲ್ಲಿ ಬಳಕೆಯಲ್ಲಿರುವ ದೇಶೀ ಪದಗಳ ಅರ್ಥ, ಸಂದರ್ಭ, ಕಾರ್ಯಾವಲೋಕನದ ಚರ್ಚೆಯನ್ನು ಪ್ರಸ್ತುತಪಡಿಸುತ್ತದೆ. ಅಂತೆಯೇ, ಈ ನಿಘಂಟು ಪಾರಂಪರಿಕ ವೃತ್ತಿ, ಕರಕುಶಲಕಲೆ, ಆಚರಣೆ, ಐತಿಹ್ಯ ಇತ್ಯಾದಿ ಜನಪದರ ಬದುಕಿಗೆ ಸಂಬಂಧಿಸಿದ ಮೂಲ ಸಂಸ್ಕೃತಿಯನ್ನು ದಾಖಲಿಸುವಂತಹುದ್ದಾಗಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಭಾಷಾ ಸಂಪತ್ತಿನ ಇತಿಹಾಸಕ್ಕೆ ಇದು ಮತ್ತೊಂದು ದಾಖಲೆಯಾಗಿದೆ.

ಕನ್ನಡ ಭಾಷೆಯ ಮೇಲೆ ಅನ್ಯ ಭಾಷೆಗಳ ಪ್ರಭಾವ ಹಾಗೂ ಇಂಗ್ಲಿಷ್ ವ್ಯಾಮೋಹದಿಂದಾಗಿ ಕನ್ನಡ ಭಾಷೆಯು ನಲುಗುತ್ತಿರುವ ಈ ಸಂದರ್ಭದಲ್ಲಿ ಕನ್ನಡಿಗರು ಮತ್ತು ಕನ್ನಡ ಭಾಷೆಯ ಉನ್ನತಿಗಾಗಿ ನಾವೆಲ್ಲರೂ ಒಮ್ಮನಸ್ಸಿನಿಂದ ದುಡಿಯಬೇಕಾಗಿದೆ. ಕೇವಲ ಕೃತಿಗಳ ಮೂಲಕ ದಾಖಲಿಸುವುದಲ್ಲದೆ, ಕನ್ನಡ ಭಾಷೆಯನ್ನು ಹೆಚ್ಚು ಆಧುನಿಕ ತಂತ್ರಜ್ಞಾನದ ಮೂಲಕ ದಾಖಲಿಸಿ, ಮುಂದಿನ ಪೀಳಿಗೆಗಳಿಗೂ ಕನ್ನಡ ಪರಂಪರೆಯನ್ನು ಕೊಂಡೊಯ್ಯುವಂತೆ ಮಾಡುವ ಜವಾಬ್ದಾರಿ ಸಮಸ್ತ ಕನ್ನಡಿಗರ ಮೇಲಿದೆ.

ಭಾಷೆ ಮನುಷ್ಯನ ಅಭಿವ್ಯಕ್ತಿ ಮಾಧ್ಯಮ, ಅಭಿವ್ಯಕ್ತಿಯ ಎಲ್ಲಾ ಆಯಾಮಗಳನ್ನು ಒಳಗೊಳ್ಳುವ ಮತ್ತು ಅದನ್ನು ವಿಸ್ತರಿಸುವ ಬಹುದೊಡ್ಡ ಶಕ್ತಿ ಭಾಷೆಗೆ ಇದೆ. ಕಾಲಕ್ರಮಕ್ಕೆ ಅನುಗುಣವಾಗಿ ಭಾಷೆ ಉಳಿಯುವುದು ಆ ಭಾಷೆಯ ಬಳಕೆ ಮತ್ತು ಬರಹಗಳಿಂದ ಎಂಬುದು ವಾಸ್ತವ ಸಂಗತಿ. ಕನ್ನಡದಂತಹ ಪ್ರಾದೇಶಿಕ ಭಾಷೆಗಳು ಜಾಗತಿಕ ಪೈಪೋಟಿಯನ್ನು ಎದುರಿಸುತ್ತಿರುವುದರಿಂದ ದೇಶೀ ಭಾಷೆ, ಸಂಸ್ಕೃತಿಗಳನ್ನು ಸಂರಕ್ಷಿಸುವ ಪ್ರಯತ್ನಗಳು ನಡೆಯುತ್ತಿರುವುದು ಅತ್ಯಂತ ಆಶಾದಾಯಕವಾದುದು. ಇಂತಹ ಮಹತ್ವಾಕಾಂಕ್ಷೆಯ ಕಾರ್ಯಗಳಿಂದಾಗಿ ದೇಶೀ ಸಂಸ್ಕೃತಿಯ ಪುನರುಜ್ಜೀವನ ಸಾಧ್ಯವಾಗಲಿದೆ.

ಕನ್ನಡ ಭಾಷೆಯ ಅಭಿವೃದ್ಧಿಗೆ ಪೂರಕವಾಗಿರುವ ಕನ್ನಡ ಜಾನಪದ ನಿಘಂಟು ಯೋಜನೆಯ ಉಪಯುಕ್ತತೆಯನ್ನು ಮನಗಂಡು ಆರ್ಥಿಕ ನೆರವು ನೀಡಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಹಾಗೂ ಯೋಜನೆಯ ಅನುಷ್ಠಾನಕ್ಕೆ ಶ್ರಮಿಸುತ್ತಿರುವ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕುಲಪತಿಗಳಿಗೆ, ಕುಲಸಚಿವರಿಗೆ, ಸಂಪಾದಕ ಮಂಡಳಿಯವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗದವರಿಗೆ ನನ್ನ ಶುಭಕಾಮನೆಗಳು.

(ಸಿದ್ದರಾಮಯ್ಯ)

ಕುಲಪತಿಗಳ ನುಡಿ

ಜಾನಪದದ ಅಧ್ಯಯನದಲ್ಲಿ ಕರ್ನಾಟಕದ ವಿದ್ವಾಂಸರು ಮಾಡಿರುವ ಸಾಧನೆ ಅನನ್ಯವಾದದ್ದು. ಕಳೆದ ಸುಮಾರು ಒಂದೂವರೆ ಶತಮಾನದಲ್ಲಿ ಈ ಅಧ್ಯಯನ ಬಹುಮುಖಿಯಾಗಿ ಸಾಗಿದೆ. ಮೊದಮೊದಲು ಜಾನಪದದ ಸಂಗ್ರಹಕಾರ್ಯ, ಅದರಲ್ಲೂ ಗೀತ ಜಾನಪದದ ಸಂಗ್ರಹಕಾರ್ಯ ಹೆಚ್ಚಿನ ಆದ್ಯತೆಯನ್ನು ಪಡೆದದ್ದು ಸಹಜವೇ. ಆಮೇಲಾಮೇಲೆ, ಕರ್ನಾಟಕದ ವಿಶ್ವವಿದ್ಯಾಲಯಗಳು ಜಾನಪದವನ್ನು ಅಧ್ಯಯನದ ವಿಷಯವನ್ನಾಗಿ ಪರಿಗಣನೆ ಮಾಡಿದ ಮೇಲೆ, ಭಾಷಿಕ ಜಾನಪದದ ಜೊತೆಗೆ ವಸ್ತು ಜಾನಪದ, ಆಚರಣ ಜಾನಪದ ಮೊದಲಾದುವೂ ಸಂಗ್ರಹಯೋಗ್ಯವೆನಿಸಿ ತಮ್ಮ ಸಾಂಸ್ಕೃತಿಕ ಮಹತ್ವವನ್ನು ದಾಖಲುಗೊಳಿಸಿಕೊಂಡುದು ಕನ್ನಡ ಜಾನಪದ ಅಧ್ಯಯನದ ಚರಿತ್ರೆಯಲ್ಲಿ ತುಂಬಾ ಗಂಭೀರವಾಗಿ ತೆಗೆದುಕೊಳ್ಳಬೇಕಾದ ಸಂಗತಿ. ಅನಿವಾರ್ಯವೂ ಅತ್ಯಗತ್ಯವೂ ಆಗಿದ್ದ ಈ ಬೆಳವಣಿಗೆಯಿಂದಾಗಿ ಕರ್ನಾಟಕ ವಾಚಿಕ ಪರಂಪರೆಯ ಸಾಂಸ್ಕೃತಿಕ ವಿಶಿಷ್ಟತೆಗಳನ್ನು ಬೃಹತ್ ಪ್ರಮಾಣದಲ್ಲಿ ದಾಖಲು ಮಾಡಿದ ಹೆಗ್ಗಳಿಕೆ ಸಾಧ್ಯವಾಯಿತು. ಇದಕ್ಕೆ ಬಹಳ ಮುಖ್ಯವಾದ ಕಾರಣ ನಮ್ಮ ಜಾನಪದ ಸಂಗ್ರಹಕಾರರ ಮತ್ತು ವಿದ್ವಾಂಸರ ಅವಿರತ ದುಡಿಮೆ. ಫ್ಲೀಟ್, ಕಿಟ್ಟೆಲ್ ಮೊದಲಾದ ಪಾಶ್ಚಾತ್ಯ ವಿದ್ವಾಂಸರಿಂದ ಆರಂಭವಾದ ಈ ಕಾರ್ಯ ಇಪ್ಪತ್ತನೇ ಶತಮಾನದ ನಡುಮಧ್ಯಾಹ್ನದ ಹೊತ್ತಿಗೆ ದೇಶೀಯ ಸಂಗ್ರಹಕಾರರನ್ನೂ ಒಳಗೊಂಡು ಬತ್ತದ ತೊರೆಯಾಗಿ ಹರಿಯಿತು. ಆನಂತರದಲ್ಲಿ ವಿಶ್ವವಿದ್ಯಾನಿಲಯಗಳ ವಿದ್ವಾಂಸರು ಸಂಗ್ರಹ, ವಿಶ್ಲೇಷಣೆ ಮತ್ತು ಬೋಧನೆಯಲ್ಲಿ ತೊಡಗಿಕೊಂಡು ಸಂಗ್ರಹ ಕಾರ್ಯಕ್ಕೂ ವಿಶ್ಲೇಷಣಾ ಕಾರ್ಯಕ್ಕೂ ಶಿಸ್ತುಬದ್ಧ ಅಧ್ಯಯನದ ಆಯಾಮಗಳನ್ನು ರೂಪಿಸಿದರು; ಜಾನಪದ ಅಧ್ಯಯನದ ನೆಲೆಗಳನ್ನು ಪಾಶ್ಚಾತ್ಯ ಮತ್ತು ದೇಶೀಯ ವಿಶಿಷ್ಟತೆಗಳ ಬೆಳಕಿನಲ್ಲಿ ಹೆಚ್ಚು ತಾರ್ಕಿಕ ಹಾಗೂ ತಾತ್ವಿಕ ವಿನ್ಯಾಸಕ್ಕೆ ಅಳವಡಿಸುವ ಕೆಲಸಗಳನ್ನು ಮಾಡಿದರು. ಕನ್ನಡ ಜಾನಪದ ಅಧ್ಯಯನ ಕ್ಷೇತ್ರದಲ್ಲಿ ಇಷ್ಟೆಲ್ಲಾ ಆಗುತ್ತಿರುವ ವೇಳೆಗೆ ನಮ್ಮ ವಿದ್ವಾಂಸರಲ್ಲಿ ಜಾನಪದ ವಿಶ್ವವಿದ್ಯಾನಿಲಯದ ಪರಿಕಲ್ಪನೆ ಮೂಡಿದ್ದು ಒಂದು ಅಭೂತಪೂರ್ವ ಸಂಗತಿಯೆಂದೇ ಹೇಳಬೇಕು.

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ನಮ್ಮ ಹಿರಿಯರ ಅಪೇಕ್ಷೆಯ ಮತ್ತು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಫಲವಾಗಿ ಜನ್ಮ ತಳೆದು ಇನ್ನೂ ಐದಾರು ವರ್ಷಗಳಷ್ಟೇ ಆಗಿವೆ. ಭಾರತದ ಮಾತ್ರವಲ್ಲ, ವಿಶ್ವದ ಪ್ರಪ್ರಥಮ ಜಾನಪದ ವಿಶ್ವವಿದ್ಯಾಲಯ ಎಂಬ ಪ್ರಾಮುಖ್ಯತೆಯನ್ನು ಸ್ಥಾಪಿಸಿಕೊಂಡಿರುವ ನಮ್ಮ ಈ ವಿಶ್ವವಿದ್ಯಾಲಯ ತನ್ನ ಕ್ರಿಯಾಶೀಲತೆಯ ಅಲ್ಪಾವಧಿಯಲ್ಲಿಯೇ ತುಂಬಾ ಮಹತ್ವದ ಕಾರ್ಯಗಳನ್ನು ಮಾಡಿದೆ ಮತ್ತು ಮಾಡುತ್ತಾ ಸಾಗಿದೆ. ಜಾನಪದದ ಮೂಲ ನೆಲೆಗಳು ನಮ್ಮ ಹಳ್ಳಿಗಳು; ಗೊಟಗೋಡಿ ಅಂತಹ ಹಳ್ಳಿಗಳಲ್ಲಿ ಒಂದು. ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಈ ಹಳ್ಳಿಯನ್ನೇ ತನ್ನ ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡು ಸ್ಥಾಪಿತವಾದದ್ದು ನಿಜಕ್ಕೂ ಅರ್ಥಪೂರ್ಣ. ಆದರೆ ಹಳ್ಳಿಯೊಂದನ್ನು ನೆಲೆಯಾಗಿಸಿಕೊಂಡು ಒಂದು ವಿಶ್ವವಿದ್ಯಾಲಯ ನಾಡಿನಾದ್ಯಂತ ತನ್ನ ಕಾರ್ಯಬಾಹುಗಳನ್ನು ಚಾಚುವುದಾಗಲಿ, ತಾನು ಮಾಡಿದ ಕೆಲಸಗಳನ್ನು ಜನತೆಗೆ ತಲುಪಿಸುವುದಾಗಲಿ ಸುಲಭಸಾಧ್ಯವಾದದ್ದಲ್ಲ. ನಮ್ಮ ವಿಶ್ವವಿದ್ಯಾನಿಲಯ ಇಂತಹ ಸವಾಲಿನ ಪರಿಸ್ಥಿತಿಯನ್ನು ಬಹು ಸಮರ್ಥವಾಗಿ ನಿಭಾಯಿಸುತ್ತಾ ಬಂದಿರುವುದು ನಿಜಕ್ಕೂ ಸಾಹಸಯಾತ್ರೆಯೇ ಸರಿ.

ಕರ್ನಾಟಕ ಸಾಂಸ್ಕೃತಿಕ ವಲಯಕ್ಕೆ ಜಾನಪದ ವಿಶ್ವವಿದ್ಯಾಲಯದ ಸ್ಪಷ್ಟ ಪರಿಕಲ್ಪನೆ ಹೇಗೆ ಒಂದು ಅಭೂತಪೂರ್ವ ಸಂಗತಿಯೋ ಹಾಗೆಯೇ ಕರ್ನಾಟಕ ಜಾನಪದ ವಿಶ್ವವಿದ್ಯಾಲಯಕ್ಕೆ 'ಕನ್ನಡ ಜಾನಪದ ನಿಘಂಟು–ಪದಸಂಸ್ಕೃತಿ ಕೋಶ'ದ ಪರಿಕಲ್ಪನೆ ಒಂದು ಅಭೂತಪೂರ್ವ ಸಂಗತಿ. ವಿಶ್ವವಿದ್ಯಾಲಯ ಸ್ಥಾಪನೆಗೊಂಡ ಆರಂಭಿಕ

ದಿವಸಗಳಲ್ಲಿಯೇ ಇಂತಹ ಸವಾಲಿನ ಕೆಲಸಕ್ಕೆ ಕೈಯಿಕ್ಕಿದುದು ಇನ್ನೂ ಮಹತ್ವದ ಸಂಗತಿ. ನಾಡಿನಾದ್ಯಂತ ಆಯಾ ಜಿಲ್ಲೆಗಳೊಳಗಿನ ಸಾಂಸ್ಕೃತಿಕ ವಲಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು 'ಕ್ಷೇತ್ರತಜ್ಞ'ರನ್ನು ನಿಯೋಜಿಸಿ ಜನಸಂಸ್ಕೃತಿಯ ನೆಲಮೂಲ ಸ್ಥಿತಿಗಳಿಗೂ ಸ್ಥಿತ್ಯಂತರ ಗತಿಗಳಿಗೂ ಸಾಕ್ಷ್ಯವಾಗಿ ನಿಲ್ಲುವ ಪದಗಳನ್ನೂ ಅವುಗಳ ಸಾಂಸ್ಕೃತಿಕ ಅರ್ಥ–ವಿವರಗಳನ್ನೂ ಸಂಗ್ರಹಿಸುವುದು, ಸಂಗ್ರಹಿಸಿದ ಸಾಮಗ್ರಿಯನ್ನು ಅಧ್ಯಯನ ವಿಧಾನಕ್ಕೆ ಒಳಪಡಿಸಿ ಹೆಚ್ಚಿನ ನಿಖರತೆ ಅಧಿಕೃತತೆ ನಿಷ್ಕೃಷ್ಟತೆಗಳನ್ನು ಪ್ರಾಪ್ತವಾಗಿಸುವುದು, ಹೀಗೆ ಸಿದ್ಧಗೊಂಡ ಸಾಮಗ್ರಿಯನ್ನು ಪದಸಂಸ್ಕೃತಿಕೋಶದ ಪರಿಕಲ್ಪನಾತ್ಮಕ ಚೌಕಟ್ಟಿಗೆ ಎರಕ ಹೊಯ್ಯುತ್ತಿರುವುದು 'ಕನ್ನಡ ಜಾನಪದ ನಿಘಂಟು' ರಚನಾ ಕಾರ್ಯದ ತ್ರಿವಿಧ ಸೋಪಾನಗಳಾಗಿವೆ. ಈ ಸ್ಪಷ್ಟ ಕಾರ್ಯಸೂಚಿಗಳನ್ವಯ ರಚನೆಯಾದ ನಿಘಂಟುವಿನ ಮೊದಲನೆಯ ಮತ್ತು ಎರಡನೆಯ ಸಂಪುಟಗಳು ಈಗಾಗಲೇ ಪ್ರಕಟವಾಗಿದ್ದು, ಇದೀಗ ಮೂರನೆಯ ಸಂಪುಟ ಸಂಸ್ಕೃತಿ ಅಧ್ಯಯನದಲ್ಲಿ ಆಸಕ್ತರಾದವರ ಕೈಸೇರುತ್ತಿದೆ.

ನವ ಜಾಗತೀಕರಣ ಬಿತ್ತಿ ಬೆಳೆಯುತ್ತಿರುವ, ಆರ್ಥಿಕ ಉದಾರ ನೀತಿಯ ಪೋಷಾಕು ತೊಟ್ಟ, ವಿಶ್ವಮಾರುಕಟ್ಟೆಯ ವಾಣಿಜ್ಯ ಜಾಲ ಪುರಾಕೃತ ಸಾಂಸ್ಕೃತಿಕ ಚಹರೆಗಳನ್ನು ತನ್ನ ಜನಜೀವನದ ಒಡಲೊಳಗೆ ಕಾಪಿಟ್ಟುಕೊಂಡ ಭಾರತದಂತಹ 'ಅಭಿವೃದ್ಧಿಶೀಲ' ದೇಶಗಳನ್ನೂ ಸರಕುಸಂಸ್ಕೃತಿಯ ಪೂರ್ವಯೋಜಿತ ವರ್ತುಲದೊಳಕ್ಕೆ ಸಿಕ್ಕಿಸುತ್ತಿದೆ. ಇದರ ಪರಿಣಾಮವಾಗಿ ನಮ್ಮ ಹಳ್ಳಿಗಳೂ ತಮ್ಮ ಮೂಲ ಸಂಸ್ಕೃತಿಯ ದೇಸೀತನವನ್ನು ಕಳೆದುಕೊಳ್ಳುತ್ತಿವೆ ಅಥವಾ ಆ ದೇಸೀತನ ಸ್ಥಿತ್ಯಂತರಗೊಳ್ಳುತ್ತಿದೆ. ಆರ್ಥಿಕ ಪ್ರಾಬಲ್ಯವುಳ್ಳ ದೇಶಗಳು ತಮ್ಮ ಪ್ರಭಾವಶೀಲತೆಯನ್ನು ವ್ಯಾಪಿಸುವುದಕ್ಕಾಗಿ ಸೃಷ್ಟಿಸಿದ ಈ ಬಿಕ್ಕಟ್ಟಿಗೆ ಪ್ರತಿರೋಧಕ ಶಕ್ತಿಯನ್ನು ದೇಶೀ ಸಂಸ್ಕೃತಿಯ ವೈಲಕ್ಷಣ್ಯಗಳಲ್ಲಿಯೇ ಅನ್ವೇಷಿಸುವ ಕೆಲಸವನ್ನು ದೇಶೀ ಸಂಸ್ಕೃತಿತಜ್ಞರು ಮಾಡುತ್ತಿದ್ದಾರೆ. ಸಾಂಸ್ಕೃತಿಕ ಅಧ್ಯಯನ ಕ್ಷೇತ್ರದಲ್ಲಿ ಇದೊಂದು ಬಹು ಮಹತ್ವದ ಸಂಕೀರ್ಣ ಸ್ಥಿತಿ. ಇಂತಹ ಸ್ಥಿತಿಯಲ್ಲಿ ನಾಡಿನ ಹಿರಿಯ ಸಂಸ್ಕೃತಿ ಚಿಂತಕರಾದ ಡಾ.ರಾಗೌ ಅವರ ನಿರ್ದೇಶನ ಮತ್ತು ನೇತೃತ್ವದ ಸಂಪಾದಕ ಮಂಡಳಿಯ ನೆರವಿನೊಡನೆ ನಮ್ಮ ವಿಶ್ವವಿದ್ಯಾಲಯ ಮಾಡುತ್ತಿರುವ 'ಪದಸಂಸ್ಕೃತಿ ಕೋಶ'ದ ಕೆಲಸಕ್ಕೆ ಜಗತ್ತಿನಲ್ಲಿ ಒಂದು ವಿಶಿಷ್ಟ ಸ್ಥಾನ ಇದೆ ಎಂದು ನಾವು ತಿಳಿದಿದ್ದೇವೆ.

ಕನ್ನಡ ಜಾನಪದಕ್ಕೆ ಸಂಬಂಧಿಸಿದಂತೆ ಹಲವು ಯೋಜನೆಗಳನ್ನು ರೂಪಿಸಿಕೊಂಡು ನಮ್ಮ ವಿಶ್ವವಿದ್ಯಾಲಯ ಕಾರ್ಯಪ್ರವೃತ್ತವಾಗಿದೆ. ಆರಂಭಿಕ ಹಂತದಲ್ಲಿರುವ ಯಾವುದೇ ವಿಶ್ವವಿದ್ಯಾನಿಲಯ ತನ್ನ ಭೌತಿಕ ಮತ್ತು ಬೌದ್ಧಿಕ ಆವಶ್ಯಕತೆಗಳನ್ನು ಒಟ್ಟೊಟ್ಟಿಗೇ ಪೂರೈಸಿಕೊಂಡು ಮುನ್ನಡೆಯಬೇಕಾದದ್ದು ಅನಿವಾರ್ಯ. ನಮ್ಮ ವಿಶ್ವವಿದ್ಯಾಲಯದ ಕಾರ್ಯಕ್ಷಮತೆ ಈ ಅಗತ್ಯ ಪೂರೈಕೆಯಲ್ಲಿ ಸಮರ್ಪಕವಾಗಿ ಕೆಲಸ ಮಾಡುತ್ತಿದೆ. ಸರ್ಕಾರದಿಂದಲೂ, ಸರ್ಕಾರಿ ಹಾಗೂ ಸರ್ಕಾರೇತರ ಅಂಗಸಂಸ್ಥೆಗಳಿಂದಲೂ ಸಂಪನ್ಮೂಲಗಳನ್ನು ಕ್ರೋಡೀಕರಿಸಿಕೊಂಡು ತಾನು ಹಮ್ಮಿಕೊಂಡ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಜಾನಪದ ವಿಶ್ವವಿದ್ಯಾನಿಲಯ ದಾಖಲೆಯ ಪ್ರಗತಿ ಸಾಧಿಸಿದೆ ಎಂಬುದರಲ್ಲಿ ಎರಡು ಮಾತಿಲ್ಲ.

'ಕನ್ನಡ ಜಾನಪದ ನಿಘಂಟು' ಯೋಜನೆ ನಮ್ಮ ವಿಶ್ವವಿದ್ಯಾನಿಲಯದ ಮಹತ್ವಾಕಾಂಕ್ಷೆಯ ಯೋಜನೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ನೆರವಿನೊಡನೆ ವಿಶ್ವವಿದ್ಯಾನಿಲಯ ರೂಪಿಸಿದ ಈ ಯೋಜನೆ ಸುಮಾರು ನಾಲ್ಕು ವರ್ಷಗಳಿಂದ ಕಾರ್ಯಪ್ರವೃತ್ತವಾಗಿದೆ. ಅದಕ್ಕೊಂದು ಸೈದ್ಧಾಂತಿಕ ಸ್ವರೂಪ ಡಾ.ರಾಗೌ ಅವರಿಂದ ಪ್ರಾಪ್ತವಾಯಿತು. ಅರ್ಹ ವಿದ್ವಾಂಸರು, ಅಗತ್ಯ ಸಿಬ್ಬಂದಿ ಹಾಗೂ ಸೌಕರ್ಯಗಳೊಡನೆ ಸಂಪಾದಕ ಮಂಡಳಿ ಕೆಲಸ ಮಾಡತೊಡಗಿದ್ದು ಯೋಜನೆಗೆ ಒಂದು ಆಶಾದಾಯಕ ಸಂಗತಿಯಾಗಿಯೇ ಪರಿಣಮಿಸಿತು. ಈ ಸಕಾರಾತ್ಮಕ ಬೆಳವಣಿಗೆಗೆ ಕಾರಣರಾದವರು ಕನ್ನಡದ ಹಿರಿಯ ವಿದ್ವಾಂಸರೂ, ಸಂಸ್ಕೃತಿ ಚಿಂತಕರೂ, ಕವಿಗಳೂ ಆದ ಡಾ.ರಾಮೇಗೌಡ(ರಾಗೌ) ಅವರು. ಈ ನಿಘಂಟು ಯೋಜನೆಗೆ ಅವರು ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡು 'ಕನ್ನಡ ಜಾನಪದ ನಿಘಂಟಿ'ನ ಸಾಂಸ್ಕೃತಿಕ ಮತ್ತು ಭಾಷಿಕ ನೆಲೆಗಳನ್ನು ದೃಢಪಡಿಸಿ ಮೂರು ಸಂಪುಟಗಳನ್ನು ಸಿದ್ಧಪಡಿಸಿದ್ದು ಕನ್ನಡದ ಸಂಸ್ಕೃತಿ ಅಧ್ಯಯನದ ಇತಿಹಾಸದಲ್ಲಿ ಒಂದು ಅಪೂರ್ವ ಘಟನೆ

ಎಂಬುದರಲ್ಲಿ ಸಂದೇಹವಿಲ್ಲ. ಈಗಾಗಲೇ ಮೊದಲೆರಡೂ ಸಂಪುಟಗಳು ಬಿಡುಗಡೆಯಾಗಿ, ಪ್ರಸ್ತುತ ಮೂರನೆಯ ಸಂಪುಟ ಬಿಡುಗಡೆಯಾಗುತ್ತಿದೆ. ಈ ಯೋಜನೆಯ ಸಂಪುಟಗಳು ಶೀಘ್ರಗತಿಯಲ್ಲಿ ಹೊರಬರಲು ಸಂಯೋಜಕ ಸಂಪಾದಕರಾಗಿ ಆಡಳಿತಾತ್ಮಕ ಕಾರ್ಯಗಳಲ್ಲಿ ಪ್ರೊ.ಜಯಪ್ರಕಾಶಗೌಡರು ನೆರವಾಗಿದ್ದಾರೆ. ಡಾ.ಬೋರೇಗೌಡ ಚಿಕ್ಕಮರಳಿ, ಪ್ರೊ.ಸಿ.ನೀಲಕಂಠೇಗೌಡ, ಡಾ.ಎಚ್.ಎಂ.ಉಮೇಂದ್ರಕುಮಾರ್ ಮೊದಲಾದ ಡಾ.ರಾಗೌ ಅವರ ಸಹಾಯಕ ಸಿಬ್ಬಂದಿಯ ಶ್ರಮ ಕೂಡ ಇಲ್ಲಿ ನೆನೆಯಬೇಕಾದದ್ದು. ನಾಡಿನಾದ್ಯಂತ ಕ್ಷೇತ್ರತಜ್ಞರು ತೋರ್ಪಡಿಸಿದ ಪದಸಂಗ್ರಹ ಸಾಮರ್ಥ್ಯವೂ ಈ ಕಾರ್ಯಸಾಧನೆಯಲ್ಲಿ ನೆರವಾಗಿದೆ. ಇವರೆಲ್ಲರಿಗೂ ವಿಶ್ವವಿದ್ಯಾನಿಲಯದ ಪರವಾಗಿ ವಂದನೆಗಳನ್ನು ಹೇಳಬಯಸುತ್ತೇನೆ.

ನಮ್ಮ ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿಗಳೂ, ಪರೀಕ್ಷಾಂಗ ಕುಲಸಚಿವರೂ ಆದ ಡಾ.ಚಂದ್ರಶೇಖರ್ ಅವರು ಜಾನಪದ ನಿಘಂಟು ಯೋಜನೆಯ ವಿಷಯದಲ್ಲಿ ತುಂಬಾ ಆಸಕ್ತರಾಗಿ ನೆರವಾಗುತ್ತಿದ್ದಾರೆ. ಅವರಿಗೆ ನನ್ನ ಧನ್ಯವಾದಗಳು ಸಲ್ಲುತ್ತವೆ.

ನಮ್ಮ ಮಹತ್ವದ ಈ ನಿಘಂಟು ಯೋಜನೆಗೆ ಸಹಕರಿಸುತ್ತಿರುವ ಕರ್ನಾಟಕ ಸರ್ಕಾರದ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಮುಖ್ಯಸ್ಥರನ್ನೂ ಸಂಬಂಧಪಟ್ಟವರನ್ನೂ ನಾನು ಇಲ್ಲಿ ನೆನೆಯಬಯಸುತ್ತೇನೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ.ಎಸ್.ಜಿ.ಸಿದ್ಧರಾಮಯ್ಯ ಅವರಿಗೆ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಆಭಾರಿಯಾಗಿದೆ. ನಮ್ಮೆಲ್ಲ ಕಾರ್ಯಗಳನ್ನು ಆಗುಮಾಡುವಲ್ಲಿ ಶ್ರಮಿಸುತ್ತಿರುವ ನಮ್ಮ ವಿಶ್ವವಿದ್ಯಾನಿಲಯದ ಎಲ್ಲ ವಿದ್ವಾಂಸರನ್ನೂ, ಸಿಬ್ಬಂದಿಯವರನ್ನೂ ಈ ಸಂದರ್ಭದಲ್ಲಿ ನೆನೆಯುತ್ತೇನೆ.

ಪ್ರೊ. ಡಿ. ಬಿ. ನಾಯಕ
ಕುಲಪತಿಗಳು

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ನುಡಿ

ಭಾಷಾ ವಿಜ್ಞಾನಿಗಳ ಪ್ರಕಾರ ಜಗತ್ತಿನಲ್ಲಿ ಆರುಸಾವಿರಕ್ಕೂ ಹೆಚ್ಚು ಭಾಷೆಗಳಿವೆ. ಇವುಗಳಲ್ಲಿ ಕೆಲವು ಭಾಷೆಗಳಿಗೆ ಲಿಪಿಗಳಿವೆ. ಹಲವು ಭಾಷೆಗಳಿಗೆ ಲಿಪಿಗಳಿಲ್ಲ. ಲಿಪಿ ಇರಲಿ ಇಲ್ಲದಿರಲಿ ಜನರ ಬಾಯಲ್ಲಿ ಈಗಲೂ ಬಳಕೆಯಲ್ಲಿರುವ ಭಾಷೆಗಳನ್ನು ಜೀವಂತ ಭಾಷೆಗಳೆಂದು ಕರೆಯುತ್ತಾರೆ. ನಮ್ಮ ಕರ್ನಾಟಕದಲ್ಲಿಯೇ ಈ ಎರಡೂ ಬಗೆಯ ಭಾಷೆಗಳಿವೆ. ಲಿಪಿ ಇಲ್ಲದೆ ಬರೀ ಜನರ ಬಾಯಲ್ಲಿ ಬಳಕೆಯಲ್ಲಿರುವ ಭಾಷೆಗಳೆಂದರೆ ಕೊಡವ, ತುಳು, ಕೊಂಕಣಿ. ಹಾಗೆಯೇ ಜನರ ಬಾಯಲ್ಲಿ ಬಳಕೆಯಲ್ಲಿರುವ ಲಿಪಿ ಇರುವ ಭಾಷೆ ಕನ್ನಡ. ಇದು ಕರ್ನಾಟಕದ ರಾಜ್ಯಭಾಷೆ. ಭಾಷೆಗಳಲ್ಲಿ ಇನ್ನೊಂದು ಬಗೆಯ ಭಾಷೆಗಳಿವೆ. ಒಂದು ಕಾಲದಲ್ಲಿ ಜನರು ಆಡುತ್ತಿದ್ದ ಬಾಷೆಯಾಗಿದ್ದು ಲಿಪಿಯನ್ನೂ ಒಳಗೊಂಡಿದ್ದು ಕಾಲಾಂತರದಲ್ಲಿ ಲಿಪಿರೂಪದಲ್ಲಿ ಮಾತ್ರ ಉಳಿದು ಜನರ ಬಾಯಲ್ಲಿ ಉಳಿಯದೆ ಹೋದದ್ದು; ಇದನ್ನು ಮೃತಭಾಷೆ ಎಂದು ಕರೆಯುತ್ತಾರೆ. ಇದಕ್ಕೆ ಸಂಸ್ಕೃತ ಉತ್ತಮ ಉದಾಹರಣೆ. ಲಿಪಿರೂಪದಲ್ಲಿ ಮಾತ್ರ ಉಳಿದಿರುವ ಭಾಷೆಯೊಂದು ಸಮೃದ್ಧವಾಗಿ ಹಲವು ಬಗೆಯ ಜ್ಞಾನವಿಚಾರ ಸಾಹಿತ್ಯಸಂಪತ್ತನ್ನು ಒಳಗೊಂಡಿದ್ದರೆ ಅಂತಹ ಭಾಷೆಯನ್ನು ಶಾಸ್ತ್ರೀಯ ಭಾಷೆ ಎಂದು ಕರೆಯುತ್ತಾರೆ. ಈ ಶಾಸ್ತ್ರೀಯ ಮೃತಭಾಷೆಯನ್ನು ಅಧ್ಯಯನ ಮಾಡಬಹುದು; ಅದರ ಜ್ಞಾನವಿಚಾರ ಸಾಹಿತ್ಯಸಂಗತಿಗಳನ್ನು ಸಮಕಾಲೀನ ವಿವೇಕಕ್ಕೆ ಮುಖಾಮುಖಿಯಾಗಿಸಿ ಚರ್ಚಿಸಬಹುದು. ಆದರೆ ಈಗಾಗಲೇ ಜನರ ಬಾಯಿಂದ ಕಳೆದುಹೋಗಿರುವ ಈ ಭಾಷೆಯನ್ನು ಮತ್ತೆ ಜೀವಂತ ಭಾಷೆಯಾಗಿಸುವುದು ಸಾಧ್ಯವಿಲ್ಲ.

ಕನ್ನಡ ಒಂದು ಜೀವಂತ ಭಾಷೆ. ಯಾವುದೇ ಭಾಷೆಯು ತನ್ನ ನೆರೆಹೊರೆಯ ಭಾಷೆಗಳ ಸಂಪರ್ಕಕ್ಕೆ ಒಳಗಾಗುತ್ತಲೆ ಅದರ ಪ್ರಭಾವ ಪ್ರೇರಣೆಗಳಿಗೆ ಭಾಗಿಯಾಗುತ್ತದೆ. ಹೀಗಾದಾಗ ಕೊಡುವ ಪಡೆಯುವ ಪ್ರಕ್ರಿಯೆ ಸಾಮಾನ್ಯವಾಗಿ ಎರಡೂ ಭಾಷೆಗಳ ಮಧ್ಯೆ ನಡೆಯುತ್ತದೆ. ವ್ಯಾಕರಣ ವಿಚಾರವನ್ನು ಬಿಟ್ಟಂತೆ ಪದಕೋಶಗಳ ವಿಷಯದಲ್ಲಿ ಈ ಕೊಡು–ಪಡೆಯ ವ್ಯವಹಾರ ಭಾಷೆಗಳ ಜಾಯಮಾನಕ್ಕೆ ಎರವಿಲ್ಲದಂತೆ ನಡೆಯುತ್ತದೆ. ಈ ವಿಚಾರದಲ್ಲಿ ಯಾವುದೇ ಭಾಷೆಯೂ ಮಡಿವಂತಿಕೆಯನ್ನು ಹಾಕಿಕೊಳ್ಳುವಂತಿಲ್ಲ. ಮಡಿವಂತಿಕೆ ಎಂಬುದು ಭಾಷೆಯ ಸಾವಿಗೆ ಆಹ್ವಾನವಿದ್ದಂತೆ. ಒಂದು ಭಾಷೆ ಎಷ್ಟು ಅನ್ಯಭಾಷಾ ಗಡಿಗಳ ಸಂಪರ್ಕಕ್ಕೆ ಬಂದಂತೆ ಭಾಷೆಗಳ ಪ್ರಭಾವಕ್ಕೆ ಒಳಗಾಗುತ್ತದೋ ಅದಕ್ಕೆ ಅನುಗುಣವಾಗಿ ಭಾಷಾ ಪ್ರಭೇದಗಳು ಬೆಳೆಯುತ್ತವೆ. ಅಂದರೆ ಭಾಷಾ ಪ್ರಯೋಗದಲ್ಲಿ ಸಂಪರ್ಕಭಾಷೆಯ ಪ್ರಭಾವದಿಂದಾಗಿ ವ್ಯತ್ಯಯಗಳು ಉಂಟಾಗುತ್ತವೆ. ಕೋಲಾರ ಭಾಗದ ಕನ್ನಡವು ತೆಲುಗಿನ ಪ್ರಭಾವಕ್ಕೆ ಒಳಗಾಗಿ ಕನ್ನಡ ಉಚ್ಚಾರಣೆಗಿಂತ ಭಿನ್ನದನಿಯಾಗಿ ಕೇಳಿಬರುತ್ತದೆ. ಹಾಗೆಯೇ ಮರಾಠಿ ತಮಿಳು ಗಡಿಗಳ ಭಾಷಾ ಪ್ರಭಾವಕ್ಕೆ ಒಳಗಾದ ಕನ್ನಡ ಪ್ರಯೋಗದಲ್ಲಿ ವ್ಯತ್ಯಾಸಗಳು ಒಡೆದು ಕಾಣಿಸುವಂತೆ ಕೇಳಿಬರುತ್ತವೆ. ಇನ್ನು ಒಳನಾಡಿನಲ್ಲಿನ ಕನ್ನಡ ಭಿನ್ನತೆಗಳು ಜಾತಿ ವರ್ಗ ಪ್ರದೇಶ ವಿಸ್ತಾರಗಳಿಗೆ ಹೊಂದಿಕೊಂಡಂತೆ ವ್ಯತ್ಯಾಸಗಳಿಗೆ ಒಳಗಾಗಿವೆ. ಈ ಕಾರಣದಿಂದಲೇ ಕನ್ನಡ ಒಂದು ಭಾಷೆಯಾದರೂ ಅದು ಒಂದೇ ರೀತಿಯ ಉಚ್ಚಾರಣೆಯ ಕನ್ನಡವಲ್ಲ.

ಇದನ್ನು ಮನಗಂಡೇ ಕನ್ನಡದ ಕವಿರಾಜಮಾರ್ಗಕಾರ 'ಕನ್ನಡಂಗಳ್ ಒಳವು' ಎಂದು ಹೇಳಿದ್ದಾನೆ. ಆದಿ ದ್ರಾವಿಡ ಮೂಲಕ್ಕೆ ಸೇರಿದ ಕನ್ನಡ ಭಾಷೆಗಳಲ್ಲಿ ಮೂಲದ್ರಾವಿಡ ಭಾಷೆಯ ಎಷ್ಟು ಪದಗಳು ಉಳಿದಿವೆ? ಹುಡುಕುತ್ತಾ

ಹೋದರೆ ವಿಸ್ಮಯವಾಗುವಷ್ಟು ಕಡಿಮೆ ಪ್ರಮಾಣದಲ್ಲಿ ಅವು ಉಳಿದಿವೆ. ಕಾಲಾಂತರದಲ್ಲಿ ಪ್ರಾಕೃತ ಸಂಸ್ಕೃತ ಪಾಳಿ ಭಾಷೆಗಳ ಪ್ರಭಾವಕ್ಕೆ ಒಳಗಾದ ಕನ್ನಡ ತನ್ನೊಳಕ್ಕೆ ಹೇರಳವಾಗಿ ಆ ಎಲ್ಲ ಭಾಷೆಗಳ ಪದಗಳನ್ನು ಪರಿಭಾಷೆಗಳನ್ನು ಸ್ವೀಕರಿಸಿದೆ. ಈ ಪ್ರಭಾವದ ಚಹರೆಗಳನ್ನು ಲಿಪಿರೂಪದಲ್ಲಿ ದಾಖಲಾಗಿರುವ ಕನ್ನಡಗ ಚಾರಿತ್ರಿಕ ಅಧ್ಯಯನದಿಂದ ತಿಳಿಯಬಹುದು.

ದೇಶವು ಅನ್ಯಾಕ್ರಮಣಕ್ಕೆ ಒಳಗಾದಂತೆ ದೇಶಭಾಷೆಗಳು ಅನ್ಯಭಾಷೆಗಳ ಸಂಪರ್ಕಕ್ಕೆ ಒಳಗಾದದ್ದು ಒಂದು ದೊಡ್ಡ ಚರಿತ್ರೆ. ಕನ್ನಡ ಭಾಷೆಯ ಮೇಲೆ ಪರ್ಷಿಯ, ಫ್ರೆಂಚ್, ಅರೇಬಿಯಾ, ಇಂಗ್ಲಿಷ್ ಇತ್ಯಾದಿ ವಿದೇಶಿ ಭಾಷೆಗಳ ಪ್ರಭಾವ ಗಾಢವಾಗಿ ಆಗಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಈ ಭಾಷಿಕ ಮೂಲದ ಜನ ಇಲ್ಲಿ ಆಡಳಿತ ನಡೆಸುವಾಗ ಅವರ ನೆಲದ ಆಡಳಿತ ವ್ಯವಸ್ಥೆಯ ಎಲ್ಲ ಮಾದರಿಗಳನ್ನೂ ಇಲ್ಲಿ ಅನುಷ್ಠಾನಗೊಳಿಸಿದರು. ಶಿಕ್ಷಣ ಆಡಳಿತ ಹಾಗೂ ಸಾಮಾಜಿಕ ಕ್ಷೇತ್ರಗಳ ಮೇಲಾದ ಇವರ ಆಡಳಿತದ ಪರಿಣಾಮಗಳು ತೀವ್ರಗತಿಯ ಬದಲಾವಣೆಗಳಿಗೂ ಕಾರಣವಾದವು. ಹೀಗಾಗಿ ಆ ವ್ಯವಸ್ಥೆಗೆ ಸಂಬಂಧಿಸಿದ ಅವರ ಭಾಷೆಯ ಪರಿಭಾಷಾ ಪದಗಳು ಕನ್ನಡ ಭಾಷೆಯ ಪದಕೋಶಗಳಿಗೆ ಸಹಜವಾಗಿಯೇ ಸೇರಿಹೋದವು. ಹೀಗೆ ಅನ್ಯಭಾಷೆಯ ಪದಗಳನ್ನು ತನ್ನೊಳಕ್ಕೆ ತೆಗೆದುಕೊಳ್ಳುವಾಗ ಸ್ವೀಕರಿಸುವ ಭಾಷೆಯು ತನ್ನ ಭಾಷಿಕ ಜಾಯಮಾನದ ಮೂಲಸ್ವರೂಪಕ್ಕೆ ಅವುಗಳನ್ನು ಒಗ್ಗಿಸಿಕೊಂಡು ಸ್ವೀಕರಿಸುತ್ತದೆ. ಇದು ಆ ಭಾಷೆಯ ಅನನ್ಯತೆ. ಇದನ್ನು ಕನ್ನಡ ಎಂದೂ ಬಿಟ್ಟುಕೊಟ್ಟಿಲ್ಲ. ಯಾವುದೇ ಜೀವಂತ ಭಾಷೆಯು ಸ್ವಕೀಯ ಪ್ರಜ್ಞೆಯನ್ನು ಕಾಯ್ದುಕೊಳ್ಳುತ್ತಲೇ ಪರಭಾಷಾ ಪ್ರಭಾವಗಳನ್ನು ಅರಗಿಸಿಕೊಳ್ಳುತ್ತದೆ. ಆ ಪ್ರಭಾವಗಳು ಈ ಭಾಷೆಯ ಒಡಲಲ್ಲಿ ಅರಗಿದ ಅನ್ನದಂತೆ ಭಾಷೆಯ ಬೆಳವಣಿಗೆಗೆ ಧಾತು ದ್ರವ್ಯಗಳಾಗುತ್ತವೆ. ಹೀಗಾಗಿ ಇಂದು ಕನ್ನಡ ಆಧುನಿಕ ಜಗತ್ತಿನಲ್ಲಿ ಎದುರಾಗುವ ಎಲ್ಲ ಬಗೆಯ ಪ್ರಭಾವ ಪ್ರೇರಣೆಗಳಿಗೆ ಮುಖಾಮುಖಿಯಾಗುತ್ತಾ ಅವುಗಳು ಕೊಡುತ್ತಿರುವ ಹೊಸ ಬಗೆಯ ಪದಗಳನ್ನು ಪರಿಭಾಷೆಗಳನ್ನು ಸ್ವೀಕರಿಸುತ್ತಾ ಬೆಳೆದಿದೆ, ಬೆಳೆಯುತ್ತಿದೆ. ಇದು ಈ ಭಾಷೆಯ ವಿಕಸನ ಗುಣದ ಬಹುದೊಡ್ಡ ಶಕ್ತಿ. ಇದಲ್ಲದೆ ಆಧುನಿಕ ವಿಜ್ಞಾನ ಜಗತ್ತಿನ ಗಣಕ ತಂತ್ರಾಂಶದ ಎಲ್ಲ ಬಗೆಯ ವಿದ್ಯುನ್ಮಾನಗಳಿಗೂ ತೆರೆದುಕೊಂಡು ಬಳಕೆಯಾಗುತ್ತಿರುವ ಭಾಷೆಯಾಗಿದೆ. ಇದು ಕನ್ನಡ ಭಾಷೆಗಿರುವ ಒಳಗೊಳ್ಳುವ ಗುಣ, ಶಕ್ತಿ.

ಇಂಥ ಕನ್ನಡ ಭಾಷೆಗೆ ಇನ್ನೊಂದು ಬಗೆಯ ನೆಲಮೂಲ ಸೊಗಡಿನ ಶಕ್ತಿವಿಶೇಷತೆ ಇದೆ. ಇದು ಕನ್ನಡ ಪರಂಪರೆಯ ಮೌಖಿಕ ರೂಪದ ಕಾಲುದಾರಿ ಪರಂಪರೆಗಳಿಗೆ ಸಂಬಂಧಿಸಿದ ವಿಶೇಷ ಗುಣ. ಲಿಪಿರೂಪದ ಚರಿತ್ರೆಯಲ್ಲಿ ಕನ್ನಡ ಭಾಷಿಕ ಜಗತ್ತು ಇಡೀ ಜಾಗತಿಕ ಮಟ್ಟದಲ್ಲಿ ಗುರುತಿಸಿ ಗೌರವಿಸಬೇಕಾದ ಪ್ರತಿಭಾ ವಿಲಾಸವನ್ನು ಮೆರೆದಿದೆ. ಇದನ್ನು ಪಂಪ ಕನ್ನಡದ 'ವಾಗ್‌ವಿಳಾಸ' ಎಂದು ಕರೆದಿದ್ದಾನೆ. ಅದೇ ರೀತಿ ಲಿಪಿಯಿಲ್ಲದ ಕನ್ನಡ ಮೌಖಿಕ ಪರಂಪರೆಯಲ್ಲೂ ಬಹುದೊಡ್ಡ ವಾಗ್ವಿಳಾಸವನ್ನು ಕಾಣಬಹುದು. ಕವಿರಾಜಮಾರ್ಗಕಾರನ 'ಕನ್ನಡಂಗಳ್ ಒಳವು' ಎನ್ನುವ ಮಾತಿನಲ್ಲಿ ಕನ್ನಡಭಾಷೆಯ ಬಹುತ್ವಗಳ ಗುರುತಿಸುವಿಕೆ ಇದೆ. ಈ ಬಹುತ್ವ ಎನ್ನುವುದು ಕೇವಲ ಪದಗಳ ಪರಿಭಾಷೆಗಳ ನುಡಿ–ನುಡಿಕಟ್ಟುಗಳ ಪ್ರಯೋಗದಲ್ಲಿ ಕಾಣುವುದಿಲ್ಲ. ಅದು ಇಡೀ ಕನ್ನಡ ಸಮುದಾಯಗಳ ಬದುಕಿನ ಒಡಲೊಳಗಿನ ಶಕ್ತಿವಿಶಿಷ್ಟತೆಗೆ ಸಂಬಂಧಿಸಿದ್ದು. ಇಡೀ ಕರ್ನಾಟಕವನ್ನು ವ್ಯವಸಾಯದ ಆಧಾರದಲ್ಲಿಯೇ ಪ್ರಧಾನವಾಗಿ ನಾಲ್ಕು ನೆಲೆಗಳಲ್ಲಿ ಪ್ರತ್ಯೇಕಿಸಿ ಗುರುತಿಸಬಹುದು: 1)ಮಲೆನಾಡು 2)ಅರೆಮಲೆನಾಡು 3)ಬಯಲುಸೀಮೆ 4)ಬೆಂಗಾಡು ಸೀಮೆ. ಈ ವಿಭಾಗಕ್ರಮ ಭೂ ವೈಲಕ್ಷಣ್ಯ ಮತ್ತು ಹವಾಮಾನದ ವಿಶೇಷತೆಯನ್ನು ಆಧರಿಸಿದಂತೆ ರೂಪುಗೊಂಡ ಕೃಷಿ ಸಂಸ್ಕೃತಿಯನ್ನು ಗಮನಿಸಿ ವಿಂಗಡಿಸಿದ್ದು. ಆದರೆ ಈ ವಿಂಗಡಣೆಯೂ ಗೆರೆಕೊರೆದ ಲೆಕ್ಕಾಚಾರದಲ್ಲಿ ಹಾಕಿದ ಸರಳ ರೇಖೆಯ ವಿಂಗಡಣೆಯಲ್ಲ. ಒಂದೊಂದು ವಿಂಗಡಣೆಯ ಒಳಗೂ ಗಮನಿಸಿದರೆ ಹಲವು ಬಹುತ್ವಗಳನ್ನು ಗುರುತಿಸಬಹುದು. ಇವು ವರ್ಣ–ವರ್ಗ ಜಾತಿ–ಕುಲ ಇತ್ಯಾದಿ ಕಾರಣಮೂಲಗಳಲ್ಲಿ ಪ್ರತ್ಯೇಕಗೊಂಡಂತೆ ಬೆಳೆದವು.

ಇಷ್ಟಾಗಿಯೂ ಯಾವುದೋ ಒಂದು ಬಗೆಯ ಅಘೋಷಿತ ಒಪ್ಪಂದ ವಿಧಿಯಲ್ಲಿ ಹೊಂದಾಣಿಕೆಯ ಬಾಳ್ವೆ ಕಟ್ಟಿಕೊಂಡವು. ಇಂಥ ಹೊಂದಾಣಿಕೆಯೆಂಬುದು ನಂಬಿಕೆಯಾಗಿ, ನಂಬಿಕೆ ನಡಾವಳಿಯಾಗಿ, ನಡಾವಳಿ ಸಂಪ್ರದಾಯವಾಗಿ, ಸಂಪ್ರದಾಯ ಕೊನೆಗೆ ಪರಂಪರೆಯ ಧಾರೆಯಾಗಿ ಇವರ ಬದುಕಿನಲ್ಲಿ ಶೋಷಣೆ ಕ್ರೌರ್ಯಗಳ ಸ್ವಾರ್ಥಮುಖೀ ಅಜ್ಞಾನವೂ ಅನುರಣಿಸಿದೆ. ಪರಸ್ಪರ ಕೊಳು–ಕೊಡೆಗಳಿರುವಂತೆ ಒಳಗು–ಹೊರಗುಗಳ ವಿಧಿನಿಷೇಧಗಳೂ ಇವೆ. ಇವುಗಳ ನಡುವೆ ಸೂಕ್ಷ್ಮ ಸಂಘರ್ಷದ ಮುಖಾಮುಖಿಯೂ ತಣ್ಣಗಿನ ವಿದ್ಯಮಾನವಾಗಿ ತಳಸ್ತರದಲ್ಲಿ ಹರಿದಿದೆ. ಇವೆಲ್ಲವನ್ನೂ ಆ ವ್ಯಾಪ್ತಿಯೊಳಗಿನ ಸಾಕ್ಷೀಪ್ರಜ್ಞೆಯ ಪ್ರಮಾಣು ರೂಪದಲ್ಲಿ ಜನರ ಭಾಷೆ ತನ್ನೊಳಕ್ಕೆ ತಂದುಕೊಂಡಿದೆ. ಹೀಗಾಗಿ ಭಾಷೆ ಎಂದರೆ ಕೇವಲ ಸಂವಹನ ಮಾಧ್ಯಮ ಸಂಕೇತವಲ್ಲ, ಅದೊಂದು ಸಂಸ್ಕೃತಿ, ಅದೊಂದು ಪರಂಪರೆ, ಅದೊಂದು ಜನಸಮುದಾಯ ಪ್ರಜ್ಞೆ. ಮೇಲೆ ಗುರುತಿಸಿದ ನಾಲ್ಕು ವಲಯಗಳ ಕೃಷಿ ಸಂಸ್ಕೃತಿಗಳನ್ನೇ ಗಮನಿಸಿದರೆ ಅವುಗಳಲ್ಲಿ ಹರಿದಿರುವ ನೆಲಮೂಲ ಜ್ಞಾನ ಪರಂಪರೆಗಳು ಅವುಗಳ ಅಸ್ಮಿತೆಯ ಅನನ್ಯತೆಗಳಿಗೆ ಕನ್ನಡಿ ಹಿಡಿದಂತಿದೆ.

ಕನ್ನಡದ ಮೌಖಿಕ ಪರಂಪರೆಯಲ್ಲಿರುವ ಅನುಭವ ಜ್ಞಾನವೆಂಬುದು ನೆಲನಿಷ್ಠೆಯಲ್ಲಿ ಬೇರುಬಿಟ್ಟು ಬೆಳೆದದ್ದು. ಹಾಗೆಯೇ ಕಾಯಕ ಮೂಲದಲ್ಲಿ ಅರಳಿದ್ದು. ಕುಲಚರಿತೆಗಳ ಸಾಂಸ್ಕೃತಿಕ ಧಾರ್ಮಿಕ ಆವರಣದಲ್ಲಿ ಆಚರಣೆಯ ಸ್ಪರ್ಶ ಪಡೆದದ್ದು. ಸಾಂಸ್ಕೃತಿಕ ದ್ರವ್ಯಮೂಲವನ್ನು ಚರಿತ್ರೆಯಾಗಿಸದೆ ಪರಂಪರೆಯ ಧಾರೆಯಾಗಿಸಿ ಪುರಾಣಗಳ ರೂಪಕಾಕೃತಿಯಲ್ಲಿ ಕಾವ್ಯವಾಗಿಸಿ ಕಥನವಾಗಿಸಿ ಆಚರಣೆಯಾಗಿಸಿ ವರ್ತಮಾನದಲ್ಲಿ ನಿರುತವಾಗಿರುವುದು. ಇದು ಮೌಖಿಕ ಪರಂಪರೆಯ ಸ್ವರೂಪ. ಈ ಸಂಪತ್ತಿನ ಮುಖ್ಯವಾಹಕ ಶಕ್ತಿಸಾಧನ ಭಾಷೆ. ಹೀಗೆ ಭಾಷೆ ಎಂಬುದು ಜನಾಂಗವೊಂದರ ಸಾಂಸ್ಕೃತಿಕ ಜೀವಧಾರೆಯನ್ನು ಧಾರಣಮಾಡಿಕೊಂಡಿರುತ್ತದೆ. ನುಡಿಗಟ್ಟುಗಳಲ್ಲಿ ಸಂಧಾಭಾಷೆಯ ಪರಿಭಾಷೆಗಳಲ್ಲಿ ಈ ಜೀವಧಾರೆ ಎಂಬುದು ಉಸಿರಾಡುತ್ತಿರುತ್ತದೆ. ಇಂಥ ನುಡಿಗಳ ಪರಿಭಾಷೆಗಳ ಅನುಭವದ್ರವ್ಯವನ್ನೂ ಬೇರೊಂದು ಭಾಷೆಗೆ ಅನುವಾದಿಸಲಾಗದು. ಅವುಗಳ ಅರ್ಥವ್ಯಂಜಕ ಗುಣ ವಾಚ್ಯದ ನೆಲೆಯದಲ್ಲ; ಅದನ್ನು ಮೀರಿದಂತೆ ರೂಪಕದ ಪ್ರತಿಮಾತ್ಮಕ ಸಂಕೇತದ ಪರಿವ್ಯಾಪ್ತಿಯಲ್ಲಿ ವಿಸ್ತರಿಸಿದ್ದು. ಇವು ಆ ಭಾಷೆಯನ್ನಾಡುವ ಜನಸಂಸ್ಕೃತಿಯ ಪ್ರಾಣಧಾರೆಗಳು. ಒಂದೇ ಭಾಷೆಯಲ್ಲಿ ಭಾಷಾ ಬಳಕೆಯ ಪ್ರಾದೇಶಿಕ ವಿಸ್ತಾರಕ್ಕೆ ಅನುಗುಣವಾಗಿ ನುಡಿಗಟ್ಟುಗಳ ಪ್ರಯೋಗಗಳು ವೈವಿಧ್ಯಮಯವೂ ಅನನ್ಯಗುಣದವೂ ಆಗಿ ಬಳಕೆಯಲ್ಲಿರುತ್ತವೆ. ಕನ್ನಡ ಭಾಷೆಯಲ್ಲಿ ಭಾಷಿಕ ಬಹುತ್ವಗಳ ಅಗತ್ಯತೆಯನ್ನು ಅದರ ನುಡಿಗಟ್ಟುಗಳ ಪ್ರಯೋಗಗಳಲ್ಲೂ ಗುರುತಿಸಬಹುದು. ಸಾಂಸ್ಕೃತಿಕ ಸಂವೇದನೆಯ ಅನನ್ಯತೆಯನ್ನೂ ಈ ವಾಚಿಕ ರೂಪಗಳು ಧಾರಣ ಮಾಡಿಕೊಂಡಿರುತ್ತವೆ. ಸಹಜವಾಗಿ ಆಧುನಿಕ ವಿದ್ಯಮಾನಕ್ಕೆ ಬದುಕು ತೆರೆದುಕೊಂಡಂತೆ ಈ ಪರಂಪರೆಯ ಜ್ಞಾನ ಮರೆಯಾಗುತ್ತದೆ. ಪ್ರಯೋಗಾವಸ್ಥೆಯ ಆವರಣದ ಸ್ಪರ್ಶ ಕಳೆಯುವ ಮುನ್ನ ಅರ್ಥವಿವರಣೆಯ ಜೊತೆಗೆ ಸಂದರ್ಭಸ್ಪರ್ಶದ ಸೊಗಡಿನ ವಿವರಣೆಯನ್ನೂ ಒಳಗೊಂಡಂತೆ ದಾಖಲಿಸಬೇಕಾದ ಅಗತ್ಯ ಈ ಕಾಲದ ತುರ್ತಾಗಿದೆ. ಇದು ಇಂದಿನ ವಿದ್ಯಾವಂತರ ಆದ್ಯ ಕರ್ತವ್ಯವೂ ಆಗಿದೆ. ಇದಕ್ಕಾಗಿ ಕರ್ನಾಟಕ ಸರ್ಕಾರ ಜಾನಪದ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದೆ. ಜಾನಪದ ವಿಶ್ವವಿದ್ಯಾಲಯ ಕೇವಲ ಪಳೆಯುಳಿಕೆಯ ದಾಖಲೀಕರಣದಲ್ಲಿ ನಿರುತವಾಗುವ ಸಂಸ್ಥೆಯಲ್ಲ. ಪರಂಪರೆಯ ಅಧ್ಯಯನ ಮಾಡುತ್ತಲೇ ಜೀವಸತ್ವವನ್ನು ಆಧುನಿಕ ಬದುಕಿನ ಜೊತೆಗೆ ಸಂಗತವಾಗಿಸುವ, ಪರಂಪರೆಯನ್ನು ವರ್ತಮಾನವಾಗಿಸುವ ಸಂಸ್ಥೆಯಾಗಬೇಕಿದೆ. ಅದಕ್ಕಾಗಿ ಅದು ಹಲವು ಪ್ರಗತಿಪರ ಯೋಜನೆಗಳನ್ನು ಹಾಕಿಕೊಂಡಿದೆ. ಜಾನಪದ ನಿಘಂಟು ಯೋಜನೆ ಜಾನಪದ ವಿ.ವಿ.ಯ ಮಹತ್ವದ ಯೋಜನೆ. ಈ ಕಾರ್ಯ ಅಲ್ಪಾವಧಿಯಲ್ಲಿ ಆಗಿ ಮುಗಿಯುವುದಲ್ಲ; ಸಂಘಟನಾತ್ಮಕ ಕಾರ್ಯಯೋಜನೆಯಾಗಿ ದೀರ್ಘಕಾಲದ ಶ್ರಮ ಮತ್ತು ಬದ್ಧತೆಯಿಂದ ಮಾಡುತ್ತಾ ಬಂದಿದೆ. ಈಗಾಗಲೇ ಎರಡು ಸಂಪುಟಗಳನ್ನು

ಪ್ರಕಟಿಸಿರುವ ಈ ಕಾರ್ಯಯೋಜನೆಯು ಮೂರನೆಯ ಸಂಪುಟವನ್ನೂ ಪ್ರಕಟಿಸತೊಡಗಿದೆ. ಈ ಯೋಜನೆಗೆ ಆರ್ಥಿಕ ಸಹಾಯ ನೀಡಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ತನ್ನ ಕರ್ತವ್ಯಪ್ರಜ್ಞೆಯನ್ನು ಮೆರೆದಿದೆ. ಕನ್ನಡ ಭಾಷೆಯ ಜಾನಪದ ಜಗತ್ತಿನ ಈ ಅರಿವಿನ ಭಂಡಾರವನ್ನು ದಾಖಲೀಕರಿಸುತ್ತಿರುವ ವಿವಿಗೆ, ಅದರಲ್ಲಿ ತೊಡಗಿಸಿಕೊಂಡಿರುವ ಸಮಸ್ತ ವಿದ್ವಾಂಸರಿಗೆ, ಸಂಪಾದಕ ಮಂಡಳಿಗೆ, ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ವಂದನೆಗಳು.

ಪ್ರೊ. ಎಸ್. ಜಿ. ಸಿದ್ಧರಾಮಯ್ಯ
ಅಧ್ಯಕ್ಷರು
ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಸಂಪಾದಕರ ಮಾತು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಕನ್ನಡ ಜಾನಪದ ನಿಘಂಟು ಯೋಜನೆಯನ್ನು ತನ್ನ ಮಹತ್ವದ ಸಾಧನೆಗಳಲ್ಲಿ ಒಂದೆಂದು ನಡೆಸಿಕೊಂಡು ಬಂದಿದೆ. ಯೋಜನೆಯ ಪ್ರಕಾರ ಜಾನಪದ ನಿಘಂಟು ಹಲವು ಸಂಪುಟಗಳಲ್ಲಿ ಪ್ರಕಟವಾಗಬೇಕಾಗಿದ್ದು, ಅದರ ಮೊದಲ ಸಂಪುಟವಾಗಿ ಸ್ವರಸಂಪುಟ ಈಗಾಗಲೆ ಪ್ರಕಟವಾಗಿದೆ. ಹಾಗೆಯೇ 'ಕ–ಕೀ'ವರೆಗಿನ ಎರಡನೆಯ ಸಂಪುಟವನ್ನೂ ಪ್ರಕಟಿಸಲಾಗಿದೆ. ಪ್ರಸ್ತುತ ಮೂರನೆಯ ಸಂಪುಟ ಪ್ರಕಟವಾಗುತ್ತಿದೆ; ಇದು 'ಕು'ಯಿಂದ 'ಖೌ'ವರೆಗಿನ ಅಕ್ಷರ/ಧ್ವನಿಮಾಕ್ಕೆ ಸಂಬಂಧಿಸಿದ ಸಂಪುಟವಾಗಿದೆ. ಜನಪದ ಸಂಸ್ಕೃತಿಯನ್ನು ಕಟ್ಟುವ ಕೆಲಸವೇ ಇದರ ಆದ್ಯ ಗುರಿಯಾಗಿದ್ದು, 'ಪದಸಂಸ್ಕೃತಿ'ಯ ಪರಿಕಲ್ಪನೆಯಲ್ಲಿ ಇದನ್ನು ಅತ್ಯಂತ ಸಮರ್ಪಕವಾಗಿ ನಿರ್ವಹಿಸಲಾಗಿದೆ. ಕನ್ನಡ ಜಾನಪದ ನಿಘಂಟಿನ ಸ್ವರೂಪ ಮತ್ತು ಅದರ ಅನನ್ಯತೆಯನ್ನು ಕುರಿತು 'ಪ್ರಸ್ತಾವನೆ'ಯಲ್ಲಿ ಪ್ರತ್ಯೇಕವಾಗಿ ಚರ್ಚಿಸಿದ್ದೇನೆ; ಇದು ಹಿಂದಿನ ಸಂಪುಟಗಳಿಂದ ಇಲ್ಲಿ ಮುಂದುವರಿದಿದೆ. ಈ ಸಂಪುಟದ ವೈಲಕ್ಷ್ಯಣ್ಯಗಳನ್ನು ಅನೇಕ ಉದಾಹರಣೆಗಳೊಡನೆ ಅದರಲ್ಲಿ ವಿವರಿಸಿದ್ದೇನೆ. ಪದಸಂಸ್ಕೃತಿಯ ಪಾರಿಭಾಷಿಕ ಅರ್ಥದಲ್ಲಿಯೇ ಈ ಎಲ್ಲ ಮಾತುಗಳಿವೆ. ಹೀಗೆ ಪದಸಂಸ್ಕೃತಿಯ ನೆಲೆಯಲ್ಲಿಯೇ ರೂಪುಗೊಂಡಿರುವ ಜಾನಪದ ನಿಘಂಟನ್ನು ಅರ್ಥಮಾಡಿಕೊಳ್ಳಲು 'ಪ್ರಸ್ತಾವನೆ' ಕೃತಿಗೆ ಒಂದು ಅಗತ್ಯ ಪ್ರವೇಶವನ್ನು ನೀಡಿದೆ ಎಂಬುದರಲ್ಲಿ ಅನುಮಾನವಿರಲಾರದು.

ಈ ಯೋಜನೆಗೆ ಬೇಕಾದ ಎಲ್ಲ ಸವಲತ್ತುಗಳನ್ನು ವಿಶ್ವವಿದ್ಯಾಲಯ ಕಾಲಕಾಲಕ್ಕೆ ಒದಗಿಸಿ ಕೊಡುತ್ತಾ ಬಂದಿದೆ. ಈ ಯೋಜನೆಯ ಅಸ್ತಿತ್ವಕ್ಕೆ ಕಾರಣರಾದ ಪ್ರಥಮ ಕುಲಪತಿಗಳಾದ ಡಾ.ಅಂಬಳಿಕೆ ಹಿರಿಯಣ್ಣನವರನ್ನು ಇಲ್ಲಿ ನೆನೆಯುತ್ತೇನೆ. ಆನಂತರದಲ್ಲಿ ಕುಲಪತಿಗಳಾಗಿದ್ದ ಡಾ.ಕೆ.ಚಿನ್ನಪ್ಪಗೌಡರು ಯೋಜನೆ ಮುಂದುವರಿಯಲು ಅಗತ್ಯವಿದ್ದ ಅನುಕೂಲಗಳನ್ನು ಕಲ್ಪಿಸಿಕೊಟ್ಟಿದ್ದಲ್ಲದೆ, ಈ ಬಗ್ಗೆ ಅವರು ತೋರಿದ ಆಸಕ್ತಿ, ನೀಡಿದ ಪ್ರೋತ್ಸಾಹ ಅತಿಮುಖ್ಯವಾದುದಾಗಿತ್ತು. ಸಂಶೋಧನೆಯ ಬಗ್ಗೆ ಅವರಿಗಿದ್ದ ಹೆಚ್ಚಿನ ಒಲವಿನಿಂದಾಗಿ, ನಿಘಂಟಿನ ಕೆಲಸ ನಿಲ್ಲದಂತೆ ನೋಡಿಕೊಂಡಿದ್ದಕ್ಕಾಗಿ ಹಾರ್ದಿಕವಾಗಿ ನೆನೆಯುವುದು ನನ್ನ ಕರ್ತವ್ಯವಾಗಿದೆ.

ಜನಪದ ಸಂಸ್ಕೃತಿಯನ್ನು ಸಮರ್ಥವಾಗಿ ಅಭಿವ್ಯಕ್ತಿಸುವ ಒಂದು ಮಾರ್ಗವಾಗಿರುವ ಕನ್ನಡ ಜಾನಪದ ನಿಘಂಟಿನ ಬಗ್ಗೆ ಮೊದಲಿನಿಂದಲೂ ಇತ್ಯಾತ್ಮಕ ಧೋರಣೆಯನ್ನು ಹೊಂದಿರುವ, ಈ ಯೋಜನೆಯ ಯಶಸ್ಸಿಗೆ ಮೊದಲಿನಿಂದಲೂ ಕಾರಣರಾಗಿರುವ, ಪ್ರಸಿದ್ಧ ಜಾನಪದ ವಿದ್ವಾಂಸರೂ ಆಗಿರುವ, ಪ್ರಸ್ತುತ ಕುಲಪತಿಗಳಾಗಿರುವ ಡಾ.ಡಿ.ಬಿ.ನಾಯಕ ಅವರು ನೀಡುತ್ತಾ ಬಂದಿರುವ ಸಕಾಲಿಕ ನೆರವನ್ನೂ, ಆಡಳಿತಾತ್ಮಕ ಅನುಕೂಲಗಳನ್ನೂ ಯಾವೊತ್ತೂ ಮರೆಯುವಂತಿಲ್ಲ. ಈ ಯೋಜನೆಯ ಕೆಲಸ ಸರಾಗವಾಗಿ ನಡೆದುಕೊಂಡು ಹೋಗಲು ಬೆಂಬಲವಾಗಿ ನಿಂತಿರುವ ಅವರ ವಿದ್ವಾದಾಸಕ್ತಿಗೆ ಮತ್ತು ಹಾರ್ದಿಕತೆಗೆ ಕೃತಜ್ಞತಾ ಪೂರ್ವಕ ವಂದನೆಗಳು.

ಜಾನಪದ ವಿಶ್ವವಿದ್ಯಾಲಯದ 'ವಿಸ್ತರಣೆ ಹಾಗೂ ಸಲಹಾ ಕೇಂದ್ರ'ದ ನಿರ್ದೇಶಕರಾಗಿಯೂ ಪ್ರೊ.ಡಿ.ಬಿ.ನಾಯಕ ಅವರು ನಿಘಂಟಿನ ಕೆಲಸ ಕಾರ್ಯಗಳಲ್ಲಿ ನಮ್ಮೊಂದಿಗಿದ್ದಾರೆ; ನಿಘಂಟು ಯೋಜನೆಯ ಸಮಸ್ಯೆಗಳಿಗೆ ಅಗತ್ಯ ಸ್ಪಂದನ ನೀಡಿದ್ದಾರೆ. ಈ ಸಂಪುಟ ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಪ್ರಕಟವಾಗುತ್ತಿರುವುದರಿಂದ ಅವರ ಸಲಹೆ ಮತ್ತು ಮಾರ್ಗದರ್ಶನ ಅಗತ್ಯವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಹೀಗೆ ಯೋಜನೆಗೆ ಸಹಕರಿಸಿದ ಅವರಿಗೆ ಆಭಾರಿಯಾಗಿದ್ದೇನೆ.

ಈ ನಿಘಂಟು ಕಾರ್ಯದ ಎಲ್ಲ ಹಂತಗಳಲ್ಲಿಯೂ ನೆರವು ನೀಡುತ್ತಾ ಬಂದಿದ್ದಾರೆ ಜಾನಪದ ವಿದ್ವಾಂಸರೂ, ನಿರ್ದೇಶಕ ಮತ್ತು ಪ್ರಾಧ್ಯಾಪಕರೂ ಆದ ಡಾ.ಪ್ರೇಮಕುಮಾರ್ ಅವರು. ನಿಘಂಟು ಯೋಜನೆಯ ಸುಗಮ ಕಾರ್ಯನಿರ್ವಹಣೆಗೆ ಪೂರ್ಣ ಸಹಕಾರ ಮತ್ತು ಸ್ಪಂದನವನ್ನು ನೀಡುತ್ತಾ ಬಂದಿರುವ ಡಾ.ಪ್ರೇಮಕುಮಾರ್ ಅವರಿಗೆ ಅನಂತ ವಂದನೆಗಳು.

ಜಾನಪದ ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿಗಳೂ, ಕುಲಸಚಿವರೂ (ಪರೀಕ್ಷಾಂಗ) ಆದ ಡಾ. ಚಂದ್ರಶೇಖರ್ ಅವರು ನಿಘಂಟು ಯೋಜನೆಯ ಬಗೆಗೆ ಕುತೂಹಲಿಗಳೂ, ಪೂರ್ಣ ಸಹಕಾರಿಗಳೂ ಆಗಿದ್ದಾರೆ. ಅವರನ್ನೂ ಇಲ್ಲಿ ನೆನೆಯ ಬಯಸುತ್ತೇನೆ.

ಈ ಸಂಪುಟದ ಪ್ರಕಟಣೆಗೆ ಅನುದಾನ ನೀಡಿ ಸಹಕರಿಸಿದ ಪ್ರಸಿದ್ಧ ಲೇಖಕರೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾನ್ಯ ಅಧ್ಯಕ್ಷರೂ ಆದ ಪ್ರೊ.ಎಸ್.ಜಿ.ಸಿದ್ಧರಾಮಯ್ಯನವರಿಗೆ ಹೃತ್ಪೂರ್ವಕ ನಮನಗಳು.

ಕರ್ನಾಟಕ ಸಂಘದ ಅಧ್ಯಕ್ಷರೂ ನಿಘಂಟು ಯೋಜನೆಯ ಗೌರವ ಸಂಯೋಜಕ ಸಂಪಾದಕರೂ ಆದ ಪ್ರೊ.ಜಯಪ್ರಕಾಶಗೌಡರು ನಿಘಂಟಿನ ಕೆಲಸಕಾರ್ಯಗಳು ಸುಗಮವಾಗಿ ನಡೆಯಲು ಅಗತ್ಯ ಅನುಕೂಲಗಳನ್ನು ಕಲ್ಪಿಸಿಕೊಟ್ಟು, ಈ ಯೋಜನೆ ಯಶಸ್ವಿಯಾಗಿ ನಡೆಯುವಂತೆ ನೋಡಿಕೊಳ್ಳುತ್ತಿದ್ದಾರೆ. ಈ ಸಂಬಂಧವಾಗಿ ಅವರನ್ನು ಹಾರ್ದಿಕವಾಗಿ ನೆನೆಯುತ್ತೇನೆ.

ಕನ್ನಡ ಜಾನಪದ ನಿಘಂಟಿನ ಪ್ರಸ್ತುತ ಸಂಪುಟದ ಪ್ರಕಟಣೆಯಲ್ಲಿ ಸಹಕರಿಸಿದ ಸಹಸಂಪಾದಕರಾದ ಡಾ.ಬೋರೇಗೌಡ ಚಿಕ್ಕಮರಳಿ, ಪ್ರೊ.ಸಿ.ನೀಲಕಂಠೇಗೌಡ; ತಜ್ಞಸಹಾಯಕರಾದ ಡಾ.ಎಚ್.ಎಂ.ಉಮೇಂದ್ರಕುಮಾರ್ ಅವರನ್ನು ಅಗತ್ಯವಾಗಿ ಸ್ಮರಿಸಬೇಕು. ನಿಘಂಟನ್ನು ಸಿದ್ಧಪಡಿಸುವಲ್ಲಿ ಇವರೆಲ್ಲರೂ ಶ್ರದ್ಧೆಯಿಂದ ದುಡಿದಿದ್ದಾರೆ. ಜಾನಪದ ನಿಘಂಟಿನ ರಚನೆಯೆಂದರೆ ಅದೊಂದು ಸಂಶೋಧನೆಯೆಂದೇ ನನ್ನ ಭಾವನೆ. ಈ ಕೆಲಸವನ್ನು ಸಹೋದ್ಯೋಗಿ ಬಂಧುಗಳೆಲ್ಲರೂ ಪ್ರಾಮಾಣಿಕವಾಗಿ ನಿರ್ವಹಿಸಿದ್ದಾರೆ; ಅವರೆಲ್ಲರಿಗೂ ವಂದನೆಗಳು.

ಮುಖ್ಯ ವಿಷಯಗಳನ್ನು ಇಂಗ್ಲಿಷಿಗೆ ಅನುವಾದಿಸಿಕೊಟ್ಟ ಶ್ರೀ ಎಲ್.ಹೋನ್ನೇಗೌಡ, ಶ್ರೀ ಎನ್.ಎಸ್.ಚಂದ್ರಣ್ಣ ಮತ್ತು ಸಹಾಯಕ ಪ್ರಾಧ್ಯಾಪಕ ಶ್ರೀ ಜಿ.ಎಸ್.ದಯಾನಂದ ಸಾಗರ್ ಅವರಿಗೆ; ಶಾಸನೋಕ್ತ ಸ್ಥಳನಾಮಗಳ ವಿವರಗಳನ್ನು ಒದಗಿಸಿ ಕೊಟ್ಟ ಡಾ.ಎಂ.ಜಿ.ಮಂಜುನಾಥ್, ಡಾ.ಧನರಾಜ್ ಅವರಿಗೆ; ಮಾಹಿತಿ ಕುಳುಹಿಸಿಕೊಟ್ಟ ಕ್ಷೇತ್ರತಜ್ಞರಿಗೆ ವಂದನೆಗಳು.

ಪ್ರಸ್ತುತ ಸಂಪುಟದ ಅಕ್ಷರ ಸಂಯೋಜನೆಗೆ ಕಾರಣರಾದ ಶ್ರೀಮತಿ ಶಿಲ್ಪ.ಡಿ.ಪಿ ಅವರಿಗೆ, ಕಛೇರಿ ಸಹಾಯಕರಾದ ಶ್ರೀ ಸಿ.ಶಂಕರ್ ಅವರಿಗೆ ವಂದನೆಗಳು.

ಡಾ. ರಾಗೌ
ಸಂಪಾದಕರು

ನಿರ್ದೇಶಕರ ಮಾತು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಸಮಾಜದ ಸಮಸ್ತ ಸಮುದಾಯಗಳ ಜ್ಞಾನ ಸಂಗ್ರಹಣೆ, ಅಧ್ಯಯನ, ಅಧ್ಯಾಪನ, ಸಂಶೋಧನೆಯಂತಹ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ರೂಪಿಸಿಕೊಂಡು ಕಾರ್ಯ ಪ್ರವೃತ್ತವಾಗಿದೆ. ವಿಶ್ವವಿದ್ಯಾಲಯವು ಇನ್ನೊಂದು ಹೆಜ್ಜೆ ಮುಂದೆ ಹೋಗಿ ತನ್ನ ಕಾರ್ಯಕ್ಷೇತ್ರಗಳನ್ನು ವಿಸ್ತರಿಸಿಕೊಳ್ಳುವ ಭಾಗವಾಗಿ 'ವಿಸ್ತರಣೆ ಹಾಗೂ ಸಲಹಾ ಕೇಂದ್ರ' ವನ್ನು ಆರಂಭಿಸಿದೆ. ವಿಶ್ವವಿದ್ಯಾಲಯಗಳು ನಿಜವಾದ ಅರ್ಥದಲ್ಲಿ ಜ್ಞಾನದ ಪುನರುತ್ಪಾದನೆಯಲ್ಲಿ ತೊಡಗಿಕೊಳ್ಳಬೇಕು. ಸ್ಥಾಪಿತ ಸಿದ್ಧ ಜ್ಞಾನದ ಸಂಗ್ರಹದ ಜೊತೆಗೆ ನಿತ್ಯನೂತನವಾದ ಜನಪದ ಸಂಸ್ಕೃತಿಯನ್ನು ಪುನರ್‌ನಿರ್ವಚಿಸುವ, ಹೊಸ ರೀತಿಯಲ್ಲಿ ಸ್ಥಾಪಿತಗೊಳಿಸುವ ಕೈಂಕರ್ಯಕ್ಕೆ ಕೈ ಹಾಕಬೇಕು. ಋತುಮಾನಗಳು ಬದಲಾದಂತೆ ಮನುಷ್ಯ ಬದುಕು ಬದಲಾಗುತ್ತಲೇ ಸಂವೇದನಾಶೀಲಗೊಳ್ಳುತ್ತ ಹೋಗುತ್ತದೆ. ನಮ್ಮ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿಗಳು ತನ್ನತನದ ಛಾಯೆಯನ್ನು ಕಳೆದುಕೊಳ್ಳುತ್ತ ನಡೆದ ಇವೊತ್ತಿನ ಸಂದಿಗ್ಧತೆಯಲ್ಲಿ ನಾವು ಮಾಡುವ ವಿನೂತನ ಜ್ಞಾನಶೋಧಗಳು, ಪ್ರಯೋಗಗಳು ಕಳೆಗುಂದುತ್ತಿರುವ ಜನಪದ ಸಂಸ್ಕೃತಿಯನ್ನು ಕಳೆಗಟ್ಟುವಂತೆ ಮಾಡದೇ ಹೋದರೆ ನಮ್ಮ ಪ್ರಯತ್ನಗಳು ನಿರರ್ಥಕ. ಆ ಎಚ್ಚರಿಕೆಯನ್ನು ಇಟ್ಟುಕೊಂಡೇ ಜಾನಪದ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಅತ್ಯುಪಯುಕ್ತ ಕಾರ್ಯಯೋಜನೆಗಳನ್ನು ರೂಪಿಸಿದೆ.

ಅಂತರ್‌ಶಿಸ್ತೀಯ ಜ್ಞಾನ ಶಾಖೆಗಳಲ್ಲಿ ಜಾನಪದವೂ ಒಂದು. ನೆಲಮೂಲ ಜೀವನ, ಕಲೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಹೊಸ ಹೊಸ ಜ್ಞಾನವನ್ನು ಶೋಧಿಸಿ, ಜಗತ್ತಿನ ಮೂಲೆ ಮೂಲೆಗೆ ತಲುಪಿಸುವ ಗುರುತರ ಜವಾಬ್ದಾರಿ ವಿಶ್ವವಿದ್ಯಾಲಯದ ಮೇಲಿದೆ. ಅದನ್ನು ಸಾಧ್ಯವಾಗಿಸುವ ಉದ್ದೇಶ ಇಟ್ಟುಕೊಂಡೇ ಆರಂಭವಾದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರವು ಜಾನಪದ ಕ್ಷೇತ್ರದ ಬಾಹುಳ್ಯತೆ, ವಿಶ್ವವ್ಯಾಪಕತೆ, ಅದರ ಮೂಲ–ಚೂಲಗಳನ್ನು ಕಂಡರಿಸುವ ಪ್ರಯತ್ನ ಮಾಡುವ ಮಹದಾಸೆ ಹೊಂದಿದೆ. ಜೊತೆಗೆ ಹೊಸ ಅಧ್ಯಯನಗಳು, ನೂತನ ಮಾದರಿಯ ಸಂಶೋಧನೆಗಳು, ನಾಡಿನ ಶ್ರೇಷ್ಠ ವಿದ್ವಾಂಸರ ಕೃತಿಗಳನ್ನು ಪ್ರಕಟಿಸುವ ಮೂಲಕ ಜ್ಞಾನ ಪ್ರಸಾರದ ಉದ್ದೇಶಕ್ಕೆ ಒತ್ತಾಸೆಯಾಗಿ ನಿಲ್ಲಲಿದೆ. ಕೇಂದ್ರವು ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಮೌಲಿಕವಾದ ಪುಸ್ತಕಗಳ ಪ್ರಕಟಣೆಗೆ ಮುಂದಾಗಿದೆ. ನಾವು ಪ್ರಕಟಮಾಡುವ ವೈವಿಧ್ಯಪೂರ್ಣವಾದ ಮೌಲಿಕ ಕೃತಿಗಳು ನಾಡಿನ ಓದುಗರಿಗೆ ತಲುಪಿ, ಅವು ಸದುಪಯೋಗವಾದರೆ ಮಾತ್ರ ನಮ್ಮ ಶ್ರಮ ಸಾರ್ಥಕ ಎಂದು ಭಾವಿಸುತ್ತೇನೆ.

ಕನ್ನಡ ನಾಡು ವೈವಿಧ್ಯಮಯವಾದ ಜನಸಂಸ್ಕೃತಿಯನ್ನು ಹೊಂದಿದೆ. ಅಂತೆಯೇ ಕರ್ನಾಟಕದಲ್ಲಿ ಬಹುಭಾಷಾ ಸಂಸ್ಕೃತಿಯನ್ನು ಕಾಣಬಹುದಾಗಿದೆ. ಭಾಷೆಯು ಮನುಷ್ಯನ ಅಭಿವ್ಯಕ್ತಿ ಸಾಧ್ಯತೆಗಳ ಮುಖ್ಯ ಮಾಧ್ಯಮ ಎಂಬುದು ನಿಸ್ಸಂದೇಹ. ಅಭಿವ್ಯಕ್ತಿಯ ಎಲ್ಲ ಆಯಾಮಗಳನ್ನು ಒಳಗೊಳ್ಳುವ ಮತ್ತು ಅದನ್ನು ವಿಸ್ತರಿಸುವ ಬಹುದೊಡ್ಡ ಶಕ್ತಿ ಭಾಷೆಗೆ ಇದೆ. ಪ್ರಪಂಚದ ಎಲ್ಲ ಭಾಷೆಗಳೂ ಶ್ರೇಷ್ಠವೇ. ಅದರಲ್ಲೂ ಭಾಷೆ ಉಳಿಯುವುದು ಆಯಾಯ ಜನಸಮುದಾಯಗಳ ಉಳಿಯುವಿಕೆ ಮತ್ತು ಅದರ ಬಳಕೆಯ ಪ್ರಮಾಣವನ್ನು ಹೆಚ್ಚಿಸಿಕೊಂಡಾಗಲೇ ಎಂಬುದು ವಾಸ್ತವ. ಸ್ಥಳೀಯ ಇಲ್ಲವೇ ಪ್ರಾದೇಶಿಕ ಭಾಷೆಗಳು ಜಾಗತಿಕ ಪೈಪೋಟಿಯನ್ನು ಎದುರಿಸಲಾಗದೆ ಇಂದು ತೀವ್ರ ಹಿನ್ನೆಡೆ ಅನುಭವಿಸುತ್ತಿವೆ. ಇದು ತೀವ್ರ ಕಳವಳಕಾರಿ ಸಂಗತಿ. ಈ ನಡುವೆ ದೇಸೀ ಭಾಷೆ, ಸಂಸ್ಕೃತಿಗಳನ್ನು ಸಂರಕ್ಷಿಸುವ ಪ್ರಯತ್ನಗಳು ನಡೆಯುತ್ತಿರುವುದೂ ಅತ್ಯಂತ ಆಶಾದಾಯಕ ಬೆಳವಣಿಗೆ. ಇದರ ಭಾಗವಾಗಿ ಪ್ರಾದೇಶಿಕ ಭಾಷಾ

ಸಂಸ್ಕೃತಿ, ಸಮೃದ್ಧತೆಯನ್ನು ಮರುಶೋಧಿಸಿ, ಸಂರಕ್ಷಿಸಿ, ಸಂವರ್ಧಿಸುವ ಕೆಲಸಗಳು ಚಾಲನೆ ಪಡೆದುಕೊಂಡಿವೆ. ಈ ಮೂಲಕ ನಾಡಿನ ಜಾನಪದ ಬದುಕು, ಸಂಸ್ಕೃತಿ ಹಾಗೂ ಜಾನಪದೀಯ ಅಂಶಗಳನ್ನು ಶಬ್ದರೂಪದಲ್ಲಿ ದಾಖಲಿಸುವ ಮಹತ್ವದ ಚಾರಿತ್ರಿಕ ಕೆಲಸಗಳು ಆಗಬೇಕಾದವೇ ಆಗಿವೆ. ಇಂತಹ ಮಹತ್ವಾಕಾಂಕ್ಷೆಯ ಕಾರ್ಯಗಳಿಂದಾಗಿಯಾದರೂ, ದೇಶೀ ಸಂಸ್ಕೃತಿಯ ಪುನರುಜ್ಜೀವನ ಸಾಧ್ಯವಾಗುತ್ತಲಿದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ 'ಕನ್ನಡ ಜಾನಪದ ನಿಘಂಟು' ಅತ್ಯಂತ ಗಮನಾರ್ಹವಾದುದಾಗಿದೆ. ದೈನಂದಿನ ಬಳಕೆಯ ಕನ್ನಡ ಭಾಷೆಯಲ್ಲಿ ಕ್ರಿಯಾಶೀಲ ಹಾಗೂ ನಿತ್ಯ ಬಳಕೆಯ ಪದಗಳನ್ನು ಸಂಸ್ಕೃತಿಯ ವಿಶಿಷ್ಟತೆಯೊಂದಿಗೆ ವಿವರಿಸುವ ಪರಿಕಲ್ಪನೆಯೊಂದಿಗೆ ಕನ್ನಡ ಜಾನಪದ ನಿಘಂಟು ಮೂಡಿಬರುತ್ತಿದ್ದು, ಜಾನಪದದೊಂದಿಗೆ ಸಂಬಂಧ ಹೊಂದಿರುವ ಗ್ರಂಥಪದಗಳನ್ನು ವಿಶ್ಲೇಷಿಸುವ ಮಾದರಿಯನ್ನು ಇಲ್ಲಿ ಅನುಸರಿಸಲಾಗಿದೆ. ಪ್ರಯೋಗಾತ್ಮಕ ಉಚ್ಚಾರ ಎಂದಿನಂತೆ ಉಳಿಸಿಕೊಳ್ಳುವ ಜೊತೆಗೆ ಬಳಕೆಯ ಸಂದರ್ಭವನ್ನು ಉಲ್ಲೇಖಿಸಿ, ಕಾಲ/ದೇಶಗಳ ಮೂಲಕ ಭಿನ್ನ ಪಠ್ಯತೆಯನ್ನು ಇಲ್ಲಿ ನೀಡಲಾಗಿದೆ. ಪದದ ಸಾಂಸ್ಕೃತಿಕ ಮತ್ತು ಸಾಮಾಜಿಕ ಮಹತ್ವವನ್ನು ಗುರುತಿಸುವ ಜೊತೆಗೆ ಅದರ ಸಮಾನ ರೂಪಗಳನ್ನು ಹಾಗೂ ಭಿನ್ನ ರೂಪಗಳನ್ನು ಕೊಡುವ ಮೂಲಕ ಪದಸಂಸ್ಕೃತಿಯನ್ನು ವಿಶ್ಲೇಷಿಸಲಾಗಿದೆ. ಆಹಾರ, ಔಷಧಿ, ನಂಬಿಕೆ, ಕಲೆಗಳ ಜೊತೆಗೆ ಪ್ರಕೃತಿ-ಸಂಸ್ಕೃತಿ ಹಾಗೂ ವಿವಿಧ ಸಮುದಾಯಗಳ ವೈವಿಧ್ಯಮಯ ಪದ ಬಳಕೆಯ ವಿಶೇಷಗಳನ್ನು ಈ ನಿಘಂಟಿನಲ್ಲಿ ಕಟ್ಟಿಕೊಡುವ ಮೂಲಕ ಅಧ್ಯಯನ ಲೋಕಕ್ಕೆ ಈ ನಿಘಂಟಿನ ಕೊಡುಗೆ ಸ್ತುತ್ಯಾರ್ಹವಾದುದು.

ಇಂತಹ ಅಮೂಲ್ಯ ನಿಘಂಟಿನ ಸಂಪುಟಗಳನ್ನು ಸಿದ್ಧಪಡಿಸುತ್ತಿರುವ ಸಂಪಾದಕರಾದ ಪ್ರೊ. ರಾಮೇಗೌಡ (ಡಾ.ರಾಗೌ), ಗೌರವ ಸಂಯೋಜಕ ಸಂಪಾದಕರಾದ ಪ್ರೊ. ಜಯಪ್ರಕಾಶಗೌಡ, ಸಹ ಸಂಪಾದಕರಾದ ಡಾ. ಬೋರೇಗೌಡ ಚಿಕ್ಕಮರಳಿ ಮತ್ತು ಪ್ರೊ. ಸಿ. ನೀಲಕಂಠೇಗೌಡ ಅವರಿಗೆ, ತಜ್ಞ ಸಹಾಯಕರಾದ ಡಾ. ಎಚ್. ಎಂ. ಉಮೇಂದ್ರಕುಮಾರ್ ಅವರಿಗೆ ಕೃತಜ್ಞತೆಗಳು ಸಲ್ಲುತ್ತವೆ.

ಈ ಯೋಜನೆ ಯಶಸ್ವಿಗೊಳ್ಳಲು ಸರ್ವ ರೀತಿಯಲ್ಲೂ ಸಹಕಾರ ನೀಡುತ್ತಿರುವ ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿಗಳೂ, ಪರೀಕ್ಷಾಂಗ ಕುಲಸಚಿವರೂ ಆದ ಡಾ. ಚಂದ್ರಶೇಖರ್ ಅವರಿಗೆ, ನಿರ್ದೇಶಕ ಹಾಗೂ ಪ್ರಾಧ್ಯಾಪಕ ಡಾ. ಕೆ. ಪ್ರೇಮಕುಮಾರ ಅವರಿಗೆ ಕೃತಜ್ಞತೆಗಳು. ಡಿ.ಟಿ.ಪಿ.ಗೆ ಅಳವಡಿಸಿದ ಶ್ರೀಮತಿ ಶಿಲ್ಪ. ಡಿ. ಪಿ, ಕಛೇರಿ ಸಹಾಯಕ ಶ್ರೀ ಸಿ. ಶಂಕರ್ ಸೇರಿದಂತೆ ಗ್ರಂಥವು ಪ್ರಕಟಗೊಳ್ಳುವಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಶ್ರಮಿಸಿದ ಎಲ್ಲರಿಗೂ ಕೃತಜ್ಞತೆಗಳು.

ಪ್ರೊ. ಡಿ.ಬಿ. ನಾಯಕ
ನಿರ್ದೇಶಕರು
ವಿಸ್ತರಣೆ ಹಾಗೂ ಸಲಹಾ ಕೇಂದ್ರ

ಗೌರವ ಸಂಯೋಜಕ ಸಂಪಾದಕರ ಮಾತು

ಕನ್ನಡ ನಾಡಿನ 'ಕರ್ನಾಟಕ ಸಂಘ' ಗಳು ಸ್ವಾತಂತ್ರ್ಯ ಪೂರ್ವದಲ್ಲೇ, ಕನ್ನಡ ನಾಡು – ನುಡಿಯ ಬಗ್ಗೆ ಸ್ಥಳೀಯ ಸಂಸ್ಕೃತಿಯ ಬಗ್ಗೆ ಕಾವಲುಗಾರನಂತಿರಲು ಹುಟ್ಟಿಕೊಂಡ ಸಂಸ್ಥೆಗಳು. ಸ್ವಾತಂತ್ರ್ಯಪೂರ್ವದಲ್ಲಿ ಸ್ವಾತಂತ್ರ್ಯದ ಬಯಕೆ ಮತ್ತು ಕರ್ನಾಟಕ ಏಕೀಕರಣದ ಬಯಕೆ ಒಟ್ಟೊಟ್ಟಿಗೇ ಸಾಗುತ್ತಿದ್ದುದರ ಪರಿಣಾಮವಾಗಿ ಕನ್ನಡ ನಾಡಿನ ಹಲವೆಡೆಗಳಲ್ಲಿ ಕರ್ನಾಟಕ ಸಂಘಗಳ ಉದಯವಾದದ್ದು ಇಂದು ಇತಿಹಾಸ.

ಅಂತಹ ಸಂದರ್ಭದಲ್ಲಿ ಹುಟ್ಟಿಕೊಂಡದ್ದು ಮಂಡ್ಯದ ಕರ್ನಾಟಕ ಸಂಘ. ೧೯೪೬ರಲ್ಲಿ ಅಧಿಕೃತವಾಗಿ ನೋಂದಣಿಗೊಂಡ ನಮ್ಮ ಸಂಘ ಅದಕ್ಕೆ ಮುಂಚಿತವಾಗಿಯೇ ಕೆಲಸ ನಿರ್ವಹಿಸುತ್ತಿತ್ತು ಎಂಬುದರ ಬಗ್ಗೆ ಮೌಖಿಕ ಸಾಕ್ಷಿಗಳಿವೆ. ಈ ಸಂಘದ ಆಶ್ರಯದಲ್ಲಿ ಅಂದಿನಿಂದ ಇಂದಿನವರೆಗಿನ ಸಾಹಿತ್ಯದ ಅಧ್ವರ್ಯುಗಳೆಲ್ಲ ತಮ್ಮ ಉಪನ್ಯಾಸಗಳ ಮೂಲಕ ಜನರ ಬೌದ್ಧಿಕ ಶಕ್ತಿಯನ್ನು ವಿಸ್ತಾರಗೊಳಿಸಿದ್ದಾರೆ. ಈ ಜಿಲ್ಲೆಯ ಬಹುತೇಕ ಜನನಾಯಕರೆಲ್ಲ ಒಂದಲ್ಲ ಒಂದು ಹಂತದಲ್ಲಿ ಒಂದಲ್ಲಾ ಒಂದು ವಿಧದಲ್ಲಿ ಕರ್ನಾಟಕ ಸಂಘದ ಸಾಹಚರ್ಯವನ್ನು ಪಡೆದು ಇದರ ಮುಂದುವರೆಕೆಗೆ ಮತ್ತು ಹೆಗ್ಗಳಿಕೆಗೆ ಕಾರಣರಾಗಿದ್ದಾರೆ.

ತನ್ನದೇ ಪುಟ್ಟ ಕಟ್ಟಡವೊಂದನ್ನು ಹೊಂದಿ ಸಾಗುತ್ತಿದ್ದ ಕರ್ನಾಟಕ ಸಂಘ ಸಹಜವಾಗಿಯೇ ಹಲವಾರು ಏಳುಬೀಳುಗಳನ್ನು ಕಂಡರೂ ತನ್ನ ಜೀವಂತಿಕೆಯನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿರುವುದಕ್ಕೆ ಹಲವಾರು ಜನರ ಪ್ರೀತಿಯೇ ಕಾರಣವಾಗಿದೆ. ಹೀಗೆ ನಡೆದುಕೊಂಡು ಬರುತ್ತಿದ್ದ ಕರ್ನಾಟಕ ಸಂಘದ ಇತಿಹಾಸದಲ್ಲಿ ೨೦೦೭ನೇ ಇಸವಿ ಒಂದು ಕ್ರಾಂತಿಕಾರಕ ವರ್ಷವೇ ಆಗಿಹೋಯಿತು. ಆ ಸಂದರ್ಭದ ಅಧ್ಯಕ್ಷರ ಒತ್ತಾಯದ ಮೇರೆಗೆ ಕಾರ್ಯದರ್ಶಿಯಾಗಿ ನಾನು ಬಂದೆ. ವಿದ್ಯಾರ್ಥಿ ದೆಸೆಯಿಂದಲೂ ಕರ್ನಾಟಕ ಸಂಘದ ಚಟುವಟಿಕೆಗಳನ್ನು ಗಮನಿಸುತ್ತಾ ಬಂದಿದ್ದ ನಾನು ಇದರ ದುಸ್ಥಿತಿಯನ್ನು ಕಂಡು ಇದನ್ನು ಮತ್ತೆ ಉಚ್ಛ್ರಾಯಸ್ಥಿತಿಗೆ ತಲುಪಿಸಲು ಕಟಿಬದ್ಧನಾದೆ. ಅದರ ಫಲವಾಗಿ ಇಂದು ಕರ್ನಾಟಕ ಸಂಘ ಹಲವು ಹತ್ತು ಸ್ತರಗಳಲ್ಲಿ ವಿಸ್ತರಣಗೊಂಡಿದೆ. ಜಿಲ್ಲೆಯ ಹಲವಾರು ಜನ ಅಧಿಕಾರಿಗಳ, ಜನಸಾಮಾನ್ಯರ ದೇಣಿಗೆಗಳಿಂದ, ಬಹುಮುಖ್ಯವಾಗಿ ಪೋಷಕರಾಗಿ ನನಗೆ ಬೆಂಬಲ ನೀಡಿದ ಅಂದಿನ ಶಾಸಕರಾಗಿದ್ದ ಶ್ರೀ ಎಂ.ಶ್ರೀನಿವಾಸ್, ಶ್ರೀ ಎಂ.ಡಿ. ರಮೇಶ್‌ರಾಜು, ಶ್ರೀ ಎಚ್.ಹೊನ್ನಪ್ಪ, ಶ್ರೀ ಬಿ.ರಾಮಕೃಷ್ಣ, ಶ್ರೀ ಮಧು ಜಿ.ಮಾದೇಗೌಡ ಮುಂತಾದವರು ಒತ್ತಾಸೆಯಾಗಿ ನಿಂತದ್ದು ಕರ್ನಾಟಕ ಸಂಘದ ಅದೃಷ್ಟವಾಗಿ ಪರಿಣಮಿಸಿತು.

ನನ್ನ ಜೊತೆ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಕೈಜೋಡಿಸಿದ ಸ್ನೇಹಿತರಿಂದಾಗಿ, ಸಾಂಸ್ಕೃತಿಕ ಕ್ಷೇತ್ರಕ್ಕೆ ಮೀಸಲಾಗಿದ್ದ ಸಂಘವನ್ನು ಶೈಕ್ಷಣಿಕವಾಗಿ ಮತ್ತು ಸಂಶೋಧನಾತ್ಮಕವಾಗಿ ಅಣಿಗೊಳಿಸಲು ಮನಸ್ಸು ಮಾಡಲಾಯಿತು. ಇವುಗಳಿಗೆ ಪೂರಕವಾಗಿ ಪ್ರಕಟಣಾ ವಿಭಾಗವನ್ನು ತೆರೆಯಲಾಯಿತು. ಇದರ ಫಲವಾಗಿ ಕನ್ನಡ ವಿಶ್ವವಿದ್ಯಾಲಯ ಮತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಕರ್ನಾಟಕ ಸಂಘಕ್ಕೆ ಸಂಶೋಧನಾ ಕೇಂದ್ರವಾಗಿ ಮಾನ್ಯತೆ ನೀಡಿದ್ದು ಸಂಘಕ್ಕೊಂದು ಗರಿಮೂಡಿಸಿತು. ಶೈಕ್ಷಣಿಕ ಚಟುವಟಿಕೆಯಾಗಿ ಎಂ.ಫಿಲ್. ತರಗತಿಗಳನ್ನು, ಸಂಶೋಧನೆಯ ಅಂಗವಾಗಿ ಪಿಎಚ್.ಡಿ. ವಿದ್ಯಾರ್ಥಿಗಳಿಗೆ ಅವಕಾಶವನ್ನು ಕಲ್ಪಿಸುವಂತಾಯಿತು. ಇಂದು ಹಲವಾರು ಜನ ಎಂ.ಫಿಲ್. ಪದವಿಯನ್ನೂ ಕನ್ನಡ ಮತ್ತು ಇತಿಹಾಸದಲ್ಲಿ ಪಿಎಚ್.ಡಿ. ಪದವಿಗಳನ್ನೂ ಪಡೆದಿರುವುದು ಸಂಘದ ಹೆಗ್ಗಳಿಕೆಯ ವಿಷಯ. ಪ್ರಕಾಶನ ಕಾರ್ಯಕ್ಕೂ ಕೈಹಚ್ಚಿರುವ ಸಂಘ ಇದುವರೆಗೆ ೩೦ಕ್ಕೂ ಮಿಕ್ಕು ವಿಮರ್ಶೆ, ಸಂಶೋಧನೆ ಹಾಗೂ ಸಾಮಾಜಿಕ ಚಿಂತನಾ ಗ್ರಂಥಗಳನ್ನು ಪ್ರಕಟಿಸಿರುವ ದಾಖಲೆಯನ್ನು ಹೊಂದಿದೆ.

ಇಂತಹ ಸಂದರ್ಭದಲ್ಲಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಡಾ. ಅಂಬಳಿಕೆ ಹಿರಿಯಣ್ಣ ಅವರನ್ನು ಭೇಟಿಯಾದಾಗ 'ಕನ್ನಡ ಜಾನಪದ ನಿಘಂಟು'ವಿನ ಬಗ್ಗೆ ಪ್ರಸ್ತಾಪಿಸಿ ಅದು ಕುಂಠಿತವಾಗಿ ನಡೆಯುತ್ತಿರುವುದಕ್ಕೆ ವಿಷಾದ ವ್ಯಕ್ತಪಡಿಸಿದರು. ಆಗ ನಾನು "ಆ ಕೆಲಸವನ್ನು ನಮ್ಮ ಕರ್ನಾಟಕ ಸಂಘಕ್ಕೆ ವಹಿಸಿಕೊಡಿ, ನಾಡಿನ ಪ್ರಸಿದ್ಧ ವಿದ್ವಾಂಸರಾದ ಡಾ. ರಾಗೌ ನೇತೃತ್ವದಲ್ಲಿ ಇದನ್ನು ಆಗುಮಾಡಿಸುತ್ತೇವೆ" ಎಂದೆ. "ರಾಗೌ ಅವರನ್ನು ಒಪ್ಪಿಸುತ್ತೀರಾ?" ಎಂದು ಕೇಳಿದರು. ಆಗ ನಾನು "ಡಾ. ರಾಗೌ ಇತ್ತೀಚಿನ ದಿನಗಳಲ್ಲಿ ಕರ್ನಾಟಕ ಸಂಘದ ಅವಿಭಾಜ್ಯ ಅಂಗವೇ ಆಗಿದ್ದಾರೆ. ಈ ಸಂಘದ ಉತ್ಕೃಷ್ಟತೆಗಾಗಿ ತಮ್ಮನ್ನು ಮುಡುಪಾಗಿಸಿಕೊಂಡಿದ್ದಾರೆ. ದಿನನಿತ್ಯವೂ ಕರ್ನಾಟಕ ಸಂಘದ ಜೊತೆ ಬೌದ್ಧಿಕವಾಗಿ ಮತ್ತು ಭೌತಿಕವಾಗಿ ಒಡನಾಟವಿಟ್ಟುಕೊಂಡಿದ್ದಾರೆ" ಎಂದು ತಿಳಿಸಿದೆ. ಕುಲಪತಿಗಳು ಸಂತೋಷದಿಂದ ಒಪ್ಪಿ "ಡಾ.ರಾಗೌ ಮತ್ತು ಯೋಜನೆಯೊಡನೆ ಗೊಟಗೋಡಿಗೆ ಬನ್ನಿ" ಎಂದು ತಿಳಿಸಿದರು. ಡಾ.ರಾಗೌ ಅವರಿಗೆ ಈ ವಿಷಯವನ್ನು ತಿಳಿಸಿ ಅವರನ್ನು ಒಪ್ಪಿಸಿ ವಿಸ್ತೃತವಾದ ಯೋಜನೆಯನ್ನು ಅವರಿಂದ ಸಿದ್ಧಪಡಿಸಿಕೊಂಡು ವಿಶ್ವವಿದ್ಯಾನಿಲಯದ ಕುಲಪತಿಗಳ ಕಛೇರಿಗೆ ಹೋಗಿ ಯೋಜನೆಯನ್ನು ಮಂಡಿಸಿದೆವು. ಕುಲಪತಿಗಳಾಗಿದ್ದ ಡಾ.ಅಂಬಳಿಕೆ ಹಿರಿಯಣ್ಣ ಹಾಗೂ ಕುಲಸಚಿವರಾದ ಡಾ.ಡಿ.ಬಿ.ನಾಯಕ ಅವರು ಅತ್ಯಂತ ಸಂತೋಷದಿಂದ ಈ ಕೆಲಸವನ್ನು ಕೈಗೊಳ್ಳುವುದಾಗಿ ತಿಳಿಸಿದರು. ಈ ಯೋಜನೆಗೆ ಬೇಕಾಗುವ ಸಂಪನ್ಮೂಲ ವ್ಯಕ್ತಿಗಳನ್ನು ಆರಿಸಿಕೊಳ್ಳಲು ನಮಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟರು ಮತ್ತು ನಿಘಂಟಿಗೆ ಪೂರಕವಾಗಿ ಬೇಕಾಗಿರುವ ಹಲವಾರು ಸೌಲಭ್ಯಗಳನ್ನು ಒದಗಿಸಿಕೊಡಲು ಮುಂದಾದರು. ಅದರ ಫಲವಾಗಿ ಡಾ.ರಾಗೌ ಅವರ ಮುಂದಾಳತ್ವದಲ್ಲಿ ಪ್ರಥಮ ಮತ್ತು ದ್ವಿತೀಯ ಸಂಪುಟಗಳ ಬಿಡುಗಡೆಯೂ ಆಯಿತು.

ಮೂರನೆಯ ಸಂಪುಟ ಈಗ ಸಿದ್ಧಗೊಂಡು ಬಿಡುಗಡೆಯಾಗುತ್ತಿದೆ. ಈ ಸಂಪುಟದ ಕಾರ್ಯವನ್ನೂ ಡಾ.ರಾಗೌ ಅವರು ಯಶಸ್ವಿಯಾಗಿ ಮುಗಿಸಿದ್ದಾರೆ. ಡಾ.ಅಂಬಳಿಕೆಯವರ ಅನಂತರದಲ್ಲಿ ಕುಲಪತಿಗಳಾಗಿದ್ದ ಡಾ.ಚಿನ್ನಪ್ಪಗೌಡರು ಹಾಗೂ ಪ್ರಸ್ತುತ ಕುಲಪತಿಗಳಾಗಿ ಕಾರ್ಯ ನಿರ್ವಹಿಸುತ್ತಿರುವ ಡಾ.ಡಿ.ಬಿ.ನಾಯಕ ಅವರು ಈ ಯೋಜನೆಗೆ ಒತ್ತಾಸೆಯಾಗಿ ನಿಂತಿದ್ದು, ಈ ಮಹತ್ಕಾರ್ಯಕ್ಕೆ ನೆರವಾಯಿತು. ಈ ಯೋಜನೆ ಆರಂಭವಾದಾಗಿನಿಂದಲೂ ಡಾ.ಡಿ.ಬಿ.ನಾಯಕ ಅವರು ಇದರ ಬೆಂಬಲಕ್ಕೆ ನಿಂತದ್ದಲ್ಲದೆ, ಇದು ಸುಗಮವಾಗಿ ನಡೆದುಕೊಂಡು ಹೋಗಲು ಕಾರಣರಾಗಿದ್ದಾರೆ. ಎಲ್ಲಾ ಸಂಪುಟಗಳು ಸಿದ್ಧಗೊಂಡು, ಈ ಯೋಜನೆ ಪೂರ್ಣಗೊಂಡಾಗ ಕನ್ನಡ ಜಾನಪದ ಜಗತ್ತಿನಲ್ಲಿಯೇ ಅತ್ಯಂತ ಅಪೂರ್ವವಾದ ಕೆಲಸವಾಗಿ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯಕ್ಕೆ ಕೋಡು ಮೂಡುವುದರಲ್ಲಿ ಯಾವ ಸಂಶಯವೂ ಇಲ್ಲ.

ಒಟ್ಟಾರೆ ಈ ಮೂರನೆಯ ಸಂಪುಟ ಹೊರಬರಲು ಶ್ರಮಿಸಿದ ಡಾ.ರಾಗೌ, ಡಾ.ಬೋರೇಗೌಡ ಚಿಕ್ಕಮರಳಿ, ಪ್ರೊ.ಸಿ.ನೀಲಕಂಠೇಗೌಡ, ಡಾ.ಎಚ್.ಎಂ.ಉಮೇಂದ್ರಕುಮಾರ್, ಶ್ರೀಮತಿ ಶಿಲ್ಪ.ಡಿ.ಪಿ, ಶ್ರೀ ಸಿ.ಶಂಕರ್ ಅವರಿಗೆ ನನ್ನ ನಮನಗಳು.

ಪ್ರೊ. ಜಯಪ್ರಕಾಶಗೌಡ
ಗೌರವ ಸಂಯೋಜಕ ಸಂಪಾದಕ

ಪ್ರಸ್ತಾವನೆ

ಕನ್ನಡ ಜಾನಪದ ಅಧ್ಯಯನ ಸಿದ್ಧಾಂತ, ಪಂಥಗಳನ್ನು ದಾಟಿ ನಿಜವಾದ ಅರ್ಥಶೋಧನೆಯ ಕಡೆಗೆ ವಾಲುತ್ತಿರುವುದು, ಪಾಶ್ಚಾತೀಕರಣದಿಂದ ದೇಸೀ ಚಿಂತನೆಯತ್ತ ಸರಿಯುತ್ತಿರುವುದು ಹರ್ಷದಾಯಕ ಸಂಗತಿ. ಭಾರತದ ಸ್ವಾತಂತ್ರ್ಯ ಆಂದೋಲನದ ಕಾಲದಲ್ಲಿಯೇ ಇಂತಹ ವಿಧಾನದ ಸುಳಿವು ಸಿಕ್ಕುವುದು ಗಮನಿಸತಕ್ಕದ್ದಾಗಿದೆ; ಈ ಯಾವುದೇ ಅಧ್ಯಯನದ ವಿಧಾನ ಜಾನಪದದ ವಿಶ್ವವ್ಯಾಪಕತೆಯನ್ನೂ, ಸಾಮಾನ್ಯ ಸಮಾನತೆಯನ್ನೂ ಅಲ್ಲಗಳೆಯುತ್ತದೆಯೆಂದು ಭಾವಿಸಬೇಕಾದ್ದಿಲ್ಲ. ಸ್ಥಳೀಯತೆಯ ಚಿಂತನೆ ಸಾರ್ವತ್ರಿಕತೆಗೆ ಅವಿರುದ್ಧವಾಗಿರುತ್ತದೆ ಎಂಬುದನ್ನು ಮೊದಲೇ ಹೇಳಬೇಕಾಗಿದೆ. ನಮ್ಮಲ್ಲಿರುವುದನ್ನು ಹೇಳುತ್ತಲೇ, ಇನ್ನೊಬ್ಬರಲ್ಲಿರುವುದನ್ನೂ ನಾವು ಹೇಗೆ ಒಪ್ಪಿಕೊಳ್ಳುತ್ತಾ ಹೋಗುತ್ತೇವೆ ಎನ್ನುವುದೇ ಪ್ರಸ್ತುತ ತರ್ಕ, ಅಲ್ಲ ತತ್ತ್ವ. ವಸಾಹತುಶಾಹಿಯ ಆಧಿಪತ್ಯದಿಂದ ವಿಮೋಚನೆ ಹೊಂದಲು ಸ್ವಾತಂತ್ರ್ಯ ಆಂದೋಲನ ಬೃಹತ್ ಪ್ರಮಾಣದಲ್ಲಿ ನಡೆಯತೊಡಗಿದಾಗ, ರಾಜಕೀಯ ಬದಲಾವಣೆಯ ಜೊತೆಗೆ ಸಾಮಾಜಿಕ/ಸಾಂಸ್ಕೃತಿಕ ಬದಲಾವಣೆಗಳೂ ನಡೆದದ್ದು ಈಗ ಇತಿಹಾಸ. ಈ ಸಂದರ್ಭದಲ್ಲಿ ಆಧುನಿಕತೆಯ ಚರಣಚಿಹ್ನೆಗಳಂತೆ ಕಾಣಿಸಿಕೊಂಡ ಕೈಗಾರಿಕೀರಣ ಮತ್ತು ನಗರೀಕರಣಗಳೂ ಇದಕ್ಕೆ ಕಾರಣವಾಗಿದ್ದುವು. ಈ ಎಲ್ಲದರ ಪರಿಣಾಮವಾಗಿ ವ್ಯಕ್ತಿವಿಶಿಷ್ಟತೆ, ಸಾಂಸ್ಕೃತಿಕ ಅನನ್ಯತೆ ಮತ್ತು ಅಸ್ಮಿತೆಯ ಭಾಗವಾಗಿ ಜಾನಪದ ಆಸಕ್ತಿ, ಆಲೋಚನೆಗಳು ಮೂಡಿದ್ದುವು. ಇದು ರಾಷ್ಟ್ರೀಯ ಪ್ರಜ್ಞೆಯ ಭಾಗವಾಗಿಯೇ ನಡೆದದ್ದು ವಿಶೇಷವಾಗಿತ್ತು. ಅಂದರೆ ಇದೊಂದು 'ಸಮಷ್ಟಿ ವಿಶಿಷ್ಟತೆ'ಯ ಜಾಗೃತಿಯಾಗಿತ್ತು. ವ್ಯಕ್ತಿ ವಿಶಿಷ್ಟತೆ ಮತ್ತು ಸಮಷ್ಟಿ ವಿಶಿಷ್ಟತೆಗಳ ಪರಸ್ಪರ ಘರ್ಷಣೆಯ ಫಲವಾಗಿ ಪರಸ್ಪರ ದೋಷ ಮತ್ತು ಕೊರತೆಗಳನ್ನು ತುಂಬಿಕೊಳ್ಳುವ ಪ್ರಯತ್ನವಾದುವು; ಸಾಮರ್ಥ್ಯಗಳಾಗಿ ಬೆಳೆದುವು. ಈ ರಾಷ್ಟ್ರೀಯ ಪ್ರಜ್ಞೆಯಲ್ಲಿಯೇ ಜಾನಪದ ಸಂಬಂಧವಾದ ಮೊದಮೊದಲ ಕೆಲಸಗಳು ಆರಂಭವಾದವು ಎಂಬುದನ್ನು ಮರೆಯಲಾಗದು. ಹೀಗೆ ಭಾರತದಲ್ಲಿ – ಕನ್ನಡದಲ್ಲಿ ಕೂಡ – ಜಾನಪದ ಆಸಕ್ತಿ ಮೊಳಕೆಯೊಡೆದ ಸಂದರ್ಭದಲ್ಲಿ ವಿದೇಶೀ ವಿದ್ವಾಂಸರಾಗಲಿ ದೇಸೀ ವಿದ್ವಾಂಸರಾಗಲಿ ಜಾನಪದವನ್ನು ಅಧ್ಯಯನ ಮಾಡಿ ಕೆಲಸಮಾಡಿದವರಲ್ಲ; ಇದು ಮೊದಲಿಗೆ ಇದ್ದ ಪರಿಸ್ಥಿತಿ.

ಈ ಅರುಣೋದಯ ನವೋದಯದ ಜಾನಪದ ಅಧ್ಯಯನ ಶುದ್ಧಾಂಗವಾಗಿ ಆಸಕ್ತಿಯಿಂದ ಬಂದುದು; ಕುತೂಹಲದಿಂದ ಅರಳಿದುದು. ಅರುಣೋದಯ ಕಾಲದಲ್ಲಿ ಪೂರ್ಣವಾಗಿ ವಿದೇಶೀ ವಿದ್ವಾಂಸರೇ ಆಕ್ರಮಿಸಿಕೊಂಡಿದ್ದಾರೆ. ಜಾನಪದ ನವೋದಯಕ್ಕೆ ಕಾರಣವಾದದ್ದು ಹೊಸಗನ್ನಡ ಸಾಹಿತ್ಯದ ನವೋದಯವೇ. ಜಾನಪದ ಅಧ್ಯಯನಕ್ಕೆ ಸಾಹಿತ್ಯದ ಮೂಲಕ ಪ್ರವೇಶಿಸಿದ್ದು ಇಲ್ಲಿನ ವಿಶೇಷವಾಯಿತು. ಜಾನಪದ ನವೋದಯದ ಲೇಖಕರೆಲ್ಲ ಹೊಸಗನ್ನಡ ಸಾಹಿತ್ಯದ ಲೇಖಕರೇ ಆಗಿದ್ದಾರೆಂಬುದು ಒಂದು ಉಲ್ಲೇಖನಾರ್ಹ ವಿಷಯ. ಜಾನಪದ ಕ್ಷೇತ್ರ ಜನಪದ ಸಾಹಿತ್ಯದ ಕ್ಷೇತ್ರಕ್ಕೆ ಮಾತ್ರ ಸೀಮಿತವಾದುದಲ್ಲವಾದರೂ, ಈ ಕಾಲದಲ್ಲಿ ಕೆಲಸ ಮಾಡಿದವರೆಲ್ಲ ಆಯ್ಕೆಮಾಡಿಕೊಂಡುದು ಜನಪ್ರಿಯವಾದ ಜನಪದ ಸಾಹಿತ್ಯ ಕ್ಷೇತ್ರವನ್ನೇ. ಜನಪದ ಸಾಹಿತ್ಯವನ್ನು ಗ್ರಹಿಸುವುದು ಮತ್ತು ಸ್ವಾರಸ್ಯವನ್ನು ವಿವರಿಸುವುದಕ್ಕಾಗಿ ಈ ಅವಧಿಯ ಹೆಚ್ಚು ಕಾಲ ವಿನಿಯೋಗವಾಯಿತು. ಹೊಸಗನ್ನಡ ಸಾಹಿತಿಗಳು ಸಾಮಾನ್ಯಜನರ ಜೀವನದ ಆಗುಹೋಗುಗಳನ್ನು ತಮ್ಮ ಸಾಹಿತ್ಯದಲ್ಲಿ ಅನಾವರಣ ಮಾಡಲು ಹೊರಟಾಗ ಜಾನಪದವನ್ನು ತೀವ್ರವಾಗಿ ಪರಿಗಣಿಸಿದ್ದು ಸಹಜವಾಗಿತ್ತು.

ಕನ್ನಡ ಜಾನಪದ ಅಧ್ಯಯನದಲ್ಲಿ ಎಪ್ಪತ್ತರ ದಶಕ ಬಹಳ ಮುಖ್ಯವಾದುದು; ಅಧ್ಯಯನಕ್ಕೆ ಹೊಸ ತಿರುವನ್ನು ತಂದುಕೊಟ್ಟ ಕಾಲವಿದು. ಶಾಸ್ತ್ರೀಯ ಅಥವಾ ವೈಜ್ಞಾನಿಕ ಅಧ್ಯಯನ ಆರಂಭವಾದದ್ದೇ ಈ ಅವಧಿಯಲ್ಲಿ. ಇಷ್ಟು ಹೊತ್ತಿಗಾಗಲೇ ಜಾನಪದಕ್ಕೆ ಒಂದು ಹೆಸರು ಬಂದು, 'ಶಿಸ್ತು' ಪ್ರಾಪ್ತವಾಗಿತ್ತು. ವೈಜ್ಞಾನಿಕ ಅಧ್ಯಯನ ಮುಖ್ಯವಾಗಿ ಸಾಮಗ್ರಿಯ ಎಲ್ಲ ಬಗೆಯ ಸಂಗ್ರಹ ಮತ್ತು ವಿಶ್ಲೇಷಣೆಗೆ ಸಂಬಂಧಿಸಿದುದು. ಜಾನಪದದ ಎಲ್ಲ ಪ್ರಕಾರಗಳಿಗೆ –

ಶಾಬ್ದಿಕ ಮತ್ತು ಶಾಬ್ದಿಕೇತರ – ಅಧ್ಯಯನಗೆ ವಿಸ್ತರಿಸಿದ್ದು ಈ ಕಾಲದ ವೈಶಿಷ್ಟ್ಯವಾಗಿತ್ತು. ಜೀವನದ ಹಾಸುಹೊಕ್ಕಾಗಿದ್ದ ಜಾನಪದದ ಅಧ್ಯಯನವೆಂದರೆ, ಅಂತಿಮವಾಗಿ ಜೀವನದ ಅಧ್ಯಯನವೆಂಬ ಅರ್ಥಬಂದು, ಎಲ್ಲ ಜ್ಞಾನ ವಿಜ್ಞಾನಗಳ ಮೂಲ ಜಾನಪದವೆಂದು ವ್ಯಾಖ್ಯಾನ ಆರಂಭವಾದದ್ದು ಈ ಕಾಲದಲ್ಲಿಯೇ. ಜಾನಪದ ಅಧ್ಯಯನ ವಿಶ್ವದಲ್ಲಿ ಹೊಸ ಶಕೆಯನ್ನೇ ಆರಂಭಿಸಿದ್ದು ಸುಳ್ಳಲ್ಲ. ಇಷ್ಟಾದರೂ ಈ ಕಾಲದ ಅಧ್ಯಯನ ಜಾನಪದದ 'ರೂಪ' (form) ದ ಭಾಗವಾಗಿಯೇ ಬಂದುದು ಅಚ್ಚರಿ ಮೂಡಿಸುತ್ತದೆ. ರೂಪವಿಶ್ಲೇಷಣೆಗೆ ಕೊಟ್ಟ ಪ್ರಾಶಸ್ತ್ಯವನ್ನು ವಸ್ತು ವಿಶ್ಲೇಷಣೆಗೆ ಕೊಡದೆ ಹೋದುದು ಜಾನಪದದ ಈ ಕಾಲದ ಅಧ್ಯಯನದ ದೊಡ್ಡಮಿತಿಯೆಂದೇ ಹೇಳಬೇಕು. ಈಗಲೂ ಜಾನಪದದ ಅಂತರಾಳವನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದೇವೆ ಎಂದು ಹೇಳಲು ಕಷ್ಟವಾಗಿದೆ. ಜಾನಪದ ರಚನೆ ಅಥವಾ ರೂಪ ಕುರಿತ ಅಧ್ಯಯನದ ಮೇಲೆ ಭಾಷಾವಿಜ್ಞಾನ ಮತ್ತು ಮಾನವಶಾಸ್ತ್ರ ಸಂಬಂಧದ ರೂಪತತ್ತ್ವ ಸಿದ್ಧಾಂತಗಳು ಪ್ರಭಾವ ಬೀರಿದ್ದನ್ನು ಇಲ್ಲಿ ನೆನೆಯಬೇಕು. ಆದರೆ ಜಾನಪದದ ರೂಪತತ್ತ್ವ ಸಿದ್ಧಾಂತ ಜಾನಪದ ಸಾಮಗ್ರಿಯ ವಿಶ್ವಾತ್ಮಕತೆ ಮತ್ತು ಮೂಲಭೂತ ಅಂಶಗಳ ಪ್ರಮಾಣ ಬದ್ಧತೆಯನ್ನು ಗುರುತಿಸಿದ್ದು ಅದರ ವ್ಯಾಪ್ತಿ ಮತ್ತು ಮಿತಿಯನ್ನು ಹೇಳಲು ಖಂಡಿತ ಸಾಧ್ಯವಾಯಿತು. ಹೇಗೂ ಇರಲಿ ಈ ಕಾಲವನ್ನು ಜಾನಪದ ಅಧ್ಯಯನದ ಸಂಭ್ರಮದ ದಿನಗಳು ಎಂದು ಕರೆಯಬೇಕೆನಿಸುತ್ತದೆ.

ಜಾನಪದ ಅಧ್ಯಯನ ಈಗ ಬಹಳ ದೂರ ಬಂದಿದೆ; ಹಳೆಯ ಸಂಭ್ರಮದ ದಿನಗಳು ಈಗಿಲ್ಲ; ಆದರೆ ಜಾನಪದ ಅಧ್ಯಯನ ತನ್ನ ಮೂಲ ನೆಲೆಯನ್ನು ಕಂಡುಕೊಳ್ಳುವ ಪ್ರಯತ್ನ ಮಾತ್ರ ನಡೆದೇ ಇದೆ. ಜಾನಪದ ಅಧ್ಯಯನಕ್ಕೆ ಒಂದು ವ್ಯವಸ್ಥೆಯೇನೊ ಬಂದಿದೆ; ಅದನ್ನು ಹೊಸಮಾರ್ಗದಲ್ಲಿ ನಡೆಸುವ ಹವಣು ಕೂಡ ಇದೆ. ಆದರೆ ಅದಕ್ಕೆ ತೀವ್ರತೆ ಬಂದಂತೆ ಕಾಣುತ್ತಿಲ್ಲ; ಅದರದು ಈಗ ನಿಧಾನಗತಿಯ ಚಲನೆ. ಈ ಸಂದರ್ಭದಲ್ಲಿ ಆಚರಣಾತ್ಮಕ ಜಾನಪದಕ್ಕೆ ವಿಶೇಷ ಒತ್ತು ಬಂದಿರುವುದು ಒಂದು ಮುಖ್ಯ ವಿಚಾರ; ಜನಪದ ಸಾಹಿತ್ಯದ ಬಗೆಗಿನ ಹಳೆಯ ವಿಚಾರಗಳೇ ಮುಂದುವರಿಯುತ್ತಿವೆ. ಜಾನಪದದ ಅಧ್ಯಯನ ತನ್ನ ವಿಸ್ತೃತ ವ್ಯಾಪ್ತಿಯಲ್ಲಿ ಧ್ಯಾನಸ್ಥವಾಗುತ್ತಿದ್ದರೂ, ಜಾನಪದೇತರ ವಿಷಯಗಳೂ ಅದರಲ್ಲಿ ಹೇಗೊ ನುಸುಳಿಕೊಂಡು ಸಮಸ್ಯೆಗಳನ್ನು ಸೃಷ್ಟಿಸುತ್ತಿವೆ. ದೇಶೀ ಚಿಂತನೆಯಂತಹ ಅಂಶವನ್ನು ಇದರಲ್ಲಿ ಪ್ರಸ್ತಾಪಿಸಿದರೂ, ಅದೂ ಗಟ್ಟಿಗೊಂಡಂತಿಲ್ಲ. ಜಾನಪದ ಪಂಥ/ಸಿದ್ಧಾಂತಗಳಾವುವೂ ಈಗ ಕೆಲಸಮಾಡುತ್ತಿಲ್ಲವಾದ್ದರಿಂದ, 'ಪಂಥಾತೀತ ನೆಲೆ'ಯನ್ನು ಗಟ್ಟಿಗೊಳಿಸಬೇಕಾದದ್ದು ಈಗ ಅನಿವಾರ್ಯವಾಗಿದೆ. ಸಂಗ್ರಹಕಾರನ ದೃಷ್ಟಿ ಕೇಂದ್ರವನ್ನೂ ವಕ್ತೃವಿನ ದೃಷ್ಟಿ ಕೇಂದ್ರವನ್ನೂ ಒಪ್ಪಿಕೊಂಡು ನಡೆದರೂ, ಅದೇ ಸರ್ವಸ್ವವೆಂದು ಕೂರುವ ಕಾಲ ಇದಲ್ಲ. ಈಗ ನಮಗೆ ಬೇಕಾಗಿರುವುದು 'ವಿಶ್ವಾತ್ಮಕ' ಅಥವಾ 'ಲೋಕದೃಷ್ಟಿ'ಯ ಚಿಂತನೆ; ಪ್ರತಿ ವಸ್ತುವನ್ನು/ವಿಚಾರವನ್ನು ಆ ನೆಲೆಯಲ್ಲಿ ನಡೆಸಬೇಕಾದದ್ದು ಈಗಿನ ನಮ್ಮ ಕರ್ತವ್ಯ. ಜಾಗತೀಕರಣ ಅಥವಾ ಸರಕು ಸಂಸ್ಕೃತಿಯ ಪ್ರಭಾವವನ್ನು ತಡೆಯಲು, ಪ್ರಭಾವಿತ ಪ್ರದೇಶಗಳನ್ನು ಜಾನಪದ ತೆಕ್ಕೆಗೆ ಒಗ್ಗಿಸಿಕೊಳ್ಳಲು ಇದಕ್ಕಿಂತ ಅತ್ಯುತ್ತಮ ಮಾರ್ಗ ಇನ್ನೊಂದಿಲ್ಲ. ಪ್ರದರ್ಶನಾತ್ಮಕ ಸಿದ್ಧಾಂತ ಉಂಟು ಮಾಡಿದ ಪರಿಣಾಮದಿಂದ ಜಾನಪದ ಅಧ್ಯಯನವನ್ನು ಮುಕ್ತಗೊಳಿಸಬೇಕಾಗುತ್ತದೆ; ಕಡೆಯ ಪಕ್ಷ ಜಾನಪದ ಸಾಮಗ್ರಿಯನ್ನೂ ಬಳಕೆಯ ಸಂದರ್ಭವನ್ನೂ ಸೇರಿಸಿಕೊಂಡು ಅದರಾಚೆಗಿನ ವಿಶ್ಲೇಷಣೆಯ ನೆಲೆಗೆ ನಾವು ಅನಿವಾರ್ಯವಾಗಿ ಹೋಗಬೇಕಾಗುತ್ತದೆ. ಜಾನಪದ ಅಧ್ಯಯನದ ಭವಿಷ್ಯವನ್ನು ರೂಪಿಸಲು ಹೊರಡುವವರು ಈ ಅಂಶಗಳನ್ನು ಹೊರಗಿಟ್ಟು ಯೋಚಿಸಲು ಸಾಧ್ಯವಾಗುವುದಿಲ್ಲ.

ಜಾನಪದ ಸಾಮಗ್ರಿಯ ಸಮಗ್ರ ಸರ್ವೇಕ್ಷಣ ಕಾರ್ಯವೇ ನಡೆಯದಿರುವಾಗ, ಜಾನಪದ ಅಧ್ಯಯನ ಇನ್ನೂ ವೈಯಕ್ತಿಕ ನೆಲೆಯಲ್ಲಿಯೇ ವ್ಯವಹರಿಸುತ್ತಿರುವಾಗ ಇದೆಲ್ಲ ಹೇಗೆ ಸಾಧ್ಯವಾಗುತ್ತದೆ ಎಂಬ ಪ್ರಶ್ನೆಯೂ ಮೂಡಬಹುದು. ಇದು ಜಾನಪದ ಅಧ್ಯಯನದ ಜಾಗತಿಕ/ ರಾಷ್ಟ್ರೀಯ ಸಮಸ್ಯೆಯೇ ಆಗಿದೆ. ಜಾನಪದ ಅವಿನಾಶಿಯಾದುದೆ? ಪಳೆಯುಳಿಕೆಯ ಪ್ರಶ್ನೆ ಎಷ್ಟರಮಟ್ಟಿನದು, ಇವನ್ನೂ ಇನ್ನೂ ನಮ್ಮ ಅಧ್ಯಯನದ ಜೊತೆಯಲ್ಲಿ ಕಟ್ಟಿಕೊಂಡು ಸಾಗಬೇಕಾದ ಪರಿಸ್ಥಿತಿ ಒದಗಿದೆ. ಜಾನಪದಕ್ಕೆ 'ಸಾವಿಲ್ಲ' ಎನ್ನುವುದು ವಿದ್ವತ್ತಿನ ಘೋಷಣೆಯೇ ಆಗಿಬಿಟ್ಟಿದೆ; ವಾಸ್ತವ ಇದಕ್ಕೆ ಬೇರೆಯೇ ಇದ್ದು, ನಿಜವಾದ ವಾಸ್ತವವನ್ನು ಅರಿಯುವಂಥದು ಒಂದು ಶೋಧವೇ. ಹೊಸ ಜಾನಪದದ ಸೃಷ್ಟಿ ಮತ್ತು ಮುಂದುವರಿಕೆಯ ಬಗ್ಗೆ ನಾವಾಡುತ್ತಿರುವ ಮಾತುಗಳೆಲ್ಲ ಸರಿಯಾಗಿವೆ ಎನಿಸುವುದಿಲ್ಲ. ನೆಲಮೂಲ ಸಂಸ್ಕೃತಿಯ ಬಗ್ಗೆ ಹೇಳುವ ನಾವು ಆ ಬಗ್ಗೆ ಜಾಗತಿಕ ಮಟ್ಟದ ಸಿದ್ಧಾಂತಗಳನ್ನು

ರೂಪಿಸಿಲ್ಲವೇಕೆ? ಕೊಡುಗೆ ಎಂದರೆ ಸಿದ್ಧಾಂತವಷ್ಟೇ ಅಲ್ಲ ಎಂದು ಹೇಳಿ ಇದರಿಂದ ಪಾರಾಗಬಹುದಾದರೂ, ಜಾಗತಿಕ ಅಧ್ಯಯನಕ್ಕೆ ನಾವು ಸೇರಿಸಿದ್ದೇನು ಎಂಬುದನ್ನಾದರೂ ಗಟ್ಟಿಯಾಗಿ ಹೇಳಬೇಕಾಗುತ್ತದೆ. ಪಾಶ್ಚಾತ್ಯರ ಪ್ರಭಾವದಿಂದ ತಪ್ಪಿಸಿಕೊಳ್ಳಬೇಕೆಂದು ಹೇಳುವ ನಾವು, ಪಾಶ್ಚಾತ್ಯರು ಬಂದು ಇಲ್ಲಿನ ಜಾನಪದವನ್ನು ಅಧ್ಯಯನ ಮಾಡಿ ಪ್ರಕಟಿಸುತ್ತಿದ್ದಾಗ, ಅವರಿಗೆ ನೆರವಾದ ಸ್ಥಳೀಯ ತಜ್ಞರು ಅವರನ್ನು ನೋಡಿ ಹೊಸದನ್ನು ನಮ್ಮಲ್ಲಿ ಸ್ಥಾಪಿಸಲಿಲ್ಲವೇಕೆ? ಜನಪ್ರಿಯತೆ ಕಾಡಿದ ಹಾಗೆ ಸ್ವೋಪಜ್ಞತೆ ಕಾಡಲಿಲ್ಲವೇಕೆ? ಈ ಎಲ್ಲ ಪ್ರಶ್ನೆಗಳಿಗೆ ಮುಂದಿನ ನಮ್ಮ ಅಧ್ಯಯನ ಮತ್ತು ಅದರ ವಿಧಾನಗಳು ಉತ್ತರಕೊಡಬೇಕಷ್ಟೆ!

ಜಾನಪದ ಸಾಮಗ್ರಿಯನ್ನು ವಿವಿಧ ಹೊಸ ಆಯಾಮಗಳಲ್ಲಿ ನೋಡುತ್ತಿರುವ ಅಧ್ಯಯನದ ಮನಸ್ಸೇನೊ ಪ್ರಬಲವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಸಾಮಗ್ರಿಯನ್ನು ಅನ್ಯ ಶಿಸ್ತುಗಳ ಮೂಲಕ ಅಧ್ಯಯನ ಮಾಡುವುದರ ಆವಶ್ಯಕತೆಯನ್ನು ಒತ್ತಿ ಹೇಳಬೇಕಾದ್ದಿಲ್ಲ. ಮಾನವಶಾಸ್ತ್ರ, ಮನಶ್ಶಾಸ್ತ್ರ, ಭಾಷಾವಿಜ್ಞಾನ, ಇತಿಹಾಸ, ಸಮಾಜಶಾಸ್ತ್ರ, ಪುರಾತತ್ತ್ವಶಾಸ್ತ್ರ ಮೊದಲಾದ ಮುಖಗಳಲ್ಲಿ ಜಾನಪದ ಸಾಮಗ್ರಿಯನ್ನು ಅರ್ಥೈಸಬೇಕಾಗಿದೆ. ಅಂತರಶಿಸ್ತಿನ ಅಧ್ಯಯನವನ್ನು ಕುರಿತು ಮಾತನಾಡುವ ನಮಗೆ ಅನ್ಯಶಿಸ್ತುಗಳ ಜ್ಞಾನ ಎಷ್ಟಿದೆ ಎಂಬುದನ್ನು ನೋಡಿಕೊಳ್ಳಬೇಕಾಗುತ್ತದೆ. ಪಾಶ್ಚಾತ್ಯ ಅಥವಾ ಯೂರೋಪಿನ ಸಂದರ್ಭದಲ್ಲಿ ಜಾನಪದವನ್ನು ಅಧ್ಯಯನ ಮಾಡಿದವರು ಈ ಎಲ್ಲ ಶಿಸ್ತುಗಳಿಗೆ ಸೇರಿದವರೇ ಆಗಿದ್ದಾರೆ. ಆ ಕಾರಣದಿಂದ ಅವರು ಜಾನಪದದಲ್ಲಿ ತಾತ್ತ್ವಿಕ/ಸೈದ್ಧಾಂತಿಕ ಹಿನ್ನಲೆಯಲ್ಲಿ ತಮ್ಮ ಅಸ್ಮಿತೆಯನ್ನು ಬಿಡಲು ಸಾಧ್ಯವಾಯಿತು. ಆದರೆ ನಮ್ಮಲ್ಲಿ ಬೇರೆ ಶಿಸ್ತಿನ ಪರಿಣತರು ಜಾನಪದ ಕ್ಷೇತ್ರವನ್ನು ಪ್ರವೇಶಿಸಿರುವುದು ಅಪರೂಪವೆನ್ನಬೇಕು. ಜಾನಪದ ಕ್ಷೇತ್ರದಲ್ಲಿ ಕೆಲಸಮಾಡುತ್ತಿರುವ ಯಾರಿಗಾದರೂ ಸರಿಯೇ ಅನ್ಯಶಿಸ್ತಿನ ಆ ಜ್ಞಾನ ಪ್ರಾಪ್ತವಾಗಿದ್ದರೂ ಸಾಕೆನಿಸುತ್ತದೆ. ನಮ್ಮಲ್ಲಿ ಜಾನಪದ ಅಧ್ಯಯನ ಆರಂಭವಾಗಿ ದಶಕಗಳೇ ಕಳೆದಿವೆ. ಈಗ ನಮ್ಮ ಸಾಧನೆಯನ್ನು ಹೇಳಿಕೊಳ್ಳಲೇಬೇಕಾಗಿದೆ. ನಮ್ಮ ಈ ಸಾಧನೆಗೆ ಎರಡು ಮುಖಗಳಿವೆ: ಒಂದು, ಶಿಕ್ಷಣ ದೃಷ್ಟಿಯದು; ಎರಡು, ಸಂಶೋಧನೆಯ ದೃಷ್ಟಿಯದು; ಇವು ಪರಸ್ಪರ ಪೂರಕವೇ ಹೊರತು, ಬೇರಲ್ಲ.

ಜಾನಪದ ಅಧ್ಯಯನಕ್ಕೆ ಸಾಂಸ್ಥಿಕ ಸ್ವರೂಪ ಬಂದು ಬಹಳ ದಿವಸಗಳೇ ಕಳೆದುವು. ಈಗ ಇದಕ್ಕೆ ಜಾನಪದ ವಿಶ್ವವಿದ್ಯಾನಿಲಯ ಸ್ಥಾಪನೆಯಾಗುವುದರ ಮೂಲಕ ಸರ್ವೋಚ್ಚ ಸ್ವರೂಪ ಬಂದಂತಾಯಿತು. ಪ್ರಪಂಚದಲ್ಲಿಯೇ ಪ್ರಥಮ ಜಾನಪದ ವಿಶ್ವವಿದ್ಯಾನಿಲಯ ಎಂಬ ಕೀರ್ತಿಗೆ ಇದು ಭಾಜನವಾಗಿದೆ. ಜಗತ್ತಿನಲ್ಲಿ ಜಾನಪದ ಅಧ್ಯಯನಕ್ಕೆ ಸಂಬಂಧಿಸಿದ ಸಂಸ್ಥೆಗಳು ಮುಚ್ಚುತ್ತಿವೆ ಎಂಬುದಾಗಿ ಕೆಲವರ ಅಂಬೋಣ. ಇಂತಹ ಕಾಲದಲ್ಲಿ ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ ಸ್ಥಾಪನೆಯಾಗಿರುವುದು ವಿಶೇಷ. ಇದನ್ನು ಬಹುದೊಡ್ಡ ಸಾಂಸ್ಕೃತಿಕ ಸಂಘಟನೆಯೆಂದೇ ಹೇಳಬೇಕು. ಇದರ ಪ್ರಥಮ ಕುಲಪತಿಯಾಗಿ ಡಾ. ಅಂಬಳಿಕೆ ಹಿರಿಯಣ್ಣ ಸಾರಥ್ಯವಹಿಸಿರುವುದೂ ಅಷ್ಟೇ ಪ್ರಮುಖ ವಿಷಯ. ವಿಶ್ವವಿದ್ಯಾನಿಲಯದ ಸಾಧನೆಗಳನ್ನು ಜಗತ್ತೇ ಕಾತರದಿಂದ ನೋಡುತ್ತಿದೆ ಎಂಬುದನ್ನು ಗಮನಿಸಬೇಕು. ಜಾನಪದ ವಿಶ್ವವಿದ್ಯಾನಿಲಯ ಹೊಸ ತಾತ್ತ್ವಿಕ ಮಾದರಿಗಳನ್ನು ರೂಪಿಸಿಕೊಡಬೇಕಾಗಿದೆ. ಹಳೆಯದು ಇನ್ನೂ ಸಂಪೂರ್ಣ ಕಳೆದುಹೋಗಿಲ್ಲದ, ಹೊಸದು ಇನ್ನೂ ಸ್ಪಷ್ಟವಾಗಿ ರೂಪುಗೊಳ್ಳದ ಈ ಹೊತ್ತಿನ ಸಂದಿಗ್ಧತೆಯಲ್ಲಿ ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದ ಸ್ಥಾಪನೆ ಮತ್ತೊಂದು ಸಂಭ್ರಮಕ್ಕೆ ಕಾರಣವಾಗಿದೆ. ಹೀಗಾಗಿ ಕನ್ನಡ ಜಾನಪದ ಅಧ್ಯಯನಕ್ಕೆ ಒಂದು ಅಧಿಕೃತ ರೂಪಬಂದಿದೆ ಎಂಬುದು ನಿಜ; ಜಾನಪದ ವಿಶ್ವವಿದ್ಯಾನಿಲಯ ಅದಕ್ಕೆ ಕಾರಣವಾಗಿದೆ ಎಂಬುದೂ ನಿಜ. ಮುಂದೆ ಅಧ್ಯಯನದ ಹೊಸ 'ಅವಿನ್ಯೂ'ಗಳನ್ನು ತೆರೆಯುವ ಜವಾಬ್ದಾರಿ ಜಾನಪದ ವಿಶ್ವವಿದ್ಯಾನಿಲಯಕ್ಕಿದೆ; ಅದರ ಸಾಧನೆಗಳೆಲ್ಲ ಈ 'ಅವಿನ್ಯೂ' ಗಳ ಮೇಲಿದೆ. ಇಂತಹ 'ಅವಿನ್ಯೂ' ಗಳಲ್ಲಿ ಕನ್ನಡ ಜಾನಪದ ನಿಘಂಟಿನ ಯೋಜನೆ ಹೆಚ್ಚಿನ ಮಹತ್ವ ಪಡೆದಿದೆ. ಪದಸಂಸ್ಕೃತಿಯ ಹೊಸಪರಿಕಲ್ಪನೆಯೊಡನೆ ಜಾನಪದ ನಿಘಂಟನ್ನು ರೂಪಿಸುವ ಕೆಲಸವಿದು. ಇದು ನಿಸ್ಸಂದೇಹವಾಗಿ ಜಾನಪದ ವಿಶ್ವವಿದ್ಯಾನಿಲಯದ ಜಾಗತಿಕ ಕೊಡುಗೆಯಾಗುತ್ತದೆ ಎಂಬುದು ನನ್ನ ಭಾವನೆ.

ಜಾನಪದ ಅಧ್ಯಯನ ಹೊಸ ಆಯಾಮಗಳನ್ನು ಪಡೆದುಕೊಳುತ್ತಾ ಬಂದಿರುವುದು, ಇತಿಹಾಸವನ್ನು ನಿರ್ಮಿಸುತ್ತಾ ಬಂದಿರುವುದು ಈಗ ಗೊತ್ತಿರುವ ವಿಷಯ. ಆಧುನಿಕವಿಜ್ಞಾನ, ತಂತ್ರಜ್ಞಾನದ ಭರಾಟೆಯಲ್ಲಿಯೂ ಜಾನಪದದಂತಹ ಸಂಸ್ಕೃತಿ ಪ್ರಧಾನ ಅಧ್ಯಯನಕ್ಕೆ, ಮುಖ್ಯ ಶೋಧ ಮಾರ್ಗದಲ್ಲಿ ಅದನ್ನು ನಡೆಸುವುದಕ್ಕೆ

ಅವಕಾಶಗಳೂ ಮಾರ್ಗಗಳೂ ರೂಪಿತವಾಗುತ್ತಿರುವುದು ಜಾನಪದ ಸಾಮಗ್ರಿಗಿರುವ ಸಾಧ್ಯತೆಗಳಿಗೆ ಸಾಕ್ಷಿಯಾಗಿದೆ. ಜಾನಪದ ಅಸಾಧಾರಣ ವ್ಯಾಪ್ತಿಯದು; ಅಷ್ಟೇ ಮಿತಿಯದು. ಜಾನಪದ ಜಗತ್ತಿನಾದ್ಯಂತ every nook and corner - ಮೂಲೆಮೂಲೆಗಳಲ್ಲಿ ಆನುವಂಶಿಕವೊ ಎನ್ನುವ ಭ್ರಮೆ ಹುಟ್ಟಿಸುವ ಹಾಗೆ ವ್ಯಾಪಿಸಿರುವಂಥದು; ಎಲ್ಲ ತಲೆಮಾರುಗಳಲ್ಲಿ ಎಲ್ಲ ವಯೋಮಾನದವರಲ್ಲಿ, ಎಲ್ಲ ಸಮುದಾಯಗಳಲ್ಲಿ, ಮಾನವ ನಿರ್ಮಿತ ಎಲ್ಲ ಜಾತಿ/ವರ್ಗಗಳಲ್ಲಿ, ಪ್ರಾಚೀನ ಆಧುನಿಕರಲ್ಲಿ ವ್ಯಾಪಿಸಿರುವಂಥದು; ವೈಷ್ಟ್ಯಪೂರ್ಣವಾಗಿ ಹರಡಿಕೊಂಡಿರುವಂಥದು; ಆಕರ್ಷಣೀಯವೂ ರೋಚಕವೂ ಆಗಿರುವಂಥದು; ವ್ಯಷ್ಟಿ ಸಮಷ್ಟಿಗಳೆರಡರಲ್ಲಿಯೂ 'ಇಳಿಯ ಮುಳಿಯ' ಹೊಂದಿರುವಂಥದು; ಕಾಲದೊಡನೆ, ಒತ್ತಡಪ್ರಭಾವಗಳೊಡನೆ ತಾನೂ ಬದಲಾದರೂ ಹೊಸಹೊಸ ಸೃಷ್ಟಿ ಮತ್ತು ಆವಿಷ್ಕಾರಗಳೊಡನೆ ಮೈದೋರಿರುವಂಥದು; ಲಿಖಿತ ಇತಿಹಾಸಕ್ಕೆ ಬಹುತೇಕ ವಿರುದ್ಧವೆನಿಸುವ 'ಅಲಿಖಿತ ಇತಿಹಾಸ'ವನ್ನು ತನ್ನದೇ ಸ್ಮೃತಿಗಳ ಮೂಲಕ ಕಥಾಂಶ ಕಟ್ಟುಪಾಡುಗಳೊಡನೆ ಉಳಿಸಿಕೊಂಡು ಬಂದಿರುವಂಥದು; ಮನುಷ್ಯನ ಮನೋ ವೃತ್ತಿಗಳನ್ನು ಸೂಕ್ಷ್ಮ ಎಳೆಗಳೊಡನೆ ಸಮೂಹಪ್ರಜ್ಞಾವಿಶೇಷಗಳಿಂದ ಸದಾ ಅಭಿವ್ಯಕ್ತಿಗೆ ಬಂದಿರುವಂಥದು. ಈ ವ್ಯಾಪ್ತಿಯ ಜಾನಪದ ಸದಾ ಸಮಯಗಳಲ್ಲಿಯೂ ನಮ್ಮಲ್ಲಿ ವಿಸ್ಮಯವನ್ನೂ ಸಂಭ್ರಮವನ್ನೂ ಮೂಡಿಸಿರುವಂಥದು. ಇಷ್ಟೆಲ್ಲ ಸಾಧ್ಯತೆಗಳನ್ನು ಹೊಂದಿರುವ ಜಾನಪದಕ್ಕೂ ಒಂದು ಮಿತಿಯಿದೆ ಎನ್ನುವುದು ಅಚ್ಚರಿಯನ್ನು ಮೂಡಿಸುತ್ತದೆ. ಜಗತ್ತಿನ ಜಾನಪದದ ಸಾಮಗ್ರಿಯನ್ನೆಲ್ಲ ನಮ್ಮ ಮುಂದೆ ರಾಶಿ ಹಾಕಿಕೊಂಡು ಯೋಚಿಸಿದರೆ, ಆ ಎಲ್ಲ ಸಾಮಗ್ರಿಯ ಮೂಲಾಶಯಗಳೂ ಮೂಲಾಂಶಗಳೂ ಎಣಿಕೆಗೆ ಬರುವಷ್ಟರ ಮಟ್ಟಿಗೆ ಸೀಮಿತವಾಗಿರುವುದು ನಮ್ಮ ಗಮನದಿಂದ ತಪ್ಪಿಸಿಕೊಳ್ಳುವುದಿಲ್ಲ. ಮಾನವ ಆಲೋಚಿಸುವ ಸಂದರ್ಭದಲ್ಲಿಯೇ ಇರುವ ಸಮಾನತೆಯೂ, ಇತಿಹಾಸದ ಕಾಲಗಳಲ್ಲಿ ಮತ್ತು ಇವೊತ್ತು ನಿರಂತರವಾಗಿ ವಲಸೆಗಳು ನಡೆಯುತ್ತಿರುವುದೂ ಇದಕ್ಕೆ ಸ್ಪಷ್ಟ ಕಾರಣವೆನಿಸಿವೆ; ಇದರ ಜೊತೆಗೆ ಒಂದನ್ನು ನೋಡಿ ಇನ್ನೊಂದನ್ನು ಸೃಷ್ಟಿಸಿಕೊಳ್ಳುವ 'ಸಾದೃಶ್ಯ ಸೃಷ್ಟಿ'ಯೂ – Analogical creations – ಕಾರಣವಾಗಿರುವುದನ್ನು ಬೆಳಕಿಗೆ ತರಬೇಕಾಗಿದೆ. ಈ ಎಲ್ಲ ಕಾರಣಗಳಿಂದಾಗಿಯೇ ಹೋಲಿಕೆ ವ್ಯತ್ಯಾಸಗಳು ಜಾನಪದ ಸಾಮಗ್ರಿಯಲ್ಲಿ ದಂಡೆಯಾಗಿ ಕಾಣಿಸಿಕೊಳ್ಳುತ್ತಿವೆ. ಸಾದೃಶ್ಯ ಮತ್ತು ಭಿನ್ನತೆಗಳು ಜಾನಪದ ಸಾಮಗ್ರಿಯ ಸೃಷ್ಟಿ ಮತ್ತು ವಿಕಾಸದ ಸ್ವರೂಪದಲ್ಲಿಯೇ ಅಡಗಿರುವ ಅಂಶಗಳಾಗಿವೆ. ವಿಶ್ವ ಸಮಾನತೆಯಲ್ಲಿ ಸಾಮ್ಯತೆಯೂ, ಪ್ರಾದೇಶಿಕತೆಯಲ್ಲಿ ಭಿನ್ನತೆಯೂ ರೂಪುಗೊಳ್ಳುತ್ತಾ ಬಂದಿವೆ. ಆದ್ದರಿಂದ ಸಾಮ್ಯತೆಯನ್ನು ಅದರ ಪ್ರಾದೇಶಿಕ ವಿಭಿನ್ನತೆಯೊಡನೆ ಅಧ್ಯಯನ ಮಾಡುವುದು ಯಾವೊತ್ತೂ ಆಪ್ಯಾಯಮಾನವಾದ ವಿಷಯ. ಇಂತಹ ಅಧ್ಯಯನದಲ್ಲಿ 'unity in Diversity' ಎಂಬ ಲಕ್ಷಣ ಯಾವತ್ತೂ ಅಗತ್ಯವಿರುವ ಅನಿವಾರ್ಯ ಮಾನದಂಡವಾಗುತ್ತದೆ. ನಿರ್ದಿಷ್ಟ ವಲಯದ ಸಾಮಾಜಿಕ ಗುಂಪುಗಳನ್ನೂ, ಸಾಂಸ್ಕೃತಿಕ ಸಮೂಹಗಳನ್ನೂ ಜಾನಪದ ಸಾಮಗ್ರಿಯ ತೆಕ್ಕೆಗೆ ತೆಗೆದುಕೊಳ್ಳುವಾಗ ಈ ಎಲ್ಲ ವಿಚಾರಗಳನ್ನೂ ಪರಿಗಣನೆಗೆ ತೆಗೆದುಕೊಳ್ಳಬೇಕಾದದ್ದು ಆವಶ್ಯಕ. ಜಾನಪದ ಸಾಮಗ್ರಿ ಇಂತಹ ಸಾಂಸ್ಕೃತಿಕ ಸಮಾನತೆ, ಭಿನ್ನತೆ, ವೈವಿಧ್ಯತೆಗಳನ್ನು ತನ್ನ ಒಡಲಿನಲ್ಲಿ ಹೊತ್ತು ನಿರ್ವಹಿಸುತ್ತಾ ಬಂದಿರುವುದರಿಂದ, ಅಂತಹ ಸಾಂಸ್ಕೃತಿಕ ಸಾತತ್ಯಕ್ಕೆ, ಸ್ಥಿರತೆಗೆ ಮತ್ತು ಚಲನಶೀಲತೆಗೆ ಪದಸಂಸ್ಕೃತಿಯೂ ಕಾರಣವಾಗಿದೆ ಎಂಬುದನ್ನು ಮರೆಯಲಾಗದು. ಈ ದೃಷ್ಟಿಯಿಂದ ಕನ್ನಡ ಜಾನಪದ ನಿಘಂಟು, ಅರ್ಥಾತ್ ಪದಸಂಸ್ಕೃತಿ ಕೋಶ ಬಿಡಿಯಾಗಿ ನೋಡಿದರೆ ಸಣ್ಣ ಸಣ್ಣ ಸಾಕ್ಷಿಗಳನ್ನು ಒದಗಿಸುವಂತೆ ಕಂಡರೂ, ಕೋಶದ ಕಲ್ಪನೆಯನ್ನು ಇಡಿಯಾಗಿ ಇಟ್ಟುಕೊಂಡು ನೋಡಿದರೆ, ಜಾನಪದದ ಸಾಂಸ್ಕೃತಿಕ ಅಭಿವ್ಯಕ್ತಿಯ ಮಹತ್ವದ ಭಾಗವಾಗಿ ಕಾಣುವುದು ಸಹಜವೇ ಆಗಿದೆ.

ಮಾನವಶಾಸ್ತ್ರೀಯ ಪರಿಕಲ್ಪನೆಯ ಸಂಸ್ಕೃತಿ ಚಿಂತನೆಯಲ್ಲಿ ಅಗತ್ಯವಾಗಿ ಸೇರಿಸಬೇಕಾದದ್ದು, ಅದರ 'ವಸ್ತು' ಮತ್ತು 'ರೂಪ'ವನ್ನು. ಸಂಸ್ಕೃತಿಯ ಭಾಗವೇ ಆಗಿರುವ ಜಾನಪದದಲ್ಲಿ ಇದರ ಆಲೋಚನೆ ಅಷ್ಟೇ ಮುಖ್ಯವಾದದ್ದೆಂದು ತಿಳಿಯಬೇಕು. ಹಾಗೆಯೇ ಜಾನಪದದ ಅಂಗವಾಗಿರುವ ಪದಸಂಸ್ಕೃತಿಯಲ್ಲಿಯೂ ಇವೆರಡರ ಚರ್ಚೆ ಸಹಜವಾಗಿಯೇ ಪರಿಗಣಿತವಾಗುತ್ತದೆ. 'ವಸ್ತು'ವನ್ನು ಕೇವಲ ಕಥೆ ಎಂತಲೊ, ಕಲ್ಪನೆ ಎಂತಲೊ, ಮಾಹಿತಿ ಎಂತಲೊ ತಿಳಿಯಬೇಕಾದ್ದಿಲ್ಲ; ಅವುಗಳ ಒಟ್ಟು ಸಮನ್ವಯ ಅಥವಾ ಸಂಲಗ್ನತೆಯೆಂದು ಕರೆದರೆ ಆದೀತು. ಇದು ಮುಖ್ಯವಾಗಿ ಪ್ರೇರಣೆ ಸ್ವರೂಪದ್ದೊ ಆಶಯದ ಸ್ವರೂಪದ್ದೋ ಆಗಿರುತ್ತದೆ. ಈ ವಸ್ತು/ಪ್ರೇರಣೆ/ಆಶಯವನ್ನು ತಲೆಮಾರುಗಳು ನಿರ್ಧರಿಸುತ್ತವೆ; ಆದ್ದರಿಂದ ಪುನರಾವರ್ತನೆಗಳು ಮೊರೆಯುತ್ತವೆ. ವ್ಯಕ್ತಿಗಳು ತಮ್ಮ ಕೆಲವು

ಅಂಶಗಳನ್ನು ಅದಕ್ಕೆ ಸೇರಿಸಬಹುದು ಅಥವಾ ಸಮುದಾಯಗಳು ಆ ಕೆಲಸವನ್ನು ಮಾಡಬಹುದು. ಅದು ಕೇವಲ ಅನುಭವವನ್ನು ಹೇಳುತ್ತಿರಬಹುದು; ಇಲ್ಲವೆ ನಂಬಿಕೆ, ಆಚರಣೆ, ಪಾರಂಪರಿಕ ಜ್ಞಾನವಾಗಿರಬಹುದು. ವಿಧಿ ನಿಷೇಧಗಳೂ, ಮನರಂಜನ ಸಾಧನಗಳೂ, ಪ್ರಕೃತಿ ಪರಿಸರ ಪರಿಭಾವನೆಗಳೂ, ಕಲಾತ್ಮಕ ಚಟುವಟಿಕೆಗಳೂ ಸೇರಿರಬಹುದು. ಇವೆಲ್ಲವೂ ಚದುರಿದ ಚಿಂತನೆಗಳಲ್ಲ; ವ್ಯವಸ್ಥಿತ ಮಾದರಿಗಳು. ಸಹಜವಾಗಿಯೇ ಅವುಗಳಲ್ಲಿ ವ್ಯತ್ಯಯಗಳು ಸಂಭವಿಸುತ್ತವೆ; ವ್ಯತ್ಯಯಗಳು ಪ್ರತ್ಯೇಕ ಮಾದರಿಗಳನ್ನು ರೂಪಿಸಲು ಸಮರ್ಥವಾಗಿರಬಹುದು, ಇಲ್ಲವೆ ಮಾದರಿಗಳಾಗಿ ಬಳಕೆಯಾಗಲು ವಿಫಲವಾಗಬಹುದು. ಮಾದರಿಯಾಗಲು ವಿಫಲವಾದ ವ್ಯತ್ಯಯಗಳು ಕ್ರಮೇಣ ಮಾದರಿಯಾಗಿ ಕಾಣಿಸಿಕೊಳ್ಳಲು ಪ್ರಯತ್ನಿಸಬಹುದು, ಇಲ್ಲವೆ ಬಳಕೆಯಿಂದ ತಪ್ಪಿಹೋಗಬಹುದು. ಪದಸಂಸ್ಕೃತಿಯಲ್ಲಿ ಈ ಎಲ್ಲ ಲಕ್ಷಣಗಳೂ ಜರುಗುತ್ತವೆ; ಆದರೆ ಒಂದು ಮಿತಿಯಲ್ಲಿ ಮಾತ್ರ. ಬಹುತೇಕ ಪದಗಳು Contextual ಆಗಿರುವುದು ಇದಕ್ಕೆ ಕಾರಣ; ಆಧುನಿಕ ಕಾರಣಕ್ಕೆ ಸಂದರ್ಭವನ್ನು ದಾಟಿ ಪದಗಳು ಬಂದಾಗ, ಸಂದರ್ಭಗಳು ಕಾಣೆಯಾಗುವುದು ಸಹಜ. ಆಗ ಆ ಪದಗಳ 'ಪದಸಂಸ್ಕೃತಿ'ಯ ಸ್ವರೂಪದಲ್ಲಿ ವ್ಯತ್ಯಾಸವಾಗಬಹುದು; ಇನ್ನೂ ಮುಂದುವರಿದಂತೆ 'ಪದಸಂಸ್ಕೃತಿ'ಯ ಸಂಸ್ಕೃತಿ ನಿಗೂಢತೆಗೆ ಜಾರಿ, ಹೊಸ ಸಂಸ್ಕೃತಿ ಆ ಜಾಗದಲ್ಲಿ ಕೆಲಸಮಾಡಲು ಪ್ರವೇಶಿಸದಿದ್ದರೆ, ಆ ಪದ ಕೇವಲ ಪದವಾಗಿ ಭಾಷಿಕ ಉಪಯೋಗಕ್ಕೆ ಮಾತ್ರ ಸೀಮಿತವಾಗುವ ಸಾಧ್ಯತೆ ಇರುತ್ತದೆ.

ಜಾನಪದ ಅಥವಾ ಪದಸಂಸ್ಕೃತಿಯ 'ರೂಪ'ದ ಸಮಸ್ಯೆ ಕೂಡ ಜಟಿಲವಾಗಿಯೇ ಇರುತ್ತದೆ. ಬಳಕೆಯ ಸಂದರ್ಭಗಳು, ಬಳಕೆಯ ಪ್ರದೇಶಗಳು ಮತ್ತು ಹೇಳುವ ವಕ್ತೃಗಳು ಈ ರೂಪದ ಜಟಿಲತೆಯನ್ನು ನಿರ್ಧರಿಸುವುದುಂಟು. ಒಂದುಕಡೆ ಭಾಷೆಯೊಡನಿರುವ ಅದರ ಸಂಬಂಧ, ಮತ್ತೊಂದು ಕಡೆ ಸಾಮಾಜಿಕ/ಸಾಂಸ್ಕೃತಿಕ ಅನುಷ್ಠಾನದೊಡನಿರುವ ಸಂಬಂಧ ಇದರ ಸ್ವರೂಪವನ್ನು ನಿರ್ಧರಿಸುವಲ್ಲಿ ಸಾಕ್ಷಿಯಾಗುತ್ತವೆ. ಮತ್ತೆ ಇದರಲ್ಲಿ 'Verbal' ಮತ್ತು 'Non – verbal' ಅಭಿವ್ಯಕ್ತಿ ಮಾರ್ಗಗಳು 'ರೂಪ'ಗಳ ನಿರ್ಧಾರಕ ಅಂಶಗಳಾಗುವುದು ಸಹಜ. ಶಬ್ದರೂಪದ ಜಾನಪದ ಪ್ರಕಾರಗಳಲ್ಲಿ ಭಾಷೆ ನಿರ್ಣಾಯಕ ಪಾತ್ರವಹಿಸುತ್ತದೆ; ಆದರೆ ಶಬ್ದರೂಪವಲ್ಲದ ಪ್ರಕಾಗಗಳಲ್ಲಿ ಭಾಷೆಯ ಪಾತ್ರ ಕಡಿಮೆ ಇರುವುದರಿಂದ 'ರೂಪ' ಅನಿರ್ದಿಷ್ಟವಾಗುತ್ತದೆ, ಸಂದಿಗ್ಧವಾಗುತ್ತದೆ; ಆಗ ಬೇರೆ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ; ಆಗ ಒಟ್ಟು 'Morphology' ರೂಪ ತತ್ತ್ವವನ್ನು ಗಮನಿಸಬೇಕಾಗುತ್ತದೆ. ಪದಸಂಸ್ಕೃತಿಯ ಪದಗಳು ಭಾಷೆಯೊಡನೆ ನೇರ ಸಂಪರ್ಕಕ್ಕೆ ಬರುವುದರಿಂದ 'ಅಶಾಬ್ದಿಕ' ಸಮಸ್ಯೆ ಅಲ್ಲಿ ತಲೆದೋರುವುದಿಲ್ಲ. ಆದರೆ ಪದಗಳ ಸಡಿಲ ಸ್ವರೂಪ, ಅವುಗಳಲ್ಲಿ ಪದೇ ಪದೇ ಕಾಣಬರುವ ಪುನರಾವರ್ತನೆಗಳು, ಮರು ಉಕ್ತಿಗಳು ಮತ್ತು ಆನುವಂಶೀಯ ರೂಪಗಳು, ಅಂದರೆ ಉಪಪದಗಳು/ ಉಪರೂಪಗಳು ಮತ್ತು ಅವುಗಳಲ್ಲಿನ ಭಿನ್ನಾರ್ಥಗಳು ಮೂಲ ಪದಸಂಸ್ಕೃತಿಯನ್ನು ಜಟಿಲಗೊಳಿಸುತ್ತವೆ. ಆಗ ಅನಿವಾರ್ಯವಾಗಿಯೇ ಮೂಲ ರೂಪದ ಅನ್ವೇಷಣೆಗೆ ತೊಡಬೇಕಾಗಬಹುದು. ವಸ್ತುವಿನ ಮಾದರಿಗಳ ಹಾಗೆಯೇ ರೂಪದ ಮಾದರಿ ಅಥವಾ ವರ್ಗಗಳನ್ನು ತಯಾರಿಸಬೇಕಾಗುತ್ತದೆ. ರೂಪ ಯಾವೊತ್ತೂ ಮೇಲ್ಮೈಯಲ್ಲ, ಅದರೊಳಗೆ ಅರ್ಥ ಅಂತರ್ನಿಹಿತವಾಗಿ ಕೆಲಸಮಾಡುವುದರಿಂದ, ವಸ್ತು ಮತ್ತು ರೂಪ ಒಂದರೊಡನೊಂದು ಅವಲಂಬಿಸಿಯೇ ಇರುತ್ತವೆ.

ಮಾತಿನ ಭಾಗವಾಗಿಯೇ ಪದಗಳು ಇರುವುದರಿಂದ, ಪದ ಸಂಸ್ಕೃತಿಯೇ ಮಾತಿನ ಸಂಸ್ಕೃತಿಯೂ ಆಗುವುದರಿಂದ, ಮಾತನ್ನು ಕುರಿತು ಕೆಲವು ವಿಚಾರಗಳನ್ನು ಬರೆಯುವುದು ಆವಶ್ಯಕ. 'ಮಾತು ಆಡಿದರೆ ಹೋಯ್ತು, ಮುತ್ತು ಒಡೆದರೆ ಹೋಯ್ತು' ಎಂಬುದು ಒಂದು ಪ್ರಸಿದ್ಧ ಲೋಕೋಕ್ತಿ; ಮಾತೇನಾದರೂ 'ತುಟಿಮೀರಿದರೆ', 'ನಾಲಿಗೆಯನು ಹರಿಯಬಿಡದಿರು' ಎಂಬ ಮಾತು ಅದರೊಟ್ಟಿಗೇ ಬರುತ್ತದೆ. ಇವೆರಡೂ ಮೂರ್ತಿ ಮಾಂತ್ರಿಕತೆಯನ್ನೂ, ಪ್ರತಿಮಾತ್ಮಕತೆಯನ್ನೂ, ಸಾಂಸ್ಕೃತಿಯಕತೆಯನ್ನೂ ಒಟ್ಟಿಗೆ ಬಿಂಬಿಸುತ್ತವೆ. ಮಾತು ನಡವಳಿಕೆಯ ಮಾದರಿ; ಪದ ಅದರ ನಡೆ – ಪದಸಂಸ್ಕೃತಿಯನ್ನು ಅಂತಿಮವಾಗಿ ಮಾತಿನ ಅಥವಾ ಸಂಸ್ಕೃತಿ ಸಂದರ್ಭದ ಪ್ರತಿನಿಧೀಕರಣವೆಂದು ಕರೆದರೂ ಆದೀತು. ಭಾಷೆಯೊಂದು ಪದವನ್ನೂ, ಮಾತನ್ನೂ ಏಕಪ್ರಕಾರವಾಗಿ ಒಳಗೊಳ್ಳುವುದರಿಂದ, ಭಾಷೆಯು ಸಂಸ್ಕೃತಿಯ ಅಭಿವ್ಯಕ್ತಿಯೆಂದೂ, ಅಥವಾ ಅದರ ಭಾಗವೆಂದೂ ಕರೆಯುವುದು ವಾಡಿಕೆಯಲ್ಲಿದೆ.

ನಾವೆಲ್ಲರೂ ಯಾವುದಾದರೊಂದು ಭಾಷಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಮೂಹಕ್ಕೆ ಸೇರಿದವರಾಗಿರುತ್ತೇವೆ. ನಮ್ಮ ಮಾತಿನ ಮೇಲೆ ಇವುಗಳ ಪ್ರಭಾವವನ್ನು ನಿರೀಕ್ಷಿಸುವುದು ಸಹಜವೇ. ಮಾತು, ಭಾಷೆ, ಪದಕೋಶಗಳೆಲ್ಲವೂ ಸುತ್ತಲ ಪರಿಸರದ ಸಾಂಸ್ಕೃತಿಕ ಪರಿಸ್ಥಿತಿಗಳಿಗೆ ಹೊಂದಿಕೊಂಡಿರುತ್ತವೆ. ಅಂದರೆ ಇವೆಲ್ಲವೂ ವಾತಾವರಣಕ್ಕೆ ಬದ್ಧವಾಗಿ, ಆಮೇಲೆ ಮಾರ್ಪಾಡಿಗೆ ಗುರಿಯಾಗುತ್ತವೆ. ಮಾತಾಡುವವನ ಮಾತನ್ನೂ ಭಾಷೆಯನ್ನೂ ನಿರ್ದಿಷ್ಟ ಸಮುದಾಯದ ನಡವಳಿಕೆಯ ಮಾದರಿಗೆ ಅನುಗುಣವಾಗಿ ವಿಶಿಷ್ಟಗೊಳಿಸುತ್ತಾ ಹೋಗುವುದು ಒಂದು ಸಾಂಪ್ರದಾಯಿಕ ಲಕ್ಷಣ. ಈ ಮಾತು ಆರಂಭದ ಹಂತಗಳಲ್ಲಿ ಕಲಾತ್ಮಕವಾಗಿದ್ದು, ಆಮೇಲಿನ ವಿಭಿನ್ನ ಪ್ರಭಾವ ಒತ್ತಡಗಳಿಂದಾಗಿ ಉಚ್ಚಾರಣೆಯಲ್ಲಿ ವ್ಯತ್ಯಾಸಗಳು ಸಂಭವಿಸುತ್ತವೆ. ಮಾತಿನ ಬಳಕೆಯಲ್ಲಿ ಮೊದಮೊದಲ ವೈಯಕ್ತಿಕತೆ ಮಾಯವಾಗಿ ಆಮೇಲಿನ ಪ್ರಾದೇಶಿಕ ಮತ್ತು ಸಾಮಾಜಿಕ ವ್ಯತ್ಯಯಗಳಿಗೆ ಕಾರಣವಾಗುವುದು ಒಂದು ಅನಿವಾರ್ಯ ಘಟನೆ. ಈ ಎಲ್ಲ ಕಾಲಮಾನಗಳ ಸ್ಪಂದನಕ್ಕೆ ಪದಗಳೂ ಒಳಪಡುವುದೂ ಬದಲಾಗುವುದೂ ಒಟ್ಟು ಬಳಕೆಯೊಡನೆ ನಡೆಯುವ ಕ್ರಿಯೆಯಾಗಿದೆ. ಭಾಷಿಕ ವೈಯಕ್ತಿಕತೆ ಮತ್ತು ಸಾಂಸ್ಕೃತಿಕ ವೈಯಕ್ತಿಕತೆ ಪರಸ್ಪರ ಮುಖಾಮುಖಿಯಾದಾಗ ಮಾತಿನಲ್ಲಿ ಉಂಟಾಗುವ ಶೀಘ್ರ ಸಂಚಲನ ಸಂಸ್ಕೃತಿಯಲ್ಲಾಗುತ್ತದೆ ಎಂದು ಹೇಳಲಾಗದು. ಅಂದರೆ ಆಡುವ ಮಾತಿಗಿಂತ ನಡೆಯುವ ಸಾರ್ವತ್ರಿಕ ಸಂಪ್ರದಾಯ ಬದಲಾವಣೆಗೆ ಬರುವುದು ನಿಧಾನ. ಈ ಕಡೆ ಭಾಷಿಕ ಪಥ್ಯವೂ ಆ ಕಡೆ ಸಾಂಸ್ಕೃತಿಕ ಪಥ್ಯವೂ ಆಗಿರುವ ಪದಗಳ ಮೇಲೆ ಈ ಎರಡೂ ಪ್ರವೃತ್ತಿಗಳು ಸಹಜವಾಗಿಯೇ ದೊಡ್ಡಪ್ರಮಾಣದ ಪ್ರಭಾವವನ್ನು ಬೀರಿರುತ್ತವೆ. ಈ ಕಾರಣದಿಂದ ಪದಸಂಸ್ಕೃತಿಯ ಬಳಕೆಯ ಸಂದರ್ಭಗಳು ವ್ಯತ್ಯಾಸವಾಗಬಹುದು, ಗೂಢವಾಗಲೂಬಹುದು.

ಮಾತು ಮೊದಲು ರೂಪುಗೊಳ್ಳುವುದು ಉಪಭಾಷೆಯ ಸಂದರ್ಭದಲ್ಲಿಯೇ. ಈ ಹಂತದಲ್ಲಿ ಒಂದು ಉಪಭಾಷೆ ಇನ್ನೊಂದರಿಂದ ಸಹಜವಾಗಿಯೇ ಪದಕೋಶದಲ್ಲಿ, ಉಚ್ಚಾರಣೆಯಲ್ಲಿ, ವ್ಯಾಕರಣದಲ್ಲಿ ಕೂಡ ಭಿನ್ನವಾಗಿರುವುದು ಸಾಧ್ಯ. ಈ ಭಿನ್ನತೆಗಳು ಭೌಗೋಳಿಕ ಲಕ್ಷಣಗಳಿಂದ, ಸಾಮಾಜಿಕ ಪರಿಸ್ಥಿತಿಗಳಿಂದ ಉದ್ಭವಿಸಿದವು ಆಗಿರಬಹುದು. ಇವು ಆ ಸಮಯದಲ್ಲಿ ಅಲ್ಲಿಯ ಭಾಷೆಯ ಪ್ರಮುಖ ಲಕ್ಷಣಗಳೇ ಆಗಿಬಿಡಬಹುದು. ಇದೇನೂ ಆಳವಾದ, ಅಂಟಿಕೊಂಡ ಪ್ರಕ್ರಿಯೆಯೇನೂ ಅಲ್ಲ, ಭಾಷಾ ವ್ಯತ್ಯಾಸ ಒಂದು ಲಕ್ಷಣವೇ ಆಗಿರುವುದರಿಂದ, ಮಾತಿನ ಮಾದರಿಗಳೂ ಪದಮಾದರಿಗಳೂ ಬದಲಾಗುವುದು ಸಹಜ. ಮಾತಿನ ಪ್ರಾದೇಶಿಕ ಭೇದಗಳಿಗಿಂತ ಜಾತಿ ಸಮುದಾಯಗಳಿಂದಾದ ಭೇದಗಳು ಭಿನ್ನವಾಗಿರುತ್ತವೆ. ಪ್ರಾದೇಶಿಕ ಭೇದಗಳ ಮೇಲೆ ಭೌಗೋಳಿಕ ಕಾರಣಗಳಿದ್ದರೆ, ಜಾತಿಯಾಧಾರಿತ ಭೇದಗಳು ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಂದಾಗಿರುತ್ತವೆ. ಜಾತಿ ಸಮುದಾಯವನ್ನು ಒಂದು ಉಪಭಾಷಿಕ ವಲಯವನ್ನಾಗಿ ಪರಿಗಣಿಸಿದರೆ, ಇಂತಹ ಸಮುದಾಯಗಳ ನಡುವೆ ಪದಕೋಶ ಮತ್ತು ಉಚ್ಚಾರಣೆಗಳಲ್ಲಿ ವ್ಯತ್ಯಾಸಗಳಿರುತ್ತವೆ; ಇದಕ್ಕೆ ವೃತ್ತಿ, ವಾಸ್ತವ್ಯ ಮತ್ತು ಆಚರಣಾತ್ಮಕ ನಡವಳಿಕೆಗಳು ಪ್ರಧಾನವಾಗಿ ಕಾರಣವಾಗಿರುತ್ತವೆ. ಸಾಮಾಜಿಕ ಮತ್ತು ಆರ್ಥಿಕ ಆಧುನಿಕತೆಯ ಕಾರಣದಿಂದಾಗಿ ಈ ಭಿನ್ನತೆಗಳನ್ನು ಶಾಶ್ವತವಾಗಿ ಉಳಿಸಿಕೊಳ್ಳಲು ಸಾಧ್ಯವಾಗುವುದಿಲ್ಲ; ಫಲವಾಗಿ ಸಮುದಾಯದ ಮಾತಿನಲ್ಲಿ ವ್ಯತ್ಯಾಸಗಳು ಕಾಣಿಸಿಕೊಂಡು ಉಚ್ಚಾರಣೆ ಮತ್ತು ಪದಕೋಶದಲ್ಲಿ ಅವು ಗರಿಷ್ಠ ಪ್ರಮಾಣದಲ್ಲಿ ದಾಖಲಾಗಬಹುದು. ಕ್ರಮೇಣ ಸಮುದಾಯಗಳ ನಡುವಣ ಉಪಭಾಷಿಕಗಳು ತಪ್ಪಿ ಭಾಷಾಸಾಮರಸ್ಯವನ್ನು ಸಾಧಿಸಬಹುದು. ಸಮುದಾಯಗಳು ತಮ್ಮ ಅಸ್ಮಿತೆಯನ್ನು ಉಳಿಸಿಕೊಂಡರೂ, ಉಪಭಾಷಾ ಅಸ್ಮಿತೆಯನ್ನು – ಪದ ಮತ್ತು ಉಚ್ಚಾರಣೆಯೂ ಸೇರಿದಂತೆ – ಬಿಟ್ಟುಕೊಡುವ ಅನಿವಾರ್ಯತೆಗೆ ತಲುಪಬಹುದು.

ಯಾವುದೇ ಪ್ರಾದೇಶಿಕ ಮತ್ತು ಸಮುದಾಯ ಉಪಭಾಷೆಗಳನ್ನು ತೆಗೆದುಕೊಂಡರೂ ಅದರಲ್ಲಿ ಶಿಷ್ಟರೂಪ, ಸಾಮಾನ್ಯರೂಪ ಮತ್ತು ಜನಪದ ರೂಪಗಳೆಂಬ ಹೆಸರಿನಲ್ಲಿ ವಿಭಜಿಸಿಕೊಳ್ಳಬಹುದು; ಪ್ರಚಲಿತವಾಗಿರುವ ಮಾತಿನ ಮೂರು ರೂಪಗಳಿವು. ಮಧ್ಯದ ಸಾಮಾನ್ಯರೂಪ ಈ ಕಡೆ ಶಿಷ್ಟರೂಪಕ್ಕೂ ಆಕಡೆ ಜನಪದ ರೂಪಕ್ಕೂ ಸಂಬಂಧ ಹೊಂದಿರುವಂಥದು; ಎರಡರ ಲಕ್ಷಣಗಳನ್ನು ತನ್ನಲ್ಲಿ ಅಂತರ್ಗತಗೊಳಿಸಿಕೊಂಡಿರುವಂಥದು. ಸಾಮಾನ್ಯವಾಗಿ ಮಧ್ಯಮವರ್ಗದ ಆಡುಭಾಷೆಯಲ್ಲಿ ಈ ತೆರನಾದ ಸಂಕೀರ್ಣತೆಯನ್ನು ಕಾಣುತ್ತೇವೆ. ಪದಸಂಸ್ಕೃತಿ ಬೆಳೆದಿರುವಂಥದು ಇಂತಹ ವಿಭಜನೆ ಮತ್ತು ಸಾಮರಸ್ಯದ ತಾದಾತ್ಮ್ಯದಿಂದ. ಆದರೆ ನಮ್ಮ ಸಮಾಜದ ಶ್ರೇಣೀಕೃತ ವ್ಯವಸ್ಥೆಯಲ್ಲಿ ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಂದಾಗಿ ಮಾತಿನ ರೂಪಗಳು ಈ ಮೂರಕ್ಕಿಂತ ಹೆಚ್ಚಿನ

ರೂಪಗಳನ್ನು ಹೊಂದಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಭಾರತದ ಬಹುಸಾಂಸ್ಕೃತಿಕ ವಲಯಗಳ ವೈವಿಧ್ಯತೆಯನ್ನು ಏಕಸಾಂಸ್ಕೃತಿಕ ದಾಳಿಯ ಸಾಂದ್ರತೆ ಕ್ರಮೇಣ ಅಳಿಸಿಹಾಕಿಬಿಡುವ ಸಂಭವನೀಯತೆಯನ್ನು ಅಲ್ಲಗಳೆಯುವಂತಿಲ್ಲ. ಮಾತು ತನ್ನ ಸ್ವಾದವನ್ನು ಬಿಟ್ಟುಕೊಡುವವರೆಗೆ ಪದಸಂಸ್ಕೃತಿ ತನ್ನ ವರ್ಣವೈಭವವನ್ನು ಬಿಟ್ಟುಕೊಡಲಾರದೆಂದೇ ತೋರುತ್ತದೆ. ಎಲ್ಲಿಯವರೆಗೆ ಪದಗಳು ತಮ್ಮ ಮೂಲ ಸಂದರ್ಭಗಳನ್ನು ಬದಲಾಯಿಸುವುದಿಲ್ಲವೊ, ಆಚರಣಾತ್ಮಕ ಸಂಸ್ಕೃತಿಯನ್ನು ತಮ್ಮ ತೆಕ್ಕೆಯಲ್ಲಿ ಬಂಧಿಸಿ ಇಟ್ಟುಕೊಂಡಿರುತ್ತವೆಯೋ ಅಲ್ಲಿಯವರೆಗೆ ಪದಸಂಸ್ಕೃತಿಯ ಈ ವರ್ಣವೈಭವ ಇದ್ದೇ ತೀರುವುದು. ನಮಗಿಲ್ಲಿ ಬೇಕಾಗಿರುವುದು ಮಾತಿನ ಶಿಷ್ಟರೂಪವಲ್ಲ; ಏಕೆಂದರೆ ಅದು ವಿದ್ಯಾವಂತರ ಮಾತಿನರೂಪ. ನಾವಿಲ್ಲಿ ನಿಜವಾಗಿಯೂ ಆಲೋಚಿಸುತ್ತಿರುವುದು ಜನಪದದ ಮಾತಿನ ಆಡುರೂಪ; ಏಕೆಂದರೆ ಅದು ನಮ್ಮ ಸಾಂಸ್ಕೃತಿಕ 'ಬಹುತ್ವ'ದ ಕೊಡುಗೆ. ಪದಗಳೂ ಅವುಗಳ ಸಾಂಸ್ಕೃತಿಕ ಸಂಬಂಧಗಳೂ ಬಹುವಾಗಿ ನಿಂತಿರುವುದು ಇದರ ಮೇಲೆಯೇ.

ಗ್ರಾಮೀಣ ಜಗತ್ತಿನ ಈ ಮಾತಿನ ಮಾದರಿಗಳ್ನು ಅಧ್ಯಯನ ಮಾಡುವುದು ತೀರ ಆವಶ್ಯಕವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇದಕ್ಕೆ ಬಹುದೊಡ್ಡ ನಿದರ್ಶನವಾಗಿ ಪ್ರಸ್ತುತ ಜಾನಪದ ನಿಘಂಟಿನ ಪದಸಂಸ್ಕೃತಿಯ ಅಧ್ಯಯನವಿದೆ. ಆ ಕಾರಣವಾಗಿ ಇದಕ್ಕೆ ಸಂಶೋಧನೆಯ ವ್ಯಾಪ್ತಿ ಮತ್ತು ಮಹತ್ವ ಪ್ರಾಪ್ತವಾಗಿದೆ. ಪದಗಳ ಆಯ್ಕೆಯ ವಿಷಯ ಬಂದಾಗ, ಹಳೆಯ ತಲೆಮಾರಿನ ವಿದ್ಯಾವಂತ ಸಮಾಜದಿಂದ ದೂರ ಉಳಿದಿರುವ ಮತ್ತು ಪ್ರಭಾವ ಮುಕ್ತ ಆಡುಭಾಷಿಕರನ್ನೇ ಅವಲಂಬಿಸುವುದು ಸೂಕ್ತ. ಹೀಗೆ ಹಳ್ಳಿಗರಾದ ವೃದ್ಧ ನಿವಾಸಿಗಳನ್ನು ಆಯ್ಕೆಮಾಡಿಕೊಂಡರೂ, ವಯೋಮಾನದ ಅಂತರಗಳನ್ನೂ, ಗ್ರಾಮೀಣ – ಪಟ್ಟಣ ಮತ್ತು ಅಕ್ಷರಸ್ಥ – ಅನಕ್ಷರಸ್ಥ ಯುಗ್ಮಗಳನ್ನೂ ಅಧ್ಯಯನದ ತೆಕ್ಕೆಗೆ ತೆಗೆದುಕೊಳ್ಳುವುದು ತೌಲನಿಕ ಪರಿಶೀಲನೆಗೆ ಉಪಯುಕ್ತವಾದೀತು. ಇಲ್ಲಿ ನಿಷಿದ್ಧ ಪದಸಮುದಾಯವನ್ನೂ ಗಮನಿಸಬೇಕು. ಇಂತಹ ಪದ ಸಮುಚ್ಚಯವನ್ನು ಹೇಳಿಕೊಡುವಾಗ ಸಂಕೋಚ ಮತ್ತು ನಾಚಿಕೆ ಅವರನ್ನು ಬಾಧಿಸುವುದು ಸಹಜ. ಆದರೆ ಕೆಲವು ಭಾವನೆಗಳ ಅಭಿವ್ಯಕ್ತಿಗಾಗಿ, ಸಾಮಾಜಿಕ ಭಾಷಿಕಸ್ತರಗಳನ್ನು ಅಭ್ಯಸಿಸಲು ಇಂಥದು ಅನುಕೂಲಕ್ಕೆ ಬರುತ್ತದೆ. ಆಡುಭಾಷೆಯನ್ನು ಮಾತನಾಡುವ ಹಳ್ಳಿಯ ಹಿರಿಯ ವ್ಯಕ್ತಿ ಅನೇಕ ಪದಗಳ ಗಣಿಯಾಗಿರುತ್ತಾನೆ; ಅಂತಹಕಡೆ ಸಂಕೋಚಗಳ ಸೆರೆಯಲ್ಲಿರುವ ಪದಗಳೂ ಇವೆಯೆಂಬುದನ್ನು ಮರೆಯಲಾಗದು.

ಅದೇ ವೇಳೆಯಲ್ಲಿ ಪ್ರಾದೇಶಿಕ ಮತ್ತು ಸಾಮಾಜಿಕ ವ್ಯತ್ಯಯಗಳ ಕೆಲವೊಂದು ಗೊಂದಲಗಳು ಕಾಣಿಸಿಕೊಳ್ಳುವುದುಂಟು. ಹಾಗೆಯೇ ಜನಪದ ಮತ್ತು ಇತರರ ನಡುವಣ ವ್ಯತ್ಯಾಸಗಳು ಕೂಡ. ಇವರ ಮಾತಿನಲ್ಲಿ ಪದಸಂಪತ್ತಿಗೆ ಸಂಬಂಧಿಸಿದಂತೆ ಕೆಲವೊಂದು ಮಿತಿಗಳಿದ್ದರೂ, ವ್ಯಾಕರಣಾತ್ಮಕ ಮತ್ತು ಧ್ವನ್ಯಾತ್ಮಕ ವಿಷಯಗಳಲ್ಲಿ ಮಹತ್ವದ ಅಂಶಗಳಿವೆ ಎಂಬುದು ನಿಜ. ಭಾಷಿಕ ವಿಧಾನಗಳಲ್ಲಿ ಪದಸಂಸ್ಕೃತಿಗೆ ಸಂಬಂಧಿಸಿದಂತೆ ಎರಡು ರೀತಿಗಳಿವೆ: ಒಂದು, ಸಂವಹನದ ಗಂಭೀರ ಸಮಸ್ಯೆಗಳಲ್ಲದ ಪದಪದ್ಧತಿ; ಎರಡು, ಭಾಷಾ ಪಳೆಯುಳಿಕೆಯ ಮಾರ್ಪಾಡಿಗೆ ಸಂಬಂಧಿಸಿದ ಪದವ್ಯವಸ್ಥೆ. ಇಂತಹ ಪದಗಳ ಅಭಿವ್ಯಕ್ತಿ ಕ್ರಮವನ್ನು ಕುರಿತು ಅಭ್ಯಾಸಮಾಡುವಾಗ, ಅವು ಸಾಮಾಜಿಕವಾಗಿ/ಸಾಂಸ್ಕೃತಿಕವಾಗಿ ಎಷ್ಟು ಪ್ರಾಮುಖ್ಯ, ಭಾಷಾವೈಜ್ಞಾನಿಕವಾಗಿ ಎಷ್ಟು ಪ್ರಾಮುಖ್ಯ ಎಂಬುದನ್ನು ನೋಡುವುದು. ಪದರೂಪ ರಚನೆಯಲ್ಲಿ ವ್ಯಾಕರಣ ಪ್ರಕ್ರಿಯೆ ಮತ್ತು ಭಾಷಾಪ್ರಕ್ರಿಯೆಯಲ್ಲಿ ಭಾಗವಹಿಸುವ ರೀತಿಯನ್ನು ಕುರಿತು ಮಾತಾಡುವುದು ಅನಿವಾರ್ಯವಾಗಬಹುದು. ವ್ಯಾಕರಣ ಪ್ರಕ್ರಿಯೆ ಮತ್ತು ಪದಕೋಶ ಪ್ರಕ್ರಿಯೆಯ ನಡುವೆ ಸಾಕಷ್ಟು ಅಂತರವಿದೆ; ಅಂತಹ ಸಂದರ್ಭದಲ್ಲಿ ವ್ಯಾಕರಣ ಸಮಸ್ಯೆಗಿಂತ ಪದಕೋಶ ರಚನಾ ಪ್ರಕ್ರಿಯೆ ಮುಖ್ಯವಾಗುವುದು ಸಹಜ; ಅದರಲ್ಲಿಯೂ ಭಾಷೆಯ ಪ್ರಾದೇಶಿಕ ಮತ್ತು ಸಾಂಸ್ಕ್ರತಿಕ ಪದರಗಳ ಶೋಧನೆಗೆ ಇದು ಅನಿವಾರ್ಯ ಮತ್ತು ಪ್ರಮಾಣಬದ್ಧ. ಕೆಲವೊಮ್ಮೆ ವ್ಯಾಕರಣ ಸಮಸ್ಯೆ ಮತ್ತು ಸಾಮಾಜಿಕ ಭಿನ್ನತೆಗಳೆರಡನ್ನೂ ತನ್ನ ಒಡಲಿನಲ್ಲಿ ಇಟ್ಟುಕೊಂಡಿರುವ ಪದಗಳೂ ಇವೆ ಎಂಬುದನ್ನು ಮರೆಯಲಾಗದು.

ಯಾವಾಗಲೂ ಜನಪದ ಆಡುಮಾತು ಉಳಿದ ವರ್ಗಗಳ ಭಾಷೆಗಿಂತ ಉಚ್ಚಾರಣೆಯಲ್ಲಿ ವೈರುಧ್ಯವನ್ನು ಸ್ಥಾಪಿಸುವುದು ಸಾಮಾನ್ಯ. ಹಾಗೆಯೇ ಉಳಿದ ವರ್ಗಗಳ ಧ್ವನಿಮಾದರಿ ಹೆಚ್ಚುಕಡಿಮೆ ಒಂದೇ ಆಗಿರುವುದೂ ಒಂದು ನಮೂನೆ. ಆದರೆ ಜನಪದ ಉಚ್ಚಾರಣೆ ಪ್ರಾದೇಶಿಕ ಎಲ್ಲೆಗಳನ್ನು ಮೀರಿರುತ್ತದೆ, ಬಹಳ ಸಾರಿ ಈ ಜನಪದ ಉಚ್ಚಾರಣೆ ಯಥಾಸಾಮಾನ್ಯ ಧ್ವನಿ ವಿಕಾಸವನ್ನು ಹೊಂದಿರುತ್ತದೆ. ಪ್ರಾದೇಶಿಕ ಉಪಭಾಷೆಗಳ ಮೇರೆಗಳಿಂದ ಆಗಾಗ್ಗೆ ಪ್ರಭಾವಕ್ಕೆ ಒಳಗಾದರೂ, ಜನಪದ ಆಡುಮಾರು ಸಾರ್ವತ್ರಿಕ ಎನ್ನದೆ ವಿಧಿಯಿಲ್ಲ. ಪ್ರಾದೇಶಿಕ ಮತ್ತು ಜಾತಿಸಂಬಂಧ

ಉಪಭಾಷೆಗಳನ್ನು ಹೊರತುಪಡಿಸಿದ ವಿಶೇಷೀಕರಿಸಿದ ಪದಸಂಸ್ಕೃತಿಯನ್ನು ಹೊಂದಿರುವುದು ಭಾಷೆಯ ಒಂದು ಲಕ್ಷಣವಾಗಿದೆ. ಭಾಷೆಯ ಉಚ್ಚಾರಣಾ ಮಾದರಿಗಳನ್ನೆ ಹೊಂದಿರುವ ಇದು, ಸಮಾಜದ ವಿಶೇಷ ಮುಖವನ್ನೋ, ನಿರ್ದಿಷ್ಟ ಭಾವನೆಗಳನ್ನೋ ವ್ಯಕ್ತಪಡಿಸಲು ಹೊರಟಿರುವ ಪದಸಮೂಹವೆಂದೇ ತಿಳಿಯಬೇಕು.

ಹೀಗಾಗಿ ಜನಪದ ಮಾತೇ ಭಾಷೆಯ ತಳಹದಿ; ಅಂದರೆ ಯಾವುದು ಸ್ವಾಭಾವಿಕವೋ ಅದೇ ಇದು. ಜನಪದ ಮಾತಿಗೆ ಸಂಬಂಧಿಸಿದ ಬಹುತೇಕ ಪದಗಳು ಜನಪ್ರಿಯ ನಿಷ್ಪತ್ತಿಯೊಂದನ್ನು ಹೊಂದಿರುತ್ತದೆ; ಈಗ ಅವು ಪತ್ತೆಗೆ ಸಿಕ್ಕಬಹುದು, ಇಲ್ಲವೆ ಸಿಕ್ಕದಿರಬಹುದು. ಇದರೊಡನೆ ತಪ್ಪು ನಿಷ್ಪತ್ತಿಗಳು – False Etymology - ಸೇರಿಕೊಂಡಿರಬಹುದು; ಇದರಿಂದ ನಿಜವಾದ ನಿಷ್ಪತ್ತಿಯನ್ನು ದೊರಕಿಸಿಕೊಳ್ಳುವುದೇ ಪದಸಂಸ್ಕೃತಿಯ ವಾಚಿಕ ಇತಿಹಾಸವಾಗುತ್ತದೆ. ಈ ಮಧ್ಯೆ ಭಾಷಿಕ ಗೊಂದಲಗಳು, ತರ್ಕಗಳು ಉಂಟಾಗುವುದು ಸಹಜ; ಸಾಮಾನ್ಯ ಬಳಕೆಯಿಂದ ಪದಗಳು ತಪ್ಪಿಹೋಗುತ್ತಿರುವುದೂ ಈ ಜಟಿಲತೆಯನ್ನು ಹೆಚ್ಚಿಸಬಹುದು. ಪದಗಳ ಉಚ್ಚಾರಣಾ ರೀತಿಯೂ ಬದಲಾಗುತ್ತಿದೆ; ಇದರಿಂದ ಧ್ವನಿಸಾದೃಶ್ಯ ಪ್ರಕ್ರಿಯೆಯೂ ಕಷ್ಟವಾಗುತ್ತಿದೆ. ಇಂತಹ ಇಕ್ಕಟ್ಟಿನ ಸಂದರ್ಭದಲ್ಲಿ ಪದಗಳನ್ನು ಪ್ರಾಮಾಣಿಕವಾಗಿ ಸಂಗ್ರಹಿಸಿ, ಅವುಗಳನ್ನು ಧ್ವನಿ ಮತ್ತು ಧ್ವನಿಮಾ ರೀತಿಗಳಿಂದ ವಿಶ್ಲೇಷಿಸಿ, ಅವುಗಳ ಸಾಮಾಜಿಕ/ಸಾಂಸ್ಕೃತಿಕ ಸಂದರ್ಭ ವಿಶೇಷಗಳನ್ನು ನಮೂದಿಸಿ/ಪರಿಶೀಲಿಸಿ ಪದಸಂಸ್ಕೃತಿ ಕೋಶಗಳನ್ನು ಸಿದ್ಧಪಡಿಸುವುದೇ ನಮ್ಮ ಮುಂದಿರುವ ಏಕೈಕ ಮಾರ್ಗ; ಪ್ರಸ್ತುತ ನಿಘಂಟು ಅದನ್ನು ನೆರವೇರಿಸಿಕೊಟ್ಟಿದೆ.

ಜಾನಪದ ನಿಘಂಟು ಶೈಕ್ಷಣಿಕ ಪ್ರಾಮುಖ್ಯತೆಯನ್ನು ಹೊಂದಿರುವುದು ಮಾತ್ರವಲ್ಲದೆ ಸಾಂಸ್ಕೃತಿಕ/ಸಾಮಾಜಿಕ ಮಹತ್ವವನ್ನೂ ಪಡೆದಿದೆ. ಕನ್ನಡ ಜಾನಪದೀಯ ಅಧ್ಯಯನಕ್ಕೆ ಇದೊಂದು ದೊಡ್ಡ ಕೊಡುಗೆಯೆಂದೇ ನನ್ನ ಅಭಿಪ್ರಾಯ. ಜಾನಪದೀಯ ಅಧ್ಯಯನದ ಮುಖ್ಯ ಸಲಕರಣೆಗಳೆಲ್ಲ ಇಲ್ಲಿರುವುದು ಸ್ಪಷ್ಟ; ಹಾಗೆಯೇ ಅದರ ತಾತ್ವಿಕತೆಗೊಂದು ಉತ್ತಮ ಆಯಾಮವಿದು. ಪದಸಂಸ್ಕೃತಿಯ ಹೆಜ್ಜೆ ಗುರುತುಗಳಿವೆ; ಸಂಸ್ಕೃತಿಯ ನೆರಳಲ್ಲ ಇವು, ಸಂಸ್ಕೃತಿಯ ನಮೂನೆಗಳು. ಒಂದು ಭಾಷೆಯ ಇತಿಹಾಸವನ್ನು ರೂಪಿಸಲು ಗ್ರಾಂಥಿಕ ಆಧಾರಗಳೇ ಸಾಕ್ಷಿ ಎಂಬ ಅಭಿಪ್ರಾಯ ಒಂದು ಕಾಲದಲ್ಲಿ ಇತ್ತು; ಈಗ ಇದು ಬಹುಮಟ್ಟಿಗೆ ಬದಲಾಗಿದೆ. ಭಾಷಿಕ ಇತಿಹಾಸಕ್ಕೆ ಉಪಭಾಷಾ ಅಧ್ಯಯನಗಳೂ, ಪ್ರಾದೇಶಿಕ ಅಧ್ಯಯನಗಳೂ, ಬುಡಕಟ್ಟು ಭಾಷಾ ಅಧ್ಯಯನಗಳೂ, ಹಿಂದುಳಿದ ಅಥವಾ ಅಲಕ್ಷಿತ ಭಾಷಾ ಅಧ್ಯಯನಗಳೂ ಹೇರಳವಾದ ಆಧಾರ ಸಾಮಗ್ರಿಯನ್ನು ಒದಗಿಸುತ್ತವೆ ಎಂಬುದು ಸ್ಪಷ್ಟವಾಗಿದೆ. ಸಾಹಿತ್ಯಿಕ ಭಾಷಾ ಆಧಾರಗಳಿಗೂ ಆಡುಭಾಷೆಯ ಭಾಷಾಸಾಮಗ್ರಿ ತಳಹದಿಯನ್ನು ನಿರ್ಮಿಸಿದೆ ಎಂಬ ಮಾತು ಇತ್ತೀಚೆಗೆ ಸ್ಪಷ್ಟವಾಗುತ್ತಿದೆ. 'ವಾಚಿಕ ಇತಿಹಾಸ' – oral history – ದ ಕಡೆಗೆ ನಮ್ಮ ಗಮನ ಕೇಂದ್ರೀಕೃತವಾಗುತ್ತಿರುವ ಈ ಸಮಯದಲ್ಲಿ 'ಪದಸಂಸ್ಕೃತಿ' ಪರಿಕಲ್ಪನೆಯ ಮೇಲೆ ನಿಂತಿರುವ ಪ್ರಸ್ತುತ 'ಕನ್ನಡ ಜಾನಪದ ನಿಘಂಟು' ಮುಂಚೂಣಿಯಲ್ಲಿ ನಿಲ್ಲುವುದು ಸಹಜ. ಪದಸಂಸ್ಕೃತಿಯೆಂದರೆ 'ವಾಚಿಕಸಂಸ್ಕೃತಿ'ಯಲ್ಲದೆ ಬೇರಲ್ಲ. ಆದಕಾರಣ ಕನ್ನಡ ಜಾನಪದ ನಿಘಂಟನ್ನು ವಾಚಿಕ ಸಂಸ್ಕೃತಿಯ ವಾಚಿಕ ಇತಿಹಾಸವೆಂದು ಕರೆಯಲು ಹಿಂದೆ ಬೀಳಬೇಕಾಗಿಲ್ಲ; ಏಕೆಂದರೆ ಅದರಲ್ಲಿ ವಾಚಿಕ ಇತಿಹಾಸವೂ ಇದೆ, ವಾಚಿಕ ಸಂಸ್ಕೃತಿಯೂ ಇದೆ.

ಹೀಗೆ 'ಪದಸಂಸ್ಕೃತಿ ಕೋಶ' ಜನಪದ ಸಂಸ್ಕೃತಿಯೊಂದನ್ನು ಅರ್ಥಮಾಡಿಕೊಳ್ಳಲು ಕಾರಣವಾದಂತೆ, ಶಿಷ್ಟಭಾಷಾಸಂಸ್ಕೃತಿಗಳೊಡನೆ ಜನಪದ ಭಾಷಾಸಂಸ್ಕೃತಿಯನ್ನು ಮುಖಾಮುಖಿಯಾಗಿಸುವಂತೆ ಕೂಡ ಮಾಡುತ್ತದೆ; ಆ ಮೂಲಕ ತೌಲನಿಕ ಅಧ್ಯಯನಕ್ಕೆ ದಾರಿಮಾಡುತ್ತದೆ. ಇದರೊಡನೆ ಸಾಂಸ್ಕೃತಿಕ ಸಮುದಾಯಗಳ ಭಾಷಿಕ ವ್ಯತ್ಯಯಗಳನ್ನು ದಾಖಲಿಸುತ್ತಲೇ, ಸಾಂಸ್ಕೃತಿಕ ವ್ಯತ್ಯಯಗಳನ್ನೂ ದಾಖಲಿಸುವುದಿದೆ. ನಮ್ಮ ಸಾಮಾಜಿಕ ಶ್ರೇಣೀಕೃತ ವ್ಯವಸ್ಥೆಯ ಮೇಲೆ ಬೆಳಕು ಚೆಲ್ಲಿ, ಭಾಷಿಕ ಮತ್ತು ಸಾಂಸ್ಕೃತಿಕ ಸಾಮಗ್ರಿಗಳನ್ನು ನಿಚ್ಚಳಗೊಳಿಸುತ್ತದೆ. ಆಧುನಿಕ ಕಾಲದಲ್ಲಿ ರೂಪುಗೊಳ್ಳುತ್ತಿರುವ ವ್ಯಕ್ತಿವಿಶಿಷ್ಟ ಸಂಸ್ಕೃತಿಯ ಎದುರು ಸಮೂಹ ಸಂಸ್ಕೃತಿಯನ್ನು ನಿಲ್ಲಿಸುವಂತೆ ಮಾಡುತ್ತದೆ ಈ ಜಾನಪದ ನಿಘಂಟು; ಫಲವಾಗಿ ಪರಸ್ಪರ ಬದಲಾದ ಮುಖಗಳನ್ನೂ ನೋಡಿಕೊಳ್ಳಬಹುದು. ಇದರಿಂದ ವಿಭಿನ್ನ ಸಾಂಸ್ಕೃತಿಕ ಸಂದರ್ಭಗಳು ಎದ್ದು ಕಾಣುವುದು ಅತ್ಯಂತ ನಿರೀಕ್ಷಿತ.

ಜಾನಪದ ನಿಘಂಟಿನಲ್ಲಿ ಪದಗಳನ್ನು ಪರಿಶೀಲಿಸುವಾಗ ಪದಸಂಸ್ಕೃತಿಯ ಪರಿಕಲ್ಪನೆ/ ಪರಿಭಾಷೆಯೊಡನೆ, ಶಿಷ್ಟಪದ – ಜಾನಪದ, ಪ್ರಾಚೀನ – ಆಧುನಿಕ, ಪ್ರಾದೇಶಿಕ – ಸಾಮಾನ್ಯ, ಸಮಾನ – ವೈದೃಶ್ಯ ಮುಂತಾದ

ದ್ವಂದ್ವಗಳನ್ನು ಎದುರಿಗಿಟ್ಟುಕೊಂಡೇ ನೋಡಲಾಗುವುದು. ಪದಗಳ ಮೂಲ ಮತ್ತು ಬೆಳವಣಿಗೆಯನ್ನು ಅವುಗಳ ಸ್ಥಿರತೆ ಮತ್ತು ಚಲನೆಗಳನ್ನು ಆಧಾರವಾಗಿಟ್ಟು ಯೋಚಿಸಲಾಗುವುದು; ಹಾಗೆ ಮಾಡುವಾಗ ಕಾಲ ಮತ್ತು ಪ್ರದೇಶ, ಒಳಗಿನ ಅನಿವಾರ್ಯತೆ ಮತ್ತು ಹೊರಗಿನ ಪ್ರಭಾವ, ಸರಕು ಸಂಸ್ಕೃತಿಯ ಪ್ರವೇಶ ಮತ್ತು ಹೊಸ ಸಂಸ್ಕೃತಿಯ ಉದಯ ಮುಂತಾದ ವಿಷಯಗಳು ಹಿನ್ನಲೆಯಲ್ಲಿರುತ್ತವೆ. ಪದಗಳ ಬದಲಾವಣೆಯೊಡನೆ ಪದಗಳ ನಾಶ, ಹಳೆಯ – ಹೊಸಪದಗಳ ಸಂಘರ್ಷ ಮತ್ತು ಸಾತತ್ಯವನ್ನೂ ಪರಿಶೀಲಿಸಲಾಗುವುದು. ಈ ಸಂದರ್ಭದಲ್ಲಿ ಸಹಜವಾಗಿಯೇ ಪದಸಂಸ್ಕೃತಿಯ ವಸ್ತು ಮತ್ತು ರೂಪ; ಬಳಕೆಯ ಸಂದರ್ಭ, ಸಮಾಜದ ಮೌನ ಮತ್ತು ಪ್ರತಿಭಟನೆ, ಪುರುಷ – ಮಹಿಳಾ ಮನೋವೃತ್ತಿಗಳು, ಸಾಂಪ್ರದಾಯಿಕತೆಯಂತಹ ಅಂಶಗಳು ಗಮನದಲ್ಲಿರುತ್ತವೆ. ಜನರು ಬಳಸುವುದರ ಮೇಲೆ ಪದಗಳ ಸ್ವರೂಪ ನಿರ್ಧಾರಿತವಾಗುವಂಥದು. ಪದಸಂಸ್ಕೃತಿ ಜನಪದ ಸಂಸ್ಕೃತಿಯ ಒಳಗೇ ರೂಪಿತವಾಗುವ ವಿಷಯವಾಗುವುದರಿಂದ, ಜನರು ಪದಗಳೊಡನೆ ಹೇಗೆ ವ್ಯವಹರಿಸುತ್ತಾರೆ ಎಂಬುದು ಗೊತ್ತಾಗುತ್ತದೆ. ಇದರಿಂದ ಜನಪದ ಸಂಸ್ಕೃತಿಯ ಪಾತ್ರ, ಜನಪದ ಅದರೊಡನೆ ಹೊಂದಿರುವ ಸಂಬಂಧಗಳು ನಿಚ್ಚಳಗೊಳ್ಳುತ್ತವೆ. ದ್ರಾವಿಡಪದಗಳು ಮತ್ತು ಆರ್ಯಪದಗಳನ್ನು ಒಟ್ಟಿಗೇ ಇಟ್ಟು ನೋಡುವುದರಿಂದಲೂ ಕೆಲವೊಂದು ಫಲಿತಗಳು ಪ್ರಾಪ್ತವಾಗಬಹುದು. ದ್ರಾವಿಡ ಪದಗಳನ್ನು ಇಡಿಯಾಗಿ ಶಿಷ್ಟಕ್ಕೆ (ಆರ್ಯ ಮತ್ತು ಸಂಸ್ಕೃತ ಸಂಬಂಧದಲ್ಲಿ) ವಿರುದ್ಧವಾಗಿ ನಿಲ್ಲಿಸಬಹುದೆ? ಜನಪದ ಸಂಸ್ಕೃತಿ, ದ್ರಾವಿಡ ಸಂಸ್ಕೃತಿ, ದೇಸೀ ಸಂಸ್ಕೃತಿ – ಈ ಮೂರೂ ಪರಿಕಲ್ಪನೆಗಳನ್ನು ಒಂದೇ ಎಂದು ಕರೆಯಬಹುದೆ? ಆಳರಸರ ಸಂಸ್ಕೃತಿ ಮತ್ತು ಪದಗಳೂ ಇದರಲ್ಲಿ ಸೇರ್ಪಡೆಯಾಗಿವೆಯಲ್ಲವೆ? ಕಾಲದ ಮೂಲಕ ಸಂಭವಿಸುವ ಪ್ರಭಾವ ಮತ್ತು ವ್ಯತ್ಯಾಸಕ್ಕೆ ಏನು ಹೇಳುವುದು? ಈ ಎಲ್ಲ ಪ್ರಶ್ನೆಗಳಿಗೂ ಕನ್ನಡ ಜಾನಪದ ನಿಘಂಟು ಒಂದು ಹಂತದ ಉತ್ತರಗಳನ್ನಾದರೂ ಕೊಡುತ್ತದೆ ಎಂದು ಭಾವಿಸುವುದರಲ್ಲಿ ತಪ್ಪಿಲ್ಲ.

ನಮ್ಮ ಎಲ್ಲ ವಿಶ್ಲೇಷಣೆಯೂ ಕ್ಷೇತ್ರಾಧಾರಿತ ಸಾಮಗ್ರಿಯ ಮೇಲೆ ನಿಂತಿರುತ್ತದೆ : ಕೆಲವೊಮ್ಮೆ ಜಾನಪದ ಸಂಗ್ರಹಗಳೂ, ಸಾಹಿತ್ಯಿಕ ಕೃತಿಗಳೂ ನೆರವಿಗೆ ಬಂದಿರುತ್ತವೆ, ಇವು ಕೂಡ ಆಯಾ ಕಾಲಘಟ್ಟದ ಪದಗಳನ್ನೇ ದಾಖಲಿಸಿರುತ್ತವೆ. ಮುಖ್ಯವಾಗಿ ಪದಗಳನ್ನು ಗ್ರಹಿಸುವ ಮತ್ತು ಸಂಗ್ರಹಿಸುವ ಪ್ರಕ್ರಿಯೆಯ ಮೇಲೆ ನಿಘಂಟಿನ ರಚನೆ ನಿಂತಿರುತ್ತದೆ. ಪದಗಳ ರಚನೆ ಸಾಂಪ್ರದಾಯಿಕವಾಗಿ ಕಾಲದ ಹರಿವಿನಲ್ಲಿ ರೂಪಿತವಾದದ್ದು. ತಲೆಮಾರುಗಳು ಮತ್ತು ಸಮಕಾಲೀನ ವಯೋಮಾನ ಗುಂಪುಗಳು ಇದಕ್ಕೆ ಒಳಗಾಗಿರುತ್ತವೆ. ರೂಪವ್ಯತ್ಯಾಸವೂ ಅರ್ಥವ್ಯತ್ಯಾಸವೂ ಪಾರಂಪರಿಕವಾದುದೇ; ಅದರಲ್ಲಿ ಆಯ್ಕೆಯ ಪ್ರಶ್ನೆ ಉದ್ಭವಿಸುವುದಿಲ್ಲ. ಎಲ್ಲ ಕಾಲದಲ್ಲಿಯೂ ಎಲ್ಲ ವಯೋಮಾನದವರೂ – ಅವರು ಅಕ್ಷರಸ್ಥರಾಗಿರಲಿ, ಅನಕ್ಷರಸ್ಥರಾಗಿರಲಿ; ಹಳ್ಳಿಯವರಿರಲಿ, ಪಟ್ಟಣದವರಿರಲಿ – ಪದಗಳನ್ನು ಬಳಕೆಗೆ ತಂದಿರುತ್ತಾರೆ. ಧ್ವನಿಮ ಅನುಕರಣೆಯಲ್ಲಿ ಉಚ್ಚಾರಣೆಯ ಅನುಸಂಧಾನವಿರುತ್ತದೆ. ಎಲ್ಲವೂ ಆಚರಣಾತ್ಮಕ ಮತ್ತು ಅನುಷ್ಠಾನಾತ್ಮಕ; ಪದ ಸಂಸ್ಕೃತಿಯ ಇತಿಹಾಸವೆಲ್ಲ ಇಷ್ಟನ್ನು ಅವಲಂಬಿಸಿರುತ್ತದೆ; ಅನುಸರಿಸಿರುತ್ತದೆ. ಇದೆಲ್ಲವೂ ಸ್ಮೃತಿ ರೂಪದಲ್ಲಿ ಬಂದಿರುವಂಥದು; ಅದನ್ನು ಹಿಡಿದಿರಿಸಿ ಚರ್ಚಿಸುವುದೇ ಸದ್ಯದ ಲಕ್ಷಣ.

ಪ್ರತಿಯೊಂದು ಪದವೂ ಸಾಂಸ್ಕೃತಿಕ ವರ್ತುಲವೊಂದನ್ನು ಹೊಂದಿರುತ್ತದೆ. ಅನೇಕ ಶತಮಾನಗಳಲ್ಲಿ ವಿವಿಧ ಕಾಲಘಟ್ಟಗಳಲ್ಲಿ ರೂಪುಗೊಂಡುದು ಇದು. ಮಾತಿನ ಭಾಗವಾಗಿ ಭಾವನೆಯನ್ನು ರವಾನಿಸುವುದೊಂದೇ ಇದರ ಕೆಲಸವಲ್ಲ; ನಿರ್ದಿಷ್ಟ ಸಂದರ್ಭಗಳು ಮತ್ತು ಸಂಬಂಧಗಳನ್ನು ಹೇಳುವುದು ಇದರ ವಿಶೇಷವಾಗಿರುತ್ತದೆ. ಕಾಲಾನುಸಾರಿಯಾಗಿ ಸಂದರ್ಭಗಳು ಬದಲಾದರೂ ಸಂಬಂಧಗಳು ಬದಲಾಗವು. ಈ ಸಂಬಂಧಗಳು ಸಾಮಾಜಿಕ ಆಗುಹೋಗುಗಳೊಡನೆ ಅಂತರ್ನಿಹಿತವಾದ ಸಂಬಂಧತತ್ವದೊಡನೆ ಬೆಸೆದುಕೊಂಡಿರುತ್ತವೆ. ಈ ಸಂಬಂಧದಲ್ಲಿಯೇ ಸಂಸ್ಕೃತಿ ವರ್ತನಾ ಮಾದರಿಗಳನ್ನು ಹೇಳುತ್ತಾ, ಪದವೊಂದರ ಕೇಂದ್ರ ಪ್ರಜ್ಞೆಗೆ ಕಾರಣವಾಗಿರುತ್ತದೆ. ಇದನ್ನೇ ನಾವು 'ಪದಸಂಸ್ಕೃತಿ' ಎಂದು ಕರೆಯುವುದು; ಇದರ ನಿಮಿತ್ತವಾಗಿ ಪದಸಂಸ್ಕೃತಿಯೊಂದರ ಕಲ್ಪನೆಯನ್ನೂ ಇದು ನೀಡುತ್ತದೆ. ಪ್ರಸ್ತುತ ನಿಘಂಟಿನ ಮಹತ್ವ ಮತ್ತು ಜೀವಾಳವಾಗಿ ಈ ಸಂಸ್ಕೃತಿ ಪರಿಕಲ್ಪನೆಯನ್ನು ಸ್ವೀಕರಿಸಿರುವ ಕಾರಣದಿಂದಾಗಿ ಇದಕ್ಕೆ 'ಪದಸಂಸ್ಕೃತಿಕೋಶ' ಎಂಬ ಪರ್ಯಾಯ ನಾಮವನ್ನು ಕೊಡಲಾಗಿದೆ. ಇದನ್ನು ಆಯ್ದ ಪದ ನಿದರ್ಶನಗಳಿಂದ ವಿವರಿಸಬಹುದಾಗಿದೆ:

೧. **ಅವ್ವ/ಅವ್ವಾ :**

"ಸಂಬಂಧ ಸೂಚಕ ಪದ; ತಾಯಿಯನ್ನು ಗುರುತಿಸಲು ಬಳಕೆಯಾಗುವ ಪದ. ಕುಟುಂಬದ ಯುಜಮಾನಿ; ಮುಖ್ಯಸ್ಥಳಲ್ಲ; ಮಾತೃ ಪ್ರಧಾನತೆಯಲ್ಲಿ ಬಂದ ವ್ಯವಸ್ಥೆ ಅವಳದಲ್ಲ. ಕುಟುಂಬದ ನಿರ್ವಹಣೆಯಲ್ಲಿ ಅವಳ ಪಾತ್ರ ಇರುವುದಾದರೂ, 'ಹಕ್ಕು' ಮತ್ತು ಅಧಿಕಾರ ಅವಳದಾಗಿರುವುದಿಲ್ಲ. ಪಿತ್ರಾರ್ಜಿತ ಮತ್ತು ಸ್ವಯಾರ್ಜಿತವಾದ ಯಾವುದೇ ಆಸ್ತಿಯ ವಾರಸುದಾರಳಲ್ಲ ಅವಳು; ಆದರೆ ಗಂಡ ತೀರಿಕೊಂಡ ಮೇಲೆ ಅದಕ್ಕವಳು ಹಕ್ಕುದಾರಳಾಗಬಹುದು; ತೌರಿನಿಂದ ಬಂದುದೇನಾದರೂ ಇದ್ದರೆ ಅವಳದಕ್ಕೆ ಸ್ಪಷ್ಟವಾಗಿ ಅಧಿಕಾರಸ್ಥಳು. ಕುಟುಂಬ ಸಂಸ್ಕೃತಿಯ ಸೃಷ್ಟಿ ಮತ್ತು ಪ್ರಸಾರದಲ್ಲಿ ಅವಳ ಪಾತ್ರ ಹಿರಿದು. ಪರಂಪರೆಯ ಬಹುತೇಕ ರೂವಾರಿ ಅವಳು; ಆದರೆ ಸಂಪ್ರದಾಯದ ಪೋಷಕಳೂ ಅವಳಾದ್ದರಿಂದ, ಪುರುಷನಿಗಿಂತ ಅವಳು ಹೆಚ್ಚು ಸಂಪ್ರದಾಯವಾದಿ ಎಂಬುದು ಕೆಲ ಮಾನವಶಾಸ್ತ್ರಜ್ಞರ ಅಭಿಪ್ರಾಯ. ಅವ್ವನೊಡನೆ ಬೆಳೆದದ್ದು ಒಂದು ಬಗೆಯ 'ಸೀತಾ ಸಂಸ್ಕೃತಿ'; ಅವಳು ಅಷ್ಟು ದುಃಖಿ, ಅಷ್ಟು ಮೌನಿ ಮತ್ತು ಅಷ್ಟು ಸಹನಾಶೀಲೆ. ದೇವರು ಎಲ್ಲ ಕಡೆ ಇರಲು ಸಾಧ್ಯವಿಲ್ಲದ್ದರಿಂದ 'ಅವ್ವ'ಳನ್ನು ಸೃಷ್ಟಿಸಿದನಂತೆ! 'ಅವ್ವಾ' ಒಂದು ಆಶ್ಚರ್ಯ ಸೂಚಕ ಪದ; ಸಂಸ್ಕೃತಿಯ ಬಹುದೊಡ್ಡ ಪ್ರತಿಮೆ!"

೨. **ಅತ್ತಿಗೆ :**

"ಅಣ್ಣನ ಹೆಂಡತಿ; ಹೆಂಡತಿಯ ಅಕ್ಕ; ಪಿತೃಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಸಮಸ್ಯೆ ಮತ್ತು ಸಂಘರ್ಷ ನಿಂತಿರುವುದು 'ಅಣ್ಣನ ಹೆಂಡತಿ' – 'ಅತ್ತಿಗೆ'ಯ ಮೇಲೆ; ಹೆಂಡತಿಯ ಅಕ್ಕ ಕೇವಲ ಸಾಂದರ್ಭಿಕ; ಪಿತೃಪ್ರಧಾನ ಕುಟುಂಬದಲ್ಲಿ ತಂದೆಯ ನಂತರದ ಸ್ಥಾನ ಅಣ್ಣನಿಗೆ; ತಾಯಿಯ ನಂತರದ ಸ್ಥಾನ ಅತ್ತಿಗೆಗೆ. ಎಲ್ಲ ಸಂದರ್ಭಗಳಲ್ಲೂ ಈ 'Function' ಸಲೀಸಾಗಿರುವುದಿಲ್ಲ, ಏರುಪೇರಾಗಬಹುದು – ಅದರಲ್ಲೂ 'ಅವಿಭಕ್ತ' ಕುಟುಂಬದಲ್ಲಿ ಇದು ಸಾಮಾನ್ಯ. ಜನಪದದಲ್ಲಿ 'ತವರಿಗೆ' ಪವಿತ್ರ ಕರ್ತವ್ಯವಿರುವುದು; ಅದು ಸಾಮಾಜಿಕ ಹೊಣೆಗಾರಿಕೆ ಕೂಡ. ಮನೆಯ ಹೆಣ್ಣು ಮಕ್ಕಳು ಅತ್ತಿಗೆಯನ್ನು ಹೇಗೆ ನೋಡುತ್ತಾರೆ, ಅತ್ತಿಗೆ ಅವರ ವಿಷಯದಲ್ಲಿ ಹೇಗೆ ನಡೆದುಕೊಳ್ಳುತ್ತಾಳೆ ಎಂಬುದರ ಮೇಲೆ ಕುಟುಂಬದ ಕಾರ್ಯದಲ್ಲಿ ಸಂಚಲನ ಮತ್ತು ಸಮಸ್ಯೆ. ಈ ದೃಷ್ಟಿಯಿಂದ 'ಅತ್ತಿಗೆ' 'Mother' ಮಾದರಿಯಾಗಿ ಅಥವಾ `Ego' ಮಾದರಿಯಾಗಿ ವರ್ತಿಸಬಹುದು. ಸಕಾರಾತ್ಮಕ ಮತ್ತು ನಕಾರಾತ್ಮಕ ದ್ವಂದ್ವವಾಗಿ ಅವಳು ಕಾಣಿಸಿಕೊಳ್ಳಬಹುದು; ಅಥವಾ ಒಡೆಯುವ ಮತ್ತು ಕಟ್ಟುವ ಯುಗ್ಮವಾಗಿ ಅವಳವ್ಯಕ್ತಿತ್ವ ಮೈದೋರಬಹುದು. ಅತ್ತಿಗೆಯ 'ಅಹಂಪ್ರಜ್ಞೆ' ಮತ್ತು 'ನಿರಾಕರಣ' ದೋರಣೆಯಲ್ಲಿ

ಹೆಣ್ಣು ಮಕ್ಕಳು ಅತೃಪ್ತಿ ಮತ್ತು ಅಸಹಾಯಕತೆಯನ್ನು ಅನುಭವಿಸಬಹುದು; ಆಗ ಸಹಜವಾಗಿಯೇ 'ಅಣ್ಣ ನಮ್ಮವನಾದರೂ, ಅತ್ತಿಗೆ ನಮ್ಮೋಳೆಯೆ' ಎಂಬ ಉದ್ಗಾರ ಬರಬಹುದು; ಇದು ಅಣ್ಣನ ಮೇಲಿನ ಅಥವಾ ಅತ್ತಿಗೆಯ ಮೇಲಿನ ಪ್ರತಿಕ್ರಿಯೆ; ಅಣ್ಣ 'ಮೌನ' ವಹಿಸಿದರೆ ಇದು ವಿಷಾದಕ್ಕಿಂತ ಕ್ರೋಧದ ಪ್ರತಿಕ್ರಿಯೆಯಾಗಬಹುದು; ಕುಟುಂಬ ಸಂಸ್ಕೃತಿಯ ಸಾಮಾಜಿಕ/ಸಾಂಸ್ಕೃತಿಕ ಕ್ರಿಯೆಗಳ ಆಯಾಮವನ್ನು ಅನಾವರಣ ಮಾಡಬಹುದು".

೩. ಅತ್ತೆ:

"ಗಂಡನ ತಾಯಿ; ಹೆಂಡತಿಯ ತಾಯಿ; ಹೆಂಡತಿಯ ತಾಯಿ ಇಲ್ಲಿ ಸಮಸ್ಯೆಯಲ್ಲ; ಗಂಡನ ತಾಯಿಯದೇ ಪ್ರಾಮುಖ್ಯ. ಪಿತೃಪ್ರಧಾನ ಕುಟುಂಬ ಇದಕ್ಕೆ ಕಾರಣ. ಅತ್ತೆ – ಸೊಸೆಯರ ಸಮಸ್ಯೆ ಲೋಕ ಪ್ರಸಿದ್ಧವಾದುದು; ಕುಟುಂಬ ವ್ಯವಸ್ಥೆಯಲ್ಲಂತೂ ಇದು ಭಾರಿ ವಿವಾದ ಎಬ್ಬಿಸಿದ ವಿಷಯ. ಸೊಸೆ ಹೊರ ಸಂಸ್ಕೃತಿಯಿಂದ ಬರುವುದರಿಂದ ಸಮಸ್ಯೆಗೆ 'ಸಾಂಸ್ಕೃತಿಕ ಕಾರಣ'ವಿದೆಯೆಂದು ಭಾವಿಸಿ, ಹೊಂದಾಣಿಕೆಯ 'ಸಾಂಸ್ಕೃತಿಕ ಸಂಘರ್ಷ'ವನ್ನು ತರಬಹುದು. ಸಾಂಸ್ಕೃತಿಕ ಹೊಂದಾಣಿಕೆ ಗಂಡನಿಗೂ ಬರಬಹುದು; ಆದರೆ ಗಂಡ – ಹೆಂಡತಿಯ ನಡುವಣ ಶಾರೀರಿಕ ಆಕರ್ಷಣೆ ಅದನ್ನು ಮೆದುಗೊಳಿಸಬಹುದು. ಅತ್ತೆ ಸೊಸೆಯರ ಜಗಳಕ್ಕೆ ಮನೋವೈಜ್ಞಾನಿಕ ಕಾರಣವೂ ಇದ್ದಂತಿದೆ; ಮಗ ತನ್ನಿಂದ ದೂರ ಸರಿಯುತ್ತಿದ್ದಾನೆಂಬ ತಿಳುವಳಿಕೆಯಿಂದ, ಸೊಸೆ ಅದಕ್ಕೆ ಕಾರಣವೆಂದು ತಿಳಿದು ಸೊಸೆಯನ್ನು ದ್ವೇಷಿಸಲು ಅತ್ತೆ ಮುಂದಾಗಬಹುದು. ಅತ್ತೆಯದು 'ಅಹಂಪ್ರಜ್ಞೆ'ಯಾದರೆ, ಸೊಸೆಯದು 'ಸ್ವಕೇಂದ್ರಿತ ಪ್ರಜ್ಞೆ'. ಅತ್ತೆ ತನ್ನ ಸೊಸೆಗೆ ಕೊಡುವ ಕಿರುಕುಳಗಳನ್ನು ಜನಪದ ವರದಿ ಮಾಡುತ್ತದೆ. ಅದಕ್ಕೆ ಸೊಗಸಾದ ನಿದರ್ಶನ ಉತ್ತರ ದೇವಿಯ ಕಥೆ; ಅತ್ತೆಮನೆ ಬಿಟ್ಟು ಬಂದ ಮಗಳನ್ನು 'ತೌರು' ಕೂಡ ಇಲ್ಲಿ ಪುರಸ್ಕರಿಸುವುದಿಲ್ಲ; ಇದರಿಂದ ಉತ್ತರ ದೇವಿ 'ಉತ್ತರೆ ಮಳೆ'ಯಾದಳು ಎಂದು ಹೇಳುವುದರ ಮೂಲಕ ಅವಳನ್ನು ಶಾಶ್ವತಗೊಳಿಸಲು ಜನಪದ ಸಾಹಿತ್ಯ ಪ್ರಯತ್ನಿಸಿದೆ. ಅತ್ತೆ ವ್ಯವಸ್ಥೆಯ ಪ್ರತೀಕ; ಅದಕ್ಕೆ ಸೊಸೆಯ ಪ್ರತಿಕ್ರಿಯೆಯನ್ನೂ ಜಾನಪದ ದಾಖಲಿಸಿದೆ".

೪. ಅಡಗೂಲಜ್ಜಿ:

"ಜನಪದ ಕಥೆಗಳಲ್ಲಿ ಬರುವ ಒಂದು ಪಾತ್ರ; ಅಡುಗೆ ಮಾಡಿ ಬಡಿಸುವ ಮುದುಕಿ; ಕಥೆಗಳಲ್ಲಿನ ಮುಖ್ಯ ಪಾತ್ರಕ್ಕೆ ಈಕೆ ಸಹಾಯಕಳು. ಅವಳ ಮನೆ ಒಂದು ಆಶ್ರಯತಾಣ, ಸಂಪರ್ಕ ಸೇತು; ಅದೊಂದು ಉಪಾಹಾರ ಮಂದಿರ; ಅಂದಿನ ಒಂದು ಚಿಕ್ಕ

ಹೋಟೆಲ್; ಅವಳ ಮನೆ ಒಂದು 'Common place' ಎನ್ನಬಹುದು. 'ಅಡಗೂಲಜ್ಜಿ' ಜನಪದ ಕಥೆಗಳ ಸಂದರ್ಭದಲ್ಲಿ ಒಂದು 'ಆಶಯ'; ಕಥೆಯ ಒಂದು ತಂತ್ರ ಕೂಡ; ಕಥೆಯ ಮುಂದುವರಿಕೆಗೆ ಅದು ಸಹಾಯಕ. ಅಡಗೂಲಜ್ಜಿಗೆ ಸಾಮಾನ್ಯ ಮನಶ್ಶಾಸ್ತ್ರ ಗೊತ್ತಿದೆ; ನಾಯಕ/ನಾಯಕಿ/ಪ್ರತಿ ನಾಯಕರ ಗುಣಾವಗುಣಗಳ ನೋಡಿ ತಿಳಿಯುವ ಸಾಮಾರ್ಥ್ಯ ಅವಳದು. ಆನಪದ ಕಥೆಯಲ್ಲಿ ಅಡುಗೂಲಜ್ಜಿ ಬರುವ ಕಡೆಯಲ್ಲೆಲ್ಲ ನಾಯಕ/ನಾಯಕಿಯರ ಪಾತ್ರಗಳಷ್ಟೆ ಅವಳು ಮುಖ್ಯವಾಗುವಳು. ಸಂದಿಗ್ಧ ಪರಿಸ್ಥಿಯಲ್ಲಿ ಅವಳ ಪಾತ್ರ ದೊಡ್ಡದೆಂದೇ ಹೇಳಬೇಕು; ನಾಯಕ/ ನಾಯಕಿಯರ ಸಾಹಸಕಾರ್ಯಗಳಲ್ಲಿ ಅವಳು ಸಕಾಲಿಕ ನೆರವು ನೀಡಿದ್ದರಿಂದ ಜಯ ಸಾಧಿಸಲು ಸಾಧ್ಯವಾಗುವುದು. ಸವಳು 'ಸುದ್ದಿಕೇಂದ್ರ' ಕೂಡ; ಅದನ್ನವಳು ಅನುಕೂಲಕ್ಕೆ ತಕ್ಕಂತೆ ವಿಕೇಂದ್ರಿಸುವಳು; ಅವಳು ಕಾಲಪ್ರಜ್ಞೆ/ಸ್ಥಿತಿಪ್ರಜ್ಞೆಯೊಡನೆ ಒಂದು ಸಣ್ಣ 'ರಾಜಕೀಯ ಕೇಂದ್ರ' ಕೂಡ ಆಗುವಳು. ಇದು ಸ್ವಾರ್ಥ ಕೇಂದ್ರಿತವಾದುದಲ್ಲ; ಪರೋಪಕಾರ ಕೇಂದ್ರಿತವಾದುದು. ಹೀಗೆ ಅವಳದು ಒಂದು ವಿಶಿಷ್ಟ ಪಾತ್ರ; ಜನಪದರ ಸೃಜನಶೀಲ ಜಾಣ್ಮೆಗೊಂದು ಅಪರೂಪದ ನಿದರ್ಶನ".

೫. **ಒಳಲೊಟ್ಟೆ/ಲೊಳಲೊಟ್ಟೆ :**

"ಅಲ್ಲಮ ಪ್ರಭು ತನ್ನ ೧೭೩ನೇ ವಚನದಲ್ಲಿ 'ಒಳಲೊಟ್ಟೆ' ಪದವನ್ನು ಬಳಸುತ್ತಾನೆ (ಬಸವಣ್ಣನವರಲ್ಲಿಯೂ ಈ ಪದ ಬರುತ್ತದೆ); ಭಕ್ತರ ಭಾವ ಸ್ವರೂಪವನ್ನು ಕುರಿತು ಹೀಗೆ ಹೇಳುತ್ತಾನೆ: 'ಬರಿಯ ನಚ್ಚಿನ ಮಚ್ಚಿನ ಭಕ್ತರು, ಲಿಂಗವ ಮುಟ್ಟಿಯೂ ಮುಟ್ಟದ ಲೊಳಲೊಟ್ಟೆಗಳು, ನೆರೆದು ಗಳಹುತಿಪ್ಪರು'; ನಿಜವಾದ ಭಕ್ತರಲ್ಲದವರ ವಿಚಾರ ವಚನದಲ್ಲಿದ್ದು, ಅವರನ್ನು 'ಒಳಲೊಟ್ಟೆ' ಎಂದು ಕರೆದು ಟೀಕಿಸಿರುವಂತೆ ಕಾಣುತ್ತದೆ. ಒಳಗೆ ಏನೂ ಇಲ್ಲದ, ಒಳಗೆ ಪೊಳ್ಳಿನ, ಅಂತಶ್ಶೂನ್ಯ, ಬರಿಯ ಮಾತಿನ ಎಂಬೆಲ್ಲ ಅರ್ಥವನ್ನು ಇದು ಹೇಳುತ್ತದೆ. 'ಒಳಲೊಟ್ಟೆ' ಪದವನ್ನು ಬೇರಾರೂ ಬಳಸಿದಂತೆ ತೋರುವುದಿಲ್ಲ; ಜನ ಸಾಮಾನ್ಯರಲ್ಲಿಯೂ ಬಳಕೆಯಿದ್ದಂತೆ ಕಾಣುವುದಿಲ್ಲ; ಆದರೆ 'ಖಾಲಿ' ಎಂಬ ಅರ್ಥದ 'ಲೊಟ್ಟೆ' ಪದ ಮಾತ್ರ ಆಗಲೂ ಈಗಲೂ ಬಳಕೆಯಲ್ಲಿರುವಂಥದು; ಜನಪದದಲ್ಲಿದ್ದ ಈ ಪದವನ್ನು ಅಲ್ಲಮಪ್ರಭು ಅದಕ್ಕೆ 'ಒಳ' ಪದವನ್ನು ಸೇರಿಸಿ ಕಾವ್ಯಾಭಿವ್ಯಕ್ತಿಗೆ ತಂದುಕೊಂಡಿರುವಂತೆ ಭಾಸವಾಗುತ್ತದೆ. ಮಧ್ಯಕಾಲೀನ ಸಂದರ್ಭದಲ್ಲಿಯೇ ಪುರಂದರದಾಸರಿಗೆ ಬರುವ ಹೊತ್ತಿಗೆ, ಅವರು ಇದಕ್ಕೆ ಬೇರೆಯ ಪದವನ್ನೇ ಬಳಕೆ ಮಾಡಿದರು; ಅದೇ 'ಲೊಳಲೊಟ್ಟೆ' ಪದ; ಇದು ಈಗಲೂ ಜನಪದರಲ್ಲಿ

ಬಳಕೆಯಲ್ಲಿದೆ. ಇದನ್ನು ಬಳಸುವಾಗ ಪುರಂದರದಾಸರು ಒಂದು ರಾಜಕೀಯ ಸಂದರ್ಭದ ಟೀಕೆಯನ್ನಾಗಿ ಮಾಡಿದರು; ಅವರು ಹೇಳಿದ್ದು: 'ಉತ್ತಮ ಪ್ರಭುತ್ವ ಲೊಳಲೊಟ್ಟೆ' ಎಂದು; ಇದು 'ರಾಜಪ್ರಭುತ್ವ' ಕುರಿತ ಮಾತಾಗಿದ್ದರೂ, ಸಮಕಾಲೀನ ಧ್ವನಿಯನ್ನು ಇದು ಕಳೆದುಕೊಂಡಿಲ್ಲ; 'ರಾಮನ ರಾಜ್ಯವಾದರೂ ರಾಗಿ ಬೀಸೋದು ತಪ್ಪಿಲ್ಲ' ಎಂಬ ಜನರ ನಾಣ್ಣುಡಿ ಕೂಡ ಇದನ್ನೇ ತಾನೆ ಹೇಳುವುದು! ಹೀಗೆ 'ಲೊಳಲೊಟ್ಟೆ' ಒಂದು ಸ್ಥಿತಿಯ, ಒಂದು ವ್ಯಕ್ತಿತ್ವದ, ಒಂದು ವ್ಯವಸ್ಥೆಯ 'ಟೊಳ್ಳ'ನ್ನು ಎತ್ತಿ ಹಿಡಿಯುವಂತಾಗಿ ಸಮಾಜದ/ಸಂಸ್ಕೃತಿಯ ವ್ಯಾಖ್ಯಾನ/ವಿಮರ್ಶೆಯಲ್ಲಿ ತೊಡಗಿದೆ. ಇವೊತ್ತಿಗೂ ಇದು ಜನಸಾಮಾನ್ಯರ ಪ್ರತಿಕ್ರಿಯೆಯ ಪ್ರತಿನಿಧೀಕರಣದ ಪದವಾಗಿ ಕಂಡಿದೆ".

೬. ಓ ಲಕ್ಷ್ಮಣಾ :

"ಇದೊಂದು ಅತ್ಯುತ್ತಮ ಪದ ಸಮುಚ್ಚಯ; ಪದಸಂಕೇತ. ದುಃಖವೊ, ಕಷ್ಟವೊ, ಶ್ರಮ ಸಮಯದಲ್ಲೊ ಯಾರಾದರೂ ಏನನ್ನಾದರೂ ಕೇಳಿಕೊಂಡು ಬಂದರೆ ಈ ಪದೋದ್ಗಾರ ಜನಸಮುದಾಯದಲ್ಲಿ ಕೇಳಿ ಬರುತ್ತಿತ್ತು; ಅದರಲ್ಲೂ ಹೆಂಗಸರೇ ಹೀಗೆ ಹೇಳುತ್ತಾರೆಂಬುದು ವಿಶೇಷ ಉಲ್ಲೇಖಕ್ಕೆ ಅರ್ಹ. ಈ ಪದಗುಂಫನ ಮಂಡ್ಯ, ಮೈಸೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ಪ್ರಚಲಿತವಿರುವುದಕ್ಕೆ ಮಾಹಿತಿ ಲಭ್ಯವಿದೆ; ಹಿರಿಯ ತಲೆಮಾರಿನ ಜನರ ನಡುವೆ ಬಳಕೆಯಲ್ಲಿದ್ದು ಈ ಅಪರೂಪದ ಪದ ಕ್ರಮೇಣ ಕಣ್ಮರೆಯಾಗುತ್ತಿದೆ. ಕುವೆಂಪು ಅವರು ತಮ್ಮ 'ಶ್ರೀ ರಾಮಾಯಣ ದರ್ಶನಂ' ಮಹಾ ಕಾವ್ಯದಲ್ಲಿನ ಸಂಚಿಕೆಯೊಂದಕ್ಕೆ 'ಓ ಲಕ್ಷ್ಮಣಾ' ಹೆಸರಿಟ್ಟಿದ್ದಾರೆ; ಇದಕ್ಕೆ ತಮ್ಮ ತಾಯಿಯ ಇಂತಹ ಮಾತೇ ಕಾರಣವೆಂದಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ತಮ್ಮ 'ನೆನಪಿನ ದೋಣಿಯಲ್ಲಿ' ಹೀಗೆಂದಿದ್ದಾರೆ: 'ನನ್ನ ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ ಒಂದು ಮಹೋನ್ನತ ಶಿಖರವಾಗಿರುವ ಸಂಚಿಕೆಗೆ ನಾನು ಕೊಟ್ಟಿರುವ ಹೆಸರು ನೇರವಾಗಿ ನನ್ನ ಅವ್ವನಿಂದಲೆ ಬಂದಿದಾಗಿದೆ. ಅವ್ವ ಯಾವುದಾದರೂ ತನಗೊದಗಿದ ಕಷ್ಟದ ಸಮಯದಲ್ಲಿ ಬೇರೆ ಯಾರಾದರೂ ತನ್ನಿಂದ ಏನಾದರೂ ಆಗಬೇಕೆಂದು ಕೇಳಿದಾಗ "ಅಯ್ಯೋ ನಾನೆ ಓ ಲಕ್ಷ್ಮಣಾ! ಅಂತೀದ್ದೀನಪ್ಪಾ" ಎಂದು ಹೇಳುತ್ತಿದ್ದುದನ್ನು ನಾನು ಎಷ್ಟೋ ಬಾರಿ ಕೇಳಿದ್ದೆ. ಹಾಗಾಗಿ 'ಓ ಲಕ್ಷ್ಮಣಾ!' ಎಂಬುದು ಏನೋ ಒಂದು ಕಷ್ಟಕ್ಕೋ ಗೋಳಿಗೋ ದುರಂತಕ್ಕೋ ವಾಕ್ ಪ್ರತಿಮೆಯಾಗಿ ಬಿಟ್ಟಿತ್ತು ನನ್ನ ಅಂತಃಪ್ರಜ್ಞೆಯಲ್ಲಿ. 'ಶ್ರೀ ರಾಮಾಯಣ ದರ್ಶನ'ದಲ್ಲಿ ಆ ಸಂಚಿಕೆಗೆ ಕೊಟ್ಟ ಶೀರ್ಷಿಕೆ "ಓ ಲಕ್ಷ್ಮಣಾ" ಮಾತ್ರವಲ್ಲದೆ ಸಂಚಿಕೆಯ ಉದ್ದಕ್ಕೂ

'ಓ ಲಕ್ಷ್ಮಣಾ' ಗೋಳ್ದನಿ ಬೇರೆ ಸಂದರ್ಭಗಳಲ್ಲಿ ಬೇರೆ ವ್ಯಕ್ತಿಗಳಿಂದ ಧ್ವನಿ ಪ್ರತಿನಿಧಿಯಾಗಿ ಹೊಮ್ಮಿ ಮಹಾಗೋಳಿಗೆ ಒಂದು 'ಶಬ್ದ ಪ್ರತೀಕ'ವಾಗಿ ಬಿಟ್ಟಿದೆ, (ಪು. ೧೮೧, ೧೯೮೦). ಇದೊಂದು ಬಹುದೊಡ್ಡ ಪದಶಿಲ್ಪ; ಪದಸಂಸ್ಕೃತಿ; ಜನಸಾಮಾನ್ಯರ ನೋವಿನ ಪದಪ್ರತಿಮೆ!"

೭. ಏಳು :

"ಜನಪದ ಜೀವನ ಮತ್ತು ಸಂಸ್ಕೃತಿಯಲ್ಲಿ 'ಏಳ'ರ ಸಂಖ್ಯೆಗೆ ಒಂದು ಮಹತ್ವದ ಸ್ಥಾನ; ಮಾಂತ್ರಿಕ ಸಂಖ್ಯೆಯಾಗಿ ಪ್ರಸಿದ್ಧ; ಸಂಖ್ಯಾ ಜಾನಪದಕ್ಕೊಂದು ಒಳ್ಳೆಯ ನಿದರ್ಶನ. ಏಳು ಒಂದು ನಿಷಿದ್ಧ (Taboo) ಸಂಖ್ಯೆ ಕೂಡ; ಅಮಂಗಳ ಎಂಬ ಶಂಕೆ; ಅಪನಂಬಿಕೆ; ಅಷ್ಟೇ ಅದನ್ನು ಮೀರುವ ಪ್ರಯತ್ನ; ಅನೇಕ ಉದಾಹರಣೆಗಳು ಪ್ರಚಲಿತ. ದವಸಧಾನ್ಯಗಳನ್ನು ಅಳೆಯುವಾಗ 'ಏಳು' ಅನ್ನಬಾರದು ಎನ್ನುವುದು ನಂಬಿಕೆ; 'ಎಚ್ಚಲಿ' ಎನ್ನುವುದು ವಾಡಿಕೆಯ ಶ್ರದ್ಧೆ; ಅಮೃದ್ಧತೆಯನ್ನು ಬಯಸಿ ಈ ಸಂಸ್ಕೃತಿ ಪರಿಕಲ್ಪನೆ! ಜನಪದ ಕಥೆಯಲ್ಲಿ ಹೆಚ್ಚಿನ ಮಾಂತ್ರಿಕತೆ; ಏಳು ಸಮುದ್ರದಾಚೆ ಕೀಳು ಸಮುದ್ರದ ಕಲ್ಪನೆ; ಅಲ್ಲಿದೆ ಪ್ರತಿನಾಯಕನ ಪ್ರಾಣ ಎಂಬ ಆಶಯದ ನಿರೂಪಣೆ! ಹಾಗೆಯೇ 'ಏಳು ಮಲ್ಲಿಗೆ ತೂಕ'ದ ರಾಜಕುಮಾರಿಯ ಉಲ್ಲೇಖ ಕೂಡ; ದೇವರ ನಂಬಿಕೆಯಲ್ಲಿಯೂ ಈ ಸಂಖ್ಯೆಯ ನಂಬಿಕೆ ತಪ್ಪಿದ್ದಿಲ್ಲ; 'ಏಳು ಮಲೆಯ ಹೆತ್ತಯ್ಯ' ಎಂಬುದು ಮಾದೇಶ್ವರನ ಬಗೆಗಿನ ಜನರ ಆಶೋತ್ತರ; 'ಏಳು ಮಲೆ ಎಪ್ಪತ್ತೇಳು ಮಲೆ' ಎಂಬುದು ಅವನ ವಾಸಸ್ಥಾನದ ಅಚ್ಚರಿಯ ವಿಷಯ; ಜನರ ಭಕ್ತಿಗೆ ಏಳರ ಸಂಖ್ಯೆಯ ಅಪರೂಪದ ಲೇಪನ! ಆಡಳಿತ ವ್ಯವಸ್ಥೆಯಲ್ಲಿಯೂ ಏಳರ ಸಂಖ್ಯೆಯ ಪ್ರವೇಶ; 'ಏಳೂರ ಎಲ್ಲೆ ಕಟ್ಟು' ಒಂದು ಕಾಲದ ಆಡಳಿತ ರೀತಿಯ ಮೇಲೆ ಬೆಳಕು ಚೆಲ್ಲುತ್ತದೆಯೆ? ಹಾಗೆಯೇ ಊರಿನಲ್ಲಿ ವ್ಯಾಜ್ಯವೇನಾದರೂ ಬಿದ್ದರೆ 'ಏಳೂರಿನವರನ್ನು' ಕರೆಸಿ ನ್ಯಾಯಮಾಡುತ್ತಿದ್ದ ಪದ್ಧತಿ ಕೂಡ ಇತ್ತಂತೆ! ಈ ಎಲ್ಲದರಲ್ಲಿಯೂ ಏಳರ ಸಂಖ್ಯೆ 'ಸಕಾರಾತ್ಮಕ' ಕ್ರಿಯೆಯದು; ಹೀಗೆಯೇ ಏಳರ ಸಂಖ್ಯೆಗೆ ನಕಾರಾತ್ಮಕ ವಿಚಾರ ಕಲ್ಪನೆಗಳೂ ಸಾಂಸ್ಕೃತಿಕ ಸಂದರ್ಭಗಳಲ್ಲಿವೆ".

ಇಲ್ಲಿ ಆಯ್ದ ಕೆಲವು ಪದಗಳಿಗೆ ಮಾತ್ರ ವಿವರಣೆ ನೀಡಲಾಗಿದೆ; ಅದೂ ಅವುಗಳ ಕೆಲವು ವಿವರಗಳನ್ನಷ್ಟೆ ಇಲ್ಲಿ ಒದಗಿಸಲಾಗಿದೆ; ಉಳಿದ ವಿಚಾರಗಳು ನಿಘಂಟಿನಲ್ಲಿವೆ. ಇಷ್ಟರಿಂದಲೇ ಪದಸಂಸ್ಕೃತಿಯ ಸಂದರ್ಭ ಮತ್ತು ಮಹತ್ವ ಏನೆಂಬುದು ಅರ್ಥವಾಗುತ್ತದೆ. ಸಂಸ್ಕೃತಿಯ ಸಂಬಂಧವಿರದೆ ಯಾವ ಪದವೂ ಇಲ್ಲವೆಂಬುದು ನನ್ನ ಭಾವನೆ. ಆದರೆ ಕೆಲವು ಪದಗಳು ಬಳಕೆ ತಪ್ಪುತ್ತಿರುವ ಕಾರಣದಿಂದಲೊ ಏನೊ ಅವುಗಳು ಪ್ರಯೋಗವಾಗುತ್ತಿರುವ ಸಂದರ್ಭಗಳು ಖಚಿತವಾಗಿ ತಿಳಿಯುತ್ತಿಲ್ಲ; ಹೀಗಾಗಿ ಅವುಗಳಿಗೆ ಸಾಂಸ್ಕೃತಿಕ ವಿವರಗಳನ್ನು ಕೊಡುವುದು ಕಷ್ಟವಾಗಿದೆ. ಏನೇ ಇರಲಿ, ಈ ಬಗೆಯ ಸಾಂಸ್ಕೃತಿಕ ಸಂಬಂಧ ತತ್ವವೇ ಸಮಾಜ ರೂಪುಗೊಳ್ಳಲು

ಆಧಾರವಾಗಿರುವಂಥದು. ಭಾಷೆಯೂ ಕೂಡ ಇದರ ಭಾಗವಾಗಿಯೇ ಕೆಲಸ ಮಾಡುತ್ತಿದೆ. ಹೀಗಾಗಿ ಬಳಕೆಯ ಪದವೊಂದು ಭಾಷೆ, ಸಮಾಜ ಮತ್ತು ಸಂಸ್ಕೃತಿ, ಈ ಮೂರರ ಒಡನಾಟದಲ್ಲಿ ಅಸ್ತಿತ್ವ ಪಡೆದುಕೊಂಡು ಬಂದಿದೆ ಎಂಬುದನ್ನು ಮರೆಯಲಾಗದು.

ಅನೇಕ ಪದಗಳಲ್ಲಿ ಧ್ವನಿ ಅಥವಾ ಧ್ವನಿಮಾ ವ್ಯತ್ಯಾಸಗಳು ಕಂಡು ಬರುವುದು ಸಹಜ. ಜನ ತಮ್ಮ ಆಡು ಮಾತಿನಲ್ಲಿ ಇಂತಹ ಉಚ್ಚಾರಣಾ ಮಾರ್ಪಾಡು ಮಾಡಿಕೊಳ್ಳುವುದರಿಂದ ಈ ಲಕ್ಷಣ ಮೈದೋರಿದೆ. ಧ್ವನಿ ವ್ಯತ್ಯಾಗಳನ್ನು ಧ್ವನಿ ಮುದ್ರಣದಲ್ಲಿ ದಾಖಲು ಮಾಡುವಷ್ಟು ಖಚಿತವಾಗಿ ಅಕ್ಷರ/ ಲಿಖಿತದಲ್ಲಿ ಹಿಡಿದಿಡುವುದು ಕಷ್ಟ. ಆದರೆ ಧ್ವನಿಮಾ ವ್ಯತ್ಯಾಸಗಳನ್ನು ದಾಖಲುಗೊಳಿಸುವುದು ಕಷ್ಟವಾಗುವುದಿಲ್ಲ. ಅಂತಹ ಧ್ವನಿಮಾ ವ್ಯತ್ಯಾಸಗಳ ಬಗ್ಗೆ ಈವರೆಗೆ ಸಾಂಪ್ರದಾಯಿಕವಾಗಿ ಆಡಿಕೊಂಡು ಬಂದ ಮಾತನ್ನು ಬದಲಿಸಲು ಸಾಧ್ಯ ಎಂಬುದನ್ನು ಈ ನಿಘಂಟಿನಲ್ಲಿ ತೋರಿಸಿಕೊಟ್ಟಿದೆ. ನಿದರ್ಶನಕ್ಕಾಗಿ ಕೆಲವನ್ನು ಮಾತ್ರ ಇಲ್ಲಿ ಉಲ್ಲೇಖಿಸಬಹುದು:

೧. ಬಳಕೆಯಲ್ಲಿರುವ ಪದಗಳ ಒಂದು ವಿಶೇಷ ಪ್ರವೃತ್ತಿ ಎಂದರೆ, ವ್ಯಂಜನದಿಂದ ಆರಂಭವಾಗುವ ಅನೇಕ ಪದಗಳು ವ್ಯಂಜನಾಕ್ಷರಗಳನ್ನು ಕಳೆದುಕೊಂಡು ಸ್ವರಾಕ್ಷರಗಳಿಂದ ಆರಂಭವಾಗಿರುವುದು. ಇದು ಮುಖ್ಯವಾಗಿ ಪದಗಳ ಉಚ್ಚಾರಣಾ ಸಂಬಂಧಿ ವಿಚಾರ; ಆ ಕುರಿತ ವ್ಯತ್ಯಾಸಗಳಿಗೆ ಸಂಬಂಧಿಸಿದ ವಿಷಯ. ಈ ಕುರಿತ ಬದಲಾವಣೆಯಲ್ಲಿ ವ್ಯಂಜನವೇ ಸ್ವರವಾಗಿ ಪರಿವರ್ತಿತವಾಗಿದೆ ಎಂದು ಅರ್ಥ ಮಾಡಬೇಕಾದ್ದಿಲ್ಲ; ವ್ಯಂಜನಾಕ್ಷರ ಬಿದ್ದುಹೋಗಿ, ವ್ಯಂಜನದ ಪೂರ್ಣ ಉಚ್ಚಾರಣೆಗೆ ಸಹಕರಿಸಿದ ಅದರ ಜೊತೆಯಲ್ಲಿನ ಸ್ವರಧ್ವನಿಮಾ ಉಳಿದುಕೊಂಡಿದೆ ಎಂದು ಅರ್ಥ. ಇದೇ ಪದಾರಂಭದ ಧ್ವನಿಮಾ ಆಗಿ ಕೆಲಸ ಮಾಡುತ್ತಾ ಬಂದಿದೆ. ಎಲ್ಲರೂ ಸಾಮಾನ್ಯವಾಗಿ ಉಲ್ಲೇಖಿಸುತ್ತಾ ಬಂದಿರುವ 'ಆಲು' ಪದ; ಇದು ಹಾಲು > ಆಲು ಆದದ್ದರ ಪರಿಣಾಮ. ಇದನ್ನು ಸಮುದಾಯದ ಉಚ್ಚಾರಣೆ ಎಂದು ಉಲ್ಲೇಖಿಸಿಬಿಡುವಷ್ಟು ಮುಂದೆ ಹೋಗಿದೆ. ವ್ಯಂಗ್ಯದಿಂದ ಮಾತಾಡಿರುವುದನ್ನೂ ಕಂಡಿದ್ದೇನೆ.

ಇಲ್ಲಿ 'ಹ' > 'ಆ' ಆಗಿದೆ ಎಂದು ಹೇಳಿ ಚರ್ಚೆ ಮಾಡುವುದು ಸರಿಯಲ್ಲ; 'ಹ್' ಮತ್ತು 'ಆ' ಧ್ವನಿಮಾಗಳು ಜೊತೆಯಲ್ಲಿದ್ದು 'ಹ್' ಬಿದ್ದು ಹೋಗಿದ್ದರಿಂದಾಗಿ ಉಳಿದಿದ್ದ 'ಆ' ಧ್ವನಿಮಾದಿಂದ ಪದ ಆರಂಭವಾಗಿದೆ ಎಂದಷ್ಟೆ ತಿಳಿಯಬೇಕಾಗಿದೆ. ಬ್ರೈಟ್ ಎಂಬ ಲೇಖಕ ತನ್ನ ವಕ್ತೃವಿನ ಮಾತೆಂದು ಹೆಳುತ್ತಾ, ಈ ಬದಲಾವಣೆಯ ಬಗ್ಗೆ ವಿವರಿಸಿದ್ದು ಹೀಗಿದೆ; ಹಾಮನಾ ಅವರು ಉಲ್ಲೇಖಿಸಿದ ರೀತಿಯಲ್ಲಿ ಇದನ್ನಿಲ್ಲಿ ಕೊಟ್ಟಿದ್ದೇವೆ:

> "Another important difference between Bright's informants is the Brahminis /h/ usually corresponds to zero in okkaliga dialect. Bright has tried to explain this difference in the light of historical development. This problem is not easy to solve. The pheomenon is restricted to some areas in the districts Mysore, Mandya, Bangalore, Tumukur and Hassan. Along with this, another difference of initial /a/ corresponding to/ha/ exists in all these areas". (Kannada : `Literary and Colloquial : A Study of two styles' - H.M.Nayak).

ಇಲ್ಲಿ ಹೇಳಿರುವಂತೆ 'ಹ' ಉಚ್ಚಾರಣೆ ಮತ್ತು 'ಹ' ಗೆ ಸಂವಾದಿಯಾಗಿ 'ಅ' ಬಂದಿದೆ ಎನ್ನುವುದು ಬೇರೆ ಬೇರೆಯ ಸಮಸ್ಯೆಗಳಲ್ಲ; ಒಂದೇ ಸಮಸ್ಯೆ – ಅದು 'ಹ' ಗೆ ಬದಲಾಗಿ 'ಅ' ಬಂದಿರುವುದು. ಒಂದು ಇನ್ನೊಂದಾಗಿರುವುದಿಲ್ಲ;

ಒಂದು ಬಿದ್ದುಹೋಗಿ, ಇದ್ದ ಇನ್ನೊಂದು ಆ ಕಾರ್ಯವನ್ನು ನಿರ್ವಹಿಸಿರುವುದು. ಸಮುದಾಯಗಳನ್ನು ಇಲ್ಲಿ ಪ್ರಸ್ತಾಪಿಸಿರುವುದು ಸರಿಯಲ್ಲ; ಈ ಸಮಸ್ಯೆಯನ್ನು ಪರಿಹರಿಸುವುದು ಸುಲಭವಲ್ಲ ಎನ್ನುವುದೂ ಸರಿಯಲ್ಲ. ಇದೆಲ್ಲವೂ 'ಹ' ಕಾರ 'ಆ' ಕಾರವಾಗಿದೆ ಎಂದು ನಂಬಿದ್ದರಿಂದ ಆದದ್ದು. ಆದರೆ ಹಾಗಾಗಿಲ್ಲವೆಂದು ಕಾಣುತ್ತದೆ; ನಿಜವಾಗಿಯೂ ಆಗಿರುವುದು ಹಾಲು > ಆಲು ಅಲ್ಲ; ವಿವರಣೆ ಇದು : ಹ್+ಆಲು > Ø+ಆಲು > ಆಲು ಆಗಿರುವುದು ಸ್ಪಷ್ಟವೆಂದು ತಿಳಿಯಬೇಕು. ಅಂದರೆ 'ಹ್' ಧ್ವನಿಮಾ ಬಿದ್ದು ಹೋಗಿದೆ; ಇದನ್ನು ಶೂನ್ಯ ಧ್ವನಿಮಾ (Ø) ಎಂದು ಕರೆಯುತ್ತಾರೆ; ಅದರ ಜೊತೆಯಲ್ಲೇ ಇದ್ದು ಉಳಿದುಕೊಂಡ ಸ್ವರಧ್ವನಿಮಾ 'ಆ' ಮೇಲೆ ಕೇಂದ್ರೀಕೃತವಾದ ಉಚ್ಚಾರಣೆ 'ಆಲು' ರೂಪಕ್ಕೆ ಕಾರಣವಾಗಿದೆ. ಇಲ್ಲಿ ಬದಲಾದದ್ದು ಹ > ಆ ಅಲ್ಲ; ಉಳಿದ ಸ್ವರಧ್ವನಿಮಾದ ಉಚ್ಚಾರಣೆಯಷ್ಟೆ. ಆಡು ಭಾಷೆಯಲ್ಲಿ ಇದು ಸರಿಯಾಗಿಯೇ ಇದೆ; ಜನರ ಈ ಉಚ್ಚಾರಣೆ ಶಾಸ್ತ್ರೀಯವಾಗಿಯೇ ಇದೆ. ಇದು ದೋಷವಲ್ಲ; ದೂರ ಬೇಕಾದ್ದಿಲ್ಲ; ವ್ಯಂಗ್ಯ ಮಾಡಬೇಕಾದ್ದಿಲ್ಲ.

೨. ಹೀಗೆ ವ್ಯಂಜನ ಧ್ವನಿಮಾ ಬಿದ್ದು ಹೋಗಿ/ ಶೂನ್ಯ ಧ್ವನಿಮಾ ಆಗಿ, ಸ್ವರಧ್ವನಿಮಾದ ಮೇಲೆ ಪದಸಂಸ್ಕೃತಿ ನಿಲ್ಲುವುದು ಕೇವಲ ಹಾಲು > ಆಲು ಗೆ ಸೀಮಿತವಾಗಿಲ್ಲ; ಅನೇಕ ಉದಾಹರಣೆಗಳು ಸಿಕ್ಕುತ್ತವೆ :

- ನೀರುಳ್ಳಿ > ಈರುಳ್ಳಿ
  =ನ್+ಈರುಳ್ಳಿ > Ø+ಈರುಳ್ಳಿ > ಈರುಳ್ಳಿ = 'ನ್' : ಶೂನ್ಯ ಧ್ವನಿಮಾ (Ø) .

- ವೀರಭದ್ರ > ಈರಭದ್ರ
  =ವ್+ಈರಭದ್ರ > Ø+ ಈರಭದ್ರ > ಈರಭದ್ರ = 'ವ್' : ಶೂನ್ಯ ಧ್ವನಿಮಾ (Ø) .

- ಯುಗಾದಿ > ಉಗಾದಿ
  =ಯ್+ಉಗಾದಿ > Ø+ಉಗಾದಿ > ಉಗಾದಿ = 'ಯ್' : ಶೂನ್ಯ ಧ್ವನಿಮಾ(Ø)

- ವಿಭೂತಿ > ಇಭೂತಿ/ಇಬೂತಿ
  = ವ್+ಇಭೂತಿ > Ø+ಇಭೂತಿ > ಇಭೂತಿ/ಇಬೂತಿ = 'ವ್'; ಶೂನ್ಯ ಧ್ವನಿಮಾ (Ø) .

- ವೀಳ್ಯ > ಈಳ್ಯ
  = ವ್+ಈಳ್ಯ > Ø+ಈಳ್ಯ > ಈಳ್ಯ ='ವ್' : ಶೂನ್ಯ ಧ್ವನಿಮಾ (Ø)

ಸಾಮಾನ್ಯವಾಗಿ ಕಂಡು ಬರುವ ಕ>ಗ, ಚ>ಸ ಗಳನ್ನು ಕುರಿತು ಆಯಾ ಪದ ಸಂದರ್ಭಗಳಲ್ಲಿ ಹೇಳಿದೆ; ಕ>ಚ ಆಗುವ ವಿಶೇಷ ಪದಪ್ರವೃತ್ತಿಯನ್ನೂ ಉಲ್ಲೇಖಿಸಿದೆ; ದೀರ್ಘಾಕ್ಷರಗಳು ಹ್ರಸ್ವಾಕ್ಷರಗಳಾಗುವುದು, ತದ್ವಿರುದ್ಧವಾಗುವುದು ಒಂದು ಲಕ್ಷಣ; ಇಂಥವನ್ನು ಗಮನಿಸಲಾಗಿದೆ. ಒತ್ತಕ್ಷರ ಇದ್ದ ಕಡೆ, ಅದು ತಪ್ಪಿದಾಗ ಪರಿಹಾರಕ್ಕಾಗಿ ದೀರ್ಘೀಕರಣವಾಗುವುದನ್ನೂ ಗುರುತಿಸಲಾಗಿದೆ.

ಎಲ್ಲಕ್ಕಿಂತ ಮಿಗಿಲಾಗಿ ದ>ಜ, ಜ>ದ ಆಗುವ ಪ್ರಕ್ರಿಯೆ ದ್ರಾವಿಡ ಭಾಷೆಗಳಲ್ಲಿ ಕಂಡು ಬರುವಂಥದು; ಕನ್ನಡದಲ್ಲಿಯೂ ಇದಕ್ಕೆ ಸಾಕಷ್ಟು ಆಧಾರಗಳಿವೆ ಎಂಬುದನ್ನು ಪದಗಳಲ್ಲಿ ತೋರಿಸಲಾಗಿದೆ. ಹೀಗಾಗಿ ಭಾಷಾ ವೈಲಕ್ಷಣ್ಯಗಳನ್ನು

ಸಾಧ್ಯವಿದ್ದ ಸಂದರ್ಭಗಳಲ್ಲೆಲ್ಲ ಚರ್ಚಿಸಲಾಗಿದೆ; ಅವೆಲ್ಲ ದ್ರಾವಿಡ ಭಾಷಾ ಸಮೂಹದ ಅಭಿವ್ಯಕ್ತಿ ಎಂಬುದನ್ನು ವಿಶ್ಲೇಷಿಸಿ ಸ್ಪಷ್ಟಪಡಿಸಲಾಗಿದೆ.

೨

ಕನ್ನಡ ಜಾನಪದ ನಿಘಂಟಿನ ಎರಡನೆಯ ಸಂಪುಟದಲ್ಲಿ 'ಕ'ದಿಂದ ಆರಂಭವಾಗಿ 'ಕೀ'ವರೆಗಿನ ಪದಗಳು ಸೇರ್ಪಡೆಯಾಗಿವೆ. 'ಕ'ಕಾರದಲ್ಲಿಯೇ ಒಂದು ಸಂಪುಟಕ್ಕಿಂತ ಹೆಚ್ಚಿನ ಪದಗಳು ಇರುವುದು ವಿಸ್ಮಯ ಮೂಡಿಸುತ್ತದೆ; ಜನಪದ ಶಬ್ದ ಸಂಪತ್ತಿಗೂ ಸೂಚಿಯಾಗಿದೆ. ಪ್ರಥಮ ಸಂಪುಟದಲ್ಲಿನ ತಾತ್ತ್ವಿಕತೆಯೇ ಇಲ್ಲಿಯೂ ಮುಂದುವರಿದಿದೆ. ದೈನಂದಿನ ಜೀವನದಲ್ಲಿ ಬಳಕೆಯಲ್ಲಿರುವ ಪದಗಳಂತೆಯೇ, ಜಾನಪದದ ವಿವಿಧ ಪ್ರಕಾರಗಳ ಸಾಮಗ್ರಿಯಲ್ಲಿನ ಪದಗಳೂ ಇಲ್ಲಿ ಪ್ರಸ್ತಾಪಕ್ಕೆ ಬಂದಿವೆ. ಜನಪದ ಮತ್ತು ಶಿಷ್ಟ ಸಂದರ್ಭಗಳೆರಡರಲ್ಲೂ ನಿರಂತರವಾಗಿ ಬಳಕೆಯಾಗುತ್ತಾ ಬಂದಿರುವ ಪದಗಳೂ ಇಲ್ಲಿ ಸ್ಥಾನ ಪಡೆದಿವೆ. ವಿವಿಧ ಸಮುದಾಯಗಳು ಮತ್ತು ಬುಡಕಟ್ಟುಗಳಲ್ಲಿ ಬಳಕೆಗೊಂಡಿರುವ ಪದಗಳನ್ನೂ ಇಲ್ಲಿ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ಎಂದಿನಂತೆಯೇ ಇಲ್ಲಿಯೂ ವೃತ್ತಿ ಸಂಬಂಧಿ ಪದಗಳು ಚರ್ಚೆಗೆ ಬಂದಿವೆ. ಪದಗಳ ಬಳಕೆಯ ಸಂದರ್ಭಗಳು, ಬದಲಾವಣೆಗಳು, ಸೃಷ್ಟಿಯಾಗುವ ಹೊಸ ಸಂದರ್ಭಗಳು ಉಲ್ಲೇಖಗೊಂಡಿವೆ. ಭಾಷಿಕ ಟಿಪ್ಪಣಿಗಳೊಡನೆ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅರ್ಥ ಮತ್ತು ಅನ್ವಯಗಳನ್ನು ಚರ್ಚಿಸಲಾಗಿದೆ. ವಿವರಣೆ ವಿಶ್ಲೇಷಣೆಗಳೂ ಹೇಗೂ ಬೆಂಬಲಕ್ಕಿವೆ; 'ಪದಸಂಸ್ಕೃತಿ'ಯ ಕಲ್ಪನೆಯಂತೂ ಅದರ ಎಲ್ಲ ಸಾಧ್ಯತೆಗಳೊಡನೆ ಕಾಣಿಸಿಕೊಂಡಿದೆ. ಪದದ ಮೂಲ ರೂಪವನ್ನೂ, ಆಮೇಲಿನ ಅದರ ಬದಲಾವಣೆಗಳನ್ನೂ ವ್ಯಾಕರಣ ದೃಷ್ಟಿ ಮತ್ತು ಭಾಷಾ ವೈಜ್ಞಾನಿಕತೆಯೊಡನೆ ಕಟ್ಟಿಕೊಡಲು ಪ್ರಯತ್ನಿಸಲಾಗಿದೆ. ಪದ ಮಾದರಿಗಳು ಬಳಕೆ ಮಾತಿನ ಮಾದರಿಗಳೂ ಆಗಿವೆ; ಅವು ಸಂಸ್ಕೃತಿ ಮಾದರಿಗಳೂ ಆಗಿ, ಕಡೆಗೆ ಜೀವನದ ಸಾಂದರ್ಭಿಕ ಮಾದರಿಗಳೂ ಆಗುವುದನ್ನು ನೋಡುತ್ತೇವೆ. ಜಾನಪದ ನಿಘಂಟು ಎಂದರೆ ಕೇವಲ ಶಬ್ದಾರ್ಥದ ಮಾದರಿಯದಲ್ಲ, ಪದವಲಯದಲ್ಲಿನ ಸಂಸ್ಕೃತಿ ಸಂಪತ್ತನ್ನು ಕಟ್ಟಿಕೊಡುವ ಮಾದರಿಯದು. ಶಬ್ದರೂಪ ಜಾನಪದದ ಬಹುದೊಡ್ಡ ಆಕರವಾಗಿ ನಿಘಂಟು ಮೈದೋರಿದೆ; ಎರಡನೆಯ ಸಂಪುಟ ಕೂಡ ಇದಕ್ಕೆ ಉದಾಹರಣೆ.

ದ್ರಾವಿಡ ಭಾಷೆಗಳಲ್ಲಿ ಏಕಪ್ರಕಾರವಾಗಿ ಬಳಕೆಯಲ್ಲಿರುವಂತಹದು 'ಕ್' ಧ್ವನಿಮಾ; ಮೂಲ ದ್ರಾವಿಡ ಭಾಷೆಯನ್ನು ಪುನಾರಚಿಸುವಾಗ ಕನ್ನಡದ 'ಕ್' ಧ್ವನಿಮಾವನ್ನು ಪ್ರಾತಿನಿಧಿಕವಾಗಿ ತೆಗೆದುಕೊಳ್ಳುವುದು ರೂಢಿ. ಇದಕ್ಕೆ ಮುಖ್ಯ ಕಾರಣ ಕನ್ನಡದ 'ಕ್' ಧ್ವನಿಮಾ ಪದಾದಿಯಲ್ಲಿ ಮೂಲ ರೂಪದಲ್ಲಿಯೇ ಬಳಕೆಯಾಗುತ್ತಾ ಬಂದಿರುವುದು. ಬದಲಾವಣೆಯಲ್ಲಿ ಈ ನಿರ್ಣಯಕ್ಕೆ ಬರಬಹುದು: "ವಿರಳವಾಗಿ ಮಾತ್ರ ಪದಾದಿಯ ಕ>ಗ ಆಗುವುದಿದೆ; ಪದಮಧ್ಯದಲ್ಲಿ ಕ>ಗ ಆಗುವುದು ಸರ್ವೇಸಾಮಾನ್ಯ; ದ್ರಾವಿಡ ಭಾಷೆಯ ಒಂದು ಮುಖ್ಯ ಸೂತ್ರವಾದ 'ಅಘೋಷಘೋಷ ವರ್ಣಗಳ ವಿನಿಮಯ ಸೂತ್ರ'– Convertibility of Surds and Sonants'- ವನ್ನು ಅನುಸರಿಸಿಯೇ ಇದು ನಡೆಯುವುದು; 'ಗ್' ಬದಲವಾಣೆಯ ಸಂದರ್ಭದಲ್ಲಿ ಮೂಲ ರೂಪ 'ಕ್'ವನ್ನು ಗುರುತಿಸುವುದು ಅಗತ್ಯ; ಆದರೆ ಉಚ್ಚಾರಣೆಯಲ್ಲಿ ಮಾತ್ರ ಖಚಿತವಾಗಿರುತ್ತದೆ ಎಂಬುದನ್ನು ಮರೆಯಲಾಗದು; ಉಚ್ಚಾರಣಾಸ್ಥಾನ ಕೂಡ ಇದೇ ರೀತಿ". ಕನ್ನಡ 'ಕ' ಕಾರದ ಸಾಮಾನ್ಯ ಬದಲಾವಣೆಯ ಒಂದು ವೈಶಿಷ್ಟ್ಯ ಇದು. ಹಾಗೆಯೇ "ಕನ್ನಡ 'ಕ' ಕಾರದ ಇನ್ನೊಂದು ಮುಖ್ಯ ಲಕ್ಷಣವೆಂದರೆ 'ಚ'ಕಾರವಾಗಿ ಬದಲಾಗುವುದು; ಇದು ದ್ರಾವಿಡ ಭಾಷೆಗಳಲ್ಲಿಯೆ ಅಪರೂಪವಾದುದು; ಮುಖ್ಯವಾಗಿ ಕನ್ನಡದಲ್ಲಿಯೇ ಈ ಪರಿವರ್ತನೆ ನಡೆಯುವುದರಿಂದ, ಮೂಲ ದ್ರಾವಿಡದ ಪುನಾರಚನೆಯಲ್ಲಿ ಕನ್ನಡ ಪಾತ್ರವೇನೆಂಬುದನ್ನು ಈ ಪರಿವರ್ತನೆ ಕೂಡ ಸಾಕ್ಷೀಪಡಿಸುತ್ತದೆ". ಇನ್ನೂ ಅನೇಕ ಕಡೆ ಇಂತಹ ಬದಲಾವಣೆಗಳು ದೊರೆಯುತ್ತವೆ. ಆ ಕಾರಣ ಕನ್ನಡ ಸಂಸ್ಕೃತ ಪದಗಳನ್ನು ಎಷ್ಟೇ ಸ್ವೀಕರಿಸಿದ್ದರೂ ಕನ್ನಡದ ಅಸ್ಮಿತೆ ಮತ್ತು ವೈಶಿಷ್ಟ್ಯ ಸಾರಲು ಇಂತಹ ಬದಲಾವಣೆಗಳು ಪರಿಶೀಲನಾರ್ಹವಾಗುತ್ತವೆ.

ಸಾಮಾನ್ಯವಾಗಿ ಪ್ರತಿಯೊಂದು ಪದಕ್ಕೂ ಒಂದು 'ಅಸ್ಮಿತೆ'(indentity) ಇರುತ್ತದೆ; ಅರ್ಥಗಳು ವಿಭಿನ್ನವಾಗಿರುವ ಸಾಧ್ಯತೆಯಿರುವುದರಿಂದ 'ಅರ್ಥದ ಅಸ್ಮಿತೆ' ಸಂದಿಗ್ಧವಾಗಬಹುದು; ಆ ಬಳಕೆಯ ಸಂದರ್ಭಗಳು

ನಿರ್ಣಾಯಕ ಪಾತ್ರವಹಿಸುತ್ತವೆ. ಪದಗಳಲ್ಲಿಯೂ ಮೂಲ ರೂಪಗಳು ಮತ್ತು ನಿಷ್ಪನ್ನ ರೂಪಗಳೆಂದು ಕವಲೊಡೆಯುವುದರಿಂದ, ಇಲ್ಲಿನ ಅಸ್ಮಿತೆ ಮೂಲ ರೂಪಕ್ಕೊ ನಿಷ್ಪನ್ನ ರೂಪಕ್ಕೊ ಎಂಬ ಚರ್ಚೆ ಬರಬಹುದು. ಮತ್ತೆ ಇಲ್ಲಿಯೂ ಸಂದರ್ಭಗಳೇ ಪ್ರಮುಖ ಪಾತ್ರವಹಿಸುತ್ತವೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಈ ಎಲ್ಲದಕ್ಕೂ ಮುಖ್ಯವಾಗಿ ಪದಕ್ಕೂ ಅರ್ಥಕ್ಕೂ ವೈಜ್ಞಾನಿಕ ಸಂಬಂಧ ಇಲ್ಲದಿರುವುದು, ಪದ ಮತ್ತು ಅರ್ಥಗಳ ಸಂಬಂಧವನ್ನು ಸ್ವೀಕೃತ ಸಾಂಪ್ರದಾಯಿಕ ತತ್ತ್ವದ ಆಧಾರದ ಮೇಲೆ ತಿಳಿಯುತ್ತಾ ಬಂದಿದ್ದೇವೆ. ಪದಗಳಿಗೆ ಅರ್ಥಗಳ ಯಾವ ಸಂಬಂಧ ತತ್ವವನ್ನು ಆರೋಪಿಸುತ್ತೇವೆಯೊ ಅದೇ 'ಪದಾರ್ಥ'ದ ಸೂಚಿಯಾಗುತ್ತದೆ. ಪದವನ್ನು 'ರೂಪ'(form) ಮತ್ತು 'ವಿಷಯ' (content) ಎಂಬುದಾಗಿ ವಿಭಜಿಸಿಕೊಳ್ಳುವುದರಲ್ಲಿ ತಪ್ಪೇನಿಲ್ಲ. ಬದಲಾವಣೆ ಎನ್ನುವುದು ಈ ಎರಡಕ್ಕೂ ಸಂಬಂಧಿಸಿರುತ್ತದೆ. ಒಡೆದು ಕಟ್ಟುವ ಕೆಲಸ ಎರಡರಲ್ಲೂ ಉದ್ದಕ್ಕೂ ನಡೆದುಕೊಂಡು ಬಂದಿದೆ. ರೂಪದಲ್ಲಿ 'ಧ್ವನಿ' ಮತ್ತು 'ಧ್ವನಿಮಾ'ಗಳು ಕೆಲಸ ಮಾಡುತ್ತವೆ; ಅರ್ಥ ರಹಿತವಾದ ಇಲ್ಲಿನ ಬದಲಾವಣೆಗಳು ಕಡೆಗೆ ಅರ್ಥಸಹಿತವಾದ 'ಆಕೃತಿಮಾ' ಗಳಲ್ಲಿ ನೆಲೆ ನಿಲ್ಲುತ್ತದೆ. ಇಲ್ಲಿನ 'ಅರ್ಥಸಹಿತ' ವಾದುದಕ್ಕೆ ಕಾರಣ ಸಂಬಂಧಿಯಾಗಿ ಬರುವಂಥದು `content', ಅಂದರೆ ವಸ್ತು ವಿಷಯ. ಇದು ಅರ್ಥ ಸ್ವರೂಪಿಯಾದ ಸಾಮಗ್ರಿ, ಅನುಭವ, ಆಲೋಚನೆಯಿಂದ ಕೂಡಿರುತ್ತದೆ. ಈ ವಿಷಯಾನುಭವದಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ವರ್ತನಾ ಮಾದರಿಗಳಿಗೆ ಸೇರ್ಪಡೆಯಾಗುತ್ತಾ ಹೋಗುತ್ತವೆ. ಲಭ್ಯವಾದ ಈ `content' ಆಯಾ ಪದರೂಪಗಳಿಗೆ ಸೇರ್ಪಡೆಯಾದಂತೆ 'ಪದವಲಯ' ಸೃಷ್ಟಿಯಾಗುತ್ತಾ ಹೋಗುತ್ತದೆ. ಹೀಗೆ ಪದಕ್ಕೆ ಒಂದು 'ಪರಿಧಿ' ಒದಗುವ ವಿಶೇಷವನ್ನೆ ನಾವು 'ಪದಸಂಸ್ಕೃತಿ' ಎನ್ನುವ ಪರಿಕಲ್ಪನೆಯಿಂದ ಕರೆದಿರುವುದು. ಎರಡನೆಯ ಸಂಪುಟದ ಎಲ್ಲ ಪದಗಳಿಗೂ ಪದಸಂಸ್ಕೃತಿಯ ಈ ಪರಿಕಲ್ಪನಾತ್ಮಕ ಸೂತ್ರ ಅಳಡಿಟ್ಟಿದೆ ಎಂಬುದನ್ನು ಹೇಳಲೇಬೇಕಾಗಿದೆ.

ಮೊದಲನೆಯ ಸಂಪುಟದಲ್ಲಿ ಕಾಣಿಸಿಕೊಂಡ ಕೆಲವು ಧ್ವನಿ/ಧ್ವನಿಮಾ ವ್ಯತ್ಯಾಸಗಳು ಎರಡನೆಯ ಸಂಪುಟದಲ್ಲಿಯೂ ಮುಂದುವರಿಯುತ್ತವೆ; ಉದಾಹರಣೆಗೆ, ಹ>ಅ, ಕ>ಗ, ಕ>ಚ, ಚ>ಸ; ಇಂತಹ ವ್ಯತ್ಯಾಸಗಳು ಸಮಸ್ತ ಕನ್ನಡ ಭಾಷೆಗೆ ಸಂಬಂಧಿಸಿರುವುದರಿಂದ, ಎಲ್ಲ ಸಂಪುಟದ ಪದಗಳಲ್ಲಿ ಕಾಣಿಸಿಕೊಳ್ಳುವುದು ಸಹಜವಾಗಿದೆ. ಆದರೆ ಪದರಚನೆಗಳು ಒಂದೇ ರೀತಿಯಲ್ಲಿರುತ್ತವೆ ಎಂದು ಹೇಳಲಾಗುವುದಿಲ್ಲ; ಪದಾದಿ, ಪದಮಧ್ಯೆ ಮತ್ತು ಪದಾಂತ್ಯದ ಸಮಸ್ಯೆಗಳು ಇವು; ಸಂಬಂಧಿಸಿದ ಕಾರಣ ಮತ್ತು ಪರಿಣಾಮಗಳು ಮಾತ್ರ ಇದ್ದೇಇರುತ್ತವೆ. ಒತ್ತಕ್ಷರಗಳು ಸರಳವಾಗುವುದು, ಸರಳಾಕ್ಷರಗಳು ಒತ್ತಕ್ಷರಗಳಾಗುವುದು ಇಂಥದೇ ವಿಷಯ; ಇಲ್ಲಿಯೂ ಹ್ರಸ್ವಾಕ್ಷರ ದೀರ್ಘವಾಗುವುದು, ದೀರ್ಘಾಕ್ಷರ ಹ್ರಸ್ವವಾಗುವುದು, ಇಂತಹ ಸಮಸ್ಯೆಗಳೂ ಸೇರ್ಪಡೆಯಾಗುತ್ತವೆ. ಸಾಂಸ್ಕೃತಿಕ ಮತ್ತು ಸಾಮಾಜಿಕ ವಿಷಯಗಳಲ್ಲಿ, ಇಲ್ಲಿನ ಪದಗಳೇ ಬೇರೆಯಾಗುವುದರಿಂದ, ಹಿಂದಿನ ಸಂಪುಟದಿಂದ ಪ್ರಸ್ತುತ ಸಂಪುಟದ 'ಪದಸಂಸ್ಕೃತಿ' ಬೇರೆಯಾಗುವುದು ಸಹಜ. ಪದನಿಷ್ಪತ್ತಿ, ಸಂಸ್ಕೃತಿ ಮಾದರಿ ಮತ್ತು ಸಾಮಾಜಿಕ ಕಾರಣಗಳ ದೃಷ್ಟಿಯಿಂದ ಚರ್ಚಿತವಾಗಿರುವ ಸಂಗತಿಗಳನ್ನು ತಾತ್ತ್ವಿಕತೆಯ ಆಧಾರದ ಮೇಲೆ ಗಮನಿಸುವುದು ಸೂಕ್ತ; ಅವನ್ನಿಲ್ಲಿ ಸೂತ್ರ ರೂಪದಲ್ಲಿ ಪ್ರಸ್ತಾಪಿಸಬಹುದು:

೧. ಪದವೊಂದು ಪ್ರಾಚೀನ ಕಾಲದಲ್ಲಿದ್ದು, ಕಾಲದ ವಿದ್ಯಮಾನಗಳಿಗೆ ಒಳಗಾಗಿ ಪದರೂಪ ಮತ್ತು ಅರ್ಥ ಬದಲಾವಣೆ ಹೊಂದಿರುವುದು ಒಂದು ವಿಶೇಷ ವಿಷಯ. ಇಂಥ ಸಂದರ್ಭದಲ್ಲಿ ಮೂಲ ರೂಪವನ್ನು ಕಂಡುಹಿಡಿದು, ಆಮೇಲಿನ ರೂಪವ್ಯತ್ಯಾಸಗಳನ್ನೂ ಅರ್ಥವ್ಯತ್ಯಾಸಗಳನ್ನೂ ದಾಖಲಿಸುವುದು ಮಹತ್ವದ ವಿಚಾರ. ರೂಪ ಒಂದೇ ಇದ್ದರೂ, ಅರ್ಥದ ಹಲವು ಆಯಾಮಗಳನ್ನು ಪಡೆಯುವುದು ಇಂತಹ ಎಲ್ಲ ಪದ ಇತಿಹಾಸದ ಆಕರ್ಷಕ ವಿಷಯ. ಧ್ವನಿಮಾ ವಿಶ್ಲೇಷಣೆಯಂತೂ ರೂಪದ ಸ್ಥಿತ್ಯಂತರಗಳಲ್ಲಿ ಅಗತ್ಯವಾಗಿರುತ್ತದೆ. ಮೂಲ ರೂಪ ಮತ್ತು ಆಮೇಲಿನ ರೂಪಗಳ ತೌಲನಿಕ ಪರಿಶೀಲನೆಯಲ್ಲಿ ಬದಲಾವಣೆಯ ಹಿಮ್ಮುಖ ಚಲನೆಯೂ ಒಂದು ಮಾದರಿಯಾಗಿ ಸ್ವೀಕೃತವಾಗಬಹುದು.

೨. ಪದರೂಪದ ಪರಿಶೀಲನೆಯಲ್ಲಿ ಪದದ್ವಯ ಅಥವಾ ಪದಪುನರಾವರ್ತನೆಯೂ ಒಂದು. ಪದಗಳು ಸಾದೃಶ್ಯದ ಆಧಾರದ ಮೇಲೆ ಸೃಷ್ಟಿಯಾಗುವಂತೆ, ಇದ್ದ ಪದಗಳ ದ್ವಂದ್ವ ಬಳಕೆ ಮಾಡಿಯೂ ಭಿನ್ನ ಪದ ನಿರ್ಮಾಣಕ್ಕೆ ಕಾರಣವಾಗಬಹುದು. ಒಂದೇ ಪದದ ಪುನರಾವರ್ತನೆ ಅಥವಾ ಭಿನ್ನ ಪದದ ಪದದ್ವಂದ್ವಕ್ಕೆ ಸಂಬಂಧಿಸಿದ ವಿಷಯವಿದು. ಭಾಷೆಯ ಲಯ ಮತ್ತು ಅರ್ಥದ ಒತ್ತು ಮುಖ್ಯವಾಗಬಹುದು; `Duplication' ವಿಷಯ ಕೂಡ ಇಲ್ಲಿಯೇ ಬರುತ್ತದೆ.

೩. ದ್ರಾವಿಡ ಭಾಷೆಗಳಲ್ಲಿ 'ಸ್ವರವ್ಯತ್ಯಯ'– Vowel mutation' ಒಂದು ಮುಖ್ಯವಾದ ವಿಷಯ. ಪ್ರಸ್ತುತ ಸಂಪುಟದ ಅನೇಕ ಪದಗಳಲ್ಲಿ ಈ ಸಮಸ್ಯೆ ಎದುರಾಗುವುದು, ಇ>ಎ ಆಗುವುದು, ಉ>ಒ ಆಗುವುದು ಒಂದು ಮಹತ್ವದ ಬದಲಾವಣೆ. ಇದು ಪದರೂಪಗಳಲ್ಲಿಯೇ ಕಾಣಿಸಿಕೊಳ್ಳಬಹುದು; ಇಲ್ಲವೆ ರೂಪವೊಂದರ ಉಚ್ಚಾರಣಾ ಭಿನ್ನತೆಗಳಲ್ಲಿ ಕಾಣಿಸಿಕೊಳ್ಳಬಹುದು. ಆದರೆ ಅರ್ಥವೇನೂ ಇದರಿಂದ ಬದಲಾದಂತೆ ಕಾಣುವುದಿಲ್ಲ. ಪಾತ್ರ ಸ್ವರಗಳದ್ದೇ ಆದರೂ, ಪರಿಣಾಮ ಮಾತ್ರ ವ್ಯಂಜನಗಳದ್ದಾಗಿರುತ್ತದೆ.

೪. ಕೆಲವೊಮ್ಮೆ ಜನಸಾಮಾನ್ಯರು ಬಳಸುವ ಪದಗಳನ್ನು ಪರಿಷ್ಕರಿಸಿ ಕವಿಗಳು ತೆಗೆದುಕೊಳ್ಳಬಹುದು; ಹಾಗೆಯೇ ಕವಿಗಳ ಬಳಕೆಯ ಪದಗಳೂ ಅರ್ಥಾಂತರ ಮತ್ತು ರೂಪಾಂತರಗಳೊಡನೆ ಜನಸಾಮಾನ್ಯರ ಭಾಷೆಯ ಬತ್ತಳಿಕೆಗೆ ಸೇರುವ ಸಾಧ್ಯತೆ ಇರುತ್ತದೆ. ಇವುಗಳನ್ನು ಶಿಷ್ಟ ಮತ್ತು ಜನಪದರ ಸಂಬಂಧ ಎಂದು ಕರೆದರೂ ಆದೀತು. ಸಂಬೋಧನಾತ್ಮಕ ಪದಗಳೂ ಇಲ್ಲಿ ಸೇರ್ಪಡೆಗೊಳ್ಳುವುದು ವಿಶೇಷ. ಪ್ರಸ್ತುತ ಸಂಪುಟದ ಪದ ವಿಶೇಷಣೆಯಲ್ಲಿ ಇದಕ್ಕೂ ಉದಾಹರಣೆಗಳು ಸಿಕ್ಕುತ್ತವೆ.

೫. ಆಡುವ ಭಾಷೆಗೆ ಕಟ್ಟು ಎಂಬುದು ಇರುವುದಿಲ್ಲ. ಭಾಷಾ ಸೃಷ್ಟಿ ಮತ್ತು ಪರಿವರ್ತನ ಪ್ರಕ್ರಿಯೆಗಳು ಜೊತೆಯಲ್ಲಿ ಸಾಗುವಂಥವು. ಭಾಷೆಯ ಮೂಲ ಮಾದರಿಗಳು ಪದೇಪದೇ ವ್ಯತ್ಯಾಸಕ್ಕೆ ಒಳಗಾಗುವುದಿಲ್ಲ. ಈ ತತ್ವದ ಅನ್ವಯ ಪದಗಳ ನಡವಳಿಕೆಗಳು ನಿರ್ಣಯವಾಗುತ್ತವೆ. ಪದಗಳು ಭಾಷೆಯ ಮೂಲಘಟಕಗಳಾಗಿರುವುದರಿಂದ, ಪದಗಳು ವ್ಯವಹರಿಸುವ ಸಾಧ್ಯತೆಗಳು ಮತ್ತು ಮಿತಿಗಳು ಭಾಷೆಯ ಸಾಧ್ಯತೆ ಮತ್ತು ಮಿತಿಗಳೇ ಆಗಿರುತ್ತವೆ. ಪದಗಳ ಸಂಬಂಧಾರ್ಥ ಭಿನ್ನಾರ್ಥಗಳೇ ಇವನ್ನು ಧ್ವನಿಸುತ್ತವೆ. ಸುಲಭವಾಗಿ ಲಿಖಿತಗೊಳಿಸಲಾಗದ ಉಚ್ಚಾರಣಾ ವ್ಯತ್ಯಾಸಗಳೂ ಭಾಷೆಯ ಮಿತಿ ಮತ್ತು ಸಾಧ್ಯತೆಗಳ ಅರ್ಥವನ್ನು ಇನ್ನಷ್ಟು ವಿಸ್ತರಿಸುತ್ತವೆ. ಎರಡನೆಯ ಸಂಪುಟದ ಪದಗಳ ಹಾದಿಯಲ್ಲಿ ಇಂತಹ ಸಮಸ್ಯೆಗಳ ಎದುರಾಗುತ್ತವೆ.

೬. ಆಹಾರ ಜಾನಪದ, ಪ್ರಾಣಿ ಜಾನಪದ, ಶರೀರ ಜಾನಪದಂತಹ ವಿಷಯಗಳು ಜಾನಪದದಲ್ಲಿ ವಿಶಿಷ್ಟ ಗುಂಪಿಗೆ ಸೇರುವಂಥವು; ಕೃಷಿ ಜಾನಪದವೂ ಇಂಥದೇ ಬಗೆಯದು. ಈ ಸಂಬಂಧವಾದ ಪದಗಳು ರೂಪ ಮತ್ತು ವಿಷಯದಲ್ಲಿ ವಿಶೇಷ ಅಸ್ಮಿತೆಯನ್ನು ಉಳ್ಳಂಥವು. ಪದ ಚಹರೆಗಳು ಮತ್ತು ಅರ್ಥ ಚಹರೆಗಳು ಸಹಜವಾಗಿಯೇ ವಿಶಿಷ್ಟತೆಯನ್ನು ಸ್ಥಾಪಿಸುತ್ತವೆ; ಸಾಂಸ್ಕೃತಿಕ ಶೋಧಕ್ಕೆ ದಾರಿ ಮಾಡಿಕೊಡುತ್ತವೆ. ಅದರಲ್ಲಿಯೂ ಆಹಾರ ಮತ್ತು ಶರೀರ ಜಾನಪದದಲ್ಲಿನ

ಪದಗಳನ್ನು ಸಂಸ್ಕೃತಿಯ ಕೇಂದ್ರ ಪ್ರಜ್ಞೆಗೆ ಹೆಚ್ಚು ತೆಗೆದುಕೊಂಡು ಹೋಗುವ ಅವಕಾಶ ಇರುತ್ತದೆ. ರೂಢಿಯಲ್ಲಿ ಆರೂಢಗೊಂಡಿರುವ ವಿಷಯವನ್ನು ಪರಿಕಲ್ಪನಾತ್ಮಕ ಭಾಷೆಯಲ್ಲಿ ಸಾಧ್ಯವಿರುವ ಕಡೆಯಲ್ಲೆಲ್ಲ ಕೊಡಬೇಕಾಗುತ್ತದೆ. ಈ ಗುಂಪಿಗೆ ಸೇರುವ ಪದ ರೂಪಗಳು ಪ್ರಸ್ತುತ ಸಂಪುಟದಲ್ಲಿ ಅಧಿಕ ಸಂಖ್ಯೆಯಲ್ಲಿ ದೊರೆಯುತ್ತವೆ. ಇವುಗಳಲ್ಲಿನ ಉಪಶೀರ್ಷಿಕೆಗಳನ್ನೂ ಮರೆಯುವಂತಿಲ್ಲ; ಸಂಸ್ಕೃತಿ ಕೆಲ ಸಾರಿ ಈ ಪದಗಳಲ್ಲಿ ಮಡುಗಟ್ಟಿರುವುದನ್ನು ನೋಡುತ್ತೇವೆ.

೭. ಪದ ಒಂದೇ ಆದರೂ, ಅರ್ಥ ಪ್ರಾಯೋಗಿಕವಾಗಿ ಭಿನ್ನವಾಗಿರುವುದೂ, ಜನಪದ–ಶಿಷ್ಟ ರೂಪ ತಾಳುವುದೂ ಸಾಮಾನ್ಯವಾಗಿ ನಡೆದು ಬಂದ ರೀತಿ; ಬಳಕೆಯ ಉಚ್ಚಾರಣಾ ಒತ್ತಡಗಳು ಪ್ರತಿಯೊಂದು ರೂಪದಲ್ಲಿಯೂ ಇರುವಂಥವೇ. ಜಾನಪದ ಶಿಷ್ಟರೂಪದಲ್ಲಿ, ಶಿಷ್ಟವಾದದ್ದು ಜಾನಪದದಲ್ಲಿ ಬದಲಾವಣೆಯೊಡನೆ ಕಾಣಿಸಿಕೊಳ್ಳುವುದು ಅಪರೂಪವೇನಲ್ಲ. ಅರ್ಥ ಸಾಧ್ಯತೆಯಲ್ಲಿ ಮಾತ್ರವಲ್ಲದೆ, ರೂಪಾಂತರಗಳಲ್ಲಿಯೂ ಇದು ತಲೆದೋರಬಹುದು. ತಲೆಮಾರುಗಳಲ್ಲಿ ನಡೆಯುವ ಪ್ರಕ್ರಿಯೆ ಇದು. ಬಳಕೆ ಮತ್ತು ಸಮುದಾಯಗಳ ಪಾತ್ರವನ್ನು ಇಲ್ಲಿ ಮರೆಯುವಂತಿಲ್ಲ. ಪ್ರಸ್ತುತ ಸಂಪುಟದ ಪದಗಳೂ ಇದಕ್ಕೆ ಹೊರತಲ್ಲ.

೮. ಪದಗಳಿಗೂ ಒಂದು ಜೀವನ, ಇತಿಹಾಸ ಉಂಟು; ಇದರಲ್ಲಿ ಧ್ವನಿ ಬದಲಾವಣೆಗಳು ಇರುತ್ತವೆ; ಧ್ವನಿಮಾ ಬದಲಾವಣೆಗಳೂ ಇರುತ್ತವೆ. ಸಂಸ್ಕೃತಿ ಸಂಬಂಧ ವಿಚಾರಗಳು ಪದಗಳಲ್ಲಿ ಸೇರ್ಪಡೆಯಾಗುತ್ತಾ ಹೋಗುವುದು ಪದಸಂಸ್ಕೃತಿಯ ಒಂದು ವಿಶಿಷ್ಟ ಲಕ್ಷಣ. ಈ ಸಾಂಸ್ಕೃತಿಕ ವಿಚಾರಗಳು ಸಾಂಕೇತಿಕ, ಪ್ರತಿಮಾತ್ಮಕ, ರೂಪಕಾತ್ಮಕ ಆಗಿರುವುದುಂಟು; ಅಥವಾ ಪದದ ಶರೀರವೇ ಸಂಸ್ಕೃತಿಯಿಂದ ರಚಿತವಾಗಿರಬಹುದು; ಇಲ್ಲವೆ ಆಚರಣಾತ್ಮಕ ಜಾನಪದದ ಒಂದು ಪ್ರಕಾರವಾಗಿ ಪದವೊಂದು ಪ್ರತಿನಿಧಿಯಾಗಿ ಕಾಣಿಸಿಕೊಳ್ಳಬಹುದು. ಸಂಪುಟದ ಅನೇಕ ಪದಗಳು ಇಂತಹ ಸಂಸ್ಕೃತೀಕರಣದ ಪ್ರತಿನಿಧೀಕರಣವನ್ನು ಹೊಂದಿವೆ.

೯. ಬಹಳ ಅಪರೂಪ ಎನ್ನುವಂತೆ 'ಅಮೂರ್ತ ಪದ' ಕಲ್ಪನೆ ಕಾಣಿಸಿಕೊಳ್ಳಬಹುದು; ಆದರೆ ಇದು ತುಂಬ ವಿರಳ; ಏಕೆಂದರೆ 'ಅಮೂರ್ತತೆ' ಜಾನಪದದ ಜಾಯಮಾನವಲ್ಲ. ಕೆಲವೊಮ್ಮೆ ತಾತ್ತ್ವಿಕತೆಯನ್ನು ಹೇಳಲು ಹೊರಟಾಗ, 'ಅನುಭವ'ಕ್ಕಿಂತ 'ಚಿಂತನೆ'ಯನ್ನು ಆಧರಿಸಿದಾಗ ಈ ಬಗೆಯ ಕಲ್ಪನೆ ಸಂಭವಿಸಬಹುದು. ಈ ಸಂಪುಟದ ಪದಗಳಲ್ಲಿಯೂ ಕೆಲವು ಉದಾಹರಣೆಗಳು ಮಾತ್ರ ಇದಕ್ಕೆ ಸಿಕ್ಕಬಹುದು.

೧೦. ಪ್ರಸ್ತುತ ನಿಘಂಟು ಸಾಂಸ್ಕೃತಿಕ ಪಾರಮ್ಯವನ್ನು ಹೊಂದಿರುವಂಥದು. ಪ್ರತಿಪದ ಸಂದರ್ಭದಲ್ಲಿಯೂ ಅಂತಹ ವ್ಯಾಖ್ಯಾನ ಪ್ರಯತ್ನವನ್ನು ಮಾಡಲಾಗಿರುತ್ತದೆ. ಸಂಸ್ಕೃತಿ ಗರಿಷ್ಠ ಪ್ರಮಾಣದಲ್ಲಿ ಪದಗಳನ್ನು ರೂಪಿಸಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಸಮುದಾಯಗಳು, ಬುಡಕಟ್ಟುಗಳು, ವೃತ್ತಿಗಳು ಮೊದಲಾದವು ರೂಪಿಸುವ ಸಂಸ್ಕೃತಿಯಲ್ಲಿ ಇಂತಹ ಪದಗಳು ಹೇರಳವಾಗಿರುತ್ತವೆ. ಆಗ ವಿವರಣೆ ಕೊಡದೆ, ವ್ಯಾಖ್ಯಾನ ಮಾಡದೆ, ವಿಶ್ಲೇಷಣೆ ಕೊಡದೆ ಇಂತಹ ಪದಗಳ ಆತ್ಮಸ್ವರೂಪವನ್ನು ಕಟ್ಟಿಕೊಡಲು ಸಾಧ್ಯವಾಗುವುದಿಲ್ಲ.

ಆಗ ಸಹಜವಾಗಿಯೇ ಸಮುದಾಯ, ಬುಡಕಟ್ಟು ಮತ್ತು ವೃತ್ತಿ ಸಂಬಂಧವಾದ ವಿವರಗಳು ಗೊತ್ತಿರಬೇಕಾಗುತ್ತದೆ. ಅದಿಲ್ಲದೆ ಪದಗಳಿಗೆ ವಿವರ ಕೊಡುವುದು ಸುಲಭವಾಗುವುದಿಲ್ಲ. ಇಡೀ ಸಂಪುಟದ ಅನೇಕ ಪದಗಳು ಇಂತಹ ಸಾಂಸ್ಕೃತಿಕ ನೋಟವನ್ನು ಸಾರಲು ಹೊರಟಿರುವುದನ್ನು ನೋಡಬಹುದು.

೧೧. ಜಾನಪದ ನೇರವಾಗಿಯೋ ಪರೋಕ್ಷವಾಗಿಯೇ ತನ್ನ ವಿವಿಧ ಪ್ರಕಾರಗಳಲ್ಲಿ ಸಾಂಸ್ಕೃತಿಕ ಶೋಷಣೆಯಂತಹ ವಿಷಯವನ್ನು ವಿಶೇಷವಾಗಿ ದಾಖಲಿಸುತ್ತಾ ಬಂದಿದೆ. ಇದು ಆಚರಣಾತ್ಮಕ ಪ್ರಕಾರಗಳಲ್ಲಿ ಮಾತ್ರವಲ್ಲದೆ, ಕಲಾ ಪ್ರಕಾರಗಳಲ್ಲಿಯೂ ಕಂಡು ಬಂದಿದೆ. ಶೋಷಕ ಮತ್ತು ಶೋಷಿತ ಪ್ರವೃತ್ತಿಗಳ ಬಗ್ಗೆ ಬೆಳಕು ಚೆಲ್ಲಲು ಇವು ಸ್ವಲ್ಪಮಟ್ಟಿನ ಪ್ರಯತ್ನವನ್ನು ಮಾಡಿವೆ. ಹೀಗಾಗಿ 'ಪದಸಂಸ್ಕೃತಿ' 'ಪ್ರತಿಭಟನೆ'ಯನ್ನೂ ಕೇಳಿಸಿದೆ. ಆದರೆ ಇದು 'ಬಂಡಾಯ' ಸ್ವರೂಪದ್ದಲ್ಲ; 'ಮೌನ ಅಭಿವ್ಯಕ್ತಿ'ಯ ಸ್ವರೂಪದ್ದು. ಪ್ರಸ್ತುತ ಸಂಪುಟದ ಪದಗಳೂ ಇದನ್ನು ಸಂವಹನಿಸುವ ಪ್ರಯತ್ನವನ್ನು ಮಾಡಿವೆ.

೧೨. ಜಾನಪದ 'ಪರಿಭಾಷೆ'ಯ ಬಗೆಗಿನ ಪದಗಳನ್ನು ಸೇರಿಸಬೇಕೆಂಬ ನಿರ್ಧಾರವನ್ನು ಮೊದಲೇ ತೆಗೆದುಕೊಳ್ಳಲಾಗಿದೆ. ಈ ಪದಗಳು ಜನಪದರೇ ಕೊಟ್ಟವಾಗಿರಬಹುದು ಅಥವಾ ಅಧ್ಯಯನ ಸಂದರ್ಭದಲ್ಲಿ ಕೊಟ್ಟವುಗಳು ಆಗಿರಬಹುದು. ಇಂತಹ ಪದಗಳು ಬಳಕೆಯ ಸಂದರ್ಭ ಮತ್ತು ಪರಿಕಲ್ಪನಾತ್ಮಕ ವಿಚಾರಗಳನ್ನು ಹೇಳುತ್ತಿರಬಹುದು. ಈ ಕುರಿತು ಮಾತನಾಡುವಾಗ ಅವುಗಳ ಶಿಷ್ಟ ನಿರೂಪಣೆ ಕುರಿತದ್ದನ್ನೇ ಪರಿಗಣಿಸಬೇಕಾಗಿಲ್ಲ; ಜನ ಏನು ಹೇಳುತ್ತಾರೆ ಎಂಬುದನ್ನೂ ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗಿದೆ. ಅಂತಹ ಕೆಲವು ಪದಗಳು ಸದ್ಯದ ಸಂಪುಟದಲ್ಲಿಯೂ ಚರ್ಚೆಗೆ ಒಳಗಾಗಿವೆ.

೧೩. ಇಲ್ಲಿನ ಕೆಲವು ಪದಗಳಾದರೂ ಸಾಂಸ್ಕೃತಿಕ ಅನ್ವೇಷಣ ಮತ್ತು ನಾಗರಿಕತೆಯ ವಿಕಾಸ ಕುರಿತಂತೆ ಹೇಳುತ್ತವೆ. ಜನರು ಇವುಗಳನ್ನು ತತ್ತ್ವಗಳನ್ನಾಗಿ ಇಟ್ಟಿದ್ದಾರೆ ಎಂದೇನಲ್ಲ; ಬಳಕೆಯ ಸಂದರ್ಭದ ಗ್ರಹಿಕೆಯನ್ನಷ್ಟೇ ಹೇಳುತ್ತಿದ್ದಾರೆ ಎಂಬುದಾಗಿ ತಿಳಿಯ ಬೇಕಾಗುತ್ತದೆ. ನಾಗರಿಕತೆ ಕಾಣಿಸಿಕೊಂಡು ಅನೇಕ ಶತಮಾನಗಳೇ ಆದುವು; ನಾಗರಿಕತೆ ಸಂಸ್ಕೃತಿಯ ಇತ್ತೀಚಿನ ಪ್ರವೃತ್ತಿ ಅಷ್ಟೆ; ಸಂಪುಟದ ಪದಗಳು ಇದನ್ನು ಗುರುತಿಸುವುದು ಅನಿವಾರ್ಯ.

೧೪. ಉಚ್ಚಾರಣೆ ಬಹುದೊಡ್ಡ ಭಾಷಿಕ ಲಕ್ಷಣ. ಆಡು ಮಾತಿನಲ್ಲಿ ಇದು ಸಾಮಾನ್ಯ; ಅಂತೆಯೇ ಧ್ವನಿ ವ್ಯತ್ಯಾಸ ಕೂಡ. ಧ್ವನಿ ವ್ಯತ್ಯಾಸಗಳನ್ನು ಲಿಖಿತ ರೂಪದಲ್ಲಿ ಖಚಿತವಾಗಿ ಕೊಡುವುದು ಕಷ್ಟ. ಆದಾಗ್ಯೂ ಪದಗಳನ್ನು ಅವುಗಳ ಉಚ್ಚಾರಣಾ ರೀತಿಯಲ್ಲಿ ಉಳಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ಒಂದೇ ಪದದಲ್ಲಿಯೇ ಅನೇಕ ಉಚ್ಚಾರಣಾ ಭೇದಗಳು ಇರುತ್ತವೆ; ಅವೆಲ್ಲವನ್ನೂ ಅದೇ ರೂಪದಲ್ಲಿ ದಾಖಲಿಸುವುದು ಸುಲಭವಲ್ಲ. ಇಂಥ ಸಂದರ್ಭಗಳಲ್ಲಿ ಮೂಲ ರೂಪವೇ ಬದಲಾಗಿ ಬಿಡುವುದುಂಟು. ಇದನ್ನು ಗಮನದಲ್ಲಿಟ್ಟುಕೊಂಡು ಮೂಲ ರೂಪ, ಅದರ ಧ್ವನಿ ವ್ಯತ್ಯಾಸಗಳಿರುವ ಪದ ರೂಪಗಳನ್ನು ಕೊಡಲಾಗಿದೆ. ಪ್ರಸ್ತುತ ಸಂಪುಟದಲ್ಲಿಯೂ ಇದನ್ನು ಸಾಧಾರಣವಾಗಿ ನೋಡಬಹುದು.

೧೫. ಪುರಾಣಪುರುಷರು ಮತ್ತು ಕರ್ಮದಂತಹ ವಿಷಯಗಳನ್ನು ಪರಿಗಣಿಸುವಾಗ ಜನಪದರ ಅಭಿಪ್ರಾಯದ ಹಿನ್ನೆಲೆಯಲ್ಲಿ ಅವುಗಳನ್ನು ನೋಡಲಾಗಿದೆ

ಎಂಬುದನ್ನು ಮರೆಯಲಾಗದು. ಪುರಾಣದಲ್ಲಿಯೇ ಇಂತಹ ಪದಗಳು ಜನಪದರ ಗ್ರಹಿಕೆಯ ಅಭಿವ್ಯಕ್ತಿಯಾಗಿರುವ ಸಾಧ್ಯತೆಯುಂಟು. ಪುರಾಣ ವ್ಯಕ್ತಿಯ ಹೆಸರುಗಳು ಇವೊತ್ತು ಜನಪದರ ನಡುವೆ ಎಂದೋ ಸಂದ ಜನರ ಹೆಸರುಗಳಾಗಿ ಉಳಿಯದೆ, ನಿರಂತರವಾಗಿ ಬಳಕೆಗೊಂಡ ಮಾನವ ಮಾದರಿಗಳಾಗಿ ಪರಿವರ್ತಿತವಾಗಿರುವುದನ್ನು ನೋಡುತ್ತೇವೆ. ಪ್ರಸ್ತುತ ಅಂತಹ ಕೆಲವು ಹೆಸರುಗಳು/ವಿಷಯಗಳಿಗೆ ಟಿಪ್ಪಣಿ ಬರೆದಿದ್ದು, ಆ ವಿವರಣೆ ನಾವು ಹಾಕಿಕೊಂಡ ನಿಯಮಕ್ಕೆ ಬದ್ಧವಾಗಿಯೇ ಇದೆ.

೧೬. ಪ್ರಸ್ತುತ ಸಂಪುಟದ ಒಂದು ವಿಶೇಷವೆಂದರೆ, ಕುಟುಂಬ, ಯುಗ, ಯುಗ ಪ್ರತಿನಿಧಿಗಳು, ಅವತಾರಗಳಂತಹ ವಿಷಯಗಳ ಹೆಸರುಗಳ ಪದಗಳು ಸೇರ್ಪಡೆಯಾಗಿರುವುದು. ಇವು ಸಂಪೂರ್ಣವಾಗಿ ಶಿಷ್ಟ ಕಲ್ಪನೆಗಳಾದರೂ, ಇವಕ್ಕೆ ಜನ ಏನೆನ್ನುತ್ತಾರೆ ಎನ್ನುವುದು ಇಲ್ಲಿ ಮುಖ್ಯವಾಗಿದೆ. ಹೀಗಾಗಿ ಆ ಹೆಸರುಗಳ ಪುರಾಣ ರೂಪವನ್ನೂ, ಅವುಗಳ ಸಾಮಾಜಿಕ ಪ್ರಸ್ತುತ ಅನ್ವಯವನ್ನೂ ಕುರಿತು ಇಲ್ಲಿ ಮಾತಾಡಲಾಗಿದೆ.

೧೭. ನುಡಿಗಟ್ಟುಗಳನ್ನು ಕುರಿತು ಪ್ರತ್ಯೇಕವಾಗಿ ಹೇಳಬೇಕು. 'ನುಡಿಗಟ್ಟು' ಒಂದು ಭಾಷೆಯ ಸಾಮರ್ಥ್ಯವನ್ನು ತೋರಿಸಿಕೊಡುವಂಥದು. ಅಂತಹ ಅನೇಕ 'ನುಡಿಗಟ್ಟು' ಗಳನ್ನು ಇದರಲ್ಲಿ ಕೊಡಲಾಗಿದೆ. ವಿವರಿಸಿ ಹೇಳಬೇಕಾದ್ದನ್ನು ಇವು ಧ್ವನಿಸಿ ಹೇಳುತ್ತವೆ; ಇದರಿಂದ ಪದವ್ಯಯ ಅಥವಾ ಪದದ ದುಂದುಗಾರಿಕೆ ತಪ್ಪುತ್ತದೆ. ಈ ನುಡಿಗಟ್ಟುಗಳು 'descruptive' ಆಗಿರುವುದಕ್ಕಿಂತ ಹೆಚ್ಚು 'suggetive' ಆಗಿರುವುದೇ ಇದಕ್ಕೆ ಕಾರಣ. ಇವು ಭಾಷಿಕ ಮಹ್ವವನ್ನು ಹೇಳುವಂತೆಯೇ, ಸಾಂಸ್ಕೃತಿಕ ಮಹತ್ವವನ್ನೂ ಸಾರುತ್ತವೆ. ಇಡೀ ಪ್ರಸಂಗವನ್ನು ಅಥವಾ ಘಟನೆಯನ್ನು, ಇಲ್ಲವೆ ಸಂದರ್ಭವನ್ನು ಪ್ರತಿಮಾತ್ಮಕಗೊಳಿಸುವ 'poetic Expression' ಕೂಡ ಇವಾಗಿರುತ್ತವೆ. ಅನುಭವ ಮತ್ತು ಆಲೋಚನೆಗಳೆರಡೂ ಒಟ್ಟಿಗೆ ಸಂಭವಿಸುವ ಭಾಷಾ ಸೋಜಿಗಕ್ಕೆ ಸಂಬಂಧಿಸಿದವು ನುಡಿಗಟ್ಟುಗಳು; ವ್ಯಂಗ್ಯ ವಿಡಂಬನೆಗಳು ಇವಕ್ಕೆ ಮತ್ತಷ್ಟು ಹರಿತವನ್ನು ಉಂಟುಮಾಡುತ್ತವೆ. ಇವು ತಿಳಿವಳಿಕೆ ಕೊಡಬಹುದು; ಬುದ್ಧಿ ಹೇಳಬಹುದು; ಎಚ್ಚರಿಕೆ ನೀಡಬಹುದು; ಜ್ಞಾನಕ್ಕೆ ಸಂಬಂಧಿಸಿರಬಹುದು; ವ್ಯವಹಾರದ ನಿಪುಣತೆ ನ್ಯೂನತೆಗಳ ಮೇಲೆ ಬೆಳಕು ಚೆಲ್ಲಬಹುದು; ಆಗಿಹೋದ ಯಾವುದೋ ಘಟನೆಗಳಿಗೆ ಪ್ರತಿಕ್ರಿಯೆಯೋ, ನೆನಪಿನ ಗ್ರಹಿಕೆಯೋ ಆಗಿರಬಹುದು; ಮಾನವನ ನಡತೆಗೆ ಅಥವಾ ನಡಾವಳಿಗಳಿಗೆ ಕನ್ನಡಿ ಹಿಡಿಯಬಹುದು; ಪ್ರಕೃತಿಯ ಪರಿಭಾವನೆಯೂ ಆಗಿರಬಹುದು. ಹೀಗೆ ಹಲವು ಆಯಾಮಗಳಲ್ಲಿ ವಿಶ್ಲೇಷಣೆಗೆ ಒಳಗಾಗುವ ಹಲವಾರು ನುಡಿಗಟ್ಟುಗಳು ಈ ಸಂಪುಟದಲ್ಲಿಯೂ ಮುಂದುವರಿದಿವೆ; ಮುಖ್ಯವಾಗಿವೆ, ಬೋಧಪ್ರದವೆನಿಸಿವೆ.

ಮೇಲಿನ ಎಲ್ಲ ಮಾದರಿಗಳು ಕನ್ನಡ ಜಾನಪದ ನಿಘಂಟಿನ ಪ್ರಸ್ತುತ ಎರಡನೆಯ ಸಂಪುಟದಲ್ಲಿಯೂ ದೊರೆಯುತ್ತವೆ. ಜನರ ಭೌತಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಜೀವನದಿಂದಲೇ ಇಂಥವು ರೂಪುಗೊಂಡಿವೆ ಎಂಬುದನ್ನು ಮರೆಯಲಾಗದು. ಮೇಲೆ ಕೊಟ್ಟಿರುವ ಎಲ್ಲ ಮಾದರಿಗಳೂ ನಿರ್ದಿಷ್ಟ ತತ್ತ್ವ, ಸೂತ್ರ ಮತ್ತು ಶಾಸ್ತ್ರಗಳನ್ನು ಒಳಗೊಂಡಿರುತ್ತವೆ. ಬಹುತೇಕ ವಾಚಿಕ ಮಾದರಿಗಳಾಗಿರುವ ಇವು ದಾಖಲಾಗುವ ಮೂಲಕ ಶಿಷ್ಟತೆಯನ್ನೂ ಅಧಿಕೃತತೆಯನ್ನೂ ಪಡೆದುಕೊಳ್ಳುತ್ತವೆ. ಇವೆಲ್ಲವೂ 'ಶಬ್ದ ಸಂಸ್ಕೃತಿ'ಗೆ ಸಂಬಂಧಿಸಿದವು; ಜಾನಪದದ ವಿಸ್ತಾರವೂ

ಅಗಾಧವೂ ಆಗಿರುವ ವ್ಯಾಪ್ತಿಯಲ್ಲಿ ಇವು ರೂಪಿತವಾಗಿರುವುದು ಒಂದು ಭಾಗ ಮಾತ್ರ. ಉಳಿದುದನ್ನು ಜಾನಪದದ ಉಳಿದ ಸಾಮಗ್ರಿ ಕಟ್ಟಿಕೊಡುತ್ತದೆ ಎಂಬುದು ಗೊತ್ತೇ ಇದೆ. ಈ ನಿಘಂಟು ಪದಸಂಸ್ಕೃತಿಯ ಮೂಲಕ ಜಾನಪದ ಜಗತ್ತನ್ನು ಕ್ಷಣಾರ್ಧದಲ್ಲಿ ಕಾಣುವ ಒಂದು ಮಹತ್ವದ ಪ್ರಯತ್ನ. ಇದನ್ನು ಜಾನಪದದ 'ಶಬ್ದಸಾಗರ' ಎಂದು ಕರೆದರೂ ಆದೀತು. ಪದಗಳ ಮೂಲಕ ಜನಪದ ಬದುಕನ್ನು ಕಟ್ಟಿಕೊಡುವ, ಅರ್ಥೈಸುವ, ವ್ಯಾಖ್ಯಾನಿಸುವ, ಆಲೋಚಿಸುವ, ಕಲ್ಪಿಸುವ, ಒಳನೋಟಕ್ಕೆ ಬಾಗಿಲು ತೆರೆಯುವ ಕಾರ್ಯವನ್ನು ಜನಪದ ಸಂಸ್ಕೃತಿ ಕೋಶ ಮಾಡುತ್ತದೆ.

ಕನ್ನಡ ಜಾನಪದ ನಿಘಂಟಿನಲ್ಲಿ ಸ್ಥಳನಾಮಗಳನ್ನು ಪರಿಚಯಿಸಬೇಕೆಂಬ ನಿರ್ಧಾರ ತೆಗೆದುಕೊಂಡಾಗ, ಆಧಾರಗಳ ಮೂಲಕ ಹೋಗಬೇಕೆಂದು ನಮ್ಮ ಆಲೋಚನೆಯಾಗಿತ್ತು. ಇದಕ್ಕಿರುವ ಏಕೈಕ ಗವಾಕ್ಷವೆಂದರೆ ಶಾಸನಗಳು ಮಾತ್ರ. ಆ ಪ್ರಕಾರ ಶಾಸನೋಕ್ತ ಸ್ಥಳನಾಮಗಳ ವಿಶ್ಲೇಷಣೆ, ಟಿಪ್ಪಣಿಗಳನ್ನು ಕಳೆದ ಸಂಪುಟದಿಂದಲೇ ಆರಂಭಿಸಲಾಯಿತು; ಪ್ರಸ್ತುತ ಎರಡನೆಯ ಸಂಪುಟದಲ್ಲಿಯೂ ಇನ್ನಷ್ಟು ವಿಸ್ತೃತಗೊಂಡು ಸೇರ್ಪಡೆಯಾಗಿದೆ. ಆಯಾ ಅಕ್ಷರಗಳಿಂದ ಮೊದಲಾಗುವ ಪದಗಳನ್ನು ಕ್ರಮವಾಗಿ ಸೇರಿಸುತ್ತಾ ಬಂದಿದ್ದೇವೆ. ಈ ಮಿತಿಯಲ್ಲಿ ಊರಿನ ಹೆಸರುಗಳನ್ನು ಪರಿಶೀಲಿಸಿದಾಗ, ಊರಿನ ಹೆಸರುಗಳಿಗೂ ಕೆಲವು ಮಾದರಿಗಳಿರುವುದು ಕಂಡುಬಂದಿದೆ. ಮೊದಲನೆಯದಾಗಿ ಹೇಳುವುದಾದರೆ, ಶಾಸನಗಳನ್ನು ಹಾಕುವುದಕ್ಕೂ ರಾಜರಿಗೂ ಸಂಬಂಧವಿರುವುದರಿಂದ, ಸಹಜವಾಗಿಯೇ ಸ್ಥಳನಾಮಗಳಿಗೂ ರಾಜರಿಗೂ ಸಂಬಂಧ ಬಂದಂತಾಯಿತು. ರಾಜರುಗಳು ತಮ್ಮ ಹೆಸರಿನಲ್ಲಿ, ತಮ್ಮ ರಾಣಿಯರ ಹೆಸರಿನಲ್ಲಿ ಊರುಗಳನ್ನು ನಿರ್ಮಿಸಿರುವುದನ್ನು ಕಾಣುತ್ತೇವೆ; ಅಗ್ರಹಾರಗಳನ್ನು ನಿರ್ಮಿಸಿ ದಾನ ನೀಡಿರುವುದೂ ಇದರೊಡನೆಯೇ ಲಿಖಿತಗೊಂಡಿದೆ. ಕೆಲವೊಮ್ಮೆ ರಾಜ ಪರಿವಾರದವರ ಹೆಸರಿನಲ್ಲಿ, ಮಂತ್ರಿ ದಳಪತಿಯವರ ಹೆಸರಿನಲ್ಲಿ, ಸಾಮಂತರು ಮತ್ತು ಪಾಳೆಯಗಾರರ ಹೆಸರಿನಲ್ಲಿ ಊರುಗಳು ನಿರ್ಮಾಣಗೊಂಡಿರುವುದೂ ಉಂಟು; ಇದಕ್ಕೆ ಮುಖ್ಯವಾಗಿ ರಾಜನ ಅಧಿಕಾರ ಮುದ್ರೆ ಮತ್ತು ಒಪ್ಪಿಗೆ ಕಾರಣವಾಗಿರುತ್ತದೆ ಎಂಬುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ, ಬಹಳ ಸಂದರ್ಭದಲ್ಲಿ ದಾನದ ನೆಪಗಳು ಕೆಲಸ ಮಾಡಿರುತ್ತವೆ. ಕೆಲವೊಮ್ಮೆ ಈಗಾಗಲೇ ಇದ್ದ ಊರಿನ ಹೆಸರುಗಳನ್ನು ರಾಜರು ಬದಲಾಯಿಸಿ ತಮ್ಮ ಅಥವಾ ತಮ್ಮ ರಾಣಿಯರ ಹೆಸರನ್ನು ಪ್ರತಿಯಾಗಿ ತಂದಿರುವುದೂ ಇದೆ. ಇವೆಲ್ಲವೂ ನೇರವಾಗಿ ರಾಜಮಹಾರಾಜರ ಆಡಳಿತಕ್ಕೆ ಸಂಬಂಧಿಸಿದ ಸ್ಥಳನಾಮ ಮಾದರಿಗಳಾಗಿವೆ.

ಪ್ರಾಚೀನ ಕಾಲದಲ್ಲಿ ಕಾಡುಕಡಿದು ಊರುಗಳನ್ನು ನಿರ್ಮಿಸಿರಬಹುದು; ಕಾಡಿನ ಮಧ್ಯದಲ್ಲಿ ಜಲವಸತಿ ಸೌಕರ್ಯವಿರುವ ಜಾಗದಲ್ಲಿ ಹಳ್ಳಿಗಳನ್ನು ಕಟ್ಟಿರಬೇಕು; ಹಾಗೆಯೇ ಕಾಡಿನ ಕಣಿವೆಯ ಕಿಬ್ಬರಿಯಲ್ಲಿ ಜನರು ತಳ ಊರಿರಬಹುದು; ಊರಿನ ಹೆಸರುಗಳ ಒಂದು ಮಾದರಿ ಇದು. ಬೆಟ್ಟಗುಡ್ಡ, ಕಲ್ಲುಬಂಡೆ, ಕೆರೆಹೊಳೆ, ಮರಗಿಡ ಮೊದಲಾದವುಗಳಿಗೆ ಸಂಬಂಧಿಸಿದ ಸ್ಥಳನಾಮಗಳು ಇನ್ನೊಂದು ಬಗೆಯವು; ದೇವಾಲಯ ಅಥವಾ ದೇವರ ಹಿನ್ನೆಲೆಯಲ್ಲಿ ಸೃಷ್ಟಿಯಾದ ಸ್ಥಳನಾಮಗಳು ಬೇರೊಂದು ಮಾದರಿಯವು. ವ್ಯಕ್ತಿಯೊಬ್ಬ ಎಲ್ಲಿಂದಲೋ ಬಂದು ನಿರ್ದಿಷ್ಟ ಜಾಗದಲ್ಲಿ ಕುಟುಂಬದೊಡನೆ ನೆಲೆನಿಂತು, ಆಮೇಲೆ ಕುಟುಂಬ ವಿಸ್ತರಿಸಿದ ಹಿನ್ನೆಲೆಯಲ್ಲಿ ಕಟ್ಟಿಕೊಂಡ ವ್ಯಕ್ತಿನಾಮ ಮಾದರಿಗಳು ಬಹಳವಾಗಿಯೇ ಸಿಕ್ಕುತ್ತವೆ. ಪ್ರಾಣಿಗಳ ಹೆಸರಿನಲ್ಲಿ, ಅದರಲ್ಲಿಯೂ ಆನೆಯ ಸಂಬಂಧದಲ್ಲಿ ಬಂದ ಸ್ಥಳನಾಮಗಳು ಮಗುದೊಂದು ಬಗೆಯವು. ಯುದ್ಧ, ಸೈನ್ಯಗಳಿಗೆ ಸಂಬಂಧಿಸಿ ಊರಿನ ಹೆಸರುಗಳಿಗೇನೂ ಕೊರತೆಯಿಲ್ಲ; ಇವು ಸ್ಥಳೀಯ ಇತಿಹಾಸಕ್ಕೆ ಆಕರ ಸಾಮಗ್ರಿಯನ್ನು ಒದಗಿಸಬಹುದು. ಪುರಾಣ, ಸಹಗಮನ, ಬಲಿ ಮುಂತಾದವುಗಳಿಗೆ ಸಂಬಂಧಿಸಿದ ಹಿನ್ನೆಲೆಯಲ್ಲಿ ಸ್ಥಳನಾಮಗಳಿವೆ; ಅವು ಮತ್ತೊಂದು ಮಾದರಿಯಾಗಿ ಕಂಡಿವೆ; ಸ್ಥಳನಾಮಗಳಲ್ಲಿ ಪುನರಾವರ್ತನೆಗಳೂ ಸಾದೃಶ್ಯ ಸೃಷ್ಟಿಯ ಹೆಸರುಗಳೂ ಬಹಳವಾಗಿ ಕಾಣಿಸಿಕೊಂಡಿವೆ; ಕಾಲಕಾಲಕ್ಕೆ ಹೊಸ ಹೆಸರುಗಳು ಪ್ರವೇಶವಾಗಿವೆ, ಹಳೆಯ ಹೆಸರುಗಳು ಬಿಟ್ಟುಹೋಗಿವೆ. ಆದ್ದರಿಂದ ಊರಿನ ಹೆಸರುಗಳನ್ನು ಅವುಗಳ ಆಶಯಗಳಿಗೆ ಅನುಗುಣವಾಗಿ ವಿಭಜಿಸಿ ರೂಪಿಸಿಕೊಂಡರೆ ಮಾದರಿಗಳು ನಿಲ್ಲುತ್ತವೆ; ಸಂಖ್ಯೆ ಕಡಿಮೆಯಾಗುತ್ತವೆ. ಸ್ಥಳನಾಮಗಳಿಗೆ ವಾಚಿಕವಾಗಿ ಹೇಳುವ ವಿವರಣೆಗಳು, ಕಾರಣಗಳು, ಕಥೆಗಳು ಕೊಡುವ ನಿಷ್ಪತ್ತಿಗಳು ಬಹಳ ಸಂದರ್ಭದಲ್ಲಿ 'false etymology' ಆಗಿರಬಹುದು; ಅವುಗಳನ್ನು ಹಾಗೆಯೇ ತೆಗೆದುಕೊಳ್ಳುವುದು ಕಷ್ಟವಾಗುತ್ತದೆ.

ಸಂಪುಟದಲ್ಲಿ ಗಮನ ಸೆಳೆಯುವ ಪದಗಳ ಇನ್ನೊಂದು ವರ್ಗ ಸಸ್ಯಗಳಿಗೆ ಸಂಬಂಧಿಸಿದ್ದು. ಈ ಬಗೆಯ ಅನೇಕ ಪದಗಳಿದ್ದು, ಇವುಗಳಲ್ಲಿ ಆಹಾರ ಸಸ್ಯಗಳು ಮತ್ತು ಕಳೆಸಸ್ಯಗಳು ಎಂಬುದಾಗಿ ವರ್ಗೀಕೃತವಾಗುವುದಿದೆ; ಜೊತೆಗೆ ಉಪಯೋಗಕ್ಕೆ ಬರುವ/ಬಾರದ ಮರಗಿಡಗಳೂ ಸೇರ್ಪಡೆಯಾಗುತ್ತವೆ. ಇಂತಹ ಕೆಲವು ಹೆಸರುಗಳಿಗೆ ವಿವರಣೆ ಕೊಡುವುದು ಕಷ್ಟವಾಗಿದ್ದರೂ, ಬಳಕೆಯ ಬಹುತೇಕ ಸಸ್ಯಗಳ ಅರ್ಥ ಮತ್ತು ಬಳಕೆಯ ಸಂದರ್ಭಗಳನ್ನು ತಿಳಿಸಲಾಗಿದೆ. ಔಷಧೀಯ ಸಸ್ಯಗಳೂ ಇಲ್ಲಿ ಸೇರಿದ್ದು, ಅವುಗಳ ಉಪಯೋಗಕ್ಕೆ ಸಂಬಂಧಿಸಿದಂತೆ ಇನ್ನೂ ಖಚಿತಪಡಬೇಕಾಗಿದೆ. ಇಂತಹ ಸಸ್ಯಗಳು ಸಾಂಪ್ರದಾಯಿಕ ಅನುಭವ ಜ್ಞಾನವನ್ನು ಮಾತ್ರ ನೀಡಲು ಸಮರ್ಥವಾಗಿವೆ. ಈ ಪದಗಳ 'ಜ್ಞಾನಾನುಭವ'ವನ್ನು 'ಸಸ್ಯ ಜಾನಪದ' ಎಂದೂ ಕರೆಯಬಹುದು. ಸಸ್ಯ ಸೂಚಕ ಪದಗಳಿಗೆ ಆದಷ್ಟು ಮಟ್ಟಿಗೆ ವೈಜ್ಞಾನಿಕ ಪದಗಳನ್ನು(ಪಾರಿಭಾಷಿಕ) ಕೊಡಲಾಗಿದೆ. ಆದರೆ ಕೆಲವು ಪದಗಳಿಗೆ ಸಸ್ಯಶಾಸ್ತ್ರಜ್ಞ `not found' ಎಂದು ಹೇಳಿರುವುದು ಅಚ್ಚರಿ ಹುಟ್ಟಿಸಿದೆ; ಉದಾಹರಣೆಗೆ, ಕಂಕಡಿ, ಕಂಗ, ಕಂಗಳುಕನಕಾಲು, ಕಂಚ್ಗಾಳಗಿಡ, ಕಂಜಿಗಿ, ಕಂದಮೂಲ, ಕಂದಲಿ/ಕಂದಿಲಿ, ಕಂದು/ಕಂದ್, ಕಂಬಾಳಿ ಮೊದಲಾದವು; ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ. ಇದರಿಂದ ಸ್ಥಳೀಯವಾದ ಅನೇಕ ಸಸ್ಯಗಳಿಗೆ ವೈಜ್ಞಾನಿಕ ಪಾರಿಭಾಷಿಕ ಪದಗಳನ್ನು ಕೊಡಲಾಗಿಲ್ಲವೆನ್ನುವುದು ಸ್ಪಷ್ಟವಾಗುತ್ತದೆ. ಅಂದರೆ ಅಂತರರಾಷ್ಟ್ರೀಯ ಸಸ್ಯಶಾಸ್ತ್ರೀಯ ಪಾರಿಭಾಷಿಕ ಪದ ಪಟ್ಟಿಯಲ್ಲಿ ಇವು ಸೇರಿಲ್ಲ ಎಂದಂತಾಗುತ್ತದೆ. ಆದ್ದರಿಂದ ಜಾನಪದ ಪರಂಪರೆಯಲ್ಲಿ ಉಲ್ಲೇಖಿತವಾಗಿರುವ ಇಂತಹ ಪದಗಳನ್ನು ತಜ್ಞರು ಪರಿಗಣನೆಗೆ ತೆಗೆದುಕೊಂಡು, ಸ್ಥಳೀಯ ಸರ್ವೇಕ್ಷಣಾ ಕಾರ್ಯವನ್ನು(survey)ನಡೆಸುವುದರ ಮೂಲಕ ಇವುಗಳಿಗೆ ಸಸ್ಯಶಾಸ್ತ್ರೀಯ ಮೂಲವನ್ನು ಪತ್ತೆಹಚ್ಚಬೇಕಾಗಿದೆ, ಇಲ್ಲವೆ ಸಂವಾದಿ ಪದಗಳನ್ನುಗುರುತಿಸಬೇಕಾಗಿದೆ; ಒಟ್ಟಿನಲ್ಲಿ `not found' ಪದಸಸ್ಯಗಳನ್ನು ಹುಡುಕಿ ಅವುಗಳಿಗೂ ಪಾರಿಭಾಷಿಕ ಪದಗಳನ್ನು ಕೊಡುವುದು ಅನಿವಾರ್ಯವೆನಿಸುತ್ತದೆ.

ಮೇಲಿನ ಜಾಡು ಹಿಡಿದು 'ವಿವರ–ವಿಶ್ಲೇಷಣೆ'ಯ ಆಯ್ದ ಪದ ನಿದರ್ಶನಗಳನ್ನು, ಕೆಲವನ್ನಾದರೂ ಇಲ್ಲಿ ಕೊಡುವುದು ಊಚಿತ. ಇದರಿಂದ ಪದ, ಪದಮಾದರಿ, ಪದಪರಿಕಲ್ಪನೆ, ಪದಸಂಬಂಧ ಮತ್ತು ಪದಸಂಸ್ಕೃತಿಯನ್ನು ತಿಳಿಯಬಹುದಾಗಿದೆ. ಸಹಜವಾಗಿಯೇ ಅವುಗಳ ಭಾಷಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಪದವರ್ತುಲಗಳು ಗ್ರಹಿಕೆಗೆ ಬಂದಂತಾಗುತ್ತವೆ. ಪ್ರತಿಯೊಂದು ಪದಕ್ಕೂ ಒಂದು 'ಚರಿತ್ರೆ' ಇರುತ್ತದೆ, ಅದನ್ನು ಬೇಕಾದರೆ 'ಪದಚರಿತ್ರೆ' ಎಂದು ಕರೆಯಬಹುದು; ಅದರಲ್ಲಿ ಇತಿಹಾಸವಲ್ಲದೆ ಪದದ ಸ್ವರೂಪಾದಿ ಲಕ್ಷಣಗಳೂ ತಿಳಿವಳಿಕೆಗೆ ಬರುತ್ತವೆ. ನಿಘಂಟನ್ನು ಇಂತಹ ಹಲವು ಅರ್ಥಪೂರ್ಣ ವಿಷಯಗಳಿಂದ ರೂಪಿಸಿರುವುದರಿಂದ, ನಿಘಂಟಿನ ಸ್ವರೂಪ ಜಿಜ್ಞಾಸೆಗೂ ಇವು ಹತ್ತಿರವಾಗುತ್ತವೆ. ಇದರಿಂದ ಕನ್ನಡ ಜಾನಪದ ನಿಘಂಟನ್ನು 'ಪದಸಂಸ್ಕೃತಿ ಕೋಶ' ಎಂದು ಕರೆದಿರುವುದನ್ನು ಮತ್ತೊಮ್ಮೆ ಸ್ಪಷ್ಟಪಡಿಸಿದಂತಾಗುತ್ತದೆ. ಸಂಪುಟದ ಪದರಚನಾವಿನ್ಯಾಸವನ್ನೂ ಉದಾಹರಿಸಿದ ಪದ ಮಾದರಿಗಳು ತಿಳಿಸಿಕೊಡುತ್ತವೆ; ಇಲ್ಲಿ ಆಯಾ ಪದಗಳ ಆಯ್ದ ಭಾಗಗಳನ್ನು ಮಾತ್ರ ಒದಗಿಸಲಾಗಿದೆ:

೧. ಕಚ್ಚು :

- "ಅನೇಕ ಆಧುನಿಕ ಪದಗಳು ಪ್ರಾಚೀನ ಕಾಲದಲ್ಲೂ ಬಳಕೆಯಲ್ಲಿದ್ದು, ಮಾರ್ಪಾಡುಗಳೊಡನೆ ಈಗ ಬಳಕೆಯಾಗುತ್ತಾ ಬಂದಿವೆ; ಉದಾಹರಣೆಗೆ 'ಕಚ್ಚು' ಪದವನ್ನೇ ತೆಗೆದುಕೊಳ್ಳಬಹುದು; ಇದು ಹಳಗನ್ನಡದ 'ಕರ್ಚು' ಪದದಿಂದ ಬಂದುದು; ವಿಜಾತೀಯ ಸಂಯುಕ್ತಾಕ್ಷರ ಸಜಾತೀಯ ರೂಪ ಪಡೆದದ್ದಕ್ಕೂ ಇದು ನಿದರ್ಶನ; ಸ್ವಾರಸ್ಯಕರ ವಿಚಾರವೆಂದರೆ, 'ಚ' ಮತ್ತು 'ರ' ಸೇರಿ ಆದ ದ್ವಿತ್ವದಲ್ಲಿ ಅವೆರಡಕ್ಕೂ ಅಂತರ್ನಿಹಿತವಾದ ಸಂಬಂಧವೇನೂ ಇಲ್ಲ, ಆದರೂ ಇಲ್ಲಿ 'ರ'ವನ್ನು ಕಳೆದುಕೊಂಡು, ಅದರ ಜಾಗದಲ್ಲಿ 'ಚ'ಕಾರ ಬಂದಿರುವುದು ವಿಶೇಷ;
- 'ಕಚ್ಚು' ರೂಪದ ಮೂಲ 'ಕಚ್' ಪದದಿಂದ ಬಂದಿರುವ ಸಾಧ್ಯತೆ ಇದೆ; ಒತ್ತಕ್ಷರಕ್ಕೆ ಮೂಲದಲ್ಲಿರುವ 'ರ್'(ಕರ್ಚು) ಕಾರಣವಿರಬಹುದು; 'ಉ'

ಸ್ವರ ಸಾಮಾನ್ಯವಾಗಿ ವ್ಯಂಜನ ಉಚ್ಚಾರಣಕ್ಕೆ 'ಪೂರಣ'ವಾಗಿ ಬಂದುದು; ಮೂಲದಲ್ಲಿ ಇದರ ಅರ್ಥ 'ತಿನ್ನು' ಎಂದು; ಆಮೇಲೆ ಅದರ ಅರ್ಥದ ಆಯಾಮಗಳು ಬಂದಿರಬಹುದು;

- 'ಕಚ್ಚು' ಪದಕ್ಕೆ ಜನಪ್ರಿಯ ಅರ್ಥ ಕಡಿತ, ಗಾಯ ಮಾಡುವುದು, ಸೀಳು/ಚೂರು; ಸುಡು, ಜಗಳ('ಕಚ್ಚಾಡು') ಎಂಬಿತ್ಯಾದಿಗಳಿವೆ; ಒಂದೇ ಹಂತದಲ್ಲಿ ಈ ಎಲ್ಲ ಅರ್ಥಗಳೂ ಬಂದಿರುವಂತೆ ಕಾಣುವುದಿಲ್ಲ; ರೂಪ ಮತ್ತು ಅರ್ಥವ್ಯತ್ಯಾಸಗಳು ಜೊತೆ ಜೊತೆಯಲ್ಲಿ ನಡೆದಿರುವ ಸಾಧ್ಯತೆ ಇರುತ್ತದೆ;
- 'ಕಚ್ಚು' ಪದಕ್ಕೆ 'ತೊಳೆ' ಎಂಬ ಅರ್ಥವೂ ಇದೆ; ಬಟ್ಟೆಕಚ್ಚು, ಅಕ್ಕಿಕಚ್ಚು ಪದಗಳೇ ಕ್ರಮವಾಗಿ ಬಟ್ಟೆತೊಳೆ ಮತ್ತು ಅಕ್ಕಿತೊಳೆ ಎಂಬ ಅರ್ಥಗಳನ್ನು ಪಡೆದಿವೆ; 'ಕಲಗಚ್ಚು' ಪದವೇ ಇದೆ: "ಅಕ್ಕಿ ತೊಳೆದ ನೀರು ಮತ್ತು ಮುಸರೆ ತೊಳೆದ ನೀರು ಶೇಖರಿಸುವುದಕ್ಕೆ ಈ ಪದವಿದೆ".

೨. **ಕಳ್ :**

- "ಅಚ್ಚಗನ್ನಡ ಪದ 'ಕಳ್'; ದ್ರಾವಿಡದ ಎಲ್ಲ ಭಾಷೆಗಳಲ್ಲಿಯೂ ಇದರ ಸಂವಾದಿ ಪದಗಳಿವೆ: ತ: ಕಳ್; ಮ: ಕಳ್; ತೆ: ಕಲ್ಲು/ಕಲ್ಲೆ; ತು: ಕಳು/ಕಲಿ/ಕಳಿ ರೂಪಗಳಿವೆ; ತೆಲುಗಿನಲ್ಲಿ ಮಾತ್ರ 'ಳ' ಕಾರಕ್ಕೆ ಬದಲಾಗಿ 'ಲ' ಕಾರವಿದೆ; ಸಂಸ್ಕೃತದ ಲ>ಳ ಆಗುವುದರ ಪ್ರಭಾವ ಇದರ ಮೇಲೆ ಆಗಿರಬಹುದು.
- 'ಕಳ್' ಪದದ ಪ್ರಮುಖ ಅರ್ಥ ಕಳು/ಕಳವು; ಕದಿಯುವುದು, ಕಳ್ಳತನ; ಕದಿಯುವವ 'ಕಳ್ಳ', ಇದು ಕಳ್>ಕಳ>ಕಳ್ಳ ಆಗಿರಬಹುದು; 'ಕಳ' ಎನ್ನುವುದಕ್ಕೆ ಕಳೆದುಕೊಳ್ಳುವುದು ಎನ್ನುವ ಅರ್ಥವಿರುವುದರಿಂದ ಈ ಪದಗಳ ರೂಪ ಬದಲಾವಣೆಯಲ್ಲಿ ಅರ್ಥ ಬದಲಾವಣೆಯೂ ಕಂಡಿದೆ;
- ಇದಕ್ಕೆ ಹೊಂದಿಕೊಂಡಂತೆಯೇ 'ಕಳ್' ಪದಕ್ಕೆ ಮೋಸ, ಅಪಹೃತ, ಕಳ್ಳಾಟದಂತಹ ಅರ್ಥಗಳು ಬಳಕೆಯಲ್ಲಿವೆ; ಇಲ್ಲೆಲ್ಲ ಮೂಲಾರ್ಥಕ್ಕೆ ಲೋಪ ಬರದಂತೆ 'ಕಳ್' ಪದದ ಅರ್ಥ ವಿಸ್ತರಣೆ ಆಗಿದೆ;
- ಕಳ್>ಕಳ್ಳು ಆಗುವುದು ಕಷ್ಟವಲ್ಲ; ಹೆಂಡ, ತೆಂಗಿನ ಮರದಿಂದ ಇಳಿಸುವಂಥದು; ಮಲೆನಾಡು ಪ್ರದೇಶದಲ್ಲಿ ಈ ಪದದ ಪ್ರಾಚುರ್ಯ ಹೆಚ್ಚು; ಬಯಲು ನಾಡಿನಲ್ಲಿ ವಾಕ್ಪರಂಪರೆಯಲ್ಲಿ ಇಲ್ಲವೆನ್ನುವಷ್ಟು ಇದು ಕಡಿಮೆ; 'ಕಳ್'/ಕಳ್ಳು' ಹೆಂಡದ ಮೂಲರೂಪಕ್ಕೆ ಅನ್ವಯ; ಅಂದರೆ ಬೆಳಗಿನ ಬಿಸಿಲಿನ ಕಿರಣಗಳು ತಾಕುವ ಮೊದಲೆ ತೆಂಗಿನ ಮರದಿಂದ ಇಳಿಸಿದ ಹೆಂಡವಿದು; ಹಾಗೆ ಮಾಡುವುದರಿಂದ 'ಹುಳಿ'ಯಾಗುವುದು ತಪ್ಪುತ್ತದೆ ಮತ್ತು 'ಮತ್ತು' ಬರುವುದೂ ತಪ್ಪುತ್ತದೆ".

೩. **ಕಕ್ಕಾ/ಕಕ್ಕು :**

- "ಕಕ್ಕಾ ಮತ್ತು ಕಕ್ಕು ಪದಗಳು ಮೂಲರೂಪದಲ್ಲಿ ಪುನರಾವರ್ತನೆಯ ಪದಗಳಂತೆ ಕಾಣುತ್ತವೆ; ಈ ಪದಗಳಿಂದಲೇ 'ಕಕ್ಕಾಬಿಕ್ಕ'/ಕಕ್ಕಾಬಿಕ್ಕು' ಪದಗಳು ಬಂದಿರಬಹುದು; ಈ ಎರಡೂ ರೂಪಗಳ ಮೂಲ 'ಕಕ್' ಇರಬಹುದು; ಇಂತಹ ಪದಗಳು ಅರ್ಥದ ಕಾರಣಕ್ಕಿಂತ 'ಪದಲಯ' ಮುಖ್ಯವಾಗಿರುತ್ತದೆ; ಅರ್ಥಮುಖ್ಯವೆನಿಸಿದಾಗ, ಅದಕ್ಕೆ ಒತ್ತಡವನ್ನು ಸೃಷ್ಟಿಸಲು ಈ ಪದಗಳು ರೂಪ ತಳೆದಿರಬಹುದು;
- ಈ ಪದಗಳಿಗೆ 'ನಡುಕ' ಎಂಬ ಅರ್ಥ ಪ್ರಾಪ್ತವಾಗಬಹುದು; 'ಕಕ್ಕಾಬಿಕ್ಕು' ಪದವಂತೂ 'ಕಕ್ಕಾಬಿಕ್ಕಿ' ರೂಪವನ್ನು ಪಡೆದು 'ಗೊಂದಲ', 'ಸಂದಿಗ್ಧತೆ', 'ಆತಂಕ', 'ಗೋಜಲು' ಸನ್ನಿವೇಶವನ್ನು ನಿರ್ಮಾಣ ಮಾಡಿ ಬಿಡುವ ಸಾಧ್ಯತೆ ಇರುತ್ತದೆ;
- 'ಕಕ್ಕಾ' ಪದವನ್ನು ಪ್ರತ್ಯೇಕವಾಗಿ ತೆಗೆದುಕೊಂಡಾಗ 'ಕಲಕು' ಎಂಬ ಅರ್ಥವೂ, 'ಕಕ್ಕು' ಪದವನ್ನು ಬೇರೆಯಾಗಿ ನೋಡಿದಾಗ 'ಕಾರಿಕೊಳ್ಳುವ' ಅಥವಾ 'ವಾಂತಿ ಮಾಡಿಕೊಳ್ಳುವ' ಕ್ರಿಯೆಯನ್ನು ರೂಪಿಸಬಹುದು;
- ಇಂತಹ ಪದಗಳಲ್ಲಿ ಎರಡು ಮುಖಗಳಿರುತ್ತವೆ: ಒಂದು– ಪದದ್ವಯದ ಲಯವನ್ನು ಬೆಳೆಸುವುದು, ಅದಕ್ಕೆ ನಿಗದಿಯಾದ ಅರ್ಥದೊಡನೆ ಸಂಬಂಧ ಕಲ್ಪಿಸುವುದು; ಎರಡು– ಪೂರ್ವ ಲಕ್ಷಣ ಯಾವುದೂ ಇಲ್ಲದೆ ಪದದ, ಅರ್ಥದ ಪ್ರತ್ಯೇಕ ಅಸ್ತಿತ್ವವನ್ನು ಪಡೆಯುವುದು".

೪. **ಕುಡು/ಕೊಡು :**

- "ಕನ್ನಡದ 'ಕುಡು' ಮತ್ತು 'ಕೊಡು' ರೂಪಗಳು ಜನಪದರಲ್ಲಿ ನಿತ್ಯಬಳಕೆಯಲ್ಲಿವೆ; 'ಕುಡು' ಮೂಲರೂಪ, ಪ್ರಾಚೀನ ರೂಪ; 'ಕೊಡು' ಆಮೇಲಿನ, ಬೆಳೆದ ರೂಪ; ಕುಡು>ಕೊಡು, ಅಂದರೆ ಉ>ಒ ಆಗಿದೆ ಎಂದು ಅರ್ಥ, ಈ ಬದಲಾವಣೆ 'ಸ್ವರಪಲ್ಲಟ'ದ– 'vowel mutation'- ನಿಯಮದ ಪ್ರಕಾರ ಆದುದು; ಉಚ್ಚಾರಣೆಯಲ್ಲಿ ಎರಡೂ ರೂಪಗಳು ಬಳಕೆಯಲ್ಲಿವೆ;
- ದ್ರಾವಿಡ ಪದ ಎಂಬುದರಲ್ಲಿ ಅನುಮಾನವಿಲ್ಲ; ತ: ಕೊಟ್ಟು/ಕೊಡು/ ಕೊಡುಂಗ್ಯೆ; ಮಲೆಯಾಳಂ ತಮಿಳನ್ನು ಅನುಸರಿಸುವುದು ಸಾಮಾನ್ಯ: 'ಕೊಟ್ಟುಗ' ಮಾತ್ರ ಬೇರೆ, ಉಳಿದಂತೆ ತಮಿಳು ಪದಗಳೇ ಇವೆ; ತೆ: ಕೊಡವಲಿ, ಕೊಡಲಿ, ಕೊಟ್ಟು– ತೆಲುಗು ಭಾಷೆ ಮಧ್ಯದ್ರಾವಿಡಕ್ಕೂ ಸೇರುವುದರಿಂದ, ಆ ಪ್ರದೇಶದ ಪ್ರಭಾವವೂ ಇರಬಹುದು;
- ಪ್ರಧಾನವಾಗಿ ಕ್ರಿಯಾರೂಪ; ಕುಡುಗೆ/ಕೊಡುಗೆ ರೂಪಗಳು ಬಳುವಳಿ, ಉಡುಗೊರೆ, ಕಾಣಿಕೆ ಅರ್ಥ ಪಡೆದು ನಾಮಪದಗಳಾಗಿ ಕೆಲಸ ಮಾಡಬಹುದು;

- 'ಕುಡು' ಪದ ಏನನ್ನಾದರೂ ಕೊಡುವ ಕ್ರಿಯೆಗೆ ಸಂಬಂಧಿಸಿದ್ದು; ದಾನ ಕೊಡುವುದನ್ನು ಹೇಳುವುದು; 'ನಡೆಸು' ಎಂಬ ಅರ್ಥವೂ ಇದೆ; 'ದನಿಗುಡು' ಅರ್ಥವೂ ಕೂಡ;
- ಹೊಡೆ, ಕುಟ್ಟು ಎಂಬ ಅರ್ಥಗಳಿವೆ; ಬಗ್ಗಿದ, ಕೊಕ್ಕೆ, ಕೊಟ್ಟ ಎಂಬ ಅರ್ಥದಲ್ಲಿ ಬಳಕೆ; 'ಕುಡುಗೋಲು' ಎಂಬ ರೂಪ ಈ ಹಿನ್ನೆಲೆಯಲ್ಲಿ ಬಂದಿರಬಹುದು".

೫. **ಕಾಣಾ/ಕಣಾ :**

- "ಕನ್ನಡದ ಕವಿಗಳು, ಅದರಲ್ಲಿಯೂ ಬಸವಣ್ಣನವರು, ಕುಮಾರವ್ಯಾಸ ಮತ್ತು ಕುವೆಂಪು ಅವರು ತಮ್ಮ ಕಾವ್ಯಗಳಲ್ಲಿ ಧಾರಾಳವಾಗಿ ಬಳಸಿದ್ದಾರೆ; ಹೆಚ್ಚಿನ `rhythm', ಲಯಗಾರಿಕೆ ಕಾರಣ; ಸಾಂದರ್ಭಿಕ ಭಾಷಾ ಸಾಮರ್ಥ್ಯಕ್ಕೆ ಒತ್ತು ಕೊಡುವ ದೃಷ್ಟಿಯಿಂದ ಗ್ರಾಮ್ಯ ಭಾಷೆಯಲ್ಲಿಯೂ ಈ ಪದಗಳ ಬಳಕೆ ಇದೆ: ಹ್ಞೂಕಣಾ, ಅಲ್ಲಕಣಣ್ಣೋ, ಹೋಗಿದ್ದೆಕಣಾ, ಬಂದೆಕಣಾ, ದೂರದ ದಾರಿ ಕಣಾ, ಅದನ್ನ ನೀ ಕಾಣಾ ಇತ್ಯಾದಿ; (ಉಚ್ಚಾರಣೆಯಲ್ಲಿ 'ಕನ/ಕಣ' ರೂಪಗಳೇ 'ಕಣಾ' ಆಗಿರುವ ಸಂದರ್ಭಗಳೂ ಇವೆ);
- 'ಕಾಣಾ' ಮತ್ತು 'ಕಣಾ' ರೂಪಗಳೆರಡೂ ಒಂದೇ ಆದರೂ, ಒತ್ತು (stress) ಮೊದಲನೆಯದರಲ್ಲಿ 'ಕಾ'ದ ಮೇಲೂ, ಎರಡನೆಯದರಲ್ಲಿ 'ಣಾ'ದ ಮೇಲೂ ಇರುವುದು ಸ್ಪಷ್ಟವಿದೆ;
- ಮೊದಲನೆಯದಕ್ಕೆ 'ಕಾಣು' ಅರ್ಥವಾದರೆ, ಎರಡನೆಯದಕ್ಕೆ 'ನೋಡಾ' ಎಂದಾಗಿ ಸಂಬೋಧನಾ ಕ್ರಿಯೆಗೆ ಒತ್ತು ಬೀಳಬಹುದು; 'ಕಾಣಾ'ಕ್ಕಿಂತ 'ಕಣಾ'ದ ಮೇಲೆ ಹೆಚ್ಚು ಒತ್ತು– ಆಶ್ಚರ್ಯ ಮತ್ತು ದೃಢತೆ/ಲಯ ತೀವ್ರತೆ ಕಂಡುಬರುತ್ತದೆ;
- ಮಾತನಾಡುವ ಧಾಟಿಗೆ ಸಂಬಂಧಿಸಿದವುಗಳು ಇವು; ಸಂದರ್ಭಕ್ಕೆ ತೀವ್ರತೆ ತರುವುದು ದೃಷ್ಟಿ; ಯಾರನ್ನಾದರೂ ಕುರಿತು ಮಾತನಾಡುವುದು ಮುಖ್ಯ ಸಂದರ್ಭ; ಇಷ್ಟಾದರೂ ಪದೇಪದೇ ಬಳಕೆಯಾದಂತೆ ತೋರುವುದಿಲ್ಲ;
- ಈ ಎರಡೂ ಪದಗಳು ಭಾಷಿಕವಾದವುಗಳು; ಈ ಭಾಷೆ `Linguistical' ಎನ್ನುವುದಕ್ಕಿಂತ `poetic' ಎಂದು ಹೇಳಬಹುದು; ಭಾಷಿಕವಾಗಿ ಇದೊಂದು 'ಧ್ವನ್ಯನುರಣನೆ'; ಭಾಷೆಯನ್ನು ಕಾವ್ಯಾತ್ಮಕವಾಗಿಸಲು ಬಂದವು ಈ 'ಕಾಣಾ' ಮತ್ತು 'ಕಣಾ' ಪದಗಳು".

೬. **ಕಡಬು :**

- "ಪ್ರಚಲಿತ ಒಂದು ಆಹಾರ; ಆಹಾರ ಜಾನಪದದ ಒಂದು ಬಗೆ; ಅಕ್ಕಿ–ಉದ್ದನ್ನು ನೆನೆಹಾಕಿ ರುಬ್ಬಿ ಮಾಡಿದ್ದು; ಪ್ರಾಚೀನ ಕಾಲದಿಂದಲೂ ಇದರ

ಬಳಕೆ, 'ಕಡುಂಬು' ಪದ ಇದಕ್ಕೆ ಸಾಕ್ಷಿ: ಕಡುಂಬು>ಕಡುಬು/ಕಡಬು; 'ಕಡುಬು' ಪದದಲ್ಲಿ ಅನುಕೂಲ ಉಚ್ಚಾರಕ್ಕಾಗಿ ಪದಮಧ್ಯೆ 'ಉ' ಸೇರಿಕೊಂಡಿದೆ; ಹೀಗೆ 'ಉ'ಕಾರದ ಮಧ್ಯ ಪ್ರವೇಶ ಕನ್ನಡದ ಬಹಳ ಪದಗಳಲ್ಲಿ ಆಗಿದೆ;

- ತೆಲುಗಿನಲ್ಲಿ 'ಕುಡುಮು' ಪದವಿದೆ; 'ಉ' ಕಾರ 'ಡ' ಕಾರಕ್ಕೆ ಮಾತ್ರವಲ್ಲದೆ, 'ಕ' ಕಾರಕ್ಕೂ ಬಂದಿರುವುದು ವಿಶೇಷ; ಇನ್ನು 'ಬ' ಮತ್ತು 'ಮ' ಧ್ವನಿಮಾಗಳ ನಡುವೆ ಬದಲಾವಣೆ ಸಾಮಾನ್ಯ ಪ್ರಕ್ರಿಯೆ;
- ಕಿಟ್ಟೆಲ್ ಇದಕ್ಕೆ ಇಂಗ್ಲಿಷ್ ಅನುವಾದ ಹೇಳುತ್ತಾ "A kind of cake boiled in steam" ಎಂದಿದ್ದಾರೆ; 'ಕಡಬು' ಕಿಟ್ಟೆಲ್ ಹೇಳುವ ಹಾಗೆ `cake' ಅಲ್ಲ, ನಮ್ಮ 'ಕಡಬು'ಗೆ ಇಂಗ್ಲಿಷ್‌ನಲ್ಲಿ ಪದವಿಲ್ಲ; ಪಾಶ್ಚಾತ್ಯರಲ್ಲಿ ಈ ಬಗೆಯ ಆಹಾರವೇ ಇಲ್ಲ;
- 'ಕಡಬಿನ ಕಾಳಗ'ದ ಆಟವೊಂದನ್ನು ಕಿಟ್ಟೆಲ್ ಮತ್ತು ಕೊಳಂಬೆ ಪುಟ್ಟಣಗೌಡರು ತಮ್ಮ ನಿಘಂಟುಗಳಲ್ಲಿ ಉಲ್ಲೇಖಿಸುತ್ತಾರೆ; 'ದೇವಸ್ಥಾನಗಳಲ್ಲಿ ಏಕಾದಶಿಯಂದು ಪೂಜಾರಿಗಳ ನಡುವೆ ನಡೆಯುವ ಕಡುಬಿನ ಎಸೆದಾಟ' (ಕಿಟ್ಟೆಲ್); 'ವಿನೋದದ ಹೊಡೆದಾಟ' (ಪುಟ್ಟಣ್ಣಗೌಡ–ಅ.ನು.ಕೋ)".

೭. **ಕಂಕಣ :**

- "ವಿವಾಹ ಸಂಸ್ಕೃತಿ ಸೂಚಕ ಪದ; ವಿವಾಹ ಪೂರ್ವದಲ್ಲಿ ಗಂಡು–ಹೆಣ್ಣಿಗೆ ಕಟ್ಟಲಾಗುವುದು; ಮದುವೆ ಮುಗಿದ ಮೇಲೆ ಶಾಸ್ತ್ರೋಕ್ತವಾಗಿ ಬಿಚ್ಚಲಾಗುವುದು; 'ಕಂಕಣ ಕಟ್ಟುವುದು' ಎಂದೇ ಇದನ್ನು ಕರೆಯಲಾಗುತ್ತದೆ;
- 'ಕಂಕಣ' ಪದಕ್ಕೆ 'ಕಂಕಳ' ಎಂಬ ರೂಪವೂ ಸಿಗುತ್ತದೆ; ಣ>ಳ ಆಗಿದೆ; ದ್ರಾವಿಡ ಭಾಷೆಗಳಲ್ಲಿ ಈ ಧ್ವನಿಮಾ ವಿನಿಮಯ ಸಾಮಾನ್ಯ; ಆದರೆ ಇವುಗಳಲ್ಲಿ ಯಾವುದು ಮೊದಲು, ಹೇಳುವುದು ಕಷ್ಟ;
- ಕಿಟ್ಟೆಲ್ 'ಕಂಕಣ' ಪದವನ್ನು ವಿವರಿಸುತ್ತಾ, `An ornament of the wrist, a bracelet' ಎಂದು ಹೇಳಿರುವುದು ಸರಿಯಲ್ಲ; ಮುಂಗೈಗೆ ಕಟ್ಟಲಾಗುವ ಒಡವೆಯೋನೂ ಅಲ್ಲ; ಈ ಸಂಪ್ರದಾಯವೇ ಕಿಟ್ಟೆಲ್‌ಗೆ ಗೊತ್ತಿರುವಂತೆ ಕಾಣುವುದಿಲ್ಲ;
- ವಧುವರರ ವೈವಾಹಿಕ ಬದ್ಧತೆಗೆ 'ಕಂಕಣ' ಸೂಚಿ; ಒಂದು ರೀತಿ ಪ್ರಮಾಣ; ಆಚರಣಾತ್ಮಕ ಜಾನಪದದ ಭಾಗ; 'ಕಂಕಣ' ಸಂಪ್ರದಾಯ: ಒಂದು ತಟ್ಟೆ; ಅದರಲ್ಲಿ ಅಕ್ಷತೆ; ಅದರ ಮೇಲೊಂದು ಬೆಲ್ಲದ ಅಚ್ಚು; ಅದರ ಮೇಲೆ ವೀಳ್ಯದೆಲೆ; ಅದರಲ್ಲಿ ತುಪ್ಪ, ಅಕ್ಷತೆ; ಜೊತೆಗೆ ಒಂದು 'ಕಂಟ್ರಣ'; 'ಕಂಟ್ರಣ' ತೀರ ಸಣ್ಣದಾದ ಒಂದು ಚಿನ್ನದ ನಾಣ್ಯ; ಅದನ್ನು ಬೆಲ್ಲದ ಮೇಲಿನ ವೀಳ್ಯದೆಲೆ ಮೇಲೆ ಅರಿಶಿನ ದಾರದ ಜೊತೆಗೆ ಇರಿಸಲಾಗಿರುತ್ತದೆ; ಬಲದ ಅಂಗೈಯನ್ನು ಅದರ ಮೇಲೆ ಊರಿ ಹಣೆಗೆ

ಒತ್ತಿಕೊಳ್ಳುವುದರ ಮೂಲಕ ವಧುವರರು ಇದನ್ನು ಆಚರಣೆಗೆ ತರುವರು; ಹಾಗೆ ಹಣೆಗೆ ಒತಿಕೊಂಡ ಮೇಲೆ ವಧುವರರ ಬಲಗೈಗೆ ಅರಿಶಿನ ದಾರ(ಭತ್ತ+ಅಕ್ಷತೆ) ಕಟ್ಟಲಾಗುವುದು; ವಿವಾಹಕ್ಕೆ ದೀಕ್ಷಾಬದ್ಧರಾದೆವು ಎಂಬುದು ಇದರ ಸಂದೇಶ;

- 'ಕಂಟ್ರಣ' ಒಂದು ಸಂಯುಕ್ತ ಪದ; 'ಕಂಠೀರವ ಹಣ'ದಿಂದ ಇದು ಬಂದಿರಬಹುದು; ಮೈಸೂರು ಒಡೆಯರಲ್ಲಿ ಪ್ರಸಿದ್ಧರಾದ ಕಂಠೀರವ ನರಸರಾಜ ಒಡೆಯರು ಅಚ್ಚು ಹಾಕಿಸಿದ ಒಂದು ಸಣ್ಣ ಚಿನ್ನದ ನಾಣ್ಯವಿದು; ಆದರೆ ವಿವಾಹ ಸಂಪ್ರದಾಯ 'ಕಂಕಣ'ಕ್ಕೆ ಇದು ಬಂದುದಾದರೂ ಹೇಗೆ? ತಿಳಿಯದು;
- ವಿವಾಹಕ್ಕೆ ಹೊರತಾಗಿಯೂ ಈ ಪದದ ಬಳಕೆಯಿದೆ; ದೀಕ್ಷಾಬದ್ಧತೆ ಪ್ರಮಾಣದ ಸಂಕೇತವಾಗಿ: ಕುವೆಂಪು ಅವರ 'ಕಂಕಣ ಕಟ್ಟಿಂದೆ, ಕನ್ನಡ ನಾಡೊಂದೆ, ಇನ್ನೆಂದೂ ತಾನೊಂದೆ' ಎಂಬ ಗೀತೆಯ ಸಾಲುಗಳು ನೆನಪಾಗುತ್ತವೆ".

೮. ಕೂಸು :

- " 'ಕೂಸು' ಪದ ಮುಖ್ಯವಾಗಿ ಮೂರು ರೂಪದಲ್ಲಿ ವ್ಯವಹರಿಸುತ್ತದೆ: ಒಂದು– ಮಗು(ಹೆಣ್ಣಾಗಲಿ ಗಂಡಾಗಲಿ); ಎರಡು– ಸ್ತ್ರೀ; ಮೂರು: ಸ್ತ್ರೀಪುರುಷ ಇಬ್ಬರಿಗೂ; ಸ್ತ್ರೀಸೂಚಕ ಪದಕ್ಕೆ ಅಣ್ಣ ಅಥವಾ ಅಪ್ಪ ಸೇರಿಸಿ ಕೂಸಣ್ಣ, ಕೂಸಪ್ಪ ರೂಪಗಳು ಸಿದ್ಧಗೊಂಡಿರಬಹುದು;
- ತುಳು ನಿಘಂಟಿನಲ್ಲಿ 'ಕೂಸು' ಪದಕ್ಕೆ ಸ್ತ್ರೀ ಎಂದೂ, 'ಕೂಸೆ' ಪದಕ್ಕೆ ಪುರುಷ ಎಂದೂ ಅರ್ಥ ಕೊಡಲಾಗಿದೆ; 'ಕೂಸು' ರೂಪವೇ 'ಕೂಸೆ' ಆಗಿರುವುದು; ಇಷ್ಟಾದರೂ 'ಕೂಸೆ' ಪುರುಷ ಸೂಚಕವಾದುದು ಹೇಗೆ? ಆಶ್ಚರ್ಯ;
- 'ಕೂಸು' ಪದಕ್ಕೆ 'ಸ್ತ್ರೀ' ಎಂಬ ಅರ್ಥವಿದ್ದರೂ, 'ಹೆಂಗೂಸು' ಪದ ಬಳಕೆಯಾಗಿದೆ; 'ಕೂಸು' ಪದ ಹೆಣ್ಣುಮಗು/ಗಂಡುಮಗು ಎರಡಕ್ಕೂ ಬಳಕೆಯಾಗಿದ್ದರೂ, ಅದು ಗಂಡುಮಗುವಿಗೆ ಎಂದು ತಪ್ಪಾಗಿ ತಿಳಿದು 'ಹೆಂಗೂಸು' ರೂಪ ಬಂದಿರಬಹುದು(ತಪ್ಪಾಗಿ); 'ಮಗಳು' ಎಂಬ ರೂಪವಿದ್ದರೂ; 'ಹೆಣ್ಣುಮಗಳು' ಎಂದು ಹೇಳುತ್ತೇವೆಯಲ್ಲ ಹಾಗೆ;
- 'ಕೊಡಗೂಸು', 'ಕುಡಗೂಸು' ರೂಪಗಳಿವೆ; ಕುಡ>ಕೊಡ(ಉ>ಒ), 'ಕುಡ' ಪ್ರಾಚೀನ ರೂಪ; 'ಸ್ವರ ವ್ಯತ್ಯಯ' ಪ್ರಕಾರ ಈ ಬದಲಾವಣೆ; 'ಕೊಟ್ಟ ಕೂಸು' ಎಂಬ ರೂಪವನ್ನು ಕಿಟ್ಟೆಲ್ ಹೇಳುತ್ತಾರೆ, ಮದುವೆಯಾದ ಮೇಲಿನ ಸಂದರ್ಭ ಇಟ್ಟುಕೊಂಡು ಹೇಳಿರಬಹುದು; ಆದರೆ ಈ ರೂಪ ಸರಿಯಿರುವಂತೆ ಕಾಣುವುದಿಲ್ಲ; ಏಕೆಂದರೆ 'ಕೊಡ' ಎಂದರೆ 'ಹಿರಿಯ' ಎಂದು ಅರ್ಥ; ಆ ಪ್ರಕಾರ 'ಕೊಡಗೂಸು' ಎಂದರೆ 'ಹಿರಿಯ ಮಗಳು'; ಹಾಗೆಯೇ 'ಕೊಡಮಗ'(ಹಿರಿಯಮಗ) ರೂಪವೂ ಇದೆ; 'ಕೊಡಮಗನ ನುಡಿ ಕೇಳು' ಎಂಬ ಗಾದೆಯೇ ಇದಕ್ಕೆ ಸಾಕ್ಷಿ".

೯. ಕಾಗೆ :

- " 'ಕಾಕಾ' ಎಂದು ಕೂಗುವ, ಗಿಡಮರಗಳಲ್ಲಿ ಗೂಡು ಕಟ್ಟುವ, ಎತ್ತರಕ್ಕೆ ಹಾರಲು ಹಗುರ ಶರೀರ ಹೊಂದಿರುವ ಒಂದು ಪರಿಚಿತ ಪಕ್ಷಿ; ಪ್ರಾಣಿ ಜಾನಪದಕ್ಕೆ ಸೇರಿದ್ದು;
- ದ್ರಾವಿಡದ ಎಲ್ಲ ಭಾಷೆಗಳಲ್ಲಿ ಈ ಪದ ಒಂದೇ ಆಗಿರುವುದು ಗಮನಾರ್ಹ, ಅದರಲ್ಲೂ ಅದು ಅಘೋಷ(surd)– 'ಕ್' ಆಗಿರುವುದು ಇನ್ನೂ ಮುಖ್ಯ; ಕನ್ನಡದಲ್ಲಿ ಮಾತ್ರ ಘೋಷ ಧ್ವನಿ(ಗೆ) ಇರುವಂಥದು;
- 'ಕಾಕಾಸುರ' ಎಂಬ ಒಬ್ಬ ರಾಕ್ಷಸನ ಉಲ್ಲೇಖವಿದೆ; 'ವಾಯಸ' ಸಂಸ್ಕೃತ ಪದವಾಗಿರುವುದರಿಂದ, 'ಕಾಕಾ' ದ್ರಾವಿಡ ಪದ ಎಂಬುದರಲ್ಲಿ ಅನುಮಾನವಿಲ್ಲ, 'ಅಸುರ' ಎಂಬುದೂ ಸಂಸ್ಕೃತವೇ; 'ಕಾಕಾಸುರ' ಹೀಗಾಗಿ ದ್ರಾವಿಡಾದಾರ್ಯ ಪದ ಎಂಬುದರಲ್ಲಿ ಸಂಶಯವಿಲ್ಲ;
- 'ಕಾಕಾ' ಎಂದು ಕೂಗುತ್ತದೆ ಎಂದು ನಂಬುವುದರಿಂದ, ಈ ಪದದಿಂದಲೇ 'ಕಾಗೆ' ಬಂದಿರಬಹುದು(ಕ>ಗ); ಕಾಕಾ>ಕಾಗೆ; ಅನುಕರಣ ರೂಪ('ಕಾಕಾ') ಕ್ರಮೇಣ ಅಂಕಿತ/ಅನ್ವರ್ಥನಾಮ ಆಗಿ ಪರಿವರ್ತನೆಯಾಗಿರಬಹುದು;
- 'ಕಾಗೆಯೊಂದಗಳ ಕಂಡರೆ'(ಬ.ವ.ಸಂ.೨೫೯) ಕಾಗೆ ತನ್ನ ಬಳಗವನ್ನು ಕರೆಯುವುದು ರೂಢಿ; ಇದು ಒಗ್ಗಟ್ಟು, ಬಂಧುತ್ವದ ಸಂಕೇತ; ಹಾಗೆ ಒಂಟಿಯಾಗಿ ಬರುವುದಕ್ಕಿಂತ ಗುಂಪಿನಲ್ಲಿ ಬರುವುದೇ ಹೆಚ್ಚು;
- 'ಕಾಗೆ' ಮತ್ತು 'ಕೋಗಿಲೆ'ಗಳನ್ನು ಹೋಲಿಸಿ ಮಾತಾಡುವುದೂ ಒಂದು ರೂಢಿ; ಕೆಟ್ಟದ್ದು ಮತ್ತು ಒಳಿತನ್ನು ವಿಭಜಿಸಿ ತೋರಿಸುವ ಜನಾಭಿಪ್ರಾಯವಿದು; ದ್ವಂದ್ವವನ್ನು ಕಟ್ಟಿಕೊಡುವ ವಿಚಾರ; ಕಾಗೆ ಮತ್ತು ಕೋಗಿಲೆಗಳೆರಡೂ ಕಪ್ಪು ಬಣ್ಣದವೇ, ಆದರೆ ಧ್ವನಿಯಲ್ಲಿ ಕೋಗಿಲೆಗೆ ಪ್ರಾಶಸ್ತ್ಯ; ಇಷ್ಟಾದರೂ ಜನಪದರಿಗೆ ಸುಪರಿಚಿತವಾಗಿರುವುದು ಕಾಗೆಯೇ ಹೊರತು, ಕೋಗಿಲೆಯಲ್ಲ;
- ಒಂದು ಕಾಲಕ್ಕೆ ಹಳ್ಳಿಗಳಲ್ಲಿ ಮನೆಯ ಹತ್ತಿರ ಕಾಳುಕಡ್ಡಿ ಹರಡಿದರೆ ಕಾಗೆಗಳು ಹೇರಳವಾಗಿ ಬರುತ್ತಿದ್ದುವು; ಈಗ ಆ ಸಂಖ್ಯೆ ಕಡಿಮೆಯಾಗಿದೆ;
- ಕಾಗೆ ಕಂಡರೆ ಅಪಶಕುನ ಎಂದು ಭಾವಿಸುವ ಜನರೇ, ಶ್ರಾದ್ಧಾ ಸಂದರ್ಭದಲ್ಲಿ ಎಡೆ ಮಾಡುವ ತಿಂಡಿ ಪದಾರ್ಥಗಳನ್ನು ಕಾಗೆ ಮೊದಲು ಮುಟ್ಟಬೇಕೆಂಬ ನಂಬಿಕೆ(ಪವಿತ್ರ ಎಂದು) ಇಟ್ಟುಕೊಂಡಿರುವುದು ಆಶ್ಚರ್ಯ; ಆದರೆ ಯಾಕಾಗಿ ಈ ನಂಬಿಕೆ/ಆಚರಣೆ ಗೊತ್ತಾಗುವುದಿಲ್ಲ; ಕೇವಲ ಪ್ರಕೃತಿಭಾವ ಸಾಕಾಗುವುದಿಲ್ಲ; ಜನಪದರ ಜೀವನಕ್ಕೆ ಕಾಗೆ ಹತ್ತಿರವಾದುದು ಎಂಬುದು ನಿಜ;
- ಯಾವುದರ ಬಗ್ಗೆ ಅಪಶಕುನ, ತಿರಸ್ಕಾರ ಯೋಗ್ಯ, ಕೀಳಾದುದು ಎಂದು ಭಾವನೆಯನ್ನು ಇಟ್ಟುಕೊಳ್ಳಲಾಗಿದೆಯೊ, ಅಂತಹ ಕಾಗೆಯ ಬಗೆಗೆ ಶ್ರೇಷ್ಠವಾದುದು, ಮೇಲಾದುದು ಎಂಬ ಭಾವನೆಯನ್ನು

ಇರಿಸಿಕೊಂಡಿರುವುದು ಸಮಾಜಕ್ಕೆ ಒಂದು ಮುಖ್ಯ ಸಂದೇಶವನ್ನು– 'ಯಾವುದೂ ಅಮುಖ್ಯವಲ್ಲ'– ನೀಡುತ್ತದೆ".

೧೦. ಕನ್ನಡಿ :

- "ಮುಖ ನೋಡಿಕೊಳ್ಳಲು ಬಳಸುತ್ತಿದ್ದ, ಕ್ರಮೇಣ ಇಡೀ ದೇಹವನ್ನು ಕಾಣಿಸುತ್ತಿದ್ದ, ನಮ್ಮನ್ನು ನಾವು ನೋಡಿಕೊಳ್ಳುವಂತೆ ಮಾಡುತ್ತಿದ್ದ ಅಪರೂಪದ ಸಾಧನ;
- 'ಕನ್ನಡಿ' ಪದಕ್ಕೆ ತಮಿಳು, ಮಲೆಯಾಳಂಗಳಲ್ಲಿ 'ಕಣ್ಣಾಡಿ' ಪದವಿದೆ; ಕೊಡವ ಭಾಷೆಯಲ್ಲಿ 'ಕನ್ನಡಿ' ಪದವೇ ಇದೆ; ಭಾಷಾ ಸೂಚಕವಾಗಿಯೂ 'ಕನ್ನಡಿ' ಪದದ ಬಳಕೆ; ಅಂದರೆ 'ಕನ್ನಡ' ಪದವನ್ನು 'ಕನ್ನಡಿ' ಎಂದು ಕರೆಯಲಾಗುತ್ತಿತ್ತು;
- ಜಾನಪದದ ಹಲವಾರು ಪ್ರಕಾರಗಳಲ್ಲಿ 'ಕನ್ನಡಿ' ಪದದ ಬಳಕೆಯಿದೆ; ಗಾದೆ ಮತ್ತು ಅತಿಮಾನುಷ ಕಥೆಗಳಲ್ಲಿ ಇದರ ಪಾತ್ರ ಹೆಚ್ಚು; ಕಥೆಗಳಲ್ಲಿ 'ಭೂತಗನ್ನಡಿ' ಬಳಕೆಯಿದೆ;
- 'ಕನ್ನಡಿ'ಯ ಬಹುದೊಡ್ಡ ಬಗೆಗಳು: ರಾಹುಗನ್ನಡಿ, ಕನ್ನವಡ ಮತ್ತು ಭೂತಗನ್ನಡಿ; 'ಕನ್ನವಡ' ಗೋಡೆಯಲ್ಲಿ ಬಳಸುವ ಕನ್ನಡಿ; ಇದನ್ನು 'ಕನ್ನಡಿ ಗೋಡೆ'(ಕಿಟ್ಟೆಲ್) ಎಂದು ಕರೆಯುವುದಕ್ಕಿಂತ 'ಗೋಡೆಗನ್ನಡಿ' ಎಂದು ಕರೆಯುವುದು ಸೂಕ್ತ; 'ರಾಹುಗನ್ನಡಿ' ದೈತ್ಯ ಅಥವಾ ಭಾರಿಕನ್ನಡಿ?; 'ಭೂತಗನ್ನಡಿ' ಅತಿಮಾನುಷ ಶಕ್ತಿಗಳು ತಮ್ಮ ಶತ್ರುಗಳ ಚಲನವಲನಗಳನ್ನು ಕಂಡು ಹಿಡಿಯಲು ಕಥೆಗಳಲ್ಲಿ ಬಳಕೆಯಾಗುತ್ತಿದ್ದ `Magic Mirror';'ರನ್ನಗನ್ನಡಿ' ಪದ ಸಾಂಕೇತಿಕ ಬಳಕೆಯದು;
- ಕನ್ನಡಿಯಲ್ಲಿ ಬಳಸುವ ಗಾಜುಗಳನ್ನೇ ಸಣ್ಣಸಣ್ಣ ಚಂದ್ರಾಕೃತಿಯಲ್ಲಿ ಲಂಬಾಣಿಗರು ತಮ್ಮ ಒಡವೆ/ವಸ್ತ್ರಗಳಲ್ಲಿ ಬಳಸುತ್ತಿದ್ದರು;
- ಯಕ್ಷಗಾನ ಬಯಲಾಟದ ಕಿರೀಟ ಮತ್ತು ಬಾಹು ಭೂಷಣಗಳಿಗೆ ಕನ್ನಡಿಯ ಬಳಕೆ;
- 'ಕನ್ನಡಿ' ಪದದ ಜೊತೆಗೆ ನಂಬಿಕೆ ಸಂಪ್ರದಾಯಗಳೂ ಕಟ್ಟುಬಿದ್ದಿವೆ; ಮನೆಯಲ್ಲಿ 'ಕನ್ನಡಿ' ಒಡೆಯಬಾರದೆಂಬುದು ನಂಬಿಕೆ; ಅವಿಭಕ್ತ ಕುಟುಂಬಗಳು ಹೆಚ್ಚಿಗೆ ಇದ್ದ ಕಾಲದಲ್ಲಿ ಅವು ಒಡೆಯಬಾರದೆಂಬುದು ಈ ನಂಬಿಕೆಗೆ ಕಾರಣ; ಒಡೆದ ಕುಟುಂಬದ ಸಂಕೇತವಾಗಿ 'ಒಡೆದಕನ್ನಡಿ' ಪದ ಇದ್ದೇಇದೆ;
- ವಿವಾಹ ಸಂದರ್ಭದ ಬಹುತೇಕ ಆಚರಣೆಗಳಲ್ಲಿ 'ಕನ್ನಡಿ'ಯ ಬಳಕೆಯಿದೆ; ಮದುವೆಯ ಸಂದರ್ಭದಲ್ಲಿ 'ಕನ್ನಡಿಕಳಸ ಸಹಿತವಾಗಿ' ಎಂದು ಹಾಡುವುದು ಸಾಮಾನ್ಯ;
- ಹಬ್ಬಹರಿದಿನಗಳಲ್ಲಿಯೂ 'ಕನ್ನಡಿ'ಯ ಬಳಕೆ: ಹಿರಿಯರಿಗೆ 'ಎಡೆ ಇಡುವ' ಹಬ್ಬಗಳಲ್ಲಿ ಇತರ ಸಾಮಗ್ರಿಗಳ ಜೊತೆಗೆ ಕನ್ನಡಿ, ಕಳಸಗಳೂ

ಇರುತ್ತವೆ; ಒಂದು ರೀತಿಯಲ್ಲಿ 'ಕಳಸ ಎಲ್ಲಿರುತ್ತದೆಯೊ ಕನ್ನಡಿಯೂ ಅಲ್ಲಿರುತ್ತದೆ; ಕನ್ನಡಿಗೂ ಇಲ್ಲಿ 'ದೇವಮಾನ್ಯತೆ';

- 'ಕನ್ನಡಿ' ನಾಗರಿಕತೆಯ ಒಂದು ಅನ್ವೇಷಣೆ; ನಾಗರಿಕತೆ ಇದರಿಂದ ಒಂದು ಹಂತ ಮುಂದಕ್ಕೆ ಬಂದಿತೆನ್ನಬೇಕು; ಕೈಗನ್ನಡಿಯಿಂದ ಹಿಡಿದು ನಿಲುಗನ್ನಡಿಯವರೆಗೆ ಕನ್ನಡಿಯ ವರ್ಣರಂಜಿತ ಇತಿಹಾಸ".

೧೧. ಕಣ್ಣು :

- "ಶರೀರ ಜಾನಪದದಲ್ಲಿ ಕಣ್ಣಿಗೆ ವಿಶೇಷ ಸ್ಥಾನ; ನೋಡುವುದರ ಮೂಲಕ ಜಗತ್ತಿನ ಸಂಪರ್ಕಕ್ಕೆ ತರುವ ಏಕೈಕ ಅಂಗ; ವ್ಯಕ್ತಿಯ ಅಸ್ತಿತ್ವವನ್ನೂ ಉಳಿದವರ ಮತ್ತು ಉಳಿದುದರ ಅಸ್ತಿತ್ವವನ್ನೂ ಗುರುತಿಸಲು ಇದರಿಂದ ಮಾತ್ರ ಸಾಧ್ಯ; ಬೆಳಕು; ಕಣ್ಣು ಕಾಣದಿದ್ದರೆ ಕತ್ತಲೆಯಷ್ಟೆ ಅನುಭವ;
- ಕಣ್ಣಿನ ರಚನೆ ಕೂಡ ಮುಖ್ಯವೇ: ಹುಬ್ಬು, ಅದರ ಕೆಳಗೆ ರೆಪ್ಪೆ, ರೆಪ್ಪೆಯೊಳಗೆ ಭದ್ರಗೊಂಡುದು ಕಣ್ಣು; ಮುಖತಾವರೆಗೆ ಸೌಂದರ್ಯ ಸೂರ್ಯನನ್ನು ಒದಗಿಸಿದ್ದು ಕಣ್ಣುಗಳೇ; ಹೀಗಾಗಿ ಸೌಂದರ್ಯ ಮತ್ತು ಕಾಂತಿಗೆ ಕಾರಣವಾದದ್ದು ಕಣ್ಣು;
- ಕಣ್ಣನ್ನು ಕೇಂದ್ರವಾಗಿರಿಸಿಕೊಂಡು ರೂಪಿಸಿಕೊಳ್ಳಲಾದ ನಂಬಿಕೆಗಳು, ಆಚರಣೆಗಳು, ವರ್ತನಾ ಮಾದರಿಗಳು ಮುಖ್ಯ; ಕಣ್ಣಿನ ಈ ಬಗೆಯ ಚಟುವಟಿಕೆಗಳು ಕಣ್ಣಿನ ಉಪಪದಗಳ ಮೂಲಕ ಕಾಣಿಸಿಕೊಂಡಿರುವುದು ಸ್ಪಷ್ಟ; ಕಣ್ಣಿನ ಒಟ್ಟಾರೆ ಪರಿಧಿಯನ್ನು ತಿಳಿಯಲು ಇವು ಆವಶ್ಯಕ;
- 'ಕಣ್ಣು' ದ್ರಾವಿಡ ಪದ ; ಆ ಕಾರಣ ಅದು ಕನ್ನಡದ ಪದ; ದ್ರಾವಿಡ ಭಾಷೆಯ ಸಂವಾದಿ ಪದಗಳು: ತ+ಮ: ಕಣ್; ತೆ: ಕನು/ಕನ್ನು; ಕೊಡ: ಕಣ್ಣಿ; ತು: ಕಣ್ಣ್/ಕನ್; ಒಂದೇ ರೀತಿಯ ಪದರೂಪಗಳು ಸಿಕ್ಕುವುದರಿಂದ, ಅನ್ಯಪದ ಬಳಕೆ ಇಲ್ಲಿ ಇಲ್ಲದ್ದರಿಂದ, ಇದನ್ನು ದ್ರಾವಿಡ ಪದವೆಂದು ಪರಿಗಣಿಸಬಹುದು;
- ಸಂಸ್ಕೃತದಲ್ಲಿ 'ಕಣ್ಣಿಗೆ' ಸಂಬಂಧಿಸಿದ ಅನೇಕ ರೂಪಗಳು ಚಾಲ್ತಿಯಲ್ಲಿವೆ; ಸಂಸ್ಕೃತ ಆಡುಭಾಷೆ ಅಲ್ಲದ್ದರಿಂದ, ಅದರ ಎಲ್ಲ ರೂಪಗಳೂ ಕಾವ್ಯ ಮತ್ತು ಶಾಸ್ತ್ರಗಳಲ್ಲಿ ಉಲ್ಲೇಖಿತವಾದವುಗಳೆಂದೇ ಅಭಿಪ್ರಾಯಪಡಬಹುದು; ಈ ರೂಪಗಳಿಂದ 'ಕಣ್ಣು' ಪದಕ್ಕೆ ಇರುವ ಆದ್ಯತೆ ಕಡಿಮೆಯಾಗಲಿಲ್ಲ;
- ಜನ ಸಾಮಾನ್ಯರಲ್ಲಿ 'ಕಣ್ಣು' ಪದವನ್ನು ಬಿಟ್ಟು ಬೇರಾವ ಸಂಸ್ಕೃತ ಪದವೂ ಚಲಾವಣೆಗೆ ಬಂದಂತೆ ಕಾಣುವುದಿಲ್ಲ;
- ಶರೀರ ಜಾನಪದದ ಅಂಗವಾದ ಕಣ್ಣಿನ ಸಾಂಸ್ಕೃತಿಕ ಕಥೆ ಸಾಕಷ್ಟು ದೀರ್ಘವಾಗಿಯೇ ಇದೆ; ಅದರ ಸಾಂದರ್ಭಿಕ ಪದ ಬೆಳವಣಿಗೆಗಳಾಗಿ ಕಣ್ಣಿನ ಉಪಪದಗಳು, ನಿಷ್ಪನ್ನ ಪದಗಳು ಕಾಣಿಸಿಕೊಂಡಿವೆ; ಅವೆಲ್ಲವನ್ನೂ ಒಟ್ಟುಗೂಡಿಸಿ ನೋಡಿದರೆ ಕಣ್ಣಿನ ಪದಸಂಸ್ಕೃತಿಯ ಒಟ್ಟು ಪರಿಕಲ್ಪನೆ ಸಾಧ್ಯವಾಗುತ್ತದೆ;

- ಇದೇ ರೀತಿಯಲ್ಲಿ ಕಯ್, ಕಾಲ್, ಕಿವಿ ಪದಗಳಿಗೂ ಉಪಪದಗಳೂ, ಅವುಗಳಿಗೆ ಸಂಬಂಧಿಸಿದ ಸಾಂಸ್ಕೃತಿಕ ಚಿತ್ರಗಳೂ ಲಭ್ಯವಾಗುತ್ತವೆ".

೧೨. ಕರೆ :

- "ವ್ಯಕ್ತಿಯನ್ನು ದೂರದಿಂದಲೋ ಹತ್ತಿರದಿಂದಲೊ ಧ್ವನಿಮಾಡಿ/ಕೈಬೀಸಿ ಬರಹೇಳುವುದು; ಹೇಳಿ ಕಳುಹಿಸಿ ಅಥವಾ ಕರೆಕೊಟ್ಟು ಕರೆಸಿಕೊಳ್ಳುವುದು;
- 'ಕರೆ' ಪದಕ್ಕೆ ತೀರ ಹತ್ತಿರದ ಪದ 'ಕೂಗು'; ಕೆಲವೊಮ್ಮೆ 'ಕೂಗಿ ಕರೆಯುವುದು' ಎಂದೂ ಇದೆ; 'ಕರೆ' ಪದಕ್ಕಿಂತ 'ಕೂಗು' ಜನಪದರಿಗೆ ಸಮೀಪವಾದುದು/ಜನಪ್ರಿಯವಾದುದು; ಆದರೆ 'ಕರೆ'ಗಿರುವ 'ಕಪ್ಪು' ಎಂಬ ಅರ್ಥ 'ಕೂಗು' ಪದಕ್ಕೆ ಇರುವುದಿಲ್ಲ;
- 'ಕರೆ' ಪದಕ್ಕೆ 'ಕರಿ' ಎಂಬ ಹತ್ತಿರದ ಪದವಿದೆ; ಬಹಳಷ್ಟು ಸಂದರ್ಭಗಳಲ್ಲಿ ಎರಡೂ ಒಂದೇ ಅರ್ಥದಲ್ಲಿ ವ್ಯವಹರಿಸುತ್ತವೆ; ಇ>ಎ ಆಗುವ ಸ್ವರವ್ಯತ್ಯಯ ಗುಣ ದ್ರಾವಿಡ ಭಾಷೆಗಳಲ್ಲಿ ಇರುವುದರಿಂದ, 'ಕರಿ' ಮೂಲವಿರಬೇಕೆಂದು ಹೇಳಬೇಕಾಗುತ್ತದೆ; 'ಅವನನ್ನು ಕರೆ' 'ಗೂ' ಅವನನ್ನು ಕರಿ''ಗೂ' ವ್ಯತ್ಯಾಸವೇನೂ ಇಲ್ಲ;
- 'ಕರೆ' ಪದ ತೀರ, ದಡ, ಅಂಚು, ತಡಿ, ಎಲ್ಲೆ ಎಂಬ ಅರ್ಥಗಳನ್ನೂ ಹೊಂದಿದೆ; ಈ ಅರ್ಥದ 'ಕರೆ' ಪದವನ್ನು ಜನಪದರು ಬಳಸುವುದು ಅಪರೂಪ; ಆದರೆ ದಡ, ತಡಿ, ಅಂಚು ಪದಗಳನ್ನು ಬಳಸುತ್ತಾರೆ; ಸೀರೆ ಅಥವಾ ವಸ್ತ್ರಗಳ ಅಂಚು ಕಟ್ಟುವುದಕ್ಕೆ ಸಂಬಂಧಿಸಿದ ಬಳಕೆ ಜನರಲ್ಲಿದೆ;
- 'ಕರೆ' ಪದಕ್ಕೆ 'ಕಪ್ಪು' ಎಂಬ ಅರ್ಥವೂ ಇದೆ; ಬಟ್ಟೆ ಮೊದಲಾದವುಗಳ ಮೇಲೆ 'ಕಲೆ' ನಿಂತರೆ, ಕೊಳೆಚುಕ್ಕೆ ಇದ್ದರೆ ಅದನ್ನು 'ಕರೆ' ಎನ್ನಲಾಗುವುದು; ಈ ಅರ್ಥದ ಬಳಕೆ ಜನಪದರಲ್ಲಿ ಮಾತ್ರವಲ್ಲ ಪಟ್ಟಣ ವಾಸಿಗಳಲ್ಲೂ ಜನಪ್ರಿಯವಾಗಿದೆ;
- 'ಕರೆ' ಪದಕ್ಕೆ ಕಪ್ಪು ಎನ್ನುವ ಅರ್ಥದಲ್ಲಿ 'ಕರಿ' ಪದವೂ ಚಾಲ್ತಿಯಲ್ಲಿದೆ; 'ಕರಿ' ಪದ ಕೂಡ ಜನಪ್ರಿಯ ಬಳಕೆಯಲ್ಲಿರುವಂಥದೇ; 'ಕಪ್ಪು' ಅರ್ಥದ ಹಿನ್ನೆಲೆಯಲ್ಲಿ 'ಕರೆ' ಪದವನ್ನು ಉಪಪದಗಳಾದ ಕರೆನೆಲ, ಕರೆಬಂಟ, ಕರೆಬಾಳೆ, ಕರೆಬೂದಿ, ಕರೆಬೆಕ್ಕು, ಕರೆಮಲೆ, ಕರೆಯವ್ವ, ಕರೆಯೆಳ್ಳು, ಕರೆಹಕ್ಕಿ, ಕರೇಮೆಣಸು ಮುಂತಾದವನ್ನು ಕಿಟ್ಟೆಲ್ ಬಳಸಿರುವುದು ಸರಿಯಲ್ಲ; ನಿಜವಾಗಿಯೂ ಇವು ಕರಿನೆಲ, ಕರಿಬಂಟ, ಕರಿಬೂದಿ, ಕರಿಬೆಕ್ಕು, ಕರಿಮಲೆ, ಕರಿಯವ್ವ, ಕರಿಯೆಳ್ಳು, ಕರಿಹಕ್ಕಿ, ಕರೀಮೆಣಸು ಎಂದಿರಬೇಕು; ಇಲ್ಲಿ 'ಕರೆ'ಗಿಂತ 'ಕರಿ' ಪದವೇ ಮೂಲ; 'ಅಂದಮಾತ್ರಕ್ಕೆ 'ಕರೆ'ಗೆ ಕಪ್ಪು ಅರ್ಥ ಇಲ್ಲವೆಂದಲ್ಲ; ಸಮಯ ಸಂದರ್ಭಗಳು ಯಾವಾಗಲೂ ಮುಖ್ಯ;
- 'ಕರೆ' ಪದ ಹಾಲನ್ನು ಕರೆದುಕೊಳ್ಳುವ, ಮೋಡ ಮಳೆಗೆರೆಯುವ ಸಂದರ್ಭಕ್ಕೆ ಬಳಸಲಾಗಿದೆ; ಕರೆಯುವ ಕ್ರಿಯೆ;

- 'ಕರಿ' ಪದಕ್ಕೆ 'ದು' ಪ್ರತ್ಯಯ ಸೇರಿಸಿ 'ಕರಿದು' ರೂಪ ಸಿದ್ಧಿಸುವಂತೆ 'ಕರೆದು' ಆಗುವುದಿಲ್ಲ; ಆದರೆ 'ಕರೆದು' ರೂಪ ಇದೆಯಲ್ಲಾ ಎಂದರೆ, ಆಗ ಅದರ ಅರ್ಥ 'ಕೂಗಿಕರೆದು' ಎಂದಾಗುತ್ತದೆ;
- ಸಂಸ್ಕೃತಿಯಲ್ಲಿ 'ಕರೆ' ಪದವನ್ನು ಉನ್ನತೀಕರಿಸಿ 'ಕರೆಯೋಲೆ' ಪದವನ್ನು ಸೃಷ್ಟಿಸಲಾಗಿದೆ; ನಿಜವಾಗಿಯೂ ಇದು 'ಪದೋನ್ನತಿ'ಯೇ ಸರಿ; 'ಪದಸಂಸ್ಕೃತಿ'ಯಲ್ಲಿ ಅನೇಕ ವೇಳೆ ಹೀಗೆ ಆಗುತ್ತದೆ".

೧೩. ಕರ್ಣ :

- "ಪುರಾಣಗಳ/ಪುರಾಣ ಮಹಾಕಾವ್ಯಗಳ ಹೆಸರೂಗಳೂ ಜನಸಾಮಾನ್ಯರ ನಡುವೆ ಬಳಕೆಯಲ್ಲಿವೆ; 'ಕರ್ಣ' ಕೂಡ ಅಂಥದೊಂದು ಹೆಸರು; 'ಕರ್ಣ'– ಯಾರಿಗೆ ಗೊತ್ತಿಲ್ಲ? ಶಿಷ್ಟರಿಗೂ ಜನಪದರಿಗೂ ಏಕಪ್ರಕಾರ ಪರಿಚಿತವಿರುವ ವ್ಯಕ್ತಿ; ಮಹಾಭಾರತದ ಮಹಾಪಾತ್ರಗಳಲ್ಲಿ ಒಂದು; ಹುಟ್ಟಿನ ಕಾರಣಕ್ಕಾಗಿ ಶೋಷಣೆಗೆ ಒಳಗಾದವ; ದಾನಶೀಲಗುಣದಿಂದಾಗಿ ಮೇರುವಾಗಿ ಬೆಳೆದವ;
- ಜನ ಅವನ ಹೆಸರಿನಲ್ಲಿ ನಾಟಕಗಳನ್ನು ರಚಿಸಿದ್ದಾರೆ; ನಾಟಕಗಳನ್ನು ಆಡಿದ್ದಾರೆ; ಕಾವ್ಯಗಳನ್ನು ಬರೆದಿದ್ದಾರೆ; ಅವನ 'ತ್ಯಾಗ'ವನ್ನು ಕಂಡು ಅಚ್ಚರಿಪಟ್ಟಿದ್ದಾರೆ; ಕೊಟ್ಟಮಾತನ್ನು ತಪ್ಪದೆ ನಡೆಸಿದ್ದಕ್ಕಾಗಿ ಖ್ಯಾತಿವಂತನಾಗಿದ್ದಾನೆ;
- ಇಷ್ಟೆಲ್ಲ ಜನಪದರ ನಡುವೆಯೇ ಬೆಳೆದ ಕರ್ಣನ ಹೆಸರನ್ನು ಯಾರೂ ಇಟ್ಟುಕೊಳ್ಳಲಿಲ್ಲವೇಕೆ? ಮೂರು ಕಾರಣಗಳು: 'ಸೂತಪುತ್ರ'(ಕುಂತಿಯ ಪುತ್ರನಾಗಿದ್ದರೂ, ಗಂಗೆಗೆ ತೇಲಿಬಿಟ್ಟು ಸಾಕಿದವರ ಹೆಸರಿನ ಮೂಲಕ ಬೆಳೆಯಬೇಕಾಗಿ ಬಂದದ್ದರಿಂದ)ನೆಂದು ಹೆಸರು ಬಂದದ್ದು; ಕೌರವರ ಕಡೆಗೆ ಸೇರಿ 'ದುಷ್ಟ ಚತುಷ್ಟಯ'ದಲ್ಲಿ ಒಬ್ಬನಾದದ್ದು; ದೇವನಾಗಿ ಬೆಳೆಯದೆ ಹೋದದ್ದು(ಅಂತಹ ಲಕ್ಷಣಗಳು ಇದ್ದವಾದರೂ); ಇದರಿಂದ ಕರ್ಣನ ಹೆಸರು ಮಸುಕಾದಂತೆ ತೋರುವುದಿಲ್ಲ; ಕರ್ಣನ ಹೆಸರನ್ನು ಇಟ್ಟುಕೊಂಡ ಉದಾಹರಣೆಗಳೂ ಇವೆ; ಅರ್ಜುನ, ಭೀಮನ ಹೆಸರುಗಳೂ ಕಡಿಮೆಯೇ; ಧರ್ಮರಾಯನ ಹೆಸರನ್ನು ಇಟ್ಟುಕೊಳ್ಳಲು ಹೆದರಿರಬೇಕು– 'ಧರ್ಮಪ್ರಜ್ಞೆ' ಕಾರಣಕ್ಕೆ;
- ಜನಪದ ಮಹಾಭಾರತದಲ್ಲಿ ಕರ್ಣನ ಪಾತ್ರವನ್ನು ಉದಾರವಾಗಿ ನಡೆಸಿಕೊಳ್ಳಲಾಗಿದೆ; 'ವೀರ' ಗುಣಕ್ಕಿಂತ 'ತ್ಯಾಗ' ಗುಣವೇ ಇಲ್ಲಿ ಮುಖ್ಯವಾದದ್ದು; ಗಾಯನ ಸಂಪ್ರದಾಯದಲ್ಲಿ ಅವನನ್ನು ನಡೆಸಿಕೊಂಡ ರೀತಿಯನ್ನು ಚಿತ್ರಿಸುವ ಅನೇಕ ಉದಾಹರಣೆಗಳಿವೆ; ಎಲ್ಲ ಕಾವ್ಯಗಳಲ್ಲೂ ಕರ್ಣನನ್ನು ಕಂಡರೆ ಕವಿಗೆ ಇಷ್ಟ; ಜನಪದ ಕವಿಗೆ ಕೂಡ".

೧೪. **ಕೃಷ್ಣ :**

- "ಭಾರತೀಯ ಅವತಾರ ಕಲ್ಪನೆಯಲ್ಲಿ ಕೃಷ್ಣಾವತಾರವೂ ಒಂದು; ಕೃಷ್ಣ ದ್ವಾಪರಯುಗದ ಅಧಿಪತಿ, ನಾಯಕ; ಎರಡು ಪ್ರಸಿದ್ಧ ಆರಾಧನಾ ಸಂಪ್ರದಾಯದಲ್ಲಿ(ಕಲ್ಟ್) ಕೃಷ್ಣನದೂ ಒಂದು, ಇನ್ನೊಂದು ರಾಮನದು; ಈ ಸಂಪ್ರದಾಯಗಳನ್ನು ರೂಪಿಸುವಲ್ಲಿ ಪುರಾಣ, ಐತಿಹ್ಯ, ಜನಪದ ಕಾವ್ಯ, ಶಿಷ್ಟಕಾವ್ಯ, ನಂಬಿಕೆ, ಆಚರಣೆ ಕಾರಣವಾಗಿವೆ; ಜೊತೆಗೆ 'ಅವತಾರ ಕಲ್ಪನೆ'ಗಳೂ ನೆರವಿಗೆ ಬಂದಿವೆ; ಕೃಷ್ಣ ಒಬ್ಬ 'ಅವತಾರ ಪುರುಷ' ಎಂಬ ನಂಬಿಕೆ ಬಂದ ಮೇಲೆ ಆರಾಧನಾ 'ಕಲ್ಟ್' ಬೆಳೆದಿದೆ;
- 'ಕೃಷ್ಣ' ಚಂದ್ರ ವಂಶದವನು; 'ರಾಮ' ಸೂರ್ಯ ವಂಶದವನು(ಪು.ನಾ.ಚೂ); ಪ್ರಾಚೀನ ಬಹುತೇಕ ರಾಜ ವಂಶಗಳು ಈ ಎರಡರಲ್ಲಿ ಯಾವುದಾದರೂ ಒಂದಕ್ಕೆ ಸೇರಿವೆ; ಈ 'ಚಂದ್ರವಂಶ' ಮತ್ತು 'ಸೂರ್ಯವಂಶ' ಕ್ರಮವಾಗಿ 'ದ್ರಾವಿಡ' ಮತ್ತು 'ಆರ್ಯ' ಜನಾಂಗಗಳನ್ನು ಪ್ರತಿನಿಧಿಸುತ್ತಿವೆಯೆ? ಈ ಸೈದ್ಧಾಂತಿಕ ಪ್ರಶ್ನೆ ಚರ್ಚೆಗೆ ಸೂಕ್ತ;
- 'ಕೃಷ್ಣ' ಪದಕ್ಕೆ ಕಪ್ಪು, ಕಡುನೀಲಿ ಎಂಬ ಅರ್ಥಗಳಿವೆ; ನಾಟಕಗಳಲ್ಲಿ ಕೃಷ್ಣನ ಪಾತ್ರಕ್ಕೆ ಹಚ್ಚುವ ಬಣ್ಣ ಕೂಡ ಇದೇನೆ; ಇದನ್ನೇ ಕಾವ್ಯಗಳು 'ನೀಲಮೇಘಶ್ಯಾಮ' ಎಂದಿರುವುದು; ಪಂಪ ತನ್ನನ್ನು ವರ್ಣಿಸಿಕೊಳ್ಳುವಾಗ 'ಕದಳೀಗರ್ಭಶ್ಯಾಮ' ಎಂದಿರುವುದು; ಇದರ ಅರ್ಥ ಬಾಳೆಯ 'ಮೋತೆ'ಯ ಬಣ್ಣ, ಹಳ್ಳಿಯ ಭಾಷೆಯಲ್ಲಿ 'ಎಣೆಗೆಂಪು' ಅಥವಾ 'ಎಣ್ಣೆಗೆಂಪು'; ಇವೆಲ್ಲ ದ್ರಾವಿಡ ಕಲ್ಪನೆಯನ್ನು ಪುಷ್ಟೀಕರಿಸುತ್ತವೆ;
- 'ಕೃಷ್ಣ'ನನ್ನು 'ಗೊಲ್ಲ' ಎಂದು ಹೇಳ ಹೊರಟಿರುವ ಪ್ರಯತ್ನವೂ ಇದೆ; ಇದಕ್ಕೆ ಕಾರಣ 'ಕೃಷ್ಣ' ಗೋಕುಲದಲ್ಲಿ ಬೆಳೆದದ್ದು, ನವಿಲುಗರಿ+ಕೊಳಲುಗಳ ಉಲ್ಲೇಖವಿರುವಂಥದು; ಈ ಕಾರಣಕ್ಕಾಗಿಯೇ ಕೆಲವು ಗೊಲ್ಲ ಸಮುದಾಯಗಳು 'ಕೃಷ್ಣಗೊಲ್ಲರು' ಎಂದು ಗುರತುಸಿಕೊಳ್ಳಲು ಪ್ರಯತ್ನಿಸಿದ್ದಾರೆ".

೧೫. **ಕಂತೆ ಒಗೆ :**

- "ಹಳ್ಳಿಯ ಕಡೆ ಸಾಮಾನ್ಯವಾಗಿ 'ಸಾವಿಗೆ' ಬಳಸುವ ನುಡಿಗಟ್ಟು ಇದು; ಸಾವಿನ ಸಹಜ ಸ್ಥಿತಿಯಲ್ಲಿ ಇದನ್ನು ಹೇಳುತ್ತಿಲ್ಲ; ಮಾತಿನ ಮಧ್ಯೆ ಬರುವಂಥದು; ಬೇಸರ, ಅಸ್ತಿತ್ವದ ಪ್ರಶ್ನೆ, ಜೀವನ ಶಾಶ್ವತವಲ್ಲ ಎಂಬ ನಂಬಿಕೆ ದೃಢವಾದಾಗ 'ಕಂತೆ ಒಗೆ' ನುಡಿಗಟ್ಟು ಉದ್ಗಾರ ರೂಪದಲ್ಲಿ ಬಂದಿರಬೇಕು;
- 'ಕಂತೆ ಒಗೆದು ಹೋದಾರಾಯಿತು ಬಿಡು, ಯಾವುದು ಶಾಶ್ವತ ಇಲ್ಲಿ' ಎಂಬಿತ್ಯಾದಿ ಮಾತಿನಲ್ಲಿ ಕಾಣಿಸಿಕೊಳ್ಳುವುದು;
- ಕಂತೆ/ಕನ್ತೆ ಪದಕ್ಕೆ ಕಟ್ಟು, ಪಿಂಡಿ, ಹೊರೆ ಎಂಬ ಅರ್ಥಗಳಿವೆ; ತಮಿಳಿನಲ್ಲಿ ಕಱ್ಚ್ಚ್, ಮಲೆಯಾಳಂನಲ್ಲಿ ಕಱ್ಚ್/ಕಱ್ಚ ರೂಪಗಳಿವೆ; 'ಒಗೆ' ಪದಕ್ಕೆ ಎಸೆ, ಬಿಸಾಡು(ಬಿಸುಡು), to throw ಅರ್ಥಗಳಿವೆ;

- ಒಂದು ಅಭಿಪ್ರಾಯ ಹೀಗಿದೆ; "'ಕಂತೆ' ಎನ್ನುವುದಕ್ಕೆ 'ಮೀಸಲು ಕಂಬಳಿ' ಎಂಬ ಅರ್ಥವಿದ್ದು, ಕುರುಬ ಸಮುದಾಯದಲ್ಲಿನ ಒಡೆಯರುಗಳು ಹೊಸ ಕಂಬಳಿಯನ್ನು ನೆಯ್ದುಕೊಂಡು, ಹಳೆಯ ಕಂಬಳಿಯನ್ನು(ರೇವಣ್ಣ ಸಿದ್ಧೇಶ್ವರ ಮತ್ತು ಸಿದ್ಧರಾಮೇಶ್ವರ ಜಾತ್ರೆಯ ಕಾಲದಲ್ಲಿ ಅವರ ಮೂರ್ತಿಗಳ ಕೆಳಗೆ ಹಾಸಿದ್ದ) ಹಳ್ಳದಲ್ಲಿ ಗುಂಡಿ ತೆಗೆದು ಮುಚ್ಚುವ ಪ್ರಕ್ರಿಯೆಗೆ 'ಕಂತೆ ಒಗೆ' ಎನ್ನುವ ಹೆಸರು ಇದೆಯಂತೆ, ಈ ನುಡಿಗಟ್ಟು ಅಲ್ಲಿಂದ ಬಂದಿದೆಯಂತೆ"(ಜ.ನು.ಕೋ); ಇದು ಸರಿಯಿರಬಹುದು; ಆದರೆ ಎಲ್ಲ ಕಡೆ ಪ್ರಚಾರದಲ್ಲಿರುವ ಈ ನುಡಿಗಟ್ಟಿಗೆ ಇದೇ ಕಾರಣವಲ್ಲ, ಬೇರೆಯದೂ ಇದೆ;
- 'ಕಂತೆ ಒಗೆ' ಎನ್ನುವುದು ವಿಶೇಷ ಆಚರಣೆಯೇನೂ ಅಲ್ಲ; 'ಕಂತೆ' ಎನ್ನುವುದು ಹುಲ್ಲಿನ, ಬತ್ತದ, ರಾಗಿಯ, ಕಬ್ಬಿನ, ಕಟ್ಟಿಗೆಯ ಒಂದು ಕಟ್ಟು, ಹೊರೆ; ಜನಸಾಮಾನ್ಯರಿಗೆ 'ಕಂತೆ' ತೀರ ಹತ್ತಿರದ ಒಂದು ಪದ; ಈ 'ಕಂತೆ'ಯನ್ನು ಒಗೆದಂತೆ ದೇಹವನ್ನು ಬಿಡುವ ಕಲ್ಪನೆ ಇದು; 'ಕಂತೆ' ದೇಹಕ್ಕೆ ಸಂಕೇತ; 'ಒಗೆ' ದೇಹ ಬಿಡುವುದಕ್ಕೆ ಪ್ರತೀಕ;
- ಜನಪದರಿಗೆ ದೇಹದ ಮೇಲೆ 'ಮೋಹವಿಲ್ಲ' ಎನ್ನುವುದು ಈ ನುಡಿಗಟ್ಟಿನ ಆಶಯ; ನಿಜಕ್ಕೂ ಇದು ಜನಸಾಮಾನ್ಯರ ತತ್ವಶಾಸ್ತ್ರವೇ ಸರಿ".

೧೬. ಕಲಿಗಾಲ :

- "ಇದೊಂದು ಪ್ರಸಿದ್ಧ ನುಡಿಗಟ್ಟು; 'ಕಲಿಗಾಲ' ಪದಕ್ಕೆ 'ಬರು' ಎಂಬ ಕ್ರಿಯಾ ರೂಪವನ್ನು ಸೇರಿಸಿದರೆ, ಆಗ ಅದರ ಕ್ರಿಯೆ ಮತ್ತು ರೂಪ ಸ್ಪಷ್ಟವಾಗುವುದು;
- ಮೂಲರೂಪ ಕಲಿ+ಕಾಲ>ಕಾಲಿಗಾಲ(ಕ>ಗ); ಇದರಲ್ಲಿ ಎರಡು ಪದಗಳಿವೆ: 'ಕಲಿ' ದೇವತೆ(?)ಗೆ ಸಂಬಂಧಿಸಿದ್ದು ಒಂದು; 'ಕಾಲಸೂಚಕ' ಪದ ಎರಡನೆಯದು;
- 'ಕಾಲ' ಸರ್ವತ್ರ ಅನ್ವಯ; 'ಕಲಿ' ಪದ ನಿರ್ದಿಷ್ಟ ಕಾಲದ್ದು; 'ಕಲಿಪುರುಷ', 'ಕಲಿಯುಗ' ಪದಗಳೂ ಪ್ರಚಾರದಲ್ಲಿವೆ; ಪುರಾಣದಲ್ಲಿರುವ ಮಾತು; ಮಹಾಭಾರತದ ಕೊನೆಯಲ್ಲಿ 'ಕಲಿಪುರುಷ'ನ ಕಥೆಯಿದೆ: ಕುದುರೆ ಮೇಲೆ ಹೆಂಡತಿಯನ್ನು ಕೂರಿಸಿಕೊಂಡು, ತಾಯಿಯನ್ನು ನಡೆಸಿಕೊಂಡು ಬರುವ ಚಿತ್ರವದು; ಕಲಿಯುಗದ ಆರಂಭ ಇಲ್ಲಿಂದ ಶುರು;
- ಪುರಾಣಗಳು ನಾಲ್ಕು ಕಾಲಗಳನ್ನು ಹೇಳಿವೆ: ಕೃತಾ, ತ್ರೇತಾ, ದ್ವಾಪರಾ, ಕಲಿ; ಧರ್ಮದ ಕಲ್ಪನೆಯ ಮೂಲಕ ಇವನ್ನು ವಿವರಿಸಿರುವುದು ಹೀಗೆ: ಧರ್ಮ ಕೃತಾಯುಗದಲ್ಲಿ ನಾಲ್ಕು ಕಾಲುಗಳಲ್ಲಿಯೂ, ತ್ರೇತಾಯುಗದಲ್ಲಿ ಮೂರು ಕಾಲುಗಳಲ್ಲಿಯೂ, ದ್ವಾಪರಾಯುಗದಲ್ಲಿ ಎರಡು ಕಾಲುಗಳಲ್ಲಿಯೂ, ಕಲಿಯುಗದಲ್ಲಿ ಒಂಟಿ ಕಾಲಿನಲ್ಲಿಯೂ ಊರಿದ್ದಿತೆಂದು ಕಥೆ;

- 'ಕಲಿಕಾಲ'ವನ್ನು `A time of Sin and Misery'(ಕಿಟ್ಟೆಲ್) ಎಂದು ಹೇಳುವುದಿದೆ; ಜನಪದರ ರೂಢಿಯ ಕಲ್ಪನೆಗೆ ಇದು ಹತ್ತಿರ;
- 'ಏನ್ ಬಂತಪ್ಪಾ ಕಲಿಗಾಲ' ಎಂದು ಜನರು ಉದ್ಗಾರ ತೆಗೆಯುವುದುಂಟು; ಅಂದರೆ 'ಕಲಿಗಾಲ'ವನ್ನು 'ಕೆಟ್ಟಕಾಲ' ಎಂದು ಕರೆಯುವುದು ಜನಪದರ ಆಶಯ; ಥಳುಕಿನ ಕಾಲ ಎಂದೂ ಆಗಬಹುದು;
- ವಿಜ್ಞಾನದ ಮೂಲಕ ಹೇಳುವುದಾದರೆ 'ಅಭಿವೃದ್ಧಿಯ ಕಾಲ' 'ಉನ್ನತ ಕಾಲ'; 'ಕಲಿ' ಎಂಬುದನ್ನು `to Learn' ಎಂಬ ಅರ್ಥದಲ್ಲಿಯೂ ತೆಗೆದುಕೊಳ್ಳಬಹುದು;
- ಕಲಿಯನ್ನು 'ಕಲ್ಕಿ' (ವಿಷ್ಣುವಿನ ಹತ್ತನೆಯ ಅವತಾರ) ಸಂಹರಿಸಿದನೆಂದೂ ಕಥೆಗಳಿವೆ; ಕೆಟ್ಟದ್ದರ ವಿರುದ್ಧ ನಿಂತ 'ಕಲ್ಕಿ'ಗೆ ಸಾಂಕೇತಿಕ ಅರ್ಥಕೊಡಬಹುದು; ಕುವೆಂಪು ತಮ್ಮ 'ಕಲ್ಕಿ' ಕವನದಲ್ಲಿ 'ಬಡವನೆ ಕಲಿಯುಗದಂತ್ಯದ ಕಲ್ಕಿ' ಎಂದಿದ್ದಾರೆ; ಕವಿಯ ಆಶಯ ಈಡೇರುವುದೆ?".

ಮೇಲೆ ಕೊಡಮಾಡಿದ ಉದಾಹರಣೆಗಳು 'ಪದಸಂಸ್ಕೃತಿ'ಯ ವಿವಿಧ ಆಯಾಮಗಳನ್ನು ಚೆನ್ನಾಗಿ ವಿವರಿಸುತ್ತವೆ ಎಂದು ತಿಳಿಯಬಹುದು. ಇವು ಆಯ್ದ ಉಲ್ಲೇಖಗಳು ಮಾತ್ರ; ಅಷ್ಟೇ ಅಲ್ಲ ಪದಗಳ ಮುಖ್ಯ ವಿವರಣೆಗಳೂ ಕೂಡ. ಈ ಪದಗಳಿಗೆ ಸಂಬಂಧಿಸಿದಂತೆ ಇರುವ ಇನ್ನಷ್ಟು ವಿವರಗಳನ್ನು ನಿಘಂಟಿನ ಆಯಾ ಪದಗಳಲ್ಲಿ ಪಡೆಯಬಹುದು. ಇವೆಲ್ಲವನ್ನೂ ಇಲ್ಲಿ ಸ್ವತಂತ್ರವಾಗಿ ಕಟ್ಟಿಕೊಡಲಾಗಿದೆ. ಈ ಎಲ್ಲ ಪದಗಳೂ ಅವುಗಳ ವಿವರಣೆಗಳೂ ಈಗಾಗಲೇ ನಾವು ರೂಪಿಸಿಕೊಂಡಿರುವ ಸೂತ್ರಗಳಿಗೆ ಬದ್ಧವಾಗಿವೆ. ಭಾಷೆಯ ಅರ್ಥ, ಅರ್ಥಾಂತರಗಳು ತಪ್ಪದೆ ಇಲ್ಲಿ ವಿವೇಚನೆಗೆ ಒಳಪಟ್ಟಿವೆ; ಪದಸಂಸ್ಕೃತಿಯ ಪಾರಂಪರಿಕ ಜ್ಞಾನದೊಡನೆ, ಪ್ರಸ್ತುತದಲ್ಲಿ ಅದರ ಮಹತ್ವ ಮತ್ತು ಮೈದೋರುವಿಕೆಯನ್ನು ಕುರಿತು ಮಾತಾಡಲಾಗಿದೆ; ಬಳಕೆಯ ಸಂದರ್ಭಗಳಲ್ಲಿ ಅವುಗಳ ಅಸ್ತಿತ್ವ ಮತ್ತು ಪ್ರಾಚುರ್ಯವನ್ನು ಕುರಿತು ಪ್ರಸ್ತಾಪಿಸಲಾಗಿದೆ. ಭಾಷೆಯ ಮತ್ತು ಅದರ ಪದಗಳ ಮೂಲಕ ರೂಪುಗೊಳ್ಳುತ್ತಿರುವ ಸಾಂಸ್ಕೃತಿಕ ಸ್ವರೂಪ ಮತ್ತು ಇತಿಹಾಸವನ್ನು ಅರಿಯುವುದಕ್ಕೆ 'ಪದ ಸಂಸ್ಕೃತಿ ಕೋಶ' ನೆರವಾಗುತ್ತದೆ ಎಂಬುದನ್ನೂ ಆಯ್ದ ಮೇಲಿನ ಪದ ವಿವೇಚನೆ ನಿಸ್ಸಂದೇಹವಾಗಿಯೂ ತಿಳಿಸಿಕೊಡುತ್ತದೆ. ಈ ಎಲ್ಲ ಕಾರಣಗಳಿಂದ ಜಾನಪದ ನಿಘಂಟು ನಮ್ಮ ಅರಿವಿನ ಎಲ್ಲೆಗಳನ್ನು ವಿಸ್ತರಿಸುತ್ತದೆ; ಭಾಷೆಯ ಗಡಿಗಳನ್ನು ದಾಟಿ 'ವಿಶ್ವ ದೃಷ್ಟಿ'ಗೆ ಭಾಜನವಾಗುವುದರಲ್ಲಿ ಸಂದೇಹವಿಲ್ಲ.

೩

ಮೂರನೆಯ ಸಂಪುಟ 'ಕು'ಯಿಂದ 'ಕೌ'ವರೆಗಿನ ಪದಗಳನ್ನು ಹೊಂದಿದೆ. 'ಕ'ಕಾರದಲ್ಲಿಯೇ ಎರಡು ಸಂಪುಟಗಳಾದದ್ದು ಪದಸಂಪತ್ತನ್ನು ದ್ಯೋತಿಸುತ್ತದೆ. 'ಧ್ವನಿ' ನಿಯಮಗಳೂ(Phonology) ಮತ್ತು ಅರ್ಥ ನಿಯಮಗಳೂ(Semantics) ಹಿಂದಿನ ಸಂಪುಟಗಳಂತೆಯೇ ಇಲ್ಲಿಯೂ ಮುಂದುವರಿಯುತ್ತವೆ. ಧ್ವನಿ ವ್ಯತ್ಯಾಸಗಳೂ ಅರ್ಥವ್ಯತ್ಯಾಸಗಳೂ ಪದಗಳ ಸ್ವರೂಪ, ಪದಗಳ ಬಳಕೆ ಮತ್ತು ಉಚ್ಚಾರಣಾ ವಿಧಾನಗಳನ್ನು ಅನುಸರಿಸಿರುತ್ತವೆ ಎಂಬುದು ಸ್ಪಷ್ಟವೇ ಇದೆ. ಭಾಷೆಯ ಮೇಲಿನ ಹೊರ ಒತ್ತಡ ಮತ್ತು ಒಳ ಒತ್ತಡಗಳು ಕಾಲಮಾನಕ್ಕೆ ಅನುಗುಣವಾಗಿ ಪದಸಂಸ್ಕೃತಿಯ ಮೇಲೆ ಪ್ರಭಾವ ಬೀರುವುದರಲ್ಲಿ ಯಾವುದೇ ಅನುಮಾನಗಳು ಉಳಿದಿಲ್ಲ. ಪದ

ನಿಷ್ಪತ್ತಿ, ಪದಸಂಸ್ಕೃತಿ ಮತ್ತು ಪದ ಪ್ರಸ್ತುತತೆಯಂತಹ ವಿಚಾರಗಳು ಈ ಸಂಪುಟದ ಪದಗಳ ಚರ್ಚೆಯಲ್ಲಿಯೂ ಪ್ರಮುಖವಾಗಿ ಭಾಗವಹಿಸುತ್ತವೆ. ಪದದ ರೂಪ ಮತ್ತು ಬಳಕೆಯ ಸಂದರ್ಭಗಳು ನಮ್ಮ ವಿವೇಚನೆಯ ಮೂಲ ಮಾನಗಳೇ ಆಗಿರುತ್ತವೆ. ಪದ ಸಂಸ್ಕೃತಿ ವ್ಯಕ್ತಿ ಕೇಂದ್ರೀಕರಣದಲ್ಲಿಯೇ ಕೆಲಸಮಾಡಬೇಕಾಗಿ ಬರುವುದರಿಂದ, ಆ ವ್ಯಕ್ತಿಯ ವೈಯಕ್ತಿಕ ಆಸಕ್ತಿ, ಅವನು ಬಳಕೆ ಮಾಡುವ ಪದಪ್ರಮಾಣ ಮತ್ತು ಪದಸ್ವರೂಪ, ಆಚರಣಾತ್ಮಕ ಮತ್ತು ಆಲೋಚನಾತ್ಮಕ ಸಾಂಸ್ಕೃತಿಕ ವರ್ತನೆಗಳು, ಮನೋವೈಜ್ಞಾನಿಕ ಸ್ವೀಕರಣ ಮತ್ತು ನಿರಾಕರಣ ವಿಷಯಗಳು ಮುಖ್ಯವಾಗುತ್ತವೆ. ಆಡುವ ವ್ಯಕ್ತಿಯ ನಡವಳಿಕೆಗಳು ಪದಗಳ ನಡವಳಿಕೆಯನ್ನು ರೂಪಿಸುತ್ತವೆ. ಇವು ವಹಿಸುವ ಪಾತ್ರಪ್ರಣಾಳಿಕೆಯೇ ಪದ ಸಂಸ್ಕೃತಿಯ ಚಲನವಲನಗಳನ್ನು ಹುಟ್ಟುಹಾಕುತ್ತವೆ. ಪ್ರಸ್ತುತ ಸಂಪುಟದ ಪದ ಸಂಸ್ಕೃತಿಯ ವ್ಯಾಖ್ಯಾನ ವಿನ್ಯಾಸದಲ್ಲಿ ಇಂತಹ ವಿಚಾರಗಳು ಎಂದಿನಂತೆಯೇ ನಿರ್ಧಾರಕ ಅಂಶಗಳಾಗುತ್ತವೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಪರಿಸರದ ವಸ್ತು ಬಳಕೆಯ ಮೂಲಕ ವಿಶೇಷ ಸಂಸ್ಕೃತಿಯನ್ನು ರೂಪಿಸುವ ಕಲೆ ಜನಪದರದು; ಜನಪದರ ಭಾವ ಮತ್ತು ವಸ್ತು ಹೆಚ್ಚು ಸ್ಥಳೀಯವಾದುದು. ಅಂತಹ ಹಲವು ಹತ್ತಿರದ ಸ್ಥಳೀಯ ಸಂಸ್ಕೃತಿಗೆ ಅದರ ಹೋಲಿಕೆ ಸಾಮಾನ್ಯ; ಸ್ಥಳಗಳಲ್ಲಿ ಅಂತರ ಹೆಚ್ಚಿದಂತೆ 'ಪದ ಸಂಸ್ಕೃತಿ'ಯಲ್ಲೂ ಏರಿಳಿತಗಳೂ, ವ್ಯತ್ಯಾಸಗಳೂ ಸಂಭವಿಸುತ್ತವೆ. ತಾಂತ್ರಿಕತೆಯನ್ನೂ ಸಾಂಸ್ಕೃತಿಕತೆಯನ್ನೂ ಬೆಸೆಯುವ ಕೌಶಲ ಪದಸಂಸ್ಕೃತಿಯಲ್ಲಿದೆ; ಇದಕ್ಕೆ ಕಾಲದ ಮೂಲಕ ತನ್ನೊಳಗೇ ಬೆಳೆಯುವ ಕೌಶಲವೃದ್ಧಿ ಒಂದು ಕಾರಣವಾದರೆ, ವ್ಯಾಪಾರ–ವಹಿವಾಟು–ಅಲೆಮಾರಿತನ–ಜನಸಂಪರ್ಕದಿಂದ ಪದಸ್ವರೂಪ ಮತ್ತು ಪದಸಂಸ್ಕೃತಿ ಬದಲಾಗುವುದು ಸಹಜ; ಅದು ಒಂದು ಲಕ್ಷಣ ಕೂಡ. ಪರಿಣಾಮವಾಗಿ ಪದಗಳು ನಿಷ್ಪತ್ತಿ ಮೊದಲಾದ ವಿಷಯಗಳಲ್ಲಿ(ರೂಪಕ್ಕೆ), ಅರ್ಥ ಮೊದಲಾದವುಗಳಲ್ಲಿ ಬೆಳವಣಿಗೆ ತೋರಬಹುದು. "Language is a part of Culture" ಎಂಬ ಮಾತನ್ನು 'ಪದ ಸಂಸ್ಕೃತಿ' ಪರಿಕಲ್ಪನೆ ಋಜುವಾತು ಪಡಿಸುತ್ತದೆ.

ಜನಪದ ಸಮಾಜ/ಸಂಸ್ಕೃತಿಯ ಗ್ರಹಿಕೆಯಲ್ಲಿ ಜನಪದರ ನಡೆಯೇ ಬೇರೆ ಇದೆ; ಅದು ಮುಖ್ಯವಾಗಿ ಪಾರಂಪರಿಕ ನಡೆ. ಅದರಲ್ಲಿ ಅವನು ಸಂಪೂರ್ಣ ವಾಸ್ತವವಾದಿಯಂತೆ ಕಾಣುವುದಿಲ್ಲ. ಕೆಲವು ವಸ್ತು ವಿಷಯಗಳಲ್ಲಂತೂ 'ಅಕಾರಣಭಯ' ಇರುವುದರಿಂದಾಗಿ ಶುಭಾಕಾಂಕ್ಷೆಯ ನೆಪದಲ್ಲಿ ಅವನು ನಂಬಿಕೆಗೆ ಜಾರುವನು. ಆಗ ಅದೊಂದು ಮನಶ್ಶಾಸ್ತ್ರೀಯ ವಿಷಯವಾಗಿ ಬಿಡುತ್ತದೆ. ಉದಾಹರಣೆಗೆ 'ಕುಂಕುಮ'ದಂತಹ ವಸ್ತುವನ್ನೆ ತೆಗೆದುಕೊಳ್ಳಿ. ಶರೀರ ಜಾನಪದಕ್ಕೆ ಅಂಟಿಕೊಂಡಂತೆ ಬರುವ ಇದರ ವಿಷಯದಲ್ಲಿ ಎರಡು ಗ್ರಹಿಕೆಗಳಿರುತ್ತವೆ: ಒಂದು–ಆಲಂಕಾರಿಕವಾದುದು; ಇನ್ನೊಂದು–ನಂಬಿಕೆಯದು, 'ಭದ್ರತೆ'ಯ ಸಂಬಂಧವಾದುದು. ಕುಂಕುಮ ಮುಗಿದಾಗ 'ಮುಗಿಯಿತು' ಎಂದು ಹೇಳದೆ, 'ಹೆಚ್ಚಿತು' ಎಂದು ಹೇಳುವುದು ಒಂದು ಪ್ರಬಲ ನಂಬಿಕೆಯೇ ಸರಿ. 'ಕುಂಕುಮ' ಒಂದು 'ಭಾಗ್ಯ' ಎಂಬ ಅರ್ಥವನ್ನು ಇಂತಹ ನಂಬಿಕೆಯ ಕಾರಣದಿಂದ ಕೊಟ್ಟುಕೊಳ್ಳಲಾಗಿದೆ. ಸಂಖ್ಯೆಯಲ್ಲಿನ ಒಂದು ಮತ್ತು ಏಳನ್ನು ಅವುಗಳ ಹೆಸರಿಂದ ಕರೆಯದೆ, 'ಹೆಚ್ಚಿತು' ಎಂದೇ ಕರೆಯುವುದು ಕೂಡ ವಾಡಿಕೆಯಲ್ಲಿದೆ. ಇಲ್ಲೆಲ್ಲ ಜನಪದದ 'ಮಂಗಳ ಜೀವಿ' ಆಕಾಂಕ್ಷೆಯಾಗಿ ಹೊರಹೊಮ್ಮಿದೆ. ಭಯಮೂಲವಾದ ಭದ್ರತೆಯ ಗ್ರಹಿಕೆಯನ್ನೆ ಇಲ್ಲಿ ಕಾಣುತ್ತೇವೆ.

ಜನಪದದ ಹಿಂದಿರುವ ಜನಸಾಮಾನ್ಯರ ಒಂದು ಮನೋಲೋಕವೇ ಇಲ್ಲಿ ಬಿಚ್ಚಿಕೊಳ್ಳುತ್ತದೆ. ಸಾಮಾನ್ಯ ಗ್ರಹಿಕೆಗೂ ನಮ್ಮ ಈಗಿನ ಗ್ರಹಿಕೆಯ ನೆಲೆಗೂ ಘರ್ಷಣೆಯಾದರೆ ಅಚ್ಚರಿಯಲ್ಲ. ಪ್ರಾಣಿ ಸಂಬಂಧಿಯಾದ ನಂಬಿಕೆಗಳೂ ಇಲ್ಲಿ ಉಲ್ಲೇಖನಾರ್ಹ ವಿಷಯಗಳು. ಅದರಲ್ಲಿ ಒಂದು–ಕಾಗೆ ಅಡ್ಡಾದಿಡ್ಡಿ ಹಾರಿದರೆ/ಕೂಗಿದರೆ ಬೇಟೆಗೆ ಹೋಗುವುದನ್ನು ನಿಲ್ಲಿಸುವ ಸಂಪ್ರದಾಯ/ಆಚರಣೆ– ಅಂತಹ ವರ್ತನೆ 'ಅಪಶಕುನ' ಎಂಬುದು ಜನಪದರ ಅಭಿಪ್ರಾಯ. ಸಂಸ್ಕೃತಿಯಲ್ಲಿ ಇಂತಹ ಮನೋಭಾವ, ನಡವಳಿಕೆ ಏಕೆ? ಕಾರಣ: ಸಮಾಧಾನ ಅಥವಾ ವಿರಾಮ ಇರಬಹುದು. ಇದೆಲ್ಲವೂ ಒಂದು ಮನೋವಿಭ್ರಾಂತಿಗೆ ಸಂಬಂಧಿಸಿದ್ದು; `Psychical illusion' ಎಂದು ಇದನ್ನು ಕರೆಯಬಹುದು. ಈ ಬಗೆಯ ನಂಬಿಕೆಗಳು/ಆಚರಣೆಗಳು ಯಾರಿಗಾದರೂ ನೋವುಂಟು ಮಾಡುವಂಥವುಗಳಲ್ಲ; ಬೇಕಾದರೆ ಸೋಮಾರಿತನವನ್ನು ಬೆಳೆಸುವಂಥವು ಎಂಬುದಾಗಿ ಮಾತ್ರ ಹೇಳಬಹುದು. ಮುಂದುವರಿದು, ಜನ

ಇಂತಹ ನಡೆಯಲ್ಲಿ ತಮಗೆ ತಾವು ಮೋಸ ಮಾಡಿಕೊಳ್ಳುತ್ತಿದ್ದಾರೆ ಎಂದೂ ವ್ಯಾಖ್ಯಾನಿಸಬಹುದು ಇಂತಹ ನಂಬಿಕೆಗಳ ಗುಂಪಿಗೇ ಸೇರುವಂಥದು ಬೆಕ್ಕು/ಕೊತ್ತಿ ಅಡ್ಡಲಾದರೆ ಪ್ರಯಾಣ ನಿಲ್ಲಿಸುವ ಮಾತು. ಎಂದೋ ಒಂದು ದಿವಸ ಒಬ್ಬರಿಗೆ ಅಪಶಕುನವಾಗಿ ಕಂಡು ಪ್ರಯಾಣ ನಿಲ್ಲಿಸಿರಬಹುದು. ಆಮೇಲೆ ಅದು ಸಾರ್ವತ್ರಿಕ ಒಪ್ಪಿಗೆ ಪಡೆದಿದ್ದು ಮಾತ್ರ ಜನಪದರ ಅವೈಜ್ಞಾನಿಕ ನಿಲುವಿಗೊಂದು ಒಂದು ನಿದರ್ಶನ. ಅದರಿಂದ ವ್ಯಕ್ತಿ ಹಾನಿಯನ್ನು ಅನುಭವಿಸದಿರುವುದರಿಂದ ನಂಬಿಕೆ ಮುಂದುವರಿದಿರಬಹುದು. ಹಾಗೆ ನೋಡಿದರೆ ಸಂಸ್ಕೃತಿಯಲ್ಲಿ ನಕಾರಾತ್ಮಕ ವಿಷಯಗಳೇ ಎಷ್ಟೋ ಸಾರಿ ಹಿಡಿತದಲ್ಲಿಟ್ಟುಕೊಂಡಿರುವಂತೆ ತೋರುವುದು.

ಸಮಾಜದಲ್ಲಿ ವೃತ್ತಿ, ಜಾತಿ, ತಲೆಮಾರು ಆಧರಿಸಿ ಪಂಗಡಗಳನ್ನು ವಿಂಗಡಿಸುವಾಗಲೆಲ್ಲಾ 'ಜನಾಂಗ'/'ಜಾನಾಂಗಿಕ'/ 'ಜಾನಾಂಗೀಯ' ಪದಗಳನ್ನು ಬಳಕೆ ಮಾಡುವುದುಂಟು. ಆದರೆ ಇಲ್ಲಿ ಸೂಚಿತವಾಗಿರುವುದು `Community' ಯೇ ಹೊರತು, `Race' ಅಲ್ಲ; `Community' ಮತ್ತು `Race' ಸಮಾನಾರ್ಥಕಗಳಲ್ಲ; ಆದ್ದರಿಂದ ಇಂತಹ ವಿಭಜನೆ ಬಂದಾಗಲೆಲ್ಲಾ 'ಸಮುದಾಯ' ಎಂದೇ ಇಲ್ಲಿ ಬಳಸಲಾಗಿದೆ; ಸಾಂಸ್ಕೃತಿಕವಾಗಿ ಇದೇ ಸರಿಯಾದ ಪದ. ಸಮುದಾಯಗಳ ವಿವರ ಕೊಡುವಾಗ, ಅವುಗಳ ಮೂಲ ಕುರಿತ ಕೆಲವು ಮಾತುಗಳು ಬರುತ್ತವೆ, ಅವುಗಳನ್ನಿಲ್ಲಿ ದಾಖಲಿಸಲಾಗಿದೆ. ಮೂಲ ಕುರಿತ ಕಥೆಗಳು–ಭೌಗೋಳಿಕ ಮತ್ತು ಸಾಂಸ್ಕೃತಿಕ ಸಂಬಂಧವಾದವು– `False Etymology' –ತಪ್ಪು ನಿಷ್ಪತ್ತಿಗೆ ಸಂಬಂಧಿಸಿದವೆಂದು ಹೇಳಬೇಕಾಗುತ್ತದೆ. ಅಂದರೆ ಸಮುದಾಯದ ಹೆಸರಿಗೆ 'ಮೂಲ' ತಿಳಿಯದಿದ್ದಾಗ ಜನ ತಪ್ಪು ನಿಷ್ಪತ್ತಿಯನ್ನು ಕಟ್ಟುವುದು ಸಾಮಾನ್ಯ; ಇವೊತ್ತಿಗೂ ಅವನ್ನು ಬಿಡಿಸಲಾಗಿಲ್ಲ. ಐತಿಹಾಸಿಕ ಕಾಲದ ಅಂಶಗಳೂ, ವಲಸೆಯ ಪ್ರವೃತ್ತಿಯ ಆಶಯಗಳೂ ಇದಕ್ಕೆ ಸೇರ್ಪಡೆಯಾಗಿರುತ್ತವೆ. ಜಾನಪದದಲ್ಲಿ–ಅದರಲ್ಲಿಯೂ ಜನಪದ ಕಥೆಗಳಲ್ಲಿ ನಾಯಕರಾಗಿ ಬರುವ ಅನೇಕ ಪಾತ್ರಗಳು "ಅದುಮಿಟ್ಟ ಭಾವನೆಗಳ ಅಭಿವ್ಯಕ್ತಿ"ಗಳಾಗಿರುತ್ತವೆ. ಇದಕ್ಕೆ ಒಂದು ಒಳ್ಳೆಯ ಉದಾಹರಣೆ, 'ಕುಂಟ'; ಈ ಪದಕ್ಕೆ ಕಾಲಿಲ್ಲದವ ಎಂಬುದು ಮಾತ್ರ ಅರ್ಥವಲ್ಲ, ಭಾವನೆಯ ಪ್ರತಿನಿಧೀಕರಣವೂ ಆಗಿರುತ್ತದೆ.

ಪದ ಸಂಸ್ಕೃತಿಯಲ್ಲಿ ಎಲ್ಲವೂ ಒಂದೇ ರೀತಿಯಲ್ಲಿ ಇರುವುದಿಲ್ಲ; ವೃತ್ತಿಪದ ಸಂಸ್ಕೃತಿ ಇದಕ್ಕೆ ಒಂದು ನಿದರ್ಶನ. ಇಲ್ಲಿನ ಪದಗಳೇನೊ ಬೇರೆಯ ಪದಗಳ ಹಾಗೆಯೇ ಇರುತ್ತವೆ; ಅರ್ಥ ಮಾತ್ರ ಭಿನ್ನ ಹಾದಿಯದು. 'ಕುಂಟೆ' ಪದವನ್ನೇ ತೆಗೆದುಕೊಳ್ಳಿ; ಇದರ ಸಾಮಾನ್ಯ ಅರ್ಥ ಎಲ್ಲರಿಗೂ ಗೊತ್ತಿರುವಂಥದು–ಸ್ತ್ರೀವಾಚಕ ಎಂಬುದು ಸ್ಪಷ್ಟ. ನೇಕಾರ ವೃತ್ತಿಯಲ್ಲಿ ಇದು ಒಂದು ಪಾರಿಭಾಷಿಕ ಪದ; ಕಂಬಳಿ ನೇಯ್ಗೆಯ ಒಂದು ಉಪಕರಣ. ಹೀಗೆಯೇ ಬೇರೆಯ ವೃತ್ತಿಪದಕೋಶಗಳಲ್ಲಿಯೂ ಸಾಂಸ್ಕೃತಿಕ ವ್ಯತ್ಯಾಸಗಳು ಇರುತ್ತವೆ. ಪದ ಸಂಸ್ಕೃತಿಯ ಸಮುದಾಯ ಕುರಿತ ಪದಗಳಲ್ಲಿ ಒಂದು ವಿಶೇಷ ನಡಿಗೆಯನ್ನು ಗುರುತಿಸುತ್ತೇವೆ:

- ಪ್ರತಿ ಸಮುದಾಯದಲ್ಲಿಯೂ ವಿಶೇಷ ಪದಗಳ ಚಲಾವಣೆ;
- ಅಂತಹ ಪದಗಳ ಕಾರಣದಿಂದ ಸಮುದಾಯಜನ/ಸಂಸ್ಕೃತಿ ಮೂಲ ಅಲೆಮಾರಿ, ಆಮೇಲೆ ನೆಲೆಗೊಂಡ ವಿಚಾರ; ಹಾಗೆ ಆಗುವಾಗ ವಲಸೆ ಬರುವ ವಿಷಯವನ್ನು ಹೇಳುವಂಥದು; ಅಂದರೆ ವಲಸೆ ಸಂಸ್ಕೃತಿಗೆ ಸಂಬಂಧಿಸಿದ್ದು;
- ಈ ಸಂಸ್ಕೃತಿಗಳು ಹಾದು ಬರುವಾಗ ಪ್ರಾಚೀನ ಕಾಲ ಮತ್ತು ಐತಿಹಾಸಿಕ ಕಾಲಗಳಲ್ಲಿ ತನ್ನದಲ್ಲದ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗುವುದು. ಉದಾಹರಣೆಗೆ, 'ದ್ರಾವಿಡಾರ್ಯ' ಸಂಸ್ಕೃತಿಗಳ ಕೊಳುಕೊಡುಗೆ ಪದದ ಮೂಲಕ ವ್ಯಕ್ತಗೊಂಡಿರುವ ಬಗೆ– ಇಂತಹ ವಿಚಾರಗಳ ಉಲ್ಲೇಖ ಸಮುದಾಯ ಸಂಸ್ಕೃತಿಗಳ ಪರಿಕಲ್ಪನೆಯಲ್ಲಿದೆ.

ಒಟ್ಟು ಸಂಸ್ಕೃತಿಯ ವಿಶ್ಲೇಷಣೆಯಲ್ಲಿ 'ಪದಸಂಸ್ಕೃತಿ' ನೆರವಾಗುವ ಬಗೆಯಿದು; ನಿರ್ದಿಷ್ಟ ಜನ/ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲಲು ಪದಗಳು ಖಂಡಿತ ಸಹಾಯ ಮಾಡುತ್ತವೆ. ಜನರ ಸ್ವಭಾವ ನಿಲುವುಗಳೊಡನೆ ಬದಲಾದ ಕಾಲ ಮತ್ತು ಪರಿಸರಗಳು ಈ ಪದಗಳನ್ನು ಕುಂದಣಕ್ಕೆ ಹಾಕುತ್ತವೆ. ಬೇಡವಾದದ್ದು ಬಿಟ್ಟುಹೋಗುತ್ತಾ, ಬೇಕಾದದ್ದು ಸೇರಿಕೊಳ್ಳುತ್ತಾ ಹೋಗುವ ಪರಿಯಿದು. ಇದರಲ್ಲಿ ಒಳ್ಳೆಯದು, ಕೆಟ್ಟದ್ದರ ವಿವಕ್ಷೆ ಇರುತ್ತದೆ ಎಂದಲ್ಲ; ಅವರಿಗೆ ಕಂಡದ್ದು, ಒಪ್ಪಿತವಾದದ್ದು ಮತ್ತು ಸ್ವೀಕೃತವಾದದ್ದು ಮಾತ್ರ ಇಲ್ಲಿ ಕೆಲಸ ಮಾಡುತ್ತದೆ ಎಂದು ಅರ್ಥ;

ಸಮುದಾಯ ಸಂಸ್ಕೃತಿಗೆ ಸಂಬಂಧಿಸಿದಂತೆ ಶಾಸ್ತ್ರ/ಸಂಪ್ರದಾಯಗಳು ಕೇವಲ ಮೌಢ್ಯವನ್ನೇ ಬೋಧಿಸುವುದಿಲ್ಲ; ಅಂಥವು ಇದ್ದಾವು, ಅವು ಗಣ್ಯವೇ. ಆದರೆ ಮೂಲದಲ್ಲಿ ಇವು ಜನಪದರ ಮಾನಸಿಕತೆಗೆ ಸಂಬಂಧಿಸಿದವು; ಭಯ ಮತ್ತು ಬಾಂಧವ್ಯ ಇವಕ್ಕೆ ಮುಖ್ಯ ಕಾರಣಗಳು. ಮುಂದೆ ಏನಾಗುತ್ತದೆ ಎಂಬುದರ ಹಿನ್ನೆಲೆಯಲ್ಲಿ, ಭವಿಷ್ಯದಲ್ಲಿ ಸಮಾಧಾನದ ಚಿತ್ತವಷ್ಟೆ ನಿರೀಕ್ಷಿಸಬಹುದಾದ ಇದರ ಉದ್ದೇಶ. ಸಂಪುಟದ ಶಾಸ್ತ್ರ ಸಂಬಂಧದ ವಿಚಾರದಲ್ಲಿ ಇದನ್ನು ಅನ್ವಯ ಮಾಡಿಕೊಂಡರೆ ಸಾಕು. ವಿವಾಹೇತರ ಆಚರಣಾತ್ಮಕ ಸಂಸ್ಕೃತಿಯಲ್ಲಿ ಕಂಡುಕೊಂಡದ್ದು ಒಂದು ಅರ್ಥದಲ್ಲಿ ಭಯ, ಇನ್ನೊಂದು ಅರ್ಥದಲ್ಲಿ ಕಲ್ಪನೆಯನ್ನು ಹರಿಯ ಬಿಡುವ ಚಪಲ; ನಂಬಿಕೆ–ಅಪನಂಬಿಕೆಗಳ ಕಟ್ಟುವ ಸೌಧ; ಕ್ಷೇಮಕಾತರ ಮನಸ್ಸು; –ಶಾಸ್ತ್ರ ಸಂಬಂಧ ವಿಚಾರಕ್ಕೆ ಮುಗ್ಧ ಪ್ರತಿಕ್ರಿಯೆಗಳು ಇವು. ಒಂದು ರೀತಿಯಲ್ಲಿ ವಾಸ್ತವ, ಕಲ್ಪನೆ, ಮುಗ್ಧತೆ ಮತ್ತು ಭಯದಲ್ಲಿ ಕಟ್ಟಿದ ವೈಭವೀಕರಣದ ಶಾಸ್ತ್ರಸಂಭ್ರಮ; ಮೌಢ್ಯದ ನುಸುಳುವಿಕೆ ಇದ್ದೇಇದೆ. ಅಚಾನಕವಾಗಿ ಬಂದು ಸೇರಿದ ಎಷ್ಟೋ ವಿಷಯಗಳನ್ನು ಶೋಧಿಸಿ ಕೈಬಿಡಬೇಕಾಗಿದೆ ಎಂಬುದು ನಿಜ. ಆದರೆ ಅವು 'ಮೈಗಂಟಿದ ಚರ್ಮದಂತೆ' ಬಂದಿವೆ; ಪೃಥಕ್ಕರಿಸಿ ನೋಡುವುದು ಅಪೇಕ್ಷಣೀಯ, ಉಪಾದೇಯ ಕೂಡ.

ಜನಪದ ಸಂಸ್ಕೃತಿಯಲ್ಲಿ ಪದಗಳು ವ್ಯವಹರಿಸುವಾಗ ಸಂದರ್ಭಗಳು ಮತ್ತು ಹೊಸ ಪದಗಳು ಸೃಷ್ಟಿಯಾಗಿ ಬಿಡಬಹುದು. ಉದಾಹರಣೆಗೆ, 'ಕುಂಬಳ ಜೇನು', 'ಕುಂಬಾರ ಗಾಳಿ', 'ಕುಂಬಾರ ಸಾಲೆ', 'ಕುಂಬಾರ ಕೋಳಿ', 'ಸಾಲಾವಳಿ ಕುಕ್ಕೆ', 'ಧಾರೆ ಕುಕ್ಕೆ' ಮುಂತಾದವು. ಪದಸಂಸ್ಕೃತಿಯಲ್ಲಿ ಇಂಥವು ಹೊಸ ಪರಿಭಾಷೆಯನ್ನೆ ಸೃಷ್ಟಿಸಿವೆ; ಮಾತ್ರವಲ್ಲ, ಕನ್ನಡ ಭಾಷೆಯನ್ನು ಬೆಳೆಸಿವೆ. ಶೂದ್ರರ ಕೆಲವು ಒಳವರ್ಗಗಳಲ್ಲಿ ಉತ್ತರಕ್ರಿಯೆಯನ್ನು ಕುಂಬಾರರು ಮಾಡುವ ಉಲ್ಲೇಖವಿದೆ; ಇದು ಒಂದು ಸಾಂಸ್ಕೃತಿಕ ಸೋಜಿಗವೇ ಸರಿ. ಇದು ಜಾತಿ ಶ್ರೇಷ್ಠತೆಯ ವ್ಯಸನವನ್ನು ಒಡೆಯುವ, ಸಮಾನತೆಯನ್ನು ಉಂಟುಮಾಡುವ ಒಂದು ಸಂಕೇತವೆಂಬಂತೆ ತೋರುವುದು. ಮನಸ್ಸಿನ ಮೂಲೆಯಲ್ಲಿ ಇಂತಹ ಆಸಕ್ತಿ ಇದ್ದಿತೆಂಬುದನ್ನು ಇದು ಸ್ಪಷ್ಟಪಡಿಸುವುದು.

ಪದಗಳು ಕಾಲಕಳೆದಂತೆ, ಹೊಸಭಾಷೆ/ಸಂಸ್ಕೃತಿ/ಬಳಕೆಯ ವಸ್ತುಗಳ ಸಂಪರ್ಕಕ್ಕೆ ಜನ ಬಂದಂತೆ ಹೊಸದಾದ ಪದಗಳು ಸೃಷ್ಟಿಯಾಗುವುದು ಸಾಮಾನ್ಯ. ಇದಕ್ಕೆ ಅತ್ಯುತ್ತಮ ನಿದರ್ಶನ 'ಕುಟಿಕುಟಿ'/ಕೊಟೆಕೊಟೆ' ಪದಗಳು. ಇಪ್ಪತ್ತನೇ ಶತಮಾನದ ಆರಂಭದ ವರ್ಷಗಳಲ್ಲಿ 'ರಾಯಲ್ ಎನ್‌ಫೀಲ್ಡ್'(ಬುಲೆಟ್) ಮೋಟರ್ ಸೈಕಲ್ ರಸ್ತೆಗೆ ಬಂದಾಗ ಅನಕ್ಷರಸ್ಥ ಜನ ಅದರ ಹೆಸರನ್ನು ಗ್ರಹಿಸುವ ಸ್ಥಿತಿಯಲ್ಲಿರಲಿಲ್ಲ. ಆಗ ಅದರ ಶಬ್ದವನ್ನು ಗ್ರಹಿಸಿ 'ಕುಟಿಕುಟಿ'/'ಕೊಟೆಕೊಟೆ' ಪದಗಳನ್ನು ಬಳಸಿದರು. ಇದು ಹೇಳಿ ಕೇಳಿ ಅನುಕರಣ ಶಬ್ದಗಳು, ಆದರೂ ಅವು ನಿಜವಾದ ಪದಗಳಂತೆ ಚಾಲ್ತಿಗೆ ಬಂದುವು; ವಸ್ತು ಸ್ವೀಕರಣದೊಡನೆ ಭಾಷಾ ಸ್ವೀಕರಣವೂ ಆಯಿತು; ಒಟ್ಟಾರೆ ಸಾಂಸ್ಕೃತಿಕ ಸ್ವೀಕರಣವೆಂದೇ ಹೇಳಬೇಕು. ಆದರೆ ಪದ ಪರಭಾಷೆಯದ್ದಲ್ಲ, ನಮ್ಮ ಭಾಷೆಯದೇ; ಕುಟಿಕುಟಿ>ಕೊಟೆಕೊಟೆ, ಉ>ಂ; ಸ್ವರ ವ್ಯತ್ಯಯಕ್ಕೆ ನಿದರ್ಶನ.

ವಸ್ತುಗಳನ್ನು ಒಂದು ಪ್ರದೇಶದಿಂದ ಮತ್ತೊಂದಕ್ಕೆ ಸ್ವೀಕರಣ ಮಾಡಿಕೊಂಡಾಗ ಆ ಪ್ರದೇಶಗಳ ಹೆಸರುಗಳನ್ನು ಅವುಗಳೊಡನೆ ಆಮದು ಮಾಡಿಕೊಳ್ಳುವುದು ಸಾಮಾನ್ಯ. ಇದಕ್ಕೆ ಕೊಂಕಶಾಲೆ, ಕೊಯಮತ್ತೂರು ಸಣ್ಣ ಪದಗಳನ್ನೆ ತೆಗೆದುಕೊಳ್ಳಿ, 'ಶಾಲೆ' ಎಂದರೆ ಬತ್ತ, ಎರಡನೆಯದೂ ಬತ್ತದ ತಳಿಯೇ. 'ಕೊಂಗ' ಎಂದರೆ 'ಕೊಂಗನಾಡು' ಎಂದು ಅರ್ಥವಿದ್ದು, ಇದರಲ್ಲಿ ಕೊಯಮತ್ತೂರು, ಸೇಲಂ, ಕರ್ನಾಟಕದ ಭಾಗಗಳೂ ಇವೆ. ಕೃಷಿಸಂಸ್ಕೃತಿಗೆ ಸಂಬಂಧಿಸಿದಂತೆ ಇಂತಹ 'ಪದಯಾತ್ರೆ' ಸಾಮಾನ್ಯ; ಸಾಂಸ್ಕೃತಿಕ ಪರಿವರ್ತನೆ ಮತ್ತು ಸಂಕೀರ್ಣತೆಗೆ ಇವು ಒಳ್ಳೆಯ ನಿದರ್ಶನಗಳು.

ಪದ ಸ್ವೀಕರಣದಿಂದ ಸಂಸ್ಕೃತಿ ಸ್ವೀಕರಣವೂ, ಸಂಸ್ಕೃತಿ ಸ್ವೀಕರಣದಿಂದ ಪದ ಸ್ವೀಕರಣವೂ ಆಗಬಹುದು. ಇದು ಯಾವಾಗ, ಯಾವ ಕಾರಣ ನಿಮಿತ್ತ ಎಂದು ಹೇಳುವುದು ಕಷ್ಟವಾಗದು. ಜನ ಇವೊತ್ತು ಒಂದು ರೀತಿ ತಿರುಗಾಡಿದರೆ, ಅವೊತ್ತು ಇನ್ನೊಂದು ರೀತಿಯಲ್ಲಿ ಸಂಪರ್ಕಕ್ಕೆ ಬರುತ್ತಿದ್ದರು; ವಿಕಾಸ ನಿಧಾನ ಮತ್ತು ವಿರಳ ಆಗುತ್ತಿದ್ದುದುಂಟು. ಈಗ 'ಕೊಂಗ' ಪದವನ್ನೇ ತೆಗೆದುಕೊಳ್ಳೋಣ. 'ಕಣ'ದಲ್ಲಿ ಒಕ್ಕಣೆ ಮಾಡುವಾಗ ಭತ್ತ, ರಾಗಿ ಇತ್ಯಾದಿಗಳನ್ನು ತೂರಲು 'ಮೊರ'ವನ್ನು ಬಳಸುತ್ತಿದ್ದರು. ಹೆಚ್ಚಿನಮಟ್ಟಿಗೆ 'ಮೊರ'ವನ್ನು 'ಕೊಂಗ' ಎಂದೇ ಹೇಳುತ್ತಿದ್ದರು. ಈ 'ಕೊಂಗ' ಎಲ್ಲಿಯದು? ಪರಿಸರದಲ್ಲಿ ಇಲ್ಲದ ಪದವಿದು; 'ಕೊಂಗರು'ಗಳಿಂದ 'ಕೊಂಗ' ಬಂದಿರಬಹುದೆ? ಕೃಷಿ ಸಂಬಂಧವಾಗಿ ತಮಿಳುನಾಡಿನಿಂದ ಜನ ಇಲ್ಲಿಗೆ ಬಂದು ನೆಲೆಸಿರುವ ಉದಾಹರಣೆಗಳಿವೆ; ಇಷ್ಟಾದರೂ ಅವರು ಹೀಗೆ ಬರುವುದಕ್ಕಿಂತ ಮುಂಚೆಯೇ ಈ ಪದವಿದ್ದಂತೆ ಕಾಣುವುದು. ಅಲ್ಲಿಗೆ ಇದು 'ಕೊಂಕ' ಪದದಿಂದ ಬಂದಿರಬಹುದು; ಕೊಂಕ>ಕೊಂಗ ಆಗುವುದು ಕಷ್ಟವಲ್ಲ. 'ಕೊಂಕ್'/'ಕೊಂಕ' ಎಂದರೆ ವಕ್ರ, ಬಾಗಿರುವ, ಮಡಿಸಿದಂತೆ ತೋರುವ, ಚಪ್ಪಟೆ ಆಕಾರದ ಎಂಬುದಾಗಿ ಅರ್ಥಮಾಡಬಹುದು; 'ಮೊರ' ಈ ಎಲ್ಲದಕ್ಕೂ ಸಾಕ್ಷಿಯಾಗುವುದು. 'ಕೊಂಗು' ಪದಕ್ಕೂ ಮೂಲದಲ್ಲಿ 'ಕೊಂಕ್' ಇದ್ದು, ಇದೇ ಈ ಎಲ್ಲ ವ್ಯತ್ಯಾಸಕ್ಕೆ ಕಾರಣವಾಗಿರಬಹುದು. ಏಕೆಂದರೆ ದ್ರಾವಿಡ ಭಾಷೆಗಳಲ್ಲಿ ಕ,ಚ,ಟ,ತ,ಪ ಗಳೇ ಮೊದಲು ಇದ್ದು, ಆಮೇಲೆ ಗ,ಜ,ಡ,ದ,ಬ ಗಳಾಗಿ ಬಂದುದು ಗೊತ್ತೇ ಇದೆ. ಇದರ ಆಧಾರದ ಮೇಲೆಯೇ ಘೋಷ-ಅಘೋಷ ವರ್ಣಗಳ ವಿನಿಮಯ ಸೂತ್ರ ಚಾಲ್ತಿಗೆ ಬಂದುದು. ಒಟ್ಟಾರೆ ಸ್ಥಳೀಯವಾದ ಕಾರಣಕ್ಕಾಗಿಯೇ 'ಮೊರ'ದ ಪರ್ಯಾಯ ಪದವಾಗಿ 'ಕೊಂಗ' ಬಂದಿದೆ ಎಂಬುದನ್ನು ನಿಲ್ಲಿಸಲು ಸಾಧ್ಯವಾಗುತ್ತದೆ. ಪದಗಳೆರಡರ ನಡುವೆ ಸಮಾನ ಧ್ವನಿಮಾಗಳು ಬಂದರೆ ಒಂದು ಲುಪ್ತವಾಗಿ, ಎರಡೂ ಪದಗಳು ಒಂದೇ ಆಗಿ ಚಲಾವಣೆಗೆ ಬರುವುದುಂಟು; ಉದಾಹರಣೆಗೆ, ಕೊಂಕು ಕತ್ತಿ>ಕೊಂಗತ್ತಿ ಆಗಿರುವುದು. ಹಾಗೆಯೇ ಪದಗಳು ವ್ಯಂಗ್ಯದಿಂದ, ಆಲಂಕಾರಿಕವಾಗಿ ಬಳಕೆಯಾಗುವ ಸಂದರ್ಭಗಳು ಸಾಮಾನ್ಯ. ಇಂಥ ಕಡೆ 'ಪದಕಾವ್ಯ' ನಿರ್ಮಾಣವಾಗುತ್ತದೆ; ಇದಕ್ಕೆ ಕೊಂಕುನುಡಿ, ಕೊಂಕುಮಾತು, ಕೊಂಕು ನೋಟಗಳನ್ನೇ ನೋಡಬಹುದು. ಇಲ್ಲಿ 'ಕೊಂಕು' ಪದ 'ವಕ್ರತೆ'ಯನ್ನು ಹೇಳುತ್ತಿದ್ದರೂ, ಆಡುಮಾತಿನ ತಿರುವುಗಳಿಂದಾಗಿ ವ್ಯಕ್ತಿಯ ಭಾವ ಪ್ರವೃತ್ತಿಗಳನ್ನೆ ಪ್ರತಿನಿಧಿಸಬಹುದು; ಅದು ಒಳ್ಳೆಯದಾಗಿರಬಹುದು ಅಥವಾ ಕೆಟ್ಟದ್ದಾಗಿರಬಹುದು.

ಆಚಾರಣಾತ್ಮಕ ಜಾನಪದ ಅನೇಕ ಸಾಂಸ್ಕೃತಿಕ ವಿವೇಚನಾ ವಿಷಯಗಳಿಗೆ ನಿದರ್ಶನಗಳನ್ನು ಒದಗಿಸುತ್ತದೆ. ಪ್ರಾದೇಶಿಕ ವ್ಯತ್ಯಾಸಗಳಿಗೆ ಹೊರತಾದ ಅಂಶಗಳು ಇವು. ಅದರಲ್ಲಿಯೂ ಬುಡಕಟ್ಟು ಸಂಸ್ಕೃತಿಯಲ್ಲಿ ಇಂಥವು ಹೆಚ್ಚು. ಕುಡಿಯರ ಸಮುದಾಯಕ್ಕೆ ಸಂಬಂಧಿಸಿದ ಒಂದು ಉದಾಹರಣೆ ಇಲ್ಲಿದೆ. ಸತ್ತ ಮೇಲಿನ ಆಚರಣೆ ಸಾಮಾನ್ಯವಾಗಿ ಹನ್ನೊಂದನೆಯ ದಿನದ್ದು; ಆದರೆ ಇವರಲ್ಲಿ ಏಳನೇ ದಿನ ಮುಖ್ಯ, ಅದರಲ್ಲಿಯೂ ಈ ದಿನದಲ್ಲಿ ನಡೆವ ದೀಪ ಇಡುವ ಆಚರಣೆ ಗಮನ ಸೆಳೆಯುವಂಥದು; ಬೇರೆಡೆ ಸಿಗದಂಥದು. ಮೂರು, ಏಳು, ಹನ್ನೊಂದು ಇಂಥ ಬೆಸಸಂಖ್ಯೆಗಳು ಅನೇಕ ಸಾಂಸ್ಕೃತಿಕ ಮಹತ್ವವನ್ನು ಹೊಂದಿವೆ; ಇದರಲ್ಲಿನ 'ದೀಪ'ದ ಸಂಕೇತ ಅಂಥದರಲ್ಲಿ ಒಂದು.

ನಿಘಂಟಿನಲ್ಲಿ ಮೊದಲ ಬಾರಿಗೆ ಎನ್ನುವಂತೆ ಅನೇಕ ಬುಡಕಟ್ಟುಗಳ ಸಂಸ್ಕೃತಿ/ಸಮುದಾಯಕ್ಕೆ ಸಂಬಂಧಿಸಿದಂತೆ ಪದಗಳಿವೆ. ಆ ಪದಗಳು ಕೇವಲ ಅರ್ಥಕ್ಕೆ ಸಂಬಂಧಿಸಿರದೆ, ಸಂಸ್ಕೃತಿ ಪರಿವೇಷವೊಂದು ಅವುಗಳ ಸುತ್ತ ಇರುತ್ತದೆ. ಇವುಗಳನ್ನು ಸೂಕ್ತ ರೀತಿಯಲ್ಲಿ ಇಲ್ಲಿ ಪರಿಚಯಿಸಲಾಗಿದೆ. 'ಪದಸಂಸ್ಕೃತಿ'ಯ ಅರ್ಥ ಇಂತಹ ಕಡೆ ನೇರ ಪ್ರತಿಪಾದನೆಗೆ ಇಳಿಯುತ್ತದೆ. ಈ ನಿಘಂಟಿನ ಗುಣ ಮತ್ತು ಶ್ರೇಷ್ಠತೆ ಇರುವುದು ಇಂತಹ ಸಾಂಸ್ಕೃತಿಕ ಪದಗಳ ವ್ಯತ್ಯಾಸ ಮತ್ತು ಸ್ವಭಾವವನ್ನು ಕುರಿತು ವಿಚಾರ ಮಾಡಿರುವುದರಲ್ಲಿ. ಬೇರಾವ ಡಿಕ್ಷನರಿಯಲ್ಲಿಯೂ ಇಂತಹ ಪ್ರಯೋಗ ಇರಲಿಲ್ಲ. ಈ ಕಾರಣಕ್ಕಾಗಿ ಪ್ರಸ್ತುತ ನಿಘಂಟು ಒಂದು ಮಾದರಿ. ಹೊಸ ಆಲೋಚನೆಯ ದಿಕ್ಕನ್ನು ಇದು ನಿಸ್ಸಂದೇಹವಾಗಿ ಹುಟ್ಟುಹಾಕಿದೆ.

ಅನೇಕ ಪದಗಳು ಅವುಗಳ ಸಮಾನಾರ್ಥದ ಜೊತೆಗೆ, ನಾನಾ ಬಗೆಯ ವಿಶೇಷ ಅರ್ಥಗಳನ್ನೂ ಧ್ವನಿಸುವುದು ಸೋಜಿಗ ತರುವ ವಿಷಯ. ಅದಕ್ಕೆ ವಿಶೇಷ ಪದಗಳೇ ಆಗಬೇಕಾದ್ದಿಲ್ಲ; 'ಕುರಿ' ಅಂತಹ ಸಾಮಾನ್ಯ ಪದವೇ ಸಾಕು. ಇದಕ್ಕೆ ಭೌತಿಕವಾದ ಒಂದು ಅರ್ಥವಿದ್ದರೆ, ಸಾಂಸ್ಕೃತಿಕವಾಗಿ ಅನೇಕ ಅರ್ಥಗಳಿವೆ; ಕ್ರಮೇಣ ಒಂದು ಪ್ರತಿಮೆಯೊ ರೂಪಕವೊ ಆಗಿಬಿಡಬಹುದು. ಅದರ ವಾಸ್ತವಾರ್ಥ 'ಬೇಯು'(ಆಹಾರ ಪದಾರ್ಥ ಜೊತೆ); ನೀರು

ಬಹಳ ಶಾಖದಿಂದ 'ತಕತಕ' ಎಂದು ಏರಿಳಿತ ಉಂಟಾಮಾಡುವುದು, ಉಕ್ಕಿಬರುವುದು; 'ಕುದಿ ಬಂದಿದೆ' ಎಂದರೆ 'ಪಾಕ'ಕ್ಕೆ ಬಂದಿದೆ ಎಂದು; ನೀರು ಉಕ್ಕಿ ಬಂದರೆ ಅಕ್ಕಿ ಹಾಕುವ ಸಮಯ ಎಂದು ಅರ್ಥ. ಆದರೆ ವಿಶೇಷಾರ್ಥಗಳು ನಾನಾ ತೆರನಾಗಿವೆ: ಸ್ವಭಾವಕ್ಕೆ, ಆಚಾರಣೆಗೆ ಅದು ವಿಧಿ ಅಥವಾ ಪ್ರತಿನಿಧಿ ಕೂಡ; ಹೊಟ್ಟೆಕಿಚ್ಚು, ಹಂತ, ಚಿಂತೆ, ಸಮಯ, ಮುಹೂರ್ತ, ಗುಳಿ, ಕೆಟ್ಟಕಣ್ಣು, ದೈವಸ್ಥಾಪನೆ, ಸೇಡಿನ ಮಾತು ಇತ್ಯಾದಿ ಬೇರೆ ಇವೆ. ಒಂದು ಸಣ್ಣ ನಿದರ್ಶನದ ಮೂಲಕ ಜನಪದ ಸಂಸ್ಕೃತಿಯ ಮಾನವ ಸಂಬಂಧಿ ವ್ಯವಹಾರದ ಕೆಲವು ಮುಖಗಳನ್ನು ಪರಿಚಯಿಸಲು ನೆರವಾಗುವುದು.

ಪದ ಮತ್ತು ಅರ್ಥಗಳನ್ನು ಗುರುತಿಸುವಾಗ, ಅದರಾಚೆ ಆ ಪದ ಕೆಲಸ ಮಾಡುತ್ತದೆ ಎಂದು ಹೇಳುವಾಗ, 'ಬಳಕೆಯ ಸಂದರ್ಭಗಳು' ಮತ್ತು 'ಬದಲಾದ ಆಶಯಗಳು' ಮುಖ್ಯವಾಗುತ್ತವೆ. ಬಳಕೆಯ ಸಂದರ್ಭಗಳು ಬೇರಾದಂತೆ ಆಶಯಗಳೂ ಬೇರಾಗಬಹುದು. ಬಳಕೆಯ ಸಂದರ್ಭಗಳು ಅದೇ ಇದ್ದು, ಆಶಯ-ಉದ್ದೇಶಗಳು ಬೇರಾಗುವ ಸಾಧ್ಯತೆಯೂ ಇರುತ್ತದೆ. ಕೆಲವೊಮ್ಮೆಯಂತೂ ಹೊಸ ಸಂದರ್ಭ ಮತ್ತು ಹೊಸ ಆಶಯಗಳೇ ಬಂದುಬಿಡಬಹುದು. ಇದಕ್ಕೆ ಸೊಗಸಾದ ಉದಾಹರಣೆ, 'ಕುಲಗೆಟ್ಟು ಹೋಗು' ಎಂಬ ನುಡಿಗಟ್ಟು. ಇದು ಕುಲ/ಜಾತಿ ವ್ಯವಸ್ಥೆಯನ್ನು ದಾಟಿ ಅರ್ಥಕೊಡುತ್ತದೆ ಎಂಬುದನ್ನು ನೋಡುವುದು ಉಪಯುಕ್ತ ವಿಚಾರ. ನುಡಿಗಟ್ಟೇನೊ 'ನಕಾರಾತ್ಮಕ' ಶೈಲಿಯಲ್ಲಿದೆ; 'ಜಾತಿಗೆಟ್ಟು ಹೋಗು' ಎಂಬ ಪರ್ಯಾಯ ಮಾತು ಇದೆ. ಇದರಲ್ಲಿ 'ಜಾತಿ'ಯನ್ನು ಒಡೆಯುವ ಮಾತಿದೆಯೇ ಎಂಬುದು ಪ್ರಶ್ನೆ; ಏಕೆಂದರೆ 'ಜಾತಿ' ಕೆಡ್ತಾಯಿದೆ ಎಂಬ ಸಿಟ್ಟಿನಿಂದಲೊ ಕನಿಕರದಿಂದಲೊ ಹೇಳಿದ ಮಾತು ಇದಾಗಿರಬಹುದು. ಅಲ್ಲದೆ, ಹಾಗೆ 'ಕೆಟ್ಟು ಹೋದವ'ನ ನಡವಳಿಕೆ ವ್ಯವಸ್ಥೆಯ ವಿರುದ್ಧ ರೂಪಿತವಾದುದೊ ಅಥವಾ ಆಕಸ್ಮಿಕವಾಗಿ ಸಂಭವಿಸಿದ ವಿಘಟನಾ ವಿಷಯವೊ ಸ್ಪಷ್ಟವಾಗುವುದಿಲ್ಲ. ಆದರೆ ಒಂದು ಮಾತ್ರ ಸತ್ಯ, ಈ ಬಗೆಯ ಪದಗಳು/ನುಡಿಗಟ್ಟುಗಳು ವೈಯಕ್ತಿಕ ಅಥವಾ ಸಾಂಸ್ಕೃತಿಕ ಸಂಘರ್ಷವನ್ನು, ಅದರಿಂದುಂಟಾಗುತ್ತಿರುವ ಬಿರುಕುಗಳನ್ನು ಅನಾವರಣ ಮಾಡುತ್ತಿರುವ ವಿಷಯ.

ಬಣ್ಣಗಳನ್ನು ಸೂಚಿಸುವ ಪದಗಳದೇ ಒಂದು ಪ್ರತ್ಯೇಕ ಇತಿಹಾಸ. ಆಯಾಯ 'ಪದಬಣ್ಣ'ಗಳನ್ನು ಆಯಾಯ ಸಂದರ್ಭಕ್ಕೆ ಅನುಗುಣವಾಗಿ ದುಡಿಸಿಕೊಳ್ಳುವುದೂ ಇದೆ. ಆಗ ಆ ಪದಗಳು ತಮಗಿರುವ ಒಂದೇ ಅರ್ಥದಲ್ಲಿ ನಿಲ್ಲದೆ, ನಾನಾರ್ಥಗಳನ್ನು ಪಡೆಯುವುದು ವಾಡಿಕೆ. ಈಗ 'ಕೆಂಪು' ಎಂಬ ಪದವನ್ನೇ ತೆಗೆದುಕೊಳ್ಳಿ. ಇದು ಏಳು ಬಣ್ಣಗಳಲ್ಲಿ ಒಂದು; ನಿರ್ದಿಷ್ಟ ಸಂದರ್ಭ, ಸನ್ನಿವೇಶಕ್ಕೆ ಅದರ ಅರ್ಥವಿರುತ್ತದೆ. ಕೆಲವೇಳೆ ಮೂಲಾರ್ಥವನ್ನು ಕಳೆದುಕೊಂಡು, ಇಲ್ಲವೆ ಮೂಲಾರ್ಥವನ್ನು ಇಟ್ಟುಕೊಂಡು ಮೇಲಿನ/ಮುಂದಿನ ಅರ್ಥಕ್ಕೆ ಅದು ಜಿಗಿಯಬಹುದು. ಹಾಗೆ 'ಜಿಗಿಯುವ' ಹಾಗೆ ಆ ಪದಗಳನ್ನು ಬಳಸಿಕೊಳ್ಳಲಾಗುವುದು. ಅದರಲ್ಲಿಯೂ ಯಕ್ಷಗಾನ ಬಯಲಾಟಗಳಲ್ಲಿ, ರಂಗಭೂಮಿಯ ಪಾತ್ರ ಪ್ರದರ್ಶನಗಳಲ್ಲಿ ಬಣ್ಣದ ವಹಿವಾಟು ಹೆಚ್ಚು. ಯಕ್ಷಗಾನಗಳಲ್ಲಿ ಕಣ್ಣಿನ ಸುತ್ತ ಕೆಂಪು ಬಣ್ಣ ಬಳಿದಿದ್ದರೆ, ಅದು ಆ ಪಾತ್ರದ ಆಕ್ರೋಶ, ಸಿಟ್ಟು, ಕೋಪ ಮುಂತಾದ ಆಂಗಿಕಾಭಿನಯಗಳಿಗೆ ಸೂಚಿಯಾಗುತ್ತದೆ. ಇಲ್ಲಿ 'ಕೆಂಪು' ಬಣ್ಣ ಮೂಲಾರ್ಥಕ್ಕಿಂತ ಬೆಳೆದಿರುತ್ತದೆ. ಹೀಗೆ ಸಾಂದರ್ಭಿಕವಾಗಿ ಪ್ರತಿ 'ಬಣ್ಣ' ಸೂಚಕ ಪದವೂ ಒಂದು ಸಂಕೇತದಂತೆ ಭಾಸವಾಗುವುದು ಸಹಜ.

ತೀರ ಆಧುನಿಕವೆನಿಸಬಹುದಾದ ಜಾಗತೀಕರಣದಂತಹ ವಿಷಯಗಳು ಹಲವು ಪದಗಳ ಸೃಷ್ಟಿಗೆ ಕಾರಣವಾಗುವುದು ಸಹಜ. ಜಾಗತೀಕರಣದ ಕಲ್ಪನೆಯನ್ನು ಅರ್ಥವತ್ತಾಗಿ ಧ್ವನಿಸುವಂಥ 'ಕೊಳ್ಳುಬಾಕ' ಪದ ಭಾಷಾ ಸಂಸ್ಕೃತಿಗೆ ಈಚೆಗೆ/ಆಮೇಲೆ ಸೇರ್ಪಡೆಯಾದಂಥದು. ಇದು 'ಹೊಟ್ಟೆಬಾಕ' ಎಂಬ ಹಳೆಯ ಪದದ ಸಾದೃಶ್ಯದ ಮೇಲೆ ಸೃಷ್ಟಿಯಾದಂಥದು. 'ಹೊಟ್ಟೆಬಾಕ' ಪದ ಅತಿಯಾಗಿ ತಿನ್ನುವುದನ್ನು ಪ್ರತಿಮಿಸಿದರೆ, 'ಕೊಳ್ಳುಬಾಕ' ಅತಿಯಾಗಿ ಕೊಳ್ಳುವ ಸಂಸ್ಕೃತಿಗೆ ಸಂಕೇತವಾಗುವುದು. 'ಕೊಳ್ಳುಬಾಕ' ಸಂಸ್ಕೃತಿ ಇವೊತ್ತು ಎಲ್ಲಕಡೆ ಕಾಣಿಸಿಕೊಂಡಿರುವಂಥದು. ಒಂದು ರೀತಿಯಲ್ಲಿ ಇದು 'ಗ್ಲೋಬಲ್ ಪ್ರಾಬ್ಲೆಮ್'; ಜಾಗತಿಕ ಸಮಸ್ಯೆ, ಇದನ್ನೇ ನಾವು 'ಸಾಂಸ್ಕೃತಿಕ ವಸಾಹತು' ಎಂದು ಕರೆಯುವುದು. ಈ 'ಕೊಳ್ಳುಬಾಕ' ಸಂಸ್ಕೃತಿ ಜಗತ್ತಿನಾದ್ಯಂತ ಕಂಡು ಬರುತ್ತಿರುವ 'ಕಬಳಿಸು'/'ಆಕ್ರಮಿಸು'ವ ರೋಗ. ಇದನ್ನು ನಾವು 'ಸಾಂಸ್ಕೃತಿಕ ವಸಾಹತುಶಾಹಿ' ಎಂದು ಕರೆಯುವಾಗ, ಇದು ರಾಜಕೀಯ ಅಥವಾ ಬೌದ್ಧಿಕ ಅಥವಾ ಆರ್ಥಿಕ ಆಕ್ರಮಣ ಕಾರಣದಿಂದಾಗಿ ಹುಟ್ಟಿಕೊಂಡಿದ್ದು ಎಂಬುದನ್ನು ಮರೆಯಬಾರದು. ಇದನ್ನು ಸೂಚಿಸುತ್ತಿರುವ 'ಕೊಳ್ಳುಬಾಕ' ಪದ ಶೋಷಣೆಯ ಸದ್ದಿಲ್ಲದ ಆಕ್ರಮಣವನ್ನು ಕೂಡ ಹೇಳುತ್ತಿರಬಹುದು. ಮಧ್ಯಮ

ಮತ್ತು ಕೆಳವರ್ಗದ ಮೇಲೆ ಆಕ್ರಮಣ ಮಾಡಿ ಹಿಡಿತದಲ್ಲಿರಿಸಿಕೊಳ್ಳುವ ಪ್ರಕ್ರಿಯೆ ಎಂಬುದು ಸ್ಪಷ್ಟವೇ ಇದೆ. ಒಂದು ಪದ ಸಮಾಜ ಅಥವಾ ಸಂಸ್ಕೃತಿಯ ಪ್ರತಿಬಿಂಬ ಅಥವಾ ಗತಿಬಿಂಬ ಹೇಗಾಗುತ್ತದೆ ಎಂಬುದಕ್ಕೆ 'ಕೊಳ್ಳುಬಾಕ' ಒಂದು ಒಳ್ಳೆಯ ಪದನಿದರ್ಶನ.

ಪದ ಅಥವಾ ನುಡಿಗಟ್ಟು, ಯಾವುದೇ ಇರಲಿ ಬಳಕೆಯ ಸಂದರ್ಭಗಳು ಮುಖ್ಯವಾಗಿರುತ್ತವೆ ಎಂಬುದನ್ನು ಹೇಳಿಕೊಳ್ಳುತ್ತಲೇ ಬರಲಾಗಿದೆ. ನುಡಿಗಟ್ಟಿನ ವಿಷಯಕ್ಕೆ ಬಂದರೆ, ಕೆಲವಾದರೂ ನಡೆದ ಘಟನೆಗಳ, ಪ್ರಸಂಗಗಳ ಹಿನ್ನೆಲೆ ಇರಬಹುದು. ಆಮೇಲೆ ಕಾಲದ ಮೂಲಕ ಹರಿದು ಬರುವಾಗ ಮೂಲ ಸಂದರ್ಭಗಳು ಕಳೆದುಹೋಗಿ, ಪರಿಣಾಮ ಮಾತ್ರ ಉಳಿದು ಬರಬಹುದು; ಉದಾಹರಣೆಗೆ, 'ಕೊಳ್ಳಿ ಹೊಕ್ಕ ಮನೆಯಂತೆ' ಎಂಬ ನುಡಿಗಟ್ಟು, ನಡೆದು ಹೋದ ಅಪಾಯದ ಘಟನೆ, ಆಮೇಲೆ ಉಪಮೆಯಾಗಿ, ಹೋಲಿಕೆಯಾಗಿ, ಅಂತಹ ಆರೋಪಿತ ಅರ್ಥವನ್ನು ಪ್ರತಿಮಿಸುತ್ತ ಬಂದಿರುವ ಸಾಧ್ಯತೆ ಹೆಚ್ಚು.

ನುಡಿಗಟ್ಟುಗಳಂತೆ ತೋರುವ ಅನೇಕ ಉಲ್ಲೇಖಗಳು ಗಾದೆಗಳೂ ಆಗಿರುವುದೊಂದು ವಿಶೇಷ. ಜಾನಪದ ಪ್ರಕಾರಗಳ ವಿಭಜನಾತ್ಮಕ ನೆಲೆಗಳನ್ನು ಕುರಿತು ಮಾತನಾಡುವಾಗ ಇಂತಹ ಸಮಸ್ಯೆಗಳು ತಲೆದೋರಿರಬಹುದು. ನುಡಿಗಟ್ಟುಗಳು ಅನೇಕ ಬಾರಿ ಚಿಕ್ಕವಾಗಿರುತ್ತವೆ; ಅವು ಗಾದೆಗಳಾಗುವ ಸಂದರ್ಭದಲ್ಲಿ ದೀರ್ಘತೆ ಪಡೆದಿರುತ್ತವೆ. ಗಾದೆಗಳ ಸಾಮಾನ್ಯ ಲಕ್ಷಣಗಳಂತೆ ಪೂರ್ವೋಕ್ತ ಸಮತೋಲನ ಅಭಿವ್ಯಕ್ತಿಯಲ್ಲಿ ಇದನ್ನು ಕಾಣುತ್ತೇವೆ. ನುಡಿಗಟ್ಟು ಪದಗಳಿಗೆ ಹೀಗೆ ಒಡೆದು ಹೇಳುವ ಅಗತ್ಯವಿರುವುದಿಲ್ಲ; 'ಕೊಂಕಣ ಸುತ್ತಿ ಮೈಲಾರಕ್ಕೆ ಬಂದಂತೆ' ನುಡಿಗಟ್ಟಾಗಿಯೂ, ಅದೇ ವೇಳೆಯಲ್ಲಿ ಗಾದೆಯಾಗಿಯೂ ಬಳಕೆಯಾಗಿರುವುದುಂಟು. ಈ ನುಡಿಗಟ್ಟುಗಳೂ, ಗಾದೆಗಳೂ 'ಬಳಸುದಾರಿ'ಯನ್ನು ಕುರಿತಂಥವು; ವಿವರಣೆ ಅನಿವಾರ್ಯ.

ನುಡಿಗಟ್ಟುಗಳು ಭಾಷೆಯ, ಅದರಲ್ಲಿಯೂ ಆಡುಮಾತಿನ ಭಾಗವಾಗಿ ಬಂದಿರುವಂಥವು; ಭಾಷೆ ಸಂಸ್ಕೃತಿಯ ಭಾಗವಾಗಿರುವುದರಿಂದ, ನುಡಿಗಟ್ಟುಗಳೂ ಸಂಸ್ಕೃತಿಯನ್ನು ಮೈಮೇಲೆ ಎಳೆದುಕೊಳ್ಳುತ್ತವೆ. ನುಡಿಗಟ್ಟುಗಳು ಮಾತನಾಡುವಾಗಿನ ಪದ ಜೋಡಣೆಯ ಸಹಜತೆಯಂತೆ ತುಂಬ ಸಲೀಸಾಗಿ, ಹಾಯಾಗಿ ವರ್ತಿಸುತ್ತವೆ. ಸೃಷ್ಟಿ ಮತ್ತು ಬಳಕೆಯ ಎರಡೂ ಸಂದರ್ಭಗಳಲ್ಲಿಯೂ ಇದಕ್ಕೆ ಅನುಭವವೇ ಕಾರಣ; ಹಾಗೆ ನೋಡಿದರೆ ನುಡಿಗಟ್ಟುಗಳು ಗಾದೆಗಳು ಹೆಚ್ಚಿನ ಅನುಭವ ಇರುವವರಲ್ಲಿಯೇ ಅಧಿಕ ಬಳಕೆಯನ್ನು ಹೊಂದಿರುತ್ತವೆ. ನುಡಿಗಟ್ಟುಗಳಾಗಲಿ, ಗಾದೆಗಳಾಗಲಿ ಪದಗಳ ಆಕರ್ಷಕ ಜೋಡಣೆಯಷ್ಟೇ; ಪದ ಸಂಸ್ಕೃತಿಯ ಗುಟ್ಟು ಪದಗಳಲ್ಲಿಯಂತೆಯೇ ನುಡಿಗಟ್ಟುಗಳಲ್ಲೂ ಭದ್ರವಾದ ನೆಲೆಗಟ್ಟನ್ನು ಹೊಂದಿರುವುದು ಸ್ಪಷ್ಟವೇ ಇದೆ. ಈಗ ಇದಕ್ಕೆ ಉದಾಹರಣೆಗಳಾಗಿ, 'ಕುಂಭಕರ್ಣ ನಿದ್ದೆ' ಮತ್ತು 'ಕುಂಭದ್ರೋಣ ಮಳೆ' ಪದಗಳನ್ನೇ ತೆಗೆದುಕೊಳ್ಳಬಹುದು. ಅತಿಯಾಗಿ ನಿದ್ದೆ ಮಾಡುವವರಿಗೆ ಸಂಬಂಧಿಸಿದ್ದು ಮೊದಲನೆಯದು, ಅತಿಯಾದ ಮಳೆಗೆ ಸಂಬಂಧಿಸಿದ್ದು ಎರಡನೆಯದು. ಇವೆರಡೂ ಇವೊತ್ತಿಗೂ ಬಳಕೆಯಲ್ಲಿರುವ ಪದಗಳು; ಎರಡನೆಯದಕ್ಕೆ ಕಾರಣ ತಿಳಿಯದು. ಎರಡೂ ಪದಗಳು ಗುಣ, ಸ್ವಭಾವವನ್ನು ತಿಳಿಸುವಂಥವು; ಇವೇನೂ ಆಕಸ್ಮಿಕವಲ್ಲ; ಕಾಲಾನುಗುಣ್ಯ.

ಪ್ರದೇಶ ನಾಮಗಳೂ ಉಲ್ಲೇಖಗೊಂಡಿವೆ; ಈ ಸಂದರ್ಭದಲ್ಲಿ ಮೂರು ರೀತಿಯ ಅರ್ಥ: ಭೌಗೋಳಿಕ, ಜನ ಅಥವಾ ಸಮುದಾಯ; ಸಂಸ್ಕೃತಿ ಪದಕ್ಕಿರುವ ಅರ್ಥ ಇದ್ದೇ ಇರುತ್ತದೆ. ಜನ ಸಮುದಾಯದ ಹರಿವು ಮತ್ತು ಸಂಸ್ಕೃತಿ ಸ್ವೀಕರಣ ಪ್ರಕ್ರಿಯೆಗಳನ್ನು ಉಲ್ಲೇಖಿಸಲಾಗಿದೆ. ಜೊತೆಗೆ ಪೌರಾಣಿಕ ಕಥೆಯ ಉಲ್ಲೇಖಗಳೂ, ಆಳುತ್ತಿದ್ದವರ ವಿವರಗಳೂ ಕೆಲವೊಮ್ಮೆ ಕಾಣಿಸಿಕೊಳ್ಳುವುದುಂಟು. ಪದಕ್ಕಿರುವ ವಿವಿಧ ಅರ್ಥಮುಖಗಳನ್ನು ಹೇಳುವುದು ಈ ಎಲ್ಲದರ ಉದ್ದೇಶ, ಅಷ್ಟೆ. ಇಂತಹ ಎಷ್ಟೋ ಪ್ರದೇಶ ನಾಮಗಳು ಸಮುದಾಯ ಸೂಚಿಗಳೂ, ಸಂಸ್ಕೃತಿ ಸೂಚಿಗಳೂ ಆಗಿರುತ್ತವೆ ಎಂಬುದನ್ನು ಮರೆಯಬಾರದು.

ಸಾಮಾನ್ಯ ಪರಿಕಲ್ಪನೆಯಂತೆಯೇ ಹೋದರೂ, ಊರಿನ ಹೆಸರುಗಳು ನಮ್ಮೆದುರು ಕೆಲವು ಸಮಸ್ಯೆಗಳನ್ನು ಎರಚುತ್ತವೆ. ಊರಿನ ಹೆಸರೊಂದು ಒಂದಕ್ಕಿಂತ ಹೆಚ್ಚಿನ ಸಂದರ್ಭಗಳಲ್ಲಿ ಸಿಕ್ಕುವುದುಂಟು. ಆಗ ಅರ್ಥ ಒಂದೇ ಆಗಿರುವುದಿಲ್ಲ; ಅರ್ಥಕ್ಕೆ ಅನುಗುಣವಾದ ಅನ್ವಯ; ಅದರಲ್ಲಿ ನಿಜವಾದ ಸಾಂಸ್ಕೃತಿಕ ಕಾಳಜಿಗಳು ಇರುವಂತೆಯೇ, ಅನುಕರಣ ಅಂಶಗಳು ಕೂಡ ಇರುತ್ತವೆ; ಜೊತೆಗೆ ಸ್ಥಳೀಯ/ಪ್ರಾದೇಶಿಕ ನಿಲುವುಗಳು ಇರುತ್ತವೆ. ಆಗ ಅದನ್ನು

'ದ್ವಿರುಕಿ' ಎಂದು ಒಗೆಯದೆ, 'ಭಿನ್ನಮುಖಿ' ಎಂದು ತೆಗೆದುಕೊಂಡು ಪದಾರ್ಥ ವಿಶ್ಲೇಷಣೆ ಮಾಡಬೇಕಾಗುತ್ತದೆ.

ಹಿಂದಿನ ಸಂಪುಟಗಳಲ್ಲಿ ಕಂಡುಬರುತ್ತಿದ್ದ ಸಾಮಾನ್ಯ ಧ್ವನಿ ವ್ಯತ್ಯಾಸಗಳು ಈ ಸಂಪುಟದ ಪದಗಳಲ್ಲಿಯೂ ಮುಂದುವರಿದಿವೆ; ಅಷ್ಟೇ ಅಲ್ಲ ದ್ರಾವಿಡ ಭಾಷೆಗಳಲ್ಲಿಯೇ ಇವು ಸಾಮಾನ್ಯ ವ್ಯತ್ಯಾಸಗಳು; ಕನ್ನಡದಲ್ಲಿಯಂತೂ ಈ ವ್ಯತ್ಯಾಸಗಳು ಪ್ರಾತಿನಿಧಿಕವೆನಿಸುತ್ತವೆ. ಕನ್ನಡ ಭಾಷೆಯ ಸಾಮಾನ್ಯ ಲಕ್ಷಣಗಳಲ್ಲಿಯೂ ಇವು ಸೇರುತ್ತವೆ. ಅವುಗಳಲ್ಲಿನ ಕೆಲವು ತಾತ್ವಿಕ ನಿಯಮಗಳನ್ನು ಇಲ್ಲಿ ಚರ್ಚಿಸಬಹುದು. ಪದಗಳ ಭಾಷಿಕ ವಿಶ್ಲೇಷಣೆಗೆ, ಪ್ರಾಯೋಗಿಕ ನಡಿಗೆಗೆ ಇವು ಸಹಕಾರಿಯಾಗಬಹುದು:

- ಕ>ಗ ಆಗುವುದು; ಇಲ್ಲವೆ ಗ>ಕ ಆಗುವುದು; ಹಾಗೆಯೇ ಟ>ಡ ಮತ್ತು ಡ>ಟ ಆಗುವುದು ಕೂಡ;
  - 'ಪರುಷ–ಸರಳ ವರ್ಣಗಳ ವಿನಿಮಯ ವ್ಯತ್ಯಾಸ' ಎಂಬ ನಿಯಮದ ಪ್ರಕಾರ ಆದ ಪರಿವರ್ತನೆ ಇದು;
  - ಮೂರ್ಧನ್ಯಾಕ್ಷರಗಳು ತಮ್ಮ ಉಚ್ಚಾರಣಾ ನಾಟಕವನ್ನು ಇಲ್ಲಿಯೂ ಮುಂದುವರಿಸಿವೆ.
- ದ್ರಾವಿಡ ಭಾಷೆಗಳ 'ಚ' ಮತ್ತು 'ಸ' ಕಾರಗಳ ವಿನಿಮಯ ವ್ಯತ್ಯಾಸ ಈ ಸಂಪುಟದಲ್ಲಿಯೂ ಮುಂದುವರಿದಿದೆ; ಉಚ್ಚಾರಣಾ ಸಾಮ್ಯ ಅಥವಾ ಈ ಎರಡೂ ಧ್ವನಿಮಾಗಳ ನಡುವಣ ಉಚ್ಚಾರದ ಮೂರನೆಯ 'ಧ್ವನ್ಯನುರಣನೆ' ಇದರಿಂದ ಲಭ್ಯ; ಅದೇ ಈ ಪರಿವರ್ತನೆಗೆ ಕಾರಣ.
- ಕನ್ನಡದ 'ಪ' ವರ್ಗದ ಮುಖ್ಯ ಧ್ವನಿಮಾಗಳಾದ ಪ, ಬ, ಮ ಗಳು ಪರಸ್ಪರ ವಿನಿಮಯ ಧ್ವನಿ ಪಲ್ಲಟಗಳನ್ನು ಇಲ್ಲಿಯೂ ಗಮನಿಸಲಾಗಿದೆ; ಪ>ಹ ಆಗುವುದು ಬೇರೆಯದೇ ಆದ ಭಾಷಾ ವ್ಯತ್ಯಾಸ; ಬ, ಮ ಗಳ ಜೊತೆಗೆ 'ವ' ಕೂಡ ಸೇರಿಕೊಳ್ಳುತ್ತದೆ; ಈ ಸಂದರ್ಭದಲ್ಲಿ 'ವ'ಕ್ಕೆ ಇರುವ ತನ್ನದೇ ಅನುನಾಸಿಕ ಅಸ್ಮಿತೆಯ ಜೊತೆಗೆ 'ಮ'ದ ಅನುನಾಸಿಕತ್ವವನ್ನೂ ಪಡೆಯುವುದಿದೆ; ಸಂಪುಟದ ಪದಗಳ ನಿಷ್ಪತ್ತಿ ಸಂದರ್ಭದಲ್ಲಿ ಇದನ್ನು ನೋಡಬಹುದು.
- ಅಪರೂಪಕ್ಕೆನ್ನುವಂತೆ ಸಂಬಂಧವೇ ಇಲ್ಲದೆ ಸಂಬಂಧವನ್ನು ಕುದುರಿಸುವ ಕೆಲಸವನ್ನು ಪದಗಳೂ ಕೆಲವೊಮ್ಮೆ ಮಾಡುತ್ತವೆ; 'ಜ' ಮತ್ತು 'ದ' ಧ್ವನಿಮಾಗಳು ಈ ಬಗೆಯ ಧ್ವನಿ ಸಂಬಂಧಕ್ಕೆ/ವ್ಯತ್ಯಾಸಕ್ಕೆ ಉದಾಹರಣೆಯಾಗಿವೆ; ಈ ಸಂಪುಟದ ಪದಗಳಲ್ಲಿ ಇದರ ಮುಂದುವರಿಕೆಯನ್ನು ಕಾಣುತ್ತೇವೆ.
- ವ್ಯಾಪಕವಾಗಿರುವಂಥದು ಹ>ಅ ಆಗುವ ವಿಚಾರ; ವ್ಯಂಜನವೊಂದು ಸ್ವರವಾಗಿ ಮಾರ್ಪಡುವಂಥದು; ದಕ್ಷಿಣ ಕರ್ನಾಟಕದ ಕೆಲವು ಭಾಷಾ ಪ್ರಯೋಗಗಳಲ್ಲಿ ಕಾಣುವ ವೈಚಿತ್ರ್ಯ; ಇದು ವೈಶಿಷ್ಟ್ಯವೂ ಹೌದು; ಹಾಗೆಯೇ ಸಹಜವೂ ಕೂಡ; ಈ ಸಂಪುಟದಲ್ಲಿಯೂ ಇಂತಹ ಪದ ಪರಿವರ್ತನೆಯನ್ನು ಕಾಣುತ್ತೇವೆ; 'ಅ' ಎಲ್ಲಿಂದಲೊ

(ಹೊರಗಡೆಯಿಂದ) ಬಂದುದಾಗಿರದೆ, 'ಹ' ಧ್ವನಿಮಾದಲ್ಲಿಯೇ ಇರುವ ಇನ್ನೊಂದು ಧ್ವನಿಮಾ; ಅಂದರೆ 'ಹ' ವ್ಯಂಜನ ಮತ್ತು ಸ್ವರ ಧ್ವನಿಮಾಗಳೆರಡರ ಸಂಯೋಗದಿಂದಾದುದು– ಹ್+ಅ>ಹ=ಹ್+ಅ>Ø+ಅ>ಅ; ಭಾಷೆಯಲ್ಲಿ ಏನು ಬೇಕಾದರೂ ಸಂಭವಿಸಬಹುದು, ಅದರಲ್ಲಿಯೂ ಆಡುಭಾಷೆಯಲ್ಲಿ; ಇದಕ್ಕೆ ಮುಖ್ಯ ಕಾರಣ ಸೌಲಭ್ಯೀಕರಣ; ಪದಗಳ ಬಳಕೆ ಅದನ್ನು ಸಾಧಿಸಿ ತೋರಿಸಿದೆ; ಇದರಲ್ಲಿ ಆಕ್ಷೇಪರ್ಣಾರ್ಹವಾದುದು ಏನೂ ಇಲ್ಲ; ವಿವರಣಾತ್ಮಕ ಭಾಷಾವಿಜ್ಞಾನ ಇದನ್ನು ಲಕ್ಷಣೀಕರಿಸಿದೆ.

- ಕನ್ನಡ ಭಾಷೆಯ ಧ್ವನಿ ವ್ಯತ್ಯಾಸದಲ್ಲಿ 'ಸ್ವರ ವ್ಯತ್ಯಯ' ಒಂದು ಮಹತ್ವದ ಅಂಶ; ಕನ್ನಡ ಭಾಷೆಯ ಸ್ಥಿತ್ಯಂತರಕ್ಕೊಂದು ಹಿಡಿದ ಕನ್ನಡಿ; ಪ್ರಾಚೀನ ಕನ್ನಡದಿಂದ ಮಧ್ಯಕಾಲೀನ ಕನ್ನಡಕ್ಕೆ, ಮಧ್ಯಕಾಲೀನ ಕನ್ನಡದಿಂದ ಆಧುನಿಕ ಕನ್ನಡಕ್ಕೆ ಬದಲಾಗುವ ಸಂದರ್ಭದಲ್ಲಿ ಸ್ವರ ವ್ಯತ್ಯಯ ಕಾಣಿಸಿಕೊಂಡಿದೆ; ಈಗ ಕೊಡು, ಕೊಡ ಮುಂತಾದ ರೂಪಗಳು ಪ್ರಚಲಿತವಿದ್ದು, ಹಿಂದೆ ಅವುಗಳ ಮೂಲ ರೂಪವಾಗಿ ಕುಡು, ಕುಡ ರೂಪಗಳು ಇದ್ದಿರಬೇಕು; ಇಲ್ಲಿ ಆರಂಭದಲ್ಲಿದ್ದ 'ಇ' ಮತ್ತು 'ಉ'ಗಳು 'ಎ' ಮತ್ತು 'ಒ'ಗಳಾಗಿ ಮಾರ್ಪಾಡುಗೊಂಡಿವೆ(ಇ>ಎ, ಉ>ಒ); ಮೂರನೆಯ ಸಂಪುಟದಲ್ಲಿಯೂ ಈ ಬಗೆಯ ವ್ಯತ್ಯಯಗಳ ರೂಪಗಳು ಕಂಡುಬಂದಿವೆ; ಮೂಲ ರೂಪವನ್ನು ಕಂಡು ಹಿಡಿಯುವ ಕೆಲಸ ನಡೆದಿದೆ.

- ಒತ್ತಕ್ಷರ ದೀರ್ಘಾಕ್ಷರವಾಗುವುದು ಇನ್ನೊಂದು ವ್ಯತ್ಯಾಸ; ಒತ್ತಕ್ಷರಗಳು ತಮ್ಮ ದ್ವಿತ್ವವನ್ನು ಕಳೆದುಕೊಂಡಾಗ, ಅದರ ಪರಿಹಾರಾರ್ಥ ಅದರ ಹಿಂದಿನ ಅಕ್ಷರ ದೀರ್ಘವಾಗುವುದು ಸಾಮಾನ್ಯ; ಗ್ರಾಮೀಣ ಉಚ್ಚಾರಣೆಯಲ್ಲಿ ಇದು ಬಹಳವಾಗಿ ನಡೆದಿರುವುದು ಗಮನಕ್ಕೆ ಬಂದಿದೆ; ಹಾಗೆಯೇ ಹಲವಾರು ಪದಗಳು ಪ್ರಾಚೀನ ಕಾಲದಿಂದ ಆಧುನಿಕಕ್ಕೆ ಬರುವಾಗ ತಮ್ಮ ಬಿಂದು ರೂಪಗಳನ್ನು ಕಳೆದುಕೊಂಡು ಸರಳಾಕ್ಷರವಾಗಿ ಮಾರ್ಪಡುವುದು ಕೂಡ ಅನಿವಾರ್ಯ ಲಕ್ಷಣ; ಪ್ರಸ್ತುತ ಪದವಿನ್ಯಾಸ ಚರ್ಚೆಯಲ್ಲಿ ಇದು ಆಗಾಗ್ಗೆ ಕಾಣಿಸಿಕೊಳ್ಳುವುದುಂಟು.

- ಪದ ಸಂಸ್ಕೃತಿಯ ಭಾಷಾ ಟಿಪ್ಪಣಿಯಲ್ಲಿ 'ಪದ ಪುನರಾವರ್ತನೆ' ಇನ್ನೊಂದು ಮುಖ್ಯ ವಿಷಯ; ಒಂದೇ ಪದ 'ದ್ವಿರುಕ್ತಿ' ಯಾಗೊ, 'ದ್ವಯ'ವಾಗಿಯೊ ಕಾಣಿಸಿಕೊಳ್ಳುವುದು ಇದರ ಲಕ್ಷಣ; ಅಂದರೆ ಪದವೊಂದರ `Duplication'; ಇದು 'ಲಯ'ಕ್ಕೊ 'ಅರ್ಥದೊತ್ತಿಗೊ' ಇಂಬುಕೊಡುವುದು; ಈ 'ಪದದ್ವಂದ್ವ'ದ ಬಳಕೆಗೆ 'ಭಾಷಾ ದೌರ್ಬಲ್ಯ'

ಕಾರಣವಿರಬಹುದೆ? ಪದಲಯದ ನೆಪದಿಂದ 'ಪದಕವಿತ್ವ'ಕ್ಕೆ ಎಡೆಮಾಡಿಕೊಡುತ್ತದೆ ಎಂದು ಹೇಳಬಹುದೆ? ಈ ಸಂಪುಟದಲ್ಲಿಯೂ ಇಂತಹ ಅನೇಕ ಉದಾಹರಣೆಗಳು ಬಂದಿವೆ.

- ಅಕ್ಷರಗಳ ಅನುನಾಸಿಕತ್ವಕ್ಕೆ ಸಂಬಂಧಿಸಿದಂತೆ ಭಾಷಾವಿಜ್ಞಾನ ಅಥವಾ ವ್ಯಾಕರಣದಲ್ಲಿ ಕೆಲವು ರಿಯಾಯಿತಿಗಳಿವೆ; ಉದಾಹರಣೆಗಾಗಿ, 'ಯ, ರ, ಲ, ವ'ಗಳು ಅನುನಾಸಿಕವೂ ಅನನುನಾಸಿಕವೂ ಆಗುತ್ತವೆ ಎಂಬುದಾಗಿ ವ್ಯಾಕರಣಕಾರರ ಹೇಳಿಕೆ; ಅದರ ಆಧಾರದ ಮೇಲೆ ಪದ ಪರಿವರ್ತನೆಗಳನ್ನು ವಿವರಿಸಲಾಗಿದೆ; 'ಕೊಳ್ಳು'>ಕೊನ್ಡ(ಕೊಂಡ) ಆಗುವುದರಿಂದ, 'ಳ'(<ಲ)ಕಾರದ ಮೇಲಿನ ಅನನಾಸಿಕತ್ವವನ್ನು ಗಮನಿಸಬೇಕು;

  ಹಾಗೆಯೇ 'ಕೊಡುವಾ' ಮೇಲಿನ ಅನುನಾಸಿಕತ್ವ ಕೂಡ; ಸ್ವಭಾವದಲ್ಲಿಯೇ ಅನುನಾಸಿಕತ್ವವನ್ನು ಆವಾಹಿಸಿಕೊಂಡಿರುವ ವಿಶೇಷವನ್ನಿಲ್ಲಿ ನೋಡುತ್ತೇವೆ. ಇದಕ್ಕೆ ಬೇಕಾದಷ್ಟು ನಿದರ್ಶನಗಳು ಸಂಪುಟದಲ್ಲಿ ಸಿಗುತ್ತವೆ.

- ಅನುಕರಣ(imitative) ಪದಗಳೂ, ಸ್ವೀಕರಣ(borrowed) ಪದಗಳೂ, ಅನ್ಯಭಾಷಾ ಸಂಸ್ಕೃತಿಯಿಂದ ಬಂದ ಪದಗಳೂ ಕನ್ನಡ ಬಾಷೆಯ ಜಾಯಮಾನಕ್ಕೆ ಹೊಂದಿಕೊಂಡಂತೆ ಬರುವುದರ ಮೂಲಕ ಪದಗಳಲ್ಲಾಗುವ ವ್ಯತ್ಯಾಸಗಳನ್ನು ಪ್ರಸ್ತುತ ಸಂಪುಟ ದಾಖಲಿಸುತ್ತದೆ; ಸಂಸ್ಕೃತದಿಂದ ತದ್ಭವಗೊಂಡು ಬಂದ ಪದಗಳು; ಹಿಂದಿ, ಪರ್ಷಿಯನ್, ಅರಬಿಕ್ ಮುಂತಾದ ಭಾಷೆಗಳಿಂದ ಆಮದಾದ ಪದಗಳು-- ಇವುಗಳ ಪದ ಪರಿವರ್ತನೆಯನ್ನು ನಿಘಂಟು ಉಲ್ಲೇಖಿಸುತ್ತಾ ಬಂದಿದೆ.

- ಪದಗಳಲ್ಲಿ ಆಗುವ ಧ್ವನಿ ಅಥವಾ ಧ್ವನಿಮಾ ವ್ಯತ್ಯಾಸಗಳು ವ್ಯಕ್ತಿ ಸಂಬಂಧಿ, ಪರಿಸರ ಸಂಬಂಧಿ ಮತ್ತು ಬಳಕೆಯ ಸಂಬಂಧಿ ಎಂದು ಮೂರು ರೀತಿಯವು; ವ್ಯಕ್ತಿಯನ್ನು ವೃತ್ತಿ, ಜಾತಿ ಮತ್ತು ಸಮೂಹ ಸಂಬಂಧದಲ್ಲಿ ನೋಡಲಾಗುವುದು; ಮಾತನಾಡುವವನ ಕಾಲ ಮತ್ತು ವಾತಾವರಣವನ್ನು ಹೇಳುವಂಥದು ಪರಿಸರ; ಮಾತನಾಡುವ ಸಂದರ್ಭ, ವಾಕ್ಯ, ಅರ್ಥ ಸಂಬಂಧಗಳಲ್ಲಿ ಬಳಕೆಯ ಸಂಬಂಧವಾದ ವ್ಯತ್ಯಾಸಗಳನ್ನು ನಿರುಕಿಸಲಾಗುವುದು; ಧ್ವನಿಮಾ ವ್ಯತ್ಯಾಸಗಳನ್ನು ಸುಲಭವಾಗಿ ಗುರುತಿಸಬಹುದಾದರೂ, ಧ್ವನಿ ವ್ಯತ್ಯಾಸಗಳಿಗೆ ಹಾಗೆ ಹೇಳಲು ಬರುವುದಿಲ್ಲ; ಸಂಪುಟದ ಉದ್ದಕ್ಕೂ ಈ ಬಗೆಯ ವಿವರಣೆ/ವಿಶ್ಲೇಷಣೆ ಬಂದಿದೆ.

- ಕೆಲವೊಮ್ಮೆ ಅನಿರೀಕ್ಷಿತ ಅಕ್ಷರ/ಧ್ವನಿಮಾ ಪಲ್ಲಟಗಳು ಕಾಣಿಸಿಕೊಳ್ಳುವುದು ವಿಶೇಷ; 'ಜ' ಮತ್ತು 'ದ'ಗಳಿಗೆ ಬರುವ

> 'ಪಲ್ಲಟ'ಗಳನ್ನು ನಾವು ಅನೇಕ ಸರ್ತಿ ನೋಡುತ್ತೇವೆ; ಹಾಗೆಯೇ ಕನ್ನಡದ 'ಕುಚುಕುಚು' ಪದದ್ವಯಕ್ಕೆ ತಮಿಳಿನಲ್ಲಿ 'ಕುಜುಕುಜು' ಪದವೂ, ತುಳುವಿನಲ್ಲಿ 'ಕುಸುಕುಸು' ಪದವೂ ಕಾಣಿಸಿಕೊಂಡಿದೆ; ಕನ್ನಡ 'ಚ'ಕಾರಕ್ಕೆ ತಮಿಳಿನಲ್ಲಿ 'ಸ'ಕಾರ ಕಂಡರೆ ಅದು ಸಹಜ; ಏಕೆಂದರೆ ಚ>ಸ ಆಗುವುದು, ಸ>ಚ ಆಗುವುದು ಸಾಮಾನ್ಯ; ಆದರೆ ತಮಿಳಿನಲ್ಲಿ 'ಜ'ಕಂಡಿದೆ; ಚ>ಜ ಆಗುವುದರಲ್ಲಿ ಯಾವ ಅಚ್ಚರಿಯೂ ಇಲ್ಲ; ಏಕೆಂದರೆ, ಚ=ಜ, ಚ=ಸ ಆಗುವುದಾದರೆ, ಜ=ಸ ಆಗುವುದು ಅಸಂಭವವೇನಲ್ಲ; ಕನ್ನಡದಲ್ಲಿ 'ಕುಸುಕುಸು'ಗೆ ಪಿಸುಮಾತು ಎಂದಿದೆ; 'ಕುಚುಕುಚು'ಗೂ ಅದೇ ಅರ್ಥ ಆಗಬಹುದು; ಆದರೆ ಕನ್ನಡದಲ್ಲಿ 'ಕುಸುಕುಸು' ರೂಪ ಉಚ್ಚಾರಣೆಯಲ್ಲಿದೆ, 'ಕುಜುಕುಜು' ರೂಪ ಸಿಕ್ಕುವುದಿಲ್ಲ.

ಪದಸಂಸ್ಕೃತಿ ಅಧ್ಯಯನದಲ್ಲಿ ಭಾಷಿಕ ವಿಚಾರಗಳು ಹೇಗೆ ಮುಖ್ಯವಾಗುತ್ತವೆ, ಏಕೆ ಮುಖ್ಯವಾಗುತ್ತವೆ ಎಂಬುದು ಮೇಲಿನ ವಿವೇಚನೆಯಿಂದ ಸ್ಪಷ್ಟವಾದಂತಾಯಿತು. ಉಚ್ಚಾರಣೆ ಮತ್ತು ಬಳಕೆ ಪದಗಳ ವೈಯಕ್ತಿಕ ನಿಲುವಿಗೆ ನಿರ್ಧಾರಕ ಅಂಶಗಳಾಗುತ್ತವೆ ಎಂಬುದನ್ನಿಲ್ಲಿ ಗುರುತಿಸಲಾಗಿದೆ. ಪದವೊಂದರ ಮೈಮನಸುಗಳು ಭಾಷಿಕ ಮತ್ತು ಸಾಂಸ್ಕೃತಿಕ ಆಯಾಮಗಳಾಗುತ್ತವೆ. ಮೈಮನಸು ಹೇಗೆ ಬೇರೆ ಬೇರೆ ಅಲ್ಲವೊ, ಪದವೊಂದರ 'ರಚನೆ'(Struture) ಮತ್ತು 'ಸಂಸ್ಕೃತಿ' (Culture) ಭಿನ್ನವೇನಲ್ಲ. ಅವೆರಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಇವೆರಡಕ್ಕೂ ಆಡುವವನ ಸಂದರ್ಭ ಮತ್ತು ಬಳಕೆ ಕಾರಣವಾಗುತ್ತವೆ ಎಂಬುದನ್ನು ಮರೆಯಲಾಗದು.

ಕನ್ನಡ ಭಾಷೆಯು ಜಿಲ್ಲಾವಾರು/ಪ್ರದೇಶವಾರು ಯೋಚನೆಯಲ್ಲಿ ಅನೇಕ ವ್ಯತ್ಯಾಸಗಳಿರುವುದು ಸಹಜ; ಅಪರೂಪದ ಧ್ವನಿ ವ್ಯತ್ಯಾಸಗಳಿಗೂ, ಹೊಸ ಪದ ಸ್ವರೂಪ ಕಲ್ಪನೆಗೂ ಈ ಬಗೆಯ ವ್ಯತ್ಯಾಸಗಳು ಕಾರಣವಾಗುತ್ತವೆ ಎಂಬುದು ವಿಸ್ಮಯವೇ ಸರಿ; ಅಂತಹ ಸಂಗತಿಗಳನ್ನು ಒಂದು ಕಡೆ ಕೂಡಿಸಿ ಚರ್ಚಿಸುವುದು ಒಳ್ಳೆಯದೇ. ಮೂರನೆಯ ಈ ಸಂಪುಟದಲ್ಲಿ 'ಕೊಡ್ಮಾ' ಎಂಬ ರೂಪವಿದೆ. ಇದೂ ಸೇರಿದಂತೆ ಬರ್ಮಾ, ಹೋಗ್ಮಾ, ಮಾಡ್ಮಾ, ನೋಡ್ಮಾ ಮುಂತಾದ 'ಮ'ಕಾರಾಂತ್ಯ ಪದಗಳು ಮಂಡ್ಯ ಮತ್ತು ಮೈಸೂರು ಜಿಲ್ಲೆಗಳ ಕೆಲಭಾಗಗಳಲ್ಲಿ ಬಳಕೆಯಲ್ಲಿದ್ದು, ಬಹಳವಾಗಿ ಗಮನ ಸೆಳೆಯುತ್ತವೆ. ಈ ಕೊಡ್ಮಾ, ಬರ್ಮಾ, ಮಾಡ್ಮಾ, ಹೋಗ್ಮಾ ರೂಪಗಳಿಗೆ ಕೊಡೋಣಾ, ಬರೋಣಾ, ಮಾಡೋಣಾ, ಹೋಗೋಣಾ ಪದಗಳು ಕಾರಣವಿರಬೇಕೆಂದು ಸಹಜವಾಗಿಯೇ ಹೇಳಬಹುದು. ಆದರೆ ಕೊಡೋಣಾ, ಬರೋಣಾ, ಮಾಡೋಣಾ, ಹೋಗೋಣಾ ರೂಪಗಳನ್ನು ಒತ್ತಕ್ಷರಗಳಾಗಿ ಕೊಡ್ಣೊ, ಬರ್ಣೋ, ಮಾಡ್ಣೋ, ಹೋಗ್ಣೋ ಎಂದು ಉಚ್ಚರಿಸಿ ಹೇಳುವುದು ಕಷ್ಟ, ಅಷ್ಟೇ ಅಲ್ಲ ಅವು ಹಾಗೆ ಬಳಕೆಯಲ್ಲಿಲ್ಲ. ಅಲ್ಲದೆ ಅವನ್ನು ಒತ್ತಕ್ಷರಕ್ಕೆ ಬರದೆ, 'ಮ'ಕಾರಾಂತ್ಯದಲ್ಲಿ ಹೇಳುವುದು ಸಾಧ್ಯವಾಗದು. ಆದ್ದರಿಂದ ಈ ಪದಗಳು ಕೊಡುವಾ, ಬರುವಾ, ನೋಡುವಾ, ಹೋಗುವಾ ಎಂದಿರಬೇಕಾಗುತ್ತದೆ; ಇಷ್ಟಕ್ಕೂ ಇವು ಬಳಕೆಯಲ್ಲಿವೆ. ಆದ ಕಾರಣ ಈ ಪ್ರದೇಶಗಳಲ್ಲಿ ಪ್ರಚಲಿತವಿರುವ ಕೊಡ್ಮಾ, ಬರ್ಮಾ, ಮಾಡ್ಮಾ, ಹೋಗ್ಮಾ ಪದಗಳಿಗೆ ಪೂರ್ವೋಕ್ತ 'ವ'ಕಾರಾಂತ ಅನುನಾಸಿಕಯುಕ್ತ ಪದಗಳು ಕಾರಣವೆಂದು ಹೇಳಿದರೆ ವ್ಯಾಕರಣ ಮತ್ತು ಭಾಷಾವಿಜ್ಞಾನ ನಿಯಮಗಳಿಗೆ ಧಕ್ಕೆಯಾಗುವುದಿಲ್ಲ. ಇಷ್ಟಕ್ಕೂ ಮ>ವ ಆಗುವುದು ಸಹಜವಾಗಿಯೇ ಇದೆ; ಹಾಗೆಯೇ 'ವ'ಕಾರ(ಯ, ರ, ಲ, ವ)ಅನುನಾಸಿಕವೂ ಹೌದು, ಎಂಬುದನ್ನು ವ್ಯಾಕರಣವೇ ಹೇಳುತ್ತದೆ; ಇದನ್ನು ಭಾಷಾ ವಿಜ್ಞಾನವೂ ಕೂಡ ಸಮರ್ಥಿಸುತ್ತಾ ಬಂದಿದೆ. ಆದ್ದರಿಂದ 'ಕೊಡ್ಮಾ'ದಲ್ಲಿನ 'ಮ'ಕಾರಾಂತ ಧ್ವನಿಮಾ ಉಚ್ಚಾರಣಾ ವ್ಯತ್ಯಾಸಕ್ಕೆ 'ಕೊಡುವಾ'(ವ>ಮ ಆಗಿ, ಕೊಡ್ಮಾ) ರೂಪ ಕಾರಣವಾಗಿದ್ದೂ, ಅದರ ಅಂತ್ಯ ಧ್ವನಿ 'ವಾ' ಧ್ವನಿಮಾವೇ ನಿಯೋಜಿತ ಧ್ವನಿಮಾವೆಂದು ಹೇಳಬೇಕಾಗಿದೆ.

ಮೇಲಿನ ಹಿನ್ನೆಲೆಯಲ್ಲಿ ಸಂಪುಟದ ಕೆಲವು ಪದಗಳ ವಿಶ್ಲೇಷಣೆಗೆ ಹೊರಡಬಹುದು. ತತ್ತ್ವ ಮತ್ತು ಪ್ರಯೋಗಗಳು ಜೊತೆಯಾಗಿ ಹೋಗುವಂಥವು; ಒಂದನ್ನೊಂದು ಅವಲಂಬಿಸಿದಂಥವು. ಪದಸಂಸ್ಕೃತಿಯ ಪರಿಕಲ್ಪನೆಯಲ್ಲಿ ಪದವೊಂದರ ವಿಶ್ಲೇಷಣೆಯೆಂದರೆ, ಭಾಷಿಕವಾಗಿ ಪದದ ವರ್ತನೆಯನ್ನು ನೋಡುವಂಥದು, ಹಾಗೆ ನೋಡುವಾಗ ಉಚ್ಚಾರಣೆ ಮತ್ತು ಪದಮೂಲಗಳು ಚರ್ಚೆಗೆ ಬರುತ್ತವೆ; ಸಾಂಸ್ಕೃತಿಕ-ಸಾಮಾಜಿಕವಾಗಿ ಪರಿಭಾಷೆಗೆ ಎಟುಕಿಸಿಕೊಂಡಾಗ ಪದವೊಂದು ಜನಪದರ ಜೀವನದೊಡನೆ ಹೊಂದಿರುವ ಸಂಬಂಧವನ್ನು ವಿವೇಚಿಸುವುದು, ಜೊತೆಗೆ ಪದಸಂಸ್ಕೃತಿ ತಳೆಯುವ ನಿಲುವು ಮತ್ತು ಪ್ರಸ್ತುತತೆಗಳೂ ಈ ತೆಕ್ಕೆಗೆ ಬರುತ್ತವೆ; ಈ ಎಲ್ಲ ಮಾತುಗಳೂ ಬಳಕೆಯ ಸಂದರ್ಭಗಳನ್ನು ಆಧರಿಸಿಯೇ ಅನ್ವಯ-ಅನುಶೀಲನೆಗಳನ್ನು ನಡೆಸಬೇಕಾಗಿರುವುದರಿಂದ, ಅಂಥದೊಂದು ಅವಲೋಕನ ಚರ್ಚೆಯ ಒಡಲಿನಲ್ಲಿ ಇದ್ದೇ ಇರುತ್ತದೆ. ಹೀಗೆ ಕೈಗೊಳ್ಳುವಾಗ ಇಲ್ಲಿ ಸಾರವನ್ನಷ್ಟೆ ಇಡಲಾಗುತ್ತದೆ; ವಿವರಕ್ಕೆ ನಿಘಂಟಿನ ಆಯಾ ಪದ ಸಂದರ್ಭಗಳನ್ನೇ ನೋಡಬೇಕು. ಆಯ್ದ ನಿದರ್ಶನಗಳು ಮಾತ್ರ ಇಲ್ಲಿವೆ; ವಿಚಾರಕ್ಕೆ ವಿಶೇಷವಾದವುಗಳನ್ನು ಆರಿಸಿಕೊಳ್ಳಲಾಗಿದೆ. ಪದಸಂಸ್ಕೃತಿಯ ನಡವಳಿಕೆಗೆ ಅನುಗುಣವಾಗಿಯೇ ಈ ಎಲ್ಲ ಚರ್ಚೆ, ಪರಿಶೀಲನೆಗಳಿವೆ:

೧. **ಕುಚೇಲ:**

- "ಕೇವಲ ಮಹಾಭಾರತದ ಪಾತ್ರ ಎಂದು ತಿಳಿಯಬೇಕಿಲ್ಲ; ಪುರಾಣಕ್ಕೆ ಸೀಮಿತವಲ್ಲ; ಸಾಮಾಜಿಕ ಪಾತಳಿಯಲ್ಲಿಯೂ ಬಳಕೆಯಲ್ಲಿದೆ; ವ್ಯಕ್ತಿಗಳಿಗೆ ವಿರಳವಾಗಿಯಾದರೂ ಹೆಸರಿಡುವ ಸಂಪ್ರದಾಯವಿದೆ; 'ಸುದಾಮ' ಎಂಬುದು ಪರ್ಯಾಯ ನಾಮ; 'ಸುದಾಮ ಚರಿತೆ' ಕನ್ನಡದ ಕವಿಯೊಬ್ಬನ ಪುಸ್ತಕ; ಕುಚೇಲ ಕೃಷ್ಣನ ಸಹಪಾಠಿ, ಸ್ನೇಹಿತ; ಶ್ರೀಕೃಷ್ಣ-ಕುಚೇಲರ ಸ್ನೇಹ ಅಮರವಾದುದು; ಕುಚೇಲ ಬಡವ, ಕೃಷ್ಣ ಶ್ರೀಮಂತ, ರಾಜ, ಪ್ರಸಿದ್ಧ ಪುರುಷ; ಇಬ್ಬರ ಸ್ನೇಹಕ್ಕೆ ಈ ವ್ಯತ್ಯಾಸ ಅಡ್ಡಿಬರಲಿಲ್ಲ; ಇದು ಪ್ರಸಿದ್ಧ ಕಥೆಯಾಗಿ ಮಾರ್ಪಾಡು; ಬಡವರನ್ನು ಇವೊತ್ತೂ 'ಕುಚೇಲ' ಎಂದು ಕರೆಯಲಾಗುವುದು, ಕೃಷ್ಣ-ಕುಚೇಲರ ಸ್ನೇಹ ಬಡವ-ಬಲ್ಲಿದರ ಸ್ನೇಹಕ್ಕೆ ಗುರುತಿಸಲಾಗಿದೆ, ಹಾಗೆಯೇ ಅಂತಹ ಸ್ನೇಹಿತರನ್ನು ಸಮಾಜದಲ್ಲಿ ಗೌರವ/ವ್ಯಂಗ್ಯ/ ತಮಾಷೆಗಳಲ್ಲಿ ಕರೆಯುವುದುಂಟು; ಕುಚೇಲ-ಅವಲಕ್ಕಿಯ ನಂಟು ಪುರಾಣ ಪ್ರಸಿದ್ಧ; ಶ್ರೀಕೃಷ್ಣ ಸಂಬಂಧಿ ಹಬ್ಬಗಳಲ್ಲಿ ಅವಲಕ್ಕಿಗೆ ಎಲ್ಲಿಲ್ಲದ ಸ್ಥಾನ, ಇದು ಕುಚೇಲನ ಕಾರಣಕ್ಕೆ ಆಚರಣೆಯಲ್ಲಿ ಬಂದದ್ದು; ಭೇಟಿಯಾದಾಗ ಕೃಷ್ಣನಿಗೆ ಕುಚೇಲ ಅವಲಕ್ಕಿಯನ್ನು ಕೊಡುವ ಪ್ರಸಂಗವಿದೆ; ಐಸಿರಿಯ ಮೇಲೂ ಕೃಷ್ಣ ಅವಲಕ್ಕಿಯನ್ನು ತಿಂದು ಚಕಿತಗೊಳಿಸಿದ ಕಥೆಯಿದೆ; ಒಮ್ಮೆ ಹೀಗೆ ಕೃಷ್ಣನನ್ನು ಭೇಟಿಯಾಗಿ ಊರಿಗೆ ಹಿಂದಿರುಗಿದಾಗ ಅವನ ಊರು, ಮನೆ, ಉಡುಗೆ ತೊಡುಗೆಗಳು ವ್ಯತ್ಯಾಸವಾಗಿದ್ದವಂತೆ, ಸಿರಿ ಸ್ವರೂಪ ಪ್ರಾಪ್ತವಾಗಿತ್ತಂತೆ; ಇದು ಇಬ್ಬರ ಮಹಿಮೆಗೂ ಸಾಕ್ಷಿ; ಉಳ್ಳವರು-ಇಲ್ಲದವರ ನಡುವಣ ಸಮಾನತೆಗೆ ಇದು ಪ್ರತಿಮೆ;
- ಕೃಷ್ಣ-ಕೆಚೇಲರ ಸ್ನೇಹ ಒಂದು ಸಂಕೇತ, ಒಂದು ಮಾದರಿ; ಅಂತಸ್ತು ಅಂತರಗಳು ಅದಕ್ಕಿಲ್ಲ; ಅಂತರಂಗದ್ದು,

ಬೆಲೆಕಟ್ಟಲಾಗದ್ದು; ಇವೊತ್ತಿಗೂ ಕಥೆಯ ಮೂಲಕ, ಆಚರಣೆಯ ಮೂಲಕ, ಕಾವ್ಯದ ಮೂಲಕ ಜನಪದರಲ್ಲಿ ಬಳಕೆಯಲ್ಲಿದೆ; ಕುಚೇಲನನ್ನು ಸಮಾಜ ಇವೊತ್ತೂ ಉಳಿಸಿಕೊಂಡಿದೆ".

೨. **ಕುಟುಂಬ :**

- "ಸಾಮಾಜಿಕ ವ್ಯವಸ್ಥೆಯಲ್ಲಿ 'ಕುಟುಂಬ' ಮುಖ್ಯ ವಿಷಯ; ಪ್ರಾಥಮಿಕ ಘಟಕ; ಸಾಮಾಜಿಕ/ಸಾಂಸ್ಕೃತಿಕ ಕಾರ್ಯ ನಿರ್ವಹಿಸುವ ಬಹುದೊಡ್ಡ ಪಾತ್ರದಲ್ಲಿ ಅದರ ನಿರಂತರ ಬಳಕೆ; ಮದುವೆಯ ಮೂಲಕ ಅಸ್ತಿತ್ವ;
- ಜಾನಪದದ ಎಲ್ಲ ಪ್ರಕಾರಗಳೂ 'ಕುಟುಂಬ'ದ ಮೂಲಕವೇ ಪ್ರಸಾರಕ್ಕೆ ಬಂದಿವೆ; ಶಾಬ್ದಿಕ ಮತ್ತು ಆಚರಣಾತ್ಮಕ ಜಾನಪದದ ಅಳಿವು ಉಳಿವಿಗೆ ಕುಟುಂಬದ ಸದಸ್ಯರೇ ಮುಖ್ಯ;
- 'ಕುಟುಂಬ'ದ ಪರಿಕಲ್ಪನೆ ಗಂಡ, ಹೆಂಡತಿ, ಮಕ್ಕಳಿಂದ ಬಂದಂಥದು, ಇದಕ್ಕೆ 'ಪ್ರಾಥಮಿಕ ಕುಟುಂಬ' ಎನ್ನುವರು; ಹಲವು ಪ್ರಾಥಮಿಕ ಕುಟುಂಬಗಳು ಸೇರಿ ವಿಸ್ತೃತಗೊಂಡಾಗ ಅದನ್ನು 'ಅವಿಭಕ್ತ ಕುಟುಂಬ' ಅಥವಾ 'ಕೂಡು ಕುಟುಂಬ' ಎನ್ನುವರು; ಬೇಸಾಯ ಸಂಸ್ಕೃತಿಯ ಬೆನ್ನೆಲುಬೇ ಈ ಕೂಡು ಕುಟುಂಬ; ಇವೊತ್ತು ಈ ವ್ಯವಸ್ಥೆ ಒಡೆದು ಹೋಗಿ 'ವಿಭಕ್ತ ಕುಟುಂಬ'ಗಳಾಗುತ್ತಿವೆ; ಬೇಸಾಯ ಸಂಸ್ಕೃತಿಗೂ, ಕುಟುಂಬ ಸಂಸ್ಕೃತಿಗೂ ಇದರಿಂದ ಧಕ್ಕೆ ಉಂಟಾಗಿದೆ;
- ಕುಟುಂಬದಲ್ಲಿ 'ಮಾತೃಪ್ರಧಾನ ಕುಟುಂಬ', 'ಪಿತೃಪ್ರಧಾನ ಕುಟುಂಬ' ಎಂಬೆರಡು ವಿಧಗಳಿವೆ; ಈ ವರ್ಗೀಕರಣಕ್ಕೆ ಐತಿಹಾಸಿಕ ಮತ್ತು ಸಾಂಸ್ಕೃತಿಕ ಕಾರಣಗಳಿವೆ; ಮಾತೃಪ್ರಧಾನ ಅಥವಾ ಸ್ತ್ರೀಪ್ರಧಾನ ಕುಟುಂಬ ಇಂದು ಕಾಣಬರುತ್ತಿಲ್ಲ; ವಿರಳವಾಗಿ ಮಾತ್ರ ಸಿಗುತ್ತದೆ; ಪಿತೃಪ್ರಧಾನವೆ ಅಥವಾ ಪುರುಷಪ್ರಧಾನವೆ ಪ್ರಧಾನ ಮತ್ತು ವ್ಯಾಪಕ; ಮನುಷ್ಯ ಒಂದೆಡೆ ನೆಲೆನಿಂತು ವ್ಯವಸಾಯ ಕಂಡುಕೊಂಡ ಮೇಲೆ ಪುರುಷ ಪ್ರಧಾನ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಿತು; ಅದರ ಪೂರ್ವದಲ್ಲಿ ಇದ್ದುದು ಸ್ತ್ರೀಪ್ರಧಾನ ವ್ಯವಸ್ಥೆಯೇ;
- ಪುರುಷ ಪ್ರಧಾನ ಕುಟುಂಬದಲ್ಲಿ ಸ್ತ್ರೀಯ ಸ್ಥಾನಮಾನಗಳು ಪುರುಷನಿಗೆ ಸಮಾನ ಆಗಿರಲಿಲ್ಲ; ಮಾತೃಪ್ರಧಾನದಲ್ಲಿ ಅದು ಇತ್ತೆ ಎಂಬುದು ಈಗಿನ ಪ್ರಶ್ನೆ; ಮಾನವಶಾಸ್ತ್ರಜ್ಞರು ಇದಕ್ಕೆ ಉತ್ತರಿಸಿದ್ದಾರೆ; ಮಾತೃಪ್ರಧಾನ ಕುಟುಂಬದಲ್ಲಿ ಆಸ್ತಿಯ ಹಕ್ಕು ಹೆಣ್ಣುಮಕ್ಕಳ ಮೂಲಕ ಹೋಗುತ್ತಿತ್ತು; ಆದರೆ ಆಡಳಿತ ಗಂಡಸರ ಅಧೀನದಲ್ಲೇ ಇರುತ್ತಿತ್ತು; ಇದರಿಂದ ಸ್ತ್ರೀಪ್ರಧಾನ ಕುಟುಂಬದಲ್ಲಿ ಹೆಣ್ಣಿನ `right' (ಹಕ್ಕು) ಇತ್ತೇ ಹೊರತು `rule' (ಆಡಳಿತ) ಇರಲಿಲ್ಲ;

- ಮಾತೃಪ್ರಧಾನ ಕುಟುಂಬದಲ್ಲಿ ಹೆಣ್ಣು ಸುಖವಾಗಿದ್ದಳೆ ಎಂಬ ಪ್ರಶ್ನೆಗೆ 'ಇಲ್ಲ' ಎನ್ನುತ್ತಾರೆ ಮಾನವಶಾಸ್ತ್ರಜ್ಞರು; ಮಾತೃಪ್ರಧಾನಕ್ಕೆ ಹೋಲಿಸಿದರೆ ಪಿತೃಪ್ರಧಾನ ಕುಟುಂಬದ ಹೆಣ್ಣು ಹೆಚ್ಚು ಸುಖಿ ಎಂಬ ಮಾತನ್ನೂ ಆಡಿ ಮಾನವಶಾಸ್ತ್ರಜ್ಞರು ಅಚ್ಚರಿ ಮೂಡಿಸಿದ್ದಾರೆ; ಏಕೆಂದರೆ, ಗಂಡು ಮಕ್ಕಳು ತಾವು ಹುಟ್ಟಿದ ನೆಲೆಯಲ್ಲಿಯೇ ಇದ್ದುದರಿಂದ ಗಂಡಸರದೇ ದರ್ಬಾರು; ಅವರು ಗಂಡಂದಿರು ಆಗಿರುವುದಿಲ್ಲ ಅಷ್ಟೆ; ಅಣ್ಣತಮ್ಮಂದಿರು ಆಗಿರುತ್ತಾರೆ; ಹೀಗಾಗಿ ಸ್ತ್ರೀಶೋಷಣೆ ಮಾತೃಪ್ರಧಾನ ಮತ್ತು ಪಿತೃಪ್ರಧಾನ ಎರಡರಲ್ಲೂ ಉದ್ದಕ್ಕೂ ನಡೆದಿದೆ;
- ಕುಟುಂಬ ಒಡೆದು ಹೋದದ್ದರಿಂದ ಜಾನಪದದ ವಿಘಟನೆ ಆರಂಭವಾಯಿತು; ಸಮುದಾಯ ಜಾನಪದದ ಮೇಲೂ, ವೃತ್ತಿ ಜಾನಪದದ ಮೇಲೂ ಇದು ದೊಡ್ಡ ಪ್ರಮಾಣದಲ್ಲಿ ಪ್ರಭಾವ ಬೀರಿದೆ; ನಾಟಕಗಳು, ಗೊಂಬೆಯಾಟಗಳು ಮುಂತಾದವು ನಶಿಸಿ ಹೋಗುತ್ತಿರುವುದಕ್ಕೆ ಈ ವಿಘಟನೆ ಒಂದು ಕಾರಣ;
- 'ಕುಟುಂಬ' ಎಂದರೆ 'ಗೃಹಿಣಿ' ಎಂದೇ ಅರ್ಥ; 'ಫ್ಯಾಮಿಲಿ' ಎಂದರೆ 'ಹೆಂಡತಿ' ಎಂಬ ಅರ್ಥವೇ ಇದೆ; 'ಕುಟುಂಬಸ್ಥ' ಎಂದರೆ ಮದುವೆಯಾದವ ಎಂದು ಅರ್ಥ, ಅವನ ಹೆಂಡತಿಗೆ ಅದು ಅನ್ವಯ".

೩. **ಕುಡು/ಕೊಡು :**

- "ಕನ್ನಡದ 'ಕುಡು' ಮತ್ತು 'ಕೊಡು' ರೂಪಗಳು ಜನಪದರಲ್ಲಿ ನಿತ್ಯಬಳಕೆಯಲ್ಲಿವೆ; 'ಕುಡು' ಮೂಲ ರೂಪ, 'ಕೊಡು' ಅದರಿಂದ ಬೆಳೆದ ಬದಲಾದ ರೂಪ; ಕುಡು>ಕೊಡು–ಉ>ಒ ಆಗಿದೆ; ಕಾರಣ 'ಸ್ವರ ವ್ಯತ್ಯಯ'ದ ನಿಯಮ; ಬಳಕೆಯಲ್ಲಿ ಎರಡೂ ರೂಪಗಳಿವೆ;
- ದ್ರಾವಿಡ ಪದ; ತಮಿಳಿನಲ್ಲಿ– ಕೊಟ್ಟು/ಕೊಡು/ಕೊಡುಂಗೈ ರೂಪಗಳು; ಮಲೆಯಾಳಂನಲ್ಲಿ ಕೊಟ್ಟುಗ/ಕೊಡು/ಕೊಡುಂಗೈ– ತಮಿಳನ್ನೇ ಅನುಸರಿಸಿ; ತೆಲುಗಿನಲ್ಲಿ ಕೊಡವಲಿ, ಕೊಡಲಿ, ಕೊಟ್ಟು ರೂಪಗಳಿವೆ; ತೆಲುಗು ಮಧ್ಯ ದ್ರಾವಿಡಕ್ಕೂ ಸೇರುವುದರಿಂದ, ಆ ಪ್ರದೇಶದ ಪ್ರಭಾವ ಇದ್ದಂತಿದೆ;
- ಪ್ರಧಾನವಾಗಿ ಇದು ಕ್ರಿಯಾರೂಪ; ಬಳುವಳಿ, ಕಾಣಿಕೆ, ಉಡುಗೊರೆ ಎಂಬ ಅರ್ಥ ಪಡೆದು ನಾಮಪದಗಳಾಗಿ ಕೆಲಸ ಮಾಡಬಹುದು;
- 'ಕುಡು' ಪದ ಕೊಡುವ ಕ್ರಿಯೆಗೆ ಸಂಬಂಧಿಸಿದ್ದು; ದಾನ ಕೊಡುವುದನ್ನು ಹೇಳುವುದು; ನಡೆಸು, 'ದನಿಗುಡು' ಎಂಬ ಅರ್ಥಗಳೂ ಇವೆ;

- ಹೊಡೆ, ಕುಟ್ಟು ಎಂಬ ಅರ್ಥಗಳಿವೆ; ಪ್ರಯೋಗ: 'ಎರಡು ಕೊಡು/ಕುಡು ಮತ್ತೆ', 'ಒಂದಷ್ಟು ಕಂಸಾಳೆಗಳನ್ನು ಕುಟ್ಟು', 'ಕೊಟ್ಟರೆ ಕೊಡು ಬಿಟ್ಟರೆ ಬಿಡು';
- ಬಗ್ಗಿದ, ಕೊಕ್ಕೆ, ಸೊಟ್ಟ ಅರ್ಥದಲ್ಲಿ 'ಕುಡು' ಪದದ ಬಳಕೆ; 'ಕುಡುಗೋಲು' ಎಂಬ ರೂಪ ಈ ಹಿನ್ನೆಲೆಯಲ್ಲಿ ಬಂದಿರಬಹುದು;
- 'ಕುಡಿ' ಎಂಬ ಅರ್ಥದಲ್ಲಿ 'ಕುಡಿನೀರ್'; 'ಇಸು' ಪ್ರತ್ಯಯ ಸೇರಿದರೆ ಕುಡಿಸು, ಕೊಡಿಸು ಆಗುವುದುಂಟು;
- ಕುಡುಕುಡು, ಕೊಡುಕೊಡು– ಅನುಕರಣ ಪದಗಳು; ಕ್ರಿಯೆಯ ತೀವ್ರತೆಗಾಗಿ ಬಳಕೆ; ಪದದ್ವಂದ್ವ/ಪದಪ್ರಾಸ;
- ಆಹಾರವಾಗಿ ಬಳಕೆ; ಹುರುಳಿಕಾಳು; ಪುಷ್ಟಿದಾಯಕ ಧಾನ್ಯ; ಔಷಧಿಯಾಗಿ ಕೂಡ ಉಪಯುಕ್ತ;
- 'ಕುಡು' ಪದದ ಬಳಕೆ– 'ಕೊಂಕು' ಎಂಬ ಅರ್ಥದಲ್ಲಿ;
- 'ಕುಡು' ಪದ ಮರಾಠಿಯಲ್ಲಿ ಉಲ್ಲೇಖ; ಲೋಕಾಪುರ ಅವರ ಹೇಳಿಕೆ".

೪. **ಕುತ್ತಿಗೆ ಮೇಲೆ ಕೂಧು :**

- "ನುಡಿಗಟ್ಟು; ಸಾಲದ ಸಂಬಂಧವಾಗಿ ರಚಿತವಾದದ್ದು; ಸಾಲ ಹಿಂದಿರುಗಿಸಲು ಒತ್ತಡ ಹೇರಿದಾಗ, ತಗಾದೆ ಮಾಡಿದಾಗ ಇದರ ಬಳಕೆ;
- 'ಸಾಲ ಕೊಟ್ಟವನು ಸುಮ್ಮನೆ ಇರುವುದಿಲ್ಲ, ಕುತ್ತಿಗೆಯ ಮೇಲೆ ಕೂತು ಪೀಡಿಸುತ್ತಾನೆ' ಎಂಬಂತಹ ಪ್ರಯೋಗಗಳು ಬಳಕೆಯಲ್ಲಿವೆ;
- ಈ ನುಡಿಗಟ್ಟು ಸಾಲಕ್ಕೆ ಮಾತ್ರ ಸೀಮಿತವಲ್ಲ; 'ಮುಯ್ಯಾಳು', ಹಣ ಪಡೆದು ಸಕಾಲಕ್ಕೆ ಕೆಲಸಗಾರರು ಬರದಿರುವುದು, ಮಾಲೀಕ ಒತ್ತಾಯ ಹೇರುವುದು, ಗುತ್ತಿಗೆ ಹಿನ್ನೆಲೆ– ಇಂತಹ ಪ್ರಸಂಗಗಳಲ್ಲಿ ಈ ನುಡಿಗಟ್ಟು ಚಾಲ್ತಿಗೆ ಬಂದಿದೆ;
- ಬಳಕೆಯ ಹೊಸ ಸಂದರ್ಭಗಳಿಗೆ ಕೊರತೆಯಿಲ್ಲ; ಮೇಲಿನ ಅಧಿಕಾರಿ ಕೆಳಗಿನವರ ಮೇಲೆ ನಿರ್ದಿಷ್ಟ ಕೆಲಸಕ್ಕೆ ಒತ್ತಾಯ ತರುವುದು;
- ನುಡಿಗಟ್ಟಿನಲ್ಲಿ 'ಕುತ್ತಿಗೆ' ಮತ್ತು 'ಕೂರು' ಪದಗಳಿವೆ; ತೆಲುಗಿನಲ್ಲಿ ಕುತ್ತಿಗೆ/ಕುತ್ತಿಕ/ಕುತಿಕೆ, ಗೊಂತುಕೆ/ಗೊಂತುಕ ಪದಗಳು ಬಳಕೆಯಲ್ಲಿವೆ; 'ಕು' ಶಬ್ದ 'ಕೊ' ಆಗಿ, 'ಗೊ' ಆಗುವುದು ಅಪರೂಪವಲ್ಲ; 'ತ' ಮತ್ತು 'ಗ'ಕಾರಗಳು ಸಾಮಾನ್ಯ; ಆದರೆ ತೆಲುಗಿನಲ್ಲಿ ಅನುನಾಸಿಕ ಉಚ್ಚಾರಣೆ ಬಂದುದಾದರೂ ಹೇಗೆ?;

ಇನ್ನು 'ಕೂರು' ಪದ–ಕನ್ನಡದಲ್ಲಿ ಕುಳಿರ್, ಕುಳ್ಳಿರ, ಕೂಡ್ರು ರೂಪಗಳಿವೆ; 'ಕೂಡ್ರೊ' ರೂಪವೇ 'ಕೂರು' ಆಗಿ, ಕ್ರಮೇಣ 'ಕೂತು' ರೂಪ ಬಂದಿರಬಹುದು;

- 'ಕುತ್ತಿಗೆಯ ಮೇಲೆ ಕೂರು' ನುಡಿಗಟ್ಟು ಶಾರೀರಿಕ ಕ್ರಿಯೆಯನ್ನು ನಿರಾಕರಿಸಬಹುದು; ಆದರೆ ಮಾನಸಿಕ ಒತ್ತಡ ಶಾರೀರಿಕ ಒತ್ತಡಕ್ಕೆ ಕಾರಣವಾಗುವುದನ್ನು ತಳ್ಳಿ ಹಾಕುವಂತಿಲ್ಲ;
- ಹಳ್ಳಿ ಗಾಡಿನಲ್ಲಿ ಮಕ್ಕಳನ್ನು ಕುತ್ತಿಗೆಯ ಮೇಲೆ ಕೂರಿಸಿಕೊಂಡು ಜಾತ್ರೆ, ಸಂತೆಗೆ ಹೋಗುವ ಕ್ರಿಯೆ ಇದಕ್ಕೆ ನೇರವಾಗಿ ಸಂಬಂಧಿಸುವುದಿಲ್ಲ; ಅದು ಒತ್ತಾಯ, ಒತ್ತಡಕ್ಕೆ ಸಂಬಂಧಿಸಿದ್ದಲ್ಲ;
- ಈ ನುಡಿಗಟ್ಟು 'ಜೀತ'ವನ್ನು ಸೂಚಿಸಬಹುದು; ಕುವೆಂಪು ಅವರ 'ಸಾಲದ ಮಗು' ಕಥೆ ಅತ್ಯುತ್ತಮ ನಿದರ್ಶನ; ಜೀತಕ್ಕಿದ್ದ ಮಗುವನ್ನು ಭಾರಿ ಮಳೆಯ ಸಂದರ್ಭದಲ್ಲಿ 'ಒಡ್ಡಿದ ಕೊಡವೆ'ಗೆ ಮೀನು ಬಿದ್ದಿದೆಯೆ ಎಂದು ನೋಡಿಕೊಂಡು ಬರಲು ಒಡೆಯ ಒತ್ತಾಯ ಮಾಡಿ ಕಳುಹಿಸುವನು; ಹೊರಟ ಮಗು ಕೊಡವೆಯಲ್ಲಿ ಕೈ ಹಾಕಿದಾಗ ನಾಗರಹಾವು ಕಡಿದು ಸತ್ತು ಹೋಗುತ್ತದೆ; ಈ ಪ್ರಸಂಗ 'ಪೀಡಿಸಿ' ಕಳುಹಿಸಿದ ಪ್ರಸಂಗವೇ, ಅರ್ಥಾತ್ 'ಕುತ್ತಿಗೆ ಮೇಲೆ ಕೂತು' ಕಳುಹಿಸಿದ ಪ್ರಸಂಗವೇ;
- ಈ ನುಡಿಗಟ್ಟು ಕೆಲಸಕ್ಕೆ ಸಂಬಂಧಿಸಿದ್ದು; ಒತ್ತಾಯ ಅಥವಾ ಹೇರಿಕೆಯನ್ನು ಹೇಳುವಂಥದ್ದು".

೫. ಕುದರೆ/ಕುದುರೆ :

- ""ಕುದರೆ' ಪದಕ್ಕೆ ಕುದುರೆ, ಕುದಿರೆ, ಕುದರಿ ಎಂಬ ರೂಪಗಳು ಬಳಕೆಯಲ್ಲಿವೆ; ಉಚ್ಚಾರಣೆಯ ಕಾರಣಕ್ಕೆ ಈ ಎಲ್ಲ ಬದಲಾವಣೆ;
- ಜಾನಪದದಲ್ಲಿ ಕುದರೆ ಪಾತ್ರವಾಗಿಯೊ ಪ್ರತಿಮೆಯಾಗಿಯೊ ಕಾಣಿಸಿಕೊಳ್ಳತ್ತದೆ; ಈ ವ್ಯಾಪ್ತಿಯಲ್ಲಿ ಜನಪದ ಕಥೆ, ಪುರಾಣ, ಐತಿಹ್ಯ, ಆಚರಣೆಗಳು ಬರುತ್ತವೆ;
- 'ಸೂರ್ಯಪುರಾಣ' ಪ್ರಕಾರ ಸೂರ್ಯದೇವ 'ಸಪ್ತಾಶ್ವ'ಗಳನ್ನು ಹೂಡಿ, ರಥವೇರಿ ಬರುತ್ತಾನೆಂಬ ಕಲ್ಪನೆಯಿದೆ; ಈ ಏಳು (ಜಾನಪದದಲ್ಲಿನ ಒಂದು ಮಾಂತ್ರಿಕ ಸಂಖ್ಯೆ) ಕುದರೆಗಳೇ ಇವೊತ್ತಿನ ಏಳು ಬಣ್ಣಗಳು; ವೈಜ್ಞಾನಿಕ ಸತ್ಯವನ್ನು 'ಸೂರ್ಯ ಪುರಾಣ' ಕಥೆ ಮಾಡಿ ಹೇಳಿದೆ;
- 'ಕೀಲು ಕುದುರೆ' ಒಂದು ಜನಪ್ರಿಯ ಆಶಯ; ಬಡಗಿಯೊಬ್ಬ ಕೀಲು ಕುದುರೆ ಮಾಡಿ ರಾಜಕುಮಾರನನ್ನು ಸವಾರಿ ಮಾಡಲು ಹೇಳಿದನಂತೆ; ಅದರ ಪ್ರಕಾರ ರಾಜಕುಮಾರ ಕೀಲು ಕುದುರೆ

ಏರುವುದು, ಕೀಲೊಂದರ ಮೇಲೆ ಕಾಲು ತಾಕಿದಾಗ ಕೀಲುಕುದುರೆ ರಾಜಕುಮಾರಿ ಮನೆಯ ಮೇಲೆ ಇಳಿಯುವುದು, ಅನಂತರ ಮುಂದಿನ ಕಥಾ ಬೆಳವಣಿಗೆ ಊಹಿಸಿದ ಜನಪದ ಕಥೆಯಂತೆ ಸಾಗುವುದು; ಈ 'ಕೀಲುಕುದುರೆ' ಕಥೆ 'ಅರೇಬಿಯನ್ ನೈಟ್ಸ್' ಕಥೆಗಳಲ್ಲಿದೆ; ಬಹಳ ಹಿಂದೆಯೇ ತೆಲುಗಿನಲ್ಲಿ 'ಕೀಲುಗುರ್‍ರಂ' ಚಲನಚಿತ್ರ ಬಂದಿತ್ತು; ಇದು ಕೀಲುಕುದುರೆ ಕಥೆಯೇ; ಇದರಿಂದ ತೆಲುಗಿನಲ್ಲಿಯೂ ಈ ಕಥೆ ಇದ್ದಂತಾಯಿತು;

- ಜನಪದ ಕಥಾ ಕಲ್ಪನೆಯಲ್ಲಿ ಹಾರುವ ಕುದುರೆಗಳಿಗೇನೂ ಕೊರತೆಯಿಲ್ಲ; ಮನಸ್ಸಿನ ಆವೇಗಕ್ಕೂ, ವೇಗಕ್ಕೂ ಇದು ಸಂಕೇತ;
- ಸಮುದ್ರ ಮಂಥನದ ಕಾಲದಲ್ಲಿ ದೊರೆತ ಅಪರೂಪದ ವಸ್ತುಗಳಲ್ಲಿ 'ಉಚ್ಚೈಃಶ್ರವ' ಒಂದು; ಇದು 'ಐರಾವತ' ಆನೆಯ ಹಾಗೆ, ದೇವೇಂದ್ರನ ಕುದುರೆ;
- 'ಕೆರೆಗೆ ಹಾರ'ದಲ್ಲಿ 'ಬತ್ತಲೆಗುದುರಿ' ಕಲ್ಪನೆಯೊಂದು ಬರುತ್ತದೆ; ಕಡಿವಾಣ ಹಾಕದೆ, ಹೇಗಿತ್ತೊ ಹಾಗೆಯೇ ಕುದುರೆ ಏರಿ ಹೋಗುವುದು; 'ಮಹದೇವರಾಯ' 'ಬತ್ತಲೆಗುದುರಿ' ಹತ್ತಿ ಬರುತ್ತಾನೆಂಬುದು ಕಥೆಯ ಪ್ರಮೇಯ; ಈ ಪದ ಇಡೀ ಸಂದರ್ಭದ ತಲ್ಲಣ, ಆತಂಕ, ಒತ್ತಡ, ಚಿಂತೆಯ ವೇಗ, ಭವಿಷ್ಯದ ಸೂಚನೆ ಮುಂತಾದವುಗಳಿಗೆ ಸಂಕೇತವಾಗುವುದು, ಪ್ರತಿಮೆಯಾಗುವುದು;
- ಸಂಸ್ಕೃತಿಯಲ್ಲಿ ಕುದುರೆ 'ಲೈಂಗಿಕ ಪ್ರತಿಮೆ'(Sexual image)ಯಾಗಿ ಕೂಡ ಕಂಡುಬಂದಿದೆ; ಅನೇಕ ಪುರಾಣ ಕಥೆಗಳು ಇದನ್ನು ಬಳಸಿಕೊಂಡಿವೆ; ಕುವೆಂಪು ಅವರ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದ 'ದಶಾನನ ಸ್ವಪ್ನಸಿದ್ಧಿ' ಸಂಚಿಕೆಯಲ್ಲಿ 'ಅಶ್ವವೊಂದರ ಪ್ರತಿಮೆಯನ್ನು ತರಲಾಗಿದೆ; ಇಲ್ಲಿಯೂ 'ಕುದುರೆ' 'ಕಾಮ'ದ ಸಂಕೇತವಾಗಿಯೇ ಬಂದಿದೆ;
- ಇಂದಿಗೂ 'ಅಶ್ವಶಕ್ತಿ'(Horse power) ಪದವನ್ನು ವಿದ್ಯುಚ್ಛಕ್ತಿ ವಿಷಯದಲ್ಲಿ ಬಳಸಲಾಗುತ್ತಿದೆ;
- 'ಕುದರಿ ಹರಕೆ' ಇಂದಿಗೂ ಜನಪದರಲ್ಲಿ ಒಂದು ಪದ್ಧತಿ; ಕುದುರೆಯಾಕಾರದ ಮೂರ್ತಿಯನ್ನು ದೇವರಿಗೆ ಅರ್ಪಿಸುವುದೇ ಇದು;
- ಉಬ್ಬಿದ ಕಾಲಿನವಳನ್ನು 'ಕುದರಿಗಾಲಿನ ಹೆಣ್ಣು' ಎಂದು ಕರೆಯುವರು; 'ಚಂಚಲೆ' ಎಂಬ ಅರ್ಥದಲ್ಲಿ;
- 'ಕುದರಿಕಾರ ಗೊರವರು' ಎಂಬ ಪದಪರಿಭಾಷೆ ಬಳಕೆಯಲ್ಲಿದೆ;

ಮೈಲಾರಲಿಂಗನ ಕುದರಿಗಳ ಚಾಕರಿ ಮಾಡುವ ಗೊರವರು ಎಂದು ಇದರ ಅರ್ಥ;

- 'ಕುದರಿ ಹಬ್ಬ' ಎಂಬ ಆಚರಣೆಯೂ ಇದೆ; ಮೈಲಾರಲಿಂಗ ದೇವರು ಸೀಗೆ ಹುಣ್ಣಿಮೆಯ ಏಳನೇ ದಿನ ಅಶ್ವಾರೋಹಿಯಾಗಿ ಬೇಟೆಯಾಡಲು ಹೋಗುವ ಆಚರಣೆ ಇದು;
- ಹಾಗೆಯೇ ಕುದುರಿ ಚಾಕರಿ, ಕುದುರೆಕೋಲ, ಕುದುರೆಗಚ್ಚಿ, ಕುದುರೆ ಕುಣಿತ, ಕುದುರೆ ಗತ್ತು, ಕುದುರೆ ದೂತ, ಕುದರೆ ಮಳೆ, ಕುದುರೆ ಮಣೆ, ಕುದುರೆ ವಾಹನ, ಕುದುರೆ ಬಾಲ, ಕುದುರೆ ಹಲ್ಲೆ, ಕುದುರೆಯಾಳು, ಕುದುರೆ ಆಟ ಮೊದಲಾದ ಪದಗಳು ವಿವಿಧ ಸಂದರ್ಭಗಳಲ್ಲಿ ಬಳಕೆಯಲ್ಲಿವೆ".

೬. **ಕುಮಾರರಾಮ :**

- "ಒಬ್ಬ ಜನಪದ ವೀರ; ಇತಿಹಾಸ ವೀರ ಕೂಡ; ಚೆನ್ನಿಗರಾಮ, ರಾಮನಾಥ ಎಂಬ ಹೆಸರುಗಳಲ್ಲಿಯೂ ಇವನು ಜನಪ್ರಿಯ;
- 'ಪರನಾರೀ ಸೋದರ' ಎಂದೇ ಇವನ ಖ್ಯಾತಿ; 'ಮೌಖಿಕ ಇತಿಹಾಸ'ವೇ ಹೆಚ್ಚಿನ ಮಾಹಿತಿಗಳನ್ನು ಒದಗಿಸಿರುವುದು;
- ಚೆನ್ನಿಗರಾಮನ ಬಗೆಗ ಜನಪದ ಕಾವ್ಯಗಳೇ ಹುಟ್ಟಿಕೊಂಡಿವೆ; ನಂಜುಂಡ ಎಂಬ ಕವಿ 'ರಾಮನಾಥ ಚರಿತೆ' ಎಂಬ ಚಾರಿತ್ರಿಕ ಕಾವ್ಯವನ್ನ ರಚಿಸಿ, ಇತಿಹಾಸದಲ್ಲಿ ಇವನನ್ನು ಉಳಿಸಲು ಪ್ರಯತ್ನಿಸಿದ್ದಾನೆ;
- 'ಕಂಪಿಲಿ' ರಾಜ್ಯದ ಕಂಪಿಲರಾಯ ಮತ್ತು ಹರಿಹಲದೇವಿಯ ಮಗ; ಜಟ್ಟಂಗಿ ರಾಮೇಶ್ವರನ ವರದಿಂದ ಹುಟ್ಟಿದ್ದರಿಂದ ಇವನಿಗೆ 'ಕುಮಾರರಾಮ' ಎಂಬ ಹೆಸರು ಬಂದಿದೆ ಎಂದು ಕಥೆಯಿದೆ;
- ಹೊಯ್ಸಳ ಮತ್ತು ವಿಜಯನಗರ ಸಾಮ್ರಾಜ್ಯಗಳ ನಡುವಣ ಅವಧಿಯಲ್ಲಿ ಕುಮಾರರಾಮ ಆಳಿದ ವಿಚಾರಗಳಿವೆ; ಮುಮ್ಮಡಿ ಬಲ್ಲಾಳನೊಡನೆ ಕಾದಿದ ವಿಚಾರ ಕೂಡ ಕಾವ್ಯದಲ್ಲಿದೆ;
- ಕುಮಾರರಾಮ–ರತ್ನಾಜಿ ಪ್ರಸಂಗ, ಕುಮಾರರಾಮ–ದೆಹಲಿ ಸುಲ್ತಾನನ ಮಗಳ ಪ್ರಸಂಗ ಕಟ್ಟುಕಥೆಗಳೆಂದು ತೋರುತ್ತದೆ;
- ಕುಮಾರರಾಮನ 'ಕುಮ್ಮಟ ದುರ್ಗ'ದ ಇತಿಹಾಸ ಒಂದು ಸವಾಲೇ ಸರಿ; ಕುಮಾರರಾಮನ ಚರಿತ್ರೆಯನ್ನು ಕಟ್ಟುವಾಗ ಜನಪದ ಕಾವ್ಯಗಳನ್ನೂ ದುಂದುಮೆ ಪದಗಳನ್ನೂ ಬಳಸಿಕೊಳ್ಳುವುದು ಅನಿವಾರ್ಯ; ಒಂದೆರಡು ಶಾಸನಗಳಲ್ಲಿ ಮಾತ್ರ ಕುಮಾರರಾಮನ ಹೆಸರಿನ ಉಲ್ಲೇಖವಿದೆ;
- ಚೆನ್ನಿಗರಾಮ ಒಬ್ಬ 'ಸಾಂಸ್ಕೃತಿಕ ವೀರ' ಎಂಬುದರಲ್ಲಿ ಅನುಮಾನವಿಲ್ಲ; ಆದರೆ ಸಾಂಸ್ಕೃತಿಕ ಪಲ್ಲಟಕ್ಕೆ ಕಾರಣನಾದನೆ

ಎಂಬುದರ ಬಗ್ಗೆ ಸರಿಯಾಗಿ ಗೊತ್ತಿಲ್ಲ; ರಾಜಕೀಯ ಲೆಕ್ಕಾಚಾರಗಳೇ ಎದ್ದುಕಂಡು, ಸಾಂಸ್ಕೃತಿಕ ಕೊಡುಗೆಗಳು ಬಯಲುಗೊಂಡಿರುವುದು ಕಡಿಮೆ".

೭. ಕುರಿ :

- "ಒಂದು ಪ್ರಸಿದ್ಧ ಸಾಕುಪ್ರಾಣಿ- ಮಾಂಸಾಹಾರಕ್ಕಾಗಿ, ತುಪ್ಪಟಕ್ಕಾಗಿ, ಗೊಬ್ಬರಕ್ಕಾಗಿ;
- 'ಮಂದೆ ಕುರಿ' ಎಂಬ ಪರಿಭಾಷೆಯ ಬಳಕೆ; ಹೊಲಗದ್ದೆಗಳಿಗೆ ಗೊಬ್ಬರಕ್ಕಾಗಿ ಹಲವು ದಿವಸಗಳವರೆಗೆ ತಡಸಲು 'ಕುರಿಗಳ ಮಂದೆ'ಯ ಬಳಕೆ;
- 'ಕುರಿ' ಪದಕ್ಕೆ 'ಕೊರಿ' ರೂಪವೂ ಇದೆ; `Vowel mutation' ಕಾರಣದಿಂದ ಇಲ್ಲಿ ಉ>ಒ ಆಗಿದೆ;
- ತಮಿಳಿನಲ್ಲಿ 'ಕೊಱಿ' ಪದವಿದೆ; ಮಲೆಯಾಳಂ ಅದನ್ನು ಅನುಸರಿಸಿದೆ; ತೆಲುಗಿನಲ್ಲಿ ಗೊಱಿ, ಗೊಱ್ಱು, ಗೊರ್ರೆ ರೂಪಗಳಿವೆ, ಕ>ಗ ಆಗುವುದರ ಜೊತೆಗೆ ಉ>ಒ ಕೂಡ ಆಗಿದೆ; ತೆಲುಗನ್ನು ಬಿಟ್ಟು ಉಳಿದೆಲ್ಲ ಭಾಷೆಗಳ ಆರಂಭದಲ್ಲಿ 'ಕ'ಕಾರವೇ ಇದೆ;
- ಸಂಸ್ಕೃತದಲ್ಲಿ 'ಮೇಷ' ಪದವಿದ್ದು, ಕನ್ನಡ ಪದಕ್ಕೂ ಅದಕ್ಕೂ ಸಂಬಂಧವಿಲ್ಲ; ದ್ರಾವಿಡ ಭಾಷೆಗಳ 'ಕುರಿ/ಕುಱಿ' ಪದ ಸ್ವತಂತ್ರವಾದುದು;
- 'ಕುರಿ' ಪದ ಹೆಣ್ಣು ಕುರಿಗೆ ಮಾತ್ರ ಅನ್ವಯ; ಗಂಡು ಕುರಿಗೆ 'ಟಗರು' ಎನ್ನುವರು; 'ತಗರ್' ರೂಪವೂ ಇದೆ; 'ತಗರ್' ಪದವೇ ಮೂಲವಿರಬಹುದು, ಆಮೇಲೆ 'ಟಗರ್' ಬಂದಿರಬಹುದು; 'ತಗರ್' ಮರಾಟಿಯಿಂದ ಬಂದದ್ದು; ಕನ್ನಡದಲ್ಲಿಯೂ ಮೂಲದಲ್ಲಿ 'ತಗರ್' ರೂಪವೇ ಇದ್ದು, ಆಮೇಲೆ ಉಚ್ಚಾರಣೆಯಲ್ಲಿ 'ಟಗರ್' ಆಗಿರಬಹುದು;
- 'ಕುರಿ' ಪದದ ಬಳಕೆಯಲ್ಲಿ 'ಕರಗಿ' ಮತ್ತು 'ಕುರಿಮರಿ' ಎಂಬೆರಡು ರೂಪಗಳಿವೆ; 'ಕರಗಿ'-ವಯಸ್ಕಕುರಿ, ಸೊಂಪಾದ ಕುರಿ; ಎಳೆಯ ಕುರಿಯನ್ನು ಕುರಿತದ್ದು 'ಕುರಿಮರಿ' ಪದ;
- 'ಕುರಿ'ಯನ್ನು ಕುರಿತು ಹಲವು ಗಾದೆಗಳಿವೆ; ಅವುಗಳಲ್ಲಿ ಎರಡು ಹೀಗಿವೆ: 'ಕುರಿ ಕಾಯೋ ತೋಳಾ ಅಂದ್ರೆ ಸಂಬಳವೇ ಬೇಡ', 'ಕುರಿ ಕೊಬ್ಬಿದಷ್ಟೂ ಕುರುಬನಿಗೆ ಲಾಭ'; ಒಂದನೆಯದು- ಮೇವು ಮತ್ತು ಮೇಯುವ ಸಂಸ್ಕೃತಿಯನ್ನು ತಿಳಿಸುವಂಥದು; ಎರಡನೆಯದು-ತುಪ್ಪಟದಿಂದ ಕುರುಬನಿಗಾದ ಲಾಭವನ್ನೂ, ಶೋಷಣೆಯ ವಾಸನೆಯನ್ನೂ ಹೇಳುವಂಥದು;

- 'ಕುರಿ' ಪದವನ್ನು ರೂಪಕ, ಪ್ರತಿಮೆ, ವ್ಯಂಗ್ಯವಾಗಿ ಬಳಸುವುದಿದೆ; 'ಕುರಿ ಹಳ್ಳಕ್ಕೆ ಬಿದ್ದಂತೆ ಜನ ಬಿದ್ದರು' ಎಂಬ ಅರ್ಥದಲ್ಲಿ; ಕುರಿಗಳು ತಲೆಯನ್ನು ಕೆಳಕ್ಕೆ ಹಾಕುವುದು 'ಅಧೀನತೆಗೆ', 'ಅಧೀರತೆಗೆ' ಒಂದು ಸಂಕೇತ; ನಿಸಾರ್ ಅಹಮದ್ ಅವರ 'ಕುರಿಗಳು ಸಾರ್ ಕುರಿಗಳು' ಪದ್ಯ ಇಂತಹ ಶೋಷಕ ಸಂಸ್ಕೃತಿಯ ಪ್ರತಿಮೆ;
- ಬಸವಣ್ಣನವರ 'ಹಬ್ಬಕ್ಕೆ ತಂದ ಹರಕೆ ಕುರಿ, ತೋರಣಕೆ ತಂದ ತಳಿರ ಮೇಯಿತ್ತು" ಒಂದು ರೂಪಕ ಧ್ವನಿಯಾಗಿ ಬಳಕೆಯಲ್ಲಿದೆ; 'ಬಲಿಪಶು'ಗಳಾಗುತ್ತಿರುವವರ ಪ್ರತಿಮೆ ಕೂಡ; ಸಾವು-ಬದುಕಿನ ನಿಕಟತ್ವದ ಸೂಚನೆ ಸಹ; ಅಮಾಯಕರ ಜೀವನಕ್ಕೊಂದು ಹಿಡಿದ ಕನ್ನಡಿ;
- 'ಕುರಿ' ಪದ ಉಪಯುಕ್ತತೆಗೆ, ವಸ್ತ್ರ ಸಂಸ್ಕೃತಿಗೆ, ಆಹಾರ ಸಂಸ್ಕೃತಿಗೆ ಸಾಂಕೇತಿಕವಾದುದು;
- 'ಕುರಿ' ಬಲಿಸಂಸ್ಕೃತಿಯಲ್ಲಿಯೂ ಕಾಣಿಸಿಕೊಳ್ಳುವಂಥದು; ಶಕ್ತಿದೇವತೆಗಳ ಹಬ್ಬಗಳಲ್ಲಿ ಕುರಿ ಕೋಳಿಗಳನ್ನು ಬಲಿ ಕೊಡುತ್ತಿದ್ದ ಸಂಪ್ರದಾಯ ಇಂದಿಗೂ ಚಾಲ್ತಿಯಲ್ಲಿದೆ; ಬಲಿಯಾದ ಕುರಿಯನ್ನು 'ದೇವರ ಕುರಿ' ಎಂದು ಕರೆಯಲಾಗುವುದು; ಬಲಿ ಸಂಸ್ಕೃತಿಯ ವೈಭವೀಕರಣವಿದು;
- 'ಕುರಿ' ಪದಕ್ಕೆ ಇತರ ಅರ್ಥಗಳೂ ಇವೆ: ಕುರಿತಂತೆ, ಕುರಿ, ತಿಳಿ, ಗುರುತು, ಉದ್ದೇಶ, ಮನಸ್ಸಿಗೆ ಬರು, ಇತ್ಯಾದಿ;
- ಕೊಡಗಿನ ಭಾಗದಲ್ಲಿ ವಾಸಿಸುವ ಒಂದು ಸಮುದಾಯದ ಹೆಸರು 'ಕುರಿಕಳ' ಎಂದಿದೆ;
- ಬುಡಕಟ್ಟು ಸಮುದಾಯದಲ್ಲಿ 'ಕುರಿ ಕರೆಯುವುದು' ಒಂದು ಮನರಂಜನಾತ್ಮಕ ಆಟ;
- ಕುರಿಬಿಡು, ಕುರಿಗಾಹಿ, ಕುರಿಕಾಲಚ್ಚು, ಕುರಿರೊಪ್ಪ, ಕುರಿಕೋಲು, ಕುರಿಗೊಬ್ಬರ, ಕುರಿತುಪ್ಪಟ, ಕುರಿಕಡುಬು, ಕುರಿಮರಿ ಆಟ, ಕುರಿಬೆಳ್ಳಿ, ಕುರಿಹುಣ್ಣು, ಕುರುಣಿ– ಇವು ಬೇರೆ ಬೇರೆ ಅರ್ಥದ/ಬಳಕೆಯ ಸಂದರ್ಭದ ಉಪಶೀರ್ಷಿಕೆಗಳು".

೮. **ಕುರುಕ್ಷೇತ್ರ :**

- "ಮಹಾಭಾರತದಲ್ಲಿ ಕೌರವರಿಗೂ ಪಾಂಡವರಿಗೂ ನಡೆದ ಯುದ್ಧದ 'ಯುದ್ಧ ಭೂಮಿ' ಹೆಸರು; ಸಾಮಾನ್ಯ ಜನ ಇದನ್ನು ರೂಪಕವಾಗಿ ಮಾಡಿಕೊಂಡು ಸಂಸಾರದಲ್ಲೊ, ಕುಟುಂಬದಲ್ಲೊ ನಡೆದ ಘರ್ಷಣೆಯನ್ನು ಆ ಹೆಸರಿನಲ್ಲಿ ಕರೆಯುವುದುಂಟು;
- ಜನರು ಜಗಳ/ಕಲಹ ಪರಿಸ್ಥಿತಿಗಳನ್ನು 'ಕುರುಕ್ಷೇತ್ರವೇ ನಡೆದು ಹೋಯಿತು' ಎಂದು ವರ್ಣಿಸುವುದಿದೆ;

- ಈ ಪದ 'ಮಹಾಭಾರತ'ಕ್ಕೆ ಸೀಮಿತವಾಗಿಲ್ಲ; ಸಾಮಾಜಿಕ ಸಂದರ್ಭವನ್ನು ಉಪಯೋಗ ಮಾಡಿಕೊಂಡು ಇವೊತ್ತೂ ಬಳಕೆ ಮಾಡುವುದನ್ನು ಕಾಣುತ್ತೇವೆ;
- ಜಗಳವನ್ನು ವೈಭವೀಕರಿಸಿ, 'ಕುರುಕ್ಷೇತ್ರ'ದ ಪುರಾಣೀಕರಣ ಮಾಡುವುದು ಈ ನುಡಿಗಟ್ಟಿನ ಉದ್ದೇಶ;
- ರಾಮಾಯಣ ಮಹಾಭಾರತ ಕಥಾಸಂದರ್ಭಗಳು ಮೌಖಿಕಸಂಸ್ಕೃತಿಯನ್ನು ರೂಪಿಸಿಕೊಂಡು ಬಂದಿವೆ; ಈಗ ಇವು 'ಸಂಕೇತ'ಗಳಾಗಿ ಮಾರ್ಪಟ್ಟಿವೆ; ಮನೆ ಮನೆಯಲ್ಲೂ ಅವುಗಳ ಕಥಾ ಸಂದರ್ಭಗಳು ಪಾತ್ರಗಳೂ ಇವೊತ್ತು ಕೆಲಸ ಮಾಡುತ್ತಿವೆ; ಜೀವನ ಮಾದರಿಗಳಾಗಿ ಬಳಕೆಗೆ ಬಂದಿವೆ; ಇದಕ್ಕೆ ಒಂದು ನಿದರ್ಶನ 'ಕುರುಕ್ಷೇತ್ರವಾಗು' ನುಡಿಗಟ್ಟು;
- ಜನಪದ ಸಂಸ್ಕೃತಿಯಲ್ಲಿ ಈ ಎರಡೂ ಕಾವ್ಯಕಥೆಗಳು ಹಾಸುಹೊಕ್ಕಾಗಿರುವ ಕಾರಣದಿಂದಾಗಿ ಇಂತಹ ನುಡಿಗಟ್ಟುಗಳು ಹುಟ್ಟಿಕೊಳ್ಳುತ್ತಿವೆ;
- ಸಾಮಾಜಿಕ/ಕೌಟುಂಬಿಕ ಸಮಸ್ಯೆಗಳು ಸಂಸ್ಕೃತೀಕರಣ/ ಪುರಾಣೀಕರಣ ಹೊಂದಿದಾಗ ಹಾಡಾಗಿ, ಕಥೆಯಾಗಿ, ಪುರಾಣವಾಗಿ, ಪದಸಂಸ್ಕೃತಿಯಾಗಿ ರೂಪ ತಳೆಯುತ್ತವೆ;
- ನಮ್ಮ ವರ್ತನಾ ಮಾದರಿಗಳು ಮಹಾಭಾರತದ ವರ್ತನಾ ಮಾದರಿಗಳಿಗೆ ಹೋಲಿಕೆಯಿದ್ದುದರಿಂದಾಗಿ 'ಕಡ್ಡಿಯನ್ನು ಗುಡ್ಡ' ಮಾಡಿರಬಹುದು;
- ಪದವೊಂದು ('ಜಗಳ/ಕಲಹ') ಪದಸಂಸ್ಕೃತಿ ('ಕುರುಕ್ಷೇತ್ರ') ಯಾದದ್ದರ ಸೋಜಿಗವನ್ನು ಇಲ್ಲಿ ಕಾಣುತ್ತೇವೆ.

೯. **ಕುಲದ ಕೊಡೆ :**

- "ಎರವರ ಒಂದು ಕುಲ; ಈ ಕುಲಕ್ಕೆ ಸೇರಿದವರು 'ಕೊಡೆ'ಯನ್ನು ಪೂಜಿಸುವರು;
- ಕುಲದ ಗುಂಪಿನಲ್ಲಿ ಸಭೆ, ಸಮಾರಂಭ ನಡೆದರೆ, ಮೊದಲು 'ಕೊಡೆ'ಗೆ ಪೂಜೆ; ಆಮೇಲೆ ಉಳಿದದ್ದು;
- 'ಕೊಡೆ' ಎರವರಲ್ಲಿ ಪ್ರತಿಷ್ಠೆಯ ಚಿಹ್ನೆ;
- 'ಕೊಡೆ' ಅವರ 'ಕುಲದೇವತೆ'ಗೆ ಹತ್ತಿರವಾದ ಸಾಂಸ್ಕೃತಿಕ ಸಂಕೇತ ಸಹ;
- ಶ್ವೇತ ಪತ್ರ/ಬೆಳ್ಗೊಡೆ ಪರಿಕಲ್ಪನೆಯಿರುವ 'ಉನ್ನತ ಸಂಸ್ಕೃತಿ' (higher culture)ಯಿಂದ ಇಳಿದು ಬಂದ ಪದ್ಧತಿಯಾಗಿರ ಬಹುದು".

೧೦. **ಕುಲಾಚಾರ :**

- "ಕುಲ+ಆಚಾರ>ಕುಲಾಚಾರ; ಕುಲಕ್ಕೆ ಸಂಬಂಧಿಸಿದ ಆಚರಣೆಗಳನ್ನು ಈ ಪದ ಸೂಚಿಸಿದೆ;
- 'ಕುಲ' ಜಾತಿ ಮಾತ್ರವಲ್ಲ; ಜಾತಿಯ ಒಳಗಿನ ಸಮುದಾಯಗಳೂ ಕೂಡ;
- ಮನೆದೇವರ ಆಧಾರದ ಮೇಲೆ ಸಮುದಾಯಗಳೂ ಆಚಾರಗಳೂ ಬದಲಾಗಬಹುದು; ಜಾತಿಯಿಂದ ಜಾತಿಗೆ 'ಕುಲಾಚಾರ'ಗಳು ಕೂಡ ಭಿನ್ನ;
- ಜಾತಿಗಳು ಅನ್ಯ ಸಂಸ್ಕೃತಿಯ 'ಸಂಸ್ಕೃತೀಕರಣ'ಕ್ಕೆ ಒಳಗಾಗುವುದು ಸಹಜ; ಭಿನ್ನತೆ ಇರುವುದು ಈ ನೆಲೆಯಲ್ಲಿಯೇ; ಆಯಾ ಜನರ ಸ್ವಭಾವ, ಸಂಸ್ಕೃತಿಯ ಮೇಲೆ ಈ ವ್ಯತ್ಯಯ ರೂಪಗಳು ಸಂಭವಿಸುತ್ತವೆ;
- ಸಂಸ್ಕೃತಿ ಮತ್ತು ಜಾತಿಗಳನ್ನು ಒಟ್ಟಿಗೆ ಇಟ್ಟು ನೋಡಿದರೆ, ಕುಲದ ಒಳಗೆ ಹೋಲಿಕೆಯಾಗಿ, ಕುಲದ ಆಚೆ ವ್ಯತ್ಯಾಸವಾಗಿ ಈ ಆಚಾರಗಳು ಕಾಣಿಸಿಕೊಳ್ಳುವುದುಂಟು;
- ಸರಿಯೆನಿಸಿದ ವಿಚಾರ ಆಚರಣೆಗೆ ಇಳಿದರೆ, ಅದೇ ಸಂಪ್ರದಾಯ ಆಗಿಬಿಡಬಹುದು; ಆಚಾರ ವಿಚಾರಗಳು ಸಂಸ್ಕೃತಿ ಎನಿಸುವುದು ಸಹಜ; ಬದಲಾವಣೆ ಇದ್ದದ್ದೇ;
- ಆಚಾರ–ವಿಚಾರಗಳು ಒಂದೇ ಎಂದು ಪರಿಗಣಿಸಿದವರು ಸುಲಭವಾಗಿ ವ್ಯವಸ್ಥೆಯ ಒಳಗೆ ಬಂದು ಬಿಡುತ್ತಾರೆ; ವಿರೋಧ ವ್ಯಕ್ತವಾದಾಗ ಬಿರುಕು ಕಾಣಿಸಿಕೊಳ್ಳುತ್ತದೆ; ಮುಂದೆ ವಿಚಾರ ಆಚಾರಕ್ಕೆ ಶರಣಾಗುತ್ತದೆಯೊ ಇಲ್ಲವೊ ಎನ್ನುವುದರ ಮೇಲೆ ಸಂಸ್ಕೃತಿಯ ಸ್ವರೂಪ ನಿಂತಿರುತ್ತದೆ;
- ಆಸ್ತಿಕ ವಿಚಾರಗಳೇ ಬಹುಮಟ್ಟಿಗೆ ಸಂಸ್ಕೃತಿಯನ್ನು ರೂಪಿಸುತ್ತವೆ; ಜನಪದ ಸಂಸ್ಕೃತಿಯಲ್ಲಿ ಸಣ್ಣ ಪ್ರಮಾಣದಲ್ಲಾದರೂ 'ನಾಸ್ತಿಕ ದನಿ' ಕೇಳಿ ಬರುತ್ತದೆ; ವಿಚಾರ ಆಸ್ತಿಕವೆ, ನಾಸ್ತಿಕವೆ ಎನ್ನುವುದಕ್ಕಿಂತ, ಅದು ಹೇಗೆ ಅನುಷ್ಠಾನ ಪಡೆಯುತ್ತದೆ ಎಂಬುದು ಮುಖ್ಯ; ಕುಲಾಚಾರಗಳು ಭೇದ ಪಡೆಯುವುದು ಇಲ್ಲಿಯೇ;
- ಕುಲ ಮತ್ತು ಕುಲ ವ್ಯವಸ್ಥೆ ಇವೊತ್ತು ಗಟ್ಟಿಯಾಗಿಯೆ ಇದೆ; ಆಚಾರದಲ್ಲಿ ಪರಿಷ್ಕಾರ ಆಗಿರುವುದು ನಿಜ; ಆದರೆ ಅದು ಒಂದು ವಿಚಾರದಲ್ಲಿ ಬದಲಾಗಿದ್ದಾಗ ಮಾತ್ರ;
- ಜನಪದ ಕುಟುಂಬದಲ್ಲಿ 'ದೇಶೀ ಸಂಸ್ಕೃತಿ'ಯ ಪ್ರಭಾವ ಹೆಚ್ಚು; 'ಶಿಷ್ಟಸಂಸ್ಕೃತಿ'ಯ ಪ್ರಭಾವ ಇಲ್ಲವೆಂದಲ್ಲ, ಕಡಿಮೆ;

- ಜಾನಪದದಲ್ಲಿ ನಂಬಿಕೆ ಮತ್ತು ಆಚರಣೆಗಳನ್ನು ಶಾಬ್ದಿಕವಲ್ಲದ ಜಾನಪದವೆಂದು ಗುರುತಿಸುತ್ತೇವೆ; 'ಕುಲಾಚಾರ' ಈ ಗುಂಪಿಗೆ ಸೇರಿದ್ದು;
- 'ಕುಲಾಚಾರ' ಆಚರಣಾತ್ಮಕ ಜಾನಪದದ ಒಂದು ಬಗೆ, 'ಪದಸಂಸ್ಕೃತಿ'ಯ ಒಂದು ಉದಾಹರಣೆ".

೧೧. **ಕೃತಯುಗ :**

- "ನಾಲ್ಕು ಯುಗಗಳಲ್ಲಿ ಮೊದಲನೆಯದು; ಉಳಿದ ಮೂರು: ತ್ರೇತಾ, ದ್ವಾಪರ ಮತ್ತು ಕಲಿ;
- 'ಆದಿಯುಗ'ವೆಂದೂ, 'ದೇವ ಯುಗ'ವೆಂದೂ ಇದನ್ನು ಕರೆಯುತ್ತಾರೆ; ಒಳ್ಳೆಯ ಯುಗವೆಂದು ಅರ್ಥ;
- ಸೂರ್ಯ, ಚಂದ್ರ, ಬೃಹಸ್ಪತಿ ಸೇರಿ ಇದನ್ನು ಕಟ್ಟಿದರಂತೆ;
- ಇದರ ಮೇಲೆ ಜ್ಯೋತಿಷ್ಯದ, ಕಾಲಗಣನಾ ಶಾಸ್ತ್ರದ ಪ್ರಭಾವ ಇದ್ದಂತಿದೆ;
- ಈ ಯುಗದಲ್ಲಿ ಹುಟ್ಟಿದ್ದೇ ಸಾರ್ಥಕ ಎಂಬ ಅಭಿಪ್ರಾಯವಿದೆ; ಅಂತಹ ಅನುಭವ, ತಿಳಿವಳಿಕೆ ಆ ಜನರಿಗೆ ಇತ್ತಂತೆ;
- ಯುಗ ಮೌಲ್ಯ ಒಳಿತು; ಕೆಟ್ಟದ್ದರ ಸುಳಿವೇ ಇಲ್ಲದ ಕಾಲ; 'ಕಾಲ' ಎಂದ ಮೇಲೆ 'ಒಳಿತು', 'ಕೆಡುಕು' ಸಾಮಾನ್ಯ; ಆದರೆ ಈ ಯುಗದಲ್ಲಿ ಕೆಡುಕಿಗೆ ಸ್ಥಾನವೇ ಇರಲಿಲ್ಲ ಎಂಬ ಭಾವನೆ;
- ಈ ಯುಗದಲ್ಲಿ 'ಧರ್ಮ' ನಾಲ್ಕು ಕಾಲುಗಳನ್ನೂ ಊರಿ ಸುಸ್ಥಿರವಾಗಿತ್ತಂತೆ; ಅಂದರೆ 'ಧರ್ಮಚ್ಯುತಿ'ಯಾಗಲಿ, 'ಧರ್ಮಬಾಹಿರ' ಚಟುವಟಿಕೆಯಾಗಲಿ ಇರುತ್ತಿರಲಿಲ್ಲವೆಂದು ಅರ್ಥ; ಉಳಿದ ಮೂರು ಯುಗಗಳಲ್ಲಿ 'ಧರ್ಮ' ಕ್ರಮವಾಗಿ ಮೂರು ಕಾಲಿನಲ್ಲಿ, ಎರಡುಕಾಲಿನಲ್ಲಿ, ಒಕ್ಕಾಲಿನಲ್ಲಿ ಇತ್ತಂತೆ; ಧರ್ಮ ಕ್ರಮೇಣ ಕ್ಷೀಣಿಸುತ್ತಾ ಹೋಗಿದೆ ಎಂದು ಅರ್ಥ;
- 'ಕಾಲ ಕೆಟ್ಟು ಹೋಯಿತು' ಎಂಬ ಮಾತು ಕೃತಯಾಗಕ್ಕೆ ಅನ್ವಯಿಸುವುದಿಲ್ಲ; ಏಕೆಂದರೆ, ಇಲ್ಲಿ 'ಕೆಡುಕೇ' ಇರಲಿಲ್ಲ;
- ಇಂತಹ ಯುಗ ಯಾವಾಗಲಾದರೂ ಇತ್ತೆ ಎಂಬ ಅನುಮಾನ ಕಾಡುವುದು".

೧೨. **ಕೃಷ್ಣ :**

- "ಭಾರತೀಯ ಅವತಾರ ಕಲ್ಪನೆಯಲ್ಲಿ ಕೃಷ್ಣಾವತಾರವೂ ಒಂದು; ಕೃಷ್ಣ ದ್ವಾಪರಯುಗದ ಅಧಿಪತಿ, ನಾಯಕ; ಭಾರತೀಯ ಎರಡು ಆರಾಧನಾ ಸಂಪ್ರದಾಯಗಳಲ್ಲಿ ಕೃಷ್ಣನ ಆರಾಧನ ಸಂಪ್ರದಾಯವೂ ಒಂದು, ಇನ್ನೊಂದು ರಾಮನ ಆರಾಧನ

ಸಂಪ್ರದಾಯ; ಇವುಗಳನ್ನು ರೂಪಿಸುವಲ್ಲಿ ಪುರಾಣ, ಐತಿಹ್ಯ, ಜನಪದ ಕಾವ್ಯ, ಶಿಷ್ಟಕಾವ್ಯ, ನಂಬಿಕೆ, ಆಚರಣೆಗಳು ಕಾರಣವಾಗಿವೆ; ಜೊತೆಗೆ ಅವತಾರ ಕಲ್ಪನೆಗಳೂ ನೆರವಿಗೆ ಬಂದಿವೆ;

- 'ಕೃಷ್ಣ' 'ಚಂದ್ರವಂಶ'ದವನು ಎಂಬ ಮಾತಿದೆ; ಹಾಗೆಯೇ ರಾಮ 'ಸೂರ್ಯವಂಶ'ದವನು ಎಂಬ ಉಲ್ಲೇಖವಿದೆ; ಪ್ರಾಚೀನ ಬಹುತೇಕ ರಾಜವಂಶಗಳು ಈ ಎರಡರಲ್ಲಿ ಯಾವುದಾದರೂ ಒಂದಕ್ಕೆ ಸೇರಿದವು ಆಗಿರುತ್ತವೆ; ಈ 'ಚಂದ್ರವಂಶ' ಮತ್ತು 'ಸೂರ್ಯವಂಶ' ಕ್ರಮವಾಗಿ 'ದ್ರಾವಿಡ' ಮತ್ತು 'ಆರ್ಯ' ಜನಾಂಗಗಳನ್ನು ಪ್ರತಿನಿಧಿಸಿವೆಯೆ? ಇದು ಸೈದ್ಧಾಂತಿಕ ಪ್ರಶ್ನೆ;
- 'ಕೃಷ್ಣ' ಎಂಬ ಪದಕ್ಕೆ 'ಕಪ್ಪು', 'ಕಡುನೀಲಿ' ಎಂಬ ಅರ್ಥಗಳಿವೆ; ಇದನ್ನೇ ಕಾವ್ಯಗಳು 'ನೀಲ ಮೇಘ ಶ್ಯಾಮ' ಎಂದು ಕರೆದಿರುವುದು, ನಮ್ಮ ಹಳ್ಳಿಯವರು ಹೇಳುವಂತೆ 'ಎಣೆಗೆಂಪು'/'ಎಣ್ಣೆಗೆಂಪು'; ಇವೆಲ್ಲ ದ್ರಾವಿಡ ಕಲ್ಪನೆಯನ್ನು ಪುಷ್ಟೀಕರಿಸುತ್ತವೆ;
- ಕೃಷ್ಣನನ್ನು 'ಗೊಲ್ಲ' ಎಂದು ಹೇಳ ಹೊರಟಿರುವ ಪ್ರಯತ್ನ; ಕಾರಣ 'ಕೃಷ್ಣ' ಗೋಕುಲದಲ್ಲಿ ಬೆಳೆದದ್ದು, ನವಿಲುಗರಿ ಮತ್ತು ಕೊಳಲುಗಳನ್ನು ಧರಿಸಿದ್ದು; ಈ ಕಾರಣವಾಗಿಯೇ ಕೆಲವು ಗೊಲ್ಲ ಸಮುದಾಯಗಳು 'ಕೃಷ್ಣಗೊಲ್ಲರು' ಎಂದು ಕರೆದುಕೊಂಡಿವೆ;
- ಕೃಷ್ಣನನ್ನು 'ಯದುಕುಲ ನಂದನ' ಎಂದೇ ಕೀರ್ತಿಸುವುದುಂಟು; ಕುರುವಂಶ ಮತ್ತು ಯದುವಂಶಗಳೆರಡರ ಚರಿತ್ರೆಯೂ ಮಹಾಭಾರತದಲ್ಲಿದೆ; ಯದುವಂಶದ ಕೃಷ್ಣ ಕುರುವಂಶದ 'ಕೌರವ' ಕವಲಿಗೆ ವಿರುದ್ಧವಾಗಿ 'ಪಾಂಡವ' ಕವಲಿಗೆ ಪರವಾಗಿ ನಿಂತನು; ದ್ವಾಪರಯುಗದ ಅಂತ್ಯ ಯದು ಮತ್ತು ಕುರುವಂಶಗಳ ಅಂತ್ಯದೊಡನೆ ಆದುದು ವಿಶೇಷ;
- ಕೃಷ್ಣ ಪುರಾಣ ಕಾಲದ ವೀರ ಮಾತ್ರವಲ್ಲ, ಸಾಮಾಜಿಕ/ ಸಾಂಸ್ಕೃತಿಕ ವೀರನೂ ಹೌದು, ಇವೊತ್ತಿಗೂ ಅವನ ಹೆಸರು ಜನಸಾಮಾನ್ಯರಲ್ಲಿ ಬಳಕೆಯಲ್ಲಿರುವುದರಿಂದ ಈ ಉಲ್ಲೇಖ; ಜನಪದ ಕೃಷ್ಣನ ಆರಾಧನ ಸಂಪ್ರದಾಯಕ್ಕೆ ಗೌರವ, ಪ್ರೀತಿಯಿಂದ ನಡೆದುಕೊಂಡಿದೆ; 'ದೈವ'ವೆಂದು ಕಂಡಿದೆ; ಕಥೆ, ಕಾವ್ಯಗಳನ್ನು ಕಟ್ಟಿ ಪ್ರಸಾರ ಮಾಡಿದೆ; ಪುರಾಣ, ಐತಿಹ್ಯ, ಕಾವ್ಯಗಳಲ್ಲಿ ಅವನ ಪರವಾದ ಒಲವುಗಳನ್ನು ತೋರಿದೆ; ಅತಿಮಾನುಷ ಪರಂಪರೆಯನ್ನೇ ಸೃಷ್ಟಿಸಿದೆ; 'ಭಕ್ತಿ ಪಾರಮ್ಯ'ವನ್ನೇ ಬೆಳಸಿದೆ; 'ಭಾಗವತ ಸಂಪ್ರದಾಯ' ಹಿನ್ನೆಲೆಯಲ್ಲಿದ್ದು ಪ್ರಚಾರಕ್ಕೆ ಬಂದಿದೆ; ಭಕ್ತಿ ಚಳುವಳಿಗೆ ಸ್ಫೂರ್ತಿಯಾಗಿ ಕೃಷ್ಣ ನಿಂತಿದ್ದಾನೆ; ಕೃಷ್ಣನ ಪರವಾದ ಕಲ್ಪನೆಗಳು

ಸಂಸ್ಕೃತಿಯ ಬಹುಮುಖ್ಯ ಮಾದರಿಗಳಾಗಿವೆ; ಜನಪದರು ಇದಕ್ಕೆ ಕಾರಣರಾಗಿದ್ದಾರೆ;

- ಎಲ್ಲದಕ್ಕೂ ಸಾಕ್ಷಿಯೆಂಬಂತೆ 'ಕೃಷ್ಣ'ನ ಹೆಸರನ್ನು ಜನ ಇಟ್ಟುಕೊಳ್ಳುತ್ತಾ ಬಂದಿದ್ದಾರೆ; ಕೃಷ್ಣ ಪರವಾದ ಸಂಸ್ಕೃತಿಯನ್ನು ರೂಪಿಸುವಲ್ಲಿ ಇದರ ಪಾತ್ರವೂ ಇದೆ; ಕೃಷ್ಣನ ಬಗೆಗಿನ ನಾಟಕ, ಸಿನಿಮಾ, ಹಾಡು, ಕಲೆ, ರೇಖಾ ಚಿತ್ರ, ಶಿಲ್ಪ ಇವೊತ್ತಿಗೂ ಜನಪ್ರಿಯವಾಗಿವೆ; ಕೃಷ್ಣನ ವ್ಯಕ್ತಿತ್ವವನ್ನೂ, ಆ ಪರಿಯಾದ ಸಂಸ್ಕೃತಿಯನ್ನೂ ರೂಪಿಸಿವೆ".

೧೩. **ಕೇರಿ :**

- ಸಾಮಾನ್ಯಾರ್ಥದಲ್ಲಿ ಬೀದಿ; ಒಂದು ಸಮುದಾಯದವರು ಒಟ್ಟಾಗಿ ವಾಸ ಮಾಡುವ ಸ್ಥಳ; ಅವರೆಲ್ಲರೂ 'ಅಣ್ಣತಮ್ಮಂದಿರು' ಆಗಿರುವ ಸಾಧ್ಯತೆ ಇದೆ; 'ಅಣ್ಣ ತಮ್ಮಿಕೆ' ಎಂದೇ ಇದನ್ನು ಕರೆಯುವರು;
- ತಮಿಳು, ಮಲೆಯಾಳಂಗಳಲ್ಲಿ 'ಚೇರಿ', ತೆಲುಗಿನಲ್ಲಿ 'ಗೇರಿ' ರೂಪಗಳಿವೆ, ಕ>ಚ(ಕೇರಿ>ಚೇರಿ) ಆಗುವುದು ವಿಶೇಷ; ಕ>ಗ ಆಗುವುದೂ ಸಾಮಾನ್ಯ; 'ಕ'ಕಾರವನ್ನು ಮೂಲ ದ್ರಾವಿಡಕ್ಕೆ ಪುನರ್ರಚಿಸುವಾಗ ಕನ್ನಡವನ್ನು ಪ್ರಾತಿನಿಧಿಕವಾಗಿ ತೆಗೆದುಕೊಳ್ಳುತ್ತೇವೆ;
- 'ಕೇರಿ' ಪದವನ್ನು ಸ್ಥಳನಾಮದ ಜೊತೆಗೆ ಸೇರಿಸುವುದಿದೆ– ಕೆಂಗೇರಿ, ಅಣ್ಣಿಗೇರಿ, ಶೃಂಗೇರಿ ಇತ್ಯಾದಿ; ಇಲ್ಲಿ 'ಕೇರಿ'ಗೆ 'ಊರು' ಎಂಬ ಹೆಸರೇ ಅನ್ವಯ;
- 'ಕೇರಿ', 'ಊರಿ'ಗೆ ಹೊರಗೆ ಇರುವಂಥದು ಎಂಬ ಅರ್ಥ ಸಾಂಪ್ರದಾಯಿಕವಾದುದು; ಪಧಗಳಿಗೆ ಕ್ರಮವಾಗಿ ಸವರ್ಣೀಯರು ಮತ್ತು ಸವರ್ಣೀಯರಲ್ಲದವರು ವಾಸ ಮಾಡುವ ಸ್ಥಳ ಎಂಬ ಅರ್ಥ ರೂಢಿಯಲ್ಲಿರುವಂಥದು; ಇದು ಸಾಂಪ್ರದಾಯಿಕವಾದುದು ಮಾತ್ರ, ಇವೊತ್ತಿನದಲ್ಲ; ಸಾಂಪ್ರದಾಯಿಕ ಅರ್ಥ ಈಗ ಪೂರ್ಣ ಬದಲಾಗಿದೆ; 'ಕೇರಿ' ಎಂದರೆ 'ಬೀದಿ' ಎಂಬ ಅರ್ಥ ಮಾತ್ರ ಉಳಿದಿದೆ;
- 'ಕೇರಿ' ಎಂಬುದಕ್ಕೆ ಸಮುದಾಯ, ತೆಂಡೆ, ಕುಲ, ಒಕ್ಕಲು, ವೃತ್ತಿ, ಪರಿಸರ ಎಂಬ ಅರ್ಥಗಳೂ ಇವೆ; ಉದಾಹರಣೆಗೆ: ಒಕ್ಕಲು ಗೇರಿ, ಕುರುಬರ ಕೇರಿ, ಸುಣ್ಣದಕೇರಿ, ಹಳ್ಳದ ಕೇರಿ ಇತ್ಯಾದಿ;
- ಬ್ರಾಹ್ಮಣರು ವಾಸ ಮಾಡುವ ಸ್ಥಳವನ್ನು 'ಕೇರಿ' ಎಂದು ಗುರುತಿಸುತ್ತಿರಲಿಲ್ಲ, 'ಅಗ್ರಹಾರ' ಎಂದು ಕರೆಯಲಾಗುತ್ತಿತ್ತು; 'ಅಗ್ರಹಾರ' ಒಂದು ಊರಾಗಿರಬಹುದು, ಊರಿನ ಒಂದು 'ಕೇರಿ' ಆಗಿರಬಹುದು;

- 'ಊರು–ಕೇರಿ' ವ್ಯತ್ಯಾಸದ ಕಲ್ಪನೆಯಲ್ಲಿ 'ಕೇರಿ' ಒಂದು ಕಾಲಕ್ಕೆ ಅಸಮಾನತೆಗೆ ಸಂಕೇತವಾಗಿತ್ತು; ಮೇಲು–ಕೀಳಿನ ವ್ಯವಸ್ಥೆಯನ್ನು ಪ್ರತಿನಿಧಿಸುತ್ತಿತ್ತು; ಈಗ ಈ ವ್ಯವಸ್ಥೆ ಬದಲಾಗಿದೆ; ಹಳೆಯ ಆ ಎಲ್ಲ ಅರ್ಥಗಳೂ ಬಿದ್ದು ಹೋಗಿವೆ;
- ಮನೆಗಳ ಸಾಲು, ಚಿಕ್ಕಹಳ್ಳಿ, ವಸತಿ ಪ್ರದೇಶ, ಗುಡಿಸಲುಗಳ ಸಮೂಹ; ಓಣಿ; ಮನೆಗಳ ಸಾಲುಗಳ ನಡುವಣ ಹಾದಿ/ದಾರಿ ಎಂಬ ಅರ್ಥಗಳಲ್ಲೂ ಬಳಕೆ;
- 'ಕೇರಿ' ಗ್ರಾಮ ಸಂಸ್ಕೃತಿಯ ವ್ಯಕ್ತ ರೂಪ; ಗ್ರಾಮ ರಚನೆಯ ಸ್ವರೂಪದ ಕುರುಹು;
- ಅಂಗಡಿ ಬೀದಿಗೆ ಮಾರುವ ಕೇರಿ, ಪಟ್ಟಣಗೇರಿ ಎಂದೂ ಕರೆಯುತ್ತಿದ್ದರು;
- 'ಒಳಗೇರಿ', 'ಹೊರಗೇರಿ' ಎಂಬ ಪದಗಳೂ ಬಳಕೆಯಲ್ಲಿದ್ದವು; ಮೊದಲನೆಯದು' ಊರೊಳಗಿನ ಕೇರಿಗೂ, ಎರಡನೆಯದು ಊರ ಹೊರಗಿನ ಕೇರಿಗೂ ಸಂಕೇತವಾಗಿತ್ತು; ಒಳ–ಹೊರ ಕೇರಿಗಳ ಪ್ರಸ್ತಾಪ ಪ್ರತ್ಯೇಕತೆ, ಅಸಮಾನತೆ, ಅಸ್ಪೃಶ್ಯತೆಯನ್ನೂ ಸೂಚಿಸುತ್ತಿತ್ತು;
- 'ಕೇರಿ'ಗಳು ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯ ಸೂಚಕವಾಗಿತ್ತು;
- ನಗರಗಳಿಗೂ ಇದು ಪ್ರವೇಶಿಸಿದ್ದು, 'ಕೊಳಗೇರಿ' ಅದಕ್ಕೊಂದು ಉದಾಹರಣೆಯಾಗಿದೆ;
- 'ಕೇರಿ', 'ಕೇರ್' ಪದದಿಂದ ಬಂದಿರುವ ಹಾಗೆ ಕಾಣುತ್ತದೆ; ಕೇರ್=ಗೋಡೆ, ಭಿತ್ತಿ; ಅಂದರೆ 'ಕೇರ್'ಗಳಿಂದ ಆದುದು, ನಿರ್ಮಾಣವಾದದ್ದು 'ಕೇರಿ' ಎಂಬುದಾಗಿ ಅರ್ಥೈಸಬಹುದು;
- 'ಕೇರಿ' ಪೂರ್ವ ಪದದೊಡನೆ ಸೇರುವಾಗ 'ಗೇರಿ' ಆಗುತ್ತದೆ".

೧೪. **ಕೈಕೆ :**

- "ರಾಮಾಯಣದ ಒಂದು ಪಾತ್ರ ಮಾದರಿ, ಜನಸಾಮಾನ್ಯರಿಗೆ ಬೇಕಾಗಿರುವುದು ಆ ಪಾತ್ರ ಮಾದರಿಯೇ ಹೊರತು, ವಾಸ್ತವ ಪಾತ್ರವಲ್ಲ; 'ಕೈಕೆ' ಪ್ರತಿನಿಧಿಸುವ ಮೌಲ್ಯ, ಪ್ರವೃತ್ತಿ ಅಂಥದು; ಕೈಕೆಯಂತಹ ಜನ ಯಾವೊತ್ತೂ ಇರುತ್ತಾರೆ; ಇದ್ದರು; ಜನರು ತಮ್ಮ ಸುತ್ತಲಿನ ಬದುಕಿನಲ್ಲಿ ಇಂಥವರನ್ನು ಕಂಡು ಗುರುತಿಸಿ ಹೇಳುವುದೇ ಮುಖ್ಯ; ರಾಮಾಯಣ ಎಂದೋ ಆಗಿಹೋದುದಲ್ಲ; ಅಲ್ಲಿನ ಪ್ರವೃತ್ತಿಗಳನ್ನು ಪ್ರತಿನಿಧಿಸುವವರೆಗೆ ಜೀವಂತವಾಗಿ ಇದ್ದೇ ಇರುತ್ತದೆ; ಕೈಕೆಯ ಪಾತ್ರ ಕೂಡ;

- ಜನಪದರು ಕೈಕೆಯನ್ನು ಗುರುತಿಸುವುದು ಎರಡು ಕಾರಣಕ್ಕಾಗಿ: ಒಂದು–ದಶರಥನ ಕಿರಿಯ ಹೆಂಡತಿ, ಚಿಕ್ಕ ವಯಸ್ಸಿನ ಸುಂದರಿ, ಭರತನ ತಾಯಿ; ಎರಡು– ರಾಮನನ್ನು ವನವಾಸಕ್ಕೆ ಕಳುಹಿಸಲು ಕಾರಣಳಾದ 'ಮಹಾರಾಯಿತಿ', ರಾಮಾಯಣಕ್ಕೆ ಗುದ್ದಲಿ ಪೂಜೆ ಮಾಡಿ ಸಂಘರ್ಷಕ್ಕೆ ನಾಂದಿ ಹಾಡಿದ ನಾಯಕಿ;
- 'ಕೈಕೆ', 'ಕೈಕೇಯ' ಮಹಾರಾಜನ ಮಗಳು; 'ಕೈಕೆಯಿ' ಎಂಬ ರೂಪವೂ ಈ ಹೆಸರಿಗಿದೆ; 'ಕೈಕೆ' ಅಥವಾ 'ಕೈಕೆಯಿ' ಪದ ರೂಪಗಳು 'ಕೈಕೇಯ' ರೂಪದಿಂದಲೇ ಬಂದವೂಗಳು; ಈ 'ಕೈಕೇಯ' ಮಹಾರಾಜನ ಮಗಳಾದ್ದರಿಂದ ಅವಳಿಗೆ ಕೈಕೆ/ಕೈಕೆಯಿ ರೂಪಗಳು ಬಂದಿರುವಂತಿವೆ;
- ಜನರಲ್ಲಿ 'ಕಿವಿ ಕಿತ್ತರೂ ಕಿರಿಯ ಹೆಂಡತಿ ಪ್ರೀತಿ' ಎಂಬ ಗಾದೆಯಿದೆ; ಕೈಕೆಯ ವರ್ತನೆಯನ್ನು ಕಂಡೆ ಇದು ರಚಿತವಾಗಿರಬೇಕು; ಜನರ ನಡುವೆ ಅಂಥವರನ್ನು ನೋಡಿ ಇದು ಚಲಾವಣೆಗೆ ಬಂದಿರಬೇಕು; ಜನರಿಗೆ ಬೇಕಾದದ್ದು ಕಿರಿಯ ಹೆಂಡತಿಯ ಪ್ರೀತಿ ಮತ್ತು ಅವಳಿಂದ ಕಿವಿ ಕೀಳಿಸಿಕೊಂಡ ರೀತಿ;
- 'ಕೈಕೆ'ಯ ಹೆಸರನ್ನು ಈವರೆಗೆ ಯಾರೂ ಇಟ್ಟುಕೊಂಡಿಲ್ಲ; ಇದಕ್ಕೆ ರಾಮನನ್ನು ಕಾಡಿಗೆ ಕಳಿಸಿದ್ದೂ ಕಾರಣವಾಗಿರಲಿಕ್ಕಿಲ್ಲ; ಮಾನವಶಾಸ್ತ್ರದ ಪ್ರಕಾರ 'ನಿಷಿದ್ಧತೆ'(Taboo) ಕಾರಣವಿರ ಬೇಕು; ಅನೇಕ ವರ್ಷಗಳ ಹಿಂದೆ, ಹುಡುಗರು ಪರಸ್ಪರ ಕೇಳುತ್ತಿದ್ದ ಪ್ರಶ್ನೆ ಎಂದರೆ– ಕೈಕೆಯ ತಂದೆಯ ಹೆಸರೇನು? ಮಂಡೋದರಿಯ ಹುಟ್ಟಿಸರೇನು? ಎಂಬಿವು; ಕ್ರಮೇಣ ಕೈಕೆಯ ತಂದೆಯ ಹೆಸರನ್ನು ಹೇಳುವುದರಿಂದ ತೊಂದರೆ ಇಲ್ಲವೆಂಬುದು ಗೊತ್ತಾಗಿ ಆ ಹೆಸರನ್ನು ಬಳಸಲಾಯಿತು; ಆಚರಣಾತ್ಮಕ ಜಾನಪದ ಇದನ್ನು ಬಿಟ್ಟಂತೆ ಕಾಣುವುದಿಲ್ಲ; ಹೇಗೋ ಬಂದ 'ಕೈಕೇಯ' ಹೆಸರಿನ ಮೇಲಿನ 'ನಿಷಿದ್ಧತೆ' ಕ್ರಮೇಣ 'ಕೈಕೆ'ಯ ಮೇಲೂ ಬಂದು ಕೈಕೆಯ ಹೆಸರನ್ನು ಇಡದಂತೆ ಒತ್ತಾಯ ಹೇರಿರಬಹುದು; ಇದು ಜನರ ನಡುವೆ ಒಂದು ಸಾಂಸ್ಕೃತಿಕ ಒತ್ತಾಯವಾಗಿ ಕೆಲಸ ಮಾಡಿರಬೇಕು".

೧೫. **ಕೈಮಾರೊತ್ತು :**

- "ಜನಸಾಮಾನ್ಯರ 'ಹೊತ್ತಿನ' (ಕಾಲದ) ಕಲ್ಪನೆಯನ್ನು ಹೇಳುವಂತಹ ಪದವಿದು; ಸೂರ್ಯ ಮುಳುಗಲು ಇನ್ನೂ 'ಮಾರುದ್ದ'ದ ಅಳತೆ ಮಾತ್ರ ಇರುವಾಗಿನ ಸಮಯ; ಸಂಜೆಗೆ ಮೊದಲ ಸಮಯ;

- ಕೈ(<ಕಯ್)+ಮಾರು+ಹೊತ್ತು (<ಪೊತ್ತು<ಪೊಟ್ಟು)= ಕೈಮಾರುಹೊತ್ತು>ಕೈಮಾರಹೊತ್ತು> ಕೈಮಾರ+ಹ್+ಒತ್ತು> ಕೈಮಾರ+Ø+ಒತ್ತು>ಕೈಮಾರೊತ್ತು ('ಹ್' ಕಾರ ಶೂನ್ಯ ಧ್ವನಿಮಾ–Ø –ಆಗುತ್ತದೆ);
- ಸೂರ್ಯನ ಚಲನೆಯನ್ನು ಅನುಸರಿಸಿ ದಿನದ ಸಮಯವನ್ನು ಗುರುತಿಸಲಾಗುತ್ತಿತ್ತು; ಗಡಿಯಾರದ ವ್ಯವಸ್ಥೆಗೆ ಮೊದಲು ಬಿಸಿಲು, ನೆರಳಿನ ಚಲನೆಯನ್ನು ಅವಲಂಬಿಸಿ ಸಮಯ ಸೂಚಿಸುತ್ತಿದ್ದರು; ಉದಾಹರಣೆ: ನಡೊತ್ತು(ಮಧ್ಯಾಹ್ನ), ಸರೊತ್ತು(ಮಧ್ಯರಾತ್ರಿ), ಇಳೊತ್ತು (ಸಂಜೆವೇಳೆ) ಇತ್ಯಾದಿ;
- 'ಕೈಮಾರು'– ಎರಡೂ ಕೈಗಳನ್ನು ಉದ್ದಕ್ಕೂ ವಿಸ್ತರಿಸಿ ಹಿಡಿದ ರೀತಿ; ಇದು ಒಂದು ಅಳತೆಯ ಕ್ರಮ; ಸಂಜೆಗೆ ಮುಂದಿನ ಸಮಯವನ್ನು ಅಳೆಯಲು ಇದನ್ನಿಲ್ಲಿ ಬಳಸಲಾಗಿದೆ; ಜನಪದರಲ್ಲಿನ ಸಮಯ ಪ್ರಜ್ಞೆಗೆ ಸಾಕ್ಷಿ; ಸಮಯವನ್ನು ಅರಿಯಲು ಬಳಸುತ್ತಿದ್ದ (ವಾಚಿಕವಾಗಿ) ಒಂದು ಕ್ರಮ".

ಇಡೀ ಭಾಷೆಯನ್ನು ಸಂಸ್ಕೃತಿಯ ಭಾಗವಾಗಿ ಮಾಡಿಸಿದ ಕೀರ್ತಿ ಪದಗಳಿಗೆ ಸೇರುವಂಥದು. ಅಸಂಖ್ಯಾತ ಪದಗಳು ಈ ಕೆಲಸವನ್ನು ಉದ್ದಕ್ಕೂ ಮಾಡುತ್ತಾ ಬಂದಿವೆ. ಪದಗಳು ಒಂದು ಭಾಷೆಯಲ್ಲಿ ಅಸಂಖ್ಯಾತವಾಗಿದ್ದರೂ, ಅವುಗಳ ಹುಟ್ಟು, ಬೆಳವಣಿಗೆ ಮತ್ತು ಬದಲಾವಣೆಗೆ ಕಾರಣವಾದ ನಿಯಮಗಳು ನಿಗದಿತವಾಗಿರುತ್ತವೆ. ಈ ನಿಯಮಗಳಿಗೆ ಅಪವಾದಗಳಿದ್ದರೂ, ಅವೂ ಕೂಡ ಯಾವುದೋ ನಿಯಮಗಳಿಗೆ ಬದ್ಧವಾಗಿರುತ್ತವೆ. ಹಾಗೆಯೇ ಒಂದು ಸಂಸ್ಕೃತಿಯಲ್ಲಿ ಮೂಲ ಮಾದರಿಗಳು (basic patterns) ಇರುತ್ತವೆ; ಅವು ಕೂಡ ನಿಗದಿತ ನಿಯಮಗಳಿಗೆ ಬದ್ಧವಾಗಿರುತ್ತವೆ; ಅವುಗಳ ಮೂಲ ಆಶಯಗಳು ಪದೇಪದೇ ಬದಲಾಗುವುದಿಲ್ಲ ಎಂದೂ ಹೇಳಲಾಗುತ್ತದೆ. ಮೇಲಿನ ಪದನಿದರ್ಶನಗಳೂ ಸೇರಿಕೊಂಡಂತೆ ಎಲ್ಲ ಪದಗಳೂ ಭಾಷಿಕ ಮತ್ತು ಸಾಂಸ್ಕೃತಿಕ ನಿಯಮಗಳಿಗೆ ಬದ್ಧವಾಗಿರುವುದು ಮೇಲಿನ ರೀತಿಯಲ್ಲಿಯೇ. ಪ್ರತಿ ಪದವೂ ಬದುಕಿನ ಒಂದು ಮಿತಿಗೊಂಡ ಸೀಳುನೋಟವನ್ನು ಕೊಡುತ್ತದೆ; ಆ ಎಲ್ಲ ಪದಗಳು ಒಟ್ಟಾರೆ ಪರಿಗಣಿತವಾದಾಗ ಬದುಕನ್ನೇ ಪ್ರತಿಬಿಂಬಿಸುತ್ತವೆ, ಪ್ರತಿಮಿಸುತ್ತವೆ. ಬದಲಾವಣೆಗಳೂ ಸಂದರ್ಭ ವಿಶೇಷಗಳೂ ಇದರಲ್ಲಿ ಅಂತರ್ನಿಹಿತವಾಗಿಯೇ ಕೆಲಸ ಮಾಡುತ್ತಾ ಬಂದಿವೆ. ಹೀಗಾಗಿ ಪದಸಂಸ್ಕೃತಿ 'ಜೀವನ ಪರಿವರ್ತನಾ ಮಾದರಿ' ಅಥವಾ 'ಜೀವನ ಸಂಸ್ಕೃತಿಯ' ಸಮರ್ಥ ಪ್ರತಿಪಾದನಾ ವಿಶೇಷವಾಗಿ ಕಾಣಿಸಿಕೊಳ್ಳುತ್ತದೆ. ಇದನ್ನು ಯಾವುದೇ ಪದ ಅಥವಾ ಪದನಿದರ್ಶನ ವಿವರ ಉಪಾದೇಯವಾಗಿ ಕಟ್ಟಿಕೊಡುತ್ತದೆ.

ಡಾ. ರಾಗೌ
ಸಂಪಾದಕರು

ಸಂಕ್ಷೇಪ ಸೂಚಿ – ೧

ಉ.ಜಿ.	–	ಉಡುಪಿ ಜಿಲ್ಲೆ
ಉ.ಕ.ಜಿ.	–	ಉತ್ತರಕನ್ನಡ ಜಿಲ್ಲೆ
ಕಲ.ಜಿ.	–	ಕಲಬುರ್ಗಿ ಜಿಲ್ಲೆ
ಕೊಡ.ಜಿ.	–	ಕೊಡಗು ಜಿಲ್ಲೆ
ಕೊ.ಜಿ.	–	ಕೊಪ್ಪಳ ಜಿಲ್ಲೆ
ಕೋ.ಜಿ.	–	ಕೋಲಾರ ಜಿಲ್ಲೆ
ಗ.ಜಿ.	–	ಗದಗ ಜಿಲ್ಲೆ
ಚಾ.ಜಿ.	–	ಚಾಮರಾಜನಗರ ಜಿಲ್ಲೆ
ಚಿಬ.ಜಿ.	–	ಚಿಕ್ಕಬಳ್ಳಾಪುರ ಜಿಲ್ಲೆ
ಚಿಕ್ಕ.ಜಿ.	–	ಚಿಕ್ಕಮಗಳೂರು ಜಿಲ್ಲೆ
ಚಿತ್ರ.ಜಿ.	–	ಚಿತ್ರದುರ್ಗ ಜಿಲ್ಲೆ
ತು.ಜಿ.	–	ತುಮಕೂರು ಜಿಲ್ಲೆ
ದಾ.ಜಿ.	–	ದಾವಣಗೆರೆ ಜಿಲ್ಲೆ
ಧಾ.ಜಿ.	–	ಧಾರವಾಡ ಜಿಲ್ಲೆ
ಬ.ಜಿ.	–	ಬಳ್ಳಾರಿ ಜಿಲ್ಲೆ
ಬಾ.ಜಿ.	–	ಬಾಗಲಕೋಟೆ ಜಿಲ್ಲೆ
ಬೀ.ಜಿ.	–	ಬೀದರ ಜಿಲ್ಲೆ
ಬೆಂ.ಗ್ರಾ.ಜಿ.	–	ಬೆಂಗಳೂರು ಗ್ರಾಮಾಂತರ ಜಿಲ್ಲೆ
ಬೆಂ.ಜಿ.	–	ಬೆಂಗಳೂರು ಜಿಲ್ಲೆ
ಬೆ.ಜಿ.	–	ಬೆಳಗಾವಿ ಜಿಲ್ಲೆ
ಮಂ.ಜಿ	–	ಮಂಗಳೂರು ಜಿಲ್ಲೆ
ಮಂಡ್ಯ.ಜಿ	–	ಮಂಡ್ಯ ಜಿಲ್ಲೆ
ಮೈ.ಜಿ.	–	ಮೈಸೂರು ಜಿಲ್ಲೆ
ಯಾ.ಜಿ.	–	ಯಾದಗಿರಿ ಜಿಲ್ಲೆ
ರಾಮ.ಜಿ.	–	ರಾಮನಗರ ಜಿಲ್ಲೆ
ರಾಯ.ಜಿ.	–	ರಾಯಚೂರು ಜಿಲ್ಲೆ

ವಿ.ಜಿ.	–	ವಿಜಯಪುರ ಜಿಲ್ಲೆ
ಶಿ.ಜಿ.	–	ಶಿವಮೊಗ್ಗ ಜಿಲ್ಲೆ
ಹಾ.ಜಿ.	–	ಹಾವೇರಿ ಜಿಲ್ಲೆ
ಹಾಸ.ಜಿ.	–	ಹಾಸನ ಜಿಲ್ಲೆ

ಸಂಕ್ಷೇಪ ಸೂಚಿ – ೨

ಅ.ಅಂ	–	ಅಲೆಮರಿಯ ಅಂತರಂಗ
ಅ.ಜಾ.ನಿ	–	ಅಕಾಡೆಮಿ ಜಾನಪದ ನಿಘಂಟು
ಅ.ಜೋ.ಹಾ	–	ಅರ್ಜುನ ಜೋಗಿ ಹಾಡು
ಅ.ದೇ	–	ಅನ್ಯದೇಶ್ಯ
ಅ.ನು.ಕೋ	–	ಅಚ್ಚಗನ್ನಡ ನುಡಿ ಕೋಶ
ಅ.ಪ್ರ.ಕ.ಶಾ.ಭಾ	–	ಅಪ್ರಕಟಿತ ಶಾಸನ ಭಾಗ
ಅ.ವ	–	ಅಕ್ಕಮಾದೇವಿ ವಚನಗಳು
ಆ.ಮ.ಕ	–	ಆರ್ಯಮರಾಠಕ್ಷತ್ರಿಯ ಕನ್ನಡ
ಆಂ.ಪ್ರ.ಕ.ಶಾ	–	ಆಂಧ್ರಪ್ರದೇಶ ಕನ್ನಡ ಶಾಸನಗಳು
ಇಂ.ಕ.ನಿ	–	ಇಂಗ್ಲಿಷ್ ಕನ್ನಡ ನಿಘಂಟು
ಏ.ದೇ.ಕಾ	–	ಏಳೂರ ದೇವರ ಕಾಳಗ
ಉ.ಕ	–	ಉತ್ತರ ಕನ್ನಡ
ಉದಾ	–	ಉದಾಹರಣೆ
ಒ.	–	ಒಗಟು
ಕ.ಕ	–	ಕರಾವಳಿ ಕನ್ನಡ
ಕ.ಜ.ಕ	–	ಕನ್ನಡ ಜನಪದ ಕಥೆಗಳು
ಕ.ಜಾ.ಕೋ	–	ಕನ್ನಡ ಜಾನಪದ ಕೋಶ
ಕ.ಜಾ.ನಿ	–	ಕನ್ನಡ ಜಾನಪದ ನಿಘಂಟು
ಕ.ನಿ	–	ಕನ್ನಡ ನಿಘಂಟು
ಕ.ವಿ.ವಿ.ಶಾ.ಸಂ	–	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ
ಕ.ಸಾ.ಒ	–	ಕನ್ನಡ ಸಾವಿರದ ಒಗಟುಗಳು
ಕ.ಶಿ.ಪ್ರಾ	–	ಕನ್ನಡ ಶಿಶು ಪ್ರಾಸಗಳು
ಕಾ.ಗೋ	–	ಕಾಸರಗೋಡು
ಕಿಟ್ಟೆಲ್	–	ಕಿಟ್ಟೆಲ್ ನಿಘಂಟು
ಕಿ.ಕೋ.ಗಾ	–	ಕಿಟ್ಟೆಲ್ ಕೋಶದ ಗಾದೆಗಳು

ಕುಂ.ವೃ.ಪ	–	ಕುಂಬಾರ ವೃತ್ತಿ ಪದಕೋಶ
ಕೃ.ಗೊ.ಕ.ಕಾ	–	ಕೃಷ್ಣಗೊಲ್ಲರ ಕಥನಕಾವ್ಯ
ಕೆಂ.ಯ.ಕಾ	–	ಕೆಂಪಣ್ಣಗೌಡನ ಯಕ್ಷಗಾನ ಕಾವ್ಯಗಳು
ಕೊ.	–	ಕೊಡವ
ಕೊ.ಜ.ಕಾ	–	ಕೊಡವ ಜನಪದ ಕಾವ್ಯ
ಗಾ.	–	ಗಾದೆ
ಗೊಂದೇ	–	ಗೊಂದಲಿಗರ ದೇವೇಂದ್ರಪ್ಪನ ಆಟಗಳು
ಗೊಂ.ಪ	–	ಗೊಂಡರ ಪದಗಳು
ಚಿ.ಪ.ಕೋ	–	ಚಿಗಟೇರಿ ಪದಕೋಶ
ಚಿ.ಸು.ಜ.ಕ	–	ಚಿತ್ರದುರ್ಗ ಸುತ್ತಿನ ಜನಪದ ಕತೆಗಳು
ಜ.ಗೀ	–	ಜನಪದ ಗೀತೆಗಳು
ಜ.ನಿ	–	ಜನಪದ ನಿಘಂಟು
ಜ.ನು.ಕೋ	–	ಜನಪದ ನುಡಿಗಟ್ಟುಗಳ ಕೋಶ
ಜ.ಮ.ಭಾ	–	ಜನಪದ ಮಹಾಭಾರತ
ಜ.ಸಾ.ಕ.ಗೀ	–	ಜನಪದ ಸಾಹಿತ್ಯದಲ್ಲಿ ಕಥನ ಗೀತೆಗಳು
ಜ.ಶ.ಕಾ	–	ಜನಪದ ಶರಣ ಕಾವ್ಯಗಳು
ಜಾ.ಪ. ಬೆಳ್ಳಿ ಸಂಪುಟ		ಜಾನಪದ ಪರಿಷತ್ ಬೆಳ್ಳಿ ಸಂಪುಟ
ಜಾ.ಮೆ	–	ಜಾನಪದ ಮೆಲುಕು
ಜಾ.ಶ.ಗಂ	–	ಜಾನಪದ ಶಬ್ದ ಗಂಗೋತ್ರಿ
ಜುಂ.ಕಾ	–	ಜುಂಜಪ್ಪನ ಕಾವ್ಯ
ಜ್ಯೋ.ಆ.ಜ	–	ಜ್ಯೋತಿಯೆ ಆಗು ಜಗಕೆಲ್ಲ
ತ.	–	ತಮಿಳು
ತ.ನಾ.ಕ.ಶಾ	–	ತಮಿಳುನಾಡಿನ ಕನ್ನಡ ಶಾಸನಗಳು
ತು.	–	ತುಳು
ತು.ನಿ	–	ತುಳು ನಿಘಂಟು
ತೆಂ.ನಾ.ಐ	–	ತೆಂಕ ನಾಡ ಐತಿಹ್ಯಗಳು
ತೆ.	–	ತೆಲುಗು
ದ.ಕ	–	ದಕ್ಷಿಣ ಕನ್ನಡ
ದ.ಕ.ಒ	–	ದಕ್ಷಿಣ ಕರ್ನಾಟಕದ ಒಡಪುಗಳು
ದ್ರಾ.ಭಾ.ಜ್ಞಾ.ಪ.ಕೋ–		ದ್ರಾವಿಡ ಭಾಷಾ ಜ್ಞಾತಿ ಪದಕೋಶ

ದ್ವಿರು	–	ದ್ವಿರುಕ್ತಿ
ದ್ವಿಗು	–	ದ್ವಿಗುಣ
ಧಾ.ಜಿ.ಜ.ಕ	–	ಧಾರವಾಡ ಜಿಲ್ಲಾ ಜನಪದ ಕಥೆಗಳು
ನ.ಗಾ	–	ನಮ್ಮ ಗಾದೆಗಳು
ನು.ಗ	–	ನುಡಿಗಟ್ಟು
ನೇ.ವೃ.ಪ.ಕೋ	–	ನೇಕಾರ ವೃತ್ತಿ ಪದಸಂಸ್ಕೃತಿ ಕೋಶ
ಪ.ನ.ಎ	–	ಪದವವೆ ನಮ್ಮ ಎದೆಯಲ್ಲಿ
ಪ.ರೂ	–	ಪರ್ಯಾಯ ರೂಪ
ಪಾಂ.ತಾ.ಸ್ಥ.ನಾ.ಅ	–	ಪಾಂಡವಪುರ ತಾಲ್ಲೂಕಿನ ಸ್ಥಳನಾಮಗಳ ಅಧ್ಯಯನ(ಅಪ್ರಕಟಿತ)
ಪಾಂ.ವೃ.ಪ.ಕೋ	–	ಪಾಂಚಾಳ ವೃತ್ತಿ ಪದಕೋಶ
ಪುನರಾ	–	ಪುನರಾವರ್ತನೆ
ಪುನರು	–	ಪುನರುಚ್ಚಾರ
ಪು.ನಾ.ಚೂ	–	ಪುರಾಣ ನಾಮ ಚೂಡಾಮಣಿ
ಪು.ಬ.ಪಾ	–	ಪುಟ್ಟು ಬಳಕೆಯ ಪಾಡ್ದನಗಳು
ಪುರಂ.ಕೀ	–	ಪುರಂದರದಾಸರ ಕೀರ್ತನೆಗಳು
ಪ್ರ.	–	ಪ್ರಯೋಗ
ಪ್ರಾ.	–	ಪ್ರಾಕೃತ
ಪ್ರಾ.ಗಾ	–	ಪ್ರಾದೇಶಿಕ ಗಾದೆಗಳು
ಬ.ವ.ಸಂ	–	ಬಸವಣ್ಣನವರ ವಚನಗಳ ಸಂಗ್ರಹ
ಪ್ರಾ.ವ್ಯ	–	ಪ್ರಾದೇಶಿಕ ವ್ಯತ್ಯಯ
ಬೀ.ಕ.ಕೋ	–	ಬೀದರ್ ಕನ್ನಡ ಕೋಶ
ಬೆ.ಹೋ.ಹಾ	–	ಬೆತ್ತಲೆ ಹೋಳಿ ಹಾಡುಗಳು
ಬೇ.ಸಾಂ.ಪ.ಕೋ	–	ಬೇಟೆ ಸಾಂಸ್ಕೃತಿಕ ಪದಕೋಶ
ಮಂ.ಕಾ	–	ಮಂಟೆಸ್ವಾಮಿ ಕಾವ್ಯ
ಮಂ.ಬ್ಯಾ	–	ಮಂಗನ ಬ್ಯಾಟೆ
ಮ.	–	ಮಲೆಯಾಳಂ
ಮ.ಚಿ	–	ಮಲೆನಾಡಿನ ಚಿತ್ರಗಳು
ಮ.ಜ.ಕೋ	–	ಮಲೆನಾಡ ಜನಪದ ಕೋಶ
ಮ.ಜ.ಸಂ	–	ಮಲೆನಾಡು ಜನಪದ ಸಂಪ್ರದಾಯಗಳು
ಮ.ಜಾ.ಲೋ	–	ಮಲೆನಾಡು ಜಾನಪದ ಲೋಕ

ಮ.ನು.ಕೋ	–	ಮಲೆನಾಡು ನುಡಿ ಕೋಶ
ಮಲೆ/ಮ.ನಾ	–	ಮಲೆನಾಡು
ಮ್ಯಾ.ಬೇ.ಕ	–	ಮ್ಯಾಸ ಬೇಡರ ಕಥೆಳು
ಯ.ಕ.ಕ	–	ಯಕ್ಷಗಾನ ಕರೀಬಂಟನ ಕಾಳಗ
ಯ.ಪ.ಕೋ	–	ಯಕ್ಷಗಾನ ಪದ ಕೋಶ
ರಾಮ.ಧಾ.ಚ	–	ರಾಮಧಾನ್ಯ ಚರಿತೆ
ವಿ.ಪ್ರ	–	ವಿಶೇಷ ಪ್ರಸ್ತಾಪ
ವಿ.ಕ.ಶ.ಕೋ	–	ವಿಶ್ವಕರ್ಮ ಶಬ್ದ ಕೋಶ
ವ್ಯರೂ	–	ವ್ಯತ್ಯಯ ರೂಪ
ಶ	–	ಶತಮಾನ
ಶ.ಮ.ದ	–	ಶಬ್ದಮಣಿ ದರ್ಪಣಂ
ಶಾ.ನಾ	–	ಶಾಸ್ತ್ರೀಯ ನಾಮ
ಸ.ಕ.ಗಾ	–	ಸಮಗ್ರ ಕನ್ನಡ ಗಾದೆಗಳು
ಸಂ.	–	ಸಂಸ್ಕೃತ
ಸಂ.ಕ.ನಿ	–	ಸಂಕ್ಷಿಪ್ತ ಕನ್ನಡ ಕೋಶ
ಸಾ.ಹೆ	–	ಸಾಮಾನ್ಯ ಹೆಸರು
ಸು.ಜಾ.ಲೇ	–	ಸುವರ್ಣ ಜಾನಪದ ಲೇಖನಗಳು
ಸೋ.ಚಿ.ಪ	–	ಸೋಬಾನೆ ಚಿಕ್ಕಮ್ಮನ ಪದಗಳು
ಹ.ಗ	–	ಹಳಗನ್ನಡ
ಹ.ಮ.ಮ	–	ಹಳಗನ್ನಡ ಮತ್ತು ಮರಾಠಿ
ಹವ್ಯ.ಕ	–	ಹವ್ಯಕ ಕನ್ನಡ
ಹ.ಶೋ	–	ಹವ್ಯಕರ ಶೋಭಾನೆಗಳು
ಹ.ಸೋ.ಪ	–	ಹವ್ಯಕರ ಸೋಬಾನೆ ಪದಗಳು
ಹ.ಹಾ	–	ಹವ್ಯಕರ ಹಾಡುಗಳು
ಹಳ್ಳಿ.ಪ	–	ಹಳ್ಳಿ ಪದಗಳು
ಹಾ.ಒ.ಸಂ	–	ಹಾಲಕ್ಕಿ ಒಕ್ಕಲಿಗರ ಸಂಸ್ಕೃತಿ
ಹಾ.ತೆ	–	ಹಾಲಿನ ತೆನೆ
ಹಾ.ಮ.ಪು	–	ಹಾಲುಮತದ ಪುರಾಣ
ಹಿಂ.	–	ಹಿಂದಿ
ಹೋ.ಹಾ	–	ಹೋಳಿ ಹಾಡುಗಳು

ಸ್ಥೂಲ ಲೇಖನ ಸಂಕೇತಗಳು
Broad Transcription Symbols

1. ಸ್ವರಗಳು (vowels) :

   a - ā
   i - ī
   u - ū
   e - ē - ai
   o - ō - au

2. ವ್ಯಂಜನಗಳು (Consonants) :

   k kh g gh ŋ
   c ch j jh ñ
   ṭ ṭh ḍ ḍh ṇ
   t th d dh n
   p ph b bh m
   y r l v ś ṣ s h ḷ

3. ಚಿಹ್ನೆಗಳು (Markers) :

   ದೀರ್ಘ (Length) : — ಉದಾ: ā (ಆ)
   ಮಹಾಪ್ರಾಣ (Aspiration) : h ಉದಾ: kh (ಖ)
   ಮೂರ್ಧನ್ಯ (Retroflexive) : . ಉದಾ ḍ (ಡ)
   ಅನುನಾಸಿಕ (Nasal) : ˜ ಉದಾ ñ (ಞ)

ದೀರ್ಘ – ā = ಆ
ಟ, ಠ, ಡ, ಢ, ಣ = ṭ ṭh ḍ ḍh ṇ
ಶ, ಷ = ś ṣ

cf.	–	ಹೋಲಿಕೆ
CTSI	–	Caste and Tribes of Southren India
DED	–	Dravidian Etymological Dictionary
FHIP	–	Five Hundred Indian plants
EC	–	Epigraphia karnatika
=	–	ಸಮಾನ; ಒಂದೇ ಅರ್ಥ; ಒಟ್ಟು; ಸಾರ
∴	–	ಆದುದರಿಂದ
>	–	ನಿಷ್ಪತ್ತಿ ವಿಕಾಸ
–	–	ಒಂದೇ ಪದ ಪೂರ್ವೋತ್ತರ ಪದರೂಪಗಳನ್ನು ಸೇರಿಸಿಕೊಂಡು ಅರ್ಥ ವಿಸ್ತರಣೆ/ಭಿನ್ನಾರ್ಥಪಡೆಯುವುದು (ಉಪಶೀರ್ಷಿಕೆಗಳಲ್ಲಿ)
/	–	ಮತ್ತು; ಅಥವಾ
( )	–	ಆವರಣ ಚಿಹ್ನೆ

ಕನ್ನಡ ಜಾನಪದ ನಿಘಂಟು

ಪದಸಂಸ್ಕೃತಿಕೋಶ

ಕುಂಕಸಾಲೆ kuŋkasāle :

ಭತ್ತದ ಒಂದು ತಳಿ; ಕುಂಕ + ಸಾಲೆ = ಕುಂಕಸಾಲೆ; 'ಕುಂಕ' ಎನ್ನುವುದಕ್ಕೆ 'ಕುಂಕುಮ' ಎಂಬ ಅರ್ಥವಿದೆ; ವ್ಯತ್ಯಯ ರೂಪವಾಗಿ 'ಕುಂಕುಮಸಾಲಿ' ಇರುವುದರಿಂದ 'ಮ' ಲೋಪವಾಗಿ 'ಕುಂಕಸಾಲೆ' ಆಗಿರುವಂತಿದೆ; ಸಾಲೆ/ಸಾಲಿ ರೂಪಗಳಲ್ಲಿ ಕನ್ನಡ ಭಾಷೆಯಲ್ಲಿ ಕಂಡುಬಂದಿರುವ ಪ್ರಾದೇಶಿಕ ವ್ಯತ್ಯಯ ರೂಪಗಳಾಗಿ ಎ/ಇ ಸಂವಾದಿ ಧ್ವನಿ ರೂಪಗಳಿವೆ; ಅರ್ಥವ್ಯತ್ಯಾಸ ಇಲ್ಲ; ವ್ಯರೂ: ಕುಂಕುಮಸಾಲಿ(ಗ.ಜಿ). Breed; the genetically different types within the breed; a kind of rice breeding, a particular type within a species of paddy or rice.

ಕುಂಕಿ kuŋki :

ಹೆಗಲು, ಬೆನ್ನು; 'ಕುಂಕಿ' ಪದಕ್ಕೆ ವ್ಯತ್ಯಯ ರೂಪವಾಗಿ 'ಕುಂಕೆ' ಇರುವುದರಿಂದ ಇ/ಎ ಪ್ರಾದೇಶಿಕ ವ್ಯತ್ಯಯ ಧ್ವನಿ ಉಚ್ಚಾರಣೆಯನ್ನು ಇದು ಪ್ರತಿನಿಧಿಸುತ್ತದೆ ಎಂದು ಹೇಳಬಹುದು; ಕುಂಕಿ/ಕುಂಕೆ ರೂಪಗಳಿಗೆ 'ಗೊಂಕೆ' ಎಂಬ ಮತ್ತೊಂದು ರೂಪವೂ ಸೇರುವುದಿದೆ; ಅರ್ಥ ವ್ಯತ್ಯಾಸವಿಲ್ಲ; ದ್ರಾವಿಡ ಭಾಷೆಗಳಲ್ಲಿ ಅಘೋಷ ವರ್ಣಗಳೇ ಮೊದಲಿದ್ದು ಆಮೇಲೆ ಘೋಷವರ್ಣಗಳು ಬಂದಿರುವ ಸಾಧ್ಯತೆ ಇರುವುದರಿಂದ 'ಗೊಂಕೆ' ಪದಕ್ಕೂ ಮೂಲದಲ್ಲಿ 'ಕೊಂಕೆ' ಪದವಿದ್ದು, ಅದು 'ಕುಂಕೆ' ಪದದ ಚಾಲ್ತಿಯಿಂದ ಬಿದ್ದು ಹೋಗಿರಬಹುದೆ?; *ವ್ಯರೂ:* ಕುಂಕೆ(ತು.ಜಿ). Back/shoulder; The joint of neck and upper arm; The joint between the upper arm or fore limb and the main part of the body or neck.

ಕುಂಕುಡಕಾಯಿ kuŋkuḍakāyi :

Sapindus laurifolius Sapindaceae; ಅರದಳ, ಅರಿಷ್ಟ ಬುರುಗುಕಾಯಿ; ಸೀಗೆಕಾಯಿ: ನೀರಿನೊಡನೆ ತಿಕ್ಕಿದರೆ ನೊರೆ ಕೊಡುವ ಕಾಯಿ; ಮಹಿಳೆಯರು ತಲೆಯಕೂದಲು ಶುಚಿಗೊಳಿಸಲು, ಬಟ್ಟೆ ತೊಳೆಯಲು ಬಳಕೆ; ಬುರುಗಿನ ಕಾಯಿ; ಕುಂಕುಡ + ಕಾಯಿ ಸಂಯುಕ್ತ ಪದದಿಂದ ಆದುದು; ಇಲ್ಲಿನ 'ಕುಂಕುಡ' ಅದೇ ಪದವಿರಬಹುದೆ?; ನೋಡಿ: ಸೀಗೆಕಾಯಿ(ಬೀ.ಜಿ). Foam nut; A foam nut which has the quality of detergent that can be used to remove dirt and used in bath by women or else.

ಕುಂಕುಮ kuŋkuma :

Mallotus Philippensis Euphorbiaceae;

- ಕುಂಕುಮ ಪದಕ್ಕೆ ಕುಂಕುವ ರೂಪವೂ ಇದೆ; ಇಲ್ಲಿ ಮ>ವ ಆಗಿದೆ; ಹಣೆಯಲ್ಲಿ ಇಟ್ಟುಕೊಳ್ಳುವ ಕೆಂಪುಬಣ್ಣದ ಪುಡಿ; ಮುತ್ತೈದೆ ಸಂಕೇತ; ಮಂಗಳದ್ರವ್ಯ; ಸಿಂಧೂರ; Vermil/vermilion (ver-mil-yuhn)old French origin; It is put/wore on the fore heads of women or man as a symbol holiness etc; It is also called as Chinese red, Chinabar; It is scientifically called as mercuric sulfide
- ಅರಿಶಿನಕ್ಕೆ ಸುಣ್ಣ ಬೆಣ್ಣೆ ಬೆರಸಿ ತಿಕ್ಕಿ ಕೆಂಪು ಬಣ್ಣಕ್ಕೆ ಬರಿಸುವುದು; ಅಲಂಕಾರಕ್ಕೆ ಬಳಕೆ; A vivid red to reddish orange;
- ಗೋಧಿ ಬೆಳೆಗೆ ಬರುವ ಒಂದು ರೋಗ; *ಪ್ರ:* 'ಕುಂಕುಮ ರೋಗ ಬಂದು ತೆನೆಗಳು ಕೆಂಪಾಗಿವೆ'; It is one of the diseases of wheat;

ಹರಕೆ; ಆ ದಿನ ಕುಂಕುಮದಿಂದಲೇ ಮೂರ್ತಿ ಅಲಂಕರಿಸಿ ಪೂಜಿಸುವುದು; A solemn promise; Oath by worshipping gods with decorating vermilion;

- ***—ಕುಂಕುಮಾರ್ಚನೆ*** : ಸ್ತ್ರೀ ದೇವರಿಗೆ ವಿಶೇಷವಾಗಿ ಕುಂಕುಮದಿಂದಲೇ ಅರ್ಚನೆ ಮಾಡುವ ಕ್ರಮ; A ritual of vermilion; A ritual that has been worshiping goddess by vermilion;
- ***—ಕುಂಕುಮ ಸಕ್ಕರಿ ಬಾಷ್ಟೆಶಾಸ್ತ್ರ*** : ಉತ್ತರ ಕರ್ನಾಟಕದ ಪರಿಶಿಷ್ಟರ ಮದುವೆಯಲ್ಲಿ ಮಾಡುವ ಶಾಸ್ತ್ರ; ಗಂಡಿನ ಮನೆಯವರು ಹೆಣ್ಣನ್ನು ನೋಡಲು ಹೋದಾಗ ಅಲ್ಲಿ ಹೆಣ್ಣಿಗೆ ಹೊಸಬಟ್ಟೆ ಉಡಿಸಿ ಕುಂಕುಮ ಹಚ್ಚಿ ನೆರೆದ ಜನರಿಗೆ ಸಕ್ಕರೆ ಹಂಚುವುದು; ಸಿಹಿ ತಿಂಡಿ ತಿಂದು ಕನ್ಯೆಯನ್ನು ಗಂಡಿನ ಮನೆಗೆ ಕರೆದೊಯ್ಯುವುದು; ಅಲ್ಲಿ ಅವಳಿಗೆ ಎಣ್ಣೆ ಹಚ್ಚುವ ಕಾರ್ಯಕ್ರಮವಿರುತ್ತದೆ. It is a ritual in the marriage ceremony of north Karnataka scheduled castes who went to see the bride at the bridal home;
- ***—ಕುಂಕುಮಕಾರ್ಯ*** : ವಿವಾಹಪೂರ್ವದಲ್ಲಿ ಗಂಡಿನ ಮನೆಯವರು ಹೆಣ್ಣಿನ ಮನೆಗೆ ಹೋಗಿ ತಮ್ಮ ವರನಿಗೆ ಹೆಣ್ಣನ್ನು ಮದುವೆ ಮಾಡಿಕೊಳ್ಳುತ್ತೇವೆಂದು ಖಚಿತಪಡಿಸಲು ಹೆಣ್ಣಿಗೆ ಕುಂಕುಮ ಹಚ್ಚಿ ಶಾಸ್ತ್ರಮಾಡುವರು(ಕಲ.ಜಿ); ಇದನ್ನೇ ಕುಂಕುಮ ಹಚ್ಚಿ ಸೀರೆ ಉಡಿಸುವುದು(ವಿ.ಜಿ); ಹೂಮುಡಿಸುವ ಶಾಸ್ತ್ರ(ಮಂಡ್ಯ.ಜಿ); ಅರಿಶಿನ ಬಾಳೆಹಣ್ಣು ಶಾಸ್ತ್ರ(ಚಾ.ಜಿ); A vermilion function; A vermilion function that has to be done by the bridegrooms to the bride by assuring them to marry the girl;
- ***—ಕುಂಕುಮ ಅಳಿಕಿತು*** : ಗಂಡನ ಸಾವು; ವಿಧವೆಯಾಗುವುದು; Husband's death; To become widow;
- ***—ಕುಂಕುಮ ಹೆಚ್ಚಿತು*** : ಮುತ್ತೈದೆ ಭಾಗ್ಯವೆಂಬ ನಂಬಿಕೆ ಇರುವುದರಿಂದ ಮನೆಯಲ್ಲಿ ಕುಂಕುಮ ಮುಗಿದು ಹೋಗಿದ್ದರೆ 'ಕುಂಕುಮ ಮುಗಿದಿದೆ' ಎಂದು ಹೇಳುವಂತಿಲ್ಲ; ಹಾಗೆ ಹೇಳಿದರೆ ಅಪಶಕುನವೆಂಬ ಭಾವನೆಯಿದೆ. ಅದರಿಂದ 'ಕುಂಕುಮ ಹೆಚ್ಚಿತು' ಎಂದು ಹೇಳುವುದು ರೂಢಿ; ಅಂದರೆ ಕುಂಕುಮ ತರಬೇಕಾಗಿದೆ ಎಂದರ್ಥ; Bridal grace; A belief in our homes even vermilion box is empty cannot be said it openly if someone say vermilion is empty that is a bad omen;
- ***—ಕುಂಕುಮದಾರತಿ*** : ಕುಂಕುಮವನ್ನು ನೀರಿನಲ್ಲಿ ಕದಡಿ ಅದರಲ್ಲಿ ದೀಪ ಬೆಳಗಿಸಿ ದೇವರಿಗೆ ಮಾಡುವ ಆರತಿ; An adoration of lightening the lamp by turbine water and vermilion;
- ***—ಕುಂಕುಮ ಕರಂಡು*** : ಕುಂಕುಮವನ್ನು ಇಟ್ಟುಕೊಳ್ಳುವ ಭರಣಿ ಅಥವಾ ಕರಡಿಗೆ; Vermilion urn; Vermilion urn which is used for vermilion;
- ***—ಕುಂಕುಮ ಕೇಸರಿ*** : ಆಹಾರ ಪದಾರ್ಥಗಳಿಗೆ ಬಣ್ಣ ಮತ್ತು ಪರಿಮಳ ನೀಡಲು ಬಳಸುವ ಕೇಸರಿ; ಇದು ಕಾಶ್ಮೀರ ಭಾಗದಲ್ಲಿ ಬೆಳೆಯುವ ಹೂವಿನ ಪರಾಗ; ಜನಪದ ವೈದ್ಯದಲ್ಲಿ ಕೆಮ್ಮು, ವಾಂತಿ, ಅಜೀರ್ಣ ಮುಂತಾದ ರೋಗಗಳಿಗೆ ಔಷಧಿಯಾಗಿ ಬಳಕೆ; ಒಂದು ಜಾತಿಯ ಬೀಡಿ ತಂಬಾಕು(ಚಿ.ಪ.ಕೋ); Vermilion saffron; A powder which is used to give colour and fragrance to the dishes; It has been grown in the state Kashmir; It is used to cure cough vomit and indigestion in folk medicine;
- ***—ಕುಂಕುಮ ಸುಳಿ*** : ದನಗಳ ಹಣೆಯ ಮೇಲಿರುವ ಸುಳಿ; ದನಗಳನ್ನು ಕೊಳ್ಳುವಾಗ ಅವುಗಳ ಮೈಮೇಲೆ ಇರುವ ಸುಳಿಗಳನ್ನು ನೋಡಿ ಅಶುಭ, ಶುಭಗಳನ್ನು ನಿರ್ಣಯ ಮಾಡುತ್ತಾರೆ; ಸಾಮಸುಳಿ, ಅಡಕಲಸುಳಿ, ಪಾತಾಳಸುಳಿ ಇತ್ಯಾದಿ ಬಗೆಯ ಸುಳಿಗಳಿವೆ. Vermilion swirl; A swirl on the fore head of the cattle on the basic of swirl farmers decide omen and sad omen of the cattle; ***ನೋಡಿ:*** ಸುಳಿ.

ಕುಂಕುಮದ ಮರ/ಕಪಿಲರಂಗು `kuŋkumada mara/kapilarangu` : Mallotous philippensis; ಮರದ ಎಳೆಯ ರೆಂಬೆ ಮತ್ತು ಹಣ್ಣಿನ ಮೇಲಿನ ಹೊದಿಕೆಯಿಂದ ಕುಂಕುಮಪುಡಿ ತೆಗೆಯಲಾಗುತ್ತದೆ; ಸಿಲ್ಕ್, ಉಣ್ಣೆ

ಬಟ್ಟೆಗಳಿಗೆ ಬಣ್ಣ ಕೊಡಲು ಬಳಕೆ; ಔಷಧಿಯಾಗಿ ಕಜ್ಜಿ, ಲಾಡಿಹುಳ ನಿಯಂತ್ರಣಕ್ಕೆ ಬಳಕೆ; ಇದರ ಮರದ ತಿರುಳು ಕಾಗದ ತಯಾರಿಕೆಯಲ್ಲಿ ಬಳಕೆ;

Vermilion tree from the tender; Vermilion tree from the tender branches and fruits of the tree remove the vermilion powder; It is used to dye silk clothes; It is used to control scabies and parasitic worms; It is used to manufacture paper.

ಕುಂಕ್ಲು kuŋklu :

ಸಣ್ಣಬುಟ್ಟಿ; ಪುಟ್ಟ ಸುತ್ತಳತೆಯ ಬುಟ್ಟಿ, A small basket.

ಕುಂಗ kuŋga :

ಬೆಸ್ತ; ಮೀನು ಹಿಡಿಯುವ ವೃತ್ತಿ ಮಾಡುವವನು (ಬೇ.ಸಾಂ.ಪ.ಕೋ); Fisherman; One who has a profession of fishing; ನೋಡಿ: ಬೆಸ್ತರು.

ಕುಂಗು kuŋgu :

- ಕುಗ್ಗು, ಬಗ್ಗು, ಬಾಗು; Tilt, bend, sink;
- ಮುಳುಗು; ಅದ್ದು; ಮೌನ(ಕಿಟ್ಟೆಲ್);
- ಕುಂಗಿದ್ದವನನ್ನು ನುಂಗ ನೋಡುವರು(ಕಿ.ಕೋ.ಗಾ); ಕನ್ನಡವೂ ಸೇರಿದಂತೆ ತಮಿಳು ಮತ್ತು ಮಲೆಯಾಳಂಗಳಲ್ಲಿ 'ಕುಂಗು' ಪದವೇ ಇದ್ದು, ತೆಲುಗಿನಲ್ಲಿ ಮಾತ್ರ ಕುಂಕು ಪದವಿದೆ; ದ್ರಾವಿಡ ಭಾಷೆಯ ಒಂದು ನಿಯಮವೆಂದರೆ ಕಚಟತಪ> ಗಜಡದಬ ಆಗುವುದು, ಅಂದರೆ ಅಘೋಷಗಳು > ಘೋಷಗಳಾಗುವುದು; ಆದರೆ ಈ ಪದ ರೂಪದಲ್ಲಿ ತೆಲುಗಿನ 'ಕುಂಕು' ಪದ ಅಂತ್ಯದ 'ಕ' ಕಾರವನ್ನೇ ಉಳಿಸಿಕೊಂಡಿದೆ; ನಿಯಮದ ಪ್ರಕಾರ ಅದು 'ಗ' ಕಾರ ಆಗಬೇಕಾಗಿತ್ತು, ಆಗಿಲ್ಲ.

ಕುಂಚ kuňca :

- ಗೊಂಚಲು; ಗುಚ್ಛ; ನವಿಲು ಗರಿಯಿಂದ ಮಾಡಿದ್ದು; Bunch; A brush tail, peacock's feather bunch;
- ಒಂದು ಬಗೆಯ ಮೀನು(ಬೇ.ಸಾಂ.ಪ.ಕೋ); A kind of fish;
- ಎತ್ತಿನ ಬಾಲ(ಚಿ.ಪ.ಕೋ); tail of ox;
- ಮೂರ್ತಿಗೆ ಬಣ್ಣ ಬಳಿಯಲು ಬಳಸುವ ವಸ್ತು; ಪ್ರ: 'ಕುಂಚ ಸಣ್ಣದು ಇದ್ದರ ಚಿತ್ರ ಚಂದ ಆಗ್ತಾವ' (ಬೆ.ಜಿ); Brush;
- ಕಸಬರಿಕೆ; ಗೊಂಚಲು(ಹ.ಸೋ.ಪ); Broom stick;
- ಕೈಯಲ್ಲಿ ಹಿಡಿದಿರುವ ಬೀಸಣಿಕೆ; A hand fan;
- ಬೆತ್ತದ ಸೀಳಿನಿಂದ ಬತ್ತಳಿಕೆಯಂತೆ ಕಾಣುವ ವಸ್ತುವಿಗೆ ನವಿಲುಗರಿ ಪೋಣಿಸಲಾಗಿರುತ್ತದೆ; ಸುಗ್ಗಿ ಕುಣಿತದಲ್ಲಿ ವಾದ್ಯ ಮೇಳಕ್ಕೆ ತಕ್ಕ ಹಾಗೆ ಬೀಸಣಿಕೆಯಂತೆ ಬೀಸುವರು; ಇದನ್ನು ಸುಗ್ಗಿ ಕಣದಲ್ಲಿಯೇ ಸುಗ್ಗಿ ಕಟ್ಟುವ ಮೊದಲ ದಿನ ಸಿದ್ಧಪಡಿಸುತ್ತಾರೆ; ಇದು ಸುಗ್ಗಿ ಹಬ್ಬಕ್ಕೆ ಮುಹೂರ್ತ ಆಗಿರುತ್ತದೆ(ಶಿ.ಜಿ); ಕುಂಚ ಬಣ್ಣ ಹಚ್ಚಲು ಬಳಕೆ; ಇದರ ರಚನೆಯೇ ಒಂದು ಕರಕುಶಲತೆ; ಕೈಬೆರಳು, ಗಿಡದಟೊಂಗೆ, ಹತ್ತಿ, ಬಟ್ಟೆಯ ಉಂಡೆಗಳು, ಪ್ರಾಣಿಗಳ ತುಪ್ಪಳ ಅಥವಾ ಕಿವಿಯ ರೋಮಗಳು ಕುಂಚ ತಯಾರಿಕೆಯಲ್ಲಿ ಬಳಕೆ; ಬಣ್ಣ ತುಂಬಿದ ಕುಂಚದ ಮೊನೆ ವಿರಳವಾಗಿರದೆ ಒಟ್ಟಾಗಿ, ಚೂಪಾಗಿ ಇದ್ದು ಬಣ್ಣವನ್ನು ಕೆಲಕಾಲ ಹಿಡಿದಿಟ್ಟುಕೊಳ್ಳುವ ಲಕ್ಷಣ ಹೊಂದಿರಬೇಕು.
- ಅಣಸು; ಗೊಣಸು(ಶಿ.ಜಿ);
- ಉಜ್ಜಿ ತೊಳೆಯಲು ಬಳಸುವ ಸಾಧನ; A tool for using rubbing and cleaning something;
- ಕುಚ್ಚು; ಚಾಮರ(ತು.ನಿ);
- ***—ಕುಂಚದ ಮೇಳ*** : ಕೈಯಲ್ಲಿ ಕುಂಚ ಹಿಡಿದು ಕುಣಿಯುವ ಹಾಲಕ್ಕಿಯವರ ಕುಣಿತ. ಸಂವಾದಿರೂಪಗಳು ತ.ಮ: ಕುಞ್ಚ; ತು: ಕುಂಚ; ತೆ: ಕುಚ್ಚು; Halakki- A tribal community of Uttar Kannada; Their dance by holding brush in their hands;
- ***—ಕುಂಚ್‌ಬಾಲ*** : ಕುಂಚದಂತಿರುವ ಬಾಲ(ದ.ಕ); ಅಳಿಲಿನ ಬಾಲ ದಪ್ಪ ಕುಂಚದಂತಿರುವುದು; ಕಾಡಿನಲ್ಲಿ ವಾಸಿಸುವ ಕೆಲವು ಪ್ರಾಣಿಗಳ ಬಾಲದ ತುದಿಯಲ್ಲಿನ ರೋಮ ದಪ್ಪವಾಗಿದ್ದು ಕುಂಚದಂತೆ ಕಾಣುತ್ತದೆ. A tail; A tail which resembles a brush like a squirrels tail;
- ***—ಕುಂಚ ಬೀಸೂದ್*** : ದೇವರಿಗೆ ಚಾಮರ ಬೀಸುವುದು; ಉತ್ಸವಗಳಿಗೆ ದೇವರ ಮೂರ್ತಿಯನ್ನು

ಪಲ್ಲಕ್ಕಿಯಲ್ಲಿ ಮೆರವಣಿಗೆಯಲ್ಲಿ ತರುವಾಗ ಎರಡು ಬದಿಯಲ್ಲಿ ಚಾಮರ ಬೀಸುವ ಕ್ರಮವಿದೆ; ಇದು ವಂಶಪರಂಪರೆಯಾಗಿ ಮನೆತನಕ್ಕೆ ಬಂದ ಕಾಯಕ. Fan weaving for god's while procession of gods on palanquin going on;

- *—ಕುಂಚಾಲ* : ಭೂತನರ್ತಕ ಹಿಡಿದುಕೊಳ್ಳುವ ಚಿಕ್ಕ ಗಾತ್ರದ ಚಾಮರ(ದ.ಕ). A small fan-chamara, which is to be held by Bhuta dancer;

ಕುಂಚಕ kuñcaka :

ಬಾಗಿದ; ವಕ್ರವಾದ; ಮುರುಟಿದ; ಚುಚ್ಚುವ ವಸ್ತು; *ಪ್ರ:* 'ಕುಂಚಕ ಕೊಡಲೇ ಹುಡುಗಾ'(ಬೆ.ಜಿ). Bend, Crooked shrivel sharpened object.

ಕುಂಚಗನಹಳ್ಳಿ kuñcaganahaḷḷi :

- ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೋಕಿನ ಕ್ರಿ.ಶ.೧೪೭೧ರ ೪೮ನೇ ಶಾಸನದಲ್ಲಿ ಈ ಊರಿನ ಉಲ್ಲೇಖವಿದೆ; A village mentioned in 48th inscription Of Malavalli Taluk Mandya District;
- ಅಚ್ಯುತರಾಯ ವೀರಂಣನಾಯಕರು ತಳಕಾಡ ನಾಡಪ್ರಭು ಸಾಥಿಯಪನ ಮಗ ಚಿಕ್ಕಸಾಥಿಯಪುವರಿಗೆ ಕುಂಚಗನಹಳ್ಳಿ ಗ್ರಾಮವನ್ನು ದಾನಬಿಟ್ಟ ವಿವರವಿದೆ; It is an endowment or gift inscription stated that Talakadu King Acchutaray Veeranna Nayaka gave this village to Chikkasathi of Sathiyapa;
- 'ಕುಂಚಿಗನಹಳ್ಳಿ' ಇರಬಹುದೆ?

(E.C- ೭, ಮಂಡ್ಯ.ಜಿ.)

ಕುಂಚಗರು kuñcagaru :

- 'ತುಂಟಕರು; ಎಂಬ ಅರ್ಥವಿರುವುದರಿಂದ 'ಕುಂಚ' ಪದಕ್ಕೆ 'ತುಂಟ' ಎಂಬ ಅರ್ಥವಿರಬಹುದೆ? *ಪ್ರ:* 'ಕುಂಚಗರು ಕ್ವಾಣೆ ಹೊಕ್ಕಂಗೆ ರೂಪೇಳಿಸಿ ಬುಡ್ತಾರೆ'(ಬೆಂ.ಜಿ); Goblins calf, mischievous calf;
- ಕುಂಚಕರು > ಕುಂಚಗರು > ಕುಂಚ್ಗರು (ಉಚ್ಚಾರಣೆಯ ದೃಷ್ಟಿಯಿಂದ);
- ಒಂದು ಊಹೆ; 'ಕುಂಚ' ಪದ 'ಕೊಂಚ'('ಅಲ್ಪ' ಎನ್ನುವ ಅರ್ಥವಿರುವುದರಿಂದ) ಪದಕ್ಕೆ ಸಮಾನಪದವೆಂದು ಪರಿಗಣಿಸಬಹುದೆ? ಉದಾಹರಣೆಗೆ, 'ಕೊಡು' ರೂಪಕ್ಕೆ 'ಕುಡು' ಮೂಲವಾಗಿರುವಂತೆ, ಇಲ್ಲಿಯೂ ಅದೇ ರೀತಿ ಸಂಭವಿಸಿರಬಹುದೆ?

ಕುಂಚಗಿ೧ kuñcagi1 :

- ನೇಯ್ಗೆಗೆ ಸಿದ್ಧಪಡಿಸಿದ ದಾರದ ಎಳೆಗಳನ್ನು ತೀಡಿ ಹದಗೊಳಿಸುವ ಒಂದು ಉಪಕರಣ(ಚಿ.ಪ.ಕೋ); A tool which is used to polish/rub threads that are prepared for weaving cloth;
- ನೂಲಿಗೆ ಸರಿ ಹಾಕುವುದು(ಬ.ಜಿ); To gum the threads;
- ನಾಲ್ಕು ಮೂಲೆಯ ಹೊದಿಕೆ ಚೀಲ(ಯಾ.ಜಿ); A square envelop bag;
- ನೂಲನ್ನು ಬಾಚಲು ಮತ್ತು ಅಂಟು ಬಳಿಯಲು ಬಳಸುವ ಒಂದು ಬಗೆಯ ಗಿಡದ ಬೇರಿನಿಂದ ಮಾಡಿದ ಸಾಧನ; ಮಗ್ಗದ ಕಾರ್ಯದಲ್ಲಿ ಬಳಕೆ(ಮಂಡ್ಯ.ಜಿ); A tool that is used in weaving or looms hand;
- *—ಕುಂಚಗಿ ಕಡ್ಡಿ* : ಕುಂಚಗಿ ಮಾಡಲು ಬಳಸುವ ಹುಲ್ಲಿನ ಒಂದು ಸಾಧನ(ನೇ.ವ್ಯ.ಪ.ಕೋ); a grass tool that is used to prepare Kunchagi;
- *—ಕುಂಚಗಿ ಕಟ್ಟು* : ಕುಂಚಗಿ ಕಂಬಿಗೆ ಬಿಗಿದಿರುವ ದಾರ(ನೇ.ಪ.ಕೋ); Thread which is tied to Kunchagi bar;
- *—ಕುಂಚಗಿ ಕಂಬಿ* : ಕುಂಚಗಿಗೆ ಕಟ್ಟಿರುವ ಮರದ ಪಟ್ಟಿ(ಚೀ.ಜಿ); A wooden repiece which is tied to Kunchagi tool.

ಕುಂಚಗಿ೨ kuncagi2 :

- ಸೀರೆ ತಯಾರಿಸುವಾಗ ನೂಲನ್ನು ಸ್ವಚ್ಛ ಮಾಡಲು ಬಳಸುವ ಸಾಧನ(ಉಂಕಿ ಹೂಡುವಾಗ ನೂಲು ಬಾಚಲು ಬಳಸುವ ಸಾಧನ);
- ಮುತ್ತಿನ ಮಣಿಗಳನ್ನು ಅಳವಡಿಸಿ ವಿವಿಧ ಬಗೆಯ ಕಸೂತಿಯಿಂದ ಸಿದ್ಧಪಡಿಸಿದ ತಲೆವಸ್ತ್ರ; ಮಕ್ಕಳ ತಲೆಗೆ ಕಿವಿ ಮುಚ್ಚಿಕೊಳ್ಳುವಂತೆ ಕಟ್ಟಲು ಬಳಕೆ;

- ಹೊಲ, ಗದ್ದೆಗಳಿಗೆ ತೆರಳುವ ಮಹಿಳೆಯರು ಉಪಯೋಗಿಸುವ ಮೂಲಿವಸ್ತ್ರಕ್ಕೆ ಕುಂಚಗಿ ಎನ್ನುವರು;
- ಹಳೆಯ ಸೀರೆಯನ್ನು ನಾಲ್ಕು ಪದರಗಳಾಗಿ ಹರಿದು ಜೋಡಿಸಿ ಮೂರು ಕಡೆ ಅಂಚನ್ನು ಹೊಲಿದು ಒಂದು ಕಡೆಯ ಅಂಚನ್ನು ಹಾಗೆಯೇ ಬಿಟ್ಟು ಚೀಲದಂತೆ ತಯಾರಿಸುವರು; ಇದು ಮೆಣಸಿನಕಾಯಿ, ಹತ್ತಿ, ಜೋಳ, ರಾಗಿ ತೆನೆಗಳನ್ನು ತುಂಬಲು ಉಪಯೋಗ;
- ರೈತ ಮಹಿಳೆಯರು, ಕೂಲಿ–ಕಾರ್ಮಿಕರು ಮಳೆ ಬರುವಾಗ ತಲೆಯ ಮೇಲೆ ಹೊದ್ದುಕೊಳ್ಳಲು ಬಳಸುವುದುಂಟು; ಪ್ರ: 'ಕುಂಚಗಿ ತಂದುದು ಅಟ್ಟದ ಮೇಲಿಟ್ಟು ಪೂಜೆ ಮಾಡಲೋ'.

ಕುಂಚಿಗೆ kuñcige :

- ಹಂಚಿಕಡ್ಡಿ ಬೇರಿನಿಂದ ತಟ್ಟಿ ಹೆಣೆಯುವುದರಿಂದ ಕುಂಚಿಗೆ ಕಟ್ಟಿರುತ್ತಾರೆ;
- ಇದನ್ನು ದಾರಕ್ಕೆ ಅಂಬಲಿ ಹಚ್ಚಿ ಎಳೆಯುವಾಗ ಉಪಯೋಗಿಸುತ್ತಾರೆ.

ಕುಂಚಟ್ kuñcaṭ :

ಯಕ್ಷಗಾನ ಕುಣಿತದ ಒಂದು ಬಗೆಯ ಲಾಗ; ಹಿಮ್ಮಡಿ ನಿತಂಬಕ್ಕೆ ತಾಗುವಂತೆ ಹಾರುವುದು(ದ.ಕ); A kind of jumping which is the part of Yakshagana dancing step.

ಕುಂಚದಹಳ್ಳಿ kuñcadahaḷḷi :

- ಕ್ರಿ.ಶ.೧೨೬೫ರ ೩೨೧ನೇ ಶಾಸನದಲ್ಲಿ ಈ ಊರಿನ ಉಲ್ಲೇಖವಿದೆ; A village has been referred in 321 Inscription Of Mandya District;
- 'ಹಳ್ಳಿ' ಎಂಬುದು ಸಾಮಾನ್ಯವಾಗಿ ಬಳಕೆಯಾಗುವ ಪದ; ವಿವರಣೆ ಅನಗತ್ಯ;
- 'ಕುಂಚ' ಎಂದರೆ ಗುಚ್ಛ, ಗೊಂಚಲು, ನವಿಲುಗರಿಯಿಂದ ಮಾಡಿದ ಕೂರ್ಚಿಕೆ, ಚವರಿ, ಚಾಮರ; ಚಿತ್ರ ಬರೆಯುದಕ್ಕೂ ಬಣ್ಣ ತುಂಬುವುದಕ್ಕೂ ಉಪಯೋಗಿಸುವ ಕೂದಲಿನ ಕುಚ್ಚು;
- ಈ ಸಾಧನಗಳು ಹೆಚ್ಚು ತಯಾರಾಗುತ್ತಿದ್ದ, ದೊರೆಯುತ್ತಿದ್ದ ಊರು 'ಕುಂಚದಹಳ್ಳಿ' ಆಗಿರಬಹುದು.

(E.C-೯)

ಕುಂಚನೂರು kuñcanūru :

- ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೋಕಿನ ಕ್ರಿ.ಶ.೧೧೮೦ರ ೨೪ನೇ ಶಾಸನದಲ್ಲಿ ಇದರ ಉಲ್ಲೇಖ; A village has been referring in 24th inscription of Jamakandi of Bagalakote;
- ಕಳಚುರ್ಯ ಚಕ್ರವರ್ತಿ ಭುವನೈಕಮಲ್ಲ, ಸಂಕಮನ ಕಾಲಕ್ಕೆ ಸೇರಿದ ಶಾಸನ; It belongs to Kalachurya King Bhuvanaikamalla, Sankama's period;
- ಕುಂಚನೂರಿನ ಮಹಾಜನರ ವರ್ಣನೆಯಿರುವುದು ವಿಶೇಷ; ಶಾಸನದಲ್ಲಿ ಸಾಮಾನ್ಯರ ವರ್ಣನೆ, ಅಚ್ಚರಿ!;
- ಈ ಊರು ಚಿತ್ರ ಬರೆಯುವುದಕ್ಕೆ ಹೆಸರಾಗಿದ್ದಿರಬಹುದು; ಆ ಹಿನ್ನೆಲೆಯಲ್ಲಿ 'ಕುಂಚನೂರು' ಹೆಸರು ಬಳಕೆಗೆ ಬಂದಿರಬಹುದು.

(ಕ.ವಿ.ವಿ.ಶಾ.ಸಂ–೯; ಹಂಪಿ)

ಕುಂಚಲ ಕೊಟ್ಟು kuñçalakoṭṭu :

- ತರಿತರಿಯಾದ ರೀತಿಯ ಕೋಳಿ ಜುಟ್ಟು; Hew – mow; Different shaped cock's crest; A type of gambling cock's crest;
- ಅಂಕದ ಕೋಳಿಗಳ ಜುಟ್ಟುಗಳಲ್ಲಿನ ಒಂದು ವಿಧ(ದ.ಕ); The score poultry's crest.

ಕುಂಚಿ ಹಿಡ್ಕೊಂಡು ಬಂದಾಕಿ kuñci hiḍkoṇḍu bandāki :

- ಬೆನ್ನು ಹತ್ತಿ ಬಂದಾಕಿ; ಮನೆ ಬಿಟ್ಟು ಅಥವಾ ತೊರೆದು ಬಂದವಳು ಎಂಬ ಅರ್ಥ ಇರಬಹುದು? A woman who gives up her own home;
- 'ಕುಂಚಿ' = 'ಕುಂಚಿಗೆ' = ಕುಂಚ; ಖಂಚಿ = ಗೊಂಚಲು, ಕುಚ್ಚು; 'ಕುಂಚಿಗೆಯ ಚೆಂದ ಶಿಶುವಿಂಗೆ'– ಸರ್ವಜ್ಞ;
- ತಲೆ + ಬೆನ್ನನ್ನು ಪೂರ್ತಿಯಾಗಿ ಮುಚ್ಚುವ ಕಿಸೆಗಳುಳ್ಳ ಕುಲಾಯಿ.

ಕುಂಚಿಗೆ kuñcige :

- ಕಂಬಳಿ ನೇಯ್ಗೆಯಲ್ಲಿ ತೆಂಗಿನ ಮರದ ಸಣ್ಣ ಬೇರುಗಳನ್ನು ಕ್ರಮಬದ್ಧವಾಗಿ ಜೋಡಿಸಿ ಮಾಡಿರುವ ಸಾಧನ; A tool prepared for blanket weaving by coconut roots;
- ಮಕ್ಕಳ ಟೋಪಿ ಅಥವಾ ಕುಲಾವಿ; ಸಣ್ಣ ಮಕ್ಕಳಿಗೆ ಕಿವಿ, ತಲೆ, ಬೆನ್ನು ಕುತ್ತಿಗೆ ಮುಚ್ಚುವಂತೆ ಹಳೆಯಸೀರೆ, ಕುಪ್ಪಸದ ಬಟ್ಟೆಯಿಂದ ತಯಾರಿಸಿದ ತಲೆಗೆ ಕಟ್ಟುವ ಟೊಪ್ಪಿಗೆ; ಕೊಪ್ಪೆ; ಗೊಪ್ಪೆ; ಗೊಂಗಡಿ; 'ಕೂಸು ಕುಂಚಿಗೆ ತಿಂತು ಹಾಸಿಗಿ ನೆಲ ತಿಂತು'(ಗಾ); Children's cape or bonnet; which is stitched especially for children to cover their ear, head back and neck;
- 'ಕುಂಚ್ಗಿ ಹರ್ದು ಕುಲಾಯಿ ಮಾಡಿದ್ಹಂತ'(ಬೀ.ಜಿ); Hood;
- ಮೀನಿನ ಒಂದು ಜಾತಿ; A kind of fish;
- ನೆರಿಗೆ(ಕೋ.ಜಿ); Hangings.

ಕುಂಚಟಿಗ kuñcaṭiga :

- ಒಕ್ಕಲಿಗ ಸಮುದಾಯದ ಒಂದು ಒಳಪಂಗಡ; ವ್ಯವಸಾಯ ಮೂಲ ಕಸುಬು; ತುಮಕೂರು ಜಿಲ್ಲೆಯಲ್ಲಿ ಹೆಚ್ಚು ಕಂಡುಬರುತ್ತಾರೆ; A sub caste of vokkaliga community; The majority of this caste is habituated in Tumkur of Karnataka;
- ಒಕ್ಕಲಿಗರಲ್ಲಿನ ಒಂದು ಪಂಗಡ; ಇವರ ಹುಟ್ಟಿನ ಬಗೆಗಿನ ಕತೆಯೊಂದು ಹೀಗಿದೆ: ಹಿಂದೆ ಉತ್ತರ ಭಾರತದ ಭಾಗದಲ್ಲಿ ಇವರು ನೆಲೆಸಿದ್ದಾಗ ಮುಸ್ಲಿಂ ರಾಜನೊಬ್ಬ ಹುಂದೆ ಎತ್ತರಾಯ ಎಂಬುವವನ ಮಗಳನ್ನು ಮದುವೆಯಾಗ ಬಯಸಿದ;
- ಎತ್ತರಾಯ ತನ್ನ ಕುಲಬಾಂಧವರೊಂದಿಗೆ ಚರ್ಚಿಸಿ ಈ ಸಂಕಟದಿಂದ ಪಾರಾಗಲು ದಕ್ಷಿಣದತ್ತ ವಲಸೆ ಹೊರಟ;
- ಮಾರ್ಗ ಮಧ್ಯೆ ಗೋದಾವರಿ ನದಿ ದಾಟಲಾಗದೆ ಪೇಚಾಡುತ್ತಾ ನಿಂತಾಗ ಇದನ್ನು ಗಮನಿಸಿದ ಕುರುಬನೊಬ್ಬ ಒಂದು ಒಪ್ಪಂದದ ಮೇರೆಗೆ ಎತ್ತರಾಯನಿಗೆ ಸಹಾಯ ಮಾಡಲು ಮುಂದಾದ;
- ಗೋದಾವರಿ ನದಿಗೆ ಆತ್ಮಾರ್ಪಣೆ ಮಾಡಿಕೊಂಡ;
- ನದಿ ಎರಡು ಭಾಗವಾಗಿ ಸೀಳಿ ನಡುವೆ ಹಾದಿಯಾಯಿತು;
- ಎತ್ತರಾಯ ತನ್ನ ಪರಿವಾರದೊಂದಿಗೆ ಪಾರಾಗಿ ನಂದನ ಹೊಸೂರು ಎಂಬಲ್ಲಿ ನೆಲೆನಿಂತ;
- ಕುರುಬನಿಗೆ ಮಾತು ಕೊಟ್ಟಂತೆ 'ಕುಂಚ' ಹಿಡಿದು ಅಂದಿನಿಂದ ಅವನ ವಂಶದವರು ಕುಂಚಿಟಿಗರಾದರು;
- ಇವರಲ್ಲಿ ಹದಿನಾರು ಭಿನ್ನಗೋತ್ರಗಳು ನಲವತ್ತೆಂಟು ಕುಲಗಳಿವೆ; ವೀರಶೈವ ಮತ್ತು ಶ್ರೀವೈಷ್ಣವ ಗುಂಪುಗಳು ಶಿವ ಮತ್ತು ವಿಷ್ಣುವನ್ನು ಆರಾಧ್ಯದೈವವಾಗಿ ಪೂಜಿಸುವ ಕ್ರಮವಿದೆ; In this sub-caste: there are sixteen cosmic different Gotras-castes; They are worshipping Lord Shiva and Lord Vishnu;
- ಕುಂಚಿಟಿಗ ಎಂದರೆ ವ್ಯಾಪಾರ ವೃತ್ತಿ ಅದರಲ್ಲಿಯೂ ವಿಶೇಷವಾಗಿ ತೊಗರಿಕಾಳು ಮಾರುವವನು ಎಂಬ ಅರ್ಥವೂ ಇದೆ; ವ್ಯರೂ: ಕಂಚಿಟೊಕ್ಕಲು. Kunchatiga means seller especially dhal seller.

ಕುಂಚಿತ kuñcita :

ಕೀಳು ಮಟ್ಟದವನು(ಬ.ಜಿ); Crooked, curved, bent, Contracted(ಕಿಟ್ಟೆಲ್). One who has inferior status.

ಕುಂಚು kuñçu :

ಮೀನಿನ ಒಂದು ಪ್ರಭೇದ; ಮೈಮೇಲೆ ಚುಕ್ಕೆಗಳನ್ನು ಹೊಂದಿರುವುದು; ಇವು ಸಾಮಾನ್ಯವಾಗಿ ಗದ್ದೆ, ಹೊಳೆ, ಹಳ್ಳಗಳಲ್ಲಿ ಹೆಚ್ಚಾಗಿ ಸಿಗುತ್ತವೆ (ಬೇ.ಸಾಂ.ಪ.ಕೋ). A kind of fish species which are available at lakes, small river.

ಕುಂಚೇಳು kuñcēlu :

ಕಪ್ಪನೆಯ ಮಿರಮಿರ ಹೊಳೆಯುವ ದೊಡ್ಡಚೇಳು; ಕೊಂಡಿಯಂತೆ ಇರುವ ಬಾಲದ ತುದಿಯಲ್ಲಿ ವಿಷವಿದ್ದು ಬಾಲದಿಂದ ಕುಟುಕುವುದು; ಇದಕ್ಕೆ ಜನಪದ ವೈದ್ಯದಲ್ಲಿ ಔಷಧಿ ಕೊಡುವ ಕ್ರಮವಿದೆ. A shining big scorpion that has poisonous hooked tail.

ಕುಂಚ್ಗೆ kuñcge :

ಗೊನೆಯಿಂದ ಅಡಕೆಕಾಯಿಯನ್ನು ಬೇರ್ಪಡಿಸುವ ಜರಲು; ಕುಚ್ಚು(ಚಿಕ್ಕ.ಜಿ). A tool for separating the betel nut by knotting cord or string in patterns.

ಕುಂಜಟಗ kuñjaṭaga :

- ಮರದಿಂದ ತಯಾರಿಸದ ಜಟ್ಟಿಗ ದೇವತೆಯ ವಿಗ್ರಹ; ಭೂತಾರಾಧನೆಯಲ್ಲಿ ಪೂಜಿಸುವ ಕ್ರಮವಿದೆ(ದ.ಕ); A wooden chiselled idol of Jattiga god;
- ಭೂತಾರಾಧನೆಯಲ್ಲಿನ ಒಂದು ದೈವ ಜಟಗ ಅಥವಾ ಜಟ್ಟಿಗ; ಇವು ಭೂತಗಳಲ್ಲ ರುದ್ರದೇವನ ರೂಪಗಳೆಂಬ ನಂಬಿಕೆ; Jattiga is one of the forms of Lord Shiva or Rudra;
- ಮರದಿಂದ ಕೆತ್ತಿದ ವಿಗ್ರಹ ಪೂಜಿಸುವುದೇ ವಿಶೇಷ; ಹೊಸ ಅಕ್ಕಿಯ ಚರುವನ್ನು(ಅನ್ನ) ತೋಟದ ಮೊದಲ ಫಸಲಾದ ಹಣ್ಣು, ಹೂವನ್ನು ಮೊದಲು ಜಟಗನಿಗೆ ಅರ್ಪಿಸುವುದು ವಾಡಿಕೆ;
- ಕುಂಟ ಜಟಗ ದೈವದ ಕಾಲಿಗೆ ನೋವಾಗಿ ಅದು ಕುಂಟುತ್ತಾ ಸಾಗುತ್ತಿದ್ದರಿಂದ ಕುಂಜಟಗ ಹೆಸರು ಬಂದಿರಬಹುದು.

ಕುಂಜರದ ಗೊಂಬೆ kuñjarada gombe :

- ಸಿಂಗರಿಸಿದ ಗೊಂಬೆ; ಆನೆ; ಗಜ; ಕುಂಜರ = ಉತ್ತಮ; ಶ್ರೇಷ್ಠ; A decorated elephant toy;
- ಉತ್ತಮವಾಗಿ ಅಲಂಕರಿಸಿದ ಗೊಂಬೆ;
- ಆನೆಯ ಗೊಂಬೆಯನ್ನು ಹೀಗೆ ಹೇಳಿರಬಹುದು.

ಕುಂಜಿಕುಡು kuñjikuḍu :

ಗಡಿಯಾರದ ಯಂತ್ರದ ಸುರುಳಿಯನ್ನು ಬಿಗಿಗೊಳಿಸಿ ನಡೆಯುವಂತೆ ಮಾಡುವುದು; ಚಾವಿ ತಿರುವು; (ಬೀ.ಪ.ಕೋ); ಕುಂಜಿ ತಿರುವು; ಕೀ ಕೊಡುವುದು; 'ಕುಂಜಿಕುಡು' ಪದಕ್ಕೆ ಮೇಲಿನ ವಿವರಣೆಯಿಂದ 'ಕುಂಜಿ + ಕುಡು' ಎಂದು ವಿಭಜಿಸಬೇಕಾಗುತ್ತದೆ; ಆ ಪ್ರಕಾರ ಕುಂಜಿ ಎಂದರೆ ಚಾವಿ ಅಥವಾ 'ಕೀ' ಎಂದು ಅರ್ಥವಾಗುವುದು; 'ಓಡು' ಎಂಬುದಕ್ಕೆ ತಿರುವು ಅಥವಾ ಕೊಡುವುದು ಎಂದು ಅರ್ಥಮಾಡಬೇಕಾಗುತ್ತದೆ; 'ಕುಡು' ರೂಪ 'ಕೊಡು' ರೂಪದ ಪೂರ್ವರೂಪವೆಂದು ಪರಿಗಣಿಸಬಹುದು. ಸಾಮಾನ್ಯವಾಗಿ ಹಳಗನ್ನಡದ ಉ> ಹೊಸಗನ್ನಡದಲ್ಲಿ 'ಒ' ಆಗುವುದುಂಟು. To turn key of a clock for successful showing time.

ಕುಂಜಿಗಿ kuñjigi :

ಮಳೆಯಿಂದ ರಕ್ಷಿಸಿಕೊಳ್ಳಲು ಬಳಸುವ ಎರಡು ಪದರಿನ ಗೋಣಿಚೀಲದ ಹೊದಿಕೆ; ಮಳೆಗಾಲದಲ್ಲಿ ಗದ್ದೆ ಕೆಲಸ ಕಾರ್ಯದಲ್ಲಿ ತಲೆ ಮೇಲಿನಿಂದ ಧರಿಸುವುದು. A gunny bag envelop which is used in rainy season at field by labours.

ಕುಂಜಿಯೂರು kuñjiyūru :

- ಬೆಂಗಳೂರು ಜಿಲ್ಲೆಯ ಕ್ರಿ.ಶ.೧೩೦೧ರ ೫೧ನೇ ಶಾಸನದಲ್ಲಿ ಇದರ ಉಲ್ಲೇಖವಿದೆ; A village referred to 51st inscription of Bangalore of Karnataka.
- ಹೊಯ್ಸಳರ ಕಾಲದ ತಮಿಳು ಶಾಸನವೊಂದು ವರ್ತೂರು ಹೋಬಳಿಯ 'ಗುಂಜೂರು' ಗ್ರಾಮದಲ್ಲಿ ದೊರೆತಿದೆ;
- ಈ ತಮಿಳು ಶಾಸನವು ಈ ಪ್ರದೇಶವನ್ನು 'ಕುಂಜಿಯೂರು' ಎಂದು ಉಲ್ಲೇಖಿಸಿದೆ;
- ಇದು ವರ್ತೂರು ಸುತ್ತಮುತ್ತಲ ಪ್ರದೇಶವಾಗಿದ್ದಿರಬಹುದು.

(E.C- IX ಬಿ.ಎಲ್.ರೈಸ್; ಬೆಂ.ಜಿ.)

ಕುಂಜಿರ್ಕ/ಕುಂಜುರ್ಕ kuñjirka/kuñjurka :

ಚೇಳಿನ ಜಾತಿಯ ವಿಷ ಜಂತು; ಬಾಲದ ತುದಿಯಲ್ಲಿ ವಿಷದ ಮುಳ್ಳನ್ನು ಹೊಂದಿರುವ ಜೀವಿ; ***ವ್ಯದೂ:*** ಕುಂಜಿಗುರ್ಮ(ಚಾ.ಜಿ); ಕುಂಚರ್ಕ, ಯಮಗಿರ್ಕೆ (ದೊಡ್ಡದು); A worm species of scorpion that has a venom/ poisonous tail;

—***ಕುಂಜ್‌ಗುರ್ಕ*** : ದಪ್ಪ ಕಟ್ಟಿರುವೆ(ಬಿಳಿಗಿರಿರಂಗನ ಕಾವ್ಯ). Anthills; Huge ants.

ಕುಂಜು kuñju :

- ಫಣಿಯರ ಸಮಾಜದಲ್ಲಿನ ಮನೆಗಳ ಸಾಲು ಅಥವಾ ಗುಂಪು; ಎರವರು ತಮ್ಮ ನೆಲೆದಾಣಗಳನ್ನು ಕುಂಜು–

ಕರೆಯುತ್ತಾರೆ(***ನೋಡಿ:*** ಎರವರ ಸಂಸ್ಕೃತಿ); Eravas called their dwelling as Kunju; A group of a lane of houses of Paniya community;
- ನೆಗೆ; ಜಿಗಿ; ಹಾರು; ಕುಣಿ(ದ.ಕ); ತಮಿ: ಕುನಿ (ದ್ರಾ.ಭಾ.ಜ್ಞಾ.ಪ.ಕೋ).

ಕುಂಜುಕಾರ kuñjukāra :

- ಎರವರ ಸಮುದಾಯದ ಮುಖಂಡ; The head of the Evava community;
- ಗ್ರಾಮ ಅಥವಾ ಊರನ್ನು ಹುಟ್ಟು ಹಾಕಿದ ಮೊದಲಿಗ; ಆ ಗ್ರಾಮದಲ್ಲಿ ಇರುವ ಎಲ್ಲಾ ಕುಟುಂಬಗಳು ಇವನ ಹಿಡಿತಕ್ಕೆ ಒಳಪಟ್ಟಿರುತ್ತದೆ;
- ಗ್ರಾಮದ ಒಳತಿಗಾಗಿ ಗ್ರಾಮದೇವತೆಗಳ ಉತ್ಸವ ಸಮಾರಾಧನೆಗಾಗಿ ಇನ್ನಿತರ ಅಭಿವೃದ್ಧಿಗಾಗಿ ಕೈಕೊಳ್ಳುವ ಕಾರ್ಯಕ್ರಮಗಳಿಗೆ ತಗುಲುವ ವೆಚ್ಚವನ್ನು ಗ್ರಾಮದ ಎಲ್ಲ ಸದಸ್ಯರಿಂದ ಸಂಗ್ರಹಿಸಿ ತಾನು ನಿರ್ವಹಿಸುವನು;
- ಇಷ್ಟೇ ಅಲ್ಲದೆ ಹುಟ್ಟು ಸಾವು, ಉತ್ತರಕ್ರಿಯೆಗಳಲ್ಲೂ ಭಾಗವಹಿಸುವನು.

ಕುಂಞ kuŋi :

ಇದೊಂದು ಜನಪದ ದೇವತೆ; ಬೀದರ್ ಜಿಲ್ಲೆಯ ಬಾಲೆಯರು ಕುಂಞಗಾನ ಮೂರ್ತಿ ಮಾಡಿ ಪೂಜಿಸುವರು; ಹಾಗೆಯೇ "ಕುಂಞ ಕುಂಞ। ಕುಂಞನ ಬಾಯಾ ಗುಣಿ। ನಿಮ್ಮಾಯಿ ಬಾಯ್ದಾ ಗೋಣ್ಣಿ" ಎಂದು ಹಾಡುತ್ತಾ ಪೂಜಿಸುತ್ತಾರೆ (ಬೀ.ಕ.ಕೋ); A folk goddess; Girls/lasses of Bidar district worship this goddess.

ಕುಂಟ kunṭa :

- ಕಾಲು ಊನವಾದವನು; ಒಂದೇ ಕಾಲುಳ್ಳವನು; ಕುಂಟುತ್ತಾ ನಡೆಯುವವನು; Lame; One legged, Limping walk, Walk with limping;
- 'ಕುಂಟನಿಗೆ ಸೊಂಟದಲ್ಲಿ ತ್ರಾಣ(ಜಿ.ಕೋ.ಗಾ); 'ಬಡವರ ಮುಂದೆ ಬಂಟ ಬಲ್ಲಿದರ ಮುಂದೆ ಕುಂಟ'(ಗಾ);
- ಗಿಡ್ಡ; ಕುಳ್ಳ; ದುರ್ಬಲ; ಅಶಕ್ತ; ಮಂದ; ದಡ್ಡ; Dwarf, Short, Weak, Retard, Poor;
- ಗೂಟ; ಕೋಳಿಕಟ್ಟುವ ಜಾಗ;
- ***—ಕುಂಟ ನೆಪ*** : ಮಾಡಲಾರದ ಕೆಲಸಕ್ಕೊಂದು ಸುಳ್ಳು ವಿವರ ಹೇಳುವುದು; ಸುಳ್ಳು ಉತ್ತರ; ಸಮರ್ಪಕವಲ್ಲದ ಜವಾಬು; ಇಲ್ಲದ ಕಾರಣ; ಮೊಟತಾಟ ಉತ್ತರ; ***ವ್ಯರೂ:*** ಕುಂಟಜವಾಬು, ಕುಂಟ ಸಿವನ(ಬೀ.ಕ.ಕೋ); Lie pretext; Lie answer, Irrelevant answers;
- ***—ಕುಂಟ ಕುಣಿತ*** : ಸ್ತ್ರೀ ಪಾತ್ರಧಾರಿಗಳ ಕುಣಿತ : ಸಾಮಾನ್ಯವಾಗಿ ಇದರಲ್ಲಿ ಕೆಲವು ಭರತನಾಟ್ಯದ ಮುದ್ರೆ, ಭಂಗಿಗಳನ್ನು ಬಳಸಿಕೊಳ್ಳಲಾಗಿದೆ; ಸೌಮ್ಯವಾದ ಹೆಜ್ಜೆಗಳಿವೆ; ಬಲಗಾಲನ್ನು ಹಿಂದೆ ಚಾಚಿ ತುದಿ ಬೆರಳನ್ನು ಬಡಿಯುತ್ತಾ ಆಟ(ಯಕ್ಷಗಾನ)ದಲ್ಲಿ ಈ ಕಡೆ ಆ ಕಡೆಗೆ ತಿರುಗುವ ಕುಣಿತ; A dance of lady parts/characters in Yakshagana using Mudras of Bharta Natyam;
- ***—ಕುಂಟ ಜಟ್ಟಿಗ*** : ಗೊಂಡರ ಪ್ರಸಿದ್ಧ ದೇವರು; ಗೊಂಡರೆಲ್ಲ ಈ ದೈವಕ್ಕೆ ನಡೆದುಕೊಳ್ಳುವರು; ಇಲ್ಲಿರುವ ಜಟ್ಟಿಗ ಕುಂಟನಾದ್ದರಿಂದ ಈ ಭೂತ ದೈವಕ್ಕೆ ಕುಂಟ ಜಟ್ಟಿಗನೆಂಬ ಹೆಸರಿದೆ; A famous god of Gonda tribe;
- ***—ಕುಂಟ ಚಾಕರಿ*** : ಕೆಲಸ ಸರಾಗವಾಗಿ ನಡೆಯದೆ ಇರುವುದು; ನಡುನಡುವೆ ಬೇರೆಬೇರೆ ಕಾರಣದಿಂದ ಕೆಲಸ ನಿಂತು ಮತ್ತೇ ಆರಂಭಗೊಳ್ಳುವಿಕೆ; An incompleting work; A work often stopped before its completion;

= ಜನಪದ ಕಥೆಗಳಲ್ಲಿ 'ಕುಂಟ' ಎಂಬ ಪ್ರಸಿದ್ಧ ಕಥೆಯಿದೆ; ಅದರಲ್ಲಿ 'ಕುಂಟ' ನೇ ಸಾಹಸಕಾರ್ಯದಲ್ಲಿ ತೊಡಗುವನು; ಕಥಾನಾಯಕನಾಗಿ ಬೆಳೆಯುವನು; ಈ ಕಥೆ 'ಅದುಮಿಟ್ಟ ಭಾವನೆಗಳ ಅಭಿವ್ಯಕ್ತಿ'ಯಾಗಿ ಕಾಣಿಸಿಕೊಂಡಿದ್ದು, ಕುಂಟ ಅದರ ಪ್ರತಿನಿಧೀಕರಣವೆಂಬಂತೆ ಕಾಣುತ್ತಾನೆ;

- 'ಕುಂಟ' ಪದದ ಸ್ತ್ರೀವಾಚಕ ರೂಪ 'ಕುಂಟಿ'.
- ***—ಕುಂಟುಮುಟ್ಟಾಟ*** : ಹೆಣ್ಣುಮಕ್ಕಳ ಆಟ; ಕುಂಟಿ ಕೊಂಡು ಹೋಗಿ ಮುಟ್ಟುವ ಆಟ(ಚಿತ್ರ,ಜಿ); Hobble play by girls; A folk play of girls in rural areas;

- —*ಕುಂಟುಸ್ರು* : ಕೊನೆಯ ಉಸಿರು; ಪ್ರಾಣ ಹೋಗುವ ಅಂತಿಮ ಕ್ಷಣದ ಉಸಿರಾಡುವಿಕೆ; (ಜ.ನಿ); The final breath of a dead; `antima' breath;
- —*ಕುಂಟೆತ್ತು* : ಕುಂಟುವ ದನ; ಉಳಲಾಗದ್ದು (ಕೊ.ಜಿ); *ಪ್ರ*: 'ಕುಂಟೆತ್ತಿಗೆ ಸನ್ನೆ ಹಾಕು'(ಗಾ); ಕುಂಟೆತ್ತು ಹೊಲಕ್ಕೆ ಮಾರಿ; ನೆಂಟ ಮನೆಗೆ ಮಾರಿ(ಗಾ); Lame cattle;
- —*ಕುಂಟು ಮಾರಿ* : ಕಾಲಿಲ್ಲದ ಮಾರಿ (ಮಂ.ಕಾ); Legless /hobble Mari or shrew/woman;
- —*ಕುಂಟು ಮಿಂಚಿ* : ಮಿಡತೆಯ ಒಂದು ಬಗೆ; ನೆಗೆಯುವುದು ಇದರ ಲಕ್ಷಣ(ತು.ಜಿ). A species of grasshopper, Jumping is its main feature.

ಕುಂಟಗುಡಿ kuṇṭaguḍi :

- ಬಿಳಿಗಿರಿರಂಗನಬೆಟ್ಟದ ಹತ್ತಿರವಿರುವ ಕ್ಯಾತದೇವರ ಗುಡಿಯ ಪಕ್ಕದಲ್ಲಿಯೇ 'ಕುಂಟಗುಡಿ' ಇದೆ; A small temple which is located just beside Kyate Devaru temple at B. R hills;
- ಕ್ಯಾತದೇವರಿಗೂ ಅವರಣ್ಣನಿಗೂ ಒಮ್ಮೆ ಜಗಳವಾಗಿ ಕಾಡ್ಗಿಚ್ಚು ಹತ್ತಿತ್ತಂತೆ; ಆ ಅಣ್ಣ ನಿನ್ನ ಗುಡಿಯ ಹತ್ತಿರ ಇರುವುದಿಲ್ಲ ಎಂದು ಹೇಳಿ ಮೊದಲೇ ಒಂದು ಕಾಲಿಗೆ ಏಟಾಗಿದ್ದರಿಂದ್ದ ಒಂದೇ ಕಾಲಿನಿಂದ ಕುಂಟುತ್ತಾ ಬೇರೆಕಡೆ ಹೋಗಿ ನೆಲೆಯೂರಿದನಂತೆ;
- ಅವನು ನೆಲೆಯೂರಿದ ಸ್ಥಳಕ್ಕೆ 'ಕುಂಟಗುಡಿ' ಎಂದು ಕರೆಯುತ್ತಾರೆ.

ಕುಂಟಗೆಣಸು kuṇṭageṇasu :

- Dioscorea bulbifera (Dioscoreaceae); ಗೆಣಸಿನಲ್ಲಿನ ಒಂದು ಒಳ ಜಾತಿ; ಏರು ಬಳ್ಳಿಯಂತೆ ಬೆಳೆಯುವುದು; ಇದರ ಗೆಡ್ಡೆ ಆಹಾರವಾಗಿ ಬಳಕೆ; A sub species of sweet potato;
- = 'ಕುಂಟಗೆಣಸು' ಮತ್ತು ಅದರ ವ್ಯತ್ಯಯ ರೂಪವಾಗಿ 'ಹೆಗ್ಗೆಣಸು' ರೂಪಗಳನ್ನು ಗಮನಿಸಿದರೆ, ಕ್ರಮವಾಗಿ 'ಚಿಕ್ಕಗೆಣಸು' 'ದೊಡ್ಡಗೆಣಸು' ಎಂದು ಅರ್ಥ ಮಾಡಬೇಕಾಗುತ್ತದೆ; ಇದು ಹೊರನೋಟದ ಭಾಷಾಭಿವ್ಯಕ್ತಿಯನ್ನು ನೋಡಿದರೆ ಮಾತ್ರ ಕಾಣುಂಥದು; ಉಳಿದಂತೆ ಸಸ್ಯಶಾಸ್ತ್ರೀಯ ಪಾರಿಭಾಷಿಕ ವಿವರಣೆಯೇ ಮುಖ್ಯವಾಗುತ್ತದೆ. **ವ್ಯರೂ**: ಹೆಗ್ಗೆಣಸು.

ಕುಂಟ ತೆಣಿ kuṇṭateṇi :

ಕಿರುಜಗುಲಿ; ದೊಡ್ಡ ಜಗುಲಿಕ್ಕಿಂತ ಒಂದು ಅಡಿ ಚಿಕ್ಕದಾಗಿದ್ದು ಅಗಲವು ಸಹ ಕಡಿಮೆ ಇರುತ್ತದೆ; ಮನೆಯ ಮುಂದೆ ಇರುವುದರಿಂದ ಮನೆ ಅಂದವಾಗಿ ಕಾಣುವುದು; ಅಲ್ಲಿಯೇ ವ್ಯಾಪಾರ, ವ್ಯವಹಾರಗಳು ಸಹ ನಡೆಯುತ್ತವೆ. = ಕುಂಟ + ತೆಣಿ > ಕುಂಟು ತೆಣಿ = ಕಿರುಜಗುಲಿ. A short platform of a house where the transaction one going on in front of house.

ಕುಂಟ ಮಿಡಿತೆ kuṇṭa miḍite :

- ಒಂದು ಕಡೆ ನಿಲ್ಲದಿರುವಿಕೆ; ಸದಾ ಅತ್ತಿಂದಿತ್ತ ಇತ್ತಿಂದತ್ತ ಓಡಾಡುವುದು;
- ಮಿಡಿತೆ/ಮಿಡಿಚೆ/ಮಿಡತೆ.

ಕುಂಟ ಸಿಂಗ್ಯಾ kuṇṭa siŋgyā :

ಸಿಂಗಳೀಕ; 'black monkey'(ಕಿಟ್ಟೆಲ್); ನಾಯಿಯಷ್ಟೇ ಎತ್ತರ ಮುಂಗಾಲುಗಳು ಹಿಂಗಾಲಿಗಿಂತ ಗಿಡ್ಡವಾಗಿದ್ದು ಮುಖ ನಾಯಿಯನ್ನೇ ಹೋಲುವ ಪ್ರಾಣಿ; ಕಾಡಿನಲ್ಲಿ ವಾಸ ಮಾಂಸಹಾರಿ. A monkey resembles a dog which dwells in the forest as carnivorous.

ಕುಂಟಣಿ೧ kuṇṭaṇi[1] :

- ಕುಂಟಿಣಿ, ಕೂಟಣಿ, ಕುಟ್ಟನಿ, ಕುಂಟಲಿ ರೂಪಗಳೂ ಇವೆ;
- ವ್ಯಭಿಚಾರಕ್ಕಾಗಿ ಗಂಡು ಹೆಣ್ಣುಗಳನ್ನು ಹೊಂದಿಸುವ ದಾಸಿ; *ಪ್ರ*: 'ನೆಂಟರ ನರೆದಂತ ನಾರಿಯರರಿಯಾನೆ ಕುಂಟಣಿಯರ ಕುಲದೇವತೆ ನಾನು'(ಕರೀಭಂಟನ ಕತೆ); A woman who controls prostitutes and arranges clients for them by taking percentage of their earnings in return;
- ವ್ಯಭಿಚಾರ(ಸಂಗ್ಯಾಬಾಳ್ಯ);
- ತಲೆಹಿಡುಕಿ; ಸೂಳೆಗಾರಿಕೆ ಮಾಡುವವಳು (ಕ.ಜಾ.ಕೋ);

- ಅಕ್ರಮ ಸಂಬಂಧ ಜೋಡಿಸುವವ; *ಪ್ರ:* 'ಯಾವಾಗಿದ್ರೂ ಕುಂಟಲತನ ಮಾಡಾಕ ಹೊಂಚ ಹಾಕ್ತಾನು';
- ಮಸಾಲೆಪುಡಿ ಕುಟ್ಟುವ ಮರದ ತುಂಡು ಅಥವಾ ಸಾಧನ; *ಪ್ರ:* 'ಕುಂಟಣಿ ಎಲ್ಲೋಯ್ತ್?'(ಉ.ಜಿ);
- ***—ಕುಂಟಣಗಿತ್ತಿ/ಕುಂಟಲಗಿತ್ತಿ/ಕಂಟ್ಲಗಿತ್ತಿ*** : ಅಲ್ಲೊಂದು ಇಲ್ಲೊಂದು ಹೇಳುವವಳು; ಗಂಡು–ಹೆಣ್ಣಿನ ನಡುವೆ ಅನೈತಿಕ ಸಂಬಂಧ ಏರ್ಪಡುವಲ್ಲಿ ನೆರವಾಗುವವಳು; ಚಾಡಿಕೋರಿ(ಸಂಗ್ಯಾಬಾಳ್ಯಾ); ಇಬ್ಬರ ನಡುವೆ ಇರುವ ಗುಪ್ತಚಾರಿಣಿ; ತಲೆಹಿಡುಕಿ(ಯಾ.ಜಿ); *ಪ್ರ:* 'ವೈಕುಂಠಕ್ಕೆ ಹೋದರೂ ಕುಂಟಣಿಗಿತ್ತಿಯ ಉಪದ್ರ ತಪ್ಪಲಿಲ್ಲ'*(ಗಾ)*; 'ಕುಂಟಣಿಗಾಡಿಗೆ ಸಿಕ್ಕತಂತೆ ಎಂಟು ಬೀದಿ ಬಣ್ಣ'*(ಗಾ)*; A lady pimp who helps man and woman to get illegal relations between them;
- ***—ಕುಂಟಲತನ*** : ತಲೆಹಿಡುಕುತನ; ಸೂಳೆಗಾರಿಕೆ; Prostitution (n);
- ***—ಕುಂಟಣಿ ಮನೆ*** : ವೇಶ್ಯಗಾರಿಕೆ ನಡೆಯುವ ಮನೆ. Prostitution's house; A house where the prostitution is going on.

ಕುಂಟಣಿ² kuṇṭaṇi² :

ಮರದ ಸಾಧನ; ಮಡಿವಾಳರು ಬಟ್ಟೆಯ ನೆರಿಗೆ ತೆಗೆಯಲು, ಜಿಡ್ಡು, ನೊರೆ ತೆಗೆಯಲು ಬಳಕೆ; A wooden tool used by washer man to remove oil dirt etc;

—ಕುಂಟಣಿಪೂಜೆ : ನೂಲು ಹುಣ್ಣಿಮೆಯಲ್ಲಿ ಕುಂಟಣಿಗೆ ಜನಿವಾರ, ನಾಮ ಹಾಕಿ ಪೂಜೆ ಮಾಡುವ ಆಚರಣೆ; A ritual during a full moon night wearing holy thread and `naama' on fore head; *ವ್ಯದೂ:* ಕುಂಟಾಣಿ.

ಕುಂಟಾಟ kuṇṭāṭa :

ಮಕ್ಕಳ ಹೊರಾಂಗಣ ಆಟ; ವೃತ್ತಾಕಾರದ ಎರಡು ಗೆರೆ ಹಾಕಿ ಕುಂಟುವವಳು ಅಂದರೆ ಔಟ್ ಆದವಳು ಒಳ ವೃತ್ತದಲ್ಲಿ ಉಳಿದವರು ಹೊರ ವೃತ್ತದಲ್ಲಿ ಇದ್ದು ಜೂಟ್ ಹೇಳಿದಾಗ ಔಟ್ ಆದವಳು ಕುಂಟುತ್ತಾ ಹಿಡಿಯಬೇಕು; ಒಂದೇ ಕಾಲಿನಲ್ಲಿ ಕುಂಟಬೇಕು; ಕಾಲು ಬದಲಾಯಿಸಬಾರದು; ಒಬ್ಬರ ಮೇಲೆ ಕಣ್ಣಾಕುವಂತಿಲ್ಲ; ಎಲ್ಲರನ್ನು ಹಿಡಿಯಲು ಪ್ರಯತ್ನಿಸಬೇಕು; ಗೆರೆಯಿಂದ ಆಟಗಾರ ಹೊರ ಹೋದರೂ ಔಟ್; ಔಟ್ ಆದವಳು ಕುಂಟುತ್ತಾ ಹಿಡಿದವರು ಆಟವನ್ನು ಮುನ್ನಡೆಸುತ್ತಾರೆ; ಮೂರಕ್ಕಿಂತ ಹೆಚ್ಚು ಜನ ಆಟಗಾರರಿದ್ದರೆ ಆಟ ಚೆನ್ನಾಗಿರುತ್ತದೆ; *ವ್ಯದೂ:* ಗುಯ್ಯಾಟ. A play of children in circle; One girl limps and touches the others one who is touched by the limping girl is out of the circle. In this way it is going on till end of the last girl.

ಕುಂಟಾಣಿ kuṇṭāṇi :

- ಮಣ್ಣು ಅಗೆಯುವ ಸಾಧನ; ಕಳೆ ಮತ್ತು ಮಣ್ಣು ತೆಗೆಯುವುದಕ್ಕೆ ಬಳಸುವ ಹಾರೆ, ಪಿಕ್ಕಾಸು; ಎರಡೂವರೆ ಅಡಿ ಎತ್ತರದ ಕಾಲು ಅಡಿ ಅಗಲದ ಒಂದೂವರೆ ಅಂಗುಲ ದಪ್ಪವಿರುವ ಗುದ್ದಲಿಯಾಕಾರದ ಕಬ್ಬಿಣದ ಸಾಧನ(ಮಂ.ಜಿ/ತು.ಜಿ./ಹಾ.ಜಿ); A spade/shovel which is used to dig soil;
- ಒಂದೇ ಬದಿಯಲ್ಲಿ ಮೊನೆಯಿರುವ ಗುದ್ದಲಿ; *ಪ್ರ:* 'ಅಯ್ಯಬ್ಬಾ ಕುಂಟಾಣಿ ಶಾಲ್ ಮೇಲೆ ಬಿತ್ಸ್';
- ಹಾವಿನ ಹಾಗೆ ಕಾಣುವ ಗಿಡ್ಡವಾಗಿರುವ ಹೊಳಪಿನ ಮೈ ಹೊಂದಿರುವ ಸರೀಸೃಪ;

ಕುಂಟಾಲಪಿ/ಕುಂಟೆಬಿಲ್ಲೆ/ಕುಂಟಾಪಿಲ್ಲೆ

kuṇṭālapi/kuṇṭebille/kuṇṭāpille :

- ವಿಶೇಷವಾಗಿ ಹೆಣ್ಣುಮಕ್ಕಳ ಆಟ; ಕೆಲವೊಮ್ಮೆ ಚಿಕ್ಕಗಂಡು ಮಕ್ಕಳು ಆಡುವುದುಂಟು; A special game or play for girls and sometimes small boys are too playing this play;
- ಮಣ್ಣಿನ ನೆಲ ಅಥವಾ ಗಾರೆನೆಲ, ಬೀದಿ, ವಿಶಾಲಜಾಗವೇ ಆಟದ ವೇದಿಕೆ;
- ಸಣ್ಣಪಚ್ಚಿ, ನಾಡಂಚಿನ ಬಿಲ್ಲೆ, ಹೊಡೆದ ಮಡಕೆ ಚೂರಿನ ಬಕ್ರೆ, ಬರೆಯಲು ಕಡ್ಡಿ, ಸೀಮೆಸುಣ್ಣ, ಇದ್ದಿಲು ಆಟದ ಸಾಮಾಗ್ರಿಗಳು; Broken mud wrinkle pieces, small disc of native mud

tiles, chalk pieces and charcoal are the tools of games;

- ಎರಡು ಬದಿಯಲ್ಲಿ ೫+೫ ರಂತೆ ೧೦ ಮನೆ ಬರೆದು ಕಟ್ಟೆ ಮನೆಯನ್ನು X ಆಕಾರದಿಂದ ಗುರುತಿಸುತ್ತಾರೆ;
- ಆಟ ಆರಂಭಿಸುವವರು ಯಾರೆಂದು ತೀರ್ಮಾನಿಸಿದ ನಂತರ ಮೊದಲು ಬಲಗಡೆಯ ಮೊದಲ ಮನೆಗೆ ಪಚ್ಚಿ ಹಾಕಿ ಎಡಗಡೆಯಿಂದ ಕುಂಟುತ್ತಾ ಕಟ್ಟೆ ಮನೆಯಲ್ಲಿ ಕಾಲು ಬಿಟ್ಟು ವಿಶ್ರಮಿಸಿ ಮತ್ತೆ ಬಲಗಡೆ ಮನೆಯಿಂದ ಕುಂಟುತ್ತಾ ಸಾಗಿ ಬಂದು ಪಚ್ಚಿಯನ್ನು ಮನೆಯಿಂದ ಹೊರಗೆ ಒದೆಯಬೇಕು;
- ನಂತರ ಪಚ್ಚಿ ತುಳಿಯಬೇಕು;
- ಪಚ್ಚಿ ದೂರದಲ್ಲಿ ಬಿದ್ದಿದ್ದರೆ ಹೆಜ್ಜೆ ಕೂಡುವುದುಂಟು. ಹೆಜ್ಜೆಕೂಡುವುದೆಂದರೆ ಪಚ್ಚಿ ಮತ್ತು ಮನೆಯ ಮಧ್ಯಗೆರೆ ಎಳೆದು ಮೊದಲು ಗೆರೆ ಮೇಲೆ ನೆಗೆದು ನಂತರ ಪಚ್ಚಿ ತುಳಿಯಲು ಅವಕಾಶ ನೀಡುವುದು;
- ಮನೆ ಮುಗಿದ ನಂತರ ಕೈಯಾಟ, ಕಾಲಾಟ, ಕುಡಿಕೆ, ಮಡಿಕೆ, ಹಾವು, ಚೇಳು ಆಟಗಳೆಲ್ಲ ಮುಗಿದ ನಂತರ 'ಪಾಂಡಿಕಟ್ಟು' (ಮನೆಯನ್ನು ತನ್ನದೆಂದು ಕಟ್ಟಿಕೊಳ್ಳುವುದು)ವುದುಂಟು;
- ಪಚ್ಚಿಯನ್ನು ಮೊದಲ ಮನೆಯ ಮುಂದೆ ನಿಂತು ಕಟ್ಟೆ ಮನೆಯ ಆಚೆ ಎಸೆದು ನಂತರ 'ಪಾಂಡಿಕಟ್ಟು' ವವಳು ಕಣ್ಣು ಮುಚ್ಚಿ ತಲೆಯನ್ನು ಮೇಲಕ್ಕೆತ್ತಿ ಎಡಬಲ ಎರಡು ಕಡೆಗಳಿಗೂ ಒಂದೊಂದು ಕಾಲುಗಳನ್ನಿಟ್ಟು 'ಅಮಟೆ' ಎನ್ನಬೇಕು;
- ಕಾಲುಗೆರೆ ಮೇಲೆ ಇಲ್ಲದನ್ನು ಗಮನಿಸಿ ಇನ್ನೊಬ್ಬಳು 'ಎಸ್'(ಹೂಂ) ಎನ್ನಬೇಕು;
- ಹೀಗೆ ಎಲ್ಲ ಮನೆ ದಾಟಿ ಕಟ್ಟೆ ಮನೆಯಲ್ಲಿ ಕಣ್ಣು ಬಿಟ್ಟು ಪಚ್ಚಿ ಇರುವಲ್ಲಿಗೆ ನೆಗೆದು ಪಚ್ಚಿ ತುಳಿಯಬೇಕು;
- ನಂತರ ಪಚ್ಚಿಯನ್ನು ಕಟ್ಟೆಮನೆಯನ್ನು ಬಿಟ್ಟು ಬೇರೆ ಮನೆಗೆ ಕಾಲಿನಿಂದ ಒದ್ದು ಯಾವ ಮನೆಯಲ್ಲಿ ಪಚ್ಚಿ ಬೀಳುತ್ತದೆಯೊ ಆ ಮನೆಯನ್ನು ಪಾಂಡಿ ಕಟ್ಟುವರು;
- ಇದು ಆಕೆಯ ಸ್ವಂತ ಮನೆ; ಅಲ್ಲಿ ಆಕೆ ಕುಂಟುವುದನ್ನು ಬಿಟ್ಟು ವಿಶ್ರಮಿಸಿಕೊಳ್ಳಬಹುದು;
- ಇಲ್ಲಿ ಯಾರು ಹೆಚ್ಚು ಮನೆ 'ಪಾಂಡಿ' ಕಟ್ಟುತ್ತಾರೆಯೊ ಅವರು ಗೆದ್ದಂತೆ;
- ಹೀಗೆ ಆಟ ಮುಂದುವರೆಯುತ್ತದೆ; ಇದೊಂದು ಹೆಣ್ಣುಮಕ್ಕಳಿಗೆ ವ್ಯಾಯಾಮದಾಯಕವಾಗಿರುವ ಆಟವಾಗಿದೆ;
- ಗರ್ಭಕೋಶದ ಬೆಳವಣಿಗೆಗೆ, ಮೊಣಕಾಲು, ಹಿಮ್ಮಡಿ, ಎಲುಬು, ಕೀಲುಗಳಿಗೆ ವ್ಯಾಯಾಮ ನೀಡಿ ಶಕ್ತಿ ಒದಗಿಸುತ್ತದೆ.

ವ್ಯರೂ: ಲಂಗ್ಡಿಆಟ, ಕುಂಟ್ಲಿಪಿ (ಬೀ.ಕ.ಕೋ).

ಕುಂಟಿ kuṇṭi :

- ನೇಕಾರ ವೃತ್ತಿಯಲ್ಲಿ ಅದರದೇ ಆದ ಪಾರಿಭಾಷಿಕ ರೂಪಗಳಿವೆ; ಕೆಲವೊಮ್ಮೆ ಸಾಮಾನ್ಯ ಪದಗಳ ಸದೃಶವೆನಿಸಿದರೂ, ಅರ್ಥಮಾತ್ರ ಬೇರೆಯಾಗಿರುತ್ತದೆ; ಆದ ಕಾರಣ ವೃತ್ತಿ ಪದಗಳ ವಿಶ್ಲೇಷಣೆ ವಿಶೇಷವಾಗಿ ಸ್ವೀಕರಿಸಬೇಕು; ಅಂತಹ ವೃತ್ತಿ ಪದಗಳಲ್ಲಿ 'ಕುಂಟಿ' ಕೂಡ ಒಂದು; ಈ ಪದ ಸ್ತ್ರೀವಾಚಿಕ ಅರ್ಥವನ್ನು ನಿರಾಕರಿಸಿ, ನೇಕಾರ ವೃತ್ತಿಯ ಅರ್ಥವನ್ನೇ ಹೊಂದಿರುತ್ತವೆ; ಮುಖ್ಯವಾಗಿರುತ್ತದೆ; A wooden log; A looming tool which is used to uncover the weaved woolen blanket;
- ಕಂಬಳಿ ಮಗ್ಗದ ಒಂದು ಉಪಕರಣ; ನೇಯ್ಗೆಗೊಂಡ ಕಂಬಳಿಯನ್ನು ಇದಕ್ಕೆ ಸುತ್ತುತ್ತಾರೆ; ಇದೊಂದು ಸಪೂರವಾದ ಕೊರಡು(ಚಿ.ಪ.ಕೋ);
- ***—ಕುಂಟಿಕುತ್ತಾ*** : ಕುಂಟಿ ಚಕ್ರ ಹಿಂದೆ ಹೋಗದಂತೆ ಹಲ್ಲಿಗೆ ಅಡ್ಡ ಬರುವ ಕಬ್ಬಿಣದ ಪಟ್ಟಿ (ನೇ.ವೃ.ಪ.ಕೋ); A soften knout; An iron bar which turns in the opposite direction of gearwheels;
- ***—ಕುಂಟಿ ಗೂಟ*** : ಕುಂಟಿ ಮರವನ್ನು ತಿರುಗಿಸಲು ಬಳಸುವ ಮರದ ಪಟ್ಟಿ(ನೇ.ವೃ.ಪ.ಕೋ); A wooden band which is used to turn hand loomed wooden log;
- ***—ಕುಂಟಿ ಅಣ್ಣು/ಕುಂಟಿ ಅಣ್ಣು*** : ಕುಂಟಿ ಮರದ ಎರಡು ಕಡೆಯ ತುದಿಗೆ ಅಳವಡಿಸಿರುವ ಕಬ್ಬಿಣದ ಅಥವಾ ಮರದ ಬೆಣೆ; ಇದನ್ನು ಗೂಟದೊಳಗೆ ಸಿಕ್ಕಿಸಲಾಗುತ್ತದೆ(ನೇ.ವೃ.ಪ.ಕೋ)(ಬೆಂ.ಗ್ರಾ.ಜಿ); A wooden wedge or iron wedge of the both sides of hand looming log;

- *—ಕುಂಟಿ ಚಕ್ರ* : ಕುಂಟಿ ಮರಕ್ಕೆ ಸೇರಿಸಿರುವ ಕಬ್ಬಿಣದ ಹಲ್ಲುಗಳಿರುವ ಚಕ್ರ(ನೇ.ವೃ.ಪ.ಕೋ). An adopted wheel of iron gears of hand looming log. A dentigerous iron wheel.

ಕುಂಟಿ ಹರಿ kuṇṭi Hari :

ಸಾವಿಗೆ ಸಂಬಂಧಿಸಿದ ಆಚರಣೆ; ಗೌಡ ಸಮುದಾಯದಲ್ಲಿ ಹೆಣಕ್ಕೆ ಹೊದಿಸಿದ ಬಟ್ಟೆಗಳಲ್ಲಿ ಒಂದನ್ನು ತೆಗೆದು ಅಡ್ಡಲಾಗಿ ಹರಿದು ತುಂಡುಗಳನ್ನೆಲ್ಲ ಸೇರಿಸಿ ಮಾಲೆಯಂತೆ ಮಾಡಿ ಮೃತನ ಸಂಸ್ಕಾರದ ಹೊಣೆ ಹೊತ್ತವನ ಕೊರಳಿಗೆ ಹಾಕುವುದು. A funeral ritual of Gowda community.

ಕುಂಟಿಗನ ಬಳ್ಳಿ kuṇṭiganabaḷḷi :

Daemia extensa or Pergularia daemia(Apocynaceae); ಒಂದು ಬಗೆಯ ಔಷಧೀಯ ಬಳ್ಳಿ; ದನಗಳ ಶರೀರದ ಮೇಲೆ ಬೆಳೆಯುವ ಗಡ್ಡೆಗಳ ಊತ ನಿವಾರಣೆಗೆ ಬಳಕೆ(ಬೀ.ಕ.ಕೋ). A kind of medicinal Vine; A species of climbing plant which is used to heal swelling tumours.

ಕುಂಟ್ರಿ kuṇṭri:

ನೆಲ ಮಟ್ಟಕ್ಕಿಂತ ಎತ್ತರದ ಜಾಗ; ಸಣ್ಣ ಕಾಡಿನಿಂದ ನಿರ್ಮಿತ ಪ್ರದೇಶ. A height place form the level ground; A small conservative/ developed forest.

ಕುಂಟು kuṇṭu :

- ಅನನುಕೂಲ; ಉದ್ದೇಶಿತ ಕೆಲಸಕ್ಕೆ ತಡೆಯಾಗು; Disadvantage; An obstacle to a decided work; *ಪ್ರ:* 'ಇವತ್ತಿನ ಕೆಲಸವೆಲ್ಲ ಕುಂಟಿತು' (ಚಿ.ಪ.ಕೋ);
- ಬಟ್ಟೆ; ವಸ್ತ್ರ; ಉಡುಪು(ತು.ನಿ); cloth , dress;
- ಗಿಡ್ಡ; ಮೋಟ; ಒಂದೇ ಕಾಲಿನ ಮೇಲೆ ದೇಹದ ಭಾರ ಹಾಕಿ ನಡೆಯುವುದು. Dwarf. Short.

ಕುಂಟು ಕೊಡು kuṇṭukoḍu :

ವಸ್ತುಗಳು ಅಲ್ಲಾಡದಂತೆ ಅವುಗಳ ತಳಭಾಗದಲ್ಲಿ ಕಿರು ವಸ್ತುಗಳನ್ನು ಆಧಾರವಾಗಿ ನೀಡುವ ಕ್ರಮ; A wedge which is used to put under the things to make them stable or unshakable; *ವ್ಯದೂ:* ಕುಂಟಿಬೆಣೆ.

ಕುಂಟು ನಾಲಿಗೆ kuṇṭu nālige :

ಕಿರುನಾಲಿಗೆ(ಕೊ.ಜಿ) (ಕುಂಟು=ಕಿರು); *ಪ್ರ:* 'ಕುಂಟು ನಾಲಿಗೆ ಕೆಂಪಾಗುಟು'. Uvula; A fleshy part of the soft palate which hangs above the throat.

ಕುಂಟು ಪುಡಿ kuṇṭu puḍi :

- ಚರ್ಮರೋಗ; ಸೊಂಟದ ಸುತ್ತ ಬಟ್ಟೆ ತೊಡುವ ಜಾಗದಲ್ಲಿ ಬರುವ ಕಜ್ಜಿ; Scab; A skin-disease caused by a fungus around the waist;
- ಮೇಹರೋಗ(ತು.ನಿ).

ಕುಂಟು ಪುಲಿ kuṇṭu puli :

ಕಣ್ಣಿನ ಕೋಡಲ್ಲಿ ಇರುವ ಸುಳಿ. A swirl.

ಕುಂಟುದ ನೂಲು kuṇṭuda nūlu :

ಮಲೆಕುಡಿಯರು ಮದುವೆಯ ಸಂದರ್ಭದಲ್ಲಿ ಬದಲಾಯಿಸಿಕೊಳ್ಳುವ ಬಟ್ಟೆಯ ನೂಲಿನ ಹಾರ (ತು.ನಿ). The thread garland that has to be exchanged by the Malekudiyas- the primitive tribe of the Western Ghats in their marriage ceremony.

ಕುಂಟುಬೀಳು kuṇṭubīḷu :

ಎತ್ತಿನ ಕಾಲು ಮುಳುವು ಬಿಡುವಿಕೆ; ನರ ತೊಡಕುವಿಕೆ; ಉಳುಕುವಿಕೆ. A twist of the leg nerve of cattle's leg.

ಕುಂಟೆ೧ kuṇṭe[1] :

- ಕಂಬಳಿ ನೇಯುವಾಗ ನೇಯ್ದ ಕಂಬಳಿಗೆ ಸುತ್ತಲ್ಪಟ್ಟ ಮರದ ದಿಂಡು;
- ಇದಕ್ಕೆ ಮರದಿಂದ ಮಾಡಿದ ೬ ಹಲ್ಲುಗಳು ಇರುತ್ತವೆ;
- ಇವನ್ನು ಕುಂಟೆಗೆ ಬರಲು ಇಟ್ಟು, ಬರಲಿಗೆ ಎಣ್ಣೆ ದಾರ ಸುತ್ತುತ್ತಾರೆ.
- ಕಂಬಳಿ ನೇಯ್ಗೆಯಲ್ಲಿ ಕಂಬಳಿ ಮಗ್ಗದ ಒಳಗಿರುವ ೪X೪ ಅಂಗುಲದ ಚೌಕಟ್ಟಾದ ೫ ಅಡಿ ಉದ್ದ

ಮರದ ತಿರುಗುವ ಸಾಧನ(ತು.ಜಿ); A rotating loom log of 5 feet and 16 inches squared of the blanket hand loom;

- ನೇಯ್ದ ಬಟ್ಟೆಯನ್ನು ಸುತ್ತುವ ಮರದ ಸಾಧನ; ಕುಂಟಿ ಮರ(ನೇ.ವ್ಯ.ಪ.ಕೋ);
- ಮಗ್ಗದವರಲ್ಲಿನ ಒಂದು ಪಂಗಡ;
- *—ಕುಂಟೆ ಬಿಲ್ಲೆ* : ಮಗ್ಗದ ಸಲಕರಣೆ(ರಾಮ.ಜಿ); A looming equipment which is used in hand looming complex;
- *—ಕುಂಟೆ ಮರದ ಕಂಬಿ* : ಹಾಸನ್ನು ಸಿಕ್ಕಿಸಿರುವ ಕುಂಟೆಯ ಮರದ ಒಳಗೆ(ದೋಣಿಯೊಳಗೆ) ಸೇರಿಸುವ ಕಂಬಿ ಅಥವಾ ಕಬ್ಬಿಣದ ಸರಳು(ನೇ.ವ್ಯ.ಪ.ಕೋ); An iron rod which connects the looming log and a flat piece of wood;
- *—ಕುಂಟೆದೋಣಿ/ಕುಂಟೆ ಕಂಬಿ* : ಸೀರೆಯ ಪ್ರಾರಂಭದ ತುದಿ ಸಿಕ್ಕಿಸಲು ಕುಂಟೆ ತೊಲೆಯ ಒಂದು ಬದಿಯಲ್ಲಿ ಅಡ್ಡವಾಗಿ ಕೊರೆದ ಒಂದು ಅಂಗುಲ ಆಳದ ತಗ್ಗು(ಬೆಂ.ಗ್ರಾ.ಜಿ); An inch of hallow pit of an hand loomed log which is used to hook the beginning edge of a saree;
- *—ಕುಂಟೆಬೆಣೆ* : ಮಗ್ಗದ ಕುಂಟೆ ತಿರುಗಿಸಲು, ಹಾಸು ಬಿಗಿಯಾಗಿ ನಿಲ್ಲಲು ಬಳಸುವ ಮೊಳದುದ್ದದ ಮರದ ಪಟ್ಟಿ(ಬೆಂ.ಗ್ರಾ.ಜಿ); A wedge; A wooden wedge that is used to turn looming stable.
- *—ಕುಂಟೆಗೂಟ* : ಕುಂಟೆಯನ್ನು ಜೋಡಿಸಲು ಮಗ್ಗದ ಗುಣಿಯ ಎರಡೂ ಪಕ್ಕ ನೆಟ್ಟ ಮರದ ಆಧಾರಪೀಠ(ಬೆಂ.ಗ್ರಾ.ಜಿ). The anchor seat of wood which connects looming log and the hand weaving pit.

ಕುಂಟೆ೨ kuṇṭe[2] :

- ಕನ್ನಡ ಮತ್ತು ತಮಿಳುಗಳಲ್ಲಿ ಪದಾದಿಯ 'ಕ'ಕಾರ ಹಾಗೆಯೇ ಇದೆ; ತೆಲುಗಿನಲ್ಲಿ ಮಾತ್ರ 'ಹ' ಕಾರವಾಗಿದೆ; ಸಮಾಸ ನಿಯಮವಿದೆ;
- ವ್ಯವಸಾಯ ಸಾಧನ; ಕಳೆಯನ್ನು ಹೊಲದಿಂದ ತೆಗೆಯಲು ಬಳಕೆ; A tool of agriculture;
- ಬೆದೆಯಿರುವ ಪೈರನ್ನು ತೆಳು ಮಾಡಲು ಬಳಸುವ ಸಾಧನ; A plough which helps to remove weeds;
- ಒಣ ಬೇಸಾಯದಲ್ಲಿ ನೆಲ ಹರಗಲು, ಹದ ಮಾಡಲು, ಮಣ್ಣು ತಳ ಮೇಲಾಗಿಸಲು, ಸಾಲು ಬಿತ್ತನೆ ಪೈರಿನ ನಡುವೆ ಕಳೆ ತೆಗೆಯಲು; A tool which is used to turn over and cut furrows in the soil especially in dry land farming;
- ಬುಡ ಸಡಿಲ ಮಾಡಿ ಮಣ್ಣು ಒತ್ತರಿಸಲು;
- ಬಿತ್ತನೆ ಪೈರಿನ ಬೆದೆ ಹೊಡೆಯಲು ಬಳಕೆ;
- ಕಬ್ಬಿಣದಿಂದ ತಯಾರಿಸಿದ್ದು ೨-೪-೬-೮ ಹಲ್ಲುಗಳಿಂದ ಕೂಡಿದ ಹಲವು ಬಗೆಗಳಿವೆ;
- ಆಯಾ ಬೆಳೆಗೆ ಹೊಂದಿಕೆಯಾಗುವ ಕುಂಟೆಯನ್ನು ಬಳಸುವರು;
- ಕುಂಟೆ ಹೊಡೆಯಲು ಅನುಭವವುಳ್ಳ ಸೂಕ್ಷ್ಮ ಸಂವೇದನೆಯುಳ್ಳ ವ್ಯಕ್ತಿ ಬೇಕು;
- ಆತ ಎತ್ತುಗಳನ್ನು ಬಲಗೈಯಿಂದ ನಿಯಂತ್ರಿಸಿ ಹಿಡಿಯನ್ನು ಅಗತ್ಯವಿರುವೆಡೆ ಊರಬೇಕು, ಬೇಡವಾದೆಡೆ ಸರಿಸಬೇಕು, ಪೈರು ಮಂದ/ ಬೆದೆಯಿರುವ ಕಡೆ ಮತ್ತು ಕಳೆಯಿರುವ ಕಡೆಗೆ ತಿರುಗಿಸಿ ಹೊಡೆಯುವ ಬಗೆಯ ಅರಿವಿರಬೇಕು;
- ಪೈರುಗಳಿಗೆ ಹೆಚ್ಚು ಹಾನಿಯಾಗದಂತೆ ಕಾರ್ಯ ನಿರ್ವಹಿಸಬೇಕು;
- *—ಐಗೇಣಿನ ಕುಂಟೆ* : ಖಾಲಿ ಹೊಲವನ್ನು ಹರಗಿ ಹದಗೊಳಿಸಲು ಉಪಯೋಗಿಸುವ ಐದುಗೇಣುದ್ದದ ಕೊರಡನ್ನು ಹೊಂದಿದ ಉಪಕರಣ. A plough of five span stump of wood that is used to fertile and cultivate soil;
- *—ತೆರಪಿನ ಕುಂಟೆ* : ಬೆಳೆಯನ್ನು ಕೊಯ್ದು ಆದ ಅನಂತರ ಹೊಲ ಹರಗಲು ಉಪಯೋಗಿಸುವ ಕುಂಟೆ. A plough which is used to cultivate fields after harvesting crops;
- *—ನಾಗೇಣಿ ಕುಂಟೆ* : ನಾಲ್ಕು ಗೇಣುದ್ದದ ಕುಂಟೆ. A plough of 4 span stump of wooden planks;
- *—ಕುಡುಗುಂಟೆ* : ನೇಗಿಲಿನಿಂದ ಉಳುಮೆ ಮಾಡಿದ ಭೂಮಿಯನ್ನು ಅರಗಲು ಬಳಸುವ ದೊಡ್ಡಕುಂಟೆ,

ಅರಿತೆ ಕುಂಟೆ(ಚಿಕ್ಕ.ಜಿ); ತು: ಕುಂಟೆ, ತೆ: ಗುಂಟಕ, ಗುಂಟಿಕ, ಗುಂಟಿಕೆ, ಗುಂಟಿಕಿ, ತ: ಕುಣ್ಟೆ; A large and huge plough which is used after cultivating the land by a small plough;

- ***—ಕುಂಟೆ ಈಚು*** : ಬೇಸಾಯದಲ್ಲಿ ಬಳಸುವ ಒಂದು ಉಪಕರಣ(ಬ.ಜಿ); A tool that is a lengthy log of the plough;
- ***—ಕುಂಟೆ ಬಳೆ*** : ಕುಂಟೆಯ 'ಕುಳು' ಹಾಳಾಗದಿರಲು ಅದರ ತುದಿಗೆ ಕಬ್ಬಿಣದ ೪ ಇಂಚು ಉದ್ದದ ತೆಳ್ಳನೆಯ ಬಳೆ ಹಾಕುವುದು; A four inch iron ring which is tightened at the mouth of stump of wood of the plough;
- ***—ಕುಂಟೆ ವರ್ಜೆ*** : ಕುಂಟೆ ಹೊಡೆಯಲು ಬಳಸುವ ದಪ್ಪನೆಯ ಹಗ್ಗ; A thick rope of a plough which is used to tighten the plough while cultivating the land;
- ***—ಕುಂಟೆ ತಾಳು/ಕುಂಟೇತಾಳು*** : ಕುಂಟೆಗೆ ಬಳಸುವ < ಆಕಾರದ ಕಬ್ಬಿಣದ ತಾಳು(ಪಾಂ.ವ್ಯ.ಪ.ಕೋ); ಕುಡವನ್ನು ಕುಂಟೆಗೆ ಜೋಡಿಸಲು ನೆರವಾಗುವ ಮರದ ನಾಲ್ಕಿಂಚು ಗಾತ್ರದ ಒಂದು ಅಡಿ ಉದ್ದದ ಮರದ ತುಂಡುಗಳು(ಮೈ.ಜಿ); ವ್ಯರೂ: ಕುಂಟಿಬುಂಡೆ. The four inch sized, and one inch lengthy wooden stumps which are connected to a plough;
- ***—ಕುಂಟೆ ದಿಂಡ*** : ಎರಡು ಕಟ್ಟಿಗೆಯ ಕಾಲುಗಳುಳ್ಳ ಉಳುವ ಸಾಧನ(ಕಲ.ಜಿ); ಬಿತ್ತಿದ ನಂತರ ಸಾಲು ಕಲೆಸುವ, ಹೊಲಹರಗಿ ಪದಮಾಡಲು ಬಳಕೆ; a cultivated tiller which is used to plain sowed lines of the land;
- ***—ಕುಂಟೆ ಹರಗು*** : ರೈತರ ಕೃಷಿ ಉಪಕರಣ; A agricultural tool of farmers;
- ***—ಕುಂಟೆ ಕೋಲು*** : ಕುಂಟೆ ನಡೆಸಲು ಮೇಣಿಯೊಂದಿಗೆ ಬಳಸುವ ಕೋಲು; ಎಡೆಕುಂಟೆ, ಬಿತ್ತನೆ ಕುಂಟೆಗಳನ್ನು ಹೊಡೆಯುವಾಗ ಬಲಭಾಗದ ಕುಂಟೆಯ ದಿಂಡಿನ ಮೇಲೆ ಒಂದು ಕುಳಿಯನ್ನು ಮಾಡಲಾಗಿದ್ದು ಅದರಲ್ಲಿ ಈ ಕೋಲನ್ನು ಇಟ್ಟುಕೊಂಡು ಕುಂಟೆ ಮೇಲೆ ಭಾರವನ್ನು ಬಿಟ್ಟಾಗ ಕುಂಟೆ ಸರಿಯಾಗಿ ನೆಲವನ್ನು ಹಾಯುತ್ತದೆ; ಅದಕ್ಕಾಗಿ ಬಳಸುವ ಕೋಲು(ಮಂಡ್ಯ.ಜಿ); A sturdy stick which is used with `Meṇi'-a prime part of any plough as a supporter to till the plough between the sowed lines;
- ***—ಕುಂಟೆ ಚಿಪ್ಪು*** : ರಾಗಿ ಪೈರು ದಪ್ಪವಾಗಿದ್ದಾಗ ಸಾಲಿನಲ್ಲಿ ಈ ಚಿಪ್ಪು ಅಥವಾ ತಾಳು ಇರುವ ಕುಂಟೆ ಬಳಕೆ(ತು.ಜಿ). A piece of rake/ a tool of a plough; A tool of a plough that used to thin the thick line of Ragi/millet's plants.

ಕುಂಟೆ೩ kuṇṭe³ :

- ನೀರಿನ ಕುಂಟೆ; ನೀರು ನಿಲ್ಲುವ ಕುಳಿ; ಕಟ್ಟೆ; A small water storage pond; A place of water storage;
- ಎತ್ತರವಾದ ಪ್ರದೇಶದಲ್ಲಿ ತಾತ್ಕಾಲಿಕವಾಗಿ ಕಟ್ಟೆಯನ್ನು ಕಟ್ಟಿ ನೀರನ್ನು ತುಂಬಿಸಿ ಬೆಳೆಗೆ ಬೇಕೆನಿಸಿದಾಗ ಹಾಯಿಸಿಕೊಳ್ಳುವ ಕ್ರಮ(ಕೋ.ಜಿ); A wall or bank built across a small rivers water flows, lakes creaters;
- ಮರದ ಕೊರಡು; ಅಂಕುಡೊಂಕಾದ ಮರದ ತುಂಡು; A wooden knout; A crooked wooden knout;
- ಭೂಮಾಪನದ ಒಂದು ಪರಿಭಾಷೆ; ಒಂದು ಎಕರೆಯ ೧/೪೦ ಭಾಗ ೩೩X೩೩ ಅಡಿ ವಿಸ್ತೀರ್ಣದ ಅಳತೆ; A revenue term of land measurement;
- ಕೂಟೆ, ಒಡನೆ, ಜೊತೆಯಲ್ಲಿ(ಶಿ.ಜಿ);
- ಕಾಡಿನಲ್ಲಿಯ ಚಿಕ್ಕಪುಟ್ಟ ಪ್ರಾಣಿಗಳನ್ನು ಹಾಗೂ ಪಕ್ಷಿಗಳನ್ನು ಆಹಾರಕ್ಕಾಗಿ ಹಿಡಿಯಲು ಹಳ್ಳಿಗರು ಬಳಸುವ ಒಂದು ತಂತ್ರ; A technique of catching tiny/small animals and birds by villagers in the nearby forest;
- ಹಂಪಿನಲ್ಲಿ ಬೆಂಕಿ ಹಾಕಲು ಬಳಸುವ ಮರದ ತುಂಡು;
- ಬೇಲಿ ಹಾರದೆ ಇರಲೆಂದು ದನಗಳಿಗೆ ಕಟ್ಟುವ ಮರದ ದಿಂಡು;
- ಬೇಲಿಗೆ ನುಗ್ಗುವ ಹೋರಿಗಳನ್ನು ನಿಯಂತ್ರಿಸಲು ಕೊರಳಿಗೆ ಹಗ್ಗದಿಂದ ಕಟ್ಟುವ ಮರದ ಕೊರಡು

(ಬೇ.ಸಾಂ.ಪ.ಕೋ); A tied wooden knout of cattle not to cross the fencing;

- ದ್ರಾವಿಡ ಭಾಷೆಗಳಲ್ಲಿ: ತಮಿ: ಕುಟ್ಟಮ್, ಮ: ಕುಂಡಿಮ್, ತುಳು: ಕುಂಡ, ತೆಲು: ಕುಂಟ, ಗುಂಟ;
- *—ಕುಂಟೆ ಕಟ್ಟು/ಕುಂಟೆ ಕಟ್ಟು* : ದನ ಓಡದಂತೆ ಕುತ್ತಿಗೆಗೆ ಕಟ್ಟಿದ ಮರದ ತುಂಡು; ಇದರಿಂದ ದನ ನಿಯಂತ್ರಣ ಸಾಧ್ಯ(ಉ.ಕ.ಜಿ); ಮದುವೆ ಮಾಡು (ಉ.ಕ.ಜಿ). A wooden core/knout that is used to tied cattle to control their running or else; To do marriage.

ಕುಂಟೆ ಕಿನ್ನಡಿ kuṇṭe kinnaḍi :

ಒಂದು ಬಗೆಯ ವಾದ್ಯ; ಚಿಕ್ಕ ಕಿನ್ನರಿಯ ರೂಪದಲ್ಲಿದ್ದು ಹಾಡುಗಾರಿಕೆಯಲ್ಲಿ ಬಳಕೆ; ನೋಡಿ : ಕಿನ್ನರಿ. A musical instrument; A kind of small musical string instrument-Psaltery.

ಕುಂಟೆ ಕ್ವಾಣ kuṇtekvāṇa :

ಅಂಕೆ ಇಲ್ಲದಂತೆ ಇರುವುದು; ಬೇಕಾಬಿಟ್ಟಿಯಾಗಿ ಜವಾಬ್ದಾರಿ ಇಲ್ಲದೆ ಬೆಳೆದವ; *ಪ್ರ:* 'ದಡ್‌ಕುಂಟೆ ಕ್ವಾಣನ ಕೊಡೆಗೆ ಇದ್ದ'(ಮಂ.ಜಿ). An irresponsible person; A person who has born and brought up without responsibility.

ಕುಂಟೆಲ್ kuṇṭel :

ಎತ್ತು, ಆಡು, ಕುರಿಗಳ ಕಾಲಿನ ಕೊಳಗ ಅಥವಾ ಗೊರಸಿಗೆ ತಗಲುವ ರೋಗ; ಜ್ವರ ಮತ್ತು ನಿತ್ರಾಣಗೊಳ್ಳುವಿಕೆ, ಬಾವು, ಕೀವು, ಹುಳ ಬೀಳುವುದು ಈ ರೋಗದ ಲಕ್ಷಣ; ಮಳೆಗಾಲದಲ್ಲಿ ಕಾಲು ಸೆಲೆತು ಈ ರೋಗ ಉಂಟಾಗುತ್ತದೆ; ಇದಕ್ಕೆ ತಂಬಾಕು ಎಲೆ, ಸುಣ್ಣದ ಮಿಶ್ರಣವನ್ನು ನೀಲಗಿರಿ ತೈಲವನ್ನು ಔಷಧಿಯಾಗಿ ಬಳಸುತ್ತಾರೆ; ಕೆಲವೊಮ್ಮೆ ಈ ರೋಗದಿಂದ ದನಗಳು ಚೇತರಿಕೆ ಕಾಣದೆ ಸಾವನ್ನಪ್ಪುವುದು ಇದೆ. A disease which affects the hooves of cattle, sheep, goats etc; Sometimes it becomes a deadly disease of cattle.

ಕುಂಟೆ ಹುಲ್ಲು kuṇṭe hullu :

- ಮಗ್ಗದಿಂದ ನೇಯುವಾಗ ಒಂದನ್ನೊಂದು ಎಳೆ ಕುಳಿತುಕೊಳ್ಳಲು ಉಪಯೋಗಿಸುವ ಕಡ್ಡಿ;
- ಇದನ್ನು ಉತ್ತರಕರ್ನಾಟಕದಲ್ಲಿ 'ಹೊಂಕಳ ಕಟ್ಟಿಗೆ' ಹುಲ್ಲು ಎನ್ನುತ್ತಾರೆ.

ಕುಂಟ್ಹಿಡಿ kuṇṭhiḍi :

ಸಣ್ಣಪೊರಕೆ; ಹಿಡಿಸೂಡಿ; ಕಸಪೊರಕೆ; ನೆಲದಲ್ಲಿನ ಕಲ್ಲು ಹಾಸಿನ ನಡುವಿನ ಕಸ ತೆಗೆಯಲು ಬಳಕೆ(ಕಲ.ಜಿ). A small broom stick that is used to remove dirty on the stone floor.

ಕುಂಡ kuṇḍa :

- ಮಡಕೆ; ಗಡಿಗೆ; ಮಣ್ಣಿನ ಪಾತ್ರೆ; ಕುಂಡಾಲೆ ಹೂವಿನ ಕುಂಡ; ಮೇಲ್ಭಾಗ ಅಗಲವಾದ ಬಾಯುಳ್ಳದ್ದಾಗಿದ್ದು ತಳಭಾಗ ಕಿರಿದಾಗಿರುವುದು; ಇದರಲ್ಲಿ ಮಣ್ಣು, ಗೊಬ್ಬರ ತುಂಬಿ ಹೂವಿನ ಗಿಡಗಳನ್ನು ಬೆಳೆಸುತ್ತಾರೆ; Urn, pot, pitcher; Flower vase;
- ತಗ್ಗು; ಕುಳಿ; ಹೊಂಡ; ಸರೋವರ; ಕೊಳ; ಕೆರೆಕುಂಟೆ ಇತ್ಯಾದಿ; ನೀರನ್ನು ಸಂಗ್ರಹಿಸಿ ಬೇಕಾದಾಗ ಬಳಸುವುದಕ್ಕಾಗಿ ನಿರ್ಮಿತ ಸ್ಥಳ; Lake, pit; Deep pit; Water pit;
- ಕುರುಡ; ದೃಷ್ಟಿಹೀನ; ಕಣ್ಣುಕಾಣದವನು; *ಪ್ರ:* 'ಕುಂಡ ಅಟ್ಟ ಮೂಗ ಉಂಡ'*(ಗಾ)*; ಕುಂಡ ದೊಂಬ ದೋಳು ಬಾರಿಸಿದ ಹಾಗೆ(ಗಾದೆ); Blind; Visually impaired;
- ಕರಿದ ಒಂದು ಬಗೆಯ ವ್ಯಂಜನ ಪದಾರ್ಥ(ಕಲ.ಜಿ);
- ಕುಣಿ: ವಿಶೇಷವಾಗಿ ಹೋಮಕಾರ್ಯ ನೆರವೇರಿಸಲು ತೋಡಿದ ಗುಳಿ; Holy fire place or holy pit of HOMA- YAGNA- YĀGA;
- ಹೊಟ್ಟೆ; ಉದರ; Stomach;
- ಹಾದರಕ್ಕೆ ಹುಟ್ಟಿದ ಮಗ. A son of prostitution/ A son of bitch.

ಕುಂಡಂಕೋರಿ kuṇḍamkōri :

- ನೀರುಕೋಳಿ(ತು.ನಿ); ನೀರಿನಲ್ಲಿ ವಾಸಿಸುವ ಕೋಳಿ; ಕಪ್ಪು ಬಣ್ಣ; A water fowl cock hen which dwells in water/ lake/pond

- ಕೋಳಿ ಕಾಲಿಗಿಂತ ಉದ್ದವಾದ ಕಾಲುಗಳನ್ನು ಹೊಂದಿರುವ ಕೋಳಿ; It has longer legs than ordinary hen/cock;
- ಇದನ್ನು ಅಲೆಮಾರಿ ಜನರು ಆಹಾರವಾಗಿ ಬಳಸುತ್ತಾರೆ; The migrating community use this as their food;
- ಇದರ ಮೊಟ್ಟೆಯನ್ನು ಕೆಮ್ಮಣ್ಣಿನಲ್ಲಿ ಇಟ್ಟು(ಮಣ್ಣು ಕಲಸಿ ಮೊಟ್ಟೆಗೆ ಹಚ್ಚಿ) ಬೇಯಿಸಿ ತಿನ್ನುವರು.

ಕುಂಡಂಗೇರ್ kuṇḍamgēr :

- ಯಕ್ಷಗಾನದಲ್ಲಿ ಕೋಡಂಗಿಯಂತೆ 'ಸರ್ಪಕೋಲ' ದಲ್ಲಿ ಬರುವ ಪಾತ್ರಧಾರಿ; A clown like character of a drama–Yakshagana appeared in sarpakola-Ophilatory ritual of South Kannada
- ಈತ ಕೋಡಂಗಿಯಂತೆ ವಿಭಿನ್ನ ವೇಷ ಭೂಷಣಗಳನ್ನು ಧರಿಸುವುದುಂಟು(ದ.ಕ);
- ಕುಂಡಂಗೇರ್: ಸರ್ಪಕೋಲ; ದಕ್ಷಿಣಕನ್ನಡ, ಕಾಸರಗೋಡು ಪರಿಸರದಲ್ಲಿ ನಡೆಯುವ ಆಚರಣೆ;
- ಬಾಕುಡ ಸಮುದಾಯದವರು ನಡೆಸುವ ಸರ್ಪಾರಾಧನೆ; ಐದುನೂರ ಎಪ್ಪತ್ತೇಳು ಹೆಡೆಯ ಸರ್ಪವನ್ನು ಪೂಜಿಸುವ ವಿಧಿ; This ritual is being protected in Baakuda- a community habituated around south canara and kasaragode of kerala;
- ಇಡೀ ರಾತ್ರಿ ನಡೆಯುವ ಆಚರಣೆ;
- ಯಕ್ಷಗಾನದ ಕೋಡಂಗಿಯನ್ನು ಹೋಲುವ ಎರಡು ಹಾಸ್ಯ ಪಾತ್ರಗಳ ಸಂಭಾಷಣೆ ಜರುಗುತ್ತದೆ; ಆ ಪಾತ್ರಧಾರಿಗಳೇ ಕುಂಡಂಗೇರ್;
- ಇವರು ಯಾವ ತೆರನಾದ ವೇಷಧರಿಸಲೂ ಅವಕಾಶವಿದ್ದು ಇವರೊಂದಿಗೆ ಕೋಪಾಳ ವರ್ಗಕ್ಕೆ ಸೇರಿದ ಮಹಿಳೆ ಭಾಗವತರಂತೆ ಸಂಭಾಷಣೆ, ಹಾಡುಗಾರಿಕೆಯಲ್ಲಿ ಜೊತೆ ಸೇರುವಳು.

ಕುಂಡಚ್ಚ kuṇḍacca:

- ಅಳಿಲು; ಇಣಚಿ; A squirrel;
- ಏತದ ಬೆನ್ನು ತೊಲೆಯ ಮೇಲು ಕೊನೆಗೆ(ಬಿದಿರಗಳೆಯನ್ನು ತಗಲಿಸುವಲ್ಲಿ) ಜೋಡಿಸಿದ ಮರದಿಂದ ಮಾಡಿದ ಅಳಿಲಿನಾಕೃತಿಯ ಸಾಧನ(ದ.ಕ); A squirrel shaped wooden tool used a manual pumping/lifting water from open well;
- *ವ್ಯರೂ:* ಕುಂಡತ=ಅಳಿಲು(ಕೊಡಗು); *ಪ್ರ:* 'ನೋಡ್‌ನೇ ಮರಲಿ ಕುಂಡತ'.

ಕುಂಡಪ್ಪ/ಗುಂಡಪ್ಪ kuṇḍappa/ guṇḍappa:

ಕುಂಬಾರರ ಮೂಲಪುರುಷ; ಆತನ ಹೆಸರಿನಿಂದ ಕರೆಯುವ ಒಂದು ಸಾಧನ; ಮಣ್ಣಿನ ಪಾತ್ರೆಗಳಿಗೆ ರೂಪ ಕೊಡುವಾಗ ಬಳಸುವ ಗುಂಡನೆಯ ಕಲ್ಲು; (ಬೆಂ.ಗ್ರಾ.ಜಿ). The fore father of kumbara- a pottery community; Its is used to give shape to pots; A small round shaped stone which is named after Gundappa.

ಕುಂಡರಿಕೆ/ಕುಂಡ್ರಿಕೆ kuṇḍarike/ kuṇḍrike:

ಸಣ್ಣಮಕ್ಕಳು ಮಲ ವಿಸರ್ಜಿಸಿದ ಬಟ್ಟೆ; A stool excretion clothing; *ಪ್ರ:* 'ಮಗುವಿನ ಕುಂಡ್ರಿಕೆ ಬಟ್ಟೆ ತೊಳೆ'(ಮಂಡ್ಯ.ಜಿ).

ಕುಂಡರ್ರಿ kuṇḍarri:

ಕುನ್ದರ್ರಿ > ಕುನ್ದರಿ > ಕೂಡರಿ > ಕೂಡ್ರಿ; ಮುಖ್ಯವಾಗಿ ಇಲ್ಲಿ ಗಮನಿಸಬೇಕಾದ್ದು ಅನುನಾಸಿಕ ಅದೃಶ್ಯವಾಗಿರುವುದು, ಆದಕಾರಣದಿಂದಲೇ ಪರಿಹಾರಾರ್ಥವಾಗಿ ಹಿಂದಿನ ವ್ಯಂಜನ(ಕು) ದೀರ್ಘ (ಕೂ)ಆಗಿರುವುದು. ಕುಳಿತುಕೊಳ್ಳಿರಿ: ಕೂಡರಿ/ಕೂಡ್ರಿ; *ಪ್ರ:* 'ನಿಂತೇ ಮಾತಾಡಾಕ್ಹತೀದೀರಿ, ಕುಂಡರ್ರಿ ಕುಂತ ಮಾತಾಡರಿ'(ವಿ.ಜಿ); To sit, to rest on one's own position.

—*ಕುಂಡ್ರುಸ್ಕಾ/ಕುಂಡ್ರುಸ್ಕೊ* : ಕುಳ್ಳಿರಿಸಿಕೋ; ಕುಳಿತುಕೊಳ್ಳಲು ಸ್ಥಳಮಾಡಿಕೊಡು; ಜಾಗಬಿಡು (ಚಾ.ಜಿ, ಮಂಡ್ಯ.ಜಿ). To leave the place for some one.

ಕುಂಡಲ kundala :

- ಲೋಹದ ಬಳೆಯಂತಹ ರಚನೆ; ಇದನ್ನು ದೊಡ್ಡ ಪಾತ್ರೆಗಳಿಗೆ ಹಿಡಿಯಂತೆ ೩ ಅಥವಾ ೪ ಕಡೆ ಜೋಡಿಸಿರುತ್ತಾರೆ. A bangle shaped rounded

melting used in the both sides of a vessel as handle;

- *—ಕುಂಡಲ ನೊಗ* : ಕೋಣಗಳನ್ನು ಹೂಡಲು ಅನುಕೂಲವಾಗುವಂತೆ ಕಬ್ಬಿಣದ ಬಳೆಗಳನ್ನು ಜೋಡಿಸಿದ ನೊಗ(ದಕ); A ring that adds wooden light log which is used to put on he buffalo while tilling;
- ಎತ್ತುಗಳ ಕೊರಳ ಹಗ್ಗಕ್ಕೆ ಬಿಗಿಯಲು ಅನುಕೂಲವಾಗಿರುವಂತೆ ನೊಗದಲ್ಲಿರುವ ಕಬ್ಬಿಣದ ಉಂಗುರ(ಕೃ.ಪ.ಕೋ); An iron ring which is tied to the neck of oxen to be tied to rope.

ಕುಂಡಲಿ kuṇḍali :

- ಗಂಡಸರು ಕಿವಿಯಲ್ಲಿ ಧರಿಸುವ ಚಿನ್ನದ ತಂತಿಯಿಂದ ಮಾಡಿದ ಉಂಗುರಾಕಾರದ ಆಭರಣ; A ring shaped gold string jewel of male wore in their ear;
- ಯಕ್ಷಗಾನದಲ್ಲಿ ಪಾತ್ರಧಾರಿಗಳು ಧರಿಸುವ ಮಣಿ ಜೋತಾಡುವ ಕಿವಿ ಆಭರಣ; *ಪ್ರ:* 'ಕಿವಿಯೊಳಗಿನ ಕುಂಡಲ ಬಿದ್ದು ಹೋಗಿದೆ'.
- ಸುರುಳಿ ಸುತ್ತಿಕೊಂಡ ಹಾವು; A rolled snake;
- ಜಾತಕ ೧೨ ಮನೆಗಳ ರೇಖಾಕೃತಿಯಲ್ಲಿ ಜನ್ಮಕಾಲದ ಗ್ರಹಗಳ ಗತಿಯನ್ನು ಗುರುತಿಸುವುದಕ್ಕೆ ಬಳಸುವ ಆಕೃತಿ; *ಪ್ರ:* 'ಕುಂಡಲಿ ನೋಡಿ ಭವಿಷ್ಯ ಹೇಳೋರಿದ್ದಾರೆ'; *ವ್ಯರೂ:* ಕುಂಡ್ಲಿ, ಕೊಂಡಲು, ಕೊಂಡಿಲು, ಕುಂಡ್ಲು; A script of fore telling which contains astrology;
- *—ಕುಂಡಲಿಕ* : ಕುಂಡಲಿ ನೋಡಿ ಮುಂದಿನ ಭವಿಷ್ಯವನ್ನು ಹೇಳುವವನು. An astrologer; The art of understanding the supposed influence of stars and planets.

ಕುಂಡಾ kuṇḍā :

- 'ಕಂಜರಭಾಟ' ಎಂಬ ಅಲೆಮಾರಿ ಸಮುದಾಯದಲ್ಲಿ ಸತ್ತ ವ್ಯಕ್ತಿಗೆ ಮರುದಿನ ಮಾಡುವ ಒಂದು ಆಚರಣೆ;
- ವಾಸಸ್ಥಳದಿಂದ ಸುಮಾರು ದೂರದಲ್ಲಿ ಒಂದು ಜಾಗವನ್ನು ಆಯ್ಕೆಮಾಡಿ ಅಲ್ಲಿಗೆ ಅಕ್ಕಿ, ಸಕ್ಕರೆ, ತುಪ್ಪ, ಖರ್ಜೂರ, ಬಾದಾಮಿ, ಗೋಡಂಬಿ, ದ್ರಾಕ್ಷಿ, ಗಸಗಸೆ, ಕೊಬ್ಬರಿ, ಸಿಹಿತಿಂಡಿಗಳು, ಒಂದು ದೊಡ್ಡ ಬೋಗುಣಿ (ಇದನ್ನು ಕುಂಡಾ ಎನ್ನುತ್ತಾರೆ), ಬಿಂದಿಗೆ, ಚೊಂಬು, ದೊಡ್ಡದೊಂದು ಮಡಿಕೆಯನ್ನು ತೆಗೆದುಕೊಂಡು ಮನೆಯ ಯಜಮಾನ, ಶವ ಹೊತ್ತವರಲ್ಲಿ ಮೂರುಜನ, ಸಮುದಾಯದ ಕೆಲವು ಜನ ಹೋಗುತ್ತಾರೆ; ಅಲ್ಲಿ ಏಳು ಒಲೆಗಳನ್ನು ಹಾಕುತ್ತಾರೆ;
- ಅದರಲ್ಲಿ ಹೆಗಲು ಕೊಟ್ಟವರು ಒಂದು ಒಲೆಯಲ್ಲಿ ದೊಡ್ಡ ಮಡಕೆ ಇಟ್ಟು ಎರಡರಿಂದ ಮೂರು ಕೆ.ಜಿ. ಯಷ್ಟು ಅಕ್ಕಿ ಹಾಕಿ ಅನ್ನ ಮಾಡುತ್ತಾರೆ; ಉಳಿದ ಒಲೆಗಳಲ್ಲಿ ಸಮುದಾಯದ ಹೆಣ್ಣುಮಕ್ಕಳು ಅನ್ನ ಬೇಯಿಸುತ್ತಾರೆ;
- ಬಾರೆಗಿಡದ ಟೊಂಗೆಯೊಂದರಿಂದ ಸೌಟು ಮಾಡಿಕೊಂಡು ಅನ್ನ ತಿರುಗಿಸುತ್ತಾರೆ;
- ಬಾರೆ ಗಿಡದಿಂದ ಸಾಕಷ್ಟು ಉದ್ದದ ಟೊಂಗೆಯೊಂದನ್ನು ಕತ್ತರಿಸಿ ತಂದು ನೆಲದ ಮೇಲೆ ನೆಟ್ಟು ಅದರ ಕೆಳಗೆ ಒಂದಿಷ್ಟು ಮರಳು ಹಾಕಿ ಸಮತಟ್ಟು ಮಾಡಿ ಅದರ ಮೇಲೆ ಬಾನಿಯನ್ನು ಬೋರಲು ಹಾಕಿ ಬಟ್ಟೆಯೊಂದನ್ನು ಸ್ವಲ್ಪ ಸಮಯ ಅದರ ಮೇಲೆ ಮುಚ್ಚುತ್ತಾರೆ;
- ನಂತರ ಬಾನಿಯನ್ನು ತೆಗೆದಾಗ ಮರಳಿನಲ್ಲಿ ಏನಾದರೂ ಗುರುತುಗಳು ಕಂಡರೆ ಸತ್ತ ವ್ಯಕ್ತಿಯ ಆತ್ಮ ಬಂದು ಗುರುತು ಮಾಡಿ ಹೋಗಿದೆ ಎಂದು ನಂಬುತ್ತಾರೆ;
- ಆ ಬಾನಿಗೆ ದೊಡ್ಡ ಮಡಕೆಯಲ್ಲಿ ಹೆಗಲು ಕೊಟ್ಟವರು ಬೇಯಿಸಿದ ಅನ್ನವವನ್ನು ಏಳು ಬಾರಿ ಹಾಕಿ ಅದಕ್ಕೆ ತುಪ್ಪ, ಸಿಹಿತಿಂಡಿ, ಖರ್ಜೂರ ಇತ್ಯಾದಿ ಮಿಶ್ರಣ ಹಾಕುತ್ತಾರೆ;
- ಹೀಗೆ ಯಜಮಾನ, ಹೆಗಲು ಕೊಟ್ಟವರು ಏಳು ಬಾರಿ ಒಮ್ಮೆ ಅನ್ನ ಒಮ್ಮೆ ಸಿಹಿ ತಿನಿಸು ಹಾಕುತ್ತಾರೆ;
- ನಂತರ ಮಧ್ಯದಲ್ಲಿ ಖರ್ಜೂರ ಹಾಕಿ ಬಾರೆಗಿಡದ ಟೊಂಗೆಯ ಬುಡದಲ್ಲಿಟ್ಟು ಬಟ್ಟೆ ಮುಚ್ಚಿ ಬಿಂದಿಗೆ ನೀರು ಇಡುತ್ತಾರೆ;
- ಉಳಿದ ಒಲೆಯ ಮೇಲೆ ಮಾಡಿದ ಅನ್ನವನ್ನು ಒಂದೊಂದು ಸೌಟು ಅನ್ನ ತಂದು ಯಜಮಾನ ಕೆಂಡದ ಮೇಲೆ ಅನ್ನ ಹಾಕಿ ನೈವೇದ್ಯ ಮಾಡಿ ಹೆಗಲು ಕೊಟ್ಟವರು ಹಾಗೆಯೇ ಮಾಡಿ ಅನ್ನದ ಮೇಲೆ ತುಪ್ಪ ಹಾಕಿದಾಗ ಬೆಂಕಿ ಹೊತ್ತುಕೊಂಡರೆ ಸತ್ತವರಿಗೆ ಸ್ವರ್ಗಪ್ರಾಪ್ತಿಯಾಗುತ್ತದೆಂದು ನಂಬಿಕೆ;

- ನಂತರ ಯಜಮಾನ ಬಾನಿಯಲ್ಲಿದ್ದ ಅನ್ನವನ್ನು ಖರ್ಜೂರದ ಸಹಿತವಾಗಿ ಸತ್ತವನ ಪಾಲು ಎಂದು ಕಲ್ಲಿನ ಮೇಲೆ ಸ್ವಲ್ಪ ತೆಗೆದು ಇಡುತ್ತಾನೆ;
- ನಂತರ ಎಲ್ಲರಿಗೂ ಪ್ರಸಾದ ಕೊಟ್ಟು ತಾನು ತಿಂದು ಅದೇ ಬಾನಿಗೆ ಏಳು ಬಾರಿ ಕೈ ತೊಳೆದು ಬಾಯಿ ಮುಕ್ಕಳಿಸಿ ಅದನ್ನು ಬಾರೆಗಿಡದ ಬುಡಕ್ಕೆ ಸುರಿಯುತ್ತಾನೆ;
- ಬಂದಿರುವವರೆಲ್ಲರೂ ಊಟ ಮಾಡಿದ ನಂತರ ದೊಡ್ಡಮಡಕೆಯನ್ನು ಒಲೆಯ ಮೇಲೆ ಒಡೆದು ಮುಚ್ಚುವರು;
- ಹಾರೆಯಿಂದ ಒಂದು ವೃತ್ತವನ್ನು ಸುತ್ತಲೂ ಬರೆದು ಮನೆಗೆ ಹೋಗುವರು; ಇಲ್ಲಿ ಏಳು ಸಂಖ್ಯೆಯ ಪಾತ್ರ ಮತ್ತು ಬೆಂಕಿ ಕೆಂಡದ ಪಾತ್ರ ಪ್ರಮುಖವಾಗಿರುತ್ತದೆ;
- 'ಕುಂಡಾ' ಪದ ಕೂಡ ಹೋಮದ ಆಚರಣೆಯ ಹಿನ್ನಲೆಯಲ್ಲಿ ಬಂದಿದೆ; ಈ ಸಮುದಾಯದವರು ಆರ್ಯ ಸಂಸ್ಕೃತಿಯ ಪ್ರಭಾವಕ್ಕೊಳಗಾಗಿದ್ದಾರೆ ಎಂಬುವುದು ಕೆಲವರ ಅನಿಸಿಕೆ; ಈ ಸಮುದಾಯದವರು ಆಡುವ ಮಾತು ಸಹ ಆರ್ಯ ವರ್ಗದ ಭಾಷಾ ಗುಂಪಿಗೆ ಸೇರಿದ್ದು ಎಂಬುವುದು ವಿದ್ವಾಂಸರ ಅಭಿಪ್ರಾಯವಾಗಿದೆ. A ritual/ funeral that has been practiced on the second day of a dead in kanjarabata a tribal community; Somebody doubts that it has a partial origin from Aryan religious ceremony – homa.

ಕುಂಡಿ೧ kuṇḍi[1] :

- ಅಂಡು; ನಿತಂಬ; ಪೃಷ್ಠ; ಸೊಂಟದ ಕೆಳಗಿನ ಹಿಂಬದಿ; *ಪ್ರ:* 'ಕುಂತ್ ಕಡೆ ಕುಂಡಿ ಮರೆತಂಗೆ'*(ಗಾ)*; 'ಕುಂಡಿ ಮೇಲೆ ಹೊಡೆದರೆ ದವಡೆ ಹಲ್ಲು ಉದುರಿದವಂತೆ'*(ಗಾ)*; 'ಕುಂಡಿ ಮೇಲೆ ಕುರ ಎದ್ದರೆ ಜಾಗಟೆ ಬಾರ್‍ಸೊ ದಾಸಯ್ಯ*(ಗಾ)*; Buttock, hippy; The lower part waist from the back side;
- ***—ಕುಂಡಿ ಕಾಯಿ*** : ಯಾವಾಗಲೂ ಹತ್ತಿರವೇ ಇರುವವನು(ಕಲ.ಜಿ); A close person who is a nearer always;
- ***—ಕುಂಡಿಗ ಬೇರು ಬಿಟ್ಟಾವ*** : ಒಂದೇ ಕಡೆ ನೆಲೆಯೂರಿದವನು ಕುಳಿತರೆ ಏಳಲಾರದಂತಾಗು; ಬೇರುಬಿಟ್ಟ ಗಿಡದಂತೆ ಅಲ್ಲಾಡದಿರು; ಭೂ ಭಾರವಾಗು(ಬೀ.ಕ.ಕೋ); A person who stays in single place for ever not a rolling stone;
- ***—ಕುಂಡಿಗ ಹಲ್ಲ ಬಂದಾವ*** : ಗರ್ವ; ಅಹಂಕಾರ; ಜಂಭ ಬಂದಿರುವವನು(ಕಲ.ಜಿ); Peacockery; Arrogant pride;
- ***—ಕುಂಡಿಗ ಹೇಳು*** : ಅಲಕ್ಷ್ಯತೋರು; negligence; to show negligence towards something;
- ***—ಕುಂಡಿಗೆ ಸುಣ್ಣಹಚ್ಚು*** : ಮೋಸಮಾಡು, ದ್ರೋಹ ಬಗೆಯುವುದು; Deception; Deceitful. to deceit;
- ***—ಕುಂಡಿಗ ಕಾಲ ಹಚ್ಚು*** : ಓಡು, ಓಟಾಕಿತ್ತ; To run without turn one's back;
- ***—ಕುಂಡ್ಯಾಗ ದಮ್ಮ/ತಿಕದಲ್ಲಿ ದಮ್ಮಿದ್ರೆ*** : ಶಕ್ತಿ; ಧೈರ್ಯ; *ಪ್ರ:* 'ಕುಂಡ್ಯಾಗ ದಮ್ಮ ಇದ್ರ ಮುಂದೆ ಬಾ'(ಬಾ.ಜಿ); strong courage; Stamina, ability;
- ***—ಕುಂಡಿ ಚಿವುಟು*** : ಕಿಡಿಗೇಡಿತನ ತೋರು; ಚಾಲಾಕಿತನದಿಂದ ಮೋಸಮಾಡು(ಬೀ.ಜಿ.); deception; to cheat someone;
- ***—ಕುಂಡಿಚೂಟು/ಚಿವುಟು*** : ಸನ್ನೆಮಾಡು; ಸಂಕೇತಿಕವಾಗಿ ತಿಳಿಸು(ಬ.ಜಿ); signing; to indicate something one's own sign language;
- ***—ಕುಂಡಿಘುಂಬ್ಯಾದ*** : ಇದೊಂದು ಬೈಗುಳ ಪದ(ಬೀ.ಜಿ); An abuse; a kind of scolding;
- ***—ಕುಂಡಿ ದಮ್ಮ ಆಗ್ಯಾದ*** : ಧನವಂತ; ಹಣದಿಂದ ಸೊಕ್ಕಿದವನು(ಬೀ.ಜಿ); The rich; a person who possess richness and has pride with money;
- ***—ಕುಂಡಿ ಬಾಯಿ ಬಿಡ್ಲಿ*** : ದೊಡ್ಡವರು ಚಿಕ್ಕಮಕ್ಕಳಿಗೆ ಪ್ರೀತಿಯಿಂದ ಬೈಯುವ ಪದ(ಬೀ.ಜಿ); An abuse of elders to younger; a scolding of elders to younger;
- ***—ಕುಂಡಿ ಮ್ಯಾಲ ಒದಿ*** : ಶಿಕ್ಷಿಸು; To punish; to kick one's on one's buttock;

- ***—ಕುಂಡಿ ಹೊಸಿ*** : ಸೋಲು ಅನುಭವಿಸು; a defeat; To experience a defeat;
- ***—ಕುಂಡಿ ಹರೀತು*** : ಭೇದಿ ಪ್ರಾರಂಭವಾಯಿತು; To start diarrhea;
- ***—ಕುಂಡಿಸುಟ್ಟ ಬೆಕ್ಕಿನಂತವ್ವ*** : ಇದೊಂದು ಬೈಗುಳ ಪದ; ಕುಂಡಿ ಸುಟ್ಟ ಬೆಕ್ಕು ಎಲ್ಲಿಯೂ ಒಂದೆಡೆ ಕುಳಿತುಕೊಳ್ಳದೆ ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ಓಡಾಡುವಂತೆ ಪರಿತಪಿಸುವವನನ್ನು 'ಕುಂಡಿ ಸುಟ್ಟ ಬೆಕ್ಕಿನಂತಹವನು' ಎನ್ನುತ್ತಾರೆ; ಚಂಚಲಸ್ವಭಾವ, ಕಂಡಕಂಡಲ್ಲಿ ತಿರುಗುವ ಬೆಕ್ಕಿನಂತೆ; An abuse; A rude word; A person who has fickle manners;
- ***—ಕುಂಡಿ ತಿರುವಿಕೊಂಡು ಹೋಗು*** : ಜಂಭ, ಅಲಕ್ಷ್ಯದಿಂದ ನೋಡಿದರೂ ನೋಡದಂತೆ ಹೋಗುವುದು; To go away; Walk away with pride or negligence;
- ***—ಕುಂಡಿ ಎತ್ತಲ್ಲ*** : ಯಾವ ಕೆಲಸವನ್ನೂ ಮಾಡದವನು; ಬಲಹೀನತೆಯುಳ್ಳವನು(ಬೀ.ಜಿ); an uselessfellow; A person who has weakness to do any work;
- ***—ಕುಂಡಿ ಪಟ್ಟಿ*** : ಒಳಸೆರಗಿನಲ್ಲಿ ಬರುವ ಪಟ್ಟಿ; An edge of any saree of a woman;
- ***—ಕುಂಡಿಪದರು*** : ಸೀರೆಯ ಕೊನೆಯ ಭಾಗ(ಬಾ.ಜಿ); ಹಿಂಭಾಗದಲ್ಲಿರುವ ಸೀರೆಯ ಪದರು; ಭಾಗ(ಬೀ.ಪ.ಕೋ); a saree layer of back side;
- ***—ಕುಂಡಿಗೊಂಡು ಶಿಶುಪ್ರಾಸ*** : ಮಾವಾ ಬಂದಾಗ ಏನೇನು ತಂದಾನ ಹಂಡೇದಂಥಾ ಕುಂಡಿ ಮಾಡಿಕೊಂಡು ಹಂಗ ಬಂದಾನ; Rhyming words of children;
- ತಮಿ: ಕುಂಡಿ, ಮ: ಕುಂಡಿ, ತುಳು: ಕುಂಡೆ, ಕುಂಡಿ; ತೆ: ಕುಟ್ಟಿ, ತೆಲುಗಿನಲ್ಲಿ 'ಕುಟ್ಟೆ' ಇರುವುದು ಆಶ್ಚರ್ಯ; ತಮಿಳಿನಲ್ಲಿ 'ಡ' ಕಾರ ಇರುವುದು ಆಶ್ಚರ್ಯ.

ಕುಂಡಿ² kuṇḍi² :

- ಕುರುಡಿ; ಕಣ್ಣು ಕಾಣದವಳು; A woman who is visually inpaired or blind;
- ತೆಂಗಿನ ಕರಟದಿಂದ ಮಾಡಿದ ಜಲಪಾತ್ರೆ; A water vessel made by coconut cell;
- ಪ್ರಾಣಿಗಳ ನಿತಂಬ ಭಾಗ(ಬೀ.ಕ.ಕೋ); Hip of animals; *ಪ್ರ:* 'ಕುಂಡಿ ಹಾದರಕ್ಕೆ ಮನೆ ಮಕ್ಕಳೆಲ್ಲ ನಿದ್ದೆಗೆಟ್ರೊ'*(ಗಾ)*; 'ಕುಂಡಗಣ್ಣೀ ನಿನ್ನ ಗಂಡೆಲ್ಲ ಅನ್ನೋವೊತ್ಗೆ ಗಂಟ್ಹಾಕೊಂಡು ಸೊಂಟಕ್ಕೆ ಕಟ್ಟಿ ಕೊಂಡಿವ್ನಿ ಅಂದ್ಲಂತೆ'*(ಗಾ)*.

ಕುಂಡಿಗೆ kuṇḍige :

- ಬಾಳೆ ಹೂ; ಮೋತೆ; ಬಾಳೆ ಗೊನೆಯ ಮುಂಭಾಗದ ಹೂವಿನ ಮೊಗ್ಗು(ಮಂ.ಜಿ); banana flower;
- ದೇವರ ಸನ್ನಿಧಿ; A placement of god; abode of god;
- ನೀರಿನ ಗೊಂಡೆ;
- ***—ಕುಂಡಿಗೆ ಆರತಿ*** : ಬಾಳೆಹೂವಿನ ಆಕಾರದಲ್ಲಿ ಬತ್ತಿಗಳನ್ನು ಜೋಡಿಸಿ ದೇವರಿಗೆ ಮಾಡುವ ಆರತಿ; The lamp lighting ceremony for god by decorating the lamp as banana flower;
- ***—ಕುಂಡಿಗೆ ಪಟ್ಟಿ*** : ಬಾಳೆಕಾಯಿಯ ಕುಂಡಿಗೆಯಲ್ಲಿ ಇರುವ ಕೆಂಪನೆಯ ಸಿಪ್ಪೆ ಅಥವಾ ಹೊದಿಕೆ; ಅದು ಕಾಯಿ ಬೆಳೆದಷ್ಟು ಒಂದೊಂದೆ ಹೊದಿಕೆ ಕೆಳಗೆ ಬೀಳುತ್ತದೆ. ಇದನ್ನು ಕಪ್ಪುಹಲಗೆಯ ಮೇಲೆ ಉಜ್ಜುವುದರಿಂದ ಹಲಗೆ ಸ್ವಚ್ಛವಾಗುತ್ತದೆಂಬ ಪ್ರತೀತಿ ಇದೆ; ದನಕರುಗಳಿಗೂ ಇದು ಮೇವಾಗಿ ಬಳಕೆ. The reddish layer of unripe banana flower and uncovered one by one day by day while ripening is going on; It is used as a feed of cattle.

ಕುಂಡಿಪೂಜೆ kuṇḍipūje :

- ಶರೀರದ ಹಿಂಭಾಗ, ಬೆನ್ನಿಗೆ ಪೂಜೆ ಮಾಡುವ ಕ್ರಮ; ಬೀದರ್ ಜಿಲ್ಲೆಯ ಭಗದೂರಿನ ಎಲ್ಲಮ್ಮ ದೇವತೆ, ಕಲಬುರ್ಗಿ ಜಿಲ್ಲೆಯ ಗೋಳದ ಲಕ್ಕಮ್ಮ ಈ ದೇವರಿಗೆ ಬೆನ್ನಿಗೆ ಪೂಜೆ ಮಾಡುವುದಿದೆ(ಬೀ.ಜಿ); Buttock/back worship of human body is being practiced in bidar and kalburgi especially goddess ellamma of bhagaduru and goddess lakkamma of kalburigi;

- ಬೆನ್ನಿಗೆ ಪೂಜೆ ಮಾಡುವುದು ಇಲ್ಲಿನ ವಿಶೇಷ; ಇದಕ್ಕೆ ಸಾಂಪ್ರದಾಯಿಕ ಹಾಗೂ ಚಾರಿತ್ರಿಕ ಕಾರಣಗಳೇನಾದರೂ ಇರಬೇಕು? ಸಂದರ್ಭ ಸಾಕ್ಷ್ಯಗಳು ಬಿದ್ದುಹೋಗಿರುವ ಸಾಧ್ಯತೆ ಇದೆ.

ಕುಂಡೆ kuṇḍe :

ಹರಿದು ಹೋಗುವ ನೀರನ್ನು ಹೋಗಲು ಬಿಡದೆ ಅಲ್ಲಲ್ಲಿ ತಡೆಗಟ್ಟುವುದು(ಕೃ.ಪ.ಕೋ); To check or stop the flowing waters;

—ಕುಂಡೆ ಅಮ್ಮ : ಗ್ರಾಮದ ದೇವತೆಗಳಲ್ಲಿ ಒಬ್ಬಳು(ಕ.ಜಾ.ಕೋ); One of the village goddess;

—ಕುಂಡೆ ಹಬ್ಬ : ಕೊಡಗಿನಲ್ಲಿ ವಾಸಿಸುವ ಜೇನು ಕುರುಬರು ವಿಶೇಷವಾಗಿ ಆಚರಿಸುವ ಹಬ್ಬ. A festival is being practiced and celebrated by jenukuraba A tribe of kodagu.

ಕುಂಡೆಕುಸ್ಕ kuṇḍekuska :

- ವ್ಯಾಗಟೈಲ್; ಉದ್ದನೆಯ ಕಾಲುಳ್ಳ ಗುಬ್ಬಿ ಗಾತ್ರದ ತೆಳು ದೇಹವನ್ನು ಹೊಂದಿರುವ ಪಕ್ಷಿ; ಕ್ಷಣಕ್ಷಣಕ್ಕೂ ಬಾಲವನ್ನು ಮೇಲಕ್ಕೂ, ಕೆಳಕ್ಕೂ ಅಲ್ಲಾಡಿಸುತ್ತಿರುವುದರಿಂದ ಇದಕ್ಕೆ ಕುಂಡೆಕುಸ್ಕ ಎಂಬ ಹೆಸರು; a small bird; a bird which has long legs and resembles a sparrow in its body structure;
- ಹೊಲ, ಗದ್ದೆ, ಕಾಡಿನ ಬಯಲು ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುತ್ತದೆ; ಹುಳುಹುಪ್ಪಟೆ, ದನದ ಮೈಮೇಲಿನ ಉಣ್ಣೆಯನ್ನು ಆಹಾರವಾಗಿ ತಿನ್ನುತ್ತದೆ; ಇವುಗಳಲ್ಲಿ ಹಳದಿ ಕುಂಡೆಕುಸ್ಕ, ಬಿಳಿ ಕುಂಡೆಕುಸ್ಕ ಎಂಬ ಪ್ರಕಾರಗಳಿವೆ; ಇದನ್ನು ಉಳ್ಳು, ಕಣಿ ಒಡ್ಡಿ ಹಿಡಿದು ಸ್ವಲ್ಪ ಸಮಯ ಆಟ ಆಡಿಸಿ ಮಕ್ಕಳು ಬಿಡುವುದುಂಟು(ಬೇ.ಸಾಂ.ಪ.ಕೋ); *ವ್ಯದೂ:* ಕುಂಡಿ ಕುಣಚನ ಹಕ್ಕಿ.

ಕುಂಡೋದರ kuṇḍōdara :

- ಪ್ರಾಚೀನ ತುಳುನಾಡಿನ ಒಂದು ದೈವ; ಇದರ ಹಿಂದೊಂದು ಕತೆಯಿದೆ; An ancient god of tulunadu;
- ಬಾರಕೂರಿನ ದೇವಪಾಂಡ್ಯನೆಂಬ ಅರಸ ಹೊಸ ಹಡಗನ್ನು ನಿರ್ಮಿಸಿದಾಗ ಕುಂಡೋದರ ದೈವಕ್ಕೆ ನರಬಲಿ ಕೊಡಬೇಕಾಗುತ್ತದೆ; This god has a connected story with barakur's king devapandya;
- ಅರಸನಿಗೆ ಎಂಟು ಮಕ್ಕಳಿದ್ದು ರಾಣಿ ಬಲಿಕೊಡಲು ನಿರಾಕರಿಸಿದಾಗ ಅರಸನ ತಂಗಿ ತನ್ನ ಒಬ್ಬನೇ ಮಗನಾದ 'ಜಯಪಾಂಡ್ಯ'ನನ್ನು ಅರ್ಪಿಸಲು ತಯಾರಾಗುತ್ತಾಳೆ;
- ತಂಗಿಯ ಈ ತ್ಯಾಗದಿಂದ ತೃಪ್ತನಾದ ದೈವ 'ಜಯಪಾಂಡ್ಯ'ನನ್ನು ಬಿಟ್ಟುಕೊಟ್ಟು ಇನ್ನು ಮುಂದೆ ಸಹೋದರಿಯ ಮಕ್ಕಳೇ ರಾಜ್ಯಕ್ಕೆ ಉತ್ತರಾಧಿಕಾರಿಗಳಾಗಬೇಕೆಂದು ಅಪ್ಪಣೆ ಕೊಡುತ್ತದೆ;
- ಅಂದಿನಿಂದ ತುಳುನಾಡಿನಲ್ಲಿ ಮಾತೃಪ್ರಧಾನ ವಂಶಪದ್ಧತಿ ಆಚರಣೆಗೆ ಬಂತು ಎಂಬ ಪ್ರತೀತಿ ಇದೆ(ತು.ನಿ).

ಕುಂಡ್ರಿಕೆ ಚಾಪೆ kuṇḍrike cāpe :

ಊಟಕ್ಕಾಗಿ ಬಳಸುವ ಚಾಪೆ; ಒಬ್ಬರು ಕುಳಿತುಕೊಳ್ಳಲು ಬೇಕಾದಷ್ಟು ಅಗಲವಾಗಿರುವ ತೆಂಗಿನ ಗರಿಯಿಂದ ಹೆಣೆದಿರುವುದು. A lunch mat; A meal mat that weaved is knitted by coconut leaf.

ಕುಂಡ್ರು ಮೂಗು kuṇḍru mūgu :

ಮೂಗು 'ಅತ್ತಿ' ಒತ್ತಿ, ಹಳ್ಳ ಬಿದ್ದಿರುವುದು; ಮಧ್ಯಭಾಗದ ಮೂಗು ಹಳ್ಳ ಬಿದ್ದಂತೆ ಕಾಣುವುದು; ಮೂಗಿನ ಹೊಳ್ಳೆಗಳು ಮಾತ್ರ ಎದ್ದು ಕಾಣುವಂತಿರುತ್ತವೆ. *ವ್ಯದೂ:* ಕಪ್ಪರಮೂಗು. An ugly nose; An awful/awkward nose.

ಕುಂತ kunta :

- ಈಟಿ; ಭರ್ಜಿ; ಬೇಟೆಗಾಗಿ ಬಳಸುವ ಆಯುಧ (ಬೇ.ಸಾಂ.ಪ.ಕೋ); A lance; A spear used as hunting weapon;
- ಕುಳಿತ; *ಪ್ರ:* 'ಗಿಳಿ ಕುಂತ ಕೂಗ್ಯಾವ';
- ಕುಂತಾರೆ – ಕುಳಿತವರು;
- ಕುಂತಾಳ – ಕುಳಿತಿದ್ದಾಳೆ;
- ಕುಂತಗತೀನಿ – ಕುಳಿತುಕೊಳ್ಳುತ್ತೇನೆ;

- ಕುಂತ್ಕಂದು – ಕುಳಿತುಕೊಂಡು;
- ಕುಂತ್ಕ – ಕುಳಿತ್ಕೊ/ಕುಳಿತುಕೊ;
- ಕುಂತುದಾನೆ – ಕುಳಿತಿದ್ದಾನೆ. ಪ್ರ: 'ಕುತ್ಕೊಂಡ್ ಉಣ್ಣಿಲ್ಲ ಕುಲಾ ಕೇಳ್ನಿಲ್ಲ ಎತ್ನಿಂದ್ ಬಂದೊ ನನ್ ಕೊಣಿವಿಣಿ ದಾಸ'(ಗಾ); Sitting sitter to move to a sitting position after he/she has been standing;
- 'ಕುಂತಿಗೆ' ರೂಪವನ್ನೂ ಇಲ್ಲೇ ಪ್ರಸ್ತಾಪಿಸಬಹುದು; ಪ್ರ: 'ಕುಂತಿರೋ ಜನಾ ಮಾಡಬ್ಯಾಸ ಗುಲ್ಲಾ'('ಸಂಗ್ಯಾಬಾಳ್ಯಾ' ನಾಟಕದ ಆರಂಭದ ಗಣೇಶ ಸ್ತುತಿ).
- —***ಕುಂತು ನಿಂತು*** : ನಿಶ್ಚಿಂತವಾಗಿ ಕಾಲ ಕಳೆಯುತ್ತ; ಹರಟೆ ಹೊಡೆಯುತ್ತ; ಕಾಲಹರಣ ಮಾಡುತ್ತ; ವಿಶ್ರಾಂತಿ ಪಡೆಯುತ್ತಾ; To spend time without fear thinking with resting;
  ಪ್ರ: ಊರಿಗಂತ ನೀನು ಬಾರೆ
  ನೀರಿಗಂತ ನಾನು ಬರುವೆ
  ಕುಂತು ನಿಂತು ಮಾತನಾಡೋಣ
  (ಗರತಿಹಾಡು);
- —***ಕುಂದಾರು*** : ಕುಂದ್ರು; ಕುಂದುರು; ಕುಳಿತಿಕೊ; ಪ್ರ: 'ಕುಂದಾರುಬಾರೆ ಮಣೆಮ್ಯಾಲೆ'; To sit.

ಕುಂತಲ್ಲೇ ಕುಣಿ ತೊಂಡೊ ಮಗಾ kuṇtalle kuṇi toṇḍo magā :

- ನಿರುದ್ಯೋಗಿ; ಕೆಟ್ಟಕೆಲಸ ಮಾಡುವವ; ಮನೆಹಾಳು ಮಾಡುವ ಗುಣವುಳ್ಳವ; An unemployed who has bad conduct;
- ಇದೊಂದು ನುಡಿಗಟ್ಟು; 'ಕುಣಿ' ಪದಕ್ಕೆ 'ಕುಳಿ' ಅರ್ಥವಿದೆ; 'ತೊಂಡೊ' ಪದ 'ತೋಡು' ಪದದಿಂದ ಬಂದುದು; ಅನುನಾಸಿಕ ಲಭ್ಯವಾದ್ದರಿಂದ 'ತೊಂಡೊ' ಪದದ ಆದಿ ಅಕ್ಷರ ಹ್ರಸ್ವ ರೂಪ ಪಡೆಯುತ್ತದೆ;
- ಮನೆಹಾಳು ಬುದ್ಧಿಯ ಜೊತೆಗೆ, ಕೆಲಸವಿಲ್ಲದೆಯೂ ಇರುವುದರಿಂದ ಯಾರಿಗೆ ಎಲ್ಲಿ ಏನು ಮಾಡಬೇಕೆಂದು ಸದಾ ದುರಾಲೋಚನೆಯ ನಕ್ಷೆ ತಯಾರಿಸುತ್ತ ಸ್ಥಿತಿಯ ಮನಸ್ಸಿನ ವ್ಯಕ್ತಿಯೊಬ್ಬನನ್ನು ಈ ನುಡಿಗಟ್ಟಿನಲ್ಲಿ ತಂದಿರುವ ಹಾಗೆ ಕಾಣುತ್ತದೆ; ಸಮಾಜದ ಇಂತಹ ಜನರಿಗೆ ಕನ್ನಡಿ ಹಿಡಿಯುತ್ತದೆ ಈ ನುಡಿಗಟ್ಟು, It is an idiom.

ಕುಂತಳದೇಶ kuntaḷadēśa :

- ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲ್ಲೋಕಿನ ಕ್ರಿ.ಶ.೧೧೭೯ರ ೭ನೇ ಶಾಸನದಲ್ಲಿ ಈ ಸ್ಥಳನಾಮ ಪ್ರಸ್ತಾಪಿತವಾಗಿದೆ; it is a place referred in 1179's 7th inscription, Ballari Taluk Of Ballari District of Karnataka;
- ಕಲಚೂರಿಯ ದೊರೆ ಕುಂತಳ ದೇಶದ ಚಕ್ರವರ್ತಿ ರಾಯಮುರಾರಿ ಸೋವಿದೇವನ ಆಳ್ವಿಕೆಗೆ(ಕಾಲಕ್ಕೆ) ಸಂಬಂಧಿಸಿದ್ದು; it is concerned to the king Rayamurary of Kuntala country;
- ಚಾಳುಕ್ಯರ ಶಾಸನಗಳಲ್ಲಿ, ಕಲಚೂರಿ/ಹೊಯ್ಸಳರ ಶಾಸನಗಳಲ್ಲಿ ಕುನ್ತಳ ದೇಶ, ಕುನ್ತಳ ನೆಲೆ, ಕುಂತಳ ವಿಷಯ, ಕುನ್ತಳ ಸಪ್ತಾರ್ಥ ಎಂದೆಲ್ಲ ಉಲ್ಲೇಖಗೊಂಡಿದೆ;
- ಕರ್ನಾಟಕವು 'ಕುಂತಳದೇಶ'ವೆಂದು ಪ್ರಾಚೀನ ಕಾಲದಿಂದಲೂ ಉಲ್ಲೇಖಗೊಂಡಿದೆ;
- ಇದನ್ನು ಊರಿನ ಹೆಸರೆಂದು ಕರೆಯುವುದಕ್ಕಿಂತ, ಒಂದು ಪ್ರದೇಶದ್ದೆಂದು ಭಾವಿಸಬೇಕಾಗಿದೆ.
  (ಕ.ವಿ.ವಿ.ಸಾ.ಸಂ.೧; ಹಂಪಿ)

ಕುಂತಿ ನಿಂತಿ ಆಟ kunti ninti āṭa:

- ಹೆಣ್ಣುಮಕ್ಕಳ ಒಳಾಂಗಣ ಆಟ; the girls' play; it is an indoor game of girls;
- ಮೂರು ಜನರಿಗಿಂತ ಹೆಚ್ಚಿಗೆ ಆಟಗಾರರು ಇರಬೇಕು; ಒಬ್ಬ ಕಳ್ಳನನ್ನು ಮುಂದೆ ನಿಲ್ಲಿಸಿಕೊಂಡು ಕುಂತೋ – ನಿಂತೋ ಎಂದು ಕೇಳುತ್ತಾರೆ;
- ಕಳ್ಳರಾದವರು ಕುಂತಿ/ನಿಂತಿ ಎಂದು ಹೇಳುವರು; 'ಕುಂತಿ' ಎಂದರೆ ಆಟಗಾರರೆಲ್ಲ ನಿಂತುಕೊಂಡಿರಬೇಕು; 'ನಿಂತಿ' ಎಂದರೆ ಕುಂತುಕೊಂಡಿರಬೇಕು;
- ಹೀಗೆ ಕಳ್ಳ ಹೇಳಿದ್ದಕ್ಕೆ ವಿರುದ್ಧವಾಗಿ ನಡೆಯಬೇಕು;
- ಕಳ್ಳನನ್ನು ಆಟ ಆಡಿಸಲು 'ನಿಂತಿ' ಎಂದಾಗ 'ಕುಂತಿ' ಕೊಳ್ಳದೇ 'ನಿಂತೇ' ಇರುವ ಆಟಗಾರರನ್ನು ಮುಟ್ಟಿಸಿದಾಗ ಆತ ಸೋತಂತೆ.

ಕುಂತಿಹುಲ್ಲು/ನಂಜಹುಲ್ಲು/ಕಾಶಿಹುಲ್ಲು kuntihullu/nanjahullu/ kāśihullu :

cymbopogon martini(Poaceae); ಬಿಳಿ ದೊಡ್ಡ ಕಾಸಿಹುಲ್ಲು; ಸುವಾಸನೆಯುಳ್ಳ ಹುಲ್ಲು; ಎತ್ತರವಾಗಿ ಬೆಳೆಯುವುದು; ಇದರಿಂದ ಎಣ್ಣೆ, ಸುಗಂಧದ್ರವ್ಯ, ಸಾಬೂನು ತಯಾರಿಸುವರು. a kind of grass; a good seen ted fragranced flavor oil grass used to manufacture scents and toilet soaps.

ಕುಂತು ನಿಂತು ಆಟ kuntu nintu āṭa :

- ಇಬ್ಬರು ಆಟಗಾರರ ಆಟ; a double player game played by two players;
- ನೆಲದ ಮೇಲೊಂದು ವೃತ್ತ ಬರೆದು ವೃತ್ತದ ಕಡೆಗೆ ಬೆನ್ನು ಮಾಡಿ ಮೊದಲ ಆಟಗಾರ ತನ್ನ ಕೈಯಲ್ಲಿರುವ ಬಚ್ಚೆಚೂರನ್ನು ವೃತ್ತದ ಕಡೆಗೆ ತಲೆ ಮೇಲಿಂದ ಹಿಮ್ಮುಖವಾಗಿ ಬಿಸಾಡಬೇಕು;
- ಅದು ಆ ವೃತ್ತ ಬಿಟ್ಟು ಹೊರಗೆ ಹೋದರೆ ಸೋತಂತೆ; ಹೀಗೆ ಆಟ ಮುಂದುವರೆಯುವುದು.

ಕುಂತುಣ್ಣು kuntuṇṇu :

- ಸುಖ; ಭೋಗದ ಜೀವನ ನಡೆಸು; ಶ್ರೀಮಂತ(ಬ.ಜಿ); luxurious life; leading happy luxurious life;
- ಕುಳಿತ ಊಟ ಮಾಡು(ಚಾ.ಜಿ./ಮಂ.ಜಿ/ಮೈ.ಜಿ);
- ಸೋಮಾರಿತನ; ಮೈಗಳ್ಳತನ; *ಪ್ರ:* 'ಕುಂತುಣ್ಣನಿಗೆ ಕುಡಿಕೆ ಹೊನ್ನಿದ್ದರೂ ಸಾಲದು'*(ಗಾ)*;
- ***—ಕುಂತುಂಬೂರು*** : ಕುಳಿತು ಉಣ್ಣುವವರು; ಶ್ರೀಮಂತರು; rich people; the people who lead settled and rich life.

ಕುಂತೂರು kuntūru :

- ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ತಾಲ್ಲೋಕಿನ ವಿದ್ಯಾರಣ್ಯಪುರದ ಶಾಮಭಟ್ಟರ ವಶದಲ್ಲಿದ್ದ ಕ್ರಿ.ಶ.೧೬೪೨ರ ೪೬ನೇ ತಾಮ್ರ ಶಾಸನದಲ್ಲಿ 'ಕುಂತೂರ'ದ ಉಲ್ಲೇಖ ದೊರೆಯುತ್ತದೆ; a village has been referred in the 46th copper inscription of Shamabhatta Of Vidyaranyapura of Shringeri In Chikkamagaluru district;
- 'ಕುಂತೂರು' ಎಂಬುದು ಕುಂತಲದೇಶ ಎಂಬ ಪೌರಾಣಿಕ ಪ್ರದೇಶದ ಪ್ರಭಾವದಿಂದ ನಿಷ್ಪತ್ತಿಯಾಗಿರಬಹುದಾದ ಸ್ಥಳನಾಮವಾಗಿದೆ;
- 'ಕುಂತೂರು' ಪದವನ್ನು ಕುಂತು+ಊರು>ಕುಂತೂರು ಎಂದೂ ಬಿಡಿಸಬಹುದು; ಹಾಗಾದರೆ ಇಲ್ಲಿ 'ಕುಳಿತು' (ಕುಂತು) ಪದದ ಸ್ಪಷ್ಟತೆ ಇದ್ದರೂ ಇಲ್ಲಿ ಅನ್ವಯ ಮಾಡುವುದು ಕಷ್ಟ;
- ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೋಕಿನಲ್ಲಿಯೂ ಒಂದು 'ಕುಂತೂರು' ಎಂಬ ಸ್ಥಳವಿದೆ; ಮಾದೇಶ್ವರ ಈ ಕುಂತೂರಿನಲ್ಲಿ ಸ್ವಲ್ಪ ಕಾಲ ಇದ್ದ ಎಂಬ ಉಲ್ಲೇಖವಿದೆ('ಮಲೆಮಾದೇಶ್ವರ' ಕಾವ್ಯ); there is one more reference regarding this village that of Kunturu Of Kollegala taluk Chamarajanagara dist in The Folk Epic of Malemahadeswara;
- ಊರಿನ ಹೆಸರುಗಳು ಸಮಾನವಾಗಿ ತಲೆದೋರಬಹುದು; ಆ ಕಾರಣದಿಂದ ಈ ಕುಂತೂರಿಗೂ ಆ ಕುಂತೂರಿಗೂ ಸಂಬಂಧವಿರಲಾರದು?

(E.C- ೧೧, ಚಿಕ್ಕ.ಜಿ.)

- ಕೊಳ್ಳೇಗಾಲ ತಾಲ್ಲೋಕಿನ ಕ್ರಿ.ಶ.೧೪೯೯ರ ೮ನೇ ಶಾಸನದಲ್ಲಿ ಇದರ ಉಲ್ಲೇಖ; It has been referred in 8th inscription of Kollegala taluk of Chamarajanagara dist;
- 'ಕುಂತ' ಎಂದರೆ ಆಯುಧ(ಈಟಿ, ಭರ್ಜಿ) ಎಂಬ ಅರ್ಥವಿರುವುದರಿಂದ, ಈ ಹಿನ್ನೆಲೆಯಲ್ಲಿ ಇಲ್ಲಿನ 'ಕುಂತೂರು' ಸ್ಥಳನಾಮ ಬಂದಿರಬಹುದು;
- ಇದು ಪ್ರಾಚೀನ ನಾಡಿನಲ್ಲಿ ಹದಿನಾಡಿನ ವಿಭಾಗದಲ್ಲಿತ್ತು; ವೀರಶೈವ ಮಠ ಈ ಗ್ರಾಮದಲ್ಲಿತ್ತು;
- ವಿಜಯನಗರ ದೊರೆ ಅಚ್ಯುತರಾಯನ ಆಳ್ವಿಕೆಯಲ್ಲಿ ರಾಯಭಟ್ಟಯ್ಯ ಕುಂತೂರ ಮಹಾಮತ್ತಿನ ಮಠದ ಸಂಬಳಸರತಿ ೩೦ ವರಹವನ್ನು ಸಾಲೂರು ಮಠದ ನಂಜಯ ದೇವರಿಗೆ ಸರ್ವಮಾನ್ಯ ಮಾಡಿದರು.

(E.C- ೪, ಮೈ.ಜಿ.)

- ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೋಕಿನ ಕ್ರಿ.ಶ.೧೫೦೬ರ ೧೦೬ನೇ ಶಾಸನದಲ್ಲಿ ಉಮ್ಮತೂರಿನ ಮಲ್ಲರಾಜರು

ನಾಗಭಟ್ಟರಿಗೆ ದಾನ ಕೊಟ್ಟ ಗ್ರಾಮಗಳಲ್ಲಿ 'ಕುಂತೂರು' ಒಂದಾಗಿತ್ತು.

(E.C- ೭, ಮಂಡ್ಯ.ಜಿ.)

ಕುಂದ kunda :

- ಬೆಟ್ಟ; ಗುಡ್ಡಗಳ ಸಾಲು; a ranges of hills; a line of hills/mountains;
- ಒಂದು ಬಗೆಯ ಮಲ್ಲಿಗೆ ಹೂ(ಹ.ಸೋ.ಪ); ಕಸ್ತೂರಿ ಮಲ್ಲಿಗೆ; ಕುಂದಪುಷ್ಪ(ತು.ನಿ); a kind of jasmine flower;
- ಮಣ್ಣು, ಇಟ್ಟಿಗೆ, ಕಲ್ಲು, ಸಿಮೆಂಟೀನಿಂದ ನಿರ್ಮಿಸಿದ ಕಂಬ(ತು.ನಿ); a pillar built with cement crushed stone bricks soil etc; a vessel manufactured by mud;
- ಮಣ್ಣಿನ ಬೋಗಣಿ; ಹಸಿ ಇದ್ದಾಗಲೇ ಇದರ ತಳದಲ್ಲಿ ಚಿಕ್ಕಚಿಕ್ಕ ಚೂಪಾದ ಬೆಣಚು ಕಲ್ಲುಗಳನ್ನು ಹುದುಗಿಸಿರುವರು;
- ಮೆಣಸಿನಕಾಯಿ ಹಾಕಿ ಕೋಲಿನಿಂದ ಅರೆದಾಗ ಬೇಗನೆ ನುಣ್ಣಗಾಗುವುದು;
- ಅಲೆಮಾರಿಗಳಲ್ಲಿ ಕೊಡಗು, ಶಿವಮೊಗ್ಗ ಭಾಗದಲ್ಲಿ ಹೆಚ್ಚು ಬಳಕೆ;
- ಬಾಡಿದ; ಕೆಟ್ಟ; ದಕ್ಕೆ; ಊನ; ಕಳಂಕ(ಬೆ.ಜಿ); *ಪ್ರ:* 'ಏನ ಕುಂದ ಕಂಡೆಪಾ ನನ್ನ ಹತೇಕ';
- ತ: ಕುನ್ಱಮ್, ತೆ: ಕೊಂಡಕೊನ್ಱ, ಮ: ಕುನ್ನಮ್, ತು: ಕುಂಜ.
- ***—ಕುಂದ ಗಡಿಗಿ/ಕುಂದಾಲಗಡಿಗೆ*** : ಮದುವೆಯಲ್ಲಿನ ಶಾಸ್ತ್ರಗಳಲ್ಲಿ ಬಳಸುವ ಗಡಿಗಿ; ಅರಣಿಗಡಿಗೆ; a ritual pitcher; a pot used in marriage ceremony /ritual;
- ***—ಕುಂದಕ/ಕುಂದೆಲ್*** : ದೋಷ; ಕೊರತೆ; ಅವಗುಣ; ಕೆಟ್ಟ; ನ್ಯೂನತೆ; ಕಡಿಮೆ(ಮಂ.ಜಿ); defect impairment short coming.

ಕುಂದಣ/ಕುಂದಲ/ಕುಂದಳ/ಕುಂದಾಣಿ kundaṇa/kundala/kundaḷa/kundāṇi :

- ಅಪರಂಜಿ; ಅಪ್ಪಟ ಚಿನ್ನ; ರತ್ನ; the pure gold; 24 carrot gold;
- ಕುಂದಣಿಗೆಲಸ ಮಾಡುವುದು; ಚಿನ್ನಕ್ಕೆ ಪುಟ ಕೊಡುವ ಕ್ರಿಯೆ; ಚಿನ್ನದಲ್ಲಿ ಕೆತ್ತನೆ; ಹರಳು ಕೂರಿಸುವ ಕೆಲಸ(ಪಾಂ.ವ್ಯ.ಪ.ಕೋ); *ಪ್ರ:* 'ನವಿಲ ರೇಶಿಮಿ ಕಸೂತಿ ಕಣ್ಣ ಮೇಲ ಕುಂದಳದ ಹರಳ' (ದುಂಡುಮಲ್ಲಿಗೆ); *ಪ್ರ:* 'ಮಂಜಲ್ಲ ಮಳೆ ಹನಿಯಲ್ಲ ಕುಂದಾಣಿ ಬೈರುವನ ಕುಡಿ ಬೆವರು'; engraving on gold plate; to do the work of goldsmith;
- ಎಡಕ್ಕೆ ತೆಗೆಯುವ ಬೈತಲೆ(ಬೀ.ಜಿ);
- ಒನಕೆ; a light log used to husk paddy or to powder spice;
- ಕುಂದಣ; *ಪ್ರ:* 'ಕುಂಕುಮ ಹಚ್ಚಿರಿ ನಮ್ಮ ಕುಂದಲದ್ದರಗಳಿಗೆ'; ಒಪ್ಪ; *ಪ್ರ:* 'ಅಂದಕ್ಕೆ ಕುಂದಣ ಇಟ್ಟಂಗೆ'(ಗಾ);
- ***—ಕುಂದಣಗಾರ*** : ಅಕ್ಕಸಾಲಿಗ; ಚಿನ್ನ ಬೆಳ್ಳಿ ಕೆಲಸ ಮಾಡುವವನು; a goldsmith; a person who make gold ornaments;
- ***—ಕುಂದಣಗಿಂಡಿ*** : ಚಿನ್ನದ ಗಿಂಡಿ; ಮಕ್ಕಳಿಗೆ ಹಾಲು ಕುಡಿಸಲು ಬಳಕೆ; a small cup that is used to feed milk for young children;
- ***—ಕುಂದಣಗುಸುರಿ*** : ಚಿನ್ನದಲ್ಲಿ ಮಾಡಿದ ಕಸೂತಿ ಅಥವಾ ಕೆತ್ತನೆಯ ಕೆಲಸ; a gold handy craft; a handy craft of goldthreads;
- ***—ಕುಂದಣದ ಚಿನ್ನ*** : ಹೆಚ್ಚು ಬೆಲೆಯುಳ್ಳ ಆಭರಣ; ತ: ಕುನ್ಱನ, ಕುಂದನಮ್; ತು: ಕುಂದನ; ತೆ: ಕುಂದನಮು; 'ಕುಂದಣ' ಪದಕ್ಕೆ 'ಲ' ಮತ್ತು 'ಳ' ಗಳು ಪರ್ಯಾಯವಾಗಿ ಬರುವ ಮೂಲಕ 'ಣ'ಕಾರ ವ್ಯತ್ಯಯ ಪಡೆಯುತ್ತದೆ; ದ್ರಾವಿಡ ಭಾಷೆಗಳಲ್ಲಿ ಣ, ಲ ಮತ್ತು ಳ ಗಳು ಪರಸ್ಪರ ವ್ಯತ್ಯಾಸ ಪಡೆಯುವುದು ಸಾಮಾನ್ಯ; ಈ ಪದ ಕನ್ನಡ ಪದದಂತೆಯೇ ಇತರ ದ್ರಾವಿಡ ಭಾಷಾ ರೂಪಗಳೂ ಕಂಡುಬರುತ್ತವೆ; ತಮಿಳಿನ 'ಕುಂದನಮ್' ನಮ್ಮ ಹಳಗನ್ನಡ ರೂಪದಂತೆಯೇ ಇದೆ, ತೆಲುಗಿನ 'ಕುಂದನಮು' ಪದದಲ್ಲಿನ 'ಮು' ತೆಲುಗಿಗೇ ವಿಶೇಷವಾಗಿರುವುದಾಗಿದೆ, ಇದು ಹಳಗನ್ನಡದ 'ಮ್'ನ್ನು ಹೋಲುತ್ತದೆ. an high quality gold; an high cost gold jewelry.

ಕುಂದಣಿಗೆ/ಕುಂದ್ನಿ/ಕುಂದಣ್ಗೆ/ಕುಂದಲಿಗೆ kundaṇige/kundni/kundaṇge/kundalige :

- ಕುಟ್ಟುವಾಗ ಒರಳು ಕಲ್ಲಿನಿಂದ ದವಸ ಧಾನ್ಯಗಳು ಆಚೆ ಈಚೆ ಸಿಡಿಯದಂತೆ ಒರಳಿನ ಸುತ್ತಲೂ ಇಡುವ ಬಿದಿರಿನಿಂದ ಹೆಣೆದ, ತೆಂಗಿನ ಮರದ ಅಥವಾ ಲೋಹದ ಸಾಧನ; a metal tool or weaved by coconut leaf that is used to cover the husked pit while husking grains;
- ಒಂದೂವರೆ ಅಡಿ ಎತ್ತರದ ಚಿಕ್ಕ ತಡೆಗೋಡೆ; a short wall measured one and half feet;
- ಏಕಕಾಲದಲ್ಲಿ ೨–೩ ಮಂದಿ ಕುಟ್ಟಲು ಅನುಕೂಲ;
- —*ಕುಂದಲಿಕೆ ಶಾಸ್ತ್ರ* : ಮೂಡಲಪಾಯದ ದೈತ್ಯ ಪಾತ್ರದ ತಲೆಗೆ ಕಿರೀಟದಂತೆ ಅಲಂಕರಿಸಲು ಬಳಕೆ; ನೇಕಾರರಲ್ಲಿ ಅರಿಶಿನಶಾಸ್ತ್ರದ ಮೊದಲು ವಧೂ ವರ ಎರಡೂ ಕಡೆಯವರು ಒಟ್ಟಿಗೆ ಕಳಸ ಪೂಜಿಸಿ ನೀರು ತರುವ ಶಾಸ್ತ್ರ; a ritual in weavers community; to use the decoration of crown of a giant character of moodalpaya drama art;
- ಮದುವೆ ಮನೆಯ ಚಪ್ಪರದ ಕೆಳಗೆ ಐದು ಜನ ಮುತ್ತೈದೆಯರು ಭತ್ತ ಕುಟ್ಟುವ ಶಾಸ್ತ್ರ; ಕುಟ್ಟಿದ ಭತ್ತ ಮದುವೆಯ ಕೆಲವು ಶಾಸ್ತ್ರಗಳಲ್ಲಿ ಬಳಕೆ; ಇಲ್ಲಿ ಕುಂದಣಿಗೆಯ ಪ್ರಧಾನ ಬಳಕೆಯಿಂದಾಗಿ ಕುಂದ್ಲಿಕೆಶಾಸ್ತ್ರ ಎಂದಿದ್ದಾರೆ; a ritual of husking paddy by five holy women; ಮ: ಕುಂದಾಣಿ, ತೆ: ಕುಂದಿ, ತ: ಕುಂದಾಣಿ.

ಕುಂದತ್ತೂರು/ಕುನ್ದತ್ತೂರು kundattūru :

- ಕೊಳ್ಳೇಗಾಲ ತಾಲ್ಲೋಕಿನ ಕ್ರಿ.ಶ.೧೦ನೇ ಶತಮಾನದ ೧೦ನೇ ಶಾಸನದಲ್ಲಿ ಈ ಊರಿನ ಉಲ್ಲೇಖ; a village a line of hill station that has been referred in 10th inscription of 10th century of Kollegala Taluk Chamarajanagar dist; ಊರಿನ ಸಮೀಪ ಬೆಟ್ಟಗುಡ್ಡಗಳು ಇದ್ದುದರಿಂದ, ಈ ಸ್ಥಳನಾಮ ಬಂದಿರಬಹುದು;
- ಗಂಗರ ದೊರೆ ಕೊಙ್ಗಣಿವರ್ಮ ಆಡಳಿತ ನಡೆಸುವ ಸಂದರ್ಭದಲ್ಲಿ ಈ ಊರನ್ನು ಪರಬ್ಬಯರ(ಶಿ) ಆಳುತ್ತಿದ್ದ ವಿಚಾರವಿದೆ;
- ಮಹಾದೇವರ ದೇವರ ನಿತ್ಯ ಸೇವೆಗೆ ಗ್ರಾಮದ ಹನ್ನೆರಡು ಮಹಾಜನರು ಭೂದಾನ ಮಾಡಿದರು; ದಾನಪ್ರತಿಗ್ರಹಿ ಪರಮ(ಸತ್ತಿ)ಭಟಾರ.

(E.C-೪, ಮೈ.ಜಿ.)

ಕುಂದರ್ಪಿ kundarpi :

- ಅನಂತಪುರ ಜಿಲ್ಲೆ ಕಲ್ಯಾಣದುರ್ಗ ತಾಲ್ಲೋಕಿನ ಕ್ರಿ.ಶ.೧೩೪೦ರ ೧೭೭ನೇ ಶಾಸನದಲ್ಲಿ ಇದರ ಪ್ರಸ್ತಾಪವಿದೆ; a village that has been referred in 177^{th} inscription of Kalyanduraga Taluk Of Anantapura District Andrapradesh;
- ಮುಮ್ಮಡಿ ವೀರಬಲ್ಲಾಳನ ಆಳ್ವಿಕೆಯ ಉಲ್ಲೇಖ; It is referring a King IIIrd Veeraballala;
- ಶಾಸನದಲ್ಲಿ 'ಕುಂದುರುಪೆ' ಎಂದಿದೆ;
- ಇದು ಒಂದು ಸೀಮೆಯಾಗಿತ್ತೆಂದು (ಕುಂದುರುಪೆ ಸೀಮೆ) ಮತ್ತೊಂದು ಶಾಸನ ತಿಳಿಸುತ್ತದೆ;
- ಕುಂದುರುಪೆ>ಕುಂದರ್ಪಿ ಆಗಿರಬಹುದು; ಅರ್ಥ ತಿಳಿದುಬರುವುದಿಲ್ಲ.

(ಆಂ.ಪ್ರ.ಕ.ಶಾ.ಬಾ.೧)

ಕುಂದಾ kundā :

- ಬೆಳಗಾವಿಯ ಒಂದು ಪ್ರಸಿದ್ಧವಾದ ಸಿಹಿ ತಿಂಡಿ; ಹಾಲು, ಸಕ್ಕರೆ, ಖೋವಾ, ಹಸುವಿನ ತುಪ್ಪ ಬಳಸಿ ಮಾಡುವರು; ಗಟ್ಟಿ ಹಾಲನ್ನು ಚೆನ್ನಾಗಿ ಕಾಯಿಸಿ ಮಂದವಾದ ನಂತರ ಸಕ್ಕರೆ, ಖೋವಾ, ತುಪ್ಪ, ಏಲಕ್ಕಿ, ಒಣಹಣ್ಣುಗಳನ್ನು ಸೇರಿಸಿದ ಸಿಹಿ ಪದಾರ್ಥ; a famous sweet snacks of Belagavi of karantaka; it is made of milk sugar dry fruits ghee;
- ಧಾರವಾಡ ಪೇಡಕ್ಕೆ, ದಾವಣಗೆರೆ ಬೆಣ್ಣೆ ದೋಸೆಗೆ, ಬೆಳಗಾವಿ 'ಕುಂದಾ', 'ಕರದಂಟು'ವಿಗೆ ಪ್ರಸಿದ್ಧವಾಗಿವೆ.

ಕುಂದಾಣ ದೀಪ kundāṇa dīpa :

- ನಗರ್ತ ಸಮುದಾಯದ ವಿವಾಹ ಸಂದರ್ಭದಲ್ಲಿ ಹಚ್ಚುವ ಪವಿತ್ರವಾದ ದೀಪ; a holy lamp lighting at the time of marriage in Nagartha Community;
- ಕರಾವಳಿ ಪ್ರದೇಶದಲ್ಲಿರುವ ನಗರ್ತ ಸಮುದಾಯದಲ್ಲಿನ ಪ್ರತಿ ಶುಭ ಕಾರ್ಯದಲ್ಲಿ ಅಂದರೆ ನಿಶ್ಚಿತಾರ್ಥ, ಮದುವೆಯ ಸಂದರ್ಭದಲ್ಲಿ ಹೆಣ್ಣಿನ ತಂದೆತಾಯಿಯರು ಮಂಟಪದಲ್ಲಿ ಹಚ್ಚುವ ಪವಿತ್ರವಾದ ದೀಪ; Nagartha - a Coastal Community of Karnataka;
- ಇಲ್ಲಿ ಬೆಳಕಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುವುದೇ ವಿಶೇಷ.

ಕುಂದಾಪುರ kundāpura :

- ಕ್ರಿ.ಶ.೧೮೯೪-೯೫ರ ೧೬೭ನೇ ಶಾಸನದಲ್ಲಿ 'ಕುಂದಾಪುರ'ದ ಪ್ರಸ್ತಾಪ; A place which has been referred in 167th inscription Of Kundapura(DK);
- ಕುಂದವರ್ಮ ಎಂಬ ರಾಜ ಕುಂದೇಶ್ವರ ಎಂಬ ದೇವಸ್ಥಾನ ಕಟ್ಟಿಸಿದ್ದರಿಂದ, ಆ ದೇವಾಲಯದ ಕಾರಣದಿಂದ ಈ ಹೆಸರು ಬಂದಿರಬಹುದು;
- 'ಪುರ' ಎಂದರೆ ಪಟ್ಟಣ, ನಗರ ಎಂದು ಅರ್ಥ;
- ಕುಂದವರ್ಮ ಆಳಿದ್ದರಿಂದ ಕುಂದಾಪುರ ಹೆಸರು ಚಾಲ್ತಿಗೆ ಬಂದಿರುವ ಸಾಧ್ಯತೆ;
- 'ಕುಂದ' ಎಂದರೆ ಬೆಟ್ಟ, ಗುಡ್ಡ ಎಂಬ ಅರ್ಥವಿರುವುದರಿಂದ, ಬೆಟ್ಟಗುಡ್ಡಗಳಿಂದ ಕೂಡಿದ ಪಟ್ಟಣ(ಪುರ) ಕುಂದಾಪುರ ಎಂದು ಆಗಿರಬಹುದು; it means hill mountain due to its etymological meaning the place has become Kundapura;
- 'ಕುಂದ' ಎಂದರೆ ಒಂದು ಜಾತಿಯ ಮಲ್ಲಿಗೆ ಮೊಲ್ಲೆ ಎಂಬ ಅರ್ಥವಿರುವುದರಿಂದ, ಮಲ್ಲಿಗೆ ಬೆಳೆಯುವ ಪುರ ಎಂಬುದಾಗಿಯೂ 'ಕುಂದಾಪುರ' ಹೆಸರು ಆಗಿರಬಹುದು.

(E.C-೯, ಮಂ.ಜಿ.)

ಕುಂದಿಕೆಕೇರು/ಕುಂದುಕೇರು kundikekēru/ kundukēru :

- ದನಗಳ ಸೆಲೆರೋಗ ಪರಿಹಾರಕ್ಕಾಗಿ ಆಚರಿಸುವ ಒಂದು ಆಚರಣೆ; a remedial ceremony of controlling; A cattle disease –SELE;
- 'ಸೆಲೆ' ಎಂದರೆ ದನಗಳ ಮೂಗು, ಬಾಯಿ ಒಣಗಿ ಬಾಯಾರಿಕೆ ಹೆಚ್ಚಾಗಿ ಕಿವಿ ತಣ್ಣಗಾಗಿರುವುದು ಲಕ್ಷಣ; it is symptom of dry mouth and cold ear;
- ಇದಕ್ಕೆ ಔಷಧಿಯಾಗಿ ಬೆಲ್ಲ ಹಾಕಿದ ಬಿಸಿನೀರು ಕುಡಿಸಿ 'ಈಶ್ವರಿ ಸೊಪ್ಪು' ತಿನ್ನಿಸುತ್ತಾರೆ; cattle are given jaggory, Hot water and `Eswari' grass; `Eswari' herb/greens;
- ನಿವಾರಣೆಗಾಗಿ ಒಂದೇ ಹೆಸರಿನ ಇಬ್ಬರು ಹೆಣ್ಣು ಮಕ್ಕಳ ಕೈಯಲ್ಲಿ ಒಂದು ಮೊರ ಕೊಟ್ಟು ಅದಕ್ಕೆ ಮೂರು ಒಲೆ ಬೂದಿ, ಒಂದು ಚಿಕ್ಕ ಮರದ ಗೊಂಬೆ ಹಾಕಿ ದನದ ಬೆನ್ನಿನ ಮೇಲೆ ಹೇರಿ ಹೊಟ್ಟೆಯ ಅಡಿಯಲ್ಲಿ ತೆಗೆದುಕೊಳ್ಳುತ್ತಾರೆ;
- ಇದರಿಂದ 'ಸೆಲೆ' ನಿವಾರಣೆಯಾಗುತ್ತದೆಂಬ ನಂಬಿಕೆ.

ಕುಂದಿಲಿಪ್ಪೆ ಕಾವಲು kundilippe kāvalu:

ಜುಂಜಪ್ಪ ಮಹಾಕಾವ್ಯದಲ್ಲಿ ಬರುವ ಹುಲ್ಲುಗಾವಲಿನ ಒಂದು ಹೆಸರು; ಗೋಮಾಳ, ದನಕರುಗಳು ಮೇಯಲು ಮೀಸಲಾದ ಜಾಗ; A green pasture; a pasture mentioned in The Folk Epic Junjappa.

ಕುಂದು೧ kundu[1] :

- ಕುಗ್ಗು; ತಗ್ಗು; ಕೊರಗು; ಬಡವಾಗು; ಕ್ಷಯಿಸು; ಪ್ರ: 'ಮೈಯಾಗಿನ ಶಕ್ತಿ ಕುಂದುತ್ತ ಹೋದಂತೆ ಕೋಪ ತಣ್ಣಗಾಯಿತು'; to less sink; slackness, to suffer;
- ಒಣಗು; ಬಾಡು; ಸೊರಗು; become weak, to dry to sink to be bent down;

  ಪ್ರ: ಕಂದಮ್ಮ ಬರುವಾಗ ಕಂದೀದೆ ಕುಂದೀದೆ
ಕಂದೀದೆಯಲೆ ಮಡಲಾಗೆ ನನ ಕಂದ
ಹಡದಮ್ಮ ನೋಡಲು ಉರದ್ದಾಂಗೆ(ಸೋ.ಚಿ.ಪ);

- ಕೊರತೆ; ದೋಷ; ನ್ಯೂನತೆ. *ಪ್ರ:* 'ನನ್ನಲ್ಲಿ ಕಂಡ ಕುಂದು ಏನು'; short come defect, impairment;
- ದ್ರವ ಪದಾರ್ಥ ಕುದಿದು ಕಡಿಮೆಯಾಗು; ಹದವಾದ ಪಾಕಕ್ಕೆ ಬರುವುದು(ತು.ನಿ);
- ಮಗು(ತು.ನಿ);
- ತ: ಕುನ್ದು, ಮ: ಕುಱು, ತು: ಕುಂದು.

ಕುಂದು೨ kundu[2] :

- EPHEMERAZ FEVER ದನಗಳಿಗೆ ಬರುವ ರೋಗ; a cattle fever;
- ಇದರ ಲಕ್ಷಣ: ೩–೪ ದಿನಗಳ ಕಾಲ ದನಗಳು ನಡೆಯುವಾಗ ಹಿಂಗಾಲು ಅಥವಾ ಮುಂಗಾಲುಗಳನ್ನು ಕುಂಟುತ್ತಾ ಹಾಕುತ್ತವೆ ಅಥವಾ ಕಾಲುಗಳನ್ನು ನೆಲಕ್ಕೆ ಊರಲಾಗದೆ ದನಗಳು ಮೇವು ಸಹ ತಿನ್ನದೆ ಮಲಗಿ ಬಿಡುವುವು; the symptom of this cattle fever is causes are limping by back legs;
- ಚೇತರಿಸಿಕೊಂಡ ನಂತರ ಎಂದಿನಂತೆ ಇರುತ್ತವೆ;
- ತುಂಬೆಗಿಡದ ರಸವನ್ನು ದನಗಳಿಗೆ ಕುಡಿಸಬೇಕು; ಕಿವಿಗೂ ಸಹ ರಸ ಹಾಕಿ ಬೆನ್ನಿಗೆ ತಿಕ್ಕುವುದು;
- ಹೊಸ ಲಕ್ಕಿ ರಸವನ್ನು ಒಂದು ಚಮಚದಷ್ಟು ದನದ ಕಿವಿಗೆ ಹಾಕಿ ಬೆಲ್ಲದ ಟೀ ಮಾಡಿ ಹಾಲು ಬೆರಸದೆ ಒಂದು ತಂಬಿಗೆಯಷ್ಟು ದಿನಕ್ಕೆ ೪–೫ ಬಾರಿ ಕುಡಿಸುವುದು;
- ***—ನಡುಗುಗುಂದು*** : ದನಗಳು ಒಂದೇ ಸಮನೆ ನಡುಗುವ ರೋಗ; the shaking; the diseases of cattle;
- ***—ಊದುಗುಂದು*** : ದನಗಳ ಹೊಟ್ಟೆಯುಬ್ಬುವ ಒಂದು ರೋಗ; a disease of cattle; a stomach swelling disease of cattle;
- ***—ರಕ್ತಗುಂದು*** : ದನಗಳ ಮೂತ್ರದಲ್ಲಿ ರಕ್ತಹೋಗುವ ರೋಗ; a cattle urine disease of blood passing in their urine;
- ***—ಹೆಗ್ಗುಂದು*** : ದನಗಳಿಗೆ ಕೆಮ್ಮು ಬರುವ ರೋಗ. the disease of cattle coughing.

ಕುಂದೂರು kundūru :

- ಚನ್ನರಾಯಪಟ್ಟಣ ತಾಲ್ಲೋಕಿನ ಕುಂದೂರು ಪ್ರದೇಶದಲ್ಲಿ ದೊರೆತ ಕ್ರಿ.ಶ.೧೧೭೩ಕ್ಕೆ ಸೇರಿದ ೫೫ನೇ ಹೊಯ್ಸಳ ವೀರಲ್ಲಾಳನ ಶಾಸನದಲ್ಲಿ ಕುಂದೂರಿನ ಪ್ರಸ್ತಾಪವಿದೆ; a village that has been referred in 55[th] inscription of Kunduru, Channarayapattana taluk; it is concerned to Hoysala King Veera Ballala Of 1173AD;
- ಕುಂದೂರು ಅಥವಾ ಕುಂದ ಊರು ಪ್ರಾಕೃತಿಕ ಹಿನ್ನೆಲೆಯಲ್ಲಿ ನಿಷ್ಪತ್ತಿಯಾಗಿರುವ ಸ್ಥಳನಾಮ;
- 'ಕುಂದ' ಎಂದರೆ 'ಬೆಟ್ಟ' ಎಂದು ಅರ್ಥ; ಬೆಟ್ಟದಿಂದ ಸುತ್ತುವರಿದ ಊರು 'ಕುಂದೂರು' ಎಂದಾಗುತ್ತದೆ;
- ಹಾಗೆಯೇ ಚನ್ನರಾಯಪಟ್ಟಣದ ೪೮ರ ಶಾಸನದಲ್ಲಿ ಕುಂದೂರಿಗೆ ವಿಜಯಮಾಧವಪುರ ಎಂಬ ಹೆಸರಿದ್ದುದರ ಉಲ್ಲೇಖವಿದೆ ('ವಿಜಯಮಾಧವಪುರವಾದ ಕುಂದೂರಲಿ')

(E.C- ೧೦, ಹಾ.ಜಿ.)

- ಚಿಕ್ಕಮಗಳೂರು ಜಿಲ್ಲೆ ಮೂಡಗೆರೆ ತಾಲ್ಲೋಕು 'ಕಳಸ' ಪ್ರದೇಶದಲ್ಲಿ ದೊರೆತಿರುವ ಕ್ರಿ.ಶ.೧೩ನೇ ಶ.ದ ೮೬ನೇ ಶಾಸನದಲ್ಲಿ 'ಕುಂದದೂರು' ಎಂಬ ಸ್ಥಳದ ಉಲ್ಲೇಖವಿದೆ;
- ಈ 'ಕುಂದದೂರು' = ಕುಂದದ + ಊರು ಎಂದಾಗುತ್ತದೆ; ಇದು 'ಕುಂದೂರು' ಎಂದೂ ಆಗಬಹುದು;
- ಇದರ ಅರ್ಥವೂ 'ಬೆಟ್ಟದೂರು'('ಕುಂದ'=ಬೆಟ್ಟ) ಎಂದೇ ಆಗುತ್ತದೆ;
- ಆದಕಾರಣ ಇದು ಭೌಗೋಳಿಕ ಸ್ಥಳನಾಮವೆಂದೇ ಗುರುತಿಸಬಹುದು.

(E.C- ೧೧, ಚಿಕ್ಕ.ಜಿ.)

- ಕ್ರಿ.ಶ.೧೩೬೯ರ ಚನ್ನಪಟ್ಟಣ ತಾಲ್ಲೋಕಿನ ಮಳೂರುಪಟ್ಟಣ ಗ್ರಾಮದ ೧೫೦ನೇ ಶಾಸನವೊಂದರಲ್ಲಿ 'ಕುಂದೂರು ದುರ್ಗ' ಎಂಬ ಹೆಸರಿದೆ.

(E.C-IX- ಬಿ.ಎಲ್.ರೈಸ್; ಬೆಂ.ಜಿ.)

ಕುಂದೇಲು/ಕುಂದ್ಲಿ kundēlu/kundli :

ಮೊಲದ ಮರಿ; a baby rabbit; the young one of rabbit;

—ಕುಂದ್ಲಿ ಬಾಡು : ಮೊಲದ ಮಾಂಸ; ಬುಡ್ಗ ಜಂಗಮ ಬುಡಕಟ್ಟಿನವರು ಬೇಟೆಯಾಡುವ ವೃತ್ತಿಯಿಂದ ಜೀವನ ನಡೆಸುವರು; ಇವರು ಮೊಲವನ್ನು ಕುಂದ್ಲಿ ಎನ್ನುವರು. the meat of the young rabbit that is hunted by budga an untouchable caste Of Andhra And Karnataka border.

ಕುಂದ್ರಮಣೆ/ಕುಂಡ್ರುಮಣೆ kundramaṇe/ kunḍrumaṇe :

- ಎತ್ತಿನ ಗಾಡಿಯಲ್ಲಿ ಗಾಡಿ ಹೊಡೆಯುವವನು ಕುಳಿತುಕೊಳ್ಳಲು ಮಾಡಿರುವ ತ್ರಿಕೋಣಾಕೃತಿಯ ರಚನೆ; ತಿಕಡಿ(ಮೈ.ಜಿ/ಹಾ.ಜಿ); a sitting seat; a triangle shaped sitting seat of a cart driver;
- ಜಾಡಿ ಪಟ್ಟಿ; ನೇಕಾರರು ಕುಳಿತುಕೊಳ್ಳುವ ಮಣೆ(ನೇ.ವೃ.ಪ.ಕೋ). a seat of weaver during weaving looming place.

ಕುಂದ್ರಾಕ್ಷಿ kundrāksi :

ಒಂದು ಬಗೆಯ ಬಳ್ಳಿಯಲ್ಲಿ ಬಿಡುವ ಹಣ್ಣು; ಹುಳಿ ರುಚಿ ಹೊಂದಿದ್ದು ಉಪ್ಪು ಖಾರ ಬೆರಸಿ ಹಣ್ಣು ಕತ್ತರಿಸಿ ಹಚ್ಚಿ ತಿನ್ನುವರು. a kind of fruit; it has a sour taste.

ಕುಂದ್ರಿ kundri :

- ಚಿಕ್ಕ; ಗಿಡ್ಡ; ಎಳೆಯ; Tender small short;
- ಮಲೆನಾಡು ಮತ್ತು ಕರಾವಳಿಯ ಭಾಗದಲ್ಲಿ ಬೆಳೆಯುವ ಗಿಡ್ಡ ಜಾತಿಯ ತೆಂಗು; ಇದರಲ್ಲಿ ಹೆಚ್ಚು ನೀರು ಇರುವುದರಿಂದ ಎಳನೀರಿಗೋಸ್ಕರ ಬೆಳೆಯುವರು; ಇದರಲ್ಲಿ ಒಳಗಿನ ಕಾಯಿ ತಿರುಳು ಬಹಳ ಕಡಿಮೆಯಾಗಿ ತೆಳುವಾಗಿರುತ್ತದೆ(ತು.ನಿ); A Species of short coconut plant grown in the coastal Karnataka and malenadu;
- ಚಿಕ್ಕ ಆಕಾರದ ದೋಣಿ(ತು.ನಿ).

ಕುಂಪಟೆ/ಕುಪ್ಪಟೆ kumpaṭe/kuppaṭe:

- ಅಗ್ಗಿಷ್ಟಕೆ; ಅಕ್ಕಸಾಲಿಗ ಬೆಂಕಿಯನ್ನು ಇಟ್ಟುಕೊಳ್ಳಲು ಬಳಸುವ ಮಡಿಕೆ(ಪಾಂ.ವೃ.ಪ.ಕೋ); A round container which is madeup of mud/soil used to collect fire by goldsmith;
- ಕುಮ್ಮಟ, ಕುಮ್ಮಟೆ ಕುಪ್ಪಡಿಗೆ ಪದಗಳೂ ಇವೆ;
- ತ: ಕುಮ್ಮಟ್ಟಿ/ಕಮ್ಬಿ/ಕಮ್ಬಿಡುಚಟ್ಟಿ; ಮ: ಕುಮ್ಬಲ್; ಕುಮ್ಮಲ್; ತೆ: ಕುಂಪಟ.
- ಕನ್ನಡದ ಕುಂಪಟೆ, ಆಮೇಲೆ ಕುಪ್ಪಟೆ ಆಗಿರಬಹುದು; ಅನುನಾಸಿಕವನ್ನು ಕಳೆದುಕೊಂಡು ಅದರ ಪರಿಹಾರಾರ್ಥವಾಗಿ 'ಮ' ಆಮೇಲೆ 'ಪ್ಪ' ಎಂದು ದ್ವಿತ್ವ ಆಗಿರುವ ಸಾಧ್ಯತೆಯಿದೆ; ಕುಮ್ಪಟೆ>ಕುಪ್ಪಟೆ (ವಿಜಾತೀಯ ದ್ವಿತ್ವ > ಸಜಾತೀಯ ದ್ವಿತ್ವ ಆಗಿದೆ).

ಕುಂಪಣಿ kumpaṇi :

- ಬ್ರಿಟಿಷರು ವ್ಯಾಪಾರ ವಹಿವಾಟು ನಡೆಸಲು ಮಾಡಿಕೊಂಡ ಸಂಘಗಳು; ಬ್ರಿಟಿಷರ ಈಸ್ಟ್ ಇಂಡಿಯಾ ಕಂಪನಿ; A company an organization of people who work together in trade and tariff;
- ಇಂಗ್ಲಿಷರ 'Company' ಪದವೇ ನಮ್ಮ ಜನರ ಬಾಯಲ್ಲಿ ಕಂಪಣಿ ಆಗಿ ಪರಿವರ್ತಿತವಾಗಿದೆ;
- ***—ಕುಂಪಣಿ ರೂಪಾಯಿ*** : ಬ್ರಿಟಿಷರ ಕಾಲದ ನಾಣ್ಯ; ವಿಕ್ಟೋರಿಯಾ ರಾಣಿಯ ಮುಖದ ಚಿತ್ರವಿರುವ ಹಣ; A coin contained a portrait of queen Victoria;
- ***—ಕುಂಪಣಿ ದಂಡು*** : ಕಂಪನಿಯ ಸೈನ್ಯದ ಗುಂಪು; A battle Of soldiers of the company-the British;
- ***—ಕುಂಪಣಿ ಪಡಿ*** : ಬ್ರಿಟಿಷರ ಕಾಲದ ಧಾನ್ಯ ಅಳೆಯುವ ಸಾಧನ; ಎರಡು ಸೇರಿನ ಅಳತೆಯುಳ್ಳ ಮಾಪನ.
- ***—ಕುಂಪಣಿ ಸರ್ಕಾರ*** : ಬ್ರಿಟಿಷರ ಸರ್ಕಾರ; ಇಂಗ್ಲೆಂಡಿನ ಈಸ್ಟ್ ಇಂಡಿಯಾ ಕಂಪನಿಯ ಆಡಳಿತ. The government of British East India company in India.

ಕುಂಪಿ kumpi :

- ರಾಶಿರಾಶಿ; ಒತ್ತಟ್ಟಿಗೆ ಸಂಗ್ರಹಿಸಿದ್ದ ಧಾನ್ಯ; ಮಣ್ಣು ಇತ್ಯಾದಿ(ಬೀ.ಜಿ); ಕುಪ್ಪೆ; ಗುಪ್ಪೆ(ಚಿಕ್ಕ.ಜಿ); Mass, A Solid lump. A lump of grain;
- ತಾತ್ಕಾಲಿಕ ತಂಗುದಾಣ(ಧಾ.ಜಿ); A temporary resting place;
- ಸಂಗ್ರಹಿಸು(ಕಲ.ಜಿ); To collect something;
- ಗುಂಪು, ಕೂಡಿಹಾಕು; *ಪ್ರ:* 'ಎಲ್ಲ ಬಳಿದು ಕುಂಪಿ ಹಾಕು'.

ಕುಂಬ kumba:

- ಬಂಡಿಯ ಗಾಲಿಗೆ ಆಧಾರವಾದ ಕಟ್ಟಿಗೆ; ಹಡಗನ್ನು ನಿರ್ಮಿಸಲು ಬಳಸುವ ಮರ; ಕೂವೆ ಮರ(ಬೆ.ಜಿ); A wooden axil of a car; A kind of tree which is used to build ships, sails;
- ಮಣ್ಣಿನಿಂದ ಮಾಡಿದ ಗಡಿಗೆ; ಕಲಶ(ಬಾ.ಜಿ); A pot of baked clay;
- ಉತ್ಸವದಲ್ಲಿ ದೇವತೆಗಳಿಗೆ ಗಡಿಗೆಯಲ್ಲಿ ಮಾಡುವ ಎಡೆ ಅನ್ನ;
- ಕಾಳುಗಳನ್ನು ಅಳೆಯುವ ಅಳತೆಮಾನ; ಇಪ್ಪತ್ತು ದ್ರೋಣಗಳ ಅಳತೆ; ನಾಲ್ಕು ಕೊಳಗ;
- ದಡ್ಡಿ; ದಡ್ಡ(ರಾಯ.ಜಿ); A foolish;
- ಯಾಗಶಾಲೆಯ ಸುತ್ತಲಿನ ಬೇಲಿ; A fence of `yaga' school;
- ***—ಕುಂಬಗೂಳು*** : ಮಾರಿದೇವತೆಗೆ ಮಾಡುವ ಮಡೆ ಅನ್ನ; ಹಬ್ಬದಲ್ಲಿ ಮಾರಿಗೆ ಬಲಿ ಕೊಡುವುದಕ್ಕೂ ಮುನ್ನ ಎಲ್ಲರ ಮನೆಯಲ್ಲಿ ಹೊಸ ಮಡಿಕೆ ಅಥವಾ ಕುಂಬದಲ್ಲಿ ಮಾಡಿದ ಅನ್ನವನ್ನು ಮೆರವಣಿಗೆಯೊಂದಿಗೆ ದೇವಾಲಯಕ್ಕೆ ತಂದು ತಂಬಿಟ್ಟು, ಮಡೆನೀಡಿ ಅನ್ನದ ರಾಶಿಯನ್ನು(ಎಲ್ಲರ ಕುಂಬದಿಂದ ತೆಗೆದ ಅನ್ನ) ಅರಿಶಿನ ಕುಂಕುಮ ಹಾಕಿ ಪೂಜಿಸಿದ ನಂತರ ಪ್ರಾಣಿ ಬಲಿ ಕೊಡುವ ಕ್ರಮ(ರಾಮ.ಜಿ); A holy rice prepared for Goddesses -Maari, that has been put in baked clay plate;
- ***—ಕುಂಬ ತುಂಬೋದು*** : ಹೊಸ ಮಡಿಕೆಯಲ್ಲಿ ಧಾನ್ಯಗಳನ್ನು ತುಂಬಿ ರಾಶಿಯ ಸುತ್ತಲೂ ಕಂಬಗಳನ್ನು ಇಟ್ಟು ಮಾಡುವ ಪೂಜಾ ವಿಧಾನ; ಇದು ಉತ್ತರ ಕರ್ನಾಟಕ ಭಾಗದಲ್ಲಿ ಕಂಡುಬರುವ ಆಚರಣೆ(ಬ.ಜಿ); A method of grain worship; putting grain in backed clay vases around the massage of grown grain;
- 'ಕುಂಬ' ಪದ 'ಕುಂಭ' ಪದದ ತದ್ಭವವೇ ಆಗಿದೆ;

ಕುಂಬಟೆ/ಕುಂಬಾದ kumbaṭe/kumbāda :

ದುರ್ಬಲವಾದ; ಗಟ್ಟಿಯಿಲ್ಲದ; ಲೊಡ್ಡಾದ; ಟೊಳ್ಳಾದ; *ಪ್ರ:* 'ಮುರುಕು ದಂಬೆಯಲ್ಲಿ ನೀರು ಬಿಡಬೇಕು, ಬಾವಿಯ ಕುಂಬಟೆ ಹಾಸುಮರದ ಮೇಲೆ ಕಾಲಿಡಬೇಡ'(ತು.ನಿ); Not strong, hollow, weak.

ಕುಂಬರಗೋಲು kumbaragōlu :

- ಕುಂಬಾರರು ಚಕ್ರವನ್ನು ತಿರುಗಿಸಲು ಬಳಸುವ ಕೋಲು; A Stick or cudgel which is used to rotate the wheel of pottery by potter;
- ಮಡಕೆ ಮಾಡಲು ಬಳಸುವ ಚಕ್ರವನ್ನು ಇಟ್ಟು ತಿರುಗಿಸುವ ತಿರುಗಣಿಯುಳ್ಳ ಕಬ್ಬಿಣದ ಮುಗ್ಗಾಲಿ;
- ಅದನ್ನು ತಿರುಗಿಸಲು ಬಳಸುವುದೇ ಕುಂಬರಗೋಲು.

ಕುಂಬರಿ kumbari :

ಮೀನಿನ ಒಂದು ಪ್ರಭೇದ; ಈ ಮೀನು ಬಲೆಗಳನ್ನು ತುಂಡರಿಸುವುದರಿಂದ ಬಲೆಗೆ ಬಿದ್ದ ತಕ್ಷಣ ಹೊರ ತೆಗೆಯಬೇಕು. One of the special fish;

—ಕುಂಬರಿಸು : ಸುರಿ; ಪ್ರ: 'ಮೀನುಗಳನ್ನು ಮಕ್ರಿಕೆ ಕುಂಬರಿಸು'(ಕೋ.ಜಿ). Pour to lose/remove a substance to flow into/ out of a container fish net.

ಕುಂಬರು kumbaru :

ಚಳಿ, ಭಯ, ಆವೇಶದಿಂದಾಗಿ ದೇಹ ನಡುಗುವುದು; ಕಂಪಿಸು(ದ.ಕ). Fear a body vibration from anxiety.

ಕುಂಬಳ kumbaḷa :

- Cucurbita maxima Cucurbitaceae; ಒಂದು ಬಗೆಯ ಬಳ್ಳಿ; ಸಾಮಾನ್ಯವಾಗಿ ಹಿತ್ತಲಿನಲ್ಲಿ ಕುಂಬಳಬಳ್ಳಿ ಹಬ್ಬಿಸುವರು; A large dark yellow round fruit that grow on the ground;

- ಈಗ ಇದು ವಾಣಿಜ್ಯ ಬೆಳೆಯಾಗಿದೆ; ಬಳ್ಳಿಯಲ್ಲಿ ದೊಡ್ಡ ಗಾತ್ರ ಕಾಯಿಬಿಡುವುದು;
- 'ಕುಂಬಳ'ಪದ ಸಂಸ್ಕೃತದ 'ಕೂಷ್ಮಾಂಡ' ದಿಂದ ಬಂದುದು; ತೆಲುಗಿನ 'ಗುಮ್ಮಡಿ' ಪದ ಕನ್ನಡದಿಂದ ತುಸು ವ್ಯತ್ಯಾಸ ಪಡೆದಿದೆ; ಆರಂಭದ 'ಕ'>ಗ(ತೆ) ಕಡೆಯ 'ಳ'>ಡ(ತೆ)ಆಗಿದೆ;
- Cucurlita maxima ಹಬ್ಬುವ ಬಳ್ಳಿ; ಮರಳು ಮಿಶ್ರಿತ ಕೆಂಪು, ಕಪ್ಪು, ಕೆಂಪುಗೋಡು ಮಣ್ಣಿನಲ್ಲಿ ಬೆಳೆಯುತ್ತದೆ; ಏಕವಾರ್ಷಿಕ ಬೆಳೆ; Gray Pumpkin sweet Pumpkin; Heavy belly;
- ಇದರಲ್ಲಿ ಕ್ಯಾಲ್ಸಿಯಂ, ಪೊಟ್ಯಾಷಿಯಂ, ಮೆಗ್ನೀಷಿಯಂ, ಜೀವಸತ್ವ 'ಎ' ಮತ್ತು 'ಸಿ' ಅಂಶ ಹೇರಳವಾಗಿದ್ದು ಹೆಚ್ಚು ಪುಷ್ಟಿದಾಯಕ;
- ಒಂದು ಅಂಬಿಗೆ(=ಹಂಬಿಗೆ) ನಾಲ್ಕೈದು ಹಳದಿ ಬಣ್ಣದ ಹೂವು ಬಿಟ್ಟು ಕಾಯಾಗುವುದು;
- ಎಣ್ಣೆ ತಾಕಿಸದೆ ಇಟ್ಟರೆ ವರ್ಷದವರೆಗೂ ಇಟ್ಟು ಬಳಸಬಹುದು;
- ಇದರಲ್ಲಿ ಬೂದುಕುಂಬಳ, ಸಿಹಿಕುಂಬಳ ಎಂಬ ಎರಡು ಬಗೆ;
- ಚೆನ್ನಾಗಿ ಬಲಿತ ಸಿಹಿಗುಂಬಳದ ಒಳತಿರುಳನ್ನು ತೆಗೆದು ಬುರುಡೆಯನ್ನು ತಂಬೂರಿ ತಯಾರಿಸಲು ಬಳಸುವರು;
- ಬೂದುಗುಂಬಳವನ್ನು ವಿವಿಧ ಶುಭಕಾರ್ಯಗಳ ಸಂದರ್ಭದಲ್ಲಿ ಮನೆಯ ಮುಂದೆ ಒಡೆಯಲು, ದೃಷ್ಟಿನಿವಾರಿಸಲು, ಔಷಧಿಯಾಗಿ ಬಳಕೆ;
- ಬೀಜವನ್ನು ಸಕ್ಕರೆ ಮತ್ತು ಜೇನು ತುಪ್ಪದೊಂದಿಗೆ ಸೇರಿಸಿ ತಿಂದರೆ ಗನೇರಿಯಾ, ಮೂತ್ರ ತೊಂದರೆಗಳು ಉಪಶಮನ:
- ಹಣ್ಣಿನ ತೊಟ್ಟನ್ನು ಒಣಗಿಸಿ ಪುಡಿ ಮಾಡಿ ಚೇಳು, ಜರಿ, ಮಂಡ್ರಗಪ್ಪೆ ಕಡಿದ ಜಾಗಕ್ಕೆ ಲೇಪನವಾಗಿ ಬಳಕೆ;
- ಕಾಯಿ, ಸೊಪ್ಪು, ಕುಡಿಗಳು ಆಹಾರಕ್ಕೆ ಯೋಗ್ಯ; ಇದರ ಕಾಯಿಗೆ ಎಣ್ಣೆ ಸೋಕಿದರೆ ಕಾಯಿಕೊಳೆಯುತ್ತದೆ;
- *ವ್ಯರೂ:* ಕುಂಬಳಿ(ಧಾ.ಜಿ); ಚೇನೀ ಕಾಯಿ(ಮಂ.ಜಿ); ಕೆಂಬಡೆಕಾಯಿ(ಕೊಡ.ಜಿ); ಸೀಗುಂಬಳ(ಮೈ.ಜಿ); ತೆ: ಗುಮ್ಮಡಿ ಗುಂಟ, ಗುಮ್ಮಳ; ತು: ಕುಂಬ್ಳೊ;
- *ಪ್ರ:* 'ಕುಂಬಳಕಾಯಿ ಕಳ್ಳ ಎಂದರೆ, ಹೆಗಲು ಮುಟ್ಟಿ ನೋಡಿಕೊಂಡನಂತೆ'*(ಗಾ)*; 'ಕುಂಬಳದ ಕಾಯಿಗೆ ಕಬ್ಬಿಣದ ಕಟ್ಟು ಕೊಟ್ಟಂತೆ'*(ಗಾ)*; 'ಕುಂಬಳದ ಹಣ್ಣಿಂಗೆ ಎಣ್ಣೆ ಬಿಟ್ಟಂಗೆ'*(ಗಾ)*;
- ಬೊಜ್ಜು ಬೆಳೆದ ಹೊಟ್ಟೆಗೆ ರೂಪಕ/ಉಪಮೆ ಆಗಿ ಪದ ಬಳಕೆ; *ಪ್ರ:* 'ಅವನ ಹೊಟ್ಟೆ ಕುಂಬಳ ಕಾಯಗಾತ್ರದ್ದು';
- ದೊಡ್ಡದು/ಗಾತ್ರ ಹೇಳುವಾಗ ರೂಪಕವಾಗಿ ಬಳಕೆ;
- ರೂಪಕ ಭಾಷೆಯಲ್ಲಿ ಸೊನ್ನೆ; *ಪ್ರ:* 'ಅವನಿಗೆ ಗಣಿತದಲ್ಲಿ ಕುಂಬಳಕಾಯಿ ಬಂದಿದೆ';
- ***—ಕುಂಬಳಕಾಯಿ ಗಾರಿಗೆ*** : ಸಿಹಿಕುಂಬಳಕಾಯಿ ತುರಿದು ಬೆಲ್ಲದ ಪಾಕದಲ್ಲಿ ಗೋಧಿ ಹಿಟ್ಟಿನೊಂದಿಗೆ ಬೇಯಿಸಿ ದುಂಡಗೆ ತಟ್ಟಿ ಎಣ್ಣೆಯಲ್ಲಿ ಕರಿಯುವ ಸಿಹಿ ತಿನಿಸು; ಕಜ್ಜಾಯದಂತೆ; A sweet snacks made up of sinker; Wheat powder and jaggory;
- ***—ಕುಂಬಳಕಾಯಿ ಶಾಮಡಿಗೆ ಕೋಸಂಬ್ರಿ*** : ಬೂದುಕುಂಬಳದ ಸಿಪ್ಪೆ ಬೀಜ ತೆಗೆದು ತುರಿದು ಅದಕ್ಕೆ ಇಂಗು, ಸಾಸಿವೆ, ಕರಿಬೇವು, ಉಪ್ಪು, ಕೊತ್ತಂಬರಿ, ಮೆಣಸಿನಕಾಯಿ, ಒಗ್ಗರಣೆಯೊಂದಿಗೆ ಹಸಿಕಾಯಿ ತುರಿ ಸೇರಿಸುವ ಪದಾರ್ಥ. A Salad made up of Pumpkin, salt and chilly;
- ***—ಕುಂಬಳದ ಪುಡೆಯ*** : ಸಿಹಿಕುಂಬಳವನ್ನು ಸಣ್ಣ ಹೋಳುಗಳಾಗಿ ಮಾಡಿ ನೀರಿನಲ್ಲಿ ಅರ್ಧ ಬೇಯಿಸಿ ನೀರು ಸೋಸಿ ತೆಗೆದು ಅದಕ್ಕೆ ತುಪ್ಪದಲ್ಲಿ ಈರುಳ್ಳಿ, ಜೀರಿಗೆ, ಉಪ್ಪು, ಮೆಣಸು, ಕಾಯಿತುರಿ ಹಾಕಿ ಒಗ್ಗರಣೆ ಕೊಟ್ಟು ಬೇಯಿಸಿದ ಹೋಳು ಸೇರಿಸುವುದು; ಇದು ಆಹಾರದೊಂದಿಗೆ ನಂಚಿಕೆಯಾಗಿದೆ; A pumpkin dish made up of pumpkin onion ginger boiled in ghee;
- ***—ಕುಂಬಳದ ಓಡು*** : ಕುಂಬಳಕಾಯಿಯ ಮೇಲ್ಭಾಗದ ಗಟ್ಟಿಯಾದ ಕವಚ; A upper/Surface guarding layer of a pumpkin;
- ***—ಕುಂಬಳ ಕುಡಿ/ಸೊಪ್ಪು*** : ಕುಂಬಳ ಬಳ್ಳಿಯ ಹಸಿರಾದ ಕುಡಿ, ಚಿಗುರು, ಇದನ್ನು ಆಹಾರದಲ್ಲಿ ಪಲ್ಯ, ಸಾರು, ತಯಾರಿಸಲು ಬಳಕೆ; ಬಹಳ

ರುಚಿದಾಯಕ ಪೋಷಕಾಂಶ ಹೊಂದಿರುವ ಸೊಪ್ಪು; The bud of pumpkin planet;

- ***—ಕುಂಬಳ ಸೊಟ್ಟೆ*** : ಕುಂಬಳದ ಬುರುಡೆಯ ಒಳಭಾಗವನ್ನೆಲ್ಲ ತೆಗೆದು ಮಾಡಿದ ಜಲಪಾತ್ರೆ; A water vessel prepared by dry pumpkin;
- ***—ಕುಂಬಳ ಸಂಡಿಗೆ*** : ಬೂದು ಕುಂಬಳ ಕಾಯಿಯನ್ನು ತುರಿದು ಅದಕ್ಕೆ ಹಸಿ ಮೆಣಸಿನಕಾಯಿ, ಜೀರಿಗೆ, ಇಂಗು, ಉಪ್ಪು ರುಬ್ಬಿ ತುರಿಯೊಂದಿಗೆ ಸೇರಿಸಿ ಬಿಸಿಲಿನಲ್ಲಿ ಒಣಗಿಸಿ ಬೇಕಾದಾಗ ಎಣ್ಣೆಯಲ್ಲಿ ಕರಿಯುವರು; Pumpkin curry bread that is to be curried in the oil;
- ***—ಕುಂಬಳ ದುಂಬಿ*** : ದುಂಬಿಯ ಒಂದು ಬಗೆ; ಇದು ಕುಂಬಳ ಬಳ್ಳಿಯ ಕುಡಿಯನ್ನು ತಿನ್ನುವುದು(ರಾಮ.ಜಿ); A kind of insect eats the buds of pumpkin creeper;
- ***—ಕುಂಬಳಕಾಯಿ ಉಪ್ಪಿನಕಾಯಿ*** : ಕುಂಬಳದ ಬಿಲ್ಲೆಗೆ ಮೆಣಸಿನಕಾಯಿ ಪುಡಿ, ಅರಿಶಿನ, ಉಪ್ಪು ಸೇರಿಸಿ ಸಾಸಿವೆ, ಇಂಗು ಒಗ್ಗರಣೆ ಹಾಕುವುದು; Pickles made up of Pumpkin powder, turmeric powder, salt and musterd;
- ***—ಕುಂಬಳ ಕಡಿಯುವುದು*** : ಯಕ್ಷಗಾನದಲ್ಲಿ ರಾಕ್ಷಸ ಪಾತ್ರಗಳು ಸಾಯುವ ದೃಶ್ಯ ರಂಗಸ್ಥಳದಲ್ಲಿ ಪ್ರದರ್ಶನವಾದ ನಂತರ ರಂಗದಲ್ಲಿ ಕುಂಬಳಕಾಯಿ ಕಡಿಯುವ ಕ್ರಮ; ಇದು ಬಲಿಯ ಹಿನ್ನೆಲೆ ಹೊಂದಿದೆ; A pumpkin is to be offered as a symbol Of sacrifice when the demon characters of the drama-Yakshagan will have killed on the stage;
- ***—ಕುಂಬ್ಳ ಬಟ್ಟು*** : ಹೆಣ್ಣುಮಕ್ಕಳು ಕಿವಿಗೆ ಧರಿಸುವ ಕುಂಬಳಕಾಯಿ ಆಕಾರದ ಆಭರಣ; (ಬಟ್ಟು = ಆಭರಣ(ತು.ಜಿ).

ಕುಂಬಳ ಅಂಗಿ kumbaḷa angi :

ಕುಂಬಳ ಆಕಾರದ ಅಂಗಿ; ಮುಂಡಾ; ಬನಿಯನ್; *ಪ್ರ:* 'ಅಂವಾ ಒಳಗ ಕುಂಬಳ ಅಂಗಿ ತೊಟ್ಟಾನ ಹೌದಲ್ಲ'(ಬೆ.ಜಿ). A Pumpkin shaped shirt.

ಕುಂಬಳ ಇಡುವುದು kumbaḷa iḍuvudu:

ಶಿವಾಚಾರನಗರ್ತರ ಮದುವೆ ಸಂದರ್ಭದಲ್ಲಿ ಹೆಣ್ಣು – ಗಂಡಿನಲ್ಲಿ ಸಲಿಗೆ ಬೆಳೆಸುವ ಹಿನ್ನೆಲೆಯಲ್ಲಿ ಇಬ್ಬರ ಕೈಯಿಂದ ನಾಣ್ಯವನ್ನು ಪಡೆದು ಅಂಗವಸ್ತ್ರದಲ್ಲಿ ಗಂಟು ಹಾಕಿ ಅದಲು – ಬದಲು ಮಾಡುವಂತೆ ಮಾಡಿಸುವ ಶಾಸ್ತ್ರ. A ritual that has been practiced in the marriage of Shivachara Nagarta caste to familiarize the bride and bride groom by changing coins in a kerchief knot.

ಕುಂಬಳ ಕಳ್ಳ kumbaḷa kaḷḷa :

- ಉತ್ತರ ಕನ್ನಡ ಜಿಲ್ಲೆಯ ಜನಪದ ಆಟ; ಆಟಗಾರರು ಎರಡು ಗುಂಪಾಗಿ ಅವಿತುಕೊಳ್ಳುವರು; ಒಂದು ಕಳ್ಳರಾಗಿ, ಇನ್ನೊಂದು ಕುಳಿತುಕೊಳ್ಳುವವರು ಬೆಳೆಗಳಾಗಿ ವಿಂಗಡಿಸಿಕೊಳ್ಳುವುದು; A folk game of North Kannada District;
- ಅಜ್ಜಿ ಕುಳಿತವರೊಂದಿಗೆ ಸುತ್ತ 'ಬೇಲಿ ಕಟ್ಟೆ ಬೇಲಿ ಕಟ್ಟೆ' ಎನ್ನುತ್ತಾ ಒಂದು ಬಾರಿ ಸುತ್ತುವಳು; 'ಗೊಬ್ಬರ ಹಾಕ್ದೆ ಗೊಬ್ಬರ ಹಾಕ್ದೆ' ಎನ್ನುತ್ತಾ ಗೊಬ್ಬರ ಹಾಕಿದಂತೆ 'ನೆಲಾಕೊಚ್ದೆ, ನೆಲಾಕೊಚ್ದೆ' ಎಂದು ನೆಲ ಅಗೆದಂತೆ ನಟಿಸುತ್ತಾ ತಾನು ಮಾಡುವ ಎಲ್ಲ ಕಾರ್ಯವನ್ನು ಬಾಯಲ್ಲಿ ಹೇಳುತ್ತಾ ಹಾಗೆಯೇ ನಟಿಸುತ್ತಾ ಕುಳಿತವರನ್ನು ಸುತ್ತುವಳು;
- ಕುಂಬಳ ಬಳ್ಳಿ, ಹೂ, ಕಾಯಿ, ಹಣ್ಣು(ಬಲಿತದ್ದು) ಬಿಟ್ಟಿದನ್ನು ತೋರಿಸುತ್ತಾ ಇದು ಹೂ, ಇದು ಕಾಯಿ, ಇದು ಹಣ್ಣು, ಇದು ಹಂಪಲ ಎಂದು ಹೇಳಿ ಕೆಲಸಕ್ಕೆ ಹೋಗುವಳು;
- ಕಳ್ಳರು ಬೆಳೆದ ಕುಂಬಳಕಾಯಿ(ಆಟಗಾರ)ಯನ್ನು ಕದಿಯುವರು;
- ಹೀಗೆ ಎಲ್ಲ ಆಟಗಾರರನ್ನು ಕದಿಯುವಾಗ ಉಳಿದ ಕಾಯಿಗಳು 'ಚಿಂವ್ ಚಿಂವ್' ಎಂಬ ಶಬ್ದ ಮಾಡುತ್ತಾ ಇರುವವು;
- ಎಲ್ಲ ಕುಂಬಳಕಾಯಿ ಖಾಲಿಯಾದಾಗ ಅಜ್ಜಿ ಕಳ್ಳನಲ್ಲಿ ಬಂದು ನಮ್ಮ ಮನೆಯಲ್ಲಿ ಸಮಾರಾಧನೆ ಊಟ ಇದೆ ಒಂದು 'ಕುಂಬ್ಳಾ ಕೊಡು' ಎಂದು ಕೇಳಿ ಪಡೆದು ಅದರಿಂದ ಅಡುಗೆ ಮಾಡಿ ಕಳ್ಳನನ್ನು ಊಟಕ್ಕೆ ಕರೆದು ಎಲ್ಲರಿಗೂ ಇದು ಅನ್ನ ಇದು ಪಲ್ಯ ಎನ್ನುತ್ತಾ ಅಡಿಗೆ ಹೆಸರು ಹೇಳಿ ಬಡಿಸುವಳು;

- ಆದರೆ ಕಳ್ಳನಿಗೆ ಚರಟೆ(ಮಳೆಗಾಲದಲ್ಲಿ ಕಾಣಸಿಗುವ ಹುಳು)ಯನ್ನು ಊಟದ ತಟ್ಟೆಗೆ ಹಾಕುವಳು; ಇಲ್ಲಿಗೆ ಆಟ ಮುಗಿಯುವುದು(ಉ.ಕ.ಜಿ).

ಕುಂಬಳ ಕಾಯಿ kumbaḷa kāyi :

- ಸಕ್ಕರೆ ಕುಂಬಳ, ಚೀನಿಕಾಯಿ ಎಂಬ ಹೆಸರುಗಳೂ ಇವೆ;
- 'Squash Gourd' ಅಥವಾ 'common gourd' ಎಂಬ ಜನಪ್ರಿಯ ಇಂಗ್ಲಿಷ್ ಹೆಸರುಗಳಿವೆ;
- ತಮಿಳಿನಲ್ಲಿ 'ಕುಂಬಳಮ್', ತೆಲುಗಿನಲ್ಲಿ 'ಗುಮ್ಮಡಿಕಾಯಿ', ಮಲೆಯಾಳಂನಲ್ಲಿ 'ಚಕ್ಕರಕುಂಪಳಜ', ತುಳುವಿನಲ್ಲಿ 'ಸೀಪೆ ಕುಂಬುಡ' ಪದಗಳಿವೆ; ಕ>ಗ, ಡ>ಳ, ಚ>ಸ ಆಗಿರುವುದು ಸಾಮಾನ್ಯ ಧ್ವನಿಮಾ ವ್ಯತ್ಯಾಸಗಳು;
- ಸಸ್ಯಶಾಸ್ತ್ರೀಯ ಪಾರಿಭಾಷಿಕ ಪದ: 'cucurbita maxima';
- ಪಲ್ಯಕ್ಕೆ ಬಳಕೆಯಾಗುವುದು ಗೊತ್ತೇ ಇದೆ; ಜೊತೆಗೆ ಔಷಧಕ್ಕೆ ಕೂಡ; ತೊಟ್ಟನ್ನು ತೇದು ಚೇಳು ಕಡಿದ ಜಾಗಕ್ಕೆ ಹಚ್ಚಲು ಬಳಕೆಯಾಗುವುದು (F.H.I.P.).

ಕುಂಬಳ ಜೇನು kumbaḷa jēnu :

- ಕುಂಬಳ ಹೂವುಗಳಿಂದ ಜೇನು ಸಂಗ್ರಹಿಸಿ ಹುಳುಗಳು ತಯಾರಿಸಿದ್ದು; ಒಂದು ಹೆಕ್ಟೇರ್ ಪ್ರದೇಶದಲ್ಲಿ ಅರಳಿದ ಹೂಗಳಿಂದ ಜೇನುಹುಳುಗಳು ಸುಮಾರು ೩೦–೫೦ ಕೆ.ಜಿ. ಜೇನು ಸಂಗ್ರಹಿಸುತ್ತವೆ; ಇದು ಚಿನ್ನದ ಬಣ್ಣದಿಂದ ಕೂಡಿದ ಹಿತವಾದ ವಾಸನೆಯುಳ್ಳ ಬಹುಬೇಗ ಹರಳುಗಟ್ಟುವ ಗುಣಹೊಂದಿದ್ದು ಹಿತವಾದ ರುಚಿಯುಳ್ಳದ್ದು (ಬೇ.ಸಾಂ.ಪ.ಕೋ); Honey that has been collected from the Pumpkin flower;
- 'ಕುಂಬಳ' ಮತ್ತು 'ಜೇನು' ಬೇರೆ ಬೇರೆ ಪದಗಳು; ಕುಂಬಳ ಹೂವುಗಳನ್ನು ಸಂಗ್ರಹಿಸಿ ಜೇನು ತಯಾರಿಸಿದ್ದರಿಂದ ಇದಕ್ಕೆ 'ಕುಂಬಳ ಜೇನು' ಎಂಬ ಸಂಯುಕ್ತ ಪದ ಬಂದಿದೆ.

ಕುಂಬಳಕಾಯಿ ಆಟ kumbaḷakāyi āṭa :

- ಇದೊಂದು ಮಕ್ಕಳ ಆಟ; ೩–೧೦ ಜನ ಆಟಗಾರರು; A children play;
- ಮೊದಲು ಬಹಳ ಅಂತರ ಬಿಟ್ಟು ಎರಡು ಗೆರೆ ಎಳೆದು ಒಂದು ಗೆರೆಯ ಒಳಗಡೆ ಕುಂಬಳಕಾಯಿ ಒಡೆಯ ಮತ್ತು ಕುಂಬಳಕಾಯಿ ಹೊತ್ತು ಚಕ್ಲಪಟ ಹಾಕಿ ಕೂರುವರು ಇಲ್ಲಿ ಕುಂಬಳಕಾಯಿ ಆಟಗಾರರು;
- ಕುಂಬಳಕಾಯಿ ಹೊರುವವರು ಗೆರೆಯ ಹೊರಗೆ ನಿಂತು 'ಅಯ್ಯ ಕುಂಬಳಕಾಯಿ ಕೊಡಯ್ಯ' ಎಂದು ಕೇಳುವರು; ಒಡೆಯ 'ತಗೊಂಡು ಹೋಗಪ್ಪ' ಎನ್ನುವನು;
- ಕುಂಬಳಕಾಯಿ ಹೊತ್ತವನು 'ಚಕ್ಲ್‌ಪಟ್ಲೆ' ಹಾಕಿಕೊಂಡು ಎಡಗೈಯಲ್ಲಿ ಬಲಗಾಲ ಹೆಬ್ಬೆರಳನ್ನು ಹಿಡಿದು ಕುಳಿತಿರುತ್ತಾನೆ;
- ಆ ಕಡೆ ಈ ಕಡೆ ಒಬ್ಬೊಬ್ಬರು ಕಂಕುಳಿಗೆ ಕೈ ಹಾಕಿ ಎತ್ತುಕೊಂಡು ಹೋಗುವರು;
- ಕುಂಬಳಕಾಯಿಗಳು ಹೆಬ್ಬೆರಳನ್ನು ಭದ್ರವಾಗಿ ಹಿಡಿದಿರಬೇಕು; ಹೆಬ್ಬೆರಳನ್ನು ಬಿಟ್ರೆ ಅಲ್ಲಿಯೇ ಕುಂಬಳಕಾಯಿ ಕೂರಿಸಿ ಬಿಡುವರು;
- ಕುಂಬಳಕಾಯಿ ಆದ ಮಕ್ಕಳಿಗೆ ಎತ್ತಿಕೊಂಡು ಹೋಗುವಾಗ ಖುಷಿಯೇ ಖುಷಿ.

ಕುಂಬಳದಡಿ ಎಲೆ kumbaḷadaḍi ele:

- ವೀಳ್ಯದೆಲೆಯ ಒಂದು ಬಗೆ; ಸಾಧಾರಣ ಖಾರದ ಗುಣವುಳ್ಳ ದೊಡ್ಡದಾದ ಎಲೆ; A kind of chewing betel;
- ತೆಳುವಾಗಿದ್ದು ಬಿಳಿ ಹಸುರು ಬಣ್ಣಹೊಂದಿದ್ದು ವೃತ್ತಾಕಾರಾವಾಗಿ ಊಟದ ಎಲೆಯಂತಿರುವುದು;
- ಸಿಹಿ ಬೀಡಾದಲ್ಲಿ ಹೆಚ್ಚು ಬಳಕೆ(ಬ.ಜಿ). It is used often sweet beeda.

ಕುಂಬಳಿ kumbaḷi :

- ಕೂಲಿ; ದಿನಗೂಲಿ; ಕುಂಬಳಿ > ಕುಂಬ್ಳಿ(ಬ.ಜಿ); Labour. A day labour;
- ಕುರಿಯ ಮೋಯಿಶೆಯಲ್ಲಿ ಮಾಡುವ ಭಾಗ; ಏಳು ಭಾಗಗಳಲ್ಲಿ ಒಂದು(ಫಣಿಯರ ಸಮಾಜ ಜಾನಪದ);
- ಒಂದು ಬಗೆಯ ಮರ; ದುಡಿ; ವಾದ್ಯದ ಹಪಳುವನ್ನು ಈ ಮರದಿಂದ ತಯಾರಿಸುವರು.

ಕುಂಬಳೆ kumbaḷe :

- ತುಳುನಾಡಿನಲ್ಲಿರುವ ಒಂದು ಚಾರಿತ್ರಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಕೇಂದ್ರ; ಐತಿಹ್ಯವಾಗಿ ತನ್ನದೇ

ಗಡಿಯನ್ನು ಹೊಂದಿದೆ; A cultural political and historical center of Tulunadu, DK;
- ಒಂದು ಬಗೆಯ ಔಷಧೀ ಸಸ್ಯ; A kind of medicine plant;
- *—ಕುಂಬಳೆ ಸೀಮೆ* : ಮಂಗಳೂರಿನ ದಕ್ಷಿಣಕ್ಕಿರುವ ಕುಂಬಳೆಯ ಸುತ್ತ ಮುತ್ತಲಿನ ಪ್ರದೇಶ. A regional feudal area around the Mangaluru south.

ಕುಂಬಳ್ಯಾ kumbaḷyā :

ತಿಂದುಂಡು ಸುಮ್ಮನೆ ಕೂಡ್ರುವವ; ಕೈಲಾಗದವ; ಸೋಮಾರಿ; A lazy fellow.

ಕುಂಬಾರ್ ಜಬ್ kumbār jab :

ಮೀನಿನ ಒಂದು ಬಗೆ; ಸುಮಾರು ನಾಲ್ಕರಿಂದ ಐದು ಇಂಚು ದೊಡ್ಡದಾದ ಕೆಂಪನೆಯ ಮೀನು. A kind of fish which has red in colour and 4 to 5 inch size.

ಕುಂಬಾರ kumbāra :

- ಕುಂಭಕಾರ > ಕುಂಬಾರ; ಚಕ್ರಸಾಲಿ; ಮಣ್ಣಿನಿಂದ ಉಪಯುಕ್ತವಾದ ವಸ್ತುಗಳನ್ನು ತಯಾರಿಸುವ ಒಂದು ಸಮುದಾಯ; A community of pottering who makes pots in different shapes and uses in balled clay; Clay gum; backed clay;
- ಕುಂಭ + ಗಾರ/ಕಾರ > ಕುಂಬಾರ; ಒಕ್ಕಲುತನ ನಡೆಸುವ ರೈತನ ಆಯಗಾರರಲ್ಲಿ ಒಬ್ಬರು;
- ಪಾಂಚಾಳ ವರ್ಗಕ್ಕೆ ಸೇರಿದವ; ಮಡಿಕೆ, ಕುಡಿಕೆ, ಗಡಿಗೆ, ಒಲೆ, ಗುಡಾಣ, ಮುಸುರೆಬಾನಿ, ವಾಡೆ, ಬುಡ್ಡು, ನಾಡಹೆಂಚು, ಮುಚ್ಚಳಗಳು, ಕುಂಡಗಳು, ಹಣತೆ, ಹೂಜಿ, ಚಟ್ಟಿಗೆ ಇತ್ಯಾದಿ ವಸ್ತುಗಳನ್ನು ತಮ್ಮ ಕುಶಲ ಕಲೆಯಿಂದ ವಿನ್ಯಾಸಗೊಳಿಸುವ ಕುಲಕಸುಬಿನವರು;
- ವಿವಿಧ ಲೋಹಗಳು, ಪ್ಲಾಸ್ಟಿಕ್ ವಸ್ತುಗಳು ಬಳಕೆಗೆ ಬರುವುದಕ್ಕಿಂತ ಮೊದಲು ಕುಂಬಾರರು ತಯಾರಿಸಿದ ಸಾಮಾಗ್ರಿಗಳಿಗೆ ಬಹಳ ಬೇಡಿಕೆ ಇತ್ತು; ಮನುಷ್ಯನ ಹುಟ್ಟಿನಿಂದ ಸಾವಿನವರೆಗಿನ ಪ್ರತಿಯೊಂದು ಆಚರಣೆಗಳಲ್ಲೂ ಪ್ರಧಾನ ಪಾತ್ರವಹಿಸುತ್ತಿದ್ದವು;
- ಕುಂಬಾರ ತಾನು ಮಾಡಿದ ವಸ್ತುಗಳನ್ನು ಹಗ್ಗದ ಕಲ್ಲಿಯಲ್ಲಿ ಕಟ್ಟಿಕೊಂಡು ತಲೆಯ ಮೇಲೆ ಹೊತ್ತು ಅಥವಾ ಮರದ ಗಾಡಿಯಲ್ಲಿ ತುಂಬಿ ಊರಿಂದ ಊರಿಗೆ ಅಲೆದು ಮಾರಾಟ ಮಾಡುತ್ತಿದ್ದ; ಈ ಕಾರಣದಿಂದ ಕುಂಬಾರನಿಗೆ ಕುಂಬಾರ ಸೆಟ್ಟಿ ಎಂದು ಕರೆದರು(ಕುಂಬ = ಕುಡಿಕೆ, ಮಡಿಕೆ, ಕುಂಬಾರ = ಮಡಿಕೆ ಮಾಡುವವನು; ಕುಂಬಾರಸೆಟ್ಟಿ = ಮಡಿಕೆ ಮಾರಾಟ ಮಾಡುವ ವ್ಯಕ್ತಿ);
- ತನ್ನ ವೃತ್ತಿಯಲ್ಲಿ ಚಕ್ರ/ತಿಗುರಿ, ಕೋಲು, ಗುಂಡುಕಲ್ಲು, ಮರದ ತುಂಡು, ಕುಯ್ಯುವ ದಾರ, ಆವಿಗೆ ಇತ್ಯಾದಿ ಸಾಮಾಗ್ರಿ ಬಳಸುವನು;
- ಜೇಡಿಮಣ್ಣು, ಜಿಗುಟು/ಅಂಟು ಮಣ್ಣು Clay gum; ಆವೆಮಣ್ಣು, ಹೊಯಿಗೆ ಮಣ್ಣು, ತಂದು ಹದ ಮಾಡಿ ತಿರುಗುವ ಚಕ್ರದ ಮಧ್ಯದ ಹಣೆಯ ಮೇಲೆ ಮಣ್ಣಿನ ಮುದ್ದೆಯಿಟ್ಟು ಬೇಕಾದ ಆಕಾರಕ್ಕೆ ತಂದು ಅರೆ ಬಾಡಿದ ನಂತರ ಗುಂಡುಕಲ್ಲಿನಿಂದ, ಮರದ ಪಟ್ಟಿಯಿಂದ ತಟ್ಟಿ ಬೇಕಾದ ಆಕಾರ ಬಂದ ನಂತರ ಒಣಗಿಸಿ ಆವಿಗೆಯಲ್ಲಿಟ್ಟು ಉರಿ ಹಾಕಿ ಹದವಾಗಿ ಸುಡುವರು;
- ಮೊದಲು ಮಾಡಿದ ಮಡಿಕೆಯನ್ನು ದೇವಾಲಯ, ಗುರುಮಠಗಳಿಗೆ ಕೊಟ್ಟು ನಂತರ ವ್ಯಾಪಾರಕ್ಕೆ ತೆರಳುವರು;
- ಉತ್ತರ ಕರ್ನಾಟಕದ ಕೆಲವೆಡೆ ಮದುವೆ ಸಂದರ್ಭದಲ್ಲಿ ಮುತ್ತೈದೆಯರು ಮದುವಣಗಿತ್ತಿಯನ್ನು ಜೊತೆಯಲ್ಲಿ ಕರೆದೊಯ್ದು ಐರಾಣಿ ತರುವ ಪದ್ಧತಿ ಇದ್ದು, ಆಗ ಕುಂಬಾರ 'ತಿಗುರಿ' ಮೇಲೆ ಮದುವಣಗಿತ್ತಿಯನ್ನು ಕೂರಿಸಿ ಏಳು ಸುತ್ತು ತಿರುಗಿಸಿ ಇಳಿಸುತ್ತಾನೆ, ನಂತರ ಏಳು ಹೊಸ ಕೊಡ ಮತ್ತು ಕುಡಿಕೆ ಕೊಡುವನು; ಮುತ್ತೈದೆಯರು ಅವನ್ನೆಲ್ಲಾ ಪೂಜಿಸಿ ಗೂಡೆಯಲ್ಲಿಟ್ಟು ತರುವ ಸಂಪ್ರದಾಯವಿದೆ;
- ಚಾಮರಾಜನಗರ ಭಾಗದಲ್ಲಿಯೂ ಚಪ್ಪರದ ದಿನ ಕುಂಬಾರ ಮನೆಗೆ ಬಂದು ಮುತ್ತೈದೆಯರಿಗೆ ಮದುವೆ ಕಾರ್ಯಕ್ಕೆ ಬೇಕಾದ ಮಡಿಕೆ, ಕುಡಿಕೆ, ಧೂಪದ ಗಿಂಡಿ ಇತ್ಯಾದಿ ವಸ್ತುಗಳನ್ನು ಕೊಟ್ಟು ಆಯಾ ಪಡೆಯುವ ಕ್ರಮವಿದೆ;
- ಕುಂಬಾರನಿಗೆ ಸಂಬಂಧಿಸಿದ ಗಾದೆಗಳು: 'ಕುಂಬಾರನಿಗೆ ವರ್ಷ ದೊಣ್ಣೆಗೆ ನಿಮಿಷ',

'ಕುಂಬಾರನ ಮನೆಲಿ ಕುಡಿಕೆ ತೂತು', 'ಕುಂಬಾರನ ಮನೆ ಮಡಿಕೆ ಎಲ್ಲಾ ದದ್ದು', 'ಕುಂಬಾರ್ರ ಆವ್ಗೇಲಿ ತಾಮ್ರದ ಚೊಂಬ ಹುಡುಕಿದಂಗೆ', 'ಕುಂಬಾರನ ಬಲಗಾಲು ಉದ್ದ ಎಡಗಾಲು ಗಿಡ್ಡ', 'ಕುಂಬಾರನಿಗೆ ಮಣ್ಣಿನ ಚಿಂತೆ ಕುರುಬನಿಗೆ ಕುರಿ ಚಿಂತೆ';

- ಸರ್ವಜ್ಞನ ತ್ರಿಪದಿ : ಹಂಬು ತೋಟಕೆ ಲೇಸು ತುಂಬು ಕೆರೆಗೆ ಲೇಸು, ಸಂಬಾರ ಲೇಸು ಅಡಿಗೆಗೆ – ಊರಿಗೊಬ್ಬ, ಕುಂಬಾರ ಲೇಸು ಸರ್ವಜ್ಞ; ಕೊಂಬು ಹೋರಿಗೆ ಲೇಸು ತುಂಬು ಕೆರೆಗೆ ಲೇಸು, ಕುಂಬಾರ ಲೇಸು ಊರಿಂಗೆ – ಹರದಂಗೆ ನಂಬುಗೆಯ ಲೇಸು ಸರ್ವಜ್ಞ;
- ಜನಪದ ಗೀತೆ: ಮುಂಜಾನೆದ್ದು ಕುಂಬಾರಣ್ಣ ಹಾಲುಬಾನ ಉಂಡಾನ, ಹಾರಾಡಿ ಕೆಸರ ತುಳಿದಾನ ಕುಂಬಾರಣ್ಣ, ಐರಾಣಿ ಗಡಿಗೆ ಮಾಡ್ಯಾನ;
- —***ಕುಂಬಾರತನ/ಕುಂಬಾರ್ಕೆ*** : ಕುಂಭಗಾರಿಕೆಯನ್ನು ಮೂಲ ಕಸುಬಾಗಿಸಿಕೊಂಡಿರುವುದು; A pottery profession;
- —***ಕುಂಬಾರಗಿತ್ತಿ*** : ಕುಂಬಾರಿಕೆ ಮಾಡುವವನ ಹೆಂಡತಿ; ಈತನ ಕಸುಬಿನಲ್ಲಿ ಸಹಭಾಗಿ; ಕುಂಬಾರ ಹೆಂಗಸು; ಕುಂಬಾತಿ, ಕುಂಬಾರತಿ, ಕುಂಭರಾತಿ; ಬಿ. ರೀವ್ವರವರ ಶಬ್ದಕೋಶದಲ್ಲಿ ಕುಂಭಕಾತಿಗೆ 'ಕುಂಭರಾತಿ' ಎಂಬ ಪದವಿದೆ; ಕುಂಬಾರಗಿತ್ತಿ ಇದೊಂದು ತದ್ಧಿತಾಂತ ಪದ; The wife of Potter;
- —***ಕುಂಬಾರ ಗುಂಡಿ*** : ಕುಂಬಾರ ಕುಂಟೆ; ಮಡಕೆಯನ್ನು ಮಾಡಲು ಬೇಕಾದ ಮಣ್ಣನ್ನು ಕುಂಬಾರರು ತರುವ ಸ್ಥಳ; A place from where potter fetch the clay to do pots;
- —***ಕುಂಬಾರ ಗೇಣಿ*** : ಊರಿನವರು ವರ್ಷಕ್ಕೊಮ್ಮೆ ಕುಂಬಾರರಿಗಾಗಿ ಕೊಡುವ ಆಯ; ರೈತರು ಸುಗ್ಗಿಯಲ್ಲಿ ಕೊಡುವ ಧಾನ್ಯ ರೂಪದ ಕಾಣಿಕೆ; An yearly offering/ gift to a potter at the time of harvest by farmers;
- —***ಕುಂಬಾರ ಗೇರಿ*** : ಕುಂಬಾರ ಸಮುದಾಯದವರು ವಾಸ ಮಾಡುವ ಬೀದಿ ಅಥವಾ ಕೇರಿ; ಒಂದೇ ವೃತ್ತಿಯನ್ನು ಮಾಡುವ ಸಮುದಾಯದವರು ಒಂದೇ ಕಡೆ ವಾಸಮಾಡುವಂತಹ ಏರ್ಪಾಡು ಇರುತ್ತಿದ್ದವು; ಉದಾಹರಣೆಗೆ ಕುಂಬಾರಗೇರಿಯಲ್ಲಿ ಕುಂಬಾರರು ಗಾಣಿಗಗೇರಿಯಲ್ಲಿ ಗಾಣಿಗರು; ಒಕ್ಕಲಗೇರಿಯಲ್ಲಿ ಒಕ್ಕಲಿಗರು; A potter's street/ Lane where the potter community dwell;
- —***ಕುಂಬಾರ ಬೂದಿ*** : ಆವಿಗೆಯಲ್ಲಿ ಹಸಿ ಮಡಿಕೆ, ಕುಡಿಕೆ, ಇತ್ಯಾದಿಗಳನ್ನು ಸುಟ್ಟ ನಂತರ ದೊರೆಯುವ ಬೂದಿಯನ್ನು ಪಾತ್ರೆ ತೊಳೆಯಲು, ಗಿಡಗಳಿಗೆ ಕೀಟನಿವಾರಣೆಗೆ ಎರಚಲು, ಗೊಬ್ಬರವಾಗಿ ಬಳಕೆ; The ashes out of backed clay pots of different shapes;
- —***ಕುಂಬಾರ ಸಾಲೆ*** : ಕುಂಬಾರ ತನ್ನ ಕಸುಬಿನ ಎಲ್ಲ ಹಂತದ ಕೆಲಸವನ್ನು ಮಾಡುವ ಸ್ಥಳ, ಮನೆ; A place/home where a potter does his work;
- —***ಕುಂಬಾರ ದಿಕ್ಕು/ಕುಂಬಾರ ಮೂಲೆ*** : ನೈರುತ್ಯ ದಿಕ್ಕು; ಆವಿಗೆಯಲ್ಲಿ ಬೇಯಿಸಲು ಇಟ್ಟು ವಸ್ತುಗಳಿಗೆ ಬೆಂಕಿ ತಗಲುವಂತೆ ನೋಡಿ ಆವಿಗೆ ಕಟ್ಟಿರುವ ದಿಕ್ಕು ಅಥವಾ ಮೂಲೆ; A south west direction;
- —***ಕುಂಬಾರ ಗಾಳಿ*** : ಕುಂಬಾರಿಕೆಗೆ ನೆರವಾಗುವ ಗಾಳಿ; ದಕ್ಷಿಣದಿಂದ ಉತ್ತರಕ್ಕೆ ಬೀಸುವ ಗಾಳಿ; ಸಾಮಾನ್ಯವಾಗಿ ಕುಂಬಾರರ ಆವಿಗೆ ದಕ್ಷಿಣಾಭಿಮುಖವಾಗಿರುವುದರಿಂದ ಈ ಗಾಳಿ ಬೀಸಿ ಎಲ್ಲ ವಸ್ತುಗಳು ಹದವಾಗಿ ಬೇಯಲು ಸಹಾಯವಾಗುವುದು; A breeze which help to pottery; A breeze which blows from south to north;
- ಕುಂಬಾರ ಗಾಳಿಗೆ ಸಂಬಂಧಿಸಿದಂತಹ ನಂಬಿಕೆಗಳು: ಒಮ್ಮೆ ಕುಂಬಾರ ಆವಿಗೆಯಲ್ಲಿ ಗಡಿಗೆಗಳನ್ನು ಸುಡುವಾಗ ಗಾಳಿ ಬೀಸದೆ ಆವಿಗೆಯಲ್ಲಿ ಬೆಂಕಿ ಉರಿಯಲಿಲ್ಲ; ಆಗ ಕುಂಬಾರನು ವಾಯುದೇವನನ್ನು ಪ್ರಾರ್ಥಿಸಲಾಗಿ ದಕ್ಷಿಣದಿಂದ ಗಾಳಿ ಬೀಸಿ ಆವಿಗೆಯಲ್ಲಿ ಬೆಂಕಿ ಉರಿದು ಗಡಿಗೆ ಹದವಾಗಿ ಸುಟ್ಟವಂತೆ; ಕುಂಬಾರನ ಪ್ರಾರ್ಥನೆಯಿಂದ ಅವನಿಗಾಗಿ ಹುಟ್ಟಿದ ಗಾಳಿಯೇ 'ಕುಂಬಾರಗಾಳಿ';
- ಇನ್ನೊಂದು ನಂಬಿಕೆ ಪ್ರಕಾರ ಒಮ್ಮೆ ಆವಿಗೆಯಲ್ಲಿ ಗಡಿಗೆಗಳು ಅರ್ಧಮರ್ಧ ಸುಟ್ಟಾಗ ಗಾಳಿ ನಿಂತು ಹೋಗಿ ಆವಿಗೆಯಲ್ಲಿ ಬೆಂಕಿ ಉರಿಯಲಿಲ್ಲವಂತೆ ಆಗ ಕುಂಬಾರ ದಕ್ಷಿಣ ದಿಕ್ಕಿಗೆ ಮುಖಮಾಡಿ

ಮುಚ್ಚಳದಿಂದ ಗಾಳಿ ಬೀಸಿದಾಗ ಆವಿಗೆಯಲ್ಲಿ ಬೆಂಕಿ ಉರಿದು ಗಡಿಗೆಗಳು ಹದವಾಗಿ ಸುಟ್ಟವಂತೆ; ಹೀಗೆ ಕುಂಬಾರ ತನಗಾಗಿ ತಾನೇ ಬರಿಸಿದ ಗಾಳಿಯನ್ನು 'ಕುಂಬಾರಗಾಳಿ' ಎಂದು ಕರೆಯುವುದು ರೂಢಿ;

- ಮಳೆಗಾಲದಲ್ಲಿ ದಕ್ಷಿಣ ದಿಕ್ಕಿನ ಗಾಳಿ ಬೀಸಿದರೆ ಮಳೆ ಬರುವುದಿಲ್ಲವೆಂಬ ನಂಬಿಕೆ;
- ಕುಂಬಾರಗಾಳಿಗೆ ನೆಲಗಡಲೆ ಬೆಳೆ ನಾಶವಾಗುತ್ತದೆಂಬ ನಂಬಿಕೆ(ರಾಯ.ಜಿ); There is a belief that this breeze destroys groundnut crops;
- ***—ಕುಂಬಾರಮಣ್ಣು*** : ಕುಂಬಾರಿಕೆಯಲ್ಲಿ ಬಳಸುವ ಕೆಂಪು ಕಪ್ಪು ಬಿಳಿ ಮಿಶ್ರಿತ ಮಣ್ಣು; ವಿಶೇಷವಾಗಿ ಕುಂಬಾರಿಕೆಗೆ ಬಳಕೆಯಾಗುವುದರಿಂದ ಇದಕ್ಕೆ ಈ ಹೆಸರು ಬಂದಿದೆ(ಕೃ.ಪ.ಕೋ); A clay which is to be used particularly in pottery;
- ***—ಕುಂಬಾರ್ಗಟ್ಟೆ*** : ಗಟ್ಟಿಮಣ್ಣಿನ ಒಂದು ಬಗೆ(ಕೃ.ಪ.ಕೋ); A kind of thick strong gum clay;
- ***—ಕುಂಬಾರ ಕೋಳಿ*** : ಕುತ್ತಿಗೆಯ ಸುತ್ತ ಹಾಗೂ ಪುಕ್ಕದ ಭಾಗದಲ್ಲಿ ಕಂದು ವರ್ಣವಿದ್ದು ಉಳಿದಂತೆ ಬಿಳಿ ಬಣ್ಣವಿರುವ ಹದ್ದಿಗಿಂತ ಸ್ವಲ್ಪ ದೊಡ್ಡದಾದ ಪಕ್ಷಿ; A bird that has a brown colour ring around neck; It is bigger than eagle;
- ಚೂಪಾದ ನಸು ಬಾಗಿದ ಕೊಕ್ಕು; ಉಗುರುಗಳಿಂದ ಕೂಡಿದ ಬಲಿಷ್ಠವಾದ ಕಾಲುಗಳು; ಚಿಕ್ಕ ಪಕ್ಷಿಗಳು ಇಲಿಗಳನ್ನು ಬೇಟೆಯಾಡಲು ಹೇಳಿ ಮಾಡಿಸಿದಂತಿವೆ;
- ಬಯಲು ಸೀಮೆಯಲ್ಲಿ ಸತ್ತ ವ್ಯಕ್ತಿಯ ತಿಥಿ ಸಂದರ್ಭದಲ್ಲಿ ಸ್ಮಶಾನದಲ್ಲಿ ಎಡೆ ಇಟ್ಟ ಪದಾರ್ಥಗಳಿಗೆ ಮೊದಲು ಈ ಪಕ್ಷಿ ಎಡೆ ಮುಟ್ಟುವುದು ಶ್ರೇಷ್ಠವೆಂಬ ನಂಬಿಕೆ;
- ನಂತರದಲ್ಲಿ ಕಾಗೆ, ಹದ್ದುಗಳು ಎಡೆ ಪದಾರ್ಥಗಳಿಗೆ ಎರಗುತ್ತವೆಂಬ ನಂಬಿಕೆ ಇದೆ;
- ಇತ್ತೀಚಿನ ದಿನಗಳಲ್ಲಿ ಆಧುನಿಕತೆಯ ಆಡಂಬರಗಳ ತಾಂತ್ರಿಕ ಆವಿಷ್ಕಾರಗಳ ಪರಿಣಾಮದಿಂದಾಗಿ ಈ ಪಕ್ಷಿ ಸಹ ನಶಿಸಿ ಅಳಿವಿನಂಚಿನ ಪಕ್ಷಿಗಳ ಗುಂಪಿಗೆ ಸೇರಿದೆ ಎಂಬುದು ವಿಷಾದನೀಯ;
- ***—ಕುಂಬಾರಹಕ್ಕಿ*** : Dranga; ಗಾತ್ರದಲ್ಲಿ ಕಾಗೆಗಿಂತ ಚಿಕ್ಕದು, ಗುಬ್ಬಚ್ಚಿಗಿಂತ ದೊಡ್ಡದಾಗಿರುವ ಪಕ್ಷಿ; A bird; it is smaller than crow, it is black like crow;
- ಸಂಪೂರ್ಣ ಕಪ್ಪು ಬಣ್ಣದ್ದು; ಮಡಕೆಯಂತೆ ಕಪ್ಪಾಗಿರುವುದರಿಂದ ಇದನ್ನು ಕುಂಬಾರಹಕ್ಕಿ ಎನ್ನುವರು;
- ದನಗಳ ಮೇಲೆ ಕುಳಿತು ಉಣ್ಣೆ ಕಿತ್ತು ತಿನ್ನುವುದರೊಂದಿಗೆ ತೆನೆಗಳ ಮೇಲಿನ ಹುಳು, ಹುಪ್ಪಟೆ ತಿನ್ನುತ್ತವೆ;
- ಈ ಹಕ್ಕಿ ಯಾವುದಾದರೂ ಪ್ರಾಣಿಗಳ ಮೇಲೆ ಕುಳಿತರೆ ಆ ಪ್ರಾಣಿಗಳ ಸೊಂಟ ಬಿದ್ದು ಹೋಗುತ್ತದೆಂದು ನಂಬಿಕೆ;
- ಸೊಂಟ ಬಿದ್ದು ಹೋದ ನಾಯಿಯನ್ನು ಕಂಡರೆ 'ಇದರ ಮೇಲೆ ಹಕ್ಕಿ ಹಾರಿದೆ' ಎಂದು ಹೇಳುವುದುಂಟು; ಇದರ ರಕ್ತ ಸಂಸ್ಕರಿಸಿ ಇಕ್ಕು ಮದ್ದಾಗಿ ಬಳಸುತ್ತಾರೆನ್ನಲಾಗಿದೆ;
- ***—ಕುಂಬಾರರ ಹೆಂಚಿನ ಮನೆ*** : ಕುಂಬಾರ ಮಣ್ಣಿನಿಂದ ಮಾಡಿ ಆವಿಗೆಯಲ್ಲಿ ಸುಟ್ಟ ದೋಣಿಯಾಕಾರದ ಹೆಂಚು; ಇವುಗಳನ್ನು ಮೇಲ್ಹಾವಣಿಯಾಗಿ ಹಾಕಿದ ಮನೆಗಳು ಕುಂಬಾರರ ಹೆಂಚಿನ ಮನೆ; ಇದನ್ನು ವರ್ಷಕ್ಕೊಮ್ಮೆ ಹೆಂಚು ಕೈಯಾಡಿಸುವರು; ಒಳಭಾಗದ ಹೆಂಚನ್ನು ಮೇಲ್ಭಾಗಕ್ಕೆ ಬರುವಂತೆ ಮೇಲ್ಭಾಗದ ಹೆಂಚು ಒಳ ಭಾಗಕ್ಕೆ ಬರುವಂತೆ ಮಾಡುವುದು; ಇದರಿಂದ ಮೇಲ್ಹಾವಣಿ ಸರಿಯಾಗಿ ಒಂದರೊಳಗೊಂದು ಹೆಂಚು ಸೇರಲು ಸಾಧ್ಯ; ಹಳೆಕಾಲದ ಇಂತಹ ಮನೆಗಳು ಈಗಲೂ ಕಾಣಸಿಗುತ್ತವೆ; A house which has the roof or terrace; That has been built by clay file made by potter; In his backed clay oven;
- ***—ಕುಂಬಾರ ಕ್ರಿಯೆ*** : ಶೂದ್ರನಿಗೆ ಕುಂಬಾರನ ಮೂಲಕ ನಡೆಸಲಾಗುವ ಉತ್ತರ ಕ್ರಿಯೆ; ಕೆಲವು ಶೂದ್ರ ವರ್ಗದ ಒಳಜಾತಿಗಳಲ್ಲಿ ಮರಣ ಹೊಂದಿದವರ ಉತ್ತರ ಕ್ರಿಯೆಗಳನ್ನು ಕುಂಬಾರರ ಮೂಲಕ ನಡೆಸುವರು; The funeral; The rites or the last rites done by potter to a shudra;
- ***—ಕುಂಬಾರ ಹುಳು*** : ತೇವಾಂಶ, ಕೊಳಚೆ ಇರುವೆಡೆ ಉತ್ಪತ್ತಿಯಾಗುವ ಒಂದು ಬಗೆಯ ಹುಳು; A

worm that has been born and brought up in dirt/filth;

- ಇದರ ಮೈ ಮೇಲೆ ಯಾವ ಕೆಸರು ಅಂಟಿಕೊಳ್ಳದೇ ಬಹಳ ಶುಭ್ರವಾಗಿರುವುದು;
- ಎಲ್ಲರ ಮಧ್ಯದಲ್ಲಿದ್ದರೂ ಯಾರೊಂದಿಗೂ ಹೊಂದಿಕೊಳ್ಳದ ವ್ಯಕ್ತಿ(ಚಿ.ಪ.ಕೋ);
- ***—ಕುಂಬಾರ್ತಿ ಹುಳ*** : ಜೇನುಹುಳಕ್ಕಿಂತ ಸ್ವಲ್ಪ ದೊಡ್ಡ ಹುಳ; ಮಣ್ಣಿನಿಂದ ಸುಂದರವಾದ ಗೂಡು ಕಟ್ಟುವುದು(ಮ.ನು.ಕೋ); An insect which is bigger than Bee, which is built its dwell in clay;
- ***—ಕುಂಬಾರತಿ ಗೂಡು*** : ಕುಂಬಾರ್ತಿ ಹುಳು ಹೂಜಿಯಂತೆ ಮಣ್ಣಿನಿಂದ ಕಟ್ಟಿದ ಗೂಡು(ಉ.ಕ.ಜಿ). A potter insect/worm which has built its abode in clay like vase.

ಕುಂಬಾರಕೊಪ್ಪಲು kumbārakoppalu :

- ಹೆಸರೇ ಹೇಳುವಂತೆ ವೃತ್ತಿ ಅಥವಾ ಸಮುದಾಯ ಸೂಚಿ ಸ್ಥಳನಾಮವಾಗಿದೆ; An hamlet/village where the potter community have been living/dwelling;
- ಕುಂಬಾರ+ಕೊಪ್ಪಲು ಎರಡು ಪದಗಳು ಸೇರಿ ಆಗಿರುವ ಹೆಸರು; 'ಕುಂಬಾರ' ಪದ 'ಕುಂಭಕಾರ' ಎಂಬ ಸಂಸ್ಕೃತ ಪದದಿಂದ ಬಂದುದು; ಕುಂಬಆ>ಕುಂಬರ ಆಗಿರುವುದು; 'ಬ'ಕಾರ ಹ್ರಸ್ವಗೊಂಡಿದ್ದರಿಂದ, ಉಚ್ಚಾರಣೆಯ ಸಂದರ್ಭ ಇದಕ್ಕೆ ಕಾರಣ; ಮಡಿಕೆ ಮಾಡುವ ವೃತ್ತಿಗೆ 'ಕುಂಬಾರ' ಎಂದು ಕರೆಯುವುದು ಪ್ರಸಿದ್ಧವಾಗಿದೆ; ವೃತ್ತಿ ಕ್ರಮೇಣ ಸಮುದಾಯ ಸೂಚಿಯಾಗಿಯೂ ಮಾರ್ಪಟ್ಟಿರುವುದು ಗೊತ್ತೇ ಇದೆ;
- ತಮಿಳು ಮತ್ತು ಮಲೆಯಾಳಂಗಳಲ್ಲಿ 'ಕುಂಬಕಾರನ್' ಪದವೇ ಇದೆ; ದೇಶೀ ಪದವೇನೂ ಅಲ್ಲ; ಸಂಸ್ಕೃತದಿಂದ ತದ್ಭವವಾಗಿ ಬಂದುದು;
- 'ಕೊಪ್ಪಲ್' ಎಂಬ ವ್ಯಂಜನಾಂತ ಪದಕ್ಕೆ 'ಉ' ಸೇರಿ 'ಕೊಪ್ಪಲು' ಆಗುವುದು ಸಾಮಾನ್ಯ; ಚಿಕ್ಕಹಳ್ಳಿ/ಚಿಕ್ಕಹಟ್ಟಿ/ಚಿಕ್ಕಗ್ರಾಮ ಎಂಬ ಅರ್ಥಗಳಿವೆ;
- ಕುಂಬಾರರು ವಾಸ ಮಾಡುವ ಸ್ಥಳವನ್ನು 'ಕುಂಬಾರಕೊಪ್ಪಲು' ಎಂದು ಕರೆಯಲಾಗಿದೆ; ಈ ರೀತಿಯ ಪದಸಂಯೋಜನೆ ಮತ್ತು ಪದಸೃಷ್ಟಿ ಇಂತಹ ಹೆಸರುಗಳ ಅನೇಕ ಕಡೆಗಳಲ್ಲಿ ಕಾಣಿಸಿಕೊಳ್ಳುವುದು ಸಾಮಾನ್ಯ.

(***ನೋಡಿ:*** ಪಾಂ.ತಾ.ಸ್ಥ.ನಾ.ಅ)

ಕುಂಬಾರಹಳ್ಳಿ kumbārahaḷḷi :

- ಕ್ರಿ.ಶ.೧೦೯೫ರ ೪೫ನೇ ಶಾಸನದಲ್ಲಿ ಇದರ ಉಲ್ಲೇಖ; A village that has been referred in 45th the inscription of 1095 AD;
- ಇದು ವೃತ್ತಿವಾಚಿ ಸ್ಥಳನಾಮವಾಗಿದೆ; ಕುಂಬಾರಿಕೆ ಮಾಡುವವರು ಹೆಚ್ಚಿದ್ದರಿಂದ ಈ ಊರಿಗೆ ಈ ಹೆಸರು ಬಂದಿರಬಹುದು;
- ಕ್ರಿ.ಶ.೧೦೯೫ರಲ್ಲಿ ಕದಂಬರ ರಾಣಿ ಮೇಚಲದೇವಿ ತಮ್ಮ ತಾಯಿ ಅರಸಿಯಬ್ಬೆಗೆ ಪುಣ್ಯವಾಗಲೆಂದು ಕುಂಬಾರಹಳ್ಳಿಗೆ 'ಅರಸಿಯಪುರ' ಎಂದು ಹೆಸರಿಟ್ಟು ಐವರು ಸುಬ್ರಾಹ್ಮಣ್ಯರಿಗೆ ಸರ್ವಬಾಧಾ ಪರಿಹಾರವಾಗಿ ದಾನಕೊಟ್ಟಳು;
- ಅಂದರೆ ಮೂಲ ಕುಂಬಾರಹಳ್ಳಿ; ಆಮೇಲೆ 'ಅರಸಿಯಪುರ'.

(E.C- ೯)

ಕುಂಬಿ kumbi ;

- ಬಿಸಿಲುಗುದುರೆ; 'ಮರೀಚಿಕೆ' ಎಂಬ ಮೃಗ; Mirage; illusion;
- ಪುರುಷರ ಜನನೇಂದ್ರಿಯ; Penis; a male organ that is uses for sex and urinating;
- ಆನೆ; ಗಜ(ತು.ನಿ); Elephant;
- ಗೋಡೆಯ ಮೇಲ್ಭಾಗದಲ್ಲಿ ಮಾಳಿಗೆಯ ಸುತ್ತಲೂ ಕಟ್ಟುವ ದಿಂಡು; ಗೋಡೆಯ ತಲೆಕಟ್ಟಡ; ಕೈಪಿಡಿ;
- ತ: ಕೊಮ್ಮೈ, ತೆ: ಕೊಮ್ಮೆ, ಕೋಟಕೊಮ್ಮ, ತು: ಕುಬಳ್, ಕುಬಲ್
- ತಮಿಳು ಮತ್ತು ತೆಲುಗು ರೂಪಗಳನ್ನು ನೋಡಿದರೆ, ಕನ್ನಡದ 'ಕುಂಬಿ' ಹೆಚ್ಚು ಹಿಂದಿನದೆಂದು ಕಾಣುತ್ತದೆ, ಇದಕ್ಕೆ ಕಾರಣ ಆರಂಭದ 'ಕು'; ಉ>ಒ ಆದುದರಿಂದ ಕೊಮ್ಮೈ, ಕೊಮ್ಮೆರುತಾಗು ಬಂದಿದೆ;
- ಮಣ್ಣಿನ ಹೂಜಿ; ಕುಡಿಕೆ(ಶಿ.ಜಿ);
- ಶಿಖರ, ಬೆಟ್ಟದ ತುದಿ;
- ಮೇಲ್ಮಾಳಿಗೆ ಅಂಚಿನ ಎತ್ತರದ ಭಾಗ; *ಪ್ರ:* 'ತುಂಬಿಮ್ಯಾಲ ಕೂಡೂದು ಮಾನಗೇಡಿ ಕೆಲಸ'(ವಿ.ಜಿ);

- *—ಕುಂಬಿ ಮ್ಯಾಲೆ ಇಡು* : ವಿಪರೀತ ಉಬ್ಬಿಸಿ ಮೇಲ್ಮಾಡು(ಚಿ.ಪ.ಕೋ). embossed over ceiling; Embossed or surfaced over roof.

ಕುಂಬಿಕೈ kumbikai :

ಮುಷ್ಟಿ; *ಪ್ರ:* 'ಕೆಂದ ಕುದುರೆಯ ತಂದು ಕುಂಬಿ ಕೈಯಲ್ಲಿ ತೋರಿ ಬೆದರಿಸಿ ಕೇಳಿದ್ದನು ಮೈಯ್ಯಗೆ ಶುಭಮಂಗಳಾ'. Fist; A person folded plain which held tightly by bending fingers;

ಕುಂಬಿಡು kumbiḍu :

- ನಮಸ್ಕರಿಸು(ಭಾ.ಸೋ.ಪ); To greet respectfully;
- ಮಣಿ; ಬಾಗು; To bow with honour; to salute by bending head;
- ಮೊರೆ: ಧ್ವನಿ ಮಾಡು;
- ಹಡಗನ್ನು ಕಟ್ಟುವ ಮರ; ಕೊವೆಮರ (ದ್ರಾ.ಜ್ಞಾ.ಪ.ಕೋ);
- ತ: ಕೊಂಬು, ಮ: ಕೊಂಬು, ತು: ಕೂವೆ.

ಕುಂಬಿನ ವಿಷ kumbina viṣa :

- ಇದರ ಮೂಲ ರೂಪ 'ಕುಂಬು';
- ಕುಂಬು(ಹುಳುಕು) ಹಿಡಿದ ಜಾಗದಿಂದ ಹೊರ ಬರುವ ಎರೆಹುಳದಂತಿರುವ ವಿಷ ಜಂತು;
- 'ಹುಳುಕು' ಆಗಿರುವ ಮರ ಅಥವಾ ಬೊಂಬಿನ (ಬಿದಿರು) ಜಾಗವನ್ನು ಸೂಚಿಸುವುದು; A poison from a tree which has been worm eaten; A worm like earth worm comes out from the worm eaten part of any tree;
- 'ಹುಳ' ಹಿಡಿದ ಜಾಗವೇ 'ಹುಳುಕು' ಕಂಡಿರುವುದು.

ಕುಂಬು kumbu :

- ನಡುಗು; ಕಂಪಿಸು; To shake, to vibrate;
- ಹುಳುತುಹೋಗು; ಲೊಡ್ಡಾಗು; ಗಟ್ಟಿ ಇಲ್ಲದ ಮರ; ಗೆದ್ದಲು ಹಿಡಿದು ಹಾಳಾಗಿರುವ ಮರ ಅಥವಾ ಮರದ ವಸ್ತು;
- ಜೋಲು; ಒಲೆದಾಡು; ಬಾಗು; ನಮಸ್ಕರಿಸು;
- ತ: ಕುಂಬಿಡು; ಮ: ಕುಂಬಿಡುಗ; ಕುಮ್ಮಿಡುಗ, ಕುಂಬು; ತು: ಕುಂಬ್;
- ಲಡ್ಡು; ಶಿಥಿಲ; ಟೊಳ್ಳು(ಮ.ನು.ಕೋ);
- *—ಕುಂಬು ಸೌದೆ* : ಲಡ್ಡಾದ; ಗಟ್ಟಿಯಿಲ್ಲದ ಸೌದೆ; ಹಳತಾಗಿ ಮೆತ್ತಗಾದ ಮರದತುಂಡು; Rattan fuel; hollow timber;
- *—ಕುಂಬು ಮರ* : ಲಡ್ಡಾಗಿರುವ ಮರ(Ratten wood). Waste wooden fuel.

ಕುಂಬುಲ kumbula :

ಸೀತೆನೆ ಸುಡಲು ಸಿದ್ಧಗೊಳಿಸಿದ ಒಲೆಗುಣಿಯ ಕಿಚ್ಚು; A prepared fire; *ಪ್ರ:* 'ಕುಂಬುಲ್ಯಾಗ ಕೈ ಹುದುಗಿಸಿ ಕೈ ಸುಟ್ಟಂದ್ರ'.

ಕುಂಬ್ನ ಜಡೆ kumbnajaḍe :

ಕಣ್ಣಿನವರೆಗೂ ಬೆಳೆದ ಕೂದಲನ್ನು ಬೈತಲೆ ತೆಗೆದು ಎರಡು ಭಾಗ ಮಾಡಿ ಮೂರು ಕಾಲಿನ ಜಡೆ ಹೆಣೆದು ಕಿವಿಯ ಬಳಿ ಕಟ್ಟುವುದು; A queue; the hair which has tied by partying line the forelock of the hair.

ಕುಂಬ್ರ ಸೌತೆ kumbra sowte :

Cucumis sativus Cucurbitaceae; ಮುಳ್ಳು ಸೌತೆ; ಮಲೆನಾಡಿನ ಭಾಗದಲ್ಲಿ ಹೆಚ್ಚಾಗಿ ಬೆಳೆಯುವ ಬೆಳೆ; ಅಡುಗೆಯಲ್ಲಿ ಪ್ರಧಾನ ಬಳಕೆ. A kind of cucumber used in cooking in Malenadu Region.

ಕುಂಬ್ರಿ kumbri :

- ಎತ್ತರದ ದಿಬ್ಬ; ದನಕರುಗಳು ಮೇಯುವ ವಿಶಾಲವಾದ ಬೆಟ್ಟದ ಅಥವಾ ಗುಡ್ಡದ ಜಾಗ; ಗೋಮಾಳ(ಶಿ.ಜಿ); The highest mount cliff rising ground; A place of cattle grazing; Reserved grassland for cattle;
- ಕುಡುಬಿ ಸಮುದಾಯದಲ್ಲಿನ ಒಂದು ಪಂಗಡ ಮತ್ತು ಅದಕ್ಕೆ ಸೇರಿದ ವ್ಯಕ್ತಿ; A sub caste of kudubi tribe of North Kannada;
- ರಾಗಿ ಬೇಸಾಯದ ಭೂಮಿ(ಉ.ಕ.ಜಿ);
- ಸುಣ್ಣದೊಂದಿಗೆ ಇರುವ ವೀಳ್ಯ; A betel leaf with lime;
- ನೆಲಮಟ್ಟಕ್ಕಿಂತ ಎತ್ತರದಲ್ಲಿರುವ ಜಾಗ;
- ಎತ್ತಂಗಡಿ ಬೇಸಾಯ/ಸ್ಥಳ ಬದಲಾಯಿಸುವ ಕೃಷಿ ಕ್ರಮ(ಉ.ಕ.ಜಿ);

- **—*ಕುಂಬ್ರಿ ಮುಂಡ್ಗ*** : ಹೊನ್ನಾವರ ಭಾಗದ ರೈತರು ಬೆಳೆಯುವ ದೇಸಿ ಭತ್ತದ ಒಂದು ತಳಿ; *ವ್ಯದೂ:* ಕುಂಬ್ರಿ ಸಣ್ಣತ್ತ(ಉ.ಕ.ಜಿ). A native paddy breed;

ಕುಂಬ್ರು ಎಂಚ್ಚು ಮನಿ kumbru enchu mani:

- ಗೋಡೆಗಳ ಮೇಲೆ ಸಮತಟ್ಟಾಗಿ ಬಿದಿರು ಕಡ್ಡಿಗಳನ್ನು ಜೋಡಿಸಿ ಅದರ ಮೇಲೆ ಕುಂಬ್ರು ಎಂಚ್ಚುಗಳನ್ನು ಜೋಡಿಸಿ ಹೊದಿಸುವರು; A kind of tiles made up of baked clay use to built housing roofs;
- ಇವು ಮಡಕೆಯ ರೀತಿಯಲ್ಲಿಯೇ ತಯಾರಾಗುವುವು; ಒಂದು ಅಡಿ ಇರುತ್ತವೆ.

ಕುಂಭ kumbha :

- ಮಣ್ಣಿನ ಗಡಿಗೆ; ಕೊಡ; ಕಲಶ; ಹರವಿ; ನೀರಿನ ಗಡಿಗೆ; ಶ್ರೀ ಕುಂಭ ಸ್ವಾಗತ, ಪೂರ್ಣ ಕುಂಭ ಸ್ವಾಗತ ಕಾರ್ಯದಲ್ಲಿ ಬಳಕೆ; A water clay pot;
- ಕುಂಭ ಎಂಬುವುದಕ್ಕೆ 'ಗರ್ಭ' ಎಂಬ ಅರ್ಥವೂ ಇದೆ; *ಪ್ರ:* 'ಕುಂಭದೊಳಗೆ ನೀರು ತುಂಬಿ ಸಿಂಧುವಿನೊಳಗೆ ಮುಳುಗಿಸಲಾಗಿ ಅದರೊಳಗೂ ನೀರು ಹೊರಗೂ ನೀರು'(ಕೂಗಿನಮಾರಮ್ಮ);
- ಒಂದು ಅಳತೆ ಮಾನ; ಇಪ್ಪತ್ತು ದ್ರೋಣಗಳ ಅಳತೆ; A measurement of twenty boats;
- ಆನೆಯ ತಲೆಯ ಮೇಲಿನ ಗುಂಡಾಗಿ ಉಬ್ಬಿದ ಭಾಗ; An embossed part of elephant head;
- ಒಂದು ಬಗೆಯ ಸುಗಂಧ ಸಸ್ಯ; ಗುಗ್ಗುಳ; ಧೂಪದ ಗಿಡ; A kind of scented plant;
- ಪುರಾಣದಲ್ಲಿ ಬರುವ ಒಬ್ಬ ರಾಕ್ಷಸನ ಹೆಸರು;
- **—*ಕುಂಭವಾದ್ಯ*** : ಘಟವಾದ್ಯ; ದೊಡ್ಡದಾದ ಮಣ್ಣಿನ ಕೊಡ; ಹೊಟ್ಟೆಯ ಮೇಲಿಟ್ಟುಕೊಂಡು ವಾದ್ಯದಂತೆ ತಾಳಬದ್ಧವಾಗಿ ನುಡಿಸುವುದು; A musical instrument that made up of clay pot;
- **—*ಕುಂಭರಾಶಿ*** : ದ್ವಾದಶ ರಾಶಿಗಳಲ್ಲಿ ಹನ್ನೊಂದನೆಯ ರಾಶಿ; Eleventh of zodiac;
- **—*ಕುಂಭಾರತಿ*** : ಚೊಂಬಿನ ಆಕಾರದ ತಾಮ್ರ ಅಥವಾ ಬೆಳ್ಳಿಯಿಂದ ಮಾಡಿದ ಸಾಧನದಲ್ಲಿ ಏಕ ಬತ್ತಿ ಬಳಸಿ ಮಾಡುವ ಆರತಿ; *ಪ್ರ:* 'ದೇವಿಗೆ ಕುಂಭಾರತಿ ಮಾಡೋಣ'(ಮಂ.ಜಿ); An adoration of lighting lamp in a copper/silver small pot like mug;
- **—*ಕುಂಭಾಭಿಷೇಕ*** : ಕ್ರಮಬದ್ಧವಾಗಿ ಕುಂಭಗಳಲ್ಲಿ ದ್ರವ್ಯಗಳನ್ನು(ಹಾಲು, ಮೊಸರು, ಚಂದನ ಇತ್ಯಾದಿ) ತುಂಬಿ ವಿಧಿಪೂರ್ಣವಾಗಿ ದೇವರಿಗೆ ಮಾಡುವ ಅಭಿಷೇಕ; A ritualistic holy bath for an idol of god in milk, curd, sandal;
- **—*ಕುಂಭಹಾಕು*** : ಗ್ರಾಮದೇವತೆಯ ಜಾತ್ರೆ ಸಂದರ್ಭದಲ್ಲಿ ಜಾತ್ರೆ ಆರಂಭಕ್ಕೆ ಮುನ್ನ ಊರ ಮುಂದೆ ಹಬ್ಬದ ಸಂಕೇತವಾಗಿ ನೆಡುವ ಧ್ವಜಕಂಬ. A holy flag pillar; A holy post to inaugurate village goddess fair;
- **—*ಕುಂಭೇಶ್ವರ*** : ಕುಂಬಾರ ಸಮುದಾಯದವರ ದೇವರು; ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನಲ್ಲಿರುವ ದೇವಾಲಯ; ಲಿಂಗಾಯಿತ ಕುಂಬಾರರು ಈ ದೈವದ ಭಕ್ತರು; ಕುಂಬಾರ ಗುಂಡಯ್ಯ ಆತನ ಹೆಂಡತಿ ಕೇತಲದೇವಿಯರಿಗೆ ಈತನೇ ಆರಾಧ್ಯ ದೈವವಾಗಿದ್ದು, ಕೇತಲದೇವಿ 'ಕುಂಭೇಶ್ವರ' ಎಂಬ ಅಂಕಿತದಿಂದ ವಚನ ರಚಿಸಿದ್ದಾಳೆ. A god of potter community at balki in Bidar district; Ketala Devi wife of Kumbāra Gundayya(a pot maker) wrote poetry(vachana) in the pen name of Kumbheshwara;
- **—*ಕುಂಭ ಕುತ್ರೆ*** : ಗುಡಿಸಿಲಿನ ಆಕಾರದಲ್ಲಿ ರಾಶಿ ಹಾಕಿದ ಭತ್ತದ ಪೈರು(ಉ.ಕ); A heap of harvest knitted as hamlets/hut shaped;
- **—*ಕುಂಭವರ್ಪಿ*** : ಶುಭ ಸಂದರ್ಭದಲ್ಲಿ ತರುವ ಅನ್ನದ ಕೊಡ(ಯಾ.ಜಿ); A pot contained boiled rice/rice;
- **—*ಕುಂಭ ಶಾಖ*** : ಆಯುರ್ವೇದದಲ್ಲಿನ ಒಂದು ಚಿಕಿತ್ಸೆ ಕ್ರಮ; ಎಣ್ಣೆ ಲೇಪನದ ನಂತರ ಕುಂಭದಿಂದ ಶಾಖ ಕೊಡುವ ಪರಿ; A kind of medicinal healing treatment in Ayurveda;

- —*ಕುಂಭ ನೀರು* : ಮದುವೆಯಲ್ಲಿ ಗಂಗೆ ಪೂಜೆ ಮಾಡಿ ನಂತರ ವಧು ಕುಂಭಗಳಿಗೆ ನೀರು ತುಂಬಿಸಿಕೊಂಡು ತಲೆಯ ಮೇಲಿಟ್ಟುಕೊಂಡು ಹೊತ್ತು ತರುವ ಆಚರಣೆ(ಮ.ನು.ಕೋ). A ritual in marriage where bride worshipped water filled pots and puts on her head in procession.

ಕುಂಭಕರ್ಣ kumbhakarṇa :

- ರಾಮಾಯಣದಲ್ಲಿ ಬರುವ ಒಂದು ಪಾತ್ರ; ರಾವಣನ ತಮ್ಮ; ನಿದ್ದೆ ಬಡಕ; ಮಿತಿಮೀರಿ ನಿದ್ದೆ ಮಾಡುವ ವ್ಯಕ್ತಿ; Brother of Ravana of Ramayana;
- ವರ್ಷದ ಆರು ತಿಂಗಳು ನಿದ್ದೆ ಆರು ತಿಂಗಳು ಎಚ್ಚರವಾಗಿರುವ ರಾಕ್ಷಸ ಎಂಬುದು ಪುರಾಣದ ವಿಚಾರ; Mythical giant who sleeps six months and awakes six months;
- ಜನಸಾಮಾನ್ಯರಿಗೆ ರಾಮಾಯಣದ ಮೂಲಕ ಪರಿಚಯ ಇರುವಂಥವನು; 'ಕುಂಭಕರ್ಣನ ನಿದ್ದೆ' ಎಂಬುದೇ ಒಂದು ರೂಪಕ; ಹೆಚ್ಚು ನಿದ್ದೆ ಮಾಡುವವರನ್ನು ಜನ ಗುರುತಿಸುವ ರೀತಿ ಇದು;
- 'ಕುಂಭಕರ್ಣ' ನಿದ್ದೆಬಡುಕನಿಗೆ, ಸೋಮಾರಿಗ, ಜಡಚೇತಸರಿಗೆ ರೂಪಕವಾದಂತೆ 'ಕುಂಭಕರ್ಣನನೆಬ್ಬಿಸಿಂ'(ಶ್ರೀರಾಮಾಯಣ ದರ್ಶನಂ–ಕುವೆಂಪು) ಎಂಬುದು ಒಂದು ನುಡಿಗಟ್ಟಾಗಿ/ ರೂಪಕವಾಗಿ ತಟಸ್ಥ ನೀತಿಯವರನ್ನು, ಉದಾಸೀನ ಪ್ರವೃತ್ತಿಯವರನ್ನು, ಹಿಂದುಳಿದವರನ್ನು ಎಚ್ಚರಗೊಳಿಸುವ, ಉದ್ಧಾರ ಮಾಡುವ ಪ್ರಕ್ರಿಯೆಯನ್ನು ಸಂಕೇತಿಸುತ್ತದೆ.

ಕುಂಭಕೋಣ kumbhakōṇa :

ಮೋಸ; ಪ್ರ: 'ಅವನು ನನಗೆ ಕುಂಭಕೋಣ ಮಾಡಿಬಿಟ್ಟ'; ಜನಪದರಲ್ಲಿ ಒಂದು ರೂಪಕವಾಗಿ ಈ 'ಕುಂಭಕೋಣ' ಪದ ಬಳಕೆಯಲ್ಲಿದೆ; ಆದರೆ ಇದರ ಹಿನ್ನೆಲೆಯೇನೆಂಬುದು ಗೊತ್ತಾಗುವುದಿಲ್ಲ. To deceive, to do cheating deception, Cheating hypocrisy.

ಕುಂಭದ್ರೋಣ kumbhadrōṇa :

ಭಾರೀ ಮಳೆಗೆ ಈ ಪದ ಬಳಕೆಯಾಗಿದೆ; ಕೊಡವನ್ನೆತ್ತಿ ಸುರಿದಂತೆ ಒಂದೇ ಸಮನೆ ಸುರಿಯುವ ಮಳೆ; ಧಾರಕಾರ ಮಳೆ. 'ಸುರಿವ ಮಳೆ'ಗೆ ಈ ಹೆಸರು ಯಾಕೆ ಬಂತು; ಅದರ ಹಿನ್ನೆಲೆ ಏನು – ತಿಳಿಯದು. The heavy rainfall.

ಕುಂಭಮೇಳ kumbhamēḷa :

ಕುಂಭರಾಶಿಗೆ ಗುರುಗ್ರಹ ಬಂದಾಗ ಸಂಗಮ ಸ್ಥಳಗಳಲ್ಲಿ ನಡೆಯುವ ಪುಣ್ಯ ಸ್ನಾನದ ಆಚರಣೆ. A ritual of holy bath.

ಕುಂಮಣೆ kummaṇe :

ಶನಿದೇವರಿಗೆ ವಿಶೇಷವಾಗಿ ನಡೆದುಕೊಳ್ಳುವ ಒಂದು ಪೂಜಾ ಕ್ರಮ(ತು.ನಿ). A special worship that is to be done for lord Shani.

ಕುಂಯ್ಕ kunyka :

- ಕುಹಕದ ಮಾತಾಡುವವ; ವ್ಯಂಗ್ಯದ ಮಾತು(ದ.ಕ) ಪ್ರ: 'ನಿಂದ್ ಈಕುಂಯ್ಕ ಮಾತೆಲ್ಲ ನನ್ನತ್ರಾಡಬೇಡ'; A tongue is cheek; A person who speaks ironically sarcastically sylly;
- ಮನಸ್ಸಲ್ಲೇ ಕೆಟ್ಟದ್ದನ್ನು ಬಯಸುವವ(ಮ.ನು.ಕೋ);
- —*ಕುಂಯ್ಕಿ* : ಸ್ತ್ರೀವಾಚಕ; ಹೆಚ್ಚು ಮಾತಾಡದೇ ಮನದಲ್ಲಿಯೇ ಕೆಟ್ಟದ್ದನ್ನು ಬಯಸುವವಳು; (ಮ.ನು.ಕೋ). A female expression; a lady who speak less and curse others.

ಕುಂಯ್ಗುಡು kuyguḍu :

- ಅಳುವಂತೆ ನಟಿಸು; ಕಿರಿಕಿರಿಯಾಗುವಂತೆ ಮಾತಾಡು(ಮ.ನು.ಕೋ); To set as weeping; To irritate other by speaking;
- ಉದ್ದೇಶಪೂರ್ವಕವಾಗಿ ಕಿರಿಕಿರಿಮಾಡುವುದು, ನಡವಳಿಕೆಯ ಒಂದು ವಿಶೇಷ ಭಂಗಿ.

ಕುಂಯ್ಯಾ kuyyā:

ಗೌರಿ ಹುಣ್ಣಿಮೆಯ ಸಂದರ್ಭದಲ್ಲಿ ಹೆಣ್ಣುಮಕ್ಕಳು ಕುಂಯ್ಯಾದ ಮೂರ್ತಿ ಮಾಡಿ ಪೂಜಿಸುವರು; ಇದೊಂದು ಆಚರಣೆಯ ಹಿನ್ನಲೆಯಲ್ಲಿ ಪೂಜಿಸುವ ದೇವರು(ಕಲ.ಜಿ). A god worshipped by girls/ ladies in Gowri full moon season.

ಕುಂಶಾಖ kumśākha :

ಶಿವಾಚಾರ ನಗರ್ತರಲ್ಲಿ ಬಾಣಂತಿಗೆ ಶಾಖ ನೀಡುವ ಒಂದು ಕ್ರಮ; ಪಾತ್ರೆಯಲ್ಲಿ ನೀರು ಕುದಿಸಿ ಅದಕ್ಕೆ ಅರಿಶಿನಪುಡಿ, ರಾಗಿ ಹಿಟ್ಟು, ಸುಟ್ಟ ಇಟ್ಟಿಗೆ ಹಾಕಿ ಬಾಣಂತಿಯನ್ನು ಅದರ ಮುಂದೆ ಕೂರಿಸಿ ಮುಸುಕು ಹಾಕಿ ಶಾಖ ಕೊಡುವ ವಿಧಾನ. A method of giving heat to the nourishing mother with hot water, turmeric, millet powder in Shivachara Nagartha caste.

ಕುಂಸ kumsa :

ಒಂದು ಬಳ್ಳಿಯ ಪ್ರಭೇದ; ಇದರಿಂದ ಮಂಕರಿಗಳನ್ನು ಹೆಣೆಯುವರು(ಕ.ಜಾ.ಕೋ). A kind of wild creeper that is used to manufacture baskets.

ಕುಕಡಿಬ್ಯಾಟಿ/ಕುಕ್ಕಡಿಬೇಟೆ kukaḍibyāṭi/ kukkaḍibēṭe :

- ಕೊರಮ ಸಮುದಾಯದಲ್ಲಿನ ಮದುವೆಯ ಒಂದು ಆಚರಣೆ; ತಾಳಿಕಟ್ಟಿದ ಮಾರನೆಯ ದಿವಸ ಕೋಣವನ್ನು ಕಡಿದು ಮಾಂಸದ ಊಟವನ್ನು ಬೀಗರಿಗೆ ಹಾಕುವ ಸಂಪ್ರದಾಯ. A grand feast; A celebration of Korama community during the second day of marriage non-veg meals for their relatives;
- ಪ್ರಾವ್ಯದ ಉಚ್ಚಾರಣೆಯ ಕಾರಣದಿಂದ 'ಬೇಟೆ' ಪದಕ್ಕೆ ಬದಲಾಗಿ 'ಬ್ಯಾಟಿ' ಪದ ಬಂದಿದೆ; beṭe > byaṭi ಆಗಿದೆ. 'ಯ' ಕಾರಾಗಮದ ಜೊತೆಗೆ, ಅದು ದೀರ್ಘವಾಗಿರುವಂತೆ ನೋಡಿಕೊಂಡಿದೆ.

ಕುಕನೂರು kukanūru :

- ಕೊಪ್ಪಳ ಜಿಲ್ಲೆ ಯಲಬುರ್ಗಿ ತಾಲ್ಲೋಕಿನ ಕ್ರಿ.ಶ.೧೧೦೭-೧೨೩೨ ಶಾಸನದಲ್ಲಿ ಈ ಊರಿನ ಉಲ್ಲೇಖ; A village that has been referred in1107-1232nd inscription of Yalburga taluk Koppala dist;
- ಈ ಶಾಸನಗಳಲ್ಲಿ ಕಲ್ಯಾಣ ಚಾಲುಕ್ಯ ಆರನೇ ವಿಕ್ರಮಾದಿತ್ಯನಿಂದ ದೇವಗಿರಿ ಯಾದವರ ಸಿಂಘಣನವರೆಗೆ ಬೇರೆ ಬೇರೆ ಕಾಲಗಳಲ್ಲಿ ಮೂಲಸ್ಥಾನ ಕಲ್ಲೇಶ್ವರ ದೇವಾಲಯಕ್ಕೆ ನೀಡಿರುವ ದಾನಗಳ ವಿವರಗಳಿವೆ;
- 'ಕುಕ್ಕನೂರು' ಒಂದು ಅಗ್ರಹಾರವಾಗಿದ್ದು, ಇಲ್ಲಿನ ಮಹಾಜನರಿಗೆ ನೀಡಿದ ದಾನವೂ ಉಲ್ಲೇಖವಾಗಿದೆ;
- ಕುಕ್ಕನೂರು>ಕುಕನೂರು ಆಗಿದೆ;
- 'ಕುಕ್ಕನ' ಊರು ಆಗಿರಬಹುದೆ? ವ್ಯಕ್ತಿವಾಚಿ ಸ್ಥಳನಾಮವೆ?

(ಕ.ವಿ.ವಿ.ಶಾ.ಸಂ.೨; ಹಂಪಿ)

- ಈಗ ಇದು 'ಯಲಬುರ್ಗಾ' ತಾಲ್ಲೂಕಿನಲ್ಲಿರುವ ದೊಡ್ಡ ಗ್ರಾಮ; ನೂರ ಏಳು ಲಿಂಗಗಳನ್ನು ಹೊಂದಿದ್ದು ದಕ್ಷಿಣಕಾಶಿ ಎಂದೇ ಪ್ರಖ್ಯಾತಿ ಹೊಂದಿರುವ ಊರು; ಇಲ್ಲಿ ಗುದ್ನೆಪ್ಪನ ಜಾತ್ರೆ ನಡೆಯುವುದು; A large village of Yalaburga taluk that is known as Kashi of south;
- 'ಕುಕನ್' ಮೂಲ ರೂಪದ ಮೇಲೆ 'ಊರು' ಪದ ಬಂದು 'ಕುಕನೂರು' ಆಗಿರುವಂತೆ ಕಾಣುತ್ತದೆ.

ಕುಕಮರೋಗ kukamarōga:

Ceratobasidium noxium (Ceratobasidiaceae); ಬೆಳೆಯ ಮೂಲ ಬೇರು ಕೊಳೆತು ಪೈರು ಹಾಳಾಗಿ ಬೆಳೆ ನಾಶವಾಗುವ ರೋಗ (ಕೃ.ಪ.ಕೋ); ***ನೋಡಿ:*** ಕೊಳೆರೋಗ; A disease of crops in which the roots of the crops are destroyed.

ಕುಕಿಲು kukilu :

- ಕೋಗಿಲೆಯ ದನಿ; ಕೂಗು; A melodious voice of Cuckoo; voice of Nightingale;
- ಬಗ್ಗಿಯ(ವಿ.ಜಿ);
- ಪಕ್ಷಿ ಪ್ರಾಣಿಗಳನ್ನು ಕರೆಯಲು ಬಳಸುವ ಒಂದು ಬಗೆಯ ಧ್ವನಿ; A voice which is used to call birds and animal near;
- ತ: ಕುಯಿಲು/ಕುಕ್ಕಿಲ್; ಮ: ಕುಯಿಲ್; ತೆ: ಕುಕ್ಕಿಲ್;
- ಅಲ್ಪಸ್ವಲ್ಪ ವ್ಯತ್ಯಾಸದೊಡನೆ 'ಕುಕಿಲ್' ಪದ ಬಳಕೆಯಲ್ಲಿದೆ. ಮುಖ್ಯವಾಗಿ ಪದಮಧ್ಯದಲ್ಲಿ 'ಕ' ಕಾರಕ್ಕೆ ಬರಲು 'ಯ್' ಕಾರ ಬಂದಿರುವುದು; ಕಾರಣ ಸ್ಪಷ್ಟವಿಲ್ಲ.

ಕುಕೂ kukū :

ಕ್ಯೂಕಲಸ್ ಕೆನೂರಸ್ cuculus conorus (Cuculidae) ಕಾಡಿನಲ್ಲಿ ಮರದ ಮೇಲೆ ವಾಸಿಸುವ ಪಕ್ಷಿ; ಕಡು ಬೂದುಬಣ್ಣದ ಮೇಲ್ಭಾಗವನ್ನು ಹೊಂದಿದ್ದು ಕುತ್ತಿಗೆ, ತಲೆ ಮತ್ತು ಹೊಟ್ಟೆಯ ಭಾಗದಲ್ಲಿ ಬಿಳಿ ಹಿನ್ನಲೆಯ ಕಪ್ಪು ಅಡ್ಡ ಪಟ್ಟಿಗಳಿರುತ್ತವೆ; ಬಾಲ ಕಪ್ಪು ಕಂದು ಬಣ್ಣದಿಂದ ಕೂಡಿದ್ದು ಬಿಳಿ ಬಣ್ಣದ ಗುರುತುಗಳಿವೆ. A Cuckoo; a bird it lives in forest trees it has dark grey colour on its head, white straps in neck, head and abdomen part.

ಕುಕ್ಕ್ kukk :

ಕುಟುಕು; ಮೊಟಕು; ಹೆಟ್ಟು; ಕುಕ್ಕುವಿಕೆ; ಚುಚ್ಚು; *ಪ್ರ:* 'ಆ ಸೌದೆನ ಅಲ್ಲಿ ಕುಕ್ಕ್'(ಗೌಡಕನ್ನಡ). To sting short; To inject to knit to put down roughly.

ಕುಕ್ಕ kukka :

- ಪರಿಶಿಷ್ಟ ಜಾತಿಯ ಒಂದು ಒಳ ಪಂಗಡ(ಕೊಡ.ಜಿ); A sub caste of scheduled caste;
- ಕಳ್ಳಕುಕ್ಕನ ಬಳ್ಳಿ; A creeper;
- ಕೊಕ್ಕರೆ; Crane;
- ಮೂಕ ಪಕ್ಷಿ;
- ನಾಯಿಗಳನ್ನು ಕರೆಯುವಾಗ ಬಳಸುವ ಶಬ್ದ. A sound while we call dogs.

ಕುಕ್ಕಟ kukkaṭa :

ಮೋಸ; ವಂಚನೆ; ಮಾಯೆ; ಕಳಿಂಗ ಎಂಬ ಹಕ್ಕಿ; Cheating, A bird.

ಕುಕ್ಕಡ/ಕುಕ್ಕುಡ kukkaḍa/kukkuḍa :

ಬಾಳೆಯ ಹೂ(ಉ.ಕ.ಜಿ); ಬಾಳೆ ಗೊನೆಯ ತುದಿ ಹೂಗಳ ಗೊಂಚಲು; ಮೋತೆ; *ಪ್ರ:* 'ಕುಕ್ಕಡ ಬೇರೆ ಕೊನಿ ಬೇರೆ'. The head point of banana flower branch.

ಕುಕ್ಕಡದಮ್ಮ kukkaḍadamma :

ಹೊಸದುರ್ಗದಲ್ಲಿನ ಗ್ರಾಮದೇವತೆ; ವಿಶೇಷವಾಗಿ ಮಕ್ಕಳಿಗೆ ಅಮ್ಮ(ಮೈಮೇಲೆ ಏಳುವ ಕೆಂಪು ಗುಳ್ಳೆಗಳು) ಆದಾಗ ಈ ದೇವರನ್ನು ಪೂಜಿಸುವರು; ಈಕೆಯನ್ನು ಮಕ್ಕಳ ದೇವರೆಂದೇ ಕರೆಯುವರು (ಚಿತ್ರ.ಜಿ); ಇಲ್ಲಿ ವ್ಯತ್ಯಯ ರೂಪವನ್ನು ಪರಿಗಣಿಸಿ ಹೇಳುವುದಾದರೆ 'ಡ' ಕಾರ 'ಲ' ಕಾರದ ಮಧ್ಯೆ ವ್ಯತ್ಯಾಸ ನಡೆದಿರುವಂತೆ ತೋರುತ್ತದೆ; 'ಡ' ಮತ್ತು 'ಲ'(ಳ)ಗಳು ಪರಸ್ಪರ ಧ್ವನಿವ್ಯತ್ಯಾಸಕ್ಕೆ ಒಳಗಾಗಿ ಆಮೇಲೆ ಧ್ವನಿಮಾ ವ್ಯತ್ಯಾಸ ಆಗಿರಬೇಕು; A village Goddess of Hosadurga of Chitradurga dist; She is worshiped for healing small pox or Amma diseases.
ವ್ಯದೂ: ಕುಕ್ಕಲಮಾರಮ್ಮ.

ಕುಕ್ಕಡಿ¹ kukkaḍi[1] :

- ಉಣ್ಣೆಯಿಂದ ದಾರವನ್ನು ಕದರಿಗೆ ಸುತ್ತುತ್ತಾರೆ; ಇದನ್ನು 'ಕುಕ್ಕಡಿ' ಎನ್ನುತ್ತಾರೆ;
- ಹತ್ತು ಕುಕ್ಕಡಿಗಳಿಗೆ ಒಂದು ಕಂಬಳಿ ನೇಯುತ್ತಾರೆ.

ಕುಕ್ಕಡಿ² kukkaḍi[2] :

- ಏಟುಬಿದ್ದಾಗ ಸ್ನಾಯುವಿನಲ್ಲಿ ಏಳುವ ಬಾವು; ಊತ; A swelling of muscle due to hurt by a blow;
- ದನಗಳಿಗೆ ಬರುವ ನಾಲಿಗೆ ಸಂಬಂಧಿ ರೋಗ; ಔಷಧಿಯಾಗಿ ಕೋರಿ(ಹತ್ತಿ) ಸುಟ್ಟು ಬೆಣ್ಣೆಯಲ್ಲಿ ಅದನ್ನು ಕಲೆಸಿ ಅರಿಶಿನಪುಡಿ ಸೇರಿಸಿ ದನಗಳ ನಾಲಿಗೆಗೆ ಹಚ್ಚಿ ನಿಧಾನವಾಗಿ ಹೆಂಚಿನಿಂದ ತಿಕ್ಕಬೇಕು; ಇಲ್ಲವೇ ಉಪ್ಪಿನಕಾಯಿ ರಸ, ಬೆಲ್ಲ, ಅಜಿವಾನ ಎಲ್ಲ ಸೇರಿಸಿ ಅರೆದು ನಾಲಿಗೆಗೆ ಹಚ್ಚಿ ಬೆರಳಿನಿಂದ ತಿಕ್ಕಬೇಕು; ಈ ರೋಗದ ದನಗಳಿಗೆ ಬಿಸಿನೀರನ್ನು ಕುಡಿಸಬೇಕು(ಕ.ಜಾ.ನಿ); Tongue- disease of cattle;
- ದೇಹದ ಇಕ್ಕೆಲದ ಪಕ್ಕೆಗಳು(ಚಿತ್ರ.ಜಿ); Ribs of a body;
- ಕುರಿ ಉಣ್ಣೆಯ ದಾರ ತುಂಬಿದ ಕದಿರು(ಚಿ.ಪ.ಕೋ);
- ಮಧ್ಯದಲ್ಲಿ ದಪ್ಪನಾಗಿಯೂ ಎರಡು ತುದಿಗಳಲ್ಲಿ ತೆಳುವಾಗಿಯೂ ಇರುವಂತೆ ಸುತ್ತಿರುವ ದಾರದ ಉಂಡೆ; *ಪ್ರ:* 'ಕುಕ್ಕಡಿ ಸುತ್ತುವುದೂ ಒಂದು ಕಲೆ'(ವಿ.ಜಿ); A small wooden roller used to roll thread;
- ದಾರವನ್ನು ಸುತ್ತಲೂ ಬಳಸುವ ಕಟ್ಟಿಗೆ(ಬ.ಜಿ);

- ತಲೆಗೆ ಅಲಂಕರಿಸಿಕೊಳ್ಳಲು ಧರಿಸುವ ಆಭರಣ. A jewel used to decorated head.

ಕುಕ್ಕರಗಾಲು/ಕುಕ್ಕಲಗಾಲು kukkaragālu/ kukkalagālu :

- ಕಾಲುಗಳನ್ನು ಮಡಚಿ ಕುಂಡೆ ನೆಲಕ್ಕೆ ತಾಗದಂತೆ ಕೂರುವ ಭಂಗಿ; ಮಲವಿಸರ್ಜನೆಗೆ ಕುಳಿತುಕೊಳ್ಳುವ ರೀತಿ; A posture of sitting for toilet;
- ವಜ್ರಾಸನ; ಯೋಗಾಸನದಲ್ಲಿ ಪ್ರಮುಖವಾದ ಆಸನ; ಎರಡು ಪಾದಗಳನ್ನು ನೆಲದ ಮೇಲೆ ಊರಿ ಹಿಮ್ಮಡಿಯ ಮೇಲೆ ಕುಳಿತುಕೊಳ್ಳುವುದು; ದೇಹವನ್ನು ನೆಟ್ಟಗೆ ಇರಿಸುಕೊಳ್ಳುವಿಕೆ; ಪ್ರಾಣಾಯಾಮದಲ್ಲಿ ಬಹಳ ಮುಖ್ಯ ಆಸನ; ನಿರಂತರ ಅಭ್ಯಾಸದಿಂದ ಹೆಚ್ಚು ಸಮಯ ವಜ್ರಾಸನದಲ್ಲಿ ಕುಳಿತುಕೊಳ್ಳಲು ಸಾಧ್ಯ (ಬಾ.ಜಿ);
- ನಾಯಿಯಂತೆ ಕಾಲು ಮಡಿಸಿಕೊಂಡು ಕುಳಿತುಕೊಳ್ಳುವ ಭಂಗಿ;
- —***ಕುಕ್ಕರಗಾಲು ಕೋಲು*** : ಕೋಲಾಟದ ಒಂದು ಬಗೆ; ಕಾಲು ಮಡಚಿ ನೆಲಕ್ಕೆ ತಾಗದಂತೆ ಕೂತು ಕೋಲು ಕೊಡುತ್ತಾ ಕೋಲಾಟ ಆಡುವ ಕ್ರಮ; A method of folk dance with sticks that the dancers carrying color sticks by bending legs without touching ground;
- —***ಕುಕ್ಕರಗಾಲು ಬಡಿತ*** : ಕುಕ್ಕರಗಾಲಿನಲ್ಲಿ ಕುಳಿತು ಡೊಳ್ಳು ಬಾರಿಸುತ್ತಾ ಕುಪ್ಪಳಿಸುವ ಕ್ರಮ; ಇದೊಂದು ಡೊಳ್ಳು ಕುಣಿತದ ಸಾಹಸ ಪ್ರದರ್ಶನ ಕಲೆ(ಚಿಕ್ಕ.ಜಿ). An adventurous use exhibition of drum beating dance.

ಕುಕ್ಕರಗೋಣು kukkaragōṇu :

ಚಿಕ್ಕ ಕುತ್ತಿಗೆ; ಕಿರು ಕತ್ತು; ಕೆಲವರಿಗೆ ಕುತ್ತಿನ ಭಾಗ ಚಿಕ್ಕದಿದ್ದು ಎದೆ ಮತ್ತು ತಲೆ ಭಾಗದ ನಡುವೆ ಅಂತರ ಇಲ್ಲದಿರುವಂತೆ ಅಥವಾ ಅಂಟಿಕೊಂಡಂತೆ ಕಾಣುವುದು. A short neck.

ಕುಕ್ಕರಸ kukkarasa :

ಯಾದಿ ಬಳ್ಳಿ(ಉ.ಕ.ಜಿ); Calycopteris Floribunda (combretaceae) lam; ಕುಪ್ಪಸಿ, ಉಪನಿ ಬಳ್ಳಿ, ಮರಸುತ್ತು ಬಳ್ಳಿ; A wild creeper.

ಕುಕ್ಕರಿಸು kukkarisu:

ಒಮ್ಮೆಲೇ ಕುಳಿತುಕೊಳ್ಳುವುದು; ಕುಸಿದುಬೀಳು; ಬಲವಂತವಾಗಿ ಕೂರಿಸು; ಚೆಲ್ಲಾಪಿಲ್ಲಿಯಾಗಿ ಹರಡು; ಬೀಳು; ಎತ್ತಿಬಡಿ; ಪ್ರ: 'ಅವಳು ಮಗುವನ್ನು ಕುಕ್ಕರಿಸಿದಳು'; ಕುದಿಯುವುದು(ಬ.ಜಿ); ಜಜ್ಜು; ಅಪ್ಪಳಿಸು(ಶಿ.ಜಿ); A sudden sitting, scattered, to sit by force;

—***ಕುಕ್ಕರುಬಡಿ*** : ತಿರಸ್ಕಾರ ಸೂಚಕವಾಗಿ ಬಳಕೆ; ಸುಮ್ಮನೆ ಕುಳಿತಿಕೊ(ಬೆಂ.ಗ್ರಾ.ಜಿ); ಪ್ರ: 'ಏನೂ ಮಾತಾಡ್ದೆ ಸುಮ್ನೆ ಕುಕ್ಕರುಬಡಿ'. To reject to sit silently;

—***ಕುಕ್ರುಸು*** : ಬೈಗುಳದಲ್ಲಿ ಕುಕ್ರುಸು ಎಂದರೆ ಕುಳಿತುಕೋ ಎಂಬರ್ಥ; Abuses for saying to sit down.

ಕುಕ್ಕರುಬಸವಿ kukkuru basavi :

ಇದೊಂದು ಗ್ರಾಮೀಣ ಹೆಣ್ಣು ಮಕ್ಕಳ ಆಟ; ಎಷ್ಟು ಮಂದಿಯಾದರೂ ಭಾಗವಹಿಸಬಹುದಾದದ್ದು; ಇಬ್ಬರು ಹುಡುಗಿಯರು ಗುಂಪಿನಿಂದ ದೂರ ಹೋಗಿ ಯಾವುದಾದರೊಂದು ಮರ, ಗಿಡ, ಹಣ್ಣು, ಪಕ್ಷಿ, ಪ್ರಾಣಿ, ಹೂವಿನ ಹೆಸರನ್ನು ತಮ್ಮಿಬ್ಬರಿಗೆ ಮಾತ್ರ ಗೊತ್ತಾಗುವಂತೆ ಕಟ್ಟಿಕೊಂಡು ಅಂಗಳಕ್ಕೆ ಬರುವರು; ನಾಯಕಿಯರಿಬ್ಬರು ತಮ್ಮ ಕೈಗಳನ್ನು ಮೇಲಕ್ಕೆತ್ತಿ ಕಮಾನಿನಂತೆ ಹಿಡಿದು ಆಟಗಾರರು ಒಬ್ಬರ ಹಿಂದೆ ಒಬ್ಬರಂತೆ ಕೈಯಿಂದಾಗಿರುವ ಕಮಾನಿನೊಳಗೆ ನುಸುಳಿ ಬರುತ್ತಿರುವರು; ನಾಯಕಿಯರು 'ರತ್ತೋ ರತ್ತೋ ರಾಯನ ಮಗಳೇ ಬಿತ್ತೋ ಬಿತ್ತೋ ಭೀಮನ ಮಗಳೇ ಹದಿನಾರೆಮ್ಮೆ ಕರೆಯಲಾರೆ ಕಾಯ್ಸಲಾರೆ ಬೈಟುಕಂಬ ಬಾಳೆ ಕಂಬ ಕುಕ್ಕುರು ಬಸವಿ ಕೂರೇ ಬಸವಿ' ಎಂದು ಹೇಳಿ ಮುಗಿಸುವಾಗ ಕಮಾನಿನೊಳಗೆ ಬಂದ ಹುಡುಗಿಯನ್ನು ಹಿಡಿದು ದೂರ ಕರೆದುಕೊಂಡು ಹೋಗಿ ತಾವು ಆಟಕ್ಕಾಗಿ ಕಟ್ಟಿಕೊಂಡಿರುವ ಬದಲಿ ಹೆಸರನ್ನು ಹೇಳುವರು; ಆಕೆ ಯಾರ ಹೆಸರನ್ನು ಆಯ್ಕೆ ಮಾಡುತ್ತಾಳೋ ಆ ನಾಯಕಿಯ ಹಿಂದೆ ಕೂರುವರು; ಹೀಗೆ ಎಲ್ಲ ಆಟಗಾರರು ಆಟ ಮುಗಿಸಿ ನಾಯಕಿಯರ ಗುಂಪಿಗೆ

ಸೇರಿದ ನಂತರ ಒಂದು ಗೆರೆ ಎಳೆದು ಇಬ್ಬರು ನಾಯಕಿಯರು ಕೈಕೈ ಹಿಡಿದು ಎದುರು ಬದುರು ನಿಲ್ಲುವರು; ಅವರ ಹಿಂದೆ ಆಟಗಾರರು ಒಬ್ಬರ ಸೊಂಟ ಒಬ್ಬರು ಹಿಡಿದು ಸಾಲಾಗಿ ನಿಲ್ಲುವರು; ಹೀಗೆ ಎರಡು ಗುಂಪು ಕೈ ಹಿಡಿದು ಎಳೆದಾಡಿ ಯಾವ ಗುಂಪಿನವರು ಗೆರೆ ದಾಟುತ್ತಾರೋ ಅವರು ಸೋತಂತೆ; ಹೀಗೆ ಆಟ ಮತ್ತೆ ಹೊಸದಾಗಿ ಆರಂಭವಾಗಿ ಮುಂದುವರೆಯುತ್ತದೆ. A game of rural girls.

ಕುಕ್ಕಲನಹಕ್ಕಿ kukkalanahakki:

ಒಂದು ಬಗೆಯ ಹಕ್ಕಿ; ಬಿಳಿ ಬಣ್ಣದಿಂದ ಕೂಡಿದ್ದು ಇದರ ಹಿಕ್ಕೆ 'ಖಾರಸೇವೆಯಂತೆ' ಉಂಡೆ– ಯಾಗಿರುವುದು; ಇದು ಅರಳಿಸೊಪ್ಪು ಮತ್ತು ಬಸರಿಸೊಪ್ಪನ್ನು ಹೆಚ್ಚು ತಿನ್ನುತ್ತದೆ(ಬ.ಜಿ). A kind of bird which eats banyan greens and `Basari' greens.

ಕುಕ್ಕಲು ಓಟ kukkalu ōṭa :

ಸಾಧಾರಣ ವೇಗದ ಓಟ; ಚಿರತೆಯಂತೆ ವೇಗವಾದದ್ದೂ ಅಲ್ಲದ, ಆಮೆಯಂತೆ ಕಡಿಮೆ ವೇಗದ್ದು ಅಲ್ಲದ ಓಟ. An run: an ordinary running; it is not as speed as Cheetah or tortoise.

ಕುಕ್ಕಳ್ಳಿ kukkaḷḷi :

ಬಿಸಿ ತವೆಯ(ಹೆಂಚು) ಮೇಲಿರುವ ಆಹಾರ ಪದಾರ್ಥವನ್ನು ತಿರುವಿ ಹಾಕಲು ಬಳಸುವ ಸಾಧನ; ಲೋಹದಿಂದ ಮಾಡಿದ್ದು, ಒಂದು ಭಾಗ ಚಪ್ಪಟೆಯಾಗಿರುತ್ತದೆ(ಚಿಕ್ಕ.ಜಿ). *ವ್ಯರೂ:* ಚುಂಚ್ಕ (ಹಾ.ವೇ.ಜಿ); A metal tool which is used to turn over the food that boils on a pan.

ಕುಕ್ಕಿ kukki :

- ಸಣ್ಣಚಬ್ಬೆ;
- ಬಳ್ಳಿಯಿಂದ ತಯಾರಿಸಿದ ಬುಟ್ಟಿ(ಉ.ಜಿ); A basket that is made up of Silver metal;
- ಪಕ್ಷಿಗಳು ಆಹಾರ ತಿನ್ನುವ ಕ್ರಮ; The method of birds feeding;
- ಬಾಲಭಾಷೆಯಲ್ಲಿ ಕೂಕಿ; ನಾಯಿ(ಬೀ.ಕ.ಕೋ).

ಕುಕ್ಕಿರೋಗ kukkirōga:

ದನಗಳ ಶ್ವಾಸಕೋಶಕ್ಕೆ ಬರುವ ರೋಗ; ಇದರ ಪ್ರಮುಖ ಲಕ್ಷಣವೆಂದರೆ ಜ್ವರ ಮತ್ತು ಕಫಗಳ ಉಲ್ಬಣ(ಜಿ.ಪ.ಕೋ; ಬೇ.ಸಾಂ.ಪ.ಕೋ). A lungs disease of cattle.

ಕುಕ್ಕುಕ್ರಿ kukku[1] :

- 'ಕುಕ್ಕು' ಕ್ರಿಯಾರೂಪದ ಪದ; ಜನಪದ ಸಂಸ್ಕೃತಿಯಲ್ಲಿ ವ್ಯಾಪಕ ಬಳಕೆ; ಇತರ ದ್ರಾವಿಡ ಭಾಷೆಗಳಲ್ಲಿಯೂ ಸಂವಾದಿ ಪದಗಳಿವೆ; ತಮಿಳಿನಲ್ಲಿ 'ಕೊಟ್ಟು' (ಕುಟುಕು/ಚುಚ್ಚು ಅರ್ಥಗಳಲ್ಲಿ), ಮಲೆಯಾಳಂನಲ್ಲಿ 'ಕೊಟ್ಟುಗ' (ಅರ್ಥ ತಮಿಳಿನಂತಯೇ ಇದೆ), ಕೊಡಗು ಮತ್ತು ತುಳು ಭಾಷೆಗಳಲ್ಲಿ 'ಕಕ್ಕ್' ಪದವಿದೆ, ಅರ್ಥ ಕನ್ನಡ, ತಮಿಳು ಮತ್ತು ಮಲೆಯಾಳಂ ಭಾಷೆಗಳದೇ ಆಗಿದೆ;
- 'ಕುಟುಕು' The sting ಎನ್ನುವ ಅರ್ಥದಲ್ಲಿ 'ಕುಕ್ಕು' ಪದದ ವ್ಯಾಪಕ ಬಳಕೆಯಿದೆ; 'ಕೊಕ್ಕಿನಿಂದ ಕುಕ್ಕುವುದು' Peck from bird's beak (ಪಕ್ಷಿಗಳ ಸಂಬಂಧದಲ್ಲಿ) ಪ್ರಯೋಗ; 'ಚುಚ್ಚು' ಎನ್ನುವ ಅರ್ಥದಲ್ಲಿ 'ಕಣ್ಣು ಕುಕ್ಕುವ ಪ್ರಕಾಶಮಾನವಾದ ಬೆಳಕು' Dazzle flash ಪ್ರಯೋಗವಿದೆ, 'ಒತ್ತಾಯಿಸು, ಬಲವಂತಪಡಿಸು ಎಂಬರ್ಥದಲ್ಲಿ ಪ್ರಕಾರಾಂತವಾಗಿ, ಧನಾತ್ಮಕವಾಗಿ 'ಕುಕ್ಕು' ಪದವನ್ನು ಬಳಸಬಹುದು; 'ಕುಕ್ಕು ತಿನ್ನು' To peck and eat ಎನ್ನುವ ಮಾತೇ ಇದೆ, ಇದು ರೂಪಕಾತ್ಮಕ ಅಭಿವ್ಯಕ್ತಿ; ಯಾರನ್ನಾದರೂ ಹಿಂಸಿಸುವ ಸಂದರ್ಭದಲ್ಲಿ ಬಳಕೆ;
- ತಲೆಯ 'ಹೇನು'ಗಳನ್ನು ಹಿಡಿದು 'ಕುಕ್ಕು' ಎನ್ನುವ ಬಳಕೆಯ ಮಾತಿದೆ; 'ಹೇನು ಕುಕ್ಕು' ಎನ್ನುವುದು ಒಂದು ಕ್ರಿಯಾ ರೂಪ; ಕೈಯಿಂದ/ಸೀರಣಿಗೆಯಿಂದ ಹೇನುಗಳನ್ನು ಬಗೆದು/ಹಿಡಿದು ಎರಡು ಉಗುರುಗಳ ನಡುವೆ ಸಿಕ್ಕಿಸಿ ಅಪ್ಪಚ್ಚಿ ಮಾಡುವುದು ಹೇನು ಕುಕ್ಕುವ ಕ್ರಿಯೆಗೆ ಸಂಬಂಧಿಸಿದ ವಿವರಣೆ;
- 'ಕುಕ್ಕು' ಬಟ್ಟೆಯನ್ನು 'ಒಗೆ'ಯುವ ಕ್ರಿಯೆಗೂ ಬಳಕೆ; ಬಟ್ಟೆಗೆ ಸೋಪು ಹಚ್ಚಿ ಶುಚಿಗೊಳಿಸುವ/ ಮಡಿಮಾಡುವ ಕ್ರಿಯೆಯ ರೂಪವಿದು; 'ಕುಕ್ಕು' ಪದಕ್ಕೆ ಪರ್ಯಾಯ ರೂಪವಾಗಿ 'ಕುಸುಬು' ರೂಪವಿದೆ;

ಇದು ಎತ್ತಿ ಒಗೆಯುವುದಲ್ಲ, ಬಟ್ಟೆಯನ್ನು ಕಲ್ಲಿನ ಮೇಲೆ ಎರಡು ಕೈಗಳಿಂದ ಉಜ್ಜುವ ಕ್ರಿಯೆಗೆ ಸಂಬಂಧಿಸಿದ್ದು; 'ಸೆಣಿ' ರೂಪವೂ 'ಕುಕ್ಕು' ಪದಕ್ಕಿದೆ;

- 'ಕುಕ್ಕು' ಪದವನ್ನು 'ಕೊಕ್ಕು' ಪದದ ಸಂವಾದಿ ಎಂದು ಪರಿಗಣಿಸಿ, ಕೊಕ್ಕರೆ ಅಥವಾ ಕೊಕ್ಕರೆಯ ಕೊಕ್ಕಿಗೆ ಅನ್ವಯಿಸುವುದುಂಟು;
- 'ಕುಕ್ಕು' ರೂಪಕ್ಕೆ 'ಕುಲುಕು' ಎಂದು ಅರ್ಥ ಹೇಳುವುದುಂಟು, ಆಗ ಇದು 'ಓಟ'ಕ್ಕೆ ಅನ್ವಯಿಸುವುದು; ಅಂದರೆ 'ಕುಲುಕು ಓಟ'ವಿದು; 'ಕುಕ್ಕೋಟ' ಎಂದೂ ಕರೆಯಲಾಗುವುದು;
- 'ಕುಕ್ಕು' ಪದದಿಂದ 'ಕುಕ್ಕರಿಸು' ರೂಪವನ್ನು ತರಬಹುದೆ? ಆಗ ಇದರ ಅರ್ಥ 'ಕೂರು' ಎಂದು ಹೇಳುವ ರಭಸ ಪ್ರಕೃತಿ ಆಗುತ್ತದೆ; ಇದೇನಾದರೂ 'ಕೊಕ್ಕರಿಸು' ರೂಪಕ್ಕೆ ಸಮಾನಾಂತರವಾದರೆ ಆಗ ಅದು ಕುಗ್ಗು/ಮುದುಡು ಆಗುತ್ತದೆ.

ಕುಕ್ಕು೨ kukku²:

- ದನಗಳಿಗೆ ಬರುವ ಮುವ್ವಾಳಿ ರೋಗ(ಚಿ.ಪ.ಕೋ); A disease of cattle;
- ಎತ್ತಿಹಾಕು(ಬೆಂ.ಗ್ರಾ.ಜಿ); ಕುಟುಕು; ಬಡಿ; *ಪ್ರ:* 'ಕಾಗೆ ಕೊಕ್ಕಿನಿಂದ ಕುಕ್ಕಿತು';
- ಹಿಸುಕು; ಸಾಯಿಸು; ಕಚ್ಚು; ಒಂದು ಪ್ರಕಾರದ ಕಾಡು ಸಸ್ಯ(ಬೀ.ಜಿ); To kill, to bite; A wild plant;
- ಕುಂಡಿ; ಗುದ(ಬೀ.ಕ.ಕೋ); ತ: ಕೊಟ್ಟು, ಮ: ಕೊಟ್ಟುಗ(ದ್ರಾ.ಭಾ.ಜ್ಞಾ.ಕೋ); ತು: ಕೊಟ್ಟುಗ; ತು: ಕುಕ್ಕ್; ಕು>ಕೊ(ಉ>ಒ) ಆಗಿರಬಹುದು; ಕ>ಟ ಆಗುತ್ತದೆ. Buttock.

ಕುಕ್ಕು೩ kukku³:

ಮಾವು; Mangifera indica(Anacardiaceae); ಇದರ ಹಣ್ಣು ತಿನ್ನಲು ಬಲುರುಚಿ; ಹಣ್ಣುಗಳ ರಾಜ ಎಂಬ ಹೆಗ್ಗಳಿಕೆ; A mango; it is known as king of fruits in its sweet; ವಿವಿಧ ಅಡುಗೆಯಲ್ಲಿ ಬಳಕೆ; ಶುಭಕಾರ್ಯಗಳಲ್ಲಿ ಇದರ ಸೊಪ್ಪಿನಿಂದ ತೋರಣ ಕಟ್ಟುತ್ತಾರೆ; ಕಳಸದೆಲೆಗಳಾಗಿ ಉಪಯೋಗಿಸುತ್ತಾರೆ; ಕಾಂಡ ಹಸಿಯಾಗಿದ್ದರೂ ಬೆಂಕಿ ಬೇಗನೆ ಹತ್ತುವುದರಿಂದ ಶವ ದಹನ ಕಾರ್ಯದಲ್ಲಿ ಬಳಕೆ; ಹಲ್ಲುಜ್ಜಲು ಈಗಲೂ ಉತ್ತರ ಕನ್ನಡ ಭಾಗದಲ್ಲಿ ಇದರ ಕಡ್ಡಿಯ ಬಳಕೆಯುಂಟು; A small thin stitch that uses for brushing teeth in North Kannada;

—***ಕುಕ್ಕುಸಾಸಮಿ*** : ಮಾವಿನ ಹಣ್ಣನ್ನು ಕಿವುಚಿ ತೆಂಗಿನಕಾಯಿ, ಸಾಸಿವೆಗಳನ್ನು ಅರೆದು ಬೆರೆಸಿ ಮಾಡುವ ಒಂದು ಬಗೆಯ ತಿನಿಸು ಪದಾರ್ಥ; A kind of liquid food: made up of mango, mustard, coconut mixture;

—***ಕುಕ್ಕುತಪ್ಪು*** : ಯಕ್ಷಗಾನದಲ್ಲಿ ಮಾವಿನ ಸೊಪ್ಪನ್ನು ಕಟ್ಟಿಕೊಂಡು ಬರುವ ಕೋಡಂಗಿ ಪಾತ್ರದ ವೇಷಧಾರಿ; A joker character of Yakshagana: which wears mango leafs ;

—***ಕುಕ್ಕುಮಡಿಸರ*** : ಮಿಡಿ ಮಾವಿನ ಕಾಯಿಯ ಆಕೃತಿಯ ರಚನೆ ಹೊಂದಿರುವ ಒಂದು ಬಗೆಯ ಕಂಠಾಭರಣ; A necklace which resembles mango;

—***ಕುಕ್ಕುಸಾರು*** : ಮಾವಿನಹಣ್ಣು ಹಾಕಿ ಮಾಡಿದ ಸಾರು; A soup made up of mango;

—***ಕುಕ್ಕುಸೂಡಿ*** : ಮಾವಿನಕಾಯಿ ಆಕಾರದಲ್ಲಿ ಗಂಟು ಹಾಕಿದ ಕೂದಲಿನ ಮುಡಿ; A plait of hair in the shape of Mango;

—***ಕುಕ್ಕುಂಬಿಲ*** : ಕೃಷ್ಣಸರ್ಪ ಕೋಲದ ಕೊನೆಯ ಭಾಗದಲ್ಲಿ ಗದ್ದೆಯಲ್ಲಿ ನಡೆಯುವ ಆಚರಣೆಯ ಭಾಗ; ಗದ್ದೆಯ ನಡುವಿನಲ್ಲಿ ಮಾವಿನ ಚಿಗುರು ಸೊಪ್ಪುಗಳನ್ನು ಇಟ್ಟಿರುತ್ತಾರೆ, ಇದನ್ನು 'ಕುಕ್ಕುಂಬಿಲ' ಎಂದು ಕರೆಯುವರು; A kola ceremony which takes place amid of farming field by decorating with mango leaves.

ಕುಕ್ಕುಟ೧ kukkuta¹:

ಕೋಳಿ(ವಿವರಕ್ಕೆ ***ನೋಡಿ:*** ಕೋಳಿ) Rooster; Hen/cock;

—***ಕುಕ್ಕುಟ ಪಂಚಾಂಗ*** : ಕೋಳಿ ಅಂಕದ ವಿವರಗಳನ್ನು ಹೊಂದಿರುವ ಪಂಚಾಂಗ; ಕೋಳಿಯ ವರ್ಗ, ಬಣ್ಣ, ಮೊದಲಾದವುಗಳ ಆಧಾರದಲ್ಲಿ ಅಂಕದಲ್ಲಿ ಅವುಗಳ ಸೋಲು ಗೆಲುವುಗಳನ್ನು

ತಿಳಿಸುವ ಮಾರ್ಗದರ್ಶಿ(ದ.ಕ). A calendar of cock game;

—*ಕುಕ್ಕುಟಾಸನ* : ಕೋಳಿಯಂತೆ ಕುಳಿತುಕೊಳ್ಳುವ ಯೋಗಾಸನದ ಒಂದು ಭಂಗಿ; It is one of postures of yogasana;

—*ಕುಕ್ಕುಟಜ್ಞಾನ* : ಕೋಳಿಯ ಜ್ಞಾನ; ಬೆಳಕು ಹರಿಯುವುದನ್ನು ತಿಳಿಯುವ ಜ್ಞಾನ; The knowledge of cock.

ಕುಕ್ಕುಟ೨ kukkuṭa[2] :

- Mallotus tetracoccus(Euphorbiaceae);
- ಮೋಸ; ವಂಚನೆ; ಮಾಯೆ; Deception, cheater;
- ಕಳಿಂಗ ಎಂಬ ಹಕ್ಕಿ.

ಕುಕ್ಕುಮಳಿ kukkumaḷi :

ಕಿರು ಸುತ್ತಿಗೆಯ ಹೊಡೆತದಿಂದ ನಾಟಬಹುದಾದ ಕಿರುಗಾತ್ರದ ಮೊಳೆ(ಚಿ.ಪ.ಕೋ); ಮೊಳೆ>ಮಳಿ (ಪ್ರಾವ್ಯ); A small net that can be beaten by a small hammer.

ಕುಕ್ಕುಸುಡು/ಕುಟಾರಿ kukkusuḍu/kuṭāri :

ಒಂದು ಜಾತಿಯ ಹಕ್ಕಿ; ಮರದ ಕಾಂಡ ಕೊರೆದು ಪೊಟರೆ ಮಾಡುತ್ತದೆ; ಇದು ಹೆಚ್ಚಾಗಿ ರಾತ್ರಿ ವೇಳೆ ಭಯ ಹುಟ್ಟಿಸುವಂತೆ ಕೂಗುತ್ತದೆ; ಇದು ಕೂಗಿದರೆ ಅಪಶಕುನವೆಂಬ ನಂಬಿಕೆ; ***ವ್ಯದೂ:*** ಮರಕೊಡಪ, ಮರಕುಟಿಗ. ***ನೋಡಿ:*** ಮರಕುಟಿಗ. A bird: the wood pecker; it has a strong bill and a shift tail that pecks tree trunks to find insects.

ಕುಕ್ಕುಸೊಂಟಿ kukkusoṇṭi :

Curcuma amada(Zingiberaceae) Ginger mango; ಮಾವಿನಕಾಯಿಯ ಪರಿಮಳ ಹೊಂದಿರುವ ಶುಂಠಿ; ಮಾವಿನಶುಂಠಿ; ಉಪ್ಪಿನಕಾಯಿ, ಚಟ್ನಿ ತಯಾರಿಕೆಯಲ್ಲಿ ಬಳಕೆ; ಮಾವು ಶುಂಠಿ; ಹುಳಿ ಅರಿಶಿನ; A mango flavoured ginger.

ಕುಕ್ಕುಹಿಡಿ kukkuhiḍi :

ಎತ್ತಿನ ಗಾಡಿಯಲ್ಲಿ ಅಥವಾ ಬೇರೆ ಯಾವುದೇ ಗಾಡಿಯಲ್ಲಿ ಪ್ರಯಾಣಿಸುವಾಗ ಕುಲುಕಾಟದಿಂದ ಹೊಟ್ಟೆ ಮತ್ತು ಪಕ್ಕೆಗಳಲ್ಲಿ ಚುಚ್ಚಿದಂತೆ ವೇದನೆಯಾಗುವುದು(ಚಿ.ಪ.ಕೋ). A pain in ribs due to travelling in bullock cart.

ಕುಕ್ಕೂರು kukkūru :

- ಪ್ರಾಚೀನ ಕಾಲದಲ್ಲಿ 'ಕುಕ್ಕುರಬಳ್ಳಿ'ಯು ಹೆಚ್ಚಾಗಿ ಬೆಳೆಯುತ್ತಿದ್ದ ಪ್ರದೇಶ ಇದಾದ್ದರಿಂದ ಸಸ್ಯವಾಚಿ ಸ್ಥಳನಾಮವೆಂದು ಹೇಳಬಹುದು; A ancient place which is named after a wild creeper or plant;
- 'ಕುಕ್ಕರಬಳ್ಳಿಯಿರುವ ಊರು' ಎಂಬರ್ಥದಲ್ಲಿ 'ಕುಕ್ಕೂರು' ಎಂಬ ಹೆಸರು ಬಂದಿರುವಂತೆ ಕಾಣುತ್ತದೆ;
- 'ಕುಕ್ಕು(ಕ್ಕ)ರಬಳ್ಳಿ' 'ಕುಕ್ಕಿಬಳ್ಳಿ'(ಕ.ನಿ; ಕಿಟ್ಟೆಲ್) ಆಗಿರಬಹುದೆ?; ಹಾಗೆಯೇ 'ಕಳ್ಳಕುಕ್ಕನಬಳ್ಳಿ' (ಕಿಟ್ಟೆಲ್) ಆಗಿರಬಹುದೆ: "An erect, often climbing shrub with purple flowers. Argyrea cuneata ker" (ಕಿಟ್ಟೆಲ್);
- ಕ್ರಿ.ಶ.೧೪೨೬ರ ವಿಜಯನಗರದ ದೊರೆ ಪ್ರತಾಪದೇವರಾಯನ ಕಾಲದ ಶಾಸನವೊಂದರಲ್ಲಿ 'ಕುಕ್ಕೂರು' ಗ್ರಾಮದ ಉಲ್ಲೇಖ(ಚನ್ನಪಟ್ಟಣ ೧೬೨) ಮೊದಲಿಗೆ ಕಾಣಿಸಿಕೊಂಡಿದೆ; It is referred in an inscription of Vijayanagara King Prathapadevaraya;
- ಅದೇ ರೀತಿ ಕ್ರಿ.ಶ.೧೫೫೮ರ ಮಳೂರಿನ ತಾಮ್ರ ಶಾಸನವೊಂದರಲ್ಲಿ (ಚನ್ನಪಟ್ಟಣ ೧೮೬) 'ಕುಕ್ಕೂರು' ಗ್ರಾಮದ ಪ್ರಸ್ತಾಪ ಬಂದಿದೆ.

(E.C-IX- ಬಿ.ಎಲ್.ರೈಸ್; ಬೆಂ.ಜಿ.)

ಕುಕ್ಕೆ೧ kukke[1] :

ಬಿದಿರು ಅಥವಾ ಈಚಲು ಕಡ್ಡಿಗಳಿಂದ ಹೆಣೆದ ಬುಟ್ಟಿ; ಅಗತ್ಯಕ್ಕೆ ತಕ್ಕಂತೆ ವಿವಿಧ ಗಾತ್ರದಲ್ಲಿ ಹೆಣೆಯುವರು; ಪುಟ್ಟಿ, ಮಂಕರಿ, ಹೆಡಿಗೆ, ಕುಕ್ಕೆ ಇತ್ಯಾದಿ ಹೆಸರುಂಟು; ಕೆಲವೊಮ್ಮೆ ಇವುಗಳನ್ನು ತೊಪ್ಪೆ, ಕಾಗದ ಮತ್ತು ಮೆಂತ್ಯೆಸರಿ, ಕೆಮ್ಮಣ್ಣುಗಳಿಂದ ತಾರಿಸಿ ಇದರಲ್ಲಿ ಬಿತ್ತನೆ ಕಾಳುಗಳನ್ನು ವರ್ಷಗಳ ಕಾಲ ಸಂಗ್ರಹಿಸಿಡುವರು; ಕೆಲವು ಬಗೆಯ ಕುಕ್ಕೆಗಳು

ಹೀಗಿವೆ; A basket that is made up of bumbo slices; a bamboo basket;

—ಬಿತ್ತನೆ ಕುಕ್ಕೆ : ಬಿತ್ತನೆ ಕಾಲದಲ್ಲಿ ಬೀಜಗಳನ್ನು ತುಂಬಿ ಕೈಯಲ್ಲಿ ಹಿಡಿದು ಬಿತ್ತಲು ಬಳಕೆ; ಸಣ್ಣಕುಕ್ಕೆ; A basket which is used to sow seeds during sowing;

—ದೊಡ್ಡ ಕುಕ್ಕೆ : ಅಡಕೆ ಗೊನೆಯಿಂದ ಬಿಡಿಸಿರುವ ಕಾಯಿ ಮತ್ತು ಸುಲಿದು ಕತ್ತರಿಸಿದ ಅಡಕೆ ತುಂಬಲು ಬಳಕೆ; A big basket which is used to fill the areca nut from its branch (by cutting);

—ಸೊಪ್ಪಿನ ಕುಕ್ಕೆ : ಸೊಪ್ಪಿನ ಮಡಿಯಿಂದ ಕೀರೇ ಸೊಪ್ಪನ್ನು ಕೊಯ್ದು ತರಲು ಬಳಕೆ; ಬಾಯಿ ಅಗಲ ಎತ್ತರ ಕಡಿಮೆ ಹೊಂದಿರುವುದು; ಇನ್ನೊಂದು ಬಾಯಿ ಕಿರಿದಾಗಿದ್ದು ದಪ್ಪ ಮಡಕೆಯ ಗಾತ್ರದಲ್ಲಿರುವ ಹಿಪ್ಪುನೇರಳೆ ಸೊಪ್ಪು ಕಿತ್ತು ತುಂಬಿ ತರುವ ಕುಕ್ಕೆ; ಇತ್ತೀಚಿನ ದಿನಗಳಲ್ಲಿ ಕಡ್ಡಿ ಸಮೇತ ಸೊಪ್ಪು ಹಾಕುವ ಕ್ರಮ ಬಂದದ್ದರಿಂದ ಈ ಕುಕ್ಕೆ ಕಣ್ಮರೆಯಾಗಿವೆ; A vegetable basket; It is used to keep different types of creepers, plants vegetables from the field;

—ಹೂಕುಕ್ಕೆ : ಚಿಕ್ಕಬಾಯಿಯ ಸಣ್ಣ ಗಾತ್ರದ ಹಿಡಿಕೆ ಇದ್ದು ಹೂ ಕಿತ್ತು ತರಲು ಬಳಕೆ;

—ಬಾಡಿನ ಕುಕ್ಕೆ : ಗ್ರಾಮೀಣ ಜನರು ಗುಡ್ಡೆಮಾಂಸ ತರಲೆಂದೇ ಬಳಸುತ್ತಿದ್ದ ಹಿಡಿಯುಳ್ಳ ಚಿಕ್ಕ ಕುಕ್ಕೆ; 'ಬಾಡಿನ ಪುಟ್ಟಿ' ಎಂದೂ ಉಂಟು;

—ಹಿಟ್ಟಿನ ಕುಕ್ಕೆ : ಹಿಟ್ಟು(ಮುದ್ದೆ) ತುಂಬಿ ಇಡುವ, ಹೊಲಗದ್ದೆಗಳಿಗೆ ಹಿಟ್ಟು(ಊಟ) ಹೊರುವ ಕುಕ್ಕೆ; ಬೇಸಿಗೆಯಲ್ಲಿ ರಾಗಿ, ಜೋಳದ ಮುದ್ದೆಯನ್ನು ತಪ್ಪಲೆಯಲ್ಲಿ ಇಟ್ಟರೆ ಬೆವರಿದಂತೆ ಆಗುತ್ತದೆಂದು ಕುಕ್ಕೆಯಲ್ಲಿ ಜೋಡಿಸಿ ಒದ್ದೆ ಬಟ್ಟೆ ಮುಚ್ಚುವರು; ಹೊಲಕ್ಕೆ ಹಿಟ್ಟು(ಊಟ) ತೆಗೆದುಕೊಂಡು ಹೋಗಲು ಬಳಸುವ ಅಗಲವಾದ ತಳವಿರುವ ಬಾಯಿ ಅಗಲವಾಗಿರುವ ಕುಕ್ಕೆ; ಆಹಾರ ಪದಾರ್ಥ ತುಂಬಿದ ಪಾತ್ರೆಗಳನ್ನು ಕುಕ್ಕೆಯಲ್ಲಿ ಜೋಡಿಸಿಕೊಂಡು ತಲೆ ಮೇಲೆ ಹೊತ್ತುಕೊಂಡು ಹೊಲಕ್ಕೆ ಹೋಗುತ್ತಿದ್ದರು. ಇಂದಿನ ದಿನಗಳಲ್ಲಿ ಡಬ್ಬಿಗಳಲ್ಲಿ(ಕ್ಯಾರಿಯರ್) ಊಟ ಕೊಡುವುದಿದೆ; *ಪ್ರ:* 'ಭಿಕ್ಷಾನ್ನದ ಕುಕ್ಕೆಗೆ ಶನೀಶ್ವರ ಬಂದ ಹಾಗಾಯ್ತು'*(ಗಾ)*; Meals basket which is used to carry millet paste to farms from homes without shading foods freshness;

—ದನೀನ್ ಕುಕ್ಕೆ : ದನಗಳ ಮುಖ ಕವಚ; ಮುಖರಂಬೆ; ಬೆತ್ತ ಅಥವಾ ಬಿದಿರಿನಿಂದ ಜಾಳಿಗೆಯಾಕಾರದಲ್ಲಿ ಹೆಣೆದ ಚಿಕ್ಕ ಬುಟ್ಟಿಯಾಕಾರದ ಮುಖದ ಕುಕ್ಕೆ; ಉಳುವಾಗ ಹೊಲದ ಇತರ ಸಸ್ಯಗಳನ್ನು ದನಗಳು ಮೇಯಬಾರದೆನ್ನುವ ಉದ್ದೇಶದಿಂದ ಎತ್ತು ಅಥವಾ ಕೋಣಗಳ ಜೋಡಿಗಳಿಗೆ ಕುಕ್ಕೆ ಕಟ್ಟುವರು; ಇದರಿಂದ ನೇಗಿಲು ಊರು ಅಥವಾ ಹಾಸುಗೊಳ್ಳದೆ ಸರಾಗವಾಗಿ ವೇಗವಾಗಿ ಉಳಲು ಸಾಧ್ಯ; An armour shaped cattle face which is used to avoid grazing the bullocks while cultivating fields;

—ಕುಕ್ಕೆ ಕೊರಮ : ಬುಟ್ಟಿ ಹೆಣೆಯುವವರು; ಕೊರಮ ಜಾತಿಗೆ ಸೇರಿದವರು; A basket weaver, who belongs to korama caste;

—ಕುಕ್ಕೆ ಮಾರಮ್ಮ/ಬುಟ್ಟಿ ದುರ್ಗಮುರ್ಗಿಯರು : ಬಿದಿರಿನ ಪುಟ್ಟಿಯಲ್ಲಿ ಮಾರಮ್ಮನ ಮುಖವಾಡವನ್ನಿಟ್ಟು ತಲೆ ಮೇಲೆ ಹೊತ್ತು ಕಂಕುಳಿಗೆ ಉರುಮೆ ವಾದ್ಯ ನೇತುಹಾಕಿಕೊಂಡು ಬೀದಿ ಬೀದಿಯಲ್ಲಿ ವಾದ್ಯಬಾರಿಸಿ ಭಿಕ್ಷೆ ಬೇಡುವ ವೃತ್ತಿಯವರು; ಅಲೆಮಾರಿಗಳು; ಮಹಿಳೆಯರೇ ಹೆಚ್ಚಾಗಿ ಪಾಲ್ಗೊಳ್ಳುವರು; A goddess of gypsy or vogabonds; Who carry goddess in bamboo basket by putting on their head and beating drum;

—ಕುಕ್ಕೆಶಾಸ್ತ್ರ : ಕಿರಿದಾದ ಬುಟ್ಟಿಯೊಳಗೆ ಗರಿಕೆ ಸಿಕ್ಕಿಸಿದ ಬೆನಕನನ್ನು ಇಟ್ಟು ಪೂಜಿಸಿ ಬುಟ್ಟಿಯನ್ನು ತೂಗಾಡಿಸಿ ಸಾರಿಸಿ ರಂಗೋಲೆ ಬಿಟ್ಟಿರುವ ನೆಲದ ಮೇಲೆ ತಕ್ಷಣವೇ ಬೋರಲು ಹಾಕುವರು; ತೆಗೆದು ನೋಡಿದಾಗ ಆ ಬೆನಕ ನೇರವಾಗಿದ್ದರೆ ಶುಭವೆಂದು ತಲೆಕೆಳಕಾಗಿ ಇದ್ದರೆ ಅಶುಭವೆಂದು ನಂಬಿಕೆ; A ritual of god by putting a small narrow bumbo basket;

—ಕುಕ್ಕೆ ತುಂಬುವುದು : ಒಕ್ಕಲಿಗ ಸಮುದಾಯದಲ್ಲಿ ಮದುವೆಗೆ ಬಳಸುವ ಹೆಣೆದ ಎರಡು ಬುಟ್ಟಿಗಳು; ಇದರಲ್ಲಿ ಎರಡು ಬಗೆ ಅ) ಸಾಲಾವಳಿ ಕುಕ್ಕೆ – ವರನ ಮನೆಯವರು ಹೆಣ್ಣಿಗೆ ಮಡಿಲು ತುಂಬಲು ಬಳಸುವ ಎಲ್ಲ ಸಾಮಾಗ್ರಿಗಳನ್ನು ಕುಕ್ಕೆಯಲ್ಲಿಟ್ಟು ಮದುವೆ ಮನೆಗೆ ತಲೆ ಮೇಲೆ ಹೊತ್ತು ತರುವ ಕ್ರಮ; ಆ) ಧಾರೆ ಕುಕ್ಕೆ : ಧಾರೆಯ ಸಮಯದಲ್ಲಿ ಬಳಸುವ ಕುಕ್ಕೆ; ಇದಕ್ಕೆ ವಿಶೇಷವಾದ ಪೂಜೆ ಕ್ರಮವಿದೆ; ದ್ರಾಕ್ಷಿ, ಕಲ್ಲುಸಕ್ಕರೆ, ಕನ್ನಡಿ, ವಿಭೂತಿ, ಎಣ್ಣೆ, ಅಡಿಕೆ, ಸಿಂಗಾರ, ತುಂಬೆ ಹೂ, ಹಾರಗಳನ್ನು ಈ ಕುಕ್ಕೆಯಲ್ಲಿಟ್ಟು ಪೂಜಿಸಿ ಧಾರೆಯಲ್ಲಿ ಬಳಸುವರು; Two weaved baskets for marriage: one for bride's side and another for bride groom to give edibles and flowers etc.,

—ಕುಕ್ಕೆ ಕಟ್ಟು : ಮೌನವಾಗಿರುವುದು; ಉಪವಾಸ ಮಾಡುವುದು(ಶಿ.ಜಿ); Silent ritual; ಊಟದಲ್ಲಿ ಕಟ್ಟುನಿಟ್ಟು ಹೇರುವುದು; *ಪ್ರ:* 'ಬಿಗಿಯಾಗಿ ಉಣ್ಣಾಕೇನು, ನಿನ್ ಬಾಯ್ಗೆ ಕುಕ್ಕೆ ಕಟ್ಟಿದ್ದರ' ;

—ಕುಕ್ಕೆ ಹೂವು : ಒಂದು ಬಗೆಯ ಹೂವು(ಬೀ.ಜಿ). A kind of flower;

ಕುಕ್ಕೆ² kukke² :

- ಬಿದಿರಿನಿಂದ ಮಾಡಿದ ಮೀನು ಹಿಡಿಯುವ ಸಾಧನ; A tool of bamboo which is made up for fishing;
- ಸಿಕ್ಕಿದ್ದನೆಲ್ಲ ತಿನ್ನದಂತೆ ರೋಗಿಗೆ ಹಾಕುವ ಕಟ್ಟಾಜ್ಞೆ;
- ಹೊಟ್ಟೆ; ಉದರ; ಪ್ರತಿಮಾತ್ಮಕ; *ಪ್ರ:* 'ಏನ್ಮಾಡೋದು ಕಷ್ಟಪಡಬೇಕು, ಇಲ್ದಿದ್ರೆ ನಮ್ಮ ಕುಕ್ಕೆ ತುಂಬಬೇಕಲ್ಲ'(ರೂಢಿ); Stomach; abdomen.

ಕುಕ್ಕೆನ್ಹುವ್ವ kukkenhuvva:

'ಕುಕ್ಕು' ಎಂಬ ಕಾಡು ಸಸ್ಯ ಮತ್ತು ಅದರ ಹೂವು; ಸೀಗಿ ಹಾಡು: ಕುಕ್ಕೆನ್ಹುವ್ವಕ। ಭಾಳ ಪಿರಿಯ ಮಾಡಿದ। ಯಾಕೊ ರಂಗಯ್ಯಾ ನಿನ್ನ ಕಾಕ ಬದಿಗಳು। ಸಾಕ ನಡಿ ನಡಿ। ಸರಿಯೆ ಸವತಿ ಮನಿ ಕಡಿ(ಬೀ.ಪ.ಕೋ). A wild forest flower.

ಕುಕ್ಕೆಬಳ್ಳಿ kukkeba!!i :

Passiflora foetida (Passifloraceae); ವೇಲಿಫಾಣಿ, ಗಡಿಯಾರ ಹೂಬಳ್ಳಿ ಎಂಬ ಹೆಸರುಗಳೂ ಇವೆ; passiflora foetida; ಇದೊಂದು ಆಲಂಕಾರಿಕ ಏರು ಬಳ್ಳಿ; ಉದ್ಯಾನವನಗಳಲ್ಲಿ ಹೆಚ್ಚು ಬೆಳೆಸುವರು; ಇದರ ಬೇರು ಸೆಳವುರೋಗ, ಪಿತ್ತ, ಉಬ್ಬಸ, ತಲೆಸುತ್ತು, ತಲೆ ನೋವುಗಳಿಗೆ ಔಷಧಿಯಾಗಿ ಬಳಕೆ; A climbing creeper; plants, to decorate gardens.

ಕುಕ್ಕೆಲ kukkela :

ಭೂತನರ್ತಕರು ಬಣ್ಣಹಾಕುವ ಮೊದಲು ಮೈಲಿಗೆಯನ್ನು ಕಳೆಯುವ ಒಂದು ಕ್ರಮ(ದ.ಕ). A ritual of removing unholiness before going to colour themselves by Bhuta dancers.

ಕುಕ್ಬುಟತಂಬಿಟ್ಟು/ಪುಲುಕಾಡಿ

kukbuṭatambiṭṭu/pulukāḍi :

Mallotus tetracoccus(Euphorbiaceae); ಒಂದು ಜಾತಿಯ ಮರ. A kind of tree.

ಕುಕ್ಯಾಲಿ kukyāli :

ಭೂತಕೋಲದ ಬಯಲಿನಲ್ಲಿ ಸಿಂಗದನವೆಂಬ ಪೀಠದ ಮೇಲ್ಗಡೆ ಚಪ್ಪರಕ್ಕೆ ತಾಗಿಸಿ ಮಡಿವಾಳ ಕಟ್ಟಿದ ಬಿಳಿಬಟ್ಟೆಯ ನಡುವಿಗೆ ನೇತು ಹಾಕುವ ತೆಂಗಿನಕಾಯಿ; ಇದನ್ನು ವೀಳ್ಯದೆಲೆ, ಅಡಿಕೆ, ತೆಂಗಿನ ಎಳೆಗರಿ ಇತ್ಯಾದಿ ವಸ್ತುಗಳಿಂದ ಅಲಂಕರಿಸುವರು (ದ.ಕ). A coconut that is decorated with betel leaf areca nut and tender coconut leafs during kola.

ಕುಗುರು kuguru :

- ತೂಕಡಿಸು; ನಿದ್ರೆಮಾಡು; ಜೊಂಪುಹತ್ತು; *ಪ್ರ:* 'ಕುಗುರ್ತಿದ್ಯೋ? ಕಣ್ಣು ಬಿಟ್ಕೊಂಡಿದ್ಯೊ'(ಶಿ.ಜಿ); sleepy; Slumber, drowsiness;
- ಪಕ್ಷಿಗಳ ತಲೆಗೆ ಬರುವ ರೋಗ(ಬ.ಜಿ);
- ***—ಕುಗುರುಗಣ್ಣು*** : ನಿದ್ದೆಗಣ್ಣು; ತೂಕಡಿಸುವ ಕಣ್ಣು.

ಕುಗ್ಗರಿಸೇವೆ/ಗುಗ್ಗರಿಸೇವೆ kuggarisēve/ guggarisēve :

ದಂಡಿನ ಮಾರಮ್ಮನ ಜಾತ್ರೆಯಲ್ಲಿ ಗ್ರಾಮಸ್ಥರೆಲ್ಲ ಸೇರಿ ಬೆಳೆದ ಕಾಳುಗಳನ್ನೆಲ್ಲ ಬೇಯಿಸಿ, ಗುಗ್ಗರಿ ತಯಾರಿಸಿ, ಪಾನಕ, ಮಜ್ಜಿಗೆಯೊಂದಿಗೆ ಮಾರಮ್ಮನಿಗೆ ನೈವೇದ್ಯ ಕೊಟ್ಟು ಪ್ರಸಾದ ಹಂಚುವ ಆಚರಣೆ(ತು.ಜಿ); ಕುಗ್ಗರಿ > ಗುಗ್ಗರಿ; ಅಂದರೆ ಕ>ಗ ಆಗಿದೆ. ಉಚ್ಚಾರಣೆಯಲ್ಲಿ ಸಾಮಾನ್ಯ ಬಳಕೆ. A service of goddess worshipped by armyforces in fair by boiling the grown grains and distributes others.

ಕುಗ್ಗು kuggu :

- ಚಿಕ್ಕದಾಗು; ಕಡಿಮೆಯಾಗು; ಕುಂದು; ಸೊರಗು; ಒಣಗು; To sink, to become short/weak, to become dry
- ಕುಂದಿಹೋಗು; ಸಂಕುಚಿತ(ಬ.ಜಿ); *ಪ್ರ:* 'ಅತ್ತೆ ಗಂಡನ ನಿಂದನೆಗೆ ನೊಂದು ಬೆಂದು ಕುಗ್ಗಿಬಿಟ್ಟೆ ನಾ';
- ಕುಪಿತಗೊಂಡ; ಕ್ಷೀಣಗೊಂಡ(ಚಾ.ಜಿ);
- 'ಹಿಗ್ಗು' ಪದಕ್ಕೆ ವಿರುದ್ಧ ಪದ ಕುಗ್ಗು; 'ಕುಗ್ಗು' ಎಂದರೆ ಸೊರಗು.

ಕುಗ್ರಾಮ kugrāma :

- ಸುಧಾರಿಸದ ಊರು; ಅಭಿವೃದ್ಧಿ ಕಾಣದ ಗ್ರಾಮ; Undeveloped village;
- ತೀರ ಚಿಕ್ಕ ಹಳ್ಳಿ; ಬೇಕಾದ ವಸ್ತುಗಳು ದೊರಕದಿರುವ ಹಳ್ಳಿ; A village far away from basic needs;
- 'ಗ್ರಾಮ' ಸಂಸ್ಕೃತ ಪದ; 'a petty village, (ಕಿಟ್ಟೆಲ್).
- ಸಾಮಾನ್ಯವಾಗಿ ಸಂಸ್ಕೃತ ಪದಗಳ ಹಿಂದೆ ಬರುವ 'ಕು' ಕೆಟ್ಟದ್ದು ಎಂಬ ಅರ್ಥವನ್ನು ಧ್ವನಿಸುತ್ತದೆ; ಕಿಟ್ಟೆಲ್ ಕೂಡ A particle implying inferiority, wickedness, badness, etc ಎಂದು ಹೇಳುತ್ತಾನೆ; ಆದರೆ 'ಕುಗ್ರಾಮ'ದಲ್ಲಿ ಬರುವ, 'ಕು' ಪೂರ್ವಪ್ರತ್ಯಯ ಆ ಅರ್ಥವನ್ನು ಸಂವಹನಿಸುವುದಿಲ್ಲ; ಬದಲಾಗಿ ಚಿಕ್ಕ, ಮೂಲ ಸೌಲಭ್ಯಗಳಿಲ್ಲದ ಎಂಬ ಅರ್ಥವನ್ನು ರವಾನಿಸುತ್ತದೆ; ಇದರಿಂದ 'ಕುಗ್ರಾಮ' ತೀರ ಸಣ್ಣ ಹಳ್ಳಿ, ಹಿಂದುಳಿದ ಹಳ್ಳಿ, ಆಧುನಿಕ ನಾಗರಿಕತೆಗೆ ಒಡ್ಡಿಕೊಳ್ಳದ ಹಳ್ಳಿ ಎಂಬುದಾಗಿ ಅರ್ಥ ಮಾಡಬೇಕಾಗುತ್ತದೆ.

ಕುಚಗ್ಯಾ/ಕುಚ್ಚು kucagyā/kuccu :

- ಕುದಿಸು, ಕುದಿಸುವಿಕೆ, ನೀರಿನಲ್ಲಿ ಹಾಕಿ ಬೇಯಿಸು ಎಂಬರ್ಥದಲ್ಲಿ ಬಳಕೆಯಿರುವ ಪದ; ಅಡುಗೆ ಪದಾರ್ಥವನ್ನು ನೀರಿನಲ್ಲಿ ಹಾಕಿ ಬೇಯಿಸುವ ಕ್ರಿಯೆ;
- ಹಸಿಅವರೆ, ಹಸಿಶೇಂಗಾ, ಹಸಿತೊಗರಿ ಮೊದಲಾದವುಗಳಿಗೆ ನೀರು, ಉಪ್ಪು ಹಾಕಿ ಬೇಯಿಸಿ ಸಿದ್ಧಪಡಿಸುವುದು; *ಪ್ರ:* 'ಕೂಳು ಕುಚಗ್ಯಾಬೇಕು ಹೋಗ ಮಾರಾಯ್ತಿ'.

ಕುಚಾನೆ ದಂಡು kucānedaṇḍu :

ಉತ್ಸಾಹದ ಸೈನ್ಯ; ಮೀಸಲು ಪಡೆ; ಹುರುಪು ಹುಮ್ಮಸ್ಸಿನಿಂದ ಕೂಡಿದ ದಂಡು(ಚಿತ್ರ.ಜಿ); *ಪ್ರ:* 'ಗಲಾಟೆ ತಡೆಗೆ ಕುಚಾನೆ ದಂಡು ಸದಾ ಸಿದ್ಧ'. Reserved force; happy army forces.

ಕುಚಾಯಿ kucāyi :

- ತುರಾಯಿ(ಶಿ.ಜಿ); bouquet;
- ಕಿರಿದಾದ ಬಾಯಿ ಇರುವ ಬಿಂದಿಗೆ ಆಕಾರದ ನೀರು ತುಂಬುವ ಪಾತ್ರೆ(ಹಾ.ಜಿ). A small vessel which is used to fill water from this to another big one.

ಕುಚುಕುಚು kucukucu :

- ಪಿಸುಪಿಸು; ಪಿಸುಮಾತು; ಕಿವಿಯ ಸಮೀಪದಲ್ಲಿ ಹೇಳುವಿಕೆ; ಇನ್ನೊಬ್ಬರಿಗೆ ಕೇಳದಂತೆ ತಮ್ಮತಮ್ಮಲ್ಲಿ ಮಾತಾಡುವುದರ ಅನುಕರಣ ಶಬ್ದ; ಅಸ್ಪಷ್ಟವಾದ ಮಾತು(ಬೀ.ಕ.ಕೋ); ಸಂವಾದಿ ಪದಗಳು: ತೆ: ಗುಸುಗುಸು, ತು: ಕುಸುಕುಸು, ತ: ಕುಜುಕುಜು, ಮ: ಕುಜುಕುಜುಕ್ಕ(ದ್ರಾ.ಭಾ.ಜ್ಞಾ.ಪ.ಕೋ); ದ್ರಾವಿಡ ಸಂವಾದಿ ರೂಪಗಳನ್ನು ನೋಡಿದರೆ ಇದು ದ್ರಾವಿಡಪದವೆಂದು ಸ್ಪಷ್ಟವಾಗುತ್ತದೆ; ಮುಖ್ಯವಾಗಿ ಇದು ಪುನರಾವರ್ತಿತ ಪದ; 'ಕುಚು' ಎರಡು ಸಾರಿ ಸೇರಿದ್ದರಿಂದ ಆದ ರೂಪವಾಗಿರುವುದರಿಂದ 'ದ್ವಿರುಕ್ತಿ' ಎಂದರೂ ಆದೀತು; ಅನುಕರಣ ಶಬ್ದವಾದ್ದರಿಂದ ಇಂತಿಷ್ಟೇ ಅರ್ಥವೆಂದು ಹೇಳಲಾಗದು; whispering; Speak very

softly; Something speak softly at one's ears confidentially softly;

- ಸಂವಾದಿ ರೂಪಗಳಲ್ಲಿ ಕನ್ನಡದ್ದೆ ಮೂಲವಿರುವಂತೆ ತೋರುತ್ತದೆ; ತಮಿಳು ಮತ್ತು ಮಲೆಯಾಳಂಗಳಲ್ಲಿನ 'ಜ' ಕಾರ ಪ್ರವೇಶ 'ಚ' ಕಾರಕ್ಕೆ ಬಂದದ್ದಾದರೂ ಅವುಗಳಲ್ಲಿ ಮೂಲ 'ಚ'(ಅಘೋಷ)ಕಾರವೇ ಇರಬೇಕಾಗಿತ್ತು; ಇನ್ನು ತೆಲುಗಿನ 'ಗುಸ' ರೂಪದಲ್ಲಿ ಬಂದ 'ಗ' ಮತ್ತು 'ಸ' ಗಳು ಕನ್ನಡದ 'ಕ' ಮತ್ತು 'ಚ' ಕಾರಕ್ಕೆ ಬಂದ ಬದಲಾವಣೆಗಾಗಿ ತುಳುವಿನ 'ಸ' ಕಾರ ಕೂಡ ಹಾಗೆಯೇ.

ಕುಚುಕುಚು ಮಾತಾಡು kucukucu mātāḍu:

- ನುಡಿಗಟ್ಟಾಗಿ ಬಳಕೆ ಪದ; ಇಬ್ಬರು ಅಥವಾ ಅದಕ್ಕಿಂತ ಹೆಚ್ಚು ಜನರ ನಡುವೆ ಅಕ್ಕಪಕ್ಕದವರಿಗೆ ಕೇಳದಂತೆ ಸಣ್ಣ ಧ್ವನಿಯಲ್ಲಿ ಮಾತನಾಡಿಕೊಳ್ಳುವ ಪ್ರಕ್ರಿಯೆ;
- ಗ್ರಾಮೀಣ ಜನಪದ ಮಹಿಳೆಯರಲ್ಲಿ ಇಂತಹ ಒಂದು ಪ್ರಕ್ರಿಯೆ ರೂಢಿಯಲ್ಲಿದೆ; ಬೇರೆ ಬೇರೆ ಮನೆಗಳವರ ವಿಚಾರಗಳನ್ನು ಚರ್ಚಿಸುವಾಗ ಒಬ್ಬರಿಗೊಬ್ಬರ ನಡುವೆ ಮೆಲುಧ್ವನಿಯಲ್ಲಿ ಪಿಸುಮಾತಿನ ಮಾತುಗಾರಿಕೆ ನಡೆಯುವುದುಂಟು;
- ಹೀಗೆ ಸುದೀರ್ಘ ಕಾಲ ಮಾತನಾಡುವವರನ್ನು ಕುರಿತು ವ್ಯಂಗ್ಯರೂಪಕವಾಗಿ ಟೀಕಿಸುವುದು ವಾಡಿಕೆ; 'ಏನು ಇಬ್ರು ಅಲ್ಲಕ್ಕ-ಮಲಕ್ಕುನ್ ಥರ ಯಾರ್ ಮನಿ ವಿಚಾರನ ಕುಚು ಕುಚು ಮಾತಾಡಕತೀರಿ' ಎಂದು ಕೇಳುವುದುಂಟು.

ಕುಚೇಲ kucēla :

- ಮಹಾಭಾರತದ ಒಂದು ಮರೆಯಲಾರದ ಪಾತ್ರ; ಕೃಷ್ಣನ ಸಹಪಾಠಿ, ಸ್ನೇಹಿತ; 'ಸುದಾಮ' ಎನ್ನುವುದು ಅವನ ಇನ್ನೊಂದು ಹೆಸರು; ಕನ್ನಡದ ಕವಿಯೊಬ್ಬ 'ಸುದಾಮ ಚರಿತೆ' ಎಂಬ ಪುಸ್ತಕವೊಂದನ್ನು ಬರೆದಿದ್ದಾನೆ; A famous character in the epic Mahabharat; A friend of Sri Krishna, The head of the Yadavas;
- ಕೃಷ್ಣನಿಗೂ ಕುಚೇಲನಿಗೂ ಎಲ್ಲಿಗೆಲ್ಲಿಯ ಸಂಬಂಧ; 'ಎಲ್ಲಿಯ ಕೋಗಿಲೆ, ಎಲ್ಲಿಯ ಮಾಮರ'; ಇಷ್ಟಕ್ಕೆಲ್ಲ ಕಾರಣವಾದುದು ಕುಚೇಲನ ಬಡತನ, ಕೃಷ್ಣನ ಸಿರಿತನ; ಕೃಷ್ಣ ಹೇಳಿಕೇಳಿ ರಾಜವಂಶಸ್ಥ, ಪ್ರಸಿದ್ಧ ಪುರುಷ, ಅವನೊಡನೆ ಕುಚೇಲನ ಸ್ನೇಹವೆ ಎಂದು ಯಾರಾದರೂ ಮೂಗು ಮುರಿಯಬಹುದು; ಆದರೆ ಕೃಷ್ಣ-ಕುಚೇಲರದು ಆತ್ಮೀಯ ಸ್ನೇಹ, ಭಗವಂತ-ಭಕ್ತನ ಸಂಬಂಧ ಎಂದು ಯಾರಾದರೂ ಉದ್ಗಾರ ತೆಗೆಯಬಹುದು; ಅವರ ಸ್ನೇಹಕ್ಕೆ ರಾಜ್ಯ, ರಾಜ, ಐಶ್ವರ್ಯ ಇವಾವುವೂ ಅಡ್ಡಿಯಾಗಲಿಲ್ಲ ಎಂಬುದೇ ಇಲ್ಲಿಯ ಮುಖ್ಯ ವಿಷಯ; ಒಂದು ರೀತಿಯಲ್ಲಿ ಅವರದು ಪುರಾಣ ಸಂಬಂಧ ಎಂದರೂ ಆದೀತು;
- ಕುಚೇಲನಿಗೂ ಅವಲಕ್ಕಿಗೂ ನೆಂಟು; ಅದು ಪುರಾಣ ಪ್ರಸಿದ್ಧವಾದುದು ಕೂಡ; ಒಮ್ಮೆ ಕುಚೇಲ ಕೃಷ್ಣನನ್ನು ನೋಡಲು ಹೊರಟನಂತೆ, ಏನು ತಂದಿದ್ದೀಯೆ ಎಂದು ಕೃಷ್ಣ ಕೇಳುತ್ತಾನೆಂದು ಅವಲಕ್ಕಿಯನ್ನು ಕಟ್ಟಿಕೊಂಡು ಹೋಗಿದ್ದನಂತೆ; ಕೃಷ್ಣ ಭೇಟಿಯಾದಾಗ ಕೇಳಿಯೇಕೇಳುತ್ತಾನೆ, ಕುಚೇಲ ಅವಲಕ್ಕಿಯನ್ನು ಕೊಡುವ ಪ್ರಸಂಗವಿದೆ; ಐರಿಸಿಯ ಮೇಲೂ ಕೃಷ್ಣ ಅವಲಕ್ಕಿಯನ್ನು ತಿಂದು ಎಲ್ಲರನ್ನೂ ಚಕಿತರನ್ನಾಗಿ ಮಾಡಿದ ವಿಶೇಷವಿದೆ; ಇದು ಅವರ ಸ್ನೇಹದ ಸ್ವರೂಪ;
- ಕೃಷ್ಣ ಕುಚೇಲನಿಗೆ ಸಹಾಯ ಮಾಡಲಿಲ್ಲವೆ? ಕೇಳಬಹುದಾದ ಪ್ರಶ್ನೆ; ಕಥೆಯೇ ಅದಕ್ಕೆ ಉತ್ತರ ನೀಡಿದೆ: ಕುಚೇಲ ಕೃಷ್ಣನನ್ನು ಭೇಟಿಯಾಗಿ ಊರಿಗೆ ಬರುವ ಹೊತ್ತಿಗೆ ಅಲ್ಲಿ ಅವನ ಊರನ್ನು ಕಾಣಲಿಲ್ಲ, ಒಂದು ಹೊಸನಗರ ತಲೆಎತ್ತಿತ್ತು. ಗುರುತಿಸುವವರು ಯಾರೂ ಇಲ್ಲದಿದ್ದಾಗ ಅವನ ಹೆಂಡತಿ ಬಂದು ಗುರುತಿಸಿ ಕರೆದುಕೊಂಡು ಹೋದಳಂತೆ, ಅಷ್ಟರಮಟ್ಟಿಗೆ ಎಲ್ಲವೂ ಬದಲಾಗಿತ್ತು, ಸಿರಿಸ್ವರೂಪ ಪಡೆದಿತ್ತು; ಇದು ಕೃಷ್ಣನ ಮಹಿಮೆಯೂ ಆಗಬಹುದು, ಕುಚೇಲನ ಮಹಿಮೆಯೂ ಆಗಬಹುದು; ಈ ಕಥೆಯನ್ನು ಯಾರಾದರೂ ಆಮೇಲೆ ಹುಟ್ಟು ಹಾಕಿದರೆ?
- ಏನಾದರೂ ಇರಲಿ, ಈ ಕೃಷ್ಣ-ಕುಚೇಲರ ಸ್ನೇಹ ಒಂದು ಸಂಕೇತ, ಒಂದು ಮಾದರಿ; ಅದಕ್ಕೆ ಅಂತಸ್ತು ಅಂತರಗಳು ಕಾರಣವಾಗಲಾರವು; ಅಂತರಂಗದ್ದು, ಬೆಲೆಕಟ್ಟಲಾಗದ್ದು; ಇದೇ ಸಂದೇಶ ಅಲ್ಲವೆ?

ಕುಚ್ಚಲು ಮೀನು ಕುಚ್ಚು kuccalu mīnu kuccu :

- ಒಂದು ಜಾತಿಯ ಮೀನು; ದುಂಡಾಗಿದ್ದು ಒಂದು ಕೈಗೆ ಅಡಕಲಾಗುವ ಮೊಳದುದ್ದದ ಮೀನು; ಕಪ್ಪು ಮತ್ತು ಗುಲಾಬಿ ಬಣ್ಣದ್ದು; ತಲೆಭಾಗ ದಪ್ಪವಿದ್ದು ಬಾಲದೆಡೆಗೆ ಕ್ರಮೇಣ ತೆಳ್ಳಗಾಗುವುದು; ಬಾಲದ ಕುಚ್ಚು ನವಿಲಿನಾಕಾರದಲ್ಲಿ ಆಕರ್ಷಕವಾಗಿರುವುದು; 'ಇಳಿಗುಳಿ' ಹಾಕಿ ಕೆರೆಯಲ್ಲಿ ಮೀನು ಹಿಡಿಯುವರು; ಇದರಿಂದ ತಯಾರಿಸಿದ ಸಾರು ಬಲು ರುಚಿ. *ಪ್ರ:* 'ಕುಚ್ಚಲು ಮೀನು ಕುಣೀತಾದೆ ಚೇಣಿ ಮೀನು ನೆಗೀತಾದೆ'*(ಗಾ).* A kind of fish breed; It is a black and rose coloured fish.

ಕುಚ್ಕು kucku :

ಕುಟುಕು; ಚುಚ್ಚು; ನೇರವಾಗಿ ಮಾತನಾಡದೆ ಸುತ್ತಿ ಬಳಸಿ ಮಾತಾಡಿ ಮನ ನೋಯಿಸುವುದು (ಮ.ನು.ಕೋ). An irritating speech; To speak indirectly clue to hurt someone.

ಕುಚ್ಚಣಿ kuccaṇi :

ಹಂಗಿಸುವಿಕೆ; ಹೀಯಾಳಿಕೆ; ನಿಂದೆ; ತೆಗಳಿಕೆ; ಚುಚ್ಚುನುಡಿ; ತಿರಸ್ಕಾರ, ದೂಷಣೆ. Unbridled; scold, reproach neglect able speech.

ಕುಚ್ಚಿ kucci :

- ಕೂದಲು; ತಲೆಗೂದಲು; ರೋಮ; *ಪ್ರ:* 'ಅಂವ ಕುಚ್ಚಿ ತೆಗೆಸಿ ಬಂದ'. Hair; A thread like stands growing from the skin or head of mammals or else;
- ಗಿಡ್ಡ; ಚಿಕ್ಕ; ಕುರುಚಲು; ಗಿಡ ಮತ್ತು ಪೊದೆಗಳನ್ನು ಸವರಿ ಉಳಿದ ಭಾಗ; ಮೋಟುಗಿಡ,
- ಗಿಡ್ಡ ಜಾತಿಯ ಎತ್ತು; A kind of dwarf breed OX;
- ಕುಚ್ಚು; ಗೊಂಡೆ.

ಕುಚ್ಚು ಕಂಬಳಿ kuccu kambaḷi :

ತೊಗರಿ, ಅವರೆ, ಅಲಸಂದೆ ಇತ್ಯಾದಿ ಬೆಳೆಗಳನ್ನು ಹಾಳು ಮಾಡುವ ಕೀಟ; ಕಂಬಳಿ ಹುಳದ ರೀತಿಯದು. A kind of insect which destroys lentil crops.

ಕುಚ್ಚು೧ kuccu[1] :

- ಉದ್ದನೆಯ ಜಡೆಯನ್ನು ಹೆಣೆದು ಜಡೆಯ ತುದಿಗೆ ಹಾಕುವ ಬಂಗಾರದ ಆಭರಣ; ಕಿರುಬೆರಳಿನ ಗಾತ್ರದಿಂದ ಹಿಡಿದು ಹಿಡಿ ಗಾತ್ರದವರೆಗೆ ವಿಭಿನ್ನ ಆಕಾರ ಮತ್ತು ಗಾತ್ರದಲ್ಲಿರುತ್ತವೆ; A jewel which tagged to an end part of the long weaved plait/queue;
- ಬಣ್ಣಬಣ್ಣದ ಬಟ್ಟೆ ಅಥವಾ ರೇಷ್ಮೆ ನೂಲನ್ನು ಕೂದಲಂತೆ ಜೋಡಿಸಿ ಕೆಳಗೆ ಮೂರು ಗೊಂಡೆ ಕಟ್ಟಿ ಗೊಂಡೆ ಮುಚ್ಚುವಂತೆ ಚಿನ್ನದ ಹೊದಿಕೆ ಅಳವಡಿಸಿರುವರು; ಇದೂ ಕೂಡ ಕಲಾತ್ಮಕ ಕೆತ್ತನೆಗಳಿಂದ, ಹರಳು, ಮುತ್ತುಗಳಿಂದ ಅಲಂಕರಿಸಲ್ಪಟ್ಟಿರುವುದು; ಇದನ್ನು ಜಡೆಗೊಂಡೆ ಎನ್ನುವರು; A tuff of hanging threads of silk or piece of clothes, knotted together at one end and used for decoration (tassel-bunch);
- ಬಟ್ಟೆ ಮತ್ತು ನೂಲುಗಳಿಂದ ಗುಂಡಗಿರುವ ಕುಚ್ಚುಗಳನ್ನು ಮಾಡಿ ಅದನ್ನು ದನ, ಎಮ್ಮೆ, ಆಡು, ಕುರಿಗಳ ಕೊಂಬಿನ ಅಲಂಕಾರಕ್ಕೆ, ದನಗಳ ಗೌನಿನ ತಯಾರಿಕೆಯಲ್ಲಿ ಬಳಸುವರು; ಬಾರುಗೋಲಿನ ದಾರದ ತುದಿಯಲ್ಲಿ ಅಲಂಕಾರಕ್ಕಾಗಿ ಕಟ್ಟುವರು; *ಪ್ರ:* 'ಜಡೆ ಬಿಲ್ಲೆ, ಕುಚ್ಚು ಹಾಕಿ ಹೆಣ್ಣು ಸಿಂಗರಿಸಿ'; ತ,ಮ: ಕುಚ್ಚು, ತೆ: ಕುಚ್ಚು, ತು: ಕುಜ್ಜಿ.
- ***—ಕುಚ್ಚು ಕಟ್ಟು*** : ಸೀರೆಯ ಸೆರಗಿನ ದಾರವನ್ನು ಕಲಾತ್ಮಕವಾಗಿ ಗಂಟು ಹಾಕುವ ವಿಧಾನ. An artistic knotting method of a saree thread.

ಕುಚ್ಚು೨ kuccu[2] :

- ಕುದಿಸು; ಬೇಯಿಸು; ಕುಸುವು; *ಪ್ರ:* 'ಬಾಣಂತಿಗೆ ಕುಚ್ಚಿದ ಅಕ್ಕಿ ಅನ್ನ'; To boil something;
- ***—ಕುಚ್ಚುಲಕ್ಕಿ/ಕುಸುಲಕ್ಕಿ*** : ಕುಚ್ಚುಲ್+ಅಕ್ಕಿ>ಕುಸುಲ್ + ಅಕ್ಕಿ; 'ಚ' ಮತ್ತು 'ಸ' ಕಾರಗಳು ಪರಸ್ಪರ ವಿನಿಮಯಗೊಳ್ಳುವುದು ದ್ರಾವಿಡ ಭಾಷೆಗಳಲ್ಲಿ ಸಾಮಾನ್ಯ; ಬತ್ತವನ್ನು ಕುದಿಸಿ, ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ, ಒಡೆವ ಕುಂಟೆಯಲ್ಲಿ ಒಡೆಯುವ ಮೂಲಕ ಅಥವಾ ಒನಕೆಯಿಂದ ಕುಟ್ಟುವ ಮೂಲಕ ಅಕ್ಕಿ ಹಾಗೂ ಉಮಿ(ಮೇಲಿನ ಸಿಪ್ಪೆ)ಯನ್ನು ಬೇರ್ಪಡಿಸಿ

ತಯಾರಿಸಿದ ಅಕ್ಕಿ; ಇದರಲ್ಲಿ ಹೆಚ್ಚಿನ ತಂಪಿನ ಗುಣ ಇರುವುದರಿಂದ ಹೆರಿಗೆಯಾದ ನಂತರ ಬಾಣಂತಿಯರಿಗೆ ಕೆಲವು ದಿನಗಳು ಅಥವಾ ತಿಂಗಳುಗಳವರೆಗೆ ಇದರಿಂದ ತಯಾರಿಸಿದ ಅನ್ನ ಕೊಡುವರು; ಕರಾವಳಿ ಭಾಗದಲ್ಲಿ ಗಂಜಿ ಊಟದಲ್ಲಿ 'ಕುಚ್ಚಲಕ್ಕಿ' ಅನ್ನ, ಒಣಮೀನು, ಉಪ್ಪಿನಕಾಯಿ ಇರುತ್ತದೆ; *ಪ್ರ:* 'ಕುಟ್ಟೋದು ಬೀಸೋದು ನಿನಗಿರಲಿ, ಕುಸುಲಕ್ಕಿ ಅನ್ನ ನನಗಿರಲಿ'*(ಗಾ)*; Boiled rice which has been manufactured by boiling paddy and dry in sun heat than husk it.

- ***—ಕುಚ್ಚುಗಡಬು/ಕುಚ್ಗಡುಬು*** : ಕುದಿಸಿದ ಕಡುಬು; ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ನಾಗರಪಂಚಮಿ, ಮಗುವಿನ ನಾಮಕರಣದ ದಿನ ನೀರಿನಲ್ಲಿ ಕುದಿಸಿದ ಕಡುಬನ್ನು ನೈವೇದ್ಯ ಮಾಡುವರು; ಕಡಲೆಬೇಳೆಯನ್ನು ಬೇಯಿಸಿ ಬೆಲ್ಲ ಕಾಯಿಯೊಂದಿಗೆ ಗಟ್ಟಿಯಾಗಿ ರುಬ್ಬಿ ಹೂರಣ ತಯಾರಿಸಿಕೊಳ್ಳುವರು; ಗೋಧಿಹಿಟ್ಟು ಅಥವಾ ಮೈದಾ ಹಿಟ್ಟಿನಿಂದ ಕಣಕ ಮಾಡಿ ಖರ್ಜಿಕಾಯಿಯಂತೆ ಹೂರಣ ತುಂಬಿ ತಯಾರಿಸಿದ ಕಡುಬುಗಳನ್ನು ಚೆನ್ನಾಗಿ ಕುದಿಯುವ ನೀರಿನ ಹಬೆಯಲ್ಲಿ ಬೇಯಿಸುವರು(ಬೆ.ಜಿ); A cooked dessert that is to be baked or steamed dish made with sweet and flour. It is cooked especially in north Karnataka during Baptism(naming ceremony-Nagara Panchamy).
- ***—ಕುಚ್ಚಕ್ಕಿ*** : ಬೇಯಿಸಿದ ಭತ್ತ ಒಣಗಿಸಿ ಕುಟ್ಟಿ ಅಕ್ಕಿ ಮಾಡಿ ಹುರಿದು ಅದಕ್ಕೆ ಉಪ್ಪು ಕಾರ ಬೆರಸಿ ತಯಾರಿಸಿದ ತಿಂಡಿ. A snacks/dessert made up of paddy by boiling and husking.

ಕುಚ್ಚು೩ kuccu[3] :

ಕೈಮಗ್ಗದ ಸಾಧನ; 'ಕುಚ್ಚು ಗುಂಡು', 'ಕುಚ್ಚಿನ ಕಾಯಿ' ಕೈಮಗ್ಗದಲ್ಲಿ ಲಾಳಿಯನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ತಳ್ಳುವ ಕ್ರಿಯೆಗೆ ನೆರವಾಗುವ ಪ್ರಮುಖ ಸಾಧನ(ಬೆಂ.ಗ್ರಾ.ಜಿ); A tool of handloom which helps to push one side to another;

—ಕುಚ್ಚು ಎಳೆ : ವಾಟಹಾಕು; ಮಗ್ಗ ನೇಯಲು ತೊಡಗುವುದು; ಕುಚ್ಚು ಎಳೆದಾಗ ಲಾಳಿ ಮನೆಯಲ್ಲಿರುವ ಲಾಳಿ ತಳ್ಳಲ್ಪಟ್ಟು ಇನ್ನೊಂದು ಕಡೆ ಸಾಗುತ್ತದೆ; ಈ ಸಂದರ್ಭದಲ್ಲಿ ಲಾಳಿಯಲ್ಲಿನ ಎಳೆ ಬಿಟ್ಟುಕೊಳ್ಳುತ್ತಾ ಹೋಗುವುದು; ಇದು ಪುನರಾವರ್ತನೆಯಾದಂತೆ ಎಳೆಯು ಬಟ್ಟೆಯ ರೂಪ ಪಡೆಯುವುದು(ಬೆಂ.ಗ್ರಾ.ಜಿ); A process of weaving;

—ಕುಚ್ಚುಕಾಯಿ : ಮಗ್ಗದ ಮೇಲಿರುವ ವ್ಯಕ್ತಿ ಲಾಳಿಯನ್ನು ಅತ್ತಿಂದಿತ್ತ ಓಡಾಡಿಸಲು ಬಳಸುವ ಹಗ್ಗದ ಹಿಡಿಕೆಯಲ್ಲಿರುವ ಮರದ ಉಂಡೆ (ಬೆಂ.ಗ್ರಾ.ಜಿ); Spherical wooden log that is used to push to and fro in hand loom;

—ಕುಚ್ಚುದಾರ : ಲಾಳಿ ಓಡಾಡಿಸಲು ಸಹಾಯಕವಾದ ಕುಚ್ಚು ಕಾಯಿಂದ ಪಿಕೀರಿಗೆ ಕಟ್ಟಿರುವ ದಾರಗಳು(ನೇ.ಪ.ಕೋ). Threads which tied to spindle or weaver's shuttle to push fro and to.

ಕುಚ್ಚು೪ kuccu[4] :

- ಗೊಂಚಲು; *ಪ್ರ:* 'ಎಷ್ಟು ಕುಚ್ಚು ಹೂ ಬೇಕು'; A bunch or tassel; headgear;
- ತುಂಡುಮಾಡು; ಕೊಚ್ಚು(ಉ.ಕ.ಜಿ);
- ಕಿರೀಟ; ಪಗಡಿ; ಕಮಲ; ತಾವರೆ ಹೂ (ಯ.ಪ.ಕೋ);
- ಕುಂಚ(ತು.ನಿ);
- ಕರು(ಚಿಕ್ಕ.ಜಿ);
- ಲಂಡಾ ಪಟಕ್ಕೆ ಇಲ್ಲವೆ ಬಾಲಂಗೋಚಿಯಿಲ್ಲದ ಗಾಳಿ ಪಟದ ಕೆಳಭಾಗದಲ್ಲಿ ಸಿಕ್ಕಿಸುವ ಕಾಗದದ ಗುಚ್ಛ; ಪಟ ಗೋತಾ ಹೊಡೆಯುವುದನ್ನು ತಪ್ಪಿಸಲು ಗಾಳಿಪಟದ ತುಯ್ದಾಟ ನಿಲ್ಲಿಸಲು ಕಟ್ಟುವ ಬಾಲಂಗೋಚಿ; ಗಾಳಿಪಟದ ಕೊನೆಗೆ ಕಟ್ಟುವ ತೂಕ(ಬೆಂ.ಗ್ರಾ.ಜಿ).

ಕುಚ್ಚುಮಟ್ಟೆ/ಕುಂಚ ಮಟ್ಟೆ kuccumaṭṭe/kuñcamaṭṭe :

ಈಚಲುಗರಿ, ತೆಂಗಿನ ಮಟ್ಟೆಯಿಂದ ಕುಂಚದಂತೆ ಮಾಡಿದ ಸುಣ್ಣ ಬಣ್ಣ ಬಳಿಯಲು ಬಳಸುವ

ಮೊಂಡು ಪೊರಕೆ(ತು.ಜಿ); ಪ್ರ: 'ಸುಣ್ಣ ಬಳಿಯಲು ಕುಚ್ಚುಮಟ್ಟೆ ತಾ'. A broom made by the leaf of wild date tree of coconut leaf.

ಕುಚ್ಚುಲ ಪಂಡ್ಗ kuccula panḍga :

ಜಲ್ಲಿಕಟ್ಟು; ಸಂಕ್ರಾಂತಿಯ ದಿನ, ದನವನ್ನು ಸಿಂಗರಿಸಿ ಓಡಿಸುವ ಕ್ರಿಯೆ; ಇದು ಊರ ಅಗಸೆ ಬಾಗಿಲಲ್ಲಿ ನಡೆಯುವುದು. A festival of sankranti; Jallikattu- a process of chasing running ball and taming it.

ಕುಚ್ಲಾಸು kuclāsu :

ತುಳಿ; ಕಾಲ ಕೆಳಗಿಟ್ಟು ಅದುಮು; ಹಾನಿ ಉಂಟು ಮಾಡು; ನಾಶಮಾಡು(ಬೀ.ಕ.ಕೋ); To harm; To press,to destroy someone, by feet.

ಕುಚ್ಲಿ kucli :

ಕುಚಲಿ; ಅಡಕೆಯಂತೆ ತಿನ್ನಲು ಬಳಸುವ ಬೀಜ ಮತ್ತು ಅದರ ಗಿಡ(ಬೀ.ಕ.ಕೋ). A seed and plant which is used eat and chew as areca nut; An honorarium given to people who carry out marriage procession.

ಕುಜಗೂಡು kujagūḍu :

ಮದುವೆ ದಿಬ್ಬಣದವರಿಗೆ ಕೊಡುವ ಸಂಭಾವನೆ; (ಚಿಕ್ಕ.ಜಿ).

ಕುಜಾಯ kujāya :

ನೀರು ಕುಡಿಯುವ ಮಣ್ಣಿನ ಮಡಿಕೆ; ಇದರ ಬಾಯಿ ತುಂಬ ಚಿಕ್ಕದಾಗಿದ್ದು ಮರದ ಬೆಣೆಯಿಂದ ಮುಚ್ಚುವರು; ಹೊಲ ಗದ್ದೆಗಳಿಗೆ ನೀರು ಹುಯ್ಯಲು ಬಳಕೆ(ತು.ಜಿ). drinking pot; A baked clay water drinking pot it has a small mouth covered by a wooden peg.

ಕುಜು/ಕುಜುಳಿ kuju/kujuḷi :

ಸಾರಾಯಿ ತುಂಬಿ ತರಲು ಬಳಸುವ ಗಾಜಿನ ಅಥವಾ ಮಣ್ಣಿನ ಪಾತ್ರೆ; ಇದರ ಮೇಲ್ಭಾಗವನ್ನು ನೈಲಾನ್ ಚೀಲ ಅಥವಾ ಬಟ್ಟೆಯಿಂದ ಅಲಂಕರಿಸುತ್ತಿದ್ದರು(ತು.ನಿ)(ಉ.ಕ.ಜಿ)(ದ.ಕ). A baked clay vessel or glass vessel used to bring wine covered in nylon cloth.

ಕುಜುಬು kujubu :

ಟೊಳ್ಳಾದ, ಲಡ್ಡಾದ ಮರದ ಭಾಗ(ಮಂ.ಜಿ). A hollow part of any tree.

ಕುಜುವೆ/ಕುಜ್ಜ kujuve/kujja :

ಹಲಸಿನ ಎಳೆಯ ಕಾಯಿ; ಬಲಿಯದ ಹಲಸಿನಕಾಯಿ; ಅಡುಗೆಯಲ್ಲಿ ಹೆಚ್ಚಾಗಿ ಬಳಕೆ(ದ.ಕ., ತು.ನಿ). Tender jack fruit that is used for cooking.

ಕುಜ್ಜಿ kujji :

- ನೇರವಾಗಿ ನೆಟ್ಟ, ಗಿಡ್ಡವಾದ ಮರದ ತೊಲೆ; ಕಂಬ; ಗುಜ್ಜು ತೋರವಾದ ಗೂಟ; A support structure; Straight short wooden pillar or support;
- ಒಂದು ಜಾತಿಯ ಮೀನು(ದ.ಕ). A species of fish.

ಕುಟ್‌ಕುಟ್‌ಕುರ್ kuṭkuṭ kur :

- ಒಂದು ಗ್ರಾಮಿಣ ಆಟ; ಅಳುವ ಮಗುವನ್ನು ಸಂತೈಸಲು ಹುಡುಗಿಯರು ಆಡುವ ಆಟ(ಕಲ.ಜಿ); A rural folk game to console or comfort the crying baby;
- ಪ್ರಾಸದ ಹಿನ್ನೆಲೆಯಲ್ಲಿ ಬಂದಿರುವ ಆಟದಂತಿದೆ;
- ಅನುಕರಣ ಶಬ್ದಸಮೂಹದಿಂದ ರೂಪುಗೊಂಡ ಆಟವಾಗಿದೆ.

ಕುಟಕುಟಾ kutakuṭā :

connarns wightil; ಒಂದು ಸಸ್ಯ ವಿಶೇಷ; ಮರಗಳ ಮೇಲೆ ಹಬ್ಬುವುದು. A climbing creeper which spreads on trees.

ಕುಟರಿ/ಕುಟ್ಟರಿ kuṭari/kuṭṭari :

ರಾಶಿ; ಗುಂಪು; ಗುಪ್ಪೆ; ಕುಪ್ಪೆ; ಹೊಟ್ಟಿನ ಬಣವೆ; ಬೆಳೆ ಕಟಾವು ಮಾಡಿ ಒಂದೆಡೆ ಹಾಕುವ ರಾಶಿ. A heep, group, a mass.

ಕುಟಾಗ kuṭāga :

- ಜೊತೆಗೆ; ಸಂಗಡ; ಒಂದಿಗೆ *ಪ್ರ:* 'ಹುಡುಗರು ಕುಟಾಗ ಆಟ ಆಡೋದ ನೋಡಿದ್ಲು'; *ವ್ಯರೂ:* ಕುಟ್ಟೆ, ಕೂಟೆ, ಕುಟ್ಪಾಡಿ, ಕುಟ್ಟೇ(ಶಿ.ಜಿ); together; Collectively associatives;
- ದಕ್ಷಿಣ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ 'ಕುಂಟೆ/ಕುಂಟ' (ಅವನಕುಂಟ, ಅವನಕುಂಟೆ = ಅವನಜೊತೆಯಲ್ಲಿ) ಮತ್ತು 'ಕುಟ್ಟೆ'(ಅವನಕುಟ್ಟೆ = ಅವನಜೊತೆಯಲ್ಲಿ) ಪದಗಳು ಪ್ರಚಲಿತವಾಗಿದೆ; 'ಕುಟಾಗ' ಪದ ಕೂಡ ಇದೇ ಅರ್ಥವನ್ನು ಹೊಂದಿರುವುದರಿಂದ, ಸಂವಾದಿ ಪದಗಳಾಗಿ ತೆಗೆದುಕೊಳ್ಳಬೇಕಾಗುತ್ತದೆ; ವ್ಯತ್ಯಯ ರೂಪಗಳಲ್ಲಿರುವ 'ಕುಟ್ಟೆ' ಮತ್ತು 'ಕೂಟೆ' ಪದಗಳು ಇದನ್ನು ಬೆಂಬಲಿಸುವಂತೆ ತೋರುತ್ತವೆ.

ಕುಟಿ kuṭi :

ತಿರುಗುಣಿ; ಬಾಗಿಲು ಮತ್ತು ವಾಸ್ಕಾಲ್ ಪಟ್ಟಿಗೂ ಮಧ್ಯ ಅಳವಡಿಸುವ ಕಬ್ಬಿಣದ ಸಾಧನ; ಬಾಗಿಲನ್ನು ಸುಲಭವಾಗಿ ಮುಚ್ಚಿ ತೆಗೆಯಲು ಅನುಕೂಲವಾಗುವಂತೆ ಜೋಡಿಸಿರುವ ಕಬ್ಬಿಣದ ಕೀಲು. An iron bolt; That used as axil between door roler and `vyaskal' band.

ಕುಟಿಗೆರೆ kuṭigere :

ಒಂದು ಜಾತಿಯ ಗಿಡ; ಹಿಂಗಾರಿನಲ್ಲಿ ಕಾಯಿ ಬಿಡುವುದು; ಕಾಯಿಯಲ್ಲಿರುವ ಮೇಣದಲ್ಲಿ ಚರ್ಮ ಸುಡುವ ಗುಣವಿದ್ದು ಅದನ್ನು ಹೊರತುಪಡಿಸಿ ತಿನ್ನುವರು(ಚಿಕ್ಕ.ಜಿ). A species of tree.

ಕುಟುಂಬ kuṭumba :

- ಸಾಮಾಜಿಕ ವ್ಯವಸ್ಥೆಯಲ್ಲಿ ಕುಟುಂಬ ಮುಖ್ಯ ಪ್ರಾಥಮಿಕ ಘಟಕ; ಯಾವುದೇ ಸಾಮಾಜಿಕ ಕಾರ್ಯಕ್ಕೆ ಮತ್ತು ಸಾಂಸ್ಕೃತಿಕ ಅನುಷ್ಠಾನಕ್ಕೆ ಕುಟುಂಬ ನಿರ್ವಹಿಸುವ ಪಾತ್ರ ಮಹತ್ವದ್ದು; ಮದುವೆಯ ಮೂಲಕ ಅಸ್ತಿತ್ವಕ್ಕೆ ಬರುವಂಥದು ಇದು; family; A basic unit of social system;
- ಜಾನಪದದ ಎಲ್ಲ ಪ್ರಕಾರಗಳೂ ಕುಟುಂಬದ ಸದಸ್ಯರ ಮೂಲಕವೇ ಪ್ರಸಾರಕ್ಕೆ ಬಂದಿವೆ; ಶಾಬ್ದಿಕ ಜಾನಪದ ಮತ್ತು ಆಚರಣಾತ್ಮಕ ಜಾನಪದದ ಅಳಿವು ಉಳಿವಿಗೆ ಕುಟುಂಬದ ಸದಸ್ಯರೇ ಮುಖ್ಯ; ಕುಟುಂಬದ ಸದಸ್ಯರು ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಜಾನಪದದ ಪ್ರಸಾರಕಾರ್ಯದಲ್ಲಿ ಭಾಗವಹಿಸಬಹುದು;
- ಕುಟುಂಬದ ಪರಿಕಲ್ಪನೆ ಮುಖ್ಯವಾಗಿ ಗಂಡ, ಹೆಂಡತಿ ಮತ್ತು ಮಗು/ಮಕ್ಕಳು ಇವರಿಗೆ ಸಂಬಂಧಿಸಿದ್ದು; ಇದನ್ನು ಪ್ರಾಥಮಿಕ ಕುಟುಂಬ ಎನ್ನುತ್ತಾರೆ; ಇಂತಹ ಹಲವಾರು ಪ್ರಾಥಮಿಕ ಕುಟುಂಬಗಳು ಸೇರಿ, ಸಂಬಂಧಿಗಳೂ ಕೂಡಿಕೊಂಡರೆ ಅಂತಹ ವಿಸ್ತೃತ ಕುಟುಂಬವನ್ನು ಅವಿಭಕ್ತ ಕುಟುಂಬ ಎನ್ನುತ್ತೇವೆ; ಬೇಸಾಯ ಸಂಸ್ಕೃತಿಯ ಆಧಾರವೇ ಈ 'ಕೂಡುಕುಟುಂಬ' ವ್ಯವಸ್ಥೆ; ಇದು ಈಗ ಒಡೆದುಹೋಗಿ ವಿಭಕ್ತ ಕುಟುಂಬಗಳೇ ಬಹಳವಾಗಿ ಕಾಣುತ್ತಿರುವುದರಿಂದ, ಬೇಸಾಯಕ್ಕೆ ಆಘಾತವಾಗಿದೆ; ಸಂಸ್ಕೃತಿಯನ್ನು ತಲೆಮಾರುಗಳ ಮೂಲಕ ಒಯ್ಯುತ್ತಿದ್ದ ಕುಟುಂಬ ಸಂಸ್ಕೃತಿಗೂ ಈಗ ಧಕ್ಕೆಬಿದ್ದಿದೆ; ಹೀಗೆ ವಿಭಕ್ತ ಕುಟುಂಬಗಳು ಹೆಚ್ಚುತ್ತಿರುವುದಕ್ಕೆ ಅವಿಭಕ್ತ ಕುಟುಂಬದಲ್ಲಿ ಇದ್ದ ಸೋಮಾರಿತನ ಮತ್ತು ವಿಭಕ್ತ ಕುಟುಂಬದಲ್ಲಿ ನಿರೀಕ್ಷಿಸಿದ ಅನುಕೂಲ ಕಾರಣವಿರಬೇಕು;
- ಐತಿಹಾಸಿಕ ಮತ್ತು ಸಾಂಸ್ಕೃತಿಕವಾಗಿ ಕುಟುಂಬವನ್ನು ವರ್ಗೀಕರಿಸಿದರೆ ಮಾತೃ ಪ್ರಧಾನ ಕುಟುಂಬ ಮತ್ತು ಪಿತೃಪ್ರಧಾನ ಕುಟುಂಬ ಎಂಬೆರಡು ವ್ಯವಸ್ಥೆಗಳು ಕಂಡುಬರುತ್ತವೆ; ಸಾಮಾನ್ಯವಾಗಿ ಇವನ್ನು ಸ್ತ್ರೀಪ್ರಧಾನ ಕುಟುಂಬ ಮತ್ತು ಪುರುಷ ಪ್ರಧಾನ ಕುಟುಂಬ ಎಂದು ಕರೆಯಲಾಗಿದೆ; ಮಾತೃಪ್ರಧಾನ ಕುಟುಂಬ ಇವೊತ್ತು ಬಹುತೇಕ ಕಂಡುಬರುತ್ತಿಲ್ಲ, ಅಲ್ಲಲ್ಲಿ ವಿರಳವಾಗಿ ಮಾತ್ರ ನೋಡಲು ಸಿಗುತ್ತವೆ; ಪಿತೃಪ್ರಧಾನ ಕುಟುಂಬವೇ ಇವೊತ್ತು ಪ್ರಧಾನ ಮತ್ತು ವ್ಯಾಪಕ; ಮನುಷ್ಯ ನೆಲೆನಿಂತು ವ್ಯವಸಾಯ ಮೊದಲಾದವನ್ನು ಕಂಡುಕೊಂಡ ಮೇಲೆ ಪಿತೃಪ್ರಧಾನ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಿತು; ಅದಕ್ಕೂ ಹಿಂದೆ ಮಾತೃಪ್ರಧಾನವೇ ಇದ್ದುದು; ಇಂದು ಕಂಡುಬರುತ್ತಿರುವ ವಿರಳ ಮಾತೃಪ್ರಧಾನ ಕುಟುಂಬ ಪ್ರಾಚೀನ ಕಾಲದ ಬಹುತೇಕ ಪರಿಷ್ಕೃತ ರೂಪವೆಂದೇ ಹೇಳಬೇಕು;

- ಪುರುಷಪ್ರಧಾನ ಕುಟುಂಬದಲ್ಲಿ ಸ್ತ್ರೀಯ ಸ್ಥಾನಮಾನಗಳು ಪುರುಷನಿಗೆ ಸಮಾನ ಇರುವುದಿಲ್ಲ ಎಂಬುದು ನಿಜ; ಆದರೆ ಮಾತೃಪ್ರಧಾನ ಕುಟುಂಬಗಳಲ್ಲಿ ಅದು ಇತ್ತೆ, ಅವಳು ಅಲ್ಲಿಯಾದರೂ ಸುಖಿಯಾಗಿದ್ದಳೆ ಎಂಬುದು ಈಗಿನ ಪ್ರಶ್ನೆ; ಇದಕ್ಕೆ ಮಾನವಶಾಸ್ತ್ರಜ್ಞರು ಚೆನ್ನಾಗಿಯೇ ಉತ್ತರ ಕೊಟ್ಟಿದ್ದಾರೆ: ಮಾತೃ ಪ್ರಧಾನ ಕುಟುಂಬದಲ್ಲಿ ಆಸ್ತಿಯ ಹಕ್ಕು ಹೆಣ್ಣಿನ ಮೂಲಕ ಹೋಗುತ್ತಿತ್ತು ಎನ್ನುವುದು ಸರಿ, ಆದರೆ ಆಡಳಿತ ಮತ್ತೆ ಗಂಡಸರ ಅಧೀನದಲ್ಲೆ ಇತ್ತು; ಮಾತೃಪ್ರಧಾನ ಕುಟುಂಬದಲ್ಲಿ ಹೆಣ್ಣು ಹುಟ್ಟಿದ ನೆಲೆಯಲ್ಲಿಯೇ ಉಳಿಯುತ್ತಿದ್ದಳು, ಗಂಡುಮಕ್ಕಳು ತಮ್ಮ ಹೆಂಡತಿಯ ಮನೆಗೆ ಹೋಗಿ ನೆಲೆಸುವ ರೂಢಿಯಿಲ್ಲದ್ದರಿಂದ, ಅವರೂ ಹುಟ್ಟಿದಲ್ಲಿಯೇ ಉಳಿಯುತ್ತಿದ್ದರು; ಈ ಕಾರಣ ಆಡಳಿತ/ವ್ಯವಹಾರ ಎಲ್ಲವೂ ಅವರಲ್ಲಿಯೇ ಇತ್ತು; ಅದರಿಂದ ಮಾತೃಪ್ರಧಾನ ಕುಟುಂಬದಲ್ಲಿ ಹೆಣ್ಣಿನ `right'(ಹಕ್ಕು) ಇತ್ತೇ ಹೊರತು, `rule'(ಆಡಳಿತ) ಇರಲಿಲ್ಲ;
- ಹೇಗಾದರೂ ಇರಲಿ, ಅವಳಾದರೂ ಸುಖವಾಗಿದ್ದಳೆ ಎಂಬ ಪ್ರಶ್ನೆಗೆ 'ಇಲ್ಲ' ಎನ್ನುತ್ತಾರೆ ಮಾನವಶಾಸ್ತ್ರಜ್ಞರು; ಹಾಗೆ ನೋಡಿದರೆ ಮಾತೃಪ್ರಧಾನ ಕುಟುಂಬಕ್ಕಿಂತ ಪಿತೃಪ್ರಧಾನ ಕುಟುಂಬದ ಹೆಣ್ಣು ಹೆಚ್ಚು ಸುಖಿ ಎಂಬ ಮಾತನ್ನೂ ಆಡಿ ಮಾನಶಾಸ್ತ್ರಜ್ಞರು ನಮಗೆ ಅಚ್ಚರಿ ಹುಟ್ಟಿಸುತ್ತಾರೆ; ಆದರೆ ಅದು ವಾಸ್ತವ, ಏಕೆಂದರೆ ಅಲ್ಲಿಯೂ ಗಂಡಸರದೇ ದರ್ಬಾರು; ಅವರು ಗಂಡಂದಿರು ಆಗಿರುವುದಿಲ್ಲ, ಅಣ್ಣತಮ್ಮಂದಿರು ಆಗಿರುತ್ತಾರೆ; ಹೀಗಾಗಿ ಸ್ತ್ರೀ ಶೋಷಣೆ ಮಾತೃಪ್ರಧಾನ ಕುಟುಂಬ ಮತ್ತು ಪಿತೃಪ್ರಧಾನ ಕುಟುಂಬ ಎರಡರಲ್ಲೂ ಉದ್ದಕ್ಕೂ ನಡೆಯುತ್ತಲೇ ಬಂದಿರುವಂಥದು;
- ಅವಿಭಕ್ತ ಕುಟುಂಬ ಜಾನಪದಕ್ಕೆ ಹೆಚ್ಚು ಸಹಕಾರಿಯಾಗಿತ್ತು; ಒಡೆದು ಹೋದದ್ದರಿಂದ ಜಾನಪದದ ವಿಘಟನೆ ಆರಂಭವಾಯಿತೆಂದೇ ಹೇಳಬೇಕು; ಸಮುದಾಯ ಜಾನಪದದ ಮೇಲಂತೂ ಈ ವಿಘಟನೆ ದೊಡ್ಡ ಪ್ರಮಾಣದಲ್ಲಿ ಪ್ರಭಾವ ಬೀರಿದೆ; ಪಾರಂಪರಿಕ ವೃತ್ತಿ ಜಾನಪದಕ್ಕಂತೂ ಇದು ಪರಿಣಾಮಕಾರಿ; ನಾಟಕಗಳು, ಗೊಂಬೆಯಾಟಗಳು ಮುಂತಾದವುಗಳು ನಶಿಸಿಹೋಗುತ್ತಿರುವುದುಕ್ಕೆ ಈ ವಿಘಟನೆಯೇ ಕಾರಣ; ಒಡೆದು ಹೋಗುತ್ತಿರುವ ವ್ಯವಸ್ಥೆ ಜಾನಪದದ ಒಡಕಿಗೆ ಖಂಡಿತಾ ಕಾರಣವಾಗಿದೆ;
- 'ಕುಟುಂಬ' ಎಂದರೆ 'ಗೃಹಿಣಿ' ಎಂದೇ ಅರ್ಥ; *ಪ್ರ:* 'ನಿಮ್ಮ ಫ್ಯಾಮಿಲಿಯನ್ನು ಕರೆದುಕೊಂಡು ಬನ್ನಿ'; ಇಲ್ಲಿ 'ಫ್ಯಾಮಿಲಿ' ಎಂದರೆ 'ಹೆಂಡತಿ' ಎಂದೇ ಅರ್ಥ;
- 'ಕುಟುಂಬಸ್ಥ' ಎಂದರೆ ಮದುವೆಯಾದವ ಎಂದು ಅರ್ಥ, ಅವನ ಹೆಂಡತಿಗೆ ಅದು ಅನ್ವಯ.

ಕುಟುಕು/ಕುಟಿಕೆ kuṭuku/kuṭike :

- ತುತ್ತು; ಒಂದು ಸಲ ಬಾಯಿ ತುಂಬ ಹಾಕಿಕೊಳ್ಳುವಷ್ಟು ಆಹಾರ; ಪಕ್ಷಿಗಳು ತಮ್ಮ ಮರಿಗಳಿಗೆ ಚಂಚುದಿಂದ ಕೊಡುವ ಕ್ರಮ; *ಪ್ರ:* 'ಪಕ್ಷಿಗಳು ಗುಟುಕು ಆಹಾರವನ್ನು ತನ್ನ ಮರಿಗಳಿಗೆ ಕೊಡುತ್ತವೆ'; ಕುಟುಕು>ಗುಟುಕು(ಕ>ಗ);

  Morsel; That is a small piece of mouthful food; . A birds feed for their chicks with their bills beaks;
- ಒಂದು ಸಲ ಕುಡಿಯುವಷ್ಟು ದ್ರವ ಪದಾರ್ಥ;
- ಕುಕ್ಕು; ಚುಚ್ಚು; *ಪ್ರ:* 'ಕೊತ್ತಿ ಬಡಕ್ನೋಡಿ ಕೋಳಿ ಕಣ್ಣು ಕುಟ್ಕುಕ್ತಂತೆ'*(ಗಾ)*;
- ಗುಳ್ಳೆ; ಕಣ್ಕುಟಿಕೆ; ಕಚ್ಚು; ಕಡಿ;
- *ಪ್ರ:* 'ಸರ್ಪ ಕುಟಕಿದಷ್ಟೇ ಪ್ರಾಣ ಹೋಯ್ತಂತೆ';
- ಹೆಂಗಸರ ಚಿಕ್ಕ ಕರ್ಣಾಭರಣ;
- ತೆಲುಗಿನ ಗುಟಕ/ಗುಟುಕು ಪದಗಳು(ತು.ನಿ) ಕನ್ನಡದಿಂದ ಬೇರೆಯಾಗಿಲ್ಲದಿದ್ದರೂ, ಆದ್ಯಕ್ಷರ 'ಕ'>'ಗ' ಆಗಿರುವುದು ಗಮನಾರ್ಹ.
- **—*ಕುಟುಕು ಜೀವ*** : ಸಣ್ಣಜೀವ; ಎಳೆ ಜೀವ; ಅರೆಜೀವ; ಈಗಲೋ ಆಗಲೋ ಹಾರಿ ಹೋಗಲಿರುವ ಜೀವ(ಮ.ನು.ಕೋ); ಪ್ರಾಣೋತ್ಕ್ರಮಣಸ್ಥಿತಿ. A state of being half dead or supposed to be dead within a short /limit of time.

ಕುಟುಕುಟಿ kuṭukuṭi :

- ಉತ್ತರ ಕನ್ನಡ ಭಾಗದ ಹರಳಾಟದಲ್ಲಿನ ಒಂದು ಪ್ರಕಾರ; ಒಂದು ಹರಳನ್ನು ಮೇಲಕ್ಕೆ ಹಾರಿಸಿ ಉಳಿದವುಗಳನ್ನು ನೆಲದ ಮೇಲೆ ಹರಡುವುದು; ಮೇಲಿನ ಹರಳನ್ನು ಕೈಯಲ್ಲಿ ಹಿಡಿಯಬೇಕು; ಮತ್ತೆ

ಹರಳನ್ನು ಮೇಲಕ್ಕೆ ಹಾರಿಸಿ ಅದು ಕೆಳಗೆ ಬೀಳುವುದರೊಳಗೆ ಒಂದು ಹರಳು ಎತ್ತಿ ನೆಲಕ್ಕೆ ಕುಟ್ಟಿ ಇಟ್ಟು ಮೇಲಿನ ಹರಳನ್ನು ಹಿಡಿಯುವುದು; ಹೀಗೆ ಉಳಿದ ಹರಳುಗಳನ್ನು ಒಂದೊಂದೇ ಕುಟ್ಟಿಕುಟ್ಟಿ ಇಡಬೇಕು; ಕುಟ್ಟುವಾಗ ಅವನ್ನು ಒಂದೆಡೆ ತಂದಿಟ್ಟುಕೊಂಡು ಕೊನೆಗೆ ಎಲ್ಲವನ್ನು ಒಟ್ಟಿಗೆ ಕೈಗೆ ಎತ್ತಿಕೊಂಡು ಮೇಲೆ ಹಾರಿಸಿದ ಹರಳನ್ನು ಹಿಡಿಯಬೇಕು; ಆಟ ಹೀಗೆ ಮುಂದುವರೆಯುವುದು; ಅಣ್ಣೆಕಲ್ಲಾಟವನ್ನು ಹೋಲುತ್ತದೆ(ಉ.ಕ). A solid rock/stone crystal play used to play by spinning upward;

- ಮೊಟ್ಟಮೊದಲ ಬಾರಿಗೆ 'ರಾಯಲ್ ಎನ್ ಫೀಲ್ಡ್'(ಬುಲೆಟ್) ರಸ್ತೆಗಿಳಿದಾಗ, ಅದರ ಶಬ್ದವನ್ನು ನಮ್ಮ ಹಳ್ಳಿಯ ಜನ ಗ್ರಹಿಸಿ ಅದನ್ನು 'ಕುಟಿಕುಟಿ/ಕೊಟೆಕೊಟೆ' ಎಂದು ಕರೆಯುತ್ತಿದ್ದರು; ಅದರ ಶಬ್ದವನ್ನು ತೀವ್ರವಾಗಿ ಗಮನಿಸಿದರೆ ಈ ಶಬ್ದ ಹಾಗೆಯೇ ಗ್ರಹಿಕೆಗೆ ಬರುತ್ತದೆ; ಒಂದು ಹೊಸ ಪದಾರ್ಥ ಮಾರುಕಟ್ಟೆಗೆ ಬಂದಾಗ, ಅದರ ಹೆಸರು ಗೊತ್ತಿಲ್ಲದೆ, ಗೊತ್ತಿದ್ದರೂ ಹೇಳಲಿಕ್ಕೆ ಬರದಿದ್ದಾಗ, ಜನ ಆ ಶಬ್ದವನ್ನೆ ಗ್ರಹಿಸಿ ಹೇಳುತ್ತಿದ್ದುದು ವಾಡಿಕೆ; ಒಂದು ಭಾಷೆಯಲ್ಲಿ ಹೊಸ ಪದಗಳು ಹೇಗೆ ಸೃಷ್ಟಿಯಾಗುತ್ತವೆ ಎಂಬುವುದಕ್ಕೆ ಈ ಕುಟಿಕುಟಿ/ ಕೊಟೆಕೊಟೆ ಒಳ್ಳೆಯ ನಿದರ್ಶನ.

ಕುಟುಗಣ್ಣ kuṭugaṇṇa :

ಅಕ್ಕಸಾಲಿಗ; ವಾಜಗಾರರು; ಚಿನ್ನಬೆಳ್ಳಿ ತಾಮ್ರವನ್ನು ಕಾಯಿಸಿ ಕುಟ್ಟಿ ಆಭರಣ ತಯಾರಿಸುವುದರಿಂದ ಇವರಿಗೆ 'ಕುಟುಗಣ್ಣ' ಎನ್ನುವರು; ಅನುಕರಣ ಪದವಾಗಿಯೂ ಇದನ್ನು ಸ್ವೀಕರಿಸಬಹುದು. ವ್ಯರೂ : ಊಜ(ತು.ಜಿ). Goldsmith; A person who makes gold ornaments or jewels.

ಕುಟುಗಲು ಮಳೆ kuṭugalu maḷe :

ಅಲ್ಲೊಂದು ಇಲ್ಲೊಂದು ಸಣ್ಣ ಹನಿ ಬೀಳುವ ಮಳೆ; ಬಿಳಿಮೋಡ ಮುಸುಗಿದ ವಾತಾವರಣದಲ್ಲಿ ಎಡೆ ಬಿಡದೆ ಬೀಳುವ ಸಣ್ಣ ಮಳೆ; ಈ ಮಳೆ ಹಿಡಿದಾಗ ದನಕರುಗಳಿಗೆ ಮೇವು ಇಲ್ಲದಂತಾಗುವುದು; ಕೊಟ್ಟಿಗೆಯಲ್ಲಿಯೇ ಇರುವುದರಿಂದ ಜಾನುವಾರುಗಳಿಗೆ ಅನೇಕ ರೋಗಗಳು ಕಾಡುವ ಭೀತಿ ಇರುತ್ತದೆ; ವಾಯುಭಾರ ಕುಸಿತ, ಚಂಡಮಾರುತದ ಸಂದರ್ಭದಲ್ಲಿಯೂ ಈ ಮಳೆ ಉಂಟಾಗುವುದು; ಇದರಿಂದ ಜನಜೀವನದಲ್ಲಿಯೂ ಸಹ ಅಸ್ಥವ್ಯಸ್ಥವಾಗುವುದು; ಇದ್ದಕ್ಕಿದ್ದಂತೆ ಮಳೆ ಆರಂಭವಾಗುವುದು; *ಪ್ರ:* 'ಲೊಟಗುಡುವ ಅತ್ತೆ ಬೇಡ ಕುಟುಗಲು ಮಳೆ ಬೇಡ'*(ಗಾ).* Drizzling rain; A light rain falling in very fine drops.

ಕುಟುಮಯ್ಯ kuṭumayya :

ಮೆತ್ತಗಿನ ಮಾತಿನಲ್ಲಿಯೇ ಕುಟುಕುವ ಗುಣ ಹೊಂದಿರುವ ವ್ಯಕ್ತಿ(ಮೈ.ಜಿ). A person who stings or prick silently.

ಕುಟುರು kuṭuru :

- ಪಾರಿವಾಳ ಮೊದಲಾದ ಪಕ್ಷಿಗಳ ಕೂಗು; Sounding of pigeons, Doves;
- ಎತ್ತು ಅಥವಾ ಹೋರಿ ಚೆನ್ನಾಗಿ ತಿಂದು ತೇಗುವುದು; *ಪ್ರ:* 'ಮೃಗಶಿರ ಮಳೆ ಬಿದ್ದರೆ ಮುದಿಯೆತ್ತೂ ಗುಟುರು ಹಾಕುತ್ತದೆ'(ಗಾ);
- ಉಬ್ಬಿದ ಕೆನ್ನೆ; ಕೆನ್ನೆಯ ಮೇಲ್ಭಾಗ ಉಬ್ಬಿರುವುದು; *ಪ್ರ:* 'ತಿಂದೂ ತಿಂದೂ ಕುಟುರು ಬಂದಿದೆ ನೋಡು'. ತೆಲುಗಿನಲ್ಲಿ 'ಗೋಣ್ಟು' ಪದವಿದೆ; ಕ>ಗ ಆಗಿರುವುದಲ್ಲದೆ ಟ>ಡ ಆಗಿದೆ, ಮೇಲಾಗಿ ಅನುನಾಸಿಕ ಬಂದಿದೆ; ಕನ್ನಡದ ಸಂವಾದಿ ಪದಗಳಾಗಿ ತುಳು ಮತ್ತು ಕೊಡಗು ಭಾಷೆಗಳಲ್ಲಿ ಕ್ರಮವಾಗಿ 'ಕುಟ್ರು' ಮತ್ತು 'ಗುಟೆರ್' ಪದಗಳಿವೆ; ಕ>ಗ ಆಗಿರುವುದು ಗಮನಕ್ಕೆ ಬಂದಿದೆ;
- ***—ಕುಟುರು ಹಾಕು/ಗುಟುರು ಹಾಕು*** : ಹೋರಿ/ದನ ಬೆದೆಗೆ ಬಂದಾಗ ಸಂಭೋಗಕ್ಕೆ ಕರೆಯುವ ಧ್ವನಿ(ಮಂ.ಜಿ). A call for sex; Bull's voice/ call for sexual inter course/to have sex.

ಕುಟುವ kuṭuva :

ಬುಡಬುಡಿಕೆಯವನು; ಅಲೆಮಾರಿ ಗುಂಪಿಗೆ ಸೇರಿದವನು; ಇವನು ನುಡಿಸುವ ವಾದ್ಯ ಡಮರುನಂತೆ ಇರುವ ಸಣ್ಣದಾದ ಬುಡುಬುಡಿಕೆ; ಅಮವಾಸ್ಯೆ, ಹುಣ್ಣಿಮೆಯಲ್ಲಿ ಹುಟ್ಟಿದ 'ನಿರವಾಣ' ದಲ್ಲಿ ಸ್ಮಶಾನದಲ್ಲಿ ಪೂಜೆ ಮಾಡಿ ಅಲ್ಲಿ ಶಕುನದ ಹಕ್ಕಿ ಹೇಳಿದ ಭವಿಷ್ಯದ ನುಡಿಯನ್ನು ಮರುದಿನ ಜನರಿಗೆ

ತಿಳಿಸಿ ಅವರಿಂದ ಕಾಣಿಕೆ ಪಡೆಯುವ ಅಲೆಮಾರಿ (ಹಾ.ಜಿ); ಪರೂ: ಬುಡುಬುಡಿಕಯ್ಯ. A gypsy; A person who has a thing that rattles A tool: Holding between fingers saying something effortlessly and quickly by rattling; a thing consisting of a container filled with small pellets.

ಕುಟ್ಕುಟಿ kuṭkuṭi :

- ಜೂಜಿನ ಆಟದ ಒಂದು ಬಗೆ; ಹಣ, ಆಭರಣ ಹೀಗೆ ಯಾವುದಾದರೊಂದು ಬೆಲೆ ಬಾಳುವ ವಸ್ತುವನ್ನು ಪಣವಿಟ್ಟು ಆಟ ಆಡುವುದು(ಉ.ಕ). A kind of gambling; A play of chance of money a betting;
- ಕುಟುಕುಟಿ>ಕಟ್ಕುಟಿ; ಅನುಕರಣ ಶಬ್ದ; ಶಬ್ದದ ಅನುಕರಣೆಯೇ ನಾಮವಾಚಿಯಾಗಿ ದ್ವಿಚಕ್ರವಾಹನಗಳಿಗೆ ಹೆಸರಾಯಿತು; 'ಸ್ಕೂಟರ್'ಗೆ ಪರ್ಯಾಯವಾಗಿ ಬಳಕೆಯಲ್ಲಿತ್ತು; ***ನೋಡಿ:*** ಕುಟುಕುಟಿ; ಪ್ರ: 'ಕಟ್ಕುಟಿ ಬತ್ತು, ಬಂದ್ರಲಾ ನೋಡುವಾ'.

ಕುಟ್ಗಿ/ಕುಟಗೆ kuṭgi/kuṭage :

ಹುಲ್ಲಿನಿಂದ ಮಾಡಿದ ಧಾನ್ಯ ಸಂಗ್ರಹಣೆಯ ಮೂಟೆ; ಮಳೆಗಾಲದಲ್ಲಿ ಉಪಯೋಗಿಸಲೆಂದು ಕೆಲವು ಆಹಾರ ಪದಾರ್ಥಗಳನ್ನು ಹುಲ್ಲಿನ ಮೂಟೆಗಳಲ್ಲಿ ಭದ್ರವಾಗಿ ಇಡಲಾಗುವುದು; ಮಳೆ, ಚಳಿಯಿಂದ ರಕ್ಷಿಸಿ ಆವಶ್ಯಕತೆ ಇದ್ದಾಗ ತಿನ್ನಲು ಬಳಕೆ(ಉ.ಕ.ಜಿ). A bundle or a package sacks made up of dry grass to pack up grains.

ಕುಟ್ಟ ಹಿಡ್ಡಿವ kuṭṭa hiḍdiva :

ಕೆಟ್ಟವ; ಎಲ್ಲ ದುಷ್ಟ ಚಟಗಳನ್ನು ಹೊಂದಿದ್ದವನು; (ಉ.ಕ.ಜಿ). A person who has bad hobbies

ಕುಟ್ಟಕ್ಕಿ ಮುಂಡು kuṭṭakki munḍu :

ಕಾರದ ಮುಂಡು ಎನ್ನುವರು; ಒರಳಿನಲ್ಲಿ ಸಾಂಬಾರ ಪದಾರ್ಥಗಳು, ಕಾರದ ಪುಡಿಯನ್ನು ಕೈನಲ್ಲಿ ಕುಟ್ಟಲು ಬಳಕೆ; ಸುಮಾರು ೨-೩ ಅಡಿ ಉದ್ದದ ೩-೪ ಇಂಚು ವ್ಯಾಸದ ಮರದ ತುಂಡು; ಇದಕ್ಕೆ ತುದಿಯಲ್ಲಿ ಬಳೆ ಅಳವಡಿಸುವುದಿಲ್ಲ(ಚಾ.ಜಿ). A wooden tool of cylindric structure which has used to powder spices in grinding stone.

ಕುಟ್ಟಗ/ಕಟ್ಟುಹಿಡಿ kuṭṭaga/kuṭṭuhiḍi :

ಪಕ್ಕೆಯಲ್ಲಿ ಕುಟ್ಟಿದಂತೆ ಆಗುವ ಒಂದು ವಿಧದ ವೇದನೆ; ಹೊಟ್ಟೆನೋವು; ಕರುಳು ಹಿಸುಕಿದಂತಾದ ನೋವು(ಚಿ.ಪ.ಕೋ.,ಕಲ.ಜಿ). A stomach pain.

ಕುಟ್ಟಚೊಳ್ಕ್ಯ kuṭṭacoḷkya :

ಗೋಸುಂಬೆ : ಶತ್ರುಗಳಿಂದ ತನ್ನ ತಾನು ರಕ್ಷಿಸಿಕೊಳ್ಳಲು ಬೇಕೆಂದಾಗ ತನ್ನ ಮೈ ಬಣ್ಣ ಬದಲಾಯಿಸಿಕೊಳ್ಳುವಂಥದು; ಮಾನವ ತನ್ನ ಸ್ವಭಾವ ಗುಣವನ್ನು ಗಂಟೆಗೊಮ್ಮೆ ಬದಲಾಯಿಸಿಕೊಳ್ಳುವ ವ್ಯಕ್ತಿತ್ವ ಹೊಂದಿದ್ದರೆ ಆತನನ್ನು ಗೋಸುಂಬೆ ಎನ್ನುವರು. A person who has changing the nature of chameleon.

ಕುಟ್ಟಚ್ಚಿ ಓಡು kuṭṭacci ōḍu :

ಹಿಂದೆ ನೋಡದೆ ಓಡು(ಮಂ.ಜಿ). To run without looking back.

ಕುಟ್ಟತಿ kuṭṭati :

ಕುಳ್ಳಿ; ಕಡಿಮೆ ಎತ್ತರ ಹೊಂದಿರುವವಳು(ಕೊಡ.ಜಿ). A dwarf woman; a short woman.

ಕುಟ್ಟದಮ್ಮ kuṭṭadamma :

- ಬೆಟ್ಟಕುರುಬರ ಅಧಿದೇವತೆ; A goodness of hill Sheppard's community.
- ಕೊಡಗಿನ ದಕ್ಷಿಣ ಭಾಗದ ಗಡಿಯಲ್ಲಿರುವ ಕುಟ್ಟ ಎಂಬ ಗ್ರಾಮದಲ್ಲಿ ವಾಸವಾಗಿದ್ದುದರಿಂದ ಕುಟ್ಟದಮ್ಮ ಎಂದು ಕರೆಯುತ್ತಾರೆ;
- ಕರುಂಗಾಳಿ(ಕರಿಕಾಳಿ) ಎಂದೇ ಪ್ರಸಿದ್ಧಳು;
- ಕೊಡಗಿನ ಎಲ್ಲಾ ಸಮುದಾಯಗಳೂ ಈ ದೇವತೆಯನ್ನು ಪೂಜಿಸುತ್ತಾರೆ;
- ಹಲವು ಕಾಯಿಲೆ, ಕಷ್ಟಗಳಿಗೆ, ಬಂಜೆತನಕ್ಕೆ ಮಕ್ಕಳಿಗೆಸಂಬಂಧಪಟ್ಟ ಕಾಯಿಲೆಗೂ ಈ ದೇವತೆಗೆ ಹರಕೆ ಕಟ್ಟಿ ಪೂಜೆ ಸಲ್ಲಿಸುತ್ತಾರೆ(ಕೊ.ಜಿ.).

ಕುಟ್ಟಾಣಿ೧ kuṭṭāṇi[1] :

ಪ್ರಾಚೀನ ಕಾಲದ ಕೊರಳಿನ ಆಭರಣ; ಶ್ರೇಷ್ಠ ಎಂಬ ಅರ್ಥವನ್ನು ಹೊಂದಿದೆ; ಏಳು ಎಳೆಯಲ್ಲಿದ್ದದ್ದು

'ಏಳೆ' ಕುಟ್ಟಾಣಿ ಸರ; ಕಾಳು ಮೆಣಸಿನ ಗಾತ್ರದ ಗುಂಡುಗಳಿಂದ ರಚಿತ; ಇದರ ಪ್ರತಿ ಎಳೆಯ ಮಧ್ಯ ಒಂದು ಹೃದಯಾಕಾರದ ಪುಟ್ಟ ಚಿನ್ನದ ಪದಕವಿರುತ್ತದೆ; ಅದರ ಅಂಚಿನಲ್ಲಿ ಸಣ್ಣ ಮತ್ತು ಮಧ್ಯದಲ್ಲಿ ಕೆಂಪು ಹರಳುಗಳಿದ್ದು ಪ್ರತಿ ಎಳೆಗಳು ಒಂದಕ್ಕಿಂತ ಒಂದು ಎಳೆ ದೊಡ್ಡದಾಗುತ್ತಾ ಹೋಗುವುದು; ಮೊದಲ ಎಳೆ ಎದೆ ಮಟ್ಟ ಇದ್ದರೆ ಕೊನೆ ಎಳೆ ಸೊಂಟದ ಡಾಬಿನ ತನಕ ಇರುತ್ತದೆ; ಎಲ್ಲ ಎಳೆಗಳನ್ನು ಮೋಪಿನಂತಿರುವ ಚಿನ್ನದ ತಗಡಿಗೆ ಜೋಡಿಸಿರಲಾಗಿರುತ್ತದೆ(ಚಿಕ್ಕ.ಜಿ, ಹಾ.ಜಿ). An ancient jewel- a necklace; It has the meaning of purity or holiness.

ಕುಟ್ಟಾಣಿ೨ kuṭṭāṇi[2] :

ಮಧ್ಯೆ ಗುಳಿಯಿರುವ ಕಲ್ಲು ಅಥವಾ ಕಬ್ಬಿಣದ ಸಲಕರಣೆ; ಕುಟ್ಟುವ ಸಣ್ಣದಾದ ತುಂಡಿರುವುದು; ಅಡಿಕೆ ಹೋಳು ಎಲೆ ಸುಣ್ಣವನ್ನು ಇದರ ಗುಳಿಯಲ್ಲಿ ಹಾಕಿ ಸಣ್ಣಗೆ ಹುಡಿಯಾಗುವಂತೆ ಕಟ್ಟುವರು; ಹಲ್ಲಿಲ್ಲದ ವೃದ್ಧರು ಸದಾ ತಮ್ಮ ಬಳಿಯಲ್ಲಿ ಈ ಕುಟ್ಟುವ ಸಾಧನವನ್ನು ಇಟ್ಟುಕೊಳ್ಳುತ್ತಿದ್ದರು; ಪುಟ್ಟ ಬಟ್ಟಲು ಮತ್ತು ಕುಟ್ಟುವ ಸಲಕರಣೆಗಳಿಗೆ ದಾರ ಅಥವಾ ಸಣ್ಣ ಚೈನು ಸೇರಿಸಿ ಅವು ಬೇರೆಯಾಗದಂತೆ ಇಡುತ್ತಿದ್ದರು; ತಮ್ಮ ಮನೆಯಿಂದ ಹೊರಗೆ ಒಂದೆರಡು ದಿನದ ಮಟ್ಟಿಗೆ ಹೋಗಬೇಕಾದಾಗ ತಮ್ಮ ಹೆಗಲ ಮೇಲೆ ದಾರದಿಂದ ಕಟ್ಟಿದ ಕುಟ್ಟಾಣಿಯನ್ನು ತೂಗು ಹಾಕಿಕೊಂಡು ಹೋಗುವುದು ಸಾಮಾನ್ಯವಾಗಿತ್ತು; ಕಟ್ಟೆರಳು/ ಕುಟ್ಟುವಕಲ್ಲು/ಕುಟ್ಟೊರಳು, ಕುಟ್ಟಣಿ ಇತ್ಯಾದಿ ಹೆಸರಿನಿಂದ ಗುರುತಿಸಿಕೊಂಡಿದೆ. *ಪ್ರ:* 'ಅಜ್ಜನಿಗೆ ಕುಟ್ಟಾಣಿಯಲ್ಲಿ ಎಲೆ ಅಡಿಕೆ ಕುಟ್ಟಿಕೊಡು'. Pestle; A tool to grind or stamping betel leaf, areca nut and lime with small metal tool with rounded end. It is used by the teeth less grandparents who have the habit of chewing bêtel and areca nut.

ಕುಟ್ಟಿ ಚಾಮರ kuṭṭi cāmara :

ಯಕ್ಷಗಾನದಲ್ಲಿ ರಾಕ್ಷಸ ಪಾತ್ರಗಳು ಧರಿಸುವ ಬಟ್ಟಲು ಆಕಾರದ ಕಿರೀಟ(ದ.ಕ.ಜಿ). crown; A bowl shaped crown used to tie in Yakshagana for demon characters.

ಕುಟ್ಟಿ ಮರ kuṭṭi mara :

ಕಂಬಳದಲ್ಲಿ ಓಟದ ಕೋಣಗಳೆರಡು ಸಮಾನವಾಗಿ ಒಂದೇ ಅಂತರದಲ್ಲಿ ಓಡಲು ಅಭ್ಯಾಸವಾಗುವಂತೆ ಒಂದು ಕೋಣ ಮತ್ತೊಂದು ಕೋಣದ ಕೊಂಬಿಗೆ ಕಟ್ಟಲು ಉಪಯೋಗಿಸುವ ಮರದ ಕೋಲು (ಮಂ.ಜಿ). A wooden stick that is Used in the race of buffalo to equalize the running buffaloes by tying horns of buffaloes.

ಕುಟ್ಟಿ೧ kuṭṭi[1] :

- ಒಂದು ಜಾತಿಯ ಭತ್ತದ ತಳಿ; ಸಣ್ಣ ಭತ್ತ; A paddy breed.
- ಚಿಕ್ಕಗೂಟ; ಬೆಣೆ; ಆಯದ ಗೂಟ; A small peg;
- ಒಂದು ಹೊರಾಂಗಣ ಆಟ; ಕುಟ್ಟಿದೊಣ್ಣೆ; ಕುಟ್ಟಿ ಆಟದಲ್ಲಿ ಉಪಯೋಗಿಸುವ ಸುಮಾರು ೩–೪ ಇಂಚು ಉದ್ದದ ಕಡ್ಡಿ ಅಥವಾ ಮರದ ತುಂಡು; ತುದಿಗಳು ಚೂಪಾಗಿರುವುದು; An outdoor game;
- ಚಿಕ್ಕಮಗು; ಹಸುಗೂಸು;
- ಗಿಡ್ಡವಾದ; ಚಿಕ್ಕ; ಕುಳ್ಳಗಿನ(ತು.ನಿ);
- ಒಂದು ಕ್ಷುದ್ರ(ಕುಳ್ಳ) ದೇವತೆ; ತ: ಕುಟ್ಟಮ್, ಮ: ಕುಟ್ಟನ್;
- ***—ಕುಟ್ಟಿದೊಣೆ*** : ಚಿಣ್ಣಿದಾಂಡು ಆಟ; ಚಿಣ್ಣಿ ಸಣ್ಣದಾದ ಮರದ ತುಂಡು; ದಾಂಡು ಇದನ್ನು ಹೊಡೆಯುವ ದೊಡ್ಡದಾದ ಮರದ ಕೋಲು; ಇವೆರಡನ್ನು ಬಳಸಿ ಆಡುವ ಹೊರಾಂಗಣ ಆಟ; (ಮಂ.ಜಿ); A play of two wood piece tipcat; A game in which a small piece of wood tapered at both ends. It is struck at one end with a stick, so as to spring up and is then knocked away by the same player.
- ***—ಕುಟ್ಟಿಕೋಲು*** : ಗಿಡ್ಡಕೋಲು; ಕುಟ್ಟಿ ದೊಣ್ಣೆ ಆಟದಲ್ಲಿ ಬಳಸುವ ಕೋಲು(ಉ.ಕ). A stick used in tipcat;
- ***—ಕುಟ್ಟಿಹಾಕು*** : ಅಡಿಕೆ ಗಿಡ ನೆಡಲು ಹಾಕುವ ಗುರುತು(ದ.ಕ.ಜಿ). A mark for areca planting;

- **—ಕುಟ್ಟಿ ಬಳ್ಳ್** : ಆಯಾ ಪೂಜೆ ಅಥವಾ ಕಟ್ಟಡಕ್ಕೆ ಪಂಚಾಂಗ ಹಾಕುವಾಗ ಮಾಡುವ ಆಚರಣೆ; ಆಯಾ ಬರೆದ ಜಾಗದಲ್ಲಿ ನೆಟ್ಟ ಗೂಟಕ್ಕೆ ಹಾಕುವ ಹಗ್ಗ(ದ.ಕ). A practice building foundation; Celebrating worship of building foundation in accordance with calendar of astrology;
- **—ಕುಟ್ಟಿ ಹಾಕುವುದು** : ಮನೆ ಕಟ್ಟಲು ಆಯಕ್ಕನುಗುಣವಾಗಿ ಗೂಟ ಹಾಕುವುದು; Stumped peg in accordance with foundation skirting;
- **—ಕುಟ್ಟಿಮನೆ/ಕುಟ್ಟಿಕೋಣೆ** : ದವಸಧಾನ್ಯ ತುಂಬುವ ಕಣಜದಂತಹ ಚಿಕ್ಕಕೋಣೆ; ಕಿಟಕಿಗಳಿಲ್ಲದೆ ಗಾಳಿ ಬೆಳಕು ಸರಿಯಾಗಿಲ್ಲದ ಕತ್ತಲಕೋಣೆ; ಇಲ್ಲಿ ಬೆಲೆ ಬಾಳುವ ವಸ್ತುಗಳನ್ನು ಇಡುವರು(ಉಕ.ಜಿ). A small room for filling grains cereals which resemble granary, or barn;
- **—ಕುಟ್ಟಿ ಕಾಯಿಮ್ಮೆ** : ಭತ್ತದ ಒಂದು ಹೆಸರು; ನೋಡಲು ಚಿಕ್ಕದಾಗಿದ್ದು ಉದ್ದ ಕಡಿಮೆಯಿದ್ದು ವೃತ್ತಾಕಾರದಲ್ಲಿರುವುದು; ಕಾರ್ ತಿಂಗಳ ಬೆಳೆಯಾಗಿ ಕೆಸರು ಗದ್ದೆಯಲ್ಲಿ ಬೆಳೆಯುವುದುಂಟು; ಬಿತ್ತನೆ ನಂತರ ಆರು ತಿಂಗಳಲ್ಲಿ ಫಸಲು; ಇದರಿಂದ 'ಬೆಳ್ತಿಗೆ' ಮತ್ತು 'ಕೊಚ್ಚಲು ಅಕ್ಕಿ' ತಯಾರಿಸುವರು; A name of paddy.
- **—ಕುಟ್ಟಿಕುಟ್ಟಿ** : ಭತ್ತವನ್ನು ಸರಿಯಾಗಿ ಒಣಗಿಸದೆ ಹಸಿ ಭತ್ತವನ್ನು ಕುಟ್ಟಿದಾಗ ಅಕ್ಕಿಯಲ್ಲಿ ತೇವಾಂಶವಿದ್ದರೆ ಉಂಟಾಗುವ ಹುಳು(ಮಂ.ಜಿ). A worm of paddy; A worm of paddy appeared due to its rawness which stamping.

ಕುಟ್ಟಿ[2] kutti[2] :

ರುಬ್ಬಲು ಅನುಕೂಲವಾಗುವಂತೆ ರುಬ್ಬುವ ಕಲ್ಲಿನ ಗುಂಡು ಅಥವಾ ರುಬ್ಬುವ ಭಾಗಕ್ಕೆ ಹೊಡೆದ ಮರದ ಗೂಟ; A wooden wedge that sticked to grinding stone to roll it;

—ಕುಟ್ಟಿಕಲ್ಲು : ವೀಳ್ಯದೆಲೆ, ಔಷಧಿಯ ಸಸ್ಯ ಇತ್ಯಾದಿಯನ್ನು ಜಜ್ಜಲು, ನೆಲವನ್ನು ನುಣುಪುಗೊಳಿಸಲು ಬಳಸುವ ಚಿಕ್ಕಕಲ್ಲು. A small stone used to stamping/crush betel leaves and medicinal leaves.

ಕುಟ್ಟು[1] kuṭṭu[1] :

- ಪುಡಿಮಾಡು; ಒನಕೆಯಿಂದ ಭತ್ತ, ರಾಗಿ, ಜೋಳ, ನವಣೆ ಇತ್ಯಾದಿ ದ್ವಿದಳ ಧಾನ್ಯಗಳ ಹೊಟ್ಟು ತೆಗೆಯುವುದು; ಈ ಕ್ರಿಯೆಯನ್ನು ಥಳಿಸುವುದು ಎಂದು ಕರೆಯುವರು; ಇಲ್ಲಿ ಸ್ತ್ರೀ ಪುರುಷರಿಬ್ಬರೂ ಭಾಗಿ; ಕುಟ್ಟಲು ಒರಳು, ಒನಕೆ, ಕುಂದಿಲಿಗೆ, ಮೊರ ಪ್ರಮುಖ ಸಾಧನ; ಇಬ್ಬರಿಂದ ಐದು ಮಂದಿಯ ಆವಶ್ಯಕತೆ ಇದ್ದು ಇಬ್ಬರು ಕುಟ್ಟಿದರೆ ಒರಳಿನ ಕಾಳು ಒಳಗೆ ದಬ್ಬಲು ಇಬ್ಬರು ಕುಳಿತುಕೊಳ್ಳುವರು; ಇಲ್ಲಿ ಕುಟ್ಟುವುದೇ ಮುಖ್ಯ ಕ್ರಿಯೆ; ದಣಿವು ನಿವಾರಣೆಗಾಗಿ ಹಾಡು ಹಾಡುವರು; *ಪ್ರ:* 'ಕುಟ್ಟೋ ಭತ್ತ ಬಿಟ್ಟು ಹುಟ್ಟೋ ಶಾಟ ಕಿತ್ತಂತೆ'*(ಗಾ)*; A pestle that a heavy wooden tool with a rounded end used for crushing or grinding paddy millet, cereals grains etc.
- **—ಕುಟ್ಟುಪದ** : ಕುಟ್ಟುವ ಸಂದರ್ಭದಲ್ಲಿ ಹಾಡುವ ಹಾಡುಗಳು; ಇದರಲ್ಲಿ ಮುಖ್ಯವಾಗಿ ಹೆಣ್ಣಿನ ಮಾನಸಿಕ ಹೊಯ್ದಾಟದ ವೇದನೆ ಸಂವೇದನೆಯಾಗಿ ಹಾಡಿನ ರೂಪ ಪಡೆದಿರುವುದಿದೆ; ಅನುಭವ ನಾದದ ನಾಲಿಗೆಯಲ್ಲಿ ಸ್ವರಗತಿಗಳ ರೂಪದಲ್ಲಿ ಕ್ರಿಯೆ – ಲಯ – ನಾದಗಳ ತ್ರಿಪದಿಯಲ್ಲಿ ಹುಟ್ಟುವ ಹಾಡುಗಳೇ ಕುಟ್ಟುವ ಹಾಡು; ಕುಟ್ಟು ಕುಟ್ಟುತ್ತಲೇ ಹಾಡು ಹಾಡುವಾಗ 'ಸುಯ್ ಸುಯ್' ಕ್ರಿಯೆಯ ಅಲೆಗಳು ಒಟ್ಟುಗೂಡಿ ಸುವ್ವಾಲೆಯಾದದ್ದು ಕುಟ್ಟುವ ಹಾಡುಗಳನ್ನು 'ಸುವ್ವಾಲೆ ಹಾಡುಗಳು' ಎಂದು ಕರೆಯಲು ಕಾರಣವಾಗಿದೆ; ಸುವ್ವಾಲೆ ಹಾಡುಗಳು ಕುಟ್ಟುವ ಕ್ರಿಯೆಯಲ್ಲಿ ಸೃಷ್ಟಿಯಾದರೂ ಮನುಷ್ಯ ಜೀವನದ ಬೇರೆ ಪ್ರಸಂಗಗಳಲ್ಲೂ ಹಾಡುವ ಪರಂಪರೆ ಬೆಳೆದುಬಂದಿದೆ; ಹಾಡು: ಸುವ್ವೀ ಸುವ್ವೀ ಸುವ್ವಾಲೆ... ಸುವ್ವಂತ ಕುಟ್ಯಾರ ಸೊಬತ್ತಬಾಣ್ಯಾರು। ಸುವ್ವಿ ಬಾ ಸುವ್ವಿ ಸುವ್ವಾಲೆ, ಆಕಾಸದ ಮ್ಯಾಲ ಕ್ಯಾಸಕ್ಕಿ ಕುಟ್ಯಾಳ। ಈಸಯ್ನ ಹೆಣತಿ ಗೌರವ್ವೋ ।ಕಾಲೀಗಿ। ಕ್ಯಾಸಕ್ಕಿಯಂತಾ ಕಿರಿಪಿಲ್ಯೋ.. Songs, that sing while stamping grain paddy at grinding stone with pestle;

- **—ಕುಟ್ಟುಬಾಡು** : ಒಳಕಲ್ಲಿನ ಸುತ್ತ ಧಾನ್ಯ ಸಿಡಿಯದಂತೆ ಇಡುವ ದುಂಡು ಆಕಾರದ ಮರದ ಸಾಧನ(ತು.ಜಿ).
- **—ಕುಟ್ಟುವ ಮನೆ** : ಒರಳುಕಲ್ಲನ್ನು ಸ್ಥಿರವಾಗಿ ಒಂದು ಕೋಣೆಯಲ್ಲಿ ನೆಲಕ್ಕೆ ಹುದುಗಿಸಿರುವ ಕೋಣೆ(ಚಿಕ್ಕ.ಜಿ). Small room where grinding stone permanently stucked to ground;
- **—ಕುಟ್ಟುಗೋಲು** : ಉತ್ತರ ಕರ್ನಾಟಕದಲ್ಲಿ ಆಡುವ ಕೋಲಾಟದಲ್ಲಿನ ಒಂದು ಪ್ರಕಾರ; A kind of art which artist play with colour sticks;
- **—ಕುಟ್ಟುಳ್ಳ** : ಅಡಿಕೆಯನ್ನು ಮಾತ್ರ ಕುಟ್ಟಲು ಬಳಕೆ; ಮರದಿಂದ ಮಾಡಿದ ಸಾಧನ; A wooden tool used to crush only areca nuts;
- **—ಕುಟ್ಟೊರಳು** : ಕುಟ್ಟುವ ಒರಳು(ಶಿ.ಜಿ).

ಕುಟ್ಟು[2] kuṭṭu[2] :

- ಏಟು ಹಾಕು; ಚಚ್ಚು; ರಭಸದಿಂದ ಬಡಿ; *ಪ್ರ:* 'ಕಳ್ಳನನ್ನು ಊರಜನ ಕುಟ್ಟಿ ಕೆಡವಿದರು'; Blow by force; pounding force; crush by force;
- ಸದ್ದುಮಾಡು; ತಟ್ಟು; ಹೊಡೆತ; ಪೆಟ್ಟು;
- ತುಕ್ಕು ಹಿಡಿಯುವುದು; ಹುಳ ತಿಂದು ಕೆಟ್ಟು ಹೋಗುವುದು(ದ.ಕ);
- ಸೇಡು; ಮತ್ಸರ; ಹೊಟ್ಟೆಯುರಿ(ಬೀ.ಪ.ಕೋ);
- ಅಜೀರ್ಣ ಮೊದಲಾದವುಗಳಿಂದ ಕರುಳಿನಲ್ಲಾಗುವ ನೋವು; ಕಚ್ಚು ಹಿಡಿದುಕೊಳ್ಳುವುದು;
- ಕಮ್ಮಾರನ ಸುತ್ತಿಗೆ;
- ತೆ: ಕುಟ್ಟು, ತು: ಕುಟ್ಟ್/ಕುಟ್ಟು, ಮ: ಕುಟ್ಟುಗ, ಕೊಡ: ಕುಟ್ಟ್; ಕನ್ನಡ ಪದಗಳಿಗೂ ಉಳಿದ ಸೋದರ ಭಾಷೆಗಳಿಗೂ ವ್ಯತ್ಯಾಸವೇನೂ ಇಲ್ಲ.

ಕುಟ್ಟುಂಡೆ kuṭṭuṇḍe :

- ಅಕ್ಕಿಯನ್ನು ಹುರಿದು ಅದಕ್ಕೆ ಉದ್ದು, ಮೆಣಸಿನಕಾಯಿ, ಉಪ್ಪು ಸೇರಿಸಿ ಒರಳಿನಲ್ಲಿ ಕುಟ್ಟಿ ತಯಾರಿಸಿದ ಪುಡಿ; ಆಹಾರದಲ್ಲಿ ಬಳಕೆ (ಮ.ನು.ಕೋ); A spherical snacks made up of rice chilly, salt;
- ಹುಣಸೇ ಹಣ್ಣಿಗೆ ಉಪ್ಪು, ಖಾರ, ಜೀರಿಗೆ ಬೆರೆಸಿ ಒರಳಿನಲ್ಲಿ ಕುಟ್ಟಿ ಪುಡಿ ಮಾಡಿದ ಉಂಡೆ(ಚಿಕ್ಕ.ಜಿ). A spherical tamarind edible snacks.

ಕುಟ್ಟು ಜಪ್ಲಿ kuṭṭu japli :

ಮೀನಿನ ಒಂದು ವಿಧ; ಮೈಮೇಲೆ ಸಣ್ಣ ಸಣ್ಣ ಸಿಪ್ಪೆಯನ್ನು ಹೊಂದಿದ್ದು ಸುಮಾರು ಒಂದು ಕೆ.ಜಿ. ಯಷ್ಟು ತೂಕವಿರುವ ಮೀನು. A kind of fish weighed one kg having small grills fins.

ಕುಟ್ಟು ಸೀರೆ kuṭṭu sīre :

ಒಡಲಿಗೆ ಬೇರೆ ಬಣ್ಣದ ದಾರ, ಅಂಚಿಗೆ ಬೇರೆ ಬಣ್ಣದ ದಾರ ಅಥವಾ ಜರಿ ಹಾಕಿ ನೇಯುವ ಸೀರೆ(ಚಿತ್ರ.ಜಿ). A kind of saree which has been weaved in different coloured threads at three parts.

ಕುಟ್ಟೆ[1] kuṭṭe[1] :

- ಆಡಿನ ಅಥವಾ ಕುರಿಯ ಗಂಡು ಮರಿ; ಟಗರು; ಹೋತ(ತು.ನಿ); A ram/Billy goat;
- ಮರವನ್ನು ಕೊರೆದು ಪುಡಿ ಮಾಡುವ ಹುಳು; ಕುಟ್ಟೆಹುಳು; An insect which rig the tree ;
- ಅಕ್ಕಿಯಲ್ಲಿ ಕಂಡುಬರುವ ಹುಳು; ವಾಟುಳು; A warm that appear in rice;
- **—ಕುಟ್ಟೆಗೊಬ್ಬರ** : ಕೊಳೆತ ಪದಾರ್ಥಗಳನ್ನು ಒಣಗಿಸಿ ಪುಡಿ ಮಾಡಿದ ಗೊಬ್ಬರ(ತು.ನಿ); A fertilize manufactured by filthy or dirty article;
- **—ಕುಟ್ಟೆ ಹುಡಿ** : ಕುಟ್ಟೆ ಹುಳು ಕೊರೆದು ಚೆಲ್ಲಿದ ಪುಡಿ; ಉದುರಿದ ಪುಡಿ; The powder due to maggot wasp/ feeder of wood;
- **—ಕುಟ್ಟೇ ಹುಳ** : ಮರವನ್ನು ಅಥವಾ ಧಾನ್ಯವನ್ನು ಒಂದು ಸಣ್ಣ ರಂಧ್ರದ ಮೂಲಕ ಒಳಹೊಕ್ಕಿ ಒಳಭಾಗವನ್ನೆಲ್ಲ ಕೊರೆದು ಟೊಳ್ಳಾಗಿಸುವುದು; ಹೊರಮೈ ಇರುವ ಹಾಗೆಯೇ ಇದ್ದು ಒಳಭಾಗವನ್ನೆಲ್ಲ ತಿಂದು ಹಾಳು ಮಾಡುವುದು (ಮೈ.ಜಿ). *ವ್ಯದೂ:* ಕುಂಟೆ ಹುಳು; A soft bodied legless larva of a fly or other insect which

bores the wooden bodies or grains to hollow by eating wood or grain inwardly;
- ಚಿಂತೆ ಮನಸ್ಸನ್ನು ಪ್ರವೇಶಿಸಿ ಕೊರೆಯಲು ಶುರುಮಾಡಿದಾಗ 'ಕುಟ್ಟೇಹುಳು ಕೊರೆದಂತೆ' ಎಂದು ರೂಪಕವಾಗಿ ಬಳಸುವುದುಂಟು.

ಕುಟ್ಟೆ² kuṭṭe² :

ತಟ್ಟೆ ಬಿಲ್ಲಿ ಕಲ್ಲನ್ನು ಕೂರಿಸುವ ಬಲೆಯಾಕಾರದ ಪಟ್ಟಿ; ಇದನ್ನು ಚರ್ಮ ಅಥವಾ ನಾರಿನ ದಾರದಿಂದ ಮಾಡಿರುವರು(ಬೇ.ಸಾಂ.ಪ.ಕೋ). A band prepared by leather or fiber to make the round stone sit on the ground.

ಕುಟ್ಟೆಳ್ಳು kuṭṭeḷḷu :

ಕರಿ ಎಳ್ಳನ್ನು ಒಳಕಲ್ಲಿನಲ್ಲಿ 'ಕುಟ್ಟಿ' ಅದಕ್ಕೆ ಬೆಲ್ಲ ಸೇರಿಸುವುದು; ಗೌರಿ ಹಬ್ಬದಲ್ಲಿ ಕಡಬು ಮಾಡುವುದು(ಸೂಸಲು ಕಡಬು) ವಿಶೇಷ; ಮೈನೆರೆದ ಹೆಣ್ಣು ಮಕ್ಕಳಿಗೆ ತಿನ್ನಲು ಕೊಡುವರು(ಮಂಡ್ಯ.ಜಿ). Black sesame seeds used to prepare sweet snacks during Gowri festival.

ಕುಟ್ಟೇವು kuṭṭevu :

ಸಣ್ಣ ಸುತ್ತಿಗೆ; ಆಭರಣ ತಯಾರಿಕೆಯಲ್ಲಿ ಬಳಕೆ; ಚಿನ್ನ ಕಾಯಿಸಿ ಅದಕ್ಕೊಂದು ಆಭರಣದ ರೂಪ ಕೊಡುವಾಗ ಹದ್ದಿಗಣಿಯ(ಅಡಿಗಲ್ಲು) ಮೇಲೆ ಚಿನ್ನವನ್ನು ಇಟ್ಟು ಬಡಿಯಲು ಬಳಸುವ ಸಾಧನ. A small hammer; A tool used in beating gold to give a shape of jewel.

ಕುಟ್ಟೊ kuṭṭo :

ಮಣ್ಣಿನ ದೊಡ್ಡ ಮಡಿಕೆ; 'ಕಳಸಿಗೆ'(ಅಳತೆಯ ಮಾನದಂತಿರುವುದು); ಹಿಂದೆ ಇದರಲ್ಲಿ ವರ್ಷಕ್ಕೆ ಬೇಕಾಗುವಷ್ಟು ಬೆಲ್ಲ ಸಂಗ್ರಹಿಸಿಡುತ್ತಿದ್ದರು(ದ.ಕ). A big baked clay pot.

ಕುಟ್ನೋಟ kuṭnōṭa :

ಕಚ್ಚೆ ಗೌಳಿಗರು ತಮ್ಮ ಎಮ್ಮೆಗಳ ಕೊರಳಿಗೆ ಕಟ್ಟುವ ಮರದ ಗಂಟೆ(ಶಿ.ಜಿ). A wooden bell that is tied to the neck of buffaloes.

ಕುಟ್ರಿ kuṭri :

ಒಂದು ಬಗೆಯ ಪಕ್ಷಿ; ಗಿಳಿಹಸಿರು ಬಣ್ಣ; ಕುತ್ತಿಗೆಯ ಅಡಿ ಭಾಗದಲ್ಲಿ ಬಿಳಿ ಪಟ್ಟೆ ಹೊಂದಿರುವ ಪುಟ್ಟ ಹಕ್ಕಿ; ಇದು ಸದಾಕಾಲ ಏನನ್ನಾದರೂ ತಿನ್ನುತ್ತಲೇ ಇರುವುದೇ ವಿಶೇಷ(ಕೊಡ.ಜಿ). A kind of bird.

ಕುಟ್ಲಿಗೆ kuṭlige :

ಬಳ್ಳಿಯಿಂದ ವೀಳ್ಯದೆಲೆಯನ್ನು ಕೊಯ್ಯಲು ಬಳಸುವ ಸಾಧನ; ಎಲೆ ಕೊಯ್ಯುವಾಗ ಬಳ್ಳಿಯ ತುದಿಗೆ ಉಗುರು ತಾಕಿದರೆ ಬಳ್ಳಿ ಒಣಗುತ್ತದೆಂಬ ನಂಬಿಕೆ ಇದೆ(ತು.ಜಿ); ಎಲೆಉಗುರು(ಮಂಡ್ಯ.ಜಿ.); A device that used pluck betel leaf from its creeper.

ಕುಡ್‌ಗುರೆಳ್ಳ kuḍgureḷḷa :

ಸಸ್ಯ ವಿಶೇಷ; ಮಸಾರಿ(ಕೆಮ್ಮಣ್ಣುಭೂಮಿ) ಜಮೀನಿನಲ್ಲಿ ಬೆಳೆಯುವ ಕಳೆ; ಕರಿ ಎಳ್ಳಿಗಿಂತ ಸಣ್ಣ ಕಪ್ಪು ಬೀಜ ಇರುವ ಗಿಡ; ದನಗಳ ಮೇವಾಗಿ ಬಳಕೆ. A special plant grows in field as fodder weed.

ಕುಡ kuḍa :

- ದೊಡ್ಡ ಕುಡ ಮತ್ತು ಚಿಕ್ಕಕುಡ ಎಂಬ ಎರಡು ಬಗೆಯುಂಟು; ಕುಡ=ಕುಳ/ಗುಳ;
- ದೊಡ್ಡ ಕುಡ ಸುಮಾರು ನಲವತ್ತೆರಡು ಇಂಚು ಅಗಲವಿರುತ್ತದೆ; ಬಿತ್ತನೆ ನಂತರ ಮಣ್ಣು ಸಮ ಮಾಡಲು, ಕಳೆ ಹೊಡೆಯಲು ಉಪಯೋಗ.
- ಹೊಲದ ಕಳೆ ತೆಗೆಯಲು ಕುಂಟೆಯ ಎರಡು ಬದಿಯ ತಾಳುಗಳಿಗೆ ಜೋಡಿಸಿರುವ ಹರಿತವಾದ ಕಬ್ಬಿಣದ ಸಾಧನ; ಕುಂಟೆಗೆ ಹಾಕಿದ ಬಾಯಿ ಚೂಪಾದ ಕಬ್ಬಿಣದ ಪಟ್ಟಿ; A sharp blade that connects the foot stalks of a wooden bar which is used to remove weeds in the field. An iron device used in agriculture;
- ಕೊನ್ನಾರಿ ಗೆಡ್ಡೆ ಎಂಬ ಕಳೆ;
- ಕಸ ಹರಿಯಲು ಬಳಸುವ ವಸ್ತು(ಮಂ.ಜಿ);
- ಕೈಕೆಳಗಿನ ಒಕ್ಕಲು;
- ಎಡೆಪಟ್ಟಿ; ಕುಂಟೆಗೆ ಹಾಕುವ ಹರಿತವಾದ ಪಟ್ಟಿ;

- ಹರಗುವ ದಿಂಡಿನ ತಾಳುಗಳಿಗೆ ಜೋಡಿಸುವ ಕಬ್ಬಿಣದ ಪಟ್ಟಿ; ಇದರಿಂದ ಹುಲ್ಲು ಕಸ ತೆಗೆದು ಹೊಲ ಸ್ವಚ್ಚಗೊಳಿಸಲಾಗುವುದು(ಬೀ.ಜಿ);
- ಒಕ್ಕಲುತನದ ಕಬ್ಬಿಣದ ಉಪಕರಣ;
- ಚರ್ಮವಾದ್ಯಗಳನ್ನು ನುಡಿಸಲು ಬಳಸುವ ಕೋಲು; (ಮೈ/ಚಾ/ಜಿ);
- ಜಾಗಟೆ ಬಡಿಯುವ ಕೋಲು; ಹರಿಸೇವೆಯಲ್ಲಿ ಬಳಕೆ(ಮಂಡ್ಯ.ಜಿ);
- ತಮಟೆ ಬಡಿಯುವ ಗೇಣುದ್ದದ ದುಂಡನೆಯ ಕಡ್ಡಿ(ಕ.ಜಾ.ಕೋ);
- ಹಪ್ಪಳ, ಚಪಾತಿ ಮೊದಲಾದುವನ್ನು ಅರೆಯಲು ತೆಗೆದುಕೊಳ್ಳುವ ಹಿಟ್ಟಿನ ಭಾಗ; ಉಂಡೆ(ಕ.ಜಾ.ಕೋ);
- ಗರಿಕೆ ಹೆರೆಯಲು ಬಳಸುವ ಸಾಮಗ್ರಿ(ಹಾ.ಜಿ);
- *—ಸಿಡಿಲಿನ ಕುಡ* : ಸಿಡಿಲು ಹೊಡೆದು ಅದರ ತುದಿ ಭೂಮಿಯಲ್ಲಿ ಹೊಕ್ಕಾಗ ಕಬ್ಬಿಣವಾಗಿ ಪರಿವರ್ತನೆಯಾಗುತ್ತದೆಯಂತೆ; ಇದನ್ನು 'ಸಿಡಿಲಿನ ಕುಡ' ಎಂದು ಕರೆಯುವರು; A lightening blade;
- *—ಬರಗುಡ* : ಮಕ್ಕಳು ಹೆಚ್ಚು ಗಲಾಟೆ ಮಾಡುತ್ತಿದ್ದಾಗ, ತುಂಟತನ ತೋರಿದಾಗ ಅವರಿಗೆ 'ಕುಡ'(>ಕುಳ) ಕಾಯಿಸಿ ಬರೆ ಹಾಕುತ್ತೇನೆಂದು ಹೇಳುವುದುಂಟು; ಹೀಗೆ ಬರೆ ಹಾಕುವುದನ್ನು ಬರಗುಡ, ಬರೆಗುಳ ಎನ್ನುವರು; 'ಕುಡ' ಪದಕ್ಕೆ 'ಕುಳ', 'ಗುಳ' ರೂಪಗಳಿವೆ; ಈ ಮೂರೂ ಪದಗಳು ಒಂದೇ ಆಗಿದ್ದು, ಕ>ಗ ಆಗುವ ಡ>ಳ ಆಗುವ ಪ್ರಕ್ರಿಯೆಯನ್ನು ಹೊಂದಿವೆ; A slang word; A word that means to cauterize instruments used to cauterize children to avoid the pranks.

ಕುಡಕ/ಕುಡಕಿ kuḍaka/kuḍaki :

- ಕುಂಬಾರರು ಮಣ್ಣಿನಿಂದ ತಯಾರಿಸಿದ ಒಂದು ಸಾಧನ; ಸುಮಾರು ನಾಲ್ಕು ಇಂಚು ಎತ್ತರವಿದ್ದು ಮೂರು ಇಂಚು ಅಗಲದ ಬಾಯಿ ಇರುತ್ತದೆ;
- ದೀಪಾವಳಿ, ಯುಗಾದಿ, ಎಳ್ಳಮವಾಸ್ಯೆ, ಸೀಗಿಹುಣ್ಣಿಮೆ ಮೊದಲಾದ ಹಬ್ಬಗಳ ಸಂದರ್ಭದಲ್ಲಿ ಹೊಲ–ಗದ್ದೆಗಳಿಗೆ ಚರಗ ಚೆಲ್ಲಲು ಉಪಯೋಗ;
- ಕೆಲವರು ಚಿಲ್ಲರೆ ಹಣ ಕೂಡಿಡಲೂ ಬಳಸುವುದು ಕಂಡುಬಂದಿದೆ; ಇದಕ್ಕೆ 'ಡಬ್ಬಿಗಡಗಿ/ಮಣ್ಣಿನ ಕುಡಕಿ' ಎನ್ನುವರು.

ಕುಡಕಿ ಕುಂಡಲ kuḍaki kuṇḍala :

ಮಣ್ಣಿನ ಸಣ್ಣ ಕುಡಿಕೆ; ದೀಪ, ಅಡುಗೆ ಇತ್ಯಾದಿಗಳ ಬಳಕೆಗೆ ಬೇಕಾದ ಎಣ್ಣೆಯನ್ನು ಈ ಕುಡಿಕೆಯಲ್ಲಿ ಇಟ್ಟುಕೊಳ್ಳುವುದು ರೂಢಿ(ಉ.ಕ.ಜಿ). A small earthen ware pot used to preserve oil for lamps.

ಕುಡಗಡಿ kuḍagaḍi :

- ಕೊಪ್ಪ ತಾಲ್ಲೋಕಿನ ಬೊಮ್ಮಲಾಪುರ ಎಂಬ ಪ್ರದೇಶದಲ್ಲಿ ದೊರೆತಿರುವ ಕ್ರಿ.ಶ.೧೪೦೭ರ ೧೭ನೇ ಶಾಸನದಲ್ಲಿ 'ಕುಡಿಗಡಿ' ಎಂಬ ಗ್ರಾಮದ ಉಲ್ಲೇಖವಿದೆ; A place that has been referred in the 17th inscription of Bommalapura, Koppa Taluk Chikkmagalun Distict;
- ಶಾಸನದಲ್ಲಿ 'ಕುಡಿಗಡಿ' ಎಂದೇ ಪ್ರಸ್ತಾಪ; ಕುಡಿ ಅಥವಾ ಕುಡ ಎಂಬುದು ನೇಗಿಲಿಗೆ ಸಂಬಂಧಿಸಿದ ವಸ್ತುವಾಚಕ ಪದ; 'ಗಡಿ' ಎಂಬುದು ಎಲ್ಲೆ ಅಥವಾ ವಿಸ್ತೀರ್ಣಕ್ಕೆ ಸಂಬಂಧಿಸಿದ ಪದ;
- ಆದ್ದರಿಂದ ಇದು ಗಡಿ ಪ್ರದೇಶದ ಸ್ಥಳನಾಮವಾಗಿ ನಿಷ್ಪತ್ತಿಯಾಗಿರಬಹುದು;
- 'ಕುಡಿ' ಎಂದರೆ ಒಕ್ಕಲು, ಒಕ್ಕಲುತನ ಎಂಬುದಾಗಿ ಅರ್ಥವಿದೆ; ಗಡಿಯಲ್ಲಿ ವಾಸಿಸುವ ನಿರ್ದಿಷ್ಟ ಒಕ್ಕಲು ಸಮೂಹವನ್ನು ಇದು ಸೂಚಿಸುತ್ತಿರಬಹುದೆ?

(E.C- ೧೨)

ಕುಡಗು kuḍagu :

ಸ್ವಲ್ಪವೂ ಉಳಿಸದಂತೆ ಎಲ್ಲವನ್ನು ಕೊಡುವುದು; ಖಾಲಿ ಮಾಡಿಬಿಡುವುದು. To make empty;

ಕುಡತಲಿ kuḍatali :

ಮೀನಿನ ಒಂದು ಪ್ರಭೇದ; ಇದು ಸಪ್ಪೆ ರುಚಿಯದು; ಸಾರು ಮಾಡಲು ಮತ್ತು ಹುರಿದು ನಂಚಿಕೆಯಾಗಿ ಬಳಕೆ. A special type of fish.

ಕುಡತಿ[೧] kuḍati[1] :

ಕುಂಬಾರರು ತಯಾರಿಸಿದ ಮಣ್ಣಿನ ಪಾತ್ರೆ; ಬಕೆಟ್ಟಿನಂತೆ ಮೇಲ್ಭಾಗ ಅಗಲಬಾಯಿ ತಳಭಾಗ ಕಿರಿದು; ೪ ರಿಂದ ೫ ಅಡಿ ಎತ್ತರ ಹೊಂದಿರುವ ಪಾತ್ರೆ; ಅಡುಗೆ ಮನೆಯಲ್ಲಿ ಪಾತ್ರೆ ತೊಳೆದ ನೀರು, ಮುಸರೆ, ತರಕಾರಿ, ಹಣ್ಣುಗಳ ತ್ಯಾಜ್ಯ, ಉಳಿದ ಅನ್ನ, ಮುದ್ದೆ ಇತ್ಯಾದಿ ಪದಾರ್ಥಗಳನ್ನು ಹಾಕುವರು; ಹೀಗೆ ಸಂಗ್ರಹಿಸಿದ ತ್ಯಾಜ್ಯಕ್ಕೆ ಹಿಂಡಿ ಬೆರೆಸಿ ಅಥವಾ ನೆನೆಸಿ ಕುಡಿಸುವುದುಂಟು; ಇದು ಜಾನುವಾರುಗಳಿಗೆ ಬಲು ಪುಷ್ಟಿದಾಯಕ ಆಹಾರ; ಇದನ್ನು ಕುಡಿಯುವುದರಿಂದ ಜಾನುವಾರುಗಳು ದಷ್ಟಪುಷ್ಟವಾಗಿ ಬೆಳೆದು ಶಕ್ತಿಯುತವಾಗಿದ್ದು ಒರಟು ಕೆಲಸವನ್ನು ನಿರಾಯಾಸವಾಗಿ ಮಾಡುತ್ತವೆ; ಹಸು ಎಮ್ಮೆಗಳಿಗೆ ಕಲಕಚ್ಚು ಕುಡಿಸಿದರೆ ಹಾಲು ಜಾಸ್ತಿ ಕೊಡುವುವು; ಕೆನೆಮೊಸರು, ಘಮಘಮಿಸುವ ಮಜ್ಜಿಗೆ, ಬೆಣ್ಣೆ, ದೊರೆಯುತ್ತದೆ; ಕೆಲವೆಡೆ ಇದನ್ನು ಕಲ್ಲಿನಲ್ಲಿಯೂ ಕೆತ್ತಿಸುವುದುಂಟು; ವ್ಯರೂ: ಕಲ್ಗಚ್ಚು, ಬಾನಿ, ಕಲ್ಗೊಚ್ಚು, ಕುಡತಿಬಾನೆ. The earthen pot prepared by potters.

ಕುಡತಿ[೨] kuḍati[2] :

ಒಂದು ಅಳತೆ ಮಾನ; ಬೊಗಸೆ; ಸೇರಿನ ಆರನೆಯ ಭಾಗ; Vernier; One of the measuring; one sixth part of a unit of measurements;

—***ಕುಡತೆಗಂಗಳು*** : ಬೊಗಸೆಗಂಗಳು : ಕಣ್ಣಿನ ಆಕಾರ ದೊಡ್ಡದಾಗಿದ್ದು ಬೊಗಸೆಯಂತಿರುವ ಸುಂದರ ಕಣ್ಣು; Beautiful big eyes.

ಕುಡತ್ಗೆ kuḍatge :

ಅಕ್ಕಿ ಮೂಡೆ ಕಟ್ಟುವಾಗ ಬಳಕೆ; ಮರದಿಂದ ತಯಾರಿಸಿದ ಸುತ್ತಿಗೆ ಆಕಾರದ ವಸ್ತು(ಉ.ಕ.ಜಿ). A tool like woods hammer to tie rice package sacks.

ಕುಡಮ್ಮು kuḍammu :

- ಅಹಂಕಾರ; ದುರಹಂಕಾರ; *ಪ್ರ:* 'ಇತ್ತೀಚ್ಗೆ ಈ ಹೈದನ್ಗೆ ಕುಡಮ್ಮು ಬಂದದಕಲಾ'(ಚಾ.ಜಿ); Arrogance;
- ಕೊಡೋಣ(ಕಲ.ಜಿ).

ಕುಡರಿ kuḍari :

ತುಳುನಾಡಿನಲ್ಲಿ ಭೂದೇವಿಯು ಪುಷ್ಪವತಿಯಾಗಿ ಫಲವತಿಯಾಗುವಳೆಂದು ನಂಬಿ ಆಚರಿಸುವ ಹಬ್ಬ; 'ಕೆಡ್ಡಸ'; ಇದು ಮೂರು ದಿನದ ಆಚರಣೆ; ಈ ಕಾಲದಲ್ಲಿ ಕೃಷಿಕೆಲಸ ನಿಷಿದ್ಧ; ಹುರಿದ ಹುರಳಿ ಮತ್ತು ಅಕ್ಕಿಯ ಮಿಶ್ರಣವನ್ನು ಭೂದೇವಿಗೆ ಅರ್ಪಿಸುವುದೇ ಕುಡರಿ; ನಂತರ ಪ್ರಸಾದದಂತೆ ಸೇವನೆ; ಇದನ್ನು ತಿನ್ನುವುದರಿಂದ ಮೂಳೆಗೆ ಸಂಬಂಧಿಸಿದ ಕಾಯಿಲೆ, ಕ್ಷಯರೋಗವನ್ನು ತಡೆಯಬಹುದೆಂದು ನಂಬಿಕೆ (ದ.ಕ); ಕುಡ+ಅರಿ ಸೇರಿ 'ಕುಡರಿ' ಆಗಿರುವಂತೆ ಕಾಣುತ್ತದೆ; 'ಕುಡ' ಎಂದರೆ 'ಹುರುಳಿಕಾಳು' 'ಅರಿ' ಎಂದರೆ ನೆಲ್ಲು/ಬತ್ತ/ಅಕ್ಕಿ ಇವೆರಡರ ಮಿಶ್ರಣವನ್ನು ನೈವೇದ್ಯ ಮಾಡುವುದೆ ಈ ಪದಸಂಸ್ಕೃತಿಯ ಅರ್ಥ. A three days celebration for earth mother in Tulunadu; during this farmers prepare food in horse gram and paddy.

ಕುಡವು kuḍavu :

ಭತ್ತ ಅಳೆಯುವ ಮರದ ಕೊಳಗದಂತಹ ಸಾಧನ; A device, used to measure paddy.

ಕುಡಸ್ನಿ kuḍasni :

ಇದೊಂದು ಔಷಧಿ ಗಿಡ; ಕೊಡಸಿಗ(ಉ.ಕ.ಜಿ); wrightia tometosa(Apocyanaceae); A medicinal plant.

ಕುಡಾ ಆಕ್ಳು kuḍā ākḷu :

ಹಾಲು ಕೊಡುವ ಹಸು; ಹಾಲು ಹಿಂಡುವ ಆಕಳು (ಬೀ.ಜಿ). Milking Cow; ಕರೆಯೋ ಹಸು (ಮಂಡ್ಯ.ಜಿ);

—***ಕುಡಾ ಎಮ್ಮಿ*** : ಹಾಲು ಕೊಡುವ ಎಮ್ಮೆ; ಹಾಲು ಹಿಂಡುವ ಎಮ್ಮೆ; ಹಯನದೆಮ್ಮೆ; ಕರೆಯೋ ಎಮ್ಮೆ(ಮಂಡ್ಯ.ಜಿ.); *ಪ್ರ:* 'ಕುಡಾ ಎಮ್ಮಿಗ್ಬಿಟ್ಟು ಹೊಡ್ಯಾ ಕ್ವಾಣಿಗಿ ತಂದ್ರಂತ'(ಗಾ); Milking buffalo.

ಕುಡಿಒಕ್ಕಲಿಗರು/ಕುಡುಒಕ್ಕಲಿಗರು kuḍi okkaligaru/kuḍuokkaligaru :

ಒಕ್ಕಲಿಗ ಸಮುದಾಯದ ಒಂದು ಉಪಪಂಗಡ;

ಒಕ್ಕಲುತನ ಇವರ ಮುಖ್ಯ ಕಸುಬು; ಉತ್ತರ ಕರ್ನಾಟಕದ ಬೆಳಗಾವಿ, ಬಿಜಾಪುರ, ಕೊಪ್ಪಳ, ರಾಯಚೂರು ಜಿಲ್ಲೆಗಳಲ್ಲಿ ಉತ್ತರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಂಡುಬರುವರು. A sub caste of Vokkaliga- a farming community of North Karnataka.

ಕುಡಿᐢ kudi[1] :

- ಚಿಗುರು; ಬಳ್ಳಿಯ ಮೊಳಕೆ; ಸುಳಿ ಒಡೆದುಕೊಂಡು ಹಬ್ಬುವ ಬಳ್ಳಿಯ ತುದಿ; ಸುಳಿ; ಸೊಪ್ಪನ್ನು ಕುಯ್ಯುವಾಗ 'ಕುಡಿ ಕುಡಿ ಕುಯ್ಯಿ' ಎಂಬುದಾಗಿ ಹೇಳುವುದುಂಟು; *ಪ್ರ:* 'ಹಸಿಕಡ್ಡೆ ಕುಡಿ ಸೊಪ್ಪು ಬಲ್ ಚಂದ', 'ಚಿಗ್ರೆತ್ತಕೋಗಿ ಉಗ್ರತ್ಕೊಂಡಂತೆ'; 'ಕುಡಿ ಕಿತ್ತರೂ ಅಡಿ ಸಾಯುವುದೇ?'*(ಗಾ)*; A sprout of creeper plant;
- ತುದಿ ಎಲೆ; ಬಾಳೆ ಎಲೆಯನ್ನು ಊಟಕ್ಕೆ ನೀಡುವಾಗ ತುದಿ ಇರುವ ಕುಡಿ ಎಲೆ ಶ್ರೇಷ್ಠ ಎಂದು ದೇವರಿಗೆ, ಬ್ರಾಹ್ಮಣರಿಗೆ, ಗುರುಗಳಿಗೆ ನೀಡುವರು; ಕಂದು–ಉಳಿದ ಭಾಗ ಮನೆಯವರಿಗೆ; ಕೀತು ದಿಂಡನ್ನು ಮಧ್ಯಕ್ಕೆ ಸೀಳಿ ಕೆಳವರ್ಗದವರಿಗೆ ಎಲೆ ಹಾಕಿ ಬಡಿಸುವ ಬದಲು ಎಲೆಯ ಮೇಲೆ ಊಟದ ಎಲ್ಲ ಬಗೆಯನ್ನು ಹಾಕಿ ಮೊರದಲ್ಲಿ ಇಟ್ಟುತಂದು ಊಟ ಮಾಡುವವನ ಮುಂದೆ ತಳ್ಳುವರು; ಮೈಲಿಗೆ ಆಗಬಾರದೆಂದು;
- ವಂಶದ ಬಳ್ಳಿ; ಮಗು; ಕಂದ; ಕೂಸು; *ಪ್ರ:* 'ವಂಶ ಬೆಳಗುವುದಕ್ಕೆ ಇರೋದು ಒಂದೇ ಕುಡಿ'; ಇದು ಒಬ್ಬ ಮಗ ಇರುವುದನ್ನು ಹೇಳುವುದು; Baby child, infant;
- ಕುಡಿಯುವುದು, ಸೇವಿಸುವುದು; ನೀರು, ಹಾಲು, ಇತ್ಯಾದಿ ಪಾನೀಯ ಆಹಾರ ಪದಾರ್ಥಗಳನ್ನು ಕುಡಿಯುವುದು; *ಪ್ರ:* 'ಬೇಸಿಗೆಯಲ್ಲಿ ಮಜ್ಜಿಗೆ ಕುಡಿಯುವುದು ಬಲು ಉತ್ತಮ'; 'ಕುಡಿಯುವ ಪಾನಕದಲ್ಲಿ ಕಡ್ಡಿ ಸಿಕ್ಕಿದ ಹಾಗೆ'*(ಗಾ)*; drinking, having liquids;
- ***—ಕುಡಿಕಟ್ಟೋದು*** : ಕರಿಮೆಣಸಿನ ಕುಡಿಯನ್ನು ನಾಟಿ ಮಾಡಿದ ಮರು ತಿಂಗಳಲ್ಲಿ ಮರಕ್ಕೆ ಹಬ್ಬಿದ ಕುಡಿಯನ್ನು ಹಾಳೆ ಅಥವಾ ಕತ್ತದ ಬಳ್ಳಿಯಿಂದ ಕುಟ್ಟುವುದು; ಒಂದು ಗೇಣಿನ ಅಂತರದಲ್ಲಿ ೨–೫ ಕಟ್ಟುಗಳನ್ನು ಹಾಕುವರು; A sprout of black pepper is to be tied with paper after three months of planting to a tree.
- ***—ಕುಡಿಮೀಸೆ*** : ಚಿಗುರುಮೀಸೆ; ಆಗತಾನೆ ಬರುತ್ತಿರುವ ಮೀಸೆ; ವಯಸ್ಸಿಗೆ ಬರುತ್ತಿರುವ ಹುಡುಗನ ಲಕ್ಷಣ; *ಪ್ರ:* 'ಕುಡಿಮೀಸೆ ಗಂಡಿಗೆ ಲೋಕ ಕಾಣುವುದಿಲ್ಲ'; Sprouting mustache;
- ***—ಕುಡಿಗಣ್ಣು*** : ಕಡೆಗಣ್ಣು; ಕಣ್ಣಿನ ಕೊನೆ; *ಪ್ರ:* 'ಕುಡಿಗಣ್ಣಿನಿಂದ ನೋಡಿದರು'. A edge of an eye;
- ***—ಕುಡಿ ನೆಡೋದು*** : ಮೃಗಶಿರಾ ಮಳೆಯಲ್ಲಿ ಒಳ್ಳೆಯ ಎಲೆ ಬಳ್ಳಿ ಅಥವಾ ಕುಡಿಯನ್ನು ಅಡಿಕೆ ಮರದ ಬುಡದಲ್ಲಿ ನೆಡುವುದು; A betel creeper is to be planted at the bottom of areca tree;
- ***—ಕುಡಿಪರೆ*** : ಒಂದು ಬಗೆಯ ಚರ್ಮವಾದ್ಯ; ಕೊಡಗಿನ ಭಾಗದಲ್ಲಿ ಬಳಕೆ; ಹಿತ್ತಾಳೆ ಅಥವಾ ಮರದ ಹೊಳವಿಗೆ ಮೇಕೆ ಚರ್ಮ ಹೊದಿಸಿರುವ ವಾದ್ಯ; A leather musical instrument used in kodagu;
- ***—ಕುಡಿ ಚಿವುಟು*** : ತೊಗರಿ, ಅವರೆ, ಕುಂಬಳ ಇತ್ಯಾದಿ ಗಿಡದ ಎಳೆ ಚಿಗುರನ್ನು ಚಿವುಟುವುದು; ಹೂ ಬಿಡುವ ಮುನ್ನ ಚಿಗುರು ತೆಗೆಯುವುದರಿಂದ ಗಿಡದ ಟಿಸಿಲು ಹೆಚ್ಚಾಗಿ ಹೆಚ್ಚು ಕಾಯಿ ಸಿಗುತ್ತದೆ;
- ನುಡಿಗಟ್ಟಾಗಿ ವಂಶ ನಾಶ ಮಾಡು ಎಂಬರ್ಥವಿದೆ; To pluck the sprouting of pumpkin creepers;
- ***—ಕುಡಿಹಾಕು*** : ಹಗ್ಗ ಹೊಸೆಯುವಾಗ ಹಗ್ಗದ ಎರಡು ತುದಿಗಳನ್ನು ಹಿಡಿದು ಗಂಟಾಗದಂತೆ ತಿರುಗಿಸುವುದು(ಚಿಕ್ಕ.ಜಿ); To roll the two sides of rope without knot while weaving;
- ***—ಕುಡಿ ಹುಬ್ಬು*** : ಕಣ್ಣಿನ ಮೇಲಿರುವ ತೆಳ್ಳನೆಯ ಕೂದಲಿನ ಸಾಲು; ಎಳಸಾದ ಹುಬ್ಬು; ಹುಬ್ಬಿನ ಕೊನೆ; ಕಮಾನಿನಂತಿರುವ ಹುಬ್ಬು; *ಪ್ರ:* 'ಕುಡಿಹುಬ್ಬು ಬೇವಿನೆಸಳಿನಂಗ'. Light eye brow.

ಕುಡಿ kuḍi[2] :

- ದೀಪದ ಬತ್ತಿಯ ತುದಿಯಲ್ಲಿ ಬರುವ ಬೆಂಕಿಯ ಕಣ; ಚೂರು; ಉರಿಯುವ ದೀಪದ ಬತ್ತಿಯ ತುದಿ; A fire flame at the edge of a wick of lamp;
- ***—ಕುಡಿಚಾಚು*** : ಎಣ್ಣೆ ಬತ್ತಿಯನ್ನು ಚಾಚಿ ದೀಪ ಉರಿಯುವಂತೆ ಮಾಡುವುದು; To flame the oil lamp by stretching a wick of the lamp;
- ವಂಶವೃದ್ಧಿಸುವುದು;
- ***—ಕುಡಿ ಬರು*** : ದೀಪದ ಮೇಲೆ ಕಿಟ್ಟದಂತಹ ಪದಾರ್ಥ ಬರುವುದು; To spinning out rust like substance;
- ***—ಕುಡಿಕಡಿ*** : ದೀಪದ ತುದಿಯಲ್ಲಿ ಕೆಂಡದಂತಹ ಭಾಗ ಉಂಟಾಗಿ ದೀಪ ಬೆಳಗಲು ಸಾಧ್ಯವಿಲ್ಲದಾಗ ಆ ಭಾಗವನ್ನು ಉದುರಿಸುವುದು(ಬೀ.ಕ.ಕೋ). To drop the part of wick that doesn't lime light clearly.

ಕುಡಿಕೆ(ಕಿ) kuḍike(ki) :

- ಮಣ್ಣಿನಿಂದ ತಯಾರಿಸಿದ ಸಣ್ಣ ಪಾತ್ರೆ; ಊಟ ಮಾಡುವಾಗ ನೀರು, ಮೊಸರು, ಮಜ್ಜಿಗೆ, ಹಾಲು ಇತ್ಯಾದಿ ಇಡಲು ಬಳಕೆ; ಮಣ್ಣಿನ ಮಿಳ್ಳೆ; ಚಿಕ್ಕ ಗಿಂಡಿ; ಬೀದರ್‌ನಲ್ಲಿ 'ಕುಳ್ಳಿ' ಎನ್ನುವರು; ಯಾವ ವಸ್ತುವನ್ನು ಹಾಕಿ ಇಡುತ್ತಾರೋ ಆ ವಸ್ತುವಿನ ಹೆಸರು ಸೇರಿಸಿ ಕರೆಯುವುದು ರೂಢಿ; ಉದಾ: ಎಣ್ಣೆ ಕುಡಿಕಿ, ಸುಣ್ಣದ ಕುಡಿಕಿ, ತುಪ್ಪದ ಕುಡಿಕಿ, ಮೊಸರು ಕುಡಿಕಿ; An earthen pot;
- ದುಂಡನೆಯ ಆಕಾರವಿದ್ದು ಮೇಲೆ ಸ್ವಲ್ಪ ಅಗಲದ ಅಡ್ಡಗೆರೆಯಂತಹ ತೂತು ಇರುವುದರಲ್ಲಿ ನಾಣ್ಯ ಸಂಗ್ರಹ ಮಾಡುವರು; ಇದನ್ನು ಹಣ ಉಳಿತಾಯದ ದೃಷ್ಟಿಯಿಂದ ಬಳಸುವರು; *ಪ್ರ:* 'ಕೂತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು'*(ಗಾ).* 'ಮಡಿಕೆ ಲಾಭ ಕುಡಿಕೆಯಲ್ಲಿ ಹೋಯ್ತು'*(ಗಾ);*
- ***—ಕುಡಿಕೆ ಬಿರುಸು*** : ಮದ್ದಿನ ಕುಡಿಕೆ; ಇದಕ್ಕೆ ಬೆಂಕಿ ತಾಗಿದ ಕೂಡಲೇ ಕಿಡಿಗಳು ಎತ್ತರೆತ್ತರಕ್ಕೆ ಚಿಮ್ಮಿ ಬೆಳಕನ್ನು ಚೆಲ್ಲುತ್ತವೆ; ಮಸಿ ಕುಡಿಕೆಯಲ್ಲಿ ಮಸಿ ತುಂಬಿ ಲೇಖನಿ ಅದ್ದಿ ಬರೆಯಲು ಬಳಕೆ; A kind of Crackers;
- ***—ಕುಡಿಕೆಯಾಟ*** : ಕುಂಟೇಬಿಲ್ಲೆ ಆಟದ ಒಂದು ಬಗೆ; ಕೈಯನ್ನು ಕುಡಿಕೆ ಆಕಾರದಲ್ಲಿ ಮಾಡಿಕೊಂಡು ಅದರ ಮೇಲೆ ಬಿಲ್ಲೆ ಇಟ್ಟುಕೊಂಡು ಮನೆ ಮನೆ ದಾಟುವ ಆಟ; A kind of limping disc play;
- ***—ಕುಡಿಕೆವಾಲೆ*** : ಕಿವಿಯ ಆಭರಣ; ನೋಡಲು ಕುಡಿಕೆಯ ಆಕಾರದಲ್ಲಿರುವುದು; ತಿರುಪು ಇಲ್ಲದ ಕೆಂಪು ಹರಳು ಹೊಂದಿರುವ ಓಲೆ(ಕಜಾಕೋ). Ear-rings look like a earthen pot.

ಕುಡಿತೆ/ಕುಡುತೆ/ಕುಡತೆ

kuḍite/kuḍute/kuḍate :

- ಅಳತೆಯ ಒಂದು ಮಾನ; ದ್ರವ ಪದಾರ್ಥದ ಅಳತೆಗೆ ಸಂಬಂಧಿಸಿದ್ದು; A unit of measurement used to measure liquids;
- ಸೆರೆ; ಬೊಗಸೆ; 'ಕೈತುಂಬ'; *ಪ್ರ:* 'ಹೆಪ್ಪಿಗೆ ಒಂದು ಕುಡಿತೆ ಮೊಸರು ಕೊಡು'.
- ***—ಕುಡಿತೆಗಣ್ಣು*** : ಕುಡಿತೆ+ಕಣ್ಣು; ಬಟ್ಟಲುಗಣ್ಣು; ಬೊಗಸೆಗಣ್ಣು; ವಿಶಾಲಾಕ್ಷಿ(ಮೈ.ಜಿ). Eyes as cups or bowls.

ಕುಡಿದ ನೀರು ಅಲುಗಾಡದಂತೆ kuḍida nīru alugāḍadante :

- ಜನಪದ ಸಂಸ್ಕೃತಿಯಲ್ಲಿ ಬಹಳ ಬಳಕೆಯಲ್ಲಿರುವ ನುಡಿಗಟ್ಟು; ಶಾರೀರಿಕ ಪ್ರಕ್ರಿಯೆಗೆ ಸಂಬಂಧಿಸಿದಂತೆ ತೋರಿದರೂ, ಅರ್ಥ ಸಾಂಸ್ಕೃತಿಕವಾದುದ್ದು; ಶರೀರ ಜಾನಪದ ವರ್ಗಕ್ಕೆ ಸೇರಿಸಬಹುದು; A folk idiom, means balanced minded never disturbed by anything, in another word. It means lazy too;
- ಯಾವುದನ್ನೂ ತಲೆಗೆ ಹಚ್ಚಿಕೊಳ್ಳದ, ಆರಾಮವಾಗಿರುವ ಸ್ಥಿತಿಯನ್ನು ಅಥವಾ ವ್ಯಕ್ತಿಯನ್ನು ಕುರಿತಂತೆ ಈ ನುಡಿಗಟ್ಟು ಹುಟ್ಟಿಕೊಂಡಿದೆ; ದೈಹಿಕ ಅಥವಾ ಮಾನಸಿಕ ಸಂಬಂಧದ ಯಾವ ಶ್ರಮವನ್ನೂ ತೆಗೆದುಕೊಳ್ಳದ ನಿಶ್ಚಿಂತ ಮನೋಭಾವವನ್ನು ಇದು ಹೇಳುತ್ತದೆ; ಒಂದು ರೀತಿಯಲ್ಲಿ 'ಚಿಂತೆ ಇಲ್ಲದವಗೆ ಸಂತೇಲಿ ನಿದ್ದೆ' ಎನ್ನುತ್ತಾರಲ್ಲ ಆ ಸ್ಥಿತಿಯದು;

- ನುಡಿಗಟ್ಟಿನಲ್ಲಿ 'ಕುಡಿದ ನೀರು' ಮತ್ತು 'ಅಲುಗಾಡದಂತೆ' ಎರಡು ಸಂಯುಕ್ತ ಪದಗಳಿದ್ದು, ಕುಡಿದ ನೀರಿನ ಹೋಲಿಕೆ 'ಅಲುಗಾಡದ' ಕ್ರಿಯೆಯಲ್ಲಿ ರೂಪುಗೊಂಡಿದೆ; 'ಕುಡಿದ ನೀರು' ಈಗಾಗಲೇ ನೀರು ಹೊಟ್ಟೆ ಸೇರಿರುವುದನ್ನು ತಿಳಿಸುತ್ತದೆ; 'ಅಲುಗಾಡು' ಪದ ಹೊಟ್ಟೆ ಸೇರಿದ ಮೇಲೆ ನೀರು ತೊನೆಯುವ, ಶಬ್ದ ಮಾಡುವ, ಓಡಾಡುವ ರೀತಿಯನ್ನು ಪ್ರತಿಮಿಸುತ್ತದೆ; 'ಅಲುಗಾಡು' ಪದ 'ಅಲುಗು+ಆಡು' ಎಂಬೆರಡು ಪದಗಳಿಂದ ಆದುದು; 'ಅಲುಗು' ಪದದ ಮೂಲರೂಪ 'ಅಲುಕು' ಇರಬಹುದು; ಇಲ್ಲಿ ಕ>ಗ ಆಗಿರುವುದು ಸ್ಪಷ್ಟ; 'ಅಲುಗಾಡು' ಪದಕ್ಕೆ 'ಅಲ್ಲಾಡು' ಪದವನ್ನೂ ಬಳಸಬಹುದು; ಎರಡೂ ಪದಗಳ ಅರ್ಥ `shake' ಅಥವಾ 'ಕುಲುಕು' ಎಂದಾಗುತ್ತದೆ; ಆದರೆ ನುಡಿಗಟ್ಟಿನ ಮುಖ್ಯ ಕ್ರಿಯೆಗೆ ಕಾರಣವಾಗಿರುವುದು 'ಅಲುಗಾಡದ' ಸ್ಥಿತಿ; ಅಂದರೆ ಕುಲುಕದ, ತೊನೆಯದ ಅದರ ಸ್ಥಿರತೆಯ ಪರಿಸ್ಥಿತಿ;
- 'ಅಲುಗಾಡದಂತೆ' ಪದ ಮೊದಲು ಅಲುಗಾಡಿದ್ದನ್ನೂ, ಆಮೇಲೆ ಅಲುಗಾಡದೆ ನಿಂತಿರುವ ಸ್ಥಿತಿಯನ್ನೂ ಹೇಳುತ್ತದೆ; ಈ ಧ್ವನಿ ನಕಾರಾತ್ಮಕದಿಂದ ಸಕಾರಾತ್ಮಕಕ್ಕೆ ಬೆಳೆದಿರುವುದು; ನುಡಿಗಟ್ಟು ಆರೋಪಿಸಿರುವ ವ್ಯಕ್ತಿ ಮೊದಲು ಶ್ರಮಪಟ್ಟು ಆಮೇಲೆ 'ಶ್ರಮವಿಲ್ಲ'ದ 'ಕೂತುಣ್ಣುವ' ಸ್ಥಿತಿಗೆ ಬೆಳೆದಿರಬಹುದೆಂಬ ಸಂದೇಹಕ್ಕೆ ಎಡೆಮಾಡಿ ಕೊಡುತ್ತದೆ; ಚಿಂತೆಯಿಲ್ಲದ, ತಲ್ಲಣವಿರದ, ಸಮಸ್ಯೆಗಳಿರದ, 'ಕುಡಿದ ನೀರು ಅಲುಗಾಡ' ದಂತೆ ಹಾಯಾಗಿರುವುದನ್ನು ನುಡಿಗಟ್ಟು ಚಿಂತಿಸುತ್ತಿರಬಹುದು; ಒಂದು ಬಗೆಯ ನಿರುಮ್ಮಳ ಸ್ಥಿತಿಯನ್ನು ನುಡಿಗಟ್ಟಿನಲ್ಲಿ ಸಂಕೇತಿಸಿರಬಹುದು; ತೃಪ್ತಿ ಅಥವಾ ನಿರ್ಲಿಪ್ತ ಸ್ಥಿತಿ, "ಜರ್ಮನಿ ಉರಿಯುತ್ತಿದ್ದಾಗ ನೀರೊ ಪಿಟೀಲು ಬಾರಿಸುತ್ತಿದ್ದ" ಹೋಲಿಕೆಯ ಸ್ಥಿತಿಯದು;
- ಇನ್ನೊಂದು ತುದಿಯಲ್ಲಿ 'ಸೋಮಾರಿ'ಯ ಸ್ಥಿತಿಯೂ ಆಗಿರಬಹುದು; ಕೊರತೆಯಿಲ್ಲದ ಬದುಕನ್ನು ಸಂಕೇಸುತ್ತಿರಬಹುದೆ? ಒಂದು ರೀತಿಯಲ್ಲಿ ಕೊರೆಯಿಲ್ಲದ ಜೀವನ;
- ಹೀಗೆ ಕೊರತೆಯಿಲ್ಲದ, ನಿರ್ಲಿಪ್ತ, ತೃಪ್ತ, ಶ್ರೀಮಂತ, ಸೋಮಾರಿ, ಕಲ್ಪಿತ ಅನುಕೂಲಗಳಿಂದ ನಿರಾಸಕ್ತ, ದುಡಿಯದ, ಕುಂದುಕೊರತೆಯಿಲ್ಲದ ಸ್ಥಿತಿ ಅಥವಾ ವ್ಯಕ್ತಿಗೆ ಈ ನುಡಿಗಟ್ಟು ಒಂದು ಪ್ರತಿಮೆ.

ಕುಡಿಯರು kuḍiyaru :

- 'ಮಲೆ ಕುಡಿಯ'ರೆಂದೇ ಇವರು ಪರಿಚಿತರಾಗಿದ್ದಾರೆ; 'ಮಲೆ' ಎಂದರೆ ಬೆಟ್ಟ, 'ಕುಡಿ' ಎಂದರೆ 'ತುದಿ'; ಅಂದರೆ ಬೆಟ್ಟದ ಮೇಲೆ ವಾಸಿಸುವವರು ಎಂಬ ಅರ್ಥದಲ್ಲಿ 'ಮಲೆಕುಡಿಯ' ಪದ ಬಳಕೆಗೆ ಬಂದಿರುವಂತಿದೆ; 'ಕುಡಿ' ಎನ್ನುವುದಕ್ಕೆ 'ಸಂತಾನ' ಎಂದೂ ಅರ್ಥವಿದೆ; ಆದರೆ 'ಒಕ್ಕಲಿಗ' ಅರ್ಥ ಸರಿಹೊಂದುವುದಿಲ್ಲ, ಆದರೆ ಇವರು ಒಕ್ಕಲಿಗರ ಒಂದು ಪಂಗಡ ಎಂಬ ಅರ್ಥದಲ್ಲಿ ತೆಗೆದುಕೊಂಡರೆ ತಪ್ಪಲ್ಲ; A tribe of Dakshina Kannada;
- ಬೆಟ್ಟದ ಮೇಲೆ ವಾಸಿಸುವುದರಿಂದ ಇವರನ್ನು 'ಬುಡಕಟ್ಟು' ವರ್ಗಕ್ಕೆ ಸೇರಿಸಬಹುದು; ಅವರ ಸಂಸ್ಕೃತಿಯನ್ನು 'ಬುಡಕಟ್ಟು ಸಂಸ್ಕೃತಿ' ಎಂದು ಕರೆಯಬಹುದು(Tribal culture); The dwellers of mountains;
- ಮಲೆಕುಡಿಯರು ಸೋಮವಾರಪೇಟೆ, ವಿರಾಜಪೇಟೆ, ಸುಬ್ರಹ್ಮಣ್ಯ, ಸುಳ್ಯ, ಬೆಳ್ತಂಗಡಿ, ಧರ್ಮಸ್ಥಲ, ಕಾರ್ಕಳ ಪ್ರದೇಶದಲ್ಲಿ ಇದ್ದಾರೆ; ಒಂದು ರೀತಿಯಲ್ಲಿ ಕೊಡಗು, ಚಿಕ್ಕಮಗಳೂರು ಮತ್ತು ದಕ್ಷಿಣ ಕನ್ನಡದ ಘಟ್ಟ ಸಾಲುಗಳಲ್ಲಿ ವಾಸಿಸುವರೆಂದು ಹೇಳಬಹುದು; This tribe has been scattered in Somavarapet, Veerajpet, Belthangadi, Karkala, Sulya;
- ಮಲೆಕುಡಿಯರ ಪ್ರದೇಶ ವಿಂಗಡಣೆಯಲ್ಲಿ ಕಿರಿಮಲೆ, ಹಿರಿಮಲೆ ಎಂಬ ಪದಗಳು ಬಳಕೆಯಾಗಿವೆ; ಕುಡಿಯರು, ಮೂರುಮಲೆ ಕುಡಿಯರು ಎಂಬ ವರ್ಗೀಕರಣವೂ ಇದೆ; ನಾಲ್ಕುಮಲೆಯವರ ಉಲ್ಲೇಖವೂ ಇದೆ; ವಾಸಸ್ಥಳವನ್ನು ಗುರುತಿಸುವಾಗ ಬಾರಿಮಲೆ, ಪಂಜಾರುಮಲೆ, ಅಂಬೊಟ್ಟೆಮಲೆ, ಎಲಿಮಲೆ ಎಂದು ಹೇಳುವುದುಂಟು; They are living in four hills ranges: Bari male, Panjaru male, Ambotte male, Eli male;
- ಕುಡಿಯರ ಸಂಪನ್ಮೂಲ ಕಾಡೇ; 'ಕುಮರಿ' ಬೇಸಾಯ ಇವರದು; ಅಂದರೆ ಕಾಡಿನ ಪೊದೆಗಳನ್ನೂ ಗಿಡಮರಗಳನ್ನೂ ಸವರಿ ವ್ಯವಸಾಯಕ್ಕೆ ಸ್ಥಳಾವಕಾಶ ಮಾಡಿಕೊಳ್ಳುವುದು;

'ಕಲ್ಕುಡ ಭೂತ' ಅವರ 'ದೆವ್ವ' ಎಂದು ತಿಳಿದು ಬರುವುದು;

- ಬೆಟ್ಟದ ಮೇಲೆ ವಾಸಿಸುವರೆಂದರೆ ಹಿಂದುಳಿದಿರುವಿಕೆ, ಕಾಡನ್ನೆ ಪ್ರಮುಖವಾಗಿ ಆಶ್ರಯಿಸಿರುವಿಕೆ, ಅವರದೇ ಆರ್ಥಿಕ ಅನುಕ್ರಮ ಇವೆಲ್ಲ ಸಾಮಾನ್ಯ ವಿಷಯಗಳು; ಇವರು ಅಸ್ಪೃಶ್ಯರಲ್ಲ ಎನ್ನುವುದು ಗಮನಾರ್ಹ ಸಂಗತಿ;
- ಏಲಕ್ಕಿಯ ಸಂಗ್ರಹ; ಜೇನು, ಸೀಗೆ ಸಂಗ್ರಹ; ಇವೆಲ್ಲವನ್ನು ಬೀಡಿಗೊ ಜಾತ್ರೆಗೊ ತೆಗೆದುಕೊಂಡು ಹೋಗುವುದು ರೂಢಿ; ಹಣದ ಚಲಾವಣೆಗಿಂತ 'ವಿನಿಮಯ ಪದ್ಧತಿ', ಅಂದರೆ ಪದಾರ್ಥಗಳನ್ನು ಕೊಟ್ಟು ಪದಾರ್ಥಗಳನ್ನು ತೆಗೆದುಕೊಳ್ಳುವ ಕ್ರಮ ಇವರದು; ಆದರೂ ಹೊರಪ್ರಪಂಚದ ಅರಿವಿರಲಿಲ್ಲ ಎಂದು ಹೇಳುವುದು ಕಷ್ಟ;
- ಕುಡಿಯರಲ್ಲಿ ಸತ್ತ ಮೇಲೆ ಹೂಳುವ, ಸುಡುವ ಎರಡೂ ಸಂಪ್ರದಾಯಗಳಿವೆ, ಅದರಿಂದ ಬಯಲುನಾಡಿನವರಿಗಿಂತ ಇದು ಭಿನ್ನವಿಲ್ಲ; ಏಳನೇ ದಿನ ದೀಪ ಇಡುವ ಸಂಪ್ರದಾಯ ಬೇರೆಡೆ ಕಾಣಸಿಗದು ಮತ್ತು ಸಂಖ್ಯಾಜಾನಪದಕ್ಕೆ ಒಳ್ಳೆಯ ಉದಾಹರಣೆ;
- ಮದುವೆಗೆ ಮೊದಲು ಹೆಣ್ಣಿನ ಮನೆಗೆ ಎಳ್ಳೆಣ್ಣೆ ಕೊಡುವ ಒಂದು ಸಂಪ್ರದಾಯವನ್ನು ಹೇಳಲಾಗಿದೆ; ಬೇರೆಡೆ ಇದರ ಉಲ್ಲೇಖವಿರದ್ದು ವಿಶೇಷ; 'ಮುಟ್ಟಿನ ಮನೆ'ಯ ಪ್ರಸ್ತಾಪವಿದೆ; ಸ್ತ್ರೀಯರು ಮುಟ್ಟಾದಾಗ ಇರಬೇಕಾದ ಮನೆಯಿದು; ಅದೊಂದು ಚಿಕ್ಕ ಗುಡಿಸಲು, ಅದಕ್ಕಾಗಿಯೇ ಕಟ್ಟಿದ್ದು;
- ನ್ಯಾಯ ತೀರ್ಮಾನ ಗುರಿಕಾರರು, ಇಲ್ಲವೆ 'ಕಲ್ಕುಡ' ದೈವದ್ದು, ಅದರಲ್ಲೂ ದೈವದ್ದೇ ಹೆಚ್ಚು ಕಾರುಬಾರು; ಆಮೇಲೆ ಗುರಿಕಾರನದು;
- ಹೀಗೆ ಕುಡಿಯರದು ಒಂದು ವಿಶಿಷ್ಟ ಸಂಸ್ಕೃತಿ; ಶ್ರಮ ಜೀವಿಗಳೆಂದು ಕಾಣುತ್ತದೆ; ಕುಲದೈವ, ಸಮುದಾಯ ದೈವ ಎಲ್ಲ ಇದ್ದರೂ, ಸುಬ್ರಹ್ಮಣ್ಯ ದೇವರಿಗೇ ಹೆಚ್ಚು ನಡೆದುಕೊಳ್ಳುವಂತೆ ಕಾಣುವುದು; ವಿಷಯದ ನಿರ್ಧಾರದ ದೈವ ಕೂಡ ಅದೇ ಆಗಿರುವುದು ಹೊರಪ್ರಪಂಚಕ್ಕೆ ಸಂಬಂಧವಿಲ್ಲ ಎನ್ನುವುದನ್ನು ನಿರಾಕರಿಸುತ್ತದೆ.
- (*ನೋಡಿ:* ಮಲೆಕುಡಿಯರು; ಆಧಾರ: ಕುಡಿಯರ ಸಂಸ್ಕೃತಿ, ಸಾಹಿತ್ಯ ಅಕಾಡೆಮಿ; ಮಲೆಕುಡಿಯರು; ತುಳು ಪೀಠ: ಬುಡಕಟ್ಟು ಅಧ್ಯಯನ, ಪ್ರಸಾರಾಂಗ, ಹಂಪಿ).

ಕುಡಿಯಾಲ kuḍiyāla :

- ನಂಜನಗೂಡು ತಾಲ್ಲೋಕಿನ ಕ್ರಿ.ಶ.೧೧೪೪ನೇ ಇಸವಿಯ ೩೨೨ನೇ ಶಾಸನದಲ್ಲಿ ಇದರ ಉಲ್ಲೇಖವಿದೆ; A place (village) has been referred in 322nd inscription of Nanjanagudu Taluk, Mysore dist; it belongs to Ganga king konganiverma;
- ಇದು ನುಗುನಾಡಿಗೆ ಸೇರಿದ ಗ್ರಾಮವಾಗಿದೆ;
- ಕುಡಿಯಾಲಕ್ಕೆ ಗಂಗದೋರೆ ಕೊಂಗುಣಿವರ್ಮ ದಾನ ಮಾಡಿದನು;
- ಮೊದಲನೆಯ ನರಸಿಂಹನು ಕ್ರಿ.ಶ.೧೧೪೪ರಲ್ಲಿ ಈ ಗ್ರಾಮದ ಪರಶುರಾಮ ದೇವರ ನೈವೇದ್ಯ, ನಂದಾದೀವಿಗೆಗೆ ದಾನ ನೀಡಿದ ಉಲ್ಲೇಖವಿದೆ.

(E.C- ೩, ಮೈ.ಜಿ.)

ಕುಡಿಲೂರು kuḍilūru :

- ತಿ.ನರಸೀಪುರ ತಾಲ್ಲೋಕಿನ ಕ್ರಿ.ಶ.೯ನೇ ಶ.ದ ೧೨೩ನೇ ಶಾಸನದಲ್ಲಿ ಇದರ ಉಲ್ಲೇಖ ಬರುತ್ತದೆ; A village that has been referred in 123rd inscription of T.Narasipura taluk, Mysore District;
- ಕುಡಿ+ಇಲ್+ಊರು ಎಂಬುದಾಗಿ ಈ ಪದವನ್ನು ಬಿಡಿಸಬಹುದು; 'ಕುಡಿ' ಎಂದರೆ ಒಕ್ಕಲುತನ, 'ಇಲ್' ಎಂದರೆ ಮನೆ; ಒಕ್ಕಲುತನ ಮಾಡುವ ಕೃಷಿಕರು ನೆಲೆಸಿದ ಹಿನ್ನೆಲೆಯಲ್ಲಿ ಈ ಸ್ಥಳನಾಮ ಬಂದಿರಬಹುದು;
- "ಕುಡಿಲೂರೊಳ್ದಿಕೆ ಸ್ವರ್ಗಸ್ಥರಾದ" ಎಂದು ಇದ್ದು, ಮುಂದಿನ ಸಾಲು ತ್ರುಟಿತವಾಗಿದೆ;
- ದಾನ ನೀಡಿದ ಉಲ್ಲೇಖವಿದ್ದರೂ ಶಾಸನ ತ್ರುಟಿತವಾದ ಕಾರಣ ವಿವರದ ಸ್ಪಷ್ಟತೆ ಇಲ್ಲ.

(E.C- ೯, ಮೈ.ಜಿ.)

ಕುಡಿವಲಿ(ಲೆ) kuḍivali(le) :

- ಪ್ರಧಾನ ಒಲೆಯ ಹಿಂಭಾಗದಲ್ಲಿ ಚಿಕ್ಕದಾಗಿ ಮಾಡಿಕೊಂಡಿರುವ ಒಲೆ; ಅಡುಗೆ ಮಾಡುವಾಗ ಪ್ರಧಾನ ಒಲೆಯ ಉರಿ ಹಿಂದಿನ ಒಲೆಗೂ

ತಗಲುವುದರಿಂದ ಅದರಲ್ಲಿ ಬೇಳೆ ಬೇಯಲು ಹಾಕುವುದು ರೂಢಿ; ನೀರು ಕಾಯಿಸಲು, ಹಾಲು ಕಾಯಿಸಲು ಮತ್ತು ಇತರೆ ಸಣ್ಣ ಪುಟ್ಟ ಪದಾರ್ಥಗಳನ್ನು ತಯಾರಿಸಲು ಉಪಯೋಗ;

- ಕುಂಬಾರರು ತಯಾರಿಸುವ ಮಣ್ಣಿನ ಒಲೆಯಲ್ಲೂ ಕುಡಿವಲೆ ಇರುವುದು ವಿಶೇಷ.

ಕುಡಿವಾಡಿ kuḍivāḍi :

ಮರಾಠ ಸೇನೆಯ ನಿಷ್ಠಾವಂತ ಅಂಗರಕ್ಷಕರು; ಶಿವಾಜಿ ಸೇನೆಯಲ್ಲಿ ಗೊಂಬೆಯಾಟಕಾರರು ಕುಡಿವಾಡಿಗಳಾಗಿದ್ದರು. The body guards of Marata army.

ಕುಡು/ಕೊಡು೧ kuḍu/koḍu[1] :

- ಕನ್ನಡದ 'ಕುಡು' ಮತ್ತು 'ಕೊಡು' ರೂಪಗಳು ಜನಪದರಲ್ಲಿ ನಿತ್ಯ ಬಳಕೆಯಲ್ಲಿರುವ ಪದಗಳು; 'ಕುಡು' ಮೂಲ ರೂಪ, ಪ್ರಾಚೀನ ರೂಪ; 'ಕೊಡು' ಅದರಿಂದ ಆಮೇಲೆ ಬೆಳೆದ ರೂಪ; ಕುಡು>ಕೊಡು, ಅಂದರೆ ಉ>ಒ ಆಗಿದೆ ಎಂದು ಅರ್ಥ, ಈ ಬದಲಾವಣೆ `mutation of vowel'- ಸ್ವರ ವ್ಯತ್ಯಯದ ನಿಯಮದ ಪ್ರಕಾರವಾಗಿಯೇ ಆದುದು; ಸ್ವಾರಸ್ಯವೆಂದರೆ, ಉಚ್ಚಾರಣೆಯಲ್ಲಿ 'ಕೊಡು'ವಿನ ಜೊತೆಯಲ್ಲಿ 'ಕುಡು' ಕೂಡ ಬಳಕೆಯಲ್ಲಿದೆ; ಕ್ರಿಯಾರೂಪ ಕೂಡ; To give; an action word in Dravidian languages;
- ದ್ರಾವಿಡ ಪದ ಎಂಬುದರಲ್ಲಿ ಅನುಮಾನವಿಲ್ಲ; ತಮಿಳಿನಲ್ಲಿ: ಕೊಟ್ಟು/ಕೊಡು/ಕೊಡುಂಗ್ಯೈ ರೂಪಗಳಿವೆ; ಮಲೆಯಾಳಂ ಯಾವಾಗಲೂ ಹೆಚ್ಚಿನ ಮಟ್ಟಿಗೆ ತಮಿಳನ್ನೇ ಅನುಸರಿಸುವುದರಿಂದ ಕೊಟ್ಟುಗ/ಕೊಡು/ಕೊಡುಂಗ್ಯೈ ರೂಪಗಳೇ ಇವೆ; ತೆಲುಗಿನಲ್ಲಿ ಕೊಡವಲಿ, ಕೊಡಲಿ ಮತ್ತು ಕೊಟ್ಟು ರೂಪಗಳಿವೆ; ತೆಲುಗು ಭಾಷೆ ಮಧ್ಯದ್ರಾವಿಡಕ್ಕೂ ಸೇರುವುದರಿಂದ ಅದರ ಮೇಲೆ ಆ ಪ್ರದೇಶದ ಆಚೆಯಲ್ಲಿರುವ ಪದಗಳ ಪ್ರಭಾವದಿಂದ ಹೀಗೆ ಆಗಿರಲೂಬಹುದು; ಕೊಡ: ಕೊಟ್, ತು: ಕೊರ್; ಈ ಪದ ದ್ರಾವಿಡ ಭಾಷೆಗಳದು ಎಂಬುದಕ್ಕೆ ಇದಕ್ಕಿಂತ ಬೇರೆ ನಿದರ್ಶನಗಳು ಆವಶ್ಯಕವಿಲ್ಲ;
- 'ಕುಡು' ಪದಕ್ಕೆ 'ಕೊಡು' ಪದವಲ್ಲದೆ ಕುಡದೆ, ಕುಡುಗೆ, ಕುಡ, ಕುಡಿ ರೂಪಗಳೂ ಚಾಲ್ತಿಯಲ್ಲಿರುವಂತೆ ತೋರುತ್ತದೆ; ಪ್ರಧಾನವಾಗಿ ಇದು ಕ್ರಿಯಾರೂಪ; ಕುಡುಗೆ/ಕೊಡುಗೆ ರೂಪಗಳು ಬಳುವಳಿ, ಕಾಣಿಕೆ, ಉಡುಗೊರೆ ಅರ್ಥವನ್ನು ಪಡೆದು ನಾಮಪದಗಳಾಗಿ ಕೆಲಸ ಮಾಡಬಹುದು;
- 'ಕುಡು' ಪದ ಏನನ್ನಾದರೂ ಕೊಡುವ ಕ್ರಿಯೆಗೆ ಸಂಬಂಧಿಸಿದ್ದು; ದಾನ ಕೊಡುವುದನ್ನು ಹೇಳುವುದು; ನಡೆಸು ಎಂಬ ಅರ್ಥವೂ ಇದೆ; ಹಾಗೆಯೇ 'ದನಿಗುಡು' ಅರ್ಥವೂ ಕೂಡ;
- ಹೊಡೆ, ಕುಟ್ಟು ಎಂಬ ಅರ್ಥಗಳಿವೆ; 'ಎರಡು ಕೊಡು/ಕುಡು ಮತ್ತೆ' ಪ್ರಯೋಗ; ಹಾಗಿಯೇ 'ಒಂದಷ್ಟು ಕಂಸಾಳೆಗಳನ್ನು ಕುಟ್ಟು' ಮತ್ತೊಂದು ಪ್ರಯೋಗ; 'ಕೊಟ್ಟರೆ ಕೊಡು ಬಿಟ್ಟರೆ ಬಿಡು' ಎಂಬ ಪ್ರಯೋಗವನ್ನೂ ನೋಡಬಹುದು;
- ಬಗ್ಗಿದ, ಕೊಕ್ಕೆ, ಸೊಟ್ಟ ಎಂಬ ಅರ್ಥದಲ್ಲಿ 'ಕುಡು' ಪದದ ಬಳಕೆ; 'ಕುಡುಗೋಲು' ಎಂಬ ರೂಪ ಈ ಹಿನ್ನೆಲೆಯಲ್ಲಿ ಬಂದಿರಬಹುದು. ಏಕೆಂದರೆ 'ಬಾಗಿದ' ರೂಪವನ್ನು ಹೊಂದಿದೆ; ಬಡಿಗೆಗಳೆಲ್ಲ ಇಂತಹ ರೂಪಗಳನ್ನೆ ಹೊಂದಿರಲು ಸಾಕು; kudu, means curved, crooked, bent shape of metal i.e. sickle;
- 'ಕುಡಿ' ಎಂಬ ಅರ್ಥದಲ್ಲಿ ಬಳಕೆ, ಕುಡುನೀರ್/ಕುಡಿನೀರ್; ಕುಡುಗೆ–ಇಸು ಪ್ರತ್ಯಯ ಸೇರಿದರೆ ಕುಡಿಸು; ಕೊಡು+ಇಸು=ಕೊಡಿಸು ಆಗುವುದು, ಬೇರೆಯವರಿಂದ ಕೊಡಿಸುಲು ಎಂಬ ಅರ್ಥದಲ್ಲಿ;
- ಕುಡು ಕುಡು/ಕೊಡುಕೊಡು ಎಂಬಿವು ಅನುಕರಣ ಪದಗಳು, ಕ್ರಿಯೆಯನ್ನು ತೀವ್ರಗೊಳಿಸುವ; ಪದ ದ್ವಂದ್ವ, ಪ್ರಾಸ;
- ಕುಡು ಒಕ್ಕಲಿಗ/ಕುಡಿಯೊಕ್ಕಲಿಗ ಅರ್ಥವಿದೆ; ಕುಡಿ–ಕುಡಿಯ/ಮಲೆ ಕುಡಿಯ; ಮಲೆಕುಡಿಯೊಕ್ಕಲಿಗ ಎಂಬ ಅರ್ಥವಾಗುತ್ತದೆಯೆ?

ಕುಡು೨ kuḍu[2] :

Vigna unguiculata(Fabaceae) cow pea; ಹುರುಳಿಕಾಳು; ಪುಷ್ಟಿದಾಯಕ ಧಾನ್ಯ; ಆಹಾರವಾಗಿ ಬಳಕೆ; ಇದರಿಂದ ತಯಾರಿಸುವ ಹಪ್ಪಳ ಬಲುರುಚಿ; ಎತ್ತು, ಕುದುರೆಗಳ ದೇಹ ಪುಷ್ಟಿಗಾಗಿ ಹುರುಳಿ ತಿನ್ನಿಸುವರು; ಎಳೆಗರುಗಳಿಗೆ ತಿರುವಿ ಹಾಲು ತೆಗೆದು ಕುಡಿಸುವರು; ಖಾಯಿಲೆಗಳಿಗೆ ಔಷಧಿಯಾಗಿ ಉಪಯುಕ್ತ(ಕೊಡ.ಜಿ); 'ಅನ್ನ ಇರುವ ಮನೆಗೆ ಹೆಣ್ಣು

ಕೊಡು, ಹುರುಳಿ ಇರುವ ಮನೆಗೆ ಎತ್ತು ಕೊಡು'*(ಗಾ)*; 'ಹಳ್ಳಿ ಮುಕ್ಕನಿಗೆ ಹುಳ್ಳಿ ಕಜ್ಜಾಯ'*(ಗಾ)*; A horse food; Horse gram;

—ಕುಡು ಪರಕೆ : 'ನಂದಿಗೋಣ' ಎಂಬ ದೈವಕ್ಕೆ ನಡೆದುಕೊಳ್ಳುವ ಹರಕೆ; ಹುರುಳಿಯನ್ನು ದೇವಸ್ಥಾನಕ್ಕೆ ಕೊಡುವ ಮೂಲಕ ಹರಕೆ ಸಲ್ಲಿಸುವುದು; A religious vow by offering horse gram to god- Nandigona.

ಕುಡು[೩] kuḍu[3] :

- 'ಕುಡು ಪ್ರದಾನೆ ವಕ್ರಚ'(ಶಮದ) ಕೊಂಕು ಎಂಬರ್ಥದಲ್ಲಿ ಕುಡುಪದ ಮರಾಠಿಯಲ್ಲಿ ಕಾಣುತ್ತದೆಂದು ಲೋಕಾಪುರರವರು ಹೇಳುತ್ತಾರೆ (ಹಳೆಗನ್ನಡ ಮತ್ತು ಮರಾಠಿ ಪು.೧೭೫);
- ಬೆಕ್ಕು, ನಾಯಿ, ಮೊದಲಾದ ಪ್ರಾಣಿಗಳ ವೃಷಣ(ತು.ನಿ); Testicle of cat and dog;
- ಸಿಡುಬಿನ ಕಲೆ; ಸಿಡುಬುರೋಗ(ತು.ನಿ); cured mark of small pox;
- ಒಂದು ವಿಭಿನ್ನ ವಿನ್ಯಾಸದ ಮೂಗುತಿ(ತು.ನಿ);
- ಕೊಡು; ಒಪ್ಪಿಸು; ದಾನಮಾಡು; to donate something;
- ಕಬ್ಬಿನ ಗಾಣದಲ್ಲಿ ಕಬ್ಬು ತುರುಕುವ ಜಾಗ; ಗಾಣದ ಬಾಯಿ(ಬೀ.ಕ.ಕೋ); ತ: ಕೊಟ್ಟು, ಮ: ಕೊಟ್ಟುಗ.

ಕುಡುಕ kuḍuka :

ಮದ್ಯಪಾನ ಮಾಡುವವನು; ಹೆಂಡ, ಸಾರಾಯಿಯಂತಹ ನಶೆ ಪದಾರ್ಥ ಸೇವಿಸುವವನು; *ಪ್ರ:* 'ಕುಡುಕ್ನ ಗೆಳೆತನ ಬೇಡ'; 'ಕುಡಿದವನು ಬಲ್ಲನೆ ಪಿಸುಮಾತ'; 'ಕುಡುಕನ ಬಾಳು ಎಷ್ಟಿದ್ದರೂ ಹಾಳು'*(ಗಾ)*; 'ಕುಡುಕ' ಪದದ ಜೊತೆಗೆ ಕುಡಕ ಮತ್ತು ಕುಡಿಕ ರೂಪಗಳೂ ಇವೆ; 'ಕುಡಿ' ಎನ್ನುವ ಕ್ರಿಯಾರೂಪದ ನಾಮಸೂಚಕಗಳೆಂದೂ ಇವನ್ನು ಕರೆಯಬಹುದು; ಪ್ರತ್ಯಯ 'ಕ' ಸೇರಿದಾಗ 'ಕುಡಿಕ' ದಲ್ಲಿ ಹಾಗೆಯೇ ಉಳಿದು 'ಕುಡುಕ' ಮತ್ತು 'ಕುಡಕ' ರೂಪಗಳಲ್ಲಿ ಮಧ್ಯದ ಸ್ವರ 'ಇ'ಗೆ ಬದಲಾಗಿ 'ಉ' ಮತ್ತು 'ಅ' ಗಳಾಗಿ ವ್ಯತ್ಯಯಗೊಂಡಿರುವುದನ್ನು ಕಾಣಬಹುದು; ಉಚ್ಚಾರಣೆಯಲ್ಲಿ ಹೀಗೆ ಆಗುವುದು ಸಹಜ; ಸುಭಗತೆ ಇದಕ್ಕೆ ಬಹುಮುಖ್ಯ ಕಾರಣ. Alcohalic addicter.

ಕುಡುಕಿ(ಕೆ)ಹಬ್ಬ kuḍuki(ke)habba :

ರೂಢಿಯಲ್ಲಿ 'ಅಜ್ಜಿಹಬ್ಬ' ಎನ್ನುವರು; ಊರಿಗೆ ಬೇನೆ, ಬೇಸರಿಕೆ, ಅಂಟು ಜಾಡ್ಯಗಳು ಬರದಿರಲೆಂದು ಮಾಡುವ ಆಚರಣೆ; ಊರವರೆಲ್ಲ ಶುಕ್ರವಾರ ಅಥವಾ ಮಂಗಳವಾರ ಕುಂಬಾರನ ಮನೆಯಿಂದ ಮಣ್ಣಿನ ಕುಡಿಕೆ ತಂದು ಅರಿಶಿನ ಕುಂಕುಮ ಹಚ್ಚಿ ಪೂಜಿಸುವರು; ಗೊತ್ತು ಮಾಡಿದ ಒಂದು ದಿನ ಅದರ ಕಂಠಕ್ಕೆ ಅರಿಶಿಣದ ಕೊಂಬನ್ನು ಕಟ್ಟಿ ಬೇವಿನಮರ ಇಲ್ಲವೇ ಆಲದ ಮರದ ಕೆಳಗಡೆ ಇಟ್ಟು ಬರುವರು; ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ ಜಿಲ್ಲೆಗಳಲ್ಲಿ ಈ ಹಬ್ಬದ ಸಂಪ್ರದಾಯವಿದೆ; ಕುಡುಕಿ=ಕುಡಿಕೆ; A festival of villagers; A celebration of goddess as grandmother of a village to avoid diseases around Bellary, Chitradurga, Davanagere;

—ಕುಡುಕಿ ಗೌರಿ : ಭಾದ್ರಪದ ಮಾಸದಲ್ಲಿ ಬರುವ ಗೌರಿ ಹಬ್ಬದಲ್ಲಿ ಮಣ್ಣಿನ ಕುಡುಕೆಯಲ್ಲಿ ಜೋಳವನ್ನು ತುಂಬಿ ಮುಚ್ಚಿ ಪೂಜಿಸುವ ಆಚರಣೆ(ಬೀ.ಜಿ). It is a process of while Millet putting in earthen pot and doing worship as good day; A festivity celebration in the month of September-Bhadrapad.

ಕುಡುಕು/ಕುಡ್ಕು kuḍuku/kuḍku :

- ಗ್ರಾಮೊಕ್ಕಲಿಗರಲ್ಲಿ(ಉ.ಕ.ಜಿ) ಮುತ್ತೈದೆ ಸಂಕೇತವಾದ ಕಿವಿಯ ಆಭರಣ; ತಿರುಪಿಲ್ಲದ ಕೆಂಪು ಹರಳಿರುವ ಕಿವಿಯೋಲೆ; ಕಿವಿಯ ಕೆಳ ಹಾಲೆಗಳಿಗೆ ಧರಿಸುವುದುಂಟು; An ear- ring;
- ಹವ್ಯಕರಲ್ಲಿ ಅಡಿಗೆ ಒಲೆ ಎಂಬರ್ಥದಲ್ಲಿ ಬಳಕೆ(ಶಿ.ಜಿ).

ಕುಡುಕುಂದೆ kuḍukunde :

- ರಾಯಚೂರು ಜಿಲ್ಲೆ ಲಿಂಗಸೊಗೂರು ತಾಲ್ಲೋಕಿನ ಕ್ರಿ.ಶ.೧೦೮೭ರ ೭ನೇ ಶಾಸನದಲ್ಲಿ ಇದರ ಉಲ್ಲೇಖವಿದೆ; A village that has been referred in 7^{th} inscription of Lingasoguru taluk, Raichuru District;

- ಕಲ್ಯಾಣಚಾಲುಕ್ಯ ತ್ರಿಭುವನಮಲ್ಲನ ಆಳ್ವಿಕೆ; it belongs to Thribhuvana Malla Of Kalyana Chalukya;
- ಮಹಾಪ್ರಧಾನಿ ಮನೆವೆರ್ಗ್ಗಡೆ ದಣ್ಣನಾಯಕ ಗೋವಿಂದಮಯ್ಯನ ನಿರೂಪದಿಂದ, ಕರಡಿಕಲ್ಲು ನಾಡಿನ ವಡ್ಡಾರಾವುಳದ ಸುಂಕವೆರ್ಗ್ಗಡೆ ಬಾಚಿಮಯ್ಯನಾಯಕ 'ಕುಂಡಕುಂದೆ'ಯಲ್ಲಿ 'ಒಕ್ಕಲುದೆರೆ'ಯನ್ನು ಬಿಟ್ಟ ವಿಚಾರವಿದೆ;
- 'ಕುಡುಕುಂದೆ' ಬಹುಶಃ 'ಕೊಂಡಕುಂದೆ'ಯಿಂದ ನಿಷ್ಪತ್ತಿಯಾಗಿರಬೇಕೆಂದು ಹೇಳಲಾಗಿದೆ; ಆದರೆ ಕು>ಕೊ(ಉ>ಒ) ಆಗಿರುವ ಸಾಧ್ಯತೆ ಹೆಚ್ಚು, ಕೊ>ಕು(ಒ>ಉ) ಆಗಿರುವ ಸಂದರ್ಭಗಳು ಕಡಿಮೆ; ಏಕೆಂದರೆ 'ಸ್ವರ ವ್ಯತ್ಯಯ' ನಿಯಮಕ್ಕೆ ಸಂಬಂಧಿಸಿದ ವಿಚಾರವಿದು.

(ಕ.ವಿ.ವಿ.ಶಾ.ಸಂ.೭; ಹಂಪಿ)

- ಅರಸೀಕೆರೆ ತಾಲ್ಲೋಕು ಕ್ರಿ.ಶ.೧೨೩೩ರ ೩೧೪ನೇ ಶಾಸನದಲ್ಲಿ (ಹೊಯ್ಸಳ ಮುಮ್ಮಡಿ ನರಸಿಂಹ) 'ಕುಡುಕುಂದಿ' ಉಲ್ಲೇಖವಿದೆ;
- 'ಕುಡುಕುಂದಿ' ಮತ್ತು 'ಕುಡುಕುಂದೆ' ಎರಡು ರೂಪಗಳೂ ಒಂದೆ ಆಗಿವೆ (ಅಂತ್ಯಾಕ್ಷರದಲ್ಲಿ ಇ>ಎ ಆಗಿದೆ; ಸಾಮಾನ್ಯ);
- 'ಕುಡ' ಎಂದರೆ ವಕ್ರವಾಗಿರುವಿಕೆ, ಬಾಗಿರುವಿಕೆ, 'ಕುಂದಿ' ಎಂದರೆ ಬೆಟ್ಟು ಅಥವಾ ಒಂದು ಜಾತಿಯ ಮಲ್ಲಿಗೆ;
- ಹೀಗಾಗಿ 'ಕುಡ(ಡು)ಕುಂದಿ' ಸ್ಥಳನಾಮ ಭೌಗೋಳಿಕ ವಾಚಕವೆಂದು ತೋರುತ್ತದೆ.

(E.C- ೧೦, ಹಾ.ಜಿ.)

ಕುಡು(ಡ)ಕೂರು kuḍu(ḍa)kūru :

- ಕೊಳ್ಳೇಗಾಲ ತಾಲ್ಲೋಕಿನ ಕ್ರಿ.ಶ.೧೩೨೧ರ ೩೦ನೇ ಶಾಸನದಲ್ಲಿ ಈ ಊರಿನ ಪ್ರಸ್ತಾಪವಿದೆ; A village that has been referred in 30th inscription of Koilegala tq of Chamarajanagara dist.
- ಕುಡ+ಊರು ಎಂಬ ಸಂಯುಕ್ತ ಪದವೇ ಕುಡಕೂರು/ಕುಡುಕೂರು ಎಂದು ವಿವಿಧ ರೀತಿಯಲ್ಲಿ ಬಳಕೆಯಾಗಿದೆ;
- 'ಕುಡ' ಪದವನ್ನೇ ಮೂಲವೆಂದು ಒಪ್ಪಿಕೊಳ್ಳುವುದಾದರೆ, 'ಕ' ಎಂಬುದರ ಪ್ರವೇಶಕ್ಕೆ ಕಾರಣ ತಿಳಿಯದು;
- 'ಕುಡ' ಎಂದರೆ ಒಂದು ಜಾತಿಯ ಸಸ್ಯ, ನೇಗಿಲ ತುದಿಯ ಕಬ್ಬಿಣದ ಭಾಗ(ಕುಳ) ಆಗುತ್ತದೆ; A kind of plant species.
- ಕೃಷಿ ಅಥವಾ ಸಸ್ಯವಾಚಕವಾಗಿ ಈ ಊರ ಹೆಸರು ಬಂದಿರಬಹುದು; The end part or post of iron sharp rod that connects to plough the ground;
- ಹೊಯ್ಸಳ ದೊರೆ ಮುಮ್ಮಡಿ ಬಲ್ಲಾಳನ ಕಾಲದಲ್ಲಿ ಇದು 'ಮಾಧವಪುರ' ಎಂಬ ಅಗ್ರಹಾರವಾಗಿತ್ತು; ಮುಮ್ಮಡಿ ಬಲ್ಲಾಳನು ಈ 'ಕುಡಕೂರ' ಶೇಷ ಮಹಾಜನಗಳಿಗೆ ದಾನ ನೀಡಿದ ತಾಮ್ರಶಾಸನದ ಉಲ್ಲೇಖವಿದೆ.

(E.C- ४, ಮೈ.ಜಿ.)

ಕುಡುಗಲೂರು೧ kuḍugalūru[1] :

- ಚಿಕ್ಕಮಗಳೂರು ತಾಲ್ಲೋಕಿನ ಮರಲೆ ಎಂಬ ಪ್ರದೇಶದಲ್ಲಿ ದೊರೆತಿರುವ ಕ್ರಿ.ಶ.೧೨೪೫ಕ್ಕೆ ಸೇರಿದ ೧೧೦ನೇ ಶಾಸನದಲ್ಲಿ 'ಕುಡುಗಲೂರು' ಉಲ್ಲೇಖವಿದೆ; A village that has been referred in 110th inscription of marale of chikkamangaluru;
- ಇದು ಎರಡು ಗ್ರಾಮಗಳು ಸಂಧಿಸುವ ಪ್ರದೇಶದಲ್ಲಿರುವ ಸ್ಥಳವಾಗಿರಬಹುದೆಂದು ಊಹಿಸಲಾಗಿದೆ; A meeting place of two villages;
- 'ಕುಡುಗಲೂರು' 'ಕೂಡುಗಲೂರು' ಆಗಿರಬಹುದೆ? ಹಾಗೆಂದು ಒಪ್ಪಿಕೊಂಡರೆ ಈ ಎರಡರಲ್ಲಿ ಯಾವುದು ಪ್ರಾಚೀನ ಎಂಬ ಸಮಸ್ಯೆ ಉಂಟಾಗುತ್ತದೆ;
- 'ಕುಡುಗ' ಪದಕ್ಕೆ 'ಕೂಡುಗ'ದ ಅರ್ಥ ಕೊಟ್ಟರೆ ಮಾತ್ರ ಈ ಸ್ಥಳನಾಮವನ್ನು ಅರ್ಥೈಸಬಹುದಾಗಿದೆ.

(E.C- ೧೧, ಚಿಕ್ಕ.ಜಿ.)

ಕುಡುಗುಲೂರು೨ kuḍugulūru[2] :

- ಚಾಮರಾಜನಗರ ತಾಲ್ಲೋಕಿನ ಕ್ರಿ.ಶ.೧೫೩೭ರ ೩೭ನೇ ಶಾಸನದಲ್ಲಿ ಇದರ ಉಲ್ಲೇಖ; A village

that has been referred in 302th inscription of Chamarajanagara;

- ಕುಡುಗುಲ್+ಊರು>ಕುಡುಗೊಲ್+ಊರು> ಕುಡುಗೋಲ್+ಊರು ಆಗಿರಬಹುದು; ಗುಲ್>ಗೊಲ್ ಅಗುವುದು ನಿಯಮದಲ್ಲಿಯೇ ಇದೆ, ಉ>ಒ ಆಗಿದೆ, ಸ್ವರವ್ಯತ್ಯಯ; ಅದು ದೀರ್ಘ ಸ್ವರವಾಗಿ ಮಾರ್ಪಟ್ಟಿರುವುದು ವ್ಯತ್ಯಾಸ ಪ್ರಕ್ರಿಯೆಯ ಭಾಗವಾಗಿಯೇ ಇದೆ;
- ಕುಡುಗುಲ್/ಕುಡುಗೋಲ್ ಎಂದರೆ ಕೃಷಿಗೆ ಬಳಸುವ ಒಂದು ಕಬ್ಬಿಣದ ಆಯುಧ, ವಕ್ರಾಕಾರದಲ್ಲಿರುವ ಆಯುಧ; ಕೃಷಿಯ ಹಿನ್ನೆಲೆಯಲ್ಲಿ ಈ ಸ್ಥಳನಾಮ ಬಂದಿರಬಹುದು; A sickle; made up of iron used in harvesting crops;
- ಪ್ರಸ್ತುತ ಈ ಊರಿಗೆ 'ತೆರಕಣಾಂಬಿ' ಎಂದು ಕರೆಯಲಾಗುವುದು; ಪ್ರಾಚೀನ ಕಾಲದಲ್ಲಿ ಇದು ಹೊಯ್ಸಳ ದೇಶದಲ್ಲಿತ್ತು;
- ವಿಜಯನಗರದ ಅರಸ ಅಚ್ಯುತದೇವರಾಯನ ಆಳ್ವಿಕೆಯ ಕಾಲದಲ್ಲಿ 'ಕುಡುಗುಲೂರ' ಪ್ರತಿನಾಮಧೇಯವಾದ ತಿರಕಣಾಂಬಿಯ ತಿರುವಲನಾಥ ದೇವರಿಗೆ ತಿಮ್ಮಪ್ಪನ ಪುರಾದಿಯಾಗಿ ಅನೇಕ ಗ್ರಾಮಗಳನ್ನು ದಾನ ಪಡೆಯಲಾಯಿತು.

(E.C- ೪, ಮೈ.ಜಿ.)

ಕುಡುಗೋಲು kuḍugōlu :

ಒಳ ಅಂಚು ಹರಿತವಾಗಿದ್ದು ಅರ್ಧಚಂದ್ರಾಕಾರದಂತೆ ಬಾಗಿರುವ ಕಬ್ಬಿಣದ ಕತ್ತಿ; ಅಲಗನ್ನು ಹಿಡಿಗೆ ಜೋಡಿಸಿ ಬಿಗಿಯಾಗಿ ಹಿಡಿದಿರುವಂತೆ ಬಿಗಿದಿರುವ ಸಣ್ಣದಾದ ಒಂದಿಂಚು ಅಗಲವುಳ್ಳ ಕಬ್ಬಿಣದ ಬಳೆ ಪ್ರಧಾನವಾಗಿರುತ್ತದೆ; ಹಿಡಿಯನ್ನು ಮರದ ತುಂಡು ಅಥವಾ ಗಟ್ಟಿ ಬಿದಿರಿನಿಂದ ಮಾಡಿರುವರು; ಮನೆಯಲ್ಲಿ ತರಕಾರಿ, ಮಾಂಸ ಕತ್ತರಿಸಲು, ಗದ್ದೆಯಲ್ಲಿ ಭತ್ತ, ರಾಗಿ, ಕಬ್ಬು ಮೊದಲಾದ ಬೆಳೆಗಳನ್ನು ಕಟಾವು ಮಾಡಲು ಬಳಕೆ; ಮೊಂಡಾದ ಅಥವಾ ಹರಿತವಲ್ಲದ ಕುಡುಗೋಲನ್ನು ಅರದಿಂದ ಉಜ್ಜುವುದರಿಂದ, ಕಲ್ಲಿನ ಮೇಲೆ ಉಜ್ಜುವುದರಿಂದಲೂ ಹರಿತ ಮಾಡುವರು; ಬೇಟೆಯಲ್ಲಿ ಪ್ರಾಣಿಗಳ ಚರ್ಮ ತೆಗೆಯಲು ಬಳಕೆ; ವ್ಯರೂ: ಕುಡಮೊಳ(ತು.ಜಿ), ಕುಡಗಿಲು(ಬೀ.ಜಿ); *ಪ್ರ:* 'ಕುಯ್ಯಲಾರದವನಿಗೆ ಕುಡುಗೋಲು ಒಂಬತ್ತು'*(ಗಾ)*; An iron sickle used for reaping crops of paddy, wheat;

—***ಕಳೆಕುಡ್ಲು*** : ಕಳೆಗಿಡಗಳನ್ನು ಬೇರು ಸಮೇತ ಕೀಳಲು ಬಳಸುವ ಕುಡಲು; *ಪ್ರ:* 'ಕುಡ್ಲು ನುಂಗಿದೋನ ಕುಂಡೆ ಹರಿಯುತ್ತ'*(ಗಾ)*; A sickle or scythe used for removing weeds;

—***ಕುಡುಗೋಲ್ದ್ಯಾವ್ರು*** : ಕೊಯ್ಲಿನ ನಂತರ ಕೊನೆಯಲ್ಲಿ ಮಾಡುವ ಪೂಜೆ(ಬ.ಜಿ); A god of sickle worship after reaping is over;

—***ಕುಡುಗೋಲು ಪೂಜೆ*** : ಕಟಾವಿಗೂ ಮುನ್ನ ಕುಡುಗೋಲಿಗೆ ಮಾಡುವ ಪೂಜೆ; A worship of sickle before the reaping crops;

—***ಕುಡ್ಲುಕೊಕ್ಕೆ*** : ಉದ್ದನೆಯ ಮರದ ಕೋಲಿನ ತುದಿಗೆ ಕುಡುಗೋಲನ್ನು ಕಟ್ಟಿರುವುದು; ಇದರಿಂದ ಎತ್ತರದಲ್ಲಿರುವ ಸೊಪ್ಪು, ಸೆಣೆಯಲು, ಕಾಯಿ ಕೀಳಲು ಬಳಕೆ; A sickle which has been tied to a long thick wooden stick to cut greens, creeper of high place;

—***ಕುಡ್ಲುಸಿಕ್ಲು*** : ಹೊಲದಲ್ಲಿ ಬೆಳೆ ಕಟಾವಾಗಿ ಒಕ್ಕಣೆ ಮಾಡಿ ಕೊನೆಯಲ್ಲಿ ರಾಶಿ ಪೂಜೆ ಮಾಡುವಾಗ ರಾಶಿ ಮಧ್ಯೆ ಪೂರ್ವಾಭಿಮುಖವಾಗಿ ಕುಡುಗೋಲನ್ನು ಸಿಕ್ಕಿಸಿ ಪೂಜಿಸುವರು; ಇದು ದೃಷ್ಟಿ ನಿವಾರಣೆಗಾಗಿ ಮಾಡುವ ಆಚರಣೆಯಾಗಿದೆ; ಜೊತೆಗೆ 'ಕೊಯ್ಲು' ಕೆಲಸದಲ್ಲಿ ಪಾತ್ರವಹಿಸಿದ 'ಕುಡುಗೋಲು' ಉಪಕರಣದ ಪ್ರತಿನಿಧೀಕರಣವೂ ಆಗಿದೆ; 'ಕುಡುಗೋಲು' ಉಪಕರಣ ಸಂಸ್ಕೃತಿಯ ಭಾಗವೇ ಆಗಿದೆ. A worship sickle by fixing centre of grain heap in the direction of the east after harvesting.

ಕುಡುತಂಬಲ kuḍutambala :

ಭೂತಾರಾಧನೆಯ ಒಂದು ಆಚರಣೆ; ಭೂತಗಳ ಭಂಡಾರವನ್ನು ಗುಡಿಯಿಂದ ಹೊರ ತೆಗೆಯುವ ಮುನ್ನ ಮಂಚದ ಮೇಲೆ ಸ್ವಸ್ತಿಕ ಅಥವಾ ರಂಗೋಲಿ ಬರೆದು ಅದಕ್ಕೆ ಕೈ ಮುಗಿಯುವುದು. A festivity

practice of Bhutaworship in South kannada.

ಕುಡುಪ kuḍupa :

ತಲೆಗೂದಲು ಕತ್ತರಿಸುವ ವೃತ್ತಿ ನಿರ್ವಹಿಸುವ ವ್ಯಕ್ತಿ; ಕ್ಷೌರಿಕ; ನಾಪಿತ; ಇವರಿಗೆ ಗ್ರಾಮೀಣರು ಹಡದೆ ಕೊಡುವ ಕ್ರಮವನ್ನು ಬೆಳೆಸಿಕೊಂಡು ಬಂದಿರುವರು; ಸುಗ್ಗಿಯಲ್ಲಿ ವರ್ಷಕ್ಕೆ ಇಷ್ಟು ದವಸ ಧಾನ್ಯ ಎಂದು ನಿಗದಿಪಡಿಸಿ ಕೊಡುವರು; ವರ್ಷಪೂರ್ತಿ ಗಡ್ಡ ತೆಗೆಯುವ, ತಲೆಕೂದಲು ತೆಗೆಯುವ ಕಾರ್ಯ ನಿರ್ವಹಿಸುವರು. A person who shave the head; an hair cutter.

ಕುಡುಪಿ kuḍupi :

- ಗಿಡಗಳನ್ನು ನೆಡುವ ಮಣ್ಣಿನ ತೊಟ್ಟಿ(ಗ.ಜಿ); A earthen pot ; used for plantation;
- ಕೆಡುವುದು; ಹಾಳಾಗುವಿಕೆ(ತು.ಜಿ); Perish,ruin;
- ಶತ್ರುತ್ವ; ವೈರಿ(ಕೊಡ.ಜಿ). enemity.

ಕುಡುಪು/ಕುಡ್ಪು kuḍupu/kuḍpu :

- ಅನ್ನ ಬಸಿಯಲು ಬಳಸುವ ಸಾಧನ; ಎಂಜಿರು, ಮಾದೇರಿ ಬಳ್ಳಿಗಳಿಂದ ಕಲಾತ್ಮಕವಾಗಿ ಹೆಣೆದ ತಟ್ಟೆಯಂತಹ ರಚನೆ; ತೂತು ಇರುವ ಎಸರು ತಟ್ಟೆ *ಪ್ರ:* 'ಗಂಜಿ ಬಾಗಿಕೆ ಕುಡ್ಪು ತಾ'; A device that uses to strain the rice soup or a gruel of rice, a thin gruel of rice;
- ಚಿಕ್ಕಬುಟ್ಟಿ; ತಾಳೆ ಗರಿಯಿಂದ ಮಾಡಿದ್ದು; a small palm leaf basket;
- ತಮಿಳಿನಲ್ಲಿ 'ಕುಡಲೈ' ರೂಪವಿದೆ, ತುಳುವಿನಲ್ಲಿ 'ಕುಡುಪು' ರೂಪವೇ ಇದೆ(ಗೌಡ. ಕನ್ನಡ);
- ಹಗ್ಗ ಹುರಿ ಬೀಳುವಿಕೆ; ದಾರ ಸಿಕ್ಕುಗಟ್ಟುವಿಕೆ; ಮತ್ಸರ; ಹೊಟ್ಟೆಕಿಚ್ಚು(ಬೀ.ಪ.ಕೋ).

ಕುಡುಪ್ಪೋಳು kuḍuppōḷu :

ಜೇನು ಹುಳು; ಅದರಲ್ಲಿಯೂ ದೊಡ್ಡದಾದ ಜೇನು; ಹೆಜ್ಜೇನು. Honey bee.

ಕುಡುಬಲ್ಯಾರ್ kuḍubalyār :

ಭೂತಾರಾಧನೆಯಲ್ಲಿನ ಒಂದು ಆಚರಣೆ; ದೈವಕ್ಕೆ ಮುಖ್ಯವಾಗಿ ಹುರುಳಿ 'ಕುಡು' ಎಂದರೆ ಹುರುಳಿ; ಮತ್ತು 'ಬಲ್ಯಾರ್' ಒಂದು ಬಗೆಯ ಮೀನು; ಮೀನಿನ ಮೇಲೋಗರ ಮಾಡಿ ಎಡೆ ಬಡಿಸುವ ಸಂಪ್ರದಾಯ(ದ.ಕ). A ritual practice in Bhuta Worship, the celebration of offering horse gram.

ಕುಡುಮ kuḍuma :

- ಕ್ರಿ.ಶ.೧೧ನೇಯ ಶತಮಾನದ ಶಾಸನದಲ್ಲಿ 'ಕುಡುಮ'ದ ಚಂದ್ರನಾಥ ಬಸದಿಯ ಉಲ್ಲೇಖ ದೊರೆಯುತ್ತದೆ; The old name of today's Dharmastala, a place that has been referred in an inscription of 11th century;
- ಕ್ರಿ.ಶ.ಸು.೧೫ನೇ ಶತಮಾನದಲ್ಲಿ ವಾದಿರಾಜರು 'ಕುಡುಮ'ಕ್ಕೆ 'ಧರ್ಮಸ್ಥಳ' ಎಂಬ ಹೆಸರನ್ನು ನೀಡಿದರೆಂದು ತಿಳಿದು ಬರುತ್ತದೆ;
- 'ಕುಡುಮ'ಕ್ಕೆ ನಿಷ್ಪತ್ತಿ ಹೇಳುವುದು ಕಷ್ಟ

ಕುಡೆಹೊಟ್ಟು kuḍehoṭṭu :

ಕುಸುಬಿ ಬಡಿದು ಕಾಳನ್ನು ಬೇರೆ ಮಾಡಿದ ಮೇಲೆ ಉಳಿಯುವ ಬೆಳ್ಳಗಿನ ಚರಟವನ್ನು ಒಂದೆಡೆಗೆ ಕೂಡಿಸಿ ರಾಶಿ ಹಾಕು(ಬ.ಜಿ). To heap the waste/husk after husking kusubi grain, a kind of oil grain.

ಕುಡ್ಕೊಂಡು ಜೋಡು kuḍkonḍu jōḍu :

ಗೊಂಡರ ಹೆಂಗಸರು ಧರಿಸುವ ಕಿವಿಯ ಓಲೆ; ಓಲೆಯ ತಳ ಭಾಗಕ್ಕೆ ಸೇರಿಸಿ ಹಾಕಿಕೊಳ್ಳುವ 'ಲೋಲಾಕಿ'ನಂತಹ ಆಭರಣ(ಉಕ.ಜಿ). A lady's ear-ring.

ಕುಡ್ಗಿ kuḍgi :

ಅಕ್ಕಿಯನ್ನು ಸಂಗ್ರಹಿಸಿಡುವ ಒಂದು ಕ್ರಮ; ಹುಲ್ಲಿನಿಂದ ಮಾಡಿದ ಸಣ್ಣ ಮೂಡೆಯಲ್ಲಿ ಅಕ್ಕಿ ಇಟ್ಟು ರಕ್ಷಿಸುವುದು; ಸಣ್ಣ ಅಕ್ಕಿಮೂಟೆ; ಅಕ್ಕಿ ಮೂಡೆಗಿಂತ ಚಿಕ್ಕದು(ಕುಡ್ಗಿ = ಸಣ್ಣದು)(ಉ.ಕ.ಜಿ). A method of preserving rice; It is made up of straws or hay.

ಕುಡ್ಡಸುಳಿ kuḍḍasuḷi :

ಬೈಗುಳ ಪದ; ನೋಡಿದ್ದನ್ನು ನೋಡದಿರುವಂತೆ ವರ್ತಿಸುವುದು; ಎಲ್ಲಿ ಸಹಾಯ

ಮಾಡಬೇಕಾಗುತ್ತೆಂದು ಹಿಂಜರಿಯುವ ಗುಣದವರು; 'ಕುಡ್ಡ' ಎನ್ನುವುದಕ್ಕೆ 'ಕುರುಡ' ಎಂಬ ಅರ್ಥವಿದೆ; ಇಲ್ಲಿ ಒಂದು ರೀತಿಯ 'ಜ್ಞಾನ ಕುರುಡ' ನ್ನು ಈ ಪದ ನಿರ್ದೇಶಿಸುತ್ತಿರಬಹುದು; ನೋಡಿದ್ದು ನೋಡದಂತಿರುವುದೂ ಇದನ್ನೇ ಹೇಳುತ್ತಿರುವಂತೆ ತೋರುತ್ತದೆ. An abusing word.

ಕುಡ್ಡಿ ಕುಟಾರ kuḍḍi kuṭāra :

- ಕುರುಡಿ ಕುಠಾರ; ಕಣಜದ ಜಾತಿಯ ಹುಳ;
- ಒಂದೇ ರಂಧ್ರದ ಮಣ್ಣಿನ ಗೂಡನ್ನು ಕಟ್ಟುವ ಕಣಜದ ಜಾತಿಗೆ ಸೇರಿದ ಹುಳ(ಕುಡ್ಡಿ = ಚಿಕ್ಕದು) (ಬೆ.ಜಿ). A kind of hornet- insect which builds it's abode in clay with a single hole entrance.

ಕುಡ್ಡಿ ಚಿತ್ತಾ kuḍḍi cittā :

ಚಿತ್ತಾ ನಕ್ಷತ್ರದಲ್ಲಿ ಬರುವ ಮಳೆ; ಸೂರ್ಯ ಚಿತ್ತಾ ನಕ್ಷತ್ರದಲ್ಲಿ ಸಂಚರಿಸುವಾಗ ಆಗುವಂತಹ ಮಳೆ; ಇದು ವ್ಯಾಪಕವಾಗಿ ಸುರಿಯುವುದಿಲ್ಲ; ಒಂದೇ ಹೊಲದಲ್ಲಿ ಆ ಭಾಗದಲ್ಲಿ ಮಳೆ ಆಗಿದ್ದರೆ ಈ ಭಾಗದಲ್ಲಿ ಬಿದ್ದಿರುವುದಿಲ್ಲ; ಈ ಕಾರಣದಿಂದ ಇದನ್ನು ಕಣ್ಣು ಕಾಣದ ಕುರುಡಿ ಮಳೆ ಎನ್ನುವರು; ವಿವರಕ್ಕೆ *ನೋಡಿ:* ಚಿತ್ತೆಮಳೆ; 'ಕುಡ್ಡಿ' ಎಂದರೆ 'ಕುರುಡಿ' ಎಂದು ಅರ್ಥ; ರೂಪವೂ ಕುರುಡಿ > ಕುಡ್ಡಿ ಆಗಿಯೇ ಬಂದಿರಬಹುದು; ಹೀಗೆ ಆಗುವಾಗ 'ರ' ಕಾರದ ನಷ್ಟದ ಪರಿಹಾರಾರ್ಥವಾಗಿ 'ಡ' ಕಾರ ದ್ವಿತ್ವ ಪಡೆದಿರುವಂತೆ ಕಾಣುತ್ತದೆ. A name of rain; it rains in (chitta star)in the month august.

ಕುಡ್ತ kuḍta :

ಹೊಲಿದ ಬಟ್ಟೆ; ಧರಿಸಲು ಸಿದ್ಧವಾಗಿರುವ ವಸ್ತ್ರ; ಸಿದ್ಧ ಉಡುಪು(ಕೊಡ.ಜಿ). Readymade cloth/dress.

ಕುಡ್ತಗಿ kuḍtagi :

- 'ಅಕ್ಕಿಮುಡಿ'(ಮೂಡೆ) ಕಟ್ಟುವಾಗ ಬೆತ್ತದ ಸೀಳುಗಳನ್ನು ಬಿಗಿಗೊಳಿಸಲು ಬಳಸುವ ಮರದ ಸಾಧನ; 'ಕುಟ್ಟು ಒತ್ತಿಗೆ'(ಉಕ.ಜಿ);
- ನಾರನ್ನು ಉತ್ಪಾದಿಸಲು ಬಳಸುವ ಮರ; ಇದರ ಸಿಪ್ಪೆಯನ್ನು ಕೊಳೆಯಿಸಿ ನಾರು ತಯಾರಿಸಿ ಬಲೆ ನೇಯ್ಗೆಯಲ್ಲಿ ಬಳಕೆ. A device which is used to the bamboo thin sticks/creeps to pack rice in a socket as `Akkimudi'.

ಕುಡ್ತಲೆ kuḍtale :

- ಒಂದು ಜಾತಿಯ ಸಮುದ್ರಮೀನು; A kind of fish species;
- ಭೂಮಿಯ ಅಧಿಕೃತ ಒಡೆತನದ ಹಕ್ಕುಪತ್ರ(ದ.ಕ.); A record of land possession;
- ***—ಕುಡ್ತಲೆದಾರ*** : ಭೂಮಿಯ ಅಧಿಕೃತ ಒಡೆತನ ಪಡೆದ ವ್ಯಕ್ತಿ; ಜಮೀನುದ್ದಾರ(ದ.ಕ). A land lord.

ಕುಡ್ಲೆ kuḍle :

- ಸಮುದ್ರದ ತೀರ ಪ್ರದೇಶಗಳಲ್ಲಿ ಸಮನಾಂತರವಾಗಿ ಕಲ್ಲಿನ ಬಂಡೆ, ಗುಡ್ಡಗಳು ಹೊರ ಚಾಚಿರುವ ಭಾಗ; ಇಂತಹ ಗುಡ್ಡಗಳ ನಡುವೆ ಸಮುದ್ರದ ನೀರಿನ ಒಡ್ಡು; ನಿರ್ಮಾಣವಾಗಿ ಕಡಲಿನ ಅಬ್ಬರವಿರುವುದಿಲ್ಲ; ಇದೊಂದು ಮೀನುಗಾರರ ನೈಸರ್ಗಿಕ ಬಂದರು; ಗೋಕರ್ಣದ ಓಂಬೀಚ್, ಅಂಕೋಲಾದ ಹೊನ್ನೆಬೀಚ್ ಇದಕ್ಕೆ ಉದಾಹರಣೆ; ಇವು ಪ್ರವಾಸಿಗರ ಆಕರ್ಷಕ ತಾಣ; A place amid of stretched rocks and cliff near the shore/coast/beaches.
- ಸಮುದ್ರದಲ್ಲಿ ದೊರೆಯುವ ಒಂದು ಜಾತಿಯ ಮೀನು(ದ.ಕ). A kind of sea fish.

ಕುಡ್ಲೆ ಮಾಲೆ kuḍle māle :

ಹಗುರವಾದ ಮರದ ಪದರುಗಳಿಂದ ಗುಡಿಕಾರರು ತಯಾರಿಸುವ ಸುಂದರವಾದ ಹಾರ; ಅದಕ್ಕೆ ಬಣ್ಣ ಕಟ್ಟುವುದುಂಟು. A garland that is made up of wooden layers by handicraftsman.

ಕುಣಕಾಲಗಿತ್ತಿ kuṇakālagitti :

- ಬೈಗುಳವಾಗಿ ರೂಢಿಯಲ್ಲಿರುವ ಪದ; ಅಡ್ಡದಾರಿ ಹಿಡಿದ ಹೆಂಗಸನ್ನು ಕುರಿತು ಹೀಗೆ ಬೈಯ್ಯುವುದು ರೂಢಿ;
- ಹೆಣ್ಣುಮಕ್ಕಳು ಚೆಲ್ಲು ಚೆಲ್ಲಾಗಿ ವಯ್ಯಾರ ಮಾಡುತ್ತಿದ್ದರೆ ಅಂತಹವರಿಗೂ 'ಕುಣಕಾಲಗಿತ್ತಿ ಆಡಿದಂಗೆ ಆಡಬೇಡ' ಎಂದು ಹೇಳುವುದು ಕಂಡುಬಂದಿದೆ;

- ಪ್ರ: 'ನಿಂತಲ್ಲಿ ನಿಂದ್ರಂಗಿಲ್ಲ ಕುಂತಲ್ಲಿ ಕುಂದ್ರಂಗಿಲ್ಲ ಕುಣಕಾಲಗಿತ್ತಿಯಂಗ್ ಆಡ್ತಿಯಲ್ಲ ಮಾರಾಯ್ತಿ.

ಕುಣಕಾಲಿ kuṇakāli :

- ವೈಯಾರಿ; Coquetry showiness;
- ಕುಣಿದಾಡುವವಳು(ಬೆಂ.ಜಿ);
- ಉತ್ಸಾಹಿ ಹುಡುಗಿ; energetic girl;
- ತುದಿ ಕಾಲಿನ ಮೇಲೆಯೇ ಓಡಾಡುವ ಹುಡುಗಿ(ಬೆ.ಜಿ); ನಿಂತಕಡೆ ನಿಲ್ಲದವಳು; ಪ್ರ: 'ಕುಣಕಾಲಿ ಸೀರೆ ಮೊಣಕಾಲಿನವರೆಗೆ'; A sprint running girl;
- —*ಕುಣಗಾಲಗಿತ್ತಿ* : ಪಡ್ಡೆ ಹೆಣ್ಣು ಮಗಳು; ತುಂಟಿ ಉಡಾಳಿ; ಗಂಡುಬೀರಿ. Manley woman; Shrew/amazon/virago/termagant.

ಕುಣಕಾಲು/ಕಣಕಾಲು kuṇakālu/ kaṇakālu :

- ಕಾಲಿನ ಮಂಡಿಯ ಮತ್ತು ಪಾದದ ನಡುವಿನ ಭಾಗ; A part between knee and ankle/feet of a leg;
- ಉಚ್ಚಾರಣೆಯ ಸೌಲಭ್ಯಕ್ಕಾಗಿ 'ಕಣಕಾಲು' > 'ಕುಣಕಾಲು' ಆಗಿರುವಂತೆ ತೋರುತ್ತದೆ. ಉಚ್ಚಾರಣೆಯಲ್ಲಿ 'ಅ'/'ಇ' ಗಳಿಗೆ ಬದಲಾಗಿ 'ಉ' ಸೇರುವುದು ವಾಡಿಕೆ(ಕುಣ = ಕಣ+ಕಾಲು).

ಕುಣಕಿ kuṇaki :

- ಕುಣಿತ; ನರ್ತನ; ಪ್ರ: 'ಜೋಗುಳ ಝುಂಪಯ್ಯ! ಕುಣಕಿಯ ಮಾರಯ್ಯ! ತಂಡ ಸೂರಯ್ಯ ಬುಗಡಯ್ಯ!' A dance/ a dance step;
- ಗುಂಡಿ; ದನಗಳ ಕೊರಳಿಗೆ ಕಟ್ಟುವ ಗಂಟೆ(ಕಲ.ಜಿ); A bell that tied to the neck of cattle;
- —*ಕುಣಿಕಿ ಹಿಡಿ* : ಕೋಪಗೊಂಡು ಅಡ್ಡಾಡು (ಕಲ.ಜಿ). To walk with angry.

ಕುಣಕೈ kuṇakai :

ಮುಂಗೈನ ಕುಣಿಕೆಯ ಕೀಲುಭಾಗದ ಕೈ; ಮೊಣಕೈ(ಗೈ). Elbow.

ಕುಣಚಟ್ಟು kuṇacaṭṭu :

ಮಲೆನಾಡು ಪ್ರದೇಶದ ಜನಪದ ಆಟ; ಗಂಡುಮಕ್ಕಳು ವಿಶೇಷವಾಗಿ ಮಳೆಗಾಲದಲ್ಲಿ ಆಡುವ ಆಟ; ಮಳೆಯಲ್ಲಿ ಮೈದಾನದಲ್ಲಿ ಆಟ ಆಡಲು ಸಾಧ್ಯವಿಲ್ಲದಿದ್ದಾಗ ಮನೆಯ ಜಗುಲಿಯಲ್ಲಿ ಇಬ್ಬರಿಗಿಂತ ಹೆಚ್ಚು ಮಂದಿ ಆಟ ಆಡುವರು; ಎರಡೂ ಕಾಲುಗಳನ್ನು ಏಕಕಾಲದಲ್ಲಿ ಮೇಲಕ್ಕೆತ್ತಿ ಅಂಡಿಗೆ ಮುಟ್ಟಿಸಿ ಮತ್ತೆ ನೆಲಕ್ಕೆ ಊರುವುದು 'ಕುಣಚಟ್ಟಿನ' ವೈಖರಿ; ಯಾರು ಹೆಚ್ಚು 'ಕುಣಚಟ್ಟು' ಹೊಡೆಯುತ್ತಾರೋ ಅವರೇ ಬಲಶಾಲಿಗಳು. A folk game of Malenadu of the Westernghats; A rainy play of boys of Malenadu.

ಕುಣಜನ ಕೊಟ್ಟೆ kuṇajana koṭṭe :

ಸಣ್ಣ ಇರುವೆ; ಇದರಿಂದ ಮಲೆನಾಡಿನ ಭಾಗದಲ್ಲಿ ನಂಜಿಕೆಯನ್ನು ತಯಾರಿಸುವರು. A small ant.

ಕುಣಪ kuṇapa :

- ಜೀವಕಳೆದುಕೊಂಡ ದೇಹ; ಶವ; ಹೆಣ; A dead body of man corpse, lifeless body;
- ದುರ್ಗಂಧ; ಕೆಟ್ಟವಾಸನೆ. bad smell.

ಕುಣಬಿಯರು kuṇabiyaru :

ಉತ್ತರ ಕರ್ನಾಟಕದ ಭಾಗದಲ್ಲಿ ಹೆಚ್ಚಾಗಿರುವ ಅರೆ ಅಲೆಮಾರಿ ಬುಡಕಟ್ಟಿಗೆ ಸೇರಿದವರು; ಅರಣ್ಯ ಪ್ರದೇಶಗಳಲ್ಲಿ 'ಕುಮರಿ' ಬೇಸಾಯ ಇವರ ಪಾರಂಪರಿಕ ಕಸುಬು; ವಾಸಸ್ಥಾನವನ್ನು 'ಕುಳಾವಿ' ಎನ್ನುವರು; ಕೊಂಕಣಿ ಭಾಷೆ ಪ್ರಧಾನ; ತುಳು ಭಾಷೆಯ ಮಿಶ್ರಣ; ಹುಟ್ಟಿದ ಸೂತಕವನ್ನು ೪ನೇ ದಿವಸಕ್ಕೆ, ಸತ್ತ ಸೂತಕವನ್ನು ೩ನೇ ದಿವಸಕ್ಕೆ ಅಗಸನಿಂದ ಶುದ್ಧಗೊಳಿಸುವರು; ಆತ ಬೂದಿ ಕಲಸಿದ ನೀರನ್ನು ಮನೆಯವರಿಗೆಲ್ಲ ಕುಡಿಸಿ ನೀರನ್ನು ಮನೆಗೆಲ್ಲಾ ಪ್ರೋಕ್ಷಣೆ ಮಾಡಿ ಸೂತಕ ತೆಗೆದು ಶುದ್ಧ ಮಾಡುವನು; ಮಗುವಿಗೆ ಮೊದಲ ಹಲ್ಲು ಮೇಲಿನ ಸಾಲಿನಲ್ಲಿ ಹುಟ್ಟಿದರೆ ಸೋದರ ಮಾವ, ಚಿಕ್ಕಪ್ಪ, ದೊಡ್ಡಪ್ಪಗಳಿಗೆ ಕೇಡುಕೆಂದು ಸೋದರಮಾವ ಮಗುವಿನ ಮುಖದ ಮೇಲೆ ಬಟ್ಟೆ ಮುಚ್ಚಿ ಅದರ ಹಣೆಗೆ ಸೂಜಿ ಚುಚ್ಚಿ ರಕ್ತ ತೆಗೆಯುವನು; ಕೇಡು ತಪ್ಪುತ್ತದೆಂಬ ನಂಬಿಕೆ; ಮೂರು ವರ್ಷವಾದೊಡನೆ

ಮಕ್ಕಳ ತಲೆಕೂದಲು ತೆಗೆದು ಹೆಣ್ಣು ಮಗುವಿನ ಕೂದಲನ್ನು ಬಾಳೇಗಿಡದ ಬುಡಕ್ಕೆ, ಗಂಡುಮಗುವಿನ ಕೂದಲನ್ನು ಹಲಸಿನ ಮರದ ಬುಡಕ್ಕೆ ಹಾಕುವರು; ಆಡಳಿತ ವ್ಯವಸ್ಥೆಯಲ್ಲಿ ಗ್ರಾಮದ ಉಸ್ತುವಾರಿಯನ್ನು 'ಗಾವಡೆ', ದೇವಸ್ಥಾನದ ಉಸ್ತುವಾರಿಯನ್ನು 'ಮಿರಾಶಿ' ನೋಡಿಕೊಳ್ಳುವನು; ಅನೇಕ ಹಳ್ಳಿ(ಕುಳಾವಿ)ಗಳಿಗೆ ಒಂದು ಸೀಮೆ ಗುರುತಿಸುವರು; ಮದುವೆ ಸಂಪ್ರದಾಯ ಬಹಳ ವಿಭಿನ್ನವಾಗಿದೆ; ಮದುವೆಗೆ ಮಾವಿನಸೊಪ್ಪಿನ ಹಸಿರು ಚಪ್ಪರ ಹಾಕಿ, ಚಪ್ಪರದೊಳಗೆ ಲಕ್ಕಿಸೊಪ್ಪಿನ ಹಸಿರು ಆವರಣ ಮಾಡುವರು; ಮದುವೆ ಹಿಂದಿನ ದಿನ ಸಂಜೆ ಈ ಚಪ್ಪರದೊಳಗೆ ಬೂರುಗದ ಮರದ ಕಾಂಡ ತಂದು ನೆಡುವರು; ಈ ಮರವನ್ನು ಸಾವುದ್/ಶಾಲ್ಮಲೀ ಎನ್ನುವರು; ಇದು ಹಸೆಕಂಬದಂತೆ ಪವಿತ್ರವಾದದ್ದು; ಇಲ್ಲಿಂದ ಮದುವೆ ಕಾರ್ಯ ಆರಂಭ; ಗಂಡುಹೆಣ್ಣಿಗೆ ಬಕುಳದ ಹೂವಿನ ಮಾಲೆಯನ್ನು ಹಾಕುವರು; ಇದು 'ಸಮ್ಮನ್' ಮಾಲೆಯಷ್ಟು ಪವಿತ್ರವಾಗಿದ್ದು ಮದುವೆ ಕಾರ್ಯ ಮುಗಿದ ನಂತರ ಮಾಲೆಯನ್ನು ದಿಮ್ಮಿ ಗಿಡಕ್ಕೆ ಹಾಕುವರು; ನಂತರ ನವದಂಪತಿಗಳನ್ನು ವಧುವಿನ ಮನೆಗೆ ಕಳುಹಿಸುವ 'ಕಳಮಳ ಶಾಸ್ತ್ರ'(ಇಲ್ಲಿ ಮದುವೆ ಗಂಡಿನ ಮನೆಯಲ್ಲಿ ನಡೆದಿರುವುದೇ ವಿಶೇಷ); ಮದುವೆಗೆ ಹೆಣ್ಣಿನ ತಾಯಿ ಬರುವಂತಿಲ್ಲ; ಆಕೆ ಮದುಮಗನ ಮುಖ ನೋಡಬಾರದೆಂಬ ನಂಬಿಕೆ); ಹೆಣ್ಣಿನ ಮನೆಯಲ್ಲಿ ಅರಿಶಿಣ ಎಣ್ಣೆ ಹಚ್ಚಿ ಸ್ನಾನ ಮಾಡಿಸುವ ತೇಲು ಉತ್ರಣೀ/ಎಣ್ಣೆ ಇಳಿಸುವುದು ಎಂಬ ಶಾಸ್ತ್ರ ಇರುತ್ತದೆ; ನಂತರ ಗಂಡು ಹೆಣ್ಣನ್ನು ತನ್ನ ಮನೆಗೆ ಕರೆತರುವನು; ಆಕೆ ಒಂಬತ್ತು ದಿನ ಅತ್ತೆ ಮನೆಯಲ್ಲಿಯೇ ಇರಬೇಕು, ಇದಕ್ಕೆ 'ನೌಪತ್ರ' ಎನ್ನುವರು; ಹೋಳಿಹಬ್ಬದಲ್ಲಿ 'ಹೋಳಿಸಿಗ್ಮ ಕುಣಿತ', ದೀಪಾವಳಿಯಲ್ಲಿ 'ದಿವಾಳಿ ಚೋಕೇಳ್' ನೃತ್ಯ ಇವರಲ್ಲಿ ಪ್ರಸಿದ್ಧವಾದವು; 'ಕುಣಬಿ' ಹೀಯಾಳಿಸುವ ಪದ; 'ಗಾಂಪ' ಎಂಬ ಪದದಂತೆ ಈ ಶಬ್ದವೂ ಹೆಚ್ಚು ರೂಢಿಯಲ್ಲಿದೆ; ಈಗ ಇದರ ಬಳಕೆ ಕಡಿಮೆಯಾಗುತ್ತಿದೆ; A tribe of North Kannada who are partially wanderers in the wertern Ghats their farming is 'kumari' farming. They speak Konkani language as main language.

ಕುಣಲೆ kuṇale :

ಬತ್ತದ ಗದ್ದೆಯಲ್ಲಿ ಬೆಳೆಯುವ ಒಂದು ಬಗೆಯ ಕಳೆ. A kind of weed grows in paddy field.

ಕುಣಿ/ಕುಣಿತ[1] kuṇi/kuṇita[1] :

- ನೃತ್ಯಮಾಡು ನೃತ್ಯ; dancing, dance; ಕುಣಿದಾಡು, ನಲಿದಾಡು, ನೆಗೆದಾಡು; ನರ್ತನಮಾಡು/ನರ್ತಿಸು; ಆಡು/ಆಟ– ಅರ್ಥಗಳಿವೆ; To dance;
- ಕುಣಿ, ಕುಣಿತ ಅಚ್ಚಗನ್ನಡ ಪದಗಳು; ತಮಿಳಿನಲ್ಲಿ 'ಕುನಿ', ಮಲೆಯಾಳಂನಲ್ಲಿ 'ಕುಣುಜ'; ಕೊಡಗು ಭಾಷೆಯಲ್ಲಿ 'ಕುಣ್‌ಕ್'; ತೆಲುಗಿನಲ್ಲಿ 'ಗುನಿಮು/ಗುನುಚು/ಗುನುಪು'; ತೆಲುಗಿನಲ್ಲಿರುವ ಪದಗಳು ಭಿನ್ನವಾಗಿರುವಂತೆ ಕಂಡರೂ, ವಾಸ್ತವವಾಗಿ ಅವು ಭಿನ್ನರೂಪಗಳಲ್ಲ; ಕುಣಿ, ಕುನಿ, ಗುನಿ ರೂಪಗಳು ಹೆಚ್ಚುಕಡಿಮೆ ಒಂದೇ: ಣ>ನ(ತ), ಕ>ಗ+ಣ>ನ(ತೆ.); ವರ್ಗ ಪ್ರಥಮಾಕ್ಷರಕ್ಕೆ ವರ್ಗ ತೃತೀಯಾಕ್ಷರ ಬರುವುದು ಮತ್ತು ಅನುನಾಸಿಕ ವರ್ಣಗಳಲ್ಲಿ ಒಂದು ಇನ್ನೊಂದು ಆಗುವುದು ದ್ರಾವಿಡ ಭಾಷೆಗಳಲ್ಲಿ ಸಾಮಾನ್ಯ; ಆದ್ದರಿಂದ ಈ ಎಲ್ಲ ರೂಪಗಳೂ ದ್ರಾವಿಡ ಪದಗಳೇ ಆಗಿವೆ; This word etymologically one and the same in all the Dravidians languages;
- ಸಂಸ್ಕೃತದಲ್ಲಿ ನೃತ್ಯ, ನರ್ತನ ಪದಗಳಿದ್ದು, ಯಾವುದೇ ಕಾರಣಕ್ಕೂ ಅವುಗಳಿಂದ ಕನ್ನಡ/ದ್ರಾವಿಡ ಪದಗಳು ನಿಷ್ಪನ್ನಗೊಂಡಿಲ್ಲ; ಆದರೆ ಸಂವಾದಿ ಪದಗಳಂತೂ ನಿಜ; *ಪ್ರ:* 'ಕುಣಿಯಲಾರದ ಬೊಡ್ಡಿ ಮೇಳದವರ ಮೇಲೆ ಬಿದ್ದಾಳು'(ಕಿ.ಕೋ.ಗಾ.), 'ಕುಣಿಯಲಿಕ್ಕೆ ತಿಳಿಯದಿದ್ದರೆ ಅಂಗಳ ಓರೆ ಎಂಬಂತೆ'(ಕಿ.ಕೋ.ಗಾ.); ಈ ಪ್ರಯೋಗಗಳಲ್ಲಿನ 'ಕುಣಿ' ಪದ ನರ್ತನವನ್ನೂ, ನರ್ತನಸ್ಥಾನವನ್ನೂ ಹೇಳುವಂತೆ ಕಾಣುತ್ತದೆ; This word has not derived from Sanskrit word `Nritya';
- 'ಕುಣಿಕುಣಿದಾಡು' ಎಂಬುದೊಂದು ಸಂಯುಕ್ತ ಪದವಿದೆ; ಇದು ಕುಣಿಯುವ ಕ್ರಿಯೆಯ ಪುನರಾವರ್ತನೆ ಮಾತ್ರ; 'ಕುಣಿಕುಣಿ' ಪದ ಒಂದು ದ್ವಂದ್ವರೂಪ, ನರ್ತನಕ್ಕಿಂತ ನೆಗೆದಾಡುವ ಅಥವಾ ನಲಿದಾಡುವ ಕ್ರಿಯೆಯಲ್ಲಿ ಉಂಟಾಗುವ ಕುಣಿತದ 'ಅಸಮತೋಲನ'ವನ್ನು ಹೇಳುತ್ತದೆ; ಹೆಜ್ಜೆಯ

ನಿಯತ ಚಲನೆಯಲ್ಲ, ಏರುಪೇರಾಗುವ ಚಲನೆ; ಇಲ್ಲಿ 'ಆಡು' ಎನ್ನುವ ಪದಪ್ರಯೋಗ ಇರುವುದರಿಂದ 'ಆಟ'ದ ಕ್ರಿಯೆಯನ್ನು ದೃಢಪಡಿಸುತ್ತದೆ;

- ಜನಪದ ಸಂಸ್ಕೃತಿಯಲ್ಲಿ 'ಕುಣಿತ'ವೇ ಮೂಲ, ಆ ಹಂತದಲ್ಲಿ ಹಾಡು ಮತ್ತು ಮಾತು ಇರಲಿಲ್ಲ; 'ಬಯಲಾಟ'ವೇ ಇದನ್ನು ಸೂಚಿಸುತ್ತದೆ; ಜನಪದ ರಂಗಭೂಮಿಯಲ್ಲಿ 'ಕುಣಿತ'ವೇ ಮೊದಲು, ಅನಂತರ ಹಾಡು, ಮಾತು ಮರುಸೇರ್ಪಡೆಯಾಗಿ ನಿಯಮಬದ್ಧ ನೃತ್ಯವಾಗಿರಬೇಕು; ಹಾಗೆಂದರೆ 'ಕುಣಿತ'ದಲ್ಲಿ ನಿಯಮವಿರಲಿಲ್ಲ ಎಂದಲ್ಲ, ಹೆಜ್ಜೆ(ಕುಣಿ) ಗಡುಸಾಗಿತ್ತು, 'ಒರಟು' ಎಂದು ಹೇಳಲಾಗದಿದ್ದರೂ, 'ರೂಕ್ಷ'ವಾಗಿತ್ತು; ಅಂದರೆ ಆದಿಯ ಅಥವಾ ಬುಡಕಟ್ಟಿನ ಸ್ವರೂಪವಾಗಿತ್ತು; ಈ 'ಗಡಸುತನ' ಅಥವಾ 'ಒರಟ'ನ್ನು ಕಡಿಮೆಗೊಳಿಸಲೆಂದೇ ಕಾರಂತರು ತಮ್ಮ ಯಕ್ಷಗಾನ ಪ್ರಯೋಗಗಳಲ್ಲಿ ಮಾತು ಮತ್ತು ಕುಣಿತವನ್ನು ಕಡಿಮೆ ಮಾಡಿದರು('ಮಾತಂತೂ' ಇಲ್ಲವೆ ಇಲ್ಲ); ಮೆದುಗೊಳಿಸಿದರು; ಅಭಿನಯಕ್ಕೆ ಒತ್ತು ಕೊಟ್ಟರು/ ಗಮನಕೊಟ್ಟರು; ಆದ್ದರಿಂದ 'ಕುಣಿ' ಮತ್ತು 'ಕುಣಿತ'ದ ಪದಸ್ವರೂಪ ಲಕ್ಷಣ ರಂಗಭೂಮಿಯಲ್ಲೂ, ಹೊರಗೂ 'ಆದಿ'ಯ ಹಂತವನ್ನು ಪ್ರತಿನಿಧಿಸುತ್ತದೆ ಎಂದು ಹೇಳಬಹುದು;
- ರಂಗಭೂಮಿಯ ಹೊರಗೆ ಪ್ರದರ್ಶಿತವಾಗುವ ಕೋಲಾಟ, ಪಟಾಕುಣಿತ, ಜವಳೆ ಕುಣಿತಗಳಲ್ಲಿ 'ಆಟ'ವೇ ಪ್ರಧಾನವಾಗಿದ್ದು, ಕುಣಿಯುವ ಅಥವಾ ಕುಣಿತದ ಭಂಗಿಗಳನ್ನೇ ನೋಡುತ್ತೇವೆ; ಪಟಾ ಮತ್ತು ಜವಳೆಕುಣಿತಗಳು ಹಬ್ಬದ ಆಚರಣೆಯ ಸಾಂದರ್ಭಿಕ ಪ್ರಯೋಗವಾಗಿದ್ದುವು, ಆಗ ಮನರಂಜನೆ `ritual' ಮೂಲಕವೇ ನಡೆಯಬೇಕಾಗಿತ್ತು; ಇಂತಹ ಕುಣಿತಗಳು 'ಆಚಾರಣಾತ್ಮಕ ಜಾನಪದ'ದ ಭಾಗಗಳಾಗಿಯೇ ಬರುತ್ತಿದ್ದುವು; ಆದರೆ 'ಯಕ್ಷಗಾನ ಬಯಲಾಟ'ಕ್ಕೆ ಈ ಕಟ್ಟು ಇದ್ದಂತಿಲ್ಲ; The base for play with colour stick - Kolata play with flag stick –pata dance is sport;
- 'ಕುಣಿ' ಪದಕ್ಕೆ ಕುಳಿ, ಗುಣಿ/ಗುಳಿ ಎಂಬ ರೂಪಗಳಿದ್ದು(ಕ>ಗ, ಣ>ಳ), ಅವುಗಳ ಅರ್ಥ ಗುಂಡಿ, ಹಳ್ಳ, ರಂಧ್ರ ಮುಂತಾಗಿ; ಪ್ರ: 'ಕುಣಿ ಆಗಿಸಿದರೆ ರುಣ ತೀರಿತೇ'(ಕಿ.ಕೋ.ಗಾ.); ಇಲ್ಲಿ 'ಕುಣಿ' ಎಂದರೆ 'ಗುಂಡಿ' ಎಂದೇ ಅರ್ಥವಾಗುತ್ತದೆ; ಈ 'ಕುಣಿ'ಗೂ ಆಟ/ನರ್ತನ ಅರ್ಥದ 'ಕುಣಿ'ಗೂ ಸಂಬಂಧವಿಲ್ಲ; ಪ್ರಾಯಶಃ ಮೊದಲು ಇದ್ದುದು ಕುಳಿ(ಟಿ)ಎಂದೇ; 'ಣ'ಕಾರ ಮತ್ತು 'ಳ'ಕಾರ ಪರಸ್ಪರ ವಿನಿಮಯ ('ಕಣ' ಮತ್ತು 'ಕಳ' ಇದ್ದ ಹಾಗೆ) ವಾಗುತ್ತಿದ್ದುದರಿಂದ ಕ್ರಮೇಣ ಪದರೂಪದ ಬೆಳವಣಿಗೆಯಲ್ಲಿ 'ಣ'ಕಾರ ಸೇರಿಕೊಂಡಿತ್ತು; ಆ ಪ್ರಕಾರ 'ಕುಣಿ' ರೂಪ ಸಿದ್ಧವಾಗಿ ಭಿನ್ನಾರ್ಥದ ಏಕರೂಪದ ಸೃಷ್ಟಿಗೆ ಕಾರಣವಾಯಿತೆನ್ನಬೇಕು; (ಪದವನ್ನು 'ಕುಳಿ' ಎಂದೇ ಕೊಟ್ಟು ಚರ್ಚಿಸಬಹುದಲ್ಲ); It has the meaning of pit, hollow pit, digged pit;
- ಕುಣಿ, ಕುಣಿತ ಪದಗಳು ನರ್ತಿಸು, ನರ್ತನ ಅರ್ಥ ರೂಪಗಳಾಗಿ ಜನಪ್ರಿಯತೆ ಪಡೆದಿವೆ; ನರ್ತನ ಶಿಷ್ಟಪದ, ಜನಪದರಲ್ಲಿ ಚಾಲ್ತಿಯಿಲ್ಲದಿರುವಂಥದು; ಕುಣಿತ/ಕುಣಿ ಜನಪದರಲ್ಲಿ ಮೊದಲಿನಿಂದಲೂ ಪ್ರಸಿದ್ಧವಾಗಿರುವಂಥದು.

ಕುಣಿ೨ kuṇi²:

ನೆಗೆದಾಡು; ಜಿಗಿದಾಡು; ಚಿಮ್ಮು; ನರ್ತಿಸು; ಹಾರಾಡು; ನಲಿದಾಡು; ಪ್ರ: 'ಕುಣಿಯಲಾರದ ಸೂಳೆ ನೆಲ ಡೊಂಕೆಂದಳಂತೆ'(ಗಾ); To spin up ward, to dance, to jump;

—***ಕುಣಿಬ್ಯಾಡ*** : ಗರ್ವದಿಂದ ಮೆರೆಯದಿರು(ಕಲ.ಜಿ); ದ್ರಾವಿಡ ಭಾಷೆಯ ಸಂವಾದಿ ಪದಗಳು: ತ,ಮ: ಕುನಿ, ತೆ: ಗುನಿ(ಕ>ಗ). Do not behave arrogantly.

ಕುಣಿ೩ kuṇi³:

- ನೇಕಾರನು ಕಾಲು ಇಳಿ ಬಿಡಲು ಮಗ್ಗದಲ್ಲಿ ತೋಡಿರುವ ತಗ್ಗು(ಚಿ.ಪ.ಕೋ). The handloom pit where the weaver stands by stretching wear's legs;
- —***ಕುಣಿಮಗ್ಗ*** : ಇದೊಂದು ಪರಂಪರಾಗತ ಮಗ್ಗ; ತಗ್ಗಿನಲ್ಲಿ ಕಾಲುಗಳನ್ನು ಇಳಿಯ ಬಿಟ್ಟುಕೊಂಡು ಬಟ್ಟೆ ನೇಯುವ ವಿಧಾನ(ಚಿ.ಪ.ಕೋ); It is an ancient heritagious pit of hand loom;
- ಗೋಲಿ ಆಟಕ್ಕಾಗಿ ತೋಡುವ ಒಂದೆರಡು ಇಂಚು ಆಳದ ಕಿರಿದಾದ ತಗ್ಗು;

- ಕೂಳಿ ಬಿದಿರಿನಿಂದ ತಯಾರಿಸಿದ ಮೀನು ಹಿಡಿಯುವ ಉದ್ದನೆಯ ಬುಟ್ಟಿ; ಇದರ ಬಾಯಿ ಚಿಕ್ಕದಾಗಿದ್ದು ಇದರಲ್ಲಿ ಇರುಗುಣಿ, ಸಣ್ಣಕುಣಿ, ದೊಡ್ಡಕುಣಿ, ಯಾಪಕುಣಿ, ಕೊಡಲಿ ಕುಣಿ, ಏಡಿಕುಣಿ ಎಂಬ ವಿಧಗಳಿವೆ; A bamboo instrument that is used for fishing in the rivers.

ಕುಣಿ[೪] kuṇi[4] :

- ಕುಳಿ; ಗುಣಿ; ಗುಳಿ('ಣ' ಮತ್ತು 'ಳ' ಪರಸ್ಪರ ವ್ಯತ್ಯಯ ಅಕ್ಷರಗಳು) ಹೆಣ ಹೂಳಲು ತೋಡಿದ ತಗ್ಗು; *ಪ್ರ:* 'ಕುಣಿ ಅಗಿಸಿದರೆ ರುಣ ತೀರೀತೇ'(ಗಾ); A grave pit where a dead body is to be burried;
- ***—ಕುಣಿಗೇರಿ*** : ಹೆಣ ಹೂಳುವ ಸಾಮಾಜಿಕ ಜಾಗ; ಸ್ಮಶಾನ; A grave yard where the dead bodies are burried;
- ***—ಕುಣಿತೋಡು*** : ಹೆಣ ಇಡಲು ತಗ್ಗು ಕೊರೆ; ಕುಣಿ ಹೊಡಿ; To dig a grave pit;
- ***—ಕುಣಿ ಸೇರು*** : ಸಾಯು; ಹೆಣವಾಗು; ಕುಣಿಕಾಣು; ಒಂದು ಬೈಗುಳ(ಬೀ.ಕ.ಕೋ); To die; To dwell in grave pit;
- ***—ಕುಣಿ ತಗಿ*** : ಸತ್ತ ವ್ಯಕ್ತಿಗಳನ್ನು ಬೆಂಕಿಗೆ ಹಾಕುವಂತೆ ಹಳ್ಳ ತೆಗೆದು ಮಣ್ಣಿನಲ್ಲಿಡುವರು; ಇಲ್ಲಿ ಕೆಲವು ನಿಯಮಗಳನ್ನು ಅನುಸರಿಸಲಾಗುತ್ತದೆ; ಮೂರಡಿ ಆರಡಿ ಕುಣಿ ತೆಗೆಸುವರು; *ಪ್ರ:* 'ಇಂದ ಮನ್ಯಾಗ ನಾಳೆ ಕುಣ್ಯಾಗ'*(ಗಾ)*; To dig for grave pit.

ಕುಣಿಕಿ ಹುಣ್ಣು kuṇiki huṇṇu :

- ಪ್ರಾಣಿಗಳ ಕಣ್ಣಿನಲ್ಲಿ ಬೆಳೆಯುವ ದುರ್ಮಾಂಸ; (ಬೇ.ಸಾಂ.ಪ.ಕೋ); pock;
- ಕುಣಿಕಿ/ಕುಣಿಕೆ ಪದ ಕಣ್ಣಿನ ಕೊನೆಯನ್ನು ಸೂಚಿಸುವುದು; ಕಣ್ಣಿನ ಕೊನೆಯಲ್ಲಿ ಏಳುವ ಹುಣ್ಣು ಎಂದು ಇದರ ಅರ್ಥ; Varicosity ulcer, abscess, a pimple that is raised at the edge of an eye. Blotch at eyes;
- 'ಕುಳಿಕೆ' ಎಂಬ ಪರ್ಯಾಯ ರೂಪವೂ ಇದಕ್ಕಿದೆ; ಅಂದರೆ ಣ>ಳ ಆಗಿ ಪಡೆದ ರೂಪವಿದು.

ಕುಣಿಕಿ ಮಾಡು kuṇikimāḍu :

ಚತುರತೆಯಿಂದ ಕೂಡಿದ ಮಾತು; ಇಂತಹ ಮಾತನ್ನು ಆಡುವವರು ಎಲ್ಲರನ್ನೂ ಆಕರ್ಷಿಸುವರು; A cleverful speech, Attractive speech.

ಕುಣಿಕೆ[೧] kuṇike[1] :

ಗಂಟು; ಹೊಸೆದಿರುವ ಹಗ್ಗದಲ್ಲಿಯೇ ಗಂಟು ಸೇರಿ ಮಾಡುವುದು; ಉರುಳುಗಂಟು; ಕೊಂಡಿಗಂಟು; ಪಾಶ; ಹಗ್ಗದ ಕೊನೆಯಲ್ಲಿ ಹಾಕುವ ಗಂಟು; *ಪ್ರ:* 'ಬಳುಕು ನಡುವಿಗೆ ಕುಣಿಕೇಯ ಒಡ್ಯಾಣ'. Knot; A noose woggle of a rope that tied at the end of it; Rolling knot /hook knot;

—ಕುಣಿಕೆ ಬಿಗಿ : ಉರಲು ಹಾಕು; ಉರುಳು ಗಂಟು; To snare to noose;

—ಕುಣಿಕೆ ಹಗ್ಗ : ಉರಲುಹಾಕುವ ಹಗ್ಗ. Snare rope.

ಕುಣಿಕೆ[೨] kuṇike[2] :

- ಬಾರುಗೋಲಿನ ದಿಂಡಿಗೆ ಕಟ್ಟುವ ಚರ್ಮದ ತುಂಡು; (ಶಿ.ಜಿ); A thin leather thread that tied to the whip stick;
- ಹಗ್ಗದ ಕೊನೆಯಲ್ಲಿ ಹಾಕುವ ಗಂಟು(ಬೆಂ.ಜಿ); End knot of a rope;
- ಕಿರುಬೆರಳು(ಮೈ.ಜಿ); little finger;
- ವಿಶಿಷ್ಟ ರೀತಿಯ ಗಂಟು(ಚಿಕ್ಕ.ಜಿ);
- ಕುಣಿತ(ದಕ); a dance step;
- ಗುಣಿ; ತಗ್ಗು(ಮಂ.ಜಿ); ***ವ್ಯರೂ:*** ಕುಣಚಿ(ರಾಯ.ಜಿ). pit/hollow pit.

ಕುಣಿಕೋಲು kuṇikōlu :

ದಾಸಯ್ಯನು ಜಾಗಟೆ ಬಡಿಯುವ ಕೋಲು. (ಬೆಂ.ಗ್ರಾ.ಜಿ). A gong beaten stick by a person –dasayya.

ಕುಣಿಗಲ್ kuṇigal :

- ರಾಷ್ಟ್ರಕೂಟರ ಕ್ರಿ.ಶ.೮೧೩ರ ಕಾಲದ ಶಾಸನವೊಂದು ಗುಬ್ಬಿ ತಾಲ್ಲೋಕಿನ ಕಡಬದಲ್ಲಿ ದೊರೆತಿದೆ (ಶಾ.ಸಂ.೧೬); ಈ ಶಾಸನವು 'ಕುಣುಂಗಿಲ್ ಐನೂರ್ಬರು' ಎನ್ನುತ್ತದೆ; ರಾಷ್ಟ್ರಕೂಟರು ಈ

ಪ್ರದೇಶವನ್ನು ತಮ್ಮ ಆಡಳಿತ ವಿಭಾಗವಾಗಿಸಿಕೊಂಡಿದ್ದರು ಎಂಬುದು ಸ್ಪಷ್ಟ; A place that has been referred in the 16th inscription Of Kadaba Of Gubbi Taluk Tumkur dist;

- ಹೊಯ್ಸಳರು ಕುಣಿಗಲ್ ಪ್ರದೇಶವನ್ನು ತಮ್ಮ ಕಾಲದಲ್ಲಿ ನಾಡನ್ನಾಗಿಸಿಕೊಂಡಿದ್ದರು;
- ಕ್ರಿ.ಶ.೧೦೬೦ರ ಕಾಲದ ಶಾಸನ(೧೧) 'ಕುಣಿಗಿಲು ನಾಡು' ಎಂದರೆ, ಕ್ರಿ.ಶ.೧೨೫೨(೫೪)ರ ಬೇಗೂರಿನಲ್ಲಿ ದೊರೆತ ಶಾಸನ 'ಕುಣಿಙ್ಗಾಲ್ ನಾಟ್ಟಿಲ್' ಎಂದು ಉಲ್ಲೇಖಿಸುತ್ತದೆ;
- ಕುಣಿಗಲ್‌ನ ಸೋಮೇಶ್ವರ ದೇವಸ್ಥಾನಕ್ಕೆ ದಕ್ಷಿಣದಲ್ಲಿರುವ ತೋಟದಲ್ಲಿನ ಗುಂಡಿನ ಮೇಲಿನ ಶಾಸನ 'ಕುಣಿಗಿಲ ಕೋಟೆ' ಎಂದು ಉಲ್ಲೇಖಿಸುತ್ತದೆ. (E.C- ೨೪)

ಕುಣಿಗಾಲ ಕುದುರೆ kuṇigāla kudure :

ಕುಣಿಯುವ ಕಾಲಿನ ಕುದುರೆ; ಸುಮ್ಮನೆ ನಿಲ್ಲಲಾರದೆ ಕುಣಿಯುತ್ತಿರುವ ಕುದುರೆ; ಕೆನೆಯುತ್ತಿರುವ ಕುದುರೆ. A kind of dancing horse.

ಕುಣಿತ kuṇita :

- ಜನಪದ ನೃತ್ಯದಲ್ಲಿ ಒಂದು ಭಿನ್ನ ಪ್ರಕಾರ ಕುಣಿತ; A kind of folk dance step;
- ಉಂಟಾಗುವ ಸಂತೋಷ, ದುಃಖವನ್ನು ಅಭಿವ್ಯಕ್ತಿಸುವ ಮಾಧ್ಯಮವಾಗಿ ಈ ಕುಣಿತಗಳಿವೆ; an entertainment for relaxing the folk;
- ಬಹುಶಃ ಮಾನವ ಮೊದಲು ಕಂಡುಕೊಂಡ ಕಲೆಯೇ ಕುಣಿತ; ಇದರಲ್ಲಿ ಎರಡು ಬಗೆ; ಧಾರ್ಮಿಕ ಕುಣಿತ ಮತ್ತು ಮನೋರಂಜನೆಯ ಕುಣಿತ;
- ಧಾರ್ಮಿಕ ಕುಣಿತ ದೇವರು, ಹಬ್ಬ, ಜಾತ್ರೆ, ಇತ್ಯಾದಿ ಧಾರ್ಮಿಕ ಚೌಕಟ್ಟಿನ ಹಿನ್ನಲೆಯನ್ನು ಹೊಂದಿದ್ದರೆ, ಮನೋರಂಜನೆಯ ಕುಣಿತಗಳು ಜನರನ್ನು ಸಂತೋಷಪಡಿಸುವುದಕ್ಕಾಗಿವೆ;
- ಕರ್ನಾಟಕದಲ್ಲಿ ಪ್ರತಿ ದೇವರ ಆರಾಧನೆಗೆ ಸಂಬಂಧಿಸಿದಂತೆ ಕುಣಿತಗಳು ರೂಪುಗೊಂಡಿವೆ; ಮುಖ್ಯವಾಗಿ ಮಾರಿ ಆರಾಧನೆಯ ಹಿನ್ನೆಲೆಯಲ್ಲಿ ಮಾರಿಕುಣಿತ, ಕೋಣನ ಕುಣಿತ, ವೀರಮಕ್ಕಳ ಕುಣಿತ, ಆಸಾದಿ ಕುಣಿತ, ದಿಮ್ಸಾಲೆ, ಹೆಬ್ಬಾರೆ, ಪೂಜಾ ಕುಣಿತ, ರಂಗದ ಕುಣಿತ, ಮಾಂಕಾಳಿ, ಸೋಮನ ಕುಣಿತ ಇತ್ಯಾದಿಗಳಿವೆ; there are many dancing types for particular folk gods in Karnataka;
- ವೀರಭದ್ರನಿಗೆ ಸಂಬಂಧಿಸಿದಂತೆ ವೀರಗಾಸೆ, ಕಾಸೆಕುಣಿತ, ಪುರವಂತಿಕೆ, ವೀರಭದ್ರನ ಕುಣಿತಗಳು;
- ಯಲ್ಲಮ್ಮನ ಆರಾಧನೆಯ ಜೋಗತಿ ಕುಣಿತ, ಗೊಂದಲಿಗರ ಮೇಳ, ಭೂತೇರ ಕುಣಿತಗಳಿವೆ; ; Jogathi Dance, Gorava Dance;
- ಮೈಲಾರ ಲಿಂಗನ ಗೊರವರ ಕುಣಿತ, ಡೊಳ್ಳು ಕುಣಿತಗಳು;
- ಮೊಹರಂ ಸಂಬಂಧಿಸಿದ ಮೊಹರಂ ಕುಣಿತ, ಅಲಾವಿ ಕುಣಿತಗಳಿವೆ; A Dance Of Moharam;
- ಭೂತಾರಾಧನೆಗೆ ಸಂಬಂಧಿಸಿದಂತೆ ಅನೇಕ ಕುಣಿತಗಳನ್ನು ಕಾಣಬಹುದಾಗಿದೆ; Bhuta Dance;
- ಸಮೃದ್ಧಿ ಮತ್ತು ಫಲವಂತಿಕೆ ಆಚರಣೆಗೆ ಸಂಬಂಧಿಸಿದಂತೆ ಹೋಳಿ, ಕೋಲಾಟ, ಸುಗ್ಗಿಕುಣಿತ, ತಾರ್ಲೆ ಕುಣಿತ, ಕಂಗಿಲು ಕುಣಿತ, ಕಾವಡಿ ಕುಣಿತ, ಪಟಾ ಕುಣಿತ, ಪಂಜಿನ ಕುಣಿತ ಇತ್ಯಾದಿಗಳಿವೆ;
- ಕರ್ನಾಟಕದಲ್ಲಿ ವಿಶೇಷವಾಗಿರುವ ಬುಡಕಟ್ಟುಗಳಲ್ಲಿ ವಿಭಿನ್ನವಾದ ಆಕರ್ಷಕ ಕುಣಿತಗಳಿವೆ; ಉದಾಹರಣೆಗೆ ಕೊಡವರ ಕುಣಿತ, ಕೊರಗರ ಕುಣಿತ; ಕುಡುಬಿಯರು, ಮೇರರ ದುಡಿ, ಕುಡಿಯರು, ಯರವರು, ಸಿದ್ದಿಯರು ಇತ್ಯಾದಿ ಸಮುದಾಯದ ವಿಶೇಷ ಕುಣಿತಗಳಿವೆ; ಕೀಲುಕುದುರೆ, ಗಾರುಡಿಗೊಂಬೆ, ಮರಗಾಲು ಕುಣಿತ, ಕೋಲೆ ಬಸವ, ಕೊರವಂಜಿ, ಬುರ್ರ ಕಥಾಮೇಳ ಹೀಗೆ ಇನ್ನೂ ಹತ್ತಾರು ಸಂಕೀರ್ಣ ಕಲಾ ಪ್ರಕಾರಗಳಿವೆ;
- ***—ಕುಣ್ತಹಾಕು*** : ತಮಟೆಯ ಸದ್ದಿಗೆ ಅಥವಾ ಗತ್ತಿಗೆ ತಕ್ಕಂತೆ ಹೆಜ್ಜೆ ಹಾಕುವುದು; ಕುಣಿಯುವುದು; Stepping in accordance with the rhythms of drum or Thamate; a leather rhythmic instrument;
- ಕುಣಕ' ರೂಪವೂ ಇದೆ.

ಕುಣಿಬಿಲ್ಲಿ kuṇibilli :

ಹುಡುಗರ ಆಟದ ವಿಧ; ವಿಶಾಲವಾದ ಬಯಲು, ಅಂಗಳದಲ್ಲಿ ಆಡುವ ರೊಕ್ಕದ ಆಟ; A play; played by boys.

ಕುಣಿಮಿಣಿ/ಕುಣ್ಮಿಣಿ kuṇimiṇi/kuṇmiṇi :

- ಇದೊಂದು ವಾದ್ಯವಿಶೇಷ; ದಕ್ಷಿಣ ಭಾರತದ ಭಾಗದಲ್ಲಿ ಹೆಚ್ಚು ಬಳಕೆ; ಆಕಾರದಲ್ಲಿ ತಾಸೆ(ಹೊಟ್ಟೆಯ ಮೇಲೆ ಇಳಿಬಿಟ್ಟು ಬಡಿಯುವ ವಾದ್ಯ)ಗಿಂತ ಚಿಕ್ಕದಾದರೂ ತಾಸೆಯನ್ನೇ ಹೋಲುವುದು; ಒಂಟಿವಾದ್ಯ– ಒಂದೂವರೆ ಅಡಿ ವ್ಯಾಸ ಮುಕ್ಕಾಲು ಅಡಿ ಎತ್ತರದ ವಾದ್ಯ; ವಾದ್ಯದ ಒಳಭಾಗ ಬೋಗುಣಿಯಾಕಾರದಲ್ಲಿದ್ದು ಈ ಭಾಗಕ್ಕೆ ಆಡಿನ ಚರ್ಮವನ್ನು ಹೊದಿಸುವರು; ಚರ್ಮದ ಅಂಚಿನ ಸುತ್ತಲೂ ಸಣ್ಣಸಣ್ಣ ರಂಧ್ರಗಳಿದ್ದು ಇದರ ಮೂಲಕ ಸಣ್ಣ ಎಳೆಯಂತಿರುವ ಬಾರನ್ನು ತೂರಿಸಿ ಬೋಗುಣಿಯ ತಳಭಾಗದಲ್ಲಿರುವ ಚಿಕ್ಕ ಚರ್ಮದ ಸಿಂಬಿಗೆ ಕಟ್ಟಿರುತ್ತಾರೆ; ಈ ಚರ್ಮದ ರಂಧ್ರದ ಮೂಲಕ ಹಾದು ಹೋಗುವ ಬಾರುಗಳನ್ನು ಒಳವಿನ ಮಧ್ಯದ ಸುತ್ತಿಗೂ ಸೇರಿಸಿ ಕತ್ತರಿಯಂತೆ ಕಟ್ಟಿರುವರು;

  A play of yard by betting money; a special south Indian musical instrument; it is used in god's procession or celebration in festivals;
- ವಾದ್ಯ ಬಾರಿಸಲು ಒಂದು ಬೆತ್ತದ ಕೋಲನ್ನು ಬಳಸುವರು; ಕೆಲವೊಮ್ಮೆ ಬೆರಳುಗಳು ಮತ್ತು ಅಂಗೈನಿಂದಲೂ ಬಡಿಯುವುದುಂಟು;
- ಕೊರಳಿಗೆ ನೇತು ಹಾಕಿಕೊಳ್ಳಲು ಒಳವಿನ ಒಂದು ಮಗ್ಗುಲಲ್ಲಿ ದಪ್ಪದಾದ ಬಟ್ಟೆಯ ಪಟ್ಟಿಯನ್ನು ಕಟ್ಟಿರುವರು;
- ದೇವರ ಉತ್ಸವಗಳು ಮತ್ತು ಇತರೆ ಸಂದರ್ಭಗಳಲ್ಲಿ ವಿಶೇಷವಾಗಿ ಈ ವಾದ್ಯದ ಬಳಕೆ ಇದೆ.

ಕುಣಿಯೋ ಮೇಳ kuṇiyō mēḷa :

ಯಕ್ಷಗಾನ, ಬಯಲಾಟ ಮೊದಲಾದವುಗಳಲ್ಲಿ ಕುಣಿತವೇ ಪ್ರಧಾನವಾಗಿರುವುದರಿಂದ ಇವನ್ನು 'ಕುಣಿಯೋ ಮೇಳ' ಎನ್ನುವರು; ಪ್ರ: 'ಕುಣಿಯೋ ಮೇಳ ಮಾಡಿಸಿದರೆ ಮಳೆಬೆಳೆ ಚಂದಾಗುತ್ತೆ'(ತು.ಜಿ).

Yakshagana; a kind of dramatic play that based mainly on dancing rhythms.

ಕುಣಿಸುಗಾಣ kuṇisugāṇa :

ನೀರಿನಲ್ಲಿರುವ ಏಡಿಗಳನ್ನು ಹಿಡಿಯಲು ಬಳಸುವ ಸಾಧನ; 'ಏಡಿಕುಣಿ' ಎಂದೂ ಇದನ್ನು ಕರೆಯುವರು. a tool that is used to catch crabs; it is known as crab device.

ಕುಣು ಕುಣು kuṇukuṇu :

ಪಿಸುಮಾತು; ಗುಸುಗುಸು ಮಾತಾಡುವುದು; ಗುಣುಗುಟ್ಟುವುದರ ಅನುಕರಣ ವಾಚಿ; 'ಕುಣು' ಪದದ ಪುನರಾವರ್ತನೆ, ಆ ಮೂಲಕ ರೂಪುಗೊಳ್ಳುವ ಪದದ್ವಂದ್ವ, Whispering; speaking to rumours; gossips.

ಕುಣುಕು kuṇuku :

- ಕೈಮಗ್ಗದ ಬಲಭಾಗದ ಲಾಳಿ; ಚೌಕದಲ್ಲಿರುವ ಲಾಳಿ ಎಡಗಡೆಗೆ ಹೋಗಿ ಮತ್ತೆ ಅದೇ ಸ್ಥಾನಕ್ಕೆ ಹಿಂತಿರುಗುವಿಕೆ; Right sided handloom shuttle;
- ಹಾಸಿನಲ್ಲಿ ಹೊಕ್ಕಿನ ಎರಡು ಎಳೆ ಸೇರುವಿಕೆ(ಬೆಂ.ಗ್ರಾ.ಜಿ).
- ಕುಟ್ಟು; ಪುಡಿಮಾಡು; ತಳಿಸು; ಕೀಲು; ಅಗುಳಿ; To grind; a shackle bolt/a sneck;
- ತ: ಕುಣುಕ್ಕು.

ಕುಣುಚಲು ಗದ್ದೆ kuṇucalu gadde :

ಚಿಕ್ಕಗದ್ದೆ; ಕಡಿಮೆ ಅಳತೆ ಹೊಂದಿರುವ ನೀರಾವರಿ ಜಾಗ(ಕೃ.ಪ.ಕೋ). A small cultivated field; Low measured irrigated land.

ಕುಣುಜ/ಕುಣಜ kuṇuja/kuṇaja :

- ಮರಗಳು, ಕಾಫಿಗಿಡಗಳು–ಇವುಗಳಲ್ಲಿರುವ ಕಪ್ಪಿರುವೆ;

  A kind of black ant dwells in trees or coffee plant;
- ಇವು ಕಚ್ಚುವ ಗುಣವನ್ನು ಹೊಂದಿವೆ(ಮ.ನು.ಕೋ);
- ಒಂದು ಸಮುದಾಯದ ಹೆಸರು.

ಕುತನಿ/ಕುತಣಿ kutani/kutaṇi :

- ಅನ್ಯದೇಶ್ಯ ಪದ; ಮರಾಠಿ ಮೂಲದಿಂದ ಬಂದಿರಬಹುದು; 'ಖುತನೀ' ರೂಪ ಇದರ ಮೂಲದಲ್ಲಿದೆ; A term originated from Marati Language, means a cotton or silk cloth;

- ಹತ್ತಿ ಮತ್ತು ರೇಷ್ಮೆ ಎಳೆಗಳನ್ನು ಸೇರಿಸಿ ತಯಾರಿಸಿದ ಬಟ್ಟೆ; ಸ್ಯಾಟಿನ್ ಬಟ್ಟೆ(ಬೆಂ.ಜಿ./ಮಂ.ಜಿ); silk and cotton thread;
- ಕುಂಕುಮದ ಡಬ್ಬಿ; ಭರಣಿ; Vermilion casket;
- ರೇಷ್ಮೆಯ ವಸ್ತ್ರ(ಮೈ/ಚಾ.ಜಿ); *ಪ್ರ:* 'ಕುತಣಿ ಅಂಗಿ ಪುರಮಾಸಿ ಹೊಲಸಿನಿ'(ವಿ.ಜಿ); silk cloth;
- ***—ಕುತನಿ ಅಂಗಿ*** : ಹತ್ತಿ ಮತ್ತು ರೇಷ್ಮೆ ನೂಲು ಮಿಶ್ರಿತ ಅಂಗಿ; ಮಕ್ಮಾಲ್ ಅಂಗಿ; *ಪ್ರ:* 'ರಾಜ ಮಹಾರಾಜರು ಕುತನಿ ಅಂಗಿ ಹಾಕ್ತಿದ್ದರು'; A short stitched in silk and cotton thread;
- ***—ಕುತನಿ ಸೀರೆ*** : ಅಗಲವಾದ ಜರಿಯ ಅಂಚುಳ್ಳ ಚೌಕಳಿಯ ರೇಷ್ಮೆ ಸೀರೆ; ಕುತ್ವಾಲ್ ಸೀರೆ(ಚಾ.ಜಿ); Brocade of silk saree;
- ***—ಕುತನೀ ಕೋಟು*** : ಹತ್ತಿ, ರೇಷ್ಮೆ ಎರಡನ್ನೂ ಸೇರಿಸಿ ತಯಾರಿಸಿದ ಬಟ್ಟೆಯಿಂದ ಹೊಲಿದ ಕೋಟು; Reefing jacket; A saree of brocade compound weaves samite; an expensive weaving in silk mixed golden threads; a coat stitched in cotton as well as silk threads simultaneously;
- ***—ಕುತನೀ ಚೀಲ*** : ಕಸೂತಿ ಮಾಡಿದ ಚೀಲ; ಹೆಂಗಸರಲ್ಲಿ ಹೆಚ್ಚಾಗಿ ಬಳಕೆ; ಸ್ಯಾಟಿನ್ ಬಟ್ಟೆಯಿಂದ ಹೊಲಿದ ಚೀಲ; *ಪ್ರ:* 'ಕುತನಿ ಚೀಲದಾಗ ಎಲೆ ಅಡಿಕೆ ಇಟ್ಟಾರ'; A hand bag with embroidery work in cloth/thread used by women;
- ***—ಕುತನಾರಿ*** : ಹತ್ತಿ ಮತ್ತು ರೇಷ್ಮೆ ನೂಲಿನಿಂದ ನೇಯ್ದು ತಯಾರಿಸಿದ ಬಟ್ಟೆಯನ್ನು ಧರಿಸಿದವಳು (ಜನಪದ ರಾಮಾಯಣ); A woman who wore the clothes sewing in cotton and silk threads;
- ***—ಕುತನಿ ತಡಿ*** : ಜೀನು; ಕುತನಿ ಬಟ್ಟೆಯಿಂದ ಮಾಡಿದ ಕುದುರೆಗೆ ತೊಡಿಸುವ ತಡಿ; The back saddle of horse sewed in cotton -silk cloth;
- ***—ಕುತನೀ ಗಾದಿ*** : ಹಾಸಿಗೆ; ಬೆಲೆಬಾಳುವ ರೇಷ್ಮೆ ಹತ್ತಿ ಮಿಶ್ರಣದ ಬಟ್ಟೆಯನ್ನು ಹೊದಿಸಿ ಮಾಡಿದ ಗಾದಿ; A bed /bedding sewed in costly cotton mixed silk thread/cloth;
- ***—ಕುತನಿಧರಿ*** : ಒಂದು ವಿಧದ ನೇಯ್ಗೆಯ ಬಗೆ(ಕಲ.ಜಿ.). A kind of weaving style.

ಕುತಾರಿ ಚೊಂಬು kutāri combu :

ತಿರುಪಿರುವ ಮುಚ್ಚುಳವನ್ನು ಹೊಂದಿರುವ ಚೊಂಬು; ಪ್ರಯಾಣ ಕಾಲದಲ್ಲಿ ಹೆಚ್ಚು ಬಳಕೆ; ರೈಲು ಚೊಂಬು; ಹಿಂದಿನ ಕಾಲದಲ್ಲಿ ಯತೇಚ್ಛವಾಗಿ ಬಳಕೆಯಲ್ಲಿದ್ದ ಈ ಚೊಂಬನ್ನು ತಿರುಪಿನ ಚೆಂಬು/ತಪ್ಲೆ ಎಂದು ಕರೆಯುತ್ತಿದ್ದರು; ಸಾಮಾನ್ಯವಾಗಿ ಈ ಚೊಂಬನ್ನು ಕಂಚಿನಿಂದ ತಯಾರಿಸುತ್ತಿದ್ದರು; ಚೆಂಬಿಗೆ ಮುಚ್ಚುವ ತಿರುಪಿನ ಮುಚ್ಚಳದ ಮೇಲೆ ಹಿಡಿದುಕೊಳ್ಳಲು ಅನುಕೂಲವಾಗುವಂತೆ ಹಿಡಿ ಇರುತ್ತಿತ್ತು; ಹೊಲ, ಗದ್ದೆಗಳಿಗೆ ಮತ್ತು ದೇವರ ಪೂಜೆಗೆ ನೀರು ಕೊಂಡೊಯ್ಯಲು ಬಳಕೆ; ಹಿಂದೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ಪ್ರಯಾಣ ಮಾಡುತ್ತಿದ್ದುದು ಎತ್ತಿನ ಗಾಡಿಯಲ್ಲಿ; ಆ ಸಂದರ್ಭದಲ್ಲಿ ಕುಡಿಯಲು ನೀರು ಆವಶ್ಯಕವಾಗಿತ್ತು; ಇಂದಿನ ಹಾಗೆ ಪ್ಲಾಸ್ಟಿಕ್ ಬಾಟಲ್‌ಗಳು ಬಳಕೆಯಲ್ಲಿರಲಿಲ್ಲ; ಆ ಕಾರಣ ನೀರು ಕೊಂಡೊಯ್ಯಲು ತಿರುಪಿನ ಚೊಂಬನ್ನು ಬಳಸುತ್ತಿದ್ದರು; ಮನೆಯಲ್ಲಿ ಹರಳೆಣ್ಣೆ ತುಂಬಿಡಲು ಉಪಯೋಗಿಸುತ್ತಿದ್ದುದೂ ಉಂಟು; ತುಂಬಾ ಶ್ರೀಮಂತರು ಬೆಳ್ಳಿ ತಿರುಪಿನ ಚೊಂಬು ಬಳಸುತ್ತಿದ್ದರು; ('ಕುತಾರಿ' ಎನ್ನುವ ಪದ 'ತಿರುಪಿನ' (ಚೊಂಬು) ಅರ್ಥವನ್ನು ಕೊಡುತ್ತಿರಬಹುದೆ?). A screwed mug with closing plate; A train mug; A train mug that was made up of bronze metal.

ಕುತಿ ಹಣ kutihaṇa :

ಕೊಡವ ಸಮೂಹದಲ್ಲಿನ ಒಂದು ಆಚರಣೆ; ಸತ್ತವರ ಮನೆಯಲ್ಲಿ ಸತ್ತ ದಿನ ಅಥವಾ ತಿಥಿಯ ದಿವಸ ಕಳಶದ ಹತ್ತಿರ ಇಟ್ಟಿರುವ ತಟ್ಟೆಯಲ್ಲಿ ಹಾಕುವ ಹಣ; ಇದು ಸತ್ತ ಮನೆಯವರ ಕಷ್ಟಕ್ಕೆ ಬಳಕೆ(ಕೊಡ.ಜಿ). Money that keeps near the plate and lamp during the death day or the second day in Kodav community of Coorg, Karnataka.

ಕುತುಗ್ಲು kutuglu :

ಕುತುಕಲು; ರಸ್ತೆಯಲ್ಲಿ ಉಂಟಾಗಿರುವ ಗುಂಡಿ ಅಥವಾ ಹಳ್ಳ; ಗಾಡಿ, ಮೋಟಾರು ಹಾಗೂ ಬೈಕುಗಳಲ್ಲಿ ಪ್ರಯಾಣಿಸುವಾಗ ಚಕ್ರ ಗುಂಡಿಗೆ ಬಿದ್ದು ಪ್ರಯಾಣಿಕರನ್ನು ಕುಲುಕುವುದರಿಂದ ಕುಲುಕಲು/ಕುತುಗಲು/ಕುತುಗ್ಲು ರೂಪ ಹುಟ್ಟಿಕೊಂಡಿರಬಹುದು; ***—ಕುತುಗ್ಲು ರಸ್ತೆ*** : ಏರುತಗ್ಗಿನ ರಸ್ತೆ; ಒಂದೇ ಸಮನಿಲ್ಲದ ಹಳ್ಳ ದಿಣ್ಣೆಗಳಿಂದ ಕೂಡಿದ ರಸ್ತೆ; *ಪ್ರ:* 'ಕುತುಗ್ಲು ರಸ್ತೆಯಲ್ಲಿ ಓಡಾಡಿ ಮೈಕೈ ನೋವಾಯಿತು'. A road that has ditcher brook and hillock knoll.

ಕುತ್ತ kutta :

- ರೋಗ; ಬೇನೆ; *ಪ್ರ:* 'ಕುರುಬನ ಕುತ್ತಕ್ಕೆ ಕುರಿ ಪಿಕ್ಕೆ ಮದ್ದು'*(ಗಾ)*; A disease;
- ಪ್ರಾಣಾಪಾಯ; ಕಂಟಕ; *ಪ್ರ:* 'ಕೂಳು ಕುತ್ತ ನೀರು ಪಿತ್ತ'(ವಿ.ಜಿ., ಶಿ.ಜಿ); a death dealing; deadly dangerous trouble; accident;
- ಆಪತ್ತು; ತೊಂದರೆ; ಆಘಾತ; ಕೊರತೆ; *ಪ್ರ:* 'ಕುತ್ತ ಬಂದಾಗ ಕುಗ್ಗಬಾರದು'(ಬಾ.ಜಿ);
- ನೇರ; ನೆಟ್ಟಗೆ; *ಪ್ರ:* 'ಅವನ ಕೂದಲು ಕುತ್ತ ನಿಂದಿದು'(ಕಾ.ಗೋ);
- ಕೋವಿಯ ಟ್ರಿಗರ್; ಇದನ್ನು ಜನಪದರು ಆಟ್‌ಮಲ್ಲರ್ ಎನ್ನುವರು(ಬೇ.ಸಾಂ.ಪ.ಕೋ); gun trigger.

ಕುತ್ತ ಕುಣಿತ kutta kuṇita :

ಯಕ್ಷಗಾನದ ಕುಣಿತದ ಬಗೆ; ಯುದ್ಧದ ದೃಶ್ಯವನ್ನು ಪ್ರದರ್ಶಿಸುವಾಗ ಕುಣಿಯುವ ಬಹಳ ಕಷ್ಟದ ಕುಣಿತ; ಆವೇಶದಿಂದ ಕುಣಿಯುವಾಗ ತಟ್ಟನೇ ತುದಿಗಾಲೂರಿ ಕುಳಿತು ಏಳುವಾಗ ಒಂದು ಕಾಲನ್ನು ಮುಂದೆ ಹೊಡೆದು ಏಳುವುದು; ಅದರಂತೆ ಇನ್ನೊಂದು ಕಾಲನ್ನು ಇದೇ ರೀತಿ ಮಾಡುವುದು; ನಾಲ್ಕು ಹೆಜ್ಜೆಗಳಿದ್ದು ಎರಡೂ ಕಾಲಿನ ಮೇಲೆ ಒಮ್ಮೆಲೇ ಏಳುವಾಗ ಪ್ರಯಾಸದಿಂದ ಹೆಜ್ಜೆ ತಪ್ಪಿ ಕುಣಿತ ತನ್ನ ಶಕ್ತಿ ಕಳೆದುಕೊಳ್ಳುವುದು; ಕೇವಲ ಕೆಲವು ಮಂದಿ ಮಾತ್ರ ಈ ಕುಣಿತ ಕುಣಿಯಲು ಶಕ್ತರಾಗಿರುವರು. A kind of dance to present war scene in the play yakshagna.

ಕುತ್ತಟ್ಟ kuttaṭṭa :

ಅಡುಗೆ ಕೋಣೆಯಲ್ಲಿರುವ ಅಟ್ಟ; ಒಲೆಯಲ್ಲಿನ ಹೊಗೆ ಹೋಗುವ ಸ್ಥಳದಲ್ಲಿ ಬಿತ್ತನೆ ಬೀಜ, ಧಾನ್ಯ, ಅಕ್ಕಿಮುಡಿ, ಉಪ್ಪಿನಕಾಯಿ ಮೊದಲಾದ ಆಹಾರ ಪದಾರ್ಥಗಳು ಕೆಡದಂತೆ ರಕ್ಷಿಸುವ ವ್ಯವಸ್ಥೆ ಇರುವ ದಾಸ್ತಾನು ಅಟ್ಟ; ಇಲ್ಲಿ ವಾತಾವರಣ ಬಿಸಿಯಾಗಿರುವುದರಿಂದ ಇಟ್ಟ ವಸ್ತು ಕೆಡದಂತೆ ಇರುತ್ತದೆ; ಇದೊಂದು ಬೀಜ ಸಂರಕ್ಷಣೆಯ ವಿಧಾನ(ದ.ಕ). Deck of kitchen where sowing seeds grain rice /paddy sacks pickle kept safely to avoid fungus which harm those things.

ಕುತ್ತರಿ kuttari :

- ಬೀಳಲಿನಿಂದ ಮಾಡಿದ ಒಂದು ಬಗೆಯ ದೊಡ್ಡ ಕುಕ್ಕೆ; ಕೋಳಿಮರಿಗಳನ್ನು ಮುಚ್ಚಿಡಲು ಬಳಕೆ(ಮಂ.ಜಿ);
- ಬೈನೆ ಮರದ ಚೌರಿಯನ್ನು ಒಣಗಿಸಿ ಹೆಣೆದು ಮಾಡಿದ್ದು; ಮೀನು ಹಿಡಿಯಲು ಬಳಸುವ ಕೂಣಿಯಂತಹ ಸಾಧನ(ದ.ಕ); ತಲೆಯ ಹಿಂಭಾಗದಲ್ಲಿ ಬಿಲ್ಲೆಯಂತೆ ಧರಿಸುವ ಆಭರಣ(ತು.ನಿ);
- 'ಅರಿ'; ಬಣವೆ; ಮೆದೆ; ಭತ್ತದ ಬೆಳೆ ಕೊಯ್ಲು ಮುಗಿಯುತ್ತಿದ್ದಂತೆ ಹೊಲದಲ್ಲಿನ ಅಥವಾ ಕಣದಲ್ಲಿನ ನಿರ್ದಿಷ್ಟ ಸ್ಥಳದಲ್ಲಿ ಅರಿಯನ್ನು ಮಳೆಗಾಲದಲ್ಲಿ ನೆನೆಯದಂತೆ ಇಳಿ ಜಾರಾಗಿ ಗುಡಿಸಿಲಿನಂತೆ ಪೋಣಿಸುವಿಕೆ(ಉ.ಕ.ಜಿ);
- ಯಕ್ಷಗಾನದಲ್ಲಿ ಸ್ತ್ರೀ ವೇಷದ ಬಣ್ಣದ ಕಿರೀಟ; ಬೆತ್ತದಿಂದ ತಯಾರಿಸಿದ್ದು(ಯ.ಪ.ಕೋ);

ಕುತ್ತಾರಿ kuttāri :

ಕಸ್ತೂರಿ ಮೃಗ; ಕುತ್ತಿ; musk deer ಕಸ್ತೂರಿಯನ್ನು ಕೊಡುವ ಕೊಂಬಿಲ್ಲದ ಜಿಂಕೆ; ಇದೊಂದು ಜಿಂಕೆ ಜಾತಿಗೆ ಸೇರಿದ ಪ್ರಾಣಿ; ನೋಡಿ: ಕಸ್ತೂರಿ ಮೃಗ.

ಕುತ್ತಾಲಗಾಟಿ kuttāla gāṭi :

ತಾಪೀಟಿಗೆ ಜೋಡಿಸಲಾದ ಕಬ್ಬಿಣದ ಪಟ್ಟಿ(ನೇ.ವ್ಯ.ಪ.ಕೋ). A iron belt /stipe;

ಕುತ್ತಿ kutti :

- ಗಿಡ, ಮರಗಳನ್ನು ಕಡಿದ ಮೇಲೆ ಬುಡದಲ್ಲಿ ಉಳಿಯುವ ಭಾಗ; ಕೂಳೆ; ಬೇರು ಭೂಮಿ ಒಳಭಾಗದಲ್ಲಿದ್ದು ಕಾಂಡದ ಆರಂಭ; ಮೋಟು; The remaining trunk of cutting tree;
- ತುಂಡು; ಉಳಿಕೆ; ಚಿಕ್ಕ; ಗಿಡ್ಡ(ತು.ನಿ); A piece;
- ಮದ್ದಲೆ, ಚಂಡೆ, ಡೋಲು ಮೊದಲಾದ ಚರ್ಮವಾದ್ಯಗಳ ಮರದ ಕಳಸಿಗೆ(ಯ.ಪ.ಕೋ); musical instrument that made up of leather and skin of goat and beatable drums;
- ಹಾಲು, ಎಣ್ಣೆ ಮೊದಲಾದ ದ್ರವಗಳ ಒಂಬತ್ತು ಕುಡುತೆ ಅಳತೆಯ ಪ್ರಮಾಣದ ಒಂದು ಮಾನ(ದ.ಕ); A measurement used for measuring liquids;
- ಪುಣುಗುಬೆಕ್ಕು; ಇದರ ಚರ್ಮದ ಬೆವರಿನಿಂದ ಹೊರಸೂಸುವ ಮೇಣ ಔಷಧಿಯಾಗಿ ಬಳಕೆ(ಶಿ.ಜಿ); Zibet; a cat like animal; from the sweat of its skin is a kind of wax; this is used as medicine;
- ಕದವನ್ನು ಬಾಗಿಲುವಾಡದ ತೂತಿನೊಳಗೆ ಸಿಕ್ಕಿಸುವ ಬೆಣೆ ಅಥವಾ ಕೀಲು(ತು.ನಿ); a peg used to close the door; ತಮಿಳು ಮತ್ತು ಮಲೆಯಾಳಂಗಳಲ್ಲಿ 'ಕುಯ್ಜಿ' ರೂಪವಿದೆ; ಕೊಡಗು ಮತ್ತು ತುಳುವಿನಲ್ಲಿ ಕನ್ನಡದ ರೂಪವೇ ಇದೆ;
- ***—ಕುತ್ತಿಕಂಬ*** : ಮನೆಕಟ್ಟುವಾಗ ಒಳ ಕೋಣೆಯ ಗೋಡೆ ಕೊರೆದು ಆಯಕ್ಕನುಗುಣವಾಗಿ ಹಾಕಿದ ಗೇಣುದ್ದದ ಕಂಬ(ದ.ಕ); A log that fixed the wall of inner room while construction;
- ***—ಕುತ್ತಿಕೋಲು*** : ಅಡ್ಡತೊಲೆಯಿಂದ ಬೆನ್ನು ತೊಲೆಗೆ ಆಧಾರಕ್ಕಾಗಿ ನಿಲ್ಲಿಸಿದ ಕಂಬ; ಬೆಂಗಟೆ ಕಂಬ(ದ.ಕ); A supported joisted log/post in the house; to stuck a peg/post to the ground when construction of a house;
- ***—ಕುತ್ತಿ ಹಾಕುವುದು*** : ಮನೆ ಕಟ್ಟಲು ಆರಂಭದಲ್ಲಿ ಹಾಕುವ ಆಯದ ಅನುಸಾರವಾಗಿ ಗೂಟವನ್ನು ಊರುವುದು(ದ.ಕ);
- ***—ಕುತ್ತಿಕ್ಕೋಲು*** : ಗದ್ದೆಯಲ್ಲಿ ಒಂದು ತುದಿಭಾಗದಲ್ಲಿ ಕೋಲೊಂದಕ್ಕೆ ತುದಿಯಲ್ಲಿ ಬಟ್ಟೆಯನ್ನು ಕಟ್ಟಿ ನೆಲಕ್ಕೆ ಊರುವ ಕೋಲು; ಕಣ್ಣುದೃಷ್ಟಿ ತಾಗದಂತೆ ಮಾಡುವ ಉಪಾಯ; A stump stick; a shepherd's crook that is used to avid evil eye by tying a piece of clothe at the edge of the stick and stuck in the ground;
- ***—ಕುತ್ತಿಪೂಜೆ*** : ಹೊಸದಾಗಿ ನಿರ್ಮಿಸಿದ ಮನೆ ಅಥವಾ ಹಡಗುಗಳಲ್ಲಿ ಇರುತ್ತವೆಂದು ನಂಬಲಾದ ದುಷ್ಟಶಕ್ತಿಗಳ ನಿಯಂತ್ರಣಕ್ಕಾಗಿ ಮಾಡುವ ಪೂಜೆ; ದುಷ್ಟ ಶಕ್ತಿಗಳನ್ನು ತೃಪ್ತಿಪಡಿಸಿ ನಿವಾರಣೆಗಾಗಿ ಬಡಗಿ ಮಾಡುವ ಪೂಜಾಕ್ರಮ; ಹೊಸದೋಣಿಯನ್ನು ನೀರಿಗಿಳಿಸುವಾಗ ಅರಿಶಿನ ಕುಂಕುಮ ಹಚ್ಚಿ ಪೂಜೆಮಾಡಿ ಒಂದು ಬಾಳೆ ಎಲೆಯಲ್ಲಿ ಭತ್ತದ ಅರಳು, ಅವಲಕ್ಕಿ, ತೆಂಗಿನಕಾಯಿ, ಅಡಿಕೆ, ವೀಳ್ಯದೆಲೆಗಳನ್ನು ಎಡೆಮಾಡಿ ಬೊಬ್ಬರ್ಯನನ್ನು ಪೂಜಿಸುವರು(ದ.ಕ); A kind of worship to avoid evils while entering into new home of new ships;
- ***—ಕುತ್ತಿ ಬದನೆ*** : ಹಳೆಯದಾದ ಬದನೆ ಗಿಡದಲ್ಲಿ ಬಿಡುವ ಕೂಳೆಕಾಯಿ; ಇದು ಬೆಕ್ಕಿನ ತಲೆಯಂತೆ ಸೊಕ್ಕುಗಟ್ಟಿರುತ್ತದೆ; A kind of brinjal that looks like a cat's wrinkled head;
- ***—ಕುತ್ತಿಬಾಳು*** : ಕೋಳಿ ಅಂಕದಲ್ಲಿ ಕೋಳಿಯ ಕಾಲಿಗೆ ಕಟ್ಟುವ ಒಂದು ಬಗೆಯ ಕತ್ತಿ; A small knife which is tied to the leg of a gambling cock;
- ***—ಕುತ್ತಿಕಾಲು ಕುಣಿತ*** : ಯಕ್ಷಗಾನದಲ್ಲಿನ ಒಂದು ಬಗೆಯ ಹೆಜ್ಜೆಗಾರಿಕೆ; ಇದರಲ್ಲಿನ ವಿಶೇಷತೆ ಹಿಮ್ಮಡಿಯನ್ನೆತ್ತಿ ಕುಣಿಯುವಿಕೆ; ಪಾತ್ರಗಳ ಗುಣಗಳಿಗೆ ಅನುಗುಣವಾಗಿ ಈ ಕುಣಿತ ಅಳವಡಿಕೆ (ಯ.ಪ.ಕೋ); A dancing rhythmic step by lifting heels only in Yakshagana;

- ***—ಕುತ್ತಿ ಮರಿ*** : ಕೂಸುಮರಿ; ಸಣ್ಣ ಮಕ್ಕಳನ್ನು ಬೆನ್ನಿನ ಮೇಲೆ ಹೇರಿಕೊಂಡು ಆಡುವ ಆಟ(ವಿ.ಜಿ); ನೋಡಿ: ಕೂಸುಮರಿ; A play that a baby is to be sit on the back of elders and move;
- ***—ಕುತ್ತಿ ಹಂಡೆ*** : ಕಡೆಗೋಲು; ಮೊಸರನ್ನು ಕಡೆದು ಬೆಣ್ಣೆ ತೆಗೆಯಲು ಬಳಕೆ; ಇದನ್ನು ಮರದ ಹಂಡೆ, ಬಿದಿರಂಡೆ ಎನ್ನುವರು; A churner /dasher that is used to churn curds to get butter.

ಕುತ್ತಿಗೆ/ಕುತ್ಗೆ kuttige/kutge :

- ಕುತ್ತಿಕೆ, ಕುತ್ತಿಗೆ ರೂಪಗಳಿವೆ; 'ಕುತಗಿ' ಅದರ ಆಡು ರೂಪ; ಕತ್ತು; ಕೊರಳು; *ಪ್ರ:* 'ಚಿನ್ನದ ಚೂರೀಂತ ಕುತ್ತಿಗೆ ಕಯ್ಯಳಕಾಗುತ್ತಾ'*(ಗಾ)*; 'ಕೂಡುಂಡು ಕುತ್ಗೆ ಕೂದಂಗೆ'*(ಗಾ)*; ತೆಲು: ಕುತಿಕ, ಗೊಂತು, ಕುತ್ತುತ, ತುಳು: ಕೆಕ್ಕೆಲ್, ಕೆಕ್ಕಿ. Neck; around the neck of a being;
- ***—ಕುತಗಿ ಕೊಯ್ಯು*** : ಕತ್ತು ಹಿಸುಕು; ಕುತ್ತಿಗೆ ಕತ್ತರಿಸು; ನಂಬಿಸಿ ಮೋಸಮಾಡು; ವಂಚಿಸು; ಕತ್ತಿಯಿಂದ ಕುತ್ತಿಗೆ ಕಡಿ; *ಪ್ರ:* 'ಕುತ್ತಿಗೆ ಕೊಯ್ಯುವುದು ಒಂದು ಉದ್ಯೋಗ ಆಗದೆ ಕಣೋ'; An idiom; to cheat; to deceit;
- ***—ಕುತಗಿ ಮಟಾ*** : ಕುತ್ತಿಗೆಯ ತನಕ; ಒಂದು ನುಡಿಗಟ್ಟು; ಒಂದು ಅಳತೆಯ ಮಾನ; *ಪ್ರ:* 'ಬಾವಿಯಾಗ ಕುತಗಿಮಟಾ ನೀರು ನಿಂತೈತಿ'; At the neck of the bottle; a measurement;
- ***—ಕುತ್ತಗಿಗಿ ಬಂದುದ*** : ಸಾಕಾಗು; ಬೇಸತ್ತು ಹೋಗು; ಊಟ ಜಾಸ್ತಿ ಆದಾಗ ಮಾಡಿದ ಊಟ ಅಥವಾ ಆಹಾರ ಪದಾರ್ಥ ಕುತ್ತಗಿಯಲ್ಲಿ ನಿಂತಂತೆ ಆಗುವುದು; *ಪ್ರ:* 'ತಿಂದಿದ್ದು ಕುತಗಿಗಿ ಬಂದದೆ' (ಬೀ.ಜಿ); ಸಮಸ್ಯೆ ಉಲ್ಬಣಗೊಂಡಿದೆ; The neck of the bottle; a trouble;
- ***—ಕುತ್ಗೆ ಮೇಲೆ ಕೂರು*** : ಪೀಡಿಸು; ಹಿಂಸಿಸು; *ಪ್ರ:* 'ಸಾಲಗಾರ ಬಂದು ಕುತ್ಗೆ ಮೇಲೆ ಕೂತು ರೊಕ್ಕ ಕೊಡು ಅಂತ ಕೇಳ್ತಿದಾನೆ'; ನುಡಿಗಟ್ಟಾಗಿಯೂ ಬಳಕೆಯಾಗಿದೆ; ಒತ್ತಡವನ್ನು ತರು ಎಂಬರ್ಥದ್ದು; A violent; irritate; wilderness;
- ***—ಕುತ್ತಿಗೆಗೆ ಬಂದೈತಿ*** : ಸಂಕಟ ಮೈಮೇಲೆ ಬಂದಿರುವುದು; ಉಸಿರುಗಟ್ಟುವಷ್ಟು ಸಮಸ್ಯೆ ತಲೆದೋರುವುದು; ಕಂಟಕ; ನುಡಿಗಟ್ಟಾಗಿಯೂ ಬಳಸಲಾಗಿದೆ; A problem, a danger;
- ***—ಕುತ್ತಿಗೆ ಮುರಿ*** : ಎದುರಾಳಿಯ ಕತ್ತನ್ನು ಪಕ್ಕಕ್ಕೆ ತಿರುಗಿಸುವಿಕೆ; ಇಲ್ಲವೇ ಮೇಲಕ್ಕೆ ಎತ್ತಿ ಮುರಿಯುವಿಕೆ; To wreck the neck by turning around by hands;
- ***—ಕುತ್ತಿಗೆ ತೀಡು*** : ಎದುರಾಳಿಯ ಕುತ್ತಿಗೆ ಮೇಲೆ ಮುಂಗೈನಿಂದ ತೀಡಿ ನೋಯಿಸುವುದು; To pain by lashing the neck of enemy with a fist;
- ***—ಕುತ್ತಿನ ರವಕೆ*** : ಒಂದು ವಿಧದ ಬಟ್ಟೆಯಿಂದ ಹೊಲಿದ ಕುಪ್ಪಸ; ರವಿಕೆ; ಇದು ಸಂಪೂರ್ಣ ಕುತ್ತಿಗೆಯ ತನಕ ಇರುವಂಥದು; A blouse that covers the full neck;
- ***—ಕುತಿಗ್ಗೆ ಉರ್ಲು*** : ಸಂಕಟದಲ್ಲಿ ಸಿಲುಕು(ಬ.ಜಿ); Caught in problem;
- ***—ಕುತ್ಗಿತೆರ್ದು ಹೂಳು*** : ಕುತ್ತಿಗೆ ಕಾಣುವಂತೆ ಇಡೀ ದೇಹವನ್ನು ಮಣ್ಣಿನಲ್ಲಿ ಹೂಳುವುದು; ಇದೊಂದು ಪ್ರಕೃತಿ ಚಿಕಿತ್ಸೆಯ ಕ್ರಮವೂ ಆಗಿದೆ; ನುಡಿಗಟ್ಟು; ಕುತ್ಗಿತೆರ್ದು ಹೂಳಿಕತ್ತಿ ಧಾಟ್ಸೆ(ಬೀ.ಕ.ಕೋ); To bury one's in the ground above at the level of neck only;
- ***—ಕುತ್ಗಿ ಕೈಹಾಕು*** : ಕುತ್ತಿಗೆಗೆ ಕೈ ಇಕ್ಕಿ ಹೊರಗೆ ದಬ್ಬು; ಇದೊಂದು ಅವಮಾನಿಸುವಿಕೆ(ಬೀ.ಕ.ಕೋ); To push someone with neck; an act of insult;
- ***—ಕುತಿಗ್ಗೆಬೀಳು/ಕುತ್ತಿಗೆಗೆ ಗಂಟುಹಾಕು*** : ಅನಪೇಕ್ಷಣೀಯ ಜವಾಬ್ದಾರಿಯನ್ನು ಹೊತ್ತು ಉದ್ದೇಶ ಈಡೇರಿಸುವುದು; *ಪ್ರ:* 'ಈ ದೊಡ್ಡ ಜವಾಬ್ದಾರಿ ನನ್ನ ಕುತಿಗ್ಗೆ ಬಿತ್ತು'; ತೆಲುಗಿನಲ್ಲಿ ಕುತಿಕೆ, ಕುತ್ತಿಕೆ; ಗೊಂತು, ಗೊಂಕೆ ರೂಪಗಳಿವೆ; ಮೊದಲ ಎರಡು ಪದಗಳಲ್ಲಿ ಅಂತಹ ವ್ಯತ್ಯಾಸವೇನೂ ಇಲ್ಲ. 'ಕ' ಹಾಗೆಯೇ ಉಳಿದಿದೆ; ಕಡೆಯ ಎರಡು ಆರಂಭದಲ್ಲಿಯೇ 'ಗ' ಕಾರವನ್ನು ಹೊಂದಿದ್ದು ಅನುನಾಸಿಕ ರೂಪವನ್ನೂ ಪಡೆದಿದೆ; ಪ್ರಭಾವಿತ ಮೂಲವನ್ನು ಹೇಳುವುದು ಕಷ್ಟ;

ಕುತ್ತಿಗೆ ಮೇಲೆ ಕೂರು kuttige mēle kūru :

- ಸಾಲದ ಸಂಬಂಧವಾಗಿ ರಚಿತವಾದ ನುಡಿಗಟ್ಟು; ಸಾಲ ತೆಗೆದುಕೊಂಡವರ ಮೇಲೆ ಸಾಲ ಹಿಂದಿರುಗಿಸಲು ಸಾಲಕೊಟ್ಟವನು ಒತ್ತಡ ಹೇರಿದಾಗ ಅಥವಾ ತಗಾದೆ ಮಾಡಿದಾಗ ಈ ನುಡಿಗಟ್ಟು ಬಳಕೆಯಾಗುತ್ತದೆ; An idiom that refers the money lenders pressure on borrowers while get back their money from them by force;
- "ಸಾಲ ಕೊಟ್ಟವನು ಸುಮ್ಮನೆ ಇರುತ್ತಾನೆಯೇ, ಕುತ್ತಿಗೆಯ ಮೇಲೆ ಕೂತು ಪೀಡಿಸಿಯೇ ಪೀಡಿಸುತ್ತಾನೆ"– ಇಂತಹ ಪ್ರಯೋಗಗಳು ಸಾಮಾನ್ಯ ಬಳಕೆಯಲ್ಲಿವೆ;
- ಈ ನುಡಿಗಟ್ಟು ಸಾಲಕ್ಕೆ ಮಾತ್ರ ಸೀಮಿತವಾಗಿಲ್ಲ; ಹೊಲಗದ್ದೆಯಲ್ಲಿ ಕೆಲಸ ಮಾಡಲು 'ಮುಯ್ಯಾಳು' ಇರಬಹುದು ಅಥವಾ ಮೊದಲೇ ಹಣ ಪಡೆದು ಸಕಾಲಕ್ಕೆ ಕೆಲಸಗಾರರು ಬರದಿರುವ ಪ್ರಸಂಗವಾಗಿರಬಹುದು, ಮಾಲೀಕ ಒತ್ತಾಯ ಹೇರುವ ಸಂದರ್ಭದಲ್ಲಿ ಇದರ ಬಳಕೆ; ಇಲ್ಲವೆ ಗುತ್ತಿಗೆ ಹಿನ್ನೆಲೆಯಲ್ಲಿ ಕೂಡ ಈ ನುಡಿಗಟ್ಟು ಚಾಲ್ತಿಗೆ ಬಂದಿರಬಹುದು; This idiom refers the person who works as mutual labouring;
- ಬಳಕೆಯ ಹೊಸ ಸಂದರ್ಭಗಳೂ ಇವೆ; ಮೇಲಿನ ಅಧಿಕಾರಿಗಳು ಕೆಳಗಿನವರ ಮೇಲೆ ಯಾವುದೊ ನಿರ್ದಿಷ್ಟ ಕೆಲಸಕ್ಕಾಗಿ ಒತ್ತಾಯ ತರುವಾಗ, ಈ ಮಾತು ವ್ಯಕ್ತವಾಗಿರಬಹುದು;
- ನುಡಿಗಟ್ಟಿನಲ್ಲಿ ಮುಖ್ಯವಾಗಿ 'ಕುತ್ತಿಗೆ' ಮತ್ತು 'ಕೂರು' ಪದಗಳಿವೆ, ಕನ್ನಡದಲ್ಲಿ 'ಕುತ್ತಿಗೆ'ಗೆ ಸಂವಾದಿಯಾಗಿ 'ಕೊರಳು' ಪದವಿದೆ; ತೆಲುಗಿನಲ್ಲಿ ಕುತ್ತಿಕೆ/ಕುತ್ತಿಕ, ಕುತಿಕೆ, ಗೊಂತುಕೆ/ಗೊಂತುಕ ಪದಗಳು ಬಳಕೆಯಲ್ಲಿವೆ; 'ಕು' ಶಬ್ದ 'ಕೊ' ಆಗಿ 'ಗೊ'ಆಗುವುದು ಅಪರೂಪವೇನಲ್ಲ; ಇನ್ನು 'ತ'ಮತ್ತು 'ಗ'ಕಾರಗಳು ಸಾಮಾನ್ಯ; ಆದರೆ ತೆಲುಗಿನಲ್ಲಿ 'ಅನುನಾಸಿಕ' ಉಚ್ಚಾರಣೆ ಬಂದ ಬಗೆಯಾದರೂ ಹೇಗೆ? ಇನ್ನು 'ಕೂರು' ಪದ– ಕನ್ನಡದಲ್ಲಿ ಕುಳಿರ್, ಕುಳ್ಳಿರ್, ಕೂಡ್ರು ರೂಪಗಳಿವೆ, 'ಕೂಡ್ರು' ರೂಪವೇ 'ಕೂರು' ಆಗಿ ಮಾರ್ಪಟ್ಟಿರಬಹುದು, ಹಾಗೆಯೇ 'ಕುಳ್ಳಿರು' ರೂಪ 'ಕುಳಿತು' ಆಗಿ ಕ್ರಮೇಣ 'ಕೂತು' ರೂಪ ಪ್ರಾಪ್ತವಾಗಿರಬಹುದು; ತೆಲುಗಿನಲ್ಲಿ 'ಕೂಕುಣ್ಡು', 'ಕೂಚುನ್ಡು' ರೂಪಗಳಿವೆ; ತುಳುವಿನ 'ಕುಳ್ಳ್' ರೂಪ ಕನ್ನಡ ಮೂಲರೂಪಕ್ಕೆ ಸಂವಾದಿಯಾಗಬಹುದು;
- 'ಕುತ್ತಿಗೆಯ ಮೇಲೆ ಕೂರು' ನುಡಿಗಟ್ಟು ಶಾರೀರಿಕ ಕ್ರಿಯೆಯನ್ನು ನಿರಾಕರಿಸುತ್ತದೆ; ಆದರೆ ಚಿಕ್ಕಮಕ್ಕಳನ್ನು ಹಳ್ಳಿಗಾಡಿನಲ್ಲಿ ಜಾತ್ರೆ, ಪರಿಸೆ, ಸಂತೆ ಮುಂತಾದ ಕಡೆಯಲ್ಲಿ ಕುತ್ತಿಗೆ/ಹೆಗಲ ಮೇಲೆ ಕೂರಿಸಿಕೊಂಡು ಹೋಗುವುದನ್ನು ನೋಡಿದ್ದೇವೆ; ಆದರೆ ನುಡಿಗಟ್ಟು ಸಾಂಸ್ಕೃತಿಕವಾದುದರ ಮೇಲೆ ಒತ್ತುತರುತ್ತದೆ; ಆ ಆರ್ಥದಲ್ಲಿ ಶಾರೀರಿಕ ಜಾನಪದಕ್ಕೆ ಸೇರುವ ಒಂದು ನುಡಿಗಟ್ಟು; ಈ ನುಡಿಗಟ್ಟು 'ಜೀತ'ವನ್ನು ಕೂಡ ಸೂಚಿಸಬಹುದು; ಕುವೆಂಪು ಅವರ 'ಸಾಲದ ಮಗು' ಕಥೆ ಅತ್ಯುತ್ತಮ ನಿದರ್ಶನ; ಜೀತಕ್ಕಿದ್ದ ಮಗುವನ್ನು ಭಾರಿ ಮಳೆಯ ಸಂದರ್ಭದಲ್ಲಿ ಒಡ್ಡಿದ 'ಕೊಡವೆ'ಗೆ ಮೀನು ಬಿದ್ದಿದೆಯೆ ಎಂದು ನೋಡಿಕೊಂಡು ಬರಲು ಒಡೆಯ ಒತ್ತಾಯ ಮಾಡಿ ಕಳುಹಿಸುತ್ತಾನೆ, ಇಷ್ಟವಿಲ್ಲದಿದ್ದರೂ ಹುಡುಕಿಕೊಂಡು ಹೊರಟ ಮಗು ಕೊಡವೆಯಲ್ಲಿ ಕೈಹಾಕಿದಾಗ ನಾಗರಹಾವು ಕಡಿದು ಸತ್ತ ಹೋಗುತ್ತದೆ; ಈ ಪ್ರಸಂಗ 'ಪೀಡಿಸಿ' ಕಳುಹಿಸಿದ ಪ್ರಸಂಗವೇ ಅರ್ಥಾತ್ 'ಕುತ್ತಿಗೆ ಮೇಲೆ ಕೂತು' ಕಳುಹಿಸಿದ ಪ್ರಸಂಗವೆಂದೇ ದಾಖಲಿಸಬೇಕು; though the idiom rejects the anatomic meanings, It refers the activities of children who sit on their parents shoulders' neck while they enjoy/visits fairs markets.

ಕುತ್ತಿಪುಳಿ kuttipuḷi :

ಕಕೋಟೆಕಾಯಿ : Garcinia Morella (Clusiaceae) ಒಂದು ಬಗೆಯ ಹುಳಿಹಣ್ಣು; ಕಾಡಿನಲ್ಲಿ ದೊರೆಯುವ ಹಣ್ಣನ್ನು ವರ್ಷದವರೆಗೂ ಶೇಖರಿಸಿ ಬೇಕೆಂದಾಗ ಬಳಸಬಹುದು; ಅರ್ದಳ, ದೇವನಪುಳಿ; ಕಚ್ಚಪುಳಿ, ಜೀರಿಗೆ ಹುಳಿ; A sour fruit; This fruit can be preserved up to one year.

ಕುತ್ತುಂಬೋಳು kuttumbo̅ḷu :

ದೊಡ್ಡದಾದ ಕೂಣಿ; ಇದನ್ನು ಮೀನುಗಾರರು ದೊಡ್ಡ ಮೀನುಗಳನ್ನು ಹಿಡಿಯಲು ಬಳಸುವರು(ದ.ಕ). A big device that is used to fishery.

ಕುತ್ತುಂಬ್ರಿ kuttumbri :

ಪ್ರಾಚೀನ ಭತ್ತದ ಒಂದು ತಳಿ; ಇದನ್ನು ವಿಶೇಷವಾಗಿ ನೀರುದೋಸೆ ಮತ್ತು ಕಜ್ಜಾಯ ತಯಾರಿಕೆಯಲ್ಲಿ ಬಳಕೆ(ದ.ಕ). An ancient paddy breed.

ಕುತ್ತುಗೋಲು kuttugo̅lu :

- ಚಾಪೆ ಮತ್ತು ಗೊರಬೆ ಹೆಣೆಯುವವರು ಉಪಯೋಗಿಸುವ ಬಿದಿರಿನ ಅಥವಾ ಕಬ್ಬಿಣದ ಚೂಪಾದ ಸಾಧನ; A sharp tool that uses to sew mat and other products alike;
- ಕಮ್ಮಾರರು ಉಪಯೋಗಿಸುವ ತೋರುಗೋಲು; ಕಬ್ಬಿಣದ ಕೋಲು(ಪಾಂ.ವ್ಯ.ಪ.ಕೋ); Odding tool used by Black smith to odd two pieces of iron bars;
- ಬೆಸಗೋಲು(ಬ.ಜಿ).

ಕುತ್ತುರೆ kutture :

- ಕಂಠಪೂರ್ತಿ; ಕಂಠದ ಮಟ್ಟ; ರಾಶಿಯಾಗಿ; ತುಂಬಿ ತುಳುಕು; *ಪ್ರ:* 'ಮೊರದ ತುಂಬ ಕುತ್ತುರೆಯಾಗಿ ಇದ್ದಿತಾದರೂ ಹಸಿದವನಿಗೆ ಅದು ಸಾಲದೆಂಬಂತೆ ತೋರಿದೆ'(ಮೈ.ಜಿ); Enough heap; up to throat;
- ಗುಡ್ಡೆ; ರಾಶಿ(ಶಿ.ಜಿ); –heap.

ಕುತ್ತೇರಿ kutte̅ri :

ಯಕ್ಷಗಾನದಲ್ಲಿ ಸ್ತ್ರೀ ಪಾತ್ರಧಾರಿಗಳು ಧರಿಸುವ ಬಣ್ಣಬಣ್ಣದ ಕಿರೀಟ(ದ.ಕ). A coloured crown of female characters in Yakshagana.

ಕುತ್ತೊಸಿ kuttosi :

ಬಡಿಗ(=ಬಡಗಿ) ಹಲಗೆಯನ್ನು ತೂತು ಮಾಡಲು ಬಳಸುವ ಸಾಧನ.

ಕುತ್ರಿ kutri :

- Solanum erianthum(Solanaceae) ಚಿಕ್ಕಸಸ್ಯ; ತರಕಾರಿಯಾಗಿ ಬಳಕೆ; A small plant used as vegetable greens; ಕಾಯಿಯಿಂದ ಉಪ್ಪಿನಕಾಯಿ ತಯಾರಿಕೆ; It is used to do pickles; ಇದರ ಎಲೆಯನ್ನು ಬಿಸಿನೀರಿನಲ್ಲಿ ಅರೆದು ಪಟ್ಟುಹಾಕಿದರೆ ಊತ, ಉರಿ ಕಡಿಮೆಯಾಗುತ್ತದೆ;
- ಭತ್ತದ ಬೆಳೆ(ಚಿಕ್ಕ.ಜಿ). A paddy crop.

ಕುತ್ರಿ ಗುಡ್ಡಿ(ಡ್ಡೆ) kutriguḍḍi(ḍḍe) :

ಬೇಸಾಯದಲ್ಲಿ ಉಳುಮೆ ಮಾಡುವಾಗ ಗದ್ದೆಯಲ್ಲಿ ಅಲ್ಲಲ್ಲಿ ಹಾಕಿರುವ ಮಣ್ಣಿನ ರಾಶಿ. A soil heap of the field while cultivating here there.

ಕುತ್ರೆ kutre :

- ಭತ್ತವಿರುವ ಹುಲ್ಲನ್ನು ಕೂಡಿಡುವ ಜಾಗ(ಚಿಕ್ಕ.ಜಿ); A place for stalking paddy straw; ಮಾಂಸದ ರಾಶಿ(ಬೇ.ಸಾಂ.ಪ.ಕೋ); A heap of mutton;
- ಹುಲ್ಲಿನ ರಾಶಿ; ಬಣವೆ(ದ.ಕ); grassy stock;
- ಗೋದನೆ; ಹುಲ್ಲಿನ ಗೊಣಬೆ(ಉಕ.ಜಿ) (ಮ.ನು.ಕೋ).

ಕುದ್‌ಮೆಣಸು kudmeṇasu :

ಆಹಾರದ ಬಗೆ; ವಿಶೇಷವಾಗಿ ಬಾಣಂತಿಯರಿಗೆ ನೀಡುವ ಆಹಾರ; ಬೆಳ್ಳುಳ್ಳಿ, ಉಪ್ಪು, ಮೆಣಸು, ಅರೆದು ತುಪ್ಪ ಬೆರೆಸಿ ತಯಾರಿಸಿದ್ದು; ಮೈನೆರೆದವರಿಗೆ ಬಾಣಂತಿಯರಿಗೆ ಮೈಸುಂಡಲಿ ಎಂದು ಕೊಡುವ ಪಥ್ಯದ ಆಹಾರ(ಮಂಡ್ಯ.ಜಿ). A dish for nursing labour mother made up of salt, ginger, pepper.

ಕುದನೆ kudane :

Solanum torvum(Solanaceae) ಕಾಡುಬದನೆ; ಕಡಲೆ ಗಾತ್ರದ ಗೋಲಿಯಾಕಾರದ ಹಸಿರು ಬಣ್ಣದ ಕಾಯಿ ಬಿಡುವ ಸಸ್ಯ; ಎಲ್ಲೆಡೆ ಬೆಳೆಯುವುದು; ಜಜ್ಜಿದ ಕಾಯಿಗಳನ್ನು ಅಡುಗೆಯಲ್ಲಿ ತರಕಾರಿಯಾಗಿ ಬಳಸುವರು; ಪುಟ್ಟಬದನೆ; ಸುಂಡೆ; ಹುಚ್ಚುಸೊಂಡೆ(ದಕ); ಕಾಡುಸೊಂಡೆ, ಚುಂಡೆ. A wild brinjal.

ಕುದಮ kudama :

ಕುದುಮು; ಕುಂಬಾರ ಹದ ಮಾಡಿದ ಮಣ್ಣಿನಿಂದ ಮಡಕೆಗಳನ್ನು ಮಾಡಿದ ಸ್ವಲ್ಪ ಒಣಗಿದ ಮೇಲೆ ದಪ್ಪನೆಯ 'ಸೊಳ' ಮತ್ತು ಕಲ್ಲನ್ನು ಬಳಸಿ ತಟ್ಟುವ ಕ್ರಮ; ಮಡಿಕೆ ತಯಾರಿಕೆಯಲ್ಲಿನ ಮೊದಲ ಹಂತ; ಇದರಿಂದ ಮಡಿಕೆಗೆ ಆಕಾರ ನೀಡಲು ಸಾಧ್ಯ; ಬೆಳಗಾವಿ ಭಾಗದಲ್ಲಿ ಇದಕ್ಕೆ 'ಕುತುಬ' ಎನ್ನುವರು; A method of pottering that gives a final shape to pots;

—*ಕುದುಬಿನ ಸೊಳ* : ಸ್ವಲ್ಪ ಹಸಿ ಮಡಕೆಯನ್ನು ತಟ್ಟಲು ಬಳಸುವ ಮರದ ದಪ್ಪನೆಯ ಹಿಡಿಕೆಯುಳ್ಳ ಸಾಧನ. A wooden tool that is used to shape clay wet pots.

ಕುದರಿ kudari :

- ಸದಾ ಸಿದ್ಧವಿರುವ; To be ready;
- ಲಾಟೀನದ ಒಂದು ಭಾಗ; ಇದು ಗಾಜಿನ ಬುರುಡೆಯನ್ನು ಹಿಡಿದಿರುತ್ತದೆ; A part of lantern;
- ಗೊಂದಲಿಗರ ಸಂಬಾಳದ ತಾಳಕ್ಕೆ ಜೋಡಿಸಿರುವ ಕಟ್ಟಿಗೆಯ ತುಂಡುಗಳು; ಇವನ್ನು ಬೆಟ್ಟೆ ಎಂದೂ ಕರೆಯುವರು;
- ಬಿತ್ತುವ ಕೂರಿಗೆ ಡಮ್ಮಲು ಬಳಸುವ ∩ಆಕಾರದ ಕಬ್ಬಿಣದ ಕೊಂಡಿ(ಬೀ.ಕ.ಕೋ). An iron hook.

ಕುದರೆ/ಕುದಿರೆ/ಕುದುರೆ/ಕುದರಿ kudare/ kudire/kudure/kudari :

- ಅಶ್ವ; ತುರಗ; An horse;
- ತುಪಾಕಿ ಹಾರಿಸುವ ಕೀಲು ಮೊಳೆ; ತಿರುಪು(ಜನಪದ ಮಹಾಭಾರತ); Gun trigger;
- ಕೊಡೆ(ಛತ್ರಿ) ಯನ್ನು ಮುಚ್ಚದಂತೆ ತಡೆ ಹಿಡಿಯುವ ಕೊಕ್ಕೆ; ಕೊಂಡಿ(ತು.ನಿ);
- ಕೋವಿಯ ಕಿವಿ; ಚಾಪು; ಕೋವಿನ ನಳಿಗೆಯ ಬುಡದಲ್ಲಿರುವ ಚಿಲಕ; ಇದರ ಚಲನೆಯಿಂದ ಕೋವಿಯಿಂದ ಗುಂಡು ಸಿಡಿಯುತ್ತದೆ; (ಬೇ.ಸಾಂ.ಪ.ಕೋ);
- ದೊಡ್ಡತನ; ಹಿರಿಮೆ; *ಪ್ರ:* 'ಕುದುರೆ ಮೇಲೆ ಕೂತು ಕುರಿ ಕಾದಂಗೆ'(ಗಾ); His highness seniority;
- ಒಂದು ಕಡೆಯಿಂದ ಇನ್ನೊಂದೆಡೆಗೆ ನೇಯ್ಗೆಯಲ್ಲಿ ಲಾಳಿಯ ಚಲನೆ(ನೇ.ವೃ.ಪ.ಕೋ); A movement of shuttle from one side to another in handloom;
- ಧಾನ್ಯ ತೂರುವಾಗ ಎತ್ತರದಲ್ಲಿ ನಿಲ್ಲಲು ಬಳಸುವ ಸಾಧನ(ಕ.ಜಿ);
- ಮರದ ಅಟ್ಟ; ಹುದುಗೆ(ರಾಮ.ಜಿ);
- ಕುಪ್ಪಳಿಸುವ ಒಂದು ಜಾತಿಯ ಮಿಡಿತೆ(ತು.ನಿ);
- ಬಂಡಿಯ ಮುಂಭಾಗದಲ್ಲಿರುವ ಕಟ್ಟಿಗೆಯ ಸಾಧನ; ಚಕ್ಕಡಿಯನ್ನು ಎತ್ತರಿಸಲು ಬಳಕೆ;
- ಸಾವಿಗೆ ಮಣೆಯ ಒತ್ತು ಕೈ;
- ಚಾಲಾಕಿ ಹೆಣ್ಣು ಮಗಳಿಗೆ ಬೈಯುವಾಗ ಬಳಸುವ ಪದ;
- ಗೋಡೆಯ ಗಾರೆ, ಸುಣ್ಣ ಇತ್ಯಾದಿಗಳನ್ನು ಬಳಿಯುವ ಕೆಲಸಕ್ಕೆ ಬಳಸುವ ಉದ್ದ ಕಾಲುಗಳುಳ್ಳ ಬೆಂಚಿನಂತಹ ಮರದ ಸಾಧನ;
- ಕಂಗಿಲು ಕುಣಿತದಲ್ಲಿ ಬರುವ ಕುದುರೆ ವೇಷ(ದಕ);
- ಚದುರಂಗ ಆಟದಲ್ಲಿನ ಒಂದು ಕಾಯಿ; ಕುದುರೆ ಆಕಾರವನ್ನು ಹೊಂದಿರುವುದು;
- ಮೆರೆ ದೇವರ ವಾಹನ; ಉತ್ಸವ ಮೂರ್ತಿಯನ್ನು ಮೆರೆಸುವಾಗ ಬಳಸುವರು;
- ಮಕ್ಕಳು ಆಡುವ ಆಟದಲ್ಲಿನ ಒಂದು ವಸ್ತು; ಕುದುರೆಯಾಕಾರದ್ದು, ಮರದಿಂದ ತಯಾರಿಕೆ; ಇದರ ಮೇಲೆ ಕುಳಿತು ಜಿಗುತ್ತಾ ಆಡುವರು; ತ: ಕುದಿರೈ, ಮ: ಕದಿರ, ತೆ: ಕುದಿರಮು, ಕುದಿರೆ. ದ್ರಾವಿಡ ಭಾಷೆಗಳಲ್ಲಿನ ಸಂವಾದಿ ಪದಗಳೆಲ್ಲ ಸಮಾನವಾಗಿವೆ; ತಮಿಳು, ಮಲೆಯಾಳಂ ಮತ್ತು ತೆಲುಗು ಭಾಷೆಗಳಲ್ಲಿ ಪದ ಮಧ್ಯೆ 'ದಿ'(ದ್+ಇ) ಬಂದಿರುವುದರಿಂದ 'ಕುದಿರೆ' ಮೂಲರೂಪ ಇರಬಹುದು; ಕನ್ನಡದಲ್ಲಿಯೂ ಇದೆ;
- ಕುದುರೆ ಜಾನಪದದಲ್ಲಿ ಪಾತ್ರವಾಗಿಯೊ ಪ್ರತಿಮೆಯಾಗಿಯೊ ವ್ಯಾಪಕವಾಗಿ ಕಾಣಿಸಿಕೊಳ್ಳುತ್ತದೆ; ಈ ವ್ಯಾಪ್ತಿಯಲ್ಲಿ ಜನಪದ ಕಥೆ, ಪುರಾಣ, ಐತಿಹ್ಯ, ಆಚರಣೆಗಳು ಬರುತ್ತವೆ; Horse appeared as a character and an image in Kannada folk;
- 'ಸೂರ್ಯ ಪುರಾಣ' ಪ್ರಕಾರ ಸೂರ್ಯದೇವ 'ಸಪ್ತಾಶ್ವ' ಗಳನ್ನು ಹೂಡಿ, ರಥವೇರಿ ಬರುತ್ತಾನೆಂಬ ಕಲ್ಪನೆಯಿದೆ; ಈ ಏಳು(ಜಾನಪದಲ್ಲಿನ ಒಂದು

ಮಾಂತ್ರಿಕ ಸಂಖ್ಯೆ) ಕುದುರೆಗಳೇ ಇವೊತ್ತಿನ ಏಳು ಬಣ್ಣಗಳು; ವೈಜ್ಞಾನಿಕ ಸತ್ಯವನ್ನು 'ಸೂರ್ಯಪುರಾಣ' ಕಥೆ ಮಾಡಿ ಹೇಳಿದೆ;

- 'ಕೀಲು ಕುದುರೆ' ಒಂದು ಜನಪ್ರಿಯ ಆಶಯ; ಬಡಗಿಯೊಬ್ಬ ಕೀಲು ಕುದುರೆ ಮಾಡಿ ರಾಜಕುಮಾರನನ್ನು ಸವಾರಿಮಾಡಲು ಹೇಳಿದನಂತೆ; ಅದರ ಪ್ರಕಾರ ರಾಜಕುಮಾರ ಕೀಲುಕುದುರೆ ಏರುವುದು, ಕೀಲೊಂದರ ಮೇಲೆ ಕಾಲು ತಾಕಿದಾಗ ಆ ಕೀಲುಕುದುರೆ ರಾಜಕುಮಾರಿಯ ಮನೆಯ ಮೇಲೆ ಇಳಿಯುವುದು, ಆನಂತರ ಮುಂದಿನ ಕಥಾ ಬೆಳವಣಿಗೆ ಊಹಿಸಿದ ಜನಪದ ಕಥೆಯಂತೆ ಸಾಗುವುದು – ಇಲ್ಲಿನ ವಿವರ; 'ಕೀಲುಕುದುರೆ' ಕಥೆ 'ಅರೇಬಿಯನ್ ನೈಟ್ಸ್' ಕಥೆಗಳಲ್ಲಿದೆ; ಹಾಗೆಯೇ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಹಳ್ಳಿಯೊಂದರ ಮುದುಕ ಹೇಳಿದ ಕಥೆಯೊಂದು ಸಿಕ್ಕಿದೆ; ಬಹುದೂರದ ಕಥೆಗಳಾದರೂ ಸಾಮ್ಯ ಸಾಮಾನ್ಯ ಗುಣವೆಂಬುದನ್ನು ಈ ಕಥೆ ಮನವರಿಕೆ ಮಾಡಿಕೊಡುತ್ತದೆ; ಬಹಳ ಹಿಂದೆಯೇ ತೆಲುಗಿನಲ್ಲಿ 'ಕೀಲುಗುರ್ರ' ಎಂಬ ಚಲನಚಿತ್ರ ಬಂದಿತ್ತು. ಇದು ಮೇಲೆ ಹೇಳಿದ 'ಕೀಲುಕುದುರೆ' ಕಥೆಯೇ, ಅಂದರೆ ತೆಲುಗಿನಲ್ಲಿಯೂ ಈ ಕಥೆ ಇದ್ದಂತಾಯಿತು; ಜನಪದ ಕಥಾಕಲ್ಪನೆಯಲ್ಲಿ ಹಾರುವ ಕುದುರೆಗಳಿಗೇನೂ ಕೊರತೆಯಿಲ್ಲ; ಮನಸ್ಸಿನ ಆವೇಗಕ್ಕೂ ವೇಗಕ್ಕೂ ಇದು ಸಂಕೇತವಾಗಿ ಬಿಡಬಹುದು; A key horse or flying horse and a prince is a popular optimistic ideology in folk stories;
- ಸಮುದ್ರಮಂಥನದ ಕಾಲದಲ್ಲಿ ದೊರೆತ ಅಪರೂಪದ ವಸ್ತುಗಳನ್ನು ದೇವತೆಗಳು ಪಡೆದರೆಂಬುದು ಗೊತ್ತಿರುವ ವಿಷಯವೇ; ದಾಯಾದಿ ಮತ್ಸರಕ್ಕೆ(ರಾಕ್ಷಸರು ದೇವತೆಗಳಿಗೆ ದಾಯಾದಿಗಳು ತಾನೆ) ಇದು ಒಳ್ಳೆಯ ಉದಾಹರಣೆ; ಹಾಗೆಯೇ ದೇವತೆಗಳು/ದೇವೇಂದ್ರ ಪಡೆದ ವಸ್ತುಗಳಲ್ಲಿ 'ಉಚ್ಛೈಃಶ್ರವ' ಒಂದು; ಇದು 'ಐರಾವತ' ಆನೆಯ ಹಾಗೆ, ದೇವೇಂದ್ರನ ಕುದುರೆ;
- 'ಕೆರೆಗೆ ಹಾರ' ದ 'ಬೆತ್ತಲೆ ಗುದರಿ' ಕಲ್ಪನೆಯನ್ನೆ ತೆಗೆದುಕೊಳ್ಳಿ; ಅಂದರೆ ಜೀನು, ಕಡಿವಾಣ ಇತ್ಯಾದಿಗಳನ್ನು ಹಾಕದೆ, ಹೇಗಿತ್ತೊ ಹಾಗೆಯೇ ಕುದುರೆ ಏರಿ ಹೋಗುವುದು; ಹೆಂಡತಿ ಭಾಗೀರಥಿ ಮಾವ ಮತ್ತು ಸಮಾಜದವರ ಒತ್ತಡಕ್ಕೆ ಒಳಗಾಗಿ 'ಕೆರೆಗೆ ಆಹಾರ' ವಾದಾಗ, ಅಂದರೆ ಬಲಿಯಾದಾಗ, ಆ ಕಡೆ ದಂಡಿಗೆ ಹೋಗಿದ್ದ ಗಂಡ 'ಮಹದೇವರಾಯ' 'ಬೆತ್ತಲೆ ಗುದುರಿ' ಯನ್ನು ಹತ್ತಿ ಬರುತ್ತಾನೆಂದು ಕಥೆಯ ಪ್ರಮೇಯ. ಈ 'ಬತ್ತಲೆ ಗುದರಿ' ಏರಿ ಬರುವ ವಿಚಾರ ಇಡೀ ಸಂದರ್ಭದ ತಲ್ಲಣ, ಆತಂಕ, ಒತ್ತಡ, ಗಂಡ ಮಹದೇವರಾಯನ ಮನಸ್ಸಿನ ಚಿಂತೆಯ ವೇಗ, ಏನೋ ಕೇಡು ಸಂಭವಿಸಿರಬಹುದೆಂಬ ಭವಿಷ್ಯದ ಸೂಚನೆ – ಇದಕ್ಕೆಲ್ಲ ಸಂತೇತವೂ ಪ್ರೇರಕವೂ ಆಗಿ ಬಿಡಬಹುದಾದಷ್ಟು ಸಮರ್ಥವಾಗಿದೆ; ಅದೊಂದು ಸಮರ್ಪಕ, ಅನನ್ಯ ಪ್ರತಿಮೆ(image) ಕೂಡ ಆಗಿದೆ;
- ಮೊದಲಿನಿಂದಲೂ ಸಂಸ್ಕೃತಿಯಲ್ಲಿ ಕುದುರೆ 'ಲೈಂಗಿಕ ಪ್ರತಿಮೆ'(sexual image)ಯಾಗಿ ಕಂಡುಬಂದಿದೆ; ಇದನ್ನು ಅನೇಕ ಪುರಾಣ ಕಥೆಗಳು ಬಳಸಿಕೊಂಡಿವೆ; ಈಗಲೂ ಬಳಸಿಕೊಳ್ಳುತ್ತಿವೆ; ಕುವೆಂಪು ಅವರ 'ಶ್ರೀರಾಮಾಯಣದರ್ಶನಂ' ಮಹಾಕಾವ್ಯದ ದಶಾನನ ಸ್ವಪ್ನಸಿದ್ಧಿ ಸಂಚಿಕೆಯಲ್ಲಿ 'ಅಶ್ವ'ವೊಂದರ ಪ್ರತಿಮೆಯನ್ನು ತರಲಾಗುತ್ತದೆ, ಇಲ್ಲಿಯೂ ಕುದುರೆ 'ಕಾಮ'ದ ಸಂಕೇತವಾಗಿಯೇ ಬರುವುದನ್ನು ಕಾಣುತ್ತೇವೆ;
- ಇಂದಿಗೂ 'ಅಶ್ವಶಕ್ತಿ'(Horse power) ಎಂಬ ಪದವನ್ನು ಬಳಸುತ್ತಿದ್ದೇವೆ'; ವಿದ್ಯುಚ್ಛಕ್ತಿ ವಿಷಯದಲ್ಲಿ HP(= Horse power) ಬಳಕೆಯಲ್ಲಿದೆ; A measurement of electricity;
- ***—ಕುದರಿ ಓಟ*** : ಕುದುರೆಯಂತೆ ವೇಗವಾಗಿ ಓಡುವಿಕೆ; ಹಾರುತ್ತ ಓಡುವುದು; Horse galloping;
- ***—ಕುದರಿ ಮೀನು*** : ಕುದುರೆ ಮುಖವನ್ನು ಹೋಲುವ ಮೀನು; ಇದು ನೀರಿನಲ್ಲಿ ಹೆಚ್ಚು ವೇಗದ ಚಟುವಟಿಕೆ ಹೊಂದಿರುವ ಮೀನು; Horse fish that resembles horse face;
- ***—ಕುದರಿ ಹರಕೆ*** : ಜನಪದರಲ್ಲಿ ಹರಕೆಯ ಒಂದು ಕ್ರಮ; ತಮ್ಮ ದೇಹ ಯಾವುದೇ ರೋಗಕ್ಕೆ ತುತ್ತಾಗದೆ ಕುದುರೆಯಂತೆ ಗಟ್ಟಿ ಮುಟ್ಟಿನ ಶರೀರಕ್ಕೆ ದೇವರಿಗೆ ಅರ್ಪಿಸುವ ಹರಕೆ; ಬೆಳ್ಳಿ ಬಂಗಾರದ ಕುದುರೆಯಾಕಾರದ ಮೂರ್ತಿಯನ್ನು ದೇವರಿಗೆ

ಅರ್ಪಿಸುವುದು(ವಿ.ಜಿ); An offer of horse idol to god as a remedy for escaping diseases;

- *—ಕುದರಿಗಾಲ* : ಹೆಣ್ಣಿನ ಕಾಲಿನಲ್ಲಿರುವ ನರ ಉಬ್ಬಿರಬಾರದು; ಹಾಗೆ ಉಬ್ಬಿದ ಕಾಲಿನವಳನ್ನು ಕುದರಿಗಾಲಿನ ಹೆಣ್ಣು ಎನ್ನುವರು; ಆಕೆ ಯೋಗ್ಯ ಹೆಣ್ಣಲ್ಲವೆಂದು ಕುದುರೆಯಂತೆ ಓಡಾಡುವ ಚಂಚಲೆ ಎನ್ನುವರು(ಕಲ.ಜಿ); A woman whose vain of leg embossed that indicate the women is frailty and indecisive;
- *—ಕುದರಿಕಾರ ಗೊರವರು* : ಮೈಲಾರಲಿಂಗನ ಕುದುರೆಗಳ ಚಾಕರಿ ಮಾಡುವ ಗೊರವರು; ಇವರು ತಮ್ಮನ್ನು ದೇವರ ಕುದುರೆಗಳೆಂದು ಭಾವಿಸಿ ಕುದುರೆಯಂತೆ ಹೆಜ್ಜೆ ಹಾಕುವರು; ಚಾಟಿಯಿಂದ ಹೊಡೆದುಕೊಳ್ಳುವುದು ಒಂದು ಆರಾಧನೆಯ ಕ್ರಮ(ಚಿ.ಪ.ಕೋ)(ಬ.ಜಿ); The servers of horse of god Mylara Linga- Gorava;
- *—ಕುದರಿ ನಡೆತ* : ಕುದುರೆಯಂತೆ ವೇಗವಾಗಿ ನಡೆಯುವ ಎತ್ತಿನ ನಡೆ; ಇಂತಹ ಎತ್ತು ಕೃಷಿ ಕಾರ್ಯಕ್ಕೆ ಯೋಗ್ಯವಾದದ್ದು(ಚಿ.ಪ.ಕೋ); A bullock that walks like a horse and fit for farming;
- *—ಕುದುರಿ ಮೂತಿ ಹುಳಾ* : ಒಂದು ಬಗೆಯ ಕೀಟ; ಬೆಳೆಯನ್ನು ನಾಶ ಮಾಡುವುದು; ದುರ್ವಾಸನೆಯ ಕೊಳಕು ಜಾಗದಲ್ಲಿ ಹುಟ್ಟುವ ಹುಳು; (ಕೃ.ಪ.ಕೋ)(ಬ.ಜಿ); A kind of insect; that destroys crops;
- *—ಕುದರಿ ಮಾವುತ* : ಮಾವುತ ಎಂಬುದನ್ನೇ ಕುದುರೆ ಕಾಸದಾರ ಎಂಬ ಅರ್ಥದಲ್ಲಿ ಬಳಕೆ(ಉ.ಕ); An horse Jockey/rider;
- *—ಕುದರಿ ಪೇರಾಟ* : ಕುದುರೆ ಮೇಲೆ ಕುಳಿತು ಅಂಗಳದಲ್ಲಿ ಸುತ್ತು ಹಾಕುತ್ತಾ ನಾನಾ ವಿಧದ ಚಮತ್ಕಾರಗಳನ್ನು ತೋರಿಸುವ ಆಟ; A play/performing stunts sitting on horse;
- *—ಕುದರಿ ಹಬ್ಬ* : ಮೈಲಾರಲಿಂಗ ದೇವರು ಸೀಗೆಹುಣ್ಣಿಮೆಯ ನಂತರದ ಏಳನೇ ದಿನ ಅಶ್ವಾರೋಹಿಯಾಗಿ ಬೇಟೆಯಾಡಲು ಹೋಗುವ ಆಚರಣೆ(ದಾ.ಜಿ)(ಬ.ಜಿ); A celebration of seventh day of god Mailaralinga who goes to huntling at fullmoon light on horse back;
- *—ಕುದುರಿ ಚಾಕರಿ* : ಅತಿಶಯ; ಉಪಚಾರ; ಮನಸ್ಸಿಲ್ಲದೆ ಮಾಡುವ ಸೇವೆ(ಬೀ.ಕ.ಕೋ); Exagagerate; treatment;
- *—ಕುದುರೆಕೋಲ/ಕುದುರೆಕೋಲು*: ದೈವಾರಾಧನೆಯ ಕಲೆ; ನಲ್ಕೆ ಜನಾಂಗದವರು ಸುಗ್ಗಿ ಬೇಸಾಯ ಪ್ರಾರಂಭಿಸುವ ಮುನ್ನ ನಡೆಸುವ ಕುಣಿತ; ನಾಗಬ್ರಹ್ಮನು ಕುದುರೆಯ ಮೇಲೆ ಕುಳಿತುಕೊಂಡು ಗ್ರಾಮಕ್ಕೆ ಬರುವುದನ್ನು ತೋರಿಸುವ ಕುಣಿತ; ಸೊಂಟಕ್ಕೆ ಕುದುರೆಯಾಕಾರದ ವೇಷಧರಿಸಿ ಕುಣಿತ ಮಾಡುವರು; ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು, ಬಂಟ್ವಾಳ, ಸುಳ್ಯ ತಾಲ್ಲೂಕುಗಳಲ್ಲಿ ಈ ಆರಾಧನಾ ಕುಣಿತ ಜರುಗುತ್ತದೆ; An art of god's festivity of nalke community of south canara;
- *—ಕುದುರೆ ಗಜ್ಜಿ* : ಚೌಡಿಕೆ ಕಾವ್ಯದಲ್ಲಿ ಬರುವ ಒಂದು ಭಯಾನಕ ಕಾಯಿಲೆ; ಸಂದು ಸಂದುಗಳಲ್ಲಿ ಕಾಣಿಸಿಕೊಳ್ಳುವ ದಪ್ಪ ಕಜ್ಜಿ; ಇದು ತುಂಬಾ ನೋವಿನಿಂದ ಕೂಡಿರುತ್ತದೆ(ಚೌಡಿಕೆ ಕಾವ್ಯಗಳು) (ಬೆ.ಜಿ); A terrible disease that is referred in an epic of choudike;
- *—ಕುದುರೆ ಕುಣಿತ/ಕುದುರಿ ಕುಣಿತ* : ಡೊಳ್ಳಿನ ಕುಣಿತದಲ್ಲಿರುವ ಒಂದು ಬಗೆಯ ಕುಣಿತ(ಶಿ.ಜಿ); A kind of dance with beaten drum;
- ನಿಂತಲ್ಲಿ ನಿಲ್ಲದ ಉತ್ಸಾಹದ ವರ್ತನೆ(ಬೀ.ಕ.ಕೋ);
- *—ಕುದುರೆ ಗೂಟದ ಪಂಚೆ* : ಮೊಳಕಾಲಿನಿಂದ ಮೇಲಕ್ಕೆ ಮಾತ್ರ ಮುಚ್ಚುವಂತೆ ಸೊಂಟಕ್ಕೆ ಧರಿಸಿದ ಮೋಟು ಪಂಚೆ(ಶಿ.ಜಿ); A short doti; a clothe that wears by men to cover upper part of knees and lower part of waist;
- *—ಕುದುರೆ ಗತ್ತು* : ಹಲಗೆ ಅಥವಾ ತಮಟೆಯ ಬಡಿತದ ಗತ್ತುಗಳಲ್ಲಿ ಒಂದು; ಉತ್ತರ ಕರ್ನಾಟಕದಲ್ಲಿ ಇದು ಹೆಚ್ಚು ಪ್ರಚಲಿತದಲ್ಲಿದೆ; A type rhythmic beats of percussion instrument by striking;

- **—ಕುದುರೆ ದೂತ** : ಉಸ್ತುವಾರಿ ಕುದುರೆಯ ಕಾಸ್ಗಾರನ ವೇಷ(ಯ.ಪ.ಕೋ); A character of a groom;
- **—ಕುದುರೆ ನಗೆ** : ಅಪಹಾಸ್ಯದ ನಗೆ; ಕುದುರೆ ಕೆನೆದಂತೆ ನಗುವುದು; Joking laughter like horse laughter;
- **—ಕುದುರೆಪ್ಪ** : ರಾಣಿಬೆನ್ನೂರು ತಾಲೂಕಿನ ದೇವರ ಗುಡ್ಡ ಕ್ಷೇತ್ರದಲ್ಲಿರುವ ಮೈಲಾರಲಿಂಗ ದೇವರ ಬಣ್ಣದ ಕುದುರೆಯ ಕಟ್ಟಿಗೆ ಮೂರ್ತಿ(ಚಿ.ಪ.ಕೋ); A colour idol of Mylaralinga god at God's Hill in Dēvaragudda, Ranebennuru taluk;
- **—ಕುದುರೆ ಬಚ್ಚ** : ಒಂದು ಗ್ರಾಮೀಣ ಆಟ; ಮುಖ್ಯವಾಗಿ ಕಲ್ಲು ಇಲ್ಲಿಯ ಆಟದ ವಸ್ತು(ಶಿ.ಜಿ); A rural game;
- **—ಕುದುರೆ ಮರ** : ಮನೆಗೆ ಹೆಂಚು ಹೊಂದಿಸಲು ^ ಇಂಗ್ಲಿಷ್‌ನ ತಲೆಕೆಳಗಾದ ವಿ ಅಕ್ಷರದ ಆಕಾರದಲ್ಲಿ ಹಾಕುವ ತೀರುಗಳು; ಮೂಲೆಗಳನ್ನು ಹೊಂದಿಸುವುದು(ತು.ಜಿ); ತೀಕಡಿಮರ(ಮಂಡ್ಯ.ಜಿ); A wooden V shaped log to match tiles at the corners of beams;
- **—ಕುದುರೆ ಬಳೆ** : ಕುದುರೆ ಲಾಳದಾಕೃತಿಯ ಬಳೆ; ಕಬ್ಬಿಣದ ಉದ್ದನೆ ಸರಳಿನ ಎರಡು ತುದಿಯನ್ನು ಅರ್ಧಚಂದ್ರಾಕೃತಿಯಂತೆ ಬಾಗಿಸಿ ಹೊಂದಿಸಿ ಬಳೆಯಾಕಾರಕ್ಕೆ ಮಾಡಿರುವುದು; A horse shoe;
- **—ಕುದುರೆ ಮಳೆ** : ವೇಗವಾಗಿ ರಭಸದಿಂದ ಬರುವ ಮಳೆ; A heavy stormed rain;
- **—ಕುದುರೆ ಮಣೆ** : ಕಣದಲ್ಲಿ ಕಾಳು ತೂರಲು ಬಳಸುವ ಎತ್ತರವಾದ ಮಣೆ; ಇದರ ಮೇಲೆ ನಿಂತು ಕಾಳು, ಧಾನ್ಯಗಳನ್ನು ತೂರುವರು; ಕಾಳನ್ನು ಸ್ವಚ್ಛಗೊಳಿಸುವ ಒಂದು ಬಗೆ(ಬೆಂ.ಗ್ರಾ.ಜಿ); The highest seat that uses to winnow grains in thrashing floor;
- ಎತ್ತಿನ ಬಂಡಿಯ ಮೂಕಿಗಿರುವ ಮತ್ತೊಂದು ಹೆಸರು(ತು.ಜಿ);
- **—ಕುದುರೆ ವಾಹನ** : ದೇವರ ಉತ್ಸವ ಮೂರ್ತಿಯನ್ನು ಹೊತ್ತು ಮೆರವಣಿಗೆ ಮಾಡಲು ಕುದುರೆ ಆಕಾರದಲ್ಲಿ ನಿರ್ಮಿಸಿದ್ದು; ಕುದುರೆಯ ಆಕಾರವನ್ನು ಮರದಿಂದ ಮಾಡಿ ಮುಂಗಾಲೆತ್ತಿದ ಭಂಗಿಯಲ್ಲಿದ್ದು ಅಡಿಯಲ್ಲಿ ಹಲಗೆ ಅಳವಡಿಕೆ; ಮರದ ಮೇಲೆ ಮರದ ಹೊಟ್ಟು, ಇತ್ಯಾದಿ ಬಳಸಿ ಆಕಾರ ನೀಡಿ ಬಣ್ಣದಿಂದ ಲಿಂಗ, ಜೂಲ, ಗಂಟೆಸರದ ಚಿತ್ರ ಬಿಡಿಸಿ ಮೆರವಣಿಗೆಯಲ್ಲಿ ಉಪಯೋಗ; ವಿಶೇಷವಾಗಿ ಕುದುರೆ ವಾಹನ ಎತ್ತಿಸುತ್ತೇನೆಂದು ದೇವರಿಗೆ ಹರಕೆ ಮಾಡಿಕೊಂಡು ಅಭೀಪ್ಸೆ ನೆರವೇರಿದ ನಂತರ ಕುದುರೆ ವಾಹನದಲ್ಲಿ ಮೂರ್ತಿಯನ್ನು ಇಟ್ಟು ನಾಲ್ಕು ಮಂದಿ ಹೆಗಲಮೇಲೆ ಹೊತ್ತು ಮೆರವಣಿಗೆ ಮಾಡುವರು(ಮಂಡ್ಯ.ಜಿ); A horse vehicle that uses to take god in procession;
- **—ಕುದುರೆ ಸೇಂಗಾ** : ಒಂದು ಸೇಂಗಾದ ತಳಿ; ಇದರಲ್ಲಿ ಎರಡು ಬೀಜ ಮಾತ್ರ ಇರುವುದು; (ಕಲ.ಜಿ); A ground nut breed;
- **—ಕುದುರೆ ಕಂಬ** : ನೇಯ್ಗೆಯಲ್ಲಿ ಮಗ್ಗದ ಚೌಕಟ್ಟನ್ನು ಕೂರಿಸಲು ಮಗ್ಗದ ಕುಳಿಯ ಅಕ್ಕಪಕ್ಕ ನೆಲಕ್ಕೆ ನೆಟ್ಟ ಮಗ್ಗದ ಆಧಾರ ಕಂಬ(ಬೆಂ.ಗ್ರಾ.ಜಿ); The base and supplied wooden pillar of handloom machinery;
- **—ಕುದುರೆಕಾರ ಗ್ವಾರಪ್ಪ** : ಮೈಲಾರಲಿಂಗನ ಗೊರವರು; ಕುದುರೆಯಾಕಾರದಲ್ಲಿ ಹೆಜ್ಜೆ ಹಾಕುತ್ತ 'ಸೆಡ್ಡೆ'ನ್ನು ಹೊಡೆದುಕೊಳ್ಳುತ್ತ ಸೇವೆ ಮಾಡುವರು; A devotees of mylaralinga God-Gorava;
- **—ಕುದುರೆ ಬಾಲ** : ಎತ್ತರವಾಗಿ ಕೂದಲನ್ನು ಬಾಚಿ ಮೇಲೆ ರಬ್ಬರ್ ಹಾಕಿ ಬಾಲದಂತೆ ಬಿಡುವ ಒಂದು ಬಗೆಯ ಕೇಶವಿನ್ಯಾಸ; pony tail;
- ಕುದುರೆ ಜೂಜಿನ ಬಗೆ(ಮೈ.ಜಿ); horse gambling;
- **—ಕುದುರೆ ಹಲ್ಲೆ** : ಕುದುರೆಲಾಳ; ಕುದುರೆಯ ಕಾಲಿನ ಗೊರಸಿಗೆ ಹೊಡೆಯುವ ಕಬ್ಬಿಣದ U ಆಕಾರದ ಲಾಳ; ಇದನ್ನು ಹಾಕುವುದರಿಂದ ಕುದುರೆಯ ಓಟಕ್ಕೆ ಅನುಕೂಲಕರ; ಕುದುರೆ ಲಾಳವನ್ನು ಮನೆಯ ಮುಖ್ಯದ್ವಾರದಲ್ಲಿ ಹಾಕಿದರೆ ಶುಭವಾಗುತ್ತದೆಂಬ ನಂಬಿಕೆ; U shaped horse shoe; It is nailed at the entrance of new house;

- ***—ಕುದುರೆ ಮೆಂತೆ*** : medicago sativa; ಸಸ್ಯ ವಿಶೇಷ; ಫಲವತ್ತಾದ ಮಣ್ಣು, ನೀರು ಇರುವೆಡೆ ಬೆಳೆಯುತ್ತದೆ; ದನಗಳಿಗೆ ಮೇವಾಗುವ ಕಳೆ ಸಸ್ಯ; ಮೆಂತ್ಯದ ಕಾಳಿನಂತಿರುವ ಬೀಜ ಮತ್ತು ಎಲೆಯಿರುವ ಗಿಡ; A cattle weed; Its seeds are like fenugreek;
- ***—ಕುದುರೆಮುಖ*** : ಬೇವಿನ ಮರದಿಂದ ಕುದುರೆ ಮುಖ ಕೆತ್ತಿರುವ ವಸ್ತು; Chiseled horse face in neem wood;
- ಉತ್ತರ ಕರ್ನಾಟಕದ ಮನೆಗಳ ಮುಂಬಾಗಿಲ ತೋಳಿನ ಮೇಲ್ಭಾಗದ ಒಂದೊಂದು ಪಕ್ಕಕ್ಕೆ ಒಂದೊಂದರಂತೆ ಕುದುರೆಮುಖದ ಅಳವಡಿಕೆ;
- ಹೀಗೆ ಹಾಕಿದರೆ ಮನೆಯೆಂಬುವುದು ರಥದಂತೆ ಕುದುರೆಗಳು ರಥ ಎಳೆಯುವಂತೆ ಸಂಸಾರರಥ ಸರಿಯಾಗಿ ಸಾಗುತ್ತದೆಂದು ನಂಬಿಕೆ;
- ಯಕ್ಷಗಾನದಲ್ಲಿ ಅಶ್ವಮೇಧಯಾಗ, ಶನಿಮಹಾತ್ಮೆಯ ಪ್ರಸಂಗಗಳಲ್ಲಿ ಕುದುರೆಮುಖವನ್ನು ಬಳಸುವುದುಂಟು;
- ***—ಕುದುರೆಯಾಳು*** : ಅಮಲ್ದಾರನ ಕುದುರೆಯ ಯೋಗಕ್ಷೇಮವನ್ನು ನೋಡಿಕೊಳ್ಳುವ ವ್ಯಕ್ತಿ; A person who looks after Amaldar's horse;
- ***—ಕುದುರೆ ಬೋಡು ಕಳಿ*** : ಕೆಂಬಟ್ಟಿ ಹೊಲೆಯರಲ್ಲಿರುವ ಒಂದು ಆಚರಣೆ; ಸಂಕ್ರಮಣದಲ್ಲಿ ನಡೆಯುವುದು; A celebration in kembatti untouchables;
- ಕಲಾವಿದ ಮಣ್ಣಿನಲ್ಲಿ ಹೊರಳಿ ಮೈಯೆಲ್ಲಾ ಮಣ್ಣು ಮಾಡಿಕೊಂಡು ಸೊಂಟದಿಂದ ಮುಡಿಯವರೆಗೂ ಸೊಪ್ಪಿನಿಂದ ಮೈ ಮುಚ್ಚಿಕೊಳ್ಳುವರು;
- ಬೆತ್ತದ ಮತ್ತು ಬಿದಿರಿನ ಪಟ್ಟಿಗಳಿಂದ ಮಾಡಿದ ಕುದುರೆಯ ಅಸ್ಥಿಪಂಜರಕ್ಕೆ ಬಟ್ಟೆತೊಡಿಸಿ ಅಲಂಕರಿಸಿ ಕುದುರೆ ಬೆನ್ನಿನಲ್ಲಿ ಬಿಟ್ಟಿರುವ ಭಾಗದಿಂದ ಕಲಾವಿದ ಮೈ ತೂರಿಸಿ ಕುದುರೆಯನ್ನು ದೇಹಕ್ಕೆ ಹೊಂದಿಸಿಕೊಳ್ಳುವನು;
- ಬಿಳಿ ಕುಪ್ಪಸದ ದಟ್ಟಿಗಳನ್ನು ಹಾಕಿ ಕೆಂಬಟ್ಟೆಗಳು ಕೀಲು ಕುದುರೆಯಂತೆ ಹೊತ್ತುಕೊಂಡು ಹಬ್ಬದ ಸಮಯದಲ್ಲಿ ಕುಣಿಯುವುದೇ ಕುದುರೆ ಕಳಿ;
- ಈ ಕಲೆಯಲ್ಲಿ ಹಾಡು ಮತ್ತು ಕುಣಿತದ ಸಮ ಹೊಂದಾಣಿಕೆ ಕಾಣುವುದು(ಕೊಡ.ಜಿ);
- ***—ಕುದುರೆ ಆಟ*** : ಒಂದು ಗ್ರಾಮೀಣ ಆಟ; ಹತ್ತು ಜನ ಆಟಗಾರರು ಆಡುವ ಆಟ; A rural game played by ten people;
- ಎರಡು ಗುಂಪುಗಳಿದ್ದು ಒಂದೊಂದು ಗುಂಪಿಗೆ ಒಂದೊಂದು ಹೆಸರು ಇರುವುದು;
- ಆಟ ಪ್ರಾರಂಭಿಸುವ ಮೊದಲು ಟಾಸ್ ಹಾಕಿ ಹಿಡಿಯುವವರು ಮತ್ತು ಆಡುವವರು ಯಾರೆಂದು ನಿರ್ಧರಿಸಿಕೊಳ್ಳುವರು;
- ಆಟದ ಸಾಮಾಗ್ರಿ ಒಂದು ಟವಲು; ಎರಡು ಗುಂಪಿನ ಮಧ್ಯ ಒಂದು ಗೆರೆ ಹಾಕಿ ಒಂದೆಡೆ ಆಡುವವರು ಇನ್ನೊಂದೆಡೆ ಹಿಡಿಯುವವರು ನಿಲ್ಲುವರು;
- ಟವಲ್ ಅನ್ನು ನುಲಿದು ಎರಡು ತುದಿಗಳನ್ನು ಕಟ್ಟಿ ಆಟಗಾರ ತುದಿಯನ್ನು ಬಲಗಾಲ ಹೆಬ್ಬೆರಳು ಮತ್ತು ಉಂಗುರದ ಬೆರಳುಗಳ ನಡುವೆ ಹಿಡಿದು ನಿಂತಿರುವಂತೆ ಎರಡು ಹಸ್ತಗಳನ್ನು ನೆಲಕ್ಕೆ ಊರಿ ಬಲಗಾಲನ್ನು ಹಿಂದಿನಿಂದ ಮೇಲಕ್ಕೆ ಎತ್ತಿ ಟವಲನ್ನು ಮುಂದಕ್ಕೆ ಎಸೆಯುವರು;
- ಹಿಡಿಯುವವರು ಟವಲನ್ನು ಹಿಡಿಯಬೇಕು; ಟವಲ್ ಹಿಡಿಯಲು ಮೂರು ಬಾರಿ ಅವಕಾಶ ನೀಡುವರು;
- ಟವಲ್ ಹಿಡಿಯದಿದ್ದರೆ ಅವರಲ್ಲಿ ಒಬ್ಬ ಕುದುರೆಯಾಗಬೇಕು; ಆಟವಾಡುವ ಗುಂಪಿನವರಲ್ಲಿ ಒಬ್ಬ ಕುದುರೆಯ ಮೇಲೆ ಕುಳಿತುಕೊಳ್ಳುವನು; ಒಬ್ಬನೇ ಎಲ್ಲರನ್ನೂ ಕುದುರೆ ಮಾಡಬಹುದು;
- ಟವಲ್ ಹಿಡಿಯುವವರೆಗೂ ಆಡುವವರು ಕುದುರೆ ಮೇಲೆ ಕುಳಿತಿರುವರು; ಹೀಗೆ ಆಟ ಮುಂದುವರಿಯುತ್ತದೆ;
- ***—ಕುದುರೆ ಹೆಜ್ಜೆ*** : ಉತ್ತರ ಕರ್ನಾಟಕದ ಬೋವಿ ಜನರ ದಿಮ್ಮಿ ಮೇಳ ಕುಣಿತದ ಒಂದು ಗತ್ತು; ದಿಮ್ಮಿ ಮತ್ತು ದುಮ್ಮಿ ವಾದ್ಯವನ್ನು ಹಿಡಿದು ಹಾಡಿ ಕುಣಿಯುವರು; A keel rhythm percussion instrument played and used to dance by bhovi community;
- ***—ಕುದುರೆ ಗಾಡಿ*** : ಜಟಕಾ ಗಾಡಿ; ಕುದುರೆ ಎಳೆಯುವ ಗಾಡಿ; A horse cart dragged by an horse;

- *—ಕುದುರೆ ಲಾಯ* : ಕುದುರೆಗಳನ್ನು ಕಟ್ಟಿ ಹಾಕುವ ಸ್ಥಳ; ಕೊಟ್ಟಿಗೆಯಂತಹದ್ದು; An horse stable;
- *—ಕುದುರೆಯಾಟ* : ಕೋಲು ಅಥವಾ ಮನುಷ್ಯನ ಮೇಲೆ ಕುದುರೆ ಮೇಲೆ ಕುಳಿತಂತೆ ಕುಳಿತು ಆಡುವ ಮಕ್ಕಳ ಆಟ; A children play played on man's back like horse back;
- *—ಕುದರಿ ಕೋಳಗ* : ಬಾವಿ, ಕೆರೆ, ಕುಂಟೆಗಳಲ್ಲಿ ಬೆಳೆಯುವ ದೊಡ್ಡ ಎಲೆಗಳುಳ್ಳ ಜಲ ಸಸ್ಯ(ಚಿ.ಪ.ಕೋ)(ಬ.ಜಿ). An aquatic plant grow in wells, brooks.

ಕುದಲ/ಕುದಲಗೇಡಿ/ಕುನಾಸಗೇಡಿ kudala/ kudalagēḍi/kunāsagēḍi :

ದುಷ್ಟ; ಕೆಡುಕ; ಮತ್ಸರದ ಬುದ್ಧಿಯುಳ್ಳವ; ದ್ರೋಹಿ; ವಂಚಕ; ಹೊಟ್ಟೆಕಿಚ್ಚಿನವ; ಕೆಟ್ಟಗುಣದವ; ಬೈಗುಳಪದ; *ಪ್ರ:* 'ಅವನು ಮೊದಲಿನಿಂದಲೂ ಕುಡಿಯೋ ನೀರಿಗೆ ಉಚ್ಚೆ ಹೊಯ್ಯೋ ಕುದಲಗೇಡಿ'(ಚಿ.ಪಕೋ); 'ಮತ್ತೊಬ್ಬರು ಮುಂದೆ ಹೋಗುವುದ ಸಹಿಸಂಗಿಲ್ಲ ಕುನಾಸಗೇಡಿ'; Wicked; villainous; cheater; jealous.

ಕುದಾಪುರ kudāpura :

ಮ್ಯಾಸಬೇಡರ ಪವಿತ್ರ ಸ್ಥಳ; ಈ ಊರಿನಲ್ಲಿ ಬೋರೇದೇವರು ನೆಲಸಿರುವನೆಂದು ನಂಬಿಕೆ. An holy place for myasabeda tribles.

ಕುದಿ kudi :

- ಬೇಯು; ಶಾಖದಿಂದ ಉಕ್ಕು; *ಪ್ರ:* 'ಬ್ಯಾಳಿ ಸರಿಯಾಗಿ ಕುದಿಯಾಕತ್ತೈತಿ'(ಬೀ.ಜಿ); To boil
- ಸೆಖೆ; *ಪ್ರ:* 'ಈವತ್ತು ಕುದಿ ಬಾಳ ಐತಿ'(ರಾಮ.ಜಿ);
- ಹೊಟ್ಟೆಕಿಚ್ಚು; ಅಸೂಯೆ; *ಪ್ರ:* 'ಅವಳ ಕಂಡರೆ ಇವನಿಗೆ ತುಂಬ ಕುದಿ'; boiling by heating; jealous person;
- ರಾಗಿ ಹಿಟ್ಟು ನೀರಿನಲ್ಲಿ ಕುದಿದು ಉಕ್ಕಿ ಬರುವ ಪಾಕ *ಪ್ರ:* 'ಸ್ವಲ್ಪ ಕುದಿ ತೆಗೆದಿಡು ಕುಡಿಯಾಕೆ';
- ಒಂದು ಹಂತ; *ಪ್ರ:* 'ಉತ್ತರೀ ಮಳೆ ಬರಲಿಲ್ಲ, ಪೈರು ಒಂದು ತುದಿ ಬಳಲಿದವು(ಚಿ.ಪ.ಕೋ);
- ಯೋಚನೆ; ಚಿಂತೆ(ಕಲ.ಜಿ);
- ಸಮಯ; ವೇಳೆ; ಕಾಲ; timings;
- ಶುಭದಿನ; ಮುಹೂರ್ತ; ತ: ಕೊದಿ, ಮ: ಕೊದಿ, ತೆ: ಗೊದ(ತು.ನಿ);
- *—ಕುದಿಜ್ವರ* : ನಿಯಮಿತವಾಗಿ ಮರುಕಳಿಸುವ ಜ್ವರ; ಅವಧಿಜ್ವರ; A fever which occurs regularly;
- *—ಕುದಿಗುಣಿ* : ಸುಣ್ಣ ತಯಾರಿಸಲು ಸುಣ್ಣದ ಕಲ್ಲುಗಳನ್ನು ನೀರಿನಲ್ಲಿ ಕುದಿಸಲು ಮಾಡಿದ ಗುಂಡಿ; ಗುಳಿ; A time –kiln –a place where burn limestone;
- *—ಕುದಿತ ದಿನ* : ಕಂಬುಲ ಆಚರಣೆಯ ಮೊದಲ ದಿನ; The first day of kambula celebration;
- *—ಕುದಿನಿಪ್ಪ* : ಕುದಿಯುತ್ತಿರುವ ನೀರು(ಉ.ಕ) Boiling water;
- *—ಕುದಿಯಾಕ ಹತ್ತ್ಯಾರ* : ಸಿಟ್ಟು ಮಾಡಿಕೊಂಡಿರುವುದು; To become angry;
- *—ಕುದಿ ಕಡಿತು* : ಚಿಂತೆ ದೂರಾಯಿತು. Worries away;
- *—ಕುದಿಸು* : ನೀರಿನಲ್ಲಿ ಹಾಕಿ ಬೇಯಿಸು(ಕಲ.ಜಿ); To boiling in water;
- *—ಕುದಿ ಆಗಿದೆ* : ದೃಷ್ಟಿಬೀಳು; ಕೆಟ್ಟಕಣ್ಣು ಬೀಳು; *ಪ್ರ:* 'ತಿನ್ನುವಾಗ ಯಾರದ್ದೋ ಕುದಿ ಬಿದ್ದಿದೆ, ಅದಕ್ಕೆ ಹೊಟ್ಟೆ ನೋವು'(ದ.ಕ); An evil; to suffer due to evil eye;
- *—ಕುದಿಹಾಕುವುದು* : ಭೂತಾರಾಧನೆಯಲ್ಲಿ ದೈವವನ್ನು ಸ್ಥಾಪನೆ ಮಾಡುವುದು(ದ.ಕ); To install god in bhuta celebration;
- *—ಕುದಿಹಿಟ್ಟು* : ಕೊತಕೊತನೆ ಕುದಿಯುವ ಹಿಟ್ಟಿನ ಎಸರು; A soup of boiled powdered liquid;
- *—ಕುದಿಗೇಡಿ* : ಚಿಂತೆಯಿಲ್ಲದವ(ಕಲ.ಜಿ); A person who has no worries;
- *—ಕುದಿ ಇಲ್ಲದ* : ಕಷ್ಟ ಅನುಭವಿಸದ; ಸುಖವಾಗಿದ್ದವರು; ಬೇನೆಇಲ್ಲದವರು; ತೊಂದರೆ ಅನುಭವಿಸದವರು(ಕಲ.ಜಿ); A happy man;
- *—ಕುದಿಮಾತು* : ಸೇಡಿನ ಮಾತು(ಕಲ.ಜಿ); A speech of enmity;

- ***—ಕುದಿಸಿದ ಉಪ್ಪಿನಕಾಯಿ*** : ನಿಂಬೆಹಣ್ಣನ್ನು ಹೋಳುಮಾಡಿ ಉಪ್ಪು, ಇಂಗು, ಮೆಂತ್ಯ, ಬೆಳ್ಳುಳ್ಳಿ, ಸಕ್ಕರೆ ಬೆರೆಸಿ ಕುದಿಸಿ ತಯಾರಿಸಿದ್ದು; boiled pickles;
- ***—ಕುದಿಸಿದ ರೊಟ್ಟಿ*** : ಉಳಿದ ರೊಟ್ಟಿಯನ್ನು ಬಳಸಿ ತಯಾರಿಸಿದ್ದು; ಈರುಳ್ಳಿ, ಸಾಸಿವೆ, ಕರಿಬೇವು, ಕಡಲೆಬೇಳೆ, ಉದ್ದಿನಬೇಳೆ, ಟಮೋಟೋ, ಕೊತ್ತಂಬರಿಸೊಪ್ಪು ಹಾಕಿ ಒಗ್ಗರಣೆ ಮಾಡಿ ಅದಕ್ಕೆ ರೊಟ್ಟಿ ಚೂರು ಸೇರಿಸುವುದು; A dish prepared in biscuit ,salt ,mustard, tomato & dal;
- ***—ಕುದಿಸಿದ ಸೇಂಗಾ*** : ಹಸಿಶೇಂಗಾ ಕಾಯಿಯನ್ನು ತೊಳೆದು ಉಪ್ಪು ಹಾಕಿ ಕುದಿಸಿ ತಿನ್ನುವರು (ಮಂಡ್ಯ.ಜಿ)(ದಾ.ಜಿ); boiled groundnuts.

ಕುದಿಹಾರ kudihāra :

- ಬಳ್ಳಾರಿ ಜಿಲ್ಲೆ ಹರಪನಹಳ್ಳಿ ತಾಲ್ಲೋಕಿನ ಕ್ರಿ.ಶ.೧೦೧೮ರ ೯೭ನೇ ಶಾಸನದಲ್ಲಿ ಇದರ ಉಲ್ಲೇಖವಿದೆ; A place a village that has been referred in 97th inscription of Harapanahally taluk, Bellary dist;
- ಚಾಲುಕ್ಯ ಜಗದೇಕಮಲ್ಲ ಜಯಸಿಂಘದೇವನ ಆಳ್ವಿಕೆ;
- ದೊರೆಯ ಸಾಮಂತನಾದ ನೊಳಂಬ ಉದಯಾದಿತ್ಯನು ಸೋಮಸಿಂಘಭಟಾರರ ಪಾದ ತೊಳೆದು, ಬಾಳ್ಗುಳಿಯ(ಬಾಗುಳಿ) ಕಲಿದೇವಸ್ವಾಮಿ ಸೇವೆಗೆ, ಪನ್ನಿರ್ವರ್ಸೂಳೆಯರಿಗೆ, ಸೂಳೆವಾಳಂಗೆ ವಂಜಿಗಂಗೆ, ಪಾತ್ರದವರಿಗೆ, ದೇಸಿಗಚ್ಚಾತ್ರದ ಭೋಜನಕ್ಕೆ ಭೂಮಿಯನ್ನು ನೀಡಿದ ಉಲ್ಲೇಖ;
- ನೊಳಂಬ ಉದಯಾದಿತ್ಯ ಬಲ್ಲಕುಂದೆ-೩೦೦, ಕುದಿಹರವಿ೭೦(ಕುದಿಹಾರ೭೦), ಎಡದೊರೆ-೨೦೦೦ವನ್ನು ಕಂಪಿಲಿಯ ಸ್ಥಳದಿಂದ ಆಳುತ್ತಿದ್ದನೆಂದು ಉಲ್ಲೇಖ;
- ಶಾಸನದಲ್ಲಿ ಕುದಿಹಾರ ೭೦, ಕುದಿಹರವಿ ೭೦ ಎಂದು ಉಲ್ಲೇಖ;
- ಕುದಿಯಪರವಿ, ಕುದಿಯಹರವಿ ಎಪ್ಪತ್ತು ಉಲ್ಲೇಖ; ಇದೊಂದು ಆಡಳಿತ ಘಟಕವಾಗಿತ್ತೆಂದು(ಚಾಲುಕ್ಯರ) ತಿಳಿಯಬಹುದು;
- ಕುದಿಹಾರ/ಕುದಿಹರವಿ=ಕುದಿ+ಹಾರ/ಹರವಿ=ಹರವಿ/ವೆ ಎಂದರೆ ಕೊಡದಂತಿರುವ ದೊಡ್ಡ ಪಾತ್ರೆ;
- ಪ್ರಾಯಃ ಇದು 'ಕುದಿಹರವು' ಆಗಿದ್ದಿರಬಹುದು; ವಿಶಾಲವಾದ ಪ್ರದೇಶ ಎಂಬರ್ಥದಲ್ಲಿ ಬಳಸಿದ್ದಿರಬಹುದು;
- ಕಾಲಾನಂತರದಲ್ಲಿ 'ಕುದಿಹಾರ'ವಾಗಿದೆ.

(ಕ.ವಿ.ವಿ.ಶಾ.ಸಂ.೧; ಹಂಪಿ)

ಕುದೀಲ/ಕುದಿಲು kudīla/kudilu :

ಹುಳಗ; ಮೇಲೋಗರ; ಕಾಯಿಪಲ್ಲೆ, ಬೇಳೆಗಳನ್ನು ಬೇಯಿಸಿ ತಯಾರಿಸಿದ ಗಟ್ಟಿಸಾಂಬಾರು; ಅನ್ನ ಕಲಸಿ ಉಣ್ಣುವ ಸಾರು; ತರಕಾರಿಯ ದಟ್ಟಸಾರು(ಉ.ಕ.ಜಿ). A kind of soup prepared in vegetable, dhals, etc.

ಕುದುಂಬುಲು/ಕುದುಂಬುಳು kudumbulu/ kudumbuḷu :

ಒಂದು ಬಗೆಯ ಪಕ್ಷಿ; ಸಿಳ್ಳು ಹಾಕುವ ಜಾತಿಗೆ ಸೇರಿದ್ದು; ಕವುಜಗ ಹಕ್ಕಿಯ ಜಾತಿಗೆ ಸೇರಿದೆ(ತು.ನಿ). A kind of bird; It belongs to Epris Species.

ಕುದುಕಲು೧ kudukalu[1] :

ಹುರುಳಿಕಾಳನ್ನು ನೀರಿನಲ್ಲಿ ಚೆನ್ನಾಗಿ ಬೇಯಿಸಿ ಕಾಳನ್ನು ಬೇರೆ ಮಾಡಿ ಅದರ ಕಟ್ಟನ್ನು ಗಟ್ಟಿಯಾಗುವವರೆಗೂ ಕುದಿಸುವುದು; ಇದನ್ನು ರೊಟ್ಟಿಯ ಜೊತೆ ನಂಜಿಕೆಯಾಗಿ ತಿನ್ನಲು ಬಳಕೆ; ತುಂಬಾ ರುಚಿಕರವಾಗಿರುತ್ತದೆ; A dish prepared in horse gram.

ಕುದುಕಲು/ಕುದುಕ್ಲುಸಾರು೨ kudukalu/ kuduklusāru[2] :

- ಕುದಕಲ/ಕುದಕ್ಲಸಾರು ಎಂಬ ರೂಪವೂ ಉಂಟು;
- ಒಂದು ಬಾರಿ ಮಾಡಿದ ಸಾಂಬಾರನ್ನು ಮೂರ್‍ನಾಲ್ಕು ದಿವಸಗಳವರೆಗೆ ಇಟ್ಟುಕೊಂಡು ಕುದಿಸಿ ಊಟ ಮಾಡಲು ಉಪಯೋಗಿಸುವ ಸಾಂಬಾರು/ಸಾರು;
- ಬಡವರು, ಸ್ಥಿತಿವಂತರಲ್ಲದವರಲ್ಲಿ ಹೆಚ್ಚು ಬಳಕೆಯಲ್ಲಿರುವಂಥದು; ಕೂಲಿ-ಕಾರ್ಮಿಕರು ಪ್ರತಿ ನಿತ್ಯ ಹೊಸದಾಗಿ ಸಾರು ಮಾಡಲಾಗುವುದಿಲ್ಲ; ಆದ ಕಾರಣ ಅಂಥವರು ಒಂದು ಬಾರಿ ಮಾಡಿದ ಸಾರನ್ನು ಕುದಿಸಿ ಇಟ್ಟುಕೊಂಡು ಮೂರ್‍ನಾಲ್ಕು ದಿವಸಗಳವರೆಗೆ ಬಳಸುವುದುಂಟು;

- ಬಡವರು, ಸ್ಥಿತಿವಂತರಲ್ಲದವರು ತಾವು ದುಡಿಮೆ ಮಾಡುವ ಯಜಮಾನರ ಮನೆಯಲ್ಲಿ ಉಳಿದ ಸಾರನ್ನು ತಂದು ಕುದಿಸಿ ಎರಡು, ಮೂರು ದಿವಸಗಳವರೆಗೆ ಇಟ್ಟುಕೊಂಡು ಊಟ ಮಾಡುವ ಪದ್ಧತಿ ಇಂದಿಗೂ ಕೆಲವು ಕಡೆಗಳಲ್ಲಿ ಕಂಡು ಬಂದಿದೆ.

ಕುದುಕೆ/ಕುದ್ಕ್ kuduke/kudk :

- ನರಿ; Fox;
- ಕುತಂತ್ರದ ಬುದ್ಧಿಯುಳ್ಳವ; cunning; *ಪ್ರ:* 'ನಿನ್ನದೊಂದು ಕುದ್ಕ್‌ನ ಬುದ್ಧಿ'(ಕಾ.ಗೋ); ***ನೋಡಿ:*** ನರಿ.

ಕುದುಪು kudupu :

ಆಯುಧಗಳನ್ನು ಮಸೆದು ಹರಿತಗೊಳಿಸುವುದಕ್ಕೆ ಬಳಸುವ ಸಾಧನ; ಅರ. A tool that sharps weapons like knife; file.

ಕುದುಪೆ kudupe :

ಹಾಲಿನ ಪಾತ್ರೆ; ಹಾಲು ಕಾಯಿಸಲು ಬಳಸುವ ಮಣ್ಣಿನ ಪಾತ್ರೆ; ಅಗಲ ಬಾಯಿಯುಳ್ಳದ್ದು; ಮೊಸರಿನಿಂದ ಬೆಣ್ಣೆ ತೆಗೆಯಲೂ ಸಹ ಬಳಕೆ(ದ.ಕ)(ಶಿ.ಜಿ). Milk vessel used to boil milk.

ಕುದುರಂಚಿಕೆ kuduraňcike :

ಹೊಲವನ್ನು ಹಂಚಿಕೊಡುವ ಬಗೆ; ಅಣ್ಣ ತಮ್ಮಂದಿರಿಗೆ ಒಂದೊಂದು ಭಾಗವನ್ನು ಸಂಪೂರ್ಣ ಕೊಡದೆ ಒಂದೊಂದು ಸೀಳಿನಲ್ಲಿ ಎಲ್ಲರಿಗೂ ಭಾಗ ಬರುವಂತೆ ಹಂಚುವುದು; *ಪ್ರ:* 'ಅದು ಕುದುರಂಚಿ ಹೊಲ ಮಾರಲು ಸಾಧ್ಯವಿಲ್ಲ' (ಮಂಡ್ಯ.ಜಿ). A kind of land/property sharing system.

ಕುದುರಿ ಜೇನು kuduri jēnu :

ಹುಳಿ ಸಿಹಿ ಎರಡರ ಸ್ವಾದದ ಜೇನು; ಹೆಜ್ಜೇನು; ಇದರಲ್ಲಿ ಔಷಧಿ ಗುಣವಿದ್ದು ಕೆಲವು ಕಾಯಿಲೆಗೆ ಬಳಕೆ; *ಪ್ರ:* 'ಕುದುರಿ ಜೇನಿಗಿ ಕೆಣಕ್ದುರು ಕುಣ್ಯಾಗ ಹೋಗಾತಾತನಾ ಬಡಲಾ'(ಬೀ.ಪ.ಕೋ); An humble honey that has the taste of sour and sweet.

ಕುದುರಿವಟ್ಟಿಸೊಲು kudurivaṭṭisolu :

ಪಶುಗಳಿಗೆ ಬರುವ ಒಂದು ವಿಧದ ರೋಗ; ಇದರ ಲಕ್ಷಣ: ರೋಗ ಬಂದ ಪಶು ಒಂದು ಸ್ಥಳದಲ್ಲಿ ನಿಲ್ಲದೆ ಎಲ್ಲೆಡೆ ಸುಮ್ಮನೆ ಸುತ್ತುತ್ತಿರುತ್ತದೆ. A type of cattle disease.

ಕುದುರು/ಕುದ್ರು kuduru/kudru :

- ಭತ್ತದ ತೆನೆ; ಚಿಗುರು(ಬಾ.ಜಿ); Paddy tassel;
- ಸುತ್ತಲೂ ನದಿ ನೀರು ಆವರಿಸಿರುವ ಭೂಮಿ; ದ್ವೀಪ; ನೈಸರ್ಗಿಕವಾದ ವ್ಯವಸ್ಥೆ(ಬ.ಜಿ); an island to balance
- ಒದಗು; ದೊರಕು(ತು.ಜಿ);
- ಸರಿಹೊಂದು; ಹೊಂದಿಕೆಯಾಗು; ಕೆಲಸವಾಗುವಂತೆ ಮಾಡು; *ಪ್ರ:* 'ನಮ್ಮದು ಅವರದು ನಂಟಿಸ್ತಾನ ಕುದುರ್ರೈತೆ';
- ತಗ್ಗು; ಕುಣಿ(ಶಿ.ಜಿ);
- ಭತ್ತ ಕುಟ್ಟುವಾಗ ಒರಳಿನಿಂದ ಕಾಳು ಆಚೆ ಈಚೆ ಸಿಡಿಯದಂತೆ ಒಳಕಲ್ಲಿಗೆ ಅಳವಡಿಸುವ ಸಾಧನ; ಬಿದಿರು, ಕಬ್ಬಿಣದಿಂದ ತಯಾರಿಕೆ; ಕೆಳಭಾಗದ ಬಾಯಿ ಒರಳಕಲ್ಲಿಗೆ ಮುಚ್ಚಿಕೊಳ್ಳುವಂತಿದ್ದು ಮೇಲ್ಭಾಗ ಅಗಲವಾಗಿರುತ್ತದೆ; A tool that is used to avoid the dapped paddy while husking;
- ಕುಟ್ಟುವಾಗ ಕಾಳು ಹೊರ ಚೆಲ್ಲದಂತೆ ಇಡುವರು; ಅಗಲವಾದ ಬಾಯುಳ್ಳ ಮಡಿಕೆಯ ತಳಭಾಗ ಪ್ರತ್ಯೇಕಿಸಿ ಕಂಠದ ಭಾಗವನ್ನು ಕುದ್ರು ಆಗಿ ಬಳಸುವುದುಂಟು(ಕೋ.ಚಾ.ಜಿ);
- ***—ಕುದುರೋದು*** : ವ್ಯವಹಾರ ಗಿಟ್ಟಿಸುವುದು; ಸರಿದೂಗಿಸುವುದು; ಪರಿಹಾರ ಮಾಡುವುದು (ಮಂಡ್ಯ.ಜಿ); To get, succeeded in one's business;
- ***—ಕುದುರುಗಾಯಿ*** : ಸಣ್ಣ ಎಳೆ ಕಾಯಿ; ಆಗ ತಾನೆ ಹೂವಿನ ಹಂತ ದಾಟಿ ಕಾಯಿಕಟ್ಟುವಿಕೆ; ಪೂರ್ಣ ಸತ್ವ ಹೊಂದಿರದ ಕಾಯಿ. A tender nut.

ಕುದುರೆಗುಂಡಿ kuduregunḍi :

- ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೋಕಿನ ಕ್ರಿ.ಶ.೧೫೭೭ರ ೧೩೨ನೇ ಶಾಸನದಲ್ಲಿ ಈ ಊರಿನ ಉಲ್ಲೇಖವಿದೆ; A village that has been referred in 132nd inscription of Madduru taluk, Mandya district;
- ಮಹಾಮಂಡಲೇಶ್ವರ ರಾಮರಾಜಯ್ಯ ಮಹಾ ಅರಸರು ಅರಸನಕೆರೆ ಸ್ಥಳದ ಕುದುರೆಗುಂಡಿ ಗ್ರಾಮವನ್ನು ಉಂಬಳಿಯಾಗಿ ಬಿಟ್ಟ ವಿವರವಿದೆ; ಆದರೆ ಯಾರಿಗೆ ಎಂಬುದು ಸ್ಪಷ್ಟವಾಗಿಲ್ಲ;
- ಕುದುರೆ+ಗುಂಡಿ=ಕುದುರೆಗುಂಡಿ; ಕುದುರೆಗಳನ್ನು ಸಾಕುತ್ತಿದ್ದ ಸ್ಥಳ; 'ಅಶ್ವದಳ'ದ ಬಿಡಾರ ಎಂಬ ಅರ್ಥದಲ್ಲಿ ಈ ಹೆಸರು ಬಂದಿರಬಹುದು.

(E.C- ೭, ಮಂಡ್ಯ.ಜಿ.)

ಕುದುರೆ ಮೇಲೆ ಬಂದಂತೆ kudure mēle bandante:

- ಹಳ್ಳಿಗಾಡಿನಲ್ಲಿ, ನಗರವಾಸಿಗಳಲ್ಲೂ ಪ್ರಚಾರದಲ್ಲಿರುವ ನುಡಿಗಟ್ಟು; ಆತುರ, ತರಾತುರಿ, ಬೇಗ, ನಿಲ್ಲದ ಮುಂತಾದ ಅರ್ಥ ಕೊಡುವ ಪ್ರಸಂಗಗಳಲ್ಲಿ ಬಳಕೆಯಾಗಿರುವಂಥದು; ವ್ಯಕ್ತಿಯ ಕೆಲಸದ ವೇಗ, ಪಾತ್ರವನ್ನೂ ಸೇರಿಸಿಕೊಂಡಿರುವಂಥದು;An idiom; it means urgency; longing eagerness
- ಈ ನುಡಿಗಟ್ಟನ್ನು ಬಳಸುವಾಗ 'ಕುದುರೆ ಮೇಲೆ ಬಂದು ಕುದುರೆ ಮೇಲೆ ಹೋದ ಹಾಗೆ' ಎಂಬಂತಹ ಪ್ರಯೋಗವನ್ನು ನೋಡುತ್ತೇವೆ; ಹಾಗೆ ಬಂದು ಹೀಗೆ ಹೋದ ಎಂದ ಹಾಗೆ; ಅಂದರೆ ವೇಗವಾಗಿ ಬಂದು ಅದೇ ವೇಗದಲ್ಲಿ ತೆರಳಿದಂತೆ; ಕೆಲಸದ ತೀವ್ರತೆಯನ್ನು ಇದು ಹೇಳಬಹುದು; ಏನೂ ಇಲ್ಲದೆಯೂ ವ್ಯಕ್ತಿ ಆಸಕ್ತಿ ತೋರದೆ ಹೀಗೆ ಮಾಡಬಹುದು;
- ಅಂತು ಕಾಲ, ಸಂದರ್ಭ, ವೇಗ, ಚಲನೆ ಮುಂತಾದವುಗಳನ್ನು ಸನ್ನಿವೇಶ ನೋಡಿ ವಿವರಿಸಬೇಕಾಗುತ್ತದೆ; ಸಾಮಾನ್ಯವಾಗಿ ಬಂಧುತ್ವದ ಸಂದರ್ಭದಲ್ಲಿ ಇದರ ಬಳಕೆ ಹೆಚ್ಚು; ಯಾರೋ ತಮಗೆ ಬೇಕಾದ ಬಂಧುಗಳು ಬಂದು ನಿಲ್ಲದೆ ಹೋಗುವ, ಅದೂ ವೇಗವಾಗಿ ಮರಳುವ ಸಂದರ್ಭಗಳನ್ನು ಇದು ಗುರುತಿಸುತ್ತದೆ;
- ಇಲ್ಲಿ 'ಕುದುರೆ ಮೇಲೆ ಬರುವ' ಮಾತೇಕೆ? 'ಕುದುರೆ' ಪದವನ್ನು 'ಸಂಕೇತ'ವಾಗಿ ಬಳಸಿದಂತೆ ತೋರುವುದಿಲ್ಲವೆ? 'ಕುದುರೆ' ಪದ ಜಾನಪದದಲ್ಲಿ, ಸಾಹಿತ್ಯದಲ್ಲಿ 'ವೇಗ' ಮತ್ತು 'ಶಕ್ತಿ'ಗೆ ಪರ್ಯಾಯವಾಗಿ ಬಳಸುವಂಥದು; ಇಲ್ಲಿಯೂ ಅದೇ ಆಗಿರುವುದು; ಆತುರಾತುರ ಬಂದು ಆತುರಾತುರ ಹೋಗುವ ಕ್ರಿಯೆಗೆ ಕುದುರೆಯ 'ವೇಗ' ಮತ್ತು 'ಶಕ್ತಿ' ಬಳಕೆಯಾದಂತಿದೆ;
- ಕುದುರೆ ಮೇಲೆ ಬಂದು ಹೋಗುವ ಈ ಪ್ರಕ್ರಿಯೆ ಇನ್ನೂ ಬೇರೆಯದನ್ನೂ ಭಿನ್ನ ಸಾಂದರ್ಭಿಕ ವಲಯವನ್ನೂ ಸೂಚಿಸುತ್ತಿರಬಹುದು; ವಾಸ್ತವದ ನೆಲೆಗಟ್ಟಿನಲ್ಲಿ ಅದರ ಪ್ರಯೋಗವಿದ್ದು, ಆಮೇಲೆ ಕ್ರಮೇಣ ಅದು ಬಿದ್ದುಹೋಗಿ 'ಕುದುರೆ' ಸಂಕೇತದ ಅರ್ಥ ಪಡೆದಿರಬಹುದು;
- ಪ್ರಾಚೀನ ಕಾಲದಲ್ಲಿ 'ಕುದುರೆ'ಯನ್ನು ಪ್ರಯಾಣಕ್ಕೆ, ಸಾಗಣಿಕೆಗೆ ಬಳಸುತ್ತಿದ್ದುದು ಗೊತ್ತೇ ಇದೆ; ಅಂತಹ ಸಂದರ್ಭದಲ್ಲಿ ಅಥವಾ ವಿಶೇಷ ಸಂದರ್ಭದಲ್ಲಿ 'ಬಂದು ಹೋಗು'ವುದಕ್ಕೆ ಕುದುರೆಯನ್ನು ಬಳಸುತ್ತಿದ್ದಂತೆ ಕಾಣುತ್ತದೆ; ಜೊತೆಗೆ ಕುದುರೆಯನ್ನು ವೈಯಕ್ತಿಕವಾಗಿ ಇಟ್ಟುಕೊಂಡಿದ್ದವರು ಬಂಧುಗಳನ್ನು ನೋಡಿಬರಲು ಬಳಸುತ್ತಿದ್ದಿರಬಹುದು; ಇಲ್ಲವೆ ಸೈನ್ಯ(ರಾಜರ)ದಲ್ಲಿದ್ದವರು ತಮ್ಮ ಊರಿಗೆ ಬಂದು ಹೋಗಲು 'ವೇಗಿ'ಯಾಗಿರುವ ಕುದುರೆಗಳನ್ನು ತರುತ್ತಿರಬಹುದು; ಆ ಕಾಲದಲ್ಲಿ 'ಅಮಲ್ದಾರ್' ಮುಂತಾದ ಸಾರ್ವಜನಿಕ ಅಧಿಕಾರಿಗಳು ತಮ್ಮ ಪ್ರಯಾಣಕ್ಕೆ ಕುದುರೆಗಳನ್ನು(ಆಗ ಬಸ್ಸು ಮುಂತಾದವು ಇರಲಿಲ್ಲವಾದ್ದರಿಂದ)ವಾಹನಗಳ ರೀತಿ ಬಳಸುತ್ತಿದ್ದುದನ್ನು ಉಲ್ಲೇಖಗಳಲ್ಲಿ ಕಂಡಿದ್ದೇವೆ. ಈ ವಾಸ್ತವವೇ ಕ್ರಮೇಣ 'ಕುದುರೆ'ಯ ಸಾಂಕೇತಿಕ 'ಪಳೆಯುಳಿಕೆ ಅರ್ಥ'ಕ್ಕೆ ಕಾರಣವಿರಬಹುದು ಎನಿಸುತ್ತದೆ;
- ಕನ್ನಡದ 'ಕುದುರೆ' ಪದಕ್ಕೆ ಸಂವಾದಿ ಪದಗಳಾಗಿ ತಮಿಳಿನಲ್ಲಿ ಕುತಿರೈ, ಮಲೆಯಾಳಂನಲ್ಲಿ ಕುತಿರೈ/ಕುತಿರ, ತೆಲುಗಿನಲ್ಲಿ ಕುದರಮು/ಕುದಿರ ಪದಗಳು ಚಾಲ್ತಿಯಲ್ಲಿವೆ; ಸಂಸ್ಕೃತದಲ್ಲಿ ಹಯ, ಅಶ್ವ, ವಾಜಿ, ತುರಂಗ ಮುಂತಾದ ಪದಗಳಿವೆ; 'ಕುದುರೆ' ದ್ರಾವಿಡ ಪದವೆನಿಸುತ್ತದೆ;

- 'ಘೋಟಕ'ದಿಂದ 'ಕುದುರೆ' ಪದ ಬಂದಿರಬಹುದೆ? ಅನ್ಯದೇಶ್ಯವೆ?; ತಮಿಳು, ಮಲೆಯಾಳಂ ಭಾಷೆಗಳಲ್ಲಿ 'ತ' ಕಾರವೆ ಇರಲು ಅಘೋಷ ವರ್ಣಗಳು ಘೋಷ ವರ್ಣಗಳಾಗದಿರುವುದೇ ಕಾರಣ.

ಕುದುರೆನೊಣ/ಕುರುಡಿನೊಣ(?) kudurenoṇa/ kuruḍi noṇa(?) :

- ಮಳೆಗಾಲದಲ್ಲಿ ಪ್ರಾಣಿಗಳನ್ನು ಕಚ್ಚಿ ರಕ್ತ ಹೀರುವ ಬೆಟ್ಟ, ಗುಡ್ಡ, ಕಾಡುಗಳಲ್ಲಿ ಇರುವ ದೊಡ್ಡ ನೊಣ; A blood sucking wild fly;
- ಮಳೆಗಾಲದ ಪ್ರಾರಂಭದ ದಿನಗಳಲ್ಲಿ ಇವು ಹೆಚ್ಚು ಕಂಡುಬರುತ್ತವೆ;
- ಸಾಮಾನ್ಯವಾಗಿ ಪ್ರಾಣಿಗಳ ರಕ್ತ ಹೀರಿ ಬದುಕುತ್ತವೆ; ಇಂಗ್ಲಿಷ್‌ನಲ್ಲಿ 'ಹಾರ್ಸ್‌ಫ್ಲೈ', ಕನ್ನಡದಲ್ಲಿ ಕುದುರೆ ನೊಣ ಎಂಬ ಹೆಸರು ಇದೆ.

ಕುದೆ ಹಾಕು kudehāku :

ರಾಗಿ ಮುದ್ದೆ ಮಾಡುವಾಗ ಮೊದಲು ನೀರನ್ನು ಬಿಸಿಯಾಗಲು ಬಿಟ್ಟು, ಸ್ವಲ್ಪ ಬಿಸಿಯಾದ ನೀರಿಗೆ ಹಿಟ್ಟು ಹಾಕಿ ಬೇಯಿಸುವುದು. To boil millet powder in a hot water.

ಕುದೇರು kudēru :

- ಚಾಮರಾಜನಗರ ತಾಲ್ಲೋಕಿನ ಕ್ರಿ.ಶ.೧೪೨೮ರ ೭೫ನೇ ಶಾಸನದಲ್ಲಿ ಇದರ ಉಲ್ಲೇಖ; A village that has been referred in 75th inscription of Chamarajanagar taluk;
- 'ಕುದಿರ್' ಎಂದರೆ ತಗ್ಗಾದಭೂಮಿ, ಹಳ್ಳದಭೂಮಿ ಎಂಬ ಅರ್ಥವಿದೆ; ಇದು 'ಕುದಿಹೆಱ' ಎಂಬ ಪ್ರಾಚೀನ ರೂಪದಿಂದ ಬಂದಿರುವ ಹಾಗೆ ಕಾಣುತ್ತದೆ;
- ಇದು ಮೇಗೂರ ನಾಡಿನಲ್ಲಿತ್ತು; ವಿಜಯನಗರ ದೊರೆ ವೀರದೇವರಾಯನ ಆಳ್ವಿಕೆಯಲ್ಲಿ ದೇವರಸ ಒಡೆಯರು 'ಕುದಿಹೆಱ' ಮಲ್ಲಿನಾಥದೇವರ ನಂದಾದೀಪಕ್ಕೆ ಮಗ್ಗದ ಸುಂಕವನ್ನು ಸರ್ವಮಾನ್ಯವಾಗಿ ಬಿಟ್ಟ ವಿಚಾರವಿದೆ.

(E.C- ೪, ಮೈ.ಜಿ.)

ಕುದ್ಗಂಜಿ kudgangi :

ಒಲೆಯ ಮೇಲೆ ಕುದಿಯುತ್ತಿರುವ ಅನ್ನ ಬೆರೆತ, ನೀರು ಇಂಗದ ಗಂಜಿ(ಚಾ.ಜಿ). A millet gruel that has been mixed with water and rice.

ಕುದ್ದ ಬಚ್ಚಿರೆ kudda baccire :

Desmodium triquetrum(Fabaceae) ನರಿಯಲೆಗಿಡ; ಮಕ್ಕಳು ಇದರ ಎಲೆಯನ್ನು ತಾಂಬೂಲದಂತೆ ಆಟದಲ್ಲಿ ತಿನ್ನಲು ಬಳಸುವರು; ದೊಡ್ಡೊಟ್ಟಿ, ಮೊಲದ ಗಿಡ. A leafy tree; The leaves of the tree are eaten by children.

ಕುದ್ರೆ kudre :

- ಧಾನ್ಯ ತೂರಲು ಬಳಸುವ ನಾಲ್ಕು ಕಾಲಿನ ಎತ್ತರದ ಅಟ್ಟಣಿಯ ಸಾಂಪ್ರದಾಯಿಕ ಹೆಸರು; ಕಣದಲ್ಲಿ ಬಳಸುವ ಸಾಧನ(ಬೆಂ.ಗ್ರಾ.ಜಿ); A four legged stool used to winnow grain in thrashing floor;
- ಬಂಡಿಯ ನೊಗದ ಮುಂದೆ ಚಾಚಿಕೊಂಡಿರುವ ಕಟ್ಟಿಗೆ(ಧಾ.ಜಿ./ರಾ.ಜಿ);

ಕುದ್ರೆಕೂರ್ಸು kudrekūrsu :

ಶಿಕ್ಷೆಯ ಒಂದು ಬಗೆ; ಹಿಂದೆ ಕೂಲಿ ಮಠಗಳಲ್ಲಿ ಓದುತ್ತಿದ್ದಾಗ ಶಿಷ್ಯರಿಗೆ ಕೊಡುತ್ತಿದ್ದ ಒಂದು ಬಗೆಯ ಶಿಕ್ಷೆ; ಮಂಡಿ ಊರಿ ಕೈ ನೆರವಿನಿಂದ ಕುದುರೆಯಂತೆ ಕುಳಿತವನ ಮೇಲೆ ಇನ್ನೊಬ್ಬ ವಿದ್ಯಾರ್ಥಿಯನ್ನು ಕೂರಿಸುವುದು(ಮೈ/ಚಾ.ಜಿ). A kind of punishment to the students at schools.

ಕುದ್ರೆಕೆಳಿ kudrekeḷi :

ನೇಗಿಲ ಉದ್ದ ಪಟ್ಟಿ ಮತ್ತು ನೇಗಿಲನ್ನು ಜೋಡಿಸುವ ಕೀಲು(ದ.ಕ). A hinge that connects plough and plough log.

ಕುನಕ kunaka :

ಕಾಡಿನಲ್ಲಿರುವ ದೊಡ್ಡ ಮರಗಳ ಪೊಟರೆಯಲ್ಲಿ ವಾಸಿಸುವ ಚಿಕ್ಕಗಾತ್ರದ ಇರುವೆಗಳು; ಗುಂಪಾಗಿ ಗೂಡುಕಟ್ಟಿಕೊಂಡು ವಾಸಿಸುತ್ತವೆ. A type of ants dwells in huge tree by building their nest. ಇವುಗಳ ಕಚ್ಚುವಿಕೆಯಿಂದ ತುಂಬಾ ಹಿಂಸೆ ಆಗುತ್ತದೆ; ಕಡಿದ ಜಾಗದಲ್ಲಿ ನವೆಯಾಗುವುದುಂಟು.

ಕುನಲ್ಲೆ kunalle :

ಗದ್ದೆಯಲ್ಲಿ ಬೆಳೆಯುವ ಒಂದು ಬಗೆಯ ಕಳೆ ಸಸ್ಯ; (ದ.ಕ). A weed.

ಕುನಿಕಲ್ kunikal :

- ಬಿದಿರಿನ ಕುಕ್ಕೆ; ಸಣ್ಣ ಗಾತ್ರದ್ದು(ಬೇ.ಸಾಂ.ಪ.ಕೋ); A bamboo basket;
- ಸಂಚಿ; ಚೀಲ(ಬ.ಜಿ).

ಕುನಿಗ kuniga :

ಬೈಲಪತ್ತಾರರ(ಕರ್ನಾಟಕದ ಒಂದು ಸಮುದಾಯ) ಒಂದು ಕುಲ; ಈ ಕುಲಕ್ಕೆ ಸೇರಿದವರೆಲ್ಲರೂ ಒಂದೆಡೆ ಸೇರಿ ತಮಗೆ ಬಂದ ಭಾಗದಲ್ಲಿ ಸ್ವಲ್ಪ ಭಾಗ ತೆಗೆದು ಇನ್ನೊಂದು ಭಾಗಕ್ಕೆ ಸೇರಿಸಿ ಕೊಡುವುದಕ್ಕೆ 'ಕುನಿಗ' ಎನ್ನುತ್ತಾರೆ.

ಕುನಿಸು kunisu :

- ದ್ವೇಷ; ಸೇಡು; ಸಿಟ್ಟು; ಎದುರಾಳಿಗೆ ಬಳಸುವ ಪದ; ವೈರಿ(ಉ.ಕ.ಜಿ); Enmity; Angriness;
- ಗುರಿ(ತು.ಜಿ).

ಕುನೇಕ kunēka :

- ತಕರಾರು; ಎಲ್ಲ ಕೆಲಸಕ್ಕೂ ಏನಾದರೊಂದು ವಿಷಯ ಎತ್ತಿ ಅದರ ಕಾರ್ಯ ಕುಂಸುವುದು (ಚಾ.ಜಿ); An objection; disputing;
- ಮೂಢನಂಬಿಕೆ(ಮೈ.ಜಿ); Blind belief;
- ವ್ಯಂಗ್ಯ; ಕುಹಕ; ಭೀತಿ(ಮಂ.ಜಿ); ಪ್ರ: 'ಯಾವ ಕೆಲಸಕ್ಕೂ ಇವನದೊಂದು ಕುನೇಕ ಇರುತ್ತದೆ'; irony; satire.

ಕುನ್ನ kunna :

ಚಿಕ್ಕ ಹೇನು; ಮರಿಹೇನು(ಉಕ); Tiny louse; Small pediculous;

—***ಕುನ್ನ ಕುಟಕ*** : ಚಿಕ್ಕವರು; ಕಿರಿಯರು(ಶಿ.ಜಿ); Junior, younger;

—***ಕುನ್ನಕುಸ್ಕ*** : ಚಿಕ್ಕಪುಟ್ಟ ಮಕ್ಕಳು(ಮೈ.ಜಿ); Young children;

—***ಕುನ್ನಟ್ಟಿ*** : ಸಣ್ಣ ಗಾತ್ರದ ಅಮಟೆಕಾಯಿ (ಉ.ಕ.ಜಿ); A small size of Amte nut; ನೋಡಿ: ಅಮಟೆ

ಕುನ್ನಿ kunni :

- ನಾಯಿ; ನಾಯಿಮರಿ; puppy;
- ಗಂಡುಕೂಸು; ಕಂದ(ಜೀವನಜೋಕಾಲಿ); a male baby;
- ಅಲ್ಪನಾದವನು; ಕ್ಷುದ್ರ(ಜಾ.ವಿ.ಕೋ);
- ಗೊರವನ ಪರ್ಯಾಯ ನಾಮ(ಮೈಲಾರಲಿಂಗನ ಪುರಾಣ); an alternate name of Gorava;
- ಕೆಂಪುಗುಲಗಂಜಿಗಿಡ; ರಕ್ತಗುಂಜಿ; ನಸುಗುನ್ನಿ; ತ+ಮ = ಕುಞಿ, ತೆ: ಗುನ್ನ, ಕೂನ.
- —***ಕುನ್ನಿಗೊಡ್ಡು*** : ಹೆಣ್ಣುನಾಯಿಯ ವಾಸನೆಯನ್ನು ನೋಡದೆ, ದಷ್ಟಪುಷ್ಟವಾಗಿ ಬೆಳೆದ ನಾಯಿ; A healthy dog;
- —***ಕುನ್ನಿಗೂಸು*** : ಚಿಕ್ಕ ಮಗು ಅಥವಾ ಶಿಶು(ಚಿ.ಪ.ಕೋ). Infant.

ಕುನ್ನೀರು kunnīru:

ಕುಡಿಯುವ ನೀರು(ಬೆಂ.ಗ್ರಾ.ಜಿ); ಪವಿತ್ರವಾದ ಕಾರ್ಯಕ್ಕೆ ಬಳಸುವ ನೀರು(ಚಾ.ಜಿ); Drinking holy water;

—***ಕುನ್ನೀರು ಕಟ್ಟೆ/ಕುನ್ನೀಕ್ಕಟ್ಟೆ*** : ಕುಡಿಯುವ ನೀರನ್ನು ತುಂಬಿಕೊಳ್ಳಲು ಬಳಸುವ ಕಟ್ಟೆ; ಈ ಕಟ್ಟೆಯಲ್ಲಿರುವ ನೀರನ್ನು ಅಡುಗೆಗೆ, ಕುಡಿಯಲು ಮಾತ್ರ ಬಳಸುವರು. A check dam of drinking water.

ಕುನ್ನೇರಲುಮರ/ಕುಂಟಾಲ kunnēralumara/ kuṇṭāla :

- Syzygium zeyanicum(Myrtaceae) ನೇರಳೆ ಜಾತಿಗೆ ಸೇರಿದ ಮರ;ಗುಡ್ಡ ಪನ್ನೇರಳೆ; ಗುಡ್ಡ ನೇರಳೆ; ಮೀನಂಗಿ; A tree belongs to jambolana; a rose apple;
- ಮಳೆಗಾಲದಲ್ಲಿ ಮಾತ್ರ ಸಿಹಿ ಮಿಶ್ರಿತ ಒಗರು ರುಚಿಯುಳ್ಳ ಕಡಲೆ ಗಾತ್ರದ ಹಣ್ಣು ಬಿಡುತ್ತದೆ;
- ತೊಗಟೆ ಕನ್ನೀಲಿ ಮಿಶ್ರಿತ ಕಂದುಬಣ್ಣ;

- ಕರಾವಳಿಯ ಬೆಟ್ಟಗುಡ್ಡಗಳಲ್ಲಿ ಬೆಳೆಯುವ ಅಷ್ಟು ಎತ್ತರವಲ್ಲದ ಮರ;
- ಔಷಧಿಯಾಗಿಯೂ ಉಪಯುಕ್ತ; ಎಳೆ ಚಿಗುರಿನಿಂದ ತಂಬುಳಿ ತಯಾರಿಸಿ ಬಳಸುವುದರಿಂದ ಜೀರ್ಣ ಶಕ್ತಿ ಹೆಚ್ಚುವುದು; ಇದರ ಬೇರು ಅನೇಕ ಕಾಯಿಲೆಗೆ ಔಷಧಿ;
- ಸಾಂಸ್ಕೃತಿಕವಾಗಿಯೂ ಈ ಮರದಿಂದ ಹೆಚ್ಚು ಉಪಯೋಗ; ಭೂಮಿ ಹುಣ್ಣಿಮೆಯಲ್ಲಿ ಮಾಡುವ ಬೆರಕೆ ಸೊಪ್ಪಿನ ಪಲ್ಯಕ್ಕೆ ವಿಶೇಷವಾಗಿ ಇದರ ಎಲೆ ಬಳಕೆ;
- ದೇವಸ್ಥಾನಗಳ ಉತ್ಸವಾಚರಣೆಗಳಲ್ಲಿ ಗುಡಿಯ ಸುತ್ತ ಸ್ಥಾಪಿಸಿದ ಪರಿವಾರ ದೇವತೆಗಳ ಬಲಿಕಲ್ಲಿಗೆ ಆರಾಧನಾ ರೂಪದಲ್ಲಿ ಅಕ್ಕಿ ನೈವೇದ್ಯಗಳ ಜೊತೆಗೆ ಈ ಗಿಡದ ಸೊಪ್ಪನ್ನು ಹಾಕುವರು; ಆಗ ಇದು ಬಲಿಸೊಪ್ಪು ಎನಿಸಿಕೊಳ್ಳುವುದು;
- ವ್ಯರೂ: ನಾಯಿ ನೇರಳೆ, ಕೆಂಪು ಕುಂಟಾಲ, ಕುನ್ನೇರಳು, ಕುಂಟನೇರಲೆ(ದ.ಕ).

ಕುನ್ಸಿ kunsi :

ಸ್ವಚ್ಛತೆ ಕಾಪಾಡಿಕೊಳ್ಳದವ; ಎಲ್ಲಿ ಬೇಕಾದರೂ ಮಲಗಿ ಏಳುವವ; ಏನಾದರೂ ತಿಂದು ತೇಗುವವ(ಕಲ.ಜಿ). An untidy person.

ಕುಪನಿ kupani :

ಸಾಧುಸಂತರು ಧರಿಸುವ ನಿಲುವಂಗಿ; ಭುಗುವ; ತೋಳುಗಳಿಲ್ಲದ ಉದ್ದನೆಯ ಅಂಗಿ; ಪ್ರ: 'ಕೈಯಲ್ಲಿ ಜೋಳಿಗೆ ಮೈಮೇಲೆ ಕಾವಿ ಬಣ್ಣದ ಕುಪನಿ ಧರಿಸಿ ಜೋಗಿ ಹೊರಟ'(ಉ.ಕ/ಮಂ.ಜಿ). A long gown worn by sages; seers.

ಕುಪನಿಯರ ಸರ್ಕಾರ kupaniyara sarkāra :

ಸೋಲಿಗರು ಬ್ರಿಟಿಷ್ ಸರ್ಕಾರವನ್ನು ಕರೆಯುವ ರೀತಿ; ಭಾರತವನ್ನು ಆಳಿದ ಈಸ್ಟ್ ಇಂಡಿಯಾ ಕಂಪನಿಯನ್ನು ಕುಂಪಣಿ, ಕುಂಪನಿ, ಕುಪನಿ, ಕಂಪನಿ ಸರ್ಕಾರವೆಂದು ಕರೆದರು; ಇದೊಂದು ವ್ಯಾಪಾರ ಸಂಸ್ಥೆ. A call; soliga tribes Calls British company government like this.

ಕುಪವಣ kupavaṇa :

- ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೋಕಿನ ಕ್ರಿ.ಶ.೧೫೫೬ರ ೧೪ನೇ ಶಾಸನದಲ್ಲಿ ಇದರ ಉಲ್ಲೇಖ; A village Mentioned in the 14th inscription of Sindhanooru taluk, Raichur District;
- ವಿಜಯನಗರ ಸದಾಶಿವರಾಯನ ಆಳ್ವಿಕೆ;
- ಆನೆಯಗೊಂದಿಗೆ ಸಲ್ಲುವ ಕೆಳವಡಿ ನಾಡಿನ ಮುಕ್ಕುಂದಕ್ಕೆ 'ವರದರಾಜಂಮಪುರ'ವೆಂಬ ಪ್ರತಿನಾಮವಿದ್ದ ವಿಚಾರ ತಿಳಿಯುತ್ತದೆ;
- ಈ ಊರಿನ ಗೌಡರು, ಸೇನಬೋವರು ಸೇರಿ ಬೇರೆ ಬೇರೆ ಊರಿನ ಬೋವುಗಳು ನೀಡಿದ ದಾನದ ಉಲ್ಲೇಖ; 'ಕುಪುವಣ'ದ ಬೋವುಗಳು ಎಂದೂ ಉಲ್ಲೇಖ;
- ಕುಪವಣ ಬಹುಶಃ 'ಕುಪಣ' ಇರಬಹುದು; ಇದೇ ಆಮೇಲೆ ಕೊಪಣ/ಕೊಪಳ/ಕೊಪ್ಪಳ (ಕು>ಕೊ, ಉ>ಒ, ಸ್ವರವ್ಯತ್ಯಯ) ಆಗಿರಬಹುದು.

(ಕ.ವಿ.ವಿ.ಶಾ.ಸಂ.೭; ಹಂಪಿ)

ಕುಪೇಂದ್ರ kupēndra :

ಶ್ರೀಮಂತ; ಉಳ್ಳವ.

ಕುಪ್ಡಲಾಳಿ kupḍalāḷi :

ನೇಯ್ಗೆಯಲ್ಲಿ ಬಳಕೆ; ಅಂಚು ನೇಯ್ಗೆ ಮಾಡಲು ಬಳಸುವ ಲಾಳಿ(ಬ.ಜಿ). A shuttle Used in weaving.

ಕುಪ್ಪಟ್ಟೆ ಪಲ್ಕ kuptaṭṭepalka :

- ಮೆದೆಯನ್ನು ತಟ್ಟುವುದಕ್ಕೆ ಬಳಸುವ ಮರದ ಸಾಧನ; (ಕೃ.ಪ.ಕೋ); A wooden tool that used to beat straw stalk;
- ತಟ್ಟು ಮಣೆ(ಬೆಂ.ಜಿ). a slap bar that uses to slap straw stack.

ಕುಪ್ಪ kuppa :

- ದನಗಳ ಹೊಟ್ಟೆಯಲ್ಲಿ ಅಥವಾ ಮೈಮೇಲೆ ಏಳುವ ಕೀವು ತುಂಬಿದ ಗಡ್ಡೆ(ಚಿ.ಪ.ಕೋ); An ulcer of cattle;
- ಕೂದಲಿನ ಚೌಲಿಗೆ ಹಾಕುವ ಆಲಂಕಾರಿಕ ಆಭರಣ;

- ಓಲೆ; ಕಿವಿಗೆ ಧರಿಸುವ ಆಭರಣ; ಬುಡಕಟ್ಟಿನಲ್ಲಿ ಹೆಚ್ಚು ಬಳಕೆ; ear-ring;
- ಮಣ್ಣಿನಲ್ಲಿರುವ ಒಂದು ಬಗೆಯ ಕೀಟ(ಉ.ಕ.ಜಿ); a earthen insect;
- *—ಕುಪ್ಪಗ ಚಾಲಕ್ಯ* : ಒಂದು ವಿಧದ ಅಕ್ಕಿ(ಉ.ಕ.ಜಿ); a rice breed;
- *—ಕುಪ್ಪಗಿನ ಬಳ್ಳಿ* : ಔಷಧಿಯಾಗಿ ಬಳಕೆಯಾಗುವ ಸಸ್ಯ. A medicinal plant.

ಕುಪ್ಪಡಿಗೆ(ಗಿ)/ಕುಪ್ಪಡಿಸಿ kuppaḍige(gi)/ kuppaḍisi :

- ಮಣ್ಣಿನ ಕೊಡದ ಕಂಠಭಾಗವನ್ನು ತೆಗೆದು ಅರ್ಧಕ್ಕೆ ಒಡೆದದ್ದು;
- ಅಕ್ಕಸಾಲಿಯ ಬಂಗಾರ ಕರಗಿಸುವ ಮಣ್ಣಿನ ಕುಡಿಕೆ; ಮೂಸೆ; ಅಗ್ಗಿಷ್ಟಕೆ; ಅಕ್ಕಸಾಲಿಗರು ಲೋಹ ಕಾಯಿಸುವ ಒಲೆ; ಇದು ಇವರಿಗೆ ದೈವದ ಸಮಾನ; ಇವರನ್ನು 'ಕುಪ್ಪಡಿಗ' ಎಂದು ಕರೆಯುವರು; A baked earthen small pot that used by goldsmiths;
- ಬಾಣಂತಿಯ ಆರೈಕೆಯಲ್ಲಿನ ಒಂದು ಕ್ರಮ; ಆಕೆಗೆ ಬೆಚ್ಚಗಿನ ಕಾವು ಕೊಡುವ ಉದ್ದೇಶದಿಂದ ಕುಪ್ಪಡಿಗೆಯಲ್ಲಿ ಕಾರ್ಕುಳ್ಳು, ಕುಳ್ಳು ಹಾಕಿ ಉರಿ ಮಾಡಿ ಬೆಂಕಿ ಹೊತ್ತಿಸಿ ಬಾಣಂತಿಯ ಕೋಣೆಯ ಹೊರಸಿನ ಬುಡಕ್ಕೆ ಇಡುವರು; A method of nursing a laboured or puerperal woman who was recently delivered a baby in solitary confinement;
- ಹೊರಸು ಎಂದರೆ ಮರದ ಪಟ್ಟಿಗಳನ್ನು ಸ್ವಲ್ಪ ಅಂತರದಲ್ಲಿ ಜೋಡಿಸಿ ಮಾಡಿದ ಮಂಚ;
- ತೆಂಗಿನ ನಾರನ್ನು ಹೊಸೆದು ಹುರಿ ಮಾಡಿ ಅದನ್ನು ಹೆಣೆದು ಮಂಚ ಮಾಡುವರು;
- ಇದರ ಕೆಳಭಾಗದಲ್ಲಿ ಕುಪ್ಪಡಿಗೆ ಇಟ್ಟು ಅದರ ಕಾವು ಬಾಣಂತಿಗೆ ತಾಕುವಂತೆ ಮಾಡಿ ಅವಳ ದೇಹದಲ್ಲಿ ಶೇಖರಿಸಿದ್ದ ಕೊಬ್ಬಿನ ಅಂಶವೆಲ್ಲ ಕರಗಿ ಮೊದಲ ದೇಹ ಸೌಂದರ್ಯ ಹೊಂದಲು ಸಾಧ್ಯ; ಅಲ್ಲದೆ ಬಿಸಿ ವಾತಾವರಣ ರೋಗದಿಂದ ದೂರವಿಡುವುದು (ಬಾ/ಮಂ.ಜಿ);
- *—ಕುಪ್ಪಡಿಗಿ* : ಕುಳ್ಳು, ಇದ್ದಲು ಸೇರಿಸಿ ಬುಟ್ಟಿಯಲ್ಲಿಟ್ಟು ಬೆಂಕಿ ಕಾಯಿಸುವಿಕೆ; ಪ್ರ: 'ಮಗಳು ಹಡದಾಳ ಕಪ್ಪಡಗಿ ಹೊತ್ತಿಸಿ ಕಾಯಿಸಬೇಕು' (ಬಾ.ಜಿ); fuel; A fire place made up of fuel, charcoal in a basket to make warm one'eself.

ಕುಪ್ಪನ ಆಟ kuppana āṭa :

- ಉತ್ತರಕನ್ನಡ ಜಿಲ್ಲೆಯ ಜನಪದ ಆಟ; 'ಹಳ್ಳಕಾಟ'ದ ಇನ್ನೊಂದು ಬಗೆ; a rural game of North Kannada;
- ಇಲ್ಲಿ ಹರಳು ಕೇಳುವವ, ಕೊಡುವವ ಇಬ್ಬರು ಎರಡು ಗುಂಪಿನ ನಾಯಕರು;
- ಕೇಳುವವ ಹರಳಿದ್ದವರನ್ನು ಗುರುತಿಸಿದರೆ ಆತನು ಕೇಳುವವನ ಪಕ್ಷಕ್ಕೆ ಸೇರುತ್ತಾನೆ; ಕೇಳುವವನು ಹರಳು ಹಾಕುತ್ತಾನೆ; ಹರಳು ಹಾಕುತ್ತಿದ್ದವನು ಕೇಳುವವನಾಗುತ್ತಾನೆ;
- ಹೀಗೆ ಇಬ್ಬರ ಗುಂಪಿಗೂ ಆಟಗಾರರು ಹಂಚಿಹೋಗುವರು; ನಾಯಕನೊಂದಿಗೆ 'ಕುಪ್ಪಾ' ಮಾಡುವವನನ್ನು ಒಂದೆಡೆ ಕರೆದುಕೊಂಡು ಹೋಗಿ ಎಲೆ ಅಥವಾ ಕಾಗದದಲ್ಲಿ ಉಪಯೋಗಿಸುವ ಹರಳುಗಳನ್ನು ಕಟ್ಟಿ ಕುಪ್ಪನ ಕಂಕುಳಲ್ಲಾಗಲಿ, ಮುಷ್ಟಿಯಲ್ಲಾಗಲಿ, ಕಾಲಿನ ಬೆರಳು ಸಂದಿಯಲ್ಲಾಗಲಿ ಅಡಗಿಸಿಡುವರು;
- ಇತರ ಸ್ಥಳದಲ್ಲಿ ಎಲೆ ಕಾಗದದ ಚಿಕ್ಕಚಿಕ್ಕ ಗಂಟು ಮಾಡಿ ಸಿಕ್ಕಿಸುವರು;
- ಎದುರಾಳಿ ಗುಂಪಿನವರಿಗೆ ಹರಳು ಗಂಟುಗಳಲ್ಲೊಂದರಲ್ಲಿ ಇದೆಯೇ ಎಂಬ ಭ್ರಮೆ ಹುಟ್ಟಿಸಲು ಕುಪ್ಪನ ಹರಳು ಹುದುಗಿಸಿದ ನಂತರ ಕುಪ್ಪನ ಕೈ ಇಳಿಬಿಟ್ಟು ಕರೆದುಕೊಂಡು ಬರುವರು;
- ಕುಪ್ಪ ಬರುವಾಗ ನಾಯಕ ಅವನ ತಲೆಗೆ ಬಡಿಯುತ್ತಾ "ನಮ್ಮ ಕುಪ್ಪಾ ಬತ್ತಿದೊ। ರಸ್ತಾಳಿ ಹಣ್ಣಾ ತತ್ತೀದೋ। ಧೀರಶೂರ ಮುಂದಾಗಿ। ಕಲ್ಲೊ ಮುಳ್ಳೊ ಬದಿಗಾಗಿ।" ಎನ್ನುತ್ತಾ ಬರುವನು;
- ಕುಪ್ಪಾ ತನ್ನ ಮೊದಲಿನ ಸ್ಥಿತಿ ಬದಲಾಯಿಸದೆ ಎದುರು ಗುಂಪಿನ ಮುಂದೆ ನಿಲ್ಲಬೇಕು;
- ಕುಪ್ಪಾ ತಂದವರು ಸೊಂಟದ ಮೇಲೆ ಬೇಕೋ ಸೊಂಟದ ಕೆಳಗೆ ಬೇಕೋ ಎನ್ನುವಾಗ ಇವರು

ಹರಳಿದ್ದ ಭಾಗ ಕೇಳುವರು; ಹೀಗೆ ಆಟ ಮುಂದುವರಿಯುತ್ತಾ ಹೋಗುತ್ತದೆ.

ಕುಪ್ಪಲು ಮಣ್ಣು kuppalu maṇṇu :

- ಫಲವತ್ತಾದ ಮಣ್ಣು; ಭೂಮಿಯ ಸಮೃದ್ಧಿಯನ್ನು ಹೆಚ್ಚಿಸಲು ರೈತನ ಮಿತ್ರ ಎರೆಹುಳು ತನ್ನ ಆಹಾರದೊಂದಿಗೆ ಮಣ್ಣನ್ನು ತಿಂದು ಜೀರ್ಣಿಸಿ ವಿಸರ್ಜಿಸಿದ ಮಲ; Fertile soil;
- ಇದು ಕುಪ್ಪೆ ಕುಪ್ಪೆಯಾಗಿ ಮಣ್ಣಿನಲ್ಲಿ ಬಿದ್ದಿರುತ್ತದೆ; ಇದು ಬೆಳೆಗೆ ಹೆಚ್ಚು ಸತ್ವವನ್ನು ನೀಡಿ ಉತ್ತಮವಾದ ಫಸಲು ನೀಡುವುದು.

ಕುಪ್ಪವಳ್ಳಿ/ಕುಪ್ಪಳಿ kuppavaḷḷi/kuppaḷi:

- ಕೊಪ್ಪ ತಾಲ್ಲೋಕಿನ ಹರಿಹರಪುರದ ಮಠದಲ್ಲಿರುವ ಕ್ರಿ.ಶ.೧೪೨೭ಕ್ಕೆ ಸೇರಿದ ಇಮ್ಮಡಿಹರಿಹರನ ಕಾಲದ ಶಿಲಾಶಾಸನ(೩೧)ದಲ್ಲಿ ಕುಪಳಿ ಎಂದೂ, ನಂತರ ಅದೇ ಗ್ರಾಮದ ಶಾಸನ ಸಂಖ್ಯೆ ೩೨ರಲ್ಲಿ ಕುಪ್ಪವಳಿ, ಕುಪ್ಪಳಿ ಎಂದೂ, ನಂತರದ ೩೪ನೇ ಶಾಸನದಲ್ಲಿ ಕುಪ್ಪವಳ್ಳಿ ಎಂದೂ ಉಲ್ಲೇಖವಾಗಿದೆ; A place/ village that mentioned in 31st inscription of Hariharapura, Koppa Taluk;
- ಪ್ರಸ್ತುತ 'ಕುಪ್ಪಳಿ' ಎಂದು ಬಳಕೆಗೊಳ್ಳುತ್ತಿರುವ ಈ ಸ್ಥಳನಾಮವು ಕುಪ್ಪವಳ್ಳಿ, ಕುಪಳಿ, ಕುಂಪ್ಪವಳ್ಳಿ ಎಂದು ನಾನಾ ರೀತಿಯಲ್ಲಿ ಬಳಕೆಯಲ್ಲಿದೆ;
- ಪ್ರಾಕೃತಿಕವಾಗಿ ಈ ಸ್ಥಳಕ್ಕೆ 'ಕುಪ್ಪಳಿಸಿಕೊಂಡು'(?) ಹೋಗಬೇಕಾಗಿರುವುದರಿಂದ ಕುಪ್ಪಳಿ ಎಂದು ಹೆಸರು ಬಂದಿದೆ ಎಂದು ಹೇಳಲಾಗಿದೆ;
- 'ಕುಪ್ಪಳಿ' ಎನ್ನುವುದಕ್ಕೆ ರಾಶಿ, ಗುಡ್ಡೆ ಎನ್ನುವ ಅರ್ಥವೂ ಇದೆ; ಆ ಹಿನ್ನೆಲೆಯಲ್ಲಿ ಈ ಹೆಸರು ಬಂದಿರಬಾರದೇಕೆ?

(E.C- ೧೨)

ಕುಪ್ಪಸ/ಕುಬುಸ/ಕುಬ್ಬಸ

kuppasa/kubusa/kubbasa :

- ಕೂರ್ಪಾಸ > ಕುಪ್ಪಸ > ಕುಬ್ಬಸ; ಸಂಸ್ಕೃತದ 'ಕೂರ್ಪಾಸ' ಪದದಿಂದ ತದ್ಭವಗೊಂಡು 'ಕುಪ್ಪಸ' ಎಂದಾಗಿ ನಂತರ 'ಪ' ಕಾರಕ್ಕೆ 'ಬ' ಕಾರ ಬಂದು ಆಡುನುಡಿಯಲ್ಲಿ 'ಕುಬಸ' ಎಂದಾಗಿದೆ;
- ಹೆಂಗಸರು ತೊಡುವ ಎದೆಯ ಉಡುಗೆ; ತೋಳುಗಳಿದ್ದು ಎದೆ ಮೈಕಟ್ಟು ಮುಚ್ಚಿರುವಂತಿರುವುದು; ರವಿಕೆ; ಕಂಚುಕ; ಕುಪ್ಪಸ; *ಪ್ರ:* 'ಒಡ್ರ ಹತ್ರ ಕುಪ್ಪ ಬೇಡಿದಂಗೆ'(ಗಾ); A blouse, that is used by women to cover their breast part;
- ಕೊಡವ ಗಂಡಸರು ಸಾಂಪ್ರದಾಯಿಕ ಉಡುಗೆಯನ್ನು ಧರಿಸಿದಾಗ ಹಾಕಿಕೊಳ್ಳುವ ಕಪ್ಪು ಬಣ್ಣದ ಅರೆದೋಳಿನ ನಿಲುವಂಗಿ; ಕುಪಚ; ಕುಪ್ಸ(ಚ>ಸ);
- ಹಾವಿನ ಪೊರೆ;
- ಗುಡ್ಡೆ; ಗೋಣಿ ಚೀಲದ ಎರಡು ಪದರದಿಂದ ಮಾಡಿದ ಗೊರಗು;
- ***—ಕುಪ್ಪಸ/ಕುಪ್ಪಸದ ಶಾಸ್ತ್ರ*** : ಚೊಚ್ಚಲು ಬಸುರಿಗೆ ಏಳು ಅಥವಾ ಒಂಬತ್ತನೇ ತಿಂಗಳಲ್ಲಿ ಮಾಡುವ ಶಾಸ್ತ್ರ; A holy celebration of first time pregnant woman at 7th or 9th pregnancy months before delivery;
- ಬಸಿರುವಸಗೆ, ಸೀಮಂತಶಾಸ್ತ್ರ, ಮಡಿಲು ತುಂಬುವುದು, ಉಡಿ ತುಂಬುವುದು ಎಂಬ ಹೆಸರುಗಳೂ ಇವೆ;
- ಈ ಶಾಸ್ತ್ರದ ಆಚರಣೆಯಲ್ಲಿ ಪ್ರಾದೇಶಿಕ ಭಿನ್ನತೆಗಳಿವೆ;
- ಕೆಲವೆಡೆ ತವರು ಮನೆಯವರು ಐದು, ಒಂಬತ್ತು ಜನ ಮುತ್ತೈದೆಯರೊಂದಿಗೆ ಮಗಳ ಮನೆಗೆ ಹೋಗಿ ಬಸರಿಗೆ ಗಂಡನ ಮನೆಯವರೇ ತಟ್ಟೆ ತುಂಬಿ ಆರತಿ ಮಾಡಿ ಹೆರಿಗೆಗೆ ತವರಿಗೆ ಕಳುಹಿಸುವ ಕ್ರಮವಿದೆ;
- ಮತ್ತೆ ಕೆಲವೆಡೆ ಮಗಳನ್ನು ತವರಿಗೆ ಕರೆತಂದು ತಮ್ಮ ಮನೆಯಲ್ಲಿ ಬಳಗದವರೊಡಗೂಡಿ ಸೀಮಂತ ಮಾಡುವರು;
- ಮೂರು ತಿಂಗಳಿಗೆ ತವರಿನವರು ತಮ್ಮ ಮನೆಯಲ್ಲಿ 'ಕಳ್ಳ ಕುಬಸ' ಮಾಡುವುದುಂಟು;
- ಹಸಿರುಬಳೆ, ಸೀರೆ, ಕುಬ್ಬಸ ತೊಡಿಸಿ, ಹೂಮುಡಿಸಿ, ತಿಂಡಿ ತಿನಿಸುಗಳು, ಹಣ್ಣು ಹಂಪಲುಗಳನ್ನು ತಟ್ಟೆಯಲ್ಲಿ ತುಂಬಿಟ್ಟು ಹಸೆಮಣೆ ಮೇಲೆ ಗಂಡ ಹೆಂಡತಿಯನ್ನು ಕೂರಿಸಿ ಅವಳ ಉಡಿಗೆ ಮುತ್ತೈದೆಯರು ಬಾಳೆಹಣ್ಣು, ನಿಂಬೆಹಣ್ಣು, ತೆಂಗಿನಕಾಯಿ, ಅಕ್ಕಿ, ಎಲೆ ಅಡಿಕೆ, ಬಾದಾಮಿ, ಉತ್ತುತ್ತೆ ಮೊದಲಾದ ವಸ್ತುಗಳನ್ನು ಹಾಕಿ ಕುಂಕುಮ

ಹಣೆಗಿಟ್ಟು ಹೂಮುಡಿಸಿ ಹಸಿರು ಬಳೆ ತೊಡಿಸಿ ಆರತಿ ಎತ್ತುವರು;

- ಅವಳಿಗೆ ಇಷ್ಟವಾದ ಬಯಕೆಯೂಟ ಮಾಡಿಸಿ ತವರಿಗೆ ಹೆರಿಗೆಗೆ ಕರೆದೊಯ್ಯುವುದು ಪದ್ಧತಿ;
- ಇದರ ಉದ್ದೇಶ ಮಗಳು ಮತ್ತು ಮಗುವಿಗೆ ಶುಭ ಹಾರೈಸಿ, ಅಮಂಗಳ ನಿವಾರಣೆಯಾಗಿ ಗರ್ಭಿಣಿ ಸಂತೋಷದಿಂದ ಇರಲೆಂಬುವುದಾಗಿದೆ;
- ***—ಕುಬ್ಬಸದ ಪದ*** : ಬಸರಿ ಒಸಗೆ ಮಾಡುವಾಗ ಹಾಡುವ ಹಾಡುಗಳು; ಸೀಮಂತದ ಹಾಡು; ಒಂದು ಉದಾಹರಣೆ: 'ಇಂದ್ರ ಜಾನಕಿ ನಿನಗೆ ಚಂದ್ರ ಮೂಡಿದನೇನ। ನಾರಿ ಜಾನಕಿ ನಿನಗೆ ಸೂರ್ಯ ಮೂಡಿದನೇನ। ಎರಡೆಂಬ ತಿಂಗಳಿಗಿ ಎರಡೇನ ಬಯಸ್ಯಾಳ। ಕಡ್ಡಿಯ ಬಳಿ ಕೈತುಂಬ ಇಟ್ಟೇನೆಂಬುವಳ।' Folk songs sing at the time of first time pregnant rituals going on;
- ***—ಕುಬಸದ ಸೀರೆ*** : ಸೀಮಂತ ಕಾರ್ಯಕ್ಕೆ ತವರು ಮನೆಯವರು ಉಡಿಸುವ ಸೀರೆ; ಸಾಮಾನ್ಯವಾಗಿ ಚೊಚ್ಚಲ ಬಸಿರಿಗೆ ಹಸಿರುಬಣ್ಣದ ಸೀರೆ, ಕುಬ್ಬಸ, ಬಳೆ ತೊಡಿಸಿ ಆರತಿ ಮಾಡುವರು; ಸೀಮಂತಕ್ಕಾಗಿ ಉಡಿಸಿದ ಸೀರೆ 'ಕುಬುಸದ ಸೀರೆ'. blouse and Saree; Bangles ceremony of first time pregnant woman.

ಕುಪ್ಪಸೋಗೆ kuppasōge :

- ನಂಜನಗೂಡು ತಾಲ್ಲೋಕಿನ ಕ್ರಿ.ಶ.೯ನೇ ಶ.ದ ೧೪೮ನೇ ಶಾಸನದಲ್ಲಿ ಇದರ ಉಲ್ಲೇಖ; A village that mentioned in 148th inscription of Nanjanagudu Taluk;
- 'ಕುಪ್ಪ'(ಕುಪ್ಪೆ) ಎಂದರೆ ಮಾಳ; 'ಸೋಗೆ' ಎಂದರೆ ನವಿಲು; ನವಿಲುಗಳು ಆಡುತ್ತಿದ್ದ ಮಾಳ ಎಂದು ಅರ್ಥೈಸಬಹುದು;
- ಪಕ್ಷಿಗಳ ಹೆಸರಿನಲ್ಲಿ ಬಂದ ಸ್ಥಳನಾಮ ಇದಾಗಿರಬಹುದು; ಈಗ ಇದು 'ಕಪ್ಪುಸೋಗೆ' ಎಂದು ಬದಲಾಗಿದೆ;
- ಗಂಗದೊರೆ ಪೆರ್ಮಾ(ನ)ಡಿ ಆಳುತ್ತಿದ್ದಾಗ 'ಕುಪ್ಪಸೋಗೆ'ಗೆ ಕೆಲವು ದತ್ತಿ ನೀಡಿದ ವಿವರಗಳಿವೆ.

(E.C- ೩, ಮೈ.ಜಿ.)

ಕುಪ್ಪಳ kuppaḷa :

ಸೆಂಟ್ರೋ ಪಸ್ ಸೈನೆನ್ಸಿಸ್; ಇದೊಂದು ಪಕ್ಷಿಯ ಬಗೆ; ಹುಲ್ಲುಗಾವಲು, ತೋಟ, ಕುರುಚಲು ಕಾಡುಗಳಲ್ಲಿ ವಾಸಿಸುವ ಸ್ಥಳೀಯ ಪಕ್ಷಿ. A local bird dwells in grassland.

ಕುಪ್ಪಳಿಸು kuppaḷisu :

- ಹಾರುವುದು; ನೆಗೆದು ದಾಟುವುದು; ಎರಡು ಕಾಲನ್ನು ಒಟ್ಟಿಗೆ ಎತ್ತಿ ಮುಂದಕ್ಕೆ ಇಡುವ ರೀತಿ; *ಪ್ರ:* 'ಬಾತು ಕೋಳಿ ಕುಪ್ಪಳಿಸ್ಕಂದ ಬಂತು'; 'ಕಪ್ಪೆ ಹಳ್ಳದತ್ತ ಕುಪ್ಪಳಿಸುತ್ತಾ ಹೋಯಿತು'; To cross by jumping;
- ರಾಶಿಹಾಕು; ಒಟ್ಟುಗೂಡಿಸು;
- ಕುದಿಯುವ ಬಿಸಿ ದ್ರವ ಮೈಚರ್ಮದ ಮೇಲೆ ಬಿದ್ದಾಗ ಚರ್ಮ ಮೇಲೆ ಉಬ್ಬಿದಂತೆ ಬರುವ ಬೊಬ್ಬೆ; *ಪ್ರ:* 'ಬಿಸಿ ಸಾರು ಬಿದ್ದು ಕೈಚರ್ಮ ಕುಪ್ಪಳಿಸಿತು';
- ಕಾಳು, ತರಕಾರಿಗಳು ಚೆನ್ನಾಗಿ ಬೆಂದು ಹೋಗುವುದು; *ಪ್ರ:* 'ಕಾಳು ಚೆನ್ನಾಗಿ ಬೆಂದು ಕುಪ್ಪಳಿಸಿ ಹೋಗಿದೆ';
- ಜಿಗಿ; ಕುಣಿದಾಡು; ಸಂಭ್ರಮಪಡು; *ಪ್ರ:* 'ಮಕ್ಕಳು ಬೇಸಿಗೆ ರಜೆಯಲ್ಲಿ ಕುಣಿದು ಕುಪ್ಪಳಿಸಿದರು'; ಆಟದೊಂದಿಗೆ ದೇಹಕ್ಕೆ ವ್ಯಾಯಾಮ ದೊರೆಯುವುದು; ವ್ಯರೂ: ಕುಪ್‌ಗಂಡು; enjoy by skipping, dancing;
- ***—ಕುಪ್ಪರಿಸು*** : ಯಕ್ಷಗಾನ ಬಯಲಾಟದಲ್ಲಿ ಜಿಗಿಯಲು ನಿಲ್ಲುವಂತಹ ಒಂದು ಭಂಗಿ; ಸಿದ್ಧತೆಯ ಕ್ರಮ; A rhythmic jumping posture of Yakshagana.

ಕುಪ್ಪಾಯ kuppāya :

ಇದೊಂದು ಯಕ್ಷಗಾನದಲ್ಲಿ ಬಳಸುವ ಅಂಗಿ; ಇದು ಮಲೆಯಾಳಂ ಶಬ್ದವಾಗಿದೆ; ಸ್ತ್ರೀ ವೇಷಧಾರಿಗಳು ಧರಿಸುತ್ತಿದ್ದ ಇಡೀ ತೋಳಿನ ಅಂಗಿ(ಯ.ಪ.ಕೋ).

ಕುಪ್ಪಿ/ಕುಪ್ಯ kuppi/kupya :

- ಮರ ಅಥವಾ ಲೋಹ, ಪಿಂಗಾಣಿ, ಗಾಜುಗಳಿಂದ ಮಾಡಿದ ಬಾಯಿ ಚಿಕ್ಕದಾಗಿದ್ದು ಬತ್ತಿಹಾಕಿ ಉರಿಸಲು ಮಾಡಿದ ಬುಡ್ಡಿ; ಗುಳಾಪು; ಸೀಮೆಯೆಣ್ಣೆಬುಡ್ಡಿ;

ಪ್ರ: 'ಕುಪ್ಪಿಗೆ ಸೀಮೆಎಣ್ಣೆ ಹಾಕಿ ತಾ'; A small kerosene lamp;

- ಭರಣಿ; ಜಾಡಿ; ಪ್ರ: 'ಉಪ್ಪಿನಕಾಯಿಗೆ ನೀರು ಸೇರದಂತೆ ಕುಪ್ಪಿಯಲ್ಲಿ ತುಂಬಿಡು'; pickle urn;
- ಕೊಡಗಿನ ಹೆಂಗಸರು ಬಳಸುವ ಕುಪ್ಪಸ(ಕೊಡ.ಜಿ);
- ಬಾಣ ಮೊದಲಾದವುಗಳನ್ನು ಇಟ್ಟುಕೊಳ್ಳಲು ಬಳಸುವ ಚರ್ಮದಿಂದ ಮಾಡಿದ ಬತ್ತಳಿಕೆ; Quiver; a leather box of arrow;
- ಒಂದು ಬಗೆಯ ಸಸ್ಯ ವಿಶೇಷ;
- ***—ಕುಪ್ಪಿ ಬಣ್ಣ*** : ಕಣ್ಣಿನ ಬೇನೆಗೆ ಔಷಧಿಯಾಗಿ ಬಳಸುವ 'ಜಾಂಬಳಿ' ಬಣ್ಣದ ಒಂದು ಪುಡಿ(ಚಿಕ್ಕ.ಜಿ);
- ***—ಕುಪ್ಪಿ ಬಳೆ*** : ಹೆಂಗಸರು ಮುಂಗೈಗೆ ಹಾಕಿಕೊಳ್ಳುವ ಬಂಗಾರದ ಬಳೆ; ಇದರ ಮೇಲಿನ ಕೆತ್ತನೆ ಇದ್ದು ಚಪ್ಪಟೆಯಾಕಾರದಲ್ಲಿರುತ್ತದೆ(ಚಿ.ಪ.ಕೋ); Gold bangles of women;
- ***—ಕುಪ್ಪಿಗಿಡ*** : Acalypha indica ನಾಟಿ ವೈದ್ಯದಲ್ಲಿ ವಿಶೇಷವಾಗಿ ಬಳಸುವ ಔಷಧಿ ಗಿಡ; ಕಫ, ವಾತ, ಅಸ್ತಮಾ, ಕಜ್ಜಿ, ಹುಣ್ಣು, ಸಂಧಿವಾತ, ಶ್ವಾಸನಾಳದ ಊತ, ಹಾವಿನ ವಿಷಕ್ಕೆ, ಔಷಧಿಯಾಗಿ ಇದರ ಎಲೆ ಬೇರು, ಕಾಂಡ ಎಲ್ಲವೂ ಬಳಕೆ; ರೋಗ ನಿರೋಧಕ ಗಿಡ; A medicinal plant uses to cure cough etc;
- ***—ಕುಪ್ಪಿ ಮಾತ್ರೆ*** : ಆಯುರ್ವೇದ ಪದ್ಧತಿಯಲ್ಲಿ ತಯಾರಿಸುವ ದಪ್ಪ ಗುಳಿಗೆ; ಇದು ಅನೇಕ ಗಿಡಮೂಲಿಕೆಗಳ ಸಾರ ಸೇರಿಸಿ ತಯಾರಿಸಿದ್ದು; ಇವುಗಳನ್ನು ಭರಣಿಯಲ್ಲಿ ತುಂಬಿಡುವರು; ನಾಟಿ ವೈದ್ಯದಲ್ಲಿ ಸಾಮಾನ್ಯವಾಗಿ ಎಲ್ಲ ರೋಗಕ್ಕೂ ಇದನ್ನು ಕಲ್ಲಿನ ಮೇಲೆ ಅರೆದು ರೋಗಿಗೆ ಕೊಡುವ ಕ್ರಮವಿದೆ; ಸರ್ವರೋಗಕ್ಕೆ ಕುಪ್ಪಿ ಮಾತ್ರೆ ಔಷಧಿ; A kind of capsule; Used in Ayurvedha;
- ***—ಕುಪ್ಪಿ ಕಣ್ಣು/ಕುಪ್ಪಳ್ ಕಣ್ಣು*** : ಒಂದು ರೀತಿಯಲ್ಲಿರುವ ಕಣ್ಣು; ಕೆಂಗಣ್ಣು; ನಸು ಕೆಂಪಾಗಿರುವ ಕಣ್ಣು(ದ.ಕ); A reddish eye;
- ***—ಕುಪ್ಪಿ ಆಟ*** : ಇಬ್ಬರು ಇಲ್ಲವೆ ಇದಕ್ಕಿಂತ ಹೆಚ್ಚು ಹುಡುಗಿಯರು ಸೇರಿ ಆಡುವ ಆಟ(ಕಲ.ಜಿ). A play of girls.

ಕುಪ್ಪಿಗೆ/ಕುಪ್ಪುಗೆ kuppige/kuppuge :

- ಚಿನ್ನ ಬೆಳ್ಳಿಯ ಆಭರಣ; ಹೆಂಗಸರು ಜಡೆ ಅಥವಾ ತುರುಬಿಗೆ ಧರಿಸುವರು; ಹಿಂದಲೆಗೆ ನೆತ್ತಿ ಮೇಲೆ ಬರುವಂತೆ ಧರಿಸುವರು; ಕುಪ್ಗೆ; ಚೌಲಿಕುಪ್ಗೆ(ಕೋ.ಜಿ); Gold or silver jewels that women wear to the edge of plait/que;
- ಕೊಳವೆ;
- ಬಾಣದ ತುದಿಯಲ್ಲಿ ಜೋಡಿಸುವ ಚೂಪಾದ ಮೊನೆಯುಳ್ಳ ಲೋಹದ ಹೊದಿಕೆ; ಮೊನೆಯಾದ ಅಲಗು;
- ಮುತ್ತು, ಹವಳ, ರುದ್ರಾಕ್ಷಿ ಹೀಗೆ ದುಂಡಾಗಿರುವ ರತ್ನಗಳಿಗೆ ಅರ್ಧ ಗೋಲಾಕಾರದಲ್ಲಿ ಚಿನ್ನದಿಂದ ಮಾಡಿದ ಮುಚ್ಚಳ; ಹೊದಿಕೆ; ಸಂಪುಟ;
- ಹೆಂಗಸರು ಕಿವಿಯಲ್ಲಿ ಧರಿಸುವ ಅರ್ಧಗೋಳಾಕಾರದ ಆಭರಣ; a crescent like ear-ring;
- ಮಾನವನ ದೇಹದ ಒಂದು ಅವಯವ; ಮೊಣಕಾಲಿನ ಮೇಲಿನ ಚಿಪ್ಪು; ಮಂಡಿಚಿಪ್ಪು;
- ಪಾತ್ರೆಯ ಬಾಯಿಗೆ ಹಾಕುವ ಮುಚ್ಚಳ; ಬಿರಡೆ.

ಕುಪ್ಪು kuppu :

- ಹಾರು; ನೆಗೆ; ಕುಣಿ; ಪ್ರ: 'ಕಪ್ಪೆಯಾಟದಲ್ಲಿ ಕುಪ್ಪುತ್ತಾ ಬರಬೇಕು'; To jump, to leap;
- ಬುಗುಟು; ಉಬ್ಬು; ಪ್ರ: 'ಗೋಡೆಗೆ ತಾಗಿ ಹಣೆ ಮೇಲೆ ಕುಪ್ಪು ಬಂತು';
- ಒಂದು ಬಗೆಯ ರೋಗ; ದೇಹದ ಮೇಲೆ ಗುಂಡಗೆ ವಿಕಾರವಾಗಿ ದೊಡ್ಡದಾಗಿ ಬೆಳೆದು ಕಾಣುವ ದುರ್ಮಾಂಸದ ಗೆಡ್ಡೆ;
- ಒಲೆಯ ಮೇಲೆ ಪಾತ್ರೆಗಳನ್ನು ಇಡಲು ಅನುಕೂಲವಾಗುವಂತೆ ತ್ರಿಕೋನಾಕಾರದಲ್ಲಿ ಇಡುವ ಮಣ್ಣಿನ ಬುಗುಟು; ಸಣ್ಣಸಣ್ಣ ಮಣ್ಣಿನ ಮುದ್ದೆ;
- ಕೊಪ್ಪು; ಕಿವಿಯ ಮೇಲ್ತುದಿಯಲ್ಲಿ ಧರಿಸುವ ಆಭರಣ;

ಕುಪ್ಪುಮರಾಯಿ kuppumarāyi :

ಆಹಾರ ಪದಾರ್ಥ ಶೇಖರಣೆಯ ಒಂದು ವಿಧ; ಬೇಯಿಸಿದ ಮಾವಿನಕಾಯಿ, ಹಲಸಿನ ತೊಳೆ, ಮೊದಲಾದವುಗಳನ್ನು ಮಳೆಗಾಲದಲ್ಲಿ

ಉಪಯೋಗಿಸಲು ದಾಸ್ತಾನು ಇಡುವುದಕ್ಕಾಗಿ ನೆಲದಲ್ಲಿ ಹೂತ ಪಾತ್ರೆ(ದ.ಕ). A method of preserving dishes like boiled mango pieces; boiled jack fruit chips.

ಕುಪ್ಪುಳು kuppuḷu :

ಸದಾ ಕುಪ್ಪಳಿಸುತ್ತಿರುವ ಒಂದು ಜಾತಿಯ ಪಕ್ಷಿ; ಸೂಕ್ಷ್ಮ ಸ್ವಭಾವದ್ದು, 'ಕುಕ್ಕು' ಎಂದು ಕೂಗುವ ಕೆಂಪು ಬಣ್ಣದ ಕೆಂಪು ಕಣ್ಣಿನ ಹಕ್ಕಿ; ಭಾರದ್ವಜ ಹಕ್ಕಿ; ಕೆಂಬೂತ; ಪ್ರ: 'ಅವನದ್ದು ಕುಪ್ಪುಳು ಕಿವಿ'. A kind of bird that always leaps from one place to another.

ಕುಪ್ಪೂರು kuppūru :

- ಮೈಸೂರು ತಾಲ್ಲೋಕಿನ ಕ್ರಿ.ಶ.೧೧೭೩ರ ೨೨೪ನೇ ಶಾಸನದಲ್ಲಿ ಈ ಊರಿನ ಉಲ್ಲೇಖವಿದೆ; A place mentioned in 224th inscription of Mysore taluk;
- ಕುಪ್ಪ/ಕುಪ್ಪೆ ಎಂದರೆ 'ಮಾಳ' ಎಂದರ್ಥ; ಮೈದಾನ ಪ್ರದೇಶದ ಊರು;
- ಭೌಗೋಳಿಕ ರಚನೆಯ ಹಿನ್ನೆಲೆಯಲ್ಲಿ ಈ ಸ್ಥಳನಾಮ ಬಂದಿರಬಹುದು;
- ಹೊಯ್ಸಳ ದೊರೆ ಇಮ್ಮಡಿ ಬಲ್ಲಾಳನ ಆಳ್ವಿಕೆಯಲ್ಲಿ ರಾಜರಾಜಪುರದ ಪ್ರಭುಗೌಡರು ಯರೆಯನ ಬಸದಿಗೆ ಭೂಮಿದಾನ ನೀಡಿದರು; ದಾನ ಪಡೆದ ಪ್ರತಿಗ್ರಹಿ ನಾಗಚಂದ್ರ ಪಂಡಿತ;
- ಈ ದಾನದಲ್ಲಿ ಕುಪ್ಪೂರಿನ ಸಮಸ್ತ ಸೀಮೆಯೂ ಸೇರಿತ್ತು.

(E.C- ೯, ಮೈ.ಜಿ.)

ಕುಪ್ಪೆ kuppe :

- ರಾಶಿ; ಗುಡ್ಡೆ; ಒಟ್ಟಲು; ಸಮೂಹ; ಗೊಪ್ಪೆ; ಪ್ರ: 'ಮರಳನ್ನೆಲ್ಲಾ ಒಂದೆಡೆ ಕುಪ್ಪೆ ಮಾಡು' (ದ.ಕ/ಕೋ.ಜಿ); Heap; group; heavy quantity;
- ಹೊಲಸು; ಕೊಳಕು; ತಿಪ್ಪೆ; ಪ್ರ: 'ಇದೇನು ಮನೆಯೋ ಇಲ್ಲ ಕಸದ ಕುಪ್ಪೆಯೋ'; untidy; filthy;
- ದಿಣ್ಣೆ; ತೆವರು;
- ಗೊರಬು; ಕೊಪ್ಪೆ; ಕುಂಚಿಗೆ; ಪ್ರ: 'ಮಳೆ ಬಂದೀತು ಕುಪ್ಪೆ ಹಾಕಿಕೊಂಡು ಗದ್ದೆಗೆ ಹೋಗು';
- ಹಸು, ಕರು(ಕೃ.ಗೊ. ಕ.ಕಾ)(ಬ.ಜಿ); cow; calf; ತ: ಕುಪ್ಪ, ಕುಪ್ಪೈ, ಮ: ಕುಪ್ಪ, ತೆ: ಕುಪ್ಪ.

ಕುಪ್ಪೆಗಾಲ kuppegāla :

- ಯಳಂದೂರು ತಾಲ್ಲೋಕಿನ ಕ್ರಿ.ಶ.೧೫೩೧ರ ೧೬೯ನೇ ಶಾಸನದಲ್ಲಿ 'ಕುಪ್ಪೆಗಾಲ'ದ ಪ್ರಸ್ತಾಪವಿದೆ; A place that mentioned in 169th inscription of Yalanduru Tq Chamarajanagar dist;
- 'ಕುಪ್ಪೆ' ಎಂದರೆ ಮಾಳ, ವಿಶಾಲ ಮೈದಾನ ಎಂದರ್ಥ; 'ಗಾಲ' ಎಂದರೆ ಹರಿಯುವುದು, ಪ್ರವಹಿಸುವುದು ಎಂದರ್ಥ; ವಿಶಾಲ ಮಾಳದಲ್ಲಿ ನದಿ/ತೊರೆ/ಹಳ್ಳ ಹರಿಯುವ ಹಿನ್ನೆಲೆಯಲ್ಲಿ ಈ ಸ್ಥಳನಾಮ ಬಂದಿರಬಹುದು;
- ವಿಜಯನಗರ ದೊರೆ ಅಚ್ಯುತರಾಯನ ಆಳ್ವಿಕೆಯ ಕಾಲದಲ್ಲಿ ಚಿಕ್ಕಸಿಂಗಣನಾಯಕ ಕೆಲವನ್ನು ಉಂಬಳಿ ನೀಡಿದನು; ಸಾಕ್ಷಿಯಾಗಿ ಕುಪ್ಪೆಗಾಲದ ಸಿಂಗಣಲೂರಗವುಡಗಳು ಉಪಸ್ಥಿತರಿದ್ದರು.

(E.C- ೪, ಮೈ.ಜಿ.)

ಕುಪ್ಪೆ ಪಂಜುರ್ಲಿ kuppe panjurli :

ಪಂಜುರ್ಲಿ ಭೂತದ ಒಂದು ಅವತಾರ; ತುಳುನಾಡಿನಲ್ಲಿ ಹೆಸರುವಾಸಿಯಾದ ಭೂತ; ಇದು ಕುಪ್ಪಳಿಸುತ್ತಾ ಆ ಕಡೆ ಈ ಕಡೆ ಅಡ್ಡಾಡುವುದರಿಂದ ಈ ಹೆಸರು ಬಂದಿದೆ(ದ.ಕ). A Bhuta- god worshiped by the people of Tulu Nadu; South kannada.

ಕುಪ್ಪೆಹಾಳು kuppehāḷu :

- ಕಡೂರು ತಾಲ್ಲೋಕಿನ 'ಕುಪ್ಪೆಹಾಳು' ಪ್ರದೇಶದಲ್ಲಿ ಕ್ರಿ.ಶ.೧೧೭೭ರ ೪೮ನೇ ಶಾಸನದಲ್ಲಿ (ಹೊಯ್ಸಳ ವೀರಬಲ್ಲಾಳನ ಕಾಲದ) 'ಕುಪ್ಪೆಹಾಳು' ಎಂಬ ಪ್ರದೇಶದ ಉಲ್ಲೇಖವಿದೆ; A village that mentioned in 48th inscription Of Kaduru Taluk;
- 'ಕುಪ್ಪೆಹಾಳು' ಎಂಬುದು ಭೌಗೋಳಿಕ ವಾಚಿ ಸ್ಥಳನಾಮವಾಗಿದ್ದು, 'ಕುಪ್ಪೆ' ಎಂದರೆ

ದಿಣ್ಣೆ/ಎತ್ತರವಾದ ಎಂಬರ್ಥವಿದೆ; ಹಾಗೆಯೇ 'ಹಾಳ' ಎಂದರೆ ಪ್ರದೇಶ ಎಂಬರ್ಥವಿದೆ;

- ಹಾಗಾಗಿ ಎತ್ತರವಾದ ಸ್ಥಳ ಎಂದು ಅರ್ಥ ನಿಷ್ಪತ್ತಿ ಮಾಡಬಹುದು;
- ಈ ಸ್ಥಳನಾಮವು ಸುಮಾರು ೮೫೦ ವರ್ಷಗಳಿಂದಲೂ ತನ್ನ ಹೆಸರನ್ನು ಹಾಗೆಯೇ ಉಳಿಸಿಕೊಂಡು ಬಂದಿದೆ.

(E.C- ೧೨)

- ಚನ್ನರಾಯಪಟ್ಟಣದ ಕ್ರಿ.ಶ.೧೫೯೯ರ ೨೧ನೇ ತಾಮ್ರಶಾಸನದಲ್ಲಿ 'ಕುಪ್ಪೆಗ್ರಾಮ'ವೊಂದರ ಉಲ್ಲೇಖವಿದೆ;
- 'ಕುಪ್ಪೆ' ಎಂದರೆ ರಾಶಿ, ದಿಣ್ಣೆ ಮುಂತಾದ ಅರ್ಥವನ್ನು ಹೊಂದಿದ್ದು, ಎತ್ತರವಾದ ಭೌಗೋಳಿಕ ಆಧಾರದ ಮೇಲೆ 'ಕುಪ್ಪೆ' ಗ್ರಾಮದ ಹೆಸರು ನಿಷ್ಪನ್ನವಾಗಿರುವಂತೆ ಕಾಣುತ್ತದೆ.

(E.C- ೧೦, ಹಾ.ಜಿ.)

ಕುಬಳ್/ಕುಬಾಲ್/ಕುಬಾಳು kubaḷ/kubāl/kubāḷu :

- ಛಾವಣಿಯ ಮೇಲ್ಭಾಗ; ತುದಿ; ಶಿಖರ(ದ.ಕ). Top of the roof; cliff- point of house roof.

ಕುಬುಟ ಬೇರು/ಕುಣಿ ಬೇರು kubuṭaberu/kuṇiberu :

ಭೂಮಿಯೊಳಗೆ ಇಳಿದಿರುವ ತುದಿಬೇರು; ಮೂಲಬೇರು; ತಾಯಿಬೇರು; ಇದೇ ಸಸ್ಯದ ಜೀವಾಳವಾಗಿದ್ದು ಇದರ ಸುತ್ತಲೂ ಸಣ್ಣ ಬೇರುಗಳು ಬೆಳೆದಿರುತ್ತವೆ(ಬ.ಜಿ). deep root strips of a plant.

ಕುಬೆ kube :

ಕವಲು ಕೊಂಬೆಗಳಿಲ್ಲದ ಅಡಕೆ, ತೆಂಗು, ತಾಳೆ ಜಾತಿಯ ಮರದ ತುದಿ; ನೇರವಾಗಿ ಒಂದೇ ಕಂಬದಂತೆ ಬೆಳೆಯುವ ಮರದ ಸುಳಿ ಭಾಗ(ದ.ಕ). A branchless tree like coconut, Palm trees.

ಕುಬೇರ kubēra :

- ಐಶ್ವರ್ಯದ ದೇವತೆ; ಯಕ್ಷರಾಜ; ಭೂಮಿ ಒಳಗಿನ ನಿಧಿಗಳ ಒಡೆಯ; ಅಷ್ಟದಿಕ್ಪಾಲಕರಲ್ಲಿ ಒಬ್ಬ; God of richness;
- ಉತ್ತರದಿಕ್ಕಿನ ಅಧಿಪತಿ; ಧನಪತಿ; ಕುಬೇರ ಮತ್ತು ಈತನ ಅನುಯಾಯಿಗಳು ಫಲವಂತಿಕೆ ಮತ್ತು ಸಮೃದ್ಧಿಯ ಶಕ್ತಿಗಳು ಅಥವಾ ರಕ್ಷಕರು;
- ದುಷ್ಟರ ಶರೀರದಲ್ಲಿಯೂ ವಾಸ ಮಾಡುವವನು; ವಿಷ್ಣು;
- ಒಂದು ಬಗೆಯ ಧೂಪ;
- ಧನಿಕ; ಶ್ರೀಮಂತ; ಹಣವಂತ; the rich;
- *—ಕುಬೇರನ ಮೂಲೆ* : ಈಶಾನ್ಯ ಭಾಗದ ಮೂಲೆ; ಮನೆಯಲ್ಲಿ ಸಂಪತ್ತು ಇಡುವ ಭಾಗ; ಇಲ್ಲಿ ಮನೆ ಯಜಮಾನ ತನ್ನ ವ್ಯವಹಾರದ ಕಾರ್ಯ ನಿರ್ವಹಿಸುವುದರೊಂದಿಗೆ ಸಂಪತ್ತು ಇಡುವುದರಿಂದ ಐಶ್ವರ್ಯ ಹೆಚ್ಚುತ್ತದೆಂಬ ನಂಬಿಕೆ; North Eastern corner of a house;
- *—ಕುಬೇರ ರಂಗೋಲಿ* : ರಂಗೋಲಿಯ ಒಂದು ಬಗೆ; ಇದನ್ನು ಶುಕ್ರವಾರ ಮನೆ ಮುಂದೆ ಅಥವಾ ದೇವರ ಕೋಣೆಯಲ್ಲಿ ಬಿಡಿಸುವುದರಿಂದ ಐಶ್ವರ್ಯ ಹೆಚ್ಚುತ್ತದೆಂಬ ನಂಬಿಕೆ. A kind of drawing; drawn in stone powder in front of homes.

ಕುಬೇರ ಮರ kubēra mara :

Swietenia mahagoni(Meliaceae) : ೧೮ನೇ ಶತಮಾನದ ಕೊನೆಭಾಗದಲ್ಲಿ ಭಾರತಕ್ಕೆ ವೆಸ್ಟ್ ಇಂಡೀಸ್‌ನಿಂದ ಬಂದ ಮರ; ಇದು ಗೃಹೋಪಯೋಗಿ ಸಾಮಾನು ತಯಾರಿಕೆಯಲ್ಲಿ ಬಳಕೆ; ಹಿರಿಬೇವು. A tree; That has been brought from West Indies during 18th century. it is used to make up of furniture.

ಕುಬ್ಬ ಹಸಿ kubbahasi :

ಮಳೆಯಿಂದ ತೃಪ್ತಿಯಾಗುವಷ್ಟು ನೆನೆದು ಹಸಿಯಾದ ಭೂಮಿ. A wet land due to heavy rain.

ಕುಬ್ಸ/ಕುನಿ kubsa/kuni :

ರಾಗಿ, ಜೋಳದ ಕಾಳಿನ ಮೇಲಿನ ಮುಸುಕು; ಗುನಿ; ಕುಪ್ಪಸ; ಹೊರಕವಚ; ಗುಂಗು; ರಾಗಿಯ ಹೊಟ್ಟು, (ಚಾ.ಶಿ/ತು/ಜಿ). Bran or husk of millet or corns.

ಕುಮಕ/ಕುಮಕು kumaka/kumaku :

ಗರ್ವ; ಸಹಾಯ; ಬೆಂಬಲ; *ಪ್ರ:* 'ರಣರಂಗ ಮಾಡುವಂಥ ಸುಭಟರ ಪ್ರಬಲಾ ಶ್ರೀರಂಗನ ಕುಮಕ ಅಷ್ಟೊರಿಗೆಲ್ಲಾ'(ಗೀಗೀ ಪದ). Support; help; pride; arrogance.

ಕುಮಟಿ kumaṭi :

- ಅಕ್ಕಸಾಲಿಗರು ಚಿನ್ನ ಕರಗಿಸಲು ಬಳಸುವ ಒಲೆಯಂತಹ ಸಾಧನ; ಅಗ್ಗಿಷ್ಟಿಕೆ; A device like oven to melt gold by goldsmith;
- ಇದು ಇವರಿಗೆ ದೈವ ಸ್ವರೂಪಿ; ಮಣ್ಣಿನಿಂದ ಇಲ್ಲವೆ ತಾಮ್ರದಿಂದ ಇದನ್ನು ಸಿದ್ಧಪಡಿಸುವರು; It is made up of copper or clay;
- ಒಳಭಾಗದಲ್ಲಿ ಭತ್ತದ ಹೊಟ್ಟನ್ನು ಅದರ ಮೇಲೆ ಇದ್ದಿಲನ್ನು ಹಾಕಿ ಅಗ್ನಿ ಸಿದ್ಧಪಡಿಸುವರು; (ಬೆಂ.ಗ್ರಾ.ಜಿ);
- ಭೂಮಿಯನ್ನು ಹದ ಮಾಡಲು ಬಳಸುವ ಸಾಧನ. A tool for cultivating land.

ಕುಮರಪ್ಪೆರುವಣಿನಗರ

kumarapperuvaṇinagara :

- ಕೊಳ್ಳೇಗಾಲ ತಾಲ್ಲೋಕಿನ ಕ್ರಿ.ಶ.೧೨೩೭ರ ೯೩ನೇ ಶಾಸನದಲ್ಲಿ ಇದರ ಪ್ರಸ್ತಾಪವಿದೆ; a village that has been mention in 93rd inscription of Kollegala Taluk;
- ಇದು ವ್ಯಕ್ತಿವಾಚಿ ಸ್ಥಳನಾಮವಾಗಿದೆ; ತಿರುನಾಡ ಉಡೈಯನ್‌ನ ಅಧಿಕಾರಿಯಾದ 'ಕುಮರಪ್ಪೆರುವಣಿಗನ್' ಎಂಬ ವ್ಯಕ್ತಿಯಿಂದ ಈ ಊರಿಗೆ ಈ ಹೆಸರು ಬಂದಿರಬಹುದು;
- ತಿರುವಿಡೆಯೊಟ್ಟಿದ ದೇಶೀಪ್ಪೆರುಮಾಳು ದೇವರಿಗೆ ಹೊಯ್ಸಳ ದೊರೆ ಸೋಮೇಶ್ವರನ ಆಳ್ವಿಕೆಯ ಕಾಲದಲ್ಲಿ, ಅತನ ಅಧಿಕಾರಿ ಕೆಲವು ದತ್ತಿ ನೀಡಿದ್ದರ ಉಲ್ಲೇಖವಿದೆ; ಸಾಕ್ಷಿಯಾಗಿ ಕುಮರಪ್ಪೆರುವಣಿನಗರದ ಪೆರಿಯ ಕೋಯಿಲ್‌ದಾಸ(ನ್) ಹಾಜರಿದ್ದನು.

(E.C- ೪, ಮೈ.ಜಿ.)

ಕುಮರಿ/ಕುಂಬ್ರಿ kumari/kumbri :

- ಕಾಡನ್ನು ಕಡಿದು ಸಾಗುವಳಿ ಮಾಡಿದ ಪ್ರದೇಶ; A kind of agriculture by cutting forest regularly; a shifting cultivation of tribes;
- ***—ಕುಮರಿ ಬೇಸಾಯ*** : ಅಲೆಮಾರಿ ಸಮುದಾಯದವರಲ್ಲಿ ರೂಢಿಯಲ್ಲಿರುವ ವಿಶಿಷ್ಟ ಬೇಸಾಯಪದ್ಧತಿ;
- ದಟ್ಟವಾದ ಅರಣ್ಯದಲ್ಲಿ ಬೆಳೆದಿರುವ ಗಿಡ, ಮರ, ಬಳ್ಳಿ, ಪೊದೆ, ಕುರುಚಲು ಸಸ್ಯಗಳನ್ನು ಕಡಿದು ಒಂದೆಡೆ ರಾಶಿ ಹಾಕಿ ಬೆಂಕಿಯಿಂದ ಸುಟ್ಟು ಶುಚಿಗೊಳಿಸುವರು;
- ನಂತರ ಉಳುಮೆ ಮಾಡಿ ಸಮತಟ್ಟು ಭೂಪ್ರದೇಶವಾಗಿ ಮಾರ್ಪಡಿಸಿ ಹದವಾದ ಮಳೆಗೆ ಬಿತ್ತನೆ ಮಾಡಿ ಬೆಳೆ ಬೆಳೆಯುವ ವಿಧಾನವೇ ಕುಮರಿ ಬೇಸಾಯ;
- ಹೊಸ ಭೂಭಾಗ ಹೆಚ್ಚು ಫಲವತ್ತತೆಯಿಂದ ಕೂಡಿರುತ್ತದೆಂದು ಇದರಿಂದ ಉತ್ತಮ ಫಸಲು ದೊರೆಯುತ್ತದೆಂಬ ನಂಬಿಕೆ;
- ಈ ರೀತಿ ಹದ ಮಾಡಿದ ಭೂಮಿಯಲ್ಲಿ ಐದು ವರ್ಷ ಬೇಸಾಯ ಮಾಡುವರು;
- ನಂತರ ಮಣ್ಣು ತನ್ನ ಫಲವತ್ತತೆ ಕಳೆದುಕೊಳ್ಳುತ್ತದೆಂದು ಮತ್ತೆ ಹೊಸ ಅರಣ್ಯ ಪ್ರದೇಶಕ್ಕೆ ವಲಸೆ ಹೋಗಿ ಅಲ್ಲಿಯೂ ಇದೇ ರೀತಿಯ ವಿಧಾನ ಅನುಸರಿಸಿ ಬೇಸಾಯ ಮಾಡುತ್ತಾರೆ;
- ಹೀಗೆ ಕುಮರಿ ಬೇಸಾಯ ಮತ್ತು ಸ್ಥಳಾಂತರ ಬೇಸಾಯ ಪದ್ಧತಿ ಆದಿವಾಸಿಗಳಲ್ಲಿ ಜಾರಿಯಲ್ಲಿರುವುದು; ಇದು ಸಹಜ ಕೃಷಿ ಪದ್ಧತಿ;
- ಒತ್ತುವರಿ(ಬ.ಜಿ);
- ***—ಕುಮರಿ ಹೊಲ*** : ಕುಮ್ಮರಿ ಹೊಲ; ಕಾಡನ್ನು ಜಮೀನನ್ನಾಗಿ ಪರಿವರ್ತಿಸಿ ಸಾಗುವಳಿ ಮಾಡುವ ಭೂಮಿ; A farm of shifted cultivation in hilly areas by the tribes;

- *—ಕುಂಬ್ರಿ/ಕುಮರಿ* : ದನಕರುಗಳು ಮೇಯುವ ವಿಶಾಲವಾದ ಬೆಟ್ಟ ಗುಡ್ಡದ ಜಾಗ; ಗೋಮಾಳ; Cattle grazing government land;
- *—ಕುಂಬ್ರಿ ಕುಂಬರಿ* : ರಾಗಿ ಬೇಸಾಯಕ್ಕಾಗಿ ನಿರ್ಮಿಸಿದ ಅರಣ್ಯ ಹದಗೊಳಿಸಿದ ಭೂಮಿ; A farming land that is prepared and cultivated for growing millet only;
- *—ಕುಂಬ್ರಿ ಗೌಡಲು* : ಅರಣ್ಯ ಸುತ್ತಲೂ ಇರುವ ಜಾಗವನ್ನು ಶುಚಿಗೊಳಿಸಿ ಬೇಸಾಯ ಮಾಡುವ ಹಾಲಕ್ಕಿ ಒಕ್ಕಲಿಗರ ಗೌಡಲು ಸಮುದಾಯ; A Halakki Gowda community who cleaned and cultivated Kumbri land for farming;
- *—ಕುಂಬ್ರಿ ಬತ್ತ* : ವಲಸೆ ಬೇಸಾಯದ ಪದ್ಧತಿಯಲ್ಲಿ ಬೆಳೆಯುವ ಬತ್ತದ ಬೆಳೆ; A kind of paddy grows in shifted cultivation.

ಕುಮರಿಸು kumarisu :

ಅಲಸಂದಿ, ಹುರುಳಿ, ಹೆಸರುಕಾಳುಗಳನ್ನು ಹುರಿದು ಸ್ವಲ್ಪವೇ ನೀರು ಉಪ್ಪು ಹಾಕಿ ಒಂದು ಸಲ ಉಕ್ಕಿಸಿ ನೀರು ಬಸಿದು ಅರೆಬೆಂದ ಕಾಳನ್ನು ಕುರುಕಲು ತಿಂಡಿಯಂತೆ ಮಳೆ ಬೀಳುವಾಗ, ಚಳಿ ಇದ್ದಾಗ ತಿನ್ನುವರು(ಚಾ.ಜಿ) *ವ್ಯದೂ:* ಬೆಂಗಳೆತ್ತು. A snack that to be prepared by boiling and drying beans, buck wheat, horse gram and pea grain etc.

ಕುಮಲು kumalu :

- ಚಿಗುರು; ಕೊನರು; *ಪ್ರ:* 'ಹೂವಿನ ಗಿಡ ಕುಮಲಿದೆ'; To sprout;
- ಅಶಾಂತಿ; ಸಂಕಟ; ಉರಿ; *ಪ್ರ:* 'ಈ ಸುದ್ದಿ ಕೇಳಿ ನನ್ನ ಹೊಟ್ಟೆಯೊಳಗ ಕುಮಲು ಎದ್ದಿದೆ'(ಚಿ.ಪ.ಕೋ);
- ಬಾಡು; ಕಮರು. sear; become pale.

ಕುಮಾರ kumāra :

- ತುಳುನಾಡಿನ ಸಿರಿ ಪಾಡ್ದನದಲ್ಲಿ ಬರುವ ಒಂದು ಪಾತ್ರ; ಸಾಂಸ್ಕೃತಿಕ ವೀರವನಿತೆಯೆಂದು ಹೆಸರು ಪಡೆದ 'ಸಿರಿ' ಯ ಮಗ; A son of siri in Tulu Oral Epic; Siri- a character in that epic;
- ಸಿರಿ ಜಾತ್ರೆಯಲ್ಲಿ ಪಾತ್ರಿಯ ಮೈಮೇಲೆ ಈ ದೈವದ ಆಹ್ವಾನವಾಗಿ ಸಿರಿಗಳು ಮೈಮೇಲೆ ಆವಾಹನೆಗೊಂಡು ಮಹಿಳೆಯರಿಗೆ ಸಮಸ್ಯೆಗೆ ಪರಿಹಾರ ಹೇಳುತ್ತವೆ(ದ.ಕ);
- ಸುಬ್ರಮಣ್ಯ ದೇವರ ಇನ್ನೊಂದು ಹೆಸರು; The another name of Lord Subramya.
- *—ಕುಮಾರವೇಷ* : ಯಕ್ಷಗಾನದಲ್ಲಿ ಬಾಲಕನ ವೇಷ; A child character of Yakshagana;
- *—ಕುಮಾರ ದೇವರು* : ಮಲೆನಾಡಿನ ಸುಗ್ಗಿ ಹಬ್ಬದಲ್ಲಿ ಪೂಜೆಗೊಳ್ಳುವ ದೇವರು(ಹಾಸ.ಜಿ). A god worshiped during harvest in malenadu.

ಕುಮಾರನಬೀಡು kumāranabīḍu :

- ಗುಂಡ್ಲುಪೇಟೆ ತಾಲ್ಲೋಕಿನ ಕ್ರಿ.ಶ.೧೧೭೧ರ ೪ನೇ ಶಾಸನದಲ್ಲಿ ಇದರ ಉಲ್ಲೇಖ; A place that mentioned in 4th inscription of Gundlupete taluk;
- ಕುಮಾರ(ನ) + ಬೀಡು > ಕುಮಾರಬೀಡು/ ಕುಮಾರನಬೀಡು; A place after a person- Kumara;
- ವ್ಯಕ್ತಿಯ ಹಿನ್ನೆಲೆಯಲ್ಲಿ ಬಂದ ಸ್ಥಳನಾಮ;
- 'ಕುಮಾರ' ಎಂಬ ವ್ಯಕ್ತಿ ನೆಲೆಸಿದ್ದರ ನೆಲೆಯಾಗಿರಬಹುದು;
- ಹೊಯ್ಸಳರ ಕಾಲದಲ್ಲಿ ಈ ಊರನ್ನು ದಣ್ಣಾನಾಯಕರು ಆಳಿದ ಉಲ್ಲೇಖವಿದೆ;
- ಮೊದಲನೆಯ ನಾರಸಿಂಹನ ಆಳ್ವಿಕೆಯಲ್ಲಿ ಆತನ ಅಧಿಕಾರಿ ಹೆಗ್ಗಡೆ ಕಲ್ಲಯ್ಯನು ಕುಮಾರ(ನ)ಬೀಡಿನ ಶೀತಳವಾರಿಯ ಶ್ರೀರಾಮನಾಥ ದೇವರಿಗೆ ಪೂಜಾ ನೈವೇದ್ಯಕ್ಕೆ ದತ್ತಿಬಿಟ್ಟ ಉಲ್ಲೇಖವಿದೆ.

(E.C- ೩, ಮೈ.ಜಿ.)

ಕುಮಾರನಹಳ್ಳಿ kumāranahaḷḷi :

- ಕ್ರಿ.ಶ.೧೨೨೧ರ ೪೬೩ನೇ ಶಾಸನದಲ್ಲಿ ಕುಮಾರನಹಳ್ಳಿಯ ಉಲ್ಲೇಖವಿದೆ; 'ಹಳ್ಳಿಯಗ್ರಹಾರ' ಎಂದೂ ಕರೆಯುವುದಿದೆ; A brahamin village that has been referred in 463rd inscription of 1221AD;
- ಇದೊಂದು ವ್ಯಕ್ತಿವಾಚಿ ಸ್ಥಳನಾಮ;

- 'ಕುಮಾರ' ಎಂಬ ವ್ಯಕ್ತಿ ಊರನ್ನು ಕಟ್ಟಿದ್ದರಿಂದಲೊ ಅಥವಾ ಊರಿನ ಮುಖಂಡನಾಗಿದ್ದರಿಂದಲೊ 'ಕುಮಾರನಹಳ್ಳಿ' ಎಂಬ ಹೆಸರು ಬಂದಿರಬಹುದು.

(E.C- ೯)

- ಕ್ರಿ.ಶ.೧೩೯೦ರ ೭೫ನೇ ಶಾಸನದಲ್ಲಿ ಈ ಊರಿನ ಉಲ್ಲೇಖವಿದ್ದು, ವಿಜಯನಗರದ ಇಮ್ಮಡಿಹರಿಹರನ ದಂಡನಾಯಕ ಗುಂಡಪ್ಪ ಎಂಬುವವರು ಕುಮಾರನಹಳ್ಳಿಗೆ 'ಭೀಮಾಪುರ'ವೆಂದು ಮರುನಾಮಕರಣ ಮಾಡಿ ಪಾರ್ಶ್ವನಾಥನಿಗೆ ದಾನಕೊಟ್ಟ ವಿಚಾರವಿದೆ.

(E.C- ೧)

- ಅರಸೀಕೆರೆ ತಾಲ್ಲೋಕು ಹಿರಿಯೂರು ಪ್ರದೇಶದಲ್ಲಿ ದೊರೆತಿರುವ ಕ್ರಿ.ಶ.೧೧೮೧ರ ಹೊಯ್ಸಳ ಮುಮ್ಮಡಿ ನರಸಿಂಹನ ಕಾಲಕ್ಕೆ ಸೇರಿದ ೩೧೮ನೇ ಶಾಸನದಲ್ಲಿ ಕುಮಾರಹಳ್ಳಿಯ ಉಲ್ಲೇಖವಿದೆ;
- ಈ ಶಾಸನದಲ್ಲಿ ಕುಮಾರ, ಕುಮಾರದೇವ, ಕುಮಾರಪಂಡಿತಯ್ಯ, ಕುಮಾರವ್ರತಿ ಮುಂತಾಗಿ ಕೀರ್ತಿತನಾಗಿರುವ ವ್ಯಕ್ತಿಯ ಹೆಸರಿನಿಂದ ಈ ಊರಿಗೆ ಹೆಸರು ಬಂದಿರಬಹುದು.
- ಇದೇ ಶಾಸನದಲ್ಲಿ 'ಕುಮಾರನ ಹೆಬ್ಬೊಳಲು' ಎಂಬ ಉಲ್ಲೇಖವೂ ಇದೆ; ಇದರಿಂದ ಈ ಹಳ್ಳಿ ಒಂದು ದೊಡ್ಡ ಪಟ್ಟಣ ಎಂದು ಅರ್ಥವಾಗುತ್ತದೆ.

(E.C- ೧೦, ಹಾ.ಜಿ.)

ಕುಮಾರರಾಮ kumārarāma :

- ಕನ್ನಡ ನಾಡಿನ ಒಬ್ಬ 'ಜನಪದ ವೀರ' `folk hero'; ಇತಿಹಾಸದ ವೀರ ಕೂಡ; ಕುಮಾರರಾಮ, ಚೆನ್ನಿಗರಾಮ, ರಾಮನಾಥ ಎಂದೆಲ್ಲ ಕನ್ನಡಿಗರಿಗೆ ಪರಿಚಿತನಾದವನು; ಕನ್ನಡಿಗರ ಮನಸ್ಸಿನಲ್ಲಿ, ಮನೆಮಾತಾಗಿ ಬೆಳೆದವನು; One of the famous folk hero of Kannada Naadu- region;
- ಪರಾಕ್ರಮ ಮತ್ತು ಪರಿಶುದ್ಧ ವ್ಯಕ್ತಿತ್ವದ ವ್ಯಕ್ತಿ; 'ಪರನಾರೀ ಸೋದರ' ಎಂದೇ ಅವನ ಖ್ಯಾತಿ; 'ಮೌಖಿಕ ಇತಿಹಾಸ'(oral history) ಮಾತ್ರ ಅವನ ಬಗ್ಗೆ ಇದೆ; ಒಂದೆರಡು ಶಾಸನಗಳೂ ದೊರೆತಿದ್ದರೂ, ಕಂಪಿಲರಾಯ –ರಾಮನಾಥ ಹೆಸರುಗಳಲ್ಲದೆ ಬೇರೆ ಯಾವುದೇ ವಿಚಾರಗಳು ಲಭ್ಯವಾಗುವುದಿಲ್ಲ; ಕರ್ನಾಟಕ ಇತಿಹಾಸದಲ್ಲಾಗಲಿ, ದಕ್ಷಿಣಭಾರತದ ಇತಿಹಾಸದಲ್ಲಾಗಲಿ ಅವನಿಗೆ ಸಲ್ಲಬೇಕಾದ ಮನ್ನಣೆ/ಅಸ್ಮಿತೆ ಸಿಕ್ಕಲಿಲ್ಲವೆಂದೇ ಹೇಳಬೇಕು; He is an historical personality; he has the names of Chenniga Rama- Ramanatha, `Paranari sodara';
- ಚೆನ್ನಿಗರಾಮನ ಬಗ್ಗೆ ಜನಪದ ಕಾವ್ಯಗಳು ದೊರೆಯುತ್ತವೆ; ನಂಜುಂಡ ಕವಿ 'ರಾಮನಾಥ ಚರಿತೆ' ಎಂಬ ಚಾರಿತ್ರಿಕ ಕಾವ್ಯವನ್ನು ರಚಿಸಿ ಅವನನ್ನು ಇತಿಹಾಸದಲ್ಲಿ ಉಳಿಸಲು ಪ್ರಯತ್ನಿಸಿದ; ಕಥೆಪುರಾಣಗಳು ಹುಟ್ಟಿಕೊಂಡು ಅವನನ್ನು ಒಬ್ಬ ವೀರನನ್ನಾಗಿ ಬೆಳೆಸುವುದರಲ್ಲಿ ಕಾರಣವಾಗಿವೆ; ವೀರ ಇತಿಹಾಸದಲ್ಲಿ ಅವನೊಬ್ಬ ವೀರ, ಆರಾಧ್ಯದೈವ ಕೂಡ;
- 'ಕಂಪಿಲಿ' ಎಂಬುದು ರಾಜ್ಯ; ಕಂಪಿಲರಾಯ ಎಂಬುವನು ರಾಜ, ಅವನ ಹೆಂಡತಿ ಹರಿಹಲದೇವಿ; ಇವರ ಮಗನೇ ಕುಮಾರರಾಮ; ಜಟ್ಟಂಗಿ ರಾಮೇಶ್ವರ ದೇವರ ವರಪ್ರಸಾದದಿಂದ ಹುಟ್ಟಿದವನು 'ಕುಮಾರರಾಮ' ಎಂಬುದು ಪ್ರತೀತಿ; ಜಟ್ಟಂಗಿ ರಾಮೇಶ್ವರನ ಕಾರಣದಿಂದಾಗಿಯೇ ಅವನಿಗೆ 'ಕುಮಾರರಾಮ' ಎಂಬ ಹೆಸರು ಬಂದಿರಬಹುದು? He is the son of Kampilaraya And Harihala Devi Of Kampila State; It was situated near Hampi Hill Ranges;
- ಹೊಯ್ಸಳ ಸಾಮ್ರಾಜ್ಯ ಮತ್ತು ವಿಜಯನಗರ ಸಾಮ್ರಾಜ್ಯಗಳ ನಡುವಣ ಅವಧಿಯಲ್ಲಿ ಕಂಪಿಲರಾಯ ಮತ್ತು ಕುಮಾರರಾಮ ಆಳಿದ ವಿಚಾರಗಳು ತಿಳಿದು ಬರುತ್ತವೆ; ಇದಕ್ಕೆ ಸ್ಪಷ್ಟ ಇತಿಹಾಸ ಆಧಾರಗಳು ಸಿಕ್ಕುವುದಿಲ್ಲ; ವಿಜಯನಗರ ಸಾಮ್ರಾಜ್ಯದ ಸ್ಥಾಪಕರಾದ ಹಕ್ಕಬುಕ್ಕರು ಕುಮಾರರಾಮನ ಸೈನ್ಯದಲ್ಲಿದ್ದುದನ್ನು ನಂಜಂಡನ ಕಾವ್ಯ ಹೇಳುತ್ತದೆ; ವೀರ ಬಲ್ಲಾಳನೊಡನೆ ಕುಮಾರರಾಮ ಕಾದಿದ ಉಲ್ಲೇಖ ಅದೇ ಕಾವ್ಯದಲ್ಲಿ ಬಂದಿದ್ದು, ಇಲ್ಲಿನ ವೀರ ಬಲ್ಲಾಳ ಮುಮ್ಮಡಿ ವೀರಬಲ್ಲಾಳನೆಂಬುದು ಸ್ಪಷ್ಟವಾಗುವುದು; He ruled during the space of post Hoysalas and pre Vijayanagara Kingdom;
- ಕುಮಾರರಾಮ–ರತ್ನಾಜಿ ಪ್ರಸಂಗವಾಗಲಿ, ಕುಮಾರರಾಮ–ದೆಹಲಿ ಸುಲ್ತಾನನ ಮಗಳ

ಪ್ರಸಂಗವಾಗಲಿ ಕಟ್ಟು ಕಥೆಗಳೆಂದು ತೋರುತ್ತದೆ; ಕುಮಾರರಾಮನ 'ಪರನಾರೀ ಸೋದರ' ಗುಣವನ್ನು ಸಾರಲು ರತ್ನಾಜಿಯ ಪ್ರಸಂಗವನ್ನು ಯಾರೊ ಎಳೆದು ತಂದು ಸೇರಿಸಿರಬಹುದು; ಇನ್ನು ದೆಹಲಿ ಸುಲ್ತಾನನ ಮಗಳ ವಿಷಯ ರಾಜಕೀಯ ಲಾಭದ ಇನ್ನೊಂದು ಮುಖವೆಂದು ತೋರುತ್ತದೆ; ಆದರೆ ಕುಮಾರರಾಮನ ಮೇಲೆ ದೆಹಲಿ ಸುಲ್ತಾನನ ಸೈನ್ಯ ದಂಡೆತ್ತಿ ಬಂದುದಾಗಲಿ, ಮೂರು ಬಾರಿ ಅಂತಹ ಪ್ರಯತ್ನ ನಡೆದು, ಮೂರನೆಯ ಬಾರಿ ಕುಮಾರರಾಮ ಸೋತ ವಿಷಯವಾಗಲಿ ನಿಜವಿರಬೇಕೆಂದು ಭಾಸವಾಗುತ್ತದೆ; ಇದನ್ನು ಸಮರ್ಥಿಸುವ ಯಾವ ನೇರ ಆಧಾರವೂ ಸಿಕ್ಕದಿರುವುದು ಒಂದು ದೊಡ್ಡ ಕೊರತೆ; ಜನಪದ ಕಾವ್ಯಗಳ ಆಧಾರಗಳನ್ನೆ ನಂಬಬೇಕಾಗುತ್ತದೆ;

- ಕುಮಾರರಾಮನ ಸಾವು, ಅಂತ್ಯದಲ್ಲಿ ಸೇನಾನಿಗಳು ನಡೆಸಿಕೊಂಡ ರೀತಿ, ಮೂವರು ಸೇನಾನಿಗಳ ನಿಜವಾದ ವಿಚಾರ – ಇವೆಲ್ಲವನ್ನೂ ನೋಡಬೇಕಾದರೆ ಇಬ್ನಬಟೂಟನ ಪ್ರವಾಸಿ ವರದಿಗೇ ಹೋಗಬೇಕಾಗುತ್ತದೆ; ಕುಮಾರರಾಮನ ಬಗ್ಗೆ ಸಿಕ್ಕುವ ಏಕೈಕ ಐತಿಹಾಸಿಕ ಆಧಾರವಿದು; ಇದರ ಪ್ರಕಾರ ಕಾವ್ಯದಲ್ಲಿ ಉಲ್ಲೇಖಿತ ಮಾತಂಗಿ ಪಾತ್ರ, ಕುಮಾರರಾಮ ಅವಳಿಗೆ ಸೋತ ವಿಚಾರ ನಿಜದಲ್ಲಿ ಚರಿತ್ರೆಯಲ್ಲ; ಮಾತಂಗಿಗೆ ಬದಲಾಗಿ ಬಂದ ದೆಹಲಿ ಸುಲ್ತಾನನ ಸೇನಾನಿಯ ಹೆಸರು ಬಟೂಟನ ವರದಿಯಲ್ಲಿದೆ; ಆದರೆ ಒಂದು ಮಾತ್ರ ನಿಜ, ಅಂತಿಮವಾಗಿ ಕುಮಾರರಾಮನ ಸಾವಿಗೆ ಸ್ಥಳೀಯ ವೀರರ ಸಹಾಯ ಸುಲ್ತಾನನ ಸೇನಾನಿಗಳಿಗೆ ದೊರೆತಿರಬಹುದು ಎಂಬ ಸತ್ಯ; Ibnabatoot- a foreign traveler recorded his ending days; It is only historical record of Kumara Rama;
- ಕುಮಾರರಾಮನ 'ಕುಮ್ಮಟದುರ್ಗ'ದ ಇತಿಹಾಸ ಸಂಶೋಧನೆಗೆ ಒಳ್ಳೆಯ ಅವಕಾಶವನ್ನು ನೀಡುತ್ತದೆ; ಶೋಧಿಸುವವರಿಗೆ ಸವಾಲುಗಳೂ ಇರುತ್ತವೆ; ಹೀಗೆ ಮಾಡುವಾಗ ಜನಪದ ಕಾವ್ಯಗಳನ್ನೂ ದುಂದುಮೆ ಪದಗಳನ್ನೂ ಬಳಸಿಕೊಳ್ಳುವುದು ಅನಿವಾರ್ಯವೇ ಸರಿ; ಕುಮಾರರಾಮನ ಚರಿತ್ರೆಯನ್ನು ಈ ಮೂಲಕ ಕಟ್ಟಿಕೊಳ್ಳಬೇಕಾಗುತ್ತದೆ;
- ಚೆನ್ನಿಗರಾಮ ಒಬ್ಬ ಸಾಂಸ್ಕೃತಿಕ ವೀರ; ಆದರೆ ಸಾಂಸ್ಕೃತಿಕ ಪಲ್ಲಟಕ್ಕೆ ಅವನು ಕಾರಣವಾದುದರ ಅಂತಹ ಉಲ್ಲೇಖಗಳೇನೂ ಇಲ್ಲ; ರಾಜಕೀಯ ಲೆಕ್ಕಾಚಾರಗಳೇ ಎದ್ದು ಕಾಣಲು ತೊಡಗಿದ್ದರಿಂದ, ಅವನ ಸಾಂಸ್ಕೃತಿಕ ಕೊಡುಗೆಗಳನ್ನು ಪತ್ತೆ ಹಚ್ಚುವುದು ಕಷ್ಟವಾಗಿದೆ;
- ಗಾದೆಯೊಂದರಲ್ಲಿ 'ಕುಮಾರರಾಮನು ಸೋರೆಕಾಯಿ ತಿಂದ ಹಾಗೆ' ಎಂಬ ಮಾತೊಂದು ಬರುತ್ತದೆ; ಕುಮಾರರಾಮನಿಗೂ ಸೋರೆಕಾಯಿಗೂ ಸಂಬಂಧ ಕಲ್ಪಿಸುವ ಈ ಗಾದೆಯ ಒಳ ಮರ್ಮ ಏನೋ ತಿಳಿಯದಾಗಿದೆ.

ಕುಮಿ kumi :

- ಒಳಗುದಿ(ಮಂ.ಜಿ); Inner tense/pressure;
- ನೊಗದ ಎರಡು ತುದಿ(ಉ.ಕ.ಜಿ); The two end points of yoke;
- ***—ಕುಮಿಲಿ/ಕುಮಿಲೋದು*** : ಬಿಸಿಬೂದಿಯ ಒಳಗೆ ಬೇಯಿಸುವ ವಿಧಾನ; *ಪ್ರ:* 'ಸೊಪ್ಪನ್ನು ಕೆಮ್ಮಣ್ಣು ಬಟ್ಟೆ ದೂಡಿ ಬೆಂಬೂದಿಯಲ್ಲಿ ಇಟ್ಟರೆ ಕುಮಿಲಿ ಬಿಡುತ್ತದೆ'. A method of boiling something in hot ashes;
- ***—ಕುಮಿ ಹುಳ*** : ವಿಷವಿರುವ ಎರೆಹುಳ(ಮಂ.ಜಿ). Poisoned earthworm.

ಕುಮುಟು kumuṭu :

ಬೆಚ್ಚಿಬೀಳು; ಗಾಬರಿಯಿಂದ ಹಾರಿಬೀಳು; ಬೇಟೆಯಲ್ಲಿ ಪ್ರಾಣಿಗಳು ಹಾರಿಬೀಳದಂತೆ ಬಲೆಯನ್ನು ಹಾಕಿರುತ್ತಾರೆ(ಬೇ.ಸಾಂ.ಪ.ಕೋ). Worried; Horror ; Horrify.

ಕುಮುದ kumuda :

- Limnanthemum indicum; ಒಂದು ಸಸ್ಯ ವಿಶೇಷ; ಇದು ಹಳೆ ಹೆಸರು; ಇದನ್ನು Nymphoides indicum(Gentianaceae) ಎಂದು ಬದಲಾಯಿಸಲಾಗಿದೆ; ಇದರ ಕನ್ನಡ ಹೆಸರು ನೀರು ತಾವರೆ; ಕುಮುದ ಎನ್ನುವುದು ಕರ್ಪೂರದ ಮರ Cinnamomum camphora(Lauraceae) ಇಂಗ್ಲೀಷ್‌ನಲ್ಲಿ Japanese camphor ಎನ್ನುತ್ತಾರೆ;

- ವಿಗ್ರಹ ಪೀಠದ ವಿನ್ಯಾಸದ ಒಂದು ಬಗೆ (ಪಾಂ.ವ್ಯ.ಪ.ಕೋ); A special plant that has the shape of an idol seat;
- ***—ಕುಮುದ ಗಡ್ಡೆ*** : kalanchol glandulosa ಸಸ್ಯ ವಿಶೇಷ; ಎಲೆಗಾಯ, ಹುಣ್ಣುಗಳಿಗೆ ಔಷಧಿಯಾಗಿ ಬಳಕೆ; ದೊಡ್ಡದಾದ ಮೂಲಿಕೆ; A medicinal plant;
- ***—ಕುಮುದ ಮರ*** : Gmelina arborea ಕಾಶ್ಮೀರಿ, ಕುಂಬಲ್. A Kashmir tree.

ಕುಮುೞೂರು kumuḻūru :

- ಕಡೂರು ತಾಲ್ಲೋಕಿನ ಕುಮುಟೂರು ಗ್ರಾಮದ ಕ್ರಿ.ಶ.೭೯೩ಕ್ಕೆ ಸೇರಿದ ಗಂಗವಂಶದ ಶಿವಮಾರನ ಕಾಲದ ಶ್ರೀರಾಜಪ್ಪ ಎಂಬುವರ ವಶದಲ್ಲಿದ್ದ ೨೪ನೇ ತಾಮ್ರಶಾಸನದಲ್ಲಿ "ಭಾಸ್ಕರದ್ವಟೀ 'ಕುಮುಟೂರ' ಗ್ರ್ರಾಮ" ಎಂಬ ಉಲ್ಲೇಖ ದೊರೆಯುತ್ತದೆ; A village that has been mentioned in 24th the copper inscription Of Ganga's Shivamara Of Kaduru Taluk;
- ಇದೇ ಕಡೂರಿನ ಶಾಸನಸಂಖ್ಯೆ ೨೮ರಲ್ಲಿ 'ಕುಮುದಾಧೀಶ' ಎಂಬ ದೇವತೆಯ ಉಲ್ಲೇಖವಿದ್ದು, ಬಹುಶಃ ಈ ದೇವತೆಯ ಹೆಸರಿನಲ್ಲಿ ನಿರ್ಮಾಣವಾಗಿರುವ ಸ್ಥಳನಾಮವಾಗಿದೆ ಎಂದು ಊಹಿಸಬಹುದಾಗಿದೆ;
- ಆದರೆ 'ಕುಮುಟೂರು' ಪದಕ್ಕೂ 'ಕುಮುದಾಧೀಶ' ಪದಕ್ಕೂ ಸಂಬಂಧ ಕಲ್ಪಿಸುವುದಾದರೂ ಹೇಗೆ?
- ಕುಮುಟು+ಊರು; ಕುಮುದ+ಅಧೀಶ ಎಂಬುದಾಗಿ ಎರಡು ಪದ ಸಮುಚ್ಚಯವನ್ನು ಬಿಡಿಸಬಹುದು; ಆದರೆ 'ಟ'(ಳ) ಮತ್ತು 'ದ' ಧ್ವನಿಮಾಗಳ ನಡುವೆ ಹೊಂದಾಣಿಕೆ ಸಾಧಿಸುವುದು ಕಷ್ಟ.

(E.C- ೧೨)

ಕುಮ್ಟಿ ಬೀಳ್ kumṭibīḻ :

ಶೇಂಗಾ ಬೀಜದ ಕಾಳಿನಂತಿರುವ ಬೀಜ; ಬಳ್ಳಿಯಲ್ಲಿ ಬೆಳೆಯುವ ಈ ಕಾಯಿಯನ್ನು ಹುರಿದು ಧಾನ್ಯಗಳ ಒಳಗಿಟ್ಟರೆ ಕ್ರಿಮಿ, ಹುಳಗಳ ಬಾಧೆ ತಟ್ಟುವುದಿಲ್ಲ (ಉ.ಜಿ). A seed that resembles ground nut; It is grounding in a creeper.

ಕುಮ್ಮಕ್ kummak :

- ಪಾರಸಿ ಪದ; 'ಕುಮಕಿ' ಪದವೂ ಇದೆ;
- ಸಹಾಯ; ಕಷ್ಟಕಾಲದಲ್ಲಿ ಕಳುಹಿಸಲಾಗುವ ಅಧಿಕ ಸೇನೆ.

ಕುಮ್ಮಕ್ಕು kummakku :

- ಬೆಂಬಲ; ಸಹಾಯ; ಹುರಿದುಂಬಿಸು; A support;
- ಕೆಟ್ಟ ಕೆಲಸ ಮಾಡಲು ಪ್ರಚೋದಿಸು; *ಪ್ರ*: 'ಎಲ್ಲ ಇವನ ಕುಮ್ಮಕ್ಕಿನಿಂದಲೇ ನಡೆಯುತ್ತಿರುವುದು'.

ಕುಮ್ಮಚಟ್ಟು kummacaṭṭu :

ಕುಣಿತದ ಒಂದು ಬಗೆ; ನಿಂತಲ್ಲಿಯೇ ನೆಗೆದು ಹಿಮ್ಮಡಿಯನ್ನು ಕುಂಡೆಗೆ ತಗಲುವಂತೆ ಹೊಡೆದುಕೊಂಡು ನೆಟ್ಟಗೆ ನಿಲ್ಲುವುದು; ಕುಣಿದು ಹಾರುತ್ತಾ ಸಂತೋಷವನ್ನು ವ್ಯಕ್ತಪಡಿಸುವಿಕೆ (ಯ.ಪ.ಕೋ). A method /type of dancing steps; To touch heels to hips by skipping once.

ಕುಮ್ಮಟದುರ್ಗ kummaṭadurga :

- ಕೊಪ್ಪಳ ಜಿಲ್ಲೆ ಕೊಪ್ಪಳ ತಾಲ್ಲೋಕಿನ ಕ್ರಿ.ಶ.೧೩೧೫ರ ೧೬೪ನೇ ವೀರಗಲ್ಲಿನಲ್ಲಿ ಈ ಹೆಸರಿನ ಉಲ್ಲೇಖ; An historical place mentioned In 164th 'Veeragallu' of Koppala taluk;
- ವೀರಕಂಪಿಲರಾಯನ ಆಳ್ವಿಕೆ; ಈತ 'ಕುಮಟ'ದಲ್ಲಿ ರಾಜ್ಯವಾಳುತ್ತಿದ್ದ ವಿಚಾರವಿದೆ;
- ಈ ಸಂದರ್ಭದಲ್ಲಿ 'ಸರತಾಳ'(ಸುಲ್ತಾನ)ನ ದಳ ಯುದ್ಧ ಮಾಡಲು ಬಂದಾಗ ತುಳುವ(?)ಗಡೆ ಸಿಂಗನಾಯ್ಕನ ತಮ್ಮ ಕಾಮಿನಾಯ್ಕನು ಮಡಿಯುತ್ತಾನೆ; ಇವನ ನೆನಪಿಗೆ ಕಾಮಿನಾಯ್ಕನ ಅಕ್ಕ ವೀರಗಲ್ಲನ್ನು ನೆಡಿಸುತ್ತಾಳೆ;
- 'ಕುಮಟ'ವು ಕಂಪಿಲರಾಯನ ರಾಜಧಾನಿ; the capital city of Kampilaray's kingdom; ಅಲ್ಲಿಯ ಕೋಟೆಯಿಂದ 'ಕುಮ್ಮಟದುರ್ಗ' ಎಂಬ ಹೆಸರು ಇದಕ್ಕೆ ಬಂದಿದೆ.

(ಕ.ವಿ.ವಿ.ಶಾ.ಸಂ.೨; ಹಂಪಿ)

ಕುಮ್ಮಣ್ಣಿ ಚೀಲ kummaṇṇi cīla :

ಹೆಂಗಸರು ಸೊಂಟಕ್ಕೆ ಸಿಕ್ಕಿಸಿಕೊಳ್ಳುವ ಸಣ್ಣ ಗಾತ್ರದ

ಹಣದ ಚೀಲ(ಮೈ.ಜಿ). A small money purse that is screwed in waist women.

ಕುಮ್ಮಯ ಕತ್ತಿ kummayakatti :

ಗಾರೆ ಕೆಲಸಗಾರರ ಸಾಧನ; ಗಾರೆ ಬಳಿಯಲು ಉಪಯೋಗಿಸುವ ಹಿಡಿಯುಳ್ಳ ಸಲಕರಣೆ; ಗಾರೆ ಕತ್ತಿ; A tool of stucco worker.

ಕುಮ್ಮಿ kummi :

- ಸ್ವಂತ ಜಮೀನಿನ ಗಡಿಕಲ್ಲಿನ ಸುತ್ತ ನಾಲ್ಕೂವರೆ ಸಂಕಲೆ ಹಾಗೂ ೧೦೦ ಗಜಗಳಷ್ಟು ಸರಕಾರಿ ಗುಡ್ಡ ಪ್ರದೇಶದ ಸ್ಥಳವನ್ನು ರೈತರಿಗೆ ಕಂದಾಯವಿಲ್ಲದೆ ನೀಡಲಾದ ಜಮೀನು(ಬ.ಜಿ); A land without revenue;
- ಹೆಣ್ಣುಮಕ್ಕಳು ಕೈ ಚಪ್ಪಾಳೆಯೊಡನೆ ಹಾಡುತ್ತಾ ಕುಣಿಯುವ ಒಂದು ಬಗೆಯ ನೃತ್ಯ. A dance girls by clapping themselves;

ಕುಮ್ಮು kummu :

- ಧಾನ್ಯಗಳನ್ನು ಕಲ್ಲುಮಣ್ಣು ಹೊಟ್ಟುಗಳಿಂದ ಬೇರ್ಪಡಿಸಿ ಸ್ವಚ್ಛಗೊಳಿಸಲು ಮೊರದಿಂದ ಕೇರುವ ಕ್ರಿಯೆ(ಚಾ.ಜಿ);
- ಒನಕೆಯಿಂದ ಮೆಲ್ಲಗೆ ಏಟು ಹಾಕು;
- ಹಾಯು;
- ಜಜ್ಜು;
- ಗಾಡಿಯ ಚಕ್ರದ ಮಧ್ಯಭಾಗದಲ್ಲಿರುವ ಗುಂಭ;
- ಬೇರೆಮಾಡು; ಕಿತ್ತುಕೋ; ಪ್ರ: 'ಕಡೇಲಿ ಬಂದೋನು ಎಲ್ಲ ದುಡ್ಡ ಕುಮ್ಮಂಡೋದ';
- ನಿಶ್ಯಕ್ತಿಯಿಂದ ಕೆಳಗೆ ಬೀಳು; ತಮಿಳು, ಮಲೆಯಾಳಂ ಮತ್ತು ತೆಲುಗುಗಳಲ್ಲಿ ಏನೊಂದು ವ್ಯತ್ಯಾಸವಿಲ್ಲದೆ 'ಕುಮ್ಮು' ಪದವೇ ಇರುವುದು ವಿಶೇಷ.

ಕುಮ್ರುಸು kumrusu :

- ಕಮ್ಮರಿಸು/ಕುಮ್ಮರಿಸು ಇರಬಹುದೆ?;
- ಒಟ್ಟಿಗೆ ಸುರಿ; ಎಲ್ಲವನ್ನು ಸೇರಿಸು;
- ಪ್ರ: 'ಬುಟ್ಟಿಯಲ್ಲಿರುವುದನ್ನು ಕುಮ್ರುಸು'.

ಕುಯ್‌ಮುಲ್ಕು kuymulku :

ಕುಂಬಾರನು ಹಸಿ ಮಣ್ಣಿನ ಮಡಕೆಗಳನ್ನು ಸಿದ್ಧಗೊಳಿಸಿದ ನಂತರ ಚಕ್ರದಿಂದ ಮೇಲಕ್ಕೆ ನಿಧಾನವಾಗಿ ಬೇರ್ಪಡಿಸಲು ಬಳಸುವ ಸಾಧನ; ಇದು ಸೂಜಿಯಂತೆ ಮೊನಚಾಗಿದ್ದು ಬಾಗಿರುತ್ತದೆ(ಹಾ.ಜಿ). A sharp device that resembles a needle that is used to separate wet clay pot mould which is on the potter wheel.

ಕುಯಿಂಕ kuyinka :

- ಚೆನ್ನೆಮಣೆ ಆಟದಲ್ಲಿನ ಒಬ್ಬ ಆಟಗಾರ; One of the player of holed bar by putting and shifting tamarind nuts;
- ಅರಸಾಟದಲ್ಲಿ ಚೆನ್ನೆಮಣೆಯ ಮಧ್ಯದ ಆರುಮಣೆ ಅಥವಾ ಗುಳಿಗಳು ಅರಸನಿಗೆ ಸೇರಿದ್ದೆಂದೂ ಎರಡೂ ಬದಿಯ ನಾಲ್ಕು ನಾಲ್ಕು ಮಣೆಗಳು ಪ್ರಧಾನಿ ಮತ್ತು ಸೇವಕನಿಗೆ ಸೇರಿದ್ದೆಂದೂ ಕಲ್ಪಿಸಿಕೊಂಡು ಆಡುವರು;
- ಇವರಲ್ಲಿ ಬರುವ ಮೂರನೆಯ ಆಟಗಾರನೇ ಕುಯಿಂಕ.

ಕುಯಿಂಪ kuyimpa :

- ದೊಡ್ಡಗಾತ್ರದ ಕಪ್ಪು ಇರುವೆ; A huge ant;
- ಎಣ್ಣೆಜಿಡ್ಡು; ಹಳತಾದ ಎಣ್ಣೆಯ ಗಮಟುನತ; ಜಿಡ್ಡು ವಾಸನೆ(ದ.ಕ). Only smell.

ಕುಯಿಕ್ kuyik :

ಗಲಾಟೆ; ಶಬ್ದ; ಒಂದು ಅನುಕರಣ ಶಬ್ದ; ನಾಯಿಯ ಒಂದು ಶಬ್ದ; ಪ್ರ: 'ಯಾರಾದ್ರೂ ಕುಯಿಕ್ ಅಂದ್ರಿ ತಲಿಜಜ್ಜಿಬಿಡತೀನಿ'(ರಾಯ.ಜಿ). A disturbed sound; An imitating sound; dog sound;

—ಕುಯ್ಯೋ ಮರ್‍ಯೋ ಅನ್ನು : ಜೋರಾಗಿ ಅಳು; ಪ್ರ: 'ಮನೆ ತುಂಬಾ ಮಕ್ಕಳಿದ್ದರೆ ಕುಯ್ಯೋ ಮರ್‍ಯೋ ಅನ್ನುತ್ತವೆ'(ಬೆಂ.ಗ್ರಾ.ಜಿ). To cry loudly.

ಕುಯಿಬು kuyibu :

ಹುಬ್ಬು; ಕಣ್ಣಿನ ಮೇಲ್ಭಾಗದಲ್ಲಿ ಕಮಾನಿನ ಆಕಾರದಲ್ಲಿರುವ ಕೂದಲಿನ ಸಾಲು; ಇದರಿಂದ ಮುಖದ ಅಂದ ಹೆಚ್ಚುವುದು; ಪ್ರ: 'ಕಣ್ಣಿರ ಕುಯಿಬು ಬೊಳ್ತಿತೆ ಆಯಿತ್'(ಕೊಡ.ಜಿ). Eye brow.

ಕುಯಿಲು ಹೋಗುವುದು kuyilu hōguvudu:

- ಹೆರಿಗೆಯ ನಂತರದ ಹನ್ನೊಂದನೆಯ ದಿನದಂದು ಬಾಣಂತಿಗೆ ಮಾಡುವ ಶಾಸ್ತ್ರ; A ritual held at 11th day relating to delivered women;
- ಆ ದಿನ ಬೆಳಿಗ್ಗೆ ಮನೆಯ ಎದುರು ಅಥವಾ ಹಿಂಭಾಗದಲ್ಲಿ ನೆಲದ ಮೇಲೆ ಮರಳನ್ನು ಹರಡಿ ಮೇಲೆ ಮಣೆ ಇಟ್ಟು ಮಡಿ ಬಟ್ಟೆ ಹಾಸುವರು;
- ಬಾಣಂತಿಯನ್ನು ಅದರ ಮೇಲೆ ಕೂರಿಸಿ ಮಣೆಯ ಸುತ್ತಲಿನ ನಾಲ್ಕು ಮೂಲೆಗಳಲ್ಲಿಯೂ ಎರಡು ವೀಳ್ಯದೆಲೆ, ಅಡಿಕೆ, ನೆನಸಿದ ಕಡಲೆ, ಶುಂಠಿಬೆಲ್ಲದ ಉಂಡೆ ಇಡುವರು;
- ನಂತರ ಬಿಸಿ ನೀರಿನಿಂದ ಮಾಡಿದ ಓಕುಳಿಯನ್ನು ಐದು ಮಂದಿ ಮುತ್ತೈದೆಯರು ಬಾಣಂತಿಯ ಬೆನ್ನಿನ ಮೇಲೆ ಹಾಕುವರು;
- ಬಾಣಂತಿಯ ಕೈಯಲ್ಲಿ ಹಸಿಹಾಲು ಮತ್ತು ಓಕುಳಿ ನೀರನ್ನು ನಾಲ್ಕು ಮೂಲೆಗೂ ಹಾಕಿಸುವರು; ನಂತರ ಬಾಣಂತಿಗೆ ಶುಂಠಿ ಬೆಲ್ಲವನ್ನು ಮೂರು ಬಾರಿ ಕೈಗೆ ಕೊಟ್ಟು ಆರತಿ ಬೆಳಗುವರು;
- ನಂತರ ಸೂತಕ ನಿವಾರಣೆಗೆ ಪುಣ್ಯಹ ಮಾಡಿ, ಮಾವು, ಬೇವು, ನೀಲಗಿರಿ, ಸೀಬೆ, ದಾಳಿಂಬೆ ಹೀಗೆ ಐದು ಬಗೆಯ ಸೊಪ್ಪುಗಳನ್ನು ಹಾಕಿ ಕಾಯಿಸಿದ ನೀರನ್ನು ಮಗು ಬಾಣಂತಿಗೆ ಹಾಕಿ ಸ್ನಾನ ಮಾಡಿಸುವರು;
- ಇದನ್ನು 'ಕುಯಿಲು ಹೋಗುವ ಶಾಸ್ತ್ರ' ಎನ್ನುವರು(ಕೋ.ಜಿ);
- —***ಕುಯಿಲು ಮುತ್ತೈದೆ*** : ಒಂದು ಗುಂಡುಕಲ್ಲಿಗೆ ಸುಣ್ಣ ಬಳಿದು ಅರಿಶಿಣ ಕುಂಕುಮ ಹಚ್ಚಿ, ರವಿಕೆ ಕಣ, ಬೇವಿನ ಸೊಪ್ಪು, ಮಾವಿನಸೊಪ್ಪು ಇಟ್ಟು ಒಬ್ಬ ಕನ್ಯಾ ಮುತ್ತೈದೆ ಕೈಯಲ್ಲಿಟ್ಟು ಬಾಣಂತಿಗೆ ಮಾಡುವ ಎಲ್ಲಾ ಶಾಸ್ತ್ರಗಳನ್ನು ಇವಳಿಗೆ ಮೊದಲು ಮಾಡುವರು; ಇವಳನ್ನು ಕುಯಿಲು ಮುತ್ತೈದೆ ಎನ್ನುವರು; ಶಾಸ್ತ್ರ ಮುಗಿದ ನಂತರ ಉಡುಗೊರೆ ನೀಡಿ ಸತ್ಕರಿಸುವರು(ಕೋ.ಜಿ). A round stone that has been decorated by lime, vermilion blouse, Neem mango leaves and gives it to a married women before offering rituals to delivered women.

ಕುಯುಂಗಾಟ/ಮೂಕಿ ಚಕ್ಕೆ kuyungāṭa/ mukicakke :

ಗಾಡಿಯ ಸಾಧನ; ಸುಮಾರು ಎರಡು ಅಡಿ ಉದ್ದದ ಮರದ ತುಂಡು; ಮೂಕಿ ಮರದ ತುದಿಯಲ್ಲಿ ಕೆಳಭಾಗಕ್ಕೆ ಸೇರಿಸಿದ್ದು ಇದರ ಸಹಾಯದಿಂದ ಗಾಡಿಯನ್ನು ಭೂಮಿಯಿಂದ ಸ್ವಲ್ಪ ಎತ್ತರದಲ್ಲಿ ಇಡಲು, ನೊಗಕ್ಕೆ ಎತ್ತುಗಳನ್ನು ಕಟ್ಟುವಾಗಲೂ ಅನುಕೂಲ; ನೊಗ ಮುಂದಕ್ಕೆ ಬಾರದಂತೆ ತಡೆಯುವುದು; L ಆಕಾರದ ಮರ.ಕುಯ್ಲುಂಗಾಟ(ಮಂಡ್ಯ) A jib-boon; A thill; A wooden small log that connect front part of the cart.

ಕುಯ್ಕು kuyku :

ಪಿತೂರಿ; ಯಾವುದಾದರೊಂದು ಕೆಟ್ಟಕೆಲಸ ಮಾಡಲು ಪೂರ್ವ ನಿರ್ಧರಿತ ಯೋಜನೆಯನ್ನು ತಯಾರಿಸಿ ಅದರಂತೆ ನಡೆಯುವುದು. Conspiracy; a scheming; A conspiracy to destroy ; to defeat someone.

ಕುಯ್ಗತ್ತಿ kuygatti :

ಕುಡುಗೋಲಿನಂತಹ ಉದ್ದನೆಯ ಕಬ್ಬಿಣದ ಸಾಧನ; ಮೆಟ್ಟುಗತ್ತಿ; ಕೃಷಿಯಲ್ಲಿ ಬೆಳೆ 'ಕೊಯ್ಯಲು' ಹೆಚ್ಚು ಬಳಸುವ ಉಪಕರಣ. A device like a bent sickle used to cut crops.

ಕುಯ್ಣ kuyṇa :

ಪ್ರಾಣಿಗಳ ಒಣಗಿದ ಮಲ; ಹಿಕ್ಕೆ(ಉ.ಕ.ಜಿ); *ಪ್ರ:* 'ಕುರಿಗಳು ಕುಯ್ಣಿ ಹಾಕ್ತವೆ ಆಕಳು ಉಳ್ಳ ಹಾಕ್ತವೆ'; ಕುಯ್ಣ = ಹಿಕ್ಕೆ; ಉಳ್ಳ = ಸಗಣಿ. A dried dung; A dry shit of any animal.

ಕುಯ್ಮರಿ kuymari :

ದೇವರ ಹರಕೆಗೆಂದು ಬಿಟ್ಟ ಮರಿ; ಯಾವ ಉಗ್ರದೇವತೆಗೊ ಅಥವಾ ಮಾರಮ್ಮನಿಗೊ ನಿರ್ದಿಷ್ಟ ಉದ್ದೇಶಕ್ಕಾಗಿ ಹರಕೆ ಮಾಡಿದಾಗ ಅದಕ್ಕೆಂದು ಒಂದು 'ಕುರಿಮರಿ' ಯನ್ನು ಮೀಸಲು ಬಿಡುವುದು ರೂಢಿ; ಅದನ್ನು ವರ್ಷಗಳ ಕಾಲ ಸಾಕಿ ನಂತರ ಆ ದೇವಿಗೆ ಬಲಿ ಕೊಡುವ 'ಕುರಿಮರಿಯೇ' 'ಕುಯ್ಮರಿ'.

An animal like sheep that for its meat offering for any god.

ಕುಯ್ಮಾಲಿ kuymāli :

ಬಾಯಿ ಉಸಿರಿನಿಂದ ನುಡಿಸುವ ಒಂದು ಕಿರು ವಾದ್ಯ(ಚಿ.ಪ.ಕೋ). A mouth organ that plays through breathing of mouth.

ಕುಯ್ಯಾರ kuyyāra :

ಕುಡ್ಲನ್ನು ಚೂಪು ಮಾಡಲು ಬಳಕೆ; ದೊಡ್ಡ ಕುಡಗೋಲನ್ನು ಹಲ್ಲುಗಳಿರುವ ಅರದಿಂದ ಉಜ್ಜಿ ಚೂಪುಗೊಳಿಸುವರು(ತು.ಜಿ). An iron tool –file that used to sharpen the sickle like weapons.

ಕುರ್ಸಗಾಯಿ kursagāyi :

- ಕುದಿಸಿದ ಮಾವಿನಕಾಯಿಯನ್ನು ದಾಸ್ತಾನು ಮಾಡುವುದು; ಚೆನ್ನಾಗಿ ಬಲಿತ ಕಾಯಿಗಳನ್ನು ನೀರಿನಲ್ಲಿ ಕುದಿಸಿ ನಂತರ ಉಪ್ಪುನೀರು ಇರುವ ಮಡಿಕೆಯನ್ನು ಸಂಗ್ರಹಿಸುವುದು; ಬೇಕಾದಾಗ ಈ ಕಾಯಿಯಿಂದ ಚಟ್ನಿ, ಸಾಸಿರಸ, ತಯಾರಿಸಿ ಊಟದಲ್ಲಿ ಬಳಸುವುದು; ಇದು ತುಂಬಾ ರುಚಿ ಮತ್ತು ಜೀರ್ಣಕಾರಿ(ಉ.ಕ.ಜಿ); To stock piled; To store the boiled mangoes;
- ಕುರ್ಸಗಾಯಿ < ಕುರ್‌ಸಗಾಯಿ < ಕರ್‌ಸ + ಕಾಯಿ;
- ***—ಕುರ್ಸಗಾಯಿ ಚಟ್ನಿ*** : ಮಾವಿನಕಾಯಿಯನ್ನು ಉಪ್ಪು ನೀರಿನಲ್ಲಿ ನೆನೆಸಿದ್ದು ಅದು ಹಣ್ಣಿನಂತಾಗಿರುವುದು; ಆ ಕಾಯಿಗೆ ತೆಂಗಿನ ತುರಿ, ಮೆಣಸು, ಜೀರಿಗೆ, ಹಸಿಮೆಣಸಿನಕಾಯಿ ಇತ್ಯಾದಿಗಳನ್ನು ಸೇರಿಸಿ ರುಬ್ಬಿ ತಯಾರಿಸಿದ ಚಟ್ನಿ. A kind of mango caviar or chutney that is made of mango, coconut piece, pepper , ginger, and chilly.

ಕುರ kura :

- ಕುರು: ಕಂಕುಳು, ತೊಡೆ ಸಂದುಗಳಲ್ಲಿ ಏಳುವ ಗುಳ್ಳೆ; ರಾಗಿ ಕಾಳಿನ ಗಾತ್ರವಿದ್ದು ಒಳಭಾಗದಲ್ಲಿ ಕೆಟ್ಟ ರಕ್ತದ ಗಂಟು ಇರುತ್ತದೆ; A blain; Blain on thigh/hip muscle contains bad blood;
- ಮೆದುವಾಗಿ ಒಳಗಿರುವ ಕೆಟ್ಟ ರಕ್ತವೆಲ್ಲ ಕೀವಾಗಿ ಕುರ ಒಡೆದು ಸೋರಬೇಕು; ಹೀಗಾಗಲೂ ಕುರ ಹಣ್ಣಾಗಬೇಕು;
- ಅದಕ್ಕಾಗಿ ಹರಳೆಣ್ಣೆ ಸವರಿದ ವೀಳ್ಯದೆಲೆಯನ್ನು ಕೈಯೆಣ್ಣೆ ದೀಪದ ಉರಿಯಲ್ಲಿ ಸ್ವಲ್ಪಮಟ್ಟಿಗೆ ಬಿಸಿ ಮಾಡಿ ಕುರದ ಮೇಲೆ ಹಚ್ಚುವರು;
- ಇಲ್ಲವೆ ಬಿಸಿರಾಗಿ ಹಿಟ್ಟನ್ನು ಕುರದ ಸುತ್ತಲೂ ಅಂಟಿಸಿ ಮೇಲೆ ವೀಳ್ಯದೆಲೆ ಕಟ್ಟುವ ಕ್ರಮವಿದೆ; ಇನ್ನು ಕೆಲವೆಡೆ ಅಕ್ಕಿ, ರಾಗಿ ಹಿಟ್ಟಿನ ಲೇಪನ ಹಚ್ಚುವರು;
- ಭತ್ತದ ತೆನೆಯನ್ನು ಕುರವಿಗೆ ನಿವಾಳಿಸಿ ಮರಕ್ಕೆ ಸಿಕ್ಕಿಸಿ ಬಂದರೆ ಕುರ ಬೇಗನೆ ವಾಸಿ ಆಗುತ್ತದೆಂಬ ನಂಬಿಕೆ; ಇಂಥ ಚಿಕಿತ್ಸೆಯಿಂದ ರೋಗದ ಮೇಲೆ ನೇರ ಪರಿಣಾಮ ಬೀರುವುದಿಲ್ಲವಾದರೂ ಅದರ ಹಿಂದೆ ರೋಗ ಗುಣವಾಗಲೆಂಬ ಆಶಯವಿದೆ;
- ಕುರುವು; ನಡುಗದ್ದೆ; ಹೊಳೆಯ ಮಧ್ಯ ಇರುವ ಭೂಮಿ(ಉ.ಕ.ಜಿ). The central land that covered by a river /Brooke.

ಕುರಂಬಳೆ/ಕುರೊಂಬಾಳೆ kurambaḷe/ kurombāḷe :

ಅಡಿಕೆ, ತೆಂಗಿನ ಹೂಗಳ ಗೊಂಚಲನ್ನು ಮುಚ್ಚಿಕೊಂಡಿರುವ ಕವಚ; ಕಾಯಿ ಬಿರಿಯುವ ಮೊದಲು ಮೊಗ್ಗಿನ ರೂಪದಲ್ಲಿರುವುದೆ ಹೊಂಬಾಳೆ; ಹೂವಿನಿಂದ ಕಾಯಿ ರೂಪ ಪಡೆಯುತ್ತಿದ್ದಂತೆ ಹೊಂಬಾಳೆ ಗೊನೆಯಿಂದ ಪೂರ್ಣ ಬೇರೆಯಾಗಿ ಮೇಲ್ಭಾಗದಲ್ಲಿರುತ್ತದೆ; ಅಗಲವಾಗಿ ಉದ್ದವಾಗಿ ಅರ್ಧಚಂದ್ರಾಕೃತಿಯಲ್ಲಿರುವ ತುಂಡು; ಒಲೆಗೆ ಉರುವಲಾಗಿ ಬಳಕೆ. The earlier stage of bud of areca or coconut flower; It is used as fuel.

ಕುರಕಲ kurakala :

ಗಿಡ್ಡ; ಚಿಕ್ಕ; ಸೊಟ್ಟ; ಮೋಟ; ಎತ್ತರ ಕಡಿಮೆಯುಳ್ಳವ; *ಪ್ರ:* 'ಅತ ಕಟ್ಟ ಮಸ್ತಾದ ಆಳು, ಅಪ್ಪನಂತೆ ಕುರಕಲಲ್ಲ'; ವ್ಯರೂ: ಕುರಸು(ಕೋ.ಜಿ). A person who is short; Polt abbreviate.

ಕುರಕಲಿ kurakali :

ಶೇಂಗಾ(ಕಡ್ಲೆಕಾಯಿ) ಹಾಕುವ ಬುಟ್ಟಿ; ಹೊಲದಲ್ಲಿ ಶೇಂಗಾವನ್ನು ಆರಿಸುವಾಗ ಬಳಸುವ ಸಣ್ಣ ಬುಟ್ಟಿ; (ಬೀ.ಜಿ). A basket used to collect groundnut in the form.

ಕುರಡಕ್ಕಿ kuraḍakki :

ಭತ್ತವನ್ನು ಕುಟ್ಟಿ ಮೇಲಿನ ಸಿಪ್ಪೆ ಮಾತ್ರ ತೆಗೆದಿರುವ ಅಕ್ಕಿ; ನುರಿಯದಿರುವ ನುಜ್ಜಾಗದಿರುವ ಅಕ್ಕಿ. Husked rice.

ಕುರಡಿ kuraḍi :

- ಒಂದು ಬಗೆಯ ಮೀನು; A kind of fish;
- ಕೊಡಲಿ(ದ.ಕ);
- ಕಣ್ಣಿಲ್ಲದವಳು(ನೋಡಿ: ಕುಂಡಿ); A woman who is visually impaired;
- —*ಕುರಡಿ ಬಾವಲಿ* : ಸ್ತ್ರೀಯರು ತಲೆಗೂದಲಿಗೆ ಧರಿಸುವ ಆಭರಣ(ತು.ಜಿ). A kind of jewel that wore by ladies in their hair.

ಕುರಡಿ ಹಣ್ಣಿನ ಕಂಟಿ kuraḍi hannina kaṇṭi :

Gloriosa superb(Liliaceae) ಕುರಡಿ ಹಣ್ಣಿನ ಕಂಟಿ, ಅಗ್ನಿ ಶಿಖೆ, ಅಕ್ಕತಂಗಿ ಬಳ್ಳಿ, ಕೋಳಿ ಕುಟುಮನ ಗಡ್ಡೆ; ಮುಳ್ಳುಗಳನ್ನು ಹೊಂದಿರುವ ಕಾಡಿನಲ್ಲಿ ಬೆಳೆಯುವ ಗಿಡ; ಕುಡುಗಾಳೆ, ಕುರಡಿ ಮೂಳೆ ಎನ್ನುವರು. A wild plant that has thorns an its body;

—*ಕುರಡಿ ಹಣ್ಣು* : Scutia myrtina(Rhamnaceae) ಕುರುಡಿ ಹಣ್ಣು; ಮೃದುವಾದ ಕಾಂಡ ಇರುವ ಹಬ್ಬುವ ಬಳ್ಳಿ; ಗುಚ್ಛಾಕಾರದ ಬೇರುಗಳನ್ನು ಹೊಂದಿದೆ; ಕೆಂಪು ಮಿಶ್ರಿತ ಕಿತ್ತಳೆ ಬಣ್ಣದ ಹಣ್ಣು ಬಿಡುತ್ತದೆ. A soft climbing creeper.

ಕುರಪಿ/ಕುರುಪಿ/ಕುರ್ಪಿ kurapi/kurupi/kurpi :

- ಕಳೆ, ಕಸ ಕೆತ್ತುವ ಸಾಧನ(ಧಾ.ಜಿ); A tool used for removing weeds;
- ದೋಸೆ, ಚಪಾತಿ, ರೊಟ್ಟಿಯನ್ನು ಕಲ್ಲಿನ ಮೇಲೆ ತಿರುಗಿಸಲು ಬಳಸುವ ಕೈ; ಕುರುಚಿಗೆ, ಉಜ್ಜುಗೋರಿ, ಮಗಚುವ ಕೈ; An hand like tool to turn Dosa, Roti on the boiling pan;
- ಚಿಕ್ಕ ಕೈಗತ್ತಿ(ಉ.ಕ.ಜಿ); a small sickle;
- ದ್ವೀಪ(ಉ.ಕ);
- ಕುಡುಗೋಲಿಗಿಂತ ಚಿಕ್ಕದಾದ ಕಳೆ ತೆಗೆಯುವ ಮರದ ಹಿಡಿಯುಳ್ಳ ಸಾಧನ; ಬೆಳೆಯ ಮಧ್ಯ ಬೆಳೆದಿರುವ ಕಳೆಯನ್ನು ತೆಗೆಯಲು ಬಳಕೆ(ಬೀ.ಜಿ., ಗ.ಜಿ);
- ಮದುವೆ ಇತರೆ ದೊಡ್ಡ ಸಮಾರಂಭ, ಅನ್ನದಾಸೋಹಗಳಲ್ಲಿ ಅಡುಗೆಯಲ್ಲಿ ಪದಾರ್ಥಗಳನ್ನು ತಿರುವಲು ಬಳಸುವ ಕಬ್ಬಿಣದ ಈಚು, ಅಲಗುಗಳಿಂದ ತಯಾರಿಸಿದ ಸಾಧನ; An iron tool: made up of iron blades that used to shuffle rice or soup in marriage ceremonies.
- —*ಕುರುಪಿ ಪಾಲು* : ದುಡಿದ ರೈತನಿಗೆ ಕೊಡುವ ನಿರ್ದಿಷ್ಟ ಉತ್ಪನ್ನ(ಕೃ.ಪ.ಕೋ). A small share of profit that gives a farmer from his land lord.

ಕುರಬರಬೆಟ್ಟಹಳ್ಳಿ kurabarabeṭṭahaḷḷ :

- ಈ ಸ್ಥಳನಾಮ ಸಮುದಾಯ ವಾಚಿಯೂ ಅಹುದು, ಭೂವಾಚಿಯೂ ಅಹುದು; A place named after a caste of Kuraba -Shaperds a place mentened in 14 inscription of Hoysala period of Panadavapura taluk.
- ಈ ಹೆಸರಿನಲ್ಲಿ ಮೂರು ಘಟಕಗಳಿವೆ; ಕುರುಬ(ರ)+ಬೆಟ್ಟ+ಹಳ್ಳಿ;
- 'ಕುರುಬ' ಪದ 'ಕುರುಂಬ/ಕುಱುಂಬ' ಪದದಿಂದ ಬಂದುದು, 'ಕುಱುಂಬ' ಹಳಗನ್ನಡದಲ್ಲಿ ಪ್ರಚಲಿತ ಇರುವಂಥದು;
- ಸಂವಾದಿ ಪದಗಳಾಗಿ ತಮಿಳು ಮತ್ತು ಮಲೆಯಾಳಂ ಭಾಷೆಗಳಲ್ಲಿ ಕುಱುಮ್ಬು(ಕುಱುಂಬ) ರೂಪವೂ, ತೆಲುಗಿನಲ್ಲಿ 'ಕುರುಪ', 'ಕುರುಮ' ರೂಪಗಳೂ ಬಳಕೆಯಲ್ಲಿವೆ, ತಮಿಳು ಮತ್ತು ಮಲೆಯಾಳಂಗಳ ಪದ ಹಳಗನ್ನಡ ರೂಪಕ್ಕೆ ಹೊಂದಿಕೆಯಾಗಿದೆ, ಹಾಗೆಯೇ ತೆಲುಗಿನ ರೂಪದಲ್ಲಿನ ಪದಾಂತ್ಯದ 'ಪ'

ಮತ್ತು 'ಮ'ಗಳು ಬೆಳವಣಿಗೆಯ ಬೇರೆ ಬೇರೆ ಹಂತಗಳಲ್ಲಿ 'ಬ' ಆಗುವುದು ಸಾಧ್ಯವಿರುವುದರಿಂದ ಕನ್ನಡದ 'ಕುರುಬ' ಸಿದ್ಧಿಸಿದಂತಾಗುತ್ತದೆ;

- 'ಕುರುಬ' ದ್ರಾವಿಡ ಪದ ಎಂಬುದು ಸ್ಪಷ್ಟ; ಅರ್ಥ ಕುರಿಗಾಹಿ ಅಥವಾ ಕುರಿ ಸಾಕಣಿಕೆ ಮಾಡುವವನು;
- 'ಬೆಟ್ಟಹಳ್ಳಿ' ಸಂಯುಕ್ತ ಪದ ಗುಡ್ಡಗಾಡಿನ ಗ್ರಾಮ ಎಂಬ ಅರ್ಥ ಕೊಡುತ್ತದೆ ಅಥವಾ ಬೆಟ್ಟಗುಡ್ಡಗಳಿಂದ ಆವೃತವಾಗಿರುವ ಊರು ಎಂದು ಅರ್ಥವಾಗುತ್ತದೆ;
- ಪಾಂಡವಪುರ ತಾಲ್ಲೋಕಿನ ೧೪ನೇ ಶಾಸನ(ಹೊಯ್ಸಳರ ಕಾಲದ್ದು)ದಲ್ಲಿ 'ಬೆಟ್ಟಹಳ್ಳಿ'ಯ ಉಲ್ಲೇಖವಿದೆ;
- ಹಾಗೆಯೇ ಪಾಂಡವಪುರ ತಾಲ್ಲೋಕಿನ ಕ್ರಿ.ಶ.೧೧೫೭ರ ನಾರಾಸಿಂಹದೇವನ ಕಾಲದ ೮೮ನೇ ಶಾಸನದಲ್ಲಿ 'ಮೂಡಣಬೆಟ್ಟಹಳ್ಳಿ' ಮತ್ತು 'ಪಡುವಣ ಬೆಟ್ಟಹಳ್ಳಿ'ಗಳ ಉಲ್ಲೇಖವಿದೆ.
- 'ಬೆಟ್ಟಹಳ್ಳಿ' ಮೂಲ ಹೆಸರಾಗಿದ್ದು, ಕುರುಬರ ವಾಸಸ್ಥಾನದ ಕಾರಣದಿಂದಾಗಿ ಅದಕ್ಕೆ ಆಮೇಲೆ 'ಕುರುಬರ ಬೆಟ್ಟಹಳ್ಳಿ' ಆಗಿರಬೇಕು; ಈಗ ಇದನ್ನು 'ಕೆ.ಬೆಟ್ಟಹಳ್ಳಿ' ಎನ್ನುವರು.

(***ನೋಡಿ:*** ಪಾಂ.ತಾ.ಸ್ಥ.ನಾ.ಅ)

ಕುರವಕ kurvaka :

- ಕೆಂಪು ಹೂವಿನ ದೊಡ್ಡ ಗೋರಂಟೆ(ಬ.ಜಿ); A big red flowered Henny which dye our hair;
- ಒಂದು ಬಗೆಯ ಹಕ್ಕಿ. a kind of bird.

ಕುರಸಕ್ಕಿ kurasakki :

ಭತ್ತವನ್ನು ನೀರಿನಲ್ಲಿ ಚೆನ್ನಾಗಿ ಬೇಯಿಸಿ ನಂತರ ಒಣಗಿಸಿ, ಒರಳಿನಲ್ಲಿ ಒನಕೆಯಿಂದ ಕುಟ್ಟಿ ಮಾಡಿದ ಅಕ್ಕಿ(ಉ.ಕ.ಜ). A rice that has been boiled and dried and husked in grinding stone and pestle.

ಕುರಸಲ್ಯಾ/ಕುರುಸಾಲ್ಯಾ/ಕುರ್ಸಾಲ್ಯಾ kurasālyā/kurusālyā/kursālyā :

- ಕೌರವರ ಗುಣದವನು; ಕೆಟ್ಟವರನ್ನು ನಿಂದಿಸಲು ಬಳಸುವ ಬೈಗುಳ; ಗುಲ್ಬರ್ಗಾ, ಬೀದರ ಭಾಗದಲ್ಲಿ ಬೈಗುಳವಾಗಿ ಈ ಪದ ಬಳಕೆ(ಬೀ.ಜಿ); An abuse; used around Gulberga & Bidar;
- ಕೈಯಲ್ಲಿ ಏನೂ ಕೆಲಸ ಆಗದವನು(ರಾಯ.ಜಿ).

ಕುರಸಾಣಿ ಕಲ್ಲು kurasani kallu :

- ಮರಳು ಶಿಲೆ; A kind of sandstone;
- ದನಗಳಿಗೆ ನೀರು ಕುಡಿಸಲು ಬಳಸುವ ಬಾನಿ; ಕಲ್ಲಿನ ತೊಟ್ಟಿ; A water tank that built for cattle;
- ಬೀಸುವ ಕಲ್ಲು ತಯಾರಿಸಲು ಬಳಸುವ ಕಲ್ಲು(ಚಿ.ಪ.ಕೋ). a kind of stone that is used to make ready a grinding stone; an handmill-stone.

ಕುರಸಾಣಿ/ಕುರಸಾನಿ kurasāṇi/kurasāni :

- ಎಣ್ಣೆಕಾಳಿನಲ್ಲಿ ಒಂದು; ಗುರೆಳ್ಳು, ಹುಚ್ಚೆಳ್ಳು ಎಂಬ ಹೆಸರು ಇದೆ; Oil/lubricating grains- like sesame; ಕುರಸಾನಿ ಇದು ಇಂಗ್ಲೀಷ್ ಪದದ ಕನ್ನಡ ಅನುವಾದದ ಪದ. ಕುರಸಾನಿ ಎಂದು ಮರಾಠಿ ಭಾಷೆಯಲ್ಲಿ ಎಳ್ಳಿಗೆ ಕರೆಯುತ್ತಾರೆ.
- ಹೊಲದಲ್ಲಿ ರಾಗಿ, ಜೋಳದೊಂದಿಗೆ ಇದನ್ನು ಸಾಲಿನಲ್ಲಿ ಬೀಜ ಬಿತ್ತುವರು; It grows along with millet seeds /crops;
- ಕಪ್ಪಗಿನ ಎಣ್ಣೆ ಅಂಶವನ್ನು ಹೊಂದಿರುವ ಕಾಳು;
- ಗಾಣದಲ್ಲಿ ಕಾಳು ಹಿಂಡಿ ಎಣ್ಣೆ ತೆಗೆಯುವರು; ಇದರಿಂದ ಬಂದ(ಸಿಪ್ಪೆ) ಹಿಂಡಿ ದನ ಕರುಗಳಿಗೆ ಉತ್ತಮ ಆಹಾರ;
- ಹಟ್ಟಿಹಬ್ಬ ಕೊಂತಮ್ಮನ ಪೂಜೆಯಲ್ಲಿ ಹುಚ್ಚೆಳ್ಳಿನ ಹೂವನ್ನು ಬಳಸುವ ಸಂಪ್ರದಾಯವಿದೆ;
- ಉತ್ತರ ಕರ್ನಾಟಕದ ಆಹಾರದಲ್ಲಿ ಗುರೆಳ್ಳು ಹಿಂಡಿ, ಗುರೆಳ್ಳು ಚಟ್ನಿಪುಡಿ ಪ್ರಸಿದ್ಧವಾಗಿದ್ದು ಅಲ್ಲಿನ ಆಹಾರ ತಯಾರಿಕೆಯಲ್ಲಿ ಗುರೆಳ್ಳುಪುಡಿ ಹೆಚ್ಚು ಬಳಕೆ;
- ದಕ್ಷಿಣ ಭಾಗದಲ್ಲಿ ವಿಶೇಷವಾಗಿ ಬಾಣಂತಿಯರಿಗೆ ಮೊದಲ ಮೂರು ತಿಂಗಳ ಪಥ್ಯ ಆಹಾರದಲ್ಲಿ ಹುಚ್ಚೆಳ್ಳಿನ ಎಣ್ಣೆಯನ್ನು ಹೆಚ್ಚು ಬಳಕೆ ಮಾಡುವುದರಿಂದ ಬಾಣಂತಿ ಮೈಕರಗಿ ಮೊದಲ ರೂಪ ಪಡೆಯುತ್ತಾಳೆಂಬ ನಂಬಿಕೆ;

- ನಾಟಿ ಕೋಳಿ ಸಾರಿಗೆ ಹುಚ್ಚೆಳ್ಳು ಅರೆದು ಅದರ ಹಾಲು ಹಿಂಡಿ ಸಾರಿಗೆ ಸೇರಿಸುವುದರಿಂದ ಸಾರಿನ ರುಚಿ ಹೆಚ್ಚುತ್ತದೆ;
- ಪ್ರಯಾಣದಲ್ಲಿ ಬುತ್ತಿಗೆ ಹುಚ್ಚೆಳ್ಳಿನ ಪುಡಿ ನಂಜಿಕೆ; ಹುಚ್ಚೆಳ್ಳು ಹುರಿದು ಖಾರ, ಉಪ್ಪು ಸ್ವಲ್ಪ ಬೆಲ್ಲ ಬೆರಸಿ ಒಳಕಲ್ಲಿನಲ್ಲಿ ಕುಟ್ಟಿ ತಯಾರಿಸಿದ ಪುಡಿ ತುಂಬಾ ದಿನದವರೆಗೂ ಕೆಡದೆ ಇರುತ್ತದೆ.

ಕುರಹಟ್ಟಿ೧ kurahaṭṭi[1] :

- ಪ್ರಾಣಿವಾಚಿ ಸ್ಥಳನಾಮವಾಗಿದೆ; A place named after an animal - sheep;
- 'ಕುರಿಹಟ್ಟಿ'ಯೇ 'ಕುರಹಟ್ಟಿ' ಆಗಿದೆ, ಉಚ್ಚಾರಣೆಯಲ್ಲಿ ಇ>ಅ ಆಗುವುದರ ಮೂಲಕ ಈ ಬದಲಾವಣೆ, 'ಕುರಿಹಟ್ಟಿ' ಉಚ್ಚಾರಣಾ ಕಾಲಾವಾಧಿಗಿಂತ 'ಕುರಹಟ್ಟಿ' ಕಾಲಾವಧಿ ಕಡಿಮೆ ಇರುತ್ತದೆ, ಇದು ಸೌಲಭ್ಯಾಕಾಂಕ್ಷೆಯ ಪರಿ; ಇದು ಮುಂದೆ 'ಕುರಟ್ಟಿ' ಆಗಿಬಿಡುತ್ತದೆ:
  ಕುರ+ಹಟ್ಟಿ>ಕುರ+ಹ್+ಅಟ್ಟಿ>ಕುರ+Ø+ಅಟ್ಟಿ>ಕುರಟ್ಟಿ –'ಹ್' ಶೂನ್ಯಧ್ವನಿಮಾ ಆಗಿ ಮಾರ್ಪಡುವುದು;
- 'ಹಟ್ಟಿ' ಪದ ಹಳಗನ್ನಡದ 'ಪಟ್ಟಿ'ಯಿಂದ ಬಂದಿದೆ; ಕನ್ನಡದಲ್ಲಿ ಪ>ಹ ಆದುದು ಸುಪ್ರಸಿದ್ಧ ವಿಷಯವಷ್ಟೆ;
- ಸಾಮಾನ್ಯವಾಗಿ 'ಹಟ್ಟಿ' ಪದ ಕುರಿಗಳನ್ನು ಕೂಡುತ್ತಿದ್ದ ಸ್ಥಳಕ್ಕೆ ಮೊದಲು ಕರೆಯಲಾಗುತ್ತಿತ್ತು; ಪ್ರಾಚೀನ ರೂಪ ಕೂಡ; ಕ್ರಮೇಣ ಜನ ವಾಸ ಮಾಡುವ ಸ್ಥಳಗಳಿಗೂ ಅನ್ವಯಿಸಲಾಯಿತು; ಮನೆಯಲ್ಲಿ ದನಕುರಿಗಳನ್ನು ಕಟ್ಟುವ ಕೊಟ್ಟಿಗೆಯ ವ್ಯವಸ್ಥೆ ಮಾಡಿಕೊಂಡಿದ್ದರಿಂದ ಜನ ವಾಸಿಸುವ ಮನೆಗೂ 'ಹಟ್ಟಿ' ಎಂದು ಕರೆಯಲು ಕಾರಣವಾಯಿತು;
- ತಮಿಳು ಮಲೆಯಾಳಂ: ಕೊಱಿ; ತೆಲುಗು: ಗೊಱೆ/ಗೊಱ್ಱೆ; ಕೊಡಗು: ಕೊರಿ (ದ್ರಾ.ಭಾ.ಜ್ಞಾ.ಪ.ಕೋ); ತುಳುವಿನಲ್ಲಿ ಕನ್ನಡದ 'ಕುರಿ'ಯೇ ಇದೆ; ತಮಿಳು, ಮಲೆಯಾಳಂ ಮತ್ತು ಕೊಡುಗು ಭಾಷೆಗಳ ಆರಂಭದ 'ಕೊ' ಕನ್ನಡದ 'ಕು'ನ ಮುಂದಿನ ರೂಪ: ಕು>ಕೊ, –ಅಂದರೆ ಉ>ಒ, 'ಸ್ವರವ್ಯತ್ಯಯ'– 'Vowel mutation' ; 'ಕು' ರೂಪವೇ ಪ್ರಾಚೀನ, ಆದಕಾರಣ ದ್ರಾವಿಡ ಭಾಷಾಮೂಲವನ್ನು ರಚಿಸುವಾಗ ಇದು ಅಗತ್ಯ ಪರಿಗಣನೆಗೆ ಬರುತ್ತದೆ; ತೆಲುಗಿನಲ್ಲಿ ಬೇರೆ ಕಡೆಯಲ್ಲಿ ಆಗುವ ಹಾಗೆಯೇ ಇಲ್ಲಿವೂ ಆರಂಭದ 'ಕ' 'ಗ' ಆಗಿದೆ.

(*ನೋಡಿ:* ಪಾಂ.ತಾ.ಸ್ಥ.ನಾ.ಅ)

ಕುರಹಟ್ಟಿ೨ kurahaṭṭi[2] :

- ನಂಜನಗೂಡು ತಾಲ್ಲೋಕಿನ ಕ್ರಿ.ಶ.೧೬೬೨ರ ೩೩೮ನೇ ಶಾಸನದಲ್ಲಿ 'ಕುರಹಟ್ಟಿ' ಊರಿನ ಉಲ್ಲೇಖವಿದೆ; A village Mentioned in 338th inscription during 1662 A.D of Nanjanagudu Taluk; it means hoofs of horse;
- 'ಕುರ' ಎಂದರೆ ಗೊರಸು; ಕುದುರೆ ಎಂಬ ಅರ್ಥ ಬರುವುದು ಸಹಜ; ಕುದುರೆ ಕಾಲಿನ ಶಬ್ದ ಕೂಡ (ಕುರಪುಟ);
- 'ಹಟ್ಟಿ' ಎಂದರೆ ವಾಸಸ್ಥಳ;
- ಬಹುಶಃ ಕುದುರೆಗಳನ್ನು ಸಾಕಲು ಒಂದು ನಿರ್ದಿಷ್ಟ ಸ್ಥಳವಿದ್ದು, ಆ ಹಿನ್ನೆಲೆಯಲ್ಲಿ ಈ ಹೆಸರು ಬಂದಿರಬಹುದು;
- ದೇವರಾಜ ಒಡೆಯರ ಆಳ್ವಿಕೆಯಲ್ಲಿ ದೇವಾಜಮ್ಮ ಎಂಬಾಕೆಯು ಕಳಲೆಯಲ್ಲಿ ಮಠವನ್ನು ಕಟ್ಟಿಸಿ 'ಕುಱ(ರ)ಹಟ್ಟಿ' ಮತ್ತು 'ಸಂಬುಪುರ' ಗ್ರಾಮವನ್ನು ದಾನವಾಗಿ ಕೊಟ್ಟಳು.

(E.C- ೩, ಮೈ.ಜಿ.)

ಕುರಾವು kurāvu :

ದನ ಮೇಯಿಸಲು ಬಿಟ್ಟಿರುವ ಖಾಸಗಿ ಜಾಗ; ಗೋಮಾಳ(ಹಾ.ಜಿ). A cattle grazing area; Grasses land preserved for cattle only.

ಕುರಿ kuri :

- ಒಂದು ಸಾಕುಪ್ರಾಣಿ; ಮಾಂಸಾಹಾರಕ್ಕಾಗಿ, ತುಪ್ಪಟಕ್ಕಾಗಿ, ಗೊಬ್ಬರಕ್ಕಾಗಿ ಸಾಕಲಾಗುತ್ತದೆ; ಕುರಿ ಗೊಬ್ಬರ ಶ್ರೇಷ್ಠವಾದುದು; ಬೇಸಿಗೆಯಲ್ಲಿ ರೈತರು ತಮ್ಮ ಹೊಲಗದ್ದೆಗಳಿಗೆ ಗೊಬ್ಬರಕ್ಕಾಗಿ 'ಮಂದೆ ಕುರಿ'ಯನ್ನು ತಡೆಸುವುದುಂಟು; 'ಮಂದೆ ಕುರಿ'ಯವರು ಸಾಮಾನ್ಯವಾಗಿ ಉತ್ತರ ಕರ್ನಾಟಕದವರೆಂದು ಹೇಳಲಾಗುವುದು; ಹಿಂದೆ 'ಕಾಡ ಸೀಮೆ' ಅಥವಾ 'ಮೂಡಸೀಮೆ'ಯವರು 'ಕುರಿಮಂದೆ'ಯನ್ನು ಬಯಲುಸೀಮೆಗೆ/ಗದ್ದೆ ಸೀಮೆಗೆ

ತರುತ್ತಿದ್ದುದುಂಟು; ಇದೆಲ್ಲ ಬೇಸಾಯಕ್ಕಾಗಿ ನಡೆದದ್ದು; A sheep; pet animal; It is used for its meat, its wool, its fertilizer;

- 'ಕುರಿ' ಸಾಕುವವರನ್ನು 'ಕುರುಬ' ಎಂದು ಕರೆಯಲಾಯಿತು. ಜಾತಿಯ ಹೆಸರು 'ಕುರಿ' ಸಾಕುವ ವೃತ್ತಿಯಿಂದ ಬಂದಿತೆ? ನೋಡಬೇಕು; One who looks ofter sheep is called as shepherd; sheep master;
- 'ಕುರಿ' ಪದಕ್ಕೆ 'ಕೊರಿ' ಎಂಬ ರೂಪವೂ ಇದೆ; ಇಲ್ಲಿ ಉ>ಒ ಆಗಿದೆ, 'Vowel Mutation'ಗೆ ಇದೊಂದು ಉದಾಹರಣೆ; ತ: ಕೊಱಿ; ಮ: ಕೊಱಿ ರೂಪಗಳಿವೆ, ಎರಡೂ ಒಂದೇ; ಕೊಡ: ಕುರಿ/ಕೊರಿ; ತು: ಕುರಿ/ಕುರುಬೆ; ತೆ: ಗೊಱಿ/ಗೊಱ್ಱೆ/ಗೊರ್ರೆ– ಇಲ್ಲಿ ಕ>ಗ ಆಗುವದರ ಜೊತೆಗೆ, ಉ>ಒ(ಗೊಱಿ) ಆಗಿದೆ, ಜೊತೆಗೆ 'ಎ'ತ್ವ ಮತ್ತು ಒತ್ತಕ್ಷರ ಪ್ರಾಪ್ತವಾಗಿದೆ; ದ್ರಾವಿಡ ಭಾಷೆಗಳ ರೂಪಗಳಲ್ಲಿ ಅಂತಹ ವ್ಯತ್ಯಾಸವಿಲ್ಲ; ತೆಲುಗಿನಲ್ಲಿ ಮಾತ್ರ ಸ್ವಲ್ಪ ವ್ಯತ್ಯಾಸ; ತೆಲುಗನ್ನು ಬಿಟ್ಟು ಉಳಿದೆಲ್ಲ ಭಾಷೆಗಳ ಆರಂಭದಲ್ಲಿ 'ಕ' ಕಾರವೇ ಇದೆ; 'ರ'ಕಾರ ಎಲ್ಲ ಭಾಷೆಗಳಲ್ಲಿಯೂ ಒಂದೇ ತೆರನಾಗಿದೆ– ಅಲ್ಪಸ್ವಲ್ಪ ವ್ಯತ್ಯಾಸದೊಡನೆ; ಸಂಸ್ಕೃತದಲ್ಲಿ 'ಮೇಷ' ಪದವಿದ್ದು, ಆ ಮೂಲಕ 'ಮೇಷರಾಶಿ'ಯನ್ನು ಗುರುತಿಸಲಾಗಿದೆ; ಸಂಸ್ಕೃತ ಪದಕ್ಕೂ ಕನ್ನಡ ಪದಕ್ಕೂ ಯಾವುದೇ ಸಂಬಂಧವಿಲ್ಲ; ದ್ರಾವಿಡ ಭಾಷೆಗಳ 'ಕುರಿ/ಕುಱಿ' ಪದ ಸ್ವತಂತ್ರವಾದುದು;
- 'ಕುರಿ' ಪದ ಹೆಣ್ಣು ಕುರಿಗೆ ಮಾತ್ರ ಅನ್ವಯ; ಗಂಡು ಕುರಿಗೆ 'ಟಗರು'(ram) ಎನ್ನುವರು; the other gender of sheep is ram; 'ತಗರ್' ರೂಪವೂ ಇದೆ, ಇದೇ ಮೂಲರೂಪವಾಗಿ, ಆಮೇಲೆ 'ಟಗರ್' ರೂಪ ಬಂದಿರಬಹುದು; 'ತಗರ್' ಮರಾಟಿಯಿಂದ ಬಂದಿದ್ದು, ಕನ್ನಡವನ್ನು ಬಿಟ್ಟು ಉಳಿದೆಲ್ಲ ದ್ರಾವಿಡ ಭಾಷೆಗಳಲ್ಲಿ 'ತಗರ್' ರೂಪವೇ ಇದೆ; 'ಗಂಡು ಕುರಿ'ಯ ಈ ರೂಪಗಳು: ತಮಿಳು: ತಗರ್, ಮಲೆಯಾಳಂ: ತಗರ್; ತೆಲುಗು: ತಗರು; ತುಳುವಿನಲ್ಲಿ ಕನ್ನಡದಂತೆ 'ಟಗರ್' ರೂಪವೇ ಇದೆ; ಕನ್ನಡದಲ್ಲಿಯೂ ಮೂಲದಲ್ಲಿ 'ತಗರ್' ರೂಪವೇ ಇದ್ದು, ಆಮೇಲೆ ಉಚ್ಚಾರಣೆಯಲ್ಲಿ 'ಟಗರ್' ಬಂದಿರಬಹುದು?; Ram fight during new year is famous in Karnataka; kuri means to know, to identify;
- 'ಕುರಿ' ಪದದ ಬಳಕೆಯಲ್ಲಿ 'ಕರಗಿ' ಮತ್ತು 'ಕುರಿಮರಿ' ಎಂಬೆರಡು ರೂಪಗಳಿವೆ; ಮಧ್ಯ ವಯಸ್ಕ ಕುರಿಯನ್ನು 'ಕರಗಿ' ಎಂದೆನ್ನಬಹುದು. ಸೊಂಪಾಗಿ ಬೆಳೆದದ್ದು ಎಂಬ ಅರ್ಥದಲ್ಲಿಯೂ ಇದೆ. 'ಯುವಕುರಿ' ಎಂದು ಬೇಕಾದರೆ ಕರೆಯಬಹುದು; 'ಕುರಿಮರಿ' ಎಳೆಯ ಕುರಿಯನ್ನು ಹೇಳುವಂಥದ್ದು, 'Lamb' ಇಂಗ್ಲಿಷಿನಲ್ಲಿ;
- 'ಕುರಿ'ಯ ಭೇದಗಳು: ಕರಿಕುರಿ, ಕೆಂದ್ಗುರಿ, ಬಿಳಿಕುರಿ(ಸಾಮಾನ್ಯ); ಪ್ರದೇಶವಾರಾಗಿಯೂ ವಿಂಗಡಿಸಬಹುದು; ಉದಾಹರಣೆಗೆ 'ಬಂಡೂರು ಕುರಿ', ಮೈಸೂರು ಮತ್ತು ಮಂಡ್ಯ ಜಿಲ್ಲೆಯಲ್ಲಿ ಪ್ರಸಿದ್ಧವಿರುವ 'ಬನ್ನೂರ ಕುರಿ', ಇದು ನಿಜವಾಗಿಯೂ 'ಬಂಡೂರು ಕುರಿ'– ಮಂಡ್ಯ ಜಿಲ್ಲೆಯ ಕಿರುಗಾವಲು ಸಮೀಪ 'ಬಂಡೂರು' ಎಂಬ ಊರಿದೆ. ಈ ಊರಿನ ಕುರಿಯನ್ನೆ 'ಬಂಡೂರು ಕುರಿ' ಎನ್ನುತ್ತಿದ್ದರು. ಇದು ಕ್ರಮೇಣ 'ಬನ್ನೂರು ಕುರಿ' ಆಗಿಬಿಟ್ಟಿದೆ– ಬಣ್ಣೂರು>ಬನ್ಡೂರು>ಬನ್ನೂರು– ಬನ್ನೂರು ಸಂತೆಯಲ್ಲಿ ಇದನ್ನು ಮಾರುತ್ತಿದ್ದರಿಂದಲೂ ಇದಕ್ಕೆ ಈ ಹೆಸರು ಬಂದಿರುವ ಸಾಧ್ಯತೆ ಇದೆ;
- 'ಕುರಿ'ಯನ್ನು ಕುರಿತು ಈ ಗಾದೆಗಳಿವೆ: 'ಕುರಿ ಕಾಯೋ ತೋಳಾ ಅಂದ್ರೆ ಸಂಬಳವೇ ಬೇಡ'(ಸ.ಕ.ಗಾ.ಸಂ.೨), 'ಕುರಿ ಕೊಬ್ಬಿದಷ್ಟೂ ಕುರುಬನಿಗೆ ಲಾಭ'(ಅದೇ); 'ಕುರಿ ಕೊಟ್ಟೋರಿಗೆ ಮರಿಕೊಡಬೇಕು'(ಅದೇ); ಮೊದಲನೆಯದು ಮೇವು ಮತ್ತು ಮೇಯುವ ಜನಸಂಸ್ಕೃತಿಯನ್ನು ತಿಳಿಸುವಂಥದು; ಎರಡನೆಯದು ಕೊಬ್ಬಿದ ಕುರಿಯ ತುಪ್ಪಟ ಕುರುಬನಿಗಾದ ಲಾಭವನ್ನು ಕುರಿತದ್ದು, ಹಾಗೆ ಶೋಷಣೆಯ ವಾಸನೆಯನ್ನು ಧರಿಸಿಕೊಂಡಿರುವಂಥದು; ಮೂರನೆಯದು ವಿಲಕ್ಷಣ ಸಂಪ್ರದಾಯವನ್ನು ತಿಳಿಸುವಂತಿದೆ, ಕುರಿ ಕೊಟ್ಟರೆ ಕೂಡಲೇ ಮಾಂಸಾಹಾರವಾಗಿ ಬಿಡುವುದು, ಆದರೆ ಅದರ ಜೊತೆಗೆ ಕೊಟ್ಟ ಮರಿ ಸಂತಾನ ಬೆಳೆಸುವುದು, ಕುರಿ ಕೊಂಡವನಿಗೆ ಅದರಿಂದ ಲಾಭವಾಗುವುದು ಎಂಬ ಆಶಯವಿರುವಂತಿದೆ; ಒಂದು ಪಾರಂಪರಿಕ ಉಲ್ಲೇಖ ಇದಾಗಿದೆ;

- 'ಕುರಿ' ಪದವನ್ನು ರೂಪಕ/ಪ್ರತಿಮೆಯಾಗಿ, ವ್ಯಂಗ್ಯವಾಗಿ ಬಳಸುವುದಿದೆ, 'ಕುರಿ ಹಳ್ಳಕ್ಕೆ ಬಿದ್ದಂತೆ ಜನಬಿದ್ದರು' ಎಂಬುದು ಅಂಥದರಲ್ಲಿ ಒಂದು; ಏನೂ ತಿಳಿಯದ, ಮಂದ, ದಡ್ಡತನದ ಪ್ರವೃತ್ತಿಗೆ ಒಡ್ಡಿದ ಪ್ರತಿಮೆ; ಕುರಿಗಳು ಯಾವಾಗಲೂ ತಲೆಯನ್ನು ಕೆಳಕ್ಕೆ ಹಾಕುವುದು 'ಅಧೀನತೆಗೆ', 'ಅಧೀರತೆಗೆ' ಸಂಕೇತ/ಪ್ರತಿಮೆ ಆಗಬಹುದು; 'ಕುರಿಗಳು ಸಾರ್ ಕುರಿಗಳು' (ನಿಸಾರ್ ಅಹಮದ್) ಪದ್ಯವೂ ಈ ಬಗೆಯ 'ಶೋಷಕ ಸಂಸ್ಕೃತಿ'ಯ ಪ್ರವೃತ್ತಿಯನ್ನು ಹೇಳುತ್ತದೆ;
- ಬಸವಣ್ಣನವರು 'ಕುರಿತನ' ಕುರಿತು ಹೇಳಿದ ವಚನ ತುಂಬ ಚೆನ್ನಾಗಿದೆ; "ಹಬ್ಬಕ್ಕೆ ತಂದ ಹರಕೆಕುರಿ, ತೋರಣಕೆ ತಂದ ತಳಿರ ಮೇಯಿತ್ತು"(ಬ.ವ.ಸಂ.೮೩)–'ಹರಕೆಯಕುರಿ' ಸಂಸ್ಕೃತಿಯ ಸಂಪ್ರದಾಯವೊಂದನ್ನು ಬಿಂಬಿಸುವುದು ಮಾತ್ರವಲ್ಲದೆ, ರೂಪಕ ಧ್ವನಿಯಾಗಿ ಕೂಡ ಕೆಲಸ ಮಾಡುತ್ತದೆ; 'ಬಲಿಪಶು'ಗಳಾಗುತ್ತಿರುವವರ ಪ್ರತಿಮೆ ಇದು; ಸಾವು ಮತ್ತು ಬದುಕಿನ ನಿಕಟತನವನ್ನು ಸೂಚಿಸಲು ಕೂಡ ಇದು ಬಂದಂತಿದೆ; ಮನುಷ್ಯ ಬದುಕಿಗೆ ಹೇಗೆ ಅಂಟುಕೊಂಡಿದ್ದಾನೆಂದರೆ, ಕುರಿ ತನ್ನನ್ನು ಮುಂದೆ 'ಬಲಿ' ಮಾಡುತ್ತಾರೆಂಬುದು ಗೊತ್ತಿರದೆ 'ತಳಿರ' ಮೇಯುವ ಪ್ರಸಂಗವನ್ನು ಬಸವಣ್ಣನವರು ತರುತ್ತಾರೆ; ಎಷ್ಟೋ ಅಮಾಯಾಕರ ಜೀವನವನ್ನು ಇಲ್ಲಿ ಪ್ರತಿಮಾತ್ಮಕವಾಗಿ ತಿಳಿಸಲಾಗಿದೆ; ಮೋಸ ಹೋಗುವ ಜನರ 'ಅಮಾಯಕತನ'ದ ಬಗ್ಗೆ ವಚನ ಮಾತಾಡುವಂತಿದೆ';
- 'ಕುರಿ' ಪದದ ಅರ್ಥ ಸ್ಪಷ್ಟವೇ ಇದೆ; ಅದರ ಜೊತೆಗೆ ಉಪಯುಕ್ತತೆಗೆ, ವಸ್ತ್ರ ಸಂಸ್ಕೃತಿಗೆ, ಆಹಾರ ಸಂಸ್ಕೃತಿಗೆ ಅನುಕೂಲಕರವಾದುದು; ಸಾಂಕೇತಿಕವಾದುದು; ಮನುಷ್ಯ ಸಂಸ್ಕೃತಿಯಲ್ಲಿ ಮೂಲಭೂತ ಅಗತ್ಯಗಳೆಂದು ಪರಿಗಣಿತವಾಗಿರುವುದು ಮೂರು: ವಸತಿ, ವಸ್ತ್ರ, ಆಹಾರ; 'ಕುರಿ' ಕೊನೆಯ ಎರಡನ್ನು ನೆರವೇರಿಸುತ್ತದೆ ಎಂದು ಹೇಳಬಹುದು;
- 'ಕುರಿ' 'ಬಲಿಸಂಸ್ಕೃತಿ'ಯಲ್ಲೂ ಕಾಣಿಸಿಕೊಳ್ಳುವಂಥದು; ದೇವತೆಗಳಿಗೆ– ಅದರಲ್ಲಿಯೂ ಶಕ್ತಿದೇವತೆಗಳಿಗೆ ಹಬ್ಬಗಳಲ್ಲಿ ಕುರಿ, ಕೋಳಿಗಳನ್ನು ಕೊಡುತ್ತಿದ್ದ ಸಂಪ್ರದಾಯ ಇವೊತ್ತಿಗೂ ಇದೆ; 'ಗಾವು ಸಿಗಿಯೋದು' ಒಂದು ಪ್ರಸಿದ್ಧ ಆಚರಣೆ; ದೇವರಗುಡ್ಡ ಕುರಿಯ ಕತ್ತನ್ನು ಕಚ್ಚಿ ರಕ್ತ ಹೀರುವ ಸಂಪ್ರದಾಯ ಇವರದು; ಈ ಆಚರಣೆಗೆ ಬಲಿಯಾದ 'ಕುರಿ'ಯನ್ನು 'ದೇವರ ಕುರಿ' ಎಂದು ಕರೆಯಲಾಗುವುದು; ಇದು ಬಲಿಸಂಸ್ಕೃತಿಯ ವೈಭವೀಕರಣವಲ್ಲದೆ ಬೇರಲ್ಲ;
- 'ಗಂಡುಕುರಿ'ಯಾದ 'ಟಗರು ಕಾಳಗ' ಕೂಡ ಇದೆ; ಯುಗಾದಿ ಸಮಯದಲ್ಲಿ ಮನರಂಜನೆಗಾಗಿ ಈ ಪಂದ್ಯವನ್ನು ಏರ್ಪಡಿಸಲಾಗುತ್ತಿತ್ತು; ಆದರೆ 'ಕೋಳಿ ಅಂಕ'ದ ಹಾಗೆ 'ಟಗರು ಕಾಳಗ' ವಾರ್ಷಿಕ ಪಂದ್ಯದ ಸಂಪ್ರದಾಯದ ಭಾಗವಾಗಿ ಕೆಲಸ ಮಾಡುತ್ತಿದ್ದುದು ವಿರಳ; ಒಂದೆರಡು ಕಡೆ ಅಂತಹ ಸಾಂಪ್ರದಾಯಿಕ ಪಂದ್ಯಗಳು ಸಿಕ್ಕಬಹುದು;
- 'ಕುರಿ' ಕುರಿತು ಪ್ರಾಸಗಳೂ ರಚಿತವಾಗಿವೆ: ಉದಾಹರಣೆಯಾಗಿ: 'ತರಿಕೆರೆ ಏರಿಮ್ಯಾಲೆ ಮೂರು ಕರಿಕುರಿ ಮೇಯ್ತಿತ್ತು';
- 'ಕುರಿ' ಪದಕ್ಕೆ ಇತರ ಅರ್ಥಗಳೂ ಇವೆ: ಕುರಿತಂತೆ, ಕುರಿ, ತಿಳಿ, ಗುರುತು, ಉದ್ದೇಶ, ಮನಸ್ಸಿಗೆ ಬರು; ಪ್ರ: 'ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತ ಮತಿಗಳ್' ('ಕವಿರಾಜ ಮಾರ್ಗ'ದಲ್ಲಿ ಉಲ್ಲೇಖಿತ).
- ***—ಕರಗಿ*** : ಪ್ರಾಯದ ಹೆಣ್ಣು ಕುರಿ; ಇನ್ನು ಮರಿ ಹಾಕದಿರುವ ಹೆಣ್ಣು ಕುರಿ; An youthful adult sheep;
- ***—ಕುರಿಕಳ*** : ಕೊಡಗಿನ ಭಾಗದಲ್ಲಿ ವಾಸಿಸುವ ಒಂದು ಸಮುದಾಯದ ಹೆಸರು; ಇವರು ಶಕುನಗಳನ್ನು ನೋಡಿ ಹೇಳುವ, ಮಂತ್ರಿಸಿದ ದಾರ, ತಾಯತಗಳನ್ನು ಹೆದರಿದವರಿಗೆ ಕಟ್ಟುವ ವೃತ್ತಿ ನಿರ್ವಹಿಸುವವರು; A name of a caste or community lived in Kodagu, Karnataka;
- ***—ಕುರಿ ಕರೆಯುವುದು*** : ಬುಡಕಟ್ಟು ಸಮುದಾಯದಲ್ಲಿ ಅದರಲ್ಲಿಯೂ ವಿಶೇಷವಾಗಿ ಗೊಲ್ಲರು, ಕುರುಬರು, ಕುಂಚಿಟಗರು, ಬೇಡರಲ್ಲಿ ಕಂಡುಬರುವ ಮನರಂಜನಾತ್ಮಕ ಜನಪದ ಆಟ; ದೇವರ ಮೆರವಣಿಗೆ, ಜಾತ್ರೆ ಇಂತಹ ಸಂದರ್ಭದಲ್ಲಿ ಕುರಿ ಕರೆಯುವುದು ಆಚರಣೆಯಲ್ಲಿದೆ; ಮೂರ್‍ನಾಲ್ಕು ಗುಂಪಿನ ಕುರಿಗಳನ್ನು ಕರೆಯುವುದು ರೂಢಿ; ಕುರಿಯ ಒಡೆಯ ಕುರಿಗಳ ಮಧ್ಯ ಇದ್ದು ಸುತ್ತ ಜನ,

ವಾದ್ಯಗಳ ಶಬ್ದದೊಂದಿಗೆ ಕುರಿ ಮತ್ತು ಒಡೆಯ ಗುಡಿಯ ಸುತ್ತ ಹತ್ತರಿಂದ ಹದಿನೈದು ನಿಮಿಷ ವೇಗವಾಗಿ ಒಂದೇ ಸಮನೆ ಸುತ್ತುತ್ತವೆ; ನೆರೆದ ಜನಗಳ ಕೇಕೆ, ಚಪ್ಪಾಳೆ ಶಬ್ದಕ್ಕೆ ಕುರಿಗಳು ವೇಗವಾಗಿ ಸುತ್ತುವುದರಿಂದ ಇದೊಂದು ಮನರಂಜನೆಯಾಗಿದೆ; ಹೀಗೆ ಉಳಿದ ಗುಂಪಿನ ಕುರಿಗಳು ಸುತ್ತುವುದರೊಂದಿಗೆ ಆಟ ಮುಂದುವರೆಯುತ್ತದೆ. A entertainment folk game played in the tribes of Golla- Herdsman, Kunchitiga Farmer, `Beda Hunters';

- ***—ಕುರಿಗಣ/ಕುರಿ ತುಳಿಸುವುದು*** : ಸುಗ್ಗಿಯಲ್ಲಿ ಒಕ್ಕಣೆಗಾಗಿ ಕಣ ಮಾಡುವಾಗ ಹಿಂದಿನ ರಾತ್ರಿ ಕಣಕ್ಕೆ ನೀರು ಹಾಕಿ ಚೆನ್ನಾಗಿ ನೆನೆಸಿ ಬೆಳಿಗ್ಗೆ ಕುರಿಗಳ ಹಿಂಡು ತಂದು ಕಣದಲ್ಲಿ ಸುತ್ತಲೂ ಬಿಡುವುದು; ಅವುಗಳ ತುಳಿತದಿಂದಾಗಿ ಕಣದ ಮಣ್ಣು ಗಟ್ಟಿಯಾಗುತ್ತದೆ; ನಂತರ ಸ್ವಲ್ಪ ಒಣಗಿದ ನಂತರ ತೊಗರಿ ಕಡ್ಡಿಯ ಪೊರಕೆಯಿಂದ ಕಣ ಗುಡಿಸಿ ಒಣಗಲು ಬಿಡುವರು; To make thrashing floor; Sheep are used to walk on the floor to pedal the ground bit by bit to strengthen a day earlier of the threshing floor;
- ***—ಕುರಿತ್ವಾಳನಾಟ*** : ಕುರಿಗೂ ತೋಳಕ್ಕು ಪರಸ್ಪರ ವಿರೋಧವಿದ್ದು ತೋಳ ಕುರಿಯನ್ನು ಹಿಡಿದು ತಿನ್ನಲೇ ಬೇಕೆಂಬ ಉದ್ದೇಶದಿಂದಾಗಿ ಕುರಿಯನ್ನು ಹುಡುಕುತ್ತಾ ಹೋಗುವ ತೋಳನ ವಿಶಿಷ್ಟ ಭಂಗಿಯನ್ನು ಪ್ರದರ್ಶಿಸುವ ಆಟ; ಇಲ್ಲಿ ಎಷ್ಟು ಜನರಿದ್ದರೂ ಆಟದಲ್ಲಿ ಸೇರಿಕೊಳ್ಳಬಹುದು; ಮುಖ್ಯವಾಗಿ ಒಬ್ಬ ತೋಳವಾಗಿ ಇನ್ನೊಬ್ಬ ಕುರಿಯಾಗಿ ಆಟದ ಆಕರ್ಷಕ ಬಿಂದುಗಳಾಗಿರುತ್ತಾರೆ; ಉಳಿದವರು ಕೈ ಕೈ ಹಿಡಿದು ಕೋಟೆ ನಿರ್ಮಿಸುವರು; ಆಟಗಾರರಲ್ಲಿ ತೋಳ ಕೋಟೆಯ ಹೊರಗೆ ಕುರಿ ಕೋಟೆ ಒಳಗೆ ಇರುವರು; ತೋಳ ಕೋಟೆಯನ್ನು ಭೇದಿಸಿ ಒಳಹೊಕ್ಕು ಕುರಿಹಿಡಿಯಲು ಪ್ರಯತ್ನಿಸುತ್ತದೆ; ಆಗ ಕೋಟೆ ನಿರ್ಮಿಸಿರುವವರು ತೋಳವನ್ನು ಒಳಕ್ಕೆ ಬಿಡದ ಹಾಗೆ ತಡೆಯಬೇಕು. ಹೀಗೆ ತೋಳ ಎಷ್ಟು ಪ್ರಯತ್ನಿಸಿದರೂ ಕೋಟೆ ಒಳಗೆ ಹೋಗದಂತೆ ತಡೆಯುತ್ತಿರುವಾಗ ತೋಳ ಬುದ್ಧಿವಂತಿಕೆಯಿಂದ ಕೋಟೆ ಭೇದಿಸಿ ಒಳಹೋಗಿ ಕುರಿ ಹಿಡಿಯುವುದೇ ಈ ಆಟದ ವಿಶೇಷ; ಉತ್ತರ ಕರ್ನಾಟಕ ಭಾಗದಲ್ಲಿ ಕುರಿ ತ್ವಾಳನಾಟ ಹೆಚ್ಚು ಪ್ರಚಲಿತದಲ್ಲಿದೆ. A play of sheep and jackal; a folk game;
- ***—ಕುರಿಬಿಡು*** : ಬೆಳಗಿನ ಹತ್ತರಿಂದ ಹನ್ನೊಂದು ಗಂಟೆ ಅವಧಿ; 'ಕುರಿ ಬಿಡುವ ಹೊತ್ತು', ಕುರಿ ಕಾಯುವವರು ಊಟ ಮಾಡಿ ನಂತರ ತಮ್ಮ ತಮ್ಮ ಕುರಿಗಳನ್ನು ಗುಂಪುಗುಂಪಾಗಿ ಬಯಲಿಗೆ ಹೊಡೆದುಕೊಂಡು ಹೋಗಿ ಮೇಯಿಸುವರು; ಇದೇ ಕುರಿ ಬಿಡುವುದು. A time of departing sheep to graze from their stay at night;
- ***—ಕುರಿಗಾಹಿ*** : ಕುರಿ ಮೇಯಿಸುವುದನ್ನು ಕಾಯಕ ಮಾಡಿಕೊಂಡು ಅದರಿಂದ ಜೀವನ ನಿರ್ವಹಿಸುವವನು;
- ಯಾವುದೇ ರೀತಿಯ ಕೆಲಸಕ್ಕೂ ಬಾರದವನು ಎಂಬರ್ಥ; ದಡ್ಡ, ಅಪ್ರಯೋಜಕ; ಪ್ರ: 'ನೀನು ಕುರಿ ಕಾಯೋಕೆ ಲಾಯಕ್ಕು'.
- ***—ಕುರಿಕಾಲಚ್ಚು*** : ಕುರಿಕಾಲಿನಷ್ಟು ಚಿಕ್ಕಚಿಕ್ಕ ಕುಳಿಗಳನ್ನು ಉಳ್ಳ ಮರದಿಂದ ಮಾಡಿದ ಅಚ್ಚಿನ ಮಣೆ; ಇದಕ್ಕೆ ಬೆಲ್ಲದ ಪಾಕ ಸುರಿದು ಮಾಡಿದ ಬೆಲ್ಲದ ಅಚ್ಚು; ಆಲೆಮನೆಯಲ್ಲಿ ಬಕೇಟುಬೆಲ್ಲ, ಉಂಡೆಬೆಲ್ಲ, ಅಚ್ಚಿನ ಬೆಲ್ಲ ಹೀಗೆ ಇನ್ನು ಅನೇಕ ಬಗೆಗಳಿದ್ದು ಅವುಗಳಲ್ಲಿ ಕುರಿಕಾಲಚ್ಚು ಒಂದು ಬಗೆ. A wooden plank that has small pit measures sheep hoof;
- ***—ಕುರಿಕಾಲ ಅಚ್ಚುಮಣೆ*** : ದೊಡ್ಡ ಮರದ ಹಲಗೆಯಲ್ಲಿ ಸಣ್ಣ ಸಣ್ಣದಾಗಿ ಕುಂಕಾಲಿನ ಹೆಜ್ಜೆಯಂತೆ ಗುಳಿ ಕೆತ್ತಿರುವುದು; ಇದಕ್ಕೆ ಬಿಸಿಬೆಲ್ಲದ ಪಾಕ ಹಾಕಿ ಕುರಿಕಾಲಚ್ಚು ಬೆಲ್ಲ ತಯಾರಿಸುವರು. A big wooden plank that has small pits and user to do jaggory;
- ***—ಕುರಿಕೊಪ್ಪಲು/ಕುರಿದೊಡ್ಡಿ/ರೊಪ್ಪ*** : ಕುರಿಗಳನ್ನು ರಾತ್ರಿ ವೇಳೆ ಒಂದೆಡೆ ಕೂಡುವ ಸ್ಥಳ; ರೊಪ್ಪ; ಕುರಿದೊಡ್ಡಿ ನಿರ್ದಿಷ್ಟ ಸುತ್ತಳತೆಯಲ್ಲಿ ಸುತ್ತಲೂ ಬಿದಿರಿನ ಗಳದಿಂದ ನಿರ್ಮಿಸಿದ್ದು; ಇದರೊಳಗೆ ಕುರಿಹಿಂಡನ್ನು ಕೂಡುವರು; Sheepfold or sheep pen where sheep and shepherds stay at night;

- ***—ಕುರಿಕೋಲು*** : ಕುರಿಕಾಯುವವರು ಕುರಿಗಳು ಅತ್ತ ಇತ್ತ ಹೋಗದಂತೆ ನಿಯಂತ್ರಿಸಲು ಬಳಸುವ ಬಿದಿರಿನ ಉದ್ದವಾದ ದೊಣ್ಣೆ ಅಥವಾ ಕೋಲು. A long wooden stick or cudgel to control sheep grass while grazing in plains;
- ***—ಕುರಿಗೊಬ್ಬರ*** : ಕುರಿಯ ಹಿಕ್ಕೆ ಮತ್ತು ಮೂತ್ರದ ಗೊಬ್ಬರ; ಇದು ಹೊಲಗದ್ದೆಗಳಿಗೆ ಉತ್ತಮ ಸಾರಾಂಶ ಒದಗಿಸಿ ಒಳ್ಳೆಯ ಫಸಲು ತೆಗೆಯಲು ಬಳಕೆ. The ordure of sheep is called as sheep fertilizer;
- ***—ಕುರಿ ತರ್‍ಸೋದು/ಕುರಿ ತಡೆಯುವುದು/ಮಂದೆ ತಡೆಯುವುದು*** : ಸಾವಿರಾರು ಸಂಖ್ಯೆಯಲ್ಲಿರುವ ಕುರಿ ಹಿಂಡನ್ನು ಕುರಿಗಾಹಿಗೆ ದುಡ್ಡು, ದವಸ, ಧಾನ್ಯ ಕೊಟ್ಟು ರೈತ ತನ್ನ ಹೊಲದಲ್ಲಿ ಕೆಲವು ರಾತ್ರಿ ತಂಗುವಂತೆ ಮಾಡುವುದು; ಹೊಲಗದ್ದೆಯಲ್ಲಿ ಬಿತ್ತನೆಗೆ ಮೊದಲು ಕುರಿ ತಡೆಯುವುದರಿಂದ ಅದರ ಹಿಕ್ಕೆ, ಮೂತ್ರದಿಂದ ಭೂಮಿಯ ಫಲವತ್ತತೆ ಹೆಚ್ಚುವುದು. To fertilize the land, farmers offering money, grain to sheep master to stay in one's land at night;
- ***—ಕುರಿ ತುಳಿಸುವುದು*** : ಬಿತ್ತದ ಹೊಲಗದ್ದೆಗಳಿಗೆ ಸಕಾಲಕ್ಕೆ ಮಳೆ ಬಾರದಿದ್ದಾಗ ನೆಲದ ಬಿಗಿ ಅಥವಾ ಗಡಸುತನ ಹೆಚ್ಚುತ್ತದೆ; ಆ ಸಂದರ್ಭದಲ್ಲಿ ಕುರಿ ಮಂದೆಯನ್ನು ಹೊಲಕ್ಕೆ ಕರೆಸಿ ಭೂಮಿಯನ್ನು ತುಳಿಸುವುದರಿಂದ ಮಣ್ಣು ಸಡಿಲವಾಗುತ್ತದೆ; ಉಳುಮೆ ಮಾಡಲು ಇದರಿಂದ ಅನುಕೂಲವಾಗುತ್ತದೆ(ತು.ಜ). To peddle the lands to loose the surface of the land by sheep;
- ***—ಕುರಿ ತುಪ್ಪಟ ತೂಗುವ ತಕ್ಕಡಿ*** : ಕಗ್ಗಲಿ ಮರದಿಂದ ತಯಾರಿಸಿದ ತಕ್ಕಡಿ; ಒಂದು ತುದಿಯಲ್ಲಿ ಮಾತ್ರ ತಕ್ಕಡಿಯ ತಟ್ಟೆಯನ್ನು ಹೊಂದಿದ್ದು ಅದರಲ್ಲಿ ತುಪ್ಪಟ ತುಂಬಿ ದಂಡದಲ್ಲಿರುವ ಸಣ್ಣ ಹಗ್ಗವನ್ನು ಹಿಡಿದೆತ್ತಿ ದಂಡದಲ್ಲಿರುವ ಗೆರೆಗಳನ್ನು ಆಧಾರವಾಗಿಟ್ಟುಕೊಂಡು ನಿರ್ಧರಿಸುವರು. A balance of weighing sheep wool;
- ***—ಕುರಿಕಾಲುಸೂಪ್/ರಸ*** : ಕುರಿಕಾಲನ್ನು ಸೀದು ಕೂದಲು ತೆಗೆದು ತೊಳೆದು ಕತ್ತರಿಸಿ ಚೆನ್ನಾಗಿ ಬೇಯಿಸುವರು; ಬೆಂದ ನಂತರ ಪಾತ್ರೆಯ ಮೇಲ್ಭಾಗಕ್ಕೆ ಕಾಲಿನ ತುಪ್ಪದ ಅಂಶ ತೇಲುತ್ತಾ ಬಂದಿರುವುದು; ಆ ರಸಕ್ಕೆ ಕರಿಮೆಣಸಿನ ಪುಡಿ, ಉಪ್ಪು, ಈರುಳ್ಳಿ, ಅರಿಶಿನ ಹಾಕಿ ಮೂಳೆಮುರಿತಕ್ಕೆ ಒಳಗಾದವರಿಗೆ, ನಿಶ್ಯಕ್ತಿ ಹೊಂದಿದವರಿಗೆ, ರೋಗಿಗಳಿಗೆ, ಬಾಣಂತಿಯರಿಗೆ, ವಿಶೇಷವಾದ ಆರೈಕೆಯ ಹಿನ್ನಲೆಯಲ್ಲಿ ರಸವನ್ನು ಕುಡಿಸುವರು; ಇದು ಹೆಚ್ಚು ಶಕ್ತಿದಾಯಕವಾಗಿದೆ; ನಂತರ ಬೆಂದ ಕುರಿಕಾಲಿಗೆ ಮಸಾಲೆ ಸೇರಿಸಿ ಕಾಲಿನ ಸಾರು ತಯಾರಿಸುವರು; A boiled soup of sheep legs, this soup is made up of onion, salt, turmeric, chilly powder to give delivered women as nutrition and protein food;
- ***—ಕುರಿ ಬಾಡು ಉಪ್ನೀರು*** : ಕುರಿ ಮಾಂಸವನ್ನು ಉಪ್ಪು ಹಾಕಿ ಬೇಯಿಸಿಕೊಂಡು ಅದಕ್ಕೆ ಬೆಳ್ಳುಳ್ಳಿ, ಈರುಳ್ಳಿ, ಮೆಣಸಿನಪುಡಿ, ಅರಿಶಿನ, ಧನಿಯಾ, ಶುಂಠಿ, ಹಸಿಕೊಬ್ಬರಿ, ಗಸಗಸೆ, ಚಕ್ಕೆ, ಲವಂಗ, ಏಲಕ್ಕಿ, ಕೊತ್ತಂಬರಿಸೊಪ್ಪು ಎಲ್ಲವನ್ನು ರುಬ್ಬಿದ ಮಸಾಲೆ ಸೇರಿಸಿ ಬೇಯಿಸುವುದು; ಆನಂತರ ಮಾಂಸವನ್ನು ಬಸಿದುಕೊಂಡು ಪ್ರತ್ಯೇಕಿಸಿ ಮಾಂಸಕ್ಕೆ ಈರುಳ್ಳಿ, ಖಾರದಪುಡಿ, ಅರಿಶಿನ, ಬೆಳ್ಳುಳ್ಳಿ, ಹಾಕಿ ಒಗ್ಗರಣೆ ಕೊಡುವುದು; ಬಾಡಿನ ಸಾರು, ಹುರಿದ ಮಾಂಸದೊಂದಿಗೆ ರಾಗಿ ಮುದ್ದೆ ಊಟ ತುಂಬಾ ಸೊಗಸಾದ ರುಚಿ ನೀಡುತ್ತದೆ. Sheep mutton boiled with salt, ginger, onion, chilly powder, turmeric and spices;
- ***—ಕುರಿ ಕಡುಬು*** : ಕುರಿಮಾಂಸದ ಸಾರು, ಕೈಮಾದ ಉಂಡೆಯ ಸಾರು, ಬೋಟಿಗೊಜ್ಜು ಇವುಗಳೊಂದಿಗೆ ಕಡುಬು ಅಥವಾ ಇಡ್ಲಿಯ ಹೊಂದಾಣಿಕೆಯ ರುಚಿ, ಹೆಚ್ಚು ಜನಪ್ರಿಯ; ಕೋಳಿ ಕಜ್ಜಾಯ, ಮೀನುರೊಟ್ಟಿಯ ರುಚಿಹೊಂದಾಣಿಕೆಯಂತೆ ಕುರಿಕಡುಬು ಹೆಚ್ಚು ರುಚಿಹೊಂದಿದೆ. Dried or curry; A lump of sheep mutton;
- ***—ಕುರಿಯೋರು*** : ಕೃಷ್ಣಗೊಲ್ಲರಲ್ಲಿನ ಒಂದು ಬೆಡಗು; The sub caste of Herdsmen;
- ***—ಕುರಿಮರಿ ಆಟ*** : ಸಣ್ಣಮಕ್ಕಳು ಹಠ ಮಾಡುವಾಗ ಅವರನ್ನು ಸಮಾಧಾನಪಡಿಸಲು ಕುತ್ತಿಗೆಯ ಭುಜದ ಮೇಲೆ ಕೂಡಿಸಿಕೊಂಡು ಎರಡು ಕಾಲು ಕೈಗಳನ್ನು

ಎಡಬಲ ಕೈಗಳಿಂದ ಹಿಡಿದು ಆಚೆಈಚೆ ನಡೆದಾಡಿ ಮನೆಯಲ್ಲಿರುವ ಇತರರಿಗೆ ಕುಂಕಿಮರಿ, ಕುರಿಮರಿ ಬೇಕೇನ್ರವ್ವಾ ಎಂದು ಕೇಳುತ್ತಾ ನಮ್ಮ ಕುರಿ ಮರಿ ಶಾನ್ಯಾದೈತಿ ತೊಗೊಂತಿರೆನವ್ವ ಎಂದು ಕೇಳುವರು; ಆಗ ಎದುರಿನವರು ಬ್ಯಾಡ್ರವ್ವ ನಿಮ್ಮ ಕುಂಕಿಮರಿ ಬಾಳ ಹಠ ಮಾಡುತ್ತೈತಿ ತೊಗೊದಿಲ್ಲ ಎನ್ನುವರು; ಹೀಗೆ ಮನೆಯಲ್ಲಿರುವವರೊಂದಿಗೆ ಪ್ರಶ್ನಿಸುತ್ತಾ ಆಟವಾಗಿ ಹಠ ಮಾಡಿ ಅಳುವ ಮಕ್ಕಳನ್ನು ರಮಿಸುವ ಆಟ; ಇದು ಉತ್ತರ ಕರ್ನಾಟಕದ ಗ್ರಾಮೀಣ ಆಟ(ಬಿ.ಜಿ). To console crying baby this game is being played by parents lifting and sealed that baby on one's back neck part or shoulder;

- ***—ಕುರಿಮಳೆ ಮೊಗಟು*** : ಹದವಾದ ಮಣ್ಣಿನಲ್ಲಿ ಮುಂಗಾರು ಮಳೆ ಆರಂಭವಾದಾಗ ಮೆದುವಾಗಿರುವ, ತಂಪಾಗಿರುವ ಸ್ಥಳ, ಹುತ್ತದ ಭಾಗದಲ್ಲಿ ಏಳುವ ಸಣ್ಣ ಹೂವಿನಂತಿರುವ ಬಿಳಿ ಬಣ್ಣದ ಅಣಬೆ; ಇದನ್ನು ಹುತ್ತದ ಅಣಬೆ ಎನ್ನುವರು; ಇದರಿಂದ ಸಾರು, ಪಲ್ಯ, ತಯಾರಿಸುವರು; ತುಂಬಾ ರುಚಿಯನ್ನು ಕೊಡುವ ಅಣಬೆ. A white eatable fungus that sprout out near anthills during rainy season;
- ***—ಕುರಿಖಂಡ*** : ಇದೊಂದು ಕತೆಗಳಲ್ಲಿ ಬರುವ ಕಾಲ್ಪನಿಕ ದೇಶ(ಶಿ.ಜಿ); An imaginary continent in folk stories;
- ***—ಕುರಿಬೆಳ್ಳಿ*** : ಶುದ್ಧವಾದ, ಚೊಕ್ಕ, ಅಪ್ಪಟ ಬೆಳ್ಳಿ; ಬೇರೆ ಯಾವುದೇ ಲೋಹ ಮಿಶ್ರವಾಗಿರದ ಬೆಳ್ಳಿ. A pure silver metal;
- ***—ಕುರಿಬಿಡ*** : ಜೊಲ್ಲು ಸುರಿಸು; ಆಸೆಪಡು(ಉಕ.ಜಿ); To desire;
- ***—ಕುರಿಪಟ್ಲ*** : ಕುರಿಗಳ ಉಣ್ಣೆಯನ್ನು ದಾರಮಾಡಿ ಅದರಿಂದ ನೇಯ್ದು ತಯಾರಿಸಿದ ಕಂಬಳಿ; ಧಾರ್ಮಿಕವಾಗಿಯೂ ಈ ಕಂಬಳಿಗೆ ವಿಶೇಷ ಸ್ಥಾನವಿದೆ; ಮೈಲಾರಲಿಂಗನ ಗುಡ್ಡರು ಕಂಬಳಿಯಿಂದ ತಯಾರಿಸಿದ ನಿಲುವಂಗಿ ಧರಿಸುವರು; ಅಲ್ಲದೆ ಯಾವಾಗಲೂ ಪಟ್ಲ ಎಂಬ ಕರಿಕಂಬಳಿಯನ್ನು ಹೆಗಲ ಮೇಲೆ ಧರಿಸಿರುತ್ತಾರೆ; ಆ ದೇವರಿಗೆ ಸಂಬಂಧಿಸಿದ ಭಕ್ತರು ನಡೆಸುವ ಸೇವೆಯಲ್ಲಿ ಕಂಬಳಿಗೆ ವಿಶೇಷ ಗೌರವವಿದೆ; ಗದ್ದಿಗೆಯನ್ನು ಹಾಕುವಾಗ, ದೇವರನ್ನು ಕೂರಿಸುವಾಗ, ಗೌರವ ಸೂಚಕವಾಗಿ ಮಠದ ಗುರುಗಳನ್ನು ಕೂರಿಸುವಾಗ ಸಹ ಕುರಿ ಕಂಬಳಿಯನ್ನು ಹಾಸುವ ಕ್ರಮ ಧಾರ್ಮಿಕವಾಗಿ ಆಚರಣೆಯಲ್ಲಿದೆ. A blanket that is manufactured by sheep wool;
- ***—ಕುರಿ ಮಲಗಿಸುವುದು*** : ಬಲಿ ಕೊಡುವುದಕ್ಕೆ ತಂದ ಕುರಿಯನ್ನು ದೇವರ ಕಟ್ಟೆಯ ಬಳಿ ಮಲಗಿಸಿದ ನಂತರ ಆ ಕುರಿಯನ್ನು ದೇವಿಗೆ ಬಲಿ ಕೊಡುವ ಕ್ರಿಯೆ. A ritual of laying a sheep in front of god before going to offer it for god;
- ***—ಕುರಿಹಣ*** : ಮಲೆನಾಡಿನ ಭಾಗದಲ್ಲಿ ಸತ್ತವರ ಮನೆಯಲ್ಲಿ ತಿಥಿಯ ದಿವಸ ಸೇರಿದ ಬಂಧು ಬಳಗದವರು ಕಳಸದ ತಟ್ಟೆಯಲ್ಲಿ ಇಡುವ ಹಣ(ಹಾ.ಜಿ); Money that the relative put drops in the plate that contains lamp in the home of died person;
- ***—ಕುರಿಹುಣ್ಣು*** : ಸತ್ತ ಕುರಿ ತಿಂದರೆ ಮೈಮೇಲೆ ಏಳುವ ದುರ್ವಾಸನೆಯುಳ್ಳ ಬಹು ಅಸಹ್ಯವಾದ ಹುಣ್ಣು; ಇದು ವಾಸಿಯಾಗಲು ಬಹಳ ದಿನ ಕತ್ತಲೆ ಮನೆಯಲ್ಲಿ ಕುಳಿತು ಔಷಧಿ ಸೇವಿಸಬೇಕೆಂಬ ನಂಬಿಕೆ. A bad smelly blains that arouse due to eat dead sheep;
- ***—ಕುರೆಣಿಕೆ ಹಬ್ಬ*** : ಸಂಕ್ರಾಂತಿ ಹಬ್ಬದ ವೇಳೆ ಕುರಿಕೂದಲು ಕತ್ತರಿಸಿ ಹಾಲು ತುಪ್ಪವನ್ನು ಕುರಿಗಳ ಮೇಲೆ ಚೆಲ್ಲಿ ಕುರಿಗಳನ್ನು ಎಣಿಸುವ ಹಬ್ಬ; A festival of sheep counting during the festival of equinox or solstic;
- ***—ಕುರುಣಿ*** : ಕುರಿ ಉಣ್ಣೆಯ ದಾರ; ಪ್ರ: 'ಕುರುಬ ಕುಂಚಗಿ। ಮ್ಯಾಲ ಮಂಚಗಿ। ಉಡಿಯಾದ ಉಣ್ಣಿ। ಬಾಯ್ದಾಗ ಕುರುಣಿ(ಜನಪದ ಪ್ರಾಸ ಬೀ.ಜಿ). The thread of sheep wool.

ಕುರಿ ಒಂಟಿ ಗಿಡ kuri onṭi giḍa :

ಕುರಂಟಿಗಿಡ Barleria prionifi(Acanthaceae); ಔಷಧಿಯಾಗಿ ಬಳಕೆಯಲ್ಲಿರುವ ಸಸ್ಯ ವಿಶೇಷ (ಚಾ.ಜಿ). A medicinal plant.

ಕುರಿಗಲ್/ಕಾಪ್ಸಿ kurigalkapsi :

Debregeasia longifolia(Urticaceae) ಕುರಿಗೆಲ್, ಕುರಿಗೆಲೆ, ಕಾಪ್ಸಿ; ಇದೊಂದು ಸಸ್ಯ ವಿಶೇಷ; ದೊಡ್ಡದಾದ ಪೊದೆಯಂತೆ ಬೆಳೆಯುವ ಮರ; ಎಲೆಗಳು ಸಣ್ಣದಾಗಿ ಈಟಿಯಾಕಾರದಲ್ಲಿದ್ದು ಅಗಲಕ್ಕಿಂತ ಉದ್ದವಾಗಿದ್ದು, ತುದಿ ಬಾಲದಂತೆ ಅಂಚು ಗರಗಸದಂತೆ ಇರುತ್ತದೆ; ಹಣ್ಣು ತಿನ್ನಲು ಕಾಂಡದಿಂದ ನಾರಿನ ಹಗ್ಗ ತಯಾರಿಕೆ. A special plant; It grows as bush with sharpen leaves.

ಕುರಿತಪ್ಪಣೆ kuritappaṇe :

- ಪೂಜಿಸುವ ಕಲ್ಲಿನ ದೇವರ ಮೂರ್ತಿಗೆ ಹೂಗಳಿಂದ ಅಲಂಕರಿಸಿ, ಪೂಜೆ ನೆರವೇರಿಸಿ ದೇವರ ಮುಂದೆ ಶುಭ, ಅಶುಭ ಕೇಳುವುದು; An asking/ requesting ritual after worship an idol;
- ತಮ್ಮ ಕೆಲಸಗಳಿಗೆ ಒಪ್ಪಿಗೆ ಕೇಳುವಿಕೆ; ಕೆಲಸ ಆಗುತ್ತದೆಂದಾದರೆ ಬಲಗಡೆಯ ಹೂವನ್ನು ಕೆಲಸ ಆಗುವುದಿಲ್ಲ ಎಂದರೆ ಎಡಗಡೆಯ ಹೂವನ್ನು ನೀಡುತ್ತದೆಂಬ ನಂಬಿಕೆ; Asking flower from the god's idols after worshipping it;
- ಹೂವಿನ ಸಂಕೇತದ ಮೂಲಕ ಕೆಲಸಕ್ಕೆ ಅಪ್ಪಣೆ ಕೇಳುವುದು;
- ಇಷ್ಟವಾದುದನ್ನು 'ಕುರಿತು'ಕೊಂಡು ದೇವರಲ್ಲಿ ಅದಕ್ಕಾಗಿ ಅಪ್ಪಣೆ ಅಥವಾ ಅನುಮತಿ ಕೇಳುವುದು;
- ಇದೊಂದು ಸಾಂಪ್ರದಾಯಿಕ ಆಚರಣೆ; ಕುರಿತು ಕೊಳ್ಳುವರ ನಂಬಿಕೆ ಮೇಲೆ ನಿಂತಿರುವಂಥದು.

ಕುರಿಪಂದೆ ಗೆಣಸು kuripande geṇasu :

ಒಂದು ಗಿಡಮೂಲಿಕಾ ಔಷಧಿ ಸಸ್ಯ(ಚಾ.ಜಿ). A medicinal plant.

ಕುರಿಮೋಹಿಷೆ kurimōhiṣe :

- ಎರವರಲ್ಲಿ ಶವಸಂಸ್ಕಾರವಾದ ಏಳನೇ ದಿನಕ್ಕೆ ಮಾಡುವ ಶ್ರಾದ್ಧಕ್ರಿಯೆ; A funeral rites of seventh day of the burial of erava community;
- ಸತ್ತವ್ಯಕ್ತಿಯನ್ನು ಹೂತ ಅಥವಾ ಸುಟ್ಟ ಜಾಗದಿಂದ ಅವನ ಆತ್ಮವನ್ನು ತಮ್ಮೊಂದಿಗೆ ಕರತಂದು ಶಾಸ್ತ್ರಗಳನ್ನು ನಡೆಸುತ್ತಾರೆ;
- ಮನೆಯ ಮುಂದಲ ಜಾಗವನ್ನು ಸಗಣಿಯಿಂದ ಸಾರಿಸಿ ಅದರ ಮೇಲೆ ಭತ್ತದ ಹುಲ್ಲನ್ನು ಸುಟ್ಟು ಬೂದಿಯೊಂದಿಗೆ ಅರಿಶಿಣ ಬೆರೆಸಿ ಹರಳೆಣ್ಣೆಯೊಂದಿಗೆ ಚಕ್ರಕಾರ ಬರೆಯಲಾಗುವುದು;
- ಏಳು ಭಾಗಗಳನ್ನು ಗುರುತಿಸಿ ಒಂದೊಂದು ಜಾಗಕ್ಕೂ ತುಂಡು ಬಾಳೆಎಲೆಯನ್ನಿಟ್ಟು ಚೂರು ಉಪ್ಪು ಮೆಣಸಿನಕಾಯಿನ್ನಿಟ್ಟು ಕುಟುಂಬದ ಮುಖ್ಯಸ್ಥ ಪ್ರದಕ್ಷಿಣೆ ಹಾಕಿ ನಾಲ್ಕು ದಿಕ್ಕುಗಳಿಗೂ ಬಾಗಿ ನಮಸ್ಕಾರ ಮಾಡುತ್ತಾನೆ; ಇದಕ್ಕೆ ಕುರಿ ಮೋಹಿಷೆ ಎನ್ನುತ್ತಾರೆ;
- 'ಆತ್ಮ'ದ ಪರಿಕಲ್ಪನೆ ಮತ್ತು 'ಏಳ'ರ ಸಂಖ್ಯೆಗಳು ಜಾನಪದದಲ್ಲಿ ಮುಖ್ಯ ಆಶಯಗಳಾಗಿ ಕೆಲಸ ಮಾಡುತ್ತವೆ; ಬಳಕೆಯಲ್ಲಿ ಮತ್ತು ವಿವರಗಳಲ್ಲಿ ಬದಲಾದರೂ, ಮೂಲ ಕಲ್ಪನೆ ಮಾತ್ರ ಹಾಗೆಯೇ ಉಳಿದುಕೊಂಡು ಬಂದಿದೆ.

ಕುರಿವಿ/ಕುರಿವೆ/ಕುರುವು ಒಲಿ kurivi/ kurive/kuruvu oli :

- ಒಲೆಯ ಬಲಭಾಗದಲ್ಲಿರುವ ಭಾಗ; ಮುಖ್ಯ ಒಲೆಯ ಬಲಭಾಗಕ್ಕೆ ಸುರಂಗದಂತೆ ಹೋಗಿ ಮೇಲಕ್ಕೆ ತೆರೆದುಕೊಂಡ ಒಲೆ; The right side place of oven;
- ಮುಖ್ಯ ಒಲೆಯಲ್ಲಿ ಬೆಂಕಿ ಹತ್ತಿಸಿದರೆ ಕುರಿವಿ ಒಲೆಗೆ ಉರಿ ಹೋಗುವುದು;
- ಇದರಲ್ಲಿ ಹಾಲು ಮತ್ತು ನೀರು ಕಾಯಿಸುವುದು ವಾಡಿಕೆ; ಸಣ್ಣ ಉರಿಯಲ್ಲಿ ಕಾಯುವುದು; ಪ್ರ: 'ಹೆಸ್ರು ಇನ್ನು ಕಾಯಬೇಕು ಕುರಿವೆ ಒಲೆ ಮ್ಯಾಲೆ ಇಟ್ಟು ಬಾ' (ಕೋ.ಜಿ).

ಕುರುಂಜಿ kuruñji :

- ಮಲೆನಾಡಿನ ಗುಡ್ಡಗಳಲ್ಲಿ ಬೆಳೆಯುವ 'ಹಾರಲು' ಎಂಬ ಜಾತಿಯ ಸಸ್ಯ; ಹನ್ನೆರಡು ವರ್ಷಗಳಿಗೊಮ್ಮೆ ಹೂ ಬಿಡುತ್ತದೆ.

- ಮಲೆನಾಡಿನ ಕಾಡು ಮೇಡುಗಳಲ್ಲಿ ಬೆಳೆಯುವ ಒಂದು ಬಗೆಯ ಸಸ್ಯ ಪ್ರಭೇದ. A kind of plant grown in the western Ghats of Malenaadu.

ಕುರುಂಟು kurunṭu :

- ಅಕ್ಕಿ, ಬತ್ತವನ್ನು ಮುಡಿ ಕಟ್ಟುವಂತೆ ಹೆಸರು, ಉದ್ದು, ಮೊದಲಾದ ಧಾನ್ಯಗಳನ್ನು ಬೈ ಹುಲ್ಲಿನಲ್ಲಿ(ಹುಲ್ಲಿನ ಒಂದು ವಿಧ) ಸುತ್ತಿ ಉರುಟಾಗಿ ಮಾಡಿದ ಚಿಕ್ಕಕಟ್ಟು; ಚಿಕ್ಕದಾದ ಮುಡಿ; A small stray/hay package or bundle that contained green grams etc just like paddy package;
- ಕೆಸರುಗದ್ದೆಯಲ್ಲಿ ಬೀಜ ಬಿತ್ತುವ ಮೊದಲು ನೀರು ಸರಿಯಾಗಿ ಹರಿದು ಹೋಗಲಿಕ್ಕಾಗಿ ಚಿಕ್ಕ ಕಾಲುವೆಗಳನ್ನು ಮಾಡಲು ಉಪಯೋಗಿಸುವ ಗುಂಡಗಿನ ಕಲ್ಲು(ಉಕ);
- ಕೂರಿಗೆ; ಹೊಲಗಳಲ್ಲಿ ಬೀಜ ಬಿತ್ತುವ ಉಪಕರಣ; A seed sowing device or plough;
- ಹರಕೆಗಾಗಿ ಧಾನ್ಯ ಮುಡಿ ಕಟ್ಟುವುದು; ತುಳುನಾಡಿನ ಬೈದುರ್ಲು ದೈವಗಳಿಗೆ ಹೀಗೆ ಮುಡಿ ಕಟ್ಟಿದ ಹರಕೆಯನ್ನು ಒಪ್ಪಿಸುವುದು ರೂಢಿ(ದಕ).

ಕುರುಂಬಿಲಿ kurumbili :

ಭತ್ತದ ಗದ್ದೆಯಲ್ಲಿ ಬರುವ ಒಂದು ಜಾತಿಯ ಕಳೆ ಸಸ್ಯ; ಬೀಳುಬೀಳಾಗಿ ಬೆಳೆಯುವ ತೆಳ್ಳಗಿನ ಹುಲ್ಲು. A kind of weed in paddy fields.

ಕುರುಂಬೂಟ/ಕುರುಂಜೋಡು kurumbūṭa/ kurunjōḍu :

- ನಡೆದಾಗ 'ಕುರುಚರ' ಶಬ್ದ ಮಾಡುವ ಚರ್ಮದಿಂದ ತಯಾರಿಸಿದ ಬೂಟು; ಕುರ್ರ್ ಸದ್ದು ಮಾಡುವ ಪಾಪಾಸು; ಚಪ್ಪಲಿ; ಚಡಾವು; ಕೊಕ್ಕೆಜೋಡು; Sounding slippers that used by shepherds;
- ಈ ಬಗೆಯ 'ಚಡಾವು' ಇಂದು ಕಡಿಮೆಯಾಗುತ್ತಿರುವಂತೆ ತೋರುತ್ತಿದೆ; ಹಿಂದೆ ವಿಶೇಷ ಜನ ಈ ತೆರನಾದ ಚಪ್ಪಲಿಗಳನ್ನು ಧರಿಸುತ್ತಿದ್ದುದು ವಿಶೇಷವಾಗಿತ್ತು; ಇಂತಹ 'ಬೂಟು' ಗಳನ್ನು ಮೆಟ್ಟಿ ರೋಡಿನಲ್ಲಿ(ಟಾರ್) ನಡೆಯುತ್ತಿದ್ದರೆ ಒಂದು ಬಗೆಯ 'ಲಯ'(ರಿದಂ) ಬರುತ್ತಿದ್ದುದನ್ನು ಗಮನಿಸಿದ್ದೇವೆ.

ಕುರುಕವೆ kurukave :

- ಮೂರು ಅಡಿ ಎತ್ತರವಿರುವ ಕವಡು ಮರ; Three feet high tree;
- ಇರುಳಿಗರು ತಮ್ಮ ವಾಸಕ್ಕಾಗಿ ನಿರ್ಮಿಸಿಕೊಳ್ಳುವ ಗುಡಿಸಲುಗಳಲ್ಲಿ ಕುರುಕವೆ ಬಳಕೆ;
- ಅವರ ಗುಡಿಸಲು ತುಂಬಾ ಚಿಕ್ಕ ಆಕಾರವನ್ನೊಂದಿರುತ್ತವೆ;
- ಕುರು+ಕವೆ>ಕುರುಕವೆ; ಕುರು = ಚಿಕ್ಕದು, ಸಣ್ಣದು; ಕವೆ = ಕವೆಗೋಲು, ಕವಲಾಗಿರುವ ಮರದ ಸಾಧನ.

ಕುರುಕು kuruku :

- ತಿಂಡಿಗಳು; ಚಳಿ, ಮಳೆಗಾಲದಲ್ಲಿ ಕೆಲಸದ ಬಿಡುವಿನ ಸಂಜೆ ವೇಳೆ ಬಾಯಿ ರುಚಿಗಾಗಿ ತಿನ್ನುವಂತಹ ತಿಂಡಿ ತಿನಿಸುಗಳು; ಹುರಿಗಾಳು, ಚಿರ್ಕುಳ್ಳಿ, ಚಕ್ಕುಲಿ, ನಿಪ್ಪಿಟ್ಟು, ಕೋಡಬಳೆ, ಅವಲಕ್ಕಿ ಇತ್ಯಾದಿ ಕುರುಕುಗಳು; ಪ್ರ: 'ದೋಸೆ ಊಟವಲ್ಲ ಕುರುಕು ತಿನ್ನೋಳು ಸೊಸಿಯಲ್ಲ'(ಗಾ); Snacks of tongue taste;
- ಮನಸ್ಸಿನಲ್ಲಿಯೇ ಮೆಲುಕು ಹಾಕುವಿಕೆ; ಮೆಲ್ಲನೆ ಹೇಳು; ಗುಣುಗುಟ್ಟು; whispering
- ಸ್ವಲ್ಪಸ್ವಲ್ಪವೇ ಅಗಿದು ತಿನ್ನುವಿಕೆ; ಪ್ರ: 'ಹುರಿದುಹುಳ್ಳಿ ಒಂದೊಂದು ಬಾಯಿಗೆ ಹಾಕಿ ಕುರುಕುತ್ತಾ ಕುಳಿತ'; Chewing bit by bit;
- ಇಲಿ, ಹೆಗ್ಗಣಗಳು ವಸ್ತುಗಳನ್ನು ಕುರುಕುವುದು; ಅಲ್ಲಲ್ಲಿಯೇ ಕಚ್ಚುವುದು;
- ಬೆಳೆಯದೆ ಇರುವುದು; ಬೆಳವಣಿಗೆ ಕುಂಠಿತವಾಗಿ ಕುಬ್ಜವಾಗಿರುವುದು(ತು.ಜಿ);
- ***—ಕುರುಕಲು*** : ಕುರುಂಕುರಂ ಶಬ್ದವಾಗುವಂತೆ ಅಗಿದು ಮೆಲುಕು ಹಾಕುತ್ತಾ ತಿನ್ನುವ ತಿಂಡಿಗಳು; ಪ್ರ: 'ಚಳಿಗಾಲಕ್ಕೆ ಹುರಿಗಾಳು ಕುರುಕಲು ಇದ್ದರೆ ಬಲುಚೆನ್ನ'; The rustling sounds of eating snacks;
- ***—ಕುರುಕುಪದ*** : ಗುನುಗುಪದ; ಮೆಲುಕು ಹಾಡು; ಕೇಳಿದ ಗೀತೆಯನ್ನು ಕಲಿಯುವ ಪರಿ; ನೆನಪಿಸಿಕೊಂಡು ಮೆಲುಕು ಹಾಕಿ ಮನನ

ಮಾಡಿಕೊಳ್ಳುವಿಕೆ; *ಪ್ರ:* 'ಅವನ್ಗೇನಪ್ಪ ಕುರುಕುಪದ ಹಾಡ್ಕಂಡು ತಿರ್‍ಗಾಡ್ತನೆ'. Humming track singing.

ಕುರುಕುಂದಿ kurukundi :

- ಕರ್ನೂಲು ಜಿಲ್ಲೆ ಆಲೂರು ತಾಲ್ಲೋಕಿನ ಕ್ರಿ.ಶ.೧೫೪೫ರ ೩೧೪ನೇ ಶಾಸನದಲ್ಲಿ ಇದರ ಉಲ್ಲೇಖ; A village mentioned in the 314th inscription of Aaluru taluk, Karnoolu District;
- ಸದಾಶಿವರಾಯನ ಆಳ್ವಿಕೆ;
- ದೊರೆಯ ಅಪ್ಪಣೆ ಮೇರೆಗೆ ಕಂದನವೊಲ(ಕರ್ನೂಲು)ದ ತಿಮ್ಮೋಜನ ಮಕ್ಕಳಿಂದ ಕೊಂಡೋಜ, ಧರ್ಮೋಜರು 'ಕುರುಕುಂದಿ'ಯ ನಾಯಿಂದರಿಗೆ ಸಂಕವನ್ನು ಬಿಟ್ಟ ವಿಚಾರವಿದೆ;
- 'ಕುರುಕುಂದಿ' ಅರ್ಥ ಗೊತ್ತಾಗುವುದಿಲ್ಲ;
- ಕ್ರಿ.ಶ.೧೦೫೭ರ(ಸಂ.೩೩೮) ಚಾಲುಕ್ಯ ತ್ರೈಲೋಕ್ಯ ಮಲ್ಲನ ಶಾಸನದಲ್ಲಿ 'ಕುಱುಕುನ್ದ' ಎಂಬ ಉಲ್ಲೇಖವಿದೆ;
- 'ಕುಱು(ರು)' ಎಂದರೆ ಚಿಕ್ಕ/ಸಣ್ಣ ಎಂದು ಅರ್ಥ; 'ಕುಂದ' ಎಂದರೆ ಗುಡ್ಡ ಬೆಟ್ಟ ಎಂದು ಅರ್ಥ; 'kuru' means small, 'kunda' means hill mountains;
- ಈ ಹಿನ್ನೆಲೆಯಲ್ಲಿ 'ಕುರುಕುಂದಿ' ಎಂದರೆ ಚಿಕ್ಕಬೆಟ್ಟ ಪ್ರದೇಶವನ್ನು ಒಳಗೊಂಡಿರುವಂಥದು ಎಂದು ಅರ್ಥ ಮಾಡಬಹುದಾಗಿದೆ.

(ಆಂ.ಪ್ರ.ಕ.ಶಾ.ಭಾ.೧)

ಕುರುಕ್ಷೇತ್ರ kurukṣētra :

- ಮಹಾಭಾರತದ ಕಥೆಯಲ್ಲಿ ಕೌರವರಿಗೂ ಪಾಂಡವರಿಗೂ ನಡೆದ ಯುದ್ಧದ 'ಯುದ್ಧಭೂಮಿ'ಯ ಹೆಸರು; ಇದನ್ನು ಸಾಮಾನ್ಯ ಜನ ರೂಪಕವಾಗಿ ಮಾಡಿಕೊಂಡು ಸಂಸಾರದಲ್ಲೊ ಕುಟುಂಬದಲ್ಲೊ ನಡೆದ ಘಟನೆಯನ್ನು ಆ ಹೆಸರಿನಲ್ಲಿ ಕರೆಯುವುದುಂಟು; A battle field where the war between the pandavas and the kouravas fight for their existence;
- ಜಗಳ, ಕಲಹ; ರಣಾಂಗಣ; ಈ ಪರಿಸ್ಥಿತಿಯನ್ನು ಜನ 'ಕುರುಕ್ಷೇತ್ರವೇ ನಡೆದು ಹೋಯಿತು' ಎಂಬುದಾಗಿ ತಮ್ಮಲ್ಲಿ ನಡೆದ ಘಟನಾ ಸಂದರ್ಭವನ್ನು ಚಿತ್ರಿಸುವುದಿದೆ;
- 'ಅವನು ತಾಳ್ಮೆವಹಿಸದಿದ್ದರೆ, ಒಂದು ಕುರುಕ್ಷೇತ್ರವಾಗಿಬಿಡುತ್ತಿತ್ತು'; ಇಂತಹ ಮಾತುಗಳಲ್ಲಿ ಕುಟುಂಬದೊಳಗಿನ ಜಗಳವನ್ನು 'ರಣಾಂಗಣ'ವನ್ನಾಗಿ ವೈಭವೀಕರಿಸಿ, 'ಕುರುಕ್ಷೇತ್ರ'ದ ಪುರಾಣೀಕರಣದ ಸ್ವರೂಪವನ್ನು ಕೊಡುವುದು ಈ ನುಡಿಗಟ್ಟಿನ ಉದ್ದೇಶ;
- ರಾಮಾಯಣ ಮಹಾಭಾರತ ಕಥಾಸಂದರ್ಭಗಳು ಮೌಖಿಕಸಂಸ್ಕೃತಿಯನ್ನು ಮೊದಲಿಂದಲೂ ರೂಪಿಸಲು ಕಾರಣವಾಗಿವೆ; ಅವು ಇವೊತ್ತು 'ಕೇವಲ' 'ಕಥೆ'ಗಳಾಗಿ ಉಳಿದಿಲ್ಲ, 'ಸಂಕೇತ'ಗಳಾಗಿ ಮಾರ್ಪಟ್ಟಿವೆ; ಮನೆಮನೆಯಲ್ಲೂ ಮನಮನದಲ್ಲೂ ಅವುಗಳ ಕಥಾ ಸಂದರ್ಭಗಳೂ ಪಾತ್ರಗಳೂ ಬಿಂಬಾತಿಬಿಂಬಗಳಾಗಿ ಕೆಲಸ ಮಾಡುತ್ತಿವೆ; ಮಹಾಭಾರತ ರಾಮಾಯಣ ಪಾತ್ರ ಸಂದರ್ಭಗಳು ಜೀವನ ಮಾದರಿಗಳಾಗಿ ಕಂಗೊಳಿಸಿವೆ; ಇದಕ್ಕೆ 'ಕುರುಕ್ಷೇತ್ರವಾಗು' ನುಡಿಗಟ್ಟು ಒಂದು ನಿದರ್ಶನವಾಗಿದೆ;
- ಜನಪದ ಸಂಸ್ಕೃತಿಯಲ್ಲಿ ಈ ಎರಡೂ ಕಾವ್ಯಕಥೆಗಳು ಹಾಸುಹೊಕ್ಕಾಗಿರುವ ಕಾರಣದಿಂದಾಗಿ ಇಂತಹ ನುಡಿಗಟ್ಟುಗಳು ಹುಟ್ಟಿಕೊಳ್ಳುತ್ತಿವೆ; ಶಿಷ್ಟ ಸಂಸ್ಕೃತಿಗೂ ಇಂಥವು ದಾಂಗುಡಿ ಇಟ್ಟಿವೆ;
- ಮನೆಗಳಲ್ಲಿ ಹಗರಣ, ಜಗಳ, ಕಲಹ, ಸಮಸ್ಯೆಗಳು ಯಾವೊತ್ತೂ ಸಾಮಾನ್ಯವೇ; ಅವು 'ಸಂಸ್ಕೃತೀಕರಣ' ಹೊಂದಿದಾಗ(ಪುರಾಣೀಕರಣ ಕೂಡ) ಸಾಮಾನ್ಯ ಚಲಾವಣೆಗೆ ಬರುತ್ತವೆ; ಹಾಡಾಗಿ, ಕಥೆಯಾಗಿ, ಪುರಾಣವಾಗಿ, ಪದಸಂಸ್ಕೃತಿಯಾಗಿ ರೂಪತಳೆಯುತ್ತವೆ; ಪ್ರಸ್ತುತ 'ಕುರುಕ್ಷೇತ್ರ' ನುಡಿಗಟ್ಟು ಕೂಡ;
- ನಾವು ನಮ್ಮ ನಡವಳಿಕೆಯನ್ನು ಆ ರೀತಿಯಲ್ಲಿ ಕರೆಯುವುದಕ್ಕೆ ಇದ್ದ ಕಾರಣವೆಂದರೆ, ನಮ್ಮ ವರ್ತನಾ ಮಾದರಿಗಳು ಮಹಾಭಾರತದ ವರ್ತನಾ ಮಾದರಿಗಳಿಗೆ ಹೋಲಿಕೆ ಇದ್ದುದು; 'ಕಡ್ಡಿಯನ್ನು ಗುಡ್ಡ' ಮಾಡಿರಬಹುದು; ಹಾಗೆ ನೋಡಿದರೆ ಮಹಾಭಾರತ ರಾಮಾಯಣ ಕಥೆಗಳೂ ವಿಕಾಸದ ಭಿನ್ನ ಮಜಲುಗಳಲ್ಲಿ ರೂಪ ಪಡೆದದ್ದು ಹೀಗೆಯೇ;

'ಕುರುಕ್ಷೇತ್ರ' ಅಥವಾ 'ಕುರುಕ್ಷೇತ್ರವಾಯಿತು' ಎಂಬುದು ಕೂಡ ಆದದ್ದು ಇದೇ ರೀತಿಯಲ್ಲಿಯೇ;
- ಪದವೊಂದು(ಜಗಳ, ಕಲಹ) ಪದಸಂಸ್ಕೃತಿ (ಕುರುಕ್ಷೇತ್ರ) ಯಾಗುವ ಒಂದು ಸೋಜಿಗವನ್ನು ಇವರಲ್ಲಿ ನೋಡುತ್ತೇವೆ.

ಕುಱುಗೋಡಸೀಮೆ kuṟugōḍasīme :
- ವಿಜಯನಗರ ಸದಾಶಿವರಾಯನ ಆಳ್ವಿಕೆ;
- ಕುರುಗೋಡ ಸೀಮೆಯ ಸೋಮಸಮುದ್ರದ ಮಹಾಜನರು ಗ್ರಾಮದ ಲಕ್ಷ್ಮೀನಾರಾಯಣ ದೇವರಿಗೆ ಭೂದಾನ ಮಾಡಿದ ವಿವರವಿದೆ;
- ಕುರು(ಱು)ಗೋಡು ಸೀಮೆಯು ಒಂದು ಕೋಟೆಯನ್ನೂ, ಬಸದಿಯನ್ನೂ ಹೊಂದಿತ್ತೆಂದು ಬಳ್ಳಾರಿ ಜಿಲ್ಲೆಯ ಇತರ ಶಾಸನಗಳಿಂದ ತಿಳಿದು ಬರುತ್ತದೆ;
- ಇದು 'ಕುಱುಗೋಡ ಕೋಟೆ', 'ಕುಱುಗೋಡ ಗಿರಿದುರ್ಗ', 'ಕುಱುಗೋಡಬಸ್ತಿ' ಎಂದೂ ಶಾಸನಗಳಲ್ಲಿ ಉಲ್ಲೇಖವಿದೆ.

(ಕ.ವಿ.ವಿ.ಶಾ.ಸಂ.೧; ಹಂಪಿ)
- ಚನ್ನರಾಯಪಟ್ಟಣ ತಾಲ್ಲೋಕು ಆನೆಕೆರೆ ಗ್ರಾಮದಲ್ಲಿ ದೊರೆತ ಕ್ರಿ.ಶ.೧೧೮೧ಕ್ಕೆ ಸೇರಿದ ಹೊಯ್ಸಳ ವೀರಬಲ್ಲಾಳನ ಕಾಲದ ೩೩ನೇ ಶಾಸನದಲ್ಲಿ 'ಕುರುಗೋಡು' ಉಲ್ಲೇಖವಿದೆ; ಅರಸೀಕೆರೆಯ ಕ್ರಿ.ಶ.೧೪೩೯ರ ೨೮೫ನೇ ಶಾಸನದಲ್ಲಿ 'ಕುರುಗೋಡ ಕೊಪ್ಪ' ಎಂದು ಉಲ್ಲೇಖವಿದೆ; A village that has been referred in 33th inscription of Anekere Village, ChannarayaPattana taluk, Hasana district;
- 'ಕುರುಗೋಡು' ಒಂದು ಪ್ರಾಕೃತಿಕ ಹಿನ್ನೆಲೆಯ ಸ್ಥಳನಾಮವಾಗಿರಬಹುದು; 'ಕುರು' ಎಂದರೆ ಚಿಕ್ಕದು/ಸಣ್ಣದು; 'ಗೋಡು' ಎರೆಮಣ್ಣಿನ ಪ್ರದೇಶ; ಎರೆಮಣ್ಣಿನ ಒಂದು ಚಿಕ್ಕ ಪ್ರದೇಶವನ್ನು ಸೂಚಿಸುತ್ತಿರಬಹುದು;
- ಕುರು+ಕೋಡು>ಕುರುಗೋಡು ಎಂದು ಮಾಡಿಕೊಂಡರೆ, ಕೋಡು=ಶಿಖರ, ಬೆಟ್ಟದ ತುದಿ ಅರ್ಥವನ್ನು ಸೂಚಿಸುವುದರಿಂದ, ಬೆಟ್ಟಗುಡ್ಡಗಳ ಒಂದು ಚಿಕ್ಕಪ್ರದೇಶವನ್ನು ಈ ಪದ ಹೇಳುತ್ತಿರಬಹುದು.

(E.C-೧೦, ಹಾ.ಜಿ.)

ಕುರುಚಲು kurucalu :
- ಇದೊಂದು ಸಸ್ಯಭೇದ; A kind of plant;
- ಏಡಿಯ ಚಿಕ್ಕಕಾಲುಗಳು; ಏಡಿ ಸುಟ್ಟ ಕಾಲಿನಲ್ಲಿರುವ ತುಪ್ಪ ತಿನ್ನುವರು;
- ಸಾಧಾರಣವಾದ ಕಾಡು; ದೊಡ್ಡ ಗಾತ್ರದ ಮರಗಳಿಲ್ಲದೆ ಚಿಕ್ಕಗಾತ್ರದ ಮರಗಳು; A plain forest :A light forest;
- ಪೊದೆ; ಕುರುಚಲು(ಸಣ್ಣಸಣ್ಣ) ಗಿಡಗಳನ್ನು ಹೊಂದಿರುವ ಕಾಡು; scrub jungle(ಹಾ.ಜಿ).

ಕುರುಚಿಟ್ಟೆ kurucițțe :
- ಗೊಬ್ಬಳಿ ಮರದಲ್ಲಿರುವ ಒಂದು ಕಿರು ಕಪ್ಪು ಚಿಟ್ಟೆ; An insect, dwells in a tree;
- ಮಳೆಗಾಲದಲ್ಲಿ ಜಿರ್ರೋ ಅಂತ ರಾತ್ರಿಯಲ್ಲೆ ಕಿರುಚುವುದು;
- ಕುರ್ಚುಟ್ಟೆ ಕುರ್ಚುಟ್ಟೆ ಕುರ್ರ್ ಅಂತ ಮಕ್ಕಳ ಕಿವಿಯಲ್ಲಿ ಹೇಳುತ್ತಾ ಆಟವಾಡುವುದು ರೂಢಿಯಲ್ಲಿದೆ(ತು.ಜಿ);
- ಕುರು + ಚಿಟ್ಟೆ > ಕುರುಚಿಟ್ಟೆ; ಸಂಯುಕ್ತಪದ; ಕುರು =ಚಿಕ್ಕ, ಸಣ್ಣ; ಚಿಟ್ಟೆ=ಹಾರಾಡುವ ಪತಂಗ/ಪಾತರಗಿತ್ತಿ.

ಕುರುಜಾತು/ಕುರ್ಜಾತು kurujātu/ kurjātu :

ಪ್ರಾಚೀನವಾದ, ದೊಡ್ಡದಾದ ಚಿನ್ನದ ನಾಣ್ಯ; ಇದರಲ್ಲಿ ಶಿಲುಬೆಯ ಚಿಹ್ನೆ ಇರುವುದರಿಂದ ಪೋರ್ಚುಗೀಸರ ಕಾಲದ ನಾಣ್ಯ ಇರಬೇಕೆನಿಸುತ್ತದೆ; An ancient big gold coin; It has 'cross' sign That is supposed to be Portuguese Times coin;

—ಕುರ್ಜಾತು ಮಾಲೆ : ಕುರ್ಜಾತು ನಾಣ್ಯಗಳನ್ನು ಪೋಣಿಸಿ ಮಾಡಿದ ಅಡ್ಡಿಗೆ ಸರ; ಪವನ್‌ಸರ; ಇದನ್ನು ಯಕ್ಷಗಾನದ ವೇಷ ಭೂಷಣದಲ್ಲಿಯೂ ಬಳಸುವರು. A coin necklace.

ಕುರುಜು/ಕುರುಜಿ kuruju/kurji :
- ಬಿದಿರಿನಿಂದ ನಿರ್ಮಿಸಿದ ಆರತಿಕಟ್ಟು; A car van decorated in bamboo straps;

- ದೇವರ ವಿಗ್ರಹ, ಮದುಮಕ್ಕಳು, ರಾಜರು, ಮಠಾಧೀಶರನ್ನು ಕೂರಿಸಲು ಗೋಪುರಾಕಾರವಾಗಿ ಬಿದಿರಿನಿಂದ ಕಟ್ಟಿ ಅಲಂಕರಿಸಿದ ತೇರು; ಸಣ್ಣಮಂಟಪ; *ಪ್ರ:* 'ಬುರುಬು ಕಟ್ಟೊಕಾಗ್ದಿದ್ರೆ ಕುರುಜಾದ್ರೂ ಬ್ಯಾಡ್ವೆ'*(ಗಾ).*

ಕುರುಡು ಗೆಜ್ಜಗ kuruḍu gejjaga :

- Caesalpinia decapetala(Caesaliniaceae) ಗಜಾಲಿಗೆ, ಹುಣ್ಣುಲ, ಇದೊಂದು ಸಸ್ಯ ವಿಶೇಷ; A kind of plant that has thorns on its body;
- ಮುಳ್ಳುಗಳನ್ನು ಹೊಂದಿರುವ ಪೊದೆಯಂತಹ ಗಿಡ;
- ಇದರ ಕಾಂಡ ಗಡಸು; ಕಂದು ಬಣ್ಣದ ಬೀಜ,
- ತೊಗಟೆಯನ್ನು ಚರ್ಮ ಹದಮಾಡಲಿಕ್ಕೆ ಬಳಕೆ;
- ಕಾಯಿಯಿಂದ ಎಣ್ಣೆ ತಯಾರಿಕೆ; ಎಲೆ ಸಹ ಔಷಧಿಗೆ ಉಪಯುಕ್ತ;
- ಇದನ್ನು ಬೇಲಿಗಾಗಿ ಹೆಚ್ಚು ಬೆಳೆಸುವರು.

ಕುರುಡು ಬಾವಲಿ kuruḍu bāvali :

- ಕಿವಿಯಲ್ಲಿ ಧರಿಸುವ ಆಭರಣ; ಹೆಂಗಸರು ಕಿವಿಯ 'ಗುಮ್ಮೆ'ಯಲ್ಲಿ ಧರಿಸುವಂಥದ್ದು(ಶಿ.ಜಿ); An ear-ring of women;
- 'ಗುಮ್ಮೆ' ಎಂದರೆ ಕಿವಿಯ ನಾಳಿಕೆಯ ಮುಂಭಾಗದಲ್ಲಿ(ಕೆನ್ನೆಗೆ ಅಂಟಿಕೊಂಡಂತಿರುವ) ತ್ರಿಕೋನಾಕೃತಿಯಲ್ಲಿ ಉಬ್ಬಿದ ಭಾಗ.

ಕುರುಡು ಹಾವು kuruduhavu :

- ಓಫಿಡಿಯ ಕುಟುಂಬ: ಟಿಫ್ಲೊಪಿಡೀ. ಅತ್ಯಂತ ಚಿಕ್ಕದಾದ ಹಾವು; A kind of snake or reptile;
- ನೋಡಲು ಎರೆಹುಳುವಿನಂತೆ ಕಾಣುವುದು; ಬಾಲವೂ ಸಹ ತಲೆಯಂತೆ ಮೊಂಡಾಗಿದ್ದು ಬಾಲದ ತುದಿಯಲ್ಲಿ ಒಂದು ಮುಳ್ಳಿದ್ದು ಶತ್ರುಗಳಿಂದ ತನ್ನನ್ನು ರಕ್ಷಿಸಿಕೊಳ್ಳುವುದು;
- ಇರುವೆ, ಗೆದ್ದಲು, ಕೀಟ, ಎರೆಹುಳು ತಿನ್ನುತ್ತದೆ.

ಕುರುಡ್ಗಿ/ಕುರಿಡಿಗೆ kuruḍgi/kuriḍige :

- ಆಹಾರದ ಒಂದು ಬಗೆ; ನಂಜಿಕೆ; A snack;
- ಅಕ್ಕಿ, ಗೋಧಿ, ಜೋಳ ಮುಂತಾದವುಗಳಿಂದ ಎಸಳೆಸಲು ಸಂಡಿಗೆಯಂತೆ ತಯಾರಿಸಿದ ತಿಂಡಿ; a part of dish that is used for a tasty;
- ಊಟದೊಂದಿಗೆ ನಂಜಿಕೊಳ್ಳಲು ಬಳಕೆ; ಇದನ್ನು ತಿನ್ನುವಾಗ ಕುರುಕುರು ಶಬ್ದವಾಗುವುದು;
- —*ಕುರುಡ್ಗಿ ಡಬ್ಬಿ* : ಕುರುಡ್ಗಿ ತಯಾರಿಸಲು ಬಳಸುವ ಸಾಧನ. A device used for preparing snacks.

ಕುರುಣಿ/ಕುರಣಿ kuruṇi/kuraṇi :

- ಕುರಿಯ ಉಣ್ಣೆ; ಕೆಲವು ಶುಭಕಾರ್ಯದಲ್ಲಿ ವಿಶೇಷವಾಗಿ ಬಳಕೆ; ದೇವರ ಗಡಿಗೆಗೆ ಕಟ್ಟಲು, ವಧುವರರಿಗೆ ಕಂಕಣ ಕಟ್ಟಲು ಬಳಕೆ; A sheep woolen that has used in holy rituals of marriages;
- ಮಂತ್ರಿಸಿ ಯಂತ್ರ ಕಟ್ಟಿದ ಉಣ್ಣೆದಾರ; ಮಕ್ಕಳು ಹೆದರಿಕೊಂಡಾಗ ಕೆಲವು ದೇವಾಲಯಗಳಲ್ಲಿ ಈ ಮಂತ್ರಿಸಿದ ಉಣ್ಣೆಯ ದಾರವನ್ನು ಕಟ್ಟಿಸುವರು; ದನಕರುಗಳಿಗೆ ದೃಷ್ಟಿ ತಾಕದಿರಲೆಂದು ಕಾಲಿಗೆ, ಕೊರಳಿಗೆ ಕಟ್ಟುವ ದಾರ;
- ಉಣ್ಣೆಯನ್ನು ಹಿಂಜಿ ಮಾಡಿದ ಉದ್ದನೆಯ ದಿಂಡು ಅಥವಾ ದಳ; ಹತ್ತಿ ಉಣ್ಣೆಯ ದಾರ;
- ಕೋವಿಯ ಕಿವಿ; ರಂಜಕವನ್ನು ತುಂಬುವ ಸಣ್ಣ ಕೊಳವೆ; ಇದರ ಮೇಲೆ ಕೇಪನ್ನು ಕೂರಿಸಿರುವರು (ಬೇ.ಸಾಂ.ಪ.ಕೋ);
- ತಲೆಕೂದಲಿನ ಮುಡಿಗೆ ಬಿಗಿಯುವ ಉದ್ದನೆಯ ದಾರ(ಬೆಂ.ಗ್ರಾ.ಜಿ);
- ನೊಗ, ನೇಗಿಲುಗಳಲ್ಲಿ ಎತ್ತುಗಳನ್ನು ಕಟ್ಟಲು ಇರುವ ರಂಧ್ರ(ಮಂ.ಜಿ).

ಕುರುತಟೆ kurutaṭe :

- ಕ್ರಿ.ಶ.೧೭೭೩ರ ೫೨ನೇ ಶಾಸನದಲಿ ಇದರ ಉಲ್ಲೇಖ; A place referred in 52nd inscription of 1773 year;
- ಕುರು+ತಟೆ>ಕುರುತಟೆ ಆಗಿದೆ; ಕುರು=ಸಣ್ಣದಾದ, ಚಿಕ್ಕದಾದ; ತಟೆ=ದಡ, ತಡಿ;
- ಯಾವುದಾದರೂ ಸಣ್ಣ ನದಿ ಅಥವಾ ಕೆರೆಯ ದಡದ ಸಮೀಪದಲ್ಲಿರುವ ಊರು 'ಕುರುತಟೆ' ಆಗಿರಬಹುದು. Any village on the bank or nearby small river or check dam;

(E.C-೯)

ಕುರುದಿ kurudi :

- ಕೆಂಬಣ್ಣದ ನೀರು; ಶುಭಕಾರ್ಯ ಮತ್ತು ಭೂತಾರಾಧನೆಯ ಸಂದರ್ಭದಲ್ಲಿ ಅರಿಶಿನ, ಸುಣ್ಣ ಬೆರೆಸಿ ತಯಾರಿಸಿದ ಓಕುಳಿ ನೀರು; A reddish water used in holy rites during Bhuta festivity;
- ಶಕ್ತಿದೇವತೆ ಹಾಗೂ ಭೂತಗಳ ಆರಾಧನೆಯ ಸಾತ್ವಿಕ ಕ್ರಿಯೆಯೆಲ್ಲಿ ರಕ್ತಾಹಾರಕ್ಕೆ ಪರ್ಯಾಯವಾಗಿ ಈ ನೀರನ್ನು ಅರ್ಪಿಸುವರು;
- ಕೆಟ್ಟದೃಷ್ಟಿ ನಿವಾರಣೆಗೂ, ಗಂಡುಹೆಣ್ಣಿಗೆ ತಗುಲಿದ ದೃಷ್ಟಿ ನಿವಾಳಿಸಲೂ, ವಧೂವರರು ಪರಸ್ಪರ ಎರಚಿಕೊಳ್ಳಲೂ ಈ ನೀರು ಬಳಕೆ;
- ಕೆಲವೆಡೆ ಅರಿಶಿನ ಕುಂಕುಮ ಬೆರೆಸಿ ಓಕುಳಿ ನೀರು ತಯಾರಿಸುವರು; ***ವ್ಯದೂ:*** ಕುರಿನೀರು.

ಕುರುಪು kurupu :

- ಅಂಗಾಲಿನಲ್ಲಿ ಆಗುವ ಗುಂಡಗಿನ ಗಡ್ಡೆ(ಬೀ.ಜಿ) A tumor of foot sole;
- ಬೆಂಕಿಯಲ್ಲಿ ಸುಟ್ಟು ಕಪ್ಪಗೆ ಮಾಡುವುದನ್ನು ಕುರುಪು ಮಾಡು ಎನ್ನುವರು.

ಕುರುಪ್ಳೆ kuruple :

- ಕೆನ್ನೆಯ ಮೇಲೆ ಏಳುವ ಒಂದು ಗುಳ್ಳೆ; A blain on cheeks;
- ಚರ್ಮದಲ್ಲಿ ಒಂದು ಸಣ್ಣ ಗುಳ್ಳೆಯಾಕಾರದಲ್ಲಿ ಕಾಣಿಸಿದರೂ ಒಳಭಾಗದಲ್ಲಿ ಊದಿಕೊಂಡಿರುತ್ತದೆ (ತು.ಜಿ).

ಕುರುಬ kuruba :

- 'ಕುರುಬ' ಕನ್ನಡ ಪದ; 'ಕುರುಂಬ' ಎಂಬ ಮೂಲದಿಂದ ಬಂದಿರಬಹುದೆಂಬ ಅಭಿಪ್ರಾಯವಿದೆ; shepherd;
- ಕುರಿ ಸಾಕಾಣಿಕೆ ಮತ್ತು ಅದರ ಉಣ್ಣೆ ಸಂಗ್ರಹಿಸಿ ಕಂಬಳಿ ನೇಯುವುದು ಪ್ರಮುಖ ವೃತ್ತಿ; A person one rears sheeps and cattles sometimes. A device that uses to thread from sheep wool;
- ಕುರುಬ ಮತ್ತು ರೈತರ ನಡುವೆ ಪರಸ್ಪರ ಅವಲಂಬನೆ ಇದೆ;
- ವರ್ಷಕ್ಕೆ ಎರಡು ಬಾರಿ ಕುರಿ ತುಪ್ಪಟ ಕತ್ತರಿಸುವುದು ಅದರಿಂದ ಕಂಬಳಿ ನೇಯುವಿಕೆ ಕಾರ್ಯ, ಕುರಿಗಳನ್ನು ಹೊಲದಲ್ಲಿ ತಂಗಿಸುವಿಕೆಯಿಂದ ಭೂಮಿ ಫಲವತ್ತತೆ ವೃದ್ಧಿಸುವಲ್ಲಿ ಸಹಕಾರವಿದೆ;
- ಕೆಲವೆಡೆ ಈ ಕಾರ್ಯಗಳಿಗೆ ಹಣಪಡೆಯದೆ ದವಸಧಾನ್ಯಗಳ ಆಯಾ ಪಡೆಯುವ ಕ್ರಮ ಉಂಟು;
- ಇವರಲ್ಲಿ ಮೂರು ವರ್ಗಗಳಿವೆ: ೧. ಹಾಲುಮತಸ್ಥರು, ೨. ಅಂಡೆ ಕುರುಬರು ೩. ಕಂಬಳಿ ಕುರುಬರು. 'ಹಾಲುಮತಸ್ಥರು' ಬೀರೇಶ್ವರನ ಕುಲದವರು; ಇವರ ಹುಟ್ಟಿನ ಬಗೆ ಅನೇಕ ಕತೆಗಳಿವೆ; ಪಾರ್ವತಿಯ ಮೊಲೆಯ ಹಾಲಿನಿಂದ ಜನ್ಮ ಪಡೆದವರು ಹಾಲುಮತದವರು ಎಂಬ ಪುರಾಣದ ಕತೆ ಇದೆ; ಇವರಲ್ಲಿ ಬೀರೇಶ್ವರನಿಗೆ ಪ್ರಿಯವಾದ ಡೊಳ್ಳುವಾದ್ಯವನ್ನು ಮುಖ್ಯವಾಗಿಸಿಕೊಂಡು ಕುಣಿಯುವ 'ಡೊಳ್ಳುಕುಣಿತ' ಬಹಳ ಪ್ರಸಿದ್ಧಿ ಪಡೆದಿದೆ;
- ಇವರಲ್ಲಿ ಹತ್ತಿ ಕಂಕಣ ಮತ್ತು ಉಣ್ಣೆ ಕಂಕಣದವರೆಂಬ ಒಳ ಪಂಗಡಗಳಿದ್ದು, ಮದುವೆಯಲ್ಲಿ ಉಣ್ಣೆದಾರಕ್ಕೆ ಮಾಂಗಲ್ಯ ಪೋಣಿಸಿ ಕಟ್ಟುವವರು ಉಣ್ಣೆಕಂಕಣದವರು; ಹತ್ತಿ ದಾರ ಬಳಸುವವರು ಹತ್ತಿ ಕಂಕಣದವರು;
- 'ಅಂಡೆಕುರುಬರು' ಬಿದಿರಿನ ಹಂಡೆಗಳಲ್ಲಿ ಕುರಿ ಮತ್ತು ಆಡುಗಳ ಹಾಲನ್ನು ಕರೆದು ಬಳಸುತ್ತಿದ್ದವರು;
- 'ಕಂಬಳಿ ಕುರುಬರು' ಕುರಿಯ ಮೈಮೇಲಿನ ಉಣ್ಣೆಯನ್ನು ಕತ್ತರಿಸಿ ಕಂಬಳಿಯನ್ನು ನೇಯುವ ವೃತ್ತಿಯನ್ನು ಪ್ರಮುಖವಾಗಿ ನಿರ್ವಹಿಸಿಕೊಂಡು ಬರುವವರು;
- ಕುರುಬರಲ್ಲಿ ಕೆಲವು ಮನೆತನದವರು ಲಿಂಗಧಾರಣೆ ಮಾಡಿಕೊಂಡು ಶುದ್ಧ ಸಸ್ಯಹಾರಿಗಳಾಗಿ ಗುರುಸ್ಥಾನದಲ್ಲಿ ಒಡೆಯರು ಅಥವಾ ಹೆಗ್ಗಡೆಗಳೆಂಬ ಹೆಸರಿನಿಂದ ಪೂಜಾರಿಕೆ ವೃತ್ತಿ ಮಾಡುವವರು ಇದ್ದಾರೆ;
- ಇವರಲ್ಲಿ 'ಕಂಬಳಿ'ಗೆ ಅತ್ಯಂತ ಪವಿತ್ರ ಸ್ಥಾನ ನೀಡಿದ್ದು ಧಾರ್ಮಿಕ ವಿಧಿವಿಧಾನಗಳಲ್ಲಿ ನ್ಯಾಯ ನಿರ್ಣಯಿಸುವವರು ಕುಳಿತುಕೊಳ್ಳಲು ಬಳಕೆ;
- ಉಣ್ಣೆದಾರವನ್ನು ಮದುವೆಯಲ್ಲಿ ಕಂಕಣಕಟ್ಟಲು, ಕಾರುಹಬ್ಬದಲ್ಲಿ ಕೃಷಿ ಸಲಕರಣೆಗೆ ಕಟ್ಟಲು, ಆರಣೆ

ಪೂಜೆ, ಮಣೇವು ಶಾಸ್ತ್ರ, ಗದ್ದುಗೆ ಪೂಜೆಯಲ್ಲಿ ಕಟ್ಟಲು ಬಳಕೆ;

- ಮೈಸೂರು ಜಿಲ್ಲೆಯ ಮುಡುಕುತೊರೆ ಮಲ್ಲಿಕಾರ್ಜುನ, ಹಾವೇರಿ ಜಿಲ್ಲೆಯ ಕಾಗಿನೆಲೆಯ ಬೀರೇಶ್ವರ, ಮೈಲಾರಲಿಂಗ, ಹಿರೇಮೈಲಾರ ಇವರ ಪ್ರಮುಖ ಧಾರ್ಮಿಕ ಕ್ಷೇತ್ರಗಳು; *ಪ್ರ:* 'ಕುಂತ್ರೆ ಕುರುಬ ನಿಂತ್ರೆ ಕಿರುಬ'*(ಗಾ);* 'ಕುರುಬನ ಮನೆ ತೋಳ ಕಾದ ಹಾಗೆ'*(ಗಾ);*
- ಉಣ್ಣೆಯಿಂದ ದಾರ ತೆಗೆಯುವ ಚರಕ; A device that uses to thread from sheep wool;
- ಮಗ್ಗ; Handloom; looming machine;
- ಹುಣಸೆ ಬೀಜದಿಂದ ತಯಾರಿಸಿದ ಸರಿಯನ್ನು ಕಂಬಳಿಗಳಿಗೆ ಹಚ್ಚಲು ಬಳಸುವ ಸಾಧನ(ಚಿತ್ರ.ಜಿ);
- ಬುದ್ಧಿಹೀನ; ಪೆದ್ದ; ದಡ್ಡ(ಬ.ಜಿ);
- ಊರ ದೇವತೆಯ ಹಬ್ಬದಲ್ಲಿ ವಾದ್ಯಗಳನ್ನು ನುಡಿಸುವವರು;
- ತಮಿಳು ಮತ್ತು ಮಲೆಯಾಳಂಗಳಲ್ಲಿ ಕುಮ್ಬಿ ಪದವಿದೆ. ತೆಲುಗಿನಲ್ಲಿ ಕುರುಪೆ ಮತ್ತು ಕುರುಮ ರೂಪಗಳಿವೆ. ಕನ್ನಡದ ಕುರುಬ ಪದ ತಮಿಳು ಮತ್ತು ಮಲೆಯಾಳಂನ ರೂಪವನ್ನು ಹೋಲುತ್ತಿದೆ. ತೆಲುಗು ಮಾತ್ರ ಭಿನ್ನವಾಗಿದೆ. ಇದರಲ್ಲಿ ಕನ್ನಡದ 'ಬ' ಗೆ ಬದಲಾಗಿ 'ಪ' ಮತ್ತು 'ಮ' ಧ್ವನಿಮಾ ಇರುವುದನ್ನು ಕಾಣುತ್ತೇವೆ. ಅದರಲ್ಲಿಯೂ 'ಮ' ಧ್ವನಿಮಾ. ಕನ್ನಡದ ಪ್ರಾಚೀನ ರೂಪದಲ್ಲಿಯೇ(ಕುರುಬ) ಇರುವುದನ್ನು ಗುರುತಿಸಬಹುದು. ಹೀಗಾಗಿ ಈ ಎಲ್ಲ ಸಾಕ್ಷಿಗಳು ಕುರುಬ ಪದ ದ್ರಾವಿಡ ರೂಪ ಎಂಬುವುದನ್ನು ಸ್ಪಷ್ಟಪಡಿಸುತ್ತದೆ.
- ***—ಕುರುಬ್ತಿ/ಕುರುಬಿತ್ತಿ/ಕುರುಬಗಿತ್ತಿ*** : ಕುರುಬನ ಹೆಂಡತಿ; ಕುರಿಕಾಯುವ ಕಾಯಕದಲ್ಲಿ ಗಂಡನೊಂದಿಗೆ ಸಹವರ್ತಿಯಾಗಿ ದುಡಿಯುವ ಹೆಣ್ಣು; The wife of a shepherd;
- ***—ಕುರುಬರ ಕುಟುಂಬ*** : ಶಿರಸಿಯ ಮಾರಿಕಾಂಬೆ ದೇವಾಲಯದ ಬಾಬುದಾರ್ ಕುಟುಂಬಗಳಲ್ಲಿ ಇದು ಒಂದು; ಕುರುಬರ ಕುಲ: ಪರಿಶಿಷ್ಟ ಸಮುದಾಯದಲ್ಲಿ ಕಂಡುಬರುವ ಒಂದು ಒಳ ಪಂಗಡ; One of the families of Babudar Of Sirasi Marikambe, A sub caste of scheduled caste;
- ***—ಕುರುಬ ಮ್ಯಾದ*** : ಮೇದರು ಬಿದಿರಿನಿಂದ ಪುಟ್ಟಿ, ಹೆಡಿಗೆ, ಕೊಳಿ ಇತ್ಯಾದಿಗಳನ್ನು ತಯಾರಿಸುವ ಕಸುಬನ್ನು ಹೊಂದಿರುವರು; ಇವರಲ್ಲಿರುವ ಒಂದು ಒಳಪಂಗಡ ಕುರುಬ ಮ್ಯಾದ(ರಾಮ.ಜಿ); A sub caste of basket weavers;
- ***—ಕುರುಬರ ದಟ್ಟಿ ಆಟ*** : ಉತ್ತರ ಕರ್ನಾಟಕದ ಕುರುಬ ಜನಾಂಗದವರು ತಮ್ಮ ದೈವಗಳಾದ ಸಿದ್ದಪ್ಪ, ಬೀರಪ್ಪ, ಬೂತಪ್ಪ ಮೊದಲಾದ ದೈವಕ್ಕೆ ಸೇವೆಯ ಉದ್ದೇಶದಿಂದ ನಡೆಸುವ ಒಂದು ಬಗೆಯ ಕುಣಿತ; A kind of folk dance of shepherds when they worship their gods;
- ***—ಕುರುಬರಟ್ಟಿ*** : ಕುರುಬರು ವಾಸಿಸುವ ಮನೆ; ಇಲ್ಲಿ ಕುರಿಗಳನ್ನು ಕೂಡಿ ಹಾಕುವುದಕ್ಕೆ ನಿರ್ದಿಷ್ಟವಾದ ಸ್ಥಳದಲ್ಲಿ ರೊಪ್ಪ ನಿರ್ಮಿಸಿರುವುದೇ ವಿಶೇಷ; A place/home- where the shepherds are living;
- ***—ಕುರುಬರ ಚಿಕ್ಕಿ*** : ಸೂರ್ಯ ಮುಳುಗುತ್ತಲೇ ಪಶ್ಚಿಮದ ದಿಕ್ಕಿನಲ್ಲಿ ಕಾಣುವ ನಕ್ಷತ್ರ; ಇದು ಸುಮಾರು ರಾತ್ರಿ . ಬಂಭತ್ತರವರೆಗೂ ಕಂಡುಬರುವುದು(ಚಿ.ಪ.ಕೋ). The western star appeared after the sun set.

ಕುರುಬರ ದ್ಯಾವರು kurubara dyāvaru :

- ಕೋಲಾರ ಭಾಗದ ಕುರುಬರಲ್ಲಿ ಕಂಡುಬರುವ ಕುಲದೇವರ ಆಚರಣೆ; ಹೆಚ್ಚು ಮಡಿ, ನಿಷ್ಠೆಯನ್ನು ಬೇಡುವ ಜಾತ್ರೆ; A fair of shepherds of Kolara Region;
- ಕುಲದವರೆಲ್ಲ ಒಂದೆಡೆ ಸೇರಿ ಜಾತ್ರೆಯ ದಿನ ನಿಶ್ಚಯಿಸಿ ಕುಲದವರಿಗೆಲ್ಲ ಸುದ್ದಿ ಮುಟ್ಟಿಸುವರು;
- ಜಾತ್ರೆ ಖರ್ಚಿಗೆ ಬೇಕಾದ ಹಣವನ್ನು ಚಂದಾ ಎತ್ತಿ ಸಂಗ್ರಹಿಸುವರು;
- ಸಂಗ್ರಹಿಸಿದ ಹಣದಿಂದ ಜಾತ್ರೆಗಾಗಿ ಒಂದು ಎತ್ತನ್ನು ಕೊಂಡು ತಂದು ಅದರ ಮೈತೊಳೆದು ದೇವರ ಹೆಸರಿನ ಮುದ್ರೆ ಒತ್ತುವರು;
- ಕೊರಳಿಗೆ ಗೆಜ್ಜೆ, ಗಂಟೆಸರ, ಕಾಲಿಗೆ ಗೆಜ್ಜೆ, ಬೆನ್ನಿಗೆ ಗೌಸು, ಕೊಂಬಿಗೆ ಕಣಸು ಇತ್ಯಾದಿ ಧರಿಸಿ ಅಲಂಕರಿಸಿ ಬೆನ್ನಿನ ಮೇಲೆ ಎರಡು ಚರ್ಮವಾದ್ಯ(ತಮಟೆ) ಗಳನ್ನು ಕಟ್ಟುವರು;

- ಒಬ್ಬ ಬಸವನನ್ನು ಹಿಡಿದು ಮುಂದೆ ನಡೆದರೆ ಇನ್ನೊಬ್ಬ ತಮಟೆ ಬಾರಿಸುವನು, ಹೀಗೆ ತಮಟೆ ಹೊತ್ತ ಎತ್ತು ಇದಾದ್ದರಿಂದ ಇದನ್ನು 'ತಮಟೆ ಎತ್ತು' ಎನ್ನುವರು. ಹೀಗೆ ಕಳಸದೊಂದಿಗೆ ಊರಿಗೆ ಸಾರುವರು;
- ಪ್ರತಿ ತೆಂಡೆಯವರು ಒಂದೊಂದು ಗುಂಪು ಸೇರಿ ಎಲ್ಲರಿಂದ ಅಕ್ಕಿಬೆಲ್ಲ ಪಡೆದು ಹತ್ತಾರು ಸೇರಿನಷ್ಟು ಅಕ್ಕಿಯನ್ನು ಒನಕೆಯಿಂದ ಕುಟ್ಟಿ ಹಿಟ್ಟು ಮಾಡಿ ಬೆಲ್ಲದಪಾಕದಲ್ಲಿ ಕಲೆಸಿ ತಂಬಿಟ್ಟಿನ ಒಂದು ದೊಡ್ಡ ದೀಪ ಮಾಡುವರು; ತುಪ್ಪ, ಎಣ್ಣೆ ಹಾಕಿ ಹತ್ತಿಬತ್ತಿಯನ್ನಿಟ್ಟು ದೀಪ ಹಚ್ಚುವರು;
- ಜಾತ್ರೆ ಆರಂಭವಾದಾಗಿನಿಂದ ಅಂತಿಮದವರೆಗೂ ಈ ದೀಪ ಆರದಂತೆ ಎಚ್ಚರವಹಿಸುವುದು ಮುಖ್ಯ;
- ಒಂದು ಬಿದಿರು ಅಥವಾ ಆಲದ ಮರದ ಐದು ಅಡಿ ಉದ್ದದ ಕೊಂಬೆ ಎಲ್ಲಿಯೂ ಕೆತ್ತಿಲ್ಲದನ್ನು ಕತ್ತರಿಸಿ ತಂದು ಅದರ ಎರಡು ಬದಿಯಲ್ಲಿ ಕಬ್ಬಿಣದ ಕಂಬಿಗೆ ನೆಲ್ಲುಲ್ಲಿನಿಂದ ಹೆಣೆದ ನೆಲು(ಹಗ್ಗ) ಸಿಕ್ಕಿಸುವರು;
- ಒಂದು ತುದಿಗೆ ದೊಡ್ಡದೀಪ ಅಥವಾ ಮನೆದೀಪವನ್ನು ಹೊಸಬುಟ್ಟಿಯಲ್ಲಿ ಇಟ್ಟು ಇನ್ನೊಂದು ಬದಿಗೆ 'ಬಾಂದರವಿ ಮಡಕೆ' ಇಡುವರು(ಬಾಂದರವಿ ಮಡಕೆ ಎಂದರೆ ಹೊಸ ಮಡಿಕೆಯಲ್ಲಿ ಅಕ್ಕಿ, ಎಲೆ, ಅಡಿಕೆ ಹಾಕಿ ಇಡುವುದು);
- ಈ ರೀತಿ ಸಿದ್ಧ ಮಾಡಿದ್ದನ್ನು 'ಕಂಬಿ' ಎನ್ನುವರು;
- ಇದನ್ನು ಐದು ದಿನದ ಜಾತ್ರೆ ಮುಗಿಯುವವರೆಗೂ ಪೂಜಿಸುವುದೇ ವಿಶೇಷ;
- ಬಿದಿರಿನ ಬುಟ್ಟಿಯಲ್ಲಿ ಕಾಯಿ, ಬೆಲ್ಲ, ಅಕ್ಕಿ, ಅರಿಶಿನ, ಕುಂಕುಮ, ಎಣ್ಣೆ, ಹಾಲು, ಮೊಸರುಗಳನ್ನು ಇಟ್ಟು ಹೊಸ ಬಟ್ಟೆಯಿಂದ ಬುಟ್ಟಿಯನ್ನು ಮುಚ್ಚಿ ಗಂಟು ಕಟ್ಟಿರುವ 'ಗಂಪ' ವನ್ನು ಮಡಿಯಿಂದ ಹೊತ್ತು ಜಾತ್ರೆ ಸ್ಥಳದಲ್ಲಿ ಕೂಟ ಸೇರುವರು;
- ಸಸ್ಯಾಹಾರಿ ಅಡುಗೆ ಮಾಡಿ ಮನೆದೀಪಕ್ಕೆ ಪೂಜೆ ಸಲ್ಲಿಸಿ ವೀರಗಲ್ಲಿಗೆ ಎಡೆ ನೀಡುವರು;
- ಹೀಗೆ ಮೂರು ದಿನದ ಆಚರಣೆ ಮುಗಿದ ನಂತರ 'ತೆಂಗಿನಕಾಯಿ ಪವಾಡ' ನಡೆಯುವುದು;
- ವೀರಭದ್ರನ ಮಕ್ಕಳೆಂದು ಜಾತ್ರೆಯಲ್ಲಿ ಪಾಲ್ಗೊಂಡಿರುವ ವೀರ ಮಕ್ಕಳ ತಲೆ ಮೇಲೆ ತೆಂಗಿನಕಾಯಿ ಒಡೆಸಿಕೊಳ್ಳುವುದನ್ನು ನೋಡಲು ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಸೇರುವರು;
- ಪ್ರತಿಯೊಬ್ಬರು 'ಬಾಂದರವಿ' ಮಡಕೆಯಲ್ಲಿದ್ದ ವಸ್ತು ಬಳಸಿ ಮನೆಯ ಹಿರಿಯರಿಂದ ಅನ್ನ ಮಾಡಿಸಿ ಪೂಜಿಸುವರು;
- ಮನೆ ದೀಪದ ಬುಟ್ಟಿಯನ್ನು ಮನೆಯ ಹಿರಿಯರಿಂದ ಆರಂಭವಾಗಿ ಕಿರಿಯರವರೆಗೂ ಮದುವೆಯಾದವರೆಲ್ಲರು ತಲೆ ಮೇಲೆ ಹೊತ್ತುಕೊಳ್ಳುವರು. ಈ ಆಚರಣೆಯನ್ನು 'ದೀಪಬಂದದ್ದು' ಎನ್ನುವರು;
- ಕೊನೆಯದಾಗಿ ದೇವಾಲಯದ ಮುಂದಿನ ಕಂಬದ ಕೆಳಗೆ ದೊಡ್ಡ ದೀಪ ಹಚ್ಚಿ ಮೂರು ಬಗೆ ಎಣ್ಣೆ ಹಾಕಿ ಪೂಜಿಸಿ ಜಾತ್ರೆಗೆ ಬಂದವರೆಲ್ಲ ದೀಪ ನೋಡಿ ಬೀರಪ್ಪನಿಗೆ ಮಂಗಳಾರತಿ ಮಾಡಿ ತಮ್ಮ ಊರಿಗೆ ಹಿಂದಿರುಗುವರು;
- ದೇವಾಲಯ ಬಿಟ್ಟು ಸ್ವಲ್ಪ ದೂರದಲ್ಲಿ ನೀರು ಇರುವೆಡೆ ಬಂಡಿ ನಿಲ್ಲಿಸಿ 'ಕಂಬಿ' ಮತ್ತು 'ಮನೆದೀಪ' ಪೂಜಿಸಿ ಮರಿಬಲಿಕೊಟ್ಟು ಅಡುಗೆ ಮಾಡಿ, ಎಲ್ಲರೂ ಊಟ ಮಾಡುವರು; ಇದನ್ನು 'ದೇವರನ್ನು ಸಾಗಾಕುವುದು' ಎನ್ನುವರು;
- ಮನೆದೀಪದ ತಂಬಿಟ್ಟನ್ನು ಕುಲಸ್ಥರೆಲ್ಲ ಪ್ರಸಾದದಂತೆ ಹಂಚಿಕೊಂಡು ಊರಿಗೆ ಹೋಗುವರು; ಹೀಗೆ ಕುರುಬರ ದ್ಯಾವರನ್ನು ಮಾಡುವ ಕ್ರಮವಿದೆ (ಕೋ.ಜಿ).

ಕುರುಬರ ಮಂಚನಹಳ್ಳಿ kurubara mañcanahaḷḷi :

- ಕುರುಬರ ಬೆಟ್ಟಹಳ್ಳಿಯ ಹಾಗೆಯೇ ಇದೂ ಸಮುದಾಯವಾಚಿಯೂ, ವ್ಯಕ್ತಿ ಅಥವಾ ದೈವವಾಚಿಯೂ ಆಗಿರುತ್ತದೆ; A village named after shepherd community just like shepherd (Kuruba)hilly village;
- ಈ ಹೆಸರಿನಲ್ಲಿಯೂ ಮೂರು ಘಟಕಗಳಿವೆ: ಕುರುಬ(ರ)+ಮಂಚ(ನ)+ಹಳ್ಳಿ;
- 'ಕುರುಬ' ಪದ ರೂಪ ಮತ್ತು ದ್ರಾವಿಡ ಭಾಷೆಗಳಲ್ಲಿನ ಸಂವಾದಿ ಪದಗಳಿಗಾಗಿ 'ಕುರುಬರ ಬೆಟ್ಟಹಳ್ಳಿ' ಸ್ಥಳನಾಮವನ್ನು ನೋಡಬಹುದು; 'ಕುರುಬ'ಪದ ಸಾಕಷ್ಟು ಪ್ರಾಚೀನ, ಸಮುದಾಯ ಮತ್ತು ವೃತ್ತಿ ಸಂಬಂಧದ ಹೆಸರು ಕೂಡ ಪ್ರಾಚೀನವೇ:

- 'ಕುರುಬ' ದ್ರಾವಿಡ ಎಂಬುದೂ ಸ್ಪಷ್ಟವೇ; ಹಾಗೆಯೇ ಕುರಿಸಾಕಾಣಿಕೆ ಕೂಡ ಹಿಂದಿನಿಂದ ಬಂದುದೇ;
- ಇನ್ನು'ಮಂಚನಹಳ್ಳಿ' 'ಮಂಚ(ನ)+ಹಳ್ಳಿ' ಎಂಬ ಎರಡು ಪ್ರತ್ಯೇಕ ಪದಗಳಿಂದ ಆದುದು; 'ಮಂಚ' ಪದ ಗ್ರಾಮದೇವತೆ ಆಗಿರುವ ಮಂಚಮ್ಮಳಿಂದ ಬಂದಿರಬಹುದು ಅಥವಾ ಆ ದೇವತೆಯ ಒಕ್ಕಲು ಮಕ್ಕಳು ಮನೆ ದೇವತೆಯ ಹೆಸರನ್ನು ಇಟ್ಟುಕೊಳ್ಳುವುದರ– ಮಂಚ, ಮಂಚಣ್ಣ ಇತ್ಯಾದಿ ಮೂಲಕ ಬಂದಿರಬಹುದು; ಹೀಗಾಗಿ ದೈವದ ಹೆಸರಿನಿಂದ, ಇಲ್ಲವೆ ದೈವದ ಹೆಸರಿನ ವ್ಯಕ್ತಿಯಿಂದ ಬಂದಿರಲು ಸಾಧ್ಯ;
- ಹೀಗಾಗಿ 'ಮಂಚನಹಳ್ಳಿ'ಯನ್ನು ಕುರುಬರು ನೆಲೆಸಿರುವ ಸೂಚಕವಾಗಿ ಇದಕ್ಕೆ ಕುರುಬರ ಮಂಚನಹಳ್ಳಿ ಎಂದು ಕರೆಯಲಾಗಿದೆ;
- ಇದನ್ನು ಸಂಕ್ಷಿಪ್ತವಾಗಿ 'ಕೆ.ಮಂಚನಳ್ಳಿ' ಎಂದು ಕರೆಯಲಾಗಿದೆ. (***ನೋಡಿ:*** ಪಾ.ತಾ.ಸ್ಥ.ನಾ.ಅ)

ಕುರುಬರ ಮಲ್ಲೇನಹಳ್ಳಿ kurubara mallenahaḷḷi :

- ಕುರುಬರ ಬೆಟ್ಟಹಳ್ಳಿ, ಕುರುಬರ ಮಂಚನಹಳ್ಳಿಯ ಹಾಗೆಯೇ 'ಕುರುಬರ' ವಿಶೇಷಣವಿರುವ 'ಕುರುಬರ ಮಲ್ಲೇನಹಳ್ಳಿ' ಇದೆ; A village named after shepherd community due to their settlements;
- ಬೆಟ್ಟಹಳ್ಳಿ ಮತ್ತು ಮಂಚನಹಳ್ಳಿಯ ಹಾಗೆಯೇ ಇದೂ ಕೂಡ ಸಮುದಾಯವಾಚಿ ಮತ್ತು ವ್ಯಕ್ತಿ–ದೈವವಾಚಿ ಆಗಿದೆ;
- ಈ ಹೆಸರಿನಲ್ಲಿಯೂ ಮೂರು ಘಟಕಗಳಿವೆ; ಕುರುಬ(ರ)+ಮಲ್ಲೇನ+ಹಳ್ಳಿ;
- 'ಕುರಬ' ಪದದ ರೂಪ ಮತ್ತು ದ್ರಾವಿಡ ಸಂವಾದಿ ರೂಪಗಳಿಗಾಗಿ 'ಕುರುಬ ಬೆಟ್ಟಹಳ್ಳಿ' ಸ್ಥಳನಾಮವನ್ನು ನೋಡಿ;
- 'ಕುರುಬ' ಪದ, ಸಮುದಾಯ, ವ್ಯಕ್ತಿ ಮತ್ತು ಸಂಸ್ಕೃತಿಗಳು ಪ್ರಾಚೀನ ಕಾಲದಿಂದಲೇ ಬಂದವು ಎಂಬುದನ್ನು ಸ್ಪಷ್ಟಪಡಿಸುತ್ತದೆ;
- 'ಮಲ್ಲೇನಹಳ್ಳಿ' ಸಂಯುಕ್ತ ಪದ 'ಮಲ್ಲೇನ'+'ಹಳ್ಳಿ' ಎಂದು ಬಿಡಿಸಿ ಹೇಳಬೇಕಾಗುತ್ತದೆ; 'ಮಲ್ಲೇನಹಳ್ಳಿ' ಎಂಬುದು 'ಮಲ್ಲಯ್ಯ(ನ)ಹಳ್ಳಿ' ಎಂದಾಗುತ್ತದೆ; 'ಮಲ್ಲಯ್ಯ' ಪದಕ್ಕೆ 'ಹಳ್ಳಿ' ಪದ ಎದುರಾದಾಗ 'ಮಲ್ಲಯ್ಯನಹಳ್ಳಿ' ಆಗಬೇಕಾಗುತ್ತದೆ; ಆದರೆ ಈಗ 'ಮಲ್ಲೇನಹಳ್ಳಿ' ಆಗಿದೆ; 'ಮಲ್ಲಯ್ಯ' ರೂಪವನ್ನು ಮಲ್ಲ+ಅಯ್ಯ>ಮಲ್ಲ+ಅಇ>ಮಲ್ಲೇ ಆಗುವುದು ಸಹಜ; 'ಯ'ಕಾರ ಕಳೆದುಹೋಗಿ ಅದರ ಪರಿಹಾರಕ್ಕಾಗಿ ಹಿಂದಿನ ಅಕ್ಷರ(ಲ್ಲ) ದೀರ್ಘವಾಗುವುದು(ಲ್ಲೇ=ಲ್+ಲ್+ಏ); ಇದರ ಪರಿಣಾಮವಾಗಿ 'ಮಲ್ಲೇನಹಳ್ಳಿ' ಬಳಕೆಗೆ ಬಂದಿರಬಹುದು;
- 'ಮಲ್ಲಯ್ಯ'ನಿಂದ 'ಮಲ್ಲೇನಹಳ್ಳಿ' ಬಂದಿದೆ ಎಂದಾದರೆ, ಆಗ ಅದು ವ್ಯಕ್ತಿನಾಮವಾಚಿಯಾಗುತ್ತದೆ;
- 'ಮಲ್ಲಯ್ಯ' ಹೆಸರು 'ಗಿರಿಮಲ್ಲಯ್ಯ'ನಾದ ಮಹದೇಶ್ವರನಿಗೆ ಇರುವುದರಿಂದ, ಆ ದೇವತೆಯ ಹೆಸರಿನಲ್ಲಿ ವ್ಯಕ್ತಿನಾಮಗಳು ಹುಟ್ಟಿಕೊಳ್ಳುವುದರಿಂದ ಇದು ದೈವ ವಾಚಕವಾಗಿ ಬಳಕೆಗೆ ಬಂದಿರಬಹುದು;
- ಊರಿನ ಹೆಸರನ್ನು 'ಕೆ.ಮಲ್ಲೇನಹಳ್ಳಿ' ಎಂದು ಕರೆಯುವುದಿದೆ.

(***ನೋಡಿ:*** ಪಾ.ತಾ.ಸ್ಥ.ನಾ.ಅ.)

ಕುರುಬರಹಳ್ಳಿ kurubarahaḷḷi :

- ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ತಾಲ್ಲೋಕಿನ ಕ್ರಿ.ಶ.೧೭೬೦ರ ೩೦ನೇ ಶಾಸನದಲ್ಲಿ ಇದರ ಉಲ್ಲೇಖ; A village referred in 30th inscription Of Sringeri Taluk, Chikkamagalur district;
- ಶೃಂಗೇರಿಯ ಸಚ್ಚಿದಾನಂದ ಭಟ್ಟಾರಿಸ್ವಾಮಿಗಳಿಗೆ ಬೆಳವಾಡ, ಬೇಲೂರು ಮತ್ತಿತರ ಸ್ಥಳಗಳನ್ನು ಚಂದ್ರಮೌಳೇಶ್ವರ ಮತ್ತು ಶಾರದಾಂಬಿಕೆ ದೇವರಿಗೆ ಮೈಸೂರು ಒಡೆಯರು ದಾನಕೊಟ್ಟ ವಿವರವಿದೆ;
- ದಾನಕೊಟ್ಟ ಸ್ಥಳಗಳಲ್ಲಿ ಕುರುಬರಹಳ್ಳಿ ಸೇರಿರಬಹುದೆ?; ಕುರುಬ(ರ)+ಹಳ್ಳಿಯಿಂದ ಆದ ಪದವಿದು; 'ಹಳ್ಳಿ' ಎನ್ನುವುದು ಸಾಮಾನ್ಯವಾಗಿ ಊರು, ಗ್ರಾಮ ಎಂಬ ಹೆಸರಿನಲ್ಲಿ ಬಳಕೆಯಾದ ಪದ; 'ಕುರುಬ' ಒಂದು ಸಮುದಾಯ ಸೂಚಕ ಪದ, 'ಕುರಿಗಾಹಿ' ಮತ್ತು 'ಕುರಿಸಾಕಾಣಿಕೆ'ಯ ಸೂಚಕ ಪದ ಕೂಡ; ಈ ಹಿನ್ನೆಲೆಯಲ್ಲಿ 'ಕುರುಬರಹಳ್ಳಿ' ಬಂದಿರಬಹುದು.

(E.C- ೧೧, ಚಾ.ಜಿ.)

ಕುರುಬಾಗಿಲು kurubāgilu :

ಮನೆಯ ಹಿಂದಿನ ಬಾಗಿಲು; ಹಿಂಬಾಗಿಲು(ಮಂ.ಜಿ). ಚಿಕ್ಕಬಾಗಿಲು; ಗಿಡ್ಡಬಾಗಿಲು(ಧಾ.ಜಿ) ಕುರು + ಬಾಗಿಲು>ಕುರುಬಾಗಿಲು; ಕುರು=ಚಿಕ್ಕ, ಹಿಂಬದಿಯ ಅರ್ಥವಿದೆ. The back side door of a house.

ಕುರುಬು kurubu :

- ತಿಗರಿಯಿಂದ ತೆಗೆದ ಮಡಿಕೆ ಕುಡಿಕೆ ಇತ್ಯಾದಿ ಮಣ್ಣಿನ ವಸ್ತುಗಳನ್ನು ಸ್ವಲ್ಪ ಒಣಗಿಸಿ ನಂತರ ಸ್ವಳಾದಿಂದ ಬಡಿಯುವ ಕ್ರಮ; A method of pot making;
- ಎಳೆ ತೆಂಗಿನಕಾಯಿ; ಇತ್ತ ಬಲಿತೂ ಅಲ್ಲದ ಅತ್ತ ಎಳತೂ ಅಲ್ಲದ ತೆಂಗಿನ ಕಾಯಿ(ತು.ಜಿ); coconut;
- ಹೆರೆಗಾಯಿ(ಮೈ.ಜಿ);
- ಎಡಗಾಯಿ(ಮಂ.ಜಿ);
- ನೀರು ತುಂಬಿಕೊಂಡಿರುವ ಆರಂಭದ ತೆಂಗಿನಕಾಯಿ(ಚಿಕ್ಕ.ಜಿ). ತ: ಕುರುಮ್ಬೈ, ಮ: ಕುರುಮ್ಬು, ತು: ಕುರುಕ್ಕು.

ಕುರುಬೆಟ್ಟ kurubeṭṭa :

- ಕ್ರಿ.ಶ.೧೩ನೇ ಶ.ದ ೩೨೨ನೇ ಶಾಸನದಲ್ಲಿ 'ಕುರುಬೆಟ್ಟ' ಕಾಣಿಸಿಕೊಂಡಿದೆ; A place appeared in 322nd inscription of 13th century;
- 'ಕುರು' ಎಂದರೆ ಸಣ್ಣದಾದ, ಚಿಕ್ಕದಾದ ಬೆಟ್ಟ; ಗಿರಿ, ಪರ್ವತ;
- ಚಿಕ್ಕದಾದ ಬೆಟ್ಟ/ಗಿರಿಯ ಸಮೀಪದಲ್ಲಿರುವ ಊರು 'ಕುರುಬೆಟ್ಟ' ಎಂದಾಗಿರಬಹುದು.

(E.C-೯)

ಕುರುಮಾಮ kurumāma :

- ಅಲೆಮಾರಿ ಬುಡಕಟ್ಟಿಗೆ ಸೇರಿದ ಭವಿಷ್ಯಕಾರ; ಕುರುಮಾಮ ಎಂದರೆ 'ಕುರುಹ'ನ್ನು ಬಿಡಿಸಿ ಹೇಳುವ ಶಾಸ್ತ್ರಕಾರ ಎಂಬರ್ಥ; A foreteller; An astrologer who belongs to a gypsy community;
- ಕುರುಮಾಮರನ್ನು 'ಕೊಂಡಮಾಮ' ಎಂಬುದಾಗಿಯೂ ಕರೆಯುವರು; ತಮ್ಮ ಶಾಸ್ತ್ರಕ್ಕೆ ಆದಿದೈವನಾದ ಶ್ರೀರಾಮ/ಕೊಂಡ ದೇವತೆಯನ್ನು ಸ್ತುತಿಸುವುದರಿಂದ ಈ ಹೆಸರು ಬಂದಿರಬಹುದು?;
- ಮನುಷ್ಯನ ಮಾನಸಿಕ ಚಂಚಲತೆ ಮತ್ತು ದೈಹಿಕ ತೊಂದರೆಗಳಿಗೆ ಪರಿಹಾರ ಸೂಚಿಸುವುದು ಇವರ ಕಾಯಕ;
- ಭವಿಷ್ಯ ಹೇಳಿ ಭಿಕ್ಷೆ ಬೇಡಿ ಜೀವಿಸುವುದು ಇವರ ವೃತ್ತಿ; ಹಾಗೆಯೇ ಜನಪದ ವೈದ್ಯದಲ್ಲೂ ನಿಪುಣರು;
- ಆಂಧ್ರದ ಮೂಲ ನಿವಾಸಿಗಳಾಗಿದ್ದು ತೆಲುಗು ಇವರ ಮಾತೃಭಾಷೆ; ಶ್ರೀಶೈಲದ ಮಲ್ಲಿಕಾರ್ಜುನನ ಪರಮಭಕ್ತರು; Their mother tongue is telugu; they worship god Mallikarjuna of Sreeshaila of Andra Pradesh;
- ಶ್ರೀರಾಮನ ಮುಡಿಕಟ್ಟಿ ಕೈಯಲ್ಲಿ ಏಕನಾದ, ಚಿಟಿಕೆ ಹಿಡಿದು ಅವನ ಧ್ಯಾನದಲ್ಲೇ ಶಕುನ ನುಡಿಯುವರು, ವೀರಗಚ್ಚೆ, ಎದೆಗೆ ಕಾವಿಬಟ್ಟೆ, ಮುಕುಟದಂತೆ ಕಟ್ಟಿದ ಮುಡಿ, ಕೈಯಲ್ಲಿ ಏಕನಾದಕ್ಕೆ ನವಿಲುಗರಿ ಸಿಕ್ಕಿಸಿಕೊಂಡು, ನಡುವಿಗೆ ಕವಡೆಯ ಪಟ್ಟಿಯನ್ನು ಸುತ್ತಿ, ಹಣೆಗೆ ಬಿಳಿ ಕೆಂಪುನಾಮ, ಹೆಲಗಮೇಲಿನ ಬಿದಿರಿನ ದಬ್ಬೆಗೆ ನಾಲ್ಕು ಪದರಿನ ಚೀಲ ನೇತು ಹಾಕಿಕೊಂಡು, ಕಿವಿಗಳಿಗೆ ಚಂದ್ರಮುರಿ, ಉದ್ದವಾದ ಗಡ್ಡಮೀಸೆ, ಬಿಟ್ಟುಕೊಂಡು ಭವಿಷ್ಯ ಹೇಳುತ್ತಾ ಬೀದಿಯಲ್ಲಿ ಅಲೆಯುವರು;
- ತಮ್ಮ ಚೀಲದಲ್ಲಿ ಸಚಿತ್ರ ಗ್ರಂಥದ ಚಿತ್ರವಸ್ತು ದುಂಡಾಗಿ ಸುತ್ತಿದ ಬಿಳಿ ಎಕ್ಕದ ಬೇರಿನ ಒಂದು ಸಿಂಬಿ, ಕರಡಿ ಕಾಲಿನ ಪಂಜ, ಮೈಮದನಿಕಿ, ತಾಮ್ರಸಿಖಿ, ಕಲ್ಲಂಬಿ, ಜಡಮೂಲಿಕಿ ಇತ್ಯಾದಿ ಗಿಡಮೂಲಿಕೆ ಇತರ ವಸ್ತುಗಳು ಇರುತ್ತವೆ;
- ಬಾಲಗ್ರಹ, ನೆಲಗ್ರಹ, ಹಲ್ಲುಕಡಿಯುವುದು ಇತ್ಯಾದಿ ಭೀತಿಗಳನ್ನು ನಿವಾರಿಸುವರು; ಹಸ್ತಮುದ್ರಿಕೆಯಲ್ಲಿ ಪ್ರಾವಿಣ್ಯತೆ ಹೊಂದಿದ್ದು ಹಸ್ತರೇಖೆ ನೋಡಿ ಭವಿಷ್ಯ ಹೇಳುವರು;
- ಮೀನು, ಕುರಿ, ಕೋಳಿ, ಮೇಕೆ ತಿನ್ನುವರು; ಸೇಂದಿಕುಡಿಯುವುದು, ಬಂಗಿಸೊಪ್ಪಿನ ಚಿಲುಮೆ ಕಟ್ಟುವುದು, ಅಡಕೆಲೆ ಹಾಕುವುದು ಇವರಿಗೆ ಮೊದಲಿಂದಲೂ ರೂಢಿ;
- "ಹರಿಯೋ ಕಾಲ್ದಲ್ಲಿ ಒಂದಂಚಿ ಕಡ್ಡಿ, ಕಳೆಯೋ ಕಾಲ್ದಲ್ಲಿ ಒಂದುಲ್ಕಡ್ಡಿ ಮಾಡ್ತೀನಿ; ಹಿಂದಿದ್ದ ಬಲ ಹೋಯ್ತು ಮುಂದಿದ್ದ ಸಿಂಗಾರ ಹೋಯ್ತು, ಅದರಿಂದ ಸ್ಯಾನೆ ಕಷ್ಟ ಅದೆ ತಿಳ್ಕಳಿ; ನೀರಿನಲ್ಲಿ ಕಂಟಕ ಕಳೆದೋಯ್ತ, ಗೋವು ಭೂಮಿಯಲ್ಲಿ

ಜಯವಾಗ್ತದೆ, ಮೂಗುತ್ತಿ ಸುಂದ್ರಿಯಿಂದ ಅಶುಭವಾಯ್ತುದೆ, ಒಳ್ಳೇದು ಮಾಡ್ಕೊಡ್ತೀನಿ ಅಂತಾನೆ ಈ ಕುರ್‌ಕುರ್ ಮಾಮ" ಎಂಬುದಾಗಿ ನುಡಿಯುವರು.

ಕುರುವಂಕ/ಕುಱುವಕ್ಕ kuruvanka/ kuṟuvakka :

- ಅರಸೀಕೆರೆ ತಾಲ್ಲೋಕು ಕುರುವಂಕ ಎಂಬ ಗ್ರಾಮದಲ್ಲಿ ದೊರೆತಿರುವ ಕ್ರಿ.ಶ.೧೧೮೬ರ ಹೊಯ್ಸಳ ವೀರಬಲ್ಲಾಳನ ಕಾಲದ ೫೯ನೇ ಶಾಸನದಲ್ಲಿ 'ಕುರುವಂಕ' ಗ್ರಾಮದ ಉಲ್ಲೇಖವಿದೆ; A village that referred in 59th inscription of Hoysala Veeraballala; It is available In Arasikere taluk, Hasana district;
- ಈ ಸಂಪುಟದ ಇತರ ಶಾಸನಗಳಲ್ಲಿ ಕುರುವಂಕ ಕುರುಳಗೌಡ, ಕುರುವಂಡೇಶ್ವರ, ಕುಱುವಗದ್ದೆ ಮೊದಲಾದ ಪದಗಳಲ್ಲಿ 'ಕುರು' ಪದದ ಉಲ್ಲೇಖವಿದೆ;
- ಹೀಗಾಗಿ ವ್ಯಕ್ತಿ, ದಾನಿ, ದೇವತೆ ಮತ್ತು ಸಮುದಾಯವಾಚಿ ಪದವಾಗಿ ಬಳಕೆಯಾಗಿರುವಂತೆ ಕಾಣುತ್ತದೆ.

(E.C-೧೦, ಹಾ.ಜಿ.)

ಕುಱುವಂಗಿ kuṟuvangi :

- ಚಿಕ್ಕಮಗಳೂರು ತಾಲ್ಲೋಕಿನ 'ಕುರುವಂಗಿ' ಪ್ರದೇಶದಲ್ಲಿ ದೊರೆತಿರುವ ಕ್ರಿ.ಶ.೧೨೮೭ರ ೮೧ನೇ ಶಾಸನದಲ್ಲಿ (ಹೊಯ್ಸಳ ಮುಮ್ಮಡಿನರಸಿಂಹನ ಕಾಲದ್ದು) 'ಕುಱುವಂಗಿ' ಪ್ರದೇಶದ ಉಲ್ಲೇಖವಿದೆ; A village that referred in 81th inscription of Chikkamagaluru taluk;
- 'ಕುಱುವಂಗಿ' ರೂಪ ಆಮೇಲೆ 'ಕುರುವಂಗಿ' (ಱ>ರ) ಆಗಿ ಮಾರ್ಪಾಟಾಗಿದೆ;
- ಈ 'ಕುರುವಂಗಿ' ಪ್ರದೇಶಕ್ಕೆ 'ಶ್ರೀಸ್ವಯಂಪ್ರಕಾಶಪುರ' ಅಗ್ರಹಾರ ಎಂಬ ಹೆಸರಿತ್ತು ಎಂದು ಈ ಶಾಸನದಲ್ಲಿ ದಾಖಲಾಗಿದೆ;
- ಕ್ರಿ.ಶ.೧೩ನೇ ಶ.ದ ಹೊತ್ತಿಗೆ ಈ ಪ್ರದೇಶ ಒಂದು ಅಗ್ರಹಾರವಾಗಿದ್ದಿತೆಂದು ತಿಳಿದು ಬರುತ್ತದೆ;
- ಈಗಲೂ 'ಕುರುವಂಗಿ' ಪ್ರದೇಶ ಅಸ್ತಿತ್ವದಲ್ಲಿರುವುದನ್ನು ಕಾಣಬಹುದಾಗಿದೆ.

(E.C-೧೧, ಚಿಕ್ಕ.ಜಿ.)

ಕುಱುವಂಗೆರೆ kuṟuvangere :

- ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೋಕಿನ ಕ್ರಿ.ಶ.೧೧೮೦ರ ೨೮ನೇ ಶಾಸನದಲ್ಲಿ ಇದರ ಪ್ರಸ್ತಾಪ; A village that referred in 28th inscription of Sindhunooru Taluk, Raichur District;
- ಮಹಾಮಂಡೇಶ್ವರ ಸಿಂಧವಂಶದ ರಾಚಮಲ್ಲನು ಸೂರ್ಯಗ್ರಹಣ ನಿಮಿತ್ತವಾಗಿ 'ಬಲ್ಲಕುನ್ದೆ'-೩೦೦, ಬಳಿಯ ಕರಿಯೂರು, ನಗರಕೆರೆಯಿಂದ ಉತ್ತರಕ್ಕೆ ಹಿರಿಯ ಕೋಲಗಡಿಂಬದಲ್ಲಿ ಅಳೆದು ಚಿಕ್ಕಯ್ಯಪಂಡಿತನ ಕಾಲತೊಳೆದು ೨೦ ಮತ್ತರು ಭೂಮಿ ದಾನ ಮಾಡಿದ;
- ಕುರು(ಱು)ವಂಗೆರೆಯು ದಾನ ಮಾಡಿದ ಪ್ರದೇಶದಲ್ಲಿ ಸೇರಿತ್ತೆಂಬುದು ಇಲ್ಲಿನ ಮುಖ್ಯ ವಿಚಾರವಾಗಿದೆ.

(ಕ.ವಿ.ವಿ.ಶಾ.ಸಂ.೭; ಹಂಪಿ)

ಕುರುವು ಕೊಡು kuruvu koḍu :

- ಗ್ರಾಮದೇವತೆಯನ್ನು ಪೂಜಿಸುವಾಗ ದೇವತೆ ಮೈಮೇಲೆ ಬಂದು ಭಕ್ತರ ಇಷ್ಟಾರ್ಥ ಪೂರೈಸುತ್ತದೆಯೋ ಇಲ್ಲವೋ ಎನ್ನುವುದಕ್ಕಾಗಿ ಅಲ್ಲಿಯೇ ಇರುವ ಯಾವುದಾದರೂ ಎರಡು ವಸ್ತುಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಕೇಳಿದಾಗ ಅವುಗಳನ್ನು ದೇವತೆ ಮೈತುಂಬಿದ ವ್ಯಕ್ತಿ ಬಂದು ತೋರಿಸುವುದು; A ritual of indicating a work to be done or not by a village god through the priest;
- ಇದು ಮುಖ್ಯವಾಗಿ ದೇವರು ಮೈಮೇಲೆ ಬಂದವರನ್ನು ಪರೀಕ್ಷಿಸಲು ಬಂದಿರುವಂತೆ ಕಾಣುತ್ತದೆ;
- ಮೈಮೇಲೆ ದೈವ ಬಂದವನು ಇಚ್ಛಿತ ವಸ್ತುಗಳನ್ನು ತೋರಿಸುತ್ತದೆಯೊ ಇಲ್ಲವೊ ಎಂಬುದಕ್ಕೆ ಒಂದು ಸವಾಲಿನ ರೂಪದಲ್ಲೇ ಇದು ಮೈದೋರಿದೆ.
- ಎರಡೂ ಕಡೆಯಲ್ಲಿಯೂ ಇದು ಒಂದು 'ನಂಬಿಕೆ' ಯಂತೆ ನಡೆಯುತ್ತದೆ ಎಂಬುದನ್ನು ಮರೆಯಲಾಗದು.

ಕುರುವನಮಾಳ kuruvanamāḷa :

- ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲ್ಲೋಕಿನ ಕ್ರಿ.ಶ.೧೨೧೦ರ ೨೪ನೇ ಶಾಸನದಲ್ಲಿ ಈ ಊರಿನ ಉಲ್ಲೇಖವಿದೆ; A village that referred in 24th inscription of Ballary Taluk;
- ಕುಟಿತಿನಿಯ ಕುಮಾರೇಶ್ವರ ದೇವಾಲಯಕ್ಕೆ ಆ ದೇವಾಲಯದ ತಪೋವನಾಧಿಪತಿ ವಿಷ್ಣುಕರ ದೇವನು ಮತ್ತು ಸ್ಥಾನದ ಏಳ್ಕೋಟಿ ಭಕ್ತರು, ಬಣಜಿಗರು ಮಹಾಸಭೆ ಸೇರಿ ಮನೆ, ನಂದಾದೀವಿಗೆಗೆ ಗಾಣ ನೀಡಿದ ವಿಚಾರ;
- ಕುರುವನ ಮಾಳದ ವಾಸುದೇವ ದೇವರಿಗೆ ಭೂಮಿಬಿಟ್ಟ ವಿಚಾರವೂ ಉಲ್ಲೇಖ;
- ಕುರುವ=ದಿಣ್ಣೆ; ಮಾಳ=ಮೈದಾನ; ಅಂದರೆ ದಿಣ್ಣೆಯಲ್ಲಿರುವ ಮೈದಾನದ ಪ್ರದೇಶ ಎಂಬರ್ಥದಲ್ಲಿ ಬಳಕೆ.

(ಕ.ವಿ.ವಿ.ಶಾ.ಸಂ.೧; ಹಂಪಿ)

ಕುರುವು kuruvu :

- ಗುರುತು; ಪತ್ತೆ ಹಚ್ಚು; ಚಿಹ್ನೆ; ಅಭಿಜ್ಞಾನ; A sign, symbol; to identify;
- ದೇವರನ್ನು ಕೇಳುವಾಗ ಯಾವುದಾದರೂ ಒಂದು ವಸ್ತು ಅಥವಾ ಸ್ಥಳವನ್ನು ಮನದಲ್ಲಿಟ್ಟು 'ಕುರುತು' ಕೊಳ್ಳುವುದು; ಕುಱುಪು(ಹ.ಗ.)>ಕುಱುವು>ಕುರುವು (ಹೊ.ಗ) ಱ>ರ; ಪ>ವ.

ಕುರುವೆ kuruve :

ಎಂಜಿರು; ಮಾದೇರಿ, ಬೆತ್ತ ಮೊದಲಾದ ಬಿಳಲುಗಳಿಂದ ತಯಾರಿಸುವ ಸಣ್ಣ ಗಾತ್ರದ ಬುಟ್ಟಿ; ಚಿಕ್ಕಕುಕ್ಕೆ; ಚಿಕ್ಕಹೆಡಗೆ; ಹೆಣೆದಬುಟ್ಟಿ(ಮಂ.ಜಿ); *ಪ್ರ:* 'ಕುರುವೇಲಿ ಕಾಳು ತುಂಬಿಡು'. A small basket, that made up of wild creepers.

ಕುರುವೇಶ kuruvēśa :

Cordia domestica,: ಶುಷ್ಕಪರ್ಣಿ, ಚಿಕ್ಕಮರ. A small tree.

ಕುರುಹಾಕಿ kuruhāki :

ಎರವರಲ್ಲಿ ಯಾರಾದರೂ ಸತ್ತರೆ ಶವಪೂಜೆ ಮಾಡುವಾಗ ಅವನ ಸಂಬಂಧಿಗಳಲ್ಲಿ ಒಬ್ಬ ಶವಕ್ಕೆ ಕಪ್ಪು ಹಾಕುವುದಕ್ಕೆ 'ಕುರುಹಾಕಿ' ಎನ್ನಲಾಗುವುದು. One of the funeral rites of Erava Caste;

ಕುರುಹು kuruvu :

- ಗುರುತು; ಚಿಹ್ನೆ; ಸುಳಿವು; A symbol; A sign, Identity, A clue;
- ಮೈಲಾರಲಿಂಗನ ಒಂದು ವರ್ಗದ ಗೊರವರಾದ ಕಂಚಾವೀರರು ತಮ್ಮ ಕೈಕಾಲುಗಳಿಗೆ ಶಸ್ತ್ರ ಹಾಕಿ ಮಾಡಿಕೊಂಡಿರುವ ಪವಾಡದ ಗಾಯ(ಚಿ.ಪ.ಕೋ).

ಕುರುಳೆ kuruḷe :

- ಚಿಕ್ಕಮಗು; An infant;
- ಬಾಳೆಯ ಚಿಕ್ಕ ಸಸಿ; ಕಂದು, ಮೊಳಕೆ; ಕಿರಿದು. An earthen vessel with wide mouth(ಕಿಟ್ಟೆಲ್). Sprouts of banana tree.

ಕುರೆಮಣ್ಣು kuremaṇṇu:

- ಯಾವುದಕ್ಕೂ ಉಪಯೋಗಕ್ಕೆ ಬಾರದ ಮಣ್ಣಿನ ಮೇಲಿನ ಪದರು; An useless Soil surface/ layer;
- *—ಕುರೆರೋಗ* : ಅಡಿಕೆ ಮರದ ತೊಗಟೆಗೆ ಬರುವ ಒಂದು ಬಗೆಯ ರೋಗ. A disease of areca nut tree.

ಕುರ್ಕ kurka :

- ಗುಳ್ಳೆನರಿ *ಪ್ರ:* 'ದಾರಿಲಿ ಕುರ್ಕ ಓಡ್ತಿತ್ತ್'(ಗೌ. ಕೊಡಗು); A cunning jackal;
- ಚಿಕ್ಕ ಆಕಾರದ ಚಿರತೆ(ಶಿ.ಜಿ); ಚಿರತೆ ಹುಲಿಯಂತೆ ಮಾಂಸಾಹಾರಿ; ನಾಯಿ ಮಾಂಸ ಬಹಳ ಪ್ರಿಯ; ನಾಯಿಯನ್ನು ಬಹಳ ಚಾಣಾಕ್ಷತನದಿಂದ ಬೇಟೆಯಾಡುವುದು; A small cheetah or leopard; dog is its favourite food;
- ಊರಿನಲ್ಲಿರುವ ಮನೆಯಲ್ಲಿಯೇ ನಾಯಿಗಳನ್ನು ಸದ್ದಿಲ್ಲದಂತೆ ಹೊತ್ತು ಹೋಗುವುದು; ನಾಯಿಗಳಿಗೆ ಕುರ್ಕನ ವಾಸನೆ ಮೂಗಿಗೆ ಬಡಿದರೆ ಅಲ್ಲಿಂದ ಓಡುತ್ತವೆ; ಬುದ್ಧಿವಂತಿಕೆಯಿಂದ ಬೇಟೆಯಾಡುವುದೇ ಕುರ್ಕನ ತಂತ್ರ.

ಕುರ್ಕಾವು kurkāvu :

- ಸಣ್ಣ ಪ್ರಮಾಣದಲ್ಲಿ ಬೆಂಕಿಯ ಉರಿ ತಾಗುವಿಕೆ; ಕಿರಿಕಾವು; A small proportion of flame;
- ಸಾಮಾನ್ಯವಾಗಿ ಒಲೆಯ(ಓ) ವಾಗೊಲೆಗೆ ಈ ಕಾವು ತಾಕುವುದು; ಇದರಲ್ಲಿ ಹಾಲು ಕೆನೆಕಟ್ಟುವಂತೆ ಕಾಯಲು ಇಡುವುದುಂಟು.

ಕುರ್ಕಿಲು kurkilu :

- ಬೀಳಲಿನಿಂದ ಮಾಡಿದ ಸಾಧನ; ಸುಮಾರು ಮೂರು ಅಡಿ ಎತ್ತರ ಕುಕ್ಕೆ; A basket that made up of wild creepers;
- ಇದು ತರಗಲೆಗಳನ್ನು ತುಂಬಿ ಹೊತ್ತಿ ತರಲು, ಸಣ್ಣ ಕೋಳಿ ಮರಿಗಳನ್ನು ಮುಚ್ಚಿಡಲು ಬಳಕೆ(ದ.ಕ).

ಕುರ್ಕು kurku :

- ದ್ವಿದಳ ಧಾನ್ಯಗಳನ್ನು ಹುರಿದುಕೊಂಡು ಆಗಿಂದಾಗ್ಗೆ ಒಂದೊಂದೇ ಕಾಳುಗಳನ್ನು ಬಾಯಿಗೆ ಹಾಕಿಕೊಂಡು ತಿನ್ನುವುದು; Eating pulses by roasting one by one;
- ಹಾಡುಗಳನ್ನು ತುಂಡು ಪದಗಳಂತೆ ಮೆಲ್ಲಗಿನ ದನಿಯಲ್ಲಿ ಹೇಳಿಕೊಳ್ಳುವುದು ಪ್ರ: 'ನಾಟಕದ ಪದಗಳನ್ನು ತನ್ನಲ್ಲಿಯೇ ಕುರಿಕಿಕೊಳ್ಳುತ್ತಿದ್ದ'; ಕುರಿಕು/ಕುರುಕು = ಕುರುಕು ತಿಂಡಿ.

ಕುರ್ಚ್ ಕಟ್ಟೋದು kurc kaṭṭōdu :

- ಶವ ಸಾಗಿಸುವಾಗ ಶವಕ್ಕೆ ಕುರ್ಚಿಯ ರೀತಿಯಲ್ಲಿ ಕಟ್ಟುವ ಚಟ್ಟ(ಮಂಡ್ಯ.ಜಿ); A bier: the dead body is carried to the grave in bier on shoulders of men;
- ಅಂತ್ಯ ಸಂಸ್ಕಾರಕ್ಕೆ ಶವ ತೆಗೆದುಕೊಂಡು ಹೋಗಲು ಕಟ್ಟುವ ಚಟ್ಟ(ಕುರ್ಜು);
- ಶವವನ್ನು ಎರಡು ರೀತಿಯಲ್ಲಿ ಹೊತ್ತು ಸಾಗಿಸುವರು; ಮೊದಲನೆಯದು ಮಲಗಿಸಿದ ಭಂಗಿಯಲ್ಲಿ ಶವವನ್ನು ಚಟ್ಟದ ಮೇಲೆ ಮಲಗಿಸಿ ಕೊಂಡೊಯುವುದು; ಎರಡನೆಯದು ಕುಳಿತ ಭಂಗಿಯಲ್ಲಿ ಕೊಂಡೊಯುವುದು; ಇದಕ್ಕೆ ಅನುಕೂಲವಾಗುವಂತೆ ಬಿದುರಿನ ಬೊಂಬುಗಳನ್ನು ಬಳಸಿ ಕಟ್ಟುವ ಚಟ್ಟವೇ ಕುರ್ಜು;
- ಒಂದು ತುದಿಗೆ ಗಳುಗಳನ್ನು ನೆಟ್ಟಗೆ ನಿಲ್ಲಿಸಿ ಕಟ್ಟಿ ನಾಲ್ಕು ಕಡೆ ನೆಟ್ಟನೆ ಗಳುಗಳಿಗೆ ಕೆಳ ಭಾಗದಲ್ಲಿ ಉದ್ದನೆ ಬೊಂಬುಗಳನ್ನು ಆಧಾರವಾಗಿ ಬಳಸಿ ಕುರ್ಚಿ ಆಕಾರಕ್ಕೆ ಕಟ್ಟುವರು;
- ಮಂಡಿ ಮಡಚಿ ಕುಳಿತುಕೊಳ್ಳುವಂತೆ ಶವ ಕೂರಿಸಿ ಸಾಗಿಸುವರು;

ಕುರ್ಚಗಿ kurcagi :

- ಕಬ್ಬಿಣದಿಂದ ತಯಾರಿಸಿದ ಸಾಧನ; ಹನ್ನೆರಡು ಇಂಚು ಉದ್ದವಿದ್ದು ಒಂದೂವರೆ ಇಂಚು ಅಗಲವಿರುತ್ತದೆ; ಮುಂಭಾಗ ಹರಿತವಿರದೆ ಮೊಂಡಾಗಿದ್ದು ಬಾಗಿದಂತಿರುತ್ತದೆ; ಹೀಗೆ ಉದ್ದವಾಗಿ ಸಿದ್ಧಪಡಿಸಿದ ಕಬ್ಬಿಣದ ಛಡಿಗೆ ಹಿಂಭಾಗದಲ್ಲಿ ಮರದ ಹಿಡಿಕೆ ಅಳವಡಿಕೆ;
- ಹೊಲದ ಬೆಳೆಯ ನಡುವೆ ಬೆಳೆಯುವ ಕಳೆಯ ಕಸವನ್ನು ತೆಗೆಯಲು ಬಳಕೆ;
- ಮೆಣಸಿನ ಗಿಡದಲ್ಲಿ ಗುಂಡಗಳೆ ಮಾಡಲು ಉಪಯೋಗ;
- ಹೊಲದ ರೆಂಟೆ ಹೊಡೆಯುವಾಗ ರೆಂಟೆಗೆ ಹತ್ತಿದ ಹೆಂಟೆ ಮಣ್ಣನ್ನು ಕೆತ್ತಲು ಉಪಯೋಗ;
- ಗಂಡ ಸತ್ತ ಹೆಂಡತಿಯ ಮುತ್ತೈದೆತನದ ವಸ್ತುಗಳನ್ನು ತೆಗೆಯುವುದಕ್ಕೆ 'ಕುರ್ಚಗಿ ತೆಗೆಯುವುದು' ಎನ್ನುವರು;
- —*ಕುರ್ಜಗೆ* : ಕುರ್ಜಗೆ<ಕುರ್ಚಗೆ?; ಕೊಕ್ಕೆಗುದ್ದಲಿ ಅಥವಾ ಕಳೆಗುದ್ದಲಿ; ಕಳೆ ತೆಗೆಯಲು ಬಳಸುವ ಸಾಧನ.

ಕುರ್ಚಿ ಕಂಬದ ಮೆರವಣಿಗೆ kurci kambada meravaṇige :

- ಹೊನ್ನಾದೇವಿ, ಆಂಜನೇಯ ದೇವರುಗಳನ್ನು ಪಲ್ಲಕ್ಕಿಯ ಮೇಲೆ ಕೂರಿಸಿ, ಹೂವು, ಹೊಂಬಾಳೆಗಳಿಂದ ಅಲಂಕರಿಸಿ ಏಳು ರಾತ್ರಿ ಮೆರವಣಿಗೆ ಮಾಡುವುದು. The seven nights procession of goddess Honnadevi on palanquin by decorating in flowers;
- 'ಕುರ್ಚಿಕಂಬ' ಒಟ್ಟಾರೆಯಾಗಿ ಪಲ್ಲಕ್ಕಿ ಪಟಕ್ಕೆ ಬಂದ ಪದ ಸಂಯುಕ್ತ.

ಕುರ್ಚಿ ಕುಂದ್ರಿಸು kurci kundrisu :

ಶಿಕ್ಷೆಯ ಒಂದು ಕ್ರಮ; ಶಾಲೆಯಲ್ಲಿ ಶಿಕ್ಷಕರು ತಪ್ಪು ಮಾಡಿದ ಮಕ್ಕಳಿಗೆ ಕುರ್ಚಿಯ ಮೇಲೆ ಕುಳಿತುಕೊಳ್ಳುವ ಭಂಗಿಯಲ್ಲಿ ಗೋಡೆಗೆ ತಾಕದಂತೆ ಕೂಡಿಸುವುದು. A method of punishment;

ಕುರ್ಚಿಗೆ kurcige :

- ತೆಂಗಿನಕಾಯಿ ತುರಿಯಲು ಬಳಸುವ ಉಪಕರಣ;
- ಕಳೆ ತೆಗೆಯುವ ಕಬ್ಬಿಣದ ಸಾಧನ(ಚಿತ್ರ,ಜಿ). A tool that uses to remove weed plant.

ಕುರ್ಚಿಗ್ಗಾಲು kurciggālu :

ಕಳೆ ತೆಗೆಯುವ ಕುರ್ಚಿಗೆಯಂತೆ ಒಳಕ್ಕೆ ಬಾಗಿಕೊಂಡಿರುವ ಪಾದಗಳುಳ್ಳ ಸಾಧನ(ಚಿ.ಪ.ಕೋ). A bent tool that is like a weed remover.

ಕುರ್ಜು kurju :

- ದೇವರ ವಿಗ್ರಹವನ್ನಿಡಲು ಅಥವಾ ರಾಜರನ್ನು ಕೂರಿಸಲು ಗೋಪುರಾಕಾರದಲ್ಲಿ ಕಟ್ಟಿ ಅಲಂಕರಿಸಿದ ತೇರು; A car van;
- ಪಲ್ಲಕ್ಕಿ(ಚಾ.ಜಿ); Palanquin ;
- ತೇರಿನ ಮೊಳ(ಮಲೆಮಾದೇಶ್ವರ ಕಾವ್ಯ);
- ಗೋಪುರ. a tower.

ಕುರ್ಜುವುದು kurjuvadu :

ಅಡಿಕೆ, ತೆಂಗುಗಳ ನಡುವಿನ ಭೂಮಿಯನ್ನು ಅಗೆದು ಮೃದುಗೊಳಿಸುವುದು(ತು.ಜಿ). To soften the land by digging; to plant coconut or areca nut plants.

ಕುರ್ಟು kurṭu :

'ಕುರ್ಪು' ಅಂದರೆ ಗೌಡ ಕನ್ನಡದಲ್ಲಿ 'ಚಿಕ್ಕದು' ಎಂಬರ್ಥ; ಮದುಮಗಳೊಂದಿಗೆ ಹೋಗುವ ಚಿಕ್ಕ ಹುಡುಗಿಯನ್ನು ಕುರ್ಟು ಎನ್ನುವರು; ಅಡಗಲದಮ್ಮಿ. A tiny small, A young girl with a bride.

ಕುರ್ದಾಯಿ kurdayi :

- ತೆಂಗಿನ ಗರಿಗಳನ್ನು ಕೊರೆದು ತಿನ್ನುವ ದುಂಬಿಯಂತಹ ಕೀಟ; A kind of insect that eats coconut leaves;
- ಒಂದು ಬಗೆಯ ಕೀಟ.

ಕುರ್ತಿಕೆ kurtike :

Lepidium satlvum ವಾರ್ಷಿಕ ಮಾಲಿಕೆ; ಎಲೆ ಔಷಧಿ ಗುಣಹೊಂದಿದ್ದು ತಿನ್ನಲು ಬಳಕೆ; ಬೀಜದ ಅಂಟು ದ್ರವ ಗೋಂದಾಗಿ ಬಳಕೆ. A medicinal plant that its glue like liquid used as gum.

ಕುರ್ತುಗೊಂಡು kurtugoṇḍu :

ನೆನಪಿಸಿಕೊಂಡು; ಯಾವುದಾದರೊಂದು ಮಾತ್ರ ನೆರವೇರಬೇಕೆಂದು ಏಕಮನಸ್ಸಿನಿಂದ ಬೇಡಿಕೊಳ್ಳುವಿಕೆ; ಚಂಚಲತೆ ಇಲ್ಲದೆ ಒಂದೇ ವಿಷಯದ ಬಗೆಗಿನ ಆಲೋಚನೆ; ಮುಂದೆ ಆಗಬೇಕಾದ್ದನ್ನು ಮನಸ್ಸಿನಲ್ಲಿ ಮೊದಲೆ ನಿರ್ಧರಿಸಿದಂತೆ ಕುರಿತು ಗುರಿಇಟ್ಟುಕೊಳ್ಳುವುದು. Keeping one thing in one's mind and request god to fulfill that.

ಕುರ್ತೆಲು kurtelu :

ಕೊಳಕು; ನಿಂತ ನೀರಲ್ಲಿ ಬೆಳೆಯುವ ಕಳೆ; ಸಸ್ಯವಿಶೇಷ; *ಪ್ರ:* 'ನಿಂತ ನೀರಲ್ಲಿ ಕುರ್ತೆಲ್ ಹೆಚ್ಚು'(ಉಕ). Filthy, untidy, shitty.

ಕುರ್ತೇಟು kurtēṭu :

ನಿಶ್ಚಯ; ನಿಶ್ಚಿತ; ನಿಖರ; ಖಂಡಿತ; ಆಗೇ ಆಗುತ್ತದೆ; ಬಂದೇ ಬರುತ್ತದೆ; ಗುರಿಯನ್ನು ಕುರಿತ ಪದವಿದು; ಭವಿಷ್ಯ ಸಂಸ್ಕೃತಿಯ ಬಗ್ಗೆ ಜನಪದರು ತಳೆಯುವ ನಿಲುವು; ಜ್ಯೋತಿಷ್ಯಕ್ಕೂ ಇದಕ್ಕೂ ಸಂಬಂಧವಿಲ್ಲ; ಜನರ ಅನುಭವವೊಂದೇ ಇಲ್ಲಿ ಕಾರಣವಾಗಿರುವಂಥದು; ಮಳೆ ಅಥವಾ ಕೆಲಸ ಕಾರ್ಯಗಳ ಬಗ್ಗೆ ಸಾಮಾನ್ಯರು ತಮ್ಮ ಅನಿಸಿಕೆ ಅಥವಾ ನಿಲುವನ್ನು ತಂದುಕೊಳ್ಳುವ ಬಗೆ; *ಪ್ರ:* 'ಕೋಟೆ ಮುಗಿಲೆದ್ದರೆ ಮಳೆ ಕುರ್ತೇಟು'. Definite, obviously sure, relevant target.

ಕುರ್ನಿಕೀಲು kurnikīlu :

ನೀರೆತ್ತುವ ಸಾಧನದ ತೊಲೆಗೂ ನೊಗಮಣೆಗೂ ಮಧ್ಯೆ ಇರುವ ಕೀಲು. A linchpin or hinges That is between water lifting beam and yoke.

ಕುರ್ಪಿ kurpi :

ಸೆದೆ, ಕಸ ಕೀಳಲು ಹೊಲ, ತೋಟಗಳಲ್ಲಿ ಬಳಸುವ ಸಾಧನ(ಕಲ.ಜಿ). A weed remover, A tool that used clean dirty.

ಕುರ್ಮ್ ಹಾಯ kurm hāya :

ಕುರ್ಮುಹುಳು ಕ್ರಿಮಿಯಿಂದಾಗಿ ಮರದಲ್ಲಿ ಕರಿಯ ರಸ ಹೊರಬರುವ ಒಂದು ರೋಗದ ಲಕ್ಷಣ (ಉ.ಕ.ಜಿ). A disease symptom of tree screwing worm.

ಕುರ್ಮ kurma :

persea macrantha ಇದರ ಕಾಂಡದಿಂದ ಪದರು ಹಲಿಗೆ, ಬೆಂಕಿಪೆಟ್ಟಿಗೆ ತಯಾರಿಕೆ. A tree that is used to make matchsticks.

ಕುರ್ಮಾ kurmā :

ಮೆಣಸು, ಬೆಳ್ಳುಳ್ಳಿ, ಮಸಾಲೆ ಪದಾರ್ಥಗಳನ್ನು ಸೇರಿಸಿ ರುಬ್ಬಿ ಮಾಂಸ ಒಗ್ಗರಣೆ ಮಾಡಿ ಮಸಾಲೆ ಸೇರಿಸಿ, ಕುದಿಸಿ ಮಾಡಿದ ರುಚಿಯಾದ ಮಾಂಸಾಹಾರ(ಮೈ.ಜಿ). Non- vegetarian soup that made up of mutton, pepper, ginger and spices.

ಕುರ್ಮೆ kurme :

ಗಂಜಿಕಟ್ಟದ ಎಳೆನೀರು; ಇದರ ನೀರಿನ ರುಚಿ ಒಗರಾಗಿದ್ದು ರುಚಿಸುವುದಿಲ್ಲ. A tender coconut water.

ಕುರ್ರಿ ಮೀನು kurri mīnu :

ಗಣ; ಸಿಪ್ರಿನಿಫಾರ್ಮಿಸ್ Cypriniforme ಕುಟುಂಬ: ಸಿಪ್ರಿನಿಡೀ cyprinidal; A kind of fish family.

ಕುರ್ರುಬೂರು kurrubūru :

- ನಂಜನಗೂಡು ತಾಲ್ಲೋಕಿನ ಕ್ರಿ.ಶ.೧೫೪೩ರ ೧೧೫ನೇ ಶಾಸನದಲ್ಲಿ ಇದರ ಉಲ್ಲೇಖವಿದೆ; A village that has been referred in 115th inscription of Nanjanagudu Talluk;
- ಕುರುಬ(ರ)+ಊರು>ಕುರುಬೂರು; 'ಕುರುಬ' ಪದ 'ಕುಱುಂಬ'(ಹ.ಗ) ಪದದಿಂದ ಬಂದದ್ದು;
- 'ಕುರುಬ' ಎಂದರೆ ರಕ್ಷಿಸುವ ಯೋಧ ಎಂಬ ಅರ್ಥವಿದೆ; ಈಗ ಅದು ಒಂದು ಸಮುದಾಯ ಸೂಚಕವಾಗಿದೆ;
- ಕೋಟೆ ಕಾಯುವ ರಕ್ಷಕರು ಎಂಬುದರ ಹಿನ್ನೆಲೆಯಲ್ಲಿ ಈ ಹೆಸರು ಬಂದಿರಬಹುದು;
- ವಿಜಯನಗರ ಅರಸರ ಆಳ್ವಿಕೆಯಲ್ಲಿ ದಾನ ನೀಡಿದ ಉಲ್ಲೇಖವಿರುವ ಶಾಸನ ಕುರುಬೂರಿನ ಸೀಮಾಂತ್ಯವನ್ನು ಗುರುತಿಸುವ ಉಲ್ಲೇಖವಾಗಿದೆ.

(E.C- ೩, ಮೈ.ಜಿ.)

ಕುರ್ಲಗುಂಡಿ kurlagundi :

ಹೊಳೆಯ ಗುಂಡಿಯ ಹೆಸರು(ಬೇ.ಸಾಂ.ಪ.ಕೋ). A name of Brooklet.

ಕುರ್ಲು kurlu :

ಒಣಗಿದ ಕಸ ಕಡ್ಡಿ(ಉ.ಕ). Dry trash, dirt, garbage.

ಕುಲ kula :

- ಗೋತ್ರ; ವಂಶ; ಸಂತತಿ; ದೈವಸಂಕೇತ; ಮನೆತನ; ಜಾತಿ; kin, clan, gene, breed, caste;
- ಕುಲವೆಂಬುವುದು ಕುಟುಂಬ ಮತ್ತು ವಂಶಗಳಿಗಿಂತಲೂ ಮೇಲಿನ ಸ್ಥಾನವನ್ನು ಹೊಂದಿರುವುದು;
- ಕುಲ ಸಮಾಜದಲ್ಲಿ ಅನೇಕ ಕಾರ್ಯಗಳನ್ನು ನಿರ್ವಹಿಸುತ್ತದೆ; ಒಂದು ಗುಂಪಿನ ಜನರನ್ನು ನಿಯಂತ್ರಿಸಿ ಸಾಮಾಜಿಕ, ಧಾರ್ಮಿಕ, ವೈವಾಹಿಕ, ರಾಜಕೀಯ, ನೈತಿಕವಾಗಿಯೂ ಉತ್ತಮ ಮಾರ್ಗದಲ್ಲಿ ನಡೆಸುವ ಪ್ರಯತ್ನ ಮಾಡುತ್ತದೆ;
- ಒಗ್ಗಟ್ಟನ್ನು ಕುಲ ಪ್ರದರ್ಶಿಸುವುದು; ಕುಲ ಬಾಂಧವರಿಗೆ ಏನಾದರೂ ತೊಂದರೆ ಸಂಭವಿಸಿದಾಗ, ಕುಲದ ಚಿಹ್ನೆಯ ಸಂರಕ್ಷಣೆ, ಕುಲದ ಏಳಿಗೆ, ಎಲ್ಲದರಲ್ಲಿಯೂ ಒಟ್ಟಿಗೆ ಕಾರ್ಯ ನಿರ್ವಹಣೆ ಕಾಣುತ್ತದೆ;
- ಸಮುದಾಯದಲ್ಲಿ ಅನೇಕ ಕುಲಗಳಿದ್ದು ಬೇರೆ ಕುಲದಲ್ಲಿ ವಿವಾಹ ನೆರವೇರಿಸಲು ಅವಕಾಶವಿದೆ. ಒಂದೇ ಕುಲದವರು ಅಣ್ಣ ತಮ್ಮಂದಿರಾಗಿರುವುದರಿಂದ ವಿವಾಹ ನಿಷಿದ್ಧ;

- ಕುಲ ವ್ಯಕ್ತಿ ಕೇಂದ್ರಿತವಲ್ಲ; ಅನೇಕ ತಲೆಮಾರುಗಳಿಗೆ ಸೇರಿದ ವ್ಯಕ್ತಿಗಳು ಕುಲದ ವ್ಯವಸ್ಥೆಯಲ್ಲಿದ್ದಾರೆ;
- ***—ಕುಲಚಿಹ್ನೆ*** : ಬುಡಕಟ್ಟು ಸಮಾಜದಲ್ಲಿ ಶಿಷ್ಟಮಾದರಿ ದೇವತೆಗಳಿಗಿಂತ ಪ್ರಕೃತಿ ಮೂಲದ ದೇವತೆಗಳಿಗೆ ಹೆಚ್ಚು ಪ್ರಾಶಸ್ತ್ಯ ಸೂರ್ಯ, ಚಂದ್ರ, ಪ್ರಾಣಿ, ಪಕ್ಷಿ, ಮರ ಗಿಡಗಳನ್ನು ಕುಲ ಚಿಹ್ನೆಗಳಾಗಿ ಸ್ವೀಕರಿಸಿದ್ದಾರೆ; Clan sign; cast sign;
- ಪ್ರಾಣಿ, ಸಸ್ಯ ಕುಲಚಿಹ್ನೆಯಾಗಿ ಹೊಂದಿರುವರೂ ಅದನ್ನು ತಮ್ಮ ವಂಶದ ಮೂಲ ಪುರುಷ ಅಥವಾ ಸ್ತ್ರೀ ಎಂದು ಪರಿಗಣಿಸಿ ಅದನ್ನು ನಾಶ ಮಾಡುವುದನ್ನು ನಿಷೇಧಿಸಿ ಸಂರಕ್ಷಿಸುವ ಅಂಶ ಕಾಣುತ್ತದೆ; ಕುಲಪದ್ಧತಿಯಲ್ಲಿ ಕುಲದ ಚಿಹ್ನೆಗೆ ಹೆಚ್ಚಿನ ಮಹತ್ವ; ಆಯಾ ಕುಲಸ್ಥರಿಗೆ ತಮ್ಮ ಕುಲದ ಬಗೆಗೆ ಗೌರವ;
- 'ಕುಳದಲ್ಲಿ ಬಡವನಾದರೆ ಕುಲದಲ್ಲಿ ಬಡವನೆ?' ಎಂಬ ಮಾತು ಅದನ್ನು ಖಚಿತ ಪಡಿಸುವುದು;
- ***—ಕುಲದೇವತಾ ಪದ್ಧತಿ*** : ಯಾವುದಾದರೊಂದು ವಸ್ತು, ಪ್ರಾಣಿಯನ್ನು ಕುಲದೇವತಯೆಂದು ತಿಳಿದು ಆರಾಧಿಸುವ ಪದ್ಧತಿ; A worshipping an animal or a festivity of a clan god/ goddess by a clan to offer something;
- 'ಟೋಟೆಮಿಸಂ' ಪ್ರಾಚೀನ ಸಮಾಜದಿಂದಲೂ ಈ ಕ್ರಮ ಆಚರಣೆಯಲ್ಲಿದೆ. ಮರ, ಗಿಡ, ಬಳ್ಳಿ, ಪ್ರಾಣಿ, ಪ್ರಕೃತಿಯ ಯಾವುದಾದರೊಂದು ವಸ್ತುವನ್ನು ಪೂಜನೀಯ ದೃಷ್ಟಿಯಿಂದ ನೋಡುವುದು;
- ಇದರಿಂದ ಮಾನವ ತನ್ನ ಸುತ್ತಲಿನ ಪರಿಸರಕ್ಕೆ ಹೊಂದುಕೊಂಡು, ನೈತಿಕತೆಯ ಹಿನ್ನಲೆಯಲ್ಲಿ ತನ್ನ ಬದುಕು ಸಾಗಿಸಲು ಕುಲದೇವತಾ ಪದ್ಧತಿ ರೂಢಿಗೆ ಬಂದಿದೆ ಎನ್ನಬಹುದು.
- **—ಕುಲದೇವರು** : ಒಂದೊಂದು ಕುಲಕ್ಕೆ ಸಂಬಂಧಪಟ್ಟಂತೆ ಗಂಡು ಮತ್ತು ಹೆಣ್ಣು ದೇವರುಗಳಿರುತ್ತವೆ;
- ಕೆಲವು ಮನೆತನಗಳಲ್ಲಿ ಮೊರೆ ಹೋದ ದೇವರುಗಳಿರುವುದುಂಟು; ಆಯಾ ದೈವಕ್ಕೆ ನಡೆದುಕೊಳ್ಳುವರು;
- ಮದುವೆಯಲ್ಲಿ ಗಂಡು ಮತ್ತು ಹೆಣ್ಣಿನ ಮನೆ ದೇವರು ಒಂದೇ ಆದರೆ ಸಂಬಂಧ ಅಥವಾ ಸಾಲಾವಳಿ ಬರುವುದಿಲ್ಲ; ಅವರು ಅಣ್ಣತಮ್ಮಂದಿರಂತೆ;
- ಗಂಡು ದೇವರು ಒಂದೇ ಆದರೂ ಹೆಣ್ಣು ದೇವರು ಬೇರೆಯಾಗಿರಬೇಕೆಂಬ ನಂಬಿಕೆ.
- ***—ಕುಲಕೊಂಡಾಡುವುದು*** : ಹೆಳವರ ವೃತ್ತಿ; ಒಕ್ಕಲು ಮನೆಗಳ ಕುಲ ಕೊಂಡಾಡುವುದು; The profession of Earava community;
- ಇವರು ಸ್ಥಿತಿವಂತರಾಗಿದ್ದರೂ ಸಹ ವರ್ಷದಲ್ಲಿ ಒಂದು ಸಲವಾದರೂ ತಮ್ಮ ನಿಗದಿತ ಒಕ್ಕಲು ಮನೆಗಳಿಗೆ ಹೋಗಿ ಕುಲಕೊಂಡಾಡಿ ಬರುವ ಕ್ರಮವಿದೆ;
- ಆ ಮನೆತನಗಳ ಎಲ್ಲ ಮಾಹಿತಿಯನ್ನು ತಮ್ಮ ಕಡತಗಳಲ್ಲಿ ಬರೆದುಕೊಂಡು ಜೋಪಾನ ಮಾಡುವರು;
- ಪ್ರತಿ ವರ್ಷ ಹೋದಾಗಲೂ ಹೊಸದಾಗಿ ಹುಟ್ಟಿದವರ ಹೆಸರನ್ನು ಕಡತಕ್ಕೆ ಸೇರಿಸಿಕೊಂಡು ಸತ್ತವರ ಹೆಸರಿನ ಕೆಳಗಡೆ Ø ಚಿಹ್ನೆ ಕೊಡುವರು.
- ***—ಕುಲಕೋಟಿ*** : ಕೋಟಿ ಸಂಖ್ಯೆಗಳಷ್ಟು ಕುಲಗಳ ಗುಂಪು; An uncountable numbers of castes or clans;
- ಸಾಮಾನ್ಯವಾಗಿ ದೇವರನ್ನು ಕುಲಕೋಟಿಗಳ ಒಡೆಯ ಎನ್ನುವರು; ಅನೇಕ ಪೀಳಿಗೆ, ತಲೆಮಾರುಗಳು ಒಂದೇ ದೇವರನ್ನು ಆರಾಧ್ಯ ದೈವವಾಗಿ ಹೊಂದಿರುವುದರಿಂದ ಈ ಹೆಸರಿದೆ.
- ***—ಕುಲಗುರು*** : ಮನೆತನ, ಮಠ, ಕುಲಕ್ಕೆ ಗುರುವಾಗಿರುವವನು; ಕುಲದ ಕಾರ್ಯ ಗುರುವಿನ ಮಾರ್ಗದರ್ಶನದಲ್ಲಿ ನಡೆಯುವುದು; The teacher of the head or guide of a particular caste, religion or a house;
- **—ಕುಲಗೆಡಿಸು/ಕುಲಾಕರ್ಮ** : ಕುಲದ ನಿಯಮಕ್ಕೆ ವಿರುದ್ಧವಾಗಿ ನಡೆಯುವುದು; ಹಾಳುಮಾಡು; ನಾಶಮಾಡು; ಜಾತಿಯನ್ನು ಕೆಡಿಸು; ಕೊಳಕು ಕೆಲಸ. To violate the rules of one's clan; to immoralize one's caste;
- ***—ಕುಲಕಸುಬು*** : ಪರಂಪರಾಗತವಾಗಿ ನಡೆಸಿಕೊಂಡು ಬಂದಿರುವ ನಿರ್ದಿಷ್ಟ ಉದ್ಯೋಗ; The profession of one's own caste;

- ತಲೆಮಾರಿನಿಂದ ವಂಶವಾಹಿನಿಯಾಗಿ ಬಂದ ಕುಸುಬು; ಉದಾಹರಣೆಗೆ ಅಗಸ, ಕಮ್ಮಾರ, ಕುಂಬಾರ, ಗಾಣಿಗ, ಕೆಲಸಿಗ, ತಳವಾರ, ಚಮ್ಮಾರ, ಅಕ್ಕಸಾಲಿಗ ಇತ್ಯಾದಿ ಕುಲಕಸುಬುಗಳಿವೆ; ತಲೆಮಾರಿನಿಂದ ಅವುಗಳನ್ನು ನಿರ್ವಹಿಸಿಕೊಂಡು ಬಂದಿರುವರು; ಸಮಾಜದಲ್ಲಿ ಒಬ್ಬರಿಗೊಬ್ಬರು ಅವಲಂಬಿಯಾಗಿ ಬದುಕುವುದನ್ನು ಕಾಣುತ್ತೇವೆ;
- ಕುಂಬಾರನ ಮಡಿಕೆ, ಹೆಂಚು, ಅಡುಗೆ ಮತ್ತು ಮನೆ ಛಾವಣಿಗೆ ಮುಖ್ಯವಾಗಿವೆ;
- ಗಾಣಿಗನು ಎಣ್ಣೆಕಾಳುಗಳಿಂದ ಎಣ್ಣೆ ತೆಗೆಯುವಿಕೆ; ಅಕ್ಕಸಾಲಿಗ ಚಿನ್ನ ಬೆಳ್ಳಿಯಿಂದ ಆಭರಣ ತಯಾರಿಕೆ;
- ಅಗಸ ಅಥವಾ ಮಡಿವಾಳ ಬಟ್ಟೆಗಳನ್ನು ಒಗೆದು ಉಬ್ಬೆಯಲ್ಲಿ ಬೇಯಿಸಿ ಮಡಿಮಾಡಿಕೊಡುವ ಕೆಲಸ;
- ಕಮ್ಮಾರ ವ್ಯವಸಾಯ ಸಾಧನಗಳನ್ನು ಕಬ್ಬಿಣದಿಂದ ತಯಾರಿಸಿಕೊಡುವ ಕೆಲಸ, ತಳವಾರ ಊರಿನಲ್ಲಿ ನಡೆಯುವ ಹಬ್ಬಹರಿದಿನ, ನ್ಯಾಯ ಪಂಚಾಯಿತಿ, ಊರಿಂದ ಊರಿಗೆ ಶುಭ ಮತ್ತು ದುಃಖದ ಸುದ್ದಿ ಮುಟ್ಟಿಸುವ ಕಾರ್ಯ ನಿರ್ವಹಿಸುವನು;
- ಹೀಗೆ ಕುಲಕಸುಬು ಹೊಂದಿರುವ ಎಲ್ಲರೂ ಸಹಭಾಗಿತ್ವದಲ್ಲಿ ಜೀವನ ನಿರ್ವಹಿಸುವರು;
- ಇವರನ್ನು ಆಯಗಾರರು ಎಚ್ಚಗಾರರು, ಅಡದೆಯವರು, ಬಾಬುದಾರರು ಎಂಬ ಹೆಸರಿನಿಂದ ಕರೆಯುವರು;
- ತಾವು ಕೆಲಸ ಮಾಡಿ ಕೊಟ್ಟ ಸಮಯದಲ್ಲೇ ಕೂಲಿ ಅಥವಾ ಹಣ ಪಡೆಯದೆ ವರ್ಷಕ್ಕೊಮ್ಮೆ ಸುಗ್ಗಿಯಲ್ಲಿ ದವಸಧಾನ್ಯಗಳನ್ನು ಪಡೆಯುವುದನ್ನು ಕಾಣಬಹುದು.
- ***—ಕುಲಗೇಡಿ*** : ಕುಲದಿಂದ ಹೊರಹಾಕಿದವರು; ಕುಲದ ನಿಯಮಗಳನ್ನು ಬಿಟ್ಟು ಅಥವಾ ವಿರುದ್ಧವಾಗಿ ನಡೆದುಕೊಂಡವರು; ಕುಲಕ್ಕೆ ಕಳಂಕ ತಂದವರು; ಕಳಂಕಿತರು; A person who is excommunicated from one's own caste;
- ***—ಕುಲಪುತ್ರ*** : ಕುಲಕ್ಕೆ ಹಿರಿಯ ಮಗ; ಕುಲಧರ್ಮವನ್ನು ಮುನ್ನಡೆಸುವನು; ವ್ಯಂಗ್ಯವಾಗಿಯೂ ಈ ಪದ ಬಳಕೆ; –ಕುಲಗೋತ್ರ : ಪೂರ್ವಾಪರ; ಜಾತಿ ಮತ್ತು ವಂಶ; ಯಾರೊಬ್ಬರನ್ನು ನಂಬುವಾಗ ಅಥವಾ ಅವರೊಂದಿಗೆ ವ್ಯವಹರಿಸುವಾಗ ಅವರ ಪೂರ್ವ ಪರವನ್ನು ತಿಳಿದುಕೊಳ್ಳುವಿಕೆ. The first son of the parent who leads their clan with its rules/ rituals customs;
- ***—ಕುಲದ ಗೌಡ*** : ಈತ ಕುಲದ ವೈದ್ಯ ಪಂಡಿತ; ಕಣಿಶಾಸ್ತ್ರ ನಿಪುಣ; ಇರುಳಿಗರು, ಬೇಡರು, ಮುಳ್ಳುಕುರುಬರು, ಜೇನುಕುರುಬರು, ಸೋಲಿಗರಲ್ಲಿ ಕುಲದ ಗೌಡನ ಪಾತ್ರ ವಿಶೇಷ; ಕುಲದ ಒಳಗಿನ ಸಮಸ್ಯೆಗಳೆಲ್ಲ ಮೊದಲು ಈತನಲ್ಲಿ ತೀರ್ಮಾನಕ್ಕೆ ಬರುತ್ತವೆ; ಇಲ್ಲಿ ಸಮಸ್ಯೆ ಬಗೆಹರಿಯದಿದ್ದಾಗ ಪಂಚಾಯತಿಯಲ್ಲಿ ಬಗೆಹರಿಸುವುದನ್ನು ಕಾಣಬಹುದು. A doctor of one's own clan.
- ***—ಕುಲಧಾರೆ*** : ಶೇರುಗಾರ ಜನಸಮುದಾಯದಲ್ಲಿ ನಡೆಯುವ ಮದುವೆಯ ಚಡಂಗ(ವಿಧಿ)ವನ್ನು ಕುಲಧಾರೆ ಎನ್ನುವರು. A marriage ritual of Sherugara caste;
- ***—ಕುಲವಾಡಿಗಳು*** : ಗ್ರಾಮದ ಸೇವಕ; ಗ್ರಾಮದ ಕೆಲಸ; ಗ್ರಾಮದ ಸುದ್ದಿಯನ್ನು ಮುಟ್ಟಿಸುವ; ಯಾರನ್ನಾದರೂ ಕರೆತರುವ ಆಳು(ತು.ಜಿ); A village assistants;
- ಸರ್ಕಾರದ ಕೆಲಸ; ಪಟೇಲರ ಸೇವಕ(ಚಿತ್ರ.ಜಿ). *ಪ್ರ:* 'ಗೌಡ ಊರ ಮುಂದೆ ಬೈದರೆ ಕುಲವಾಡಿ ಒಲೆ ಮುಂದೆ ಬೈದ'(ಗಾ);
- ***—ಕುಲಗೆಟ್ಟಿದ್ದು*** : ಕುಲಧರ್ಮವನ್ನೆಲ್ಲ ಗಾಳಿಗೆ ತೂರಿದವ; ಜಾತಿಬಿಟ್ಟಿದ್ದು(ಬಾ.ಜಿ); A violator of one's own caste;
- ***—ಕುಲಸ್ಥರು*** : ಒಳ್ಳೆಯ ಮನೆತನದವರು; ಗೌರವಸ್ಥರು; ಸಭ್ಯರು; ಕುಲೀನ; ಒಂದೇ ಕುಲಕ್ಕೆ ಸೇರಿದವರು; The hounourables chiefs;
- ***—ಕುಲಾಚಾರ ಕಟ್ಟುವುದು*** : ನೇಕಾರ ಜನಾಂಗದಲ್ಲಿ ನಿರ್ದಿಷ್ಟ ಕಾಣಿಕೆ ಸಲ್ಲಿಸುವ ಕ್ರಮ; A system of definite amount offering in weaver's caste;
- ಪೇಟೆ ಯಜಮಾನರಿಂದ ವಿವಾಹಕ್ಕೆ ಒಪ್ಪಿಗೆ ಪಡೆಯುವುದು;
- ಹೆಣ್ಣಿನ ಕಡೆಯಿಂದ ಹದಿನೈದು ರೂಪಾಯಿ ಗಂಡಿನ ಕಡೆಯಿಂದ ಎಂಟುರೂಪಾಯಿ ಸಂದಾಯ ಮಾಡುವುದು;

- ಕುಲಾಚಾರದ ಸಂದರ್ಭದಲ್ಲಿ ಭಾಗವಹಿಸುವ ಪ್ರತಿ ಗಂಡಸರಿಗೆ ಹನ್ನೆರಡು ಬಟ್ಟಲಡಿಕೆ, ವೀಳ್ಯದೆಲೆ, ಹೆಂಗಸರಿಗೆ ಐದು ಬಟ್ಟಲಡಿಕೆಯ ವೀಳ್ಯಾ ನೀಡುವುದು(ಬೆಂ.ಜಿ).
- ***—ಕುಲಕ್ಕೆ ಸೇರಿಸಿಕೊಳ್ಳುವುದು*** : ಇರುಳಿಗರಲ್ಲಿ ತಪ್ಪು ಮಾಡಿದವರನ್ನು ಕುಲದಿಂದ ಆಚೆ ಹಾಕಿರುತ್ತಾರೆ; ಮತ್ತೆ ಕುಲಕ್ಕೆ ಸೇರಿಸಿಕೊಳ್ಳಲು ಮಾಡುವ ಆಚರಣೆ; A rejoins ceremony of the person who are ex -communicated from one's own caste;
- ಗಂಜಲ, ಸೀಗೆಪುಡಿ ಮಿಶ್ರಣ ಮಾಡಿ ತಲೆಯ ಮೇಲೆ ಚಿಮುಕಿಸುವರು; ಎಣ್ಣೆ ದೀಪದಲ್ಲಿ ಚಿನ್ನದ ಕಡ್ಡಿ; ಬೆಳ್ಳಿ ಕಡ್ಡಿಯಿಂದ ಕಾಯಿಸಿ ನಾಲಿಗೆಗೆ ಬರೆ ಎಳೆದು ಐದು ಜನ ಗೌಡರು ತಪಿತಸ್ಥರ ಬಾಯಿಗೆ ಗಂಜಲ ಸೀಗೇ ಪುಡಿ ಮಿಶ್ರಣವನ್ನು ಹನಿಸುವರು;
- ನಂತರ ಸೇರಿದ ಬಳಗಕ್ಕೆ ಮಾಂಸದೂಟವನ್ನು ಬಡಿಸುವರು; ಇವತ್ತಿಗೂ ಇದು ಚಾಲ್ತಿಯಲ್ಲಿದೆ(ರಾಮ.ಜಿ);
- ***—ಕುಲದೂಟ*** : ಇರುಳಿಗರಲ್ಲಿ ಕುಲಕ್ಕೆ ಸೇರಿಸಿಕೊಂಡ ನಂತರ ಎಲ್ಲರಿಗೂ ಏರ್ಪಡಿಸುವ ಮಾಂಸದ ಊಟ; A mutton meals that offers all the people of the caste after rejoining the community by the excommunicators;
- ***—ಕುಲಕೀಟಗ*** : ಕುಲಕಂಟಕ; ಸ್ವಜನದ್ರೋಹಿ(ಚಿ.ಪ.ಕೋ); Predator of a caste
- ***—ಕುಲದ ಮನಿ ಕ್ವಾಡಗ*** : ನಂಟಸ್ತಿಕೆಯಲ್ಲಿರುವ ಗಂಡು; ವರಮಹಾಶಯ(ಚಿ.ಪ.ಕೋ); *ಪ್ರ:* 'ವರ ಹೆಂಗಾದ್ರೂ ಇರಲಿ ಅವನು ಕುಲದ ಮನಿಕ್ವಾಡಗ ಅಂದ ಮೇಲೆ ಕನ್ಯಾ ಕೊಡಾಕ ಅಡ್ಡಿ ಇಲ್ಲ; A bridegroom;
- ***—ಕುಲನೇಮ*** : ಕುಲದ ಸಂಪ್ರದಾಯ; ಕುಲದ ನಿಯಮ; *ಪ್ರ:* ಕುಲನೇಮ ಬುಡಕವಕಾಗದ'(ದಕ). The rites ;rules of one's own caste;
- ***—ಕುಲಮೋಜಿ*** : ಕುಲಗೆಡಿಸುವವ; ಮರೆಮಾಡುವವ(ಬ.ಜಿ); A flub;
- ***—ಕುಲಬಾಂಧವ*** : ರಕ್ತಸಂಬಂಧಿ; ಹತ್ತಿರ ಬಂಧು; ಜಾತಿಯಬಂಧು; Kith and kin;
- ***—ಕುಲಸಾವಿರದವರು*** : ಗ್ರಾಮದ ಧಾರ್ಮಿಕ ವ್ಯವಸ್ಥೆಯಲ್ಲಿ ಇಡೀ ಗಾತ್ರದ ಎಲ್ಲಾ ಜನರನ್ನು ಈ ಹೆಸರಿನಲ್ಲಿ ಕರೆಯುವರು; A call of addresses the community member;
- ***—ಕುಲಸತಿ*** : ಕುಲಧರ್ಮಕ್ಕೆ ಮಾದರಿಯಾದ ಹೆಣ್ಣು; ಶ್ರೇಷ್ಠ ಸತಿ(ತು.ಜಿ); A model wife; A noble wife;
- ***—ಕುಲಪುರೋಹಿತ*** : ಕೋಲಾರ ಭಾಗದಲ್ಲಿರುವ ವಹ್ನಿ ಕುಲದವರು ಆಚರಿಸುವ ಕರಗೋತ್ಸವದಲ್ಲಿ ವೇದಾಧ್ಯಯನ, ಶಾಸ್ತ್ರ – ಸಂಪ್ರದಾಯಗಳನ್ನು ಕಲಿತ ಬ್ರಾಹ್ಮಣರನ್ನು ಕುಲಪುರೋಹಿತರಾಗಿ ಆಯ್ಕೆ ಮಾಡಿ ಪ್ರತಿವರ್ಷ ಇವರಿಂದ ಧರ್ಮರಾಯಸ್ವಾಮಿ ಆಲಯದಲ್ಲಿ ಧ್ವಜಾರೋಹಣ, ಪುಣ್ಯಾಹ, ಹೋಮ ಇತ್ಯಾದಿ ಶುದ್ಧಿಕಾರ್ಯ ಮಾಡಿಸುವರು; A priest pertaining to only one caste who carries the rites of that family only;
- ಮುಖ್ಯವಾಗಿ ಧ್ವಜಸ್ತಂಭಕ್ಕೆ ಕಂಕಣಕಟ್ಟಿ ಪೂಜಿಸಿ ಧ್ವಜಾರೋಹಣದಿಂದ ಆರಂಭಿಸಿ ಧ್ವಜ ಅವರೋಹಣದವರೆಗೆ ಕುಲಪುರೋಹಿತನ ಪಾತ್ರ ಮುಖ್ಯವಾಗಿರುತ್ತದೆ.

ಕುಲಕರ್ಣಿ kulakarṇi :

ಗ್ರಾಮದ ಲೆಕ್ಕ ಪತ್ರಗಳ ಕಡತವನ್ನು ಸರಿಯಾಗಿ ಹೊಂದಿಸಿ ಇಟ್ಟು ಕಂದಾಯ ವಸೂಲಿ ಮಾಡಿ ಸರ್ಕಾರಕ್ಕೆ ಕಟ್ಟುವ ಜವಾಬ್ದಾರಿ ವಹಿಸಿಕೊಂಡ ಮನೆತನ; ಶಾನುಭೋಗ; ಇವೊತ್ತು ಈ ವ್ಯವಸ್ಥೆ ಚಾಲ್ತಿಯಲ್ಲಿಲ್ಲ. A village accountant;

—ಕುಲಕರ್ಣಿಕಿ ಜಮೀನು : ಕುಲಕರ್ಣಿಯ ಕೆಲಸಕ್ಕೆ ಸರ್ಕಾರ ಉಂಬಳಿಯಾಗಿ ಕೊಟ್ಟ ಜಮೀನು. A granted land for a village accountant by government.

ಕುಲಗೆಟ್ಟು ಹೋಗು kulageṭṭu hōgu :

- ಸಮಾಜದ ಶ್ರೇಣೀಕೃತ ವ್ಯವಸ್ಥೆಯ ಗಡುಸು ನಿಲುವಿನ ಹಿನ್ನೆಲೆಯಲ್ಲಿ ಈ ನುಡಿಗಟ್ಟು ಜನ್ಮ ತಳೆದಿರಬಹುದು; ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತಿಗತಿಗೆ ನೇರವಾಗಿ ತಾಕುವ ನುಡಿಗಟ್ಟು ಇದು;

Demoralizing of caste; to become excommunicated from caste;

- 'ಕುಲಗೆಟ್ಟು' ಎಂದರೆ 'ಜಾತಿಕೆಟ್ಟು' ಹೋಗು ಎನ್ನುವುದೇ ನಿಜವಾದ ಅರ್ಥ; 'ಜಾತಿ ಕೆಡುವುದರ' ಹಿನ್ನೆಲೆಯಲ್ಲಿ ಈ ನುಡಿಗಟ್ಟು ರಚಿತವಾಗಿರಬಹುದು, ಅದೇ ಹಿನ್ನೆಲೆಯ ಸಂದರ್ಭದಲ್ಲಿ ಮೊದಲು ಬಳಕೆಗೆ ಬಂದಿರಬಹುದು; ಜಾತಿಯಿಂದ ಜಾತಿಗೆ ಮತಾಂತರಗೊಂಡ ಸಂದರ್ಭಗಳು ಈ ನುಡಿಗಟ್ಟಿನ ಸೃಷ್ಟಿ ಮತ್ತು ಪ್ರಸಾರದಲ್ಲಿ ಪಾತ್ರವಹಿಸಿರಬಹುದು;
- ಆದರೆ ಈಗ ಈ ನುಡಿಗಟ್ಟು ವಿಸ್ತೃತ ಸಂದರ್ಭಗಳನ್ನು ಹೊಂದಿರುವಂತೆ ಕಾಣುತ್ತದೆ; ಹಾಳಾಗು, ನಾಶವಾಗು, ಕೆಡು, ಮೀರು, ಕೆಲಸಕ್ಕೆ ಬಾರದೆ ಹೋಗು ಎಂಬೀ ಅರ್ಥಗಳನ್ನು ಪಡೆದು ಪ್ರಸಾರದಲ್ಲಿದೆ;
- 'ಕುಲ' ಹುಟ್ಟಿನ ಮೂಲವನ್ನು ಹೇಳುವಂಥದು; ಆದರೆ ನಿರ್ದಿಷ್ಟ 'ಕುಲಚಿಹ್ನೆ' ಮತ್ತು 'ಕುಲದೇವತೆ'ಯನ್ನು ಹೊಂದಿದವರೆಲ್ಲ 'ಒಂದುಕುಲ' (=ತೆಂಡೆ) ಎಂಬ ಅರ್ಥವೂ ಇದೆ; caste tells us about the birth roots of a person;
- ಮಧ್ಯಕಾಲೀನ ಸಾಹಿತ್ಯ ಮತ್ತು ಜೀವನದಲ್ಲಿ 'ಕುಲ' ಪದದ ಬಳಕೆ; ಉದಾಹರಣೆಗೆ ಕನಕದಾಸರ "ಕುಲಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ" ಎಂಬ ಕೀರ್ತನೆ ಪ್ರಸಿದ್ಧವಾಗಿದೆ, ಇಲ್ಲಿ 'ಕುಲ'ಎಂದರೆ ಜಾತಿಯೇ?;
- ವರ್ಣವ್ಯವಸ್ಥೆ, ಮೇಲು-ಕೀಳು ಭೇದದ ಬಳಕೆ, ಇದರ ಕಾರಣದಿಂದ ಶ್ರೇಷ್ಠತೆಯ ಭ್ರಮೆಯ ಕಾಲದಲ್ಲಿ- 'ಕುಲ'ಗಳ ಶ್ರೇಷ್ಠತೆಯನ್ನು ಹುಟ್ಟಿನ ಮೂಲದಿಂದ ಕಲ್ಪಿಸಲಾಯಿತು;
- ಒಂದೇ ಜಾತಿಯಲ್ಲಿ 'ಕುಲಮೂಲ'ಗಳು ಬೇರೆ ಬೇರೆ ಇರಬಹುದು- 'ಕುಲದೇವತೆ' ಅಂತಹ ಒಂದು ಪರಿಕಲ್ಪನೆ;
- 'ಕುಲಗೆಟ್ಟು' ಪದ ಭಿನ್ನ ಅರ್ಥದಲ್ಲಿಯೂ ಬಳಕೆಯಾಗಿದೆ; ಚುನಾವಣೆಯಲ್ಲಿನ ಮತ ಚಲಾವಣೆಯಲ್ಲಿ ಕೆಲವು ಮತಗಳು 'ಕುಲಗೆಟ್ಟ' ಮತಗಳು ಎಂದು ಕರೆಯುವುದು;
- 'ಕುಲ' ಪದಕ್ಕೆ 'ಕುಳ' ಬಳಕೆಯಾಗುವುದುಂಟು: ಕುಳವಾಡಿ, ಕುಳವಾರು;
- 'ಕುಲ'ಕ್ಕೆ ಕುಟುಂಬ, ಬುಡಕಟ್ಟು, ಸಮುದಾಯ ಎಂಬ ಅರ್ಥಗಳೂ ಇವೆ;
- 'ಕುಲ' ಪದ ಗಾದೆಗಳಲ್ಲಿ ಬಳಕೆ: 'ಕುಲವನ್ನು ನಾಲಿಗೆ ಹೇಳುವುದು'; 'ಕುಲ'ಕ್ಕೆ ತಕ್ಕ ಬುದ್ಧಿ, ಆಹಾರಕ್ಕೆ ತಕ್ಕ ಲದ್ದಿ'(ಕಿ.ಕೋ.ಗಾ); 'ಕುಲಗೇಡಿ' ಪದಕ್ಕೂ 'ಕುಲಗೇಡಿಯ ಕೂಡ ಸರಸವೇ'(ಕಿ.ಕೋ.ಗಾ.)- ಕುಲದ ಮೇಲು-ಕೀಳು ಪರಿಕಲ್ಪನೆಯಲ್ಲಿಯೇ ಈ ಗಾದೆಗಳು ಬಳಕೆಯಾಗಿವೆ; ಜನ ಸಂಸ್ಕೃತಿಯನ್ನು ಹಾಗೆಯೇ ನೋಡಿದ್ದಾರೆ ಎನ್ನುವುದಕ್ಕೆ ಇವು ವಾಚಿಕ ದಾಖಲೆಗಳಾಗಿವೆ;
- 'ಕುಲ' ಮಾತಿನಿಂದ ಅನೇಕ ಪದಗಳು ರೂಪುಗೊಂಡಿವೆ; ಕುಲಸ್ಥ, ಕುಲಪುತ್ರ, ಕುಲವಧು, ಕುಲಸ್ತ್ರೀ, ಕುಲಜ, ಕುಲಕ್ಷಯ, ಕುಲಗುರು, ಕುಲದೇವತೆ, ಕುಲಹೀನ, ಕುಲಧರ್ಮ-ಇಲ್ಲಿಯೂ ಶ್ರೇಷ್ಠತೆ/ಹೀನತೆ/ನಾಶ ಕಲ್ಪನೆಯಲ್ಲಿಯೇ ಈ ಪದಗಳು ಚಲಾವಣೆಗೊಂಡಿವೆ; ಮತ್ತೆ ಮೇಲು-ಕೀಳಿನ ಪ್ರಸ್ತಾಪ ಆಯಾಪದಗುಂಫನದಲ್ಲಿದೆ;
- 'ಕುಲ' ಪದ 'ವಂಶ' ಎನ್ನುವ ಅರ್ಥದಲ್ಲಿಯೂ ಬಳಕೆಯಾಗಿದೆ: 'ಕುಲ ನೋಡಿ ಹೆಣ್ಣು ಕೊಡಬೇಕು', 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗು'-ಜಾತಿ, ವಂಶ, ಕುಟುಂಬ ಶ್ರೇಷ್ಠತೆಯ ನೆಲೆಯಲ್ಲಿಯೇ ಈ ಗಾದೆಗಳು ಕೆಲಸ ಮಾಡಿವೆ,
- 'ಕೆಡು' ಪದದ ಮೂಲರೂಪವೇ 'ಕೆಟ್ಟು'(ಕೆಟ್); (ಕುಲ+ಕೆಟ್ಟು>ಕುಲಗೆಟ್ಟು-ಕ>ಗ); ಅಥವಾ ದ್ರಾವಿಡ ಭಾಷಾನಿಯಮವಾದ 'ಘೋಷಅಘೋಷ ವರ್ಣಗಳ ವಿನಿಮಯ ಸೂತ್ರ'ದಂತೆ ಈ ಬದಲಾವಣೆ; ಸಂವಾದಿ ರೂಪಗಳು: ತ:ಕೆಡು(ಕೆಟ್ಟು), ಮ: ಕೆಡು(ಕೆಟ್ಟು), ಹಾಗೆ ನೋಡಿದರೆ ತ+ಮ: 'ಕೆಡು' ರೂಪವೇ ಇದೆ; ತೆಲುಗಿನಲ್ಲಿ 'ಚೆಡು' ರೂಪವಿದೆ- ಕ>ಚ ಆಗುವುದು ದ್ರಾವಿಡ ಭಾಷೆಗಳಲ್ಲಿನ ಒಂದು ಲಕ್ಷಣ;
- 'ಜಾತಿ' ಹೊರತಾಗಿಯೂ ಈ ಪದ ಬಳಕೆಯಾಗಿದೆ; ಯಾರ ಮಾತನ್ನೂ ಕೇಳದೆ, ಸರಿಯಾಗಿ ಕೆಲಸವನ್ನೂ ಮಾಡದೆ ಕೆಟ್ಟು ಹೋದವರನ್ನು 'ಕುಲಗೆಟ್ಟು ಹೋಗು' ಎಂದು ಆಡಿರಬಹುದು; ಬೈಗುಳವಾಗಿಯೂ ಇದರ ಬಳಕೆ ಇದೆ;
- ಸಾಮಾಜಿಕ, ಆರ್ಥಿಕ ವ್ಯವಸ್ಥೆಯಲ್ಲಿ ಅದರ ಹಿಡಿತ ಕಳೆದುಕೊಂಡುದು/ಕಳೆದುಕೊಂಡವರು ಈ

ನುಡಿಗಟ್ಟಿನ ಆಶ್ರಯಕ್ಕೆ ಬರುತ್ತಾರೆ; ಇದು ಪತನವನ್ನು ಹೇಳುವ ಮಟ್ಟಕ್ಕೆ ಬೆಳೆಯುತ್ತದೆ;

- ಬದಲಾದ ಸಾಮಾಜಿಕ ವ್ಯವಸ್ಥೆಯಲ್ಲಿ 'ಕುಲ'ಗಳಿಗೆ ಬೆಲೆ ಇಲ್ಲದಿರಬಹುದು; ಆದರೆ 'ಸಂಪೂರ್ಣ ನೆಲೆ' ಕಳೆದುಕೊಂಡಿವೆ ಎನ್ನಲಾಗುವುದಿಲ್ಲ; ನುಡಿಗಟ್ಟಿನ ಮುಂದುವರಿಕೆಗೆ ಇದೂ ಒಂದು ಕಾರಣವಿರಬಹುದು;
- ಸಂದರ್ಭಗಳು ಬದಲಾದಂತೆ ಬಳಕೆಯ ಆಶಯಗಳೂ ಬದಲಾಗುವುದು ಸಹಜ; ಪ್ರಸ್ತುತ ನುಡಿಗಟ್ಟಿನಲ್ಲಿ ಆಗಿರುವುದೂ ಇದೆಯೇ; ನುಡಿಗಟ್ಟು ತನ್ನ ಹುಟ್ಟಿನ ಮೂಲವನ್ನು ಉಳಿಸಿಕೊಂಡೂ, ಹೊಸ ಅರ್ಥಗಳನ್ನು ಪಡೆಯಬಹುದು ಎಂಬುದಕ್ಕೂ ಇದು ನಿದರ್ಶನವಾಗುವುದನ್ನು ನೋಡಬಹುದು.

ಕುಲದ ಕೊಡೆ kulada koḍe :

- ಎರವರ ಒಂದು ಕುಲ; A sub caste of Erava community;
- ಈ ಕುಲಕ್ಕೆ ಸೇರಿದವರು ಕೊಡೆಯನ್ನು ಗೌರವದಿಂದ ಪೂಜಿಸುವರು;
- ಈ ಕುಲದ ಗುಂಪಿನಲ್ಲಿ ಯಾವುದೇ ಸಭೆ ಸಮಾರಂಭಗಳು ನಡೆದರೂ ಮೊದಲು ಕೊಡೆಗೆ ಪೂಜೆ ಸಲ್ಲಿಸಿ ನಂತರ ಬೇರೆ ಕೆಲಸವನ್ನು ಮಾಡವಂತಹದ್ದು; ಈ ಕುಲಕ್ಕೆ ಸಂಬಂಧಿಸಿದವರನ್ನೆಲ್ಲ ಆಹ್ವಾನಿಸಿ ಗೌರವಿಸುವರು;
- 'ಕೊಡೆ' ಎರವರಲ್ಲಿ ಪ್ರತಿಷ್ಠೆಯ 'ಚಿಹ್ನೆ' ಎಂದಾಯಿತು;
- ಅಷ್ಟೇ ಅಲ್ಲ ಕೊಡೆ ಅವರ 'ಕುಲದೇವತೆ'ಗೆ ಹತ್ತಿರವಾದ ಸಾಂಸ್ಕೃತಿಕ ಸಂಕೇತ ಕೂಡ ಆಗುತ್ತದೆ;
- ಅಥವಾ ಶ್ವೇತಪತ್ರದ(ಬೆಳ್ಗೊಡೆ) ಪರಿಕಲ್ಪನೆಯಿರುವ `higher culture'ನಿಂದ ಇಳಿದು ಬಂದ ಪದ್ಧತಿಯೇ?

  ನೋಡಿ: ಎರವರು.

ಕುಲಾಚಾರ kulācāra :

- ಕುಲ+ಆಚಾರ>ಕುಲಾಚಾರ ಆಗಿದೆ; ಕುಲಕ್ಕೆ ಸಂಬಂಧಿಸಿ ಆಚರಣೆಗಳನ್ನು ಈ ಪದ ಹೇಳುತ್ತದೆ; ಇಲ್ಲಿ 'ಕುಲ' ಜಾತಿ ಮಾತ್ರವಲ್ಲ; ಒಂದೇ ಜಾತಿಯ ಒಳಗಿನ ಸಮುದಾಯಗಳೂ ಆಗಿರಬಹುದು; "The established observances or practices of caste"(ಕಿಟ್ಟೆಲ್); The systems, traditions, customs of one's caste;
- ಮನೆದೇವರ ಆಧಾರದ ಮೇಲೆ ಸಮುದಾಯಗಳೂ ಆಚಾರಗಳೂ ಬದಲಾಗಬಹುದು; ಜಾತಿಯಿಂದ ಜಾತಿಗೆ 'ಕುಲಾಚಾರ'ಗಳು ಬೇರೆಯಾಗುತ್ತವೆ;
- ವೈದಿಕ ಸಂಸ್ಕೃತೀಕರಣ ಕೂಡ ಇತರ ಜಾತಿಗಳ ಮೇಲೆ ಆಗಿರುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ; ಸಂಸ್ಕೃತಿಯ ಭಿನ್ನತೆ ಈ ನೆಲೆಯಲ್ಲಿ ನಡೆಯುವುದು; ಆಯಾ ಜನರ ಸ್ವಭಾವ, ಭಾವ, ಸಂಸ್ಕಾರದ ಮೇಲೆ ಈ ವ್ಯತ್ಯಯ ರೂಪಗಳು ಕಂಡು ಬರುತ್ತವೆ;
- ಸಂಸ್ಕೃತಿ ಮತ್ತು ಜಾತಿಗಳನ್ನು ಒಟ್ಟಿಗೆ ಇಟ್ಟು ನೋಡಿದರೆ, ಕುಲದ ಒಳಗೆ ಹೋಲಿಕೆಯಾಗಿ, ಕುಲದ ಆಚೆ ವ್ಯತ್ಯಾಸವಾಗಿ ಈ ಆಚಾರಗಳು, ಕಾಣಲು ಸಿಗುತ್ತವೆ;
- ಸರಿಯೆನಿಸಿದ ವಿಚಾರ ಆಚರಣೆಗೆ ಇಳಿದರೆ, ಅದೇ ಸಂಪ್ರದಾಯವಾಗಿಬಿಡಬಹುದು; ಅದನ್ನವರು ಪರಂಪರೆ ಎನ್ನಬಹುದು; ಆದರೆ ನಿಜವಾಗಿಯೂ ಸಂಪ್ರದಾಯವೇ ಪರಂಪರೆ ಆಗುವುದಿಲ್ಲ; ಆಚಾರ ವಿಚಾರಗಳು ಸಂಸ್ಕೃತಿ ಎನಿಸುವುದು ಸಹಜ; ಬದಲಾವಣೆ ಇದ್ದೇ ಇರುತ್ತದೆ;
- ಆಚಾರ ಮತ್ತು ವಿಚಾರಗಳು ಒಂದೇ ಎಂದು ಪರಿಗಣಿಸಿದವರು ಸುಲಭವಾಗಿ ವ್ಯವಸ್ಥೆ ಒಳಗೆ ಬಂದುಬಿಡುತ್ತಾರೆ; ವಿರೋಧ ವ್ಯಕ್ತವಾದಾಗ ಆಚಾರ ಮತ್ತು ವಿಚಾರಗಳಲ್ಲಿ ಬಿರುಕು ಕಾಣಿಸಿಕೊಳ್ಳಬಹುದು; ಮುಂದೆ ವಿಚಾರ ಆಚಾರಕ್ಕೆ ಶರಣಾಗುತ್ತದೆಯೊ ಇಲ್ಲವೊ ಎನ್ನುವುದರ ಮೇಲೆ ಸಂಸ್ಕೃತಿಯ ಸ್ವರೂಪ ನಿಂತಿರುತ್ತದೆ;
- ಆಸ್ತಿಕ ವಿಚಾರಗಳೇ ಬಹುಮಟ್ಟಿಗೆ ಸಂಸ್ಕೃತಿಯನ್ನು ರೂಪಿಸುತ್ತವೆ; ಜನಪದ ಸಂಸ್ಕೃತಿಯಲ್ಲಿ ಸಣ್ಣ ಪ್ರಮಾಣದಲ್ಲಾದರೂ 'ನಾಸ್ತಿಕ ದನಿ' ಕೇಳಿಬರುತ್ತದೆ; ವಿಚಾರ ಆಸ್ತಿಕವೆ/ನಾಸ್ತಿಕವೆ ಅನ್ನುವುದಕ್ಕಿಂತ, ಅದು ಹೇಗೆ ಅನುಷ್ಠಾನ ಪಡೆಯುತ್ತದೆ ಎಂಬುದು ಮುಖ್ಯ; ಪರ-ವಿರೋಧಗಳು ಹುಟ್ಟಿಕೊಳ್ಳುವುದು ಇಲ್ಲಿಯೇ; 'ಕುಲಾಚಾರ'ಗಳು ಭೇದ ಪಡೆಯುವುದು ಇಲ್ಲಿಯೇ;
- ಕುಲ ಮತ್ತು ಕುಲ ವ್ಯವಸ್ಥೆ ಇವೊತ್ತು ಗಟ್ಟಿಯಾಗಿಯೇ ಇದೆ; ಆಚಾರದಲ್ಲಿ ಪರಿಷ್ಕಾರ ಆಗಿರುವುದು ನಿಜ; ಆದರೆ ಅದು ವಿಚಾರದಲ್ಲಿ ಬದಲಾಗಿದ್ದಾಗ ಮಾತ್ರ; ವಿಚಾರದಲ್ಲಿ ಎಲ್ಲರೂ ಪ್ರಗತಿ ಪರರಂತೆ

ತೋರಿಸಿಕೊಳ್ಳುತ್ತಾರೆ; ಆದರೆ ವಾಸ್ತವ ಬೇರೆಯೇ ಇರುತ್ತದೆ; ಅದರಲ್ಲಿ ಕೆಲವೊಂದು ಒತ್ತಾಯಗಳೂ ಇರುತ್ತವೆ;

- ಜನಪದ ಕುಟುಂಬದಲ್ಲಿ 'ದೇಶೀ ಸಂಸ್ಕೃತಿ'ಯ ಪ್ರಭಾವ ಹೆಚ್ಚು 'ಶಿಷ್ಟಸಂಸ್ಕೃತಿ'ಯ ಪ್ರಭಾವ ಇಲ್ಲವೆಂದಲ್ಲ, ಕಡಿಮೆ.

ಕುಲಾಯ/ಕುಲಾಯಿ/ಕುಲಾವಿ kulāya/kulāyi/kulāvi :

- ಚಿಕ್ಕ ಮಕ್ಕಳಿಗೆ ತಲೆ ಮತ್ತು ಕಿವಿ ಮುಚ್ಚುವಂತೆ ಕಟ್ಟುವ ಟೋಪಿ; ಎರಡು ಕಡೆ ಕಸೆ(ದಾರ) ಇದ್ದು ಕುತ್ತಿಗೆ ಸುತ್ತಲೂ ಕಟ್ಟಲು ಅನುಕೂಲವಿದೆ; A small hat that covers head, neck and back of a younglings;
- ಅರೆಬಿಕ್, ಕುಲ್ಲಾದ್; ಹಿಂದಿ: ಕುಲಾಹ್(ಕ.ನಿ). ನೋಡಿ : ಕುಂಚಿಗೆ;
- —*ಕುಲಾವಿ ಕರಗ* : ಕರಗದ ಪೂಜಾರಿಯ ತಲೆಯಿಂದ ಹಿಡಿದು ಮೊಣಕಾಲಿನವರೆಗೆ ಇಳಿ ಬೀಳುವಂತೆ ಮಲ್ಲಿಗೆ ಮೊಗ್ಗುಗಳಿಂದ ಕುಲಾವಿಯಂತೆ ಪೋಣಿಸಿ ಅಲಂಕರಿಸುವುದು. A long gown that is like small hat of infant covers all the body that made up of flowers used by the priest of a Karaga God.

ಕುಲಾಯಿಸು kulāyisu :

ಒದಗುವುದು; ತೆರೆದುಕೊಳ್ಳು; *ಪ್ರ:* 'ಸೊಸೆ ಮನೆಗೆ ಕಾಲಿಟ್ಟ ಮೇಲೆ ಅದೃಷ್ಟ ಕುಲಾಯಿಸಿತು'. ಕುಲಾಯ (=ಖಿಲಾಯ)+ಇಸು=ಕುಲಾಯಿಸು ಅನ್ಯದೇಶ್ಯಪದ+ ಕನ್ನಡಪ್ರತ್ಯಯ. To open a opportunity.

ಕುಲಾಲ kulāla :

- ಈತ ಕುಂಬಾರರ ಮೂಲಪುರುಷ; ಕುಲಾಲನ ವಂಶಸ್ಥರು ಕುಂಭಕಾರರು; ಇವರೇ ಕಾಲಾನಂತರ ಕುಂಬಾರರು ಎನಿಸಿರಬಹುದು; ಕುಂಬಾರರಿಗೆ ಬಳಕೆಯಲ್ಲಿರುವ 'ಕುಲಾಲ' ಎಂಬ ಪದ ವೈದಿಕ ವಾಙ್ಮಯದಲ್ಲಿಯೂ ಮಧ್ಯಕಾಲೀನ ಗ್ರಂಥಗಳಲ್ಲಿಯೂ ಹೆಚ್ಚು ಬಳಕೆಯಲ್ಲಿದೆ; Forefather of potter community;
- ದಕ್ಷಿಣ ಕನ್ನಡದಲ್ಲಿಯೂ ಈ ಪದ ಹೆಚ್ಚು ಬಳಕೆಯಲ್ಲಿರುವುದನ್ನು ಕಾಣಬಹುದು; (ಕೋ/ಬೆಂ.ಗ್ರಾ/ಜಿ);
- —*ಕುಲಾಲಚಕ್ರ* : ಕುಂಬಾರರು ಮಡಿಕೆ ಮುಂತಾದ ವಸ್ತುಗಳನ್ನು ಮಾಡಲು ಬಳಸುವ ಚಕ್ರ; The pottering wheel;
- —*ಕುಲಾಲಿ* : ಕುಂಬಾರನ ಹೆಂಡತಿ; ಮಡಿಕೆ, ಕುಡಿಕೆ, ಹಣತೆ ಇತ್ಯಾದಿ ಮಣ್ಣಿನ ಸಾಮಾಗ್ರಿ ಮಾಡುವ ಕಾರ್ಯದಲ್ಲಿ ಕುಂಬಾರನಿಗೆ ಸಹಕರಿಸುವವಳು; the wife of potter.

ಕುಲಿಂಜನ/ಗಂಧಮೂಲ kulinjana/gandhamūla :

Alpinia galangal(Zingiberaceae) ಸುವಾಸನೆಯುಳ್ಳ ಗೆಡ್ಡೆ; ಹಸಿರು ಮಿಶ್ರಿತ ಬಿಳಿಹೂವು, ಚೆರ್ರಿ ಹಣ್ಣಿನಂತೆ ಕಿತ್ತಳೆ ಕೆಂಪು ಬಣ್ಣದ ಹಣ್ಣುಗಳನ್ನು ಹೊಂದಿಸುವ ಸಸ್ಯ ವಿಶೇಷ. A vegetable smell plant.

ಕುಲಿಪೆ kulipe :

ಚಿಕ್ಕ ಮಣ್ಣಿನ ಕುಡಿಕೆ; ವಿಶೇಷವಾಗಿ ಮೊಸರು ಹೆಪ್ಪು ಹಾಕಲು ಬಳಕೆ; A small earthen pot.

ಕುಲಿಬಾರಣೆ kulibāraṇi :

- ಕೆಂಬಟ್ಟೆ ಹೊಲೆಯರಲ್ಲಿನ ಒಂದು ಆಚರಣೆ; A celebration in the community of kembatte (Holayas) untouchables;
- ಸತ್ತವರ ಅತೃಪ್ತ ಆತ್ಮಗಳು ತನ್ನ ಪೂರ್ವಜರ ಸಾಲಿನಲ್ಲಿ ಸೂಕ್ತಸ್ಥಾನ ಪಡೆಯಲಿ ಎಂದು ಅಕ್ಕಿಕಾಳನ್ನು ಮನೆಯ ಮೇಲೆ ಎಸೆಯುವ ಒಂದು ಆಚರಣೆ;
- ಮನೆಯ ಅಂಗಳದಲ್ಲಿ ಐದು ಕೋಳಿಗಳ ಹೆಸರಿನಲ್ಲಿ ಅಂಚ್‌ಕೂಟ, ವಾತಾಳ್, ಚಾವುಂಡಿ, ಕಲ್ಲುರ್ಟಿ, ಪಂಜುರ್ಲಿ, ಗುಳಿಗ, ಗೊರಗ ಈ ಭೂತಗಳ ಕೋಲ ನಡೆಸಿ ಪೂಜಿಸಿ ನೆರೆದವರಿಗೆ ಊಟ ನೀಡಿದರೆ ಆತ್ಮಗಳು ಅಲೆಯುವುದು ತಪ್ಪುತ್ತದೆಂಬ ನಂಬಿಕೆ (ಕೊಡ.ಜಿ).

ಕುಲುಕು kuluku :

- ಅಲ್ಲಾಡಿಸು; ಮೇಲೆ ಕೆಳಗೆ ಮಾಡು; To shake up and downwards;
- ಹೆಣ್ಣುಮಕ್ಕಳ ನಡಿಗೆಯ ಬಗೆ; ವೈಯಾರದಿಂದ ಬಳುಕುತ್ತಾ ನಡೆಯುವಿಕೆ;
- ಪರಸ್ಪರ ಒಬ್ಬರಿಗೊಬ್ಬರು ಭೇಟಿ ಮಾಡಿದಾಗ ಕುಶಲ ಸಮಾಚಾರ ಕೇಳಿ ಕೈ ಕುಲುಕುವ ಕ್ರಮ;
- ಕೈಕಾಲುಗಳನ್ನು ಹೊರಳಿಸುತ್ತಾ ನಡೆಯುವ ಒಂದು ಬಗೆಯ ನಡಿಗೆ(ಚಿ.ಪ.ಕೋ).

ಕುಲುಮೆ kulume :

- ಕಮ್ಮಾರರು ತಮ್ಮ ಕುಲಕಸುಬನ್ನು ಮಾಡಲು ನಿಗದಿಪಡಿಸಿಕೊಂಡ ಸ್ಥಳ ಹಾಗೂ ಅದಕ್ಕೆ ಸಂಬಂಧಿಸಿದ ಸಲಕರಣೆಗಳ ಒಟ್ಟು ಮೊತ್ತ; A place of blacksmiths and their professional equipments to sharpen the weapons;
- ಕಬ್ಬಿಣದ ಉಪಕರಣ ತಯಾರಿಕೆ ಹಾಗೂ ದುರಸ್ಥಿ ಕೆಲಸ, ಗೃಹ ಬಳಕೆ, ಕೃಷಿ ಸಲಕರಣೆ, ಬೇಟೆಗಾರಿಕೆಗೆ ಅಗತ್ಯವಾದ ಸಾಧನ ತಯಾರಿಕೆಯ ಕಾರ್ಯ ನಡೆಯುತ್ತದೆ;
- ಮೊಂಡಾದ ಉಪಕರಣಗಳನ್ನು ಹರಿತ ಮಾಡುವುದು ಇಲ್ಲಿನ ಪ್ರಧಾನ ಕಸುಬು; the profession of sharpening the tools;
- ಕುಲುಮೆಯಲ್ಲಿ ತಿಗರಿ, ದೊಡ್ಡಸುತ್ತಿಗೆ, ಸಣ್ಣಸುತ್ತಿಗೆ, ಚಾಣಗಳು, ಅಡಿಗಲ್ಲು, ಚಿಮ್ಮಟಿಗೆ, ಪಾಗರಿ(ರಂಧ್ರ ಮಾಡಲು ಬಳಸುವ ಸಾಧನ) ಸರಗೋಲು ಇದ್ದಿಲನ್ನು ಒಳನೂಕುವುದು ಮತ್ತು ಹೊರ ಹಾಕುವುದಕ್ಕೆ ಬಳಕೆ;
- ಇದ್ದಿಲು, ಹೊಟ್ಟು, ತೆಂಗಿನ ಮಟ್ಟೆಗಳು ಪ್ರಮುಖವಾಗಿ ಬಳಕೆಯಾಗುವ ಸಾಮಾಗ್ರಿಗಳು;
- ಕಮ್ಮಾರನು ಕಬ್ಬಿಣವನ್ನು ಕಾಯಿಸಿಕೊಳ್ಳಲು ಓಲೆಯಾಕಾರದ ಸಣ್ಣ ಗುಳಿಯನ್ನು ಮಾಡಿ ಅದರಲ್ಲಿ ಇದ್ದಿಲನ್ನು ತುಂಬಿ ಬೆಂಕಿ ಹಚ್ಚುವನು;
- ಕುಲುಮೆ ಇದ್ದಿಲು ಉರಿಯಲು 'ತಿದಿ'ಯಿಂದ ಗಾಳಿ ಕುಲುಮೆಗೆ ಬಂದು ಕುಲುಮೆಯಲ್ಲಿ ಬೆಂಕಿ ಉರಿಯಲು ಸಾಧ್ಯವಾಗುವಂತಹ ವ್ಯವಸ್ಥೆ ಇರುತ್ತದೆ;
- ಕಮ್ಮಾರನ ಒಲೆಯಲ್ಲಿ ಬೆಂಕಿ ಉರಿ ವರ್ಷದ ಆರಂಭದಲ್ಲಿ ಬಲಕ್ಕೆ ತಿರುಗಿದರೆ ಆ ವರ್ಷ ಬೆಳೆ ಚೆನ್ನಾಗಿ ಆಗುತ್ತದೆಂದು, ಎಡಕ್ಕೆ ತಿರುಗಿದರೆ ಸಾಧಾರಣ ಬೆಳೆ ಆಗುತ್ತದೆಂಬ ನಂಬಿಕೆ ಇದೆ;
- ಹಳ್ಳಿಯ ಆಯಾಗಾರರಲ್ಲಿ ಈತ ಸಹ ಒಬ್ಬ; ಪ್ರ: 'ಕಮ್ಮಾರ ಕುಲುಮೆಯಲ್ಲಿ ಕಬ್ಬಿಣ ಕಾಯಿಸಿ ನಂತರ ಬೇಕಾದ ಆಕಾರಕ್ಕೆ ತಂದನು';
- ಕೊಲಿಮೆ, ಕುಲುಮೆ ರೂಪಗಳೂ ಇವೆ; ಕುಲುಮೆ> ಕೊಲಿಮೆ/ಕೊಲುಮೆ ಉ>ಒ(ಕು>ಕೊ) 'ಸ್ವರ ವ್ಯತ್ಯಯ(Vowel mutation)
- ***—ಕುಲುಮೆ ಕಾಳಮ್ಮ*** : ಪಾಂಚಾಳರ ವೃತ್ತಿಯ ದೇವತೆ(ಚಾ.ಜಿ).

ಕುಲೆ kule :

- ಪ್ರೇತ; ದೆವ್ವ; ಸದ್ಗತಿ ಸಿಕ್ಕದಿರುವ ಮೃತನ ಆತ್ಮ; Devil, demon;
- ಒಂದು ಬೈಗುಳದ ಪದ; an abused word;
- ***—ಕುಲೆಗೊಡುವುದು*** : ಸತ್ತವರ ಪ್ರೇತ ಮತ್ತು ನಂತರ ಮನುಷ್ಯರ ಆತ್ಮ ಅಸ್ತಿತ್ವದಲ್ಲಿ ಇರುವುದೆಂಬ ದೃಢವಾದ ನಂಬಿಕೆ ಇದೆ; A belief that soul and its existence after the death of one's;
- ಅವು ನಿರಾಕಾರವಾಗಿದ್ದು ಕುಟುಂಬವನ್ನು ರಕ್ಷಿಸುತ್ತವೆಂಬ ನಂಬಿಕೆಯಿಂದ ಅವುಗಳಿಗೆ ಕಾಲಕಾಲಕ್ಕೆ ಅನ್ನ, ಪಾನೀಯ ನೀಡುವ ಪದ್ಧತಿ;
- ***—ಕುಲೆ ಮದುವೆ*** : ಪ್ರೇತ ಮದುವೆ; ಮದುವೆಯಾಗದೆ ಸತ್ತ ಹುಡುಗ ಮತ್ತು ಮದುವೆಯಾಗದೆ ಸತ್ತ ಹುಡುಗಿಯನ್ನು ಆಯ್ಕೆ ಮಾಡಿ ಜೀವಂತ ವ್ಯಕ್ತಿಗಳಿಗೆ ಮದುವೆ ಮಾಡುವ ರೀತಿಯಲ್ಲಿಯೇ ಮದುವೆ ಮಾಡುವುದು. Devil's marriage;
- ***—ಕುಲೆ ಸೊಪ್ಪು*** : ಒಂದು ಬಗೆಯ ಸೊಪ್ಪು; ಇದರ ಸೊಪ್ಪನ್ನು ಪ್ರೇತ ಬಾಧೆ ನಿವಾರಣೆಯ ಆಚರಣೆಯಲ್ಲಿ ಉಪಯೋಗಿಸುವರು; ಇದು ಮೈಗೆ ತಾಗಿದರೆ ಬಂದ ದಾರಿ ಮರೆತು ಹೋಗುತ್ತದೆಂಬ ನಂಬಿಕೆ(ದ.ಕ); A kind of green vegetable;
- ***—ಕುಲೆನಲಿಕೆ*** : ಕಾಲೆ ಕೋಲದ ಇನ್ನೊಂದು ಹೆಸರು; ಯಾರಾದರೂ ಸತ್ತ ಹನ್ನೆರಡನೆಯ ದಿನ ಕುಣಿಯುವ ವೇಷ; ತುಳುನಾಡಿನಲ್ಲಿ ಸಮಾಧಿಯ

ಬಳಿ ಹರಿಜನರಿಂದ ವೇಷ ಹಾಕಿಸಿ ಡೋಲು ಬಡಿದು ಕುಣಿಸುವ ಸಂಪ್ರದಾಯವಿದೆ. A dance ritual that takes place at 12th day of dead person in Tulunadu;

ಕುಲೆತ್ತು/ಕುಲ್ಡೆತ್ತು kulettu/kulḍettu :

- ಬಯಲುಸೀಮೆ ಭಾಗದಲ್ಲಿರುವ ಎತ್ತಿನ ಒಂದು ತಳಿ; A species of ox in plain land;
- ಇದು ಉಳುಮೆ ಮಾಡಲು ಉತ್ತಮವಾಗಿದೆ;
- ಕುಲೆತ್ತು = ಕುಲ + ಎತ್ತು > ಕುಲೆತ್ತು; ಕುಲ್ಡೆತ್ತು = ಕುಲದ ಎತ್ತು ಕುಲ್ಡೆತ್ತು(ಉಚ್ಚಾರಣೆಯಲ್ಲಿ ಆದ ಮಾರ್ಪಾಡು);
- ಸಾಮಾನ್ಯವಾಗಿ ಎತ್ತುಗಳನ್ನು ತರುವಾಗ ರೈತರು ಅವು ಬೇಸಾಯಕ್ಕೆ ಯೋಗ್ಯವೆ ಎಂದು ನೋಡಿಯೆ ತರುವುದು ವಾಡಿಕೆ; ಉಳುಮೆಗೆ ಒಗ್ಗಿ ಬರುವ ಎಲ್ಲ ಎತ್ತುಗಳನ್ನು ಈ ಮಾತಿನಲ್ಲಿ ಪಡೆಯಬಹುದು; ಕುಲೆತ್ತು, ಕುಲ್ಡೆತ್ತು ಪದ ರೂಪಗಳು ಎತ್ತುಗಳ ಸಮೂಹ(ಜಾತಿ)ದಲ್ಲಿಯೇ ಶ್ರೇಷ್ಠವಾದವು ಎಂಬ ಅರ್ಥದಲ್ಲಿ ಬಳಕೆಯಾಗಿರುವಂತೆ ತೋರುವುದು.

ಕುಲ್ಡಿರುವೆ kulḍiruve :

ಕಟ್ಟಿರುವೆಗಳಷ್ಟೆ ಗಾತ್ರವಿದ್ದು ತಿಳಿಗೆಂಪು ಬಣ್ಣದಾಗಿರುತ್ತದೆ; ಹುತ್ತಗೂಡುಗಳಲ್ಲಿ ಕಾಣಸಿಗುತ್ತವೆ; ಇದು ಸ್ವಭಾವತಃ ಸಾಧು ಇರುವೆಯಾಗಿದ್ದು ಕಚ್ಚುವುದಿಲ್ಲವಾದ್ದರಿಂದ ಈ ಹೆಸರು ಬಂದಿದೆ. A light reddish ants that they resembles reddish ants.

ಕುಲ್ಡುನ್ ಮೀನು kulḍun mīnu :

- ದೊಡ್ಡ ಆಕಾರದ ತಲೆಯುಳ್ಳ ಮೀನು; A huge headed fish;
- ಆನೆ ಕಿವಿಯಂತಹ ಕಿವಿಗಳನ್ನು ಹೊಂದಿದೆ;
- ಇವು ನೀರಿನ ಆಳದಲ್ಲಿ ಹೆಚ್ಚು ಇರುವುದರಿಂದ ಸಾಮಾನ್ಯವಾಗಿ ಕಣ್ಣಿಗೆ ಕಾಣುವುದು ಅಪರೂಪ;
- ನೀರಿನಲ್ಲಿ ಬಲೆ, ಕೊಳಿ, ಗಾಣ ಮುಂತಾದ ಸಾಂಪ್ರದಾಯಿಕ ಪದ್ಧತಿಯಿಂದ ಹಿಡಿಯಲಾಗುವುದಿಲ್ಲ; ಏಕೆಂದರೆ ಅವುಗಳ ತಲೆ ದೇಹಕ್ಕಿಂತ ದೊಡ್ಡದಾಗಿದ್ದು ಬಲೆ, ಕೂಳಿಯೊಳಗೆ ತಲೆ ನುಗ್ಗುವುದಿಲ್ಲ;
- ಬೆಳಗಿನ ಜಾವದಲ್ಲಿ ಬಿಸಿಯಾಗಿರುವ ಜಾಗಕ್ಕೆ ಬರುತ್ತವೆ; ಆಗ ಅದರ ಹೊಟ್ಟೆಯ ಅಡಿಯಲ್ಲಿ ದನಕರುಗಳ ಹೆಗಲು, ಬೆನ್ನನ್ನು ಸವರಿದಂತೆ ಸವರುತ್ತಾ ಇದ್ದಾಗ ಅವು ಮೈಮರೆಯುತ್ತವೆ;
- ಆಗ ಹಗ್ಗದ ಉಳ್ಳು ಮಾಡಿ ಮೂತಿಗೆ ಸೇರಿಸಿ ಎಳೆದು ದಡಕ್ಕೆ ತರುವರು.

ಕುಲ್ಲ೧ kulla[1] :

- ಒಳಗೊಳಗೆ ನೊಂದುಕೊಳ್ಳುವವ; *ಪ್ರ:* 'ಇಷ್ಟೊಂದು ಕುಲ್ಲು ಇರಬಾರದು'.
- ಖುಲ್ಲ/ಖುಲ್ಲಾ ದಿಂದ ಬಂದಿರಬಹುದು; ಚಿಕ್ಕದು; ಅರ್ಥಹೀನ ಎಂಬ ಅರ್ಥದಲ್ಲಿ ಬಳಕೆ; ಖುಲ್ಲಾ ಕಳೆಯಿತು ಎಂದು ಹೇಳಲಾಗುತ್ತದೆ.

ಕುಲ್ಲ೨ kulla[2] :

- ಗೋಲಿಯಾಟದ ಒಂದು ಪ್ರಭೇದ; ಎರಡು ಗೋಲಿಗಳ ನಡುವೆ ಸ್ವಲ್ಪ ಜಾಗವಿದ್ದರೆ ಅದಕ್ಕೆ ಕುಲ್ಲ ಎನ್ನುವರು; A kind of crystal boll game;
- ಚಿಲ್ಲರೆ ಹಣ; ಸ್ಪಷ್ಟ(ಬ.ಜಿ); money
- ಕೆಟ್ಟ; ಕ್ಷುಲ್ಲಕ; ಚಿಕ್ಕದು, ಸಣ್ಣದು, ಕಿರಿದು; narrow minded, small bad omen; ಯಾವುದಾದರೂ ಸಂದರ್ಭದಲ್ಲಿ ತಮಗೆ ಒದಗಿದ ಕಷ್ಟ, ಕೆಟ್ಟದ್ದು, ಅಶುಭವಾದದ್ದು ತಪ್ಪಿದರೆ ಆಗ ಜನರು 'ಕುಲ್ಲ ಕಳಿಯ' ಎಂದು ಉದ್ಗಾರ ತೆಗೆಯುತ್ತಾರೆ;
- ಬೇರೆ ಆಗಿ; ಸ್ವಂತವಾಗಿ(ಶಿ.ಜಿ).

ಕುಲ್ಲ ಕಟ್ಟುವುದು kulla kaṭṭuvudu :

- ವಜ್ರದ ಹರಳುಗಳನ್ನು ಕಿವಿಯೋಲೆಗೆ ಮೂಗುತಿಗೆ ಅಥವಾ ಕಂಠಿ ಹಾರಕ್ಕೆ ಪೋಣಿಸುವ ಒಂದು ವಿಧಾನ; A method of fixing crystal to gold rings/nose rings;
- ಸಂಪೂರ್ಣವಾಗಿ ಚಿನ್ನದಿಂದ ಹರಳುಗಳನ್ನು ಮುಚ್ಚದೆ ಎಣ್ಣೆ, ನೀರು ಹರಿದು ಹೋಗುವಂತೆ ಮಧ್ಯೆ ಜಾಗಬಿಟ್ಟು ಹರಳುಗಳನ್ನು ಪೋಣಿಸಲಾಗುವುದು.

ಕುಲ್ಲರ್ kullar :

- ಲಂಬಾಣಿಗರ ಒಂದು ಬಗೆಯ ಸಿಹಿತಿಂಡಿ; ಹೆರಿಗೆ ಸೂತಕವನ್ನು ಕಳೆಯುವ ದಿವಸ ಈ ತಿಂಡಿ

ಮಾಡುವರು; A kind of sweet snacks; prepared By Lambani Caste

- ಗೋಧಿಹಿಟ್ಟಿಗೆ ಬೆಲ್ಲ, ತುಪ್ಪ ಬೆರೆಸಿ ತಯಾರಿಸಿದ್ದು;
- ಸೂತಕ ಕಳೆಯುವ ದಿನದ ಸಂಜೆ ಹೆರಿಗೆ ಮನೆಯ ಮುಂಭಾಗದಲ್ಲಿ ಒಂದು ಸಣ್ಣ ಗುಂಡಿಯನ್ನು ತೋಡಿ ಅದರ ಸುತ್ತಲೂ ಸಗಣಿಯಿಂದ ಸಾರಿಸಿ ಗುಂಡಿ ಸುತ್ತ ಹಿಟ್ಟಿನಿಂದ ಮಾಡಿದ ನಾಲ್ಕು ದೀಪಗಳನ್ನು ಹಚ್ಚುವರು;
- ಹಿರಿಯ ಹೆಂಗಸರು ಬಾಣಂತಿಯ ಉಡಿಗೆ ಅಕ್ಕಿ, ಮಗುವಿನ ಬಟ್ಟೆ ಹಾಕಿ ಸುಣ್ಣ ಮತ್ತು ಕಪ್ಪು ಮಸಿಯಿಂದ ಅಲಂಕರಿಸಿದ ಜೋಡು ಕಳಸವನ್ನು ಬಾಣಂತಿಯ ತಲೆಯ ಮೇಲಿರಿಸುವರು;
- ನಂತರ ಆ ಕಳಸದ ನೀರಿನಿಂದ ಐದು ಮಕ್ಕಳ ಪಾದ ತೊಳೆದು ನಮಸ್ಕರಿಸುವರು; ಹಿರಿಯ ಹೆಂಗಸರೆಲ್ಲ ಸೇರಿ ಪ್ರಾರ್ಥನೆ ಮಾಡುವರು; ಹೀಗೆ ಪ್ರಾರ್ಥಿಸಿದ ನಂತರ ಹಿಟ್ಟಿನಿಂದ ಮಾಡಿದ ದೀಪವನ್ನು ಗುಂಡಿಯಲ್ಲಿ ಹಾಕಿ ನೀರು ಸುರಿದು ಗುಂಡಿ ಮುಚ್ಚುವರು;
- ನಂತರ ಬಾಣಂತಿ ತಲೆಮೇಲೆ ಕಳಸ ಹೊರಿಸಿ ಗುಂಡಿಯನ್ನು ಪ್ರದಕ್ಷಿಣೆ ಮಾಡಿಸಿ ಮನೆಗೆ ಸೇರಿಸಿಕೊಳ್ಳುವರು;
- ಹೀಗೆ ಹೆರಿಗೆ ಸೂತಕ ಕಳೆದ ನಂತರ ನೆರೆದ ಮಕ್ಕಳಿಗೆ ಕುಲ್ಲರ್ ಸಿಹಿತಿಂಡಿ ಹಂಚುವರು.

ಕುಲ್ಲಿ kulli :

- ಸಣ್ಣಕತ್ತಿ(ಉ.ಕ.ಜಿ); A small knife;
- ಅಸೂಯೆ; jealousy;
- ಹಾಲು, ಮೊಸರುಗಳನ್ನು ಇಡುವ ಸಣ್ಣ ಮಣ್ಣಿನ ಪಾತ್ರೆ(ಉ.ಜಿ).

ಕುಲ್ಲು kullu :

- ಜಿಪುಣ(ದಕ); A miser;
- ದ್ವೇಷ; ಅಸೂಯೆ; ಕುಳ್ಳು; ಹೊಟ್ಟೆಕಿಚ್ಚು(ಕೋ.ಜಿ). enmity/jealous.

ಕುಲ್ಲೇವು kullēvu:

- ದೃಷ್ಟಿ ನಿವಾರಿಸುವ ಒಂದು ಕ್ರಮ; A method of avoiding evil eyes of other;
- ಮಕ್ಕಳಿಗೆ ದೃಷ್ಟಿ ನಿವಾರಿಸಲು ಒಂದು ಹಿಡಿ ಹರಳು ಉಪ್ಪನ್ನು ಎಡಗೈ ಮುಷ್ಠಿಯಲ್ಲಿ ಹಿಡಿದು ಮಗುವಿನ ಮುಖದಿಂದ ಕಾಲಿನ ವರೆಗೆ ಮೂರು ಬಾರಿ ನಿವಾಳಿಸಿ ಉರಿಯುವ ಒಲೆಯ ಬೆಂಕಿಯಲ್ಲಿ ಉಪ್ಪನ್ನು ಹಾಕಿದಾಗ ಅದು ಸಿಡಿಯುವುದು; ಸಿಡಿದಂತೆ ತಗಲಿರುವ ದೃಷ್ಟಿ ನಿವಾರಣೆಯಾಗುವುದೆಂಬ ನಂಬಿಕೆ;
- ಒಲೆಗೆ/ಬೆಂಕಿಗೆ ಉಪ್ಪು ಹಾಕಿದರೆ ಸಿಡಿಯುವುದು ಅದರ ಸ್ವಾಭಾವಿಕ ಪ್ರಕ್ರಿಯೆ; ಅದಕ್ಕೂ ದೃಷ್ಟಿಗೂ ಏನೂ ಸಂಬಂಧ ಇರುವುದಿಲ್ಲ; ನಿವಾಳಿಸಿದಾಗ ಸಿಡಿಯುವುದನ್ನು ತಮ್ಮ ನಂಬಿಕೆಗೆ ಅರ್ಥಬರುವಂತೆ ಮಾಡಿಕೊಂಡಿರುವುದು ಜನಪದರ ಮನೋಪ್ರವೃತ್ತಿ; 'ಸಮೂಹ ಮನಶ್ಶಾಸ್ತ್ರ'ದ ರೀತ್ಯಾ, ಇದನ್ನು ವಿಶ್ಲೇಷಿಸಬೇಕು, ಆಗ ಅದರ ನಿಜವಾದ ನಿಲುವು ಸಿಗುತ್ತದೆ.

ಕುಲ್ವು ಮುಲ್ವು kulvu mulvu :

- ಮರವನ್ನು ಕಡಿದ ನಂತರ ಬೇರಿನೊಂದಿಗೆ ನೆಲದ ಮೇಲೆ ಕಾಣುವ ಮೋಟು; ಗೆಡ್ಡೆ(ತು.ಜಿ). A remaining small stump appeared after cutting a tree;
- 'ಕುಲ್ವುಮುಲ್ವು' ಪದ ಸಂಯುಕ್ತವನ್ನು ಗಮನಿಸಿದರೆ, ಇದು ಪದ ಪುನರಾವರ್ತನೆ, ಪದದ್ವಂದ್ವ ಆಗಿರುವಂತೆ ಕಾಣುತ್ತದೆ; ಅದರ ಪುನರಾವರ್ತಿತ ಲಯ ಕೂಡ ಇದಕ್ಕೆ ಬೆಂಬಲ ಸೂಚಿಸುತ್ತದೆ, ಆದರೆ ಅರ್ಥದಲ್ಲಿ ಆ ಬಗೆಯ 'ನಿಲುವು' ಕಾಣುವುದಿಲ್ಲ.

ಕುವತ್ತು kuvattu :

ತಾಕತ್ತು; ಸಾಮರ್ಥ್ಯ; ಪ್ರ: 'ನಮ್ಮ ಹತ್ತಿರ ಕುವ್ವತ್ತಿಲ್ಲ, ಊರು ಉದ್ಧಾರ ಮಾಡಲಿಕ್ಕೆ ಹೊಂಟೀವಿ'. Ability; capacity;

ಕುವಲೆ ಪುಟ್/ಕುವಲೆ ಹಿಟ್ಟು kuvale puṭ/ kuvale hiṭṭu :

- ಕೆಂಬಟ್ಟೆ ಹೊಲೆಯರು ಮಳೆಗಾಲದಲ್ಲಿ ವಿಶೇಷವಾಗಿ ತಯಾರಿಸುವ ಒಂದು ಬಗೆ ತಿನಿಸು; A special snacks; prepred by Kembatte Untouchables during winter season;

- ಬೆಲ್ಲ, ಅಕ್ಕಿಪುಡಿ, ಬಾಳೆಹಣ್ಣು, ಹಲಸಿನಹಣ್ಣು ಮಿಶ್ರಣ ಮಾಡಿ ಕುವಲೆ ಎಲೆಯಲ್ಲಿ ಹಾಕಿ ಮಡಿಕೆಯ ಹಬೆಯಲ್ಲಿ ಬೇಯಿಸಿ ತಯಾರಿಸಿದ ತಿಂಡಿ;
- ಕುವಲೆ; ಎಂಬುದು ಒಂದು ಬಗೆಯ ಮರ ಮತ್ತು ಅದರ ಎಲೆ.

ಕುವಲ್ಲೆ kuvalle :

ಗದ್ದೆಯಲ್ಲಿ ಬೆಳೆಯುವ ಒಂದು ಕಳೆಗಿಡ; ಸಸ್ಯ; ದನಕರುಗಳಿಗೆ ಮೇವಾಗಿ ಬಳಕೆ; A kind of weed

ಕುವಾಡ kuvāḍa :

ಕುಹಕವಾಡು; ಕುಚೇಷ್ಟೆಮಾಡು; ತಮಾಷೆಮಾಡು; ಹಾಸ್ಯ; ಅಣಕಿಸುವಿಕೆ; *ಪ್ರ:* 'ಕೂಳು ಹೆಚ್ಚಾದರೆ ಕುವಾಡ ಹೆಚ್ಚು; ನೀರು ಹೆಚ್ಚಾದರೆ ನೇಮನಿಷ್ಠೆ ಹೆಚ್ಚು'*(ಗಾ).* Joking; funning.

ಕುವ್ವೆ kuvve :

ಮೇಕೆ, ಕುರಿ ಮೊದಲಾದ ಪ್ರಾಣಿಗಳನ್ನು ಕರೆಯಲು ಬಳಸುವ ಪದ. A call to get near the cattles/ goats/sheep;

ಕುಶಲದೇವರು kuśaladēvaru :

ಕುಶಲದೇವರು; 'ಖುಷೆ' ಎಂಬ ಹಿಂದಿ ಪದವು ಅಪಭ್ರಂಶಗೊಂಡು 'ಕುಶಾಲು' ಎಂದಾಗಿರಬೇಕು; ಹೊಳೆ ದಂಡೆಯ ಅಂಚಿನಲ್ಲಿರುವ ಕುಶಲ ದೇವರ ಗುಡಿಯಲ್ಲಿ ಕಲ(ಳ)ಸಕ್ಕೆ ಪೂಜೆ ಸಲ್ಲುತ್ತಿರಬಹುದು?. The god of particular clan or caste.

ಕುಶಾಲು ತೋಪು kuśālu tōpu :

- ಮರಾಟಿ ಮತ್ತು ಹಿಂದೂಸ್ಥಾನಿಯಲ್ಲಿ 'ಖುಶಾಲ' ಪದವಿದೆ; ಅದರಿಂದ 'ಕುಶಾಲು' ರೂಪ ನಿಷ್ಪನ್ನಗೊಂಡಿರಬಹುದು;
- 'ಕುಶಾಲು ತೋಪು' ಪದವನ್ನು ಬಿಡಿಸಿದರೆ ಖುಷ್+ಹಾಲ್+ತೋಪು ಎಂದಾಗುತ್ತದೆ; ಖುಷ್=ಸಂತಸದ, ಹಾಲ್=ಸ್ಥಿತಿ, ತೋಪು=ಪಿರಂಗಿ;
- ಮದುವೆ, ಹುಟ್ಟುಹಬ್ಬ ಮತ್ತು ಶುಭ ಕಾರ್ಯಗಳಲ್ಲಿ ಸಿಡಿಸುವ ಪಿರಂಗಿ; ಸರಣಿ ಸಿಡಿತವೂ ಆಗಿರುತ್ತದೆ;
- 'ಕುಶಾಲು' 'ಸಂತೋಷ'ದ ಅರ್ಥದ ಜೊತೆಗೆ ನಗೆ/ವ್ಯಂಗ್ಯ, 'fun' , ಆರೋಗ್ಯಕರ ಸ್ಥಿತಿ, ಕುಶಲದ ಮಾತು ಎಂಬ ಅರ್ಥಗಳೂ ಇವೆ.

ಕುಸ್‌ಕುಸ್ kuskus :

- ಕರಗುವ ತಿಂಡಿ; ಬಾಯಿಯಲ್ಲಿ ಇಟ್ಟ ತಕ್ಷಣ ಕರಗುವ ಗುಣ ಹೊಂದಿರುವ ತಿಂಡಿ(ಬೀ.ಜಿ); A kind of melting snack;
- 'ಕುಸ್‌ಕುಸ್' ಉಚ್ಚಾರಣೆಯನ್ನು ನೋಡಿದರೆ, 'ಲಯಸಮನ್ವಿಕ' ಎನಿಸುತ್ತದೆ; ಜೊತೆಗೆ ಪದ ಪುನರಾವರ್ತನೆ ಕೂಡ, 'ಕುಸ್' ಎನ್ನುವುದೇ 'ಕರಗುವ ಗುಣ'ವನ್ನು ತೀವ್ರಗೊಳಿಸುವ ಸಲುವಾಗಿ ಜನಪದರು ಆ ಪದವನ್ನು ಪುನರಾವರ್ತಿತ ಪ್ರಕ್ರಿಯೆಯಲ್ಲಿ ಹರಿಯಬಿಟ್ಟಿರಬಹುದು.

ಕುಸಬ kusaba :

ಒಣಗಿದ ಅಥವಾ ಹಸಿ ಗೋಧಿ ಕಾಳಿನ ಹೊದಿಕೆ; ತೆನೆಯಿಂದ ಕಾಳನ್ನು ಬೇರ್ಪಡಿಸಿದಾಗ ಕೆಲವು ಕಾಳಿನ ಕವಚ ಹಾಗೇ ಉಳಿದಿರುವುದುಂಟು; ಅದನ್ನು 'ಕುಸಬ' ಎನ್ನುವರು. Dry hull/husk of wheat.

ಕುಸಿ kusi :

- ಕುಗ್ಗು; ಕ್ಷೀಣಿಸು; ಕೆಳಗೆ ಜಗ್ಗು; ಬಾಗು; To sink; to bend;
- ಖುಷಿ; ಸಂತೋಷ; happy;
- ಅಗುಳಿ; ಬಾಗಿಲಿಗೆ ಹಾಕುವ ಚಿಲಕ; *ಪ್ರ:* 'ಬಸಿಯ ಬಾವುಗನುಂಗಿ ಕುಸಿಯ ಹೆಗ್ಗಣ ನುಂಗಿ'(ವಿ.ಜಿ);
- ಕುಗ್ಗಿಬೀಳು; ಕೆಳಗೆ ಬೀಳು; *ಪ್ರ:* 'ಅವನು ನಡೆಯುತ್ತಲೇ ಕುಸಿದು ಬಿದ್ದ' ತೆಲು. ಕುದಿ, ತುಳು. ಕುಸಿ; ತೆಲುಗಿನಲ್ಲಿ 'ಸ' ಕಾರಕ್ಕೆ ಬದಲಾಗಿ 'ದ' ಕಾರ ಬಂದಿರುವುದು ಗಮನಾರ್ಹ;
- —***ಕುಸಿಹೊಡೆ*** : ಲೋಹದ ಪಾತ್ರೆ ಮೊದಲಾದವುಗಳನ್ನು ಕೊಡತಿಯಿಂದ ಕುಟ್ಟಿ ಸರಿಯಾದ ಆಕಾರಕ್ಕೆ ತರುವುದು. To shape metal vessels by hammering.

ಕುಸಿಗೂಟ kusigūṭa :

ಎತ್ತುಗಳ ಹೆಗಲಿಗೆ ನೊಗವನ್ನು ಜೋಡಿಸಲು ಬಳಸುವ ಚಿಕ್ಕಗೂಟ; ಇದಕ್ಕೆ 'ಕೊಳ್ಳಕೀಲ' ಎಂದೂ ಹೆಸರಿದೆ(ಚಿ.ಪ.ಕೋ). A small wedge or peg that joins yoke on the oxen.

ಕುಸಿಬಿ/ಕುಸುಬೆ kusibi/kusube :

- Carthamus tinctorius(Asteraceae) safflower; ಕುಸುಮೆ ಕಾಳು, ಕುಸುಂಭಿ, ಕುಸುಬೀ ಗಿಡ(Bastard saffron) ಪ್ರಮುಖ ಎಣ್ಣೆಕಾಳು ಬೆಳೆಗಳಲ್ಲಿ ಒಂದು; ಕಪ್ಪುಭೂಮಿಯಲ್ಲಿ ಮಿಶ್ರ ಮತ್ತು ಹಿಂಗಾರಿನ ಬೆಳೆಯಾಗಿ ಬೆಳೆಯುವರು; Safflower that grows in black fertile land;
- ಬೀಜದಿಂದ ಖಾದ್ಯ, ತೈಲ ತಯಾರಿಸುವರು; ಎಣ್ಣೆ, ಸಾಬೂನು, ಬಣ್ಣ ತಯಾರಿಕೆ, ಚರ್ಮ ಹದಗಾರಿಕೆಯಲ್ಲಿ ಬಳಕೆ; ಇದರ ಹಿಂಡಿ ದನಕರುವಿಗೆ ಒಳ್ಳೆಯ ಆಹಾರ; ಎಲೆಯಲ್ಲಿ 'ಎ' ಅನ್ನಾಂಗ, ಕಬ್ಬಿಣ, ರಂಜಕ, ಕ್ಯಾಲ್ಸಿಯಂ ಅಂಶವಿದ್ದು ಔಷಧಿಯಾಗಿ ಬಳಕೆ;
- ***—ಕುಸಿಬಿ ಎಣ್ಣೆ/ಕುಸುಬೆಯೆಣ್ಣೆ*** : ಕುಸುಬಿ ಗಿಡದ ಬೀಜವನ್ನು ಹಿಂಡಿ ತೆಗೆದ ಎಣ್ಣೆ; ಅಡುಗೆಯಲ್ಲಿ ಹೆಚ್ಚು ಬಳಕೆ; ಕುಸುಬೆಯೆಣ್ಣೆ > ಕುಸುಬಿನೆಣ್ಣೆ ಆಗಿರಬಹುದು; ಕುಸುಂಬಿ ಎಂಬ ರೂಪವೂ ಸಹ ಇದ್ದು ಕುಸುಂಬಿನ ಎಣ್ಣೆ > ಕುಸುಬಿನೆಣ್ಣೆ ಆಗಿರುವ ಸಾಧ್ಯತೆ ಇದೆ; Safflower oil; By twisting grain one's can get its oil;
- ಸಾಂಪ್ರದಾಯಿಕವಾಗಿ ಗೊಂದಲಿಗರು ಗೊಂದಲ ಹಾಕುವಾಗ ಅಂಬಾಭವಾನಿಯ ಪ್ರತೀಕವಾಗಿ ಸ್ಥಾಪನೆ ಮಾಡುವ ಕಳಸದ ಚೌಕಿಯ ಮೇಲೆ ಇಡುವ ಕಣಕದಿಂದ ತಯಾರಿಸಿದ ದೀಪಗಳಿಗೆ ಕುಸುಬಿನೆಣ್ಣೆ ಬಿಟ್ಟು ಉರಿಸುವ ರೂಢಿ ಇದೆ;
- ***—ಕುಸಿಬಿ ಕೊಯ್ಯುವುದು*** : ಕುಸುಬೆಯ ಗಿಡ ಮುಳ್ಳುಗಳಿಂದ ಕೂಡಿದ್ದು ಅದನ್ನು ಕೊಯ್ಯಲು ಕುಸುಬೆ ಗಿಡ ಮೆತ್ತಗೆ ಇರಬೇಕು; ಬೆಳಿಗ್ಗೆ ಮಂಜು ಬಿದ್ದಾಗ ಕುಸುಬೆ ಗಿಡದ ಮುಳ್ಳುಗಳು ಮೆತ್ತಗಾಗುವುದರಿಂದ ಕೈಗೆ ನಾಟುವುದಿಲ್ಲ; ಹಾಗಾಗಿ ಬೆಳಗಿನ ಸಮಯ ಮಾತ್ರ ಕುಸುಬೆ ಕೊಯ್ಯುವರು; Harvesting safflower crops;
- ***—ಕುಸಿಬಿ ತೊಂಡಲ*** : ಕುಸುಬೆಯ ಕಾಳುಗಳುಳ್ಳ ಕಾಯಿ; ಮುಳ್ಳುಗಳ ನಡುವೆ ಹೂವು ಬಿಟ್ಟಿರುತ್ತವೆ; ತುದಿಯಲ್ಲಿ ಹೂ ಒಳಗೆ ಕಾಳು ಆಗುತ್ತವೆ; ತೆನೆ; ಗೊಂಚಲು 'ತೊಂಡಲ್' ರೂಪ 'ತೊಂಗಿಲ್' ರೂಪವನ್ನು ಹೊಂದಿದೆ; Safflower tassel;
- ***—ಕುಸಿಬಿ ಬಡಿಯೂದು*** : ಕುಸುಬೆಯನ್ನು ಬಿಸಿಲಿನಲ್ಲಿ ಮಾತ್ರ ಬಡಿಯುವರು; ಕಣದಲ್ಲಿ ಅಥವಾ ತಾಡಪತ್ರಿಗಳ ಮೇಲೆ ಕುಸುಬೆ ಹಾಕಿ ಸುಡುವ ಬಿಸಿಲಿನಲ್ಲಿ ದೊಡ್ಡ ಕೋಲುಗಳಿಂದ ಬಡಿಯುವರು; ಯಾರಿಗಾದರೂ ಜೋರಾಗಿ ಹೊಡೆದಾಗ 'ಕುಸುಬಿ ಬಡದಂಗ ಬಡದರು' ಎಂದು ಹೇಳುವರು; Safflower tassel thrashing;
- ***—ಕುಸಿಬಿ ಹೂವು*** : ಕೆಂಪು ಮತ್ತು ಅರಿಶಿನ ಬಣ್ಣದಿಂದ ಕಂಗೊಳಿಸುವ ಹೂ; ಬಣ್ಣ ತಯಾರಿಕೆಯಲ್ಲಿ ಬಳಕೆ; Safflower;
- ***—ಕುಸುಬೆ ಚಟ್ಟು*** : ಕುಸುಬೆ ಕಾಳಿನ ಮೇಲಿನ ಸಿಪ್ಪೆ(ಕಲ.ಜಿ); ಚಟ್ಟು – ಸಿಪ್ಪೆ. The hull/husk of safflower corn;
- ***—ಕುಸುಬೆ ಹಿಂಡಿ*** : ಎಣ್ಣೆ ತೆಗೆದು ಉಳಿದ ಕುಸುಬೆಯ ಹಿಂಡಿ; ದನಕರುಗಳಿಗೆ ಉತ್ತಮ ಆಹಾರ; Oil cake of safflower;
- ***—ಕುಸುಬಿ ಪುಡಿ*** : ಕುಸುಬಿಯೊಂದಿಗೆ ಕೆಲವು ಮಸಾಲೆ ಪದಾರ್ಥಗಳನ್ನು ಸೇರಿಸಿ ಕುಟ್ಟಿ ತಯಾರಿಸಿದ ಚಟ್ನಿಯ ಪುಡಿ(ಬ.ಜಿ); The powder prepared in safflower;
- ***—ಕುಸುಬಿ ಹಾಲು*** : ಕುಸುಬಿ ಕಾಳುಗಳನ್ನು ನೀರಿನಲ್ಲಿ ನೆನೆಸಿ ರುಬ್ಬಿ ಹಿಂಡಿ ತೆಗೆದ ಹಾಲು; ಗೋಧಿ ಹುಗ್ಗಿ ತಯಾರಿಸಲು ಬಳಕೆ. Safflower milk;

ಕುಸುಕು kusuku :

- ಬಾಯೊಳಗಿನ ಕಡಿತ(ಮಂ.ಜಿ); A hitching in mouth;
- ಹೊಡಿ; ಬಡಿ; ಕೊಳೆ ಬಟ್ಟೆಯನ್ನು ಕೈಯಲ್ಲಿ ಇಡಿಯಾಗಿ ಹಿಡಿದು 'ಉಜ್ಜಿಉಜ್ಜಿ' ಕೊಳೆಯನ್ನು ತೆಗೆಯುವ ಪ್ರಕ್ರಿಯೆ; *ಪ್ರ:* 'ಕೆರೆಯಲ್ಲಿ ಬಟ್ಟೆ ಕುಸುಕೊಂಡು ಬಾ'. ಬಿಟ್ಟು ಬಿಟ್ಟು ಅಳು; ಸಣ್ಣದಾಗಿ ಅಳು; *ಪ್ರ:* 'ಬೆಳಿಗ್ಗೆಯಿಂದ ಯಾಕ್ ಕುಸುಕುತ್ತಾ ಇದ್ದೀಯಾ'; To wash by beating clothes;
- ***—ಕುಸುಕೂಡುದು*** : ಸಣ್ಣ ದನಿಯಲ್ಲಿ ಅಳುವುದು; *ಪ್ರ:* 'ಯಾಕೆನೇ ಹಂಗೆ ಕುಸುಕೊಡುದು'(ಕೊಡ.ಜಿ); ತ: ಕಚಕ್ಕು, ತೆ: ಗುಂಜು. Weep in low voice.

ಕುಸುಗ kusuga :

ಬಾಗಿದ ಬೆನ್ನಿನವನು; ಕೆಮ್ಮಳ್ಳವನು; ಪದೇಪದೇ ಕೆಮ್ಮುತ್ತಿರುವವನು(ಚೌಡಿಕೆ ಕಾವ್ಯ); *ಪ್ರ:* 'ಅವನು ಬಿಡದೆ ಕುಸುಕ್ತಾ ಇದಾನಲ್ಲ, ತೊಂದರೆಯಾಗೋದಿಲ್ವೆ'. A man whose back is bent.

ಕುಸುಗ್ಲು kusuglu :

ರೇಷ್ಮೆ ಹುಳುಗಳನ್ನು ಒಂದು ತಟ್ಟೆಯಿಂದ ಇನ್ನೊಂದು ತಟ್ಟೆಗೆ ಬದಲಾಯಿಸಿದಾಗ ಅದರಲ್ಲಿ ಉಳಿದ ಹಿಪ್ಪುನೇರಳೆ ಸೊಪ್ಪಿನ ಕಸ; ಇದು ಕುರಿ, ಮೇಕೆಗಳಿಗೆ ಆಹಾರವಾಗಿ ಬಳಕೆ. The eaten silk plant's leaves of goats food.

ಕುಸುಮಾಲೆ kusumāle :

- ಕೇಪುಳ, ಹೊಳೆ ದಾಸವಾಳ, ಕಿಸ್ಲಾರ ಇತ್ಯಾದಿ ಹೆಸರು ಇದೆ; ಕೆಂಪನೆಯ ಹೂವು, ಹಣ್ಣು, ಚಿಗುರು ತಿನ್ನಲು ಬಳಕೆ; ಚಟ್ನಿ, ತಂಬುಳಿಗಳಿಗೆ ಬಳಸುವರು; A flower;
- ಜನಪದ ಧಾರ್ಮಿಕ ಆಚರಣೆಯಲ್ಲಿಯೂ ಇದರ ಹೂ ಬಳಕೆ; this flower is used in Kannada folk celebration;
- ಉತ್ತರ ಕನ್ನಡ ಜಿಲ್ಲೆಯ ಅಮ್ಮನವರ ಬಂಡಿ ಹಬ್ಬದ ದಿನ ಅಮ್ಮನವರ ಕಳಸ ಹೊರಡುವಾಗ ಅಮ್ಮನವರಿಗೆ ಬಲಿ ಸೇವೆ ಸಲ್ಲಿಸುವ ಹರಕೆ ಇದೆ; ಬಲಿ ಸೇವೆಯೆಂದರೆ ಅಮ್ಮನವರು ಹೊರಡುವ ದಾರಿಯಲ್ಲಿ ಕೂಗುತ್ತ ಓಡುವುದು;
- ಈ ಬಲಿಸೇವೆ ಸಲ್ಲಿಸುವವರನ್ನು ಬಲಿಮಕ್ಕಳು ಎನ್ನುವರು; ಬಲಿ ಮಕ್ಕಳಿಗೆ ಕುಸುಮಾಲೆ ಹೂವಿನ ಮಾಲೆ ಹಾಕುವರು(ಉಕ.ಜಿ);
- ವಯ್ಯಾರಿ(ಚಿ.ಪ.ಕೋ).

ಕುಸುರಿ kusuri :

- ಕಸರು; ಎಳೆಕಾಯಿ; ಹೀಚು; Nascent nut ;
- ಹಣ್ಣು, ಕಾಯಿಯ ತಿರುಳು; the core of ripe shell
- ಹೂವಿನ ಮಧ್ಯದಲ್ಲಿರುವ ನವಿರಾದ ದಾರದ ತಂತು; ಪುಷ್ಪ ಕೇಸರಿ;
- ಕೆತ್ತನೆ; ಶಿಲ್ಪ; ಕಸೂತಿ ಮೊದಲಾದ ಕುಶಲ ಕಲೆಯಲ್ಲಿರುವ ಸೂಕ್ಷ್ಮವಾದ ಕೆಲಸ; ನಾಜೂಕಿನ ಚಿತ್ತಾರ; Embroidery chiseling drawing crafting art;
- ಎಂಜಲು; ತಿಂದು ಉಳಿದಿರುವುದು;
- ರೇಷ್ಮೆ ಬಟ್ಟೆಯಲ್ಲಿ ಜರಿ, ಹರಳುಗಳನ್ನು ಬಳಸಿ ಮಾಡಿದ ಕಸೂತಿಯ ಕಲೆ;
- ತಮಿ. ಕೊಚ್ಚಿ, ತೆಲು. ಗುಜುರು; ಈ ಎರಡೂ ಪದ ರೂಪಗಳನ್ನು ಕನ್ನಡದೊಡನೆ ಹೋಲಿಸಿದರೆ, ಕನ್ನಡದ 'ಕು' ತಮಿಳಿನಲ್ಲಿ 'ಕೊ' ಆಗಿರುವುದು ಸ್ವರ ವ್ಯತ್ಯಯದ ಪರಿಣಾಮ(ಉ>ಒ); ಸ>ಚ ಸಾಮಾನ್ಯ; ಕನ್ನಡದ ಕ>ಗ (ತೆಲುಗಿನಲ್ಲಿ) ಆಗಿರುವುದು ಸಾಮಾನ್ಯ; ಆದರೆ 'ಸ' ಮತ್ತು 'ಜ' ಸಂಬಂಧ ಸ್ಪಷ್ಟಪಡಿಸುವುದು ಕಷ್ಟ;
- *—ಕುಸುರಿಕಾಳು* : ಎಳ್ಳು, ಜೀರಿಗೆ ಮೊದಲಾದ ಸಣ್ಣ ಗಾತ್ರದ ಕಾಳುಗಳನ್ನು ಸಕ್ಕರೆ ಪಾಕದಲ್ಲಿ ಅದ್ದಿ ತಯಾರಿಸಿದ ಒಂದು ಬಗೆಯ ತಿನಿಸು; ಉತ್ತರ ಕರ್ನಾಟಕ ಭಾಗದಲ್ಲಿ ಹೆಚ್ಚು ಬಳಕೆ; *ವ್ಯರೂ:* ಕುಸುರೆಳ್ಳು. A snacks for eating.

ಕುಸುರು ಕಟ್ಟು kusuru kaṭṭu :

- ಅಡಕೆ, ತೆಂಗು, ಮೊದಲಾದವುಗಳಲ್ಲಿ ಹೊಂಬಾಳೆ ಬಿರಿದು ಕಾಯಾಗುವ ಹಂತಕ್ಕೆ ಬರುವುದು; The stage of becoming nut from flowers of coconut and areca;
- ಈ ಪದ 'ಕುಸುರು' ಮತ್ತು 'ಕಟ್ಟು' ಪದಗಳಿಂದ ಆಗಿದೆ; 'ಕುಸುರು' ಕಾಯಾಗುವ ಪೂರ್ವ ಸ್ಥಿತಿ, ಮೃದುರೂಪ; 'ಕಟ್ಟು' ಎಂದರೆ ಒಂದು ಸಸ್ಯ, 'ಹೂಬಿಟ್ಟು ಕಾಯಾಗುವ' ಹಂತದವರೆಗೆ ಬೇರೆ ಬೇರೆ ಹಂತಗಳನ್ನು ರೂಪಿಸುವಂಥದು, ಕೊಡುವಂಥದು, ಧರಿಸುವಂಥದು.

ಕುಸ್ಗಿ kusgi :

- ಒಬ್ಬನು ಒಂದು ಕಲ್ಲನ್ನು ಎಸೆಯಬಹುದಾದಷ್ಟು ದೂರದ ಭೂ ಪ್ರಮಾಣ(ಕೃ.ಪ.ಕೋ);
- ಒಣ ಬೇಸಾಯದ ಭೂಮಿ(ಬ.ಜಿ). Dry land farming.

ಕುಸ್ಗು kusgu :

ಕುಸುಬು; ಬೇಯಿಸು; ಅವರೆಕಾಯಿ, ಕಡಲೆಕಾಯಿಯನ್ನು ಸಿಪ್ಪೆಸಹಿತವಾಗಿ ಉಪ್ಪಿನೊಂದಿಗೆ ನೀರಿನಲ್ಲಿ ಬೇಯಿಸಿ ತಿನ್ನುವುದು(ತು.ಜಿ)(ಹಾ.ಜಿ). To boil; To eat pea; ground nuts by boiling in water.

ಕುಸ್ತಿ kusti :

- ಮಲ್ಲಯುದ್ಧ, ಜಟ್ಟಿಕಾಳಗ; ಲಡತ್ತು; A wrestling;
- ಅಖಾಡ ಇಲ್ಲವೇ ಗರಡಿಯ ಮಣ್ಣಿನ ಮಟ್ಟಿಯ ಮೇಲೆ ನಿಯಮಬದ್ಧವಾಗಿ ಪೈಲ್ವಾನರ ನಡುವೆ ನಡೆಯುವ ಶಾರೀರಿಕ ಬಾಹುಬಲ ಪ್ರದರ್ಶನ;
- ಇದರಲ್ಲಿ ಶಕ್ತಿಯೊಂದಿಗೆ ಯುಕ್ತಿ ಪ್ರದರ್ಶನ ಸಹ ಮುಖ್ಯ; ಒಬ್ಬ ವ್ಯಕ್ತಿ ಇನ್ನೊಬ್ಬನೊಡನೆ ಸೆಣಸಾಡಿ ತನ್ನ ಶಕ್ತಿ ಪ್ರದರ್ಶನ ಮಾಡುವ ಕಲೆ;
- ಸಾಮಾನ್ಯವಾಗಿ ದಸರಾ, ಜಾತ್ರೆ, ಕಾಮನಹಬ್ಬದಲ್ಲಿ ಕುಸ್ತಿ ಪ್ರದರ್ಶನ ಏರ್ಪಡುತ್ತದೆ; ಸೆಡ್ಡು ಹೊಡೆದು ಕುಸ್ತಿಗೆ ಆಹ್ವಾನಿಸಿ ಮಣ್ಣನ್ನು ಪರಸ್ಪರರು ಮೈಕೈಗೆ ಹಚ್ಚಿಕೊಂಡು ಕುಸ್ತಿ ಆಡಲು ಆರಂಭಿಸುವರು; ಒಬ್ಬ ಇನ್ನೊಬ್ಬನನ್ನು ಟಾಂಗ ಕಟ್ಟಿ ಅಂಗಾತ ಕೆಡವಿದರೆ ಬೆನ್ನನ್ನು ನೆಲಕ್ಕೆ ಒತ್ತಿ ಹಿಡಿಯುವ ಮಲ್ಲ ಜಯಗಳಿಸಿದಂತೆ;
- ಗೆದ್ದವರಿಗೆ ಬಾಳೆಹಣ್ಣಿನ ಗೊನೆ, ತೆಂಗಿನಕಾಯಿ ಗೊನೆ, ಕೆಂಪುವಸ್ತ್ರ, ಬೆಳ್ಳಿಗದೆ, ಹಣವನ್ನು ಬಹುಮಾನವಾಗಿ ಕೊಡುವರು;
- ಗರಡಿ ಮನೆ ಪೈಲ್ವಾನರ ಕಸರತ್ತಿಗಾಗಿ ನಿರ್ಮಿತವಾದ ಸ್ಥಳ;
- ***—ಕುಸ್ತಿ ಒಗೆ*** : ಕುಸ್ತಿಯಲ್ಲಿ ಗೆಲ್ಲುವುದು; ಎದುರಾಳಿಯನ್ನು ಅಂಗಾತ ನೆಲಕ್ಕೆ ಬೀಳಿಸುವುದು; ಗಂಡು ಮಗನಿಗೆ ಜನ್ಮಕೊಟ್ಟವನಿಗೂ ಕುಸ್ತಿ ಒಗದಿ ಎನ್ನುವರು; A winning in wrestling;
- ***—ಕುಸ್ತಿಕಮಾಲು*** : ಕುಸ್ತಿಯಲ್ಲಿನ ವಿವಿಧ ಬಗೆಯ ಪಟ್ಟುಗಳು; Tricks of locking one's in wresting
- ***—ಕುಸ್ತಿ ಬಿಟ್ಟುಕೊಡು*** : ಕುಸ್ತಿಯಲ್ಲಿ ಸೋಲುವುದು; ಕುಸ್ತಿ ಮುಂದುವರೆಸಲು ಶಕ್ತಿಯಿಲ್ಲದಿರುವುದು; A defeat in wresting;
- ***—ಕುಸ್ತಿ ಸಳಿ*** : ಕುಸ್ತಿ ಕಣ; ಇಬ್ಬರು ಮಲ್ಲರು ಕುಸ್ತಿಯಾಡಲು ನಿರ್ಮಿತವಾಗಿರುವ ಮಣ್ಣಿನ ಕಣ; The court of wrestling.

ಕುಹಲುದೊರೆ kuhalu dore :

ಶ್ರೀಮಂತರು ತಮ್ಮ ಮನೆಯ ಜೀತದಾಳುಗಳಿಗೆ ಮದುವೆ ಮಾಡಿ ಅವರಿಗೆ ಹುಟ್ಟುವ ಮಕ್ಕಳನ್ನು ಸಹ ಜೀತದಾಳಿನಂತೆ ದುಡಿಸಿಕೊಳ್ಳುವ ವ್ಯವಸ್ಥೆ. A system of slavery; the rich did marriage to their slaves and slave's children then their new slaves.

ಕುಳ kuḷa :

- ಕುಟುಂಬ; ಮನೆ; ಸಂಸಾರ; ಶ್ರೀಮಂತ; ಒಕ್ಕಲು; ವ್ಯಕ್ತಿ; ವಂಶ; ದೊಡ್ಡಗೇಣಿದಾರ; A rich family;
- ದನಗಳನ್ನು ಕಟ್ಟಿಹಾಕಲು ಬಳಸುವ ಹಗ್ಗ(ಚಿಕ್ಕ.ಜಿ);
- ಉಳುಮೆಯಲ್ಲಿ ಮರದ ನೇಗಿಲಿನ ಮೊನೆ ಸವಕಳಿಯಾಗದಂತೆ ಮತ್ತು ಆಳವಾಗಿ ಉಳಲು ನೇಗಿಲಿಗೆ ಜೋಡಿಸಲಾಗಿರುವ ಮೊನಚಾದ ಕಬ್ಬಿಣದ ಪಟ್ಟಿ; To avoid depreciation of the point of plough, thin small iron blade is connected/ fitted;
- ಹಣ್ಣು, ಹಂಪಲು, ಬೆಲ್ಲ ಇತ್ಯಾದಿ ರಸವನ್ನು ಚೆನ್ನಾಗಿ ಕುದಿಸಿ ಪಾಕಕ್ಕೆ ಬರಿಸುವಿಕೆ;
- ಗಾಯಕ್ಕೆ ಔಷಧಿಯಂತೆ ಲೇಪಿಸುವುದಕ್ಕಾಗಿ ಶೇಖರಿಸಿಟ್ಟಿರುವ ಮಾವಿನ ಸೊನೆ;
- ಕೇಪಳದ ಹೂವನ್ನು ನೀರಿನಲ್ಲಿ ಕುದಿಸಿ ಬೆಲ್ಲ ಸೇರಿಸಿ ಘನೀಕರಿಸಿ ಮಾಡಿದ ತಿಲಕದ್ರವ್ಯ;
- ***—ಕುಳವಾಡಿ*** : ಗ್ರಾಮ ಸೇವಕ; ಮುಖ್ಯವಾದ ಸುದ್ದಿಗಳನ್ನು ಗ್ರಾಮದವರಿಗೆ ಮುಟ್ಟಿಸುವ ಕಾಯಕ; ಪ್ರ: 'ಕುಳವಾರು ಇಲ್ಲದ ಊರಿಗೆ ತಳವಾರ ಏನು ಮಾಡ್ಯಾನು'(ಗಾ); A village assistant;
- ***—ಕುಳವಾರ*** : ಊರಿನ ಗಣ್ಯ ವ್ಯಕ್ತಿ; ಊರಿನ ಪ್ರಮುಖ ಮನೆತನಕ್ಕೆ ಸೇರಿದವರು(ಬೆ.ಜಿ); ಪ್ರತಿ ರೈತನಿಗೂ ಸಂಬಂಧಪಟ್ಟ ವೈಯಕ್ತಿಕ ಲೆಕ್ಕಪತ್ರ; A dignitaries of a village;
- ***—ಕುಳವಾರು ಪಟ್ಟಿ*** : ಸಾಗುವಳಿ ಮಾಡಿದ ಒಕ್ಕಲುಗಳಿಂದ ಬರಬೇಕಾದ ಲೆಕ್ಕಚಾರದ ಪಟ್ಟಿ;

ಗಿರಾಕಿಗಳ ಸಾಲದ ಅಂಕಿ ಅಂಶ; Statistics of farming farmers;

- **—ಕುಳಮುರಿ** : ಏಕಮಾತ್ರ ವಂಶೋದ್ಧಾರಕ ಸಾಯುವುದು; ವಂಶನಾಶವಾಗುವಿಕೆ(ಚಿ.ಪ.ಕೋ). The death of sole/only one son of the family.

ಕುಳಲೂರು kuḷalūru :

- ಯಳಂದೂರು ತಾಲ್ಲೋಕಿನ ಕ್ರಿ.ಶ.೧೯ನೇ ಶ.ದ ೧೩೭ನೇ ಶಾಸನದಲ್ಲಿ ಇದರ ಉಲ್ಲೇಖವಿದೆ; A village that mentioned in 137th inscription of Yalanduru taluk;
- 'ಕುಳ' ಎಂದರೆ ತೆರಿಗೆ, ಸುಂಕ ಎಂಬ ಅರ್ಥವಿದೆ; ತೆರಿಗೆಯನ್ನು ಸಂಗ್ರಹಿಸುವ ಹಿನ್ನೆಲೆಯಲ್ಲಿ ಈ ಊರಿಗೆ ಈ ಹೆಸರು ಬಂದಿರಬಹುದು;
- ದೇಶಿಕೊಣ್ಡ ಶೋಟಿಪಟ್ಟಣದ ವ್ಯಾಪಾರಿಯಾದ 'ಕುಳಲೂರಿ'ನ ದೇವನಾರುಜ್ಞಾಣನಡ ಚೆಟ್ಟಿಯಾರ್ ಎಂಬುವನು ದಾನಕೊಟ್ಟ ಉಲ್ಲೇಖವಿದೆ.

(E.C- ೪, ಮೈ.ಜಿ.)

ಕುಳವಿನ ಬಳ್ಳಿ kuḷavina baḷḷi :

- ಒಂದು ಸಸ್ಯ ವಿಶೇಷ; A special plant;
- ಉರಿಮೂತ್ರ; ದೇಹದ ಉಷ್ಣ ನಿವಾರಣೆಗೆ, ನಿದ್ರೆ ಬರಲು, ಬಿಳಿಸೆರಗು ನಿಯಂತ್ರಣಕ್ಕೆ ಇದರ ಎಲೆ ಔಷಧಿಯಾಗಿ ಬಳಕೆ; ಹಸುವಿನಲ್ಲಿ ಹಾಲಿನ ಪ್ರಮಾಣ ಹೆಚ್ಚಿಸಲು ಬಳಸುವ ಬಳ್ಳಿ.

ಕುಳಾಪೈಂಚಿ kuḷāpaiñci :

ಎರವರ ಮುಖಂಡ ಶ್ರಾದ್ಧಕ್ರಿಯೆಗೆ ತಮ್ಮ ವಂಶಕ್ಕೆ ಒಳಪಡುವ ಕುಟುಂಬ ಸದಸ್ಯರಿಂದ ಭತ್ತ ಸಂಗ್ರಹಿಸಲು ತೆಗೆದುಕೊಂಡು ಹೋಗುವ ಬಳ್ಳಿ (ಅಳೆಯುವ ಸಾಧನ) ತುಂಬಿಡುವ ಚೀಲ. ನೋಡಿ: ಎರವರು. A paddy measuring tool that is to used by the eravas during funeral rites.

ಕುಳಾವಿ kuḷavi :

ಕುಣಬಿ ಸಮುದಾಯದಲ್ಲಿರುವ ಒಂದು ವಿಶೇಷ ಕ್ರಮ; ಇದು ಕುಲದ ಸೆಲೆ ಸೂಚಕವಾಗಿದೆ; ಒಂದು ದೊಡ್ಡ ಕೂಡು ಕುಟುಂಬ ಅಂದರೆ ಸುಮಾರು ೩೦ ರಿಂದ ೫೦ ಕುಟುಂಬಗಳು ಕುಮರಿ ಬೇಸಾಯ ಮಾಡಿಕೊಂಡು ಒಟ್ಟಿಗೆ ಬದುಕು ನಿರ್ವಹಿಸುವಿಕೆ; ಊರೊಟ್ಟಿನದೆಂಬಂತೆ ಬದುಕುತ್ತಿರುವ ವಸತಿಕೇಂದ್ರ, A special method of Kunabi farming community.

ಕುಳಿ kuḷi :

- ಗೋಲಿ ಆಟದಲ್ಲಿ ಗೋಲಿಗಳನ್ನು ಬೀಳಿಸಲು ಮಾಡುವ ಪುಟ್ಟ ಗುಳಿ/ಹಳ್ಳ; A small pit that is used in crystal ball game;
- ಮೀನನ್ನು ಹಿಡಿಯುವ ಬಿದಿರಿನ ಉದ್ದನೆಯ ಬುಟ್ಟಿ; ಕೊಳಿ;
- ಸೊರಗು; ಸಣ್ಣದಾಗು;
- ಗುಳಿ; ತಗ್ಗು; ಪ್ರ: 'ನಕ್ಕರೆ ಕೆನ್ನೆಯಲ್ಲಿ ಕುಳಿ ಬೀಳುವುದು'. 'ಕುಳಿ' ರೂಪಕ್ಕೆ 'ಗುಳಿ' ರೂಪವೂ ಇದೆ; ಇಲ್ಲಿ ವ್ಯತ್ಯಾಸ ಇಷ್ಟೆ; ಕ>ಗ.
- **—ಕುಳಿಮೀನು** : ಹೊಂಡದ ಮೀನು(ಉಕ.ಜಿ). A kind of fish.

ಕುಳಿಕಾರತಿ kuḷikārati :

- ಎರವರ ಸಮುದಾಯದಲ್ಲಿ ಸತ್ತವ್ಯಕ್ತಿಯ ಮಗಳು ಅಥವಾ ಸಹೋದರಿಯನ್ನು 'ಕುಳಿಕಾರತಿ' ಎಂದು ಕರೆಯುತ್ತಾರೆ; A woman in erava tribe if her father dies she is called as kulikarati;
- ಇವಳು ಸಮಾಧಿಯ ಎದುರು ನಿಂತು ಕುಟುಂಬದ ಮುಖ್ಯಸ್ಥನಿಂದ ಹೊಸ ಮಡಿಕೆ ಪಡೆಯುವಳು;
- ಆ ಮಡಿಕೆಯಲ್ಲಿ ಅನ್ನ ಮಾಡಿ ಸಮಾಧಿಯ ಮುಂದೆ ಎಡೆ ಇಟ್ಟು ಅದರಲ್ಲಿ ಸ್ವಲ್ಪಭಾಗವನ್ನು ತಾನು ತಿನ್ನುವಳು;
- ಬಳಿಕ ಕುಟುಂಬದ ಮುಖ್ಯಸ್ಥ ಶೋಕಮುಕ್ತಿಯ ಸೂಚಕವಾಗಿ 'ಕುಳಿಕಾರತಿ'ಗೆ ಎಲೆಅಡಿಕೆ ಕೊಡುವನು.

ನೋಡಿ: ಎರವರು.

ಕುಳುಕಡ್ಡಿ kuḷukaḍḍi :

ಚಿನ್ನದಲ್ಲಿ ತಾಳಿಯನ್ನು ತಯಾರಿಸುವಾಗ ತಾಳಿಯ 'ತಗ್ಗು'(ಒಳಗಡೆ ಟೊಳ್ಳು ಮತ್ತು ಮೇಲ್ಭಾಗ ಉಬ್ಬಿದ ರೀತಿ); ಮಾಡಲು ಬಳಸುವ ಉಪಕರಣ; (ಪಾಂ.ವೃ.ಪ.ಕೋ). A tool used to pit/ditch on

golden small disc of a necklace used to tied during marriage from bridegroom to the bride.

ಕುಳೆ/ಕೂಳೆ kuḷe/kūḷe :

- ಕೊಳೆ; ಕಬ್ಬು ಅಥವಾ ಜೋಳವನ್ನು ಕೊಯ್ದ ನಂತರ ಬುಡದಲ್ಲಿ ಉಳಿದ ತುಂಡು; ಮತ್ತೆ ಅದರಲ್ಲಿ ಬೆಳೆ ತೆಗೆಯಲಾಗುವುದು; Stubbly;
- —***ಕುಳೇದ ಕಬ್ಬು*** : ಕಟಾವು ಮಾಡಿದ ನಂತರ ಬುಡದಲ್ಲಿ ಮತ್ತೇ ಚಿಗುರಿ ಬೆಳೆದ ಕಬ್ಬು; ಒಮ್ಮೆ ನಾಟಿ ಮಾಡಿದ ಕಬ್ಬಿನಿಂದ ೩–೪ ಬಾರಿ ಬೆಳೆ ತೆಗೆಯುವರು; ಇದನ್ನು 'ಕೂಳೆ ಕಬ್ಬು' ಎನ್ನುವರು; Ratoon sugar cane;
- —***ಕುಳೆ ಗೆಣಸು*** : ಗೆಣಸಿನ ಒಂದು ಬಗೆ; A kind of sweet potato;
- —***ಕುಳೆ ಗುಡ್ಡೆ*** : ಪೈರನ್ನು ಬುಡಸಮೇತ ಕಿತ್ತು ತೆಗೆದು ಹಾಕಿದ್ದು; ಒಲೆಗೆ ಉರುವಲಾಗಿ ಬಳಕೆ; Removing the crop by its roots;
- —***ಕುಳೆನಿಕೊಡುವುದು*** : ಜಮೀನಿನಲ್ಲಿ ಮಾಡುವ ಒಂದು ಆಚರಣೆ; ಕೋಳಿ, ಕುರಿ, ಹಂದಿಯನ್ನು ಗದ್ದೆಗೆ ಬಲಿಕೊಟ್ಟು ಬೆಳೆಯನ್ನು ದುಷ್ಟಶಕ್ತಿಯಿಂದ ರಕ್ಷಿಸಲು ಮಾಡುವ ಪೂಜೆ(ದ.ಕ). A ritual practiced in the farm by the farmer.

ಕುಳ್ಕಲ್ಲ ಕೋಟೆ kuḷkalla kōṭe :

- ನಂಜನಗೂಡು ತಾಲ್ಲೋಕಿನ ೧೨ನೇ ಶ.ದ ೨೪೪ನೇ ಶಾಸನದಲ್ಲಿ ಇದರ ಉಲ್ಲೇಖ; A place that mentioned in 244th inscription of 12th century (Nanjanagudu taluk);
- ಕಾರೆಯ ಊರಿನ ಬಾರಂದಕುಳದ ಹೆರ್ಮ್ಮಾಡಿಗವುಂಡನು 'ಕುಳ್ಕಲ್ಲ' ಕೋಟೆಯಲ್ಲಿನ ಯುದ್ಧದಲ್ಲಿ ಕಾದು ಮಡಿದನು;
- ಈ 'ಕುಳ್ಕಲ್ಲ ಕೋಟೆ'ಯ ಬಗ್ಗೆ ಹೆಚ್ಚಿನ ವಿವರಗಳಿಲ್ಲ.

(E.C- ೪, ಮೈ.ಜಿ.)

ಕುಳ್ಗಲ್ಲು kuḷgallu :

ಮಣ್ಣಿನಿಂದ ವೃತ್ತಾಕಾರವಾಗಿ ಮಾಡಿದ ಸಾಧನ; ರೇಷ್ಮೆಹುಳು ಸಾಕಲು ಬಳಸುವ, ಇರುವೆಗಳು ಮೇಜಿನಮೇಲೆ ಹತ್ತದಂತೆ ಇಡಲು ಬಳಕೆ; *ವ್ಯರೂ:* ಮೇಜದ ಕಲ್ಲು. A circle shaped tool made up by clay.

ಕುಳ್ಮಡು kuḷmaḍu :

ಕಳೆ ತೆಗೆಯುವ ಸಾಧನ; ಒಂದು ಮೊಳದುದ್ದದ್ದು; ಮರದಿಂದ ತಯಾರಿಸಿದ್ದು; ಮುಂತುದಿಗೆ ಅಂಗೈ ಅಗಲದ ಕಬ್ಬಿಣದ ಅಲಗನ್ನು ಸೇರಿಸಿ ಕಳೆ ಎರೆಯುವರು; ವ್ಯರೂ: ಕಳೆಗತ್ತಿ, ಹೆರಗತ್ತಿ(ಮೈ.ಜಿ). Weed removing tool.

ಕುಳ್ಳ kuḷḷa :

- ಸಮಾನ್ಯ ಎತ್ತರಕ್ಕಿಂತ ಕಡಿಮೆ ಎತ್ತರದವನು; *ಪ್ರ:* 'ಕಳ್ಳನ ನಂಬಿದರೂ ಕುಳ್ಳನ ನಂಬಬಾರದು'*(ಗಾ)*; A man who is short or a dwarf;
- ಜನಪದ ಕಥೆಗಳಲ್ಲಿ ಕುಳ್ಳ(ಕುಬ್ಜ) ಕುಂಟ ಅಂಥವರು ಕಥಾನಾಯಕರಾಗುವ ಯೋಗ ಪಡೆದಿರುತ್ತಾರೆ; ಏಕೆಂದರೆ 'ದೈಹಿಕವಾಗಿ ಅಶಕ್ತರು' ಮತ್ತು ಅವರ ಆಕಾಂಕ್ಷೆಗಳಿಗೆ ಅಭಿವ್ಯಕ್ತಿ ಕೊಡಲು ಹೀಗೆ ಮಾಡಲಾಗಿದೆ; ಅದು ಬಿಟ್ಟ ಭಾವನೆಗಳಿಗೆ ರೂಪ ಕೊಡುವ ಸಲುವಾಗಿ ಇಂಥವರ ಪಾತ್ರಗಳನ್ನು ಬಳಸಿಕೊಳ್ಳುವುದು ಸಾಮಾನ್ಯ; ಇಂಥವರನ್ನು ಮೇಲೆತ್ತಬೇಕೆಂಬುದು ಜನಪದ ಕಥೆಗಳ 'ಸಾಮಾಜಿಕ ನ್ಯಾಯದ' ಹಂಬಲ.

ಕುಳ್ಳಬಾನಿ ಕುಳ್ಳ kuḷḷabāni kuḷḷa :

- ಕುಳ್ಳನ್ನು ಪಿರಮಿಡ್ಡಿನಾಕೃತಿಯಲ್ಲಿ ಒಟ್ಟಿ ಅದರ ಸುತ್ತಲೂ ಸೆಗಣಿ–ಕೆಮ್ಮಣ್ಣು ಮಿಶ್ರಿತ ನೆರಕಿ ಬಳಿಯುವುದಕ್ಕೆ 'ಕುಳ್ಳಬಾನಿ' ಎನ್ನುವರು;
- ಸೆಗಣಿಯಿಂದ ತಟ್ಟಿ ಒಣಗಿಸಿದ ಕುಳ್ಳನ್ನು ಒಟ್ಟುಗೂಡಿಸಿ ಮನೆಯ ಅಂಗಳ ಅಥವಾ ಮಾಳಿಗೆಯ ಮೇಲೆ ಪಿರಾಮಿಡ್ದು(ತಳಭಾಗ ಚೌಕಾಕಾರವಿದ್ದು ಮೇಲ್ಭಾಗ ಕಮಾನಿನಾಕೃತಿಯಲ್ಲಿ ವಿನ್ಯಾಸಗೊಂಡದ್ದು) ಆಕಾರದಲ್ಲಿ ವಟ್ಟಿ ಮೇಲ್ಭಾಗಕ್ಕೆ ಸೆಗಣಿ–ಕೆಮ್ಮಣ್ಣು ಮಿಶ್ರಿತ ನೆರಕಿ ಮೆತ್ತುವರು;
- ಇದರಿಂದ ಕುಳ್ಳನ್ನು ಮಳೆಗಾಲದಲ್ಲಿ ಸಂರಕ್ಷಿಸಬಹುದು; ವರ್ಷದ ಎಲ್ಲ ಕಾಲದಲ್ಲಿಯೂ ಉರುವಲಿಗೆ ಉಪಯೋಗ.
- ಕುರುಳು; ಎತ್ತಿನ ಇಲ್ಲವೆ ದನಕರುಗಳ ಸಗಣಿಯನ್ನು ತೆಗೆದು ಹಿತ್ತಲು ಅಥವಾ ಗೋಡೆ ಮೇಲೆ, ದಪ್ಪ

ರೊಟ್ಟಿಯಾಕಾರದಲ್ಲಿ ಬಡಿದು ಒಣಗಿಸಿರುವುದು; Dung cake;

- ಮಳೆಗಾಲದಲ್ಲಿ ಒಲೆ ಬೆಂಕಿ ಹೊತ್ತಿಸಲು, ಅಡುಗೆ ಮಾಡಲು ಬಳಕೆ; ಸೌದೆಯಂತೆ ಉರುವಲಾಗಿ ಬಳಕೆ;
- ಕುಳ್ಳನ್ನು ಹಿತ್ತಲಿನಲ್ಲಿ ಬಣವೆ ಆಕಾರದಲ್ಲಿ ಒಟ್ಟಿ ಶೇಖರಿಸಿಕೊಳ್ಳುವುದು ಕುಳಬಾನ; Stack of fuel; *ಪ್ರ:* 'ಇಟ್ಟರೆ ಸೆಗಣಿಯಾದೆ ತಟ್ಟಿದರೆ ಕುರುಳಾದೆ'; *ಪ್ರ:* 'ಕುಳುಬಾನ ಸಂದ್ಯಾಗ ಕುಳ್ಳು ಆರಿಸಿದರಂತೆ'*(ಗಾ).*

ಕುಳ್ಳಿ kuḷḷi :

- ಗಿಡ್ಡ; ಕಡಿಮೆ ಎತ್ತರಯುಳ್ಳವಳು; A woman who is short and dwarf;
- ಮಿಳ್ಳಿ, ಗಿಂಡಿ; ಚಿಕ್ಕ ಗಡಿಗೆ;
- ಕೆಂಪು ಮಣ್ಣಿನ ಸಣ್ಣ ಮಡಿಕೆ; ವಿಶೇಷವಾಗಿ ಮೊಸರು ಮಾಡಲು ಬಳಕೆ;
- ***—ಕುಳ್ಳಿ ಹಾಕು*** : ಶವ ಸಂಸ್ಕಾರಕ್ಕಾಗಿ ಕಟ್ಟಿಗೆಯನ್ನು ಜೋಡಿಸುವುದು; To set/conjoin wooden fuel to set fire the dead body as a final rites of the dead.

ಕೂ kū :

- ಕರ್‌ಂಗೋಲು ಕುಣಿತದಲ್ಲಿ ಕೊನೆಯಲ್ಲಿ ಆಚರಿಸುವ ಆಚರಣೆ; ಇಲ್ಲಿ 'ಕೂ' ಎಂದು ಕೂಗಿ 'ತೂಟೆ' ಎಂದರೆ ತೆಂಗು, ಬಾಳೆಗಳ ಒಣಗಿದ ಗರಿಗಳನ್ನು ಅಥವಾ ಒಣ ಬಿದಿರಿನ ಕಡ್ಡಿಗಳನ್ನು ಒಟ್ಟು ಸೇರಿಸಿ ಕಟ್ಟಿ ಮಾಡಿದ ಪಂಜು; ದೀವಟಿಗೆ; ಇದನ್ನು ಕೂ ಎಂದು ಕೂಗುತ್ತಾ ಎಸೆಯುವ ಮೂಲಕ ಅನಿಷ್ಟವನ್ನು ಗ್ರಾಮದಿಂದ ಹೊಡೆದೋಡಿಸುವ ಆಚರಣೆ ನಡೆಯುವುದು; A low/shout Hee-haw; A shout out during the end of festivity in Karngolu Dance by throwing Torch made up of banana leaves coconut leaves, and dry sticks of bamboo;
- ದೀಪಾವಳಿ ಹಬ್ಬದಂದು ಬಲೀಂದ್ರನನ್ನು ಕರೆಯುವ ಶಬ್ದ; A call for Balindra- an ancient Indian king during light festival/Diwali;
- ಇನ್ನೊಂದು ದಡದಲ್ಲಿರುವ ಅಂಬಿಗನು ದೋಣಿಯನ್ನು ತರಲು ಕರೆಯಲು ಬಳಸುವ ಶಬ್ದ(ಉ.ಕ.ಜಿ). A call of boat man.

ಕೂಂಚೆಲ್ kūñjel :

ಮೀನು ಹಿಡಿಯಲು ಬೀಳಲಿನಿಂದ ಹೆಣೆದು ಮಾಡಿದ ಬುಟ್ಟಿಯಾಕಾರದ ರಚನೆ(ದ.ಕ.). A structure that resembles a creeper basket: used to fishing.

ಕೂಕಣಿ ಹೆಳವರು kūkaṇi heḷavaru :

- ಹೆಳವರಲ್ಲಿ ಒಂದು ಉಪಪಂಗಡ 'ಕೂಕಣಿ ಹೆಳವರು'; ರಾಯಚೂರು, ಬಳ್ಳಾರಿ, ಕೂಡ್ಲಿಗಿ ಮುಂತಾದ ಕಡೆ ಕಂಡುಬರುತ್ತಾರೆ; ಸಾಮಾನ್ಯವಾಗಿ ಹೆಳವರು ಒಕ್ಕಲು ಮನೆಗಳಿಗೆ ಹೋಗಿ ಹೊಗಳಿಕೆ ಹಾಡ ಹಾಡುವುದು ರೂಢಿ; ಆದರೆ ಕೂಕಣಿ ಹೆಳವರಲ್ಲಿ ಆ ಕ್ರಮ ಇದ್ದಂತಿಲ್ಲ; A sub caste of elava Community; They are habituated in Raichur, Bellari and around Kudligi;
- 'ಕೂಕಣಿ' ಎಂದರೆ 'ಕಿವಿಯ ಗುಗ್ಗೆ' ಎಂದು ಅರ್ಥ; 'ಕೂಕಣಿ'ಗೆ 'ಕೂಗಣಿ' ವ್ಯತ್ಯಯ ರೂಪವಿದೆ, ಸಹಜವಾಗಿ ಇಲ್ಲಿ ಕ>ಗ ಆಗಿರುವುದು ಸ್ಪಷ್ಟ; 'ಕುಋಗಣಿ' ರೂಪವನ್ನು ಕಿಟ್ಟೆಲ್ ಸೂಚಿಸುತ್ತಾರೆ; 'ಕೂಗಟೆ' ಪದವನ್ನೂ ಕಿಟ್ಟೆಲ್ ಕೊಡುವರು, 'ಟ' ವರ್ಗದ ಅಕ್ಷರವಾದ್ದರಿಂದ ಸಂಬಂಧರೂಪ ಆಗಿರಬಹುದು; ಕೂಗಣೆ, ಕುಕ್ಕಣಿ, ಕೂಗಳಿ ರೂಪಗಳೂ ಇವೆ; ಣ>ಳ ಆಗಿರುವುದೂ ಇಲ್ಲಿನ ಒಂದು ವಿಶೇಷ;
- ತಮಿಳು: ಕುಋಂಬಿ; ಮಲೆಯಾಳಂ: ಕುಋಂಬಿ; ತೆಲುಗು: ಗುಲಿಮಿ/ಗುಬಿಲಿ/ಗುಲಿಬಿ;

= ಕನ್ನಡದ ಕೂಕಣಿ/ಕೂಗಣಿ ರೂಪಗಳಿಗೂ ಇತರ ದ್ರಾವಿಡ ಭಾಷೆಗಳ ರೂಪಗಳಿಗೂ ಸಂಬಂಧವಿದ್ದಂತಿಲ್ಲ; ತಮಿಳು ಮತ್ತು ಮಲೆಯಾಳಂಗಳ 'ಕುಋಂಬಿ'ಗೂ 'ಕನ್ನಡದ ಕುಋಗಣಿ' ಗೂ ಸಂಬಂಧವಿದ್ದರೂ ಪೂರ್ಣ ಹೋಲಿಕೆಯಾಗುವುದಿಲ್ಲ; ಇನ್ನು ತೆಲುಗಿನ ರೂಪಗಳು 'ಗುಗ್ಗೆ'ಗೆ ಬಂದ ರೂಪಗಳು ಇದ್ದಿರಬಹುದೆ? ತಮಿಳಿನ ಇನ್ನೊಂದು ರೂಪ

'ಕುಜುಗು' ಕನ್ನಡದ ಕುಜುಗಣಿಯನ್ನು ಚೆನ್ನಾಗಿ ಹೋಲುವಂಥದು;

- 'ಕೂಕಣಿ ಹೆಳವರ' ವೃತ್ತಿಯೇ ಗುಗ್ಗೆ ತೆಗೆಯುವುದು; ಗುಗ್ಗೆಕಡ್ಡಿಗಳನ್ನು ಇಟ್ಟುಕೊಂಡಿರುತ್ತಾರೆ; ಅಲೆಮಾರಿಗಳಾದ ಇವರು ಊರೂರಿಗೆ ಹೋಗಿ ಅಲ್ಲಿಯ ಜನರ ಗುಗ್ಗೆ ತೆಗೆಯುವ ಕಾರ್ಯ ಮಾಡುತ್ತಾರೆ; ಪ್ರತಿಫಲವಾಗಿ ದವಸ ಧಾನ್ಯ, ಹಣಕಾಸನ್ನು ಸಂಪಾದಿಸುತ್ತಾರೆ; ಇದರಿಂದ ಅವರು ಜೀವನ ಮಾಡುವುದು ವಾಡಿಕೆ; Kukani means ear-wax or cerumen; The profession of kukani elava's is to remove ear-wax, so They have been migrating with these ear-wax removing sticks;
- ಹೆಂಗಸರ ಉದ್ಯೋಗ ಮಾತ್ರ ಬೇರೆ; ಪೊರಕೆ ತಯಾರಿಕೆ, ಚಾಪೆ ತಯಾರಿಕೆ, ಕೂದಲು ಕಟ್ಟುವ ಕೆಲಸ, ಇವರ ಕಸುಬು; ಈಗಲೂ ಅವರು ಅಲೆಮಾರಿಗಳೇ, ಆದರೆ ಬಹುತೇಕ ಕಡಿಮೆಯಾಗಿದೆ; ಹಿಂದೆ ಹೆಳವರು ಊರೂರು ಸುತ್ತುತ್ತಿದ್ದಂತೆ ಈಗ ಇದ್ದಂತಿಲ್ಲ. The women of elava manufacture brooms mats etc.

ಕೂಕ್ಕೆ ಇಕ್ಕಳ kūkke ikkaḷa :

ಕಾಯಿಸಿದ ಸಣ್ಣದಾದ ವಸ್ತುಗಳನ್ನು ಹಿಡಿದುಕೊಳ್ಳಲು ಬಳಸುವ ಇಕ್ಕಳ; ಅಕ್ಕಸಾಲಿಗರಲ್ಲಿ ಹೆಚ್ಚು ಬಳಕೆ. Hook pliers or hook pincers: used by goldsmith.

ಕೂಗಟೆ ಹುಣ್ಣು kūgaṭe huṇṇu :

ಕಿವಿಯಲ್ಲಿ ಶೇಖರಣೆಯಾಗುವ ಗುಗ್ಗೆಯಿಂದ ಕಿವಿ ಒಳಪದರದಲ್ಲಿ ಉಂಟಾಗುವ ಗಾಯ; ಕಿವಿಯ ಹುಣ್ಣು; *ಪ್ರ:* 'ಕೂಗಟೆಹುಣ್ಣು ಆದರೆ ಜಾಗಟೆ ಬಡಿಯುವುದಕ್ಕೆ ಆಗದೇ?'*(ಗಾ).* An ulcer in the inner wall of ear due to the storage of ear wax.

ಕೂಗಲಿಟ್ಟು kūgaliṭṭu :

- ಕೊಡವರಲ್ಲಿನ ಒಂದು ವಿಶೇಷ ತಿಂಡಿ; A special snacks prepared by Kodava caste;
- ಹಲಸಿನ ಹಣ್ಣಿನೊಂದಿಗೆ ನೆನೆಸಿದ ಅಕ್ಕಿ ರುಬ್ಬಿ ಅದಕ್ಕೆ ಏಲಕ್ಕಿಪುಡಿ, ತೆಂಗಿನಕಾಯಿ, ಹುರಿದ ಎಳ್ಳು ಸೇರಿಸುವರು; . It is made up of Jack-fruit, rice, coconut and sesame;
- 'ಕೂಗಲೆ' ಎಲೆಯಲ್ಲಿ ಈ ಹಿಟ್ಟು ಹಾಕಿ ಬೇಯಿಸುವುದರಿಂದ ಇದಕ್ಕೆ ಕೂಗಲಿಟ್ಟು ಎನ್ನುವರು; (ಕೂಗಲೆ ಒಂದು ಮರ); A snack that is boiled by wrapping in Koogale leaf;
- ಬಾಳೆ ಅಥವಾ ಅರಿಶಿನ ಎಲೆಯನ್ನು ಮಡಚಿ ಹಿಟ್ಟು ಹಾಕಿ ಆವಿಯಲ್ಲಿ ಬೇಯಿಸುವರು; To boil something by wrapping in banana or turmeric leaves;
- ಕೂಗಲೆ+ಹಿಟ್ಟು>ಕೂಗಲೆ+ಹ್+ಇಟ್ಟು>ಕೂಗಲೆ+Ø+ಇಟ್ಟು>ಕೂಗಲಿಟ್ಟು(ಕೊಡ.ಜಿ).

ಕೂಗಳತೆ kūgaḷate : .

- ಅಳತೆಯ ಮಾನ; A measurement;
- ಕೂಗಿದರೆ ಕೇಳುವಷ್ಟು ಅಂತರ; A distance of a call;
- ಮನುಷ್ಯ ತನಗೆ ಸಾಧ್ಯವಾದಷ್ಟು ಗಟ್ಟಿ ದನಿಯಿಂದ ಕೂಗಿದಾಗ ಆ ಧ್ವನಿ ಕೇಳುವಷ್ಟು ದೂರ;
- ಜನಪದರು ಅಳತೆಮಾನಗಳನ್ನು ತಮ್ಮ ಅನುಭವದಿಂದ ಮಾತ್ರ ಮಾಡಿಕೊಳ್ಳುತ್ತಿದ್ದರು; ಅವರಿಗೆ ಯಾವುದೇ ಶಾಸ್ತ್ರದ ನೆರವು ಇರಲಿಲ್ಲ; ಅದರಲ್ಲಿ 'ಕೂಗಳತೆ'ಯೂ ಒಂದು; It is one of the measurements used by the folk by their experience;
- ಈ 'ಕೂಗಳತೆ' ಕೂಡ ವ್ಯಕ್ತಿಯಿಂದ ವ್ಯಕ್ತಿಗೆ ಬೇರೆಯಾಗಬಹುದು; ಏಕೆಂದರೆ ಎಲ್ಲರ ಧ್ವನಿಗಳೂ ಏಕಪ್ರಕಾರವಾಗಿ ಇರುವುದಿಲ್ಲ;
- ಅಂಥ ಸಂದರ್ಭದಲ್ಲಿ ಸುಮಾರು/ಬಹುತೇಕ ಧ್ವನಿಗಳನ್ನು ಆಧರಿಸಿ ಇದನ್ನು ತೆಗೆದುಕೊಳ್ಳಲಾಗುವುದು;
- ಇದು ತಲೆಮಾರುಗಳ ಹರಿಯುವ ಕ್ರಿಯೆಯಲ್ಲಿ ಪ್ರಣೀತವಾಗುವಂಥದು.

ಕೂಗಿನ ಅಳಬು kūgina aḷabu :

- ಮರದ ಕಾಂಡದ ಮೇಲೆ ಬೆಳೆಯುವ ಚಿಕ್ಕ ಅಣಬೆ; A mushroom grown on the trunk of a tree;

- ಬಿಳಿ ಬಣ್ಣದ್ದು; ಹುತ್ತದ ಅಣಬೆಯಂತೆ ಇರುತ್ತದೆ (ಚಿಕ್ಕ.ಜಿ). It is white in colour and like anthill mushroom.

ಕೂಗು kūgu :

- ಧ್ವನಿ; ಅರಚು; A call, A cry;
- ಹತ್ತಿರಕ್ಕೆ ಬರುವುದಕ್ಕೆ ಹೇಳು; ಕರೆ; ಆಹ್ವಾನಿಸು; ಬೊಬ್ಬೆ ಹಾಕು; *ಪ್ರ:* 'ನರೀ ಕೂಗು ಗಿರೀ ಮುಟ್ತೀತೇ'*(ಗಾ)*; A call of invitation;
- ಕೂಗು ಅಥವಾ ಧ್ವನಿಯ ಆಧಾರದ ಮೇಲೆ ಪರಿಚಿತ ವ್ಯಕ್ತಿಗಳನ್ನು ಎದುರಿಗೆ ನೋಡದೆಯೇ ಗುರುತಿಸುವುದುಂಟು; ವ್ಯಕ್ತಿಗಳ ಕೂಗು ಬದಲಾಗುತ್ತದೆ; An unknown person can be identified with his/her call sound;
- ಪ್ರಾಣಿಗಳ 'ಕೂಗು' ಗಳಲ್ಲಿಯೂ ವ್ಯತ್ಯಾಸವಿರುತ್ತದೆ; ಅದನ್ನು ಅನುಭವದಿಂದ ಕಂಡುಹಿಡಿಯಲಾಗುವುದು; ಆನೆ, ನರಿ, ಹುಲಿ, ನಾಯಿಗಳ ಕೂಗಿನಲ್ಲಿ ವ್ಯತ್ಯಾಸ ಇರುವುದನ್ನು ಗುರುತಿಸಲಾಗಿದೆ; Different animals have their own call sounds;
- ಹಾಯಿ ಹಡಗಿನ ಹಿಂದೆ ಹೋಗುವ ಚಿಕ್ಕ ದೋಣಿ(ತು.ನಿ); A small boat behind a sail. ತ: ಕೂವು; ಮ: ಕೂಕು; ತೆ: ಕೂಯು;
- —*ಕೂಗ್ಮಾರಿ/ಕೂಗೋಮಾರಿ* : ಹಿಂದೆ ಕಾಲರಾ, ಪ್ಲೇಗ್ ಮುಂತಾದ ಸಾಂಕ್ರಮಿಕ ರೋಗದಿಂದ ಜನ ಸಾಯುತ್ತಿದ್ದಾಗ ಬೆಳಗಿನ ಜಾವ 'ಕೂಗೋಮಾರಿ' ಊರಿಗೆ ಬಂದು ಸ್ಮಶಾನಕ್ಕೆ ಜನರನ್ನು ಕರೆಯುತ್ತಿದ್ದಳೆಂಬ ನಂಬಿಕೆ; It is the another name of cholera a disease;
- ಆ ಅತಿಮಾನುಷಶಕ್ತಿಯ ಕರೆಗೆ ಓಗೊಟ್ಟರೇ ಆಕೆ ಅವರನ್ನು ಬಲಿ ತೆಗೆದುಕೊಳ್ಳುತ್ತಾಳೆಂಬ ನಂಬಿಕೆ; Folk personifies the disease as symbol of death who takes folk to graveyard;
- ಗ್ರಾಮೀಣರು ತಮ್ಮ ಮನೆಯ ಬಾಗಿಲಿನ ಮೇಲೆ 'ನಾಳೆ ಬಾ' ಎಂದು ಬರೆದಿರುವುದು ಕಲ್ಪಿತ ಆಪತ್ತನ್ನು ನಿವಾರಿಸಿಕೊಳ್ಳುವ ಮಾನಸಿಕ ಪ್ರವೃತ್ತಿಯನ್ನು ತೋರುತ್ತದೆ;
- ಹಿಂದೆ ಹಳ್ಳಿಯ ಜನರು ಪ್ರತಿಯೊಂದರಲ್ಲೂ ಸ್ವಾವಲಂಬನೆ ಮತ್ತು ಸ್ವತಂತ್ರ ತೀರ್ಮಾನ ತೆಗೆದುಕೊಳ್ಳುತ್ತಿದ್ದರು;
- ಆಪತ್ತಿನ ವಿಷಯದಲ್ಲೂ ಇದು ನಿಜವಾಗಿತ್ತು;
- ಆದ್ದರಿಂದ ಇದೊಂದು ಅನವಶ್ಯಕ ಸಾಂಪ್ರದಾಯಿಕ ಹೊರೆ;
- ಕಾಲ್ಪನಿಕ ಮೃತ್ಯುದೇವತೆ(ಚಿಕ್ಕ.ಜಿ); An imaginary goddess of death;
- ಆಧುನಿಕ ಕಾಲದಲ್ಲಿ ದೂರದರ್ಶನ, ಧ್ವನಿವರ್ಧಕಗಳನ್ನು ಕೂಗೋಮಾರಿ ಎನ್ನುವರು (ತು.ಜಿ).

ಕೂಗೊಡ್ಲಿ kūgoḍli :

- ಒಂದೇ ಕೈಯಿಂದ ಕಟ್ಟಿಗೆಯನ್ನು ತುಂಡುಮಾಡುವ ಸಾಧನ; A hand axe that is used to chop timber in a single hand;
- ಸಣ್ಣಕೊಡಲಿ; 'ಕೈಗೊಡ್ಲಿ' ಇರಬೇಕಲ್ಲವೆ? A small axe.

ಕೂರ್ಗ್ಗಲ್ಲ/ಕೂರ್ಗಲು/ಕೂರಗಲ್ಲು kūrggalla/ kūrgalu/kūragallu :

- ಪಿರಿಯಾಪಟ್ಟಣ ತಾಲ್ಲೋಕಿನ ಕ್ರಿ.ಶ.೧೦ನೇ ಶ.ದ ೨೮ನೇ ಶಾಸನದಲ್ಲಿ ಇದರ ಉಲ್ಲೇಖ; A place in Piriyapattana Taluk mentioned in the 28th inscription of 10th century AD;
- ಕೂರಲು ಅನುಕೂಲವಾದ ಕಲ್ಲು ಅಥವಾ ಚೂಪಾದ ಕಲ್ಲುಗಳು ಇದ್ದ ಹಿನ್ನೆಲೆಯಲ್ಲಿ ಈ ಊರಿಗೆ ಈ ಹೆಸರು ಬಂದಿರಬಹುದು; A convenient seat stone;
- ಗಂಗದೊರೆ ಪೆರ್ಮಾಡಿಯ ಆಡಳಿತದಲ್ಲಿ ಬೂತುಗನ ಅರಸಿ ಪರಮಬ್ಬೆ ಕೂರ್ಗ್ಗಲ್ಲನ್ನು ಆಳುತ್ತಿದ್ದಳೆಂಬ ಪ್ರಸ್ತಾಪ; It tells us about Gangas king Permadi and his rule;
- ಕೂರ್ಗ್ಗಲ್ಲ ಗಾವುಂಡನು 'ತುಬುಗೋಳ್'ನಲ್ಲಿ ಮಡಿದಾಗ ಎರೆಯಪ್ಪ ಎಂಬುವನು ವೀರನ ಮನೆಯವರಿಗೆ ಗೌರವಿಸಿ ದತ್ತಿ ನೀಡಿದ ವಿಚಾರವಿದೆ. (E.C-೪; ಮೈ.ಜಿ.)

ಕೂಚಂಭಟ್ಟ kūcambhaṭṭa :

- ಅವಿವೇಕಿ; ದಡ್ಡ; A fool, idiot;
- ಎಷ್ಟು ಬಾರಿ ಓದಿದರೂ ಏನನ್ನೂ ಅರ್ಥೈಸಿಕೊಳ್ಳದವನು; A person who cannot understand by his/her reading;
- *ಪ್ರ:* 'ಓದಿ ಓದಿ ಮರುಳಾದ ಕೂಚಂಭಟ್ಟ'*(ಗಾ)*;
- ಮೂಲರೂಪ 'ಕೂಚಿ' ಇರಬೇಕು; ಇದಕ್ಕೆ 'ಭಟ್ಟ' ಸೇರಿ 'ಕೂಚಿಭಟ್ಟ' ಆಗುವುದು;
- ಇದಕ್ಕೆ 'ಕೋಚು' ಎನ್ನುವ ರೂಪವೂ ಇದ್ದು, ಅದಕ್ಕೆ 'ಭಟ್ಟ' ಸೇರಿದಾಗ 'ಕೋಚುಭಟ್ಟ' ಆಗುವುದು (ಕಿಟ್ಟೆಲ್).

ಕೂಚ/ಕೂಚು kūca/kūcu :

- ಕಂಬ; ಬಿದಿರು ಅಥವಾ ಕಲ್ಲಿನ ಕಂಬ; ಮಣ್ಣಿನ ಗೋಡೆಯ ಮಧ್ಯಭಾಗದಲ್ಲಿ ಹಾಕಲಾಗುವುದು; A bamboo pillar/post; A stone pillar;
- ಗುಮ್ಮಟೆಯ ನುಡಿತದೊಂದಿಗೆ ಕುಣಿಯುವ ವ್ಯಕ್ತಿ (ಮಂ.ಜಿ); A person who dances rhythmically to a drum beats;
- ಮದುವೆಯಾಗದ ಹುಡುಗ(ಉ.ಕ.ಜಿ);
- ಬಾಲ ಭಾಷೆಯಲ್ಲಿ 'ಕುಳಿತಿಕೊ'; To sit in childish language;
- ಯುದ್ಧಕ್ಕೆ ಸೈನ್ಯದ ಸಿದ್ಧತೆ(ಮೈ.ಜಿ);
- ಸೈನ್ಯದ ಚಲನೆ(ಮಂ.ಜಿ); A march of army;
- ಸಜ್ಜುಗೊಳಿಸು; ಸೇರಿಸು; ಅಣಿ(ಶಿ.ಜಿ); To prepare to make ready someone or something;
- ಬಯಲಾಟದ ಹಾಡುಗಳ ಕೊನೆಯಲ್ಲಿ ಹಿಮ್ಮೇಳದವರ ತಾರಕಮಟ್ಟದ ಆಲಾಪನೆ(ಬ.ಜಿ);
- ***—ಕೂಚುಹೊಡಿ*** : ಪುಸಲಾಯಿಸು; ಹೇಳಿದ್ದಕ್ಕೆಲ್ಲ ಹೌದು ಅನ್ನು(ಚಿ.ಪ.ಕೋ); To encourage to say yes for everything;
- ***—ಕೂಚಾ*** : ಹಾಲಕ್ಕಿ ಸಮುದಾಯದಲ್ಲಿ ಹದಿ ಹರೆಯದ ಮಕ್ಕಳನ್ನು(೧೫–೨೦) 'ಕೂಚಾ' ಎನ್ನುವರು; ಕೂಸು ಎಂಬ ಅರ್ಥದಲ್ಲಿ ಬಳಕೆ(ಉ.ಕ.ಜಿ). A call for matured boys and girls in Halakki community; It is also synonym of Kusu-an infant.

ಕೂಚಿ kūci :

- ಕಲಶ; ಹೂಜಿ; ಜಲಗಿಂಡಿ; A water mug;
- ಭೂತಸ್ಥಾನಗಳಲ್ಲಿ ಪವಿತ್ರ ಜಲವನ್ನು ತುಂಬಿಸಿಟ್ಟ ಪಾತ್ರೆ; ಉದ್ದವಾದ ಕತ್ತು ಇರುವ ಪಾತ್ರೆ(ದ.ಕ.); *ಪ್ರ:* 'ಕೂಚಿಯ ನೀರನ್ನು ತೀರ್ಥದಂತೆ ಕುಡಿದರು'; Vase, shrine that is used in Bhutha rituals to fill holy water;
- ಮಣ್ಣಿನಿಂದ ಅಥವಾ ತೆಂಗಿನ ಕರಟದಿಂದ ಮಾಡಿದ ಚಿಕ್ಕ ಹೂಜಿಯಾಕಾರದ ಪಾತ್ರೆ; ಕಮಂಡಲ;
- ಸಣ್ಣ ಗಾತ್ರದ ತೆಂಗಿನಕಾಯಿ(ಮಂ.ಜಿ); A small coconut;
- ***—ಕೂಚಿಬಾಗ್ಲು*** : ಹಳೆಯ ಕಾಲದ ಬಂಡಿ ಬಾಗಿಲು; (ಪಾಂ.ವ್ಯ.ಪ.ಕೋ). A door of an ancient cart.

ಕೂಟ[೧] kuta[1] :

- ಜೊತೆ; ಸಂಘ; ಸಹವಾಸ; ಹತ್ತಿರ; ಸಂಗಡ; ಒಂದಿಗೆ; An union, friendship, committee;
- ಎತ್ತರವಾದ ಪ್ರದೇಶ; ಬೆಟ್ಟದ ನೆತ್ತಿ; A cliff; A top of the hill;
- ರಾಶಿ; ಸಮೂಹ; Mass, heap;
- ಗುಂಪು; ಸಮುದಾಯ; A Group: community;
- ಸಭೆ; ಮೇಳ; *ಪ್ರ:* 'ದ್ವಾಸಿ ಊಟಲ್ಲ ದಾಸಿ ಕೂಟಲ್ಲ'(ಗಾ); An assembly;
- ಯಕ್ಷಗಾನದ ಒಂದು ಪ್ರಕಾರ; ತಾಳಮದ್ದಲೆ; A kind of Yakshagana;
- ಕಬ್ಬಿಣದ ಲೆಕ್ಕಣಿಕೆ;
- ನಾಲ್ಕು ದಾರಿ ಸೇರುವ ಸ್ಥಳ; ಚೌಕ; A place of meeting four roads;
- ಒಂದು ಬಗೆಯ ತೆರಿಗೆ; ಸಭೆಯ ಮೇಲೆ ಹಾಕುವ ಸುಂಕ; A kind of tax;
- ವಧೂವರರ ಜನ್ಮಪತ್ರಿಕೆ(ಜಾತಕ)ಗಳ ಹೊಂದಾಣಿಕೆ; ಮದುವೆ ನಿಶ್ಚಯವಾಗುವುದಕ್ಕೆ ಮುನ್ನ ಇಬ್ಬರ ಜಾತಕ ಗುಣಿಸಿ 'ಕೂಟ' ಹೇಳುವಿಕೆ;
- ಕೋಲಾರ ಜಿಲ್ಲೆಯಲ್ಲಿ ನಡೆಯುವ ಕುರುಬರ ದ್ಯಾವರು ಆಚರಣೆಯಲ್ಲಿ ಕಂಬಿ, ಗಂಪಗಳನ್ನು ಹೊತ್ತು ಕುಲ ದೇವಸ್ಥಾನದ ಬಳಿ ಸೇರುವುದನ್ನು 'ಕೂಟ' ಎನ್ನುವರು(ನೋಡಿ: ಕುರುಬರ ದ್ಯಾವರು);

A meet of gods of shepherd community in Kolara district;

- ***—ಕೂಟ ಪ್ರಶ್ನೆ*** : ಉತ್ತರ ಇಲ್ಲದ ಪ್ರಶ್ನೆ; ರಹಸ್ಯವಾದುದು; ತೊಡಕಿನ ಪ್ರಶ್ನೆ; ಬಿಡಿಸಲಾಗದ ಒಗಟು; ಕಗ್ಗಂಟು; A question without answer; A problematic question;
- ***—ಕೂಟ ಬಾಗಿಲು*** : ಹಜಾರದ ಎರಡೂ ಬದಿಗೆ ಇರುವ ಕೊಠಡಿಗಳ ಬಾಗಿಲುಗಳು; ಇವುಗಳಿಗೆ ಯಾವುದೇ ಅಲಂಕಾರ, ಕೆತ್ತನೆ ಇರುವುದಿಲ್ಲ; ಸಾದಾ ಬಾಗಿಲು(ಬೆಂ.ಗ್ರಾ.ಜಿ); Simple doors without decoration in a house;
- ***—ಕೂಟ ಕಟ್ಟು*** : ಗುಂಪು ಕಟ್ಟು; ಸಮಾನ ವಯಸ್ಕರು ಆಸಕ್ತರನ್ನು ಒಂದೆಡೆ ಸೇರಿಸು; A gathering; To make group of people;
- ***—ಕುಟ್ಲೋರು*** : ಕೂಟದವರು; ಬಳಗದವರು; ಜೊತೆಯವರು; *ಪ್ರ:* 'ನಾವು ಹಿಂಗೆಲ್ಲ ಕಚ್ಚಾಡ್ತಿದ್ರೆ ಕೂಟ್ಲೋರು ಏನನ್ನಕ್ಕಿಲ್ಲ'. Relations in groupism.

ಕೂಟ೨ kūṭa[2] :

- ಎರವರ ಸಮುದಾಯದಲ್ಲಿ ತೀರಿಹೋದ ತಮ್ಮ ರಕ್ತಸಂಬಂಧಿಗಳ ಆತ್ಮಶಾಂತಿಗಾಗಿ ವರ್ಷಕ್ಕೊಮ್ಮೆ ಮಾಡುವ ಪಿತೃಹಬ್ಬವನ್ನು 'ಕೂಟ' ಎಂದು ಕರೆಯುತ್ತಾರೆ; A tributary festival of dead for parents in Erava community;
- ಈ ಕೂಟವು ರಾತ್ರಿ ವೇಳೆ ನಡೆಯುತ್ತದೆ; ಕುಟುಂಬದ ಸದಸ್ಯರೆಲ್ಲ ಸೇರಿ ತಮ್ಮ ವಂಶದ ಮುಖಂಡನ ಮನೆಯಲ್ಲಿ ಕೂಟ ನಡೆಸಲಾಗುವುದು; This festival is celebrated at nights;
- ಇದಕ್ಕೆ ತಗಲುವ ವೆಚ್ಚವನ್ನು ವಂಶದ ಎಲ್ಲ ಸದಸ್ಯರಿಂದ ಧಾನ್ಯಗಳ ರೂಪದಲ್ಲಿ ಅಥವಾ ಕಾಣಿಕೆ ರೂಪದಲ್ಲಿ ಸಂಗ್ರಹಿಸಿ ಎರಡು ದಿನ ಆಚರಿಸುತ್ತಾರೆ;
- ***—ಕೂಟದ ಅಕ್ಕಿ*** : ಎರವರು ತಿಥಿಯ ಸಂದರ್ಭದಲ್ಲಿ ಮೀಸಲಿಟ್ಟಿರುವ ಅಕ್ಕಿ; ತಮ್ಮ ವಂಶಸ್ಥರಿಂದ ಸಂಗ್ರಹಿಸಿ ಹೊಸ ಮಡಿಕೆಯಲ್ಲಿ ತಿಥಿಗಾಗಿ ತುಂಬಿಡುವ ಅಕ್ಕಿ; ***ನೋಡಿ:*** ಎರವರು. Reserved rice for the death anniversary in Erava caste.

ಕೂಟನಮಡುವು/ಕೂಂಟನಮಡುವು

kūṭanamaḍuvu/kūṇṭanamaḍuvu:

- ತರೀಕೆರೆ ತಾಲ್ಲೋಕು ಅಮೃತಾಪುರ ಪ್ರದೇಶದಲ್ಲಿ ದೊರೆತ ಕ್ರಿ.ಶ.೧೨೦೫ರ ಹೊಯ್ಸಳ ವೀರಬಲ್ಲಾಳನ ೯ನೇ ಶಾಸನದಲ್ಲಿ ಇದರ ಪ್ರಸ್ತಾಪವಿದೆ; A place mentioned in 9th inscription of Hoysala Veeraballala at Amrithapura in Tarikere Taluk Shimoga district;
- ಶಾಸನಗಳಲ್ಲಿ 'ಕೂಂಟನಮಡುವು' ಎಂದು ಉಲ್ಲೇಖಗೊಂಡಿದ್ದು, 'ಕೂಟನಮಡುವು' ಎಂದು ಬಳಕೆಯಲ್ಲಿದೆ;
- ನೀರನ್ನು ಸಂಗ್ರಹಿಸಿಡುವ ಒಂದು 'ಕಟ್ಟೆ' ಎಂದು ಇದಕ್ಕೆ ಅರ್ಥೈಸಬಹುದು; A place of water storage: Dam;
- ವ್ಯಕ್ತಿವಾಚಕ ಸ್ಥಳನಾಮ; ಕೂಟನ ಅಥವಾ ಕೂಂಟನ ಹೆಸರಿನಲ್ಲಿ ನಿಷ್ಪನ್ನಗೊಂಡುದು;
- 'ಮಡು' ಎಂದರೆ ನೀರಿನ ಆಳವನ್ನು ಸೂಚಿಸುವಂತಹ ಪದವಾಗಿದೆ;
- ಪ್ರಾಯಶಃ 'ಕೂಂಟನಮಡುವು' ಪ್ರಾಚೀನವಾಗಿದ್ದು, ಆಮೇಲೆ ಅನುನಾಸಿಕ ರಹಿತ 'ಕೂಟನಮಡುವು' ಚಾಲ್ತಿಗೆ ಬಂದಿರಬಹುದು;
- 'ಕೂಂಟ' ಪದ 'ಕುಂಟ' ರೂಪವಾಗಿ ಮಾರ್ಪಾಡು ಹೊಂದುವುದು ಸಾಧ್ಯವಿರುವುದರಿಂದ ಕೂಂಟನಮಡುವು> ಕುಂಟನಮಡುವು ಆಗಿರಬೇಕು;
- ಇದರಿಂದ ಕೂಂಟ=ಕುಂಟ ಎಂದಾಯಿತು; ಆದರೆ ಕೂಂಟ>ಕೂಟ ಆಯಿತು ಎಂದು ಹೇಳಿ ಕುಂಟ>ಕುಟ ಮಾಡಲಾಗದು.

(E.C- ೧೨; ಚಿಕ್ಕ.ಜಿ.)

ಕೂಟಾಯಿ kūṭāyi :

- ಅಕ್ಕಿ ಮುಡಿಯನ್ನು ಕಟ್ಟಿದ ನಂತರ ಒಂದೆಡೆ ಸಂಗ್ರಹ ಮಾಡುವ ಕ್ರಮ; ಧಾನ್ಯ ಸಂಗ್ರಹಿಸಿಡುವ ಕಣಜ (ದ.ಕ); A granary of rice/paddy package;
- ಕೋಳಿ ಮತ್ತು ಸಣ್ಣ ಮರಿಗಳನ್ನು ಮುಚ್ಚಿಡಲು ಬಳಸುವ ದೊಡ್ಡ ಬುಟ್ಟಿ(ತು.ನಿ). A chicken big basket to cover chicken under it.

ಕೂಟಿ kūṭi :

- ಬಾಗಿಲ 'ನಿಲ' ಮತ್ತು 'ಕದ' ಇವುಗಳ ಮಧ್ಯೆ ಇರುವಂತಹ ಸಾಧನ; ಕದ ಸರಾಗವಾಗಿ ಹಿಂದೆ ಮುಂದೆ ಆಡಲು ಸಹಾಯ ಮಾಡುವ ಕಬ್ಬಿಣದ ಸಾಧನ(ಹಾ.ಜಿ.,ಪಾಂ.ವ್ಯ.ಪ.ಕೋ); A tool that is used to move a door from its connected wooden post;
- ಕೀಲು; ತಿರುಗಣಿ(ಬೆಂ.ಜಿ); An hinge; latch;
- ಬಾಗಿಲಿನ ಕದ(ಮಂಡ್ಯ.ಜಿ., ರಾಮ.ಜಿ); A door latch;
- ಹರಗುವ ಸಾಧನ; ಗಳೆ(ಬಾ.ಜಿ);
- —***ಕೂಟಿದಬ್ಬೆ*** : ಬಾಗಿಲಿಗೆ ಹಾಕುವ ಅಡ್ಡಪಟ್ಟಿ; A crossed band of wooden door;
- —***ಕೂಟಿನ ದಡೆ*** : ಗೋಡೆಗಳ ಮೇಲಿನ ಚೌಕಟ್ಟಿನ ಚಪ್ಪಟೆಯಾದ ತೊಲೆ. A flat beam of upper portion of wall frame.

ಕೂಟು kūṭu :

- ಒಂದು ಬಗೆಯ ನಂಜಿಕೆ ಅಥವಾ ಮೇಲೋಗರ; ಪಲ್ಯ; ಎಲ್ಲ ಬಗೆಯ ತರಕಾರಿ ಜೊತೆಯಲ್ಲಿ ಹಾಕಿ ಮಾಡಿದ ಗಟ್ಟಿಸಾರು; ಗೊಜ್ಜು; A kind of soup that is to be prepared by vegetables, grains;
- ಕರಗ ದೇವತೆಗಳ ಕೂಟ(ಬೆಂ.ಗ್ರಾ.ಜಿ); A meet of Karaga goddess;
- ಹರಿತ ಮಾಡು(ದ.ಕ); To do sharp;
- ಕುಳೆ ತಂಬಾಕು(ಚಿ.ಪ.ಕೋ);
- ಸೊಂಟದ ಕೀಲುಗಳ ರಚನೆ (ತು.ನಿ);

ಕೂಟ್ಗಿ kūṭgi :

ಗೊಂಡರು ದೀಪಾವಳಿ ಮತ್ತು ಸಂಕ್ರಾಂತಿ ಹಬ್ಬಗಳಲ್ಲಿ ವಿಶೇಷವಾಗಿ ತಯಾರಿಸುವ ತಿಂಡಿ(ಉ.ಕ.ಜಿ). A snack of Gonda caste during Diwali and Sankranthi.

ಕೂಡಕಂಜಿ kūḍakanji :

ಇನ್ನೊಬ್ಬರ ವಿಚಾರದಲ್ಲಿ ತಲೆಹಾಕುವ ವ್ಯಕ್ತಿ; ಮೂಗು ತೂರಿಸುವುದು; A person who poses his/her nose in one's matter.

ಕೂಡಗ kūḍaga :

ಮೇಣಿ; ರೈತರು ಹೊಲದಲ್ಲಿ ನೇಗಿಲಿನಿಂದ ಉಳುಮೆ ಮಾಡುವಾಗ ನೆಲಕ್ಕೆ ಒತ್ತಿ ಹಿಡಿಯುವ ನೇಗಿಲಿನ ಭಾಗ(ತು.ಜಿ). A part of plough; It is used to press the plough to ground while ploughing.

ಕೂಡಮ್ರ/ಕುಡಾಮ್ರ kūḍamra/kuḍāmra :

- ಬೇರೆ ಬೇರೆ ಮನೆಯ ಸಾರಿನ ಮಿಶ್ರಣ; Mixed soups or many soups of many houses;
- ದನಕುರಿ ಮೇಕೆಗಳನ್ನು ಕಾಯಲು(ಮೇಯಿಸಲು) ಒಟ್ಟೊಟ್ಟಿಗೆ ಹೋಗುವವರಿಗೆ ಮಧ್ಯಾಹ್ನ ಊಟ ತರಲು ಬಂದವ ಬಟ್ಟೆಯಲ್ಲಿ ಮುದ್ದೆ, ಅನ್ನ ಹಾಕಿಕೊಂಡು ಎಲ್ಲರ ಮನೆ ಸಾರನ್ನು ಒಂದು ಮಡಿಕೆಯಲ್ಲಿ ತುಂಬಿಕೊಂಡು ಬರುವನು;
- ಹೀಗೆ ಎಲ್ಲರ ಮನೆಯ ಬಗೆ ಬಗೆ ಸಾರಿನ ರುಚಿ ಸೇರಿ 'ಕೂಡಾಮ್ರ' ಆಗುವುದು;
- ಕೂಡು+ಆಮ್ರ = ಕೂಡಾಮ್ರ(ತು.ಜಿ); ಆಮ್ರ ಎಂದರೆ ಸಾರು; 'ಆಮ್ರ' ಪದ 'ಆಮ್ಬ' ದಿಂದ ಬಂದಿರಬಹುದು(ಆಂಬ್ರ); ಉಚ್ಚಾರಣೆಯಲ್ಲಿ ಸೌಲಭ್ಯಕಾಂಕ್ಷೆಯ ದೃಷ್ಟಿಯಿಂದ 'ಬ' ಬಿಟ್ಟುಹೋಗಿ, 'ಆಮ್ರ' ಮಾತ್ರ ಉಳಿದಿರಬಹುದು.

ಕೂಡಲಪುರ kūḍalapura :

- ಗುಂಡ್ಲುಪೇಟೆ ತಾಲ್ಲೋಕಿನ ಕ್ರಿ.ಶ.೧೦೪೮ರ ೬೧ನೇ ಶಾಸನದಲ್ಲಿ ಈ ಊರಿನ ಉಲ್ಲೇಖ; A place mentioned in 61th Inscription of 1048 AD in Gundlupet taluk Mysore district;
- ಕೂಡಲ+ಪುರ>ಕೂಡಲಪುರ; 'ಕೂಡಲ' ಎಂದರೆ ಸಂಗಮ, 'ಪುರ' ಎಂದರೆ ಊರು; ಈ ಹಿನ್ನೆಲೆಯಲ್ಲಿ ಬಂದ ಸ್ಥಳನಾಮ ಇದು;
- ವಿಜಯನಗರದ ರೇವಣಾದ್ಯ ಸ್ವಾಮಿಗಳು ಸೋಸಲೆಯಲ್ಲಿ ಶೈವಮತ ನಿರ್ಮಿಸಿದ ಹಿನ್ನೆಲೆಯಲ್ಲಿ

ಹಲವರ ಕುಲದೇವರ ಉಲ್ಲೇಖವಿದೆ; ಈ ಶಾಸನವು ತಾಮ್ರಶಾಸನ;

- ಚೆಂನುವೀರೆಗವಡನು ಈ ಕೂಡಲಪುರದವನು; ಈತನ ಕುಲದೇವರು 'ಯಡುರುಶಿಂದೇಶ್ವರ' ಎಂದು ಉಲ್ಲೇಖವಿದೆ.

(E.C-೩; ಮೈ.ಜಿ.)

ಕೂಡಲಸಂಗಮ kūḍalasangama :

- ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೋಕಿನ ಕ್ರಿ.ಶ.೧೧೬೦ರ ೯೭ನೇ ಶಾಸನದಲ್ಲಿ ಇದರ ಉಲ್ಲೇಖ; A place mentioned in 97th inscription of 1160 AD of Hunagunda Taluk of Bagalakote Dist;
- ಸಂಗಮೇಶ್ವರ ದೇವಾಲಯದಲ್ಲಿ ದೊರೆತ ಶಾಸನ; the inscription found in Sangamesh's Temple;
- ಇಲ್ಲಿನ ಮಹಾಜನರನ್ನು 'ಸಂಗಮೇಶ್ವರ ದೇವರ ವರಪ್ರಸಾದ'ವೆಂದು ಕರೆದು, ಕಾಳೇಶ್ವರ ಮತ್ತು ಆಚೇಶ್ವರ ದೇವರಿಗೆ ಚುಂಚಿನಾದಿ ಸೆಟ್ಟಿ ಮತ್ತು ಅರವತ್ತೊಕ್ಕಲುಗಳು ೧೨ ಮತ್ತರು(ಅಷ್ಟು, ಅಳತೆ) ಭೂಮಿಬಿಟ್ಟ ವಿಚಾರ;
- ಕೂಡಲ ಕಪ್ಪಡಿ ಸಂಗಮ ಎಂದು ಶಾಸನದಲ್ಲಿದೆ;
- ಕೃಷ್ಣ ಮತ್ತು ಮಲಪ್ರಭಾ ನದಿಗಳ ಸಂಗಮವಾದ ಈ ಸ್ಥಳ ಬಸವಣ್ಣನವರ ಸಮಾಧಿಯನ್ನು ಹೊಂದಿದೆ. A place of Basavanna's death; It is a meeting place of Two rivers-Krishna and Malaprabha.

(ಕ.ವಿ.ವಿ.ಶಾ.ಸಂ.೯; ಹಂಪಿ)

ಕೂಡಲೂರು kūḍalūru :

- ಗುಂಡ್ಲುಪೇಟೆ ತಾಲ್ಲೋಕಿನ ಕ್ರಿ.ಶ.೮ನೇ ಶ.ದ ೬೭ನೇ ಶಾಸನದಲ್ಲಿ ಈ ಊರಿನ ಉಲ್ಲೇಖ; A place that mentioned in 67th inscription of 8th century of Gundlupet Taluk Mysore district;
- 'ಕೂಡಲ್'(ಲು)+ಊರು>ಕೂಡಲೂರು; 'ಕೂಡಲ್(ಲು)' ಎಂದರೆ ಜೊತೆ, ಸೇರಿಕೊಳ್ಳುವಿಕೆ; ಸಂಗಮ(ಪ್ರದೇಶ); ಈ ಹಿನ್ನೆಲೆಯಲ್ಲಿ ಈ ಸ್ಥಳನಾಮ ಬಂದಿರಬಹುದು;
- ಗಂಗದೊರೆ ಶ್ರೀಪುರುಷನ ಕಾಲದಲ್ಲಿ ಗುಣಸಾಗರ ತಮ್ಮಡಿಗೆ ಮಾದಪ್ಪಣ್ಣ ಎಂಬಾತನು ಭೂಮಿ ದಾನ ನೀಡಿದನು; ಈ ದಾನದ ವಿಷಯದಲ್ಲಿ ಕೂಡಲೂರ ಉಲ್ಲೇಖವಿದೆ. It belongs to Ganga king Sripurusha;

(E.C-೩; ಮೈ.ಜಿ.)

- ಚಾಮರಾಜನಗರ ತಾಲ್ಲೋಕಿನ ಕ್ರಿ.ಶ.೧೯ನೇ ಶ.ದ ೨೦೮ನೇ ಶಾಸನದಲ್ಲೂ 'ಕೂಡಲೂರು' ಎಂಬ ಊರಿನ ಉಲ್ಲೇಖವಿದೆ; It is also mentioned in 208th inscription of Chamarajanagar Taluk.
- ಇದರಲ್ಲಿ ಕೋಣಪ್ಪ ನಾಯಕನು ಕೇಶವದೇವರಿಗೆ ನಂದಾದೀಪಕ್ಕೆ 'ಕೂಡಲೂರ' ಎರೆಹೊಲವನು ದಾನವಾಗಿ ಕೊಟ್ಟ ವಿವರವಿದೆ.

(E.C-೪; ಮೈ.ಜಿ.)

ಕೂಡಲೂರುಸಂಗಮ kūḍalūru sangama:

- ರಾಯಚೂರು ಜಿಲ್ಲೆ ಮಾನ್ವಿ ತಾಲ್ಲೋಕಿನ ಕ್ರಿ.ಶ.೧೫೨೧ರ ೧೯ನೇ ಶಾಸನದಲ್ಲಿ ಇದರ ಉಲ್ಲೇಖವಿದೆ; A place mentioned in 19th inscription of 1521 of Manvi Taluk, Raichur district;
- ವಿಜಯನಗರದ ಕೃಷ್ಣರಾಯನ ಆಳ್ವಿಕೆ; It belongs to the rule of krishnadevaraya;
- ಕೃಷ್ಣರಾಯನು ಕೂಡಲೂರು ಸಂಗಮದಲ್ಲಿ ತನ್ನ ಪತ್ನಿಯರಾದ ಚೆಂನಾದೇವಿಯಿಂದ ಗೋದಾನ ಮತ್ತು ತಿರುಮಲದೇವಿಯಿಂದ ಕನಕದಾನವನ್ನು ಮಾಡಿಸಿ ರತ್ನಧೇನು ಮಹಾದಾನ ಮಾಡಿಸಿ, ಮನುವೆ(ಮಾನ್ವಿ) ಸೀಮೆಯ ಚೀಕಲಪರವಿಯನ್ನು ತಿರುವಂಗಳನಾಥ ದೇವರಿಗೆ ದಾನ ನೀಡಿದ ವಿಚಾರವಿದೆ;
- ಈ ಸಂಗಮವು ಕೃಷ್ಣವೇಣಿ ಮತ್ತು ಭೀಮರತಿಯ ಸಂಗಮವಾಗಿದೆ;
- ಕೂಡಲೂರು ಮತ್ತು ಸಂಗಮ ಎಂಬ ಎರಡೂ ಹೆಸರುಗಳು ಬಳಕೆಯಲ್ಲಿವೆ;
- ವಾಸ್ತವವಾಗಿ 'ಕೂಡಲು' ಎಂದರೇ ಸಂಗಮ ಎಂದು ಅರ್ಥ, ಅದು ಗೊತ್ತಾಗದೇ ಯಾವುದೋ ಕಾಲದಲ್ಲಿ ಅದಕ್ಕೆ 'ಸಂಗಮ' ಎಂಬುದನ್ನು ಸೇರಿಸಿ

'ಕೂಡಲೂರು ಸಂಗಮ' ಎಂದು ಕರೆದಿರಬಹುದು; ಇದು 'ದ್ವಿರುಕ್ತಿ' ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

(ಕ.ವಿ.ವಿ.ಶಾ.ಸಂ.೭; ರಾ.ಜಿ)

ಕೂಡವಳಿ/ಕೂಡುವಳಿ/ಕೂಡಾವಳಿ kūḍavaḷi/kūḍuvaḷi/kūḍāvaḷi :

- ಹೆಂಡತಿ ಸತ್ತಾಗ ಅಥವಾ ಮೊದಲ ಹೆಂಡತಿಗೆ ಸಂತಾನ ಆಗದಿದ್ದಾಗ ಆ ಗಂಡಸು ಎರಡನೆಯ ಮದುವೆಯಾಗುವುದಕ್ಕೆ ಬದಲಾಗಿ ವಿಧವೆಯನ್ನು ಅಥವಾ ಗಂಡ ಬಿಟ್ಟವಳನ್ನು(ವಿಚ್ಛೇದನ ಪಡೆದವಳನ್ನು) ಶಾಸ್ತ್ರೋಕ್ತವಾದ ರೀತಿಯಲ್ಲಿ ಪತ್ನಿಯಾಗಿ ಸ್ವೀಕರಿಸುವ ಪದ್ಧತಿ; A system of marriage; a widower or a widow marries another widow or widower after they lost their life partners-vice-versa;
- ಎಲ್ಲ ವರ್ಗದವರಲ್ಲಿಯೂ ಈ ಕ್ರಮವಿದೆ; ಇದನ್ನು 'ಕೂಡಿಕೆ' ಎನ್ನುವರು; This kind of marriage system is in all castes or sub caste in folk society;
- ಲಂಬಾಣಿಗರಲ್ಲಿ ಕೂಡಿಕೆಯನ್ನು ಬಾಂಗ್ ಘುಗರಿ ಎನ್ನುವರು; 'ಬಾಂಗ್' ಎಂದರೆ, ಮದುವೆಯ ಶಾಸ್ತ್ರ 'ಘುಗರಿ' ಎಂದರೆ ವಧುವಿನ ತಲೆಯ ಇಕ್ಕೆಲಗಳಿಗೆ ಮುತ್ತೈದೆಯರು ತೊಡಿಸುವ ಆಭರಣ;
- ಒಡಿಗರ ಸಮುದಾಯದಲ್ಲಿ ಗಂಡ ಸತ್ತ, ಹೆಂಡತಿ ಸತ್ತವರಿಬ್ಬರೂ ಹಿರಿಯರ ಒಪ್ಪಿಗೆ ಪಡೆದು ಗಂಡು ಹೆಣ್ಣಿಗೆ ಬೆಂಡಿನಿಂದ ಮಾಡಿದ ಮಣಿಹಾರದ ಗುಂಡನ್ನು ತಾಳಿಯಾಗಿ ಕಟ್ಟುವುದು.

ಕೂಡವಳ್ಳಿ kūḍavaḷḷi :

- ಚಿಕ್ಕಮಗಳೂರು ತಾಲ್ಲೋಕಿನ ಹಂಚರಹಳ್ಳಿ ಪ್ರದೇಶದಲ್ಲಿ ದೊರೆತ ಕ್ರಿ.ಶ.೧೨೮೩ರ ೧೫೩ನೇ ಶಾಸನದಲ್ಲಿ(ಹೊಯ್ಸಳ ಮುಮ್ಮಡಿ ನರಸಿಂಹನ) ಉಲ್ಲೇಖ; A place, that mentioned in 153rd inscription of 1283 AD of Hancharahally, Chikkamagalur Taluk; It belongs to Hoysala 3rd Narasimha;
- ಕೂಡವಳ್ಳಿ=ಕೂಡ(ಡು) +ಪಳ್ಳಿ>ಕೂಡವಳ್ಳಿ(ಪ>ವ);
- ಹೆಸರೇ ಸೂಚಿಸುವಂತೆ 'ಕೂಡವಳ್ಳಿ' ಎರಡು ಪ್ರದೇಶಗಳು ಸಂಧಿಸುವಿಕೆ ಆಗಿರಬಹುದು;
- 'ಸಂಗಮಸ್ಥಳ' ಎಂದು ಇದನ್ನು ಕರೆಯಬಹುದು;
- 'ಅವಳಿ ಹಳ್ಳಿಗಳು' ಎಂಬ ಕಲ್ಪನೆಯೆ? ಸ್ಪಷ್ಟವಾಗುವುದಿಲ್ಲ.

(E.C- ೧೧; ಚಿಕ್ಕ.ಜಿ.)

ಕೂಡಸಾಲ kūḍasāla :

- ಜೋಡುಸಾಲು; ಕೂಡು ಸಾಲು; A pair lane; A line that combine other line;
- ಒಂದು ಹೊಲದ ಕೊನೆಯ ಸಾಲು ಮತ್ತೊಂದು ಹೊಲದ ಆರಂಭದ ಸಾಲು; A joining line in ploughing land;
- ಮಧ್ಯ ಕೂಡಿರುವ ಪೈರಿನ ಸಾಲು; ಅಳತೆಗಿಂತ ಹತ್ತಿರ ಇರುವ ಹೊಲದ ಕೊನೆ ಭಾಗ(ಧಾ.ಜಿ.); ಪ್ರ: 'ಆ ಕೂಡ ಸಾಲಿಗೆ ನಮ್ಮ ಹೊಲ ಆತು'.

ಕೂಡಾ kūḍā :

ಮಂಗಗಳಲ್ಲಿನ ಒಂದು ಪ್ರಭೇದ(ಉ.ಕ.ಜಿ). A monkey species.

ಕೂಡಾಸೆ kūḍāse :

- ಹೆಣ್ಣಿನವರು, ಗಂಡಿನವರು ಒಟ್ಟಾಗಿ ಸೇರಿ ಹೆಣ್ಣು ಗಂಡುಗಳನ್ನು ಹಸೆ ಮೇಲೆ ಕೂರಿಸುವುದು; One of the nuptial ceremony or unite the bride and bridegroom on a seat at nuptial night after their marriage;
- ಶೋಭನದ ದಿನ ಈ ಕಾರ್ಯ ನೆರವೇರುವುದು (ಬೆ.ಜಿ);
- ಕೂಡ+ಹಸೆ>ಕೂಡ+ಹ್+ಅಸೆ>ಕೂಡ+Ø+ಅಸೆ>ಕೂಡಾಸೆ.

ಕೂಡಿ kūḍi :

- ಜೊತೆಯಾಗಿ; ಸಂಗಡ; ಒಂದಾಗು; ಪ್ರ: 'ಅವರಿಬ್ಬರೂ ಯಾವಾಗಲೂ ಕೂಡಿಯೇ ಇರುತ್ತಾರೆ'; To bring together; In pairs comradeship;
- ತುದಿ; ಚಿಗುರು; A bud or sprouts;

- —***ಕೂಡಿಕೊಂಡು ಉಣ್ಣುವುದು/ಕೂಡುಂಬೊ*** : ರಕ್ತಸಂಬಂಧಿಕರಲ್ಲಿ ವ್ಯಕ್ತಿಯ ಸಾವಿನ ನಂತರದ ದಿನಗಳಲ್ಲಿ ಮಾಡುವ ಒಂದು ಆಚರಣೆ; Feeding by gathering at one place; A ritual of death will be done a few days after a death of a person;
- ಸಾವಿನ ನಂತರದ ಮೂರು ತಿಂಗಳೊಳಗಾಗಿ ವಿವಿಧ ಅಡುಗೆ, ಅಂಬಲಿ ಮಾಡಿಕೊಂಡು ಸತ್ತವರ ಮನೆಗೆ ಬಂಡಿ ಹೂಡಿಕೊಂಡು ಗುಂಪಾಗಿ ಹೋಗುವರು;
- ಮನೆಯವರೊಂದಿಗೆ ಮಾತನಾಡಿ ಅವರಿಗೆ ಧೈರ್ಯ ತುಂಬಿ ತಮ್ಮ ಸಹಾಯ, ಸಹಕಾರದ ಭರವಸೆ ಕೊಟ್ಟು ತಾವು ತಂದ ಅಡುಗೆ ಅಂಬಲಿಯನ್ನು ಆ ಮನೆಯವರಿಗೆಲ್ಲ ಉಣಿಸಿ ತಾವೂ ಉಂಡು ಬರುವ ಆಚರಣೆ(ಉ.ಕ.ಜಿ).
- —***ಕೂಡಿ ಬೀಳು*** : ಅಗಲಿದವರು ಅಥವಾ ಬೇರೆಯಾಗಿರುವವರು ಒಂದಾಗುವಿಕೆ; *ಪ್ರ:* 'ಬ್ಯಾರಿದ್ದ ಅಣ್ಣ ತಮ್ಮಂದಿರು ಮತ್ತೆ ಕೂಡಿ ಬಿದ್ದರಲ್ಲ'; To live under one roof after a long gap of relations; Unite once again the separated relations;
- ಸಂಗ್ರಹಗೊಳ್ಳು;
- —***ಕೂಡಿಗ್ಗೋಡು*** : ತುದಿಯಲ್ಲಿ ಕೂಡಿಕೊಂಡಿರುವ ಎತ್ತಿನ ಕೋಡುಗಳು; ಇವಕ್ಕೆ 'ಪಟ್ಟಿಕೋಡು' ಎಂಬ ಹೆಸರು ಇದೆ(ಚಿ.ಪ.ಕೋ); Tips of horns of cattle;
- —***ಕೂಡಿಗೆ*** : ಕೊಡಗಿನ ಒಂದು ಪಟ್ಟಣ; ಎರಡು ನದಿಗಳು ಸೇರುವ ಊರು(ಕೊಡ.ಜಿ); A city of Coorg; A place of meeting two rivers;
- —***ಕೂಡಿಗೆ ಆಟ*** : ಯಕ್ಷಗಾನ ಕಲಾವಿದರು ವರ್ಷದಲ್ಲಿ ನಿರ್ದಿಷ್ಟ ಅವಧಿಯಲ್ಲಿ ತೆಗೆದುಕೊಳ್ಳುವ ರಜೆಯ ಕೊನೆಯ ದಿನಗಳಲ್ಲಿ ಎಲ್ಲರೂ ಒಟ್ಟಾಗಿ ಸೇರಿ ನೀಡುವ ಯಕ್ಷಗಾನ ಬಯಲಾಟದ ಪ್ರದರ್ಶನ (ದ.ಕ); A stage play of Yakshagana is to be staged by the artists who will take leave once in a year;
- —***ಕೂಡಿಕೊಂಡೋರು*** : ವಿವಾಹ ಬಾಹಿರ ಸಂಬಂಧದಿಂದ ಕೂಡಿಕೊಂಡು ಜೀವನ ಸಾಗಿಸುವವರು(ಚಿ.ಪ.ಕೋ); The pair who leads the life of an illegal relations or out of marriage system of society; Prohibited marriage system;
- —***ಕೂಡಿಕ್ಕು*** : ಗಳಿಸಿದ ಹಣವನ್ನು ಸಂಗ್ರಹಿಸುವ ವಿಧ; Miserliness; to collect money;
- ಬೇಕಾದವರನ್ನು ಒಂದೆಡೆ ಸೇರಿಸು(ಚಿ.ಪ.ಕೋ);
- —***ಕೂಡಿಬರು*** : ಹೊಂದಿಕೆಯಾಗು; ಸಂಬಂಧಗಳನ್ನು ಬೆಳೆಸಲು ಬೇಕಾದ ಎಲ್ಲ ಅಂಶಗಳು ಸರಿಯಾಗಿ ಹೊಂದಿಕೆಯಾಗುವುದು; Gather, accumulate; To match the relations, to match the people, to continue their relations;
- —***ಕೂಡಿ ಕಟ್ಟೆ ಕೊರಮ*** : ಹಗ್ಗ ಮತ್ತು ಬಲೆಗಳನ್ನು ತಯಾರಿಸಿಕೊಡುವ ಕೊರಮ ಅಲೆಮಾರಿ ಸಮುದಾಯ; A Korama caste who manufacture ropes and nets;
- —***ಕೂಡಿಕೊಳ್ಳೊ ಆಟ*** : ಸರಿ ಸಂಖ್ಯೆಯ ಆಟಗಾರರು ಇದ್ದು ಚಪ್ಪಾಳೆ ಹಾಕುವುದರ ಮೂಲಕ ಒಬ್ಬನನ್ನು ಸೋಲಿಸುವರು; A game of clapping;
- ಸೋತ ವ್ಯಕ್ತಿಯ ಜೊತೆ ಇರುವ ವ್ಯಕ್ತಿ ಒಬ್ಬಂಟಿಗನಾಗುವನು; ಆ ವ್ಯಕ್ತಿಯನ್ನು ಮುಟ್ಟಲಿಕ್ಕೆ ಹೋದಾಗ ಇನ್ನೊಂದು ಜೋಡಿಯ ವ್ಯಕ್ತಿ ಬಂದು ಅವನನ್ನು ಸೇರುತ್ತಾನೆ; ಮತ್ತೆ ಒಬ್ಬಂಟಿಗನಾದ ವ್ಯಕ್ತಿಯನ್ನು ಮುಟ್ಟಲಿಕ್ಕೆ ಹೋಗುವನು; ಹೀಗೆ ಆಟ ಮುಂದುವರೆಯುವುದು;
- —***ಕೂಡಿ ಮೀಯುವುದು*** : ನಾಮಧಾರಿಗಳ ವಿವಾಹ ಸಂದರ್ಭದ ಆಚರಣೆ; ವರನಿಗೆ ಕಳಶದ ನೀರೆರೆಯುವಾಗ ವರನ ಅಕ್ಕ ತಂಗಿಯರನ್ನು ಒಬ್ಬರ ನಂತರ ಒಬ್ಬರನ್ನು ನಿಲ್ಲಿಸಿ ಅವರ ಮೇಲೂ ಕಳಶದ ನೀರನ್ನು ಎರೆಯುವುದು; A marriage ritual of Namadhari castes to bath the sisters one after another;
- 'ಕೂಡಿ ಮೀಯುವ' ಆಚರಣೆಯ ಕೊನೆಯಲ್ಲಿ ಅಕ್ಕತಂಗಿಯರಿಗೆ ಹೊಸ ವಸ್ತ್ರವನ್ನು ಉಡುಗೊರೆಯಾಗಿ ನೀಡುವರು; wear new clothes to those bathed sisters;
- —***ಕೂಡಿ(ಕುಡಿ) ಬಾಳೆ ಎಲೆ*** : ಬಾಳೆ ಎಲೆಯ ತುದಿಯ ಭಾಗ; ಇದು ಎಳೆಯದಾಗಿದ್ದು

ಸುಳಿಯಿಂದ ಹೊರ ಬರುವಂತಿರುತ್ತದೆ; ಬಹಳ ಮೃದುವಾಗಿರುವುದು; The edge of banana leaf;

- ***—ಕೂಡಿಸೋ ಆಟ*** : ಒಂದು ಒಳಾಂಗಣ ಆಟ; ಚೌಕಾಬಾರದಂತೆ ಅನೇಕ ಮನೆಗಳಿದ್ದು ಅವುಗಳಲ್ಲಿ ಹರಳು ಸರಿಸುತ್ತಾ ಆಡುವ ಆಟ. An indoor game.

ಕೂಡು kūḍu :

- ಒಂದಾಗು; ಸೇರು; ಬೆರೆಯುವಿಕೆ; ಜೊತೆಯಾಗು; To assemble together, to come together;
- ಸಂಭೋಗಿಸು; ರತಿಕ್ರೀಡೆ; *ಪ್ರ:* 'ಆಸೆಗೆ ದಾಸಿ ಕೂಡಿ ಕೂಸಿನ ಹೇಲು ಬಳಿದಂಗೆ'*(ಗಾ)*; have sex;
- ಒಳಗೆ ಸೇರಿಸು; *ಪ್ರ:* 'ಅವರನ್ನು ಮನೆ ಒಳಗೆ ಕೂಡಿಕೊಂಡರು', 'ಕತ್ತೆ ಕೋಣೇಲಿ ಕರಿಬೆಕ್ಕು ಕೂಡಿದಂಗೆ'*(ಗಾ)*; let them inside;
- ಕುಳಿತುಕೊಳ್ಳು; ಆಸೀನವಾಗು; Be seated;
- ಅಂಕಿಗಳನ್ನು ಒಂದಕ್ಕೊಂದು ಸೇರಿಸು; *ಪ್ರ:* 'ನಾಲ್ಕು ಮೂರು ಕೂಡು'; to add/addition;
- ಹೊಂದಿಕೆಯಾಗು; ಸಾಧ್ಯವಾಗು; to match possibility;
- ಒಂದು ಬಗೆಯ ತೆರಿಗೆಯ ವಿಧ;
- ಎರಡು, ಮೂರು ದಾರಿಗಳು, ನದಿಗಳು ಕೂಡುವ ಸ್ಥಳ; a place of meeting roads/rivers etc;
- ತಮಿಳು, ಮಲೆಯಾಳಂ, ತೆಲುಗುಗಳಲ್ಲಿಯೂ 'ಕೂಡು' ಪದವೇ ಬಳಕೆಯಲ್ಲಿದೆ.
- ***—ಕೂಡು ಬೇಟೆ*** : ಹಗಲು ಬೇಟೆ; ದೊಡ್ಡ ಬೇಟೆ; ಸಮೂಹ ಬೇಟೆ; A big hunting, mass hunting;
- ***—ಕೂಡು ಸಾಗುವಳಿ :*** ಕೊಡೊಕ್ಕಲು; ಎಲ್ಲರೂ ಒಂದೆಡೆ ಕೃಷಿ ಚಟುವಟಿಕೆಯಲ್ಲಿ ತೊಡಗಿ ಫಲ ತೆಗೆದುಕೊಳ್ಳುವಿಕೆ; Mass farming, community cultivation;
- ***—ಕೂಡು ಹುಬ್ಬು*** : ಎರಡು ಹುಬ್ಬುಗಳ ಮಧ್ಯದಲ್ಲಿ ಜಾಗ ಬಿಡದಂತೆ ಮೂಗಿನ ಮೇಲೆ ಎರಡು ಹುಬ್ಬು ಕೂಡಿಕೊಂಡಿರುವುದು; Connected eyebrows without gap between two brows;
- ***—ಕೂಡುಕೊಟ್ಟಿಗೆ*** : ಊರಿನ ದನಗಳನ್ನು ಕೂಡಿ ಹಾಕುವ ಸ್ಥಳ; ಒಂದು ರೀತಿಯಲ್ಲಿ ಕೂಡು ಕುಟುಂಬ ಇದ್ದ ಹಾಗೆ; ಕೂಡು ಕೊಟ್ಟಿಗೆ; ಊರವರೆಲ್ಲರ ದನಗಳು ಹಗ್ಗ ಮೂಗುದಾರ ಏನೂ ಇಲ್ಲದೆ ಊರ ಆಸುಪಾಸಿನ ಬಯಲಿನಲ್ಲಿ ಕಾಡಿನಲ್ಲಿ ಮೇದು ಊರಿಗೆ ಮರಳಿದ ಮೇಲೆ ರಾತ್ರಿ ಇಲ್ಲಿ ಕೂಡಿ ಹಾಕುತ್ತಾರೆ; A cattle shed/hut where the village cattle are gathered;
- ಉಳುಮೆಗೆ, ಬಂಡಿ ಎಳೆಯಲು ಇತ್ಯಾದಿ ಕೆಲಸಕ್ಕೆ ಬರುವ, ಸುಳಿ ಶುದ್ಧ ಇರುವ, ದನಗಳನ್ನು ತಮ್ಮ ಮನೆಯ ಕೊಟ್ಟಿಗೆಯಲ್ಲಿ ಸಾಕುವರು(ಮೈ.ಜಿ, ಉ.ಕ.ಜಿ);
- ***—ಕೂಡು ಗಂಟು*** : ಎರಡು ತುದಿಯನ್ನೂ ಒಟ್ಟಿಗೆ ಹಿಡಿದು ಹಾಕುವ ಗಂಟು; ಈ ಗಂಟು ದಪ್ಪವಿದ್ದು ನೇಯಲು ಕಷ್ಟವಾಗುವುದು(ಬೆಂ.ಗ್ರಾ.ಜಿ); A knot of two edges of thread or rope;
- ***—ಕೂಡು ದೀಪ*** : ಮನೆಯ ಮುಂಭಾಗದ ಗೋಡೆಗಳಲ್ಲಿ ಇಲ್ಲವೆ ತುಳಸಿ ಕಟ್ಟೆಯ ಒಳಭಾಗದಲ್ಲಿ ಗೂಡು ಮಾಡಿದ್ದು ಹಬ್ಬ ಹರಿದಿನಗಳಲ್ಲಿ ದೀಪ ಹಚ್ಚುವರು; A lightning lamp that lit up during festival at homes;
- ಇವು ಹೆಚ್ಚಾಗಿ ಉತ್ತರ ಕರ್ನಾಟಕದ ಭಾಗದಲ್ಲಿ ಕಾಣುತ್ತವೆ; ದೀಪಾವಳಿ ಸಂದರ್ಭದಲ್ಲಿ ವಿಶೇಷವಾಗಿ ಅಲಂಕರಿಸುವರು;
- ***—ಕೂಡುಗೋಲು*** : ಕುಡ್ಲು, ಮಚ್ಚು; ಅರ್ಧಚಂದ್ರಾಕಾರದ್ದು; ಮರದ ಹಿಡಿ ಇದ್ದು ಬೆಳೆ ಕೊಯ್ಲು ಮಾಡಲು ಬಳಕೆ; A sickle in crescent shape to use for cutting crops;
- ***—ಕೂಡೋಲಿ/ಕೂಡೊಲೆ*** : ಇದ್ದಿಲು ಮತ್ತು ಕಟ್ಟಿಗೆ ಎರಡನ್ನು ಬಳಸಿ ಅಡುಗೆ ಮಾಡಲು ಅನುಕೂಲಕರವಾಗಿರುವುದು; An oven of wooden fuel;
- ನಿಧಾನವಾಗಿ ಬೇಯಬೇಕಾದ ಪದಾರ್ಥಗಳನ್ನು ಇಡುವ ಒಲೆ; An oven used for boiling things slowly;
- ಅವಿಭಕ್ತ ಕುಟುಂಬ(ಚಿ.ಪ.ಕೋ); *ಪ್ರ:* 'ಅಣ್ಣ ತಮ್ಮಂದಿರರು ಕೂಡೊಲಿಯ ಬಾಳ್ವೆ';

- **—ಕೂಡು ಕುಟುಂಬ** : ಅವಿಭಕ್ತ ಕುಟುಂಬ; ಅಣ್ಣತಮ್ಮಂದಿರೆಲ್ಲ ಒಂದೇ ಮನೆಯಲ್ಲಿ ಒಗ್ಗಟ್ಟಿನಿಂದ ಇರುವುದು; A joint family where the sisters and brothers of more than two generation lived together with their farming and diary activity;
- ಕೃಷಿಕಾರ್ಯ, ಹೈನುಗಾರಿಕೆ ಮುಂತಾದ ಕೆಲಸವನ್ನು ಎಲ್ಲರೂ ಸೇರಿ ನಿರ್ವಹಿಸುವುದು;
- 'ಒಗ್ಗಟ್ಟಿನಲ್ಲಿ ಬಲವಿದೆ' ಎಂಬ ಮಾತಿನಂತೆ ಹೆಚ್ಚು ಆದಾಯಗಳಿಸುವಿಕೆಯೂ ಸಾಧ್ಯ;
- ಅವಿಭಕ್ತ ಕುಟುಂಬದಲ್ಲಿ ಮಕ್ಕಳನ್ನು ಬೆಳೆಸುವುದರಿಂದ ಅವರಲ್ಲಿ ಉತ್ತಮ ಸಂಸ್ಕಾರ ಬೆಳೆಯುವುದು;
- ಇವತ್ತಿನ ಕಾಲದಲ್ಲಿ ವಿಭಕ್ತ ಕುಟುಂಬ ಪರಿಕಲ್ಪನೆ ಹೆಚ್ಚಾಗಿ ಕೂಡು ಕುಟುಂಬಗಳೆಲ್ಲ ಸಣ್ಣ ಕುಟುಂಬವಾಗುತ್ತಿವೆ;
- **—ಕೂಡುಣ್ಣು** : ಜೊತೆಯಲ್ಲಿ ಕುಳಿತು ಊಟಮಾಡುವಿಕೆ; ಸಹಪಂಕ್ತಿ ಭೋಜನ; To eat by sitting side by side without any negative complexes such as untouchabality;
- **—ಕೂಡುಬೇಟೆ** : ಸಮೂಹಬೇಟೆ; ಹಗಲು ಬೇಟೆ; ದೊಡ್ಡ ಬೇಟೆ; Mass hunting, day hunting, big hunting;
- **—ಕೂಡು ಬಲೆ ಬೇಟೆ** : ಇದರಲ್ಲಿ ಬಲೆಯು ಪ್ರಮುಖ ಪಾತ್ರ ನಿರ್ವಹಿಸುತ್ತದೆ; ದೊಡ್ಡ ಬಲೆಯನ್ನು ಬೀಸಿ ಹತ್ತಾರು ಜನರು ಸೇರಿ ಮಾಡುವ ಬೇಟೆ; ಬೇಟೆಯಾಡಿದ ಪ್ರಾಣಿಯ ಮಾಂಸವನ್ನು ಎಲ್ಲರೂ ಸಮನಾಗಿ ಹಂಚಿಕೊಳ್ಳುವರು. An hunting with hunting nets; In this hunting hunters shares the meat of hunted animal equally themselves.

ಕೂಡ್ಲೂರು kūḍluru :

- ಕ್ರಿ.ಶ.೧೦೩೦ರ ಮಳೂರುಪಟ್ಟಣ ಗ್ರಾಮದ ಶಾಸನವೊಂದರಲ್ಲಿ 'ಕೂಡಲೂರಿ'ನ ಉಲ್ಲೇಖವಿದೆ; A place that mentioned an inscription of 1030AD at Maluru city;
- ನಿಸರ್ಗವಾಚಿ ಸ್ಥಳನಾಮ ಇದಾಗಿದೆ;
- ಈ ಗ್ರಾಮವು ಕಣ್ವ ನದಿಯ ದಂಡೆಯಲ್ಲಿ ನಿರ್ಮಾಣಗೊಂಡಿದೆ; It is situated on the river bank of Kanva;
- ಪ್ರಾಚೀನ ಕಾಲದಿಂದ ಈ ಗ್ರಾಮದ ಸಮೀಪ ಕಣ್ವನದಿಗೆ ಹಳ್ಳವೊಂದು ಸೇರುತ್ತಿದ್ದ ಕಾರಣದಿಂದಾಗಿ, ನದಿಯ ಕೂಡಲಿನ(ಸಂಗಮ) ಪಕ್ಕದಲ್ಲಿದ್ದ ಊರು ಎಂದು ಗುರುತಿಸಲು 'ಕೂಡಲೂರು' ಎಂಬ ಹೆಸರು ಬಂದಿರುವಂತಿದೆ.

(E.C-IX; ಬಿ.ಎಲ್.ರೈಸ್)

ಕೂಣಿ kūṇi :

- ಮೀನು ಹಿಡಿಯುವ ಸಾಧನ; Tool of fishing;
- ಬಿದಿರು ಅಥವಾ ತೆಂಗಿನ ಕಡ್ಡಿಯಿಂದ ಹೆಣೆದದ್ದು; ಬಿದಿರಿನ ಬುಟ್ಟಿಯಂತಹ ಬಲೆ; It is weaved by bamboo and coconut leafy sticks;
- ಎರಡು ಮೂರು ಅಡಿ ಉದ್ದವಿದ್ದು, ಒಂದು ಬದಿಯಲ್ಲಿ ದೊಡ್ಡ ತೆರೆದ ಬಾಯಿ ಇದ್ದು ಇನ್ನೊಂದು ಬದಿ ಚಿಕ್ಕದಾಗಿರುತ್ತದೆ;
- ಗದ್ದೆಯ ಬದು, ಹಳ್ಳ, ಕೆರೆಗಳಲ್ಲಿ ಇದನ್ನು ಇಟ್ಟು ಮೀನು ಹಿಡಿಯುವರು;
- ಇದರಲ್ಲಿ ಅನೇಕ ಬಗೆಗಳಿವೆ.

ಕೂತುಗೊ kūtugo :

- ಕುಳಿತಿಕೊ; ಕುಂತುಕೊ; To sit, to be seated;
- ಕುಳಿತಿಕೊ>ಕುಳ್ತುಕೊ>ಕುಂತುಕೊ>ಕುತುಕೊ> ಕೂತುಕೊ>ಕೂತುಗೊ ಎಂದಾಗಿದೆ; ಪದದ ಅದಿಯ 'ಕು' ಕ್ರಮೇಣ ಉಚ್ಚಾರಣೆಯಲ್ಲಿ ದೀರ್ಘವಾಗಿ 'ಕೂ' ಎಂದಾಗಿದ್ದು ಅಂತ್ಯಾಕ್ಷರ 'ಕ' ಕಾರಕ್ಕೆ 'ಗ' ಕಾರ ಬಂದಿದೆ.
- 'ಕುಳ್ತುಕೊ' ರೂಪ 'ಕುಂತುಕೊ' ರೂಪ ಪಡೆಯುವಾಗ ಪದಮಧ್ಯದ 'ಳ' ಕಾರ ಅನುನಾಸಿಕತ್ವ ಪಡೆದಿದೆ, 'ಲ'ಕಾರ ವ್ಯಾಕರಣದ ಪರಿಭಾಷೆಯಲ್ಲಿ ಅನನುನಾಸಿಕ, ಅನುನಾಸಿಕ ಎರಡೂ ಆಗುವ ಸೌಲಭ್ಯ 'ಳ' ಕಾರಕ್ಕೂ ಪ್ರಾಪ್ತವಾಗಿದೆ; ಏಕೆಂದರೆ ಲ>ಳ ಆಗುವುದು ಸಾಮಾನ್ಯ; 'ಕುಂತುಕೊ' >ಕೂತುಕೊ ಆಗಿ ಪರಿವರ್ತನೆಯಾದಾಗ, ಅದರಲ್ಲಿನ 'ಅನುನಾಸಿಕ' ಬಿಟ್ಟುಹೋಗಿ ಅದರ ಪರಿಹಾರವಾಗಿ

ಹಿಂದಿನ 'ಕು' ಹ್ರಸ್ವ 'ಕೂ' ದೀರ್ಘವಾಗಿ ಮಾರ್ಪಟ್ಟಿದೆ.

ಕೂತುಮಂಡಿ kūtumaṇḍi :

- ಯಕ್ಷಗಾನದ ಕುಣಿತದ ಬಗೆ; ತುದಿಗಾಲಲ್ಲಿ ಕುಳಿತು ಮಂಡಿಗಳು ಕೂಡಿಕೊಂಡಿರುವಂತೆ ಮಾಡುವ ಕುಣಿತ; ಮಂಡಿಕುಣಿತ; A kind of dancing step in Yakshagana, a knee dance;
- ಯಕ್ಷಗಾನದಲ್ಲಿ ಗಂಡುವೇಷ; ಸ್ತ್ರೀವೇಷದ ಕುಣಿತಗಳು ಹೀಗಿರುತ್ತವೆ (ಉ.ಕ.ಜಿ).

ಕೂತು ಮದುವೆ kūtu maduve :

- ಮಲೆನಾಡು ಭಾಗದ ಅತ್ಯಂತ ಸರಳ ವಿವಾಹ ಪದ್ಧತಿ; A very simple marriage system of Malenadu region;
- ಹೆಣ್ಣಿನ ಮನೆಯಲ್ಲಿ ಯಾವ ಆಡಂಬರವೂ ಇಲ್ಲದೆ ನಡೆಯುವ ಮದುವೆ; A modesty marriage in bride's house without showiness or pomp;
- ಗಂಡು ಕುಂಟನೊ, ಕುರುಡನೊ ಆಗಿದ್ದರೆ ಕೂತು ಮದುವೆ ನಡೆಯುತ್ತಿತ್ತು;
- ಗಂಡು ಬಡವನಾಗಿದ್ದರೂ ಹೆಣ್ಣಿನ ಮನೆಯಲ್ಲಿಯೇ ಕೂತು ಮದುವೆ ನಡೆಯುತ್ತಿತ್ತು.

ಕೂದಲು kūdalu :

- ಕೇಶ; ಕುರುಳು; ತಲೆಯ ಮೇಲ್ಭಾಗದಲ್ಲಿ ಬೆಳೆದಿರುವ ಉದ್ದನೆಯ ಕಪ್ಪು ಕುರುಳು; ತಲೆಕೂದಲು; Hair that grow thickly on the head portion of human body;
- ಮೈಮೇಲಿನ ಚರ್ಮದಲ್ಲಿ ಇರುವ ಸಣ್ಣ ಕೂದಲು ಮೈರೋಮ; hair on the body;
- ಕಣ್ಣಿನ ರೆಪ್ಪೆಯ ಅಂಚಿನಲ್ಲಿರುವುದು ಕಣ್ಣು ರೆಪ್ಪೆ ಕೂದಲು; eyelashes;
- ಕೂದಲಿನಿಂದ ಸೌಂದರ್ಯ ಹೆಚ್ಚುವುದರೊಂದಿಗೆ ರಕ್ಷಣೆಯ ಅಂಗ(ಸಾಧನ)ವಾಗಿಯೂ ಕಾರ್ಯ ನಿರ್ವಹಣೆ; a defence unit for eye dust;
- ಕೂದಲು ಅತಿಮಾನುಷ ವಸ್ತುವಾಗಿ ಜನಪದ ಕಥೆಗಳಲ್ಲಿ ಪಾತ್ರನಿರ್ವಹಿಸುತ್ತದೆ; ಒಂದೊಂದು ಕೂದಲಿಗೂ ಮುತ್ತು ಪೋಣಿಸುವಿಕೆ ಅವರ ಶ್ರೀಮಂತಿಕೆ ಮತ್ತು ಅಣ್ಣ ತಂಗಿಯರ ಪ್ರೇಮ ತಿಳಿಸುವುದು; ಉದ್ದ ಕೂದಲಿನ, ಗಿಡ್ಡಕೂದಲಿನ ರಾಜಕುಮಾರಿಯರ ಕತೆಯಲ್ಲಿ ಉದ್ದ ಕೂದಲಿನವಳ ವಿಶಾಲಗುಣ ಗಿಡ್ಡ ಕೂದಲಿನವಳ ಸಣ್ಣಗುಣವನ್ನು ಚಿತ್ರಿಸಲಾಗಿದೆ; Hair is depicted as super human thing in folk stories;
- ಮಾಟ ಮಂತ್ರದಲ್ಲಿಯೂ ಕೂದಲನ್ನು ಬಳಸುವರು; ತ: ಕೂಂದಲ್, ಮ: ಕೂಂದಲ್, ತುಳು: ಕುಜಲ್, ಕುಜಾಲ್; ಪ್ರ: 'ಇವನ ಮಾತು ಬೆಣ್ಣೆಯಲ್ಲಿ ಕೂದಲು ತೆಗೆದಂತೆ'; Hair is used in black magic;
- —***ಕೂದಲು ತೆಗೆಯುವ ಶಾಸ್ತ್ರ*** : ಮಗುವಿಗೆ ಐದು, ಒಂಬತ್ತು ತಿಂಗಳಿನಲ್ಲಿ ಇಲ್ಲವೇ ವರ್ಷದ ನಂತರ ಹುಟ್ಟಿದ ಕೂದಲು ತೆಗೆಸುವ ಕ್ರಮ; 'ಮುಡಿ ತೆಗೆಯುವುದು'; A ritual of shaving hair on the head of an nine month baby or the above old child at the first time after its birth;
- ಮನೆ ದೇವರಿಗೆ ಮುಡಿ ಸಲ್ಲಿಸುವರು; ಇಷ್ಟದೇವರಿಗೂ ಹರಕೆ ರೂಪದಲ್ಲಿ ಕೂದಲು ಕೊಡುವ ಕ್ರಮ; ತಿರುಪತಿ ತಿಮ್ಮಪ್ಪನ ಆದಾಯ ತಲೆಕೂದಲಿನಿಂದ(ಮುಡಿ ಹರಕೆ) ಕೋಟಿ ರೂಪಾಯಿಗಳಲ್ಲಿ ಇದೆ; An offer of head shaving;
- ಕೆಲವು ಸಮುದಾಯಗಳಲ್ಲಿ ಸೋದರಮಾವನ ತೊಡೆ ಮೇಲೆ ಮಗು ಕೂರಿಸಿ ಕೂದಲು ತೆಗೆಯುವರು;
- ಪಂಚಮುಡಿ; ಐದು ಕಡೆಗಳಲ್ಲಿ ಕೂದಲು ತೆಗೆದು ಹರಕೆ ಸಲ್ಲಿಸುವಿಕೆ;
- —***ಕೂದಲು ಹಣ್ಣಾಗೈತಿ*** : ಬಿಳಿಕೂದಲು ವಯಸ್ಸಿನ ಸಂಕೇತ; ಕೂದಲು ನೆರೆಯುವಿಕೆಯಿಂದ ವ್ಯಕ್ತಿಯ ವಯಸ್ಸನ್ನು ಅಂದಾಜಿಸುತ್ತಿದ್ದರು; ಇಂದು ಹೆಣ್ಣು ಮಕ್ಕಳಲ್ಲಿಯೇ ಬಾಲನೆರೆ ಬರುವುದನ್ನು ಕಾಣುತ್ತೇವೆ; Becoming gray or white hair is a symbol of old age;
- —***ಕೂದಲು ಬಿಲ್ಲಿ*** : ಸ್ತ್ರೀಯರು ತಲೆಗೂದಲಿಗೆ ಧರಿಸುವ ಬಳೆಯಾಕಾರದ ಆಭರಣ; ಬಂಗಾರದಿಂದ ತಯಾರಿಸಿದ್ದು. A bangle shaped jewel worn by ladies to their hair.

ಕೂದಲು ಕೊಂಕದಂತೆ kūdalu koŋkadante :

- ಜನಪ್ರಿಯ ನುಡಿಗಟ್ಟು; ಶಾರೀರಿಕ ಜಾನಪದದ ಭಾಗ; ಕ್ಷೇಮಕಾತರ ಚಿಂತನೆ ನುಡಿಗಟ್ಟಿನ ಉದ್ದೇಶ; ವ್ಯಕ್ತಿಯೊಬ್ಬನನ್ನು ನೋಡಿಕೊಳ್ಳುವುದರ ಬಗ್ಗೆ ಜನ/ಸಮುದಾಯ/ಇನ್ನೊಬ್ಬ ವ್ಯಕ್ತಿ ತೆಗೆಯುವ ಉದ್ಗಾರ ರೂಪಿ ಅಭಿವ್ಯಕ್ತಿ; A popular Indian idiom in physio-folk section;
- ತೊಂದರೆಯಾಗದಂತೆ, ಅಪಾಯ ಸಂಭವಿಸದಂತೆ, ಕಷ್ಟ ಬರದ ಹಾಗೆ, ಹುಷಾರಾಗಿ, ಚೆನ್ನಾಗಿ, ಅನುಕೂಲಕರವಾಗಿ– ಇತ್ಯಾದಿ ಅರ್ಥಗಳಿವೆ; ಶಾರೀರಿಕವಾಗಿ ತೊಂದರೆಯಾಗದಂತೆ, ವ್ಯಕ್ತಿತ್ವ ಮುಕ್ಕಾಗದ ಹಾಗೆ; It reflects a safe life of a person who is being looked after by someone else of the family of community etc;
- ರಕ್ಷಣೆಗೆ ಸಂಬಂಧಿಸಿದ ನುಡಿಗಟ್ಟು; ದೈಹಿಕ ಅಥವಾ ಮಾನಸಿಕ ಆಗಬಹುದು; ನಡವಳಿಕೆ, ಸಾಮಾಜಿಕಪಾತ್ರ, ಸಾಂಸ್ಕೃತಿಕ ನಿಲುವು, ಪಾರಂಪರಿಕ ಸಂಪತ್ತು– ಈ ಅರ್ಥದಲ್ಲಿ ವ್ಯಕ್ತಿಗೆ ಕೇಡಾಗದಂತೆ/ ಸಮಸ್ಯೆಯೊದಗದಂತೆ ಭಾವಿಸುವ ಸಂದರ್ಭಗಳೂ ಈ ನುಡಿಗಟ್ಟಿನ ಹಿಂದೆ ಇರಬಹುದು; To look after someone without physical harmness; A defensive idiom whether it is physical, mental or psychological;
- ಪ್ರ: 'ಅವರನ್ನು ನಾವು ಕೂದಲು ಕೊಂಕದಂತೆ ನೋಡಿಕೊಂಡಿದ್ದೆವು'; ಇದರಲ್ಲಿನ 'ಅವರು' ಪದ ಸಂದರ್ಭ, ಸನ್ನಿವೇಶ, ಸಾಧನೆಯ ಅವಲೋಕನಕ್ಕೆ ಸಂಬಂಧಿಸಿದಂತೆ ಬಳಕೆಯಾಗಬಹುದು;
- ಇಲ್ಲಿ 'ಕೂದಲು' ಎನ್ನುವ ಪದ ನೇರವಾಗಿ ಭಾಗಿಯಾಗುವುದಿಲ್ಲ; ಕೊಂಕಿದ ಕೂದಲಿನ ವರ್ಣನೆ ಈ ನುಡಿಗಟ್ಟಿನ ಉದ್ದೇಶವಲ್ಲ; ಇದು ವಾಸ್ತವಕ್ಕೆ ಅನನ್ವಯ; 'ಅನ್ಯೋಕ್ತಿ'–ಬೋರೊಂದನ್ನು ಕುರಿತು ಹೇಳಿರುವಂಥದು; ಸಾಮಾನ್ಯವಾಗಿ ಕೂದಲಿನ ಲಕ್ಷಣ ಕೊಂಕು, ಆದರೆ ಇಲ್ಲಿ ಅದು ಮುಖ್ಯವಲ್ಲ; 'ಕೂದಲು' ಇಲ್ಲಿ ಒಂದು ಸಂಕೇತ ಅಷ್ಟೆ; ಒಂದು ಕೂದಲನ್ನೂ ನೋಯಿಸುವುದಿಲ್ಲ ಎಂದರೆ, ಆ ವ್ಯಕ್ತಿಗೆ ಕಿಂಚಿತ್ತೂ ಕಷ್ಟ ಕೊಡದ ಹಾಗೆ ರಕ್ಷಿಸುತ್ತೇವೆ ಎಂದು ಅರ್ಥವಾಗುತ್ತದೆ; Here the meaning is absence and the intention of describing hair is not important or 'motto' of this idiom;
- ಈ ಮಾತು ಹಿರಿಯರು, ತಂದೆತಾಯಿಗಳು, ದೊಡ್ಡವ್ಯಕ್ತಿಗಳನ್ನು ಕುರಿತಂತೆ ಆಡಿರುವುದು ಸ್ಪಷ್ಟವಾಗುತ್ತದೆ; This idiomatic speech reflects on the nourishing in one's family;
- ಇಲ್ಲಿನ ಇನ್ನೂ ಒಂದು ಧ್ವನಿಯೆಂದರೆ, ಕೂದಲು ಕೊಂಕದಂತೆ ನೋಡಿಕೊಳ್ಳುತ್ತೇವೆ/ ನೋಡಿಲೊಂಡಿದ್ದೇವೆ ಎನ್ನುವುದರಲ್ಲಿ 'ಹಾಗೆ ನೋಡಿಕೊಂಡಿಲ್ಲ' ಎಂಬೂದು ಅಂತರ್ಗತ ಅರ್ಥವಾಗಬಹುದು; ಮತ್ತೆ ಇದು ಕಾಲ ಮತ್ತು ಸಂದರ್ಭವನ್ನು ಅಪೇಕ್ಷಿಸುತ್ತದೆ;
- ಇಲ್ಲಿ 'ಕೂದಲು' ಮತ್ತು 'ಕೊಂಕು' ಪದಗಳಿವೆ; ಕೂದಲಿನ ಮೂಲ ರೂಪ 'ಕೂದಲ್'; ಸಂಸ್ಕೃತದಲ್ಲಿ 'ಕುಂತಲ' ಪದವಿದೆ; ದ್ರಾವಿಡ ಭಾಷೆಗಳಲ್ಲೆಲ್ಲ ಸಮಾನ ಪದಗಳು ದೊರೆಯುತ್ತವೆ; ತಮಿಳಿನಲ್ಲಿ ಕುಟಿಲ್, ಕೂಂದಲ್, ಕೂರಲ್ ರೂಪಗಳಿವೆ; ಮಲೆಯಾಳಂನಲ್ಲಿ 'ಕೂಂದಲ್' ರೂಪವೇ ಇದೆ; 'ಕೊಂಕು' ಪದಕ್ಕೆ ಬಾಗು, ಗುಂಗುರು, ವಕ್ರ, ಡೊಂಕು ಮೊದಲಾದ ಅರ್ಥಗಳಿವೆ; ತೆಲುಗಿನಲ್ಲಿ 'ಕೊಂಕಿ' ಪದವಿದೆ; ಕನ್ನಡದಲ್ಲಿ 'ಕೊಂಕು' ರೂಪಕ್ಕೆ 'ಕೊಂಗು' ರೂಪವೂ ಬಳಕೆಯಲ್ಲಿದೆ; 'ಕೊಂಕು ಕೂದಲ್' ಎಂಬ ಮಾತು ಬಳಕೆಯಲ್ಲಿರುವುದನ್ನು ನೋಡುತ್ತೇವೆ.

ಕೂದಾಕು kūdāku :

- ಕತ್ತರಿಸು; ಕೊಯ್ದು ಹಾಕು; ಗಿಡದಿಂದ ಬೇರ್ಪಡಿಸು; To cut, to chop up something to make separate from its connected branches;
- ಕೂದು + ಹಾಕು > ಕೂದು + ಹ್ + ಆಕು> ಕೂದು + Ø + ಆಕು> ಕೂದಾಕು;
- ಕುಯ್ದು > ಕೂದು; ವಿಜಾತೀಯದ್ವಿತ್ವ(ಯ್ದು) ಸಜಾತಿಯ(ದು) ಆಗಿದೆ; ಹಾಗೆ ಆಗುವಾಗ ದ್ವಿತ್ವ ಹೊರಟುಹೋಗಿ, ಅಂದರೆ 'ಯ್' ಬಿದ್ದು ಹೋಗಿ ಅದರ ಪರಿಹಾರಾರ್ಥವಾಗಿ ಹಿಂದಿನ ಅಕ್ಷರ 'ಕು' ದೀರ್ಘ 'ಕೂ' ಆಗಿದೆ.

ಕೂನ kūna :

- ಗುರುತು; ಕುರುಹು; ಪರಿಚಯ; Trace, denotation; Emblem, bend, crooked;
- ಬಾಗಿರುವಿಕೆ; ಬಗ್ಗು; ವಕ್ರ;
- ಕುಬ್ಜತೆ; ಕುಳ್ಳು; ತ.ಮ : ಕೂನು, ತು.ತೆ : ಗೂನು;
- —*ಕೂನಜ್ಜಿ* : ಗೂನು ಬೆನ್ನಿನ ಅಜ್ಜಿ; ವಯಸ್ಸಾದಂತೆ ಬೆನ್ನಿನ ಮೂಳೆ ಬಾಗಿರುವಿಕೆ; ಕತೆಗಳಲ್ಲಿ ಇವಳ ಪಾತ್ರ ಹೆಚ್ಚು; hump backed grandmother;
- ಮೂಲರೂಪ 'ಕೂನ್' ಎಂದು; ಇದು 'ಅ' ಸ್ವರಾಕ್ಷರ ಸೇರಿ 'ಕೂನ' ಆದಂತೆ, 'ಉ' ಸೇರಿ ಕೂನು ಆಗುವುದೂ ಉಂಟು.

ಕೂನಿ kūni :

- ದನಕರುಗಳಿಗೆ ನೀರು ಮತ್ತು ಕಲಗಚ್ಚನ್ನು ಕುಡಿಸಲು ಬಳಸುವ ಬಳಪದ ಕಲ್ಲಿನಿಂದ ಅಥವಾ ಮಣ್ಣಿನಿಂದ ಮಾಡಿದ ಅಗಲ ಬಾಯಿ ಉಳ್ಳ ಪಾತ್ರೆ(ಹಾ.ಜಿ); A wide opened soap stone vessel that is used to water cattle; Water bowls; Cooking vessel, that have been carved in soap stone or steatite;
- ಬೆಲ್ಲದ ಪಾಕವನ್ನು ಹಾಕುವ ಸಾಧನ; An iron device that is used to pour jaggory;
- ಮಣ್ಣಿನ ಕೊಳವೆಯಾಕಾರದ ಸಾಧನ; ಧಾನ್ಯ, ಕಾಳುಗಳನ್ನಿಡಲು ಬಳಕೆ(ರಾಮ.ಜಿ);
- ರಾಟಾಳಕ್ಕೆ ಕಟ್ಟಿದ ಮಡಿಕೆ(ಕಲ.ಜಿ); A cylendric clay tube that is used for preserving grain's feeding tool/device;
- ಹಂದಿ ಮೇವಿಗಾಗಿ ಮಾಡಿದ ಕಲ್ಲಿನ ಬಾನಿ(ಹಾವೇ.ಜಿ); stone structure that is used to feed pigs;
- ಕೂಲೆ (ಕೋ.ಜಿ).

ಕೂನಿ ಸೆರಗು kūni seragu :

ಸೀರೆಯ ಕೊನೆಯ ಭಾಗದ ಸೆರಗಿನ ತುದಿ(ಬೆ.ಜಿ). The edge of a Saree.

ಕೂನಿ ಹಂಚು/ಕೂಣಿ ಹೆಂಚು kūnihancu/ kūṇihencu :

- ಕೊಳವೆಯಾಕಾರದ ಹಂಚು; ಒಳಲೆ ಹಂಚು; ಬೆನ್ನಂಚು; Tube shaped tiles; Hump tiles;
- ಎರಡು ಕಡೆಯ ಮೇಲ್‌ಭಾಗದ ಛಾವಣಿಯಲ್ಲಿ ಹೊದಿಸುವ ಹಂಚು; Topping tiles of both sides of the roof;
- ಬೇರೆ ಬೇರೆ ದಿಕ್ಕಿನಿಂದ ಒಂದೆಡೆ ಸೇರುವ ಹಂಚಿನ ಮೇಲೆ ಮಳೆ ನೀರು ಸುರಿಯದಂತೆ ಹೊದಿಸುವ ಹಂಚು(ತು.ಜಿ).

ಕೂನೆ ಮುಹೂರ್ತ kūne muhūrtha :

ಅಡಿಕೆ ತೋಟದಲ್ಲಿ ಕೊಯ್ಲು ಪ್ರಾರಂಭಿಸುವ ಮೊದಲು ಅಡಿಕೆ ಮರವನ್ನು ಪೂಜಿಸಿ ಮೊದಲ ಗೊನೆಯನ್ನು ದೇವರಿಗೆ ಅರ್ಪಿಸುವ ಆಚರಣೆ. An offering celebration of areca nut cropping season at areca plantaion.

ಕೂಪ kūpa :

- ತಗ್ಗು; ಹಳ್ಳ; ಗುಳಿ; ತೂತು; A pit; A digging pit;
- ಬಾವಿ; ನೀರಿನ ಗುಂಡಿ; A well; A hole;
- ಕೂವೆಯ ಕಂಬ; A masted rope;
- ನೇಣಿ ಹಗ್ಗ;
- 'ಕೂಪ' ಪದಕ್ಕೆ 'ಕೂವ', 'ಕುವ್ವೆ' ರೂಪಗಳೂ ಇವೆ(ಕಿಟ್ಟೆಲ್).

ಕೂಪರ್ ನೇಗಿಲು kūpar nēgilu :

ಎರಡು ರೆಕ್ಕೆಗಳಿದ್ದು, ಕಬ್ಬಿನ ಪಟದ ಮಣ್ಣನ್ನು ಪೂರ್ತಿಯಾಗಿ ಆ ಕಡೆ ಈ ಕಡೆ ತಳ್ಳಿ ಸಡಿಲಗೊಳಿಸುವ ಅಗಲವಾದ ಕಬ್ಬಿಣದ ನೇಗಿಲು (ಮಂಡ್ಯ.ಜಿ). Two winged iron plough that is used to make aside the soil between two lines of sugar cane crop.

ಕೂಪ್ಪಗಲ್ಲ kūppagalla :

- ನಂಜನಗೂಡು ತಾಲ್ಲೋಕಿನ ಕ್ರಿ.ಶ.೧೪ನೇ ಶ.ದ ೨೦೬ನೇ ಶಾಸನದಲ್ಲಿ ಇದರ ಉಲ್ಲೇಖ; A place mentioned in the 206th inscription of 14th century of Nanjanagudu taluk Mysuru District;

- 'ಕೂಪ್ಪ' ಎಂದರೆ 'ಮಾಳ' ಎಂದು ಅರ್ಥ; 'ಕೂಪ್ಪಗಲ್ಲ' ಎಂದರೆ ಕಲ್ಲುಗಳಿಂದ ತುಂಬಿದ ಮಾಳ;
- ಪ್ರಕೃತಿ ವಾಚಿ ಸ್ಥಳನಾಮ;
- ತೆರಿಗೆನಾಯಕನ ಮಗ ನಂಡ ಎಂಬ ವೀರ 'ಕೂಪ್ಪಗಲ್ಲ' ಬವರದಲ್ಲಿ ಕಾದು ವೀರಮರಣವನ್ನಪ್ಪಿದನು; ಇದನ್ನು ಮೆಚ್ಚಿ ಗಂಗೆಯ ದಂಡಾಯಕರು ವೀರನಿಗೆ ಗೌರವ ಸಲ್ಲಿಸಿ ವೀರಗಲ್ಲನ್ನು ನಿಲ್ಲಿಸಿದ ವಿವರವಿದೆ.

(E.C-೩; ಮೈ.ಜಿ.)

ಕೂಬಿ kūbi :

- ಬಹಳ; Multi; Enough;
- ಗುಮಾನಿ(ಚಿ.ಪ.ಕೋ); Doubts;
- ಗುರುತು(ಶಿ.ಜಿ); Identity.

ಕೂಮ kūma :

- ಪೀಚಾಳು; ಮೈಗಳ್ಳ; ಹೆಂಡತಿಯನ್ನು ಪರರಿಗೆ ಬಿಟ್ಟು ಕೊಟ್ಟವನು; Physically thin; A man who leaves one's wife to another man;
- ಅಶಕ್ತ; ದುರ್ಬಲ; Weak person;
- ಆಮೆ(ಉ.ಕ.ಜಿ.); turtle, tortoise;
- ನಪುಂಸಕ; ಹೆಣ್ಣಿಗ(ಕ.ಜಾ.ನಿ). Impotence; Effeminacy.

ಕೂರ್‌ಕೂರ್ kūrkūr :

- ಗ್ರಾಮೀಣ ಜನಪದ ಆಟ; A rural folk game;
- ಎರಡು ಗುಂಪುಗಳಲ್ಲಿ ಸಮಾನ ಆಟಗಾರರಿದ್ದು ಅಂಗಳದಲ್ಲಿ ಬೂದಿಯನ್ನು ಗರಟೆ(ಕಂಠ) ತುಂಬಿ ತರುವರು;
- ಎರಡೂ ಗುಂಪಿನವರು ಒಂದೇ ಬಾರಿಗೆ ಆಟ ಆರಂಭಿಸಿ ಬೂದಿಯಲ್ಲಿ ಗುಪ್ಪೆಯಿಡುತ್ತಾ ಹೋಗುವರು;
- ಮತ್ತೊಬ್ಬರು ಕೂರ್‌ಕೂರ್ ಎನ್ನುತ್ತಾ ಗುಪ್ಪೆ ತುಳಿಯುತ್ತಾ ಬರುವರು;
- ಒಟ್ಟಿಗೆ ಆಟ ನಿಲ್ಲಿಸಿ ಗುಪ್ಪೆ ಲೆಕ್ಕ ಹಾಕಿ ಯಾರು ಹೆಚ್ಚು ಗುಪ್ಪೆ ಹಾಳು ಮಾಡಿರುತ್ತಾರೆ ಅವರು ಗೆದ್ದಂತೆ(ಉ.ಕ.ಜಿ).

ಕೂರ kūra :

- ನಾಯಿ; ಗಂಡುನಾಯಿ; Male dog, not bitch;
- ಕೊಳಕು ಬಟ್ಟೆಯಲ್ಲಿ ವಾಸಿಸುವ ಹೇನು; ಕೂರೆ; a louse that lives in dirty cloth;
- ಹರಿತವಾದ. Something sharpen.

ಕೂರಗ kūraga :

- ಬಾಗಿಲನ್ನು ತೆಗೆದು ಹಾಕುವುದಕ್ಕೆ ಅನುಕೂಲವಾಗುವಂತೆ ಅಳವಡಿಸಿರುವ ತಿರುಗಣಿಯ ಗೂಟ; A pully peg/ Wedge that connects to a door to close and open easily;
- ಇಡೀ ಕದ ಅದರ ಮೇಲೆ ನಿಂತಿರುತ್ತದೆ; ಕದದ ಎಡಭಾಗದ ಅಂಚಿನ ತಳಭಾಗದಲ್ಲಿ ಇದನ್ನು ಹಾಕಿರುತ್ತಾರೆ;
- ಬಾಗಿಲನ್ನು ಸರಾಗವಾಗಿ ತೆಗೆದು ಮುಚ್ಚಲು ಅನುಕೂಲ;
- ಇತ್ತೀಚೆಗೆ ಆಧುನಿಕ ತಂತ್ರಜ್ಞಾನದಲ್ಲಿ ಕೂರಗ ಕಣ್ಮರೆಯಾಗಿದೆ; ಪ್ರ: 'ಹೆಂಡತಿಯಿಲ್ಲದ ಮನೆ ಕೂರಗವಿಲ್ಲದ ಕದ ನಿಷ್ಪ್ರಯೋಜಕ'.

ಕೂರವಳ್ಳಿ kūravaḻḻi :

- ಅರಸೀಕೆರೆ ತಾಲ್ಲೋಕಿನ ತಿರುಪತಿ ಎಂಬ ಗ್ರಾಮದ ದೇವಾಲಯದಲ್ಲಿ ದೊರೆತಿರುವ ಕ್ರಿ.ಶ.೧೭೪೪ರ ಒಂದು ತಾಮ್ರ ಶಾಸನದಲ್ಲಿ 'ಕೂರವಳ್ಳಿ'ಯ ಉಲ್ಲೇಖವಿದೆ; A village mentioned in a copper inscription of that has found in the temple of Tirupathi village of Arasikere taluk;
- 'ಕೂರವಳ್ಳಿ' ಎಂಬುದರ ವಿಗ್ರಹ ರೂಪ ಕೂರ+ಹಳ್ಳಿ; 'ಹಳ್ಳಿ' 'ಪಳ್ಳಿ'ಯಿಂದ ಬಂದುದು, ಪ>ಹ ಆಗುವ ಹಾಗೆಯೇ ಪ>ವ ಕೂಡ ಆಗುತ್ತದೆ; ಆ ಪ್ರಕಾರ 'ಕೂರಹಳ್ಳಿ'>'ಕೂರವಳ್ಳಿ' ಆಗಿದೆ;
- 'ಕೂರ' ಎನ್ನುವುದರ ಸಂವಾದಿ ಪ್ರಾಚೀನ ರೂಪ 'ಕೂಟ್' ಎಂದಿದೆ; ಆದ್ದರಿಂದ 'ಕೂರ' ಎನ್ನುವುದಕ್ಕೆ ಅನ್ನ/ಆಹಾರ ಎಂದು ಅರ್ಥವಾಗುತ್ತದೆ;
- ಆದ್ದರಿಂದ ಆಹಾರ ಸಂಬಂಧಿವಾಚಿ ಸ್ಥಳನಾಮವಾಗಿ ಇದು ಕಂಡಿದೆ.

(E.C- ೧೦; ಹಾ.ಜಿ.)

ಕೂರಸಿಗನ ಮರ kūrasigana mara :

- ಅಪೋಸ್ಯೆನೇಸಿ ಹೊಲೊರಿನ ಆಂಟಡಿ ಸಿಂಟ್ರಿಕ್; A bush smelly flower;
- ಕುಡ್ಸಾಲೆ, ಬೆಪ್ಪಾಲೆ, ಕೊಚ್ಚಿಮರ ಇತ್ಯಾದಿ ಹೆಸರುಗಳಿವೆ;
- ಆಲಂಕಾರಿಕ ಪೊದೆ ಸಸ್ಯ; ಸುವಾಸನೆಭರಿತ ಹೂ; A bush that is used for decoration;
- ತೊಗಟೆಯಲ್ಲಿ ಔಷಧಿಗುಣ; ಜಂತುನಾಶಕ, ಜ್ವರನಿವಾರಕ, ಶಕ್ತಿವರ್ಧಕ ಗುಣ; It is a medicinal plant that heals fever;
- ಬಾಚಣಿಗೆ, ಪೆಟ್ಟಿಗೆ, ಚಿತ್ರಗಳಕಟ್ಟು, ಆಟದ ಸಾಮಗ್ರಿ, ಊರುಗೋಲು, ನೇಗಿಲು, ಮಣೆ ತಯಾರಿಕೆಗೆ. It is used for manufacturing combs, boxes, play toys and ploughs.

ಕೂರಳ್ kūraḷ :

- ಹರಳಾಟದ ಒಂದು ಬಗೆ;
- ಒಂದು ಕೈಯಲ್ಲಿ ಐದರಳನ್ನು ತೆಗೆದುಕೊಂಡು ಒಂದು ಹರಳನ್ನು ಹಾರಿಸಿ ನಾಲ್ಕು ಹರಳನ್ನು ನೆಲದಿಂದ ತುಸು ಎತ್ತರದಿಂದ ಬಿಡುವರು; A kind of crystal stone, played by putting on the fingers by spinning upward;
- ನಂತರ ಕೈಯಲ್ಲಿದ್ದ ಹರಳನ್ನು ಹಾರಿಸುತ್ತಾ ಒಂದೊಂದೇ ಹರಳನ್ನು ಹೆಕ್ಕಬೇಕು;
- ಹೀಗೆ ಎರಡು, ಮೂರು, ನಾಲ್ಕು, ಐದು ಹರಳು ಎತ್ತುವುದು; ಆಟ ಮುಂದುವರೆಯುತ್ತದೆ (ಉ.ಕ.ಜಿ); ***ನೋಡಿ:*** ಅಣ್ಣೆಕಲ್ಲಾಟ.

ಕೂರಿ kūri :

- ಹೆಣ್ಣು ನಾಯಿ ಮರ; A bitch tree;
- ಮೀನು ಹಿಡಿಯಲು ಉಪಯೋಗಿಸುವ ತೆಂಗಿನಗರಿ; ಬಿದಿರಿನ ಸಲಿಕೆ ಅಥವಾ ಸಪೂರ ಬಿಳಲುಗಳಿಂದ ಹೆಣೆದ ಸಾಧನ; A device that is made up of bamboo creeper's, used for fishing;
- ಸ್ತಂಭಾಕಾರದ್ದು(ದ.ಕ); It is pillar shaped log.

ಕೂರಿಗೆ kūrige :

- ಬಿತ್ತನೆಗೆ ಬಳಸುವ ಸಾಧನ; Sowing plough;
- ವೈವಿಧ್ಯಮಯ ಕೂರಿಗೆಗಳು ಕೃಷಿಯಲ್ಲಿ ಬಳಕೆಯಲ್ಲಿವೆ; There are many types of sowing ploughs and used in farming;
- ಮಿಶ್ರಬೆಳೆ ಬಿತ್ತನೆಯಲ್ಲಿ ಹೆಚ್ಚು ಉಪಯೋಗ;
- ಸುಮಾರು ಐದರಿಂದ ಆರು ಅಡಿ ಉದ್ದದ ಮರದ ದಿಂಡಿಗೆ ಆರರಿಂದ ಏಳುಗೆರೆ ಎಳೆಯುವ ಹಲ್ಲುಗಳನ್ನು ಜೋಡಿಸಿರುತ್ತಾರೆ;
- ಕೂರಿಗೆ ಮಧ್ಯೆ ಭಾಗದಲ್ಲಿ ಮೇಳಿಯನ್ನು ಹಾಕಿರುವರು; ಮೇಳಿಯ ನೇರಕ್ಕೆ ಮೇಲುಗಡೆ ಒಂದು ಬಟ್ಟಲಿದ್ದು ಅಲ್ಲಿಂದ ಕೊಳವೆ ಕೂರಿಗೆಯಾ ದಿಂಡಿನವರೆಗೆ ಜೋಡಿಸಿದ್ದು ರಚನೆ;
- ಬಿತ್ತನೆ ಬೀಜವನ್ನು ಬಟ್ಟಲಿನಲ್ಲಿ ಹಾಕಿದರೆ ಅವು ಎಲ್ಲ ಗೂಟಗಳಲ್ಲಿಯೂ ಭೂಮಿಗೆ ಬೀಳುತ್ತವೆ;
- ಗೆರೆ ಎಳೆಯುವ ಹಲ್ಲುಗಳು ಬಿತ್ತನೆ ಬೀಜದ ಮೇಲೆ ಮಣ್ಣು ಬೀಳುವಂತೆ ಗೆರೆ ಹೊಡೆದುಕೊಂಡು ಹೋಗುತ್ತದೆ;
- ಮರದ ದಿಮ್ಮಿಯಿಂದ ಎರಡು ಉದ್ದನೆಯ ಗಳಗಳಿಂದ 'ಈಯ'ಗಳನ್ನು ಮಾಡಿ ಅವನ್ನು ಹಗ್ಗದ ಮೂಲಕ ನೊಗಕ್ಕೆ ಬಿಗಿಯುವರು; ನೊಗಕ್ಕೆ ಕಟ್ಟಿದ ಎತ್ತುಗಳು ಕೂರಿಗೆಯನ್ನು ಎಳೆದುಕೊಂಡು ಹೋಗುತ್ತವೆ;
- ಬಿತ್ತನೆಯಲ್ಲಿ ಒಬ್ಬ ಕೂರಿಗೆಯನ್ನು ಹಿಡಿದಿದ್ದರೆ ಮತ್ತೊಬ್ಬ ಬಟ್ಟಲಿಗೆ ಬಿತ್ತನೆ ಕಾಳು ಹಾಕುವನು;
- —***ಕೂರಿಗೆ ಕಟ್ಟೆ*** : ಕೂರಿಗೆಯಲ್ಲಿ ಬಿತ್ತನೆ ಮಾಡುವಾಗ ಕೂರಿಗೆ ಬಟ್ಟಲು ಅಥವಾ ಕೊಳವೆಯಲ್ಲಿ ಕಾಳು ಕಟ್ಟಿಕೊಂಡಾಗ ಉದ್ದಾನೆ ಕಡ್ಡಿಯಿಂದ ಕಟ್ಟಿಕೊಂಡದ್ದನ್ನು ಸರಿಸಿ ಕಾಳು ಸರಾಗವಾಗಿ ಇಳಿಯುವಂತೆ ಮಾಡಲು ಬಳಕೆ; A wooden stick that used in sowing with sowing plough;
- —***ಕೂರಿಗೆ ಕಲ್ಲು*** : ಒಂದೇ ಸಮನಾಗಿ ಎಲ್ಲ ರಂಧ್ರದಿಂದಲೂ ಬಿತ್ತನೆ ಬೀಜ ಬರುವುದು; The releasing of sowing seeds equally through the tiny holes of sowing plough;
- —***ಕೂರಿಗೆ ತಲೆ/ಕೂರಿಗೆ ಬಟ್ಟಲು*** : ರಾಗಿ ಬಿತ್ತಲು ಬಳಸುವ ಕಿರುಗಣ್ಣಿನ ಕೂರಿಗೆ ಬಟ್ಟಲು; ಎಂಟು ರಂಧ್ರ ಹೊಂದಿರುತ್ತದೆ; A small holed /eyed

sowing wooden bowl that is used for sowing Millet;

- ***—ಕೂರಿಗೆ ಅಳತೆ*** : ನಾಲ್ಕೆಕರೆ ಅಳತೆ; ಎರಡು ಎತ್ತುಗಳು ಒಂದು ಕೂರಿಗೆಯಿಂದ ದಿನವಿಡೀ ಬಿತ್ತುವಷ್ಟು ಅಳತೆ ಜಮೀನು(ಬೆಂ.ಗ್ರಾ.ಜಿ); A measurement of four acres of land;
- ***—ಕೂರಿಗೆ ಹಬ್ಬ*** : ಬಿತ್ತಿದ ಫಸಲು ಕೈ ಸೇರಲೆಂದು ಮಾಡುವ ಹಬ್ಬ; A festival of crops;
- ***—ಕೂರಿಗೆ ದಾಳು*** : ಕೂರಿಗೆ + ತಾಳು; ಉಚ್ಚಾರಣೆಯಲ್ಲಿ ತ>ದ ಆಗಿದೆ;
- ಕೂರಿಗೆಯ ಹಲುಬೆಯಾಕಾರದ ಮರದ ದಿಂಡಿಗೆ(ಎಜ್ಜ) ರಂಧ್ರ ಮಾಡಿ ಅದರ ತಳಭಾಗಕ್ಕೆ ಹದವಾಗಿ ಒರೆದು ಸಿದ್ಧಗೊಳಿಸಿ ಅಳವಡಿಸಿರುವ ಒಂದೂವರೆ ಗೇಣುದ್ದದ ಬಿದಿರಿನ ಗೂಟಗಳೇ ತಾಳುಗಳು; A one and half span measured bamboo wedge / peg that connects to that round shaped log of the plough by holing as foot stalk;
- ಈ ತಾಳುಗಳ ಆಧಾರದ ಮೇಲೆ ಕೂರಿಗೆಯನ್ನು ವರ್ಗೀಕರಿಸುವರು;
- ಮೂರು ತಾಳಿನ ಕೂರಿಗೆ, ಆರು ತಾಳಿನ ಕೂರಿಗೆ, ಒಂಬತ್ತು ತಾಳಿನ ಕೂರಿಗೆ, ಹನ್ನೆರಡು ತಾಳಿನ ಕೂರಿಗೆ ಇತ್ಯಾದಿ;
- ಮೇಲುಭಾಗದಲ್ಲಿ ಅದೇ ರಂಧ್ರಗಳಿಗೆ ಲಗತ್ತಿಸಿದ ಸೆಡ್ಡೆ (ಕೊಳವೆಯಿರುವ ಬಿದಿರಿನ ಕೋಲುಗಳು)ಗಳನ್ನು ಮೇಲಿರುವ ಕೂರಿಗೆಯ ಬಟ್ಟಲಿನ ರಂಧ್ರಗಳಿಗೆ ಜೋಡಿಸಿ ಅಲುಗಾಡದಂತೆ ಹುರಿಯಿಂದ ಬಿಗಿದು ಕಟ್ಟಿರುವರು;
- ಇದರ ಬಟ್ಟಲಿನ ಮೂಲಕ ರಾಗಿ ಬಿಟ್ಟರೆ ಅದು ಸೆಡ್ಡೆಗಳ ಮುಖಾಂತರ ಕೆಳಗಿಳಿದು ತಾಳುಗಳ ಮೂಲಕ ನೆಲದ ಮಣ್ಣೊಳಗೆ ಬೀಳುತ್ತದೆ;
- ನೆತ್ತಿಯ ಮೇಲಿದ್ದ ಕೂರಿಗೆ ದಾಳು ಪಡುವಲತ್ತ ಜಾರಿ ಮುಳುಗುತ್ತಿದ್ದಂತೆ 'ಕೂರಿಗೆ ದಾಳು ಮುಳುಗಿದವು' ಅಂದರೆ ಕತ್ತಲಾಯಿತು ಎಂಬ ಕಾಲ ನಿರ್ಣಯದ ಪರಿಕಲ್ಪನೆ ನಮ್ಮ ಜನಪದರಲ್ಲಿ ಬಹು ಹಿಂದಿನಿಂದಲೂ ರೂಢಿಯಲ್ಲಿದೆ; A seed drill; A sowing machine drawn by oxen;
- ***—ಕೂರಿಗೆ ಪೂಜೆ*** : ಹೊಲಕ್ಕೆ ಬಿತ್ತಲು ಹೋಗುವ ಹಿಂದಿನ ದಿನ ಕೂರಿಗೆಯನ್ನು ತೊಳೆದು ಸೆಡ್ಡಿ ಬಟ್ಟಲು ಜೋಡಿಸಿ ಸೀರೆ ಉಡಿಸಿ ಪೂಜೆ ಮಾಡಿ ನೈವೇದ್ಯ ಅರ್ಪಿಸುವರು(ಹಾವೇ.ಜಿ). A worship of a structure of sowing plough.

ಕೂರು kūru :

- ಅರ್ಧಪಾಲು; The half of the share;
- ಕುಳಿತುಕೊಳ್ಳು; 'ಕುಳಿರ್'>ಕೂರ್> ಕೂರು ಬಂದಿರಬಹುದು; 'ಳ್' ಬಿಟ್ಟುಹೋಗಿ ಅದರ ಕಾರಣದಿಂದಾದ್ಯಕ್ಷರ ದೀರ್ಘವಾಗಿದೆ(ಕು>ಕೂ); To seat/ to sit down;
- ***—ಕೂರುಮಣೆ*** : ಊಟಕ್ಕೆ ಕುಳಿತುಕೊಳ್ಳುವ ಮಣೆ (ಚಿಕ್ಕ.ಜಿ); A wooden seat that is used to sit on while having meal/food;
- ***—ಕೂರುಗುರು*** : ಕೂರ್+ಉಗುರು>ಕೂರುಗುರು; ಹರಿತವಾದ ಉಗುರು; ಚೂಪಾದ ಉಗುರು; (ಯ.ಪ.ಕೋ). A sharp nail.

ಕೂರುದ್ kūrud :

- ಲವಲವಿಕೆ ಇಲ್ಲದಿರುವುದು; Lazy; Inactiveness;
- ನಿದ್ದೆಗಣ್ಣಿನಲ್ಲಿರುವಂತೆ ಇರುವುದು; In slumber;
- ಸೋಮಾರಿತನ(ದ.ಕ).

ಕೂರುಬಾಯಿ kūrubāyi :

ಕುರುವಾಯಿ; ತೆಂಗಿನಮರವನ್ನು ಕೊರೆದು ಹಾಳುಮಾಡುವ ಕೀಟ; ಒಂದು ಕೂರು ಬಾಯಿ ಕೀಟ ಕೊಂದರೆ ಒಂಬತ್ತು ತೆಂಗಿನಮರ ನೆಟ್ಟಂತೆ ಎಂಬ ಮಾತಿದೆ. An insect that destroys coconut trees.

ಕೂರುಳಿ kūruḷi :

- ಬಡಗಿತನದಲ್ಲಿ ಬಳಸುವ ಒಂದು ಮೊನಚಾದ ಉಪಕರಣ(ಚಿ.ಪ.ಕೋ); One of the tools used by carpenter to chisel; A sharp chisel/ drawknives;
- ಕೂರ್+ಉಳಿ=ಕೂರುಳಿ; 'ಕೂರ್' ಎಂದರೆ 'ಹರಿತ' ಎಂಬ ಅರ್ಥವಿದೆ; 'ಉಳಿ' ಬಡಗಿ ಬಳಸುವ

ಕಬ್ಬಿಣದ ಒಂದು ಸಾಧನ. An iron tool used by carpenter.

ಕೂರೆ kūre :

- ಬಿಳಿಹೇನು; A cloth louse;
- ಕೊಳೆಯಾಗಿರುವ ಬಟ್ಟೆಗಳಲ್ಲಿ ಬರುವ ಕ್ರಿಮಿ; A louse in dirty clothes;
- ಕಂಕುಳು, ಕಣ್ಣಿನರೆಪ್ಪೆಯಲ್ಲಿರುವ ಕೂದಲ ಬುಡದಲ್ಲಿ ಸೇರುವ ರಕ್ತ ಹೀರುವ ಕ್ರಿಮಿ; a blood sucked maggot of one's under-arm;
- ಹಸು, ಕುರಿ ಕೋಳಿಗಳ ದೇಹದಲ್ಲಿಯೂ ಸೇರುತ್ತವೆ; ಸೀಮೆಎಣ್ಣೆಯಿಂದ ಹಸುವಿನ ಮೈತೊಳೆದರೆ ಸಾಯುತ್ತವೆ;
- ಮನುಷ್ಯನಲ್ಲಿ ಬಿಳಿಹೇನು ಸೇರಿದರೆ ಕೆಡುಕು ಎಂಬ ನಂಬಿಕೆ;
- ಮಂಗ; ಕಪಿ(ಗೌಡ ಕನ್ನಡ) (ಕೊಡ.ಜಿ); monkey;
- ತಮಿಳಿನಲ್ಲಿ ಕೂಱ್ಯಿ ರೂಪವಿದೆ; ಮಲೆಯಾಳಂನಲ್ಲಿ 'ಕೂಱಿ' ಪದವೇ ಇದೆ.

ಕೂಱೆ(ರೆ)ಗನೂರು kūṟe(re)ganūru :

- ಬಳ್ಳಾರಿ ಜಿಲ್ಲೆ ಸಿರಗುಪ್ಪ ತಾಲ್ಲೋಕಿನ ಕ್ರಿ.ಶ.೧೦೯೧ರ ಒಂದನೇ ಶಾಸನದಲ್ಲಿ ಇದರ ಪ್ರಸ್ತಾಪ; A place that mentioned in the first inscription of 1091 AD of Siruguppa Taluk, Bellary District;
- ಚಾಲುಕ್ಯ ತ್ರಿಭುವನಮಲ್ಲನ ಪತ್ನಿ ಪಿರಿಯಕೇತಲ ದೇವಿಯು ಬಲ್ಲಕುಂದೆ–೩೦೦ ಬಳಿಯ ತೆಕ್ಕೆಕಲ್ಲು–೧೨ಕ್ಕೆ ಸೇರಿದ ಸಿರಗುಪ್ಪೆ ಕೂಱೆ(ರೆ)ಗನೂರು ಮೊದಲಾದ ಊರುಗಳನ್ನು ಪಾಲಿಸುತ್ತಿದ್ದ ವಿವರವಿದೆ;
- ಈ ಸಂದರ್ಭದಲ್ಲಿ ಸಿರಗುಪ್ಪೆಯ ಕೇತಾರೇಶ್ವರ ದೇವರಿಗೆ ಭೂದಾನ ಮಾಡಿದ ಉಲ್ಲೇಖವಿದೆ;
- ಕೂಱೆ(ಜೆ)ಗನೂರಿನಲ್ಲಿಯೂ ಭೂದಾನ ನೀಡಿದ ವಿವರವಿದೆ;
- ಹೊಲಗದ್ದೆ ಉಳುಮೆ ಮಾಡುವ, ಬೀಜ ಬಿತ್ತುವ ಪ್ರಕ್ರಿಯೆಯಲ್ಲಿ ಬಳಸಲಾಗುವ 'ಕೂರಿಗೆ'ಗೆ ಸಂಬಂಧಿಸಿದ ಹೆಸರಾಗಿದೆ.

(ಕ.ವಿ.ವಿ.ಶಾ.ಸಂ.೧; ಬ.ಜಿ)

ಕೂರೇಸಿ kūrēsi :

ದೈಹಿಕ ಬೆಳವಣಿಗೆ ಇಲ್ಲದೆ ಕುಬ್ಜರಾಗಿರುವುದು; ಪೀಚು; ಪ್ರ: 'ಮನೆನಾಗೆ ಕುಂತು ಕುಂತು ಕೂರೇಸಿ ಬಿದ್ದದ್ನು'. A dwarf Who is not physically developed to one's age.

ಕೂರ್ಕೆ kūrke :

- ಸಾಂಬ್ರಾಣಿ ಗೆಡ್ಡೆ; Styrax potato;
- ತರಕಾರಿಯಂತೆ ಬಳಕೆ; ಗಾತ್ರದಲ್ಲಿ ಬಲುಚಿಕ್ಕದ್ದು; ರುಚಿಯಲ್ಲಿ ಆಲೂಗೆಡ್ಡೆಯನ್ನು ಹೋಲುತ್ತದೆ; a vegetable that resembles potato;
- ಎಲ್ಲ ವಿಧದ ಮಣ್ಣಿನಲ್ಲಿ ಬೆಳೆಯುವುದು;
- ಕೇರಳ ಮತ್ತು ಕರಾವಳಿ ಭಾಗದಲ್ಲಿ ಹೆಚ್ಚು ಬಳಕೆ;
- ಸಾಂಬಾರ್, ಪಲ್ಯ, ಬೋಂಡಾ ತಯಾರಿಕೆಗೆ ಉಪಯೋಗ. It is used in preparing dishes in Keral and Coastal areas of Karnataka.

ಕೂರ್ಗ kūrga :

- ಕುರಿಯಂತಿರುವ ಒಂದು ಕಾಡು ಪ್ರಾಣಿ; A wild animal like sheep;
- ಇದನ್ನು ಇರುಳಿಗರು ಹೆಚ್ಚು ಬೇಟೆಯಾಡುವರು; It is being hunted by iruliga –trible community;
- ಇದು ಒಮ್ಮೆ ಮಲ ವಿಸರ್ಜಿಸಿದ ಸ್ಥಳದಲ್ಲಿಯೇ ಮಲ ವಿಸರ್ಜಿಸುತ್ತದೆಯಂತೆ; ಹಾಗಾಗಿ ಅದನ್ನು ಅಲ್ಲಿಯೇ ಹೊಂಚು ಹಾಕಿ ಬೇಟೆಯಾಡುವರು;
- ಇದಕ್ಕೊಂದು ಗಾದೆ ಇದೆ: 'ಕೂರ್ಗಯಂಗ್ ಕೆಡ್ತು ಅಂದ್ರೆ ಏತ್(ಮಲವಿಸರ್ಜಿಸಿ)ಕೆಡ್ತು'; ಇದು ಇರುಳಿಗರಲ್ಲಿ ಪ್ರಚಲಿತದಲ್ಲಿದೆ.

ಕೂರ್ಚೆ kūrce:

ದರ್ಬೆ ಹುಲ್ಲನ್ನು ವೈದಿಕ ಕಾರ್ಯದಲ್ಲಿ ಬಳಸಲು, ಮೂರು ಅಥವಾ ಐದು ತುಂಡು ದರ್ಬೆಯನ್ನು ಒಟ್ಟು ಮಾಡಿ ಬಲಭಾಗಕ್ಕೆ ತಿರುಗಿಸಿ ಗಂಟು ಹಾಕುವ ಬಗೆ; ಇದನ್ನು ಹೋಮ, ಪೂಜೆಗಳಲ್ಲಿ ಬಳಸುವ ಕ್ರಮವಿದೆ. A holy straw that is used in yagna/yaga by Brahmin Priest; They are

knotted in three or four straws tied together.

ಕೂರ್ಮ kūrma :

- ಆಮೆ; ವಿಷ್ಣುವಿನ ಅವತಾರದಲ್ಲಿನ ಒಂದು ಬಗೆ, ಕೂರ್ಮಾವತಾರ; ಅದಕ್ಕೆ ಸಂಬಂಧಿಸಿದ ರಂಗೋಲಿಯನ್ನು ಪೂಜಾವಿಧಿಯಲ್ಲಿ ಬಿಡಿಸುವರು; It is one of the forms of the lord Vishnu. Turtle/ tortoise;
- ***—ಕೂರ್ಮ ಹೊಂಡದ ಬೇಟೆ*** : ಆಮೆ ಹಿಡಿಯುವ ಕ್ರಮ; ಗೊಂಡರಲ್ಲಿ ಈ ವಿಧಾನದ ಬೇಟೆ ಪ್ರಚಲಿತದಲ್ಲಿದೆ; ಮರಳಿನಲ್ಲಿ ಆಳದ ಹೊಂಡ ಮಾಡಿ ಅದರ ಬಾಯಿಯನ್ನು ತೆಳ್ಳಗಿನ ಕಡ್ಡಿಗಳ ಸಹಾಯದಿಂದ ಮುಚ್ಚಿ, ಮೇಲೆ ಹುಲ್ಲು, ಪಾಚಿ, ಆಹಾರಗಳನ್ನು ಇಟ್ಟು ಆಮೆ ಅದನ್ನು ತಿನ್ನಲು ಬಂದಾಗ ಆಳಕ್ಕೆ ಬೀಳುವ ವ್ಯವಸ್ಥೆ ಮಾಡಿರುತ್ತಾರೆ(ಉ.ಕ.ಜಿ). A method of catching turtle.

ಕೂರ್ಮದಮರ/ನೀಲ್‌ಕುಕ್ಕು kūrmadamara/ nīlkukku :

persea macrantha ಕಡಲ್‌ವಾಂಚಿ, ಕಾಡುಲವಂಗ ಎನ್ನುವ ಹೆಸರಿದೆ. A wild clove; a spice.

ಕೂಲಿ kūli :

- ದುಡಿಮೆಗಾಗಿ ಕೊಡುವ ಪ್ರತಿಫಲ; Wage; Hire; Cooly; A reward for work;
- ಕೂಲಿಯಾಗಿ ಹಣ, ಕಾಳು, ಧಾನ್ಯ ಕೊಡುವ ಕ್ರಮ; ಜೀತ; Money for wage;
- *ಪ್ರ:* 'ಕೂಲಿ ಮಾಡಿ ಕುಡಿಕೆಗೆ ಹಾಕಲಿಲ್ಲ ಹಾದರ ಮಾಡಿ ತೊಟ್ಟಿಲು ಕಟ್ಟಲಿಲ್ಲ'*(ಗಾ)*;
- ***—ಕೂಲಿ ಕಂಬಳ*** : ದಿನನಿತ್ಯದ ದುಡಿಮೆಗೆ ದೊರೆಯುವ ಹಣರೂಪದ ಸಂಭಾವನೆಯನ್ನು ಕೂಲಿ ಎನ್ನುವರು; ಕಣದಲ್ಲಿ ಒಕ್ಕಣೆ ಮಾಡುವ ಕೆಲಸಗಾರರಿಗೆ ಧಾನ್ಯ ರೂಪದಲ್ಲಿ ನೀಡುವ ಸಂಭಾವನೆಯನ್ನು ಕಂಬಳ ಎನ್ನುವರು; A form of daily wages for daily work;
- ಇತ್ತೀಚಿನ ದಿನಗಳಲ್ಲಿ ಎರಡನ್ನೂ ಜೋಡಿ ಪದವಾಗಿ ಸೇರಿಸಿ ದಿನನಿತ್ಯ ದುಡಿದು ಬರುವ ಹಣದಿಂದ ಜೀವಿಸುವವರನ್ನು ಕೂಲಿಕಂಬಳದವರು ಎಂದು ಕರೆಯುವುದು ರೂಢಿಯಲ್ಲಿದೆ;
- ***—ಕೂಲಿಯಾಳು*** : ದಿನಗೂಲಿಗಾಗಿ ದುಡಿಮೆ ಮಾಡುವ ವ್ಯಕ್ತಿ; ಸಂಪಾದನೆಗಾಗಿ ದುಡಿಯುವವನು; A day labourer; Who works for daily wages;
- ***—ಕೂಲಿಯಾಕೆ*** : ಕೂಲಿ ಕೆಲಸ ಮಾಡುವವನ ಹೆಂಡತಿ; ತುಳು, ತೆಲುಗು, ಮಲಯಾಳಂ, ತಮಿಳು, ಕನ್ನಡ–ದ್ರಾವಿಡ ಭಾಷೆಗಳಲ್ಲಿಯೂ 'ಕೂಲಿ' ಎಂಬ ಪದವೇ ಇದೆ; A wife of a male labourer;
- ***—ಕೂಲಿಮಠ*** : ಹಿಂದೆ ಉಪಾಧ್ಯಾಯರು ಪೋಷಕರಿಂದಲೇ ಕೂಲಿ ಪಡೆದು ಮಕ್ಕಳಿಗೆ ಪಾಠ ಹೇಳುತ್ತಿದ್ದ ಕ್ರಮ; A kind of school where the teacher was being paid wages by the parents of children;
- ದೇವಸ್ಥಾನ ಅಥವಾ ಪ್ರತ್ಯೇಕವಾದ ಸ್ಥಳದಲ್ಲಿ ಸ್ಥಾಪನೆಯಾಗುತ್ತಿದ್ದ ಪಾಠಶಾಲೆ; *ಖಾಸಗಿಶಾಲೆ;*
- ಮೈಸೂರು ಮಹಾರಾಜರ ಆಳ್ವಿಕೆಯ ಕಾಲದಲ್ಲಿ ಹಳ್ಳಿಗಳಲ್ಲಿ ಕೂಲಿಮಠಗಳು ಪ್ರಾರಂಭವಾದವು; Many wages school run by in the rule of Maharajas of Mysuru;
- ***—ಕೂಲಿನಾಲಿ*** : 'ಕೂಲಿ' ಎಂದೇ ಇದರ ಅರ್ಥ; ಪದ ಪುನರಾವರ್ತನೆ; duplication; a collocative word of Cooly in Kannada language; A pair word of Cooly-labourer.

ಕೂಲಿಗೆರೆ kūligere :

- ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೋಕಿನ ಕ್ರಿ.ಶ.೬೧೬ರ ೧೦೦ನೇ ಶಾಸನದಲ್ಲಿ ಇದರ ಉಲ್ಲೇಖವಿದೆ; A place that mentioned in 100th inscription 616 AD of Madduru taluk, Mandya district;
- ನೀತಿಮಾರ್ಗ ಪೆರ್ಮಾಡಿಯು ಕನಕಗಿರಿಯ ಬಸದಿಯ ನಿರ್ಮಾಣಕ್ಕೆ ಕನಕಸೇನ ಭಟ್ಟಾರರಿಗೆ ಗ್ರಾಮದ ಹಲವಾರು ತೆರಗಳನ್ನು ದಾನ ಕೊಟ್ಟ ವಿವರವಿದೆ;

- ಅರ್ಥ; ದುಡಿಮೆಗಾಗಿ ಕೊಡುವ ಹಣ; ಒಂದು ಬಗೆಯ ಸಸ್ಯ; Wages; Salary; A kind of plant;
- ಕೂಲಿ ಮಾಡಿ ಎಲ್ಲರೂ ನಿರ್ಮಿಸಿದ ಕೆರೆ, ಅದರ ಹಿನ್ನೆಲೆಯಲ್ಲಿ ರೂಪುಗೊಂಡ ಊರು 'ಕೂಲಿಗೆರೆ' ಎನ್ನಬಹುದು.

(E.C-೭; ಮಂಡ್ಯ.ಜಿ.)

ಕೂಲು kūlu :

- ಒಂದು ಮರ ಮುಟ್ಟಿನ ರಂಧ್ರದಲ್ಲಿ ಇನ್ನೊಂದನ್ನು ಸೇರಿಸಬೇಕಾದಾಗ ಆ ರಂಧ್ರದ ಅಳತೆಗೆ ತಕ್ಕಂತೆ ಕೆತ್ತಿ ಸಿದ್ಧಪಡಿಸಿದ ಭಾಗ(ಚಿ.ಪ.ಕೋ); A dovetail, dovetail joint; The joints that are familiar to a carpenter –mortise and tenons., dovetail and wedge; But it is the traditional way of work-in which wooden structures are joined with wooden pegs/ wedges;
- ಬೆಣೆ ಸಡಿಲವಾದಾಗ ಹೊಡೆಯುವ ಮರದ ತುಂಡು (ಚಿಕ್ಕ.ಜಿ); peg/wedge;
- ಕೆರೆ ಅಥವಾ ಬಾವಿಯನ್ನು ನಿರ್ಮಿಸಿರುವ ಮೆಟ್ಟಿಲುಗಳು; staircases of a well;
- ***—ಕೂಲುಬಾವಿ*** : ಮೆಟ್ಟಿಲುಗಳನ್ನು ಹೊಂದಿರುವ ಬಾವಿ; A stair cased well; A slopping stairs that leads down to the water of the well or tank;
- ***—ಕೂಲು ಮಟ್ಲಗಿ*** : ಗಾಡಿಯ ಗಾಲಿಗಳ ಎಲೆಗಳ ಕೂಲು ಸಮರ್ಪಕವಾಗಿ ಅಂಕಿತಗೊಳ್ಳುವಂತೆ ಮಾಡಲು ಉಪಯೋಗಿಸುವ ಒಂದು ಉಪಕರಣ (ಚಿ.ಪ.ಕೋ). A tool of levelling or matching one piece of wood that fit into sockets drilled into another piece of wood.

ಕೂವೆ೧ kūve1 :

ಕೋವೆ ಗಿಡ; ಗೆಣಸು; ಆರಾರೊಟ್; curcuma angustifolia; ಇದರ ಪುಡಿಯನ್ನು ಔಷಧಿಯಾಗಿ ಬಳಕೆ; ತಮಿ = ಕೂಗ್ವೈ, ಕೂವ್ವೈ; ಕೊಡ = ಕೂವೆ, of sweet potato plant/sweet potato.

ಕೂವೆ೨ kūve2 :

ಹಡಗಿನ ಮಧ್ಯದಲ್ಲಿರುವ ಕಂಬ; ಹಾಯಿಕಂಬ; ಧ್ವಜಸ್ತಂಭ. A mast of sail/a ship; The central flag post of a ship.

ಕೂಸಾಳು kūsāḷu :

- ಎಳೆಯ ಪ್ರಾಯದ ಗಂಡು ಆಳು(ಉ.ಕ.ಜಿ); A tender male youth labourer;
- ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಒಂದು ಸಮುದಾಯ ಮತ್ತು ಅದಕ್ಕೆ ಸೇರಿದ ವ್ಯಕ್ತಿ(ಕ.ಜಾ.ನಿ); a person who is belongs to a particular community of South Canara;
- ಕೂಸು + ಆಳು>ಕೂಸಾಳು;
- "A weak, useless person" (ಕಿಟ್ಟೆಲ್).

ಕೂಸಿನ ಬಾಗಿನ kūsinabāgina :

- ಕೂಸು ಹುಟ್ಟಿದ ಐದನೇ ದಿವಸ ಮಾಡುವ ಒಂದು ಆಚರಣೆ; A ritual of a baby's born; it is to be done after 5 days of a baby's birth;
- ಸೂಲಗಿತ್ತಿಯರಿಗೆ ಜೋಳ, ಎಲೆ, ಅಡಿಕೆ, ಹಣ ಇತ್ಯಾದಿಗಳನ್ನು ಮೊರದಲ್ಲಿ ಹಾಕಿ ಕೊಡುವುದೇ 'ಕೂಸಿನ ಬಾಗಿನ';
- ಈ ಆಚರಣೆ ಎಲ್ಲ ಕಡೆ ಇರುವಂತೆ ಕಾಣುವುದಿಲ್ಲ.

ಕೂಸು kūsu :

- ಮಗು; ಕನ್ಯೆ; ಯುವತಿ; ಹರೆಯ; ಬಾಲೆ ಎಂಬ ಅರ್ಥಗಳು ಪ್ರಧಾನವಾಗಿ ಚಾಲ್ತಿಯಲ್ಲಿರುವಂಥವು; A baby; An infant; An youthful girl- These are the popular meanings;
- ಚಿಕ್ಕಮಗು; ಹಸುಳೆ; A baby; an infant; A female infant;
- *ಪ್ರ:* 'ಹೆಂಗಸರ ಬಾಯಲ್ಲಿ ಮಾತು ನಿಲ್ಲಲ್ಲ, ಗಂಡಸರ ಕೈಲಿ ಕೂಸು ನಿಲ್ಲಲ್ಲ'*(ಗಾ)*; 'ಕೂಸು ಕುಂಚಿ ತಿಂತು, ಹಾಸಿಗೆ ನೆಲ ತಿಂತು'*(ಗಾ)*;
- ಹೆಣ್ಣುಮಗು;

- 'ಕೂಸು' ಪದ ಮುಖ್ಯವಾಗಿ ಮೂರು ರೂಪಗಳಲ್ಲಿ ವ್ಯವಹರಿಸುತ್ತದೆ: ಒಂದು– ಮಗು (ಹೆಣ್ಣಾಗಲಿ ಗಂಡಾಗಲಿ); ಎರಡು– ಸ್ತ್ರೀ; ಮೂರು– ಸ್ತ್ರೀಪುರುಷ ಇಬ್ಬರಿಗೂ; ಸ್ತ್ರೀ ಸೂಚಕ 'ಕೂಸು' ಪದಕ್ಕೆ ಅಣ್ಣ ಅಥವಾ ಅಪ್ಪ ಸೇರಿಸಿ ಕೂಸಣ್ಣ, ಕೂಸಪ್ಪ ರೂಪಗಳು ಸಿದ್ಧಗೊಂಡಿರಬಹುದು;
- ತುಳು ನಿಘಂಟಿನಲ್ಲಿ 'ಕೂಸು' ಪದಕ್ಕೆ ಸ್ತ್ರೀ ಎಂದೂ, 'ಕೂಸೆ' ಪದಕ್ಕೆ ಪುರುಷ ಎಂದೂ ಅರ್ಥ ಕೊಡಲಾಗಿದೆ; 'ಕೂಸೆ' ಪದದಲ್ಲಿನ 'ಎ' ಸಂಬೋಧನೆಯ ಸೂಚಕವಾದ್ದರಿಂದ ಪುರುಷರನ್ನು ಕರೆಯಲು 'ಕೂಸೆ' ಬಳಕೆಗೆ ಬಂದಿರಬಹುದು; 'ಕೂಸು' ರೂಪವೇ 'ಕೂಸೆ' ಆಗಿರುವುದನ್ನು ಮರೆಯಬಾರದು; ಇಷ್ಟಾದರೂ 'ಕೂಸೆ' ಸ್ತ್ರೀಸೂಚಕವಾಗಿರದೆ ಪುರುಷವಾಚಕವಾಗಿರುವುದು ಆಶ್ಚರ್ಯವನ್ನುಂಟು ಮಾಡಿದೆ; baby, as a male and female and female only in Tulu dictionary;
- 'ಕೂಸು' ಪದಕ್ಕೆ 'ಸ್ತ್ರೀ' ಎಂಬ ಅರ್ಥವಿದ್ದರೂ, 'ಹೆಂಗೂಸು' ಪದ ಬಳಕೆಯಾಗಿದೆ; ಆಗ 'ಮಗು' ಅರ್ಥವನ್ನು ಅವಲಂಬಿಸಿದ್ದೆಂದು ಸ್ಪಷ್ಟವಿದೆ; 'ಕೂಸು' ಪದ ಹೆಣ್ಣುಮಗು/ಗಂಡುಮಗು ಎರಡಕ್ಕೂ ಬಳಕೆಗೊಂಡಿದ್ದರೂ, ಅದು ಗಂಡು ಮಗುವಿಗೆ ಎಂದು ತಪ್ಪಾಗಿ ತಿಳಿದು 'ಹೆಂಗೂಸು' ರೂಪ ಚಾಲ್ತಿಗೆ ಬಂದಿಬಹುದು; 'ಮಗಳು' ಎಂಬ ರೂಪವಿದ್ದರೂ 'ಹೆಣ್ಣಮಗಳು' ಎಂದು ಕರೆದಂತೆ; ಹೆಣ್+ಕೂಸು>ಹೆಣ್ಗೂಸು>ಹೆಂಗೂಸು; it means a lady or female; a male and a female infant; a virgin, a young virgin; Maiden; a person;
- **—ಕೊಡಗೂಸು:** 'ಕುಡಗೂಸು', 'ಕೊಟ್ಟ ಕೂಸು' ರೂಪಗಳೂ ಇವೆ; ಕುಡ>ಕೊಡ(ಉ>ಒ), 'ಕುಡ' ಪ್ರಾಚೀನ ರೂಪ, ಬದಲಾಗುವಾಗ 'Vowel Mutation'(ಸ್ವರವ್ಯತ್ಯಯ) ಸಿದ್ಧಾಂತವನ್ನು ಅನುಸರಿಸಿರುವಂತೆ ಕಾಣುತ್ತದೆ; 'ಕೊಟ್ಟ ಕೂಸು' ಎಂಬ ರೂಪವನ್ನು ಕಿಟ್ಟೆಲ್ ಹೇಳುತ್ತಾನೆ, 'ಕನ್ಯೆ' ಅರ್ಥವೂ ಇದೆ; ಮದುವೆಯಾದ ಮೇಲಿನ ಸ್ಥಿತಿಯ ರೂಪವಾಗಿ 'ಕೊಟ್ಟ ಕೂಸು' ಪದ ಇರುವಂತೆ ಕಾಣುತ್ತದೆ; ಆದರೆ ಈ ರೂಪ ಸರಿಯಿರುವಂತೆ ಕಾಣುವುದಿಲ್ಲ; 'ಕೊಡ' ಪದಕ್ಕೆ ಹುಡುಗಿ/ಕನ್ಯೆ ಅರ್ಥದೊಡನೆ ಇದನ್ನು ನೋಡಿರಬಹುದು; ಆದರೆ 'ಕೊಡ' ಎಂದರೆ 'ಹಿರಿಯ' ಎಂದು ಅರ್ಥ; ಆ ಪ್ರಕಾರ 'ಕೊಡಗೂಸು' ಹಿರಿಯ ಮಗಳು; ಹಾಗೆಯೇ 'ಕೊಡಮಗ' ರೂಪವಿದೆ; 'ಹಿರಿಯ ಮಗ' ಎಂದು; *ಪ್ರ:* 'ಕೊಡ ಮಗನ ನುಡಿ ಕೇಳು'*(ಗಾ.).* An archaic form of vowel mutation is here followed to use this word kudu. it has virgin meaning; A ceremony of handovering the bride to the bridegroom and his family during their marriage.
- **—ಕೂಸು ಎತ್ತಿಗೊಂಬಲೆ ಕೊಡುದು :** ಶುದ್ಧದ ದಿನ ಮಗುವಿನ ತಾಯಿ ಮಗುವನ್ನು ಹಿರಿಯರಿಗೆ ಕೊಟ್ಟು ತಾನು ಅವರ ಕಾಲು ಮುಟ್ಟಿ ನಮಸ್ಕರಿಸುವ ಆಚರಣೆ (ಉ.ಕ.ಜ); A celebration of a mother who hands over her baby one fine day to her elders and gets grace from them;
- **—ಕೂಸುಕುಡು :** ಮದುವೆಯಲ್ಲಿ ಧಾರೆಯಾದ ನಂತರ ಹೆಣ್ಣು ಒಪ್ಪಿಸುವ ಶಾಸ್ತ್ರ; Bride offering ritual during marriage after knotting ceremony;
- **—ಕೂಸು ಕೂಡಾ ಹಾಡು :** ಹೆಣ್ಣು ಒಪ್ಪಿಸುವಾಗ ಹಾಡುವ ಶಾಸ್ತ್ರದ ಹಾಡುಗಳು; Folk song sung during marriage ceremony;
- **—ಕೂಸೊಪ್ಪಿಸು :** ಮದುವೆ ಕಾರ್ಯ ಕಲಾಪಗಳು ಮುಗಿದ ನಂತರ ತೊಟ್ಟಿಲಲ್ಲಿ ಗೊಂಬೆಯನ್ನು ಮಲಗಿಸಿ ಜೋಗುಳ ಹಾಡಿ ಹೆಣ್ಣುಮಗುವನ್ನು ಚೆನ್ನಾಗಿ ನೋಡಿಕೊಳ್ಳುವಂತೆ ಗಂಡಿನ ಕಡೆಯವರಿಗೆ ತಿಳಿ ಹೇಳುವ ಆಚರಣೆ; ದಂಪತಿಗಳ ಸಾಮರಸ್ಯವನ್ನು ಸೂಚಿಸುವ ಸಂಕೇತ; The ritual of the bride's family after the marriage to symbolically to looked after their daughter well as a baby girl of their own;
- **—ಕೂಸುಮರಿ ಆಟ :** ಮಕ್ಕಳ ಒಂದು ಆಟ; ಅಳುತ್ತಿರುವ ಮಕ್ಕಳನ್ನು ಸಮಾಧಾನಪಡಿಸಲು ದೊಡ್ಡವರು ಮಗುವನ್ನು ಬೆನ್ನ ಮೇಲೆ ಹೊತ್ತಿಕೊಂಡು 'ಕೂಸುಬೇಕೆ ಕೂಸು ಕೂಸುಬೇಕೆ

ಕೂಸು' ಎಂದು ಆಟಗಾರರು ಹೇಳುತ್ತಾ ಸುತ್ತುತ್ತಾರೆ; A children play that played by the parents to console their crying babies to make comfort their infants;

- ಎಷ್ಟಮ್ಮ ಕೂಸಿಗೆ ಎನ್ನುತ್ತಾರೆ; ಆರ್‌ಕಾಸ್, ಮೂರ್‌ಕಾಸ್, ಒಂದಾಣಿ, ಒಂದು ರೂಪಾಯಿ ಎಂದು ಹೇಳುತ್ತಾರೆ; ಇನ್ನೊಬ್ಬರು ಏನೇನ್ ಕೆಲ್ಸ ಮಾಡ್ತದೆ ಎನ್ನುತ್ತಾರೆ; ಕ್ವಾಣೆ ಸಾರಿಸುತ್ತದೆ, ಅಡುಗೆ ಮಾಡುತ್ತದೆ, ಎಲ್ಲರಿಗೂ ಉಣ್ಣಕ್ಕೆ ಇಕ್ಕುತ್ತದೆ, ತಾನೂ ಉಣ್ತದೆ, ಕೊನೆಗೆ ಡರ್‌ಬರ್ ಎಂದು ಊಸ್ತದೆ ಎಂದು ಬಾಯಲ್ಲಿ ಪುರ್‌ಪುರ್ ಎನ್ನುತ್ತಾರೆ; ಆಗ ಮಕ್ಕಳು ಕಿಲಕಿಲನೆ ನಗುತ್ತವೆ;
- —*ಕೂಸಿನ್ತಾಯಿ* : ಕೂಸನ್ನು ಹಡೆದ ತಾಯಿ; Mother who gives birth to a baby;
- —*ಕೂಸಾಡಿಸು* : ಮಕ್ಕಳನ್ನು ಆಡಿಸುವಂತೆ ಆಡಿಸುವುದು; *ಪ್ರ*: 'ನನ್ನ ಕೂಸಾಡಿಸಬೇಡ'; ಕೂಸು +ಆಡಿಸು>ಕೂಸಾಡಿಸು(ಮಂ.ಜಿ). To play children by their elders.

ಕೂಸುಮರಿ ಮಾಡು kūsumari māḍu :

- ಬೆನ್ನ ಮೇಲೆ ಮಕ್ಕಳನ್ನು ಕೂಡಿಸಿಕೊಂಡು, 'ಕೂಸುಮರಿ ಬೇಕೇ ಕೂಸುಮರಿ' ಎಂದು ಪದಪ್ರಾಸವನ್ನು ಹಾಡುತ್ತಾ ಮಕ್ಕಳನ್ನು ಆಡಿಸುವ ಆಟ; ಕೂಸಾಡಿಸುವ ಒಂದು ಬಗೆ; To play for children on their elder's back; It is a process of a play that a child will sit on its elders'-father and grandfather, back as a horse rider, then the person who moves as a horse sings a rhyme "do you want a baby, do you want a baby";
- ಮಕ್ಕಳನ್ನು ಸಂತೋಷ ಪಡಿಸಲು, ನಗಿಸಲು ಈ ಆಟ, ಅದಕ್ಕೆ ತಕ್ಕ ನುಡಿಗಟ್ಟು ಇದು; ಮಕ್ಕಳ ಆಟ ಇರುವ ತನಕ ಈ ನುಡಿಗಟ್ಟು ಇರುತ್ತದೆ ಮಾತ್ರವಲ್ಲ; ಅದರ ಇತಿಹಾಸವೂ ಅದೇ ದಾರಿಯದು;
- ಮಕ್ಕಳನ್ನು ಕೂಸುಮರಿ ಮಾಡುವ ದೊಡ್ಡವರು, ಅವರ ಕೈಗಳು ತಮ್ಮನ್ನು ಹಿಡಿದುಕೊಳ್ಳಲು ಹೇಳಿ, ತಮ್ಮ ಕೈಗಳನ್ನು ಹಿಂದಕ್ಕೆ ಚಾಚಿ ಹಿಡಿದುಕೊಂಡಿರುವ ಕೆಲಸವನ್ನು ಮಾಡುತ್ತಾರೆ;
- 'ಕೂಸುಮರಿ' ಆಟದಲ್ಲಿ ಭಾಗವಹಿಸುವವರು ತಂದೆ, ತಾಯಿ ಮತ್ತು ಆಪ್ತರು ಆಗಿರುತ್ತಾರೆ, ಆಟದಲ್ಲಿ ಯಾರೂ ಆಗಿರಬಹುದು; ಇವರೆಲ್ಲ ಮಕ್ಕಳ ಮೇಲಿನ ಪ್ರೀತಿಯಿಂದ ನಡೆಸಿಕೊಂಡು ಬಂದಿರುವಂತೆ ಕಾಣುತ್ತದೆ;
- 'ಕೂಸು' ಪದ ಹೆಣ್ಣು ಮಕ್ಕಳಿಗೆ ಬಳಕೆಯಾದದ್ದಿದೆ; ಉದಾಹರಣೆಗೆ 'ಕೋಳೂರ ಕೊಡಗೂಸು'; ಆಮೇಲೆ ಭೇದವಿಲ್ಲದೆ ಹುಡುಗ ಹುಡುಗಿ ಇಬ್ಬರಿಗೂ ಬಳಕೆಯಾದುದನ್ನು ಕಾಣುತ್ತೇವೆ;
- 'ಪ್ರಾಯ ಕೂಸಾದಡೇಂ ಅಭಿಪ್ರಾಯ ಕೂಸಕ್ಕುಮೆ'(ಶ.ಮ.ದ); 'ಕೂಸು' ಪದ ಹಳಗನ್ನಡ ಕಾಲದಿಂದಲೇ ಬಳಕೆಯಲ್ಲಿರುವುದು ಸ್ಪಷ್ಟವೇ ಇದೆ;
- 'ಕೂಸು' ಪದಕ್ಕೆ ತೆಲುಗಿನಲ್ಲಿ 'ಕೂಸು' ಎಂದೇ ಇದೆ; ತುಳುವಿನ 'ಕೂಕ್ರ್/ಕೂಕ್ರು' ರೂಪಗಳಿವೆ, ಆದರೆ ಅರ್ಥ ಬೇರೆ ಇದೆ; ತಮಿಳಿನಲ್ಲಿ 'ಕುಂಜು' ಪದವಿದೆ(ಕಿಟ್ಟೆಲ್),– 'ಕೂಸು' 'ಕುಂಜು' ಆದುದು ಹೇಗೆ? 'ಸ'ಕಾರಕ್ಕೆ 'ಜ'ಕಾರ ಬರುವುದು ಕೆಲವು ದ್ರಾವಿಡ ಭಾಷೆಗಳಲ್ಲಿದೆ;
- 'ಕೂಸುಮರಿ' ಕಲ್ಪನೆಯನ್ನು, ಆಟವನ್ನು ನಮ್ಮ ಕವಿಗಳು ಪ್ರತಿಮೆಯಾಗಿ ಮಾಡಿಕೊಂಡಿದ್ದಾರೆ; ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ ಇದು ಪ್ರಯೋಗವಾಗಿದೆ; ವಾಲಿ ರಾಮನ ಬಾಣದಿಂದ ಆಘಾತಗೊಂಡು ಪ್ರಾಣೋತ್ಕ್ರಮಣ ಸ್ಥಿತಿಯಲ್ಲಿರುವಾಗ, ಸುಗ್ರೀವನನ್ನು ಕರೆಸಿ ಏಕೆ ಹೀಗೆ ಮಾಡಿದೆ ಎಂದು ಕೇಳುವ ಸಂದರ್ಭದಲ್ಲಿ ಇದರ ಪ್ರಸ್ತಾಪವಿದೆ; ವಾಲಿ ತನ್ನ ತಮ್ಮ ಸುಗ್ರೀವನನ್ನು ಬಾಲ್ಯದಲ್ಲಿ ಕೂಸುಮರಿ ಮಾಡುತ್ತಿದ್ದುದನ್ನು ನೆನಪಿಸುತ್ತಾನೆ; 'ಸಾವ್‌ಗಾಳಿ' ತೂರಲು, ಮುಖ್ಯ ಅಂತ ತಿಳಿದುಕೊಂಡುದು ಅಮುಖ್ಯವಾಗುತ್ತದೆ, ಅಮುಖ್ಯ ಅಂತ ತಿಳಿದುಕೊಂಡುದು ಮುಖ್ಯವಾಗುತ್ತದೆ ಎಂದು ಹೇಳುತ್ತಾ, 'ಕೂಸುಮರಿ' ಪ್ರಸಂಗದ ಮಹತ್ವವನ್ನು ಪರಿಚಯಿಸುತ್ತಾನೆ; ಇದು ಮೂಲ ರಾಮಾಯಣದಲ್ಲಿ ಇಲ್ಲದ್ದು; ಕುವೆಂಪು ಇದನ್ನು ಜನಪದ ಸಂಸ್ಕೃತಿಯಿಂದ ತೆಗೆದು ಕೊಂಡಿರುವುದು ಸ್ಪಷ್ಟವೇ ಇದೆ.

ಕೂಳ್(ಳು) kūḷ(ḷu) :

- ಅನ್ನ(ಸಂಸ್ಕೃತದ ಪದ); Boiled rice, food gruel;
- ದಪ್ಪ ಗಂಜಿ; ಅಂಬಲಿ; ಅರೆದ್ರವ ರೂಪದ ಆಹಾರ;
- ಅಸಹನೆಯಿಂದ ಹಂಗಿಗೆ ನೀಡುದ ಊಟ;
- ಇಂದು ಹೀನಾರ್ಥದಲ್ಲಿ ಬಳಕೆಯಾಗುತ್ತದೆ; 'ಹಿಂಡೆಕೂಳು' ಪದವಿದೆ; Today it is used in impatient meaning;
- ತ: ಕೂೞ್, ಮ: ಕೂೞ್, ಕೊಡ: ಕೂಳ್, ತೆ: ಕೂಡು(ದ್ರಾ.ಜ್ಞಾ.ಪ.ಕೋ); *ಪ್ರ:* 'ಕೂಳು ಚೆಲ್ಲಿದ ಕಡೆ ಸಾವಿರ ಕಾಗೆ'*(ಗಾ)*;
- ***—ಕೂಳು ಬೇಯಿಸುವುದು*** : ಮಲೆನಾಡಿನ ಗೌಡ ಸಮುದಾಯದವರಲ್ಲಿ ಸಾವಿನ ಸಂದರ್ಭದಲ್ಲಿರುವ ಒಂದು ಆಚರಣೆ; ಸಾವು ಸಂಭವಿಸಿದಾಗ ಮಡಕೆಯಲ್ಲಿ ಅನ್ನ ಬೇಯಿಸುವ ಶಾಸ್ತ್ರ; ಆ ಅನ್ನವನ್ನು ಮೂರು ಬಾರಿ ಹೆಣದ ಬಾಯಿಗೆ ಒಡಿಯುವರು; Rice boiling ritual/rites of Malenadu Gowda caste during one's death;
- ***—ಕೂಳು ಹಾಕು/ಕೂಳಾಕು/ಕೂಳ್ಹಾಕು*** : ತಿಥಿಮಾಡು; ಶ್ರಾದ್ಧಾ ಮಾಡುವಿಕೆ; ಸತ್ತವರ ಅಂತ್ಯಕ್ರಿಯೆಯಾದ ಮಾರನೆಯ ಬೆಳಿಗ್ಗೆ ಸತ್ತವರಿಗೆ ಇಷ್ಟವಾದ ಆಹಾರ ಪದಾರ್ಥಗಳನ್ನು ಅಂತ್ಯಕ್ರಿಯೆ ಮಾಡಿದ ಜಾಗದಲ್ಲಿ ಎಡೆ ರೂಪದಲ್ಲಿ ಇಡುವರು; ಗೊಂಡರಲ್ಲಿ ಸತ್ತವರಿಗಾಗಿ ಹನ್ನೆರಡನೆಯ ದಿನ ಅನ್ನ, ಪಾಯಸ, ರಾಗಿಗಂಜಿ, ಮೀನಿನ ಸಾರು, ತರಕಾರಿ ಪಲ್ಯ ಇತ್ಯಾದಿ ಅಡುಗೆಗಳನ್ನೆಲ್ಲಾ ಮಾಡಿ ಬಾಳೆ ಎಲೆಯ ಮೇಲೆ ಇಟ್ಟು ಹೆಣ ಸುಟ್ಟ ಸ್ಥಳದಲ್ಲಿ 'ಕೂಳು' ಹಾಕಿ ಬರುವರು; ಅಂದು ಎಲ್ಲಾ ಕುಲಸ್ಥರು ಹುಳಿ ತಿನ್ನಬೇಕೆಂಬ ನಿಯಮವಿದೆ; Death ritual; rites to be done one day after one's funeral; The twelfth day's rice offering ritual of one's death in Gonda caste;
- ***—ಕೂಳ್ ಬಾಗೂದ್*** : ಕಾಗೆ ಅನ್ನಕ್ಕಾಗಿ ಕೂಗುವುದು; ಅನ್ನದ ಅಗುಳನ್ನು ಕಂಡ ಕಾಗೆ ತನ್ನ ಬಂಧುಗಳನ್ನು ಕರೆಯುವ ಬಗೆ; A cry of a crow that calls its relatives-flock of crows, for sharing food;
- ***—ಕೂಳಿನ ಮಡಿಕೆ*** : ಸತ್ತವರಿಗೆ ತಿಥಿಯಲ್ಲಿ ಪಿಂಡದ ಅನ್ನ ಮಾಡಲು ಬಳಸುವ ಹೊಸ ಮಡಿಕೆ (ರಾಮ.ಜಿ); A pot that used to boil rice during the annual ceremony of one's death's anniversary;
- ***—ಕೂಳುಬಾಕ*** : ಕೂಳನ್ನು ಹೆಚ್ಚಾಗಿ ತಿನ್ನುವವ; ತಿನ್ನುವುದಷ್ಟೇ ಕಾಯಕ ಮಾಡಿಕೊಂಡವನು; ಸೋಮಾರಿತನ ಮೈಗೂಡಿಸಿಕೊಂಡವನು; A person who wants/desires to eat large quantity of food; A glutton who frequently eats too much;
- ***—ಕೂಳು ಪೂಜೆ*** : ಹಿರಿಯರ ಗದ್ದುಗೆಯ ಪಕ್ಕದಲ್ಲಿ ಬಾಳೆ ಎಲೆ ಹಾಸಿ ಅದರ ಮೇಲೆ ಅಕ್ಕಿ ಹರಡಿ ಐದು ತೆಂಗಿನಕಾಯಿ, ಐದು ವೀಳ್ಯವನ್ನಿಟ್ಟು ಇವುಗಳ ಮೇಲೆ ಹೊಸ ವಸ್ತ್ರ ಹೊದಿಸಿ ತಾಳಿ, ಬಾಸಿಂಗಗಳನ್ನು ಅದರ ಮೇಲಿಟ್ಟು ಪೂಜಿಸುವ ಕ್ರಮ; A worship of offering rice, coconuts betel leaves and nuts beside the elders seat or cathedra or chair elders;
- ***—ಕೂಳಿಗೆ ಇಡುದು*** : ಮನೆಯ ಜಗಲಿಯಲ್ಲಿ ನಡೆಯುವ ಒಂದು ಶುದ್ಧದ ಕಾರ್ಯಕ್ರಮ; ಜಗಲಿಯಲ್ಲಿ ಮಣೆಯನ್ನು ಇರಿಸಿ ಅದರ ಮೇಲೆ ಬಿಳಿ ಬಟ್ಟೆ ಹೊದಿಸಿ ಶುದ್ಧಕ್ಕೆ ನಿಂತವನನ್ನು ಕೂರಿಸಿ ಆತನ ಎಡಬದಿಗೆ ದೀಪವೊಂದನ್ನು ಉರಿಸಿ ಊರಿನ ಪ್ರಮುಖರು ಆತನ ತಲೆಗೆ ಅಕ್ಕಿ ಹಾಕುವರು; ಹೀಗೆ ತಲೆಯಿಂದ ಕೆಳಗೆ ಬಿದ್ದ ಅಕ್ಕಿಯನ್ನು ಸಂಗ್ರಹಿಸಿ ಅನ್ನಮಾಡುವರು; A ritual of purifying oneself by pouring rice on one's head and that rice must be boiled as food;
- ***—ಕೂಳಿಗೆ ದಂಡ ಕುಲಕ್ಕೆ ಹೊರಗೆ*** : ಇದೊಂದು ನುಡಿಗಟ್ಟು; ಚೆನ್ನಾಗಿ ಊಟ ಮಾಡಿ ಕೆಲಸ ಮಾಡದೆ ಸೋಮಾರಿಯಾಗಿ ಕಾಲ ಕಳೆಯುವವರಿಗೆ ಅನ್ವಯಿಸಿ ಹೇಳುವ ಮಾತು; It is an idiom; it refers to lazy person;
- ***—ಕೂಳು ಎರಚು*** : ಕೃಷಿಗೆ ಸಂಬಂಧಿಸಿದ ದೇವತೆಗಳಿಗೆ ಸಲ್ಲಿಸುವ ಬಲಿ; ಇದೊಂದು ಆಚರಣೆ (ಬ.ಜಿ); An offering ritual pertaining God's of farming agriculture;

- **—ಕೂಳುಗೆಡಿಸು** : ಕೆಲಸ ಕೆಡಿಸು; ಕ್ರಮಬದ್ಧವಲ್ಲದ್ದು (ಮೈ.ಜಿ); To disturb the work.

ಕೂಳಿ kūḷi :

- ಬಿದಿರಿನ ಬೆತ್ತದಿಂದ ಅಥವಾ ತೆಂಗಿನ ಗರಿಗಳ ಕಡ್ಡಿಗಳನ್ನು ಕತ್ತಾಳೆ ನಾರಿನಿಂದ ಒಂದು ಅನುಕೂಲಕರ ರೀತಿಯಲ್ಲಿ ನೇಯ್ಗೆಗೊಳಿಸಿ ತಯಾರಿಸಿದ ಮೀನು ಹಿಡಿಯುವ ಸಾಧನ; ಇದರ ಆಂತರಿಕ ರಚನೆ ಹೇಗಿರುತ್ತದೆಂದರೆ ಅದರೊಳಗೆ ಪ್ರವೇಶಿಸಿದ ಮೀನಾಗಲಿ, ಹಾವಾಗಲಿ ಹೊರ ಬರಲಾರದಂತಿರುತ್ತದೆ; ಗಂಟೆಗೊಮ್ಮೆ ಅದರೊಳಗಿರುವ ಮೀನುಗಳನ್ನು ಸಂಗ್ರಹಿಸುವರು; ಹರಿಯುವ ನೀರಿಗೆ ಅಡ್ಡಲಾಗಿ ಕೂಳಿಯನ್ನಿಟ್ಟು ಮೀನು ಹಿಡಿಯುವರು; A basket for fishing; that made up of bamboo sticks;
- ಬತ್ತದ ಗಿಡವನ್ನು ಕೊಯ್ದು ಬಳಿಕ ಉಳಿಯುವ ಬುಡ; ಕೂಳೆ; A stem of paddy crop after being cut;
- ಹಲ್ಲು; ದಂತ; ಕೋರೆಹಲ್ಲು; Tooth, tusk;
- ಹಾವಿನ ವಿಷದ ಹಲ್ಲು; snake's poisonous tooth;
- ಒನಕೆಯ ಬುಡಕ್ಕೆ ಹೊಡೆದಿರುವ ಹಲ್ಲಿನಾಕಾರದ ಲೋಹದ ವಸ್ತು(ತು.ನಿ);
- **—ಕೂಳಿ ಜೋಳ** : ಹಲ್ಲಿನ ಆಕಾರವನ್ನು ಹೋಲುವ ಜೋಳದ ಒಂದು ಬಗೆ; A kind of teeth shaped corn
- **—ಕೂಳಿಗತ್ತಿ** : ಭತ್ತದ ಗಿಡದ ಬುಡವನ್ನು ಗೊಬ್ಬರಕ್ಕಾಗಿ ಸಂಗ್ರಹಿಸುವ ಬಣವೆ. A paddy stack for fertilising.

ಕೂಳಿ ಬೀಳು kūḷi bīḷu :

ಒಂದು ವಿಧದ ಬಳ್ಳಿ; ಎತ್ತರದ ಮರಗಳ ನೆತ್ತಿಯವರೆಗೂ ಹಬ್ಬಿ ಹೆಬ್ಬಾವಿನಂತೆ ಮರದಿಂದ ಕೆಳಗೆ ಜೋತು ಬಿದ್ದಿರುವ ಬಳ್ಳಿ. A kind of creeper; It spreads throughout the tree like python.

ಕೂಳೆ kūḷe :

- ಪೈರನ್ನು ಕೊಯ್ದು ಬಳಿಕ ತಳದಲ್ಲಿ ಉಳಿಯುವ ಮೋಟು; ತುಂಡು; ಬೊಡ್ಡೆ; The stump of a crop left after being cut;
- ಪೈರು ಕತ್ತರಿಸಿದ ಮೇಲೆ ಹುಟ್ಟಿದ ಹೊಸ ಮೊಳಕೆ;
- ಅಲ್ಪ; ನೀಚ;
- ನೆನೆಸಿದ ಕಾಳಿನಲ್ಲಿ ಹೊರಬರುವ ಮೊಳಕೆ; ಕುರ್ ಮೊಳಕೆ; ತಮಿಳು: ಕೂಟ್ಟೈ; A sprout out from the stump of corn crop in the ground to push out sprouts;
- **—ಕೂಳೆ ಕಬ್ಬು** : ಕಬ್ಬು ಕಟಾವಿನ ನಂತರ ಅದರ ಕೂಳೆಯಲ್ಲಿ ಪೈರು ಚಿಗುರುತ್ತದೆ; ಇದಕ್ಕೆ ವ್ಯವಸಾಯ ಮಾಡಿದರೆ ಹುಲುಸಾದ ಕಬ್ಬು ಬೆಳೆಯುತ್ತದೆ; ಇದು ಕೂಳೆ ಕಬ್ಬು; ಒಂದು ಸಲ ನೆಟ್ಟ ತನು ಕಬ್ಬಿನಿಂದ ೫-೬ ಬೆಳೆ ಕೂಳೆ ಕಬ್ಬು ಬೆಳೆಯಬಹುದು; The stumps of sugar cane that left in the ground to push out new shoots;
- **—ಕೂಳೆ ಬೆಳೆ** : ಬೆಳೆಯ ಬೇರು ಅಥವಾ ಬುಡ ಮತ್ತೆ ಚಿಗುರಿ ಬೆಳೆಯುವಿಕೆ; A crop of new shoots from old stumps of cutting crop;
- **—ಕೂಳೆ ಮಂಕರಿ** : ಹರಿದ ಮಂಕರಿ; ತಳಭಾಗ ಜಾಳಾಗಿರುವುದು; ದೊಡ್ಡ ಗಾತ್ರದ ವಸ್ತುಗಳನ್ನು ಸಾಗಿಸಲು ಬಳಕೆ; A big basket /skep;
- **—ಕೂಳೆ ಗುದ್ದಲಿ** : ಕಬ್ಬಿಣದ್ದು; ಮರದ ಬೇರನ್ನು ಬುಡ ಸಮೇತ ತೆಗೆಯಲು ಬಳಕೆ; An iron spade to root out roots of any tree;
- **—ಕೂಳೆ ಅಣಬೆ** : ಒಂದು ಜಾತಿಯ ಅರಿಶಿಣ ಬಣ್ಣದ ಅಣಬೆ; ಕೂಳೆ ಬಳ್ಳಿಯ ಬಳಿ ಹುಟ್ಟುತ್ತದೆ. A kind of turmeric colour mushroom.

ಕೃತಕ ಜರಿ kritakajari :

- ಪ್ಲಾಸ್ಟಿಕ್ ಕಲಾಬತ್ತು; Fazandol plastic lacing falbala
- ಚಿನ್ನದ ಇಲ್ಲವೆ ಬೆಳ್ಳಿಯ ಬಣ್ಣ ಹೊಂದಿದ ಪ್ಲಾಸ್ಟಿಕ್ ಉತ್ಪನ್ನಗಳಿಂದ ತಯಾರಾಗುವ ಮಿಂಚುವ ಗುಣವುಳ್ಳ ಜರಿ(ಬೆಂ.ಗ್ರಾ.ಜಿ). An illuminated golden coloured plastic products.

ಕೃತಯುಗ kritayuga :

- ನಾಲ್ಕು ಯುಗಗಳಲ್ಲಿ ಮೊದಲನೆಯದು; ಉಳಿದ ಮೂರು: ತ್ರೇತಾ, ದ್ವಾಪರ ಮತ್ತು ಕಲಿಯುಗಗಳು; One of the four human Eras;
- ಇದನ್ನು 'ಆದಿಯುಗ'ವೆಂದೂ, 'ದೇವಯುಗ'ವೆಂದೂ ಕರೆಯುವುದುಂಟು; ತುಂಬ ಒಳ್ಳೆಯ ಯುಗವೆಂದು ಇದರ ಅರ್ಥ;
- ಸೂರ್ಯ, ಚಂದ್ರ ಮತ್ತು ಬೃಹಸ್ಪತಿ ಸೇರಿ ಇದನ್ನು ಕಟ್ಟಿದರೆಂದು ಒಂದು ಪ್ರತೀತಿ(ಪು.ನಾ.ಚೂ);
- ಈ ಯುಗವನ್ನು ಅಂಕಿ ಸಂಖ್ಯೆಯ ಮೂಲಕ ಎಣಿಸಲಾಗಿದೆ; ಇದರ ಮೇಲೆ ಜ್ಯೋತಿಷ್ಯದ ಮತ್ತು ಕಾಲಗಣನಾಶಾಸ್ತ್ರದ ಪ್ರಭಾವ ಇರಬಹುದು?
- ಈ ಯುಗದಲ್ಲಿ ಹುಟ್ಟಿದ್ದೇ ಸಾರ್ಥಕ ಎಂಬ ಅಭಿಪ್ರಾಯ; ಅಂತಹ ಅನುಭವ ಮತ್ತು ತಿಳಿವಳಿಕೆ ಅಲ್ಲಿನ ಜನರಿಗೆ ಇತ್ತಂತೆ;
- ಈ ಯುಗದ ಯುಗಮೌಲ್ಯ ಒಳಿತೇ; ಕೆಟ್ಟದ್ದರ ಸುಳಿವೇ ಇಲ್ಲದ ಕಾಲ; 'ವ್ಯಕ್ತಿ' ಎಂದ ಮೇಲೆ, 'ಕಾಲ' ಎಂದ ಮೇಲೆ 'ಒಳಿತು', 'ಕೆಡುಕು' ಇದ್ದೇ ಇರುತ್ತವೆ, ಆದರೆ ಈ ಯುಗದಲ್ಲಿ ಕೆಡುಕಿಗೆ ಸ್ಥಾನವೇ ಇರಲಿಲ್ಲ ಎಂಬ ಭಾವ;
- ಈ ಯುಗದಲ್ಲಿ 'ಧರ್ಮ' ನಾಲ್ಕು ಕಾಲನ್ನೂ ಊರಿ ಸುಸ್ಥಿರವಾಗಿತ್ತಂತೆ; ಅಂದರೆ 'ಧರ್ಮಚ್ಯುತಿ'ಯಾಗಲಿ, 'ಧರ್ಮಬಾಹಿರ' ಚಟುವಟಿಕೆಯಾಗಲಿ ಇರುತ್ತಿರಲಿಲ್ಲ ಎಂದು ಅರ್ಥ; ಉಳಿದ ಮೂರು ಯುಗಗಳಲ್ಲಿ ಧರ್ಮ ಕ್ರಮವಾಗಿ ಮೂರು ಕಾಲಿನಲ್ಲಿ, ಎರಡು ಕಾಲಿನಲ್ಲಿ, ಒಕ್ಕಾಲಿನಲ್ಲಿ ಇತ್ತೆಂಬುದು ಅಭಿಪ್ರಾಯ; ಅಂದರೆ ಧರ್ಮ ಕ್ರಮೇಣ ಕ್ಷೀಣಿಸುತ್ತಾ ಹೋಗಿದೆ ಎಂಬ ಕಲ್ಪನೆಯನ್ನು ಈ 'ವಿಕಾಸ' ಕೊಡುತ್ತಿದೆ;
- "ಕಾಲ ಕೆಟ್ಟು ಹೋಯಿತು" ಎಂಬ ಮಾತು ಕೃತಯುಗಕ್ಕೆ ಅನ್ವಯಿಸುವುದಿಲ್ಲ; ಏಕೆಂದರೆ ಇಲ್ಲಿ 'ಕೆಡುಕೇ' ಇರಲಿಲ್ಲ ಎನ್ನಲಾಗಿದೆ;
- ಇಂತಹ ಯುಗ ಯಾವಾಗಲಾದರೂ ಇತ್ತೆ ಎಂಬ ಅನುಮಾನ ನಮ್ಮನ್ನು ಕಾಡುವುದು ಸಹಜ.

ಕೃತ್ತಿಕೆ krittike :

- ಒಂದು ಮಳೆಯ ನಕ್ಷತ್ರ; ಈ ಮಳೆಯ ಬಗೆಗೆ ಇರುವ ಒಂದು ಸಾಮಾನ್ಯ ಅಭಿಪ್ರಾಯ: "ಕೃತ್ತಿಕೆ ಮಳೆ ಬೀಳದೆ ಇದ್ದರೆ ಬಾಯಿಗೆ ಮೃತ್ತಿಕೆ, ಕುತ್ತಿಗೆಗೆ ಕುರುಹು ಗಾಳಿ"; The third lunar mansoon containing six stars called the pleiad; It is the one of the names of rains in rainy season;
- ಮೇ ತಿಂಗಳ ಮಧ್ಯದಲ್ಲಿ ಬರುವ ಮಳೆ. It rains during middle of may month.

ಕೃಮಿ ಭೋಜಿ krimi bhōji :

ಕಾರ್ತಿಕ ಮಾಸದಲ್ಲಿ ಕಂಚಿನ ಪಾತ್ರೆಯಲ್ಲಿ ಊಟ ಮಾಡುವವನು; A person who feeds in bronze plate during Karthika month.

ಕೃಷ್ಣ krisṇa :

- ಭಾರತೀಯ ಅವತಾರ ಕಲ್ಪನೆಯಲ್ಲಿ ಕೃಷ್ಣಾವತಾರವೂ ಒಂದು; ಕೃಷ್ಣ ದ್ವಾಪರಯುಗದ ಅಧಿಪತಿ, ನಾಯಕ; ಭಾರತೀಯ ಸಂಸ್ಕೃತಿಯಲ್ಲಿನ ಎರಡು ಪ್ರಸಿದ್ಧ ಆರಾಧನ ಸಂಪ್ರದಾಯಗಳಲ್ಲಿ ಕೃಷ್ಣನ ಆರಾಧನ ಸಂಪ್ರದಾಯ (krishna cult)ವೂ ಒಂದು, ಇನ್ನೊಂದು ರಾಮನ ಆರಾಧನ ಸಂಪ್ರದಾಯ (Rama cult); ಇವೆರಡೂ ಭಾರತಾದ್ಯಂತ ಗೋಚರಿಸುತ್ತವೆ; ಈ ಆರಾಧನ ಸಂಪ್ರದಾಯಗಳನ್ನು ರೂಪಿಸುವಲ್ಲಿ ಪುರಾಣ, ಐತಿಹ್ಯ, ಜನಪದಕಾವ್ಯ, ಶಿಷ್ಟಕಾವ್ಯ, ನಂಬಿಕೆ, ಆಚರಣೆಗಳೂ ಕಾರಣವಾಗಿವೆ; ಜೊತೆಗೆ ಕೃಷ್ಣನ ಅಥವಾ ರಾಮನ ಅವತಾರ(incarnation) ಕಲ್ಪನೆಗಳೂ ನೆರವಿಗೆ ಬಂದಿವೆ; ಕೃಷ್ಣ 'ಅವತಾರಪುರುಷ' ಎಂಬ ಭಾವನೆ ಮತ್ತು ನಂಬಿಕೆ ಬಂದ ಮೇಲೆ ಕೃಷ್ಣನ ಆರಾಧನ ಸಂಪ್ರದಾಯ ಪ್ರಭಾವಶಾಲಿಯಾಗಿ ಬೆಳೆಯಲು ಕಾರಣವಾಯಿತು; A person who is considered as one of the forms of lord Vishnu; The hero of epic –Mahabhatatha; He is being worshiped by the both-literate civilian and illiterate civilian;
- 'ಕೃಷ್ಣ' 'ಚಂದ್ರವಂಶ'ದವನು ಎಂಬ ಮಾತಿದೆ; ಹಾಗೆಯೇ ರಾಮ 'ಸೂರ್ಯವಂಶ'ದವನು ಎಂಬ ಉಲ್ಲೇಖ(ಪು.ನಾ.ಚೂ); ಪ್ರಾಚೀನ ಬಹುತೇಕ ರಾಜವಂಶಗಳು ಈ ಎರಡರಲ್ಲಿ ಯಾವುದಾದರೂ ಒಂದಕ್ಕೆ ಸೇರಿದವರಾಗಿರುತ್ತವೆ; ಈ 'ಚಂದ್ರವಂಶ' ಮತ್ತು 'ಸೂರ್ಯವಂಶ' ಕ್ರಮವಾಗಿ 'ದ್ರಾವಿಡ' ಮತ್ತು

'ಆರ್ಯ' ಜನಾಂಗಗಳನ್ನು ಪ್ರತಿನಿಧಿಸಿವೆಯೆ? ಈ ಸೈದ್ಧಾಂತಿಕ ಪ್ರಶ್ನೆಯನ್ನು ಚರ್ಚಿಸುವುದು ಸೂಕ್ತ; He belongs to Dravidian race-Chandra race; It is a belief that-he is one of the incarnations of Vishnu;

- 'ಕೃಷ್ಣ' ಎಂಬ ಪದಕ್ಕೆ 'ಕಪ್ಪು', 'ಕಡುನೀಲಿ' ಎಂಬ ಅರ್ಥಗಳಿವೆ; ನಾಟಕಗಳಲ್ಲಿ ಕೃಷ್ಣನ ಪಾತ್ರಕ್ಕೆ ಹಚ್ಚುವ ಬಣ್ಣವನ್ನು ನೆನೆಪಿಸಿಕೊಳ್ಳಬಹುದು; ಇದನ್ನೆ ಕಾವ್ಯಗಳು 'ನೀಲಮೇಘ ಶ್ಯಾಮ' ಎಂದು ಕರೆದಿರುವುದು; ಪಂಪ ತನ್ನನ್ನು ವರ್ಣಿಸಿಕೊಳ್ಳುವಾಗ ಹೇಳಿರುವ 'ಕದಳೀಗರ್ಭ ಶ್ಯಾಮಂ' ಎಂಬ ಮಾತನ್ನೂ ಇಲ್ಲಿ ಉಲ್ಲೇಖಿಸಬಹುದು, ಇದರ ಅರ್ಥ ಬಾಳೆಯ 'ಮೋತೆ'ಯ ಬಣ್ಣ; ನಮ್ಮ ಹಳ್ಳಿಯವರು ಹೇಳುವಂತೆ 'ಎಣೆಗೆಂಪು' ಅಥವಾ 'ಎಣ್ಣೆಗೆಂಪು'; ಇವೆಲ್ಲ ದ್ರಾವಿಡ ಕಲ್ಪನೆಯನ್ನು ಪುಷ್ಟೀಕರಿಸುತ್ತವೆ; Krishna-means black, dark and dark-blue as well;
- 'ಕೃಷ್ಣ'ನನ್ನು 'ಗೊಲ್ಲ' ಎಂದು ಹೇಳಲು ಹೊರಟಿರುವ ಪ್ರಯತ್ನವೂ ಇದೆ; ಇದಕ್ಕೆ ಕಾರಣವಾಗಿ 'ಕೃಷ್ಣ' ಗೋಕುಲದಲ್ಲಿ ಬೆಳೆದದ್ದು, ನವಿಲುಗರಿ ಮತ್ತು ಕೊಳಲುಗಳನ್ನು ಉದಾಹರಣೆಯಾಗಿ ಕೊಡಲಾಗುತ್ತದೆ; ಈ ಕಾರಣಕ್ಕಾಗಿಯೇ ಕೆಲವು ಗೊಲ್ಲ ಸಮುದಾಯಗಳು 'ಕೃಷ್ಣಗೊಲ್ಲರು' ಎಂಬುದಾಗಿ ಗುರುತಿಸಿಕೊಳ್ಳಲು ಪ್ರಯತ್ನಿಸಿರುವುದನ್ನು ನೋಡುತ್ತೇವೆ; ಕೃಷ್ಣ ಗೊಲ್ಲನಾಗಬೇಕಾಗಿ ಬಂದುದು ದೇವಕಿಯ ಅಷ್ಟಮ ಶಿಶುವನ್ನು ಕಂಸನಿಂದ ರಕ್ಷಿಸಲು ನಡೆಸಿದ ನಾಟಕದಿಂದ; ಆದ್ದರಿಂದ ಕೃಷ್ಣ ಮೂಲದಲ್ಲಿ ರಾಜವಂಶಸ್ಥ, ಯಾದವ ವಂಶಕ್ಕೆ ಸೇರಿದವನು; ಯದುಕುಲದ ಕ್ಷತ್ರಿಯ;
- ಚಂದ್ರವಂಶದ ಐದನೇ ಚಕ್ರವರ್ತಿ ಯಯಾತಿ; ಅವನ ಒಬ್ಬಳು ಹೆಂಡತಿಯಲ್ಲಿ ಯದು, ಇನ್ನೊಬ್ಬಳಲ್ಲಿ ಪುರು ಜನಿಸಿದರು; ಯಯಾತಿಯ ಮಗ ಯದುವೇ ಕೃಷ್ಣನ ಪೂರ್ವಜ; ಹೀಗಾಗಿ, ಕುರು, ಪುರು ಮತ್ತು ಯದು ಪೀಳಿಗೆಗಳು ಚಂದ್ರವಂಶದಲ್ಲಿ ಬಂದವು; ದ್ರಾವಿಡ ಕವಲುಗಳು ಎನ್ನಬಹುದೆ? The fifth emperor of Chandra lineage Yayathi is the fore father of Krishna.
- ಕೃಷ್ಣನನ್ನು 'ಯದುಕುಲ ನಂದನ' ಎಂದೇ ಕೀರ್ತಿಸುವುದುಂಟು; ಕುರುವಂಶ ಮತ್ತು ಯದುವಂಶಗಳೆರಡರ ಚರಿತ್ರೆಯೂ ಮಹಾಭಾರತದಲ್ಲಿರುವುದು ವಿಶೇಷ; ಯದುಕುಲ ಲಲಾಮನಾದ ಕೃಷ್ಣ ಕುರುವಂಶದ 'ಕೌರವ' ಕವಲಿಗೆ ವಿರುದ್ಧವಾಗಿ, 'ಪಾಂಡು' ಕವಲಿಗೆ ಬೆಂಬಲವಾಗಿ ನಿಂತುದನ್ನು ಎಷ್ಟೇ ಸಮರ್ಥಿಸಿಕೊಂಡರೂ ದುರಂತದ ಅಂತ್ಯವನ್ನು ತಲುಪಲೇಬೇಕಾಯಿತು; ಕೊನೆಗೆ ದ್ವಾಪರಯುಗದ ಅಂತ್ಯ ಈ ಎರಡು ವಂಶಗಳ–ಯದು ಮತ್ತು ಕುರು– ಅಂತ್ಯದೊಡನೆ ಆದುದು, ಸಂಘರ್ಷಕ್ಕೊಂದು ಮಿತಿಯಿದೆ ಎಂಬುದನ್ನು ಹೇಳುವಂತಿದೆ; ಸಹಜವಾಗಿ ಕಲಿಯುಗ ಆರಂಭವಾದುದು ಇದಕ್ಕೆ ಒಂದು ಪ್ರತಿಮೆಯಂತೆ ಕಾಣುತ್ತದೆ; krishna is called as Yadhukula Nandana;
- ಜನಪದ ಕೃಷ್ಣನ ಆರಾಧನ ಸಂಪ್ರದಾಯಕ್ಕೆ ಗೌರವ, ಪ್ರೀತಿಯಿಂದ ನಡೆದುಕೊಂಡಿದೆ; 'ದೈವ'ವೆಂದು ಆರಾಧಿಸಿದೆ; ಆತನ ಕಥೆ, ಕಾವ್ಯಗಳನ್ನು ಕಟ್ಟಿ ಪ್ರಸಾರ ಮಾಡುತ್ತಾ ಬಂದಿದೆ; ಜನಪದ, ಪುರಾಣ, ಐತಿಹ್ಯ, ಕಾವ್ಯಗಳಲ್ಲಿ ಅವನ ಪರವಾದ ಒಲುವುಗಳನ್ನು ತೋರಿದ್ದಿದೆ; ಕೃಷ್ಣನನ್ನು 'ವಿಷ್ಣು'ವಿನ ಅವತಾರವೆಂದು ಜನತೆ ನಂಬಿದೆ, ಪರಮಾತ್ಮನೆಂದು ಪೂಜಿಸಿದೆ; ಅದಕ್ಕಾಗಿ ಅತಿಮಾನುಷ ಪರಂಪರೆಯನ್ನೆ ಸೃಷ್ಟಿಸಿದೆ; ಶ್ರೀಕೃಷ್ಣನ ಪರವಾದ 'ಭಕ್ತಿ ಪಾರಮ್ಯ'ವನ್ನು ಬೆಳೆಸಿದೆ; 'ಭಾಗವತ' ಸಂಪ್ರದಾಯವೊಂದು ಈ ಹಿನ್ನೆಯಲ್ಲಿ ಪ್ರಚಾರಕ್ಕೆ ಬಂದಿದೆ; ಭಕ್ತಿ ಚಳವಳಿಗೆ ಅವನು ಸ್ಫೂರ್ತಿಯಾಗಿ, ಶಕ್ತಿಯಾಗಿ ನಿಂತಿದ್ದಾನೆ; ಹೀಗಾಗಿ ಆಸೇತುಹಿಮಾಚಲದವರೆಗೆ ಕೃಷ್ಣನ ಪರವಾದ ಕಲ್ಪನೆಗಳು ಸಂಸ್ಕೃತಿಯ ಬಹುಮುಖ್ಯ ಮಾದರಿಗಳಾಗಿ ಕಂಡಿವೆ; ಇದಕ್ಕೆ ಮೊದಲಿನಿಂದಲೂ ಜನಪದರು ಕಾರಣರಾಗಿದ್ದಾರೆ; In folk traditions he is worshiped as god; The folk develops their own myth, oral epics on him; He is the spirit behind Bhakti-Bhagvath movement in India;
- ಈ ಎಲ್ಲದಕ್ಕೂ ಸಾಕ್ಷಿ ಎಂಬಂತೆ 'ಕೃಷ್ಣ'ನ ಹೆಸರನ್ನು ಬಹಳ ಹಿಂದಿನಿಂದಲೂ ಇಡುತ್ತಾ ಬಂದಿದ್ದಾರೆ; ಕೃಷ್ಣ ಪರವಾದ ಸಂಸ್ಕೃತಿಯನ್ನು ರೂಪಿಸುವುದರಲ್ಲಿ

ಇದರ ಪಾತ್ರವೂ ಇದೆ ಎಂಬುದನ್ನು ಮರೆಯಲಾಗದು; ಕೃಷ್ಣ ಕಥಾವಸ್ತುವಿನ ನಾಟಕ, ಸಿನಿಮಾ, ಹಾಡು, ಕಲೆ, ರೇಖಾಚಿತ್ರ, ಶಿಲ್ಪಗಳು ಇವೊತ್ತೂ ಜನಪ್ರಿಯವಾಗಿಯೇ ಇವೆ; ಇವು ಮನರಂಜನೆ, ಭಕ್ತಿ, ಸಂಸ್ಕೃತಿ ವಿಷಯವಾಗಿ ಮುಂದುವರಿಯುತ್ತಲೇ ಇವೆ; ಕೃಷ್ಣನ ವ್ಯಕ್ತಿತ್ವವನ್ನು ಕಟ್ಟಿ ನಿಲ್ಲಿಸುತ್ತಲೇ ಇವೆ.

ಕೃಷ್ಣಪಕ್ಷ krisṇapaksa :
- ಹುಣ್ಣಿಮೆಯಿಂದ ಅಮವಾಸ್ಯೆಯ ತನಕ ಇರುವ ಹದಿನೈದು ದಿನಗಳ ಅವಧಿ; The dark half of the lunar month from full to new moon;
- ಅಮವಾಸ್ಯೆಯಿಂದ ಹುಣ್ಣಿಮೆವರೆಗಿನದು ಶುಕ್ಲಪಕ್ಷ;
- ಒಂದು ಇಳಿಮುಖದ ಚಲನೆ; ಇನ್ನೊಂದು ಏರುಮುಖದ ಚಲನೆ;
- 'ಕೃಷ್ಣ' ಅಂದರೆ ಕಪ್ಪು(ಕತ್ತಲೆ); 'ಶುಕ್ಲ' ಎಂದರೆ ಬಿಳುಪು(ಬೆಳಕು);
- ಚಂದ್ರನನ್ನು ಆಧರಿಸಿ ಈ ವಿಭಜನೆ.

ಕೃಷ್ಣನ ಕಾಲು krisṇana kālu :
- ಕೃಷ್ಣನಂತೆ ನಿಲ್ಲುವ ಭಂಗಿ; The standing posture of lord Krishna;
- ಸಹಜವಾದರೂ ಅನುಕರಣೆಯಂತೆ ತೋರು-ವಂಥದು; Though it is natural it appears like imitation;
- ಆ ಬಗೆಯ ಭಂಗಿಯನ್ನು ಕಂಡು 'ಕೃಷ್ಣನ ಕಾಲು ಹಾಕಿಕೊಂಡು ನಿಂತವನೆ' ಎಂಬ ಹೇಳಿಕೆ.

ಕೃಷ್ಣನ ಜುಟ್ಟು krisṇana juṭṭu :
- ಕೃಷ್ಣನ ತಲೆಯಲ್ಲಿ ಕಟ್ಟಿದ ಜುಟ್ಟಿನ ರಂಗೋಲಿ ವಿನ್ಯಾಸ; The head crest knot of hairy decoration;
- ಬಾಲಕೃಷ್ಣನ ಬಾಲಲೀಲೆಯನ್ನು ವರ್ಣಿಸುವಂತೆ ಇದಿದೆ; It depicts the nostalgia of infant Krishna;
- ಪುಟ್ಟ ಕೃಷ್ಣನ ಜುಟ್ಟನ್ನು ರಂಗೋಲಿ ವಿನ್ಯಾಸದಲ್ಲಿ ತಂದು ಅಷ್ಟಮಿ ದಿನದಂದು ದೇವರ ಎದುರು ಬಿಡಿಸುತ್ತಾರೆ.

ಕೃಷ್ಣನ ತೊಟ್ಟಿಲು krisṇana toṭṭilu :
- ತೊಟ್ಟಿಲು ಆಕಾರದ ರಂಗೋಲಿ ವಿನ್ಯಾಸ; The cradle of infant Krishna;
- ನಾಲ್ಕು ಕಾಲುಗಳಿಂದ ನಿಂತಿರುವ ತೊಟ್ಟಿಲಿನ ಆಕಾರದ ಈ ನಕ್ಷೆ ವಿವಿಧ ರೂಪದಲ್ಲಿರುತ್ತದೆ; A kind of drawing on the floor with multi-colours;
- ಕೃಷ್ಣಾಷ್ಟಮಿಯಂದು ಈ ತೊಟ್ಟಿಲಿನಲ್ಲಿ ಕೃಷ್ಣ ಮಲಗುತ್ತಾನೆ ಎಂಬ ನಂಬಿಕೆ ಇದೆ.

ಕೃಷ್ಣನ ದಾನ krisṇana dāna :
- ಚಾತುರ್ಮಾಸದ ಒಂದು ವ್ರತ; A ceremony of four months;
- ಒಂದು ಬಟ್ಟಲಲ್ಲಿ ಬೆಣ್ಣೆ ಕೃಷ್ಣನನ್ನು ಇಟ್ಟು ಪ್ರತಿ ದ್ವಾದಶಿಗೆ ದಾನ ಮಾಡುವ ವ್ರತ.

ಕೃಷ್ಣನ ಪಾದ krisṇana pāda :
- ಮಗುವಿನ ಪಾದದ ನಕ್ಷೆ; The trace of baby foot in the direction of home entry foot print;
- ಇದು ಮನೆಯ ಒಳಗೆ ಪಾದವಿಡುವಂತೆ ಇದರ ವಿನ್ಯಾಸ;
- ಈಗ ತಟ್ಟೆಯಲ್ಲಿ ಹುಡಿ ಹಾಸಿ ಒತ್ತಿ ಪಾದವನ್ನು ಮೂಡಿಸುವ ವಿಧಾನ ಬಂದಿದೆ.

ಕೃಷ್ಣನ ಮಂಡಿ krisṇana mandi :
- ಕೃಷ್ಣ ಅಂಬೆಗಾಲಿಟ್ಟು ನಡೆಯುವ ನಕ್ಷೆ; A drawing shows the Krishna's babbling walk;
- ಪುಟ್ಟ ಕೃಷ್ಣ ಮನೆಗೆ ಅಂಬೆಗಾಲಿಟ್ಟು ಬರುವನು ಎಂಬ ನಂಬಿಕೆ;
- ತಮ್ಮ ಬಯಕೆಯನ್ನು ಈಡೇರಿಸುವನು ಎಂಬ ಶ್ರದ್ಧೆಯಿಂದ ರಂಗೋಲಿ ಬರೆವಣಿಗೆ.

ಕೃಷ್ಣನೆಲ್ಲಿ/ಕರೀಬೆಟ್ಟುನೆಲ್ಲಿ krisṇanelli/ karībeṭṭunelli :

phyllantaus polyphyllus; ಇದೊಂದು ಬಗೆಯ ಮರ; ಟ್ಯಾನಿಂಗ್ ಚರ್ಮ ಹದ ಬರಿಸಲು ಬಳಕೆ. A kind of tree that used to tan skins/leather of animals.

ಕೃಷ್ಣಬೀಜ/ಕೋಳಿಬೀಜ/ಗೌರಿಬೀಜ krişņabīja/kōļibīja/gowribīja :

Ipomoea hederifolia; ಏರುಬಳ್ಳಿ. A kind of climbing creeper.

ಕೃಷ್ಣಮೃಗ krişņamriga :

- 'ಆರ್ಟಿಯೊಡ್ಯಾಕ್ಟೈಲ'ದ ಸಮೂಹ; 'ಬೋವಿಡೀ' ಕುಟುಂಬ; Blackbuck;
- ಚಿಗರಿ, ಸಾರಂಗ ಎಂದು ಕರೆಯುವರು; stag, elk, deer, buck;
- ಮೈಬಣ್ಣ ಸುಂದರ; ನುಲಿದ ಕೊಂಬುಗಳ ಸೊಬಗು;
- ಶ್ರವಣ ಶಕ್ತಿ ಅಷ್ಟಿಲ್ಲ; ಘ್ರಾಣಶಕ್ತಿ ಹೆಚ್ಚು;
- ದೃಷ್ಟಿ, ವೇಗದ ಓಟಗಳೇ ರಕ್ಷಣೆ;
- ಹೆಣ್ಣು ಚಿಗರಿಯೇ ತಂಡದ ನಾಯಕತ್ವ ವಹಿಸಿಕೊಳ್ಳುತ್ತದೆ;
- ಮೈಮೇಲಿನ ರೋಮ ಹಳದಿ; ಮೂರು ವರ್ಷದ ನಂತರ ಕಪ್ಪುಬಣ್ಣ;
- ಮೈಬಣ್ಣದಿಂದಾಗಿ 'ಕೃಷ್ಣಮೃಗ' ಎಂಬ ಹೆಸರು.

ಕೃಷ್ಣರಾಜ ಸಮುದ್ರ krişņarajasamudra:

- ಕೃಷ್ಣರಾಜನಗರ ತಾಲ್ಲೋಕಿನ ಕ್ರಿ.ಶ.೧೭೬೧ರ ೪೬ನೇ ಶಾಸನದಲ್ಲಿ ಇದರ ಉಲ್ಲೇಖ; A place that mentioned in the 46th inscription of 1761 AD of Krishnarajanagara Taluk;
- ಮೈಸೂರಿನ ರಾಜರಾದ ಇಮ್ಮಡಿ ಕೃಷ್ಣರಾಜ ಒಡೆಯರು ತಮ್ಮ ಹೆಸರಿನಿಂದ ನಿರ್ಮಿಸಿದ ಊರಿನ ಹೆಸರು ಇದು; It was named after king of 2nd Krishnaraja of Mysore;
- ಇಮ್ಮಡಿ ಕೃಷ್ಣರಾಜ ಒಡೆಯರು ಬರಗೂರು ಮತ್ತು ಅದರ ೧೨ ಹಳ್ಳಿಗಳನ್ನು ಅಗ್ರಹಾರವನ್ನಾಗಿ ಪರಿವರ್ತಿಸಿ ತಮ್ಮ ಹೆಸರಿನಲ್ಲಿ ಬರಗೂರಿಗೆ ಪ್ರತಿ ನಾಮ ಮಾಡಿ ಕೆಲವು ಭೂಮಿಯನ್ನು ದಾನ ಮಾಡಿದ್ದಿದೆ.

(E.C-೯; ಮೈ.ಜಿ.)

ಕೃಷ್ಣರಾಜೇಂದ್ರಪುರ ಅಗ್ರಹಾರ krişņa rājēndrapura agrahāra :

- ಮೈಸೂರು ತಾಲ್ಲೋಕಿನ ಕ್ರಿ.ಶ.೧೮೨೯ರ ೩೭ನೇ ಶಾಸನದಲ್ಲಿ ಈ ಊರಿನ ಉಲ್ಲೇಖ; A place where the only Brahmins dwell mentioned in 37th inscription of 1829AD of Mysore Talluku;
- ಮೈಸೂರು ಅರಸರಾದ ಮುಮ್ಮಡಿ ಕೃಷ್ಣರಾಜ ಒಡೆಯರ ಹೆಸರಿನಿಂದ ಈ ಅಗ್ರಹಾರಕ್ಕೆ ಈ ಹೆಸರು ಬಂದಿದೆ; It was named after the Mysore king 3rd Krishnaraja vodeyar;
- ಬ್ರಾಹ್ಮಣರಿಗೆ ಅಗ್ರಹಾರ ನಿರ್ಮಿಸಿ ಭೂಮಿದಾನ ಮಾಡುವುದು ಒಳ್ಳೆಯ ಕೆಲಸ ಎಂಬ ಹಿನ್ನೆಲೆಯಲ್ಲಿ ಮುಮ್ಮುಡಿ ಕೃಷ್ಣರಾಜ ಒಡೆಯರು ತಮ್ಮ ಹೆಸರಿನಿಂದ ಈ ಅಗ್ರಹಾರ ನಿರ್ಮಿಸಿದ್ದಾರೆ.

(E.C-೯; ಮೈ.ಜಿ.)

ಕೃಷ್ಣರಾಯಪೇಠೆ krişņarāyapēţhe :

- ಗುಂಡ್ಲುಪೇಟೆ ತಾಲ್ಲೋಕಿನ ಕ್ರಿ.ಶ.೧೭೫೧ರ ೮೦ನೇ ಶಾಸನದಲ್ಲಿ ಇದರ ಉಲ್ಲೇಖ; A place that mentioned in 80th inscriptions of 1751AD of Gundalupete Taluku; It is village in coimbatur of Tamil Nadu;
- ಇಮ್ಮಡಿ ಕೃಷ್ಣರಾಜ ಒಡೆಯರ ಹೆಸರಿನಲ್ಲಿ ನಿರ್ಮಾಣವಾದ ಊರು; ಇದು ಕೊಯಂಬುತ್ತೂರಿನಲ್ಲಿರುವ ಊರು; It is founded ofter the name of 2nd Krishnaraja vodeyar of Mysore;
- ಪೇಡೆ>ಪೇಟೆ=ಪಟ್ಟಣ; ಈ ಪೇಟೆಯಲ್ಲಿ 'ಪಟ್ಟೆಕಾರರು', ಅಂದರೆ ರೇಷ್ಮೆ ವ್ಯಾಪಾರಿಗಳು ಇದ್ದರು; ಈ ವ್ಯಾಪಾರಿಗಳು ಸೇರಿ ನಂಜನಗೂಡಿನ ಶ್ರೀನಂಜುಂಡೇಶ್ವರ ದೇವರಿಗೆ ಕೆಲವು ದತ್ತಿಗಳನ್ನು ಕೊಟ್ಟಿದ್ದಂತೆ ವಿಚಾರವಿದೆ.

(E.C-೩; ಮೈ.ಜಿ.)

ಕೃಷ್ಣಸಮುದ್ರ krişņasamudra :

- ಯಳಂದೂರು ತಾಲ್ಲೋಕಿನ ಕ್ರಿ.ಶ.೧೫೧೯ರ ೧೬೮ನೇ ಶಾಸನದಲ್ಲಿ ಇದರ ಉಲ್ಲೇಖ; A village that mentioned of 168th inscription of 1519 of Yalandur Talluk in Chamarajanagara district;

- ಇದು ಆಲಕೆರೆಯ ಮತ್ತೊಂದು ಹೆಸರು; ಹೊಯ್ಸಳ ದೇಶ ಹದಿನಾಡಿನಲ್ಲಿದ್ದ ಊರು;
- ಕೆರೆ ಇದ್ದ ಹಿನ್ನೆಲೆಯಲ್ಲಿ ಈ ಹೆಸರು ಬಂದಿರಬಹುದು;
- ವಿಜಯನಗರದ ಕೃಷ್ಣದೇವರಾಯನ ಆಳ್ವಿಕೆಯಲ್ಲಿ 'ಕೃಷ್ಣಸಮುದ್ರ' ಎಂದು ಪ್ರತಿನಾಮವಾಗಿರಬಹುದು;
- ಕೃಷ್ಣದೇವರಾಯನ ಮಂತ್ರಿಯಾದ ಸಾಳುವ ಗೋವಿಂದರಾಜಯ್ಯನು 'ಆಲಕೆರೆ' ಅಂದರೆ, ಕೃಷ್ಣಸಮುದ್ರಕ್ಕೆ ಕೆಲವು ತೆರಿಗೆಗಳನ್ನು ಬಿಟ್ಟ ವಿವರವಿದೆ.

(E.C-೪; ಮೈ.ಜಿ.)

ಕೃಷ್ಣಸಾಗರ krisṇasāgara :

- ಗುಂಡ್ಲುಪೇಟೆ ತಾಲ್ಲೋಕಿನ ಕ್ರಿ.ಶ.೧೫೧೭ರ ೧ನೇ ಶಾಸನದಲ್ಲಿ ಇದರ ಉಲ್ಲೇಖ; A village that mentioned in 1st inscription of 1517 of Gundalpete Talluk, Mysore District;
- ವಿಜಯನಗರದ ಅರಸ ಶ್ರೀ ಕೃಷ್ಣದೇವರಾಯನು ತನ್ನ ಹೆಸರಿನಿಂದ ಈ ಊರನ್ನು ಕರೆದಂತೆ ಕಾಣುತ್ತದೆ;
- ಇದು 'ಮಾದಲವಾಡಿ' ಎಂಬ ಹೆಸರಿನ ಗ್ರಾಮ; ಶ್ರೀ ಕೃಷ್ಣದೇವರಾಯನು ಇದನ್ನು 'ಕೃಷ್ಣಸಾಗರ' ಎಂದು ಪ್ರತಿನಾಮ ಮಾಡಿದಂತೆ ತಿಳಿಯ ಬರುತ್ತದೆ.

(E.C-೩; ಮೈ.ಜಿ.)

ಕೃಷ್ಣಸಾಗರ ಗ್ರಾಮ krisṇasāgara grāma:

- ಕುಣಿಗಲ್ ತಾಲೋಕಿನ ಕ್ರಿ.ಶ.೧೫೯೯ರ ೨೫ನೇ ಶಾಸನದಲ್ಲಿ ಇದರ ಉಲ್ಲೇಖ; A village that mentioned in 25th inscription of 1599 of kunigal Talluk, Tumkur District;
- ಶ್ರೀರಂಗರಾಯ ದೇವರು ರಾಜ್ಯವಾಳುತ್ತಿದ್ದಾಗ ಯಲಹಂಕ ನಾಡಪ್ರಭು ಇಮ್ಮಡಿ ಹಿರೀಕೆಂಪಯ್ಯಗೌಡರ ಹೆಂಡತಿ ವೆಂಕಟಕೃಷ್ಣಾಜಮ್ಮನವರು ಕುಣಿಗಲ್ಲಿನ ಪಡುವಣ ದಿಕ್ಕಿನಲ್ಲಿ ಕಟ್ಟಿದ 'ವೇಂಕಟಕೃಷ್ಣಸಾಗರದ ಗ್ರಾಮ'ವೇ ಇಂದಿನ ಕೃಷ್ಣಸಾಗರ ಗ್ರಾಮವಾಗಿದೆ;
- ಅಂದರೆ 'ಕೃಷ್ಣಾಜಮ್ಮ'ನವರ ಹೆಸರಿನ ಗ್ರಾಮವೇ ಈ 'ಕೃಷ್ಣಸಾಗರ'.

(E.C-೨೪; ತು.ಜಿ.)

ಕೃಷ್ಣಾಪುರ krisṇāpura :

- ತಿ.ನರಸೀಪುರ ತಾಲ್ಲೋಕಿನ ಕ್ರಿ.ಶ.೧೫೨೧ರ ೨೨೫ನೇ ಶಾಸನದಲ್ಲಿ ಇದರ ಉಲ್ಲೇಖವಿದೆ; A village that mentioned in 225th inscription of 1521AD of T.Narasipura Taluk, Mysore District;
- ವಿಜಯನಗರ ಅರಸನಾದ ಕೃಷ್ಣದೇವರಾಯನ ಹೆಸರನ್ನೆ ಈ ಊರಿಗೆ ಇಡಲಾಗಿದೆ; It was named after the king of Vijayanagara KrishnaDevaraya;
- ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಕಲಿಯೂರನ್ನು ಕೃಷ್ಣಾಪುರ ಎಂದು ಪ್ರತಿನಾಮ ಮಾಡಿ, ಈ ಊರ ಭೂಮಿಯನ್ನು ಹಂಪೆಯ ವಿರೂಪಾಕ್ಷ ದೇವರಿಗೆ ದಾನ ಮಾಡಿದಂತೆ ತಿಳಿದು ಬರುತ್ತದೆ.

(E.C-೯; ಮೈ.ಜಿ.)

- ಇದೇ ತಲ್ಲೋಕಿನ ಕ್ರಿ.ಶ.೧೬ನೇ ಶ.ದ ೧೩೩ನೇ ಶಾಸನದಲ್ಲಿ 'ಕೃಷ್ಣರಾಯಪುರ'ದ ಉಲ್ಲೇಖವಿದ್ದು, ಇದು ಕೂಡ ಕೃಷ್ಣದೇವರಾಯನಿಂದಲೇ ಆದುದೆಂದು ಪ್ರಸ್ತಾಪವಿದೆ; ಆ ಕಾರಣ ಮೇಲಿನ 'ಕೃಷ್ಣಾಪುರ' ಮತ್ತು 'ಕೃಷ್ಣರಾಯಪುರ' ಎರಡೂ ಒಂದೇ ಆಗಿರುವಂತೆ ತೋರುತ್ತದೆ; There is an another village that mentioned in 133rd of inscription 16th century of T.Narasipura Taluk, Mysore District;
- ಈ ಶಾಸನದಲ್ಲಿ 'ಮೊರಡಿಯಪುರ'ಕ್ಕೆ ಕೃಷ್ಣರಾಯಪುರ ಎಂದು ಪ್ರತಿನಾಮ ಮಾಡಿ ಅಗ್ರಹಾರಕ್ಕೆ ಕೆಲವು ದಾನ ಮಾಡಿದುದರ ಉಲ್ಲೇಖವಿದೆ; It is also named after KrishnaDevaraya of Vijayanagara;
- ಸಮಸ್ಯೆ ಇರುವುದು 'ಕಲಿಯೂರು' ಮತ್ತು 'ಮೊರಡಿಪುರ' ಎರಡೂ ಒಂದೆಯೇ ಅಥವಾ ಬೇರೆಯೇ ಎಂಬುದರಲ್ಲಿ.

(E.C-೯; ಮೈ.ಜಿ.)

ಕೆಂಕಣ್ಣು/ಕೆಂಗಣ್ಣು Keŋkaṇṇu/Keŋgaṇṇu:

- ೧. ಕೆಂಪುಕಣ್ಣು; ಕೆಂಪು ಪದದ ಮೂಲರೂಪ ಕೆನ್ ಧಾತುವಿನಿಂದ ಬಂದದ್ದು(ಕೆನ್, ಕೆಮ್); Reddish eye; `Kempu' word has its root in the word `ken';

- ಕೆಂಪು ಪದವು ಸಮಾಸದಲ್ಲಿ ಪೂರ್ವ ಪದವಾಗಿ ಬರುವಾಗ ಪಡೆಯುವ ರೂಪಭೇದ; the form `ken' has the Morphologlical change of kem;
- ಕೆನ್+ಕಣ್ಣು=ಕೆಂಕಣ್ಣು>ಕೆಂಗಣ್ಣು(ಕ>ಗ);
- ಕಣ್ಣಿನ ಒಳಭಾಗದ ಬಿಳಿ ಗುಳ್ಳೆಯ ಸುತ್ತಲೂ ಕೆಂಪುಬಣ್ಣದಿಂದ ಕೂಡಿರುವಂಥದು ಕೆಂಗಣ್ಣು;
- ಯಕ್ಷಗಾನ ಪಾತ್ರದ ಕಣ್ಣಿನ ಒಂದು ರೂಪ; ಪಾತ್ರದ ಉಗ್ರ ಭಾವನೆ ಅಭಿವ್ಯಕ್ತಿಸಲು; ಆಂಗಿಕಾಭಿನಯಕ್ಕಾಗಿ ಕಣ್ಣಿನ ಸುತ್ತ ಕೆಂಪುಬಣ್ಣ ಬಳಿಯುವುದು;
- ಸಿಟ್ಟು, ದ್ವೇಷಾಭಿವ್ಯಕ್ತಿಗೆ ಬಿಡುವ ಕಣ್ಣನೋಟ; angry eye; an eye disease;
- ಕಣ್ಣಿನ ತೊಂದರೆಯಿಂದಾಗುವ(ಖಾಯಿಲೆ) ಕೆಂಗಣ್ಣು; ರಕ್ತಕಣ್ಣು ಎನ್ನುವುದು;
- ಕೆಂಗಣ್ಣಿನವರ ದೃಷ್ಟಿ ಬಿದ್ದರೆ ಕೇಡಾಗುತ್ತದೆಂಬುದು ನಂಬಿಕೆ; an evil eyesight;
- ಶಿವನಿಗೆ ಕೆಂಗಣ್ಣನೆಂದು ಕರೆಯುವುದು; ಹಣೆಗಣ್ಣನ್ನು ಕುರಿತು ಹೇಳುವುದು; Lord Shiva is called as Kenganna or reddish eye;
- ಕೋಗಿಲೆಯನ್ನು 'ಕೆಂಗಣ್ಣಕ್ಕಿ' ಎನ್ನುವುದು; ನುಡಿಗಟ್ಟಾಗಿ ಬಳಕೆ; ಕಾಡುಕೋಳಿಗೆ 'ಕೆಂಕಣ್' ರೂಪ ಬಳಕೆ; Cucku and Wild flow or Cock is called as Kengannakki or `Kenkannu';
- ಕಾಡುಕೋಳಿ ಹಾಗೂ ಕೋಗಿಲೆ ಕೆಂಪುಬಣ್ಣದ ಕಣ್ಣನ್ನು ಹೊಂದಿರುವುದರಿಂದ ಅವುಗಳನ್ನು ಆಲಂಕಾರಿಕವಾಗಿ 'ಕೇಂಕಣ್' ಎಂದು ತುಳುವಿನಲ್ಲಿ ಕರೆದಿರುವಂತೆ ಕಾಣುತ್ತದೆ.
- ಅಸೂಯೆ, ಅಸಹನೆ, ಹೊಟ್ಟೆಉರಿ, ಹೊಟ್ಟೆಕಿಚ್ಚು, ದ್ವೇಷದಿಂದ ಬೀರುವ ಕಣ್ಣೋಟ; An evil eyesight that denotes jealous envy anger impatience;
- ಕೆಕ್ಕರಿಸಿ, ದುರುಗುಟ್ಟಿ ನೋಡುವ ನೋಟ; ಸಿಟ್ಟನ್ನು ಸೂಚಿಸುವ ಕಣ್ಣು; An angry eyesight;
- ಶಿವನ ಮೂರನೇ ಕಣ್ಣು ಕುರಿತು 'ತ್ರಿನೇತ್ರನ ಹುರಿಗಣ್ಣಿನಂತೆ' ಎಂಬುದು ಕೆಂಗಣ್ಣಿನ ಸೂಚಕ; the third eye of Shiva which is on his forehead;
- ವ್ಯಕ್ತಿಯ ವ್ಯಕ್ತಿತ್ವ ಮತ್ತು ಸ್ವಭಾವಕ್ಕೆ ಸಂಬಂಧಿಸಿದ್ದು; It pertains to a person's personality;
- ಕುಡಿತದ ಅಮಲಿನಲ್ಲಿರುವವರು ಬೀರುವ ಕೆಂಪು ಕಣ್ಣು; intoxicated eyes;

  ಪ್ರ: 'ಮೇಷ್ಟ್ರು ಕೆಂಗಣ್ಣು ಬಿಟ್ರು ಹುಡುಗ್ರೆಲ್ಲಾ ಓಡೋದ್ರು';

  ವ್ಯರೂ: ಕೆಂಗ್ರುಗಣ್ಣು, ಕೆಂಜುರುಗಣ್ಣು, ಕೆಂಡುಗಣ್ಣ, ಕೆಡುಗಣ್ಣ.
- ೨. ಕೆಂಗಣ್ಣು; ಕೆಂಪು ಕಣ್ಣು(ತು); Reddish eyes;
- ಕಣ್ಣಿನಲ್ಲಿ ಉಂಟಾಗುವ ಒಂದು ಸಾಂಕ್ರಾಮಿಕ ರೋಗ; ಕಣ್ಣು ಕೆಂಪಾಗುವುದು, ನೀರು ಸುರಿಯುವುದು ಈ ರೋಗದ ಮುಖ್ಯ ಲಕ್ಷಣ; ಸೂಜಿಯಲ್ಲಿ ಚುಚ್ಚಿದಂತೆ ಕಣ್ಣಿನಲ್ಲಿ ಪಣಗುಡುವುದು (ನೋವಾಗುವುದು ಈ ರೋಗದ ಇನ್ನೊಂದು ಲಕ್ಷಣ); ಕಣ್ಣ ಕಡೆಯಲ್ಲಿ ಜಿಬರೆ ಕಟ್ಟುವುದೂ ಉಂಟು; ಬೇಸಗೆಯಲ್ಲಿ ಸಾಮನ್ಯವಾಗಿ ಈ ರೋಗ ಕಾಣಿಸಿಕೊಳ್ಳುತ್ತದೆ; ರೋಗ ಅಂಟಿದ ಕಣ್ಣಿನ ಸುತ್ತ ಕಪ್ಪನೆಯ ಒಂದು ಬಗೆಯ ಸಣ್ಣ ನೊಣಗಳು ಹಾರಾಡಿ ಮನಸ್ಸಿಗೆ ಕಿರಿಕಿರಿ ಅಥವಾ ಹಿಂಸೆ ಆಗುತ್ತದೆ; ಅಂಗೈಯನ್ನು ಕಣ್ಣಿನ ಮುಂದೆ ಬೀಸಿ ನೊಣಗಳನ್ನು ಓಡಿಸಿ ಈ ಹಿಂಸೆಯಿಂದ ಪಾರಾಗಲು ಯತ್ನಿಸುವುದು ಒಂದು ಸಾಮಾನ್ಯ ಕ್ರಿಯೆ; A kind of eye disease or lues;
- ಪರ್ಯಾಯ ನಾಮ: ಕಣ್ಣಾಗುವುದು; ಮದ್ರಾಸ್ಐ; ಮದ್ರಾಸ್‌ಕಣ್ಣು; An eye-infection - Madras eye;
- ರೋಗ ಹರಡದಿರಲೆಂದು ಕಪ್ಪು ಕನ್ನಡಕ ಧರಿಸುತ್ತಾರೆ; ರೋಗ ಅಂಟಿದವರು ಇನ್ನೊಬ್ಬರ ಆರೋಗ್ಯವಂತ ಕಣ್ಣುಗಳನ್ನು ನೋಡಬಾರದೆಂದು ಹೇಳಲಾಗುತ್ತದೆ; ರೋಗ ಹರಡುವುದನ್ನು ನಿಯಂತ್ರಿಸುವುದು ಆಶಯ; To avoid the spreading this eye infection or disease one has to wear spectacles or eyeglasses.

ಕೆಂಕಲು keŋkalu:

- ಕೆಂಕಲ್>ಕೆಂಕಲು>ಕೆಂಕ್ಲು;

- 'ಕೆಂಕಲ್' ಪದದ ವ್ಯಂಜನಾಂತ್ಯ 'ಕೆಂಕಲು'ನಲ್ಲಿ ಸ್ವರಾಂತ್ಯವಾಗಿರುವುದು; The consonant ended word `Kenkal' becomes vowel ended `Kenkalu';
- ಒಂದು ಬಗೆಯ ಮೀನಿಗೆ ಪದ ಬಳಕೆ; ಕೆಂಪು ಬಣ್ಣದ್ದೂ ಆಗಿರಬಹುದು. A kind of fish that is red in colour.

ಕೆಂಕೆಱೆ(ರೆ) keŋkeṟe(re) :

- ಕಡೂರು ತಾಲ್ಲೋಕಿನ 'ಕೆಂಕೆರೆ' ಗ್ರಾಮದಲ್ಲಿ ದೊರೆತಿರುವ ಕ್ರಿ.ಶ.೧೧೩೫ರ ೫೩ನೇ ಶಾಸನದಲ್ಲಿ ಈ ಗ್ರಾಮದ ಉಲ್ಲೇಖವಿದೆ; A Village; referred in 53rd inscription that has been found in Kenkere, Kaduru taluk, Chikkamagalure district; it belongs to 1135AD;
- ಇದೊಂದು ಜಲಮೂಲವಾಚಕ ಸ್ಥಳನಾಮ; It is a name of water source;
- ಇದೇ ತಾಲ್ಲೋಕಿನ ಬಾಣೂರು ಅಗ್ರಹಾರದಲ್ಲಿರುವ ಶಾಸನದಲ್ಲಿ 'ಕಂಕಿಯಕೆರೆ' ಉಲ್ಲೇಖವಿದೆ; ಬಹುಶಃ 'ಕಂಕಿಯಕೆರೆ' ಎಂಬುದೇ ಮುಂದೆ 'ಕೆಂಕೆರೆ' ಆಗಿರಬಹುದು. It is referred in an inscription found in Banooru Agrahara of the same taluk; perhaps `Kankiyakere' later was became `Kankikere'.

(E.C- ೧೨; ಚಿಕ್ಕ.ಜಿ.)

ಕೆಂಗಟ್ಟೆ Keŋgaṭṭe:

- ಕೆಂಪುಕಟ್ಟೆ>ಕೆಂಕಟ್ಟೆ>ಕೆಂಗಟ್ಟೆ(ಕ>ಗ);
- ಕೆನ್+ಕಟ್ಟೆ>ಕೆಂಕಟ್ಟೆ>ಕೆಂಗಟ್ಟೆ(ಕ>ಗ);
- ಕೆಂಪುಬಣ್ಣದ ಮಣ್ಣಿನಿಂದ ಹಾಕಿದ ಕಟ್ಟೆ; ಹೊಲ–ಗದ್ದೆಗಳಲ್ಲಿ ನೀರಿನ ತಡೆಯುವಿಕೆಗಾಗಿ ಹಾಕಲಾಗುವ ಬದು; A deck that built in red soil in cultivated land or farms;
- ಮರಳು ಮಿಶ್ರಿತ ಕೆಂಪು ಮಣ್ಣಿನ ಹೊಲಗಳಲ್ಲಿ ಜೋರು ಮಳೆ ಬಿದ್ದಾಗ ಮಣ್ಣಿನ ಸವಕಳಿ ತಪ್ಪಿಸಲು ದಪ್ಪದಾದ ಕಟ್ಟೆ/ಬದು ನಿರ್ಮಿಸುವುದಿದೆ. Embank in sand mixed reddish soil at fields to avoid soil erosion.

ಕೆಂಗಣಕು Keŋgaṇaku:

- ಕೆನ್+ಕಣಕು>ಕೆಂಕಣಕು>ಕೆಂಗಣಕು(ಕ>ಗ); ಕಣಕು=ಕಲಕು; ರಾಡಿಮಾಡು ಎಂಬರ್ಥವಿದೆ; to make mud;
- ಕೆಂಪಾದ ಕೊಳಕು ನೀರು; ತಿಳಿಯಾದ ಕೆರೆ–ಕಟ್ಟೆಗಳ ನೀರಿಗೆ ಹಸು, ಎಮ್ಮೆ, ದನ, ಕರು, ಕುರಿಮರಿಗಳನ್ನು ಇಳಿಸಿ ತೊಳೆದಾಗ, ಅವನ್ನು ಒಳಗೆ ಬಿಟ್ಟು ಈಜಾಡಿಸಿದಾಗ ನೀರು ಕಲಕಿ ತಳದಲ್ಲಿರುವ ಮಣ್ಣು ನೀರಿನೊಂದಿಗೆ ಬೆರೆತು ಕೆಂಪುಬಣ್ಣಕ್ಕೆ ತಿರುಗುತ್ತದೆ; ಇದು ಅನುಪಯುಕ್ತ ನೀರು; Reddish muddy water due to cattle bath in lakelet or pond; useless water; reddish polluted water due to the bath of cattle at tank, ponds embanks;
- ಬೇಸಿಗೆಯಲ್ಲಿ ಮಕ್ಕಳು, ದೊಡ್ಡವರು ಈಜಾಡಲು ಹೋದಾಗ, ಮೀನುಗಳನ್ನು ಹಿಡಿಯಲು ಬಲೆ, ಮಂಕ್ರಿ ಅಥವಾ ಸಣ್ಣ ಸಣ್ಣ ಬಿದಿರಿನ ಬುಟ್ಟಿಗಳನ್ನು ಹಾಕಲು ನೀರಿನೊಳಗೆ ಇಳಿದಾಗ ನೀರು ಕದಡಿ ಕೆಂಪಾಗುವುದಿದೆ; ಇಂತಹ ನೀರು ದುರ್ವಾಸನೆಯಿಂದ ಕೂಡಿದ್ದು ಜಾನುವಾರುಗಳೂ ಸಹ ಕುಡಿಯುವುದಿಲ್ಲ; In summer kids and adults swam in ponds and fished in lakelets with their fishing tools; during that water was stirred and became reddish; the cattle will not drink such smelly water;
- ಹಿಂದೆ ಕೆರೆ–ಕಟ್ಟೆಗಳು ಮನುಷ್ಯನ ಜೀವನಾಡಿಗಳಂತಿದ್ದವು; ಊರಿಗೊಂದೆರಡು ಕೆರೆ ಇಂದಿಗೂ ಇವೆ; ಅಂದು ಬಟ್ಟೆ ತೊಳೆಯುವುದು, ಮುಖ ತೊಳೆಯುವುದು, ಸ್ನಾನ ಮಾಡುವುದು, ದನಕರುಗಳನ್ನು ತೊಳೆಯುವುದು, ನೀರು ಕುಡಿಸುವುದು ಮೊದಲಾದ ಪ್ರಕ್ರಿಯೆಗಳು ಇಲ್ಲೇ ನಡೆಯುತ್ತಿದ್ದವು; ಅದಕ್ಕಾಗಿ ಒಂದೊಂದು ಕೆರೆಗಳ ನೀರನ್ನು ಯಾರೂ ಕದಡದಂತೆ ಕಾವಲಿರಿಸುತ್ತಿದ್ದುದು ಉಂಟು; ಕಾರಣ ಯಾರಾದರೂ ಈ ನೀರನ್ನು ಕದಡಿ ಕೆಂಗಣಕು ಮಾಡಿದರೆ ಅಲ್ಲಿನ ಜನರ ಮೂಲಸೌಕರ್ಯಗಳಿಗೆ ನೀರಿನ ತೊಂದರೆಯಾಗಬಹುದೆಂಬುದಾಗಿತ್ತು; once, lakelets, ponds, decks were part and

parcel of human beings in their day today lives, even today, every village has two lakelets- `kere-katte'. These are used to bath, wash clothes, wash utensils, to wash cattle; once, ponds or tanks are the moving spirt or sustainable powers of human beings; each village has atleast two tanks to wash clothes, to bath etc;

- ಕೆಂಗಣಕು ನೀರನ್ನು ಕುಡಿದರೆ, ಗಂಟಲು ಗುರುಗುಟ್ಟುವುದು, ಕೆಮ್ಮು ಬರುವುದು, ಅದರಿಂದ ಶೀತ, ನೆಗಡಿ, ಜ್ವರ ಬಂದು ಅನಾರೋಗ್ಯಕ್ಕೆ ತುತ್ತಾಗುವುದರ ಜೊತೆಗೆ ಇನ್ನಿತರ ದೈಹಿಕ ತೊಂದರೆಗಳಿಗೆ ಒಳಗಾಗುವ ಸಾಧ್ಯತೆಗಳಿರುತ್ತವೆ; if this kind of `Kenganaku' reddish water is being drunk by people, it leads to caugh, fever coldache or unhealthiness;
ಪ್ರ: 'ಮಕ್ಕಳು ಈಜಾಡಿ ಕೆರೆ ನೀರನ್ನು ಕೆಂಗಣಕು ಮಾಡವ್ರೆ'

ಕೆಂಗಂದು ನಾರಾಯಣಿ Keŋgandu nārāyaṇi:

Ixobrychus cinnamoneus;

- ಪಕ್ಷಿ ವಿಶೇಷ; ಕೆರೆ, ಕೊಳ, ನದಿ, ತೊರೆಗಳ ದಡದಲ್ಲಿ ಸದ್ದಿಲ್ಲದೆ ಈಜಾಡುವುದು ಇದರ ಸ್ವಭಾವ; ಸ್ಥಳೀಯ ವಲಸೆ ಪಕ್ಷಿಯೂ ಹೌದು. A migrated bird; it swims in lakelets, ponds, brooklets.

ಕೆಂಗಯನೀರು KeŋgayanĪru:

- ಕೆನ್+ಗಯ>ಕೆನ್‌ಗಯಾ>ಕೆಂಗಯ:
- ಕಣ್ಣೀರು; ಕೆಂಪಾದ ಕಣ್ಣೀರು; ಕೆಂಗಣ್ಣನೀರು; reddish lachrymation or lachrymation of a reddish eye due to rubbing eye;
- ಸಾಮಾನ್ಯವಾಗಿ ಕಣ್ಣಿನಲ್ಲಿ ಕೆಂಪುಬಣ್ಣದ ನೀರು ಬರುವುದು ಸಾಧ್ಯವಿಲ್ಲ; ಆದರೆ ಅತಿಯಾದ ದುಃಖದಿಂದ ಕಣ್ಣನ್ನು ಉಜ್ಜುತ್ತಿರುವಾಗ ಕಣ್ಣು ಕೆಂಪಾಗಿ ಅದರಿಂದ ಬರುವ ನೀರಾಗಿರಬಹುದು?; ಅಥವಾ ಅಸಹನೆ, ಅಸೂಯೆ, ಹೊಟ್ಟೆಕಿಚ್ಚಿನಿಂದ ಕೂಡಿದವರ ಕಣ್ಣಿನಲ್ಲಿ ಬರುವ ನೀರಾಗಿರಬಹುದು?; generally red tears from the eyes is not possible but while rubbing eyes they become reddish; or the tears of envy jealous people;
- 'ರಂಗಣ್ಣನ ಏಳಿಗೆಯನ್ನು ಕಂಡು ಅವನ ವೈರಿಗಳ ಕಣ್ಣಿನಲ್ಲಿ ರಕ್ತವೇ ಬಂದಿರಬಹುದು' ಎಂಬ ಮಾತು ಇದರ ಸಂವಾದಿ ಸೂಚಕ;
- ಒಟ್ಟಾರೆ ವ್ಯಕ್ತಿಯ ಸ್ವಭಾವದ ಮೇಲೆ ನಿರ್ಧಾರವಾಗುವ ಕಣ್ಣೀರು ತಿಳಿ ಬಿಳಿಬಣ್ಣದ್ದೇ ಆದರೂ ಕೆಂಪುಬಣ್ಣದ ಕಣ್ಣೀರು ಅನ್ವರ್ಥವಾಗಿ ಬಳಕೆಗೆ ಬಂದಿದೆ; ಆದರೂ 'ಕೆಂಗಯನೀರು' ಪದದ ಅರ್ಥ ಅಸ್ಪಷ್ಟದಿಂದಲೇ ಕೂಡಿದ್ದು ಇದು ಯಾವ ಅರ್ಥದಲ್ಲಿ ಬಳಕೆಗೆ ಬಂದಿದೆ ಎಂಬುದು ತಿಳಿಯದು.

ಕೆಂಗಲು/ಕೆಂಗ್ಲು Keŋgalu/Keŋglu:

- ಕೆನ್+ಗಲು>ಕೆನ್‌ಗಲು>ಕೆಂಗಲು>ಕೆಂಗ್ಲು;
- ಒಂದು ಬಗೆಯ ಮಣ್ಣು; ಕೆಂಪು/ಕೆಂಚು ಬಣ್ಣದಿಂದ ಕೂಡಿರುವಂಥದು; 'ಮಸಾರಿ' ನೆಲಕ್ಕೆ ಕೆಂಗ್ಲುಮಣ್ಣು ಎನ್ನುವುದಿದೆ; A kind of soil that is red or reddish in colour;
- ಕಬ್ಬು, ಬಾಳೆ, ಅರಿಶಿಣ, ತರಕಾರಿ, ಸೊಪ್ಪು, ದ್ವಿದಳ ಧಾನ್ಯಗಳ ಬೆಳೆಗಳಿಗೆ ಯುಕ್ತವಾದದ್ದು; it is suitable soil to grow-sugercane, banana, turmeric, vegetable etc;
- ತೇವಾಂಶ ಹಿಡಿದಿಡುವ ಗುಣ ಹೊಂದಿರದ ಮಣ್ಣು; ಶುಷ್ಕ ಒಣಹವೆಯಿಂದ ಕೂಡಿದ್ದು ಬೇಸಿಗೆಯಲ್ಲಿ ವಾರಕ್ಕೊಮ್ಮೆ ಮತ್ತು ಇತರೆ ವೇಳೆಯಲ್ಲಿ ೧೫ ರಿಂದ ೨೦ ದಿವಸಗಳಿಗೊಮ್ಮೆ ನೀರುಣಿಸುವುದು ಸೂಕ್ತ; ಹೆಚ್ಚು ಮಳೆ ಬಿದ್ದರೂ ಹೀರಿಕೊಳ್ಳುವ ಗುಣ ಹೊಂದಿದ್ದು ಕೆಲವೊಮ್ಮೆ ಕಟ್ಟೆ ತೆಗೆದು ನೀರು ಬಸಿಯುವುದೂ ಉಂಟು; it has the nature of catching water or dump bibulous;
- ಸಾಮಾನ್ಯವಾಗಿ ಕಪ್ಪು, ಕೆಂಪುಬಣ್ಣದ ಮಣ್ಣಿನಿಂದ ಕೂಡಿದ ಜಮೀನುಗಳೇ ಯತೇಚ್ಚವಾಗಿ ಕಂಡುಬರುತ್ತವೆ; generally we found black, redsoil farming fields;
- ಮಳೆಗಾಲದಲ್ಲಿ ಭತ್ತದ ಬೆಳೆ ಹೊರತುಪಡಿಸಿ ಇತರೆ ಬೆಳೆಗಳಿಗೆ ಕಪ್ಪುಮಣ್ಣಿಗಿಂತ ಕೆಂಪುಮಣ್ಣೇ ಶ್ರೇಷ್ಠ ಎಂಬುದು ಅನುಭವದ ಮಾತು;
- ಕೆಲವೊಮ್ಮೆ ಕೆಂಪುಮಣ್ಣಿನ ಜಮೀನಿಗೆ ಕಪ್ಪುಮಣ್ಣು, ತಿಪ್ಪೆಗೊಬ್ಬರ–ಗೋಡು ಹರಡಿ ಮಿಶ್ರಣ ಮಾಡಿ

ಭೂಮಿಯ ಫಲವತ್ತತೆ ಕಾಪಾಡಿಕೊಳ್ಳುವುದಿದೆ; to maintain the fertility of the reddish cultivated land by spreading the mixture of black soil and dung fertilizer;

- ಕೆಂಗುಳಿ ಮಣ್ಣು, ಕೆಬ್ಬೆಹೊಲ ಎಂಬ ಸಂವಾದಿ ರೂಪಗಳ ಬಳಕೆ ಇದೆ; reddish soil is called as `Kenguli soil', `a Kebbe Hola' in kannada language;
  ಪ್ರ: 'ನೀ ಎನೇ ಹೇಳಣ್ಣ ಕೆಂಗ್ಲು ಮಣ್ಣಿನ ವ್ಯವಸಾಯವೇ ಸರಿ ತುಪ್ಪ ಬಗ್‌ದಂಗಾಯ್ತದ'.

ಕೆಂಗಲ್ಲು Keŋgallu:

- ಕೆನ್+ಕಲ್ಲು=ಕೆಂಕಲ್ಲು>ಕೆಂಗಲ್ಲು(ಕ>ಗ);
- ಕಲ್ಲನ್ನು ಕೆಂಪುಬಣ್ಣದಿಂದ ಗುರುತಿಸುವ ಪದ (Reddish brown) ಕೆಂಪಾದಕಲ್ಲು;
- 'ಕೆಂಗಲ್ಲು' ಎಂಬುದು ಸ್ಥಳನಾಮ ಘಟಕವೂ ಹೌದು; it is a name of a place;
- ಕಲ್ಲಿನ ವಿವಿಧ ಶೋಧನೆಯಲ್ಲಿ 'ಕೆಂಪುಬಣ್ಣದ ಕಲ್ಲು' ಕೂಡ ಒಂದು; reddish stone;
- 'ಕೆಂಚು' ಎಂದು ಆಡುಮಾತಿನಲ್ಲಿ ಕರೆಯಲಾಗಿದೆ. Reddish stone has synonym in local dealect-Kenchu.

ಕೆಂಗಲಿ Keŋgali:

- ಬತ್ತದ ಬೆಳೆಯ ರೋಗ; paddy disease;
- ಬತ್ತದ ಬೆಳೆಯು ರೋಗ ಬಾಧೆಯಿಂದ ಕೆಂಪಾಗುವುದು; paddy crop is became reddish due to paddy disease;
- ಬತ್ತಕ್ಕೆ ತಗಲುವ ಬೆಂಕಿ ರೋಗಕ್ಕೂ ಪದ ಬಳಕೆ; this word is used to indicate paddy fire or flaming disease;
- ಬತ್ತದ ಗದ್ದೆಯಲ್ಲಿ ಬೆಳೆಯುವ ಒಂದು ಬಗೆಯ ಕಳೆ; a kind of weed is grown in paddy fields;
- ಬೇಸಾಯ ಜಾನಪದದ ಭಾಗವಾಗಿ ಬರುವ ಒಂದು ಪದ. it is a word that is a part and parcel of agricultural folklore.

ಕೆಂಗಾಡು keŋgāḍu:

- ಕೆಂಪು ಮಣ್ಣಿನ ಭೂಮಿ; `kadu' has the meanings of red soiled field or land;
- ಕೆನ್+ಕಾಡು=ಕೆಂಗಾಡು; ಕಾಡು=ಹೊಲ;
- 'ಕಾಡು' ಪದ ಹೊಲ, ಜಮೀನು, ಗದ್ದೆ, ಪ್ರದೇಶ ಎಂಬ ಅರ್ಥಗಳಲ್ಲಿ ಬಳಕೆ;
- ಕಪ್ಪು, ಕೆಂಪುಬಣ್ಣಗಳ ಮಿಶ್ರಿತ ಮಣ್ಣಿನ ಭೂಮಿ;
- ಕೆಬ್ಬೆಹೊಲ ಎಂದು ಕರೆಯಲಾಗುತ್ತದೆ(ಮಂ.ಜಿ).

ಕೆಂಗಿನ ಕಿಟ್ಟಾಟ Keŋgina kiṭṭāṭa:

- ಉತ್ತರಕನ್ನಡ ಜಿಲ್ಲೆಯ ಜನಪದ ಆಟ; A folk game or play of North kannada district;
- ಆಟದಲ್ಲಿ ಸಮಸಂಖ್ಯೆಯ ಎರಡು ಗುಂಪುಗಳಿದ್ದು ಸಂಖ್ಯೆಗನುಗುಣವಾಗಿ ಗೆರೆ(ರೇಖೆ) ಎಳೆಯುವುದು; it is a limping or skipping game of two teams;
- ಒಂದು ಗುಂಪಿನವರು ಗೆರೆಯ ಒಳಗೆ ಹೋದರೆ ಇನ್ನೊಂದು ಗುಂಪಿನವರು ಗೆರೆಯ ಹೊರಗಿದ್ದು, ಆ ಗುಂಪಿನ ಒಬ್ಬ ಹುಡುಗ ಕುಂಟುತ್ತಾ ಒಳ ಪ್ರವೇಶಿಸಿ, ಒಳಗಿದ್ದವರನ್ನು ಮುಟ್ಟಬೇಕು;
- ಗೆರೆಯೊಳಗೆ ಕಾಲೂರದೆ, ಗೆರೆಮುಟ್ಟದೆ ಒಳಗಿರುವವರನ್ನು ಮುಟ್ಟಬೇಕೆಂಬುದು ನಿಯಮ;
- ಒಳಗಿರುವವರು ಗೆರೆ ತುಳಿಯದಂತೆ, ಗೆರೆಯ ಹೊರಗೆ ಹೋಗದಂತೆ ಓಡಾಡಬೇಕು;
- ಮುಟ್ಟಿಸಿಕೊಂಡವರು ಗೆರೆ ಹೊರಗೆ ಹೋಗಬೇಕು;
- ಒಳಗಿದ್ದವರೆಲ್ಲ ಹೊರಗೆ ಹೋದ ಮೇಲೆ ಹೊರಗಿನವರು ಒಳಗೆ ಹೋಗಬೇಕು;
- ಯಾರೂ ಮುಟ್ಟಿಸಿಕೊಳ್ಳದಿದ್ದರೆ ಗೆರೆಯ ಒಳಗಿರುವವರೇ ಆಟ ಗೆದ್ದಂತೆ.

ಕೆಂಗುಡಿ keŋguḍi :

- ಮೈಸೂರು ಜಿಲ್ಲೆಯ ಚಾಮರಾಜನಗರ ತಾಲ್ಲೋಕಿನ ಕ್ರಿ.ಶ.೧೩೧೮ರ ೩೦೬ನೇ ಶಾಸನದಲ್ಲಿ ಇದರ ಉಲ್ಲೇಖ; A village that mentioned in 306th inscription found in Chamarajanagar taluk; it belongs to 1318AD;
- 'ಕೆಂಗುಡಿ'=ಕೆನ್+ಕುಡಿ>ಕೆನ್‌ಕುಡಿ>ಕೆನ್‌ಗುಡಿ; ಅರ್ಥ ಕೆಂಪಾದ ಚಿಗುರು; ಈ ಹಳ್ಳಿಯ ಹೆಸರು ಸದಾ ಹಸಿರು, ಎಳೆ ಚಿಗುರಿನಿಂದ ಕಂಗೊಳಿಸುವ

ಹಿನ್ನೆಲೆಯಲ್ಲಿ ಬಂದಿರಬಹುದು; A village of reddish sprouts;

- ಹೊಯ್ಸಳ ಅರಸ ಮುಮ್ಮಡಿ ವೀರಬಲ್ಲಾಳನ ಆಳ್ವಿಕೆಯಲ್ಲಿ ವೀರಮಾಧವ ದಂಡನಾಯಕನು 'ಪದಿನಾಲ್ಕು' ನಾಡನ್ನು ಆಳುತ್ತಿದ್ದನು; ಈತನು ಗೋಪಿನಾಥ ದೇವರ ಅಂಗಭೋಗರಂಗಭೋಗಕ್ಕೆ 'ಕೆಂಗುಡಿ' ಆದಿಯಾಗಿ ಹಲವು ಗ್ರಾಮಗಳನ್ನು ದಾನ ನೀಡಿದ ಪ್ರಸ್ತಾಪವಿದೆ. During the rule of Hoysala king 3rd Veeraballala; one of his army generals- Veera Madhava ruled `Padinalku' nadu- a state or small regions of 14; he donated the land to lord Gopinatha for its `pooja'-Anga-Bhoga-Ranga-Bhoga rituals.

(E.C- ೪; ಮೈ.ಜಿ.)

ಕೆಂಗುರಿ Keŋguri:

- ಕೆನ್+ಕುರಿ>ಕೆನ್‌ಕುರಿ>ಕೆನ್‌ಗುರಿ>ಕೆಂಗುರಿ(ಕ>ಗ);
- ಕೆಂಪುಬಣ್ಣದ ಕುರಿ; red sheep; red coloured sheep;
- ಜನಪದರು ಕಂದುಬಣ್ಣವನ್ನು ಕೆಂಪು ಎಂದೇ ಕರೆಯುವುದರಿಂದ ಕೆಂಗುರಿ ಪದ ಬಳಕೆ; the folk people called brown colour as red colour;
- ಕೆಂಗುರಿ ಕುರಿ ಕೆಂಪು(ಕಂದುಬಣ್ಣದ) ಕುರಿ; ಬಣ್ಣದ ತೀವ್ರತೆ ಹೇಳಲು 'ಕುರಿ' ದ್ವಿರುಕ್ತಿಯಾಗಿ ಬಂದಿದೆ; 'ಕೆಂಗುರಿ' ಒಂದು ಬಗೆಯ ಕುರಿಯೆಂದು ತೋರಿಸಿ ಮತ್ತೆ 'ಕುರಿ' ಪದವನ್ನು ಗುರುತಿಸುವ ಚಿಹ್ನೆಯಾಗಿ ಬಳಕೆಗೆ ಬಂದಿರಬಹುದು; reddish sheep; brownish sheep;
- ಗೊಂದಲಿಗರು ಪಂಚಮಿ ಅಮಾವಾಸ್ಯೆಯ ದಿನ ದುರ್ಗಾದೇವಿಗೆ ಕೆಂಗುರಿಯನ್ನು ಬಲಿ ಕೊಡುವುದು ಪದ್ಧತಿ; Gondaliga community victimizes red sheep to goddess Durgadevi;
- ದುರ್ಗಾದೇವಿಯನ್ನು ಕೆಂಪುಕಣ್ಣಿನ ದೇವತೆಯೆಂದು ಭಾವಿಸಿ ಅವಳಿಗೆ ಅರ್ಪಿಸುವ ಕುರಿ ಕೆಂಗುರಿ ಆಗಿರಬಹುದೆ?. Offering red sheep to red eyed Durga Goddess.

ಕೆಂಗೂದಲು Keŋgūdalu:

- ಕೆನ್+ಕೂದಲು>ಕೆನ್‌ಕೂದಲು>ಕೆನ್‌ಗೂದಲು (ಕ>ಗ)>ಕೆಂಗೂದಲು; reddish hair;
- ಕೆಂಪುಬಣ್ಣದ ತಲೆಕೂದಲು; 'ಕೆಂಪುಗೂದಲು' ಎಂದೂ;
- ಕೆಲವೊಮ್ಮೆ ಆನುವಂಶಿಕವಾಗಿ; ಬಣ್ಣ ಬಳಿದುಕೊಳ್ಳುವುದರಿಂದ; ದೇಹಪ್ರಕೃತಿ ವ್ಯತ್ಯಾಸದಿಂದ ಕೆಲವರ ಕೂದಲು ಕಂದು, ಕೆಂಪುಬಣ್ಣದ್ದೂ ಆಗಿರಬಹುದು; sometimes it happens due to one's hereditary hair dying; anatomical changes, some people hais become copper, brown or reddish colour;
- ಮಾನವಶಾಸ್ತ್ರದ ಮೂಲದಿಂದಲೂ ಕೆಲವು ಜನಾಂಗದ ಕೂದಲ ಬಣ್ಣಗಳು ಭಿನ್ನವಾಗಿರುತ್ತವೆ. Anthropalogically the hair colours are different from race to race.

ಕೆಂಗೇರಿ keŋgēri :

- ಕ್ರಿ.ಶ.ಸುಮಾರು ೧೩೦೦ರ ಶಾಸನವೊಂದರಲ್ಲಿ (೧೦೯) ಈ ಊರಿನ ಹೆಸರು 'ತೆಂಗೇರಿ' ಎಂದು ಉಲ್ಲೇಖಿತವಾಗಿದೆ; A village that referred in 109 inscription of 1300AD as `Tengeri';
- 'ತೆಂಗೇರಿ'ಯು ೧೭೩೮ರ ವೇಳೆಗೆ 'ಕೆಂಗೇರಿ' ಎಂದು ಬದಲಾವಣೆ ಹೊಂದಿದುದಾಗಿ ಇದೇ ಬಖೈರಿನಿಂದ ತಿಳಿದು ಬರುತ್ತದೆ; during 1738AD Tengeri was changed as `Kengeri' according to the said Bakhair;
- ಸ್ಥಳೀಯರು ಹೇಳುವ ಪ್ರಕಾರ ಕೆಂಪು ಮಣ್ಣಿನ ಪ್ರದೇಶದಿಂದಾಗಿ ಇದು 'ಕೆಂಪಾದ ಕೇರಿ' 'ಕೆಂಗೇರಿ' ಆಗಿರಬಹುದು; ಕೆನ್+ಕೇರಿ>ಕೆನ್ಕೇರಿ>ಕೆನ್ಗೇರಿ> ಕೆಂಗೇರಿ; ಕೆನ್=ಕೆಂಪು, ಕೇರಿ=ಬೀದಿ, 'ಊರು' ಎಂದು ತಿಳಿಯಬಹುದು; According to some local witness, it is reddish colony or settlement due to its reddish soil;
- ಇನ್ನೂ ಕೆಲವರ ಅಭಿಪ್ರಾಯದಲ್ಲಿ 'ತೆಂಗೇರಿ' ಎಂಬ ಸ್ಥಳನಾಮವು 'ತೆಂಕಣಕೇರಿ', ಎಂದರೆ ದಕ್ಷಿಣ ದಿಕ್ಕಿನಲ್ಲಿರುವ(=ತೆಂಕಣ) ಪ್ರದೇಶವಾದ್ದರಿಂದ 'ತೆಂಗೇರಿ' ಆಗಿರಬಹುದು; some other local saying that `Tengeri' is called as `Tenkana'

street- it means a place situated in the south direction?

- ದ್ರಾವಿಡ ಭಾಷೆಗಳಲ್ಲಿ ಕ>ತ ಆಗುವುದಾಗಲಿ, ತ>ಕ ಆಗುವುದಾಗಲಿ ತುಂಬ ಕಷ್ಟದ ಕೆಲಸ; ಆದರೆ ಉಚ್ಚಾರಣೆಯಲ್ಲಿ ಹೇಗೂ ಆಗಬಹುದು.

(E.C-IX, ಬಿ.ಎಲ್.ರೈಸ್, ಬೆಂ.ಜಿ.?)

ಕೆಂಗೊಡಗನಬೀಳು Keŋgoḍaganabīḷu:

- ಒಂದು ಜಾತಿಯ ಕಾಡುಬಳ್ಳಿ; ಇದರ ತೊಗಟೆಯನ್ನು ಜಜ್ಜಿ ಮೀನು ಹಿಡಿಯಲು ಬಳಸುತ್ತಾರೆ (ಮ.ಜ.ಕೋ.). A kind of wild creeper; its peel or bark is used to fish.

ಕೆಂಗೋಲೆ ಕೆಸ Keŋgōle kesa:

- ಕೆಂಪುಬಣ್ಣದ ದಂಟುಸೊಪ್ಪು; ಕೆಸ="ಅಗಲವಾದ ಎಲೆಗಳುಳ್ಳ ಹಾಗೂ ದಂಟುಳ್ಳ ಒಂದು ಬಗೆಯ ಸಸ್ಯ"(ದ್ರಾ.ಭಾ.ಜ್ಞಾ.ಪ.ಕೋ); Reddish green vegetable;
- ಕೆಂಪುಬಣ್ಣದ ದಂಟುಸೊಪ್ಪು ಪತ್ರೊಡೆ ಮಾಡಲು ಬಳಕೆ; ಮಲೆನಾಡಲ್ಲಿ ಆಹಾರಕ್ಕೆ ಈ ಸೊಪ್ಪಿನ ಬಳಕೆ ಸಾಮಾನ್ಯ.

ಕೆಂಚ್ Keñc:

- ಕೆಂಪುಬಣ್ಣ, ಕೆಂಬಣ್ಣ, ನಸುಗೆಂಪುಬಣ್ಣ; red colour
- ಕೆಂಚ್ಇಳ್ಸು(ಕ್ರಿ)=ಕೊಬ್ಬುಇಳಿಸು(?) ಗುಣವಾಚಕವಾಗಿ ಪದಬಳಕೆ(ಮಂ.ಜಿ); it is used as adjective;
- ಕೆಂಪುಬಣ್ಣಕ್ಕೆ ಕೆಂಚು ಎಂದೂ ಕರೆಯುವುದಿದೆ. Red colour is called as `Kenchu'.

ಕೆಂಚ Keñca:

- ಬುದ್ದಿಗೇಡಿ, ಏನೂ ತಿಳಿಯದವ; A fool; a person who knows nothing;
- ಕೆಂಪುಬಣ್ಣದ ವ್ಯಕ್ತಿ; A person who is red in colour;
- ಬುದ್ಧಿ ಸರಿಯಿಲ್ಲದ ವ್ಯಕ್ತಿಗಳನ್ನು ಕುರಿತು ಪದಬಳಕೆ; ಗುಣವಾಚಕವಾಗಿ ಬಳಕೆ; the word is used to call the people who have no wisdom or intelligency;
- ಬಣ್ಣದ ಆಧಾರದ ಮೇಲೆ ವ್ಯಕ್ತಿಗಳನ್ನು ಗುರುತಿಸುವುದು; ಅನ್ವರ್ಥನಾಮವಾಗಿ; 'ಕೆಂಚ' ಪುಲ್ಲಿಂಗಾರ್ಥದಲ್ಲಿ ಬಳಕೆಯಾದರೆ, 'ಕೆಂಚಿ' ಸ್ತ್ರೀಲಿಂಗಾರ್ಥದಲ್ಲಿ ಬಳಕೆ; persons are often identified on the basis of their skin colour;
- ಕೆಂಚಯ್ಯ, ಕೆಂಚಮ್ಮ ನಾಮಪದದಲ್ಲಿಯೂ ರೂಢಿಯಲ್ಲಿರುವುದು;

  ಪ್ರ: 'ಕೆಂಚ ಒಕ್ಕಲಿಗನ ಕರಿ ಹಾರುವನ ನಂಬಬೇಡ'(ಗಾ)(ಮಂ.ಜಿ).

ಕೆಂಚಕಾರ Keñcakāra:

- ರೈತರು ಬೆಳೆ ತೋರಿಸಿ ಪಡೆವ ಮುಂಗಡ ಸಾಲ; ದಲ್ಲಾಳಿಗಳು ರೈತರ ಅಸಹಾಯಕತೆ ನೋಡಿ ಸುಲಿಗೆ ಮಾಡುವ ರೀತಿ; An advanced loan which is to be got by the farmers by showing harvesting crops;

  ಪ್ರ: 'ರಾಗಿ ಇನ್ನೂ ಕಾಸಕ್ಕಿಯಾಗಾಕೆ ಬಂದಿಲ್ಲ ಆಗ್ಲೆ ಕೆಂಚಕಾರ್ನ ಹಿಡ್ಕಂಡ್ ಬಂದವ್ನೆ'(ಮೈ.ಜಿ).

ಕೆಂಚಕೋಡಿ keñcakōḍi :

- ಮೈಸೂರು ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೋಕಿನ ೧೯ನೇ ಶತಮಾನದ ೨ನೇ ಶಾಸನದಲ್ಲಿ ಇದರ ಉಲ್ಲೇಖ; A village referred in 2nd inscription of 19th century that found in Gundlupet taluk, Mysuru district;
- 'ಕೆಂಚ' ಒಬ್ಬ ವ್ಯಕ್ತಿಯ ಹೆಸರು; 'ಕೋಡಿ' ಹೆಚ್ಚಿನ ನೀರು ಹೊರ ಹರಿಯುವಂತೆ ಮಾಡಿರುವ ಕೆರೆಯ ಏರಿಯಲ್ಲಿನ ಬಾಗಿಲು ಅಥವಾ ಉರುಳು ಅಣೆ; ಈ ವ್ಯಕ್ತಿ ಇದಕ್ಕೆ ಕಾರಣನಾಗಿದ್ದಿರಬಹುದು ಎಂಬುದರ ಹಿನ್ನೆಲೆಯಲ್ಲಿ ಈ ಸ್ಥಳನಾಮ ಬಂದಿರಬಹುದು;
- ಇದು ನೀಲಗಿರಿಯ ನಾಲ್ಕು ನಾಡಿನ ಭಾಗದಲ್ಲಿರುವ ಗ್ರಾಮ;
- 'ಕೆಂಚಕೋಡಿ'ನ ಗ್ರಾಮದವರು ತಮ್ಮ ಗುರುಗಳಾದ 'ಮಲಪಗುರು ಸ್ವಾಮಿ'ಗಳಿಗೆ ಕೆಲವು ದಾನ ನೀಡಿದ್ದ ವಿಚಾರವಿದೆ.

(E.C- ೩; ಮೈ.ಜಿ.)

ಕೆಂಚಗಿಬಳ್ಳಿ/ಕೆಂಜಿಗೆಬಳ್ಳಿ Keñcagibaḷḷi/ keñjigebaḷḷi:

- caesalpinia mimosoiles
- ಮುಳ್ಳಿನ ಅಡರು ಕಂಟಿ; A fencing creeper;

- ಎಲೆಗಳಿಂದ ಚಟ್ನಿ, ಪಲ್ಯ ತಯಾರಿಕೆ; its leaves are used to prepare `Chetny', `palya'; a dish;
- ಬೇಲಿಗಾಗಿ ಬೆಳೆಸುವುದು.

ಕೆಂಚನಪಾಳ್ಯ kencanapāḷya :

- ತುಮಕೂರು ಜಿಲ್ಲೆ ತುಮಕೂರು ತಾಲ್ಲೋಕಿನ ಕ್ರಿ.ಶ.೧೫೧೩ರ ೯ನೇ ಶಾಸನದಲ್ಲಿ ಈ ಊರಿನ ಉಲ್ಲೇಖ; A village referred in 9th inscription of 1513AD found in Tumkuru taluk and district;
- ಇದರಲ್ಲಿ 'ಕೆಂಚಸೋಮಂಣ ನಾಯಕರು ಕೆಂಚನ ಕೋಟೆಯ ಹರಿಹರ ದೇವರಿಗೆ' ಎಂದಿದೆ;
- ಈ ಪ್ರದೇಶದಲ್ಲಿ ನಾಯಕ ಕೆಂಚಣ್ಣ ನಾಯಕನಿಂದ 'ಕೆಂಚನಪಾಳ್ಯ' ಎಂಬ ಹೆಸರಾಗಿರಬಹುದು;
- ಪಾಳ್ಯ=ಪಾಳೆಯ; ಬೀಡು; ವಸತಿ; ರಾಜರು ಬೀಡು ಬಿಡುತ್ತಿದ್ದ ಸ್ಥಳವೂ ಆಗಿರಬಹುದು; Palya means a residential place; a halting place of Kings.

(E.C- ೨೪; ತು.ಜಿ.)

ಕೆಂಚಿ Kenci:

- ಚೀಲ; ಕೆಂಪುಬಣ್ಣದವಳು; A woman/girl whose skin colour is red or wheat colour;
- ಸಾಂಸ್ಕೃತಿಕ ಆಚರಣೆ(ಬೇಲೂರು); a name of ritual at Beluru;
- ಕೆಂಚಿ>ಚೆಂಚಿ/ಚಂಚಿ=ಚೀಲ;
- 'ಸಂಚಿ>ಚಂಚಿ>ಕೆಂಚಿ'; 'ಕುಂಚಿ' ರೂಪವೂ ಇದೇ ಅರ್ಥದಲ್ಲಿರುವುದು;
- ಕ>ಚ, ಸ>ಚ ಆಗುವುದು ಸಾಮಾನ್ಯ;
- ಎಲೆ, ಅಡಿಕೆ ಚೀಲ; ತಾಂಬೂಲ ಪರಿಕರಗಳನ್ನು ಇಟ್ಟುಕೊಳ್ಳುವ ಚೀಲ; ಸಂಚಿಹೊನ್ನಮ್ಮ ಪ್ರಸಿದ್ಧ ಲೇಖಕಿ; A purse; it is used to keep betal, betel nut etc;
- ಉಚ್ಚಾರಣೆಯಲ್ಲಿ ಕ>ಚ ಆಗಿರುವುದು; ಮಕ್ಕಳ ಪ್ರಾಥಮಿಕ ಪದ ಪ್ರಯೋಗದಲ್ಲಿ ಇಂಥ ಉಚ್ಚಾರಣಾ ವ್ಯತ್ಯಾಸ ಕಾಣಬರುವುದು;
- 'ಕೆಂಚಿ' ನಾಮವಾಚಕವಾಗಿ ಬಳಕೆ; ಕೆಂಚು ಬಣ್ಣದವರನ್ನು ಕೆಂಚ/ಕೆಂಚಿ ಎಂದು ಕರೆಯುವುದು; ಬ್ರಿಟಿಷರನ್ನು ಕೆಂಚಪರಂಗಿಯವರು ಎಂದು ಕರೆಯುತ್ತಿದ್ದುದು; the British citizens are called as `Kenchi' or `Chenchi'
- ಪರಂಗಿಹಣ್ಣು ವಿದೇಶದ್ದೇ ಆಗಿದ್ದು ಕೆಂಪು ಬಣ್ಣದ್ದೇ ಆಗಿತ್ತು; 'ಕೆಂಚ' ಪುಲ್ಲಿಂಗ, 'ಕೆಂಚಿ' ಸ್ತ್ರೀಲಿಂಗ ವ್ಯಕ್ತಿಗಳಾಗಿ ಗುರುತಿಸಿಕೊಳ್ಳುವುದು ರೂಢಿ; 'ಅ' ಕಾರಾಂತ್ಯ 'ಇ' ಕಾರಾಂತ್ಯ ಲಿಂಗ ವ್ಯತ್ಯಾಸ;
- —***ಕೆಂಚಿ ತುಂಬುವುದು*** : ಮದುವೆ ಸಂದರ್ಭದಲ್ಲಿ ವಧುವಿಗೆ ಮಡಿಲು ತುಂಬುವ ಶಾಸ್ತ್ರ; ಕೊಬ್ಬರಿ, ಬೆಲ್ಲ, ಕಲ್ಲುಸಕ್ಕರೆ, ಎಲೆ, ಅಡಿಕೆ, ಅಕ್ಕಿ ಮುಂತಾದವನ್ನು ಮಡಲಿಗೆ ಹಾಕಿ ಗಂಟು ಕಟ್ಟಿ ಕಳುಹಿಸುವುದು; ಇದನ್ನೇ ಕೆಂಚಿ ತುಂಬುವುದು ಎನ್ನುತ್ತಿದ್ದುದು; ಸಂತಾನಾಪೇಕ್ಷೆಯ ಪರೋಕ್ಷ ಆಚರಣೆ; it is a ritual during marriage ceremony to fill jaggary, crystal sugar, betel, rice, dry coconut into bridegrooms saree; it is an indirect ritual for getting children or fertility;
  ವ್ಯರೂ: ಎಲೆಕೆಂಚಿಯರು; ಎಲೆಚಂಚಿಯರು; ಎಲೆಸಂಚಿಯರು;
- —***ಕೆಂಚಿಗೀಮ್ವಾರಿ*** : ಕೆಂಪನೆಯ ಮುಖ; reddish face;
- —***ಕೆಂಚರಾಯ*** : ವೆಂಕಟರಮಣ ದೇವರ ದೂತ; ಮುಖ ಹಳದಿ ಇರುವವನೇ ಕೆಂಚರಾಯ; ರಕ್ತ ಭೂತಾಳೆ ಮರದಿಂದ ಈ ಸೋಮನನ್ನು ಮಾಡುವುದು; a messanger of lord Venkataramana; kencharaya who has yellow face;
- ಹಣೆಗೆ ನಾಮ, ಕೋರೆಹಲ್ಲು, ಕೊಂಕುಮೀಸೆ, ದಪ್ಪಕಣ್ಣು, ದಪ್ಪಹುಬ್ಬು; ದಾಸಪ್ಪನ ಹರಿಗೆಯಲ್ಲೂ ಕೆಂಚರಾಯ ಇರುವುದು;
- ಕೆಲವೆಡೆ(ತುರುವೇಕೆರೆ) ಹೆಣ್ಣೆಂದು ಭಾವಿಸಿ 'ಕೆಂಚಮ್ಮ' ಎಂಬ ಹೆಸರಿನಿಂದ ಕರೆಯುವುದಿದೆ;

ಕೆಂಚು Kēcu:

- ಮುಂಡಾಸು; ಕೇದಿಗೆ ಮುಂದಲೆ; headgear;
- ರೇಷ್ಮೆಹುಳುವಿಗೆ ಬರುವ ರೋಗ; a silk-worm disease;

- ಯಕ್ಷಗಾನ ಪಾತ್ರಧಾರಿಯ ವೇಷಗಳಲ್ಲೊಂದು; ಬಡಗುತಿಟ್ಟು ಸಂಪ್ರದಾಯದ್ದು(ಉ.ಕ.ಜಿ); one of the characters of Badagutittu Yakshagana of Northkannada
- ***—ಕೆಂಚುರೋಗ*** : ರೇಷ್ಮೆಹುಳುವಿಗೆ ಬರುವ ರೋಗ; ತಲೆ ಮೇಲ್ಭಾಗ ಕೆಂಚಗಿದ್ದು ಸೊಪ್ಪು ತಿನ್ನುತ್ತದೆ; ಗೂಡು ಕಟ್ಟುವುದಿಲ್ಲ; ಮೂರು-ನಾಲ್ಕನೇ ಹಂತದಲ್ಲಿ ಈ ರೋಗ ಬರುತ್ತದೆ; ಹುಳುವಿನ ಮೈಬಣ್ಣ ಕೆಂಪಾಗಿರುವುದು. A disease of silk worm; silk worm's skin turns into red itself.

ಕೆಂಚೋಲಿ Keñcōli:

(Indian Pike, Cong, common Eel)

- ಚಿನ್ನದಂತಹ ಹಳದಿಬಣ್ಣದ ದೇಹ, ಮಾಸಲು ಬಣ್ಣದ ಅಂಚುಗಳಿರುವ ಮೀನು; A kind of yellow coloured fish;
- ಪ್ರಾಣಿ ಜಾನಪದಕ್ಕೆ ಸಂಬಂಧಿಸಿದ ಪದ. It belongs to Animal folklore.

ಕೆಂಜರ್ಳು Kenjarḷu:

- ದೇಹದ ಚರ್ಮದ ಮೇಲೆ ಕಾಣಿಸಿಕೊಳ್ಳುವ ಕೆಂಪುಬಣ್ಣದ ಸಣ್ಣ ಸಣ್ಣ ಗುಳ್ಳೆಗಳು; ಬೇಸಿಗೆಯ ಬಿಸಿಲಿನ ಝಳಕ್ಕೆ ಮಕ್ಕಳ ಮೈಮೇಲೆ ಕಾಣಿಸಿಕೊಳ್ಳುವುದಿದೆ; ಅಮ್ಮ, ಗಂಧದ ಮಾರಮ್ಮ, ಗಂಧೆ ಎಂದು ಕರೆಯುವರು; The small red pimples on skin during hot summer;
- ಇದರ ನಿವಾರಣೆಗೆ ಹತ್ತಿರದ ಮಾರಮ್ಮನ ಗುಡಿಗೆ ಹೋಗಿ ಪೂಜೆ ಸಲ್ಲಿಸಿ ತೀರ್ಥಪ್ರೋಕ್ಷಣೆ ಮಾಡಿಸುವುದು;
- ಜಾನುವಾರುಗಳಿಗೆ ಈ ರೋಗ ಬಾಧಿಸಿದರೆ ಹೆದ್ದುಂಬೆ ಸೊಪ್ಪನ್ನ ಮಜ್ಜಿಗೆಗೆ ಸೇರಿಸಿ ಔಷದ ತಯಾರಿಸಿ ಕೊಟ್ಟದ ಸಹಾಯದಿಂದ ಹೊಟ್ಟೆಗೆ ಹುಯ್ಯಬೇಕು; ಗಂಧೆ ಕಂಡಲ್ಲೆಲ್ಲ ಇದರ ಸೊಪ್ಪಿನ ರಸವನ್ನು ಸವರುವುದು; `Heddumbe' greens is used to cure this cattle disease.

ಕೆಂಜಿಗ/ಕೆಂಜ್ಗ/ಕೆಂಚ್ಗ Keñjiga/Keñjga Keñcga/:

- ಕೆಂಪುಬಣ್ಣದ ದಪ್ಪ ಇರುವೆಗಳು; Red coloured huge ants;
- ನೇರಳೆ, ಹಲಸು, ಮಾವು, ತೆಂಗು ಮುಂತಾದ ಮರಗಳ ಎಲೆಗಳಲ್ಲಿ ಗೂಡು ಕಟ್ಟುವುದು; they make nest in leaves of different tree;
- ಇವುಗಳನ್ನು ಸಾರು, ಚಟ್ನಿ ಮಾಡಲೂ ಬಳಸುವುದು; ರೋಗ ನಿವಾರಕವೆಂಬ ನಂಬಿಕೆ; the ants are used `Chetny, Sauce' for dish;
- ಕೆಲವೊಮ್ಮೆ ತೊಂದರೆ ಲಭ್ಯ; ಕಡಿಯುವುದರ ಮೂಲಕ; ಕೆಂಪುಬಣ್ಣದ ಗಂಧೆ ಆಗುತ್ತದೆ;
  ಪ್ರ: 'ಅವ ತನ್ನ ಕಣ್ಣುಗಳನ್ನ ಕೆಂಚ್ಗ ಮಾಡಿಕೊಂಡನು'(ಕು.ಬಾ.);
- ತೆಂಗಿನಮರದ ಗರಿ, ಕಾಯಿಯಿಂದ ಕೂಡಿದ ಹೊಂಬಾಳೆಗಳಲ್ಲಿ ಗೂಡುಕಟ್ಟಿ ವಾಸ ಮಾಡುತ್ತವೆ;
- 'ಚ' ಕಾರ 'ಜ' ಕಾರ ಆಗುವುದು ಸಾಮಾನ್ಯ; ದ್ರಾವಿಡ ಭಾಷಾ ವೈಲಕ್ಷಣ್ಯ ಕೂಡ; ಅಘೋಷ ಘೋಷ ವರ್ಣಗಳ (Surds and Sonants) ವಿನಿಮಯ;
- ***—ಕೆಂಜಿಗೆ ಹಿಂಡಿಲು*** : ಕೆಂಜಿಗೆ ಇರುವೆಗಳಿಂದ ಕೂಡಿದ್ದು ಪೊದೆಯಂತೆ ಬೆಳೆಯುವ ಸಸ್ಯ ಸಮೂಹ; ಕಾಡುಗಳಲ್ಲಿ ಬೆಳೆಯುವುದು; A kind of plant groups grows like wild bushes in which red ants live in;
  ಪ್ರ: 'ತರಗು ಗುಡಿಸಿ ಕೆಂಜಿಗೆ ಹಿಂಡಿಲು, ರಾಶಿ ಮುಳ್ಳುಗಳನ್ನೆಲ್ಲ ಕಡಿದು ಹಾಕಿ'.

ಕೆಂಜಿಗಾಪುರ keñjigāpura :

- ಇದೊಂದು ಸಸ್ಯವಾಚಿ ಸ್ಥಳನಾಮ; a plant name of place;
- ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೋಕಿನ ಕ್ರಿ.ಶ.೧೪೧೯ರ ೬೭ನೇ ಶಾಸನದಲ್ಲಿ ಇದರ ಪ್ರಸ್ತಾಪವಿದೆ; a village referred in 67th inscription of 1419AD found in Sagara taluk, Shivamogga district;
- ವಿಜಯನಗರದ ಪ್ರತಾಪದೇವರಾಯ ವೀರಭದ್ರದೇವರ ದೇವಾಲಯ ಕಟ್ಟಿ ಭೂಮಿಯನ್ನು

ಅದರ ಸೇವೆಗೆ ಬಿಟ್ಟ ದಾನದ ವಿವರಕ್ಕೆ ಸಂಬಂಧಪಟ್ಟಿದ್ದು;
- ಪದ ಕೆಂಜಿಗಾ+ಪುರ>ಕೆಂಜಿಗಾಪುರ ಆಗಿದೆ;
- ಕೆಂಜಿಗಾ/ಕೆಂಜಿಗೆ ಒಂದು ಜಾತಿಯ ಸಸ್ಯ(ಕೆಂಪು ಬಣ್ಣದ ದೊಡ್ಡ ಇರುವೆ ಎಂಬ ಅರ್ಥವೂ ಇದೆ); Kenjiga/Kenjige; a species of plant or a huge red ant;
- 'ಪುರ' ಎನ್ನುವ ಪದ ಊರು, ನಗರ ಎನ್ನುವ ಅರ್ಥದಲ್ಲಿ ಕಾಣಿಸಿಕೊಳ್ಳುವ ಸಾಮಾನ್ಯ ರೂಪ;
- 'ಪುರ'ಕ್ಕೆ 'ಪುರ್' ಮೂಲ ರೂಪ ಇರಬಹುದು; ಪುರ=ಪುರ್(ಕಿಟ್ಟೆಲ್); ಹಳಗನ್ನಡದಲ್ಲಿ ಪ್ರಚಲಿತವಿದ್ದ 'ಪೊಟಿಲ್' ಪದವನ್ನು ನೆನೆಯಬಹುದು;
- 'ಕೆಂಜಿಗೆ(ಗಾ)' ಸಸ್ಯವಿರುವ ಊರು(ಪುರ) ಎಂಬರ್ಥದಲ್ಲಿ ಕೆಂಜಿಗಾಪುರ ಬಂದಿರಬಹುದು.

(E.C- ೧೫; ಶಿ.ಜಿ.)

ಕೆಂಜಿಗೆ ಹೂವು Keñjige hūvu:
- ಹಿತ್ತಲಲ್ಲಿ ಬೆಳೆಯುವ ಬಳ್ಳಿ, ಹಳದಿಬಣ್ಣದ ಹೂ ಬಿಡುವುದು; A creeper grows in backyards having yellow flower;
- ಕೆಂಜಿಗೆ ಒಂದು ವಿಧದ ಸಸ್ಯ; 'ಕೆಂಚಿಗೆ' ರೂಪದೊಡನೆ ಸಂಬಂಧ ಹೊಂದಿರಬಹುದು; `Kenjiga' a kind of plant;
- ಸಸ್ಯ ಜಾನಪದಕ್ಕೆ ಸೇರುವಂಥದು. It belongs to botanical folklore.

ಕೆಂಜಿಗೆ ಮಟ್ಟಿ ಹುಳು Keñjige maṭṭi huḷu:
- ಕಾಡುಹಂದಿ ಮರಿ ಹಾಕುವ ಗೊತ್ತು/ಅಡ್ಡೆ/ಸುರಕ್ಷಿತ ಜಾಗ(ಪಯಣ); A safety place where wild bore gives birth to its babies;
- ಪ್ರಾಣಿ ಜಾನಪದಕ್ಕೆ ಸೇರುವಂಥದು.

ಕೆಂಜೂರಿಯಾ Keñjūriya:

ಕೋಳಿಯಲ್ಲಿ ಒಂದು ವರ್ಗ. A species of hen/cock.

ಕೆಂಟು Keṇṭu:
- ಕೆರಿ, ಬಿಡಿಸು, ಕೆದಕು, ಚೇಷ್ಟೆ; scrabble, mischief;
- ಕೆರೆದು ಒಳಗು ನೋಡಲು ಯತ್ನಿಸುವುದು; ಮೇಲಿನ ಸಿಪ್ಪೆ ಎತ್ತುವುದು (ಎಬ್ಬುವುದು); ಗಾಯದ ನವೆಗೆ ಕೆರೆದು ಹುಣ್ಣು(ಗಾಯ) ಮಾಡಿಕೊಳ್ಳುವುದು; scrab or scratching wound;
- ಬೇರೊಬ್ಬರಿಗೆ ಚೇಷ್ಟೆ ಮಾಡಿ ತಮಾಷೆ ನೋಡುವುದು; ಕೆಲವೊಮ್ಮೆ ಜಗಳ ತಂದು ಕೊಳ್ಳುವುದು; to make fun;

ಪ್ರ: 'ಸುಮ್ನಿರ್ದ್ವಾರ್ದೆ ಕೆಂಟ್ಕೊಂಡು ಗಾಯ ಮಾಡ್ಕಂಡ'(ಜಗಳ ತಂದುಕೊಂಡ);
- 'ಕೆಂಟು' ಪದ ವಿಶಾಲಾರ್ಥದಿಂದ ಕೂಡಿರುವಂಥದು;
- ಮಕ್ಕಳು ತಮಾಷೆಗಾಗಿ ಅವರವರ ನಡುವೆ ತಿವಿಯುವುದು; ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯನ್ನು ಕೆಣಕುವುದು, ರೇಗಿಸುವುದು, ತಮಾಷೆಗೆಂದು ಛೇಡಿಸಿ ಜಗಳ ತಂದುಕೊಳ್ಳುವುದು;
- ಕೆಲಸ ಮಾಡುವವರಂತೆ ನಟಿಸುತ್ತಾ ನೆಲವನ್ನು ಕೆರೆಯುತ್ತಲೋ, ಕೆಂಟುವಂತೆ ಮಾಡುತ್ತಲೋ ಕುಳಿತಿರುವುದು;
- ಜಗಳ ಆಡುವವರನ್ನು ಹುರಿದುಂಬಿಸಿ ಮಾತನಾಡುವುದು; to provoke the persons who are quarrelling;
- ಮರವನ್ನೊ ಅಥವಾ ಬೇರಾವುದೋ ವಸ್ತುವನ್ನು ಕೆಂಟುತ್ತಾ ಸಿವುರು ಮಾಡುವುದು; ಕಳ್ಕೋಟ್ಟು/ ಉಜ್ಜೋರಿಯಿಂದ ಗಿಡದ ಬುಡ ಕೆದಕುವುದು, ಹೀಗೆ ಹಲವಾರು ಅರ್ಥಗಳಿಂದ ಕೂಡಿದೆ;
- 'ಕೆಂಟ್ ಕೆಂಟ್ತ ಸಿವುರು' ಎಂಬ ಗಾದೆಮಾತು ಆ ಹಿನ್ನೆಲೆಯಲ್ಲೇ ಹುಟ್ಟಿಕೊಂಡಿರುವಂಥದು;
- 'ಮಳೆ ನಿಂತ್ರು ಮರದ ಹನಿ ನಿಲ್ಲಲ್ಲ' ಎಂಬ ಗಾದೆಮಾತಿಗೆ ಸಂವಾದಿಯಾದುದು; ಕಾರಣ ಜಗಳ ಸಂಪೂರ್ಣ ನಿಂತರೂ ಆ ಕುರಿತ ವ್ಯಂಗ್ಯೋಕ್ತಿ/ ಚುಚ್ಚು ಮಾತುಗಾರಿಕೆ ನಿಲ್ಲದಿರುವುದು; ಇಂತಹ ವ್ಯಂಗ್ಯೋಕ್ತಿ ಚುಚ್ಚುಮಾತಿನ ಅರ್ಥಕ್ಕೆ 'ಕೆಂಟು' ಪದದ ಬಳಕೆ.

ಕೆಂಡ Keṇḍa:
- ಬೆಂಕಿತುಂಡು; ಅರ್ಧ ಉರಿದ ಅಥವಾ ಉರಿದ ಸೌದೆಯ ಬೆಂಕಿ ಉಂಡೆಗಳು(ಹಾ.ಜಿ); live coal; glowing coal, red hot coal;

- ನಿಗಿ ನಿಗಿ ಉರಿಯುತ್ತಿರುವ ಸೌದೆ ಸೀಳಿನಿಂದ ಪದರ ಪದರವಾಗಿ ಉದುರುವ ಕೆಂಪುಬಣ್ಣದ ಬೆಂಕಿಯ ಉಂಡೆ; ಉರಿವ ಕಟ್ಟಿಗೆ ಕೆಂಪಾಗಿರುವುದು;
- ಬಲಿ ಹಾಕಲು, ಕೆಟ್ಟದೃಷ್ಟಿ ನಿವಾರಣೆಗೆ ಬಳಕೆ;
- ಕೆಂಡದಿಂದ ಸಿಗುವ ಇದ್ದಿಲು ಸುಣ್ಣ ತಯಾರಿಕೆಗೆ, ಕಮ್ಮಾರನ ಬಡಿಗೆ ಕೆಲಸಕ್ಕೆ, ಹಿಂದೆ ಹಲ್ಲುಜ್ಜಲು, ಇಸ್ತ್ರಿಪೆಟ್ಟಿಗೆಗೆ ತುಂಬಿ ಐರನ್ ಮಾಡಲು, ಮಾಂಸಾಹಾರದ ಪದಾರ್ಥಗಳನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಕೊಂಡೊಯ್ಯುವ ಬುಟ್ಟಿಗೆ ಹಾಕಲು ಬಳಕೆ; firecoal is used to heat iron, to heat limestone;
- ಮದುವೆಯಾಗದ ಹೆಣ್ಣುಮಕ್ಕಳು ಮನೆಯಲ್ಲಿದ್ದರೆ ಅವರನ್ನು ಕುರಿತು ಹಿರಿಯರು 'ಸೆರಗಿಗೆ ಕೆಂಡ ಕಟ್ಕೊಂಡಂಗೆ' ಎಂದು ಹೇಳುವ ಮಾತು ಪ್ರಚಲಿತವಿರುವುದು; There is an elder's saying about adults; matured unmarried girls; tying firecoal in one's sarry boarder;
- ಶಿವನ ಮೂರನೇ ಕಣ್ಣಿಗೆ 'ಕೆಂಡಗಣ್ಣ' ಎನ್ನುವುದಿದೆ; ಏಕೆಂದರೆ ಅಲ್ಲಿಂದ ಉಗುಳುವ ಕೆಂಡದಂಥ ಬೆಂಕಿ ಎಲ್ಲವನ್ನು ನಾಶ ಮಾಡಿಬಿಡುತ್ತದೆ ಎಂಬುದೊಂದು ನಂಬಿಕೆ; the third eye of lord Shiva is called as `Kendgannu' blood shot eye;
- ಇದಕ್ಕೆ ಪೂರಕವಾಗಿ 'ಶಿವನ ತಪೋಭಂಗ ಮಾಡಲು ಬಂದ ಮನ್ಮಥನನ್ನು ಶಿವ ತನ್ನ ಕೆಂಡಗಣ್ಣಿನಿಂದ ಸುಟ್ಟು ಭಸ್ಮಮಾಡಿದ' ಎಂಬ ಪುರಾಣದ ಕಥೆ ಇದೆ;
- ಗಟ್ಟಿ ಸೌದೆಗೆ ಬೆಂಕಿ ತಾಗಿದಾಗ ಉರಿದು ಕೆಂಪಾಗುವ ತುಂಡುಗಳು;
- ಕೆಂಡದ ಮೇಲೆ ಇಟ್ಟು ಗೆಡ್ಡೆ, ಮಾಂಸಗಳನ್ನು ಬೇಯಿಸುವುದು; to boil meat or roots on glowing coal;
- ಕಬ್ಬಿಣದ ಡಬ್ಬಕ್ಕೆ ಕೆಂಡ ತುಂಬಿ ಬಟ್ಟೆ ಇಸ್ತ್ರಿ ಮಾಡುವುದು;
- ಕೊಂಡದ ಕೆಂಡದ ಮೇಲೆ ನಡೆಯುವುದು(ಕೊಂಡ ಹಾಯುವುದು); 'ಕೆಂಡಸೇವೆ' ಎಂಬ ಹೆಸರೂ ಇದೆ;
- ಕೆಂಡದಲ್ಲಿ ಕಬ್ಬಿಣ ಕಾಯಿಸಿ ಬೇಕಾದ ರೂಪಕ್ಕೆ ತರುವುದು;
- ***—ಕೆಂಡಕಟ್ಟು*** : ಕೊಂಡ ಹಾಯಲು ಬಳಸುವ ಕಟ್ಟಿಗೆಗೆ ಬೆಂಕಿ ಹಚ್ಚುವುದು(ಮ.ಜಾ.ಕೋ). To spark the fuel due to walk across live coal.

ಕೆಂಡ ಕಾರು Keṇḍa kāru:

- ಅತಿ ಸಿಟ್ಟಾಗುವುದು; ದ್ವೇಷಿಸುವುದು; ಸೇಡು ತೀರಿಸಿಕೊಳ್ಳುವುದು; to become angry; to take avenge;
- ಕೆಂಡ+ಕಾರು>ಕೆಂಡಕಾರು; ಕೆಂಡ=ಕೋಪ; ಕೋಪವನ್ನು ಹೊರ ಹಾಕುವುದು; ಕಾರು ಅಂದರೆ ಮನಸ್ಸಿನ ಭಾವನೆಗಳನ್ನು ಕೋಪದಿಂದ ಹೊರಹಾಕುವಿಕೆ ಅಥವಾ ಹೊರಬರುವಿಕೆ ಎಂಬ ಅರ್ಥದಲ್ಲಿ; to express one's anger;
- 'ಕೆಂಡ' ಇಲ್ಲಿ ಕೋಪಕ್ಕೆ ಪ್ರೇರಕ; ಸಂಕೇತ; `Kenda' is a symbol of angriness;
- *ಪ್ರ: 'ನನ್ನನ್ನ ಕಂಡ್ರೆ ಸಾಕು ಕೆಂಡ ಕಾರ್ತಾನೆ';*
  ಪ್ರ: 'ಭೀಮಸೇನ ದುರ್ಯೋಧನನ ಮೇಲೆ ಕೆಂಡ ಕಾರಿದ';
- ನುಡಿಗಟ್ಟಾಗಿ ಬಳಕೆ ಕೂಡ; ಕೋಪಗೊಂಡಾಗ ಕೆಂಡದಂತೆ ಕಣ್ಣು ಕೆಂಪಗಾಗುವುದರಿಂದ, ಸಾಂದರ್ಭಿಕ ನುಡಿಗಟ್ಟಾಗುವುದು ಸಹಜ;
- ವಿರೋಧಿಗಳನ್ನ ದುರುಗುಟ್ಟಿ ನೋಡುವುದು ಮತ್ತು ಅವರ ಬಗೆಗೆ ದ್ವೇಷದಿಂದ ಮಾತನಾಡುವ ಸಂದರ್ಭ; starring one's enimies and speaking wih hatredness;
- ***—ಕೆಂಡಾಮಂಡಲ*** : ಹೆಚ್ಚು ಕೋಪಗೊಳ್ಳುವುದು; 'ಮಂಡಲ' ಎಂದರೆ 'ಉಂಡೆ'(ಬೆಂಕಿಉಂಡೆ)' ಗುಂಡಾಗಿ ಕಾಣುವ ಬೆಂಕಿಯ ಕೆಂಡ; ಉರಿಯುತ್ತಿರುವ ರೀತಿ; be furious burn with rage;
- ಅನ್ಯರಿಂದ ಮೋಸ ಹೋದಾಗ; ಇತರರು ತಪ್ಪು ಮಾಡಿದಾಗ, ಹೆಚ್ಚು ಕೋಪಗೊಳ್ಳುವ ಪರಿ; be enraged when one is deceived by others;
  ಪ್ರ: 'ಮೋಸಗಾರರನ್ನು ಕಂಡು ಕೆಂಡಾ ಮಂಡಲವಾದ'.

ಕೆಂಡಕೊಂಡ Keṇḍakoṇḍa:

- ಆತ್ಮಾಹುತಿಗಾಗಿ ಸಿದ್ಧಪಡಿಸಿದ ಕೆಂಡ ತುಂಬಿದ ಹೊಂಡ; a pond of live coal or glowing coal which is prepared for suicide oneself; a pond or pit of glowing coal or fire is prepared;
- 'ಕೆಂಡ ಕೊಂಡವಾದಳು' ಒಂದು ಬಳಕೆಯ ರೂಪ;
- ಚಿತೆಗೇರಿದಳು, ಸಹಗಮನ(ಹಿಂಬಾಲಿಸುವುದು);
- ಸತಿಸಹಗಮನ ಪದ್ಧತಿಯ ಆಚರಣೆ; ಗಂಡ ಸತ್ತಾಗ ಹೆಂಡತಿ ಗಂಡನ ಚಿತೆಯಲ್ಲಿ ತಾನು ಬಿದ್ದು ಸಾಯುವುದು; during `Sati' system, the woman who is going to die herself due to the death of her husband;
- ವಿಧವೆ ಬದುಕಿನ ನಿರಾಕರಣೆ; ಬದುಕಿನಲ್ಲಿ ಜೊತೆಗಿದ್ದ ಸತಿ ಸಾವಿನಲ್ಲೂ ಪತಿಯನ್ನು ಹಿಂಬಾಲಿಸುವುದು; ಪ್ರಾಚೀನ ಪದ್ಧತಿಯ ಈ ಪಳೆಯುಳಿಕೆ ಇಂದೂ ಅಪರೂಪವಾಗಿ ಕಾಣಿಸಿಕೊಳ್ಳುವುದು; ನೋಡಿ: ಸಹಗಮನ; Rejecting the life of an widow; by following one's husband in his deaths `Stati'.

ಕೆಂಡಸೇವೆ/ಕೆಂಡ ಹಾಯುವುದು Keṇḍasēve/ Keṇḍa hāyuvudu:

- ದೇವರ ಆರಾಧನೆಯ ಒಂದು ಆಚರಣೆ; A part of God's ritual or celebration;
- ದೇವರ ಪೂಜಾರಿ ಕೆಂಡದ ಮೇಲೆ ನಡೆದುಕೊಂಡು ಹೋಗುವುದು; ಹರಕೆ ಹೊತ್ತವರು, ಹರಕೆ ರೂಪದಲ್ಲಿ ಕೆಂಡದ ಮೇಲೆ ನಡೆಯುವರು; a priest of God/Goddess walks on the live coal of the pit;
- ಕೆಂಡ ಹಾಯುವ ಪೂಜಾರಿ ತಿಂಗಳು ಮೊದಲೇ ಬರಿಗಾಲಲ್ಲಿ ನಡೆದು ಅಂಗಾಲನ್ನು ಒರಟು ಮಾಡಿಕೊಳ್ಳುವನು;
- ಕೆಂಡದ ಮೇಲೆ ಸ್ವಲ್ಪವೂ ಬೂದಿ ಇಲ್ಲದಂತೆ ಅದನ್ನು ಚಾಮರ ಬೀಸಿ ತೆಗೆಯುವ ತಂತ್ರ; ಬೂದಿ ಇದ್ದರೆ ಬೊಬ್ಬೆ ಬರುವ ಸಾಧ್ಯತೆ;
- 'ಕೊಂಡ ಹಾಯುವುದು' ಎಂದೇ ಇದರ ಖ್ಯಾತಿ; ಸಂಪ್ರದಾಯದ ಒಂದು ಭಾಗ; ನಂಬಿಕೆಯ ಒಂದು ಹೊರೆ; **ನೋಡಿ:** ಕೊಂಡ;
- ಹಬ್ಬಗಳಲ್ಲಿ, ಸಾಂಪ್ರದಾಯಿಕ ಜಾತ್ರೆಗಳಲ್ಲಿ ಈ ನಡವಳಿಕೆ; ಈಚೆಗೂ ಇದರ ಪ್ರಾಬಲ್ಯ ಕಡಿಮೆ ಆಗಿಲ್ಲ; A ritual; who is practicing in their village festival;
- ಹರಕೆ ತೀರಿಸಲು ಇದು ನಡೆದರೂ, ಕೊಂಡ ಹಾಯುವಾಗ ಕೆಲವೊಮ್ಮೆ ತೊಂದರೆಗಳು ಆಗಿವೆ;
- ನಂಬಿಕೆಯ ರೂಪದಲ್ಲಿರುವ 'ಸಮೂಹ ಮನೋವಿಜ್ಞಾನ'ವೇ ಇದಕ್ಕೆ ಕಾರಣ; it is a Mass Psychology in form of a belief;
- ಜನಪದ ಸಂಸ್ಕೃತಿಯಲ್ಲಿರುವ ಹಿಂಸಾರೂಪದ ಆಚರಣೆಗಳಲ್ಲಿ ಇದೂ ಒಂದು.

ಕೆಂಡ ತುಂಬುವುದು Keṇḍa tumbuvudu:

- ಗಡಿಗೆಯಲ್ಲಿ ಕೆಂಡ ತುಂಬಿಡುವ ಆಚರಣೆ; a ritual of keeping or filling live coal in a pitcher or a pot;
- ತುಮಕೂರು ಜಿಲ್ಲೆ ನಾಗಲಮಡಿಕೆ ಸುಬ್ರಹ್ಮಣ್ಯ ಜಾತ್ರೆಯಲ್ಲಿ ಅಗ್ನಿಕೊಂಡ ಮುಗಿದ ಮೇಲೆ ಸಣ್ಣ ಗಡಿಗೆಯೊಂದರಲ್ಲಿ ಬೆಂಕಿಕೆಂಡವನ್ನು ತುಂಬಿ ಮಣ್ಣು ಮುಚ್ಚುವುದು; the people of Nagalamadike of Tumkur fills the pots with live coal during Subramanya fair;
- ಇಂಥ ಗಡಿಗೆ ಕೆಂಡ ವರ್ಷಪೂರ್ತಿ ಇರುತ್ತದೆಂದು ಜನಪದರ ನಂಬಿಕೆ;

ಕೆಂಡಕಾಸು Keṇḍakāsu:

- ಬೆಂಕಿ ಹಚ್ಚಿ ಮೈ ಬೆಚ್ಚಗೆ ಮಾಡಿಕೊಳ್ಳುವುದು; to warm oneself by sparking fuel;
- ಚಳಿಗಾಲದಲ್ಲಿ ಹೊತ್ತಾರೆ ಹೊತ್ತು ಬೆಂಕಿ ಮುಂದೆ ಕುಳಿತು ಮೈ ಬೆಚ್ಚಗೆ ಮಾಡಿಕೊಳ್ಳುವುದು; during winter people warm themselves by sitting around a fire place;
  ವ್ಯರೂ: ಬೆಂಕಿ ಕಾಯುವುದು(ಮಂಡ್ಯ.ಜಿ.).

ಕೆಂಡ ಮೀಯುವುದು Keṇḍa mīyuvudu:

- ಇದೊಂದು ಒಂದು ಧಾರ್ಮಿಕ ಆಚರಣೆ; a religious ritual during `Sidi' celebration;
- ದೇವರ ಕಾರ್ಯದ ಸಂದರ್ಭದಲ್ಲಿ ಸಿಡಿಯಾಡಿಸುವಾಗ ಸಿಡಿ ಆಡುವವನ ತಲೆ ಮೇಲೆ ಮಡಕೆಯಲ್ಲಿ ಕೆಂಡ ತುಂಬಿ ಇಡುವುದು;

- ಸಿಡಿಯಾಡುವ ವ್ಯಕ್ತಿಯ ತಲೆಯ ಮೇಲೆ ಕೆಂಡ ಸುರಿಯುವ ಆಚರಣೆಯೂ ಇರುವುದು(ಚಿಕ್ಕ.ಜಿ.).

ಕೆಂಡಹಾಕು Keṇḍahāku:

- 'ಆಸರು'(ದೃಷ್ಟಿ) ತೆಗೆಯುವುದು; 'ಕಣ್ಣಾಸರು'; to remove evil eye;
- ಮಕ್ಕಳಿಗೆ(ಕೆಲವೊಮ್ಮೆ ದೊಡ್ಡವರಿಗೂ) 'ಆಸರು' ಆಗಿದೆ ಎಂಬ ನಂಬಿಕೆ;
- ಅಂಥವರನ್ನು ಒಲೆ ಮುಂದೆ ಕೂರಿಸಿ ತಟ್ಟೆಯಲ್ಲಿ ಓಕುಳಿ ನೀರು (ಅರಿಸಿಣ ನೀರಿಗೆ ಸುಣ್ಣ ಹಾಕಿ) ತಯಾರಿಸಿ, ಮತ್ತೊಂದು ಕೈಯಲ್ಲಿ ಚಮಚದಿಂದ ಕೆಂಡ ತೆಗೆದು ಮುಖದ ಮೇಲಿಂದ ಇಳಿತೆಗೆದು (ನೀವಳಿಸಿ) ಓಕುಳಿಯೊಳಕ್ಕೆ ಹಾಕುವುದು; to prevent evil eye 'live coal' is to be used along with turmeric water as 'Vokali' water;
- ಓಕುಳಿ ನೀರು ಇನ್ನೂ ಹೆಚ್ಚು ಕೆಂಪಾದರೆ 'ಆಸರು' (ದೃಷ್ಟಿ) ಆಗಿದೆ ಎಂಬ ನಂಬಿಕೆ;
- ನಂತರ ದೇವರ ಮೇಲಿನ ಹೂವು, ವೀಳೆಯದೆಲೆ ತೆಗೆದುಕೊಂಡು ವಿಧವೆ ಹೆಂಗಸು ಮೂರು ದಾರಿ ಕೂಡುವ ಜಾಗದಲ್ಲಿ ಚೆಲ್ಲಿ ಬರುವುದು.

ಕೆಂಡದ ಅಡ್ಡೆ Keṇḍada aḍḍe:

- ಕೆಂಡದ ಮೇಲೆ ದೋಸೆ(ರೊಟ್ಟಿ) ಕಾಯಿಸುವುದು (ಬೇಯಿಸುವುದು); to boil 'Roti' or 'Pan cake' on live coal;
- ಈ ದೋಸೆಗೆ ಎಣ್ಣೆ ಸವರದಿರುವುದರಿಂದ ಹೆಚ್ಚು ದಿನ ಬಳಸಬಹುದೆಂಬ ಭಾವನೆ.

ಕೆಂಡಬ್ಬರಿಗೆ Keṇḍabbarige:

- ಕೆಂಪು ಅಬ್ಬರಿಗೆ ಹೂ; ಕೆಂಡ+ಅಬ್ಬರಿ(ಲಿ)ಗೆ= ಕೆಂಡಬ್ಬರಿ(ಲಿ)ಗೆ; a kind of flower;
- ಅಬ್ಬರಿ(ಲಿ)ಗೆ ಜಾತಿಯ ಗಿಡದ ಹೂ; ಕನಕಾಂಬರವೆಂದೂ ಕರೆಯುವುದುಂಟು; ಕೆಂಪುಬಣ್ಣದ ಹೂವಾದ್ದರಿಂದ ಕೆಂಡಬ್ಬರಿಗೆಯಾಗಿದೆ; a flower species; it is called as 'Kanakamabara'; it resembles Jasmine but its colour is red;
- ಹೊನ್ನಾವರ ಪ್ರದೇಶದ ವಿಶೇಷ ಹೂವಿನಗಿಡ.

ಕೆಂಡ ಮಾಸ್ತಿ Keṇḍa māsti:

- ಗ್ರಾಮದೇವತೆ ಪರಿವಾರದ ಒಂದು ದೇವರು; a village Goddess;
- 'ಒಂದು ಭೂತದ ಹೆಸರು'(ತು.ನಿ).

ಕೆಂಡ ಪಣಿ Keṇḍa paṇi:

- ಕೆಂಡದಂತೆ ಚುರುಕು ಮುಟ್ಟಿಸುವ ಹನಿ; A hor drop of water;
- ಕೊರೆಗಾಲದಲ್ಲಿ(ಚಳಿಗಾಲ) ಹಿಮದ ಹನಿ(ಗೆಡ್ಡೆ) ಬೀಳುವುದು; ಕೆಂಡ ಬಿಸಿಯಾದರೆ, ಇಬ್ಬನಿ ಹನಿಗೆ ಚಳಿ, ನಡುಕ ಹುಟ್ಟಿಸುವುದು; ಎರಡೂ ಸಹಿಸಲು ಅಸಾಧ್ಯ; dropping snow drops during winter season;
- *ಪ್ರ: 'ಕೊರಕಾಲ(ಚಳಿಗಾಲ)ದಲ್ಲಿ ಕೆಂಡಪಣಿ ಬೀಳುವ ವೇಳೆ ತಡೆಯುವುದಕ್ಕೆ ಆಗುತ್ತಿರಲಿಲ್ಲ'*;
- ಕೆಂಡ+ಪಣಿ (ದೊಡ್ಡಮನೆ); ಪಣಿ=ಪನಿ>ಹನಿ; ಆದರೆ 'ಣ' ಕಾರಕ್ಕೆ 'ನ' ಕಾರ ಬರುವುದು ವಿಶೇಷ; ಅನುಕರಣ ಶಬ್ದ ರೂಪಗಳಲ್ಲಿ ಹೇಗೂ ಸರಿ; ಇಲ್ಲಿ ಮಾತ್ರ ಉಚ್ಚಾರಣೆಯ ಸಮಸ್ಯೆ ಇರುವಂತಿದೆ;

ಕೆಂಡದಿಟ್ಟು/ಗೆಂಡದಿಟ್ಟು Keṇḍadiṭṭu/ Geṇḍadiṭṭu:

- ಕೊಡವರ ಸಿಹಿತಿಂಡಿ; A sweet snacks of Kodava community;
- ಕೆಂಡದ+ಹಿಟ್ಟು>ಕೆಂಡದ+ಹ್+ಇಟ್ಟು>ಕೆಂಡದ+Ø+ಇಟ್ಟು>ಕೆಂಡದಿಟ್ಟು;
- ನೆನೆಅಕ್ಕಿ, ತೆಂಗಿನಕಾಯಿ, ಬೆಲ್ಲ, ಸೌತೆಕಾಯಿಗಳನ್ನು ರುಬ್ಬಿ ಈರುಳ್ಳಿ ಒಗ್ಗರಣೆಯೊಡನೆ ಬಾಣಲೆ (ಬಾಂಡ್ಲಿ)ಗೆ ಹಾಕಿ ಅದರ ಮೇಲೆ ತಟ್ಟೆಮುಚ್ಚಿ ತಟ್ಟೆಮೇಲೆ ಕೆಂಡಹಾಕಿ ಒಲೆ ಮೇಲಿಟ್ಟು ಬೇಯಿಸುವುದು; ಕೆಳಗೆ-ಮೇಲೆ ಎರಡೂ ಬಿಸಿಯಿಂದ ಬೆಂದಹಿಟ್ಟು 'ಕೆಂಡದಿಟ್ಟಾಗುವುದು'; it is prepared or made up of jaggary, coconut, wet rice, cucumber, onions;
- ಬೆಂದ ಹಿಟ್ಟನ್ನು ತುಂಡುಗಳಾಗಿ ಕತ್ತರಿಸಿ ತಿನ್ನುವುದು; **ವ್ಯರೂ:** ಚೆಚ್ಚಿಟ್ಟು, ಕಲ್ಲಪ್ಪ.

ಕೆಂಡದೆಡೆ Keṇḍadeḍe:

- ಕಟ್ಟಿಗೆ ಕೆಂಡದ ಎಡೆ; ಇದೊಂದು ವಿಶಿಷ್ಟ ದೈವ ಸಂಬಂಧಿ ಆಚರಣೆ; it is a special kind of celebration of god/goddess;
- ಕಟ್ಟಿಗೆಯಿಂದ ಸುಟ್ಟ ಕೆಂಡಗಳನ್ನು ಗಂಗಾಳದಲ್ಲಿ ಹಾಕಿ ದೇವರಿಗೆ 'ಎಡೆ' ಇಡುವುದು; ಕೆಂಡವನ್ನು ನೈವೇದ್ಯವಾಗಿ ಇಡುವುದೇ ಕೆಂಡದೆಡೆ; offering `live coal' by putting in plate;
- ಉತ್ತರಕರ್ನಾಟಕದ ಕಲಘಟಗಿ ತಾಲ್ಲೋಕಿನ ಬೀರವಳ್ಳಿಯಲ್ಲಿ ಇಂಥ ವಿಶಿಷ್ಟ ಆಚರಣೆ ಕಂಡುಬರುವುದು; ಕೆಂಡದ+ಎಡೆ=ಕೆಂಡದೆಡೆ.

ಕೆಂಡದೋಕುಳಿ Keṇḍadōkuḷi:

- ಕೆಂಡದ+ಓಕುಳಿ=ಕೆಂಡದೋಕುಳಿ;
- ಉತ್ತರ ಕರ್ನಾಟಕದ ಜಾತ್ರಾ ಆಚರಣೆ; ಕಲಘಟಗಿ ತಾಲ್ಲೋಕಿನ ಬೀರವಳ್ಳಿ ಶ್ರೀಕಲ್ಮೇಶ್ವರ ದೇವರ ವಿಶಿಷ್ಟ ಜಾತ್ರೆ; a ritual during Beeravally Sree Kalmeswara of Kalagatagi;
- ಜಕಣಾಚಾರಿ ಈ ದೇವಸ್ಥಾನ ಕಟ್ಟಿದನೆಂದು ಹೇಳುವರು;
- ರಾತ್ರಿವೇಳೆ ನಡೆವ ಅಪರೂಪದ ಜಾತ್ರೆ; it is celebrating during night;
- ದೇವರ ಕೊಂಡವನ್ನು ಪಲ್ಲಕ್ಕಿ ಹೊತ್ತು ಬರಿಮೈಯಲ್ಲಿ ಹಾಯುವುದು; ಹೋಳಿ-ಹುಣ್ಣಿಮೆಯಲ್ಲಿ ಕೆಂಡವನ್ನು ಕೈಯಲ್ಲಿ ಹಿಡಿದು ಪರಸ್ಪರ ಎರಚಾಡುವ ಪದ್ಧತಿ. `Live coal' is being thrown each other during festival.

ಕೆಂಡದಹಬ್ಬ Keṇḍadahabba:

- ಗಡಿಯಲ್ಲಿರುವ ಸ್ತ್ರೀದೈವಗಳಿಗೆ ಸಂಬಂಧಿಸಿದ ಆಚರಣೆ(ಮಂ.ಜಿ.). It is a ritual for goddess of village borders.

ಕೆಂಡವ್ರೆ/ಕೆಂಡದವರೆ Keṇḍavre/ Keṇḍadavare:

- ಕೆಂಡದಲ್ಲಿ ಬೆಂದ ಅವರೆಕಾಯಿ; ಕೆಂಡದ + ಅವರೆ = ಕೆಂಡದವರೆ > ಕೆಂಡವ್ರೆ; the boiled peas which boil on livecoal;
- ಹಸಿ ಅವರೆಕಾಳು ಅಥವಾ ಕಾಯಿಗಳನ್ನು ಬೆರಣಿ ಕೆಂಡಕ್ಕೆ ಹಾಕಿ ಸುಡುವುದು; ಸುಟ್ಟಕಾಳು ಬಲುರುಚಿ;
- ದನಕಾಯುವ ಜನ ಹೊಲಮಾಳದಲ್ಲಿ ತಿನ್ನುವ ಪರಿ, ಮಧ್ಯಾಹ್ನದ ಹಸಿವೂ ನೀಗುವುದು(ಹಾ.ಜಿ); The manner of eating during midday to overcome one's hungry by Oxherd or Neatherd.

ಕೆಂಡಾಬಟ್ಟೆ/ಕಂಡಾಬಟ್ಟೆ Keṇḍābaṭṭe/ Kaṇḍābaṭṭe:

- ವಿಪರೀತ, ಮಿತಿಮೀರಿ; unlimited;
- ಬಯಲುಸೀಮೆಯ 'ಕಂಡಾಬಟ್ಟೆ' ಪದ ಶಿವಮೊಗ್ಗದ ಕಡೆ 'ಕೆಂಡಾಬಟ್ಟೆ'ಯಾಗಿ ಬಳಕೆ; ಎರಡೂ ಕಡೆ ಏಕರೂಪದ ಅರ್ಥದಲ್ಲಿ 'ಅ' ಕಾರ 'ಎ' ಕಾರಾಂತಗಳಷ್ಟೆ ವ್ಯತ್ಯಾಸ; the word `Kandabatte' of pains used as `Kendabatte' around Shivamogga region; *ಪ್ರ: 'ಕಂಡಾಬಟ್ಟೆ ತಿಂದು ಅಜೀರ್ಣ ಹತ್ತಂಡಿದೆ';*
- 'ಕಂಡಾ' ಎನ್ನುವ ಪದ 'ಕೆಂಡಾ' ಆಗುವುದು ಕಷ್ಟ; ಇದನ್ನ 'ಅ' ಮತ್ತು 'ಎ' ಗಳ ವ್ಯತ್ಯಾಸವಷ್ಟೆ ಎಂದು ಹೇಳಲಾಗದು; ಬೇರೇನೋ ಉಚ್ಚಾರಣೆಯ ಸಮಸ್ಯೆ ಇಲ್ಲಿರಬಹುದು.

ಕೆಂಡಾಳದ ಮರ Keṇḍāḷada mara:

- ಮರದ ತೊಗಟೆಯಲ್ಲಿ ಔಷಧೀಯ ಗುಣ; a species of tree having medicinal bark or peel;
- ಬಿಳಿಗಿರಿರಂಗನ ಬೆಟ್ಟದಲ್ಲಿ ಕಾಣಬರುವ ಮರ; it appears in B.R.Hills;
- ಕೆಂಡವೂ ಕೆಂಪಾಗಿರುವುದರಿಂದ ಈ ನಾಮವಾಚಕ ಆಗಿರಬಹುದೆ?
- ಕೆಂಪು ಆಲದಮರ>ಕೆಂಡಾಳದ ಮರ?. Red Banyan tree?.

ಕೆಂಡೆ Keṇḍe:

- ಉಣ್ಣೆ ಎಳೆಸುತ್ತಿರುವ ಲಾಳಿಯೊಳಗೆ ಹಾಕುವ ಕಂಡಿಕೆ(ಕಂಡೆ)(ಬೆಂ.ಗ್ರಾ.). A tool that is used to fill woollen thread into weaver's shuttle.

ಕೆಂತಿ/ಕೆತ್ತೆಬಾಜೆ(ಜಿ) Kenti/ Kettebāje(ji):
ಅಧಿಕ ಪ್ರಸಂಗತನ, ಕಿತಾಪತಿ, ಇಲ್ಲದ ಸಲ್ಲುದು; ಕೆದಕಿ?; *ಪ್ರ: 'ತನಗೆ ಸಂಬಂಧವಿಲ್ಲದಿದ್ದರೂ ಕೆಂತಿ ಮಾಡಿ ಜಗಳ ಹಚ್ಚಿಸುತ್ತಾನೆ'.* Trouble monger, officiousness.

ಕೆಂದ/ಕೆಂದೆ Kenda/Kende:
- ಕೆಂಪು/ಕಂದು/ಕೆಂಚನೆಯ ಬಣ್ಣದ ಹಸು/ಎತ್ತು; a red coloured cow or bullock;
- ಈ ಬಣ್ಣದ ಹಸುವಿನ ಹಾಲು ಗಟ್ಟಿಯಾಗಿದ್ದು ಶ್ರೇಷ್ಠ ಎಂಬ ನಂಬಿಕೆ;
- ಕಂದುಬಣ್ಣದ ಹೋರಿ; ಕಂದುಬಣ್ಣದ ಕರು; ತೆಳು ಕೆಂಪುಬಣ್ಣದ ದನ;
- ಕೆಂಪುಬಣ್ಣದ ವ್ಯಕ್ತಿಗಳಿಗೆ 'ಕೆಂದ' ಎಂದು ಬಯಲುಸೀಮೆಯಲ್ಲಿ ಕರೆಯುವುದು ವಾಡಿಕೆ; *ವ್ಯರೂ:* ಕೆಂದೆ(ಗೆಂದೆ), ಕೆಂಪುಹಸು(ಕಪಿಲೆ) (ಹವ್ಯ.ಶೋ);
- **—*ಕೆಂದಗುದರಿ*** : ಕಂದುಬಣ್ಣದ ಕುದುರೆ(ಬ.ಜಿ.); a reddish horse;
- **—*ಕೆಂದಗಿಡಗ*** : ಕೆಂಪು–ಕೆಂದು ಬಣ್ಣದ ಗಿಡುಗ: ಮಾಂಸಾಹಾರಿ ಪಕ್ಷಿ. Red-brown coloured falcon or vulture; a meat eater bird.

ಕೆಂದಗಾವಿ Kendagāvi:
- ಪಗಡೆ ಹೊದಿಕೆ; ಗೊರವರು ಹೊದೆಯುವ ಬಟ್ಟೆ; a red cloth which is worn by Gorava community or used to cover dice;
- ಕೆಂದ+ಕಾವಿ>ಕೆಂದಗಾವಿ(ಕ>ಗ);
- ಕೆಂಪು, ಕೆಂದು(ಕಾವಿ) ಬಣ್ಣದ ಬಟ್ಟೆ;
- ಕೆಂದನಾಯಿ: ತೋಳ; ಕೆಂದಲಗಾಡು: ಅಗಸ; ಕೆಂದಲು: ಬಟ್ಟೆ; ಕೆಂದಳಿಲು(ರು); ಕೆಂಪನೆಯ ಚಿಗುರು=ಕೆಂಪು+ತಳಿರು=ಕೆಂದಳಿರು; `Kendanayi'; wolf kendalagadu; washerman;
- ಕೆಲವು ಗಿಡಗಳು ಚಿಗುರೊಡೆದಾಗ ಕೆಂಪು ಬಣ್ಣದಿಂದಿರುವುದು;
- **—*ಕೆಂದಳಿ/ಕೆಂದಾಳೆ*** : ಕೆಂಪುಸಿಪ್ಪೆಯ ತೆಂಗಿನಕಾಯಿ;
- ಇದರ ನೀರು ಸಿಹಿಯಾಗಿರುತ್ತದೆ, ಜನಪದ ವೈದ್ಯದಲ್ಲಿ ಇದರ ಬಳಕೆ ಹೆಚ್ಚು; ಕೆಂಪು+ತಳಿ= ಕೆಂದಳಿ; ಕೆನ್ + ತಳಿ = ಕೆಂದಳಿ(ತ>ದ). Reddish coconut; a brownish or reddish coconut.

ಕೆಂದಟ್ಟಗ kendaṭṭaga :
- ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ಮಠದಲ್ಲಿರುವ ಕ್ರಿ.ಶ.೧೩೯೭ರ ನಾಲ್ಕನೆಯ ಶಾಸನದಲ್ಲಿ 'ಕೆಂದಟ್ಟಗ' ಗ್ರಾಮದ ಉಲ್ಲೇಖವಿದೆ; a village referred in 4th inscription of 1397AD found in Shringeri Mutt of Chikkamagaluru;
- 'ಕೆಂದಟ್ಟಗ' ಪದವನ್ನು ಬಿಡಿಸಿದಾಗ ಕೆಂದ+ಅಟ್ಟಗ ಎಂದಾಗುತ್ತದೆ; 'ಕೆಂದ' ಎಂದರೆ ಕೆಂಪಾದ, 'ಅಟ್ಟಗ' ಎಂದರೆ ಹೊದಿಕೆ ಎಂದಾಗುತ್ತದೆ;
- ಅಂದರೆ ಕೆಂಪಾದ ಹೊದಿಕೆಯ ಸ್ವರೂಪದ ಹಿನ್ನೆಲೆಯಲ್ಲಿ ಆ ಪ್ರದೇಶಕ್ಕೆ ಈ ಸ್ಥಳನಾಮ ಬಂದಂತಿದೆ;
- ಭೌಗೋಳಿಕ ಸ್ವರೂಪವನ್ನು ಈ ಪದ ಹೇಳುತ್ತಿರುವುದರಿಂದ ಪ್ರಾದೇಶಿಕ ವೈಲಕ್ಷಣ್ಯದ ಪದವಾಚಿಯಾಗಿರುವಂತೆ ಕಾಣುತ್ತದೆ.

(E.C- ೧೧; ಚಿಕ್ಕ.ಜಿ.)

ಕೆಂದಾಳ/ಕಾನಕೆಂದಾಳ Kendāḷa/ Kānakendāḷa:
- Dimocarpus longan; ಒಂದು ಬಗೆಯ ಮರ; a species of tree;
- ಸಮಸಂಖ್ಯೆಯ ಗರಿ ರೂಪದ ಎಲೆಗಳು; ಹಣ್ಣನ್ನು ತಿನ್ನುತ್ತಾರೆ, ಹಣ್ಣು ಮತ್ತು ಅಲಂಕಾರಕ್ಕಾಗಿ ಬೆಳೆಸುವ ಮರ. Its fruits are eatable, its leaves are used for decoration.

ಕೆಂದಾಳೆ Kendāḷe:
- Schleichera oleosa;
- ಕುಟುಂಬ: ಸ್ಯಾಪಿಂಡೇಸೀ; ವೈ.ಹೆ: ಸ್ಲಿಶರ ಟ್ರೈಜುಗ; it belongs to the species of wax tree;
- ಅರಗು ಮರಗಳ ಗುಂಪಿಗೆ ಸೇರಿದ್ದು; in kannada there are synonyms Sagade, Kendale, Chendale;
- ಕನ್ನಡದಲ್ಲಿ ಸಗಡೆಕೆಂದಾಳೆ, ಚೆಂಡಾಲ ಎಂಬ ಹೆಸರುಗಳು; ಇದರ ಅರಗನ್ನು ಗಾಡಿಚಕ್ರ, ಯಂತ್ರಗಳಿಗೆ, ಗಿರಣಿಗಳಲ್ಲಿ ಹೆಚ್ಚಾಗಿ ಬಳಸುವರು;

- ಈ ಮರದಿಂದ ಗಾಡಿಯ ಗಾಲಿ, ಒನಕೆ, ಎಣ್ಣೆಗಾಣ, ಸಕ್ಕರೆ ಕಾರ್ಖಾನೆಗೆ ಬೇಕಾದ ಕಟ್ಟಿಗೆಗಳ ತಯಾರಿಕೆ;
- ಸೊಪ್ಪು ದನಗಳ ಮೇವಾಗಿ ಬಳಕೆ;
- ಬೀಜದ ಎಣ್ಣೆ ಇಂಧನವಾಗಿ, ಸೋಪು ಸುಗಂಧತೈಲ ತಯಾರಿಕೆಗೆ ಬಳಕೆ;
- ಎಣ್ಣೆ ಚರ್ಮರೋಗಕ್ಕೆ ಔಷಧಿ; it is a medicine of oily skin disease;
- ಮರದಿಂದ ಆಯುಧಗಳ ಹಿಡಿಕೆ, ಗಣಿಗಳಿಗೆ ಆಸರೆ ಕಂಬಗಳ ತಯಾರಿಕೆ.

ಕೆಂದು Kendu:

- ಒಂದು ಬಣ್ಣ; ಕೆಂದು=ಕೆಂಪು; 'ಕೆನ್' ಮೂಲರೂಪ, a kind of colour;
- ಗುಣವಾಗು(ಹಾ.ಜಿ.); ಚಿಗುರೊಡೆ; to be cured; to sprout;
- ಕೆಂಪುಬತ್ತ(ಕೊಪ್ಪ.ಜಿ.); ಮರುಕಳಿಸು; ಒದ್ದೆಯಾಗು; ಒಗ್ಗು;
- ಆತುಕೊಳ್ಳು; ಮಲಗು; ನಿದ್ರಿಸು; ತೆಲುಗಿನಲ್ಲಿ ಚೇರು, ಚೇರಬಡು(ದ್ರಾ.ಭಾ.ಜ್ಞಾ.ಪ.ಕೋ); to support one another to sleep;
- ಕೆಂಪು, ಕಪ್ಪು ಮಿಶ್ರಿತವಾದ ಬಣ್ಣ, ಹಲವು ಅರ್ಥಗಳಲ್ಲಿ ಬಳಕೆ;

  ಪ್ರ: 'ಎಷ್ಟೇ ಔಷಧಿ ತೆಗೆದುಕೊಂಡರೂ ಕಾಯಿಲೆ ಕೆಂದುವುದಿಲ್ಲ';

  ಪ್ರ: 'ಚೈತ್ರ ಮಾಸದಲ್ಲಿ ಗಿಡ, ಮರಗಳೆಲ್ಲಾ ಕೆಂದುತ್ತವೆ;

  ಪ್ರ: 'ಕೆಂದುಬತ್ತ ನಮ್ಮ ಕಡೆ ಸಾಮಾನ್ಯ ಬೆಳೆ';

  ಪ್ರ: 'ಕಾಯಿಲೆ ಮತ್ತೆ ಮತ್ತೆ ಕೆಂದುತ್ತಿದೆ';

  ಪ್ರ: 'ಪ್ಲಾಸ್ಟಿಕ್ ಚೀಲ ಮುಚ್ಚಿದರೆ ಬಟ್ಟೆ ಕೆಂದುವುದಿಲ್ಲ';

  ಪ್ರ: 'ಅವನ ಸಹವಾಸ ನಮಗೆ ಕೆಂದುವುದಿಲ್ಲ';

  ವ್ಯರೂ: ಕೆಂದಿ.

ಕೆಂದೂಳು/ಕೆಂದೂಳಿ Kendūḷu/Kendūḷi:

- ಕೆಂಪುಮಣ್ಣಿನ ದೂಳು; ಕೆನ್+ದೂಳು=ಕೆಂದೂಳು (ಕೆನ್=ಕೆಂದು); the dust of red soil;
- ಬೇಸಿಗೆಯಲ್ಲಿ ಕೆಂಪುಭೂಮಿಯ ಮೇಲ್ಪದರದ ಮಣ್ಣು ಗಾಳಿಗೆ, ವಾಹನ ಓಡಾಟದ ಬಿರುಸಿಗೆ, ಜನರ ಗುಂಪಿನ ಕಾಲ್ತುಳಿತಕ್ಕೆ ಮೇಲೇಳುವುದು; during hot summer, red soil dust is arisen due t vehicle drive;
- ಸೂರ್ಯನ ಸಂಜೆಗೆಂಪಿನಿಂದಲೂ ಕೆಂದೂಳಾಗಿ ಕಾಣಬಹುದು?
- ಸುಂಟರಗಾಳಿ, ಬಿರುಗಾಳಿ ಸಂದರ್ಭದಲ್ಲಿ ಏಳುವ ಧೂಳು; ಸುಂಟರಗಾಳಿಯಲ್ಲಿ ಧೂಳು ಮತ್ತು ತರಗೆಲೆ, ಕಸ, ಕಡ್ಡಿಗಳು ಸುತ್ತಿಕೊಂಡು ಬರುವುದು;
- ಕೆಂಪುಮಣ್ಣಿನ ಪ್ರದೇಶದಲ್ಲಿ ಜನ, ಜಾನುವಾರುಗಳ ಹಿಂಡು(ಸಮೂಹ) ಓಡಾಡುವಾಗ ಅಥವಾ ನಡೆದಾಡುವಾಗ ಕೆಂದೂಳು ಏಳುವುದು; the brown dust; rising during heavy cattle walk;

  ಪ್ರ: 'ರಣಾಂಗಣದಲ್ಲಿ ಕೆಂದೂಳೆದ್ದು ಯಾರೂ ಸರಿಯಾಗಿ ಕಾಣುವುದಿಲ್ಲ'.

ಕೆಂಪ Kempa:

- ಹುಂಜದ ಒಂದು ಬಗೆ; ವ್ಯಕ್ತಿಸೂಚಕ ನಾಮಪದ; ಬತ್ತದತಳಿ; ಈ ಜಾತಿಯ ಹುಂಜ ಕೆಂಪುಬಣ್ಣದ್ದು; ಕಾಲು ಉದ್ದವಾಗಿ ಎತ್ತರದ ನಿಲುವು, ತಲೆಯ ಮೇಲಿನ ಕುಕ್ಕುಟವು ಕೆಂಪುಬಣ್ಣದ್ದು; a species of cock; a name of a person; a paddy breed;
- ವ್ಯಕ್ತಿಗಳನ್ನೂ ಬಣ್ಣದಿಂದ ಗುರುತಿಸುವುದು ರೂಢಿ; ಕೆಂಪುಬಣ್ಣದ ವ್ಯಕ್ತಿಗಳಿಗೆ ಅನ್ವರ್ಥನಾಮವಾಗಿ 'ಕೆಂಪ'-'ಕೆಂಪಿ' ಎನ್ನುವುದು; ಕೆಂಪುಬಣ್ಣ ಇಲ್ಲದಿದ್ದರೂ ವಾಡಿಕೆಯಾಗಿ ಸಂಪ್ರದಾಯದಂತೆ ಕೆಂಪ/ಕೆಂಪಿ ಹೆಸರು ಇರಲು ಸಾಧ್ಯ; ಕೆಂಪ-ಪುಲ್ಲಿಂಗ, ಕೆಂಪಿ-ಸ್ತ್ರೀಲಿಂಗ; 'ಅ' ಕಾರ 'ಇ' ಕಾರ ವ್ಯತ್ಯಾಸ-ಲಿಂಗಸೂಚಕ; ಅಂಕಿತನಾಮವಾಗಿ ಕೆಂಪಯ್ಯ, ಕೆಂಪಣ್ಣ, ಕೆಂಪಮ್ಮ ಪದಬಳಕೆ;
- ಕೆಂಪುಬಣ್ಣದವರನ್ನು ಕೆಲವೊಮ್ಮೆ ಕೆಂಚ, ಕೆಂಚಿ ಎಂದು ಬೈಗುಳವಾಗಿಯೂ ಬಳಕೆ;
- ಕೆಂಪುಬಣ್ಣದ ಹಸುವನ್ನು 'ಕೆಂಪಿ' ಎಂದೂ ಕರೆಯುವುದು; reddish cow is called as `Kempi';
- ಹಾಲಕ್ಕಿ ಒಕ್ಕಲಿಗರು ಬೆಳೆಯುವ ಬತ್ತದ ತಳಿ (ಉ.ಕ.ಜಿ.). A paddy breed which is grown by Halakki Vokkaliga community.

ಕೆಂಪಣ್ಣಗೌಡ kempaṇṇagowḍa :

- ಕಾವ್ಯ ರೂಪದಲ್ಲಿ ಯಕ್ಷಗಾನ ಪ್ರಸಂಗಗಳನ್ನುಬರೆದವನು; ಮೊದಲ ಯಕ್ಷಗಾನ ಕವಿ ಎಂದು ಹೇಳಿದರೂ ಆದೀತು;
- ಈತನ ಕಾಲವನ್ನು ೧೪೮೦ ಎಂದು ತಿಳಿಯಲಾಗಿದೆ (ಪೀಠಿಕೆ, ಕೆಂ.ಗೌ.ಯ.ಕಾ); ಇನ್ನೂ ಈಚೀನ ಕವಿಯೆಂದು ಕಾಣುತ್ತದೆ; ಕಾಲ ನಿಗದಿ ಅಸ್ಪಷ್ಟ;
- ಕರಿರಾಯ ಚರಿತ್ರೆ, ನಳಚರಿತ್ರೆ, ಶನಿಮಹಾತ್ಮೆ ಎಂಬ ಮೂರು ಕಾವ್ಯಗಳನ್ನು ಬರೆದಿದ್ದಾನೆ; ಕನ್ನಡದ ಮೊದಲ ಯಕ್ಷಗಾನದ ಹಸ್ತಪ್ರತಿ 'ಕರಿರಾಯಚರಿತ್ರೆ' ಎಂದೂ ಗುರುತಿಸಲಾಗಿದೆ;
- ಇವನ ತಂದೆ ಓದೋ ಕೆಂಪಯ್ಯ; ತಾತಾ ಜೀರಿಗೆ ಕೆಂಪಯ್ಯ; ಊರು ಅಂದೇನಹಳ್ಳಿ– ಈ ವಿವರ ಅವನ ಕಾವ್ಯಗಳಿಂದಲೇ ದೊರೆಯುತ್ತದೆ; 'ಓದೋ ಕೆಂಪಯ್ಯ' ಎಂದರೆ ಓದುಬರಹ ಬಲ್ಲವನೆಂದು ಅರ್ಥ, ಸಹಜವಾಗಿಯೇ ಮಗನ ಮೇಲೆ ಇದರ ಪ್ರಭಾವ; 'ಜೀರಿಗೆ' ಉಲ್ಲೇಖ ಸಂದಿಗ್ಧ, ಊರೊ(ಮೂಲ) ಕುಲವೊ ತಿಳಿಯದು; ಅಂದೇನಹಳ್ಳಿ ನಾಗಮಂಗಲ ತಾಲ್ಲೋಕಿನಲ್ಲಿರುವಂಥದು, ಲೋಕಪಾವನಿಯ ಸಮೀಪದಲ್ಲಿರುವಂಥದು;
- 'ಕರಿರಾಯ ಚರಿತ್ರೆ' ಸುಪ್ರಸಿದ್ಧ 'ಕರಿಭಂಟನ ಕಾಳಗ'ವೇ ಆಗಿದೆ; ಯಕ್ಷಗಾನ ನಾಟಕವಾಗಿ ಆಮೇಲೆ ಪರಿವರ್ತನೆಗೊಂಡುದು; ಅಪಾರ ಜನಪ್ರಿಯತೆ ಗಳಿಸಿರುವಂಥದು; 'ನಳಚರಿತ್ರೆ' ಮತ್ತು 'ಶನಿಮಹಾತ್ಮೆ'ಗಳು ಕೂಡ ಅದರಷ್ಟೇ ಪ್ರಸಿದ್ಧವಾಗಿರುವ ಕೃತಿಗಳು; ಓದಿಸಿ ಕೇಳುವ ಸಂಪ್ರದಾಯಕ್ಕೆ ಈ ಎರಡೂ ಕೃತಿಗಳು ನಾಗಮಂಗಲದ ಪರಿಸರದಲ್ಲಿ ಬಳಕೆಯಲ್ಲಿವೆ (ಕೆಂ.ಗೌ.ಯ.ಕಾ);
- ಕರಿರಾಯ ಚರಿತ್ರೆ/ಕರಿಭಂಟನ ಕಾಳಗದಲ್ಲಿ ಚಾರಿತ್ರಿಕ ಸಂಗತಿಗಳನ್ನು ಹುಡುಕುವ ಪ್ರಯತ್ನ ನಡೆದಿದ್ದು; ಗಂಗರಸರ ಜೊತೆ ತಳುಕು ಹಾಕುವ ಶೋಧನೆಗಳೂ ಪ್ರಸ್ತಾಪಿತವಾಗಿವೆ; ಆದರೆ ಇದು ಚರಿತ್ರೆ ಮತ್ತು ಐತಿಹ್ಯದ ನಡುವೆ ಇರುವ ಸ್ಥಿತಿಯದು; ಐತಿಹ್ಯ, ಪುರಾಣದ ಅಂಶಗಳು ಸೇರಿಕೊಂಡು ಚರಿತ್ರೆಯನ್ನು ಮುಚ್ಚಿ ಹಾಕಲಾಗಿದೆ; ಆದ್ದರಿಂದ ಇದನ್ನು `semi-historical'- 'ಅರ್ಧಚಾರಿತ್ರಿಕ' ಎಂದು ಕರೆಯಬಹುದಾಗಿದೆ; ಉಳಿದ ಎರಡು ಕೃತಿಗಳಂತೂ ಪುರಾಣಕಥೆಗಳಾಗಿದ್ದು, ಭಾರತೀಯ ಸಂಸ್ಕೃತಿ ಕಥಾ ಪರಂಪರೆಯಲ್ಲಿ ಪ್ರಸಿದ್ಧವಾಗಿವೆ;
- 'ಕೆಂಪಣ್ಣಗೌಡನ ಈ ಮೂರೂ ಕಾವ್ಯಗಳ ವಾಚನ, ತಾಳಮದ್ದಳೆ ಮತ್ತು ರಂಗಸಂಪ್ರದಾಯಗಳು ಇಂದಿಗೂ ಜೀವಂತವಾಗಿವೆ'(ಕೆಂ.ಗೌ.ಯ.ಕಾ);
- ಈ ಮೂರೂ ರಚನೆಗಳು ಶಿಷ್ಟ; ಜನಪದ ಕೃತಿಗಳಲ್ಲ; ಕೆಂಪಣ್ಣಗೌಡ ಒಬ್ಬ ಶಿಷ್ಟ ಕವಿ; ಜನಪದ ಕವಿಯೇನಲ್ಲ;
- ಅವನ ರಚನೆಗಳು ರಂಗ ಪ್ರಯೋಗಗಳಾಗಿ ಬಳಕೆಯಾಗಿರುವುದರಿಂದ ಜಾನಪದದಲ್ಲಿ ಇವುಗಳ ಪರಿಗಣನೆ ಅಷ್ಟೆ; ವಾಚಿಕವಾಗಿ ಹರಿದು ಬಂದವುಗಳಲ್ಲ; ಹಸ್ತಪ್ರತಿ ರೂಪದಲ್ಲಿ ಒಬ್ಬ ಕವಿ/ ಲಿಪಿಕಾರನಿಂದ ಬರೆದವುಗಳಾಗಿ ಉಳಿದು ಬಂದವುಗಳು;
- ಸಾಮಾನ್ಯವಾಗಿ ಯಕ್ಷಗಾನ ಸಾಹಿತ್ಯ/ಪ್ರಸಂಗಗಳು ಜಾನಪದವಾಗುವುದಿಲ್ಲ; ರಂಗ ಸಂಬಂಧವಾದ ಚಟುವಟಿಕೆಗಳನ್ನು ಮಾತ್ರ ಯಕ್ಷಗಾನದಲ್ಲಿ ಜಾನಪದವನ್ನು ಗುರುತಿಸುತ್ತೇವೆ; ಕೆಂಪಣ್ಣಗೌಡನ ರಚನೆಗಳಿಗೂ ಈ ಮಾತು ಅನ್ವಯವಾಗುವುದು;
- ಈ ಮೂರೂ ಕಾವ್ಯಗಳ ವಸ್ತು ಪುರಾಣ ಜಾನಪದಕ್ಕೆ ಸಂಬಂಧಿಸಿದವು; ಅವು ಮೂಲದಲ್ಲಿ ರೂಪುಗೊಂಡುದು ಜನರ ಮಧ್ಯದಲ್ಲಿಯೇ; ಆದ್ದರಿಂದ ಆ ಎಲ್ಲ ಕಥೆಗಳೂ ಅವುಗಳ ಪ್ರಸಾರವೂ ಜಾನಪದದ ಲಕ್ಷಣಕ್ಕೆ ಸಂಬಂಧಿಸಿದಂತೆಯೇ ಇವೆ;
- ಕವಿ ಕೆಂಪಣ್ಣಗೌಡ ಈ ಕಥೆಗಳನ್ನು ಸಂಗ್ರಹಿಸಿ, ಅದಕ್ಕೆ ತನ್ನದನ್ನು ಸೇರಿಸಿ, ಪರಿಷ್ಕರಿಸಿ, ರೂಪಿಸಿ ರಚಿಸಿದ್ದಾನೆ; ಯಕ್ಷಗಾನದ ಲಕ್ಷಣಗಳನ್ನು 'ಅಭಿವ್ಯಕ್ತಿ'ಗೆ ಅಣಿಗೊಳಿಸಿಕೊಂಡಿದ್ದರೂ, ಬರೆವಣಿಗೆ ಶಿಷ್ಟವೇ ಆಗಿದೆ; ಕವಿಯಂತೂ ನಮಗೆ ಪರಿಚಿತವಾಗಿಯೇ ಇದ್ದಾನೆ;
- ಕೆಂಪಣ್ಣಗೌಡನ ಕಾವ್ಯಗಳು ಶುದ್ಧ ಜಾನಪದವೂ ಅಲ್ಲ, ಶುದ್ಧ ಶಿಷ್ಟವೂ ಅಲ್ಲ; ಹಾಗೆಯೇ ಕೆಂಪಣ್ಣಗೌಡ ಶುದ್ಧ ಜನಪದ ಕವಿಯೂ ಅಲ್ಲ, ಶುದ್ಧ ಶಿಷ್ಟ ಕವಿಯೂ ಅಲ್ಲ; ಇಂತಹ ಸ್ಥಿತಿಯನ್ನು ಇಂಗ್ಲಿಷಿನಲ್ಲಿ `popular' ಎಂದು ಕರೆಯುತ್ತಾರೆ; ಅಂದರೆ 'ಜನಪ್ರಿಯ' ಸ್ಥಿತಿಯದು; ಪದಸಂಸ್ಕೃತಿಯಲ್ಲಿ ಈ ಉಲ್ಲೇಖ ಆಗುವುದು ಅನಿವಾರ್ಯ ಕೂಡ.

ಕೆಂಪರಾಯ Kemparāya:

- ಕೆಂಪುಸೋಮ; ಸೋಮನ ಒಂದು ಬಗೆ; ಯಕ್ಷಗಾನದಲ್ಲಿ ಕೆಂಪುಬಣ್ಣ ಬಳಿದುಕೊಳ್ಳುವ ಸೋಮ. A kind of Soma; a messenger of god who is in red colour.

ಕೆಂಪ್ಕಡ್ಡಿ ರೋಗ Kempkaḍḍi rōga:

- ಕೆಂಪುಕಡ್ಡಿರೋಗ; ರಾಗಿ ಬೆಳೆಗೆ ಬರುವ ರೋಗ; ಈ ರೋಗದಿಂದ ರಾಗಿಕಡ್ಡಿ ಕೆಂಪುಬಣ್ಣಕ್ಕೆ ತಿರುಗುವುದು. A disease of Millet crop.

ಕೆಂಪಾರತಿ Kempārati:

- ಕೆಂಪು+ಆರತಿ=ಕೆಂಪಾರತಿ; ಕೆಂಪುನೀರಿನ ಆರತಿ, ಅರಿಸಿನ ಸುಣ್ಣ ಬೆರೆಸಿದ ನೀರು, ದೃಷ್ಟಿ ತೆಗೆಯುವ ನೀರು, ಮಗು ಹುಟ್ಟಿದ ಐದನೇ ದಿನ ಆರತಿ ಎತ್ತುವ ನೀರು. An adoration or worship of red water which is mixed with turmeric and lime to prevent evileye.

ಕೆಂಪಿಪಟ್ಟ Kempipaṭṭa:

- ಕೆಂಪಿನಪಟ್ಟ; ಕೆಂಪು ರುಮಾಲು; red headgear;
- 'ಪಟ್ಟ' ಎಂದರೆ 'ಬಟ್ಟೆ' ಎಂಬರ್ಥ; ರುಮಾಲು ಕೆಂಪುಬಣ್ಣದ್ದೆ ಎಂದು ಒತ್ತುಕೊಟ್ಟು ಹೇಳಲು ಕೆಂಪಿಪಟ್ಟ ಬಳಕೆಯಾಗಿರಬಹುದು.

ಕೆಂಪು/ಕೆಮ್ಪು Kempu:

- ಏಳು ಬಣ್ಣಗಳಲ್ಲಿ ಒಂದು; ಚರ್ಮವ್ಯಾಧಿ; it is one of seven colours; a skin disease;
- ತಮಿಳು: ಚೆಮ್'; ಚೆವಪ್ಪು; ಮಲೆಯಾಳಂ: ಚೆಮ್/ಚುವಪ್ಪು; ತೆಲುಗು: ಚೆಂಗಾವಿ (ದ್ರಾ.ಭಾ.ಜ್ಞಾ.ಪ.ಕೋ); ಮೂಲರೂಪ ಕೆನ್ ಅಥವಾ ಕೆಮ್;
- ಕಾಮನಬಿಲ್ಲಿನ ಏಳು ಬಣ್ಣಗಳಲ್ಲಿ ಕೊನೆಯದು, ಸೂರ್ಯನ ವಿಕಿರಣಗಳಲ್ಲಿ ಉಂಟಾಗುವ ಏಳು ಬಣ್ಣಗಳಲ್ಲಿ ಕೆಂಪು ಒಂದು; ಇದರ ಸಂಕೇತವಾಗಿ ಸೂರ್ಯರಥದ(ಅರುಣ) ಕುದುರೆಗಳು ಏಳು; it is the last colour of rainbow colours;
- ಶಿವನ ಮೂರನೆ ಕಣ್ಣು ಕೆಂಪು(ಕೆಂಗಣ್ಣು); the third eye of lord Shiva is red;
- ನೈದಿಲೆ ಬಣ್ಣಗಳಲ್ಲಿ ಕೆಂಪು ಒಂದು (ಕೆನ್ನೈದಿಲೆ);
- ಕಣಗಿಲೆಯಲ್ಲಿ ಕೆಂಪುಬಣ್ಣ(ಕೆಂಪಕಣಗಲೆ, ಚೆಂಗಣಗಿಲೆ);
- ಕೆಂಪು ಮಿಶ್ರಿತ ಬಣ್ಣದ ಕಬ್ಬು ಕೆಂಪ್‌ಕಬ್ಬು;
- ಸ್ತ್ರೀಯರ ಮಂಗಳ ಸೂಚಕ ಹಣೆಬೊಟ್ಟು ಕೆಂಪು (ಕುಂಕುಮ); the vermilian which is put on the forehead of women;
- ಒಡವೆಗಳಿಗೆ ಬಳಸುವ ಹರಳಲ್ಲಿ ಕೆಂಪು ಕಲ್ಲಿನ ಬಳಕೆ;
- ಕೆಂಪು ಕ್ರಾಂತಿ ಅಥವಾ ಅಪಾಯದ ಸಂಕೇತವಾಗಿಯೂ;
- ಕೆಂಪು-ಕಪ್ಪು ಮಿಶ್ರಿತ ಬಣ್ಣ-ಬೂದುಬಣ್ಣ;
- ಕೆಂಪು-ಅರಿಸಿನ ಬೆರಸಿದ ಬಣ್ಣ-ಹಳದಿಬಣ್ಣ (ಹೊಂಬಣ್ಣ);
- ಕೆಂಪು-ಬಿಳುಪು ಬೆರಸಿದ ಬಣ್ಣ-ನಸುಗೆಂಪು;
- ಸೂರ್ಯೋದಯ, ಸೂರ್ಯಾಸ್ತದ, ಪ್ರಾಕೃತಿಕ ಕ್ರಿಯೆಲ್ಲಿ ಕೆಂಪುಬಣ್ಣ ಕಾಣಿಸುವುದು(ಅರುಣೋದಯ, ಸಂಜೆಗೆಂಪು);
- ಬಣ್ಣದ ವಿವಿಧ ತೀವ್ರತೆಯಿಂದ ಭಿನ್ನ ಹೆಸರುಗಳಲ್ಲಿ ಗುರುತಿಸುವಿಕೆ-ಎಣ್ಣೆಗೆಂಪು, ಎಳೆಗೆಂಪು, ಕಡುಗೆಂಪು; *ಪ್ರ: 'ಕೆನ್ನೂಲಿಯಿನ್ನಾಗ ಸರಿಕೆಮ್ಪಾದುದು';*
- ***—ಕೆಂಪರಗು/ಕೆಮ್ಪರಗು*** : ಕೆಂಪುಬಣ್ಣದ ಅರಗು,
- ಕೆಂಪರಗಿನ ಗಿಡದಿಂದ ತಯಾರಾದುದು; a red coloured wax;
- ***—ಕೆಂಪುಕೂವೆ/ಕೆಮ್ಪುಕೂವೆ*** : ಕೆಂಪುಬಣ್ಣದ ಹಣ್ಣುಗಳನ್ನು ಬಿಡುವ ಬಳ್ಳಿ; a red creeper which bear red fruits;
- ***—ಕೆಂಪುಜಂಬುನೇರಳೆ*** : ನೇರಳೆಹಣ್ಣಿನಲ್ಲಿ ಕೆಂಪು ಒಂದು ಬಗೆ; a species of 'Nerale' fruit;
- ***—ಕೆಂಪು ಗೋರಂಟೆ*** : Barleria buxifolia; (ಕೆಂಪು) ಸ್ಫಟಿಕದ ಹೂವಿನಗಿಡ; ಗುಬ್ಬಿಮುಳ್ಳು; crystal flower tree;
- ***—ಕೆಂಪುಗದಡ/ಕೆಂಪುಕದಡು*** : ಹೊಳಪಿಲ್ಲದ (ಮಾಸಲುರಿ) ಕೆಂಪು;
- ***—ಕೆಂಪುತಾವರೆ*** : ತಾವರೆ ಹೂವಿನಲ್ಲಿ ಕೆಂಪುಬಣ್ಣದ್ದು(ಕೆಂದಾವರೆ); red lotus or red lily;

- ***—ಕೆಂಪುತೊಂಡೆಗಿಡ*** : ಈ ಸಸ್ಯ ತರಕಾರಿಯಾಗಿ ಬಳಕೆ; ಗಿಡದ ಹಣ್ಣು ಪೂರ್ಣ ಮಾಗಿದಾಗ ಕೆಂಪಾಗುವುದು; ತುಟಿಯನ್ನು ತೊಂಡೆಹಣ್ಣಿಗೆ ಹೋಲಿಕೆ(ಕೆಂದುಟಿ); a kind of vegetable 'Tonde' creeper;
- ***—ಕೆಂಪುದೋರು*** : ಕೆಲವು ಹಣ್ಣುಗಳು ಪೂರ್ಣ ಮಾಗುವ ಮುನ್ನ ಕೆಂಬಣ್ಣವಾಗಿದ್ದು, ಮಾಗಿದಹಣ್ಣು ಹಳದಿ ಬಣ್ಣವಾಗುವುದು(ಮಾವು ಇತ್ಯಾದಿ); the colour of fruit which is shortly ripen itself fully;
- ***—ಕೆಂಪುನೆಲ*** : ಕೆಂಪುಮಣ್ಣಿನ ನೆಲ; ಬೆಳೆಗಳಿಗೆ ಉತ್ತಮ ಭೂಮಿ, ನೀರಿನ ಅಂಶವನ್ನು ಹೆಚ್ಚುಕಾಲ ಹಿಡಿದಿಟ್ಟುಕೊಳ್ಳಬಲ್ಲದು; red soil land;
  ವ್ಯದೂ: ಕೆಬ್ಬೆನೆಲ(ಭೂಮಿ);
- ***—ಕೆಂಪುನೆಲಗುಂಬಳ*** : ನೆಲ+ಕುಂಬಳ> ನೆಲಗುಂಬಳ(ಕ>ಗ); ಕೆಂಪುಬಣ್ಣದ ಕುಂಬಳಕಾಯಿ, ಸಿಹಿಯಾಗಿಯೂ ಇರುವುದು; red-coloured pumpkin;
- ***—ಕೆಂಪುನೀರು ಚೆಲ್ಲುವುದು*** : ಮಗುವಿಗೆ ಅನಾರೋಗ್ಯವಾದಾಗ ಕೆಂಪುನೀರು ಮಾಡಿ ಅದಕ್ಕೆ ಅನ್ನ, ಕೆಂಡ, ಹೂವು ಹಾಕಿ ಮಗುವಿನ ಮುಖದಿಂದ ನೀವಳಿಸಿ(ದೃಷ್ಟಿ ತೆಗೆದು) ಮೂರು ದಾರಿ ಸೇರುವ ಕಡೆ ಚೆಲ್ಲುವುದು; to shed red water to prevent evileye;
- ***—ಕೆಂಪುನೀರು*** : ವಧುವರರಿಗೆ ದೃಷ್ಟಿ ತೆಗೆಯಲು ಕೆಂಪುನೀರಿನಲ್ಲಿ ದೀಪವಿಟ್ಟು ಆರತಿ ಬೆಳಗಿ ದೃಷ್ಟಿ ತೆಗೆಯುವ ಆಚರಣೆ; *ವ್ಯದೂ:* ರತ್ನೀರು, ಗತ್‌ನೀರು; red water used to remove evileye for bride and bridegroom;
- ***—ಕೆಂಪು ಬಂಗಡಬಳ್ಳಿ*** : ತೇಲಾಡುವ ಸಸ್ಯ, ನೀರಿನ ಮೇಲೆ ಬೆಳೆಯುವುದು; red aquatic creeper;
- ***—ಕೆಂಪುನೆಲ್ಲು*** : ಒಂದು ಬಗೆಯ ಧಾನ್ಯ; ಕೆಂಪುಬತ್ತ; ದೇಸಿತಳಿ, ಅಕ್ಕಿಯೂ ಕೆಂಪುಬಣ್ಣದ್ದು; a kind of native paddy breed;
  ವ್ಯದೂ: ಕೆಂಪು ಮುಂಡಗನಬತ್ತ;
- ***—ಕೆಂಪು ಪಾಟೀಲಿ ಬಳೆ*** : ಕೆಂಪುಬಣ್ಣದ ಗಾಜಿನ ಬಳೆ; red coloured glass bangle;
- ***—ಕೆಂಪುಬಟ್ಟೆ*** : ಅಪಾಯಸೂಚಕ, ಕ್ರಾಂತಿಸೂಚಕವಾಗಿ ಕೆಂಪುಬಟ್ಟೆ ಬಳಕೆ; a red cloth which represents danger as well as revolution;
- ಕೆಮ್ಮಣ್ಣು ಸವರಿದ ಬಟ್ಟೆಯನ್ನು ದನಗಳ ಕಾಲಿಗೆ ಏಟು ಬಿದ್ದಾಗ ಸುತ್ತುವರು; ನೋಡಿ: ಕೆಂಬಟ್ಟೆ;
- ***—ಕೆಂಪುಬಸಳೆ*** : ಕಂದು ಕೆಂಪುಬಣ್ಣದ ಬಳ್ಳಿ; ಸೊಪ್ಪಿನ ಸಸ್ಯ; ಸೊಪ್ಪು ತರಕಾರಿಯಾಗಿ ಆಹಾರದಲ್ಲಿ ಬಳಕೆ; ಬಾಯಿಹುಣ್ಣಿಗೆ ಉತ್ತಮ ಔಷಧ; 'ಬಿ' ಜೀವಸತ್ವ ಇರುವುದು; a red veg creeper which is used to prepare food and medicine for mouth pimple;
- ***—ಕೆಂಪುಬಾಳೆ*** : ಕೆಂಪುಬಣ್ಣದ ಸಿಪ್ಪೆ ಇರುವ ಬಾಳೆ, ಹೆಚ್ಚು ಸಿಹಿ ಇರುತ್ತದೆ; *ವ್ಯದೂ:* ಚಂದ್ರಬಾಳೆ(ದ.ಕ.); ನೇಂದ್ರಬಾಳೆ; a species of banana which has red peel;
- ಮೈಮೇಲೆ ಕೆಂಪು ಗಂದೆ (ಗುಳ್ಳೆ) ಗಳು ಏಳುವುದು; ಚರ್ಮ ಕೆಂಪಾಗಿ ಉರಿ ಕಾಣಿಸುವುದು; ಮೂರ್ತಿಗಳ ಕಣ್ಣಿನ ಕೆಂಪು ಭಾಗವನ್ನು ವಿಷ್ಣು ಎನ್ನುವುದು? (ಪಾಂ.ವ್ಯ.ಪ.ಕೋ); reddish pumple on one's skin;
- ***—ಕೆಂಪುಮಲೆ*** : ಪಶ್ಚಿಮಘಟ್ಟ; ಸೂರ್ಯ ಮುಳುಗುವ ದಿಕ್ಕಿನ ಘಟ್ಟ(ಮಲೆ); ಸಂಜೆ ಸೂರ್ಯನ ಕಿರಣದಿಂದ ಮಲೆ ಕೆಂಪಾದಂತೆ ಕಾಣುವುದು ಇದಕ್ಕೆ ಕಾರಣವಿರಬಹುದು; the Western Ghatt, the Redhill Ghatt due to sun setting;
- ***—ಕೆಂಪುರತ್ನ*** : ಮಾಣಿಕ್ಯ; ರತ್ನಗಳಲ್ಲಿ ಒಂದು; ruby; one among gems;
- ***—ಕೆಂಪುಓಲೆ*** : ಕೆಂಪು ಹರಳಿನ ಓಲೆ; ಮುತ್ತೈದೆ ಭಾಗ್ಯವೆಂಬುದು ಜನಪದ ನಂಬಿಕೆ; red crystallographic earring;
- ***—ಕೆಂಪುಮೀನು*** : ಮೈಬಣ್ಣದಲ್ಲಿ ಕೆಂಪು ಕಾಣುವ ಮೀನು; red coloured fish;

- —***ಕೆಂಪುಹುಲಿಗಿಡ*** : ಒಂದು ಸಸ್ಯಜಾತಿ; a species of plant;
- —***ಕೆಂಪುಹೊಳೆ*** : ಪಶ್ಚಿಮ ಘಟ್ಟಗಳಿಂದ ಹರಿದು ಬರುವ ಹೊಳೆ ಕಾವೇರಿಯನ್ನು ಸೇರುವುದು?; a brooklet of Western Ghatt which joins Kaveri river;
- —***ಕೆಂಪಿರ್ಬುೞ*** : ಕೆಂಪುಇರುವೆ; ಕೆಂಪು+ಇರುವೆ = ಕೆಂಪಿರುವೆ>ಕೆಂಪಿರುಬೆ>ಕೆಂಪಿರ್ಬುೞ; red ants;
- ನಚ್ಚಿರುವೆಗಿಂತ ಸ್ವಲ್ಪ ದಪ್ಪದಾದದ್ದು ಕೆಂಪಿರುವೆ, ಮರಗಳ ಎಲೆಗಳಲ್ಲಿ ಗೂಡು ಕಟ್ಟುವುದು;
- —***ಕೆಂಪು ಅಲಸಂದಿ*** : ಅಲಸಂದೆಯ ಒಂದು ಬಗೆ; ಜವಾರಿತಳಿ; ಜೋಳದ ಜೊತೆಗೆ ಅಕ್ಕಡಿ ಸಾಲಿನ ಬೆಳೆ; ಹೆಚ್ಚಾಗಿ ಹಿಂಗಾರಿನ ಬೆಳೆ; red cow pea;
- —***ಕೆಂಪುಉಳ್ಳಾಗಡ್ಡಿ*** : ಕೆಂಪು ಈರುಳ್ಳಿ; ಮಿಶ್ರತಳಿ ಮಾಡಿ ಬೆಳೆವ ಬೆಳೆ; ಕೆಂಪುಬಣ್ಣದಿಂದ ಗುಣವಾಚಕವಾಗಿ ಬಳಕೆ, ನೀರಾವರಿ ಬೆಳೆ; ಈರುಳ್ಳಿಗೆ ಉತ್ತರಕರ್ನಾಟಕದಲ್ಲಿ ಉಳ್ಳಾಗಡ್ಡಿ(ಗೆಡ್ಡೆ), ನೀರುಳ್ಳಿ ಎಂದು ಕರೆಯುವರು; ಕೃಷಿಕರ ಆನುವಂಶಿಕ ಹೆಸರಾಗಿ ಬಳಕೆ; red onion;
- —***ಕೆಂಪ್‌ಕಬ್ಬು*** : ಕಬ್ಬಿನ ಒಂದು ತಳಿ, ಕೆಂಪು+ಕಬ್ಬು; ಕೆಂಪುಬಣ್ಣದ ಕಬ್ಬು; ಕಾಂಡಗಟ್ಟಿ, ಸಿಪ್ಪೆದಪ್ಪ; ಸಿಹಿಹೆಚ್ಚು; red sugarcane;
  ವ್ಯರೂ: ಪಟಾವಳಿಕಬ್ಬು(ಮಂಡ್ಯ.ಜಿ.);
- —***ಕೆಂಪ್‌ಜಾರಿ*** : ಮೀನಿನ ಒಂದು ಬಗೆ; ಬೆನ್ನ ಮೇಲಿನ ಕವಚ ಕೆಂಪಾಗಿರುವ ಮೀನು; a species of fish;
- —***ಕೆಂಪ್‌ಗೋಟು*** : ಅಡಕೆಯ ಒಂದು ಬಗೆ; ಬಲಿತುದು, ಗಟ್ಟಿಯಾದುದು; a species of eracanut;
- —***ಕೆಂಪಡಿಕೆ*** : ಸಿಪ್ಪೆ ಸುಲಿದು ಬೇಯಿಸಿದ ಅಡಿಕೆ; ಕೆಂಪುಬಣ್ಣ ಕಟ್ಟಿ ಬಿಸಿಲಿನಲ್ಲಿ ಒಣಗಿಸಿ ಸಿದ್ಧಪಡಿಸಿದ್ದು; ತಿನ್ನಲು ಬಳಕೆ; boiled eracanut;
- —***ಕೆಂಪಕಣಗಲ*** : ಕೆಂಪು ಗಣಗಲೆ ಹೂ; ಕೆಂಪು+ಕಣಗಲ=ಕೆಂಪಕಣಗಲ; ಹೂವು ದೇವರ ಪೂಜೆಗೆ, ಮಹಿಳೆಯರು ಮುಡಿಯಲು ನಿಷಿದ್ಧ; ಹೆಣದ ಪೂಜೆಗೆ ಬಳಕೆ; ಔಷಧೀಯ ಸಸ್ಯ; a `Ganagale' species of plant which bears red flowers;
- ದೇವಗಣಗಲೆ(ಹೊಂಬಣ್ಣದ್ದು) ಹೂವನ್ನು ದೇವರ ತಂಬಿಟ್ಟಿನ ಆರತಿಯಲ್ಲಿ, ಮದುವೆಯಲ್ಲಿ, ಸಂಬಂಧಮಾಲೆಯಲ್ಲಿ ಬಳಕೆ; `Devaganagale' flower is used to worship of Gods/Goddess;
  ವ್ಯರೂ: ಕೆಂಪುಕಾಸಿ ಗಣಗಲು, ಗಣೇಶನ ಹೂವು ಸದಾ ಪುಷ್ಪ(chathranthus) ;
- —**ಕೆಂಪಕಟಕ** : ಗಟ್ಟಿಪದರಿನ ಕಲ್ಲು ಇರುವ ನೆಲ; the land having layer of red boulders;
- —***ಕೆಂಪಮೊಸಡಿ*** : ಕೆಂಪುಮುಖ; ಕೆಂಪು+ಮುಸುಡಿ=ಕೆಂಪಮೊಸಡಿ; ಮುಸುಡು> ಮುಸುಡಿ>ಮೊಸಡಿ; ಮುಸುಡಿ ಪದ 'ಮುಖ'ದ ಗ್ರಾಮ್ಯರೂಪ; ಬ್ರಿಟಿಷರಿಗೆ ಕರೆಯುತ್ತಿದ್ದ ಹೆಸರು ಕೂಡ; ಪ್ರಾಣಿಗಳ ಉದ್ದನೆಯ ಮೂತಿಗೂ ಮುಸುಡಿ ಎನ್ನುತ್ತಾರೆ; reddish face;
- —***ಕೆಂಪುಗೋದಿ*** : ಜವಾರಿಗೋದಿ; ಕಾಳು ಕೆಂಪಗಿರುವುದು; ಹುಗ್ಗಿ, ಹೋಳಿಗೆ, ಸಜ್ಜಕ ಮಾಡಲು ಬಳಕೆ; reddish wheat which is used to prepare food;
- —***ಕೆಂಪಹಂಚು*** : ಕೆಂಪುಬಣ್ಣದ ಹೆಂಚು; ಮಂಗಳೂರಿನಲ್ಲಿ ತಯಾರಾಗುವುದರಿಂದ ಮಂಗಳೂರು ಹೆಂಚು ಎಂದೂ, ಕೆಂಪುಬಣ್ಣ ಇರುವುದರಿಂದ ಕೆಂಪಹಂಚು ಎಂದು ಕರೆಯುವುದು ರೂಢಿ; ವಸ್ತುಗಳ ಪ್ರಾದೇಶಿಕತೆ, ಬಣ್ಣಗಳಿಂದ ಗುರುತಿಸುವಿಕೆ. Red tiles which are manufactured in Mangalore.

ಕೆಂಪು ಕಣಗಿನ kempu kaṇagina :

- 'ಕಣಗಿನ' ಪದ ಕಣಗಿಲೆಯನ್ನು ಸೂಚಿಸುತ್ತಿರುವುದರಿಂದ ಆ ಸಂಬಂಧಿಯಾದ ಪದವೇ; ಕೆಂಪುಕಣಗಿಲೆಯನ್ನು ಸೂಚಿಸುತ್ತಿರುವ ಪದ; 'ಚೆಂಗಣಗಿಲೆ' ಎಂದೂ ಇದನ್ನು ಕರೆಯಬಹುದು; ಸಸ್ಯಶಾಸ್ತ್ರೀಯ ಪಾರಿಭಾಷಿಕ ಪದ: Barringtonia acutangula; a species of `Kanagile' flower plant;

- ಇದಕ್ಕೆ ಸೂಚಿತವಾಗಿರುವ ಕಣಗಿಲ ತೋರ, ಹೊಳೆ ಕೌವ ಮರ ಎಂಬೆರಡು ನಮ್ಮಲ್ಲಿ ಪ್ರಚಲಿತವಿದ್ದಂತೆ ಕಾಣುವುದಿಲ್ಲ;
- ತಮಿಳಿನ 'ರದಮಿ' ಮತ್ತು ಮಲೆಯಾಳಂನ ಚರಿಯಸಂಸ್ಕರವಡಿ ರೂಪಗಳು ಎಲ್ಲಿಂದ ಬಂದಿವೆಯೊ ತಿಳಿಯದು; ತೆಲುಗಿನ 'ಕನಪುಚೆಟ್ಟು' ಬೇರೆಯದು, ಇನ್ನೊಂದು 'ಕಣಿಗಿ' ಕನ್ನಡ ಪದವನ್ನು ಹೋಲುತ್ತದೆ; 'Radami' in Tamil `Chariyasamskaravadi' in Maleyalam forms are unknown;
- 'ಕಣಗಿನ'='ಗಣಗಿಲ', ಕಣಗಿಲ್>ಕಣಗಿನ ಆಗಿದೆ; ಆದರೆ 'ಲ'ಕಾರ ಮತ್ತು 'ನ'ಕಾರ ನಡುವೆ ವಿನಿಮಯವಿತ್ತೆ?; 'ಲ'ಕಾರಕ್ಕೆ ಅನುನಾಸಿಕತ್ವ ಆರೋಪವಿರುವುದರಿಂದ, 'ನ'ಕಾರ ಸಂಬಂಧ ಈ ದೃಷ್ಟಿಯಲ್ಲಿ ಆಗಿರಬಹುದೆ?
- 'ಕೆಂಪು' ಪದದಲ್ಲಿ ಕೆಮ್/ಕೆನ್ ಮೂಲ ರೂಪಗಳು; ಕ>ಚ ಸಾಧ್ಯತೆಯಿರುವುದರಿಂದ, ಇವೇ ಚೆನ್/ಚನ್ ಬದಲಾವಣೆಗೂ ಕಾರಣವಿರಬೇಕು;
- ಇದರ ಉಪಯೋಗ: ಚೆಕ್ಕೆ ಮಲಶೋಧನೆಗೆ, ಬೀಜ ಹೊಟ್ಟೆ ನೋವಿಗೆ ಔಷಧಿಯಾಗಬಲ್ಲದು; ಇದರ ಹಸಿ ಎಲೆಗಳನ್ನು ಪಲ್ಯಕ್ಕೆ ಬಳಸಲಾಗುತ್ತದೆ.

(F.H.I.P)

ಕೆಂಪು ಕುಂಟಾಲ ಗಿಡ kempu kuṇṭāla giḍa:
- ವೈದ್ಯಕೀಯ ಉಪಯೋಗವಿರುವ ಸಸ್ಯ; ಒಂದು ಚಿಕ್ಕ ಮರ/ಗಿಡ; a short medicinal tree;
- ಸಸ್ಯಶಾಸ್ತ್ರೀಯ ಪಾರಿಭಾಷಿಕ ಪದ: Eugenia carryophyllæa;
- ತುಳುವಿನಲ್ಲಿ 'ಕುಯಾಲ ಪರ್ಂದ್' ಪದವಿದೆ; ಕನ್ನಡದ 'ಕುಂಟಾಲ' ಪದವನ್ನು ಹೋಲುವುದಾದರೂ, 'ಕೆಂಪು' ಪದ ಇಲ್ಲಿಲ್ಲ; ಇಲ್ಲಿನ 'ಪರ್ಂದ್' ಕನ್ನಡದಲ್ಲಿಲ್ಲ;
- ಬೇರು ಮತ್ತು ಎಲೆ ರಕ್ತ ಶುದ್ಧಿಗೆ; ಎಲೆಯ ಕಷಾಯ ಎದೆಯುರಿ ಮತ್ತು ಗಾಯಗಳಿಗೆ; ಎಲೆ ಹೂ ಕಾಯಿ ವಸಡನ್ನು ಗಟ್ಟಿಗೊಳಿಸುವುದಕ್ಕೆ ಉಪಯೋಗವಾಗುವುದು; it is used to cure wounds, chest pain and to refine blood of human beings;
- ಮಳೆಗಾಲದಲ್ಲಿ ಇದರ ಹಣ್ಣುಗಳನ್ನು ತಿನ್ನಲು ಬಳಕೆ;
- 'ಕುಂಟು ನೇರಳೆ ಹಣ್ಣು' ಎಂಬ ಉಲ್ಲೇಖ ಇದೆ(ತು.ನಿ.).

(F.H.I.P)

ಕೆಂಪುಕೂವೆ Kempukūve:
- ಗೆಣಸು; ಮಲೆನಾಡಿನ ಕೆಸುವಿನ ಗೆಡ್ಡೆಯಂತಹ ಗೆಡ್ಡೆ; ನೀರಿನಲ್ಲಿ ಬೇಯಿಸಿ ತಿನ್ನುವುದು; ಮಕ್ಕಳು ಮತ್ತು ಗರ್ಭಿಣಿಯರಿಗೆ ಉತ್ತಮ ಆಹಾರ; Yam, a sweet potato; it is used to prepare food by boiling it in water;
- ಸೊಂಟನೋವು, ಮುಟ್ಟಿನ ನೋವಿಗೆ ಔಷಧವಾಗಿ ಬಳಕೆ; ದೇಹತೂಕ ಕೂಡ ಹೆಚ್ಚುವುದು;
- ಈ ಗೆಡ್ಡೆಯನ್ನು ಅಕ್ಕಿಯೊಡನೆ ರುಬ್ಬಿ ದೋಸೆ ಮಾಡಬಹುದು; ಬಾಳೆಹೂವಿನ ಗಿಡದ ಹೋಲಿಕೆ; *ವ್ಯರೂ:* ಬಾಳೆಗೆಣಸು(ದ.ಕ).

ಕೆಂಪುಕೆನ್ನೆಯ ಪಿಕಳಾರ: Kempukenneya pikaḷāra :
- ಹಾಡುವ ಹಕ್ಕಿ(pycnonotus jacosu) ; ಕಾಡು, ತೋಟ, ಮನುಷ್ಯರ ವಾಸಸ್ಥಳದಲ್ಲಿ ಇದರ ನೆಲೆ; singing bird which is red in colour; *ವ್ಯರೂ:* ಕೆಂಪುಗಂಟಲು ಪಿಕಳಾರ(pyconotus melanicterus) .

ಕೆಂಪು ಕೊಗ್ದೆ Kempu kogde:
- (Indigofera mysorensis) ನೇರವಾಗಿ ಬೆಳೆಯುವ ಗಿಡ; ದಕ್ಷಿಣ ಕರ್ನಾಟಕದಲ್ಲಿ ಕಂಡುಬರುವುದು. A species of tree which is grown straight.

ಕೆಂಪುಕೋಚಿಯಾ Kempukōciyā :
- ಪೊದೆಯಾಗಿ ಬೆಳೆಯುವ ಸಸ್ಯ, ಬೇಲಿಗಾಗಿ ಬೆಳೆಸುವರು; ಕುಂಡದಲ್ಲೂ ಅಲಂಕಾರಕ್ಕಾಗಿ ಬೆಳೆಸುವರು. A bushy plant which is grown for fencing.

ಕೆಂಪುಚಾಲಿ Kempucāli:
- (Acacia churdra) ಸಣ್ಣಮರ, ನುಣುಪಾದ ರೆಂಬೆಗಳು, ಚಪ್ಪಟೆ ಬೀಜಗಳು. A species of tree.

ಕೆಂಪುಚಿಟುಗು Kempuciṭugu:

- ಹೊಗೆಸೊಪ್ಪಿಗೆ ತಗಲುವ ರೋಗ. A disease which affects tobacco.

ಕೆಂಪುಚಿತ್ರಫಾಲೆ Kempucitraphāle:

- (Euphorbiarosea) ನೆಲದಲ್ಲೇ ಹಬ್ಬುವ ಬಳ್ಳಿ; ಎಲೆಗಳು ಅಭಿಮುಖ ಜೋಡಣೆಯಾಗಿ ಬೆಳೆಯುತ್ತವೆ; ಬಳ್ಳಾರಿ, ವಿಜಯಾಪುರ ಜಿಲ್ಲೆಗಳಲ್ಲಿ ಕಂಡು ಬರುತ್ತವೆ. A species of creeper which grows on floor only; it appears in Ballari, Vijaypura districts.

ಕೆಂಪು ಜಂಬು ನೇರಲು kempu jambu nēralu :

- 'ನೇರಳೆ'ಯಲ್ಲಿ 'ಜಂಬುನೇರಳೆ' ವಿಶೇಷವಾದದ್ದು, ಅದರಲ್ಲಿಯೂ ಕೆಂಪು ಜಂಬು ನೇರಳೆಯನ್ನು ಇದು ವಿಶೇಷೀಕರಿಸುತ್ತದೆ; indea roseapple;
- ಇದರ ಸಸ್ಯಶಾಸ್ತ್ರೀಯ ಪಾರಿಭಾಷಿಕ ಪದ: Eugenia malaccenis;
- ತಮಿಳಿನಲ್ಲಿ 'ಜಂಬು ನಾವಲ್', ಮಲೆಯಾಳಂನಲ್ಲಿ 'ನಾಟ್ಟು ಜಾಂಬಲ್', ತುಳುವಿನಲ್ಲಿ ಜಂಬುನೇರೊಳು;
- 'ನೇರಲ್' ಮೂಲ ಪದವಾಗಿದ್ದು, ಅದರಿಂದ ಆಮೇಲೆ ಉಳಿದೆಲ್ಲ ಪದಗಳು ಬಂದಂತೆ ಕಾಣುತ್ತದೆ; 'ನೇರಳೆ'ಯಲ್ಲಿ 'ಜಂಬು' ಒಂದು ವಿಧ;
- ಸಂಸ್ಕೃತದ 'ಜಂಬು' ಪದವೇ ಉಳಿದೆಲ್ಲ ದ್ರಾವಿಡ ಭಾಷೆಗಳಿಗೆ ಮೂಲವಾಗಿದ್ದಿರಬೇಕು; it has its origin in Sanskrit word Jambu;
- 'ಜಂಬುನೇರಲು' ಅಲ್ಪಸ್ವಲ್ಪ ವ್ಯತ್ಯಾಸದೊಡನೆ ತಮಿಳು, ಮಲೆಯಾಳಂ ಮತ್ತು ತುಳುಗಳಲ್ಲಿ ಕಾಣಿಸಿಕೊಂಡಿರುವುದನ್ನು ನೋಡುತ್ತೇವೆ;
- ಇದರ ಹಣ್ಣು ತಿನ್ನಲು ಉಪಯೋಗ; ಕಿಟ್ಟೆಲ್ ಇದನ್ನು `rose apple' ಎಂದು ಕರೆಯುತ್ತಾರೆ; ಇಲ್ಲಿನ `rose' ಕೆಂಪನ್ನು ಪ್ರತಿನಿಧಿಸುತ್ತದೆ;
- ಸಾಮಾನ್ಯ ನೇರಳೆ ಹಣ್ಣಿಗಿಂತ ಜಂಬುನೇರಳೆ ಹಣ್ಣು ಗಾತ್ರದಲ್ಲಿ ಸ್ವಲ್ಪ ದೊಡ್ಡದಾಗಿರುತ್ತದೆ;
- ಉಚ್ಚಾರಣೆಯಲ್ಲಿ 'ಜಮ್ಮುನೇರಳೆ' (ಜಮ್ಬು>ಜಮ್ಮು) ಕೂಡ ಆಗುತ್ತದೆ.

(F.H.I.P)

ಕೆಂಪು ನೆಲಗುಂಬಳ kempu nelagumbaḷa:

- ಇದು ಕುಂಬಳದ ಒಂದು ವಿಧ ಎಂಬುದು ಸ್ಪಷ್ಟ; ಇದರಂತೆ ಚಿಟ್ಟುಕುಂಬಳ, ಹೆಗ್ಗುಂಬಳಗಳೂ ಇವೆ; A species of pumpkin; there are two other pumpkins-`Chittukumbala', `Heggumbala';
- ನೆಲ+ಕುಂಬಳ=ನೆಲಗುಂಬಳ(ಕ>ಗ); ಇದಕ್ಕೆ 'ಕೆಂಪು' ಸೇರಿಸಿ ಮತ್ತೆ ವಿಶೇಷ ಬಗೆಯೊಂದನ್ನು ದಾಖಲಿಸುತ್ತದೆ;
- ಸಸ್ಯಶಾಸ್ತ್ರೀಯ ಪಾರಿಭಾಷಿಕ ಪದ: Polygonum glabrum;
- ಇದನ್ನು 'ನೀರು ಗಣಗಲು ಗಿಡ' ಎಂದೂ ಕರೆಯಲಾಗುವುದು; it is also called as `Neeru Ganagala Gida' - water Ganagala plant;
- ಇದರ ಗಡ್ಡೆಯಿಂದ ಹಿಟ್ಟು ಮಾಡಿ, ಮೂಲವ್ಯಾಧಿಗೂ, ಕಾಮಾಲೆ ರೋಗಕ್ಕೂ ಬಳಸಲಾಗುವುದೆಂದು ಹೇಳಲಾಗಿದೆ; ಕ್ಷಯರೋಗಕ್ಕೂ ಈ ಗಡ್ಡೆಯ ಉಪಯೋಗವಿದೆ ಎಂದು ಹೇಳಲಾಗಿದೆ. It is used as medicine to cure Tuberculoces(T.B).

(F.H.I.P)

ಕೆಂಪು ಜಂಬುಹುಲ್ಲು Kempu jambuhullu:

- (Cyperus Exaltatus) ಬಹುವಾರ್ಷಿಕ ಸಸ್ಯ; ಬೇರು, ಕಾಂಡವುಳ್ಳದ್ದು. A multi seasoned plant; it has roots and its own trunk.

ಕೆಂಪು ಜೋಲಿಯ ತಿತ್ತಿರಿ Kempu jōliya tittiri :

- (Vanellus indicus) ಉತ್ತುಬಿಟ್ಟ ಬತ್ತದ ಗದ್ದೆ, ಗುಡ್ಡ ಪ್ರದೇಶ, ಕೆರೆಗಳ ದಡದಲ್ಲಿ ಕಾಣುತ್ತವೆ; ಸ್ಥಳಿಯ ಪ್ರಭೇದಗಳಿವೆ. A cultivated paddy field which appears near hillstations, banks of water tanks.

ಕೆಂಪು ಪೊಡಿ Kempu poḍi:

- ಹೆಂಗಸರ ಜನನಾಂಗಕ್ಕೆ ಬರುವ ರೋಗ. A disease which affects Vagina.

ಕೆಂಪುಕಪಾಳ Kempukapāḷa:

- ಒಂದು ಜಾತಿಯ ಪಕ್ಷಿ; ಕೆಂಪಾದ ಕೆನ್ನೆಗಳುಳ್ಳ ಪಕ್ಷಿ ಆಗಿರಬಹುದೆ? a kind of bird;
- ಸಂಸ್ಕೃತದ 'ಕಪೋಲ' ಪದವೇ ಕನ್ನಡದಲ್ಲಿ 'ಕಪಾಲ' ಆಗಿ, ಆಮೇಲೆ ಆಡುಭಾಷೆಯಲ್ಲಿ 'ಕಪಾಳ' ಆಗಿರುವುದು ಸ್ಪಷ್ಟ, ಹೇಗೂ ಲ>ಳ ಆಗುವುದು ಇದ್ದೇ ಇದೆ.

ಕೆಂಪು ಕುಂಬಳದ ಹಸಿ Kempu Kumbaḷada hasi:

- ಕೆಂಪುಕುಂಬಳಕಾಯಿ; ಬೆಲ್ಲ(ಉಪ್ಪು) ಸೇರಿಸಿ ಮಾಡಿದ ಆಹಾರ; ಹವ್ಯಕರ ಅಡುಗೆಯಲ್ಲಿ ಒಂದು ಬಗೆ(ಉ.ಕ.ಜಿ). Red pumpkin which is used to prepare food by Havyaka of Northkannada.

ಕೆಂಪುಗೊರಸು Kempugorasu:

- ಬೇಸಾಯ ಮಾಡಲು ಕಷ್ಟಕರವಾದ ಭೂಮಿ (ಬ.ಜಿ.). A land which is unfit to cultivate.

ಕೆಂಪುಜೋಳ Kempujōḷa:

- ಜೋಳದ ಒಂದು ತಳಿ(ಕೆಂಪು ಬಣ್ಣದ್ದು); ಹಬ್ಬ, ಹರಿದಿನಗಳಲ್ಲಿ ಕಡಬು, ದೋಸೆ ಮಾಡಲು ವಿಶೇಷ ಬಳಕೆ; *ವ್ಯರೂ:* ಕಾಗೆಜೋಳ. Red Javar breed; a corn breed.

ಕೆಂಪುದಾಸವಾಳ Kempudāsavāḷa:

- ಹಲವು ಬಣ್ಣದ ದಾಸವಾಳ ಹೂವುಗಳಿದ್ದು ಕೆಂಪು ಅದರಲ್ಲಿ ಒಂದಾಗಿದೆ. Red hibiscus species.

ಕೆಂಪುನವಣೆ Kempunavaṇe:

- ಧಾನ್ಯಗಳಲ್ಲಿ ಒಂದು; ಆರ್ಕ, ನವಣೆ ಕಾಳುಗಳನ್ನು ರುಬ್ಬಿ ಹಿಟ್ಟು ತಯಾರಿಕೆ;
- ಕೆಂಪು ಕಾಳಿನ ನವಣೆಗೆ ಕೆಂಪುನವಣೆ ಎಂಬ ಹೆಸರು; ಪುಷ್ಟಿಕರ ಆಹಾರವೆಂಬ ಭಾವನೆ.

ಕೆಂಪುಬೂರುಗ Kempubūruga:

- ಸಿಲ್ಕ್ ಹತ್ತಿಗಾಗಿ ಬೆಳೆಸುವ ಮರ; A silk cotton tree;
- ಮರದ ಕಾಂಡದ ಬುಡದಲ್ಲಿ ಊರೆಬೇರುಗಳು; ಕಾಂಡದಲ್ಲಿ ಚಿಕ್ಕ ಚಿಕ್ಕ ಮುಳ್ಳುಗಳು ಇರುವುದು;
- ಹಣ್ಣಿನ ಒಳಭಾಗದ ಸಿಲ್ಕ್ ಕೂದಲೆಳೆಗಳಿಂದ ಹಾಸಿಗೆ, ದಿಂಬು, ಕುಶನ್, ಮೀನಿನಬಲೆ ತಯಾರಿಕೆ; its silkcotton is used to prepare pillows cushions and beds;
- ಕಾಳುಗಳ ಹಿಂಡಿ ದನದ ಆಹಾರ; cattle food;
- ಅತಿಸಾರ, ಆಮಶಂಕೆ, ಮುಟ್ಟಿನ ಸಮಯದ ಹೊಟ್ಟೆನೋವಿಗೆ ಔಷಧವಾಗಿ ಬಳಕೆ; it is used as medicine to cure stomach pain during periods, diarrhoea;
- ಕಾಂಡದ ಪದರು ತೆಗೆದು ಬೆಂಕಿಪೆಟ್ಟಿಗೆ, ಪ್ಯಾಕಿಂಗ್‌ಹಲಿಗೆ, ಪದರುಹಲಿಗೆ ತಯಾರಿಕೆ;
- ಕಾಂಡದ ಅಂಟು ಉಪಯುಕ್ತ. Wax of its trunk is useful.

ಕೆಂಪು ಮಂದಾರ kempu mandāra :

- 'ಕೆಂಪುಮಂದಾರ'ದ ಉಲ್ಲೇಖದಿಂದ, ಬಿಳಿ ಮಂದಾರದ ಅಸ್ತಿತ್ವವನ್ನೂ ಗುರುತಿಸುತ್ತದೆ; a species of tree;
- ಇದೊಂದು ಜಾತಿಯ ಮರ; 'The ornamental tree' (ಕಿಟ್ಟೆಲ್); 'ಕೆಂಪು ಕಂಚಿವಾಳದ ಮರ' ಎಂಬ ಹೆಸರೂ ಇದಕ್ಕಿದೆ; 'ಕಂಚಿವಾಳ'ಕ್ಕೆ 'ಕಂಚವಾಳ' ಮತ್ತು 'ಕಂಚುವಾಳ' ರೂಪಗಳೂ ಸಿಗುತ್ತವೆ;
- ಸಸ್ಯಶಾಸ್ತ್ರೀಯ ಪಾರಿಭಾಷಿಕ ಪದ: Bauhinia variegata;
- ತಮಿಳಿನ 'ಶೆಮ್ಮಂದಾರೈ' ಪದ ಕನ್ನಡದ 'ಕೆಂಪು ಮಂದಾರ'ದ ಸಂವಾದಿ ಪದ; ಹಾಗೆಯೇ ತೆಲುಗಿನ 'ದೇವಕಾಂಚನಮು' ಕನ್ನಡದ 'ಕೆಂಪು ಕಾಂಚಿವಾಳ'ಕ್ಕೆ ಹತ್ತಿರವಿರುವಂತೆ ಕಂಡರೂ, ಹೆಚ್ಚು 'ಸಂಸ್ಕೃತೀಕರಣ' ಹೊಂದಿರುವಂತೆ ಕಾಣುತ್ತದೆ; 'Shemmandarai' of Tamil word is a synonym of 'Kempumandara' in kannada;
- ಇದರ ಔಷಧೀಯ ಉಪಯೋಗ: ಚಕ್ಕೆ ಜ್ವರದಿಂದ ಬಲಹೀನರಾದವರಿಗೆ, ಬೇರಿನ ಕಷಾಯ ಕೊಬ್ಬಿದವರಿಗೆ, ಒಣಗಿದ ಮೊಗ್ಗೆ ಅತಿಸಾರಕ್ಕೂ ಒಳ್ಳೆಯದೆಂದು ಹೇಳಲಾಗಿದೆ. It is a medicinal tree, its bark and roots are useful to cure fever.

(F.H.I.P)

ಕೆಂಪುಮುಂಡಾಸು Kempumuṇḍāsu:

- ಯಕ್ಷಗಾನ ಪಾತ್ರಧಾರಿಯ ಒಂದು ಉಡುಪು; ಕೆಂಪುಬಣ್ಣದ ಬಟ್ಟೆಯನ್ನು ಮುಚ್ಚಿ ಕಟ್ಟುವ ಮುಂಡಾಸು(ಯ.ಪ.ಕೋ). A head gear which is tied to the head of an Yakshagana character in red cloth.

ಕೆಂಪುಮೂತಿಯೋರು Kempumūtiyōru:

- ಇಂಗ್ಲೀಷರು(ವಿದೇಶಿಯರು); ಕೆಂಪು+ಮೂತಿ= ಕೆಂಪುಮೂತಿ, ಮೂತಿ=ಮುಖ; the British foreigners;
- ಬ್ರಿಟಿಷರ ಮೈಬಣ್ಣ ಕೆಂಪಾಗಿದ್ದು, ಮುಖಚರ್ಯೆಯಲ್ಲಿ ಭಾರತೀಯರಿಗಿಂತ ಭಿನ್ನವಾಗಿದ್ದರಿಂದ ಕೆಂಪುಮೂತಿಯೋರು ಎಂಬ ಹೆಸರು ಬಂದಿದೆ.

ಕೆಂಪುಮೂಲಂಗಿ Kempumūlangi:

- 'ಕ್ಯಾರೆಟ್'ಗೆ ಸ್ಥಳೀಯವಾಗಿ ಈ ಹೆಸರು ಇದ್ದಂತಿದೆ; the local name for carrot;
- ಮೂಲಂಗಿಬಣ್ಣ ಬಿಳುಪು(radish white), ಸ್ಥಳೀಯವಾದದ್ದು; ಕ್ಯಾರೆಟು ಹೊರಗಿನಿಂದ ಬಂದದ್ದು, ಬಣ್ಣ ಕೆಂಪಾಗಿದ್ದು, ಮೂಲಂಗಿ ರೂಪ ಇದ್ದುದರಿಂದ ಕೆಂಪುಮೂಲಂಗಿ ಎಂಬ ಅನ್ವರ್ಥ ಹೆಸರು; ಅನ್ಯದೇಶ್ಯ ಪದಗಳಿಗೆ ಸಂವಾದಿ ಪದಬಳಕೆ.

ಕೆಂಪುರೋಗ Kempurōga:

- ಹತ್ತಿಬೆಳೆಗೆ ಬರುವ ರೋಗ; ಪೌಷ್ಟಿಕಾಂಶದ ಕೊರತೆ, ಅತಿವೃಷ್ಟಿಯಿಂದ ಬರುವ ರೋಗ(ಚಿ.ಪ.ಕೋ.). A disease which affects cotton crops due to the shortage of minerals.

ಕೆಂಪುಮುನಿಯ Kempumuniya:

- ಕೆಂಪುರಾಟವಾಳ ಎನ್ನುವರು; a kind of bird;
- Estrilda amandava ಕುರುಚಲುಕಾಡು, ಹುಲ್ಲುಗಾವಲು, ಹೊಲಗದ್ದೆಗಳಲ್ಲಿ ವಾಸಿಸುವ ಪಕ್ಷಿ. It dwels in plains and cultivated fields.

ಕೆಂಪುಮುಳ್ಳು ಕೋಳಿ Kempumuḷḷu Kōḷi:

- Galloperdix Spadicia ಗುಡ್ಡಗಾಡುಗಳಲ್ಲಿ ವಾಸಿಸುವ ಪಕ್ಷಿ. A bird of hillstation.

ಕೆಂಪುರೆಕ್ಕೆ ಬಾನಾಡಿ Kempurekke Bānāḍi:

- (Mirafra erythropterd) ಒಂದು ಜಾತಿ ಪಕ್ಷಿ. A species of bird.

ಕೆಂಪುಸಡಿ Kempusaḍi:

- ಒಂದು ರೋಗ; ಉತ್ತರಕನ್ನಡ ಜಿಲ್ಲೆ ಇದರ ತವರು; ಕೋತಕಣಿಜಡ್ಡು ಎಂಬ ಹೆಸರಿದೆ. A disease; North kannada is its native; it has local name `Kotakanijaddu'.

ಕೆಂಪುಸಾಸಿವೆ Kempusāsive:

Brassica juncea

- ನೇರವಾಗಿ ಬೆಳೆಯುವ ಸಸ್ಯ; ಎಳೆಯದಾದ ಎಲೆ, ಕೊಂಬೆಗಳು ತರಕಾರಿಯಾಗಿ ಬಳಕೆ; red mustard; it is one of spices;
- ಬೀಜದಿಂದ ಎಣ್ಣೆ, ಸಾಂಬಾರ ಪದಾರ್ಥ ತಯಾರಿಕೆ; ಕಾಡಿನ ಬಯಲುಸೀಮೆಯ ಕಾಡಿನ ಕೆಲವೆಡೆ ಬೆಳೆಯುವುದು. Its seeds are used in cooking; its seeds are crushed for getting its oil.

ಕೆಂಪುಸೀಬೆ Kempusībe:

- ಚಂದ್ರಸೀಬೆ ಎನ್ನುವರು; ಮೊಟ್ಟೆ ಆಕಾರದ ಹಣ್ಣು, ಉದ್ದವಾಗಿ, ಹಳದಿ, ಹಸಿರು ಬಣ್ಣದ್ದಾಗಿರುತ್ತದೆ; red guava; it is called as `Chandra Seebe';
- ಮೇಲ್ಮೈ ನುಣ್ಣಗಿದ್ದು ತಿರುಳಿನ ಬಣ್ಣ ಕೆನ್ನೀಲಿ, ಮೃದುವಾಗಿ ಸಿಹಿಯಾಗಿರುತ್ತದೆ.

ಕೆಂಪುಸೆರಗು Kempuseragu:

- ಹೆಂಗಸರ ಮಾಸಿಕ ಋತುಮಾನದ ಕ್ರಿಯೆ; ಅತಿಯಾದಾಗ ರೋಗವಾಗಿಯೂ ಪರಿಣಮಿಸುವುದು; it is a monthly periodic manstral process of women; if it passes too much it becomes a disease;
- ಹೆಣ್ಣು ವಯಸ್ಕಳಾದಾಗ ಪ್ರಾರಂಭವಾಗುವುದು.

ಕೆಂಪುಸೋಮ/ಹಳದಿಸೋಮ Kempusōma/haḷadisōma:

- ಗ್ರಾಮದೇವತೆಯ ಹಬ್ಬಗಳಲ್ಲಿ ಮುಖವಾಡಗಳನ್ನು ಹಾಕಿಕೊಂಡು ಕುಣಿಯುವ ಆಚರಣೆ; the two masks of red and yellow colours which

are wore by persons to dance during village goddess festivity;

- ಮುಖವಾಡದ ಮೂಗಿನ ಹೊಳ್ಳೆಯ ರಂಧ್ರಗಳು ಕಣ್ಣಿಗೆ ಹತ್ತಿರವಿರುತ್ತವೆ; ರಂಧ್ರಗಳ ಮೂಲಕ ವಾದ್ಯದವರನ್ನು, ರಂಗಸ್ಥಳವನ್ನು ನೋಡಿಕೊಂಡು ಲಯಕ್ಕೆ ತಕ್ಕಂತೆ ಕುಣಿಯುವರು;
- ಇವರು ಗ್ರಾಮದೇವತೆಯ ಭಂಟರು;
- ಕೆಂಪುಸೋಮನಿಗೆ ಕುರಿ/ಕೋಳಿ ಬಲಿಕೊಟ್ಟರೆ; ಹಳದಿಸೋಮನಿಗೆ ಮೊಸರನ್ನದ ತಳಿಗೆ, ರಸಾಯನವನ್ನು 'ಎಡೆ' ಹಾಕುವರು;
- ಸೋಮಗಳನ್ನು ಹೊತ್ತು ಕುಣಿಯುವವರು ಬೆತ್ತದ ಕೋಲನ್ನು ಹಿಡಿದುಕೊಂಡು ಕುಣಿದರೆ, ಪೂಜಾರಿಗಳು ಚಾವಟಿಯನ್ನು ಮೈಗೆ ಹೊಡೆದುಕೊಂಡು ಕಗ್ಗದ ಪದ ಹೇಳುವರು;
- ಹತ್ತಿಮರವನ್ನು ಅಮವಾಸ್ಯೆ ದಿನದಂದು ಕಡಿದು ಸೋಮಗಳನ್ನು ತಯಾರಿಸುವರು;
- ಅಮವಾಸ್ಯೆ ದಿನ ಕಡಿದರೆ ಮರ ಬೀಳು ಬರುವುದಿಲ್ಲವೆಂಬ ನಂಬಿಕೆ;
- ಸೋಮಗಳ ತಯಾರಿಕೆಯಲ್ಲಿ 'ರಕ್ತಭೂತಾಳೆ', 'ದೇವಭೂತಾಳೆ'ಯನ್ನು ಸೇರಿಸುವರು; during the manufacturing `Soma' masks Rakta Bhutale and Deva Bhutale are used;
- ಕೆಂಪುಸೋಮನಿಗೆ ರಕ್ತಭೂತಾಳೆಯನ್ನು ಜಾಸ್ತಿ ಹಾಕಿದರೆ, ಹಳದಿಸೋಮನಿಗೆ ಕಡಿಮೆ ಹಾಕುವರು;
- ಕೆಂಪುಸೋಮ ರಾಕ್ಷಸ ರೂಪವಿದ್ದರೆ, ಹಳದಿಸೋಮ ಸೌಮ್ಯರೂಪದ ಶಾಂತಿಧೂತ. Red Soma is resembled demon; yellow Soma is resembled divinity.

ಕೆಂಪುಹರಿಗೆ Kempuharige:

- ಕೆಂಪು+ಹರಿಗೆ=(ಹಲಗೆ);
- ಸೋಮಚಿತ್ರದ ಹಲಗೆ(ಗುರಾಣಿ); ಮಣೇವು ಹಾಕುವ ಸಂದರ್ಭದಲ್ಲಿ ಪೂಜಾರಿ ಹರಿಗೆ, ಖಡ್ಗ ಹಿಡಿದು ಅರ್ಚನೆ ಸಲ್ಲಿಸುವುದು; ಹರಿಗೆಗೆ ಬಲಿ, ಮಣೇವು ಉಂಟು; red plank of wood; it is manufactured from tree of Deva Bhutale;
- ದೇವಭೂತಾಳೆ ಮರದಿಂದ ಮಾಡಿದ್ದು.

ಕೆಂಪುಓಕುಳಿ Kempuōkuḷi:

- ಇದೊಂದು ಸಾಂದರ್ಭಿಕ ಸಾಂಸ್ಕೃತಿಕ ಆಟ; ಓಕುಳಿಯಾಟ; it is a causual cultural game;
- ವಿವಾಹ ಸಂದರ್ಭದ ಆಚರಣೆ; it is a ritual of wedding ceremony;
- ಅರಿಶಿಣ, ಸುಣ್ಣ ಮಿಶ್ರಿತ ನೀರನ್ನು ಹರಿವಾಣದಲ್ಲಿ ತುಂಬಿ ಅದರೊಳಗೆ ಚಿನ್ನದ ಉಂಗುರ ಮುಳುಗಿಸುತ್ತಾರೆ;
- ನವವಧು-ವರರು ಅದನ್ನು ಹುಡುಕಿ ತೆಗೆಯಲು ಪೈಪೋಟಿ ನಡೆಸುವರು.

ಕೆಂಪು ಕೆರೆಂಗ್ Kempu kereŋg :

(Ipomoea batatas)

- ಸಿಹಿಗೆಣಸು, ಗೆಡ್ಡೆಗೆಣಸು; sweet potato;
- ಹಪ್ಪಳ ಮಾಡಲು ಮತ್ತು ಅಡುಗೆಗೆ ಬಳಕೆ; it is used for preparing dishes- Happala;
- ನೀರಿನಲ್ಲಿ ಬೇಯಿಸಿ ಸಿಪ್ಪೆ-ತೆಗೆದು ತಿನ್ನುವ ಸಿಹಿತಿಂಡಿ;
- ದಕ್ಷಿಣ ಅಮೇರಿಕಾ ಅಥವಾ ಆಫ್ರಿಕಾದಿಂದ ಬಂದಿರಬಹುದೆಂಬ ಅಭಿಪ್ರಾಯವಿದೆ;
- ಪೋರ್ಚುಗೀಸರು ಇದನ್ನು ಭಾರತಕ್ಕೆ ಪರಿಚಯಿಸಿರಬಹುದು?. It is introduced by the portugese.

ಕೆಂಪುಕೊಮ್ಮೆ/ಗಣಜಲಿ Kempukomme/ Gaṇajali:

(Zaleya govindia) ;

- ಹೆಚ್ಚು ರಂಬೆಗಳುಳ್ಳ ಸಸ್ಯ. A plant of plenty branches or boughs.

ಕೆಂಪುಚಾಲಿ Kempucāli:

- ಸ್ವಲ್ಪ ಕೆಂಪುಮಿಶ್ರಿತ ಬಿಳಿಯಡಿಕೆ; ಸಿಪ್ಪೆ ಸುಲಿದ ಅಡಿಕೆ; ಬಿಳಿ(ಹಳದಿ) ಬಣ್ಣವೇ ಇದ್ದರೂ ಅದಕ್ಕೆ ಕೆಂಪುಸವರಿ ಬೇಯಿಸುವರು. Red complexioned white eracanut.

ಕೆಂಪುದಬೂರು Kempudabūru:

- (Ventilago denticulata)
- ಐತಾಳ ಬೀಳು, ಕುಬ್ಬಿಲ; ಸಸ್ಯ ಜಾನಪದಕ್ಕೆ ಸಂಬಂಧಿಸಿದ್ದು. A species of plant.

ಕೆಂಪುದಾಳೆ/ಕರಾಯಿ Kempudāḷe/Karāyi:

- ಸಸ್ಯ ವಿಶೇಷ; (Sterculia urens); a species of wild palm tree;
- ದೊಡ್ಡ ಮೈತೊಗಟೆ; ಬಿಳಿ ನುಣುಪು ಕಾಗದದಂತೆ ಸಿಪ್ಪೆ ಎಳೆಯುವಂಥದ್ದು; ಕಾಂಡದಿಂದ ಆಟಿಕೆಗಳ ತಯಾರಿಕೆ; ಒಸರುವ ಕಟೀರಾ? ಅಂಟು ಔಷಧವಾಗಿ ಉಪಯೋಗ;
- ತೊಗಟೆಯಿಂದ ನಾರು, ಹಗ್ಗ ತಯಾರಿಕೆ, ಬೀಜವನ್ನು ಹುರಿದು ತಿನ್ನುವರು; its fibre is used to manufacture ropes; its seeds are used to boil to eat;
- ಕೆಂಪು+ದಾ(ತಾ)ಳೆ; ತ>ದ;
- ತಾಳೆಮರದ ಮತ್ತೊಂದು ಜಾತಿ ಇರಬಹುದೆ?;

  ಪ್ರ: 'ಕೆಂಪುದಾಳೆ ಮರದಿಂದ ಆಟಿಕೆಗಳನ್ನು ಮಾಡುವರು'.

ಕೆಂಪುನೆನೆಅಕ್ಕಿಗಿಡ Kempu neneakkigiḍa:

- ಸಸ್ಯಶಾಸ್ತ್ರೀಯ ಹೆಸರು-ಯುಫೋರ್ಬಿಯ ಹಿರ್ಟ್; a species of plant;
- ಪ್ರಾದೇಶಿಕ ಹೆಸರು-ಅಚ್ಚೆಸೊಪ್ಪು, ತಡ್ಡಿನಗಿಡ, ಹಾಲುಕುಡಿ; the regional names are Hasiru Acche Soppu, Taddina Gida, Haalu Kudi;
- ಸಸ್ಯದ ಹೂವಿನ ಗೊಂಚಲು ಕುಟ್ಟಿದ ಕೆಂಪಕ್ಕಿಯನ್ನು ಹೋಲುವುದು;
- ರೆಂಬೆಗಳು ನೇರವಾಗಿ ಬೆಳೆಯುತ್ತವೆ;
- ಒಂದು ಹೆಣ್ಣು ಹೂವಿನ ಪಕ್ಕ ೨೧ ಗುಂಪು ಗಂಡು ಹೂಗಳಿವೆ;
- ಮೂಲವ್ಯಾಧಿ ರೋಗಿಗಳಿಗೆ ಗಿಡದ ಕಷಾಯಕ್ಕೆ ತುಪ್ಪ, ಸಕ್ಕರೆ ಹಾಕಿ ತಿನ್ನಿಸುವರು; it is used to cure piles disease;
- ಏಪ್ರಿಲ್-ನವೆಂಬರ್‌ನಲ್ಲಿ ಬೆಳೆಯುವುದು;
- ಸಸ್ಯ ಜಾನಪದದಲ್ಲಿ ಗುರುತಿಸಲಾಗುವುದು.

ಕೆಂಪುನೆಲ ನೆಲ್ಲಿ Kempunela nelli:

(Phyllanthus urinaria);

- ನೇರವಾಗಿ ಬೆಳೆಯುವ ಸಸ್ಯ; ಸಣ್ಣ ಮಕ್ಕಳಿಗೆ ನಿದ್ರೆ ಬರಿಸಲು ಮತ್ತು ಉದರ ಊತ, ಮೂತ್ರಜನಕಾಂಗ ತೊಂದರೆಗಳಿಗೆ ಇದರ ಬೇರು ಔಷಧವಾಗಿ ಬಳಕೆ; ಈ ಗಿಡವು ಮೀನಿಗೆ ವಿಷಕಾರಿ; A plant grow independently and used as medicinal plant to cure infant's stomach pain to sleep children;
- ಮರದ ರೂಪದಲ್ಲಿರುವ ನೆಲ್ಲಿಕಾಯಿ ಮರ, ಕೆಂಪುನೆಲನೆಲ್ಲಿ, ನೆಲಮಟ್ಟದಲ್ಲೇ ಇರಬಹುದು?

  ವ್ಯರೂ: ತಾಮ್ರನೆಲ್ಲಿ?.

ಕೆಂಪುಲಕ್ಷ್ಮಿ Kempulakshmi:

- ದೇವಿಗೆ ಹೋಳಿಗೆ, ಸಿಹಿ ಊಟ ಮಾಡಿ ಚೊಕ್ಕಭೋಜನ ಎಡೆ ಇಟ್ಟು ಪೂಜಿಸುವರು; a goddess who is worshipped by offering sweet dishes;
- ಮಹಾಲಕ್ಷ್ಮಿ ಎಂದೂ ಕರೆಯುವರು, ಶಿಷ್ಟ ದೇವತೆಗಳಲ್ಲಿ ಲಕ್ಷ್ಮಿ ಐಶ್ವರ್ಯದ ಅಧಿದೇವತೆ ಎಂಬ ಕಲ್ಪನೆ; she is called as `Mahalakshmi';
- ಮೂರ್ತಿಗೆ ಕೆಂಪುಬಣ್ಣ ಹಚ್ಚಿ 'ಕೆಂಪುಲಕ್ಷ್ಮಿ' ಎಂದು ಕರೆದಿರಬಹುದು?.

ಕೆಂಪು ಹತ್ತಿಸೊಪ್ಪು/ತುತ್ತಿಸೊಪ್ಪು Kempu hattisoppu/Tuttisoppu :

- ಮಕ್ಕಳಿಗೆ ನೆಗಡಿ ಆದರೆ ತಲೆಯ ಮೇಲೆ ಹರಳೆಣ್ಣೆ ಹಾಕಿ ಅದರ ಮೇಲೆ ಈ ಸೊಪ್ಪಿನ ಎಲೆಗಳನ್ನು ಅಂಟಿಸುವರು; a green vegetable; its leaves are used to cure coldache for children
- ಎಲೆಗಳು ಕಫವನ್ನು ಕರಗಿಸುವ ಅಂಶ ಹೊಂದಿದೆ ಎಂಬ ನಂಬಿಕೆ. Its leaves melts the caugh of children.

ಕೆಂಪುಹಿಂಡಿ/ಕೆಂಪಿಂಡಿ Kempuhinḍi/Kempinḍi:

- ಹಣ್ಣಾದ ಕೆಂಪು ಮೆಣಸಿನಕಾಯಿಯಿಂದ ಮಾಡುವ ಚಟ್ನಿ; ಈ ಚಟ್ನಿಪುಡಿಯನ್ನು ಹಲವು ದಿನಗಳವರೆಗೆ ಇಡಬಹುದು; a `chettny' is made up of red chilly;
- ಕೆಂಪು ಮೆಣಸಿನಕಾಯಿಗಳನ್ನು ಎಣ್ಣೆಯಲ್ಲಿ ಹುರಿದುಕೊಳ್ಳುವುದು; ಸ್ವಲ್ಪ ಬೆಲ್ಲ, ಉಪ್ಪು, ಕರಿಬೇವು, ಕೊತ್ತಂಬರಿಸೊಪ್ಪು, ಹುಣಸೆಹಣ್ಣು, ಸುಟ್ಟ ಈರುಳ್ಳಿ, ಬೆಳ್ಳುಳ್ಳಿ ಮೊದಲಾದವನ್ನು ನೀರು ಹಾಕದೆ ಒರಳಿನಲ್ಲಿ ರುಬ್ಬಿಕೊಂಡು ಇದರ ಜೊತೆಗೆ ಎಣ್ಣೆಯಲ್ಲಿ ಹುರಿದ

ಮೆಣಸಿನಕಾಯಿಯನ್ನು ಪುಡಿ ಮಾಡಿಕೊಂಡು ಎಲ್ಲವನ್ನು ಮಿಶ್ರಣ ಮಾಡುವುದು;

- ಇದನ್ನು ರೊಟ್ಟಿ, ಚಪಾತಿ, ಅನ್ನ ತಿನ್ನುವಾಗ ಉಪ್ಪಿನಕಾಯಿಯಂತೆ ಮತ್ತು ಕೆಲವೊಮ್ಮೆ ಕೆಂಪಿಂಡಿಗೆ ಸ್ವಲ್ಪ ಎಣ್ಣೆ ಹಾಕಿ ಪಲ್ಯದ ಹಾಗೆ ಮಾಡಿಕೊಂಡು ರೊಟ್ಟಿಯ ಜೊತೆಗೆ ತಿನ್ನುವುದಿದೆ;
- ಉತ್ತರಕರ್ನಾಟಕದ ಗದಗ, ಹಾವೇರಿ, ಧಾರವಾಡ ಭಾಗಗಳಲ್ಲಿ ವಿಶೇಷವಾಗಿ ಬಳಕೆಯಲ್ಲಿರುವ ಆಹಾರ ಪದಾರ್ಥ; A redchilly; a food product grow in Northkarnataka side; Gadag, Haveri.

ಕೆಂಪೂರಿ ರೋಗ Kempūri rōga:

- ಕಬ್ಬಿನ ಬೆಳೆಗೆ ಬರುವ ರೋಗ; ಕಬ್ಬಿನ ಗರಿಗಳು ಕೆಂಪುಬಣ್ಣಕ್ಕೆ ತಿರುಗುವುದು(ಕೃ.ಪ.ಕೋ). A disease which affects sugarcane crops.

ಕೆಂಪೆ ಮಂಜಳೆ Kempe manjaḷe:

- ಬಣ್ಣದ ಮೇಲೆ ಗುರುತಿಸುವ ಅಂಕದ ಕೋಳಿಯ ಹೆಸರು; a name of a gambling cock which identifies from its colour during cock fighting;
- ಕೋಳಿ ಕಾಳಗದಲ್ಲಿ ಪದಬಳಕೆ(ಕುಕ್ಕಟ ಪಂಚಾಂಗ).

ಕೆಂಪೇಗೌಡ Kempēgowḍa:

- ಯಲಹಂಕ ಪ್ರಭುಗಳಲ್ಲಿ ಮುಖ್ಯನಾದವನು; ೧ನೆಯ ಕೆಂಪೇಗೌಡನೆಂದೇ ಇವನನ್ನು ಗುರುತಿಸಲಾಗಿದೆ; ಆಳ್ವಿಕೆಯ ಕಾಲ ೧೫೧೦–೧೫೭೦;
- ಯಲಹಂಕ ಪ್ರಭುಗಳ ಮನೆದೇವತೆ ಕೆಂಪಮ್ಮ ಎಂದಿರುವುದರಿಂದ, ಈ ವಂಶದ ಅನೇಕ ರಾಜರಿಗೆ ಕೆಂಪೇಗೌಡ ಎಂದೇ ಕರೆಯಲಾಗಿದೆ; ಕೆಲಕಥೆಗಳ ಪ್ರಕಾರ ಮಕ್ಕಳಿಲ್ಲದೆ ಕುಲದೇವತೆ ಕೆಂಪಮ್ಮನ ಬೇಡಿ ಮಕ್ಕಳನ್ನು ಪಡೆದಿದ್ದರಿಂದ 'ಕೆಂಪೇಗೌಡ' ಎಂಬ ಹೆಸರು ಇಟ್ಟಂತೆ ಉಲ್ಲೇಖ; ಆಕೆಯ ಕೃಪೆಯ ನೆನಪಿಗಾಗಿ ಉಳಿದವರಿಗೂ ಈ ಹೆಸರು ಬಂದಿತೆಂದು ಹೇಳುತ್ತಾರೆ; ಅದರಲ್ಲಿ ಮೊದಲ ಕೆಂಪೇಗೌಡನೇ ಬೆಂಗಳೂರಿನ ಸ್ಥಾಪಕ; ಆ ಕಾರಣ ಅವನಿಗೆ 'ಬೆಂಗಳೂರು ಕೆಂಪೇಗೌಡ' ಎಂದು ಹೆಸರು;
- ಬಹಳ ಮುಖ್ಯವಾದ ವಿಚಾರವೆಂದರೆ, ಪ್ರಸ್ತುತ ಕೆಂಪೇಗೌಡ ವಿಜಯನಗರದ ಶ್ರೀಕೃಷ್ಣದೇವರಾಯ ಮತ್ತು ಅಚ್ಯುತರಾಯನ ಸಮಕಾಲೀನ;
- ಕೆಂಪೇಗೌಡನ ಇತಿಹಾಸ ಬಹುತೇಕ ಪುರಾಣ, ಐತಿಹ್ಯ, ದಂತಕಥೆಗಳಲ್ಲಿ ಮುಳುಗಿ ಹೋಗಿದೆ; ಇತಿಹಾಸವನ್ನು ಮೀರಿ ಘಟನೆಗಳಿಗೆ ಕಥಾವರಣ ಬಂದಿದೆ; ಹಾಗಾಗಿ ಈತನ ವಿವರಗಳನ್ನೆ `semi-historical' ಎಂದೇ ಹೇಳಬೇಕು;
- ಕೆಂಪೇಗೌಡನ ಬಗ್ಗೆ ಹಲವಾರು ಜನಪದ ಕಾವ್ಯಗಳು ಪ್ರಕಟವಾಗಿವೆ; ಐತಿಹ್ಯ ಪುರಾಣಕಥೆಗಳಿವೆ; ಅವನ ವಾಸ್ತವ ಚರಿತ್ರೆಯ ಜೊತೆಗೆ 'ಮೌಖಿಕ ಇತಿಹಾಸ' (oral history) ಇದೆ; ಅದು ಜಾನಪದವಲ್ಲದೆ ಬೇರಲ್ಲ;
- ಕೆಂಪೇಗೌಡನಂಥವರು ಸಾಮಂತರೊ ಪಾಳೆಯಗಾರರೊ ಆಗಿರುವುದರಿಂದ ಜನರಿಗೆ ಹತ್ತಿರದವರಾಗಿರುವರು; ಚಕ್ರವರ್ತಿಗಳಿಗೆ ಸಾಧ್ಯವಿಲ್ಲದ ಜನ ಸಂಪರ್ಕ ಕೆಂಪೇಗೌಡನಿಗೆ ಸಾಧ್ಯವಾಗುತ್ತದೆ; ಫಲವಾಗಿ ಅವರು ಜನರ ನಡುವೆ ಪ್ರಚಾರದಲ್ಲಿರುತ್ತಾರೆ; ಅದರಿಂದಾಗಿ ಅವರ ಬಗ್ಗೆ ಜಾನಪದ ಸೃಷ್ಟಿಯಾಗಿರುತ್ತದೆ; ಅವರು 'ಸಾಂಸ್ಕೃತಿಕ ವೀರ' ಅಥವಾ 'ಜನಪದ ವೀರ'ನಾಗಿ ವಿಜೃಂಭಿಸಿರುತ್ತಾರೆ;
- ಬೆಂಗಳೂರಿನ ನಿರ್ಮಾಣ ಕಾರ್ಯವನ್ನು ೧೫೩೭ರಲ್ಲಿ ಆರಂಭಿಸಿದನೆಂದು ತಿಳಿಯಲಾಗಿದೆ; ಎಂಟು ಹೆಬ್ಬಾಗಿಲುಗಳನ್ನು ನಿಲ್ಲಿಸಿದನೆಂದು ಹೇಳಿಕೆ; ಅವುಗಳಲ್ಲಿ ಯಲಹಂಕ, ಅಲ್ಸೂರು, ಆನೇಕಲ್ ಮತ್ತು ಕೆಂಗೇರಿ ಹೆಬ್ಬಾಗಿಲುಗಳು ಮುಖ್ಯವೆಂದು ಅಭಿಪ್ರಾಯ (ಯ.ಪ್ರ.ಒ.ಅ.ಪು.೯);
- ಬೆಂಗಳೂರಿನ ಕೋಟೆಯ ಮಹಾದ್ವಾರ ನಿಲ್ಲದಿದ್ದುದಕ್ಕೆ ಬಲಿಯಾದ ಕಥೆಯೊಂದರ ಉಲ್ಲೇಖ ಜನಶ್ರುತಿಯಲ್ಲಿದೆ; ಹಗಲು ಕಟ್ಟಿದ್ದೆಲ್ಲ ರಾತ್ರಿ ಬಿದ್ದು ಹೋಗುತ್ತಿದ್ದುರಿಂದ, ಬಲಿ ಕೊಡಬೇಕೆಂದು ಜ್ಯೋತಿಷ್ಯ ಹೇಳಿತಂತೆ; ಚಿಂತಾಕ್ರಾಂತನಾದ ಗೌಡನ ವ್ಯಾಕುಲತೆ ಹೋಗಲಾಡಿಸಲು, ಸೊಸೆ ಲಕ್ಷ್ಮಮ್ಮ ಕೋಟೆಯ ಮಹಾದ್ವಾರ ನಿಲ್ಲಲು ಬಲಿಯಾದಳೆಂದು ಕಥೆಯಿದೆ; ಅದಕ್ಕಾಗಿ ಲಕ್ಷ್ಮಮ್ಮನಿಗೆ ಕುಲದೇವತೆಯ ಸ್ಥಾನ ಕೊಡಲು ಅವಳ ಹೆಸರಿನಲ್ಲಿ ದೇವಾಲಯ ಕಟ್ಟಿಸಿದ ಉಲ್ಲೇಖವೂ ಇದೆ;

- ಕೆಂಪೇಗೌಡನನ್ನು ಕುರಿತಂತೆ ಬೆಂಗಳೂರು, ಕೋಲಾರ, ತುಮಕೂರು, ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ಜನಪದ ಸಾಹಿತ್ಯ ದೊಡ್ಡ ಪ್ರಮಾಣದಲ್ಲಿ ಸಿಕ್ಕುತ್ತದೆ; ಇದರಿಂದ ಅವನ ವ್ಯಕ್ತಿತ್ವ ಇತಿಹಾಸವೊಂದು ರೂಪುಗೊಳ್ಳುತ್ತದೆ.

ಕೆಂಬಕ್ಕಿ Kembakki:

- ಕೆಂಪುಹಕ್ಕಿ; ಕೆಂಪು+ಹಕ್ಕಿ>ಕೆಂಪು+ಹ್+ಅಕ್ಕಿ>ಕೆಂಪು+Ø+ಅಕ್ಕಿ>ಕೆಂಪಕ್ಕಿ>ಕೆಂಬಕ್ಕಿ(ಪ>ಬ);
- ಕೆಂಪುಬತ್ತದ ಅಕ್ಕಿ, ಅಕ್ಕಿ ಬಣ್ಣವೂ ಕೆಂಪಾಗಿದ್ದು ಅನ್ವರ್ಥನಾಮವಾಗಿ; ಬತ್ತ ಗಾತ್ರದಲ್ಲಿ ಸಣ್ಣದು; ಬತ್ತಗಳಲ್ಲಿ ಒಂದು ಜಾತಿ 'ಕೆಂಬತ್ತಿಗೆ'; reddish tiny bird; reddish rice breed;
ವ್ಯದೂ: ಕೆಂಬತ್ತಿಗೆ, ಕೆಂಬಕ್ಕಿಬತ್ತ.

ಕೆಂಬಟ್ಟೆ Kembaṭṭe:

- ಕೆಂಪುಬಣ್ಣದ ಬಟ್ಟೆ; ಕೆಂಪುವಸ್ತ್ರ; ಕೆಮ್ಮಣ್ಣು ಸವರಿದ ಬಟ್ಟೆ; red cloth, red soiled cloth;
- ಕೆಂದೂಳು ಮೇಲೆದ್ದ ದಾರಿ;
- ಕೊಡವ ಭಾಷಿಕ ಸಮುದಾಯವೊಂದರ ಹೆಸರು; it is a name of one of the Kodava communities;
- ಕೆಂಪು+ಬಟ್ಟೆ=ಕೆಂಪುಬಟ್ಟೆ>ಕೆಂಬಟ್ಟೆ; ಬಟ್ಟೆ=ದಾರಿ, ಅರಿವೆ;
- ಸಾಂಪ್ರದಾಯಿಕವಾಗಿ ತೊಡುವ ಬಟ್ಟೆ; ದೇವರಮೂರ್ತಿಗೆ ತೊಡಿಸುವ ಬಟ್ಟೆ; ಕೆಲವು ಆಚರಣೆಗಳಲ್ಲಿ ಮನುಷ್ಯರು ತಲೆಗೆ, ನಡುವಿಗೆ ಸುತ್ತುವ ಬಟ್ಟೆ; ಸನ್ಯಾಸಿಗಳು ತೊಡುವ ವಸ್ತ್ರ; it is a traditional dress which has to be wore by idoles;
- ಕೆಮ್ಮಣ್ಣು ಸವರಿದ ತೇವದ ಬಟ್ಟೆಯನ್ನು ದನಕರುಗಳ ಕಾಲಿಗೆ ಪೆಟ್ಟಾದಾಗ ಆ ಭಾಗಕ್ಕೆ ಸುತ್ತುವರು;
  ಪ್ರ: 'ಎತ್ತು ಬಿದ್ದು ಕಾಲ್ಮುರ್ಕಂಡದೆ ಕೆಂಬಟ್ಟೆ ಕಟ್ಟೇಕು';
- ಬೇಸಿಗೆಯಲ್ಲಿ ರಸ್ತೆಯ ಮಣ್ಣು ಕಾಲ್ತುಳಿತಕ್ಕೆ ಕೆಂದೂಳಾಗಿ ಮೇಲೇಳುವ ಪರಿ; ದಾರಿಗೆ(ರಸ್ತೆಗೆ) ಬಟ್ಟೆ ಎಂದೂ ಕರೆಯುವುದು;
  ಪ್ರ: 'ಕೆಂದೂಳೆದ್ದು ಬಟ್ಟೆ-ಬರಿ ಎಲ್ಲಾ ಕೆಂಪಾಗಿವೆ';
- ಐತಿಹ್ಯದ ಪ್ರಕಾರ ಕಾವೇರಮ್ಮ ಅಗಸ್ತ್ಯನ ಕಮಂಡಲದಿಂದ ಹರಿದು ಹೋಗುವಾಗ ಕೊಟ್ಟ ಬಟ್ಟೆ ಎಂಬ ನಂಬಿಕೆ; to a myth river Kaveri flowed from sage Agastyas Kamandala reddish cloth was given to her;
- ಭುಜದ ಮೇಲೆ ಹಾಕಿಕೊಳ್ಳುವ ಕೆಂಪುಬಣ್ಣದ, ಮಧ್ಯೆ ಗೀರುಗಳಿರುವ ಬಟ್ಟೆ; strapped reddish towel on one's shoulder;
- ದೇವಸ್ಥಾನಗಳಲ್ಲಿ ಕಾಣಿಕೆಯಾಗಿ ಕೊಡುವ ಬಟ್ಟೆ; ಪೂಜಾರಿಗಳು ತಲೆ, ನಡುವಿಗೆ ಸುತ್ತಿಕೊಳ್ಳುವ ಬಟ್ಟೆ; an offering cloth to temples;
- ಪನ್ನಂಗಾಲ ದೇವಿಯ ಹಬ್ಬದಲ್ಲಿ ಉತ್ಸವಮೂರ್ತಿ ಅಥವಾ ಬಿಂಬವನ್ನು ಹೊರುವವರು ಕಡ್ಡಾಯವಾಗಿ ಕೆಂಪುವಸ್ತ್ರ ಧರಿಸುವರು; ದೇವರಿಗೆ ಹಾಸುವ ಮತ್ತು ಹೊದಿಸುವ ಬಟ್ಟೆ.
- ***—ಕೆಂಬಟ್ಟೆಹೊಲೆಯರು*** : ಹಾವನೂರ ವರದಿಯಲ್ಲಿ 'ಕೆಂಬಟ್ಟಿ' ಪದದ ಉಲ್ಲೇಖ; ಕೆಂಬಟ್ಟೆ> ಕೆಂಬಟ್ಟಿ(ಎ>ಇ); ಉಚ್ಚಾರಣೆಯಲ್ಲಿ ಉಂಟಾಗುವ ಪ್ರಾದೇಶಿಕ ಭಿನ್ನತೆಯಿಂದ ಇಂತಹ ವ್ಯತ್ಯಯ;
- ಕೊಡಗು ಪ್ರದೇಶದಲ್ಲಿ ವಾಸಿಸುವ ಪರಿಶಿಷ್ಟ ಜನಸಮೂಹ; ತಮ್ಮದೇ ಆದ ಸಾಂಸ್ಕೃತಿಕ ವೈಶಿಷ್ಟ್ಯ ಉಳಿಸಿಕೊಂಡವರು; ಆಹಾರ, ಸಾಂಸ್ಕೃತಿಕ ಆಚರಣೆಗಳಲ್ಲಿ ಕೊಡವರನ್ನೇ ಹೋಲುವರು; an untouchable community who dwell in Kodagu region;
- ಪಟ್ಟೋಲೆ ಪಳಮೆ ಮುಂತಾದ ಕೃತಿಗಳಲ್ಲಿ ಬರುವ ಹಾಡುಗಳಲ್ಲಿ 'ಕೆಂಬಟ್ಟೆ' ಪದ ಬಳಕೆ; the word Kembatte is repeated in the songs of the text `Pattole palame';
- ಈ ಹೆಸರಿನ ಬಗ್ಗೆ ದಂತಕತೆಗಳಿವೆ; ಕಾವೇರಮ್ಮ ಅಗಸ್ತ್ಯನ ಕಮಂಡಲದಿಂದ ಬರುವಾಗ ಕೊಟ್ಟ ಹೆಸರೆಂಬ ಐತಿಹ್ಯ ಉಂಟು;
- ಕೆಂಪುಬತ್ತ ಬೆಳೆಯುವುದರಲ್ಲಿ ವಿಶೇಷ ಪರಿಣಿತಿ ಇದ್ದುದರಿಂದ 'ಕೆಂಬಟ್ಟೆ' ಎಂಬ ಹೆಸರು ಬಂದಿರಬಹುದು;
- ಇವರ ಕುಲದೇವತೆ ಪನ್ನಂಗಾಲಮ್ಮನ ಹಬ್ಬದಲ್ಲಿ ಉತ್ಸವಮೂರ್ತಿ ಅಥವಾ ಬಿಂಬವನ್ನು

ಹೊರುವವರು ಕೆಂಪುಬಟ್ಟೆಯನ್ನು ಕಡ್ಡಾಯವಾಗಿ ಧರಿಸುವುದರಿಂದಲೂ 'ಕೆಂಬಟ್ಟೆ' ಹೆಸರು ಬಂದಿರಬಹುದೆಂಬ ಊಹೆ;

- ದೈಹಿಕವಾಗಿ ಆಕರ್ಷಿತ ಮೈಮಾಟವುಳ್ಳ ಜನ, ಸಾಂಸ್ಕೃತಿಕವಾಗಿ ಶ್ರೀಮಂತರಾದರೂ ಆರ್ಥಿಕವಾಗಿ ಬಡವರೇ; though they are physically attractive and culturally rich, they economically poor;
- ಉತ್ತರಿ ಕೋಲಾಟಕ್ಕೆ ಕೊಂಬು, ಕಹಳೆ, ವಾದ್ಯ ನುಡಿಸುವರು;
- ಕೊಡವರ ಉಡುಗೆ ತೊಡುಗೆಗಳನ್ನೇ ಧರಿಸುವರು; they use the dress of Kodavas;
- ಸಸ್ಯಾಹಾರ ಮತ್ತು ಮಾಂಸಾಹಾರದ ಜೊತೆ ಕಳ್ಳು ಸೇವನೆ ಸಾಮಾನ್ಯ; they use veg and non-veg along with teddy;
- ಆಹಾರಕ್ಕಾಗಿ ಮೀನುಗಾರಿಕೆ, ಕುಕ್ಕೆ, ಚಾಪೆ ಎಣೆಯುವ ಕಸಬು; they fish for their meal; they wave mate and basket;
- ಇವರ ಹುಲ್ಲು ಹೊದಿಸಿದ ಗುಡಿಸಲಿಗೆ 'ಪಳ್ಳಿ' ಎನ್ನುವರು, 'ಹೊಲೆಯರಪಳ್ಳಿ' ಎಂಬುದು ವಾಸಸ್ಥಳಕ್ಕೆ ಇಟ್ಟ ಹೆಸರು; their hamlet's are called as `palli', `Holeyarapalli';
- ಕೃಷಿ ಬದುಕಿಗೆ ಅನುಕೂಲವಾದ ಉಡುಗೆ ತೊಡುಗೆ; Their dress is suitable for their agricultural work;
- ಕೊಡವ ಕನ್ನಡ ಭಾಷೆ ಮಾತನಾಡುವರು; ಗಾದೆ, ಒಗಟು, ಕಥನ ಗೀತೆಗಳಿವೆ (ಕ.ವಿ.ವಿ.ಜಾ.ಕೋ). They speak kannada, Kodava language in their daily lives.

ಕೆಂಬಡೆಕಾಯಿ Kembaḍekāyi:

(Cucurbita maxima) ;

- ಸಿಹಿ ಕುಂಬಳಕಾಯಿ; ಅಡುಗೆಗೆ ತರಕಾರಿಯಾಗಿ ಬಳಕೆ; the sweet pumpkin used in cooking to prepare sauce;
- ಬಲಿತ ಕಾಯಿಯ ಒಳತಿರುಳು ತೆಗೆದು ಹೊರಕವಚವನ್ನು ತಂಬೂರಿ ಮಾಡಲು ಉಪಯೋಗಿಸುವರು;
- *ವ್ಯದೂ:* ಕೆಂಬುಡೆ ಕೆಂಪುಕುಂಬಳ(ತು.ಜಿ).

ಕೆಂಬಡಿ ಕತ್ತಿ Kembaḍi katti:

- ಹಣ್ಣು ಕುಯ್ಯಲು ಬಳಸುವ ಕುಡುಗೋಲು(ಕತ್ತಿ); a sickle which is used to cut fruits;
  ಪ್ರ: 'ಹಲಸುಹಣ್ಣು ಕುಯ್ಬೇಕು ಕೆಂಬಡಿಕತ್ತಿ ತನ್ನಿ';
- ಕೆಂಪು+ಪಿಡಿ+ಕತ್ತಿ>ಕೆಂಪಿಡಿಕತ್ತಿ>ಕೆಂಬಿಡಿ(ಪ>ಬ) ಕತ್ತಿ.

ಕೆಂಬಗಡೆನೆಲ Kembagaḍenela:

- ಕಲ್ಲುಮಿಶ್ರಿತ ಕೆಂಪುಮಣ್ಣು ಇರುವ ಭೂಮಿ; ನುರ್ಜಗಲ್ಲು ನೆಲ; ಜಜ್ಜುನೆಲ; the land having reddish soil;
- *ವ್ಯದೂ:* ಕೆಂಬಗಡ್ಡೆನೆಲ; ಗಡ್ಡೆ>ಗಡೆ ಆಗಿರಬಹುದೆ?.

ಕೆಂಬರ್ಗ/ಕೆಂಬರಗಾ Kembarga/ Kembaragā :

- ಕೆಂಪುಬಣ್ಣದ ಹುಲಿ; ಹೆಬ್ಬುಲಿ; reddish tiger;
- ಸಂಸ್ಕೃತದ 'ವ್ಯಾಘ್ರ' ಪದದಿಂದ ಬಂದಿದೆ; ಬರ್ಕ>ಬರ್ಗ>ಬಗ್ಗ; 'ಕೆಂಪು' ಪದ ಇದಕ್ಕೆ ಸೇರಿಕೊಂಡಿದೆ;
- ಕೆಂಪು ಚುಕ್ಕಿಗಳಿರುವ ಒಂದು ಜಾತಿ ಹುಲಿ; red dotted tiger species;
- ಹುಲಿ ಮಹದೇಶ್ವರನ ವಾಹನವೆಂಬ ನಂಬಿಕೆ; ಮಲೆಮಹದೇಶ್ವರನ ಬಗ್ಗೆ ಜನಪದ ಮಹಾಕಾವ್ಯ ಇದೆ; it is known as the vehicle of Malemahadeshwara; it has reference in the epic of Male Mahadeshwara;
- ಬರಗಗಳಲ್ಲಿ ಎಪ್ಪತ್ತೇಳು ಜಾತಿಗಳನ್ನು ಗುರುತಿಸುವರು; ಕೆಂಬರಗ, ಚುಂಚುಬರಗ, ಪಟ್ಟಬರಗ, ತುಟ್ಟಬರಗ ಮುಂತಾದವು (ಸತ್ಯಗುಣಶಂಕಮ್ಮ).

ಕೆಂಬಲ್ಲು Kemballu:

- ಕೆಂಪುಹಲ್ಲು; ತಾಂಬೂಲ ಅಗಿಯುವವರ ಹಲ್ಲು ಕೆಂಪಾಗಿರುವುದು; ಅನ್ವರ್ಥವಾಗಿ ಬಳಕೆ; reddish tooth due to chewing of betel leaf aracanut and lime;
  ವ್ಯದೂ: ಕೀಚುಹಲ್ಲು(ಮೈ.ಜಿ);
  ಕೆಂಪು+ಹಲ್ಲು=ಕೆಂಪುಹಲ್ಲು>ಕೆಂಪು+ಹ್+ಅಲ್ಲು>
  ಕೆಂಪು+Ø+ಅಲ್ಲು>ಕೆಂಪಲ್ಲು>ಕೆಂಬಲ್ಲು(ಪ>ಬ);

ಕೆಂಬಳ್ಳಿ Kemba!!i:

- 'ಸನ್ಯಾಸಿಗೆಡ್ಡೆ' ಎಂದು ಇದನ್ನು ಕರೆಯುವರು. `Sanyasi gedde' is known as Kemballi.

ಕೆಂಬಾಕು Kembāku:

- ಒಂದು ಬಗೆಯ ಆಯುಧ; ಚಿಕ್ಕಕತ್ತಿ; ಕೆನ್+ಬಾಕು>ಕೆನ್ಬಾಕು>ಕೆಂಬಾಕು; a small weapon like dagger;
  ಪ್ರ: 'ನಮ್ಮ ಶಿವನಿಗೆ ಕತ್ತಿ ಕವಾಟೆ ಕೆಂಬಾಕು'.

ಕೆಂಬಾರ Kembāra:

- ಎಳೆಮಕ್ಕಳಲ್ಲಿ(ಹುಟ್ಟಿದಾಗ) ಕಾಣುವ ಕಾಯಿಲೆ; a disease that affects infants or babies;
- ಉಷ್ಣದ ಕಾರಣದಿಂದ ಮಗುವಿನ ಮೈಮೇಲೆ ಏಳುವ ಕೆಂಪುಗುಳ್ಳೆಗಳು;
- ಕೆಂಪು ಗಂದೆಗಳಿಂದ ಕೂಡಿರುವ ಒಂದು ಚರ್ಮರೋಗ; ನುಚ್ಚಕ್ಕಿ ಗಾತ್ರದಲ್ಲೂ ಕಾಣಿಸುವುದುಂಟು; a kind of skin disease;
- ಬಸುರಿ ಹೆಂಗಸಿಗೂ ಆಗುವ ಗುಳ್ಳೆ; ಬಸುರಿ ಹೆಂಗಸರಿಗೆ ೩,೫,೯ನೇ ತಿಂಗಳಲ್ಲಿ; ಎಲೆ ಅಡಿಕೆ ಜೊತೆ ಉಲುಚಿ ಮರದ ಚಕ್ಕೆಯ ಚಿಕ್ಕ ಚಿಕ್ಕ ಚೂರುಗಳನ್ನು ಜಜ್ಜಿ ತುಪ್ಪ ಬೆರೆಸಿ ತಿನ್ನಿಸುವರು;
- ***—ಕೆಂಪುಛಾಯೆ*** : ಮೋಡದಲ್ಲಿ ಕೆಂಬಾರ ಕಾಣಿಸಿದರೆ ಮಳೆ ಬರುವುದಿಲ್ಲವೆಂಬ ನಂಬಿಕೆ. Red shadow if it is appeared in clouds rain will not come.

ಕೆಂಬಾರುಗಲ್ಲು/ಕೆಂಬಾರೆಗಲ್ಲು Kembārugallu/Kembāregallu:

- ಮಣ್ಣು ಮಿಶ್ರಿತ ಕೆಂಪುಕಲ್ಲು; ಕೆಂಬಾರೆಕಲ್ಲು> ಕೆಂಬಾರುಗಲ್ಲು ಆಗಿದೆ; soil mixed reddish stones;
- ಬಸುರಿ ಹೆಂಗಸರು ಬಯಕೆಗಾಗಿ ಕೆಮ್ಮಣ್ಣು ತಿನ್ನುವ ಕ್ರಿಯೆ ಉಂಟು; pregnant women swallow/chew reddish soil as a part of pregnant desires or wants;
- ಕೆಮ್ಮಣ್ಣಿನ ಜೊತೆ ಇರುವ ಕೆಂಪು ಕಲ್ಲನ್ನು ತಿನ್ನುವರು ಎಂಬ ನಂಬಿಕೆ;
- ಸುಣ್ಣದ ಅಂಶದ ಕೊರತೆ ಇರುವ ಬಸುರಿ ಹೆಂಗಸರು ಗೋಡೆಮಣ್ಣನ್ನು ಕೆರೆದು ತಿನ್ನುವುದೂ ವಾಡಿಕೆ, ಬಿಸಿಲಿಗೆ ಚೆನ್ನಾಗಿ ಕಾದಿರುವ ಗೋಡೆಗೆ ನೀರು ಎರಚಿ ಮಣ್ಣನ್ನು ಕೆರೆದು ತಿನ್ನುವುದು ರೂಢಿ;
- ಇತ್ತೀಚೆಗೆ ವೈದ್ಯರೇ ಖನಿಜಾಂಶದ ಔಷಧ ಕೊಡುವುದರಿಂದ ಇಂತಹ ಬಯಕೆ ಕಡಿಮೆಯಾಗಿರಬಹುದು;

ಕೆಂಬಾರೆ Kembāre:

- ಮಳೆ ಹೆಚ್ಚಾದಾಗ ರಾಗಿ ಬೆಳೆಗೆ ಬರುವ ರೋಗ. A disease which affects millet crops during heavy rain.

ಕೆಂಬೂತ Kembūta:

- ಕಾಗೆಯಾಕಾರದ ಕೆಂಪುಮಿಶ್ರಿತ ಕಪ್ಪುಬಣ್ಣದ ಪಕ್ಷಿ; coppersmith bird;
- ನವಿಲನ್ನ ಅನುಕರಣೆ ಮಾಡುತ್ತದೆ ಎನ್ನುವರು;
- ಸಂಕೋಚ ಸ್ವಭಾವದ ಪಕ್ಷಿ; shy natured bird;
- ಬೆಳಗ್ಗೆದ್ದು ಇದನ್ನು ನೋಡಿದರೆ ಧನಲಾಭವೆಂಬ ಜನಪದ ನಂಬಿಕೆ; there is a myth that if one looks it early in the morning one must get financial profit;
  ಪ್ರ: 'ನವಿಲ್ ನೋಡಿ ಕೆಂಬೂತ ಪುಕ್ಕ ತರ್ಕತ್ತು';
  ಇಂತಹ ಗಾದೆಗಳು ಭಾಷಿಕ ಜಾನಪದದಲ್ಲಿ ಬಹಳ ಪ್ರಸಿದ್ಧವಾದುದು; ನುಡಿಗಟ್ಟಾಗಿ ಕೂಡ ಬಳಕೆಯಾಗಿದೆ.

  ವ್ಯದೂ: ಕೆಂಬಕ್ಕಿ, ಕೆಂಬಗತ, ಕೆಂಗುಬೋತ, ಸಾಬಾರಕಾಗೆ;

- ***—ಕೆಂಬೂತುಚ್ಚೆ ರೋಗ*** : ಕೆಂಬೂತ ಅಡಿಕೆ ಸುಳಿಯಲ್ಲಿ ಉಚ್ಚೆ ಉಯ್ಯುತ್ತದೆ, ಇದರಿಂದ ಸುಳಿಸುಟ್ಟು ಸಸಿ ನಾಶವಾಗುತ್ತದಂತೆ?(ಉ.ಕ.ಜಿ.). the bird Kembutha coppersmith bird passes its urine on eraca nut branch due to this reason the eracanut tree is affected by its disease.

ಕೆಂಬೇರಿ Kembēri:

- ಕೆಂಪುಬಣ್ಣದ ದಪ್ಪತುಟಿಯ ರುಚಿಕರ ಮೀನು. Reddish big lipped tasty fish.

ಕೆಂಬೋರೆ Kembōre:

- ಕೆಂಪು+ಬೋರೆ=ಕೆಂಬೋರೆ; ಬೋರೆ=ದಿಬ್ಬ;

- ಕೆಂಪುಮಣ್ಣಿನ ದಿಬ್ಬಕ್ಕೆ ಈ ಪದ ಬಳಕೆ. Red soiled hillock.

ಕೆಂಬ್ಲು Kemblu:

- ಶ್ವಾಶಕೋಶದ ತೊಂದರೆಯಿಂದ ಉಂಟಾಗುವ ರೋಗ; ವಾತ, ಪಿತ್ತ, ಕಫ ಶರೀರ ಪ್ರಕೃತಿಯಲ್ಲಾಗುವ ತೊಂದರೆಗಳಿಂದ ಬರುವ ಕಾಯಿಲೆ; a disease due to lungs infection;
- ಕೆಮ್ಮು, ಕೆಮ್ಮುಲು, ಕೆಮ್ಮಲು ಎಂದು ಹೇಳುವುದು ಕಷ್ಟ; 'ಕೆಮ್ಮು ರೂಪಕ್ಕೆ ಸೆಮ್ಮು/ಶೆಮ್ಮು, ಚೆರುಮು (ತಮಿಳು) ಸಂವಾದಿ ರೂಪಗಳಿವೆ; ಕನ್ನಡದ 'ಕ' ಕಾರಕ್ಕೆ 'ಸ' ಕಾರ ಮತ್ತು 'ಚ' ಕಾರ ಬರುವುದು ಸಾಮಾನ್ಯ; 'ಕೆಮ್ಮಲು' ರೂಪಕ್ಕೆ ತಮಿಳಿನಲ್ಲಿ 'ಚೆರುಮಲ್' ರೂಪವಿರುವುದರಿಂದ, 'ಕೆಮ್ಮಲು' ರೂಪವೇ ಮೂಲವಿರಬಹುದು; ಹಾಗಿದ್ದಾಗ ಅದು 'ಕೆಮ್ಮು' ಆಗುವುದು, ಆಮೇಲೆ ಕೆಮ್ಲು ಆಗುವುದು ಸಹಜ; 'ಕೆಮ್ಲು'(ಕೆಮ್ಮುಲು) ರೂಪವೇ ಮ>ಬ ಆಗುವುದರ ಮೂಲಕ 'ಕೆಂಬ್ಲು' ಆಗಿರುವುದು ಸ್ಪಷ್ಟ; cough;
- ಮನುಷ್ಯರಿಗೆ ಶೀತ, ಉಷ್ಣ ಎರಡೂ ತೊಂದರೆಗಳಿಂದ ಶ್ವಾಶಕೋಶ ಕೆಟ್ಟು ಕೆಮ್ಮು ಬರುವುದು; Due to excess of heat or cold lungs are infecting then it leads to cough.

ಕೆಂಮಂಣಗುಡ್ಡೆ kemmaṇṇaguḍḍe :

- ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ಮಠದಲ್ಲಿರುವ ಕ್ರಿ.ಶ.೧೭೨೯ಕ್ಕೆ ಸೇರಿದ ತಾಮ್ರಶಾಸನದಲ್ಲಿ 'ಕೆಂಮಂಣಗುಡ್ಡೆ' ಪ್ರದೇಶದ ಉಲ್ಲೇಖ ದೊರೆಯುತ್ತದೆ; a region that referred in a copper inscription of 1729AD found in Shringeri Matt of Chikkamagaluru district;
- ಪ್ರಕೃತಿವಾಚಿ ಸ್ಥಳನಾಮವಿದು;
- ಕೆಂಪು ಬಣ್ಣದ ಮಣ್ಣಿನಿಂದ ಕೂಡಿರುವ ಎತ್ತರವಾದ ಪ್ರದೇಶ ಎಂಬ ಅರ್ಥವನ್ನು ಕೊಡುವುದರಿಂದ ಈ ಸ್ಥಳಕ್ಕೆ 'ಕೆಂಮಂಣಗುಡ್ಡೆ'(=ಕೆಮ್ಮಣ್ಣುಗುಡ್ಡೆ) ಎಂದು ಹೆಸರಾಗಿರಬಹುದು.

(E.C- ೧೧; ಚಿಕ್ಕ.ಜಿ.)

ಕೆಂಯ್ಯಜಿಬ್ಬ Kemyyajibba:

- ಉತ್ತರಕನ್ನಡದ ಕರಾವಳಿಯಲ್ಲಿ ಬತ್ತದ ಗದ್ದೆಯಲ್ಲಿ ಮಳೆಗಾಲದಲ್ಲಿ ಸಿಗುವ ಒಂದು ಬಗೆಯ ಚಿಕ್ಕಮೀನು. A kind of small tiny fish found in paddy fields during rainy season.

ಕೆಕ್ಕ Kekka:

- 'ಕೆಕ್ಕೆ' ಪದ ಇಲ್ಲಿ 'ಕೆಕ್ಕ' ಆಗಿರುವಂತಿದೆ; ಆಡುವ ಭಾಷೆಯಲ್ಲಿ ಇದೆಲ್ಲಾ ಸಹಜವೇ; ಇದಕ್ಕೆ ಕಾರಣವಾಗಿರುವಂಥದು ಉಚ್ಚಾರಣೆ ಸೂತ್ರ; `kekke' is prounced as `kekka';
- ಕೆನ್ನೆ ಎಂಬರ್ಥದಲ್ಲಿ ಪದಬಳಕೆ;
- ತೆಲುಗು ಭಾಷೆಯಲ್ಲಿ ಅನ್ಯರೂಪದಲ್ಲಿ ಪದ ಬಳಕೆಯಾಗಿರುವುದು;
- ಕನ್ನಡದ 'ಕ' ಕಾರ ತೆಲುಗಿನಲ್ಲಿ 'ಚ' ಕಾರ ಆಗುವುದು;
- ಉದಾ: ಚೆಕ್ಕು, ಚೆಂಕೆ ಇತ್ಯಾದಿ;
  ಪ್ರ: 'ಕೆಕ್ಕದ ಮೇಲೆ ಕೊಟ್ರೆ ಹಲ್ಲು ಉದ್ರುತ್ತವೆ';
  ಕೆಲ, ಪಕ್ಕ ಎಂಬ ಮತ್ತೊಂದು ಅರ್ಥವೂ ಇರುವುದು.
- ಕೆನ್ನೆ ಮತ್ತು ಕಿವಿಗೆ ಹೊಂದಿಕೊಂಡಂತಹ ಭಾಗವನ್ನು ಕಪಾಳ/ಕಪಾಲ ಎನ್ನುವುದಿದೆ; ಕೋಪವಾದಾಗ, ಅನುಚಿತ ವರ್ತನೆಯ ವ್ಯಕ್ತಿಗಳಿಗೆ 'ಕಪಾಳಾಮೋಕ್ಷ' ಮಾಡುವುದು ವಾಡಿಕೆ; ಎಚ್ಚರ ತಪ್ಪಿ ಏಟು ಕಿವಿಯ ಭಾಗಕ್ಕೆ ಬಿದ್ದರೆ ಪ್ರಾಣಾಪಾಯವೂ ಇದೆ; it is a place between kenne- `cheek' and ear- `Kivi';
- ಗ್ರಾಮೀಣ ಪ್ರದೇಶದಲ್ಲಿ 'ಕೆಕ್ಕೆ' ಪದಬಳಕೆಯೇ ಹೆಚ್ಚಾಗಿ ಕಂಡುಬಂದಿದೆ;
- ಎರಡು ಕೆನ್ನೆಗಳು ದಪ್ಪಗಿರುವವರನ್ನು ಕೆಕ್ಕಊದಿ/ ಕೆಕ್ಕಊದ(ಕೆಕ್ಕೂದಿ/ಕೆಕ್ಕೂದ) ಎಂಬುದಾಗಿ ರೇಗಿಸುವುದು; ಕೆಕ್ಕಮಾದಿ ಕೆಕ್ಕಮಾದ ಎಂಬುದು ವ್ಯಕ್ತಿನಾಮವಾಗಿ, ಅಡ್ಡ ಹೆಸರಾಗಿ, ಅನ್ವರ್ಥನಾಮವಾಗಿ ಕೆಲವೊಮ್ಮೆ ವ್ಯಂಗ್ಯೋಕ್ತಿಯಾಗಿ ಬಳಕೆ ಉಂಟು;
- ಕೆಕ್ಕ ಊದಿಕೊಳ್ಳವುದು ಒಂದು ರೋಗದ ಸಂಕೇತವೂ ಹೌದು; if `kekka' part of our face swells, it is a symbol of a disease;

- ಅಂತಹವರಿಗೆ ಊದ್ಲಾ, ಬುಕ್ಲ ಹಾಗೆಯೇ ಊದ್ಲಿ, ಬುಕ್ಲಿ ಎನ್ನುವರು; ಪುಲ್ಲಿಂಗದ ಸಂಕೇತ ಊದ್ಲಾ, ಬುಕ್ಲ ಎಂದಾದರೆ, ಸ್ತ್ರೀಲಿಂಗದ ಸಂಕೇತ ಊದ್ಲಿ, ಬುಕ್ಲಿ ಎಂದಾಗಿರುವುದು;
- ದೇಹದಲ್ಲಿ ರಕ್ತ ಕಡಿಮೆಯಾದಾಗ, ಅಕ್ಕಿ, ಮಣ್ಣು, ಕಡ್ಡೆಯನ್ನು ಅತಿಯಾಗಿ ಸೇವಿಸುವವರಿಗೆ ಇಂತಹ ತೊಂದರೆ ಕಾಣಿಸಿಕೊಳ್ಳುವುದಿದೆ;
- ತಂದೆ, ತಾಯಿ, ಗುರುಗಳು ಮಕ್ಕಳ ಕೆಕ್ಕೆಯನ್ನು ಪ್ರೀತಿಯಿಂದಲೂ, ಕೋಪದಿಂದಲೂ ಜಿಗುಟುವುದು ಸಾಮಾನ್ಯ(***ನೋಡಿ:*** ಕೆನ್ನೆ).

ಕೆಕ್ಕರ ಹಣ್ಣು Kekkara haṇṇu:
- 'ಕೆಕ್ಕರಿಕೆ' ರೂಪವೂ ಇದೆ;
- ಪುಟ್ಟದಾಗಿರುವ ಒಂದು ಬಗೆಯ ಹಣ್ಣು; a small fruit;
- 'ಸೌತೆಯ ಒಂದು ಜಾತಿ'(ದ್ರಾ.ಭಾ.ಜ್ಞಾ.ಪ.ಕೋ); a species of cucumber;
  ವ್ಯದೂ: ಕೆಕ್ರಿಹಣ್ಣು(ಕಲ.ಜಿ);
- 'ಕೆಕ್ಕರಬಳ್ಳಿ'ಯನ್ನು ಕಿಟ್ಟೆಲ್ ಉಲ್ಲೇಖಿಸಿದ್ದಾರೆ.

ಕೆಕ್ಕರಿಸು Kekkarisu:
- ಕೆಂಪಾಗು, ಕೆಂಪೇರು, ದ್ವೇಷಿಸು; to look angrily; to hate oneself;
- ಸಿಟ್ಟಿನ ದೃಷ್ಟಿಯಿಂದ ಕಣ್ಣು ಕೆಂಪಾಗುವುದು; eyes become reddish because of one's angriness;
- ಬೇರೆಯವರು ತಪ್ಪು ಮಾಡಿದಾಗ ಕೋಪದಿಂದ ನೋಡುವ ನೋಟ;
- ಮತ್ತೊಬ್ಬರನ್ನು ಬೆದರಿಸಲು ಬಿಡುವ ಕಣ್ಣನೋಟ; ದ್ವೇಷದಿಂದ ನೋಡುವ ನೋಟ;
- ಕೆನ್+ಕರಿಸು=ಕೆಕ್ಕರಿಸು; ಕೆಂಪಾಗುವುದು; 'ಕೆಕ್ಕರ' ಪದ ಕೂಡ ಇದೇ ಅರ್ಥದಲ್ಲಿದೆ; ಆಗ ಕೆಕ್ಕರ+ಇಸು>ಕೆಕ್ಕರಿಸು ಆಗಬಹುದು, ಕೆಕ್ಕರ=ಕೆಂಪು; 'ಕೆಕ್ಕಳ' ಇದೇ ಅರ್ಥದಲ್ಲಿ ಬಳಕೆಯಲ್ಲಿದೆ;
  ಪ್ರ: 'ಅವನು ನನ್ನ ಕೆಕ್ಕರಿಸಿಕೊಂಡು ನೋಡ್ದ'.

ಕೆಕ್ಕುವುದು Kekkuvudu:
- ಕೆಕ್ಕು: ಕೂಗುವುದು, ಕೂಗುವಿಕೆ; ಕಾಡುಕೋಳಿ ಹುಂಜದ ಕೂಗುವಿಕೆಗೆ ಬಳಕೆ; ಕೇಕು=ಕೂಗು; to cry; it is a call of wild fowl;
- ಕೇಕೆ ಹಾಕುವುದು>ಕೇಕುವುದು>ಕೆಕ್ಕುವುದು?;
- ಕೇಗುವುದು>ಕೇಕುವುದು>ಕೆಕ್ಕುವುದು;
- ಹಿಂದೆ ದೀರ್ಘಾಕ್ಷರ ಇದ್ದರೆ ಅದರ ಮುಂದಿನ ಅಕ್ಷರ ಒತ್ತಕ್ಷರ ಇರದು; ಒತ್ತಕ್ಷರ ಇದ್ದಾಗ ಹಿಂದಿನ ಅಕ್ಷರ ಪ್ರಾಸವಾಗುವುದು ಒಂದು ಸಾಮಾನ್ಯ ಲಕ್ಷಣ;
  ಪ್ರ: 'ಕೋಳಿ ಬೆಳಿಗ್ಗೆ ಕೆಕ್ಕುವುದು(ಕೂಗುವುದು)' (ಸಾಂ.ಪ.ಕೋ.).

ಕೆಚ್ಚಲು Keccalu:
- ಹೆಣ್ಣು ಪ್ರಾಣಿಗಳಲ್ಲಿ ಹೊಟ್ಟೆಯ ತಳಭಾಗದ ಹಿಂಭಾಗದಲ್ಲಿರುವ ಹಾಲು ಸಂಗ್ರಹವಾಗುವ ಮೊಲೆತೊಟ್ಟುಗಳಿಂದ ಕೂಡಿದ ಭಾಗ/ಅಂಗ; udder of animals;
- ಹಸು, ಎಮ್ಮೆಯಂತಹ ಇತರೆ ಪ್ರಾಣಿಗಳಿಗೆ ನಾಲ್ಕು ಕೆಲವೊಮ್ಮೆ ಐದು ತೊಟ್ಟುಗಳಿದ್ದರೆ ಆಡು, ಕುರಿಯಂತಹ ಇನ್ನಿತರ ಪ್ರಾಣಿಗಳಿಗೆ ಸಾಮಾನ್ಯವಾಗಿ ಎರಡು ತೊಟ್ಟುಗಳಿದ್ದು ಕೆಲವುಗಳಿಗೆ ಮೂರು, ನಾಲ್ಕು ತೊಟ್ಟುಗಳಿರುವುದು ಅಪರೂಪ; ನಾಯಿ, ಹಂದಿಯಂತಹ ಪ್ರಾಣಿಗಳಿಗೆ ನಾಲ್ಕಕ್ಕಿಂತಲೂ ಅಧಿಕ ಮೊಲೆತೊಟ್ಟುಗಳಿರುವುದು ವಿಶೇಷ; cow or buffalo has four or five nipples of udder;
- ಕೆಚ್ಚಲು ಆಕಳಿನ ವಯಸ್ಸು, ದೇಹ ಪ್ರಕೃತಿಗೆ ಅನುಗುಣವಾಗಿ ಆನುವಂಶಿಕವಾಗಿ ಉದ್ದ, ಗಾತ್ರದಲ್ಲಿ ವ್ಯತ್ಯಾಸವಿರುತ್ತದೆ;
- ಹಸು, ಎಮ್ಮೆಗಳು ಮೊದಲ ಕರು ಹಾಕಿದಾಗ ಕೆಚ್ಚಲು ಗಾತ್ರದಲ್ಲಿ ಸಣ್ಣದಿದ್ದರೂ, ನಂತರದ ಕಾಲದಲ್ಲಿ ದಪ್ಪವಾಗುತ್ತ ಹೋಗುತ್ತದೆ; the udder of cow or buffalo is small during their first calve or foal later it becomes big;
- ಹಸು, ಎಮ್ಮೆಗಳ ಇತರ ಶುದ್ಧತೆಯನ್ನು ಪರೀಕ್ಷಿಸುವ ಹಾಗೆ, ಕೆಚ್ಚಲ ಭಾಗವನ್ನು ಗಮನಿಸುವುದುಂಟು;
- ಕೆಚ್ಚಲ ಗಾತ್ರ ನೋಡಿ ಗರ್ಭಕಟ್ಟಿರುವ (ತೆನೆಯಾಗಿರುವ) ಕಾಲ ನಿರ್ಣಯಿಸುವುದು; ಕರು ಹಾಕಿದಾಗ ಪೂರ್ಣ ಪ್ರಮಾಣದಲ್ಲಿ ಹಾಲು ಸಂಗ್ರಹವಾಗುತ್ತದೆ;
- ಹಾಲು ಕರೆಯುವ ಮೊದಲು ಕರುವನ್ನು ಕೆಚ್ಚಲಿಗೆ ಬಿಡಬೇಕು, ಕರು ಹಾಲು ಕುಡಿಯುವಾಗ

(ಸೊರೆಬಿಟ್ಟು) ಹಾಲು ದ್ರವಿಸಲು ಸಾಧ್ಯವಾಗುತ್ತದೆ; ನಂತರ ಕರುವನ್ನು ಪಕ್ಕಕ್ಕೆ ಕಟ್ಟಿ ಕೆಚ್ಚಲಿನ ಹಾಲನ್ನೆಲ್ಲಾ ಕರೆದುಕೊಳ್ಳುವುದು;

- ಕೆಲವೊಮ್ಮೆ ಕರುವಿಗೆ ಹಾಲು ಕುಡಿಸದೆ ಎಲ್ಲ ಹಾಲನ್ನೂ ಮನುಷ್ಯ ಹಿಂಡಿಕೊಳ್ಳುವ ಸಂದರ್ಭವೂ ಉಂಟು, ಆಗ ಸತ್ತ ಕರುವಿನ ಚರ್ಮಕ್ಕೆ ಹುಲ್ಲು ತುಂಬಿ ಹಸುವಿನ ಮುಂದೆ ನಿಲ್ಲಿಸಿ ಮೋಸ ಮಾಡುವುದು ಮಾನವನ ತಂತ್ರಗಾರಿಕೆ;
- ಕೆಚ್ಚಲಿನಿಂದ ಹಾಲನ್ನು ಹೊರ ತೆಗೆಯದಿದ್ದರೆ ಕೆಚ್ಚಲು ಬಾವು ಆಗುವ ಸಾಧ್ಯತೆ ಉಂಟು; ದೃಷ್ಟಿದೋಷವಾದಾಗ ಹಾಲನ್ನು ಕರೆಯಿಸಿಕೊಳ್ಳುವುದಿಲ್ಲ; ಆಗ ಜುಟ್ಟಿರುವ ತೆಂಗಿನಕಾಯಿನ ಕರಟ, ವೀಳ್ಯದೆಲೆಯನ್ನು ನೀವಳಿಸಿ ಸುಡುವುದು ರೂಢಿ; if we don't milk the udder is swelled;
- ಗರ್ಭ ಕಟ್ಟಿರುವ ಆಕಳಿಗೆ 'ಕೆಚ್ಚಲು ಬಿಟ್ಟಿದೆ' ಎನ್ನುತ್ತಾರೆ; ಇದರರ್ಥ ಈಯುವ ಸಮಯ ಹತ್ತಿರ ಬಂದಿದೆ ಎಂಬುದು; cows pregnancy is measured by its size of udder;
- ದಪ್ಪವಾದ ಕೆಚ್ಚಲಿಗೆ ಬಿಙ್ಗೆಚ್ಚಲ್, ಹೆಗ್ಗೆಚ್ಚಲ್ ಎಂಬ ಹೆಸರುಗಳಿವೆ; big udder is called as Bingecchal or Heggecchal;
- 'ಕೆಚ್ಚಲು' ಪದದ ಮೂಲರೂಪ 'ಕೆಚ್ಚಲ್'; ತಮಿಳಿನಲ್ಲಿ ಚೆರುತ್ತಲ್; ಮಲೆಯಾಳಂನಲ್ಲಿ ಚೆರನ್ನಲ್, ಚೆರುನ್ನಲ್(D.E.D, ದ್ರಾ.ಭಾ.ಜ್ಞಾ.ಪ.ಕೋ) ಪದಗಳಿವೆ; ಈ ಎರಡೂ ಭಾಷೆಗಳ ಆದಿಯ 'ಚ' ಕಾರಕ್ಕೆ ತೆಲುಗಿನ ಪ್ರಭಾವ ಇರಬಹುದು; 'ಕೆಚ್ಚಲ್' ಪದಕ್ಕೆ ಕೆಂಚಲು, ಕೆಂಚೆಲ್(ತುಳು) ಪದಗಳಿವೆ; ಇದಕ್ಕೆ ಕಾರಣ ತಿಳಿಯದು;
- ***—ಕೆಚ್ಚಲ್ಗೆಕುಯ್ಯಬೇಡ*** : ನುಡಿಗಟ್ಟಾಗಿ ಬಳಕೆ; ಅನ್ಯಾಯ ಮಾಡಬೇಡ ಎಂಬುದು ಅರ್ಥ; ದುರಾಸೆಯಿಂದ ಯಾವುದಾದರೂ ವ್ಯವಸ್ಥೆಯನ್ನೇ ಹಾಳು ಮಾಡುವಾಗ ಹೇಳುವ ಪದ; ಯಾವುದು ಒಳ್ಳೆಯದೊ, ಸತ್ಯದಿಂದ ಕೂಡಿರುವುದೊ ಅದು ಉಳಿಯಬೇಕೆಂಬುದು ಜನಪದರ ಕಾತರ; ಅದರ ಅಭಿವ್ಯಕ್ತಿ ಇದು; it is used as idiom; it means `don't do injustice';
- ***—ಕೆಚ್ಚಲುಬಾವು*** : ಕೆಚ್ಚಲುಊತ; ಕೆಚ್ಚಲಿನಿಂದ ಹಾಲು ಹೊರಬರದಿದ್ದರೆ ಕೆಚ್ಚಲು ಊದಿಕೊಳ್ಳುವ ರೀತಿ (ಕಾಯಿಲೆ); ದಿನಕ್ಕೆ ೨–೮ ಸಾರಿ ತಣ್ಣೀರನ್ನು ಎರಚಿ ಊತವನ್ನು ಇಳಿಸುವುದು; udder swelling due to the remaining milk after milking;
- ಹಾಲು ಕರೆಯುಲು ಸಾಧ್ಯವಾದಾಗ 'ಹಸು ಸೊರೆ ಬಿಟ್ಟಿದೆ' ಎನ್ನುತ್ತಾರೆ; ಇದು ಹಸುವಿನ ದೈಹಿಕ ಪ್ರಕಿಯೆಯೂ ಹೌದು, ಹಾಗೆಯೇ ಸಾಂಸ್ಕೃತಿಕ ತಿಳಿವಳಿಕೆಯೂ ಹೌದು;
- **—ಕೆಚ್ಚಚೀಲ** : ಎದೆಕಟ್ಟು, ಕಂಚುಕ(ಕುಪ್ಪಸ);
- ಎದೆ(ಮೊಲೆ) ಮುಚ್ಚಿಕೊಳ್ಳಲು ಕುಪ್ಪಸದೊಳಗೆ ಕಟ್ಟುವ ಬಟ್ಟೆ(ಚೀಲ); a bra type sacks used to wear inside the blouse by women;
- ಹಸು, ಎಮ್ಮೆಗಳು ಕರು ಹಾಕಿದಾಗ ಕೆಚ್ಚಲ ಗಾತ್ರ ದೊಡ್ಡದಾಗುವುದರಿಂದ ಕೆಟ್ಟದೃಷ್ಟಿ ತಾಗದಂತೆ ಕಟ್ಟುವ ಚೀಲ;

  ಪ್ರ: 'ಹಸುವಿನ ಕೆಚ್ಲು ಇಳಿಬಿದ್ದಿದೆ ದೃಷ್ಟಿ ತಾಗದಂತೆ ಕೆಚ್ಲಚೀಲ ಕಟ್ಟು';
- 'ಕೆಚ್ಚಲ್' ಮೂಲರೂಪ, ಅದು 'ಕೆಚ್ಚಲು' ಆಗಿ, ತದನಂತರ ಉಚ್ಚಾರಣಾ ಸೌಲಭ್ಯಕ್ಕಾಗಿ ಕೆಚ್ಲು/ಕೆಚ್ಲ ಆಗಿರುವುದು.

ಕೆಚ್ಚು Keccu:

- ಜಜ್ಜು, ಹೊಡಿ, ಕೆತ್ತು; to split something, daring, to beat;
- ಧೈರ್ಯ, ಪ್ರತಿಷ್ಠೆ, ಗರ್ವ(ಅಹಂಕಾರ), ಚೇಗು; valour, bravery, courage;
- ಕ್ರಿಯಾಪದ, ಗುಣವಾಚಕವಾಗಿ ವಿವಿಧ ಸಂದರ್ಭಗಳಲ್ಲಿ ಭಿನ್ನ ಅರ್ಥದಲ್ಲಿ ಬಳಕೆ;
- ಕೆಚ್ಚು>ಚೆಚ್ಚು; ಇದರಲ್ಲಿ ಕ>ಚ ಆಗಿರುವುದು ಸಾಮಾನ್ಯ ಬದಲಾವಣೆ;
- ಸೌದೆ ಸಿಗಿಯುವುದಕ್ಕೆ, ಏಟು(ಹೊಡೆತ) ಹೊಡೆದಾಗ ಕ್ರಿಯಾ ಪದವಾಗಿ ಬಳಕೆ;

  ಪ್ರ: 'ಆ ಕಳ್ಳನ್ಗೆ ಚೆನ್ನಾಗಿ ಕೆಚ್ಚು';

  'ಸೌದೆಕೊಂಟ ಕೆಚ್ಚುಬುಡು';
- ಮನುಷ್ಯರಲ್ಲಿನ ಧೈರ್ಯ, ಗರ್ವ (ಜಂಭ)ಗಳಿಗೆ ಗುಣವಾಚಕವಾಗಿ ಪ್ರಯೋಗ;

ಪ್ರ: 'ದೊಡ್ಡೋರ್ಗೆ ತಿರೀಕಂಡು ಮಾತಾಡ್ತನಲ್ಲ ಎಷ್ಟಾ ಅವ್‌ನ್ಗೆ ಕೆಚ್ಚು!

'ಬಲು ಕೆಚ್ಚುಗಾರ ಗಂಡು ಅವ್ನು';

- ಮರ ಎಷ್ಟು ಬಲಿತಿದೆ ಎಂಬುದಕ್ಕೆ ಅದರೊಳಗಿನ 'ಚೇಗು' ನೋಡಿ ನಿರ್ಧರಿಸುವುದು';

ಪ್ರ: 'ಮರದ ಕೆಚ್ಚು ನೋಡಿ ಅದು ಎಷ್ಟು ಚೇಗು ಬಂದದೆ ಎಂಬುದು ತಿಳೀತದೆ';

- ***—ಕೆಚ್ಕಂದು(ಡು)*** : ಕಿರುಚಿಕೊಂಡು, ಹೊಡೆದುಕೊಂಡು; it is a posture of self beating;
- ದು:ಖ ತೀವ್ರವಾದಾಗ ತಮಗೆ ತಾವೆ ಗಟ್ಟಿಯಾಗಿ ಕೂಗಿಕೊಂಡು, ಎದೆ ಬಡಿದುಕೊಂಡು ಬರುವ ಆಂಗಿಕಾಭಿನಯದ ಸ್ಥಿತಿ; it is denoting a person's helplessness by crying beating themselves;
- ಗ್ರಾಮೀಣರಲ್ಲಿ ಕೆಚ್ಚು, ಕೆಚ್ಕೊಂಡು ಪದಕ್ಕೆ ಚೆಚ್ಚು, ಚೆಚ್ಕೊಂಡು ರೂಪವೇ ಹೆಚ್ಚಾಗಿ ಬಳಕೆ; 'ಕೆಚ್ಕೊಂಡು' ಪದದ ಉಚ್ಚಾರಣಾ ರೂಪ 'ಚೆಚ್ಕೊಂಡು' ಆಗಿರುವುದು ಸ್ಪಷ್ಟ(ಕ>ಚ);
- 'ಮಗನ ದಾರುಣ ಸ್ಥಿತಿಯನ್ನು ಕಂಡ ತಾಯಿ ಚೆಚ್ಕೊಂಡ್ ಬಡ್ಕೊಂಡ್ ಅಳ್ತಿದ್ದ' ಎಂಬ ಹೇಳಿಕೆ ತಾಯಿಗಿರುವ ಕರುಳಬಳ್ಳಿಯ ಮೇಲಿನ ಮಮಕಾರ ಮತ್ತು ಹೃದಯ ವೇದನೆಯನ್ನು, ಕಡು ದುಃಖದ ಸನ್ನಿವೇಶವನ್ನು ಧ್ವನಿಸುತ್ತದೆ;

ಪ್ರ: 'ಮಗ ಸತ್ತ ಸುದ್ದಿ ಕೇಳಿ ಎದೆ ಕೆಚ್ಕಂದು ಬಂದ';

- ತಪ್ಪು ಮಾಡಿದವರಿಗೆ ಏಟು ಹೊಡೆದುಕೊಂಡು ಬರುವುದು;

ಪ್ರ: 'ಪೊಲೀಸಿನವರು ಕಳ್ಳನಿಗೆ ಚೆನ್ನಾಗಿ ಕೆಚ್ಕಂದು ಬಂದ್ರು';

- ***—ಕೆಚ್ಚಾಟ*** : ಹೊಡೆದಾಟ, ಜಗಳ; a quarrelling, to beat eachother;

ಪ್ರ: 'ಅವ್ರೆಲ್ಲಾ ಕೆಚ್ಚಾಟದಲ್ಲೇ ಸತ್ರು';

- ***—ಕೆಚ್ಚೆದೆ*** : ಧೈರ್ಯ, ಸಾಹಸ; courage, bravery, valour; ಕೆಚ್ಚುಳ್ಳ+ಎದೆ=ಕೆಚ್ಚೆದೆ;

ಪ್ರ: 'ಹಾವು ಹಿಡಿಬೇಕಾದ್ರು ಕೆಚ್ಚೆದೆ ಬೇಕು';

- ***—ಕೆಚ್ಚುಗಟ್ಟು*** : ದೃಢಗೊಳ್ಳುವಿಕೆ; confirming;

ಪ್ರ: 'ಆ ಕೆಲ್ಸಕ್ಕೆ ಕೈಹಾಕೂಕೆ ಮೊದ್ಲು ಕೆಚ್ಚುಗಟ್ಟು';

- ***—ಕೆಚ್ಚೋಳಡಿಕೆ*** : ಕೆಚ್ಚಿದ ಓಳು ಅಡಿಕೆ; ಸಿಪ್ಪೆ ಸುಲಿದ ಉಂಡೆ ಅಡಿಕೆಯನ್ನು ಓಳುಮಾಡಿ ಬೇಯಿಸಿ ಬಳಕೆ ಮಾಡುವುದು; Arecanut which is round peeled, boiled and splitted;

ಪ್ರ: 'ಕೆಚ್ಚೋಳಡಿಕೆಯನ್ನ ನೀರಲ್ಲಿ ಬಣ್ಣಕಟ್ಟಿ ಬೇಯಿಸಬೇಕು';

- ಕೆಚ್ಚಿದ+ಓಳು+ಅಡಿಕೆ>ಕೆಚ್ಚೋಳಡಿಕೆ;

ತ: ಚೆರುಕ್ಕು/ಕಿಳಿಕ್ಕು;

ಮ: ಚೆಳುಕೆ, ಕಿಳುಕೆ; ಕಿರುಕ್ಕ;

ತು: ಕೆರ್ಜೆ (D.E.D. ದ್ರಾ.ಭಾ.ಜ್ಞಾ.ಪ.ಕೋ.);

- 'ಕೆಚ್ಚು' ಪದ ಸಾಮಾನ್ಯ ಬಳಕೆಯ ಸಂದರ್ಭಗಳಲ್ಲೂ ವಿವಿಧ ಅರ್ಥಗಳಲ್ಲಿ ಉಳಿದುಕೊಂಡಿದೆ; ಬಹಳ ಕಾಲದಿಂದಲೂ ಇದರ ಬಳಕೆ ಇತ್ತು ಎನ್ನುವುದಕ್ಕೆ 'ಕೆರ್ಚು' ಎಂಬ ಹಳಗನ್ನಡ ರೂಪವೇ ಉದಾಹರಣೆ; ಇದೇ ಕ್ರಮೇಣ (ಕೆರ್ಚು>ಕೆಚ್ಚು) ವಿಜಾತೀಯ ದ್ವಿತ್ವದಿಂದ ಸಜಾತೀಯ ದ್ವಿತ್ವವಾಗಿ ಮಾರ್ಪಟ್ಟಿದೆ;

ಕೆಟ್ಟ/ಕೆಟ್ಟು Keṭṭa/Keṭṭu:

- ಕೆಟ್ಟ=ಕೆಡು; ಹಾಳಾದ; ನಾಶವಾದ; ಅಡ್ಡದಾರಿ ಹಿಡಿದ; ಒಳ್ಳೆಯದಲ್ಲದ; ಅನಿಷ್ಟಕಾರಕ; ಅಶುದ್ಧ, ಅಶುಭವಾದದ್ದು; ಕೆಡುಕಿನಿಂದ ಕೂಡಿರುವಂಥದು; the word denotes badness, being destroyed, impured bad omen;
- ಕೆಡುಕನ್ನು ಸೂಚಿಸುವ ಎಲ್ಲ ಪದಗಳಿಗೆ ಪೂರ್ವ ಪದವಾಗಿ ಬಳಕೆ;
- ಕೆಟ್ಟ ವ್ಯಕ್ತಿ ಎಂಬುದೊಂದು ನುಡಿಗಟ್ಟು; ಮೋಸ, ವಂಚನೆ, ನಂಬಿಕೆದ್ರೋಹ, ದಗಲಬಾಜಿತನದಿಂದ ಕೂಡಿದ ಮನುಷ್ಯರಿಗೆ ಹೇಳುವಂಥದು; ಈ ಪದದ ಅರ್ಥ ವಿಸ್ತಾರವಾದ ರೂಪವನ್ನು ಹೊಂದಿದೆ; 'Bad person' is an idiom; it refers to a person who cheats someone;
- 'ಒಳ್ಳೆಯ' ಎಂಬ ರೂಪದ ವಿರುದ್ಧಾರ್ಥಕ ಪದ 'ಕೆಟ್ಟ';
- ಕೆಟ್ಟಜಾಗ, ಕೆಟ್ಟವಾಸನೆ, ಕೆಟ್ಟಹೆಸರು, ಕೆಟ್ಟಸನ್ನಿವೇಶ, ಕೆಟ್ಟಆಲೋಚನೆ, ಕೆಟ್ಟನಡೆ, ನುಡಿ, ಗುಣ, ಸ್ವಭಾವ ಮೊದಲಾದ ಸಂವಾದಿ ರೂಪಗಳ ಬಳಕೆ ಉಂಟು; Bad place, bad smell, bad name, bad situation are the words used to show something bad;

- ಒಬ್ಬ ವ್ಯಕ್ತಿ, ಒಂದು ಸ್ಥಳ, ಮಾಡುವ ಕೆಲಸ-ಕಾರ್ಯಗಳು, ಅಡುಗೆ, ತಿಂಡಿ-ತಿನಿಸುಗಳು ಹದಗೆಟ್ಟ, ಹಾಳಾದ ಸಂದರ್ಭಕ್ಕೆ;
- ಸಮಾಜದಿಂದ ಸ್ವೀಕಾರಾರ್ಹವಲ್ಲದ್ದು; ಅನರ್ಹತೆಯಿಂದ ಕೂಡಿರುವಂಥದು; it is not acceptable from society;
- ಕನಸಿನಲ್ಲೂ ಒಳ್ಳೆಯ, ಕೆಟ್ಟ ಎಂಬ ಪರಿಕಲ್ಪನೆ ಇದೆ;
- ಮನುಷ್ಯ ಬದುಕಿನ ಅಶುಭ, ಅನಿಷ್ಟಕಾರಕ ಸಂದರ್ಭ, ಸನ್ನಿವೇಶಗಳಿಗೆ ಕೆಟ್ಟ ರೂಪದ ಬಳಕೆ;
- ಕೆಟ್ಟದ್ದನ್ನು ಕಂಡರೆ ತಿರುಗಿ ಬೀಳುವ ಸ್ವಭಾವ ಅವನದ್ದು ಎಂಬ ಮಾತು ವ್ಯಕ್ತಿಯ ವ್ಯಕ್ತಿತ್ವಕ್ಕೆ ಸಂಬಂಧಿಸಿದ್ದು;
- 'ಕೆಟ್ಟಕಣ್ಣು' ಎಂಬುದೊಂದು ದೃಷ್ಟಿದೋಷದಿಂದ ಕೂಡಿರುವಂಥದು; bad eye means evil eye; *ಪ್ರ: 'ಸಹವಾಸ ದೋಷದಿಂದ ಸನ್ಯಾಸಿಯೂ ಕೆಟ್ಟುಹೋದ';* ಕೆಟ್ಟ ಮುಂಡೆ ಕುಲ ಸೇರಳು; ಕೆಟ್ಟಡುಗೆ ಅಟ್ಟೋಳೆ ಜಾಣೆ;
- 'ಕೆಟ್ಟು ಪಟ್ಣ ಸೇರ್ದ' ಎಂಬುದು ಗಾದೆಮಾತಾದರೂ ನುಡಿಗಟ್ಟಾಗಿಯೂ ಬಳಕೆ ಉಂಟು;
- ***—ಕೆಟ್ಟು ಕೆರ ಹಿಡ್ದ* :** ನುಡಿಗಟ್ಟಿನ ರೂಪ; ಅಡ್ಡದಾರಿ ಹಿಡಿದ; ಹಾಳಾದ; ಸಂಸ್ಕೃತಿ ಹೀನ; ಅನಾಗರಿಕ ವ್ಯಕ್ತಿತ್ವದಿಂದ ಕೂಡಿದವ; ವ್ಯಕ್ತಿಯ ಅಧಃಪತನದ ಸೂಚಕ; `Kettu kera Hiddha' is an idiom that shows a person who is being an immoral, uncivilized and a man of shortcuts;
- ಒಳ್ಳೆಯ ಗುಣ, ನಡೆ, ನುಡಿ, ವ್ಯಕ್ತಿತ್ವಕ್ಕೆ ವಿರುದ್ಧವಾಗಿರುವುದು; it is opposite to good conduct, good manners and behaviours of a personality;
- ಕೆಟ್ಟು=ಹಾಳಾದ; ಕೆರ=ಪಾದರಕ್ಷೆ, ಚಪ್ಪಲಿ, ಯಕ್ಕಡ; ವ್ಯಕ್ತಿಯಗುಣ, ಸ್ವಭಾವವನ್ನು ಚಪ್ಪಲಿಗೆ ಹೋಲಿಸಿರುವಂಥದು; ಮನುಷ್ಯ ತನ್ನ ಬದುಕಿನಲ್ಲಿ ಚಪ್ಪಲಿಗೆ ನೀಡಿರುವ ಸ್ಥಾನವನ್ನು ದುರ್ವರ್ತನೆಯಿಂದ ಕೂಡಿರುವ ವ್ಯಕ್ತಿಗಳಿಗೆ ನೀಡಿರುವುದು;
- 'ನಿನ್ಮಗ ಕೆಟ್ಟು ಕೆರ ಹಿಡ್ದು ಆರ್ತಿಂಗ್ಳಾಯ್ತು ಕನ ಬುಡಯ್ಯ, ಎಂಬುದು ರೂಢಿಮಾತು ಹೌದು, ವ್ಯಂಗ್ಯೋಕ್ತಿಯೂ ಹೌದು.
- ***—ಕೆಟ್ಟಕಣ್ಣು/ಕೆಟ್ಗಣ್ಣು*** : ಕೆಟ್ಟ+ಕಣ್ಣು>ಕೆಟ್ಟಕಣ್ಣು>ಕೆಟ್‌ಕಣ್ಣು>ಕೆಟ್ಕಣ್ಣು>ಕೆಟ್ಗಣ್ಣು(ಕ>ಗ);
- ಕೆಟ್ಟಕಣ್ಣಿಗೆ ಇಂಗ್ಲಿಷಿನಲ್ಲಿ 'Evil eye' ಎಂದು ಕರೆಯಲಾಗುತ್ತದೆ;
- ಕೆಟ್ಟಕಣ್ಣಿನ ಕೇಡಿನ ಬಗ್ಗೆ ಲೋಕ ವಿಖ್ಯಾತವಾದ ಒಂದು ನಂಬಿಕೆಯಿದೆ; ವ್ಯಕ್ತಿಗಳಲ್ಲಿರುವ ಸ್ವಾರ್ಥ, ದ್ವೇಷಾಸೂಯೆಗಳೇ ಕಾರಣ; ಕೆಟ್ಟ ಕಣ್ಣುಳ್ಳವರು ನೋಡಿದರೆ ದೃಷ್ಟಿ ತಾಗಿ ಕೇಡಾಗುತ್ತದೆಂಬುದೇ ಇದು; there is a belief that a person who has revenge, selfish, hatred values- such person's have evil eye whose eye sight destroys good values;
- ಎಷ್ಟೋ ಸಾರಿ ಇದು ಸತ್ಯವಾಗಿರಲೂಬಹುದು, ಇಲ್ಲದಿರಲೂಬಹುದು;
- ವಿಕಾರಾಂಗಿಗಳಲ್ಲಿಯೂ, ಸೌಂದರ್ಯ, ಶಕ್ತಿಯುಳ್ಳವರಲ್ಲೂ, ಗಂಡಸರಿಗಿಂತ ಹೆಂಗಸರಲ್ಲಿ ಕೆಟ್ಟ ಕಣ್ಣಿನ ಶಕ್ತಿಯಿರುತ್ತದೆಂದೂ ಭಾವನೆ;
- ನಾಯಿ, ನರಿ, ಕಾಗೆಗಳಂತಹ ಪ್ರಾಣಿಗಳಲ್ಲೂ ಕೆಟ್ಟಕಣ್ಣಿದೆಯಂತೆ; there is a belief that dog, fox and crow have evil eye;
- ಕೆಟ್ಟಕಣ್ಣಿನವರು ತಮ್ಮ ದೃಷ್ಟಿಯನ್ನು ಮನುಷ್ಯರ, ಪ್ರಾಣಿಗಳ, ಸಸ್ಯಗಳ ಮೇಲೂ ಬೀರಬಲ್ಲರೆಂಬುದು, ನಂಬಿಕೆ;
- ಮಾತು, ಸ್ಪರ್ಶ, ಮನಸ್ಸಿನ ಮೂಲಕವೂ ಆಗುತ್ತದೆಂದೂ, ನಾಲಗೆಯಲ್ಲಿ ಮತ್ತಿ(ಮತ್ನಾಲ್ಗೆ) ಉಳ್ಳವರು ಆಡಿದ್ದು ಸತ್ಯವಾಗುವುದೆಂದೂ ಹೇಳಿಕೆ;
- ಕೆಟ್ಟಕಣ್ಣಿನ ಕಲ್ಪನೆ, ನಂಬಿಕೆ, ಸಂಪ್ರದಾಯ ಮತ್ತು ಆಚರಣೆಗಳಲ್ಲಿ ಬಲವಾಗಿ ಬೇರು ಬಿಟ್ಟಿದೆ;
- ಬೇರೆಬೇರೆ ರಾಷ್ಟ್ರಗಳ ಪುರಾಣಗಳಲ್ಲಿ ಕೆಟ್ಟಕಣ್ಣಿನ ಪ್ರಭಾವದ ಬಗ್ಗೆ ಮಾಹಿತಿಗಳಿವೆ; ಭಾರತೀಯರಲ್ಲಿ ಮುಕ್ಕಣ್ಣ ಮನ್ಮಥನನ್ನು ಸುಟ್ಟದ್ದು, ಋಷಿ, ಮುನಿಗಳು ತಪೋಭಂಗ ಮಾಡಿದವರನ್ನು ನಾಶಮಾಡಿದ್ದು, ಮಾರಿಮಸಣಿಯರೂ ಕೇಡು ಮಾಡಿದ್ದು ಉದಾಹರಣೆಗಳು;

- ಈಜಿಪ್ಟ್, ಗ್ರೀಕ್ ಪುರಾಣಗಳಲ್ಲೂ ಕೆಟ್ಟಕಣ್ಣಿನ ಪ್ರಸ್ತಾಪ, ಗ್ರೀಕ್‌ನ ಗಾರ್ಗನ್ ಮೆಡೂಸಾ ಕಣ್ಣನೋಟದಿಂದ ಜನರನ್ನು ಕಲ್ಲು ಮಾಡಿದ ಕಥೆ, ಗ್ರೀಕ್‌ನ ಜುನೋ ಎಂಬ ಕೆಟ್ಟಕಣ್ಣಿನ ದೇವತೆಯ ಎಲ್ಲೆಯು; there is a reference of evil eye in the myths of Egypt and Greeks;
- ಕೆಟ್ಟಕಣ್ಣಿನ ಕೇಡಿಗೆ ಕೂಡಲೇ ಉಗುಳುವುದು ಸಾಮಾನ್ಯ ಪರಿಹಾರವಾಗಿತ್ತು; spitting is the only remedy to prevent the effect of evil eye;
- ಆಫ್ರಿಕಾದ ಹಾಟನ್ ಟಾಡ್‌ಜನ ದೃಷ್ಟಿಯಾಗದಿರಲೆಂದು ವಧೂ-ವರರಿಬ್ಬರಿಗೂ ಹಳೇಬಟ್ಟೆ ತೊಡಿಸುತ್ತಿದ್ದರಂತೆ, ಮೊರಾಕೋ ದೇಶದಲ್ಲಿ ಕೆಟ್ಟಕಣ್ಣಿನ ವ್ಯಕ್ತಿ ಸಮಾರಂಭದಲ್ಲಿ ಭಾಗಿಯಾಗಿದ್ದರೆ ಅಲ್ಲಾಗುವ ಕೇಡಿನ ನಷ್ಟವನ್ನೆಲ್ಲಾ ಅವನೇ ಕಟ್ಟಿಕೊಡಬೇಕೆಂಬುದು ನಿಯಮವಾಗಿತ್ತು; Hotton Dodge tribles of Africa prefer to wear old clothes to bride and bridegroom during their wedding to avoid evil eye;
- ಸುಂದರ ಸನ್ನಿವೇಶಗಳು ಕೆಟ್ಟಕಣ್ಣಿನವನ ಭಾವನೆಗಳನ್ನು(ಸ್ವಾರ್ಥ, ಮತ್ಸರ, ಕೋಪ) ಕೆರಳಿಸಿದಾಗ ಕೇಡಾಗುವುದೆಂಬುದು ನಂತರದ ಪರಿಣಾಮಗಳಿಂದ ಮನವರಿಕೆಯಾಗಿದೆ;
- ಕೆಟ್ಟಕಣ್ಣಿನ ಕೇಡಿಗೆ ಪರಿಹಾರಗಳೂ ಉಂಟು; ಮಕ್ಕಳಿಗೆ ಕೆನ್ನೆ ಮೇಲೆ ಕಪ್ಪು ಬೊಟ್ಟಿಡುವುದು, ಮಂತ್ರಿಸಿದ ದಾರಗಳನ್ನು ಕೈ, ಕಾಲು, ಕುತ್ತಿಗೆಗೆ ಕಟ್ಟಿಕೊಳ್ಳುವುದು, ಮೈಮೇಲೆ ಮಚ್ಚೆ ಹಾಕಿಸಿಕೊಳ್ಳುವುದು, ಮನೆ ಕಟ್ಟುವಾಗ ಬೆದರುಗೊಂಬೆಗಳನ್ನು ಕಟ್ಟುವುದು; to prevent evil eye effect putting black dots on infant's cheeks, tying threads or laces to necks or hand wrist or legs;
- ಕರಡಿ, ಹುಲಿಯಂತಹ ಕ್ರೂರ ಪ್ರಾಣಿಗಳ ಉಗುರು, ರೋಮಗಳನ್ನು ಕಟ್ಟಿಕೊಳ್ಳುವುದು, ಹಸುಗಳ ಕೊರಳಿಗೆ ಚರ್ಮದ ತುಂಡು, ತಾಯಿತಗಳನ್ನು ಕಟ್ಟುವುದು ಇತ್ಯಾದಿ; to tie phylactery of nails, hair of wild animals such as bear, tiger etc;
- ಕೆಟ್ಟಕಣ್ಣಿನವನ ನೋಟದಿಂದ ಕೇಡಾಗುತ್ತದೆಂದು ನಂಬುವವರ ಮನಃಸ್ಥಿತಿ ಬಗೆಗೂ ಯೋಚಿಸಬಹುದು;
- ಹಗಲು ಕಂಡ ಸ್ಥಳದಲ್ಲೇ ರಾತ್ರಿ(ಕತ್ತಲಲ್ಲಿ) ಓಡಾಡಲು ಭಯ ಪಡುವುದು, ಅಪರಿಚಿತರ ಬಗ್ಗೆ ಮಕ್ಕಳ ಮನಸ್ಸಿನ ಭಯ, ಗಾಬರಿ, ಹಿರಿಯರಿಂದ ಆನುವಂಶಿಕವಾಗಿ ಬಂದ ನಂಬಿಕೆಗಳ ಬಗೆಗಿನ ಪ್ರಶ್ನಾತೀತ ನಂಬಿಕೆ; it is a phobia of walking in a familiar area at night;
- 'ಕೆಟ್ಟಕಣ್ಣು' ಒಂದು ಮಾನಸಿಕ ಸ್ಥಿತಿ ಅಥವಾ ಭ್ರಮೆ; ಇದಕ್ಕೆ ಕಾರಣರಾದವರು ಮತ್ತು ಪರಿಣಾಮಕ್ಕೆ ಒಳಗಾದವರು ಇಬ್ಬರೂ ಮಾನಸಿಕ ವಿಪತ್ತಿಗೆ ಒಳಗಾಗಿರುತ್ತಾರೆಯೆ? ಆ ವಂಶವಾಹಿಗಳ ಪಾತ್ರವೇನಾದರೂ ಇದೆಯೆ? ಮನಶ್ಶಾಸ್ತ್ರ ಹೇಳಬೇಕು(ಕ.ವಿ.ವಿ.ಜಾ.ಕೋ.); `Ketta kannu'- evil eye is a phobia as well as a psychological state or illusion of a person;
- —***ಕೆಟ್ಟಕಾಯಿ/ಕೆಟ್ಕಾಯಿ*** : ಕೆಟ್ಟ+ಕಾಯಿ= ಕೆಟ್ಟಕಾಯಿ>ಕೆಟ್ಕಾಯಿ; 'ಕೆಟ್ಗಾಯಿ' ಎಂಬ ರೂಪವೂ ಇದೆ; ಕೆಟ್ಟ+ಕಾಯಿ>ಕೆಟ್ಟಗಾಯಿ> ಕೆಟ್‌ಗಾಯಿ> ಕೆಟ್ಗಾಯಿ(ಕ>ಗ); spoiled coconut;
- ಕೆಲವೊಮ್ಮೆ ಕಾಯಿಯನ್ನು ಒಡೆಯುವ ಮುನ್ನ ಕೆಟ್ಟಿರುವುದು, ಕಾಯಿಯೊಳಗಿನ ಕೊಬ್ಬರಿ, ಹಾಲು ಕೆಟ್ಟಿರುವುದು ಗೊತ್ತಾಗುತ್ತದೆ;
- ಕಾಯಿ ಕೆಟ್ಟಿದ್ದರೆ ಅಶುಭವೆಂಬ ನಂಬಿಕೆ; if coconut is spoiled it is a symbol of bad omen;
- ತೊಟ್ಲಕಾಯಿಯಾಗಿ ಸೀಳಿಕೊಂಡರೆ ಒಳ್ಳೆಯದು; ತೊಟ್ಟಲು ಕಟ್ಟುವ(ವಂಶೋದ್ಧಾರಕನ ಆಗಮನ) ಮುನ್ಸೂಚನೆ ಎಂಬ ಭಾವನೆಯಿದೆ;

  ಪ್ರ: 'ದೇವರಿಗೆ ಒಡೆದ ಕಾಯಿ ಕೆಟ್ಟಿದೆ ಏನ್ ಕೇಡಾದದೋ ಕಾಣೆ';
- —***ಕೆಟ್ಟಗ(ಘ)ಳಿಗೆ*** : ಕೆಟ್ಟ+ಗಳಿಗೆ>ಕೆಟ್ಟಗಳಿಗೆ; ಗಳಿಗೆ=ಕಾಲ,ಸಮಯ; bad timings; a short while of foul or wickedness;
- ಸಂಸ್ಕೃತದ 'ಘಳಿಗೆ' ತದ್ಭವವಾಗಿ ಕನ್ನಡದಲ್ಲಿ 'ಗಳಿಗೆ' ಆಗಿದೆ;
- ಜನಪದರು ತಮಗಾಗುವ ಒಳಿತು, ಕೆಡಕುಗಳನ್ನು ಕಾಲದೊಡನೆ ತಾಳೆಹಾಕಿ ನೋಡುವುದು ನಂಬಿಕೆ;

ಅನುಕೂಲವಾದ ಸಮಯವನ್ನು 'ಶುಭಘಳಿಗೆ' ಎಂದರೆ, ಅನನುಕೂಲವಾದುದ್ದನ್ನು 'ಕೆಟ್ಟಘಳಿಗೆ' ಎನ್ನುವರು;

- ಕೆಟ್ಟಗಳಿಗೆಯನ್ನು ಕೆಲವೊಮ್ಮೆ ನುಡಿಗಟ್ಟಾಗಿ ಬಳಸುವುದು; the word `Kettagalige' badtime is used as an idiom to indicate bad omen;
- ಮಾನವ ಪ್ರಯತ್ನಕಿಂತ ಕಾಲದ ಮೇಲೆ ಕಾರಣ ಹೇಳುವ ಪಲಾಯನ ಪ್ರವೃತ್ತಿ ಮೌಢ್ಯ ಸೂಚಕವಲ್ಲವೆ?
- ಕೆಡುಕನ್ನು ಸೂಚಿಸುವ ಪದ; ಸಾಮಾನ್ಯವಾಗಿ
- 'ರಾಹುಕಾಲ' ವನ್ನು ಕೆಟ್ಟಗಳಿಗೆ ಎನ್ನುವುದುಂಟು; ಕಾಲವನ್ನು ರಾಹುಕಾಲ, ಗುಳಿಕಕಾಲ, ಯಮಗಂಡಕಾಲ ಎಂದು ಗುರುತಿಸಲಾಗಿದೆ; ಇದರಲ್ಲಿ ರಾಹುಕಾಲ, ಯಮಗಂಡಕಾಲ ಅಶುಭದ ಸಂಕೇತವಾದರೆ 'ಗುಳಿಕಕಾಲ' ಶುಭಸಂಕೇತ; ಆದ್ದರಿಂದ ನಮ್ಮ ಜನಪದರು ತಾವು ಮಾಡುವ ಯಾವುದೇ ಕೆಲಸ-ಕಾರ್ಯವನ್ನು ರಾಹುಕಾಲ, ಯಮಗಂಡಕಾಲ ಕಳೆದು ಗುಳಿಕಕಾಲದಲ್ಲಿ ಮಾಡುವುದು ವಾಡಿಕೆ; it indicates evilness generally `Rahukala' bad evil timings;
- ಮನುಷ್ಯ ತನಗೇನಾದರೂ ಕೇಡು ಸಂಭವಿಸಿದಾಗ ಅದನ್ನು 'ಗ್ರಹಾಚಾರ', 'ಕೆಟ್ಟಗಳಿಗೆ' ಎಂದು ಸಮಾಧಾನ ಕಂಡುಕೊಳ್ಳುವುದು ಉಂಟು; if something is happened bad to a man he feels that it is a bad time;
- ***—ಕೆಟ್ಟತಪಸ್ಸು*** : ದುರಾಲೋಚನೆಯಿಂದ ಮಾಡುವ ಧ್ಯಾನ; ಋಷಿ, ಮುನಿಗಳ ಮನಸ್ಸು ಸಮಾಜಮುಖಿಯಾಗಿ, ಲೋಕಕಲ್ಯಾಣಕ್ಕಾಗಿ ಮಾಡುವ ಧ್ಯಾನ ಒಂದು ಬಗೆಯದ್ದಾದರೆ, ಸ್ವಾರ್ಥ ಸಾಧನೆಗಾಗಿ, ಅನ್ಯರ ನಾಶಕ್ಕಾಗಿ ಮಾಡುವ ಧ್ಯಾನ (ತಪಸ್ಸು) ಮತ್ತೊಂದು ಬಗೆಯದ್ದು; ಅದರಿಂದ ಪಡೆದ ಸಿದ್ಧಿ ಇತರರನ್ನು ನಾಶಪಡಿಸುವುದಲ್ಲದೆ ಸ್ವತಃ ಅವರನ್ನು ಸುಡುವುದು ಎಂಬುದು ಲೋಕೋಕ್ತಿ; ಭಷ್ಮಾಸುರನ ತಪಸ್ಸು ಕೆಟ್ಟ ತಪಸ್ಸಿಗೆ ಉದಾಹರಣೆಯಾಗುವುದು; a `Dyana' or Meditation of bad purpose or aim is called as `Ketta tapassu' foul or wicked meditation;
- ***—ಕೆಟ್ಟತೊಗಲು*** : ಕೆಟ್ಟ+ತೊಗಲು; ತೊಗಲು= ಚರ್ಮ; ವಿಶ್ವದ ಹಲವೆಡೆ ಚರ್ಮದ ಬಣ್ಣದಿಂದ ಸಾಮಾಜಿಕ ಸ್ಥಾನಮಾನ ಗುರುತಿಸಲಾಗುವುದು; ಆಫ್ರಿಕಾದಲ್ಲಿ ಕಪ್ಪು ಜನರನ್ನು ಕೀಳಾಗಿ ಕಾಣುವುದು; evil skin, bad skin which causes social discrimination in a society as in Africa and India;
- ಸತ್ತ ಪ್ರಾಣಿಗಳ ತೊಗಲನ್ನು ಹದಗೊಳಿಸಿ ಬಳಸುವ ಪದ್ಧತಿ; ಕೆಟ್ಟತೊಗಲು ಅನುಪಯುಕ್ತ;
- ಪ್ರಾಣಿಗಳ ದೇಹಾರೋಗ್ಯಕ್ಕೆ ತೊಗಲು(ಚರ್ಮ) ಮುಖ್ಯಕಾರಣ; skin is alone responsible for the healthiness of a person;
- ಚರ್ಮದಲ್ಲಿ ಗಾಯ ಮತ್ತಿತರ ವಿಕಾರಗಳಾಗಿದ್ದಲ್ಲಿ ಅಂಥ ವ್ಯಕ್ತಿಯನ್ನು ಗುಂಪಿನಿಂದ ಹೊರ ಹಾಕಲಾಗುವುದು;
- ಹೊರ ಮೈ ತೊಗಲು(ಚರ್ಮ) ಬಿಳಿಬಣ್ಣ(ತೊನ್ನು) ವಾಗಿದ್ದರೆ ಅನಾರೋಗ್ಯದ ಲಕ್ಷಣ ಎನ್ನುವುದು;
- ***—ಕೆಟ್ಟಗುಣ*** : ಕೆಟ್ಟ+ಗುಣ; ಗುಣ=ನಡತೆ, ಸ್ವಭಾವ; bad conduct, bad nature;
- ಸಾಮಾಜಿಕವಾಗಿ ಅಸ್ವೀಕೃತ ನಡತೆ(ಸುಳ್ಳು, ಮೋಸ, ಕಳ್ಳತನ ಇತ್ಯಾದಿ) ಯನ್ನು ಕೆಟ್ಟಗುಣವೆಂದು ಪರಿಭಾವಿಸುವುದು;
- ***—ಕೆಟ್ಟಮನಸ್ಸು*** : ಕೆಟ್ಟ+ಮನಸ್ಸು; ಮನಸ್ಸು=ಸ್ವಭಾವ, ಭಾವನೆ; spoiled psychology of a person;
- ಪ್ರತಿ ವ್ಯಕ್ತಿಯ ಸ್ವಭಾವ, ಭಾವನೆ, ಆಲೋಚನೆ ಸ್ವಹಿತ ಸಾಧನೆಯದ್ದಾದರೂ, ಸಮಾಜ ಸ್ವೀಕಾರಾರ್ಹವಾದುದಾಗಿರಬೇಕು;
- ಸಮಾಜ(ಪರ) ದ್ರೋಹ ಆಲೋಚನೆಯೇ ಕೆಟ್ಟಮನಸ್ಸು;
- ***—ಕೆಟ್ಟಮಾತು*** : ಪ್ರಾಣಿಜಗತ್ತಿನಲ್ಲಿ ಮನುಷ್ಯನಿಗೆ ಮಾತ್ರ ದಕ್ಕಿರುವ ಒಂದು ಸವಲತ್ತು ಮಾತು; man is only animal who has got the facility of speech among animals; bad language, speech;
- ಮಾತುಗಳಿಂದ ಭಾವನೆಗಳನ್ನು ಪರಸ್ಪರ ವಿನಿಮಯಿಸಿಕೊಳ್ಳುವುದು; with the help of

speech man can share their feelings-emotions eachother;

- ಒಳ್ಳೆಯ(ಹಿತ) ನುಡಿಗಳಿಂದ ಪರಸ್ಪರ ಸಂಬಂಧ, ಉತ್ತಮವಾದ ಆರೋಗ್ಯ, ಸಮಾಜ ನಿರ್ಮಾಣವಾಗುವುದು;
- ಕೆಟ್ಟ(ಅಹಿತ) ನುಡಿಗಳಿಂದ ಜಗಳ, ದ್ವೇಷ, ಅಸೂಯೆಗೆ ಕಾರಣ; bad words or bad tongue causes quarrel, revenge and jealousy;
- 'ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ' ಎಂಬ ಮಾತೇ ಮಾತಿನ ಮಹತ್ವ ಧ್ವನಿಸುತ್ತದೆ;
- 'ಮಾತೇ ಮುತ್ತು, ಮಾತೇ ಮಿತ್ತು' ಕೂಡ;
- ಸಾಮಾಜಿಕ ಬದುಕಿನಲ್ಲಿ ಮಾತಿನ ಮಹತ್ವ ಹಿರಿದಾದ್ದು;
- ***—ಕೆಟ್ಟಸುಳಿ:*** ಅಲೆಸಿ ಮೋಸ ಮಾಡುವ ವ್ಯಕ್ತಿಗೆ ಬಳಕೆ; ನೀಚ, ಅಯೋಗ್ಯ ಎಂಬುದಕ್ಕೆ ಪರ್ಯಾಯ ಪದ; a synonym for a man who is deceitiful who is unworthy;
- ಸುಳಿ(ರೊಮ, ಕೂದಲು) ಬಗೆಗೆ ಇರುವ ನಂಬಿಕೆ; vortex of hair in a man;
- ಕೆಟ್ಟವ್ಯಕ್ತಿ ಬದಲಾಗಲಾರನೆಂಬುದಕ್ಕೆ 'ಹೀನಸುಳಿ ಬೋಳಿಸಿದರೆ ಹೋದೀತೆ' ಎಂಬ ಮಾತು;
- ಸುಳಿ ಹುಟ್ಟನ್ನು, ವಾಂಶಿಕವಾಗಿಯೂ ಅರ್ಥೈಸುವುದು; it defines plebeian;
- 'ಕೆಟ್ಟಸುಳಿ'ಗೆ ಪರ್ಯಾಯ ಪದವಾಗಿ 'ಹೀನಸುಳಿ' ಇದೆ; 'ಹೀನ' ಎನ್ನುವ ಮಾತು 'ಕೆಟ್ಟ' ಎನ್ನುವುದಕ್ಕಿಂತ ಅವಮಾನ ಪದ; it is an alternate word for low-gradation spot or shame;
- 'ಸುಳಿ' ಪದ ಮೊದಲಿಗೆ ದನಗಳ ಸುಳಿಗೆ ಸಂಬಂಧಿಸಿದಂತೆ ಬಳಕೆಯಾದುದು; ಅದರಲ್ಲಿಯೂ ಎತ್ತು ಅಥವಾ ಹೋರಿಗಳನ್ನು ಸಾಕುವವರಿಗೆ ಇದು ಮುಖ್ಯವಾದುದು; ಏಕೆಂದರೆ 'ವ್ಯಾಪಾರ'ದ ಬೆಲೆ ಅದರ ಮೇಲೆ ನಿರ್ಧರಿತವಾಗುತ್ತಿತ್ತು; vortex of hair at first, is used to refer bullocks while they sell or buy;
- ಹೋರಿಗಳ ಬಗೆಗೆ(ಸುಳಿ) ತೋರುತ್ತಿದ್ದ ಈ ಸಾಂಸ್ಕೃತಿಕ ಅಸಡ್ಡೆಯನ್ನು ವ್ಯಕ್ತಿಗಳ ನಡವಳಿಕೆಗೂ ಅನ್ವಯಿಸಿ ವ್ಯಂಗ್ಯದಿಂದ ಮಾತನಾಡಿರುವುದು ಸಾಧ್ಯವಾಗಿರಬಹುದು;
- ವ್ಯಕ್ತಿಗಳಿಗೆ ಈ 'ಕೆಟ್ಟಸುಳಿ' ಯನ್ನು ಆರೋಪಿಸುವಾಗ ಅವನ ವಂಶವನ್ನು, ಸಹವಾಸದೋಷವನ್ನು, ಹುಟ್ಟನ್ನು, ಆನುವಂಶೀಯ ಪರಂಪರೆಯನ್ನು ಬಳಸಿಕೊಳ್ಳಲು ಹೊರಟಿರಬೇಕು.
- ***—ಕೆಟ್ಟದಾರಿ:*** ತಪ್ಪು ದಾರಿಯಲ್ಲಿ ನಡೆಯುವಂಥದು; ಸಾಮಾಜಿಕವಾಗಿ ಸ್ವೀಕಾರಾರ್ಹವಾದ ಒಪ್ಪಿತ ಮಾರ್ಗದಲ್ಲಿ ನಡೆಯದೆ, ಅನ್ಯಮಾರ್ಗವನ್ನು ಹಿಡಿಯುವಂಥದು; worse route which is not socially receivable or acceptable one; *ಪ್ರ: 'ಕೆಟ್ಟದಾರಿ ಹಿಡಿದು ಬೇಗ ಹಾಳಾದ';*
- ವ್ಯಕ್ತಿಯೊಬ್ಬ ಸ್ವಪ್ರೇರಣೆಯಿಂದಲೊ, ಸಹವಾಸ ದೋಷದಿಂದಲೊ ಕೆಟ್ಟಮಾರ್ಗವನ್ನು ಆಯ್ದುಕೊಂಡಾಗ ಆಗ ಅದು ಒಂದು 'Social evil' ಆಗಿ ಪರಿಣಮಿಸಲು ಸಾಧ್ಯ;
- ಸಮಾಜ ವ್ಯಕ್ತಿಯ 'ನೈತಿಕತೆ'ಯನ್ನು ಅಪೇಕ್ಷಿಸುತ್ತದೆ; ವಿರುದ್ಧ ಹೋದಾಗ ಕೌಟುಂಬಿಕ ವಿಘಟನೆಗೆ ಕಾರಣವಾಗಿ, ಸಾಮಾಜಿಕ ಕೆಡುಕಿನಲ್ಲಿ ಪರಿಣಾಮಗೊಳ್ಳಬಹುದು; society expects alway morality of a person;
- 'ಕೆಟ್ಟ ದಾರಿ' 'Social ethics' ಗೆ ವಿರುದ್ಧವಾದುದು; ಆ ಕಾರಣವಾಗಿ ವ್ಯಕ್ತಿ ಶಿಕ್ಷೆಗೊ, ಪರಿವರ್ತನೆಗೊ ಒಳಗಾಗುವ ಸನ್ನಿವೇಶ ಒದಗಬಹುದು;if a person choose anti-social ethics he/she is to be punished;
- 'ಕೆಟ್ಟದಾರಿ'ಗೆ ಒದಗಿಬರುವ ಸನ್ನಿವೇಶಗಳೂ ಕಾರಣವಾಗಿರಬಹುದು; ಆದ್ದರಿಂದ ಪರಿಸ್ಥಿತಿಗಳ ನಿಯಂತ್ರಣ ಸಮಾಜದಲ್ಲಿ ನಡೆದೇ ಇರುತ್ತದೆ; ಅಷ್ಟೇ ಕೆಟ್ಟದಾರಿಗಳೂ ಕಾಲ ಸರಿದಂತೆ ನಿರ್ಮಾಣವಾಗುತ್ತಾ ಹೋಗುತ್ತವೆ.
- ***—ಕೆಟ್ಟಹುಳ:*** ಕೆಟ್ಟ+ಹುಳ; ಹುಳ=ಕ್ರಿಮಿ; ವ್ಯಕ್ತಿ; 'ಕೆಡು' ಕ್ರಿಯಾಪದದ ಗುಣವಾಚಕ ರೂಪವೇ 'ಕೆಟ್ಟ' ಪದ; evil worm, bad worm;
- ಕೆಟ್ಟದಾಗಿ ನಡೆಯುವ ವ್ಯಕ್ತಿಯನ್ನು 'ಹುಳ'(ಕೆಟ್ಟ) ಕ್ಕೆ ಹೋಲಿಸಲಾಗಿದೆ; a person who has taken

wrong path to walk is called as worm, bad worm;
- 'ಹುಳ' ಅನ್ನುವ ಮಾತೇ 'ಕ್ಷುದ್ರತನ'ವನ್ನು, ಕ್ರಿಮಿತನವನ್ನು ಸೂಚಿಸುತ್ತದೆ;
- 'ಕೆಟ್ಟ' ವಿಶೇಷಣ ಮನುಷ್ಯನ ನೀಚತನವನ್ನು ಮತ್ತಷ್ಟು ಅಧಿಕವಾಗಿ ಸೂಚಿಸುತ್ತದೆ;
- ಸಾಮಾಜಿಕ ಅನಾರೋಗ್ಯಕ್ಕೆ ಕಾರಣವಾದ ಅಪಮಾರ್ಗದ ವ್ಯಕ್ತಿಗಳನ್ನು ಈ ಪದ ಸಾಂಕೇತಿಕವಾಗಿ ಹಿಡಿದಿರಿಸುವಂತೆ ತೋರುತ್ತದೆ;
- ನುಡಿಗಟ್ಟಾಗಿ ಪದ ಬಳಕೆ;
  ಪ್ರ: 'ಅವನಂಥ ಕೆಟ್ಟಹುಳದ ಸಹವಾಸ ಬೇಡ';
- **—ಕೆಟ್ಟ ಮುಸುಡಿ:** ಮುಸುಡಿ=ಮುಖ, ಮೋರೆ; ನುಡಿಗಟ್ಟಾಗಿ, ಬೈಗುಳ ಪದವಾಗಿ ಬಳಕೆ; ಸೋತ ಮುಖ; ಸಪ್ಪೆಯಾದ ಮುಖ; ದರಿದ್ರ ಮುಖ ಎಂತಲೂ ಕರೆಯುವುದಿದೆ; an idiom of abuse indicating one's bad face;
- ಯಾರೆ ವ್ಯಕ್ತಿ ತಪ್ಪು ಮಾಡಿದಾಗ ಅಥವಾ ಜೀವನದಲ್ಲಿ ಜಿಗುಪ್ಸೆ ಹೊಂದಿದಾಗ ಅವರ ಮುಖಚರ್ಯೆಯಲ್ಲಿ ಮಹತ್ತರ ಬದಲಾವಣೆ ಕಂಡುಬರುತ್ತದೆ; ಅಂತಹವರನ್ನು ನೋಡಲು, ಮಾತನಾಡಿಸಲು ಒಂದು ರೀತಿಯ ಮುಜುಗರ; if a person is done wrong or disappointed a lot in his/her life his/her facial expressions are changed; such people are iltreated by others;
- ತಂದೆ ತಾಯಿಯರು, ಗುರು-ಹಿರಿಯರು ಕೋಪದಿಂದ 'ನಿನ್ನ ಈ ಕೆಟ್ಟ ಮುಸುಡಿಯನ್ನು ನನಗೆ ತೋರಿಸಬೇಡ' ಎಂದು ಹೇಳುವುದಿದೆ.

ಕೆಟ್ಟಗಂಟಿ ಚೌಡೇರು Keṭṭaganṭi couḍēru:
- ಯಮನ ವಾಹನವೆಂದು ಜನಪದರು ನಂಬಿರುವ ಕಾಡುಕೋಣಗಳು; wild male buffaloes which are vehicles of lord of death Yama according to the folk;
- ಗಂಟೆ ಒಂದು ವಾದ್ಯ ವಿಶೇಷ, ದೇವತಾ ಕಾರ್ಯಗಳಲ್ಲಿ ಗಂಟೆ ಬಳಕೆ, ಆದರೆ ಇಲ್ಲಿ ಗಂಟೆಗೆ 'ಕೆಟ್ಟ' ಎಂಬ ವಿಶೇಷಣ ಪ್ರಾಪ್ತವಾಗಿರುವುದು, ಮನುಷ್ಯರ ಸಾವಿನ ಸೂಚಕವಾಗಿ ಯಮ ಕೋಣದ ಮೇಲೆ ಬರುವನೆಂಬ ಜನಪದರ ನಂಬಿಕೆ;
- ಊರಿನ ಕೋಣಗಳು ಸಂತಾನೋತ್ಪತ್ತಿ, ಕೃಷಿ ಕೆಲಸಕ್ಕೆ ಉಪಯುಕ್ತವಾದವು; ಕಾಡುಕೋಣವನ್ನು ಯಮನ ವಾಹನವಾಗಿ ಕಲ್ಪಿಸಲಾಗಿದೆ;
- ಮನುಷ್ಯನ ಮನಸ್ಸಿಗೆ ಸಂಬಂಧಿಸಿದ್ದು; ಕೆಟ್ಟದು ಅಥವಾ ಒಳ್ಳೆಯದು ಎಂಬ ಭಾವನೆಯೆಲ್ಲ ಅವನ ಮನಸ್ಸಿನ ಪ್ರಶ್ನೆ; ಯಾವುದೇ ಸಂದರ್ಭದಲ್ಲಿ ಆದ ಕಾಕತಾಳೀಯ ಘಟನೆಗಳಿಂದ ಇಂತಹ ಕಲ್ಪನೆ ಬಂದಿರುತ್ತದೆ; it belongs to human psychology;
- ನಮ್ಮ ಸುತ್ತಲಿನ ವಸ್ತು, ಪ್ರಾಣಿ, ಪಕ್ಷಿಗಳನ್ನು ನಾವು ನೋಡುವ ರೀತಿಯಲ್ಲಿಯೇ ಇಂಥದೊಂದು 'ಕಲ್ಪನೆ' ಹುಟ್ಟಿರುತ್ತದೆ; this kind of concept is emerged due to our notions regarding things, animals or birds around us;
- ಮುಖ್ಯವಾಗಿ ಇಲ್ಲಿ ಕಾಡುಕೋಣಕ್ಕೂ, 'ಗಂಟಿ'ಗೂ ಏನು ಸಂಬಂಧ ಎಂಬುದು ಗೊತ್ತಾಗುವುದಿಲ್ಲ.

ಕೆಟ್ಟಿ Keṭṭi:
- ಹಳ್ಳ, ತಗ್ಗುಪ್ರದೇಶ; a trench, ditch, lower region of land;
- ಹೊಲಕ್ಕೆ ಒಡ್ಡು ಹಾಕುವ ಸಮಯದಲ್ಲಿ ಮಣ್ಣನ್ನು ಅಗೆದು ತಗ್ಗು ಮಾಡಿರುವ ಸ್ಥಳ.

ಕೆಟ್ಟು ಕೆರಹಿಡಿದು ಹೋಗಿದೆ keṭṭu kerahiḍidu hōgide:
- ಎಲ್ಲವನ್ನೂ ಕಳೆದುಕೊಂಡವನ ಸ್ಥಿತಿಯನ್ನು 'ಕೆಟ್ಟು ಕೆರ ಹಿಡಿದು ಹೋಗವನೆ' ಎಂದು ಹೇಳುವುದುಂಟು; ಸಾಮಾನ್ಯವಾಗಿ ಬಳಕೆಯಲ್ಲಿರುವ ನುಡಿಗಟ್ಟು ಇದು; it is an idiom; it means a person who is bankrupt or pauper himself or herself or loss everything;
- 'ಕೆರ' ಎಂದರೆ ಚಪ್ಪಲಿ; 'ಕೆರಹಿಡಿ' ಚಪ್ಪಲಿ ಹೊಲಿಯುವ ವೃತ್ತಿ ಹಿಡಿ; ಒಂದು ಕಾಲದಲ್ಲಿ ಚಪ್ಪಲಿ ಹೊಲಿದು ಜೀವನ ಮಾಡುತ್ತಿದ್ದ ಜನವರ್ಗ; ಆರ್ಥಿಕ ಅನುಕೂಲ ಇಲ್ಲದೆ ಕೆಟ್ಟುಹೋಗಿದ್ದವರು, ಅಂದರೆ ಗತಿಯಿಲ್ಲದವರು ಕೆರ ಹೊಲಿದು ಜೀವನ ಸಾಗಿಸುತ್ತಿದುದರ ಉಲ್ಲೇಖ ನುಡಿಗಟ್ಟಿನಲ್ಲಿದೆ; it

refers the people who sew slippers as a lost job of life to servive themselves;
- ಕೆರ ಹೊಲಿಯುವ ವೃತ್ತಿಯ ಹಿನ್ನೆಲೆಯಲ್ಲಿ ಪ್ರಸ್ತುತ ನುಡಿಗಟ್ಟು ಬಂದಿದೆ; ಕೊನೆಯ ಆಯ್ಕೆಯಾಗಿ ಈ ವೃತ್ತಿ, ಇಲ್ಲದಿದ್ದರೆ 'ನಿರ್ಗತಿಕ'ನಾಗಬೇಕಾಗಿತ್ತು; ಆಗ ಅದು 'ಕೀಳೆಂದರೂ', ಬದುಕಿನ ಒಂದು ದಾರಿಯನ್ನು ಆ ಮೂಲಕ ಕಂಡುಕೊಳ್ಳಲಾಯಿತು;
- 'ಕೆರ ಹಿಡಿದು ಹೋಗು' ಎಂಬ ಹೇಳಿಕೆ ಚಪ್ಪಲಿ ಹೊಲಿಯುವ ವೃತ್ತಿಯನ್ನು ಕೈಗೊಂಡು ಹೋಗು ಎಂದು ಅರ್ಥ; it means to join cobbler profession;
- 'ಕೆಟ್ಟು' ಪದದ ಇಲ್ಲಿನ ಬಳಕೆ ಸಂದರ್ಭ: 'ಕೆಟ್ಟು ಪಟ್ಟಣ ಸೇರು' ಎನ್ನುವಂತೆ(ಪಟ್ಟಣ ಸೇರಿ ಬದುಕಿಗೆ ದಾರಿ ಮಾಡಿಕೊ), 'ಕೆಟ್ಟ' ಸ್ಥಿತಿಯನ್ನು ಹೋಗಲಾಡಿಸಲು 'ಕೆರ ಹಿಡಿದು(ಕೆರ ಹೊಲಿದು)' ಬದುಕಿಕೊ ಎಂದು ಅರ್ಥ;
- ಶ್ರೇಣೀಕೃತ ವ್ಯವಸ್ಥೆಯಲ್ಲಿ ಈ ವೃತ್ತಿ ಕೆಳಗಿನದಾಗಿತ್ತು, ಕೀಳಾಗಿತ್ತು; ಆಗ ನಿರ್ದಿಷ್ಟ ಜಾತಿಯವರು ಮಾತ್ರ ಕೈಗೊಳ್ಳುವ ವೃತ್ತಿ ಇದಾಗಿತ್ತು; ಈಗ 'ಲಾಭದಾಯಕ' ಉದ್ಯಮವಾಗಿದೆ; ಅದಕ್ಕೆ ಜಾತಿ ಅಂಟಿಕೊಂಡಿಲ್ಲ; ನುಡಿಗಟ್ಟಿನ ಈಗಿನ ಅರ್ಥವೇ ಬೇರೆಯಾಗಿದೆ: ಪೂರ್ಣ ಹಾಳಾಗು, ಇದ್ದುದನೆಲ್ಲ ಕಳೆದುಕೊಂಡು ನಿರ್ಗತಿಕನಾಗು; in a social highrarchy this job of sewing slipper is a last and least one and inferior one;
- ಈ ನುಡಿಗಟ್ಟಿಗೆ ಇನ್ನೊಂದು ಅರ್ಥವಿದೆ; ಅದು ಮಾಂಸಾಹಾರಿಗಳ ಅರ್ಥ: 'ಪುಳುಚಾರು' (ಸಸ್ಯಾಹಾರಿ) ಊಟದಿಂದ ರುಚಿಗೆಟ್ಟ ಬಾಯಿ ಬಯಸಿದ್ದು ಇದು; ನಾಲಿಗೆಯಂತೂ 'ಕೆರದ ಅಟ್ಟೆಯಂತೆ' ಜಿಡ್ಡು ಹಿಡಿದಿದೆ ಎಂಬುದು ಅವರ ವ್ಯಾಖ್ಯಾನ; ಇಂತಹ ಸ್ಥಿತಿಯನ್ನು 'ಕೆಟ್ಟು ಕೆರಹಿಡಿದು ಹೋಗಿದೆ' ಎಂದು ಅವರು ವರ್ಣಿಸುವುದುಂಟು; ರುಚಿಗೆಟ್ಟು ಬಾಯಿಯ ರುಚಿಪ್ರಾಪ್ತಿಗಾಗಿ ಹೇಳುವ ಮಾತಿದು; ಮಾಂಸಾಹಾರಿಗಳ ಮಧ್ಯದಲ್ಲಿ ಈ ನುಡಿಗಟ್ಟು ಈ ಅರ್ಥದಲ್ಲಿ ಹೆಚ್ಚು ಪ್ರಚಲಿತ; this idiom has one more meaning that is non-vegetable or meat eaters;
- 'ಕೆರ'ಕ್ಕೆ ಸಂವಾದಿ ರೂಪಗಳು; ಕೆರವು, ಕೆರ್ಪು, ಕೆಪ್ಪು, ಎಕ್ಕಡ, ಚಪ್ಪಲಿ, ಪಾಪೋಸು, ಪಾಪಾಸು; ತ: ಚೆರುಪ್ಪು, ಮ: ಚೆರಿಪ್ಪು, ತೆ: ಚೆಪ್ಪು, ತು: ಕೆರೆಪ್ಪು/ ಕಿರೆಪ್ಪು.

ಕೆಟ್ಟು ಪಟ್ಣ ಸೇರು keṭṭu paṭṇa sēru :
- ಈ ನುಡಿಗಟ್ಟನ್ನು ತೀರ ಪ್ರಾಚೀನ ಎನ್ನಲಾಗುವುದಿಲ್ಲ; ಪ್ರಾಚೀನ ಕಾಲದಲ್ಲಿ ಹಳ್ಳಿಗಳಿಂದ ಪಟ್ಟಣಕ್ಕೆ ವಲಸೆ ಹೋಗುತ್ತಿದ್ದುದು ಕಡಿಮೆ; ಪಟ್ಟಣಗಳು ಬೆಳೆಯತೊಡಗಿದಾಗ, ಹಳ್ಳಿಗಳಲ್ಲಿದ್ದ ಜನ ಹೊಟ್ಟೆಪಾಡಿಗಾಗಿ/ ವೃತ್ತಿಗಾಗಿ ಪಟ್ಟಣ ಸೇರುವುದು ಸಾಮಾನ್ಯವಾಯಿತು; ಈಗಂತು ಪಟ್ಟಣಗಳು ಕೊಬ್ಬಿ ಬೆಳೆಯುವುದಕ್ಕೆ ಇಂತಹ ಆಶಯವೇ ಕಾರಣವಾಗಿದೆ; it is an idiom; it is not an ancient one; it shows the migration of rural agrarial society towords urbans or cities;
- ಕಿಡು>ಕೆಡು(ಇ>ಎ)>ಕೆಟ್ಟು ಆಗಿದೆ; ಹಳ್ಳಿಗಳಲ್ಲಿ ನಿರ್ಗತಿಕನಾಗಿದ್ದವನು ಪಟ್ಟಣ ಸೇರಿದರೆ ಅನುಕೂಲವಾಗುತ್ತದೆ ಎಂಬ ಭಾವನೆ ಇಲ್ಲಿ ಕೆಲಸ ಮಾಡಿದೆ;
- 'ಪಟ್ಟಣ'ಕ್ಕೆ 'ಪಟ್ಟನ' ರೂಪವೂ ಇದೆ; ಇದು 'ಪತ್ತನ'ದ ತದ್ಭವ ಎಂದು ಹೇಳಲಾಗಿದೆ; 'ಸೇರು' ಪದಕ್ಕೆ 'ಸೇರ್' ಮೂಲ ರೂಪ; ತಮಿಳು, ಮಲೆಯಾಳಂ, ತೆಲುಗುಗಳಲ್ಲಿ ಚೇರ್/ಚೇರು ರೂಪಗಳಿವೆ;
- ಯುವಕರು ಇಂತಹ ಪರಿಣಾಮಕ್ಕೆ ಹೆಚ್ಚು ಒಳಗಾದವರು; ಆಧುನಿಕ ಸೌಲಭ್ಯ/ ಸೌಕರ್ಯ/ಸುಖಕ್ಕೆ ಒಳಗಾಗಿಯೂ ಈ ವಲಸೆ ನಡೆದಿದೆ; ಸಾಮಾಜಿಕ ಸ್ಥಾನಮಾನ/ಪ್ರತಿಷ್ಠೆಗಳೂ ಕಾರಣವಾಗಿವೆ;
- ವಿದ್ಯಾವಂತರು/ಉದ್ಯೋಗಸ್ಥರು ಪಟ್ಟಣ ಸೇರುವುದು ಸಾಮಾನ್ಯ; ಪಟ್ಟಣಗಳು ಕೊಬ್ಬಿ ಬೆಳೆಯುವುದಕ್ಕೆ ಇವರೇ ಕರಣರು; ಆದರೆ ಇವರು 'ಕೆಟ್ಟು' 'ಪಟ್ಟಣ' ಸೇರಿದವರಲ್ಲ; students or employees are common to settle in cities but these are not settled as a part of their previous life style at rural area;
- ವ್ಯಕ್ತಿ ಬದುಕಿನ ಆರ್ಥಿಕ ಕೆಟ್ಟ ಸ್ಥಿತಿಯೇ ಪಟ್ಟಣ ಸೇರಲು ಕಾರಣವಾದರೂ, ಹಳ್ಳಿಯ ಬದುಕಿನ ಶ್ರಮಜೀವನವೂ ಕಾರಣವಿರಬೇಕು; ಹಳ್ಳಿಯ ಆಹಾರ ಪದ್ಧತಿ, ಸಾಂಪ್ರದಾಯಿಕ ವರ್ತನಾ ಮಾದರಿಗಳು

ಕೆಲವೊಮ್ಮೆ ನಿಮಿತ್ತವಾಗಬಹುದು; ಪಟ್ಟಣ ಸೇರಲು ನಗರಗಳ ಆಕರ್ಷಣೆಯಂತೂ ಇದ್ದೇ ಇದೆ;

- ಫಲವಾಗಿ ಹಳ್ಳಿಗಳು ಬಡವಾಗುತ್ತಾ, 'ಹಾಳೂರು' ಆಗುತ್ತಾ, ಮುದುಕರು, ಮಕ್ಕಳು ಮಾತ್ರ ಇರುವ ಕೇಂದ್ರಗಳಾಗಿ ಮಾರ್ಪಡುತ್ತಿರುವುದೂ ನಮಗೆಗೊತ್ತಿದೆ;
- ಪಟ್ಟಣಕ್ಕೆ ಸೇರುವ ಈ ವಲಸೆಗೆ ಒಂದೇ ಒಂದು ಪರಿಹಾರವೆಂದರೆ, ಹಳ್ಳಿಗಳನ್ನೇ ಪಟ್ಟಣಗಳನ್ನಾಗಿ (`sub-urb') ಪರಿವರ್ತಿಸುವುದನ್ನು ಸೃಷ್ಟಿಸುವುದು;
- 'ಕೆಟ್ಟು ಪಟ್ಣ ಸೇರು' ಮಾತಿನ ಹಿಂದೆ ಒಂದು ಜ್ವಲಂತ ಸಮಸ್ಯೆಯೇ ಇದೆ; ಪಾರಂಪರಿಕವಾದ ಈ ನುಡಿಗಟ್ಟು ಅದರ ಗ್ರಹಿಕೆ; ಆದರೆ ಈ ಗ್ರಹಿಕೆ ಕೇವಲ `One way' ಮಾತ್ರ, `Other way' ಗಳನ್ನು ಪತ್ತೆ ಹಚ್ಚುವುದು ಮುಖ್ಯ;
- ನುಡಿಗಟ್ಟು ಕೆಲವೊಮ್ಮೆ ಗಾದೆಯಾಗಿಯೂ ಚಲಾವಣೆಯಲ್ಲಿದೆ.

ಕೆಡು Keḍu:

- ಹಾಳಾಗು, ನಾಶವಾಗು; ಅಳಿ; spoiled, perished, be destroyed, be ruined;
- 'ಕೆಡು' ರೂಪಕ್ಕೆ ಸಂವಾದಿಯಾಗಿ ಇರುವಂಥದು 'ಕಿಡು' ರೂಪ; 'ಕಿಡು' ರೂಪವೇ ಮೂಲ, ಆ ಮೇಲಿನದು ಕೆಡು; ಅಂದರೆ ಕಿಡು>ಕೆಡು–ಸ್ವರವ್ಯತ್ಯಯ ಕಾರಣ; ಇ>ಎ;
- ತಮಿಳು ಮತ್ತು ಮಲೆಯಾಳಂಗಳಲ್ಲಿ 'ಕೆಡು' ರೂಪವೇ ಇದೆ; ತೆಲುಗಿನಲ್ಲಿ 'ಚೆಡು' ಇರುವುದು ಸಹಜ; ಕ>ಚ ಆದುದು ಇದಕ್ಕೆ ಕಾರಣ; ತುಳುವಿನಲ್ಲಿ 'ಚೆಟ್ಟ್' ಇರುವುದೇನೋ ಸರಿ, ಆದರೆ 'ತೆಟ್ಟ್' ಇರುವುದು(ದ್ರಾ.ಭಾ.ಜ್ಞಾ.ಪ.ಕೋ) ಆಶ್ಚರ್ಯ; ಕಾರಣ ಸ್ಪಷ್ಟವಿಲ್ಲ; In Tamil and Maleyalam the word Kedu but in Telugu it has `Chedu' form for spoiled; in Tulu `Chett';
- —***ಕೆಡುಕ*** : 'ಕೆಡು' ಧಾತುವಿಗೆ 'ಕ' ಪ್ರತ್ಯಯ ಸೇರಿ 'ಕೆಡುಕ' ಆಗುವುದು; ಕೆಟ್ಟಕೆಲಸ ಮಾಡುವ ವ್ಯಕ್ತಿಗೆ ಬಳಕೆ; evil doer, villain, wicked; a person who does bad deeds;
- —***ಕೆಡುಕಿ*** : ಕೆಡು ಧಾತುಗೆ 'ಕಿ' ಪ್ರತ್ಯಯ ಸೇರಿ 'ಕೆಡುಕಿ' ಅಗುವುದು; ಕೆಟ್ಟಕೆಲಸ ಮಾಡುವ ಹೆಂಗಸಿಗೆ ಬಳಕೆ; 'ಕ' ಪುಲ್ಲಿಂಗಾರ್ಥದಲ್ಲೂ 'ಕಿ' ಸ್ತ್ರೀಲಿಂಗಾರ್ಥದಲ್ಲೂ ಬಳಕೆ; a women who is bad in her deeds;
- —**ಕೆಡುಕು:** 'ಕೆಡು' ಧಾತುವಿಗೆ 'ಕು' ಪ್ರತ್ಯಯ ಸೇರಿಸಿದರೆ 'ಕೆಡಕು' ಆಗುವುದು; trouble evil, vice;
- ತೊಂದರೆ, ವಿಪತ್ತು ಎಂಬ ಗುಣವಾಚಕಾರ್ಥದಲ್ಲಿ ಬಳಕೆ;

ಪ್ರ: 'ಅವಿವೇಕಿಗಳ ಆಡಳಿತದಿಂದ ಲೋಕಕ್ಕೆ ಕೆಡುಕು ಆಗುತ್ತದೆ'.

ಕೆಡಕೊ/ಕೆಡ್ಕೊ Keḍako/Keḍko:

- ಮಲಗು; ಕೆಳಕ್ಕೆ ಬೀಳಿಸು; to sleep; to pull down;
- ಕೆಡವು>ಕೆಡಹು>ಕೆಡವು>ಕೆಡಕೊ; 'ಕೆಡೆ' ಎಂಬ ಮೂಲರೂಪದಿಂದ ಇದು ಬಂದಿರಬಹುದು; 'ಕೆಡಕೊ' 'ಕೆಡೆ'ಯಿಂದ ಬಂದಿರಬಹುದಾದರೂ ಅಂತ್ಯಾಕ್ಷರಕ್ಕೆ ಕಾರಣ ತಿಳಿಯದು;
- ಮಲಗಿಕೊಂಡಿತು ಎಂಬರ್ಥದಲ್ಲಿ ಬಳಕೆ;
- ಪ್ರಾಣಿಗಳು ಮಲಗಿಕೊಳ್ಳುವ ಕ್ರಿಯೆಗೆ ಮಾತ್ರ; ಮನುಷ್ಯರಿಗಲ್ಲ; ದನ ಮಲಗುವ ಕ್ರಿಯೆಯನ್ನು ಸೂಚಿಸುವ ಪದ;
- 'ಕೆಡೆ'ಗೆ ಮೂಲರೂಪ 'ಕೆಡೆ/ಕೆಡ' ಇರಬಹುದು; ಅದರಿಂದ ಬೆಳೆದ 'ಕೆಡೆ' ರೂಪಕ್ಕೆ 'ಕೆಡ' ರೂಪವೂ ಇರಬಹುದು; ತಮಿಳು, ಮಲೆಯಾಳಂಗಳಲ್ಲಿ 'ಕಿಡ' ರೂಪವೇ ಇದೆ; ತೆಲುಗಿನಲ್ಲಿ 'ಕೆಡಮು' ಇದೆ; 'ಕೆಡಗು' ಎಂಬ ರೂಪವೂ ಇದಕ್ಕಿದೆ (ದ್ರಾ.ಭಾ.ಜ್ಞಾ.ಪ.ಕೋ).
- —***ಕೆಡವು*** : 'ಬೀಳಿಸು' ಎಂಬುದು ಇದರ ಅರ್ಥ'; to drop something;

ಪ್ರ: 'ಗಿಡದಿಂದ ಹಣ್ಣನ್ನು ಕೆಡವು'.

ಕೆಡೆಂಜೆಲ್/ಕೆಡೆಂಜೊಳು/ಕೆರಿಂಜೊಳು
Keḍenjel/Keḍenjoḷu/ Kerinjoḷu:

- ಗೊರಬು; ಮಳೆಯಿಂದ ರಕ್ಷಿಸಿಕೊಳ್ಳಲು ತಲೆ ಮತ್ತು ಬೆನ್ನಿನ ಭಾಗವನ್ನು ಮುಚ್ಚುವಂತೆ ತೆಂಗಿನ ಗರಿಗಳಿಂದ ಮಾಡಿದ ರಕ್ಷಾಕವಚ; a structure madeup of coconut leave which covers

head and back part of man to protect from rain;
- ಮಲೆನಾಡಿನಲ್ಲಿ ಮಳೆ ತೀವ್ರತೆ ಹೆಚ್ಚಿರುವಾಗ ಗೊರಬು ಬಳಕೆ.

ಕೆಡ್ಡಸ/ಖೆಡ್ಡಾಸ Keḍḍasa/Kheḍḍāsa:
- ಭೂಮಿ ಋತುಮತಿಯಾಗುವ ಆಚರಣೆ; a celebrating of fertility of frtile land;
- ಕರಾವಳಿ ಪ್ರದೇಶದಲ್ಲಿ ಭೂಮಿ ಪೂಜೆ ಮಾಡುವುದರ ಮೂಲಕ ಫಲವಂತಿಕೆಯ ಸಂಕೇತವಾಗಿ ಆಚರಿಸುವ ಹಬ್ಬ;
- ಇದರ ಸಮಯ ಮಕರ ಮಾಸದ ಇಪ್ಪತ್ತೇಳನೆಯ ದಿನದಿಂದ ಪ್ರಾರಂಭವಾಗಿ ಕುಂಭ ಸಂಕ್ರಮಣದವರೆಗೆ; it is a time between 27th day of month of Makara and Kumba Sankramana;
- ಹೆಣ್ಣುಮಕ್ಕಳೇ ಪ್ರಧಾನವಾಗಿ ಆಚರಿಸುವ ಹಬ್ಬ; it is predominantly women celebration;
- ಭೂಮಿತಾಯಿ ಮುಟ್ಟಾದ ಈ ಮೂರು ದಿನಗಳಲ್ಲಿ ಉಳುಮೆ, ಅಗೆತ ಮುಂತಾದ ಭೂಮಿಗೆ ನೋವಾಗುವ ಯಾವುದೇ ಕೆಲಸ ಮಾಡುವಂತಿಲ್ಲ, ಹಾಗೆ ಮಾಡಿದರೆ ಭೂಮಿ ಬಂಜೆಯಾಗುವಳೆಂದೂ, ಅವರ ಮನೆ ಹೆಣ್ಣು ಮಕ್ಕಳು ಬಂಜೆಯಾಗುವರೆಂದೂ ನಂಬಿಕೆ; there is a belief once a farmer was forming land, land was bleeding and became barren or infertile;
- ಹಿಂದೊಮ್ಮೆ ರೈತನೊಬ್ಬ ಭೂಮಿ ಉತ್ತಾಗ ರಕ್ತ ಬಂತೆಂದೂ ಇದರಿಂದ ಭೂಮಿಗೆ ನೋವಾಗಿ ಬಂಜೆಯಾದಳೆಂಬ ನಂಬಿಕೆ;
- ಮನೆಯನ್ನು ಸ್ವಚ್ಛಗೊಳಿಸಿ ಸೆಗಣಿಯಿಂದ ಸಾರಿಸಿ ಮೊಳದಗಲದ ವೃತ್ತವನ್ನು ಬರೆದು ಅದರಲ್ಲಿ ಬಿಳಿಯ ಮಡಿಬಟ್ಟೆ, ಕಿರುಗೆಜ್ಜೆ, ಕಿರುಗತ್ತಿ, ತೆಂಗಿನ ಸೋಗಿನ ಕಡ್ಡಿಗಳನ್ನು ಇಡುವುದು; ಮೂರನೇ ದಿವಸ ಮುಂಜಾನೆ ಮುತ್ತೈದೆಯರು ಮಡಿಯುಟ್ಟು ಮೊದಲೇ ಸಿದ್ಧಪಡಿಸಿದ ಜಾಗದಲ್ಲಿ ಏಳು ಸರೋಳ ಸೊಪ್ಪುಗಳನ್ನು ಸಾಲಾಗಿರಿಸಿ, ದೀಪಗಳನ್ನು ಹಚ್ಚಿ, ಅರಿಶಿಣ, ಕುಂಕುಮ, ಕರಿಮಣಿ ಮುಂತಾದ ಪೂಜಾ ಸಾಮಾಗ್ರಿಗಳನ್ನಿರಿಸುವರು; ಇದು ಭೂಮಿಯ ಮೈಲಿಗೆ ತೊಳೆದು ಸ್ವಚ್ಛತೆಯಿಂದ ಸ್ವಾಗತಿಸುವ ಸಂಕೇತ;
- ಹೆಣ್ಣಮಕ್ಕಳು ರಜಸ್ವಲೆಯಾದಾಗಿನ ಆಚರಣೆಗಳೇ ಇಲ್ಲೂ ನಡೆಯುವುದು ವಿಶೇಷ; here, the rituals of menstrual of women are celebrated during this festivity;
- ಈ ದಿನಗಳಲ್ಲಿ ವಿಶೇಷ ಅಡುಗೆಗಳ ತಯಾರಿಕೆಯುಂಟು; ಮಾಂಸಾಹಾರಿಗಳು ಮಾಂಸದೂಟ ಮಾಡದಿದ್ದರೆ ಮೂಳೆ ಮುರಿಯುತ್ತವೆಂಬ ನಂಬಿಕೆ;
- —***ಕೆಡ್ಡಸ ಗಾಳಿ*** : ಕೆಡ್ಡಸ ಸಮಯದಲ್ಲಿ ಮೂಡಲ ದಿಕ್ಕಿನಿಂದ ಬೀಸುವ ವಿಲಕ್ಷಣ ಗಾಳಿಯನ್ನು 'ಕೆಡ್ಡಸ ಗಾಳಿ' ಎನ್ನುವರು; ಈ ದಿನಗಳಲ್ಲಿ ಭೂಕೆಲಸ ನಿಷಿದ್ಧ; the wind blown from the direction of the east to the west;
- —***ಕೆಡ್ಡಸ ಬೇಟೆ*** : ಕೆಡ್ಡಸದ ಅಂಗವಾಗಿ ನಡೆಸುವ ಬೇಟೆ; ಕೆಡ್ಡಕ್ಕೆ ಬೇಟೆಯೆಂಬ ಅರ್ಥವಿದ್ದು ಕೆಡ್ಡಸದ ಸಮಯದಲ್ಲಿ ಬೇಟೆ ಒಂದು ಪ್ರಮುಖ ಆಚರಣೆ; as a part of `Keddasa celebration, the hunting is being taken place; it is a major attraction of this festivity;
- ಬೇಟೆಗೆ ಹೊರಡುವ ಮುನ್ನ ಊರಿನ ನಲಿಕೆಯವ ಡೋಲು ಬಡಿದು ಡಂಗುರ ಬಾರಿಸುತ್ತಾ ಸಾರುತ್ತಾನೆ; ಈ ದಿನಗಳಲ್ಲಿ ಮೃಗ ಪಕ್ಷಿಗಳು(ಕಾಡು ಒಡೆಯುವ ಪೀಡೆ) ಬಳಲುವವೆಂದೂ, ಸುಲಭವಾಗಿ ಬೇಟೆಗೆ ಸಿಗುತ್ತವೆಂಬ ನಂಬಿಕೆ;
- ಹೊಳೆ, ಕೆರೆಗೆ ಹೋಗಿ ಮೀನು, ಏಡಿ ಹಿಡಿಯುವರು; men who is going to creek or tanks to catch fish or crabs;
- ಕೆಡ್ಡಸದ ಕ್ರೀಡೆಯಾಗಿ ಕೋಳಿ ಅಂಕವಿರುತ್ತದೆ;
- ವಿನೋದಕ್ಕಾಗಿ ಕುಟ್ಟಿದೊಣ್ಣೆ, ಕಬ್ಬಡಿ, ಪಲ್ಲಿಪತ್‌ಗಳೆಂಬ ಆಟಗಳು ಉಂಟು;
- ಬೇಟೆಯಲ್ಲಿ ಮೊದಲ ಪ್ರಾಣಿಗೆ ಹೊಡೆದು ರಕ್ತ ಚಿಮ್ಮಿಸಿದವನಿಗೆ ಮೊದಲ ಪಾಲು ಮೀಸಲು; A reserved part of the hunting which is reserved to a men who dap the blood of the victim;
- ಹಂದಿ ಹೊಡೆದವನಿಗೆ ಅದರ ತಲೆ, ಕೈ, ಬೆನ್ನೆಲುಬು ಭಾಗ; ಉಳಿದದ್ದು ಇತರರಿಗೆ;

- ಭೂತಗಳಿಗೆ ಪಿತ್ತಜನಕಾಂಗದ ಅರ್ಪಣೆ; ಪುರುಷಭೂತ 'ಮುಗ್ಗೆರ್ಲು' ದೈವಗಳಿಗೂ ಪಾಲುಂಟು.

ಕೆಣಕು Keṇaku:

- ರೇಗಿಸು, ಜಗಳಕ್ಕೆ ಕರೆ, ಮತ್ತೊಬ್ಬರ ತಂಟೆಗೆ ಹೋಗು; tease, irritable, taunt, provoke others;
- ಬೇಕೆಂತಲೇ ಬೇರೆಯವರೊಂದಿಗೆ ಜಗಳವಾಡುವುದು; to quarrel intensionally with others without reason;
- ಪ್ರಾಣಿಗಳನ್ನು ಉದ್ರೇಕಿಸುವುದು;
ಪ್ರ: 'ಮಣ್ಣಮರಿ ಕೆಣಕುಬುಟ್ಟು ಗಿಣ್ಣನ ಈಸ್ಕತ್ತು'(ಗಾ.);
- ದೀವಳಿಗೆಯಲ್ಲಿ ದನಗಳನ್ನು ಕೆಣಕುಬಾರದು;
- ತುಳುವಿನಲ್ಲಿ ಕೆಣಕ್/ಕೆನಕ್(ತು.ನಿ.) ರೂಪಗಳೇ ಇವೆ; ತಮಿಳಿನಲ್ಲಿ 'ಕೆಣಕ್ಕು' ರೂಪದ ಜೊತೆ 'ಚಿಣುಕ್ಕು' ರೂಪವೂ ಇದೆ; ತೆಲುಗಿನಲ್ಲಿ ಚಿಣಕು, ಚೆಣಕು, ಚೆನಗು ರೂಪಗಳಿವೆ; ತಮಿಳಿನಲ್ಲಿನ ಪದಾದಿಯ 'ಚ' ಕಾರಕ್ಕೆ ತೆಲುಗಿನ ಪ್ರಭಾವ ಕಾರಣವಿರಬೇಕು; ತೆಲುಗಿನಲ್ಲಿ ಸಹಜವಾಗಿಯೇ 'ಚ' ಕಾರವಿದೆ; ದ್ರಾವಿಡ ಭಾಷೆಯಲ್ಲಿ 'ಕ' ಕಾರಕ್ಕೆ 'ಚ' ಕಾರ ಬರುವುದು ಒಂದು ಲಕ್ಷಣ; ತೆಲುಗಿನಲ್ಲಿಯೇ 'ಚಿಣಕು' ಮತ್ತು 'ಚೆಣಕು' ಎರಡೂ ರೂಪಗಳಿವೆ; ಇದಕ್ಕೆ ಕಾರಣ ಸ್ವರವ್ಯತ್ಯಯ; ಇ>ಎ ಆಗುವುದು; In Tulu `Keṇak'/`Kenak' form for `Irritate'; in Tamil `Keṇakku' and `Ciṇukku'; in Telugu `Cenagu' form for teasing.

ಕೆಣಿ Keṇi:

- ಉಪಾಯ; ಕುತಂತ್ರ; ಸಿಕ್ಕಿಬೀಳು; a plan, a plot to be caught;
ಪ್ರ: 'ಅವನ ಕೆಣಿ ಅವನ್ಗೆ ಕುತ್ತಾಯ್ತು'.

ಕೆಣಿಬೆಲ್ಲ Keṇibella:

- ಕಾದು ಆರಿದ ಬೆಲ್ಲದ ಮೇಲ್ಪದರ; ಕೆನೆ+ಬೆಲ್ಲ; ಕೆನೆ>ಕೆಣಿ; ಕೆನೆಬೆಲ್ಲ>ಕೆಣಿಬೆಲ್ಲ; ಕೊಪ್ಪರಿಗೆಯಲ್ಲಿ ಕಾಯಿಸಿದ ಬೆಲ್ಲದ ಪಾಕವನ್ನು ಅಚ್ಚುಮಣೆಗೆ ಬಿಡುವ ಮುನ್ನ ಮರದ ಕೂನಿ(ಮರಿಗಿ)ಯಲ್ಲಿ ಸುರಿದಾಗ ಬೆಲ್ಲದ ಆಣ(ಪಾಕ)ದ ಮೇಲೆ ಸಂಗ್ರಹವಾಗುವ ಕೆನೆಬೆಲ್ಲ; ಅಚ್ಚಿನ ಪೂರ್ವದ ದ್ರವರೂಪದ ಬೆಲ್ಲ; the creamy layer of jaggary;
ಪ್ರ: 'ಕೆಣಿಬೆಲ್ಲ ಕಬ್ಬುಗೆ ಸುತ್ತಿಕಂಡು ತಿಂದ್ರೆ ತುಂಬಾ ಚೆನ್ನ'.

ಕೆತ್ತನೆ Kettane:

- ಕೊರೆದು ಮಾಡಿದ ಚಿತ್ರಣ; ಮರ, ಕಲ್ಲು, ಲೋಹ, ಗೋಡೆಗಳ ಮೇಲೆ ಕೊರೆದು ಬಿಡಿಸಿದ ರೂಪ/ ಚಿತ್ರಣ; engraved, chiselled art on wood, stone or metal which are being hung on wallhooks;
ಪ್ರ: 'ಬಾಗಿಲ ಮೇಲಿನ ಲಕ್ಷ್ಮೀಯ ಕೆತ್ತನೆ ಚಿತ್ರ ಚೆನ್ನಾಗಿದೆ';
ಬೇಲೂರು ಶಿಲಾಬಾಲಿಕೆಯರ ಕೆತ್ತನೆ ಅದ್ಭುತ.
- 'ಕೆತ್ತು'+'ಇಸು'=ಕೆತ್ತಿಸು; ಕೆತ್ತುವುದಕ್ಕೆ ಕಾರಣವಾಗು; ಕೆತ್ತುವ ಕ್ರಿಯೆಗೆ ಸಂಬಂಧಿಸಿದ್ದು;
- 'ಕೆತ್ತು' ಪದಕ್ಕೆ 'ಕೆಚ್ಚು' ರೂಪವೂ ಇದೆ; ಸೇರಿಸು, ಸಂಯೋಜಿಸು; ಅದುರು; ಬಡಿದು; ಎದೆ, ಭುಜ, ಕಣ್ಣು ಅದುರುವುದು;
- 'ಕೆತ್ತು' ಮುಖ್ಯವಾಗಿ ವೃತ್ತಿ ಜಾನಪದದ ಒಂದು ಪ್ರಕ್ರಿಯೆಗೆ ಸಂಬಂಧಿಸಿದ್ದು; ಅದರಲ್ಲೂ ನೇಗಿಲು, ಗಾಡಿ ಮುಂತಾದ ವ್ಯವಸಾಯ ಉಪಕರಣಗಳನ್ನು, ಕದ, ತೊಲೆ, ಕಂಬ ಮುಂತಾದ ಗೃಹೋಪಕರಣಗಳನ್ನು ಮಾಡಿಕೊಡುತ್ತಿದ್ದ ಬಡಗಿಯಲ್ಲಿ ಬಳಕೆ; ಅದಕ್ಕಾಗಿಯೇ 'ಬಾಚಿ' ಎನ್ನುವ ಪ್ರತ್ಯೇಕ ಉಪಕರಣವೇ ಇದೆ; ಅದರಿಂದ ಬಡಗಿ ಮರ ಮತ್ತು ಅದರ ಭಾಗವನ್ನು ಸವರಿ, ಕೆತ್ತಿ, ನಯಗೊಳಿಸಿ ಸಿದ್ಧಪಡಿಸಿಕೊಡುತ್ತಿದ್ದ; ಈ ಪ್ರಕ್ರಿಯೆಗೆ ಇಡಿಯಾಗಿ ಅನ್ವಯವಾಗುತ್ತಿದ್ದ ಪದ 'ಕೆತ್ತು'; carve, sculp, acut and chop are the process of shaping plough, cart beam by a carpenter; engraving or chiselling is a process of folk profession;
- ಬೇಸಾಯಗಾರರು ಮನೆಗೆ ಸಂಬಂಧಿಸಿದ ಅಥವಾ ಹೊರಗಿನ ತಮ್ಮ ಉಳುಮೆ ಮುಂತಾದವುಗಳಿಗೆ ಬೇಕಾದ ಸಣ್ಣಪುಟ್ಟ ಸಾಧನಗಳನ್ನು 'ಕೆತ್ತಿ' ಸಿದ್ಧಪಡಿಸಿಕೊಳ್ಳುವುದೂ ಉಂಟು; ದನಕಟ್ಟುವ ಗೂಟಗಳು ಇದಕ್ಕೊಂದು ಉದಾಹರಣೆ;

- ಕೆಲವೊಮ್ಮೆ ರೈತರು ಹುಲ್ಲು/ಕಳೆಗಳನ್ನು ಕೆತ್ತಿ ಕಳೆದು ನೆಲವನ್ನು ನುಣ್ಣಗೆ ಹಸನುಮಾಡಿ ಕಾಯಿ, ಪಲ್ಯಗಳನ್ನು ಒಣಗಿಸಲು ಅಥವಾ ಒಕ್ಕಣೆಗೆ ಕೂಳೆಕೆತ್ತಿ ನೆಲಸಮ ಮಾಡಲು, ಕಣ ಮಾಡಲು ಬಳಸುತ್ತಿದ್ದ ರೂಢಿಯೂ ಇದೆ; 'ಕೆತ್ತು' ವ ಪ್ರಕ್ರಿಯೆ ಪ್ರಧಾನವಾಗಿ ಇಲ್ಲಿರುವುದು.
- ಬೇಸಾಯಗಾರರು ಕೆತ್ತಲು ಬಳಸಿಕೊಳ್ಳುತ್ತಿದ್ದ ಉಪಕರಣ 'ಗುದ್ದಲಿ', ಅಗಲವಾದ ಅದರ ಬಾಯಿ ಈ ಕೆಲಸವನ್ನು ನಿರ್ವಹಿಸುತಿತ್ತು; ಬಡಗಿಗೆ 'ಬಾಚಿ', ರೈತನಿಗೆ 'ಗುದ್ದಲಿ' ಇಂತಹ ಉಪಕರಣಗಳು; the pickaxe or hoe of farmers;
- ಕೃಷಿ ಸಂಸ್ಕೃತಿಯಲ್ಲಿ ಕೆತ್ತುವ ಪ್ರಕ್ರಿಯೆ ಒಂದು ವಿಧಾನ– ಒಂದು ನಿರ್ದಿಷ್ಟ ರೂಪ ಮತ್ತು ಅರ್ಥದಲ್ಲಿ;
- ***—ಕೆತ್ತನ ಗುಂಡು*** : ಕೊರಳ ಆಭರಣ; ಕೊರಳಿಗೆ ಧರಿಸುವ ಕೆತ್ತನೆಯುಳ್ಳ ಚಿನ್ನದ ಆಭರಣ; a neck jewel;
- ***—ಕೆತ್ತುಮೊಳೆ*** : ಕೆತ್ತಲು ಬೇಕಾಗುವ ಮೊಳೆ (ಪಾಂ.ವ್ಯ.ಪ.ಕೋ); a nail or pin which is used to engrave art on wood or stone;
- ***—ಕೆತ್ತೆಉಳಿ*** : ಒಂದು ಜಾತಿಯ ಮರದ ಕಾಯಿಯ ಹುಳಿ; a nut of tree species;
- 'ಕೆಸ್ಸ್'–ರೂಪ; ತು:ಕೆತ್ತ್ ತೆ:ಚೆಕ್ಕು ತ:ಚೆತ್ತು/ಚೆದುಕು ಮ:ಚೆತ್ತು/ಚೆತ್ತ/ಚೆದುಕು(ದ್ರಾ.ಭಾ.ಜ್ಞಾ.ಪ.ಕೋ).
- ಸಪೂರಮಾಡು; ತೆಳುಮಾಡು, ಕೊರೆ; ಎರೆ, ಸುಲಿ, ಸೀಳು;
- ಮೇಲು ಪದರವನ್ನು ಕೊರೆಯುವುದು, ಕೊಚ್ಚುವುದು; to engrave the outer layer or bark of wood;

  ಪ್ರ: 'ಜೂಜಲ್ಲಿ ಎಲ್ಲಾ ದುಡ್ಡು ಕೆತ್ತು(ಕೆತ್ತಿ) ಕಳಿಸಿದರು'.

ಕೆತ್‌ಬೆಟ್ಟೆ Ketbeṭṭe:

- ಅಡಕೆಯ ಒಂದು ಬಗೆ; ಶುಚಿಯಾಗಿ ಹೊಳಪಾಗಿರುವಂಥದು; ಕತ್ತಿಯಿಂದ ಹೆರೆದು ಪಾಲಿಸ್ ಮಾಡುವುದು ವಿಧಾನ; a kind of eraca nut which is polished by sickle;
- ಅಡಕೆ ಗೊನೆಯನ್ನು ಮರದಿಂದ ಇಳಿಸಿದ ನಂತರ ಗೊನೆಯಿಂದ ಬೇರ್ಪಡಿಸಿ ಸಿಪ್ಪೆ ಸುಲಿದು ಬೇಯಿಸಿ ಚೆನ್ನಾಗಿ ಒಣಗಿಸುವುದು; ನಂತರ ಅದನ್ನು ಪಾಲಿಸ್ ಮಾಡಿ ಬಟ್ಲಡಕೆ, ಗೋಟಡಕೆ, ತುಂಡಡಕೆ, ಚೂರಡಕೆ ಮೊದಲಾಗಿ ವಿಂಗಡಿಸಿ ಮಾರಾಟ ಮಾಡುವುದಿದೆ;
- ಅಡಕೆ ಬೆಳೆ ಚಾಮರಾಜನಗರವೂ ಸೇರಿದಂತೆ ರಾಜ್ಯದ ಇತರೆ ಜಿಲ್ಲೆಗಳಲ್ಲಿ ಬೆಳೆಯಲಾಗುವ ವಾಣಿಜ್ಯ ಬೆಳೆ.

ಕೆತಾರಿ/ಕೆತ್ತಾರಿ Ketāri/Kettāri:

- ಕೆತ್ತವಾರಿ, ಕೆತ್ವಾರಿ, ಕೆತ್ತೋರಿ ಎಂಬ ರೂಪಗಳಿವೆ;
- ಕೆತ್ತ+ಪಾರಿ>ಕೆತ್ತವಾರಿ>ಕೆತ್ತಾರಿ;
  ಕೆತ್ತ+ಪಾರಿ>ಕೆತ್ತವಾರಿ>ಕೆತ್ವಾರಿ?; ಪ>ಹ;
- ಕಬ್ಬಿಣದಿಂದ ತಯಾರಿಸಿದ ಒಂದು ಉಪಕರಣ; ಗುದ್ದಲಿಯಾಕಾರದಲ್ಲಿರುತ್ತದೆ; ಕುರುಪೆ, ಚಿಕ್ಕಾರಿ, ಕಳೆಕುಡ್ಲು, ಉಜ್ಜುವಾರೆ ಎಂಬ ಹೆಸರುಗಳಿಂದಲೂ ಕರೆಯುವರು; an iron tool; it is a pick axe shaped tool;
- ಹುಲ್ಲಿನಿಂದ ಕೂಡಿದ ನೆಲವನ್ನು ಕೆತ್ತಲು, ಗರಿಕೆಯ ನೆಲವನ್ನು ಬಗೆದು ಗರಿಕೆ ಬೇರನ್ನು ಬುಡಸಮೇತ ತೆಗೆಯಲು ಮತ್ತು ಇತರೆ ಕೃಷಿ ಕೆಲಸಗಳಿಗೆ ಬಳಕೆ; it is used to remove weeds;

  ಪ್ರ: 'ಕೆತ್ತಾರಿ ತಕ್ಕಂದು ಗರಿಕೆ ಹೊರ್‍ದಾಕು'.

ಕೆತ್ನಡ್ಡ Ketnaḍḍa:

- ಅಳತೆಯ ಸಾಧನ; ಮರಗೆಲಸದಲ್ಲಿ ಮರದ ತುಂಡುಗಳಿಗೆ ಗುರುತು ಹಾಕಲು ಬಳಕೆ; a measured tool; it is used in carpentry to mark measurement on wooden pieces;
- ಉಳಿ, ಬಾಚಿ, ಅತ್ರಿ, ಬೈರ್ಗೆ, ಸುತ್ತಿಗೆ ಸೇರಿದಂತೆ ಕೆತ್ನಡ್ಡವೂ ಸಹ ಮರಗೆಲಸದವರ ಉಪಕರಣ;
- ಕಿಟಕಿ, ಬಾಗಿಲು, ಮೇಜು, ಕುರ್ಚಿ, ಮಂಚ, ಊಟದ ಮೇಜು ಮೊದಲಾದ ಪೀಠೋಪಕರಣಗಳನ್ನು ತಯಾರಿಸುವಾಗ ಅವುಗಳನ್ನು ಅಳತೆಗನುಸಾರವಾಗಿ ಕತ್ತರಿಸಿಕೊಳ್ಳಲು ಈ ಉಪಕರಣದ ಬಳಕೆ;

  ಪ್ರ: 'ಮಗಾ ಕೆತ್ನಡ್ಡ ತೆಗೆದು ಬಿಸಾಡಿತು'.

ಕೆತ್ಬಳೆ Ketbaḷe:

- ಕೆತ್ತುವ ಅಥವಾ ಮಣ್ಣನ್ನು ಕೆರೆಯುವ ಸಾಧನ; ಕುಂಬಾರಿಕೆ ಉಪಕರಣ; ಕುಂಬಾರ ಮಡಕೆ ಮಾಡಲು ಸಿದ್ಧಪಡಿಸಿದ ಮಣ್ಣನ್ನು ಅಗತ್ಯಕ್ಕೆ ತಕ್ಕಷ್ಟು

ಹೆರೆದುಕೊಂಡು ಉಂಡೆಕಟ್ಟಿ ತಿಗರಿಯ ಮೇಲಿಟ್ಟು ಮಡಕೆ ತಯಾರಿಸುವುದು ವಿಧಾನ; a tool that is used to engrave or scratch the soil; it is used in pottery;

- ಕಬ್ಬಿಣದಿಂದ ತಯಾರಿಸಿದ್ದು; ಬಳೆಯ ಆಕೃತಿಯಲ್ಲಿರುತ್ತದೆ; ಕುಂಬಾರಿಕೆಗೆ ಬಳಸುವ ಉಪಕರಣಗಳಲ್ಲಿ ಕೆತ್ಬಳೆಯೂ ಸಹ ಒಂದು (ಹಾ.ಜಿ);
- ಕೆತ್ತುವ+ಬಳೆ>ಕೆತ್‌ಬಳೆ>ಕೆತ್ಬಳೆ; ಉಚ್ಚಾರಣೆಯಲ್ಲಿ 'ವ' ಕಾರಕ್ಕೆ 'ಬ' ಕಾರ ಸೇರ್ಪಡೆಯಾಗಿ ಸಂಕ್ಷಿಪ್ತ ಪದ ಸೌಲಭ್ಯದಿಂದ 'ಕೆತ್ಬಳೆ' ಆಗಿದೆ;
- *ಪ್ರ: 'ಕೆತ್ಬಳೆ ಮಣ್ಣೊಳ್ಗೆ ಊತ್ಕೊಂಡದೆ ತಗೊಂಡ್ರಾ'?.*

ಕೆತ್ತಾ ಕೆತ್ತಾ ಸಿಬರು kettā kettā sibaru :

- ಬಳಕೆಯಲ್ಲಿರುವ ಒಂದು ಜನಪ್ರಿಯ ನುಡಿಗಟ್ಟು; ಬಡಗಿ ಮತ್ತು ವ್ಯವಸಾಯ ಮೂಲದಿಂದ ಬಂದು ಆ ಕ್ಷೇತ್ರದಲ್ಲಿ ಹೆಚ್ಚು ಚಲಾವಣೆಯಲ್ಲಿರುವ ನುಡಿಗಟ್ಟು; ಆದರೆ ಈಗ ಹಳ್ಳಿಯ ಮೂಲ/ಸಾಂಪ್ರದಾಯಿಕ ಅನುಭವ ಇರುವ ಯಾರಿಗೂ ಈ ನುಡಿಗಟ್ಟಿನ ಪರಿಚಯವಿದೆ; it is an popular idiom; it has its roots in carpentry and farming;
- 'ಕೆತ್ತಾ ಕೆತ್ತಾ' ಪದದ ಪುನರಾವರ್ತನೆಯನ್ನು ಗಮನಿಸಬೇಕು; ಕ್ರಿಯೆಯ ಒತ್ತನ್ನು ಮತ್ತು ಒತ್ತಡವನ್ನು ಸೂಚಿಸಲು ಒಂದೇ ಪದದ ಇನ್ನೊಂದು ಬಂದಿರಲು ಸಾಕು; ಒಂದೇ ಸಾರಿ ಕೆತ್ತುವುದರಿಂದ 'ಸಿಬರು' ಬಂದರೂ, ಮತ್ತೆ ಮತ್ತೆ ಕೆತ್ತಿದಾಗ ಈ 'ಸಿಬರು' ಹೆಚ್ಚುತ್ತಾ ಹೋಗುತ್ತದೆ ಎಂಬ ಅರ್ಥ ತರಲು ಹೀಗೆ ಪದಪುನರಾವರ್ತನೆ ಬಂದಿದೆ; 'ಕೆತ್ತಾ ಕೆತ್ತಾ' ಎನ್ನುವುದು 'ಕೆತ್ತುತ್ತಾ ಕೆತ್ತುತ್ತಾ'ದಿಂದ ಬಂದುದು, ಕ್ರಿಯೆಯ ನಿರಂತರತೆಯನ್ನು ದಾಖಲಿಸುವುದು; engraving and engraving we peel outer layer one by one just like that we solve our problem gradually;
- ಬಾಚಿಯಿಂದ ಕೆತ್ತಿದಾಗ ಮೊದಮೊದಲ ಸಲ 'ಸಿಬರು' ಬರುವುದು ಸಹಜ; ಕ್ರಮೇಣ ನಯಗೊಳಿಸುವ ಕೆಲಸ ನಡೆಯುತ್ತದೆ; ಹಾಗೆಯೇ ಲೋಕದ ಸಮಸ್ಯೆಗಳನ್ನು ಕೂಡ ನೋಡಬೇಕು;
- ಈ ನುಡಿಗಟ್ಟು ವಾಸ್ತವ ನೆಲೆಗಟ್ಟಿನಿಂದ ಪ್ರಾರಂಭವಾದರೂ, ಅಲ್ಲಿಗೇ ನಿಲ್ಲದೆ ಆಮೇಲೆ ಅದು ಒಂದು ಪ್ರತಿಮೆಯಾಗಿ ಬೆಳೆಯುತ್ತದೆ; ಮೊದಲಿಗೆ ಅನ್ವಯ, ಆಮೇಲೆ ಅದು ಅನನ್ವಯ; ಮೊದಲಿನ ಅಸ್ತಿತ್ವವನ್ನು ಬಿಟ್ಟು ಕೊಡದೆ, ಬೇರೊಂದು ಅಸ್ತಿತ್ವಕ್ಕೆ ಜಿಗಿಯುವುದು ನುಡಿಗಟ್ಟಿನ ಮೂಲ ಉದ್ದೇಶ;
- ನಿಜವಾಗಿಯೂ ಈ ನುಡಿಗಟ್ಟು ಬಳಕೆಯಾಗಿರುವುದು ಮಾತಿನಮಥನ, ಸಮಸ್ಯೆಯ ತಲ್ಲಣ ಮತ್ತು ಜಗಳದ ಅತಿರೇಕಗಳನ್ನು ಕುರಿತು; ಅವು ಹೆಚ್ಚಾದಂತೆ ಸಣ್ಣಸಣ್ಣ ಅಡ್ಡಿ, ಆತಂಕ, ಘರ್ಷಣೆಗಳು ಬೆಳೆಯುತ್ತವೆ; ಇವನ್ನು 'ಸಿಬರು' ಪದ ಸಂಕೇತಿಸುತ್ತದೆ; 'ಸಿಬರು' ಏಳದ ಹಾಗೆ ಮಾಡಬೇಕಾದರೆ ವಾಸ್ತವದ ನೆಲೆಗಟ್ಟಿನಲ್ಲಿ 'ನುಣಪಾಗಿಸುವುದು', ಪ್ರಕಾರಾಂತವಾದುದರಲ್ಲಿ 'ಬಗೆಹರಿಸುವುದು' ಮುಖ್ಯವಾಗುವುದು; ಆದರೆ ಹೀಗೆ ಆಗದೆ 'ಘರ್ಷಣೆ'ಯಾಗುವ ಸ್ಥಿತಿಯನ್ನು ಈ ನುಡಿಗಟ್ಟು ಹೇಳುತ್ತದೆ; this idiom is used to show the extremes of quarrels talks, discussions;
- 'ಕೆತ್ತು' ಪದ ನಯಗೊಳಿಸುವ/ತೆಳುಗೊಳಿಸುವ ಕ್ರಿಯೆಯಲ್ಲಿ ಪಾತ್ರವಹಿಸುವಂಥದು; ಈ ಕ್ರಿಯೆಯ ಪೂರ್ವಭಾಗದಲ್ಲಿ ನಡೆಯುವಂಥದು 'ಸಿಬರು' ಏಳುವುದು; `Kettu' or engrave means smoothen something rough;
- ಸಂವಾದಿ ಪದಗಳು: ತ:ಚೆದುಕ್ಕು, ಮ:ಚೆತ್ತು, ತೆ:ಚೆಕ್ಕು, ತಮಿಳಿನ ಚದುಕ್ಕು>ಚೆದ್ಕು>ಚೆಕ್ಕು?; ತೆಲುಗಿನ ಪದಾರಂಭದಲ್ಲಿ 'ಚ' ಇದೆ; ಕ>ಚ ಆಗುವುದು ದ್ರಾವಿಡ ಭಾಷೆಯ ಸಾಮಾನ್ಯ ನಿಯಮ; ಪದಮಧ್ಯದ ತ>ದ ಆಗುವುದು ಸುಲಭ, ಆದರೆ ತ/ದಗಳು 'ಕ' ಆಗುವುದು ಕಷ್ಟ; 'ಸಿಬರು' ಪದಕ್ಕೆ ಸಿಗುರ್/ಸಿಗುರು, ಸಿವರು/ಸಿವುರು ರೂಪಗಳಿವೆ, ಆದರೆ –'ಗ'– ಬಂದುದಾದರೂ ಹೇಗೆ?;

= ಬ.ವ.ಗ–ಗಳಲ್ಲಿ ಮೊದಲ ಎರಡು ಪರಸ್ಪರ ಬದಲಾಗಬಹುದು; ಆದರೆ ಕೊನೆಯದು ಬದಲಿ ಅಲ್ಲವಲ್ಲ; ಅರ್ಥ: ಚಕ್ಕೆ, ಸೀಳು/ದಾರದ ರೀತಿಯ ಎಳೆಗಳು ಪ್ರಕಾರಾಂತ: ಜಗಳ, ಮಥನ, ಸಮಸ್ಯೆ, ತಿಕ್ಕಾಟ, ಸಂಘರ್ಷ.

ಕೆತ್ತಿಗ Kettiga:

- ಕೆಲಸಿಗ, ಕ್ಷೌರಿಕ; ಕೆತ್ತುವ ಅಥವಾ ಕ್ಷೌರದ ಕೆಲಸ ಮಾಡುವವ; 'ಕ್ಷೌರ' ಪದಕ್ಕೆ 'ಕೆತ್ತು' ರೂಪ ವ್ಯಂಗ್ಯೋಕ್ತಿಯಾಗಿ ಬಳಕೆ; 'ಬೇಗ ಮುಗ್ಸಪ್ಪ ಅಂದ್ರೆ ಕೆತ್ತಾ ಕುಂತವ್ನೆ' ಎಂಬುದು ವ್ಯಂಗ್ಯೋಕ್ತಿ; a barber one who runs a saloon shop; one who works with sharpe knife;
- ಕತ್ತಿಯ ಬಳಕೆ ಪ್ರಧಾನವಾದುದು; ಇದು ಕತ್ತಿಯಿಂದ ಕೆತ್ತುವ ಕೆಲಸವಾದ್ದರಿಂದ 'ಕೆತ್ತಿಗ' ಎಂಬ ಹೆಸರು ಬಂದಿರಬಹುದು?;
- ವ್ಯಕ್ತಿಸೂಚಕ ನಾಮಪದವಾಗಿ ಬಳಕೆ; 'ಕೆತ್ತು' ಪದಕ್ಕೆ 'ಇಗ' ಪ್ರತ್ಯೆಯ ಸೇರಿ 'ಕೆತ್ತಿಗ' ಆಗಿರುವಂಥದು; ಕೆತ್ತುಗ>ಕೆತ್ತಿಗ(ಉ>ಇ);
- 'ಕೆತ್ತು' ಪದಕ್ಕೆ ನಾನಾರ್ಥಗಳಿರುವಂತೆ ಈ ಅರ್ಥವೂ ಒಂದೆನಿಸಿರುವುದು ಸ್ಪಷ್ಟ;
- ವಹಿಸಿದ ಕೆಲಸವನ್ನೇ ಸುಮಾರು ಸಮಯದವರೆವಿಗೂ ಮಾಡುವವರನ್ನು ಕುರಿತು 'ಏನ್ ಕೆತ್ತುತಾ ಕುಂತವ್ನಪ್ಪ ಇವ್ನು' ಎಂದು ಹೇಳವುದಿದೆ;

  ಪ್ರ: 'ಕೆತ್ತಿಗನ ಕತ್ತಿ ಏನಾಯ್ತು ಅಂದ್ರೆ ಪೂಜೆಗಿಟ್ಟವ್ನೆ ಅಂದ್ನಂತೆ'.

ಕೆತ್ಲು ಬೇಸಾಯ Ketlu bēsāya:

- ಬುಡಕಟ್ಟು ಸಮುದಾಯದವರ ಪ್ರಾಚೀನ ವ್ಯವಸಾಯ ಪದ್ಧತಿ; an ancient agricultural system of tribal communities;
- ಬೇಸಾಯ ಪದಕ್ಕೆ ವ್ಯವಸಾಯ, ಆರಂಭ, ಕೃಷಿ, ಉಳುಮೆ ಎಂಬ ನಾನಾರ್ಥಗಳಿವೆ; ಇದು ಒಬ್ಬ ವ್ಯಕ್ತಿಯಿಂದ ಪೂರ್ಣಗೊಳ್ಳುವಂಥದ್ದಲ್ಲ; ಮನೆಮಂದಿಯಲ್ಲಾ ಮಾಡಿದರು ಮುಗಿಯದ ಅಕ್ಷಯ ಪಾತ್ರೆಯಂತೆ; Besaya-Farming has many synonyms- Vyavasaya, Aramba-beginning cultivation- Krushi
- ಪ್ರಾಚೀನ ಬುಡಕಟ್ಟುಗಳಿಂದ ಪ್ರಾರಂಭವಾದ ಈ ಬೇಸಾಯ ಪದ್ಧತಿ ಇಂದಿನ ಪಾರಂಪರಿಕ ಹಾಗೂ ಆಧುನಿಕ ಕೃಷಿ ಪದ್ಧತಿಗಳ ಆವಿಷ್ಕಾರಗಳೊಂದಿಗೆ ನಿಂತಿದೆ;
- 'ಬೇಸಾಯ ನಾಸಾಯ, ನೀಸಾಯ, ಮನೆಮಂದಿಯೆಲ್ಲಾ ಸಾಯ' ಎಂಬ ಗಾದೆಮಾತು ಎಲ್ಲರ ಪಾಲ್ಗೊಳ್ಳುವಿಕೆಯ ದ್ಯೋತಕವನ್ನು ಬಿಂಬಿಸುವುದರ ಜೊತೆಗೆ ವ್ಯಂಗ್ಯೋಕ್ತಿಯೂ ಹೌದು; a proverb framed on farming which causes the death of the whole family due to its gambling with rain, prices, loans etc;
- ಕೆತ್ತು, ಕೆತ್ಲು ಎನ್ನುವುದು ನೆಲವನ್ನು ಅಗೆ, ಮಣ್ಣನ್ನು ಸಡಿಲಗೊಳಿಸು, ಗುಳಿದಸಿ, ಕಳೆಗುದ್ದಲಿಗಳಿಂದ ಭೂಮಿಯನ್ನು ಸಾಗುವಳಿ ಮಾಡು ಎಂಬರ್ಥವನ್ನು ಹೊಂದಿದೆ; `Kethlu' means to cùltivate or to loose the soil to grow crops;
- ಗಿಡ, ಮರ, ಬಳ್ಳಿ, ಪೊದೆ, ಮೆಳೆಗಳನ್ನು ಕಡಿದು ಒಂದೆಡೆ ಕಲೆಹಾಕಿ ಬೆಂಕಿಯಲ್ಲಿ ಸುಟ್ಟು ಶುಚಿಗೊಳಿಸಿ ಸಾಗುವಳಿಗೆ ಯೋಗ್ಯ ಭೂಮಿಯಾಗಿ ಸಿದ್ಧಪಡಿಸುವುದು; ನಂತರ ಗುಳಿದಸಿ, ಕಳೆಗುದ್ದಲಿಗಳಿಂದ ಅಗೆದು ಮನೆಯ ಹೆಂಗಸರ ಸಹಾಯದಿಂದ ಉಳುಮೆ ಮಾಡಿ(ಕೆರೆದು) ಹೆಂಟೆ ಹೊಡೆದು ಸಮತಟ್ಟು ಮಾಡುವುದು ಕ್ರಿಯೆ; to cut or clean the plants, trees, creepers, bushes to cultivate land to grow crops;
- ನಂತರ ಮಳೆಯ ಅನುಕೂಲ ನೋಡಿಕೊಂಡು ಬಿತ್ತನೆ ಬೀಜ ಬಿತ್ತಿ ಮಣ್ಣು ಮುಚ್ಚುವುದು;
- ಬೀಜ ಮೊಳಕೆ ಹೊಡೆದು ಪೈರು ಬೆಳೆದ ಮೇಲೆ ಇದೇ ಉಪಕರಣಗಳಿಂದ ಕಳೆ, ಕಸ, ಕಡ್ಡಿ ತೆಗೆದು ಬುಡ ಸಡಿಲಗೊಳಿಸಿ ಗೊಬ್ಬರ–ಗೋಡು ಹಾಕಿ ಬೆಳೆ ತೆಗೆಯುವುದು; ಇದು 'ಕೆತ್ಲು ಬೇಸಾಯ' ದಲ್ಲಿ ಅನುಸರಿಸುವ ವಿಧಾನ;
- ಗುಳಿದಸಿ, ಗುದ್ದಲಿಗಳಿಂದ ನೆಲವನ್ನು ಕೆತ್ತಿ, ಅಗೆದು ಹಸನುಮಾಡಿ 'ಹದ ಮಳೆಗೆ ಬೆದೆ ಬೆಳೆ' ತೆಗೆಯುವ ವಿಧಾನವೇ ಕೆತ್ಲು ಬೇಸಾಯ ಪದ್ಧತಿ;
- ಪ್ರಾಚೀನ ಬುಡಕಟ್ಟು ಸಮುದಾಯಗಳಲ್ಲಿ ಕೆತ್ಲು, ಕುಮರಿ ಬೇಸಾಯ ಪದ್ಧತಿಗಳಿದ್ದು ಇವು ವಲಸೆ ಬೇಸಾಯದಿಂದ ಕೂಡಿದ್ದವು; in ancient tribes, they have imigratory agricultural system such as Kethlu or `Kumari';
- ಕೃಷಿಯ ಮೂಲ ಹೆಣ್ಣು; ಗೆಡ್ಡೆ–ಗೆಣಸು, ಹಣ್ಣು–ಹಂಪಲುಗಳನ್ನು ತಿಂದು ಬದುಕುತ್ತಿದ್ದ ಆದಿ ಮಾನವ ದಿನ ಕಳೆದಂತೆ ರುಚಿಗೆ ಒತ್ತುಕೊಟ್ಟಂತೆ ಕಾಣುತ್ತದೆ; ಅದು ವಿವಿಧ ಕಾಳುಗಳ ಬೆಳವಣಿಗೆಗೆ ಉತ್ತೇಜನ ನೀಡಿರಬಹುದು; ಆದರೆ ಅದಕ್ಕೆ ಸಂಬಂಧಿಸಿದ

ಯಾವುದೇ ವಿಧಾನವೂ ಅವರಿಗೆ ತಿಳಿದಿರಲಿಲ್ಲ; ಎತ್ತು, ದನ, ಹಸುಗಳ ಪರಿಚಯವಿರಲಿಲ್ಲ; ವ್ಯವಸಾಯದ ವಿಧಾನದ ಅರಿವಿರಲಿಲ್ಲ; ಗಂಡಸಿಗೆ ಕಾಡು-ಮೇಡು ಅಲೆದು ಗೆಡ್ಡೆ-ಗೆಣಸು ತರುವ ಕೆಲಸವಾದರೆ, ಹೆಂಗಸಿಗೆ ಮನೆ, ಮಕ್ಕಳು, ಸುತ್ತಮುತ್ತಲ ಪರಿಸರ, ಪಶುಪಾಲನೆ, ಪೋಷಣೆಯೇ ಕಾಯಕವಾಗಿತ್ತು;

- ಅದರ ನಡುವೆ ಬಿಡುವಿನ ಸಂದರ್ಭದಲ್ಲಿ ಮನೆಯ ಹೆಂಗಸರು ಅಕ್ಕಪಕ್ಕದ ಜಾಗವನ್ನು ಶುಚಿಗೊಳಿಸಿ ಗುಳಿದಸಿ, ಗುದ್ದಲಿಗಳಿಂದ ಅಗೆದು ತಾವು ತಿಂದಿಟ್ಟ ಗೆಡ್ಡೆ-ಗೆಣಸು, ಹಣ್ಣು-ಹಂಪಲುಗಳ ಬೀಜಗಳನ್ನು ನೆಲದಲ್ಲಿ ಹುಗಿದು ಬೆಳೆ ಬೆಳೆಯುವುದನ್ನು ಕಲಿತರು; ಅದು ಹಾಗೆಯೇ ಮುಂದುವರಿದು ಇತರೆ ಬೀಜಗಳ ಪರಿಚಯ, ಬಿತ್ತನೆ, ಬೆಳವಣಿಗೆಯೊಂದಿಗೆ ಕೆತ್ಲು ಬೇಸಾಯ ಪ್ರಾರಂಭವಾಯಿತು; ಮುಂದೆ ಅದು ಅವರ ಜೀವನಾವಶ್ಯಕ ಕಸುಬುಗಳಲ್ಲೊಂದಾಗಿ ಇಂದಿನ ಕೃಷಿ ಪದ್ಧತಿಗಳಿಗೆ ನಾಂದಿಯಾಯಿತು;
- ನೆಲೆನಿಂತ ಜಾಗದಲ್ಲಿ ಒಂದೆರಡು ವರ್ಷಗಳ ಕಾಲ ಸಾಗುವಳಿ ಮಾಡಿ ನಂತರ ಅಲ್ಲಿನ ಫಲವತ್ತತೆ ಕಡಿಮೆಯಾಯಿತೆಂದು ತಿಳಿದು ಮುಂದಿನ ಜಾಗಕ್ಕೆ ಸ್ಥಳಾಂತರಗೊಂಡು ಮಾಡುವ ಕೃಷಿ ಪದ್ಧತಿಗೆ 'ವಲಸೆ ಬೇಸಾಯ' ಎನ್ನುವರು; ಸಾಮಾನ್ಯವಾಗಿ ಇದು ಕೃಷಿಗೆ ಒಳಪಟ್ಟ ಎಲ್ಲಾ ಬುಡಕಟ್ಟುಗಳಲ್ಲಿಯೂ ರೂಢಿಯಲ್ಲಿದ್ದಂತಹ ವಿಧಾನ; once the settled tribes cultivated the land for a time, then the reasons of infertility they moved to another new place to settle and cultivation; this is called as Migratory Farming or Agriculture
- ಅಲೆಮಾರಿಗಳಾದ ಆದಿವಾಸಿಗಳು ಒಂದೆಡೆ ನೆಲೆನಿಲ್ಲುವ ಜಾಯಮಾನದವರಾಗಿರಲಿಲ್ಲ;

ಪ್ರ: ಕೆತ್ಲು ಬೇಸಾಯ ಮಾಡಿ ಕಾಡುಪ್ರಾಣಿಗಳಿಗೂ ಆಹಾರವಾಯ್ತು'.

ಕೆತ್ತೆಬಜೆ/ಕೆತ್ತೆಬಾಜಿ Kettebaje/ kettebāji:

- ಮಾಡಬೇಕಾದ ಕೆಲಸವನ್ನು ಬಿಟ್ಟು ಅನರ್ಥಕಾರಿ ಕೆಲಸ ಮಾಡುವವ; ಮೊಂಡುತನ, ಉದ್ಧಟತನದ ವ್ಯಕ್ತಿ; ಬೇಜವಾಬ್ದಾರಿತನದಿಂದ ವರ್ತಿಸುವವ; ಸ್ವೇಚ್ಛಾಚಾರ, ಕಿತಾಪತಿಯಿಂದ ಕೂಡಿದವ; a person who is immoral, a disobedient, irresponsible, misbehaviour; a man indecent values;
- ಲಂಗುಲಗಾಮಿಲ್ಲದ ವರ್ತನೆ; ಎಚ್ಚರತಪ್ಪಿ ನಡೆಯುವವ; ಗುರು-ಹಿರಿಯರ ಮಾರ್ಗದರ್ಶನವಿಲ್ಲದೆ ತನ್ನಿಷ್ಟದಂತೆ ಬದುಕುವವ; ಅಡ್ಡದಾರಿಯಿಂದ ಕೂಡಿದ ಜೀವನ; a man who never respects seniors, teachers;

ಪ್ರ: 'ಅವನೇನು ಬರೀ ಕೆತ್ತೆಬಜೆ ಕೆಲಸ ಮಾಡ್ಕೊಂಡು ನಿಂತವ್ನಲ್ಲ'.

ಕೆದಕು/ಕೆದುಕು/ಕೆದ್ಕು Kedaku/Keduku/ Kedku:

- ಕೆದಕು>ಕೆದ್‌ಕು>ಕೆದ್ಕು; ಸಂಕ್ಷಿಪ್ತ ಪದ ಸೌಲಭ್ಯದಿಂದಾಗಿ ಈ ಬದಲಾವಣೆ;
- ತಳಮೇಲು ಮಾಡು; ಹರಡು; ಹುಡುಕು; ನೆನಪಿಸು; ನೆಲವನ್ನು ಅಗೆದು ಸಡಿಲಗೊಳಿಸು; ತಿರುವು; ಒಣಗಲು ಹರಡಿದ ಧಾನ್ಯದ ಮೇಲೆ ಕೈ ಅಥವಾ ಕಾಲಾಡುವಿಕೆ; ಆಹಾರ ಸೀದು ಹೋಗದಂತೆ ಕುರ್ಪಿ ಅಥವಾ ಸೌಟಿನಿಂದ ತಿರುಗಿಸುವ ಕ್ರಿಯೆ; to stir up; to dig up; to loose the earth for cultivation;
- ಸೌದೆಯಿಂದ ತುಂಬಿ ಉರಿಯುತ್ತಿರುವ ಅಥವಾ ಹೊಗೆಯಾಡುತ್ತಿರುವ ಒಲೆ(ಅಡುಗೆ ಒಲೆ ಅಥವಾ ಬೆಲ್ಲ ಬೇಯಿಸುವ ಕೊಪ್ಪರಿಗೆ ಒಲೆ)ಯನ್ನು ಕವೆಗೋಲು ಅಥವಾ ಕಬ್ಬಿಣದ ಸಣ್ಣ ಸರಳಿನಿಂದ ಕೆದಕುವುದು; ಒಂದೆಡೆ ರಾಶಿ ಇರುವ ತೆನೆ, ಹುಲ್ಲು, ತೆನೆಯಿಂದ ಕೂಡಿದ ಹುಲ್ಲು ಅಥವಾ ಕಡ್ಡಿ, ತಿಪ್ಪೆಗೊಬ್ಬರ-ಗೋಡು, ಕಸ-ಕಡ್ಡಿಯಂತಹ ತ್ಯಾಜ್ಯ ವಸ್ತುಗಳಿಂದ ತುಂಬಿದ ಜಾಗ, ಕಲ್ಲು-ಪೊಟರೆಗಳ ರಾಶಿ, ನೀರಿನಿಂದ ಕಲಸಿ ನೆನೆಹಾಕಿದ ಧಾನ್ಯ, ಮಣ್ಣು (ಕುಂಬಾರನ ಮಡಕೆ ತಯಾರಿಕೆಗೆ ಅಥವಾ ಮಣ್ಣಿನ ಗೋಡೆ ನಿರ್ಮಾಣಕ್ಕೆ), ಮುಳ್ಳು, ಪೊದೆಗಳಿಂದ ಕೂಡಿದ ಜಾಗ, ಒಣಗಲು ಹರಡಿರುವ ವಿವಿಧ ಧಾನ್ಯಗಳು, ಸೌದೆ, ಸೊಪ್ಪು-ಸೆದೆ, ಕಟ್ಟಿಗೆ ಮೊದಲಾದವುಗಳ ರಾಶಿಯನ್ನು ಕೆದಕಿ ಹರಡುವ ಅಥವಾ ತಳಮೇಲು ಮಾಡಿ ಬಿಸಿಲಿನಲ್ಲಿ ಒಣಗಿಸುವ ಪ್ರಕ್ರಿಯೆ;

- ಹರಡಿರುವ ಧವಸ-ಧಾನ್ಯಗಳು, ತೆನೆ, ಹುಲ್ಲು, ಸೆತ್ತೆ-ಸೆದೆ ಮೊದಲಾದವುಗಳನ್ನು ವ್ಯಕ್ತಿ ತನ್ನ ಕೈ ಅಥವಾ ಕಾಲುಗಳಿಂದ ಕೆದಕುವುದು; ಅಲ್ಲದೆ ಕೈಕೂರಿಗೆ, ಕೊಕ್ಕೆಕೋಲು, ಮಮ್ಮಿ, ಗುದ್ದಲಿ, ಮುಂಭಾಗ ಕವಲಿರುವ ಬಿದಿರು ಅಥವಾ ಇತರೆ ಮರದ ನೇರ, ಗಟ್ಟಿ ತುಂಡು ಅಥವಾ ಕೋಲುಗಳ ಬಳಕೆ; to rake up grains, straw stalk;
- ನಿಂತ ಜಗಳಕ್ಕೆ ವ್ಯಂಗ್ಯೋಕ್ತಿಗಳ ಮೂಲಕ ಮರುಚಾಲನೆ ನೀಡುವುದು;
  ಪ್ರ: 'ಅದ್ಯಾನಾರಿ ಅದ್ನೆ ಕೆದ್ಕಿನೋ ಈ ಮಾರಾಯ ಸುಮ್ನೆ ಕೂತ್ಕಳ್ದೆ';
- 'ಕೆದಕು' ಪದಕ್ಕೆ ಕೋಳಿಕಾಲು ಅನ್ವರ್ಥವಾಗಿ ಬಳಕೆ; ಸಾಮಾನ್ಯವಾಗಿ ಕೋಳಿಗಳು ಆಹಾರ, ಹುಳ-ಹುಪ್ಪಟೆ ಹುಡುಕುವುದಕ್ಕಾಗಿ ಮಣ್ಣಿನಿಂದ ಕೂಡಿದ ನೆಲ, ತಿಪ್ಪೆಗೊಬ್ಬರ, ಕಸ-ಕಡ್ಡಿಯಂತ ತ್ಯಾಜ್ಯದಿಂದ ಕೂಡಿದ ಜಾಗ; ಬಚ್ಚಲು; ಹಸಿರು ಹುಲ್ಲಿನಿಂದ ತುಂಬಿದ ಬಯಲು ಪ್ರದೇಶವನ್ನು ಕಾಲಿನಿಂದ ಕೆರೆದು ಕೆದಕಿ ಬೇರ್ಪಡಿಸಿ, ಚೆಲ್ಲಾಪಿಲ್ಲಿ ಮಾಡಿ ತನಗೆ ಬೇಕಾದ ಆಹಾರವನ್ನು ಕೊಕ್ಕಿನಿಂದ ಹೆಕ್ಕಿ ತಿನ್ನುವುದು ವಾಡಿಕೆ; ಹಾಗೆಯೇ ವ್ಯಕ್ತಿಗಳಲ್ಲಿ ಕೆಲವರು ತಮ್ಮ ಅಗಲಿನಲ್ಲಿರುವ ಆಹಾರವನ್ನು ತೆಗೆದು ತಿನ್ನದೆ ಕೈನಿಂದ ಕೆದಕಿ ನೋಡಿ ಅನಂತರ ತಿನ್ನುವುದಿದೆ; ಇದಕ್ಕೆ 'ಸೋಸು'ವಿಕೆ ಎನ್ನುವರು; ಆ ಹಿನ್ನೆಲೆಯಲ್ಲಿ 'ಸೊಸ್ಕೊ ಉಣ್ಣೋಸ್ಗೆ ಸ್ವಾನಾಲರೋಗ, ಕೆದಿಕ್ಕಂಡ್ ಉಣ್ಣೋನ್ಗೆ ಕೆರ್ಕಳೊ ರೋಗ' ಎಂಬ ಗಾದೆಮಾತು ಹುಟ್ಟಿಕೊಂಡಿದೆ(ಚಾ.ಜಿ); `scatter', `scratch' or `kedaku' is a word which applies cocks or hen's scratching or dig up the earth or filthy with its beaks and legs;
- *ಪ್ರ: 'ಊಟ ಮಾಡು ಅಂತ ತಟ್ಟೇಲಿ ಅನ್ನ ಹಾಕ್ಕೊಟ್ರೆ ತಟ್ಟೆಗೆ ಕೈ ಹಾಕ್ಕೊಂಡು ಕೋಳಿ ಕಾಲುನ್ ತರ ಕೆದುಕ್ತ ಕುಂತವ್ನೆ';*
- ಮನೆಯ ಮೂಲೆಗಳಲ್ಲಿ ರಾಶಿ ಬಿದ್ದಿರುವ ಹಳೆಯ ಉಪಯುಕ್ತ ಅಥವಾ ಅನುಪಯುಕ್ತ ವಸ್ತು ಅಥವಾ ಪದಾರ್ಥವನ್ನು ಕೆದಕಿ ಅವಶ್ಯ ವಸ್ತುಗಳನ್ನು ಹುಡುಕಿ ತೆಗೆಯುವುದು;
- ಮರೆಮಾಚಿದ ವಿಷಯಗಳು; ಹಳೆಯ, ಅಪ್ರಿಯ ಸಂಗತಿಗಳು, ಬಾಲ್ಯದ ನೆನಪುಗಳನ್ನ ಮೆಲುಕು ಹಾಕುವುದು; ಬೇಡವಾದ, ಸಂಘರ್ಷಕ್ಕೆ ಕಾರಣವಾಗುವ ವಿಚಾರಗಳ ಪ್ರಸ್ತಾಪ; ರಹಸ್ಯ ಹಾಗೂ ಗೌಪ್ಯ ವಿಚಾರಗಳ ಬಯಲಿಗೆಳೆಯುವಿಕೆ; to dig up hidden matter, old and uneasy incidents, childhood memories referring the issues which leads to quarrel;
  ಪ್ರ: 'ಹಿಂದಿನ ವಿಚಾರಗಳನ್ನು ಕೆದಕಿದರೆ ಇವನ ಬಣ್ಣ ಬಯಲಾದಿತೆಂಬ ಭಯವಿರಬೇಕು';
- ವ್ಯಂಗ್ಯೋಕ್ತಿಯು ಹೌದು;
  ಪ್ರ: 'ಅದೇನೋ ಹಿಂದಿನ್ ಪುರಾಣಗಳ್ನೆಲ್ಲ ಕೆದುಕ್ತಾ ಕುಂತವ್ರೆ';
- 'ಕೆದಕಿ ತದುಕಿಸಿಕೊಂಡ' ಎಂಬುದೊಂದು ನುಡಿಗಟ್ಟು ಅಥವಾ ನಾಣ್ಣುಡಿ; ಮರೆಮಾಚಿದ ಗೌಪ್ಯ ಸತ್ಯ ಸಂಗತಿಗಳನ್ನ ಪ್ರಸ್ತಾಪಿಸಿ ಸಂಬಂಧಿಸಿದವರಿಂದ ವಿನಾಕಾರಣ ಒದೆ(ಏಟು) ತಿನ್ನುವಿಕೆ; `To dig up and to be beaten' is a well known idiom;
- ಕೆಲವರು ಹಾಗೆಯೇ; ವಿಚಾರದ ಸೂಕ್ಷ್ಮತೆಗಳನ್ನರಿಯದೆ ಸುಮ್ಮನೆ ಬಾಯಿಗೆ ಬಂದಂತೆ ಬಡಬಡನೆ ಮಾತನಾಡುತ್ತಿರುತ್ತಾರೆ; ಇವರಿಗೆ ಪೂರ್ವಜ್ಞಾನದ ಪರಿಚಯವಿರುವುದಿಲ್ಲ; ಇದರಿಂದ ಒಳ್ಳೆಯದೂ ಆಗಬಹುದು, ಕೆಟ್ಟದ್ದೂ ಅಗಬಹುದು; ಒಂದು ವೇಳೆ ಕೆಟ್ಟದ್ದೆ ಆದಲ್ಲಿ ಹೀಗೆ ತದುಕಿಸಿಕೊಳ್ಳುವರು; ಇಂತಹವರಿಗೆ 'ಬಾಯಿಬಡುಕ ಅಥವಾ ಬಾಯಿಬಡುಕಿ' ಎನ್ನುವರು; 'ಹಜಾಮರ ತಿಪ್ಪೆ ಕೆದಕಿದರೆ ಕೂದಲೇ ಕೂದಲು'(ಗಾ);
- 'ಕೆದಕಿ ತದುಕಿಸಿಕೊಂಡ' ಎಂಬ ನಾಣ್ಣುಡಿಯಂತೆ 'ಕೆದಕಿ ತಗ್ಲಾಕೊಂಡ' ಎಂಬುದೊಂದು ನುಡಿಗಟ್ಟು; ಅಂದರೆ ಸಂಘರ್ಷಕ್ಕೆ ಒಳಗಾಗುವ ವಿಚಾರಗಳನ್ನು ಪ್ರಸ್ತಾಪ ಮಾಡಿ ಚರ್ಚೆಗೆ ಅವಕಾಶ ಮಾಡಿಕೊಟ್ಟು ಚರ್ಚೆಗೆ ಪ್ರತಿಚರ್ಚೆ ಮಂಡಿಸಲಾಗದೆ ಇರುಸು-ಮುರುಸು ಅನುಭವಿಸುವ ಸನ್ನಿವೇಶ; ವಿಚಾರವನ್ನು ಅರ್ಧಕ್ಕೆ ಬಿಡದೆ ಮತ್ತೆ ಮತ್ತೆ ಪ್ರಸ್ತಾಪಿಸಿ ಪ್ರಾರಂಬಿಸಿದವನನ್ನು ಇಕ್ಕಟ್ಟಿಗೆ ಸಿಲುಕಿಸುವುದು; there is one more proverb that to dig up and to be hung by oneself;
  ಪ್ರ: 'ನಾನೇಳ್ದೆ ಅದುರ್ ಬಗ್ಗೆ ಮಾತಾಡ್ಬೇಡ ಅಂತ ಈಗ್ನೋಡು ಕೆದುಕ್ಬುಟ್ಟು ತಗ್ಲಾಕಂಡ'.

ಕೆದರು/ಕೆದುರು/ಕೆದ್ರು Kedaru/Keduru/Kedru:

- ಕೆದರು>ಕೆದ್‌ರು>ಕೆದ್ರು; ಉಚ್ಚಾರಣೆಯಲ್ಲಿ ಪದ ಸಂಕ್ಷಿಪ್ತತೆಯ ಸೌಲಭ್ಯದಿಂದಾಗಿ ಇಂತಹ ವ್ಯತ್ಯಯ;
- ತಮಿಳಿನಲ್ಲಿ ಚೆದರು, ಚೆದರು, ಚಿದರ್; ಮಲೆಯಾಳಂನಲ್ಲಿ ಚಿದರ್, ಚಿನ್ನು; ತೆಲುಗಿನಲ್ಲಿ ಚೆದರು, ಚೆದುರು ಮತ್ತು ತುಳುವಿನಲ್ಲಿ ಕೆದರ್, ಚದರ್ ರೂಪಗಳಿವೆ; ತಮಿಳು, ತೆಲುಗು, ಮಲೆಯಾಳಂ ಭಾಷೆಗಳಲ್ಲಿ 'ಚ' ಕಾರದ ಅಲ್ಪಸ್ವಲ್ಪ ಬದಲಾವಣೆಯೊಡನೆ ಚೆದರು, ಚೆದರ್ ಪದಗಳೇ ಬಳಕೆಗೊಂಡಿರುವುದು ವಿಶೇಷ; ಆದರೆ ತುಳುವಿನಲ್ಲಿ ಚೆದರ್ ಜೊತೆಗೆ ಕೆದರ್ ಪದವೂ ಬಳಕೆಗೊಂಡಿದೆ; ದ್ರಾವಿಡ ಭಾಷೆಗಳಲ್ಲಿ ಕ>ಚ ಬರುವುದಿದೆ; ಹಾಗೆಯೇ ಇಲ್ಲಿ 'ಕ' ಕಾರಕ್ಕೆ 'ಚ' ಕಾರ ಸಮಾನಾರ್ಥದಲ್ಲಿ ಬಳಕೆಗೊಂಡಿದೆ; ಅರ್ಥಸಾಮ್ಯತೆಯನ್ನು ನೋಡಿದಾಗಲೂ ಕೆದರು>ಚೆದರು ಪದಗಳು ಸಮಾನ ಅರ್ಥಗಳುಳ್ಳ ರೂಪಗಳೇ ಎಂಬುದರಲ್ಲಿ ಸಂಶಯವಿಲ್ಲ; ಕನ್ನಡದ 'ಕೆದರು' ರೂಪವೇ ಮೂಲ ಆಗಿರಬಹುದೆ?; ಮಲೆಯಾಳಂನ 'ಚಿನ್ನು' ರೂಪದ ಬಳಕೆಯ ವಿಶೇಷ?; to scatter, be dishevelled, to disperse something;
- ಹರಡು; ಪಸರಿಸು; ಚೆಲ್ಲು; ಎಸೆ; ಅಸ್ತವ್ಯಸ್ತತೆ; ಚೆಲ್ಲಾಪಿಲ್ಲಿ; ಬೇರೆ ಬೇರೆಯಾಗಿಸು; ಎರಚು; ವ್ಯವಸ್ಥಿತವಲ್ಲದ್ದು; ಅಸಂಬದ್ಧತೆ; ದಿಕ್ಕಾಪಾಲಾಗಿ ಬಿಸಾಡುವಿಕೆ; ಅವ್ಯವಸ್ಥೆಯಿಂದ ಕೂಡಿರುವಂಥದು; scattering, spreading, casting disordering;
- ಅರಳುವ ಹೂವುಗಳು, ಧಾನ್ಯಗಳ ಬೆಳೆಗಳಲ್ಲಿ ಹೊಡೆ ಕಡೆದು ಚೆದುರುವ ಸಂದರ್ಭಕ್ಕೂ ಅನ್ವಯ;
- ಮುದುಡಿದ ಎಲೆಗಳು ಚೆದುರುವುದು, ಹಕ್ಕಿಗಳು ರೆಕ್ಕೆ ಬಿಚ್ಚಿ ನಿಲ್ಲುವುದು, ನವಿಲು ಗರಿ ಕೆದರಿ ನಲಿಯುವುದು, ಕೋಳಿ ಬಿಸಿಲಿಗೆ ತನ್ನ ರೆಕ್ಕೆ ತೆರೆದು ಕಾಯಿಸುವುದು, ಕಬ್ಬಿನ ಸುಳಿಯಲ್ಲಿ ಅರಳಿನಂತ ಬಿಳಿ ಬಣ್ಣದ ಸೂಲಂಗಿ, ಎದುರಾಳಿಯ ಎದರು ಮೈಕೊಡವಿ ನಿಲ್ಲುವುದು, ರಾಶಿಯಿರುವ ದವಸ–ಧಾನ್ಯಗಳು, ತೆನೆ, ಹುಲ್ಲು, ಕಸ–ಕಡ್ಡಿ, ಸೊಪ್ಪು–ಸೆದೆ, ಕಟ್ಟಿಗೆಗಳನ್ನು ಹರಡುವುದು ಮೊದಲಾದವು 'ಕೆದರು' ಪದಕ್ಕೆ ಸಂವಾದಿ; to spread wings or feathers of a bird, spreading of peacock's feathered tail;
- ಗಾಳಿ ಬಡಿತಕ್ಕೆ ಅಸ್ತವ್ಯಸ್ತಗೊಂಡ ಕೂದಲು, ವ್ಯವಸ್ಥಿತವಾಗಿ ಬಾಚಿದ ತಲೆಯ ಕೂದಲು ಕೆದರಿರುವುದಕ್ಕೂ ಇದು ಅನ್ವಯ; scattered hair of a person;
- ಕೋಳಿ ಮಧ್ಯಾಹ್ನದ ಬಿಸಿಲಿನಲ್ಲಿ ತನ್ನ ರೆಕ್ಕೆ ಕೆದರಿ ಕಾಯಿಸುತ್ತಿದ್ದರೆ ಮಳೆ ಬರುವುದೆಂಬ ಕಲ್ಪನೆ;
- ಉಗುರು ಮೊದಲಾದವುಗಳಿಂದ ಕೆರೆ ಅಥವಾ ಬಗೆ; ಸವೆದು ಹೋಗು; ಸೀಳಾಗು; ತೆರೆದುಕೊಳ್ಳು; ಮುರಿದು ಹೋಗು(ದ್ರಾ.ಭಾ.ಜ್ಞಾ.ಪ.ಕೋ); to scratch something by nails;
- ಕೆಸರಿನಲ್ಲಿ ಅರಳಿದ ಕಮಲ; ದೇವತೆಗಳು ಕುಳಿತಿರುವುದು;spreading lotus of mud on which goddess are seated themselves;
- ಕೋಪಗೊಂಡ ಪ್ರಾಣಿಗಳು ಕೆದರಿ ನಿಲ್ಲುವುದು; ಕೋಳಿಕಾಳಗ, ಟಗರುಕಾಳಗ, ಕುಸ್ತಿಕಾಳಗ, ಬಾಕ್ಸಿಂಗ್ ಮೊದಲಾದ ಆಟಗಳಲ್ಲಿ ಎದುರಾಳಿಗಳು ಪರಸ್ಪರ ಮೈಕೊಡವಿ ನಿಲ್ಲುವ ಪ್ರಕ್ರಿಯೆ;

  ಪ್ರ: 'ಕೆದರಿದ ಹೂವಿನ ಪರಿಮಳ ತೋಟವನ್ನೆಲ್ಲಾ ಪಸರಿಸಿದೆ';
- ಬೆಂಡೆಕಾಯಿ ಚಟ್ನಿ, ತಿರಕಸಾಲಿ ಸೊಪ್ಪಿನ ಪಲ್ಯ ಮತ್ತು ಹೆಸರುಕಾಳು ಹಿಟ್ಟಿನಿಂದ ಹಿಟ್ಟಿನ ಪಲ್ಯ ಮಾಡಿದಾಗ ಸ್ವಲ್ಪ 'ಹಿಟ್ಟಿಂಪಲ್ಯ ಕೆದರಿಸು' ಎಂದು ಹೇಳುವುದಿದೆ;

  ಪ್ರ: 'ಕೆದರಿದ ಮಲ್ಲಿಗೆ ಬಾಡದೆ ಇರದೆ'; ವ್ಯಕ್ತಿಗಳ ನಡುವೆ ವ್ಯಂಗ್ಯೋಕ್ತಿಯೂ ಹೌದು;

  ಕೋಳಿ ಕಾಲಿಗೆ ಗೆಜ್ಜೆ ಕಟ್ಟಿದ್ರೆ ತಿಪ್ಪೆ ಕೆದಕೋದ ಬಿಡ್ತದಾ(ಗಾ);
- —***ಕೆದರಿದ/ಕೆದುರಿದ*** : ಕೆದರ್+ಇ+ದ>ಕೆದರಿದ; ಕೆದರ್ ಕ್ರಿಯಾಧಾತುವಿಗೆ 'ಇ+ದ' ಪ್ರತ್ಯಯ ಸೇರಿ 'ಕೆದರಿದ' ಆಗಿರುವುದು; engraved, aggressive;
- ಚದುರಿದ; ಕೆರಳಿದ; ಕೋಪಗೊಂಡ ಎಂಬರ್ಥದಲ್ಲಿ ಬಳಕೆ; ಹರಡು; ಚೆಲ್ಲಾಪಿಲ್ಲಿ ಮಾಡು ಎಂಬರ್ಥದಲ್ಲಿಯೂ ಬಳಕೆ ರೂಪ; it is used in the meaning of something scattered spreaded angry against someone;

- ಕೋಳಿಯ ಕೂಗು(ಹುಂಜ); A cry of cock; a call of cock;
- ಗರ್ಜಿಸು; ಕೇಕೆಹಾಕು; ಉತ್ಸಾಹದಿಂದ ಕೂಗು; ಗುಟುರುಹಾಕು; ಪ್ರತಿಧ್ವನಿಸು; ಕೂಗಾಡುವಿಕೆ; ಹರಟು; ಸಿಟ್ಟಾಗುವಿಕೆ; ಶಬ್ದಮಾಡು; ಬೊಗಳು; ಕಿಣಿಗುಟ್ಟುವ ಕಾಲುಬಳೆ; ತಂತಿವಾದ್ಯದ ಧ್ವನಿ; ಬೊಬ್ಬೆ ಹಾಕು; ಚಿಲಿಪಿಲಿಗುಟ್ಟು; ಅನುರಣನೆ; ನೃತ್ಯಗಾರರು ಹಾಕಿಕೊಳ್ಳುವ ಕಾಲುಗೆಜ್ಜೆ; ಕಿರುಚು; Roaring making a loud voice; a prolonged cry; a prolonged deep sound;
- ತಮಿಳಿನಲ್ಲಿ 'ಚಿಲೈ', ತೆಲುಗಿನಲ್ಲಿ 'ಚೆಲಗು', 'ಚೆಲ್ಲು', ತುಳುವಿನಲ್ಲಿ 'ಕಿಲೆಪು', 'ಕೆಲೆಪು' ಮತ್ತು ಮಲೆಯಾಳಂನಲ್ಲಿ 'ಚಿಲ', ಚಿಲಪ್ಪು 'ಚಿಲೆಪ್ಪು' ಪದಗಳ ಬಳಕೆ ಇದೆ(ದ್ರಾ.ಭಾ.ಜ್ಞಾ.ಪ.ಕೋ);
- ದ್ರಾವಿಡ ಭಾಷೆಗಳಲ್ಲಿ ಕ>ಚ ಆಗಿರುವುದಕ್ಕೆ 'ಕೆಲೆ' ಪದ ಕೂಡ ಒಂದು ಉದಾಹರಣೆ; ಒಂದು ಗುಂಪು 'ಕ' ಕಾರವನ್ನು, ಇನ್ನೊಂದು 'ಚ' ಕಾರವನ್ನು ಪ್ರತಿನಿಧಿಸುತ್ತವೆ; ಆದರೆ 'ಕ' ಕಾರ ಮಾತ್ರ ಮೂಲದ್ರಾವಿಡದ ಪ್ರತಿನಿಧಿ.

ಕಲೆವತ್ತಿಯ ಕೊಪ್ಪ kalevattiya koppa:
- ಚಿಕ್ಕಮಗಳೂರು ತಾಲ್ಲೋಕಿನ ಕೆಳಗೂರು ಪ್ರದೇಶದಲ್ಲಿ ದೊರೆತಿರುವ ಕ್ರಿ.ಶ.೧೧೨೪ರ ೬೯ನೇ ಹೊಯ್ಸಳ ಉದಯಾದಿತ್ಯನ ಕಾಲದ ಶಾಸನದಲ್ಲಿ ಈ ಪ್ರದೇಶದ ಉಲ್ಲೇಖ ದೊರೆಯುತ್ತದೆ; A region referred in 69th inscription of 1124AD (Hoysala Udayadithya) found in Kelaguru of Chikkamagalur district;
- ಕೆಲೆ+ವತ್ತಿ+ಕೊಪ್ಪ, ಈ ಮೂರು ಪದಗಳು ಸೇರಿ ಈ ಊರಿನ ಹೆಸರಾಗಿದೆ;
- 'ಕೆಲೆ' ಎಂದರೆ ಜೋರಾಗಿ ಕೂಗಿಕೊಳ್ಳುವುದು ಎಂದೊಂದು ಅರ್ಥವಿದೆ; ಇದನ್ನು 'ಕೂಗಳತೆ' ಎಂದು ಅರ್ಥೈಸಬಹುದೆ? ಈ ಪದ ಬೈಗುಳವಾಗಿ ಕೂಡ ಬಳಕೆಯಲ್ಲಿದೆ; ಒತ್ತಾಯ/ಚಲನೆ ಎಂದು ಕೂಡ; ತಮಿಳಿನಲ್ಲಿ 'ಚಿಲೈ' ರೂಪ ಇದೆ; A forceful deep loud cry;
- 'ವತ್ತಿ' ಪದ 'ವರ್ತಿ'ಯ ತದ್ಭವವಾಗಿದ್ದು, ನೆಲೆನಿಲ್ಲುವ/ವಿಶ್ರಮಿಸಿಕೊಳ್ಳುವ ಸ್ಥಳ ಎಂದು ಅರ್ಥವಿದೆ; ಅಂದರೆ 'ತಂಗುದಾಣ' ಎಂಬುದಾಗಿ ತಿಳಿಯಬಹುದು? Vatti as Varthi means a place of a temporary halt;
- ಇನ್ನು 'ಕೊಪ್ಪ' ಪದ ಬಹಳವಾಗಿ ಬಳಕೆಯಲ್ಲಿರುವಂಥದು; ಚಿಕ್ಕಹಳ್ಳಿ, ಗ್ರಾಮ ಎಂದು ಅರ್ಥ; ಅನೇಕ ಊರುಗಳ ಅಂತ್ಯದಲ್ಲಿ ಬರುವ ರೂಪ; ತಮಿಳಿನಲ್ಲಿ ಕುಪ್ಪ, ತೆಲುಗಿನಲ್ಲಿ ಕೊಪ್ಪ ರೂಪಗಳಿವೆ; ತಮಿಳಿನ 'ಕುಪ್ಪ' ರೂಪವನ್ನು ನೋಡಿದರೆ, ಹಳಗನ್ನಡದಲ್ಲಿಯೂ 'ಕುಪ್ಪ' ರೂಪ ಇದ್ದಿರಬಹುದು; ಅಲ್ಲಿಂದ ಆಮೇಲೆ 'ಕೊಪ್ಪ' ರೂಪ ಚಾಲ್ತಿಗೆ ಬಂದಿರಲು ಸಾಧ್ಯ; ಇದು ಸ್ವರ ವ್ಯತ್ಯಯಕ್ಕೆ –ಉ>ಒ– ಉದಾಹರಣೆಯಾಗಬಹುದು; `Koppa' is a word to indicate a small village;
- ತಂಗುದಾಣವಾದ ಊರೊ, ನೆಲೆವೀಡೊ ಆಗಿರಬಹುದು; ಆದರೂ ಈ ಮೂರೂ ರೂಪಗಳನ್ನು ಹೊಂದಿಸಿ ಇದೇ ಅರ್ಥ ಎಂದು ಹೇಳುವುದು ತುಸು ಕಷ್ಟವೆನಿಸುತ್ತದೆ.

(E.C- ೧೧; ಚಿಕ್ಕ.ಜಿ.)

ಕೆಲ್ಲಂಗೆರೆ kellamgere :
- ಹಾಸನ ಜಿಲ್ಲೆಯ ಶ್ರವಣಬೆಳಗೊಳ ತಾಲ್ಲೋಕಿನ ೭೧, ೪೭೬ನೇ ಶಾಸನಗಳಲ್ಲಿ ಈ ಊರಿನ ಉಲ್ಲೇಖ; A village referred in 71th and 476th inscriptions of 1163AD found in Sravanabelagola taluk, Hassan district;
- ಕ್ರಿ.ಶ.೧೧೬೩ರ ಶಾಸನವೊಂದು(೭೧) 'ಶ್ರೀ ಕೊಲ್ಲಾಪುರದ ಶ್ರೀರೂಪನಾರಾಯಣನ ಬಸದಿಯ ಪ್ರತಿವಿದ್ಧದ ಶ್ರೀಮತ್ಕೆಲ್ಲಂಗೆಱೆಯ ಪ್ರತಾಪಪುರವಂ ಪುನರ್ಬ್ಭರಣವಂ ಮಾಡಿಸಿ' ಎಂದಿದೆ;
- ಕ್ರಿ.ಶ.೧೧೫೯ರ ಭಂಡಾರ ಬಸದಿಯೊಳಗಿರುವ ಶಾಸನದಲ್ಲಿ(೪೭೬) 'ಕೆಲ್ಲಂಗೆಱೆ' ಎಂಬ ಉಲ್ಲೇಖವಿದೆ;
- ಈ ಹೆಸರಿನ ಪದವನ್ನು ಬಿಡಿಸಿದರೆ ಕೆಲ್ಲಮ್+ಕೆಱೆ>ಕೆಲ್ಲಮ್‌ಕೆಱೆ>ಕೆಲ್ಲಂಗೆಱೆ>ಕೆಲ್ಲಂಗೆರೆ ಆಗಿರುವಂತಿದೆ; ಕ>ಗ ಆಗುವುದು, ಱ>ರ ಆಗುವುದು ಸಾಮಾನ್ಯ ಭಾಷಾ ಪ್ರಕ್ರಿಯೆ;
- ಆದರೆ 'ಕೆಲ್ಲ' ಎನ್ನುವುದಕ್ಕೆ ಅರ್ಥವೇನೊ ತಿಳಿಯದು; ಕಿಲ್ಲ>ಕೆಲ್ಲ ಆದರೆ ಆಗ ಅರ್ಥ 'ಕೋಟೆ' ಎಂದಾಗುತ್ತದೆ.

(E.C- ೩; ಶ್ರ.ಬೆ.)

ಕೆಲ್ಲಗೆರೆ(ಱೆ)/ಕಿಲ್ಲಗೆರೆ(ಱೆ) kellagere(ṟe)/ killagere(ṟe) :

- ಮೈಸೂರು ಜಿಲ್ಲೆಯ ಚಾಮರಾಜನಗರ ತಾಲ್ಲೋಕಿನ ಕ್ರಿ.ಶ.೧೩೧೮ರ ೩೦೬ನೇ ಶಾಸನದಲ್ಲಿ ಇದರ ಉಲ್ಲೇಖ; A village referred in 306th inscription of 1318AD found in Chamarajanagara taluk and district;
- 'ಕೆಲ್ಲ' ಎನ್ನುವುದಕ್ಕೆ 'ಕಿಲ್ಲ' ಎನ್ನುವ ಸಂವಾದಿ ಪದವಿರುವುದರಿಂದ, ಸಮಸ್ಯೆ ಬಗೆಹರಿದಂತಾಯಿತು; ಏಕೆಂದರೆ 'ಕೆಲ್ಲ'ಕ್ಕಿಂತ 'ಕಿಲ್ಲ'ವೇ ಸರಿಯಾದುದು ಅಥವಾ ಕೆಲ್ಲ>ಕಿಲ್ಲ ಮಾರ್ಪಟ್ಟಿರಬಹುದು; ಇಲ್ಲಿ 'ಕಿಲ್ಲ'ವೇ ಮೂಲ ರೂಪವಾಗಿ, ಆಮೇಲೆ 'ಕೆಲ್ಲ' ರೂಪಕ್ಕೆ ಬದಲಾವಣೆ ಪಡೆದಿರುವುದೇ ಹೆಚ್ಚಿನ ಸಾಧ್ಯತೆ; ಕಿಲ್ಲ>ಕೆಲ್ಲ ಆಗುವಾಗ ಅದು ದ್ರಾವಿಡ ಭಾಷೆಯ ಮುಖ್ಯ ಲಕ್ಷಣಗಳಲ್ಲಿ ಒಂದಾದ 'ಸ್ವರವ್ಯತ್ಯಯ'ಕ್ಕೆ ಒಳಗಾಗಿರುವುದು ಸ್ಪಷ್ಟವಾಗಿದೆ;
- 'ಕಿಲ್ಲ' ಎಂದರೆ 'ಕೋಟೆ' ಎಂದು ಅರ್ಥ('ಕೆಲ್ಲ' ಕೂಡ ಅದೇ ಅರ್ಥದಲ್ಲಿ ಬಳಕೆಯಾಗಿರುವಂತಿದೆ); `Killa' means `Fort';
- ಕೋಟೆಯ ಸಮೀಪ ಕೆರೆಯಿದ್ದು, ಈ ಹೆಸರು ಬಂದಿರಬಹುದು;
- ಈ ಊರು ಹೊಯ್ಸಳ ನಾಡಿನ ತೆರಕಣಾಂಬಿಯ 'ಪದಿನಾಡು' ನಾಡಿನಲ್ಲಿದ್ದ ಗ್ರಾಮ; It belongs to Hoysala Terekanambi Padinadu region ruled by 3rd Veera Ballala's officer Veramadhava Dandanayaka;
- ಮುಮ್ಮಡಿ ವೀರಬಲ್ಲಾಳನ ಅಧಿಕಾರಿ ವೀರಮಾಧವ ದಂಡನಾಯಕ ಈ ಭಾಗವನ್ನು ಆಳುತ್ತಿದ್ದನು; ಗೋಪಿನಾಥ ದೇವನ ಅಂಗ-ರಂಗಭೋಗಕ್ಕೆ 'ಕಿಲ್ಲಗೆರೆ' ಮತ್ತು ಬೆಲಕುಪ್ಪೆ ಗ್ರಾಮವನ್ನು ದತ್ತಿಯಾಗಿ ಬಿಟ್ಟಿದ್ದನು.

(E.C- ೪; ಮೈ.ಜಿ.)

ಕೆಲ್ಸ ಮೀನಾ Kelsa mīnā:

- ಮೀನಿನ ಒಂದು ಪ್ರಕಾರ; ಸಮುದ್ರದಲ್ಲಿ ಸಿಗುತ್ತದೆ (ಉ.ಕ.ಜಿ). A species of fish; it is seafish.

ಕೆಸಕೋಡು kesakōḍu :

- ಕ್ರಿ.ಶ.೧೧೧೭ರ ೧೬೮ನೇ ಶಾಸನದಲ್ಲಿ ಈ ಹಳ್ಳಿಯ ಉಲ್ಲೇಖ; A village referred in 168th inscription of 1117AD;
- ಈ ಪದವನ್ನು ಬಿಡಿಸಿದರೆ ಕೆಸ+ಕೋಡು ಎಂದಾಗುವುದು ಸಹಜ; ಆದರೆ ಇದು ಕೆಸರ್+ಕೋಡು ಆಗಿರಬಹುದು?
- ಹಾಗಾದಾಗ ಅದು ಕೆಸಕ್ಕೋಡು>ಕೆಸಕೋಡು ಆಗುವುದು; ಮುಂದುವರಿದು ಕೆಸರ್ಗೋಡು> ಕೆಸಗೋಡು ಆಗಬಹುದು; ಆದರೆ ಇಲ್ಲಿ 'ಕೋಡು' ಮಾತ್ರವೆ ಉಳಿದು, 'ಗೋಡು' ಆದಂತಿಲ್ಲ;
- ಆದರೆ ಇಲ್ಲಿ 'ಕೋಡು' ಪದಕ್ಕೆ 'ಗೋಡು' ಪದವನ್ನು ತೆಗೆದುಕೊಳ್ಳುವುದು ಅನಿವಾರ್ಯವೆನ್ನಬೇಕು;
- 'ಕೆಸರು' ಪದವನ್ನು 'ತರಿಭೂಮಿ', 'ಗದ್ದೆ' ಎನ್ನುವ ಅರ್ಥದಲ್ಲಿಯೂ, 'ಗೋಡು'(=ಕೋಡು) ಪದವನ್ನು ಸಾರವತ್ತಾದ ಹೂಳುಮಣ್ಣು, ರೇವೆಮಣ್ಣು ಎಂಬ ಅರ್ಥದಲ್ಲಿಯೂ ತೆಗೆದುಕೊಳ್ಳಬೇಕು; `Kesaru' word indicates Taribhumi- irrigated land or Fertile land;
- ಆಗ ಫಲವತ್ತಾದ ಭೂಮಿಯ ಸಮೀಪದಲ್ಲಿರುವ ಹಳ್ಳಿ/ಊರು ಎಂದಾಗುವುದನ್ನು ಯೋಚಿಸಬಹುದು.

(E.C- ೯)

ಕೆಸಣೆ Kesaṇi:

- 'ಉಜ್ಜುಗೊರಡು' ಎನ್ನುವರು; ಮರಗೆಲಸದಲ್ಲಿ ಬಳಸುವ ಉಪಕರಣ; ಮರವನ್ನು ಇದರಿಂದ ಉಜ್ಜಿ ನಯಗೊಳಿಸಲು ಉಪಯೋಗ; ನಾಮಪದವಾಗಿ ಬಳಕೆ(ಪಾಂ.ವೃ.ಪ.ಕೋ). A tool that is used to smoothen the raw timber; It is used in carpentary.

ಕೆಸರ್/ಕೆಸರು Kesar/Kesaru:

- ಮಣ್ಣು, ನೀರು ಎರಡನ್ನು ತೆಳು ಅಥವಾ ಮಂದವಾಗಿ ಕಲಸಿದಾಗ ಅಥವಾ ಇಂತಹ ಗದ್ದೆಯನ್ನು ಒಂದೆರಡು ಬಾರಿ ಉಳುಮೆ ಮಾಡಿದಾಗ ಅದರ ಮೇಲ್ಭಾಗದಲ್ಲಿ ನಿಲ್ಲುವ ಗಟ್ಟಿ ಕೆನೆ ಅಥವಾ ಮಂದವಾದ ಪದರ; ಇದು ಮಣ್ಣಿನ ಫಲವತ್ತತೆಯ ಸಂಕೇತ; ಕೆನೆಗಟ್ಟಿ ನಿಂತಿರುವ ಕೆಸರಿನ ಆಧಾರದ ಮೇಲೆ ಮಣ್ಣಿನ ಫಲವತ್ತತೆಯ ನಿರ್ಧಾರ

ಮಾಡುವುದಿದೆ; The bud of paddy cultivated field before planting the crop or plant;

- ಹೀಗೆ ಹೆಪ್ಪುಗಟ್ಟಿದ ಪದರ, ಮಣ್ಣು ಮತ್ತು ನೀರು ಮೂರನ್ನು ಹದವಾಗಿ ಮಿಶ್ರಣ ಮಾಡಿ ಸಿದ್ಧಪಡಿಸಿರುವುದಕ್ಕೆ 'ಕೆಸರುಗದ್ದೆ' ಎನ್ನುವರು; The mud field which is ready to plant paddy crop;
- ನೀರಾಗಿರುವ ಮಣ್ಣು; ನೀರಾಗಿ ಕಲಸಿದ ಮಣ್ಣು; ನೀರುಮಣ್ಣು; ಹಸಿಮಣ್ಣು; ರಾಡಿ; ಪಂಕ; ರೊಚ್ಚೆ; ಅರಲು; ಬಚ್ಚಲಿನ ಹರಿ ಮೊದಲಾದ ಮಣ್ಣಿನ ಸ್ಥಿತಿಗೆ ಕೆಸರುಮಣ್ಣು ಎನ್ನುವರು; wet soil; liquid soil-mud;
- ಮನೆ, ದೇವಾಲಯಗಳ ಕಟ್ಟಡಕ್ಕೆ ಪಾಯ ಭರ್ತಿ ಮಾಡಲು, ಕುಂಬಾರರು ಮಡಕೆ ತಯಾರಿಸಲು, ಮಣ್ಣಿನ ಗೋಡೆ ನಿರ್ಮಾಣಕ್ಕೆ ಬಳಕೆ; the mud is used to fill the foundations of homes, temples and for pottery;
- ಕೆಸರುಮಣ್ಣು ಮಾಡಿದ ಗದ್ದೆಗೆ ಭತ್ತದ ನಾಟಿ ಮಾಡುವುದಿದೆ; The field which is fit for paddy planting;
- ಕೆಸರುಮಣ್ಣು ಮಾಡುವುದರಿಂದ ಮಣ್ಣಿನಲ್ಲಿ ಅಂಟು ಮತ್ತು ನಾರಿನಂಶ ಉತ್ಪತ್ತಿಯಾಗುವುದು; ಇಂತಹ ಮಣ್ಣು ಗಟ್ಟಿ, ಬಿಗಿ, ಭದ್ರತೆಯಿಂದ ಕೂಡಿರುತ್ತದೆ ಎಂದು ಹೇಳುವುದಿದೆ; ಅದಕ್ಕಾಗಿ ಹೀಗೆ ಕಲಸಿದ ಮಣ್ಣನ್ನು ಕನಿಷ್ಠ ಏಳೆಂಟು ದಿವಸಗಳವರೆಗಾದರೂ ಹಾಗೆಯೇ ಬಿಟ್ಟು ಮದ್ಯ ಕುಳಿ ಮಾಡಿ ನೀರುಣಿಸುತ್ತಿರುತ್ತಾರೆ;
- ತಮಿಳಿನಲ್ಲಿ 'ಚೇಱು', ಮಲೆಯಾಳಂನಲ್ಲಿ 'ಚೇರು', ತುಳುವಿನಲ್ಲಿ 'ಕೇದ್', 'ಕೆಸರ್' ಮತ್ತು ಕೊಡವ ಭಾಷೆಯಲ್ಲಿ 'ಕೆತ್ತೆ' ಪದಗಳ ಬಳಕೆ ಕಂಡುಬಂದಿದೆ (ದ್ರಾ.ಭಾ.ಜ್ಞಾ.ಪ.ಕೋ);
- ಪೈಲ್ವಾನ, ಜಟ್ಟಿ, ಮಲ್ಲಯುದ್ಧ ಮಾಡುವವನನ್ನು 'ಕೆಸರಂಕ' ಎನ್ನುವರು; `Kesarank' is a word which means a wrestler;
- —***ಕೆಸರುಗದ್ದೆ*** : ಭತ್ತದ ಪೈರಿನ ನಾಟಿಗೆ ಸಿದ್ಧಗೊಂಡ ಜಮೀನು; ಉಳುಮೆ ಮಾಡಿದ ಜಮೀನಿಗೆ ನೀರು ಬಿಟ್ಟು ಮತ್ತೆ ಒಂದೆರಡು ಬಾರಿ ಉಳುಮೆ ಮಾಡಿ ಮಣ್ಣನ್ನು ರಾಡಿಮಾಡಿದ ಗದ್ದೆ; ಇದಕ್ಕೆ ಹೊಂಗೆ ಮೊದಲಾದ ಹಸಿರುಸೊಪ್ಪನ್ನು ಹಾಕಿ ತುಳಿದು ಕೊಳೆಸಿದರೆ ಉತ್ತಮ ಇಳುವರಿ ಸಿಗುತ್ತದೆ ಎಂಬುದೊಂದು ಹೇಳಿಕೆ; The land which is ready to plant paddy crop;
- ನಾಟಿಯಲ್ಲಿ ಕೆಸರುನಾಟಿ, ಬರನಾಟಿ ಎಂಬ ಎರಡು ಪ್ರಕಾರಗಳುಂಟು; There are two kinds of planting: Mud planting- Kesaru nati and dry or drough planting- Baranati;
- —***ಕೆಸರುನೇಜಿ/ಕೆಸರೊಟ್ಟಲು*** : ನೇಜಿ=ನಾಟಿ; ಕೆಸರು+ಒಟ್ಟಲು>ಕೆಸರೊಟ್ಟಲು;
- ಭತ್ತದ ಸಸಿಗಳ ನಾಟಿಗೂ ಮೊದಲು ಭತ್ತವನ್ನು ನೀರಿನಲ್ಲಿ ಸುರಿದು ಒಂದು ದಿವಸ ನೆನೆಸಿ ನಂತರ ಒಂದು ಗೋಣಿಚೀಲದಲ್ಲಿ ಹಾಕಿ ಬಿಗಿಯಾಗಿ ಕಟ್ಟಿ ಹಬೆ ಬರುವ ಹಾಗೆ ಮೇಲೊಂದು ದಿಂಡು ಅಥವಾ ತೂಕದ ವಸ್ತುವನ್ನು ಏರಿಸಿ ಒಂದು ದಿವಸ ಹಾಗೆಯೇ ಬಿಟ್ಟರೆ ಭತ್ತದ ಕಾಳಿನಲ್ಲಿ ಮೊಳಕೆ ಬರುತ್ತದೆ; To bind paddy plant or crops into a bundle;
- ಇದನ್ನು ಕೆಸರುಮಣ್ಣು ಮಾಡಿದ ನಿರ್ದಿಷ್ಟ ಸ್ಥಳದಲ್ಲಿ ಹದವಾಗಿ ಚೆಲ್ಲಿ ನೀರುಣಿಸುವುದು; ಸಸಿಗಳಾದ ಮೂವತ್ತರಿಂದ ನಲ್ವತ್ತು ದಿವಸಗಳೊಳಗೆ ಅಗೆಯಿಂದ ತೆಗೆದು ಗದ್ದೆಯಲ್ಲಿ ನಾಟಿ ಮಾಡುವರು;
- ಇದೊಂದು ಅಗೆ(ಬಟ್ಟಲು) ಪ್ರಕ್ರಿಯೆಗೆ ಸಂಬಂಧಿಸಿದ್ದು; ನೀರ್ಅಗೆ, ನೀರ್‌ನೇಜಿ ಎನ್ನುವರು; *ಪ್ರ: 'ಕೆಸರ್‌ನೇಜಿ ಕೆಲಸಕ್ಕೆ ಹೋಗಿದ್ದೆ';*
- —***ಕೆಸರ್‌ಕಲ್ಲ್/ಕೆಸರುಗಲ್ಲಿಡುವುದು*** : ಹದಿಪೂಜೆ ಅಥವಾ ಅಡಿಗಲ್ಲಿಡುವುದು ಎಂಬರ್ಥದಲ್ಲಿ ಪದಬಳಕೆ; ಮಣ್ಣಿನ ಪಾಯಕ್ಕೆ ನೀರು ಹಾಕಿ ಕೆಸರುಮಣ್ಣು ಮಾಡಿ ಅದರ ಮೇಲೆ ಕಲ್ಲು ಇಡುವುದರಿಂದ 'ಕೆಸರ್‌ಕಲ್' ಎಂಬ ಹೆಸರು ಬಂದಿರಬಹುದು; The worship of foundation; to fix foundation stone;
- ಮನೆ, ದೇವಸ್ಥಾನ ಮೊದಲಾದ ಕಟ್ಟಡಗಳ ನಿರ್ಮಾಣ ಮಾಡುವಾಗ ಹದಿಪೂಜೆ ಮಾಡಿದ ನಂತರ ಇಡಲಾಗುವ ಮೊದಲ ಕಲ್ಲು ಅಥವಾ ದಿಂಡು; ಪಾಯ ಮುಚ್ಚುವ ಸಮಯದಲ್ಲಿ ನವಧಾನ್ಯ, ನವರತ್ನಗಳನ್ನು ಈ ಕಲ್ಲಿನ ತಳಭಾಗದಲ್ಲಿಟ್ಟು ಪಾಯ ಮುಚ್ಚುವುದು ಸಂಪ್ರದಾಯ; ಕಟ್ಟಡದ ಮೊದಲ ಕಲ್ಲು

ಇದಾದ್ದರಿಂದ ಈ ಕಲ್ಲಿಗೆ ಹೆಚ್ಚಿನ ಮಹತ್ವವಿದೆ; The worshipping of the foundation of a temple or a house or any new construction;

- ದೇವಾಲಯದ ವಾಸ್ತುವಿನಲ್ಲಿ ಶಿಲಾನ್ಯಾಸ ಅಸ್ತಿಭಾರದ ಮೊದಲ ಕಲ್ಲಿಡುವ ವಿಧಿ;
- ***—ಕೆಸರೆರೆಚಾಟ*** : ನುಡಿಗಟ್ಟಾಗಿ ಪದಬಳಕೆ; ಒಬ್ಬರ ಮೇಲೊಬ್ಬರು ಆರೋಪ, ಪ್ರತ್ಯಾರೋಪ ಮಾಡಲಾಗುವ ಪ್ರಕ್ರಿಯೆಗೆ ಸಂಬಂಧಿಸಿದ್ದು; It is used as idiom; it means to charge each other with their opinions;
ಪ್ರ: 'ಅವರವರೇ ಕೆಸರೆರೆಚಾಟದಲ್ಲಿ ತೊಡಗಿದ್ದರು';
- ***—ಕೆಸರು ಕುಪ್ಪೆ*** : ನೀರಿನ ಒಸರು(ತೇವ) ಇರುವ ಜಾಗ; ಒಸರು=ಜಿನುಗು, ತೇವ; ಸದಾ ನೀರು ಜಿನುಗುತ್ತಿರುವ ಜಾಗ ತೇವದಿಂದ ಕೂಡಿರುತ್ತದೆ; A place of humidity;
- ***—ಕೆಸರು ಮಣ್ಣು*** : ಮೆದುಮಣ್ಣು; ನೀರಿನೊಂದಿಗೆ ಬೆರೆತ ಮಣ್ಣು; ನಾಟಿಗೆ ಅನುಕೂಲ; Mud which is suitable to plant crop;
- ***—ಕೆಸರು ಹಲಗೆ*** : ದಾರಂದ(ಬಾಗಿಲು, ಕದ)ದ ಮೇಲ್ಭಾಗದಲ್ಲಿ ಅಳವಡಿಸಿರುವ ಹಲಗೆ; A wooden plank which is used at upper part of door;
- ***—ಕೆಸರು ಕಾಲಾಡ್ಸುದು*** : ಭತ್ತದ ನಾಟಿಯ ಸಂದರ್ಭದಲ್ಲಿ ಕೆಸರು ಗದ್ದೆಯ ಹೆಂಟೆಗಳನ್ನು ಮಣೆಯಿಂದ ಸಮಗೊಳಿಸಿ ಅದರಲ್ಲಿರುವ ಸೆತ್ತೆ-ಸೆದೆಗಳನ್ನು ಕಾಲಿನಿಂದ ಮಣ್ಣಿನೊಳಗೆ ತುಳಿದು ಕಾಲಾಡಿಸಿ ಸಮಗೊಳಿಸುವುದು; ನಂತರ ಇದರ ಮೇಲೆ ನಾಟಿ ಮಾಡುವುದಿದೆ; ಹೀಗೆ ಮಾಡುವುದರಿಂದ ಮಣ್ಣಿನ ಫಲವತ್ತತೆಯನ್ನು ಕಾಪಾಡಬಹುದು; During paddy plantation clods in the paddy field is to be level with foot;
- ***—ಕೆಸರುಗಳ್ಳೆ/ಕೆಸರುಹುಣ್ಣು*** : ಕೆಸರು ಮಣ್ಣಿನಲ್ಲಿ ಹೆಚ್ಚು ಕಾಲಾಡಿಸಿದಾಗ ಅದರಲ್ಲಿನ ಕ್ರಿಮಿ-ಕೀಟಗಳಿಂದಾಗಿ ಕಾಲಿನ ಬೆರಳುಗಳ ಸಂದಿಯಲ್ಲಿ ಏಳುವ ಗುಳ್ಳೆಗಳು; ಇವು ನವೆಯಿಂದ ಕೂಡಿರುತ್ತವೆ; ಬಿಸಿನೀರಿಗೆ ಉಪ್ಪಾಕಿ ಅದರಲ್ಲಿ ಕಾಲಿಟ್ಟು ಕೂರುವುದರಿಂದ ಉಪಶಮನ; The pimple which are caused between toes of feet to work heavy in watered slushy muddy field of paddy during paddy plantation;
- ಕೆಸರಿನಲ್ಲಿ ಕೆಲಸ ಮಾಡುವವರ ಕಾಲುಗಳಲ್ಲಿ ಉಂಟಾಗುವ ಹುಣ್ಣು;
- ***—ಕೆಸರುಗದ್ದೆ ಓಟ*** : ಜನಪದ ಕ್ರೀಡೆ ಅಥವಾ ಆಟ; ಗ್ರಾಮೀಣರಲ್ಲಿ ರೂಢಿ; ಕೆಸರುಗೊಳಿಸಿದ ನೆಲದಲ್ಲಿ ಓಡುವ ಓಟ; ಮನರಂಜನಾತ್ಮಕ ಕ್ರೀಡೆಯೂ ಹೌದು; A race in slushy paddy field; it is a rural folk game;
- ***—ಕೆಸರುಗಡಿಗೆ*** : ಒಂದು ರೀತಿಯಲ್ಲಿ 'ಕವಳಿಯ ಚಟಗಿ' ಇದ್ದಂತೆ; ಕೆಸರು ಮಣ್ಣನ್ನು ತುಂಬಿರಿಸಿದ ಗಡಿಗೆ; ಮಡಕೆಯ ಸೀಳನ್ನು ಮುಚ್ಚಲು ಉಪಯೋಗ; A pot or pitcher; filled with slush mire;
- ಕುಂಬಾರರು ತಾವು ತಯಾರಿಸಿದ ಮಡಕೆಯನ್ನು ಬಿಸಿಲಿನಲ್ಲಿ ಸುಮಾರಾಗಿ ಒಣಗಿಸಿದ ನಂತರ ಹಸಿಮಡಕೆ ಸರಿಪಡಿಸುವ ಕಲ್ಲು ಮತ್ತು ಸೊಳದಿಂದ ತಟ್ಟುವರು; ಈ ಸಂದರ್ಭದಲ್ಲಿ ಮಡಕೆಗಳು ಸೀಳಿದರೆ ಆ ಭಾಗಕ್ಕೆ ಗಡಿಗೆಯಲ್ಲಿ ತುಂಬಿ ತಮ್ಮ ಮುಂದಿರಿಸಿಕೊಂಡಿರುವ ಕೆಸರು ಮಣ್ಣನ್ನು ತೆಗೆದು ಲೇಪಿಸುವರು.
- ಹೆಚ್ಚಿನ ನೀರಿನಿಂದ ಮಣ್ಣು ಕದಡಿ ಕಾಲಿಟ್ಟ ಕೂಡಲೆ ಮೈಮೇಲೆ ಹಾರುವಂಥದು; ಕದಡಿದ ಮಣ್ಣು; ಹೂತುಕೊಳ್ಳುವ ಗುಣದ್ದು; ಕೆಲವೊಮ್ಮೆ ಕೆಸರು ಆಳವಾಗಿದ್ದು ಜಾರುವ/ಒಳಕ್ಕೆಳೆದುಕೊಳ್ಳುವ ಸ್ವಭಾವದ್ದು; Slush, slushy, mire;
- ಪರ್ಯಾಯ ರೂಪಗಳಾಗಿ ಬದಿ, ರಾಡಿ, ಒದ್ದೆ, ತೇವ, ಹಸಿ, ಕೊಚ್ಚೆ; ನೀರುಮಣ್ಣು, ಒದ್ದೆಮಣ್ಣು ಮುಂತಾದವು; ಉತ್ತು ಹದ ಮಾಡಿ ಸಿದ್ಧವಾದ ಗದ್ದೆಯನ್ನು 'ಕೆಸರುಗದ್ದೆ' ಎನ್ನುತ್ತೇವೆ; 'ಬರಿ' ಗದ್ದೆ/ಹೊಲದ್ದೂ ಮಾತ್ರವಲ್ಲ, ಮಳೆ ನೀರಿನಿಂದ ಬೀದಿ/ಹೊಲದಲ್ಲಿ ನಿಂತ ನೀರಿನಿಂದ ಆದದ್ದು; ಆದರೆ 'ಕೊಚ್ಚೆ' ಹೊಲಸು/ಮಲಮೂತ್ರ ನೀರಿನಿಂದ ಆದುದ್ದಲ್ಲ; There are many synonyms for Kesaru- Slush in kannada- Badi, Radi, Vodde, Teva, Hasi, water soil;

- ಬೇಸಾಯಗಾರನಿಗೆ ಕೆಸರು ಯಾವೊತ್ತೂ ಇರುವಂಥದು; ಉತ್ತು ಬೆಳೆಗೆ ಸಿದ್ಧ ಮಾಡುವಾಗಿನ ಪ್ರಕ್ರಿಯೆಯಲ್ಲಿಯೂ ಇರುತ್ತದೆ; ಇದನ್ನೇ 'ಕಯ್ ಕೆಸರಾದರೆ ಬಾಯಿ ಮೊಸರು'(ಗಾ.) ಎಂದು ಹೇಳುವುದು; ಹೊಲಗದ್ದೆಯಲ್ಲಿ ಫಸಲು ತೆಗೆಯಬೇಕಾದರೆ ರೈತನ ಕೈಕಾಲು 'ಕೆಸರು' ಆಗಿಯೇ ಆಗುತ್ತದೆ; 'ಕೆಸರು' ಇಲ್ಲಿ 'ದುಡಿಮೆ'ಗೆ ಸಂಕೇತವಾಗುತ್ತದೆ; mud, slush, wet soil is a part and parcel of a farmer;
- ಕಷ್ಟದಲ್ಲಿ ಬಡತನದಲ್ಲಿ, ಅನಾಥಸ್ಥಿತಿಯಲ್ಲಿ ಹುಟ್ಟಿ ಬೆಳೆದು ದೊಡ್ಡವನಾದರೆ, ಸಮಾಜ ಗುರುತಿಸುವಂತಾದರೆ, ಅಂಥವರನ್ನು 'ಕೆಸರಿನ ಕಮಲ' ಎಂದು ಕರೆಯುವುದುಂಟು; ಕೆಸರಿನಲ್ಲಿ ಅರಳಿದ ಕಮಲಕ್ಕೆ ಇದು ಸಂಕೇತ, ತೊಂದರೆಯಲ್ಲೂ ಅರಳಿದ ವ್ಯಕ್ತಿತ್ವಕ್ಕೆ ಈ ಹೆಸರು; 'ಕಮಲ' ಸೌಂದರ್ಯಕ್ಕೂ ಸಂಕೇತವಾಗುವುದರಿಂದ, ಯಾವ ವಾತಾವರಣದಲ್ಲಾದರೂ ಅರಳಬಹುದು ಎಂಬುದರ ದ್ಯೋತಕ; A person who is born and brought in poor condition and achieved a lot the he/she is poor is called as `Lotus in a slush';
- ದ್ರಾವಿಡ ಭಾಷೆಯಲ್ಲಿ ಸಂವಾದಿ ಪದಗಳು: ತಮಿಳಿನಲ್ಲಿ– ಚೆದುಕ್ಕು, ಚಗದಿ, ಚೆಯಲ್, ಚೇರು ರೂಪಗಳಿವೆ; ಮಲೆಯಾಳಂನಲ್ಲಿ– ಚೇರು, ಚೆದುಕ್ಕು ಪದಗಳಿವೆ; ತೆಲುಗಿನಲ್ಲಿ– ಚದುಕು, ಜೀರುಕು ರೂಪಗಳಿವೆ; ತೆಲುಗಿನಲ್ಲಿ 'ಚ' ಆಗುವುದು ಸರಿ, ಆದರೆ ತಮಿಳು ಮತ್ತು ಮಲೆಯಾಳಂಗಳಲ್ಲಿ ಕಷ್ಟ; ಅಂದರೆ ಇದರ ಉಚ್ಚಾರಣೆ 'ಕ' ಮತ್ತು 'ಚ' ಧ್ವನಿಯ ನಡುವಣ (ಪ್ರಾಯಃ 'ಶ') ಧ್ವನಿಯಾಗಿರಬಹುದು; ತಮಿಳಿನ 'ಚೆಯಲ್' ಕನ್ನಡದ 'ಕೆಸರ್' ಆಗುವಾಗ, ಸಹಜವಾಗಿಯೇ ಕ>ಚ, ಯ>ಸ ಆಗುತ್ತವೆ; ಇನ್ನು ಕಡೆಯ 'ರ್' ಮತ್ತು 'ಲ್' ಧ್ವನಿಮಾಗಳು ಬದಲಾಗುವುದು ಸಾಮಾನ್ಯ; ಸಂಸ್ಕೃತದಲ್ಲಿ ಪಂಕ, ಕರ್ದಮ ಪದಗಳಿದ್ದು ಅವು ದ್ರಾವಿಡ ಮೂಲಕ್ಕೆ ಸೇರುವುದಿಲ್ಲ;
- ಅಸ್ಥಿರ ಮನಸ್ಸು, ಕೆಟ್ಟ ನಡತೆ ಇದ್ದವರಿಗೆ ಇದು ಬಳಕೆಯಾಗುವುದು; ಅನವಶ್ಯಕವಾಗಿ ಇನ್ನೊಬ್ಬರ ಮೇಲೆ ಆಪಾದನೆ ಅಥವಾ ಆರೋಪ ಮಾಡಿದಾಗ– 'ಕೆಸರೆರಚು' ಪದ ಪ್ರಯೋಗವಾಗುವುದು; Unstable psyche of a person; it indicates imbalanced psyche/bad behaviour of a person;
- ಕಣ್ಣು ಕೆಂಪಾಗಿ ಕೋಪಗೊಂಡವನಿಗೆ ಕೂಡ 'ಕೆಸರು'(ಕೆಂಪಗಿದ್ದರೆ) ಪದ ಬಳಕೆಗೊಳ್ಳುವುದು;
- ಕೆಸರು ಪದದಿಂದ ಆರಂಭವಾಗುವ ಊರಿನ ಹೆಸರುಗಳಿವೆ; ಉದಾಹರಣೆಗೆ– 'ಕೆಸರೆ' (ಮೈಸೂರು), ಕೆಸರ್ಗುಪ್ಪೆ(ಕೆಸರ್+ಕುಪ್ಪೆ);
- 'ಕೆಸರು' ಎಂಬ ಪದಕ್ಕೆ 'ಸಂಸಾರ' ಎನ್ನುವ ಅರ್ಥವನ್ನು ಆಧ್ಯಾತ್ಮಿಕ ಜಗತ್ತಿನಲ್ಲಿ ಕೊಡಲಾಗಿದೆ; ಬಸವಣ್ಣನವರ ಸುಪ್ರಸಿದ್ಧ ವಚನದ ಭಾಗವೊಂದು ಹೀಗಿದೆ: "ಕೆಸರಲ್ಲಿ ಬಿದ್ದ ಪಶುವಿನಂತೆ ಆನು ದೆಸೆದೆಸೆಗೆ ಬಾಯಿ ಬಿಡುತ್ತಿದ್ದೆನಯ್ಯ" (ಬ.ವ.ಸಂ.ನಂ.೩೫); The word- `Kesaru' has the meaning `Samsara' a family in religious or metaphysical context;
- ಯಾವುದು ಮಾಡುವುದಕ್ಕೆ ಸಾಧ್ಯವಿಲ್ಲವೊ, ಯಾವುದು ಅಸಂಭವವೊ, ಯಾವುದು ಸಲೀಸು ಅಂತ ತಿಳಿದಿದ್ದೇವೆಯೊ ಅದರಲ್ಲಿ ಸಂಕಟ ಎದುರಾದಾಗ 'ಕೆಸರು' ಪದದ ಬಳಕೆಯಾಗುವುದನ್ನು ಕಾಣುತ್ತೇವೆ– 'ಕೆಸರಿನಲ್ಲಿ ಕಲ್ಲು ಅಥವಾ ಮುಳ್ಳು' ಎಂಬ ಅರ್ಥದಲ್ಲಿ; ಅಸತ್ಯದ ಇಂತಹ ಪ್ರತಿಪಾದನೆಯನ್ನು 'ಕೆಸರುಗಂಬ' ಎಂಬ ಮಾತಿನ ಬಳಕೆಯೂ ಹೇಳುತ್ತದೆ, ಅಂದರೆ ಸುಳ್ಳಿನ ಪ್ರತೀಕವಾಗಿ;
- ಕೆಸರು ಮೆಯ್‌ಗೆ ಮೆತ್ತಿಕೊಂಡರೂ, ಮನಸ್ಸಿಗೆ ಮೆತ್ತಿಕೊಳ್ಳಬಾರದು; ಏಕೆಂದರೆ ಮೆಯ್ಗೆ ಮೆತ್ತಿದ ಕೆಸರು ತೊಳೆದರೆ ಹೋದೀತು; ಆದರೆ ಮನಸ್ಸಿಗೆ ಮೆತ್ತಿದ ಕೆಸರನ್ನು ಸುಲಭವಾಗಿ ತೊಳೆಯಲಾಗದು;
- 'ಕೆಸರು' ಮುಖ್ಯವಾಗಿ 'ವಿಷಯ ಜಾನಪದ', ಪ್ರತೀಕವಾದಾಗ 'ಶರೀರ ಜಾನಪದ'; ಹಂದಿ, ಎಮ್ಮೆ ಮುಂತಾದ ಪ್ರಾಣಿಗಳು ಕೆಸರಲ್ಲಿಯೇ ಉರುಳಾಡಿ ಸಂತೋಷಪಡುತ್ತವೆ; ಏನು ಮಾಡುವುದು!? Kesaru-slush is indicating physiological folklore; buffalo, swine and many animals play and rolled in slush.

ಕೆಸರಟ್ಟಿ kesaraṭṭi :

- ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೋಕಿನ ಕ್ರಿ.ಶ.೧೫೨೭ರ ೭೩ನೇ ಶಾಸನದಲ್ಲಿ ಈ ಊರಿನ ಉಲ್ಲೇಖ; A village referred in 73rd inscription of 1527AD found in Gangavathi taluk, Koppala district;
- ವಿಜಯನಗರ ಕೃಷ್ಣದೇವರಾಯನ ಆಳ್ವಿಕೆ; It belongs to king Krishnadevaraya of Vijayanagara;
- ಶಾಂಡಿಲ್ಯ ಗೋತ್ರದ ಕೊಂಡಾಜಟಿಯ ಮಗ ಕೃಷ್ಣಯ್ಯನು ಕೆಸರಟ್ಟಿಯಲ್ಲಿ ಕೃಷ್ಣದೇವರನ್ನು ಪ್ರತಿಷ್ಠೆ ಮಾಡಿಸಿ, ಕೊಮಾರ ಪೆರುಮಾಳೆ ಮತ್ತು ಆತನ ತಮ್ಮ ರಾಮಾಂಜಯ್ಯನಿಗೆ ಸ್ಥಾನಿಕ ಪದವಿ ನೀಡುತ್ತಾನೆ; ಸ್ಥಾನಿಕರು ಕೃಷ್ಣಯ್ಯನ ಮಾತಿನಂತೆ ನಡೆಯಬೇಕು ಎಂದು ವಿಧಿಸುತ್ತಾನೆ;
- ಕೆಸರ+ಹಟ್ಟಿ>ಕೆಸರ+ಹ್+ಅಟ್ಟಿ>ಕೆಸರ+Ø+ಅಟ್ಟಿ> ಕೆಸರಟ್ಟಿ;
- 'ಕೆಸರು' ಎನ್ನುವುದಕ್ಕೆ ನೀರಿನ ವಸತಿ ಇರುವ, `wet soil'(ಕಿಟ್ವೆಲ್) ಎಂದು ಹೇಳಬಹುದಾದ ಪ್ರದೇಶ;
- 'ಹಟ್ಟಿ'ಗೆ ಗ್ರಾಮ, ಊರು, ಹಳ್ಳಿ ಎಂದೆಲ್ಲ ಅರ್ಥ;
- ನೀರಾವರಿ ಅಥವಾ ನೀರಿನ ಅನುಕೂಲ ಇರುವ ಜಾಗ ಎಂಬ ಹಿನ್ನೆಲೆಯಲ್ಲಿ 'ಕೆಸರಟ್ಟಿ' ಪದ ಬಂದಿರಬಹುದೆಂದು ತೋರುತ್ತದೆ. It indicates irrigated area or village.

(ಕ.ವಿ.ವಿ.ಶಾ.ಸಂ.೨; ಹಂಪಿ)

ಕೆಸರೆ kesare :

- ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ಮಠದಲ್ಲಿರುವ ಕ್ರಿ.ಶ.೧೭೨೯ಕ್ಕೆ ಸೇರಿದ ೩೮ನೇ ತಾಮ್ರ ಶಾಸನದಲ್ಲಿ 'ಕೆಸರೆ' ಪ್ರದೇಶದ ಉಲ್ಲೇಖ ದೊರೆಯುತ್ತದೆ; A village referred in 38th copper inscription of 1729AD found in Shringeri matt, Chikkamagaluru district;
- 'ಕೆಸರೆ' ಎಂದರೆ ನೀರು ಬೆರೆತ ಮಣ್ಣು, ತರಿ, wetsoil ಎಂಬ ಅರ್ಥಗಳಿವೆ;
- ಈ ಹಿನ್ನೆಲೆಯಲ್ಲಿ 'ನೀರಾವರಿ' ಭೂಮಿ ಎಂದು ಅರ್ಥೈಸಬಹುದು.

(E.C- ೧೧; ಚಿಕ್ಕ.ಜಿ.)

ಕೆಸಲೆಗೋಡು kesalegōḍu :

- ಮೈಸೂರು ಜಿಲ್ಲೆ ಮೈಸೂರು ತಾಲ್ಲೋಕಿನ ಕ್ರಿ.ಶ.೧೧೯೧ರ ೧೮೮ನೇ ಶಾಸನದಲ್ಲಿ ಈ ಊರಿನ ಹೆಸರಿದೆ; A village referred in 188th inscription of 1191AD found in Mysore taluk, Mysore district;
- ಕೆಸಲೆ+ಗೋ(ಕೋ)ಡು>ಕೆಸಲೆಗೋಡು ಆಗಿದೆ; 'ಕೆಸಲೆ' ಎಂಬುದು ಕೆಸವೆ ಎಲೆ ಎಂಬ ಸಸ್ಯದ ಹೆಸರಾಗಿರಬಹುದು; ಆಗ ಕೆಸವೆ ಎಲೆ>ಕೆಸವೆಲೆ> ಕೆಸಲೆ ಎಂದಾಗಿರಬಹುದು;
- 'ಗೋಡು' ಎಂಬುದು 'ಕೋಡು' ಪದದಿಂದ ಬಂದಿದೆ ಎಂದಾದರೆ, ಆಗ ಅದರ ಅರ್ಥ ಎತ್ತರ ಪ್ರದೇಶ; 'ಗೋಡು' ಪದವೇ ಮೂಲವೆಂದು ಇಟ್ಟುಕೊಂಡರೆ ಫಲವತ್ತಾದ ಮಣ್ಣು(ಭೂಮಿ) ಎಂದಾಗುತ್ತದೆ;
- ಈ ಹಿನ್ನೆಲೆಯಲ್ಲಿ ಸಸ್ಯವಾಚಿ ಸ್ಥಳನಾಮವಾಗಿ ಈ ಹೆಸರು ಕಾಣಿಸಿಕೊಂಡಿದೆ;
- ಮಾಂಡಳಿಕ ಬೋವನು ಅಂಣ್ನಾಯ ಸಮುದ್ರವನ್ನು ಜೀರ್ಣೋದ್ಧಾರ ಮಾಡಲು ಒಪ್ಪಿ ಗ್ರಾಮದ ಗೌವುಂಡರಿಂದ ಕೆಲವು ದತ್ತಿಯನ್ನು ಪಡೆದಾಗ, ಈ ದತ್ತಿ ನೀಡಿದ ಗೌವುಂಡರಲ್ಲಿ 'ಕೆಸಲೆಗೋಡಿ'ನ ಸವಿಗೌಡನು ಒಬ್ಬನೆಂದಿದೆ.

(E.C- ೫; ಮೈ.ಜಿ.)

ಕೆಸವೊಳಲು kesavoḷalu :

- ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೋಕಿನ ಕ್ರಿ.ಶ.೧೦ನೇ ಶತಮಾನದ ೧೧೨ನೇ ಶಾಸನದಲ್ಲಿ ಉಲ್ಲೇಖ; A village that referred in 112 inscription of 10th century found in Mudigere taluk, Chikkamagalur district;
- ಜೈನ ಬಸದಿಯನ್ನು ನಿರ್ಮಾಣ ಮಾಡಿದ್ದರ ಉಲ್ಲೇಖ; ಶುಭಚಂದ್ರ ಎನ್ನುವವನು ಇದನ್ನು ಮಾಡಿಸಿದ್ದರ ಪ್ರಸ್ತಾಪ;
- 'ಕಿಸುವೊಳಲು' ರೂಪದಿಂದ ಪ್ರಸ್ತುತ ಪದ ಬಂದಿರಬಹುದು; ಕಿಸುವೊಳಲು>ಕೆಸ(ಸು)ವೊಳಲು;
- ಕಿಸು ಅಥವಾ ಕೆಸು ರೂಪಗಳು 'ಕೆಂಪು' ಎನ್ನುವ ಅರ್ಥವನ್ನು ಹೊಂದಿವೆ;
- ಹಾಗೆಯೇ 'ವೊಳಲು' ರೂಪ 'ಪೊಳಲು' ಎಂಬ ರೂಪದಿಂದ ಬಂದದ್ದು(ಪ>ವ); ವಸತಿ, ವಾಸ

ಮಾಡುವ ಸ್ಥಳ, ಪಟ್ಟಣ ಎಂಬೆಲ್ಲ ಅರ್ಥಗಳು ಇದಕ್ಕಿವೆ;

- ಹೀಗಾಗಿ ಕೆಂಪು ಮಣ್ಣಿನ ಭೂಮಿ, ಕೆಂಪು ಮಣ್ಣಿನ ನಾಡು ಎನ್ನುವ ಅರ್ಥದಲ್ಲಿ ಈ ಊರಿನ ಹೆಸರು ಬಂದಿರಬೇಕೆಂದು ಹೇಳುವುದು ಅನಿವಾರ್ಯ.

(E.C- ೧೧; ಚಿಕ್ಕ.ಜಿ.)

ಕೆಸಿನ ಹಿಟ್ಟು Kesina hiṭṭu:

- 'ಕೆಸುವಿನ ಹಿಟ್ಟು' ಎನ್ನುವರು; ಕೆಸುವಿನ ಎಲೆಯಿಂದ ತಯಾರಿಸಿದ ಒಂದು ಬಗೆಯ ತಿಂಡಿ; ಕಡುಬಿನ ರೂಪಕ್ಕೆ ಸೇರಿದ್ದು; A kind of snacks which is made up of `Kesu' leaves and millet or wheat powder or rice powder;
- ಹಾಲುಗೆಸುವಿನ ಎಲೆಗಳನ್ನು ತಂದು ಚಿಕ್ಕದಾಗಿ ಹೆಚ್ಚಿ ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸುವುದು; ನೆನೆಸಿದ ಅಕ್ಕಿಯ ಜೊತೆಗೆ ಅಗತ್ಯಕ್ಕೆ ತಕ್ಕಷ್ಟು ಎಲೆ ಹಾಕಿ ರುಬ್ಬಿ ಕಡುಬಿನ ಪಾತ್ರೆಯಲ್ಲಿ ಬೇಯಿಸಿ ಮಾಡಲಾಗುವ ಆಹಾರ ಪದಾರ್ಥ;
- ಹಾಲು+ಕೆಸ>ಹಾಲುಗೆಸ(ಕ>ಗ); ಹಾಲಿನಂಥ ರಸದಿಂದ ತುಂಬಿದ ಎಲೆ.

ಕೆಸು/ಕೆಸುವು Kesu/Kesuvu:

- ಕಾಲೋಕೇಸಿಯಾ ಅಂಟಿಕೋರಮ್ ಸಸ್ಯಶಾಸ್ತ್ರೀಯ ಹೆಸರು; ಏರೇಸೀ ಕುಟುಂಬಕ್ಕೆ ಸೇರಿದ್ದು;
- ಕೆಸ, ಶಾಮಗೆಡ್ಡೆ, ಸಾವೆಗೆಡ್ಡೆ, ಕಚ್ಚಾಚಿ ಎಂಬ ಹೆಸರುಗಳಿಂದ ಕರೆಯುವರು; ಬಹುವಾರ್ಷಿಕ ಬೆಳೆ; ಬುವಿಯೊಳಗೆ ಬೆಳೆಯುವ ಗೆಡ್ಡೆ; ಇದರ ದಂಟು ಹಾಗೂ ಗೆಡ್ಡೆ ತರಕಾರಿಯಾಗಿ ಉಪಯೋಗ; ನಿರ್ಲಿಂಗ ರೀತಿಯ ಸಸ್ಯಾಭಿವೃದ್ಧಿಯ ಗುಣ ಹೊಂದಿದೆ; A kind of plant; it is used for cooking vegetable snacks along with rice powder; `Kesu' is called as `Shamagedde' `Savegedde' and `Kechchachi';
- ಕೆಸುವಿನ ಭಾಗಗಳಲ್ಲಿ ಅಧಿಕ ಪಿಷ್ಟವಿದ್ದು, ಹೆಚ್ಚು ಸಿಹಿಯಿಂದ ಕೂಡಿರುವಂಥದು; ಬೇಗ ಬೇಯುತ್ತದೆ ಕೂಡ; ಸುಲಭದ ಜೀರ್ಣಶಕ್ತಿ ಹೊಂದಿದೆ; ಇದರಿಂದ ಪತ್ರೊಡೆ ತಯಾರಿಸುವುದುಂಟು; Heavy starch is found in the parts of Kesu plant;
- ಇದರ ಪಿಷ್ಟ ಗಂಜಿ, ಬ್ರೆಡ್, ಬಿಸ್ಕತ್ ತಯಾರಿಕೆಯಲ್ಲಿ ಉಪಯೋಗ; ಎಲೆಗಳ ತೊಟ್ಟಿನ ರಸದಲ್ಲಿ ರೋಗ ನಿರೋಧಕ ಅಂಶವಿದೆ; ಎಲೆಗಳು ಅಗಲವಾಗಿರುತ್ತದೆ; ಮಲೆನಾಡಿನಲ್ಲಿ ಯತೇಚ್ಚವಾಗಿ ಬೆಳೆಸಲಾಗುವುದು; Its starch or gruel is used in the manufacturing bread, biscut etc;
- ***—ಕೆಸುಕಾಲ್/ಕೆಸುದಂಟು*** : ಎಲೆಯ ತಳಭಾಗದ ದಂಟು; ಇದು 'ಮಜ್ಜಿಗೆಹುಳಿ' ತಯಾರಿಕೆಗೆ ಉಪಯೋಗ; A dish prepared by Kesu stem during Gouri festival;
- ಕೆಸುವಿನ ದಂಟನ್ನು ಕತ್ತರಿಸಿ ಬೇಯಿಸಿ ಅದಕ್ಕೆ ತೆಂಗಿನಕಾಯಿ, ಹಸಿಮೆಣಸಿನಕಾಯಿ ಮತ್ತು ಜೀರಿಗೆಯನ್ನು ರುಬ್ಬಿ ಹಾಕಿ ಚೆನ್ನಾಗಿ ಕುದಿಸುವುದು; ಹೀಗೆ ಕುದಿಸಿದ ಕೆಸುವಿನ ರಸಕ್ಕೆ ಮೊಸರು ಹಾಕಿ ಸಿದ್ಧಪಡಿಸುವುದು;
- ವಿಶೇಷವಾಗಿ ಗೌರಿಹಬ್ಬದಲ್ಲಿ ತಯಾರಿಸುವುದು ಉಂಟು;
- ***—ಕೆಸುವಿನ ಗೆಡ್ಡೆ*** : ತರಕಾರಿಯಾಗಿ ಉಪಯೋಗ; ಆಲೂಗೆಡ್ಡೆಯಂತಿರುವ ಇದಕ್ಕೆ ಯಾವುದೇ ಬೇಳೆಕಾಳುಗಳನ್ನು ಹಾಕದೆ ಬರಿಯ ತೆಂಗಿನಕಾಯಿಯ ಮಸಾಲೆಯೊಂದಿಗೆ ಸಾಂಬಾರು ತಯಾರಿಸುವರು; It is a vegetable; it resembles potato; it is used to prepare sauce;
- ಮಲೆನಾಡಿನಲ್ಲಿ ಯತೇಚ್ಚವಾಗಿ ಬಳಕೆ;
- ***—ಕೆಸುವಿನ ಸೊಪ್ಪಿನ ಫಲ್ಯ*** : ಚೆನ್ನಾಗಿ ತೊಳೆದ ಕೆಸುವಿನ ಎಲೆಗಳನ್ನು ಸಣ್ಣಗೆ ಕತ್ತರಿಸಿಕೊಂಡು ಬೇಯಿಸುವುದು; ನಂತರ ಈರುಳ್ಳಿ, ಬೆಳ್ಳುಳ್ಳಿ, ಅರಿಶಿಣ, ಜೀರಿಗೆ, ಮೆಣಸನ್ನು ರುಬ್ಬಿ ಬೇಯಿಸಿದ ಕೆಸುವಿನ ಸೊಪ್ಪಿನೊಳಗೆ ಹಾಕುವುದು; A kind of `Palya' side snacks prepared by Kesu leaves as a part of meal;
- ಹುಳಿಗೆ ಸ್ವಲ್ಪ ಅಮಟೆ ಕಾಯಿಯನ್ನು ಜಜ್ಜಿ ಹಾಕಿ ಚೆನ್ನಾಗಿ ಕುದಿಸುವುದು; ನಂತರ ಸೊಪ್ಪನ್ನು ರಸದಿಂದ ಬೇರ್ಪಡಿಸಿ ಒಗ್ಗರಣೆ ಮಾಡಿದರೆ ಕೆಸುವಿನ ಸೊಪ್ಪಿನ ಫಲ್ಯ ಸಿದ್ಧವಾಗುವುದು.

ಕೆಸ್ತೂರು kestūru :

- ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೋಕಿನ ೪೦ನೇ ಶಾಸನದಲ್ಲಿ ಇದರ ಉಲ್ಲೇಖ; A village referred

in 40th inscription of Maddur taluk, Mandya district;
- ಅಂಕುಶರಾಯವಡೆಯರು ಹನುಮಂತರಾಯ ದೇವರಿಗೆ ಕೆಸ್ತೂರ ಕೆರೆಯ ಕೆಳಗಿನ ವರದನರಾಜನಕೆರೆ ಕೆಳಗಿನ ಗದ್ದೆಯನ್ನು ದಾನಕೊಟ್ಟ ವಿಚಾರವಿದೆ;
- 'ಕೆಸು' ಎಂದರೆ 'ಕೆಂಪು' ಎಂದು ಅರ್ಥವಿದೆ; ಅಂದರೆ ಕೆಂಪು ಮಣ್ಣಿನ ಭೂಮಿ, ಕೆಂಪು ಮಣ್ಣಿನ ನಾಡು ಎಂಬುದಾಗಿ ಅರ್ಥವನ್ನು ವಿಸ್ತರಿಸಬಹುದು; ಇದರ ಮೇಲೆ ಕೆಸು+ಊರು>ಕೆಸೂರು ಆಗಿ, ಆಮೇಲೆ 'ಕೆಸ್ತೂರು' ರೂಪ ಪಡೆದಿರಬಹುದು; ಇಲ್ಲಿ 'ತ' ಕಾರ ಪ್ರವೇಶವಾದದ್ದಾರೂ ಹೇಗೆ? ಕೇವಲ ಉಚ್ಚಾರಣೆಯಷ್ಟೇ ಕಾರಣವೇ? The word Kesu has the meaning of Red-Kempu;
- 'ಕಸ್ತೂರಿ' ಪದದ `Analogy'ಯ ಮೇಲೆ ಕೆಸ್ತೂರು ಬಂದಿರಬಹುದೆ?
- ಇದಕ್ಕೆ ಬೆಂಬಲ ಸೂಚಿಸುವ ಹಾಗೆ, ಫಲವತ್ತಾದ ತೋಟಗಳು, ಅಡಿಕೆ ಮರದ ಹೊಂಬಾಳೆ ಕಸ್ತೂರಿ ವಾಸನೆ ಬೀರುತಿತ್ತಂತೆ ಎಂಬ ವಿಷಯವೂ ಇದೆ.

(E.C- ೭; ಮಂಡ್ಯ.ಜಿ.)

ಕೆಳ್ Keḷ:
- ನೆರಕೆ ಅಥವಾ ನೆರಿಕೆ; ಬಿದಿರಿನ ಹಚ್ಚೆಗಳಿಂದ ಹೆಣೆದದ್ದು; A bamboo structure, weaved as a fence around a house;
- ವಾಸಿಸುವ ಸ್ಥಳದಲ್ಲಿ ತಡಿಕೆಯಿಂದ ಕಟ್ಟಿಕೊಳ್ಳುವ ತೆರೆ; ಚಾವಣಿಯ ತಳ;
- ಕೆಳ್>ಕಿಳ್ಳು?; ಕಿಳ್ಳು; ಚಾವಣಿ ತಳ; ಎರಡು ಮನೆಗಳ ನಡುವಿನ ಜಾಗ ಅಥವಾ ಸಂಧಿ;
  ಪ್ರ: 'ಅವ್ನ್ ಕೆಳ್‌ಗೋಗಿ ನಿಂತವ್ನೆ'.

ಕೆಳ ಊರು keḷa ūru :
- ಚಿಕ್ಕಮಗಳೂರು ಜಿಲ್ಲೆ ಮೂಡಗೆರೆ ತಾಲ್ಲೋಕಿನ ಕಳಸ ಎಂಬ ಪ್ರದೇಶದಲ್ಲಿ ದೊರೆತಿರುವ ಕ್ರಿ.ಶ.೧೫೧೬ರ ವಿಜಯನಗರದ ಅರಸ ಶ್ರೀಕೃಷ್ಣದೇವರಾಯನ ಕಾಲದ ೪೮ನೇ ಶಾಸನದಲ್ಲಿ ಕೆಳ ಊರು/ಕೆಳವೂರು ಎಂಬ ಪ್ರದೇಶದ ಉಲ್ಲೇಖ ದೊರೆಯುತ್ತದೆ; A village referred in 48th inscription of 1516AD found in Kalasa of Mudigere taluk, Chikkamagaluru district; it belongs to the king Krishnadevaraya of Vijayanagara;
- 'ಕೆಳವೂರು' ಭೌಗೋಳಿಕ ಸೂಚಕವಾದ ಹಿನ್ನೆಲೆಯನ್ನು ಹೊಂದಿದ್ದು, ಇಳಿಜಾರಿನಿಂದ ಕೂಡಿದ ಪ್ರದೇಶಕ್ಕೆ ಸಂಬಂಧಿಸಿದ ಸ್ಥಳವಾಗಿರಬಹುದು;
- 'ಕೆಳ' ಪದ 'ಕೆಳಗು' ಪದಕ್ಕೆ ಬಂದಿರುವ ಸಂಕ್ಷಿಪ್ತ ರೂಪ; ಸರಳವಾಗಿ 'ಕೆಳಗಿನ ಊರು' ಎಂಬುದಾಗಿ ಅರ್ಥೈಸಬಹುದು.

(E.C- ೧೧; ಚಿಕ್ಕ.ಜಿ.)

ಕೆಳಕೆಂಚು KeḷaKencu:
- ದೊಡ್ಡ ಮುಂಡಾಸು; ಒಂದು ಬಗೆಯ ಉಡುಗೆ; ಯಕ್ಷಗಾನದ ಪಾತ್ರಾಧಾರಿಗಳು ತೊಡುವಂಥದು (ಯ.ಪ.ಕೋ). A big head gear; a kind of dress worn by the characters of Yakshagana-drama.

ಕೆಳಗಿನ್ನೀರು Keḷaginnīru:
- ಕೆಳಜಾತಿ; ನೀಚಕುಲ; ನಿಮ್ನವರ್ಗ; Untouchable; low caste;
- ಕೆಳಗಿನವರು ಎಂಬುದು ಕೆಳಗಿನೋರು ಎಂದಾಗುವ ಸಾಧ್ಯತೆ ಇದೆ; ಹಾಗೆಯೇ ಕೆಳಗಿನೋರು ಪದ ಕೆಳಗಿನ್ನೀರು ಆಗಿರಬಹುದೆ?;
- ಅದಾಗದೇ ಇದ್ದಲ್ಲಿ 'ಕೆಳಗಿನ್ನೀರು' ಪದಕ್ಕೆ ಪ್ರಾದೇಶಿಕ ಹಿನ್ನೆಲೆಯಲ್ಲಿ ಅರ್ಥ ಹುಡುಕಬೇಕಾಗಬಹುದು (ಚಿ.ಪ.ಕೋ);
- ವ್ಯಕ್ತಿಯ ವ್ಯಕ್ತಿತ್ವವನ್ನು ಗುಣ, ಸ್ವಭಾವ, ಕರ್ಮಗಳಿಂದ ಗುರುತಿಸಬೇಕೇ ಹೊರತು ಹುಟ್ಟಿನಿಂದಲ್ಲ ಎಂಬುದು ಒಪ್ಪಬೇಕಾದ ಸಂಗತಿ.

ಕೆಳಗೆ ಮೇಲೆ ನೋಡು Keḷage mēle nōḍu:
- ಅನುಮಾನಿಸಿ ನೋಡು; ಗೊಂದಲಕ್ಕೊಳಗಾಗುವಿಕೆ; to doubt; to look doubtfully;
- ನುಡಿಗಟ್ಟಾಗಿ ಪದಬಳಕೆ; ಯಾವುದಾದರೂ ತೀರ್ಮಾನ ತೆಗೆದುಕೊಳ್ಳುವಾಗ ಅದರ ಬಗೆಗೆ ಗೊಂದಲವಿದ್ದರೆ ಅನುಮಾನದಿಂದ ನೋಡುವ, ಅಂತಿಮ ನಿರ್ಣಯಕ್ಕಾಗಿ ಸ್ವಲ್ಪ ಸಮಯ ತೆಗೆದುಕೊಳ್ಳುವ ಪ್ರಕ್ರಿಯೆಗೆ ಈ ಪದದ ಬಳಕೆ ಇದೆ; It is used as idiom which indicates

dilemma; a condition of disability to take a decision;
ಪ್ರ: 'ಎಲ್ಲಾ ಮುಗಿದ ಮೇಲೆ ಕೆಳಗೆ ಮೇಲೆ ನೋಡುವುದರಿಂದ ಏನೂ ಪ್ರಯೋಜನವಿಲ್ಲ'.

ಕೆಳನುಲಿಗಂಟು Keḷanuligaṇṭu:
- ಗಂಟಿನ ಒಂದು ಪ್ರಕಾರ; ಗಂಟು ಹಾಕಬೇಕಾದ ಎಳೆಗಳನ್ನು ಬಲಗೈಯಲ್ಲಿ ಹಿಡಿದು ಅದರ ತುದಿಯ ಹಿಂಭಾಗವನ್ನು ಎಡಗೈಯಿಂದ ಒಂದು ಸುತ್ತು ನುಲಿದು ಹಾಕುವ ಗಂಟು(ಬೆಂ.ಗ್ರಾ.ಜಿ.). A kind of knot; a technique of knotting thread.

ಕೆಳ ಬೆಳಂದೂರು keḷa beḷandūru :
- ಚಿಕ್ಕಮಗಳೂರು ಜಿಲ್ಲೆ ಶೃಂಗೇರಿಯಲ್ಲಿ ದೊರೆತ ಕ್ರಿ.ಶ.೧೩೫೬ರ ೯ನೇ ಶಾಶನದಲ್ಲಿ 'ಕೆಳ ಬೆಳಂದೂರು' ಪ್ರದೇಶದ ಉಲ್ಲೇಖವಿದೆ; A village referred in 9th inscription of 1356AD found in Shringeri of Chikkamagaluru;
- ಇದೇ ಸಂಪುಟದ ಕ್ರಿ.ಶ.೧೩೪೬ರ ಶೃಂಗೇರಿ ಶಾಸನ ಸಂಖ್ಯೆ ೧ರಲ್ಲಿ 'ಬೆಳಂದೂರಿನ' ಉಲ್ಲೇಖವಿದೆ;
- 'ಕೆಳ ಬೆಳಂದೂರು' ಎಂಬುದೂ ಕೂಡ ಬೆಳಂದೂರಿನ ಪ್ರದೇಶದ ಸಮೀಪದಲ್ಲೇ ಇರಬಹುದು; ಇಳಿಜಾರಿನ ಪ್ರದೇಶವಾಗಿರಬಹುದು;
- ಈ ಹಿನ್ನೆಲೆಯಲ್ಲಿ ಬೆಳಂದೂರಿನ ಸಮೀಪ ಪ್ರದೇಶವೆಂದು ನಿರ್ಧರಿಸಬಹುದು;
- ಆದರೂ 'ಬೆಳಂದೂರು' ನಿಷ್ಪತ್ತಿ ಹಾಗೆಯೇ ಉಳಿದುಕೊಂಡಿದೆ.

(E.C- ೧೧; ಚಿಕ್ಕ.ಜಿ.)

ಕೆಳಬೆಳ್ಳೂರು keḷabeḷḷūru :
- ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ತಾಲ್ಲೋಕಿನ ಕ್ರಿ.ಶ.೧೩೯೨ರ ೫೩ನೇ ಶಾಸನದಲ್ಲಿ ಉಲ್ಲೇಖ; A village referred in 53rd inscription of 1392AD found in Shringeri taluk, Chikkamagaluru district;
- ವಿದ್ಯಾಶಂಕರ ದೇವಾಲಯಕ್ಕೆ ಕಲಿನಾಡು ಬೆಳ್ಳೂರಿನ ಬೊಮ್ಮಣ್ಣ ಹೆಗ್ಗಡೆಯು ಕೊಟ್ಟಿರುವ ದಾನದ ವಿವರವಿದೆ;
- ಕೆಳ+ಬೆಳ್ಳೂರು=ಕೆಳಬೆಳ್ಳೂರು; 'ಕೆಳ' ಎಂದರೆ ಕೆಳಗಿನ, ಕಡೆಯ, ತಗ್ಗಿನ ಎಂದೆಲ್ಲ ಅರ್ಥ ಮಾಡಬಹುದು; ಬೆಳ್ಳೂರು = ಬೆಳ್(ಳ್) + ಊರು ಎಂದು ಊಹಿಸಬಹುದು;
- ಬೆಳ್ಳೂರಿನ ಪ್ರಸ್ತಾಪ ದಾನದ ವಿವರದಲ್ಲಿ ದೊರೆಯುದಾಗಿದೆ; 'ಕೆಳಬೆಳ್ಳೂರು' ಅದರ ಪಕ್ಕದಲ್ಲೇ ಇರುವ ಇನ್ನೊಂದು ಅದೇ ಹೆಸರಿನ ಊರಾಗಿರಬಹುದು; ಅದರ ಪ್ರತ್ಯೇಕತೆ ಮತ್ತು ಸ್ವತಂತ್ರ ಅಸ್ತಿತ್ವಕ್ಕೆ 'ಕೆಳ' ಎಂಬ 'ಮಾತು ಹೇಗೂ ಇದೆ.

(E.C- ೧೧; ಚಿಕ್ಕ.ಜಿ.)

ಕೆಳವಡಿ keḷavaḍi :
- ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲ್ಲೋಕಿನ ಕ್ರಿ.ಶ.೧೦೫೩ರ ೧೪ನೇ ಶಾಸನದಲ್ಲಿ ಇದರ ಉಲ್ಲೇಖ; A village referred in 14th inscription of 1053AD found in Badami taluk, Bagalakote district;
- ಕಲ್ಯಾಣ ಚಾಳುಕ್ಯ ತ್ರೈಲೋಕ್ಯ ಮಲ್ಲನ ಆಳ್ವಿಕೆ; It was the rule of Kalyana Chalukya Trilokya Malla;
- ಮಹಾ ಸಾಮಂತಾಧಿಪತಿ ಭೋಗರಸನ ಮೈದುನ ಸುಪ್ಪರಸನು ಕೆಳವಾಡಿಯ ಕೆರೆಗೆ ೨೦ ಮತ್ತರು(=ಅಳತೆ, ಅಷ್ಟು) ಭೂಮಿ ಮತ್ತು ನಿವೇಶನವನ್ನು ದಾನ ಮಾಡಿದ ವಿಚಾರವಿದೆ;
- 'ವಾಡಿ' ಎನ್ನುವುದು ಹಳಗನ್ನಡದ 'ಪಾಡಿ'ಯಿಂದ ಬಂದುದು; ವಸತಿ, ಹಳ್ಳಿ, ಊರು, ಗ್ರಾಮ ಎಂಬುದು ಅರ್ಥ;
- 'ಕೆಳವಾಡಿ' ರೂಪ ಉಚ್ಚಾರಣೆಯಲ್ಲಿ 'ಕೆಳವಡಿ' ಆಗಿದೆ; `Kelavaadi' is pronounced as `Kelavadi';
- 'ಕೆಳ' ಎಂದರೆ ಕೆಳಗಿನ ಅಥವಾ ತಗ್ಗಿನ ಎಂದು ಅರ್ಥ ಮಾಡಬಹುದು; ಅಂದರೆ ತಗ್ಗಿನ ಊರು ಎಂದು; `Kela' means lowered region or place in down;
- ಸುಪ್ಪರಸ ಇಲ್ಲಿನ ಕೆರೆಗೆ ದಾನ ನೀಡಿದ ವಿವರ ಇರುವುದರಿಂದ, ಕೆರೆಯ ಕೆಳಗೆ ಇರುವ ಊರೊ ಅಥವಾ ಊರಿನ ಕೆಳಗೆ ಇರುವ ಕೆರೆಯೊ ಇರಬಹುದೆಂದು ತೋರುತ್ತದೆ.

(ಕ.ವಿ.ವಿ.ಶಾ.ಸಂ.೯; ಹಂಪಿ)

ಕೆಳ(ಟಿ)ವಾಡಿ kaḷa(ḷa)vāḍi :

- ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೋಕಿನ ಕ್ರಿ.ಶ.೧೧೦೦ರ ೨೪ನೇ ಶಾಸನದಲ್ಲಿ ಇದರ ಪ್ರಸ್ತಾಪ; A village referred in 24th inscription of 1100AD found in Sindhanuru taluk, Raichur district;
- ಇದನ್ನು 'ಕೆಳ(ಟಿ)ವಾಡಿ ಮುನ್ನೂರು' ಎಂದು ಕರೆಯಲಾಗಿದೆ;
- ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ ಕಾಲ; It was the rule of 6th Vikramadithya;
- ಕದಂಬ ವಂಶದ ಬಾಚರಸ ಮತ್ತು ಅವನ ಮೂಲಿಗರಾದ ಹಂಪೆಯ ನಾಯಕರು ಭೇರಿಗೆಯ ಕಲಿದೇವರ, ಅಂಗ-ರಂಗ ಭೋಗಕ್ಕೆ ದಾನ ನೀಡಿದ ವಿಚಾರ ಕೂಡ ಇದೆ;
- ಭೇರಿಗೆಯ ಕಲಿದೇವರು ಕೆಳ(ಟಿ)ವಾಡಿ ೩೦೦ಕ್ಕೆ ಸೇರಿದ ವಿಚಾರ ಸಹ ಪ್ರಸ್ತಾಪವಾಗಿದೆ ಶಾಸನದಲ್ಲಿ;
- ಇದೊಂದು ಆಡಳಿತ ಘಟಕ, ಚಾಲುಕ್ಯರ ಕಾಲದಲ್ಲಿ;
- ಹೆಸರಿನ ಪದವನ್ನು ಬಿಡಿಸಿದರೆ 'ಕೆಳ(ಟಿ)+ವಾಡಿ' ಎಂದಾಗುತ್ತದೆ; 'ಕೆಳ(ಟಿ)' ಎಂದರೆ 'ಕೆಳಗಿನ' ಎಂದು ಅರ್ಥವಾಗುವುದರಿಂದ 'ಕೆಳಗಿನ ಊರು'; 'ತಗ್ಗಿನ' ಎಂಬ ಅರ್ಥ ಬಂದು, 'ತಗ್ಗಿನ ಊರು' ಎಂದಾಗುತ್ತದೆ;
- 'ವಾಡಿ' ಎಂಬ ಪದ ಮರಾಟಿ/ಹಿಂದೂಸ್ತಾನಿ ಪದವಾಗಿದ್ದು, ಹಳ್ಳಿ, ಊರು, ಪಟ್ಟಣದ ಒಂದು ಉಪಭಾಗ ಎಂದು ಅರ್ಥವಾಗುತ್ತದೆ. `Vaadi' is a word, has its origin in Marati or Hindustani.

(ಕ.ವಿ.ವಿ.ಶಾ.ಸಂ.೭; ರಾಯ.ಜಿ.)

ಕೇಂಡ್/ಕೇಂಡು Kēṇḍ/Kēṇḍu:

- ಕೇಳು; ಗಮನವಿಟ್ಟು ಕೇಳು(ತು); To listen; To listen attentively;
- ಪ್ರಶ್ನಿಸು; ವಿಚಾರ ಮಾಡು;
- ಒಪ್ಪಿಕೊ; ಹೇಳಿದಂತೆ ಕೇಳು;To question or to enquire; to accept;
  ಪ್ರ: ೧. ಆ ನರೋತ್ತಮಟಿಂಚ ಪ್ರಾರ್ಥಿಪ ಕೇಂಡನೇ ಕೋಲ ಮೋದಿಕ್(ತು.ನಿ);
  (ಆ ನರೋತ್ತಮನಲ್ಲಿ ಹೀಗೆ ಪ್ರಾರ್ಥಿಸಲು (ಅದನ್ನು) ಕೇಳಿ ಬಹಳ ಸಂತೋಷಗೊಂಡು);
  ೨. ನಾನು ಅವನ ಮಾತು ಕೇಂಡುದಿಲ್ಲ (ತಿ.ಜಿ.);
- ಕೇಣ್ ಮೂಲರೂಪ (ಧಾತು); ತಮಿಳಿನಲ್ಲಿ 'ಕೇಡ್' ರೂಪ ಇದೆ; 'ಕೇಟ್' ಕೂಡ ಆಗಬಹುದು.
- ಕೇಂಡ್/ಕೇಂಡು ರೂಪ ತುಳುನಾಡು ಹಾಗೂ ಮಲೆನಾಡು ಪ್ರದೇಶದಲ್ಲಿ ಬಳಕೆ; ದಕ್ಷಿಣದ ಒಳನಾಡು ಹಾಗೂ ಬಯಲು ಸೀಮೆಯಲ್ಲಿ 'ಕೇಳು' ರೂಪದ ವ್ಯಾಪಕ ಬಳಕೆ;
- ಡ್, ಣ್, ಳ್‌ಗಳು ಮೂರ್ಧನ್ಯಾಕ್ಷರಗಳಾಗಿದ್ದು ವಿನಿಮಯ ಸಹಜವಾಗಿದೆ; ಣ್‌ಕಾರ ಅನುನಾಸಿಕವಾದುದರಿಂದ ಪದಮಧ್ಯದಲ್ಲಿ ಸಹಜವಾಗಿಯೇ ಬಿಂದು(ಂ) ಬಂದಿದೆ;
- ಕೇಂಡ್ ಅಥವಾ ಕೇಣ್ ರೂಪವನ್ನು ಇಟ್ಟುಕೊಂಡು ಕೇಂಡೀರ್ (=ಕೇಳಿದ್ದಾರೆ), ಕೇಂಡುದಿಲ್ಲ (=ಕೇಳುವುದಿಲ್ಲ), ಕೇಣೆ(=ಕೇಳಿರಿ), ಕೇಂಬನ್ (=ಕೇಳುವವನು), ಕೇಂಬುಕೆಡ್ಯ (=ಕೇಳಲು ಸಾಧ್ಯವಿಲ್ಲ) ಮುಂತಾದ ರೂಪಗಳನ್ನು ಮಾಡಿಕೊಂಡಿರುವುದನ್ನು ಕಾಣಬಹುದು;
- —***ಕಮಿಕೇಂತಿಲ್ಲೆ*** : ಕಿವಿ ಕೇಳುವುದಿಲ್ಲ/ಕಿವಿ ಕೇಳುತ್ತಿಲ್ಲ; Ear is impaired; ear doesnot hear or listening disability;
- —***ಕೇಂಡುತೆಗೆ*** : ಕೇಳಿ ತೆಗೆ. To listen and remove.

ಕೇಕ್‌ಮಾರಿ Kēkmāri:

- ಕೆಟ್ಟವ; ಕಿಲಾಡಿ; ಚಾಣಾಕ್ಷ; ಮೋಸಗಾರ; ವಂಚಕ (ಚಾ.ಜಿ.); Evilman, wicked villain, deceitful person, cheater;
- ಒಂದು ದೇವತೆ; ಕೂಗು ಮಾರಿ(?); ಕೆಡುಕಿಗೆ ಹೆಸರಾದ ದೇವತೆ; A goddess who is known for her wickedness;
- ನಯವಂಚನೆ ಹಾಗೂ ಕಿತಾಪತಿ ಮಾಡುವುದರಲ್ಲಿ ಚಾಣಾಕ್ಷರಾದವರಿಗೆ 'ಕೇಕ್ ಮಾರಿ' ಎಂದು ಹೇಳುವ ರೂಢಿ ಇದೆ; ಮಾರಿ=ಕೆಟ್ಟ, ಕ್ರೂರ, ಸಾವು ಇತ್ಯಾದಿ;
- 'ಕೇಕ್' ರೂಪ ಕೇಕು/ಕೇಗು/ಕೇಕೆ(ಕಾಕ್-ಕೊಡ; ಕೇಕ-ತೆ, ಕೇಕ್/ಕೇಕೆ-ತು)ಯ ಸಂಕ್ಷಿಪ್ತರೂಪ ಅಥವಾ ಆದೇಶ ರೂಪ ಎನ್ನಬಹುದು; 'ಮಾರಿ' ಜೊತೆ ಸೇರುವಾಗ ಈ ಪ್ರಕ್ರಿಯೆ ಜರುಗಿದೆ; ಕೇಕೆ/ಕೇಗು=ಕೂಗು, ಸಂತೋಷದಕೂಗು, ನವಿಲಿನ

ಕೂಗು; ಕಾಕ್=ಕರೆ, ಜೊತೆಗೆ ಕರೆದೊಯ್ಯು (ದ್ರಾ.ಭಾ.ಜ್ಞಾ.ಪ.ಕೋ) ಕೇಕ್/ಕೇಕೆ=ಸಂತಸದ ಉದ್ಗಾರ, ಗಟ್ಟಿಯಾದ ನಗು, ಮೊಟ್ಟೆ ಇಟ್ಟ ಮೇಲೆ ಹೆಣ್ಣುಕೋಳಿ ಮಾಡುವ ಸದ್ದು(ತು.ನಿ); To cry loudly; a call of deep loud sound by someone;

- ಕೇಕು(ಕೇಗು)/ಕೇಕೆ + ಮಾರಿ = ಕೇಕುಮಾರಿ/ ಕೇಗುಮಾರಿ/ಕೇಕೆಮಾರಿ>ಕೇಕ್‌ಮಾರಿ/ಕೇಕ್ಮಾರಿ
- ಪ್ಲೇಗು, ಕಾಲರ ಮೊದಲಾದ ಮಾರಕ ರೋಗಗಳನ್ನು ತರುವ ದೇವತೆ ಕೂಗುಮಾರಿ ಎಂದು ಪ್ರತೀತಿ; ಆದುದರಿಂದ ಅವಳು ಕೆಡುಕಿನ ದೇವತೆ; ಇದು ಕೆಡುಕು ಮಾಡುವ ವ್ಯಕ್ತಿಗಳಿಗೂ ಅನ್ವಯಗೊಂಡಿದೆ; `KooguMaari' a local goddess who is known as the bringer of Plague, Cholara, Small pox and deadly diseases;
- 'ಕೇಕ್‌ಮಾರಿ' ಪದ ತಪ್ಪು ಗ್ರಹಿಕೆಯ ಉಚ್ಚಾರಣೆಯಿಂದಾಗಿ 'ಕೇಪ್‌ಮಾರಿ' ಎಂದಾಗಿರುವುದೂ ಜನಪದರ ಮಾತಿನಲ್ಲಿ ಕಂಡುಬರುತ್ತದೆ; 'ಕೇಪ್‌ಮಾರಿ' ಸಹ ಕೆಡುಕು ಸ್ವಭಾವದ ವ್ಯಕ್ತಿಗಳಿಗೆ ರೂಪಕವಾಗಬಲ್ಲದು; ಕೇಪ್/ಕೇಪು=ಸಿಡಿಮದ್ದು; ಬಂಡೆ ಸಿಡಿಸುವಾಗ, ತುಪಾಕಿಯಿಂದ ಗುಂಡು ಹಾರಿಸುವಾಗ ಬಳಕೆ;
- ಕೇತ್‌ಮಾರಿ/ಕೇತಿಮಾರಿ ಎಂದು ಕೆಡುಕಿಗೆ ಪ್ರಸಿದ್ಧಿ ಪಡೆದ ಇನ್ನೊಂದು ದೇವತೆಯ ಪರಿಕಲ್ಪನೆಯೂ ಜನಪದರಲ್ಲಿದೆ.

ಕೇಕ Kēka:

- ಮನೆಮನೆಗೆ ವರ್ತನೆಯಂತೆ ಮೀನು ಕೊಂಡೊಯ್ದು ಕೊಡುವ ಪದ್ಧತಿ; ಕಾಯಂ ಗಿರಾಕಿತನ(ಮಂ.ಜಿ.); A system of sharing fish door to door;
- ವ್ಯಾಪಾರಿಗಳು ಮತ್ತು ಗಿರಾಕಿಗಳು ನಿರ್ದಿಷ್ಟ ವಸ್ತುಗಳನ್ನು ನಿರ್ದಿಷ್ಟ ಅವಧಿಯಲ್ಲಿ ಕೊಡುಕೊಳ್ಳುವ ವ್ಯವಹಾರಕ್ಕಾಗಿ ಮಾಡಿಕೊಳ್ಳುವ ಒಪ್ಪಂದ; *ಪ್ರ: 'ನಮ್ಮ ಮನೆಗೂ ಆ ವ್ಯಾಪಾರಿಗೂ ಪ್ರತಿ ತಿಂಗಳೂ ಕೇಕ ವ್ಯವಹಾರವಿದೆ'*(ರೂಢಿ); A permanent fishseller who brings or supplies fish door to door;
- ವರ್ತನೆಯ ಸಾಲ; ಒಪ್ಪಂದದ/ಕಾಯಂ ಆದ ಲೇವಾದೇವಿ ವ್ಯವಹಾರ(ದ್ರಾ.ಜ್ಞಾ.ಪ.ಕೋ/ತು.ನಿ.); ದೀರ್ಘಕಾಲದ ಸಾಲ ರೂಪದ ವ್ಯವಹಾರ(ದ.ಕ.); A routine loan;
- ವ್ಯರೂ: ಕೇಕೊ.

ಕೇಕರಿಕೆ/ಕ್ಯಾಕರಿಕೆ Kēkarike/Kyākarike:

- ಕೇಕರ/ಕೇಂಕರ + ಇಕೆ; ಕೇಂಕರ(> ಕೇಕರ) = ಗುರುಗುಟ್ಟುವಿಕೆ; ಗಂಟಲಲ್ಲಿ ಉಂಟಾಗುವ ಕೆರೆತ/ ಕಡಿತ/ನವೆ; Itching due to lungs, throat infection;
- ಗುರುಗುಡುವಿಕೆ; ಗುರುಗುಟ್ಟುವಿಕೆ; ಹೇಕರಿಕೆ; ಶ್ವಾಸಕೋಶದಲ್ಲಿ ಕಫ ಇತ್ಯಾದಿ ದ್ರವಪದಾರ್ಥ ಕಟ್ಟಿಕೊಂಡಾಗ ಅದನ್ನು ಹೊರಹಾಕಲು ಗಂಟಲಲ್ಲಿ ಉಂಟಾಗುವ ಕಡಿತ/ನವೆ; ಗಂಟಲಲ್ಲಿ ಕಟ್ಟಿಕೊಂಡ ಕಫವನ್ನು ಹೊರಹಾಕುವಾಗ ಉಂಟಾಗುವ ಶಬ್ದ; ಕೇಕರಿಸುವಿಕೆ; ಕ್ಯಾಕರಿಸುವಿಕೆ; a kind of sounding while spitting cough of lungs; *ಪ್ರ: 'ಗಂಟ್ಲಲ್ಲಿ ಯಾಕೊ ಅಪಾಟಿ ಕ್ಯಾಕರ್ಕೆ, ಕ್ಯಾಕರ್ಸಿ ಉಗ್ಯಾನ ಅಂದ್ರೆ ಏನೂ ಬರೊಲ್ದು';*
- ಗಂಟಲಲ್ಲಿ ಉಂಟಾಗುವ ಕೆರೆತ/ಕಡಿತವನ್ನು ಹೇಳುವ 'ಕೇಕರ'(<ಕೇಂಕರ) ಶಬ್ದದ ಕ್ರಿಯಾರ್ಥದ ಸ್ಪಷ್ಟತೆಗಾಗಿ '–ಇಕೆ' ಪ್ರತ್ಯಯವನ್ನು ಸೇರಿಸಿ 'ಕೇಕರಿಕೆ'ಯನ್ನು ಸೃಷ್ಟಿಸಿಕೊಳ್ಳಲಾಗಿದೆ;
- ಕೇಕರ, ಕೇಕರಿಕೆಗಳು ನಾಮವಾಚಕಗಳೆಂಬ ಗ್ರಹಿಕೆ ಉಂಟಾಗುವುದರಿಂದ '–ಇಸು' ಪ್ರತ್ಯಯವನ್ನು 'ಕೇಕರ' ಕ್ಕೆ ಸೇರಿಸಿ 'ಕೇಕರಿಸು'(ಕೇಕರ+–ಇಸು) ರೂಪವನ್ನು ಕ್ರಿಯಾರ್ಥದ ಮತ್ತಷ್ಟು ಸ್ಪಷ್ಟತೆಗಾಗಿ ಸೃಷ್ಟಿಸಿಕೊಳ್ಳಲಾಗಿದೆ; ಕೇಕರಿಸುವಿನ ಜಾನಪದೀಯ ರೂಪ 'ಕ್ಯಾಕಕರಿಸು';
- ಕಾಂಕರಿಪ್ಪು(ತು), ಕೇಕರಿಂಚು(ತೆ) ವ್ಯರೂ.ಗಳು 'ಕ್ಯಾಕರಿಸು'(ಕ) ವಿಗೇ ಹತ್ತಿರವಾಗಿವೆ.
- ಕೇಕರ(ಸಂ) =ಮೆಳ್ಳೆಗಣ್ಣು; ಓರೆಗಣ್ಣು; ಕಡೆಗಣ್ಣು; ಮೆಳ್ಳೆಗಣ್ಣಿನವನು; ಓರೆಗಣ್ಣಿನವನು; ಕೆಕ್ಕರ, ಕೆಕ್ಕರಿಸು ರೂಪಗಳು ಸಂ.ದ ಈ 'ಕೇಕರ'ದಿಂದ ಬಂದಂತಹವು.

ಕೇಕೆ Kēke:

- ನಗೆ; ಗಟ್ಟಿಯಾದ ನಗೆ; ಅಟ್ಟಹಾಸದ ನಗೆ; Laughter, a loud laughter;

ಪ್ರ: 'ಕೇಮೆ ಇಲ್ದೆನೆ ಕೇಕೆ ಹಾಕ್ಕಂದ್ ಕೂತವ್ರೆ, ಸುಮ್ನೆ'(ರೂಢಿ);

- ಸಂತೋಷದ ಕೂಗು; ಉತ್ಸಾಹದ ಕೂಗು; ನವಿಲಿನ ಕೂಗು; A happy cry or call of a Peacock or Peahen;
  ಪ್ರ: 'ಮಳ್ಗಾಲ್ದಲ್ಲಿ ನವ್ಲು ಕೇಕೆ ಹಾಕ್ಕೊಂಡ್ ಕುಣಿತದೆ'(ರೂಢಿ);
- ಅನುಕರಣವಾಚಿ ಶಬ್ದ; an imitative sound;
- *ವ್ಯರೂ:* ಕೇಕು; ಕೇಕೇ; ಕೇಗು;
  ತು: ಕೇಕೆ; ತೆ: ಕೇಕ; ಸಂ: ಕೇಕಾ;
- ***—ಕೇಕೆ ಹಾಕು/-ಕೇಕೆ ಹಾಕಿ ನಗು*** : ಗಟ್ಟಿಯಾಗಿ ಕೂಗು; ಅಟ್ಟಹಾಸದಿಂದ ನಗು; ಅಪಾರ ಸಂತೋಷವನ್ನು, ಗೆಲುವನ್ನು, ವಿಜಯವನ್ನು ಅನುಭವಿಸುವಾಗ ಅಗಲ ಬಾಯಿ ತೆರೆದು ಅಲೆಅಲೆಯಾಗಿ ಶಬ್ದಮಾಡಿ ನಗುವ ಗಟ್ಟಿಯಾದ ನಗೆ; ಹಾಸ್ಯ, ಪರಿಹಾರ, ವ್ಯಂಗ್ಯ, ವಿಡಂಬನೆ, ಅವಹೇಳನ, ಅವಮಾನ, ಅಣಕ ಮಾಡುವಾಗಲೂ ಬಳಕೆ. A loud cry; loud and deep sound of laughing.

ಕೇಟರಬಿಲ್ಲು/ಕ್ಯಾಟರ್‌ಬಿಲ್ಲು/ಕ್ಯಾಟ್‌ಬಿಲ್ಲು Kēṭarabillu/Kyāṭarbillu/ Kyāṭbillu:

- ಬೇಟೆಗಾಗಿ ಬಳಸುವ ಒಂದು ಸಾಧನ; ಸಣ್ಣ ಸಣ್ಣ ಕಲ್ಲುಗಳನ್ನು ಎದುರಾಳಿ/ಬೇಟೆಯ ಕಡೆಗೆ ಚಿಮ್ಮಿಸುವ ಸಲಕರಣೆ; An hunting weapon; it is a small wooden tool which is used to throw small stone towards prey; it is in the shape of Y-an English letter;
- ಸಣ್ಣ ಪ್ರಾಣಿಗಳು, ಹಕ್ಕಿಪಕ್ಷಿಗಳನ್ನು ಬೇಟೆಯಾಡಲು ಮಕ್ಕಳಿಂದಲೂ. ದೊಡ್ಡವರಿಂದಲೂ (ಅಲೆಮಾರಿ ಹಾಗೂ ಬುಡಕಟ್ಟು ಸಮುದಾಯದವರಲ್ಲಿ ಹೆಚ್ಚು) ಬಳಕೆ ಸಾಮಾನ್ಯ;
- 'Y' ಆಕಾರದ, ೬ ರಿಂದ ೧೦ ಇಂಚು ಉದ್ದವಿರುವ ಕಾರೆ, ಚಿಜ್ಜಲು ಇತ್ಯಾದಿ ಗಟ್ಟಿ ಮೆಳೆ/ಮರದ ತುಂಡಿನ ಎರಡೂ ತುದಿಗಳಿಗೆ ಸು. ಒಂದಡಿ ಉದ್ದದ ಹಳೆಯ ಸೈಕಲ್ ಟ್ಯೂಬಿನ ತುಂಡನ್ನು ಅಥವಾ ಇನ್ನಾವುದಾದರೂ ಬಗೆಯ ರಬ್ಬರ್ ತುಂಡನ್ನು ಬಿಗಿದು 'ಕಟ್ಟಿ ಕ್ಯಾಟರ್ ಬಿಲ್ಲನ್ನು ಮಾಡಲಾಗುತ್ತದೆ';
- ಕಟ್ಟಿದ ರಬ್ಬರ್ ತುಂಡಿನ ಮಧ್ಯಕ್ಕೆ ಹೆಬ್ಬೆರಳಿನ ತುದಿ ಗಾತ್ರದ, ಅಥವಾ ಅದಕ್ಕಿಂತಲೂ ಸ್ವಲ್ಪ ಸಣ್ಣದಾದ ಕಲ್ಲನ್ನು ಇಟ್ಟು ಎಳೆದು ಬಿಟ್ಟರೆ ಕಲ್ಲು ಒತ್ತಡದಿಂದ ತಳ್ಳಲ್ಪಟ್ಟು ಗುರಿಗೆ ತಾಗಿ ನೋವನ್ನು ಗಾಯವನ್ನು ಮಾಡಿ ರಕ್ತ ಚಿಮ್ಮುವಂತೆ ಮಾಡುತ್ತದೆ; ಸಣ್ಣ ಪ್ರಾಣಿಗಳಾದರೆ ಜೀವಹಾನಿಯೂ ಸಂಭವಿಸುತ್ತದೆ;
- ಹೊಲಗದ್ದೆಗಳಲ್ಲಿ ಬೆಳೆದ ಬೆಳೆಯ ತೆನೆಗಳ ಮೇಲೆ ಕುಳಿತು ತಿಂದು ಬೆಳೆ ನಷ್ಟ ಮಾಡುವ ಹಕ್ಕಿ ಪಕ್ಷಿಗಳನ್ನು ಕಲ್ಲು ಬೀಸಿ ಹೊಡೆದು, ಬೆದರಿಸಿ ಓಡಿಸಲೂ ಬಳಕೆ;
- ನಾಲ್ಕೈದರಿಂದ ಎಂಟು–ಹತ್ತು ವರ್ಷದೊಳಗಿನ ಹುಡುಗರು ಕ್ಯಾಟರಬಿಲ್ಲು ಹಿಡಿದು ಹಕ್ಕಿಪಕ್ಷಿಗಳನ್ನು ಬೆದರಿಸುತ್ತಾ ಮರಗಿಡಗಳ ಎಲೆ ಕಾಯಿಗಳನ್ನು ಉದುರಿಸುತ್ತಾ ತಿರುಗಾಡುವುದೆಂದರೆ ಅವರಿಗೆ ಬಲು ಮೋಜು;
- ಕ್ಯಾಟರ ಬಿಲ್ಲಿನಿಂದ ಗುರಿಗೆ ಹೊಡೆಯುವ ಕ್ರೀಡಾಸ್ಪರ್ಧೆಗಳನ್ನು ನಡೆಸುತ್ತಾರೆ.

ಕೇಟೆ Kēṭe:

- ಗದ್ದಲ; ಗಲಾಟೆ(ಉ.ಕ.ಜಿ.); Quarrelling, clash, strife, conflict;
- ಅಪರೂಪದ ಬಳಕೆ;
- ಕನ್ನಡ ಮತ್ತು ತುಳುವಿನಲ್ಲಿ 'ಕೇಕೆ' ರೂಪ ಇದೆ; ಕೇಕೆ>ಕೇಟೆ ಆಗಿರಬಹುದೇ? ಪ್ರಾದೇಶಿಕ ಭಿನ್ನತೆ ಕಾರಣವಾಗಿರಬಹುದು;
- ಕೇಕೆ(ನೋಡಿ)=ಕೂಗು; ಕಿರುಚು; ಗಟ್ಟಿಯಾದ ನಗು. A cry; a loud laughter.

ಕೇಡು Kēḍu:

- ಕೆಡುಕು; ಗಂಡಾಂತರ; ವಿಪತ್ತು; ವಿನಾಶ; ಅಪಾಯ; ಹಾನಿ; ನಾಶ; Danger, distruction; something collapsing;
- ಅಳಿವು; ಸಾವು; ಭಂಗ; ನಷ್ಟ; ನಶ್ವರ; Endanger, death, loss, temporary;
- ಹಾಳಾಗುವಿಕೆ; ಚದುರುವಿಕೆ; ಚಲ್ಲಾಪಿಲ್ಲಿಯಾಗುವಿಕೆ; ಕೆದರಿಹೋಗುವಿಕೆ; Scattering, spreading out;

- ತೊಂದರೆ; ಸಮಸ್ಯೆ; ಗೋಜಲು; ಫಜೀತಿ; A problem of confliction;
- ಕೆಟ್ಟ ಕೆಲಸ; ದುಷ್ಕೃತ್ಯ;
- *ಪ್ರ: ೧.'ಅವುನ್ಗೇನೊ ಬಂದದೆ ಕೇಡು, ಅದ್ಕೆ ಅಂಗಾಡ್ತನೆ'(ರೂಢಿ);*
- *೨.'ಬರ್ಬಾರುದ್ ಕೇಡ್ ಬಂದು ವತ್ಗಂದೋಗ' (ಬೈಗುಳ);*
- *೩.'ಕೇಡಿಲ್ಲದ ರೂಹಿಲ್ಲದ ಚೆಲುವಂಗೆ ಆನೊಲಿದೆನವ್ವ'(ಅಕ್ಕನ.ವ.);*
- *೪.'ಕೇಡು ಬರುವ ಕಾಲಕ್ಕೆ ಪೆಟ್ಟಿಗೆಯಲ್ಲಿ ಇದ್ದರೂ ತಪ್ಪದು'(ಗಾ);*
- ಕೆಡು/ಕಿಡು ಧಾತುವಿನ ಭಾವನಾಮ/ಕ್ರಿಯಾನಾಮ– Verbalnoun/ನಾಮವಾಚಿ; ಕೇಟ/ಕೇತ(ಕ್ಯಾತ) ರೂಪಗಳಿವೆ, ತೊಂದರೆ ಕಿರುಕುಳ ಎಂಬರ್ಥದಲ್ಲಿ; ಕೇಟ(ತ)>ಕೇಡ/ಕೇಡು ಆಗಿರಬಹುದು; ಸರಳವಾಗಿ 'ಕೆಡು' ಧಾತುವಿನ ಭಾವವಾಚಿ 'ಕೇಡು' ಎನ್ನಬಹುದು;
- ***ವ್ಯರೂ:*** ತ.ಕೇತು; ಮ.ಕೇಡು; ತೆ.ಚೇಡು; ಕೊಡ. ಕೆಡಿ; ತು.ಕೇಡ್/ಕೇಡು;
- ತುಂಬಾ ಪ್ರಚಲಿತ ರೂಪ; ಭಯ, ಆತಂಕ, ಅಸಹಜ, ಅನಿಷ್ಟ ಮೊದಲಾದ ಭಾವಗಳಿಗೆ, ನಂಬಿಕೆಗಳಿಗೆ ವಾಹಕವಾಗಿ ಬಳಕೆ; ಈ ಕಾರಣದಿಂದ ಇದರ ಅನೇಕ ನಿಷ್ಪನ್ನ ರೂಪಗಳೂ ಇವೆ;
- ***—ಕುಲಗೇಡಿ(ಗ):*** ಕುಲ+ಕೇಡು+–ಇ/–ಇಗ; ಕುಲದ ಖ್ಯಾತಿಯನ್ನು ಕೇಡಿಸಿದವನು; ಕುಲಕ್ಕೆ ಕೆಟ್ಟಹೆಸರು ತಂದವನು; A person who has brought bad name for his family due to his bad behaviour;
- ***—ಕೇಡಾಗು:*** ಕೇಡು+ಆಗು; ಕೆಡಕು ಸಂಭವಿಸು; ಕೆಟ್ಟದ್ದಾಗು; ನಾಶಹೊಂದು; ಹಾಳಾಗಿಹೋಗು; ಸಂಭವನೀಯವಾದದ್ದರ ಬಗೆಗೆ ಭಯ ಆತಂಕಗಳ ಸೂಚಕವಾಗುವಂತೆ ಈ ರೂಪದಲ್ಲಿ ಶಾಪಾಶಯವೂ ಇದೆ; To effect or to suffer from evilness, wickedness; bad happenings;
- ***—ಕೇಡಾಳ/–ಕೇಡಾಳಿ:*** ಕೇಡು+–ಆಳ/–ಆಳಿ(<ಆಡಿ); ಕೆಡುಕು ಬಯಸುವವನು; ಕೆಟ್ಟದ್ದನ್ನು ಮಾಡುವವನು; ವಿನಾಶಕಾರಕ ಕೆಲಸಗಳನ್ನು ಮಾಡುವುದರಲ್ಲೇ ಪ್ರವೃತ್ತನಾಗಿರುವವನು; ಅನಿಷ್ಟಕಾರಕ ಸ್ವಭಾವದವನು; '–ಕೇಡಾಳಿ' ಸ್ತ್ರೀವಾಚಕವೂ ಆಗುತ್ತದೆ; 'ಕೇಡಾಡಿ' ರೂಪದ ಪರಿವರ್ತಿತ ರೂಪ 'ಕೇಡಾಳಿ/ಕೇಡಾಳ'; ಡ>ಳ ಆಗುವುದು ಸಾಮಾನ್ಯ; –ಆಡಿ/–ಆಳಿ ಸ್ವಭಾವ ಸೂಚಕ ಉಪಸರ್ಗ/ಪ್ರತ್ಯಯ; ಸ್ತ್ರೀಪುರುಷವಾಚಕಗಳೆರಡೂ ಆಗುತ್ತವೆ; ಆದರೂ '–ಆಳ' ರೂಪ ಕಾಣಿಸಿಕೊಂಡಿರುವುದು ಭಾಷಾ ಬಳಕೆಯ ಸ್ವಚ್ಛಂದತೆಗೆ ಸಾಕ್ಷಿ; '–ಆಳಿ' ಯನ್ನು ಸ್ತ್ರೀವಾಚಕಕ್ಕಷ್ಟೇ ಸೀಮಿತ ಎಂಬ ತಪ್ಪು ಗ್ರಹಿಕೆ ಇದಕ್ಕೆ ಕಾರಣ; A person who wishes evilness or bad for others;
- ***—ಕೇಡಿ/ಕೇಡ:*** ಕೇಡು+–ಇ/–ಅ: ತಪ್ಪಿತಸ್ಥ; ದೋಷಿ; ಅಪರಾಧಗುಣಗಳಿಂದ ಹೆಸರುವಾಸಿಯಾದವನು; ಕುಖ್ಯಾತ ಅಪರಾಧಿ; ರಮ್ಯ ಕಥೆಗಳಲ್ಲಿ, ಸಿನಿಮಾಗಳಲ್ಲಿ ಕಾಣಿಸಿಕೊಳ್ಳುವ ಖ(ಕ)ಳನಾಯಕ; ಕೇಡಿ ಪಾರ್ಟಿ ಎಂದೇ ಪ್ರಸಿದ್ಧಿ; ಅಪರಾಧಗಳ ಸರಮಾಲೆ ಕಾರಣವಾಗಿ ಅಪರಾಧ ಇಲಾಖೆಯ/ ಪೊಲೀಸರ ಕಡತದಲ್ಲಿ ನಮೂದಾದ ವ್ಯಕ್ತಿ; ದುಷ್ಟ; ನೀಚ; ಕೇಡಾಡಿ/ಕೇಡಾಳಿ; A person who is wellknown for his/her commited crimes in society;
- ***—ಕೇಡಿಗ/–ಕೇಡುಗ:*** ಕೇಡು+–ಇಗ; ಕೇಡಾಡಿ; ಕೇಡಿ; ಕೆಡುಕು ಮಾಡುವವನು; ಹಾಳು ಮಾಡುವವನು; ದುಷ್ಟ ಗುಣದವನು/ಸ್ವಭಾವದವನು; A rowdy, a criminal, a person with bad nature;
- ***—ಕೇಡಿಗತನ/–ಕೇಡುಗತನ:*** ಕೆಡುಕು ಮಾಡುವ ಸ್ವಭಾವ; ಕೆಟ್ಟದ್ದನ್ನು ಮಾಡುವ/ಹಾರೈಸುವ ಗುಣ; ದುಷ್ಟಗುಣ; ಕೇಡು+ಇಗ+ತನ; The nature of doing bad for others;
- ***—ಕೇಡಿಗಬುದ್ಧಿ/–ಕೇಡುಬುದ್ಧಿ:*** ಕೇಡಿಗತನ; ಕೆಟ್ಟದ್ದನ್ನು ಮಾಡುವ/ಹಾರೈಸುವ ಸ್ವಭಾವ/ಪ್ರವೃತ್ತಿ; Bad conduct;
- ***—ಕೇಡುಗಾಣು:*** ಕೇಡು+ಕಾಣು; ಕೆಟ್ಟದ್ದನ್ನು/ ದುರ್ಗತಿಯನ್ನು ಕಾಣು; ನಾಶವಾಗು; ಅವನತಿಹೊಂದು; ಶಾಪಾಶಯವೂ ಇದೆ; To destroy at last;
- ***—ಕೇಡುಗಾಲ:*** ಕೇಡು+ಕಾಲ; ಕೆಟ್ಟಕಾಲ; ದುರ್ಭಿಕ್ಷದ ಕಾಲ; ಅವನತಿಯ ಕಾಲ; ಅವಸಾನದ/ಅಧರ್ಮದ/

ಅನಿಷ್ಟದ ಕಾಲ; ಅವನತಿಯ ಸೂಚಕವಾಗಿ ಅಸಹಜ ಘಟನೆಗಳು ಜರುಗುವ ಸಮಯ; The time of downfall or distruction; *ಪ್ರ: ೧.'ಕೇಡುಗಾಲಕ್ಕೆ ನಾಯಿ ಮೊಟ್ಟೆ ಇಕ್ಕಿತು'(ಗಾ); ೨.'ಕೇಡುಗಾಲಕ್ಕೆ ಬುದ್ಧಿಯಿಲ್ಲ ಮರಣಕಾಲಕ್ಕೆ ಮದ್ದು ಇಲ್ಲ'(ಗಾ);*

- ***—ಕೇಡುಬಗೆ/–ಕೇಡೆಣಿಸು:*** ಕೇಡು+ಬಗೆ (=ಆಲೋಚಿಸು; ಆಶಿಸು; ಹಾರೈಸು); ಕೇಡು+ ಎಣಿಸು(=ಅದೇ); ಇನ್ನೊಬ್ಬರಿಗೆ ಕೇಡನ್ನು ಉಂಟುಮಾಡು; ಕೇಡನ್ನು ಬಯಸು; ಇನ್ನೊಬ್ಬರ ಅವನತಿಯನ್ನು ಬಯಸು/ಹಾರೈಸು; To wish or to do bad for others;
- ***—ಕೇಡುಮಾಡು:*** ಕೆಟ್ಟದ್ದನ್ನು ಮಾಡು; ಕೆಡುಕು ಸಂಭವಿಸುವುದರಲ್ಲಿ ಪ್ರವೃತ್ತನಾಗು; To do bad for others;
- ***—ಕೇಡ್ಗಣ್ಣು:*** ಕೇಡು+ಕಣ್ಣು; ಕೆಡುಕನ್ನು ಉಂಟುಮಾಡುವ ದೃಷ್ಟಿ; ಅಶುಭ/ಅನಾರೋಗ್ಯ/ ಅನಿಷ್ಟಕಾರಕ ನೋಟ/ದೃಷ್ಟಿ; ***ನೋಡಿ:*** ಕೆಟ್ಟಕಣ್ಣು; The evil eye; the wicked eye sight;
- ***—ಕೇಡುಗಾಲ್ವೆ:*** (ಕೇಡುಗಾಲ್ವೆ<ಕೇಡುಗಾಲುವೆ;) ಕೇಡು+ಕಾಲುವೆ; ಬೀಳುಗಾಲುವೆ/ಬೀಳುಜಿಗುಳು (ಮಂಡ್ಯ.ಜಿ.); ಹೊಲ–ಗದ್ದೆಗಳಲ್ಲಿ ಹರಿಯುವ ಅಧಿಕ ಪ್ರಮಾಣದ ನೀರು ಹೊರಗೆ ಹರಿದುಹೋಗಲು ತೋಡಿದ ಕಾಲುವೆ; ಜೌಗುಪ್ರದೇಶದಲ್ಲಿ ಯಾವಾಗಲೂ ನೀರು ತುಂಬಿದಂತಿರುವ ಅಥವಾ ಅಧಿಕ ತೇವಾಂಶದಿಂದ ಕೂಡಿರುವ ಹೊಲ ಗದ್ದೆಗಳ ನೀರು ಹೊರಕ್ಕೆ ಹರಿದು ಹೋಗಲು(ಆರ್‍ವಸೆ ಬರಲು) ತೋಡುವ ಜಿಗುಳು, ವಸ್ತಿ ಜಿಗುಳು(ಅದೇ); ಹೆಚ್ಚಾದ ನೀರನ್ನು ಹೊರಗೆ ಹರಿಬಿಡುವ ಕಾಲುವೆ(ಚಿ.ಪ.ಕೋ); ಅಧಿಕ ನೀರು ಹೊಲಗದ್ದೆಗಳನ್ನು ಜೌಗಾಗಿಸಿ, ಕ್ಷಾರಗುಣವನ್ನು ಹೆಚ್ಚಿಸಿ ಬೆಳೆಯ ನಷ್ಟಕ್ಕೆ ಕಾರಣವಾಗುವುದರಿಂದ 'ಕೇಡು' ಪದ ಬಳಕೆಯಾದ ಹಾಗೆ ಕಾಣುತ್ತದೆ; 'ಕೇಡು'ವಿಗೆ ಇಲ್ಲಿ ಅನಗತ್ಯ, ಅಧಿಕ ಎಂಬ ಅರ್ಥವೂ ಇಲ್ಲಿ ಲಭ್ಯ; ಅಧಿಕ ನೀರು ಹರಿದು ಜಮೀನಿನ ಆಕೃತಿ ಕೆಡುವುದರಿಂದ, ಮಣ್ಣು ಕೊಚ್ಚಿಹೋಗುವುದರಿಂದ, ಸಹ 'ಕೇಡು' ಬಳಕೆಯಾಗಿರುವುದು ಸಾಧ್ಯ; A cannal which is dig to flow excess water from cultivated fields;
- ***—ಕೇಡುನೀರು:*** ದೊಡ್ಡಮಳೆ ಸುರಿದು ಹೊಲ–ಗದ್ದೆಗಳಲ್ಲಿ ಹರಿದುಹೋಗುವ ನಿರುಪಯುಕ್ತ ನೀರು (ಚಿ.ಪ.ಕೋ); ವಿಪತ್ತಿಗೆ, ಬೆಳೆನಷ್ಟಕ್ಕೆ ಕಾರಣವಾಗುವ ನೀರು; The useless rainy water due to heavy rain which causes distruction of crops;
- ***—ಕೇಡು ಮಳೆ:*** ವ್ಯರೂ. ಕೇಡುಮಳೆ; ಪ್ರಾದೇಶಿಕ ಭಿನ್ನತೆ; ಬೇಡವಾದಾಗ ಸುರಿದು ಬೆಳೆಯನ್ನು ಕೆಡಿಸುವ, ಸಾವುನೋವಿಗೆ ಕಾರಣವಾಗುವ ಮಳೆನೀರು(ಚಿ.ಪ.ಕೋ). The rain which is unwanted.

ಕೇಣ್ Keṇ:

- ಕೇಳು; ಆಲಿಸು; ವಿಚಾರಮಾಡು; ಪ್ರಶ್ನಿಸು(ತು); To listen or hearing;
- ಬೇಡು; ಯಾಚಿಸು; to beg; request;
- 'ಕೇಳ್' ಮೂಲರೂಪ;
- ***ವ್ಯರೂ:*** ತ: ಕೇಡ್/ಕೇಟ್/ಕೇಳ್; ಕ: ಕೇಳ್/ಕೇಳು; ಮ: ಕೇಲ್‌ಕ್ಕ; ಕೊಡ: ಕೇಳ್;
- ಕೇಳ್(ಕ.ತ.ಕೊಡ.)>ಕೇಣ್(ತು) ಆಗಿದೆ ಎನ್ನಬಹುದು; ಆದರೇ ಇದಕ್ಕೂ ಮೂಲದಲ್ಲಿ ಕೇಡ್/ಕೇಂಡ್ ಇರುವಂತೆ ಕಾಣುತ್ತದೆ; ಇದು ದ್ರಾವಿಡ/ಮೂಲದ್ರಾವಿಡಕ್ಕೆ ಹತ್ತಿರವಿರಬಹುದು ಅಥವಾ ಮೂಲದ್ರಾವಿಡವೇ ಆಗಿರಬಹುದು;
- ∴ ಕೇಂಡ್/ಕೇಡ್>ಕೇಟ್/ಕೇಣ್>ಕೇಳ್(ಕ)>ಕೇಳು ಆಗಿರಬೇಕೆಂದು ನಿರೂಪಿಸುವುದೇ ಸರಿ ಎನಿಸುತ್ತದೆ; 'ಕೇಂಡ್'ನಲ್ಲಿ ಬಿಂದು/ಅನುನಾಸಿಕತ್ವ ಇರುವುದರಿಂದ ಕೇಣ್ ಆದೇಶ ಅಸಹಜವೇನೂ ಅಲ್ಲ; ಇನ್ನು 'ಡ' ಕಾರಕ್ಕೆ 'ಳ' ಕಾರದೇಶ ದ್ರಾವಿಡ ಭಾಷೆಗಳಲ್ಲಿ ಇದ್ದೇ ಇದೆ;
- ***ನೋಡಿ:*** ಕೇಂಡ್.

ಕೇಣ Keṇa:

- ಕೋಪ; ಮಾತ್ಸರ್ಯ; ಸಿಟ್ಟು; >ಕ್ಯಾಣ; ರೋಷ; Anger, jealous, revengeful;
- ಹೊಟ್ಟೆಕಿಚ್ಚು; ಅಸೂಯೆ; ಮತ್ಸರ; ಹುರುಡು; Envy, jealous;

- ಲೋಭ; ಅತ್ಯಾಸೆ; Too much of desires;
- ದೀರ್ಘವಿಚಾರ; ಯೋಚನೆ(ಹವ್ಯ.ಶೋ);
- ಆಲೋಚನೆ; ಪರಾಮರ್ಶೆ; ಚಿಂತನೆ; Thinking, thought, referencing;
- ಸಂಕೋಚ; ಭಯ Shyness and fear;
- ಹುರುಪು; ಆವೇಶ; ಉದ್ರೇಕ;
- ವ್ಯರೂ: ಕೀಣ; ಕೇಣೊ(ತು); ಕ್ಯಾಣ(ಕ)
- ಏ>ಯಾ(ಯ್+ಆ) ಆಗುವುದು ಸಂಧ್ಯಕ್ಷರ ಪ್ರಕ್ರಿಯೆಯಲ್ಲಿ ಸಹಜ ದೂರವೇನಲ್ಲ; ∴ ಕೇಣ> ಕ್ಯಾಣ ಅಥವಾ ಕ್ಯಾಣ>ಕೇಣ ಆಗುವುದು ಸಾಮಾನ್ಯ;
- 'ಕೀಣ' ಸಂ.'ಕ್ಷೀಣ'ದ ಪರಿವರ್ತಿತ ರೂಪ; ಕ.'ಕೇಣ'ಕ್ಕೆ 'ಕೀಣ' ಪರ್ಯಾಯವಲ್ಲ; ತಪ್ಪು ಬಳಕೆ ಆಗಿದೆ;
- ಕನ್ನಡ ಜನಪದರಲ್ಲಿ 'ಕ್ಯಾಣವೇ' ಪ್ರಚಲಿತ, ಸಹಜ ಪ್ರಯೋಗ(ಮಂ.ಜಿ; ಮೈ.ಜಿ.);
- ಕೊರತೆ; ಊಣೆಯ; ಲೋಪ; ನ್ಯೂನತೆ(ಸಂ); <ಕ್ಷೀಣ(ಸಂ);
- ಮಗ್ಗದ ಹಾಸಿನ ನೂಲು;
- *ಪ್ರ: ೧.'ಜಾಣಭಕ್ತಿ ತನಗೆಂದು ಮರುಳನ ಕೀಣವನು ನೋಡ'(ಸರ್ವಜ್ಞ);*
- *೨.'ಕೇಣದಿಂ ಗಳಿಸಿ ಕಡೆಯಲಿ ಕೊಡುವೆನೆನೆ ಪ್ರಾಣ ಶಾಶ್ವತವೆ'(ಸರ್ವಜ್ಞ);*
- *೩.'ಕೇಣವಿಲ್ಲದೆ ಜಂಗಮಕ್ಕೆ ದಾಸೋಹಮಂ ಮಾಡುತಿರಲು'(ವಚನ);*
- *೪.'ಅಣಿಯೊಳಗಣ ಕೇಣದಂತೆ ಚಿನ್ನದೊಳಗಣ ಬಣ್ಣದಂತೆ'(ವಚನ);*
- ***—ಕೇಣ್ಸಳ:*** ಕೇಣ+ಸರ(<ಸ್ವರ=ಧ್ವನಿ/ಭಾವ); ಕರುಬು; ಹೊಟ್ಟೆಕಿಚ್ಚು; ಮಾತ್ಸರ್ಯ; envy jealousy;
- *ಪ್ರ: 'ಬಂಡಾಟ ಬದುಕಿಸಿತು ಕೇಣ್ಸರ ಕೆಡಿಸಿತು'* (ಗಾ).

ಕೇಣಿ Keṇi:

- ಬಾವಿ; ಕೊಳ; ನೀರಿನ ಒರತೆಗೆ ನದಿಯ ದಡದಲ್ಲಿ ತೋಡಿದ ಕುಳಿ; ಚಿಕ್ಕಕೆರೆ; ಕಿಣರು(?) ಬಾವಿ; Well, pond, a brooklet, waterfall, duck dug at river bank;
- ನೀರಿನ ಕೊರೆತದಿಂದ ಉಂಟಾದ ತೋಡು; ಚಿಕ್ಕ ಕಾಲುವೆ; Brooklet small channel due to water flow;
- ಪರ್ವತಗಳ ನಡುವೆ ಇರುವ ಇಕ್ಕಟ್ಟಾದ ಸ್ಥಳ/ದಾರಿ; ಕಣಿವೆ; Mountain pass;
- ಸಾಲು; ಪಂಕ್ತಿ; ಗುಂಪು; ಹಿಂಡು; <ಕೇಱಿ(ಕ); Line, group;
- ತ.ಮ.ಕೇಣಿ; ತು.ಕಣಿ/ಕನಿ;
  ವ್ಯರೂ: ಕಣಿಮ್(ಮೆ) ಕಣಿವ್(ವೆ);
- ಮೈತ್ರಿ; ಕೆಳೆ; <ಕೇಱಿ(ತ);
- ಖೇಣಿ; ಗೇಣಿ; ಕೊಳ್ಳುವುದು–ಮಾರುವುದು; ಕ್ರಯ–ವಿಕ್ರಯ; <ಕ್ರೇಣಿ(ಸಂ);
- ರತ್ನ ಪರೀಕ್ಷೆಯ ಬಗೆ; ಕುಂದಣ;
- ಒಪ್ಪಿಗೆ; ಒಪ್ಪಂದ; ಮೀಸಲು;
- ಗುತ್ತಿಗೆ; ಪಾಲು; ಭಾಗ;
- ಕ್ರೀಡೆ; <ಕೇಳಿ(ಕ್ಷಳ)<ಕೇಲಿ(ಸಂ);
- 'ಕೇಣ' ಪದಕ್ಕೆ ದ್ರಾವಿಡ ಹಾಗೂ ಆರ್ಯವರ್ಗಗಳೆರಡರ ಮೂಲದಿಂದಲು ನಿಷ್ಪತ್ತಿ ಹೇಳಲು ಸಾಧ್ಯವಿರುವುದು ವಿಶೇಷ; ಅರ್ಥ ಮಾತ್ರ ಆಯಾ ಮೂಲಕ್ಕೆ ಭಿನ್ನವಾಗಿರುತ್ತದೆ; ಗೇಣಿ, ಗುತ್ತಿಗೆ, ಒಪ್ಪಂದ, ಪಾಟು, ಕ್ರೀಡೆ– ಈ ಅರ್ಥಗಳಿಂದ ಸಂ.ಮೂಲದ ನಿಷ್ಪತ್ತಿಗೆ ಅನ್ವಯ; ಉಳಿದುವು ಕನ್ನಡ, ತಮಿಳು ಅಥವಾ ದ್ರಾವಿಡದ ಮೂಲಕ್ಕೆ ಅನ್ವಯ;
- 'ಕೇಳಿಪಜ್ಜಿಗೆ ಜಱಿಂ ಕ್ರೀಡೆಯೊಳ್ ಕ್ಷಳಂ', 'ಕೇಱಿಯೆಂದು ಪಂಕ್ತಿಯೊಳ್ ಜಱಿಂ' ಎಂಬ ವ್ಯಾಕರಣೋಕ್ತಿಗಳು ಬಹುನಿಷ್ಪತ್ತಿ ಮತ್ತು ಬಹು ಅರ್ಥ ಸಾಧ್ಯತೆಯ ರೂಪದ ಬಗೆಗಿನ ಗೊಂದಲ ನಿವಾರಣೆಗಾಗಿಯೇ ಹುಟ್ಟಿಕೊಂಡಿವೆ;
- ***—ಕೇಣಿಕಾರ/–ಗೇಣಿಕಾರ:*** ಗುತ್ತಿಗೆದಾರ; ಒಪ್ಪಂದದ ಮೇಲೆ ಕೆಲಸದ ಹಂಚಿಕೆ ಪಡೆಯುವವನು; ವ್ಯಾಪಾರಿ; ಬಣಜಿಗ; ಬಣಜಿಗ ಸಮುದಾಯದ ಮುಖ್ಯಸ್ಥ; a chief trafficker (ಕಿಟ್ಟೆಲ್); a Setti(ಅದೇ); 'ಮುಂಗೇಣಿಕಾಱ' ಎಂಬ ರೂಪವೂ ಇದೆ; A contractor; a person who cultivates a land on lease;
- ***—ಕೇಣಿಗಾರರು*** : ಮಣಿಗಾರರು ಎಂದೂ ಹೆಸರಿದೆ; ಒಂದು ಅಲೆಮಾರಿ ಸಮುದಾಯ ಮತ್ತು ಆ ಸಮುದಾಯದ ಜನ; ಮರಾಠಿ ಇವರ ಮಾತೃಭಾಷೆ; ಮಕ್ಕಳ ಆಟದ ಸಾಮಾನು, ರಿಬ್ಬನ್ನು, ಬಾಚಣಿಗೆ, ಪಿನ್ನು ಮುಂತಾದುವನ್ನು ಬೀದಿ ಬೀದಿಗಳಲ್ಲಿ

ಊರೂರುಗಳಲ್ಲಿ ಅಲೆದು ಮಾರುವುದು ಇವರ ವೃತ್ತಿ. `Kēnigara' is also known as `Manigara'; a migrated who sell toys, ribbon, comb, pin at streets.

ಕೇತ Kēta:

- ತೊಂದರೆ; ಕಿರುಕುಳ; ಕಾಟ; ಕೇಟ; ಕ್ಯಾಟ; ಕ್ಯಾತ; Trouble, troublesome, to make disturb;
- ಕ್ಲೇಷ(ಸಂ)>ಕೇತ/ಕೇಟ>ಕ್ಯಾಟ/ಕ್ಯಾತ ಆಗಿರುವ ಸಾಧ್ಯತೆ ಇದೆ;
- ಜಾಗ; ಸ್ಥಳ; ಪ್ರದೇಶ; ಹೊಲ; ಕೆಯ್; Field (ಕಿಟ್ಟೆಲ್); A place, region, land, cultivated land;
- ಕ್ಷೇತ್ರ(ಸಂ)>ಕೇತ>ಕೇಟ ಆಗಿರಲೂಬಹುದು;
- 'ಕೇತಪ' ಪ್ರಯೋಗವಿದೆ; ಕೇತ+ಅಪ್ಪ=ಕೇತಪ್ಪ> ಕೇತಪ ಎಂಬ ನಿರೂಪವೊಂದಿದೆಯಾದರೂ ಕ್ಷೇತ್ರ>ಕೇತ ಆಗಿ, ಅಧಿಪತಿ, ದೊರೆ, ಒಡೆಯ ಎಂಬ ಅರ್ಥದ 'ಪ'(ಸಂ) ಸೇರಿ 'ಕೇತಪ' ಆಗಿರುವ ಸಾಧ್ಯತೆಯೂ ಉಂಟು; 'ಜನಪ' ಇದ್ದ ಹಾಗೆ;
- ಕೇತಪಗಾವುಂಡ(ಕೇತ+ಅಪ್ಪ)ಪ+ಗಾವುಂಡ/ ಗಾಮುಂಡ), ಕೇತಪೊಡೆಯ(ಕೇತ+ಅಪ್ಪ/ಪ+ ಒಡೆಯ=ಕೇತಪವೊಡೆಯ>ಕೇತಪೊಡೆಯ; ಕೇತೊಡೆಯ ಎಂದೂ ಆಗಬಹುದು), ಕೇತಯ್ಯ/ ಕೇತಯ(ಕೇತ+ಅಯ್ಯ), ಕೇತೋಜ(ಕೇತ+ಓಜ), ಕೇತಬ[ಕೇತ+ಅಬ(<ಅಬ್ಬೆ)], ಕೇತಲದೇವಿ (ಕೇತಲ+ ದೇವಿ) ಎಂಬೆಲ್ಲಾ ರೂಪಗಳಿವೆ; ಈ ಎಲ್ಲ ರೂಪಗಳು ವ್ಯಕ್ತಿವಾಚಕಗಳಾಗಿದ್ದು, ಕೆಲವು ಶಾಸನಗಳಲ್ಲಿ ಉಲ್ಲೇಖಗೊಂಡ ಹೆಸರುಗಳೂ ಆಗಿವೆ;
- ಕೇತ, ಕೇತಲದೇವಿ ಜನಪದರ ದೇವತೆಗಳ ಹೆಸರುಗಳೂ ಆಗಿವೆ; ಕೇತ ಕಾಟಕೊಡುವ ಬಲಿ ಇತ್ಯಾದಿ ರೂಕ್ಷ ಆರಾಧನೆಯನ್ನು ಬಯಸುವ ದೇವತೆ ಎಂದಾಗಿ 'ಕ್ಷುದ್ರದೇವತೆ' ಎಂಬ ಅಪಖ್ಯಾತಿಗೂ ಒಳಗಾಗಿದೆ; Kēta-Ketaladevi- a folk goddess- a goddess of wickedness;
- ಕ್ಯಾತ ಎಂಬ ಅಡ್ಡಹೆಸರು, ಕ್ಯಾತೇಗೌಡ ಎಂಬ ಅಂಕಿತನಾಮ ಇತ್ತೀಚಿನವರೆಗೂ ರೂಢಿಯಲ್ಲಿದ್ದುವು; Kyata- Kyategowda are famous proper nouns even today around us;
- ಮೂಲತಃ ಕೇತ/ಕ್ಯಾತ ಶಬ್ದ ಗ್ರಾಮದ/ಕೆಲವು ಸೀಮಿತ ಗ್ರಾಮಗಳ/ಸೀಮಿತ ಭೂಪ್ರದೇಶದ ಒಡೆಯ/ ಯಜಮಾನ/ಗೌಡ(ಕ್ಷೇತ್ರಪ/ಕ್ಷೇತ್ರಾಧಿಪ/ಕ್ಷೇತ್ರಾಧಿಪತಿ) ಎಂಬ ಅರ್ಥದಲ್ಲಿ ಅಧಿಕಾರ ಸೂಚಕ ಶಬ್ದಗಳೊಡನೆ ಸೇರಿ ರೂಢಿಗೆ ಬಂದು ಆಮೇಲೆ ವ್ಯಕ್ತಿವಾಚಕ ಅಂಕಿತ ನಾಮರೂಪವಾಗಿ ಆನಂತರದಲ್ಲಿ 'ಕ್ಲೇಷ'ದ ಕಾರಣವಾಗಿಯೋ ಅಧಿಕಾರಸ್ಥರು ಹಾಗೂ ಆ ಹೆಸರಿನವರು ಕೊಡುವ ಕಾಟಗಳು ಕಾರಣವಾಗಿಯೋ ಏನೊ ಕಾಟ, ತೊಂದರೆ ಎಂಬ ಅರ್ಥವನ್ನೂ ಪಡೆದುಕೊಂಡು ಕಾಟ ಕೊಡುವ ವ್ಯಕ್ತಿ, ಕಾಟ ಕೊಡುವ ದೇವತೆ ಎಂಬ ಅಪಖ್ಯಾತಿಸಂಸ್ಕೃತಿಯ ಆರೋಪಗಳು ಸೇರಿಕೊಂಡಂತೆ ಕಾಣುತ್ತದೆ; Keta/Kyata word is used to indicate the chief of a region or an area or a group of villages;
- ಒಂದು ಬಗೆಯ ಆಟ/ನಾಟಕ; ಕಿಳ್ಳೇಕೇತರ ಆಟ; ತೊಗಲುಗೊಂಬೆ ಆಟ; ***ನೋಡಿ:*** ಕಿಳ್ಳಿಕ್ಯಾತರು; ಸೆಣಕಲ(ಸಣ್ಣಗಿರುವವನು/ಸಣ್ಣಕಾಲಿನವನು)ನಾಗಿದ್ದು ಸಣ್ಣಪುಟ್ಟ ಕಾರಣಗಳಿಗೆಲ್ಲ ಕೋಪಗೊಂಡು ಹಾರಾಡುವ ವ್ಯಕ್ತಿಯನ್ನು 'ಶಿಳ್ಳ' ಎಂದು ಕರೆಯುವ ರೂಢಿ ಇದೆ; 'ಶಿಳ್ಳ' ಜೊತೆ 'ಕೇತ' ಸೇರಿ 'ಶಿಳ್ಳೇಕೇತ' ಆಗಿದೆ; ಶಿಳ್ಳೇಕೇತ>ಕಿಳ್ಳೇಕೇತ>ಕಿಳ್ಳಿಕ್ಯಾತ;
- ಕರೆ; ಆಹ್ವಾನ(ಕ.ನಿ); Summons; invitation; (ಕಿಟ್ಟೆಲ್).

ಕೇತಗೌಡನಹಳ್ಳಿ೧ kētagowḍanahaḷḷi[1] :

- ಮೈಸೂರು ಜಿಲ್ಲೆಯ ಮೈಸೂರು ತಾಲ್ಲೋಕಿನ ಕ್ರಿ.ಶ.೧೬೬೦ರ ೯೨ನೇ ಶಾಸನದಲ್ಲಿ ಈ ಊರಿನ ಉಲ್ಲೇಖವಿದೆ; A village referred in 92nd inscription of 1660AD found in Mysuru taluk, Mysuru district;
- 'ಕೇತಗೌಡ' ಎಂಬ ವ್ಯಕ್ತಿಯ ಹಿನ್ನೆಲೆಯಲ್ಲಿ ನಿರ್ಮಾಣವಾದ ಒಂದು ಹಳ್ಳಿ; ಇವನು ಸಹಜವಾಗಿಯೇ ಜನಪ್ರಿಯ ವ್ಯಕ್ತಿಯಾಗಿರಬೇಕು; It is named after a person `Kethegowda';
- ಪ್ರಾಚೀನ ಆಡಳಿತ ವಿಭಾಗವಾದ ಹದಿನಾಡ ಸೀಮೆಯಲ್ಲಿದ್ದ ಗ್ರಾಮವಿದು;
- ದೇವರಾಜ ಒಡೆಯರು ಶ್ರೀರಂಗಪಟ್ಟಣವನ್ನು ಆಳುತ್ತಿದ್ದಾಗ ರಾಜೇಂದ್ರಸ್ವಾಮಿಯವರಿಗೆ

ರಾಮಸಮುದ್ರ ಹೋಬಳಿಯ ಕೇತಗೌಡನಹಳ್ಳಿಯಾದಿಯಾಗಿ ಇತರ ಗ್ರಾಮಗಳನ್ನು ದಾನ ನೀಡಿದ ಪ್ರಸ್ತಾಪವಿದೆ.

(E.C- ೫; ಮೈ.ಜಿ.)

ಕೇತಗೌಡನಹಳ್ಳಿ೨ kētagowḍanahaḷḷi[2] :

- ಅರಸೀಕೆರೆ ತಾಲ್ಲೋಕಿನ ಮುದುಡಿ ಎಂಬ ಸ್ಥಳದಲ್ಲಿ ದೊರೆತಿರುವ ಕ್ರಿ.ಶ.೧೨-೧೩ನೇ ಶ.ಕ್ಕೆ ಸೇರಿದ ಹೊಯ್ಸಳ ವೀರಬಲ್ಲಾಳನ ಶಾಸನದಲ್ಲಿ ಈ ಹಳ್ಳಿಯ ಉಲ್ಲೇಖವಿದೆ; A village referred in an inscription of 12-13 century AD found in Mududi, Arasikere taluk, Hassan district;
- ವ್ಯಕ್ತಿವಾಚಿ ಸ್ಥಳನಾಮ ಎಂಬುದು ಸ್ಪಷ್ಟ;
- ಈ ಸಂಪುಟದ ಹಲವಾರು ಶಾಸನಗಳಲ್ಲಿ ಕೇತಗೌಡ, ಕೇತಗೌಂಡ, ಕೇತಜೀಯ, ಕೇತಣ, ಕೇತಣನಾಯಕ, ಕೇತಣ್ಣ, ಕೇತಗವುಡ ಎಂಬ ಹೆಸರುಗಳು ಉಲ್ಲೇಖಗೊಂಡಿವೆ;
- ಈತ ಒಬ್ಬ ದಾನಿಯಾಗಿ, ವೀರನಾಗಿ, ಶೈವಯತಿಯಾಗಿ ಉಲ್ಲೇಖಗೊಂಡಿದ್ದಾನೆ;
- ಅವನ ಹೆಸರಿನಲ್ಲಿ ಈ ಹಳ್ಳಿ ಸ್ಥಾಪನೆಯಾಗಿರಬಹುದು.

(E.C- ೧೦; ಹಾ.ಜಿ.)

ಕೇತನಕೆರೆ kētanakere :

- ತರೀಕೆರೆ ತಾಲ್ಲೋಕಿನ ಕೂಟನಮಡುವು ಎಂಬ ಪ್ರದೇಶದಲ್ಲಿ ಕ್ರಿ.ಶ.೧೨೩೩ಕ್ಕೆ ಸೇರಿದ ೩೬ನೇ ಶಾಸನದಲ್ಲಿ ಈ ಪ್ರದೇಶದ ಉಲ್ಲೇಖವಿದೆ; A village referred in 36th inscription of 1233AD found in Kootanamadavu, Tarikere taluk, Chikkamagaluru;
- ಹೆಸರೇ ಸೂಚಿಸುವಂತೆ 'ಕೇತ' ಎಂಬ ವ್ಯಕ್ತಿಯಿಂದ ನಿರ್ಮಾಣವಾದ ಕೆರೆ ಎಂದು ಅರ್ಥಮಾಡಬಹುದು; it is a tank built by a person Keta;
- ಜಲವಾಚಿಯೂ ವ್ಯಕ್ತಿವಾಚಕವೂ ಆದ ಸ್ಥಳನಾಮ ಇದು; it is named after a person Keta or water roots;
- ಇದೇ ಸಂಪುಟದ ಅನೇಕ ಶಾಸನಗಳಲ್ಲಿ 'ಕೇತ' ಎಂಬ ವ್ಯಕ್ತಿ ದಾನಿಯಾಗಿ, ಅಧಿಕಾರಿಯಾಗಿ ಕಾಣಿಸಿಕೊಂಡಿದ್ದಾನೆ;
- ಆದ್ದರಿಂದ ಕೇತನಿಗೆ ಸಂಬಂಧಿಸಿದ ಕೆರೆ ಇದೆಂಬುದು ಸ್ಪಷ್ಟವೂ ಇದೆ;
- 'ಕೇತ'ನಿಗೆ ಸಂಬಂಧಿಸಿದ ವಿಚಾರಗಳು, ಈ ಸಂಪುಟದಲ್ಲಿ ಮಾತ್ರವಲ್ಲ, ಇತರ ಸಂಪುಟಗಳಲ್ಲಿಯೂ ಉಲ್ಲೇಖಗೊಂಡಿರುವುದುಂಟು.

(E.C- ೧೨; ಚಿಕ್ಕ.ಜಿ.)

ಕೇತಮ್ಮಹಳ್ಳಿ kētammahaḷḷi :

- ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೋಕಿನ ಕ್ರಿ.ಶ.೧೩೩೨ರ ೧೩೮ನೇ ಶಾಸನದಲ್ಲಿ ಇದರ ಪ್ರಸ್ತಾಪ; A village referred in 138th inscription of 1332AD found in Nanjandu taluk, Myusru district;
- ಕೇತ+ಅಮ್ಮ(ನ)+ಹಳ್ಳಿ>ಕೇತಮ್ಮ(ನ)ಹಳ್ಳಿ;
- 'ಕೇತ' ಒಬ್ಬನ ಹೆಸರು; ಈ ಹಿನ್ನೆಲೆಯಲ್ಲಿ ವ್ಯಕ್ತಿಸೂಚಿ ಸ್ಥಳನಾಮವಿದು;
- ಕೇತ, ಕೇತೆಯ ಎಂಬ ಹೆಸರಿನ ವೀರರು, ದಂಡನಾಯಕರು ಹಲವಾರು ಶಾಸನಗಳಲ್ಲಿ ಕಾಣಿಸಿಕೊಳ್ಳುತ್ತಾರೆ; ಅಂತಹ ವ್ಯಕ್ತಿಯೊಬ್ಬರ ಉಲ್ಲೇಖವಿದ್ದ ಶಾಸನವಿದು;
- 'ಕೇತಮ್ಮ' ಎಂದರೆ ಮಹಿಳೆಯ ಹೆಸರಿನ ಹಿನ್ನೆಲೆಯಲ್ಲಿ ಇರುವ ಸ್ಥಳನಾಮವೆಂದು ಅರ್ಥವಾಗುವುದು ಸಹಜ; It is named after `Ketamma';
- ಆದರೆ ಹಳಗನ್ನಡದಲ್ಲಿ 'ಅಮ್ಮ' ಎಂದರೆ 'ಅಪ್ಪ' ಎಂದು ಅರ್ಥ; ಹೀಗಾಗಿ ಪುರುಷವಾಚಿ ಸ್ಥಳನಾಮ ಆಗಿದ್ದಿರಬಹುದು; ಆಗ 'ಕೇತಮ್ಮನಹಳ್ಳಿ'> 'ಕೇತಪ್ಪನಹಳ್ಳಿ'ಯಾಗುವುದು ಸಹಜ; In old kannada `Amma' became `Appa';
- ಹೊಯ್ಸಳ ದೊರೆ ಮುಮ್ಮಡಿ ಬಲ್ಲಾಳನ ಆಳ್ವಿಕೆಯಲ್ಲಿ ಕೇತಯ ದಂಡನಾಯಕನು 'ಶ್ರೀ ಅಲ್ಲಾಳನಾಥ' ದೇವರಿಗೆ 'ಕೇತಮ್ಮಹಳ್ಳಿ'ಯನ್ನು ಸರ್ವಮಾನ್ಯವಾಗಿ ಧಾರಾಪೂರ್ವಕ ಮಾಡಿದನೆಂದು ತಿಳಿದು ಬಂದಿದೆ.

(E.C- ೩; ಮೈ.ಜಿ.)

ಕೇತಸಮುದ್ರ kētasamudra :

- ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೋಕಿನ ಕ್ರಿ.ಶ.೧೬೦೪ರ ೨೯ನೇ ಶಾಸನದಲ್ಲಿ ಇದರ ಉಲ್ಲೇಖ; A village

referred in 29th inscription of 1604AD found in Sagar taluk, Shivmogga district

- ಸಿದ್ಧಗಿರಿ ಮಠಕ್ಕೆ ಸೋಮಶೇಖರನ ಹೆಂಡತಿ ಚೆನ್ನಮ್ಮಾಜಿಯ ಕತ್ತಕಟ್ಟೆ ಗ್ರಾಮವನ್ನು ದಾನಬಿಟ್ಟ ವಿವರವೂ ಇದೆ;
- ಕೇತ+ಸಮುದ್ರ=ಕೇತಸಮುದ್ರ; 'ಕೇತ' ಎನ್ನುವುದಕ್ಕೆ ಕೆರೆ, ಸ್ಥಳ, ಕ್ಷುದ್ರದೇವತೆ ಎಂದೆಲ್ಲ ಅರ್ಥವಿರುವುದರಿಂದ, ಈ ಯಾವುದಾದರೊಂದರ ಹಿನ್ನೆಲೆಯಲ್ಲಿ ಈ ಹೆಸರು ಬಂದಿರಬಹುದು;
- ಆದರೆ 'ಕೇತ' ಎನ್ನುವುದು ಒಬ್ಬಾತನ ಹೆಸರೂ ಆಗಿರಬಹುದು, ಉದಾಹರಣೆಗೆ 'ಕೇತಯ್ಯ' ರೂಪ ಸಿಗುತ್ತದೆ; ಆದ್ದರಿಂದ ಕೇತನ ಹೆಸರಿನಲ್ಲಿ ನಿರ್ಮಾಣಹೊಂದಿರುವ ಊರೆಂದು ಇದನ್ನು ವ್ಯಾಖ್ಯಾನಿಸಬಹುದು;
- 'ಸಮುದ್ರ' ರೂಪ ಜನಪದ ಸಂಸ್ಕೃತಿ ಸಂದರ್ಭದಲ್ಲಿ, ಊರು, ಪಟ್ಟಣ, ಗ್ರಾಮ ಎಂಬೆಲ್ಲ ಅರ್ಥಪಡೆದಿರುವುದು ಸ್ಪಷ್ಟ.

(E.C- ೧೫; ಶಿ.ಜಿ.)

ಕೇತಸೆಟ್ಟಿಯ ಬೀಡು kētaseṭṭiya bīḍu:

- ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೋಕಿನ ಕ್ರಿ.ಶ.೧೫೨೭ರ ೧೯೮ನೇ ಶಾಸನದಲ್ಲಿ ಉಲ್ಲೇಖ; A place referred in 198th inscription of 1527AD found in Chikkamagaluru taluk, Chikkamagaluru district;
- ಲಕ್ಕಿಯ ಚೆನ್ನಕೇಶವ ದೇವರಿಗೆ ಕೇತಸೆಟ್ಟಿಯ ಬೀಡಿನ ದೇವಣ್ಣ ಕೊಟ್ಟ ದಾನ ಶಾಸನ;
- 'ಕೇತಸೆಟ್ಟಿಯಬೀಡು' ಆಮೇಲೆ 'ಚೆನ್ನಕೇಶವಪುರ' ಹೆಸರನ್ನು ಪಡೆದಂತೆ ಕಾಣುತ್ತದೆ;
- 'ಕೇತಸೆಟ್ಟಿ'ಗೆ 'ಕೇತಿಸೆಟ್ಟಿ'(ಕ.ನಿ.) ಎಂಬ ಹೆಸರೂ ಇರುವುದನ್ನು ಉಲ್ಲೇಖಗಳು ಹೇಳುತ್ತವೆ;
- 'ಕಿಳ್ಳೇಕೇತ' ಸಮುದಾಯದಲ್ಲಿ, 'ಅಕ್ಕಸಾಲೆ ಕೇತ' ಎಂಬ ಉಲ್ಲೇಖಗಳು ಸಿಗುವುದರಿಂದ, ಆಯಾ ಸಮುದಾಯಗಳಲ್ಲಿ 'ಕೇತ' ಹೆಸರು ಪ್ರಚಲಿತವಿರುವಂತಿದೆ;
- ಕೇತಯ, ಕೇತಯ್ಯ(ಸೆಟ್ಟಿ) ರೂಪಗಳೂ ಚಾಲ್ತಿಯಲ್ಲಿದ್ದವು;
- 'ಕೇತ' ರೂಪ ಕ್ಯಾತ<ಖ್ಯಾತ ರೂಪದಿಂದ ಬಂದಿರುವಂತೆ ಒಂದು ಅಂದಾಜು;
- ಹಾಗೆಯೇ 'ಕೇತ' ಪದಕ್ಕೆ ಸ್ಥಳ, ಜಾಗ ಎಂದೂ ಅರ್ಥ ಇರುವುದರಿಂದ, ಕ್ಷೇತ್ರ>ಕೇತ ಆಗಿರುವ ಸಾಧ್ಯತೆ ಹೆಚ್ಚಿದೆ; The word `Keta' has the meaning of place Space;
- 'ಬೀಡು' ಪದಕ್ಕೆ ವಾಸಸ್ಥಳ, ತಂಗುದಾಣ, ಊರು, ಮನೆ ಮುಂತಾದ ಅರ್ಥಗಳಿವೆ;
- ಕ್ಷೇತ್ರಾಧಿಪತಿಯಾದ ಕೇತಸೆಟ್ಟಿಯ ಹೆಸರಿನಲ್ಲಿ ವಾಸಸ್ಥಾನ ನಿರ್ಮಿತವಾಗಿರುವುದನ್ನು ಇದು ಹೇಳುತ್ತಿರುವುದರಿಂದ, ವ್ಯಕ್ತಿವಾಚಿ ಸ್ಥಳನಾಮ ಇದಾಗಿರಬಹುದು.

(E.C- ೧೧; ಚಿಕ್ಕ.ಜಿ.)

ಕೇತ(ನ)ಹಳ್ಳಿ kēta(na)haḷḷi :

- ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲ್ಲೋಕಿನ ಕ್ರಿ.ಶ.೧೩೨೨ರ ೧೪ನೇ ಶಾಸನದಲ್ಲಿ ಈ ಹಳ್ಳಿಯ ಪುರಾವೆ ಇದೆ; A village referred in 14th inscription of 1322AD found in Heggadadevanakote taluk, Mysuru district;
- ಈ ಕೇತನಹಳ್ಳಿ > ಕ್ಯಾತನಹಳ್ಳಿಯಾಗಿಯೂ ಮಾರ್ಪಟ್ಟಿದೆ ಕೂಡ;
- ತಗಡೂರ 'ಕೇತಗೌಂಡ' ಎಂಬುವನು ತನ್ನ ಹೆಸರಿನಲ್ಲಿ ಈ ಹಳ್ಳಿಯನ್ನು ಮಾಡಿಸಿದನು; ಇದರ ಜೊತೆಗೆ ಅಲ್ಲಿ ಒಂದು ಕೆರೆ ಮತ್ತು ಮಲ್ಲಿನಾಥ ದೇವಾಲಯವನ್ನು ಕಟ್ಟಿಸಿದನು;
- ಈ 'ಕೊವರ ಕೇತಗೌಂಡ'ನ ಮಗ 'ಹೊಯ್ಸಳಗೌಂಡ'ನು ಕ್ರಿ.ಶ.೧೩೨೨ರಲ್ಲಿ ಇಲ್ಲಿ ಲಕ್ಷ್ಮೀನಾರಾಯಣ ದೇವಾಲಯವನ್ನು ನಿರ್ಮಿಸಿದನು; ಈ ಊರಿನ ಸಮಸ್ತ ಪ್ರಭುಗಳು ಪೂಜಾ ಕೈಂಕರ್ಯಕ್ಕೆ ದಾನ ಮಾಡಿದರು;
- ಈಗ ಈ ದೇವಾಲಯ ಲಕ್ಷ್ಮೀಕಾಂತ ದೇವಾಲಯವಾಗಿ ಪುನರ್ ಪರಿಷ್ಠಾಪನೆ ಮಾಡಲಾಗಿದೆ.

(E.C- ३; ಮೈ.ಜಿ.)

ಕೇತಳ್ಳಿ ಹುಂಡಿ kētaḷḷi hunḍi :

- ಮೈಸೂರು ಜಿಲ್ಲೆ ತಿ.ನರಸೀಪುರ ತಾಲ್ಲೋಕಿನ ಕ್ರಿ.ಶ.೧೭೪೯ರ ೧೬ನೇ ಶಾಸನದಲ್ಲಿ ಇದರ ಉಲ್ಲೇಖವಿದೆ; A village referred in 16th

inscription of 1749AD found in T.Narasipura taluk, Mysuru district;
- 'ಕೇತ' ಎಂಬ ವ್ಯಕ್ತಿಯ ಸುತ್ತ ಈ ಹಳ್ಳಿಯ ನಿರ್ಮಾಣ ಪ್ರಕ್ರಿಯೆ ಇದೆ; ಆ ವ್ಯಕ್ತಿಯೇ ಇದನ್ನು ನಿರ್ಮಿಸಿರಬಹುದು, ಅಥವಾ ಆ ವ್ಯಕ್ತಿಗೆ ಗೌರವ ಸೂಚಿಸಲು ಈ ಹಳ್ಳಿಯ ನಿರ್ಮಾಣ ಆಗಿರಬಹುದು;
- 'ಹುಂಡಿ' ಎಂದರೆ ಚಿಕ್ಕಗ್ರಾಮ, ಕೊಪ್ಪಲು ಎಂದು ಅರ್ಥ;
- 'ಕೇತಳ್ಳಿ' ಪದವನ್ನು ಬಿಡಿಸಿದರೆ, ಕೇತ+ಹಳ್ಳಿ>ಕೇತ+ಹ್+ಅಳ್ಳಿ>ಕೇತ+Ø+ಅಳ್ಳಿ>ಕೇತಳ್ಳಿ ಆಗುತ್ತದೆ; ಇದಕ್ಕೆ 'ಹುಂಡಿ' ಅಧಿಕವಾಗಿ ಸೇರಿಕೊಂಡಿದೆ; ಅಂದರೆ ಮೊದಲೇ 'ಹಳ್ಳಿ' ಪದವಿದ್ದು, ಅದಕ್ಕೆ 'ಹುಂಡಿ' ಸೇರಿಕೊಂಡಿದೆ; ಇದು ಕಂಡ ಹಾಗೆಯೇ ದ್ವಿರುಕ್ತಿ, duplication ಆಗುತ್ತದೆ; 'ಕೇತಳ್ಳಿ'ಯಲ್ಲಿ ಊರಿನ ಹೆಸರು ಸೇರಿದೆ ಎಂದು ಗೊತ್ತಾಗದೆ 'ಹುಂಡಿ' ಪದ ಅದಕ್ಕೆ ಸೇರಿರಬಹುದು; ಅಥವಾ 'ಕೇತಳ್ಳಿ'ಗೆ ಸೇರಿದಂತೆ ಒಂದು ಕೊಪ್ಪಲು ನಿರ್ಮಾಣವಾಗಿ ಆಮೇಲೆ ಅದನ್ನು 'ಕೇತಳ್ಳಿಹುಂಡಿ' ಎಂದು ವಿಸ್ತರಿಸಿ ಕರೆದಿರಬಹುದು; the morpholocial analysis of the word Ketalli=Keta+Halli>Keta+h+alli>keta+Ø+alli>ketalli;
- ಮೈಸೂರು ದೊರೆ ಇಮ್ಮಡಿ ಕೃಷ್ಣರಾಜ ಒಡೆಯರ ದಳಪತಿಯಾದ ದೇವರಾಜನು ಕೆಲವು ದತ್ತಿ ಮಾಡಿದ್ದನು; ಈ ಭೂಮಿಯ 'ಚಕ್ಕು ಬಂದಿ' ಹೇಳುವಾಗ 'ಕೇತಳ್ಳಿಹುಂಡಿ' ಹೆಸರು ಉಲ್ಲೇಖವಾಗಿದೆ.

(E.C- ೫; ಮೈ.ಜಿ.)

ಕೇತಾರ/ಕೇದಾರ Kētāra/Kēdāra:
- ಹೊಲ; ಗದ್ದೆ; ಪ್ರದೇಶ(Field–ಕಿಟ್ಟೆಲ್); ಹಿಮಾಲಯ ಪರ್ವತ ಪ್ರದೇಶದ ಒಂದು ಸ್ಥಳ; ಕೇದಾರ; ಕೇದಾರೇಶ್ವರ; A farming land, a cultivated land; a holy place of Himalayan ranges;
- ಉದ್ಯಾನವನ; ಉಪವನ; ಉಪನಂದನ; a park;
- ತನು; ದೇಹ; the body(ಕಿಟ್ಟೆಲ್); ದೇವಗೇಹ; ದೇವಾಲಯ; ಶಿವಾಲಯ;
- ಕೇದಾರ(ಸಂ)>ಕೇತಾರ; ತಕಾರಕ್ಕೆ ತೃತೀಯತ್ವ (ತ>ದ) ಸಹಜ; ಆದರೆ ಇಲ್ಲಿ ವಿರುದ್ಧ ಪ್ರಕ್ರಿಯೆ ಜರುಗಿರುವುದು(ದ>ತ) ವಿಶೇಷ;
- 'ಕೇದಾರ' ಸಂಗೀತದಲ್ಲಿ ಒಂದು ರಾಗದ ಹೆಸರೂ ಹೌದು; ಕೇದಾರಗೌಳ; it is one of the musical notes- Ragas-Kedaaragowla;
- ವ್ಯರೂ; ಕ್ಯಾತಾರ;
- ದೂರ; ಅಂತರ; 'ದೂರಮೈದಿ ಹಿಮಾಂಬುವಂ ಕೇತಾರದಲಿ ಸೇವಿಸುವರಂತೆ' (ಬಸವ.ಪು.) ಎಂಬ ಪ್ರಯೋಗವಿದೆ; ದಕ್ಷಿಣ ದೇಶದವರು, ಅದರಲ್ಲೂ ಜನಪದರು 'ಕೇತಾರ'/'ಕ್ಯಾತಾರ'ವನ್ನು ದೂರಕ್ಕೆ, ದೂರಪ್ರದೇಶಕ್ಕೆ ನುಡಿಗಟ್ಟಾಗಿ ಬಳಸಿಕೊಂಡದ್ದು ಈ ಪ್ರಯೋಗದಿಂದ ಧ್ವನಿತವಾಗುತ್ತದೆ;
- ವೇಗ; ಅತಿವೇಗ; ಎತ್ತರದಲ್ಲಿ ದೂರಕ್ಕೆ ಕುದುರೆ, ಪುಷ್ಪಕ ಮೊದಲಾದುವನ್ನು ಹಾರಿಸಿಕೊಂಡು ಹೋಗುವುದು; ಅಥವಾ ಎತ್ತರದಲ್ಲಿ ಕುದುರೆ ಮೊದಲಾದುವನ್ನು ಹಾರಿಸಿಕೊಂಡು ಬರುವುದು; ಜನಪದ ಕಥೆ, ಲಾವಣಿ ಹಾಗೂ ಕಥನಗೀತೆಗಳಲ್ಲಿ ಈ ಆಶಯ ಕಂಡುಬರುತ್ತದೆ; ರಮ್ಯ (ಅತಿಮಾನುಷ) ಕಥಾನಕಗಳಲ್ಲಿ ಸಾಮಾನ್ಯ; speed, overspeed; a horse that carries puspak plane on clouds;
- ಬಂಡಿ ಹಾಗೂ ವಾಹನಗಳನ್ನು ಅತಿವೇಗದಲ್ಲಿ ನಡೆಸುವುದಕ್ಕೂ 'ಕೇತಾರ'ವನ್ನು ಜನಪದರು ಒಂದು ನುಡಿಗಟ್ಟಾಗಿ ಬಳಸುವುದಿದೆ; `Ketara' is used as idiom by folk which indicates to drive carts or vehicles fast;
ಪ್ರ: ಬ್ರೇಕ್ಹೂ ಆಕ್ದಿಯೆ ಏನ್ ಕೇತಾರ್ದಲೊಯ್ತಾ ಅವ್ನೆ ನೋಡಪ್ಪ(ರೂಢಿ).

ಕೇತಿ Kēti:
- ಜಗಳಗಂಟಿ; ಕೇತ; 'ಕೇತ'ದ ಸ್ತ್ರೀವಾಚಕ ರೂಪ; ಪುರುಷವಾಚಕವಾಗಿಯೂ ಬಳಕೆಯಾಗಿದೆ; Quarrellsome, trouble maker, problematic person;
- ಕೇತಿದೇವ; ಕೇತಿದೇವಯ್ಯ; ಕೇತಿಶೆಟ್ಟಿ ರೂಪಗಳಿವೆ;
- 'ಕೇತಿಮಾರಿ' ರೂಪವೂ ಇದ್ದು 'ಕೇತಿ' ಸ್ತ್ರೀವಾಚಕವಾಗಿಯೂ ಬಳಕೆಯಾಗಿರುವುದನ್ನು

ದೃಢಪಡಿಸುತ್ತದೆ; 'ಕಲಕೇತಿ'ಯಲ್ಲಿ 'ಕೇತಿ' ರೂಪವಿದೆ, ಸ್ತ್ರೀಯನ್ನೇ ಕುರಿತಿದೆ;

- 'ಕೇತ' ಮತ್ತು 'ಕೇತಿ' ಎರಡೂ ರೂಪಗಳು ಪುರುಷವಾಚಕವಾಗಿ ಬಳಕೆಯಾಗುತ್ತಿದ್ದು ಕಾಲಾನಂತರದಲ್ಲಿ 'ಕೇತ' ಪುರುಷವಾಚಕವಾಗಿಯೂ 'ಕೇತಿ' ಸ್ತ್ರೀವಾಚಕವಾಗಿಯೂ ನಿರ್ದಿಷ್ಟಗೊಂಡಿರುವಂತೆ ತೋರುತ್ತದೆ;
- *ಪ್ರ: 'ಕೇತಿ ಸಂಗ ಎಷ್ಟು ದಿನ ಅಂದ್ರೆ ಶುಕ್ರವಾರ ಸೋಮವಾರ ಎರಡೇ ದಿನ*'(ನಮ್ಮ.ಗಾ.);
- —***ಕಲಕೇತಿ*** : ನಡತೆಗೆಟ್ಟವಳು; ನೀಚ ಸ್ವಭಾವದವಳು; ಬೆರಕೆ; ತಂಟೆಕೋರಿ; ಒಂದು ಬೈಗುಳ; A woman who has bad conduct; an abuse;
- —***ಕೇತಿಮಾರಿ*** : ಕಾಟ ಕೊಡುವ ಮಾರಿ; ಒಂದು ಜನಪದ ದೇವತೆ; 'ಕ್ಷುದ್ರ' ಎಂಬ ಅಪಖ್ಯಾತಿಯ ಆರೋಪ ಮಾಡಲಾಗಿದೆ. A folk goddess of wickedness.

ಕೇತಿಹಳ್ಳಿ kētihaḷḷi :

- ಮೈಸೂರು ಜಿಲ್ಲೆ ಚಾಮರಾಜನಗರ ತಾಲ್ಲೋಕಿನ ಕ್ರಿ.ಶ.೧೬೬೮ರ ೩೭೯ನೇ ಶಾಸನದಲ್ಲಿ ಇದರ ಉಲ್ಲೇಖ; A village referred in 379th inscription of 1668AD found Chamarajanagara taluk, Chamarajanagar district;
- ಕೇತಿ+ಹಳ್ಳಿ; 'ಕೇತ' ರೂಪವೇ ಇಲ್ಲಿ 'ಕೇತಿ' ಎಂದಾಗಿರಬಹುದು; ಆ ದೃಷ್ಟಿಯಿಂದ ಇದು 'ಕೇತಹಳ್ಳಿ' ಕೂಡ;
- 'ಕೇತ' ಎಂಬ ವ್ಯಕ್ತಿಯ ಹೆಸರಿನಿಂದ ಬಂದ ಸ್ಥಳನಾಮ ಇದು; 'ಕೇತಯ್ಯ' ಎಂಬ ರೂಪವೇ ಪ್ರಚಲಿತದಲ್ಲಿದೆ;
- ಇದು ತೆರಕಣಾಂಬಿಯ ಸ್ಥಳಕ್ಕೆ ಸೇರಿದ ಗ್ರಾಮ;
- ಮೈಸೂರು ಅರಸನಾದ 'ದೇವರಾಜ ಒಡೆಯರ' ತಾಯಿ 'ಅಮೃತಮ್ಮ' ನವರು ಮಹತ್ತಿನ ಮಠದ ಅನ್ನದಾನಕ್ಕೆ ಕೇತಿಹಳ್ಳಿಯನ್ನು ಶಿವಾರ್ಪಿತವಾಗಿ ಕೊಟ್ಟರು;
- 'ಕಿಳ್ಳೇಕ್ಯಾತ'ದಲ್ಲಿ ಈ 'ಕ್ಯಾತ' ರೂಪವೇ ಉಳಿದುಕೊಂಡು ಬಂದಿದೆ.

(E.C- ೪; ಮೈ.ಜಿ.)

ಕೇದಗೆ/ಕೇದಗಿ/ಕೇದಿಗೆ Kēdage/Kēdagi/ Kēdige:

- ತಾಳೆಹೂ; ತಾಳೆಗಿಡ; Screw pine(ಇಂ.ಕ.ನಿ); ನೀರು ಹರಿಯುವ ನದಿ ಹಳ್ಳ ಮೊದಲಾದವುಗಳ ತೀರದಲ್ಲಿ ಪೊದೆಯಾಕಾರದಲ್ಲಿ ತಲೆ ಕೆದರಿ ನಿಂತಂತೆ ಬೆಳೆದುಕೊಳ್ಳುವ ತಾಳೆ ಜಾತಿಗೆ ಸೇರಿದ ಒಂದು ಗಿಡ, ಅದರ ಹೂ; ಒಂದು ಸುವಾಸನಾಯುಕ್ತ ಹೂ ಮತ್ತು ಗಿಡ; ಜ್ಯೇಷ್ಠದಿಂದ ಭಾದ್ರಪದದವರೆಗೆ ಹೂ ಬಿಡುತ್ತದೆ; It is a tree of palm species;
- ಕುಟುಂಬ; ಪ್ಯಾಂಡನೇ ಸೀ; Pandanaceae; ವೈಜ್ಞಾನಿಕ ಹೆಸರು: ಪ್ಯಾಂಡೇನಸ್ ಓಡೊರೇಟಿಸಿಮಸ್; Pandanus odoratissimus;
- ಪೊದೆಯಂತೆ ಬೆಳೆಯುವ ಸದಾ ಹಸಿರಾಗಿರುವ ಒಂದು ಸಸ್ಯ; ತೆಂಗಿನಗರಿಗಿಂತ ಸ್ವಲ್ಪ ಅಗಲ ಹಾಗೂ ಮಂದವಾದ, ಆದರೆ ಅಷ್ಟುದ್ದವಿಲ್ಲದ, ಏಣಿನಲ್ಲಿ ಗರಗಸದಂತೆ ಮುಳ್ಳುಗಳಿರುವ ಎಲೆ/ಗರಿಗಳು ಇರುತ್ತವೆ; ಗಿಡದ ನೆತ್ತಿಯಲ್ಲಿ ಅಥವಾ ಕವಲಿನ ತುದಿಯಲ್ಲಿ ಎಲೆಯಾಕಾರದಲ್ಲೇ ದಟ್ಟ ಹಳದಿ ಬಣ್ಣದ ಹೂವುಗಳನ್ನು ಬಿಡುತ್ತದೆ; ಹೂವಿನಿಂದ ಮೋಹಕ ಸುವಾಸನೆ ಹೊಮ್ಮುತ್ತಿರುತ್ತದೆ; ಕೆಲವು ಪ್ರದೇಶದ ಹೂವುಗಳಲ್ಲಿ ಸುವಾಸನೆ ಹೆಚ್ಚು ಎಂದು ಹೇಳಲಾಗಿದೆ; Its leaves are resembling coconut leaves;
- ಕಾಂಡದ ಗಿಣ್ಣುಗಳಲ್ಲಿರುವ ಕಣ್ಣುಗಳಿಂದಲೇ ಸಸ್ಯಾಭಿವೃದ್ಧಿ ಉಂಟಾಗುತ್ತದೆ;
- ನೀತಿ ಕೇದಗೆ, ಮುಳ್ಳುಕೇದಗೆ(ತು.ನಿ) ಇತ್ಯಾದಿ ಪ್ರಭೇದಗಳೂ ಇರುವಂತೆ ಕಾಣುತ್ತದೆ; ಕೆಲವು ಪ್ರಭೇದಗಳ ಹೂವುಗಳು ಹೆಚ್ಚು ಸೂವಾಸನೆಯಿಂದ ಕೂಡಿದ್ದು ಅಲಂಕಾರಕ್ಕೆ ಬಳಸುವ ಸುಗಂಧದ್ರವ್ಯಗಳ ತಯಾರಿಯಲ್ಲಿ ಬಳಸುತ್ತಾರೆ; Neeti kedage, mullu(thorny) Kedage are two types of Kedage plant or tree;
- ಹೂವಿನಿಂದ ತೆಗೆದ ತೈಲವನ್ನು ಅಗರಬತ್ತಿ, ಸಿಹಿತಿಂಡಿ, ಪಾನೀಯಗಳ ತಯಾರಿಯಲ್ಲಿ ಪರಿಮಳ ಹೆಚ್ಚಿಸಲು ಉಪಯೋಗಿಸುತ್ತಾರೆ;
- ಎಲೆ ಮತ್ತು ಮೊಗ್ಗನ್ನು ತರಕಾರಿಯಾಗಿಯೂ ಬಳಸಲಾಗುತ್ತದೆ;

- ಬಲಿತ ಎಲೆಯಿಂದ ಚಾಪೆ, ಹಗ್ಗ, ಬುಟ್ಟಿ, ಬೀಸಣಿಗೆ, ಟೋಪಿ, ಚೀಲ, ಪೊರಕೆ, ನಾರು ಹಾಗೂ ಕಾಗದವನ್ನು ತಯಾರಿಸುತ್ತಾರೆ; Its leaves are used to make mat, rope, basket, hand fan, topi, broomstick;
- ಎಲೆ ಮುಂಡೇವು ಗಿಡದ ಎಲೆಗಿಂತ ಗಾತ್ರದಲ್ಲಿ ಚಿಕ್ಕದೂ, ಅಗಲದಲ್ಲಿ ಕಡಿಮೆಯೂ ಇರುತ್ತದೆ; ಆದರೂ ಮುಂಡೇವು ಗಿಡದ ಎಲೆ ಸಿಗದೆಯಿದ್ದಾಗ ಈ ಎಲೆಯನ್ನೇ ಚಾಪೆ ಎಣೆಯಲು, ಮೂಡೆ ಕಟ್ಟಲು ಬಳಸುತ್ತಾರೆ;
- ಸುಣ್ಣದ ಗಾರೆ ತಯಾರಿಸುವಾಗ ಇದರ ಬೇರಿನ ನೀರನ್ನು ಸೇರಿಸುತ್ತಿದ್ದರು; these roots are used to prepare lime concrete;
- ಒಣಗಿದ ಗರಿಗಳನ್ನು ಗುಡಿಸಲುಗಳ ಮೇಲ್ಚಾವಣಿಗೆ ಹೊದಿಸುತ್ತಾರೆ; dried leaves are used to make roof of houses;
- ಇದರ ಎಣ್ಣೆ ಹಾಗೂ ಹೂವಿನ ಕೇಸರಗಳಿಂದ ಕಿವಿನೋವು, ತಲೆನೋವು, ರಕ್ತಸಂಬಂಧಿ ರೋಗಗಳಿಗೆ ಔಷಧ ತಯಾರಿ; ಎಲೆಗಳು ಚರ್ಮಸಂಬಂಧಿ ರೋಗಗಳಿಗೆ ತಯಾರಿಸುವ ಔಷಧಿಯಲ್ಲಿ ಬಳಕೆ;
- ನರಗಳ ಸೆಳೆತ, ವಾತ, ಅರಸಿನ ಮುಂಡಿಗೆ, ಮೂತ್ರಕಟ್ಟು ಮೊದಲಾದ ರೋಗಗಳ ಔಷಧ ತಯಾರಿಯಲ್ಲಿ ಬಳಕೆ(ತು.ನಿ); It is used as medicine to cure nerves weakness, urinal problems;
- ಇದರ ಹಣ್ಣುಗಳು ಜಾನುವಾರುಗಳಿಗೆ ಹೊಟ್ಟೆನೋವಾದಾಗ ಔಷಧಿಯಾಗಿ ಬಳಕೆ;
- ಪೂಜೆ ಆಚರಣೆಗಳಲ್ಲೂ ಕೇದಗೆ ಹೂ ಬಳಕೆ; ಕೆಲವುಕಡೆ ಪ್ರತಿನಿತ್ಯದ ಆಂಜನೇಯನ ಪೂಜೆಯಲ್ಲಿ ಬಳಕೆ; ನಾಗದೇವರಿಗೆ ತುಂಬಾ ಪ್ರಿಯವಾದ ಹೂವು; ತಾಳೆಹೂವಿನ(ಕೇದಗೆ ಹೂವಿನ) ಸುವಾಸನೆಗೆ ಸೋತು ಹಾವುಗಳು ಬರುವುದು ಹೆಚ್ಚು ಎಂದೂ ನಂಬಲಾಗಿದೆ; ಹಾಗಾಗಿ ನಾಗಪೂಜೆಗೆ ಈ ಹೂವಿನ ಬಳಕೆ ಒಂದು ವಿಶೇಷ; The flower of `Kedage' tree is used to worship god Anjaneya, Nagadeva; there is a belief the flower of Kedage has strong smell which attracts snakes so it is not kept in homes;
- ಕರಾವಳಿ ಜಿಲ್ಲೆಗಳಲ್ಲಿ ನಾಗರ ಪಂಚಮಿ, ಶ್ರೀಕೃಷ್ಣ ಜನ್ಮಾಷ್ಟಮಿ ಹಾಗೂ ಗಣೇಶ ಚತುರ್ಥಿಯಂದು ಅಪಾರ ಬೇಡಿಕೆ;
- ಹೂವನ್ನು ಮನೆಗಳಲ್ಲಿ ಬಳಸಲು ಸಾಮಾನ್ಯವಾಗಿ ಇಷ್ಟಪಡುವುದಿಲ್ಲ; ವಾಸನೆಗೆ ಹಾವುಗಳು ಬರುತ್ತವೆಂಬ ನಂಬಿಕೆ ಕಾರಣ ಇರಬಹುದು;
- ಬತ್ತದ ತೆನೆ ಬರುವಾಗ ತುದಿಯಲ್ಲಿ ಕೆಲವೊಮ್ಮೆ ಕಾಣಿಸಿಕೊಳ್ಳುವ ಚಿಕ್ಕ ಕೇದಗೆಯಾಕಾರದ ಹೂ; ಇದು ಬಂದರೆ ಆ ಪೈರಿನ ಒಡೆಯನಿಗೆ ಶುಭ ಎಂಬ ನಂಬಿಕೆ ಇದೆ(ತುನಿ); a flower that appears before paddy tessels; it is a symbol of luck;
- ಯಕ್ಷಗಾನ ಕಲಾವಿದರು ಹಾಗೂ ಭೂತನರ್ತಕರು ಹಾಕಿಕೊಳ್ಳುವ ಒಂದು ವಿಧದ ತಲೆಯ ಆಭರಣ, ಕೇದಗೆ ಹೂವನ್ನು ಹೋಲುತ್ತದೆ(ಅದೇ);
- ಉತ್ಸವ ಮೂರ್ತಿಯ ಪ್ರಭಾವಳಿಯ ತುದಿಯ ಆಭರಣ;
- ಸ್ತ್ರೀ ಅಂಕಿತನಾಮವಾಗಿಯೂ ಬಳಕೆ; it is used as feminine nouns;
- ಒಂದು ಜನಪ್ರಿಯ ಹಿಂದಲೆ ಆಭರಣ; ಹಿಂಬದಿ ತಲೆಕೂದಲಿಗೆ ಸಿಕ್ಕಿಸುವ ಕೇದಗೆಯ ಮೂರೆಸಳಿನಂತಿರುವ ಆಭರಣ; ಕೇದಿಗೆಹೂ, ಅಡ್ಡಕೇದಿಗೆ, ಕೇದಿಗೆ ಗರಿ ಮುಂತಾಗಿಯೂ ಹೆಸರುಗಳಿವೆ; it is a famous jewel of Backside of head;
- *ವ್ಯದೂ:* ಕೇದಂಗೆ; ಕೇದಕೆ; ಕೇತಕಿ; ಕೇದಗ್; ಮುಂದಿಗೆ; ತಾಳಹೂ;
- ಇತರ ಭಾಷಾ ರೂಪಗಳು: ತ: ಕೇದಕೈ(ಗೈ), ಕೈದಲ್, ಕೈದೈ, ತಾಳಂ, ತಾಳಂಚಡಿ, ಮುಂಡಗಂ, ಮುಶಲಿ; ತೆ: ಗೇದಂಗಿ, ಕೇತಕಿ, ಗಾಜಂಗಿ, ಮೊಗಲಿ; ಮ: ಕೈತ, ಕೈದ, ಕೇತಕಿ, ಕೈದಗಂ, ಕೈದಪ್ಪೂವು, ಪುಳ್ಳಿಯಂಬು; ತು: ಕೇದೈ, ಕೇದಯಿ, ಮುಂಡೆಯಿ, ಕೇದಾಯಿ; ಕೇದಗ್, ಕೇದಗೆ;
- ಕೇತಕೀ(ಸಂ)>ಕೇತಕಿ>ಕೇದಗಿ/ಕೇದಗೆ;
- ಸಂಸ್ಕೃತ ರೂಪದ ತದ್ಭವ ಎಂದು ಪರಿಗಣಿಸಲಾಗಿದೆ; ಕ.ದಲ್ಲಿ ಸಮಾನಾರ್ಥಕ ರೂಪಗಳನ್ನು ಚಾಲ್ತಿಗೆ ತರುವ ಪ್ರಯತ್ನ ನಡೆದಿರುವಂತೆ ಕಾಣುತ್ತದೆ; ಗಱುವುವ್ವು (ಶ.ಮ.ದ),

ಗಜಿಬಿವೂ, ಗಜಿಬಿಹೂ; ಕೇದಗೆ ಗರಿಗೂ ತೆಂಗಿನ ಸೋಗೆಗೂ ಆಕಾರದಲ್ಲಿ ಅಂತಹ ವ್ಯತ್ಯಾಸವೇನೂ ಇಲ್ಲ; ಆದುದರಿಂದ ಕ.ದ ಈ ಸಮಾನಾರ್ಥಕ ರೂಪಗಳು ಯಥಾರ್ಥವಾಗಿವೆ; ಆದರೆ ಬಳಕೆ ಸಾರ್ವತ್ರಿಕಗೊಳ್ಳಲಿಲ್ಲ;

- ***—ಕೇತಕಿ ಕುಂಡಿಗೆ*** : ಕೇದಗೆ ಹೂವಿನ ಗೊಂಚಲು (ಹ.ಶೋ.); The flower bunch of `Kedage';
- ***—ಕೇದಗೆ ಮೊಲೆ*** : ಒಂದು ಬಗೆಯ ಮೂಲಿಕೆ; A kind of medicinal plant or roots;
- ***—ಕೇದಿಗೆಗರಿ*** : ಚಿನ್ನ ಅಥವಾ ಬೆಳ್ಳಿಯ ಒಂದು ಆಭರಣ; ಹೆಂಗಸರು ತಲೆಗೆ ಧರಿಸುತ್ತಾರೆ; ಕೇದಗೆ ಗಿಡದ ಗರಿಯಂತೆ ಇದ್ದು ತಲೆಗೂದಲಿಗೆ ಸಿಕ್ಕಿಸಿಕೊಳ್ಳಲು ಕೊಕ್ಕೆ ಇರುತ್ತದೆ; A gold or silver jewel worn by ladies;
- ***—ಕೇದಿಗೆ ಮಾಲೆ*** : ಒಂದು ಬಗೆಯ ತಲೆಯ ಆಭರಣ; ಹೆಂಗಸರು ಧರಿಸುತ್ತಾರೆ; A kind of head jewel worn by women on their heads;
- ***—ಕೇದಿಗೆ ಮುಂದಲೆ*** : ಬಡಗುತಿಟ್ಟು ಯಕ್ಷಗಾನದಲ್ಲಿ ಬಳಕೆಯಾಗುವ ಒಂದು ಅಲಂಕಾರ ಸಾಮಾಗ್ರಿ; ಪಾತ್ರಧಾರಿಗಳು ಧರಿಸುವ ಒಂದು ಕಿರೀಟ; ಮುಂಡಾಸಿನ ಮುಂದೆ ಕಟ್ಟಿಕೊಳ್ಳುವ ಅರ್ಧಚಂದ್ರಾಕೃತಿಯ ಒಂದು ಅಲಂಕಾರ; ಕಿರಾತ ವೇಷಧಾರಿಗಳು ಧರಿಸುವುದಿಲ್ಲ(ಕ.ಜಾ.ಕೋ); A decorative thing used in Badagu- North style of Yakshagana; A kind of headgear or crown;
- ***—ಕೇದಿಗೆ ಹೂ*** : ಕೇದಗೆ ಗಿಡದ ಹಳದಿ ಬಣ್ಣದ ಸುಗಂಧಭರಿತ ಹೂವು. Yellowish smelly flower of `Kedage'.

ಕೇದಗೆಗಟ್ಟ kēdagegaṭṭa :

- ಅರಸೀಕೆರೆ ತಾಲ್ಲೋಕಿನ ಕಿತ್ತನಕೆರೆ ನರಸಿಂಹ ದೇವಾಲಯದಲ್ಲಿರುವ ಕ್ರಿ.ಶ.೧೧೬೪ರ ಹೊಯ್ಸಳ ಒಂದನೇ ನರಸಿಂಹನ ಕಾಲದ ೧೧೩ನೇ ಶಾಸನದಲ್ಲಿ ಈ ಗ್ರಾಮದ ಪ್ರಸ್ತಾಪ; A village referred in 113th inscription of 1164AD found in Kittanakere Narasimha temple, Arasikere taluk, Hassan; it belongs to 1st Narasimha of Hoysala;
- ಹೆಸರಿನ ಪದರೂಪ 'ಕೇದಗೆ' ಮತ್ತು 'ಗಟ್ಟ' ಎಂಬೆರಡು ಪದಗಳಿಂದ ಆದದ್ದು;
- 'ಕೇದಗೆ' ಎಂದರೆ ತಾಳೆಯ ಮರ ಅಥವಾ ಅದರ ಹೂವು ಎಂದು ಅರ್ಥ;
- 'ಗಟ್ಟ'(ಘಟ್ಟ) ಎಂದರೆ 'ಬೆಟ್ಟಗಳ ಸಾಲು' ಎಂದು ಅರ್ಥ;
- ಅಂದರೆ ತಾಳೆಯ ಮರಗಳನ್ನು ಹೊಂದಿರುವ ಬೆಟ್ಟಗಳ ಸಾಲಿನ ಪ್ರದೇಶ ಎಂಬುದಾಗಿ ಅರ್ಥ ಮಾಡಬಹುದು;
- ಸಸ್ಯವಾಚಿ ಸ್ಥಳನಾಮವೆಂಬುದು ಸ್ಪಷ್ಟ; ಹಾಗೆಯೇ ಪ್ರಕೃತಿವಾಚಿ ಕೂಡ.

(E.C- ೧೦; ಹಾ.ಜಿ.)

ಕೇದಗೆ ಸಾಲೂರು kēdage sālūru :

- ನರಸಿಂಹರಾಜಪುರ ತಾಲ್ಲೋಕಿನ ಸಾಲೂರು ಗ್ರಾಮದ ಶಂಕರಪ್ಪ ಎಂಬುವರ ಬಳಿಯಿದ್ದ ಕ್ರಿ.ಶ.೧೬೨೭ಕ್ಕೆ ಸೇರಿದ ೪೧ನೇ ತಾಮ್ರ ಶಾಸನದಲ್ಲಿ ಇದರ ಉಲ್ಲೇಖವಿದೆ; A village referred in 41th copper inscription of 1627AD found in Saluru Shankarappa's home, Narasimharajapura taluk;
- 'ಕೇದಗೆ ಸಾಲೂರು' ಎಂಬ ಸ್ಥಳನಾಮದಲ್ಲಿನ ಆರಂಭದ 'ಕೇದಗೆ' ಎಂಬುದು ಲೋಪವಾಗಿ 'ಸಾಲೂರು' ಪ್ರಸ್ತುತ ಬಳಕೆಯಲ್ಲಿದೆ;
- 'ಕೇದಗೆ' ಪದ 'ತಾಳೆಯ ಗಿಡ'ವನ್ನು ಸೂಚಿಸುತ್ತಿದ್ದು, ಸಸ್ಯವಾಚಕ ಸ್ಥಳನಾಮವಾಗಿದೆ;
- ಈ ತಾಳೆಯ ಗಿಡಗಳ ಸಾಲುಗಳಿಂದ ಇದಕ್ಕೆ 'ಕೇದಗೆ ಸಾಲೂರು' ಎಂಬ ಹೆಸರು ಬಂದಿರಬಹುದು;
- ಆಮೇಲೆ 'ಕೇದಗೆ' ಬಿದ್ದುಹೋಗಿ, 'ಸಾಲೂರು' ಮಾತ್ರ ಉಳಿದುಕೊಂಡಿರಬಹುದು.

(E.C- ೧೨; ಚಿಕ್ಕ.ಜಿ.)

ಕೇದರಸಿ/ಬೆರಾಸಿ Kēdarasi/berāsi:

- ಒಂದು ಬಗೆಯ ಸಸ್ಯ; Mollugo pentaphylla; A kind plant;
- ಇದರ ಎಲೆಯನ್ನು ಹಸಿಯಾಗಿಯೇ ಜಗಿದು ತಿನ್ನಬಹುದು; ಕ್ಯಾರೊಟಿನ್, ವಿಟಮಿನ್ ಸಿ

ಪೌಷ್ಟಿಕಾಂಶಗಳು ಅಧಿಕವಾಗಿರುತ್ತವೆ ಎನ್ನಲಾಗಿದೆ; Its leaves are chewed; its raw leaves have much proteins and vitamins;
- ಗಿಡದಲ್ಲಿ ನಂಜುನಿರೋಧಕ(Antiseptic) ಗುಣವಿದೆ; ಕಾಲಿನ ಹುಣ್ಣುಗಳಿಗೆ ಇದರ ಪ್ಲಾಸ್ಟರ್ ಕಟ್ಟುತ್ತಾರೆ.

ಕೇನೆ Kēne:
- ಒಂದು ಬಗೆಯ ಮೂಲಿಕೆ; ಕಂದಗೆಡ್ಡೆ; ಕೇನೆಗೆಂಡೆ; A kind of root, medicinal bulbum root;
- Amorphophallus Paeoniif olius;
- ಚೂರ್ಣಗಡ್ಡೆ, ಶೇನೆಗೆಡ್ಡೆ, ಸುವರ್ಣಗೆಡ್ಡೆ, ಸೂರಣಗೆಡ್ಡೆ ಎಂದು ಪರ್ಯಾಯ ರೂಪಗಳಿವೆ;
- ಚೂರ್ಣ, ಶೇನೆ, ಸುವರ್ಣ ಸಂ.ರೂಪಗಳು, ಕ.ಗಡೆ/ಗೆಡ್ಡೆ ಸೇರಿದೆ; ಚೂರ್ಣ>ಸೂರಣ ಆಗಿದೆ, ಚ>ಸ/ಸ>ಚ ವ್ಯತ್ಯಯ ಸಾಮಾನ್ಯ; ಸುವರ್ಣ>ಸೂರಣ ಆಗಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ, ವಕಾರ ಲೋಪ ಉಕಾರ ದೀರ್ಘಕ್ಕೆ ಕಾರಣವಾಗಿರಬಹುದು;
- ಈ ಗೆಡ್ಡೆಯನ್ನು ಮುಟ್ಟಿದರೆ ಕೈಯಲ್ಲಿ ತುರಿಕೆ ಉಂಟಾಗುತ್ತದೆ;
- ತರಕಾರಿಯಾಗಿ ಊಟಕ್ಕೆ, ಔಷಧಿಯಾಗಿ ರೋಗನಿವಾರಣೆಗೆ ಬಳಕೆ; ಕಣ್ಣುರೋಗ, ಕುರು, ಕಫ, ವಾತಗಳಿಗೆ ಔಷಧ; It is used as vegetable for cooking sauce and used as medicinal herb to cure eye disease cough blain;
- ಕೇನೆ ಬೀಜದ ಸಂಸ್ಕರಣೆಯಲ್ಲಿ ದೀರ್ಘಕಾಲದ ರಕ್ಷಣೆಗಾಗಿ ಬೀಜಕ್ಕೆ ಸಗಣಿ ಮೆತ್ತುವ ಪದ್ಧತಿ ಇದೆ; ಈ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ತುಳುಗಾದೆ; 'ಕೇನೆದ ಬಿತ್ತ್‌ಗ್ ಅಂಬಿ ಮೆತ್ತಿಲೆಕ್ಕೊ'(ತು.ನಿ.)–ಕೇನೆಯ ಬೀಜಕ್ಕೆ ಸೆಗಣಿ ಮೆತ್ತಿದ ಹಾಗೆ; to preserve the seeds of `Kene'; used cow dung;
- ಕೇನೆ ಗೆಡ್ಡೆ ಸೊಂಪಾಗಿ ಬೆಳೆದುಕೊಂಡು ಸೊಕ್ಕದ ಹಾಗೆ ನಿಯಂತ್ರಿಸಲು ಕುಡಿಯ ಮೇಲೆ ಕಲ್ಲು ಹೇರುವ ಕ್ರಮವೂ ಇರಬಹುದು; ಈ ಗಾದೆ ಈ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿರುವಂತೆ ಕಾಣುತ್ತದೆ: 'ಕೇನೆದ ತರೆಕ್ ಕಲ್‌ದೀಯಿಲೆಕ್ಕ'(ತು.ನಿ.)–ಕೇನೆಯ ತುದಿಗೆ ಕಲ್ಲಿಟ್ಟಂತೆ;
- **ವ್ಯರೂ:** ತ.ಚೇನ್ನೈ, ಶೇನ್ನೈ, ತೇನ್ನೈ; ಮ.ಚೇನ, ಶೇನ; ತು,ಕೇನ್/ಕೇನೆ, ಚೇನ್/ಚೇನೆ;
- ವ್ಯತ್ಯಯ ರೂಪಗಳಲ್ಲಿ ಆದಿವರ್ಣ ವ್ಯತ್ಯಯ ಬಹಳ ಮುಖ್ಯವಾದುದು; ಕ.ಚ.ತ.ಶ ವರ್ಣಗಳ ವ್ಯತ್ಯಯ ಇಲ್ಲಿ ನಡೆದಿದೆ; ಕ>ಚ, ಕ>ಸ/ಶ ಸಾಮಾನ್ಯ ವ್ಯತ್ಯಯ; ಚ>ಸ ವ್ಯತ್ಯಯವೂ ಉಂಟು; ತು.ವಿನ ಕೇನ್/ಕೇನೆ ಮತ್ತು ತ.ಚೇನ್ನೈ/ಕೇನೆ ಪದದ ಮೂಲರೂಪವನ್ನು ನಿರ್ಧರಿಸುವಲ್ಲಿ ದಿಕ್ಸೂಚಿಯಾಗಬಲ್ಲವು, 'ಕೇನ್ನೈ' ಮೂಲ ರೂಪವಾಗಿದ್ದು ಕಾಲಾಂತರದಲ್ಲಿ ಕೇನೆ, ಚೇನ್ನೈ/ಚೇನೆ/ಚೇನ,ಶೇನ್ನೈ/ಶೇನ ರೂಪಗಳು ಕಾಣಿಸಿಕೊಂಡಿವೆ ಎನ್ನಬಹುದು;
- ದೇಸಿ ರೂಪ ಎನ್ನಲಾಗಿದೆ(ಕ.ನಿ.); ಕಿಟ್ಟೆಲ್ ನಿಘಂಟುವಿನಲ್ಲಿ ಇತರ ಉಲ್ಲೇಖ ಇಲ್ಲ; ಸಂ.ದೊಂದಿಗಿನ'ಸುವರ್ಣಗಡ್ಡೆ', 'ಚೂರ್ಣಗಡ್ಡೆ'ಗಳ ಬಳಕೆಯಿಂದಾಗಿ ಕ.ದಲ್ಲಿ 'ಕೇನೆ' ಹಿನ್ನೆಲೆಗೆ ಸರಿದು, ಇತರ ದ್ರಾವಿಡ ಭಾಷೆಗಳಾದ ತ.ತು.ಮ.ಗಳು ಮೂಲರೂಪದ ವ್ಯತ್ಯಯ ರೂಪಗಳನ್ನು ಬಳಕೆಯಲ್ಲಿ ಉಳಿಸಿಕೊಂಡಿವೆ.

ಕೇಪ್‌ಮಾರಿ Kēpmāri:
- ಕೆಟ್ಟವನು; ಮೋಸಗಾರ; ಮೋಸ; A person having bad qualities; cheater, deceitful person;
- ಸಂಯುಕ್ತ ಪದ; ಕೇಪು+ಮಾರಿ=ಕೇಪ್‌ಮಾರಿ> ಕೇಪ್ಮಾರಿ;
- ಕೇಪ್/ಕೇಪು=ಸಿಡಿಮದ್ದು; ಚರೆ; ಬಂಡೆ ಸಿಡಿಸುವಾಗ, ತುಪಾಕಿಯಿಂದ ಗುಂಡು ಹಾರಿಸುವಾಗ ಬಳಕೆ; ಮಾರಿ=ಕೆಟ್ಟ, ಕ್ರೂರ, ಸಾವು; ಒಂದು ದೇವತೆ; ಗ್ರಾಮದೇವತೆ;
- ಜನಪದರ ನಂಬಿಕೆಯ ಪ್ರಕಾರ 'ಮಾರಿ' ಗ್ರಾಮಗಳನ್ನು ದುಷ್ಟಶಕ್ತಿಗಳಿಂದ ರಕ್ಷಿಸುವ ಗ್ರಾಮದೇವತೆ; ಮಾರಕ ರೋಗಗಳನ್ನು ತಂದು ಕೆಡಕು ಉಂಟುಮಾಡುವ ಭಯಾನಕ ಶಕ್ತಿಯೂ ಹೌದು; ಕೇಪು ಸಿಡಿಸುವ, ಸ್ಫೋಟಿಸುವ, ಜೀವ ತೆಗೆಯುವ ಶಕ್ತಿಯಾಗಿ ಬಳಕೆಯಾಗುವುದರಿಂದ ಕೆಟ್ಟದ್ದೆಂದೇ ಪರಿಗಣನೆ; The belief of folks; village goddess protects the village people from wickedness or dangerous diseases;

- ಮಾರಿ ದೇವತೆಯ ಕ್ರೂರ ಪರಿಣಾಮಗಳನ್ನು ಹೇಳುವುದಕ್ಕಾಗಿ 'ಕೇಪು' ವಿಶೇಷಣವಾಗಿ ಸೇರಿಕೊಂಡಿದೆ;
- 'ಕೇಕ್‌ಮಾರಿ' ಎಂದು ಪ್ರಯೋಗ ಉಂಟು, ಕೂಗುಮಾರಿಗೆ; 'ಕೇಕ್‌ಮಾರಿ'ಯ ತಪ್ಪು ಉಚ್ಚಾರಣೆಯಿಂದಾಗಿಯೂ 'ಕೇಪ್‌ಮಾರಿ' ರೂಪ ಹುಟ್ಟಿಕೊಂಡಿರಬಹುದು;
- *ನೋಡಿ:* ಕೇಕ್‌ಮಾರಿ.

ಕೇಪಲ/ಕೇಪಳ/ಕೇಪುಳ Kēpala/Kēpaḷa/Kēpuḷa:

- Ixora coccinea; Scarlet Ixora;
- ಕಡುಗೆಂಪು ಹೂ ಬಿಡುವ ಒಂದು ಸಸ್ಯ ಮತ್ತು ಅದರ ಹೂವು; ಕೇಪಲ ಪುಷ್ಪ/ಕಿರ್ಗಾಡ ಕೇಪಲದ ಗಿಡ; ಮಾಲೆಹೂ ಗಿಡ; A kind of red flowered plant;
- ಅಡಿಯಾಲ, ಕಿಸುಕಾರ/ಕಿಸ್ಗಾರ, ಪಾಳೆಮರ ಎಂದೂ ಪರ್ಯಾಯನಾಮಗಳಿವೆ; It has synonyms Adiyala, Kisukara or kisgara, Palemara;
- ತುಳುನಾಡಿನ ಆಚರಣೆಗಳಲ್ಲಿ ಹಾಗೂ ಜನಪದ ವೈದ್ಯದಲ್ಲಿ ಮುಖ್ಯವಾಗಿ ಬಳಕೆಯಾಗುವ ಗಿಡ; ಒಂದು ಔಷಧೀಯ ಸಸ್ಯ; ಮರವನ್ನು ದೇವಸ್ಥಾನಗಳಲ್ಲಿ ಧ್ವಜಸ್ತಂಭವಾಗಿ ಬಳಸುತ್ತಾರೆ; In Tulunadu celebrations this `Kepala' tree is major one;
- ಬೇರನ್ನು ನೀರಿನ ಜೊತೆ ನೆತ್ತರು ಉಗುಳಿಗೂ, ಹಾಲಿನೊಡನೆ ಮೂತ್ರಗಡ್ಡೆ ರೋಗಕ್ಕೂ ಕೊಡುತ್ತಾರೆ; ಬೇರನ್ನು ತೇದು ನಂಜುಬೊಕ್ಕೆಗಳನ್ನು ಒಣಗಿಸುವುದಕ್ಕೆ ಲೇಪಿಸುತ್ತಾರೆ(FHIP); ಹಣ್ಣನ್ನು ತಿನ್ನುತ್ತಾರೆ;
- ಹೂವಿನಿಂದ ದಂಡೆ/ಮಾಲೆ ತಯಾರಿಸುತ್ತಾರೆ; ಭೂತಾರಾಧನೆ ಹಾಗೂ ದೇವಿ ಪೂಜೆಗಳಿಗೆ ಈ ಹೂವು ಬೇಕೇಬೇಕು(ತುನಿ.);
- ಯಕ್ಷಗಾನ ವೇಷಧಾರಿಗಳ ಹಾಗೂ ಭೂತನರ್ತಕರ ಒಂದು ಆಭರಣ (ಅದೇ); A jewel worn by characters of Yakshagana;
  ಪ್ರ: ದೇವೀ ಪೂಜೆಗೆ ಬರುವ ಭಕ್ತರು ಕೇಪಳ ಹೂವನ್ನು ತಂದೇತರುತ್ತಾರೆ;
- 'ದೀಪಾವಳಿಯ ದಿನ....ಕೇಪಳಂಬಳಕಾಯಿ ಗುಂಡು ಸರ ತೊಡಿಸಿ ಆ ಪೂಜೆಯಾಗುತಿರೆ'(ಉಲ್ಲೇಖ: ಕ.ನಿ.) ಎಂಬ ಪ್ರಯೋಗವಿದೆ; ಇಲ್ಲಿ 'ಕೇಪಳಂಬಳ ಕಾಯಿ'ಯನ್ನು ಒಂದು ಆಭರಣವಾಗಿ, ದೇವರಿಗೆ ತೊಡಿಸುವ ಆಭರಣವಾಗಿ ಪರಿಭಾವಿಸಿರುವುದು ವೇದ್ಯವಾಗುತ್ತದೆ; ಕೇಪಳದ ಕಾಯಿಯಾಕಾರದಲ್ಲಿ (ಮಾಂಗಾಯಿ ಇದ್ದ ಹಾಗೆ) ಆಭರಣವೊಂದನ್ನು ಮಾಡಿಸುವ ಪರಿಪಾಠ ಇತ್ತೆಂಬುದನ್ನು ಇದು ದೃಢಪಡಿಸುತ್ತದೆ;
- ಕೇಪಾಳದ ಗಿಡ ತುಳುನಾಡಿನಲ್ಲಿ ಬೆಳೆಯುವ ಒಂದು ಸಾಮಾನ್ಯ ಕಾಡುಮರ; ಇತರೆಡೆಗಳಲ್ಲಿಯೂ ಇರಬಹುದು; ವರ್ಷವಿಡೀ ಹೂವು ಬಿಡುತ್ತದೆ;
- *ವ್ಯದೂ:* ಕೆವಲ, ಕೇಪುಳು, ಕೇಪುಲು, ಕೇಪುಲ, ಚೇಪುಲ;
  ತು: ಕೇಪಳ್/ಕೇಪರ್, ಕೇಪುಳ, ಕೇಪಲ, ಕೇಪಲದೈ;
  ತ: ಚೆತ್ತಿ, ವೆಡ್ಡಿ, ಮ: ಚೆತ್ತಿ, ಚೆಕ್ಕಿ, ತೆಚ್ಚಿ;
  ಸಂ: ಪಾತಲೀ.

ಕೇಪು Kēpu:

- ಒಂಟಿ ನಳಿಗೆಯ ತುಪಾಕಿಯಿಂದ ಸಿಡಿಮದ್ದು ಗುಂಡು ಹಾರಿಸಲು ಬಳಸುವ ಒಂದು ಸಾಧನ; ತುಪಾಕಿಗೆ ತುಂಬುವ ಚರೆಗಳಿಗೆ(ಸಣ್ಣ ಗುಂಡುಗಳಿಗೆ) ಹಿಂಬದಿಯಲ್ಲಿ ಅಳವಡಿಸುವ ಅಣಸು; ಟೋಪಿ; A small sparker like metal piece which is used to explode single barrel gun; a kind of small ferrule;
- ಬಂಡೆ, ದಿಬ್ಬ ಮೊದಲಾದುವನ್ನು ಸಿಡಿಸಲು ಬಳಸುವ ಸಿಡಿಮದ್ದನ್ನು ತುಂಬಿರುವ ನಳಿಗೆ; ಸಿಡಿಮದ್ದು ಸಿಡಿಸುವ ಸಾಧನ; ಸಿಡಿಮದ್ದು;
- ಮಕ್ಕಳ ಆಟಿಕೆಗಳಲ್ಲಿ ಒಂದಾದ ಸಣ್ಣ ತುಪಾಕಿಯಿಂದ 'ಟಪ್' ಎಂದು ಶಬ್ದ ಹೊಮ್ಮಿಸಲು ಬಳಸುವ ಪೊಟಾಷ್‌ಮದ್ದು; ಚಿನಕುರಳಿ;
- ವ್ಯಾಪಾರದ ಸರಕು; ಮಾರಾಟದ ಸಾಮಾನು; ಮಾಲು; ಮಾರಾಟದ ಸರಕು ಸರಂಜಾಮುಗಳ ನಿಯತಕಾಲಿಕ ಸರಬರಾಜು; Trade goods;
- ಮರಾಠಿ ಮತ್ತು ಹಿಂದಿಯಲ್ಲಿ ಖೇಪ್/ಖೇಪ ರೂಪ ಇದೆ; ಖೇಪ್/ಖೇಪ>ಖೇಪು>ಕೇಪು ಆಗಿದೆ; ಅರಬ್ಬಿ ಅಥವಾ ಪರ್ಷಿಯನ್ ಮೂಲದ ಪದ ಇರಬಹುದು;

ಇಂ.ನ Cap ನಿಂದ ಕೇಪು ಬಂದಿದೆ (ಕನಿ) ಎಂಬ ಅಭಿಪ್ರಾಯವೂ ಇದೆ; the word `cap' is used in Marati and Hindi languages, but originally it has Arabian an Persian roots;

- 'ಖೇಪು'ವಿಗೆ a single time, a turn ಎಂಬ ಅರ್ಥಗಳಿವೆ (ಕಿಟ್ಟೆಲ್); ಕೇಪಿನಲ್ಲಿ ತುಂಬಿದ ಮದ್ದು ಒಮ್ಮೆಗೇ ಸಿಡಿಯುವುದರಿಂದಲೂ, ಸಿಡಿತಕ್ಕೆ ಒಳಗಾದ ವಸ್ತು ಛಿದ್ರಗೊಂಡು ಸ್ವರೂಪ ಬದಲಿಸಿಕೊಳ್ಳುವುದರಿಂದಲೂ ಸಿಡಿಸುವ ಈ ಸಾಧನವನ್ನು ಈ ಹೆಸರಿನಿಂದ ಕರೆದಿರುವ ಸಾಧ್ಯತೆ ಇದೆ;
- ಪುರುಷವಾಚಕ ಅಂಕಿತನಾಮ; ಸ್ಥಳನಾಮವೂ ಹೌದು(ತು.); ತುಳುನಾಡಿನ ಕೇಪುವಿನಲ್ಲಿನ ಉಳ್ಳಾಲ್ತಿ ಗುಡಿ ಆ ಪ್ರದೇಶದಲ್ಲಿ ಪ್ರಸಿದ್ಧ; ಈ ಕಾರಣದಿಂದ ಕೇಪು ಪವಿತ್ರ ಕ್ಷೇತ್ರ ಎನಿಸಿದೆ; ಚೌಲ ಮಾಡಿಸುವ ಹರಕೆ ಈ ಕ್ಷೇತ್ರದ ವಿಶೇಷ; ಈ ಹರಕೆಗೆ ತುಳುವಿನಲ್ಲಿ 'ಕೇಪುಕ ಜಂಬು' ಎಂದೇ ಕರೆಯುತ್ತಾರೆ(ತುನಿ.);
- ***—ಕೇಪಿನ ಕೋವಿ*** **:** ಸಿಡಿಮದ್ದು ಅಥವಾ ಚರೆಗಳನ್ನು ತುಂಬಿದ ಕೇಪುಗಳನ್ನು ಅಳವಡಿಸುವ ಒಂಟಿ ನಳಿಗೆಯ ಬಂದೂಕು; ತುಪಾಕಿ; 'ಇನ್' ಆಗಮವಾಗಿ 'ಕೇಪಿನ'; ಕೋವಿ=ಕೊಳವೆ; ನಳಿಗೆ; ಬಂದೂಕು; ಕೊಳಲು(ಪಿಳ್ಳಂಗೋವಿ); ಒಂಟಿ ನಳಿಕೆಯ ಬಂದೂಕು ಅರಣ್ಯಗಳಲ್ಲಿ ವಾಸಮಾಡುವ ಜನರಲ್ಲಿ (ಮಲೆನಾಡಿಗರಲ್ಲಿ, ಬೇಡ ಸಮುದಾಯಗಳಲ್ಲಿ) ಸಾಮಾನ್ಯವಾಗಿ ಇರುತ್ತದೆ; ಬೇಟೆ ಆಡಿ ಆಹಾರ ಸಂಪಾದಿಸಲು ಬಳಕೆ; ಕ್ರೂರ ಮೃಗಗಳ ಹಾವಳಿ ಹಾಗೂ ಶತ್ರುಧಾಳಿಯಿಂದ ಆತ್ಮರಕ್ಷಣೆ ಮಾಡಿಕೊಳ್ಳುವ ಸಾಧನ; ದುರ್ಬಳಕೆಯಿಂದಾಗಿ ಜೀವ ಬೆದರಿಕೆ, ದರೋಡೆ, ಕೊಲೆ, ಸುಲಿಗೆಯ ಸಾಧನವಾಗುವುದರಿಂದ ಪರವಾನಗಿ ಪಡೆಯುವ ನಿರ್ಬಂಧವನ್ನು ಆಳುವ ವ್ಯವಸ್ಥೆ ಹೇರಿದೆ; ಬ್ರಿಟಿಷರ ಶಸ್ತ್ರಾಸ್ತ್ರ ನಿಷೇಧ ಕಾಯಿದೆ ಐತಿಹಾಸಿಕ ಪ್ರಸಿದ್ಧಿ ಪಡೆದಿದೆ; ಹಲಗಲಿಯ ಬೇಡರು 'ಕುಂಪಣಿ' ಸರ್ಕಾರದ ವಿರುದ್ಧ ಬಂಡೇಳಲು ಈ ಕಾಯಿದೆ ಕಾರಣ; Explosive powder filled single barrel gun which has a cape to spark powder after trigger the horse part of a gun; single barrel gun filled with gun powder;
- ಒಡಿಗ ಎಂಬ ಬೇಟೆಗಾರ ಸಮುದಾಯದ ಜನ ಬೇಟೆಗೆ ಕೇಪಿನಕೋವಿ ಬಳಸುತ್ತಾರೆ; 'ಬತ್ತಿಕೋವಿ' ಎಂದು ಇನ್ನೊಂದು ಬಗೆಯ ಕೋವಿ ಇದ್ದು ಇದು ಕೇಪಿನಕೋವಿಗಿಂತ ಹೆಚ್ಚು ಅಪಾಯಕಾರಿಯಾದದ್ದು;
- ***—ಕೇಪಿನ ಡಬ್ಬಿ*** **:** ಕೋವಿಗೆ ಬಳಸುವ ಕೇಪುಗಳನ್ನು ತುಂಬಿ ಇಟ್ಟುಕೊಳ್ಳುವ ಡಬ್ಬಿ; A tinybox which is used to keep cape parts;
- ***—ಕೇಪುತೊಟ್ಟು*** **:** ಬಂದೂಕು/ತುಪಾಕಿಯಲ್ಲಿ ಕೇಪು ಇಡುವ ಭಾಗ; ಸಂಯುಕ್ತ ಪದ; ಕೇಪು+ತೊಟ್ಟು; A part of gun where cape is fixed;
- ***—ಕೇಪುಹಾರಿಸು*** **:** ಸಿಡಿಮದ್ದು ಸಿಡಿಸು; ಬಂಡೆ ಮೊದಲಾದವುಗಳನ್ನು ಸಿಡಿಸುವಾಗ ಈ ಪದ ಬಳಕೆ; ಕೇಪಿನ ಒಂದು ತುದಿಗೆ ಸಾಕಷ್ಟು ಉದ್ದದ ಬತ್ತಿ ಅಳವಡಿಸಿ ಸ್ವಲ್ಪ ದೂರದಿಂದಲೇ ಬತ್ತಿಗೆ ಬೆಂಕಿ ತೋರಿಸುತ್ತಾರೆ; ಬತ್ತಿ ಉರಿದು ಕೇಪಿಗೆ ಕಿಡಿ ತಾಕಿ ಸಿಡಿಯುವಷ್ಟರಲ್ಲಿ ಸಿಡಿದ ಬಂಡೆಯ ಚೂರುಗಳೂ ತಾಕದಷ್ಟು ದೂರಕ್ಕೆ/ಮರೆಗೆ ಹೋಗಿ ರಕ್ಷಣೆ ಪಡೆಯುತ್ತಾರೆ; To explode or to fire the loaded gun;
- ***—ಕೇಪುಹೊಡೆ*** **:** ಗುಂಡು ಹಾರಿಸು (ಕೋವಿಯಿಂದ); ಷಿಕಾರಿಮಾಡು; ಜಯಗಳಿಸು, ಸಾಧಿಸು, ಸಾಧನೆ ಮಾಡಿ ತೋರು ಎಂಬ ಅರ್ಥದಲ್ಲೂ ನುಡಿಗಟ್ಟಾಗಿ ಬಳಕೆ. To fie gun; to hunt; to win; to achieve.

ಕೇಮೆ/ಗೇಮೆ/ಗೆಯ್ಮೆ Kēme/gēme/geyme**:**

- ಕೆಲಸ; ದುಡಿಮೆ; ಉದ್ಯೋಗ; work, job, earnings, profession;
- ಕೇ/ಕೆಯ್ ಮೂಲರೂಪ; ಕೆಯ್>ಕೇ ಆಗಿರುವ ಸಾಧ್ಯತೆಯೇ ಹೆಚ್ಚು; ಪದಾಂತ್ಯ ಹಾಗೂ ಪದಮಧ್ಯ 'ಯ'ಕಾರಕ್ಕೆ 'ಏ'ಕಾರವನ್ನು ಆದೇಶವಾಗಿ ತರುವ ಪ್ರವೃತ್ತಿಯೊಂದು ಕನ್ನಡದಲ್ಲಿ ಇದ್ದೇ ಇದೆ; ಉದಾ. ಎರಡನೆಯ > ಎರಡನೇ, ತಮ್ಮಯ್ಯಗೌಡ > ತಮ್ಮೇಗೌಡ;
- ಕೆಯ್=ಮಾಡು, ಕೆಲಸಮಾಡು; ಕ್ರಿಯಾವಾಚಕ; ಕ್ರಿಯಾವಾಚಕವನ್ನು ನಾಮವಾಚಕವಾಗಿ ಮಾಡಲು

'ಮ್' ಸೇರಿ ಕೆಯ್‌ಮೆ/ಕೆಯ್ಮೆ ಆಗಿದೆ; Do something; to do work; an action word;

- ಕೆಯ್+ಮೆ=ಕೆಯ್ಮೆ>ಕೇಮೆ;Cf.ಒಲ್+ಮೆ=ಒಲುಮೆ>ಒಲ್ಮೆ;ಗೆಲ್+ಮೆ=ಗೆಲುಮೆ>ಗೆಲ್ಮೆ;ಬಲ್+ಮೆ=ಬಲುಮೆ>ಬಲ್ಮೆ; ಕೆಯ್ಮೆ>ಗೆಯ್ಮೆ ಕೇಮೆ>ಗೇಮೆ; ಕ>ಗ ಹಾಗೂ ಯ>ಏ ದ್ರಾವಿಡ ಭಾಷೆಗಳಲ್ಲಿ ಸಾಮಾನ್ಯ ಪರಿವರ್ತನ ಕ್ರಿಯೆ;
- ಕೆಯ್‌ಗೂ ಕಯ್(ಕೈ)ಗೂ ಹೊಲ(ಕ್ಷೇತ್ರ, Field)ಕ್ಕೂ ನಿಕಟ ಸಂಬಂಧ ಇದೆ; ಕೆಯ್ ಮತ್ತು ಕಯ್‌ಗೆ ರೂಪಸಂಬಂಧವಿದ್ದರೆ ಕೆಯ್/ಕಯ್‌ಗೂ ಹೊಲ(=ಕೆಯ್)ಕ್ಕೂ ಅರ್ಥಸಂಬಂಧವಿದೆ; ಹೊಲಕ್ಕೆ ಕೈ ಊಡುವುದೇ ಕೇಮೆ; ಆಮೇಲೆ ಯಾವುದೇ ಕೆಲಸಕ್ಕೆ ಕೈ ಹಾಕುವುದೂ ಕೇಮೆಯೇ ಆಯಿತು; The word `kaiy' is related to cultivated planting fields;
- ಅವಿರತ ದುಡಿಮೆಯ, ಶ್ರಮದ, ಉದ್ಯೋಗದ ಲಕ್ಷಣವಾಗಿಯೂ–ನುಡಿಗಟ್ಟಾಗಿ 'ಕೇಮೆ' ಬಳಕೆಯಾಗುವುದೂ ಇದೆ; ಕೆಲಸ ಮಾಡದ ಅಲಸಿಗರನ್ನು, ಕೆಲಸವಿಲ್ಲದೆ ಕಾಲ ಕಳೆಯುವವರನ್ನು, ಸಲ್ಲದ ಕೆಲಸಗಳಲ್ಲಿ ತೊಡಗಿದವರನ್ನು 'ಅವ್ನ್‌ಗೆ ಇನ್ನೇನ್ ಕೆಮೆ ಮಾಡೂಕೆ' ಎಂದು ನಿರಾಕರಿಸಲಾಗುತ್ತದೆ; 'ಮಾಡೂಕೆ ಏನಾದ್ರೂ ಕೇಮೆ ಇದ್ರೆ ಮಾಡು ಹೋಗು' ಎಂದು ನಿರ್ದೇಶಿಸುವುದೂ ಇದೆ;
- 'ಕೈಮೆ' ರೂಪವಿದೆ; ಕೆಟ್ಟತನ, ದುಷ್ಟತನ, ಮೋಸ, ಕಪಟ, ವಂಚನೆ, ಕೆಯ್ತ, ಗೆಯ್ತ ಎಂಬ ಅರ್ಥಗಳಿವೆ; ಕೈಮೆ>ಕೇಮೆ ಆಗುವುದು ಅಸಂಭವವೇನಲ್ಲ; ಆದರೆ 'ಕೇಮೆ' ರೂಪ ಕೆಲಸ, ಗೇಮೆ, ಉದ್ಯೋಗ, ದುಡಿಮೆ ಎಂಬುದಕ್ಕಿಂತ ಹೆಚ್ಚಿನ ಅರ್ಥಗಳಿಗೆ ತನ್ನನ್ನು ವಿಸ್ತರಿಸಿಕೊಂಡಂತೆ ಕಾಣುವುದಿಲ್ಲ.

ಕೇಯೂರ Kēyūra:

- ತೋಳುಬಳೆ; ತೋಳುಬಂದಿ; ಕಡಗ; ಮೇಲುಗೈಗೆ ತೊಡುವ ಒಂದು ಆಭರಣ; Bracelet which is worn by men or women for their upper part of arm; not for their wrists;
- ಯಕ್ಷಗಾನದಲ್ಲಿ ಪಾತ್ರಧಾರಿಗಳು ಮೇಲುಗೈಗೆ ತೊಡುವ ಒಂದು ತೊಡುಗೆ;
- ಅನ್ಯದೇಶ್ಯ: ಸಂ.

ಕೇರಿ kēri :

- ಸಾಮಾನ್ಯಾರ್ಥದಲ್ಲಿ ಬೀದಿ; ಒಂದು ಸಮುದಾಯದವರು ಒಂದು ಕಡೆ ವಾಸ ಮಾಡುವ ಅರ್ಥವೂ ಇದೆ; ಆಗ ಅವರೆಲ್ಲರೂ 'ಅಣ್ಣ ತಮ್ಮಂದಿರು' ಆಗಿರುವ ಸಾಧ್ಯತೆ ಇದೆ; 'ಅಣ್ಣ ತಮ್ಮಿಕೆ' ಎಂದೇ ಇದನ್ನು ಕರೆಯುವರು; ಪ್ರಾಯಶಃ ಒಂದೇ ವಂಶವೃಕ್ಷಕ್ಕೆ ಸೇರಿದವರು ಆಗಿರುತ್ತಾರೆ; A street, colony where the only one community is dwelt at single place;
- ತಮಿಳು ಮತ್ತು ಮಲೆಯಾಳಂಗಳಲ್ಲಿ 'ಚೇರಿ', ತೆಲುಗಿನಲ್ಲಿ 'ಗೇರಿ' ರೂಪಗಳಿವೆ; 'ಕ'ಕಾರಕ್ಕೆ 'ಚ'ಕಾರ ಬರುವುದು (ಕೇರಿ>ಚೇರಿ) ಒಂದು ವಿಶೇಷ; ದ್ರಾವಿಡ ಭಾಷೆಗಳ ಒಂದು ಲಕ್ಷಣ; ಕ>ಗ ಆಗುವುದು (ಕೇರಿ>ಗೇರಿ) ಸಾಮಾನ್ಯ; 'ಕ'ಕಾರವನ್ನು ಮೂಲ ದ್ರಾವಿಡಕ್ಕೆ ಪುನರ್ರಚಿಸುವಾಗ ಕನ್ನಡವನ್ನು ಪ್ರಾತಿನಿಧಿಕವಾಗಿ ತೆಗೆದುಕೊಳ್ಳುತ್ತೇವೆ;
- ಇದೇ ಅರ್ಥದಲ್ಲಿ 'ಕೇಟಿ' ಪದವನ್ನೂ ಹೇಳಲಾಗಿದೆ(ಕಿಟ್ಟೆಲ್); ಕೇಟಿ>'ಕೇರಿ' ಆಗುವುದು ಕಷ್ಟವಲ್ಲ; ಟಿ>ರ ಆಗುವುದನ್ನು ಅನೇಕ ಸಂದರ್ಭಗಳಲ್ಲಿ ನೋಡುತ್ತೇವೆ (ಉದಾಹರಣೆಗೆ: ಗಟ್ದೆ>ಗರ್ದೆ>ಗದ್ದೆ; ಟಿ>ರ ಆಗಿರುವುದು ಸ್ಪಷ್ಟ);
- ತುಳುವಿನಲ್ಲಿ 'ಕೇರಿ' ಪದವನ್ನು ಕೊಟ್ಟು(ತು.ನಿ), 'ಬೀದಿ' ಅರ್ಥದ ಜೊತೆಗೆ 'ಓಣಿ' ಪದವನ್ನೂ ಕೊಡಲಾಗಿದೆ; ಆದರೆ 'ಓಣಿ' ಪದ 'ಕೇರಿ' ಪದದಿಂದ ಸ್ವಲ್ಪಮಟ್ಟಿಗೆ ಭಿನ್ನವಿರುವಂತೆ ಕಾಣುತ್ತದೆ; 'ಸಾಲು'('ಓಳಿ'>ಓಣಿ) ಎಂಬ ಅರ್ಥದಲ್ಲಿ ಅದನ್ನು ಪರಿಗಣಿಸಬಹುದು; In Tulu language `keri' is `kottu';
- 'ಕೇರಿ' ಎಂಬ ಪದವನ್ನು ಸ್ಥಳನಾಮದ ಜೊತೆಗೆ ಸೇರಿಸುವುದಿದೆ– ಕೆಂಗೇರಿ, ಅಣ್ಣಿಗೇರಿ, ಶೃಂಗೇರಿ ಇತ್ಯಾದಿ; ಇಲ್ಲಿ 'ಕೇರಿ'ಗೆ 'ಊರು' ಎಂಬ ಹೆಸರೇ ಅನ್ವಯವಾಗುವುದು; The word `keri' is used as suffix which is added to name of places;
- 'ಕೇರಿ' ಎಂಬುದು ಊರಿಗೆ ಹೊರಗೆ ಇರುವಂಥದು ಎಂಬ ಅರ್ಥ ಸಾಂಪ್ರದಾಯಿಕವಾದುದು; Traditional `keri' is a place outside the conventional villages; 'ಊರು' ಮತ್ತು 'ಕೇರಿ'

ಪದಗಳನ್ನು ಕ್ರಮವಾಗಿ ಸವರ್ಣೀಯರು ಮತ್ತು ಸವರ್ಣೀಯರಲ್ಲದವರ ವಾಸ ಮಾಡುವ ಸ್ಥಳ ಎಂಬ ಅರ್ಥ ರೂಢಿಯಲ್ಲಿರುವಂಥದು; ಹಾಗಾಗಿ 'ಕೇರಿ' ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ವಾಸಿಸುವ ಸ್ಥಳ ಎಂದಂತಾಯಿತು, ಇದು ಸಾಂಪ್ರದಾಯಿಕವಾದುದು ಮಾತ್ರ, ಇವೊತ್ತಿನದಲ್ಲ; "ಊರಿದ್ದಲ್ಲಿ ಹೊಲಗೇರಿ" (ಕಿ.ಕೋ.ಗಾ) ಎಂಬ ಗಾದೆಯೂ ಇದನ್ನೇ ಹೇಳುತ್ತದೆ; ಆದರೆ ಇದಾವುದೂ ಈಗಿಲ್ಲ, ಸಾಂಪ್ರದಾಯಿಕ ಅರ್ಥ ಈಗ ಪೂರ್ಣ ಬದಲಾಗಿದೆ; ಇವೊತ್ತು 'ಕೇರಿ' ಎಂದರೆ ಒಂದು 'ಬೀದಿ' ಎಂಬ ಅರ್ಥ ಮಾತ್ರ ಉಳಿದಿದೆ, ಅಷ್ಟೆ;

- 'ಕೇರಿ' ಎಂಬುದನ್ನು ಸಮುದಾಯ, ತೆಂಡೆ, ಕುಲ, ಒಕ್ಕಲು, ವೃತ್ತಿ, ಪರಿಸರ– ಎಂಬ ಅರ್ಥದ ಹಿನ್ನೆಲೆಯಲ್ಲಿ ಬಳಸಲಾಗಿದೆ; The `keri' is used to indicate communities, castes and subcaste environment or dwellings; for ex. Vokkalgeri etc; ಉದಾಹರಣೆಗೆ ಒಕ್ಕಲಗೇರಿ, ಕುರುಬರಗೇರಿ, ಸುಣ್ಣದಕೇರಿ, ಹಳ್ಳದಕೇರಿ, ಕುಂಬಾರಗೇರಿ ಇತ್ಯಾದಿ; ಆಯಾ ಕುಲ ಅಥವಾ ವೃತ್ತಿಯನ್ನು ಆಧರಿಸಿ ಒಂದು ಕಡೆ ವಾಸ ಮಾಡುತ್ತಿದ್ದ ಸಮುದಾಯವನ್ನು ಗುರುತಿಸಲು ಈ ಪದ ಬಳಕೆ; ಅರ್ಥ ಕೂಡ; ಇಲ್ಲಿ 'ಕೇರಿ' ಎಂಬುದು ಊರಲ್ಲ, ಒಂದು ಊರಿನ ಒಂದು ಸಮುದಾಯದವರ ಬೀದಿ;
- ಬ್ರಾಹ್ಮಣರು ವಾಸ ಮಾಡುವ ಸ್ಥಳವನ್ನು 'ಕೇರಿ' ಎಂದು ಗುರುತಿಸುತ್ತಿರಲಿಲ್ಲ; ಅದನ್ನು 'ಅಗ್ರಹಾರ' ಎಂದೇ ಕರೆಯಲಾಗುತ್ತಿತ್ತು; ಈ 'ಅಗ್ರಹಾರ' ಒಂದು ಪ್ರತ್ಯೇಕ ಊರಾಗಿರಬಹುದು ಅಥವಾ ಒಂದು ಊರಿನ ಬೀದಿ(ಕೇರಿ) ಆಗಿರಬಹುದು; the place where Brahmins dwel is not called as `keri', that is called as Agrahara- a holy place of Brahmin settlement;
- ಕೆಲವು ವಿಶಿಷ್ಟ ಕಾರಣಕ್ಕಾಗಿ 'ಕೇರಿ' ಪದವನ್ನು ಬಳಸುತ್ತಿದುದುಂಟು; ಉದಾಹರಣೆಗೆ, 'ಸೂಳೆಗೇರಿ'; ಹಿಂದೆ ರಾಜರು ಆಳುತ್ತಿದ್ದಾಗ, ಈ ಸೂಳೆಗೇರಿಗಳು ಅರಮನೆಯ ಮುಂದಿನ ಬೀದಿಯಲ್ಲಿಯೇ ಇರುತ್ತಿದ್ದುವು; ರಾಜನರ್ತಕಿಯರು ಅರಮನೆಯ ರಾಜ ವ್ಯವಸ್ಥೆಯಲ್ಲಿ ಸೇರ್ಪಡೆಯಾಗಿದ್ದರಿಂದ, ರಾಜರು 'ಸೂಳೆಗೇರಿ'ಗೆ ಮಹತ್ವ ಕೊಡಲು ಕಾರಣವಾಗಿರಬೇಕು;
- 'ಕೇರಿ' ಒಂದು ಕಾಲಕ್ಕೆ ಅಸಮಾನತೆಗೆ (ಊರು–ಕೇರಿ ವ್ಯತ್ಯಾಸದ ಕಲ್ಪನೆಯಲ್ಲಿ) ಸಂಕೇತವಾಗಿತ್ತು, ಮೇಲು–ಕೀಳಿನ ವ್ಯವಸ್ಥೆಯನ್ನು ಪ್ರತಿನಿಧಿಸುವಂಥದಾಗಿತ್ತು; ಈಗ ಈ ವ್ಯವಸ್ಥೆ ಬದಲಾಗಿದೆ, ಹಳೆಯ ಈ ಎಲ್ಲ ಅರ್ಥಗಳೂ ಬಿದ್ದು ಹೋಗಿವೆ.
- ಮನೆಗಳ ಸಾಲು; ಚಿಕ್ಕಹಳ್ಳಿ; ವಸತಿ ಪ್ರದೇಶ; ಗುಡಿಸಲುಗಳ ಸಮೂಹ; ಕೆಳಜಾತಿಯವರ ವಸತಿ ಸಮೂಹ; ಚಿಕ್ಕ ಹಳ್ಳಿ; ನಿರ್ದಿಷ್ಟ ಸಮುದಾಯದ ಜನ ವಾಸಮಾಡುವ ಮನೆಗಳ/ಗುಡಿಸಲುಗಳ ಸಾಲು/ ಗುಂಪು; ಅಸ್ಪೃಶ್ಯ ಜನರ ಹಳ್ಳಿ; ಮೊಗವೀರರ ಕೇರಿ(ತು.); A lane of houses; a small village; a small residential area; an area of few hamlets; a village of untouchables;
- ಬೀದಿ; ಓಣಿ; ಮನೆಗಳ ಸಾಲುಗಳ ನಡುವಣ ಹಾದಿ/ದಾರಿ;
- *ಪ್ರ: 'ಕೆಲಸಕ್ಕೆ ಬಾರದ್ದು ಕೇರಿಯಲ್ಲಿದ್ದರೇನು ಮನಸ್ಸಿಗೆ ಬಾರದ್ದು ಮನೇಲಿದ್ದರೇನು'* (ಗಾ)
ಪ್ರ: 'ಕೇರಿಗ್ ಕಲ್ಲ್ ದಕ್ಕ್‌ಜಿಂಡ ಊರುಡು ಆಣ್ ಇಜ್ಜಿಪಣ್ಂಬು' (ಗಾ.,ತು.); (ಕೇರೆಗೆ ಕಲ್ಲು ಹೊಡೆಯದಿದ್ದರೆ ಊರಲ್ಲಿ ಗಂಡಸರು ಇಲ್ಲ ಅಂದುಕೊಳ್ಳುತ್ತದೆ);
- 'ಕೇರಿ' ಗ್ರಾಮಸಂಸ್ಕೃತಿಯ ವ್ಯಕ್ತರೂಪಗಳಲ್ಲಿ ಒಂದು; ಗ್ರಾಮ ರಚನೆಯ ಸ್ವರೂಪದ ಕುರುಹು; ಒಂದೊಂದು ಸಮುದಾಯದ ಜನ ಒಂದೊಂದು ಕಡೆ ವಾಸ ಮಾಡುತ್ತ ಅವರವರ ಮನೆಗಳ ಸಮೂಹವನ್ನು/ಸಾಲನ್ನು/ಸಾಲುಗಳ ನಡುವಣ ಬೀದಿಯನ್ನು ಆ ಸಮೂಹಗಳ ಹೆಸರಿನೊಡನೆ 'ಕೇರಿ'ಯನ್ನು ಸೇರಿಸಿ ಕರೆಯಲಾಗುತ್ತಿತ್ತು; ಹಾರೂರಗೇರಿ, ಗಾಣೀಗ್ಗೇರಿ, ಒಕ್ಕಲಗೇರಿ ಇತ್ಯಾದಿ;
- ಅಂಗಡಿ ಬೀದಿಗೆ ಮಾರುವಕೇರಿ, ಪಟ್ಣಗೇರಿ ಎಂದೂ ಕರೆಯುತ್ತಿದ್ದರು; A lane of shops is called as Maaruvakeri, Pattanageri;
- ಅಸ್ಪೃಶ್ಯ ಸಮುದಾಯದವರ ಮನೆಗಳು ಊರ ಹೊರಗೆ ನಿರ್ದಿಷ್ಟ ಕಡೆಗೆ ಇದ್ದು ಅವುಗಳನ್ನು ಹೊಲಗೇರಿ, ಮಾದಿಗ್ಗೇರಿ, ಮೊಗವೀರಗೇರಿ

ಇತ್ಯಾದಿಯಾಗಿ ಕರೆಯಲಾಗುತ್ತಿತ್ತು; A lane of untouchable hamlets which are built outside the village is called Holageri Maadigakeri;

- 'ಒಳಗೇರಿ' ಸವರ್ಣೀಯರ(ಊರೊಳಗಿನ) ಕೇರಿಗಳಿಗೆ, 'ಹೊರಗೇರಿ' ಅವರ್ಣೀಯರ(ಊರ ಹೊರಗಿನ) ಕೇರಿಗಳಿಗೆ ಸಂಕೇತವಾಗಿದೆ;'
- 'ಕೇರಿಕೇರಿಗಳನ್ನು ಸುತ್ತಿ ಬಂದೆ' ಎಂಬ ಮಾತು 'ಒಳಗೇರಿ'ಗಳನ್ನೂ, ಶ್ರಮ, ಬೇಸರ, ನಿರಾಶೆಗಳನ್ನೂ, 'ಊರುಕೇರಿ' ಎಂಬ ಮಾತು ಒಳ-ಹೊರ ಕೇರಿಗಳ ಪ್ರತ್ಯೇಕತೆ, ಅಸಮಾನತೆ, ಅಸ್ಪೃಶ್ಯತೆಯನ್ನೂ ಸೂಚಿಸುತ್ತಿವೆ ಎನ್ನಬಹುದು;
- ಆದುದರಿಂದ ಕೇರಿಗಳು ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯ ಸೂಚಕಗಳೂ ಆಗಿವೆ;
- ನಗರಗಳಿಗೂ ಇದು ಪ್ರವೇಶಿಸಿದ್ದು 'ಕೊಳಗೇರಿ'ಗಳು ಕಾಣಿಸಿಕೊಂಡಿವೆ;
- ಸ್ಥಳನಾಮ ಘಟಕವಾಗಿಯೂ 'ಕೇರಿ' ಯ ಬಳಕೆ; ಕೆಂಗೇರಿ, ಪಟ್ಟಣಗೇರಿ, ಮಡಕೇರಿ ಇತ್ಯಾದಿ;
- 'ಕೇರ್'ದಿಂದ ಕೇರಿ ಬಂದ ಹಾಗೆ ಕಾಣುತ್ತದೆ; ಕೇರ್=ಗೋಡೆ, ಭಿತ್ತಿ; 'ಕೇರ್ ಕೆಡೆದುದು' ಎಂದರೆ ಗೋಡೆ ಬಿದ್ದಿತು; ಗೋಡೆಗಳಿಂದ ಮನೆಗಳು, ಮನೆಗಳಿಂದ ಕೇರಿ; ಕೇರ್‌ಗಳಿಂದ ಕೂಡಿದ್ದು/ ನಿರ್ಮಾಣವಾದುದ್ದು ಕೇರಿ ಎಂದು ಅರ್ಥೈಸಬಹುದು; ಹುಲ್ಲಿನ ಚಾವಣಿಗೆ ಬೆಂಕಿ ಬಿದ್ದರೆ ಅಥವಾ ಊರು ಹಾಳದರೆ ಉಳಿಯುವುದು ಬರೀ ಗೋಡೆ/(ಕೇರ್)ಗಳು ತಾನೆ;
- 'ಕೇರಿ' ಪೂರ್ವಪದದೊಡನೆ ಸೇರುವಾಗ 'ಗೇರಿ' ಆಗುತ್ತದೆ; ಕ>ಗ ವ್ಯತ್ಯಯ;
- ***ವ್ಯರೂ:*** ಚೇರಿ; ತ.ಮ.ಚೇರಿ; ಕೊಡ.ತು.ಕೇರಿ; ಕ>ಚ ವ್ಯತ್ಯಯ.
- ಸಾಲು; ಶ್ರೇಣಿ; a lane, a range;
- ತೆಳ್ಳನೆಯ; ಕೃಷವಾದ; ಸಪೂರ(ತು.)
- ಕೇರೆಹಾವು (ತು.); a ratsnake;

ಕೇರು/ಕೇಱುಗಿ Kēru/kēṟu[1]:

- ದವಸ ಧಾನ್ಯಗಳಿಂದ ಕಸ-ಕಡ್ಡಿ, ಕಲ್ಲು-ಮಣ್ಣುಗಳನ್ನು ಬೇರ್ಪಡಿಸು; ಶುದ್ಧೀಕರಿಸು; ಹಸನುಮಾಡು; ಕಲಬೆರಕೆಯನ್ನು ಹೊರತೆಗೆ; ದೋಷಗಳನ್ನು ಹೋಗಲಾಡಿಸು ಎಂಬರ್ಥದಲ್ಲಿ ನುಡಿಗಟ್ಟಾಗಿಯೂ ಬಳಕೆ; To husk grains; to winnow grains; to separate unwanted mixture among grains;
- ಮೊರಕ್ಕೆ ದವಸಧಾನ್ಯಗಳನ್ನು ಹಾಕಿಕೊಂಡು ಮೊರದಿಂದ ಚಿಮ್ಮಿಸಿ ಅಥವಾ ಒನೆದು, ಅಂದರೆ ಮೇಲಕ್ಕೂ ಕೆಳಕ್ಕೂ ಎಡಕ್ಕೂ ಬಲಕ್ಕೂ ಆಡಿಸಿ ಕಲಬೆರಕೆಯನ್ನು ತೆಗೆದು ಹಸನು ಮಾಡಿಕೊಳ್ಳುವ ಒಂದು ನಿಯತ ವಿಧಾನ/ಕ್ರಿಯೆ; To winnow the grains from winnower to separate small stone particles, sticks etc;
- ಕೇರುವುದು ವಾಸ್ತವವಾಗಿ ಒಂದು ಕಲೆ; ಶ್ರಮಪೂರ್ವಕ ವಿದ್ಯೆ; ಅಭ್ಯಾಸದ ಹೊರತು ಈ ವಿದ್ಯೆ ಕೈಗೂಡದು; ಗ್ರಾಮೀಣ ಪ್ರದೇಶದ, ಶ್ರಮಿಕ ಕುಟುಂಬಗಳ ಹೆಂಗಸರಿಗೆ ಈ ವಿದ್ಯೆ ಕರಗತ; ಒಮ್ಮೊಮ್ಮೆ ಗಂಡಸರೂ ಕೇರುವುದುಂಟು;
- *ಪ್ರ: 'ಕೇರಿದ್ದೂಳು ಯಾರ ಮೇಲೆ ಅಂದ್ರೆ ಕೇರಿದವರ ಮೇಲೆಯೇ ಅಂದಂತೆ'*(ನಮ್ಮ.ಗಾ);
- ಮದುವೆ, ದೊಡ್ಡ ಹಬ್ಬ ಮೊದಲಾದ ಸಮಾರಂಭಗಳು ಹಾಗೂ ಉತ್ಸವಗಳು ಅಕ್ಕಿ, ರಾಗಿ, ಕಾಳು ಕಡ್ಡಿಗಳನ್ನು ಕೇರಿ ಹಸನುಗೊಳಿಸಿಕೊಳ್ಳುವ ಕ್ರಿಯೆಗಳಿಂದಲೇ ಆರಂಭವಾಗುತ್ತಿದ್ದವು; ಅವಿಭಕ್ತ ಕುಟುಂಬಗಳಲ್ಲಿ ಮನೆಯ ಹೆಂಗಸರೆಲ್ಲರೂ ಸೇರಿ ಈ ಕೆಲಸ ಮಾಡಿಕೊಳ್ಳುತ್ತಿದ್ದರು; ವಿಭಕ್ತ ಕುಟುಂಬಗಳು ನೆರೆಹೊರೆಯ, ಹತ್ತಿರದ ನೆಂಟರಿಷ್ಟರ, ರಕ್ತಸಂಬಂಧಿಗಳ ನೆರವು ಪಡೆಯುತ್ತಿದ್ದರು; ಒಂದು ರೀತಿಯ ಸಮೂಹ ಜೀವನ ಇಲ್ಲಿ ಕಾಣಿಸುತ್ತಿತ್ತು; During wedding and festivals the process of winnowing grain for cooking is major one;
- ವ್ಯವಸಾಯದ ಫಸಲು ತೆಗೆದು ಒಕ್ಕಣೆ ಮಾಡಿಕೊಳ್ಳುವ ಕಣಗೆಲಸದಲ್ಲೂ, ಮನೆಯಲ್ಲಿ ಸಂಗ್ರಹಿಸಿಟ್ಟ ಧಾನ್ಯಗಳನ್ನು ಗೃಹಬಳಕೆಗೆ ಹಸನು ಮಾಡಿಕೊಳ್ಳುವಾಗಲೂ ಕೇರುವ ಕ್ರಿಯೆ ಅನಿವಾರ್ಯ; ಈಗೆಲ್ಲಾ ಗಿರಣಿಯ ಯಂತ್ರಗಳೇ ಈ ಕೆಲಸವನ್ನೂ ಮಾಡುತ್ತವೆ; Threshing of corns after harvesting crops;
- ಕೇರುವುದಕ್ಕೂ, ಕೇರುವ ಸಾಧನವಾದ ಮೊರಕ್ಕೂ ನಿಕಟ ಸಂಬಂಧ; ಮೊರವನ್ನು ಬೇರೆ ಕೆಲಸಗಳಿಗೂ

ಬಳಸುತ್ತಾರಾದರೂ ಕೇರುವ ಕ್ರಿಯೆಗೆ ಮೊರ ಬೇಕೇಬೇಕು; ಈ ಕಾರಣದಿಂದಲೇ ಏನೋ 'ಕೇರು' ಪದಕ್ಕೆ ಮೊರ ಎಂಬ ಅರ್ಥವೂ ಬಂದಿದೆ; ಕೇಱುವ ಮೊರ(ಐ)–ಕಿಟ್ಟೆಲ್; Winnowing and winnower has close relation or winnower is used for other deeds but to winnow winnower is essential a tool;

- ಗೋಡೆ; ಭಿತ್ತಿ; ಕೇರ್ ಕೆಡೆದುದು (ಶವದ)=ಗೋಡೆ ಬಿದ್ದಿತು; <ಕೇರ್;
- *ವ್ಯರೂ:* ಕೇರ್/ಗೇರ್; ಕೇಱ್; ಗೇರು;
  ತ: ಚೇ; ಚೇರ್; ಚುವರ್; ಚೆವರ್; ಕೇರು;
  ಚೇಂಗೊಟ್ಟೈ(=ಗೇರುಕಾಯಿ); ಚೇಟ್ಟೈ(=ಕೇರುವ ಸಾಧನ, ಮೊರ);
  ತೆ: ಚೆರಗು; ಚೇಯು; ಚೇಟೆ; ಜೇಡಿ; ಜೇಡಿ;
  ಚರುಗು; ಚೇಟ(=ಮೊರ);
  ಮ: ಚುವರ್; ಚುಮರ್; ಚೇರ್; ಚೇರುಗ; ಚೇಱು;
  ತು: ಗೇರ್; ಚೇರ್; ಗೇರೊ; ಕೇರ್/ಗೇರ್/ಚೇರ್;
  ಗೇರು; ಕೊಡ: ಕೆವ; ಗೇರ್; ಕೇರ್;
- ದ್ರಾವಿಡ ಮೂಲದ ಪದ; *ಚೇ/ಚೇರ್/ಚೆವರ್* ಮೂಲರೂಪವಾಗಿರುವ ಸಾಧ್ಯತೆ ಇದೆ;

ಕೇರು/ಕೇಱು[2] Kēru/kēṟu[2]:

- ಗೇರು; ಗೇರುಮರ; ಗೇರುಹಣ್ಣು; ಗೇರುಬೀಜ; ಗೇರುಬೀಜದಿಂದ ತೆಗೆದ ಎಣ್ಣೆ; ಗೋಡಂಬಿ ಜಾತಿಗೆ ಸೇರಿದ ಒಂದು ಕಾಡುಮರ, ಅದರ ಕಾಯಿ/ಹಣ್ಣು, ಅದರಬೀಜ; ಗೇರುಬೀಜದಿಂದ ತೆಗೆದ ಎಣ್ಣೆ ಔಷಧಿಗೆ ಬಳಕೆ; ಗೋಡಂಬಿ ತಯಾರಿಕೆ; ಗೋಡಂಬಿ; <ಕೇರ್/ಕೇಱ್; ಕ>ಗ ವ್ಯತ್ಯಯ; Cashew tree; cashew fruit; by crushing cashew nut cashew oil is manufactured;
- ***—ಕೇರ್‌ವಟ್ಟು*** : ಕೇರ್+ಬಟ್ಟು=ಕೇರ್ಬಟ್ಟು/ಕೇರ್ವಟ್ಟು; ಬ>ವ ವ್ಯತ್ಯಯ; ಗೋಡೆಗೆ ಹಾಕಿದ ಅಲಂಕಾರದ ಬಟ್ಟು; A decorative object on wall;
- ***—ಕೇರಗಿಡ*** : ಕೇರುಮರ; ಗೇರುಮರ; ಕೇರ್+ಗಿಡ=ಕೇರಗಿಡ/ಕೇರ್ಗಿಡ; cashew tree;
- ***—ಕೇರಡಿಕೆ*** : ಕೇರ್+ಅಡಿಕೆ; ಕೇರುಅಡಿಕೆ; ಗೇರುಅಡಿಕೆ;ಗೇರುಬೀಜ ಅಥವಾ ಗೋಡಂಬಿಯನ್ನು ಬೆರಸಿದ ಅಡಿಕೆ ಎಂದಿರಬಹುದು; ಬಾಣಂತಿಯರಿಗೆ ಕೊಡುತ್ತಾರೆ; It is mixture of cashew nut and eraca nut which is given to the women who gives birth to babies;
- ***—ಕೇರಿನೆಣ್ಣೆ*** : ಕೇರಿನ(ಕೇರ್+ಇನಾಗಮ)+ಎಣ್ಣೆ; ಗೇರುಬೀಜದಿಂದ ತೆಗೆದ ಎಣ್ಣೆ; ಮೂರ್ತಿಗಳಿಗೆ ಬಣ್ಣ ಹಾಕಲು ಬಳಕೆ; Cashew nut oil;
  ವ್ಯರೂ: ಕೇರೆಣ್ಣೆ(ಕೇರು+ಎಣ್ಣೆ);
- ***—ಕೇರುಕಟ್ಟು*** : ಕೇರು+ಕಟ್ಟು(?); ಕೆಡಿಸು; ಬಾಧಿಸು; ನಾಶಪಡಿಸು(ಕ.ನಿ); to destroy, to haunt, to disturb;
- ***—ಕೇರುಬಟ್ಟು*** : ಬಂಜೆಯರು ತಮ್ಮ ಮಾಸಿಕ ಮುಟ್ಟಿನ ರಕ್ತದೊಡನೆ ಕೇರು(ಗೇರು?) ಬೀಜದ ಎಣ್ಣೆಯನ್ನು ಬೆರಸಿ ಬೇರೆಯವರ ಮಗುವಿನ ಬೆನ್ನುಹುರಿಯ ಕೆಳಭಾಗದಲ್ಲಿ ಇಡುವ ಬಟ್ಟು; ಬಟ್ಟು ಇಕ್ಕಿಸಿಕೊಂಡ ಮಗು ವೇದನೆ ಅನುಭವಿಸಿದರೆ ಇಕ್ಕಿದವರ ಬಂಜೆತನ ನೀಗುವುದೆಂದು ನಂಬಿಕೆ; A mark which is marked on lower part of spinal card of an infant by an eunuch to cure her infertility with menastral blood and cashew nut oil;
- ***—ಕೇರುಬಡಿ*** : ಕೇರು+ಬಡಿ(=ಹಚ್ಚು, ಸವರು, ಲೇಪಿಸು); ಬಂಜೆಯರು ಬೇರೆಯವರ ಮಕ್ಕಳ ಮರ್ಮಾಂಗಗಳಿಗೆ ಹಸಿ ಕೇರುಬೀಜದ ಎಣ್ಣೆಯನ್ನು ಯಾರಿಗೂ ಗೊತ್ತಾಗದಂತೆ ಹಚ್ಚುವುದು; ಈ ಲೇಪನದಿಂದ ಉಂಟಾದ ನೋವಿನಿಂದ ಆ ಮಕ್ಕಳು ಸತ್ತರೆ ಬಂಜೆಯ ಬಂಜೆತನ ಹೋಗಿ ಗರ್ಭ ಧರಿಸುತ್ತಾಳೆಂದು ನಂಬಿಕೆ(ಚಿ.ಪ.ಕೋ); To smear the cashew nut oil to the genitals of children secretely to overcome their infertility by eunuchs;
- ***—ಕೇರುಬೀಜ*** : ಗೇರುಬೀಜ; ಗೇರುಹಣ್ಣಿನ ಕೆಳಕ್ಕೆ ಹೊರಗಿನಿಂದ ಅಂಟಿಕೊಂಡಿರುವ ಬೀಜ; ಮಾವಿನ ವಾಟೆ; ಮಾವಿನ ಹಣ್ಣಿನೊಳಗೆ ಇರುವ ಅದರ ಬೀಜ; Cashew nut;
- ***—ಕೇರುಮರ*** : ಗೇರುಮರ; ಕೇರಗಿಡ; ಗೇರುಮರದ ಬೀಜವನ್ನು ಅರೆದು ಮಕ್ಕಳಿಗೆ 'ಕೇರುಹಾಕ'ಲು ಬಳಸುತ್ತಾರೆ; ಕಾಲಿನ ಹಿಮ್ಮಡಿ ಬಿರುಕು ಬಿಟ್ಟಾಗ

ಗೇರು ಬೀಜವನ್ನು ಅರೆದು ಹಚ್ಚಿದರೆ ಬಿರುಕು ಹೋಗುತ್ತದೆ; cashew tree;

- *—ಕೇರುಹಾಕು/ಕೇರುಹಾಕೋದು* : ರೋಗಿಯ ಅಂಗೈ ಅಂಗಾಲುಗಳಿಗೆ ಕೇರಿನೆಣ್ಣೆ ಹಚ್ಚುವುದು (ಚಿ.ಪ.ಕೋ); ಬರೆಹಾಕುವುದು; ಆಗತಾನೆ ಹುಟ್ಟಿದ ಮಕ್ಕಳಿಗೆ, ಅವರ ಬೆಳವಣಿಗೆಯ ಮುಂದಿನ ಹಂತದಲ್ಲಿ ನಂಜು ಆಗಬಾರದು(=ಸೋಂಕು ತಗುಲಬಾರದು) ಎಂಬ ಉದ್ದೇಶದಿಂದ, ಬೆಂಕಿಗೆ ಹಿಡಿದು ಕಾಯಿಸಿದ ಸೂಜಿಯನ್ನು ಮಾವಿನ ಹಣ್ಣಿನ ಒಳಗೆ ಇರುವ ಕೇರುಬೀಜಕ್ಕೆ(=ಮಾವಿನ ಬೀಜ, ವಾಟೆ?) ಚುಚ್ಚಿ ತೆಗೆದು ಆ ಸೂಜಿಯನ್ನು ಮಕ್ಕಳ ಒಕ್ಕಳಿನ ಮೇಲೆ ಎಳೆದು ಬರೆಹಾಕುವುದು; To smear cashew nut oil to the palms of a patient or soles of legs of a patient;
- *—ಸುಡುಗೇರು* : ಸುಟ್ಟ/ಸುಡುವ+ಕೇರು; ಒಂದು ಗೃಹವೈದ್ಯ; ದಬ್ಬಳ ಚುಚ್ಚಿದ ಕೇರುಬೀಜವನ್ನು ಬೆಂಕಿಗೆ ಹಿಡಿದರೆ ಬೀಜದಿಂದ ಎಣ್ಣೆ ಸೋರುತ್ತದೆ; ಆ ಎಣ್ಣೆಯನ್ನು ಸಂಗ್ರಹಿಸಿ ರೋಗಿಯ ಕಾಲಿಗೆ ಹಚ್ಚಿ ಅದರ ಮೇಲೆ ಬೂದಿ ಸವರಲಾಗುತ್ತದೆ: ನೋಡಿ: ಗೇರು;

ಕೇರೆ/ಕೇರೆಹಾವು Kēre/Kērehāvu:

- ಒಂದು ಜಾತಿಯ ಹಾವು; ಕೆರೆಹಾವು ಎಂದು ಹೇಳುವುದೂ ಉಂಟು; A kind of snake; a rat snake; non poisonous snake;
- ಜೌಗುಪ್ರದೇಶದಲ್ಲಿ, ಗದ್ದೆ ಬಯಲಿನಲ್ಲಿ, ಒಟ್ಟಾರೆ ಸದಾ ನೀರು ಇರುವ ಜಾಗದಲ್ಲಿ ಇರುತ್ತದೆ; ಕಪ್ಪೆ, ಇಲಿ, ಹೆಗ್ಗಣಗಳನ್ನು ತಿನ್ನುತ್ತದೆ; ಕಚ್ಚುವುದಿಲ್ಲ; ನಿರುಪದ್ರವಿ ಜೀವಿ ಎಂದು ಭಾವಿಸಲಾಗಿದೆ; ಆದರೆ ಶತ್ರುಗಳ ಮೇಲೆ ಬಾಲದಿಂದ ಪ್ರಹಾರ ನಡೆಸುತ್ತದೆ; ಇದು ಬಾಲದಿಂದ ಹೊಡೆದ ಜಾಗದಲ್ಲಿ ಗಂಟು ಮೂಡುತ್ತದೆ. ಎಂಟು–ಹತ್ತು ಅಡಿ ಉದ್ದ, ಮುಂಗೈ ಗಾತ್ರ ಬೆಳೆಯುತ್ತದೆ; ತುಂಬಾ ವೇಗವಾಗಿ ಓಡುವ ಹಾವು; ಚುರುಕು ಪ್ರಾಣಿ ಎಂದು ತಿಳೀಯಲಾಗಿದೆ; *ಪ್ರ: 'ಕೇರೆಹಾವಿಗೆ ಬಾಲದಲ್ಲಿ ಬಲ ನಾಗರಹಾವಿಗೆ ಹೆಡೆಯಲ್ಲಿ ಬಲ*'(ಗಾ.); It dwells in the area of humidity, plains, cultivated fields; it eats rats, frogs etc;
- ಕೇರೆಹಾವು ಗಂಡು ನಾಗರಹಾವು ಹೆಣ್ಣು ಎಂದು ತಪ್ಪು ಗ್ರಹಿಕೆ ಇದ್ದು ಲೈಂಗಿಕ ಸಂಬಂಧಕ್ಕಾಗಿ ಒಟ್ಟಾಗುತ್ತವೆ ಎಂದು ತಿಳಿಯುತ್ತಾರೆ; ಇವು ಪರಸ್ಪರ ವೈರಭಾವ ಉಳ್ಳವು, ಹೋರಾಟದಲ್ಲಿ ತೊಡಗುತ್ತವೆ ಎಂದೂ ಹೇಳಲಾಗುತ್ತದೆ; ಶತ್ರುಗಳನ್ನು 'ನಾಗರಹಾವು ಕ್ಯಾರೆಹಾವು ಇದ್ದಂಗೆ' ಎನ್ನುವ ಬಣ್ಣನೆಯ ಮಾತೇ ಇದೆ; 'ನಾಗಾಂಗನೆಯೊಳ್ ನೆರವ ಕೇರೆಯಂ ಕಂಡು'(ಚಾವುಂ.ಪು.–ಉಲ್ಲೇಖ: ಕ.ನಿ) ಎಂಬ ಪ್ರಯೋಗ ಶಿಷ್ಟ ಕಾವ್ಯದಲ್ಲೇ ಬಂದಿದೆ; There is wrong notion that rat snake is male cobra;
- ಚರ್ಮ ಸುಲಿದು ತೆಗೆದು ತಲೆ ಕತ್ತರಿಸಿದ ಕೇರೆಹಾವನ್ನು ದನಗಳಿಗೆ ಪ್ರಿಯವಾದ ಅಪಸೆಣಬು ಜೋಳ ಮೊದಲಾದ ಮೇವಿನೊಡನೆ ಸೇರಿಸಿ ತಿನ್ನಿಸುತ್ತಾರೆ; Skin removed rat snake is used to feed cattles with the intention of good growth of cattle; ಒಂದು ಎತ್ತು ಒಂದು ಕೇರೆಹಾವನ್ನು ಪೂರ್ತಿ ತಿಂದುಕೊಂಡರೆ ದಷ್ಟಪುಷ್ಟವಾಗಿ ಬೆಳೆದು ಒಳ್ಳೆಯ ಶಕ್ತಿ ಪಡೆಯುತ್ತದೆ, ಎಂತಹ ಕೆಲಸವನ್ನಾದರೂ ಮಾಡುತ್ತದೆಂದು ನಂಬಿಕೆ (ಮಂಡ್ಯ.ಜಿ.); ಕೇರೆಹಾವಿನಷ್ಟೇ ಚುರುಕಾಗುತ್ತದೆ ಎಂದು ತಿಳಿಯುತ್ತಾರೆ; ಚರ್ಮಸುಲಿದು ತಲೆ ತೆಗೆದ ಕೇರೆಗೆ ಧನ್ಯದಪುಡಿ ಉಪ್ಪು ಬೆರಸಿ ಚೆನ್ನಾಗಿ ಬೇಯಿಸಿ ಕೋಟ್ಟದಲ್ಲಿ ಹಾಕಿ ದನಗಳಿಗೆ ಕುಡಿಸಲಾಗುತ್ತದೆ (ಅದೇ); ಚರ್ಮಸುಲಿದ ಕೇರೆಯನ್ನು ಚನ್ನಾಗಿ ಒಣಗಿಸಿ ಸುತ್ತಿ ದನಗಳ ಕೊಟ್ಟಿಗೆಯಲ್ಲಿ ನೇತುಹಾಕುತ್ತಾರೆ; ದನ, ಎಮ್ಮೆ ಮೊದಲಾದ ಸಾಕುಪ್ರಾಣಿಗಳಿಗೆ ಮೂಗಿನಲ್ಲಿ ಹುಣ್ಣಾದರೆ ಕೊಟ್ಟಿಗೆಯಲ್ಲಿ ನೇತುಹಾಕಿದ ಕೇರೆಯ ಸಣ್ಣ ತುಂಡುಗಳನ್ನು ಕತ್ತರಿಸಿ ಅಡುಗೆ ಎಣ್ಣೆಯಲ್ಲಿ ಬೇಯಿಸಿ ಬಂದ ರಸವನ್ನು ಬಟ್ಟೆಗೆ ಅದ್ದಿ ಹುಣ್ಣಿಗೆ ಹಚ್ಚುತ್ತಾರೆ, ಔಷಧಿಯಾಗಿ; ಹೀಗೆ ಬೇಯಿಸಿದ ತುಂಡುಗಳನ್ನು ಮನುಷ್ಯರೂ ತಿನ್ನುವುದುಂಟು(ಅದೇ); ಮೀನಿನ ಸಾರಿನಂತೆ ಸಾರು ಮಾಡಿಯೂ ತಿನ್ನುತ್ತಾರೆ; the people around mandya district removed the head and skin of rat snake and boiled it with spice and salt and they prepare a soup and let it be drunk by cattle;

- ತುಳು ನಾಡಿನಲ್ಲಿಯೂ ಮನುಷ್ಯರು ಕೇರೆಯನ್ನು ತಿನ್ನುವುದು ಸಾಮಾನ್ಯವಾಗಿರುವಂತೆ ಕಾಣುತ್ತದೆ; 'ಕೇರೆಹಾವನ್ನು ತಿನ್ನುವ ಊರು ಅಕ್ಕಿ ತಿನ್ನುವವನಿಗೆ ಹಿಡಿಸದು'(ಕೇರಿ ತಿನ್ಪಿ ಊರು ಅರಿ ತಿನ್ಪುನಾಯಗ್ ಪತ್ತಂದ್) ಎನ್ನುವ ಗಾದೆಯೇ ಇದೆ(ತುನಿ.); In Tulunadu it appears a common issue that eating rat snake is leading to form a proverb- `The ratsnake eater doesnot like eating boiled rice'; ಅಲ್ಲಿ ಕೇರೆಹಾವುಗಳನ್ನು ಹೊಡೆದುಹಾಕುವ ಹವ್ಯಾಸವೂ ಜನಪ್ರಿಯ; ಕೇರೆಗ್‌ಕಲ್ ದಕ್ಕ್‌ಜಿಂಡ ಊರುಡು ಆಣ್ ಇಜ್ಜಿಪಣ್ಂಬು(ಕೇರೆಹಾವಿಗೆ ಕಲ್ಲು ಎಸೆಯದಿದ್ದರೆ ಊರಲ್ಲಿ ಗಂಡುಹುಡುಗರು ಇಲ್ಲವೆಂದು ಹೇಳೀತು– ತು.ನಿ.,ಗಾ.);
- ಕೇರೆಹಾವಿನ ಕೊಬ್ಬು ಹಾಗೂ ಮಾಂಸವನ್ನು ಜಾನುವಾರುಗಳಿಗೂ ಮನುಷ್ಯರಿಗೂ ಔಷಧಿಯಾಗಿ ಬಳಸುವುದುಂಟು; ಇದರ ಮಾಂಸವನ್ನು ಬಾಣಂತಿಯರಿಗೆ ತಿನ್ನಿಸುತ್ತಾರೆ(ಕ.ಜಾ.ಕೋ); the fat of ratsnake is used as medicine to cattles and humans;
- ಲೋಕಸರ ಮೊದಲಾದ ಔಷಧೀಯ ಗಿಡಮೂಲಿಕೆಗಳನ್ನು ದನಗಳ ಕೊಟ್ಟಿಗೆಯಲ್ಲಿ ನೇತುಹಾಕುವಂತೆ ಒಣಗಿಸಿದ ಕೇರೆಹಾವನ್ನು ಸುತ್ತಿ ನೆತುಹಾಕುವುದು ಕೊಟ್ಟಿಗೆ ಸಂಸ್ಕೃತಿಯ ಒಂದು ಅನನ್ಯ ಭಾಗವಾಗಿದೆ;

  ವ್ಯದೂ: ಕ್ಯಾರೆ; ಕ್ಯಾರೆಹಾವು; ಎ>ಯ/ಏ>ಯಾ ವ್ಯತ್ಯಯ ಕನ್ನಡದಲ್ಲಿ ಸಾಮಾನ್ಯ; ದೇಸಿ ಪದ; ತ: ಚೇರ್ರೈ, ಚಾರ್ರೈ; ತೆ: ಸಾರ,ಸಾರೆ, ಜೇರ; ಮ: ಚೇರ; ಕೊಡ: ಕೇರೆ; ತು: ಕೇರ್/ಕೇರೆ, ಕೇರಿ;
- **—*ಕೇರೆತುಪ್ಪ*** : ಕೇರೆಹಾವಿನ ಕೊಬ್ಬು; ಔಷಧಿಯಾಗಿ ಬಳಕೆ; rat snake fat used as medicine;
- **—*ಕೇರೆಮೀನು*** : ಒಂದು ಬಗೆಯ ಮೀನು; ಹಾವುಮೀನು. A kind of fish; a snake fish.

ಕೇರ್ಗಳ್ಳಿ Kērgaḷḷi:

- ಒಂದು ಊರಿನ ಹೆಸರು; ಮೈಸೂರಿನ ಸಮೀಪದಲ್ಲಿ; ತಿರುಮಕೂಡಲು ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ; A name of village which is near by Mysuru; it belongs to Tirumakoodalu Narasipura;
- ವಾಸ್ತವವಾಗಿ ಇದು ಕಾರ್ಗಳ್ಳಿ; ಕಾರ್ಗಳ್ಳಿ> ಕೇರ್ಗಳ್ಳಿಯಾಗಿರುವ ಸಂಭವವಿದೆ; ಆ>ಏ ವ್ಯತ್ಯಯ ಕನ್ನಡದಲ್ಲಿ ಸಾಮಾನ್ಯ;
- ಕಾರುಕ+ಹಳ್ಳಿ=ಕಾರುಗ್ಗಳ್ಳಿ>ಕಾರುಗಳ್ಳಿ>ಕಾರ್ಗಳ್ಳೀ> ಕೇರ್ಗಳ್ಳಿ (?);
- ಕಾರು/ಕಾರುಕ=ಕೈಕೆಲಸ, ಕಸುಬುಗಾರಿಕೆ, ಕೈಗಾರಿಕೆ; ಕುಶಲಕರ್ಮಿ-ಶಿಲ್ಪಿ;
- ಮರ ಹಾಗೂ ಕಲ್ಲಿನ ಕಲಾಕೃತಿಗಳನ್ನು, ಬಳಕೆಯ ವಸ್ತುಗಳನ್ನು ತಯಾರಿಸುವ ಕುಶಲಕರ್ಮಿಗಳು/ ಶಿಲ್ಪಿಗಳು ವಾಸ ಮಾಡುವ ಊರು ಎಂಬ ಅರ್ಥದಲ್ಲಿ ಕಾರುಕಹಳ್ಳಿ/ಕಾರುಗಹಳ್ಳಿ ಎಂದು ಕರೆದು ಕ್ರಮೇಣ ಕಾರ್ಗಳ್ಳಿ/ಕೇರ್ಗಳ್ಳಿಯಾಗಿ ಉಚ್ಚಾರಣೆಗೊಂಡಿದೆ; ಆದರೆ ಕೇರ್ಗಳ್ಳಿ ಪ್ರಚಲಿತವಲ್ಲ, ಈಗಲೂ ಈ ಊರು ಕಾರ್ಗಳ್ಳಿ'ಯೇ; It is basically a village of sculptors, who engrave idoles;
- 'ಕೇರ್ಗಳ್ಳಿ' ಸಂದೇಹಾಸ್ಪದವೂ ಚರ್ಚಾಸ್ಪದವೂ ಆದ ರೂಪವೆನಿಸುತ್ತದೆ;
- ಕಾರುಗಳ್ಳಿ ಶಾಸನಗಳಲ್ಲಿ ಉಲ್ಲೇಖವಾಗಿದೆ, ಕಾರುಗಳ್ಳಿಯ ಮಾರಪ್ಪನಾಯಕ ಅಥವಾ ಮಾರನಾಯಕನ ಚರಿತ್ರೆ ಲಭ್ಯವಿದೆ ಎನ್ನಲಾಗಿದೆ;
- ಕಾರುಕ, ಕಾರುಕಶಿಲ್ಪ, ಕಾರುಕಗ್ರಾಮ, ಕಾರುಕಗ್ರಾಮ ಗದ್ಯಾಣ, ಕಾರುಕದೆರೆ ಮೊದಲಾದ ರೂಪಗಳು ಶಾಸನಗಳಲ್ಲಿ ಸಿಗುವುದು ಸಾಮಾನ್ಯ.

ಕೇಲ್/ಕೇಲ[1] Kēl/Kēla[1]:

- ಕೆಳವರ್ಗದವರು ವಾಸಿಸುವ ಮನೆ; ಗುಡಿಸಲು (ತು.); ಬಿಡಾರ; An hamlet which is used to live by low caste people;
- ಮನ್ಸ, ಮುಂಡಾಲ, ಬಾಕುಡ ಮೊದಲಾದ ಸಮುದಾಯಗಳ ಜನ ವಾಸಿಸುವ ಮನೆ/ಗುಡಿಸಲು; A home or hut of Mansa, Mundala, Bakuda community;

  ಪ್ರ: 'ಕೇಲ್ ಇತ್ತ್‌ಂಡ್ ಬರಂದ್ ಕೇಣುನಾಯೆಲ ಬೋಡು(ಗಾ.,ತು.ನಿ.); (ಮನೇ ಇದ್ರೆ ಸಾಲ್ದು ಕೇಳೋರೂ ಇರ್ಬೇಕು);
- ಅಡಿ, ಅಂಡು; ತಳ; ಜಾನುವಾರುಗಳ ಕುಂಡೆ;
- ***ವ್ಯದೂ:*** ಕಿಲ; ಕೇಳ್; ಕೇಳ; ದೇಸೀಪದ;

ದ್ರಾವಿಡ ಮೂಲದಲ್ಲಿ ಇಲ್, ಕೋಯಿಲ್ ರೂಪಗಳಿವೆ.

ಕೇಲ್/ಕೇಲ/ಕೇಲು² Kēl/Kēla/Kēlu²:

- ಮಣ್ಣಿನಿಂದ ಮಾಡಿದ ಗಡಿಗೆ; ಹರವಿ(ಬಿ); ಗುಡಾಣ(?); ಕುಡಿಕೆ; ಮಣ್ಣಿನ ಒಂದು ಬಗೆಯ ಪಾತ್ರೆ; ಕೊಡ; ಚಿಕ್ಕ ಗಡಿಗೆ, ಕಳಸದ ಆಕೃತಿಯಲ್ಲಿರುತ್ತದೆ; A burnt clay pot; clay pitcher;
- ಚಿಕ್ಕ ಬಿಂದಿಗೆಗೆ ಚಿತ್ತಾರ ಬಿಡಿಸಿ ಚಂದ ಕಾಣುವಂತೆ ಮಾಡಿ ಕೊರಳಿನ ಕೆಳಗೆ ಎರಡು ಪಾದಗಳನ್ನು ಮಾಡಿ(?) ಬಾಯಿಗೆ ಭರಣಿ ಹಚ್ಚಿದರೆ ಕೇಲಾಗುತ್ತದೆ;
- ಸರಪಳಿಯಂತೆ ಚಿತ್ರವಿರುವ, ಮಣ್ಣಿನಿಂದ ತಯಾರಿಸಿದ ಸುಂದರವಾದ ಕುಂಭ; ಇಂಥವು ಸುಮಾರು ಎರಡು ಬಿಂದಿಗೆ ನೀರು ಹಿಡಿಯುವಷ್ಟು ದೊಡ್ಡದಿರುತ್ತವೆ;
- ನೀರು ತರಲು, ದವಸಧಾನ್ಯ ಕಾಳುಕಡ್ಡಿ ಶೇಖರಿಸಿ ಇಡಲು, ಎಣ್ಣೆ ಬೆಣ್ಣೆ ಮೊಸರು ಮಜ್ಜಿಗೆ ತುಂಬಿ ಇಟ್ಟುಕೊಳ್ಳಲು ಬಳಕೆ; A clay pitcher that is used to keep corns, oil, butter, curd, buttermilk;
- ಮದುವೆ, ಹೊಸಮನೆಗೆ ಹೋಗುವುದು, ತಳಪಾಯ ತೆಗೆಯುವುದು(ಗುದ್ದಲಿಪೂಜೆ) ಮೊದಲಾದ ಶುಭಕಾರ್ಯಗಳಲ್ಲಿ ಮೀಸಲು ನೀರು ತರಲು, ಕಳಸ ಪೂಜಲು, ದೇವರು ತರಲು ಬಳಕೆ;
  ಪ್ರ: 'ಕೇಲು ಬರೋಗ ಕೇರೀಲಿ ಸದ್ದಿಲ್ಲ';
- ಜಾತ್ರೆ–ಉತ್ಸವ, ಸಮಾರಂಭ, ಸಮ್ಮೇಳನ, ಕುಂಭಮೇಳ, ಗಣ್ಯರ ಸ್ವಾಗತ, ಮೆರವಣಿಗೆಗಳಲ್ಲಿ ಪೂರ್ಣಕುಂಭವಾಗಿ ಬಳಕೆ;
- ಮದುವೆಯಲ್ಲಿ ವರನ ತಂಗಿ ಹಿಡಿಯುವ ಒಡಹುಟ್ಟಿನ ಗಡಿಗೆ; During wedding the sister of bridegroom holds the pitcher that pitcher or pot of sibling or kith and kin;
- ಶುಭಕಾರ್ಯಗಳಲ್ಲಿ ಬಳಸುವಾಗ ಗಡಿಗೆಗೆ ನೀರು/ಅಕ್ಕಿ/ಬತ್ತ ತುಂಬುತ್ತಾರೆ; ಬಾಯಿಗೆ ಸುತ್ತಾ ವೀಳ್ಯದೆಲೆ ಜೋಡಿಸಿ ಮಧ್ಯದಲ್ಲಿ ಜುಟ್ಟು ಮೇಲೆ ಮಾಡಿ ತೆಂಗಿನಕಾಯಿ ಇಲ್ಲವೇ ಅಡಿಕೆಗೊನೆಯ ಹೊಂಬಾಳೆ ಇಡುತ್ತಾರೆ; ನವಧಾನ್ಯ ಕಟ್ಟಿದ ಅರಿಶಿಣದಲ್ಲಿ ಅದ್ದಿದ ಬಟ್ಟೆಯ ಗಂಟನ್ನು ನೂಲಿನಿಂದ ಕೊರಳಿಗೆ ಕಟ್ಟುತ್ತಾರೆ; ವಿಭೂತಿ, ಅರಿಶಿಣ, ಕುಂಕುಮ ಹಚ್ಚುತ್ತಾರೆ; ಸೇವಂತಿಗೆ, ಮಲ್ಲಿಗೆ, ಕನಕಾಂಬರ ಮೊದಲಾದ ಹೂವುಗಳಿಂದ ಅಲಂಕರಿಸುತ್ತಾರೆ; ಉತ್ಸವಗಳಲ್ಲಿ ತಲೆಯ ಮೇಲೆ ಹೊರುವಾಗ, ವೇದಿಕೆಯಲ್ಲಿ ಅಥವಾ ಮನೆಯ ದೇವರ ಕೋಣೆಯಲ್ಲಿ ಇಡುವಾಗ ಕುಡಿಕೆಯ ತಳಕ್ಕೆ ಸಿಂಬಿ ಬಳಸುತ್ತಾರೆ;
- ಕಳಸ, ಪೂರ್ಣಕುಂಭ ಇತ್ಯಾದಿ ಹೆಸರಿನ ಗಡಿಗೆ ಹೊರುವವರು ಇಲ್ಲವೆ ಕಂಕುಳಲ್ಲಿ ಇರುಕಿಕೊಂಡು ಹೋಗುವವರು ಸಾಮಾನ್ಯವಾಗಿ ಹೆಂಗಸರು ಹಾಗೂ ಹೆಣ್ಣುಮಕ್ಕಳು;
- ದೇವರ ಗಡಿಗೆಯನ್ನು ಗಂಡುಮಕ್ಕಳಿಂದಲೂ ಹೊರಿಸುತ್ತಾರೆ; Divine pot which is carried by boys;
- ದೇವರನ್ನೂ ಮೀಸಲು ನೀರನ್ನೂ ತರುವಾಗ ವಾದ್ಯಸಮೇತ ಊರಿನ ಪೂರ್ವದಿಕ್ಕಿನ ಬಾವಿ, ಕೊಳ, ಕೆರೆ, ಹಳ್ಳಗಳ ಬಳಿಗೆ ಹೋಗಿ ನೀರಿನ ತಡಿಯಲ್ಲಿ ಪೂಜೆ ಪುನಸ್ಕಾರಗಳನ್ನು ಮಾಡಿ ನಡೆಮಡಿ ಹಾಸಿಕೊಂಡು ಬರುತ್ತಾರೆ; Divine pot is used to bring holy water- `Meesalu neeru' from rivers in holy procession;
- ಕೇಲ್/ಕೇಲ/ಕೇಲು ಪದ ಕೊಡವ ಮತ್ತು ತುಳುವಿನಲ್ಲಿ ಬಳಕೆಯಲ್ಲಿರುವಂತೆ ಕಾಣುತ್ತದೆ; ಕನ್ನಡದಲ್ಲಿ ವಿರಳ; ದೇಸೀ ಪದ;
- ಶುಭಕಾರ್ಯಗಳಿಗೆ ಮೇಲೆ ಹೇಳಿದಂತೆ ಸಿದ್ಧಪಡಿಸಿದ ಗಡಿಗೆಗಳನ್ನು 'ಕೇಲ್/ಕೇಲು' ಎಂದು ಕರೆದಿರುವಂತೆ ಕಾಣುತ್ತದೆ;
- ***ವ್ಯರೂ:*** ಕೊಡ, ಕಲ; ಕೇಲು; ಕುಇ: ಕೇಡು;
- ಖಯಾಲು(ಹಿಂ.); ಹವ್ಯಾಸ; ತೆವಲು; ಚಪಲ; ಕಾತರ; ಆತುರ; hobby, habit, eagerness;
- *ಪ್ರ: ೧.'ಆಟದ ಕೇಲು ಹತ್ತಿದರೆ ಅವನಿಗೆ ಯಾವ ಕೆಲಸವೂ ಬ್ಯಾಡ';*
- *೨.'ಯಾವತ್ತಿಗೆ ಮದುವೆಯಾಗಿ ಜನ್ಮ ಸಾರ್ಥಕಪಡಿಸಿಕೊಂಡೇನೊ ಅಂತ ಕೇಲು ಹತ್ತಿಬಿಟ್ಟಿದೆ';*
- ಖೇಲ್>ಕೇಲ್(ಹಿಂ.); ಕೇಲಿ(ಸಂ.); ಕೇಳಿ(ತದ್ಭವ; ಕ.); ಆಟ; ಕ್ರೀಡೆ; ವಿನೋದ; ಖ>ಕ, ಲ>ಳ

ವ್ಯತ್ಯಯ; ಭಾಷಾ ಸ್ವೀಕರಣದಲ್ಲಿ ಮಹಾಪ್ರಾಣ ಅಲ್ಪಪ್ರಾಣವಾಗುವುದು, ಲ>ಳ ಆಗುವುದು ಸಾಮಾನ್ಯ;

- —***ಕೇಲಮಗಿ*** : ಮಣ್ಣಿನಿಂದ ಮಾಡಿದ ಸಣ್ಣ ಚರಿಗೆ (ಚೌರಿಗೆ)ಯಕಾರದ ಹರವಿ; ಸರಗಿ ನೀರು ಬೀಳುವ ಮೊದಲು ಸುರಗಿ ಸುತ್ತುವುದಕ್ಕೆ ಈ ಮಗಿಗಳನ್ನು ಬಳಸುವರು; ಮದುವೆಯ ಸಂದರ್ಭದಲ್ಲಿ ಕುಂಬಾರರು ದೇವಸ್ಥಾನಕ್ಕೆ ತಂದಿಟ್ಟ ಮಣ್ಣಿನ ಮಗಿಗಳನ್ನು ವಾದ್ಯಗಳನ್ನು ಊದುತ್ತ ಬಾರಿಸುತ್ತ ತಂದು ಸುರಗಿ ಸುತ್ತುವಾಗ ನಾಲ್ಕೂ ದಿಕ್ಕಿಗೆ ಇಟ್ಟು ಈ ಮಗಿಗಳಿಗೆ ದಾರ ಸುತ್ತುವರು; A burnt clay pot; a small clay pot;
- —***ಕೇಲ್‌ಕುಂಭ*** : ಕೆಲವು ಬುಡಕಟ್ಟು ಸಮುದಾಯಗಳಲ್ಲಿ ಕೂದಲು ಕತ್ತರಿಸುವ ಆಚರಣೆ; ನೆಲದ ಮೇಲೆ ಕಂಬಳಿಯೊಂದನ್ನು ಹಾಸಿ ಅದರ ಮೇಲೆ ವರನನ್ನು ಕೂರಿಸುವರು; ಅವನ ಎದುರಿಗೆ ನೀರು ತುಂಬಿದ ಒಂದು ಕುಂಭ(ಕೇಲು)ವನ್ನು ಇಟ್ಟು ಎಣ್ಣೆಯಲ್ಲಿ ಕಲಸಿದ ಅರಿಶಿಣ ಮತ್ತು ಅಕ್ಕಿಕಾಳಿನಿಂದ ಕುಂಭದ ಹೊರಮೈ ಮೇಲೆ ರಂಗೋಲಿ ಬರೆಯುವರು; ಇದು ಪಟ್ಟೆ ಎಳೆಯುವುದು; ಹೀಗೆ ಪಟ್ಟೆ ಎಳೆದು ರಚಿಸಿದ ಕೇಲ್‌ಕುಂಭಕ್ಕೆ ಶಾಸ್ತ್ರಾಚಾರ ಮಾಡಿ ಆದ ಮೇಲೆ ವರನ ಕೂದಲು ಕತ್ತರಿಸಿ(ಕಟಿಂಗ್ ಮಾಡಿಸಿ) ಸ್ನಾನ ಮಾಡಿಸುತ್ತಾರೆ; ನಾಮಧಾರಿ ಮನೆತನಗಳವರು ಸಹ ಎರಡು ಬಿಂದಿಗೆ ನೀರು ಹಿಡಿಯುವಷ್ಟು ದೊಡ್ಡದಾದ ಗಡಿಗೆ(ಕೇಲು)ಗೆ ಅರಿಶಿಣದ ಅಕ್ಕಿ ಮತ್ತು ಕುಂಕುಮದ ಅಕ್ಕಿಯನ್ನು ಬಳಿದು ಸಿಂಗರಿಸುತ್ತಾರೆ; ಅನಂತರ ಕುಂಭಕ್ಕೆ ನೀರು ತುಂಬುವರು; ಸರಪಳಿಯಂತೆ ಚಿತ್ರ ಬಿಡಿಸಿರುತ್ತಾರೆ; ಮದುವೆ ಮುಂತಾದ ಶುಭ ಕಾರ್ಯಗಳಲ್ಲಿ ಬಳಸುತ್ತಾರೆ; In few tribes or communities during bride ceremony ritual a woollen blanket spread out and bride sits on it earthern vessel is to be kept opposite of bride then the bride is smeared turmeric paste and bathed by five holy women;
- —***ಕೇಲಮಗಿ ತರುವ ಕಾರೆ/ಕೇಲ್‌ಮಗಿ ತರುವ ಕಾರ್ಯ*** : ಕುಂಬಾರರ ಮನೆಯಿಂದ ಮಣ್ಣಿನ ಗಡಿಗೆಗಳನ್ನು ತರುವ ಕಾರ್ಯ; ಊರಿನಲ್ಲಿ ಕುಂಬಾರರ ಮನೆಗಳು ಇಲ್ಲದಿದ್ದರೆ, ಊರಿನ ಮಠದಿಂದ ಗಡಿಗೆಗಳನ್ನು ತರಲಾಗುತ್ತದೆ; ಐದು ಗಡಿಗೆಗಳನ್ನು ತರುವ ಸಂಪ್ರದಾಯವಿದೆ; ಗಡಿಗೆಗಳಿಗೆ ತಕ್ಕಷ್ಟು ಬೆಲೆಯ ಹಣವನ್ನು ಕುಂಬಾರರಿಗೆ/ಮಠಕ್ಕೆ ಕೊಟ್ಟು ತರಲಾಗುತ್ತದೆ; A ritual of bringing earthern vessels from potter's home;
- —***ಕೇಲ ಹೊರಸೋದು*** : ಗಂಡಿನ ಮನೆಯವರು ಮದುಮಗಳನ್ನು ಮನೆಯ ಒಳಕ್ಕೆ ಬರಮಾಡಿಕೊಳ್ಳುವ(ಸ್ವಾಗತಿಸುವ) ಆಚರಣೆ; ಮದುವೆಯಾದ ಮರುದಿವಸ ಹೊಳೆಯಿಂದ ನೀರು ತುಂಬಿದ ಕೊಡವನ್ನು ಮದುಮಗಳ ಕೈಲಿ ಹೊರಿಸಿಕೊಂಡು ಗಂಡನ ಮನೆಗೆ ಕರೆತರುವರು; ಮೊಳೆ ಹೊಡೆದು ಒಳಕ್ಕೆ ಕರೆದುಕೊಳ್ಳುತ್ತಾರೆ; ಇದಕ್ಕೆ 'ಬಾವಿಗಂಗಮ್ಮನನ್ನು ತರುವ ಶಾಸ್ತ್ರ' ಎಂದೂ ಹೇಳುತ್ತಾರೆ (ಚಿಪಕೋ); It is an wet coming ritual of bride from bridegroom family;
- —***ಕೇಲಿಗ್ ಅಕ್ಕಿ ಹಾಕುದ್/ಕೇಲ್‌ಗೆ ಅಕ್ಕಿ ಹಾಕೂದ್*** : ಹೊಸ ಬೆಳೆಯ ಅಕ್ಕಿಯನ್ನು ಸಂಗ್ರಹಿಸಿ ಇಡುವ ಹಬ್ಬ; ಮಣ್ಣಿನ ಪಾತ್ರೆಗೆ ಮೊದಲ ಬಾರಿಗೆ ಅಕ್ಕಿ ತುಂಬುವ ಶಾಸ್ತ್ರ; ಕಾವೇರಿ ಸಂಕ್ರಮಣ(ತುಲಾ ಸಂಕ್ರಮಣ)ದಂದು ರಂಗೋಲಿಯಿಂದ ಅಲಂಕರಿಸಿರುವ ಪಾತ್ರೆಗೆ ಅಕ್ಕಿ ಹಾಕಿ, ಅಡಿಕೆ ವೀಳ್ಯದೆಲೆ ಇಟ್ಟು ಪೂಜಿಸುವರು; ಈ ದಿವಸ ಸಾಧ್ಯವಾಗದಿದ್ದರೆ ಕೋಟೇಶ್ವರ ಹಬ್ಬದಂದು ಈ ಆಚರಣೆ ಮಾಡುವ ಸಂಪ್ರದಾಯವೂ ಇದೆ; A tinbox which is used to keep newly harvested paddy or rice;
- —***ಕೇಲುಕಂದ್ಲು*** : ಮದುವೆಯಲ್ಲಿ ಕೇಲುನೀರು ತರಲು ಬಳಸುವ ಮಣ್ಣಿನ ಪಾತ್ರೆ; An earthern vessel which is used to bring holy water;
- —***ಕೇಲು ತರುವ ಶಾಸ್ತ್ರ*** : ಉತ್ಸವ, ಹಬ್ಬ ಮೊದಲಾದ ಊರ ಆಚರಣೆಗಳ ಸಂದರ್ಭದಲ್ಲಿ ಊರಿನ ಪ್ರಮುಖರೆಲ್ಲರೂ ಸೇರಿ ಹೊಳೆಯ ತಡಿಗೆ ಹೋಗಿ ಅಲ್ಲಿ ನೀರು ತುಂಬಿದ ಕೇಲು (ಗಡಿಗೆ) ಗಳಿಗೆ ಪೂಜೆ ಮಾಡಿ ವಿಶ್ವಕರ್ಮ ಸಮುದಾಯದವರ ತಲೆಯ ಮೇಲೆ ಆ ಕೇಲುಗಳನ್ನು ಹೊರಿಸಿಕೊಂಡು ಬರುತ್ತಾರೆ; ಇದು ಕೇಲು ತರುವ ಶಾಸ್ತ್ರ; The

ritual of bringing newly brought earthern vessel by filling water at rivers during village festivals;

- *—ಕೇಲುನೀರು* : ಶುಭಕಾರ್ಯಗಳಲ್ಲಿ ಕೇಲುಗಳಿಗೆ ತುಂಬಿಕೊಂಡು ಹೊಳೆ/ಬಾವಿಯಿಂದ ಶಾಸ್ತ್ರೋಕ್ತವಾಗಿ ತರುವ ನೀರು ಮೀಸಲು ನೀರು; A pot contains reserved holy water;
- *—ಕೇಲುಪೂಜೆ* : ಕಳಸದಂತಹ ಮಣ್ಣಿನ ಕುಂಭಗಳನ್ನಿಟ್ಟು ಮಾಡುವ ಪೂಜೆ; The worship of clay pots;
- *—ಕೇಲುಬಾನ* : ಕಾಳಮ್ಮನ ಜಾತ್ರೆಯಲ್ಲಿ ಉಪ್ಪಾರ ಸಮುದಾಯದವರು ಮಾಡುವ ಒಂದು ಆಚರಣೆ; ವೀರಶೈವ ಸಮುದಾಯಕ್ಕೆ ಸೇರಿದ ಹನ್ನೆರಡು ವರ್ಷದೊಳಗಿನ ಹೆಣ್ಣುಮಕ್ಕಳು ಒಪ್ಪೊತ್ತು (ಒಂದ್ಹೊತ್ತು?) ಇದ್ದು, ಉಪವಾಸವಿದ್ದು, ಬೆಳಗಿನ ಜಾವ ನಾಲ್ಕು ಗಂಟೆಯಿಂದ ಆರುಗಂಟೆವರೆಗಿನ ಆಷರಣೆಯಲ್ಲಿ ಕೇಲನ್ನ(ಕೇಲು+ಅನ್ನ; ಶಾಸ್ತ್ರದ ಗಡಿಗೆಗೆ ತುಂಬಿದ ಅನ್ನ) ತೆಗೆದುಕೊಂಡು ಕಾಳಮ್ಮನ ಗುಡಿಗೆ ಹೋಗುವುದು; A celebration during kalamma fair by Uppara community;
- **—ಕೇಲೂಜಿ:** ತಂಪಾದ ನೀರಿಗಾಗಿ ಬಳಸುವ ಮಣ್ಣಿನ ಗಡಿಗೆಯ ಊಜಿ; ಬೇಸಿಗೆಯಲ್ಲಿ ಕುಡಿಯುವ ತಂಪುನೀರಿಗಾಗಿ ಮಣ್ಣಿನ ಗಡಿಗೆಯಿಂದ ತಯಾರಿಸಿದ ಊಜಿಯಲ್ಲಿ ನೀರನ್ನು ಸಂಗ್ರಹಿಸಿ ಇಡುವರು. A burnt clay pot used to keep water cool during summer.

ಕೇಲಾರ Kēlāra:

- ಊರ ಹೆಸರು; ಒಂದು ಸ್ಥಳನಾಮ; ಉತ್ತರ ಕನ್ನಡ ಜಿಲ್ಲೆಯ ಒಂದು ಗ್ರಾಮ; A name of Village in North kannada district;
- ಹಾಲಿನಮನೆ; ಉ.ಕ.ಜಿಲ್ಲೆಯಲ್ಲಿ ಈ ಹೆಸರಿನ ಗ್ರಾಮವಿದೆ.

ಕೇವಲ Kēvala:

- ಬಹು ಸಾಮಾನ್ಯ; ಪರಮ ಆಪ್ತತೆ; Ordinary, common fact, close intimacy;
ಪ್ರ: 'ಅವನೂ ನಾನೂ ಬಹಳ ಕೇವಲವಾಗಿದ್ದೆವು';
- ಕಳಪೆ; ಕನಿಷ್ಠ; ಅಷ್ಟು ಮಾತ್ರ; unimportant, least;
ಪ್ರ: 'ಹುರುಳಿ ಹುಳಿತರೆ ಜೋಳಕ್ಕಿಂತ ಕೇವಲವೇ?' (ಗಾ);
- ಒಂದು ನುಡಿಗಟ್ಟು; 'ಕೀಳಾಗಿ ನೋಡ್ತಾರೆ' ಎನ್ನುವ ಅರ್ಥದಲ್ಲಿ ಈ ನುಡಿಗಟ್ಟು ಇದೆ; ಹೀನಾಯ, ನಿರ್ಲಕ್ಷ, ಕೆಟ್ಟು, ತಪ್ಪಾಗಿ ಎಂಬೆಲ್ಲಾ ಅರ್ಥಗಳು ಇದಕ್ಕೆ ಬೆಂಬಲವಾಗಿ ನಿಲ್ಲುತ್ತವೆ; ಕಡೆಗಣಿಸುವ ಪ್ರವೃತ್ತಿಯ ಮೇಲೆ ಈ ನುಡಿಗಟ್ಟು ನಿಂತಂತಿದೆ; ಕುಟುಂಬದ ಒಳಗೆ ಮತ್ತು ಸಮಾಜದಲ್ಲಿ ಈ ಬಗೆಯ ಭಾವನೆ ಚಾಲ್ತಿಯಲ್ಲಿದೆ; ಅನ್ಯದೇಶ್ಯ ಪದ; ಸಂ; It is an idiom used to indicate inferiority approach of persons;
- ಅಧ್ಯಾತ್ಮದಲ್ಲಿ ಮೋಕ್ಷ, ಮುಕ್ತಿ ಎಂದೆಲ್ಲಾ ಬಳಕೆ;
- *—ಕೇವಲಪಾಪಿ* : ದೊಡ್ಡ ಪಾಪಿ(ತುನಿ.); ಕೈವಲ್ಯ (=ಮೋಕ್ಷ, ಮೋಕ್ಷಜ್ಞಾನ) ದಿಂದ ವಂಚಿತನಾದವನು, ಕೈವಲ್ಯಕ್ಕೆ ದ್ರೋಹ/ವಂಚನೆ ಬಗೆದವನು ಎಂದು ಇರಬಹುದೆ? Sinner who lost the chance of eternity or reaching god;
- *—ಕೇವಲವಾಗು* : ಕೇವಲ+ಆಗು; ಬಹಳ ನಿಕಟವಾಗು; ಅನ್ಯೋನ್ಯತೆ ಗಳಿಸಿಕೊ; ಕೀಳಾಗು; ಬಹು ಸಾಮಾನ್ಯವಾಗು; ತುಚ್ಛಭಾವಕ್ಕೆ ಗುರಿಯಾಗು; ಕಡು ಬಡವನಾಗು, ಬರಿಗೈಯವನಾಗು(ಚಿ.ಪ.ಕೋ); To achieve intimacy; to become an untouchable inferior;
ಪ್ರ: 'ದಿನವೂ ಕೇಳಿಕೊಂಡು ಹೋದರೆ ಬಹು ಕೇವಲವಾಗಿ ಕಾಣುತ್ತಾರೆ'.

ಕೇವಿ Kēvi:

- ತೆಂಡೆ; ಗುಚ್ಛ; A branch; a clan;
- ಬತ್ತದ ಪೈರಿನ ಹೊರೆ; ಕೇವಿಹೊರೆ; a package of paddy crop;
- ಕಟಾವಿಗೆ ಬಂದ ಬತ್ತದ ಬೆಳೆಯನ್ನು ಕೊಯ್ದು ಅರಿ ಒಣಗಿಸಿ ಮೆದೆಗೆ ಸಾಗಿಸಲು ಕಟ್ಟುವ ಹೊರೆಗಳು; ಒಬ್ಬರು ತಲೆಯ ಮೇಲಕ್ಕೆ ಎತ್ತಿಕೊಂಡು ಹೊರುವಷ್ಟು ಗಾತ್ರ ಮತ್ತು ತೂಕಕ್ಕೆ ಹೊರೆ ಕಟ್ಟುತ್ತಾರೆ; ಇನ್ನೊಬ್ಬರ ನೆರವು ಪಡೆದು ಹೊತ್ತುಕೊಳ್ಳಬಹುದಾದಷ್ಟು ತೂಕದ ಹೊರೆಗಳನ್ನು ಕಟ್ಟುವುದೂ ಇದೆ; the bundles of

harvested paddy straw-crop to carry on one's head;

- ಹೊರೆ ಕಟ್ಟಲು ಬೈನೆ ಮರದ ಬಿಳಲು, ಬಾಳೆಗಿಡದ ಒಣಗಿಸಿ ನೀರಿನಲ್ಲಿ ನೆನೆಹಾಕಿದ ಪಟ್ಟೆ, ಪುಂಡಿ ನಾರನ್ನು ಬಳಸುವುದು ವಾಡಿಕೆ.

ಕೇವು Kēvu:

- ತೆವಲು; ತೀಟೆ; ಚಟ; Overwhelming, urge, over mastering desire, habit, addition; being in heat sexual desires;
- ರತಿಕ್ರೀಡೆ; ಸಂಭೋಗ; ರಸಮಿಲನ; ಸಂಗಮ; Sexual intercourse;
  ಪ್ರ: ೧.'ಅಳಿಯನ ಕೇವ್ಗೆ ಮನೆ ಕೋಳಿಯೆಲ್ಲ ಬರಿದಾದ್ಲೋ'(ನಮ್ಮ.ಗಾ.);
  ೨.'ಕೇವಿಲ್ಲದ ಮುಕ್ಕ ಕಲ್ಲೆರೆ ಸಂತ್ಗೊಯ್ತಂತೆ'(ಗಾ., ಕ.ಜಾ.ಕೋ.);
- ಜನರು ಒಟ್ಟುಗೂಡುವ ಸ್ಥಳ; ನಿಶ್ಚಿತ ಜಾಗ(ತು.); A perfect place where people will meet eachother;
- ದೋಣಿ ಬಾಡಿಗೆ; ಅತಿಯಾದ ಗಳಿಕೆ; ಅನಿರೀಕ್ಷಿತ ಲಾಭ(ತು.)
- ದೇಸಿಪದ; 'ಕೇ' ಧಾತು;
- ಕೇ+–ವು(ಕನಿ); ಕೇ=ಕೆಂಪು(ಕೆನ್); ಕೆಂದ; ಕೆಂದು (=ಕೆಂದುಬಣ್ಣ., ಮಲಗು); ಮಲಗು; ಶಯನ ಮಾಡು; ಒರಗು; ಸಂಭೋಗಮಾಡು; ರತಿಕ್ರೀಡೆ ನಡೆಸು; to do sex with partner;
- ಕ್ರಿಯಾರ್ಥದ ಧಾತು 'ಕೇ' ಯಿಂದ ನಾಮರೂಪವನ್ನು ಸಿದ್ಧಿಸಿಕೊಳ್ಳುವುದಕ್ಕಾಗಿ '–ವು' ಪ್ರತ್ಯಯ ಸೇರಿಸಲಾಗಿದೆ; ∴ ಕೇವು ಸಾಧಿತನಾಮ ರೂಪ.

ಕೇಶವಪುರ೧ kēśavapura[1] :

- ಕ್ರಿ.ಶ.೧೧೭೪ರ ೧೭ ಮತ್ತು ೧೧೭ನೇ ಶಾಸನಗಳಲ್ಲಿ ಇದರ ಉಲ್ಲೇಖ; A village referred in 17th and 117th inscriptions of 1174AD found in Baluru;
- ಬೇಲೂರಿನ ಇನ್ನೊಂದು ಹೆಸರೇ ಕೇಶವಪುರ; The other name of Beluru is Keshavapura;
- ವಿಷ್ಣುವರ್ಧನನು ಬೇಲೂರಿನಲ್ಲಿ ನಿರ್ಮಿಸಿದ ಚೆನ್ನಕೇಶವ ದೇವಾಲಯದಿಂದ ಬೇಲೂರಿಗೆ ಈ ಹೆಸರು;
- ಚೆನ್ನಕೇಶವ ದೇವಾಲಯ ಇತಿಹಾಸ ಪ್ರಸಿದ್ಧವಾದುದು; ಪ್ರವಾಸಿಗರ ಬಹುದೊಡ್ಡ ಆಕರ್ಷಣೆ; Channakeshava temple is historically famous and it is a big attraction;
- 'ಬೇಲೂರು' ಹೆಸರೇ ಇವೊತ್ತು ಜನಪ್ರಿಯವಾಗಿರುವುದು; ಕೇಶವಪುರ ಅಲ್ಲ.

(E.C- ೯)

ಕೇಶವಪುರ೨ kēśavapura[2] :

- ಮೈಸೂರು ಜಿಲ್ಲೆ ಚಾಮರಾಜನಗರ ತಾಲ್ಲೋಕಿನ ಕ್ರಿ.ಶ.೧೩೬೮ರ ೨೬೦ನೇ ಶಾಸನದಲ್ಲಿ ಇದರ ಉಲ್ಲೇಖ; A village referred in 260th inscription of 1368AD found in Chamarajanagara taluk;
- ಹೊಯ್ಸಳ ವಿಷ್ಣುವರ್ಧನ ಶ್ರೀವೈಷ್ಣವ ಧರ್ಮವನ್ನು ಸ್ವೀಕರಿಸಿದಾಗ ಕೇಶವ ದೇವಾಲಯ ನಿರ್ಮಾಣವಾಯಿತು; ಹಾಗೆಯೇ 'ಕೇಶವಪುರ' ಎಂಬ ಅಗ್ರಹಾರ ಕೂಡ ನಿರ್ಮಾಣ; ಈ ಹಿನ್ನೆಲೆಯಲ್ಲಿ ಪ್ರಸ್ತುತ ಹೆಸರು ಬಂದಿರಲು ಸಾಧ್ಯ; when Hoysala Vishnuvardhana received Srivaishnava religion, Keshava temple was built and Keshavapura Agrahara a Brahmin settlement was built too;
- ವೀರ ಬುಕ್ಕಣ ಒಡೆಯ ಹೊಯ್ಸಳ ರಾಜ್ಯವನ್ನು ಆಳುತ್ತಿದ್ದಾಗ ಹರದನಹಳ್ಳಿಯ ದಿವ್ಯಲಿಂಗವಾದ ಅಣಲೇಶ್ವರ ದೇವರ ಅಮೃತ ಪಡಿಗೆ ಕೇಶವಪುರದ 'ಶ್ರೀಮದಶೇಷಮಹಾ ಜನಂಗಳು' ದಾನ ನೀಡಿದ ಉಲ್ಲೇಖವಿದೆ.

(E.C- ೪; ಮೈ.ಜಿ.)

ಕೇಶವೇಶ್ವರಪುರ kēśavēśvarapura :

- ಕಡೂರು ತಾಲ್ಲೋಕಿನ ಹಿರೇನಲ್ಲೂರು ಎಂಬ ಗ್ರಾಮದಲ್ಲಿ ಕ್ರಿ.ಶ.೧೨೪೨ರ ೨೪೨ನೇ ಶಾಸನದಲ್ಲಿ ಈ ಊರಿನ ಉಲ್ಲೇಖವಿದೆ; A village referred in 242 inscription of 1242AD found in

Hirenalluru village, Kaduru taluk, Chikkamagaluru district;
- ಹಿರಿಯ ನಲ್ಲೂರು ಗ್ರಾಮದ ಹಿಂದಿನ ಹೆಸರೇ ಕೇಶವೇಶ್ವರಪುರ ಎಂಬುದು;
- ಪ್ರಸ್ತುತ 'ಹಿರಿಯ ನಲ್ಲೂರು' ಎಂಬುದು 'ಹಿರೇನಲ್ಲೂರು' ಎಂಬ ರೂಪವನ್ನು ಪಡೆದು ಬಳಕೆಯಲ್ಲಿದೆ;
- 'ಹಿರಿಯ' ಎನ್ನುವುದಕ್ಕೆ 'ದೊಡ್ಡ' ಅಥವಾ 'ಹಳೆಯ' ಎಂದು ಅರ್ಥಕೊಡಬಹುದು; ಆಗ ಇನ್ನೊಂದು 'ನಲ್ಲೂರು' ಇರುವ ಸಾಧ್ಯತೆಯನ್ನು ಇದು ಹುಟ್ಟು ಹಾಕುತ್ತದೆ;
- 'ನಲ್ಲೂರು' 'ನಲ್' ಮತ್ತು 'ಊರು' ಪದಗಳಿಂದ ಆದುದು; 'ನಲ್' ಒಳ್ಳೆಯ/ಸುಂದರವಾದ ಅರ್ಥ ಪಡೆದಿರುವ ಅಚ್ಚಗನ್ನಡ ಪದ;
- ಕೇಶವೇಶ್ವರಪುರ' ದೈವವಾಚಿ ಸ್ಥಳನಾಮವೆನ್ನಬಹುದು.

(E.C- ೧೨; ಚಿಕ್ಕ.ಜಿ.)

ಕೇಶಿಕೊಪ್ಪ kēśikoppa :
- ನರಸಿಂಹರಾಜಪುರದಲ್ಲಿ ದೊರೆತ ಕ್ರಿ.ಶ.೧೫೮೪ರ ೧೨ನೇ ತಾಮ್ರ ಶಾಸನದಲ್ಲಿ ಈ ಹೆಸರಿನ ಉಲ್ಲೇಖವಿದೆ; A villaga referred in 12th copper inscription of 1584AD found in Narasimarajapura;
- 'ಕೇಶಿ' ಮತ್ತು 'ಕೊಪ್ಪ' ಎರಡು ಪದಗಳು ಸೇರಿ ಈ ಹೆಸರು ಬಂದಿರುವುದು ಸ್ಪಷ್ಟ;
- ಈ ಸಂಪುಟದ ಹಲವಾರು ಶಾಸನಗಳಲ್ಲಿ ಕೇಶವಭಟ್ಟ, ಕೇಶವದೇವ, ಕೇಶವಗವುಡ, ಕೇಶಿಯಾರ್‍ಯ ಮುಂತಾದ ಹೆಸರುಗಳ ಪ್ರಸ್ತಾಪವಿದೆ; ಈ ಹೆಸರುಗಳಲ್ಲಿ ಯಾವುದಾದರೊಂದು ಪ್ರಸ್ತುತ ಹೆಸರಿಗೆ ಕಾರಣವಾಗಿರಬಹುದು;
- ವ್ಯಕ್ತಿವಾಚಕ ಸ್ಥಳನಾಮ ಎಂಬುದು ಮಾತ್ರ ಖಚಿತ;
- ಇನ್ನು 'ಕೊಪ್ಪ' ಎಂಬುದು ಒಂದು ಚಿಕ್ಕಹಳ್ಳಿಯನ್ನು ಸೂಚಿಸುತ್ತದೆ;
- ಹೀಗಾಗಿ 'ಕೇಶಿ' ಎಂಬ ವ್ಯಕ್ತಿಗೆ ಸಂಬಂಧಿಸಿದಂತೆ ಈ 'ಕೊಪ್ಪ' ಎಂಬ ಸಣ್ಣಹಳ್ಳಿ ಬಳಕೆಗೆ ಬಂದಿರಬಹುದು.

(E.C- ೧೨; ಚಿಕ್ಕ.ಜಿ.)

ಕೇಸಕ್ಕಿ/ಕ್ಯಾಸೆ ಅಕ್ಕಿ/ಕ್ಯಾಸಕ್ಕಿ Kēsakki/Kyāse akki/Kyāsakki:
- ಕೆಂಪು ಅಕ್ಕಿ; ತೊಳಸದ ಅಕ್ಕಿ; ಕೆಂಪು/ಕಂದು ಪರೆ ಕವಿದಿರುವ ಅಕ್ಕಿ; ಒರಳಿಗೆ ಬತ್ತ ತುಂಬಿ ಒನಕೆಯಿಂದ ಕುಟ್ಟಿ ಒಟ್ಟು ತೆಗೆದ, ತೌಡನ್ನು ಬೇರ್ಪಡಿಸದ ಅಕ್ಕಿ; ಬತ್ತ ಮಿಲ್ಲು ಮಾಡಿಸಿ ಪಾಲಿಷ್ ಕೊಡಿಸದೇ ತೆಗೆದ ಅಕ್ಕಿ; Reddish rice or paddy breed;
- ಕ್ಯಾಸೆ ತೆಗೆಯದ, ಅಂದರೆ ಪಾಲಿಷ್ ಕೊಡಿಸದೆ ಇರುವ ಅಕ್ಕಿ ಊಟಕ್ಕೆ ಹೆಚ್ಚು ರುಚಿಕರ; ಪೌಷ್ಟಿಕಂಶಗಳೂ ಅಧಿಕ; ಆರೋಗ್ಯಕ್ಕೆ ಒಳ್ಳೆಯದೆಂದು ಅಭಿಪ್ರಾಯ; ವೈಜ್ಞಾನಿಕವಾಗಿಯೂ ಇದು ಸರಿ; A rice without polished; it is tasty;
- ಆದರೆ ಮಿಲ್ಲಿನಲ್ಲಿ ಮಾಡಿಸಿದ ಅಕ್ಕಿಗೆ ಪಾಲಿಷ್ ಮಾಡಿ ಅಕ್ಕಿ ಬೆಳ್ಳಗೆ ಹೊಳೆಯುವಂತೆ ಮಾಡಿಕೊಳ್ಳುವುದು ಸಾಮಾನ್ಯವಾಗಿಹೋಗಿದೆ; ಹಿಂದೆ ಕೇಸಕ್ಕಿಯನ್ನು ಒರಳಿಗೆ ಹಾಕಿಕೊಂಡು ಅಕ್ಕಿ ನುಚ್ಚಾಗದಂತೆ ಮೆದುವಾಗಿ ಕುಟ್ಟಿ ಕೆಂಪು ಪದರವನ್ನು, ಅಂದರೆ ತೌಡನ್ನು ತೆಗೆದು ಹಾಕಲಾಗುತ್ತಿತ್ತು.
- ಅಕ್ಕಿಗೆ ಪಾಲಿಷ್ ಮಾಡಿ ತೆಗೆದ ತೌಡು ದನಗಳಿಗೆ ಒಳ್ಳೆಯ ಪೌಷ್ಟಿಕ ಆಹಾರ; ನೀರಿನಲ್ಲಿ ಬೆರಸಿ ಇಲ್ಲವೇ ಹಿಂಡಿ ಅತ್ತಿಬೀಜ ಮೊದಲಾದವುಗಳೊಡನೆ ಮಿಶ್ರ ಮಾಡಿ ತೌಡನ್ನು ಜಾನುವಾರುಗಳಿಗೆ ತಿನ್ನಿಸಲಾಗುತ್ತದೆ; The husk of polished rice is having good proteins and vitamins contained food for cattle;
- ಕೇಸು(=ಕಿಸು)+ಅಕ್ಕಿ; ಕೇಸು=ಕೆಂಪು; ಅಕ್ಕಿಯ ಮೇಲ್ಮೈಯನ್ನು ಆವರಿಸಿಕೊಂಡಿರುವ ಕಂದು/ಕೆಂಪು ಬಣ್ಣದ ಒಂದು ಪದರ; ತೌಡು; ಕೇಸು>ಕ್ಯಾಸೆ; ಏ>ಯಾ, ಉ>ಎ ವ್ಯತ್ಯಯ; ಕೆಂಪು>ಕೆಂಚು> ಕೆಸು/ಕೇಸು ಆಗುವುದು ಸಾಧ್ಯ; 'ಕ್ಯಾಸೆ' ಜನಪದರ ಉಚ್ಚಾರಣೆಯ ರೂಪ;
- —*ಕೇಸಕ್ಕಿಯನ್ನ* : ಕೇಸು+ಅಕ್ಕಿ+ಅನ್ನ; ಕೆಂಪು ಅಕ್ಕಿಯಿಂದ ಅಥವಾ ಪಾಲಿಷ್ ಕೊಡಿಸದ ಅಕ್ಕಿಯಿಂದ ಮಾಡಿದ ಅನ್ನ. Boiled rice of rice without polished.

ಕೇಸರಿ Kēsari:

- ೧. ಒಂದು ಬಣ್ಣ; ಕೇಸರಿ ಬಣ್ಣ; ಕುಂಕುಮ ಕೆಸರಿ; ರಂಗೋಲಿ, ಗೋಡೆಚಿತ್ರ, ಬಟ್ಟೆ, ಮಂದಲಿಗೆ ತಯಾರಿ ಮೊದಲಾದವುಗಳಲ್ಲಿ ಬಳಕೆ; ಕುಂಕುಮ ಕೇಸರಿ ಪೂಜಾ ಸಂದರ್ಭಗಳಲ್ಲಿ, ವಿಶೇಷವಾಗಿ ಶಕ್ತಿದೇವತೆಗಳ ಆರಾಧನೆಯಲ್ಲಿ ಬಳಕೆ; ಮಾಟ ಮಂತ್ರ ಮೊದಲಾದ ತಾಂತ್ರಿಕ ಆರಾಧನೆಗಳಲ್ಲಿಯೂ ಬಳಕೆ; ನಿಂಬೆಹಣ್ಣಿನೊಳಕ್ಕೆ ಚುಚ್ಚುಮದ್ದಿನೋಪಾದಿಯಲ್ಲಿ ಕುಂಕುಮ ಕೇಸರಿಯ ದ್ರವವನ್ನು ತುಂಬಿ ಜನರನ್ನು ವಂಚಿಸುವ ಮಾಟಗಾರರೂ ಇದ್ದರೆ; A saffron colour; one of the colours; vermilion `Kesari'; it is used to draw `Rangoli' on the floor and on the walls;
- ಕೇಸರಿ ಬಣ್ಣ ಶೌರ್ಯ ಸಾಹಸ ನಿರ್ವೇಗ ನಿರಾಸಕ್ತಿಯ ಸಂಕೇತವಾಗುವುದರ ಜೊತೆಗೆ ಮತಾಚಾರಗಳ ಸಂಕೇತವೂ ಆಗಿದೆ; ಭಾರತದ ರಾಷ್ಟ್ರಧ್ವಜದಲ್ಲಿ ಮೂರನೆಯ ಬಣ್ಣವಾಗಿ ಕೇಸರಿ ಇದೆ–ಶೌರ್ಯದ ಸೂಚಕವಾಗಿ; It is a symbol of valour and religious too; one of the three colours of Indian National Flag;
- ೨. ಒಂದು ಸುಗಂಧ ದ್ರವ್ಯ; ಸಾಂಬಾರಪದಾರ್ಥ; ಕ್ರೋಕಸ್ ಸಟೈವಸ್; ಕೇಸರಿ ಗಿಡ ಮತ್ತು ಅದರ ಹೂವು(Saffron plant); ಪರಾಗಧೂಳು; ಗ್ರೀಸ್ ದೇಶದ ಕ್ರೇಟ್ ಇದರ ಮೂಲಸ್ಥಳ; ಕಾಶ್ಮೀರದ ಹೂವುಗಳಿಂದ ಉತ್ಪನ್ನವಾಗುವ ವಸ್ತು; Kesari colour is a symbol of Valour;
- ನೀಲಿ ಹೂಗಳ ನಡುವೆ ಕೆಂಪು ಬಣ್ಣದ ಎಳೆಗಳು; ಆಕರ್ಷಕ ಬಣ್ಣ ಹಾಗೂ ಪರಿಮಳದಿಂದ ಕೂಡಿರುವುದು; ಗಾಳಿಯ ಮೂಲಕ ಇದರ ಪರಿಮಳ ಸುತ್ತಲಿನ ಪ್ರದೇಶವನ್ನೆಲ್ಲಾ ವ್ಯಾಪಿಸಿ ಒಂದು ಆಪ್ಯಾಯಮಾನ ವಾತಾವರಣವನ್ನು ಉಂಟುಮಾಡುತ್ತದೆ; ಈ ಕೆಂಪು ಎಳೆಗಳನ್ನು ಬಾಯಿಗಿಟ್ಟರೆ ಬಾಯೆಲ್ಲಾ ಕೆಂಪಾಗಿ ಗಮಗುಟ್ಟುವುದು; A smelly perfume; one of spices;
- ಕೇಸರಿ ಹೂವಿನ ಎಳೆಗಳನ್ನು ಋತುಮತಿಯಾದ ಹೆಣ್ಣುಮಕ್ಕಳಿಗೆ, ಬಾಣಂತಿಯರಿಗೆ, ಮಕ್ಕಳಿಗೆ ತಿನ್ನಿಸುತ್ತಾರೆ; ಹುಟ್ಟಲಿರುವ ಮಕ್ಕಳು ಕೆಂಪಗೆ ದೃಢಕಾಯರಾಗಿ ಹುಟ್ಟುತ್ತಾರೆಂದು ಗರ್ಭಿಣಿ ಸ್ತ್ರೀಯರಿಗೆ ತಿನ್ನಿಸುತ್ತಾರೆ; ತಾಂಬೂಲದೊಡನೆ ಬೆರಸಿ ತಿನ್ನುವುದು ವಾಡಿಕೆ; It is used to prepare sweet snacks; It is used to purify blood and worked as antibiotic;
- ಕೇಸರಿಬಾತು ಮೊದಲಾದ ಸಿಹಿತಿಂಡಿಗಳ ತಯಾರಿಕೆಯಲ್ಲಿ ಪರಿಮಳ ಹಾಗೂ ಬಣ್ಣಕ್ಕಾಗಿ ಕೇಸರಿಯ ಬಳಕೆ; ಕೇಸರಿ ಹಾಕಿದ ಹಾಲನ್ನು ಗರ್ಭಿಣಿಯರಿಗೆ ಕುಡಿಸಿದರೆ ನಂಜು ನಿವಾರಣೆಯಾಗಿ ರಕ್ತ ಶುದ್ಧಿಯಾಗುತ್ತದೆಂದೂ ಹುಟ್ಟುವ ಮಗು ಕಾಂತಿಯುಕ್ತವಾಗಿರುತ್ತದೆಂದೂ ನಂಬಿಕೆ ಇದೆ; ಮುಖದ ಮೊಡವೆಗಳ ನಿವಾರಣೆಗೂ ಸೌಂದರ್ಯವರ್ಧಕವಾಗಿಯೂ ಬಳಕೆ;
- ಅಸ್ತಮ, ಖಿನ್ನತೆ, ನಿದ್ರಾಹೀನತೆ, ಚರ್ಮವ್ಯಾಧಿಗೆ ಔಷಧಿಯಾಗಿ ಬಳಕೆ; ಆಯುರ್ವೇದ, ಯುನಾನಿ ಮುಂತಾದ ವೈದ್ಯ ಪದ್ಧತಿಗಳ ಔಷಧಿ ತಯಾರಿಕೆಯಲ್ಲಿ ಕೇಸರಿ ಅವಿಭಾಜ್ಯ ಅಂಗ; it is used as medicine to cure depression, skin disease, lack of sleeping; in Unani and Aurvedic science Safforn is a part of those treatments;
- ವಿಶ್ವದಲ್ಲೇ ಅತ್ಯಂತ ದುಬಾರಿ ಸಾಂಬಾರ ಪದಾರ್ಥ ಕೇಸರಿ; ಸುಮಾರು ಆರುನೂರು ಹೂಗಳಿಂದ ಸುಮಾರು ಒಂದು ಕೆಜಿಯಷ್ಟು ಕೇಸರಿ ದೊರೆಯುವ ಸಾಧ್ಯತೆ ಇದೆ; ಒಂದು ಕೆಜಿ ಕೇಸರಿಗೆ ಎರಡು ಲಕ್ಷಕ್ಕೂ ಮೇಲ್ಪಟ್ಟು ಬೆಲೆ ಸಿಗುತ್ತದೆ; ಹೀಗಾಗಿ ಕೇಸರಿ ಚಿನ್ನದ ಬೆಳೆ ಎಂದೇ ಖ್ಯಾತಿ ಪಡೆದಿದೆ;
- ನವೆಂಬರ್ ತಿಂಗಳಲ್ಲಿ ಕೊಯ್ಲಿಗೆ ಬರುತ್ತದೆ; ಕೇಸರಿ ಕೊಯ್ಲನ್ನು ನೋಡಲು ಕಾಶ್ಮೀರ ಪ್ರದೇಶದಲ್ಲಿ ಜನರು ಕಾದು ನಿಲ್ಲುತ್ತಾರೆಂದು ಪ್ರತೀತಿ; ಇದರ ಕೊಯ್ಲು ಅಲ್ಲಿ ಸಂಭ್ರಮದ ಹಬ್ಬವೂ ಹೌದು;
- ೩. ಕೆಂಪುಭೂಮಿ; ಭೂಮಿಯ ಒಂದು ಬಗೆಯನ್ನು 'ಕೇಸರಿ' ಎಂದು ಹೇಳುವ ಪ್ರಯೋಗಗಳು ಶಾಸನಗಳಲ್ಲಿ ಸಿಗುತ್ತವೆ; 'ಕೇಸರಿಯೊಮ್ಮತ್ತರ್' (ಎಕ VII, ಶಿವಮೊ.೧೧೫, ೧೩?; ಉಲ್ಲೇಖ: ಕನಿ.) ಎಂಬ ಪ್ರಯೋಗವಿದೆ; 'ಮಸಾರಿ ಕೇಸರಿ ಮೊರಡಿಯ ಜಮೀನುಗಳಾದರೂ....' (ಉಲ್ಲೇಖ:ಅದೇ) ಎಂದೂ ಉಂಟು; reddish

soiled earth or field or land; it is sometimes called as saffron; this kind of practices are found in inscriptions;
- ೪. ಕುದುರೆ; ಕೋಳಿ; ಸಿಂಹ; ಅಯಾಲವುಳ್ಳದ್ದು; (ಅಯಾಲ=ಕತ್ತಿನ ಮೇಲಿರುವ ಕೂದಲು); *ಪ್ರ: 'ಇಲಿಯ ಮಾಂಸವ ಬಯಸಿ ಕೇಸರಿ ತಲೆಯ ಸಿಕ್ಕಿಸಿಕೊಂಡಂತೆ'(ಗಾ);*
- ೫. ಬಕುಳದ ಹೂವು;
- ೬. ಯಕ್ಷಗಾನ ಕಲಾವಿದರೂ ಭೂತನರ್ತಕರೂ ಕಿರೀಟದ ಹಿಂಬದಿಯಲ್ಲಿ ಕಟ್ಟುವ ಚೌರಿ;
- ೭. ಯಕ್ಷಗಾನದಲ್ಲಿ ರಾಕ್ಷಸವೇಷಧಾರಿಗಳು ತಲೆಯ ಹಿಂಭಾಗದಲ್ಲಿ ಧರಿಸುವ ಅಗಲವಾದ ಕಿರೀಟ (ಇದರ ಹಿಂದೆ ಚೌರಿ ನೇತಾಡುತ್ತಿರುತ್ತದೆ);
- ಅನ್ಯದೇಶ್ಯ ಪದ; ಸಂ. ಕೇಸರಿನ್;
- ***—ಕೇಸರಿತಟ್ಟ್/ತಟ್ಟೆ/ತಟ್ಟಿ*** **:** ಬಯಲಾಟ ಮೇಳದಲ್ಲಿ ಪಾತ್ರಧಾರಿಗಳು ಧರಿಸುವ ಬಣ್ಣದ ಕಿರೀಟ; ಬಣ್ಣದ ವೇಷದ ಕಿರೀಟ ಎಂದೂ ಹೇಳುವುದುಂಟು; ತೆಂಕುತಿಟ್ಟು ಯಕ್ಷಗಾನದಲ್ಲೂ ಈ ಕಿರೀಟವನ್ನು ಪಾತ್ರಧಾರಿಗಳು ಧರಿಸುತ್ತಾರೆ(ಮಂ.ಜಿ.); ಯಕ್ಷಗಾನದಲ್ಲಿ ರಾಕ್ಷಸ ವೇಷಧಾರಿಗಳು ತಲೆಯ ಹಿಂಭಾಗದಲ್ಲಿ ನೇತಾಡುವ ಚೌರಿಯ ಮೇಲೆ ಧರಿಸುವ ಅಗಲವಾದ ಕಿರೀಟ(ತುನಿ.); ಕೇಸರಿ=ವೇಷಧಾರಿಗಳು ಧರಿಸುವ ಚೌರಿ, ಅಯಾಲ; ಚೌರಿಯ ಕೂದಲು ಕೆದರಿಕೊಳ್ಳದ ಉಪಾಯವಾಗಿಯೂ, ಅಲಂಕಾರ ಸಾಧನವಾಗಿಯೂ ಧರಿಸುವುದರಿಂದ ಇದು 'ಕೇಸರಿತಟ್ಟೆ' ಎಂದಾಗಿರಬಹುದು; The saffron crown; worn by the chorus team of `bayalata' or play a drama in open yard;
ವ್ಯದೂ: ಕೇಶರ ಕಿರೀಟ; ಕೇಶವಾರಿ ಕಿರೀಟ;
- ***—ಕೇಸರಿಬತ್ತ*** **:** ಒಂದು ಜಾತಿಯ ಬತ್ತ; ಕೇಸರಿ ಬಣ್ಣದ ಬತ್ತ; ಕೆಂಪುಬತ್ತ; A kind of saffron coloured paddy breed; reddish paddy;
ವ್ಯದೂ: ಕೆಸರಿಭತ್ತ;
- ***—ಕೇಸರಿಬಾತು*** **:** ಒಂದು ಬಗೆಯ ಸಿಹಿ ತಿಂಡಿ/ಉಪಾಹಾರ; ಸಕ್ಕರೆ ಕರಗಿಸಿದ ನೀರಿನಲ್ಲಿ ರವೆಯನ್ನು ಬೇಯಿಸಿ ತಯಾರಿಸಿದ ಬಾತಿಗೆ ಕೇಸರಿಯನ್ನೂ ಬೆರಸಿದರೆ ಒಂದು ವಿಶಿಷ್ಟ ಬಣ್ಣ, ರುಚಿ ಮತ್ತು ಸುವಾಸನೆ ಪ್ರಾಪ್ತವಾಗುತ್ತದೆ; ವಾಸ್ತವವಾಗಿ ಇಲ್ಲಿ ಕೇಸರಿ ಒಂದು ಉಪ ಪರಿಕರವಾದರೂ ಅದರ ವಿಶಿಷ್ಟ ಗುಣ ಮತ್ತು ಮೌಲ್ಯದಿಂದಾಗಿ 'ಕೇಸರಿಬಾತು' ಎಂದೇ ಕರೆಸಿಕೊಂಡು ಪ್ರಾಧಾನ್ಯತೆ ಸ್ಥಾಪಿಸಿಕೊಂಡಿದೆ; ಕೇಸರಿಬಾತಿನೊಡನೆ ಉಪ್ಪಿಟ್ಟನ್ನೂ(ಖಾರಾಬಾತು) ಉಪಾಹಾರವಾಗಿ ತೆಗೆದುಕೊಳ್ಳುವುದು ವಾಡಿಕೆ; ಅಗ ಈ ಎರಡೂ ಸೇರಿ 'ಚೌಚೌ ಬಾತು'. A kind of saffron coloured sweet snacks.

ಕೇಸರಿಬೇಳೆ Kēsaribēḷe:
- ಒಂದು ದ್ವಿದಳ ಧಾನ್ಯ ಬೆಳೆ; Lathyrus sativus; ಒಂದು ಬಗೆಯ ತೊಗರಿ; A kind of bicot crop; saffron dal;
- ತಂಪು ವಾತಾವರಣದಲ್ಲಿ, ನೀರನ್ನು ಹೆಚ್ಚುಕಾಲ ಹೆಚ್ಚಿನ ಪ್ರಮಾಣದಲ್ಲಿ ಹಿಡಿದಿಟ್ಟುಕೊಳ್ಳುವ ಕಪ್ಪು ಮಣ್ಣಿನಲ್ಲಿ ಚನ್ನಾಗಿ ಬೆಳೆಯುತ್ತದೆ; ಯಾವ ಬೆಳೆಗೂ ಅನುಕೂಲವಲ್ಲದ ಮಣ್ಣಿನಲ್ಲೂ ಬೆಳೆಯುತ್ತದೆ, ಆದರೆ ಬೆಳೆ ಹುಲುಸಾಗುವುದಿಲ್ಲ; ಮುಖ್ಯವಾಗಿ ದನಗಳ ಮೇವಿಗಾಗಿ ಬೆಳೆಯುತ್ತಾರೆ;
- ಇದರ ಹಸಿ ಕಾಯಿ ಪಲ್ಯಕ್ಕೆ ಬಳಕೆ; ಗಿಡದ ಭಾಗದಲ್ಲೂ ಕಾಳಿನಲ್ಲೂ ಒಂದು ಬಗೆಯ ವಿಷವಸ್ತು ಇದ್ದು ಬಹಳವಾಗಿ ಸೇವಿಸಿದರೆ ಪಾರ್ಶ್ವವಾಯು ಬರುವ ಸಾಧ್ಯತೆ ಇದೆ ಎನ್ನಲಾಗಿದೆ; ಕಾಳುಗಳನ್ನು ರಾತ್ರಿಯೆಲ್ಲಾ ನೀರಿನಲ್ಲಿ ನೆನೆಹಾಕಿ ಮರುದಿವಸ ನೀರನ್ನೆಲ್ಲಾ ಬಸಿದು ನೆನೆಸಿದ ಕಾಳನ್ನಷ್ಟೇ ಬಳಸಿದರೆ ವಿಷದ ಅಂಶ ಕಡಿಮೆ ಇರುತ್ತದೆ ಎಂದೂ ನಂಬಲಾಗಿದೆ; it is used to cook vegetable food; the tree has a poisonous seed, if it is eaten it causes paralysis stroke;
- ಈ ಕಾಳಿನ ಮಿತಬಳಕೆ ಆರೋಗ್ಯದ ದೃಷ್ಟಿಯಿಂದ ಉತ್ತಮ ಎಂಬ ತಿಳುವಳಿಕೆ ಉಂಟು.

ಕೇಸವನಹಳ್ಳಿ kēsavanahaḷḷi :
- ಹಾಸನ ಜಿಲ್ಲೆಯ ಪಾಳ್ಯ ಎಂಬಲ್ಲಿ ದೊರೆತ ಕ್ರಿ.ಶ.೧೩೬೦ರ ೪೧ನೇ ಶಾಸನದಲ್ಲಿ ಇದರ ಪ್ರಸ್ತಾಪ ಇದೆ; A village referred in 41st inscription of 1360AD found in Palya of Hassan district;

- ಪಾಳ್ಯ ಪ್ರದೇಶದ ಜನಾರ್ದನ ದೇವಸ್ಥಾನದ ದಕ್ಷಿಣದ ಬಳಿಯಿರುವಂಥದು ಈ ಶಾಸನ;
- 'ಕೇಸವನಹಳ್ಳಿ' ಕೇಶವನಹಳ್ಳಿಯೇ ಸರಿ; ಶ>ಸ ಆಗಿರುವುದು ಸ್ಪಷ್ಟ; ಉಚ್ಚಾರಣೆಯ ಕಾರಣ;
- ದೈವವಾಚಿ ಸ್ಥಳನಾಮವಾಗಿದೆ;
- ಶ್ರೀವೈಷ್ಣವ ಧರ್ಮಕ್ಕೆ ಸಂಬಂಧಿಸಿದ್ದಾಗಿರಬಹುದು;
- ದೇವಸ್ಥಾನದ ಕಾರಣದಿಂದಾಗಿಯೇ ಆ ಊರಿಗೆ ಈ ಹೆಸರು ಬಂದಿರುವುದಕ್ಕೆ ಸಾಧ್ಯ.

(E.C- ೮; ಹಾ.ಜಿ.)

ಕೇಸವಪುರದ ನೆಲೆವೀಡು kēsavapurada nelevīḍu :

- ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲ್ಲೋಕಿನ ಕ್ರಿ.ಶ.೧೦೮೩ರ ೫ನೇ ನಂಬರಿನ ಶಾಸನದಲ್ಲಿ ಇದರ ಉಲ್ಲೇಖ; A village referred in 5th inscription of 1083AD found in Hagari bommanahalli, Bellary district;
- ಚಾಳುಕ್ಯ ವಿಕ್ರಮಾದಿತ್ಯನು ಕಲ್ಯಾಣದಿಂದ ಆಳ್ವಿಕೆ ನಡೆಸುತ್ತಿದ್ದ ಕಾಲ; it belongs to Chalukya Vikramaditya ruled from Kalyana;
- ಗಂಗ ದುರ್ವಿನೀತನಿಂದ ಸನ್ಮಾನಿತನಾದ ಪಶುಪತಿ ಭಟ್ಟನ ವಂಶಸ್ಥನಾದ ಭೋಗದೇವನ ಮಗ ಶಿವರಾಜನು ಅಮ್ಮಳೆಯಲ್ಲಿ ಕಲಿ ದೇವರ ದೇವಾಲಯವನ್ನು ನಿರ್ಮಿಸಿ ದಾನ ನೀಡುತ್ತಾನೆ; Shivaraja son of Bogadeva who was honoured by Ganga's king Durvineeta built a temple of Kali devaru and gifted it to the people;
- ಇದೇ ಸಂದರ್ಭದಲ್ಲಿ ಅಲ್ಲಿನ ಮಹಾಜನರು ಕೇಶವ ದೇವರಿಗೆ ದಾನ ನೀಡುತ್ತಾರೆ; ಈ ಕೇಶವ ದೇವಾಲಯ ಮತ್ತು ಧವಳ ಶಂಕರ ದೇವಾಲಯಗಳಿಂದ 'ಕೇಶವಪುರ' ಎಂಬ ಹೆಸರು ಪಡೆದಿದೆ;
- 'ನೆಲೆವೀಡು' ಪದವಿರುವುದರಿಂದ, ರಾಜ ವಿಶೇಷ ಸಂದರ್ಭದಲ್ಲಿ ಬಂದು ತಂಗುತ್ತಿದ್ದಂತೆ ಕಾಣುತ್ತದೆ; ಆ ಕಾರಣದಿಂದಲೇ ಈ ಹೆಸರು ಬಂದಿರಬಹುದು.

(ಕ.ವಿ.ವಿ.ಶಾ.ಸಂ.೧; ಬ.ಜಿ.)

ಕೇಸವೆ/ಕೆಸು kēsave/kesu :

- ಎಲೆಗಳುಳ್ಳ, ದಂಟುಗಳುಳ್ಳ ಒಂದು ಬಗೆಯ ಸಸ್ಯ(ದ್ರಾ.ಜ್ಞಾ.ಪ.ಕೋ); A stemed and leafy plant;
- 'ಕೆಸವು' ಎಂಬ ಪದವೂ ಚಾಲ್ತಿಯಲ್ಲಿದೆ; 'ಸಾವೀಗಡ್ಡೆ' ಎಂಬ ರೂಪವೂ ಇದೆ; ಸಸ್ಯಶಾಸ್ತ್ರೀಯ ಪಾರಿಭಾಷಿಕ ಪದ: `Colocasia antiquorum';
- ಚೇವು, ಸೇವು, ತೇವು ಎಂಬ ರೂಪಗಳೂ ಬಳಕೆಯಲ್ಲಿವೆ; ಕನ್ನಡದ 'ಕ'ಕಾರ 'ಚ'ಕಾರ ಮತ್ತು 'ಸ'ಕಾರಗಳನ್ನು ಪಡೆಯಬಲ್ಲುದು; ಆದರೆ 'ತ'ಕಾರ ವಿನಿಮಯಗೊಳ್ಳುವುದು ಮಾತ್ರ ಕಷ್ಟ;
- ತಮಿಳಿನ 'ಶೀಮೈಕಿಳಙ್ಗು' 'ಚೇವು' ಮತ್ತು 'ಸೇವು' ರೂಪಗಳಿಗೆ ಹತ್ತಿರವಿರುವಂತೆ ಕಾಣುತ್ತದೆ; ತುಳುವಿನಲ್ಲಿನ 'ತೇವು' ಪದಕ್ಕೆ ಅನ್ಯಮೂಲಕ್ಕೆ ಹೋಗಬೇಕಾಗಬಹುದು; ಮಲೆಯಾಳಂನ 'ಚೇಂಪ್' ಸಹಜವಾಗಿಯೇ 'ಚೇವು' ರೂಪಕ್ಕೆ ಸಂಬಂಧ ಕಲ್ಪಸುತ್ತದೆ;
- ಔಷಧಿಯಾಗಿ ಇದರ ಉಪಯೋಗ; ಎಲೆದಂಟಿನ ರಸ ಗಾಯಕ್ಕೆ ಒಳ್ಳೆಯದೆಂದು ನಂಬಿಕೆ; ಎಲೆ ಮತ್ತು ಗಡ್ಡೆಗಳನ್ನು ಪಲ್ಯಕ್ಕಾಗಿ ಬಳಸುವುದುಂಟು. It is used as medicinal plant to cure wounds and used for cooking.

(F.H.I.P)

ಕೇಸಳಲೆ/ಕೇಶಅಳಿಲು Kēsaḷale/ Kēsaalilu:

- ಒಂದು ಜಾತಿಯ ಅಳಿಲು; ಕೆಂಪು ಅಳಿಲು; ಭಾರತದಲ್ಲಿ ಕಂಡುಬರುವ ಅಳಿಲುಗಳಲ್ಲಿ ಅತ್ಯಂತ ದೊಡ್ಡ ಗಾತ್ರದ್ದು ಎನ್ನಲಾಗಿದೆ; A squrril species; a reddish squirrel;
- Sciurus elphinstonei (ಕಿಟ್ಟೆಲ್);
- Ratufa indica; ಗಣ: ರೊಡೆನ್ಷಿಯ; ಕುಟುಂಬ: ಸ್ಕೈಯರಿಡೀ(ಪ್ರಾ.ಪ.ಸಂ);
- ಎತ್ತರವಾದ ಮರದ ನೆತ್ತಿಯಲ್ಲಿ ಗೂಡುಕಟ್ಟಿ ವಾಸಿಸುತ್ತದೆ; ನೆಲದ ಮೇಲಕ್ಕೆ ಬರುವುದು ಅಪರೂಪ; ಒಂದು ಮರದಿಂದ ಇನ್ನೊಂದು ಮರಕ್ಕೆ ಜಿಗಿಯುವಲ್ಲಿ ನಿಷ್ಣಾತವಾದದ್ದು; ಮಂಗಳೂರು, ಉಡುಪಿ, ಉತ್ತರಕನ್ನಡ ಮತ್ತು ಧಾರವಾಡ ಜಿಲ್ಲೆಗಳ

ನಿತ್ಯ ಹರಿದ್ವರ್ಣದ, ಅರೆ ನಿತ್ಯಹರಿದ್ವರ್ಣದ, ಎಲೆ ಉದುರುವ ಕಾಡುಗಳಲ್ಲಿ ಕಂಡುಬರುತ್ತದೆ; it is lived on the tops of tall tress; it comes down rarely on the ground from tree tops;

- ತಲೆ ಮತ್ತು ದೇಹದ ಉದ್ದ ೧೪ ರಿಂದ ೧೬ ಅಂಗುಲ, ಬಾಲವೂ ಅಷ್ಟೇ ಅಥವಾ ಸ್ವಲ್ಪ ಉದ್ದ ಇರುತ್ತದೆ; ಒಂದೂವರೆಯಿಂದ ಎರಡು ಕೇಜಿ ತೂಕ ಇರುತ್ತದೆ; It is 14 to 16 inches long and 1 1/2 to 2kg weight;
- ಸಸ್ಯಾಹಾರಿ; ಹಣ್ಣು, ಕಾಯಿ, ಬೀಜ ಮುಖ್ಯ ಆಹಾರ; ಕೆಲವು ಮರಗಳ ತೊಗಟೆ, ಎಲೆ, ಚಿಗುರನ್ನೂ ತಿನ್ನುತ್ತದೆ; ಕೀಟಗಳು ಮತ್ತು ಪಕ್ಷಿಗಳ ಮೊಟ್ಟೆಗಳನ್ನು ತಿನ್ನುವುದೂ ಉಂಟು; It is vegetarian animal; it eats sometimes insects, birds, eggs;
- ಮಾರ್ಚ್-ಏಪ್ರಿಲ್ ಮತ್ತು ಸೆಪ್ಟೆಂಬರ್-ಅಕ್ಟೋಬರ್ ತಿಂಗಳುಗಳಲ್ಲಿ ಮರಿ ಹಾಕುತ್ತದೆ; ಗರ್ಭದ ಅವಧಿ ೨೮ ತಿಂಗಳು; It gives birth to its babies during March-April;
- ತುಂಬಾ ಚಟುವಟಿಕೆಯ ಚುರುಕು ಪ್ರಾಣಿ; ನಾಚಿಕೆ ಮತ್ತು ಅಂಜುಬುರುಕ ಸ್ವಭಾವದ ಪ್ರಾಣಿ; ಕಣ್ಣಿಗೆ ಕಾಣಿಸಿಕೊಳ್ಳುವುದು ಅಪರೂಪ; ಧ್ವನಿಯ ಮೂಲಕವೇ ಗುರುತಿಸುವುದು ಸಾಮಾನ್ಯ; ಒಂದು ಅಳಿಲು ಶಬ್ದ ಮಾಡಿದರೆ ಸುತ್ತಮುತ್ತಲಿನ ಎಲ್ಲಾ ಅಳಿಲುಗಳು ಶಬ್ದ ಮಾಡಿ ಗಲಾಟೆ ಎಬ್ಬಿಸುತ್ತವೆ; it is hyper active animal; it is also an animal of shyness;
- ಕೋತಿಯು ಬೈಯ್ಯುವಂತೆ ಕಿರುಚುವ, ಅಪಾಯ ಕಂಡಾಗ ಎಚ್ಚರಿಸುವ ಧ್ವನಿ ಮಾಡುತ್ತವೆ; ಹೆದರಿ ಓಡಿಹೋಗುವ ಬದಲು ಮರೆಯಲ್ಲಿ ರೆಂಬೆಯನ್ನು ಅಪ್ಪಿ ಅವಿತುಕೊಳ್ಳುತ್ತವೆ, ಇಲ್ಲವೇ ಮರದಿಂದ ಜಾರಿ ನೆಲದ ಮೇಲೆ ಪೊದೆಗಳ ನಡುವೆ ಕಾಣೆಯಾಗುತ್ತವೆ;
- ಕೇಸು+ಅಳಲೆ; ಕೇಸು=ಕೆಂಪು (ಕೆಂಪು>ಕೆಂಚು>ಕೇಸು ಆಗಿರಬಹುದು); ಅಳಲೆ=ಅಳಿಲು(ಅಣಿಲ್>ಅಳಿಲು); ಹೊಟ್ಟೆಯ ಭಾಗ ಹಳದಿ ಇದ್ದು, ಇತರೆಡೆ ಕಂದು ಬಣ್ಣ ವ್ಯಾಪಿಸಿದೆ, ನಡು ನಡುವೆ ಸಣ್ಣ ಪ್ರಮಾಣದ ಬಿಳಿಯ ಬಣ್ಣ ಕಾಣಿಸಿಕೊಳ್ಳುತ್ತದೆ ಎಂದು ಒಂದು ವಿವರ ಹೇಳುತ್ತದೆ; ತುಪ್ಪಳು ತಂಬಿಕೊಂಡಿರುವುದರಿಂದ 'ಕೇಶ ಅಳಿಲು' ಎಂದು ಕರೆದಿರಬಹುದು.

ಕೇಸು Kēsu:

- ಕೆಂಪುಬಣ್ಣ; ಕೆಂಪು; <ಕಿಸು(ದೇಸಿ); Red colour;
- ತೌಡು(ತವಡು); ಅಕ್ಕಿಯ ಮೇಲಿನ ಕೆಂಪು/ಕಂದು ಬಣ್ಣದ ಪರೆ/ಹೊಟ್ಟು; Bran, the outer reddish layer of rice;
- <ಕೆಸು/ಕೆಸವು/ಕೆಸ್‌ವೆ; ಅಣಬೆ; ಅಗಲವಾದ ಎಲೆಯುಳ್ಳ ದಂಟು ಇರುವ ಒಂದು ಸಸ್ಯ; A fungus;
- ಸಂಭೋಗಿಸು; ಸಂಭೋಗಿಸುವಂತೆ ಮಾಡು; ಕೇ+ಇಸು=ಕೇಯಿಸು>ಕೇಸು; Having sex and pretending as sexual intercourse;
  ವ್ಯದೂ: ತ: ಚೆಯ್ಯ; ಮ: ಚೇಯ;
- <ಕೇಸ್(ಇಂ. Case); ಮೊಕದ್ದಮೆ; ದಾವೆ; ಖಟ್ಲೆ; ಪ್ರಕರಣ; ಪ್ರಸಂಗ; litigate; law suit; Incident;
- ಪೆಟ್ಟಿಗೆ, ದಪ್ಪ ಪೊಟ್ಟಣ; ಸಂಪುಟ; ಕೋಶ; ವಿಭಾಗ; ಆವರಣ; ಗೂಡು; A box, a big box, a cell, a department, a nest;
- ವೈದ್ಯ ಅಥವಾ ಆಸ್ಪತ್ರೆಯ ಪರಿಭಾಷೆಯಲ್ಲಿ ರೋಗಿ; ಆಸ್ಪತ್ರೆಗೆ ದಾಖಲಾದ ರೋಗಿ;
- —***ಕೇಸಾಡು*** : ಕೇಸು+ಆಡು; ಮೊಕದ್ದಮೆ ನಡೆಸು; ಖಟ್ಲೆ ನಡೆಸು; To lodge and run a lawsuit or litigation;
- —***ಕೇಸುರಿ*** : ಕೇಸು+ಉರಿ; ಕೆಂಪುಉರಿ; ತೀವ್ರ/ತೀಕ್ಷ್ಣ ಬೆಂಕಿ; Acute redish inflame;
- —***ಕೇಸುಳ್ಳಿ*** : ಕೇಸು+ಉಳ್ಳಿ(<ಹುರುಳಿ); ಕೆಂಪು ಹುರುಳಿ; ಈರುಳ್ಳಿ, Reddish onion.

ಕೇಸೂರು kēsūru :

- ಅರಸೀಕೆರೆ ತಾಲ್ಲೋಕಿನ ಹಿರಿಯೂರು ಪ್ರದೇಶದ ಕ್ರಿ.ಶ.೧೨೦೭ರ ಹೊಯ್ಸಳ ಇಮ್ಮಡಿನರಸಿಂಹನ ಕಾಲದ ೩೧೯ನೇ ಶಾಸನದಲ್ಲಿ 'ಕೇಸೂರು' ಪ್ರದೇಶ ಉಲ್ಲೇಖವಾಗಿದೆ; A village referred in 319^{th} inscription of 1207AD found in Hiriyur, Arasikere taluk, Hassan district; it belongs to Hoysala 2^{nd} Narasimha;

- ಕೇಸೂರು>ಕೇಸು+ಊರು; 'ಕೇಸು' ಎಂಬುದಕ್ಕೆ ಕೆಂಪು ಬಣ್ಣ, ಕೆಂಪಕ್ಕಿ(ಕೇಸಕ್ಕಿ), (ಕೇಸುಳ್ಳಿ), ಈರುಳ್ಳಿ ಎಂಬೆಲ್ಲ ಅರ್ಥಗಳಿವೆ;
- ಅಂದರೆ ಕೆಂಪು ಮಣ್ಣಿನ ಪ್ರದೇಶ, ಕೆಂಪಕ್ಕಿ ಅಥವಾ ಈರುಳ್ಳಿ ಬೆಳೆವ ಪ್ರದೇಶ ಎಂಬ ಅರ್ಥದಲ್ಲಿ ಈ ಸ್ಥಳನಾಮ ಬಂದಿರಬಹುದು; it is named after reddish soil or the land of growing onion.

(E.C- ೧೦; ಹಾ.ಜಿ.)

ಕೇಸೆರು/ಕೇಸೆರುಗು/ Kēseru/Kēserugu:

- ಕೆಂಪು ಇರುವೆ; ಕೆಂಪಗಿರುವ ಕಟ್ಟಿರುವೆ; Reddish ants;
- ಬೇಸಿಗೆಯಲ್ಲಿ ಸೆಕೆಗೆ ನೆಲದಿಂದ ಮೇಲಕ್ಕೆ ಎದ್ದು ಹರಿದಾಡುತ್ತವೆ; ಗೆದ್ದಲುಹುಳುವಿನಂತೆ ಇರುತ್ತವೆ;
- ಕೇಸು+ಎರು/ಎರುಗು=ಕೇಸೆರು/ಕೇಸೆರುಗು; ಕೇಸು<ಕಿಸು/ಕೆಸು(=ಕೆಂಪು); ಎರು/ಎರುಗು=ಇರುವೆ;
- ಹಕ.ದಲ್ಲಿ ಎರ, ಎರಗು ರೂಪಗಳಿವೆ; ತ.ಮ.ನಲ್ಲಿ ಎಱುಂಬು ರೂಪ ಇದೆ; ಪ್ರಸ್ತುತ ಎರು, ಎರುಗು ರೂಪಗಳು ಈ ರೂಪಗಳನ್ನು ಹೋಲುತ್ತವೆ; ಇಱುಂಪೆ>ಇರುಂಬೆ>ಇರುವೆ ಇದರ ಸಾಮಾನ್ಯ ವಿಸ್ತರ ರೂಪ; ಇ>ಎ, ಪ>ಬ>ವ ವ್ಯತ್ಯಯಗಳು ಕನ್ನಡದಲ್ಲಿ ಇರುವುದರಿಂದ 'ಇರುವೆ'ಯ ಗ್ರಾಮ್ಯರೂಪವಾಗಿ 'ಇರ' ಇದ್ದು ಎರ, ಎರು, ಎರುಗು ರೂಪಗಳಿಗೆ ಅವಕಾಶವಾಗಿದೆ ಎನ್ನಬಹುದು; ಇರುಂಬೆ>ಎರುಗು ಆಗಿರುವಂತೆ ತೊರುತ್ತದೆ.

ಕೇಳಿ Kēḷi:

- <ಕೇಲಿ(ಸಂ); ಆಟ; ವಿನೋದ; ಕ್ರೀಡೆ; ನಟನೆ ಮೊದಲಾದ ವಿನೋದ ಲೀಲೆ; A play; funny play; sports; acting;
- <ಕೇಟಿಱ(ಕ); ಸಾಲು; ಗುಂಪು; ಹಿಂಡು; ವ್ಯರೂ; ಕೇಣಿ(<ಶ್ರೇಣಿ–ಸಂ.); ಶ/ಸ ಮತ್ತು ಚಗಳಲ್ಲಿ ವ್ಯತ್ಯಯ ಉಂಟಾದುದರಿಂದ ಶ>ಚ ಆಗಿ 'ಚ' ಕಾರದ ಸ್ಥಾನದಲ್ಲಿ 'ಕ' ವ್ಯತ್ಯಯಗೊಂಡು 'ಕೇಣಿ' ಆಗಿರಬಹುದು; ಣ ಮತ್ತು ಳ/ೞಗಳಲ್ಲೂ ವ್ಯತ್ಯಯ ಇರುವುದರಿಂದ ಕೇಟಿಱ/ಕೇಳಿ ರೂಪಗಳು ಕಾಣಿಸಿಕೊಂಡಿರುವುದು ಸಾಧ್ಯ; ಱಟ ಇರುವುದರಿಂದ ಸಾಲು ಗುಂಪು ಎಂಬ ಅರ್ಥದ 'ಕೇಟಿಱ'(>ಕೇಳಿ) ದ್ರಾವಿಡ ಮೂಲದ್ದೇ ಯಾಕಾಗಿರಬಾರದು? ಎಂದು ಯೋಚಿಸುವುದೂ ಅಗತ್ಯ ಎನಿಸುತ್ತದೆ; lane, group and team;
- ಒಂದು ಬಗೆಯ ತೆಂಗು(ಸಂ.?); ಈ ಅರ್ಥದ 'ಕೇಳಿ' ರೂಪ ತ.ನಲ್ಲೂ ಇದೆ; ಹಳಗನ್ನಡ ಮತ್ತು ತ.ನಲ್ಲಿ 'ಕೇಳಿವಟ್ಟಲ್'(ಕೇಳಿ+ಬಟ್ಟಲ್) ಎಂಬ ಕೂಡುಪದ ಇದೆ; ಸಂ.ದಲ್ಲಿ ನಾರೀಕೇಲ(ಳ) ಎಂದಿದೆ; ಈ ರೂಪ(ಕೇಳಿ)ವನ್ನೂ ಸಂ.ದಿಂದ ಬಂದದ್ದೋ ದ್ರಾವಿಡ ಮೂಲದ್ದೆಯೋ ಎಂದು ಚರ್ಚಿಸಿ ನಿರ್ಧರಿಸಬೇಕಿದೆ; A kind of coconut crop;
- ಘೋಷಣೆ; ಪ್ರಚಾರ(ತು.); ಯಕ್ಷಗಾನ ಬಯಲಾಟದ ಸೂಚನೆಗಾಗಿ ಮುಸ್ಸಂಜೆ ಹೊತ್ತಿನಲ್ಲಿ ಮಾಡುವ ಚಂಡೆಮದ್ದಳೆಗಳ . ಬಡಿತ(ತುನಿ.); declaration propogation of Yakshagana, an advertisement of a drama;
- ಪ್ರಸಿದ್ಧಿ(ತು.); ಕೇಳ್(ಕ./ದ್ರಾ.) ಧಾತು; ಶ್ರವಣಿಸು, ಕೇಳು, ಕೆಳಿಸು ಪ್ರಚುರಪಡಿಸು ಎಂದು ಮೂಲಾರ್ಥ; ಕೇಳ್/ಕೇಟ್+–ಇ;

ಕೇಳಿಕೆ Kēḷike:

- ಕೇಲ್(ಸಂ–)>ಕೇಳ್+–ಇಕೆ; ಕೇಟಿಕೆ>ಕೇಳಿಕೆ ಎಂದೂ ಹೇಳಬಹುದು; ಕೇಲ್/ಕೇಲಿ=ಆಟ; ವಿನೋದ; ಕ್ರೀಡೆ; ನೃತ್ಯ; ನಟನೆ; >ಕೇಳಿಗೆ; Comic shows; comic sports; creative sports;
- ಕೇಳ್+ಇಕೆ(ಕ)=ಕೇಳಿಕೆ= ಕೇಳಿಸಿಕೊಳ್ಳುವಿಕೆ; ಕೇಳುವಿಕೆ; ಪ್ರಾರ್ಥನೆ; ವ್ಯರೂ: ಕೇಳ್ಕೆ; ಕೇಳ್ಕಿ; ಪ್ರಾದೇಶಿಕ ವ್ಯತ್ಯಯ;
- ಒಂದು ಬಗೆಯ ಯಕ್ಷಗಾನ ಬಯಲಾಟ; ಮೂಡಲ ಪಾಯದ ಲಕ್ಷಣಗಳೂ ಗೋಚರಿಸುವುದರಿಂದ ಯಕ್ಷಗಾನ ಬಯಲಾಟದ ಒಂದು ಪ್ರಭೇದ ಎಂದೇ ಗುತಿಸಬಹುದು; a kind of `Yakshagana Bayalata'- a drama which is played in open yard;
- ತ: ಕೇಳಿಕ್ಕೈ; ತೆ: ಕೇಳಿಕ; ದೇಶಿ ಇರಬಹುದೆಂದು ಊಹಿಸಲಾಗಿದೆ; ಕೇಳಿಕ್ಕೈ=ಹೆಂಗಸರ ಒಂದು ಆಟ (ತ.);
- ಸಾಂಪ್ರದಾಯಿಕ ರಂಗಭೂಮಿಯಲ್ಲಿ ಪಾರಿಭಾಷಿಕವಾಗಿ 'ಕೇಳಿಕೆ' ಉಳಿದು ಬಂದಿದೆ; ತೆ.ನಲ್ಲೂ ಇದೆ; ಬಯಲಾಟಕ್ಕೆ 'ಕೇಳಿಕೆ' ಎಂದೂ

ಹೇಳುತ್ತಾರೆ ಎಂಬ ಅಭಿಪ್ರಾಯವೂ ಇದೆ(ಕೇಳಿಕೆ ಮುನಿಯಪ್ಪ–ಟಿ.ಗೋವಿಂದರಾಜು; ಉಲ್ಲೇಖ: ಜಾವಿಕೋ.); ಬೆಂಗಳೂರು ಪ್ರದೇಶದಲ್ಲಿ ಬಯಲಾಟವನ್ನು ಕೇಳಿಕೆ ಎಂದೇ ಕರೆಯುತ್ತಾರೆ ಎನ್ನಲಾಗಿದೆ; `Kelike' is a word even today used in conventional drama art;

- ತೆಲುಗಿನ 'ವಿಧಿನಾಟಕಮು' ವನ್ನು ಹೋಲುವ ಒಂದು ಅಭಿನಯಕಲೆ ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿದೆ; ಅಭಿನಯ, ಕುಣಿತ, ಹಾಡುಗಾರಿಕೆ, ವೇಷಭೂಷಣ, ವಾದ್ಯಮೇಳಗಳ ಸಂಗಮರೂಪಿ ರಂಗಪ್ರಕಾರ ಇದು; ಮಾಸ್ಟೇರ ಸಮುದಾಯದವರು ಇದನ್ನು ಅಭಿನಯಿಸುತ್ತಾರೆ; ಮಹಾಭಾರತದ ಕೃಷ್ಣರಾಯಭಾರದಿಂದ ಕುರುಕ್ಷೇತ್ರದ ವರೆಗಿನ ಕಥಾಪ್ರಸಂಗಗಳು, ರಾಮಾಯಣದ ಲವ, ಕುಶರ ಪ್ರಸಂಗ ಹಾಗೂ ಜಾನಪದದ ಕೆಲವು ಪ್ರಸಂಗಗಳು ಇಲ್ಲಿ ಅಭಿನಯಗೊಳ್ಳುತ್ತವೆ; ಈ ಕಲೆಯಲ್ಲಿಯೂ ಯಕ್ಷಗಾನದ ಬಯಲಾಟದ ಕೆಲವು ಲಕ್ಷಣಗಳು ಕಂಡುಬರುವುದರಿಂದ ಇದನ್ನು 'ಕೇಳಿಕೆ' ಎಂದು ಗುರುತಿಸುವ ಪ್ರಯತ್ನಗಳು ನಡೆದಿವೆ; in Kolara and Bengaluru rural districts there is an exihibition art which resembles Telugu-Vidhinatakamu;
- ಪೂಜಾರಿಯ ಮೈಮೇಲೆ ದೇವರು ಬಂದಾಗ ದೇವರು ಮತ್ತು ಭಕ್ತರ ನಡುವೆ ನಡೆಯುವ ಸಂವಾದಕ್ಕೆ 'ಕೇಳಿಕೆ' ಎನ್ನುತ್ತಾರೆ; 'ಕೇಳೂಸಿ' ಎನ್ನವುದೂ ಉಂಟು; ಹಯ್ಯಾಳಪ್ಪನ ಜಾತ್ರೆಯಲ್ಲಿ ದೇವರ ಪೂಜಾರಿ ಮತ್ತು ಭಕ್ತರ ಮಾತುಗಾರಿಕೆಯನ್ನು 'ಹೇಳಿಕೆ ಕೇಳಿಕೆ' ಎನ್ನುತ್ತಾರೆ; The conversation between devotee and god is called as `Kelike';
- ಪಡುವಲಪಾಯದಲ್ಲಿ ಭಾಗವತರು ರಂಗಸ್ಥಳಕ್ಕೆ ಬಂದ ಕೂಡಲೆ ಚಂಡೆ, ಮದ್ದಲೆ, ಜಾಗಟೆ, ಚಕ್ರತಾಳಗಳನ್ನು ಬಾರಿಸುವ ಪದ್ಧತಿ ಇದೆ; ಇದು 'ಕೇಳಿ'/'ಕೇಳಿ ಹೊಡೆಯುವುದು'; there is a system in Padavalapaya Yakshagana-western side of Yakshagana of coastal Karnataka that when the chief of the chorus Bhagavata comes on the stage Chande-Maddale-Jagate musical instrument are to be beaten;
- ಕಣಿಕೇಳುವುದು; ಶಕುನ ಕೇಳುವುದು, ಜ್ಯೋತಿಷ್ಯ ಕೇಳುವುದಕ್ಕೆ ಸಹ 'ಕೇಳಿಕೆ' ಎನ್ನುತ್ತಾರೆ;
- ಆಂಧ್ರಪ್ರದೇಶದ ದೇವಾಲಯ ನೃತ್ಯಗಳಲ್ಲಿ ಕೇಳಿಕಾನರತ್ಯವೊಂದಿದೆ;
- *—ಕೇಳಿಕೆ ತಾಳ* : 'ಕೇಳಿಕೆ' ಅಭಿನಯದಲ್ಲಿ ಬಳಕೆಯಾಗುವ ಒಂದು ವಾದ್ಯ; ಎರಡು ಬಟ್ಟಲುಗಳ ಕಂಚಿನ ತಾಳ; ಹಾಡುಗಾರರು ಬಳಸುತ್ತಾರೆ. A musical instrument that madeup of brass metal as rhythm instruments.

ಕೇಳು Ke̅ḷu:

- ಆಲಿಸು; ಕಿವಿಗೊಡು; ಗಮನವಿಟ್ಟು ಕೇಳಿಸಿಕೊ; ಬೇರೆಯವರು ಆಡುವ ಮಾತನ್ನು ಮನಸ್ಸಿಗೆ ತಂದುಕೋ; To listen; to listen attentively;
  ಪ್ರ: 'ನನ್ ಮಾತ್ನೂ ಒಸಿ ಕೇಳು';
- ಬೇಡು; ಪ್ರಶ್ನಿಸು; ವಿಚಾರಿಸು;
  ಪ್ರ: 'ಏನಂದಾರು ಕೇಳ್ಕೋಡು, ಯಾವುದ್ನೂ ಆಮೇಲ್ ಯೋಚ್ನೆ ಮಾಡೂದ';
- ಒಪ್ಪು; ಪಾಲಿಸು; ಸಮ್ಮತಿ ಇತ್ತು ನಡೆಸು;
  ಪ್ರ: 'ಹೇಳ್ದಂಗ್ ಕೇಳು, ಒಳ್ಳೇದಾಯ್ತದ';
- ಮನುಷ್ಯನ ನಾಗರಿಕತೆಯ ವಿಕಾಸದಲ್ಲಿ ವಾಕ್ ಮತ್ತು ಶ್ರವಣ, ಅಂದರೆ ಶಬ್ದಗಳ ವ್ಯವಸ್ಥಿತ ಉಚ್ಚಾರಣೆ ಮತ್ತು ಉಚ್ಚರಿಸಿದ್ದನ್ನು ಸರಿಯಾಗಿ ಅರ್ಥ ಮಾಡಿಕೊಂಡು ತೋರುವ ತಕ್ಕ ಪ್ರತಿಕ್ರಿಯೆ ಬಹಳ ಮುಖ್ಯ ಪಾತ್ರ ವಹಿಸಿದೆ;
- ಕೇಳುವ ಮತ್ತು ಹೇಳುವ ಪ್ರಕ್ರಿಯೆ ಶಾಬ್ದಿಕ ಜಾನಪದದ ಹಾಗೂ ಜಾನಪದದ ಇತರ ಪ್ರಕಾರಗಳ ಹುಟ್ಟು, ಉಳಿವು ಮತ್ತು ವಿಕಾಸದಲ್ಲಿ ಮುಖ್ಯವಾದ ಪಾತ್ರ ವಹಿಸುತ್ತಿದೆ; Listening and speaking processes are the reason of birth of folklore and branches of folklore;
- 'ಹೇಳತೇನ ಕೇಳ', 'ಕೇಳಿಕೆ'(ನೋಡಿ) ಅಥವಾ 'ಕೇಳ್ಕಿ/ಕೇಳ್ಕಿ' ಎಂದು ವಾಕ್‌ಪರಂಪರೆಯ ನುಡಿಗಟ್ಟುಗಳೇ ಇವೆ; 'ಕೇಳಿಕೆ' ಶಾಬ್ದಿಕ ಜಾನಪದದ ಒಂದು ಪ್ರಕಾರವನ್ನು ಹೇಳುತ್ತದೆ;
- 'ಕೇಳು ಜನಮೇಜಯ ಧರಿತ್ರೀಪಾಲ....' ಎಂದು ಕುಮಾರವ್ಯಾಸಭಾರತ ಆರಂಭವಾಗುತ್ತದೆ;

ಜನಮೇಜಯ ರಾಜನ ಕೇಳಿಕೆಗಾಗಿ ರಚನೆಯಾದ ಕಥೆ ಎಂಬಂತೆ ಮಹಾಭಾರತದ ರಚನೆಯಾಗಿರುವುದು ಅದರ ವಾಕ್‌ಪರಂಪರೆಯ ಸೂಚನೆಯಂತಿದೆ;

- ಕೇಳುವುದು ಮತ್ತು ಹೇಳುವುದು ವ್ಯಕ್ತಿ ವ್ಯಕ್ತಿಗಳ ಪರಸ್ಪರ/ಸಂವಹನದ ಮತ್ತು ವಿಚಾರ ವಿನಿಮಯದ ಸಾಧನವಾಗಿ ವ್ಯವಸ್ಥಿತ ಸಾಮಾಜಿಕತೆಯಿಂದ ಹಿಡಿದು ಸಿದ್ಧಾಂತಗಳ ಬೆಳವಣಿಗೆಯವರೆಗೂ, ಒಟ್ಟಾರೆ ಭಾಷಿಕ ಪರಿಣಾಮಶೀಲತೆಯಿಂದ ಮೊದಲ್ಗೊಂಡು ಬದುಕಿನ ವಿಭಿನ್ನ ಆಯಾಮಗಳು ಮತ್ತು ವಿಭಿನ್ನ ಹಂತಗಳವರೆಗೂ ತನ್ನ ಪ್ರಭಾವವನ್ನು ವಿಸ್ತರಿಸಿಕೊಂಡಿರುವುದು ಕಂಡುಬರುತ್ತದೆ; Listening and telling or narration are mutual communication system of persons;
- ಈ ದಿಶೆಯಲ್ಲಿ ನೋಡಿದಾಗ 'ಕೇಳು' ಪದ ಮತ್ತು ಕೇಳಿಸಿಕೊಳ್ಳುವ ಪ್ರಕ್ರಿಯೆ ಹಾಗೂ ಸ್ವಭಾವ ಮಾನವ ಸಂಸ್ಕೃತಿಯಲ್ಲಿ ಏನೆಲ್ಲಾ ಪ್ರಭಾವ ಬೀರಿಕೊಂಡು ಬಂದಿದೆ ಎಂಬುದನ್ನು 'ಕೇಳು' ಪದಯುಕ್ತ ಕೆಲವು ನುಡಿಗಟ್ಟುಗಳ ಅವಲೋಕನದಿಂದ ತಿಳಿಯಬಹುದಾಗಿದೆ; ಕಣೀಕೇಳು, ಶಾಸ್ತ್ರಕೇಳು, ದೇವರುಕೇಳು ಎಂಬ ನುಡಿಗಟ್ಟುಗಳು ಮನಷ್ಯನ ಆದಿಮಸ್ಥಿತಿಯಿಂದ ಇವತ್ತಿನವರೆಗೂ ಉಳಿದುಬಂದಿವೆ; ಅವನ ಆಚರಣೆಗಳು, ನಂಬಿಕೆಗಳು; ಭಯ ತಲ್ಲಣ ಅವಲಂಬನೆಗಳು ಇತ್ಯಾದಿಗಳ ಸೂಚಕವಾಗುವುದರ ಜೊತೆಗೆ ಮೌಢ್ಯ ಕಂದಾಚಾರಗಳ ಮೂಲಕ ಮನುಷ್ಯ ಮನುಷ್ಯನನ್ನು ಶೋಷಿಸಿದ್ದರ ನಿರ್ಬಂಧಿಸಿದ್ದರ ಕುರುಹುಗಳೂ ಆಗಿ ಗೋಚರಿಸುತ್ತವೆ;
- 'ಹೇಳಿಕೆ ಮಾತು ಕೇಳಿಕೊಂಡು', 'ಒಂದು ಕಿವಿಯಲ್ಲಿ ಕೇಳಿ ಇನ್ನೊಂದು ಕಿವಿಯಲ್ಲಿ ಬಿಡು' ಎಂಬಂತಹ ಮಾತುಗಳು ಕೇಳಿಸಿಕೊಳ್ಳುವುದರ ಹಾಗೆಯೇ ಹೇಳುವುದರ ಬಗೆಗೆ ಮನುಷ್ಯ ವಹಿಸಿದ್ದರ ಎಚ್ಚರಿಕೆಯ ಸೂಚಕವಾಗಿ ಅವನ ಜಾಗೃತ ಸ್ಥಿತಿಯ ಮುಂದುವರಿದ ಹಂತವಾಗಿ ಗೋಚರಿಸುತ್ತವೆ; ಹೇಳಿದ್ದೆಲ್ಲವೂ ಅಥವಾ ಕೇಳಿದ್ದೆಲ್ಲವೂ ಸಿಂಧುವಲ್ಲ ಎಂಬ ಸತ್ಯಾಸತ್ಯತೆಯ ಶೋಧದ ಪ್ರವೃತ್ತಿಯ ಸೂಚಕವೂ ಆಗುತ್ತವೆ ಎನಿಸುತ್ತದೆ;
- 'ಹೇಳಿದಂತೆ ಕೇಳು', 'ಹೇಳಿದಷ್ಟು ಕೇಳು' ಎಂದು ಗಂಡ ಹೆಂಡತಿಗೆ, ಗಂಡಸು ಹೆಂಗಸಿಗೆ, ಹಿರಿಯರು ಕಿರಿಯರಿಗೆ, ಒಡೆಯ ಆಳಿಗೆ, ಪ್ರಭು ಪ್ರಜೆಗೆ ಆಗಾಗ ಹೇಳುವುದುಂಟು; 'ಕೇಳು' ಪದ ಪುರುಷ ಪ್ರಾಧಾನ್ಯದ, ಹಿರಿತನದ/ಯಜಮಾನಿಕೆಯ ಬಂಡವಾಳಶಾಹಿ, ಪುರೋಹಿತಶಾಹಿ ಹಾಗೂ ಪ್ರಭುತ್ವಶಾಹಿಯ, ದಬ್ಬಾಳಿಕೆಯ ವ್ಯವಸ್ಥೆಯ ಪೋಷಕವಾಗಿಯೂ ಕಾಣುತ್ತದೆ; ಪ್ರೀತಿ, ವಿಶ್ವಾಸ, ಸಮಧಾನ, ಸಮಜಾಯಿಷಿಯ ವಿಧಾನಗಳಿಗೂ ಈ ಮಾತು ಧ್ವನಿಯಾಗುತ್ತದೆ ಎಂಬುದನ್ನು ಮರೆಯುವಂತಿಲ್ಲ; 'ಕೇಳ್ರಪ್ಪೋ ಕೇಳ್ರಿ' ಎಂಬುದೊಂದು ಜನಪದರ ಘೋಷಣಾ ನುಡಿಗಟ್ಟು; ಗ್ರಾಮಪಂಚರ ಸೂಚನೆಯಂತೆ ತಳವಾರ ಪ್ರಕಟಣೆಗಳನ್ನು ಜನರಿಗೆ ತಲುಪಿಸುವ ವಾಗ್ರೂಢಿ ಇದಾಗಿದೆ; `Listen, all of you listen' is a declarative idiom of folk; to listen what it is said to be;
- 'ಹೇಳೀಕೇಳಿ ಸರಿಹೊತ್ನಲ್ ಬಂದಂಗಾಯ್ತು', 'ಹೇಳೀಕೇಳಿ ಅವ್ನ್ ಮಾತ್ ನಂಬ್ಕಂದ್ ಕುಂತಿದ್ದಿ' ಇತ್ಯಾದಿ ಮಾತುಗಳೂ ಉಂಟು; ಅವೇಳೆ, ಅನೌಚಿತ್ಯ, ಅಪಾತ್ರ ಮೊದಲಾದ ಭಾವಗಳು ಇಲ್ಲಿ ವ್ಯಕ್ತವಾಗುತ್ತವೆ;
- ಹೇಳುವ ಮತ್ತು ಕೇಳಿಸಿಕೊಳ್ಳುವ ಪ್ರಕ್ರಿಯೆಯ ಪ್ರಾಮುಖ್ಯ ಮತ್ತು ಪ್ರಚುರತೆಯನ್ನು ಮೇಲಿನ ನಡಿಗಟ್ಟುಗಳು ಸಾಕ್ಷೀಕರಿಸುತ್ತವೆ; Narration and listening process is important which causes to form the proverbs;
- 'ಕೇಳ್'ಧಾತು; ಕೇಳು(+–ಉ), ಕೇಳಿಕೆ(+–ಇಕೆ); ಕೇಳಿಸು(+–ಇಸು), ಕೇಳಿಸಿಕೊ(+–ಇಸು+–ಕೋ), ಕೇಳಿಸಿಕೊಳ್(+–ಇಸು+–ಕೊಳ್) ಮುಂತಾದ ರೂಪಗಳು ಇದರಿಂದ ಸಿದ್ಧಿಸುತ್ತವೆ;
- ತು:ಕೇಣ್; ತ:ಕೇಡ್, ಕೇಟ್, ಕೇಳ್; ಮ:ಕೇಳ್;
- —***ಕೇಳಗೊಡು*** : ಕೇಳಿಸಿಕೊಳ್ಳಲು ಬಿಡು; ಕೇಳಿಸಿಕೊಳ್ಳಲು ಅವಕಾಶ ಕೊಡು; 'ಗಲಾಟೆ, ಗದ್ದಲ, let it be listened by avoiding sounds cry quarrel; ಅಡ್ಡಿ, ಅಡಚಣೆಗಳನ್ನು ನಿಲ್ಲಿಸಿ ಇನ್ನೊಬ್ಬರು ಹೇಳುತ್ತಿರುವುದನ್ನು ಕೇಳಿಸಿಕೊಳ್ಳಲು

ನನ್ನನ್ನು ನನ್ನಷ್ಟಕ್ಕೆ ಬಿಡು' ಎಂದು ಭಾವ; <ಕೇಳ+ಕೊಡು; ಕೇಳಲು+ಕೊಡು; ಕ>ಗ ವ್ಯತ್ಯಯ;

- ***—ಕೇಳಿಕೊಟ್ಟು*** : ದೂರದವರೆಗೂ ಕೇಳಿಸುವಂತೆ ಚಂಡೆಯನ್ನು ಬಾರಿಸುವುದು(ತು.); ಯಕ್ಷಗಾನ ಅಥವಾ ಕಥಕ್ಕಳಿಯ ಆಟದ ಪ್ರಾರಂಭಕ್ಕೆ ಮುನ್ನ, ಆಟ ಇನ್ನೇನು ಆರಂಭವಾಗುತ್ತದೆ ಎಂಬ ಸೂಚನೆ ಕೊಡಲು ಹೀಗೆ ಚಂಡೆಯನ್ನು ಬಾರಿಸುತ್ತಾರೆ; to beat `Chande' a leather rhythm instrument; during the beginning of Yakshagana to indicate its beginning for the people; ವ್ಯರೂ: ಕೇಳುಕೊಟ್ಟು;
- ***—ಕೇಳಿಬರು*** : ಆಗಾಗ ಕೇಳಿಬರುವುದು; ಹೆಸರು, ಹೆಸರುವಾಸಿತನ, ಪ್ರಚುರತೆ, ಪ್ರಸಿದ್ಧಿಗಳನ್ನು ಹೇಳಲು ಬಳಕೆ; ಕೇಳು+–ಇ+ಬರು(ಬರುವುದು/ಬರುವಿಕೆ); to listen often; to fame;
- ***—ಕೇಳೆಡ*** : < ಕೇಳ್ಬೇಡ < ಕೇಳಬೇಡ; ಕೇಳಿಸಿಕೊಳ್ಳಬೇಡ(ನಿಷೇಧಾರ್ಥಕ ಕ್ರಿಯೆ); don't listen;
- ***—ಕೇಳ್ತೆ*** : <ಕೇಳುತ್ತೇನೆ; ಕೇಳು+ಉತ್ತೆ (<ಉತ್ತೇನೆ?); the process of listening;
- ***—ಕೇಳೊತ್ಗೆ*** : <ಕೇಳೋಹೊತ್ತಿಗೆ<ಕೇಳುವ ಹೊತ್ತಿಗೆ; ಕೇಳಿಸಿಕೊಳ್ಳುತ್ತಿರುವ ಸಮಯಕ್ಕೆ; ಕೇಳಿಸಿಕೊಂಡ ಕಾರಣಕ್ಕೆ; ಇಲ್ಲಿ 'ಹೊತ್ತು' ಸಮಯ, ನಿಮಿತ್ತ ಎಂಬ ಅರ್ಥದಲ್ಲಿ ಬಳಕೆ. The time of listening.

ಕೇಳ್ಗಂಬ Kēḷgamba:

- ಮನೆಯ ತೊಲೆ ಹಾಗೂ ಸೂರಿನ ಭಾರವನ್ನು ಹೊತ್ತು ನಿಂತಿರುವ ಎತ್ತರದ ಕಂಬ; The center post which bears the burden of beams and the top of home;
- ಮನೆಯ ತೀರು, ಜಂತಿ, ತೊಲೆಗಳಿಗೆ ಆಧಾರವಾಗಿ ಅವುಗಳ ಕೆಳಗೆ ನಿಲ್ಲಿಸಿರುವ ದಪ್ಪಗಾತ್ರದ ಮುಖ್ಯ ಕಂಭ;
- ತೀರು ಹಾಗೂ ಜಂತಿಗಳ ಭಾರ ಹೊರಲು ಅಡ್ಡಲಾಗಿ ಕೊಟ್ಟಿರುವ ನೆತ್ತಿಮರ(ತುದಿಮರ)ಕ್ಕೆ ಅದರ ಭಾರ ಹೊರಲು ಆಧಾರವಾಗಿ ನಿಲ್ಲಿಸಿರುವ ಕಂಭ;
- ಕೆಳಕಂಬ>ಕೇಳ್ಗಂಬ ಆಗಿರುವ ಸಾಧ್ಯತೆ ಇದೆ, ಮನೆಯ ಚಾವಣೆಯ ಪರಿಕರಗಳೆಲ್ಲಕ್ಕೆ ತಳದಲ್ಲಿ ನಿಲ್ಲಿಸುವುದರಿಂದ 'ಕೆಳಕಂಬ' ಎಂದು ಕರೆದಿರುವುದು ಸಾಧ್ಯ; ಆದರೆ ಕೆಳಕಂಬ>ಕಿಳ್ಗಂಬ ಆಗಬೇಕಿತ್ತು; ಕೇಳ್ಗಂಬ ಆಗಿರುವುದು ವಿಶೇಷ;
- ಕಿಳ್(=ಕೆಳಗು) ಮೂಲರೂಪ; ಕಿಳ್>ಕೆಳ ಆಗುತ್ತದೆ (ಇ>ಎಸ್ವರವ್ಯತ್ಯಯ);ಕೆಳ+ಕಂಬ=ಕೆಳಗಂಬ(ಕ>ಗ ವ್ಯತ್ಯಯ); 'ಕೆಳಗಂಬ'ವೇ ಯಾದೃಚ್ಛಿಕ ಉಚ್ಚಾರಣೆಯ 'ಕೇಳ್ಗಂಬ' ಆಗಿದೆ ಎನ್ನಬಹುದು;
- ಕೊಮರ(ಪರೂ.–ಚಾ.ಜಿ.).

ಕ್ಷೇಮಪುರ kṣēmapura :

- ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೋಕಿನ ಕ್ರಿ.ಶ.೧೬ನೇ ಶ.ದ ೮೯ನೇ ಶಾಸನದಲ್ಲಿ ಉಲ್ಲೇಖ; A village referred in 89th inscription of 16th century AD found in Sagara taluk, Shivmogga district;
- ಕೇಶವಪುರದ ನೇಮೀಶ್ವರ ಬಸದಿಯ ಮಾನಸ್ತಂಭಕ್ಕೆ ಚಿನ್ನದ ಕಳಸವನ್ನು ಹಾಕಿಸಿದ ವಿವರವಿರುವ ಶಾಸನ ಇದಾಗಿದೆ;
- ಕ್ಷೇಮ+ಪುರ=ಕ್ಷೇಮಪುರ; 'ಕ್ಷೇಮ' ಎಂದರೆ ಮನೆ, ವಾಸಸ್ಥಾನ, ನೆಮ್ಮದಿ, ಮಂಗಳ, ಕಲ್ಯಾಣ ಎಂದು ಅರ್ಥ; 'ಪುರ' ಎಂದರೆ ಒಂದು ಚಿಕ್ಕಹಳ್ಳಿ;
- ವಾಸಸ್ಥಾನಕ್ಕೆ ಯೋಗ್ಯವಾಗಿರುವ ಮನೆಗಳಿರುವ 'ಪುರ' ಎಂದು ಅರ್ಥೈಸಬಹುದು;
- ಅಥವಾ ಮಂಗಳ/ಕಲ್ಯಾಣ ಎಂಬುದರ ಹಿನ್ನೆಲೆಯಲ್ಲಿ 'ಕ್ಷೇಮಪುರ' ಬಂದಿರಬಹುದು.

(E.C- ೧೫; ಶಿ.ಜಿ.)

ಕೈಂಕ kaiŋka :

Apodytes dimidiate; ಮಧ್ಯಮ ಗಾತ್ರದ ಮರ; ತೆಳುವಾದ ಎಲೆಗಳನ್ನು ಹೊಂದಿದೆ; ಎಲೆಗಳು ಒಣಗಿದಾಗ ಕಪ್ಪಾಗುತ್ತವೆ. A normal middle sized tree.

ಕೈಂಕಲು kaiŋkalu :

ಮೀನಿನ ಒಂದು ಬಗೆ(ಬ.ಜಿ.). A kind of fish species.

ಕೈಂಪೆ/ಕೈಪೆ kaimpe/kaipe :

- ಕಯ್ಪೆ, ಕಹಿ, ಕಹಿರುಚಿ, ತಿಕ್ತ, ಷಡ್ರಸಗಳಲ್ಲಿ ಒಂದು; A tasty of bitterness;

- ಪಿತ್ತಕೋಶ; ಪ್ರಾಣಿ ಮತ್ತು ಪಕ್ಷಿಗಳ ದೇಹದಲ್ಲಿ ಈಲಿ(liver)ಗೆ ಅಂಟಿಕೊಂಡಂತಿರುವ ಹಸಿರು ಬಣ್ಣದ ಕೋಶ; ಇದು ಕಹಿಯಾಗಿರುತ್ತದೆ (ಕೊಡ.ಜಿ./ದ.ಕ); A tissue or a poisonous cell which is on the liver;
- ಕುರಿ, ಕೋಳಿಗಳನ್ನು ಮಾಂಸಕ್ಕಾಗಿ ಕೊಂದಾಗ ಅದರ ಈಲಿ(liver) ಭಾಗದಲ್ಲಿ ಹೊಂದಿಕೊಂಡಿರುವ ಈ ಪಿತ್ತಕೋಶವನ್ನು ತೆಗೆದು ಹೊರ ಹಾಕುತ್ತಾರೆ; ಇದು ಮಾಂಸದ ಜೊತೆ ಬೆರೆತುಕೊಂಡರೆ ಮಾಂಸವೆಲ್ಲವೂ ಕಹಿಯಾಗಿ ಉಪಯೋಗಿಸಲು ಯೋಗ್ಯವಾಗಿರುವುದಿಲ್ಲ;
- *ಪ್ರ: 'ಕೈಂಪೆ ತೆಗಿದಿದ್ರೆ ಮಾಂಸವೆಲ್ಲ ಕಹಿ'; 'ಪೈತ್ತಿಕಮಾಗಿರ್ದವರ್ಗೆ ಪಾಲ್ ಕಯ್ಪೆಯಪ್ಪವೋಲ್...' (ಅ.ಜಿ.ಪು. ೨-೯೨);*
- ಕಂಯ್+ಪೆ=ಕಂಯ್ಪೆ/ಕಯ್ಪೆ>ಕೈಂಪೆ/ಕೈಪೆ; **ವ್ಯದೂ:** ಕೈಂಕಲ.

ಕೈಂಬೀಜ kaimbīja :
- ಕೆಟ್ಟ ವ್ಯಕ್ತಿ(ಬೆ.ಜಿ.); Wicked person; a man of bad conduct;
- ಕಹಿ ಬೀಜ ಮೊಳೆತು ಮರವಾಗಿ ಕಹಿ ಹಣ್ಣುಗಳನ್ನು ನೀಡುತ್ತದೆ; ಕೆಟ್ಟವನಾದವನು ತನ್ನ ಸಹವಾಸಕ್ಕೆ ಇತರರನ್ನು ಸೆಳೆದು ಅವರನ್ನೂ ಕೆಟ್ಟವರನ್ನಾಗಿಯೇ ಮಾಡುತ್ತಾನೆ; ಆತನ ಕೆಟ್ಟತನ ಬೀಜದಲ್ಲಿನ ಕಹಿಯಂತೆ ಮೂಲಗುಣವೇ ಆಗಿರುತ್ತದೆ ಎಂಬುದನ್ನು ಈ ಪದ ಬಿಂಬಿಸುತ್ತದೆ; the word indicates a philosophy that bitter seed gives bitter fruits, in the same sense bad man make his companions bad; *ಪ್ರ: 'ಅವಾ ಕೆಟ್ಟ ಕೈಂಬೀಜ ಅದಾನ'.*

ಕೈ ಅಡ್ಕ kai aḍka :
- ನಿಯಂತ್ರಣ(ತು.ಜಿ.); to control;
- ಯಾವುದೇ ವಿಚಾರಗಳಲ್ಲಿ ಹಿಡಿತ ಸಾಧಿಸುವುದು; ಹತೋಟಿ; *ಪ್ರ: 'ಅಧ್ಯಕ್ಷರು ನಿಂತು ಸಭೆಯಲ್ಲಿನ ಗದ್ದಲವನ್ನು ಕೈಅಡ್ಕ ಮಾಡಿದರು'.* To control on any issues; to achieve control on anything or any issue.

ಕೈ ಅಲ್ವೆ kai alve :
- ಕೈಹಲುಬೆ; An agricultural equipment;
- ಕೃಷಿ ಉಪಕರಣ; ಹೊಲಗದ್ದೆಗಳಲ್ಲಿ ಮಣ್ಣಿನ ಹೆಂಟೆಯನ್ನು ಒಡೆಯಲು ಬಳಸುವ ಸಾಧನ; ಇದರಲ್ಲಿ ದೊಡ್ಡ ಹಲುಬೆ, ಕೈಹಲುಬೆ(ಚಿಕ್ಕಹಲುಬೆ) ಎಂದು ಎರಡು ವಿಧಗಳಿವೆ; ದೊಡ್ಡ ಹಲುಬೆಯನ್ನು ಎತ್ತುಗಳಿಗೆ ಕಟ್ಟಿ ಎಳೆಸುತ್ತಾರೆ; ಕೈಹಲುಬೆಯನ್ನು ಚಿಕ್ಕ ಚಿಕ್ಕ ಪಾತಿ ಮಾಡುವಾಗಿ ಮಣ್ಣನ್ನು ಮಟ್ಟ ತಳ್ಳಲು, ಈರುಳ್ಳಿ, ಬೆಳ್ಳುಳ್ಳಿ ಇತರೆ ನೆಡುವಲ್ಲಿ ಸಾಲು ಹೊಡೆಯಲು ಕೈಯಲ್ಲಿ ಹಲುಬೆಯನ್ನು ಹಿಡಿದು ಎಳೆಯುತ್ತಾರೆ; ಇಂತಹ ಚಿಕ್ಕ ಹಲುಬೆಯನ್ನು ಕೈಹಲುಬೆ ಎಂದು ಕರೆಯುತ್ತಾರೆ; farming tool that is used to break the clods of the field and to make the field level, Halabe-Alabe is used to level the field property;
- ಕೈ+ಹಲುಬೆ>ಕೈ+ಹ್+ಅಲುಬೆ>ಕೈ+Ø+ಅಲುಬೆ>ಕೈಅಲುಬೆ>ಕೈಅಲುವೆ>ಕೈಅಲ್ವೆ;
- 'ಹಲುಬೆ' ಪದವು 'ಕೈ' ಪದದೊಡನೆ ಸೇರುವಾಗ 'ಹ್'ಕಾರ ಶೂನ್ಯ ಧ್ವನಿಮಾ(Ø) ಆಗಿ ಕಳೆದು ಹೋಗುತ್ತದೆ; ನಂತರ 'ಕೈ' ಜೊತೆ ಸ್ವರ 'ಅ' ಸೇರಿ 'ಕೈಅಲುಬೆ' ಆಗುತ್ತದೆ; 'ಬ'ಕಾರಕ್ಕೆ 'ವ'ಕಾರ ಬಂದು 'ಕೈಅಲುವೆ'ಯಾಗಿ, ಉಚ್ಚಾರಣೆಯಲ್ಲಿ 'ಕೈಅಲ್ವೆ'–ಯಾಗಿದೆ;
- *ಪ್ರ: 'ಕೈಅಲ್ವೆ ತಕಂಡು ಪಾತಿ ಸಮಮಾಡಿ, ಬೇಗ ಬೇಗ ಸಾಲು ಹೊಡಿ'.*

ಕೈ ಅಳತಿ kai aḷati :
- ೧.ಒಂದು ವಸ್ತುವನ್ನು ಅಂಗೈಯಲ್ಲಿ ಹಿಡಿದು ನೋಡಿ ಅದರ ಅಂದಾಜು ಪ್ರಮಾಣ ನಿರ್ಣಯಿಸುವ ವಿಧಾನ; ೨.ಸ್ವಲ್ಪ ಪ್ರಮಾಣದ ಧಾನ್ಯವನ್ನು ಬೊಗಸೆಯಿಂದ ಅಳೆಯುವ ವಿಧಾನ(ಚಿ.ಪ.ಕೋ.); A system of measuring a thing by putting on palm;
- ಕೈ+ಅಳತೆ=ಕೈಅಳತೆ>ಕೈಅಳತಿ; An hand measuring;
- 'ಅಳತೆ' ಪದದಲ್ಲಿನ ಅಂತ್ಯ ಸ್ವರ 'ಎ'ಕಾರವು ಪ್ರಾದೇಶಿಕ ಭೇದದಿಂದಾಗಿ 'ಇ'ಕಾರವಾಗಿದೆ;
- ಅಡಿಗೆ ಮಾಡುವಾಗ, ಸಾರಿಗೆ ಉಪ್ಪು ಹಾಕುವಾಗ ಕೈಅಳತೆ/ಕೈಅಳತಿಯಲ್ಲಿ ಹಾಕುವುದುಂಟು;

- ಪ್ರಮಾಣದ ಜೊತೆಗೆ ದೂರವನ್ನು ಹೇಳಲು ಸಹ ಇದು ಬಳಕೆಯಾಗುತ್ತದೆ; ಉದಾಹರಣೆಗೆ: 'ಮಾವಿನ ಮರದಲ್ಲಿ ಮಾವಿನ ಕಾಯಿಗಳು ಕೈಅಳತೆ/ ಕೈಅಳತಿಯಲ್ಲಿ ತೂಗಾಡುತ್ತಿವೆ' ಎಂದು ಹೇಳುವುದುಂಟು; it is used to say quantity and distance;
- ಉಚ್ಚಾರಣೆಯಲ್ಲಿ 'ಯ'ಕಾರ ಬರುವುದರೊಡನೆ ಕೈ+ಅಳತೆ>ಕೈಯಳತೆಯೂ ಕಾಣಿಸಿಕೊಳ್ಳುವುದುಂಟು; ಕ್+ಅಇ>ಕೈ ಆಗುವಾಗಲೇ ಉಚ್ಚಾರಣೆಯಲ್ಲಿ 'ಯ'ಕಾರದ ವಾಸನೆ ಕಂಡು ಬರುತ್ತದೆ.

ಕೈ ಅಳ್ಳಿ kai aḷḷi :

- ಕೈಅರಳೆ; ಗಾದಿ, ದಿಂಬುಗಳನ್ನು ತಯಾರಿಸುವ ಪಿಂಜಾರರು ಸ್ವಲ್ಪ ತೆಗೆದಿಟ್ಟುಕೊಳ್ಳುವ ಅರಳೆ (ಸಂಗ್ರಹಿತ ಅರಳೆಯನ್ನು ಕೊನೆಗೆ ಮಾರಿ ಅದರಿಂದ ಬಂದ ಹಣವನ್ನು ತಮ್ಮ ಶರಣರಿಗೆ ಅರ್ಪಿಸುತ್ತಾರೆ) (ಚಿ.ಪ.ಕೋ); Hand cotton which is used to manufacture pillows and beds, cushions;
- ಕೈ+ಅರಳೆ=ಕೈಅರಳೆ>ಕೈಅಳ್ಳೆ>ಕೈಅಳ್ಳಿ;
- 'ಅರಳೆ; ಪದ ಉಚ್ಚಾರಣೆಯಲ್ಲಿ 'ಅಳ್ಳೆ'ಯಾಗಿ, ನಂತರ ಪ್ರಾದೇಶಿಕ ಭೇದದಿಂದಾಗಿ ಅಂತ್ಯ 'ಎ'ಕಾರ 'ಇ'ಕಾರವಾಗಿ 'ಅಳ್ಳಿ'ಯಾಗುತ್ತದೆ; `Arale' means `cotton';
- 'ಕೈಅಳ್ಳಿ' ಉಚ್ಚಾರಣೆಯಲ್ಲಿ ಹಾಗೆಯೇ ಉಳಿಯದೆ, 'ಯ'ಕಾರದ ಮಧ್ಯ ಪ್ರವೇಶದಿಂದಾಗಿ 'ಕೈಯಳ್ಳಿ' ಆಗುತ್ತದೆ; 'ಕೈ' ರೂಪದಲ್ಲಿರುವ 'ಅಇ'ಗೆ 'ಯ' ಬಂದು ಕಯ್(ಕ್+ಅಇ) + ಅಳ್ಳಿ = ಕೈಯಳ್ಳಿ ಆಗುವುದೂ ಇದೆ.

ಕೈ ಆಟ kai āṭa :

- ಮಕ್ಕಳಾಡುವ ಒಂದು ಜನಪದ ಕ್ರೀಡೆ; A folk game of children;
- ಹದಿನೈದು-ಇಪ್ಪತ್ತು ಮಕ್ಕಳು ಕೂಡಿ ವೃತ್ತಾಕಾರವಾಗಿ ಕುಳಿತು ಆಡುವ ಆಟ; ಕೈಗಳನ್ನು ಬೆನ್ನ ಹಿಂದೆ ಇಟ್ಟುಕೊಂಡು ಕುಳಿತುಕೊಳ್ಳುತ್ತಾರೆ; ವೃತ್ತದ ಮಧ್ಯೆ ಒಬ್ಬ ನಿಂತು ಪ್ರಶ್ನೆ ಹಾಕುತ್ತಾನೆ; ಇದಕ್ಕೆ ಕುಳಿತವರು ಉತ್ತರ ಹೇಳಬೇಕು;
- ಪ್ರಶ್ನೆ: ಕೈಕೈ ಎಲ್ಲೋಯ್ತು?
  ಉ: ಸಂತೇಗೆ ಹೋಯ್ತು;
  ಪ್ರ: ಸಂತೇಲಿ ಏನ್ ತತ್ತು?;
  ಉ: ಕಬ್ಬು ತತ್ತು;
- ಹೀಗೆ ಹೇಳುತ್ತಾ ಕೈಗಳನ್ನು ಮುಂದಕ್ಕೆ ತಂದು ಕೈಬಂತು, ಕೈಬಂತು ಎಂದು ಚಪ್ಪಾಳೆ ಹೊಡೆಯುತ್ತಾರೆ; ಅಲ್ಲಿಗೆ ಆಟ ಮುಗಿಯುತ್ತದೆ;
- ಕೈಯನ್ನು ಪ್ರಧಾನವಾಗಿ ಬಳಸುವುದರಿಂದ ಇದು 'ಕೈಆಟ'ವಾಗಿದೆ; ಇದಕ್ಕೆ 'ಕೈಕೈ ಅವುಸಾಟ' ಎಂದು ಕರೆಯುವುದೂ ಉಂಟು;
- 'ಕೈಆಟ' ಹೀಗೆ ಬಿಡಿಯಾಗಿಯೇ ಉಚ್ಚಾರಣೆಯಲ್ಲಿ ನಿಲ್ಲುವುದಿಲ್ಲ; 'ಯ'ಕಾರದ ಮಧ್ಯೆ ಪ್ರವೇಶದಿಂದ 'ಕೈಯಾಟ; ಆಗಿ ರೂಪ ಪಡೆಯುತ್ತದೆ; ಹಾಗೆ ನೋಡಿದರೆ 'ಕೈ'ನಲ್ಲಿಯೇ 'ಯ'ಕಾರದ ಸೂಚನೆ ಇದೆ; ಕ್+ಅಇ=ಕಯ್>ಕೈ ಆಗುವುದಿದೆ; ಬಹಳ ಸಂದರ್ಭಗಳಲ್ಲಿ ಇಂತಹ ಪ್ರಕ್ರಿಯೆ ಜರುಗುತ್ತದೆ.

ಕೈ ಆಡು/ಕೈಯಾಡು kai āḍu/kaiyāḍu :

- ಕಳೆಕೀಳು(ಮಂಡ್ಯ.ಜಿ); To remove weed from crop;
- ಕೈಯಾಡು; ಭತ್ತದ ಗದ್ದೆ ಅಥವಾ ಹೊಲದಲ್ಲಿ ಬೆಳೆದ ಪೈರುಗಳ ನಡುವಿನ ಬೇಡವಾದ ಕಳೆಗಿಡಗಳನ್ನು ತೆಗೆದು ಹಾಕುವುದು(ಹಾ.ಜಿ); to pluck weeds among paddy crop or plants;
- ಬತ್ತದ ಗದ್ದೆಯಲ್ಲಿ ಬಂದ ಕಳೆಯನ್ನು, ತೆಗೆಯುವುದನ್ನು 'ಕೈಆಡುವುದು/ಕೈಯಾಡುವುದು' ಎಂದು ಹೇಳುವುದು ವಾಡಿಕೆ;
- ನೀರು ಇರುವ ಗದ್ದೆಯಲ್ಲಿ ಬತ್ತದ ಬುಡಗಳ ನಡುವೆ ಕೈ ಆಡಿಸುತ್ತ, ಕಳೆಸಸ್ಯಗಳನ್ನು ಕಿತ್ತು ಹಾಕುತ್ತಾರೆ; ಬತ್ತದ ಬುಡದಲ್ಲಿ ಕೈಆಡಿಸುವುದರಿಂದ ಕಳೆ ನಾಶವಾಗುವುದರ ಜೊತೆಗೆ ಬತ್ತದ ಪೈರುಗಳ ಮೇಲ್ಪದರದಲ್ಲಿರುವ 'ಪಾಸು ಬೇರುಗಳು ಕಿತ್ತು, ಪೈರು ಆಳಕ್ಕೆ ಬೇರು ಬಿಡಲು ಕಾರಣವಾಗುತ್ತದೆ; ಇದರಿಂದ ಬತ್ತ, ಬುಡಗಟ್ಟಿ ಹುಲುಸಾಗಿ ಬೆಳೆಯುವಂತಾಗುತ್ತದೆ; *ಪ್ರ: 'ಬತ್ತದ ಗದ್ದೆಗೆ ನೀರು ತುಂಬಾಕ್ಬೇಡ, ನಾಳೆ ಕೈಆಡಲು ಆಳು ಬತ್ತಾರೆ';*
- ***—ಕೈಯಾಡು*** : ಕೈ+ಆಡು; ತನ್ನದಲ್ಲದ ಸಂಪತ್ತನ್ನು ಹೇಗಾದರೂ ಮಾಡಿ ಪಡೆದುಕೊಳ್ಳುವುದು; *ಪ್ರ: 'ಇದು ಸಾರ್ವಜನಿಕರ ಹಣ, ಕೈಯಾಡಬೇಡ';* getting money or fortune at any rate of risk for the sake of selfinterest;

- ಮನೆಗೆ ಹೊದಿಸಿದ ನಾಡ ಹೆಂಚುಗಳಲ್ಲಿ ಕಟ್ಟಿದ ಧೂಳು, ಕಸ ತೆಗೆದು, ಒಡೆದ ಹೆಂಚುಗಳನ್ನು ಬದಲಾಯಿಸಿ ಹೊಸ ಹೆಂಚು ಹಾಕಿ ಮಳೆಗಾಲದಲ್ಲಿ ಸೋರದಂತೆ ಸರಿಪಡಿಸುವ ಕಾರ್ಯ; *ಪ್ರ: 'ಮಳೆಗಾಲ ಆರಂಭವಾಗುವ ಮೊದಲು ಮನೆಯ ಹೆಂಚು ಕೈಯಾಡಬೇಕು';* it is an hand work of cleaning clay tiles of house roofs which are to covered with dust and removed spoiled tiles;
- **—ಕೈ ಆಡಿಸು** : ಕೈ+ಆಡು+ಇಸು>ಕೈಯಾಡಿಸು ('ಯ'ಕಾರಾಗಮನ + 'ಇಸು' ಪ್ರತ್ಯಯ);
- ಇದು ಆಗುವುದಿಲ್ಲ, ಇದಕ್ಕೆ ನನ್ನ ಒಪ್ಪಿಗೆಯಿಲ್ಲ ಎಂಬಂತೆ ನಕಾರಾತ್ಮಕ ಭಾವನೆಯನ್ನು ವ್ಯಕ್ತಪಡಿಸುವ ವಿಧಾನ; the system of negative approach;
- ನೆರೆದ ಜನರಿಗೆ ತನ್ನ ಸಂತೋಷವನ್ನು, ಅಭಿನಂದನೆಯನ್ನು ಸೂಚಿಸುವಿಕೆ; *ಪ್ರ: ೧.'ಅಲ್ಲಿನ ತೀರ್ಮಾನಕ್ಕೆ ತಾನು ಬದ್ಧನಾಗುವುದಿಲ್ಲವೆಂಬಂತೆ ಕೈಆಡಿಸಿ ಎದ್ದುಹೋದ'; ೨.'ನೆರೆದಿದ್ದ ಅಭಿಮಾನಿಗಳತ್ತ ಕೈಆಡಿಸಿ ವೇದಿಕೆಯಿಂದ ಇಳಿದು ಹೊರಟರು';* to show one's own happiness to the gathered folk;
- ಕೈಯಾಡಿಸು; ಕೈ(ಕಯ್)+ಆಡಿಸು=ಕೈಯಾಡಿಸು;
- ಕೈಯನ್ನು ಅಲ್ಲಾಡಿಸು; ಕೈ ಬೀಸಿ ಗಮನ ಸೆಳೆಯುವುದು; to draw one's attention to shake hands in air towards oneself;
- ಒಣಗಲು ಹಾಕಿದ ಕಾಳು ಇತ್ಯಾದಿಯನ್ನು ಮಗುಚಿ ಹಾಕುವುದು; ತಿರುವಿ ಹಾಕುವುದು;
- ಬೆಳೆಗಳ ಮಧ್ಯೆ ಬೆಳೆದಿರುವ ಕಳೆಯನ್ನು ಕೀಳುವುದು;
- ಸಾಹಿತ್ಯ ಕ್ಷೇತ್ರದಲ್ಲಿ ಬರವಣಿಗೆ ಮೂಲಕ ಪ್ರವೇಶಿಸು;
- ಯಾವುದೇ ಕೆಲಸ ಕಾರ್ಯಗಳಿಗೆ ತೊಡಗಿಸಿಕೊಳ್ಳುವುದು; ಕೈಹಾಕುವುದು;
- ಹಲವು ಕ್ಷೇತ್ರಗಳಲ್ಲಿ ಜ್ಞಾನ ಹೊಂದಿ ಪರಿಣತರಾಗಿ ಕಾರ್ಯ ಸಾಧಿಸಿರುವುದು.

ಕೈ ಆಭರಣ kai ābharaṇa :

- ಕೈಗಳಿಗೆ ಧರಿಸುವ ಆಭರಣಗಳು; jewels worn to hands, fingers, wrists made up of gold, silver;
- ಚಿನ್ನ ಅಥವಾ ಬೆಳ್ಳಿಯಿಂದ ಮಾಡಿದ ಬಳೆಗಳು, ಕಡಗಗಳು, ಗಂಡಸರು ಧರಿಸುವ ಚಿನ್ನದ ಕಪ್ಪ ಮೊದಲಾದವುಗಳು;
- ಕಯ್+ಆಭರಣ>ಕಯ್ಯಾಭರಣ>ಕೈಯಾಭರಣ; ಕ್+ಅಇ(ಯ್)+ಆಭರಣ>ಕೈಯಾಭರಣ ಉಚ್ಚಾರಣೆಯಲ್ಲಿ ನಡೆಯುವ ಪ್ರಕ್ರಿಯೆ.

ಕೈ ಉಜ್ಜುಗೊರ್ಡ/ಕೈ ಉಜ್ಜುಗೊಲ್ಡ kai ujjugorḍa/kai ujjugolḍa :

- ಕೈಯಿಂದ+ಉಜ್ಜುವ+ಕೊರಡು>ಕೈಉಜ್ಜುಗೊರಡು>ಕೈ ಉಜ್ಜುಗೊರ್ಡ>ಕೈಉಜ್ಜುಗೊಲ್ಡ;
- ಒಣಗಿದ ಮರದ ತುಂಡು; ಕೃಷಿ ಕೆಲಸದಲ್ಲಿ ಮಣ್ಣು ಹೆಂಟೆಗಳನ್ನು ಪುಡಿ ಮಾಡಲು ಬಳಸುವ ಉಪಕರಣ; ಇದು ಗಾತ್ರದಲ್ಲಿ ಚಿಕ್ಕದಾಗಿರುತ್ತದೆ; *ಪ್ರ: 'ಕೈಉಜ್ಜುಗೊರ್ಡ ತಗೊಂಡು ಮಣ್ಣು ಹೆಂಟೆನೆಲ್ಲಾ ಪುಡಿ ಮಾಡು';* A tool that is used to powder the soil clod by beating them;
- **—ಕೈಉದ್ದಗೊಳ್ಡು** : ಬಡಗಿಗಳ ಒಂದು ಉಪಕರಣ; ಚಿಕ್ಕದಾದ ಉಜ್ಜುಗೊರಡು; (ಮರ ಮುಟ್ಟುಗಳ ಹೊರ ಮೈಯ ನಸು ಪ್ರಮಾಣದ ಉಬ್ಬುತಗ್ಗುಗಳನ್ನು ಉಜ್ಜಿ ತೆಗೆದು ಸಮಗೊಳಿಸಲು ಇದು ಉಪಯುಕ್ತ) (ಜಿ.ಪ.ಕೋ); A tool of carpentry that is used to smoothen or to polish outer raw surface of any timber or plank of wood;
- ಕೈ(ಕ್+ಅಇ) + ಉಜ್ಜು = ಕೈಯುಜ್ಜು + ಕೊರಡು> ಕೈಯುಜ್ಜುಗೊರಡು(ಕ>ಗ) > ಕೈಯುಜ್ಜುಗೊರ್ಡು;
- 'ಕೈಉದ್ದಗೊಳ್ಡು' ಪದ ಸಮುಚ್ಚಯದಲ್ಲಿನ 'ಉದ್ದಗೊಳ್ಡು' ರೂಪ ವಾಸ್ತವವಾಗಿ 'ಉಜ್ಜುಗೊಳ್ಡು' ಆಗಿರಬೇಕು ಏಕೆಂದರೆ ಕನ್ನಡ ಆಡುಭಾಷೆಯಲ್ಲಿ 'ದ' ಮತ್ತು 'ಜ'ಗಳು `interchange' ಆಗುವ ಸಂಭವವಿರುತ್ತದೆ; ಇಲ್ಲಿ ಆಗಿರುವುದು ಕೂಡ ಅದೇನೆ.

ಕೈ ಎಂಜ್ಲ kai eñjla :

- ಕೈ ಎಂಜಲು; hand leftover; slops;
- ಕೈ ಎಂಜಲು > ಕೈ ಎಂಜ್ಲು > ಕೈ ಎಂಜ್ಲ;
- ಮದುಮಗನಿಗೆ ಕುಲದೇವತೆ ಎದುರು ಬಾಸಿಂಗ ಕಟ್ಟಿಯಾದ ಮೇಲೆ ಆತನನ್ನು 'ಮೂರ್ತದ ಕೋಣೆ'ಗೆ ಕರೆತಂದು ವರನ ತಾಯಿ ತನ್ನ ಕೈಯಾರೆ

ಸವಿ ತಿನ್ನಿಸುತ್ತಾಳೆ; ಈ ಆಚರಣೆ ದಕ್ಷಿಣ ಕನ್ನಡ ಭಾಗದಲ್ಲಿ(ಮಂ.ಜಿ/ಉ.ಜಿ.) ರೂಢಿಯಲ್ಲಿದೆ; *ಪ್ರ: 'ವರನಿಗೆ ಬಾಸಿಂಗ ಕಟ್ಟಿದ ಮೇಲೆ ಕೈ ಎಂಜ್ಲ ತಿನ್ನಿಸಬೇಕು, ಬೇಗ ಕರೆತನ್ನಿ';* after dying Basinga- a holy thread that tied on bridegrooms forehead; the bridegroom is to be feed sweet by his own mother in a room;

- 'ಕೈ ಎಂಜ್ಲ' ಪದ ಸಮುಚ್ಚಯ 'ಕೈ' ಮತ್ತು 'ಎಂಜ್ಲ' (ಎಂಜಲು) ಎಂಬ ರೂಪಗಳಿಂದ ಆದುದು; ಇವೆರಡೂ ಕೂಡುವಾಗ ಎರಡನೆಯ ಪದಾದಿಯ 'ಎ'ಕಾರದ ಜೊತೆಗೆ 'ಯ'ಕಾರ ಕೂಡಿ 'ಕೈಯೆಂಜ್ಲ' ಆಗುವುದು ರೂಢಿ; ಆಗ ನಿಜವಾಗಿಯೂ ಕಯ್+ಎಂಜ್ಲ>ಕಯೆಂಜ್ಲ>ಕೈಯಂಜ್ಲ ಆಗಿರುವುದು; ಬರೆವಣಿಗೆ ರೂಪ ಉಚ್ಚಾರಣೆಯ ರೂಪಕ್ಕನುಗುಣವಾಗಿಯೇ ರೂಪುಗೊಂಡಿದೆ.

ಕೈ ಎತ್ತು kai ettu :

- ದಿವಾಳಿ ಆಗು; ಮೋಸ ಮಾಡು(ಬಾ.ಜಿ.); to become bankrupt; to cheat someone;
- ಇಲ್ಲವೆನ್ನು; ಅಸಮ್ಮತಿ ಸೂಚಿಸು(ಬೆಂ.ಗ್ರಾ.ಜಿ.); to show unwillingness; to surounder; to complete;
- ಹೊಡೆಯಲು ಉದ್ಯುಕ್ತನಾಗುವುದು; ಶರಣಾಗುವುದು;
- ಮುಗಿಸು; ಯಶಸ್ಸು(?); *ಪ್ರ: 'ಆತನ ವರ್ತನೆಯಿಂದ ಕೋಪಗೊಂಡು ಕೈ ಎತ್ತಿದ'; 'ಹಲವರಿಂದ ಸಾಲ ಪಡೆದು ಕೊನೆಗೆ ಅವರಿಗೆಲ್ಲಾ ಕೈಎತ್ತಿದ';*
- ಸಮ್ಮತಿ ಸೂಚಕವೂ ಹೌದು; ಸಣ್ಣ ಸಭೆಗಳಲ್ಲಿ ಅಭಿಪ್ರಾಯ ಪಡೆಯುವಾಗ, ಪರ ವಿರೋಧಗಳನ್ನು ಲೆಕ್ಕಾಚಾರ ಹಾಕುವಾಗ ಕೈಎತ್ತುವ ಪ್ರಕ್ರಿಯೆ ಇರುತ್ತದೆ; It is symbol of acceptance;
- ಅಭಿವೃದ್ಧಿ ಮತ್ತು ಕಟ್ಟುವ ಕ್ರಿಯೆಗೆ ಪ್ರತಿಮೆಯಾಗಿ ಬಿಡುವ ಸೋಜಿಗವನ್ನು ಕಾಣುತ್ತೇವೆ;
- ಕೈ+ಎತ್ತು>ಕೈಯೆತ್ತು ಆಗುವುದು ಸಹಜ; ಎರಡು ಪದಗಳು ಕೂಡುವಾಗ 'ಯ' ಅಥವಾ 'ವ' ಮಧ್ಯ ಪ್ರವೇಶಿಸುವ ಒಂದು ಭಾಷಾ ಪ್ರಕ್ರಿಯೆ; 'ಕೈ' ಎನ್ನುವುದರಲ್ಲಿಯೇ ಒಂದು 'ಯ'ಕಾರದ ಉಚ್ಚಾರಣೆ ಇರುತ್ತದೆ(ಕೈ=ಕಯ್/ಕ್ಅಇ).

ಕೈ ಒಡ್ಡು kai oḍḍu :

- ಏನನ್ನಾದರೂ ಬೇಡಿ ಪಡೆಯಲು ಬೊಗಸೆಯನ್ನು ಹಿಡಿಯುವುದು; To hold one's handful as for cup begging something or anything;
- ದೈನ್ಯದಿಂದ ಬೇಡುವಾಗಿನ ಸ್ಥಿತಿ; *ಪ್ರ: 'ಕೈಒಡ್ಡಿ ಬೇಡಿಕೊಂಡರೂ ಅವರ ಮನ ಕರಗಲಿಲ್ಲ';* the status of humble request;
- ಇಲ್ಲಿಯೂ ಕೈ+ಒಡ್ಡು>ಕೈಯೊಡ್ಡು/ಕಯೊಡ್ಡು; 'ಕೈ'ನಲ್ಲಿರುವ 'ಅಇ' ಸಂಯುಕ್ತಾರಕ್ಕೆ 'ಯ' ಬರುವುದನ್ನೂ ಇಲ್ಲಿ ಗಮನಿಸಿರಬೇಕು.

ಕೈ ಒಳಲೆ ಬಟ್ಟಲು kai oḷale baṭṭalu:

- ಸಾರು, ಪಾಯಸ ಬಡಿಸಲು ಬಳಸುವ ವಿಶಿಷ್ಟ ಪಾತ್ರೆ(ಬೆಂ.ಗ್ರಾ.ಜಿ.); ***ವ್ಯರೂ:*** ಮೂಗೊಳ್ಳೆ; A small vessel that is used to serve sauce, sweet- `payasa';
- ಇತರ ಪಾತ್ರೆಗಳಲ್ಲಿ ಸಾರು, ಪಾಯಸ ಬಡಿಸಬೇಕಾದಾಗ ಸೌಟು ಬಳಸುವುದು ಅನಿವಾರ್ಯವಾಗುತ್ತದೆ; ಆದರೆ ಕೈಒಳಲೆಯಲ್ಲಿ ಮುಂದೆ ಚೂಪಾದ ಒಳ್ಳೆ ಇರುವುದರಿಂದ ಸೌಟು ಬಳಸದೆ ಬಡಿಸುವುದಕ್ಕೆ ಅನುಕೂಲವಾಗಿರುತ್ತದೆ;
- ಎಳೆಯ ಮಕ್ಕಳಿಗೆ 'ಹಾಲು ಹುಯ್ಯಲು' ಸಲುವಾಗಿ ಮೂತಿ ಚಾಚಿರುವ ಸಣ್ಣ ರೂಪದ 'ಒಳಲೆ'ಗಳನ್ನು ಬಳಸಲಾಗುತ್ತದೆ; 'ಕೈಒಳಲೆ' ಎಂತಲೂ ಕರೆಯಬಹುದು; ಈ 'ಕೈಒಳಲೆ' ಮಾದರಿಯನ್ನೆ ಇಟ್ಟುಕೊಂಡು ದೊಡ್ಡ ಗಾತ್ರದ 'ಕೈಒಳಲೆ ಬಟ್ಟಲು'ಗಳನ್ನು ತಯಾರಿಸಿದಂತೆ ಕಾಣುತ್ತದೆ;
- ಕೈ+ಒಳಲೆ>ಕೈಯೊಳಲೆಯಾಗಿಯೇ ಉಚ್ಚಾರಣೆ ಮತ್ತು ಬರೆವಣಿಗೆಯಲ್ಲಿ ಕಂಡುಬರುತ್ತದೆ; ಅದು 'ಕಯೊಳಲೆ' ರೂಪ ಕೂಡ ಆಗಬಹುದು.

ಕೈ ಔಷಧಿ kai auṣadhi :

- ಮನೆಯ ಹಿರಿಯರು ಗಿಡಮೂಲಿಕೆಗಳಿಂದ ತಯಾರು ಮಾಡುವ ಔಷಧಿ(ಮಂಡ್ಯ.ಜಿ.); home medicine; self-prepared medicine; madeup of roots or herbs;
- ಮದ್ದು, ನಾಟಿ ವೈದ್ಯ(ಉ.ಕ.ಜಿ);
- ಗಿಡ ಮೂಲಿಕೆಗಳಿಂದ ಔಷಧಿ ತಯಾರಿಸುವ ಪದ್ಧತಿ ಭಾರತದಲ್ಲಿ ಬಹಳ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದೆ; ಇದನ್ನು ಆಯುರ್ವೇದ ಪದ್ಧತಿ

ಎಂದು ಕರೆಯುತ್ತಾರೆ; from ancient times in India herbs, roots are used to prepare medicines; this system is called as Ayurveda;

- ರೋಗದ ಉಪಶಮನಕ್ಕೆ ಬೇಕಾದ ಗಿಡ ಮೂಲಿಕೆಗಳನ್ನು ಹುಡುಕಿ ತಂದು, ಅವುಗಳನ್ನು ಅರೆದು, ಬಂದ ರಸವನ್ನು ರೋಗಿಗೆ ಕುಡಿಸಿ ಗುಣಪಡಿಸುತ್ತಿದ್ದರು; ಕೈಯಲ್ಲಿ ತಾವೇ ತಮ್ಮ ಮನೆಗಳಲ್ಲಿ ತಯಾರಿಸುತ್ತಿದ್ದ ಔಷಧಿಯಾದ್ದರಿಂದ 'ಕೈಔಷಧಿ' ಎಂದು ಕರೆಯುವುದು ವಾಡಿಕೆಯಾಗಿದೆ; ಇದನ್ನೇ 'ನಾಟಿ ಔಷಧಿ' ಎಂಬುದಾಗಿ ಹೇಳುವುದುಂಟು; *ಪ್ರ: 'ಏನೂ ಹೆದರಬೇಕಾಗಿಲ್ಲ; ಕೈಔಷಧಿಗೆ ಒಂದೆರಡು ದಿನದಲ್ಲಿ ಗುಣವಾಯ್ತದೆ';* to cure or to prevention any disease one has to prepare medicine by searching in forest;
- ಕೈ+ಔಷಧಿ>ಕೈಯೌಷಧಿ ಎಂಬ ರೀತಿಯಲ್ಲಿಯೂ ಉಚ್ಚಾರಣೆಗೆ ಬರಬಹುದು; ಕಯ್+ಔಷಧಿ>ಕೈಯೌಷಧಿಯೂ ಆಗಬಹುದು; ಮೂಲ 'ಕಯ್'(ಕ್+ಅಇ)ನಲ್ಲಿಯೇ 'ಯ'ಕಾರ ಪ್ರವೇಶವಿದೆ; ಆಮೇಲೆ 'ಔಷಧಿ' ಪದ ಸೇರುವಾಗ ಉಂಟಾಗುವ 'ಯ'ಕಾರ ಪ್ರವೇಶವೂ ಇದೆ; ಆದರೆ ಅಂತಿಮವಾಗಿ ಉಚ್ಚಾರಣೆಯಲ್ಲಿ ಒಂದು 'ಯ' ಧ್ವನಿಮಾ ಮಾತ್ರ ಕಾಣುವುದು; ಕೆಲವೊಮ್ಮೆ ದ್ವಿತ್ವ ಬಂದಂತೆ ಕಂಡು, ಆಮೇಲೆ ಸರಳವಾಗುವುದು ಸಹಜ ಪ್ರಕ್ರಿಯೆ.

ಕೈ ಕಚ್ಚು kai kaccu :

- ಮಕ್ಕಳು ಸಿಟ್ಟಿನಲ್ಲಿ ಹಿಡಿದವರ ಕೈಕಚ್ಚುವಿಕೆ; children while playing to bite themself hands each other;
- 'ಕಚ್ಚು' ಪದ ಹಳಗನ್ನಡದ 'ಕರ್ಚು' ಪದದಿಂದ ಬಂದುದು;
- 'ಕಚ್ಚು' ಎಂಬ ಪದಕ್ಕೆ 'ಕಚ್ಚುವುದು'(to bite) ಎನ್ನುವ ಅರ್ಥದೊಡನೆ 'ತೊಳೆ'(to wash) ಎಂಬ ಅರ್ಥವೂ ಇದೆ;
- ನುಡಿಗಟ್ಟಾಗಿ ಬಳಕೆ; ಆರ್ಥಿಕವಾಗಿ ನಷ್ಟ ಅನುಭವಿಸುವುದು; it is used as idiom that refers to a person who experienced financial loss;
- ಯಾವುದೇ ವ್ಯವಹಾರದಲ್ಲಿ ಅನುಭವ ಸಾಲದೆ, ಹಾಕಿದ ಬಂಡವಾಳ ಹಿಂತಿರುಗಿ ಬರದೆ ನಷ್ಟ ಸಂಭವಿಸುವುದನ್ನು ಈ ಪದ ಸೂಚಿಸುತ್ತದೆ;
- ನುಡಿಗಟ್ಟಿನಲ್ಲಿ ವ್ಯವಹಾರ ಸೂಚಕವಾಗಿ ಕೈಯನ್ನೇ ಏಕೆ ಮುಂದು ಮಾಡಲಾಗುತ್ತದೆ ಎಂಬ ಪ್ರಶ್ನೆ ಬರಬಹುದು; ಕೊಡುವ ಮತ್ತು ತೆಗೆದುಕೊಳ್ಳುವ ವ್ಯವಹಾರವೆಲ್ಲ ಕೈಮೂಲಕವಾಗಿಯೇ ನಡೆಯುವುದರಿಂದ ಕೈಯನ್ನು ಪ್ರಧಾನ ಮಾಡಲಾಗಿದೆ;
- ಇಲ್ಲಿ 'ಕೈಕಡಿ' ಎಂಬ ಮಾತನ್ನೂ ನೆನಪಿಗೆ ತಂದುಕೊಳ್ಳಬಹುದು; ಇಲ್ಲಿ 'ಕೈಕಡಿ' ಎಂದರೆ ಯಾರಾದರೂ 'ದುಡ್ಡು' ಕೊಡುತ್ತಾರೆಂಬ ಭಾವನೆ/ನಂಬಿಕೆ ರೂಢಿಯಲ್ಲಿದೆ; ಕೆಲವೊಮ್ಮೆ 'ಕೈಕಡಿ'ಗೆ ಬೇರೆ ಅರ್ಥವೂ ಇದೆ.

ಕೈ ಕಟ್ಟು kai kaṭṭu :

- ಅಡಚಣೆಯಾಗು; ತೊಡಕಾಗು; to control; become an obstacle;
- ಅಸಹಾಯಕನಾಗು; ಖರ್ಚಿಗೆ ಹಣವಿಲ್ಲದಾಗು; ನುಡಿಗಟ್ಟಾಗಿ ಬಳಕೆಯಾಗುತ್ತದೆ; to become helplessness;
- ಮುಂಗೈಯಲ್ಲಿ ಧರಿಸುವ ಒಂದು ಆಭರಣ;
- ಬಿಳಿ ಮತ್ತು ಕಪ್ಪು ಮಣಿಗಳೊಂದಿಗೆ ಚಿನ್ನ ಅಥವಾ ಬೆಳ್ಳಿಯ ಗುಂಡುಗಳನ್ನು ತಂತಿಯಲ್ಲಿ ಪೋಣಿಸಿ ಮಾಡಿದ ಕೈಆಭರಣ; ಇದನ್ನು ಮಕ್ಕಳ ಕೈಗೆ ಧರಿಸುವುದುಂಟು; it is a rich wrist jewel madeup of gold, silver beads;
- ವಿಧೇಯತೆಯನ್ನು ತೋರುವುದು; ಕೈಗಳನ್ನು ಮಡಚಿ ಎದೆಯ ಮೇಲೆ ಇಟ್ಟುಕೊಳ್ಳುವುದು;
- ಯಕ್ಷಗಾನ ಪಾತ್ರಧಾರಿಗಳು ಮುಂಗೈಗೆ ಕಟ್ಟುವ ಅಲಂಕಾರ; ಬೆಂಡು ಮರದಿಂದ ಮಾಡಿ, ಬಂಗಾರದ ಬಣ್ಣ ಬಳಿದು, ತಿಳಿನೀಲಿ, ಗುಲಾಬಿ ಬಣ್ಣದ ಸುವೇರಿ ಬ್ಯಾಗಡಿ ಅಂಟಿಸಿರುವುದು; *ಪ್ರ: 'ಹಣವಿಲ್ಲದೆ ನನ್ನ ಕೈಕಟ್ಟಿದಂತಾಗಿದೆ'; 'ಅಲ್ಲಿ ಕೈಕಟ್ಟಿ ಕುಳಿತುಕೊ';*
- ***—ಕೈಕಟ್ಟಿತು*** : ಸ್ವಾತಂತ್ರ್ಯ ಇಲ್ಲದಾಯ್ತು; ನೀಡುವ, ಮಾಡುವ ಕಾರ್ಯಗಳಿಗೆ ಅಡಚಣೆ ಉಂಟಾಗುವುದು; ಉದಾರವಾಗಿ ಕೊಡುವ

ಸ್ಥಿತಿಯಲ್ಲಿ ಇಲ್ಲದಿರುವುದು; ಅಸಹಾಯಕತೆಯಿಂದ ಕೂಡಿರುವುದು; ವ್ಯಕ್ತಿಯ ಚಟುವಟಿಕೆಗಳನ್ನು ನಿರ್ಬಂಧಿಸುವ ಪ್ರಕ್ರಿಯೆ. A kind of control on one's expenses; there is no chance of generous attitudes.

ಕೈಕಡ/ಕೈಗಡ kaikaḍa/kaigaḍa :

- ಕೈ(<ಕಯ್)+ಕಡ=ಕೈಕಡ>ಕೈಗಡ;
- ಕರಾರು ಪತ್ರಗಳನ್ನು ಬರೆದು ಕೊಡದೆ ಅಲ್ಪಾವಧಿಗೆ ತೆಗೆದುಕೊಳ್ಳುವ ಸಾಲ; ಬಡ್ಡಿ ಇಲ್ಲದೆ ಎರವಲು ಪಡೆದ ಹಣ ಇಲ್ಲವೆ ವಸ್ತು; Hand loan for interest; interest free loan based on trust; oral business without pronotes or cheques unsecured loan;
- ತನ್ನದಲ್ಲದ್ದು; ಎರವಲು ಪಡೆದದ್ದು; ತುರ್ತಾಗಿ ಪಡೆಯುವ ಕೈಸಾಲ;
- ಕಾಗದ ಪತ್ರಗಳಿಲ್ಲದ ಬಾಯಿ ಮಾತಿನ ವ್ಯವಹಾರ;
- ಲಿಖಿತ ಆಧಾರ ನೀಡದೆ ನಾಲಿಗೆಯ ನಂಬಿಕೆಯ ಮೇಲೆ ನಡೆಯುವ ಹಣದ ಸಾಲ ವ್ಯವಹಾರ; ಕೆಲವೊಮ್ಮೆ ಈ ವ್ಯವಹಾರದಲ್ಲಿ ಸಾಕ್ಷಿಗಳೂ ಇರುವುದಿಲ್ಲ;
- ಯಾವ ದಾಖಲೆಗಳೂ ಇಲ್ಲದೆ ಕೊಟ್ಟ ಸಾಲ; ಕೈಸಾಲ(ಕ.ಜಾ.ಕೋ.); A loan without proper supportive documents;
- ಬಡ್ಡಿ ಇಲ್ಲದ ಸಾಲ; ಕೈಸಾಲ(ಶಿ.ಜಿ/ಉ.ಕ.ಜಿ/ಕೊ.ಜಿ); zero percent interest loans;
- ಇಲ್ಲಿ 'ಕೈ' ಮೂಲರೂಪ 'ಕಯ್'ನಿಂದ ಆಗಿದೆ ಎಂಬುದನ್ನು ಮರೆಯಲಾಗದು; ಕ್+ಅಇ>ಕಯ್ ('ಯ' ಬದಲಿ ಬಂದ ಧ್ವನಿಮಾ).

ಕೈಕಡಗ/ಕೈಗಡಗ kaikaḍaga/kaigaḍaga:

- ಕೈ(<ಕಯ್)+ಕಡಗ;
- ಕೈಗೆ ಧರಿಸುವ ಬೆಳ್ಳಿ ಆಭರಣ; ಕಯ್‌ಕಡಗ; Silver wristlet worn by men or women to their wrist;
- ಇಲ್ಲಿಯೂ 'ಕೈ' ರೂಪ 'ಕಯ್'ನಿಂದ ಆದುದು; ಕಯ್=ಕ್+ಅಇ(>ಯ);

ನೋಡಿ: ಕಯ್‌ಕಡಗ.

ಕೈಕಪ್ಪ kaikappa :

- ಗಂಡಸರು ಮುಂಗೈಗೆ ಧರಿಸುವ ಬಂಗಾರದ ಆಭರಣ; ಕೆಲವೊಮ್ಮೆ ಬೆಳ್ಳಿಯಿಂದಲೂ ಮಾಡಿಸುವುದುಂಟು; A jewel worn by men to their wrists; it is made up of silver or gold;
- ದಾರದ ನುಲಿಗೆಯಂತೆ ಒಂದು ಎಳೆ ಇದ್ದರೆ ಅದು ಒಂಟಿ ಕೈಕಪ್ಪ ಎನಿಸುತ್ತದೆ; ಇಂತಹ ಕಪ್ಪ ಜೋಡಿಯಾಗಿ ಇದ್ದರೆ ಅದು ಜೋಡಿ ಕೈಕಪ್ಪ ಆಗುತ್ತದೆ; ಕೆಲವೊಮ್ಮೆ ಹರಳಿನಿಂದ ಸಿಂಗರಿಸುವುದೂ ಉಂಟು; ಇದನ್ನು ಹರಳಿನ ಕೈಕಪ್ಪವೆನ್ನುತ್ತಾರೆ;
- ಸಾಮಾನ್ಯವಾಗಿ ಹಿಂದೆ ಮದುವೆಯಲ್ಲಿ ವರನಿಗೆ 'ಕೈಕಪ್ಪ'ವನ್ನು ಕೊಡುತ್ತಿದ್ದ ಸಂಪ್ರದಾಯವಿತ್ತು; 'ಜೋಡಿ ಕಪ್ಪ' ಮತ್ತೆ ಶ್ರೀಮಂತಿಕೆಯ ದ್ಯೋತಕ ಎನ್ನುವುದು ಸ್ಪಷ್ಟವೇ ಇದೆ.

ಕೈಕರಾಮತ್ತು kaikarāmattu :

- ಕೈ(<ಕಯ್)+ಕರಾಮತ್ತು;
- ಕೈಚಳಕ ತೋರಿಸು; ಕೈಗುಣ; ಏನಾದರೂ ಕೈವಾಡ ಮಾಡುವುದು; ಯುಕ್ತಿ ಪ್ರದರ್ಶಿಸುವುದು; ಚಾತುರ್ಯ; Hand tricks; sleight of hand legerdemain; to do miracles;
- ಖರಾಮತ್/ಕರಾಮತ್(ಅರ./ಪಾರ.)>ಕರಾಮತ್ತು, ಕರಾಮತಿ; ಅಂದರೆ ಕೈಚಳಕ, ಕೈವಾಡ, ಚಾತುರ್ಯ, ಯುಕ್ತಿ, ಸಾಹಸ ಎಂಬಿತ್ಯಾದಿ ಅರ್ಥಗಳಿವೆ(ಕ.ನಿ); an adventurous deed, courageous;
- 'ಕರಾಮತ್'ಗೆ 'ಕೈ' ಸೇರಿ ಅದೇ ಅರ್ಥದಲ್ಲಿ ಪ್ರಯೋಗಗೊಂಡಿದೆ; *ಪ್ರ: 'ನನ್ನ ಕೈಕರಾಮತ್ತು ಏನು ಅಂತ ನಿನಗೆ ತೋರದೆ ಬಿಡೊಲ್ಲ'.*

ಕೈಕಸೆ kaikase :

ದೇವರಿಗೆ ನೈವೇದ್ಯ ಮಾಡುವ ಮೊದಲು ಆ ಸ್ಥಳವನ್ನು ಶುಚಿಗೊಳಿಸುವುದು(ಮಂ.ಜಿ/ಉ.ಜಿ); *ಪ್ರ: 'ಕೈಕಸೆ ಮಾಡಿಯಾತ; ನೈವೇದ್ಯ ತರೂದಾ?'.* To clean the place before offering holy food to god/goddess.

ಕೈಕಾಣಿಕೆ kaikāṇike :

- ಕೈ(<ಕಯ್)+ಕಾಣಿಕೆ; Bribe;

- ತಮ್ಮ ಕೆಲಸಕ್ಕಾಗಿ ನೀಡುವ ಲಂಚ; bribing as favour to do certain selfish deeds;
- ಮಂಗಳ ಕಾರ್ಯದಲ್ಲಿ ಆರತಿ ಬೆಳಗಿಸಿಕೊಳ್ಳುವಾತ ಆರತಿ ತಟ್ಟೆಯಲ್ಲಿ ಹಾಕುವ ಹಣ(ಚಿ.ಪ.ಕೋ)(ಬ.ಜಿ);
- ದೈವದ ಕೈಗೆ ಒಪ್ಪಿಸುವ ಹರಕೆ; ಭೂತದ ಕೈಗೆ ಒಪ್ಪಿಸುವ ಹರಕೆ(ಮಂ.ಜಿ/ಉ.ಜಿ); *ಪ್ರ: 'ಈ ಕಛೇರೀಲಿ ಕೈಕಾಣಿಕೆ ನೀಡದಿದ್ದರೆ ಯಾವ ಕೆಲ್ಸಾನೂ ಆಗೋದಿಲ್ಲ'.*

ಕೈಕಾಯಿ kaikāyi :

- ಮದುಮಗನ ಕೈಯಲ್ಲಿ ಕೊಡುವ ಕಾಯಿ; A coconut which is hold by bridegroom in his hand;
- ಸರ್ವಾಲಂಕಾರಗೊಂಡ ಮದುಮಗ ಅಥವಾ ಮದುವಣಗಿತ್ತಿಗೆ ಕುಲದೇವತೆ ತುಳಸಿ ಮನೆಯಲ್ಲಿಟ್ಟ ಸುಲಿದ ತೆಂಗಿನ ಕಾಯಿಯನ್ನು ಹಾರೈಕೆಯ ಮೂಲಕ ನೀಡುವುದು;
- ಸಾಮಾನ್ಯವಾಗಿ ಧಾರಾ ಮುಹೂರ್ತಕ್ಕೆ ವರನನ್ನು ಕರೆತರುವಾಗ ವರನ ಕೈಗೆ ಕಾಯಿಕೊಡುವುದು ಮದುವೆಯ ಸಂಪ್ರದಾಯಗಳಲ್ಲಿ ಒಂದು.

ಕೈಕಾಯಿಸುವುದು kaikāyisuvudu :

- ಇದು ಒಂದು ಜನಪದ ಕ್ರೀಡೆ; ಕೈಕಾಸು; A kind of folk game- `Kaikasu';
- ಚೌಕಾಭಾರ ಆಟದಲ್ಲಿ ಸೋತವರಿಗೆ ಗೆದ್ದವರು ಕೊಡುವ ಶಿಕ್ಷೆ; ಸೋತವರು ತಮ್ಮ ಎರಡೂ ಕೈಗಳನ್ನು ಕೈಮುಗಿಯುವಂತೆ ಚೌಕಾಭಾರ ಮಧ್ಯಗಟ್ಟದ ಹತ್ತಿರ ನೀಡಬೇಕು; ಕೈಕೆಳಗೆ ಆಟದ ಕಾಯಿಗಳು(ಗೆಜ್ಜುಗ, ಪಚ್ಚೆ ಇತ್ಯಾದಿ) ಇರುತ್ತವೆ; ಗೆದ್ದವರು ಚೌಕಾಭಾರದ ಎರಡು ಬದಿಯಲ್ಲಿ ತಮ್ಮ ಕೈಯನ್ನು ನೆಲಕ್ಕೆ ಉಜ್ಜುತ್ತಾ ಸಮಯ ನೋಡಿ ಸೋತವನ ಕೈಗೆ ಏಟು ಹೊಡೆಯುವರು; ಸೋತ ವ್ಯಕ್ತಿ ಏಟಿನಿಂದ ತಪ್ಪಿಸಿಕೊಂಡರೆ ಒಂದೊಂದೇ ಕಾಯಿಗಳನ್ನು ಹೊರತೆಗೆಯಬೇಕು; ಹೀಗೆ ಎಲ್ಲಾ ಕಾಯಿಗಳನ್ನು ಗೆಲ್ಲುವವರೆಗೆ ಕೈಕಾಸುವುದು ನಡೆಯುತ್ತದೆ.

ಕೈಕಾಲಾಡು kaikālāḍu :

- ಕೈ(<ಕಯ್)+ಕಾಲು+ಆಡು=ಕೈಕಾಲಾಡು;
- ಅನಾರೋಗ್ಯದಿಂದ ಸ್ವಲ್ಪಮಟ್ಟಿಗೆ ಚೇತರಿಸಿ-ಕೊಳ್ಳುವುದು; to recover from unhealthy condition;
- ಕಾರ್ಯಭಾರದ ಅತಿಯಾದ ಒತ್ತಡದಿಂದ ಸ್ವಲ್ಪಮಟ್ಟಿಗೆ ವಿಶ್ರಾಂತಿ ಪಡೆಯಲು ಅವಕಾಶ ದೊರೆಯುವಂತಾಗಿರುವುದು; a relief between heavy stressful job;
- ಪ್ರಜ್ಞಾಹೀನ ಸ್ಥಿತಿಯಿಂದ ನಿಧಾನವಾಗಿ ಎಚ್ಚರ ಹೊಂದುತ್ತಾ, ದೇಹ ಚಲನೆ ಪಡೆಯುವುದು;
- ಅತಿಯಾದ ಭಯಕ್ಕೊಳಗಾಗಿದ್ದವರು ಕ್ರಮೇಣ ಚೇತರಿಸಿಕೊಳ್ಳುವುದು; *ಪ್ರ: 'ನಿನ್ನೆಯಿಂದ ಸ್ವಲ್ಪಮಟ್ಟಿಗೆ ಕೈಕಾಲು ಆಡುವಂತಾಯ್ತು'; 'ಭಯದಿಂದ ನನ್ನ ಕೈಕಾಲಾಡಲೇ ಇಲ್ಲ'.*

ಕೈಕಾಲಿಗೆ ಹತ್ತು kaikālige hattu :

- ಸಂಡಾಸ ಹತ್ತು; ಹೊಟ್ಟೆ ಝಾಡಿಸು; (ಸಂಡಾಸ= ಪಾಯಖಾನೆಯ ಮನೆ, ಟಾಯಲೆಟ್, ಕಕ್ಕಸು); diarrhea, to go toilet repeatedly;
- ಭೇದಿ ಉಂಟಾದಾಗ ಪಾಯಖಾನೆಗೆ ಪದೇ ಪದೇ ಓಡಾಡಬೇಕಾದ ಸ್ಥಿತಿಯನ್ನು ಇದು ಹೇಳುತ್ತದೆ.

ಕೈಕಾಲು ತಣ್ಣಗಾಗು kaikālu taṇṇagāgu:

- ಇದು ನುಡಿಗಟ್ಟಾಗಿ ಬಳಕೆಯಾಗುತ್ತದೆ; It is an idioms indicates `death';
- ಪ್ರಾಣ ಹೋಗು; ಸಾವುಂಟಾಗು;
- ವ್ಯಕ್ತಿ ಸಾಯುವ ಸ್ಥಿತಿಯಲ್ಲಿದ್ದಾಗ ಮೊದಲು ಕೈ ಮತ್ತು ಕಾಲುಗಳಲ್ಲಿ ರಕ್ತ ಸಂಚಾರ ನಿಂತು ಹೋಗುತ್ತದೆ; ಇದರಿಂದ ಕೈ ಮತ್ತು ಕಾಲುಗಳಲ್ಲಿನ ನಾಡಿ ಮಿಡಿತ ನಿಂತು ಹೋಗಿ ತಣ್ಣಗಾಗುವ ಅನುಭವ ಉಂಟಾಗುತ್ತದೆ; ಇದರಿಂದ ಸಾವು ಸಂಭವಿಸುತ್ತಿದೆ ಅಥವಾ ಸಂಭವಿಸಿದೆ ಎಂಬುದರ ಅರಿವನ್ನು ಗ್ರಾಮೀಣರು ಅರಿತು ಹೇಳುತ್ತಾರೆ;
- ಕೆಲವರು ಶಾಪ ಹಾಕುವಾಗ 'ನಿನ್ನ ಕೈಕಾಲು ತಣ್ಣಗಾಗಲಿ' ಎಂದು ಹೇಳುವುದುಂಟು; ಅವರಿಗೆ ಸಾವು ಸಂಭವಿಸಲಿ ಎಂಬುದರ ಶಾಪ ಇದಾಗಿದೆ.

ಕೈಕಾಲು ಬಿದ್ದುಹೋಗು kaikālu bidduhōgu :

- ಆಯಾಸದಿಂದಾಗಿ ಬಳಲುವುದು; ಸುಸ್ತಾಗುವುದು (ಬೆಂ.ಗ್ರಾ.ಜಿ.); to suffer from tiredness, fatigue, weariness;
- ಬಿಸಿಲಿನಲ್ಲಿ ಬಹಳ ದೂರ ನಡೆಯುವಾಗ, ಹೆಚ್ಚು ಶ್ರಮದಿಂದ ದುಡಿಯುವಾಗ ಉಂಟಾಗುವ ಆಯಾಸದ ತೀವ್ರತೆಯನ್ನು ಇದು ಧ್ವನಿಸುತ್ತದೆ;
- ವೃದ್ಧಾಪ್ಯದ ಸಾಮಾನ್ಯ ಸಮಸ್ಯೆಯೂ ಇದಾಗ ಬಹುದು; a common reason of oldage is weariness;
- ಒಂದು ಬೈಗುಳವಾಗಿಯೂ ಇದು ಬಳಕೆಯಲ್ಲಿದೆ.

ಕೈಕುಂಟಿ/ಕೈಕುಂಟೆ kaikuṇṭi/kaikuṇṭe:

- ಕೈ+ಕುಂಟಿ(ಟೆ)=ಕೈಕುಂಟಿ;
- ಕುಂಟೆ ಕೃಷಿ ಉಪಕರಣವಾಗಿದ್ದು, ಗಾತ್ರದಲ್ಲಿ ದೊಡ್ಡದು, ಚಿಕ್ಕದು ಎರಡು ಬಗೆ; ಎತ್ತುಗಳಿಗೆ ಕಟ್ಟಿ ಎಳೆಸುವ ಕುಂಟೆ ದೊಡ್ಡದು; ಮನುಷ್ಯ ಕೈಯಿಂದಲೇ ಎಳೆದು ಹರಗಬಹುದಾದ ಚಿಕ್ಕ ಗಾತ್ರದ ಕುಂಟೆಯೇ ಕೈಕುಂಟಿ; An agricultural implement which is used to level ploughed land; it is dragged by bullocks;
- ಬಯಲು ಸೀಮೆಯ 'ಎ'ಕಾರ ಉತ್ತರ ಕರ್ನಾಟಕದ ಕಡೆ 'ಇ'ಕಾರವಾಗಿ ಬಳಕೆ 'ಕುಂಟೆ'>'ಕುಂಟಿ'; *ಪ್ರ: 'ಕೈಕುಂಟೆಯಿಂದ್ಲೆ ಹೊಲಾ ಎಲ್ಲಾ ಹರಗ್ದೆ(ಹರಗಿದೆ)'.*

ಕೈಕುಂಟು kaikuṇṭu :

- ಅಡುಗೆ ಮನೆಯಲ್ಲಿ ಬಳಸುವ ಬಟ್ಟೆ;
- ಅಡುಗೆಯಾದ ಮೇಲೆ ಒಲೆಯ ಮೇಲಿನ ಬಿಸಿ ಪಾತ್ರೆಗಳನ್ನು ಇಳಿಸುವಾಗ ಕೈಗೆ ಬಿಸಿ ತಾಗದಂತೆ ಹಿಡಿದುಕೊಳ್ಳಲು ಬಳಸುವ ಬಟ್ಟೆ; ಇದನ್ನು ಹೊರಗಡೆಯಲ್ಲಿ ಇತರ ಯಾವ ಕೆಲಸಕ್ಕೂ ಉಪಯೋಗಿಸುವುದಿಲ್ಲ; ಸುಲಭವಾಗಿ ಕೈಗೆ ಸಿಗುವಂತೆ ಅಡುಗೆ ಕೋಣೆಯ ಗೋಡೆಯಲ್ಲಿನ ಗೂಟಕ್ಕೆ ನೇತುಹಾಕಿ ಇಟ್ಟುಕೊಂಡಿರುತ್ತಾರೆ. A piece of cloth used by cooks while cooking to hold hot vessals.

ಕೈಕುಂದ್ರು kaikundru :

- ನೈಪುಣ್ಯತೆ ಪಡೆಯುವಿಕೆ; to get expertise;
- ತಾವು ಮಾಡುವ ಯಾವುದೇ ಕೆಲಸದಲ್ಲಿ ನೈಪುಣ್ಯತೆ, ಪ್ರಗತಿ, ಲಾಭ ಪಡೆಯುವಿಕೆ(ಚಿ.ಪ.ಕೋ).

ಕೈಕುಡಾರಿ kaikuḍāri :

- ಸಣ್ಣ ಕೊಡಲಿ, ಚಿಕ್ಕ ಕೊಡಲಿ(ತು.ಜಿ.); a small axe;
- ಸಂಸ್ಕೃತದ 'ಕುಠಾರ' > ಕುಡಾರ > ಕುಡಾರಿ ಎಂದಾಗಿರಬಹುದೆ?;
- *ನೋಡಿ:* ಕೈಕೊಡಲಿ/ಕೈಕೊಡ್ಲಿ.

ಕೈಕುಯ್ಕನ ಬೀಳು kaikuykana bīḷu :

- ನೆರಳಲ್ಲಿ ಬೆಳೆಯುವ ಚೌಕಾಕಾರದ ಬಳ್ಳಿ; A kind of creeper; grown under shadow;
- ಅಕ್ಕಿ ಹೆಂಡವನ್ನು ತಯಾರಿಸುವಾಗ ಬಳಸುವ ಒಂದು ಜಾತಿಯ ಬಳ್ಳಿ(ಚಿಕ್ಕ.ಜಿ.); a creeper used while preparing paddy toddy;
- ಕಣ್ಣಿನಲ್ಲಿ ಹೂ ಬಂದಾಗ ಔಷಧವಾಗಿ ಬಳಕೆ;
- ಇದರ ಬೇರನ್ನು ಅಡಿಕೆ ಜೊಗರಿಗೆ(?) ಬಳಸುತ್ತಾರೆ;
- ಬೀಳು = ಬಳ್ಳಿ.

ಕೈಕುರುವೆ kaikuruve :

- ಒಂದು ಕೈ ಬುಟ್ಟಿ; ಇದಕ್ಕೆ ಹೆಂಗಸರ ವ್ಯಾನಿಟಿ ಬ್ಯಾಗಿಗಿರುವಂತೆ ಒಂದೇ ಕೈಹಿಡಿ ಇರುತ್ತದೆ;
- ಕರಾವಳಿ ಮತ್ತು ಮಲೆನಾಡಿನಲ್ಲಿ ಅಡಿಕೆ, ಗೇರುಬೀಜ ಹೆಕ್ಕಲು ಈ ಬುಟ್ಟಿಯನ್ನು ಉಪಯೋಗಿಸುತ್ತಾರೆ.

ಕೈಕೂಡು/ಕೈಕೂಡಿಸು kaikūḍu/kaikūḍisu :

- ನೆರವಿಗೆ ನಿಲ್ಲುವುದು; ಸಹಾಯಕ್ಕೆ ಒದಗಿ ಬರುವುದು; ಆಸರೆಯಾಗಿ ಜೊತೆಗೆ ನಿಲ್ಲುವುದು; *ಪ್ರ: 'ಈ ಕಾರ್ಯದಲ್ಲಿ ನೀನು ಕೈಕೂಡಿಸದಿದ್ರೆ ನಾನು ಅತಂತ್ರವಾಗ್ಬಿಡ್ತಿದ್ದೆ';* to help the need;
- ಸಹಾಯ ಮಾಡು; ಗೆಳೆತನ ಮಾಡು; to make friendship;
- 'ಕೈ' ಜೊತೆಗೆ 'ಕೂಡು' ಪದ ಸೇರಿದೆ; 'ಕೂಡು' ಪದಕ್ಕೆ 'ಇಸು' ಪ್ರತ್ಯಯ ಸೇರಿ ಕೂಡಿಸು ಆಗಿದೆ.

ಕೈಕೂರಿಗಿ kaikūrigi :

- ಎತ್ತುಗಳನ್ನು ಕಟ್ಟದೆ ಕೈಯಿಂದ ಎಳೆದು ಬೀಜ ಬಿತ್ತಲು ಬಳಸುವ ಸಾಧನ; An agriculture tool like plough which is used to sow seeds in fields;
- ಇದನ್ನು ತುಂಡು ಭೂಮಿಗಳಲ್ಲಿ ಬಳಕೆ ಮಾಡುತ್ತಾರೆ;
- ಬೀಜ ಬಿತ್ತುವ ಪ್ರದೇಶ ತುಂಡು ಭೂಮಿಯಾಗಿದ್ದಾಗ ಎತ್ತುಗಳನ್ನು ಹೂಡಿ ಕೂರಿಗೆಯಲ್ಲಿ ಬೀಜ ಬಿತ್ತುವ ಪ್ರಮೇಯ ಇರುವುದಿಲ್ಲ; ಕೈಯಿಂದ ಎಳೆಯುತ್ತಾ, ಬೀಜ ಬಿತ್ತನೆ ಮಾಡುವ ಕಾರ್ಯ ಮಾಡಲಾಗುತ್ತದೆ; ನಿಧಾನವಾಗಿ ಬಿತ್ತನೆ ಕಾರ್ಯ ನಡೆಯುವುದರಿಂದ ಭೂಮಿಯಲ್ಲಿ ಹದವಾಗಿ ಬೀಜವನ್ನು ಹಾಕಲು ಅನುಕೂಲವಾಗುವ ಚಿಕ್ಕ ಅಳತೆಯ ಕೂರಿಗೆ ಇದಾಗಿದೆ;
- (ಕಯ್)ಕೈ+ಕೂರಿಗೆ=ಕೈಕೂರಿಗೆ>ಕೈಕೂರಿಗಿ; ಪ್ರಾದೇಶಿಕ ಭೇದದಿಂದಾಗಿ(ಕೂರಿಗೆ>ಕೂರಿಗಿ) ಪದದ ಅಂತ್ಯ 'ಎ'ಕಾರ 'ಇ'ಕಾರವಾಗಿದೆ.

ಕೈಕೂಸು kaikūsu :

- ಸಣ್ಣ ಮಗು; ಕಂಕುಳಲ್ಲೇ ಎತ್ತಿಕೊಂಡು ಓಡಾಡುವ ಚಿಕ್ಕಮಗು; Infant, a baby who is carried on one's waist;
- ಕೈ+ಕೂಸು>ಕೈಗೂಸು(ಕ>ಗ) ಆಗಬಹುದು;
- 'ಕೂಸು' ಹೆಣ್ಣು ಅಥವಾ ಗಂಡು ಮಗು; ಬೆಳೆದ ಹಾಗೆ <'ಕೂಸು' ಹೆಣ್ಣುಮಗು'ವಿಗೆ ಮಾತ್ರ ಗುರುತಿಸುವ ಪದವಾಗುತ್ತದೆ; ಸಂಬೋಧನೆಯಲ್ಲಿ ಮಾತಾಡುವಾಗ 'ಕೂಸ' ಪದ ಗಂಡುಮಕ್ಕಳಿಗೂ ಅನ್ವಯವಾಗುವುದು;
- ನುಡಿಗಟ್ಟಾಗಿ ಕೂಡ ಬಳಕೆ; ಇನ್ನೊಬ್ಬರ 'ಕೈಗೊಂಬೆ' ಎನ್ನುವ ಅರ್ಥದಲ್ಲಿ ಇನ್ನೊಬ್ಬರ 'ಕೈಗೂಸು' ಪದದ ಬಳಕೆ ಇದೆ; ಸ್ವತಂತ್ರವಲ್ಲದ ಸ್ಥಿತಿಯನ್ನು ಇದು ಹೇಳುತ್ತದೆ;
- ನುಡಿಗಟ್ಟಿನ ಬಳಕೆಯ ವಿಸ್ತಾರಕ್ಕೆ ಹೋದಾಗ, ವೈಯಕ್ತಿಕತೆಯನ್ನು ಮೀರಿದ ಅರ್ಥವೊಂದು 'ಕೈಗೂಸು' ನುಡಿಗಟ್ಟಿಗೆ ಪ್ರಾಪ್ತವಾಗುತ್ತದೆ; ಉದಾಹರಣೆಗೆ 'ಪರಿಸ್ಥಿತಿಯ ಕೈಕೂಸು', ಇಲ್ಲಿ 'ಅಸಹಾಯಕತೆ'ಯೊಂದು ವ್ಯಕ್ತವಾಗುವುದು.

ಕೈಕೆ kaike :

- ರಾಮಾಯಣದ ಪಾತ್ರ ಮಾದರಿಗಳಲ್ಲಿ ಕೈಕೆಯೂ ಒಬ್ಬಳು; ಜನಸಾಮಾನ್ಯರಿಗೆ ಬೇಕಾಗಿರುವುದು ಆ ಪಾತ್ರದ ಮಾದರಿಯೇ ಹೊರತು, ವಾಸ್ತವ ಪಾತ್ರವಲ್ಲ; ಏಕೆಂದರೆ 'ಕೈಕೆ' ಪ್ರತಿನಿಧಿಸುವ ಮೌಲ್ಯ, ಪ್ರವೃತ್ತಿ ಅಂಥದು; ಕೈಕೆಯಂತಹ ಜನ ಯಾವೊತ್ತೂ ಇರುತ್ತಾರೆ, ಇದ್ದರು; ಜನರು ತಮ್ಮ ಸುತ್ತಲಿನ ಬದುಕಿನಲ್ಲಿ ಇಂಥವರನ್ನು ಕಂಡು, ಗುರುತಿಸಿ ಹೇಳುವುದೇ ಮುಖ್ಯ; ರಾಮಾಯಣ ಎಂದೋ ಆಗಿ ಹೋದುದಲ್ಲ, ಅಲ್ಲಿನ ಪ್ರವೃತ್ತಿಗಳನ್ನು ಪ್ರತಿನಿಧಿಸುವವರೆಗೆ ಅದು ಜೀವಂತವಾಗಿ ಇದ್ದೇ ಇರುತ್ತದೆ; ಹಾಗೆಯೇ ಕೈಕೆಯ ಪಾತ್ರ ಕೂಡ; A female character of the epic- Ramayana, one of the wives of Dasharatha, father of Sree Rama;
- ಕೈಕೆ ದಶರಥನ ಕಿರಿಯ ಹೆಂಡತಿ, ಆ ಕಾರಣಕ್ಕಾಗಿಯೇ ಅವಳು ಹೆಚ್ಚು ಪ್ರಸಿದ್ಧಳು; ಅವಳಿಗೆ ದಶರಥ ಕೊಟ್ಟಿದ್ದ ವರ ಶಾಪವಾಗಿ ಪರಿಣಮಿಸಿ ಇಡೀ ರಾಮಾಯಣಕ್ಕೆ ನಿಮಿತ್ತವಾಯಿತು; ರಾಮಾಯಣದ ಪೂರ್ವಾರ್ಧದ ಆರಂಭದಲ್ಲಿ ಕೈಕೆಯೇ ಸೂತ್ರಧಾರಿ; ಆಕೆಯನ್ನು ನೆನೆಯದೆ ರಾಮಾಯಣಕ್ಕೆ ಕಾಲಿಡುವಂತಿಲ್ಲ;
- ಜನಪದರು ಕೈಕೆಯನ್ನು ಗುರುತಿಸುವುದು ಎರಡು ಕಾರಣಕ್ಕಾಗಿ: ಒಂದು– ದಶರಥನ ಕಿರಿಯ ಹೆಂಡತಿ, ಚಿಕ್ಕವಯಸ್ಸಿನ ಸುಂದರಿ ಮತ್ತು ಭರತನ ತಾಯಿ; ಎರಡು– ರಾಮನನ್ನು ವನವಾಸಕ್ಕೆ ಕಳುಹಿಸಲು ಕಾರಣಳಾದ 'ಮಹಾರಾಯಿತಿ', ರಾಮಾಯಣಕ್ಕೆ ಗುದ್ದಲಿ ಪೂಜೆ ಮಾಡಿ ಸಂಘರ್ಷಕ್ಕೆ ನಾಂದಿ ಹಾಡಿದ 'ನಾಯಕಿ'; the folk talk about `Kaike' for two reasons: one is she is the little wife of Dasharatha and she is the reason behind the exile of Rama;
- 'ಕೈಕೆ' 'ಕೈಕೇಯ' ಮಹಾರಾಜನ ಮಗಳು: 'ಕೈಕಯೆ' ಎಂಬ ರೂಪವೂ ಈ ಹೆಸರಿಗಿದೆ; 'ಕೈಕೆ' ಅಥವಾ 'ಕೈಕಯೆ' ಪದರೂಪಗಳು 'ಕೈಕೇಯ' ರೂಪದಿಂದಲೇ ಬಂದವುಗಳು; ಕೇಕಯರ ರಾಜನಾದ್ದರಿಂದ ಅವನಿಗೆ 'ಕೈಕೇಯ' ಎಂದು ಕರೆಯಲಾಗಿದೆ; ಈ 'ಕೈಕೇಯ' ಮಹಾರಾಜನ ಮಗಳಾದ್ದರಿಂದ ಅವಳಿಗೆ ಕೈಕೆ/

ಕೈಕಯೆ ರೂಪಗಳು ಬಂದಿರುವಂತಿವೆ; Kaike is the daughter of Kaikeya- a king;

- ಜನಸಮುದಾಯದಲ್ಲಿ "ಕಿವಿ ಕಿತ್ತರೂ ಕಿರಿಯ ಹೆಂಡತಿ ಪ್ರೀತಿ" ಎಂಬ ಗಾದೆಯಿದೆ; ಈ ಗಾದೆ ಕೈಕೆಯ ವರ್ತನೆಯನ್ನು ಕಂಡೇ ರಚಿತವಾಗಿರಬೇಕು ಅಥವಾ ಜನರ ನಡುವೆ ಇರುವ ಅಂಥವರನ್ನು ನೋಡಿಯೇ ಇಂಥವು ರೂಪುಗೊಂಡಿರಬೇಕು; ದಶರಥ ಕೈಕೆಯನ್ನು ಮದುವೆಯಾದಾಗ ಕೊಟ್ಟ ವರ ಆಮೇಲೆ ಅವನಿಗೆ ಹೇಗೆ ಮುಳುವಾಯಿತೆಂಬುದನ್ನು ಈ ಗಾದೆ ಸೂಚ್ಯವಾಗಿ ಸೂಚಿಸುತ್ತದೆ; ಉತ್ತರೋತ್ತರದಲ್ಲಿ ಕೈಕೆ ನಡೆದುಕೊಂಡ ರೀತಿಯನ್ನು ರಾಮಾಯಣ ಹೇಳಿದೆ; ಅದು ಬಹುತೇಕ ಕವಿಯದು; ಬದಲಾದ ಕೈಕೆಯ ನಡವಳಿಕೆಯತ್ತ ಸಮಾಜ ಗಮನ ಹರಿಸಿದಂತಿಲ್ಲ; ಜನರಿಗೆ ಬೇಕಾದ್ದು ಕಿರಿಯ ಹೆಂಡತಿಯ ಪ್ರೀತಿ ಮತ್ತು ಅವಳಿಂದ ಕಿವಿ ಕೀಳಿಸಿಕೊಂಡ ರೀತಿ;
- 'ಕೈಕೆ'ಯ ಹೆಸರನ್ನು ಈವರೆಗೆ ಯಾರೂ ಇಟ್ಟುಕೊಂಡಂತೆ ಕಾಣುವುದಿಲ್ಲ; ಇದಕ್ಕೆ ರಾಮನನ್ನು ಕಾಡಿಗೆ ಕಳಿಸಿದ್ದು ಕಾರಣವಾಗಿದ್ದರಲಿಕ್ಕಿಲ್ಲ; ಮಾನವಶಾಸ್ತ್ರದ `Taboo'–'ನಿಷಿದ್ಧತೆ'– ಕಾರಣವಿರಬೇಕು; ಅನೇಕ ವರ್ಷಗಳ ಹಿಂದಿನ ಮಾತು; ಹುಡುಗರು ಪರಸ್ಪರ ಕೇಳುತ್ತಿದ್ದ– ಕೇಳಿಸಿಕೊಳ್ಳುತ್ತಿದ್ದ ಒಂದು ಪ್ರಶ್ನೆ ಎಂದರೆ– ಕೈಕೆಯ ತಂದೆಯ ಹೆಸರೇನು? ಮಂಡೋದರಿಯ ಹುಟ್ಟೆಸರೇನು? ಎಂಬಿವು– ಆಮೇಲೆ ಕೈಕೆಯ ತಂದೆಯ ಹೆಸರನ್ನು ಹೇಳುವುದರಿಂದ ಯಾವ ತೊಂದರೆಯೂ ಇಲ್ಲವೆಂಬುದು ಗೊತ್ತಾಗಿ ಆ ಹೆಸರನ್ನು ಬಳಸಲಾಯಿತು; ಆಚರಣಾತ್ಮಕ ಜಾನಪದ ಇದನ್ನು ಬಿಟ್ಟಂತೆ ಕಾಣುವುದಿಲ್ಲ; ಹೇಗೋ ಬಂದ 'ಕೈಕೇಯ' ಹೆಸರಿನ ಮೇಲಿನ 'ನಿಷಿದ್ಧತೆ' ಕ್ರಮೇಣ 'ಕೈಕೆ'ಯ ಮೇಲೂ ಬಂದು ಕೈಕೆಯ ಹೆಸರನ್ನು ಇಡದಂತೆ ಒತ್ತಾಯ ಹೇರಿರಬಹುದು; ಇದು ಜನರ ನಡುವೆ ಒಂದು ಸಾಂಸ್ಕೃತಿಕ ಒತ್ತಾಯವಾಗಿ ಕೆಲಸ ಮಾಡಿರಬೇಕು; the word or name `Kaike' is not named after by any one nowadays; it is a name of prohibited or Taboo or bad omen.

ಕೈ ಕೈ ಮಿಲಾಯಿಸು kai kai milāyisu :

- ಪರಸ್ಪರ ಜಗಳ ಪ್ರಾರಂಭಿಸುವುದು; to fight eachother; to quarrel eachother;
- ಕೈಗೆ ಕೈಗೆ ಕೂಡಿಸಿ ಮಾಡುವ ಜಗಳ; ಹೊಡೆದಾಟ; ತಳ್ಳಾಟ; to manhandle eachother;
- ಮಾತಿಗೆ ಮಾತು ಬೆಳೆದು ಜಗಳ ಪ್ರಾರಂಭವಾದುದನ್ನು ಇದು ಸೂಚಿಸುತ್ತದೆ; *ಪ್ರ: 'ಅವರಿಬ್ಬರ ವಾದ ವಿವಾದ ಕೈ ಕೈ ಮಿಲಾಯಿಸುವ ಹಂತಕ್ಕೆ ತಲುಪಿತು';*
- ಇಲ್ಲಿನ 'ಕೈಕೈ' ಪದದ್ವಂದ್ವ ಇಬ್ಬರ ಕೈಗಳು ಭಾಗವಹಿಸುವುದನ್ನು ಸೂಚಿಸುತ್ತದೆ;
- 'ಮಿಲಾಯಿಸು' ಅನ್ಯದೇಶ್ಯ ಪದ; ಮರಾಟಿ ಭಾಷೆಯ ಮೂಲಕ ಬಂದಿರಬಹುದು; ಇದರೊಡನೆ 'ಮಿಲಾಕತ್ತು' ಪದವಿರುವುದನ್ನೂ ಗಮನಿಸಬಹುದು; ಇದರ ಅರ್ಥ 'ಕೂಡಿ'/ಸೇರಿ(ಕೈಕೈ ಕೂಡಿ/ಕೈಕೈಸೇರಿ) ಎಂದು; ಸಂಸ್ಕೃತದ 'ಮಿಲನ' ರೂಪವನ್ನು ಇದರೊಟನೆ ಪರಿಶೀಲಿಸಬಹುದು;
- 'ಕೈಕೈ ಮಿಲಾಯಿಸು' ಪದದೊಡನೆ 'ಕೈಕೈ ಹತ್ತೇತಿ' ಪದವಿರುವುದನ್ನೂ ಗಮನಿಸಬಹುದು;
- ಧಾರವಾಡ ಪ್ರಾಂತ್ಯದಲ್ಲಿ ವಿಶೇಷವಾಗಿ ಬಳಸುವ 'ಹತ್ತೇತಿ' ಪದ ಗಮನಾರ್ಹ; ಜಗಳ ಮಾಡಲು ಆರಂಭಿಸಿದ್ದಾರೆ, ಜಗಳ ನಡೆಯುತ್ತಿದೆ ಎಂಬರ್ಥದಲ್ಲಿ ಪ್ರಯೋಗವಾಗಿದೆ.

ಕೈಕೊಡಲಿ/ಕೈಕೊಡ್ಲಿ/ಕೈಗೊಡ್ಲಿ kaikoḍali/ kaikoḍli/kaigoḍli :

- ಸಣ್ಣದಾದ ಕೊಡಲಿ;
- ಮರಗಳ ಕೊಂಬೆಯನ್ನು ಕಡಿಯಲು ಬಳಸುವ ಚಿಕ್ಕ ಕೊಡಲಿ(ಹಾ.ಜಿ); A small handy axe which is used to cut small branches of tree;
- ಕೊಡಲಿಗಳ ಗಾತ್ರದ ಆಧಾರದ ಮೇಲೆ ವಿಭಜನೆ; ದೊಡ್ಡ ಕೊಡಲಿ ಎರಡೂ ಕೈಬಳಸಿ ಕಡಿಯುವ ಕೊಡಲಿ;
- ಕೈಕೊಡಲಿ ಗಾತ್ರದಲ್ಲಿ ಚಿಕ್ಕದಾಗಿ ಹಗುರವಾಗಿದ್ದು ಒಂದೇ ಕೈಯಿಂದ ಕಡಿಯುವ ಆಯುಧ;
- ಮರ ಹತ್ತಿದಾಗ ಒಂದು ಕೈಯಲ್ಲಿ ಕೊಂಬೆ(ಮರ) ಹಿಡಿದುಕೊಂಡು ಇನ್ನೊಂದು ಕೈಯಲ್ಲಿ(ಒಂಟಿ ಕೈಯಲ್ಲಿ) ಕಡಿಯಲು ಬಳಸುವುದು;

- ಸಣ್ಣ ಪುಟ್ಟ ಸೌದೆ ಕಡಿಯಲು ಉಪಯೋಗಿಸುವ ಕೊಡಲಿ; *ವ್ಯರೂ:* ಪಿಚ್‌ಕೊಡಲಿ.

ಕೈಕೊಡ್ತಿ kaikoḍti :
- ಚಿಕ್ಕದಾದ ಹಿಡಿಯಿರುವ ಕೊಡತಿ/ಕೊಡತೆ/ಕೊಡಂತಿ;
- ಬಡಗಿ ಮರಗೆಲಸ ಮಾಡುವಾಗ ಸಣ್ಣದಾಗಿ ಉಳಿಗೆ ಹೊಡೆಯಲು ಬಳಸುವ ಸಾಧಾರಣ ಗಾತ್ರದ ಸಾಧನ; ಇದು ಚಪ್ಪಟೆಯಾಗಿದ್ದು, ಮುಂದೆ ಸ್ವಲ್ಪ ದಪ್ಪವಾಗಿ, ಹಿಂದೆ ಹಿಡಿಯಲು ಅನುಕೂಲವಾಗುವಂತೆ ಚಿಕ್ಕದಾಗಿಯೂ ಇದ್ದು ಸುಮಾರು ಮುಕ್ಕಾಲು ಅಡಿ ಉದ್ದವಿರುತ್ತದೆ. A small wooden hammer or mallet used by a carpenter.

ಕೈಕೊಡು kaikoḍu :
- ಮಾತಿಗೆ ತಪ್ಪುವುದು; ಮಾತಿನಂತೆ ನಡೆದುಕೊಳ್ಳದಿರುವುದು; ಒಪ್ಪಂದವನ್ನು ಮುರಿಯುವುದು; ಮೋಸ ಮಾಡುವುದು; ಸಂಬಂಧವನ್ನು ಕಡಿದುಕೊಳ್ಳುವುದು; A cheater, to cheat, to deceit;
- ಹಿಡಿದು ಮೇಲೆತ್ತಲು ಅನುಕೂಲವಾಗುವಂತೆ ಕೈನೀಡಲು ಹೇಳುವ ಮಾತು; to give a hand for lifting a person;
- ಕೈನೀಡು; ಕೈಯನ್ನು ಆಸರೆಯಾಗಿ ಕೊಡು;
- ನುಡಿಗಟ್ಟಾಗಿ ಕೂಡ ಇದು ಬಳಕೆಯಲ್ಲಿದೆ; ಇದರಲ್ಲಿ 'ಕೈ'ನ ಶಾರೀರಿಕ ರಚನಾ ಸಂಬಂಧ ಇರುವುದಿಲ್ಲ; ಕೇವಲ 'ಸಂಬಂಧ' ತತ್ವದ ಭಾವ ರೂಪಕವಾಗಿ ಮಾತ್ರ ಕಾಣಿಸಿಕೊಳ್ಳುತ್ತದೆ;
- ಶರೀರ ಜಾನಪದದ ಸಂಬಂಧವನ್ನು ಉಳಿಸಿಕೊಂಡೂ ಅದರಾಚೆಗೆ ಅರ್ಥ ವಿಸ್ತಾರವನ್ನು ಧ್ವನಿಸುತ್ತದೆ.

ಕೈಕೊತ್ತಿ kaikotti :
- ಸಣ್ಣ ಹಾರೆ; ಕೈ+ಕೊತ್ತಿ(ಕೊತ್ತಿ=ಹಾರೆ); a small crowbar or small or short hoe;
- ನಿಂತು ಅಗೆತ ಮಾಡುವ ಉದ್ದದ ಹಾರೆ ಮತ್ತು ಕುಳಿತು ಕೆಲಸ ಮಾಡುವ ಚಿಕ್ಕ ಹಾರೆ ಎಂಬ ಎರಡು ಬಗೆಯ ಉಪಕರಣಗಳು; ಚಿಕ್ಕ ಹಾರೆಗೆ 'ಕೈಕೊತ್ತಿ' ಎಂದು ಕರೆಯುವುದು(ತು.ಜಿ.);
- *ವ್ಯರೂ:* ಕೈಹಾರೆ(ಮಂಡ್ಯ.ಜಿ.); *ಪ್ರ: 'ಕೈಕೊತ್ತಿ ತಗೆದುಕೊಂಡು ಗುಂಡಿ ಅಗೆದೆ'.*

ಕೈಕೋಲು/ಕೈಗೋಲು kaikōlu/kaigōlu :
- ಕೈ+ಕೋಲು=ಕೈಕೋಲು>ಕೈಗೋಲು;
- ಊರುಕೋಲು, ಊರುದೊಣ್ಣೆ; A walking stick;
- ವೃದ್ಧರು ನಡೆದಾಡುವಾಗ ಆಸರೆಯಾಗಿ ಬಳಸುವ ಕೋಲು; supporting cudgel used by the old people to walk;
- ರಸ್ತೆಗಳ ವ್ಯವಸ್ಥೆ ಇಲ್ಲದಿದ್ದಾಗ ವಯಸ್ಸಾದವರು ನಡೆಯಲು ತಮ್ಮ ಶಕ್ತಿಯನ್ನು ಈ ಕೋಲಿನ ಮೇಲೆ ಬಿಟ್ಟು ದಾರಿಯಲ್ಲಿ ನಡೆಯುತ್ತಿದ್ದರು;
- ನಾಲ್ಕು ಅಡಿ ಉದ್ದದ ಕೋಲನ್ನು ಬೀಟೆ, ಶ್ರೀಗಂಧ, ಹೊನ್ನೆ, ಬಿದಿರು, ಬೆತ್ತ ಮುಂತಾದ ಮರಗಳಿಂದ ತಯಾರಿಸುವರು; ಕೋಲಿನ ಹಿಡಿಯನ್ನು ತಾಮ್ರ, ಹಿತ್ತಾಳೆ, ಕಂಚು, ಬೆಳ್ಳಿ ಲೋಹಗಳಿಂದ ಕಲಾತ್ಮಕವಾಗಿ ಮಾಡುವರು;
- ಹಿಂದೆ ರಾಜ ಮಹಾರಾಜರು ತಮ್ಮ ಸೈನಿಕ, ಸೇವಕರಿಗೂ ಇಂಥ ಕೋಲುಗಳನ್ನು ಉಡುಗೊರೆಯಾಗಿ ನೀಡುತ್ತಿದ್ದರಂತೆ; once kings gave this kind of cudgel to their soldiers as gifts.

ಕೈಕೋಳ kaikōḷa :
- ಕೈಗೆ ಹಾಕುವ ಬೇಡಿ(ಕೊ.ಜಿ.); hand cuffs used to arrest culprits;
- ಬಂಧಿಸುವಾಗ ಕೈಗಳಿಗೆ ತೊಡಿಸುವ ಕಬ್ಬಿಣದ ಸಂಕೋಲೆ;
- ದನಗಳ ಗಂಟಲಲ್ಲಿ ಮೇವು ಸಿಕ್ಕಿಹಾಕಿಕೊಂಡಾಗ ಅದನ್ನು ಕೈಹಾಕಿ ತೆಗೆಯಲು ದನದ ಬಾಯಿಗೆ ಹಾಕುವ ಮರದ ಸಾಧನ(ಮಂಡ್ಯ.ಜಿ.);
- ಕೈಕೊಳ ಅಥವಾ 'ಕ್ವಾಳಮರ' ಎಂದು ಕರೆಯುವುದುಂಟು; ದನಗಳ ಬಾಯಿಗೆ ಅಡ್ಡವಾಗಿ ಈ ಮರದ ಸಾಧನವನ್ನು ಹಾಕುವುದರಿಂದ ಗಂಟಲಿಗೆ ಕೈಹಾಕಿ ಸಿಕ್ಕಿಕೊಂಡ ಹುಲ್ಲು ಇತ್ಯಾದಿ ಮೇವನ್ನು ಸುಲಭವಾಗಿ ತೆಗೆಯಲು ಸಾಧ್ಯವಾಗುತ್ತದೆ;
- *ವ್ಯರೂ:* ಕ್ವಾಳಮರ

ಕೈಗಂಟು kaigaṇṭu :

- ಸ್ವಂತದ ಬಂಡವಾಳ; 'ಇಡಗಂಟು'; self capital amount; own wealth; own money;
- ಗೋಪ್ಯವಾಗಿ ಕೂಡಿಟ್ಟುಕೊಂಡ ನಗನಾಣ್ಯ (ಚಿ.ಪ.ಕೋ);
- ತಮ್ಮ ಕಷ್ಟ ಕಾಲಕ್ಕೆ ಸಹಾಯವಾಗಲೆಂದು ಅಲ್ಪ ಸ್ವಲ್ಪ ಹಣವನ್ನು ಉಳಿಸಿ ಯಾರಿಗೂ ತಿಳಿಯದಂತೆ ಇಟ್ಟುಕೊಳ್ಳುವ ಹಣ; ಜೊತೆಗೆ ತನಗಾಗಿ ಮಾಡಿಸಿಕೊಟ್ಟ ಒಡವೆಗಳಲ್ಲಿ ಸಣ್ಣ ಪುಟ್ಟವುಗಳನ್ನು ಕೂಡ ರಹಸ್ಯವಾಗಿ ಇರಿಸಿಕೊಂಡಿರುವುದು; *ಪ್ರ: 'ಅವರತ್ರ ಒಸಿ ಕೈಗಂಟದೆ, ಅದಂಗಾಡಿಸ್ತದೆ'.*

ಕೈಗಡಿಗೆ kaigaḍige :

- ಕೈ(<ಕಯ್)+ಗಡಿಗೆ=ಕೈಗಡಿಗೆ;
- Hand made pot; ತಿಗುರಿಯಿಂದ ಮಾಡದೆ ಕುಂಬಾರಗಿತ್ತಿಯರು ಕೈಯಿಂದಲೇ ಮಾಡಿದ ಗಡಿಗೆ;
- ಕೆಲವೊಂದು ಮಡಕೆ-ಕುಡಿಕೆಗಳನ್ನು(ಚಿಕ್ಕ ಚಿಕ್ಕ ಕುಡಿಕೆ, ಗಡಿಗೆ, ಮುಚ್ಚಳ, ಮೊದಲಾದವು) ಗಂಡು ಮಕ್ಕಳು ಸಹ ಕೈಯಿಂದ ಮಾಡುವುದುಂಟು;
- ಪ್ರಾಚೀನ ಮಾನವರು ಮೊದಮೊದಲು ಮಡಕೆಗಳನ್ನು ಕೈಯಿಂದಲೇ ಮಾಡುತ್ತಿದ್ದರು; ಅನಂತರ ಚಕ್ರವನ್ನು ಬಳಸಿ ಮಡಕೆ ಮಾಡುವುದು ಚಾಲ್ತಿಗೆ ಬಂತು; In olden days people made pots without wheel, or they had hand maden.

ಕೈ ಗಣೆಸೊಪ್ಪು kai gaṇesoppu :

- ಕಳೆಸಸ್ಯ; ಸಸ್ಯ ಜಾನಪದಕ್ಕೆ ಸೇರಿದ್ದು; A weed grown in fields;
- ಗದ್ದೆಯಲ್ಲಿ ಬೆಳೆಯುವ ಕಳೆಗಿಡ(ತು.ಜಿ.);
- ಇಲ್ಲಿನ 'ಕೈ ಗಣೆ' 'ಕೈಗಳೆ'ಯಿಂದ ಬಂದಿರಬಹುದೆ (ಳ>ಣ)?

ಕೈಗರಕೆ/ಕೈಗರ್ಕೆ kaigarake/kaigarke :

- ಒಂದು ಬಗೆಯ ಸಸ್ಯ; A kind of plant;
- ನಾಟೀ ವೈದ್ಯದಲ್ಲಿ ಔಷಧಿಯಾಗಿ ಕೈಗರಕೆ ಸೊಪ್ಪನ್ನು ಉಪಯೋಗಿಸುತ್ತಾರೆ;
- ಔಷಧಿಗೆ ಬಳಸುವ ಕಹಿಯಾದ ಗರಿಕೆ; ಕಹಿಗರಿಕೆ; ಶೀತ ನಿವಾರಣೆಗೆ ಔಷಧಿಯಾಗಿ ಬಳಸುವ ಒಂದು ಹುಲ್ಲು. It is a medicine used to cure coldache.

ಕೈಗರ್ಸ kaigarsa :

- ಕೈ(<ಕಯ್)+ಗರಗಸ=ಕೈಗರಗಸ>ಕೈಗರಗ್ಸ>ಕೈಗರ್ಸ;
- ಆಕಾರದಲ್ಲಿ ಚಿಕ್ಕದಾದ ಗರಗಸ; ಕೈಗರಗಸ; a small short saw;
- 'ಗರಗಸ' ಪದ ಆಡುಮಾತಿನ ಉಚ್ಚಾರಣೆಯಲ್ಲಿ ಸಂಕ್ಷೇಪಗೊಂಡು ಗರಗ್ಸ>ಗರ್ಸ ಎಂದಾಗಿ, 'ಕೈ'ಯೊಡನೆ ಸೇರಿ 'ಕೈಗರ್ಸ' ಎಂದಾಗಿದೆ;
- ಬಡಗಿ ಮರಗೆಲಸ ಮಾಡುವಾಗ ಒಂದೇ ಕೈಯಲ್ಲಿ ಹಿಡಿದು ತನ್ನ ಅಳತೆಗೆ ಬೇಕಾದಂತೆ ಮರದ ಪಟ್ಟಿಗಳನ್ನು, ಹಲಗೆಯನ್ನು ತುಂಡರಿಸಿಕೊಳ್ಳಲು ಉಪಯೋಗವಾಗುತ್ತದೆ.

ಕೈಗಲಸು kaigalasu :

- ಕೈ(<ಕಯ್)+ಕಲಸು=ಕೈಗಲಸು; Handy work; home work;
- ಕೈಹಾಕಿ ಮಿಶ್ರ ಮಾಡುವುದು; ಕೈಯಾಡಿಸುವುದು (ಕ.ಜಾ.ಕೋ); to mix something;
- ಕೈಯಿಂದ ಕಲಸಿ ಚೆನ್ನಾಗಿ ಮಿಶ್ರಣ ಮಾಡುವುದು;
- 'ಕೈಗಲಸು' ಪದಕ್ಕೆ 'ಕೈಗಳಸು' ರೂಪವೂ ಇದ್ದು, 'ಕೈಕ್ಕೈಬೆರಸು' ಎಂಬ ಅರ್ಥವಿದೆ(ಕ.ನಿ.); ಅಂದರೆ ಜಗಳಕ್ಕೆ ದಾರಿ ಮಾಡಿಕೊಡು ಎಂಬ ಅರ್ಥದಲ್ಲಿ.

ಕೈಗಲ್ಲು kaigallu :

- ಎಸೆಯಲು ಸಿದ್ಧವಾಗಿ, ಕೈಯಲ್ಲಿ ಹಿಡಿದಿರುವ ಮುಷ್ಟಿ ಗಾತ್ರಕ್ಕಿಂತ ಚಿಕ್ಕದಾದ ಸಣ್ಣಕಲ್ಲು; small stone; fit to be fist;
- —*ಕೈಗಲ್ಲಳತೆ/ಕೈಗಲ್ಲಳತಿ* : ಕೈಯಿಂದ ಕಲ್ಲನ್ನು ಎಸೆಯುವಷ್ಟು ದೂರ(ಕ.ಜಾ.ಕೋ); A measurement which is the distant of throwing a stone by hand;
- ಕೈಯಿಂದ ಕಲ್ಲನ್ನು ಬೀಸಿ ಎಸೆದಾಗ ಅದು ಬೀಳುವಷ್ಟು ದೂರದ ಅಳತೆ(ಬೆಂ.ಗ್ರಾ.ಜಿ);
- ಸಾಮಾನ್ಯವಾಗಿ ಗ್ರಾಮೀಣರು ದೂರವನ್ನು ಹೇಳುವಾಗ ಮಾರುದೂರ, ಉಳುವ ಹಗ್ಗದ ದೂರ, ಕೂಗಳತೆ ದೂರ ಎಂದು ತಮಗೆ ಪರಿಚಿತವಾದ ನೆಲೆಯಿಂದ ಸೂಚಿಸುವುದು ವಾಡಿಕೆ; ಅಂತೆಯೇ ಒಬ್ಬ ಬಲಿಷ್ಠವಾದ ವ್ಯಕ್ತಿ ಕಲ್ಲನ್ನು ಕೈಯಲ್ಲಿ ಹಿಡಿದು

ಬೀಸಿ ಎಸೆದರೆ ಎಷ್ಟು ದೂರ ಹೋಗಬಹುದೋ ಅಷ್ಟು ದೂರದ ಅಳತೆ ಉಳ್ಳದ್ದೆಂದು ಕೂಡ ದೂರವನ್ನು ನಿರ್ದೇಶನ ಮಾಡುವುದುಂಟು; ಈ ಹಿನ್ನೆಲೆಯಲ್ಲಿ 'ಕೈಗಲ್ಲಳತೆ' ಚಾಲ್ತಿಗೆ ಬಂದಿದೆ;

- ಪ್ರಾದೇಶಿಕ ಭೇದದಿಂದಾಗಿ ಪದದ ಅಂತ್ಯ ಸ್ವರ 'ಎ'ಕಾರ 'ಇ'ಕಾರವಾಗಿ ಕೈಗಲ್ಲಳತಿ ಎಂದು ಬಳಕೆಯಲ್ಲಿದೆ.

ಕೈಗಾವಲಿ kaigāvali :

- ಸಣ್ಣ ಕಾಲುವೆ(ಮಂಡ್ಯ.ಜಿ.); A small cannal or channel which is dug to flow water from storage to down lands;
- ಕೈ+ಕಾಲುವೆ=ಕೈಕಾಲುವೆ>ಕೈಗಾಲುವೆ>ಕೈಗಾವಲಿ;
- ಇದರ ಮೂಲ ರೂಪ 'ಕಾಲ್ವಾಯ್' ಆಗಿದೆ; ಕಾಲಿವೆ, ಕಾಲುವೆ, ಕಾಲ್ವೆ, ಕಾವಲಿ, ಕಾವಲೆ, ಕಾವ್ಲೆ, ಕಾವ್ಲಿ ಎಂಬಿತ್ಯಾದಿ ರೂಪಗಳು ಬಳಕೆಯಲ್ಲಿವೆ; ಅಂದರೆ ನೀರು ಹರಿಯುವುದಕ್ಕಾಗಿ ಮಾಡಿದ ತಗ್ಗು;
- ಕೆರೆ, ಕಟ್ಟೆ, ನದಿ ಇತ್ಯಾದಿ ನೀರಿನ ಮುಖ್ಯ ಆಸರೆಯಿಂದ ವ್ಯವಸಾಯಕ್ಕಾಗಿ ನೀರು ಹರಿಸಲು ಮಾಡಿದ ವ್ಯವಸ್ಥೆಯೆ ಕಾಲುವೆ; ಕಾಲುವೆಯಿಂದ ಬೆಳೆಯಿರುವ ಗದ್ದೆಗಳಿಗೆ ಕಾಲಕಾಲಕ್ಕೆ ನೀರು ಸರಬರಾಜಾಗುತ್ತದೆ;
- ಮುಖ್ಯ ಕಾಲುವೆಯಿಂದ ಸೀಳು ಸೀಳುಗಳಾಗಿ ಕವಲೊಡೆದು ಹರಿಯುವ ಸಣ್ಣ ಸಣ್ಣ ಕಾಲುವಗಳಿಗೆ 'ಕೈಗಾಲುವೆ' ಎಂದು ಕರೆಯುವುದುಂಟು; the sub cannals or feeding cannals of a main cannal;
- 'ಎ'ಕಾರಾಂತ ಪದವಾದ 'ಕಾಲುವೆ' ಪ್ರಾದೇಶಿಕ ಭೇದದಿಂದ 'ಇ'ಕಾರಂತವಾಗಿ 'ಕಾಲುವಿ' ಎಂದಾಗುತ್ತದೆ; 'ಕೈ' ಶಬ್ದದೊಡನೆ ಸೇರಿ ಕೂಡು ಪದವಾದಾಗ ಕೈ+ಕಾಲುವೆ=ಕೈಗಾಲುವೆ>ಕೈಗಾಲುವಿ ಎಂದಾಗುತ್ತದೆ; ನಂತರ 'ಲ್'ಕಾರ ಮತ್ತು 'ವ್'ಕಾರಗಳು ಉಚ್ಚಾರಣೆಯಲ್ಲಿ ವರ್ಣ ಪಲ್ಲಟಗೊಂಡು 'ಕೈಗಾವಲಿ' ಎಂಬ ರೂಪ ಉಂಟಾಗಿದೆ;
- ಕೈಗಾಲುವಿ>ಕೈಗಾವಲಿ>ಕೈಗಾವ್ಲಿ ಅದೇ ಅರ್ಥದಲ್ಲಿ ಬಳಕೆಯಲ್ಲಿದೆ.

ಕೈಗಾಳು ಹಾಕೂದು kaigāḷu hākūdu :

- ಕೈ(ಕಯ್)+ಕಾಳು+ಹಾಕುವುದು=ಕೈಗಾಳು ಹಾಕುವುದು>ಕೈಗಾಳು ಹಾಕೂದು;
- ಹೊಲದಲ್ಲಿ ಬಿತ್ತನೆ ಮಾಡುವಾಗ ಕೈಯಿಂದ ಬೀಜ ಹಾಕುವ ವಿಧಾನ; to sow seeds by hand;
- ಹೊಲದಲ್ಲಿ ಬಿತ್ತನೆ ಮಾಡುವುದು ಒಂದು ಕಲೆ; sowing is an art; ಬಿತ್ತಿದ ಬೀಜ ಮಣ್ಣಿನಲ್ಲಿ ಆಳವಾಗಿ ಸೇರಿಕೊಂಡರೆ ಸರಿಯಾಗಿ ಮೊಳಕೆಯೊಡೆಯುವುದಿಲ್ಲ; ಸಾಲಿನಲ್ಲಿ ಬಿತ್ತನೆ ಚೆಲ್ಲಿದರೆ ಬೀಜ ಹೆಚ್ಚು ಬೇಕಾಗುತ್ತದೆ; if the sowed seed goes deep the seedling will not become out from the earth;
- ಕೈಯಿಂದ ಸಾಲು ಸಾಲುಗಳಲ್ಲಿ ಒಂದೊಂದೇ ಬೀಜವನ್ನು ಹಾಕುತ್ತಾ ಬೆರಳಲ್ಲಿ ಊರುತ್ತಾ ಬಿತ್ತನೆ ಕೆಲಸ ಮಾಡಿದರೆ ಬೀಜವೂ ಹೆಚ್ಚು ಬೇಕಾಗುವುದಿಲ್ಲ; ಹಾಕಿದ ಬಿತ್ತನೆ ಬೀಜಗಳು ಮಣ್ಣಿನಲ್ಲಿ ಹೆಚ್ಚು ಅಳಕ್ಕೆ ಸೇರದೆ ಸರಿಯಾದ ಪ್ರಮಾಣದಲ್ಲಿದ್ದು ಒಂದು ಬೀಜವೂ ಹುಸಿಯದೆ ಚೆನ್ನಾಗಿ ಮೊಳಕೆಯೊಡೆಯುತ್ತವೆ; ಕಡಿಮೆ ಬೀಜದಿಂದ ಹೊಲದ ಹೆಚ್ಚು ಪ್ರದೇಶದಲ್ಲಿ ಬಿತ್ತನೆ ಮಾಡಲು ಸಾಧ್ಯವಾಗುತ್ತದೆ.

ಕೈಗುಂಟೆ kaiguṇṭe :

- ಕೃಷಿ ಉಪಕರಣಗಳಲ್ಲಿ ಒಂದು; ಚಿಕ್ಕ ಕುಂಟೆ; A small plough;
- ಬೀಜ ಹಾಕುವಾಗ ಸಾಲು ಮಾಡಲು ಉಪಯೋಗಿಸುವ ಸಾಧನ; an agricultural tool used to lane for sowing seeds;
- ಕುಂಟೆಗಳಲ್ಲಿ ಹೆಗ್ಗುಂಟೆ, ಕೈಗುಂಟೆ ಎಂಬ ಎರಡು ರೂಪಗಳಿವೆ; ಹೆಗ್ಗುಂಟೆ ಕಬ್ಬಿಣದ ದೊಡ್ಡ ಹಲ್ಲುಗಳಿಂದ ಕೂಡಿದ್ದು, ಎತ್ತುಗಳನ್ನು ಹೂಡಿ ಎಳೆಸುತ್ತಾರೆ; ಕೈಗುಂಟೆಯನ್ನು ಕೈಯಲ್ಲಿ ಹಿಡಿದು ಎಳೆಯುವುದರ ಮೂಲಕ ಚಿಕ್ಕ ಪಾತಿಗಳನ್ನು ಸಮಗೊಳಿಸುವುದು, ಸ್ವಲ್ಪಸ್ವಲ್ಪವಾಗಿ ಸಾಲು ಎಳೆದುಕೊಂಡು ಬಿತ್ತನೆ ಮಾಡುವುದಕ್ಕೆ ಬಳಸುತ್ತಾರೆ.

ಕೈಗುಂಡು kaiguṇḍu :

- ಬಂಗಾರದ ಗುಂಡುಗಳಿಂದ ತಯಾರಿಸಿದ, ಮಕ್ಕಳ ಮುಂಗೈಗೆ ಕಟ್ಟುವ ಆಭರಣ; A bracelet; a jewel worn by children madeup of gold;
- ಪುಟ್ಟ ಮಕ್ಕಳಿಗೆ ಯಾವ ತೊಂದರೆಯೂ ಆಗದಿರಲೆಂದು ಚಿನ್ನದ ಗುಂಡುಗಳ ಜೊತೆಗೆ ಹವಳದ ಮಣಿ, ಕರಿಮಣಿ ಸೇರಿಸಿ ಕೈಗೆ ಕಟ್ಟುವುದುಂಟು; ಇದು ದೃಷ್ಟಿದೋಷವನ್ನು ದೂರ ಮಾಡುತ್ತದೆಂಬ ನಂಬಿಕೆಯೂ ಇದೆ;
- ಕೈಯಿಂದ ಎಸೆಯುವ ಗುಂಡು ಎಂಬ ಅರ್ಥವೂ ಇದೆ; ಇದು ಜನಪದ ಆಟದಲ್ಲಿ ಇದ್ದಂತಿಲ್ಲ.

ಕೈಗುಣ kaiguṇa :

- ಕೈ(<ಕಯ್)+ಗುಣ=ಕೈಗುಣ; a lucky hand or the lucky palm;
- ಹಸ್ತ ಕೌಶಲ; ಕೈಯ ಸಾಮರ್ಥ್ಯ; ಕೈಯ ಪ್ರಭಾವ; ಚಾತುರ್ಯ; hand skill capacity of a person;
- ಹಿಡಿದ ಕಾರ್ಯವನ್ನು ಛಲದಿಂದ ಸಾಧಿಸುವುದು; to acieve immediately;
- ಇನ್ನೊಬ್ಬರ ಮೇಲೆ ತೋರಿಸುವ ಶಕ್ತಿ ಪ್ರದರ್ಶನ; it is a process of power exhibition on one another;
- ವೈದ್ಯಕೀಯ ಕ್ಷೇತ್ರದಲ್ಲಿ ಡಾಕ್ಟರ್ ಔಷಧಿ ನೀಡಿ ರೋಗಿಗಳನ್ನು ಗುಣಪಡಿಸುವ ಸಂಬಂಧವಾಗಿ ಈ ಪದದ ಬಳಕೆ ಹೆಚ್ಚಾಗಿ ಕಂಡುಬರುತ್ತದೆ;
- ಅಡುಗೆ ಮಾಡುವಾಗ ಉತ್ತಮ ಪರಿಕರಗಳನ್ನು ಹದವರಿತು ಹಾಕಿ ಮಾಡಿದರೆ ಅದು ರುಚಿಯಾಗಿರುತ್ತದೆ; ಇಂತಹ ಸಂದರ್ಭದಲ್ಲಿಯೂ ಹಸ್ತಗುಣದ ಬಗೆಗೆ ಮಾತನಾಡುವುದುಂಟು;
- ವ್ಯಕ್ತಿಯು ನೆಟ್ಟ ಗಿಡ ಚೆನ್ನಾಗಿ ಚಿಗುರಿ, ಬೆಳೆದು ಫಲ ಕೊಡುವಾಗ, ಹಾಕಿದ ಬಿತ್ತನೆ ಬೀಜ ಚೆನ್ನಾಗಿ ಮೊಳೆತು, ಬೆಳೆದು ಉತ್ತಮ ಫಸಲು ಬಂದಾಗಲೂ ಆ ವ್ಯಕ್ತಿಯ ಹಸ್ತಕೌಶಲದ ಬಗೆಗಿನ ಪ್ರಶಂಸೆಯಾಗಿದೆ; we are talking about one's lucky hand or palm when one's sowing seed grows successfully;
- ವೈದ್ಯಕೀಯ ರಂಗ, ಅಡುಗೆ, ಕೃಷಿ ಕ್ಷೇತ್ರಗಳಲ್ಲಿ ಪಡೆದುಕೊಂಡ ಹೆಚ್ಚಿನ ಅನುಭವ ಜ್ಞಾನವನ್ನು 'ಕೈಗುಣ' ಎಂಬುದರಿಂದ ಸೂಚಿಸುವುದು ವಾಡಿಕೆ; ಆಯಾ ಕ್ಷೇತ್ರದಲ್ಲಿನ ಪರಿಣತಿ ಪಡೆದ ಜ್ಞಾನವನ್ನು ಇದು ಪ್ರತಿನಿಧಿಸುತ್ತದೆ.

ಕೈಗುದ್ಲಿ kaigudli :

- ಕೈ(<ಕಯ್)+ಗುದ್ದಲಿ=ಕೈಗುದ್ದಲಿ>ಕೈಗುದ್ಲಿ;
- ಸಣ್ಣ ಗುದ್ದಲಿ; ಚಿಕ್ಕಗುದ್ದಲಿ; a small spade, hoe;
- ಒಂದೇ ಕೈಯಲ್ಲಿ ಹಿಡಿದು ಅಗೆಯಲು ಬಳಸುವ ಚಿಕ್ಕಗುದ್ದಲಿ; ಕೈತೋಟದಲ್ಲಿ ಹೆಚ್ಚಾಗಿ ಬಳಸಲಾಗುತ್ತದೆ.

ಕೈಗೂಟ kaigūṭa :

ಕುಣಿ ಮಗ್ಗದ ಎಡ ಪಕ್ಕದಲ್ಲಿ ಇರುವ ಒನಕೆ ಗಾತ್ರದ ಗೂಟ (ಕೈಮಗ್ಗದ ಮಿಣಿಗೂಟದ ನೆರವಿನಿಂದ ಇದು ದಾರದ ಜಾಲವನ್ನು ನೆಲದಿಂದ ಎತ್ತಿ ಹಿಡಿದಿರುತ್ತದೆ) (ಚಿ.ಪ.ಕೋ). Wooden pestle sized wooden post which fixed by the side of hand loom.

ಕೈಗೂಡು kaigūḍu :

- ಕೈ(<ಕಯ್)+ಕೂಡು=ಕೈಕೂಡು>ಕೈಗೂಡು;
- ಸಂಕಲ್ಪಿಸಿದ ಕೆಲಸ ಸಾಧ್ಯವಾಗುವುದು; to do work successfully;
- ಬಯಕೆಗಳು ಈಡೇರುವುದು; ಸಿದ್ಧಿಸುವುದು; fulfilled wants; fulfilment of one's desires;
- 'ಕೈಗುಡು' ಎಂಬ ರೂಪವೂ ಇದೆ; ಈ ರೂಪವೇ ಪ್ರಾಚೀನವೆಂದು ತೋರುತ್ತದೆ;
- ಕೈಗುಡು/ಕಯ್ಗುಡು; ಕೈಗೂಡು/ಕೈಯ್ಗೂಡು.

ಕೈಗೆಟಕದ್ದು kaigeṭakaddu :

- ಸುಲಭವಾಗಿ ಸಿಗದಿರುವುದು; it is not reachable unfulfilment of wants;
- ಕೈಗೆ+ಎಟುಕದ್ದು=ಕೈಗೆಟುಕದ್ದು>ಕೈಗೆಟಕದ್ದು;
- ಬಯಸುವ ಕಾರ್ಯಗಳು ಕೈಗೂಡದಿರುವ ಸ್ಥಿತಿಯನ್ನು ಇದು ಹೇಳುತ್ತದೆ; ಎಷ್ಟೇ ಪ್ರಯತ್ನ ಪಟ್ಟರೂ ತಮಗೆ ದಕ್ಕದಿರುವುದು;
- 'ಕೈಗೆಟಕು' ಇದರ ಇತ್ಯರ್ಥಕ ಪದ; 'ಕೈಗೆಟಕದ್ದೂ' ನಿಷೇಧಾರ್ಥಕ ಪದ; negative term for earned;
- 'ಕೈಗೆಟಕದ್ದು' ಯಾವುದಾದರೂ ವಸ್ತುವನ್ನು ತೆಗೆದುಕೊಳ್ಳಲು ಹೋದಾಗ 'ಕೈಗೆ' ಸಿಗದೆ ಎತ್ತರದಲ್ಲಿದ್ದರೆ, ಆಸ್ಥಿತಿಯನ್ನು ಸೂಚಿಸುತ್ತದೆ;

- ಹಾಗೆಯೇ ದಕ್ಕದ ಅಥವಾ ದೊರಕದ ಆಸೆ/ಅಪೇಕ್ಷೆಯನ್ನು ಕುರಿತು ಮಾತಾಡುವಾಗ ಇದೇ ಪದ ನುಡಿಗಟ್ಟಿನಂತೆ ಬಳಕೆಯಾಗುತ್ತದೆ.

ಕೈಗೆತ್ತಿಕೊ kaigettiko :

- ಜವಾಬ್ದಾರಿ ತೆಗೆದುಕೊಳ್ಳುವುದು, ಕೈಗೆ+ಎತ್ತಿಕೊ=ಕೈಗೆತ್ತಿಕೊ; Responsible to take risk of others or oneself;
- ಯಾವುದಾದರೂ ಕಾರ್ಯವನ್ನು ಮಾಡಲು ಪ್ರವೃತ್ತರಾಗುವುದು; ಜವಾಬ್ದಾರಿ ತೆಗೆದುಕೊಂಡು ಕೆಲಸ ನಿರ್ವಹಿಸುವುದು; to work; to start work with responsibility;
- ಸಿಕ್ಕಿದ ಪದಾರ್ಥವನ್ನು ಕೈಯಿಂದ ತೆಗೆದುಕೊ ಎನ್ನುವಲ್ಲಿ ಅದರ ಭೌತಿಕ ಕ್ರಿಯೆಯನ್ನೆ ಪ್ರತಿನಿಧಿಸುತ್ತದೆ; ಆಗ ಇದು ಸಹಜವಾಗಿಯೇ ಶರೀರ ಜಾನಪದವಾಗುತ್ತದೆ;
- ಹಾಗೆಯೇ ಜವಾಬ್ದಾರಿ ಕೆಲಸವನ್ನು ವಹಿಸಿಕೊಳ್ಳಬೇಕೆಂದಾಗ, ಅದು 'ನುಡಿಗಟ್ಟಾಗಿ' ವರ್ತಿಸುವುದು ಬಳಕೆಯ ಸಂದರ್ಭವನ್ನು ಅವಲಂಬಿಸಿ.

ಕೈಗೆಬರು kaigebaru :

- ಸಹಾಯಕ್ಕೆ ಬರುವುದು; ಪ್ರಾಪ್ತ ವಯಸ್ಸಿಗೆ ಬರುವುದು; to help others; to come to help;
- ಪ್ರಾಯಕ್ಕೆ ಬರು(ಕೊ.ಜಿ.); to mature;
- ದಕ್ಕುವುದು; ದೊರಕುವುದು; available;
- ತಂದೆ-ತಾಯಂದಿರು ವೃದ್ಧರಾದಾಗ ಅವರ ಸಹಾಯಕ್ಕೆ ಬರುವ ವಯಸ್ಕ ಮಕ್ಕಳ ಬಗ್ಗೆ ಪದ ಬಳಕೆ;
- ಮಕ್ಕಳು ತಾವು ದುಡಿದು ವೃದ್ಧರನ್ನು ರಕ್ಷಿಸುವುದು ಕರ್ತವ್ಯವೂ ಅಹುದು; *ಪ್ರ: 'ಮಕ್ಕಳು ಕೈಗೆ ಬರುವಾಗ ನನಗೇಕೆ ಯೋಚ್ನೆ'.*

ಕೈಗೆಹತ್ತು/ಕೈಹತ್ತು kaigehattu/ kaihattu :

- ಅನುಕೂಲವಾಗುವುದು; ಲಾಭ ಬರುವುದು; to get profit; convenient; convenience
- ಶ್ರಮದ ದುಡಿಮೆ ಮಾಡಿದಾಗ ತಕ್ಕ ಪ್ರತಿಫಲ ದೊರೆಯುವುದಕ್ಕೆ ಪದ ಬಳಕೆ; ಕೆಲವೊಮ್ಮೆ ನಷ್ಟವಾಗಬಹುದು; ಆದರೆ ಉತ್ತಮ ಪ್ರತಿಫಲ ಬಂದಾಗ; ಹಿಡಿದ ಕೆಲಸ ಕೈಗೂಡಿದಾಗ ಮಾತ್ರ ಕೈಗೆ ಹತ್ತಿತ್ತು/ಕೈಹತ್ತಿತು ಎಂಬ ಅರ್ಥದ ಪದ ಬಳಕೆ; Convenient price for one's labour;
- ಉತ್ತರ ಕರ್ನಾಟಕದ ಕಡೆ ಕೈಗೆ ಹತ್ತು ಪದ ಬಳಕೆಯಾದರೆ ಬಯಲು ಸೀಮೆಯಲ್ಲಿ 'ಕೈಹತ್ತು' ಪದ ಸಾಮಾನ್ಯ; *ಪ್ರ: 'ಬೆಳೆ ಕೈಗೆಹತ್ತುದ್ರೆ ರೈತರು ಯಾಕೆ ಸಾಯುತ್ತಾರೆ?'*

ಕೈಗೈ೧ kaigai[1] :

- ರಕ್ಷಿಸು, ಜೋಪಾನಮಾಡು; to protect someone; to save something;
- ಯಾವುದೇ ವಸ್ತು, ವ್ಯಕ್ತಿಗಳನ್ನು ಹಾಳಾಗದಂತೆ ಜೋಪಾನವಾಗಿ ಕಾಪಾಡಿಕೊಳ್ಳುವುದು; ಲಂಬಾಣಿ ಸಮಾಜದಲ್ಲಿ ಪದಬಳಕೆ;
- ಕಯ್+ಕೈ(ಗೈ)=ಕಯ್‌ಗೈ>ಕೈಗೈ(ಕ್+ಗ್) ಕೈಯ್= ಮಾಡು, ಕೈಯಿಂದ ಮಾಡು, ಸ್ವತಃ ರಕ್ಷಿಸು(ಹಬ್ಬದ ಹಾಡು); *ಪ್ರ: 'ಅಪ್ಪನ ಆಸ್ತಿಯನ್ನು ಕೈಗೈ';*
- 'ಕೈಗೈ'ಗೆ ಸಂವಾದಿಯಾಗಿ ಕಯ್ಗೆಯ್, ಕೈಗೆಯ್ ರೂಪಗಳೂ ಇವೆ;
- ಅಲಂಕರಿಸು, ಸಿದ್ಧವಾಗು ಎಂಬ ಅರ್ಥಗಳೂ ಇವೆ.

ಕೈಗೈ೨ kaigai[2] :

- ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ಮಠದಲ್ಲಿರುವ ಕ್ರಿ.ಶ.೧೪೩೨ಕ್ಕೆ ಸೇರಿದ ವಿಜಯನಗರದ ಇಮ್ಮಡಿದೇವರಾಯನ ಕಾಲದ ೫೫ನೇ ಶಾಸನದಲ್ಲಿ ಈ ಗ್ರಾಮದ ಉಲ್ಲೇಖವಿದೆ; A village referred in 55th inscription of 1432AD found in Shringeri matt of Chikkamagaluru; it belongs to the king 2nd Devaraya of Vijayanagara;
- ಇದೇ ಶಾಸನದಲ್ಲಿ 'ಕೈಗಯೀದೇಶ' ಎಂಬ ಆಡಳಿತ ವಿಭಾಗದ ಉಲ್ಲೇಖವಿದೆ;
- ಈ ಆಡಳಿತ ವಿಭಾಗದ ಹಿನ್ನೆಲೆಯಲ್ಲಿ 'ಕೈಗೈದೇಶ' ಎಂಬ ಸ್ಥಳನಾಮ ನಿಷ್ಪತ್ತಿಯಾಗಿದೆ ಎಂದು ಊಹಿಸಬಹುದಾಗಿದೆ.

(E.C- ೧೧; ಚಿಕ್ಕ.ಜಿ.)

ಕೈಗೊಂಬೆ kaigombe :

- ಕೈ(ಯ)+ಗೊಂಬೆ=ಕೈಗೊಂಬೆ; puppet, small doll;

- ಸ್ವಂತ ಬುದ್ಧಿ ಇಲ್ಲದ, ಇನ್ನೊಬ್ಬರ ಆದೇಶದಂತೆ ನಡೆಯುವುದು; ಹೇಳಿದಂತೆ ಕೇಳುವವರು; a person who has no independent intelligency and follows others without reason;
- ಇದು ನುಡಿಗಟ್ಟಾಗಿಯೂ ಬಳಕೆಯಾಗುತ್ತದೆ;
- ಯಾವುದೇ ವಿಷಯದಲ್ಲಿ ನೇರವಾಗಿ ತೀರ್ಮಾನ ತೆಗೆದುಕೊಳ್ಳಲಾಗದೆ ಬೇರೊಬ್ಬರ ಅಭಿಪ್ರಾಯಕ್ಕೆ ತಕ್ಕಂತೆ ನಡೆದುಕೊಳ್ಳುವ ವ್ಯಕ್ತಿ; a cat's paw another's tool;
- ಸಂಸಾರಿಯಾಗಿದ್ದು, ಬೇರೊಂದು ಹೆಣ್ಣಿನ ಮೋಹಕ್ಕೆ ಒಳಗಾಗಿ ಆಕೆ ಆಡಿಸಿದಂತೆ ಆಡುವ ವ್ಯಕ್ತಿ;
- ಪೂರ್ವಾಪರ ಆಲೋಚನೆ ಮಾಡದೆ ಹೆಂಡತಿಯು ಹೇಳಿದ ಹಾಗೆ ಕೇಳುವವರಿಗೂ ಈ ಮಾತು ಅನ್ವಯಿಸುತ್ತದೆ;
- ಕೈನಲ್ಲಿ ಹಿಡಿದುಕೊಳ್ಳಬಹುದಾದ(ಮಕ್ಕಳು) ಚಿಕ್ಕಗಾತ್ರದ ಗೊಂಬೆ ಎನ್ನುವ ಅರ್ಥವೂ ಇದೆ; a small doll, that can be kept in the hands of a small children;
- 'ಗೊಂಬೆ' ರೂಪಕ್ಕೆ 'ಬೊಂಬೆ' ಎಂಬ ಸಂವಾದಿ ರೂಪವೂ ಇದೆ; 'ಗ' ಮತ್ತು 'ಬ'ಗಳ ನಡುವೆ ಯಾವುದೇ ಸಂಬಂಧ ಇಲ್ಲದಿದ್ದರೂ, ಕಡೆಯ ಧ್ವನಿಮಾದ(ಬ) ಉಚ್ಚಾರಣೆಯ ಪ್ರಭಾವದಿಂದ ಅದರ ಹಿಂದಿನ 'ಗೊ'>'ಬೊ' ಆಗಿ ಪರಿವರ್ತಿತವಾಗಿರುವ ಸಾಧ್ಯತೆ ಇದೆ.

ಕೈಗೊಟ್ಟ kaigoṭṭa :

- ಜಾನುವಾರುಗಳಿಗೆ ಔಷಧಿ, ರಾಗಿ ಅಂಬಲಿ, ಗಂಜಿ ಇತ್ಯಾದಿ ಕುಡಿಸುವುದಕ್ಕಾಗಿ ಬಳಸುವ ಬಿದಿರಿನ ಕೊಳವೆ; A wooden shuttle used to feed medicine for cattles;
- ಇದು ಚಿಕ್ಕದಾಗಿದ್ದು ಸುಲಭವಾಗಿ ಕೈಯಲ್ಲಿ ಹಿಡಿದು ಜಾನುವಾರುಗಳ ಬಾಯಿಗೆ ಹಾಕಿ ಅದರೊಳಗಿನ ಆಹಾರವನ್ನು ಕುಡಿಸಲು ಅನುವಾಗುವುದರಿಂದ 'ಕೈಗೊಟ್ಟ' ಎನ್ನುತ್ತಾರೆ; (ಕೈ+ಕೊಟ್ಟ=ಕೈಗೊಟ್ಟ);
- ಸುಮಾರು ಎರಡು ಇಂಚು ಗಾತ್ರದ, ಒಂದು ಅಡಿ ಉದ್ದದ ಬಿದಿರುಬೊಂಬನ್ನು ಹಿಂದಿನ ಗಂಟು/ಗಿಣ್ಣು ಉಳಿಸಿ, ಮುಂದೆ ತೆರೆದಿರುವಂತೆ ಓರೆಯಾಗಿ ಕತ್ತರಿಸಲಾಗಿರುತ್ತದೆ; ಬಿದಿರಿನ ಟೊಳ್ಳಿನೊಳಗೆ ಜಾನುವಾರುಗಳಿಗೆ ಕುಡಿಸಬೇಕಾದ ಆಹಾರವನ್ನು ತುಂಬಿಕೊಂಡು, ಮುಂದಿನ ಓರೆಯಾಗಿ ತೆರೆದಿರುವ ಮೂತಿಯನ್ನು ಬಾಯೊಳಗೆ ಇಟ್ಟು ಗಂಟಲಿಗೆ ಆಹಾರ/ಔಷಧಿ ನೇರವಾಗಿ ಹೋಗುವಂತೆ ಹಾಕುತ್ತಾರೆ; ಕೊಟ್ಟದ ಮುಂತುದಿಯಿಂದ ನಾಲಿಗೆಯನ್ನು ಅದುಮಿ ಹಿಡಿಯುವುದರಿಂದ ಜಾನುವಾರುಗಳು ನಾಲಿಗೆಯಾಡಿಸಿ ಹೊರ ಉಗುಳಲು ಸಾಧ್ಯವಾಗದೆ ಗಂಟಲಿಗೆ ಬಂದುದನ್ನು ಗುಟುಕರಿಸಿ ಕುಡಿಯುವಂತಾಗುತ್ತದೆ.

ಕೈಗೋರಿ kaigōri :

- ಧಾನ್ಯ ಒಟ್ಟು ಮಾಡುವ ಸಾಧನ(ಮಂ.ಜಿ/ಉ.ಕ.ಜಿ); A tool used to gather or collect grains or corns as pile;
- ಕಣದಲ್ಲಿ ಧಾನ್ಯ ಒಕ್ಕಣೆಯಾದ ಮೇಲೆ, ಕಣದ ತುಂಬ ಹರಡಿರುವ ಧಾನ್ಯವನ್ನೆಲ್ಲಾ ಕಣದ ಮಧ್ಯಕ್ಕೆ ರಾಶಿ ಮಾಡಲು ಬಳಸುವ ಸಾಧನ; ಗೋರುಮಣೆ;
- ಒಬ್ಬೊಬ್ಬರೆ ಇದನ್ನು ಹಿಡಿದು ಧಾನ್ಯವನ್ನು ಒಟ್ಟುಗೂಡಿಸಲು ತಳ್ಳುವುದರಿಂದ ಮರದ ಈ ಸಾಧನಕ್ಕೆ 'ಕೈಗೋರಿ' ಎಂಬ ಹೆಸರು ಬಂದಿದೆ;
- 'ಗೋರು' ಪದದಿಂದ 'ಗೋರಿ' ಬಂದಿದೆ; ಕೈಮೂಲಕ ಗುಡಿಸಿ/ಶೇಖರಿಸಿ ಒಂದು ಕಡೆ ಸೇರಿಸುವುದು; ಒಕ್ಕಣೆಯ ಸಂದರ್ಭವಾದ್ದರಿಂದ ಕೈಗೆ ಬದಲಾಗಿ 'ಗೋರುಮಣೆ'ಯನ್ನು ಉಪಯೋಗಿಸಲಾಗುತ್ತದೆ; 'ಮಣೆ' ಇಲ್ಲಿ ಸಾಧನವಾದರೂ, ಅದನ್ನು ಕೈಯಿಂದಲೇ ಹಿಡಿದು ತಳ್ಳಬೇಕಾಗುತ್ತದೆ; ಆ ಕಾರಣದಿಂದಲೇ 'ಕೈಮಣೆ/ ಕೈಗೋರಿ' ಎಂಬ ಪದಗಳಿವೆ;
- 'ಕೈಗೋರಿ' ಎಂಬುದಕ್ಕೆ 'ಚಿಕ್ಕಮಣೆ'(ಗೋರಿ) ಎಂದೂ ಅರ್ಥೈಸಬಹುದು; it means a small wooden plank.

ಕೈಚಪ್ಪಡಿ kaicappaḍi :

- ಗರಡಿ ಮನೆಯಲ್ಲಿ ಸಾಮು ಮಾಡುವಾಗಿನ ಪಟ್ಟು; a technique of trick of wrestling;
- ಸಾಮು ಮಾಡುವ ಸ್ಥಿತಿಯಲ್ಲಿದ್ದಂತೆಯೇ ವೇಗವಾಗಿ ಎಡಗೈ ಇಲ್ಲವೆ ಬಲಗೈ ಮಡಚಿ, ಕೈಯಿಂದ ಕಲ್ಲಿನ ಚಪ್ಪಡಿಗೆ ಹೊಡೆದಾಗ ಶಬ್ದ ಬರುವಂತೆ ನೆಲಕ್ಕೆ ಕೈಯನ್ನು ಬಡಿಯುವುದು; ಈ ಅಭ್ಯಾಸದಿಂದ

ಎದುರಾಳಿಯ ಕೈಸುತ್ತಿ ಚಿತ್ ಮಾಡಲು ಸಹಾಯವಾಗುವುದು.

ಕೈಚಪ್ಪಳೆ/ಕೈಚಪ್ಪಾಳೆ kaicappaḷe/ kaicappāḷe :

- ಕೈತಪಾಳೆ, ಕೈತಪ್ಪಳೆ; ಎರಡೂ ಕೈಗಳನ್ನು ಒಂದಕ್ಕೊಂದು ತಟ್ಟಿ ಮಾಡುವ ಶಬ್ದ; ಕರತಾಡನ; a clap of thunder sound echoed claps;
- ಕೈಚಪ್ಪಾಳೆ; ಕೈತಟ್ಟುವಿಕೆ, ಕರತಾಡನ; [ಕೈ(<ಕೆಯ್)+ಚಪ್ಪಳೆ](ಕ.ನಿ.);
- ಕೆಯ್ಚಪ್ಪಳೆ, ಕೆಯ್ಚಪ್ಪಾಳೆ; clapping the hands(ಕಿಟ್ಟೆಲ್);
- ಆದರೆ 'ಚ'ಕಾರಕ್ಕೆ 'ತ'ಕಾರ ಬಂದಿರುವುದು ಅಚ್ಚರಿಯ ಅಂಶ; ಇತರ ಕಡೆಗಳಲ್ಲಿಯೂ ಈ ಭಾಷಿಕ ಬದಲಾವಣೆಗಳು ವರದಿಯಾಗಿವೆ.

ಕೈಚಲಿಗೆ kaicalige :

ಕೈಗೆಟುಕುವಂತೆ ವಸ್ತುಗಳನ್ನು ಇಡುವ ಜಾಗ. A place where things are kept easily.

ಕೈಚಳಕು/ಕೈಚಳಕ kaicaḷaku/ kaicaḷaka :

- ಕೈಚಳುಕು; ಕೈಯ್ಯ ಅಥವಾ ತೋಳಿನ ಸ್ನಾಯುಗಳು ಬಿಗಿಯುವುದು; ಸೆಡೆಯುವುದು; ಸೆಳೆತಕ್ಕೊಳಗಾಗುವುದು; A palm skill; dexterity, finess, sleight of hand;
- ಕೈಚಳಕ; ಕೈಯ ನೈಪುಣ್ಯತೆ; ಚಮತ್ಕಾರ;
- cramp in the hand or arm(ಕಿಟ್ಟೆಲ್) [ಕೈ(<ಕೆಯ್)+ಚಳಕು]; *ಪ್ರ: ೧.'ನೆನ್ನೆಯಿಂದ ಕೈಚಳಕು ಆಗಿ ಬರೆಯೋಕೆ ಆಗ್ಲಿಲ್ಲ'; ೨.'ಆತನು ಕೈಚಳಕದಿಂದ ಮೋಡಿ ಮಾಡಿದ'.*

ಕೈಚಿನ್ನ kaicinna :

- ಯಕ್ಷಗಾನದ ವೇಷಕ್ಕೆ ಸಂಬಂಧಿಸಿದ ಮರದಿಂದ ಮಾಡಿದ ಕೈಕಟ್ಟು, ತೋಳ್ಕಟ್ಟು, ಭುಜಕೀರ್ತಿ ಎಲ್ಲವೂ ಸೇರಿದಂತಹ ಕೈಯಿನ ಆಭರಣಗಳು(ಮಂ.ಜಿ/ಉ.ಜಿ.) (ಯ.ಪ.ಕೋ); A hand jewel worn by characters of Yakshagana;
- ಗೊಂದಲಿಗರು ಮುಂಗೈಗೆ ಧರಿಸುವ ಒಂದು ಆಭರಣ(ಕ.ಜಾ.ಕೋ).

ಕೈಚೀಲ kaicīla :

- ಎಲೆ ಅಡಿಕೆ ಚೀಲ(ತು.ಜಿ.); A hand purse used to keep eracanut, betel leaves lime and tobacco;
- ಕೈಯಲ್ಲಿ ಹಿಡಿಯುವ ಚೀಲ(ಬಾ.ಜಿ.); An hand bag used to keep small things;
- ಸಣ್ಣ ಪುಟ್ಟ ಸಾಮಗ್ರಿಗಳನ್ನು ತೆಗೆದುಕೊಂಡು ಬರಲು ಬಳಸುವ ಬಟ್ಟೆಯಿಂದ ಹೊಲಿದ ಚಿಕ್ಕ ಚೀಲ;
- ನೂಲು, ರೇಷ್ಮೆ, ನೈಲಾನ್, ಪಾಲಿಸ್ಟರ್ ಹೀಗೆ ಹಲವು ಬಟ್ಟೆಗಳಿಂದ ಹೊಲಿದು ತಯಾರಿಸಿದ ಸಾಧನ;
- ಮೇಟಿ ಬಟ್ಟೆಯ ಮೇಲೆ, ಹಾಳೆಯ ಮೇಲೆ ಉಲ್ಲನ್‌ನಿಂದ ಕಸೂತಿ ಹಾಕಿ ಕೈಚೀಲಗಳನ್ನು ಹೊಲಿಯುತ್ತಾರೆ; ತರಕಾರಿ, ಕಿರಾಣಿ, ಮಂಡಕ್ಕಿ, ಅವಲಕ್ಕಿ ಇತ್ಯಾದಿಗಳನ್ನು ತರಲು ಕೈಚೀಲ ಉಪಯೋಗಿಸುವರು;
- ಗುಲಾಮಗಿರಿ ಮಾಡುವಂತಹವರಿಗೆ ಬೈಯಲು ಈ ಪದ ಬಳಕೆ ಮಾಡುವರು; ಉದಾ: 'ಅಂವ ಅದಾನಲ್ಲಾ ಸಾಹುಕಾರನ ಕೈಚೀಲ ಇದ್ದಾಂಗ ಅದಾನ" ಎಂದು ಹೇಳುವರು; an abused word that refers a man who lives a life of slavery;
- ಕೈಗಳ ರಕ್ಷಣೆಗಾಗಿ ಹಾಕಿಕೊಳ್ಳುವ ಚೀಲ(ಕಾಲಿಗೆ ಧರಿಸುವ ಚೀಲ 'ಕಾಲುಚೀಲ' ಎನಿಸಿಕೊಂಡಂತೆ, ಕೈಗೆ ಹಾಕಿಕೊಳ್ಳುವ ಚೀಲವನ್ನು 'ಕೈಚೀಲ'ವೆಂದು ಕರೆಯಲಾಗಿದೆ); ಇಂಗ್ಲಿಷ್‌ನಲ್ಲಿ Gloves ಎಂದು ಕೈಗಳಿಗೆ ಧರಿಸುವ ಚೀಲಗಳಿಗೆ ಕರೆಯುತ್ತಾರೆ. Hand glove used to protect hands, sometimes it is used as legglove to protect feet, ankle.

ಕೈಚೂಟು kaicūṭu :

- ಕೈಯಿಂದ ಸನ್ನೆ ಮಾಡು(ಕಲ.ಜಿ.);
- ಕೈಸನ್ನೆ ಮಾಡಿ ಕೊಡುವ ಸೂಚನೆಗೆ ಪದಬಳಕೆ; ಕಣ್ಸನ್ನೆ, ಬಾಯ್ಸನ್ನೆ ಇದ್ದ ಹಾಗೆ ಕೈಸನ್ನೆ; ಉತ್ತರ ಕರ್ನಾಟಕದ ಕಡೆ ಪದಬಳಕೆ; ಕೈ+ಚೂಟು=ಕೈಚೂಟು; ತು:ಚೂಟು=ತಂತ್ರ, ಉಪಾಯ, ರಹಸ್ಯ;
- *ಪ್ರ: 'ಏನೋ ವಿಶೇಷ ಇರಬೇಕು ಕೈಚೂಟು ಮಾಡ್ತಾ ಇದ್ದಾನೆ';*
- ***ವ್ಯರೂ:*** ಕೈವೂಟು(ಕೊ.ಜಿ); ಕೈಸನ್ನೆ(ಮಂಡ್ಯ.ಜಿ).

ಕೈಚೊಟ್ಟು kaicoṭṭu :

- ಚಹ ಮಾಡಲು ಬಳಸುವ ಹಿಡಿಕೆಯುಳ್ಳ ಚಿಕ್ಕಪಾತ್ರೆ; a small tea vessel;
- ಹಿಡಿಕೆ ಇರುವುದರಿಂದ ಚಹದ ಪಾತ್ರೆಯನ್ನು ಹಿಡಿದುಕೊಳ್ಳುವಾಗ ಕೈಗೆ ಬಿಸಿ ತಟ್ಟುವುದಿಲ್ಲ; ಸರಾಗವಾಗಿ ಕಪ್ಪುಗಳಿಗೆ ಚಹ ಬಸಿಯಲು ಅನುಕೂಲವಾಗುತ್ತದೆ.

ಕೈಜಪ್ಪುದ್ kaijappud :

- ಬತ್ತ ಇತ್ಯಾದಿ ಬೆಳೆಯ ಹುಲ್ಲಿನಿಂದ ಕಾಳನ್ನು ಬೇರ್ಪಡಿಸಲು ಕೈಯಿಂದ ಎತ್ತಿ ಬಡಿಯುವುದು (ಮಂ.ಜಿ/ಉ.ಜಿ); to beat paddy crop after harvesting to separate paddy from the straw;
- ಬತ್ತ ಒಕ್ಕಣೆ ಮಾಡುವಾಗ ಗೊನೆಯಿರುವ ತುದಿ ಭಾಗವನ್ನು ಒಟ್ಟುಗೂಡಿಸಿದ ಚಿಕ್ಕ ಚಿಕ್ಕ ಕಂತೆಗಳನ್ನು ಎತ್ತಿ ಬೀಸಿ ಬಡಿಯುವುದರಿಂದ ಕಾಳು ಹುಲ್ಲಿನಿಂದ ಬೇರ್ಪಡುತ್ತದೆ; ಇತ್ತೀಚಿನ ದಿನಗಳಲ್ಲಿ ಭತ್ತ, ರಾಗಿ ಇತ್ಯಾದಿ ಒಕ್ಕಣೆಗೆ ಯಂತ್ರಗಳ ಬಳಕೆಯೂ ರೂಢಿಯಲ್ಲಿದೆ.

ಕೈಜಾರು kaijāru :

- ತಪ್ಪಾಗು; ತಪ್ಪು ಎಸಗುವುದು; to slip from the hand, palm; to do wrong;
- ಉದ್ದೇಶಿತ ಕೆಲಸ ಆಗದೆ ಹೋಗುವುದು; ತಪ್ಪಿಹೋಗು;
- ಹಿಡಿತ ಕಳೆದುಕೊಳ್ಳುವುದು; ಕೆಳಗೆ ಬೀಳುವುದು;
- ಕೆಲವೊಮ್ಮೆ ಇದು ನುಡಿಗಟ್ಟಾಗಿ ಕೂಡ ಬಳಕೆಯಾಗುವುದು; ತನಗೆ ಸಿಗಬೇಕಾದದ್ದು ಸಿಕ್ಕದಿದ್ದರೆ, ಬೇರೆಯವರ ಪಾಲಾದಾಗ ಈ ಮಾತಿನ ಪ್ರಯೋಗವಾಗುವುದುಂಟು;
- ಕೈಜಾರಿದ್ದು ಒಡೆದು ಹೋಗಬಹುದು, ಕಳೆದು ಹೋಗಬಹುದು.

ಕೈಟಾಕಾ/ಕೈಟಾಕು kaiṭākā/kaiṭāku :

- ಒಬ್ಬನ ಬಲಗೈ ಮತ್ತೊಬ್ಬನ ಎಡಗೈ ಬೆರಳುಗಳನ್ನು ಜೋಡಿಸಿ ಎರಡೂ ತೋಳುಗಳನ್ನು ಉಯ್ಯಾಲೆಯಂತೆ ಮಾಡುವುದು; ಈ ಉಯ್ಯಾಲೆಯಲ್ಲಿ ಇನ್ನೊಬ್ಬರನ್ನು ಕುಳ್ಳಿರಿಸಿ ಎತ್ತಿಕೊಂಡು ಹೋಗುವುದು(ಮಂಡ್ಯ.ಜಿ.); swinging structure made by two opposite arms of two persons;
- *ವ್ಯರೂ:* ಕೈತಾಕು(ಚಾ.ಜಿ.); ಕೈಟುಕಾ.

ಕೈಡ kaiḍa :

- ಕರಡ; ಒಣಗಿದ ಹುಲ್ಲು(ಕರಡ>ಕರ್ಡ>ಕಯ್ಡ>ಕೈಡ); a dry straw;
- ಸಾರ ರಹಿತ ಭೂಮಿಯಲ್ಲಿ ಬೆಳೆಯುವ ಹುಲ್ಲು;
- ಕರಡವನ್ನು ಒಣಗಿಸಿ ದನಗಳ ಆಹಾರಕ್ಕಾಗಿ, ದೊಡ್ಡಿಯಲ್ಲಿ ದನಗಳಿಗೆ ಮೈಹಾಸಲಾಗಿ ಮತ್ತು ಗುಡಿಸಲುಗಳಿಗೆ ಮೇಲು ಹೊದಿಕೆಗಾಗಿ ಉಪಯೋಗಿಸುತ್ತಾರೆ; hey, dry grass used for cattle to feed them;
- ಹಾಲಕ್ಕಿ ಸಮುದಾಯದಲ್ಲಿ ಈ ಪದ ಬಳಕೆಯಲ್ಲಿದೆ; *ಪ್ರ: 'ದನಗಳ ಕಾಲಿನ ಗೊಂತಲ್ಲಿರುವ ಕೈಡ ತಂದು ಹೊರಗೆ ಹಾಕು'.*

ಕೈಡಿ kaiḍi :

- ಕರಡಿ(ಕರಡಿ > ಕರ್ಡಿ > ಕಯ್ಡಿ>ಕೈಡಿ ಆಗಿರುವಂತಿದೆ) (ಮಂಜಿ./ಉ.ಜಿ.); bear;
- ಸುಗ್ಗಿ ಹಬ್ಬದ ಕುಣಿತ ಮೇಳಗಳಲ್ಲಿ ಕರಡಿ ಎಂದು ಕರೆಯಲಾಗುವ ಛದ್ಮವೇಷವಿದ್ದು, ಕೃತಕ ಮರದ ಕರಡಿಯ ಮುಖವಾಡ ಹಾಗೂ ತೆಂಗಿನ ನಾರಿನಿಂದ ಮಾಡಿದ ಮೈಉಡುಪುಗಳನ್ನು ತೊಟ್ಟು ಕುಣಿತ ಮಾಡುತ್ತಾ ಪ್ರೇಕ್ಷಕರಿಂದ ಹಣ ಸಂಗ್ರಹಿಸುವ ಆಚರಣೆ ಇದೆ; bear dance during harvesting;
- ಕನ್ನಡಿ; ಕದಡಿ(ಮಂ.ಜಿ./ಉ.ಜಿ.).

ಕೈಡು kaiḍu :

- ನೇರಮಾತು; ಕಟುಮಾತು; ನೇರ ನಡೆನುಡಿ (ಮಂಡ್ಯ.ಜಿ.); dashing nature; slashing, fierce speech;
- ನಿಷ್ಠುರವಾದ ನಡೆನುಡಿಯುಳ್ಳವರು ಆಡುವ ಮಾತಿನ ನಿಖರತೆ; *ಪ್ರ: 'ಆ ವ್ಯಕ್ತಿ ಒಳ್ಳೆಯವನೆ; ಆದರೆ ಮಾತು ಬಲು ಕೈಡು';*
- ಅನ್ಯದೇಶ್ಯ ಪದವಿರಬೇಕು; 'ಕೈಡ್' ರೂಪದಿಂದ 'ಕೈಡು' ಬಂದಿರುವಂತೆ ಕಾಣುತ್ತದೆ; ಎಲ್ಲಿಂದ ಬಂತು ಹೇಳುವುದು ಕಷ್ಟ; ಉರ್ದುವಿನಿಂದ?

ಕೈತಕ್ಕಡಿ kaitakkaḍi :

- ಕೈಯಿಂದ ಹಿಡಿದು ತೂಕ ಮಾಡಲು ಬಳಸುವ ಸಾಧನ; a balance tool; balanced by hand;
- ಒಂದು ಮೊಳ ಉದ್ದದ ನೇರವಾದ ದಂಡಕ್ಕೆ ಎರಡೂ ತುದಿಗಳಲ್ಲಿ ಎರಡು ತಟ್ಟೆಗಳನ್ನು ತೂಗುಹಾಕಿ, ಮಧ್ಯದಲ್ಲಿ ಸಮಾನಾಂತರದಲ್ಲಿ ಕಟ್ಟಿದ ದಾರವನ್ನು ಕೈಯಲ್ಲಿ ಹಿಡಿದು ಒಂದು ಕೆ.ಜಿ., ಎರಡು

ಕೆ.ಜಿ.ವರೆಗೆ ವಸ್ತುಗಳನ್ನು ತೂಕ ಮಾಡಲು ಬಳಸುತ್ತಿದ್ದ ಸಾಧನ; the hand balancing tool that is used to weigh things made up of a meter wooden rod/stick hanging two plates at the both sides of the wooden stick;
- ಗ್ರಾಮೀಣರು ತಮ್ಮ ಮನೆಯಲ್ಲಿ ಇತರರಿಗೆ ಬೆಣ್ಣೆ ತೂಕ ಮಾಡಿಕೊಡಲು ಇದರ ಬಳಕೆಯಿತ್ತು;
- ಮಾಂಸದ ಗುಡ್ಡೆಗಳನ್ನು ಸಮಾನವಾಗಿ ತೂಕ ಮಾಡಿ ಹಾಕಲು ಕೈತಕ್ಕಡಿ ಬಳಸುತ್ತಿದ್ದರು.

ಕೈತಲೆ ಆಟ kaitale āṭa :
- ಕರತಾಡನ ಮಾಡುತ್ತಾ ಆಡುವ ಜನಪದ ಕುಣಿತ; ಕೈತಲ್ ಆಟ; a folk game of clapping;
- ಕೈಚಪ್ಪಾಳೆ ಆಟ>ಕೈತಪ್ಪಳೆ ಆಟ>ಕೈತಲ್/ಕೈತಲೆ ಆಟ(?);
- ಇದು ಕೊಡಗಿನಲ್ಲಿ ಕಂಡುಬರುವ ದೈವೀ ಆರಾಧನೆಯ ಒಂದು ಕ್ರಮವಾಗಿದೆ; it is familiar divine celebration of Kodava community;
- ಶಕ್ತಿ ದೇವತೆ ಭದ್ರಕಾಳಿಯ/ಮಹಾಕಾಳಿಯ ಆರಾಧನೆಯ ಹಿನ್ನೆಲೆಯಲ್ಲಿ ಪುರುಷರು ಸ್ತ್ರೀವೇಷ ಧರಿಸಿ ಮಾಡುವ ಒಂದು ಬಗೆಯ ನೃತ್ಯವಾಗಿದೆ;
- ಇದನ್ನು ಮಹಾಕಾಳಿ ದೇವಸ್ಥಾನದ ಎದುರು ಮಾತ್ರ ಮಾಡಲಾಗುತ್ತದೆ(ಕೊಡ.ಜಿ.);
- ಕಾಳಿ ಆರಾಧಕರು, ಬಿಳಿಕುಪ್ಪಸ, ದಟ್ಟಿ ಉಟ್ಟು, ತಲೆಗೆ ರುಮಾಲು ಧರಿಸಿ ಕೈಯಲ್ಲಿ ಚೌರಿ ಹಿಡಿದು ಕುಣಿಯುತ್ತಾರೆ; ಕುಣಿತಕ್ಕೆ ಡೋಲು, ಕಂಚಿನ ಜಾಗಟೆಗಳು ಹಿನ್ನೆಲೆ ವಾದ್ಯಗಳು; ಸಾಮನ್ಯವಾಗಿ ಮಾರ್ಚಿ ತಿಂಗಳಲ್ಲಿ ಕೈತಲೆ ಆಚರಣೆ ನಡೆಯುವುದು; ದೇವಿಯನ್ನು ಕೊಂಡಾಡುತ್ತಾ ಕುಣಿಯುವುದು ಇಲ್ಲಿನ ಪದ್ಧತಿಯಾಗಿದೆ; the worship of Kali or the followers of the lord goddess Kali wears white blouse head gear and dance in accordance with rhythm of drums.

ಕೈತಳೆ kaitaḷe :
- ಎತ್ತರದ ತೆಂಗಿನ ಮರ ಹತ್ತಲು ಆಧಾರಕ್ಕೆ ಬಳಸುವ ಹಗ್ಗದ ಗುದಿ; A tight rope used to climb coconut tree;
- ಎರಡೂ ಕಾಲಿಗೆ ಸೇರಿಸಿ ಗುದಿ ಹಾಕಿಕೊಂಡರೆ ಮರ ಹತ್ತುವಾಗ ಕೆಳಜಾರುವುದು ತಪ್ಪುತ್ತದೆ; ಇದರ ಆಧಾರದಿಂದ ತೆಂಗಿನಮರವನ್ನು ಹತ್ತಲು ಅನುಕೂಲವಾಗುತ್ತದೆ; *ಪ್ರ: 'ಕೈತಳೆ ಹಾಕೊಂಡು ಮರಹತ್ತು'.*

ಕೈತಾಂಗ kaitānga :
- ಆಧಾರ ಬಳ್ಳಿ, ಆಧಾರ ಬಡಿಗೆ; a supported creeper; a support wooden beam;
- ಮರದ ಸೇತುವೆ ದಾಟುವಾಗ ಹಿಡಿದುಕೊಳ್ಳುವ ಆಧಾರ ಕಂಬ/ಹಗ್ಗ(ಕೊಡ.ಜಿ./ದ.ಕ.);
- ತೂಗು ಸೇತುವೆಯಲ್ಲಿ ಬಳಸುವ ಕೈಯಾಧಾರದ ಹಗ್ಗ;
- ಉಪ್ಪರಿಗೆಯ ಮೆಟ್ಟಿಲು ಹತ್ತುವಾಗ ಕೈಯಲ್ಲಿ ಹಿಡಿದುಕೊಳ್ಳಲು ಕಟ್ಟಿರುವ ಆಧಾರ; ಕೈತಾಂಗು; *ಪ್ರ: 'ಕೈತಾಂಗ ತುಂಡಾಗುದು(ತುಂಡಾಯ್ತು)'.*

ಕೈತಿಕ್ಕು kaitikku :
- ಕೈಗಳನ್ನು ಉಜ್ಜುವುದು, ಕೈಗಳನ್ನು ಪರಸ್ಪರ ತೀಡುವುದು; to rub hands; to rub palms eachother;
- ಅತಿವಿನಯ, ಪಶ್ಚಾತ್ತಾಪ, ಬೇಡಿಕೆಗಳನ್ನು ಅಭಿವ್ಯಕ್ತ ಮಾಡುವ ಅಂಗಿಕಾಭಿನಯ; ನುಡಿಗಟ್ಟಾಗಿಯೂ ಬಳಕೆ;
- ಆದ ತಪ್ಪಿಗೆ ವ್ಯಥೆ ಪಡುವುದು; *ಪ್ರ: 'ಏನು ಕೈತಿಕ್ಕುತಾನಿಂತಿದ್ದೀಯಲ್ಲಾ ಇನ್ನೂ ಏನ್ ಆಗಬೇಕು?'*

ಕೈತುಂಬ kaitumba :
- ಸಾಕಾಗುವಷ್ಟು, ತೃಪ್ತಿಯಾಗುವಷ್ಟು; full of satisfaction; satisfactorily;
- ತೃಪ್ತಿಯಾಗುವಷ್ಟು ದೊರೆತಾಗ(ಲಭ್ಯವಾದಾಗ) ಪದಬಳಕೆ; ನುಡಿಗಟ್ಟಾಗಿ ಬಳಕೆ; [ಕೈ(<ಕಯ್)+ತುಂಬ]; handful of opportunities;
- ಶಾರೀರಿಕ ಚಹರೆಯಲ್ಲದೆ, ಮಾನಸಿಕ ಚಹರೆಯನ್ನೂ ಹೇಳುವುದರಿಂದಾಗಿ ನುಡಿಗಟ್ಟಿನಂತೆ ವರ್ತಿಸುತ್ತದೆ; *ಪ್ರ: 'ಅವನಿಗೇನು ಕೈತುಂಬ ಸಿಕ್ಕಿದೆ'; 'ಕೊಡೋದನ್ನ ಕೈತುಂಬ ಕೊಡು ದೇವರು ನಿನಗೆ ಮನೆ ತುಂಬ ಕೊಡ್ತಾನೆ'.*

ಕೈತುತ್ತು kaituttu :
- ಕೈಯಿಂದ ಉಣಿಸುವ ಪ್ರೀತಿಯ ತುತ್ತು; it is used as idiom; morsel, meal;
- ತಾಯಿ ಮಕ್ಕಳಿಗೆ ಊಟ ಮಾಡಿಸುವಾಗ ಕೈಯಲ್ಲಿ ಸ್ವಲ್ಪ ಸ್ವಲ್ಪವಾಗಿ ಉಣಿಸುವುದು; mother gives palmful of morsel with her love;
- ಅನ್ನ ಮತ್ತು ಸಾರುಗಳೆರಡನ್ನು ಹಿತವಾಗಿ ಕಲೆಸಿ ಪಾತ್ರೆಯಲ್ಲಿ ತುಂಬಿಕೊಂಡು, ಸುತ್ತಲೂ ಕುಳಿತವರ ಬೊಗಸೆಗೆ ಕಲೆಸಿದ ಅನ್ನವನ್ನು ಒಂದೊಂದೇ ತುತ್ತು ಹಾಕುತ್ತಾ ಉಣಿಸುವ ವಿಧಾನ; ಇದರಿಂದ ಊಟ

ಮಾಡುವವರು ನಿಧಾನವಾಗಿ ತಾಯಿ ನೀಡುವ ಪ್ರೀತಿಯ ತುತ್ತನ್ನು ಸವಿದು ತೃಪ್ತಿಹೊಂದುವರು; a method of feeding that rise and soup are mixed in a vessel and one by one gets their a palmful of morsel; it gives a satisfaction of motherly affection; it remains in longterm memory;
- ಇದು ನುಡಿಗಟ್ಟಾಗಿಯೂ ಬಳಕೆಯಾಗುವುದುಂಟು; ಇನ್ನೊಬ್ಬರ ಅಭಿಪ್ರಾಯದಂತೆಯೇ ನಡೆಯುವುದು; ಇನ್ನೊಬ್ಬರ ಬಾಯಿಗೆ ಆಹಾರವಾದನಲ್ಲಾ ಎಂದೂ ಅರ್ಥವಿದೆ; *ಪ್ರ: 'ಆತ ಕೈತುತ್ತಿನವನು; ಸ್ವಂತ ಅಭಿಪ್ರಾಯದಂತೆ ಎಂದೂ ನಡೆದುಕೊಂಡಿಲ್ಲ'.*

ಕೈತೂಂಬು kaitūmbu :
- ಕೈಮಾತ್ರ ಹೋಗಬಹುದಾದ(ತೂರಿಸಬಹುದಾದ) ಗೋಡೆಯಲ್ಲಿ ಮಾಡಿದ ತೂತು; a hole in which hand alone enters into it;
- ಕೈ + ತೂಂಬು > ಕೈತೂಂಬು> ಕೈತೂಬು (ತೂಂಬು = ರಂಧ್ರ).

ಕೈತೂಕ kaitūka :
- ತಕ್ಕಡಿ ಮತ್ತು ಬಟ್ಟುಗಳನ್ನು ಬಳಸದೆ ವಸ್ತುಗಳನ್ನು ಕೈಯಲ್ಲಿ ಹಿಡಿದು ತೂಗಿ ನೋಡಿ ಒಂದು ಅಂದಾಜಿನಲ್ಲಿ ಆ ವಸ್ತುವಿನ ತೂಕವನ್ನು ನಿರ್ಣಯಿಸುವುದು; an approximate measurement weighing things by hand or by holding things in two hands;
- ಬೆಣ್ಣೆಯನ್ನು ತೂಗದೆ ಒಂದು ಅಂದಾಜಿನಲ್ಲಿ ಕೈಯಿಂದ ಮುದ್ದೆ ಕಟ್ಟಿ ಕೊಡುವುದು; ಆಕಾಲ ಈಗ ಎಲ್ಲಿದೆ? *ಪ್ರ: 'ಕೈತೂಕದ ಬೆಣ್ಣೆ ಕೊಡು';*
- 'ಕೈತೂಕ ಬಾಯಿಬಣ್ಣ' ಎಂಬ ಗಾದೆಯೇ ಇದೆ.

ಕೈತೆಳ್ಗ kaiteḷga :
- ಇನ್ನೊಬ್ಬರ ಅಧೀನದಲ್ಲಿರುವಿಕೆ; to live under the elms of others; slavery;
- ಕೈ+ಕೆಳಗೆ=ಕೈಕೆಳಗೆ>ಕೈತೆಳ್ಗೆ>ಕೈತೆಳ್ಗ(ಕ>ತ);
- ಅಧೀನದಲ್ಲಿ ಎಂಬರ್ಥಕ್ಕೆ ಪದ ಬಳಕೆ; ಉತ್ತರ ಕರ್ನಾಟಕದ ಕಡೆ ಚಾಲ್ತಿ; *ಪ್ರ: 'ಅವುನ ಕೈತೆಳ್ಗ ಆರುಮಂದಿ ಆಳ್ಗೋಳು ಇದ್ದಾರೆ?'*

ಕೈತೊಳೆದುಕೊ kaitoḷeduko :
- ಕೈ ಸ್ವಚ್ಛ ಮಾಡಿಕೊಳ್ಳುವುದು; to wash hand; to clean palm;
- ಜಂಜಾಟದಿಂದ ಮುಕ್ತನಾಗು; ಹೊಣೆಗಾರಿಕೆಯಿಂದ ಬಿಡಿಸಿಕೊಳ್ಳುವುದು; ಜವಾಬ್ದಾರಿಯನ್ನು ಕಳೆದುಕೊಳ್ಳುವುದು;
- ಇದು ನುಡಿಗಟ್ಟಾಗಿ ಬಳಕೆ; it is used as idiom;
- ಸಂಬಂಧದಿಂದ ಬಿಡಿಸಿಕೊ ಎಂಬ ಅರ್ಥವೂ ಇದೆ;
- 'ಕೈತೊಳೆದುಕೊ' ರೂಪದಂತೆ 'ತಲೆತೊಳೆದುಕೊ' ಎಂಬ ರೂಪವೂ ಇದೆ.

ಕೈತೊಳೆದು ಮುಟ್ಟು kaitoḷedu muṭṭu :
- ಪವಿತ್ರ ವಸ್ತು; ಸ್ವಚ್ಛವಾದುದು; purified thing, holy object;
- ನುಡಿಗಟ್ಟಾಗಿಯೂ ಬಳಕೆ;
- ಪರಿಶುದ್ಧರಾದವರು, ಅತಿ ಸುಂದರವಾದವರು ಎಂದು ಹೇಳುವಲ್ಲಿ ಕೂಡ ಇದು ಬಳಕೆಯಾಗುತ್ತದೆ; *ಪ್ರ: 'ಅವರನ್ನು ಕೈತೊಳೆದು ಮುಟ್ಟಬೇಕು, ಅಂಗಿದ್ದಾರೆ'.*

ಕೈತೋಟ/ಕೈದೋಟ kaitōṭa/kaidōṭa :
- ಕೈ(<ಕಯ್)+ತೋಟ=ಕೈತೋಟ>ಕೈದೋಟ(ತ>ದ);
- ಚಿಕ್ಕ ತೋಟ(ಮಂಡ್ಯ.ಜಿ.); A small farm; grow vegetables in backyards or in home garden;
- ಮನೆಯ ಹಿಂಭಾಗದಲ್ಲಿ(ಹಿತ್ತಲಿನಲ್ಲಿ) ತರಕಾರಿ, ಸೊಪ್ಪು, ಸಪೋಟ, ಸೀಬೆ, ದಾಳಿಂಬೆ ಮತ್ತು ಹೂವಿನ ಗಿಡಗಳನ್ನು ಬೆಳೆಯಲು ಮಾಡಿಕೊಂಡ ಚಿಕ್ಕತೋಟ;
- ಕೆಲವೊಮ್ಮೆ ಜಮೀನಿಗೆ ಹೊಂದಿಕೊಂಡಂತೆ ಒಂದು ಚಿಕ್ಕ ಪಾತಿಯಲ್ಲಿ ತಮ್ಮ ಮನೆ ಬಳಕೆಗಾಗಿ ಬೇಕಾದ ತರಕಾರಿ ಇತ್ಯಾದಿ ಬೆಳೆದುಕೊಳ್ಳಲು ಮಾಡಿಕೊಂಡ ಚಿಕ್ಕ ತೋಟ ಇದಾಗಿದೆ.

ಕೈತೋಳ್ kaitōḷ :
- ಚಿನ್ನಿ–ದಾಂಡು ಆಟದಲ್ಲಿ ಬಳಕೆ ಮಾಡುವ ಪದ; this word is used in the game of 'Chinni-Dandu' a local folkgame;
- ಎಡತೋಳನ್ನು ಭುಜದ ಸಮಾನಾಂತರವಾಗಿ ಇರಿಸಿಕೊಂಡು, ಗೆಣೆಯನ್ನು ತೋಳಿನ ಮೊಳಕೈ ಮೇಲಿಟ್ಟು, ಸ್ವಲ್ಪ ಮೇಲಕ್ಕೆ ಚಿಮ್ಮಿಸಿ ದಾಂಡಿನಿಂದ ಬೀಸಿ ಹೊಡೆಯಲಾಗುವುದು.

ಕೈದಂಡೆ ಮಾಡು kaidaṇḍe māḍu :
- ಕಣದಲ್ಲಿ ಧಾನ್ಯವನ್ನು ತಳ್ಳಿ ರಾಶಿ ಮಾಡು(ಕ.ಜಾ.ಕೋ.); to pile corn after

thrashing of corn during the season of harvesting;
- ಧಾನ್ಯವನ್ನು ಒಕ್ಕಣೆ ಮಾಡುವ ಕಣದಲ್ಲಿ ಬಳಸುವ ಪರಿಭಾಷೆಯಲ್ಲಿ ಇದೂ ಕೂಡ ಒಂದು;
- ಒಕ್ಕಣೆ ಮಾಡಿದ ಮೇಲೆ ಕಣದಲ್ಲಿ ಹರಡಿಕೊಂಡಿರುವ ಧಾನ್ಯವನ್ನೆಲ್ಲಾ ಕಣದ ಮಧ್ಯಭಾಗಕ್ಕೆ ಒಟ್ಟು ಸೇರಿಸಿ ರಾಶಿ ಮಾಡುವ ಕ್ರಿಯೆಗೆ ಈ ಪದ ಬಳಕೆಯಾಗುತ್ತದೆ;
- 'ಕೈಕೋಲು' ಎನ್ನುವ ಅರ್ಥದಲ್ಲಿ ಕೂಡ 'ಕೈದಂಡೆ' ಪದದ ಬಳಕೆಯಿದೆ.

ಕೈದಂಬೆ kaidambe :
- ದೊಡ್ಡಪಾತ್ರೆ; a big vessel;
- ಕೈ+ತಂಬಿಗೆ=ಕೈತಂಬಿಗೆ>ಕೈದಂಬಿಗೆ>ಕೈದಂಬೆ? (ತ>ದ);
- ಕೆರೆ, ಬಾವಿಗಳಿಂದ ನೀರೆತ್ತಲು ಬಳಸುವ ಲೋಹದ ಸಾಧನ(ದ.ಕ.). A metal tool used to lift water from tanks, wells.

ಕೈದಾರ kaidāra :
- ಕೈಗೆ ಕಟ್ಟಿಕೊಳ್ಳುವ ಮಂಗಳಕರವಾದ ದಾರ(ಕ.ನಿ.); A holy thread tied to wrist of the hand as good omen;
- ಕಂಕಣದ ಜೊತೆ ಕಟ್ಟುವ ದಾರ;
- ದಾರಗಳನ್ನು ಸೇರಿಸಿ ಹೆಣೆದು ವಿಶೇಷವಾಗಿ ಸಿದ್ಧ ಪಡಿಸಿದ ದಾರ;
- ಕೈಯಲ್ಲಿ ಧರಿಸಿದ ಕಡಗ ಮುಂದಕ್ಕೆ ಜಾರಿ ಸರಳುಗಳಿಗೆ ತಾಕಿ ಸವೆಯದಿರಲೆಂದು ಈ ದಾರವನ್ನು ಕೈಗೆಹಾಕಿಕೊಳ್ಳುತ್ತಾರೆ;
- ಗದ್ದೆಗೆ ಸಂಬಂಧಿಸಿದ ಹಾಗೆ ಕೂಡ ಇದರ ಬಳಕೆಯಿದೆ(ಕ.ನಿ.).

ಕೈದಾಸ kaidāsa :
- ಸೇವಕ; ಇನ್ನೊಬ್ಬರ ಕೈಕೆಳಗೆ ಕೆಲಸಮಾಡುವುದು; handy, a servent;
- ಕೈ+ದಾಸ(ದಾಸ=ಸೇವಕ);
- ವಶವಾದ ವ್ಯಕ್ತಿ ಅಥವಾ ವಸ್ತು; ಬೇರೆಯವರ ಅಧೀನದಲ್ಲಿ ಸ್ವಂತಿಕೆ ಇಲ್ಲದೆ ಬದುಕುವುದು.

ಕೈದಾಳ kaidāḷa :
- ತುಮಕೂರು ಜಿಲ್ಲೆ ತುಮಕೂರು ತಾಲ್ಲೋಕಿನ ಕ್ರಿ.ಶ.೧೧೨೧ರ ಮತ್ತು ೧೧೫೧ರ ೧೧, ೧೪ನೇ ಶಾಸನಗಳಲ್ಲಿ ಈ ಊರಿನ ಉಲ್ಲೇಖವಿದೆ; A village referred in 11,14 inscription of 1121 and 1151AD found in Tumkuru taluk, Tumkuru;
- ೧೧ನೇ ಶಾಸನದಲ್ಲಿ ಈ ಸ್ಥಳವನ್ನು 'ಕೈದಳ' ಎಂದು ಉಲ್ಲೇಖಿಸಿದೆ(ಕ್ರಿ.ಶ.೧೧೨೧);
- ಹೊಯ್ಸಳ ಅರಸ ಮೊದಲನೆಯ ನರಸಿಂಹನ ಕಾಲದ ೧೪ನೇ ಶಾಸನದಲ್ಲಿ 'ಕಯ್ದಾಳ' ಎಂಬ ಉಲ್ಲೇಖವಿದೆ(ಕ್ರಿ.ಶ.೧೧೫೧).

(E.C- ೨೪; ತು.ಜಿ.)

ಕೈದೀಪ kaidīpa :
- ಮನೆಯೊಳಗೆ ಕತ್ತಲಲ್ಲಿ ಕೈಯಲ್ಲಿ ಹಿಡಿದು ಓಡಾಡಲು ಬಳಸುವ ದೀಪ; ಚಿಕ್ಕದೀಪ; a small Kerosene lamp used to light in homes during dark night;
- (ಕೈಯಲ್ಲಿ ಹಿಡಿದುಕೊಳ್ಳಲು) ಹಿಡಿಯಿರುವ ದೀಪ; ಸಣ್ಣ ದೀಪ; ಮಾರ್ಗವನ್ನು ತೋರಿಸುವ ದೀಪ; ದಾರಿದೀಪ; ಕೈದೀವಿಗೆ(ಕ.ನಿ.); [ಕೈ(<ಕೆಯ್)+ದೀಪ];
- ಕಣ್ಬೆಳಕಿಗಾಗಿ ಮನೆಯ ಒಳಗಡೆ ಹಿಡಿದುಕೊಂಡು ಅಡ್ಡಾಡಲು ಬಳಸುವ ಪ್ರಣತಿ; ಬ್ಯಾಟ್ರಿ(battery) (ಚಿ.ಪ.ಕೋ);
- ಇದು ಚಿಕ್ಕದೀಪವಾಗಿದ್ದು ಕತ್ತಲೆಯ ಮನೆಯಲ್ಲಿ ಎಲ್ಲೆಂದರಲ್ಲಿಗೆ ಕೈಯಲ್ಲಿ ಹಿಡಿದು ಓಡಾಡಲು ಬರುವುದರಿಂದ 'ಕೈದೀಪ' ಎಂಬ ಅನ್ವರ್ಥನಾಮ ಬಂದಿರುವಂತಿದೆ;
- ಆಧುನಿಕವಾಗಿ ಕೈದೀಪದ ಸ್ಥಾನದಲ್ಲಿ ಬ್ಯಾಟರಿ(battery) ಬಳಕೆಯಲ್ಲಿದೆ; ಕತ್ತಲೆಯಲ್ಲಿ ಮನೆಯೊಳಗೆ ಮತ್ತು ಹೊರಗೆ ಕೈಯಲ್ಲಿ ಹಿಡಿದು ಬಳಸುವ ಇದನ್ನು 'ಕೈದೀಪ, ದಾರಿದೀಪ' ಎಂದು ಕರೆಯಬಹುದೆನಿಸುತ್ತದೆ; a lamp that is used to show path at night during olden days; now-a-days modern torches or battery cells are replaced old lamps.

ಕೈದು kaidu :
- ಕಯ್ದು; ಆಯುಧ, ಶಸ್ತ್ರ(ಕ.ನಿ.); a weapon tool used by worries etc;
- ಖೈದು, ಸೆರೆಮನೆ, ಬಂದೀಖಾನೆ, ಕಾರಾಗೃಹ; ಕೈಸೆರೆ; ದಸ್ತಗಿರಿ; ಬಂಧನ[ಖೈದ್/ಕೈದ್(ಅರ)>ಕೈದು](ಕ.ನಿ.);
- ಬಹಿಷ್ಕಾರ; ಸಾಮಾನ್ಯವಾಗಿ ಐಗಳ ಗುರುಮಠದಿಂದ ಬಹಿಷ್ಕಾರಕ್ಕೊಳಗಾದವರಿಗೆ 'ಕೈದು' ಎಂದು ಕರೆಯುವುದುಂಟು;

- ***—ಕೈದುಕಾರ*** : ಕೈದುಗಾರ, ಆಯುಧವನ್ನು ಹಿಡಿದವನು; ಯೋಧ(ಕ.ನಿ.); A warrior who holds weapon;
- ಆಯುಧ ಹಿಡಿದು ಯುದ್ಧ ಮಾಡುವ ವೀರ; ಸೈನಿಕ;
- ***—ಕೈದುಮಾಡು*** : ಸೆರೆಹಿಡಿ, ಬಂಧಿಸು; ನಿಲ್ಲಿಸು; ಮುಗಿಸು(ಕ.ನಿ.). To finish; to arrest; to stop; to capture.

ಕೈದುಡುಗಿಸು kaiduḍugisu :

- ಕೈಕೈ ಹಿಡಿಸುವುದು; to hold hands eachother;
- ಮದುವೆಯಾದ ಹೆಣ್ಣು-ಗಂಡುಗಳನ್ನು ಮನೆ ತುಂಬಿಸಿಕೊಳ್ಳುವಾಗ ಪರಸ್ಪರ ಕೈಕೈ ಹಿಡಿಸುವುದುಂಟು; ಇದಕ್ಕೆ 'ಕೈದುಡುಗಿಸು' ಎಂದು ಹೇಳುತ್ತಾರೆ; ವಧು-ವರರನ್ನು ಕೈದುಡುಗಿಸಿ ಮನೆ ತುಂಬಿಸಿಕೊಳ್ಳುವ ಒಂದು ಪದ್ಧತಿ; a ritual of holding hands of newly wedded pairs;
- ಕೈ + ತುಡುಕು > ಕೈದುಡುಕು(ತ>ದ) + ಇಸು > ಕೈದುಡುಕಿಸು > ಕೈದುಡುಗಿಸು(ಕ>ಗ).

ಕೈದೊಳಕ್ಲು kaidoḷaklu :

- ಅಡಿಗೆ ಮನೆಯಲ್ಲಿ ಪದೇಪದೇ ಕೈತೊಳೆದುಕೊಳ್ಳಲು ಇಟ್ಟುಕೊಳ್ಳುತ್ತಿದ್ದ ಪಾತ್ರೆಯಲ್ಲಿನ ನೀರು; water kept in kitchen to wash hands repeatedly;
- ಕೈ(<ಕೆಯ್)+ತೊಳಕಲು=ಕೈದೊಳಕಲು>ಕೈದೊಳಕ್ಲು;
- ಕೈತೊಳೆದ ನೀರು ಪಾತ್ರೆಯಲ್ಲಿ ತುಂಬಿಕೊಂಡಾಗ ಅದನ್ನು ತೆಗೆದು, ನೀರನ್ನು ಹೊರಚೆಲ್ಲಿ ಮತ್ತೆ ಅಡಿಗೆ ಮಾಡುವಾಗ ಕೈತೊಳೆದುಕೊಳ್ಳಲು ಇಟ್ಟುಕೊಳ್ಳುತ್ತಿದ್ದರು;
- ಗ್ರಾಮೀಣ ಪ್ರದೇಶಗಳಲ್ಲಿ ಅಡಿಗೆ ಮನೆಯಲ್ಲಿ ಅಡಿಗೆ ಕೆಲಸ ಮಾಡುವಾಗ ಆಗಾಗ್ಗೆ ಕೈತೊಳೆದುಕೊಳ್ಳಲು ಹೊರಗಡೆ ಬರಬೇಕಾದ ಪ್ರಮೇಯವಿದ್ದುದರಿಂದ ಅದನ್ನು ನಿವಾರಿಸಲು ಒಂದು ಪಾತ್ರೆಯಲ್ಲಿ ನೀರಿಟ್ಟುಕೊಂಡು ತೊಳೆದುಕೊಳ್ಳುತ್ತಿದ್ದರು; ಆಧುನಿಕವಾದ ಅಡಿಗೆ ಮನೆಗಳಲ್ಲಿ ತೊಳೆಯಲು 'ಸಿಂಕ್' ಅಳವಡಿಕೆ ಮಾಡಿಕೊಂಡಿರುತ್ತಾರೆ; ಆದರೆ ಹಿಂದೆ ಪಾತ್ರೆಯಲ್ಲಿ ತೊಳೆದುಕೊಳ್ಳುವ ಪದ್ಧತಿಯಲ್ಲಿ ಬಳಕೆಯಾಗುವ ಪದವಾಗಿದೆ; the olden sink; the fixed or mobile basin that is used to wash hands while cooking in Kitchen.

ಕೈದೋಟಿ kaidōṭe :

- ಹೂವು ಮತ್ತು ಹಣ್ಣು ಕೀಳಲು ಬಳಸುವ ಕೊಕ್ಕೆ ಇರುವ ಸಾಧನ(ಬ.ಜಿ.); a long hooked stick used to pluck flowers or fruits;
- ಒಂದು ಬಿದಿರಿನ ಗಳಿಗೆ ಕಟ್ಟಿದ ಕೊಕ್ಕೆಯುಳ್ಳ ಸಾಧನ ಇದಾಗಿದೆ; a bamboo tool having tied a hook at its front point;
- ಕೈದೋಟಿ(ಮಂಡ್ಯ.ಜಿ.); ***ವ್ಯರೂ:*** ಕೈಲೋಟಿ.

ಕೈಧಾರೆ kaidhāre :

- ಮದುವೆಯ ಸಂದರ್ಭದಲ್ಲಿ ಆಚರಣೆಯಲ್ಲಿರುವ ಒಂದು ಪದ್ಧತಿ; a kind of ritual during 'Dhare' marriage while tying holy lace 'Mangalya' by bridegroom to bride;
- ಧಾರಾ ಮಂಟಪದಲ್ಲಿ ವಧುವರರನ್ನು ಎದುರುಬದುರಾಗಿ ನಿಲ್ಲಿಸಿ, ಗಂಡಿನ ಕೈಗಳ ಮೇಲೆ ಹೆಣ್ಣಿನ ಕೈಗಳನ್ನು ಇರಿಸಿ, ಆ ಕೈಗಳಲ್ಲಿ ಹೂ, ಎಲೆ, ಅಡಿಕೆ ಹಾಗೂ ಕಾಯಿ ಇಟ್ಟು ಮೊದಲಿಗೆ ವಧುವರರ ತಂದೆ ತಾಯಿಯರು ಪೂಜಿಸಿ, ಕಾಯಿಯ ಮೇಲೆ ದಕ್ಷಿಣೆ ಇಟ್ಟು ಹಾಲನ್ನು ಎರೆದು ಧಾರೆಯೆರೆಯುತ್ತಾರೆ; ಇದು ಕನ್ಯಾದಾನ ಮಾಡುವ ಆಚರಣೆಯೂ ಆಗಿದೆ;
- ಮಾಂಗಲ್ಯ ಧಾರಣೆಗೆ ಮೊದಲು ವಧುವರರ ಮನೆಯವರು, ಬಂಧುಗಳು ಕಾಯಿಯ ಮೇಲೆ ದಕ್ಷಿಣೆಯಿಟ್ಟು ಹಾಲನ್ನು ಎರೆಯುತ್ತಾರೆ; ಇದು ಎಲ್ಲರ ಸಮಕ್ಷಮದಲ್ಲಿ ಹೆಣ್ಣನ್ನು ಒಪ್ಪಿಸಿಕೊಡುವ ಪದ್ಧತಿಯೂ ಆಗಿದೆ;
- ಇಂತಹ ಆಚರಣೆ, ಪದ್ಧತಿ ಎಲ್ಲ ಸಮುದಾಯಗಳಲ್ಲಿಯೂ ಕಂಡು ಬರುತ್ತದೆ; ಗೊಂಡ ಮತ್ತು ಮುಕ್ರಿ ಸಮುದಾಯದವರಲ್ಲಿ ಕೂಡ ಧಾರೆ ಎರೆದು ಕೊಡುವ ಸಂಪ್ರದಾಯ ರೂಢಿಯಲ್ಲಿದೆ;
- ಕಾಯಿಯ ಮೇಲೆ 'ದಕ್ಷಿಣೆ' ಇಡುವ ಪದ್ಧತಿ ಆಮೇಲೆ ಸೇರಿಕೊಂಡುದೆಂದು ತೋರುತ್ತದೆ; ಮದುವೆಯಲ್ಲಿ ಪೌರೋಹಿತ್ಯ ಪದ್ಧತಿ ಚಾಲ್ತಿಗೆ ಬಂದ ಮೇಲೆ ಇದರ ಸೇರ್ಪಡೆ; ಆಗ ದಕ್ಷಿಣೆ ಪುರೋಹಿತರ ಪಾಲಾಗುತ್ತದೆ.

ಕೈನಟಿಕೆ kainaṭike :

- ಕೈಬೆರಳುಗಳನ್ನು ಬಾಗಿಸಿ ಒತ್ತಿದಾಗ ಬೆರಳುಗಳ ಕೀಲಿನಲ್ಲಿ ಬರುವ ಸದ್ದು; A sound while folding or pressing fingers;
- ಹೆಂಗಸರು ಚಿಕ್ಕಮಕ್ಕಳ ಗಲ್ಲವನ್ನು ಸವರಿ ತಮ್ಮ ಎರಡೂ ಕೈಗಳ ಬೆರಳುಗಳನ್ನು ಒತ್ತಿ ಶಬ್ದ ಮಾಡುತ್ತಾರೆ; ಇದರಿಂದ ಆ ಮಕ್ಕಳಿಗೆ ಆಗಿದ್ದ ದೃಷ್ಟಿ ದೋಷ ನಿವಾರಣೆಯಾಗುತ್ತದೆ ಎಂಬ ನಂಬಿಕೆ ಇದೆ;
- ಮದುವೆ ಹೆಣ್ಣು-ಗಂಡುಗಳಿಗೂ ಹೆಂಗಸರು ಕೈ ನಿವಾಳಿಸಿ ಬೆರಳುಗಳಿಂದ ಒಂದೇ ಬಾರಿಗೆ 'ಲಟಲಟ' ಎಂಬ ಶಬ್ದದೊಡನೆ ದೃಷ್ಟಿ ತೆಗೆಯುವುದುಂಟು;

- ತಮಗಾಗದವರಿಗೆ ಹೆಂಗಸರು ಒಂದೇ ಬಾರಿಗೆ ಬೆರಳುಗಳನ್ನು ಒತ್ತಿ ನೆಟಿಕೆ ತೆಗೆದು 'ನೀನು ಹಾಳಾಗಿ ಹೋಗು'; 'ನೀನು ನಿಗರಿ ಹೋಗು' ಎಂಬ ಶಾಪ ಹಾಕುವುದುಂಟು;
- ಕೆಲವೊಮ್ಮೆ ಒಂದೊಂದೇ ಬೆರಳನ್ನು ಎಳೆದು ಅಥವಾ ಬಾಗಿಸಿ ಒತ್ತಿ ಲಟ್, ಲಟ್ ಎಂಬ ಶಬ್ದ ಮಾಡುತ್ತಾ ನೆಟಿಕೆ ತೆಗೆದು ಬೆರಳಿನ ಕೀಲುಗಳನ್ನು ಸಡಿಲಗೊಳಿಸುವುದುಂಟು;

ವ್ಯದೂ: ಕೈನಾಟಿ; ಕೈನಟ್ಟೆ;

ಕೈನಸುಗುಡು kainasuguḍu :

- ತವಕಿಸು(ಮೈ.ಜಿ.); solicitous eagerness longing;
- ಸುಮ್ಮನೆ ಕೂರದೆ ಏನಾದರೂ ತೀಟೆ, ತಂಟೆ ಅಥವಾ ಕೆಲಸ ಮಾಡುವುದನ್ನು ಈ ಪದ ಸೂಚಿಸುತ್ತದೆ; to do something unnecessarily;
- *ಪ್ರ: 'ಅವನ ಕೈ ನಸಗುಡ್ತದೆ; ಸುಮ್ಮನೆ ಇರುವ ಜಾಯಮಾನವೇ ಅಲ್ಲ ನೋಡು';*
- ಒಂದು ರೀತಿಯ `teasing desire'(ಕಿಟ್ಟೆಲ್) ಇದು;
- ಇಲ್ಲಿನ 'ನಸು' ಪದ 'ನಸೆ' ಇರಬೇಕು; ಆದ್ದರಿಂದ ಕೈನಸುಗುಡು<ಕೈನಸೆಗುಡು ಆಗಿರುತ್ತದೆ.

ಕೈನಾಟಿ kaināṭi :

- ಕೆಸರು ಗದ್ದೆಯಲ್ಲಿ ಬತ್ತದ ಪೈರನ್ನು ಕೈಯಲ್ಲಿ ನೆಡುವ ವಿಧಾನ; a system of planting paddy crop by hand in paddy field;
- ಬತ್ತದ ಪೈರನ್ನು ಕಿತ್ತು, ಕೆಸರು ಗದ್ದೆಯಲ್ಲಿ ಬಿಟ್ಟಿರುವ ಗುದಿಗಳಲ್ಲಿ ಒಂದೊಂದು ಹಿಡಿ ಪೈರನ್ನು ತೆಗೆದುಕೊಂಡು ಅದರಿಂದ ಐದಾರು ಬತ್ತದ ಪೈರುಗಳನ್ನು ಬಿಡಿಸಿ ತೆಗೆದು ಗದ್ದೆಯಲ್ಲಿ ಒಂದು ಗೇಣು ಅಳತೆಯ ಅಂತರದಲ್ಲಿ ಒಂದೊಂದು ಗುನ್ನವಾಗಿ ನೆಡುತ್ತಾರೆ; ಈ ಐದಾರು ಪೈರುಗಳ ಒಂದೊಂದು ಗುಳಿಯೂ ತೆಂಡೆಯೊಡೆದು ಒಂದು ಹಿಡಿ ಗಾತ್ರದ ಬುಡವಾಗಿ ಬೆಳೆಯುತ್ತದೆ;
- ಇತ್ತೀಚಿನ ದಿನಗಳಲ್ಲಿ ನಾಟಿ ಮಾಡಲು ಯಂತ್ರಗಳ ಬಳಕೆ ಕೂಡ ಚಾಲ್ತಿಯಲ್ಲಿದೆ.

ಕೈನಿಲ್ಸು kainilsu :

- ಕೈನಿಲ್ಲಿಸಿ; ಮಾಡುವ ಕೆಲಸವನ್ನು ಬಿಟ್ಟು (ಮೈ.ಜಿ./ ಚಾ.ಜಿ.); to stop work which has to continue;
- ಮಾಡುತ್ತಿರುವ ಕೆಲಸವನ್ನು ಮುಂದುವರಿಸದೆ ಇರುವುದು; ನಿಲ್ಲಿಸುವುದು;
- ಕೈಗೊಂಡ ಕೆಲಸವನ್ನು ಪೂರ್ಣಮಾಡದೆ ಮಧ್ಯದಲ್ಲೇ ನಿಲ್ಲಿಸಿ ಬಿಡುವುದನ್ನು ಹೇಳುವ ಈ ಪದ ನುಡಿಗಟ್ಟಾಗಿ ಬಳಕೆಯಾಗುತ್ತದೆ;
- *ಪ್ರ: 'ಕಟ್ಟಡದ ಕೆಲಸದವನು ಕೈನಿಲ್ಸಿ ಹೋದವನು ಒಂದು ವಾರವಾದರೂ ಬರಲಿಲ್ಲ';*
- ಇಡೀ 'ಕೈನಿಲ್ಸು' ಪದ ವ್ಯವಹಾರ, ಚಟುವಟಿಕೆ ನಿಂತು ಹೋಗುವ/ಸ್ಥಗಿತಗೊಳ್ಳುವ ಪ್ರಕ್ರಿಯೆಯನ್ನು ಪ್ರತಿಮಾತ್ಮಕವಾಗಿ ದಾಖಲಿಸುತ್ತದೆ.

ಕೈನೀಡು kainīḍu :

- ಕೆಯ್ನೀಡು; ಕೈಯನ್ನು ಒಡ್ಡು; ಕೈಚಾಚು; ಬೇಡು, ಯಾಚಿಸು; ಒಬ್ಬರ ಮುಂದೆ ದೈನ್ಯದಿಂದ ಕೈಚಾಚಿ ಬೇಡುವುದು; to stretch hands; begging;
- ಕೈಯಿಕ್ಕು; ಕೈಹಾಕು;
- ನೆರವಾಗು; ಆಶ್ರಯಕೊಡು; ಸಹಾಯಮಾಡು; ಉದಾರವಾಗಿ ಧನ ಸಹಾಯ ಮಾಡುವುದು; to help; to give protection;
- ಕೆಯ್+ನೀಡು=ಕೆಯ್ನೀಡು/ಕಯ್ನೀಡು>ಕೈನೀಡು.

ಕೈನೀರು kainīru :

- ಕೈಗೆ ಸುರಿಯುವ ನೀರು; ಮದುವೆಯಲ್ಲಿ ವಧು–ವರರ ಕೈಮೇಲೆ ಎರೆಯುವ ಧಾರೆಯ ನೀರು; water which is to pour to hands during wedding season;
- ಕೈತೊಳೆಯಲು ಬಿಡುವ ನೀರು;
- ಊಟ ಮಾಡುವಾಗ ಎರೆಯುವ ಹಸ್ತೋದಕ; ಇದು ಬ್ರಾಹ್ಮಣ ಸಂತರ್ಪಣೆಯ ಒಂದು ಭಾಗ;
- ಕೆಯ್+ನೀರ್=ಕೆಯ್ನೀರ್/ಕಯ್ನೀರ್>ಕೈನೀರ್;
- ***—ಕೈನೀರೆರೆ*** : ಕೈನೀರು ಬಿಡು; ಮದುವೆಯಲ್ಲಿ ಧಾರೆಯಾಗುವಾಗ ವಧುವರರ ಕೈಗೆ ಎಲೆ, ಹೂ, ಕಾಯಿ ಇಟ್ಟು, ಗಂಡು ಹೆಣ್ಣಿನ ತಂದೆ ತಾಯಿಯರಿಂದ ಮೊದಲು ಹಾಲನ್ನು ಧಾರೆಯೆರೆಸುತ್ತಾರೆ; ಇದಕ್ಕೆ ಕೈನೀರು ಎರೆಯುವುದು, ಕೈನೀರು ಬಿಡುವುದು ಎಂದು ಕರೆಯುತ್ತಾರೆ; ಶಾಸ್ತ್ರೋಕ್ತವಾಗಿ ಹೆಣ್ಣನ್ನು ಧಾರೆ ಎರೆದು ಕೊಡುವ ಆಚರಣೆ ಇದಾಗಿದೆ; ಧಾರೆಯೆರೆಯಲು ಹಾಲು ಬಳಸಿದರೂ ಕೈಮೇಲೆ ನೀರೆರೆಯುವುದು ಎಂಬ ರೂಢಿಯ ಮಾತು ಬಂದಿದೆ; water which is poured or drizzled or trickled to the hands of bride and bridegroom;
- ಮದುವೆ ನಿಶ್ಚಯವಾದ ಮೇಲೆ ಮದುವೆಗೆ ಮುನ್ನ ಹೆಣ್ಣಿನ ಸೋದರಮಾವ ತಮ್ಮ ಮನೆಗೆ ಆಕೆಯನ್ನು ಕರೆಸಿ ಊಟೋಪಚಾರ ಮಾಡಿಸುವುದು, ಅಂತೆಯೇ

ಗಂಡಿನ ಸೋದರಮಾವ ತಮ್ಮ ಮನೆಗೆ ಗಂಡನ್ನು ಕರೆಸಿ ಊಟ ಮಾಡಿಸುವುದು ಕೆಲವು ಕಡೆ ಸಂಪ್ರದಾಯವಾಗಿದೆ; ಇದಕ್ಕೆ 'ಕೈನೀರೆರೆ'ಯುವುದು, 'ಕೈನೀರು' ಬಿಡುವುದು ಎಂದು ಕರೆಯುತ್ತಾರೆ; ಈ ಪದ್ಧತಿ ಚಾಮರಾಜನಗರ ಜಿಲ್ಲೆಯಲ್ಲಿ ಕಂಡುಬರುತ್ತದೆ; ಇದು ಮಂಡ್ಯ, ಮೈಸೂರು ಪ್ರಾಂತ್ಯದಲ್ಲಿ ಅಟ್ಟಿಕ್ಕುವುದು ಎಂಬ ಸಂಪ್ರದಾಯವಾಗಿ ಆಚರಣೆಯಲ್ಲಿದೆ; a grand feast given by one's meternal uncle of a bride after decided her marriage.

ಕೈನುಲಿ kainuli :

- ಕೈಯನ್ನು ತಿರುಚುವುದು; to twist hands; to twist the wrist of a rival wrestler during wrestling competation;
- ಎದುರಾಳಿಯ ಕೈಯನ್ನು ಮಣಿಕಟ್ಟಿನ ಬಳಿ ಹಿಡಿದು ಎಡಕ್ಕೂ, ಬಲಕ್ಕೂ ತಿರುಚುವುದು;
- ಕುಸ್ತಿಯಲ್ಲಿ ಕೈತಿರುಚುತ್ತಾ ಯಾವುದಾದರು ಪಟ್ಟು ಪ್ರಯೋಗಿಸಿದಲ್ಲಿ ಎದುರಾಳಿಯನ್ನು ಸುಲಭವಾಗಿ ಗೆಲ್ಲುವುದಕ್ಕೆ ಸಾಧ್ಯವಿದೆ; ಇದು ಎದುರಾಳಿಯನ್ನು ಮಣಿಸುವ ತಂತ್ರವೂ ಆಗಿದೆ.

ಕೈನೆಣ್ಕೆ kaineṇke :

- ಕೈಯಲ್ಲಿ ದಾರದ ಸಹಾಯದಿಂದ ಹೂವಿನ ದಂಡೆಯನ್ನು ಕಟ್ಟುವ ಕ್ರಮ; a system of knitting flower with thread;
- ಬಿಡಿ ಹೂವುಗಳನ್ನು ಅವುಗಳ ತೊಟ್ಟು ಒಳಮುಖವಾಗಿರುವಂತೆ ಎದುರು ಬದುರಾಗಿ ಜೋಡಿಸಿ ದಾರದಿಂದ ಅವುಗಳನ್ನು ಕಟ್ಟುತ್ತಾ ಹೂವಿನ ದಂಡೆ, ಹೂವಿನ ಹಾರ ಸಿದ್ಧಪಡಿಸುವ ವಿಧಾನ.

ಕೈನೇಲೆ kainēle :

- ಗ್ರಾಮೀಣರು ತಮ್ಮ ಮನೆಗಳಲ್ಲಿಯೇ ಹೆರಿಗೆ ಮಾಡಿಸುವ ಸಂದರ್ಭದಲ್ಲಿ ಗರ್ಭಿಣಿಯು ಆಧಾರಕ್ಕಾಗಿ ಹಿಡಿದುಕೊಳ್ಳಲು, ಜೋತಾಡುವಂತೆ ಕಟ್ಟಿದ ಹಗ್ಗ; a swinging rope tied to hold the women while delivering babies at home;
- ಜೋತಾಡುವ ಹಗ್ಗವನ್ನು ಹಿಡಿದು ಗರ್ಭಿಣಿಯು ಹೆರಿಗೆ ಬೇನೆಯನ್ನು ಸಹಿಸಲು ಅನುಕೂಲವಾಗುತ್ತಿತ್ತು;
- ಮೂಲ ಪದ 'ನೇಲ್(ಲು)' ರೂಪದಿಂದ 'ನೇಲೆ' ಬಂದಿರುವುದು ಸ್ಪಷ್ಟವಿದೆ; 'ಕೈ' ಅದಕ್ಕೆ ಸೇರಿ ಕೈನೇಲು>ಕೈನೇಲೆ ಆಗಿರುವಂತೆ ಕಾಣುತ್ತದೆ.

ಕೈಪ kaipa :

- ೧.ಕಣಿ; ೨.ಲಂಗೋಟಿ, ಕಚ್ಚೆಅಂಚು(ಶಿ.ಜಿ.); `Langoti';
- ಅಂಗೈ ಅಗಲದ ಅರಿವೆಯ ತುಂಡು; ಇದನ್ನು ಗಂಡಸರು ಅದರಲ್ಲೂ ಸಂನ್ಯಾಸಿಗಳು ಹಾಕಿರುತ್ತಾರೆ; cloth piece used to tie to the waist by the wrestlers during wrestling;
- ಪೈಲ್ವಾನರು ಕುಸ್ತಿ ಮಾಡುವಾಗ ವಿಶೇಷವಾಗಿ ಕಟ್ಟಿಕೊಳ್ಳುವ ಕಚ್ಚೆಯಾಗಿದೆ; *ಪ್ರ: 'ಅವರು ಕೈಪ ಕಟ್ಟಿಕೊಂಡು ಕುಸ್ತಿಗೆ ಇಳಿದರು';*
- 'ಕೈಪ'ದ ಜೊತೆಗೆ 'ಕೈಪು' ರೂಪವೂ ಇದೆ; ಕೌಪ/ಕೌಪು ರೂಪಗಳೂ ಇವೆ;
- ಸಂಸ್ಕೃತದ 'ಕೌಪೀನ' ಪದದಿಂದ ಈ ಎಲ್ಲ ರೂಪಗಳು ಬಂದಿವೆ.

ಕೈಪಟ kaipaṭa :

- ದಟ್ಟಿ ಕುಣಿತದ ಸಂದರ್ಭದಲ್ಲಿ ಬಳಸುವ ಚಿಕ್ಕ ಡೊಳ್ಳು; ಕೊರಳಿಗೆ ನೇತು ಹಾಕಿಕೊಂಡು ನುಡಿಸುವ ಇದಕ್ಕೆ ಎಡಬದಿಯಲ್ಲಿ ಆಡಿನ ಚರ್ಮವನ್ನೂ ಬಲಬದಿಯಲ್ಲಿ ಹೋತದ ಚರ್ಮವನ್ನೂ ಹೊದಿಸಿ ಬಿಗಿದಿರಲಾಗುತ್ತದೆ; ಇದರಿಂದಾಗಿ ಈ ಚರ್ಮವಾದ್ಯ ಎರಡು ರೀತಿಯ ಧ್ವನಿಯನ್ನುಂಟು ಮಾಡುತ್ತದೆ. ಒಂದು ಹೆಣ್ಣು ದನಿ, ಮತ್ತೊಂದು ಗಂಡುದನಿ ಎಂದು ಹೇಳುವುದುಂಟು; a small drum; a leather rhythmic instrument; a drum used to `Datti dance' madeup of goat leather;
- ಆಡಿನ ಚರ್ಮ ಹೊದಿಸಿರುವ ಕಡೆ ತೀವ್ರವಾದ ಸ್ವರ ಉಂಟಾದರೆ, ಹೋತದ ಚರ್ಮ ಹೊದಿಸಿರುವ ಭಾಗದಲ್ಲಿ 'ದಿಮ್ ದಿಮ್' ನಾದ ಹೊರ ಹೊಮ್ಮುತ್ತದೆ;
- *ಪ್ರ: 'ಕೈಪಟದ ದನಿಗೆ ನೆರೆದವರೆಲ್ಲ ಹೆಜ್ಜೆ ಹಾಕಿದರು';* ***ವ್ಯರೂ:*** ಕೈಪಟ್ಟಿ.

ಕೈಪಟ್ಟು kaipaṭṭu :

- ಡೊಳ್ಳನ್ನು ಕೈಗಳಿಂದ ನುಡಿಸುವ ಗತ್ತು(ಕ.ಜಾ.ಕೋ); a method of beating drum rhythmically;
- ಡೊಳ್ಳು ಮೇಳ ನಡೆಸುವಾಗ ಲಯಬದ್ಧವಾಗಿ, ಕುಣಿತದ ಗತ್ತಿಗೆ ಹೊಂದುವಂತೆ ಕೈಯಿಂದ ಡೊಳ್ಳು ಬಾರಿಸುವ ಒಂದು ಪರಿ; *ಪ್ರ: 'ಡೊಳ್ಳು ಮೇಳದವರ ಡೊಳ್ಳಿನ ಕೈಪಟ್ಟು ಬಲು ಸೊಗಸಾಗಿತ್ತು';*
- ಕೈಯನ್ನು ಭದ್ರವಾಗಿ ಅಥವಾ ಬಿಗಿಯಾಗಿ ಹಿಡಿ ಎಂಬ ಅರ್ಥವೂ ಇದೆ; 'ಪಟ್ಟು' ಒಂದು 'ವರಸೆ'ಯಾಗಿಯೂ ಕಾಣಿಸಿಕೊಳ್ಳಬಹುದು.

ಕೈಪತ್ತು kaipattu :

- ಮುಚ್ಚಳಿಕೆ ವಂಶಾವಳಿ ದಾಖಲೆ; a family records; an ancestral chart or a family tree;
- ಕೈಫಿಯತ್(ಅರ.)>ಕೈಪಿಯತ್ತು>ಕೈಪತ್ತು(?)
- ಯಾವುದಾದರೂ ಒಪ್ಪಂದಗಳಿಗೆ ಮುಚ್ಚಳಿಕೆ ಪತ್ರ ಬರೆದು ಕೊಡುವುದು; *ಪ್ರ: 'ಕೈಪತ್ತು ಬರೆದು ಕೊಟ್ಟು ಸಾಲ ತಂದಿದ್ದೀನಿ';*
- ನಿರ್ದಿಷ್ಟ ಸ್ಥಳದ ಇಲ್ಲವೆ ವಂಶದ ವಂಶಾವಳಿಗಳ ವಿವರದ ದಾಖಲೆ; *ಪ್ರ: 'ಅವರ ವಂಶದ ಕೈಪತ್ತು ನೋಡಿದರೆ ವಿವರ ತಿಳಿಯುವುದು';*
- ಬರಹದ ಮೂಲಕ ಕೊಟ್ಟ ಅಪ್ಪಣೆ; ಆಜ್ಞಾ ಪತ್ರ; ತಿಳಿವಳಿಕೆಯ ಪತ್ರ,

ಕೈಪರಡಿ kaiparaḍi :

- ಲೋಹದ ಚಿಕ್ಕ ತಟ್ಟೆ; a small metal plate;
- ಕೈ+ಪರಡಿ=ಕೈಪರಡಿ(ಪರಡಿ=ತಟ್ಟೆ);
- ದಿನಸಿ ಅಂಗಡಿಗಳಲ್ಲಿ ದಿನಸಿಯ ವಿವಿಧ ಮಾದರಿಗಳನ್ನು ತೋರಿಸಲು ಬಳಸುವ ಲೋಹದ ವೃತ್ತಾಕಾರದ ಚಿಕ್ಕ ತಟ್ಟೆ,

ಕೈಪಾವಡ kaipāvaḍa :

- ಕೈವಸ್ತ್ರ; ಕೈ ಒರೆಸಿಕೊಳ್ಳಲು ಬಳಸುವ ಚಿಕ್ಕ ಬಟ್ಟೆ; hand kerchief;
- ಕೈ+ಪಾವಡೆ(=ಬಟ್ಟೆ)=ಕೈಪಾವಡೆ=ಕೈಪಾವಡ;
- ಸಾಮಾನ್ಯವಾಗಿ ಇಂತಹ ಕೈವಸ್ತ್ರವನ್ನು ದೇವರ ಮನೆಯಲ್ಲಿ ಬಳಸುವುದು ವಾಡಿಕೆ.

ಕೈಪಾಳಿ kaipāḷi :

- ಅನ್ನ ಬಡಿಸಲು ಮಾಡಿದ ಮರದ ಚಪ್ಪಟೆ ಸಾಧನ(ಬಾ.ಜಿ.); a wooden flat tool used to serve rice;
- *ವ್ಯದೂ:* ಕೈಬಟ್ಲು, ಕೈಹಾಳಿ, ಸಣ್ಣ ಕೊಡಮಗಿ(ಕಲ.ಜಿ.);
- ಅಡಿಗೆ ಮನೆಯಲ್ಲಿ ಬಳಸುವ ಮರದ ಉಪಕರಣ; ಅನ್ನ ನೀಡುವ ಚಪ್ಪಟೆ ಸೌಟು(ವಿ.ಜಿ.); *ಪ್ರ: 'ಎಲ್ಲಾರು ಕಟ್ಯಾರ ಹತ್ತು ಹೊನ್ನಿನ ತಾಳಿ, ಬೀಗುತಿ ಕಟ್ಯಾಳ ಕೈಪಾಳಿ'.*

ಕೈಪಿಡಿ kaipiḍi :

- ಮಣ್ಣೆತ್ತುವ ಸಾಧನ; ಕೃಷಿ ಉಪಕರಣ(ಉ.ಕ.ಜಿ.); soil lifting tool; agricultural instrument;
- ತಾರಸಿ ಮನೆಯ ಮೇಲೆ ಸುತ್ತಲೂ ಕಟ್ಟುವ ಎರಡೂವರೆ ಅಡಿ ಎತ್ತರದ ಗೋಡೆ;
- ಚಿಕ್ಕಗೋಡೆ; ಮೋಟು ಗೋಡೆ(ಕ.ಜಾ.ಕೋ.); short wall of a home;
- ಕೆಯ್ಪಿಡಿ, ಕಯ್ಪಿಡಿ, ಕಯ್ವಿಡಿ; ೧.ಕನ್ನಡಿ, ದರ್ಪಣ; ೨.ಆಶ್ರಯ, ಆಧಾರ; ೩.ಒಂದು ಬಗೆಯ ಆಯುಧ(?); ೪.ಕೈಯ ಹಿಡಿತ, ಮುಷ್ಟಿ; ೫.ಹಿಡಿ, ಹಿಡಿಕೆ, ಚುಕ್ಕಾಣಿ; ೬.ಕೈಹೊತ್ತಗೆ, ಸಣ್ಣಗ್ರಂಥ(ಕ.ನಿ.);
- ಕೈಹಿಡಿ; ವಿವಾಹವಾಗು, ವರಿಸು; to marry;
- ಟಿಪ್ಪಣಿ ರೂಪದ ವಿವರಗಳನ್ನೊಳಗೊಂಡ ಕೃತಿ;
- **—ಕೈಪಿಡಿಗೋಡೆ** : ಕೆಯ್ಪಿಡಿಗೋಡೆ; ಮೊಗಸಾಲೆಯ ಅಥವಾ ಮಾಳಿಗೆಯ ಸುತ್ತಲೂ ಕಟ್ಟಿರುವ ಎತ್ತರವಿಲ್ಲದ ಗೋಡೆ; ತುಂಡುಗೋಡೆ; ಕೈಪಿಡಿ(<ಕೆಯ್ಪಿಡಿ)+ಗೋಡೆ(ಕ.ನಿ.). Parapet wall.

ಕೈಪೆ೧ kaipe[1] :

- ಕಯ್ಪೆ; ಕಹಿ, ಕಹಿ ರುಚಿಯುಳ್ಳದ್ದು; ಮನಸ್ತಾಪ, ಭಿನ್ನಾಭಿಪ್ರಯ, ವೈಮನಸ್ಸು; ಅಸೂಯೆ, ಅಸೂಯಾ ಪರ(ದ.ಕ.)(ತು.ನಿ.); bitter tasty;
- *ಪ್ರ: 'ಕೈಪೆ ಸೊರೆಯ ಕುಡಿಯೇಂ ಮಿಡಿಯೇಂ'* (ಗದಾಯು);
- ಸಣ್ಣ ಮೀನು(ದ.ಕ.);

ಕೈಪೆ೨ kaipe[2] :

- ಕಯ್ಪ್/ಕಯ್ಪೆ;
- ಕೋಳಿಯ ಪಿತ್ತಕೋಶ(ತು.ನಿ.)(ದ.ಕ.). Gall bladder of hen or cock.

ಕೈಪೆ೩ kaipe[3] :

- ಕೆಚ್ಚು, ದಿಟ್ಟತನ; ಧೈರ್ಯ(ಕ.ನಿ.); Courage, brave, velour;
- ಹಠದ ಸ್ವಭಾವ ಉಳ್ಳವನು, ಹಠವಾದಿ(ದ.ಕ).

ಕೈಪೆಟಗಿ kaipeṭagi :

- ಒಂದು ಕೈಯಿಂದ ತಿದಿಯೊತ್ತಿ ಇನ್ನೊಂದು ಕೈಯಿಂದ ಬಾರಿಸುವ ಹಾರ್ಮೋನಿಯಂ (ಚಿತ್ರ.ಜಿ./ಬ.ಜಿ.); An harmonium; musical instrument;
- ಕಾಲಿನಿಂದ ತಿದಿಯೊತ್ತಿ ಬಾರಿಸುವ ದೊಡ್ಡ ಹಾರ್ಮೋನಿಯಂ ಪೆಟ್ಟಿಗೆ ಇರುವುದರಿಂದ ಕೈಯಲ್ಲಿ ತಿದಿಯೊತ್ತಿ ಬಾರಿಸುವ ಚಿಕ್ಕ ಹಾರ್ಮೋನಿಯಂ ಪೆಟ್ಟಿಗೆಗೆ 'ಕೈಪೆಟಗಿ' ಎಂದು ಕರೆದಿರುವಂತಿದೆ;
- ಕೈಪೆಟ್ಟಿಗೆ>ಕೈಪೆಟಗೆ>ಕೈಪೆಟಗಿ ಎಂದು ಆಗಿರಬಹುದು; ಪದಾಂತ್ಯದ 'ಎ'ಸ್ವರಕ್ಕೆ 'ಇ'ಸ್ವರ ಪ್ರಾದೇಶಿಕ ಭೇದದಿಂದಾಗಿ ಬಂದಿರುವುದನ್ನು ಗಮನಿಸಬಹುದು.

ಕೈಬಂದಿ kaibandi :

- ಕೈಗೆ ತೊಡಿಸುವ ಆಭರಣ; a jewel worn to hand; bracelet, wristlet;
- 'ದೇವರ ವಿಗ್ರಹದ ಬಲಗೈಗೆ ಕೈಬಂದಿ ತೊಡಿಸಿ ಅಲಂಕರಿಸಿದರು'(ತು.ಜಿ.).

ಕೈಬಟ್ಟಲು/ಕೈಬಟ್ಲು kaibaṭṭalu/ kaibaṭlu :

- ಹಿಡಿಯಿರುವ ಮರದ ಅಥವಾ ಲೋಹದ ಬಟ್ಟಲು; a wooden or metal bowl having handle;
- ಕೈಮರಿಗೆ;
- ಬಟ್ಟಲಿಗೆ ಹಿಡಿಕೆ ಇರುವುದರಿಂದ ಬಟ್ಟಲಿನಲ್ಲಿ ಬಿಸಿಯಾದ ದ್ರವ ಪದಾರ್ಥ ಇರುವಾಗ ಕೈ ಸುಡುವ ಭಯವಿರುವುದಿಲ್ಲ; ಮಕ್ಕಳು ಹಿಡಿಯನ್ನು ಹಿಡಿದು ಬಟ್ಟಲಿನ ಹಾಲು ಕುಡಿಯಲು ಅನುಕೂಲವೂ ಆಗಿರುತ್ತದೆ;
- ಕೈ(<ಕೆಯ್)+ಬಟ್ಟಲು=ಕೈಬಟ್ಟಲು>ಕೈಬಟ್ಲು; ಆಡುಮಾತಿನಲ್ಲಿ ಬಟ್ಟಲು ಸಂಕ್ಷೇಪಗೊಂಡು 'ಬಟ್ಲು' ಎಂದಾಗಿ 'ಕೈ' ಜೊತೆ ಸೇರಿ 'ಕೈಬಟ್ಲು' ಎಂದಾಗುತ್ತದೆ;
- ಸಂದರ್ಭೋಚಿತವಾಗಿ ರಾಗಿಮುದ್ದೆ ಕಟ್ಟಲು, ಸಾಂಬಾರು ಪದಾರ್ಥಗಳನ್ನು ಕುಟ್ಟುವಲ್ಲಿ ಬಳಸುವುದುಂಟು;

ವ್ಯರೂ: ಕೈಚೆಟ್ಟಿ, ಕೈಚೆಟ್ನಿ(ಮಂಡ್ಯ.ಜಿ.).

ಕೈಬದ್ದು kaibaddu :

ಕೈ ಆಭರಣ; ಕೈಗೆ ಹಾಕುವ ಚೈನು, ಕೈಚೈನು(ಚಿತ್ರ.ಜಿ.). Bracelet, wristlet, wristchain.

ಕೈಬದಲು kaibadalu :

- ಹಣವನ್ನು ಸಾಲ ಕೊಡುವುದು; giving loans; hand exchange loans;
- ಅಲ್ಪ ಸಮಯದಲ್ಲಿ ಹಿಂದಿರುಗಿಸುವ ಭರವಸೆಯೊಡನೆ ಬಡ್ಡಿ ರಹಿತವಾಗಿ ಸಾಲ ಪಡೆಯುವುದು;
- ಆಕೈಯಿಂದ ಈಕೈಗೆ ಬದಲು ಮಾಡಿಕೊಳ್ಳುವ ಹಾಗೆ, ಅಂದರೆ ಕಡಿಮೆ ಅವಧಿಯಲ್ಲಿ ಸಾಲ ಮರುಪಾವತಿ ಮಾಡುವ ವಾಗ್ದಾನ ಈ ಪದದಲ್ಲಿ ಧ್ವನಿಸುವಂತೆ ತೋರುತ್ತದೆ; ಸಾಲ ಪಡೆಯುವವರು 'ಕೈಬದಲು' ಮಾಡಿ ಕೊಟ್ಟುಬಿಡುತ್ತೇನೆಂದು ನೀಡುವ ಭರವಸೆ ಇಲ್ಲಿ ಕಂಡು ಬರುತ್ತದೆ; handloan that is paid within a shorttime.

ಕೈಬಳಕೆ kaibaḷake :

- ೧.ಕೈಯ ಅಭ್ಯಾಸ; ೨.ಸ್ವಂತವಾದ ಚಿಲ್ಲರೆ ಖರ್ಚು; ಕೈವೆಚ್ಚ(ಕ.ನಿ.); own expence; own expenditure;
- ಅನುಭವದ ಬಲದಿಂದ ಮಾಡುವ ಯಾವುದೇ ಕೆಲಸಗಳನ್ನು ಇದು ಸೂಚಿಸುತ್ತದೆ; ಅಡುಗೆ ಮಾಡುವಾಗ ಪರಿಕರಗಳನ್ನು ಸರಿಯಾದ ಸಮಪ್ರಮಾಣದಲ್ಲಿ ಹಾಕುವ ಅಭ್ಯಾಸ ರೂಢಿಸಿಕೊಂಡವರು ಅತ್ಯಂತ ರುಚಿಯಾಗಿ ಅಡುಗೆ ತಯಾರಿಸಬಲ್ಲರು; *ಪ್ರ: 'ಇತ್ತೀಚೆಗೆ ನನಗೆ ಕೈಬಳಕೆ ತಪ್ಪಿಹೋಗಿದೆ';*
- ಸ್ವಂತವಾಗಿ ಬಳಕೆ ಮಾಡಲು ತಮ್ಮ ಬಳಿ ಇರಿಸಿಕೊಂಡ ಸ್ವಲ್ಪ ಪ್ರಮಾಣದ ಹಣ; ಇದನ್ನು 'ಕೈಬಳಕೆಯ ಹಣ' ಎಂದು ಕರೆಯುವುದುಂಟು; *ಪ್ರ: 'ನನ್ನ ಕೈಬಳಕೆಗೆ ಇಟ್ಟುಕೊಂಡಿದ್ದೆಲ್ಲವನ್ನೂ ಕೊಟ್ಟು ಬಿಟ್ಟಿದ್ದೇನೆ'.* Own money preserved for self expense.

ಕೈಬಳಿ kaibaḷi :

- ಕೃಷಿಯಲ್ಲಿ ಬಳಸುವ ಉಪಕರಣ; Farming tools;
- ಉಳುಮೆ ಮುಂತಾದ ಕೃಷಿ ಕೆಲಸದಲ್ಲಿ ಮೇಳಿಯಿಂದ ಈಸಿನ ತುದಿಗೆ ಕಟ್ಟುವ ಹಗ್ಗ(ಉ.ಕ.ಜಿ.).

ಕೈಬರಿದಾಗು kaibaridāgu :

- ಕೈ ಖಾಲಿಯಾಗು; ಹಣ ಇಲ್ಲದಿರುವ ಸ್ಥಿತಿ; *ಪ್ರ: 'ಕೈ ಬರಿದಾಗ್ಬುಟ್ಟು ಯಾವ ವ್ಯವಹಾರ ಮಾಡೂಕಾಗ್ತಾಯಿಲ್ಲ';* Empty hands having nothing to do in one's own life;
- ಇದು ನೇರವಾದ ವಾಚ್ಯಾರ್ಥಕ್ಕೆ ಸೀಮಿತವಾಗಿ ನಿಲ್ಲುವುದಿಲ್ಲ; ಯಾವುದೇ ವ್ಯವಹಾರ ಮಾಡಲು ಹಣವಿರಬೇಕಾಗುತ್ತದೆ; ಆದರೆ ಹಣವಿಲ್ಲದ ಸ್ಥಿತಿಯಿಂದ ಏನೂ ಮಾಡಲಾಗದಂತಾಗಿದೆ ಎಂಬ ಅರ್ಥವನ್ನು ಇದು ನೀಡುತ್ತದೆ; ತನ್ನ ಕೈಯಲ್ಲಿ ಹಣವಿಲ್ಲವೆಂಬುದನ್ನು ಈ ಪದ ಹೇಳುತ್ತಿದೆ;
- ಇಲ್ಲಿ 'ಕೈಬರಿದು' ಒಂದು ಸಾಂಕೇತಿಕ ಪದ; ವಾಸ್ತವವಾಗಿ 'ಕೈ' ಬರಿದಾಗಿಯೇ ಇರುತ್ತದೆ; ಬರಿದಾಗಿರುವುದು 'ಹಣ' ಮಾತ್ರ, ಅದನ್ನು ಅನುಸರಿಸಿ ನಡೆಯುವ ವ್ಯವಹಾರ ಮಾತ್ರ; a word that is used symbolically that refers to the emptinees of trade or business or sometimes relations.

ಕೈಬಾಕು kaibāku :

- ಒಂದು ಸಣ್ಣ ಆಯುಧ; ಚಿಕ್ಕಬಾಕು(ಕ.ಜಾ.ಕೋ.); a small dagger;
- ಸೊಂಟದಲ್ಲಿ ಸಿಕ್ಕಿಸಿಕೊಂಡು ಓಡಾಡುವಾಗಿನ ಚಿಕ್ಕ ಆಯುಧ; ಅಪಾಯ ಎದುರಾದಾಗ ಆತ್ಮರಕ್ಷಣೆಗೆ ಬಳಸುತ್ತಿದ್ದುದುಂಟು; ದರೋಡೆಕೋರರು ಇತರರನ್ನು ಹೆದರಿಸಿ ಹಣ ದೋಚಲು ಉಪಯೋಗಿಸುವುದುಂಟು; ಸೈನಿಕರು ಶತ್ರುಗಳ ಮೇಲೆ ದಾಳಿ ಮಾಡುವಾಗ ಕೂಡ ಸಮಯವರಿತು ಬಳಸುತ್ತಿದ್ದರು.

ಕೈ ಬಾಯಿ ಕಚ್ಚೆ ಸುದ್ದ ಇರು kai bāyi kacce sudda iru :

- ಕೈ(<ಕಯ್)+ಬಾಯಿ+ಕಚ್ಚೆ+ಸುದ್ದ(<ಶುದ್ಧ)+ಇರು;
- ಕೈ, ಬಾಯಿ ಮತ್ತು ಕಚ್ಚೆ ಶುದ್ಧವಾಗಿದ್ದರೆ ಎಲ್ಲವೂ ಚೆನ್ನಾಗಿರುತ್ತದೆ; ಎಲ್ಲರೂ ಮಿತ್ರರಾಗುತ್ತಾರೆ ಎಂಬ ಅಭಿಪ್ರಾಯವಿದೆ; ನಡೆ ಮತ್ತು ನುಡಿ ಚೆನ್ನಾಗಿರಬೇಕು ಎಂಬುದನ್ನು ಹೇಳುತ್ತಿದೆ; a idiom of morality; man must be pure in business by avoiding loose talks and adultress;
- ಕದಿಯದಿರುವುದು, ಮೋಸ ಮಾಡದಿರುವುದು, ಲಂಚ ಪಡೆಯದೆ ಪ್ರಾಮಾಣಿಕತನದಿಂದ ಕೂಡಿರುವುವನ್ನು 'ಕೈಶುದ್ಧ' ಎಂಬುದು ಸೂಚಿಸುತ್ತದೆ;
- ಸುಳ್ಳು ಹೇಳದಿರುವುದು, ಅವಾಚ್ಯ ಶಬ್ದಗಳಿಂದ ಇತರರನ್ನು ನಿಂದಿಸದಿರುವುದು, ಅನ್ಯರಿಗೆ ಶಾಪ ಹಾಕದಿರುವುದು, ಏನನ್ನೂ ಕದ್ದು ತಿನ್ನದಿರುವುದು ಮತ್ತು ಎಲ್ಲರಿಗೂ ಹಿತವಾಗುವಂತೆ ಮಾತನಾಡುವುದನ್ನು 'ಬಾಯಿ ಶುದ್ಧ' ಆಗಿರುವುದು ಹೇಳುತ್ತದೆ;
- ವಿಷಯಾಸಕ್ತಿಗೆ ಒಳಗಾಗಿ ಪರಸ್ತ್ರೀ ಕಾಮುಕರಾದರೆ, ಕಚ್ಚೆ ಹರುಕರಾದರೆ ಅಂಥವರ ನಡತೆಯನ್ನು ಮಾನವ ಸಮಾಜ ಗೌರವಿಸುವುದಿಲ್ಲ; ಸಮಾಜದಿಂದ ತಿರಸ್ಕೃತರಾಗುತ್ತಾರೆ; ಆದ್ದರಿಂದ ಎಲ್ಲರಿಗೂ ಆದರ್ಶಪ್ರಾಯರಾಗಿ ಪರನಾರೀ ಸೋದರರಾಗಿ ಬಾಳಬೇಕೆಂಬುದನ್ನು 'ಕಚ್ಚೆಶುದ್ಧ' ಇರುವುದು ತಿಳಿಸುತ್ತಿದೆ; ಎಲ್ಲಿಗೆ ಹೋದರೂ ಕೈಬಾಯಿ ಕಚ್ಚೆ ಶುದ್ಧವಾಗಿರಲಿ ಎಂದು ಜನಪದರು ಎಚ್ಚರಿಕೆ ನೀಡುವುದು ಸಾಮಾನ್ಯವಾಗಿದೆ; womanizer one who seduces women other than his own wife;
- ಸಮಾಜದಲ್ಲಿ ಜೀವಿಸುವಾಗ ಸ್ವಾರ್ಥವನ್ನು ಬದಿಗಿಟ್ಟು ಎಲ್ಲರ ಒಳಿತು ಬಯಸುತ್ತಾ ಉತ್ತಮರಾಗಿ ಬಾಳಬೇಕೆಂದರೆ ಕೈ, ಬಾಯಿ ಮತ್ತು ಕಚ್ಚೆ ಶುದ್ಧವಾಗಿರಬೇಕು; ಸಾರ್ವಜನಿಕ ಸೇವೆಯಲ್ಲಿ ಇರುವವರೂ ಕೂಡ ಇತರರಿಗೆ ಮೇಲ್ಪಂಕ್ತಿಯಾಗಿ ಬಾಳುವುದು ಅವಶ್ಯವಾದುದು ಎಂಬ ಅರಿವು ಇದರಿಂದ ವ್ಯಕ್ತವಾಗುತ್ತದೆ.

ಕೈಬಾಯಿ ನೋಡು kaibāyi nōḍu :

- ಯಾಚನೆ ನೋಟ; ದೈನ್ಯ ನೋಟ; ತನಗೆ ಬೇಕಾದ್ದು ಬೇರೆಯವರಲ್ಲಿದ್ದಾಗ ಯಾಚನಾ ದೃಷ್ಟಿಯಿಂದ ನೋಡುವ ನೋಟ; stare someone; look someone politely or obediently;
- ತಮ್ಮೆದುರು ಬೇರೆ ಮಕ್ಕಳು ತಿನ್ನುವುದನ್ನು ಬೇಡುವಂತೆ ನೋಡುವುದು; ನುಡಿಗಟ್ಟಾಗಿ ಬಳಕೆ;
- ಮಾತಿನಿಂದ ಅಭಿವ್ಯಕ್ತಿಸದೆ, ನೋಟದಿಂದ ವ್ಯಕ್ತಪಡಿಸುವುದು; *ಪ್ರ: 'ಇದ್ರೆ ಉಣ್ಣಾನ, ಇಲ್ದಿದ್ರೆ ಮಲಗಾನ, ಬೇರೆಯವರ ಕೈಬಾಯಿ ನೋಡಬಾರ್ದು'.*

ಕೈಬಾಯಿ ಸುಟಗೋ kaibāyi suṭagō :

- ಸ್ವತಃ ಅಡುಗೆ ಮಾಡಿಕೋ(ಚಿ.ಪ.ಕೋ.); self cooking;
- ಅಡುಗೆ ಮಾಡಲು ಅನುಭವ ಇಲ್ಲದವರು ಅಡುಗೆ ಮಾಡಲು ತೊಡಗಿದರೆ ಕೈಸುಟ್ಟುಕೊಳ್ಳುವುದು ಸಾಮಾನ್ಯ; ಬಿಸಿಯಾದುದನ್ನು ಆತುರವಾಗಿ ಬಾಯಿಗೆ ಹಾಕಿಕೊಳ್ಳುವುದರಿಂದ ಬಾಯಿ ಸುಡುವುದುಂಟು.

ಕೈಬಾರಿಕೆ kaibārike :

- ಒಂದು ಜನಪದ ಕುಣಿತ; a folk dance practiced in the fair of Mylaralinga;
- ಮೈಲಾರಲಿಂಗನ ಆರಾಧನೆಯಲ್ಲಿ ಮಾಡುವ ಕುಣಿತದ ಒಂದು ವಿಧ;
- ಡೊಳ್ಳು ಕುಣಿತದ ಒಂದು ಪ್ರಕಾರ(ದ.ಕ.). A method of drum dance.

ಕೈಬಾಸೆ kaibāse :

- ಕೈಭಾಷೆ; ಕೈಮುಟ್ಟಿ ಮಾತು ಕೊಡುವುದು(ದ.ಕ.); to promise by touching hands or by holding hand or palm;
- ಕೈಹಿಡಿದು ಮಾಡುವ ಪ್ರಮಾಣ(ಬೆಂ.ಗ್ರಾ.ಜಿ.);
- ವ್ಯಕ್ತಿ ವ್ಯಕ್ತಿ ನಡುವೆ ನಡೆಯುವ(ಆಗುವ) ಒಪ್ಪಂದಗಳು, ಲಿಖಿತವಾಗಿ ಅಥವಾ ಅಲಿಖಿತವಾಗಿ ಆಗುವಂಥದು;
- ಪತ್ರಬರಹಗಳ ಪೂರ್ವಕಾಲದಲ್ಲಿ ಅಲಿಖಿತ ಒಪ್ಪಂದಗಳು ಪರಸ್ಪರ ಕೈಮೇಲೆ ಕೈಹಾಕಿ ಭಾಷೆ(ಸೆ) ಮಾಡುವ ಪದ್ಧತಿಯಲ್ಲಿ ಇದ್ದುದು; ಜನರು ಕೊಟ್ಟ ಮಾತಿಗೆ ತಪ್ಪಿ ನಡೆಯದಂಥ ನಂಬಿಕಸ್ತರಾಗಿದ್ದರು;

- ಕೈಬಾಸೆ(ಷೆ) ಮಹತ್ವ ಆಧುನಿಕ ಕಾಲದಲ್ಲಿ ಮರೆಯಾಗಿರುವುದು ದುರಂತ;
- ಜನಪರು ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತಿದ್ದುದು ಅಕ್ಷರಸ್ಥ ಸಮಾಜಕ್ಕಿಂತ ಶ್ರೇಷ್ಠರೆಂಬುದನ್ನು ಸಾಬೀತು ಪಡಿಸುತ್ತಿತ್ತು;
- ಮೂಗರು ಕೈಸನ್ನೆಯ ಮೈಲಕ ಹೇಳುವುದನ್ನು ಕೂಡ ಕೈಭಾಷೆ ಎನ್ನುತ್ತಾರೆ; *ಪ್ರ: 'ನಾನು ಕೈಬಾಸೆ(ಷೆ) ಮಾಡಿವ್ನಿ ತಪ್ಪಿ ನಡೆಯೂದಿಲ್ಲ'.* the sign language of the deaf and dumbs.

ಕೈಬಾಳಿ kaibāḷi :

- ಒಂದು ಬಗೆಯ ಪಾತ್ರೆ; ಖಾದ್ಯ ತಿನಿಸುಗಳನ್ನು ಕರಿಯಲು ಬಳಸುವ ಪುಟ್ಟ ಕಡಾಯಿ(ಬ.ಜಿ.); a kind of vessel used to curry snacks;
- ಕಜ್ಜಾಯ ಇತ್ಯಾದಿ ತಿಂಡಿಗಳನ್ನು ಕರಿಯಲು ಉಪಯೋಗಿಸುವ ಬಾಣಲೆ(ಬೆಂ.ಗ್ರಾ.ಜಿ.);
- *ವ್ಯದೂ:* ಬಾಂಡ್ಲಿ, ಬಾಂಡ್ಲೆ.

ಕೈಬಿಗಿ kaibigi :

- ದುಂದುಗಾರಿಕೆ ಮಾಡದಿರುವುದು; ವೆಚ್ಚ ಮಾಡುವುದರಲ್ಲಿ ಹಿಡಿತ ಹೊಂದಿರುವುದು; ಧಾರಾಳತನವಿಲ್ಲದ್ದು; having tight or strict trade or business;
- ಉದಾರವಾಗಿ ಖರ್ಚು ಮಾಡದಿರುವುದು;
- ಜಿಪುಣತನ; ಹಿಡಿತವಾಗಿ ಖರ್ಚು ಮಾಡುವುದು(ಕೊ.ಜಿ.);
- ಗಟ್ಟಿಯಾಗಿ ಹಿಡಿದಿರುವುದು *ಪ್ರ: 'ಈಗ ಕೈಬಿಗಿ ಹಿಡಿದ್ರೆ ಕೆಲಸ ಆಗೋದಿಲ್ಲ'; 'ಒಟ್ಟಲು ಪಾತಿಯನ್ನು ಕೈಬಿಗಿಯಲ್ಲಿ ಉಳು';*

  ವ್ಯದೂ: ಕೈಹಿಡಿಯುವುದು, ಕೈಮುಂಡಾಗು.

ಕೈಬಿಡು/ಕೈಬುಡು kaibiḍu/kaibuḍu :

- ಕೈಯನ್ನು ಬಿಡು; ಕೈಯಲ್ಲಿರುವುದನ್ನು ಬಿಡು(ಕ.ನಿ.); to loose relation; to leave someone;
- ಸಂಬಂಧ ಕಳಚಿಕೋ;
- ತೊರೆ, ತ್ಯಜಿಸು(ಕ.ಜಾ.ಕೋ.);
- *ಪ್ರ: 'ಆ ವ್ಯವಹಾರ ಕೈಬಿಡು; ಎಲ್ಲಾಸರಿಹೋಗ್ತದೆ';*
- 'ಕೈಬಿಡು' ಆಡುಮಾತಿನಲ್ಲಿ 'ಕೈಬುಡು' ಆಗಿದೆ'; ಪದದ ಅಂತ್ಯ ಸ್ವರ 'ಉ'ಕಾರವಾಗಿರುವುದರಿಂದ ಪದ ಮಧ್ಯದ 'ಇ'ಕಾರವು 'ಉ'ಕಾರದ ಸಹಚರ್ಯದಿಂದಾಗಿ 'ಉ'ಕಾರವಾಗಿ ಉಚ್ಚರಿತವಾಗಿರುವುದನ್ನು ಗಮನಿಸಬಹುದು; *ಪ್ರ: 'ಅವನು ನಡುನೀರಲ್ಲಿ ಕೈಬುಟ್ಟಂಗೆ ಮಾಡಿದ';*
- ನೆರವು ತಪ್ಪಿಸು, ನಿಲ್ಲಿಸು; ದೂರ ಮಾಡು; *ಪ್ರ: 'ಕಂಡು ಕಂಡು ನೀ ಎನ್ನ ಕೈಬಿಡುವರೆ'(ಪುರಂ.ಕೀ.);*
- **—ಕೈಬಿಡುವು** : ಕೆಲಸದ ನಡುವಿನ ವಿಶ್ರಾಂತಿ; intermission; interval;
- **—ಕೈಬಿಡುವುದು** : ಊಟ ಮಾಡಲು ಕೈಹಾಕುವುದು; ಪಂಕ್ತಿ ಭೋಜನದಲ್ಲಿ ಎಲ್ಲರಿಗೂ ಎಲ್ಲಾ ಆಹಾರವನ್ನು ಬಡಿಸಿದ ಮೇಲೆ ಇನ್ನು ಊಟ ಮಾಡಿ ಎಂದು ಹೇಳುವುದಾಗಿದೆ; *ಪ್ರ: 'ಪಂತಿಗೆ ಎಲ್ಲಾ ಬಡಿಸಿದ ಮೇಳೆ ಕೈಬಿಡುವುದು ಎಂದು ಊರ ಗೌಡರು ಹೇಳಿದರು';* to feed in groups by sitting in line;
- ಸೇವೆಯಿಂದ, ಲೆಕ್ಕದಿಂದ ತೆಗೆದು ಹಾಕುವುದು;
- **—ಕೈಬಿಟ್ಟು ಹೋಗು** : ದೂರಹೋಗು, ಅಗಲುವುದು; *ಪ್ರ: 'ಇದ್ದ ಒಬ್ಬ ಮಗನೂ ಕೈಬಿಟ್ಟು ಹೋದ'; 'ಕುಡಿತದ ಚಟದಿಂದ ಇದ್ದ ಒಂದು ಎಕರೆ ಹೊಲಾನೂ ಕೈಬಿಟ್ಟು ಹೋಯಿತು'.* to go far away; to get separated;
- **—ಕೈಬಿಟ್ಟ** : ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದು; to escape from responsibility of serving parents;
- ತೊರೆದು ದೂರ ಹೋಗುವುದು; ಸಂಬಂಧ ತೊರೆಯುವುದು;
- ವೃದ್ಧ ತಂದೆ ತಾಯಿಯರನ್ನು ಪೋಷಿಸದೆ, ರಕ್ಷಿಸದೆ ಹೊಣೆಗಾರಿಕೆಯಿಂದ ದೂರ ಸರಿಯುವುದು; *ಪ್ರ: 'ಬೆಳೆದ ಮಗ ತಂದೆ ತಾಯಿಗಳನ್ನು ಕೈಬಿಟ್ಟ';*
- ಬಹಳ ಕಾಲದ ಸ್ನೇಹ ಮರೆತು ಸ್ನೇಹಿತರನ್ನು ತ್ಯಜಿಸುವುದು.

ಕೈಬುಳಕ್ kaibuḷak :

- ಕಯಿಬಳಕ್/ಕಯಿವಳಕ್; An handy lamp used to walk at night;
- ಕೈದೀಪ (ದೇವಾಲಯಗಳಲ್ಲಿ ಉಪಯೋಗಿಸಲ್ಪಡುವ, ನೇತಾಡಿಸಿಕೊಂಡು ಹೋಗಲು ಅನುಕೂಲವಾಗುವಂತೆ);
- ದೇವಾಲಯಗಳಲ್ಲಿ ಗಣ್ಯ ವ್ಯಕ್ತಿಗಳನ್ನು ಕರೆದುಕೊಂಡು ಹೋಗುವಾಗ ಹಿಡಿಯುವ ಕೈಸೊಡರು(ದ.ಕ.);
- ವಿದ್ಯುಚ್ಛಕ್ತಿಯ ಬಳಕೆಯ ಪೂರ್ವದಲ್ಲಿ ದೇವಾಲಯದೊಳಗೆ ಬೆಳಕಿಗಾಗಿ ಎಣ್ಣೆಯ ದೀಪಗಳನ್ನು ಹಚ್ಚಲಾಗುತ್ತಿತ್ತು; ದೇವರ ದರ್ಶನಕ್ಕೆ ಬಂದ ಗಣ್ಯ ವ್ಯಕ್ತಿಗಳನ್ನು ಕರೆದೊಯ್ಯುವಾಗ ದಾರಿ ತೋರಲು ಕೈಯಲ್ಲಿ ಎಣ್ಣೆಯ ಸೊಡರನ್ನು ಹಿಡಿದು

ಬೆಳಕು ಮಾಡಿ ದೇವಾಲಯದ ಶಿಲ್ಪಕಲೆಗಳನ್ನು ಪರಿಚಯಿಸಲಾಗುತ್ತಿತ್ತು;

- ಕೈಯಲ್ಲಿ ಸೊಡರು ಹಿಡಿದು ಬೆಳಕು ಮಾಡುತ್ತಿದ್ದುದರಿಂದ 'ಕೈಬೆಳಕು' ಎಂದು ಕರೆದಿರುವ ಸಾಧ್ಯತೆ ಇರಬಹುದು; 'ಕೈಬೆಳಕು' ಕ್ರಮೇಣ ಆಡುನುಡಿಯಲ್ಲಿ 'ಕೈಬುಳಕ್' ಎಂದಾಗಿರಬಹುದೆ? (ಕೈಬೆಳಕು>ಕೈಬುಳಕ್?);
- ಈಗಲೂ ದೇವಾಲಯಗಳಲ್ಲಿ ಗರ್ಭಗುಡಿಯಲ್ಲಿ ತೂಗಾಡುವ ಎಣ್ಣೆಯ ದೀಪಗಳು ಕಂಡುಬರುತ್ತವೆ.

ಕೈಬಿಸಿಮಾಡು kaibisimāḍu :

- ಲಂಚಕೊಡು; to give bribe; to give money as a favour;
- ಕಛೇರಿಗಳಲ್ಲಿ ಮತ್ತು ಹೊರಗೂ ಆಗಬೇಕಾದ ಕೆಲಸ ಬೇಗ ಆಗಲು ಕೊಡುವ ಲಂಚಕ್ಕೆ ಈ ಪದ ಬಳಕೆ; ಮಾಡುವ ಕೆಲಸ ಸಕ್ರಮವೇ ಆದರೂ ಲಂಚ ಕೊಡಬೇಕಾದ ಅನಿವಾರ್ಯ ಸ್ಥಿತಿ ನಿರ್ಮಾಣವಾಗಿರುವುದು ದುರಂತವೇ; ಅಕ್ರಮಗಳಿಗೆ ಅಭ್ಯಾಸವಾದ ಲಂಚ, ಸಕ್ರಮ ಕೆಲಸಗಳಿಗೂ ಮುಂದುವರಿದಿದ್ದು ಸಾಮಾನ್ಯ ಕ್ರಿಯೆಯೆನಿಸಿದೆ;
- *ಪ್ರ: 'ನಿನ್ನ ಕೆಲಸ ಬೇಗ ಆಗಬೇಕೆ ಕೈಬಿಸಿ ಮಾಡು';* *ವ್ಯರೂ:* ಕೈಬೆಚ್ಚಗೆ ಮಾಡು.

ಕೈಬುತ್ತಿ kaibutti :

- ಕಟ್ಟಿದ ಆಹಾರದ ಗಂಟು; ಊಟದ ಗಂಟು; meal or food carried by knotting in a cloth;
- 'ಊಟ, ಭೋಜನ' ಎಂಬ ಅರ್ಥ ನೀಡುವ 'ಭುಕ್ತಿ' ಪದದಿಂದ 'ಬುತ್ತಿ' ಬಂದಿರಬಹುದು; (ಕೈ+ಭುಕ್ತಿ= ಕೈಭುಕ್ತಿ>ಕೈಬುತ್ತಿ); ಇಲ್ಲವೇ 'ಬುತ್ತಿ'ಯು ಸಂಸ್ಕೃತಕ್ಕೆ ಹೋದಾಗ 'ಭುಕ್ತಿ' ಎಂದಾಗಿರುವ ಸಾಧ್ಯತೆಯೂ ಉಂಟು; ದುಡಿಯುವವರಿಗೆ ಬುತ್ತಿ ಕೊಂಡೊಯ್ಯುವ ಪದ್ಧತಿ ಪ್ರಾಚೀನ ಕಾಲದಿಂದಲೂ ಇದೆ;
- 'ಬುತ್ತಿ ಕಟ್ಟು' ಎಂಬುದು ಆಹಾರದ/ಊಟದ ಗಂಟು ಕಟ್ಟು ಎಂಬರ್ಥದಲ್ಲಿ ಪ್ರಯೋಗವಾಗುತ್ತದೆ; a tied and carried food in a cloth while going to fair or migration tours;
- ಜಾತ್ರೆ/ಯಾತ್ರೆಗಳಿಗೆ ಪ್ರಯಾಣ ಮಾಡುವಾಗ ದಾರಿ ಮಧ್ಯದಲ್ಲಿ ಹಸಿವು ನೀಗಿಸಲು ಊಟವನ್ನು ಕಟ್ಟಿಕೊಂಡು ಹೋಗುವುದಾಗಿದೆ;
- ಕೈಯಲ್ಲಿ ಊಟದ ಗಂಟು ಹಿಡಿದುಕೊಂಡು ಹೋಗುತ್ತಿದ್ದುದರಿಂದ 'ಕೈಬುತ್ತಿ' ಎಂಬ ಪದ ರೂಢಿಯಲ್ಲಿ ಬಂದಿದೆ;
- ಬುತ್ತಿಯನ್ನು ಸಾಮಾನ್ಯವಾಗಿ 'ಅಡಕೆ ಪಟ್ಟೆ'ಯಲ್ಲಿ ಕಟ್ಟುತ್ತಿದ್ದರು; ಹೀಗೆ ಕಟ್ಟಿದ ಬುತ್ತಿ ಬಹಳ ಕಾಲದವರೆಗೆ ಕೆಡದೆ ಹಾಗೆ ಇರುತ್ತಿತ್ತು; *ಪ್ರ: 'ಕೈಬುತ್ತಿ ಕಟ್ಟಿಸಿಕೊಂಡು ಬೆಟ್ಟದ ಜಾತ್ರೆಗೆ ಹೊರಟರು'.*

ಕೈಬೇವು kaibēvu :

- Melia azededarach; ಕಹಿಬೇವು;
- ಬೇವಿನ ಮರವು ಮನೆ ಕಟ್ಟುವಾಗ ಮರಮುಟ್ಟಿಗೆ, ಔಷಧಿಗೆ ಉಪಯುಕ್ತ; Neem tree used as a medicinal plant;
- ಬೇವು ಸಹಜವಾಗೇ ಕಹಿ; ಕಹಿ(ಕೈ) ಬೇವಿನ ಚಕ್ಕೆ, ಎಲೆ ಚರ್ಮರೋಗಗಳಿಗೆ, ಮಧುಮೇಹಕ್ಕೆ ಔಷಧವಾಗಿ ಬಳಕೆ; to cure diabetics, skin diseases;
- ಮಕ್ಕಳಿಗೆ ಅಮ್ಮ (ದಡಾರ) ಆದಾಗ ಬೇವಿನ ಸೊಪ್ಪನ್ನು ಅರೆದು ಲೇಪಿಸುವುದು; ಬೇವಿನ ಕಡ್ಡಿಯಿಂದ ಹಲ್ಲುಜ್ಜುವುದರಿಂದ ಹಲ್ಲಿನ ಆರೋಗ್ಯ ದೃಢಗೊಳ್ಳುವುದು; ಬೇವು ಬಹುಉಪಯೋಗಿ ವಸ್ತು;
- ಕಹಿ+ಬೇವು=ಕಹಿಬೇವು>ಕೈಬೇವು(ಕೈ=ಕಹಿ); *ಪ್ರ: 'ಹಲ್ಲುಜ್ಜಬೇಕು ಕೈಬೇವು ಕಡ್ಡಿ ತೆಗೆದುಕೊಂಡು ಬಾ'.*

ಕೈಬೈರಿಗೆ kaibairige :

- ಮರಗೆಲಸದಲ್ಲಿ ಸಣ್ಣ ಸಣ್ಣ ರಂಧ್ರಗಳನ್ನು ಕೊರೆಯಲು ಬಡಗಿ ಬಳಸುವ ಸಣ್ಣ ಸಾಧನ; auger, gimlet; a metal instrument of drilling holes used by a carpenter to hole wooden planks;
- ಬೈರಿಗೆಯಲ್ಲಿ ದೊಡ್ಡರಂಧ್ರ ಕೊರೆಯಲು ಸುತ್ತು ಬೈರಿಗೆ ಬಳಸಿದರೆ, ಸಣ್ಣ ರಂಧ್ರಗಳನ್ನು ಕೊರೆಯುವಲ್ಲಿ ಕೈಬೈರಿಗೆ ಬಳಸುತ್ತಾರೆ;
- ಸುಮಾರು ಆರು ಇಂಚು ಎತ್ತರ, ಮೂರು ಇಂಚು ವ್ಯಾಸವುಳ್ಳ ದುಂಡಾಗಿರುವ ಮರದ ಕೊರಡಿಗೆ ಮೇಲ್ತುದಿಯಲ್ಲಿ ಬೇರಿಂಗ್ ಅಳವಡಿಸಿದ ಹಿಡಿಕೆ ಇರುತ್ತದೆ; ಕೆಳತುದಿಯಲ್ಲಿ ರಂಧ್ರ ಕೊರೆಯುವ ಉಕ್ಕಿನ ಸಾಧನ ಸೇರಿಸಲಾಗಿರುತ್ತದೆ; ಮಧ್ಯದ ಮರದ ಕೊರಡಿಗೆ ಕಿರುಬೆರಳು ಗಾತ್ರದ ನೂಲಿನ ದಾರ ಸುತ್ತಲು ಅನುಕೂಲವಾಗುವಂತೆ ಸಣ್ಣದಾಗಿ ಕೊರೆದಿರುತ್ತಾರೆ;
- ಬಡಗಿಯು ರಂಧ್ರ ಕೊರೆಯ ಬೇಕಾದ ಸ್ಥಳದಲ್ಲಿ ಕೈಬೈರಿಗೆಯ ಮುಂತುದಿಯಲ್ಲಿನ ಉಕ್ಕಿನ ಸಾಧನವನ್ನು ಇಟ್ಟು, ನೇರವಾಗಿ ಮರದ ಕೊರಡನ್ನು ನಿಲ್ಲಿಸಿ, ಮೇಲ್ತುದಿಯ ಬೇರಿಂಗ್ ಇರುವ ಹಿಡಿಯನ್ನು ಭದ್ರವಾಗಿ ಒತ್ತಿ ಹಿಡಿದುಕೊಳ್ಳುತ್ತಾನೆ; ಮತ್ತೊಬ್ಬರು ಮಧ್ಯದಲ್ಲಿ ಸುತ್ತಿರುವ ನೂಲಿನ ದಾರದ

ಎರಡೂ ತುದಿಗಳನ್ನು ಒಂದೊಂದು ಕೈಯಲ್ಲಿ ಹಿಡಿದು ಆಕಡೆ, ಈಕಡೆ ಎಳೆಯುವಾಗ, ಬೈರಿಗೆಯು ಆಕಡೆಗೊಮ್ಮೆ, ಈಕಡೆಗೊಮ್ಮೆ ಎಳೆದ ರಭಸಕ್ಕನುಗುಣವಾಗಿ ತಿರುಗುತ್ತದೆ; ಇದರಿಂದ ಬೈರಿಗೆಯ ಮೊಳೆ ಮರದ ಪಟ್ಟಿಯಲ್ಲಿ ರಂಧ್ರವನ್ನು ಕೊರೆಯುತ್ತಾ ಹೋಗುತ್ತದೆ;

- ಸಣ್ಣ ರಂಧ್ರ ಕೊರೆಯಲು ಬಡಗಿಯು ಒಂದೇ ಕೈಯಲ್ಲಿ ತಿರುಗಿಸಲು ಅನುಕೂಲವಾಗಿರುವ ಚಿಕ್ಕದಾದ ಉಕ್ಕಿನ ಉಪಕರಣವನ್ನು ಕೂಡ ಕೈಬೈರಿಗೆ ಎನ್ನುತ್ತಾರೆ.

ಕೈಬೋಣಿ/ಕೈಬೋಣಿಗೆ kaibōṇi/kaibōṇige :

- ಮೊದಲ ವ್ಯಾಪಾರ; ಮೊದಲ ಗಿರಾಕಿ; first trade; first customer;
- ಕೈ + ಬೋಣಿ = ಕೈಬೋಣಿ(ಬೋಣಿ=ಮೊದಲ ವ್ಯಾಪಾರ);
- ವ್ಯಾಪಾರಗಾರರಿಗೆ ದಿನದ ಮೊದಲ ವ್ಯಾಪಾರದಲ್ಲಿ ಗ್ರಾಹಕ ಹಣ ಕೊಟ್ಟೇ ವ್ಯಾಪಾರ ಮಾಡಿದರೆ ತಮಗೆ ಲಾಭವೆಂಬ ನಂಬಿಕೆ; the belief of paying money at first trade of first customer of a day that makes luck or rich to a trader;
- ಮೊದಲ ಗಿರಾಕಿಗೆ ಸಾಲ ಕೊಟ್ಟರೆ ದಿನವೆಲ್ಲಾ ನಷ್ಟವಾಗುತ್ತದೆಂಬ ವಾಣಿಜ್ಯವಲಯದ ಈ ಜನಪದ ನಂಬಿಕೆ ಸಾಮಾನ್ಯವಾದುದಾಗಿದೆ; ಆದ್ದರಿಂದ ಮೊದಲು ವ್ಯಾಪಾರ ಮಾಡುವವನು ಹಣ ಕೊಟ್ಟೇ ವ್ಯಾಪಾರ ಮಾಡಬೇಕಾಗುತ್ತದೆ;
- ಒಂದು ವೇಳೆ ಹಣ ಕೊಟ್ಟೂ ವ್ಯಾಪಾರಿಗೆ ನಷ್ಟವಾದರೆ ಅದರ ಜವಾಬ್ದಾರಿಯನ್ನು ಬೋಣಿ ಮಾಡಿದವನ ತಲೆಗೇ ಕಟ್ಟುತ್ತಾರೆ; *ಪ್ರ: 'ನಿನ್ನ ಕೈಬೋಣಿ ಸರಿಯಾಗಿದ್ದರೆ ನನಗೂ ಅನುಕೂಲ'.*

ಕೈಮಂತು kaimantu :

- ಮೊಸರನ್ನು ಕಡೆಯಲು ಕೈಯಲ್ಲಿ ಆಡಿಸುವ ಚಿಕ್ಕ ಮಂತು; ಚಿಕ್ಕ ಕಡೆಗೋಲು; a wooden tool used to churn curds; it churns curds with rope;
- ಇದನ್ನು ಹಗ್ಗದಿಂದ ಸುತ್ತಿ ಎಳೆಯಬೇಕಾಗಿಲ್ಲ; it is not pulled or pushed by tying with a rope;
- ಮಂತುಗಳಲ್ಲಿ ದೊಡ್ಡ ಮಂತು ಮತ್ತು ಕೈಮಂತು ಎಂದು ಎರಡು ಬಗೆಗಳಿವೆ; ದೊಡ್ಡಮಂತು ೫–೬ಅಡಿ ಉದ್ದದ ಗಳುವಿಗೆ ಸೇರಿಸಿದ್ದು, ಗಳುವಿಗೆ ಹಗ್ಗ ಸುತ್ತಿ ಆಕಡೆ, ಈಕಡೆ ಎಳೆದು ಮಡಿಕೆಯಲ್ಲಿನ ಮೊಸರನ್ನು ಕಡೆಯುತ್ತಾರೆ; ಆದರೆ ಕೈಮಂತು ಸುಮಾರು ಒಂದು ಮೊಳದುದ್ದ ಇರುವ ಕೋಲಿಗೆ ಸೇರಿಸಿರುತ್ತಾರೆ; ದೊಡ್ಡಮಂತನ್ನು ನಿಂತು ಮೊಸರು ಕಡೆಯುವಾಗ ಬಳಸುತ್ತಾರೆ; ಕುಳಿತು ಚಿಕ್ಕ ಗಡಿಗೆಯಲ್ಲಿನ ಮೊಸರು ಕಡೆಯಲು ಕೈಮಂತು ಬಳಸುತ್ತಾರೆ; ಮೊಸರಿನ ಪ್ರಮಾಣವನ್ನು ಆಧರಿಸಿ ದೊಡ್ಡ ಮಂತು ಅಥವಾ ಚಿಕ್ಕಮಂತು ಬಳಕೆಯಾಗುತ್ತದೆ;
- ಸ್ವಲ್ಪ ಪ್ರಮಾಣದಲ್ಲಿ ಮಜ್ಜಿಗೆ ಮಾಡಿಕೊಳ್ಳಲು ಕೈಮಂತು ಬಳಕೆ; a small churner is used to make small quantity of butter milk;
- ಕೈ+ಮಂತು=ಕೈಮಂತು(ಮಂತು=ಕಡೆಗೋಲು); *ಪ್ರ: 'ಮೊಸರು ಸ್ವಲ್ಪವಿದೆ; ಸ್ವಲ್ಪ ನೀರು ಹಾಕಿ ಕೈಮಂತು ಆಡಿಸಿ ಅನ್ನಕ್ಕೆ ಹಾಕಿಕೊಡು'.*

ಕೈಮ/ಕೈಮಾದುಂಡೆ kaima/kaimādunḍe :

- ಮಾಂಸಾಹಾರದ ಒಂದು ಬಗೆ; a kind of mutton dish;
- ಮಾಂಸಖಂಡದ ಉಂಡೆ(ಮಂಡ್ಯ.ಜಿ.); mutton lump clod;
- ಮಾಂಸದ ಸಣ್ಣಚೂರು(ತು.ಜಿ.); a small piece of mutton;
- ಮಾಂಸಖಂಡವನ್ನು ಸಣ್ಣಚೂರುಗಳಾಗಿ ಕತ್ತರಿಸಿ, ಒಳಕಲ್ಲಿನಲ್ಲಿ ಮಸಾಲೆಯೊಡನೆ ರುಬ್ಬಿ ಉಂಡೆ ಮಾಡಿ ಬೇಯಿಸುವ ಮಾಂಸಾಹಾರದ ಒಂದು ಬಗೆ;
- ಕೈಮಾದಲ್ಲಿ ಮೂಳೆ ಇಲ್ಲದಿರುವುದರಿಂದ ಹಲ್ಲು ಇಲ್ಲದವರೂ ಬೋಡಿನಲ್ಲೆ ಸವೆಸಿ ತಿನ್ನುವ ಅನುಕೂಲವಿರುವುದು; *ಪ್ರ: 'ಹಲ್ಲು ಇಲ್ಲದಿದ್ರೇನು ಕೈಮ ಮಾಡಿದ್ದೀನಿ ಊಟಕ್ಕೆ ಬನ್ನಿ';*
- 'ಕೈಮ'<ಖೀಮಾದಿಂದ ಬಂದಿರಬೇಕು; ಅನ್ಯದೇಶ್ಯ ಪದ; 'ಮರಾಟಿ' ಮೂಲಕ ಬಂದಿರುವ ಸಾಧ್ಯತೆ ಹೆಚ್ಚು;

ಕೈಮಗ್ಗ kaimagga :

- ಮನುಷ್ಯ ಕೈಯಿಂದ ಬಟ್ಟೆ ನೇಯುವ ಸಾಧನ; Hand loom; Manual hand loom; a weaving instrument weaved by man to weave cloth;
- ಕೈ+ಮಗ್ಗ=ಕೈಮಗ್ಗ(ಮಗ್ಗ=ನೇಯ್ಗೆ ಸಾಧನ);
- ಯಂತ್ರ ಕೈಗಾರಿಕೆಗೆ ಮೊದಲು ಮನುಷ್ಯ ಕೈಯಿಂದ ಮಗ್ಗ ನಡೆಸಿ ಬಟ್ಟೆ ತಯಾರಿಸುತ್ತಿದ್ದುದರಿಂದ 'ಕೈಮಗ್ಗ' ಎಂಬ ಅನ್ವರ್ಥಕ ನಾಮಪದ ಬಳಕೆ;

- ಕೈಮಗ್ಗದಿಂದ ಮಾನವ ಸಂಪನ್ಮೂಲ ಹೆಚ್ಚು ಬಳಕೆ; ವಿದ್ಯುತ್‌ಚ್ಛಕ್ತಿ ಆವಶ್ಯಕತೆಯೂ ಇಲ್ಲ; *ಪ್ರ: 'ಕಾರ್ಖಾನೆ ಬತ್ಲೆ ಕೈಮಗ್ಗ ಮೂಲೆ ಪಾಲಾದೋ'.*

ಕೈಮಚ್ಚು kaimaccu :

- ಸಣ್ಣ ಮಚ್ಚು; a small sickle; the sickle used to cut small branches of any tree;
- ಮುಂಗೈ ಗಾತ್ರದ ಹಾಗೂ ಸಣ್ಣ ಸಣ್ಣ ರೆಂಬೆಗಳನ್ನು ಕಡಿಯಲು ಬಳಸುವ ಉಕ್ಕಿನಿಂದ ಮಾಡಿದ ಗಟ್ಟಿಯಾದ ಕುಡುಗೋಲಿಗಿಂತ ಸ್ವಲ್ಪ ದೊಡ್ಡದಾದ ಸಾಧನ;
- ಕೈಯಲ್ಲಿ ಹಿಡಿದು ತೆಂಗಿನಕಾಯಿ ಸಿಪ್ಪೆ ಸುಲಿಯಲು ಅನುಕೂಲವಾಗಿರುವ ಚಿಕ್ಕದಾದ ಮಚ್ಚು; *ಪ್ರ: 'ಕೈಮಚ್ಚು ತಗೊಂಡು ಸಣ್ಣ ರೆಂಬೆಗಳನ್ನೆಲ್ಲಾ ತುಂಡು ಹಾಕು'.*

ಕೈಮಣ್ಣು kaimaṇṇu :

- ಕೈಯಿಂದ ಮೆತ್ತಿದ ಮಣ್ಣು;
- ಮನೆಯ ಗೋಡೆ ಮತ್ತು ನೆಲಗಟ್ಟಿನಲ್ಲಿ ಮಣ್ಣು ಕಿತ್ತುಹೋಗಿ ಅಂದಗೆಟ್ಟಾಗ, ಕೈಯಿಂದ ಕಲಸಿದ ಮಣ್ಣನ್ನು ಮೆತ್ತಿ, ಸವರಿ ಸರಿಪಡಿಸುವುದು; ಅಂದವಾಗಿ ಕಾಣುವಂತೆ ಮಾಡುವುದು; the soil; wet soil; smeared it on the walls of home manually;
- ಗಾರೆ, ಸಿಮೆಂಟ್ ಬಳಕೆಗಿಂತ ಮೊದಲು ಮಣ್ಣನ್ನೇ ಗೋಡೆ ಕಟ್ಟಲು, ನೆಲಗಟ್ಟು ಮಾಡಲು ಬಳಸುವುದು ಸಾಮಾನ್ಯವಾಗಿತ್ತು; *ಪ್ರ: 'ಹಬ್ಬ ಹತ್ತಿರವಾಯ್ತು; ಮನೆಗೆ ಕೈಮಣ್ಣು ಮಾಡಿ ಸುಣ್ಣ ಬಳಿ ಬೇಕು';*
- ಇದೇ ತೆರನಾಗಿ ಕೆಮ್ಮಣ್ಣು, ನೀರ್‌ಮಣ್ಣು ಪದಗಳು ಬಳಕೆಯಲ್ಲಿವೆ.

ಕೈಮದ್ದು kaimaddu :

- ಆಹಾರದೊಡನೆ ಗುಪ್ತವಾಗಿ ಬೆರೆಸಿ ಬಡಿಸುವ ಮದ್ದು(ಉ.ಕ.ಜಿ.); Medicament used to do harm a person and to feed it such people secretely;
- ಕೈ+ಮದ್ದು=ಕೈಮದ್ದು;
- ಆಹಾರ ವಸ್ತುಗಳೊಡನೆ ಕಾಣದಂತೆ ಬೆರಸಿಕೊಡುವ ಒಂದು ಬಗೆಯ ಮದ್ದು(ಕ.ಜಾ.ಕೋ.); a kind of harmful medicare to hurt somebody secretly;
- ಆಗದವರಿಗೆ ಕೆಟ್ಟದು ಮಾಡಲು ಊಟ, ತಿಂಡಿಗಳಲ್ಲಿ ಬೆರಸಿಕೊಡುವ ಮಂದ ವಿಷ(ಮದ್ದು); it is a kind of poisoning through food some body who is being hate by someone;
- ಗೋಸುಂಬೆ ರಕ್ತದ ಜಿಡ್ಡಿನಿಂದಾದ ಉಂಡೆ; ಗೋಸುಂಬೆಯನ್ನು ಸಾಯಿಸಿ ಒಲೆಯ ನೇರಕ್ಕೆ ನೇತು ಹಾಕಿ, ಒಲೆಯ ಮೇಲೆ ಕಾವಲಿ ಇಟ್ಟಾಗ ಅದರ ಮೇಲೆ ಬೀಳುವ ಗೋಸುಂಬೆಯ ರಕ್ತ ಸಣ್ಣ ಸಣ್ಣ(ಉಂಡೆ) ಗುಳ್ಳೆಗಳಂತಾಗುತ್ತವೆ; ಉಂಡೆಗಳನ್ನು ಆಹಾರದಲ್ಲಿ ಬೆರಸಿ ಕೊಟ್ಟಾಗ ಅದನ್ನು ತಿಂದ ವ್ಯಕ್ತಿಗೆ ದಿನ ಕಳೆದಂತೆ ಆಹಾರ ಅರಗುವುದಿಲ್ಲ; ಊಟ ರುಚಿಸುವುದಿಲ್ಲ;
- ಮದ್ದು ಬೆರಸಿದ ಆಹಾರ ಜೀರ್ಣವಾಗದೆ ಹೊಟ್ಟೆಯಲ್ಲಿ ಉಳಿದು ಅದರ ಮೇಲೆ ಕೂದಲು ಬೆಳೆಯುತ್ತದೆಂಬ ನಂಬಿಕೆ; ಇದನ್ನು ವಾಂತಿ ಮಾಡಿಸಿ ಹೊರತೆಗೆಸಿದರೆ ವ್ಯಕ್ತಿ ಬದುಕುತ್ತಾನೆ, ಇಲ್ಲದಿದ್ದರೆ ಸಾಯುತ್ತಾನೆಂದೂ ಹೇಳುವರು;
- ವಾಂತಿ ಮಾಡಿಸಲು, ಜೀರ್ಣಗೊಳಿಸಲು ಕೋಳಿ ಸಾರು, ಹುರುಳಿ ಸಾರು, ವೀಳ್ಯದೆಲೆಯಲ್ಲಿ ಹಸಿರು ಔಷಧಿ ತಿನ್ನಿಸುವುದು ರೂಢಿ; to make one vomit or digest one has to make eat chicken soup horsegram soup or putting green medicine in betel;
- ಬೇರೆಯವರ ಮನೆಯಲ್ಲಿ ಊಟ, ತಿಂಡಿಯ ನಂತರ ಎಲಕ್ಕಿ ಕಾಳನ್ನು ಬಾಯಿಗೆ ಹಾಕಿಕೊಂಡರೆ ಅಥವಾ ಉಟ್ಟಬಟ್ಟೆಯನ್ನು ಮಗುಚಿ ಉಟ್ಟರೆ ಕೈಮದ್ದು ನಾಟುವುದಿಲ್ಲವೆಂಬ ನಂಬಿಕೆ; ಮೂಢನಂಬಿಕೆಯೆಂದೂ ಹೇಳುವುದುದುಂಟು;
- *ವಿ.ನೋಡಿ:* ಇಕ್ಮದ್ದು; *ವ್ಯರೂ:* ಕೈಮಸಗೆ, ಮದ್ದಿಕ್ಕುವುದು, ಇಕ್ಮದ್ದು, ಕೈಮಾಸ.

ಕೈಮರಿಗೆ/ಕೈಮರ್ಗಿ kaimarige/kaimargi:

- ಕೈ(<ಕಯ್)+ಮರಿಗೆ=ಕೈಮರಿಗೆ; a vessel having handle;
- ಕೈಮರಿಗೆ>ಕೈಮರಿಗಿ>ಕೈಮರ್ಗಿ;
- ಹಿಡಿಯಿರುವ ಮರದ ಪಾತ್ರೆ; a wooden bowl with a handle;
- ಮುದ್ದೆ ಕಟ್ಟಲು ಬಳಸುತ್ತಿದ್ದ ಹಿಡಿಯಿರುವ ಮರದ ಬಟ್ಟಲು, ಕೈಬಟ್ಟಲು;
- ರೊಟ್ಟಿ ತಟ್ಟಲು ಮತ್ತು ಬಿಸಿ ಆಹಾರ ಪದಾರ್ಥ ಬಡಿಸಲು ಬಳಸುತ್ತಿದ್ದುದುಂಟು;
- *ಪ್ರ: 'ಕೈಮರಿಗೆ ತಗೊಂಡು ಚೆನ್ನಾಗಿ ಮುದ್ದೆಕಟ್ಟು';* *ವ್ಯರೂ:* ಕೈಬಟ್ಲು(ತು.ಜಿ.), ಕೈಯಟ್ಲು, ಕೈಯಟ್ಲು.

ಕೈಮರೆ kaimare :

ಕೈಯಿಂದ ವಸ್ತುಗಳನ್ನು ಮಗುಚಿ ಹಾಕುವ ಸಾಧನ; ಅಡುಗೆ ಮಾಡುವಾಗ ಹವ್ಯಕರು ಬಳಸುತ್ತಾರೆ. A

tool to turn things up and down used by the Havyakas of Northkannada.

ಕೈಮಾರೊತ್ತು kaimārottu :

- ಪಶ್ಚಿಮ ದಿಗಂತದಲ್ಲಿ ಸೂರ್ಯ ಮುಳುಗಲು ಇನ್ನೂ ಮಾರುದ್ದುದ ಅಳತೆ ಮಾತ್ರ ಇರುವಾಗಿನ ಸಮಯ; ಸಂಜೆಗೆ ಮೊದಲ ಸಮಯ; Dusk; the early evening; the time before sunsetting;
- ಕೈ(<ಕಯ್)+ಮಾರು+ಹೊತ್ತು(<ಪೊತ್ತು<ಪೊಱ್ತು)= ಕೈಮಾರುಹೊತ್ತು>ಕೈಮಾರಹೊತ್ತು>ಕೈಮಾರ+ಹ್+ಒತ್ತು>ಕೈಮಾರ+Ø+ಒತ್ತು>ಕೈಮಾರೊತ್ತು; [ಹ್‌ಕಾರ ಶೂನ್ಯ ಧ್ವನಿಮಾ(Ø) ಆಗುತ್ತದೆ];
- ಸೂರ್ಯನ ಚಲನೆಯ ಕ್ರಮವನ್ನು ಅನುಸರಿಸಿ ದಿನದ ಸಮಯವನ್ನು ಗುರುತಿಸಲಾಗುತ್ತಿತ್ತು; ಗಡಿಯಾರದ ವ್ಯವಸ್ಥೆಗೆ ಮೊದಲು ಬಿಸಲು, ನೆರಳಿನ ಚಲನೆಯನ್ನು ಅವಲಂಬಿಸಿ ಸಮಯ ಸೂಚಿಸುತ್ತಿದ್ದರು; ಉದಾ: ನಡೊತ್ತು(ಮಧ್ಯಾಹ್ನ), ಸರೊತ್ತು(ಮಧ್ಯರಾತ್ರಿ), ಇಳೊತ್ತು(ಸಂಜೆವೇಳೆ) ಇತ್ಯಾದಿ;
- ಕೈಮಾರ ಹೊತ್ತು(ಕೈಮಾರೊತ್ತು) ಎಂದು ಸಂಜೆಗೆ ಮೊದಲಿನ ಸ್ವಲ್ಪ ಸಮಯವನ್ನು ಗುರುತಿಸುತ್ತಿದ್ದರು; ಜನಪದರಲ್ಲಿನ ಸಮಯ ಸೂಚನೆಯ ಪ್ರಜ್ಞೆಗೆ ಇವೆಲ್ಲಾ ಸಾಕ್ಷಿಯಾಗಿವೆ; *ಪ್ರ: 'ಕೈಮಾರೊತ್ತಾಯ್ತು ಇನ್ನೂ ದನಕರುಗಳು ಮನೆಗೆ ಬಂದಿಲ್ಲ'.*

ಕೈಮ್ಯಾಲಿನ ಹೊಟ್ಟೆ kaimyālina hoṭṭe :

- ದುಡಿದು ತಿನ್ನು; ಕೂಲಿಯಿಂದ ನಡೆಯುವ ಬದುಕು; a life run by regular labour; a life of work and eat;
- ಅಂದಂದಿನ ದುಡಿಮೆ/ಕೂಲಿಯಿಂದ ಅಂದಂದಿಗೆ ಹೊಟ್ಟೆ ತುಂಬಿಸಿಕೊಂಡು ಜೀವನ ಸಾಗಿಸುವುದನ್ನು ನಿರ್ದೇಶಿಸುವ ಮಾತಾಗಿದೆ; *ಪ್ರ: 'ನಮ್ದೇನಿದೆ, ಕೈಮ್ಯಾಲಿನ ಹೊಟ್ಟೆ ಜನ ನಾವು';* it is a speech directing about one's earning one's regular bread and butter;
- ದುಡಿಯುವ ಕೈಗಳನ್ನು ನಂಬಿ ಬಾಳು ನಡೆಸುವವರು; ಒಂದು ದಿನ ದುಡಿಯದಿದ್ದರೆ ಅಂದು ಉಪವಾಸವೇ ಗತಿ ಎಂಬ ಸ್ಥಿತಿಯಲ್ಲಿರುವವರು ಎಂಬುದು ಗ್ರಹಿಕೆಗೆ ಬರುವುದಾಗಿದೆ; one who belives in one's own earning strong hands.

ಕೈಮಿಲಾಯಿಸು kaimilāyisu :

- ರಾಜಿಯಾಗು; ಗೆಳೆತನ ಮಾಡು; to compromise; to make friendship;
- ಪರಸ್ಪರ ದ್ವೇಷ, ಹಗೆತನವನ್ನು ಮರೆತು ಒಂದಾಗುವುದರ ದ್ಯೋತಕ; to envy eachother;
- ಕುಸ್ತಿಗೆ ಮುನ್ನ ಮಲ್ಲರಿಬ್ಬರು ನೀಡುವ ಹಸ್ತ ಲಾಘವ; ಕುಸ್ತಿ ಮಾಡಲು ತೊಡಗುವುದು.

ಕೈಮೀರು kaimīru :

- ರೋಗ ಉಲ್ಬಣಿಸಿರುವುದು; ಗುಣ ಪಡಿಸಲು ಆಗದ ಸ್ಥಿತಿ ತಲುಪಿರುವುದು; ಪ್ರಯತ್ನ ಮುಗಿದಿರುವುದು; to gout of hand; to get beyond control; to become impossible to restrain;
- ಬೆಳೆದ ಮಕ್ಕಳು ಹಿರಿಯರ ಹತೋಟಿಗೆ ಒಳಗಾಗದೆ ಮುಂದುವರಿದ ಪರಿಸ್ಥಿತಿ; uncontrolled grown-ups from their elders;
- ಉದ್ದೇಶಿತ ಕಾರ್ಯ ಕೈಗೂಡದಂತಾಗಿ ಅಸಹಾಯಕ ಸ್ಥಿತಿ ತಲುಪಿರುವುದು;
- ವಿವಾದ, ಜಗಳ ಇತ್ಯಾದಿ ಬಗೆ ಹರಿಯದೆ ಮುಂದುವರಿದು ಬಿಕ್ಕಟ್ಟು ಸೃಷ್ಟಿಯಾಗಿರುವುದು; *ಪ್ರ: 'ನಮ್ಮಿಂದ ಏನೂ ಆಗೋದಿಲ್ಲ; ಪರಿಸ್ಥಿತಿ ಕೈಮೀರಿ ಹೋಗಿದೆ';* unsoluable, uncompromised cases, quarrels;
- ಕಯ್+ಮೀರು>ಕೈಮೀರು; ಕ್+ಅಇ>ಕೈ.

ಕೈಮುಚ್ಚಿ ಅಳೆ kaimucci aḷe :

- ಧಾನ್ಯ ಅಳೆಯುವಾಗ ಅನುಸರಿಸುವ ವಿಧಾನ; A method of measuring corn or grain;
- ಪಾವು, ಸೇರುಗಳ ತುಂಬ ಕಾಳು ತುಂಬಿ, ಗೋಪುರಾಕಾರವಾಗಿ ಕೂರಿಸಿದ ಕಾಳನ್ನು ಕೆಳಕ್ಕೆ ಬೀಳದಂತೆ ಎರಡೂ ಕೈಗಳಿಂದ ಮುಚ್ಚಿ ಅಳೆಯುವುದು.

ಕೈಮುರಿ kaimuri :

- ಗಂಡಸರು ಕೈಗೆ ಧರಿಸುವ ಬೆಳ್ಳಿಯ ಗಟ್ಟಿಯಾದ ಬಳೆ(ಮಂಡ್ಯ.ಜಿ.); A strong silver bracelet or wristlet worn by men;
- *ಪ್ರ: 'ಗಂಡನ ಕೈಮುರಿ ಕೆಚ್ಚಾಕಿಸಿ ಬೆಳ್ಳಿ ಬಟ್ಟಲು ಮಾಡಿಸಿದೆ';*
- 'ಕೋಪದಿಂದ ಜಗಳವಾಡುತ್ತಾ ಕೈಯನ್ನು ತಿರುಚಿ ಕೈ ಮೂಳೆ ಮುರಿಯುವುದ';
- *ಪ್ರ: 'ಇಬ್ಬರೂ ಜಗಳವಾಡಿ ಕೈಮುರಿದುಕೊಂಡು ಬಂದವ್ರೆ';*
- ಕೈಯನ್ನು ತುಂಡು ಮಾಡು; ಕೈ ತುಂಡಾಗು (ಕ.ಜಾ.ಕೋ.); to cut one's hand into pieces or defragmented;

- ಎದುರಾಳಿಯ ಕೈಬೆರಳುಗಳ ನಡುವೆ ಕೈಬೆರಳು ತೂರಿಸಿ ಅವನ ಅಂಗೈ ಮೇಲೆತ್ತಿ ಮುರಿಯುವುದು;
- ಹಮ್ಮಿಕೊಂಡ ಕೆಲಸಕ್ಕೆ ತಡೆಯುಂಟಾಗು; ಕೆಲಸ ಕೆಡು; ಕೈಗೊಂಡ ಕಲಸ ನಿಂತು ಹೋಗು(ಬ.ಜಿ.);
- ಕಬ್ಬು ಬೇಸಾಯದ ಒಂದು ಕ್ರಮ; ಕಬ್ಬು ಬಿತ್ತನೆ ಮಾಡಿದ ಎರಡರಿಂದ ಮೂರು ತಿಂಗಳು ಬೆಳವಣಿಗೆಯಾದ ಅವಧಿಯಲ್ಲಿ ಕಬ್ಬಿನ ಪೈರಿನ ಬುಡಕ್ಕೆ ಗೊಬ್ಬರ ಹಾಕಿ, ಪಟದ ಮಧ್ಯದ ಮಣ್ಣನ್ನು ಗುದ್ದಲಿಯಿಂದ ತೆಗೆದು ಪೈರಿನ ಬುಡಕ್ಕೆ ಕಟ್ಟುವುದು; ಇದನ್ನು ಕೈಮುರಿ ಕಟ್ಟುವುದು ಎನ್ನುತ್ತಾರೆ; ಇದರಿಂದ ಬುಡದಲ್ಲಿ ಹೊಸದಾಗಿ ಮತ್ತಷ್ಟು ಪೈರು ಕವಲೊಡೆದು ಸೊಂಪಾಗಿ ಎತ್ತರಕ್ಕೆ ಬೆಳೆದು ಕಬ್ಬಿನ ಗಿಣ್ಣಿಕ್ಕಿದಾಗ (ಬಿತ್ತನೆ ಮಾಡಿದ ಐದನೆಯ ತಿಂಗಳಲ್ಲಿ) ದೊಡ್ಡ ಮುರಿ(ಕಬ್ಬಿಣದ ಕೂಪರ್‌ಗೆ ಎತ್ತುಗಳನ್ನು ಕಟ್ಟಿ ಬುಡಕ್ಕೆ ಮಣ್ಣು ತಳ್ಳಿಸುವುದು) ಮಾಡಲಾಗುವುದು; a system of sugarcane cropping or farming.

ಕೈಮುರಿದಂತಾಗು kaimuridantāgu :

- ಶಕ್ತಿ, ಸಾಮರ್ಥ್ಯ ಕಡಿಮೆಯಾಗು; Disadvantages in one's life; to become weak;
- ಮನುಷ್ಯನ ಬದುಕಿನಲ್ಲಿ ಚಟುವಟಿಕೆಯಲ್ಲಿ ಅನನುಕೂಲತೆ ಆಗುವುದು; ಉದಾ: ಬಾಳ ಸಂಗಾತಿ ಕಳೆದುಕೊಂಡಾಗ ಗಂಡನಿಗೊ, ಹೆಂಡತಿಗೊ ಆಗುವ ತೊಂದರೆ;
- ಸಹಾಯಕನಾಗಿದ್ದ ವ್ಯಕ್ತಿ ದೂರ ಸರಿದಾಗ ಆಗುವ ಸ್ಥಿತಿ; ನುಡಿಗಟ್ಟಾಗಿ ಬಳಕೆ.

ಕೈಮುಳುಗಿಸುವ ಶಾಸ್ತ್ರ kaimuḷugisuva śāstra :

- ಮದುವೆಯ ಒಂದು ಆಚರಣೆ; it is a ritual of wedding;
- ರಾಜ ಕ್ಷತ್ರಿಯ ಸಮುದಾಯದ ಮದುವೆ ಸಂದರ್ಭದ ಆಚರಣೆ; ಅಕ್ಕ, ಭಾವನೊಡನೆ ಮೈದುನನೂ ಕುಳಿತುಕೊಳ್ಳವುದು; ಮಡಿಕೆಗೆ ನೀರು ತುಂಬಿ ಅದರಲ್ಲಿ ಎಲೆ, ಅಡಿಕೆ, ಬಾಳೆಹಣ್ಣು, ಚಿನ್ನದ ಉಂಗುರವನ್ನು ಹಾಕುವುದು; ಭಾವ, ಮೈದುನ ಇಬ್ಬರೂ ಮಡಿಕೆಯಲ್ಲಿ ಕೈಮುಳುಗಿಸಿ ಉಂಗುರ ತೆಗೆಯುವ ಶಾಸ್ತ್ರ.

ಕೈಮೆಚ್ಲು kaimeclu :

- ಆಕಳು/ಎಮ್ಮೆ ಹಾಲು ಹಿಂಡಲು ಸಹಕರಿಸುವುದು; a milking cow which co-operated a person to milk happily;
- ಹಾಲು ಹಿಂಡುವ ಆಕಳು/ಎಮ್ಮೆ ನಂಬುಗೆಯ ನಿರ್ದಿಷ್ಟ ವ್ಯಕ್ತಿಗೆ ಮಾತ್ರ ಹಾಲು ಹಿಂಡಲು ಸಹಕರಿಸಿದಾಗ ಅದನ್ನು 'ಕೈಮೆಚ್ಲು' ಎನ್ನುವುದು;
- ಹೊಸಬರು ಹಾಲು ಹಿಂಡಲು ಹೋದರೆ ಅವು ನಿರಾಕರಿಸುವುದೇ ಹೆಚ್ಚು; ಕೆಲವೊಮ್ಮೆ ಹೆಂಗಸರಿಗೆ ಮಾತ್ರ ಒಗ್ಗಿದರೆ ಬೇರೆಯವರನ್ನು ಸೇರಿಸುವುದಿಲ್ಲ.

ಕೈಮೆರೆ kaimere :

- ತುದಿಯಲ್ಲಿ ಬಾಗಿದ ಕೊಕ್ಕೆಯಿರುವ ಬಿದುರಿನ ಗಳು; a bamboo cudgel having a hook and is bent at its tip part;
- ಕಣದಲ್ಲಿ ಬತ್ತದ ಹುಲ್ಲು ಕೆದಕಲು, ರಾಗಿ ತೆನೆಯನ್ನು ಕೆದಕುತ್ತಾ ಅಡಿ ಮೇಲು ಮಾಡಿ ಒಣಗಿಸಲು ಬಳಸುವ ಬಿದಿರಿನ ಸಾಧನ, ಸುಮಾರು ಐದು ಅಡಿ ಉದ್ದವಿದ್ದು ತುದಿಯಲ್ಲಿ ಸ್ವಲ್ಪ ಬಾಗಿದ ಕೊಕ್ಕೆಯಿರುವ ಬಿದುರಿನ ಗಳುವಾಗಿದೆ; *ಪ್ರ: 'ಮೆರೆಯಲ್ಲಿ ರಾಗಿತೆನೆ ಕೆದಕು'.*

ಕೈಮೇಲೆ ಕೈಹಾಕು kaimēle kaihāku :

- ವಚನ ಕೊಡುವುದು, ಭರವಸೆ ನೀಡುವುದು, ಭಾಷೆ ಕೊಡುವುದು; Assurance; to promise, to assure;
- ನುಡಿದಂತೆ, ಒಪ್ಪಿಕೊಂಡಂತೆ ನಡೆಯುವುದಾಗಿ ಮಾತುಕೊಡುವುದು; ಇಟ್ಟ ನಂಬಿಕೆಗೆ ಪರಸ್ಪರರು ವಂಚನೆ ಮಾಡದೆ ನಡೆದುಕೊಳ್ಳುವುದರ ಬಗೆಗೆ ಖಾತ್ರಿ ಮೂಡಿಸುವುದಾಗಿದೆ; ಪ್ರಮಾಣ ಮಾಡುವುದು; to assure somebody about one's proper behavior.

ಕೈಯಟ್ಲು kaiyaṭlu :

- ಮರದ ಕೈ ಬಟ್ಟಲು; wooden hand cup;
- ಒಂದು ಬದಿಯಲ್ಲಿ ಹಿಡಿ ಇರುವ ಮರದ ತಟ್ಟೆ, ಬಟ್ಟಲು(ಚಿಕ್ಕ.ಜಿ.);
- —***ಕೈಯಾಂಟ್ಲು*** : ಮರದಿಂದ ಮಾಡಿದ ತಟ್ಟೆಯಂತಹ ಸಾಧನ; a wooden plate;
- ಇದಕ್ಕೆ ಒಂದು ಅಥವಾ ಎರಡು ಹಿಡಿಕೆಗಳಿರುತ್ತವೆ; ***ವ್ಯರೂ:*** ಮರಬಟ್ಲು(ಮೈ.ಜಿ.).

ಕೈಯಾಗ ಕೋಲ ಬಂದೈತಿ kaiyāga kōla banaiti :

- ಮುಪ್ಪು ಬಂದಿರುವುದು; to become old; the stage of walking with walking stick;
- ಮುಪ್ಪಿನಲ್ಲಿ ಮೊದಲಿನಂತೆ ನಡೆದಾಡುವುದು ಸಾಧ್ಯವಾಗುವುದಿಲ್ಲ; ಆಸರೆಗಾಗಿ ಊರೆಗೋಲು

ಹಿಡಿದು ಓಡಾಡಬೇಕಾಗುತ್ತದೆ; ಆದುದರಿಂದ ಮುಪ್ಪು ಬಂದಿರುವುದನ್ನು ಸೂಚಿಸುವಾಗ ಕೈಗೆ ಕೋಲು ಬಂದಿದೆ ಎಂದು ಹೇಳುವುದುಂಟು;
- ವೃದ್ಧರನ್ನು ಕುರಿತು 'ಮೂರು ಕಾಲಿನಲ್ಲಿ ನಡೆಯುವ ಪ್ರಾಣಿ' ಎಂದು ಹೇಳುವುದುಂಟು.

ಕೈಯಾಗ ಜೀವ kaiyāga jīva :
- ಅಪಾಯಸ್ಥಿತಿ, ಗಾಬರಿ, ಪ್ರಾಣ ಭಯ; the condition of horror, danger;
- ಮನುಷ್ಯನಿಗೆ ಉಂಟಾಗುವ ತುಂಬಾ ಅಪಾಯದ ಸ್ಥಿತಿಯ ಬಗ್ಗೆ; ಭಯದಿಂದ ಗಾಬರಿಗೊಳ್ಳುವುದು; ನುಡಿಗಟ್ಟಾಗಿ ಬಳಕೆ; ಪ್ರತಿಮಾತ್ಮಕ ರೂಪ;
- —*ಕೈಯಾಗ ಜೀವ ಹಿಡಕೋ* : ಭಯಾನಕ ವಾತಾವರಣ; ಉತ್ಕಟತೆ; ಅನ್ಯೋಕ್ತಿ; Horrific environment; *ಪ್ರ: 'ಕಾಡಿನಲ್ಲಿ ಬರುವಾಗ ಕೈಯಾಗ ಜೀವ ಹಿಡಕೊಂಡು ಬಂದೆ'.*

ಕೈಯಾಲೆ/ಕೈಯ್ಯಾಲೆ kaiyāle/kaiyyāle :
- ಕೈಸಾಲೆ; ಪಡಸಾಲೆ; ಮುಖಮಂಟಪ; Portico; Aisle;
- ದೇವಸ್ಥಾನಗಳಲ್ಲಿರುವ ಮುಂಭಾಗದ ಮಂಟಪ; ಪ್ರವೇಶ ಮಂಟಪ(ಗೌ.ಕ.;ಕೊಡ.ಜಿ.); a front part of a house;
- 'ಕಯ್ಸಾಲೆ' ಎಂಬುದೆ 'ಕೈಯಾಲೆ/ಕೈಯ್ಯಾಲೆ' ಎಂದಾಗಿ ಆಡು ಮಾತಿನಲ್ಲಿ ಬಂದಿರುವ ಸಾಧ್ಯತೆ ಇದೆ.

ಕೈಯಾಸರೆ kaiyāsare :
- ಅಶಕ್ತರಾದವರನ್ನು, ವೃದ್ಧರಾದವರನ್ನು ಕೈಹಿಡಿದು ನಡೆದಾಡಿಸುವುದು; ಆಧಾರವಾಗಿರುವುದು; ಅಸಹಾಯಕರಿಗೆ ನೆರವಾಗುವುದು; to help and cross the needy and weak person;
- ದುಡಿಮೆ ಮಾಡಿ ಕುಟುಂಬದವರನ್ನು, ಇತರ ಅವಲಂಬಿತರನ್ನು ನೋಡಿಕೊಳ್ಳುವಿಕೆ.

ಕೈಯಾಳು kaiyāḷu :
- ಕೆಲಸದವನು; ಕೆಲಸದ ಆಳು; ಸಹಾಯಕ(ಚಾ.ಜಿ./ದ.ಕ.); worker, labour, chief labour;
- ಮುಖ್ಯ ಕೆಲಸಗಾರನ ಸಹಾಯಕ ಆಳು;
- ಗಾರೆ ಕೆಲಸ ಮಾಡುವ ಸಂದರ್ಭದಲ್ಲಿ ಈ ಪದ ಹೆಚ್ಚು ಬಳಕೆ; ಗಾರೆ ಕೆಲಸಗಾರನಿಗೆ ಗಾರೆ ಕಲಸಿ ಕೊಡುವವನೇ ಕೈಯಾಳು; *ಪ್ರ: 'ಜೊತೇಲಿ ಕೈಯಾಳು ಇದ್ರೆ ಕೆಲ್ಸ ಬೇಗ ಆಗುತ್ತದೆ'.*

ಕೈಯಿಂಡಲೆ ಕಾಯಿ kaiyinḍale kāyi :
- ಇದು ಔಷಧಿಯ ಗುಣವುಳ್ಳ ಕಾಯಿ; a kind of nutshell used as medicine to cure throny wounds;
- ಕೈಯಿಂಡಲೆ ಗಿಡ ಕಾಡಿನಲ್ಲಿ ಬೆಳೆಯುತ್ತದೆ; ಇದರ ಕಾಯಿಯನ್ನು ಕಾಲಿಗೆ ಚುಚ್ಚಿದ ಮುಳ್ಳು ತೆಗೆಯಲು ಬಳಸುತ್ತಾರೆ;
- ಈ ಕಾಯಿಯನ್ನು ಬಿಸಿಯುಳ್ಳ ಬೆಂಬೂದಿಯಲ್ಲಿ ಸುಟ್ಟು, ಮುಳ್ಳು ಚುಚ್ಚಿರುವ ಜಾಗಕ್ಕೆ ಕಟ್ಟಿದರೆ ಮುಳ್ಳು ಹೊರ ಬರುವುದೆಂದು ಹೇಳುತ್ತಾರೆ.

ಕೈಯಿಕ್ದ/ಕೈಯಿಟ್ಟ kaiyikda/kaiyiṭṭa :
- ಯಾವುದೇ ವ್ಯವಹಾರದಲ್ಲಿ ಅನಗತ್ಯವಾಗಿ ಮಧ್ಯಪ್ರವೇಶ ಮಾಡುವುದು; to interfere unnecessarily to take part or intervene in an activity without invitation;
- ಕೈ+ಇಕ್ಕಿದ=ಕೈಯಿಕ್ಕಿದ>ಕೈಯಿಕ್ದ;
- ಕೆಲಸ ಕಾರ್ಯಗಳ ನಡುವೆ ಅನ್ಯರ ಪ್ರವೇಶದಿಂದ ತೊಂದರೆಯಾದಾಗ ಈ ಪದ ಬಳಕೆ; ಪ್ರ: 'ಅವನು ಕೈಯಿಕ್ದ, ಎಲ್ಲಾ ಹಾಳಾಯ್ತು';
- ಯಾವುದಾದರೂ ಕೆಲಸವನ್ನು ಮಾಡಲು ಉದ್ಯುಕ್ತನಾಗುವುದು; ಕೆಲಸ ಪ್ರಾರಂಭಿಸುವುದು;
- ಒಪ್ಪಿಕೊಂಡ ಕೆಲಸಕ್ಕೆ ಕೈಹಾಕುವುದು; *ಪ್ರ: 'ಕಟ್ಟಡ ಮಾಡಲು ಇತ್ತೀಚೆಗೆ ಕೈಯಿಕ್ದ; ಮುಗಿಯೋಕೆ ಇನ್ನೂ ಆರು ತಿಂಗ್ಳುಬೇಕು'.*

ಕೈಯುಳಿ kaiyuḷi :
- ಬಡಗಿ ಬಳಸುವ ಚಿಕ್ಕ ಉಳಿ; hand chisel used in carpentry by a carpenter;
- ಬಾಗಿಲು, ಕಿಟಕಿ ಇತ್ಯಾದಿ ಮರದಿಂದ ಸಾಮಾನುಗಳನ್ನು ಮಾಡುವ ಸಂದರ್ಭದಲ್ಲಿ ಅವುಗಳಿಗೆ ಎಜ್ಜ(hole) ಮಾಡಲು ಬಳಸುವ ಸಣ್ಣ ಉಳಿ ಇದಾಗಿದೆ; *ಪ್ರ: 'ಕೈಯುಳಿಯಿಂದ ಮರದ ಪಟ್ಟಿಗಳಿಗೆ ಎಜ್ಜ ತೋಡು'.*

ಕೈಯೆಣ್ಣೆ kaiyeṇṇe :
- ಕೈಯಣ್ಣೆ, ಹರಳೆಣ್ಣೆ(ಚಾ.ಜಿ./ಮಂಡ್ಯ.ಜಿ./ಮೈ.ಜಿ.); castor oil;
- ಕೈ+ಎಣ್ಣೆ=ಕೈಯೆಣ್ಣೆ>ಕೈಯಣ್ಣೆ;
- 'ಕೈಯೆಣ್ಣೆ' ಎಂದು ಕರೆಯುವುದಾದರೂ ಇದರ ಹೆಸರು 'ಹರಳೆಣ್ಣೆ' ಎಂಬುದೇ ಆಗಿದೆ; the oil which is manufactured by castor seeds that's why the oil is named after castor;

- ಹರಳು ಗಿಡದಿಂದ ಬಲಿತ ಹರಳು ಗೊನೆಗಳನ್ನು ಕಿತ್ತು ತಂದು ಒಣಗಿಸಿ ಉಜ್ಜಿ ಹರಳು ಬೀಜಗಳನ್ನು ಬೇರ್ಪಡಿಸುತ್ತಾರೆ; ಈ ಹರಳನ್ನು ಒನಕೆಯಿಂದ ಕುಟ್ಟಿ, ಕಡಾಯಿಯಲ್ಲಿ ನೀರಿನೊಡನೆ ಹಾಕಿ ಕುದಿಸಿದಾಗ ನೀರಿನ ಮೇಲ್ಪದರದಲ್ಲಿ ಎಣ್ಣೆ ಬರುತ್ತದೆ; ಇದನ್ನು ಬಸಿದು ಬೇರೊಂದು ಪಾತ್ರೆಯಲ್ಲಿ ಸಂಗ್ರಹಿಸಿಕೊಳ್ಳಲಾಗುತ್ತದೆ; ಈ ಎಣ್ಣೆಯಲ್ಲಿ ನೀರಿನ ಅಂಶ ಬೆರೆತಿರುವುದರಿಂದ ಹದವಾಗಿ ಕಾಯಿಸಿ ಶುದ್ಧವಾದ ಹರಳೆಣ್ಣೆಯನ್ನು ಚಿಕ್ಕ ಗಡಿಗೆಗಳಲ್ಲಿ ಅಥವಾ ಬಾಟಲಿಗಳಲ್ಲಿ ತುಂಬಿಟ್ಟುಕೊಂಡು ಬಳಸುತ್ತಾರೆ;
- ಹರಳೆಣ್ಣೆಯನ್ನು ತಲೆಗೆ ಹಚ್ಚುವುದರಿಂದ ಕೂದಲು ಸೊಂಪಾಗಿ ಬೆಳೆಯುವುದರ ಜೊತೆಗೆ ನೆತ್ತಿ ತಂಪಾಗಿರುತ್ತದೆ; castor oil is used to smeare head that helps to cool the head and make the hair grow;
- ಕಣ್ಣು ಉರಿ ಇದ್ದಾಗ ಕೈಯೆಣ್ಣೆಯನ್ನು ನಸು ಬೆಚ್ಚಗೆ ಮಾಡಿ, ಅಂಗೈಯಲ್ಲಿ ಹಾಕಿಕೊಂಡು ಚೆನ್ನಾಗಿ ಮಸೆದು ಕಣ್ಣಿನ ರೆಪ್ಪೆಯ ಮೇಲೆ ಹಚ್ಚುವುದರಿಂದ ಉರಿ ಶಮನವಾಗುತ್ತದೆ; it cures eye pain;
- ಮಕ್ಕಳಿಗೆ ಮೂತ್ರ ಕಟ್ಟಿದ್ದರೆ ಕೈಯೆಣ್ಣೆಯನ್ನು ವೀಳ್ಯದೆಲೆಗೆ ಲೇಪಿಸಿ, ಕೈಯೆಣ್ಣೆ ದೀಪದ ಕುಡಿಯಿಂದ ನಸು ಬಿಸಿ ಮಾಡಿ ಒಕ್ಕಳು ಕೆಳಗೆ ಅಂಟಿಸಿದರೆ ಸ್ವಲ್ಪ ಹೊತ್ತಿನ ನಂತರ ಮೂತ್ರ ವಿಸರ್ಜನೆಯಾಗಿ ತೊಂದರೆ ನಿವಾರಣೆಯಾಗುತ್ತದೆ;
- ಮಲಬದ್ಧತೆಯಿಂದಾಗಿ ಹೊಟ್ಟೆ ಕಟ್ಟಿದ್ದರೆ ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಬಿಸಿ ಕಾಫಿಗೆ ಅರ್ಧ ಚಮಚ ಕೈಯೆಣ್ಣೆ ಸೇರಿಸಿ ಕುಡಿದರೆ ವಿರೇಚಕವಾಗಿ ವರ್ತಿಸಿ ಭೇದಿಯಾಗುವಂತೆ ಮಾಡುತ್ತದೆ; ಹೊಟ್ಟೆಯನ್ನು ಹಗುರಗೊಳಿಸುತ್ತದೆ;
- ಸೊಡರಿನಲ್ಲಿ ಹಾಕಿ ದೀಪ ಹಚ್ಚಲು ಬಳಸುತ್ತಾರೆ; ಇದನ್ನು ಕೈಯೆಣ್ಣೆ ದೀಪ ಎಂದೇ ಕರೆಯುತ್ತಾರೆ; it is used to kindle the lamp;
- ಗ್ರಾಮೀಣರು ಯುಗಾದಿ ಹಬ್ಬದಲ್ಲಿ ತಲೆ, ಮೈಗೆ ಎಣ್ಣೆ ತಿಕ್ಕಿ ಸ್ನಾನ ಮಾಡುವುದುಂಟು.

ಕೈಯೇಳಿ kaiyēḷi :

- ಮದುವೆ ನಿಶ್ಚಯವಾದ ಸಂದರ್ಭದಲ್ಲಿನ ಒಂದು ಆಚರಣೆ; a ritual of confirming marriage;
- ಕೆಲವು ಸಮುದಾಯಗಳಲ್ಲಿ ಮದುವೆ ಗಂಡಿನ ಕಡೆಯವರು, ಮುಖ್ಯಸ್ಥರು ಮದುವೆಯಾಗುವ ಹೆಣ್ಣಿನ ಮನೆಗೆ ಬಂದು ಮದುವೆ ಘೋಷಣೆ ಮಾಡುವ ಒಂದು ಪದ್ಧತಿ;
- ***—ಕೈಯೇಳಿ ಸೀರೆ*** : ಮದುಮಗಳಿಗೆ ಮದುವೆ ವೇಳೆಯಲ್ಲಿ ಧರಿಸಿಕೊಳ್ಳಲು ಗಂಡಿನ ಕಡೆಯವರು ಕೊಡುವ ಸೀರೆ. The saree given to bride from bridegroom family.

ಕೈಯೊಳಗಿನವರು kaiyoḷaginavaru :

- ಒಬ್ಬರು ಹೇಳಿದಂತೆ ಚಾಚೂ ತಪ್ಪದೆ ನಡೆದುಕೊಳ್ಳುವವರು; deciple's followers or obedient of a person;
- ಇವರು ತಮ್ಮ ಸ್ವಂತ ಅಭಿಪ್ರಾಯ ಮತ್ತು ಭಾವನೆಗಳನ್ನೂ ಕೂಡ ಪರಿಗಣಿಸುವುದಿಲ್ಲ; ಒಂದು ರೀತಿಯಲ್ಲಿ ಪುಂಗಿನಾದಕ್ಕೆ ಹೆಡೆದೂಗುವಂತೆ ಅವರ ಮಾತಿಗೆ ತಲೆಯಾಡಿಸಿ ಬದ್ಧರಾಗಿ ಬಿಡುವವರು; ನಾಯಕನ ಕೈಯೊಳಗಿನ ಸೂತ್ರದ ಗೊಂಬೆಯಂತೆ ವರ್ತಿಸುವರು; ಪ್ರ: 'ಅವರೆಲ್ಲ ನನ್ನ ಕೈಯೊಳಗಿನವರು; ಅವರ ಮತ ನಮಗೇ ಕಟ್ಟಿಟ್ಟ ಬುತ್ತಿ';
- ನುಡಿಗಟ್ಟಾಗಿ ಬಳಕೆಯಾಗುತ್ತದೆ; ನಮ್ಮ ಕೈಯೊಳಗಿನವರು ಎನ್ನುವಾಗ ನಮ್ಮ ವ್ಯವಸ್ಥೆಯೊಳಗೆ ಇರುವವರು, ಮಾತು ಮೀರದವರು, ನಮ್ಮ ಹತ್ತಿರದ ಬಂಧುಗಳು, ನಮ್ಮ ರಹಸ್ಯ ಕಾಪಾಡಿ ಗೌರವ ಉಳಿಸುವವರು ಎಂಬಿತ್ಯಾದಿ ಅರ್ಥಗಳಡಿಯಲ್ಲಿಯೂ ಬಳಕೆಯಾಗುವುದುಂಟು.

ಕೈರಂಕ/ಕೈರೊಂಕ kairanka/kaironka :

- ತೆಂಗಿನ ಕರಟದಿಂದ ಅಥವಾ ಲೋಹದಿಂದ ಮಾಡಿದ, ಹಿಡಿಯಿರುವ ಚಿಕ್ಕ ಪಾತ್ರೆ; a small vessel with handle manufactured by coconut shell or any metal;
- ಕೈರೊಂಕ; ನೀರು ತೆಗೆಯಲು ಇರುವ ತೆಂಗಿನ ಗರಟೆಯಿಂದ ಮಾಡಿದ ಸಾಧನ(ದ.ಕ.);
- ಬಚ್ಚಲು ಮನೆಯಲ್ಲಿ(ಸ್ನಾನದ ಮನೆ) ಮತ್ತು ಹೊರಗೆ ಇಟ್ಟಿರುವ ದೊಡ್ಡ ಪಾತ್ರೆಯಿಂದ ನೀರು ತೆಗೆಯಲು ಕರಟಕ್ಕೆ ಹಿಡಿಹಾಕಿ ಇಲ್ಲವೆ ಹಿಡಿಯಿರುವ ಲೋಹದ ಚಿಕ್ಕ ಪಾತ್ರೆಯನ್ನು ಬಳಸಲಾಗುತ್ತದೆ. ಇದನ್ನೇ ಕೈರಂಕ/ಕೈರೊಂಕ ಎಂದು ಕರೆಯಲಾಗುತ್ತದೆ; ಈ ರೀತಿಯ ಬಳಕೆ ಹೆಚ್ಚಾಗಿ ದ.ಕ. ಭಾಗದಲ್ಲಿ ಕಂಡು ಬರುತ್ತದೆ.

ಕೈರಂಟಿ/ಕೈರಂಟೆ kairaṇṭi/kairaṇṭe :

- ಮನುಷ್ಯರೇ ಎಳೆಯಬಹುದಾದ ಕಟ್ಟಿಗೆಯ ಕಿರುರಂಟೆ(ಬ.ಜಿ.); a farming tool; it resembles plough; dragged by man;

- ಇದು ಕುಂಟೆಯಂತಹ ಉಳುವ ಸಾಧನ; ರಂಟೆ/ರೆಂಟೆ ದೊಡ್ಡದಾಗಿದ್ದಾಗ ಎತ್ತುಗಳನ್ನು ಹೂಡಿ ಎಳೆಸಲಾಗುತ್ತದೆ; ಚಿಕ್ಕ ಪಾತಿಗಳ ಮಣ್ಣು ಎಳೆಯ ಬೇಕಾದಾಗ, ಮಡಿಗಳನ್ನು ಮಾಡುವಾಗ ಚಿಕ್ಕದಾದ, ಕೈಯಲ್ಲೆ ಹಿಡಿದು ಎಳೆಯಬಹುದಾದ ಕೈರಂಟೆಗಳನ್ನು ಬಳಸಲಾಗುತ್ತದೆ; *ಪ್ರ: 'ಕೈರಂಟೆ ಎಳೆದು ಸಸಿಮಡಿಯ ಪಾತಿಯನ್ನು ಸಮಗೊಳಿಸು'.* A cultivated tool.

ಕೈರಂಪ kairampa :

- ಚಿಕ್ಕಗರಗಸ; A small saw;
- ಕೈ+ರಂಪ=ಕೈರಂಪ(ರಂಪ=ಗರಗಸ);
- ಗರಗಸಗಳಲ್ಲಿ ದೊಡ್ಡದು, ಚಿಕ್ಕದು ಎಂಬ ಎರಡು ಬಗೆ; there are two types of saws: one is big saw; the second one is small size saw;
- ದೊಡ್ಡ ಗರಗಸ ಎರಡೂ ತುದಿಯಲ್ಲಿ ಹಿಡಿಕೆ ಇದ್ದು ಇಬ್ಬರು ಹಿಡಿದುಕೊಂಡು ಕೊಯ್ಯುವರು; ಚಿಕ್ಕ ಗರಗಸ(ಕೈರಂಪ) ಒಂದೇ ಕೈಯಲ್ಲಿ ಒಬ್ಬ ವ್ಯಕ್ತಿಯೇ ಉಪಯೋಗಿಸುವಂತಹದು; ಬಡಗಿಯ ಸಾಧನಗಳಲ್ಲೊಂದು; *ಪ್ರ: 'ಮರ ತುಂಡು ಮಾಡಬೇಕು ಕೈರಂಪ ತೆಗೆದುಕೊಂಡು ಬಾ'*; the bigsize saw has two handles, of its two sides which are usefull to pull and push.

ಕೈರಂಪಣಿ kairampaṇi :

- ಸಾಧಾರಣ ಗಾತ್ರದ ಮೀನಿನ ಬಲೆ; A small sized fish net;
- ಸಾಂಪ್ರದಾಯಿಕ ಮೀನುಗಾರಿಕೆಯಲ್ಲಿ ಬಳಸುವ ಮಧ್ಯಮ ಗಾತ್ರದ ಬಲೆ.

ಕೈರಟ್ಟೆ kairaṭṭe :

- ಮನುಷ್ಯನ ಕೈತೋಳುಗಳು; ಬಾಹುಗಳು; the human shoulders;
- ದುಡಿಯುವುದಕ್ಕೆ ತೋಳ ರಟ್ಟೆಯಲ್ಲಿ ಬಲವಿರಬೇಕು ಎಂದು ಹೇಳುವುದುಂಟು; *ಪ್ರ: 'ರಟ್ಟೆಯಲ್ಲಿ ಬಲವಿರುವರೆಗೂ ದುಡಿದು ಸಾಕುತ್ತೇನೆ'; 'ಹೊಟ್ಟೆಯ ಸಿಟ್ಟು ರಟ್ಟೆಗಿಲ್ಲ'(ಗಾ.).*

ಕೈರಾಟೆ kairāṭe :

- ಕೈಯಿಂದ ನೂಲು ತೆಗೆಯುವ ಸಾಧನ; A tool used to spin yarn thread;
- ಕೈ+ರಾಟೆ=ಕೈರಾಟೆ; ಚಿಕ್ಕರಾಟೆ(ಚಕ್ರ)(ರಾಟೆ=ನೂಲುವ ಸಾಧನ); ಯಂತ್ರ ಕೈಗಾರಿಕೆಗೆ ಮೊದಲು ಇದ್ದ ಗುಡಿ ಕೈಗಾರಿಕೆ; hand spinner; handicrafts cottage industries; it was earlier than machine looms;
- ಕೈಯಿಂದ ರಾಟೆ ಬಳಸಿ ನೂಲು ತೆಗೆಯುವ ಕಾರ್ಯ; ಮಾನವ ಸಂಪನ್ಮೂಲದ ಪೂರ್ಣ ಬಳಕೆ; *ಪ್ರ: 'ಗಾಂಧೀಜೀ ಕೈರಾಟೆಯಿಂದ ನೂಲುತ್ತಿದ್ದರು'.*

ಕೈರೂಢಿ kairūḍhi :

- ಎಳೆಮಕ್ಕಳ ಸಾಕುವಿಕೆಯಲ್ಲಿ ಈ ಪದ ಬಳಕೆ; A method of looking after babies;
- ಕೈ+ರೂಢಿ(ರೂಢಿ=ಕ್ರಮ, ಅಭ್ಯಾಸ)
- ಎಳೆಯ ಮಕ್ಕಳನ್ನು ನಾವು ನೋಡಿಕೊಳ್ಳುವ ಕ್ರಮ; ಅತಿ ಪ್ರೀತಿಯಿಂದ ಯಾವಾಗಲೂ ಎತ್ತಿಕೊಂಡು ಮುದ್ದಾಡಿ ಅಭ್ಯಾಸ ಮಾಡಿದರೆ ಅವು ಅದನ್ನೇ ಬಯಸುವುದು; ಅವುಗಳನ್ನು ನೆಲದ ಮೇಲೆ ಬಿಟ್ಟು ತಮ್ಮ ಪಾಡಿಗೆ ಇರುವಂತೆ ಮಾಡಿದರೆ ಅವು ಹಾಗೇ ಬೆಳೆಯುತ್ತವೆ; a system or a method of looking after our infants or babies at homes;
- ಕೆಲವೊಮ್ಮೆ ಸಾಕುಪ್ರಾಣಿಗಳಿಗೆ ಕೈಯಿಂದ ತಿನಿಸು ಕೊಟ್ಟು ಅಭ್ಯಾಸ ಮಾಡುವುದಕ್ಕೂ ಪದ ಬಳಕೆ; sometimes this word is used to look after pet animals and their hand feeding;
- ಚಿಕ್ಕ ಮಗುವಿಗೆ ಯಾವಾಗಲೂ ಎತ್ತಿಕೊಳ್ಳುವ ಅಭ್ಯಾಸವಾಗುವುದು; ಕೈರಾಟಿ ಬೀಳು; *ಪ್ರ: 'ಮಗುವಿಗೆ ಕೈರೂಢಿ ಮಾಡಿ ಯಾರ ಹತ್ತಿರಕ್ಕೂ ಹೋಗುವುದಿಲ್ಲ'*;

ವ್ಯದೂ: ಕೈಪಾಟ, ಕೈರಾಟಿ ಬೀಳು.

ಕೈರೊಟ್ಟಿ kairoṭṭi :

- ಎರಡೂ ಅಂಗೈಗಳಲ್ಲಿ ಹದವಾಗಿ ಒತ್ತಿ ಮಾಡಿದ ರೊಟ್ಟಿ; A kind of pan cake madeup of millet powder or any corn powder by pressing in two palms;
- ಇದು ಮೃದುವಾಗಿ ಸ್ವಾದಿಷ್ಟವಾಗಿರುತ್ತದೆ;
- ರೊಟ್ಟಿ ಹಿಟ್ಟನ್ನು ಬಳಿಯದೆ ಮಾಡಿದ ರೊಟ್ಟಿ;
- ಬಡಿಯದೆ ಕೈಯಲ್ಲಿಯೇ ಮಾಡಿದ ದಪ್ಪರೊಟ್ಟಿ (ಬಿ.ಜಿ./ಬೆ.ಜಿ.);
- ಕೈರೊಟ್ಟಿಯನ್ನು ಕೆಂಡದ ಮೇಲೂ ಸುಡುವುದುಂಟು; ಅಕ್ಕಿಯ ಹಿಟ್ಟಿನಿಂದ ಮಾಡಿದ ರೊಟ್ಟಿ ಕೂಡ ರುಚಿಯಾಗಿರುತ್ತದೆ; *ಪ್ರ: 'ಎರಡು ಕೈರೊಟ್ಟಿ ತಿಂದರೆ ಸಾಕು, ಹೊಟ್ಟೆ ತುಂಬಿ ಹೋಗುತ್ತದೆ'.*

ಕೈಲ್/ಕೈಲು kail/kailu :

- ಕಯಿಲ್ ಎಂಬ ತುಳು ಮೂಲದಿಂದ ಬಂದಿದೆ; ಕಯಿಲ್(ತುಳು)>ಕೈಲ್>ಕೈಲು;

- ಬಾಳೆಯ ಮತ್ತು ತೆಂಗಿನ ಗೊನೆ; coconut or banana cluster or bunch;
- ಭೂತಾರಾಧನೆಯ ಉತ್ಸವ, ನೇಮಗಳಲ್ಲಿ ಪ್ರಾರಂಭಿಕ ಹಂತದಲ್ಲಿ ಗೊನೆ ಕಡಿಯುವ ಸಮಾರಂಭ ನಡೆಯುತ್ತದೆ; ಇದಕ್ಕೆ 'ಕಯಿಲ್ ಮೂರ್ತ/ಕೈಲ್ ಎಂದು ಕರೆಯುತ್ತಾರೆ(ಕೊಡ.ಜಿ./ಹಾ.ಜಿ./ದ.ಕ);
- ತೆಂಗಿನ ಕರಟದಿಂದ ಮಾಡಿದ ಸೌಟು; ಹಿಡಿಯುಳ್ಳ ಸೌಟು(ದ.ಕ.);
- ಕತ್ತಿ, ಕೊಡಲಿ, ಗುದ್ದಲಿ ಇತ್ಯಾದಿ ಕೃಷಿ ಉಪಕರಣಗಳ ಹಿಡಿ, ಹಿಡಿಕೆ(ದ.ಕ.);
- ***—ಕೈಲ್‌ಕಡೆ/ಕೈಲಕಡೆ*** : ಸೌಟಿನ ಹಿಡಿ; ಕರಟದಿಂದ ಮಾಡಿದ ಸೌಟಿಗೆ ಹಾಕಿದ ಹಿಡಿ. `Soutu' a wooden spoon madeup of coconut shell with handle.

ಕೈಲ್ ಪೋಳ್ದ್ kail pōḷd :
- ಬೇಸಾಯ ಮುಕ್ತಾಯದ ಹಬ್ಬ(ಕೊಡ.ಜಿ.); the end festival of agriculture;
- ಬೇಸಾಯ ಸಂಸ್ಕೃತಿಗೆ ಸಂಬಂಧಿಸಿದಂತೆ ಇರುವ ಆಚರಣೆಗಳಲ್ಲಿ ಇದು ಕೂಡ ಒಂದು; ಫಸಲು ಕಟಾವು ಮಾಡುವ ಸಂದರ್ಭದಲ್ಲಿ ಆಚರಿಸುವ ಹಬ್ಬ.

ಕೈಲ kaila :
- ಕಪಿಲ ವರ್ಣದ ಎತ್ತು(ದ.ಕ.); (ಕಪಿಲ=ನಸುಗೆಂಪು, ಕಂದು ಬಣ್ಣ); *ಪ್ರ: 'ಕೈಲ ಎತ್ತುಗಳನ್ನು ಗಾಡಿಗೆ ಕಟ್ಟು';* Ox of reddish brown;
- ಸೌಟಿನ ಹಿಡಿಕೆ; ಸಟ್ಟುಗದ ಹಿಡಿ(ಕ.ನಿ.). Spoon handle of `Sattuga'.

ಕೈಲರೀದೋನು kailarīdōnu :
- ಕೈಯಲ್ಲಿ+ಅರಿಯದವನು=ಕೈಲರಿಯದವನು> ಕೈಲರೀದೋನು; A man of helplessness;
- ಏನು ಮಾಡಲೂ ಆಗದಿರುವವನು; ಕೈಲಾಗದವನು; ದುರ್ಬಲನಾದವನು; ಹೇಡಿ; coward who has no bravery to face problem;
- ಹೇಳಿದ ಕೆಲಸವನ್ನಾಗಲೀ, ಒಪ್ಪಿಕೊಂಡ ಕೆಲಸವನ್ನಾಗಲೀ ಮಾಡುವ ಅರ್ಹತೆ ಇಲ್ಲದಿರುವವನು; *ಪ್ರ: 'ಕೈಲರೀದೋನು ಮೈ ಪರಚಿಕೊಂಡ'(ಗಾ.).*

ಕೈಲಾ kailā :
- ಮಜ್ಜಿಗೆ ಕಡೆಯಲು ಕಟ್ಟಿಗೆಯಿಂದ ತಯಾರಿಸಿದ ಒಂದು ಸಾಧನ(ಉ.ಕ.ಜಿ.); A churn; a tool used to churn curds;
- ಕಡೆಗೋಲು, ಮಂತು(ಮೈ.ಜಿ.).

ಕೈಲಾಗ kailāga :
- ಪಾರಿವಾಳದ ಹಾರಾಟದ ವೈಖರಿ; A flying style of pigeon;
- ಪಾರಿವಾಳಗಳು ಹಾರಿ ಹೋಗುವಾಗ ಲಾಗ ಹಾಕುತ್ತಾ ಪಲ್ಟಿ ಹೊಡೆಯುತ್ತಾ ಹಾರುವ ವಿಧಾನ;
- ಅತಿಯಾದ ವಿಧೇಯತೆಯಿಂದ ನಡೆದುಕೊಳ್ಳುವ ರೀತಿ;
- ಜೀಹುಕುಂ ಎಂಬ ನಡವಳಿಕೆಯ ಸ್ವಭಾವ; *ಪ್ರ: 'ಕೈಯಲ್ಲಿ ಬಲ ಇಲ್ಲದಾಗ ಕೈಲಾಗ ತೋರತಾನ'.*

ಕೈಲಾಗು kailāgu :
- ೧.ಸಾಧ್ಯವಾಗು; ೨.ನಿರ್ದಿಷ್ಟ ಕೆಲಸವನ್ನು ನಿರ್ವಹಿಸಲು ಸಮರ್ಥನಾಗಿರುವಿಕೆ(ಚಿ.ಪ.ಕೋ.); to become possible; capability; to lead a particular work;
- ಏನನ್ನಾದರೂ ಮಾಡಲು ಕನಿಷ್ಠವಾದ ಅಥವಾ ಗರಿಷ್ಠವಾದ ಸಾಮರ್ಥ್ಯವನ್ನು ಒಳಗೊಂಡಿರುವ ಸ್ಥಿತಿ; ಪ್ರ: 'ತಮ್ಮ ಗ್ರಾಮದ ಏಳಿಗೆಗೆ ತಮ್ಮ ಕೈಲಾಗುವ ಸಹಾಯ ಮಾಡುವುದಾಗಿ ಗ್ರಾಮಸ್ಥರು ಭರವಸೆ ನೀಡಿದರು;
- ***—ಕೈಲಾದಷ್ಟು*** : ತಮಗೆ ಶಕ್ತಿ ಇದ್ದಷ್ಟು; bearable power or capacity of a person;
- ಧನಸಹಾಯ ಅಥವಾ ಇತರೆ ತಮ್ಮಿಂದಾಗುವ ಗರಿಷ್ಠ ಮಟ್ಟದ ಸಹಾಯವನ್ನು ನೀಡುವಾಗ ಹೇಳುವ ಮಾತು.

ಕೈಲಾ ಪೂಜೆ kailā pūje :

ದೈವದ ಮನೆ ಮತ್ತು ಗರಡಿಯಲ್ಲಿ ನಡೆಯುವ ಒಂದು ವಿಧದ ಆಚರಣೆ; ಪೂಜೆಯ ವಿಧಿ; A ritual at `Garadi Mane' place where wrestling is being practiced by men only.

ಕೈಲಾಸ kailāsa :
- ಕೈಳಾಸ; ಹಿಮಾಲಯದ ಪರ್ವತ ಶ್ರೇಣಿಯಲ್ಲಿರುವ ಒಂದು ಬೆಟ್ಟ; ಬೆಳ್ಳಿಬೆಟ್ಟ/ಬೆಳ್ಳಿವಟ್ಟ; ಶಿವನ ಆವಾಸ; ಗೌರಿಶಂಕರ ಎಂಬ ಹೆಸರೂ ಇದೆ; ಇದು ಹಿಮಗಡ್ಡೆಗಳಿಂದ ಕೂಡಿದ ಪರ್ವತ; ಹೊಂಬಿಸಿಲಿಗೆ ಚಿನ್ನದ ಬಣ್ಣದಿಂದ ಹೊಳೆಯುತ್ತದೆ; ಆದ್ದರಿಂದ ಇದಕ್ಕೆ ಚಿನ್ನದ ಬೆಟ್ಟವೆಂದೂ, ಮಧ್ಯಾಹ್ನದ ಬಿಸಿಲಲ್ಲಿ ಬೆಳ್ಳಗೆ ಕಂಗೊಳಿಸುವುದರಿಂದ ಬೆಳ್ಳಿಯ ಬೆಟ್ಟವೆಂದೂ ಕರೆಯಲಾಗುತ್ತದೆ; Abode of Lord Shiva;

- ಕೈಲಾಸವೆಂಬುದು ಶಿವಶರಣರಿಗೆ ಅತ್ಯುನ್ನತ ಪದವಿ; ಶರಣರು ಶ್ರಮದ ದುಡಮೆ ಮೂಲಕ, ಕಾಯಕತತ್ವದ ಮೂಲಕ ಕೈಲಾಸ ಕಾಣಲು ಹಂಬಲಿಸಿದವರು; 'ಕಾಯಕವೇ ಕೈಲಾಸ' ಎಂಬುದು ಅವರ ಮಂತ್ರವಾಗಿತ್ತು; ಧಾರ್ಮಿಕವಾಗಿ , ಕೈಲಾಸ ಸ್ವರ್ಗವೇ ಆಗಿದೆ ಎಂಬ ನಂಬಿಕೆ; the topmost status of Shivasharana's of 12th century `Kayakave Kailasa'- Service is Salvation;
- ಸುಖ, ಆನಂದ; *ಪ್ರ: 'ಕಾಸಿದ್ದರೆ ಕೈಲಾಸ'(ಕ.ನಿ.);*
- ಸಾವು, ಮರಣ; ಸತ್ತವರಿಗೆ ಕೈಲಾಸವಾಸಿಯಾದರೆಂದು ಕರೆಯುವುದು ಸಂಪ್ರದಾಯ; *ಪ್ರ: 'ಅಮ್ಮನವರು ಪ್ರಾಯ ಸಮರ್ಥೆ ಆಗುವಾಗ ಅಯ್ಯನವರಿಗೆ ಕೈಲಾಸ'(ಗಾ).*
- —***ಕೈಲಾಸ ವಸ್ತ್ರ*** : ಶವಕ್ಕೆ ಹೊದಿಸುವ ವಸ್ತ್ರ; the cloth that is spreaded on dead body;
- ಸಮಾಧಿ ಕಾಲದಲ್ಲಿ ಶರಣರ ದೇಹಕ್ಕೆ ಹೊದಿಸುವ ಹೊಸ ವಸ್ತ್ರ(ಬೆಂ.ಜಿ.).

ಕೈವಲಿಗಿ(ಗೆ) kaivaligi(ge) :

- ಶವ ಸಾಗಿಸುವ ಸಾಧನ; A carriage or carrying vehicle of a dead body;
- ಕೆಲವು ಸಮುದಾಯದಲ್ಲಿ ವ್ಯಕ್ತಿ ಸತ್ತಾಗ ಸ್ಮಶಾನಕ್ಕೆ ಶವ ಸಾಗಿಸಲು ಗೋಣಿ ಚೀಲಕ್ಕೆ ಎರಡೂ ಬದಿಗಳಲ್ಲಿ ಕೋಲುಗಳನ್ನಿಟ್ಟು ಹೊಲಿದು ಸಿದ್ಧಪಡಿಸಲಾಗುವುದು;
- ಲಿಂಗಾಯಿತರು ಹಾಗೂ ಕೆಲವು ಇತರ ಪಂಗಡದವರು ಶವಯಾತ್ರೆಗಾಗಿ ಬಳಸುವ ಅಲಂಕೃತ ಮಂಟಪ(ಚಿ.ಪ.ಕೋ.);
- ಕೈಹೊಲಿಗಿ: ಬಟ್ಟೆಗೆ ಕೈಯಿಂದ ಹಾಕಿದ ಹೊಲಿಗೆ; ಕೈಹೊಲಿಗೆ;
- ಕೈಹೊಲಿಗೆ>ಕೈಹೊಲಿಗಿ>ಕೈವಲಿಗಿ.

ಕೈವಾಡ kaivāḍa :

- ಸೂಕ್ಷ್ಮ ಕೆತ್ತನೆ ಕೆಲಸ; ಕುಶಲ ಕೆಲಸ; ಕುಸುರಿ ಕೆಲಸ; Micro chiseling of an idol; micro-engraved articrafts;
- ಕೈಚಳಕ ತೋರುವುದು; ಹಸ್ತ ಕೌಶಲ;
- ಪ್ರಭಾವ ಬೀರುವುದು; ಹಸ್ತಕ್ಷೇಪ ಮಾಡುವುದು; ಸ್ವಪ್ರತಿಷ್ಠೆ ಪ್ರತಿಸ್ಥಾಪಿಸುವುದು; *ಪ್ರ: 'ಬಾಗಿಲವಾಡದಲ್ಲಿನ ಕೈವಾಡ ಆಕರ್ಷಕವಾಗಿದೆ'; 'ಅವರ ಕೈವಾಡದಿಂದ ಎಲ್ಲಾ ಹಾಳಾಯ್ತು';*
- —***ಕೈವಾಡದ ಜನ/ಕೈವಾಡದವರು*** : ಬೇರೆ ಬೇರೆ ಕೈಕಸುಬಿನವರು; ಬೇರೆ ಬೇರೆ ವೃತ್ತಿಯವರು; ಕೈವಾಡದವರು; professionals of different professions;
- ಒಂದೊದು ವೃತ್ತಿಯನ್ನು ಅವಲಂಬಿಸಿಕೊಂಡ ಒಂದೊಂದು ವರ್ಗದವರನ್ನು ಕೈವಾಡದ ಜನರೆಂದು ಕರೆಯಲಾಗುತ್ತಿತ್ತು;
- ಸಮಾಜದಲ್ಲಿ ಹುಟ್ಟು, ಸಾವು, ಮದುವೆ ಇತ್ಯಾದಿ ಸಂದರ್ಭಗಳಲ್ಲಿ ತಮತಮಗೆ ನಿಗದಿಯಾದ ವೃತ್ತಿ ಮಾಡುವ ಒಂದೊಂದು ವರ್ಗದ ಜನರು;
- ಕರಕುಶಲಮತಿಗಳು; ಕುಂಬಾರ, ಕ್ಷೌರಿಕ, ಅಗಸ, ಬೋವಿ ಮುಂತಾದ ಹದಿನಾಲ್ಕು ವೃತ್ತಿ ಸಮೂಹದವರನ್ನು 'ಕೈವಾಡ ಜಾತಿ'ಯವರೆಂದು ಕರೆಯುತ್ತಿದ್ದರು; *ಪ್ರ: 'ಹಿಂದೆಲ್ಲಾ ಕೈವಾಡದವರು ಇದ್ದರು; ಊರಿನಲ್ಲೇ ಎಲ್ಲಾ ಕಸುಬೂ ನಡೆಯುತ್ತಿದ್ದವು'.*

ಕೈವಾರ/ಕೆಯ್ವಾರ/ಕಯಿವಾರ/ಕಯ್ವಾರ kaivāra/ keyvāra/kayivāra/kayvāra :

- ಕೊಂಡಾಟ, ಹೊಗಳಿಕೆ; ಧಾರಾಳತನ; ಕೈಚಳಕ, ಬಾಹುಬಲ, ಸಾಮರ್ಥ್ಯ; ಕೈವಶ, ಅಧೀನತೆ(?); ಗೊಡವೆ; ಮಮತೆ, ಅಭಿಮಾನ; ಬೆಂಬಲ, ನೆರವು ಎಂಬಿತ್ಯಾದಿ ಅರ್ಥಗಳಿವೆ; the word has meanings of praising, generousity palmskill, love, support, helping etc;
- ತಮಿಳಿನಲ್ಲಿ 'ಕೈವಾರಮ್'(=ಹೊಗಳಿಕೆ, ಎರಡೂ ಕೈಗಳನೆತ್ತಿ ಸ್ತುತಿ ಮಾಡುವಿಕೆ); ತೆಲುಗಿನಲ್ಲಿ 'ಕೈವಾರಮು, ಕಯಿವಾರಮು'(=ಸ್ತೋತ್ರ, ಹೊಗಳಿಕೆ) ಎಂಬ ರೂಪಗಳಿವೆ(ದ್ರಾ.ಭಾ.ಜ್ಞಾ.ಪ.ಕೋ);
- ಲೋಹದ ಕೆಲಸದಲ್ಲಿ ವಿನ್ಯಾಸಕ್ಕಾಗಿ ವರ್ತುಲ ಹಾಕಿಕೊಳ್ಳಲು ಬಳಸುವ ಉಪಕರಣ(ಬ.ಜಿ.);
- ಮರದ ಕೆಲಸ ಮಾಡುವಲ್ಲಿ ಕೂಡ ವರ್ತುಲಾಕಾರದ ಅಳತೆ, ವಿನ್ಯಾಸಗಳನ್ನು ಮಾಡಿಕೊಳ್ಳಲು ಬಡಗಿಗೆ ಬೇಕಾದ ಉಪಕರಣ; ಅಳತೆಯ ಉಪಕರಣ;
- ಕೋಲಾರ ಜಿಲ್ಲೆಯ ಒಂದು ಸ್ಥಳ ಕೈವಾರ; ಐತಿಹಾಸಿಕ, ಧಾರ್ಮಿಕ ಸ್ಥಳ; ಕೈವಾರ ತಾತಯ್ಯ ಎಂಬುವವರು ತತ್ವಪದ ರಚನಕಾರರು; ಇದು ಪವಿತ್ರ ಯಾತ್ರಾಸ್ಥಳ ಎಂಬ ನಂಬಿಕೆ ಜನಪದರಲ್ಲಿದೆ.

ಕೈವಾರಿ kaivāri :

- ಹೊಗಳು ಭಟ್ಟ; ಸ್ತುತಿ ಮಾಡುವವನು; A man who is praising others;
- ಶೂರನಾದವ; ಪರಾಕ್ರಮ ಶಾಲಿ; A man of eulogy, eulogist; flatterer; sycophant;
- ಹಿಂಬಾಲಕ, ಬೆಂಬಲಿಗ, ಅಭಿಮಾನಿಯಾದವನು;

- ಪ್ರಭಾವಿಗಳನ್ನು, ಅಧಿಕಾರದಲ್ಲಿರುವವರನ್ನು ಹೊಗಳಿ ತಮ್ಮ ಸಾಧನೆ ಮಾಡಿಕೊಳ್ಳುವವರು;
- ರಾಜರ ಆಡಳಿತದಲ್ಲಿ ಹೊಗಳು ಭಟ್ಟರು ಇರುತ್ತಿದ್ದರು;
- 'ಕೈವಾರಿ' ಪದಕ್ಕೆ 'ಇಸು' ಪ್ರತ್ಯಯ ಸೇರಿದರೆ 'ಕೈವಾರಿಸು' ರೂಪ ಬರುತ್ತದೆ; ಅರ್ಥ 'ಸ್ತುತಿಸು' ಎಂದು.

ಕೈವಾಲಿ kaivāli :

- ಕೈಓಲೆ; ಕರಪತ್ರ; ಕೈಯಲ್ಲಿ ಕಳುಹಿಸಿದ ಪತ್ರ; ಕೈಕಾಗದ; ಹಸ್ತಾಕ್ಷರದಲ್ಲಿ ಬರೆದ ಪತ್ರ; Hand written letter; written by hand; not a printed one;
- ಕೈ+ಓಲೆ=ಕೈಓಲೆ>ಕೈವಾಲೆ>ಕೈವಾಲಿ;
- ಪ್ರಾದೇಶಿಕ ಭೇದದಿಂದ 'ಓಲೆ' ಯು 'ಓಲಿ' ಎಂದಾಗುವುದರಿಂದ ಕೈವಾಲೆ>ಕೈವಾಲಿ ಆಗಿದೆ.

ಕೈವಾಲುಗ kaivāluga :

- ಕೈ(<ಕಯ್)+ಓಲಗ=ಕೈಓಲಗ>ಕೈವಾಲಗ>ಕೈವಾಲುಗ;
- ಚಿಕ್ಕಸಭೆ; ಕೆಲವೇ ವ್ಯಕ್ತಿಗಳು ಕುಳಿತು ನಡೆಸುವ ಸಣ್ಣ ಸಭೆ; A small gathering; a short function; a short assembly;
- ವಾದ್ಯದ ಉಪಕರಣ; ಕೈಯಲ್ಲಿ ಹಿಡಿದು ಊದುವ ವಾದ್ಯದ ಸಾಧನ; A musical pipe; blowing pipe by holding in hands;
  ವ್ಯರೂ: ವಾಲ್ಗ(ಮಂಡ್ಯ.ಜಿ.).

ಕೈವೂಟು kaivūṭu :

- ಕೈಸನ್ನೆ; ತಂತ್ರ; ಯುಕ್ತಿ; Gesture, sign, technique tricks;
- ಕೈ(<ಕಯ್)+ಹೂಟ(?)=ಕೈ+ಹ್+ಊಟ=ಕೈ+Ø+ಊಟ=ಕೈವೂಟ>ಕೈವೂಟು;
- 'ಹೂಟ'=ಸನ್ನೆ, ತಂತ್ರ, ಯುಕ್ತಿ; 'ಹೂಟ'ದಲ್ಲಿನ 'ಹ್'ಕಾರವು ಶೂನ್ಯ ಧ್ವನಿಮಾ(Ø) ಆಗಿ 'ಕೈವೂಟ' ಎಂದಾಗುತ್ತದೆ; ಇದು ಕೈಸನ್ನೆ ಮಾಡು, ತಂತ್ರಗಾರಿಕೆ ಮಾಡು ಎಂಬ ಅರ್ಥಗಳಲ್ಲಿ ಬಳಕೆಯಾಗುತ್ತದೆ; *ಪ್ರ: 'ಅವನು ಕೈವೂಟು ಮಾಡಿ ಎಲ್ಲಾ ಸಾಧಿಸಿಕೊಂಡ'.*

ಕೈಶಾಲೆ kaiśāle :

- ವಿದ್ಯಾರ್ಥಿಗಳ ಹೆತ್ತವರೇ(ತಂದೆ, ತಾಯಿಗಳು) ಉಪಾಧ್ಯಾಯರಿಗೆ ಸಂಬಳ ಕೊಟ್ಟು ನಡೆಸುವ ಶಾಲೆ; ಖಾಸಗೀ ಶಾಲೆ(ಮಂಡ್ಯ.ಜಿ.); A school run by parents of the students;
- ಹಿಂದಿನ ಕೂಲಿ ಮಠದ ವ್ಯವಸ್ಥೆಗೆ ಇದು ಪರ್ಯಾಯವಾದುದು. It is a synonymous to cooly mattha of olden days.

ಕೈಸಟ್ಟಿ/ಕೈಸೆಟ್ಟಿ kaisaṭṭi/kaiseṭṭi :

- ಕಯಿಸೆಟ್ಟಿ; ಕಯಿಚಟ್ಟಿ(ಕೈಚೆಟ್ಟಿ); ಹಿಡಿಯಿರುವ (ಮರದಿಂದ ಮಾಡಿದ) ವೃತ್ತಾಕಾರದ ಅಥವಾ ಅಂಡಾಕಾರದ ಪಾತ್ರೆ(ತು.ನಿ.)(ದ.ಕ.); A rounded cooking vessel;
- ಅನ್ನ ಬಸಿಯುವಾಗ ಅನ್ನದ ಪಾತ್ರೆಗೆ ಬಲಕೊಡುವ ಮುಚ್ಚಳ; ಹಿಡಿಯಿರುವ ವೃತ್ತಾಕಾರದ ಮರದ ಬಾನೆ;
- ಮರದಿಂದ ತಯಾರಿಸಿದ ಅನ್ನ ಬಸಿಯಲು ಉಪಯೋಗಿಸುವ ಸಾಧನ.

ಕೈಸತ್ತಿಗೆ kaisattige :

- ಕೈ ಆಭರಣಗಳಲ್ಲಿ ಒಂದು; One of the wrist jewels worn by men and women;
- ಕೈಗೆ ತೊಡುವ ಛತ್ರ ಆಕಾರದ ಆಭರಣ.

ಕೈಸನ್ನೆ kaisanne :

- ಮಾತನಾಡದೆ ಕೈಯಿಂದ ಮಾಡುವ ಸೂಚನೆ (ಕ.ಜಾ.ಕೋ); Hand signating, hand gestures;
- ಬೇರೆಯವರಿಗೆ ಗೊತ್ತಾಗದ ಹಾಗೆ ರಹಸ್ಯವಾಗಿ ಕೈಮೂಲಕ ಸೂಚನೆ ನೀಡಿ ತಿಳಿಸುವ ವಿಧಾನ; *ಪ್ರ: 'ಕಳ್ಳಿ ಒಬ್ಬೇಲಿ ಕೈಸನ್ನೆ ಗ್ವಾಡೆ ಮರೇಲಿ ಪಿಸ್ಮಾತು'(ಗಾ.);*
- ಕೈಸನ್ನೆಯಂತೆ ಕಣ್ಸನ್ನೆ, ಕಾಲ್ಸನ್ನೆಗಳ ಮೂಲಕ ಕೂಡ ತಮಗೆ ಬೇಕಾದವರಿಗೆ ಸೂಚನೆ ಕೊಡುವುದೂ ಉಂಟು; to direct somebody through handsignals, eyegestures;
- ಯಕ್ಷಗಾನದಲ್ಲಿಯ ಹಸ್ತಾಭಿನಯ; ಕೈಗಳಿಂದ ಪ್ರದರ್ಶಿಸುವ ಮುದ್ರೆಗಳು; the palmsigns-Mudras of Yakshagana- a sort of Karnataka coastal drama;
- ಸಂಜ್ಞಾ(ಸಂ)>ಸಂಜ್ಞೆ>ಸನ್ನೆ; ಕೈ+ಸನ್ನೆ(<ಸಂಜ್ಞಾ)=ಕೈಸನ್ನೆ.

ಕೈಸರ kaisara :

- ಕೈಗೆ ಹಾಕಿಕೊಳ್ಳುವ ಬಂಗಾರದ ಸರ/ಮಾಲೆ; ಚಿನ್ನದ ದಾರ; A wrist thread; made up of golden thread;
- ಗಂಡಸರು ಮುಂಗೈಯಲ್ಲಿ ಧರಿಸುವ ಚಿನ್ನದ ಚೈನು; Men wear it to their wrist as wrist chain;

- ವಿವಾಹ ಸಂದರ್ಭದಲ್ಲಿ ವರನು ವಧುವಿಗೆ ಹಾಕುವ 'ವರಣಮಾಲಿಕೆ'(ಕ.ನಿ.).

ಕೈಸಾವಿಗೆ kaisāvige :

- ಕೈಶಾವಿಗೆ; ಕೈಯಿಂದ ಒತ್ತಿ ಮಾಡಿದ ಸಾವಿಗೆ; ಕೈ(<ಕಯ್)+ಶಾವಿಗೆ=ಕೈಶಾವಿಗೆ>ಕೈಸಾವಿಗೆ; A dish-kaishavige- prepared it by hand;
- ಸಣ್ಣರವೆ, ಚಿಟಿಕೆ ಉಪ್ಪು ಹಾಕಿ, ನೀರನ್ನು ಸೇರಿಸಿ ಚಪಾತಿ ಹಿಟ್ಟಿನ ಹದಕ್ಕೆ ಚೆನ್ನಾಗಿ ನಾದುವುದು;
- ಸಾವಿಗೆ ಮರದ ಮಣೆಯ ಮೇಲೆ ಕೈಯಿಂದ ಉಜ್ಜಿದಾಗ ಅದು ಮಣೆಯ ರಂಧ್ರಗಳಿಂದ ದಾರದಂತೆ ಕೆಳಗೆ ಇಳಿಯುವಾಗ ಕೋಲಿನಿಂದ ತೆಗೆದುಕೊಂಡು ನೆರಳಿನಲ್ಲಿ ಒಣಗಿಸಿ ಮಾಡುವ ಸಾವಿಗೆ;
- ಉತ್ತರ ಕರ್ನಾಟಕದ ಸಾಂಪ್ರದಾಯಿಕ ಆಚರಣೆಯಲ್ಲಿ ಶಾವಿಗೆ ಬಳಸುತ್ತಾರೆ; this dish is used in any conventional ceremonies of Northkarnata region;
- ಮದುವೆಯ ಚಪ್ಪರದ ದಿನ ಜಂಗಮರ ಮನೆಯಲ್ಲಿ ಮದುಮಕ್ಕಳಿಗೆ ಅರಿಶಿನದ ನೀರು ಹಾಕಿ, ಸಪ್ಪೆಹಾಲು ಸಾವಿಗೆ ಊಟ ಹಾಕುವರು; ಮದುವೆ ಶಾಸ್ತ್ರವೆಲ್ಲ ಮುಗಿದ ನಂತರ ಮೊದಲ ರಾತ್ರಿಯಲ್ಲಿಯೂ ಮದುಮಗನಿಗೆ ಸಾವಿಗೆ ಹಾಲು ತಿನ್ನಿಸುವರು;
- ದಕ್ಷಿಣ ಕರ್ನಾಟಕದಲ್ಲಿ ಹಾಲು ಅನ್ನ ತಿನ್ನಿಸುವ ಶಾಸ್ತ್ರವಿದ್ದಂತೆ, ಉತ್ತರ ಕರ್ನಾಟಕದಲ್ಲಿ ಶಾವಿಗೆ ಹಾಲು ತಿನ್ನಿಸುವರು.

ಕೈಸಾಲೆ kaisāle :

- ಮನೆಯ ಹೊರ ಅಂಗಳ; ಪಡಸಾಲೆ; ವರಾಂಡ(ಕ.ಜಾ.ಕೋ.); 'Angala'; frontyard-portico of an building;
- ಮನೆಯ ಮುಂದಿನ ಅಂಗಳ(ದ.ಕ.);
- ಮೊಗಸಾಲೆ, ಮನೆಯ ಹೊರಭಾಗದ ಜಗುಲಿ; the outside of a house;
- ಮನೆಯ ಮುಂದೆ ವಿರಾಮವಾಗಿ ಕುಳಿತುಕೊಳ್ಳಲು, ವಿಶ್ರಾಂತಿ ಪಡೆಯಲು, ಕುಳಿತು ಮಾತುಕತೆಯಲ್ಲಿ ತೊಡಗಿಕೊಳ್ಳಲು ಅನುಕೂಲವಾಗುವಂತೆ ತಲೆಬಾಗಿಲಿನ ಎರಡೂ ಕಡೆಗಳಲ್ಲಿ ಜಗುಲಿ ನಿರ್ಮಿಸಿಕೊಳ್ಳುತ್ತಿದ್ದರು; ಇದರ ಮೇಲ್ಭಾಗದಲ್ಲಿ ಮನೆಯ ಸೂರಿನಿಂದ ತೀರುಗಳನ್ನು ಹಾಕಿ, ಹೆಂಚು ಹೊದಿಸಿ ಬಿಸಿಲು, ಮಳೆ ಬೀಳದಂತೆ ಮಾಡುತ್ತಿದ್ದರು; ಪ್ರತಿದಿನ ದನ ಕರುಗಳಿಗೆ ಮೇವು(ಹಸಿರು ಹುಲ್ಲು, ಒಣಹುಲ್ಲು ಇತ್ಯಾದಿ) ತಂದು ಇಟ್ಟುಕೊಳ್ಳುತ್ತಿದ್ದರು; ಈ ಎಲ್ಲಾ ದೃಷ್ಟಿಯಿಂದ ಮನೆಯ ಮುಂದಿನ ಪಡಸಾಲೆ/ಜಗುಲಿ ಜನಪದರಿಗೆ ಬಹೂಪಯೋಗಿಯಾಗಿರುತ್ತದೆ; ಪರಸ್ಥಳದಿಂದ ಬರುವವರು ರಾತ್ರಿ ವೇಳೆ ತಂಗಲು ಯಾರದಾದರೂ ಜಗಲಿಯನ್ನು ಆಶ್ರಯಿಸುತ್ತಿದ್ದರು; ಅಪರಿಚಿತರು ಕೆಲಕಾಲ ಕುಳಿತು ವಿಶ್ರಾಂತಿ ಪಡೆದು ಹೋಗುತ್ತಿದ್ದರು; a place where freely one has to take rest at front yard of any house;
- ಈ ಎಲ್ಲ ಅನುಕೂಲಕ್ಕೆ ಹೇಳಿಮಾಡಿದಂತೆ ಗ್ರಾಮೀಣರ ಮನೆಯ ಜಗಲಿ/ಪಡಸಾಲೆ ಇದ್ದು ಉಪಯೋಗಕ್ಕೆ ಬರುತ್ತದೆ.

ಕೈಸುಟ್ಟುಕೋ kaisuṭṭukō :

- ಅನುಭವ ಪಡೆದುಕೋ; ಕೆಟ್ಟ ಅನುಭವವುಂಟಾಗು; A bad experience; to experience loss;
- ವ್ಯಾವಹಾರಿಕವಾಗಿ ನಷ್ಟವನ್ನು ಹೊಂದುವುದು; ತೊಂದರೆ ಅನುಭವಿಸುವುದು; to get loss due to uneasy nonplanned enterprenary activities;
- ಪೂರ್ವಾಪರ ಆಲೋಚಿಸದೆ, ಸರಿಯಾದ ಮಾಹಿತಿಗಳಿಲ್ಲದೆ ಯಾವುದೇ ಒಂದು ವ್ಯವಹಾರಕ್ಕೆ ಏಕಾಏಕಿಯಾಗಿ ಕೈಹಾಕಿದರೆ ಅದರಿಂದ ಉಂಟಾಗಬಹುದಾದ ನಷ್ಟವನ್ನು ಈ ನುಡಿಗಟ್ಟು ಸೂಚಿಸುತ್ತದೆ;
- ಇಲ್ಲಿ ನೇರವಾಗಿ ಕೈಸುಟ್ಟುಕೊಳ್ಳುವುದು ಅನನ್ವಯ; ಅನುಭವದ ಮೂಲಕ ಪಡೆಯುವ ಕಹಿ; ಹಾಗೆಯೇ ವ್ಯವಹಾರ ನಷ್ಟ ಕೂಡ.

ಕೈಸುತ್ಗೆ/ಕೈಸುತ್ಗಿ kaisutge/kaisutgi :

- ಚಿಕ್ಕ ಸುತ್ತಿಗೆ; A small hammer used by sculptures and ironsmiths;
- ಕೈ+ಸುತ್ತಿಗೆ=ಕೈಸುತ್ತಿಗೆ>ಕೈಸುತ್ಗೆ>ಕೈಸುತ್ಗಿ;
- ಕಲ್ಲು ಕುಟಿಗರು ಮತ್ತು ಕಮ್ಮಾರರು ಬಳಸುವ ಸಣ್ಣ ಸುತ್ತಿಗೆ(ಚಿ.ಪ.ಕೋ);
- ಕಲ್ಲುಕುಟಿಗರು ಉಳಿಯನ್ನು ಬಳಸಿ ವಿಗ್ರಹಗಳನ್ನು ನಯವಾಗಿ ಕೆತ್ತುವಾಗಿ, ಕುಸುರಿ ಕೆಲಸ ಮಾಡುವಾಗ ಸಣ್ಣ ಪ್ರಮಾಣದಲ್ಲಿ ಏಟು ಹಾಕಲು ಬಳಸುವ ಚಿಕ್ಕ ಸುತ್ತಿಗೆ; sculptures or stone cultures use chisel to shape a stone;
- ಕಮ್ಮಾರರು ಕುಲುಮೆಯಲ್ಲಿ ಸಣ್ಣ ಆಯುಧಗಳನ್ನು ಕಾಯಿಸಿ ತಟ್ಟುವಾಗ, ಉಳಿಗಳನ್ನು, ಚಾಣಗಳನ್ನು ತಟ್ಟಿ ಹರಿತಗೊಳಿಸುವಾಗ ಒಂದೇ ಕೈಯಲ್ಲಿ ಹಿಡಿದು ಬಡಿಯಲು ಬಳಸುವ ಚಿಕ್ಕಸುತ್ತಿಗೆ; Ironsmith's

use to hammer small weapons at their farge;

- ಬಡಗಿಗಳು ಮರದ ಕೆತ್ತನೆ ಮಾಡುವಾಗ, ಕುಸುರಿ ಕೆಲಸದ ಮೂಲಕ ಅಂದಗೊಳಿಸುವಾಗ ಉಳಿಗೆ ಸಣ್ಣದಾಗಿ ಹೊಡೆಯಲು ಚಿಕ್ಕಸುತ್ತಿಗೆ ಬಳಕೆ ಮಾಡುತ್ತಾರೆ; a small hammer which is used to chisel microcarves drawings on a wooden frames;
- ದೊಡ್ಡದಾಗಿ ಪೆಟ್ಟು ನೀಡುವ ದೊಡ್ಡಸುತ್ತಿಗೆಯನ್ನು ಮೇಲಿನ ಸಂದರ್ಭಗಳಲ್ಲಿ ಬಳಸಲು ಬರುವುದಿಲ್ಲ; ಆದುದರಿಂದ ಕೈಸುತ್ತಿಗೆ ಅಗತ್ಯವಾಗುತ್ತದೆ.

ಕೈಸುದ್ದಿಲ್ಲ kaisuddilla :

- ಭ್ರಷ್ಟತನ; ಅಪ್ರಾಮಾಣಿಕತೆ; ತುಡುಗು, ಕಳ್ಳತನ; ವಿಶ್ವಾಸಘಾತುಕತನ; corruption, dishonesty, non-confidential robbery;
- ಕೈ+ಶುದ್ಧ+ಇಲ್ಲ=ಕೈಶುದ್ಧವಿಲ್ಲ>ಕೈಶುದ್ವಿಲ್ಲ>ಕೈಶುದ್ದಿಲ್ಲ> ಕೈಸುದಿಲ್ಲ;
- 'ಶುದ್ಧ' ಎಂಬ ಸಂಸ್ಕೃತ ಪದ ಅಪಭ್ರಂಶವಾಗಿ ಬಳಕೆಯಾಗುವಾಗ 'ಸುದ್ದ' ಎಂಬ ರೂಪ ಪಡೆಯುತ್ತದೆ; ಇದು 'ಕೈ' ಪದದೊಡನೆ ಸೇರಿ 'ಕೈಸುದ್ದ' ಎಂದಾಗುತ್ತದೆ; ಈ ಪದಕ್ಕೆ 'ಇಲ್ಲ' ಎಂಬುದು ಸೇರಿ 'ಕೈಸುದ್ದಿಲ್ಲ' ಎಂದಾಗಿದೆ; ಇದು ನುಡಿಗಟ್ಟಾಗಿ ಪ್ರಯೋಗವಾಗುತ್ತದೆ;
- ಹಣಕಾಸಿನ ವಿಚಾರದಲ್ಲಿ, ವ್ಯಾವಹಾರಿಕವಾಗಿ ಅಪ್ರಾಮಾಣಿಕನಾಗಿರುವುದು, ಲಂಚ ಪಡೆಯುವುದು, ಇತರರ ಹಣದ ದುರುಪಯೋಗ ಮಾಡಿಕೊಳ್ಳುವುದು; ಕಳ್ಳತನ ಮಾಡುವುದು ಇತ್ಯಾದಿ ನಡವಳಿಕೆಯಿಂದ ಕೂಡಿರುವುದನ್ನು ಸೂಚಿಸುತ್ತದೆ; *ಪ್ರ: 'ನಿನ್ನ ಕೈಸುದ್ದಿಲ್ಲ; ಯಾವ ಕಾರಣಕ್ಕೂ ನಿನಗೆ ಮನೆಯ ವ್ಯವಹಾರ ಕೊಡೋದಿಲ್ಲ'.* a dishonest man as far as financial management is concerned.

ಕೈಸುರುಗಿ kaisurugi :

- ಕೈಗತ್ತಿ, ಚಿಕ್ಕಕತ್ತಿ(ಶಿ.ಜಿ.); a small handy dagger;
- ಕೈ(<ಕಯ್)+ಸುರಗಿ=ಕೈಸುರಗಿ>ಕೈಸುರುಗಿ;
- 'ಕೈ'=ಚಿಕ್ಕ ಅಥವಾ ಕೈಯಲ್ಲಿ ಹಿಡಿಯುವ ಸಣ್ಣದಾದ; ಸುರಗಿ=ಕತ್ತಿ; ಚಿಕ್ಕಕತ್ತಿ;
- ಮುಂದಿನ ಪದವಾದ 'ಸುರಗಿ' ಉಚ್ಚಾರಣೆಯಲ್ಲಿ 'ಸು' ಅಕ್ಷರದ ಸಹಚರ್ಯದಿಂದ 'ರ'ಕಾರವೂ 'ರು' ಆಗಿ ಬಳಕೆಗೊಂಡಿದೆ; ಇದರಿಂದ ಸುರಗಿ> 'ಸುರುಗಿ'ಯಾಗಿ ಉಚ್ಚಾರಗೊಂಡಿರುವ ಸಾಧ್ಯತೆ ಕಂಡುಬರುತ್ತದೆ;
- ಚಿಕ್ಕಕತ್ತಿಯಂತೆ ಬಳಸುವ ಆಯುಧಕ್ಕೆ 'ಚೂರಿ' ಎಂದು ಕರೆಯುವುದೂ ಉಂಟು.

ಕೈಸೆರೆ kaisere :

- ಬಂಧನ, ಕಟ್ಟು; ಬಂಧಿಸುವುದು; ಬಂಧನಕ್ಕೊಳಗಾಗುವುದು; ವ್ಯಕ್ತಿಯನ್ನು, ಅಪರಾಧಿಯನ್ನು ಬಂಧನದಲ್ಲಿಡುವುದು; to arrest; to imprison a person; imprisonment;
- ಒಂದು ಹಿಡಿ, ಅರ್ಧಬೊಗಸೆ ಅಥವಾ ಬೊಗಸೆಯಷ್ಟು ಅಳತೆ;
- ಇರುಳಿಗರಲ್ಲಿ ಕಣಿಹೇಳುವವನನ್ನು ಪರೀಕ್ಷಿಸಲು ಬಂದ ವ್ಯಕ್ತಿಗೆ ಕೈಜೋಡಿಸಿ ಹಿಡಿದು ನಿಲ್ಲುವಂತೆ ಹೇಳಿ, ಆತನ ಜೋಡಿಸಿದ ಕೈಗಳು ಅಂಟಿಕೊಳ್ಳುವಂತೆ ಮಾಡುವುದು; ಪರೀಕ್ಷಿಸಲು ಬಂದವನು ಸೋತು ತನ್ನ ಕೈಗಳನ್ನು ಬಿಡಿಸುವಂತೆ ಕ್ಷಮೆಯಾಚಿಸುವವರೆಗೆ ಅಂಟಿದ ಕೈಗಳನ್ನು (ಕೈಸೆರೆಯನ್ನು) ಬಿಡಿಸುವುದಿಲ್ಲ; ಆತನು ಕ್ಷಮೆಯಾಚಿಸಿದ ಮೇಲೆ ಕಣಿ ಹೇಳುವವನು ಮಂತ್ರ ಹಾಕಿ ಅವನ ಅಂಟಿದ ಕೈಗಳನ್ನು ಬಿಡಿಸಿಕೊಳ್ಳುವಂತೆ ಮಾಡುತ್ತಾನೆ; ಇದೊಂದು ಕಣಿ ಹೇಳುವವನ ಶಕ್ತಿ ಪ್ರದರ್ಶನದ ತಂತ್ರ; it is a skill or technique of a Iruliga community; it is used to test a person who foretells or says Astrology by saying to fold palm and detach it when one has no ability to detach one's folded palm the foreteller removes or detachs it; *ವ್ಯದೂ:* ಕೈಸ್ಯಾರೆ(ತು.ಜಿ.).

ಕೈಸೆಲಂಬು kaiselambu :

- ಜನಪದ ವಾದ್ಯ ವಿಶೇಷ; a folk musical instrument; it is used by the devotees of Male Mahadeshvara;
- ಮಲೆ ಮಹದೇಶ್ವರನ ಭಕ್ತರು ಬಳಸುವ ವಾದ್ಯ; ಈ ವಾದ್ಯವನ್ನು ನುಡಿಸುತ್ತಾ ಹಾಡುವುದು ವಾಡಿಕೆ;
- ಬೊಗಸೆ ಅಗಲವಿರುವ ಕಂಚಿನ ಕಳಸಗಳು; ಒಳಭಾಗ ಟೊಳ್ಳಾಗಿದ್ದು ಸೀಸದ ಗುಂಡುಗಳನ್ನು ಸೇರಿಸಿರುತ್ತಾರೆ; ಎರಡೂ ಕೈಗಳಲ್ಲಿ ಸೆಲುಂಬುಗಳನ್ನು ಹಿಡಿದು ಹಿಂದಕ್ಕೂ, ಮುಂದಕ್ಕೂ ಹಸ್ತದಿಂದ ತೂಗುವುದರಿಂದ ಒಳಗಿನ ಗುಂಡುಗಳ ಚಲನೆಗೆ ಮೋಹಕ ಧ್ವನಿ ಹೊರಡುತ್ತದೆ.

ಕೈಸೋತಿದೆ kaisōtide :

- ದಣಿವಾಗಿದೆ, ಆಯಾಸವುಂಟಾಗಿದೆ; Weariness, tiredness;

- ದುಡಿದು ಸಂಪಾದನೆ ಮಾಡಲಾಗದೆ ಆರ್ಥಿಕವಾಗಿ ಹಿನ್ನಡೆ ಉಂಟಾಗಿರುವುದು; the stage of lack of earnings; *ಪ್ರ: 'ಮೊದ್ಲಂಗೆ ಧಾರಾಳವಾಗಿ ಕೊಡುಕಾಗೋದಿಲ್ಲ; ನನ್ನ ಕೈಸೋತಿದೆ';*
- ಇದು ವಯಸ್ಸಾದ ಕಾರಣದಿಂದ ಉಂಟಾಗುವ ಪರಿಣಾಮ ಇರಬಹುದು; it may be accured due to one's oldage;
- ಇಲ್ಲವೆ ವ್ಯವಹಾರದಲ್ಲಿ ಸೋತ ಅಸಹಾಯಕತೆಯಿಂದ ಉಂಟಾದ ಸ್ಥಿತಿ ಇರಬಹುದು.

ಕೈಸೋರೆಕಾಯಿ kaisōrekāyi :
- ಕೈಪೆಸೋರೆ; bitter bottlegourd; it is used as medicine;
- ಕಹಿಸೋರೆಯ ಕಾಯಿ; ಕಹಿ>ಕಯ್>ಕೈ+ಸೋರೆ;
- ಇದು ಔಷಧಿಗಾಗಿಯೂ ಬಳಕೆಯಾಗುತ್ತದೆ; ಸೊಪ್ಪು ಔಷಧಿಯಾಗಿ ಬಳಕೆ;
- ಇದರ ಬುರುಡೆಯನ್ನು ಊದುವ ಪುಂಗಿಗಾಗಿ ಬಳಸುತ್ತಾರೆ; its dried gourd is used to pepare- Pungi- a pipe musical instrument used by snake charmers;
- ಕಹಿಸೋರೆಗಳಲ್ಲಿ ಕೆಲವು ವಿಷಯುಕ್ತವೂ ಆಗಿರುತ್ತವೆ; ಇವು ವಿಷದ ಸೋರೆ;

ವ್ಯದೂ: ಕೈಸ್ವಾರೆ(ಮಂಡ್ಯ.ಜಿ./ಬೆಂ.ಗ್ರಾ.ಜಿ.).

ಕೈಹಚ್ಚು kaihaccu :
- ಪ್ರಾರಂಭಿಸು(ಬ.ಜಿ.); ಕೈಹಾಕು; to start; to begin an enterprise;
- ಕಾರ್ಯ ಪ್ರವೃತ್ತನಾಗು; ಸಹಾಯ ಮಾಡು;
- ಉಪಕ್ರಮಿಸು; ಕೆಲಸದಲ್ಲಿ ತೊಡಗಿಸಿಕೊ; *ಪ್ರ: 'ನೀನೂ ಕೈಹಚ್ಚು ಬೇಗ ಕೆಲಸವಾಗಲಿ'; 'ನಾಟಿ ಕಾರ್ಯಕ್ಕೆ ಎಲ್ಲರೂ ಕೈಹಚ್ಚಿದರು'.*

ಕೈಹಣ್ತಿ ದೀಪ kaihaṇti dīpa :
- ಕೈ(<ಕಯ್) + ಹಣತೆ(<ಪಣತಿ) + ದೀಪ = ಕೈಹಣತೆದೀಪ > ಕೈಹಣ್ತೆದೀಪ > ಕೈಹಣ್ತಿದೀಪ; lamp of Castrol oil;
- 'ಹಣ್ತಿದೀಪ' ಎಂಬಲ್ಲಿ ದ್ವಿರುಕ್ತಿ ಇದೆ; ಹಣತೆ ಮತ್ತು ದೀಪ ಎರಡೂ ಒಂದೇ ಅರ್ಥ ಒಳಗೊಂಡಿವೆ;
- ಕೈಎಣ್ಣೆ ಹರಳು ದೀಪ; ಬತ್ತಿ ಹಾಕಿದ ದೀಪ; ಚಿಕ್ಕದೀಪ; ಕೈಸೊಡರು.

ಕೈಹರ್ಗಿ/ಕೈಹರ್ವಿ kaihargi/kaiharvi :
- ಸಣ್ಣ ಹರಿವೆಗಿಡ; ಸಣ್ಣ ದಂಟಿನ ಸೊಪ್ಪಿನ ಗಿಡ; small stemmed greens plant;
- ಕೈತೋಟದಲ್ಲಿ ಬೆಳೆಸಿದ ಎಳಸಾದ ಹರಿವೆ ದಂಟು; ಇದನ್ನು ಸಾರಿಗೆ ಬಳಸುತ್ತಾರೆ; ಸೊಪ್ಪಿನ ಪಲ್ಯ ಮಾಡುತ್ತಾರೆ; ಉತ್ತಮ ಆಹಾರವಾಗಿದೆ.

ಕೈಹಲುವೆ/ಕೈಹಲಬೆ kaihaluve/kaihalabe :
- ಸುಗ್ಗಿ ಕಾರ್ಯದಲ್ಲಿ ಕಣದಲ್ಲಿ ಒಕ್ಕಣೆ ಮಾಡುವಾಗ ನುರಿದ ಹುಲ್ಲನ್ನು ಎಳೆದುಕೊಳ್ಳಲು ಬಳಸುವ ಉಪಕರಣ; An instrument used to thresh corns at threshing place- `kana';
- ಒಕ್ಕಣೆ ಮಾಡುವಾಗ ಒಕ್ಕಣೆ ಕಾಳು ಕಣದಲ್ಲಿ ಬಿದ್ದಾಗ ಅದರ ಮೇಲಿನ ಹುಲ್ಲನ್ನು ಪ್ರತ್ಯೇಕಗೊಳಿಸಲು ಬಳಕೆ; ಇದು ಚಿಕ್ಕ ಉಪಕರಣವಾಗಿದ್ದು, ಕೈಯಲ್ಲೇ ಬಳಕೆ ಮಾಡುವುದು;
- ಗದ್ದೆಗಳಲ್ಲಿಯೂ ಬಳಸುವ ದೊಡ್ಡ ಹಲುವೆಗಳಿರುತ್ತವೆ; ನೊಗಕ್ಕೆ ಎತ್ತುಗಳನ್ನು ಕಟ್ಟಿ ಹಲುವೆ ಎಳಸುತ್ತಾರೆ; it is plough like farming tool; drawn by bullocks;
- ಕೈ+ಹಲುವೆ/ಹಲಬೆ.

ಕೈಹಾಕು kaihāku :
- ಯಾವುದೇ ಕೆಲಸ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದು; to involve in anywork, to start a new work;
- ಉಳಿದವರು ಮಾಡುತ್ತಿರುವ ಕೆಲಸದಲ್ಲಿ ತಾನೂ ಸೇರಿಕೊಳ್ಳುವುದು; ಸಹಾಯ ಮಾಡುವುದು;
- ನುಡಿಗಟ್ಟಾಗಿ ಬಳಕೆ; ಅನ್ಯರ ವಿಚಾರದಲ್ಲಿ ಮಧ್ಯೆ ಪ್ರವೇಶಿಸುವುದು; 'ಮೂಗು ತೂರಿಸುವುದು' ಎಂಬ ಮಾತೂ ಈ ಸಂಬಂಧದಲ್ಲಿ ಬಳಕೆಯಿದೆ;
- ಕೈಹಾಕು, ಬಾಯ್‌ಹಾಕು, ಮೂಗು ತೂರಿಸು– ಎಂಬೆಲ್ಲ ಮಾತುಗಳು ಬೇರೆಯವರ ಮಾತು ಮತ್ತು ಕಾರ್ಯಗಳಲ್ಲಿ ಮಧ್ಯ ಪ್ರವೇಶಿಸುವವರನ್ನು ಕುರಿತು ಆಡಿದವುಗಳೇ; ಇದರಿಂದ ಬೇರೆಯವರ ವಿಷಯಕ್ಕೆ ಹೋಗಬಾರದೆಂಬ ಸಮಯೋಚಿತ ನಿಲುವನ್ನೂ ಇವು ಪ್ರಕಟಿಸುತ್ತವೆ; ಜನಪದದ ವ್ಯವಹಾರ ಜ್ಞಾನ ಮತ್ತು ನ್ಯಾಯ ನಿರ್ಣಯಗಳೆರಡೂ ಇಲ್ಲಿ ಗಮನಕ್ಕೆ ಬರುತ್ತವೆ; to interfere unnecessarily into another's matter or issues;
- ಹೊಡೆದಾಟಕ್ಕೆ ಪ್ರಾರಂಭಿಸು; ಹೊಡೆ.

ಕೈಹಾರೆ kaihāre :
- ಸಣ್ಣಹಾರೆ(ಮೈ.ಜಿ./ಚಿ.ಜಿ.); ಸುಮಾರು ಒಂದು ಮೊಳದುದ್ದರ ಹಾರೆ; a handy crow bar used to dig a pit;

- ಚಿಕ್ಕದಾಗಿ ಕುಳಿ ತೋಡಲು ಬಳಸುವ ಸಣ್ಣ ಹಾರೆ;
- ಅಡಕೆ ಗಿಡದ ಬುಡದ ಸುತ್ತಲೂ ಸಣ್ಣ ಕುಳಿ ತೋಡಲು ಇದನ್ನು ಉಪಯೋಗಿಸುತ್ತಾರೆ; it is used to dig a pit around eraca tree;
- ಇದರ ಮೊನಚಾದ ಭಾಗವನ್ನು ಮೇಲು ಮಾಡಿ, ದುಂಡಾದ ಮೇಲ್ಭಾಗವನ್ನು ಕೆಳಗು ಮಾಡಿ, ಒರಳುಕಲ್ಲಿನಲ್ಲಿ ಏನನ್ನಾದರೂ ಕುಟ್ಟಿ ಪುಡಿ ಮಾಡಲು ಕೂಡ ಬಳಸುತ್ತಾರೆ; ಒರಳಿನ ಮುಂದೆ ಕುಳಿತು ಕುಟ್ಟುವುದಕ್ಕೆ ಇದು ಹೆಚ್ಚು ಅನುಕೂಲವಾಗಿದೆ.

ಕೈಹಾಳಿ kaihāḷi :

- ಗಾರೆ ಕೆಲಸದಲ್ಲಿ ಬಳಸುವ ಮಟ್ಟಗೋಲು; ಗಾರೆ ಮುಟ್ಟಸ; a wooden leveler used by people who built buildings;
- ಇದನ್ನು ೧ ೧/೨ಇಂಚು ದಪ್ಪ, ೨ಇಂಚು ಅಗಲ, ಸುಮಾರು ೩ಅಡಿಯಿಂದ ೫ಅಡಿ ಉದ್ದದವರೆಗಿನ ವಿವಿಧ ಅಳತೆಯ ಮರದ ಪಟ್ಟಿಯಿಂದ ಮಾಡಿರುತ್ತಾರೆ; a wooden plank having the measurement of 1 1/2 inch thick 2inch width 3 to 5 feet long tool used by mortars or people who do plastering the wall;
- ಇಟ್ಟಿಗೆ ಕಟ್ಟುವಾಗ ಗೋಡೆ ನೇರವಾಗಿರುವಂತೆ ತಟ್ಟಿಕೊಳ್ಳಲು, ಸಮತಟ್ಟಾಗಿ ಗಾರೆ ತೀಡಲು ಇದನ್ನು ಬಳಸುತ್ತಾರೆ;
- *ಪ್ರ: 'ಗೋಡೆ ತಿರುಚಿಕೊಳ್ಳದಂತೆ 'ಕೈಹಾಳಿ' ಹಾಕಿ ನೋಡಿಕೊ'!*
- ಪಾತಿಯಿಂದ ನೀರು ಹರಿದು ಹೋಗದಂತೆ ಸುತ್ತಲೂ ಹಾಕಿದ ಸಣ್ಣ ತೆವರಿ(ಬದು); *ಪ್ರ: 'ಗದ್ದೆಯ ಪಾತಿಗೆ ಕೈಹಾಳಿ ಹಾಕಿ ನೀರು ನಿಲ್ಲಿಸು'.*

ಕೈಕೈ ಹಿಚಕು kaikai hicaku :

- ಕೈ(<ಕಯ್)+ಕೈ(<ಕಯ್)+ಹಿಸುಕು=ಕೈಕೈಹಿಸುಕು> ಕೈಕೈಹಿಸಕು>ಕೈಕೈಹಿಚಕು; (ಸ>ಚ); hand squeeze; hand press;
- ಅಸಹಾಯಕತೆ; ಆಗಲಾರದ ಕಾರ್ಯ; to show helplessness by pressing or squeezing hands;
- ನಿರೀಕ್ಷೆಯ ಆಗಬಹುದಾದ ಕಾರ್ಯ ಕೈತಪ್ಪಿ ಹೋದಾಗ ಮನಸ್ಸಿಗೆ ಉಂಟಾಗುವ ವ್ಯಥೆ, ಅಸಮಾಧಾನವನ್ನು ಅಭಿವ್ಯಕ್ತಿಸುವ ಸ್ಥಿತಿ;
- ಇನ್ನೇನು ಅಂದುಕೊಂಡ ಕೆಲಸ ಆಗುತ್ತದೆ ಎಂದು ಭಾವಿಸಿರುವಾಗ, 'ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ' ಎಂಬಂತಾಗಿ ವ್ಯಕ್ತ ಪಡಿಸುವ ಮಾನಸಿಕ ಅಸಮಾಧಾನ; ನುಡಿಗಟ್ಟಾಗಿ ಬಳಕೆ;
- 'ಹಿಚಕು' ಪದಕ್ಕೆ ಸಂವಾದಿಯಾಗಿ 'ಹಿಸಕು' ರೂಪವೂ ಇದೆ; ಇದು 'ಚ' ಮತ್ತು 'ಸ'ಕಾರಗಳು ಪರಸ್ಪರ ವಿನಿಮಯಗೊಳ್ಳುವುದಕ್ಕೆ ಹೇಳುತ್ತದೆ;
- 'ಕೈಕೈ' ದ್ವಿರುಕ್ತಿ; ಒಂದೇ ಪದದ ಪುನರಾವರ್ತನೆ; ಇಲ್ಲಿಂತು ಇದರ ಅಗತ್ಯವಿದೆ; ಎರಡೂ ಕೈಗಳೂ ಈ ಕ್ರಿಯೆಯಲ್ಲಿ ಭಾಗವಹಿಸುವುದರಿಂದ ಈ ಪದದ್ವಂದ್ವ ಅನಿವಾರ್ಯ.

ಕೈಹಿಡಿ kaihiḍi :

- ಕೈ(<ಕಯ್)+ಹಿಡಿ(<ಪಿಡಿ)=ಕೈಹಿಡಿ;
- ಕಷ್ಟದಲ್ಲಿರುವವರಿಗೆ ಸಹಾಯ ಮಾಡು; ಕೈಯಿಂದ ಹಿಡಿದುಕೊ; ನೆರವಾಗು; to help the needy why they are in trouble;
- ೧.ಅಲ್ಲದ ಕೆಲಸ ಮಾಡಿದಾಗ ತೀಕ್ಷ್ಣವಾಗಿ ಪ್ರಶ್ನಿಸು; ೨.ಜಗಳಕ್ಕೆ ತೊಡಗು; ೩.ನೆರವಾಗು(ಉದಾ: ಕಷ್ಟ ಕಾಲದಾಗ ನೀನು ಕೈಹಿಡಿದಿ)(ಚಿ.ಪ.ಕೋ);
- ಸವಾಲು ಸ್ವೀಕರಿಸು; ಅಖಾಡದಲ್ಲಿ ನಿಂತು ಸವಾಲು ಕೂಗಿದವನ ಮೇಲೆ ಕುಸ್ತಿ ಮಾಡಲು ಒಪ್ಪುವುದು; accepting a challenge of a person- a wrestler who calls somebody to wrestle with him;
- ಹೆಣ್ಣನ್ನು ವಿವಾಹವಾಗು; ವರಿಸು; ಸ್ವೀಕರಿಸು; to marry an adult girl;
- ಮದುವೆಯ ನಂತರ ಹೆಣ್ಣನ್ನು *ಗಂಡಿಗೆ* ಒಪ್ಪಿಸುವುದು; after the marriage elders of a family send their bride with bridegroom as ritual of their acknowledgement;
- ನುಡಿಗಟ್ಟಾಗಿ ಇದು ಬಳಕೆಯಾಗುತ್ತದೆ; *ಪ್ರ: 'ಯಜಮಾನರು ಕೈಹಿಡಿಯದಿದ್ದರೆ ಅವನಿಗೆ ಉಳಿಗಾಲವಿರಲಿಲ್ಲ'; 'ತಾನು ಪ್ರೀತಿಸಿದವಳನ್ನೆ ಕೈಹಿಡಿದ'.*

ಕೈಹೂಸಿ kaihūsi :

- ಮರಗೆಲಸ ಮಾಡುವ ಬಡಗಿ ಬಳಸುವ ಸಾಧನ; A tool used by a carpenter; a driller;
- ಕುಡುಗೋಲಿಗೆ ಹಿಡಿಕೆ ಸೇರಿಸುವಾಗ ಹಿಡಿಕೆಗೆ ರಂಧ್ರ ಕೊರೆಯಲು ಬಳಸುತ್ತಾರೆ;
- ಗೋಡೆಗೆ ಮೊಳೆ ಅಥವಾ ಸ್ಕ್ರೂ ಹಾಕುವಾಗ ಗೋಡೆಗೆ ರಂಧ್ರ ಹೊಡೆದು ಮರದ ಘಟ್ಟ ಸೇರಿಸಲು ಉಪಯೋಗಿಸುತ್ತಾರೆ. To drill the wall to fix a screw.

ಕೈಹೆಂಚು kaiheñcu :

- ಮಳೆ, ಬಿಸಿಲಿನಿಂದ ರಕ್ಷಣೆ ಪಡೆಯಲು ವಾಸಿಸುವ ಮನೆಯ ಮೇಲ್ಛಾವಣಿಗೆ ಹೊದಿಸುವ ಮಣ್ಣಿನ ಹೆಂಚು; ನಾಡಹೆಂಚು; Clay tiles, natives tiles which are helpful to the most of the homes of poor used these tile to cover their roofs;
- ಮಣ್ಣನ್ನು ಹದಗೊಳಿಸಿ ಕುಂಬಾರರು ಕೈಯಿಂದ ಮಾಡಿದ ಹೆಂಚನ್ನು ಆವುಗೆಯಲ್ಲಿ ಹಾಕಿ ಹದವಾಗಿ ಸುಡುತ್ತಾರೆ; ಇದರಿಂದ ಮಳೆಗೆ ಮಣ್ಣಿನ ಹೆಂಚು ಕರಗುವುದಿಲ್ಲ; ಕಾರ್ಖಾನೆಯ ಸೀಮೆ ಹೆಂಚು ಬಳಕೆಗೆ ಮುನ್ನ ಗ್ರಾಮೀಣರು ಮನೆ ಕಟ್ಟುವಾಗ ಮೇಲ್ಛಾವಣಿಗೆ ಹೊದಿಸಲು ಹೆಚ್ಚಾಗಿ ಕೈಹೆಂಚು/ನಾಡಹೆಂಚನ್ನೇ ಬಳಸುತ್ತಿದ್ದರು; *ಪ್ರ: 'ದೂರದಲ್ಲಿ ಕಾಣುವ ಕೈಹೆಂಚಿನ ಮನೆ ನಮ್ಮದು'.*

ಕೈಹೊಲಿಗೆ kaiholige :

- ಬಟ್ಟೆಯ ಹರಿದ ಭಾಗವನ್ನು ಸೂಜಿ, ದಾರ ಬಳಸಿ ಕೈಯಿಂದ ಹಾಕುವ ಹೊಲಿಗೆ; Handsewing; to sew the ragged cloths by needle and yarn or thread;
- ಹೊಲಿಗೆ ಯಂತ್ರದಿಂದ ಹೊಲಿದ ಹೊಸ ಪ್ಯಾಂಟ್‌ಗಳಿಗೆ ಕಾಲಿನ ಭಾಗದ ಕೆಳಗೆ ಒಳಮುಖವಾಗಿ ಸ್ವಲ್ಪ ಮಡಚಿ ಕೈಯಿಂದ ಮಾಡುವ ಸೂಜಿ, ದಾರದ ಹೊಲಿಗೆ(hand stitch);
- ಕೈಯಿಂದ ನಾಜೂಕಾಗಿ ಹಾಕುವ ಹೊಲಿಗೆ ನೋಡಲು ಸುಂದರವಾಗಿ, ನಯವಾಗಿ ಕಾಣುವುದುಂಟು; Hand made sewing; *ಪ್ರ: 'ನಿಮ್ಮ ಪ್ಯಾಂಟ್ ರೆಡಿ ಇದೆ; ಕೈಹೊಲಿಗೆ(hand stitch) ಮಾಡಿ ಈಗ ಕೊಟ್ಟುಡ್ತೀನಿ'.*

ಕೈಹೊಸಕು kaihosaku :

- ಎರಡೂ ಕೈಗಳನ್ನು ಒತ್ತಿ ಉಜ್ಜಿಕೊಳ್ಳುವುದು; ತೆಗೆದುಕೊಂಡ ನಿರ್ಣಯ ತಪ್ಪಾದಾಗ ಉಂಟಾದ ಪರಿಣಾಮಕ್ಕೆ ಹೀಗಾಗಬಾರದಿತ್ತೆಂದು ಪರಿತಪಿಸುವ ಮನಃಸ್ಥಿತಿ; To press or squeezing hands eachother while one's plan goes wrong or loss;
- ಆಗಬೇಕಾದ ಕಾರ್ಯ ಕೈತಪ್ಪಿದಾಗ ಮನಸ್ಸಿನ ಅಸಮಾಧಾನವನ್ನು ವ್ಯಕ್ತಮಾಡುವುದಕ್ಕೆ ಕೂಡ ಈ ಪದ ಬಳಕೆ;
- ಹೆಚ್ಚು ಕಡಿಮೆ 'ಕೈಕೈ ಹಿಚಕು' ಪದವನ್ನೇ ಇದು ಹೋಲುತ್ತದೆ; ರೂಪದಲ್ಲಿ ಮಾತ್ರವಲ್ಲದೆ ಅರ್ಥದಲ್ಲಿ ಕೂಡ; 'ಕೈ' ಪದ ಎರಡರಲ್ಲೂ ಸಮಾನ, 'ಹಿಚಕು(ಹಿಸುಕು)' ಮತ್ತು 'ಹೊಸಕು' ಪದಗಳಲ್ಲಿ ಅಂತಹ ವ್ಯತ್ಯಾಸವೇನೂ ಇಲ್ಲ.

ಕೊಂಕ Koŋka :

- ಒಂದು ಕಾಡುಪ್ರಾಣಿ; An wild animal;
- ಒಂದು ಜಾತಿಯ ಮರ; A kind of tree;
- ಒಂದು ಪ್ರದೇಶದ ಹೆಸರು; ಕೊಂಕನಾಡು/ ಕೊಂಕದೇಶ; ಕೊಂಗ; ಕೊಂಗದೇಶ; ನೋಡಿ: ಕೊಂಗ; A name of region- Konkadesh/ Konknadu; Konga;
- ನೀಚ; ನೀಚ ಕುಲದವನು; Untouchable, downtrodden; *ಪ್ರ: 'ಕೊಂಕನಾಗಿ ಪುಟ್ಟಿ ಪಾಂಪಂಗೆಯ್ದು'(ವಡ್ಡಾ);*
- ಒರಟ; ವಕ್ರ; ಗೂನ; ಸೊಟ್ಟ ಬೆನ್ನು/ಮೈಯವನು; ಕೊಂಕು ಮಾತನಾಡುವವನು(ಳು); ಚುಚ್ಚು ನುಡಿ ನುಡಿಯುವವನು(ಳು); ಕೊಂಕು+ಅ; Crooked; A person who is rough and hunchback; **ನೋಡಿ:** ಕೊಂಕು.

ಕೊಂಕಣ Koŋkaṇa :

೧. ಕೊಂಕಣ ವಿಷಯ; ಕೊಂಕಣ ನಾಡು; ಒಂದು ಪ್ರದೇಶ, ಅದರ ಹೆಸರು; ಭಾರತದ ಪಶ್ಚಿಮ ಕರಾವಳಿಯಲ್ಲಿ, ಗೋವಾ ಹಾಗೂ ಅದರ ದಕ್ಷಿಣಕ್ಕೆ ಹರಡಿಕೊಂಡಿರುವ ಪ್ರದೇಶ; ಕೊಂಕಣಸೀಮೆ; A name of area; Konkan region of India; Goa and its Southern area;

- ಕೊಂಕಣವೆಂಬ ಪಡುವಣ ತೀರದ ನಾಡು (ಅನುಕೋ); Konkan is the west part of coastal belt or coast of any region;
- ಕೊಂಕಣ ಪ್ರದೇಶದಲ್ಲಿ ವಾಸ ಮಾಡುವ ಜನ ಕೊಂಕಣಿಗರು; ಕೊಂಕಣಿಗರು ಮಾತನಾಡುವ ಭಾಷೆ ಕೊಂಕಣಿ; ಕೊಂಕಣ–ಕೊಂಕಣಿ–ಕೊಂಕಣಿಗ ಅನ್ಯೋನ್ಯಾಶ್ರಿತ ರೂಪಗಳು; ಕೊಂಕಣಿಗರ ವರ್ತನೆ, ನಡವಳಿಕೆಗೆ ಸಂಬಂಧಿಸಿದ ಮಾತು 'ಕೊಂಕಣಿಕೆ'; ಮೂಲರೂಪ 'ಕೋಂಕಣ'(ಸಂ.) ಎನ್ನಲಾಗಿದೆ; The people who are dwelling in Konkan area are Konkanies, their language is Konkani;
- ತು.ತೆ.ತ.ಮ: ಕೊಂಗಣ; ಮರಾಠಿ: ಕೋಕಣ

- ಭರತ ಖಂಡದ ನಕ್ಷೆಯಲ್ಲಿ ನೈರುತ್ಯ ಮೂಲೆಯಲ್ಲಿ ಕೊಂಕಣಸೀಮೆ ಇದೆ; ಪೂರ್ವಕ್ಕೆ ಸಹ್ಯಾದ್ರಿಶ್ರೇಣಿ, ಪಶ್ಚಿಮಕ್ಕೆ ಸಮುದ್ರ, ಉತ್ತರದಲ್ಲಿ ಗುಜರಾತು, ದಕ್ಷಿಣದಲ್ಲಿ ಹೈಗ(ಗೋಕರ್ಣ) ಸುತ್ತುವರಿದಿರುವದು ಕೊಂಕಣನಾಡು ಎಂಬುದು ಒಂದು ಪಾರಂಪರಿಕ/ ಪೌರಾಣಿಕ ಉಲ್ಲೇಖ(**ನೋಡಿ:** ಪುನಾಚೂ.);

  Konkan area or region has been situated at South-western side of Indian map- to its East- Sahyadri to its West- Arabian sea, to its North- Gujarath, to its South Haiga(Gokarna) have surrounded- Konkan region;
- 'ಕೊಂಕಣ' ಎಂದರೆ ಮೂಲೆ, ಕೊಂಪೆ, ಸುತ್ತು ಬಳಸಿನ ಪ್ರದೇಶ ಎಂಬ ಗ್ರಹಿಕೆಯೂ ಇರುವಂತಿದೆ; 'ಕೊಂಕಣ ಸುತ್ತಿ ಮೈಲಾರಕ್ಕೆ ಹೋದ ಹಾಗೆ' ಎಂಬ ಗಾದೆ ಇದೆ; ತೀರಪ್ರದೇಶದ ತಗ್ಗಿನಲ್ಲಿರುವಂತಹದು ಕಣಿವೆಗಳಿಂದಾವೃತವಾದದ್ದು, ಗುಡ್ಡಗಳನ್ನು ಹತ್ತಿ–ಇಳಿದು, ಕಣಿವೆಗಳಲ್ಲಿ ಹರಿದು ಹೋಗಬೇಕಾದದ್ದು ಎಂಬ ಕಾರಣಕ್ಕೆ ಈ ಗ್ರಹಿಕೆ ಬಂದಿರಬಹುದು; ಮೈಲಾರ ಅಥವಾ ಮೈಲಾರಲಿಂಗನ ಕ್ಷೇತ್ರ ಮಧ್ಯ ಕರ್ನಾಟಕದ ಬಯಲುಸೀಮೆ(ಹಾವೇರಿಜಿಲ್ಲೆ) ಯಲ್ಲಿರುವುದರಿಂದ, ಬಹುತೇಕ ಈ ಕ್ಷೇತ್ರದ ಯಾತ್ರೆಯನ್ನೇ ಉದ್ದೇಶಿಸಿದಂತಿರುವ ಈ ಗ್ರಹಿಕೆ ದಕ್ಷಿಣ ಉತ್ತರ ಕರ್ನಾಟಕದವರಿಬ್ಬರ ಗ್ರಹಿಕೆಯೂ ಆಗಿದ್ದರೆ ಅದು ಸಹಜವೇ;
- 'ತೆಂಕಣ ದೇಶಕ್ಕೆ ಹೋಗಿ ಕೊಂಕಣ ಕೆಟ್ಟ', 'ಲಂಕೆಗೆ ಹೋದರೂ ಕೊಂಕಣಿಕೆ ಬಿಡಲಿಲ್ಲ', 'ಅಂಕಣದ ಮನೆಯಾದರೆ ಕೊಂಕಣಿಗನಿಗೆ ಆಗದೆ', 'ತೋಟ ಸೊಕ್ಕಿದರೆ ಆಡನಿರಿಸು, ನಾಡು ಸೊಕ್ಕಿದರೆ ಕೊಂಕಣಿಯನಿರಿಸು', 'ಕೊಂಕುಳಲ್ಲಿ ಕುರು ಸಲ್ಲ, ಕೊಂಕಣಿಗರ ನೆರೆ ಸಲ್ಲ', 'ಗೆದ್ದರೆ ಹಲವರು ಗೆದ್ದರು, ಸೋತರೆ ಕೊಂಕಣಿಗರ ಗಂಡು ಸೋತ'

  –ಇವು ಕೊಂಕಣ, ಕೊಂಕಣಿ, ಕೊಂಕಣಿಕೆ, ಕೊಂಕಣಿಗ ರೂಪಗಳನ್ನು ಒಳಗೊಂಡಿರುವ ಕೆಲವು ನಾಣ್ನುಡಿಗಳು; ವ್ಯಾಪಾರಿಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಲೆಕ್ಕಾಚಾರದ ಮನೋಭಾವಕ್ಕೆ 'ಕೊಂಕಣಿಯ ಬುದ್ಧಿ' ಎಂದು ಹೇಳಿಬಿಡುವ ನುಡಿಗಟ್ಟೂ ಇದೆ; ಇಲ್ಲೆಲ್ಲಾ ಕೊಂಕಣ ಸೀಮೆ ಹಾಗೂ ಕೊಂಕಣಿ ಜನರ ಬಗೆಗೆ ಇತರರಲ್ಲಿ ಒಂದು ಬಗೆಯ ಪೂರ್ವಾಗ್ರಹ ಮನೋಭಾವ ಸೃಷ್ಟಿಯಾಗಿರುವುದು ಗೋಚರಿಸುತ್ತದೆ.
- ಪರಶುರಾಮನು ಕಶ್ಯಪಮುನಿಗೆ ಭೂಮಂಡಲವನ್ನೆಲ್ಲ ಯಜ್ಞಮುಖೇಣ ದಾನ ಮಾಡಿದನೆಂದೂ, ದಾನ ಸ್ವೀಕರಿಸಿದ ಕಶ್ಯಪ ತನಗೆ ದಾನ ಕೊಟ್ಟ ಭೂಮಿಯಲ್ಲಿ ಪರಶುರಾಮನು ವಾಸ ಮಾಡಕೂಡದೆಂದು ಹೇಳಿದನೆಂದೂ, ಪರಶುರಾಮನು ಸಮುದ್ರರಾಜನ ಮೂಲಕ ಹೊಸದಾಗಿ ಸ್ವಲ್ಪ ಭೂಭಾಗವನ್ನು ಬಿಡಿಸಿಕೊಂಡನೆಂದೂ, ಹೀಗೆ ಬಿಡಿಸಿಕೊಂಡ ಪ್ರದೇಶಕ್ಕೆ ಶೂರ್ಪಾರಕವೆಂದೂ ಕೊಂಕಣವೆಂದೂ ಹೆಸರು ಎಂದೂ ಕಥೆ(ಪುನಾಚೂ.);

೨. ಮಕ್ಕಳ ಒಂದು ಆಟ(ತು.ಜಿ); A children play;

- —***ಕೊಂಕಣಿಕೆ*** : ಕೊಂಕಣ+–ಇಕೆ; ಕೊಂಕಣಸೀಮೆಯ ವಿಶಿಷ್ಟತೆ; ಕೊಂಕಣಿಗರ ನಡವಳಿಕೆ, ಅವರ ಸಂಸ್ಕೃತಿ; ಕೊಂಕಣ ಬ್ರಾಹ್ಮಣನ(ರ) ವರ್ತನೆ; A speciality of Konkan region; the behaviour of Konkan Brahmins;
- —***ಕೊಂಕಣಿಗ*** : ಕೊಂಕಣ+–ಇಗ; ಕೊಂಕಣಿ+–ಇಗ ಎಂದೂ ಹೇಳಬಹುದು; 'ಕೊಂಕಣಸ್ಥ' ಎಂದೂ ಉಂಟು; ಕೊಂಕಣ ಸೀಮೆಯವನು; ಕೊಂಕಣಿ ಭಾಷೆ ಮಾತನಾಡುವವನು; ಕೊಂಕಣ ಬ್ರಾಹ್ಮಣ(ಅನುಕೋ.); ಗೋವಾ ಪ್ರದೇಶದಿಂದ ಬಂದ ಒಂದು ಸಮುದಾಯಕ್ಕೆ ಸೇರಿದ ವ್ಯಕ್ತಿ; ಗೌಡ ಸಾರಸ್ವತ ಬ್ರಾಹ್ಮಣ(ಕನಿ.). The person who dwells and speaks in Konkan region and Konkan language respectively.

ಕೊಂಕಣಗೇರಿ koŋkaṇagēri :

- ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲ್ಲೋಕಿನ ಕ್ರಿ.ಶ.೧೧೬೮ರ ೨೫ನೇ ನಂಬರಿನ ಶಾಸನದಲ್ಲಿ ಇದರ ಪ್ರಸ್ತಾಪ; A place that mentioned in 25th inscription of 1168AD found in Bellari taluk of Bellari District;
- ಕೊಂಕಣ+ಕೇರಿ>ಕೊಂಕಣಕೇರಿ>ಕೊಂಕಣಗೇರಿ (ಕ>ಗ);
- ಕೊಂಕಣಗೇರಿಯ ಗಾವುಂಡನ ಮಗ(ಹೆಸರು ಹಾಳಾಗಿದೆ) ಋಣಮೋಚನ ದೇವರ ಪ್ರತಿಷ್ಠೆಯ

ಸಂದರ್ಭದಲ್ಲಿ ಖಂಡ ಸ್ಫುಟಿತ ಜೀರ್ಣೋದ್ಧಾರಕ್ಕೆ ನೀಡಿದ ಭೂದಾನದ ವಿವರ;

- 'ಕೊಂಕಣನಾಡು' ಎಂದರೆ ಪಶ್ಚಿಮ ಕರಾವಳಿಯ ಭಾಗಗಳನ್ನು ಹಾಗೆಂದು ಕರೆಯುವುದು ವಾಡಿಕೆ;
- ಬಹುಶಃ ಕೊಂಕಣಿ ಮಾತಾಡುವವರು ಈ ಊರಿನಲ್ಲಿದ್ದುದರಿಂದ 'ಕೊಂಕಣಗೇರಿ' ಎಂಬ ಹೆಸರು ಬಂದಿರಬೇಕು. Perhaps `Konkanigeri' is named after Konkanis who spoke Konkan language.

(ಕ.ವಿ.ವಿ.ಶಾ.ಸಂ.೧; ಬ.ಜಿ.)

ಕೊಂಕಣ ಸುತ್ತಿ ಮೈಲಾರಕ್ಕೆ ಬಂದಂತೆ konkaṇa sutti mylārakke bandante :

- ಇದು ನುಡಿಗಟ್ಟು ಹೌದು; ಗಾದೆಯೂ ಹೌದು; ಎರಡೂ ಆಗಿಯೇ ಕನ್ನಡದಲ್ಲಿ ಬಳಕೆಗೊಂಡಿದೆ; It is an idiom and a proverb also;
- ಮೈಲಾರಲಿಂಗನ ಕ್ಷೇತ್ರಕ್ಕೆ ಬರುವಾಗ ಜನರು ಪಶ್ಚಿಮಕರಾವಳಿಯ ಕೊಂಕಣ ಪ್ರದೇಶವನ್ನು ಬಳಸಿಕೊಂಡು ಬರುತ್ತಿದ್ದರು ಎಂಬ ವಸ್ತು ಇದರಲ್ಲಿದೆ; ಇದಕ್ಕೆ ನದಿ ಅಡ್ಡಬಂದುದೆ ಕಾರಣವಿರಬೇಕು; ಆಗ ನೇರವಾಗಿ ಬರಲು ನದಿಗೆ ಸೇತುವೆ ಇಲ್ಲದಿದ್ದರಿಂದ ಜನ 'ಬಳಸು ದಾರಿ'ಯನ್ನು ಹಿಡಿಯಬೇಕಾಯಿತು ಎಂಬುದು ಅರ್ಥ; ಪ್ರಸ್ತುತ ನುಡಿಗಟ್ಟಿನ ಹುಟ್ಟಿಗೆ ಇದೇ ಹಿನ್ನೆಲೆ; It indicates a journey that is not direct route but it takes a lot of walking through woods, valley, hills to reach Mailara due to the lack of a bridge across the river;
- ನುಡಿಗಟ್ಟು ಈಗ ಅದೇ ಅರ್ಥವನ್ನು ಉಳಿಸಿಕೊಂಡಿಲ್ಲ; ಭೌಗೋಳಿಕ ಅರ್ಥವಾಗಲಿ, ಸಮಸ್ಯೆಯಾಗಲಿ ಅದಕ್ಕೀಗ ಅಂಟಿಕೊಂಡಿಲ್ಲ; ಮೂಲ ಉದ್ದೇಶವನ್ನು ಉಳಿಸಿಕೊಂಡು, ಅದನ್ನು ದಾಟುವ ಪ್ರಯತ್ನವನ್ನು ನುಡಿಗಟ್ಟು ಮಾಡಿದೆ;
- ಈಗ ಇದರ ಅರ್ಥ ಬಳಸಿಕೊಂಡು ಅಥವಾ ಸುತ್ತಿಕೊಂಡು ಬರುವ ಎಲ್ಲ ಸಂದರ್ಭಗಳಿಗೂ ಅನ್ವಯವಾಗುತ್ತದೆ; ನೇರದಾರಿ ಇರದ, ಬಳಸುದಾರಿಗೆ ಸಂಬಂಧಿಸಿರುವಂಥದು; `round about' ಎನ್ನುತ್ತಾರಲ್ಲ ಅದು; ಇದು 'ನಡೆ'ಗೆ ಮಾತ್ರ ಸಂಬಂಧಿಸಿದ್ದಲ್ಲ, 'ಸಮಸ್ಯೆ'ಗೂ ಅನ್ವಯವಾಗುತ್ತದೆ; ಅಂದರೆ ವಿಷಯವನ್ನು ನೇರವಾಗಿ ಹೇಳದೆ, ಸುತ್ತಿ ಬಳಸಿ ಹೇಳಲು ಹೋದಾಗ ಕೂಡ ಈ ನುಡಿಗಟ್ಟನ್ನು ಹೇಳಲಾಗುತ್ತದೆ ಎಂಬುದು ವಿಶೇಷ; ಒಂದು ರೀತಿಯಲ್ಲಿ 'ತಲೆಶಿರೋ ಭಾರ' ಎಂದಂತೆ; ಅರ್ಥ ವಿಸ್ತಾರವೇ ಅದರ ಜನಪ್ರಿಯತೆಗೂ ಕಾರಣವಾಗಿದೆ;
- ಈ ನುಡಿಗಟ್ಟಿನಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ, ಮೈಲಾರಲಿಂಗನ ಭಕ್ತರು ದೂರದ ಪ್ರದೇಶಗಳಿಂದ ಬರುತ್ತಿದ್ದರೆಂಬುದು; ಹಾಗೆ ಬರುವಾಗ ಅವರಿಗೆ ಒದಗಿ ಬರುತ್ತಿದ್ದ ಅಡಚಣೆಯೊಂದನ್ನು ಈ ನುಡಿಗಟ್ಟು ಹೇಳುತ್ತದೆ; ನಡೆದೇ ಬರುತ್ತಿದ್ದರಿಂದ 'ಬಳಸು ದಾರಿ' ಸಹಜವಾಗಿ ಅವರ ನಡೆಯನ್ನು ಹೆಚ್ಚಿಸುತ್ತಿತ್ತೆಂಬುದೂ ಗಮನಿಸುವಂಥದು; ಸೌಕರ್ಯ ಇಲ್ಲದಿದ್ದ ಕಾಲದಲ್ಲಿ ಈ ನುಡಿಗಟ್ಟು ಜನ್ಮತಳೆದಿದ್ದು, ಆ ಕಾಲದ ಪ್ರಯಾಣ ಸಂಬಂಧವಾಗಿ ಇದ್ದ ಸಮಸ್ಯೆಯೊಂದರ ಮೇಲೆ ಇದು ಬೆಳಕು ಚೆಲ್ಲುತ್ತದೆ.

ಕೊಂಕಶಾಲೆ/ಕೊಂಕಸಾಲೆ Koŋkaśāle/ Koŋkasāle :

- ಬತ್ತದ ಒಂದು ತಳಿ(ತು.); A paddy breed;
- ಪ್ರಾದೇಶಿಕ ಹಿನ್ನೆಲೆಯಲ್ಲಿ ಬತ್ತದ ತಳಿಯೊಂದನ್ನು ಗುರುತಿಸುವ ಪರಿಪಾಠ ಇಲ್ಲಿದೆ;
- ಕೊಂಕನಾಡು/ಕೊಂಗನಾಡು (ಕೊಯಮತ್ತೂರು, ಸೇಲಂ ಮತ್ತು ಕರ್ನಾಟಕದ ಕೆಲಭಾಗಗಳು ಸೇರಿದ ಪ್ರದೇಶ) ಹಾಗೂ ಕೊಂಕಣಸೀಮೆ ಎರಡೂ ಬತ್ತದ ಬೆಳೆಗೆ ಪ್ರಸಿದ್ಧವಾದವುಗಳೇ; The area or region of Coimbatore, Salem of Tamilnadu and a few parts of Karnataka is called as Konganadu; Konkanadu and Konkana Seeme; both are famous for paddy crops;
- ಶಾಲಿ/ಶಾಲೆ(ಸಂ.)=ಬತ್ತ;
- 'ಕೊಂಕ' ಪದ ಕೊಂಕನಾಡು, ಕೊಂಕಣಸೀಮೆ ಎರಡರಲ್ಲಿ ಯಾವುದನ್ನು ಕುರಿತಿದೆ ಎಂದು ನಿರ್ಧರಿಸುವುದು ಕಷ್ಟ; 'ಕೊಂಕಶಾಲೆ' ತುಳುನಾಡಿನಲ್ಲಿ ಪ್ರಚಲಿತವಿರುವುದರಿಂದ ಇಲ್ಲಿನ 'ಕೊಂಕ' 'ಕೊಂಕಣ್'ದ ಸಂಕ್ಷೇಪವೇ ಆಗಿರುವ ಸಾಧ್ಯತೆ ಹೆಚ್ಚು;
- ಕರಾವಳಿಸೀಮೆ ಮದ್ರಾಸ್ ಆಡಳಿತಕ್ಕೆ ಒಳಪಟ್ಟಿದ್ದ ಪ್ರದೇಶವಾಗಿದ್ದುದರಿಂದ 'ಕೊಂಕ/ಕೊಂಗ ನಾಡನ್ನೇ ಸೂಚಿಸುತ್ತಿರುವ ಸಾಧ್ಯತೆಯನ್ನೂ ತಳ್ಳಿಹಾಕುವಂತಿಲ್ಲ;

- 'ಕೊಯಮತ್ತೂರುಸಣ್ಣ' ಎಂಬ ಬತ್ತದ ತಳಿಯೊಂದು ಹಳೆಯ ಮೈಸೂರು ಪ್ರದೇಶದಲ್ಲಿ ವಿಶೇಷವಾಗಿ ಮಂಡ್ಯ, ಮೈಸೂರು ಜಿಲ್ಲೆಗಳ ವ್ಯಾಪ್ತಿಯಲ್ಲಿ ಪ್ರಸಿದ್ಧಿ ಪಡೆದಿದ್ದ ಕಾಲವೊಂದಿತು; `Coimbatore Sanna' a paddy breed is a familiar paddy breed around old Mysore regions- Mandya, Mysore;
- ಕೊಂಕ=ಬಾಗಿದ; ವಕ್ರವಾದ; ಬತ್ತದ ಗೊನೆ ಸಮಾನ್ಯವಾಗಿ ನೆಲಕ್ಕೆ ಬಾಗಿರುತ್ತದೆ; ಕೊಂಕಶಾಲೆ=ಬಾಗಿದ ಗೊನೆಯ ಬತ್ತ; ಎಲ್ಲ ಜಾತಿಯ ಬತ್ತದ ಗೊನೆಗಳೂ ಬಾಗುತ್ತವಾದುದರಿಂದ ಈ ಅರ್ಥ ಒಂದು ನಿರ್ದಿಷ್ಟ ಬತ್ತದ ತಳಿಯನ್ನು ಹೇಳದೆ ಸಾಮಾನ್ಯಾರ್ಥದ ವ್ಯಾಪ್ತಿ ಪಡೆದುಬಿಡುತ್ತದೆ; ಈ ಸಾಧ್ಯತೆ ಕಡಿಮೆ; ಪ್ರಾದೇಶಿಕತೆಯ ಹಿನ್ನೆಲೆಯಲ್ಲಿ ಬತ್ತದ ತಳಿಯ ಪ್ರಕಾರಗಳನ್ನು ಗುರುತಿಸುವ ಪ್ರವೃತ್ತಿಯೇ ಇಲ್ಲಿ ದೃಢಪಡುವಂತಹುದು.

ಕೊಂಕಳಕ Koŋkaḷaka :

- ಒಂದು ಬಗೆಯ ಸಸ್ಯ; ಕೊಂಕಳಕದ ಗಿಡ; A kind of plant species;
- ಭೂಮಿಹುಣ್ಣಿಮೆಯ ದಿವಸ ಮಾಡುವ ಬೆರಕೆ ಸೊಪ್ಪಿನ ಪಲ್ಯಕ್ಕೆ ಈ ಗಿಡದ ಸೊಪ್ಪನ್ನೂ ಬಳಸುತ್ತಾರೆ.

ಕೊಂಕಾರು Koŋkāru :

- ಒಂದು ಜಾತಿಯ ಕಳ್ಳಿಗಿಡ; ಪಾಪಾಸು ಕಳ್ಳಿ; ಪಾಪಾಸ್ಗಳ್ಳಿ; A kind of cactus or cercus;
- ಒಂದು ಬಗೆಯ ಪಾದರಕ್ಷೆ; ಅಂಗಾಲಿಗೆ ರಕ್ಷೆಯಾಗಿ ತೊಡಲು ಬಳಕೆ; A kind of Sandal or Slipper;
- ತುಳುವಿನಲ್ಲಿ 'ಕೊಂಗ್‌ಕೋರ್' (=ಅಂಕುಡೊಂಕು) ರೂಪವಿದೆ; ಡೊಂಕು ಎಂಬ ಅರ್ಥದ ಕೊಂಕ್/ ಕೊಂಕು ಗೆ ಕೋರ್ ಸಾಮ್ಯ ರೂಪವಾಗಿ ಪ್ರಾಸಕ್ಕೋಸ್ಕರ ಸೇರಿದ್ದಿರಬುದು; ಇದು ಇನ್ನೂ ಮೂಲ(ದ್ರಾವಿಡ)ದಲ್ಲಿ ಕೊಂಕ್‌ಕಾರ್/ಕೊಂಕ್‌ಕೋರ್ ಎಂದಿದ್ದು 'ಕೊಂಕಾರು' ಆದಂತೆ ಕಾಣುತ್ತದೆ; `Kongcore' in Tulu means bent, carved;
- ಕೊಂಕ್‌ಕಾರ್/ಕೊಂಕ್‌ಕೋರ್>ಕೊಂಕಾರು;
- ಪಾಪಾಸುಗಳ್ಳಿಯಾಗಲಿ, ಪಾದರಕ್ಷೆಯಾಗಲಿ ನೇರವಾಗಿಯೇನೂ ಇರುವುದಿಲ್ಲ; ಅವುಗಳ ಆಕೃತಿ ಅಂಕುಡೊಂಕಾಗಿಯೇ ಇರುತ್ತದೆ.

ಕೊಂಕಿ Koŋki :

೧. ಕೊಂಕು+-ಇ; ಕೊಂಕಿದ; ಬಾಗಿರುವ; ಕೊಂಕು ಸ್ವಭಾವದ; ವ್ಯಂಗ್ಯ, ಕುಚೋದ್ಯ, ದುಷ್ಟತನದಿಂದ ಕೂಡಿರುವ; Carved, bent, Satirical, ironical;

- 'ಕೊಂಕು' ಎಂಬ ವಿಶೇಷಣ ರೂಪದ ನಿಷ್ಪನ್ನ ರೂಪಗಳಾದ 'ಕೊಂಕ' ಪುರುಷವಾಚಕ; 'ಕೊಂಕಿ' ಸ್ತ್ರೀವಾಚಕ; ಕೊಂಕು ನುಡಿ ನುಡಿಯುವವಳು; ವಕ್ರಸ್ವಭಾವದ, ದುಷ್ಟವೃತ್ತಿಯ ಹೆಂಗಸು;

೨. ಮೇಟಿಕೋಲು; ಕೊಕ್ಕೆ ಕಡ್ಡಿ; ಮೆರೆಕೋಲು; ಮೆರೆದೊಣ್ಣೆ; A long bamboo cudgel that is bended at its one's edge;

- ಆಳೆತ್ತರದ, ಅಥವಾ ಅದಕ್ಕೂ ಸ್ವಲ್ಪ ಚಿಕ್ಕದಾದ, ಹಿಡಿ ಗಾತ್ರದ ಬಿದಿರಿನ ನೀಳ ಕೊಲಿನ ಕಂಕುಳುಗಳನ್ನು ಕತ್ತರಿಸಿ ತೆಗೆದು ತುದಿಯಲ್ಲಿ ಮಾತ್ರ ಒಂದು ಕಂಕುಳನ್ನು(ಟಿಸಿಲನ್ನು) ಕೊಕ್ಕೆಯಂತೆ ಬಾಗಿಸಿರುತ್ತಾರೆ; ನೀಳ ಕೋಲಿಗೆ ಕಬ್ಬಿಣದ ಕೊಕ್ಕೆ ಅಳವಡಿಸಿರುವುದೂ ಉಂಟು;
- ಕಣದಲ್ಲಿ ಬತ್ತ ರಾಗಿ ಮೊದಲಾದ ಬೆಳೆಯ ಹುಲ್ಲನ್ನು ಒಕ್ಕಣೆಗೆ ಹಾಸಿ ಒಣಗಿಸುವಾಗ, ಗುಂಡು/ ರೋಣುಗಲ್ಲನ್ನು ಹೊಡೆದು ಕಾಳು ಉದುರಿಸಿಕೊಳ್ಳುವಾಗ, ಮೇಲ್ಬದಿಯ ಹುಲ್ಲನ್ನು ತಳಕ್ಕೂ ತಳದ ಹುಲ್ಲನ್ನು ಮೇಲಕ್ಕೂ ಮೊಗುಚಲು, ಹರಡಿದಂತಿರುವ ಹುಲ್ಲನ್ನು ಒಂದೆಡೆಗೆ ಬಳಿದುಕೊಳ್ಳಲು ಈ ಕೋಲು ಬಳಕೆ; It is used while thrashing paddy or millet to shuffle the rolled paddy or millet straws;
- ಮಲೆಯ ಮಾದೇಶ್ವರನ ಬೆಟ್ಟಕ್ಕೆ ಯಾತ್ರೆ ಹೋದಾಗ, ಅಲ್ಲಿ ತಯಾರಾದ ಇಂತಹ ಸಾಧನಗಳನ್ನು ತಂದುಕೊಳ್ಳುವ ರೂಢಿ ಇತ್ತು(ಮಂಡ್ಯಜಿ.);
- ಮೀನಿನಾಕಾರದ ಹುಕ್ಕನ್ನು ಅಳವಡಿಸಿದ ಕಲಾತ್ಮಕ ಕೊಂಕಿಗಳೂ ಉಂಟು; ಇದು ಕೊಂಕಿನಾರಸ ಕೊಕ್ಕೆ(?);
- ಪರೂ: ಕೊಂಗ್ರಿಕಟ್ಲೆ(?).

ಕೊಂಕು Koŋku :

- ವ್ಯಂಗ್ಯ; ವ್ಯಂಗ್ಯದಿಂದ ಕೂಡಿದ ಮಾತು; ವಕ್ರೋಕ್ತಿ; ಕೊಂಕುನುಡಿ; ಚುಚ್ಚುಮಾತು; ಕಟಕಿ; Irony, a specch having irony;

ಪ್ರ: 'ಅಂಗೆಲ್ಲ ಕೊಂಕು ಮಾತಾಡಿ ನೋಯಿಸಬ್ಯಾಡ'; 'ಕೊಂಕಿನ ನುಡಿಯಾದರೂ ಮಂಕು ಬಿಟ್ಟರೆ ಸರಿ'(ನ.ಗಾ.);

- ಡೊಂಕು; ಬಾಗು; ವಕ್ರ; ಬಳುಕು; ಡೊಂಕಾಗು; ವಕ್ರವಾಗು; ಅಡ್ಡ ಪ್ರವೃತ್ತಿ ತೋರು; Screwness, Flexion, Grotesqueness, Untowardness;
*ಪ್ರ: 'ಆ ಕೊಂಕು ಮರ ಯಾತಕ್ ಬಂದದು, ಕುಯ್ಲಂಗಾಟಿ ಮಾಡುಸ್ಬೋದು ಅಸ್ಟೆಯ';
'ಕೊಂಕಿನ ದೇವರಿಗೆ ಕೊಡತಿ ಮದ್ದು'(ನ.ಗಾ.);*
ಯಾರಾದರೆನು, ಅಡ್ಡಪ್ರವೃತ್ತಿ ತೋರುವವರನ್ನು ದಂಡಿಸಿ ನೇರ್ಪುಗೊಳಿಸುವಲ್ಲಿ ದಯಾದಾಕ್ಷಿಣ್ಯ ತೋರಬಾರದು ಎಂಬ ನಿಲುವು ಈ ಗಾದೆಯದು;
- ಉದ್ವೇಗಗೊಳ್ಳು; ರೇಗು; ಬಾಧಿಸು; Grump, crab, peppery, shrew;
- ಅಳುಕು; ಅಂಜಿಕೆ; ತೊಂದರೆ; ಬಾಧೆ
ಪ್ರ: 'ಒಬ್ಬೆ ಮಗ್ಗಲ್ ಹೊಯ್ತಿದ್ದೆ, ಅದೇನೊ ಸರಸರ ಅಂತು, ಜೀವ ಕೊಂಕ್ದಂಗಾಯ್ತು, ಸಳಿಜರ ಬಂದ್ಬಟ್ಟೊ (ಮಂಡ್ಯಜಿ.);
- ಕುಂದು; ದೋಷ; ಕೊರತೆ ಬೀಳು; ಊನವಾಗು; ಕಡಿಮೆಯಾಗು; Mistake, fault, flaw blot, blur;
ಪ್ರ: 'ಅದೊಂದು ಕೊಂಕ್‌ಮೂದೇವಿ, ಜೀವುನ್ದಲ್ ಉದ್ದಾರ ಆಗಿಕಿಲ್ಲ';
'ಅವ್ಳು ಕೂದ್ಲೂ ಕೊಂಕ್ದಂಗ್ ಬಾಳ್ದೌಳು, ಗೊತ್ತಾ';
- ಭಗ್ನ; ವಿಕಟ; ಕರಾಳ; ಕುಟಿಲ;
- ***—ಕೊಂಕಕತ್ತಿ/ಕೊಂಗತ್ತಿ:*** ಕೊಂಕು+ಕತ್ತಿ;(ಕತ್ತಿ>ಗತ್ತಿ; ಕ>ಗ;) ಎರಡು ಪದಗಳ ಮಧ್ಯೆ ಒಂದೇ ರೀತಿಯ ಎರಡು ಧ್ವನಿಮಾಗಳು ಬಂದರೆ, ಒಂದು ಇಲ್ಲವಾಗಿ ಒಂದೇ ಪದವಾಗಿ ಗೋಚರ;
- ದೊಡ್ಡಬೇಲಿ, ಮೆಳೆ, ಮರ ಮೊದಲಾದುವನ್ನು ಕತ್ತರಿಸುವ ಒಂದು ಬಗೆಯ ಕತ್ತಿ; ಕಡಿಗತ್ತಿ; ಕುಡುಗೋಲಿಗಿಂತ ದೊಡ್ಡದಾದ ಕತ್ತಿ ಮತ್ತು ಬಾಗಿದ ಅಲಗು ಇರುವ ಕತ್ತಿ; ಕುಡುಗೋಲಿಗಿಂತ ಸ್ವಲ್ಪ ದೊಡ್ಡದಾದ ಕೊಂಗತ್ತಿಯನ್ನು ಕಬ್ಬು ಕಡಿಯುವಾಗ, ಬತ್ತ ರಾಗಿ ಮೊದಲಾದ ಬೆಳೆಗಳ ಕೊಯ್ಲು ಮಾಡುವಾಗ ಬಳಸಲಾಗುತ್ತದೆ; A kind of big or large sickle that is used to cut fence or tree; it is used to cut sugarcane;
- ***—ಕೊಂಕಾಟ :*** ಕೊಂಕು+ಆಟ>ಕೊಂಗು+ಆಟ> ಕೊಂಗಾಟ ಆಗಬಹುದು; ಕೊಂಕು ನಡತೆ; ಚೇಷ್ಟೆ; ಕುಟಿಲ ನಡವಳಿಕೆ; Cheating behaviour, Mischievousness, Harassment;
- ***—ಕೊಂಕಿಶೇಮರಾಮಿ(?) :*** ಕೊಂಕು+ಶೇಮ(?) +ಹರಾಮಿ; ಹ–Ø; ಕೊಂಕು ಮಾತನಾಡುವ ಗಂಡುಬೀರಿ; ಒರಟು ಮಾತನಾಡುವ ಒರಟು ಸ್ವಭಾವದ ಹೆಣ್ಣುಮಗಳು/ಹೆಂಗಸು; ಹರಾಮಿ=ಕೀಳು ನಡತೆಯ ಹೆಣ್ಣು, ಜಾರೆ; ಜನಪದರಲ್ಲಿ 'ಹರಾಮಿ' ನಡತೆಗೆಟ್ಟವಳು ಎಂಬ ಅರ್ಥದಲ್ಲಿ ಬಳಕೆಯಾಗುವುದು ವಿರಳ; ಹಿರಿಯರು ಕಿರಿಯರು, ಗಂಡಸು ಹೆಂಗಸು, ಯಾರನ್ನೂ ಯಾವುದನ್ನೂ ನೋಡದೆ ತಿರುಗಿ ಬೀಳುವವಳು, ಹಿಂದಿರುಗಿ ಮಾತನಡುವವಳು ಎಂಬರ್ಥದಲ್ಲೇ ಹೆಚ್ಚು ಬಳಕೆ; Amazonion Tomboy; A girl or woman who has manly manners or attitudes;
- ***—ಕೊಂಕಿಸು :*** ಕೊಂಕು+–ಇಸು; ಸೊಟ್ಟ ಮಾಡು; ಬಾಗಿಸು; ಓರೆ ಮಾಡು; ಪೀಡಿಸು; ಬಾಧಿಸು; ವಕ್ರವಾಗಿಸು; inflect to bend inward of a thing;
- ***—ಕೊಂಕು ಊದುಕೊಳವೆ :*** ಊದುವ ಒಂದು ಬಗೆಯ ಕೊಳವೆ; ತುದಿಯಲ್ಲಿ ರಂಧ್ರ ಸಣ್ಣದಾಗಿ ಸ್ವಲ್ಪ ಬಾಗಿದ ಸಣ್ಣ ಗಾತ್ರದ ಕೊಳವೆ; ಬಾಗಿದ ಕೊಳವೆ; ಅಕ್ಕಸಾಲಿಗರು ಆಭರಣಗಳಿಗೆ ಬೆಸುಗೆ ಹಾಕುವಾಗ ಬಳಸುವುದು ಸಾಮಾನ್ಯ(ಬೆಂ.ಗ್ರಾ.ಜಿ.); A blowing pipe having small hole at one of its edge used by a goldsmith;
- ***—ಕೊಂಕುಗಣ್ಣು :*** ಕೊಂಕು+ಕಣ್ಣು; ಕ>ಗ; ವಕ್ರಕಣ್ಣು; ಕೆಟ್ಟಕಣ್ಣು; the evil eye;
ಪ್ರ: 'ಆಕಿನ ನೋಡಬ್ಯಾಡ, ಕೊಂಕುಗಣ್ಣಿನಾಕಿ ಅದಾಳ;
- ***—ಕೊಂಕುಗೂದಲು :*** ಕೊಂಕು+ಕೂದಲು; ಕ>ಗ; ಬಾಗಿದ ಕೂದಲು; ನೀಳವಾಗಿದ್ದು ತುದಿಯಲ್ಲಿ ಬಾಗಿದ ಅಥವಾ ಗುಂಗುರಾದಕೂದಲು; curly hair;

- ***—ಕೊಂಕುಗೊಂಬು*** : ಕೊಂಕು+ಕೊಂಬು; ಕ>ಗ; ಡೊಂಕಾದಕೊಂಬು; ಬಾಗಿದಕೊಂಬು; carved horn of a cattle;
- ***—ಕೊಂಕುನುಡಿ*** : ವ್ಯಂಗ್ಯದ, ಕುಚೋದ್ಯದ ಮಾತು; ಚುಚ್ಚುಮಾತು; ಕಟಕಿ; ನಿಂದನೆ; ಅಪಹಾಸ್ಯ; ಪರೂ: ಕೊಂಕುಮಾತು; ironical speech, teasing speech, funny talk, innuendo; *ಪ್ರ: 'ಕೊಂಕುನುಡಿ ನುಡಿದು ಮುಖಾ ಮುರಿಯಬ್ಯಾಡ';*
- ***—ಕೊಂಕುನೋಟ*** : ಓರೆನೋಟ; ಕಡೆಗಣ್ಣ ನೋಟ; ವೈರ, ದ್ವೇಷ, ದುರ್ಭಾವ, ದುಷ್ಟತನದ ನೋಟ; ಕೀಟಲೆಯ/ಅವಮಾನಿಸುವ ಕಣ್ಣೋಟ; *ಪ್ರ: 'ಆ ಬಿನ್ನಾಣಗಿತ್ತಿಯ ಕೊಂಕುನೋಟಕ್ಕೆ ಹೆದರೋರು ಯಾರು'*(ಮಂಡ್ಯಜಿ.). Hatredness rivalry; sidelong glance.

ಕೊಂಕುಳರಿವೆ Koŋkuḷarrive :

- ಕೊಂಕುಳ ಅರಿವೆ; ಕಂಕುಳಿನ ಬಟ್ಟೆ; ಹೆಣ್ಣುಮಕ್ಕಳ ಕುಬಸದ ಕಂಕುಳಿಗೆ ಹಾಕುವ ಅರಿವೆ; ರವಕೆ ಅಥವಾ ಕುಪ್ಪಸ(>ಕುಬಸ)ದ ತೋಳಿನ ಬಟ್ಟೆ; Cloth that is used to stitch a blouse or shoulder; part of a blouse;
- ರವಕೆ ಅಥವಾ ಕುಪ್ಪಸ ಹೊಲಿಯುವಾಗ ಅದರ ಎರಡೂ ತೋಳಿಗೆ ವಿಶೇಷ ಜರಿಯ, ಕಲಾಪತ್ತಿನ, ಕಸೂತಿಯ ಪ್ರತ್ಯೇಕ ಬಟ್ಟೆಯನ್ನು ಸೇರಿಸಿ ಹೊಲಿಯುವುದುಂಟು; ಕಂಕುಳ ಬೆವರಿಗೆ ಈ ವಿಶೇಷ ಬಟ್ಟೆ ಬೇಗನೆ ಹಾಳಾಗದಿರಲಿ ಎಂದು ರವಕೆಯ ತೋಳಿನ ಒಳಬದಿಗೆ ಬೇರೆ ಬಟ್ಟೆಯನ್ನು ಸೇರಿಸಿ ಹೊಲಿಯುತ್ತಾರೆ; ರವಕೆಯ ಕಂಕುಳಿನ ಭಾಗಕ್ಕೆ ಸೇರಿಸುವ ಈ ಹೆಚ್ಚುವರಿ ಬಟ್ಟೆ 'ಕೊಂಕುಳರಿವೆ'(ಬಾ.ಜಿ.); ಇಂತಹ ಹೊಲಿಗೆ ಉತ್ತರ ಕರ್ನಾಟಕದ, ವಿಶೇಷವಾಗಿ ಲಂಬಾಣಿ ಸ್ತ್ರೀಯರ ಉಡುಪಿನಲ್ಲಿ ಸಾಮಾನ್ಯ; A designary cloth; used to design the shoulder part of a blouse cloth; *ಪ್ರ: 'ಕುಬಸ ಹೊಲೀಬೇಕಂದ್ರ ಕೊಂಕಳರವಿ ಬೇರೇನೆ ಕೊಡಬೇಕು';*
- ಕೊಂಕುಳು(<ಕೌಂಕುಳ್/ಟ್)=ಕಕ್ಷಮೂಲ; ಬಾಹುಮೂಲ; ಭುಜದ ಕೆಳ ಸಂದು; ತೋಳಿನ ಬುಡ/ಸಂದು; ಮೇಲುತೋಳು; ಕಂಕುಳು; Armpit;
- ಕವುಂಕುಳ್/ಟ್>ಕೌಂಕುಳ್/ಟ್>ಕೊಂಕುಳ್/ಟ್> ಕೊಂಕುಳು>ಕಂಕುಳು>ಕಂಕ್ಳು; ತ: ಕಮುಕ್ಕಟ್ಟು; ತೆ: ಕೌಂಗಿಲಿ; ತು:ಕಂಕುಳ; ಅರಿವೆ=ಬಟ್ಟೆ;

ಕೊಂಕ್ಳು/ಕೊಂಕುಳು Koŋkḷu/Koŋkulu:

- ಕಂಕುಳು; ತೋಳಿನ ಸಂದಿ; ಬಗಲು; ಕಕ್ಷಪುಟ; Armpit, under arm;
- ಕವುಂಕುಳ್>ಕೌಂಕುಳ್>ಕೊಂಕುಳು/ಕೊಂಕ್ಳು> ಕಂಕುಳು/ಕಂಕ್ಳು; *ಪ್ರ:* 'ಕೊಂಕುಳ್ದಾಗ್ ಕೂಸಿಟ್ಕೊಂಡು ಕೇರಿಲೆಲ್ಲಾ ಹುಡ್ಕಾಡುದ್ರಂತೆ (ಚಾ.ಜಿ.);
- ವಿವರಗಳಿಗೆ ನೋಡಿ: ಕಂಕುಳು.

ಕೊಂಗ್‌ಪಂಗ್ ಚೋತ್ರ Koŋgpang cōtra:

- ಅಂಕುಡೊಂಕಾದ ಅಥವಾ ವಕ್ರವಕ್ರವಾದ ಧೋತ್ರ (?);
- ಕಚ್ಚೆ ಹಾಕುವ ಧೋತಿ/ಪಂಚೆ; ಧೋತ್ರ; A style of tying waist cloth or saree by Brahmin men or women;
- ಬ್ರಾಹ್ಮಣ ವಿಧವೆಯರು ಕಚ್ಚೆ ಹಾಕಿ ಉಡುವ ಕೆಂಪುಧೋತ್ರ;
- ವಕ್ರವಕ್ರ, ಅಂಕುಡೊಂಕು, ಅಡ್ಡತಿಡ್ಡ, ಓರೆಕೋರೆ ಎಂಬ ಅರ್ಥದಲ್ಲಿ ಕೊಂಗ್, ಕೊಂಗರ್, ಕೊಂಗ್‌ಕೋರ್(ತು), ಕೊಂಕುವಂಕು, ಕೊಂಗ–ಮಂಗ, ಕೊಂಗರಿಬಿಂಗರಿ(ಕ) ಮೊದಲಾದ ರೂಪಗಳಿವೆ; ಕೊಂಗ=ಸಪೂರ ಉದ್ದವಾದ(ತು.ನಿ.) ಎಂದೂ ಇದೆ; ಇಂತಹ ಸಾಮ್ಯರೂಪ ಜೋಡಣೆಯಾಗಿ 'ಕೊಂಗ್‌ಪಂಗ್' ರೂಪುಗೊಂಡಿರುವಂತೆ ಕಾಣುತ್ತದೆ; Crooked, bent, curved, wraped;
- ದ>ಜ/ಚ ಅಗುವುದು ದ್ರಾವಿಡ ಭಾಷೆಗಳಲ್ಲಿ ಸಾಧ್ಯವಿದೆ; ಸಂಸ್ಕೃತದ ಧೋತ್ರ>ದೋತ್ರ ಆಗಿ 'ಚೋತ್ರ' ಆಗಿರುವುದು ಸಂಭವನೀಯ;
- ಕಚ್ಚೆ ಉಡುವ ವಸ್ತ್ರ/ಪಂಚೆ ಅಥವಾ ಸೀರೆ ಉದ್ದವಾದದ್ದೂ ಹೌದು; ವಿಧವೆಯರು

ಉಡುವುದಾದರೆ ಅಡ್ಡತಿಡ್ಡವಾಗಿ ಇದ್ದರೂ ಆಯಿತು ಎಂಬ ಗ್ರಹಿಕೆ ಇರಲಿಕ್ಕೂ ಸಾಧ್ಯ.

ಕೊಂಗ Koŋga :

೧. ಒಂದು ಬಗೆಯ ಮೊರ; ಒಂಟಿ ಗೋಟಿನ/ಒಂದೇ ಮೂಲೆಯ ಮೊರ; ಮಾಮೂಲಿ ಮೊರಗಳಂತೆ ಚಪ್ಪಟೆಯಾದ ಅಗಲ ಬಾಯುಳ್ಳದ್ದಲ್ಲದ, ಒಂದು ಮೊಳಕ್ಕಿಂತಲೂ ಸ್ವಲ್ಪ ಉದ್ದವಾಗಿದ್ದು ಪುಟ್ಟ ದೋಣಿಯಂತೆ ಕಾಣುವ ಮೊರ(ಭಾ.ಜಿ.,ಬೀ.ಜಿ.); A kind of dust pan; single corner dust pan;

- ಧಾನ್ಯಗಳನ್ನು ತೂರಲು, ಚೀಲ ಮೊದಲಾದವುಗಳಿಗೆ ತುಂಬಿಕೊಳ್ಳಲು ಬಳಸುವ ಸಾಧನ; ಬಿದಿರಿನ ಅಚ್ಚೆ/ದಬ್ಬೆಗಳಿಂದ ತಯಾರಿಕೆ; ಹೊಲಗದ್ದೆಗಳಿಗೆ ಊಟ ಇತ್ಯಾದಿಗಳನ್ನು ಹೊರಲೂ, ತಿಪ್ಪೆಗೆ ಕಸ ಸುರಿಯಲೂ ಬಳಕೆ; ಅಳತೆಯ ಸಾಧನ ಕೂಡ; ಕುಕ್ಕೆ, ಬುಟ್ಟಿ ಎಂದು ಪರ್ಯಾಯ ಹೆಸರುಗಳು; A dustpan used to clean corns, seeds or husking grains;
- ಆಗತಾನೆ ಹುಟ್ಟಿದ ಮಗುವನ್ನು ಕೊಂಗ/ಮೊರದಲ್ಲಿ ಮಲಗಿಸುವ ವಾಡಿಕೆ ಇದೆ; It is used to sleep new born child putting in it;
- ಅರ್ಧ ಮಾರಿಗಿಂತಲೂ ಸ್ವಲ್ಪ ಉದ್ದವಾದ ಕೊಂಗಗಳನ್ನು ಮಳೆಯಲ್ಲಿ ನೆನೆಯದಂತೆ ಗುಬರು ಹಾಕಿಕೊಳ್ಳಲೂ ಬಳಸಲಾಗುತ್ತದೆ;
- ದಾನ ಕೊಡುವಾಗ, ಬಾಗಿನ ಬಿಡುವಾಗ ಮೊರದ ಬಳಕೆ ಒಂದು ಸಂಪ್ರದಾಯ; ಆದರೆ ಕೊಂಗ ಇಂತಹ ಮೊರಗಳಿಗಿಂತ ಸ್ವಲ್ಪ ಭಿನ್ನ ಆಕೃತಿಯುಳ್ಳದ್ದು; A dust pan used to give doning of something;
  ವ್ಯರೂ: ಕೊಂಗು;
  ಪ್ರ: 'ಕೊಂಗುನಲ್ಲಿ ತೂರೋರು, ಕೊಳಗದಲ್ಲಿ ಅಳೆಯೋರು'(ನಗಾ.);
- ತ.ಕೊಙ್ಙಣಿ; ಕೊಂಜ್ಞಾಣಿ;
- ಸಾಮಾನ್ಯವಾಗಿ 'ಕಣದಲ್ಲಿ' ಮೊರ 'ಪದಕ್ಕಿಂತ 'ಕೊಂಗ' ಪದವನ್ನೆ ಹೆಚ್ಚು ಬಳಸುವುದು ವಾಡಿಕೆ;

೨. ಒಂದು ಪ್ರದೇಶದ ಹೆಸರು; ಕೊಂಗನಾಡು; ಕೊಂಗದೇಶ; ಕೊಯಮತ್ತೂರು, ಸೇಲಂ ಹಾಗೂ ಕರ್ನಾಟಕದ ಕೆಲವು ಪ್ರದೇಶಗಳನ್ನು ಒಳಗೊಂಡ ಭಾಗ; ಈಗಿನ ಕೊಯಮತ್ತೂರು (ಕೊಯಂಬತ್ತೂರ್) ಸೇರಿದಂತೆ ಅದರ ಸುತ್ತಮುತ್ತಲಿನ ನಾಡು; **ವ್ಯರೂ:** ಕೊಗ್ಗ, ಕೊಂಕ, ಕೊಂಗು, ಕೊಗ್ಗಂ;

- ಚೇರ/ಕೇರಳ ರಾಜ್ಯ; Chera; Kerala state;
  ಇತರ ಭಾಷಾರೂಪಗಳು: ತ: ಕೊಂಗು; ಕೊಂಗಮ್; ಮ: ಕೊಙ್ಙು; ಕೊಙ್ಙ; ಕೊನ್ನು;

೩. ಕೊಂಗನಾಡಿನ ವ್ಯಕ್ತಿ; ಕೊಂಗದೇಶದವನು; ಕೊಂಗು ಪ್ರದೇಶದವನು; ಕೊಂಗನ್(ತ.);

೪. ತೀಟೆ ಸ್ವಭಾವದವನು; ಅನಾಗರಿಕ; ವಕ್ರಸ್ವಭಾವದ ಮನುಷ್ಯ; ಕುಚೇಷ್ಟೆಯವನು; ಮೋಸಗಾರ; ಕುಟಿಲೋಪಾಯ ನಿಪುಣ; ಹಠಮಾರಿ(ಮೈ.ಜಿ/ ಮಂಡ್ಯಜಿ./ಚಾ.ಜಿ.); A man who has bad behavior uncivilized cheater;

೫. ಏನೂ ತಿಳಿಯದವ; ದಡ್ಡ;

೬. ಮಂಗ; ಕೋತಿ; ಮಂಗತನ; ಕೊರಂಗು(ತ.); Monkey;

೭. ಒಂದು ಬಗೆಯ ಉದ್ದನೆಯ ಕವಡೆ; ಚಿಪ್ಪು(ತು.); A kind of long dice;

- ನಾರು ಅಥವಾ ದಾರದಲ್ಲಿ ಪೋಣಿಸಿ ನೇವಳದಂತೆ (=ಉಡಿದಾರದಂತೆ) ಮಕ್ಕಳ ಸೊಂಟಕ್ಕೆ ಕಟ್ಟುವುದುಂಟು(ತುನಿ.);
- ದೇಶೀಪದ; ಒಂದು ಪ್ರದೇಶಕ್ಕೆ/ಪ್ರದೇಶದ ಜನರಿಗೆ ಆರೋಪಿಸಿದ ಸ್ವಭಾವದ ಹಿನ್ನೆಲೆಯಿಂದಲೇ ಈ ಪದ ಚಾಲ್ತಿಗೆ ಬಂದಂತೆ ತೋರುತ್ತದೆ; 'ಕೊಂಕ'/ 'ಕೊಂಕು' ಬಂದುದೇ ಆಗಿರಬೇಕು; ಕೋತಿ, ಮಂಗ ಎಂಬ ಹೆಸರೂ ಸ್ವಭಾವದ ಹಿನ್ನೆಲೆಯುಳ್ಳದ್ದೇ;
- —***ಕೊಂಗಕಂಡುಗ*** : ಧಾನ್ಯದ ಅಳತೆಯ ಒಂದು ಪ್ರಮಾಣ; ಕೊಂಗದಿಂದ ಅಳೆದ ಧಾನ್ಯದ 'ಕಂಡುಗ' ಪ್ರಮಾಣವನ್ನು ಇದು ಹೇಳುತ್ತಿರಬಹುದು; 'Kanduga' a scale of measuring grain;
- —***ಕೊಂಗಟ್ಟೆ*** : ಕೊಂಗ+ಕಟ್ಟೆ(?); ಕುಳಿತುಕೊಳ್ಳುವ ಸಣ್ಣ ಕಟ್ಟೆ(ತು); ('ಕಾಲುಗಳನ್ನು ಮಡಿಚಿಕೊಂಡು/ ಕೊಕ್ಕರಿಸಿಕೊಂಡು ಕೂರುವ ಕಟ್ಟೆ' ಎಂದು ವಿವರಿಸಬಹುದೆಂದು ತೋರುತ್ತದೆ); ನ್ಯಾಯ – ಪಂಚಾಯಿತಿ ಮಾಡುವ ಸ್ಥಳ; ಗಂಡಸು ತಮ್ಮ ಕೆಲಸಕಾರ್ಯಗಳನ್ನು ಮುಗಿಸಿ ಸಮವಯಸ್ಕರ ಜೊತೆ ಕುಳಿತು ಹರಟೆ ಹೊಡೆಯುವ ಸ್ಥಳ; 'ಕೊಂಗ' ಸ್ವಭಾವ ಸೂಚಕ ಪದವಾದುದರಿಂದ ಸೋಮಾರಿ

ಕಟ್ಟೆ ಎಂದು ಹೇಳಬಹುದು; A small seat of judgement; a place of chatting;

- *—ಕೊಂಗನಾಡು* : ಕೊಂಗದೇಶ; ಸೂರ್ಯೋದಯದ ದಿಕ್ಕನ್ನು ಸೂಚಿಸುವ ನಾಡೇ ಕೊಂಗನಾಡು ಎಂಬುದು ಇರುಳಿಗರ ನಂಬಿಕೆ; ತುಳು ಪಾಡ್ದನಗಳಲ್ಲಿ ಈ ಪ್ರದೇಶದ ವರ್ಣನೆ ಇದೆ(ತುನಿ.); ನೀಲಗಿರಿಯಾಚೆಯ ತಮಿಳುನಾಡು; `Konga nation'- a nation that indicates the direction of the sun rising; Tamilnadu;
- ***—ಕೊಂಗಪಟ್ಟೆ ಬಳ್ಳಿ*** : ಒಂದು ಔಷಧೀಯ ಸಸ್ಯ (ದ.ಕ.); A medicinal plant;
- ***—ಕೊಂಗಮಂಗ/ಕೊಂಗಮಂಗತನ*** : ಮೂರ್ಖ; ಮೂರ್ಖತನ; ವಕ್ರ ನಡವಳಿಕೆಯ ವ್ಯಕ್ತಿ; ವಕ್ರ ನಡವಳಿಕೆ; ಒರಟ; ಒರಟುತನ; Idiot, fool, foolishness, crooked person;
- ***—ಕೊಂಗಮಚ್ಚು*** : ಕೊಂಕಾದ/ಡೊಂಕಾದ ಮಚ್ಚು; ದೊಡ್ಡ ಕುಡುಗೋಲಿನಾಕಾರದ, ಕಬ್ಬಿಣದ ಮಚ್ಚು; ಕೊಂಗನಾಡಿನಿಂದ ತರಿಸಿದ ಮಚ್ಚು; A big sickle; carved sickle brought from `Konga nadu';
- ***—ಕೊಂಗಮಾರಮ್ಮ*** : ಮಾರಮ್ಮ ದೇವತೆ (ರಾಮ.ಜಿ.); ಕೊಂಗದೇಶದ/ಕೊಂಗರ ಮಾರಮ್ಮ ಎಂದಿರಬಹುದೆ? ಒಂದು ಸಂದೇಹ: ಕೊಂಗಲಿ/ ಕೊಂಗಳಿ ಎಂಬ ಹೆಸರಿನ ಊರಿನ ಮಾರಮ್ಮ ಇರಬಹುದೆ?; The goddess of Maramma of Konga area;
- ***—ಕೊಂಗರ್ಸಿ*** : ಒಂದು ಭಯಂಕರ ಗಂಟು ರೋಗ; ಗುದದ್ವಾರದಲ್ಲಿ ಕಾಣಿಸಿಕೊಳ್ಳುವ ಈ ಗಂಟು ಕ್ರಮೇಣ ಅಡೆ(ವೃಷಣ)ಗೆ ಹರಡಿ ಅಲ್ಲಿಂದ ಎದೆಯವರೆಗೆ ಹಬ್ಬುತ್ತದೆ; ಈ ರೋಗ ತಗುಲಿದರೆ ಸಾವು ನಿಶ್ಚಿತ; ಹಂದಿತುಪ್ಪ, ಅಪ್ಪೆಗೆಡ್ಡೆ, ಸರ್ದಾರಿಸೊಪ್ಪು, ಇಂಬುತೊಳಸಿ, ಕಂಪಿನ ಗಣಿಕೆಸೊಪ್ಪು, ಪಚ್ಚಕರ್ಪೂರ, ಪುನುಗು–ಈ ವಸ್ತುಗಳನ್ನು ಬೆರಸಿ ಅರೆದು ಹಸುವಿನ ಬೆಣ್ಣೆಯೊಂದಿಗೆ ಕಲಸಿ ಔಷಧಿ ತಯಾರಿಸಿ ಗಂಟು ಇರುವ ಕಡೆ ಹಚ್ಚುತ್ತಾರೆ; A dangerous disease that appears at anal; a skin eruption or skin knot;
- *—ಕೊಂಗಾಟ/–ಕೊಂಗಾಟಿ* : ವಕ್ರ ಚೇಷ್ಟೆ; ಅಡ್ಡಪ್ರವೃತ್ತಿ; ಒರಟು ನಡವಳಿಕೆ; ಮೂರ್ಖತೆ; ಒರಟ; ಮೂರ್ಖ; ವಕ್ರ ಸ್ವಭಾವದ ವ್ಯಕ್ತಿ; ಸೂಕ್ಷ್ಮತೆಗಳನ್ನರಿಯದವನು; ಕೊಂಗದೇಶದವನು; ತಮಿಳಿಗ; ಕೊಂಗ+ಆಟ; ಕೊಂಗ+ಆಟ+ಇ> ಕೊಂಗಾಟಿ. crooked nature, foolish manners, rough personality.

ಕೊಂಗಪಟ್ಟಣ koŋgapaṭṭaṇa :

- ಮೈಸೂರು ಜಿಲ್ಲೆ ಕೊಳ್ಳೇಗಾಲ ತಾಲ್ಲೋಕಿನ ಕ್ರಿ.ಶ.೧೩೬೬ರ ೫೭ನೇ ಶಾಸನದಲ್ಲಿ ಇದರ ಪ್ರಸ್ತಾಪ; A town mentioned in 57th inscription of 1366AD; found in Kollegala taluk, Mysuru district;
- 'ಕೊಂಗ' 'ಕೊಂಗು' ರೂಪದಿಂದ ಬಂದಿರುವಂಥದು;
- 'ಕೊಂಗು' ಎಂದರೆ ಒಂದು ಪ್ರದೇಶ; ಈಗಿನ ಕೊಯಮುತ್ತೂರು ಪ್ರದೇಶ; ಈ ಪ್ರದೇಶದ ನಿವಾಸಿಯನ್ನು 'ಕೊಂಗ' ಎನ್ನುತ್ತಾರೆ;
- ವಿಜಯನಗರದ ಅರಸ ವೀರಬುಕ್ಕಣನ ಮಗ ಕುಮಾರ ಕಂಪಣ ಒಡೆಯರು ಆಳುತ್ತಿದ್ದಾಗ ಕೊಂಗುಪಟ್ಟಣದ ಸಮಸ್ತ ಜನರು 'ಮೊಡೆ ಹಳಿಯ' ಶ್ರೀ ಮಲ್ಲಿನಾಥ ದೇವರಿಗೆ ದತ್ತಿ ಮಾಡಿದರು.

(E.C- ೪; ಮೈ.ಜಿ.)

ಕೊಂಗು Koŋgu :

- ಒಂದು ಜಾತಿಯ ಮರ; Mitragyna parviflora; A knd of tree;
- ಈ ಮರದ ಎಲೆ ದನ–ಕರುಗಳಿಗೆ ಮೇವಾಗಿ ಬಳಕೆ; ತೊಗಟೆಯಿಂದ ನಾರು ತಯಾರಿಕೆ; ಕಾಂಡ ಮತ್ತು ರೆಂಬೆಗಳ ಭಾಗಗಳಿಂದ ಕಟ್ಟಡ ಸಾಮಾಗ್ರಿ, ವ್ಯವಸಾಯದ ಉಪಕರಣ, ಆಟದ ಸಾಮಾನು, ಬಾಚಣಿಗೆ, ಕುಂಚದ ಹಿಡಿ, ಕೈಕೋಲು, ಪೆನ್ಸಿಲ್ ಕಡ್ಡಿ ಮೊದಲಾದವುಗಳ ತಯಾರಿ; It leaves are used as fodder for cattle; its wood is used to manufacture comb, handle, pencil sticks, agricultural tools, playing toys;
- ನಗರ್ತ ಸಮುದಾಯದ ಬಾಣಂತಿಯರು ಸ್ನಾನಕ್ಕೆ ಹೋಗುವಾಗ ಬಿಳಿಯ ಪಂಚೆಯನ್ನು ಮೈಮೇಲೆ ಹೊದಿಕೆಯಾಗಿ ಉಟ್ಟು, ಆ ಬಟ್ಟೆಯ ಎರಡೂ

ಅಂಚಿನ ತುದಿಗಳನ್ನು ಬಲಗಡಗೆ ಕೂಡಿಸಿ ಹಾಕುವ ಗಂಟು(ಕೋ.ಜಿ.);

- ಪಂಚೆ, ಸೀರೆ ಮೊದಲಾದ ಉದ್ದನೆಯ ಧೋತಿ/ ವಸ್ತ್ರ/ಬಟ್ಟೆಯ ಅಂಚು/ಸೆರಗು; ಸೆರಗಿನ ಅಂಚು/ ತುದಿ/ಕೊನೆ; ಸೆರಗಿನ ಅಂಚಿನ ಕೊನೆಗಳನ್ನು ಕೂಡಿಸಿ ಹಾಕುವ ಗಂಟು;
- ಕೊಂಕು; ವಕ್ರ; ಡೊಂಕು; ವ್ಯಂಗ್ಯ; ಅಣಕ; ನೋಡಿ: ಕೊಂಕು; crooked, wrap, carved;
- ಒಂದು ಪ್ರದೇಶ/ಪ್ರಾಂತ್ಯ; ಕೊಂಗನಾಡು; ನೋಡಿ; ಕೊಂಗ; An area; a region;
- —*ಕೊಂಗಣಿ* : ಕೊಂಗು+ಅಣಿ; ನೇಗಿಲು ಹೊಡೆಯುವಾಗ ನೇಗಿಲಿಗೆ ಕಟ್ಟಿದ ಹಗ್ಗ ಸವೆಯದಂತೆ ಬಳಸುವ ಮರದ ಒಂದು ಸಾಧನ (ಕೃ.ಪ.ಕೋ); ಕೊಂಗು ಮರದಿಂದ ತಯಾರಿಸಿದ ಪಟ್ಟಿ/ಅಚ್ಚು ಎಂಬ ಭಾವ ಇರುವಂತಿದೆ; ಅಣಿ/ಅಣಿಗೆ=ಮಗ್ಗದ ಅಚ್ಚು; ಹಾಸು–ಹೊಕ್ಕುಗಳ ಜೋಡಣೆ; A wooden tool that is used to avoid eradicate the tying plough; it is madeup of Kongu wood;
- —*ಕೊಂಗಾಣಿ* : ಕೊಂಗು+ಆಣಿ; ಹಗ್ಗದ ಕಟ್ಟನ್ನು ಬಿಗಿಗೊಳಿಸುವುದಕ್ಕಾಗಿ, ಕಟ್ಟಿನ ನಡುವೆ ಇಟ್ಟು ತಿರುಗಿಸುವ ಡೊಂಕುಕಡ್ಡಿ/ಕೊಂಕು ಬೆಣೆ; ಬಿರಿ; ಹೊಸೆಯುವ ಹಗ್ಗದ ಕಡುಪು ಹೆಚ್ಚಾಗಲೆಂದು ಹಗ್ಗ ತಿರುಗಿಸಲು, ಹಗ್ಗದ ತುದಿಗೆ ಕಟ್ಟುವ ಚಿಕ್ಕ ಕೋಲು/ಮರದ ತುಂಡು; ಆಣಿ=ಬಿದಿರಿನ ದೊಣ್ಣೆ; ಮರದ/ಕಬ್ಬಿಣದ ಸಣ್ಣಕಡ್ಡಿ, ಬೆಣೆ; cf ಕಡಾಣಿ; A peg or wedge which is used to tie rope rightly;
- —*ಕೊಂಗೊಟ್ಟು* : ಕೊಂಗು+ಕೊಟ್ಟು; ಕೊಟ್ಟು=ಗುದ್ದಲಿ; ಮಣ್ಣನ್ನು ಅಗೆಯುವ ಸಾಧನ; ಹಾರೆ; ಅಗಲ ಕಿರಿದಾದ, ಅಂದರೆ ಮೊನಚಾದ ಹಾರೆ ಎಂಬ ಅರ್ಥದಲ್ಲಿ 'ಕೊಂಗುಕೊಟ್ಟು' >ಕೊಂಗೊಟ್ಟು ಆಗಿದೆ; ಕ>ಗ ಆಗಿ ಒಂದೇ ವ್ಯಂಜನ ಎರಡು ಸಲ ಒಟ್ಟಿಗೇ ಉಚ್ಚಾರಗೊಳ್ಳಬೇಕಾಗಿ ಬಂದುದರಿಂದ ಒಂದು ವ್ಯಂಜನ ಬಿದ್ದುಹೋಗಿದೆ; cf ವೀರರಾಜಪೇಟೆ>ವೀರಾಜಪೇಟೆ. A tool with a sharp edged; typically rectangular metal blade and a long wooden or metal handle used for digging or cutting earth, sand or turf.

ಕೊಂಗೆ Koŋge :

೧. ಕೊಂಬೆ; ಮರದ/ಗಿಡದ ಕಾಂಡದ ಮೇಲಿನ ಕವಲು; ಶಾಖೆ;(ಮರದ); ಕೊನೆ; ಕೊಂಬು; ಕೊಂಬೆ; ಮರದ ಗೆಲ್ಲು(ಅನುಕೋ); A branch of a tree or the split of a branch of a tree;
- ದೇಸಿ ಪದ; ತ.ಕೊಂಗ್ಯೆ(ಕೊಜ್ಙೈ);

೨. ಗುಗ್ಗೆ; ಕೂಕಣಿ; ಕಿವಿಯೊಳಗಿನ ಒಂದು ಅಂಟು ಪದಾರ್ಥ; ಒಂದು ಬಗೆಯ ಕೊಳೆ; Ear-wax; Cerumen: a gum inside the ear;

೩. ಕೊಂಗನಾಡಿನವನು(ತು.);

೪. ಒಂದು ಬಗೆಯ ಧಾನ್ಯ; ನವಣೆ;

೫. ಅಡಕೆ ಮರ; ಪೂಗಧ್ರುಮ; <ಕೌಂಗು(ಸಂ.)–?

ಕೊಂಗೈ Koŋgai :

- ಅಣಿಗೆ(<ಹಣಿಗೆ; ಹ್–Ø); ಬಾಚಣಿಗೆ; ಸೀರಣಿಗೆ; hair comb that used to comb hair;
- ತಲೆಗೂದಲನ್ನು ಬಾಚಲು; ಕೂದಲಿನ ಸಿಕ್ಕು ತೆಗೆಯಲು; ಹೇನು ಹಿಡಿಯಲು ಬಳಸುವ, ಮರದ ಅಚ್ಚಿಗಳಿಂದ ತಯಾರಿಸುವ ಒಂದು ಸಾಧನ;
- ಕೊಂಗು=ಒಂದು ಜಾತಿಯ ಮರ; ಕೊಂಗೆ=ಮರದ ಕೊಂಬೆ; 'ಕೊಂಗು' ಎಂಬ ಮರದಿಂದ ಅಥವಾ ಕೊಂಬೆಯ ತುಂಡುಗಳೀಂದ ತಯರಿಸಿದ್ದು ಎಂಬ ಕಾರಣಕ್ಕೆ 'ಕೊಂಗೈ' ಎಂದು ಕರೆದಿರಬಹುದೆ? A kind of tree.

ಕೊಂಗ್ಳಮುಗ್ತಿ Koŋgḷamugti :

- <ಕೊಂಗಳ/ಕೊಂಗಾಳ ಮೂಗುತಿ (?); ಕೊಂಡಲಿ+ಮುಗ್ತಿ(?); Nose ring;
- ಮೂಗಿಗೆ ಧರಿಸುವ ಒಂದು ಬಗೆಯ ನತ್ತು; ಮೂಗಿನ ಒಂದು ಆಭರಣ; ಗಾತ್ರದಲ್ಲಿ ಸ್ವಲ್ಪ ದೊಡ್ಡದಾಗಿದ್ದು, ಕಿವಿಯ ಆಭರಣ ಕುಂಡಲಿಯಾಕಾರದ ಈ ಮೂಗುತಿಯನ್ನು ಹಾಲಕ್ಕಿ ಒಕ್ಕಲಿಗರು ಧರಿಸುತ್ತಾರೆ; A nose jewel worn by women;
- 'ಕುಂಡಲ' ಕಿವಿಗೆ ಧರಿಸುವ ಒಂದು ಆಭರಣ; ಉ ಕಾರ ಸ್ವರವ್ಯತ್ಯಯದ ಕಾರಣದಿಂದ 'ಒ' ಆಗಿ,

ಅಭೇದ ಉಚ್ಚಾರಣೆಯಿಂದ ಲ>ಳ ಆಗಿ ಕುಂಡಲ>ಕೊಂಡಲ>ಕೊಂಡಳ ಆಗುವುದು ಅಸಂಭವವಲ್ಲ; ವರ್ಗೀಯ ವ್ಯಂಜನಗಳ ಸ್ಪರ್ಶ ಧ್ವನಿಮಾಗಳ ವಿನಿಮಯ ಕಾರಣವಾಗಿ ಡ>ಗ ಆಗಿದೆ ಎಂಬುದನ್ನು ಒಪ್ಪಿಕೊಂಡರೆ ಕೊಂಡಳಿ>ಕೊಂಗಳಿ ಆಗುತ್ತದೆ ಎಂದೂ ಹೇಳಬಹುದು; ಕುಂಡಲ>ಕೊಂಡಳ>ಕೊಂಗಳ;

ಮೂಗುತಿ>ಮೂಗ್ತಿ>ಮುಗ್ತಿ ಆಗುವುದೂ ಸಾಧ್ಯ; 'ಕುಂಡಲ' ಎಂಬ ಕಿವಿಯ ಆಭರಣವನ್ನು ಹೋಲುವ, ಮೂಗಿಗೆ ಧರಿಸುವ ಆಭರಣ ಎಂಬ ಅರ್ಥದಲ್ಲಿ 'ಕುಂಡಲ ಮೂಗಿತಿ' ರೂಪ ಹುಟ್ಟಿಕೊಂಡು ಕ್ರಮೇಣ ಅದು 'ಕೊಂಗ್ಳಮುಗ್ತಿ' ಆಗಿರಬಹುದು;

- ಕೊಂಡಲ, ಕೊಂಡಲಿ ರೂಪಗಳು ಕ್ರಮವಾಗಿ ಗಾವುಂಡ, ಕೆಜಿ ರೂಪಗಳೊಡನೆ ಸೇರಿ ವ್ಯಕ್ತಿವಾಚಕ ಹಾಗೂ ಸ್ಥಳವಾಚಕಗಳಾಗಿವೆ; ಕೊಂಗಲ/ಕೊಂಗಲಿ, ಕೊಂಗಳ/ಕೊಂಗಳಿ, ಕೊಂಗಾಳ/ಕೊಂಗಾಳಿ ರೂಪಗಳಿವೆ, ಊರು ಹಾಗೂ ಪ್ರದೇಶ ನಾಮಗಳಾಗಿ; 'ಕೊಂಗಳ' ರೂಪ ಗಾವುಂಡ, ಆಚಾರಿ ರೂಪಗಳೊಡನೆ ಸೇರಿ ವ್ಯಕ್ತಿವಾಚಕವಾಗಿಯೂ, 'ನಾಡು' ರೂಪದೊಡನೆ ಸೇರಿ ಪ್ರಾಂತ್ಯ(ಕಂಗಳ್ನಾಡು/ಕೊಂಗಲ್ನಾಡು) ವಾಚಕವಾಗಿಯೂ ಕಂಡುಬರುತ್ತದೆ; ಈ ರೂಪಗಳು 'ಮೂಗುತಿ'ಯೊಡನೆ ಸೇರಿ ಕ್ರಮೇಣ 'ಕೊಂಗ್ಳಮುಗ್ತಿ' ಆಗಿರುವ ಸಾಧ್ಯತೆಯನ್ನೂ ತಳ್ಳಿಹಾಕುವಂತಿಲ್ಲ; ಪ್ರಾಂತ್ಯವಿಶಿಷ್ಟತೆ, ಸ್ಥಳವಿಶಿಷ್ಟತೆ, ವ್ಯಕ್ತಿವಿಶಿಷ್ಟತೆಗಳಲ್ಲಿ ಯಾವುದಾದರೊಂದರ ಪ್ರಭಾವದಿಂದಲೂ 'ಕೊಂಗಳಮುಗ್ತಿ' ಹುಟ್ಟಿಕೊಂಡಿರುವುದು ಸಾಧ್ಯ.

ಕೊಂಚ Koñca :

- ಒಂದಿಷ್ಟು; ಅತ್ಯಲ್ಪ; ಲವಲೇಶ; ಲೇಶಮಾತ್ರ; ಕಿಂಚಿತ್; ತುಸು; A little; a wee bit, small;
- ಕೀಳು inferior; ತುಚ್ಛ; ಅಲ್ಪ least; ಕ್ಷುದ್ರ; ಚಿಕ್ಕ; ವ್ಯರೂ: ಕೊಂಜ(=ಕ್ಷುದ್ರವ್ಯಕ್ತಿ)
- ಇತರ ಭಾಷಾ ರೂಪಗಳು: ತ: ಕೊಂಜಮ್; ಕೊಚ್ಚೈ; ಕೊಂಞ್ಚು; ತೆ:ಕೊಂಚೆಮು; ಕೊಂಚೆ; ಮ: ಕೊಂಞಮ್; ಕೊಚ್ಚು; ಕೊಣಿಚ್ಚಮ್; ತು:ಕೊಂದ್ರ; ಪದಮಧ್ಯೆ ಮತ್ತು ಪದಾಂತ್ಯದಲ್ಲಿ ಚ>ಜ ಆಗುವುದು, ಅದೇ ವರ್ಗದ ಅನುನಾಸಿಕವಾಗುವುದು ಸಹಜ;
- ದೇಶಿಪದ; <ಕುಚುಚು? cf ಕುರುಚಲುಕಾಡು; ಕುಚ್ಚಲುಮೀನು;
- ***—ಕೊಂಚಗಾತಿ*** : ಅಲ್ಪಳಾದವಳು; ಸಾಮಾನ್ಯಳು; ಚಿಕ್ಕವಳು; ಕುಳ್ಳಿ(?); ಕೊಂಚ+–ಕಾತಿ/–ಗಾತಿ; a common woman, little one, dwarf woman;
- ***—ಕೊಂಚಗಾರ*** : ಸಾಮಾನ್ಯನಾದವನು; ಕ್ಷುದ್ರನಾದವನು; ನಾಡಾಡಿ; ಕೊಂಚ+–ಕಾರ/–ಗಾರ; common man;
- ***—ಕೊಂಚಗಿರಿ*** : ಹತ್ತಿಯ ಒಂದು ತಳಿ; ಕಲ್ಲು ಮಿಶ್ರಿತ ಕೆಂಪು ನೆಲದಲ್ಲಿ ಬೆಳೆಯುವ ಒಂದು ಜಾತಿಯ ಹತ್ತಿಗಿಡ; ಎತ್ತರ ಬೆಳೆಯದ ಗಿಡ್ಡ ಬೆಳೆಯ ತಳಿ ಎಂಬರ್ಥದಲ್ಲಿ ಇರಬಹುದು; A kind of cotton breed;
- ***—ಕೊಂಚದವನು*** : ಅಲ್ಪ ಮನುಷ್ಯ; ತುಚ್ಛವ್ಯಕ್ತಿ; ಕ್ಷುದ್ರ/ಹುಲುಮಾನವ. An ordinary man.

ಕೊಂಚನಹಳ್ಳಿ koñcanahaḷḷi :

- ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೋಕಿನ ಕ್ರಿ.ಶ.೧೪೧೯ರ ೧೯ನೇ ಶಾಸನದಲ್ಲಿ ಇದರ ಉಲ್ಲೇಖ; A village mentioned in 19th inscription of 1419AD found in Kudligi taluk, Bellari district;
- ವಿಜಯನಗರದ ಪ್ರತಾಪದೇವರಾಯನ ಆಳ್ವಿಕೆ; During the rule of Vijayanagara Pratap Devaraya;
- ಹರಿಯಣ್ಣ ಎಂಬುವನು ಪಾಂಡ್ಯನಾಡ ನೊಣಬನರಸಿಯ ಕೆರೆಯನ್ನು ಆಳುತ್ತಿದ್ದ ಉಲ್ಲೇಖ; ಈ ಸಂದರ್ಭದಲ್ಲಿ ಹರಿಯಣ್ಣ ಹರಿಯ ಸಮುದ್ರವನ್ನು ಶ್ರೋತ್ರಿಯ ಅಗ್ರಹಾರವಾಗಿ ದಾನ ನೀಡುತ್ತಾನೆ;
- ಈ ಹರಿಯ ಸಮುದ್ರದ ಸೀಮೆಗೆ ಸೇರಿದ ಅನೇಕ ಊರುಗಳಲ್ಲಿ 'ಕೊಂಚನಹಳ್ಳಿ'ಯೂ ಒಂದಾಗಿದೆ;
- ಯಾವುದೋ ವ್ಯಕ್ತಿಯಿಂದ ಈ ಊರಿಗೆ ಈ ಹೆಸರು ಬಂದಿರಬೇಕು;
- 'ಕೊಂಚ' ಎನ್ನುವ ಪದ 'ಕೆಂಚ' ಆಗಿರಬಹುದೆ?

(ಕ.ವಿ.ವಿ.ಶಾ.ಸಂ.೧; ಬ.ಜಿ.)

ಕೊಂಚಲು Koñcalu:

- ಹಳ್ಳ; ಗುಂಡಿ; ಓಣಿ; A brooklet; a water ditch; a street;
- ನೇರವಲ್ಲದ, ಇಕ್ಕಟ್ಟಾದ, ಪೊದೆಯಿಂದ ಆವೃತವಾದ ತಗ್ಗಿನ ಪ್ರದೇಶ(ಮಂ.ಜಿ);
- ಕುರುಚಲು(=ಪೊದೆ), ಕೊರಕಲು(=ಎತ್ತಿನ ಗಾಡಿ ಮೊದಲಾದ ಬಂಡಿಗಳು ಸಂಚರಿಸಿ ಹಳ್ಳ ಬಿದ್ದ, ಇಕ್ಕಟ್ಟಾದ ಮಾರ್ಗ) ರೂಪಗಳಿವೆ; ಉ>ಒ, ಕ>ಚ ವ್ಯತ್ಯಯ, ಅವರ್ಗೀಯ ವ್ಯಂಜನಗಳಲ್ಲಿರುವ ಅನುನಾಸಿಕತ್ವಕ ಕಾರಣವಾಗಿ ಕುರುಚಲು/ಕೊರಕಲು> ಕೊಂಚಲು ಆಗಿರಬಹುದು.

ಕೊಂಚಿಗೆ/ಕೊಂಚಿಗಿ Koñcige/koñcigi :

- ಕುಲಾವಿ; ಸಣ್ಣ ಮಕ್ಕಳಿಗೆ ಚಳಿ/ಶೀತ ಆಗದಂತೆ ಅವರ ತಲೆಗೆ ಬೆನ್ನ ಮೇಲೂ ಮುಚ್ಚಿಕೊಳ್ಳುವಂತೆ ಕೊರಳನ್ನು ಸೇರಿಸಿ ಕಟ್ಟುವ ಒಂದು ಉಡುಪು; A woollen cap; especially knitted for infants/babies to save them from cold;
- ಪ.ರೂ.: ಕುಲಾಬಿ; ಕುಲಾಯಿ;
- ಹರಿದ ಸೀರೆಯ ತುಂಡುಗಳನ್ನು ಕೂಡಿಸಿ ಹೊಲಿದ, ಮಲೆನಾಡಿನ ಹೆಂಗಸರು ತಲೆ ಹಾಗೂ ಬೆನ್ನಿನ ಮೇಲೆ ಹಾಕಿಕೊಳ್ಳುವ ಒಂದು ಉಡುಪು(ಶಿ.ಜಿ.); A dress stitched in old saree pieces to cover head and back part of a women's in Malenadu region;
- ಸಾಮಾನ್ಯ ಕುಲಾವಿಗಿಂತಲೂ ದೊಡ್ಡದಾದ, ಹೆಣ್ಣುಕೂಸಿನ ತಲೆಗೆ ಕಟ್ಟುವ ವಸ್ತ್ರ(ಬಾ.ಜಿ.);
- ತಲೆಯನ್ನೂ, ಕಿವಿಗಳನ್ನೂ ಮುಚ್ಚಿ, ಕತ್ತಿಗೆ ಸುತ್ತು ಹಾಕಿ ಧರಿಸುವ ವಸ್ತ್ರ; ಇದರ ತುದಿ ಬೆನ್ನಿನ ಮೇಲೆ ನಿರಿಗೆ ಹಾಕಿದಂತೆ ಇಳಿಬಿದ್ದಿರುತ್ತದೆ; The cap that covers ears, neck and the wholehead;
- ಚಿಕ್ಕ ಮಕ್ಕಳ ಉದ್ದ ಚುಂಗಿನ(=ಅಂಚಿನ) ಟೋಪಿ; The long monkey cap of children;
- **ವ್ಯರೂ:** *ಕುಂಚಿಗೆ; ಕುಂಚಿಗಿ; ಕೊಂಚಗಿ;*

ನೋಡಿ: ಕುಂಚಿಗೆ.

ಕೊಂಜಿ koñji :

ಉಳಿದ ಮೂಲೆ; ಕೊನೇ ಭಾಗ(ತು.ಜಿ). The remaining corner or the last part.

ಕೊಂಟು Koṇṭu :

೧. ಮರದ ತುಂಡು; ಕೊರಡು; ಒಣಗಿದ (ಕೆಲವೊಮ್ಮೆ ಇನ್ನೂ ಹಸಿ ಇರುವ) ಮರದ ಕಾಂಡ ಅಥವಾ ರೆಂಬೆಯಿಂದ ಕತ್ತರಿಸಿ ತೆಗೆದ ಗಂಟುಗಂಟಾದ ಇಲ್ಲವೇ ಅಂಕುಡೊಂಕಾದ ಭಾಗ; ಗಂಟುಳ್ಳ ಬಡಿಗೆ(ಅನುಕೋ); The wooden pieces;

- ಸುಮರು ಒಂದು ಮೊಳದುದ್ದಕ್ಕೆ ತುಂಡು ಮಾಡಿ ತೆಗೆದ ಮರದ ಭಾಗವನ್ನು ನೇರವಾಗಿದ್ದರೂ 'ಕೊಂಟು'(=ಕೊರಡು) ಎನ್ನುವುದುಂಟು; ಒಣಗಿಹೋದ, ಮತ್ತೆ ಚಿಗುರಲಾರದ ಮರದ ತುಂಡು; The wooden dry or wet log;
- ಕೊಡಲಿಯಿಂದ ಸುಲಭವಾಗಿ ಸೀಳಿ ಸೌದೆ ಮಾಡಿಕೊಳ್ಳಲಾಗದ, ಸಿಕ್ಕುಸಿಕ್ಕಾದ ಗಂಟುಳ್ಳ, ನೇರ ಎಳೆಗಳಿಲ್ಲದ ಮರದ ತುಂಡು;
- ಗೊಬ್ಬಳಿ, ಕಗ್ಗಲಿ, ಬಾಗೆ, ಹಿಪ್ಪೆ, ತಬಸಿ, ಹೊಂಗೆ ಮೊದಲಾದ ಗಟ್ಟಿ ಮರದ ತುಂಡುಗಳು ಕೊಂಟಿಗೆ ಪ್ರಸಿದ್ಧಿ; ಗೊಬ್ಬಳಿ, ಬಾಗೆ, ಹಿಪ್ಪೆ ತುಂಡುಗಳು/ಕೊಂಟುಗಳು ಬೆಂಕಿಗಲ್ಲದೆ ಬೇರೆ ಉಪಯೋಗಕ್ಕೂ ಬಳಕೆ; ಮುಖ್ಯವಾಗಿ ಮಾಂಸ ಕತ್ತರಿಸುವುದಕ್ಕೆ, ಹಿಪ್ಪುನೇರಳೆ ಮೊದಲಾದ ಸೊಪ್ಪುಗಳನ್ನು ಉತ್ತರಿಸಿಕೊಳ್ಳುವುದಕ್ಕೆ, ಸಣ್ಣಪುಟ್ಟ ಸೌದೆ ಮೊದಲಾದ ಕಡ್ಡಿಗಳನ್ನು ಕಡಿದು ತುಂಡು ಮಾಡಿಕೊಳ್ಳುವುದಕ್ಕೆ ಒತ್ತು ಸಾಧನವಾಗಿ ಬಳಕೆ;
- ಕೊಂಡಹಾಯುವ ಕೆಂಡದ ರಾಶಿಯ ನಿರ್ಮಾಣದಲ್ಲಿ, ಮದುವೆ, ಪರ ಮೊದಲಾದ ಆಚರಣೆಗಳ ದೊಡ್ಡ ಪ್ರಮಾಣದ ಅಡುಗೆ ಮಾಡುವಲ್ಲಿ, ಸಾವು ಸಂಭವಿಸಿದ ಮನೆಯ ಮುಂದೆ ಬೆಂಕಿ ಹಾಕುವಲ್ಲಿ, ಶವಗಳನ್ನು ಸುಡುವ ಚಿತೆಗಳನ್ನು ನಿರ್ಮಿಸುವಲ್ಲಿ ಉರುವಲಿಗಾಗಿ ಕೊಂಟಿನ ಬಳಕೆ ವಿಶೇಷ;

೨. ತುಂಟ; ಒರಟ; ತೊಂಡು; ಗಟ್ಟಿಗ ಎಂದೂ ಪ್ರತಿಮಾತ್ಮಕ ಅರ್ಥ; A naughty;

೩. ಓರೆ; ವಕ್ರತೆ (ತು.); crossed, crooked;

- ದೇಶಿಪದ; ಇತರ ಭಾಷಾ ರೂಪಗಳು: ತ: ಕೊಂಡಿ, ಕೊಣ್ಡಿ; ತೆ: ಕೊಂಡೆ, ಕೊಂಟೆ, ಗೊಂಟು, ಗೊಂಟಿ; ಮ:ಕೊಂಡಿ; ತು:ಕೊಂಟ, ಕೊಂಡ, ಕೋಂಟು, ಕೋಂಟ್;

- *—ಅಡಿಕೊಂಟು/–ಅಡೇಕೊಂಟು/–ಅಡ್ಕೊಂಟು* : ಅಡಿಯಲ್ಲಿ/ತಳದಲ್ಲಿ ಆಧಾರವಾಗಿ ಇಟ್ಟುಕೊಳ್ಳುವ ಕೊಂಟು; ಒತ್ತು ಸಾಧನ; ಮಾಂಸ, ಸೌದೆ, ಬರಲು ಮೊದಲಾದುವನ್ನು ಕತ್ತರಿಸುವಾಗ ಕೊಡಲಿ ಅಥವಾ ಮಚ್ಚಿಗೆ ಆಧಾರವಾಗಿ, ಒತ್ತು ಸಾಧನವಾಗಿ ಬಳಸುವ ಮರದ ತುಂಡು; ಗೊಬ್ಬಳೀ(=ಜಾಲಿ), ಕಗ್ಗಲಿ, ಬಾಗೆ ಮೊದಲದ ಗಟ್ಟಿ ಮರಗಳಿಂದ ಬೇಕಾದ ಗಾತ್ರಕ್ಕೆ ಬೇಕಾದ ಉದ್ದಕ್ಕೆ ಈ ಒತ್ತು ಸಾಧನವನ್ನು ಸಿದ್ಧ ಮಾಡಿ ಇಟ್ಟುಕೊಳ್ಳಲಾಗುತ್ತದೆ; ಕೊಂಟಿಗೆ ಬಳಸಿದ ಮರದ ಹೆಸರಿನಲ್ಲಿ ಗೊಬ್ಬಳಿಕೊಂಟು, ಬಾಗೆಕೊಂಟು, ಕಗ್ಗಲಿಕೊಂಟು ಇತ್ಯಾದಿಯಾಗಿ ಕರೆಯುವ ರೂಢಿಯೂ ಇದೆ. The supported wooden tool; a log; used for supporting to cut flesh or wood or timber.

ಕೊಂಟೆಗಾಡಿ Koṇṭegāḍi :

- ಚಿಕ್ಕ ಗಾಡಿ; ಕುಳ್ಳುಗಾಡಿ; ಮೋಟು ಬಂಡಿ; ಚಿಕ್ಕದಾದ ಒಂದು ಬಗೆಯ ಎತ್ತಿನ ಗಾಡಿ; ಪರೂ: ಪಂಟಿಗಾಡಿ; A small cart; kind of a dwarf bullcart;
- 'ಒಡ್ಡರ ಬಂಡಿ' ಎಂದೂ ಕರೆಯುತ್ತಾರೆ; ಮರದ ಹಲಗೆಯಿಂದ ಮಾಡಿದ ಚಕ್ರಗಳನ್ನು ಅಳವಡಿಸಿರುವ ಹಳೆಯ ಮಾದರಿಯ ಕುಳ್ಳಗಿರುವ ಗಾಡಿ/ಬಂಡಿ; ಕಲ್ಲುಗಳನ್ನು ಸಾಗಿಸಲು ಒಡ್ಡರು ಬಳಸುತ್ತಾರೆಂದು ಕಾಣುತ್ತದೆ; ಹೊಲ ಗದ್ದೆಗಳಿಗೆ ಗೊಬ್ಬರ ಸಾಗಿಸಲು ರೈತರಿಂದ ಬಳಕೆ;
- ಪಂಟು=ಕುಳ್ಳು; ಮೋಟು; ಚಿಕ್ಕದು; short, dwarf, small;
- 'ಪಂಟೆಗುದ್ಲಿ' (=ಸವೆದು ಚಿಕ್ಕದಾದ ಗುದ್ದಲಿ) ಎಂಬ ರೂಪ ಇದೆ; ಸ್ವರ ವ್ಯತ್ಯಯದ ಕಾರಣದಿಂದ ಪಂಟು>ಪಟೆ ಆಗುವುದು ಸಂಭವನೀಯ; ಆದರೆ 'ಕೊಂಟೆ' ಆಗುವುದು ವಿಶೇಷ; ಸ್ಪರ್ಶ ವರ್ಣಗಳ ವಿನಿಮಯ ನಡೆದು ಪ>ಕ ಆಗಿದೆ ಎನ್ನಬಹುದೇನೊ? ಪಂಟೆಗಾಡಿ>ಕೊಂಟೆಗಾಡಿ(?);
- ನಿರ್ದಿಷ್ಟ ಅಳತೆ ಮತ್ತು ಆಕಾರಕ್ಕೆ ಕತ್ತರಿಸಿ ಸಿದ್ಧಪಡಿಸಿದ ಮರದ ತುಂಡುಗಳನ್ನು (ಕೊಂಟುಗಳನ್ನು?) ಜೋಡಿಸಿ ಮಾಡಿದ್ದು ಎಂಬ ಕಾರಣಕ್ಕೆ 'ಕೊಂಟೆಗಾಡಿ' ಎಂದು ಕರೆದಿರಬಹುದೆ; ಕೊಂಟುಗಾಡಿ>ಕೊಂಟೆಗಾಡಿ ಆಗಿರುವುದೂ ಸಾಧ್ಯ.

ಕೊಂಟೆಬುಂಡೆ Koṇṭebuṇḍe :

- ನೇಗಿಲಿನ ಸವೆದ ಕೊಂಟು; ವ್ಯರೂ: ಕುಂಟೆಬುಂಡೆ; Out worn plough log; ragged log;
- ಕುಂಟೆ>ಕೊಂಟೆ; ಉ>ಒ ಸ್ವರ ವ್ಯತ್ಯಯ; ಬುರುಡೆ>ಬುಂಡೆ;
- ಉದ್ದನೆ ನೇಗಿಲಿನ ಕೊರಡು ಸವೆದು ಸವೆದು ಗೋಳದಂತೆ ಗುಂಡಗಾಗುತ್ತದೆ; ಅದನ್ನು 'ಕುಂಟೆಬುಂಡೆ' ಎಂದು ಕರೆದು ಅದೇ 'ಕೊಂಟೆಬುಂಡೆ' ಆಗಿದೆ;
- ಗುಂಡಗೆ ಕುಳ್ಳಗೆ ಇರುವವರನ್ನು 'ಕುಂಟೆಬುಂಡೆ' ಎಂದು ಅಡ್ಡ ಹೆಸರಿಟ್ಟು ಕರೆಯುವ ರೂಢಿ ಇದೆ.

ಕೊಂಡ Koṇḍa :

- ೧. ಕುಂಡ; ಹೊಂಡ; ಕುಣಿ; ;ಗುಳಿ; ಗುಂಡಿ; ಕೆರೆ; A pot of rearing plants, pit, hole, a ditch, a tank;
- ಕೆಂಡ ಹಾಯುವ ಆಚರಣೆಗಾಗಿ ದೇವರ ಗುಡಿ ಎದುರು ತೋಡುವ ಉದ್ದನೆಯ ಗುಂಡಿ; ಹೋಮ ಹವನಕ್ಕಾಗಿ ರಚಿಸಿದ ಕುಂಡ; ಅಗ್ನಿಕುಂಡ; ಬೆಂಕಿಕುಂಡ
- ನೀರು ನಿಲ್ಲಿಸಿಕೊಳ್ಳುವುದಕ್ಕಾಗಿ ಅಗೆದ, ಓಕುಳಿ ನೀರನ್ನು ತುಂಬಿಕೊಳ್ಳುವುದಕ್ಕಾಗಿ ತೋಡಿದ ಗುಂಡಿ/ ಕುಳಿ; ಓಕುಳಿ ಬಾವಿ;
- ಗ್ರಾಮದೇವತೆ ಮತ್ತು ಕುಲದೇವತೆಗಳ ಹಬ್ಬ ಮತ್ತು ಜಾತ್ರೆಯ ಸಂದರ್ಭದಲ್ಲಿ ಆ ದೇವತೆಗಳ ಗುಡಿಯ ಮುಂದೆ ಕೊಂಡಹಾಯುವ ಆಚರಣೆಗಾಗಿ ತೋಡುವ ಮೂರ್‍ನಾಲ್ಕು ಅಡಿ ಆಳ ಮತ್ತು ಅಗಲದ ಹತ್ತುಹನ್ನೆರಡು ಅಡಿ ಉದ್ದದ ಹಳ್ಳ; ಕೆಲವೆಡೆ ಚಕ್ರಾಕಾರವಾಗಿ ಆಳ ಗುಂಡಿ ತೋಡಿ ಕೊಂಡ ರಚಿಸುತ್ತಾರೆ.
- 'ಕೊಂಡ' (<ಕುಂಡ,ಸಂ.) ಪದಕ್ಕೆ ವೀರಭದ್ರ ಎಂದು ಅರ್ಥ ಕೊಡಲಾಗಿದೆ (ಕನಿ); ದಕ್ಷಯಜ್ಞದ ಕುಂಡಕ್ಕೆ ಪಾರ್ವತಿ ಬಿದ್ದು ಮತ್ತೆ ಹುಟ್ಟಿದ ಕಥೆಗೂ ಕೊಂಡ ಹಾಯುವ ಜನಪದರ ಆಚರಣೆಗೂ ಸಂಬಂಧವಿದೆಯೇ ಎಂದು ವಿವೇಚಿಸಬೇಕದ ಅಗತ್ಯವಿದೆ; ಕೊಂಡ 'ಭೂತವೇತಾಳಗಳಲ್ಲಿ ಒಂದು ಹೆಸರು' ಎಂದೂ ಹೇಳಲಾಗಿದೆ(ಅದೇ);

'ಹಳಗನ್ನಡ ಮತ್ತು ಮರಾಠಿ' ಪುಸ್ತಕದಲ್ಲಿ 'ಕೊಂಡ' ಪದ 'ಕೊಂಡು' ಧಾತುವಿನಿಂದಾದ

ನಾಮರೂಪವೆಂದು ಲೋಕಾಪುರ ಅವರು ಹೇಳುತ್ತಾರೆ(ಪು.೧೭೮–೧೮೦);

ಕೊಂಡಕ್ಕೆ ಬಿದ್ದು ಆತ್ಮಾಹುತಿ ಮಾಡಿಕೊಂಡವರ (ಸಹಗಮನ, ಗರುಡ ಮೊದಲಾದ ಆಚರಣೆಗಳ ಸಂಗರ್ಭದಲ್ಲಿ) ಹೆಸರಿನಲ್ಲಿ ಗುಡಿ ಕಟ್ಟಿ ವರ್ಷಂಪ್ರತಿ ಕೊಂಡ ಹಾಯುವ ಆಚರಣೆ ಹುಟ್ಟಿಕೊಂಡಿರುವ ಸಾಧ್ಯತೆಯೂ ಇದೆ;

ಕಾಡುಮೇಡುಗಳಲ್ಲಿ ಅಲೆಯುವ ಅಲೆಮಾರಿ ಸಮುದಾಯಗಳು ಕ್ರೂರ ಪ್ರಾಣಿಗಳಿಂದ ರಕ್ಷಣೆ ಪಡೆಯುವುದಕ್ಕೂ, ಕತ್ತಲ ಭಯದ ನಿವಾರಣೆಗೂ, ಬೆಂಕಿಯ ಬಳಕೆಗೂ ಕೊಂಡ ರಚಿಸಿಕೊಳ್ಳುವ ಪೂರ್ವಸ್ಥಿತಿಯೊಂದಿತ್ತು; ಮಾದಕ ದ್ರವ್ಯಗಳನ್ನು ಸೇವಿಸಿ. ಕೊಂಡದಲ್ಲಿ ಬೆಂದ ಪ್ರಾಣಿಗಳ ಮಾಂಸ ತಿಂದು ಕೊಂಡದ ಸುತ್ತ ಕುಣಿದು ಆನಂದಿಸಿ ಲೈಂಗಿಕ ತೃಷೆ ತೀರಿಸಿಕೊಳ್ಳುತ್ತಿದ್ದ ಸ್ಥಿತಿಯೂ ಇತ್ತು; ಆಕಸ್ಮಿಕಗಳೂ ಸಂಭವಿಸಿರಲಿಕ್ಕೆ ಸಾಕು; ಇದೆಲ್ಲದರ ಕುರುಹಾಗಿ ಕೊಂಡದ ಆಚರಣೆ ಉಳಿದಿರಬಹುದೆ?

ಪ್ರ: 'ಕೊಂಡ ಬೇಯಿಸುವಾಗ ಮಕ್ಕಳು ಮುಗ್ಗರಿಸಿದವೊ'.....

'ಕೊಂಡ ಕೆದಿರ್ಯಾವೊ ನಾಗವ್ವನಾ ಕೊಂಡ ಉರುದಾವೋ.....

'ಕೊಂಡ ಹೋಗೋರ ಕೈಲಿ ದುಂಡು ಮಲ್ಲಿಗೆ ಸರ....

ಕೊಂಡಗಳುಮಂ ಕಟ್ಟಿಸಿದರ್(ಎ.ಕ.X, ಉಲ್ಲೇಖ:ಕನಿ.);

- ಸಾಂಸ್ಕೃತಿಕ ಸಂದರ್ಭದಲ್ಲಿ ಕೊಂಡ ಎಂದರೆ ಹೊಂಡ ಅಥವಾ ಗುಂಡಿ ಎಂದಷ್ಟೇ ಅರ್ಥವಲ್ಲ; ಉದ್ದ ಅಥವಾ ವೃತ್ತಾಕಾರದಲ್ಲಿ ಗುಂಡಿ ತೋಡಿ ಅದರ ತುಂಬ ಸೌದೆ ತುಂಬಿ ಉರಿಸಿ ಕೆಂಡ ರಚಿಸಿದ ಹೊಂಡ/ಗುಂಡಿ; ಹಬ್ಬ ಹಾಗೂ ಉತ್ಸವಗಳಲ್ಲಿ ಕೊಂಡ ಹಾಯುವ ಸಂಪ್ರದಾಯವಿದೆ; ಸಹಗಮನ ಮಾಡಿಕೊಳ್ಳುತ್ತಿದ್ದುದೂ ಉಂಟು;

೨. ಬೆಟ್ಟ; ಗುಡ್ಡ; ದಿಣ್ಣೆ; ಮಲೆ; ಪರ್ವತ; ಕುನ್ನ; ಮರಳ ದಿಣ್ಣೆ; Hill, mountain, valley;

- ಕಾಡು, ವನ ಎಂಬ ಅರ್ಥವೂ ಇದ್ದಿರಬಹುದು; ಕೊಣ್ಣಗುಜಿ(=ಕಾಡುಕುರಿ), ಕೊಣ್ಣಗೂಟಿ(=ಕಾಡೆತ್ತು) ಮೊದಲಾದ ರೂಪಗಳಿವೆ; forest, jungle;
- ತ: ಕುನ್ನ, ಕುನ್ರು; ತೆ: ಕೊಣ್ಡೆ; ಮ:ಕುನ್ನ, ಕುನ್ನು; ತು: ಕುಂಜ;
- ದೇಶೀ ಪದ;

೩. ತೆಗೆದುಕೊಂಡ; ಪರಿಗ್ರಹಿಸಿದ; ಅಂಗೀಕರಿಸಿದ; (ವ್ಯಾಪಾರ, ವಿನಿಮಯ, ಒಪ್ಪಂದ ಮೊದಲಾದ ವಿಧಾನದಲ್ಲಿ) ವಶಕ್ಕೆ ತೆಗೆದುಕೊಂಡ; ಅಪಹರಿಸಿದ; ಕಿತ್ತುಕೊಂಡ; ಕೊಂಡುಕೊಂಡ; ಕ್ರಯಕ್ಕೆ ಪಡೆದ; obtained; accepted as for as business agreement, exchange are concerned;

- ಕೊಳ್/ಕೊಳ್ಳು ಧಾತುವಿನ ಭೂತ ಕೃದಂತ ರೂಪ;

೪. ಅಡಕೆ ಹಾಳೆಯಿಂದ ಮಾಡಿದ ಒಂದು ಬಗೆಯ ಟೋಪಿ (ತು/ಮಂ.ಜಿ.);

- —***ಕೊಂಡಗುರಿ*** : ಕೊಂಡಕುರಿ; ಕೊಂಡಕ್ಕೆ ಬಿಟ್ಟ ಕುರಿ; ಕೊಂಡ ಹಾಯುವ ಮುನ್ನ ಬೆಂಕಿ ಕೊಂಡಕ್ಕೆ ಬಲಿ ಕೊಡಲು ಹರಕೆ ಹೊತ್ತು ಮುಡಿಪು ಬಿಟ್ಟ ಟಗರು('ಕುರಿ' ಸಾಮಾನ್ಯ ಸಂಬೋಧನೆ); ದೇವರು ಹೊತ್ತ ಪೂಜಾರರೂ ಹರಕೆ ಕಟ್ಟಿಕೊಂಡವರೂ ಬರಿಗಾಲಿನಲ್ಲಿ ಕೊಂಡ ಹಾಯುವಾಗ ಸಾವು ನೋವುಗಳು ಸಂಭವಿಸದಿರಲಿ ಎಂಬುದು ಈ ಹರಕೆಯ ಆಶಯ; ಅಡವಿಯಕುರಿ; ಕಾಡುಕುರಿ (ಬ.ಜಿ.,cf ಕೊಗ್ಗಿಕುಜಿ); ಕೊಂಡುಕೊಂಡ ಕುರಿ (ಕ್ರಿಯಾರೂಪದಲ್ಲಿ) ಎಂದೂ ಆಗಬಹುದು; A scape goat or sheep that offers to holy fire as a part of religious festivals;
- —***ಕೊಂಡಕೊಟ್ಲೆ*** : ಅನುಭವಿಸಿದ ಕೋಟಲೆ/ತೊಂದರೆ; ಕೋಟಲೆ>ಕೋಟ್ಲೆ>ಕ್ವಾಟ್ಲೆ/ಕೊಟ್ಲೆ; 'ಕೊಂಡ' ಪ್ರತಿಮಾರ್ಥ ಆಗಬಹುದು, ಬೇಗೆ, ಅಸಹನೀಯ, ಕಡು ಎಂದು; felt, trouble or experienced trouble;
- —***ಕೊಂಡಪರು*** : ಮಂಟೆಸ್ವಾಮಿ ಕ್ಷೇತ್ರವಾದ ಕಪ್ಪಡಿಯ ಜಾತ್ರೆಯಲ್ಲಿ ನಡೆಯುವ ಒಂದು ಆಚರಣೆ; ಕಪ್ಪಡಿ ಜಾತ್ರೆಯ ನಾಲ್ಕನೆಯ ದಿವಸ ಬೆಂಕಿ ತುಂಬಿದ ಏಳು ಮೊಳ ಉದ್ದದ ಕೊಂಡವನ್ನು ಭಕ್ತರು ತುಳಿಯುತ್ತಾರೆ; ಕೊಂಡ ಹಾಯುತ್ತಾರೆ; ಹಾಯುವುದಕ್ಕೆ ಮೊದಲು ಕೊಂಡಕ್ಕೆ ಗುರುಗಳೂ ಪೂಜೆ ಸಲ್ಲಿಸುತ್ತಾರೆ; ಹೊತ್ತ ಹರಕೆಯ ಆಶಯ ಈಡೇರಿದ ಮೇಲೆ ಹರಕೆಹೊತ್ತ ಭಕ್ತರು ಈ ಕೊಂಡದ ಸೇವೆ ಸಲ್ಲಿಸುವುದು ರೂಢಿ; A ritualistic celeberation at Kappadi of Manteswamy;

- —***ಕೊಂಡಬಂಡಿ*** : ಕೊಂಡಕ್ಕೆ, ಕೊಂಡದ ಹಬ್ಬಕ್ಕೆ, ಹೊರಡಿಸಿದ ಬಂಡಿ(=ಎತ್ತಿನ ಗಾಡಿ); ಕೊಂಡದ ಹಬ್ಬದ ಅಥವಾ ಜಾತ್ರೆಯ ಸಂದರ್ಭದಲ್ಲಿ ದವಸಧಾನ್ಯ ಹಾಗೂ ಸೌದೆ ತುಂಬಿಕೊಂಡು ಗುಡಿಯ ಬಳಿಗೆ ಬಂಡಿ ಹೊರಡಿಸುವುದು ಪದ್ಧತಿ; ಕೊಂಡದ ದಿವಸ ಉಪವಾಸವಿದ್ದು ಮೈಲಿಗೆ ತೊಳೆದು ಮಡಿಯುಟ್ಟು ತೊಳೆದು ಅಲಂಕರಿಸಿದ ಗಾಡಿಗೆ ಐದಾನ್ಯ(ಐದುಧಾನ್ಯ-?)ದ ಬುತ್ತಿ ತುಂಬಿ, ಪೂಜೆ ಮಡಿ ಕತ್ತರಿಸಿದ ಆಲ, ಗೊಬ್ಬಳೀ ಬೇವಿನ ಮರದ ಸೌದೆ ತುಂಬಿ ಅಲಂಕರಿಸಿದ ಎತ್ತುಗಳನ್ನು ಬಂಡಿಗೆ ಊಡಿ ಊರ ಮುಂದಿನ ದೇವಸ್ಥಾನಕ್ಕೆ (ನೆರೆಯೂರೂ ಇರಬಹುದು, ಏಳೂರಮ್ಮ ಇತ್ಯಾದಿ ಪರಿಕಲ್ಪನೆಗಳಿವೆ, ಹಲವು ಊರಿನವರು ಸೇರಿ ಆಚರಿಸುವುದೂ ಇದೆ) ಯಾತ್ರೆ ಹೊರಡುತ್ತಾರೆ; ತಲುಪಿದ ಮೇಲೆ ದೇವಸ್ಥಾನಕ್ಕೆ ಮೂರು ಸುತ್ತು ಬಂದು ಗರ್ಭಗುಡಿಯ ಹಿಂದೆ ಗುಡಿಗಳನ್ನು ನಿಲ್ಲಿಸುತ್ತಾರೆ; ಪೂಜಾರರು ತೀರ್ಥ ಪ್ರೋಕ್ಷಣೆ ಮಾಡಿದ ಮೇಲೆ ಧಾನ್ಯವನ್ನು ಗುಡಿಗೂ ಸೌದೆಯನ್ನು ಕೊಂಡಕ್ಕೂ ಒಪ್ಪಿಸಿ ಗಾಡಿಗಳನ್ನು ನಾ ಮುಂದು ತಾ ಮುಂದು ಎಂದು ಸ್ಪರ್ಧಾ ಭಾವದಿಂದ ಓಡಿಸಿಕೊಂಡು ಹೋಗಿ ದೇವಾಲಯದ ಸುತ್ತಲಿನ ಮೈದಾನದಲಲ್ಲಿ ತಮಗೆ ಬೇಕಾದ ಕಡೆ ನಿಲ್ಲಿಸಿಕೊಳ್ಳುತ್ತಾರೆ; The cart, which is filled with timber/grain for holy fire or to celebrate holy festival;
- —***ಕೊಂಡಬಲಿ*** : ಕೊಂಡಕ್ಕೆ ಕೊಡುವ ಬಲಿ; ಕೊಂಡದ ಬಲಿ; ಕೊಂಡ ಹಾಯುವುದಕ್ಕೆ ಮುನ್ನ ಹರಕೆಯ ಕುರಿ(=ಟಗರು)ಯನ್ನು ಕೊಂಡಕ್ಕೆ ಮೂರು ಸುತ್ತು ಹಾಕಿಸಿ ಪೂಜಾರಿಯಿಂದ ತೀರ್ಥ ಪ್ರೋಕ್ಷಣೆ ಮಾಡಿಸಿ ಬಲಿಕೊಡಲಾಗುತ್ತದೆ; ಶಾಖಾಹಾರಿ ದೇವರಾದರೆ/ಹಬ್ಬವಾದರೆ ಪ್ರಾಣಿಬಲಿ ಇರುವುದಿಲ್ಲ; ಬೂದುಗುಂಬಳ ಒಡೆಯುವುದು, ಮುಡಿ ಒಪ್ಪಿಸುವುದು ಇತ್ಯಾದಿ ಸಾತ್ವಿಕ ಬಲಿ ಆಚರಣೆಗಳಿರುತ್ತವೆ; Sheep sacrifice at Konda festival;
- —***ಕೊಂಡ ಹಾಯುವುದು*** : ಬೆಂಕಿ ಕೊಂಡದ ಮೇಲೆ ನಡೆಯುವ ಒಂದು ಜನಪದ ಆಚರಣೆ; ಜನಪದರ ಒಂದು ಆರಾಧನಾ ವಿಧಾನ; ಕೆಂಡ ತುಳಿಯುವುದು; ಕೆಂಡದ ಮೇಲೆ ನಡೆಯುವುದು; ಕರಗ, ಪೂಜೆ, ಉತ್ಸವಮೂರ್ತಿ ಇತ್ಯಾದಿ ರೂಪದಲ್ಲಿ ದೇವರನ್ನು ಹೊತ್ತ ಪೂಜಾರಿ, ಅವನ ಹಿಂದೆ ಹರಕೆ ಹೊತ್ತ ಭಕ್ತರು ಬರಿಗಾಲಿನಲ್ಲಿ ಕೆಂಡ ತುಂಬಿದ ಕೊಂಡದ ಮೇಲೆ ನಡೆದು(ಲಘು ವೇಗದಲ್ಲಿ) ಹೋಗುವುದು; It is a holy celebration of devotees; walking on the holy fire or firecoal during the festival;
- ಇದೊಂದು ಧಾರ್ಮಿಕ ಆಚರಣೆ; ಗ್ರಾಮದೇವತೆ ಅಥವಾ ಕುಲದೇವತೆಯ ಗುಡಿಯ ಮುಂದೆ ತೋಡಿದ 'ಕೊಂಡ'ದಲ್ಲಿ ಈ ಆಚರಣೆ ನಡೆಯುತ್ತದೆ; ಒಂದು ರೀತಿಯ ಉಗ್ರ ಆಚರಣೆ; ಸಂಕಲ್ಪ ಶಕ್ತಿಯ ಸತ್ವಪರೀಕ್ಷೆ ಎಂಬಂತಿದೆ; ಕೊಂಡ ಹಾಯುವ ಮನೆತನಗಳೇ ಗ್ರಾಮಗಳಲ್ಲಿರುತ್ತವೆ; ಇವರು ಸಾಮಾನ್ಯವಾಗಿ ಪೂಜಾರಿ ಮನೆತನದವರಾಗಿರುತ್ತಾರೆ; ಕೊಂಡಹಾಯುವ ಕೆಲ ದಿವಸಗಳ ಮೊದಲಿನಿಂದ ಪೂಜಾರರು ಕೆಲವು ಕಟ್ಟುಪಾಡುಗಳಿಗೆ ವ್ರತಾಚರಣೆಗಳಿಗೆ ಒಳಪಟ್ಟಿರುತ್ತಾರೆ; ಮನೆಯಲ್ಲಿ ಮುಟ್ಟುಚಿಟ್ಟು ಆಗದಿರುವುದು, ಉಪವಾಸವಿರುವುದು, ಸ್ನಾನ ಮಡಿ ಪೂಜೆ ಮೊದಲಾದುವನ್ನು ಸಾಂಗವಾಗಿ ನೆರವೇರಿಸುವುದು, ಮಾಂಸ ಮದ್ಯ ಸೇವಿಸದಿರುವುದು ಇವೇ ಮುಂತಾದುವು; ಕೊಂಡ ಹಾಯುವ ಭಕ್ತರೂ ಇದಕ್ಕೆ ಹೊರತಲ್ಲ; ಅಸವಾಲದ ದೇವರುಗಳಾದರೆ ಇವುಗಳ ಬಗೆಗೆ ಇನ್ನೂ ಹೆಚ್ಚಿನ ನಿಷ್ಠೆ ಹೊಂದಿರಬೇಕಾಗುತ್ತದೆ; ಹಬ್ಬಕ್ಕೆ ಮೊದಲು 'ಕರಿಕು'(>ಕರ್ಕು) ಹಾಕುವ ಮೂಲಕ ಇಡೀ ಊರು ಸಹ ಇಂತಹ ಕೆಲವು ಕಟ್ಟುಪಾಡುಗಳನ್ನು ಅನುಸರಿಸುತ್ತದೆ;
- ಕೊಂಡ ಹಾಯುವ ಹಿಂದಿನ ದಿವಸವೇ ಬಂಡಿಯಲ್ಲಿ ತಂದ ಸೌದೆಯನ್ನು ಕೊಂಡಕ್ಕೆ ತುಂಬುತ್ತಾರೆ; ಆ ದಿವಸ ರಾತ್ರಿ ವಿಧಿವತ್ತಾಗಿ ಬೆಂಕಿ ಹೊತ್ತಿಸಿ ಕೊಂಡದೊಳಗಿನ ಸೌದೆಯನ್ನೆಲ್ಲಾ ಉರಿಸಿ ಕೆಂಡ ಮಾಡುತ್ತಾರೆ; ಕೊಂಡ ಹಾಯುವ ಮೊದಲು ಅರೆಬರೆ ಕೊಳ್ಳಿಗಳನ್ನೆಲ್ಲಾ ತೆಗೆದು, ಕೆಂಡವನ್ನು ಸಮತಟ್ಟು ಮಾಡಿ ಕೆಂಡದ ಮೇಲಿನ ಬೂದಿಯನ್ನೆಲ್ಲಾ ಗಾಳಿ ಹಕಿ ತೆಗೆದು ನಿಗಿನಿಗಿ ಉರಿಯುವ ಕೆಂಡದ ಮೇಲೆ ಪೂಜಾರರೂ ಭಕ್ತರೂ ಹಾದುಹೋಗುತ್ತಾರೆ;

- ಕೊಂಡ ಹಾಯುವಾಗ ಕೆಂಡದ ಮೇಲೆ ಕಾಲೂರಿ ಸ್ಥಿರವಾಗದೆ ವೇಗವಾಗಿ ನಡೆದು ಹೋಗುವುದರಿಂದ ಕೆಂಡದ ಶಾಖ ಅಂಗಾಲನ್ನು ಸುಡುವಷ್ಟು ತಾಕುವುದಿಲ್ಲ; ಬೊಬ್ಬಳಿಕೆಗಳಾಗಲೀ ಗಾಯಗಳಾಗಲೀ ಆಗುವುದಿಲ್ಲ; ಉಪವಾಸ ಮೊದಲದ ವ್ರತಾಚರಣೆಗಳಿಂದ ದೇಹ ಹಗುರಾಗಿ ಮನಸ್ಸು ದೃಢವಾಗುವುದರಿಂದ ಈ ಆಚರಣೆಯ ನಿರ್ವಹಣೆ ಸರಾಗವಾಗುತ್ತದೆಂದು ತೋರುತ್ತದೆ; ಅನುಭವದಿಂದ ಬಂದ ತಿಳುವಳಿಕೆ ಇಲ್ಲಿ ಕೆಲಸ ಮಾಡುತ್ತದೆ; ಆದರೂ, ದೈವೀಶಕ್ತಿಯ ಕೃಪೆ, ಮಹಿಮೆಗಳ ಮೇಲಿನ ನಂಬಿಕೆ ಇಲ್ಲಿ ಪ್ರಧಾನವಾಗುತ್ತದೆ; ಇಡೀ ಪ್ರಸಂಗವನ್ನು ಪವಾಡವೆಂದೇ ಭಾವಿಸಲಾಗುತ್ತದೆ; ಮಂಗಳೂರು ಜಿಲ್ಲೆ, ಕೊಡಗುಜಿಲ್ಲೆ ಹಾಗೂ ಉತ್ತರ ಕೇರಳ ಪ್ರದೇಶದಲ್ಲಿ ಇಂಥದೇ ಆಚರಣೆ 'ಒತ್ತೆಕೋಲ' ಎಂಬ ಹೆಸರಿನಲ್ಲಿ ಭೂತಾರಾಧನೆಯ ಸಂದರ್ಭದಲ್ಲಿ ಕಂಡುಬರುತ್ತದೆ;
- ಬೆಂಕಿಗೆ ಬಿದ್ದು ಆತ್ಮಾಹುತಿ ಮಡಿಕೊಂಡವರ, ಆಕಸ್ಮಿಕಗಳಿಂದ ಸತ್ತವರ ಮೇಲಿನ ಭಯ, ನಿಷ್ಠೆ ಹಾಗೂ ಭಕ್ತಿ ಕಾರಣವಾಗಿ ಸಂಸ್ಮರಣಾಚರಣೆಯಂತೆ ಹುಟ್ಟಿಕೊಂಡಿರಬಹುದಾದ ಈ ಆಚರಣೆಯ ಆಶಯವನ್ನು ಬೆಂಕಿಯ ಪ್ರಾಧಾನ್ಯತೆಯಿಂದಾಗಿ ವ್ಯಕ್ತಿತ್ವಶುದ್ಧಿ, ರೋಗರುಜಿನಗಳ ನಿವಾರಣೆ, ಮಳೆಬೆಳೆಗಳಾಗಿ ಲೋಕಕಲ್ಯಾಣ ಎಂದು ವಿಶಾಲಗೊಳಿಸಲಾಗಿದೆ;
- ***—ಕೊಂಡದ ಗತ್ತು :*** ತಮಟೆಯ ಶಬ್ದದ ಒಂದು ಬಗೆಯ ಗತ್ತು; ಕೊಂಡ ಪ್ರವೇಶಿಸುವಾಗ ಮೈಮೇಲೆ ಆವೇಶ ಬಂದಂತೆ ತಮಟೆ ಹೊಡೆಯುವ ಗತ್ತು/ಧಾಟಿ(ರಾಮ.ಜಿ.); A stylish drum beats while someone enters into holy fire place;
- ***—ಕೊಂಡದ ಗುಳಿ :*** ಕೊಂಡದ ಉತ್ಸವಕ್ಕೆ ಸಿದ್ಧವಾದ (ತೋಡಿದ) ಗುಂಡಿ/ಕುಳಿ/ಗುಳಿ; ಕೆಂಡದ ರಾಶಿ; the heap of fire coal;
- ***—ಕೊಂಡದಪ್ಪಣೆ :*** ಕೊಂಡದ+ಅಪ್ಪಣೆ; ಕೊಂಡದಪ್ಣೆ; ಕೊಂಡದ ಬೆಂಕಿಯಲ್ಲಿ ಬೀಳಲು ಪಡೆಯುವ ದೈವದ ಅಪ್ಪಣೆ; A permission of entering into firecoal pond;
- ***—ಕೊಂಡದ ಬೆಂಕಿ :*** ಕೊಂಡಕ್ಕೆ ತುಂಬಿದ ಸೌದೆಗೆ ತಾಕಿಸುವ ಬೆಂಕಿ(ಚಿತ್ರ.ಜಿ.); To light the fuel or timber of fire place;
- ***—ಕೊಂಡದ್ದಬ್ಬ :*** ಕೊಂಡದ ಹಬ್ಬ; ವೀರಭದ್ರನ ಹಬ್ಬ; ವೀರಭದ್ರ ದೇವರ ಮೇಲಿನ ಭಕ್ತಿಯಿಂದ ಕೊಂಡದಲ್ಲಿ ಕುಣಿಯುವ ಹಬ್ಬ(ಕೋ.ಜಿ.); The festival of lord Veerabhadra;
- ***—ಕೊಂಡದಸೌದೆ :*** ಕೊಂಡಕ್ಕೆ ತುಂಬಲು ತಂದ ಸೌದೆ; ಉಪವಾಸವಿದ್ದು, ಸ್ನಾನ ಮಡಿ ಮಾಡಿ, ಮರಕ್ಕೆ ಪೂಜೆ ಸಲ್ಲಿಸಿ, ಇಡೀ ಮರವನ್ನೊ ರೆಂಬೆಕೊಂಬೆಗಳನ್ನೊ ಕತ್ತರಿಸಿ ಬಂಡಿಯಲ್ಲಿ ಗುಡಿಯ ಬಳಿಗೆ ಸಾಗಿಸಲಾಗುತ್ತದೆ; The fuel or timber that is offered to holy fire;
- ∴ ಜನಪದ ಸಂಸ್ಕೃತಿಯಲ್ಲಿನ ಹಿಂಸೆಯ ವಿರಳ ಸ್ವರೂಪವಾದ ಈ 'ಕೊಂಡ' ಪ್ರಾಚೀನ ಕಾಲದ ಒಂದು 'ದಿವ್ಯ'ವೂ ಆಗಿರಬಹುದು.

ಕೊಂಡ ಊರು koṇḍa ūru :

- ಕಡೂರು ತಾಲ್ಲೋಕಿನ ಆಸಂದಿ ಪ್ರದೇಶದಲ್ಲಿ ಕ್ರಿ.ಶ.೧೩ನೇ ಶತಮಾನದಲ್ಲಿನ ೧೧ನೇ ಶಾಸನದಲ್ಲಿ ಇದರ ಉಲ್ಲೇಖವಿದೆ; A village that mentioned in 11th inscription of 13 century AD found in Kaduru taluk, Asandi area;
- 'ಕೊಂಡ ಊರು' ಹೆಸರೇ ಹೇಳುವಂತೆ ಯಾವುದೋ ವ್ಯಕ್ತಿಯಿಂದ ಕೊಂಡುಕೊಂಡಂತಹ ಪ್ರದೇಶ–ವಾಗಿರಬಹುದೆಂದು ಅನುಮಾನಿಸಬಹುದಾಗಿದೆ.

(E.C- ೧೨; ಚಿಕ್ಕ.ಜಿ.)

ಕೊಂಡಕಸೀಪುರ koṇḍakasīpura :

- ಬಳ್ಳಾರಿ ಜಿಲ್ಲೆ ಸೊಂಡೂರು ತಾಲ್ಲೋಕಿನ ಕ್ರಿ.ಶ.೧೨೨೪ರ ೧೮ನೇ ಶಾಸನದಲ್ಲಿ ಈ ಊರಿನ ಹೆಸರಿನ ಉಲ್ಲೇಖ, ಇದು ತಾಮ್ರ ಶಾಸನವಾಗಿದೆ;A village mentioned in 18th inscription of 1224Ad found in Sanduru taluk, Bellary district;
- ವೀರ ಬಲ್ಲಾಳನ ದಂಡನಾಯಕ ಅಮಿತಯ್ಯನೆಂಬುವನು ಶ್ರೀಪುರದಲ್ಲಿ ತ್ರಿಕೂಟ ದೇವಾಲಯ ನಿರ್ಮಿಸಿ, ಅಮೃತೇಶ್ವರ, ವಾಮೇಶ್ವರ

ಮತ್ತು ಲಕ್ಷ್ಮೀನಾರಾಯಣ ದೇವರುಗಳನ್ನು ಪ್ರತಿಷ್ಠಾಪಿಸಿದ ವಿಚಾರವಿದೆ;

- ಈ ದೇವಾಲಯಗಳ ಪೂಜಾಕಾರ್ಯಕ್ಕಾಗಿ 'ಕೊಂಡಕಸೀಪುರ'ವನ್ನು ದಾನವಾಗಿ ನೀಡಿದ್ದಿದೆ;
- ಆದರೆ 'ಕೊಂಡಕಸೀಪುರ'ದ ಅರ್ಥ ಸಂಪೂರ್ಣ ತಿಳಿದು ಬರುವುದಿಲ್ಲ;
- 'ಕೊಂಡ' ಪದ ಬೆಟ್ಟ, ದಿಣ್ಣೆ, ಕೆರೆ ಅರ್ಥಗಳನ್ನು ಒಳಗೊಂಡಿದೆ; 'ಕೊಂಡ'ದ ಮೂಲರೂಪ 'ಕುಂಡ' ಆಗಿರಬಹುದು; ಎಲ್ಲ ಕಡೆ ಆಗುವಂತೆ ಇಲ್ಲಿಯೂ ಕು>ಕೊ ಆಗಿದೆ, ಅಂದರೆ ಉ>ಒ ಆಗಿದೆ, 'ಸ್ವರವ್ಯತ್ಯಯ'ಕ್ಕೆ ಒಳಗಾಗಿದೆ;
- 'ಪುರ' ಎನ್ನುವುದಕ್ಕೆ ಅರ್ಥ ಸ್ಪಷ್ಟವೇ ಇದೆ;
- ಆದರೆ ಮಧ್ಯದ 'ಕಸೀ' ಎನ್ನುವುದನ್ನು ಅನ್ವಯಿಸಿ ಅರ್ಥ ಹೇಳುವುದು ಕಷ್ಟವಾಗಿದೆ; 'ಕೊಂಡಕಸೀ' ಪದವನ್ನು ನೀರಿನ ವಸತಿಯುಳ್ಳ ಜಾಗ ಎಂದು ಅರ್ಥ ಮಾಡಬಹುದೆ? ಅನ್ಯ ಪದ ಬೆಂಬಲವಿಲ್ಲ.

(ಕ.ವಿ.ವಿ.ಶಾ.ಸಂ.೧; ಬ.ಜಿ.)

ಕೊಂಡಕುಂದೆ kondakunde :

- ಕ್ರಿ.ಶ.೧೧೩೩ರ ೩೮೯ನೇ ಶಾಸನದಲ್ಲಿ ಇದರ ಉಲ್ಲೇಖವಿದೆ; It is a village; that mentioned in the inscription of 389 of the year 1133AD;
- 'ಕೊಂಡ' ಮತ್ತು 'ಕುಂದೆ' ಎಂಬ ಎರಡು ಪದಗಳಿಂದ ಆದುದು ಈ ಹೆಸರು; ಕುಂದ>ಕುಂದೆ ಆಗಿದೆ;
- ಎರಡೂ ಪದಗಳ ಅರ್ಥ 'ಬೆಟ್ಟಗುಡ್ಡ' ಎಂದೇ ಇದೆ; ಅಂದರೆ ಬೆಟ್ಟಗುಡ್ಡ ಪರಿಸರವಿರುವ ಊರು 'ಕೊಂಡಕುಂದೆ' ಎಂದಾಗಿರುವುದು.

(E.C- ೯)

ಕೊಂಡಕುಳಿ Kondakuḷi :

- ವ್ಯವಸಾಯದ ಒಂದು ಉಪಕರಣ; ಗೋಡೆಗೆ ತೂತು ಕೊರೆಯಲು ಒಡಿಗ ಸಮುದಾಯದಲ್ಲಿ ಬಳಕೆ. An agricultural tool.

ಕೊಂಡಕೋಲು Kondakōlu:

- ಒಡಿಗ ಸಮುದಾಯದ ದಾಸರ ಗುಂಪಿನ ಮನೆತನದವರಲ್ಲಿ ದಾಸ ಮನೆತನದ ಸೂಚಕವಾಗಿ ಇರುವ ಕೋಲು; A cudgel; it is kept by Odiga community as a symbole of their 'DASA' family;
- ಹುಟ್ಟಿನಿಂದ ಸಾವಿನ ವರೆಗಿನ ವ್ಯಕ್ತಿಯ ಜೀವನಾವರ್ತದ ಕಾಲದಲ್ಲಿ ಬರುವ ಶುಭಕಾರ್ಯಗಳ ಸಂದರ್ಭಗಳಲ್ಲಿ ನಡೆಯುವ ಆಚರಣೆಗಳಲ್ಲಿ ಒಂದು ಆರಾಧಕ ವಸ್ತುವಾಗಿ ಈ ಕೋಲನ್ನು ಒಡಿಗ ಸಮುದಾಯದ ದಾಸ ಮನೆತನದ ಜನ ಬಳಸುತ್ತರೆ.
- 'ದಾಸ' ಪದದ ಜೊತೆ 'ಕೊಂಡ' ವಿಶೇಷಣವಾಗಿ ಸೇರಿದಂತೆ(**ನೋಡಿ:** ಕೊಂಡದಾಸ) ಇಲ್ಲಿ ಮನೆತನ ಸೂಚಕ 'ಕೋಲಿ'ನೊಡನೆ 'ಕೊಂಡ' ಸೇರಿದೆ; ಆರಾಧನಾ ಪದ್ಧತಿಯೊಂದರ ಪಾರಿಭಾಷಿಕವಾಗಿ 'ಕೊಂಡ' ಅರ್ಥವ್ಯಾಪ್ತಿ ಪಡೆದಿರುವುದಕ್ಕೆ ಇದು ಸಾಕ್ಷಿ.

ಕೊಂಡಗ Kondaga :

- ಚಿಪ್ಪುಳ್ಳ ಒಂದು ಜಾತಿಯ ಮೀನು(ಉ.ಕ.ಜಿ.). A kind of cell fish.

ಕೊಂಡಗುಳಿ kondaguḷi :

- ಕೊಪ್ಪ ತಾಲ್ಲೋಕಿನ ನಾರವೆ ಪ್ರದೇಶದಲ್ಲಿ ದೊರೆತಿರುವ ಕ್ರಿ.ಶ.೧೬೧೦ರ ೧೨ನೇ ಶಾಸನದಲ್ಲಿ 'ಕೊಂಡಗುಳಿ' ಸ್ಥಳದ ಉಲ್ಲೇಖ; A place mentioned in the 12th inscription of the year 1610AD found in Narave region Koppa taluk;
- ಇದು ಪ್ರಾಕೃತಿಕ ಸ್ವರೂಪದ ಹಿನ್ನೆಲೆಯ ಸ್ಥಳನಾಮ;
- 'ಕೊಂಡ' ಎಂಬುದರ ಅರ್ಥ 'ಗುಡ್ಡ' ಎಂದು; 'ಗುಳಿ' ಎಂದರೆ ತಗ್ಗು ಅಥವಾ ಹಳ್ಳ;
- ಈ ಹಿನ್ನೆಲೆಯಲ್ಲಿ ಇದನ್ನು ನೈಸರ್ಗಿಕ ಸ್ಥಳನಾಮ ಎಂದು ಕರೆಯಬಹುದು.

(E.C- ೧೨; ಚಿಕ್ಕ.ಜಿ.)

ಕೊಂಡಡಗ Kondadaga :

- ಬಿಟ್ಟಿದನಗಳನ್ನು ಕೂಡಿಹಾಕುವ ಸ್ಥಳ(ಯಾ.ಜಿ.); ದೊಡ್ಡಿ; ದನೀನ ದೊಡ್ಡಿ(ಮಂಡ್ಯ.ಜಿ.). A place where unauthorized ownerless cattles are kept.

ಕೊಂಡದಾಸ Kondadāsa :

- ದಾಸಯ್ಯಗಳಲ್ಲಿ ಒಂದು ಬಗೆ; ಶಂಖ, ಜಾಗಟೆ, ಕಾಲು ದೀವಟಿಗೆ(ಗರುಡಗಂಬ) ಹಿಡಿದು, ಕಚ್ಚೆ,

ಜುಬ್ಬ ರುಮಾಲು ಧರಿಸಿ, ಹಣೆಗೆ ನಾಮ ಹಾಕಿಕೊಂಡು ಹರಿಸಂಕೀರ್ತನೆ ಅಥವಾ ಭಜನೆ ಮಾಡುತ್ತ ಊರೂರು ತಿರುಗಿ ಭಿಕ್ಷೆ ಪಡೆಯುವ, ಮೀಸಲು ಪೂಜೆ ತಿಥಿ ಪೂಜೆ ಮುಂತಾದ ಪೂಜಾ ಕಾರ್ಯಗಳನ್ನು ನೆರವೇರಿಸುವ ಭಕ್ತ/ಪೂಜಾರಿ; ಇವರು ವೈಷ್ಣವ ಪರಂಪರೆಗೆ ಸೇರಿದವರಾಗಿರುತ್ತಾರೆ; ನಾರಾಯಣ, ಹನುಮಂತರಾಯ, ಗರುಡಾಳ ಸ್ವಾಮಿ ಮೊದಲಾದ ದೇವತೆಗಳನ್ನು ಪೂಜಿಸುತ್ತಾರೆ; ಇವರು ತಿರುಪತಿ ತಿಮ್ಮಪ್ಪನಿಗೆ ಯಾತ್ರೆ ಹೋಗುವುದು ಸಾಮಾನ್ಯ; A subcaste of Dasayya, who have Counch, Jagate, standing lamp, wearing Dhoti, headgear, having `Nama' on their forehead;

- ವೈಷ್ಣವ ಪರಂಪರೆಯ ಭಕ್ತನನ್ನು/ಭಕ್ತ ಸಮುದಾಯವನ್ನು ಸೂಚಿಸುವ ಪದ 'ದಾಸ'; 'ಕೊಂಡ' ವಿಶೇಷಣ ರೂಪವಾಗಿ ಸೇರಿದ್ದರ ಔಚಿತ್ಯ ಇಲ್ಲಿ ಅಸ್ಪಷ್ಟ; 'ಕೊಂಡ'ದ ಅಥವಾ 'ಕೊಂಡ ಹಾಯುವ' ಆಚರಣೆಗೂ ಇದಕ್ಕೂ ಸಂಬಂಧವಿದೆಯೇ ಎಂಬುದು ವಿಚಾರಾರ್ಹ?
- 'ಕೊಂಡ' ಎನ್ನುವುದಕ್ಕೆ 'ಪರ್ವತ' ಎಂಬ ಅರ್ಥ ಇರುವುದರಿಂದ ಇಲ್ಲಿ 'ಪರ್ವತ' ಎಂದರೆ 'ಸಪ್ತಗಿರಿ' ಒಡೆಯ (ತಿರುಪತಿ ತಿಮ್ಮಪ್ಪ) ನಿಗೆ 'ದಾಸ' ಎಂದು ಅರ್ಥಮಾಡಬಹುದೆ?

ಕೊಂಡಪುರಿ Koṇḍapuri :

- ಕಾಡುಹಂದಿ ಮೊದಲಾದ ತುಡುಗು ಪ್ರಾಣಿಗಳು ಹೊಲಗದ್ದೆಗಳಿಗೆ ನುಗ್ಗದಂತೆ ಓಡಿಸಲು ಬಳಸುವ ಒಂದು ಸಾಧನ; A tool that is used to fear or make wild animals run from crops;
- ಮಡಕೆಯ ಬಾಯಿಗೆ ಮೇಕೆಯ ತಿಳಿಯಾದ ಚರ್ಮವನ್ನು ಬಿಗಿಯಾಗಿ ಕಟ್ಟಿ, ನಡುವೆ ಸಣ್ಣ ರಂಧ್ರ ಮಾಡಿ, ಅದರೊಳಕ್ಕೆ ಬಳೆಯ ಚೂರನ್ನು ತೂರಿಸಿ ಮಡಕೆಯ ಒಳಭಾಗದ ತುದಿಯಲ್ಲಿ ಗಂಟುಹಕುತ್ತಾರೆ;
- ಹೀಗೆ ಮಾಡಿದ ಮೇಲೆ ಆ ಮಡಕೆಯನ್ನು ಫಸಲು ಇರುವ ಹೊಲದ ಮಧ್ಯೆ ಎತ್ತರದ ಜಾಗದಲ್ಲಿ ಇಟ್ಟುಕೊಂಡು ಮಡಕೆ ಬಾಯಿಗೆ ಕಟ್ಟಿದ ಚರ್ಮದ ಮಧ್ಯಕ್ಕೆ ಒಣಗಿದ ಜೊಂಡುಹುಲ್ಲೊಂದನ್ನು ಇಟ್ಟು ಹೆಬ್ಬೆರಳು ಹಾಗೂ ತೋರು ಬೆರಳಿಗೆ ನೀರಿನಿಂದ ತೇವ ಮಾಡಿಕೊಂಡು ಜೊಂಡನ್ನು ಎರಡೂ ಬೆರಳಿನಿಂದ ಹಿಡಿದು ಮೇಲಿನಿಂದ ಕೆಳಕ್ಕೆ ನೀವಿದರೆ/ ಬೆರಳನ್ನು ಜಾರಿಸಿದರೆ ಮಡಕೆಯಿಂದ 'ಜಿರ್‌ಜಿರ್' ಶಬ್ದ ಹೊರಡುತ್ತದೆ;
- ಈ ಶಬ್ದ ಸುಮಾರು ದೂರದವರೆಗೆ ಕೇಳುವುದರಿಂದ ಶಬ್ದಕ್ಕೆ ಹೆದರಿದ ಪ್ರಾಣಿಗಳು ಹೊಲದ ಕಡೆಗೆ ಸುಳಿಯುವುದು ಕಡಿಮೆಯಾಗುತ್ತದೆ.

ಕೊಂಡಮಾಮ Koṇḍamāma :

- ಆಂಧ್ರಮೂಲದ ಒಂದು ಅಲೆಮಾರಿ ಸಮುದಾಯ; ದನಕರುಗಳ ಮೇಲೆ ತಮ್ಮ ದಿನಬಳಕೆಯ ವಸ್ತುಗಳನ್ನು ಹೇರಿಕೊಂಡು ಊರಿಂದ ಊರಿಗೆ ಅಲೆಯುತ್ತಾರೆ; ಗಂಡಸರು ಒಂದು ಕೈಯಲ್ಲಿ ಚಿಟಿಕೆಯನ್ನೂ, ಇನ್ನೊಂದು ಕೈಯಲ್ಲಿ ಏಕತಾರಿಯನ್ನೂ ಹಿಡಿದು ಹೆಸರುಬಲ ಮತ್ತು ಹಸ್ತಸಾಮುದ್ರಿಕೆಯ ಶಾಸ್ತ್ರ ಹೇಳಿ ಹಣ ಸಂಪಾದಿಸುತ್ತಾರೆ; 'ಕುರ್ರಮಾಮ, ಕುರುಕುರುಮಾಮ, ರಾಮನಂದಂ ರಾಮನಂದಂ, ಮಸ್ತಾನನ್ನ ಗುರುನಾದನ್ನ, ಕೊಂಡದೇವತೆ' ಎಂದು ಮುಂತಾಗಿ ಹಾಡಿ ಚಮತ್ಕಾರ ಪೂರ್ವಕವಾದ ಮಾತುಗಳನ್ನು ಆಡಿ ಜನರನ್ನು ಆಕರ್ಷಿಸುತ್ತಾರೆ; ಹೆಂಗಸರದು ಮಕ್ಕಳನ್ನು ಸಲಹುವ, ದಿನಬಳಕೆಯ ವಸ್ತುಗಳನ್ನು ಜೋಪಾನ ಮಾಡುವ, ದನಕರುಗಳನ್ನು ನೋಡಿಕೊಳ್ಳುವ ಕೆಲಸ; 'ಕುರುಮಾಮ'(ನೋಡಿ) ಎಂದೂ ಇವರನ್ನು ಕರೆಯುತ್ತಾರೆ; A migrating community of having origin of Andhrapradesh; they use cattle to carry their luggage from one place to another, they say palm history;
- ಕುರುಹು(ಶಾಸ್ತ್ರ/ಭವಿಷ್ಯ) ಹೇಳುವುದರಿಂದು 'ಕುರುಮಾಮ' ಎಂದೂ, ಕೊಂಡದೇವತೆಯ ಭಕ್ತರಾದುದರಿಂದ 'ಕೊಂಡಮಾಮ' ಎಂದೂ ಕರೆಯುವುದು ರೂಢಿಯಾಗಿರಬೇಕು; ಇವರ ಮೂಲ ವಂಶಸ್ಥರು ಚಂದ್ರಾಚಲಕ್ಕೆ ಯಾತ್ರೆ ಹೋಗಿದ್ದಾಗ ಅಲ್ಲಿ ಶ್ರೀರಾಮದಾಸರ ಪ್ರಭಾವಕ್ಕೆ ಒಳಗಾಗಿ ಶ್ರೀರಾಮನ ಭಕ್ತರಾಗಿ ಪರಿವರ್ತಿತರಾದರೆಂದೂ, ಅಲ್ಲಿಂದೀಚೆಗೆ ಇವರು ಶ್ರೀರಾಮನ ಧ್ಯಾನದಲ್ಲಿ ತಲ್ಲೀನರಾಗುವುದನ್ನು, ಶ್ರೀರಾಮಮುಡಿ ಕಟ್ಟುವುದನ್ನು,

ಚಿಟಿಕೆ ಹಾಗೂ ಏಕತಾರಿ ಹಿಡಿಯುವದನ್ನು ರೂಢಿಸಿಕೊಂಡರೆಂದೂ ಅಭಿಪ್ರಾಯವಿದೆ;

- ಶಾಸ್ತ್ರ ಹೇಳಿ ಸಂಪಾದಿಸಲು ಹೊರಟ ಕೊಂಡಮಾಮನ ಬಗಲಲ್ಲಿ ಇರುವ ನಾಲ್ಕು ಮೂಲೆಯ ವಿಶಿಷ್ಟ ಮಾದರಿಯ ಚೀಲದಲ್ಲಿ ಭವಿಷ್ಯ ಹೇಳಲು ನೆರವಾಗುವ ತಾಳೆಯೋಲೆ ಅಥವಾ ಕಲ್ಲಚ್ಚಿನ ಸಚಿತ್ರ ಗ್ರಂಥಗಳಿರುತ್ತವೆ; ನಾಟಿ ವೈದ್ಯವನ್ನೂ ಬಲ್ಲವರಾಗಿದ್ದಾರೆ; ದುಂಡಾಗಿ ಸುತ್ತಿದ ಬಿಳೀಎಕ್ಕದ ಬೇರಿನ ಸಿಂಬಿ, ಕರಡಿಯ ಕಾಲಿನ ಪಂಜ, ಮೈಮದನಿಕಿ, ತಾಮಸಿಖಿ, ಕಲ್ಲಂಬಿ, ಜಡಮೂಲಿಕೆ ಮೊದಲಾದ ಗಿಡಮೂಲಿಕೆಗಳೂ ಇವರ ಬಳಿ ಇರುತ್ತವೆ; ಮಕ್ಕಳಿಗೆ ಬಾಲಗ್ರಹದ, ನೆಲಗ್ರಹದ ಭೀತಿ ಬಿಡಿಸುತ್ತಾರೆ; ಬಂಗಿ ಸೊಪ್ಪಿನ ಚಿಲುಮೆ, ಅಡಕೆ ಎಲೆ ಚೀಲವೂ ಇವರಲ್ಲಿರುವ ಆಕರ್ಷಣೀಯ ವಸ್ತುಗಳು.

ಕೊಂಡಮಾವು/ಕೊಣಮಾವು Koṇḍamāvu/ Koṇamāvu:

- ಒಂದು ಜಾತಿಯ ಸಣ್ಣಮರ; Commiphora candate; A species of small tree;
- ಗಂಟುಗಂಟಾದ ಕಾಂಡ ಮತ್ತು ರೆಂಬೆಗಳಿರುತ್ತವೆ; ಮುಳ್ಳು ಇರುವುದಿಲ್ಲ; ಎಲೆ ಆಡುಗಳಿಗೆ ಮೇವು; ಔಷಧಿಗೂ ಬಳಸುತ್ತಾರೆ; ಕುದಿಸಿದ ಎಲೆಗಳನ್ನು ನಾರಿನ ಸಹಾಯದಿಂದ ಮಂಡಿನೋವಿಗೆ ಕಟ್ಟುತ್ತಾರೆ; ಹೊಲಗದ್ದೆಗಳ ಬೇಲಿಗೆ ಕಾಂಡ ಮತ್ತು ಕೊಂಬೆಗಳ ಬಳಕೆ; ಮಲ್ಲಿಗೆ ಹಂಬನ್ನು ಕೊಂಡಮಾವು ಮರಕ್ಕೆ ಹಬ್ಬಿಸುತ್ತಾರೆ; ಹಣ್ಣುಗಳನ್ನು ತಿನ್ನುತ್ತಾರೆ; ಪತ್ರೆ(=ಎಲೆ)ಯನ್ನು ದೇವರಿಗೆ ಮುಡಿಸುತ್ತಾರೆ; It has knot bark; it leaves are used as fodder and medicine;
- ಕಾಂಡ ಮತ್ತು ರೆಂಬೆಯಿಂದ ತಳಿ ಅಭಿವೃದ್ಧಿಯಾಗುತ್ತದೆ; ಕತ್ತರಿಸಿ ಇಟ್ಟ ಕಾಂಡ ಬೇಗ ಒಣಗದೆ ಚಿಗುರೊಡೆಯುವ ಸಾಮಾರ್ಥ್ಯ ಹೊಂದಿರುತ್ತದೆ;
- 'ಕೊಣಮಾವು' ಎಂಬುದೇ ಇದರ ಜನಪ್ರಿಯ ರೂಪ.

ಕೊಂಡಲಿ/ಕೊಂಡಲು Koṇḍali/Koṇḍalu:

- (ಚಿಕ್ಕಮಕ್ಕಳ) ಕಿವಿಯ ಆಭರಣ; ಕುಂಡಲ; ಕರ್ಣಕುಂಡಲ; Ear-rings of infants or babies;
- ವ್ಯರೂ: ಕೊಂಡ್ಲಿ; ಕೊಂಡ್ಲು; ಕುಂಡಲಿ; ಕುಂಡ್ಲು;
- ನೋಡಿ: ಕುಂಡಲಿ;

ಮೀನು ಹಿಡಿಯುವ ಒಂದು ಸಾಧನ(ಉ.ಕ.ಜಿ.); A hook that uses to catch fish;

- *—ಕೊಂಡಲಿ ಹುಳು* : ಒಂದು ಬಗೆಯ ಕೀಟ; ಗೌಣು ಹಾಕುವ ಹುಳು(?); ಹಸುರು ಹುಳು ಎನ್ನುವುದೂ ಉಂಟು; ಹೂವು ಮತ್ತು ಕಾಯನ್ನು ಕೊರೆದು ತಿನ್ನುತ್ತದೆ. A kind of insect.

ಕೊಂಡವಾಡ Koṇḍavāḍa :

- ಕಿರಾತ; ಬೇಡ; ಬೆಟ್ಟ ಗುಡ್ಡಗಳಲ್ಲಿ, ಕಾಡು ಮೇಡುಗಳಲ್ಲಿ ವಾಸಿಸುವವನು(ತೆ.); ಕೊಂಡವಾಡು(ತೆ)=ಬೆಟ್ಟದವನು; 'ಕೊಂಡವಾಡುಲು' ರೂಪದ ಸವಕಳಿ 'ಕೊಂಡವಾಡು' ಇರಬಹುದು; An Indian tribal; a Tarjan who lives in forest or jungle or mountains;
- ಕೊಂಡ=ಬೆಟ್ಟ; ವಾಡ, ವಾಡೆ ರೂಪಗಳು ಮನೆ, ವಠಾರ, ಊರು ಎಂಬ ಅರ್ಥದಲ್ಲಿ ಉತ್ತರ ಕರ್ನಾಟಕದಲ್ಲಿ ಬಳಕೆ;
- ತಿರುಪತಿತಿಮ್ಮಪ್ಪನಿಗೆ 'ಏಳು(ಡು)ಕೊಂಡಲವಾಡ'(ತೆ), 'ಸಪ್ತಗಿರಿವಾಸ'(ಸಂ) ಎಂಬ ಹೆಸರು ಪ್ರಸಿದ್ಧ; 'ಸಪ್ತಗಿರಿಯೊಡೆಯ' ಎಂದೂ ಉಂಟು;
- ತುಡುಗು/ಪೋಲಿ ದನಗಳನ್ನು ಕೂಡಿಹಾಕುವ ಜಾಗ(ಮರಾ.); ದೊಡ್ಡಿ; ದನಗಳ ಬಯಲು ಬಂದೀಖಾನೆ; ಮೂರುಕಡೆ ಎತ್ತರದ ಗೋಡೆ ಕಟ್ಟಿ ಇನ್ನೊಂದು ಕಡೆಗೆ ಕಬ್ಬಿಣದ ಜಾಲರಿಯ ದೊಡ್ಡ ಬಾಗಿಲು ಇಟ್ಟು ದನಗಳನ್ನು ಕೂಡಿಹಾಕುತ್ತಾರೆ; ಚಳಿ ಗಾಳಿ ಮಳೆಯ ರಕ್ಷಣೆ ಇಲ್ಲದಿರುವುದೇ ಇಲ್ಲಿ ಪೋಲಿದನಗಳಿಗೆ ಶಿಕ್ಷೆ;
- ಹೊಲಗದ್ದೆಗಳಿಗೆ ನುಗ್ಗಿ ಫಸಲು ತಿಂದು ಹಾಳು ಮಾಡುವ, ವಾರಸುದಾರರು ಯಾರೆಂದು ಗೊತ್ತಿಲ್ಲದ, ಮನೆಯಿಂದ ತಪ್ಪಿಸಿಕೊಂಡು ಎಲ್ಲೆಂದರಲ್ಲಿ ಓಡಾಡಿ, ನುಗ್ಗಿ ದಾಂದಲೆ ಎಬ್ಬಿಸುವ ದನಗಳನ್ನು, ಕಳ್ಳದನಗಳನ್ನು ಕೂಡಿಹಾಕುವ ಊರೊಟ್ಟಿನ ಜಾಗ; ಸಾಕಷ್ಟು ವಿಸ್ತಾರವಾದ ಬಯಲಿಗೆ ಸುತ್ತು ಬೇಲಿ ಅಥವಾ ಗೋಡೆ ನಿರ್ಮಿಸಿ ಮಾಡಿದ ಸಾರ್ವಜನಿಕ ವ್ಯವಸ್ಥೆ; ವಾರಸುದಾರರು ದಂಡ ತೆತ್ತು ಬಿಡಿಸಿಕೊಳ್ಳುವ, ವಾರಸುದಾರರಿಲ್ಲದುವನ್ನು ಹರಾಜು ಇತ್ಯಾದಿ ವಿಕ್ರಯಗಳಲ್ಲಿ ಕೊಂಡುಕೊಳ್ಳುವ ಪರಿಪಾಠ ಇತ್ತು;

- ಕಾಡುದನಗಳನ್ನು ಹಿಡಿದು ಪಳಗಿಸಿಕೊಳ್ಳುವ ವ್ಯವಸ್ಥೆಯ ಪರಿವರ್ತಿತ ರೂಪ ಈ ಕೊಂಡವಾಡ ಅಥವಾ ದೊಡ್ಡಿ ಇರಬಹುದು;
- 'ಕೊಂಡಗುಱಿ'(=ಕಾಡುಕುರಿ), 'ಕೊಂಡಗೂಟಿ' (ಕಾಡುದನ) ಇದ್ದಹಾಗೆ ಕಾಡುಮನುಷ್ಯರನ್ನು (ಆದಿವಾಸಿ/ಮೂಲನಿವಾಸಿಗಳನ್ನು) ಹೇಳಲು 'ಕೊಂಡವಾಡ' ಪದ ಬಳಕೆಯಿದ್ದಂತೆ ತೋರುತ್ತದೆ;
- ದ್ರಾವಿಡ ಮೂಲದ ದೇಶೀಪದವೇ ಇರಬೇಕು; It is a native Dravidian word form;
- 'ಕೊಂಡವಾಡೆ' ರೂಪವೂ ಇದೆ(ಬೆ.ಜಿ); ಮರಾಟಿಯ 'ಕೊಂಡವಾಡಾ' ರೂಪವೇ ಕೊಂಡವಾಡ/ ಕೊಂಡವಾಡೆ ರೂಪಗಳಿಗೆ ಕಾರಣವಾಗಿದೆ;
- ತಪ್ಪು ಮಾಡುವ ಮನುಷ್ಯನಿಗೆ 'ಜೇಲು' ಇರುವಂತೆ, ತುಡುಗು ಮೇಯುವ ದನಗಳಿಗೆ ನಿರ್ಮಿಸಿದ ವಾಸದ ಮನೆ ಇದು.

ಕೊಂಡವೀಟಿನಗರ kondavīṭinagara :
- ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೋಕಿನ ಕ್ರಿ.ಶ.೧೫೩೯ರ ೫೬ನೇ ನಂಬರಿನ ಶಾಸನದಲ್ಲಿ ಈ ಊರಿನ ಉಲ್ಲೇಖ; A village that mentioned in 56th inscription of 1539AD found in Hospet taluk, Bellary district;
- ವಿಜಯನಗರ ಅಚ್ಯುತ ದೇವರಾಯನ ಆಳ್ವಿಕೆ; it belongs to the rule of Vijayanagara Achyuta Devaraya;
- ಬಯಕಾರ ರಾಮಪ್ಪಯ್ಯ ತನ್ನ ಚಿಕ್ಕಮ್ಮ ಮತ್ತು ಚಿಕ್ಕಪ್ಪ ಬಾಚರಸಯ್ಯನ ಹೆಂಡತಿಯಾದ ಅಂಮಮ್ಮನ ಹೆಸರಿನಲ್ಲಿ ಅಂಮಸಮುದ್ರ ಕೆರೆ ಕಟ್ಟಿಸಿ ಭೂಮಿ ದಾನ ನೀಡಿದ;
- ಹೀಗೆ ದಾನ ನೀಡಿದ ಊರುಗಳಲ್ಲಿ 'ಕೊಂಡವೀಟಿ' ನಗರವೂ ಒಂದು;
- 'ಕೊಂಡ' ಎಂದರೆ ಬೆಟ್ಟಗುಡ್ಡ; 'ವೀಟಿ' ಎಂದರೆ 'ಬೀಡು' ಎಂದು ಅರ್ಥ; 'ಕೊಂಡ' ಎನ್ನುವುದಕ್ಕೆ 'ಕುಂಡ' ಮೂಲ ರೂಪ; ಕುಂಡ>ಕೊಂಡ (ಉ>ಒ– ಸ್ವರವ್ಯತ್ಯಯ);
- ಅಂದರೆ 'ಗುಡ್ಡದ ಬೀಡು' ಎಂಬ ಅರ್ಥದಲ್ಲಿ ಕೊಂಡವೀಟಿ/ಕೊಂಡವೀಡುನಗರವನ್ನು ಕರೆಯಲಾಗುತ್ತಿತ್ತೆಂದು ಭಾವಿಸಬಹುದು.

(ಕ.ವಿ.ವಿ.ಶಾ.ಸಂ.೧; ಬ.ಜಿ.)

ಕೊಂಡಾಡು Kondādu :
- ಹೊಗಳು; ಸ್ತುತಿಸು; ಕೀರ್ತಿಸು; ಕುಲವನ್ನು/ ವಂಶಾವಳಿಯನ್ನು ಹೊಗಳು/ಎತ್ತಿಹಾಡು/ಎತ್ತಿಹಿಡಿ; ಗುಣಗಾನ ಮಾಡು; Praising or flattering about one's own family history;
- ಕೊಂಡು+ಆಡು; 'ಕೊಳ್' ಧಾತು; ಭೂತ ಕೃದಂತದಲ್ಲಿ 'ಕೊಂಡ' ಆಗುತ್ತದೆ; ಭೂತ ಕ್ರಿಯೆಯಲ್ಲಿ 'ಕೊಂಡು'(=ತೆಗೆದುಕೊಂಡು; ಪಡೆದುಕೊಂಡು); 'ಕೊಂಡಾಡು' ಕ್ರಿಯೆಯ ಭಾವನಾಮ ಕೊಂಡಾಟ; ಆಡು>ಆಟ; ಕೊಂಡಾಟ=ಹೊಗಳುವಿಕೆ; ಕೀರ್ತಿಸುವಿಕೆ; ಗುಣಗಾನ ಮಾಡುವಿಕೆ;
- ತೆಲುಗಿನಲ್ಲಿ 'ಕೊನು', 'ಕೊಣ್'(=ಖರೀದಿಸು, ತೆಗೆದುಕೊ) ರೂಪಗಳಿವೆ; ಪರಿಗಣಿಸು ಎಂದೂ ಇಲ್ಲಿ ಅರ್ಥವುಂಟು; ಕೊಣ್, ಕೊನ್, ಕೊಳ್ ಉಚ್ಚಾರಣಾ ಸಾಮೀಪ್ಯದ/ಸಾಮ್ಯತೆಯುಳ್ಳ ಒಂದೇ ಅರ್ಥದ ರೂಪಗಳು; ಈ ಧಾತುವಿನ ಕ್ರಿಯಾಪದ ಹಾಗೂ ಭಾವನಾಮವಾಗಿ ಕೊನಿಯಾಟು, ಕೊನಿಯಾಡು, ಕೊಂಡಾಟಮು ರೂಪಗಳಿವೆ;
- 'ಪರಿಗಣಿಸು' ಎಂದರೆ ವಂಶಮೂಲವನ್ನು ಅಥವಾ ಗುಣಮೂಲವನ್ನು ಹಿಡಿದು ಗುರುತಿಸು, ಗುಣಗಾನ ಮಾಡು, ಕೊಂಡಾಡು ಎಂದೇ ಆಗುತ್ತದೆ; To consider one's own clan roots or family roots;
- ಒಕ್ಕಲು ಮಕ್ಕಳ ವಂಶವಿವರಗಳನ್ನು ಹೇಳುವ ದಾಖಲಾತಿಗಳನ್ನು(ಚಪ್ಪೋಡು) ಇಟ್ಟುಕೊಂಡು ಕುಲದವರನ್ನು ಕೊಂಡಾಡಿ ಅವರಿಂದ ದಿನಸಿಗಳನ್ನು ದಕ್ಷಿಣೆಯನ್ನು ಪಡೆದು ಬದುಕು ಸಾಗಿಸುವುದು 'ಹೆಳವ' ಸಮುದಾಯದ ಕುಲವೃತ್ತಿಯಾಗಿದೆ; Helava community has the profession of praising or telling the family history of cultivating families or any families;
- ಆಳು ಅರಸ/ಒಡೆಯನನ್ನು, ಭಕ್ತ ಭಗವಂತನನ್ನು, ಕಿರಿಯರು ಹಿರಿಯರನ್ನು ಒಟ್ಟಾರೆ, ಕೆಲಸವಾಗಬೇಕಾದವರು ಕೆಲಸ ಮಾಡಿಕೊಡಬಲ್ಲವರನ್ನು 'ಕೊಂಡಾಡು'ವ ಪ್ರವೃತ್ತಿ ಮಾನವ ಸಹಜ ಪ್ರಕ್ರಿಯೆಯಂತೆ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ;

- ಇತರ ಭಾಷಾ ರೂಪಗಳು: ತ: ಕೊಂಡಾಟ್ಟು; ತೆ: ಕೊನಿಯಾಟು, ಕೊನಿಯಾಡು, ಕೊಂಡಾಟಮು; ಮ: ಕೊಂಡಾಡುಗ; ತು.ಕೊಂಡಾಡ್; ಟ>ಡ ವ್ಯತ್ಯಯ;
- *—ಕೊಂಡಾಡಿಸು:* ಕೊಂಡಾಡು+ಇಸು; ಹೊಗಳಿಸು; ಹೊಗಳುವಂತೆ ಮಾಡು.

ಕೊಂಡಿ೧ kondi[1] :

- ಕ್ರಿ.ಶ.೧೧೦೦ರ ೨೪೯ನೇ ಶಾಸನದಲ್ಲಿ ಈ ಹೆಸರಿನ ಉಲ್ಲೇಖ; A name mentioned in 249th inscription of 1100AD;
- 'ಕೊಂಡಿ' ಎಂದರೆ ಒಂದು ಬಗೆಯ ಸಸ್ಯ; A kind of plant;
- ಇದಕ್ಕೆ ಸಂವಾದಿಯಾಗಿ 'ಕೊಂಡೆ' ಎಂಬ ರೂಪವೂ ಇದೆ; 'ತೊಂಡೆ' ಎಂಬ ರೂಪವನ್ನು ಕಿಟ್ಟೆಲ್ ಕೊಟ್ಟಿದ್ದಾರೆ(ಕ.ಇ.ಡಿ); ಹಾಗೆಯೇ 'ಕೊಂಡೆಬಳ್ಳಿ', 'ತೊಂಡೆಬಳ್ಳಿ' ರೂಪಗಳನ್ನೂ ಕಿಟ್ಟೆಲ್ ಉಲ್ಲೇಖಿಸಿದ್ದಾರೆ;
- ಈ ಹಿನ್ನೆಲೆಯಲ್ಲಿ ಈ ಬಗೆಯ ಸಸ್ಯಗಳು ಹೆಚ್ಚು ಬೆಳೆಯುವ ಸ್ಥಳ ಎಂಬ ಅರ್ಥದಲ್ಲಿ 'ಕೊಂಡಿ' ಹೆಸರು ಬಂದಿರಬಹುದು;
- ಹೊಲಗದ್ದೆಗಳ ಕೊನೆಯಲ್ಲಿ ಸಂಪರ್ಕ ಕಲ್ಪಸುವುದಕ್ಕಾಗಿ ಜೋಡಿಸಿಕೊಂಡ ಸಣ್ಣಭಾಗವನ್ನು ಕೂಡ 'ಕೊಂಡಿ' ಎನ್ನುವುದುಂಟು; ಆದರೆ ಇದರಿಂದ ಈ ಹೆಸರು ನಿಷ್ಪನ್ನವಾಗಿರಲಿಕ್ಕಿಲ್ಲ. A small portion of land that connects the farms, fields or cultivated areas.

(E.C- ೯)

ಕೊಂಡಿ೨ Kondi[2] :

- ಕೊಕ್ಕೆ; ಗೊಣಸು; ತುದಿಯಲ್ಲಿ ಬಾಗಿಸಿರುವ ಮೊಳೆ; ಬಾಗಿದ ತುದಿಯುಳ್ಳ ಮುಳ್ಳು; Hook;
- ತಿರುವು; ಬಾಗು; ತುದಿ; Cross, carved, bend;
- ಚೇಳಿನ ಬಾಲ; ಚೇಳು ಮೊದಲಾದವುಗಳ ಚೂಪಾದ ಕುಟುಕುವ ಅಂಗ; The sting part of Scorpian;
- ಎರಡು ವಸ್ತುಗಳನ್ನು, ಸರಪಳಿಯ ಎರಡು ತುದಿಗಳನ್ನು, ತುಂಡಾದ ಸರಪಳಿಯ ಭಾಗಗಳನ್ನು ಜೋಡಿಸಲು s ಆಕಾರದಲ್ಲಿ ಬಾಗಿಸಿ ಕೂಡಿಸುವ ಸಾಧನ/ಕೊಕ್ಕೆ;
- ಕತ್ತಿನ ಸರ, ಕೈಕಪ್ಪ, ಕಾಲಿನ ಚೈನು, ನಡುವಿನ ಪಟ್ಟಿ, ಡಾಬು ಮೊದಲಾದ ಆಭರಣಗಳ ಎಡರು ತುದಿಗಳನ್ನು ಕೂಡಿಸಲು ಒಂದು ತುದಿಯಲ್ಲಿ ಅಳವಡಿಸುವ ಕೊಕ್ಕೆ; A small hook of necklace, bracelet, waist belt;
- ಚಾಡಿ; ಚಾಡಿಮಾತು; ಇಬ್ಬರ ನಡುವೆ ತಂದುಹಾಕುವುದು; Slander;
- ಹಗ್ಗದ ತುಂಡಾದ ಭಾಗಗಳನ್ನು ಸೇರಿಸಲು, ಹಗ್ಗದ ಒಂದು ತುದಿಯನ್ನು ದನಗಳ ಕೊರಳಿಗೆ ಕಟ್ಟಿದ ಹಗ್ಗ ಮೊದಲಾದುವಕ್ಕೆ ಜೋಡಿಸಲು ಹಗ್ಗದ ಒಂದು ತುದಿಯಲ್ಲಿ ಹೆಣೆಯುವ/ರಚಿಸುವ ಕುಣಿಕೆ; ಗೊಣಸು; ಪಲಪು; ಕೊಂಡಿಬಲ್(ತು);
- ಬಾಗಿಲಿನ ಅಗುಳಿಯನ್ನು ಸಿಕ್ಕಿಸಲು ನಿಲಕ್ಕೆ/ಹೊಸ್ತಿಲಿಗೆ ಅಳವಡಿಸಿರುವ 'U' ಆಕಾರದ ಕಬ್ಬಿಣದ ಸಾಧನ; ನೇಗಿಲಿನ ಕುಳ/ಗುಳವನ್ನು ಕಳಚಿಕೊಳ್ಳದಂತೆ ಬಿಗಿಯಾಗಿ ಬಂಧಿಸಲು ಇರುವ '೧' ಆಕಾರದ ಕಬ್ಬಿಣದ ಸಾಧನ; ಜಿಗುಣೆ; ಗೊಣಸು; 'U' shaped iron tool that connects the door and the thresh hold;
  ಪ್ರ: 'ಬಂಡಿ ಬಂಡಿಗೆಲ್ಲ ಕೊಂಡಿ ಕಾಣೇ ಕಬ್ಬುನದ.....';
- ಹೊಲಗದ್ದೆಗಳ ಕೊನೆಯಲ್ಲಿ ಅಥವಾ ನಡುನಡುವೆ/ಅಲ್ಲಲ್ಲಿ ಅನುಕೂಲಕ್ಕೆ ತಕ್ಕಂತೆ ನೀರಿನ ಸೌಕರ್ಯಕ್ಕೊ, ಉಳುಮೆಯ ಸೌಕರ್ಯಕ್ಕೊ, ಏರು ತಗ್ಗುಗಳ ಕಾರಣಕ್ಕೊ ರಚಿಸಿಕೊಳ್ಳುವ ಚಿಕ್ಕ ಹೊಲ/ಗದ್ದೆ; ಹೊಲ–ಗದ್ದೆಯ ಭಾಗ;
- ಒಂದು ಬಗೆಯ ಔಷಧೀ ಸಸ್ಯ; 'ಕೊಂಡಿಯ ರಸ' ಪ್ರಯೋಗವಿದೆ;
- ವ್ಯರೂ: ಕೊಣ್ಡಿ; ಕೊಂಡೆ;
- ಇತರ ಭಾಷಾ ರೂಪಗಳು: ತ:ಕೊಣ್ಡಿ, ಕೊಂಡಿ; ಮ:ಕೊಂಡಿ; ತು:ಕೊಂಡಿ, ಕೊಂಡ್, ಕೊಂಡೆ;
- ದೇಶೀಪದ; ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ರೂಪ ಸಾಮ್ಯತೆ ಇರುವುದು ಗಮನಾರ್ಹ;
- ***—ಕೊಂಡಿಕಟ್ಟಿನಿ*** : ಸೀರೆಯ ತುದಿಗೆ ಕುಚ್ಚುಕಟ್ಟುವುದು(ತು); Tying knots at the edge of a saree;

- *—ಕೊಂಡಿಕಾಪು* : ಒಂದು ಸಮುದಾಯ ಮತ್ತು ಅದಕ್ಕೆ ಸೇರಿದ ವ್ಯಕ್ತಿ; A community or a man who belongs to it;
- *—ಕೊಂಡಿಕಾಯಿ* : ಚಪ್ಪಲಿಗಳಿಗೆ ಅಳವಡಿಸುವ ಒಂದು ಸಾಧನ; ಜೇಕಿನಜೋಡಿನೊಳಕ್ಕೆ ಸೇರಿಸುತ್ತಾರೆ; A tool that adapts to slipper;
- *—ಕೊಂಡಿಕಾರ/–ಕೊಂಡಿಗಾರ* : ಸಾರುವವನು; ಚಾಡಿಕೋರ; ತಂದುಹಾಕುವವನು; ವ್ಯಕ್ತಿ ವ್ಯಕ್ತಿಗಳ ನಡುವೆ ತಂಟೆ ತಕರಾರು ಗಂಟುಹಾಕುವವನು; ಕೊಂಡೆಯಕಾರ; ಕೊಂಡುಕಾರ; Slanderer; carrytale; whisperer;
  ಪ್ರ: 'ಊರ ಕೊಂಡಿಕಾರ ಸಾರಿದ ಮುಹೂರ್ತಕ್ಕೆ ಸರಿಯಾಗಿ'.....; 'ಕೊಂಡಿಕಾರ ಚನ್ನ ಬಸವಣ್ಣ', 'ಕೊಂಡುಕಾರ ಮಂಚಣ್ಣ' ಮೊದಲಾದ ಪ್ರಯೋಗಗಳಿವೆ;
  ವ್ಯರೂ: ಕೊಂಡೆಗ(=ಚಾಡಿಕೋರ);
  ರೈತರ ಧಾರ್ಮಿಕ ಕಾರ್ಯಗಳಿಗೆ ಬೇಕಾಗುವ ಅಗತ್ಯತೆಗಳನ್ನು ಪೂರೈಸುವುದು ಮತ್ತು ಅವರ ಈ ಇಲ್ಲ ಕಾರ್ಯಗಳಿಗೆ ಸಲಹೆ ಸೂಚನೆ ಮಾರ್ಗದರ್ಶನ ಮಾಡುವುದು ಕೊಂಡಿಕಾರರ ಕೆಲಸ/ಕಾಯಕ; ಇವರು ರೈತರ ಹಿತೈಷಿಗಳೇ ಆದುದರಿಂದ ಇವರ ಸೇವೆಗೆ ರೈತರು ದವಸ–ಧಾನ್ಯದ ಆಯ ಕೊಡುತ್ತಾರೆ; ಕೊಂಡಿಕಾರರು ತಿರುಪತಿ ತಿಮ್ಮಪ್ಪನ ಭಕ್ತರೂ ಹೌದು; ತಿಮ್ಮಪ್ಪ ಇವರ ಆರಾಧ್ಯ ದೈವ; ತಿಮ್ಮಪ್ಪನ ಬಿರುದುಗಳಾದ ಶಂಖ, ಜಾಗಟೆ, ಗಂಟೆ, ಸರಗಂಟೆ, ಬಿಲ್ಲುಗೂಡು, ಭವನಾಸಿ/ಬೋನಾಸಿ, ಬಿದಿರಿನ ಬೆತ್ತಗಳನ್ನು ಧರಿಸಿ ರೈತರ ಮನೆಗಳಲ್ಲಿ ಅವರ ಅಪೇಕ್ಷೆಯಂತೆ ಆರಾಧನಾ ಕಾರ್ಯಗಳನ್ನು ನೆರವೇರಿಸುತ್ತಾರೆ; ದಾಸಪ್ಪ ಮತ್ತು ತಿಮ್ಮಪ್ಪನ ಒಕ್ಕಲುಗಳಿಗೆ ಕೊಂಡಿಕಾರರ ಅಗತ್ಯ ಬಹಳವಾಗಿದೆ; ಮಕ್ಕಳಿಗೆ ಮಾಡುವ ಮುಡಿಶಾಸ್ತ್ರದಲ್ಲಿ ಇವರ ನಿರ್ದೇಶನದಂತೆ ಪೂಜೆ ಮಾಡಿ, ಮಣೇವು, ಧೂಪ ಹಾಕಿ, ಕೆಂಡ ಕೊಂಡ ಮಾಡಿ, ಎದಿರೆತ್ತಿ ಮುಡಿ ಕೊಡುವ ಸಂಪ್ರದಾಯವಿದೆ; ತಿರುಪತಿಗೆ ಹೋಗುವಾಗ, ಬರುವಾಗ, ಬಂದ ಮೇಲೆ ಮಾಡುವ 'ದೇವರ ಸಾಗಹಾಕುವ' ಕಾರ್ಯಗಳು ಕೊಂಡಿಕಾರನ ಮಾರ್ಗದರ್ಶನದಂತೆಯೇ ನಡೆಯುತ್ತವೆ; ಈ ಕಾರಣಗಳಿಂದ ಕೊಂಡಿಕಾರನನ್ನು ಆಯಗಾರನೆಂದು ಪರಿಗಣಿಸಿ ಅವನಿಗೆ ಸಲ್ಲಬೇಕಾದ ಕಪ್ಪಕಾಣಿಕೆಯನ್ನು ಆಯದ ರೂಪದಲ್ಲಿ ಕೊಡುತ್ತಾರೆ;
- *—ಕೊಂಡಿಕೆ* : ಬಾಳೆಹೂವು; ಬಾಳೆಹೂವಿನ ಮೋತೆ; ಬಾಳೆಯ ಗಿಡದ ಗೊನೆಯ ತುದಿಯಲ್ಲಿ ಇರುವ ಹೂವಿನ ಗೊಂಚಲುಗಳ ಕಟ್ಟು/ಮೂತಿ; ಮದುವೆಯ ಮನೆಯಲ್ಲಿ ಹಾಕುವ ಚಪ್ಪರಕ್ಕೆ, ಹಬ್ಬ ಜಾತ್ರೆ ಉತ್ಸವಾದಿಗಳಲ್ಲಿ ದೇವಸ್ಥಾನದ ಮುಂದೆ ಹಾಕುವ ಚಪ್ಪರಕ್ಕೆ, ಬಾಗಿಲು ಕಂಬ ಮೊದಲಾದವುಗಳಿಗೆ ಕಟ್ಟಲು, ನಿಲ್ಲಿಸಲು ಅಲಂಕಾರ ಸಾಮಾಗ್ರಿಯಾಗಿ ಬಳಕೆ; ಕೊಂಡಿ+–ಇಕೆ?; Banana flower;
- *—ಕೊಂಡಿಕ್ಕಳ* : ಕೊಂಡಿಯಂತೆ ಬಾಗಿದ ಅಥವಾ ತುದಿಯಲ್ಲಿ ಕೊಕ್ಕೆಯಂತಿರುವ ಇಕ್ಕಳ; ಗೋಡೆ, ಹೆಸ್ತಿಲು, ಕಂಬ, ಕುರ್ಚಿ, ಮೇಜು ಮೊದಲಾದವುಗಳಿಗೆ ಹೊಡೆದಿರುವ ಮೊಳೆಗಳನ್ನು ಕೀಳಲು, ಹುಳಿ, ಜಿಗಣೆ, ಗುಳ ಮೊದಲಾದ ಸಲಕರಣೆಗಳನ್ನು ಕಾಯಿಸಿ ತಟ್ಟಿ ಮೊನೆ ಮಾಡಿಕೊಳ್ಳುವಾಗ ಕೆಂಪಗೆ ಕಾದ ಅವುಗಳನ್ನು ಹಿಡಿಯಲು ಬಡಗಿ ಕಮ್ಮಾರಿಕೆ ಮೊದಲಾದ ವೃತ್ತಿಯವರು ಬಳಸುವ ಕಬ್ಬಿಣದ ಒಂದು ಸಾಧನ; ಕೊಂಡಿ+ಇಕ್ಕಳ(<ಇಕ್ಕುಳ); pliers which is bent and like hook;
- *—ಕೊಂಡಿಗ* : ಚಾಡಿಕೋರ; ಒಬ್ಬರಿಂದ ಒಬ್ಬರಿಗೆ ಚಾಡಿಹೇಳಿ ಜಗಳ ತಂದುಹಾಕುವವ; ವ್ಯವಹಾರ(ವಾಜ್ಯ) ಗಂಟುಹಾಕುವವನು; ಕೊಂಡಿಕಾರ; ಕೊಂಡಿ+–ಇಗ; ವ್ಯರೂ:ಕೊಂಡುಗ; Slanderer who causes a quarrel between two;
- *—ಕೊಂಡಿಗಂಟೆ* : ಕೊಂಡಿ ಇರುವ ಗಂಟೆ; ನೇತುಹಾಕುವ ಗಂಟೆ; ಮಾಳಿಗೆ, ತೊಲೆ ಮೊದಲಾದವುಗಳಿಗೆ ಅಳವಡಿಸಿದ ಗೊಣಸಿಗೆ ನೇತು ಹಾಕಲು ಕೊಂಡಿ ಜೋಡಿಸಿದ ಗಂಟೆ; ದೇವಸ್ಥಾನ, ಚರ್ಚು, ಶಾಲೆ, ರೈಲ್ವೆ ನಿಲ್ದಾಣ ಮೊದಲಾದವುಗಳಲ್ಲಿ ಪ್ರಾರ್ಥನೆ, ಮೊರೆ, ದೂರು, ವೇಳೆ, ಎಚ್ಚರ ಮೊದಲಾದವುಗಳ ಸೂಚಕ ಶಬ್ದಕ್ಕಾಗಿ ಬಳಕೆ; A hooked bell or hanging bell;

- ***—ಕೊಂಡಿಗದ್ದೆ*** : ದೊಡ್ಡದೊಡ್ಡ ಗದ್ದೆಗಳ ನಡುವೆ ಹಾಗೂ ಕೊನೆಯಲ್ಲಿ ರೂಪಿಸಿಕೊಳ್ಳುವ ಚಿಕ್ಕ ಗದ್ದೆ; ನೀರು ನಿಲ್ಲಿಸುವ/ಹಾಯಿಸುವ ಸೌಕರ್ಯಕ್ಕೊ, ಉಳುಮೆಯ ಸೌಕರ್ಯಕ್ಕೊ, ಗದ್ದೆ ಬಯಲಿನ ಏರಿಳಿತದ ಕಾರಣಕ್ಕೊ ಇಂತಹ ಚಿಕ್ಕ ಗದ್ದೆಗಳನ್ನು ಅಗತ್ಯ ಬಿದ್ದಡೆ ಮಾಡಿಕೊಳ್ಳುತ್ತಾರೆ; ಸಮ ಅಳತೆಯಲ್ಲಿ ಬಯಲನ್ನು ವಿಭಜಿಸಿಕೊಂಡು ಗದ್ದೆಗಳನ್ನು ಮಾಡಿದ ಮೇಲೆ ಉಳಿದ ಕೋಸನ್ನು 'ಕೊಂಡಿಗದ್ದೆ'ಯನ್ನಾಗಿ ಮಾಡಿಕೊಳ್ಳುವುದೂ ಉಂಟು; A small or piece of land among biglands;
- ***—ಕೊಂಡಿಡಾಬು*** : ಗೊಣಸು ಇರುವ ಸೊಂಟಪಟ್ಟಿ (ಚಿನ್ನ/ಬೆಳ್ಳಿಯದು); ಕೊಕ್ಕೆ ಇರುವ ಒಡ್ಯಾಣ; 'ಡಾಬು' ಎಂಬ ಸೊಂಟದ ಆಭರಣದ ಎರಡು ತುದಿಗಳನ್ನು ಕೂಡಿಸಿ ಬಿಗಿ ಮಾಡಿಕೊಳ್ಳುವುದಕ್ಕಾಗಿ ಅದರ ಒಂದು ತುದಿಗೆ ಕೊಕ್ಕೆಯನ್ನೂ ಇನ್ನೊಂದು ತುದಿಗೆ ಕೊಕ್ಕೆಯನ್ನು ಸಿಕ್ಕಿಸಲು ವೃತ್ತಾಕಾರದ ಬಳೆಯನ್ನೂ ಬೆಸೆದಿರಲಾಗುತ್ತದೆ; Golden waist belt having hook;
- ***—ಕೊಂಡಿಗೆ*** : ಗುದಿಗೆ, ದನಕರುಗಳ ಕೊರಳಿಗೆ ತೂಗಿಬಿಟ್ಟ ಬಡಿಗೆ; ಕೊಟ್ಟಿಗೆಯ ರಾಸುಗಳನ್ನು ಮೇಯಲು ಬಯಲಿಗೆ ಬಿಟ್ಟಾಗ, ರಸ್ತೆಯಲ್ಲಿ ಹೊಡೆದುಕೊಂಡು ಹೋಗುವಾಗ ಓಡಿಹೋಗಬಾರದೆಂದು, ಅಕ್ಕಪಕ್ಕದ ಹೊಲಗದ್ದೆಗಳಿಗೆ ಜಿಗಿದು ಬೆಳೆ ನಾಶ ಮಾಡದಿರಲೆಂದು ಅವುಗಳ ನಡಿಗೆಯನ್ನು ನಿಯಂತ್ರಿಸಲು ಕೊರಳಿಗೆ ಕಟ್ಟಿದ ಹಗ್ಗಕ್ಕೆ ತೊಡೆಗಾತ್ರದ, ಸುಮಾರು ಅರ್ಧ ಮಾರು ಉದ್ದದ ಬಡಿಗೆಯನ್ನು ಕಟ್ಟಿ ಮುಂಗಾಲುಗಳ ಮಧ್ಯಕ್ಕೆ ಬರುವಂತೆ ಜೋತು ಬಿಟ್ಟಿರಲಾಗುತ್ತದೆ; The wooden necklace tied around the necks of cattle while they go for grazing;
- ***—ಕೊಂಡಿಗೆಕಾರ*** : ಚಾಡಿಕೋರ; ಗೊರೆ ಹಬ್ಬದಲ್ಲಿ ಬೀರಪ್ಪ ದೇವರಿಗೆ ಒಂದು ಬಗೆಯ ವಿಶಿಷ್ಟ/ವಿಚಿತ್ರ ಸೇವೆ ಸಲ್ಲಿಸುವ ವ್ಯಕ್ತಿ; ಗೊರೆಹಬ್ಬದಲ್ಲಿ ಹುಲ್ಲಿನ ಮೀಸೆ, ಗಡ್ಡ ಕಟ್ಟಿಕೊಂಡು ಕತ್ತೆಯ ಮೇಲೆ ಕೂತು ಮೆರವಣಿಗೆಯಲ್ಲಿ ಬೀರಪ್ಪನ ಗುಡಿಗೆ ಬರುವ/ಕರೆತರಲ್ಪಡುವ ವ್ಯಕ್ತಿ; ದೇವಾಲಯದಲ್ಲಿ ಈತನನ್ನು ಅವಾಚ್ಯ ಮಾತುಗಳಿಂದ ನಿಂದಿಸುವ ಆಚರಣೆ ನಡೆಯುತ್ತದೆ; ಪ್ರತಿ ವರ್ಷವೂ ಒಬ್ಬನೇ ವ್ಯಕ್ತಿ ಈ ಸಾಂಪ್ರದಾಯಿಕ ಆಚರಣೆಯಲ್ಲಿ ಕೊಂಡಿಗೆಕಾರನಾಗಿ ಸೇವೆ ಸಲ್ಲಿಸುತ್ತಾನೆ; ಹರೆಯದ ಹುಡುಗರು ಕೊಂಡಿಗೆಕಾರನಿಗೆ ಸೆಗಣಿ ಎರಚಾಡಿ, ಅನಂತರ ಆತನ ಪ್ರತಿರೂಪವನ್ನು ಅಂಚಿಕಡ್ಡಿಯಿಂದ ಮಾಡಿಕೊಂಡು ಗುಡ್ಡಕ್ಕೆ ತೆಗೆದುಕೊಂಡು ಹೋಗಿ ಸುಡುತ್ತಾರೆ(ಚಾ.ಜಿ.); Slanderer; A special man priest who worshipped the lord Beerappa;
- ***—ಕೊಂಡಿಗೆರವು*** : ಕೊಕ್ಕೆಗಳಿರುವ ದೊಡ್ಡ ಜೋಡು/ಚಪ್ಪಲಿ/ಕೆರ; ಚರ್ಮದಿಂದ ಮಾಡಿದುವಾಗಿದ್ದು ಕೊಕ್ಕೆಗಳನ್ನು ಅಳವಡಿಸಲಾಗಿರುತ್ತದೆ; ಮೆಟ್ಟಿಕೊಂಡು ನಡೆದರೆ ಗಿರ್‍ಕಗಿರ್‍ಕನೆ ಶಬ್ದ ಹೊಮ್ಮುತ್ತದೆ; ಕುರಿ ಕಾಯುವವರು ಕಾಡುಮೆಡು, ಮುಳ್ಳುಕಂಟಿಯ ಬಯಲು ತುಳಿಯುವಾಗ ಪಾದಗಳ ರಕ್ಷಣೆಗಾಗಿ ಧರಿಸುತ್ತಾರೆ; ಕೊಂಡಿ+ಕೆರವು; ಕೆರ/ಕೆರವು ಉಚ್ಚಾರಣಾ ವ್ಯತ್ಯಯ; ಕೆರ=ಚಪ್ಪಲಿ; **ವ್ಯರೂ:** ಕೊಂಡ್ಗೆರವು; Big or huge slippers those of having hooks, slippers or sandals madeup of lether which are sounding while wearing and walking;
- ***—ಕೊಂಡಿಬಲ್*** : ಕೊಂಡಿ ಹಗ್ಗ(ತು); ಕುಣಿಕೆ/ಪಲಪು/ಪಲ್ಪು ಇರುವ ಹಗ್ಗ; ಓಡಾಡುವ ತೊಂಡು ಜಾನುವಾರುಗಳನ್ನು ನಿಯಂತ್ರಿಸಲು; ಕತ್ತಿಗೆ ಉರುಳು ಹಾಕಿ ಮರದ ತುಂಡನ್ನು ಇಳಿ ಬಿಡುವುದಕ್ಕೆ ಉಪಯೋಗಿಸುವ ಹಗ್ಗ(ಮಂ.ಜಿ.); *ಪ್ರ: ನಾಲೆರು ಮಾದವರ್ ಕೊಂಡಿಬಲಿದ್ಯಾಂಡೇ(ನಾಲ್ಕು ಎತ್ತುಗಳನ್ನು ನಿಯಂತ್ರಿಸಿ ತಿರುಗಿಸಲು ಕೊಂಡಿಹಗ್ಗ ಇಲ್ಲವಾಯಿತಲ್ಲಾ);* Knoting rope;
- ***—ಕೊಂಡಿಬುರ್ಜ*** : ಕಪ್ಪುಬಣ್ಣದ ದೊಡ್ಡ ಇರುವೆ; ಕೊಂಬಿನಂತಹ ಕೊಂಡಿಗಳಿರುವ ಇರುವೆ; ಕಟ್ಟಿರುವೆಗಿಂತ ದೊಡ್ಡ ಗಾತ್ರದವಾಗಿರುತ್ತವೆ; ಕಚ್ಚಲು, ಆಹಾರ ಪದಾರ್ಥಗಳನ್ನು ಸಾಗಿಸಲು ಕೊಂಡಿಗಳನ್ನು ಬಳಸುತ್ತವೆ; ಕೊಂಡಿ+ಇರ್ಬುರ್ಜ; ಎರ/ಎರವು> ಎರ್ಬುರ್ಜ/ಇರ್ಬುರ್ಜ ವ>ಬ ಆಗಿದೆ; ಓಷ್ಠ್ಯ ಧ್ವನಿಮಾಗಳ ವಿನಿಮಯ ನಡೆದಿದೆ; ವ್ಯರೂ: ಕೊಂಬಿರುವೆ;

Blackish huge ant having antnnas like horns;

- *—ಕೊಂಡಿಮರ* : ಮರದ ಒಂದು ಸಾಧನ; ಎಣ್ಣೆಗಾಣದಲ್ಲಿ ಬಳಕೆ; ಗಾಣದ ಒರಳಿನಲ್ಲಿ ಅಳವಡಿಸುವ ಗಣೆಮರವನ್ನು ಬಿಗಿಹಿಡಿಯಲು ಕೊಂಡಿಯಾಕಾರದಲ್ಲಿ ತಯಾರಿಸಿದ ಎರಡು ಮೂರು ಅಡಿ ಉದ್ದದ ಮರದ ತುಂಡು; ಒಂದು ಸಲಕರಣೆ(ಹಾ.ಜಿ.); A wooden tool; used in oil mill or grinding;
- *—ಕೊಂಡಿಮಂಚಣ್ಣ/–ಕೊಂಡಿಮಿಂಚಣ* : ಚಾಡಿಕಾರ; ನಿಂದೆಕಾರ; ಇಬ್ಬರ ನಡುವೆ ವ್ಯವಹಾರ ಗಂಟುಹಾಕುವವನು; ಚುಚ್ಚಪ್ಪ; ಹಚ್ಚಪ್ಪ(ಬೀ.ಜಿ.); ಶಕುನಿಯಂತಹ ಮನುಷ್ಯ; Slanderer; A problem creater;
- *—ಕೊಂಡಿಯಕಲ್ಲು* : ತಲೆಗಲ್ಲು; ಹೊಲಗದ್ದೆಗಳ, ದೇವಾಲಯಗಳ ಕೊಡುಗೆ ಭೂವಿಯ ಎಲ್ಲೆಯಲ್ಲಿ ನೆಡುವ ಗುರುತಿನ ಕಲ್ಲು; A stone that is used as land mark between lands;
- *—ಕೊಂಡುಳಿ* : ಕೊಕ್ಕೆ ಉಳಿ; ಚಮ್ಮಾರರು ಚಪ್ಪಲಿ ಹೊಲಿಯಲು ಬಳಸುವ, ಹಿಡಿಯುಳ್ಳ ದಬ್ಬಳದಂತಹ ಒಂದು ಸಾಧನ; ತುದಿಯಲ್ಲಿ ದಾರ ಸಿಕ್ಕಿಸಲು ಕೊಂಡಿಯಂತೆ ಬಾಗಿಸಿರುತ್ತಾರೆ/ರಂಧ್ರ ಮಾಡಿರುತ್ತಾರೆ; ಕೊಂಡಿ+ಉಳಿ(ಚಿಪಕೋ); ವ್ಯರೂ: ಕೊಂಡೆಉಳಿ(ತು.). A hooked chisel used to manufacture slippers by cobblers;

ಕೊಂಡೆ/ಗೊಂಡೆ Konḍe/gonḍe:

- ಕುಚ್ಚು; ಗೊಂಚಲು; ಗುಚ್ಛ; A branch, a knot, a bunch;
- ಎತ್ತಿಕಟ್ಟಿದ ತಲೆಗೂದಲಿನ ಗಂಟು; ಹೆಣೆಗಂಟು; ತುರುಬು; Que or knotted head hair;
- ತುರುಬು ಕಟ್ಟಲು ಬಳಸುವ, ಬಟ್ಟೆ ಅಥವಾ ನೂಲಿನಿಂದ ಮಾಡಿದ, ಸಿಂಬೆಯಂತಹ ಒಂದು ಸಾಧನ;
- ಜೆಡೆ ಎಣೆದು, ತುದಿಗೆ ಜೋಡಿಸಿ ಕಟ್ಟುವ ಕುಚ್ಚುಗಳ ಗೊಂಚಲು; ಗೊಂಡೆ ಸರ;
- ಒಂದು ಬಗೆಯ ಆಭರಣ; ತಲೆಗೆ ಧರಿಸುವ ಮುತ್ತಿನ ಒಂದು ಒಡವೆ; A head jewel;
- ಹಕ್ಕಿಗಳ ತಲೆಯ ಮೇಲಿನ ಜುಟ್ಟು(ಕೊಂಡ್ಯೆ; ತ.); Bird's crest;
- ಮೊಳೆ ಅಥವಾ ಆಣಿಯ ಗುಂಡಗಿನ ತಲೆ; ಕೊಕ್ಕೆಯಂತೆ ಬಾಗಿರುವ ಮೊಳೆ(ಕ.ನಿ.); ತಿರುಪು;
- ಗುನುಗು ಅಥವಾ ಹೊಟ್ಟನ್ನು ತೆಗೆದಿರದ ಕಾಳು (ಉ.ಕ.ಜಿ.);
- ಊರುಗೋಲಿನ ಬುಡದ ಗಂಟು, ಉರುಟಾದ ವೃತ್ತಾಕಾರದ ಮೇಲ್ಭಾಗ(ಕೊಡ.ಜಿ.); The upper round rough part of walking stick;
- ಒಂದು ಅಳತೆ; ಸೇರಿನ ಆರನೆಯ ಒಂದು ಭಾಗ; ಕುಡ್ತೆ/ಬೊಗಸೆಯಷ್ಟು; A measurement or scale of one part of six;
- ಕುಡ್ಕೆ(<ಕುಡುಕೆ); ಕುಡ್ತೆ(<ಕುಡುತೆ); ಮಣ್ಣಿನ ಚಿಕ್ಕ ಪಾತ್ರೆ; A small clay vessel;
- ಟೊಳ್ಳಾದ ಬಿದಿರಿನ ತುಂಡು
- ಚಾಡಿಮಾತು; ಪಿಸುಣು; ನಿಂದೆ; ಬಯ್ಗುಳ, ಕುಹಕ; <ಕೊಂಡೆಯ;
- ದೇಶಿಪದ; ವ್ಯರೂ: ಕೊಣ್ಡೆ; ಕೊಂಡಿ; ಕೊಂಡ್; ಕೊಂಡೆಯ; ಗೊಂಡ್; ಗೊಂಡಿ; ಗೊಂಡು;
- ಇತರ ಭಾಷಾ ರೂಪಗಳು: ತ: ಕೊಣ್ಡೈ, ಕೊಂಡ್ಯೆ, ಕೊಂಡಿ; ಮ: ಕೊಣ್ಣ, ಕೊಂಡಿ; ತೆ: ಕೊಂಡೆ, ಕೊಂಡೆಮು; ತು: ಕೊಂಡ್, ಗೊಂಡೆ; ಕೊಡ: ಕೊಂಚೆ;
- *—ಕೊಂಡೆಕಾರ* : ಗಡಿಗೆ(ತುನಿ); ಮಡಕೆ ಮಾಡುವವನು ಕುಂಬಾರ; A potter;
- *—ಕೊಂಡೆಗ* : ಚಾಡಿ ಹೇಳುವವನು; ಚಾಡಿಕೋರ; ಪಿಸುಣ; ಪಿಸುಣಿಗ; ಬೆನ್ನಹಿಂದೆ ನಿಂತು ನಿಂದಿಸುವವನು; ಕೋಳನ್(ತ.); ಕೊಂಡೆ+–ಗ; Slanderer;
- *—ಕೊಂಡೆಗಾರ* : ಚಾಡಿಕೋರ; Slanderer;
- *—ಕೊಂಡೆಗಾರ್ತಿ* : ಚಾಡಿಹೇಳುವವಳು; ಪಿಸುಣೆ; <ಕೊಂಡೆಗಾರತಿ; ಕೊಂಡೆ+ಗಾರ್ತಿ; A woman who is slander;
- *—ಕೊಂಡೆಕಿವಿ* : ಬೊಗಸೆಗಿವಿ(ತು); ಚಾಡಿಮಾತು ಕೇಳುವ ಕಿವಿ; ಒಳಕ್ಕೆ ಸುರುಟಿಕೊಂಡಿರುವ ಕಿವಿ; Slanding talk;

- —*ಕೊಂಡೆಕರ* : ಸ್ತಂಭಾಕಾರದ ಅಥವಾ ವರ್ತುಲಾಕಾರಧ ಮಣ್ಣಿನ ಪಾತ್ರೆ; ಮಡಕೆ; ಗಡಿಗೆ (ಉ.ಕ.ಜಿ.) A clay pot.

ಕೊಂಡೆಯನಹಳ್ಳಿ koṇḍeyanahaḷḷi :

- ಕ್ರಿ.ಶ.೧೩೨೭ರ ದೊಮ್ಮಲೂರಿನ ಶಿಲಾಶಾಸನ ತಿಳಿಸುವಂತೆ ಕಾಮೆಯ ದಂಡನಾಯಕರ ಕುಮಾರ ಬಲ್ಲಪ್ಪ ದಂಡನಾಯಕನು ದೊಂಬಲೂರಿನ ಸೋಮನಾಥ ದೇವರಿಗೆ ನೀಡಿದ ದಾನ ಗ್ರಾಮಗಳಲ್ಲಿ ಈ ಊರೂ ಕೂಡ ಒಂದಾಗಿದೆ; A village mentioned in an inscription of 1327AD; found in Dommaluru stone inscription;
- 'ಕೊಂಡೆಯ' ಪದಕ್ಕೆ ಹಲವು ರೀತಿಯಲ್ಲಿ ನಿಷ್ಪತ್ತಿ ಹೇಳಬಹುದು;
- 'ಕೊಂಡ' ಎನ್ನುವುದು 'ಬೆಟ್ಟಗುಡ್ಡ' ಎಂದು ಅರ್ಥಮಾಡಿ, ಅದರ ಪ್ರದೇಶ ಎಂದು ಹೇಳುವುದು;
- 'ಕೊಂಡ' ಪದ ಒಬ್ಬನ ಹೆಸರನ್ನು ಸೂಚಿಸುತ್ತಿದ್ದು, 'ಕೊಂಡಯ' ಅದರ ರೂಪವಾಗಿರಬಹುದು; ಕೊಂಡ+ಅಯ್ಯ>ಕೊಂಡಯ>ಕೊಂಡೆಯ;
- 'ಕೊಂಡೆಯ' ರೂಪವನ್ನು ಕೊಟ್ಟು, ಅದರ ಅರ್ಥವನ್ನು ಕಿಟ್ಟೆಲ್ ಅವರು `informer', `defamer; ಎಂಬುದಾಗಿ ಅರ್ಥೈಸಿರುವುದು;
- ಮೊದಲ ಎರಡನ್ನು ಆಧರಿಸಿ ಇದು ಪ್ರಕೃತಿವಾಚಿ ಅಥವಾ ವ್ಯಕ್ತಿವಾಚಿ ಸ್ಥಳನಾಮ ಎಂದು ಗುರುತಿಸಬಹುದಾಗಿದೆ.

(E.C-IX; ಬಿ.ಎಲ್.ರೈಸ್; ಬೆಂ.ಜಿ. ಅನುಬಂಧ ಸಂ–ಬೆಂ–೧೬೫)

ಕೊಂಡ್ಗ Koṇḍga :

- ಒಂದು ಜಾತಿಯ ಮೀನು(ಉ.ಕ.ಜಿ.); ಚಿಪ್ಪುಗಳಿರುತ್ತವೆ; ಕೊಕ್ಕೆಯಂತಹ/ಕುಟುಕುವ ಚೂಪಾದ ಮೂತಿಯಿದ್ದು 'ಕೊಂಡ್ಗ' ಎಂದು ಕರೆದಿರಬಹುದೆ? ವ್ಯರೂ: ಕೊಂಡಗ; ಕೊಂಡಗ>ಕೊಂಡ್ಗ; 'ಕೊಂಡ್ಗ'ವೇ ಸರಳ ಉಚ್ಚಾರಣೆಗೋಸ್ಕರ 'ಕೊಂಡಗ' ಆಗಿರಬಹುದು. A kind of fish.

ಕೊಂತ Konta :

- ಶಾವಿಗೆ ಒತ್ತುವ ದಿಂಡು; ದುಂಡಗೆ ಮರದಿಂದ ಮಾಡಿದ ಒಂದು ತುಂಡು; ದಪ್ಪ ದಡಿ; A wooden tool that is used to make noodles or vermicelli;
- ಶಾವಿಗೆ ಒರಳು ತೋಡಿ, ಆ ಒರಳು ಹಿಡಿಸುವಷ್ಟು ಗಾತ್ರದ ಬೇಕಷ್ಟು ಉದ್ದದ ಮರದ ತುಂಡನ್ನು ಗುಂಡಗೆ ತಯಾರಿಸಿಕೊಂಡು ಶಾವಿಗೆ ಒರಳಿಗೆ ಅಳವಡಿಸಿರುತ್ತಾರೆ; ಒರಳಿನ ರಂಧ್ರಕ್ಕೆ ನುಸುಳುವ ಭಾಗದಿಂದ ಮೇಲಕ್ಕೆ ಕಲಾತ್ಮಕ ಕೆತ್ತನೆ ಮಾಡಿರುವುದೂ ಉಂಟು;
- ಒಂದು ಆಯುಧ; ಸಬಳ; ಭಲ್ಲೆ(ತ್ರಿಶೂಲ); ಭರ್ಜಿ; ಒಂದು ಬಗೆಯ ಬೇಟೆಯ ಆಯುಧ; An hunting tool; spear;
- ಗರಡಿ ಮನೆಗಳಲ್ಲಿ ಜಟ್ಟಿಗಳು ಸಾಮು ಮಾಡಲು ಬಳಸುವ ಒಂದು ಸಾಧನ; ಸುಮಾರು ಒಂದೂವರೆ ಮೊಳದಷ್ಟು ಉದ್ದದ ಇದು ತಳದಲ್ಲಿ ಹಿಡಿಗಾತ್ರದಿಂದ ಆರಂಭವಾಗಿ ತುದಿಯಲ್ಲಿ ಒಂದು ಒಂದೂವರೆ ಅಡಿ ಸುತ್ತಳತೆಯ ಉರಟಾದ ಸಾಧನ, ಗಟ್ಟಿ ಮರದಿಂದ ತಯಾರಿಸಿದ್ದು; ಕದನ, ಯುದ್ಧಗಳಲ್ಲಿ ಇದನ್ನೇ ಆಯುಧವಾಗಿ ಬಳಸಲಾಗುತ್ತಿತ್ತು; ಬೇಟೆಗೂ ಬಳಸುವದುಂಟು; An exercise tool used by wrestlers in wrestling home;
- ಕೆಲವು ಹಬ್ಬ, ಉತ್ಸವಗಳಲ್ಲಿ ಕೊಂತಕ್ಕೆ ಅಲಂಕಾರ, ಧಾರ್ಮಿಕ ಆಚರಣೆಗಳು ನಡೆಯುತ್ತವೆ; ಮೆರವಣಿಗೆಯಲ್ಲಿ ಮೆರೆಸಲಾಗುತ್ತದೆ; ಇಂತಹ ಕೆಲವು ಉತ್ಸವಗಳಲ್ಲಿ ಕೊಂತ ಪುರುಷ ಜನನೇಂದ್ರಿಯದಂತೆ ಇರುತ್ತದೆ ಇಲ್ಲವೆ ಕೊಂತವನ್ನು ಪುರುಷ ಜನನೇಂದ್ರಿಯಕ್ಕೆ ಪ್ರತೀಕವನ್ನಾಗಿ ಮಾಡಿಕೊಳ್ಳಲಾಗುತ್ತದೆ; ಫಲವಂತಿಕೆಯ ಬಯಕೆಯನ್ನು, ಅಂದರೆ ಸಂತಾನಾಪೇಕ್ಷೆಯನ್ನು ಪೂರೈಸಿಕೊಳ್ಳುವುದು ಇಂತಹ ಆಚರಣೆಗಳ ಆಶಯವಾಗಿರುತ್ತದೆ;
- ಮೈಲಾರ ಮಲ್ಲಯ್ಯನ ಒಕ್ಕಲು ಕೈಯಲ್ಲಿ ಕೊಂತ ಭಾಲೆ ಹಿಡಿದದು'(ಕಜಕೋ)ಎಂಬ ಪ್ರಯೋಗವಿದೆ; ಗೊರವರು ಇಂತಹ ಆಚರಣೆಗಳಲ್ಲಿ ತೊಡಗಿಕೊಳ್ಳುತ್ತಿದ್ದುದನ್ನು ಇದು ಹೇಳುತ್ತಿರಬಹುದು;
- ಒತ್ತೊರಳಿನ ಒಳಕ್ಕೆ ಒತ್ತುವ ಒಂದು ಸಾಧನ; ದಿಂಡು; ಪಂಪು ಮೊದಲಾದ ನಳಿಕೆಗಳಿಗೆ ಗಾಳಿಯನ್ನಾಗಲಿ, ದ್ರವವನ್ನಾಗಲಿ, ಒತ್ತುವುದಕ್ಕಾಗಿ

ಜೋಡಿಸಿದ ಬೆಣೆ; ಆಡುಬೆಣೆ; ತೂಬಿನ ಕಿಂಡಿಯನ್ನು ಮುಚ್ಚುವ ಸಾಧನ;

- ಒರಳಿಗೆ ಹಿಟ್ಟು ತುಂಬಿ ಕೊಂತದಿಂದ ಒಂದು ಸಲ ಒತ್ತಿ ತೆಗೆದ ಶಾವಿಗೆಯ ಒಂದು ಪ್ರಮಾಣ; ಒಂದು ಒಬ್ಬೆ;
  ಪ್ರ: 'ಇನ್ನೊಂದ್ ಕೊಂತ ಶಾವ್ಗೆ ಹಾಕು, ತಿನ್ನವ'; 'ಕೊಂತದ ಬಾಯ್ಗೆ ಹಿಟ್ಟು ತುಂಬಿ ಕೊಂತೂರಿಗೆ ಎಣ್ಣೆಗೆ ಹೋದಂಗಾಯ್ತು';
- ದೊಡ್ಡ ಅಡಕೆಯ ಮರದ ಕೊಂಬೆಯ ಭಾಗ; A branch of big areca nut tree;
- ಕೆರೆ ಹಾಗೂ ತೋಡಿದ ಗುಂಡಿಯಿಂದ ಪೈರು ಇರುವ ಗದ್ದಗೆ ನೀರು ಎತ್ತಲು ಬಳಸುವ ಸಾಧನ; ಮೂರು ಕಂಬಗಳನ್ನು ತಳದಲ್ಲಿ ಭೂಮಿಗೆ ನಟ್ಟು, ಅವುಗಳ ತುದಿ ಒಂದೇ ಕಡೆಗೆ ಬರುವಂತೆ ಮಾಡಿ, ಅಲ್ಲಿಂದ ಉದ್ದನೆಯ, ಹರಿನಳಿಗೆಯನ್ನು ನೇತುಹಾಕಿ ನೀರು ತೆಗೆಯುವ ಒಂದು ಸಾಧನ(ಚಿತ್ರ,ಜಿ); ವ್ಯರೂ: ಕೊಂತು;
- ಅನ್ಯದೇಶ್ಯ ಪದ; <ಕುಂತ(ಸಂ); ಕೋಂತ(ಪ್ರಾ).

ಕೊಂತಳ Kontaḷa :

- ಚಿಕ್ಕದೋಣಿ(ತು); ಇಬ್ಬರು ಮಾತ್ರ ಕುಳಿತು ಮೀನು ಹಿಡಿಯಲು ಬಳಸುವ ದೋಣಿ; ಸಮುದ್ರದಲ್ಲಿ ದೊಡ್ಡ ದೋಣಿಯಲ್ಲಿ ಕುಳಿತು ಬಲೆಬೀಸಿ ಹಿಡಿದು ಸಂಗ್ರಹಿಸಿದ ಮೀನುಗಳನ್ನು ದಡಕ್ಕೆ ಸಾಗಿಸಲೂ ಬಳಕೆ(ಉಕ.ಜಿ./ಉ.ಜಿ./ಮಂ.ಜಿ.);ವ್ಯರೂ: ಕೊಂತಾಳ; A small boat used to fishing;
- ಕೋಟೆಯ ಮೇಲಿನ ಅಟ್ಟಣಿಗೆ; ಕೋಟೆಯ ಮೇಲೆ ಸೈನಿಕರು ನಿಂತು ಕಾವಲು ಕಾಯಲು ಅನುವು ಮಾಡಿದ ಜಾಗ; ಬುರುಜು; ವ್ಯರೂ: ಕೊತ್ತಳ.

ಕೊಂತಳ್ಕಿ Konthaḷki :

- ತೆಂಗಿನ ಹೂವಿನ ಕವಚ; ಹೊಂಬಾಳೆಯ ಮೇಲ್ಪದರ; ಹೊಂಬಾಳೆ ಮೊಟ್ಟೆ; `Hombale'; the crest of coconut flower;
- ಹೊಂಬಾಳೆಯೊಳಗಿನ ಹೂವು ಅರಳಿ ಹೊಡೆದುಕೊಂಡ ಮೇಲೆ, ಅದರ ಮೇಲಿನ ಒಣಗಿಕೊಳ್ಳುವ ಕವಚ.

ಕೊಂತಾಲ Kontāla :

- ಭೂತಾರಾಧನೆಯ ಚಪ್ಪರ; ಕೊಡಿಯಡಿ? (ಉಕ.ಜಿ/ಮಂ.ಜಿ.); A pandal of Bhoota ritual;
- ವ್ಯರೂ: ಕೊಂತಾಳ? ಕೊಂತಾಳ=ಕಾಳಗ; ಯುದ್ಧ (ತುನಿ).

ಕೊಂತಿ/ಕೊಂತಮ್ಮ Konti/Kontamma :

- <ಕುಂತಿ/ಕುನ್ತಿ(ಸಂ); ವೇದವ್ಯಾಸರಿಂದ ರಚನೆಯಾದ ಸಂಸ್ಕೃತ ಮಹಾಭಾರತದ ಒಂದು ಮುಖ್ಯ ಪಾತ್ರ; ಯದುವಂಶದ ರಾಜ ಕುಮಾರಿ; ತಂದೆ ಶೂರರಾಜ; ವಸದೇವನ ತಂಗಿ; ಕೃಷ್ಣನ ಸೋದರತ್ತೆ; ಕುರುವಂಶದ ಸೊಸೆ; ಪಾಂಡುರಾಜನ ಮಡದಿ; ಯುದಿಷ್ಠಿರ(ಧರ್ಮರಾಯ), ಭೀಮ, ಅರ್ಜುನರ ತಾಯಿ; ಸವತಿ ಮಾದ್ರಿಯ ಸಹಗಮನಾನಂತರ ಆಕೆಯ ಮಕ್ಕಳಾದ ನಕುಲ ಸಹದೇವರನ್ನೂ ಸಲಹಿದಳು; ಪಾಂಡವರ ತಾಯಿಯೆಂದೇ ಖ್ಯಾತಿ; ದುರ್ವಾಸಮುನಿ ಕೊಟ್ಟ ವರವನ್ನು ಪರೀಕ್ಷಿಸಲು ಹೋಗಿ ಮದುವೆಗೆ ಮುನ್ನವೇ ಸೂರ್ಯದೇವನಿಂದ ಕರ್ಣನನ್ನು ಮಗನನ್ನಾಗಿ ಪಡೆದಳು; ಕರ್ಣ ಈಕೆಯ ಹಿರಿಯ ಮಗ; A female character created by Vedavyasa's Mahabharata; she is the princess of Yadhu vamsha her father Shura raja; sister of Vasudeva; wife of Pandu raja, mother of Dharmaraya, Bheema and Arjuna;
- ನಿಜ ನಾಮಧೇಯ ಪೃಥೆ; ಕುಂತಿದೇಶದ ರಾಜ ಕುಂತಿಭೋಜನ ಸಾಕುಮಗಳಾದುದರಿಂದ ಇವಳ ಹೆಸರೂ ಕುಂತಿ ಎಂದೇ ಆಯಿತು. ಜನಪದರ ಬಾಯಲ್ಲಿ 'ಕೊಂತಿ'(ಉ>ಒ ಸ್ವರ ವ್ಯತ್ಯಯ) ಎಂದಾಗಿದೆ; ಪಂಪಕವಿಯ 'ವಿಕ್ರಮಾರ್ಜುನ ವಿಜಯ' ಕೂಡ 'ಕೊಂತಿ' ಎಂದೇ ಹೆಸರಿಸುತ್ತದೆ;
- ಕೊಂತಿ ವ್ಯವಸಾಯ ಸಂಸ್ಕೃತಿಯ ಆರಾಧ್ಯ ದೈವವಾಗಿದ್ದಾಳೆ; ಒಕ್ಕಲಿಗರು, ದಲಿತರು, ಗೊಲ್ಲರು, ಕುಂಚಿಟಿಗರು, ಬೆಸ್ತರು, ಉಪ್ಪಾರಶೆಟ್ಟರು, ಕೆಲವೆಡೆ ಶಿವಭಕ್ತರು ಕುಂತಿಯನ್ನು ಪೂಜಿಸುತ್ತಾರೆ; 'ಕೊಂತಿಪೂಜೆ'ಯೆಂಬ ಜನಪದರ ಒಂದು ವಿಶಿಷ್ಟ ಆರಾಧನೆ, ಆ ಸಂದರ್ಭದಲ್ಲಿ ಹಾಡುವ 'ಕೊಂತಿಪದಗಳು' ಎಂಬ ಒಂದು ಗೀತ ಪ್ರಕಾರ

ಜಾನಪದದಲ್ಲಿ ಉಂಟು; **ನೋಡಿ:** –ಕೊಂತಿಪೂಜೆ; Konti is a famous celebrity goddess of agrarian community; Vokkaliga, Dalitas, Golla, Besta;

- ಕೊಂತಿ/ಕೊಂತಮ್ಮ ಭೂಮಿತಾಯಿಯ ಮಗಳಾಗಿ ನೇಗಿಲ ಗುಳ(ಕುನಿ)ದಲ್ಲಿ ಹುಟ್ಟಿದವಳೆಂದು ಜನಪದರ ಕಲ್ಪನೆ; ಕೊಂತಿ ವ್ಯವಸಾಯಗಾರರ ಆರಾಧ್ಯ ದೈವವಾಗುವುದಕ್ಕೆ ಅವಳ ಹುಟ್ಟಿನ ಬಗೆಗಿನ ಈ ಕಥೆ ಕಾರಣವಾಗಿರಬಹುದು; ಮಧುರಾ ಪಟ್ಟಣದ ರಾಜ ರಾಜಶೂರ ಒಮ್ಮೆ 'ಮಣ್ಣೊಕ್ಲು ಹಬ್ಬ' ಮಾಡಲು ತನ್ನ ತಮ್ಮ ಭೋಜರಾಜನನ್ನೂ ಬಂಧುಬಳಗವನ್ನೂ ಕರೆಸಿದ; ಹಬ್ಬ ಮಾಡಿ ಹಬ್ಬದೂಟ ಉಂಡು ಸುಖದಿಂದ ಇರುವಾಗ ಭರಣಿ ಮಳೆ ಹೂದು ಧರಣೀ ಮೇಲೆಲ್ಲಾ ನೀರು ಉಳ್ಳಾಡಿ ಹರಿಯಿತು, ಭೂಮಿ ಉಳುಮೆಗೆ ಹದವಾಯಿತು; ರಾಜಶೂರ ಭೂಮಿಯನ್ನು ಉತ್ತು ರಾಗಿ ಬಿತ್ತಬೇಕೆಂದು ಹೆಂಡತಿಯ ಕೈಲಿ ಬಿತ್ತನೆ ಹೊರಿಸಿಕೊಂಡು ಏರು ಕಟ್ಟಿಕೊಂಡು ಹೊರಟ; ಕೆಬ್ಬೆ ಹೊಲಕ್ಕೆ ಹೋಗಿ ಬಸ್ರೀ ಮರದ ಅಡಿಯಲ್ಲಿ ಭೂಮಿಪೂಜೆ ಮಾಡಿ ಉಳುಮೆಗೆ ತೊಡಗಿದ; ಮುಂದೆ ರಾಜಶೂರನೂ ಹಿಂದೆ ಭೋಜರಾಜನೂ ಭೂಮಿ ಉಳುವಾಗ ಅವರ ಹೆಂಡತಿಯರು ಕೂರಿಗೆ ಹಿಡಿದು ಬಿತ್ತನೆ ಮಾಡುತ್ತಾ ಹೊದರು; ರಾಜಶೂರನಿಗೆ ಪಂಚಲಕ್ಷ್ಮಿಯರನ್ನು ಸಂತಾನಭಾಗ್ಯವಾಗಿ ಕೊಡಬೇಕೆಂದು ಮನಸ್ಸು ಮಾಡಿ ನೇಗಿಲ ಕುಳದಿಂದ ಎದ್ದು ಬಂದು ರತ್ನದ ಪೆಟ್ಟಿಗೆಯೊಂದನ್ನು ಕೊಟ್ಟಳು; ಅರಮನೆಗೆ ಬಂದ ರಾಜಶೂರ ಪೆಟ್ಟಿಗೆ ತೆಗೆದ; ಧನಲಕ್ಷ್ಮಿ, ಧಾನ್ಯಲಕ್ಷ್ಮಿ, ಭಾಗ್ಯಲಕ್ಷ್ಮಿ, ರಾಜ್ಯಲಕ್ಷ್ಮಿ ಮತ್ತು ಸಂತಾನಲಕ್ಷ್ಮಿ ಎಂಬಂತೆ ಐವರು ಮಕ್ಕಳು ಪೆಟ್ಟಿಗೆಯಲ್ಲಿ ಇದ್ದರು; "ಒಬ್ಬಾಳು ಮಗಳ ನೀನು ತಕ್ಕೊಳಪ್ಪ" ಅಂದ ರಾಜಶೂರ ತಮ್ಮ ಭೋಜರಾಜನಿಗೆ; ಮಕ್ಕಳಿಲ್ಲದ ಬೋಜರಾಜ ಸಂತೋಷದಿಂದ "ಧಾನ್ಯಲಕ್ಷ್ಮಿಯಾದ ಕುನಿದೇವಿಯನ್ನು ತನಗೆ ಬೇಕೆಂದು ಪಡೆದುಕೊಂಡ"; ಅಂದಿನಿಂದ ಭೋಜನ ರಾಜ್ಯ 'ಕುನಿತಲ' ಎಂದಾಯ್ತು; ಮಗಳಿಗೆ 'ಕುಂತಿ' ಅನ್ನೋ ಹೆಸರಾಯ್ತು; "ಆ ಕುಂತಿಯೇ ನಮಗೆ ಕೊಂತಮ್ಮ ಆದಳೂ"(ಜ.ಮ.ಭಾ); ಇದು ವ್ಯವಸಾಯಗಾರ ಜನಪದರು ಕುಂತಿಯ ಹುಟ್ಟಿನ ಬಗೆಗೆ, ಅವಳು ಭೂಮಿತಾಯಿಯ ಪ್ರತೀಕವಾಗಿ ತಾವು ಪೂಜಿಸುವ ಕೊಂತಮ್ಮನಾದುದರ ಬಗೆಗೆ ಹೇಳುವ ಕಥೆ; According to folk she was born in the blade of a plough;
- ಕೃಷಿಕ ಮಹಿಳೆಯರು ದಿವಸವೂ ಸಂಜೆ ಮನೆ ಬಾಗಿಲು ಗುಡಿಸಿ ಸೆಗಣಿನೀರು ಹಾಕಿ ರಂಗೋಲಿ ಇಟ್ಟು ಹೊಸ್ತಿಲಿಗೆ ಅರಿಶಿಣ ಕುಂಕುಮ ಹಚ್ಚಿ ಆಮೇಲೆ ಕೊಟ್ಟಿಗೆಗೆ ದೀಪ ಹಚ್ಚುತ್ತಾರೆ; ದೀಪದ ಕೆಳಗೆ ಸೆಗಣಿ ಉಂಡೆ ಇಟ್ಟು ಅದಕ್ಕೂ ಅರಿಶಿಣ–ಕುಂಕುಮ–ಹುಚ್ಚೆಳ್ಳು ಹೂವು ಹಚ್ಚುತ್ತಾರೆ; ಕೊಟ್ಟಿಗೆಯ ಜಾನುವಾರುಗಳ ಸಂತಾನ ವೃದ್ಧಿಸಲಿ ಎಂದು ಪ್ರತಿನಿತ್ಯ ಸೆಗಣಿ ಉಂಡೆಯ ಮೇಲೆ ಹಚ್ಚಿ ಇಡುವ ಹಣತೆಯನ್ನು 'ಕೊಂತ್ಯಮ್ಮ'(ಕೊಂತಿ+ಅಮ್ಮ) ಅನ್ನುವ ರೂಢಿ ಇದೆ; ವ್ಯರೂ: ಕೊಂತ್ಯಮ;
- ಕೊಂತಿ ಧಾನ್ಯಲಕ್ಷ್ಮಿಯಾಗಿಯೂ, ಸಂತಾನ ಲಕ್ಷ್ಮಿಯೂ ಆಗಿ ಪರಿಕಲ್ಪಿತವಾಗಿರುವುದು ಮೇಲಿನ ಕಥೆ ಮತ್ತು ಆಚರಣೆಯಿಂದ ತಿಳಿಯುತ್ತದೆ; 'ಕೊಂತಿಪೂಜೆ' ಇದನ್ನು ದೃಢಪಡಿಸುತ್ತದೆ;
- ಒಂದು ಬಗೆಯ ಮೀನು; ಕೊಂತಿಮೀನು (ಶಿ.ಜಿ./ಮಂ.ಜಿ./ಉಕ.ಜಿ.); A kind of fish;
- ತ್ರಿಶೂಲ; ದೇವಿಯ ಕೈಯಲ್ಲಿರುವ ಆಯುಧ (ರಾಮ.ಜಿ.); A weapon in the hand of Goddess Devi;
- ಬೆಲ್ಲದ ಸಣ್ಣ ಅಚ್ಚು(ಉ.ಕ.ಜಿ.);
- ಗೌರೀ ಮಕ್ಕಳು ಪೂಜೆ ಮಾಡಲು ಮಣ್ಣಿನಿಂದ ಮಾಡಿದ ಗೊಂಬೆ(ಚಿತ್ರ.ಜಿ.);
- ಹಾಲಕ್ಕಿ ಒಕ್ಕಲಿಗರ ಒಂದು ಬಳಿ/ವಂಶ/ಗೋತ್ರ (ಉ.ಕ.ಜಿ.); The subcaste of Halakki Vokkaliga;
- ***—ಕೊಂತಿತಿರು(?)*** : ಅಸಮ್ಮತಿಸು; ಮನಸ್ಸಿಗೆ ಹಿಡಿಸದೆ ಇರು(ಕಲ.ಜಿ); Disagree;
- ***—ಕೊಂತಿಪದ*** : ಕೊಂತಿಪೂಜೆಯೆಂಬ ಧಾರ್ಮಿಕ ಆರಾಧನೆಯ ಸಂದರ್ಭದಲ್ಲಿ ಹಾಡುವ ಹಾಡುಗಳು; ಕೊಂತಿಪೂಜೆಯಲ್ಲಿ ಹೆಂಗಸರು ಮಕ್ಕಳದೇ ಮುಖ್ಯಪಾತ್ರ ಇರುವುದರಿಂದ, ಕೊಂತಿಪದಗಳು ಬಹುತೇಕ ಮಕ್ಕಳಿಗಾಗಿಯೇ ರಚಿಸಿದಂತಿವೆ; ಕೊಂತಿಪದಗಳಿಗೆ ನಿರ್ದಿಷ್ಟ ಛಂದಸ್ಸಾಗಲೀ, ನಿಯತ ಲಯವಾಗಲೀ ಇರುವುದಿಲ್ಲ; ತ್ರಿಪದಿ ರೂಪದಲ್ಲಿ

ಕೊಂತಿ

ಕೆಲವು ಹಾಡುಗಳಿವೆಯಾದರೂ ಅವು ಸಾರ್ವತ್ರಿಕ ಲಕ್ಷಣವಾಗಿ ಗೋಚರಿಸುವುದಿಲ್ಲ; ಕುಂತಿಯ ಆರಾಧನೆಯೇ ಇಡೀ ಕ್ರಿಯೆಯ ಮತ್ತು ಹಾಡುಗಳ ಆಶಯವಾದುದರಿಂದ ಹಾಡುಗಳಲ್ಲಿ ಒಂದು ನಿರ್ದಿಷ್ಟ ಕಥೆಯ ಹಂದರ ಇರುವುದಿಲ್ಲ; ಕೆಲವು ಹಾಡುಗಳಲ್ಲಿ ಮಾತ್ರ ಮಹಾಭಾರತ ಹೇಳುವ ಕೊಂತಿಯ ಮತ್ತು ಪಾಂಡವರ ಬದುಕಿಗೆ ಸಂಬಂಧಿಸಿದ ಸಂಗತಿಗಳು ಉಕ್ತವಾಗುತ್ತವೆ; ಆದರೆ ದೀರ್ಘ ರಚನೆಯಾಗಿ ಹಾಡಿನಿಂದ ಹಾಡಿಗೆ ಕಥೆಯ ಬೆಳವಣಿಗೆಯ ಸಾತತ್ಯ ಕಂಡುಬರುವುದಿಲ್ಲ; ಶಿಶುಪ್ರಾಸಗಳ ಲಕ್ಷಣಗಳು ಕೆಲವು ಹಾಡುಗಳಲ್ಲಿ ಗೋಚರಿಸುತ್ತವೆ; The songs about goddess Konthamma; ಎರಡು ತುಣುಕುಗಳನ್ನು ನಿದರ್ಶನಕ್ಕಾಗಿ ನೋಡಬಹುದು:

೧. ಕುಂತಿಗೆ ಸಂಬಂಧಿಸಿದ್ದು:

ಒಂದು ಕಂಬರ್‌ಷ್ಣ ಒಂದು ಗಿಂಡಿ ನೀರು
ಅದು ನಮ ಕೊಂತಿಗೆ ನಿದಾನವೊ
ಕದಾನವೋ
ಕಾಮ ಕಸ್ತುರಿಯೋ
ತ್ರುಪ್ಪದೋಕುಳಿಯೋ
ಸಿರಿಮುಕುದಾ ಕೊಂತ್ರಮ್ಮ
ಜಲನಾಡಿ ಬರುವಾಗ
ಶ್ರೀಗಂದಾದೋಕುಳಿಯೋ(ಕೊಂ.ಪೂ.ಒಂ.ಅ.)

೨. ಧರ್ಮರಾಯ ಜೂಜಾಡಿದುದು:

ಒಂದು ಮಣೆಯ ಮೇಲೆ ಒಂದಡಕೆ ತಗದಿರಿಸಿ
ಒಂದುಕು ನೂರಡಕೆ ತಗಜೂಜು
ಜೂಜು ಜೂಜಂದರೊ
ದರುಮಾರು
ಜೂಜಾಡೇನಂದರೊ
ಸೋತಾರೆ ಸೋಲರಂತೆ
ದರುಮಾರು
ಗೆದ್ದಲುದೆ ಏಳರಂತೆ(ಅದೇ)

- —*ಕೊಂತಿಪುತ್ರ/ಕೊಂತಿಸುತ/ಕೊಂತಿಕುಮಾರ* ಕರ್ಣ; ಪಾಂಡವರಲ್ಲಿ ಯಾರಾದರೊಬ್ಬ; ಕರ್ಣನಿಗೆ ಸಂಬಂಧಿಸಿದ ಪ್ರಯೋಗವಾಗುವುದೇ ಹೆಚ್ಚು; Son of Kunti; one of the Pandavas who born to Kunti;
- —*ಕೊಂತಿಪೂಜೆ* : ಜನಪದರ ಒಂದು ಆಚರಣೆ; ದಕ್ಷಿಣ ಕರ್ನಾಟಕದ ಮೈಸೂರು, ಮಂಡ್ಯ, ತುಮಕೂರು, ಶಿವಮೊಗ್ಗ, ಜಿಲ್ಲೆಗಳಲ್ಲಿ ಕಂಡುಬರುತ್ತದೆ; ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ಹೆಚ್ಚು; ಕೊಂತಿಯನ್ನು ಪೂಜಿಸುವವರು ಹೆಚ್ಚಾಗಿ ಒಕ್ಕಲಿಗರು, ಪರಿಶಿಷ್ಟರು, ಗೊಲ್ಲರು, ಕುಂಚಿಟಿಗರು, ಬೆಸ್ತರು, ಉಪ್ಪಾರರು; A folk ritual; celebrating around South Karnataka- Mysore, Mandya, Tumkuru, Shimoga;
- ಬಹುತೇಕ ವ್ಯವಸಾಯಕ್ಕೆ ಸಂಬಂಧಪಟ್ಟ ಧಾರ್ಮಿಕ ಆಚರಣೆಯಂತೆ ಕಂಡುಬುರುತ್ತದೆ; ಪ್ರತಿವರ್ಷ ಕಾರ್ತಿಕ ಮಾಸದ ಮೊದಲನೆಯ ಸೋಮವಾರದಂದು ಆರಂಭವಾಗಿ ಹದಿನಾರು, ಇಪ್ಪತ್ತೆರಡು, ಒಂದು ತಿಂಗಳಲ್ಲಿ ಅನುಕೂಲಕ್ಕೆ ತಕ್ಕ ಅವಧಿಯಲ್ಲಿ ಆಚರಣೆಗೊಳ್ಳುವುದು ಸಾಮಾನ್ಯ; ಶಿವಮೊಗ್ಗ ಮತ್ತು ತುಮಕೂರುಕಡೆ ದೀಪಾವಳಿಯ (ಕಾರ್ತಿಕ ಮಾಸದ) ಮೊದಲ ಅಥವಾ ಕೊನೆಯ ಸೋಮವಾರದಂದು ಪ್ರಾರಂಭವಾಗಿ ತಿಂಗಳ ಕಾಲ ನಡೆಯುತ್ತದೆ;
- ಆದರ್ಶ ಸತಿ, ಮಾತೆ ಎನಿಸಿದ ಕುಂತಿಯನ್ನು ಕೊಂತಿ ಎಂದು ಕರೆಯುತ್ತ ಸನ್ನಡತೆ, ಸತ್‌ಕೀರ್ತಿ, ಒಳ್ಳೆಯ ಸಂತಾನ, ಫಲ ಸಮೃದ್ಧಿ ದೊರೆಯಲೆಂಬ ಆಶಯದಿಂದ ಕೊಂತಿಪೂಜೆಯನ್ನು ಆಚರಿಸಲಾಗುತ್ತದೆ; ಗ್ರಾಮೀಣ ಪ್ರದೇಶದ ಹೆಂಗಸರದು, ಹೆಣ್ಣುಮಕ್ಕಳದೇ ಈ ಆಚರಣೆಯಲ್ಲಿ ಮುಖ್ಯಪಾತ್ರ;
- ಮೈನೆರೆದ ಹೆಣ್ಣುಮಕ್ಕಳಿಗೆ ಗುಡ್ಲುಕೂರಿಸುವ ಶಾಸ್ತ್ರ ನೆರವೇರಿಸುವಂತೆಯೇ ಕೊಂತಿಪೂಜೆಯ ಮೊದಲ ಹಂತವೂ ಗೋಚರಿಸುತ್ತದೆ; ಕುಂತಿಗೂ ಗುಡ್ಲು ಕೂರಿಸುವ ಶಾಸ್ತ್ರ ನೆರವೇರಿಸಲಾಗುತ್ತದೆ; ಚಿಗಳಿ, ಪುರಿಉಂಡೆ, ಕಡ್ಲೆಉಂಡೆ ಮೊದಲಾದ ತಿನಿಸುಗಳು, ಚಕೋತ ಮೊದಲಾದ ಹಣ್ಣುಗಳು, ಹುಚ್ಚೆಳ್ಳು, ಅವರೆ ಉತ್ತರೆ ಕಣಿಗಿಲೆ ಮೊದಲಾದ ಹೂವುಗಳು ಇಲ್ಲಿ ಪೂಜಾ ಪರಿಕರಗಳಾಗಿ ಗೋಚರಿಸುತ್ತವೆ; ಇವು ತಟ್ಟೆ ತುಂಬುವ ಶಾಸ್ತ್ರದ ಪರಿಕರಗಳೂ ಹೌದು; ಸಾಮಾನ್ಯವಾಗಿ ಮಾರಿಗುಡಿ ಕುಂತಿಯನ್ನು ಪೂಜಿಸುವ ಸ್ಥಳ; ಊರೊಟ್ಟಿನ ಬೇರೆ ಯಾವುದಾದರೂ ಅನುಕೂಲಕರ ಸ್ಥಳವನ್ನು

ಆಯ್ದುಕೊಳ್ಳುವುದೂ ಇದೆ; ರಾತ್ರಿ ಏಳೆಂಟು ಗಂಟೆಯಿಂದ ಆರಂಭವಾಗಿ ಹತ್ತು-ಹನ್ನೊಂದು ಗಂಟೆಯವರೆಗೂ ಕೊಂತಿ ಪೂಜೆ ನೆರವೇರುತ್ತದೆ;

- ಪೂಜೆಯ ಮೊದಲನೆಯ ದಿವಸ ರಾತ್ರಿ ಹೆಂಗಸರು ಕೊಂತಿಯನ್ನು ಪೂಜಿಸುವ ಸ್ಥಳವನ್ನು ಸೆಗಣಿಯಿಂದ ಸಾರಿಸಿ ಪಶ್ಚಿಮ ದಿಕ್ಕಿನ ಗೋಡೆಯ ಮೊಗ್ಗಲಲ್ಲಿ ನೆಲದಿಂದ ಒಂದು ಮೊಳ ಮೇಲಕ್ಕೆ ಹಸಿ ಮಣ್ಣು ಅಥವಾ ಸೆಗಣಿಯಿಂದ ಕುದುರೆ ಗೊರಸಿನಾಕೃತಿಯ ಒಂದು ಪ್ರಾಕಾರವನ್ನು ಬಿಡಿಸಿಕೊಳ್ಳುತ್ತಾರೆ; ಮಣ್ಣಿನಿಂದ ಮಾಡಿದ ಕುಂತಿ ವಿಗ್ರಹವನ್ನು ಅದರೊಳಗೆ ಗೋಚರಿಸುವಂತೆ ಇಟ್ಟು ಹೂವುಗಳಿಂದ ಅಲಂಕರಿಸುತ್ತಾರೆ; ಹಣ್ಣು ತಿಂಡಿ ಮೊದಲಾದ ಪರಿಕರಗಳಿಂದ ತಟ್ಟೆ ತುಂಬಿ ಕಳಶ ಸಹಿತ ವಿಗ್ರಹದ ಮುಂದೆ ಇಡುತ್ತಾರೆ; ಪ್ರಾಕಾರದ ಸುತ್ತ ಹರಳೆಣ್ಣೆ/ ಒಳ್ಳೆಣ್ಣೆ ದೀಪ ಹಚ್ಚಿಟ್ಟು ಆರತಿ ಬೆಳಗಿ, ಕಾಯಿ ಒಡೆದು, ಹಣ್ಣು ಮುರಿದು ಪೂಜಾಕಾರ್ಯ ನೆರವೇರಿಸುತ್ತಾರೆ; ಆಮೇಲೆ ಪದಗಳನ್ನು ಹಾಡುವ ಸಂಪ್ರದಾಯ; ಪೂಜೆಗೊಂಡ ಕೊಂತಿ ವಿಗ್ರಹದ ಮುಂದೆ ಅಥವಾ ಸುತ್ತಲೂ ಹೆಂಗಸರು ಮಕ್ಕಳು ಕೂತು ಕೊಂತಿ ಪದಗಳನ್ನು ಹಾಡತೊಡಗುತ್ತಾರೆ; ಮಣ್ಣಿನ ಕೊಂತಿಯ ವಿಗ್ರಹಕ್ಕೆ ಬದಲು ಸಣ್ಣ ಕೊಂತದಂತಹ ಅಥವಾ ಗುಂಡುಕಲ್ಲಿನಂತಹ ಕಲ್ಲನ್ನು ಪೂಜಿಸುತ್ತಾರೆ; ಪೂಜೆ ಮುಗಿದ ಮೇಲೆ, ಆ ದಿವಸದ ಹೂವು ಮೊದಲಾದ ಪರಿಕರಗಳನ್ನು ಹೊಸದಾಗಿ ತಂದ ಕುಕ್ಕೆಗೆ ತುಂಬಿ ಮಧ್ಯದಲ್ಲಿ ಕುಂತಿಯ ಪ್ರತೀಕವನ್ನು ಇಡುತ್ತಾರೆ; ಇನ್ನು ಮಾರನೆ ರಾತ್ರಿ ಪೂಜೆ ಪ್ರಾರಂಭವಾಗುವವರೆಗೆ ಈ ಎಲ್ಲಾ ವಸ್ತುಗಳು(ತಿಂಡಿ ತಿನಿಸುಗಳನ್ನು ಬಿಟ್ಟು) ಮಾರಿಗುಡಿಯ ಅಂಗಳದಲ್ಲಿರುತ್ತವೆ;
- ಕೊನೆಯ ದಿವಸದ ಪೂಜೆ ವಿಶೇಷ; ಅದೂ ಸಂಜೆ ಹೊತ್ತನಲ್ಲೇ ನಡೆಯುತ್ತದೆ; ಕುಂತಿಯ ಮಣ್ಣಿನ ಆಕೃತಿಯನ್ನು ಊರ ಮಡಿವಾಳರಲ್ಲಿ ಒಬ್ಬ ಮಾಡಿ ಸೀರೆ ಉಡಿಸಿ ಆಭರಣ ತೊಡಿಸಿ ಅಲಂಕರಿಸುತ್ತಾನೆ; ಹತ್ತು ಹನ್ನೆರಡು ವರ್ಷದ ಹುಡುಗ ಹುಡುಗಿಗೆ ಗಂಡು ಹೆಣ್ಣಿನ ವೇಷ ತೊಡಿಸಿ ತಮಟೆ ಅಥವಾ ನಗಾರಿ ಸದ್ದಿನೊಡನೆ ಊರ ಹೆಂಗಸರೆಲ್ಲಾ ಸೇರಿ ಮೆರವಣಿಗೆಯಲ್ಲಿ ಮಡಿವಾಳರ ಮನೆಯಿಂದ ಕೊಂತಮ್ಮನನ್ನು ಮಾರಿಗುಡಿ ಅಂಗಳಕ್ಕೆ ಕರೆತರುತ್ತಾರೆ; ಅಲ್ಲಿ ದಿನವೂ ಪೂಜೆಗೊಳ್ಳುತ್ತಿದ್ದ ಕೊಂತಿಯ ಪ್ರತೀಕವನ್ನೂ ಮಣ್ಣಿನ ಗೊಂಬೆಯನ್ನೂ ಇಟ್ಟು ಎಂದಿನ ತಟ್ಟೆ ಪದಾರ್ಥ, ಹೂವು, ದೀಪಾದಿಗಳಿಂದ ಕೊಂತಿಯ ಪೂಜೆ ನಡೆಯುತ್ತದೆ; ಕೊಂತಿ ಪದಗಳನ್ನು ಹಾಡುವುದು ಕೊಂತಿಯನ್ನು ಕರೆತರುವಾಗಿನಿಂದ ಹಿಡಿದು ಪೂಜೆ ಮುಗಿಯುವವರೆಗೆ ನಡೆಯುತ್ತದೆ; ಕೊನೆಗೆ ಕೊಂತಿಯ ಪ್ರತಿಮೆಯನ್ನು ಉತ್ಸವದಂತೆ ಮೆರವಣಿಗೆಯಲ್ಲಿ ಸಾಗಿಸಿ ಊರಿನ ಉತ್ತರ ಅಥವಾ ಪೂರ್ವ ದಿಕ್ಕಿನ ಹೊಲದಲ್ಲಿ ಹುರುಳಿ/ಹುಚ್ಚೆಳ್ಳು/ ಅವರೆ/ರಾಗಿ/ಜೋಳದ ಬೆಳೆ ಸಮೃದ್ಧವಾಗಿ ಬೆಳೆದಿರುವಲ್ಲಿ ಇಟ್ಟು ಪೂಜೆ ಮಾಡಿ ವಿಸರ್ಜನಾ ಕ್ರಿಯೆ ನೆರವೇರಿಸಿ ಬರುತ್ತಾರೆ; ಅವರೆ ಸಾಲಿನ ಬುಡದಲ್ಲಿ ಇಟ್ಟು ಅವರೆ ಬಳ್ಳಿಗಳಿಂದ ಮುಚ್ಚಿ ಬರುವುದು ಸಾಮಾನ್ಯ;
- ಕೊಂತಿಯನ್ನು 'ಪ್ರಜನನ ದೇವತೆ' (Fertility God) ಎಂದು ಪರಿಗಣಿಸಿ, ಕುದುರೆ ಗೊರಸಿನಾಕಾರದ ಪ್ರಾಕಾರ ಅಥವಾ ಗುಡಿಸಲನ್ನು ಸ್ತ್ರೀಯ ಸಂಕೇತವೆಂದೂ ಗುಂಡುಕಲ್ಲನ್ನು ಪುರುಷ ಸಂಕೇತವೆಂದೂ ತಿಳಿದು, ಬಾಲ್ಯವಿವಾಹ ಪದ್ಧತಿಯಂತೆ ಮೈನೆರೆಯುವ-'ಹೆಣ್ಣಾಗುವ'- ಮೊದಲೇ ಮದುವೆಯಾಗಿದ್ದ ಹೆಣ್ಣುಮಗಳಿಗೆ ಮೈನೆರೆದ ದಿವಸದಿಂದ ಹದಿನಾರು ದಿವಸದವರೆಗೆ ಗುಡ್ಲು ಕೂಡಿಸುವ ಶಾಸ್ತ್ರ ಮಾಡಿ ಹದಿನಾರನೆಯ ದಿವಸ ಅವಳ ಗಂಡನೊಡನೆ ಕೂರಿಸಿ ಪ್ರಸ್ತದ ಕಾರ್ಯ ಮಾಡಿ ಮಗಳನ್ನು ಗಂಡನ ಮನೆಗೆ ಕಳುಹಿಸಿಕೊಡುವ ಶಾಸ್ತ್ರದಂತೆ ಕೊಂತಿ ಪೂಜೆ ನಡೆಸಲಾಗುತ್ತದೆ; ತಟ್ಟೆ ತುಂಬುವ ಶಾಸ್ತ್ರ ಮತ್ತು ಅಲ್ಲಿ ಬಳಕೆಯಾಗುವ ಚಿಗಳಿ, ತಂಬಿಟ್ಟು, ಕೊಬ್ಬರಿ, ಬೆಲ್ಲ, ಉದ್ದು, ಗಿಟುಕು ಮೊದಲಾದ ವಸ್ತುಗಳೂ ಸಹ ಈ ಎರಡೂ ಸಂದರ್ಭದ ಸಮಾನ ಅಂಶಗಳು; ಈಗೆ 'ಕೊಂತಿಪೂಜೆ' ಆಚರಣೆಯ ವಿಶ್ಲೇಷಣೆ ಇದೆ; ವ್ಯವಸಾಯ ಸಂಸ್ಕೃತಿಯ ಪ್ರತೀಕ ಎಂಬಂತೆ, ಇದು ಇನ್ನೊಂದು ಬಗೆಯ ವ್ಯಾಖ್ಯಾನ;
- ಹೆರಿಗೆ ಕಷ್ಟವಾದಾಗ ಸುಖಪ್ರಸವಕ್ಕಾಗಿ ಹೆರಿಗೆ ಮನೆಯಲ್ಲಿ ಪುರುಷ ಜನನೇಂದ್ರಿಯದ ಸೂಚಕವಾಗಿ ಗುಂಡುಕಲ್ಲನ್ನು ಇಡುವ ಸಂಪ್ರದಾಯವಿದೆ; ರಾಗಿ, ಬತ್ತ, ಹುರುಳಿಯಲ್ಲಿ , ಯಾವುದಾದರೊಂದು

ಧಾನ್ಯವನ್ನು ತಲೆಮಟ್ಟ ತುಂಬಿ ಮನೆಯ ಮೂಲೆಯೊಂದರಲ್ಲಿಟ್ಟು, ಅರಿಶಿಣ ಕುಂಕುಮ ಹಚ್ಚಿ, ಅಂಗಣೆದಾರ ಕಟ್ಟಿ ಸೂಲಗಿತ್ತಿ ಪೂಜಿಸುವ ಸಂಪ್ರದಾಯವೂ ಇದೆ; ಇದಕ್ಕೂ ಕೊಂತಿಪೂಜೆ ಎಂದು ಕರೆಯಲಾಗುತ್ತದೆ ಎಂಬ ಅಭಿಪ್ರಾಯವೂ ಇದೆ.

- ***—ಕೊಂತಿಹಬ್ಬ*** **:** ಕುಂಚಿಗರು ಆಚರಿಸುವ ಒಂದು ವಾರ್ಷಿಕ ಹಬ್ಬ/ಉತ್ಸವ; ಕುಂತಿಯ ಪ್ರತಿಮೆ ಮಾಡಿ ಆರಾಧಿಸಲಾಗುತ್ತದೆ(ಕಿಟ್ಟೆಲ್); ಮಧುರಾಪಟ್ಟಣದ ರಾಜಶೂರ ಆಚರಿಸಿದ 'ಮಣ್ಣೊಕ್ಲು ಹಬ್ಬ' ಕುಂತೀಪೂಜೆಗೆ ಪ್ರೇರಣೆಯಾಗಿ ಇದನ್ನೇ 'ಕುಂತಿಹಬ್ಬ' ಎಂದು ಕರೆದಿರಬಹುದು; An annual festival of Kunchiga community;
- ***—ಕೊಂತ್ಯಮ್ಮ ದೆಯ್ಯಾರ್(ತು)*** **:** ಸ್ತ್ರೀ ಅಂಕಿತನಾಮ; ಒಂದು ಭೂತ(ಮಂ.ಜಿ./ಉ.ಜಿ./ಉ.ಕ.ಜಿ.); ಕೊಂತಿ/ ಕೊಂತ್ಯಮ್ಮ; ಕತ್ತಲ ಕೋಣೆಯಲ್ಲಿ ಮಗನನ್ನು ಹುಡುಕುವಾಗ ಕೊಂತ್ಯಮ್ಮನ ಕಾಲಿಗೆ ಗೋಪಾಲ ಸಿಕ್ಕದ ಎಂಬ ನಾಣ್ನುಡಿ ತುಳುಸೀಮೆಯಲ್ಲಿ ಇದೆ. A Bhoota; A female Bhoota of South canara.

ಕೊಂತಿಗುಡಿ Kontigudi :

- ಕೊಂತಿಪೂಜೆಗಾಗಿ ನಿರ್ಮಿಸಿಕೊಳ್ಳುವ ಚಚ್ಚೌಕಾಕಾರದ ಎರುಡು ಅಥವಾ ಮೂರು ಹಂತದ ಒಂದು ಅಟ್ಟಣೆ/ಮಂಟಪ/ಎತ್ತರದ ಜಾಗ; A platform built in a high to perform Pooja rituals of goddess Konti;
- ತಳಮಟ್ಟದ ಅಟ್ಟಣೆ/ಮಂಟಪ ಸುಮಾರು ಮೂರಂಗುಲ ಎತ್ತರ ಹಾಗೂ ಒಂದೂವರೆ ಅಡಿ ಉದ್ದ-ಅಗಲದ ಸಮತಟ್ಟಾಗಿ ಹಾಗೂ ಚಚ್ಚೌಕಾಕಾರವಾಗಿ ಇರುತ್ತದೆ; ಇದರ ಮೇಲೆ ಇಷ್ಟೇ ಎತ್ತರಕ್ಕೆ, ಆದರೆ ನಾಲ್ಕೈದು ಅಂಗುಲ ಒಳಕ್ಕೆ ಎರಡನೆಯ ಅಟ್ಟಣೆ ಇರುತ್ತದೆ; ಕೆಲವೆಡೆ ಮೂರನೆಯ ಅಟ್ಟಣೆಯೂ ಇದ್ದು ಅಷ್ಟೇ ಎತ್ತರಕ್ಕೆ, ಆದರೆ ಎರಡನೆಯದರ ಮೇಲೆ ನಾಲ್ಕೈದು ಅಂಗುಲ ಒಳಕ್ಕೆ ಇರುತ್ತದೆ; ಪ್ರತಿ ಹಂತದಲ್ಲೂ ನಾಲ್ಕು ಕಡೆಯೂ ಉದ್ದ-ಅಗಲ ಕಿರಿದಾಗುತ್ತಾ ಹೋಗುವುದರಿಂದ ಎರಡು/ಮೂರು ಮೆಟ್ಟಿಲಿನ/ಹಂತದ ಮಂಟಪವಾಗಿ ಗೋಚರಿಸುತ್ತದೆ;
- ಅಟ್ಟಣೆಯ ಎರಡು ಅಥವಾ ಮೂರನೆಯ, ಅಂದರೆ ಮೇಲ್ಮಟ್ಟದ ಸಮತಟ್ಟಿನಲ್ಲಿ ನಡುಮಧ್ಯೆ ಕೊಂತಿಕಲ್ಲನ್ನು ಹೂಳಿ ನಿಲ್ಲಿಸಲು ತಕ್ಕಷ್ಟು ಆಳ ಮತ್ತು ಅಗಲದ ದುಂಡನೆಯ ಕುಳಿ ಮಾಡುತ್ತಾರೆ; ಕುಳಿಯೊಳಕ್ಕೆ 'ಕೊಂತಿಕಲ್ಲ'ನ್ನು ನಿಲ್ಲಿಸಿ ಭದ್ರವಾಗಿ ನಿಲ್ಲುವಂತೆ ಸುತ್ತಲೂ ಮಣ್ಣು ಮೆತ್ತಿ ಮಟ್ಟ ಮಾಡುತ್ತಾರೆ;
- ಮನೆಯ ಜಗಲಿಯ ಮಧ್ಯೆ ಅಥವಾ ಬೀದಿ ಬದಿಯ ಅಂಗಳದಲ್ಲಿ ಗೋಡೆ ಇತ್ಯಾದಿ ಯಾವುದೇ ಅವಲಂಬನೆ ಇಲ್ಲದೆ ಸ್ವತಂತ್ರ ಅಸ್ತಿತ್ವದ ಅಟ್ಟಣೆ ಇದಾಗಿದ್ದು ಇದನ್ನು 'ಕೊಂತಿಗುಡಿ' ಎನ್ನುತ್ತಾರೆ; ಗೋಡೆಗೆ ಹೊಂದಿಕೊಂಡಂತೆ ಅಟ್ಟಣೆಯನ್ನು ನಿರ್ಮಿಸುವ ಕ್ರಮವೂ ಇದ್ದು ಅದನ್ನು 'ಕೊಂತಿಜಗಲಿ'/'ಕೊಂತಿಹಂತ'(ನೋಡಿ) ಎನ್ನುತ್ತಾರೆ;
- ಕೊಂತಿಕಲ್ಲು ಪೂಜೆಗೊಳ್ಳುವ ವಸ್ತುವಾದುದರಿಂದ ತುಳಿದುಕೊಂಡು ತಿರುಗಾಡುವ ನೆಲಮಟ್ಟದಲ್ಲಿ ಅದನ್ನು ಇಡಬಾರದು, ಕಾಲಿಗೆ ಸಿಕ್ಕದಂತೆ ಎತ್ತರದ ಜಾಗದಲ್ಲಿ ಇರಿಸಬೇಕೆಂಬುದು ಇಂತಹ ವೇದಿಕೆಯ ನಿರ್ಮಾಣದ ಆಶಯ;
- 'ಗುಡ್ಲು'(ಗುಡಿಸಲು)ವಿನ ಆಕಾರದ 'ಕೊಂತಿಗುಡಿ'ಯ ನಿರ್ಮಾಣದ ಇನ್ನೊಂದು ಕ್ರಮ ಕೆಲವೆಡೆ ಇದೆ; "ನೆಲದಿಂದ ಒಂದು ಮೊಳ ಮೇಲಕ್ಕಾದಂತೆ ಗುಡ್ಲಿನ ಆಕಾರವನ್ನು ಹೋಲುವಂತೆ ಎರೆಮಣ್ಣಿನಿಂದ ಅಥವಾ ಗೋವಿನ ಸೆಗಣಿಯಿಂದ ರೇಖಾಚಿತ್ರ ಬಿಡಿಸಿ, ಅದರೊಳಗೆ ಎರಮಣ್ಣಿನಿಂದಲೆ ಕೊಂತಿಯ ವಿಗ್ರಹವನ್ನು ತಿದ್ದುತ್ತಾರೆ; ಅಥವಾ ಮನೆಯಲ್ಲಿರುವ ಗುಂಡುಕಲ್ಲೊಂದನ್ನಿಟ್ಟು ಅದನ್ನೇ ಕೊಂತಿಯೆಂದು ಭಾವಿಸುತ್ತಾರೆ"(ಕೊಂತಿಪೂಜೆ ಒಂದು ಅಧ್ಯಯನ); 'ಗುಡ್ಲಿನ ಆಕಾರ ಮತ್ತು ಅದರೊಳಗೆ ಸೇರಿರುವ ಈ ಕೋಲು ಆಕಾರದ ಗುಂಡುಗಳನ್ನು'(ಅದೇ) ಲೈಂಗಿಕತೆಯ ಸಂಕೇತಗಳೆಂದೂ, 'ಗುಡ್ಲಿ'ನಲ್ಲಿ ಕೊಂತಿಯನ್ನು ಕೂರಿಸಿ ಪೂಜಿಸುವ 'ಕೊಂತಿಪೂಜೆ'ಯ ಆಚರಣೆಯನ್ನು ಋತುವತಿಯಾದ ಹೆಣ್ಣುಮಗಳಿಗೆ 'ಗುಡ್ಲುಕೂಡು'ವ ಆಚರಣೆಯ ಸಮೀಕರಣವೆಂದೂ ಅರ್ಥೈಸಿರುವ ವ್ಯಾಖ್ಯಾನವೂ('ಕೊಂತಿಪೂಜೆ'–ಡಿ.ಲಿಂಗಯ್ಯ) ಇದೆ; **ನೋಡಿ:** ಕೊಂತಿಪೂಜೆ.

ಕೊಂತಿಜಗಲಿ/ಕೊಂತಿಹಂತ Kontijagali/ Kontihanta:

- ಕೊಂತಿಪೂಜೆಗಾಗಿ ನಿರ್ಮಿಸಿಕೊಳ್ಳುವ ಒಂದು ವಿಧದ ಅಟ್ಟಣೆ/ಮಂಟಪ; ಇದು ಎರಡು ಅಥವಾ ಮೂರು ಹಂತಗಳಲ್ಲಿ ಒಂದರ ಮೇಲೊಂದರಂತೆ ಇರುತ್ತದೆ; 'ಕೊಂತಿಹಂತ' ಎಂಬುದೇ ಸಾಮಾನ್ಯ ಬಳಕೆ; 'ಕೊಂತಿಜಗಲಿ' ಎಂದೂ ಹೇಳುತ್ತಾರೆ; Mandapa or Mantapa or a pandal built for performing Konti pooja in two or three steps or floors;
- ಯಾರದಾದರೂ ಮನೆಯ ಜಗಲಿಯ ಮೇಲೆ ಅಥವಾ ಊರಚಾವಡಿಯ ಮೇಲೆ ಅಥವಾ ಬೀದಿ ಬದಿಯ ಜಾಗದಲ್ಲಿ ಗೋಡೆಗೆ ಹೊಂದಿಕೊಂಡಂತೆ 'ಕೊಂತಿಹಂತ'ವನ್ನು ನಿರ್ಮಿಸಿಕೊಳ್ಳಲಾಗುತ್ತದೆ;
- ತಳಹಂತದ ಅಟ್ಟಣೆ ಸಾಮಾನ್ಯವಾಗಿ ಮೂರಂಗುಲ ಎತ್ತರ ಹಾಗೂ ಒಂದೂವರೆ ಅಡಿ ಉದ್ದ ಮತ್ತು ಅಗಲದ ಚಚ್ಚೌಕಾಕಾರದಲ್ಲಿ ಸಮತಟ್ಟಾಗಿ ಇರುತ್ತದೆ; ಇದರ ಮೇಲೆ ಸುಮಾರು ನಾಲ್ಕೈದು ಅಂಗುಲ ಒಳಕ್ಕಾದಂತೆ ಅಷ್ಟೇ ಎತ್ತರದಲ್ಲಿ ಎರಡನೆಯ ಅಟ್ಟಣೆ ಮಾಡುತ್ತಾರೆ. ಕೆಲವೆಡೆ ಮೂರನೆಯ ಅಟ್ಟಣೆಯೂ ಇದ್ದು ಅದೇ ಕ್ರಮದಲ್ಲಿ ನಾಲ್ಕೈದು ಅಂಗುಲ ಒಳಕ್ಕೆ ಮೂರಂಗುಲ ಎತ್ತರಕ್ಕೆ ಮಾಡಿಕೊಳ್ಳುತ್ತಾರೆ; ಈ ಎರಡು ಅಥವಾ ಮೂರನೆಯ ಅಟ್ಟಣೆಯ ನಡು ಮಧ್ಯೆ ಕೊಂತಿ ಕಲ್ಲನ್ನು ಇಡಲು ತಕ್ಕಷ್ಟು ಅಳತೆಯ ಕುಳಿ ಮಡುತ್ತಾರೆ;
- ಕುಳಿ ಸಿದ್ಧವಾದ ಮೇಲೆ ಅದರೊಳಕ್ಕೆ ಹಾಲುತುಪ್ಪ ಹಾಕಿ ಆಮೇಲೆ 'ಕೊಂತಿಕಲ್ಲು' ಎಂದು ಕರೆಯಲಾಗುವ ಮೂರು ಮಗ್ಗುಲುಳ್ಳ ನೈಸರ್ಗಿಕ ಕರಿಕಲ್ಲನ್ನು ನಿಲ್ಲಿಸಿ ಪೂಜಿಸಲಾಗುತ್ತದೆ;
- ತುಳಿದುಕೊಂಡು ತಿರುಗಾಡುವ ನೆಲಮಟ್ಟದಿಂದ ಮೆಲಕ್ಕೆ, ಕಾಲಿಗೆ ಸಿಕ್ಕದಂತೆ ಸ್ವಲ್ಪ ಎತ್ತರದಲ್ಲಿ ಮೂಜನೀಯ ವಸ್ತುವನ್ನು ಇರಿಸಬೇಕೆಂಬುದು 'ಕೊಂತಿಹಂತ'ದ ನಿರ್ಮಾಣದ ಆಶಯ;

ನೋಡಿ: ಕೊಂತಿಪೂಜೆ

ಕೊಂತಿಜವನ Kontijavana :

- ಒಂದು ಸಸ್ಯ; ಕೊಂತಿಪೂಜೆಯಲ್ಲಿ ಪೂಜಾ ಸಾಮಗ್ರಿಯಾಗಿ ಬಳಕೆ; ಬಿಳಿ ಬಣ್ಣದ ಹೂವನ್ನು ಬಿಡುತ್ತದೆ; A kind of plant; it is used in Konti pooja or worship;
- ಹೊಲದಲ್ಲಿ ಬೆಳೆಯ ನಡುವೆ 'ಕೊಂತ್ಯಮ್ಮ'ನನ್ನು ಇಟ್ಟು ಪೂಜಿಸಿ ವಿಸರ್ಜನಾ ವಿಧಿಗಳನ್ನು ಪೂರೈಸುವಾಗ ಅವರೆ ಹೂವು, ಹುಚ್ಚೆಳ್ಳು ಹೂವು ಮೊದಲಾದವುಗಳ ಜೊತೆ ಉತ್ರಾಣಿ ಕಡ್ಡಿ ಹಾಗೂ ಕೊಂತಿಜವನದ ಪತ್ರೆಗಳನ್ನು ಬಳಸಲಾಗುತ್ತದೆ;
- ಬೇರೆ ಯಾವ ಪೂಜೆಯಲ್ಲೂ ಬಳಸದೆ ಕೊಂತಿಪೂಜೆಯ ಸಂದರ್ಭದಲ್ಲಿ ಮಾತ್ರ ಬಳಕೆಯಾಗುವುದರಿಂದ ಈ ಸಸ್ಯಕ್ಕೆ 'ಕೊಂತಿಜವನ'ವೆಂಬ ಹೆಸರು ಬಂದಿರಬಹುದು;
- ಕುಂತಿದವನ>ಕೊಂತಿಜವನ>ಕೊಂತಿಜವ್ನ ಆಗಿದೆ;
- ತೇರಿನ ಜಾತ್ರೆಗಳಲ್ಲಿ 'ಹಣ್ಣುಜವನದ ಸೇವೆ'ಗೆ ಬಾಳೆಹಣ್ಣಿನ ಜೊತೆ 'ಜವನ'ವೆಂಬ ಸುವಾಸನೆ ಬೀರುವ ಸಸ್ಯ ಬಳಕೆಯಾಗುತ್ತದೆ; ನೆರೆದ ಭಕ್ತರು ಚಲಿಸುತ್ತಿರುವ ತೇರಿನ ಕಡೆಗೆ ಒಂದು ಬಾಳೆಹಣ್ಣು ಮತ್ತು ಒಂದು ಜವನದ ಗಿಡವನ್ನು ಬಲಗೈಲಿ ಹಿಡಿದು ಉಗ್ಗಡಿಸುತ್ತಾ ಎಸೆಯುವುದೇ 'ಹಣ್ಣುಜವನದ ಸೇವೆ';
- ಜಾತ್ರೆಗಳಲ್ಲಿ ಪೂಜಾ ಸಾಮಾಗ್ರಿಯಾಗಿ ಬಳಕೆಯಾಗುವ ಜವನದಂತಹುದೇ ಇನ್ನೊಂದು ಬಗೆಯ ಸಸ್ಯ, ಕೊಂತಿಪೂಜೆಯಲ್ಲಿ ಬಳಕೆಯಾಗುವಂತಹುದು ಎಂಬ ಸಾಮ್ಯವಿಧಾನದ ಗ್ರಹಿಕೆಯ ಮೇಲೆ 'ಕೊಂತಿಜವನ' ಎಂಬ ಹೆಸರನ್ನು ಹುಟ್ಟುಹಾಕಲಾಗಿದೆ. It is used in fairs as a part of pooja things.

ಕೊಂತಿಮೀನು Kontimīnu :

- ಒಂದು ಬಗೆಯ ಮೀನು; ಹಾವಿನಂತಿರುವ ಮೀನು; A kind of fish that resembles snake;
- ನೀಳ ಮೈ, ಉದ್ದಮೂತಿ, ಬೂದುಗೆಂಪು ಬಣ್ಣ, ಹೊಟ್ಟೆಯಡಿ ಮಾಸಲು ಹೊಳಪು ಇರುತ್ತದೆ; ಬೆನ್ನು ಮತ್ತು ಬಾಲದ ರೆಕ್ಕೆಗಳ ಬದಿಯಲ್ಲಿ ಕಪ್ಪಗಿರುತ್ತದೆ.
- ಕೊಂತದಂತೆ ನೀಳ ಮೈ ಇರುವುದರಿಂದ 'ಕೊಂತಮೀನು' ಎಂದು ಕರೆದು, 'ಕೊಂತಿ'ಯ ಸಾಮ್ಯರೂಪವಾಗಿ 'ಕೊಂತಿಮೀನು' ಎಂದಾಗಿರಬೇಕು?

ಕೊಂತಿಲಗ್ಗೆ/ಕೊಂತಿಲೆಗ್ಗೆ Konthilagge/ Konthi legge :

- ಲಗ್ಗೆ ಆಟದ ಒಂದು ಬಗೆ; ಕೊಂತಿಪೂಜೆಯ ಅಂಗವಾಗಿ ಆಡುವ ಲಗೋರಿ/ಲಗ್ಗೆ ಆಟ;–ಲೆಗ್ಗೆ ವ್ಯತ್ಯಯ ರೂಪ; A kind of play Lagge or Lagori;
- ಕೊಂತಿಯನ್ನು ಪೂಜಿಸುವುದಕ್ಕೆ ಮೂರು/ಐದು ದಿವಸ ಮುಂಚಿನಿಂದ ಕೊಂತಿಪೂಜೆಯನ್ನು ಆರಂಭಿಸುವ ದಿವಸದ ವರೆಗೆ, ಕೊಂತಿಯನ್ನು ಪೂಜಿಸುವ ಸ್ಥಳದಲ್ಲಿ ಹುಡುಗರು ಈ ಆಟ ಆಡುತ್ತಾರೆ;
- ನಿರ್ದಿಷ್ಟ ಸ್ಥಳದಲ್ಲಿ ಕಲ್ಲೊಂದನ್ನು ನಿಲ್ಲಿಸಿ ಚೆಂಡಿನಿಂದ ಹೊಡೆದು ಉರುಳಿಸುವುದು ಸಾಮಾನ್ಯ ಕ್ರಿಯೆ; ಕೊಂತಿಲಗ್ಗೆಯಲ್ಲಿ ಒಂದರ ಮೇಲೊಂದರಂತೆ ಐದು ಕಲ್ಲುಗಳನ್ನು ಜೋಡಿಸುವುದು ಬಟ್ಟೆ ಚೆಂಡಿನಿಂದ ಹೊಡೆದುರುಳಿಸುವುದು ವಿಶೇಷ;
- ಕೊಂತಿಯನ್ನು ಪೂಜಿಸುವ ಬೀದಿ ಅಥವಾ ಚೌಕದ ನಿರ್ದಿಷ್ಟ ಸ್ಥಳದಲ್ಲಿ ಕುಳಿಮಾಡಿ ಆ ಕುಳಿಯಲ್ಲಿ ಕಲ್ಲುಗಳನ್ನು ಹುಡುಗರ ಒಂದು ಗುಂಪು ಜೋಡಿಸುವುದು, ಇನ್ನೊಂದು ಗುಂಪು ಹಾಗೆ ಜೋಡಿಸಲು ಬಿಡದೆ ಸತತವಾಗಿ ಚೆಂಡಿನಿಂದ ಹೊಡೆಯುತ್ತ ಕಲ್ಲುಗಳನ್ನು ಉರುಳಿಸುವುದು, ಹೊಡೆಯುವ ಚೆಂಡು ಗುರಿ ತಪ್ಪಿ ದೂರ ಹೋದಾಗ ಆ ಚೆಂಡನ್ನು ಹಿಡಿದು ತಂದು ನಿರ್ದಿಷ್ಟ ಸ್ಥಳದಿಂದ ಪುನಃ ಹೊಡೆಯುವಷ್ಟರಲ್ಲಿ ಐದೂ ಕಲ್ಲುಗಳನ್ನು ಜೋಡಿಸಿಬಿಡುವುದು, ಹೀಗೆ ಜೋಡಿಸುವುದರಲ್ಲಿ ಗೆದ್ದ ಗುಂಪು ಚೆಂಡನ್ನು ತಮ್ಮ ವಶಕ್ಕೆ ತೆಗೆದುಕೊಂಡು ಒಂದೇ ಚೆಂಡನ್ನು ಎಲ್ಲರೂ ತಮ್ಮ ಮಡಿಲಲ್ಲಿ ಅವಿಸಿ ಇಟ್ಟುಕೊಂಡಂತೆ ನಟಿಸುತ್ತಾ ಸೋತ ಗುಂಪಿನವರನ್ನು ಚೆಂಡಿನಿಂದ ಹೊಡೆಯತೊಡಗುವುದು ಕೊಂತಿಲಗ್ಗೆ ಆಟದ ಸ್ವರೂಪ;
- ಕೊಂತಿಯನ್ನು ಪೂಜಿಸುವ ಸ್ಥಳದಲ್ಲೇ ಕುಳಿ ಮಾಡಿ ಲಗ್ಗೆ ಆಡುವುದು, ಕುಳಿ ಮಾಡಿ ಲಗ್ಗೆ ಆಡಿದ ಜಾಗದಲ್ಲೇ ಕೊಂತಿಯನ್ನು ಕೂರಿಸಿ ಪೂಜಿಸಲು ಆರಂಭಿಸುವುದು ರೂಢಿಯಲ್ಲಿದೆ; ಈ ಸಂಬಂಧದಿಂದ ಕೊಂತಿಲಗ್ಗೆ ಆಟದ ಆರಂಭವೇ ಕೊಂತಿಪೂಜೆ ಆಚರಣೆಯ ನಾಂದಿ ಎಂದು ಅಭಿಪ್ರಾಯಪಡಲಾಗಿದೆ('ಕೊಂತಿಪೂಜೆ: ಒಂದು ಅಧ್ಯಯನ', ಕ್ಯಾತನಹಳ್ಳಿ ರಾಮಣ್ಣ); ಲಗ್ಗೆ ಆಟದ ವಿವರಗಳಿಗೆ ನೋಡಿ: ಲಗ್ಗೆ/ಲಗೋರಿ.

ಕೊಂದಾಟ Kondāṭa:

- ಒಂದು ಬಗೆಯ ಕೀಟ; ನೋಡಲು ದುಂಬಿಯಂತೆ ಕಾಣುವ ಕೀಟ; A kind of insect; it is like a bee;
- ಮನೆಯ ಮಾಳಿಗೆ ಹಾಗೂ ಗೋಡೆಗಳಲ್ಲಿ ಮಣ್ಣಿನ ಗೂಡು ಕಟ್ಟುತ್ತದೆ;
- ಇದರ ಗೂಡಿನ ಮಣ್ಣನ್ನು ಔಷಧಕ್ಕೆ ಉಪಯೋಗಿಸುತ್ತಾರೆ.

ಕೊಂದೆ Konde:

- Cassia fistula; ಕಕ್ಕೆಮರ; ಕಾಡುಕೊಂದೆಮರ (ಮಂ.ಜಿ.); ಅರಗಿನ ಮರ(ತುನಿ); ಕೊಂದೆಮರ; Kakke tree;
- ನಯವಾದ ಹಾಗೂ ಗಟ್ಟಿಯಾದ ಮರ; ಮದ್ದಳೆ, ಕಳಸಿಗೆ, ಕೊಡಲಿಕಾವು ಮೊದಲಾದವುಗಳ ತಯಾರಿಕೆಯಲ್ಲಿ ಬಳಕೆ; Soft and strong tree; it is used as handle for an axe;
- ಮಾಟದ ದುಷ್ಪರಿಣಾಮವನ್ನು ನಿವಾರಿಸುವ ಆಚರಣೆಯಲ್ಲಿ ಈ ಮರದ ತುಂಡುಗಳನ್ನು (ಮಂತ್ರದಂಡವಾಗಿ?) ಬಳಸಲಾಗುತ್ತದೆ;
- ಇದರ ತೊಗಟೆ ಹಾಗೂ ಎಲೆಗಳ ಕಷಾಯ ಬೀಗು, ಕಾಮಾಲೆ(ಕಾಮಿಲೆ–ತುನಿ.), ಬೊಕ್ಕೆ ಮೊದಲಾದ ವ್ಯಾಧಿಗಳ ಶಮನಕ್ಕೆ ಬಳಕೆ; Its bark is used as medicine;
- ಬೇರು ಜ್ವರದ ಶಮನಕ್ಕೆ, ಬೇಧಿ ಮಾಡಿಸಲು ಉಪಯೋಗ; ಬಾಣಂತಿಯರಿಗೆ ಕೊಡುವ ಕಷಾಯ ಹಾಗೂ ಕೆಲ ಮದ್ದುಗಳಿಗೂ ಇದರ ಬೇರನ್ನು ಬಳಸಲಾಗುತ್ತದೆ; It's roots are used to cure fever;
- ಒಂದು ಜಾತಿಯ ಮೀನು(ಮಂ.ಜಿ./ಉ.ಜಿ / ಉಕ.ಜಿ.); A kind of fish;
- ಒಂದು ಜಾತಿಯ ನೊಣ; ಕಾಡುನೊಣ; ಕುರುಡು ನೊಣ(ಮಂ.ಜಿ.); ಸೊಳ್ಳೆಯಂತೆ ಕಡಿಯುವ ಸ್ವಭಾವವುಳ್ಳದ್ದು(ತು.ನಿ); A kind of wild fly; blind fly;

- ವ್ಯರೂ: ಕೊಂದ್(ಮಂ.ಜಿ./ತು.);
- ಇತರ ಭಾಷಾ ರೂಪಗಳು: ತ: ಕೊನ್ರೈ; ಮ:ಕೊನ್ನ

ಕೊಂಪಲ ಚೆನ್ನೆ Kompalacenne:

ಒಂದು ಜನಪದ ಆಟ; ಚೆನ್ನೆಮಣೆ ಆಟದ ಒಂದು ಬಗೆ. A kind of folk game.

ಕೊಂಪಲಮುಳ್ಳು Kompalamuḷḷu:

ಒಂದು ಔಷಧೀಯ ಸಸ್ಯ. A kind of medicinal plant.

ಕೊಂಪೆ Kompe:

- ಕುಗ್ರಾಮ; ದೂರದ ಸಾಮಾನ್ಯ ಹಳ್ಳಿ; ಚಿಕ್ಕ ಗ್ರಾಮ; ದೂರದ ಪ್ರದೇಶ; A remote village, a small settlements;
- ಕೊಪ್ಪಲು; ಉಪಗ್ರಾಮ; ತ:ಕುಪ್ಪಂ=ಮೀನುಗಾರರ/ ಇತರ ಕೆಳಜಾತಿಯವರ ಚಿಕ್ಕ ಹಳ್ಳಿ(ದ್ರಾಜ್ಞಾಪಕೋ); ತೆ: ಕುಪ್ಪ/ಕೊಂಪ=ಗುಡಿಸಲು; ಕುಪ್ಪಮು= ಬೆಸ್ತರ ಹಳ್ಳಿ; ಊರು(ಅದೇ); ಕೊಪ್ಪಳ;
- ಗುಡಿಸಲು; ಜೋಪಡಿ; ಕೊಪ್ಪಲು, ಹೊಸಕೊಪ್ಪಲು, ಚಿಕ್ಕಕೊಪ್ಪಲು ಎಂದು ಊರ ಹೆಸರುಗಳೇ ಇವೆ; Huts, hamlets;
- ಸಾರಿಗೆ ಮೊದಲಾದ ಮೂಲಭೂತ ಸೌಕರ್ಯಗಳಿಲ್ಲದ, ತೀರಾ ಹಿಂದುಳಿದ ಗ್ರಾಮ; ಮುಖ್ಯ ಮಾರ್ಗಕ್ಕೆ ಹಾಗೂ ಪಟ್ಟಣಗಳಿಗೆ ದೂರದಲ್ಲಿರುವ ಊರು; ಗ್ರಾಮೀಣರ ವಸತಿಗಳ ಗುಂಪು; ಮನೆಗಳ ಸಮೂಹ; A village that has no fundamental basic needs;
  ಪ್ರ: ಹಮ್ಪೆಗೆ ಹೋಗೋದಕ್ಕಿಂತಿ ನನ್ನ ಕೊಮ್ಪೆಯಲ್ಲಿರೋದೇ ಲೆಸು;
- ಚಿಕ್ಕ ಒಟ್ಟಿಲು; ಚಿಕ್ಕ ಮುಳ್ಳಪೊದೆ; ಮುಳ್ಳೀನ ಚಿಕ್ಕ ಗೆಲ್ಲುಗಳ ಕಟ್ಟು(ಅ.ನು.ಕೋ); ಪ್ರ: 'ಕೆರೀ ಸುತ್ತ ಮುಳ್ಳಿನ ಕೊಂಪಿ ತುಂಬ್ಯದೆ'(ಬೆ.ಜಿ.);
- ತಿಪ್ಪೆ; ಕಸಕಡ್ಡಿಗಳ ರಾಶಿ; ಕಸದ ಕುಪ್ಪೆ; ಕಸಕುಪ್ಪೆ;
  ವ್ಯರೂ; ಕೊಂಪಿ; ಕೊಂಪ; ಕೊಪ್ಪ; ಕುಪ್ಪೆ
- ದೇಶೀಪದ; 'ಕುಪ್ಪೆ'(<ಕುಂಪೆ)ಯಿಂದ 'ಕೊಂಪೆ' ಆಗಿದೆ ಎಂದು ಹೇಳಲಾಗಿದೆ; ಕುಂಪೆ>ಕೊಂಪೆ ಆಗಿರುವ ಸಾಧ್ಯತೆ ಹೆಚ್ಚು; ಉ>ಒ ಸ್ವರ ವ್ಯತ್ಯಯ ದ್ರಾವಿಡ ಭಾಷೆಗಳಲ್ಲಿ ಸಹಜ;
- 'ಕುಪ್ಪೆ'ಗೆ ಕನ್ನಡದಲ್ಲಿ ರಾಶಿ, ಗುಡ್ಡೆ, ಒಟ್ಟಿಲು, ಸಮೂಹ ಎಂಬ ಅರ್ಥಗಳಿವೆ; ಕಸ, ಕೊಳಕು, ಕಸಕಡ್ಡಿಗಳ ಒಟ್ಟಿಲು, ತಿಪ್ಪೆ ಎಂಬ ಅರ್ಥಗಳೂ ಇವೆ;
- ಕೊಪ್ಪ, ಕೊಪ್ಪಲು(=ಊರು, ಹಳ್ಳೀ, ಸಣ್ಣ ಗ್ರಾಮ) ಬಳಕೆ ಸಾಮಾನ್ಯ; ಈ ರೂಪಗಳ ತಮಿಳಿನ 'ಕುಪ್ಪಮ್' ತೆಲುಗಿನ 'ಕೊಂಪ', 'ಕುಪ್ಪಮು'ಗೆ ಸಮೀಪವರ್ತಿಯಾಗಿವೆ;
- ಇತರ ಭಾಷಾ ರೂಪಗಳು; ತ: ಕುಪ್ಪಮ್; ಕುರುಮ್ಬೈ;
  ತೆ: ಕೊಂಪ; ಕುಪ್ಪ; ಕುಪ್ಪಮು;
  ತು: ಕೊಂಪ್; ಕೊಪ್ಪ; ಕೊಪ್ಪೊ;
  ಮ: ಕುಪ್ಪಮ್.

ಕೊಂಬ Komba:

- ಬೆರಳು; ಹೆಬ್ಬೆರಳು; Fingers, thumb;
- ಕವಲು; ಕವೆಯಾಕಾರದ(ತು); ಕೊಂಬೆ; The splitted branch;
- ಕೋಡು ಇರುವ; ಕೋಡಿನ ಆಕಾರದ(ತು); ಕೊಂಬು; Horn;
- ದೊಡ್ಡದಾದ; ದಪ್ಪದಾದ; ಗಟ್ಟಿ ಇರುವ; ಬಲಶಾಲಿಯಾದ; ಗಂಡು; Huge fat, strong man;
- ಸ್ಥಳನಾಮಗಳೂ ಉಂಟು: ಕೊಂಬದಗುಡ್ಡ; ಕೊಂಬಗುಡ್ಡ;
- ಕೊಂಬೆ, ಕೊಂಬು ರೂಪಗಳು ಪ್ರಾದೇಶಿಕ ವ್ಯತ್ಯದಿಂದ 'ಕೊಂಬ' ಆದಂತೆ ಕಾಣುತ್ತದೆ;
- ಪ್ರ: 'ದನೀನ ಕೊಂಬ ಬಾಳ ಜೂಪಾಗದ ಕಪ' (ಚಾ.ಜಿ.).

ಕೊಂಬಚ್ಚೇಳು Kombaccēḷu:

- <ಕೊಂಬತ್‌ಚೇಳು(?); A scorpion;
- ಕೊಂಬು(=ಕೊಂಡಿ/ಕೊಕ್ಕೆ) ಇರುವ ಚೇಳು; ಕೊಂಬಿನಂತೆ ಮುಂಭಾಗದಲ್ಲಿ ದೊಡ್ಡ ಕೊಕ್ಕೆಗಳನ್ನು ಉಳ್ಳ ಚೇಳು; ದೊಡ್ಡಜಾತಿಯ ಚೇಳು; ಕಡುನೀಲಿ/ ಕಪ್ಪು ಬಣ್ಣದ ದೊಡ್ಡ ಚೇಳು(ತು);
  ವ್ಯರೂ: ಕೊಂಬಂಚೇಳೂ; ಕೊಂಬಚೇಳು(ತು).

ಕೊಂಬನಹಾಳು kombanahāḷu :

- ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೋಕಿನ ಕ್ರಿ.ಶ.೧೪೧೯ರ ೧೯ನೇ ನಂಬರಿನ ಶಾಸನದಲ್ಲಿ ಇದರ ಉಲ್ಲೇಖ; A village mentioned in 19th Number inscription of 1419AD found in Kudlige taluk, Bellari district;
- ವಿಜಯನಗರ ದೇವರಾಯ ಮಹಾರಾಯನ ಆಳ್ವಿಕೆ; It belongs to Vijayanagara Devaraya;
- ಹರಿಯಣ್ಣನು ಹರಿಯ ಸಮುದ್ರ ಗ್ರಾಮವನ್ನು ಶ್ರೋತ್ರಿಯ ಅಗ್ರಹಾರವಾಗಿ ದಾನ ನೀಡುತ್ತಾನೆ;
- ಇದೇ ಸಂದರ್ಭದಲ್ಲಿ ಮಹಾಜನರು ಬ್ರಾಹ್ಮಣರಿಗೆ ತೆರಿಗೆ ರಹಿತವಾಗಿ ಭೂಮಿ ಬಿಡುತ್ತಾರೆ;
- 'ಕೊಂಬನಹಾಳು' ಸೇರಿ ಅನೇಕ ಊರುಗಳ ತೆರಿಗೆ ವಿನಾಯಿತಿಯನ್ನು ಉಲ್ಲೇಖಿಸಿದೆ;
- 'ಕೊಂಬನಹಾಳು' ಯಾವುದೋ ಪಾಳುಬಿದ್ದ ಜಾಗವನ್ನು ಸೂಚಿಸುತ್ತಿರಬಹುದು('ಕೊಂಬು' ಎನ್ನುವದಕ್ಕೇ 'ನಿರ್ದಿಷ್ಟ ಸ್ಥಳ' ಎಂದು ಅರ್ಥವಿರುವುದನ್ನೂ ಈ ಸಂದರ್ಭದಲ್ಲಿ ಗಮನಿಸಬಹುದು).

(ಕ.ವಿ.ವಿ.ಶಾ.ಸಂ.೧; ಬ.ಜಿ.)

ಕೊಂಬಾರೆ Kombāre:

ಕೋಣೆ. A room of a home.

ಕೊಂಬು೧ Kombu1:

- ಕೋಡು; ದನ, ಎಮ್ಮೆ, ಆಡು, ಕುರಿ, ಸಾರಂಗ ಮೊದಲಾದ ಪ್ರಾಣಿಗಳಿಗೆ ಇರುವ ಕೋಡು; ಈ ಪ್ರಾಣಿಗಳ ತಲೆಯ ಮೇಲೆ ಕವೆಯಾಕಾರದಲ್ಲಿ ಅಥವಾ ಕವಲಿನಾಕಾರದಲ್ಲಿ(ಸಾರಂಗ ಇತ್ಯಾದಿ) ಬೆಳೆಯುವ ಒಂದು ಅಂಗ; ಶತ್ರು ಪ್ರಾಣಿಗಳ ದಾಳಿಯಿಂದ ರಕ್ಷಣೆ ಪಡೆಯುವುದಕ್ಕಾಗಿ ಅಥವಾ ಶತ್ರು ಪ್ರಾಣಿಗಳ ಮೇಲೆ ದಾಳಿ ಮಾಡುವುದಕ್ಕಾಗಿ ಇರುವ ಅಂಗ; Horn of cattles;
- ಶಾಶ್ವತ ಕೊಂಬುಗಳು, ಉದುರಿ ಮತ್ತೆ ಬೆಳೆಯುವ ಕೊಂಬುಗಳು ಎಂದು ಎರಡು ಬಗೆ ಉಂಟು; ಕೆಲವು ಪ್ರಾಣಿಗಳಲ್ಲಿ ಕೊಂಬು ಸಾಕಷ್ಟು ಬಲಿತ ಮೇಲೆ, ಇಂತಿಷ್ಟು ವರ್ಷಗಳ ಆವರ್ತದಲ್ಲಿ, ರಕ್ತ ಪರಿಚಲನೆ ನಿಂತು ಕೊಂಬು ಉದುರುತ್ತದೆ; ಮತ್ತೆ ಅದೇ ಜಾಗದಲ್ಲಿ ಕೊಂಬು ಮೊಳೆತು ಬೆಳೆಯುತ್ತದೆ; Two types of horns: permanent horns and dropped and growing horns;
- ದನ ಮೊದಲಾದ ಕೆಲವು ಸಾಕು ಪ್ರಾಣಿಗಳ ಕೊಂಬುಗಳನ್ನು ಒರೆದು ಎಣ್ಣೆ ಹಚ್ಚಿ ನಯಗೊಳಿಸುವ, ದಬ್ಬೆ ಕಟ್ಟಿ ನೇರ ಮಾಡಿಕೊಳ್ಳುವ, ಬಟ್ಟೆ ಕಟ್ಟಿ ಕೊಂಬು ಸಿಗಿಯದ ಹಾಗೆ, ಸಿವುರು ಏಳದ ಹಾಗೆ ಎಚ್ಚರವಹಿಸುವ, ಚಿನ್ನ, ಬೆಳ್ಳಿ ಹಾಗೂ ಇತರ ಲೋಹಗಳ ಕೊಳವೆ/ಕಳಸಗಳನ್ನು ಮಾಡಿಸಿ ಕೊಂಬಿನ ತುದಿಗೆ ತೊಡಿಸುವ, ಬಣ್ಣ ಬಣ್ಣದ ಟೇಪು, ಬಲೂನು, ಕಾಗದದ ಹೂವು ಮೊದಲಾದವುಗಳಿಂದ ಅಲಂಕರಿಸುವ; ಕೊಂಬಿಗೆ ಬಣ್ಣ ಹಚ್ಚುವ ಪರಿಪಾಟ ಉಂಟು; ಸಂಕ್ರಾಂತಿ ಹಬ್ಬ, ಮಳೆ ಹಬ್ಬ, ಜಾತ್ರೆ ಮೊದಲಾದ ಸಂದರ್ಭಗಳಲ್ಲಿ ಇದನ್ನು ಒಂದು ಆಚರಣೆಯಂತೆ ನಡೆಸಲಾಗುತ್ತದೆ; ವಾಸ್ತವವಾಗಿ ಇದೊಂದು ಹವ್ಯಾಸ; ದನಗಳ ಕೊಂಬಿಗೆ ಈ ಅವಕಾಶ ಹೆಚ್ಚು; ಕಂಬಳದಂತಹ ಆಚರಣೆಯಲ್ಲಿ ಮಾತ್ರ ಎಮ್ಮೆಯ ಕೊಂಬಿಗೆ, ಅದೂ ಒಂದು ಮಿತಿಯಲ್ಲಿ ಬಣ್ಣ ಹಚ್ಚಿ ಅಲಂಕಾರ ಮಾಡಲಾಗುತ್ತದೆ;
- ಕೋರೆ; ಕೋರೆಹಲ್ಲು; ದಂತ; ಕಾಡುಹಂದಿ, ಆನೆ, ಘೇಂಡಾಮೃಗದಂತಹ ಪ್ರಾಣಿಗಳಿಗೆ ದವಡೆ/ ಕಟಬಾಯಿಯಲ್ಲಿ ಇರುವ ಕೋರೆಹಲ್ಲು; ನೆಲ ಬಗೆಯಲು, ಆಹಾರ ಕಿತ್ತು ತೆಗೆಯಲು, ಶತ್ರುಗಳ ಮೇಲೆ ದಾಳಿ ಮಾಡಲು/ಶತ್ರುಗಳ ದಾಳಿಯಿಂದ ರಕ್ಷಿಸಿಕೊಳ್ಳಲು ಬಳಕೆ; ಕೋರೆಯಲ್ಲೆ ಉದ್ದವಾದದ್ದು ಆನೆಯ ಕೊಂಬು; ದಾಳಿ ಮತ್ತು ಆತ್ಮರಕ್ಷಣೆ ಮುಖ್ಯ ಉದ್ದೇಶ; ಅಲಂಕಾರ ಸಾಮಾಗ್ರಿಯಾಗಿ, ಗೊಂಬೆ ಮೊದಲಾದ ಕಲಾತ್ಮಕ ವಸ್ತುಗಳ ತಯಾರಿಕೆಯಲ್ಲಿ, ಬಾಚಣಿಗೆ ಮೊದಲಾದ ಸಲಕರಣೆಗಳ ತಯಾರಿಯಲ್ಲಿ ಆನೆಯ ಕೊಂಬು ಬಳಕೆ; ಈ ಕಾರಣದಿಂದ ಅದು ಬಲು ದುಬಾರಿ ವಸ್ತು; Fang tusk horn of wild bore elephant and Rhino respectively;
- ಉದುರಿದ ಕೊಂಬುಗಳನ್ನು ಔಷಧಿಯಲ್ಲಿ ಬಳಸುತ್ತಾರೆ; ಕೋಣದ ಕೊಂಬು ಮನೆಯಲ್ಲಿದ್ದರೆ ದುಷ್ಟಶಕ್ತಿಗಳು ಮನೆಯೊಳಗೆ ಬರುವುದಿಲ್ಲವೆಂದು ನಂಬಿಕೆ ಇದೆ; ಕೆಲವು ಆದಿವಾಸಿ ಸಮುದಾಯಗಳು ಕುಲಸೂಚಕವಾಗಿ/ಪರಂಪರೆ ಕಾರಣವಾಗಿ ಕೊಂಬನ್ನು/ಕೊಂಬಿನಾಕೃತಿಯನ್ನು ಕಲೆಯಲ್ಲಿ ಧರಿಸುವುದುಂಟು; ಧಾರ್ಮಿಕ ಆಚರಣೆಗಳ

ಅಂಗವಾಗಿ ಸಾರಂಗ ಮೊದಲಾದ ಪ್ರಾಣಿಗಳ ಕೊಂಬುಗಳನ್ನು ಊದುತ್ತಾರೆ; ಶಂಖು, ಜಾಗಟೆ, ಕೊಂಬುಗಳನ್ನುಳ್ಳ ದಾಸಯ್ಯಗಳ ಪರಂಪರೆಯೇ ಇದೆ; ಚುಂಚನಗಿರಿಯ ಜೋಗಿಗಳು ಕೊಂಬು ಊದಿ ಧಾರ್ಮಿಕ ವಿಧಿಗಳನ್ನು ಪೂರೈಸುತ್ತಾರೆ; Dropped horns are used as medicine;

- ಕಹಳೆ; ಕೊಂಬಿನಾಕಾರದ ಕಹಳೆ; ಕೊಂಬುಕಹಳೆ; ತಳದಲ್ಲಿ ಕೊಂಬಿನ ಚೂಪಾದ ಭಾಗದಂತೆ ಕಿರಿದಾದ ರಂಧ್ರವಿರುವ; ತುದಿಯಲ್ಲಿ ಶಬ್ದ ಹೊಮ್ಮುವ ಜಾಗದಲ್ಲಿ ಕೊಂಬಿನ ಬುಡದಂತೆ ದಪ್ಪದಾಗಿದ್ದು ಅಗಲ ಬಾಯಿಯುಳ್ಳ ಊದುವ ಸಾಧನ/ವಾದ್ಯ; ಒಳಗಿನ ತಿರುಳನ್ನು ತೆಗೆದು ರಂಧ್ರ ಮಾಡಿ ದನಗಳ ಕೊಂಬನ್ನು ಹಬ್ಬ ಉತ್ಸವಾದಿ ಆಚರಣೆಗಳಲ್ಲಿ ಊದುವ ವಾದ್ಯವಾಗಿ ಬಳಸುತ್ತಿದ್ದ ಆದಿವಾಸಿ ಸ್ಥಿತಿಯೊಂದಿತ್ತು; ಆಮೇಲೆ ಕೊಂಬನ್ನು ಹೋಲುವ ಕಂಚಿನ ಸಾಧನವಾಗಿ ಕಹಳೆ ಬಂತು; 'ಕೊಂಬುಕಹಳೆ' ರೂಪ ಈ ಸಾಂಸ್ಕೃತಿಕ ಸ್ಥಿತ್ಯಂತರದ ಉಳಿಕೆ; ಒಂದರ್ಥದಲ್ಲಿ ಇದು ದ್ವಿರುಕ್ತಿ; ಎತ್ತಿನ ಕೊಂಬಿನಂತೆ ಅರ್ಧವೃತ್ತಾಕಾರದಲ್ಲಿರುವ ಕಹಳೆ ಕೊಂಬುಕಹಳೆ; ದಕ್ಷಿಣ ಕರ್ನಾಟಕದ ಭಾಗದಲ್ಲಿ ಇದರ ಬಳಕೆ ಹೆಚ್ಚು; Trumpet, trumpeter or horn-trumpet;
- ಸಾರಂಗದ ಕೊಂಬಿನಿಂದ ಮಾಡಿದ ಸಂಗೀತದ ಒಂದು ಸಾಧನ(ತು.ಜಿ.); ಊದುವ ಕೊಂಬು, ಸಾರಂಗದ ಕೊಂಬಿನಿಂದ ಮಾಡಿದ್ದು(ಮಂ.ಜಿ./ ವಿ.ಜಿ./ಚಿಕ್ಕ.ಜಿ./ಚಾ.ಜಿ.); A musical pipe instrument madeup of stag's horn;
- ಪ್ರಾಣಿಗಳ ಕೋಡಿನಿಂದ ಮಾಡಿದ ಕೊಳವೆ; ಒಂದು ಬಗೆಯ ಪಾತ್ರೆ; ದ್ರವಪದಾರ್ಥಗಳನ್ನು ತುಂಬಿ ಇಡಲು ಬಳಕೆ; A pipe madeup of cattle horns;
- ಲೋಹದ ಒಂದು ಹೊದಿಕೆ; ಅಂದಲದ ಕೊಂಬು; ಪಲ್ಲಕ್ಕಿಯ ಅಡ್ಡೆ ತುದಿಗೆ ಅಳವಡಿಸುವ ಲೋಹದ ಹೊದಿಕೆ; ಪ್ರ: 'ಅಂದಲದ ಕೊಂಬ ಹಿಡಕೊಂಡು ಅಣ್ಣಯ್ಯ ಎಂದೀಗೆ ಬಂದೀಯೊ ಕರಿಯಾಕೆ;
- ಮಹಿಷಿ, ನಂದಿನಿ ವೇಷಗಳನ್ನು ಹಾಕುವಾಗ ತಲೆಗೆ ತೊಡಿಸುವ ಜೋಡಿ ಕೋಡು(ಮಂ.ಜಿ.);
- ಗೊತ್ತುಪಡಿಸಿದ ಪ್ರದೇಶ; ಕೊಳ ಮೊದಲಾದ ಸಂಕೇತ ಸ್ಥಳ; ಸಂಕೇತಭೂಮಿ; ಸ್ಥಳನಾಮ ಘಟಕ; ಉದಾ: ಕೊಂಬಗುಡ್ಡ; Targeted area, land mark;
- ಕೊಂಬೆ; ಗಿಡಮರಗಳ ಟಿಸಿಲು; ಕವಲು; ಕವೆಯಾಕಾರದ/ಕೋಡಿನ ಆಕಾರದ ಸಾಧನ; ಮರದ ಗೆಲ್ಲು; ಪಲ್ಲಕ್ಕಿಯ ದಿಂಡು; ತಾಳೆ, ತೆಂಗು ಮೊದಲಾದ ಉದ್ದವಾದ ಹಾಗೂ ಹಾಳೆಯಿಂದ ಆವೃತವಾದ ಹೂಮೊಗ್ಗುಗಳ ಗೊಂಚಲು; ಅರಿಶಿಣದ ಕೊನೆ, ಸಣ್ಣ ಟಿಸಿಲು; ಕೊಂಬಿನ ಅರಿಶಿಣ ಎಂದೇ ಹೇಳುತ್ತಾರೆ; Branch of a tree;
- ಕೋಡುಗಲ್ಲು; ಬೆಟ್ಟ, ಗುಡ್ಡ, ಮೆದೆ ಮೊದಲಾದವುಗಳ ನೆತ್ತಿ; ಶೃಂಗ; Tips or cliffs of Hill, Mountain or Valley;
- ಗಿಂಡಿ(=ನೀರು, ಹಾಲು ಇತ್ಯಾದಿಗಳನ್ನು ಕುಡಿಯುವ ಚೊಂಬು)ಯ ಕೊಂಬು; ಚೇಳು, ದಪ್ಪ ಇರುವೆ ಮೊದಲಾದ ಪ್ರಾಣಿಗಳಿಗಿರುವ ಚುಚ್ಚುವ/ಕಚ್ಚುವ ಕೊಂಡಿ/ಕೊಕ್ಕೆ; ಭೇರಿ ಮೊದಲಾದ ಚರ್ಮವಾದ್ಯಗಳನ್ನು ಬಾರಿಸುವ ಕೊಂಬಿನ ಆಕಾರದಲ್ಲಿ ಬಾಗಿದ ಕೋಲು/ಕುಡುಹು; ಎಳೆಯ ಚಂದ್ರಮನ ಕೊಂಬಿನಾಕಾರದ ಭಾಗ/ಭಾಗಗಳು;
- ಗುಣಿತಾಕ್ಷರದ ಕೊಂಬು; ಕ ಕೊಂಬು ಕು, ಚ ಕೊಂಬು ಚು, ಪ ಕೊಂಬು ಪು ಇತ್ಯಾದಿ; ವ್ಯಂಜನಾಕ್ಷರಗಳ ಮೇಲೆ ಸೇರುವ ಸ್ವರಗಳಲ್ಲಿ 'ಉ' ಕಾರದ ಸಂಕ್ಷಿಪ್ತ/ಸಂಕೇತ ರೂಪ 'ು'; ಕ್+ಉ=ಕು; ಚ್+ಉ=ಚು; ಪ್+ಉ=ಪು ಇತ್ಯಾದಿ;
- ದೊಡ್ಡದಾದ; ದಪ್ಪವಾದ; ಗಟ್ಟಿಯಾದ; ಬಲಶಾಲಿಯಾದ(=ಗಂಡು ಇತ್ಯಾದಿ); ಅಗ್ಗಳಿಕೆ; ಹೆಚ್ಚುಗಾರಿಕೆ; ಪ್ರತಿಷ್ಠೆ; ಅಹಂಕಾರ; ಸೊಕ್ಕು; ಗರ್ವ; ಕೀರ್ತಿ; –ಇವೆಲ್ಲ ಆಲಂಕಾರಿಕ/ರೂಪಕಾತ್ಮಕ/ ಪ್ರತಿಮಾತ್ಮಕ ಅರ್ಥಗಳು; ಕೊಂಬು ಪ್ರಾಣಿಗಳ, ಮರಮುಟ್ಟುಗಳ, ಬೆಟ್ಟಗುಡ್ಡಗಳ ಎತ್ತರದ ಅಂಗ/ಭಾಗ ಆಗಿರುವುದರಿಂದ ಈ ಸಾಹಿತ್ಯಾತ್ಮಕ ಅಭಿವ್ಯಕ್ತಿ ಸಾಧ್ಯವಾಗಿದೆ; The big, the fat, the strong and the strengthy male;

ಪ್ರ: 'ಅದೇನು ಅಷ್ಟೊಂದ್ ಮರ್‍ವಾದಿ, ಅವ್ನ್‌ಗೇನ್ ಎರ್‍ಡ್‌ಕೊಂಬಿದ್ದವೊ?'

'ಆನೆ ಆಡು ಮೊದಲಾದುವಕ್ಕೆ ಎರಡು ಕೊಂಬು, ಅಯ್ಯಂಗಾರರಿಗೆ ಮೂರು ಕೊಂಬು'(ಗಾ);

- ಒಂದು ಅಳತೆ; ಪ್ರಾಣಿಗಳ ಕೊಂಬುಗಳಿಂದ ಮಾಡಿಕೊಂಡ ಅಳೆಯುವ ಸಾಧನಗಳು ಒಂದು ಕಾಲಕ್ಕೆ ಇದ್ದಿರಬಹುದು; ಪ್ರ: 'ನೂರು ಕೊಂಬು ತುಂಬ, ಸಾವಿರ ಪಾತ್ರೆಯಲ್ಲಿ ಮಹಿಮೆಯ ಅಮೃತವನ್ನು ತಂದಿತು'(ತುನಿ.); A measurement or scale made of animal horns;
ವ್ಯರೂ: ಕುಂಬು; ಕೊಮ್ಮು; ಕೊಮ್ಬು;
- ಇತರ ಭಾಷಾ ರೂಪಗಳು: ತ: ಕೊಮ್ಬು, ಕೊಪ್ಪು, ಕೊಂಬು;
ಮ: ಕೊಂಬು; ತೆ: ಕೊಮ್ಮು, ಕೊಮ್ಮ; ತು: ಕೊಂಬು, ಕೊಂಬ್; ಕೊಡ; ಕೊಂಬ್;
- ಕುಂಬು; ಕೊಂಬು, ಕೊಂಬೆ ಒಂದೇ ಮೂಲದ ಸಾಮ್ಯರೂಪಗಳು; ಅರ್ಥದಲ್ಲೂ ಸ್ವಲ್ಪ ಹೆಚ್ಚು ಕಡಿಮೆ ಸಾಮ್ಯತೆ ಇದೆ; 'ಕೊಂಬೆ'ಗೆ 'ಕೊನೆ'(*ಪ್ರ: ಆ ಮರ್ದ್ದಲಿ ಒಂದ್ ಕೊನೆ ಕಡ್ಡ ಬಾ ಇಲ್ಲಿ*) ರೂಪ ಇದೆ; ಕೊನರ್, ಕುಡಿ ಹೆಚ್ಚೂ ಕಡಿಮೆ ಸಮಾನಾರ್ಥಕಗಳು; ಕೊನೆ>ಕೊಮ್ಮು>ಕೊಂಬು> ಕೊಂಬೆ); 'ಕೊನರ್' ಧಾತುವಿನ ವಿಕಸಿತ ನಾಮರೂಪಗಳು ಇವು ಎನ್ನಬಹುದೆಂದು ತೋರುತ್ತದೆ; Kombu and Kombe are having same origin;
- —***ಕೊಂಬಚ್ಚೇಳು*** : ದೊಡ್ಡ ಜಾತಿಯ ಚೇಳು; ಕೊಂಬತ್+ಚೇಳು?; ಕೊಂಬುಳ್ಳ ಚೇಳು ಎಂದಿರಬಹುದು; 'ಕೊಂಬು'ಗೆ ದೊಡ್ಡದು, ಬಲಿಷ್ಠವಾದದ್ದು ಎಂದೂ ಅರ್ಥವಿದೆ; The big species of scorpion;
- —***ಕೊಂಬಣಸು/ಕೋಡಣಸು*** : ದನಗಳ ಕೊಂಬುಗಳ ತುದಿಗೆ ಅಳವಡಿಸುವ ಒಂದು ಅಲಂಕಾರ ಸಾಧನ; ಹುಲುಗೆಜ್ಜೆ; ಎತ್ತಿನ ಆಭರಣ; ಹಿತ್ತಾಳೆ ಅಥವಾ ಬೆಳ್ಳಿಯಿಂದ ಮಾಡಿಸಿದ್ದು; ಕೊಳವೆ ಮತ್ತು ಗುಬ್ಬಿಯ/ಕಳಸದ ಆಕಾರದಲ್ಲಿರುತ್ತದೆ; ಅಣಸು= ಗೊಣಸು, ಕೀಲು, ಜೋಡಣೆಯ ವಸ್ತು/ಸ್ಥಾನ; ಕೊಂಬು/ಕೋಡು + ಅಣಸು = ಕೊಂಬಣಸು/ ಕೋಡಣಸು; ಕೊಂಬಿಗೆ ಹಾಕುವ ಲೋಹದ ಆಭರಣ; The jewel that is fitted or worn to the tips of cattle horn to decorate the same;
- ವ್ಯರೂ: ಕೊಂಬಣಸ; ಕೊಂಬುಚೇರು; ಕೊಂಬೆನೆಸು; ಕೊಡಬಾಸ;
- —***ಕೊಂಬಮೀಸೆ*** : ಕೋರೆಮೀಸೆ; ದಪ್ಪಮೀಸೆ (ಕೊಡ); ಮೀಸೆ ಬಿಡುವುದು ಪುರುಷ ಲಕ್ಷಣ, ಪೌರುಷದ ಸೂಚಕ ಎಂದು ಸಾಮಾನ್ಯವಾಗಿ ಭಾವಿಸಲಾಗುತ್ತದೆ; ಕೊಡವರಲ್ಲಿ/ಕೊಡಗು ಗೌಡರಲ್ಲಿ ಈ ಭಾವ/ನಂಬಿಕೆ ಅಧಿಕವಾಗಿಯೇ ಇದೆ; ರಾಜಸೈನ್ಯದಲ್ಲಿ ಯೋಧರಾಗಿ, ಭಾರತ ಸೇನೆಯಲ್ಲಿ ಸೈನಿಕರಾಗಿ ಕೊಡವರು ಅಧಿಕ ಸಂಖ್ಯೆಯಲ್ಲಿ ಇದ್ದದ್ದು, ಇರುವುದು ಗಮನಾರ್ಹ; ಅಂತಲೇ ಕೊಡಗಿನವರಲ್ಲಿ ಹೆಚ್ಚಿನ ಗಂಡಸರು ಮೀಸೆ ಬಿಟ್ಟಿರುತ್ತಾರೆ; ತಾವು ಬಿಡುವ ದಪ್ಪಮೀಸೆಯನ್ನು ಅವರು 'ಕೊಂಬಮೀಸೆ' ಎನ್ನುತ್ತಾರೆ; ಕೊಂಬಿನಂತಹ ಮೀಸೆ; ಅತಿಷಯತೆ, ಪ್ರತಿಷ್ಠೆಯನ್ನೂ ಇದು ಸೂಚಿಸುತ್ತಿರಬಹುದು; Fanged mustache, of male that indicats the feature of manliness;
- —***ಕೊಂಬಾಟ್*** : ಕೊಡವರ ಒಂದು ಜನಪದ ಕಲೆ; ದೇವತಾರಾಧನೆಯ ಸಂದರ್ಭವೊಂದರಲ್ಲಿ ಆಚರಿಸುವ ಆಚರಣಾತ್ಮಕ ಕಲೆ; ಮಾರ್ಚ್/ಏಪ್ರಿಲ್ ತಿಂಗಳಿನಲ್ಲಿ ನಡೆಯುವ ತಮ್ಮ ವಿಶಿಷ್ಟವಾದ ಹಬ್ಬ, ಉತ್ಸವ ಹುಣ್ಣಿಮೆ ಜಾತ್ರೆಗಳ ಸಂದರ್ಭಗಳಲ್ಲಿ ಕೊಡವರು ಈ ಕಲೆಯನ್ನು ಪ್ರದರ್ಶಿಸುತ್ತಾರೆ; ಕೊಡಗಿನ ಸಾಂಪ್ರದಾಯಿಕ ವೇಷ ಧರಿಸಿದ ಪುರುಷ ಕಲಾವಿದರು ಮದ್ಯ ಮಾಂಸ ಸೇವಿಸದೆ ಮಡಿಯಿಂದಿದ್ದು ಒಂದು ಕೈಯಲ್ಲಿ ನವಿಲುಗರಿ ತೆಂಡೆಯನ್ನೂ ಇನ್ನೊಂದು ಕೈಯಲ್ಲಿ ಜಿಂಕೆಯ ಕೊಂಬನ್ನೂ ಹಿಡಿದು ಕುಣಿಯುತ್ತಾರೆ; ಭಸ್ಮಾಸುರನ ಸಂಹಾರಕ್ಕಾಗಿ ಅವತಾರವೆತ್ತಿದ ವಿಷ್ಣುವು ನರ್ತಿಸುವಾಗ ಜಿಂಕೆಯ ಕೊಂಬನ್ನು ಹಿಡಿದಿದ್ದನೆಂದು ಕೊಡವರಲ್ಲಿ ಪ್ರತೀತಿ; ಇದರ ಪ್ರತೀಕವಾಗಿ ಕೊಡವರು ನವಿಲುಗರಿ ಮತ್ತು ಕೊಂಬನ್ನು ಹಿಡಿದು ಕುಣಿಯುತ್ತಾರೆ; ಕೊಂಬ್(=ಕೊಂಬು)+ಆಟ್= ಕೊಂಬಾಟ್; ಕೊಂಬು ಹಿಡಿದು ಆಡುವ ಆಟ, ಅಂದರೆ ನಟನೆ, ನೃತ್ಯ/ಕುಣಿತ; A folk art of Kodava community; it is performed during March/April fullmoon days;

- —*ಕೊಂಬಿನ ಜೋಳ* : ಜೋಳದ ಬೆಳೆಸಿನ ಒಂದು ಬಗೆ; ಉದ್ದಕ್ಕೆ ಕೋಲಿನಂತೆ ಬೆಳೆದು ನೆತ್ತಿಯಲ್ಲಿ ಗೇಣು ಉದ್ದದ ನೇರ ಕೊಂಬಿನಂತಹ ಗೊನೆ ಬಿಡುತ್ತದೆ, ಹೆಬ್ಬೆರಳಿನ ಗಾತ್ರಕ್ಕೆ; ಜೋಳದ ಎಲೆಯಂತೆಯೇ ಗಿಣ್ಣು ಗಿಣ್ಣಿಗೂ ಎಲೆ ಬಿಟ್ಟಿರುತ್ತದೆ; ದನಗಳಿಗೆ ಒಳ್ಳೆಯ ಮೇವು; ಮೇವಿಗಾಗಿಯೇ ಬೆಳೆಯುವ ಬೆಳೆ; ಧಾನ್ಯವನ್ನು ರೊಟ್ಟಿ ಮತ್ತು ದೋಸೆಯ ತಯಾರಿಯಲ್ಲಿ ಬಳಸುತ್ತಾರೆ; A breed of Millet;
ವ್ಯರೂ: ಕಮ್ಮಿನ/ಕೊಂಮಿನ ಜೋಳ; ಕೊಮ್ಮಿನ್‌ಜ್ವಾಳ;
- —*ಕೊಂಬಿನ ಟಗರು* : ಕೊಂಬು ಬೆಳೆದಿರುವ ಠಗರು; ದೇವರು ದಿಂಡರಿಗೆ ಹರಕೆ ಕಟ್ಟಿಕೊಂಡು ಬಲಿ ಅರ್ಪಿಸಲು ಠಗರನ್ನು ಬೆಳೆಸುವಾಗ ಕೊಂಬಿನ ಠಗರಿಗೇ ಹೆಚ್ಚಿನ ಆದ್ಯತೆ; ಮಾಮೂಲಿ ಸಾಕಾಣಿಕೆಯಲ್ಲಿ ಸಾಮಾನ್ಯವಾಗಿ ಕೊಂಬು ತೆಗೆಸುತ್ತಾರೆ; ಕೊಂಬು ಇರುವ ಠಗರು ಹುಲುಸುವುದಿಲ್ಲ ಎಂಬ ಅಭಿಪ್ರಾಯವಿದೆ; **ವ್ಯರೂ:** ಕೊಂಬುನ್‌ಟಗರು; A ram having horns;
- —*ಕೊಂಬಿನ ದೀರ್ಘ* : 'ಊ' ಅಕ್ಷರದ ಸಂಕೇತ ರೂಪ; ವ್ಯಂಜನಾಕ್ಷರಗಳ ಮೇಲೆ ಸೇರುವ ದೀರ್ಘಸ್ವರಗಳಲ್ಲಿ ಒಂದಾದ 'ಊ' ಸ್ವರಾಕ್ಷರದ ಪರ್ಯಾಯ ರೂಪ: 'ೂ'; ವ್ಯಂಜನಾಕ್ಷರಗಳ ಮೇಲೆ ಸೇರುವ ಉ ಹ್ರಸ್ವಸ್ವರದ ಪರ್ಯಾಯ ರೂಪ 'ು'ದ/ಇಳಿ/ದೀರ್ಘ ಎಂದೂ ಹೇಳಬಹುದು; **ವ್ಯರೂ:** ಕೊಂಬುನ್‌ದೀರ್ಘ; It is one ಊ/U; the long vowel sound of Kannada alphabet;
- —*ಕೊಂಬಿನನೀರು* : ಕುಂಭಾಭಿಷೇಕದ ನೀರು; ಕುಂಭದ ನೀರು> ಕೊಂಬಿನನೀರು ಆಗಿರಬಹುದು; ಉ>ಒ ವ್ಯತ್ಯಯ ಸಹಜ; ಆದರೆ ಕುಂಭ, ಕೊಂಬು ಭಿನ್ನ ವಸ್ತುಗಳಾಗಿರುವುದರಿಂದ ಈ ರೂಪ ವ್ಯತ್ಯಯಕ್ಕೆ ತಪ್ಪು ಗ್ರಹಿಕೆ ಕಾರಣವಾಗಿರುವಂತೆ ಕಾಣುತ್ತದೆ; **ವ್ಯರೂ:** ಕೊಂಬುನೀರು; Powering holy water on holy idol;
- —*ಕೊಂಬಿನಲಾಳಿ* : ಕಲಾಬತ್ ಲಾಳಿ; ಸೀರೆ ನೇಯುವ ಮಗ್ಗದಲ್ಲಿ ಬಳಸುವ ಒಂದು ಸಾಧನ; ಕಲಾಪತ್ತಿನ ಸೀರೆಯಲ್ಲಿ ಜರಿಯ ವಿನ್ಯಾಸ ಮೂಡಿಸಲು ಬಳಸುವ ಲಾಳಿ; ಜಿಂಕೆಯ ಇಲ್ಲವೇ ಎಮ್ಮೆಯ ಕೊಂಬಿನಿಂದ ಮಾಡಿದ ಚಿಕ್ಕ ಗಾತ್ರದ ಲಾಳಿ(ಬೆಂ.ಗ್ರಾ.ಜಿ.); A shuttle used to weave saree by wears at hand looms;
- —*ಕೊಂಬಿನವರು* : ಕಹಳೆ ಊದುವವರು; ಕಹಳೆ/ಕೊಂಬುಕಹಳೆ ಒಂದು ಜನಪದ ವಾದ್ಯ; ಈಗಿನ ಕಂಚಿನ ಕಹಳೆಗಳ ಪ್ರಾಚೀನ ರೂಪ; ಪ್ರಾಣಿಗಳ ಕೊಂಬುಗಳೀಂದ, ಮುಖ್ಯವಾಗಿ ಎತ್ತಿನ/ದನದ ಕೊಂಬುಗಳಿಂದ ಮಾಡಿದ್ದು; ಕ್ರಮೇಣ ಲೋಹದಿಂದ ಮಾಡಿದ ಕಹಳೆಗಳು ಬಂದವು; ಇವನ್ನೂ ಕೊಂಬು ಎಂದೇ ಕರೆಯುತ್ತಿದ್ದರು; ಈಗಲೂ ಉತ್ತರ ಭಾರತದ ಕೆಲವೆಡೆ ಎತ್ತಿನ ಕೊಂಬಿನಲ್ಲೇ ಕಹಳೆ ಮಾಡಿ ನುಡಿಸುತ್ತಾರೆ; Trumplers: who blow trumplets;
- —*ಕೊಂಬಿಸುತ್ತಿ* : ಕಂಚುಗಾರರ ಒಂದು ಸುತ್ತಿಗೆ; ಕಂಚುಗಾರಿಕೆಯ ಮೊದಲ ಹಂತದ ಕೆಲಸದಲ್ಲಿ ಬಳಕೆ; Hammer used by blacksmith to bend metal to give a definite shape;
- —*ಕೊಂಬಿರುವೆ* : ದೊಡ್ಡ ಇರುವೆ; ಕಟ್ಟಿರುವೆಗಿಂತ ದೊಡ್ಡ ಗಾತ್ರದ್ದು ಕೊಂಬಿನಂತೆ ಕಾಣುವ ಕೊಕ್ಕೆಗಳಿದ್ದು ಆಹಾರ ಸಾಗಿಸಲು, ಕಚ್ಚಲು ಬಳಕೆ; ಇತರ ಇರುವೆಗಳಂತೆಯೇ ಗುಂಪಿನಲ್ಲಿ ವಾಸ; A big ant; a big size ant having horn antenna that use to carry food;
- —*ಕೊಂಬು ಅರಿಷಿಣ* : ಅರಿಷಿಣವೆಂಬ ಗಿಡದ ಬೇರು/ಗಡ್ಡೆ; ಈ ಗಡ್ಡೆ ಚಿಕ್ಕಚಿಕ್ಕ ಕವಲುಗಳಾಗಿ ಹರಡಿಕೊಂಡಿರುತ್ತದೆ; ಕವಲು ಕವಲಾಗಿರುವ ಅರಿಷಿಣ ಎಂಬ ಅರ್ಥದಲ್ಲಿ 'ಕೊಂಬು ಅರಿಷಿಣ' ಎನ್ನುತ್ತಾರೆ; ಈ ಗಡ್ಡೆಯಿಂದ ಮುರಿದ ಒಂದು ತುಂಡು ಕವಲನ್ನೂ ಹೀಗೆನ್ನುವುದುಂಟು; 'ಅರಿಷಿಣದ ಕೊಂಬು' ಎನ್ನುವುದೂ ಉಂಟು; The roots of turmeric plant;
- —*ಕೊಂಬುಕಹಳೆ/ಕೊಂಬುಗಾಳೆ* : ಕೊಂಬಿನಾಕಾರಕ್ಕೆ ಅರ್ಧವೃತ್ತಾಕಾರಕ್ಕೆ ಬಾಗಿದ ಕಂಚಿನ ಕಹಳೆ; ದೇವಾಲಯಗಳ ಉತ್ಸವಗಳಲ್ಲಿ, ಜಾತ್ರೆಗಳಲ್ಲಿ, ಅರ್ಚನೆ ಸಂದರ್ಭದಲ್ಲಿ ಊದಿ ಧ್ವನಿಮಾಡಲು ಬಳಕೆ; 'ಕೊಂಬು'ಗೆ 'ಕಹಳೆ' ಎಂದೂ ಅರ್ಥ ಇದೆ; ಒಂದು

ರೀತಿಯ ದ್ವಿರುಕ್ತಿ ಈ ಮಾತಿನಲ್ಲಿದೆ; ಉತ್ತರ ಭಾರತದ ಕೆಲವು ಸಮುದಾಯಗಳು ಈಗಲೂ ದನಗಳ ಕೊಂಬಿನಿಂದಲೇ ಕಹಳೆ ಮಾಡಿ ಬಳಸುತ್ತಾರೆ; ವ್ಯರೂ: ಕೊಂಬುಗಹಳೆ; ಕೊಂಬುಕಾಳೆ; The horn like cresent shaped bronze trumpet used it during pooja or ritual at temple to blow;

- *—ಕೊಂಬುಕಳಸ* : ಪ್ರಾಣಿಯ (ಜಿಂಕೆಯ) ಕೊಂಬನ್ನು ಇಟ್ಟು ಪೂಜಿಸಿದ ಕಳಸ; ಅಕ್ಕಿಯ ತಟ್ಟೆ ಮೇಲೆ ನೀರು ತುಂಬಿದ ಚೊಂಬು, ಅದರ ಬಾಯಿಗೆ ವೀಳ್ಯದೆಲೆಗಳನ್ನು ಜೋಡಿಸಿ, ಕಾಯಿ ಇಟ್ಟರೆ ಅದು ಕಳಸ; ಈ ಕಳಸದಲ್ಲಿ ವಿಭೂತಿಘಟ್ಟಿ, ಕನ್ನಡಿ ಇತ್ಯಾದಿಗಳನ್ನು ಇಡುತ್ತಾರೆ; ಜಿಂಕೆಯ ಕೊಂಬನ್ನೂ ಇಡುವ ಸಂಪ್ರದಾಯ ಇರಬಹುದು; ಮದುವೆ ಶಾಸ್ತ್ರಗಳಲ್ಲಿ, ದೇವರ ಉತ್ಸವ ಇತ್ಯಾದಿಗಳಲ್ಲಿ ಕಳಸ ಪೂಜಿಸುವ ರೂಢಿ ಇದೆ; ಕಳಸ ಹೊರಡುವಾಗ ಕೊಂಬನ್ನು(=ಕಹಳೆಯನ್ನು) ಊದುವ ರೂಢಿಯೂ ಇದ್ದು ಅದನ್ನೂ ಕೊಂಬುಕಳಸ ಎನ್ನಬಹುದು; `Kalasa';
- *—ಕೊಂಬುಕೀಳು/–ಕೊಂಬುಮುರಿ* : ಅಹಂಕಾರ ಅಡಗಿಸು; ಸೊಕ್ಕನ್ನು ಇಳಿಸು; ಗರ್ವಭಂಗಮಾಡು: ಪ್ರತಿಮಾರ್ಥದಲ್ಲಿ 'ಕೊಂಬು' ಎಂದರೆ ಪ್ರತಿಷ್ಠೆ, ಹೆಚ್ಚುಗಾರಿಕೆ, ಸೊಕ್ಕು, ಅಹಂ; 'ಕೀಳು' ಅಥವಾ 'ಮುರಿ' ಎಂದರೆ ನಾಶಪಡಿಸು ಎಂದು ಭಾವಾರ್ಥ; To tame an arrogance of a person;
- *—ಕೊಂಬುಕೊಟ್ಟ ವಾಲಗ* : ಕೊಡವರ ಒಂದು ವಾದ್ಯಮೇಳ; ಮದುವೆ ಮೊದಲಾದ ಶುಭಕಾರ್ಯಗಳಲ್ಲಿ ನಡೆಸುವ ವಾದ್ಯಮೇಳ; ಹಬ್ಬ ಹರಿದಿನ, ಜಾತ್ರೆ, ಉತ್ಸವಗಳಲ್ಲಿ ದೇವಸ್ಥಾನಗಳ ಮುಂದೆ ಪ್ರದರ್ಶಿಸುವುದೂ ಉಂಟು; ಕೊಂಬು(ಕಹಳೆ), ಮೋರಿ, ಶ್ರುತಿ, ತಾಳ, ಪರೆ(ತಮಟೆ), ಡೋಲುಗಳನ್ನು ಈ ಮೇಳದಲ್ಲಿ ಪ್ರಧಾನವಾಗಿ ಬಳಸುತ್ತಾರೆ; 'ಕೊಂಬುಕೊಟ್ಟಮೇಳ' ಎಂದೂ ಕರೆಯುತ್ತಾರೆ; 'ಕೊಟ್ಟ' ಇನ್ನೊಂದು ಬಗೆಯ ವಾದ್ಯವನ್ನು ಹೇಳುತ್ತಿರಬಹುದು; ಈ ಮೇಳದಲ್ಲಿ ಏಳು ಜನರಿದ್ದು ಒಬ್ಬೊಬ್ಬರೂ ಒಂದೊಂದು ವಾದ್ಯವನ್ನು ನುಡಿಸುತ್ತಾರೆ; ಸಪ್ತವಾದ್ಯಗಳೆಂದೂ ಕರೆಯುತ್ತಾರೆ; Kodavas musical team or chorus or orchestra perform during their festivals;
- *—ಕೊಂಬುಕೋದಂಡ/–ಕೊಂಬುವಿಲ್ಲು* : ಒಂದು ಬಗೆಯ ಬಿಲ್ಲು; ಕೊಂಬಿನಂತೆ/ಕಹಳೆಯಂತೆ ಬಾಗಿಸಿ ಹೆದೆಯೇರಿಸಿದ ಬಿಲ್ಲು; ಕೋದಂಡ=ಬಿಲ್ಲು; ಕೊಂಬು+ಬಿಲ್ಲು=ಕೊಂಬುವಿಲ್ಲು; ಬ>ವ ಆಗಿದೆ; ಆದೇಶ ಪ್ರಕ್ರಿಯೆ; A kind-of bow; resembles horn;
- *—ಕೊಂಬುಕೋಲು* : ತಾಳೆ ಮರದ ಕೊಂಬನ್ನು (ಕೊಂಬೆ?) ಹದಮಾಡಲು ಮೂರ್ತೆಯವರು–toddy tappers(ತು.ನಿ) ಬಳಸುವ ಕೋಲು; ಬೈನೆ ಮರದ ಕೋಲು; ತಾಳೆ ಜಾತಿಗೆ ಸೇರಿದ ಬಗನಿ ಮರದ ನಾರಿನಿಂದ ಹಗ್ಗ ತಯಾರಿಸುತ್ತಾರೆ. ಮರದ ರೆಂಬೆಗಳನ್ನು ನಾರು ಬರುವಂತೆ ಬಡಿಯಲು ಈ ಕೋಲು ಬಳಕೆ; ತಾಳೆ/ ಬೈನೆ ಮರದ ಕೊಂಬನ್ನು ಜಜ್ಜಿ ಹದ ಮಾಡಿದರೆ ಕಳ್ಳು/ಹೆಂಡ ಸರಾಗವಾಗಿ ಒಸರುತ್ತದೆ ಎನ್ನುತ್ತಾರೆ; ಬೈನೆ ಮರದ ಕೋಲನ್ನು ಕೋಲಾಟಕ್ಕೆ ಬಳಸುತ್ತಾರೆ; ಕೋಲಾಟದ ಕೋಲುಗಳನ್ನು ಗಂಧ, ಕೊಡಸು, ಬೈನೆ, ಹೊನ್ನೆ, ಮರಗಳಿಂದಲೇ ಕಡಿದು ತರಬೇಕೆಂಬ ಸಂಪ್ರದಾಯವಿದೆ; The cudgel or stick of a palm tree used by the people moorte who sell palm wine or teddy;
- *—ಕೊಂಬುಗತ್ತಿ* : ಕೊಂಬಿಗೆ/ಕೋರೆಗೆ ಕಟ್ಟಿದ ಕತ್ತಿ; ಆನೆಗಳ ಕೋರೆಗೆ (=ದಂತಕ್ಕೆ) ಕಟ್ಟುವ ಕತ್ತಿ; ಕೊಂಬಿನಂತಿರುವ ಕತ್ತಿ/ಕಠಾರಿ ಎಂದೂ ಆಗಬಹುದು; ಯುದ್ಧದಲ್ಲಿ ಶತ್ರುಗಳನ್ನು ಮಣಿಸಲು ಆನೆಗಳ ದಾಡೆಗೆ ಕತ್ತಿಗಳನ್ನು ಕಟ್ಟಲಾಗುತ್ತಿತ್ತೆಂದು ತೋರುತ್ತದೆ; ಕೊಂಬು+ಕತ್ತಿ=ಕೊಂಬುಗತ್ತಿ; ಕ>ಗ; An horn shaped sword or sickle;
- *—ಕೊಂಬುಗಿಂಡಿ* : ಕೊಂಬಿನಂತಹ ಸಣ್ಣ ನಳಿಕೆ ಜೋಡಿಸಿದ ಕಂಚಿನ ಗಿಂಡಿ/ಚೊಂಬು; ಮಕ್ಕಳಿಗೆ ಹಾಲು, ನೀರು ಮೊದಲಾದ ದ್ರವಪದಾರ್ಥಗಳನ್ನು ಕುಡಿಸಲು ಬಳಕೆ; ಮದುವೆ ಸಮಾರಂಭದಲ್ಲಿ ಹೆಣ್ಣನ್ನು ಧಾರೆ ಎರೆದು ಕೊಡುವಾಗ ಹಾಲು ಬಿಡಲು ಬಳಸುತ್ತಾರೆ; A small jug having small pipe to drink water, milk; it is madeup of bronze;

- **—*ಕೊಂಬುಗೂಬೆ*** : ಒಂದು ಬಗೆಯ ಪ್ರಾಣಿ; Bubobub; ನದಿ, ಹಳ್ಳ, ತೊರೆಗಳ ಸಮೀಪದ ಮರಗಳಲ್ಲಿ, ಕಲ್ಲುಬಂಡೆಗಳಿಂದ ಕೂಡಿದ ಬೆಟ್ಟಗುಡ್ಡಗಳಲ್ಲಿ ಕಂಡುಬುರುತ್ತದೆ; ಗೂಬೆಯ ಒಂದು ಸ್ಥಳೀಯ ಪ್ರಭೇದ ಇರಬಹುದು; ಮೀನು, ಹಾವುರಾಣಿ, ಹಕ್ಕಿ, ಇಲಿ ಮೊದಲಾದ ಸಣ್ಣ ಸಸ್ತನಿಗಳನ್ನು ತಿನ್ನುತ್ತದೆ; A kind of animal; it appears near rivers, brooklets, valleys; it belong to owl family;
- **—*ಕೊಂಬುಬಾಳೆ*** : ಒಂದು ಜಾತಿಯ ಗಿಡ; ಹಾರ್ನ್ ಪ್ಲಾಂಟನ್; ಮಂಜಿಲಾ(?)ನಂತೆ ಇರುತ್ತದೆ; ಮಲಬಾರ್ ತೀರದಲ್ಲಿ ಕಂಡುಬರುತ್ತದೆ; A kind of plant or tree; it grows around Malabar;
- **—*ಕೊಂಬುವಾದ್ಯ/-ಕೊಂಬುವಾಲಗ*** : ಕೊಂಬಿನೊಡನೆ ಊದುವ/ಬಾರಿಸುವ ಒಂದು ವಾದ್ಯ ಇರಬಹುದು; ಕೊಂಬು ಒಂದು ವಾದ್ಯವೇ ಆಗಿರುವುದರಿಂದ ಅದನ್ನೇ ಕೋಂಬುವಾದ್ಯ/ವಾಲಗ ಎಂದು ಕರೆದಿರಬಹುದು, ಕೊಂಬುಕಹಳೆಯಂತೆ; ಕೊಂಬಿನಿಂದ ಮಡಿದ ವಾಲಗ(<ಓಲಗ) ಎಂದು ಅರ್ಥ; Horn musical pipe;
- **—*ಕೊಂಬುಪೆರೆ*** : ಕೊಂಬು+ಪೆರೆ(=ಚಂದ್ರ); ದನದ/ಜಿಂಕೆಯ ಕೋಡಿನಂತೆ ಕಾಣುವ ಬಾಲಚಂದ್ರ; ಅಮಾವಾಸ್ಯೆ ಆದ ಮಾರನೆಯಿಂದ ಮೂರ್‍ನಾಲ್ಕು ದಿವಸಗಳವರೆಗೆ ಕಾಣಿಸುವ ಕೊಂಬಿನಂತಹ ಚಂದ್ರ; little moon that resembles deer horns;
- **—*ಕೊಂಬುಹಿಡಿಯುವುದು*** : ಪ್ರಾಣಿಗಳು ಊಳಿಡುವುದು; ಆನೆ, ನಾಯಿ, ನರಿ ಮೊದಲಾದ ಪ್ರಾಣಿಗಳು ಊಳಿಡುವುದು; ಕೊಂಬುಳ್ಳ, ಅಂದರೆ ಕೋರೆ/ದಾಡೆ ಹಲ್ಲುಳ್ಳ ಪ್ರಾಣಿಗಳು ಊಳಿಡುವುದು/ ಗೀಳಿಡುವುದು/ಕಿರುಚಿಕೊಳ್ಳುವುದು ಎಂಬ ಅರ್ಥದಲ್ಲಿ ಇರಬಹುದು; Cries of animals who have fangs, tusks;
- **—*ಕೊಂಬೆಣ್ಣೆ/-ಕೊಂಬ್ಣೆಣ*** : ಕೊಂಬಿನಲ್ಲಿ(ದನಗಳ) ಶೇಖರಿಸಿದ ಎಣ್ಣೆ; ಎರೆಎಣ್ಣೆ; ಗಾಡಿ/ಬಂಡಿಗಳ ಚಕ್ರಗಳಿಗೆ ಹಾಕುವ ಎಣ್ಣೆ/ಕೀಲೆಣ್ಣೆ; ಕೀಲೆಣ್ಣೆಯನ್ನು ಸಂಗ್ರಹಿಸಿ ಇಡುವ ಕೊಂಬಿನ/ಲೋಹದ/ಬಿದಿರಿನ ನಳಿಗೆಗೆ ಎರೆಅಂಡೆ/ಎರೆಯಂಡೆ ಎನ್ನುತ್ತಾರೆ; The oil stored in horns;
- **—*ಕೊಂಬೆನಸು*** : ಕೊಂಬಿನ/ಕೋಡಿನ ಅಲಂಕಾರ ಸಾಮಾಗ್ರಿ/ಗೊಣಸು; ದನಗಳ ಕೊಂಬಿನ/ಕೋಡಿನ ತುದಿಗೆ ಅಳವಡಿಸುವ, ಬೆಳ್ಳಿ ಕಂಚು ತಾಮ್ರದಂತಹ ಲೋಹಗಳಿಂದ ಮಾಡಿದ ಸೌಂದರ್ಯಸಾಧಕ ವಸ್ತು/ಅಲಂಕಾರ ಸಾಮಾಗ್ರಿ/ಅಣಸು; ವ್ಯಪೂ: *ಕೋಡೆನಸು;* ಕೊಂಬು+ಅಣಸು=ಕೊಂಬಣಸು ಕೊಂಬೆನಸು ಆಗಿರುವ ಸಾಧ್ಯತೆ ಇದೆ. ಅ>ಎ, ಣ>ನ ವ್ಯತ್ಯಯ ಕಂಡುಬರುತ್ತಿದೆ; ಒಂದು ಸ್ವರ ವ್ಯತ್ಯಯ, ಇನ್ನೊಂದು ಅನುನಾಸಿಕ ವ್ಯತ್ಯಯ; The copper or bronze jewel of horns; these are fixed to the tips of bullock horns;
- **—*ಕೊಕ್ಕರುಗೊಂಬು*** : ಮುಂದಕ್ಕೆ ಬಾಗಿದ ಕೊಂಬು, ಕೊಕ್ಕರೆ ಕತ್ತಿನಂತೆ ಬಾಗಿರುವ ಕೊಂಬು ಎಂದು ಆಲಂಕಾರಿಕ ಅರ್ಥ; ಕೊಕ್ಕರು+ಕೊಂಬು =ಕೊಕ್ಕರುಗೊಂಬು; ಕ>ಗ ವ್ಯತ್ಯಯ; The horn which resembles the neck of cranes;
- **—*ನೆಟ್ಟಗ್ಗೊಂಬು*** : ನೆಟ್ಟಗಿರುವ ಕೊಂಬು; ನೇರವಾದ ಕೊಂಬು; ನೆಟ್ಟಗೆ+ಕೊಂಬು. Straight horns,

ಕೊಂಬು/ಕೊಮ್ಮು² kombu² :

- ದನಗಳ/ಪ್ರಾಣಿಗಳ ಕೋಡು; ದನಗಳ ಕೊಂಬು; 'ಆನೆಕೊಂಬು' ಪದವನ್ನು ಬಳಸುವಾಗ 'ದಂತ' ಎಂದು ಅರ್ಥ ಬರುತ್ತದೆ; The horn of cattles;
- ಸಂವಾದಿ ಪದಗಳಾಗಿ ತಮಿಳಿನಲ್ಲಿ ಕೊಂಬು, ಕೊಂಬನ್(ವಾದ್ಯ); ತೆಲುಗಿನಲ್ಲಿ 'ಕೊಮ್ಮು' ರೂಪಗಳಿವೆ; ತುಳುವಿನಲ್ಲಿ ಏನೂ ವ್ಯತ್ಯಾಸವಿಲ್ಲದೆ 'ಕೊಂಬ್' ಎಂಬ ಪದವೇ ಇದೆ;
- ಎತ್ತುಗಳನ್ನು ತರುವಾಗ ಲಕ್ಷಣಗಳನ್ನು ನೋಡುವುದು ವಾಡಿಕೆ; 'ಕೊಂಬು' ಕೂಡ ಅಂತಹ ಲಕ್ಷಣಗಳಲ್ಲಿ ಒಂದು; ಅದರಲ್ಲಿಯೂ ಹೋರಿಗಳನ್ನು ಸಾಕುವವರು 'ಕೊಂಬು' ನೇರವಾಗಿ/ಸುಂದರವಾಗಿ ಇರಬೇಕೆಂದು ಬಯಸುವುದು ತಪ್ಪಲ್ಲ; Horns is one of the considerable feature to buy cattle;
- ಸಂಕ್ರಾಂತಿ/ದೀಪಾವಳಿ ಹಬ್ಬಗಳಲ್ಲಿ ದನಗಳನ್ನು 'ಕಿಚ್ಚಾಯಿಸುವ'ವ ಸಂದರ್ಭದಲ್ಲಿ, ಅವುಗಳ ಕೊಂಬುಗಳಿಗೆ 'ಶೃಂಗಾರ' ಮಾಡುವುದು ಸಾಮಾನ್ಯ;

'ಗುಲಾಂಪಟ್ಟೆ' ಮುಂತಾದ ಸಾಧನಗಳಿಂದ ಸಿಂಗರಿಸಲಾಗುವುದು; ಕೊಂಬುಗಳಿಗೆ ತರಾವರಿ ಬಣ್ಣ ಹಚ್ಚಿ ಸಂಭ್ರಮಿಸುವುದುಂಟು;

- 'ಕೊಂಗೆ'ಗೆ ಸಮಾನವಾಗಿ ಬರುವ 'ಕೊಂಬು' ಪದವಿದೆ; ಆಗ ಅದರ ಅರ್ಥ 'ಮರದ ಕೊಂಬೆ' ಆಗುವುದು; 'ಮರದ ಕೊನೆ' ಎಂತಲೂ ಭಾವಿಸಬಹುದು; 'ಅರಸಿನದ ಕೊನೆ'ಗೂ 'ಕೊಂಬು'(=ಅರಸಿನದ ಕೊಂಬು) ಎಂದು ಕರೆಯುವುದುಂಟು; ಒಂದು ಅಳತೆ ಎಂಬ ಅರ್ಥದಲ್ಲಿಯೂ ಕೊಂಬು ಪದದ ಬಳಕೆಯಿದೆ; `Kombu' is an equalent word for `Konge';
- ಸ್ಥಳ ಸಂಕೇತವಾಗಿಯೂ 'ಕೊಂಬು' ಪದ ಕಾಣಿಸಿಕೊಳ್ಳಬಹುದು; ಆಗ ಅದು 'ನಿರ್ಬಂಧ ಪದ' ಆಗುವುದುಂಟು; `Kombu' is appeared as a symbol of place;
- ಸಂಕೇತವಾಗಿ/ರೂಪಕವಾಗಿ/ಪ್ರತಿಮಾತ್ಮಕವಾಗಿ ಬಳಸುವುದುಂಟು; 'ಪೆತ್ತಪರೀಷಹ ಜಯಮೆ ತಪಂ, ತಪಕೆ ಬೇರೆ ಕೋಡೆರಡುಮೊಳವೆ' (ಜನ್ನನ 'ಯಶೋಧರ ಚರಿತೆ'); 'ಕೊಂಬು' ಪದದ ಬದಲಿಗೆ 'ಕೋಡು' ಬಂದಿದೆ;
- ಅಹಂಕಾರ/ಕೊಬ್ಬು ಎಂಬ ಅರ್ಥಗಳಲ್ಲಿ ಸಂಕೇತವಾಗಿ ಬಳಕೆ; 'ಕೋಡು ಮೂಡಿದೆಯೆ' ಎಂಬಂತಹ ಉಕ್ತಿ; ವ್ಯಂಗ್ಯದ ಅಭಿವ್ಯಕ್ತಿ: ಪ್ರತಿಷ್ಠೆ, ಹೆಚ್ಚುಗಾರಿಕೆ, ಇದೆಯೆ ಎಂದು ಪ್ರಶ್ನಿಸುವಲ್ಲಿ ಪದದ ಉಪಯೋಗ; ಸಾಂಕೇತಿಕವಾದಾಗ 'ಕೊಂಬು' ಪದಕ್ಕೆ ಬದಲಾಗಿ 'ಕೋಡು' ಬರುವುದುಂಟು; Pride arrogance;
- ಜನಪದ ಕವಿಗಳು 'ಕೊಂಬು' ಪದವನ್ನು ಭೌತಿಕ ರೂಪದಲ್ಲಿ ಕೊಡುತ್ತಲೇ ಸಾಂಸ್ಕೃತಿಕ ಅರ್ಥ ಬರುವಂತೆ ಮಾಡಬಹುದು; ಆಗ ದನ/ಎತ್ತುಗಳ ಬಗೆಗಿನ ಗೌರವ, ವ್ಯವಸಾಯ ಸಂಸ್ಕೃತಿ ಬಗೆಗಿನ ಬದ್ಧತೆಗಳು ವ್ಯಕ್ತವಾಗುವುದುಂಟು; ಒಂದು ಜನಪದ ತ್ರಿಪದಿಯನ್ನು ಕುತೂಹಲಕ್ಕಾಗಿ ಇಲ್ಲಿ ಉಲ್ಲೇಖಿಸಬಹುದು:

  "ತುಂಬಿದ ಹೊಳೆಯಾಗ ಕೊಂಬು ಕಾಣಿಸಿತಾವ
  ಇಂಬುಳ್ಳ ಇಣಿಯಾ ಬಸವಣ್ಣ–ಬರುವಾಗ
  ಗಂಗೆದ್ದು ಕೈಯ ಮುಗಿದಾಳ"

  ='ಕೊಂಬು ಕಾಣಿಸತಾವ' ಉಕ್ತಿಯಿಂದ 'ಕೊಂಬು' ಪದದ ಬಳಕೆ ಇರುವುದನ್ನು ಕಾಣುತ್ತೇವೆ; ಎತ್ತು ತುಂಬಿದ ಹೊಳೆಯಲ್ಲಿ ಈಜುತ್ತಿರುವ ಒಂದು ಭೌತಿಕ ದೃಶ್ಯವಿದೆ; 'ಕಾಯಕ ದೇವತೆ' ಎಂದು ಎತ್ತನ್ನು ಭಾವಿಸಿದಾಗ, ಅದು ಸಾಂಸ್ಕೃತಿಕ ಚಿತ್ರವಾಗಿ ಮಾರ್ಪಡುತ್ತದೆ; ವ್ಯವಸಾಯಕ್ಕೆ ನೆರವಾಗುವ ಎತ್ತಿನ ಕುತೂಹಲ ಜನಕ ಅಭಿವ್ಯಕ್ತಿಯಿದು; ಇಲ್ಲಿ ಎತ್ತಾಗಿ ಉಳಿಯದೆ, ಒಂದು ಸಂದರ್ಭದ ಸಾಂಸ್ಕೃತಿಕ ಚಿತ್ರವಾಗಿ ಎದುರಾಗುತ್ತದೆ; ಇಲ್ಲಿ 'ಎತ್ತು' ಪದಕ್ಕೆ ಬದಲಾಗಿ 'ಬಸವಣ್ಣ' ಪದವನ್ನು ಬಳಸಿರುವುದೇ ಇದಕ್ಕೆ ಒಂದು 'ಸಂಸ್ಕೃತಿ' ವಾತಾವರಣ ಲಭ್ಯವಾಗುವುದು; ಹಾಗೆಯೇ 'ಗಂಗೆ'ಯ ಪ್ರಸ್ತಾಪ ಕೂಡ; ಎತ್ತು ಈಜುತ್ತಿರುವಾಗ ಹರಿವ ನದಿಯಲ್ಲಿನ ಆಸಂದರ್ಭದಲ್ಲಿ ಉಂಟಾದ ಒಂದು ವರ್ಣವೈಭವವನ್ನು ಈ ಪದ್ಯ ತಂದು ಕೊಡುತ್ತದೆ; ಎತ್ತಿನ ಎರಡೂ ಕಡೆಯಿಂದ ನೀರು ಕಮಾನಿನ ಆಕಾರದಲ್ಲಿ ಅದರ ಮೈಮೇಲೆ ಬೀಳುತ್ತಿರುವುದನ್ನು 'ಕೈಮುಗಿವ' ರೀತಿಗೆ ಹೋಲಿಸಿರುವುದು ಚೆನ್ನಾಗಿದೆ, ಅದನ್ನು ಗಂಗೆಗೆ ಆರೋಪಿಸಿರುವುದು ' ಒಂದು ಅದ್ಭುತ ಕಲಾಪ್ರತಿಮೆಯಾಗಿ ಒಡಮೂಡಿದೆ; ಇಲ್ಲಿ 'ಬಸವಣ್ಣ' ಎಂದರೆ ನಂದಿಯೆಂದು ಇರಿಸಿ, 'ಗಂಗೆ'ಯನ್ನು ಶಿವನಮಡದಿ ಎಂಬ ಪೌರಾಣಿಕ ಅರ್ಥಪ್ರತಿಮೆಯನ್ನು ಕೊಟ್ಟರೆ ಇಡೀ ಚಿತ್ರ `Mythological Metaphor' ಆಗಿ ರೂಪುಗೊಳ್ಳುವ ಸೋಜಿಗವನ್ನು ನೋಡುತ್ತೇವೆ; 'ಕೊಂಬು' ಪದದ ನೆಪದಲ್ಲಿ ಇಡೀ ಪದ್ಯ 'ಕಾಯಕ ಶರೀರ' ಮತ್ತು 'ಸಾಂಸ್ಕೃತಿಕ ಶರೀರ'ಗಳನ್ನು ಹೊದ್ದ ಅಪರೂಪದ, ಅದ್ಭುತ ದೃಶ್ಯವಾಗಿ/ಚಿತ್ರವಾಗಿ ನಮ್ಮ ಮುಂದೆ ಮೂಡುತ್ತದೆ. ('ಜಾನಪದ ಸಂಕೀರ್ಣ') 'ಕೊಂಬು ಪದದ ಉಪಯೋಗ– `artifact' ಆಗಿ, 'ಇರೆಂಡೆ' ಆಗಿ(ಗಾಡಿಯೆಣ್ಣೆ ಬಳಕೆ).

ಕೊಂಬು೩ kombu[3] :

- ಕೊಂಬನ್ನು ಬಳಸಿಕೊಂಡು ವಾದ್ಯ ಮಾಡುವುದು; 'ಕೊಂಬುಗಾಳೆ' ಪದವೇ ಇದೆ; ಇಲ್ಲಿರುವ 'ಕಾಳೆ'(< ಕಹಳೆ) 'ಕಹಳೆ'ಯಿಂದ ಬಂದದ್ದು< ಕೊಂಬುಕಾಳೆ; ಕಹಳೆಯ ಆಕಾರದಲ್ಲಿಯೇ ಇದ್ದರೂ, ಸ್ವಲ್ಪ ಮಟ್ಟಿನ ಭಿನ್ನರೂಪವನ್ನು ಹೊಂದಿರುವಂಥದು; ಆಗ

'ಕೊಂಬು' ವಾದ್ಯವೇ ಬೇರೆ, 'ಕಾಳೆ/ಕಹಳೆ' ವಾದ್ಯವೇ ಬೇರೆ; 'ಕೊಂಬು' ಪದಕ್ಕೆ ಬೇರೆ ಅರ್ಥವೂ ಇರುವುದರಿಂದ, ಅದಕ್ಕೆ ಕಾಳೆ/ಗಾಳೆ ಪದವನ್ನು ಅದಕ್ಕೆ ಸೇರಿಸಿರಬಹುದು; Horn is used to make musical instrument;

- ಸಾರಂಗ(ಕುರಂಗ/ಜಿಂಕೆ)ದ ಕೊಂಬನ್ನು ಬಳಸಿಕೊಂಡು 'ಸಿಂಗನಾತ' (ಜೋಗಯ್ಯರ ವಾದ್ಯ) ವಾದ್ಯವನ್ನು ಮಾಡಲಾಗುವುದು; `Singanath'- a musical instrument performed by Jogayya; it is madeup of stag's horn;
- ಕೊಂಬುವಾದ್ಯಕ್ಕೆ 'ಕೊಂಬು ವಾಲಗ' ಎಂಬ ರೂಪವನ್ನೂ ಹೇಳುವುದುಂಟು; ಆದರೆ ಅದರ ಸಹಜ ರೂಪವಾಗಿರುವಂತೆ ಕಾಣುವುದಿಲ್ಲ; Horn instrument;
- ಒಂದು ಜನಪದ ವಾದ್ಯ; ಪ್ರಾಣಿಗಳ ಕೊಂಬಿನಿಂದ ತಯಾರಿಸುವಂಥದು; ಎಮ್ಮೆ/ದನಗಳ ಕೊಂಬಿನಿಂದಲೂ ಈ ವಾದ್ಯವನ್ನು ತಯಾರಿಸಬಹುದು; A folk musical instrument;
- ಇದು ಊದುವ ವಾದ್ಯ; ಕೊಂಬಿನ ತುದಿಗೆ ತೂತು ಮಾಡಿ ಗಾಳಿ ತುಂಬಲು, ಬರುವ ಧ್ವನಿಯೇ ಇದು; ಹಾಗಾಗಿ ಈ ವಾದ್ಯದ ರಚನೆ ತುಂಬ ಸರಳವಾದುದು; A blowing piper musical instrument;
- ತಂತ್ರಜ್ಞಾನದ ಈ ಹೊತ್ತಿನಲ್ಲಿ ಕೊಂಬಿನ ಆಕಾರದಲ್ಲಿ ಲೋಹದಿಂದ ಕೊಂಬು ತಯಾರಿಸಿ ಊದುವ ವಾದ್ಯವನ್ನು ಮಾಡಿಕೊಳ್ಳಬಹುದು; ಬೇಕಾದರೆ 'ಲೋಹ ಕೊಂಬು' ಎಂದು ಕರೆಯಬಹುದು;
- 'ಲೋಹಕೊಂಬು' ವಾದ್ಯ ಮಾಮೂಲು ಕೊಂಬುವಾದ್ಯಕ್ಕಿಂತ ಉದ್ದ/ಗಾತ್ರದಲ್ಲಿ ಹೆಚ್ಚಿನದು; ಊದುವ ಭಾಗ ಕಿರಿದಾಗಿದ್ದು ಕ್ರಮೇಣ ದಪ್ಪವಾಗಿ ಇನ್ನೊಂದು ತುದಿಗೆ ಬರುವ ಹೊತ್ತಿಗೆ ಅಗಲವಾಗಿರುತ್ತದೆ; ಊದಿದಾಗ ಕಿರಿದಾದ ಭಾಗದಿಂದ ಹೊರಟ ಗಾಳಿ ಇನ್ನೊಂದು ತುದಿ ಬಾಯಿ ಮೂಲಕ ಹೊರಟಾಗ ನಾದವಾಗಿ ಹೊಮ್ಮುವುದು(ನೋಡಿ: ಕ.ಜ.ವಾ);
- ಪ್ರಾಚೀನ ಕಾಲದಿಂದಲೂ ಕೊಂಬು ವಾದ್ಯ ಬಳಕೆ; 'ಪಂಚ ಮಹಾ ವಾದ್ಯ'ಗಳಲ್ಲಿ ಸೇರ್ಪಡೆ (='ಶೃಂಗವಾದ್ಯ' ಹೆಸರಿನಲ್ಲಿ);
- ಪ್ರಾಚೀನ ಕವಿಗಳ ಯುದ್ಧ ವರ್ಣನೆಯ ಸಂದರ್ಭದಲ್ಲಿ 'ಕೊಂಬಿನ'ನ ಪ್ರಸ್ತಾಪವಿದೆ.

ಕೊಂಬೆ^ Kombe[1]:

- ಮರಗಿಡದ ರೆಂಬೆ; ಶಾಖೆ; ಕವಲು; ಟೊಂಗೆ; ಕೊನೆ; ಟಿಸಿಲು; A bough; a branch of any tree;
- ಕೊಂಬು; ಪ್ರಾಣಿಗಳ ತಲೆಯ ಮೇಲೆ ಮೊಳೆತು ಬೆಳೆಯುವ ಕೋಡು; ನೋಡಿ; ಕೊಂಬು;
- ತೆಂಗು, ಅಡಕೆ, ಬಾಳೆಯಂತಹ ಕೆಲವು ಜಾತಿಯ ಮರಗಿಡಗಳನ್ನು ಬಿಟ್ಟರೆ ಉಳಿದ ಎಲ್ಲ ಬಗೆಯ ಮರ ಗಿಡ ಗಂಟೆಗಳು ಕಾಂಡದಿಂದ ಮೇಲಕ್ಕೆ ಕವಲೊಡೆಯುತ್ತವೆ, ಶಾಖೋಪಶಾಖೆಗಳಾಗಿ ಬೆಳೆಯುತ್ತವೆ; ನೆಲಮಟ್ಟದಿಂದಲೇ ಕವಲೊಡೆಯುವ ಪೊದೆ ಜಾತಿಯ ಮರಗಿಡಗಳೂ ಇವೆ;
- ಮರದ ಕೊಂಬೆಗಳು ಪ್ರಾಣಿ ಪಕ್ಷಿಗಳ ತಂಗುದಾಣ; ಕೊಂಬೆಯ ತುದಿಗೆ ಗುಬ್ಬಚ್ಚಿ ಮೊದಲಾದ ಸಣ್ಣಪಕ್ಷಿಗಳು ಗೂಡಿಕಟ್ಟಿಕೊಳ್ಳುತ್ತವೆ; The boughs are landing place or locations of animals or birds;
  ಪ್ರ: 'ಕೋಗುಲೆ ಎದ್ದು ಕೊಂಬೆಯನೇರಿ ಕೂಗುತಾವೆ ನಮ್ ಮಾದೇವ್ನ';
- ರೈತಾಪಿ ಜನ ತಮ್ಮ ಹೊಲಗದ್ದೆಗಳ ಮಗ್ಗುಲಲ್ಲಿ ಹಳ್ಳದ ಮಗ್ಗುಲಲ್ಲಿ ಬೆಳೆದಿರುವ ಮರಗಳ ಕೊಂಬೆಗಳನ್ನು ವರ್ಷಕ್ಕೊಮ್ಮೆ ಕಡಿದು ಮರ ಬೀಳದಂತೆ, ನೇರವಾಗಿ ಎತ್ತರಕ್ಕೆ ಬೆಳೆಯುವಂತೆ, ಅಗಲವಾಗಿ ಹರಡಿ ಬೆಳೆ ನಾಶವಾಗದಂತೆ ನೋಡಿಕೊಳ್ಳುತ್ತಾರೆ; ಕಡಿದ ಕೊಂಬೆಗಳು ಒಣಗಿ ಎಲೆಗಳೆಲ್ಲ ಉದುರಿದ ಮೇಲೆ ಆ ಕೊಂಬೆಗಳನ್ನು 'ಬರಲು', 'ಸೌದೆಬರಲು' ಎಂದು ಕರೆಯುತ್ತಾರೆ; ಬರಲುಗಳನ್ನು ಮತ್ತೆ ಕತ್ತರಿಸಿ ಅಡುಗೆ ಒಲೆಗೆ, ನೀರು ಒಲೆಗೆ ಸೌದೆಯಾಗಿ ಬಳಸುತ್ತಾರೆ;
- ದೇಶಿಪದ; ಕೊಮ್ಮು(ತೆ)>ಕೊಂಬು>ಕೊಂಬೆ ಆಗಿರಬಹುದು;
  ಕೊಮ್ಮ(ತೆ)>ಕೊಂಬ>ಕೊಂಬೆಯೂ ಸಾಧ್ಯ;
  ಕೊಮ್ಮೆ(ತೆ)>ಕೊಂಬೆ ಆಗಿರಲೂಬಹುದು;

ಮೂಲದ್ರಾವಿಡ ರೂಪ; ಕೊಮ್ಮ/ಕೊಮ್ಮೆ>ಕೊಂಬ/ಕೊಂಬೆ;

- ಒಂದು ಬಗೆಯ ಸಸ್ಯ(ಕನಿ);
- —***ಕೊಂಬೆಗಲ್ಲು*** : ಕೋಡುಗಲ್ಲು; ಬೆಟ್ಟದ ನೆತ್ತಿಯಲ್ಲಿರುವ ಚೂಪುಗಲ್ಲು; ಕವಲುಗಲ್ಲು; ಕೊಂಬೆ+ಕಲ್ಲು=ಕೊಂಬೆಗಲ್ಲು; The tip or cliff of top rocks of hills, mountains;
- —***ಕೊಂಬೆಗಾಳಿ*** : ಮರದ ಕೊಂಬೆಗಳನ್ನು ಗಿರ್ರನೆ ಅಲುಗಾಡಿಸುವ ಗಾಳಿ; ಬಿರುಸಾದ ಗಾಳಿ; ಸುಂಟರುಗಾಳಿ(?); ಕೊಂಬೆಗಾಳಿ ಮತ್ತೆಮತ್ತೆ ಬೀಸಿದರೆ ಮಳೆ ಒರುತ್ತದೆ ಎಂದು ಒಂದು ತಿಳಿವಳಿಕೆ/ನಂಬಿಕೆ; The wind that shakes the boughs of the trees
- —***ಕೊಂಬೆಬಾಳೆಗಿಡ*** : ರೆಂಬೆಯಾಗಿ ಕವಲೊಡೆಯುವ ಒಂದು ಬಗೆಯ ಬಾಳೆಗಿಡ(ಕನಿ); A banana tree which has boughs;
- —***ಕೊಂಬೆಯೊಡೆ*** : ಚಿಗುರು(ಮರ/ಗಿಡ); ಕವಲುಬಿಡು; ವಂಶ/ಪೀಳಿಗೆ ಸಾಖೋಪಶಾಖೆಯಾಗಿ ಬೆಳೆ/ಬೆಳೆಯಿತು; 'ವಂಶವೃಕ್ಷ' ಎಂಬ ಮಾತಿದೆ. Family tree; tree or plant that has sprouts or boughs.

ಕೊಂಬೆ² kombe² :

- ಮರದ ದೊಡ್ಡ/ಚಿಕ್ಕ ಕವಲುಗಳಿಗೆ ಈ ಹೆಸರು; ಮರ ಚಾಚಿಕೊಳ್ಳಲು ಈ ಕೊಂಬೆಗಳೇ ಕಾರಣ; ಮರ ದೊಡ್ಡದಾದಷ್ಟು ಕೊಂಬೆಗಳು ಹೆಚ್ಚು; ಚಿಕ್ಕದಾಗಿದ್ದರೆ ಅದರ ಕವಲುಗಳು ಕಡಿಮೆ; ಉದಾಹರಣೆಗೆ: ಆಲ, ಬಸಿರಿ ಮತ್ತು ಅರಳಿ ಮರಗಳನ್ನೇ ನೋಡಬಹುದು; The bough or branch of tree; `Kombe, Rembe, Konge, Tonge' are synonyms;
- 'ಕೊಂಬೆ' ಪದದಂತೆಯೇ ರೆಂಬೆ(ರಂಬಿ), ಕೊಂಗೆ, ಟೊಂಗೆ ರೂಪಗಳೂ ಚಾಲ್ತಿಯಲ್ಲಿವೆ; 'ಕೊನೆ' ಎಂಬ ಪದವೂ ಇದೇ ಅರ್ಥದಲ್ಲಿ ರೂಢಿಯಲ್ಲಿದೆ; ಈ ಎಲ್ಲ ರೂಪಗಳೂ ಮರದ ಕವಲುಗಳನ್ನೇ ಹೇಳುತ್ತವೆ; ಮರ ಚಿಕ್ಕದಾದರೆ/ಗಿಡವಾದರೆ ಅದರ ಕೊಂಬೆಗಳಿಗೆ ಈ ಎಲ್ಲ ಪದಗಳೂ ಬಳಕೆಯಾದಂತಿಲ್ಲ; ಏಕೆಂದರೆ ಈ ಎಲ್ಲವೂ ಮರದ ಕವಲಿನ ಒಂದೇ ಭಾಗವನ್ನು/ಅರ್ಥವನ್ನು ಧ್ವನಿಸುವುದಿಲ್ಲ; ಕೊಂಬೆಗಿಂತ ರೆಂಬೆ ಚಿಕ್ಕದಿರಬಹುದು, ಅದರ ಕವಲಿ(ಸಣ್ಣ)ರಬಹುದು; ಅದರ ಮುಂದಿನ ಕವಲುಗಳನ್ನು ಕೊಂಗೆ, ಟೊಂಗೆ ಹೇಳುತ್ತಿರಬಹುದು; ಆದರೆ 'ಕೊಂಗೆ' 'ಕೊಂಬೆ'ಯನ್ನು ಸೂಚಿಸಲು ಬಂದಿರಬಹುದು; ಹಾಗೆಯೇ 'ಟೊಂಗೆ' 'ಕೊಂಗೆ'ಯ ಮತ್ತೊಂದು ರೂಪ ಇರಬಹುದು; ಕೊನೆ ಮರದ ಕವಲಿನ 'ತುದಿ'ಗೆ ಅನ್ವಯವಾಗಬಹುದೇನೊ! ಆದರೆ ಟೊಂಗೆ ಕನ್ನಡದ ಪದದಂತೆ ಕಾಣುವುದಿಲ್ಲ; ಕನ್ನಡದಲ್ಲಿ 'ಟ'ಕಾರದಿಂದ ಆರಂಭವಾಗುವ ಪದಗಳು ವಿರಳ!;
- ತೆಲುಗಿನಲ್ಲಿ ರೆಮ್ಮ/ರೆಬ್ಬ ಪದಗಳಿವೆ(DED); ಒತ್ತಕ್ಷರ ಸಹಿತವಾಗಿ ವ್ಮ, ಬ್ಬ ಆಗಿರಬಹುದು; ಏಕೆಂದರೆ ಕನ್ನಡದಲ್ಲಿ 'ಮ' ಮತ್ತು 'ಬ' `Interchangeble'; ಕಿಟ್ಟೆಲ್ ಮಾತ್ರ 'ಕೊಮ್ಮೆ'(ತೆಲುಗು) ಪದವನ್ನು ಸೂಚಿಸುತ್ತಾನೆ; ಆಗ ಪದದ 'ರ' ಮತ್ತು 'ಕ' ಧ್ವನಿಮಾಗಳು ಸಮಸ್ಯೆ ಒಡ್ಡುತ್ತವೆ; 'ಕೊಮ್ಮೆ' ಕನ್ನಡದ 'ಕೊಂಬೆ'ಗೆ ಸಂವಾದಿಯಾದುದು; ಆದರೆ ರೆಂಬೆ/ರೆಮ್ಮ/ರೆಬ್ಬಗಳಲ್ಲಿನ ಆರಂಭದ 'ರ'ಕಾರಕ್ಕೆ ವಿವರಣೆ ಅಗತ್ಯವಿದೆ;
- ಕೊಂಬೆ/ರೆಂಬೆಗಳಲ್ಲಿ ಸವರಿ ಮರವನ್ನು ಬೆಳೆಸುವ ಕ್ರಮವಿದೆ; ಮತ್ತಷ್ಟು ಕವಲುಗಳು ಬರಲಿ ಎಂಬುದು ಆಶಯ; ಕೆಲವೊಮ್ಮೆ ಕೊಂಬೆಗಳನ್ನು ಪ್ರತ್ಯೇಕ ಮರ ಬೆಳೆಸಲು 'ಬೀಜ'ವಾಗಿ ಬಳಸಬಹುದು; ಆಗ ಕೊಂಬೆಯ 'ಕಣ್ಣು'ಗಳಲ್ಲಿ ಹೊಸ 'ದಸಿ'(ಚಿಗುರು) ಬೆಳೆದು ಅದೇ ಮರವಾಗಿ ನಿಲ್ಲಬಹುದು; A system of trimming a tree or bush by cutting away dead or over grown branches or stems;
- 'ವೃಕ್ಷ' ಕುಲದೇವತೆಯಾದ ಬುಡಕಟ್ಟುಗಳಲ್ಲಿ ಮರದ ಕೊಂಬೆ/ರೆಂಬೆಗಳನ್ನು ಸವರುವುದಾಗಲಿ, ಸೌದೆಗೆ ಬಳಸಿಕೊಳ್ಳುವುದಾಗಲಿ ಇರುವುದಿಲ್ಲ, ಅದೇ ಬಿದ್ದು ಹೋದರೂ ಇವರಲ್ಲಿ ಬಳಕೆ ನಿಷಿದ್ಧ;
- ಕೊಂಬೆಯನ್ನು ಕಾವ್ಯದಲ್ಲಿ ರೂಪಕದಂತೆ ಬಳಸುವ ಬೇಕಾದಷ್ಟು ಉದಾಹರಣೆಗಳಿವೆ; ಬಸವಣ್ಣನವರ 'ಕೊಂಬೆಯ ಮೇಲಣ ಮರ್ಕಟದಂತೆ' ಮಾತನ್ನೆ ನೋಡಬಹುದು(ಬ.ವ.ಸಂ.೨೦). The word `Kombe' is used by poets in their poetry.

ಕೊಂಯ್‌ಕೊಟಾರ್/ಕೊಂಯಕೊಟ್ಟ Koỹkoṭār/Koỹakaṭṭa:

- ಒಂದು ಅನುಕರಣ ವಾಚಿ; ಮಕ್ಕಳು ಆಡುವ ಪತ್ತೇದಾರಿ ಆಟವೊಂದರಲ್ಲಿ ಬಳಕೆ; ವಿನೋದ ಕ್ರೀಡೆಯೂ ಹೌದು; ಈ ಕ್ರೀಡೆಯಲ್ಲಿ ಹಾಡುವ ಶಿಶುಪ್ರಾಸವೊಂದರ ಕೊನೆಯ ಸಾಲು; An imitative sound; it is used by children in their funny or recreative games;
- ಮಕ್ಕಳು ಗುಂಪಿನಲ್ಲಿ ಕಲೆತಿರುವಾಗ ಆ ಗುಂಪಿನವರಲ್ಲಿ ಯರಾದರೂ ಹೂಸಿ ಗಬ್ಬುವಾಸನೆ ಗುಂಪನ್ನೆಲ್ಲಾ ಆವರಿಸಿಕೊಂಡರೆ, ಹೂಸಿದವರು ಯಾರು ಎಂಬುದನ್ನು ಪತ್ತೆಹಚ್ಚಲು ಈ ಆಟ ಮತ್ತು ಹಾಡಿನ ವಿಧಾನ ಬಳಕೆಯಾಗುತ್ತದೆ; ಈ ಪತ್ತೆ ನಿಜವಾಗುತ್ತದೆಂದೇನೂ ಇಲ್ಲ. ಆದರೆ ಯಾರಾದರೊಬ್ಬರು ಅಪರಾಧಿ ಸ್ಥಾನಕ್ಕೆ ಗುರಿಯಾಗಲೇಬೇಕಾಗುತ್ತದೆ; ಆತನನ್ನು ಗುಂಪಿನಿಂದ ಹೊರಹಾಕಲಾಗುತ್ತದೆ, ಇಲ್ಲವೆ ಅಪಹಾಸ್ಯಕ್ಕೆ ಗುರಿಪಡಿಸಿ ಲೇವಡಿ ಮಾಡಲಾಗುತ್ತದೆ;
- ಗುಂಪಿನಲ್ಲಿ ಒಬ್ಬ ನಾಯಕತ್ವ ವಹಿಸಿಕೊಂಡು ಹಾಡನ್ನು ಹಾಡತೊಡಗುತ್ತಾನೆ; ಹಾಡಿನ ಒಂದೊಂದು ಪದದ ಉಚ್ಚಾರಣೆಗೂ ಗುಂಪಿನ ಒಬ್ಬೊಬ್ಬನನ್ನು ಬೆರಳು ಮಾಡಿ ತೋರಿಸುತ್ತಾನೆ; ಕೊನೆಯ ಪದದ ಉಚ್ಚಾರಣೆ ಯಾರಿಗೆ ಬೆರಳು ಮಾಡಿ ಉಚ್ಚಾರಣೆಗೊಳ್ಳುತ್ತದೋ ಅವನೇ ಹೂಸಿದವನೆಂದು ಇಡೀ ಗುಂಪು ನಿರ್ಧರಿಸುತ್ತದೆ; ನಾಯಕ ನಿರ್ಧಾರವನ್ನು ಪ್ರಕಟಿಸುತ್ತಾನೆ; ಹಾಡು ಇದು: ಅವಳಕ್ಕಿ ಪವಳಕ್ಕಿ

  ಕಾಂಚ್ಮಣಿ ಮಿಣಿಮಿಣಿ

  ಡಾಂಡೂ

  ಕೊಂಯ್‌ಕೊಟಾರ್;

ಕೊಂಯ್‌ಗುಡು/ಕೊಂಯಿಕ್/ಕೊಂಯಿಕಿಡು Koy˜guḍu/Koỹik/Koỹkiḍu:

- ಕೊಂಯ್=ಒಂದು ಅನುಕರಣ ಶಬ್ದ; +ಕುಡು/ಗುಡು; ಪಿಸುಗುಡು, ಲೊಟಗುಟ್ಟು ಇದ್ದಹಾಗೆ ಅನುರಣಿತ ಶಬ್ದ ಸೂಚಕ ಸಂಜ್ಞೆ ಎನ್ನಬಹುದು; An imitative sound: a whispering sound, murmering sound;
- 'ಕೊಂಯಿಕ್' ರೂಪ ಒಂದು ಸಲದ ಶಬ್ದವನ್ನು ಹೇಳುತ್ತದೆ;

  ಉದಾ: 'ಒಂದೇಟ್ ಕೊಟ್ಟೆ ನೋಡು, ಅಂಗೆ 'ಕೊಂಯಿಕ್' ಅಂತ ಬಿದ್ಕತ್ತು; ತಿರ್ಗ ಉಸುರ್ ತಗ್ದಿದ್ರ್ ಹೇಳ್ಕೊಟ್ಟೇನು';
- ಕೊಂಯ್/ಕೊಂಯಿ=ನಾಯಿಗಳು ಕಿರುಚುವ ಧ್ವನಿಯ ಅನುಕರಣ ಶಬ್ದ; ಪ್ರಕರಾಂತರವಾಗಿ ಇತರ ಪ್ರಾಣಿಗಳ ಹಾಗೂ ಮನುಷ್ಯನ ಅರಚುವಿಕೆಗೂ ಕೂಗುವಿಕೆಗೂ ಗೊಣಗುವಿಕೆಗೂ ಅನ್ವಯಿಸಿ ಹೇಳುವುದುಂಟು; ಸಾಮಾನ್ಯವಾಗಿ ಪೆಟ್ಟು ತಿಂದಾಗ ಉಂಟುಮಾಡುವ ಯಾತನೆಯ ಧ್ವನಿಯ ಅನುಕರಣೆಗೆ ಈ ಶಬ್ದ ಅನ್ವಯ;
- ಕೊಂಯ್ ಅಥವಾ ಕೊಂಯಿಕ್ ಅನ್ನು ಮೂಲರೂಪವೆಂದು ಪರಿಗಣಿಸಿ ಇದಕ್ಕೆ ಕುಡು/ಗುಡು ಪ್ರತ್ಯಯದ ರೀತಿಯಲ್ಲಿ ಸೇರಿದೆ ಎನ್ನಬಹುದು;
- ಕೊಂಯ್‌ಗುಡು ಮತ್ತು ಕೊಂಯಿಕಿಡು(ಕೊಂಯಿಕ್+ಇಡು) 'ಕೊಂಯಿಕ್' ಶಬ್ದದ ಧಾರೆಯನ್ನು ಹೇಳುತ್ತಿವೆ.

ಕೊಂಯಂಪುರ Koỹampura:

- ದೂರದ ಊರು; ಕಣ್ಣಿಗೆ ಕಾಣದಷ್ಟು ದೂರ; A remote village;
- ಕೊಯಮತ್ತೂರು, ಕೊಯ್‌ಮೂಲೆ ರೂಪಗಳು ಸಿದ್ಧಗೊಂಡಿರುವುದು ಈ ರೀತಿಯಲ್ಲಿಯೇ ಇರಬಹುದು. The name Coimbatore is named because it is a remote village or town or human settlement.

ಕೊಂಯಸಣಿ Koỹasaṇi:

ದಾಕ್ಷಿಣ್ಯ. Make someone legally or morally bound to an action or course of action; helpful, obliging, willing to do a service or kindness.

ಕೊಂಯಾಮಂಜರಿಕೆ Koỹāmanjarike:

- ತೆಂಗಿನ ಮರದ ಒಣಗಿಹೋದ ಹೂಗೊಂಚಲು (ಉಕ.ಜಿ.); ಒಣಗಿದ ಹೊಂಬಾಳೆ(?); Dried coconut flower, branch;
- ಮಂಜರಿ(ಸಂ.)=ಗೊಂಚಲು; ಗುಚ್ಛ; 'ಮಂಜರಿಕೆ' ಎಂದರೆ ಗೊಂಚಲಿನ ಆಕಾರದಲ್ಲಿರುವಂತಹುದು,

ಗೊಂಚಲು ಗೊಂಚಲಾಗಿರುವಂತಹುದು ಎಂದಾಗಬಹುದು; 'ಕೊಂಯಾ' ರೂಪದ ನಿಷ್ಪತ್ತಿ ಮತ್ತು ಅರ್ಥ ಹೇಳುವುದು ಕಷ್ಟ. The branch, the bunch.

ಕೊಕ್‌ಹುಣಸೆ Kokhuṇase:

- ಕೊಕ್ಕೆಯಂತೆ ಬಾಗಿದ ಹುಣಸೇ ಕಾಯಿ; ಕೊಂಕಾದ/ಬಾಗಿಕೊಂಡಿರುವ ಹುಸಣಕಾಯಿ/ಹಣ್ಣು (ಮಂಡ್ಯಜಿ.); Carved tamarind;
- ಕೊಂಕು ಹುಣಸೆ>ಕೊಕ್‌ಹುಣಸೆ; ಕೊಂಕು=ಬಾಗು; ಬಾಗಿರು.

ಕೊಕಣಿ Kokaṇi:

- ಕಿವಿಯ ಕಸ; ಗುಗ್ಗೆ; Ear wax, gum inside the ear;
- **ನೋಡಿ:** ಕೂಕಣಿ:

ಕೊಕತ್ತಿ Kokatti:

- ಬಿದಿರು ಕಡಿಯುವ ಕತ್ತಿ; A sickle used to cut bamboo only;
- ಕೊಕ್ಕೆ+ಕತ್ತಿ=ಕೊಕ್ಕತ್ತಿ>ಕೊಕತ್ತಿ ಆಗಿರಬಹುದು; ಉಚ್ಚರಣಾ ಸೌಕರ್ಯಕ್ಕಾಗಿ ಪದಮಧ್ಯ ಕ ಕಾರದ ಒತ್ತಕ್ಷರ ಬಳಕೆಯಿಂದ ತಪ್ಪಿಹೋಗಿರುವ ಸಾಧ್ಯತೆ ಇದೆ.
- ಬಿದಿರು ಮೆಳೆಯ ಸಿಕ್ಕು ಬಿಡಿಸಿ ಬುಡ ಕಡಿದ ಗಳುವನ್ನು ಹೊರಕ್ಕೆ ಎಳೆಯಲು ಉದ್ದನೆಯ ಕತ್ತಿನ, ಕೊಕ್ಕೆಯಂತೆ ಬಾಗಿದ ಕತ್ತಿಗಳು ಬಹಳ ಆವಶ್ಯಕ. A long sickle.

ಕೊಕನ್ಹಕ್ಕಿ/ಕೊಕ್ಕನಕ್ಕಿ/ಕೊಕ್ಕಾನಕ್ಕಿ Kokanhakki/ Kokkanakki/Kokkanakki:

- ಕೊಕ್ಕರೆ; ಬೆಳ್ಳಕ್ಕಿ; ಕೊಕ್ಕರೆ ಜಾತಗೆ ಸೇರಿದ ಹಕ್ಕಿ/ ಪಕ್ಷಿಗಳು; Crane or pertained to crane species bird;
- ಕೊಕ್ಕಿನ ಹಕ್ಕಿ>ಕೊಕ್ಕಿನ್ಹಕ್ಕಿ>ಕೊಕ್ಕನ್ಹಕ್ಕಿ>ಕೊಕನ್ಹಕ್ಕಿ/ ಕೊಕ್ಕನಕ್ಕಿ ಆಗಿರುವ ಸಾಧ್ಯತೆ ಇದೆ; Beaked bird;
- ಹೊಲಗದ್ದೆಗಳಲ್ಲಿ ಹುಳುಹುಪ್ಪಟೆಗಳನ್ನು ಹಿಡಿದು ತಿಂದು ಬದುಕುವ ಬೆಳ್ಳಕ್ಕಿಗಳು ಬೆಳೆಗಳ ರೋಗ ರುಜಿನಗಳನ್ನು ನಿಯಂತ್ರಿಸುತ್ತವೆ; ಬೆಳೆ ಮತ್ತು ಫಸಲು ಹುಳುಗಳಿಗೆ ತುತ್ತಾಗುವುದನ್ನು ತಡೆಗಟ್ಟುತ್ತವೆ; ಹೀಗಾಗಿ ಕೊಕ್ಕರೆಗಳನ್ನೂ 'ರೈತನ ಮಿತ್ರ' ಎನ್ನುತ್ತಾರೆ; Egrets which are eating insects in the fields or crops; the bird having a long neck, long beaks, tall long leg;
- *ಪ್ರ: 'ಆ ಕೊಕ್ಕನಕ್ಕಿ ಕಾಲ್ ಕಾಣ್ ಮರಲೆ' (ಉಕ.ಜಿ.);*
- ಗುಗ್ಗಳ ಕಾಯಿಯನ್ನು ತಿಂದು ಬದುಕುವ ಹಕ್ಕಿ; ಗುಮ್ಮಾಡಲು ಹಕ್ಕಿ(ಚಿಕ್ಕ.ಜಿ.);
  ವ್ಯರೂ: ಕೊಕನಕ್ಕಿ/ಕುಕ್ಕನಕ್ಕಿ; ಕೊಕ್ಕಾನಕ್ಕಿ;
  ನೋಡಿ: ಕೊಕ್ಕರೆ(crane or stork).

ಕೊಕಮು Kokamu:

- ಬೆಳೆಗೆ ಮಾಡುವ ಒಂದು ಪೂಜೆ (ಹಾ.ಜಿ.); The festival of crops;
- ಕೊಡಿಹಬ್ಬ (ಬ.ಜಿ).

ಕೊಕ್/ಕೊಕ್ಕು Kokk/Kokku:

- ಚಂಚು; ಕೋಳಿ, ಬಾತು, ನವಿಲು, ಕೊಕ್ಕರೆ, ಕಾಗೆ, ಗುಬ್ಬಚ್ಚಿ, ಮೊದಲದ ಪಕ್ಷಿಗಳ ಮೂತಿ; ಪಕ್ಷಿಗಳ ಬಾಯಿಯ ಮುಂಭಾಗದ ಉದ್ದನೆಯ ಗಟ್ಟಿಯಾದ ಚೂಪದ ಅಂಗ; The beak of crow, peacock, crane, cock;
- ಪಕ್ಷಿಗಳು ಕೊಕ್ಕಿನಿಂದ ಕಾಳು ಕಡ್ಡಿಗಳನ್ನು ಕುಕ್ಕಿ ತೆಗೆದು ಆಹಾರ ಸಂಪಾದಿಸುವ, ಗೂಡು ಕಟ್ಟುವ, ಪೊಟರೆಗಳನ್ನು ನಿರ್ಮಿಸುವ ಕೆಲಸ ಮಾಡುತ್ತವೆ; ಶತ್ರುಗಳ ಮೇಲೆ ಧಾಳಿ ಮಾಡಲೂ ಕೊಕ್ಕುಗಳನ್ನು ಬಳಸುತ್ತವೆ; The beak of bird helps birds to peck grains, to build nests;
  ವ್ಯರೂ: ಕೊಕ್ಕಿ;
- ಇತರ ಭಾಷಾ ರೂಪಗಳು:
  ಮ: ಕೊಕ್ಕು; ಕೊಡ: ಕೊಕ್;
  ತು: ಕೊಕ್ಕು, ಕೋಕಾಯಿ;
- ದೇಸಿ ಪದ; 'ಕುಕ್ಕು'ದಿಂದ 'ಕೊಕ್ಕು' ಬಂದಿದೆ; ಉ>ಒ ಸ್ವರ ವ್ಯತ್ಯಯ; ಕುಕ್ಕು=ಹೆಕ್ಕು, ಕುಟುಕು; ಕುಸುಕು;
- ಆಹಾರವನ್ನು ಹೆಕ್ಕುವ, ಮರ ಹಣ್ಣು ಇತ್ಯಾದಿಗಳನ್ನು ಕುಟುಕುವ, ಶತ್ರುಗಳನ್ನು ಕೊಕ್ಕಿನಿಂದ ಕಚ್ಚಿ ಓಡಿಸುವ/ ಕೊಲ್ಲುವ ಕ್ರಿಯೆ ಕೊಕ್ಕಿನಿಂದ ನಡೆಯುತ್ತದೆ; It helps for pecking food or tree;

- ಕೊಂಕು>ಕೊಕ್ಕು ಆಗಿರುವ ಸಾಧ್ಯತೆಯೂ ಇದೆ; ಕೆಲವು ಪಕ್ಷಿಗಳಿಗೆ ಕೊಕ್ಕು ಅಥವಾ ಮೂತಿ ಕೊಕ್ಕೆಯಂತೆ ಬಾಗಿರುವುದೂ ಉಂಟು.

ಕೊಕ್ಕ Kokka:

- ಕೋಳಿ; 'ಕೋಳಿ ಕೊಕ್ಕ' ಎಂಬ ಮಾತಿದೆ (ಮಂಡ್ಯ.ಜಿ.); <ಕುಕ್ಕುಟ(ಸಂ); cock or hen;
- ನಾಯಿ(?); dog?
- ಕಣ್ಣುಮುಚ್ಚಾಲೆ ಆಟ(ತು.); –ಕೊಕ್ಕದೀಪುನಿ= ಕಣ್ಣುಮುಚ್ಚಾಲೆ ಆಟ ಆಡುವುದು (ತು.ನಿ); Seek and hide game;
- ದನಗಳ ಕೊಂಬುಗಳು ಕೊಕ್ಕೆಯಂತೆ ಮುಂದಕ್ಕೆ ಬಾಗಿದ್ದರೆ ಅಂತಹ ದನಗಳನ್ನು ಕೊಕ್ಕ ಎನ್ನುತ್ತಾರೆ (ತು.ಜಿ.); The beak like horned cattle is called as `Kokka';
- 'ಬೆಕ್ಕು ಕೊಕ್ಕನಂ ತವೆ ಪಿಡಿವಂತಿರೆ ಪಿಡಿದು' ಎಂದು ಜನ್ನ ಕವಿಯ ಪ್ರಯೋಗ (ಯಶೋಧರ ಚರಿತೆ);
- ಬಾಗಿದ ಕೊಂಬುಗಳನ್ನು ಅಥವಾ ಅಂತಹ ಕೊಂಬಿನ ದನಗಳನ್ನು 'ಕೊಕ್ಕ' ಎನ್ನುವುದನ್ನು ನೋಡಿದರೆ ಬಾಗಿದ ಕೊಕ್ಕುಳ್ಳದ್ದು ಕೊಕ್ಕ ಎಂದು ಕರೆದಿರಬಹುದು; ಅಥವಾ 'ಕೊಕ್‌ಕೊಕ್...' ಎಂದು ಶಬ್ದ ಮಾಡುವಂತಹುದು ಎಂದು ಅನುಕರಣವಾಚಿಯೊಂದು ನಾಮವಾಚಕ ಆಗಿರುವಂತೆಯೂ ತೋರುತ್ತದೆ; ಸಂಸ್ಕೃತದ 'ಕುಕ್ಕುಟ'ದಿಂದ 'ಕೊಕ್ಕ' ಎನ್ನುವ ಬದಲು ಈ ದೇಸೀ ಮೂಲ ಸರಿ ಎನಿಸುತ್ತದೆ; ಅನುಕರಣವಾಚಿಗಳು ಎಲ್ಲ ಭಾಷೆಗಳಿಗೂ ಸಮಾನ್ಯ; 'ಕುಕ್ಕುಟ' ಕೂಡ ಶಬ್ದಾನುಕರಣೆಯಿಂದಲೇ ರೂಢಗೊಂಡಂತೆ ತೋರುತ್ತದೆ.

ಕೊಕ್ಕಟೆ Kokkate:

- ಹಾಳಾದ ದಾರಿ; Destroyed route;
- ಬಳಕೆ ತಪ್ಪಿಹೋಗಿರುವ, ಹಳ್ಳ ದಿಣ್ಣೆ ಕೊರಕಲು ಗಿಡಗಂಟೆಗಳಿಂದ ಕೂಡಿ ತಿರುಗಾಡಲು ಸಾಧ್ಯವಿಲ್ಲದ, ಕೋಳಿ ಕೊಕ್ಕ ಇತ್ಯಾದಿಗಳ ಆಡುಂಬೊಲವಾಗಿರುವ ದಾರಿ ಎಂಬ ಅರ್ಥದಲ್ಲಿ ಇರಬಹುದು; The route that is not possible for easy travelling;
- ಕೊಕ್ಕ(=ಕೋಳಿ)+ಬಟ್ಟೆ(=ದಾರಿ,ಮಾರ್ಗ)= ಕೊಕ್ಕಬಟ್ಟೆ>ಕೊಕ್ಕಟೆ>ಕೊಕ್ಕಟೆ ಆಗಿರಬಹುದೆ?
- ಕೂಡು ಉಚ್ಚಾರಣೆಯಲ್ಲಿ ದ್ವಿತ್ವ ಸಂಭವಿಸುವುದು, ವಿಜಾತಿ ದ್ವಿತ್ವ ಉಚ್ಚಾರಣಾ ಸೌಕರ್ಯಕ್ಕಾಗಿ ಸಜಾತಿ ದ್ವಿತ್ವವಾಗುವುದು, ದ್ವಿತ್ವ ಲೋಪವಾಗುವುದು ಸಾಮಾನ್ಯ;
- —***ಕೊಕ್ಕಟೆ ಹೊಡಿ*** : ಸುಮ್ಮನೆ ನಗುತ್ತ/ಕಾಡುಹರಟೆ ಹೊಡೆಯುತ್ತ ಕಾಲಕಳಿ; ಹಾಳು ಮಾತುಗಳನ್ನಾಡು; ವ್ಯರ್ಥಾಲಾಪ ಮಾಡು; ನಗು(ಹೋ.ಹಾ.). Meaningless, useless chatting, laughter.

ಕೊಕ್ಕಡ Kokkada:

- ಒಂದು ಬಗೆಯ ದೀಪ; ಚಿಮಿಣಿ(ವ್ಯ.ಪ.ಕೋ); A kind of lamp; Chimney;
- ಬೆಸುಗೆ ಹಾಕಲು ಬಳಸುವ ದೀಪ(ಬ.ಜಿ.); Soldering lamp;
- ಒಂದು ಸ್ಥಳನಾಮ/ಪ್ರದೇಶವಾಚಿ(ತು); Name of an area;
  ಪ್ರ: 'ಕೋರಿ ಪುಟ್ಟಿ ಊರು ಕೊಕ್ಕಡ ಸೀಮ್, ಆನ್ ಪುಟ್ಟಿ ಊರು ಆನೆಗುಂಡಿ'(ತುನಿ.); (=ಕೋಳಿ ಹುಟ್ಟಿದ ಊರು ಕೊಕ್ಕಡ ಸೀಮೆ, ಆನೆ ಹುಟ್ಟಿದ ಊರು ಆನೆಗುಂಡಿ);
- ವ್ಯರೂ: ತು: ಕೊಕ್ಕಡೊ.

ಕೊಕ್ಕಬಕ್ಕ Kokkabakka:

- ಸೊಟ್ಟಾಬ; ಅಂಕುಡೊಂಕು; Criss-cross; curved, bent;
- ಕುರೂಪು; ಕುರೂಪಾದ.

ಕೊಕ್ಕರ Kokkara:

- ವಕ್ರಬುದ್ಧಿಯವನು; Crooked;
- ಹೇವರಿಕೆ; ಜುಗುಪ್ಸೆ; ಅಸಹ್ಯ; disgust; prolix; loathing;
- ಕೋರೈಸು; ಕುಕ್ಕು; ಚುಚ್ಚು;
- ಇತರ ಭಾಷಾರೂಪಗಳು: ತ:ಕೊಕ್ಕರೈ; ಮ:ಕೊಕ್ಕರ, ಕೊಕ್ಕ;
  ತೆ:ಕೊಂಕರ, ಕೊಕ್ಕೆಮು, ಕೊಕ್ಕಿ, ಕೊಡ:ಕೊಕ್ಕೆಮಕ್ಕೆ;
  ತು: ಕೊಂಕೆ, ಕೊಕ್ಕೆ;
- ಕೊಕ್/ಕುಕ್, ಕೊಕ್ಕ ಮೂಲರೂಪದ ವಿಸ್ತರಣರೂಪದಂತೆ ಕಾಣುತ್ತದೆ; ಕೊಕ್‌ಕೊಕ್ ಎಂದು ಶಬ್ದ ಮಾಡುವ, ಆಹಾರಕ್ಕಾಗಿ ಕೊಕ್ಕಿನಿಂದ ನೆಲವನ್ನೂ ಕಾಳನ್ನೂ ಕುಕ್ಕುವ ಅನುಕರಣ ಕ್ರಿಯೆ ಈ

ಶಬ್ದರೂಪಗಳ ನಿಷ್ಪತ್ತಿಯ ಹಿನ್ನೆಲೆಯಲ್ಲಿ ಇರುವಂತಿದೆ; ದೇಶಿಪದ;

- ***—ಕೊಕ್ಕರಗಾಲ*** : ವಕ್ರವಾದ/ಡೊಂಕಾದ ಕಾಲುಳ್ಳವನು; ಕೊಕ್ಕರೆಯಂತೆ ಸಣ್ಣಗೆ, ಉದ್ದವಾಗಿರುವ ಕಾಲುಗಳನ್ನುಳ್ಳ ವ್ಯಕ್ತಿ; ಕೊಕ್ಕರ(ರೆ)+ ಕಾಲ=ಕೊಕ್ಕರಗಾಲ; Thin long legged person; a man having bend leg;
- ***—ಕೊಕ್ಕರಗೆಯ್*** : ಜುಗುಪ್ಸೆಪಡು; ಅಸಹ್ಯಪಡು; ಕೊಕ್ಕರ+ಗೆಯ್; ಕ್>ಗ್ ವ್ಯತ್ಯಯ; Loathing gruesome;
- ***—ಕೊಕ್ಕರಿ*** : ಕೊಕ್‌ಕೊಕ್ ಎಂದು ಶಬ್ದ ಮಾಡು; *ಪ್ರ:* ಕೋಳಿ ಕೊಕ್ಕರೀತ ಅದೆ, ಮೊಟ್ಟೆ ಇಕ್‌ಬೈದು(ಮಂಡ್ಯಜಿ.); ಡೊಂಕು; ವಕ್ರತೆ; ಕೊಕ್ಕರ+ಇ; ಕೊಕ್+ಕರಿ=ಕೊಕ್ಕರಿ/ಕೊಗ್ಗರಿ; A sound of cock or hen;
- ***—ಕೊಕ್ಕರಿಕೆ*** : ಜುಗುಪ್ಸೆ; ಹೇಸಿಕೆ; ಹೇವರಿಕೆ; ಓಕರಿಕೆ(>ವಾಕರಿಕೆ);ಕೊಕ್ಕರ+–ಇಕೆ; Disgusted loathing;
- ***—ಕೊಕ್ಕರಿಸು*** : ಅಸಹ್ಯಪಡು, ಹೇಸಿಕೆಪಡು; ಜುಗುಪ್ಸೆತೋರು; ಕ್ಯಾಕರಿಸು; ವಾಕರಿಕೆಯ ಶಬ್ದ ಮಾಡು; ಗಟ್ಟಿಯಾಗಿ ಅರಚು; ಕೊಕ್ಕೊಕೋ ಎಂದು ಕೂಗು; ತಿರಸ್ಕಾರದಿಂದ ನಗು; ಪರಿಹಾಸ ಮಾಡು; ಕೋರೈಸು; ಪ್ರಕಾಶಮಾನದಿಂದ/ಕಾಂತಿಯಿಂದ ಕಣ್ಣು ಕುಕ್ಕು; ಕಣ್ಣು ಚುಚ್ಚಿದಂತಾಗು; ಸಂಕೋಚಪಡು; ನಾಚಿಕೆಯಿಂದ/ಭಯದಿಂದ/ಗೌರವಭಾವದಿಂದ ಬಾಗಿ ನಿಲ್ಲು; ತಲೆತಗ್ಗಿಸು; ಕುಬ್ಜವಾಗು; *ಪ್ರ: 'ಅದ್ಯಾಕಂಗ್ ಕೊಕ್ರುಸ್ಕಂದ್ ನಿಂತ್ಕಂದಿಯೆ, ನೆಟ್ಗ್ಯಾಗ್ ನಿಂತ್ಕಲ'*; ಕೊಕ್ಕರ+ಇಸು; ಇತರ ಭಾಷಾರೂಪಗಳು: ತ:ಕೊಕ್ಕರಿ; ತೆ: ಕೊಕ್ಕರಿಂಚು. Prolix sound of spitting irritated funny laugh.

ಕೊಕ್ಕರಟಿ kokkaraṭi :

- ಹಟ್ಟಿ ಕಂದಿಗೆ ತೆಗೆಯಲು ಬಳಸುವ ಮರದಿಂದ ಮಾಡಿಕೊಂಡ ಕೊಕ್ಕೆಯಂತಾ ಪರಿಕರ(ಚಿಕ್ಕ.ಜಿ); Hooked wooden tool;
- ಕೊಕ್ಕೆಯಂತಹ ಒಂದು ಸಾಧನ(ಮಂ.ಜಿ.,ಉ.ಜಿ.); Hooked tool;
- ದನದ ಕೊಟ್ಟಿಗೆಯಲ್ಲಿ ಮಾಸು(=ಕಂದಿಗೆ?) ತೆಗೆಯಲು ಬಳಸುತ್ತಾರೆ; ಮರದಿಂದ ಮಾಡಿಕೊಂಡಿರುತ್ತಾರೆ.

ಕೊಕ್ಕರು Kokkaru:

- ಒಂದು ಜಾತಿಯ ಮೀನು; ಕೊಕ್ಕರ್‌ಮೀನು(ತು); ಪರ್ಯಾ: ಕೊಂತಿಮೀನು; A kind of fish;
- ಹನೆ ಎಡೆಯ ಬುಡ; ತಾಳೆ ಮರದ ಬುಡ (ಮಂಡ್ಯಜಿ.); Palm stem;
- 'ಕೊಕ್ಕರ' ರೂಪಕ್ಕೆ ವಕ್ರ, ಒರಟು ಎಂಬ ಅರ್ಥಗಳಿವೆ; ತಾಳೆ ಮರದ ಬುಡ ವಕ್ರವಾಗಿಲ್ಲದಿದ್ದರೂ ಕಳಚಿದ ಗರಿಗಳ ಗುರುತುಗಳಿಂದಾಗಿ ಒರಟೊರಟಾಗಿರುತ್ತದೆ;
- ಕೊಕ್ಕರ್+–ಉ; ಕೊಕ್ಕರ+–ಉ ಎಂದೂ ಹೇಳಬಹುದು; ಸ್ವರಾಂತ ಪ್ರಕ್ರಿಯೆ ನಡೆದಿದೆ.

ಕೊಕ್ಕರೆ Kokkare:

- ಒಂದು ಬಗೆಯ ಪಕ್ಷಿ; ಬೆಳ್ಳಕ್ಕಿ; ಕಪ್ಪು ಕಂದು ಬಣ್ಣದ, ಕಂದು ನಸುಗೆಂಪು ಬಣ್ಣದ, ಪೂರ್ಣ ಅಚ್ಚ ಬಿಳುಪಿನ ಪಕ್ಷಿ; ಉದ್ದನೆಯ, ಸ್ವಲ್ಪ ಬಾಗಿದಂತಿರುವ ಕತ್ತನ್ನು ಉಳ್ಳ, ಕೊಕ್ಕುಳ್ಳ ತಲೆಯ, ಸಣ್ಣ ಕಾಲಿನ ಹಕ್ಕಿ; ಬಕ ಪಕ್ಷಿ; A kind of bird; Egret, Mew, Seagull; brownish red coloured or white coloured long necked thin legsged bird
- ನೀರಿನಲ್ಲಿ ವಾಸ ಮಾಡುವುದರಿಂದ 'ನೀರುಹಕ್ಕಿ' ಎಂದೂ ಕರೆಯುತ್ತಾರೆ; ಕೊಕ್ಕರೆಯಲ್ಲಿ ಬಿಳಿಯ ಕೊಕ್ಕರೆಗಳೇ ಅಧಿಕವಾಗಿ ಕಾಣುವುದರಿಂದ 'ಬೆಳ್ಳಕ್ಕಿ' ಎನ್ನುವುದೂ ಉಂಟು; ಅಪ್ಪಟ ಬಿಳಿಯ ವಸ್ತುಗಳನ್ನು ವರ್ಣಿಸುವುದರಿಂದ ಉಪಮಾನವಾಗಿ ಬಳಕೆ; ಕೊಕ್ಕರೆಯಂತೆ ಬಿಳುಪಾದದ್ದು ಎಂದೋ, ಕೊಕ್ಕರೆಬಿಳುಪಿನದು ಎಂದೋ, ಕೊಕ್ಕರೆಯ ಬಣ್ಣದ್ದು ಎಂದೋ ಹೇಳುತ್ತಾರೆ; It lives in water so it is called as water bird;
- ಉದ್ದ ಕಾಲಿನ ಬಿಳೀ ಕೊಕ್ಕರೆಗಳ ಕತ್ತು ಕಪ್ಪಗಿರುವುದೂ ಉಂಟು; ಇಂಥವು 'ಕಂಚುಗಾರ ಕೊಕ್ಕರೆ';
- ನೀರಿನಲ್ಲಿ ವಾಸಿಸುವ ಹುಳು ಉಪ್ಪಟೆ, ಕಪ್ಪೆ, ಮೀನು ಸಾಮಾನ್ಯ ಆಹಾರ; ನೀರ ತಡಿಯಲ್ಲಿ ಮೇಯಲು, ಕೆರೆಗಳಲ್ಲಿ ಕೆಡೆಯಲು ಹೋಗುವ ದನ, ಎಮ್ಮೆಗಳ

ಹಾಗೂ ಇತರ ಕಾಡುಪ್ರಾಣಿಗಳ ಮೈಮೇಲಿನ ಉಣ್ಣೆಯನ್ನು ಕಿತ್ತು ತಿನ್ನುತ್ತವೆ; ಗದ್ದೆ ಬಯಲಿನಲ್ಲಿ ಮಿಡತೆ ಮೊದಲಾದ ಕೀಟಗಳನ್ನು ತಿನ್ನಲು ಗುಂಪುಗೂಡುವ ಕೊಕ್ಕರೆಗಳ ಚಿತ್ರ ಮೋಹಕವಾಗಿರುತ್ತದೆ; They eat aquatic insects frog, fish;

- ಆಹಾರಕ್ಕಾಗಿ ಕೆರೆ, ಕೊಳ, ಸರೋವರಗಳನ್ನು ಹುಡುಕುತ್ತಾ ಹೋಗುತ್ತವೆ; ಒಂದೆಡೆ ಸ್ಥಿರವಾಗಿ ನಿಲ್ಲುವುದಿಲ್ಲ; ಇವರ ಈ ಗತಿಶೀಲತೆಯಿಂದಾಗಿ ಬೆಳ್ಳಕ್ಕಿಗಳನ್ನು ಕಾಲಕ್ಕೆ ಹೋಲಿಸುವುದು ರೂಢಿ; ಬೇಂದ್ರೆ ಅವರ 'ಹಕ್ಕಿ ಹಾರುತಿದೆ ನೋಡಿದಿರಾ' ಕವಿತೆ ಉಜ್ವಲ ಸಾಕ್ಷಿ; ಅಲೆಮಾರಿ ಸಮುದಾಯಗಳಿಗೂ ಹೋಲಿಕೆಯಾಗುತ್ತವೆ: 'ಒಡ್ಡರಿಗೊಂದು ಊರೇ, ಕೊಕ್ಕರೆಗೊಂದು ಕೆರೆಯೇ'(ಗಾ); ಕೊಕ್ಕರೆಗಳ ಸಂಜೆಹೊತ್ತಿನ/ಹಗಲಿನ ಪ್ರಯಾಣ ಜನಜನಿತ; ಸ್ಫೂರ್ತಿದಾಯಕ; ಕುವೆಂಪು ಅವರ 'ದೇವರು ರುಜು ಮಾಡಿದನು' ಕವಿತೆಯನ್ನು ನೆನಪಿಸಿಕೊಳ್ಳಬಹುದು; They search their food in lakes, tanks, brooklets;
- ಹಂಸ ಬಿಳೀ ಕೊಕ್ಕರೆಗಳ ಸಾಮ್ಯತೆಯ ಮೇಲೆ ಕಲ್ಪಿಸಿದ ಪಕ್ಷಿ ಇರಬಹುದೆ; ಅಥವಾ ಕೊಕ್ಕರೆ ಜಾತಿಯ, ಆದರೆ ಕೊಕ್ಕರೆಗಿಂತ ದಪ್ಪವಾದ ಅಚ್ಚಬಿಳಿಯ, ಅಪರೂಪದ ಪಕ್ಷಿಯೇ ಇರಬಹುದು; ಅಚ್ಚ ಸರೋವರ, ಬಿಳೀಹಂಸ, ಬಿಳೀ ಉಡುಪಿನ ಶಾರದೆ–ಒಂದು ಪಾರಂಪರಿಕ ಚಿತ್ರಕಲ್ಪನೆ; ಪರಿಶುದ್ಧ ಚಾರಿತ್ರ್ಯಕ್ಕೆ, ಜ್ಞಾನಕ್ಕೆ ಪ್ರತೀಕ;
- ಕಲರವಕ್ಕೂ ಕೊಕ್ಕರೆ/ಹಂಸ ಪ್ರಸಿದ್ಧಿ; 'ಕಲಹಂಸ' ಎಂಬ ಮಾತೇ ಇದೆ;
- ಕೊಕ್ಕರೆಯಂತಹ ನೀರುಹಕ್ಕಿಗಳಲ್ಲಿ ನಾಮಗೋಳಿ, ಹುಂಡೆಹಕ್ಕಿ, ನೀರುಕೋಳಿ, ಹುಳುಮುಳುಕ, ಬಾತುಕೋಳಿ ಮೊದಲಾದ ಪ್ರಭೇದಗಳಿವೆ;
- ಒಂದು ಜಾತಿಯ ಮರ; **ವ್ಯರೂ:** ಕೊಕ್ಕಲೆ (ಕೊಡ.) = ಒಣಗಿದ ಎಲೆ; A kind of tree or a dry leaf;
- ಒಂದು ಬಗೆಯ ಮೀನು; ಕೊಕ್ಕರೆಮೀನು; A kind of fish: Egret fish;
- ಒಂದು ಬಗೆಯ ಸಸ್ಯರೋಗ;
- ದೇಶಿಪದ; ಕೊಕ್ಕ, ಕೊಕ್ಕು, ಕೊಕ್ರೆ(<ಕೊಕ್ಕರೆ) ಸಮೀಪವರ್ತಿ ನಾಮರೂಪಗಳು; ಕೊಕ್ಕು ಉಳ್ಳದ್ದು/ ವಕ್ರ(ಬಾಗಿದ) ಕತ್ತಿನದು ಎಂಬ ಕಾರಣಕ್ಕೆ ಅಥವಾ ಕೊಕ್‌ಕೊಕ್ ಎಂದು ಶಬ್ದ ಮಾಡುವುದನ್ನು ಅನುಕರಿಸಿ ಈ ರೂಪಗಳು ಹುಟ್ಟಿಕೊಂಡಿರುವ ಸಾಧ್ಯತೆ ಇದೆ;
- ಇತರ ಭಾಷಾ ರೂಪಗಳು: ತ: ಕೊಕ್ಕು, ಕುರುಗು; ತೆ: ಕೊಕ್ಕೆರ, ಕೊಕ್ಕರಾಯಿ, ಕೊಂಗ, ಕಕ್ಕರ; ಮ: ಕೊಕ್ಕು; ಕೊಕ್ಕನ್ನು; ತು: ಕೊರ್‌ಂಗ್, ಕೊರಂಗ್; ಕೊಡ: ಕೊಕ್ಕಲೆ;
- ***—ಕೊಕ್ಕರೆಗುಡ್ಡಿ/–ಕೊಕ್ಕರಿಗುಡ್ಡಿ*** : ಕೊಕ್ಕರೆ ಜಾತಿಗೆ ಸೇರಿದ ಒಂದು ಪಕ್ಷಿ; ನೀರಿನೊಳಗೆ ಇಳಿಯದೆ; ತಡಿಯಲ್ಲೇ ನಡೆದುಕೊಂಡು ಆಹಾರ ಹುಡಿಕಿಕೊಳ್ಳುತ್ತದೆ; A kind of species of egret;
- ***—ಕೊಕ್ಕರೆತಾಳು*** : ವ್ಯವಸಾಯದ ಉಪಕರಣವಾದ ಕುಂಟೆಯ ದಿಂಡಿಗೆ ಅಳವಡಿಸುವ ಕಬ್ಬಿಣದ ತಾಳು; ಕೊಕ್ಕರೆಯ ಕತ್ತಿನಂತಿರುತ್ತದೆ; ಈ ತಾಳುಗಳಲ್ಲಿ ಕೊಕ್ಕರೆತಾಳು, ರಾಯತಾಳು ಮೊದಲಾದ ಬಗೆಗಳಿವೆ; An agricultural tool; a part of plough;
- ***—ಕೊಕ್ಕರೆರೋಗ*** : ಕೋಳಿಗಳಿಗೆ ಬರುವ ಒಂದು ರೋಗ; ಬೇಸಿಗೆಯಲ್ಲಿ ಬರುವುದು ಸಾಮಾನ್ಯ; ರೋಗ ಬಂದಾಗ ಮುಖ ಕಪ್ಪಾಗುತ್ತದೆ, ನಿಂತಕಡೆ ನಿಂತು ತೂಕಡಿಸುತ್ತವೆ, ಕಾಳು ತಿನ್ನುವುದಿಲ್ಲ ನೀರು ಕುಡಿಯುವುದಿಲ್ಲ; ಬೆಳ್ಳಗೆ ಮಲವಿಸರ್ಜನೆ (ಭೇದಿ) ಮಾಡಿಕೊಳ್ಳುತ್ತವೆ; ಎರಡು ಮೂರು ದಿವಸಗಳಲ್ಲಿ ಸಾಯುವ ಸ್ಥಿತಿಗೆ ಬರುತ್ತವೆ; ಔಷಧವಾಗಿ ಮಜ್ಜಿಗೆ ಬೆರಸಿದ ಅನ್ನಕ್ಕೆ ಬೆಳ್ಳುಳ್ಳಿ ಇಲಕುಗಳನ್ನು ಬೆರಸಿ ತಿನ್ನಿಸುತ್ತಾರೆ; ಸೀದ ಬೆಳ್ಳುಳ್ಳಿಯಿಂದ ಗುದದ್ವಾರವನ್ನು ಸುಡುತ್ತಾರೆ; ಕೊಕ್ಕರೆಗಳು ಬೆಳ್ಳಗೆ ಮಲವಿಸರ್ಜನೆ ಮಾಡುವ ಸಾಮ್ಯತೆ ಮೇಲೆ ಈ ರೋಗಕ್ಕೆ ಈ ಹೆಸರು; ಬತ್ತದ ಬೆಳೆಗೆ ಬರುವ ಒಂದು ರೋಗ; ಬೆಳೆ ಬಾಡಿ ಸೊರಗಿ ಹಾಳಾಗುತ್ತದೆ (ಕೃ.ಪ.ಕೋ); A cock disease; a bird flue; **ವ್ಯರೂ:** ಕೊಕ್ಕರಿ ಜಾಡ್ಯ; ಕೊಕ್ಕಿರಿ ಜೇಡ್ವಿ; ಕೊಕ್ಕೆರೋಗ.

ಕೊಕ್ಕರೆ ಮೀಸೆ/ಕೊಕ್ಕರ ಮೀಸೆ Kokkaremīse/ Kokkara mīse:

- ಕೊಕ್ಕರೆ ಕತ್ತಿನಂತೆ ನಸು ಬಾಗಿದ ಮೀಸೆ; ಬಿಳಿ ಮೀಸೆ; ತಿರುವಿ ಬಿಟ್ಟ ದಪ್ಪ ಒರಟು ಮೀಸೆ (ಮಂಡ್ಯ.ಜಿ.); A sword like mustache;

- ವ್ಯರೂ: *ಕೊಕ್ಕಾರ ಮೀಸೆ.*

ಕೊಕ್ಕರ್ಣೆ ವೈದ್ಯರ್ Kokkarṇe vaidyar:

ಕೊಕ್ಕರ್ಣೆ ಊರಿನ ಮೇಳ. A village Orchastra.

ಕೊಕ್ಕಳಿಕೆ Kokkaḷike:

- ಉಗ್ಗು; ಬಿಕ್ಕಲು ಮಾತು; ಮಾತು ತಡೆಯುವುದು; ಬಿಕ್ಕಳಿಸಿ ಮಾತನಾಡುವುದು; ತೊದಲು ಮಾತು; Stutter; Stutterd voice; stuttered speech;
- ಕೊಕ್ಕಳ+-ಇಕೆ; ಕೊಕ್ಕಳ=ತಳಮಳ; ಸಂತಾಪ; ಸಂಕಟ;
- ಕೊಕ್ಕರ>ಕೊಕ್ಕಳ ಆಗಿರಬಹುದು; ಮೂರ್ಧನ್ಯ ವ್ಯಂಜನಗಳಾದ ರ ಮತ್ತು ಳ ವಿನಿಮಯಗೊಳ್ಳುವುದು ಸಹಜ; A tendency to stutter while talk with continued involuntary repetition of sounds especially initial consonents;
- 'ಕೊಕ್ಕರಿಸು'(ನೋಡಿ) ಮಾತಿದೆ; ಓಕರಿಸು, ಕ್ಯಾಕರಿಸು ಅರ್ಥಗಳಿವೆ; ಹೇವಭಾವವನ್ನು ಮಾತಿನಿಂದಲೋ ಭಾವಸೂಚಿಯಿಂದಲೋ, ಕ್ರಿಯೆಯಿಂದಲೋ ತಿಳಿಸುವುದು ಎಂದಾಗುತ್ತದೆ; ಹೆಚ್ಚೂ ಕಡಿಮೆ 'ಕೊಕ್ಕಳಿಕೆ'ಗೂ ಇದೇ ಅರ್ಥ; ಭಾವಪೂರ್ಣತೆಯಿಂದ ಅಥವಾ ದೈಹಿಕ ನ್ಯೂನತೆಯಿಂದ ಉಗ್ಗುವಿಕೆ. ತೊಳಳುವಿಕೆ, ಬಿಕ್ಕಳಿಸುವಿಕೆ ಎಂದೇ ಅರ್ಥ;
- ಭಾವೋತ್ಕರ್ಷದಿಂದ/ಭಾವದ ಒತ್ತಡದಿಂದ ಉಗ್ಗುತ್ತ ಸಂತಾಪದ/ಸಂಕಟದ/ಪರಿತಾಪದ ಮಾತುಗಳನ್ನು ತಡೆತಡೆದು ಆಡಿ ಬಿಕ್ಕುವುದು ಎಂದು ಗ್ರಹಿಸಬಹುದು.

ಕೊಕ್ಕಾ Kokkā:

- ಒಂದು ಬಗೆಯ ಮಗ್ಗ; ಅಗಲ ಬಾಯುಳ್ಳದ್ದು, ಪ್ಲಾಸ್ಟಿಕ್ ಅಥವಾ ತಗಡಿನಿಂದ ಮಾಡಿದ್ದು; A kind of hand loom waving machine;
- ಕಣ್ಣುಮುಚ್ಚಾಲೆ ಆಟ(ಮಂ.ಜಿ.). Seek and hide game.

ಕೊಕ್ಕಾಗಿ Kokkāgi:

ದಷ್ಟಪುಷ್ಟವಾಗಿ(ಶಿ.ಜಿ.); ಸೊಕ್ಕು ಅಳವಟ್ಟಂತಾಗಿ; Bouncing, sleekness; ಕೊಕ್ಕ್+ಆಗಿ; **ನೋಡಿ:** ಕೊಕ್ಕ್;

ಕೊಕ್ಕಾಟ/ಕೊಕ್ನಾಟ Kokkāṭa/Koknāṭa:

- ಒಂದು ಜನಪ್ರಿಯ ಆಟ; ಕೊಕ್ಕೋ ಆಟ(ನೋಡಿ); ಖೋ ಖೋ ಆಟ(ಕೊಡ.ಜಿ.); Kho-Kho- a popular dodging and chasing game;
- ಕೊಕ್/ಕೊಕ್ಕ್+-ಇನ+ಆಟ=ಕೊಕ್ಕಾಟ/ಕೊಕ್ನಾಟ.

ಕೊಕ್ಕಾನಕ್ಕಿ kokkānakki :

- ಗುಗ್ಗಳ ಮರದ ಕಾಯಿಗಳನ್ನು ಅವಲಂಬಿಸಿ ಬದುಕುವ ದೊಡ್ಡಗಾತ್ರದ ಹಕ್ಕಿ(ಚಿಕ್ಕ.ಜಿ); A huge bird;
- ಗುಗ್ಗುಲು, ಗುಗ್ಗಿಳ ರೂಪಗಳೂ ದೊರೆಯುತ್ತವೆ;
- ಕೊಕ್ಕಾನ್(ನ)+ಹಕ್ಕಿ>ಕೊಕ್ಕಾನ+ಹ್+ಅಕ್ಕಿ>ಕೊಕ್ಕಾನ+Ø+ಅಕ್ಕಿ>ಕೊಕ್ಕಾನಕ್ಕಿ.

ಕೊಕ್ಕಾಬತ್ತಿ/ಕೋಕಾಬತ್ತಿ Kokkābatti/Kōkābatti:

- ಹತ್ತಿಯಿಂದ ಮಾಡಿದ ಬತ್ತಿ; ಗೆಜ್ಜೆ ವಸ್ತ್ರ(ಮಂಡ್ಯಜಿ.); Cotton fuse, wick, wick of candle; wick of oil lamp;
- *ಪ್ರ: 'ಗಣಪತಿಗೆ ಇಪ್ಪತ್ತೊಂದು ಸರದ ಕೊಕ್ಕಾಬತ್ತಿ ಹಾಕಿ ಪೂಜಿಸುತ್ತಾರೆ';*
- ಉತ್ತರ ಕರ್ನಾಟಕದ ಕಡೆ ನಾಗರಪಂಚಮಿಯಂದು 'ಹುತ್ತ ಮುರಿಯುವುದು' ಎಂಬ ಆಚರಣೆ ಮಾಡುತ್ತಾರೆ; ಅಂದು ಮೊದಲು ಮನೆಯಲ್ಲೇ ನಾಗಪ್ಪನಿಗೆ ಹಾಲೆರೆದು ಅನಂತರ ಹುತ್ತ ಇರುವಲ್ಲಿಗೆ ಹೋಗಿ ಕೊಕ್ಕಾಬತ್ತಿ ಮಾಲೆ ಹಾಕಿ ಪೂಜೆ ಮಾಡಿ ಹಾಲು ಎರೆದು ಬರುತ್ತಾರೆ; ಇದೊಂದು ಧಾರ್ಮಿಕ ಆಚರಣೆ;
- ಕೋಕಾಬತ್ತಿ > ಕೊಕ್ಕಾಬತ್ತಿ ಆಗಿರುವ ಸಾಧ್ಯತೆ ಇದೆ; ಓ ದೀರ್ಘ ಹ್ರಸ್ವಕ್ಕೆ ಇಳಿದು, ಮುಂದಿನ ಅಕ್ಷರದ ದ್ವಿತ್ವಕ್ಕೆ ಕಾರಣವಾಗಿರುವುದನ್ನು ಗಮನಿಸಬಹುದು;
- ಪದಮಧ್ಯದ ದ್ವಿತ್ವಕ್ಕೆ ಬದಲಾಗಿ ಆದಿದೀರ್ಘ ಸಂಭವಿಸಿ ಕೊಕ್ಕಾಬತ್ತಿ > ಕೋಕಾಬತ್ತಿ ಆಗಿರಬಹುದಾದ ಸಾಧ್ಯತೆಯನ್ನೂ ತಳ್ಳಿಹಾಕುವಂತಿಲ್ಲ;
- ಒಂದು ಗ್ರಾಮೀಣ ಕ್ರೀಡೆ; ಹಲವು ಮಂದಿ ಹುಡುಗರು ಕೂಡಿ ಆಡುತ್ತಾರೆ. A native rural game played by girls or boys.

ಕೊಕ್ಕಿ Kokki:

- ಬಿದಿರನ್ನು ಕೊಯ್ಯುವ, ಬಿದಿರಿನ ಉದ್ದನೆಯ ಕೋಲಿಗೆ ಕುಡುಗೋಲು ಅಳವಡಿಸಿದ ಕೋಲು; ಕೊಕ್ಕೆಕೋಲು/ಕೊಕ್ಕಿಕೋಲು(ಮಂ.ಜಿ./ಕೃಪ.ಕೋ); ಲೌಟಿ; ಜವಳೆ(ಮಂಡ್ಯಜಿ.); A bamboo cutter or a bamboo sickle that is madeup of a long bamboo stick that has a hook at its one end;
- ಮರದ ಕೊಂಬೆ; ಸ್ವಲ್ಪ ನೇರವಾಗಿ ಉದ್ದಕ್ಕಿದ್ದು ತುದಿಯಲ್ಲಿ ಬಾಗಿರುವಂತಹುದು; ಕೊಕ್ಕಿನಂತೆ ಬಾಗಿರುವ ಕೊಂಬೆ;
- ಚೂಪಾದ, ಮೊಂಡಾದ/ಬಾಗಿದ ಯಾವುದೇ ವಸ್ತುವಿನ, ವಿಶೇಷವಾಗಿ ಕಬ್ಬಿಣ ಮೊದಲಾದ ಲೋಹದ, ಭಾಗ/ತುದಿ; ಚೂಪಾದ ತುದಿ(ಕಲ.ಜಿ.); Metal hook;
- ಚಂಚು; ಹಕ್ಕಿಪಕ್ಷಿಗಳ ಕೊಕ್ಕು(ಜ.ನೂ.ಕ.); Beak of a bird;
- ಶಿಶ್ನ; ಪುರುಷರ/ಗಂಡು ಪ್ರಾಣಿಯ ಜನನೇಂದ್ರಿಯ (ಚಿ.ಪ.ಕೋ.);
- ಮೊಂಡ; ವಕ್ರ; ಹಠಮಾರಿ(ಅದೇ);
- ಅಡ್ಡಿ; ಅಡಚಣೆ; ಅಡೆತಡೆ;
- < ಕೂಡು/ಕೊಕ್ಕೆ?
- **ನೋಡಿ:** ಕೊಕ್ಕೆ;
- ***—ಕೊಕ್ಕಿಕೊಕ್ಕೆ*** : ಗೇರುಬೀಜ, ತೆಂಗು ಹಾಗೂ ಅಡಕೆಯನ್ನು ಕೊಯ್ಯಲು ಬಳಸುವ ಉದ್ದನೆಯ ಕೋಲು (ಮಂ.ಜಿ.); Cashew cutter or sickle;
- ***—ಕೊಕ್ಕಿಕ್ವಾರಿ ಮಾತು*** : ಕೊಂಕುಮಾತು; ವಕ್ರಬುದ್ಧಿಯ ಮಾತು; ಅರ್ಥವಿಲ್ಲದ ಮಾತು (ಬ.ಜಿ.); 'ಕೊಕ್ಕಿಕ್ವಾರಿ' ಅನುರೂಪಸೃಷ್ಟಿ ಎಂದು ತೋರುತ್ತದೆ; ಕೊಕ್ಕೆಗಿಕ್ಕೆ; ತಂಟೆಪಂಟೆ; ಕೊಂಕುಗಿಂಕು.... ಇದ್ದಹಾಗೆ; Crooked speech, meaningless talk, teasing speech;
- ***—ಕೊಕ್ಕಿಮನುಷ್ಯ*** : ಸಬೂಬು ಹೇಳಿ ಕೆಲಸಕ್ಕೆ ತಡೆ ಒಡ್ಡುವವನು; ಆಗುವ ಕೆಲಸಕ್ಕೆ ತಂಟೆ ತಕರಾರು ತೆಗೆದು ಅಡಚಣೆ ಒಡ್ಡುವವನು; ಮುಖ್ಯವಾಗಿ ಕಚೇರಿ ಕೆಲಸಗಳಲ್ಲಿ ಕಡತಗಳನ್ನು ಮುಂದಕ್ಕೆ ಕಳುಹಿಸದೆ, ಇಲ್ಲದ ಪ್ರಶ್ನೆ/ಸಮಸ್ಯೆ/ತಕರಾರು ತೆಗೆದು ಇಟ್ಟುಕೊಳ್ಳುವವನು; ಕೊಕ್ಕೆ ಮನುಷ್ಯ; A person who causes obstacle to achieve goal;
- ***—ಕೊಕ್ಕಿಮಾತು*** : ಚುಚ್ಚುಮಾತು; ವ್ಯಂಗ್ಯೋಕ್ತಿ; ಕೊಂಕುಮಾತು; ಮಾತಿನ ತಿವಿತ; ಕೊಕ್ಕೆಮಾತು; Crookedness; perversity;
- ***—ಕೊಕ್ಕಿಸು*** : ಸೊಟ್ಟವಾಗುವಂತೆ ಮಾಡು; ಅಂಕುಡೊಂಕು ಮಾಡು; ಬಾಗಿಸು; ಕೊಂಕಿಸು; ಮಣಿಸು; ಕೊಕ್ಕಿ/ಕೊಕ್ಕೆ+-ಇಸು; To bend; to crook; to carve;
- ***—ಕೊಕ್ಕಿಹಾಕು*** : ಕೆಲಸ ಕಾರ್ಯಗಳು ಸುಲಭವಾಗಿ ಆಗದಂತೆ ವಿನಾಕಾರಣ ತಡೆ ಒಡ್ಡು; ಆಗುವ ಕೆಲಸಕ್ಕೆ ತಂಟೆ ತೆಗೆದು ಅಡ್ಡಿಪಡಿಸಿ; ಕೊಕ್ಕಿಸು; ಕೊಕ್ಕೆಹಾಕು. To do obstacle; an hitch.

ಕೊಕ್ಕು Kokku:

- ಚಂಚು; ಪಕ್ಷಿಗಳ ಮೂತಿ/ಮೂಗು; ಉದ್ದಕ್ಕೆ, ಗಟ್ಟಿ ರಚನೆಯಲ್ಲಿ ಮುಂದಕ್ಕೆ ಚಾಚಿದ ಬಾಯಿ(ಪಕ್ಷಿಗಳ); ಬಾಯಿಯ ಭಾಗ(ಮ.ಸಾಂ.ಪ.ಕೋ.); Beak or bill of a bird;
- ಕೋಳಿ, ಕೊಕ್ಕರೆ ಮೊದಲಾದ ಪಕ್ಷಿಗಳು ಆಹಾರವನ್ನು ಕುಕ್ಕಿ ತಿನ್ನಲು ಅನುಕೂಲವಾದ ಅವುಗಳ ಮೂತಿಯ ಒಂದು ಅಂಗ; A part of bird that helps to peck food or grain;
- ಹಾಳೆಯ ಮೇಲೆ, ಕಾಗದದ ಮೇಲೆ, ಮೂಗಿನ ಮೇಲೆ ಬಣ್ಣದಿಂದ ಬರೆಯುವ ಕೊಕ್ಕೆ (ಯ.ಪ.ಕೋ.).

ಕೊಕ್ಕೆ Kokke:

- ಬಾಗಿದ ಕೋಲು; ಗಿಣ್ಣು ಬಳಿ ಬಗ್ಗಿದ ಹಾಗೆ ಇರುವ ಕೋಲು(ರಾಮ.ಜಿ.); Carved stick;
- ಬಾಗಿದ ಅಥವಾ ಡೊಂಕಾದ ಮೊಳೆ, ಕೊಕ್ಕೆಕೊಳೆ; Carved bone;
- ಉಡಿದಾರ ಹೆಣೆಯಲು ಬೇಕಾದ ಉಪಕರಣ (ವೃ.ಪ.ಕೋ); A tool that used to weave or knit waist thread;
- ಕುರಿ, ಆಡು ಮೊದಲಾದವುಗಳಿಗೆ ಸೊಪ್ಪು ಸೆಣೆದು ಹಾಕಲು ಬಳಸುವ ಕೊಕ್ಕೆ;

- ತುದಿಯಲ್ಲಿ ಹಲ್ಲಿನಂತಹ ಕೋಲಿರುವ ಸಾಧನ, ಉದ್ದಕೋಲು; A long stick, having a teeth at its one's end;
- ಪಕ್ಷಿಗಳ ಚಂಚು/ಕೊಕ್ಕು(ಕೊಡ.ಜಿ.); Bird's bill;
- ಮದ್ದಲೆ, ಚಂಡೆಗಳಿಗೆ ಬಾರ ಸಿಕ್ಕಿಸುವುದಕ್ಕೆ ಬಳಸುವ ಕಬ್ಬಿಣದ ಕೊಕ್ಕೆ (ಯ.ಪ.ಕೋ.); An iron hooks;
- ಕೊಕ್ಕಿ ಮತ್ತು ಕೊಂಕಿ ರೂಪಗಳೂ ಸಂವಾದಿಯಾಗಿ ಸಿಕ್ಕುತ್ತವೆ; 'ಕೊಕ್ಕೆ'ಯಲ್ಲಿನ ಪದಾಂತ್ಯ ಸ್ವರ'ಇ' ಕಾರವಾಗಿ ಬಳಕೆಯಲ್ಲಿರುವ ಪದ ಕೊಕ್ಕಿ; ಆದರೆ 'ಕೊಂಕಿ' ರೂಪಕ್ಕೆ ಏನು ಹೇಳುವುದು?;
- ಬಿದಿರಿನ ಉದ್ದ ದೋಟಿ; ಇದರ ಒಂದು ತುದಿಗೆ ಹಣ್ಣು ಕಾಯಿಗಳನ್ನು ಕೀಳಲು ಅನುಕೂಲವಾಗುವಂತೆ ಕೂಳಿ(ಕೋಲಿನ ಸಣ್ಣ ತುಂಡು)ಯನ್ನು ಕಟ್ಟಿರುತ್ತಾರೆ; ರೈತರು ಹೊಲಗಳಲ್ಲಿ ಕಳೆಕೀಳಲು, ಸಸಿ ನೆಡಲು ಬಳಸುತ್ತಿದ್ದ ಬಾಗಿದಂತಿರುವ ಚಿಕ್ಕ ಕಬ್ಬಿಣದ ಸಾಧನ(ಹಾ.ಜಿ.); Bamboo crook, shepherds crook that uses to pluck fruits from trees; fruit plucker;
- ಹಣ್ಣು ಕೊಯ್ಯುವ ಕಬ್ಬಿಣದ ಮೂತಿ ಇರುವ ಸಾಧನ; ಬಿದಿರಿನ ಕೋಲಿಗೆ ಕಟ್ಟಿರುತ್ತಾರೆ;
- ***—ಕೊಕ್ಕಿಕ್ಕಳ :*** ಕೊಕ್ಕೆ ಇಕ್ಕಳ; ಕೊಕ್+ಇಕ್ಕಳ ಅಥವಾ ಕೊಕ್ಕಿ+ಇಕ್ಕಳ ಆಗಿರಬಹುದು; ಚಿನ್ನ ಕಾಯಿಸಿದ ಮೂಸೆಯನ್ನು ಹಿಡಿದುಕೊಳ್ಳಲು ಬಳಸುವ ಬಾಗಿದ ಇಕ್ಕಳ (ಬೆಂ.ಗ್ರಾ.ಜಿ.) ಕಾಯಿಸಿದ/ದೊಡ್ಡವಸ್ತುಗಳನ್ನು ಹಿಡಿದುಕೊಳ್ಳಲು ಬಳಸುವ ಇಕ್ಕಳ (ಪಾಂ.ವೃ.ಪ.ಕೋ.); ಲೋಹವನ್ನು ಕಡಿಯುವಾಗ ಚಾಣಹಿಡಿದುಕೊಳ್ಳಲು ಬಳಸುವ ಉಪಕರಣ; ಕೊಕ್ಕೆ ಆಕಾರದ ಇಕ್ಕಳ; ಕುಲುಮೆ ಕೆಲಸ ಮಾಡುವಾಗ ಈ ಬಗೆಯ ಇಕ್ಕಳ ಬಳಕೆ(ಮಂಡ್ಯಜಿ.); Plier that uses to hold hot metals;
- ***—ಕೊಕ್ಕೆಕತ್ತಿ :*** ಕಾಫಿ, ಚಿಗುರು ಕೊಯ್ಯುವ ಕತ್ತಿ; A sickle that is used to cut, pluck coffee sprouts;
- ***—ಕೊಕ್ಕೆಕುಡ್ಲು :*** ಸಾಮಾನ್ಯ ಕುಡುಗೋಲಿನಂತೆ ಇದ್ದು ಕೊಕ್ಕೆಯಂತೆ ಬಾಗಿರುವ ತುದಿ ಇರುವ ಸಾಧನ (ಹಾ.ಜಿ.); A crooked sickle;
- ***—ಕೊಕ್ಕೆಕುಡುಗ್ಲು :*** ಕುಡುಗೋಲಿಗೆ ಬಿದಿರಿನ ಉದ್ದನೆಯ ಕೋಲನ್ನು ಸೇರಿಸಿರುತ್ತಾರೆ; ಇದನ್ನು ಎತ್ತರದಲ್ಲಿರುವ ಸೊಪ್ಪು ಕೀಳಲು ಬಳಸುವರು; A sickle that has been connected to a long cudgel;
- ***—ಕೊಕ್ಕೆಕೋಲು :*** ಇದು ಬಿದಿರಿನದಾಗಿದ್ದು, ಹುತ್ತರಿ ಹಬ್ಬದಲ್ಲಿ ಹಿಡಿದು ಕುಣಿಯುತ್ತಾರೆ(ಕೊಡ.ಜಿ.); ಮೆರೆಕೋಲು/ಮೆರೆದೊಣ್ಣೆ(ಮಂಡ್ಯ.ಜಿ;ತು.ಜಿ.); ರಾಗಿ ತೆನೆಯನ್ನು ಒಣಹಾಕಿದಾಗ ಅದನ್ನು ಪದೇ ಪದೇ ಕೆದಕಿ ಮಗುಚಿ ಹಾಕಲು ಕೊಕ್ಕೆಯುಳ್ಳ ಕೋಲು/ದೊಣ್ಣೆಯನ್ನು ಬಳಸುತ್ತಾರೆ; A curved sickle that is used to dance in `Huttari' festival of Kodagu;
- ***—ಕೊಕ್ಕೆ ಕೋಲು ಆಟ :*** ಮಕ್ಕಳು ಕೋಲು ಬಳಸಿ ಆಡುವ ಆಟ(ತು.ಜಿ.); ಇದನ್ನು 'ಕಲ್ಲು ಕುಟಿ ಕುಟಿ ಆಟ' ಎಂದೂ ಕರೆಯುತ್ತಾರೆ(ಮಂಡ್ಯ.ಜಿ.); 'ಕುಟ್ಟಿದೊಣ್ಣೆ' ಆಟವೆಂದೂ ಕರೆಯುವುದುಂಟು; ಕೊಕ್ಕೆಯಿರುವ ಕೋಲಿನಿಂದ ಇನ್ನೊಬ್ಬರ ಕೋಲನ್ನು ಹಾರಿಸಿ ಆಡುವ ಗ್ರಾಮೀಣ ಆಟ(ಕ.ಜಾ.ಕೋ.); A children play by holding cudgels;
- ***—ಕೊಕ್ಕ(ಕ್ಕೆ)ಕ್ವಾರಿಮಾತು :*** ಅರ್ಥವಿಲ್ಲದ ಮಾತುಗಳು(ಬ.ಜಿ.); Meaningless talks;
- ***—ಕೊಕ್ಕೆ ಜವಳಿ :*** ತುದಿಯಲ್ಲಿ ಕುಡುಗೋಲು ಸೇರಿಸಿರುವ ಉದ್ದವಾದ ಬಿದಿರಿನ ಗಳು; ಎತ್ತರವಾದ ಮರದಿಂದ ಆಡುಗಳಿಗೆ ಸೊಪ್ಪು ಜಡಿದು ಹಾಕಲು, ತೆಂಗಿನ ಮರದಿಂದ ಕಾಯಿ ಕೀಳಲು ಬಳಕೆಯಾಗುವ ಸಾಧನ; A long bamboo cudgel that has a small bend sickle at its end;
- ***—ಕೊಕ್ಕೆಜೋಡು/ಕ್ವಕ್ಕ್‌ಜೋಡು :*** ಮೆಟ್ಟಿನ ಮುಂಭಾಗ ಸುರುಳಿಯಂತೆ ಇರುವ ಜೋಡು (ಚಾ.ಜಿ.); ಇದನ್ನು ಮೆಟ್ಟಿ ನಡೆಯುವಾಗ ಮುರ್ರಮುರ್ರ ಶಬ್ದ ಬರುವುದುಂಟು; A slipper or sandals that has rolling shape at its front;
- ***—ಕೊಕ್ಕೆತಾಳು :*** ರಾಗಿ ಬೆಳೆಯ ನಡುವೆ ಕಳೆ ತೆಗೆಯಲು ಹೊಡೆಯುವ ಕುಂಟೆ(ತು.ಜಿ.); An agricultural tool; it is used to cultivate between the lines of Raagi or Millet crops;

- **—ಕೊಕ್ಕೆ ದೊಣ್ಣೆ** : ಛತ್ರಿಯ ಹಿಡಿಕೆಯಂತೆ ಬಾಗಿರುವ ದೊಣ್ಣೆ; Curved cudgel like handle of an Umbrella;
- **—ಕೊಕ್ಕೆ(ಕ್ಕೈ)ಪುಳ್ಳೆ** : ಬಾಣ ಮಾಡಲು ಬಳಸುವ ಕಡ್ಡಿ (ಕೃ.ಗೊ.ಕ.ಕಾ); Arrow stick;
- **—ಕೊಕ್ಕೆ ಬೀಸ್ಗತ್ತಿ** : ತುದಿ ಬಾಗಿರುವ ಚೂರಿ(ದ.ಕ; ಕೃ.ಪ.ಕೋ.); Curved knife;
- **—ಕೊಕ್ಕೆಮರ** : ಗಾಣದ ಕೊಂಡಿ ಮರಕ್ಕೆ ಹೊಂದಿಕೊಂಡಿರುವ ಕೊಕ್ಕೆಯಾಕಾರದ ಸಾಧನ (ಹಾ.ಜಿ.); A curved bent tool that is used to connect oil-press or mill;
- **—ಕೊಕ್ಕೆಮಾತು** : ಕೊಂಕುಮಾತು; ಚುಚ್ಚುಮಾತು; ವಕ್ರನುಡಿ; ವ್ಯಂಗ್ಯದ ರೀತಿಯಲ್ಲಿ ಬಳಕೆಯಾಗುವ ಮಾತು; "ಅವನು ಅಂದ ಮಾತು ಕೊಂಕ್ ಮಾತು ಅಲ್ಲವೆ"?; ನೇರವಲ್ಲದ ಮಾತು; Harsh words, piercing words, stinging words;
- **—ಕೊಕ್ಕೆ ಮನುಷ್ಯ** : ಕೊಂಕು ಮಾತು ಆಡುವವ; ಆಗುವುದನ್ನು ಅಡ್ಡಿಪಡಿಸುವವ; ತಕರಾರು ತೆಗೆಯುವ; ಅಡ್ಡಮಾತು ಆಡುವವ; ಸಿನಿಕ; ವ್ಯಂಗ್ಯ ಅಥವಾ ರೂಪಕವಾಗಿ ಹೇಳಿದ್ದು; ಅರ್ಥಾಂತರೋಕ್ತಿ; A person who speaks harshily or words which stab others;
- **—ಕೊಕ್ಕೆಹಾಕು** : ಕೆಲಸಕ್ಕೆ ಅಡ್ಡಿಮಾಡು; ತೊಂದರೆಕೊಡು; Do objection;
- **—ಕೊಕ್ಕೆಮೂಕ್** : ಬಾಗಿದ ಮೂಗು (ಪಟ್ಟೋಲೆಪಳಮೆ)/(ಕೊಡ.ಜಿ.); Bent nose;

∴ ಗ್ರಾಮೀಣ ಸಂಸ್ಕೃತಿಯಲ್ಲಿ ಬಹಳವಾಗಿ ಬಳಕೆಯಲ್ಲಿರುವ 'ಕೊಕ್ಕೆ'; ಮಾನವ ತನ್ನ ಅನುಕೂಲಕ್ಕಾಗಿ ಮಾಡಿಕೊಂಡಿರುವ ಸಾಧನ; ಅದನ್ನೇ ಮುನುಷ್ಯನ ಟೀಕೆಗೂ ಬಳಸಲಾಗಿರುವುದು ವಿಶೇಷ

- ಒಂದು ಪದ ಮನುಷ್ಯ ನಾಗರಿಕತೆಯಲ್ಲಿ ಪರವಾಗಿಯೂ, ಪ್ರತಿರೋಧವಾಗಿಯೂ ಬಳಕೆಯಾಗಿರುವುದುಂಟು; ಇದು ಭಾಷಿಕ ಸಾಧ್ಯತೆಯನ್ನೂ, ಸಂಸ್ಕೃತಿಯ ನಡವಳಿಕೆಯನ್ನೂ ತಿಳಿಸುವಂಥದಾಗಿದೆ.

ಕೊಕ್ಕೆ ಇಲಿ Kokke ili:

- ಸೊಂಡಿಲಿನಂತೆ ಮೂತಿ ಉದ್ದವಿರುವ ಇಲಿ; ಮೂಗಿಲಿ; ಇದು ಇಲಿಯ ಜಾತಿಯಲ್ಲಿ ಒಂದು ವರ್ಗ; Long nosed rat;
- ಮೂಗಿಲಿ ಕಚ್ಚಿದರೆ ಔಷಧಿ ಇಲ್ಲ ಎನ್ನುತ್ತಾರೆ.

ಕೊಕ್ಕೆಕಾಯಿಮರ Kokkekāyimara:

- ಒಂದು ಜಾತಿಯ ಮರ; ಚಕ್ಕೆಯನ್ನು ಅಕ್ಕಿ ತೊಳೆದ ನೀರಿನಲ್ಲಿ ತೇದು ಹಚ್ಚಿದರೆ ತೊಡೆಬಾಳೆ ಕರಗೀತು; A kind of tree; it is used to care skin disease;
- ಚರ್ಮರೋಗದಲ್ಲಿ ಇದರ ಲೋಪ ಬಳಕೆಯಾಗುತ್ತದೆ.

ಕೊಕ್ಕೆ ಚಿಕ್ಕ Kokke cikka:

- ಕೀಚಕವಧೆಯಲ್ಲಿ ಕೀಚಕನ ಜೊತೆ ಬರುವ ಹಾಸ್ಯಪಾತ್ರ (ಯಕ್ಷಗಾನ ಪದಕೋಶ, ಬಡಗತಿಟ್ಟು; ಉ.ಕ.ಜಿ.). A joker character appears with Keechaka in the drama `Keechaka Vadha'.

ಕೊಕ್ಕೆ ತಾತಿ Kokke tāti:

- ಕೊಡಗಿನವರ ವಿಶಿಷ್ಟ ಆಭರಣ; ಇದಕ್ಕೆ 'ಚಂದ್ರಹಾರ' ಎಂದೂ ಕರೆವರು; A special jewel used by coorgies; it is known as `Chandrahara';
- ಎದೆಮಟ್ಟದಷ್ಟು ಉದ್ದ, ಇಮ್ಮಡಿ ಶಂಕುವಿನಾಕಾರದ ಚಿನ್ನದ ಗುಂಡುಗಳನ್ನು ಚಿನ್ನದ ಸರಿಗೆಯಲ್ಲಿ ಪೋಣಿಸಲಾಗಿರುವುದು; ಮಧ್ಯದಲ್ಲಿ ಚೌತಿಯ ಚಂದ್ರಾಕಾರದ ಪದಕವಿರುವುದು; ಇದರ ಮೇಲೆ ಚಿತ್ತಾರದ ಕೆತ್ತನೆಯಿದ್ದು ಕೆಂಪು ಬಿಳಿ ಹರಳುಗಳನ್ನು ತೂರಿಸಲಾಗಿರುವುದು;
- ಪದಕದ ಕೆಳ ಅಂಚಿನುದ್ದಕ್ಕೂ ಕಿರು ಮುತ್ತುಗಳ ಗೊಂಚಲುಗಳಿರುತ್ತವೆ;
- ಪದಕದ ಮೇಲಂಚಿನ ಮಧ್ಯದಲ್ಲಿ ಚಿಕ್ಕ ಉಂಗುರಕ್ಕೆ ಗುಂಡುಗಳ ಸರವನ್ನು ಜೋಡಿಸಲಾಗಿರುವುದು; ಉಂಗುರಕ್ಕೆ ಬದಲಾಗಿ ನಾಗನ ಹೆಡೆಯೂ ಇರುವುದು;
- ಈ ಆಭರಣವನ್ನು ಮದುವೆಯಲ್ಲಿ ಮದುಮಗಳು ಧರಿಸಿರಲೇಬೇಕೆಂದು ಹೇಳುತ್ತಾರೆ.

ಕೊಕ್ಕೊ ಆಟ Kokko āṭa:

- ಇದೊಂದು ಹೆಣ್ಣುಮಕ್ಕಳು ಆಡುವ ಜನಪದ ಆಟ; ಈ ಆಟದಲ್ಲಿ ಹನ್ನೆರಡು ಜನ ಆಟಗಾರರಿದ್ದು, ಒಂದೊಂದು ಗುಂಪಿನಲ್ಲಿ ಆರಾರು ಜನ ಆಟಗಾರರಿರುತ್ತಾರೆ; Kho-Kho; it is a folk game played by women; in this game 12 players playing; 6 members dodge remaining six players chase; it is a chasing and dodging game;
- ಒಂದು ಗುಂಪಿನವರು ಕೂರುತ್ತಾರೆ; ಇನ್ನೊಂದು ಗುಂಪಿನವರು ಓಡುತ್ತಾರೆ;
- ಒಂದು ಮಾರು ಅಂತರ ಬಿಟ್ಟು ಒಂದೇ ಸಾಲಿನಲ್ಲಿ ಆಕಡೆ ಈಕಡೆ ಮುಖಮಾಡಿ ಐದು ಜನ ಕೂರುತ್ತಾರೆ; ಆರನೆಯವ ಹಿಡಿಯುವವ;
- ಕುಳಿತಿರುವವರಿಂದ ಸ್ವಲ್ಪ ದೂರದಲ್ಲಿ ಆಕಡೆ ಒಂದು ಕಲ್ಲು, ಈಕಡೆ ಒಂದು ಕಲ್ಲು ಇಡುವರು;
- ಓಡುವವರು ಒಂದು ಕಲ್ಲಿನ ಮುಂದೆ, ಹಿಡಿಯುವವರು ಒಂದು ಕಲ್ಲಿನ ಹಿಂದೆ ನಿಂತುಕೊಳ್ಳುವರು; ಓಡುವವರು 'ಜೂಟ್' ಎಂದು ಹೇಳಿ ಬಲಗಡೆಯಿಂದ ಓಡುತ್ತಾರೆ;
- ಹಿಡಿಯುವವರು ಎಡಗಡೆಯಿಂದ ಓಡಿಬರುವರು;
- ಓಡುವವರು ಮೂರು ಸುತ್ತು ಓಡಾಡಿದ ನಂತರ ಕುಳಿತಿರುವವರ ನಡುವೆ ಓಡಿಹೋಗಬಹುದು, ಓಡಾಡುವವರು ತನಗೆ ಸಾಕಾದಾಗ ಕುಳಿತಿರುವವರ ಹಿಂದೆ ಹೋಗಿ ಕೊಕ್, ಕೊಕ್ ಎಂದು ಕೊಕ್ ಕೊಟ್ಟು ಆ ಜಾಗದಲ್ಲಿ ತಾನು ಕುಳಿತುಕೊಳ್ಳಬಹುದು;
- ಓಡಾಡುತ್ತಿರುವವರನ್ನು ಮುಟ್ಟಿದರೆ ಅವರು ಆಟದಿಂದ 'ಔಟ್' ಆದಂತೆ; ಎಲ್ಲರನ್ನೂ 'ಔಟ್' ಮಾಡಿದಾಗ ಆಟ ಮುಗಿಯುತ್ತದೆ.

ಕೊಕ್ಕೊಬಾಳು Kokkobāḷu:

- 'ಕೋಳಿ ಅಂಕ'ದಲ್ಲಿ ಕೋಳಿಯ ಕಾಲಿಗೆ ಕಟ್ಟುವ ಚೂರಿ(ಮಂ.ಜಿ.)(ಕುಕ್ಕುಟ ಪಂಚಾಂಗ); A small knife that has been tied to the legs of fighting cock;
- 'ಬಾಳ್'(ಳು) ಎಂದರೆ ಕತ್ತಿ, ಖಡ್ಗ ಎಂದೆಲ್ಲ ಅರ್ಥವಿದೆ; 'ಚೂರಿ'ಯೂ ಆಗಬಹುದು; 'ಬಾಳ್' ರೂಪ ಹಳಗನ್ನಡದ 'ವಾಳ್' ರೂಪದಿಂದ ಬಂದುದು; ವ>ಬ ಆಗುವುದರ ಮೂಲಕ ಬಾಳ್>ವಾಳ್ ಹೊಸಗನ್ನಡದಲ್ಲಿ ಆಗುವುದಿದೆ; ಹೊಸಗನ್ನಡದಲ್ಲಿ 'ಉ' ಸೇರುವುದರ ಮೂಲಕ ವ್ಯಂಜನಾಂತ 'ಳ್' ಸ್ವರಾಂತ ಪಡೆದು 'ಳು' ಆಗುವುದು(ವಾಳ್/ಬಾಳ್>ಬಾಳು);
- 'ಕೋಳಿ ಅಂಕ' ಎಂದರೆ ಕೋಳಿ ಕಾಳಗ (ಸ್ಪರ್ಧೆ) ನಡೆಯುವ ಸ್ಥಳ, ಬಯಲು;
- 'ಕತ್ತಿ' ಅಥವಾ 'ಚೂರಿ'ಯನ್ನು ಕೋಳಿ ಕಾಲಿಗೆ ಕಟ್ಟುವುದು ತಮ್ಮ ಕೋಳಿ ಗೆಲ್ಲಲಿ ಎಂದು; ಎರಡು ಕೋಳಿಗಳ ನಡುವಣ ಸ್ಪರ್ಧೆಯಲ್ಲಿ ಕತ್ತಿ/ಚೂರಿ ತನ್ನ ಕೆಲಸವನ್ನು ಮಾಡಿಯೇ ತೀರುವುದು;
- ಇದೆಲ್ಲವೂ ಪ್ರಾದೇಶಿಕ ಜನಪದ ಸಂಸ್ಕೃತಿಯ ಸಾಂಪ್ರದಾಯಿಕ ನಡೆ; ಜನಪದರು ಮನರಂಜನೆಗೆ ಮಾಡಿಕೊಂಡಿರುವ ಒಂದು ವ್ಯವಸ್ಥೆ; ತಲೆತಲಾಂತರದಿಂದ ಇದು ನಡೆದು ಬಂದಿದೆ.

ಕೊಗಳು Kogaḷu:

- 'ಕೊಗಳು' ಎಂದರೆ ಮಾಡಿನ ಮೇಲ್ತುದಿ; ಉಪ್ಪರಿಗೆಯ ತುತ್ತತುದಿ ಭಾಗ; ಛಾವಣಿಯ ಮೇಲ್ಭಾಗ(ತು.ನಿ.); The top of the ceiling or roof;
- 'ಕೊಗಳು' ಪದಕ್ಕೆ 'ಮರ' ಸೇರಿದರೆ' ಕೊಗಳ್‌ಮರ' ಆಗಿ, ಕಡೆಗೆ ಉಚ್ಚಾರಣೆಯಲ್ಲಿ 'ಕೊಗ್ಳ್‌ಮರ' ರೂಪ ಪಡೆಯುವುದು;
- 'ಕೊಗ್ಳ್‌ಮರ'ದ ಅರ್ಥ; ಮನೆಯ ಮಾಡನ್ನು ಆಧಾರವಾಗಿ ಹಿಡಿಯುವ ಅಡ್ಡ ತೊಲೆ(ಮಂ.ಜಿ.);
- 'ಕೊಗಳು' ಪದಕ್ಕೆ ತುಳುವಿನಲ್ಲಿ 'ಕೊಬಳ್'/'ಕುಬಳ್' ರೂಪಗಳಿವೆ; 'ಕುಬಳ್' ಪದವೇ ಮೂಲ ರೂಪ, ಅದರಿಂದ ನಿಷ್ಪನ್ನಗೊಂಡುದು 'ಕೊಬಳ್'; 'ಸ್ವರವ್ಯತ್ಯಯ' ನಿಯಮಕ್ಕೆ(ಉ>ಒ) ಇದು ಒಳ್ಳೆಯ ಸಾಕ್ಷಿ;
- ತುಳುವಿನ ಆಧಾರದ ಮೇಲೆ ಕನ್ನಡದ 'ಕೊಗಳು' ರೂಪಕ್ಕೆ 'ಕುಗಳು' ಪದ ಮೂಲ ರೂಪವಾಗಿರಬಹುದು; ಉಚ್ಚಾರಣೆಯಲ್ಲಿ ಬಿದ್ದುಹೋದುದನ್ನು ಹೀಗೆ ಪುನರ್ರಚಿಸಬಹುದು.

ಕೊಗ್ಗಿಡಿ Koggiḍi:

- ಮುಳ್ಳಿನ ಗಿಡ; ಒಂದು ಸಸ್ಯ ವಿಶೇಷ; ಪುಳ್ಳಿಗೆ ಒದಗುವ ಪೊದೆಯಂತೆ ಬೆಳೆಯುವ ಒಂದು ಔಷಧಿ

ಸಸ್ಯ; ಕುರುಚಲುಗಿಡ; Thorny tree, a special plant;

- ಸಂವಾದಿ ಪದಗಳಾಗಿ ಕೊಗ್ಗಿ, ಕೊಗ್ಗೆ, ಕೊಗ್ಗಿಲ, ಕೊಗ್ಗಿಲಿ, ಕೊಗ್ಗಿಡಿ, ಕೊಗ್ಗೆಗಿಡ ಎಂಬಿತ್ಯಾದಿ ರೂಪಗಳಿವೆ;
- 'ಕೊಗ್ಗಿಗಿಡ' ಅಥವಾ ಕೊಗ್ಗೆಗಿಡ' ರೂಪಗಳೇ 'ಕೊಗ್ಗಿಡಿ'ಯಾಗಿರಬಹುದು; 'ಕೊಗ್ಗೆಸೊಪ್ಪು' ಎಂದೂ ಇದನ್ನು ಕರೆದಿರುವುದೂ ಇದೆ; ಕೊಗ್+ಗಿಡ>ಕೊಗ್ಗಿಡ>ಕೊಗ್ಗಿಡಿ ಆಗಿರಬಹುದು; ಪದಾಂತ್ಯದ 'ಡಿ'ಗೆ 'ಕೊಗ್ಗಿಲಿ' ಪದದ ಅಂತ್ಯಾಕ್ಷರ 'ಲಿ' ಕಾರಣವಾಗಿರಬಹುದು;
- *ಪ್ರ: 'ಏದ್ದೇಳಲಾರದ ಬಡ್ಡಿ ಕೊಗ್ಗಿಡಿ ಗಿಡಾ ತಂದಾಳೋ'(ಕಿ.ಕೋ.ಗಾ.)*
- ಈ ಗಿಡವನ್ನು ಕತ್ತರಿಸಿಕೊಂಡು ಬಂದು ಕಸ ಗುಡಿಸುವ ಬರಲು ಮಾಡಿಕೊಂಡಿರುವುದಿದೆ; ಗಿಡವು ಗಟ್ಟಿಯಾಗಿರುವುದುಂಟು;
- ಈ ಬರಲು ಕಡ್ಡಿಗೆ 'ಅಂಗರಿಕೆ ಕಡ್ಡಿ' ಎಂತಲೂ; ಕರೆಯುವುದುಂಟು;
- ಪರಿಸರದಲ್ಲಿ ದೊರೆಯುವ ವಸ್ತುಗಳನ್ನೆ ಜನಪದರು ವಿವಿಧ ವಸ್ತುಗಳಾಗಿ ಬಳಕೆ ಮಾಡುವುದರ ಮೂಲಕ ಸಂಸ್ಕೃತಿಯನ್ನೂ, ಅದಕ್ಕೆ ವಿಶೇಷ ಹೆಸರನ್ನು ತಂದುಕೊಡಲು ಕ್ರಮೇಣ ಪ್ರಯತ್ನಿಸಿದಂತೆ ತೋರುವುದು.

ಕೊಗ್ಡೆಹುಳ Kogḍehuḷa:

ಬೆಳೆಯ ಸುಳಿ ತಿಂದು ಹಾಳು ಮಾಡುವ ಒಂದು ಬಗೆಯ ಹುಳ(ಕೃ.ಪ.ಕೋ.). A kind of worm; it destroys crops by eating them.

ಕೊಚ್ಚಡಿಕೆ Koccaḍike:

- ಸುಲಿದ ಅಡಿಕೆಯನ್ನು ಕತ್ತರಿಸಿ ಬಣ್ಣಕಟ್ಟಿ ತಯಾರಿಸಿದ ಅಡಿಕೆ; Arecanut; crest removed, boiled, coloured arecanut;
- ಅಡಿಕೆಕಾಯಿಯ ಸಿಪ್ಪೆಸುಲಿದು, ಸಣ್ಣ ಹೋಳುಗಳನ್ನಾಗಿ ಕತ್ತರಿಸಿದ ಅಡಿಕೆ;
- ಇದಕ್ಕೆ ಕೋಟಡಿಕೆ, ಬಟ್ಲಡಿಕೆ, ಚೂರಡಿಕೆ ಎಂಬ ರೂಪಗಳೂ ಇವೆ.
- ಅಡಿಕೆ ತಯಾರಿಕೆಯ ತಾಂತ್ರಿಕತೆ ಮತ್ತು ಸಾಂಸ್ಕೃತಿಕತೆಗಳೆರಡೂ ಇಲ್ಲಿವೆ;
- ಆಧುನಿಕ ಅಗತ್ಯಕ್ಕೆ ಸಂಬಂಧಿಸಿದಂತೆ ಮಾರುಕಟ್ಟೆಯ ಸಂಸ್ಕೃತಿಯನ್ನು ನೋಡಬೇಕಾದದ್ದು ಒಂದು ಅನಿವಾರ್ಯ; ಅದೇ ಇಲ್ಲಿನ ಅಡಿಕೆಯನ್ನು ಹೊಸ ಅಗತ್ಯಕ್ಕೆ ಹೊಂದಿಕೊಳ್ಳುವಂತೆ ಮಾಡಿದೆ.

ಕೊಚ್ಚಲಿ Koccali:

- ಒಂದು ಬಗೆಯ ಮೀನು(ಶಿ.ಜಿ.); A kid of fish;
- ಕೊಚ್ಲು ಮೀನು, ಕುರುಚಲು ಮೀನು, ಕುರ್ಚ್ಲು ಮೀನು ಎಂಬ ರೂಪಗಳಿವೆ;
- ಮೀನಿನ ಮರಿಗಳು. Fish and its younglings.

ಕೊಚ್ಚಲು Koccalu:

- ಮುಳ್ಳು ಸೌತೆ ಹಲಸಿನ ಹಣ್ಣಿನ ಸೊಳೆ ಇತ್ಯಾದಿಗಳನ್ನು ವ್ಯಂಜನ ತಯಾರಿಸುವುದಕ್ಕಾಗಿ ಸಣ್ಣಗೆ ಹೆಚ್ಚಿದ ತುಂಡುಗಳು. Chips of cucumber or jack fruit.

ಕೊಚ್ಚು[೧] Koccu[1]

- ಹಳಗನ್ನಡದ 'ಕೊರ್ಚು' ಪದದಿಂದ ಬಂದಿರಬಹುದು; ಕೊರ್ಚು>ಕೊಚ್ಚು; 'ಕುಚ್ಚು' ರೂಪವೂ ಇದೆ; ಅದು ಕಾರಣ 'ಕುಚ್ಚು' ಮೂಲ ರೂಪ ಇರಬಹುದು; ಕುಚ್ಚು>ಕೊಚ್ಚು–ಉ>ಒ ಸ್ವರ ವ್ಯತ್ಯಯ ನಿಯಮಪ್ರಕಾರ; To cut and piece something;
- ತುಂಡುಮಾಡು, ಕತ್ತರಿಸು; ಕತ್ತರಿಸಿ ತುಂಡುಮಾಡು; ತುಂಡು ತುಂಡಾಗಿಸು;
- *ಪ್ರ: 'ಹಲಸಿನ ಕಾಯ್ನ ಕೊಚ್ಚಿ(ಕೊಚ್ಚು) ತುಂಡುಮಾಡು; 'ಮರವನ್ನು ಕತ್ತರಿಸಿ ತುಂಡುಮಾಡು';*
- 'ಕೊಚ' ಎನ್ನುವ ರೂಪವೂ ಇದ್ದು, ಹಳಗನ್ನಡದಿಂದ ಹೊಸಗನ್ನಡಕ್ಕೆ ಬರುವಾಗ ಎಲ್ಲ ಪದಗಳೂ ಆಗುವ ಹಾಗೆ ಇಲ್ಲಿಯೂ 'ಉ' ಸ್ವರ ಸೇರಿ 'ಕೊಚ್ಚು' ಆಗಿದೆ;
- ಕೊಚ್ ಅಥವಾ ಕೊಚ್ಚು ಪದಕ್ಕೆ 'ಇಸು' ಪ್ರತ್ಯಯ ಸೇರಿ 'ಕೊಚ್ಚಿಸು' ರೂಪ ತಳೆದಿದೆ; ಕತ್ತರಿಸಲು ಕಾರಣವಾಗು, ತುಂಡಾಗುವಂತೆ ಕತ್ತರಿಸಲು ಹೇಳು ಎಂಬ ಅರ್ಥ ಇದಕ್ಕಿವೆ;
- 'ಕೊಚ್ಚಿಕೆ' ಎಂಬ ರೂಪವೊಂದಿದ್ದು, ಕೊಚ್/ ಕೊಚ್ಚು+ಇಕೆ> ಕೊಚ್ಚಿಕೆ ಆಗುವುದು; ತುಂಡು ತುಂಡು ಮಾಡುವಂಥದು, ತುಂಡುಮಾಡಲು ಸಿದ್ಧವಾಗುವಂಥದು ಎಂಬ ಅರ್ಥಗಳಿವೆ.

- ಕೊಚ್‌ಕೊಟ್ಟು/ಕೊಚ್ಚುಕೊಟ್ಟು ಎಂಬ ಮಾತು ಇದೆ; ಕಡಿದ/ಕತ್ತರಿಸಿದ ಅಗಲವಾದ ಕಟ್ಟಿಗೆಯ ತುಂಡು ಎಂಬ ಅರ್ಥ ಇದರದು;
- ಕೊಚ್‌ದ್ರೆ/ಕೊಚ್ಚುದ್ರೆ; ಕೊಂದರೆ, ಸಾಯಿಸಿದರೆ;
- 'ಕೊಚ್ಚಕ' ಎಂಬ ರೂಪವೂ ಇದೆ; ಕತ್ತರಿಸಿ ತುಂಡುಮಾಡುವವ?; ಆದರೆ 'ಹೆಡ್ಡ'(ಕೊಡ.ಜಿ.) ಎಂಬ ಅರ್ಥವಿರುವುದು ವಿಶೇಷ.
- 'ಕೊಚ್ಚಾದ' ಭೂತಕಾಲದ ಕ್ರಿಯೆಯನ್ನು ಸೂಚಿಸುವ ಪದ; ತುಂಡರಿಸಿದು, 'ಕೊಚ್ಚು' ಧಾತುವಿನಿಂದ ಬಂದಿದೆ; ಕೊಚ್ಚಿಹಾಕಿದ್ದು, ತುಂಡುಮಾಡಿದ್ದು–ಅರ್ಥ.

ಕೊಚ್ಚು೨ Koccu[2] :

- ಕಾಳುಕಡ್ಡಿಗಳನ್ನು, ದವಸಧಾನ್ಯವನ್ನು ಹಸನು ಮಾಡುವುದು; ಮುಖ್ಯವಾಗಿ 'ಮೊರ'ದಲ್ಲಿ ಧಾನ್ಯಗಳನ್ನು ಇಟ್ಟು ಕೇರುವುದು, ಕೊಚ್ಚುವುದು (ಮೊರದಿಂದ ಆಚೆ ಹೋಗುವಂತೆ ಮಾಡುವುದು); ಬೇರ್ಪಡಿಸುವುದು; To clean grains with dust pan winnow;
- ಧಾನ್ಯದ ಕೂಲಿ(ಮಂ.ಜಿ.); ಕೊಚ್ಚಕ್ಕಿ; ಕೂಲಿ ಕೊಡುವ ಅಕ್ಕಿ; ಕೂಲಿ ಕೊಡುವುದು; ದುಡಿಮೆಗೆ ನೀಡುವ ಕೂಲಿ ರೂಪದ ಅಕ್ಕಿ; Labour of grains;
- —***ಕೊಚ್ಚಾಡು*** : ಕೊಚ್ಚುವಿಕೆ; ಧಾನ್ಯವನ್ನು ಶುದ್ಧಿಮಾಡುವ ಬಗೆ; To clean grains;
- —***ಕೊಚ್ಚಕ್ಕಿ*** : ಕುಚ್ಚಗಿ ಅಕ್ಕಿ(ಉ.ಕ.ಜಿ.); ಕೊಚ್ಚಿದ ಅಕ್ಕಿ ಸಣ್ಣಕ್ಕಿ(ಒಂದು ವಿಧವಾದ ಅಕ್ಕಿ/ಸುಚ್ಚಕ್ಕಿ ಎಂದೂ); ಮೊರದಿಂದ ಕೊಚ್ಚಿದ ಅಕ್ಕಿ; cleaned rice;
- —***ಕೊಚ್ಚಕ್ಕಿಬಾನ*** : ಸಣ್ಣಕ್ಕಿ ಅನ್ನ; ಬಾನ=ಬೋನ=ಅನ್ನ; Boiled rice; a kind of polished small sized rice;
- —***ಕೊಚ್ಚಕ್ಕಿವರ್ನ*** : ಕುಚ್ಚಿಗೆ ಅಕ್ಕಿಯ ಬಣ್ಣ (ಉ.ಕ.ಜಿ.); 'ಕುಚ್ಚಕ್ಕಿ' ಎಂಬುದು ಬತ್ತ ಬೇಯಿಸಿ, ಒಣಗಿಸಿ ಮಾಡಿದಅಕ್ಕಿ, ಇದರ ಬಣ್ಣ ಹೊಂಬಣ್ಣದಲ್ಲಿರುತ್ತದೆ(ಕಂದುಮಿಶ್ರಿತವಾಗಿ); 'ಕೊಚ್ಚಕ್ಕಿ'ಗೆ 'ಕುಚ್ಚಕ್ಕಿ' ಮೂಲರೂಪ–ಉ>ಒ ಸ್ವರವ್ಯತ್ಯಯದಿಂದ ಆಗಿರುವಂಥದು; ಇದಕ್ಕೆ ಕುಚ್ಚುಲಕ್ಕಿ, ಕುಸುಲಕ್ಕಿ, ಕುಸುಬಲಕ್ಕಿ, ಕುಚ್ಚುಗಕ್ಕಿ ಎಂಬ ಪರ್ಯಾಯ ರೂಪಗಳಿವೆ; 'ಚ' ಮತ್ತು 'ಸ'ಕಾರಗಳು ಪರಸ್ಪರ ವಿನಿಮಯಗೊಳ್ಳುವುದು ಸಾಮಾನ್ಯ; 'ಕುಚ್ಚಕ್ಕಿ'ಯ ಬಣ್ಣದಲ್ಲಿರುವುದನ್ನು ಹೋಲಿಕೆಕೊಡುವಾಗ 'ಕುಚ್ಚಕ್ಕಿವರ್ನ' ಎಂಬುದು ಬಳಕೆಯ ಮಾತಾಗಿ ಬರುತ್ತದೆ; ವರ್ಣ>ವರ್ನ ಆಗಿದೆ. Boiled rice used by people of South canara.

ಕೊಚ್ಚು೩ Koccu[3] :

- 'ದುರ್ವಾಸನೆ, ಕೆಟ್ಟವಾಸನೆ; ಮೂತ್ರದ ವಾಸನೆ; ಕೊಳಚೆ ನೀರಿನ ಮೋರಿ ವಾಸನೆ; ಗೊಜ್ಜೆ; ಕೆಸರು; ಬಚ್ಚಲುನೀರು; ರಾಡಿ; ಕೊಳಚೆ, 'ನಾಯಿ ಕೊಚ್ಚೇಲಿ ಹೊರಳಾಡ್ತುಟು'(ಕೊಡ.ಜಿ.); Bad smell, nasty smell, urinal smell, smell of gutters or bath water or stagnet water; mud, mire, slush;
- 'ಕೊಚ್ಚೆ' ಪದ ಜನಪ್ರಿಯವಾಗಿದ್ದು, 'ಕೊಳಚೆ'ಯಿಂದ ಬಂದುದು, ಕೊಳಚೆ>ಕೊಳ್ಚೆ>ಕೊಚ್ಚೆ(ವಿಜಾತೀಯ ಅಕ್ಷರ ಸಜಾತೀಯ ಆಗುವುದು);
- 'ಕೊಚ್ಚು' ವಾಸನೆ 'ಕೊಚ್ಚೆ' ನೀರಿನಿಂದ ಬಂದುದು; ಅಥವಾ 'ಕೊಚ್ಚು' ದುರ್ನಾತದಿಂದ 'ಕೊಚ್ಚೆ' ರೂಪುಗೊಳ್ಳಬಹುದು; *ಪ್ರ: 'ಸರಿಯಾಗಿ ಬಚ್ಲು ತೊಳೆಯದೆ 'ಕೊಚ್‌ಕೊಚ್' ಹೊಡೀತದೆ'*;
- 'ಕೊಚ್‌ಕೊಚ್' ಮೂತ್ರ ವಿಸರ್ಜನೆಯಿಂದಾದು ಎಂಬುದು ಸ್ಪಷ್ಟ; ಈ ಪದ ರೂಪ ಕೂಡ ಪುನರಾವರ್ತಿತ 'ಪದದ್ವಂದ್ವ'ವಾಗಿದೆ; ವಾಸನೆಯ ಮೇಲೆ ಒತ್ತುಕೊಡಲು ಇದು ನೆರವಾಗಿದೆ;
- ಕೊಚ್ಚುಕೊಚ್ಚು>ಕೊಚ್‌ಕೊಚ್ ಆಗಿದೆ ಅಷ್ಟೆ.
- 'ಕೊರ್ಚು' ರೂಪ ಇಲ್ಲಿಗೂ ಅನ್ವಯಿಸುತ್ತದೆ; 'ಉಚ್ಚೆಯನಾತ' ಎಂಬ ಅರ್ಥದಲ್ಲಿ 'ಗೊಚ್ಚು'/'ಗೊಚ್ಚೆ' ರೂಪಗಳಿವೆ; ಇವುಗಳ ಮೂಲ ರೂಪಗಳು 'ಕೊಚ್ಚು/ಕೊಚ್ಚೆ'ಗಳೇ ಆಗಿವೆ;

ಕೊಚ್ಚು೪ Koccu[4] :

- ಹರಿದು ಹೋಗು, ಕೊಚ್ಚಿಹೋಗು; ತಳ್ಳು, ನೂಕು ಎಂಬ ಅರ್ಥಗಳಲ್ಲಿ ಬಳಕೆ; To push; to cut and pieces chap into bits;
- ಮಳೆಯಿಂದ ಪ್ರವಾಹ ಬಂದು ಗಿಡ ಮರಗಳು, ಜಾನುವಾರುಗಳು ಕೊಚ್ಚಿಕೊಂಡುಹೋಗುವದನ್ನು ಈ

ರೂಪ ಹೇಳುತ್ತದೆ; Plants trees and cattles are washed away due to torrents;

- 'ಕೊಚ್ಚಿಹೋಗು' ಪ್ರಕ್ರಿಯೆ ಪ್ರಕೃತಿ ವಿಕೋಪದ ಪ್ರಕ್ರಿಯೆ ಕೂಡ; ಹೊಲಸು ಮಾತ್ರ ಕೊಚ್ಚಿಹೋಗುವುದಿಲ್ಲ, ಫಲವತ್ತಾದುದು ಕೂಡ ಕೊಚ್ಚಿಹೋಗುತ್ತದೆ;
- ಕೊಚ್ಚಿಹೋಗುವುದರ ಕಥೆಯು ವಿನಾಶದ ಕಲ್ಪನೆಯನ್ನೂ, ಅಂತಿಮವಾಗಿ ಸಂಸ್ಕೃತಿ ನಾಶದ ಪರಿಕಲ್ಪನೆಯನ್ನೂ ಹಿಡಿದಿಡಲು ಶಕ್ಯವಾಗಬಹುದು.
- ಕೆಟ್ಟದ್ದೆಲ್ಲ ಕೊಚ್ಚಿಹೋಗಿ ಒಳ್ಳೆಯದು ಉಳಿಯಲೆಂಬ ಆಶಯವನ್ನೂ ನೀಡಬಹುದು.

ಕೊಚ್ಚು೫ Koccu[5] :

- ವ್ಯರ್ಥಮಾತು, ಖಾಲಿಮಾತು; ಜಂಭ ಕೊಚ್ಚಿಕೊಳ್ಳುವುದು; ಸಂಬಂಧವಿಲ್ಲದ ವಿಷಯವನ್ನು ಹೇಳು; Useless talk, boast, vaunt, put on airs brag;
- ಆತ್ಮಪ್ರಶಂಸೆ; ತನ್ನನ್ನು ತಾನೇ ಹೊಗಳಿಕೊಳ್ಳುವುದು; ಬಡಾಯಿ ಬಿಡುವುದು– ಬಡಾಯಿ ಕೊಚ್ಚಿಕೊಳ್ಳುವುದು; An act of talking with excessive pride and self satisfaction;
- 'ಕೊಚ್ಚಿಕಂತ', 'ಕೊಚ್ಚಿಣ್ತ'(ಶಿ.ಜಿ.); ಕೊಚ್ಚಿಮತ್ತಿ (ಕೊಡ.ಜಿ.) ಎಂಬ ಪರ್ಯಾಯ ರೂಪಗಳೂ ಇವೆ; ಎಲ್ಲದರ ಅರ್ಥ 'ಕೊಚ್ಚಿಕೊಳ್ಳುವುದು' (ಕೊಡ.ಜಿ.);
- ವಿಷಯ ನಕಾರಾತ್ಮಕ ಮುಖವನ್ನೆ ಹೇಳುತ್ತಿದರೂ, ಆಶಯಮಾತ್ರ ಸಕಾರಾತ್ಮಕವಾದುದು;
- ಜಂಭ ಒಳ್ಳೆಯದಲ್ಲ ಎಂಬ ತತ್ತ್ವ; 'ಕೊಚ್ಚಿಮತ್ತಿನಲ್ಲದಲ್ಲ'(ಕೊಡ.ಜಿ.); ಭಾಷೆ ಸಂಸ್ಕೃತಿಯನ್ನೆ ಹೇಳುವುದಾದರೆ, ಇಲ್ಲಿನ ಪದ ಮತ್ತು ಅದರ ಬಳಕೆ ಇದನ್ನೇ ಹೇಳುತ್ತಿದೆ.

ಕೊಚ್ಚು೬ Koccu[6] :

- ಕೊಚ್ಚು, ಕೊಚ್, ಕೊಚ್ಚಿ, ಕೊಚ್ಚೆ–ಇವೆಲ್ಲವೂ ಸಂವಾದಿ ರೂಪಗಳು; ಅರ್ಥಗಳೂ ಹೆಚ್ಚು ಕಡಿಮೆ ಒಂದೇ ಎನಿಸಿದರೂ, ಭಿನ್ನವೆನಿಸುವುದೆ ಹೆಚ್ಚು; ವಿವರಗಳು ಸಿಕ್ಕುವಂಥವು ಕೆಲವು; ವಿವರ ಸಿಕ್ಕದಂತಹವು ಕೆಲವು;
- ವಿವರ ಸಿಕ್ಕಿದ ಕೆಲವನ್ನಿಲ್ಲಿ ಉಲ್ಲೇಖಿಸಬಹುದು; ವಿವರಣೆ ಎಂದರೆ ಬಳಕೆಯ ಸಾಂದರ್ಭಿಕ ವಿವರಣೆ ಎಂದು ಅರ್ಥ;
- ಮಣ್ಣನ್ನು ಹಾರೆಯಿಂದ ಹದಮಾಡು(ಕೊಚ್); Tanning the soil with crow bar or short-hoe;
- ತೊದಲು ಮಾತಾಡುವವ(ಕೊಚಾಳ್=ಕೊಚ್+ ಆಳ್);
- ಕೊಚ್ಚೆಕೊರೆ= ಗಿಜಿಗುಟ್ಟು, ತುಂಬಿರು(ಮಂ.ಜಿ.)
- ಸವರು, ಮಣ್ಣನ್ನು ಮಗುಚಿ ಹಾಕು; To shuffle soil;
- ಅತಿಸಾರ; ವಿಪರೀತ ಮಲವಿಸರ್ಜನೆಯಾಗು; Dysentery;
- ಕೊಚ್ಚಿಗಾಯಿ–ಬೇಯಿಸಿದ ಮಾವಿನ ಕಾಯಿ;
- ಕೊಚ್ಚಿನ ಕೋಲು–ನೇರವಾದ ಕೋಲು(ಉ.ಕ.ಜಿ); (ಕೊಚ್+ಕೋಲು>ಕೊಚ್‌ಕೋಲು> ಕೊರ್ಚ್ಚಿಕೋಲು);
- ಕೊಚ್ಚೆಳ್:– ನೊಗಕ್ಕೆ ಹೂಡಿದ ಎತ್ತು ನೇರವಾಗಿ ನಡೆಯದೆ ಒಳಕ್ಕೆ ಸರಿದು ಅಸಹಕರಿಸುವುದು (ಚಿ.ಪ.ಕೋ.).

ಕೊಚ್ಚುಕೊರಟ(ಟೆ) Koccukoraṭa(e)

- ಕಡುಕಮರ, ಕೊಚ್ಚಿಮರ; A tree, A wooden log that is used to cut mutton or flesh;
- ಮಾಂಸವನ್ನು ಕತ್ತರಿಸುವುದಕ್ಕಾಗಿ ಬಳಸುವ ಮರದ ತುಂಡು (ಶಿ.ಜಿ.);
- ಮರದ ಮೂರು ಕಾಲಿನ ಕೊಚ್ಚುವ ಅಡಿ ಸಾಧನ (ಬೇ.ಸಾಂ.ಪ.ಕೋ.);
- —*ಕೊಚ್ಚಿಗೊಲ್ಲಿ:* ಚಿಕ್ಕ ಅಲಗು; ಮಾಂಸ, ಎಲುಬು ಕತ್ತರಿಸುವ ಸಾಧನ.

ಕೊಚ್ಚುಪ್ಪಿನಕಾಯಿ Koccuppinakāyi:

- ಮಲೆನಾಡಿನ ಮದುವೆಯಲ್ಲಿ ಹಾಕುವ ತತ್ಕಾಲದ ಉಪ್ಪಿನ ಕಾಯಿ; Pickle;
- ಮಾವಿನಕಾಯಿ, ದೊಡ್ಲಿಕಾಯಿ, ಅಮಟೆಕಾಯಿ, ಶುಂಠಿ – ಇವುಗಳನ್ನು ಸಣ್ಣದಾಗಿ ಹೆಚ್ಚಿ ಉಪ್ಪುಹಾಕಿ ಒಣಮೆಣಸಿನಕಾಯಿ ರುಬ್ಬಿ ಹಾಕಿ ತಯಾರಿಸಲಾಗುವುದು; Mangoes or cucumber preserved in Vinegar, brine or a similar solution;

- ಎಲ್ಲವನ್ನೂ ಚೆನ್ನಾಗಿ ಮಿಶ್ರಮಾಡಿ ಇಂಗು, ಬೆಳ್ಳುಳ್ಳಿ ಒಗ್ಗರಣೆ ಹಾಕಿ ಸಿದ್ಧವಾದ ಕೂಡಲೆ ಬಳಕೆಗೆ ಬರುತ್ತದೆ.

ಕೊಚ್ಚುಸಳ್ಳಿ Koccusaḷḷi:

- ತೆಂಗಿನ ಕಾಯಿಗೆ ಹಸಿಮೆಣಸು, ಸಾಸಿವೆ, ಉಪ್ಪುಹಾಕಿ ರುಬ್ಬಿ ಸಣ್ಣಗೆ ಹೆಚ್ಚಿದ 'ಮುಳ್ಳುಸೌತೆ'ಗೆ ಸೇರಿಸಿ, ಒಂದು ಸೌಟು ಮೊಸರು ಬೆರಸಿ ಒಗ್ಗರಣೆ ಹಾಕಿ ಮಾಡುವ ಹಸಿ ಪದಾರ್ಥ; A edible that is made up of coconut pieces, muster salt, chilli;
- 'ಮುಳ್ಳುಸೌತೆ'ಗೆ ಇಂಗ್ಲಿಷಿನಲ್ಲಿ 'Cucumber' ಎನ್ನುತ್ತಾರೆ.

ಕೊಚ್ಲಕಾಯಿಕಡುಬು Koclakāyikaḍubu:

- ಕೊಚ್ಲಕಾಯಿ–ಮೊಗ್ಗೆಕಾಯಿ; ಅಕ್ಕಿ ಮತ್ತು ಮೊಗ್ಗೆಕಾಯಿಯನ್ನು ಬಳಸಿಕೊಂಡು ಅರಿಶಿನ ಎಲೆಗಳನ್ನು ಹೊರ ಆವರಣವನ್ನಾಗಿಸಿ ಅಟ್ಟೆ ಉಗಿಯ ಮೂಲಕ ಬೇಯಿಸಿ ಮಾಡುವ ಕಡುಬು (ಉ.ಕ.ಜಿ.); A vegetable; it is used to make tarts a steamed food;
- 'ಕಡುಬು' ಪದಕ್ಕೆ 'ಇಡ್ಲಿ' ಸಂವಾದಿ ರೂಪವಿದೆ;
- 'ಉಗಿ' ಎಂದರೆ ಹಬೆ; Steam.

ಕೊಚ್ಲುಕಾಯಿರೊಟ್ಟಿ Koclukāyiroṭṭi:

'ಮೊಗೆಸೌತೆ' ಇತ್ಯಾದಿ ತರಕಾರಿಯನ್ನು ಕೊಚ್ಚಿ ತಯಾರಿಸಿದ ರೊಟ್ಟಿ(ಉ.ಕ.ಜಿ.). Vegetable roti or pancake.

ಕೊಜಂಟಿ Kojaṇṭi:

ರಸ ಹಿಂಡಿದ ಕಬ್ಬು; ಕಬ್ಬಿನಸಿಪ್ಪೆ. The squeezed sugarcane peel.

ಕೊಜಕ್ಕು/ಕೊಜಕು Kojakku/Kojaku:

- ಜಜ್ಜಿದುದು; ತೆಂಗಿನಕಾಯಿಯನ್ನು ತರಿತರಿಯಾಗಿ ರುಬ್ಬಿದುದು; Fine pieces of coconut or grinding coconut pieces;
- ಸಣ್ಣಪುಡಿ; ಹರಳು(ಕ.ನಿ.); Powdered;
- ತುಳುವಿನಲ್ಲಿ 'ಕೊಜಕ್' ರೂಪವಿದೆ.

ಕೊಜ್ಜ/ಕೊಜ್ಜೆ Kojja/Kojje:

- ಕೊಜಾರ/ಕೊಜಾರಿ ಎಂಬ ಸಂವಾದಿ ರೂಪಗಳೂ ಇವೆ; eunuch;
- 'ನಪುಂಸಕ' ಎಂಬುದು ಇದರ ಅರ್ಥ; Neuter gender;
- 'ಪಾರಸಿ'ಯಲ್ಲಿ 'ಖ್ವಾಜಾ' ರೂಪವಿದೆ; ಇದು ಮರಾಠಿಯಲ್ಲಿ 'ಖೋಜಾ' ಆಗಿದೆ; 'ಖೋಜೆ'ಯೂ ಆಗಬಹುದು; Hermaphrodite;
- ಕನ್ನಡಕ್ಕೆ ಬರುವಾಗ ಮೂಲದ ಪದಾದಿ ಮಹಾಪ್ರಾಣ ಕಳೆದುಕೊಂಡು ಅಲ್ಪಪ್ರಾಣ 'ಕ' ಆಗಿರುವುದು ಸ್ಪಷ್ಟ;
- ಇನ್ನು ಕೊಜ್ಜ/ಕೊಜ್ಜೆ ರೂಪಗಳು ಪದಾಂತ್ಯದ ದೀರ್ಘಸ್ವರ ಕಳೆದುಕೊಂಡುದರ ಫಲಗಳಾಗಿರಬಹುದು; ಆದರೆ ಹಾಗೆ ಆಗದೆ ದೀರ್ಘಸ್ವರವೇ ಉಳಿದು ಬಂದುದೂ ಇದೆ, ಆಗ ಅದರ ಮುಂದೆ 'ದ/ರಿ' ಸೇರಿಕೊಂಡಿರುವುದನ್ನು ನೋಡುತ್ತೇವೆ.

ಕೊಜ್ಜಕ್ಕಿ Kojjakki:

- ಕಪ್ಪಾಗಿ ಹಾಳಾದ ಅಕ್ಕಿ. Spoiled blackish rice.

ಕೊಜ್ರ್ Kojr:

- ಕೆಟ್ಟವಾಸನೆ; ಯಾವುದೇ ಬಗೆಯ ದುರ್ವಾಸನೆ; ಮೂತ್ರದ ವಾಸನೆಯೂ ಆಗಬಹುದು; ಕೊಜ್ರ್; ದುರ್ವಾಸನೆ(ಮಂ.ಜಿ.); A bad smell; nasty or dirty smell;
- 'ಕೊಜ್ರ್' ರೂಪ ತುಳುವಿನ ಕುಜರ್ ಅಥವಾ ಕೊಜರ್ ರೂಪದಿಂದ ಬಂದಿರಲು ಸಾಧ್ಯ;
- 'ಕೊಜರ್'>'ಕೊಜ್ರ್'–ಗ್ರಾಮೀಣ ಉಚ್ಚಾರಣೆಯಲ್ಲಿ;
- ಮೂಲರೂಪ ಕುಜರ್>ಕುಜ್ರ್ ಆಗುವುದು–ಸ್ವರ ವ್ಯತ್ಯಯದ ನಿಯಮದಂತೆ ಇದೇ ಕೊಜರ್/ಕೊಜ್ರ್ ಆಗುವುದು(ಉ>ಜ).

ಕೊಜ್ಲ Kojla:

- ಸಂವಾದಿ ರೂಪಗಳಾಗಿ ಕೊದಲ, ಕೊದ್ಲ ರೂಪಗಳಿವೆ; ಕೊದಲ>ಕೊದ್ಲ>ಕೊಜ್ಲ; 'ದ' ಕಾರ ಮತ್ತು 'ಜ' ಕಾರಗಳ ಸಂಬಂಧ ದ್ರಾವಿಡ ಭಾಷೆಗಳಲ್ಲಿದೆ; ಅಂದರೆ 'ದ'ಕ್ಕೆ ಬದಲಾಗಿ 'ಜ' ಕಾರ ಬರುವುದು; ಇಲ್ಲಿ ಕೊದ್ಲ>ಕೊಜ್ಲ ಆಗಿದೆ; ಹಾಗೆಯೇ ಸಂಬಂಧ>ಸಂಬಂಜ ಆಗುತ್ತದೆ; Hair;

- ಅಸ್ಪಷ್ಟವಾದ ಮಾತು; ತೊದಲ್ಸಿ ಮಾತನಾಡುವುದು; Stammering; lallation, Lambdacism; a fault of speaking;
ಪ್ರ: 'ಅದ್ರ್ ಮಾತ್ ಒಂಚೂರ್ ಕೊಜ್ಞ ಅಂಬ್ರ (ಉ.ಕ.ಜಿ.);
- ತೊದಲು ಮಾತಾಡುವವನಿಗೆ 'ಬಿಕ್ಕಲ' ಎಂದು ಕರೆಯುವರು; ಅಂದರೆ ಸರಾಗವಾಗಿ ಮತಾಡಲು ಸಾಧ್ಯವಾಗದೆ ತಡೆದು ತಡೆದು ಬಿಕ್ಕಲಿಸಿ ಮಾತಾಡುವುದಕ್ಕೆ ಈ ಹೆಸರು. Stuttering; impediment in speech.

ಕೊಟ ಕೊಟ Koṭa koṭa

- ಇದೊಂದು ಅನುಕರಣ ಪದ; ಧ್ವನಿಯನ್ನು ಅನುಕರಿಸಿ ನಡೆಯುವಂಥದು; An imitative sound;
- ಯಂತ್ರಗಳು ಕಾರ್ಯನಿರ್ವಹಿಸುವಾಗ ಕೊಟ್ ಕೊಟ್ ಎಂದು ಶಬ್ದ ಮಾಡುವಾಗ, ಅವನ್ನು ಹಾಗೆಯೇ ಭಾಷೆಯಲ್ಲಿ ಹಿಡಿದಿರಿಸಲು ಹೋದಾಗ ಇಂತಹ ಪದಗಳು ಸೃಷ್ಟಿಯಾಗುತ್ತವೆ;
- ಹಿಟ್ಟಿನ ಗಿರಣಿಗಳು, ಹಲ್ಲರ್ ಮಿಷನ್‌ಗಳು ಈ ತೆರನಾದ ಶಬ್ದಕ್ಕೆ ಕಾರಣವಾಗುತ್ತವೆ; ಅದರಲ್ಲಿಯೂ ಆ ಯಂತ್ರದ ಆರಂಭದ ಪ್ರತಿಸಾರಿಯೂ ಈ ಶಬ್ದಗಳನ್ನು ಹೊರಸೂಸುತ್ತದೆ; Flour mills sound like `Kota, Kota';
- ಯಾರಾದರೂ ಮೆಲುದನಿಯಲ್ಲಿ ಮಾತಾಡುತ್ತಿದ್ದರೆ, ಗೊಣಗುತ್ತಿದ್ದರೆ, ಆ ಗೊಣಗುವಿಕೆಗೆ ಬೇಸರ ವ್ಯಕ್ತಪಡಿಸುವಾಗ ಇಂತಹ ಶಬ್ದಗಳ ಬಳಕೆ ಸಾಮಾನ್ಯ;
ಪ್ರ: 'ಯಾವಾಗ್ಲೂ ಇವ್ನ್‌ದು ಕೊಟ್ಕೊಟ ಪಿಟ್ಪಿಟಿ ಅನ್ನೂದೇ ಗೋಳಾಗೋಯ್ತು'.

ಕೊಟಕೊಟೆ Koṭakoṭe:

- ಆಮದು ವಸ್ತುಗಳನ್ನು ಹೆಸರಿಸಲು ದೇಶಭಾಷೆಯಲ್ಲಿ ಶಬ್ದಗಳಿಲ್ಲದಾಗ, ಇಂತಹ ಅನುಕರಣ ಪದಗಳು ಬಳಕೆಗೆ ಬರುತ್ತವೆ; Imported goods are called like this;
- ಸರಕುಗಳ ಆಕಾರ, ಶಬ್ದ ಮೊದಲಾದವುಗಳನ್ನು ಗ್ರಹಿಸಿ, ಜನಪದರು ಹೊಸ ನಾಮರೂಪಗಳನ್ನು ಸೃಷ್ಟಿಸಿಕೊಳ್ಳುವುದು ಶಬ್ದ ಸಂಸ್ಕೃತಿಯ ಉತ್ತಮ ಉದಾಹರಣೆ;
- ಮೊಟ್ಟಮೊದಲ ಬಾರಿಗೆ ಮೋಟಾರ್ ಬೈಕುಗಳು ಪರಸಂಸ್ಕೃತಿ ಅಥವಾ ಹೊರನಾಡಿನಿಂದ ನಮ್ಮಲ್ಲಿ ಬಂದಾಗ ಅವುಗಳ ಶಬ್ದವನ್ನು ಅನುಕರಿಸಿ ಕೊಟಕೊಟೆ, ಕುಟಿಕುಟಿ ಎಂದೆಲ್ಲ ಪದರೂಪಗಳನ್ನು ಸೃಷ್ಟಿಸಿಕೊಳ್ಳಲಾಯಿತು; At beginning bikes are called as Kota Kota due to their sounds;
- ಇಂಗ್ಲಿಷ್ ಹೆಸರುಗಳು ಅವಕ್ಕಿದ್ದರೂ, ಅವುಗಳ ಬಳಕೆ ಆಗ ನಾಡಿನಲ್ಲಿ ಇಲ್ಲದಿದ್ದಾಗ ಈ ತೆರನದ ಪದರೂಪಗಳು ನಿರ್ಮಾಣವಾಗುವುದು ಸಹಜ; ಆದರೆ ಈಗ ಇಂತಹ ಬಳಕೆ ಇದಕ್ಕಿಲ್ಲ. ಏಕೆಂದರೆ ಆ ಪದಾರ್ಥಗಳು ನಮ್ಮಲ್ಲಿ ಹೆಚ್ಚಿಗೆ ಬಳಕೆಯಾಗಿ ನಮ್ಮವೇ ಆಗಿಬಿಟ್ಟಿವೆ;
- ಒಂದು ಭಾಷೆಯ ಬೆಳವಣಿಗೆಯಲ್ಲಿ ಅನುಕರಣ ಶಬ್ದಗಳ ಪಾತ್ರವನ್ನು ಅಲ್ಲಗಳೆಯಲಾಗುವುದಿಲ್ಲ.

ಕೊಟಗನ ಹೊಡೆಯುವವರು Koṭagana hoḍeyuvavaru:

- ಬೇಟೆಗೆ ಸಂಬಂಧಿಸಿದರಂತೆ ಈ ಪದ ಚಾಲ್ತಿಯಲ್ಲಿದೆ; 'ಬೇಟೆ ಸಂಸ್ಕೃತಿ'ಯ ಒಂದು ಪದ; A word related to hunting culture;
- ಬಲೆಯ ಅಕ್ಕಪಕ್ಕ ನಿಂತು ಬೇಟೆಗಾರರು ಬೇಟೆ ಮಾಡುವುದು ಎಂದು ಸಾಮಾನ್ಯ ಅರ್ಥ; The act of hunting a prey at either side of a net; an act of patient silent waiting and hunting;
- 'ಕೊಟರ್ಗ' ಪದಕ್ಕೇ ದೂರ ನಿಂತು ಕಾದಿದ್ದು ಹೊಡೆಯುವವನು, ಆಯ ಕಟ್ಟಿನ ಜಾಗದಲ್ಲಿ ಕಾದಿದ್ದು ಬೇಟೆಯ ಪ್ರಾಣಿಗಳನ್ನು ಹೊಡೆಯುವವನು ಎಂದು ಅರ್ಥ; Kotarga means one who waits for the right moment to hunt a prey;
- 'ಕೊಟಗನ' ಪದಕ್ಕೆ ಹೊಡೆಯುವವನು ಎಂದು ಅರ್ಥವಿರುವುದರಿಂದ, 'ಕೊಟಗನ ಹೊಡೆಯುವವನು' ಪದ ಒಂದು ರೀತಿಯಲ್ಲಿ ದ್ವಿರುಕ್ತಿ ಆಗುತ್ತದೆ; 'ಕೊಟಗನ' ಪದ ಅಪರಿಚಿತವೆನಿಸುತ್ತಿದ್ದಂತೆ ಅಥವಾ ಬೇರೆ ಸಂದರ್ಭಕ್ಕೂ ಅನ್ವಯ ಮಾಡುತ್ತಿದ್ದಂತೆ, 'ಹೊಡೆಯುವವನು' ಎಂಬ ಪದ ಆಮೇಲೆ ಸೇರಿಕೊಂಡಂತೆ ಕಾಣುತ್ತದೆ; Kotagana means one who beats or slashes; it is `Dwirukthi' in Kannada language;

- ಕೊಟ, ಕೊಟ್ಟ, ಕೊಟರ್ಗ, ಕೊಟ್ಟಗಾರ, ಕೊಟ್ಟದಳ ರೂಪಗಳಲ್ಲಿ ಅಧಿಕ ರೂಪಗಳು ಜೋಡಣೆಯಾಗಿ ಉಚ್ಚಾರಣಾ ವ್ಯತ್ಯಯಗಳು ಕೆಲಸ ಮಾಡಿರುವುದು ಕಂಡುಬರುತ್ತದೆ.

ಕೊಟಗಲು Koṭagalu:

ಕುತ್ತಿಗೆಗೆ ಕಟ್ಟುವ ಶಬ್ದಮಾಡುವ ಸಾಧನ; ಬಿದಿರಿನಿಂದ ಮಾಡಿರುವುದು ಗಮನಕ್ಕೆ ಬರುತ್ತದೆ. A hollow device, made of bamboo that makes a sound; it is attached to the neck.

ಕೊಟಮಗಿ Koṭamagi:

- ಮೈಲಾರಲಿಂಗನ ಗೊರವರ ದೋಣಿ; 'ದೋಣಿ' ಮೈಲಾರಲಿಂಗನ ಲಾಂಛನಗಳಲ್ಲಿ ಒಂದು (ಚಿ.ಪ.ಕೋ.). A bowl(for meal) made of a skull, used by Goravas of Myalara; one among the emblems of Mylaralinga(a deity).
- ಮೈಲಾರಲಿಂಗನನ್ನು ಆರಾಧಿಸುವವರು ಗೊರವರು; ಗೊರವರು ಕುರುಬ ಸಮುದಾಯಕ್ಕೆ ಸೇರಿದವರು; ಕೋಟಿನಂತಹ ಉಣ್ಣಿಮೆ ನಿಲುವಂಗಿ ಇವರ ಸಾಂಪ್ರದಾಯಿಕ ಉಡುಪು; ಡಮರುಗ ಬಾರಿಸುವುದು, ಕಟ್ಟುನಿಟ್ಟಾದ ವ್ರತಾಚರಣೆ, 'ಏಳುಕೋಟಿ–ಏಳುಕೋಟಿ–ಏಳುಕೋಟಿ' ಎಂದು ಘೋಷಣೆ ಹಾಕಿಕೊಂಡು ಭಿಕ್ಷೆಗೆ ಹೋಗುವುದು ಇವರ ಮುಖ್ಯವಾದ ಧಾರ್ಮಿಕ ಆಚರಣೆ. Goravas worship Mylaralinga; `Gorava' refers to men and women belonging to the Kuruba Community who have taken a special vow and dress in the traditional overcoat and headgear, and beat a damaruga shouting `Elukoti-elukoti-elukoti'; Goravas of Mylaralingeshwara use skulls as meal bowl called `Doni'.
- **ನೋಡಿ:** ಗೊರವರು; ಮೈಲಾರಲಿಂಗ.

ಕೊಟಮಾರಿ Koṭamāri:

- ಕಲ್ಲು ಹೃದಯದವಳು; ಕಠಿಣ ಸ್ವಭಾವದವಳು; Stony hearted, rough, stubborn, deceit, haughtiness, devoid of feeling for others;
- 'ಕೊಟ' ರೂಪವನ್ನು 'ಕೊಟ್ಟ' ಪದವಿರಬಹುದೆಂದು ಭಾವಿಸಿದರೆ, ಆಗ ಅದಕ್ಕೆ ಒರಟು, ಮೊಂಡು, ದರ್ಪ, ವಂಚನೆ ಮುಂತಾದ ಅರ್ಥಗಳಿವೆ;
- ಸ್ವಭಾವದಲ್ಲಿಯೇ ಇರುವ ಒಂದು ರೀತಿಯ 'ಗಡಸುತನ'ವನ್ನು ಆಧರಿಸಿ 'ಕಲ್ಲುಹೃದಯ' ಎಂಬ ಗುಣಲಕ್ಷಣ ಈ ಪದಕ್ಕೆ ಪ್ರಾಪ್ತವಾಗಿರಬಹುದು.

ಕೊಟರಿ/ಕೊಟ್ರಿ Koṭari/Koṭri:

- ಉಳಿದುಕೊಳ್ಳಲು ಬೇಕಾದ ಜಾಗ; ಕೊಠಡಿ; 'ಕೊಟ್ರಿ' (ಮಂಡ್ಯ.ಜಿ.); A place for halting, room, cottage, hut, a small house with a single storey;
- ಅನ್ಯದೇಶೀ ಪದಮೂಲದಿಂದ ಬಂದಿದ್ದಾಗಿರ ಬಹುದು;(ಸಂ.) ಕುಟೀರ, ಕೊಠಡಿ–ಮೂಲ ಇರಬಹುದೆ?
- ಸಂಸ್ಕೃತದ 'ಕುಟೀರ' ಪದದ ವ್ಯತ್ಯಯ ರೂಪವಾಗಿ ಕೊಟರಿ/ಕೊಟಾರಿ ಚಾಲ್ತಿಗೆ ಬಂದಿರಬಹುದು;
- 'ಕೊಠಡಿ'ಯ ತಪ್ಪು ಸಾಹಚರ್ಯದಿಂದ 'ಕೊಟರಿ' ಆಗಿರುವಂತೆ ಕಾಣುವುದು; ಮಹಾಪ್ರಾಣಾಕ್ಷರ> ಅಲ್ಪಪ್ರಾಣಾಕ್ಷರ(ಠ>ಟ); ಡ>ರ ಆಗುವುದು ಸಾಮಾನ್ಯ;
- ನೇರ ಭಾಷಿಕ ವ್ಯತ್ಯಾಸಕ್ಕೆ ಸಂಬಂಧಿಸಿದುದು; ಸಾಂಸ್ಕೃತಿಕ ಕಾರಣಕ್ಕೆ ಆದಂತಿಲ್ಲ.

ಕೊಟಾ Koṭā:

ಚಳಿಯ ನಡುಕ(ಉ.ಕ.ಜಿ.). Shivering(from cold).

ಕೊಟಾಯಿ/ಕೊಳಾಯಿ(?) Koṭāyi/Koḷāyi:

- ಪದ ರೂಪಗಳು ಒಂದೇ ಮೂಲದಿಂದ ಬಂದವು ಇರಬಹುದು(ಟ>ಳ);
- ತರಗೆಲೆ ತುಂಬುವ ಹುರಿಹಗ್ಗದ ಕಣ್ಣಿರುವ ಸಾಧನ; Holed container made of cord for filling frond, withered leaf;
- ನೀರು ಮೊದಲಾದ ದ್ರವ ಪದಾರ್ಥಗಳನ್ನು ತುಂಬಿಡುವ ಸಿಲಿಂಡರಾಕಾರದ ಲೋಹದ ದೊಡ್ಡ ಸಾಧನ(ಕೃ.ಪ.ಕೋ.). A cylindrical container to store water and other liquid substances/ingredients.

ಕೊಟಾರ Koṭāra:

- ಕಣಕ್ಕೆ ಮತ್ತೊಂದು ಹೆಸರು; Barn, field;
- ದವಸ ಧಾನ್ಯಗಳನ್ನು ಒಕ್ಕುವ ಜಾಗ;
- ತೆನೆಗಳಿಂದ ಕಾಳನ್ನು ಬೇರ್ಪಡಿಸುವ ಜಾಗ (ಮೈ.ಜಿ.); Threshing flour;
- 'ಕೊಟಾರ' ಪದಕ್ಕೆ ಕೊಟಾರು, ಕೊಟ್ಟಾರ ಕೊಠಾರ ಎಂಬ ರೂಪಗಳು ಸಹಜವಾಗಿಯೇ ಇವೆ; ಕೋಷ್ಠಾಗಾರ=ಕೋಷ್ಠ+ಆಗರ>ಕೊಠಾರ>ಕೊಟಾರ;
- ಕಣಜ, ಉಗ್ರಾಣ ಎಂಬ ಅರ್ಥದಲ್ಲಿಯೂ ಬಳಕೆ; Garner, A store house for threshed grain;
- ದವಸಧಾನ್ಯ ಒಕ್ಕಣೆ ಮಾಡುವ ಜಾಗ(ಕಣ/ಕಳ) ಎಂಬ ಅರ್ಥದಂತಿಯೇ, ದವಸಧಾನ್ಯ ಸಂಗ್ರಹಣೆಯ ಸ್ಥಳವೆಂದೂ ಹೆಸರಾಗಿದೆ; *ಪ್ರ: 'ಕೋಳಿ ಹೆಚ್ಚಿ ಕೊಠಾರ ಹಾಳಾಯ್ತು' (ಮೈ.ಜಿ.);*
- ***—ಕೊಟಾರಿಕೆ*** : ಉಗ್ರಾಣದ ಮೇಲ್ವಿಚಾರಣೆ ನಡೆಸುವುದು; One who is incharge of barn, garner;
- ***—ಕೊಟ್ಟಾರಿ*** : ಉಗ್ರಾಣದ ಅಧಿಕಾರಿ.

ಕೊಟಾಳಿ Koṭaḷi:

- ಅಡಿಕೆ ಹಾಳೆ; ಅಡಿಕೆ ಕೊಟ್ಟೆಯಿಂದ ಮಾಡಿದ ಹಾಳೆ; Areca leaf sheet;
- ತಲೆಗೆ ಧರಿಸುವ ಟೋಪಿ(ಮಟ್ಟಾಳೆ); Areca leaf cap;
- ಊಟ, ತಿಂಡಿಗೆ ಬಳಸುವ ತಟ್ಟೆಯಾಕಾರದ ಸಾಧನಗಳು; Made of areca leaf, crockery, plates and bowls of bio-gradable;
- ಆಹಾರ ಬುತ್ತಿ ಕಟ್ಟಲು ಇದರ ಬಳಕೆ ಇದೆ.

ಕೊಟುಗಂಡು Koṭugaṇḍu:

- ಕೊಟ್ಟುಕೊಂಡು; ಸಲ್ಲಿಸು; ಹಿಡಿದುಕೊಂಡು; Give, pay, giving, holding on;
- 'ಕೊಡು' ಧಾತು; ಭೂತಕಾಲ ಕ್ರಿಯೆಯಲ್ಲಿ ಕೊಟ್ಟ ಆಗುತ್ತದೆ;
- ಕೊಡು/ಕೊಟ್ಟು; 'ಕೊಟ್ಟುಕೊಂಡು' ಎಂಬಲ್ಲಿನ 'ಟ' ಕಾರ ದ್ವಿತ್ವ ಲೋಪವಾಗಿ ಕೊಟುಗಂಡು/ಕೊಟಗಂಡು ಎಂಬ ಉಚ್ಚಾರಣೆ ಭೇದವಿದೆ; ಪ್ರಾಂತಭೇದಕ್ಕೂ ಉದಾಹರಣೆ ಆಗಬಹುದು.
- ಇಲ್ಲಿ ಮುಖ್ಯವಾಗಿ ಉಚ್ಚಾರಣೆ ದ್ವಿತ್ವ ಸೇರಿಕೊಂಡು ಅಥವಾ ಕಳೆದುಕೊಂಡು ಆಗುವುಂಥದು;
- ಅನೇಕ ಪದಗಳಲ್ಲಿ ಈ ಸಾಂದರ್ಭಿಕ ನೀತಿ ಕಾಣಿಸಿಕೊಳ್ಳುವುದು; ಪ್ರಸ್ತುತ ಪದ ಕೂಡ ಇದಕ್ಕೆ ಹೊರತಲ್ಲ.

ಕೊಟುವಳಿ/ಕೊಡುವಳಿ(?) Koṭuvaḷi/ Koḍuvaḷi(?)

- ಭೈರವ ಒಕ್ಕಲಿನ ಸಣ್ಣಮಕ್ಕಳನ್ನು ಹೀಗೆ ಕರೆಯುತ್ತಾರೆ (ಮಂಡ್ಯಜಿ.); ಸಣ್ಣ ಮಕ್ಕಳು; Small children;
- ಭೈರವನಿಗೆ ಅವನ ಒಕ್ಕಲಿನವರು ಜೋಗಿಬಿಡುವ ಸಂಪ್ರದಾಯವಿದ್ದು, ಶಿಶುಮಕ್ಕಳ ಹಂತದಲ್ಲೆ ಅದಕ್ಕೆ ಸಂಬಂಧಿಸಿದ ಆಚರಣೆಗಳನ್ನು ನೆರವೇರಿಸಿ ದೇವರಿಗೆ ಬಿಡುತ್ತಾರೆ; In Vokkaliga community the vokkaligas who worship Lord Kala Bhairava(Shiva) observe a tradition; they name the `infants'/small children as `Jogis';
- ಈ ಪ್ರಕ್ರಿಯೆಯಿಂದಾಗಿ 'ಕೊಟುವಳಿ'/'ಕೊಡುವಳಿ' ರೂಪಗಳು ರೂಢಿಗೆ ಬಂದಿರಬಹುದು; The word `Kotuvali/Koduvali may be the resultant of this regilious act;
- ಕೊಡು>ಕೊಟು ಧಾತು ರೂಪದ ಮೇಲೆ 'ವಳಿ' ಪ್ರತ್ಯಯದಂತೆ(ಆವಳಿ?) ವರ್ತಿಸುತ್ತಿರುವದನ್ನ ಗಮನಿಸಬಹುದು.

ಕೊಟೆ Koṭe:

- 'ಕೊಟೆ'ಗೆ 'ಕೂಟ' ಎಂಬ ಪರ್ಯಾಯ ರೂಪವೂ ಇದೆ;
- ಚಿಲ್ಕ, ಚಿಲಕ; ತಿರುಗಣಿ; ಚಿಲಕಕ್ಕೆ ಪರ್ಯಾಯ ಪದ; Bolt, hatch, cork, stopper, plug, blockage;
- ಬಾಗಿಲಿಗೆ ತಗಲು ಹಾಕುವಾಗ 'ಕೂಟಿಹಾಕು' ಎಂದು ಹೇಳುವುದಿದೆ(ತು.ಜಿ.); Consisting of an object designed to fill a whole tightly;
- ಎರಡು ವಸ್ತುಗಳನ್ನು ಜೋಡಿಸುವುದು, ಕೂಟ ಏರ್ಪಡಿಸುವುದು; ಇದನ್ನೇ 'ಕೂಟಿ' ಎನ್ನುತ್ತಾರೆ; Fasten; join two things;
- ಎರಡು ಅಥವಾ ಹಲವು ವಸ್ತುಗಳನ್ನು ಜೋಡಿಸುವಾಗ, ಜೋಡಣೆಯ ಜಾಗದಲ್ಲಿ ಪರಸ್ಪರ ಬಿಚ್ಚಿಕೊಳ್ಳದಂತೆ, ಒಟ್ಟಾಗಿ ಇರುವಂತೆ ಮಾಡಲು

ತೋಡಿದ ರಂಧ್ರಕ್ಕೆ ಜಡಿಯುವ ಬೆಣೆ; ಬಡಗಿ ವೃತ್ತಿಯಲ್ಲಿ ಬಳಕೆ ಸಾಮಾನ್ಯ;

- ಬಾಗಿಲು ಮತ್ತು ಹೊಸ್ತಿಲಿಗೆ ಜೋಡಣೆ ಹಾಕಿ, ಬಾಗಿಲು ತೆರೆದುಕೊಳ್ಳದಂತೆ/ಹೊರಗಡೆಯಿಂದ ಯಾರೂ ತೆರೆಯದಂತೆ ಒಳಗಿನಿಂದ ಬಂಧಿಸುವ ಸಾಧನ; ಮೊಣಕೈ ಗಾತ್ರ ಮತ್ತು ಉದ್ದದ ಮರದ ಸಾಧನ.

ಕೊಟ್ಗಿ Koṭgi:

ಗೊಂಡರು ದೀಪಾವಳಿ ಮತ್ತು ಸಂಕ್ರಾಂತಿ ಹಬ್ಬಗಳಲ್ಲಿ ಮಾಡುವ ತಿಂಡಿ(ಉ.ಕ.ಜಿ.). A dish prepared by Gondas on the festivals of Sankranthi and Deepavali; `Sankranthi' and `Deepavali' festivals are very valuable and traditional among Hindus; Gonda community belongs to the scheduled tribes who are settled in Uttara kannada district and found in Byndoor in Udupi district.

ಕೊಟ್ಗಿಹುಣ್ಣಿ Koṭgihuṇṇi:

- ಆಷಾಢ ಹುಣ್ಣಿಮೆ ಕೊಟ್ಗಿಗೆ ದಾವಣಿಗಳ ಪೂಜಿಸುವ ಹುಣ್ಣಿಮೆ; An auspicious full moon day, especially in the fourth month in a traditional Hindu calendar followed in Karnatka;
- ಇದೊಂದು ವಿಶೇಷ ಆಚರಣೆ; ಅದರದೇ ಆದ ಸಾಂಸ್ಕೃತಿಕ ಮಹತ್ವವಿದೆ; It has its own cultural importance;
- ಆಚರಣಾತ್ಮಕ ಜಾನಪದದ ಒಂದು ಉದಾಹರಣೆಯಾಗಿ ಇದಿದೆ.

ಕೊಟ್ಟ koṭṭa :

- ಬಿದಿರಿನ ಹಂಡೆ, ದನಗಳಿಗೆ ಔಷಧಿ ಕುಡಿಸಲು ಬಳಸುವ ಬಿದಿರಿನ ಸಾಧನ(ಮಂಡ್ಯ.ಜಿ/ಚಾ.ಜಿ/ಕೊಡ.ಜಿ); A cylindrical instrument made of bamboo and uses to pour medicines into the mouths of diseased cattle;
- ರಾಸುಗಳು ರೋಗಕ್ಕೆ ತುತ್ತಾದಾಗ ಔಷಧಿಯನ್ನು ಅವುಗಳ ಗಂಟಲಿಗೆ ಉಯ್ಯಲು ಬಳಸುವ ತಳಮುಚ್ಚಿರುವ ಕೊಳವೆಯಾಕಾರದ ಬಿದಿರಿನ ಬೊಂಬು; Pestle, pounding instrument, beating/pounding;
- ದವಸಗಳನ್ನು ಕುಟ್ಟಿ ಸಿಪ್ಪೆಯಿಂದ ಕಾಳನ್ನು ಬೇರ್ಪಡಿಸುವುದು; ಕೊಟ್ಟಣ; The husk from paddy/ separating the husk from grains;
- ಕೊರಗ ಸಮುದಾಯದ ಮನೆ; ಪ್ರ: *'ಕೊಟ್ಟದಲ್ಲಿ ಕೊಂತಿ ಕೂತ್ತಿದ್ದಳು'*(ಮಂ.ಜಿ); A house/ settlement of `Koraga' community;
- ಮದುವೆಯಾದ ಮನೆ; ಗಂಡನ ಮನೆ;
- ದಕ್ಷಿಣ ಕನ್ನಡ ಪ್ರದೇಶದ ಒಂದು ಆದಿವಾಸಿ ಸಮುದಾಯ; ವಾಸಸ್ಥಾನ, ನೆಲೆ; The `Koraga' are a tribal community found mainly in Dakshina kannada;
- ಗೊಟ್ಟ(ಮಂಡ್ಯ.ಜಿ) ಎಂದು ಕರೆಯುವುದೂ ಉಂಟು; 'ಕೊಟ್ಟ'ದ ಆದಿ 'ಕ'ಕಾರಕ್ಕೆ 'ಗ'ಕಾರ ಬಂದು ಗೊಟ್ಟ ಎಂದು ಬಳಕೆಯಲ್ಲಿದೆ;
- ತಮಿಳಿನಲ್ಲಿ 'ಕೊಟ್ಟ'; ತುಳು: ಗೊಟ್ಟ, ಗೊಟ್ಪೊ, ಕೊಂಡೆ; ತೆಲುಗು: ಗೊಟ್ಟಮು, 'ಗೊಟ್ಟ' ಎಂಬ ಪ್ರಯೋಗಗಳಿವೆ; ಕ>ಗ; ಟ>ಡ; 'ಕೊಟ್ಟಮ್' ಎಂಬುದು ತೆಲುಗಿನಲ್ಲಿ 'ಗೊಟ್ಟಮು' ಆಗಿದೆ ('ಉ'ಕಾರಾಂತ);
- ನೆಲಮನೆ; ಬೀಡು; ವಾಸಸ್ಥಾನ; ರಾಜ್ಯದ ಸಣ್ಣ ವಿಭಾಗ; ಜಿಲ್ಲೆ ಎಂಬಿತ್ಯಾದಿ ಅರ್ಥಗಳನ್ನು ಕೂಡ ಪರಿಷತ್ತಿನ ಕನ್ನಡ ನಿಘಂಟು ಹೇಳಿದೆ;
- ಅಳತೆಯ ಸಾಧನ; ದೊನ್ನೆ; ಕೆಟ್ಟದು; ಖೊಟ್ಟಿ; ಲಜ್ಜೆ ಇಲ್ಲದ(ಕ.ಜಾ.ನಿ);
- ಕುಡು/ಕೊಡು ಧಾತುವಿನಿಂದ ಬಂದ ಭೂತಕಾಲದ ಕ್ರಿಯಾರೂಪ; ನೀಡಿದ; ಕುಡು/ಕೊಡು+ದ+ಅ= ಕೊಟ್ಟ; ನೀಡಿರುವ, ಕೊಟ್ಟಿರುವ ಎಂಬರ್ಥದ ಪ್ರಯೋಗ;
- ಕೊಟ್ಟ ಪದಕ್ಕೆ ಮತ್ತೊಂದು ವಿವರಣೆ ಹೀಗಿದೆ: ಇದೊಂದು ಅಪರೂಪದ ಜನಪದ ತಂತ್ರಜ್ಞಾನ; ಅನಿರೀಕ್ಷಿತ ದಾಳಿಕೋರರಿಂದ ಮನೆಯ ಹೆಣ್ಣುಮಕ್ಕಳು ನಗ-ನಾಣ್ಯ, ಒಡವೆ-ವಸ್ತುಗಳನ್ನು ಸಂರಕ್ಷಿಸಿಕೊಳ್ಳಲೋಸುಗ ನಿರ್ಮಿಸಿಕೊಂಡಿರುವ ಅಡಗು ತಾಣ; ಇಂತಹದ್ದೊಂದು ಶಿರಸಿಯ ಸುತ್ತಮುತ್ತಲ ಪ್ರದೇಶಗಳಲ್ಲಿ ಕಂಡುಬರುತ್ತದೆ; ಮನೆಯ ಮಾಳಿಗೆಯ ಮೇಲೆ ಈ ಕೊಟ್ಟ

ನಿರ್ಮಿಸಿರುತ್ತಾರೆ; ಸಣ್ಣ ರಂಧ್ರದ ಮೂಲಕ ಮಹಡಿ ಏರಿದರೆ ಅಲ್ಲಿ ಈ ಚಿಕ್ಕ ಕೋಣೆಗೆ ಸೇರುವ ವ್ಯವಸ್ಥೆ ಇರುತ್ತದೆ; ಮಹಡಿ ಏರುವ ರಂಧ್ರ ಮುಚ್ಚಿದರೆ ಈ ಕೋಣೆಯ ಬಾಗಿಲು ತೆರೆದುಕೊಳ್ಳುತ್ತದೆ; ಕೋಣೆಯ ಬಾಗಿಲು ತೆರೆದರೆ ರಂಧ್ರ ಮುಚ್ಚಿಕೊಳ್ಳುತ್ತದೆ; ಇದರಿಂದ ಕೊಟ್ಟಕ್ಕೆ ಹೋಗುವ ಮಾರ್ಗವೂ ಕಾಣೆಯಾಗದಂತೆ ವಿಶಿಷ್ಟ ಸೂಕ್ಷ್ಮ ತಂತ್ರಜ್ಞಾನದಿಂದ ಮಾಡಿದ ಅಡಗು ತಾಣ/ರಹಸ್ಯ ಕೋಣೆಯಿದು; ತುರ್ತು ಸಂದರ್ಭದಲ್ಲಿ 'ಎಂಟತ್ತು' ಮಂದಿ ಉಳಿದುಕೊಳ್ಳಲು ವ್ಯವಸ್ಥೆ ಮಾಡಿಕೊಂಡಿರಲಾಗುತ್ತದೆ. Udupi districts of Karnataka and the Kasargod district of Kerala; a secret hiding place/cellar to bury valuables and women folk; this can be found around `Shirsi' of Karnataka.

ಕೊಟ್ಟ/ಕೊಡಚಿ koṭṭa/koḍaci :

- ಇದೊಂದು ಬಗೆಯ ಮುಳ್ಳು/ಪೊದೆಗಿಡ; ಚಿಕ್ಕದು; A shrub, a large prickly shrub or smaller tree with hard wood and tasty fruits;
- ಕೊಟ್ಟ=ಕೊಡಚಿ; ಕೊಡಂಚಿ>ಕೊಡಚಿ;
- `A large prickly shrub or smaller tree'(ಕಿಟ್ಟೆಲ್);
- ತಮಿಳಿನ 'ಕೊಟ್ಟೈಯಿಲಂದೈ' ಮತ್ತು 'ಕೊಂಡೈ' ರೂಪಗಳು ಕನ್ನಡದ 'ಕೊಟ್ಟ' ಮತ್ತು 'ಕೊಡಚಿ'ಗಳಿಗೆ ಕ್ರಮವಾಗಿ ಹೋಲುತ್ತವೆ; ತುಳುವಿನ 'ಕೊಟ್ಟೆ ಮುಳ್ಳು' ಕನ್ನಡದ 'ಕೊಟ್ಟ' ಪದಕ್ಕೆ ಹತ್ತಿರವಾಗಿದ್ದು, ಅದೊಂದು ಮುಳ್ಳು ಪೊದೆ ಎಂಬುದನ್ನು ಸಾಬೀತು ಪಡಿಸುತ್ತದೆ; ಮಲೆಯಾಳಂನ 'ಚೋಟ್ಟು ಕೊಟ್ಟ' ಕನ್ನಡದ ಪದದ ಹಾಗೆಯೇ ಇದ್ದು, ದ್ವಿರುಕ್ತಿ ಇರುವಂತೆ ಕಾಣುತ್ತದೆ;
- ಸಸ್ಯಶಾಸ್ತ್ರೀಯ ಪಾರಿಭಾಷಿಕ ಪದವೆಂದರೆ, Zizyphus xylopyrus' ಎಂಬುದಾಗಿದೆ;
- ಮರ ಸಾಕಷ್ಟು ಗಟ್ಟಿಯಿರುವುದರಿಂದ ಮರಗೆಲಸಗಳಿಗೆ ಉಪಯೋಗ; ಹಣ್ಣನ್ನು ತಿನ್ನುತ್ತಾರಂತೆ.

(F.H.I.P)

ಕೊಟ್ಟಂಬಾಳೆ koṭṭambāḷe :

- ಅಡಕೆ ಮರದ ಸೋಗೆಯಿಂದ ಹಾಳೆಯನ್ನು ಕತ್ತರಿಸಿ ತೆಗೆದು ಮಾಡಿದ ಶಿರಸ್ತ್ರಾಣ(ದ.ಕ.); Helmet, cap made of areca fiber or sheet to carry soil basket, stone, wooden logs etc;
- ಕಾಸರಗೋಡು ಮತ್ತು ದಕ್ಷಿಣ ಕನ್ನಡ ಭಾಗದಲ್ಲಿ ಹಟ್ಟಿಗೊಬ್ಬರ, ಮಣ್ಣು ಹೊರುವ ಸಂದರ್ಭದಲ್ಲಿ ತಲೆಗೆ ಹಾಕಿಕೊಳ್ಳುವ ಶಿರಸ್ತ್ರಾಣ; They can be found in South kannada and Kasaragodu of Karnataka;
- ಕೊಟ್ಟಂಬಾಳೆಯ ನೆತ್ತಿಯ ಭಾಗದಲ್ಲಿರುವ ಚೂಪಾದ ಭಾಗವನ್ನು ಮಡಚಿ ತಳಭಾಗದಿಂದ ಸಣ್ಣದಾಗಿ ಎಬ್ಬಿಸಿದ ನಾರಿನೊಳಗೆ ಸಿಕ್ಕಿಸಿದರೆ ಹಾಳೆಯ ಮತ್ತೊಂದು ಪಾರ್ಶ್ವ ಬಿಲ್ಲಿನಾಕೃತಿಯಲ್ಲಿರುತ್ತದೆ; ಬಾಗಿದ ಕೊಟ್ಟಂಬಾಳೆಯ ಅಂಚನ್ನು ಒಂದು ಅಂಗುಲದಷ್ಟು ಮೇಲಕ್ಕೆ ಮಡಚಿದರೆ ಕೊಟ್ಟಂಬಾಳೆಯ ಮೇಲೆ ಹರಿದು ಬರುವ ಸಗಣಿ ನೀರು, ಮಣ್ಣು, ಕೆಸರು ಮುಖದ ಮೇಲೆ ಬೀಳುವುದಿಲ್ಲ;
- ತಲೆಗೆ ಧರಿಸಿದ ಕೊಟ್ಟಂಬಾಳೆಯ ಮೇಲೆ ಸಿಂಬಿ ಇಟ್ಟುಕೊಂಡು ಭಾರವಾದ ವಸ್ತು(ಕಲ್ಲು, ಮರದ ದಿಮ್ಮಿ ಇತ್ಯಾದಿ)ಗಳನ್ನು ಹೊರುವುದುಂಟು.

ಕೊಟ್ಟಗನಹಳ್ಳಿ koṭṭaganahaḷḷi :

- ಮೈಸೂರು ಜಿಲ್ಲೆಯ ಚಾಮರಾಜನಗರ ತಾಲ್ಲೋಕಿನ ಕ್ರಿ.ಶ.೧೫೩೫ರ ೨೫೭ರ ಶಾಸನದಲ್ಲಿ ಇದರ ಉಲ್ಲೇಖವಿದೆ; A place in Chamarajanagara district found in Mysore inscription of 1535 A.D;
- 'ಕೊಟ್ಟ' ಎಂದರೆ ಮನೆ, ವಾಸಸ್ಥಳ, ಆಡಳತ ವಿಭಾಗ ಎಂಬ ಅರ್ಥವಿದೆ; ವಾಸಯೋಗ್ಯ ಸ್ಥಳವಾದ ಹಳ್ಳಿ ಎಂಬ ಹಿನ್ನೆಲೆಯಲ್ಲಿ ಈ ಗ್ರಾಮದ ಹೆಸರು 'ಕೊಟ್ಟಗನಹಳ್ಳಿ' ಎಂದಾಗಿರಬಹುದು; The word `Kotta' means `residential place', house, administractive block;
- 'ಕೊಟ್ಟಗ' ರೂಪ ನಿಜವಾಗಿಯೂ 'ಕೊಟ್ಟಿಗ' ಆಗಿರಬಹುದು; ಏಕೆಂದರೆ 'ಇಗ' ಪ್ರತ್ಯಯ ಸೇರುವುದರಿಂದ, ಅದು ಕೊಟ್ಟ+ಇಗ>ಕೊಟ್ಟಿಗ ಆಗುವುದು ಸಹಜ; ಆದರೆ ಬಳಕೆಯಲ್ಲಿ 'ಕೊಟ್ಟಗ' ಆಗಿದೆ;
- ಇದು ಅಮಚವಾಡಿ ಸ್ಥಳದ ಒಂದು ಗ್ರಾಮ;

- ವಿಜಯನಗರದ ದೊರೆ ಅಚ್ಯುತರಾಯನ ಆಳ್ವಿಕೆಯಲ್ಲಿ ರಾಮಪ್ಪಯ್ಯ ಎಂಬುವನು 'ಕೊಟ್ಟಕನಹಳ್ಳಿಗೆ' (ಕೊಟ್ಟಕ=ಕೊಟ್ಟಗ) ದಾನ ಮಾಡಿದ ವಿಚಾರವಿದೆ.

(E.C- ೪; ಮೈ.ಜಿ.)

ಕೊಟ್ಟಗುಡ್ಡೆ koṭṭaguḍḍe :

- ಕಣದಲ್ಲಿ ಹಾಕಿದ ಮೆದೆ; Haystack;
- ಬತ್ತ, ರಾಗಿ, ಜೋಳ, ಹುರುಳಿ ಇತ್ಯಾದಿ ಬೆಳಸನ್ನು ಕಟಾವು ಮಾಡಿ, ಒಣಗಿದ ಮೇಲೆ ಕಂತೆಗಳನ್ನಾಗಿ ಕಟ್ಟಿ, ಒಕ್ಕಣೆ ಮಾಡುವ ಕಳಕ್ಕೆ ಸಾಗಿಸಿ ಮೆದೆಗಳನ್ನು ಹಾಕುವುದು; Stack (after harvesting paddy, Ragi, Horsegram, Maize etc);
- ಕಳ(ಕಣ) ಖಾಲಿಯಾದಂತೆ ಮೆದೆಯ ಧಾನ್ಯಗಳನ್ನು ಒಕ್ಕಣೆ ಮಾಡುತ್ತಾ ಹೋಗುವುದು ವಾಡಿಕೆ.

ಕೊಟ್ಟಡಕೆ/ಕೊಟ್ಟಡಿಕೆ koṭṭaḍake/ koṭṭaḍike :

- ಒಣಗಿದ ಅಡಿಕೆ; Parched/dried areca nut(in small pieces);
- ಅಡಿಕೆಕಾಯಿಯನ್ನು ಸಣ್ಣದಾಗಿ ಕೊಚ್ಚಿ/ಕತ್ತರಿಸಿ, ನಂತರ ಬೇಯಿಸಲಾಗುತ್ತದೆ; ಬೆಂದ ಅಡಿಕೆ ಚೂರು ತೆಗೆದು, ಕುದಿಸಿದ ಅಡಿಕೆ ಬೆಂದ ನೀರಿನಿಂದ ಬಣ್ಣ ಕಟ್ಟಲಾಗುತ್ತದೆ; ನಂತರ ಅಡಿಕೆ ಚೂರುಗಳನ್ನು ಚೆನ್ನಾಗಿ ಒಣಗಿಸಲಾಗುತ್ತದೆ; ಒಣಗಿದ ಅಡಿಕೆಯನ್ನು ಕೊಟ್ಟಡಕೆ/ಕೊಟ್ಟಡಿಕೆ ಎಂದು ಕರೆಯುತ್ತಾರೆ.

ಕೊಟ್ಟಣ/ಕೊಟ್ನ/ಕೊಟ್ಲ koṭṭaṇa/koṭṇa/ koṭla :

- ಕಾಲಿನಿಂದ ಒತ್ತಿ ಬತ್ತವನ್ನು ಕುಟ್ಟಲು ಬಳಸುವ ಮರದ ಸಾಧನ; A wooden tool to bind the hay, specially paddy straw;
- ಕುಟ್ಟುವಿಕೆ; ಭತ್ತ ಕುಟ್ಟುವ ಒರಳು;
- ದವಸ ಧಾನ್ಯಗಳನ್ನು ಕುಟ್ಟಿ ಸಿಪ್ಪೆಯಿಂದ ಕಾಳನ್ನು ಬೇರ್ಪಡಿಸುವುದು(ಶಿ.ಜಿ.); An act of separating grain from the husk chaff(pound, beat, pummel)
- ಭತ್ತ ಕುಟ್ಟುವ ವಿಶೇಷವಾದ ಸಾಧನ(ಮಂಡ್ಯ.ಜಿ./ ಮೈ.ಜಿ./ಚಾ.ಜಿ.);
- ಅರವತ್ತು ಸೇರಿನ ಅಳತೆ, ಇಪ್ಪತ್ತೊಂದು ಕೊಳಗ (ಕೃ.ಪ.ಕೋ); Unit of measurement(these two are not now in vogue);
- ಕೊಟ್ನ; ಬತ್ತ ಮೊದಲಾದವನ್ನು ಕುಟ್ಟುವ ಸಾಧನ; ಇದು ಕುಳ್ಳಾದ ಏತದ ಆಕಾರದಲ್ಲಿದ್ದು ಕಾಲಿನಲ್ಲಿ ಮೆಟ್ಟಿ ಬತ್ತ ಕುಟ್ಟುತ್ತಾರೆ; ಬಹು ಹಿಂದೆ ಬತ್ತ ಕುಟ್ಟಲು ಬಳಸುತ್ತಿದ್ದ ಕೊಟ್ಟಣದ ಪರಿಚಯವೇ ಈಗಿನವರಿಗೆ ಇಲ್ಲವಾಗಿದೆ; *ಪ್ರ: 'ಪಟ್ಟಣ ಆಳೋ ಅಪ್ಪನಿಗಿಂತ ಕೊಟ್ಟಣ ಕುಟ್ಟೋ ಅಪ್ಪ ಲೇಸು'(ಗಾ.); 'ಮಿಲ್ಲು ಬಂದು ಕೊಟ್ಲ ಮೂಲೆಗೆ ಬಿತ್ತು';*
- (ಬತ್ತ ಮೊದಲಾದವನ್ನು) ಕುಟ್ಟುವಿಕೆ; *ಪ್ರ: 'ವೇದ ಶಾಸ್ತ್ರ ಪುರಾಣಾಗಮಂಗಳೆಲ್ಲ ಕೊಟ್ಟಣವ ಕುಟ್ಟುತ್ತ ನುಚ್ಚು ತೌಡು ಕಾಣಿಭೋ'(ಅಕ್ಕನ ವಚನ);*
- ಕುಟ್ಟುವ ಸಾಧನ, ಕುಟ್ಟಾಣಿ; ಎಲೆ, ಅಡಿಕೆ ಮೊದಲಾದ ತಾಂಬೂಲ ಪದಾರ್ಥಗಳನ್ನು, ಚಕ್ಕೆ, ಲವಂಗ, ಏಲಕ್ಕಿ, ಜೀರಿಗೆ, ಮೆಣಸು ಮೊದಲಾದ ಸಾಂಬಾರ ಪದಾರ್ಥಗಳನ್ನು ಕುಟ್ಟಿ ಪುಡಿ ಮಾಡುವ, ಸಣ್ಣ ಗಾತ್ರದ ಸಾಧನಕ್ಕೂ ಕೊಟ್ಟಣ/ಕೊಟ್ಲ ಎನ್ನಲಾಗುವುದು; Pestle(and mortle), pounding instrument to pound, betel leaf, arecanut, cardamom, clove etc;
- ಅಪರೂಪಕ್ಕೆ ಕಂಚು ಮೊದಲಾದ ಲೋಹದಿಂದ ತಯಾರಿಸಿದ ಕೊಟ್ಟಣಗಳೂ ಕಾಣಸಿಗುತ್ತವೆ; ಲೋಹದ ಸಣ್ಣ ಕೊಟ್ಟಣಗಳಾದರೆ ಒರಳು ಮತ್ತು ದಿಂಡುಗಳನ್ನು ಸಣ್ಣ ಸರಪಳಿಯಿಂದ ಕೂಡಿಸಿರುತ್ತಾರೆ; ಒರಳು ಮತ್ತು ದಿಂಡು ಅಲ್ಲೊಂದು ಇಲ್ಲೊಂದು ಆಗಿ ಹುಡುಕಾಡುವಂತಾಗಬಾರದು; ಎರಡರಲ್ಲಿ ಯಾವೊಂದು ಇಲ್ಲವಾದರೂ ಉಪಯೋಗಕ್ಕೆ ಬಾರದು ಎಂಬ ಮುನ್ನೆಚ್ಚರ ಈ ಸರಪಳಿಯ ಬಂಧನ;
- ಒರಳುಕಲ್ಲಿನಲ್ಲಿ ಒನಕೆಯಿಂದ ಬತ್ತ ಕುಟ್ಟುವ ಕ್ರಿಯೆ ನಿಧಾನಗತಿಯದಾಗಿದೆ; ಹೆಚ್ಚು ಹೆಚ್ಚು ಬತ್ತವನ್ನು ಬಹಳ ಬೇಗ ಕುಟ್ಟಲು ಸಾಧ್ಯವಾಗುವಂತೆ ಈ ಕೊಟ್ಟಣ ಆವಿಷ್ಕಾರಗೊಂಡಿದೆ; ವಿವಿಧ ಗಾತ್ರ ಹಾಗು ಆಕಾರದ ಕೊಟ್ಟಣಗಳನ್ನು ಮರ, ಕಲ್ಲು, ಕಬ್ಬಿಣದಿಂದ ಮಾಡುತ್ತಾರೆ; ಧಾನ್ಯ ಕುಟ್ಟುವ ಒರಳು ಮತ್ತು ಕುಟ್ಟುವ ದುಂಡನೆಯ ಸಾಧನ ಎರಡೂ ಕೂಡಿ ಕೊಟ್ಟಣ ಎನಿಸಿಕೊಳ್ಳುತ್ತದೆ; ಒರಳಿಗೆ ಬಿದ್ದು ಕುಟ್ಟುವ

ಕೊಂತ ಮುಂದಿದ್ದರೆ, ಹಿಂದೆ ಒಬ್ಬ ವ್ಯಕ್ತಿ ಕೊಟ್ಟಣದ ಇನ್ನೊಂದು ತುದಿಯನ್ನು ಕಾಲಿನಿಂದ ಮೆಟ್ಟಿ ಕೊಂತ ಮೇಲೇರುವಂತೆ ಮಾಡುತ್ತಾನೆ; ಸುತ್ತಲೂ ಚೆಲ್ಲಿದ್ದ ಬತ್ತವನ್ನು ಅಲ್ಲೇ ಕುಳಿತು ಒರಳಿಗೆ ತಳ್ಳುತ್ತಿದ್ದಂತೆ ಮತ್ತೆ ಕೊಟ್ಟಣದ ಹಿಂದಿನ ತುದಿಯ ಮೇಲಿಂದ ಕಾಲು ತೆಗೆದರೆ ಸಾಕು ಕೊಂತ ಒರಳಿಗೆ ರಭಸವಾಗಿ ಬೀಳುತ್ತದೆ; ಇದರಿಂದ ಬತ್ತದ ಸಿಪ್ಪೆ ಕಳಚುತ್ತಾ ಅಕ್ಕಿಯಾಗುತ್ತದೆ; ಹೀಗೆ ಕೊಟ್ಟಣದಿಂದ ಕುಟ್ಟುವ ಕ್ರಿಯೆ ಸಾಗುತ್ತದೆ; Separating grain(paddy-rice) from husk in stone-mortar by pounding with the help of long wooden pestle;

- ಆಶ್ರಯ ಸ್ಥಾನ; ನೆಲೆ ಎಂಬ ಅರ್ಥಗಳೂ ಉಂಟು;
- ತಮಿಳು, ಮಲಯಾಳಂ, ತುಳುಗಳಲ್ಲಿ 'ಕೊಟ್ಟಣ' ಎಂಬ ರೂಪವೇ ದೊರೆಯುತ್ತದೆ;
- ***—ಕೊಟ್ಟಣಂಗುಟ್ಟು/ಕೊಟ್ಟಣಕುಟ್ಟು*** : ಬತ್ತವನ್ನು ಕುಟ್ಟಿ ಅಕ್ಕಿಯನ್ನು ಮಾಡುವುದು; beating/pounding;
- ಕೊಟ್ಟಣಮಂ+ಕುಟ್ಟು=ಕೊಟ್ಟಣಂಗುಟ್ಟು;
- to beat the husk from paddy(ಕಿಟ್ಟೆಲ್);
- ಕೊಟ್ಟಣ ಕುಟ್ಟು; ಕೊಟ್ಟಣಂ+ಕುಟ್ಟು=ಕೊಟ್ಟಣಂಗುಟ್ಟು/ ಕೊಟ್ಟಣಕುಟ್ಟು;
- *ಪ್ರ: 'ನಮ್ಮ ಜಂಗಮ ಲಿಂಗವ ದೈವವೆನ್ದಾರಾಧಿಸಿ ನಮ್ಮ ಶಂಕರ ದಾಸಿಮಯ್ಯಗಳು ಸರ್ವಭೂತಂಗಳ ಕೈಯಲ್ಲಿ ಕೊಟ್ಟಣವ ಕುಟ್ಟಿಸಲಿಲ್ಲವೆ? (ಚ.ಬ.ವ–೬೫೮); 'ಕೊಟ್ಟಣಾ ಕುಟ್ಟಿ ಮಿಣ್ಣನ ಸಾಕಿದ ಹಾಗೆ'(ಕಿ.ಕೋ.ಗಾ.)*
- ಮದುವೆ ಸಂದರ್ಭದಲ್ಲಿ ಗಂಡಿನ ಮನೆಗೆ ಹೆಂಗಸರು ಬಂದು ಮದುವೆಗಾಗಿ ಕೊಟ್ಟಣದಲ್ಲಿ ಕುಟ್ಟಿ ಅಕ್ಕಿ ಕೊಡುವುದು; ಒಬ್ಬೊಬ್ಬರು ಹದಿನಾರು ಸೇರು ಬತ್ತ ಕುಟ್ಟಿಕೊಡುವ ಪದ್ಧತಿ ಇತ್ತು;
- ***—ಕೊಟ್ಟಣಗಿತ್ತಿ*** : ಕೊಟ್ಟಣ ಕುಟ್ಟುವವಳು(ದ.ಕ.);
- ಕೊಟ್ಟಣ+ಗಿತ್ತಿ=ಕೊಟ್ಟಣಗಿತ್ತಿ; A female one who pounds pestle;
- ***—ಕೊಟ್ಟಣಗೇರಿ*** : ಕೊಟ್ಟಣದ + ಕೇರಿ = ಕೊಟ್ಟಣಗೇರಿ(ಕ>ಗ);
- ಕೊಟ್ಟಣದವರು ವಾಸ ಮಾಡುವ ಬೀದಿ; ಕೇರಿ;
- ಇಂತಿಷ್ಟು ಬತ್ತವನ್ನು ಕೊಟ್ಟಣದಲ್ಲಿ ಕುಟ್ಟಿಕೊಡಲು ಇಂತಿಷ್ಟು ಅಕ್ಕಿ ಕೊಡಬೇಕು ಎಂಬ ಒಪ್ಪಂದದ ಮೇರೆಗೆ ಬತ್ತವನ್ನು ಕುಟ್ಟಿಕೊಡುವ ವೃತ್ತಿಯವರು ಇರುವ ಬೀದಿ; A separate street for the persons who have the profession of pounding rice;
- ***—ಕೊಟ್ಟಣದ ಅಕ್ಕಿ*** : ಕೊಟ್ಟಣದ ಸಹಾಯದಿಂದ ಕುಟ್ಟಿ ತೆಗೆದ ಅಕ್ಕಿ; Rice separated from paddy by pounding/beating;
- ***—ಕೊಟ್ಲಾಕುಟ್ಟಿ*** : ಕೊಟ್ಲದ ಲೆಕ್ಕದಲ್ಲಿ ಕುಟ್ಟಿದ ಬತ್ತಕ್ಕೆ ಕೂಲಿ ಪಡೆಯುವುದು; ಐದು ಬಳ್ಳ ಬತ್ತ ಕುಟ್ಟಿದರೆ ಮಾಲೀಕರಿಗೆ ಎರಡು ಬಳ್ಳ ಅಕ್ಕಿಯನ್ನು ಕೊಟ್ಟು ಉಳಿದ ಅಕ್ಕಿ ಹಾಗು ನುಚ್ಚನ್ನು ಕೂಲಿಗಾಗಿ ತೆಗೆದುಕೊಳ್ಳುವುದು;
- ***—ಕೊಟ್ಲದ ಕೊಂತ*** : ಮೂಟೆಗಟ್ಟಲೆ ಬತ್ತ ಕುಟ್ಟಲು ಏತದಂತೆ ಕೊಟ್ಟಣ ಉಪಯೋಗಿಸುತ್ತಿದ್ದರು; ಈ ಕೊಟ್ಟಣದ ಕೊಂತದ ಭಾಗ ಇದು, ಮರದ್ದಾಗಿದ್ದು ತುದಿಗೆ ಕಬ್ಬಿಣದ ಬಳೆ ಅಳವಡಿಸಲಾಗಿರುತ್ತದೆ;
- ***—ಕೊಟ್ಲಹಾಕು*** : ಮದುವೆಗೆ ಬೇಕಾದ ಅಕ್ಕಿಯನ್ನು ಒರಳಿನಲ್ಲಿ ಕುಟ್ಟಿ ಶುದ್ಧಗೊಳಿಸಿ ಕೊಡುವಿಕೆ; ಒಂದು ಕೊಟ್ಲ ಎಂದರೆ ಹದಿನಾರು ಸೇರು ಅಳತೆ; ಈ ರೀತಿ ಒಪ್ಪ ಮಾಡಿಕೊಡುವವರಿಗೆ ಒಂದು ಕೊಟ್ಲಕ್ಕೆ ಎರಡು ಸೇರು ಅಕ್ಕಿ ಕೂಲಿ ಹಾಗು ಊಟ ನೀಡುವರು;
- ಮದುವೆ ಮನೆಯವರಿಗೆ ಅನುಕೂಲವಾಗುವಂತೆ ಕೊಟ್ಟಣದವರು ಸ್ಥಳದಲ್ಲಿ ಕೊಟ್ಟಣ ಹಾಕಿ ಬತ್ತ ಕುಟ್ಟಿಕೊಡುವ ಪದ್ಧತಿ;
- 'ಕೊಟ್ಲ' ಎನ್ನುವುದು ಒಂದು ವಿಶೇಷ ರೂಪ; ಣ>ಲ ಆಗಿದೆ; ಣ>ಳ ಆಗುವುದು ರೂಢಿಯಲ್ಲಿರುವುದರಿಂದ, ಅದರ ಸಾದೃಶ್ಯದ ಮೇಲೆ ಣ>ಲ ಆಗಿರಬಹುದು; ಣ>ಲ>ಳ ಇದು ಸಮೀಕರಣ ಸೂತ್ರ;
- ಕುಟ್ಟಣ>ಕೊಟ್ಟಣ ಆಗಿದೆ–ಕು>ಕೊ(ಉ>ಒ) ಆಗುವುದು; ಸ್ವರ ವ್ಯತ್ಯಯದ ಪರಿಣಾಮ;
- ಹಾಗೆಯೇ ಕುಟ್ಟುವ ಕ್ರಿಯೆಯನ್ನು ದಾಖಲಿಸುವ 'ಕೊಟ್ಟಾಣಿಕೆ' ಪದವಿದೆ, ಇದು 'ಕುಟ್ಟಣಿಕೆ'ಯಿಂದ ಬಂದುದಾಗಿರಬಹುದು; ಇದು ಕೂಡ ಸ್ವರ ವ್ಯತ್ಯಯದ ಪರಿಣಾಮವೇ.

ಕೊಟ್ಟಮನೆ/ಕೊಟ್ಟಮನಿ koṭṭamane/ koṭṭamani :

- ಹೆಣ್ಣು ಮದುವೆಯಾಗಿ ಸೇರಿದ ಮನೆ; ಗಂಡನಮನೆ; Married woman's residence(after her marriage at husband's house); wife's abode at her husband's house;
- ಕೊಟ್ಟ + ಮನೆ = ಕೊಟ್ಟಮನೆ > ಕೊಟ್ಟಮನಿ;
- ಉತ್ತರ ಪದದ ಮನೆ ಪ್ರಾದೇಶಿಕ ಭೇದದಿಂದಾಗಿ 'ಮನಿ' ಎಂದಾಗಿದೆ(ಮನೆ>ಮನಿ); Mane, home, house, residence becomes `mani' in North Karnataka language(Kannada);
- ಮಾತೃ ಪ್ರಧಾನ ಕುಟುಂಬಗಳು ಹೋಗಿ ಪುರುಷ ಪ್ರಧಾನ ಕುಟುಂಬಗಳು ಕಾಣಿಸಿಕೊಂಡಾಗ, ಹುಟ್ಟಿದ ಮನೆಯಿಂದ ಹೆಣ್ಣು ಮದುವೆಯಾಗಿ ಗಂಡನ ಮನೆಗೆ ಸೇರಿ ಅಲ್ಲಿ ಬಾಳುವಂತಹ ಪದ್ಧತಿ ಬೆಳೆದು ಬಂದಿತು; ಇದರಿಂದ ಹೆಣ್ಣಿನ ಪಾಲಿಗೆ ಹುಟ್ಟಿದ ಮನೆ ತವರು ಮನೆಯಾಗಿ, ಗಂಡನ ಮನೆ ಕೊಟ್ಟ ಮನೆಯಾಗಿ ಕರೆಯುವಂತಾಯಿತು. In the patriarchal society a married girl resides in the house of her husband.

ಕೊಟ್ಟಮುತ್ತು koṭṭmuttu :

ಮಜ್ಜಿಗೆ ಕಡೆಯುವ ಮಂತು; ಕಡೆಗೋಲು; ***ನೋಡಿ:*** ಕಡೆಗೋಲು. Churning rod, churning stick.

ಕೊಟ್ಟರಾಮೇನಹಳ್ಳಿ/ಕೋಡರಾಮೇನಹಳ್ಳಿ Koṭṭarāmēnahaḷḷi/ kōḍarāmēnahaḷḷi :

- ಹಾಸನ ಜಿಲ್ಲೆಯ ಕ್ರಿ.ಶ.೧೮–೧೯ನೇ ಶತಮಾನದ ೨೦೭ನೇ ಶಾಸನದಲ್ಲಿ ಕೋಡರಾಮೇನಹಳ್ಳಿ ಎಂಬ ಪ್ರದೇಶವನ್ನು ಹಿಂದೆ ಕೊಟ್ಟರಾಮೇನಹಳ್ಳಿ ಎಂದು ಕರೆಯಲಾಗುತ್ತಿತ್ತು ಎಂಬುದರ ಉಲ್ಲೇಖ ಈ ಶಾಸನದಲ್ಲಿದೆ; A village in Hassan district found in the 207th inscription of 18th-19th century;
- 'ಕೊಟ್ಟರಾಮೇನಹಳ್ಳಿ' ಹೆಸರೇ ಮುಂದುವರಿದು, 'ಕೊಟ್ಟ' ಪದದ ಟ>ಡ ಕಾರವಾಗಿ ಕೋಡರಾಮೇನಹಳ್ಳಿ ಎಂದು ರೂಪಾಂತರಗೊಂಡಿರಬೇಕೆಂದು ಕಾಣುತ್ತದೆ;
- ಕೊಟ್ಟ>ಕೊಡ ಆಗಿರುವುದಷ್ಟೇ ಅಲ್ಲ(ಟ>ಡ), ಅದರ ದ್ವಿತ್ವ ಹೊರಟುಹೋಗಿ, ಆ ಕಾರಣದಿಂದ ಅದರ ಹಿಂದಿನ ಅಕ್ಷರ ದೀರ್ಘ(ಕೋ)ವಾಗಿರುವುದೂ ಒಂದು ವೈಶಿಷ್ಟ್ಯವೇ; ಇಂತಹ ಎಲ್ಲ ಸಂದರ್ಭಗಳಲ್ಲಿಯೂ ಈ ಬದಲಾವಣೆ ಅನಿರೀಕ್ಷಿತವಲ್ಲ;
- 'ಕೊಟ್ಟ' ಎನ್ನುವುದಕ್ಕೆ 'ಕೋಟ' ಎನ್ನುವ ಅರ್ಥವೂ ಇರುವುದರಿಂದ('ಕೊಟ್ಟ'ಕ್ಕೆ 'ಕೋಟ್ಟ' ಎಂಬ ರೂಪವೂ ಇದೆ) ಇದು 'ಕೋಟೆರಾಮೇನಹಳ್ಳಿ' ಎಂದಿರಬಹುದೆ?
- 'ರಾಮೇನ' ಎಂಬುದು 'ರಾಮಯ್ಯನ' ಎಂಬುದರಿಂದ ಬದಲಾದುದು; ಅದರಿಂದ ವ್ಯಕ್ತಿವಾಚಕ ಸ್ಥಳನಾಮ.

(E.C- ೮; ಹಾ.ಜಿ.)

ಕೊಟ್ಟವೀಳ್ಯ koṭṭvīḷya :

- ಹೆಣ್ಣಿನವರು ಮಗಳನ್ನು ಧಾರೆಯೆರೆದು ಕೊಟ್ಟಿದ್ದನ್ನು ಸೂಚಿಸಲು ಗಂಡಿನವರಿಗೆ ನೀಡುವ ವೀಳ್ಯ;
- ಇದು ಮದುವೆ ಸಂದರ್ಭದಲ್ಲಿ ನಡೆಯುವ ಆಚರಣೆಗಳಲ್ಲಿ ಒಂದಾಗಿದೆ; ಹೆಣ್ಣನ್ನು ಧರೆಗೆ ಕರೆದು ತಂದು ಕೈಯ ಮೇಲೆ ಧಾರೆ ಎರೆದು ಮಗಳನ್ನು ಒಪ್ಪಿಸಿಕೊಡುವಾಗ ವಧುವಿನ ತಾಯಿ–ತಂದೆಯರು 'ನಮ್ಮ ಮಗಳಲ್ಲ ನಿಮ್ಮ ಮಗಳು' ಎಂದು ಹೇಳಿ ಸಂಪ್ರದಾಯವಾಗಿ ಕೊಡುವ ವೀಳ್ಯ ಇದಾಗಿದೆ;
- 'ಕೊಟ್ಟ' ಎಂಬುದು 'ಕುಡು/ಕೊಡು' ಧಾತುವಿನಿಂದ ಬಂದುದಾಗಿದೆ; ಕೊಟ್ಟ(<ಕೊಡು/ಕುಡು)+ವೀಳ್ಯ= ಕೊಟ್ಟವೀಳ್ಯ;
- 'ವೀಳ್ಯ' ಕೊಡುವ ಪದ್ಧತಿ ಯುದ್ಧಕ್ಕೆ ಹೋಗುತ್ತಿದ್ದ ವೀರರಿಗೆ ವೀಳ್ಯ ಕೊಡುವುದರಲ್ಲಿಯೂ ಚಾಲ್ತಿಯಲ್ಲಿತ್ತು(ಪ್ರಾಚೀನ ಕಾಲದಲ್ಲಿ); 'ರಣವೀಳ್ಯ' ಎಂಬ ಪದ ಪ್ರಚಲಿತವಿತ್ತು; ಸವಾಲು/ಆಹ್ವಾನ ಎಂಬ ಅರ್ಥದಲ್ಲಿ. Betel leaf and betel nut distribution of these on an auspicious occasion like wedding ceremony by bride's parents to the bridegrooms and used to give to the warriors at the time of battle or war.

ಕೊಟ್ಟಸ koṭṭasa :

- ಸುಟ್ಟ ಮಾಂಸ; ಬೇಯಿಸಿದ ಬಾಡು; Roasted meat, fried/boiled meat; especially pork;
- 'ಸುಂಟಗೆ', 'ಸುಡುಬಾಡು' ಎಂಬ ರೂಪಗಳೂ ಬಳಕೆಯಲ್ಲಿವೆ; ವಿಶೇಷವಾಗಿ ಹಂದಿಮಾಂಸದಲ್ಲಿ ಈ ಪದಗಳು ಹೆಚ್ಚು ಬಳಕೆ; 'ಸುಂಟಗೆ' ಎನ್ನುವ ಪದವಂತೂ ಹಂದಿಮಾಂಸದ 'ಬಾರ್'ಗೆ ಸಂಬಂಧಿಸಿದ್ದು;
- 'ಕೋಲ್ಬುಸ', 'ಕೊಡಸ' ಎಂಬೆರಡು ರೂಪಗಳು ಸಿಕ್ಕುತ್ತವೆ; ಕೋಲ್ಬುಸ– ಪ್ರಾಯಃ ಕೋಲಿನ ತುದಿಗೆ ಮಾಂಸವನ್ನು ಸಿಕ್ಕಿಸಿ ಬೆಂಕಿಯಲ್ಲಿ ಸುಡುತ್ತಿದ್ದುದನ್ನು ಹೇಳುತ್ತಿರಬಹುದು; 'ಕೊಡಸ'– 'ಕೊಟ್ಟಸ' ರೂಪದ ಪದ ಮಧ್ಯದ 'ಟ'ಕಾರಕ್ಕೆ 'ಡ'ಕಾರ ಬಂದು ಆದುದಾಗಿದೆ.

ಕೊಟ್ಟಸೋಗೆ koṭṭasōge :

- ಮೈಸೂರು ಜಿಲ್ಲೆ ಚಾಮರಾಜನಗರ ತಾಲ್ಲೋಕಿನ ಕ್ರಿ.ಶ.೧೪೨೨ರ ೩೭೨ನೇ ಶಾಸನದಲ್ಲಿ ಇದರ ಪ್ರಸ್ತಾಪ ಬಂದಿದೆ; A place in Chamarajanagara district, found in 372nd inscription of 1422AD;
- 'ಕೊಟ್ಟ' ಎಂದರೆ ವಾಸಸ್ಥಳ; 'ಸೋಗೆ' ಎಂದರೆ ನವಿಲು; ಅಂದರೆ ನವಿಲುಗಳು ವಾಸ ಮಾಡುವ ಸ್ಥಳ; A place peacocks live;
- ಈ ಹಿನ್ನೆಲೆಯಲ್ಲಿ ಇದೊಂದು ಪಕ್ಷಿವಾಚಕ ಸ್ಥಳನಾಮ;
- ವಿಜಯನಗರ ದೊರೆ ಇಮ್ಮಡಿ ದೇವರಾಯನ ಮಗನಾದ ಮುಮ್ಮಡಿ ಹರಿಹರನು 'ತೆರಕಣಾಂಬೆ ರಾಜ್ಯ'ವನ್ನು ಆಳುತ್ತಿದ್ದಾಗ ಮಲೆಯೂರಿನ ಕನಕಗಿರಿಯ ಶ್ರೀವಿಜೆಯ ದೇವರಿಗೆ 'ಕೊಟ್ಟಸೋಗೆ' ಆದಿಯಾಗಿ ದಾನ ನೀಡಿದ ವಿಚಾರವಿದೆ.

(E.C- ೪; ಮೈ.ಜಿ.)

ಕೊಟ್ಟಹೆಣ್ಣು koṭṭahennu :

- ಮದುವೆಯಾದ ಹೆಣ್ಣು; ಮದುವೆ ಮಾಡಿಕೊಟ್ಟ ಹೆಣ್ಣು; Married girl(woman);
- ಆರಂಭದಲ್ಲಿದ್ದ ಮಾತೃ ಪ್ರಧಾನ ವ್ಯವಸ್ಥೆಯ ಕುಟುಂಬಗಳು ಕ್ರಮೇಣ ಪಿತೃ ಪ್ರಧಾನ ವ್ಯವಸ್ಥೆಗೆ ತಿರುಗಿ ಸಾಮಾಜಿಕ ವ್ಯವಸ್ಥೆಯಲ್ಲಿ ಪುರುಷ ಪ್ರಧಾನನಾದನು; ಇಂತಹ ಕುಟುಂಬದಲ್ಲಿ ಹುಟ್ಟಿದ ಹೆಣ್ಣು ಪ್ರಾಪ್ತ ವಯಸ್ಸಿಗೆ ಬಂದಾಗ ಮದುವೆಯಾಗಿ ಗಂಡನ ಮನೆಯಲ್ಲಿ ಬಾಳುವಂತಾಯಿತು; ಅವಳು ತವರು ಮನೆಯಿಂದ 'ಕೊಟ್ಟ ಹೆಣ್ಣು' ಎನಿಸಿಕೊಂಡಳು; ಈ ಹಿನ್ನೆಲೆಯಲ್ಲಿ 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗು' ಎಂಬ ಗಾದೆ ಮಾತು ಕೂಡ ಹುಟ್ಟಿಕೊಂಡಿತು; In male dominated society married woman resides at her husband's house; they don't have right to property in Patriarchy;
- ಕೊಟ್ಟ ಹೆಣ್ಣಿಗೆ ತವರಿನ ಆಸ್ತಿಯ ಮೇಲೆ ಯಾವ ರೀತಿಯ ಹಕ್ಕೂ ಇಲ್ಲದಾಂತಾಗಿತ್ತು; ಆದರೆ ಇತ್ತೀಚೆಗೆ ತವರಿನ ಆಸ್ತಿಯ ಮೇಲೆ ಹೆಣ್ಣುಮಕ್ಕಳಿಗೂ ಆಸ್ತಿಹಕ್ಕು ಇರುವಂತೆ ಕಾನೂನಿನ ತಿದ್ದುಪಡಿಯಿಂದಾಗಿದೆ.

ಕೊಟ್ಟಳೆ koṭṭaḷe :

- ಕಷ್ಟ; ಚಳ್ಳೆ(ಚಳ್ಳೆ ಹಣ್ಣು ತಿನ್ನಿಸು, ಸತಾಯಿಸು ಎಂಬರ್ಥದಲ್ಲಿ)(ಪ.ಪ–೫೧೦/ಕೊಡ.ಜಿ.);

  Hardship, difficulty, torment or irritate, rag, play the devil, cheat;
- ಕೋಟಲೆ>ಕೊಟ್ಟಳೆ ಆಗಿರಬಹುದೆ?
- ಆದಿ 'ಓ' ಸ್ವರ ಹ್ರಸ್ವವಾಗಿ 'ಟ'ಕಾರಕ್ಕೆ ದ್ವಿತ್ವ ಉಂಟಾಗಲು ಕಾರಣವಾಗಿರುವಂತಿದೆ; ಪದಾಂತ್ಯದ 'ಲ'ಕಾರ 'ಳ' ಆಗಿರುವುದು ಸಾಮಾನ್ಯ ಪ್ರಕ್ರಿಯೆ; (ಕೋಟಲೆ>ಕೊಟ್ಟಳೆ; ಲ>ಳ);
- ಕೋಟಲೆ=ತೊಂದರೆ; ಕಷ್ಟ; ಹಿಂಸೆ; ಕಾಟ; 'ಕೊಟ್ಟಳೆ'ಗೂ ಇದೇ ಅರ್ಥ ಉಂಟಾಗುತ್ತದೆ;
- 'ಕೊಟ್ಟಳೆ' ಪದದ ಆದಿ ಸ್ವರ ದೀರ್ಘವಾಗಿ, 'ಟ'ಕಾರದ ದ್ವಿತ್ವ ಲೋಪವಾಗಿ 'ಕೋಟಲೆ' ಆಗಿರುವ ಸಾಧ್ಯತೆ ಇರಬಹುದು; (ಕೊಟ್ಟಳೆ>ಕೋಟಳೆ/ಕೋಟಲೆ); ಇದನ್ನು ಗಮನಿಸಿದರೆ 'ಕೊಟ್ಟಳೆ'ಯೇ ಮೂಲರೂಪವಿದ್ದು ಶಿಷ್ಟೀಕರಣಗೊಂಡು 'ಕೋಟಲೆ' ಆದಂತೆ ಕಾಣುತ್ತದೆ; *ಪ್ರ: 'ಅವನ ಕೊಟ್ಟಳೆ ಹೇಳತೀರದು'.*

ಕೊಟ್ಟಾರ koṭṭāra :

- ಕೋಟಾರ(ದ್ವಿತ್ವಾಕ್ಷರ ಸರಳವಾದಾಗ ಅದರ ಹಿಂದಿನ ಅಕ್ಷರ ದೀರ್ಘವಾಗುವುದು ಸಹಜ); ಕಣಜ,

ಉಗ್ರಾಣ, ಧಾನ್ಯಾಗಾರ, ಭಂಡಾರ ಎಂಬ ಅರ್ಥಗಳಿವೆ; Store, garner, granary;

- ಕೋಷ್ಠಾಗಾರ(ಸಂ)>ಕೋಠಾರ(ಮರಾ)>ಕೊಟ್ಟಾರ;
- ಧಾನ್ಯ ತುಂಬಿಡುವ ಕಣಜಕ್ಕೆ ಸಂಸ್ಕೃತದ ಪದ 'ಕೋಷ್ಠಾಗಾರ' ತದ್ಭವಗೊಂಡು 'ಕೊಟ್ಟಾರ'ವಾಗಿ ಬಳಕೆಗೆ ಬಂದಿದೆ;
- —*ಕೊಟ್ಟಾರಿ* : ಇದು ಸಂಸ್ಕೃತದ 'ಕೋಷ್ಠಾಗಾರಿನ್' ಪದದ ತದ್ಭವ ರೂಪವಾಗಿದೆ(ಕೋಷ್ಠಾಗಾರಿನ್(ಸಂ) ಕೊಟ್ಟಾರಿ);
- ಉಗ್ರಾಣದ ಅಧಿಕಾರಿ, ಧಾನ್ಯಾಗಾರದ ಮೇಲ್ವಿಚಾರಕ. Supervisor, caretaker of granary house, store.

ಕೊಟ್ಟಿ koṭṭi :

- ಖೊಟ್ಟಿ; ಸುಳ್ಳು; ಹಠಮಾರಿ(ಚಿ.ಪ.ಕೋ); Fake, something artificial;
- ಕೆಟ್ಟದ್ದು, ಖೊಟ್ಟಿ, ಲಜ್ಜೆ ಇಲ್ಲದ, ಖೊಟಾ; *ಪ್ರ: 'ಏಟ್ಟಿ ಗಂಡಂಗೆ ಕೊಟ್ಟಿ ಹೆಂಡತಿ'*(ಗಾ)(ದ.ಕ); Something not genuine, duplicate, saucy, brazen fellow;
- ಹಿಂದಿ/ಮರಾಠಿಯ 'ಖೋಟಾ' ಎಂಬ ಪದ ಅಪಭ್ರಂಶಗೊಂಡು 'ಖೊಟ್ಟಿ'ಯಾಗಿ ನಂತರ 'ಕೊಟ್ಟಿ'ಯಾಗಿದೆ; ಖೋಟಾ/ಖೊಟ್ಟಿ ಎಂದರೆ ನಿಜವಲ್ಲದುದು, ಮೋಸವುಳ್ಳದು, ಕಪಟತನವುಳ್ಳುದು, ನಿಲ್ಲದುದು ಎಂಬಿತ್ಯಾದಿ ಅರ್ಥಗಳು ಉಂಟಾಗುತ್ತವೆ; ಖೋಟಾ/ಖೊಟ್ಟಿ ನಾಣ್ಯ, ಖೋಟಾ ರೂಪಾಯಿ ಎಂಬುದು ಕೊಟ್ಟಿ ನಾಣ್ಯ, ಕೊಟ್ಟಿ ರೂಪಾಯಿ, ಮೋಸದ ನಾಣ್ಯ ಎಂಬರ್ಥಗಳಲ್ಲಿ ಕಂಡು ಬರುತ್ತದೆ; (ಖೋಟಾ(ಹಿಂ/ಮರಾ)>ಖೊಟ್ಟಿ>ಕೊಟ್ಟಿ);
- ಖೊಟ್ಟಿ; ಕೆಟ್ಟವ್ಯಕ್ತಿ; ಅಶ್ಲೀಲ ವ್ಯಕ್ತಿ; ನಾಚಿಕೆಗೇಡಿ(ಕ.ನಿ.);
- ಕೊಟ್ಟಿ ವ್ಯಕ್ತಿ; ಮೋಸಗಾರ ಎಂಬ ಅರ್ಥದಲ್ಲಿ ಕೂಡ ವ್ಯಕ್ತಿ ಸಂಬಂಧವಾಗಿಯೂ ಹೇಳುವುದುಂಟು;
- ಹಿಂಸೆ; ಕೊಲೆ(ಕ.ನಿ.);
- ತರಗೆಲೆ ಸಾಗಿಸಲು ತೆಂಗಿನ ಮಡಲನ್ನು ಮಡಚಿ ಮಾಡಿದ ಸಾಧನ(ಕೃ.ಪ.ಕೋ);
- ಕೊಟ್ಟಿ, ಕೊಟ್ಟೆ- ಒಂದೇ ಅರ್ಥದ ವ್ಯತ್ಯಯ ರೂಪಗಳಿರಬಹುದು; ಸಾಮ್ಯ ಆಕಾರದ ಭಿನ್ನಗಾತ್ರದ, ಭಿನ್ನ ಬಳಕೆಯ ಸಾಧನಗಳಿಗೆ ಪ್ರಯೋಗವಾಗುವಂತೆ ಕಾಣುತ್ತದೆ; ಉದಾ: ಕೊಟ್ಟಿ=ತರಗೆಲೆ ಸಾಗಿಸಲು ತೆಂಗಿನ ಮಡಲು(ಗರಿ/ಮೊಟ್ಟೆ?) ಮಡಚಿ(ಹೆಣೆದು?) ಮಾಡಿದ ಸಾಧನ; ಅಂದರೆ ದೊಡ್ಡ ಕೊಟ್ಟೆ; ಕೊಟ್ಟೆ=ದೊನ್ನೆ(ಊಟದಲ್ಲಿ ಬಳಕೆ);
- —*ಕೊಟ್ಟಿಕಡ್ಡಿ* : ಕೊಟ್ಟಿ/ಕೊಟ್ಟೆಯನ್ನು ಮಾಡಲು ಬಳಸುವ ಬಿದಿರಿನ ಸಣ್ಣಕಡ್ಡಿ;
- —*ಕೊಟ್ಟಿರೊಟ್ಟಿ/ಕೊಟ್ಟೆರೊಟ್ಟಿ* : ಹಲಸಿನ ಎಲೆಯ ಕೊಟ್ಟಿ/ಕೊಟ್ಟೆ ಬಳಸಿ ಮಾಡುವ ರೊಟ್ಟಿ(ಉ.ಕ.ಜಿ./ದ.ಕ.);
- ಹಲಸಿನ ಎಲೆಯನ್ನು ಕೊಟ್ಟೆ ರೂಪದಲ್ಲಿ ಹೆಣೆದು, ಅಕ್ಕಿ ಮತ್ತು ಉದ್ದನ್ನು ಬೆರೆಸಿ ಮಾಡಿದ ಹಿಟ್ಟಿಗೆ ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ, ಹಲಸಿನ ಕೊಟ್ಟೆಯಲ್ಲಿ ಹಾಕಿ ಹಂಡೆ ಅಥವಾ ದೊಡ್ಡದಾದ ಮಡಕೆಯಲ್ಲಿ ಉಗಿಯಿಂದ ಬೇಯಿಸುವ ಒಂದು ಬಗೆಯ ರೊಟ್ಟಿ; ಇದನ್ನು ಕೊಟ್ಟಿ/ಕೊಟ್ಟೆ ರೊಟ್ಟಿ ಎನ್ನುತ್ತಾರೆ.

ಕೊಟ್ಟಿಗನೂರು koṭṭiganūru :

- ಬಳ್ಳಾರಿ ಜಿಲ್ಲೆ ಹಡಗಲಿ ತಾಲ್ಲೋಕಿನ ಕ್ರಿ.ಶ.೧೧೪೮ರ ೮೧ನೇ ಶಾಸನದಲ್ಲಿ ಇದರ ಉಲ್ಲೇಖ; A place in Bellary district found in 81st inscription of 1148AD;
- ವಿವಿಧ ಕಾಲಗಳಲ್ಲಿನ ದಾನಗಳ ಪ್ರಸ್ತಾಪ; ಚಾಳುಕ್ಯ ವಂಶಾವಳಿಯ ಉಲ್ಲೇಖ; Donated place;
- ಹೂವಿನ ಹಡಂಗಿಲೆಯ ಉತ್ತರಕ್ಕಿದ್ದ ಕೋಟಿಶಂಕರ ದೇವರ ಸೇವಾಕಾರ್ಯಕ್ಕೆ ಮತ್ತು ಬ್ರಾಹ್ಮಣರ ಆಹಾರಕ್ಕೆ ಚಾಳುಕ್ಯ ವಿಕ್ರಮಾದಿತ್ಯನು 'ಕೊಟ್ಟಿಗನೂರು' ಗ್ರಾಮವನ್ನು ದಾನ ಮಾಡಿದ ಉಲ್ಲೇಖ;
- ಕೋಟಿಶಂಕರದೇವ ಎಂದಿರುವುದರಿಂದ 'ಕೋಟಿ'ಯಿಂದ 'ಕೊಟ್ಟಿ'>ಕೊಟ್ಟಿಗ>ಕೊಟ್ಟಿಗ ಆಗಿ, 'ಊರು' ಸೇರಿಕೊಂಡಿರಬಹುದು;
- ದಾನದ ಹಿನ್ನೆಲೆ ಈ ಹೆಸರಿನ ಹಿಂದೆ ಇದೆ; 'ಕೊಟ್ಟಿಗ' ಎಂದರೆ ಕೊಡ ಮಾಡಿದ, ನೀಡಿದ ಎಂಬ ಅರ್ಥವಿದೆ;
- ಕೊಟ್ಟಿಗನ+ಊರು ಎಂದಾಗುವುದು; 'ಕೊಟ್ಟಿಗ' ಮತ್ತು 'ಊರು' ಪದಗಳ ನಡುವೆ 'ನ್'ಕಾರ ಬಂದಿರುವುದನ್ನು ನೋಡಿದರೆ, ಈ 'ನ'ಕಾರ ದಾನ ನೀಡಿದವರ ಹೆಸರನ್ನು ಸೂಚಿಸುತ್ತಿರಬಹುದು; ಈಗಾಗಲೇ 'ವಿಕ್ರಮಾದಿತ್ಯ'ನ ಹೆಸರು

ಪ್ರಸ್ತಾಪಿತವಾಗಿರುವುದರಿಂದ, ಅವನಿಗೂ ಆ ಊರಿಗೂ ಸಂಬಂಧ ಕಲ್ಪಿಸಬಹುದಾದ ಸಾಧ್ಯತೆ ಇದೆ.

(ಕ.ವಿ.ವಿ.ಶಾ.ಸಂ.೧; ಬ.ಜಿ.)

ಕೊಟ್ಟಿಗೆ/ಕೊಟ್ಟಗೆ/ಕೊಟಗೆ/ಕೊಟಗಿ/ಕೊಟ್ಗೆ
kottige/kottage/kotage/kotagi/kotge :

- ದನಗಳನ್ನು ಕಟ್ಟುವ ಸ್ಥಳ; ದಾವಣಿ; ದನ, ಕರು, ಕುರಿ, ಕೋಳಿ ಮೊದಲಾದ ಸಾಕುಪ್ರಾಣಿಗಳನ್ನು ಕೂಡುವ/ಕಟ್ಟುವ ಮನೆ/ಮನೆಯ ಭಾಗ; ಹಟ್ಟಿ; ದನದ ಹಟ್ಟಿ; Cattle-shed, stall for cattle, canopy made with(coconut) thatch pandal; out-house;
- ಗರಿಗಳನ್ನು ಹೊದಿಸಿದ ವಾರೆ ಚಪ್ಪರ(ಶಿ.ಜಿ.); ಒಪ್ಪಾರು(ಮಂಡ್ಯ.ಜಿ.);
- ಬೇಟೆಯ ಪ್ರಾಣಿಗಳನ್ನು ಸುಟ್ಟು ಹಸಿಗೆ(ಹಂಚಿಕೆ/ಪಾಲು) ಮಾಡುವ ಮನೆ(ಬೇ.ಸಾಂ.ಪ.ಕೋ); A place(room) to share meat(of prey) in a measured proportion;
- ಮನೆಯಾಚೆಯ ಕೊಠಡಿ(ಹ.ಶೋ.ಪ.); ಮನೆಯ ಒಂದು ಪಾರ್ಶ್ವಕ್ಕೆ ಹೊಂದಿಕೊಂಡಂತೆ ಸೂರು ಇಳಿಸಿ, ಸೀಮೆ ಹೆಂಚು/ನಾಡ ಹೆಂಚು/ಬೋದೆ ಹುಲ್ಲು ಅಥವಾ ತೆಂಗಿನ ಗರಿ ಅಥವಾ ಒಡಕೆ ಹುಲ್ಲನ್ನು ಚಾವಣಿಗೆ ಹೊದಿಸಿ ನಿರ್ಮಿಸಿಕೊಂಡ ಚಿಕ್ಕಹಟ್ಟಿ; ಒಸಾರು/ಒಪಾರು; out house;
- ಕಣಜ, ಧಾನ್ಯಾಗಾರ; Granary, garner;
- ಇಡ್ಲಿ/ಕಡುಬು/ಅಕ್ಕಿಯ ಕಡುಬು/ಕೊಟ್ಟೆ; ಉದ್ದಿನ ತಿಂಡಿ; A dish made with batter(a liquid mixture of rice flour) prepared on auspicious occasions;
- ಗೊಂಡರು ದೀಪಾವಳಿ ಹಾಗೂ ಸಂಕ್ರಾಂತಿ ಹಬ್ಬಗಳಲ್ಲಿ ಮಾಡುವ ಒಂದು ಬಗೆಯ ತಿಂಡಿ(ಉ.ಕ.ಜಿ);
- *ಪ್ರ: 'ನಿಷ್ಠೆಯಿಲ್ಲದವನ ಶಿವಪೂಜೆ–ಹಾಳೂರ ಕೊಟ್ಟಗೆ ಬೆಂದಂತೆ ಸರ್ವಜ್ಞ'(ಸ.ವ); 'ಹುಟ್ಟಗೆ ಅಳಿವಕ್ಕು ಕೊಟ್ಟಗೆ ಕೆಸರಕ್ಕು ಬಟ್ಟಲ ಮೇಲೆ ಗಿಳಿ(ತಿಳಿ)ಯಕ್ಕು–ತೋಟದೊಳಿಟ್ಟಗೆಯಕ್ಕು ಸರ್ವಜ್ಞ(ಸ.ವ); 'ದೀಪಾವಳಿಗೆ ... ಕೊಟ್ಟಿಗೆ ಮಾಡ್ತವು'(ಕಾ.ಗೋ); 'ಹುಡುಗಿ ಕೊಟಗಿ ಸ್ವಚ್ಛ ಮಾಡ್ಬೇಕು'(ಬಾ.ಜಿ.); 'ಕೊಟ್ಟೆಲ್ ಅತ್ತಳ ಕೂಟಿತ್'(ಕೊಡ.ಜಿ.); 'ದ್ಯನಗಳೆಲ್ಲ ಕೊಟ್ಗಿಗ್ ಬಂದುವನಾ'(ಉ.ಜಿ.); 'ಅಲ್ಲಲ್ಲೇ ಕಸ ಹಾಕಿ ಒಳ್ಳೆ ದನದ್ ಕೊಟ್ಗೆ ಕಣಂಗ್ ಆಯಿತ್'(ಉ.ಜಿ.);*
- ಕನ್ನಡದ ಪ್ರಾದೇಶಿಕ ಉಪಭಾಷೆಗಳಲ್ಲೂ, ಸಮುದಾಯ ಉಪಭಾಷೆಗಳಲ್ಲೂ 'ಕೊಟ್ಟಿಗೆ' ಪದ ಬಳಕೆಯಲ್ಲಿರುವುದು ಕಂಡುಬರುತ್ತದೆ; ಬಳಕೆಯ ವ್ಯಾಪಕತೆಗೆ ಇದು ಸಾಕ್ಷಿ; ಗೋವಳಿಗ ವೃತ್ತಿ, ವ್ಯವಸಾಯ ಸಂಸ್ಕೃತಿಯ ವ್ಯಾಪಕತೆಯನ್ನು ಇದು ಸೂಚಿಸುತ್ತದೆ; ಕೊಟ್ಟಿಗೆ ಬೇಸಾಯ ಸಂಸ್ಕೃತಿಯ ಸಂಪತ್ತು ಸಮೃದ್ಧಿಯ ಸೂಚಕವೂ ಆಗಿತ್ತು; ಕೊಟ್ಟಿಗೆಯಲ್ಲಿ ದನಕರುಗಳು, ಆಡುಕುರಿಗಳು, ಕೋಳಿಕೊಕ್ಕಗಳು ಹೆಚ್ಚಿದಷ್ಟೂ ಮನೆಯ ವಹಿವಾಟು(ವ್ಯೆವಾಟು) ಹೆಚ್ಚುತ್ತಿದೆ ಎಂದೇ ಅರ್ಥ;
- ಕೊಟ್ಟಿಗೆಯ ದನಗಳ ಮೇವು, ಉರುವಲು, ವ್ಯವಸಾಯೋಪಕರಣ ಇತ್ಯಾದಿ ಪೂರಕ ವಸ್ತುಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳುವ ಸ್ಥಳವೂ ಹೌದು;
- ಎಮ್ಮೆ, ಹಸು, ಎತ್ತುಗಳನ್ನು ಕೊಟ್ಟಿಗೆಯಲ್ಲಿ ಪೂರ್ವಾಭಿಮುಖವಾಗಿಯೇ ನಿಲ್ಲಿಸಿ ಗೊಂತಿಗೆ ಕಟ್ಟಬೇಕೆಂದು ನಂಬಿಕೆ; ಹೀಗಾಗಿ ಗೊಂತು/ದಾವಣಿ ಕೊಟ್ಟಿಗೆಯ ಪೂರ್ವ ಪಾರ್ಶ್ವಕ್ಕೇ ಇರುವುದು ಸಾಮಾನ್ಯ; ಕೊಟ್ಟಿಗೆ ಮನೆಯ ಹೊರಗೆ ಪಶ್ಚಿಮ ಪಾರ್ಶ್ವಕ್ಕೆ ಇದ್ದರೂ, ಗೊಂತು ಮಾತ್ರ ಆ ಕೊಟ್ಟಿಗೆಯ ಪೂರ್ವಪಾರ್ಶ್ವಕ್ಕೇ ಇರುತ್ತದೆ;
- ಎದ್ದ ತಕ್ಷಣ ದನಗಳ ಮುಖ ನೋಡಬೇಕೆಂದು ನಂಬಿಕೆ ಇರುವುದರಿಂದಲೂ, ದನಗಳ ಮೇಲಿನ ಕಾಳಜಿಯಿಂದಲೂ ಸಾಮಾನ್ಯವಾಗಿ ಕೊಟ್ಟಿಗೆ ರೈತಾಪಿಗಳ ವಾಸದ ಮನೆಯೊಳಗೇ ಇರುತ್ತಿತ್ತು; ಹಲವೆಡೆ ಈಗಲೂ ಇದೆ; ಬಯಲು ಸೀಮೆಯಲ್ಲಿ ಈ ಪ್ರವೃತ್ತಿ ಸಾಮಾನ್ಯ; cattle-shed is an important place in the life of farmers; in the agrarian society the cow-shed/cattle-shed are one among the rooms such as kitchen, bedroom and bathroom;
- ಕೊಟ್ಟಿಗೆ ಪದದ ಮೂಲ ರೂಪ 'ಕೊಟ್ಟ'; ಇದಕ್ಕೆ 'ಇಗೆ' ಪ್ರತ್ಯಯ ಸೇರಿ 'ಕೊಟ್ಟಿಗೆ' ಆಗಿ ಪ್ರಾದೇಶಿಕ ಉಚ್ಚಾರಣಾ ವ್ಯತ್ಯಯದಿಂದ ಕೊಟ್ಟಗೆ, ಮೊದಲಾದ ವ್ಯತ್ಯಯ ರೂಪಗಳು ಕಾಣಿಸಿಕೊಂಡಿವೆ; 'ಕೊಟ್ಟ'

ಪದಕ್ಕೆ 'ಗೆ' ಪ್ರತ್ಯಯ ಸೇರಿ 'ಕೊಟ್ಟಿಗೆ' ಎಂದೂ ಆಗಿರಬಹುದು; ಕೊಟ್ಟ+ಗೆ=ಕೊಟ್ಟಗೆ; ಕೊಟ್ಟ+ಇಗೆ= ಕೊಟ್ಟಿಗೆ;
- ಕಿಟ್ಟೆಲ್ 'ಕೊಟ್ಟ' ಎಂಬುದಕ್ಕೆ 'ಆಕಳುಗಳು ಇರುವ ಕೊಟ್ಟವು' ಎಂಬ ವಿವರ ನೀಡಿದ್ದಾನೆ;
- ತಮಿಳು, ಮಲಯಾಳಂಗಳಲ್ಲಿ ಕೊಟ್ಟಗ, ಕೊಟ್ಟಗ್ಗೈ, ಕೊಟ್ಟಗಂ ರೂಪಗಳಿವೆ; ತೆಲುಗಿನಲ್ಲಿ ಕೊಟ್ಟಮು, ಕೊಟ್ಟಾಮು ಎಂಬ ಪದಗಳಿವೆ; ಕೊಡವ: ಕೊಟ್; ತುಳು: ಕೊಟ್ಟ/ಕೊಟ್ಟ್ಯ; ಕೊಟ್ಟ, ಕೊಟ್ಟಗ ಮೂಲರೂಪಗಳಾಗಿದ್ದು ಕೊಟ್ಟಿಗೆ, ಕೊಟ್ಟಗೆ ರೂಪಗಳು ಸಿದ್ಧವಾಗಿರುವಂತೆ ತೋರುತ್ತದೆ;
- ಕೊಟ್ಟಗೆ<ಕೊಟ್ಟವಗೆ<ಕೊಟ್ಟವನಿಗೆ; = ನೀಡಿದವನಿಗೆ ಎಂಬ ಅರ್ಥ ಉಂಟಾಗುತ್ತದೆ; ಇದು ಸಾಪೇಕ್ಷ ಕ್ರಿಯಾ ರೂಪವಾಗಿದೆ.
- ***—ಕೊಟ್ಗೆಗೊಬ್ರ*** : (< ಕೊಟ್ಟಿಗೆ ಗೊಬ್ಬರ); ಕೊಟ್ಟಿಗೆಯಲ್ಲಿ ದೊರೆತ ಗೊಬ್ಬರ; ಕೊಟ್ಟಿಗೆಯಲ್ಲಿ ಕಟ್ಟಿದ ದನಕರುಗಳು, ಎಮ್ಮೆ, ಆಡುಕುರಿಗಳು ಹಾಕಿದ ಸೆಗಣಿ, ಹೊಯ್ದ ಗಂಜಲ, ಜಾನುವಾರುಗಳು ತಿಂದು ಬಿಟ್ಟ ಹುಲ್ಲು ಸೊಪ್ಪು, ಕಸಕಡ್ಡಿಗಳನ್ನು ತಿಪ್ಪೆಯಲ್ಲಿ ಸಂಗ್ರಹಿಸಿದ್ದು; ಬೇಸಾಯದ ಭೂಮಿಯ ಫಲವತ್ತತೆಯನ್ನು ಹೆಚ್ಚಿಸಿ ಉತ್ತಮ ಫಸಲು ಪಡೆಯಲು ಕೊಟ್ಟಿಗೆ ಗೊಬ್ಬರ ಒಳ್ಳೆಯ ಸಾಧನ; ಬೆಳೆಗಳಿಗೆ ಶ್ರೇಷ್ಠ ದರ್ಜೆಯ ಪೋಷಕಾಂಶಗಳನ್ನು ಒದಗಿಸುವ ಇದನ್ನು ಉಳುಮೆ ಮಾಡುವಾಗ ಬೇಸಾಯದ ಭೂಮಿಗೆ ಹರಡಿ ಮಣ್ಣಿನಲ್ಲಿ ಬೆರೆಸುತ್ತಾರೆ; Manure, compost, fertilizer especially of cattle dung, fecal matter of animals and remnant of fodder especially hay and other plants(leaves);
- ***—ಕೊಟ್ಗೆಮನೆ*** : (< ಕೊಟ್ಟಿಗೆ ಮನೆ); ಜಾನುವಾರುಗಳನ್ನು ಕಟ್ಟುವ ಕೊಟ್ಟಿಗೆಗಾಗಿ ನಿರ್ಮಿಸಿದ ಮನೆ; ಕೊಟ್ಟಿಗೆ ಇರುವ ಮನೆ; Cattle shed/cow-shed;
- 'ಕೊಟ್ಟಿಗೆ' ಸಂಸ್ಕೃತಿ ಹಳ್ಳಿಗಳಲ್ಲಿಯೇ ಮಾಯವಾಗುತ್ತಿದೆ; ದನಕರುಗಳನ್ನು ಸಾಕುವುದು ಕಡಿಮೆಯಾಗುತ್ತಿರುವುದು ಕಾರಣ; 'ಯಂತ್ರ ಸಂಸ್ಕೃತಿ' ಇದಕ್ಕೆ ಬದಲಿ ವ್ಯವಸ್ಥೆಯಾಗಿದೆ.

ಕೊಟ್ಟಿಗೆ ಮುರ kot̤t̤ige mura :
- ಒಂದು ಬಗೆಯ ಕಿವಿಯ ಆಭರಣ; ಗಂಡಸರು ಮೇಲ್ಕಿವಿಗೆ ಧರಿಸುವ ಆಭರಣ(ಶಿ.ಜಿ.); Jewellery to adorn the ear(earring);
- ಕೊಟ್ಟಗೆ ಮುರ, ಕೊಟ್ಗೆಮುರ ಎಂದು ಕರೆಯುವುದೂ ಉಂಟು; ವಿಶೇಷವಾಗಿ ಮಲೆನಾಡಿನಲ್ಲಿ ಬಳಕೆಯಲ್ಲಿರುವ ಕಿವಿಯ ಆಭರಣ ಇದು. Usually males of Shimoga district, Karnatka state clipped to the upper earlobe;

ಕೊಟ್ಟಿಗೇನಹಳ್ಳಿ kot̤t̤igēnahal̤l̤i :
- ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ಮಠದಲ್ಲಿರುವ ಕ್ರಿ.ಶ.೧೭೬೦ ಒಂದನೆಯ ತಾಮ್ರ ಶಾಸನ(ಸಂಖ್ಯೆ ೩೦)ದಲ್ಲಿ ಕೊಟ್ಟಿಗೇನಹಳ್ಳಿ ಎಂಬ ಗ್ರಾಮದ ಪ್ರಸ್ತಾಪವಿದೆ; A village in Chikkamagaluru district found in the inscription of 1760 A.D(at Shringeri Matt);
- 'ಕೋಟ್ಟಿಗೇನಹಳ್ಳಿ' ಎಂಬುದು ಕೊಟ್ಟಿಗೆ ಅಥವಾ ಕೊಡಿಗೆ(ಟ>ಡ)ಯಾಗಿ ಬಂದಿರುವಂತಹ ಅಥವಾ ಕೊಟ್ಟಿರುವಂತಹ ಗ್ರಾಮ ಎಂದು ಅರ್ಥವಿರುವುದರಿಂದ ಇದಕ್ಕೆ ಈ ಹೆಸರು ನಿಷ್ಪತ್ತಿಯಾಗಿರಬಹುದು.

(E.C- ೧೧; ಚಿಕ್ಕ.ಜಿ.)

ಕೊಟ್ಟಿಮಣ್ಣು kot̤t̤iman̤n̤u :
- ಒಂದು ಬಗೆಯ ಮಣ್ಣು(ಶಿ.ಜಿ.); A kind of soil; Clod, a lump of earth or clay;
- ಹೆಂಟೆ ಮಣ್ಣು(ಕೃ.ಪ.ಕೋ);
- ಹೆಂಟೆ ಕೆಂಟೆಯಾಗಿರುವ ಮಣ್ಣು; ಉಳುಮೆ ಮಾಡಿದಾಗ ಹೆಂಟೆಯಾಗಿ ಏಳುವ ಮಣ್ಣನ್ನು ಕುಟ್ಟಿ ಪುಡಿ ಮಾಡುತ್ತಾರೆ.

ಕೊಟ್ಟಿರೋಗ kot̤t̤irōga :
- ಭತ್ತದ ಬೆಳೆಗೆ ಪ್ರಾದೇಶಿಕವಾಗಿ ತಗಲುವ ಒಂದು ರೀತಿಯ ರೋಗ ಇದಾಗಿರುವಂತಿದೆ. A regional disease which affects paddy crop.

ಕೊಟ್ಟು koṭṭu :

- ದೋಣಿಯ ಮುಖ ಅಥವಾ ತುದಿ(ದ.ಕ.); The front part of a boat(bow);
- ಹಾರೆ, ಗುದ್ದಲಿ, ಸಲಿಕೆ(ಮಂ.ಜಿ./ಕೊಡ.ಜಿ.); Spade, forked stick;
- ಮಣ್ಣನ್ನು ಅಗೆಯುವ ಒಂದು ಸಾಧನ; ಗುದ್ದಲಿ; ತಮಿಳು: ಕೊಟ್ಟ್, ಕೊಟ್ಟು(ದ್ರಾ.ಭಾ.ಜ್ಞಾ.ಪ.ಕೋ);
- ಜಡೆ ಬಿಲ್ಲೆ(ಜ.ನಿ.);
- ಮರದ ಕವೆ(ತು.ಜಿ./ಮಂಡ್ಯ.ಜಿ./ಚಾ.ಜಿ.);
- ಮರದ ಕವೆಯನ್ನು ಕೊಳವೆ ಬಾವಿಯಲ್ಲಿ ಬಳಸುತ್ತಾರೆ;
- *ಪ್ರ: 'ಕಪಿಲೆಗೆ ಕೊಟ್ಟುಕೊಟ್ಟರೆ ಬಾವಿಗೆ ಹೊರೆ ಕಮ್ಮಿ';*
- ಒಣಗಿದ ಮರಗಳಲ್ಲಿ ಸಣ್ಣ ರಂಧ್ರಗಳನ್ನು ಕೊರೆದು ಮರವನ್ನು ತಿನ್ನುತ್ತ ಕಡಲೆ ಹಿಟ್ಟಿನ ತರಹದ ಪುಡಿಯನ್ನು ಉದುರಿಸುವ ಸೂಕ್ಷ್ಮ ಹುಳು;
- ಕುಟ್ಟೆ, ಕುಟ್ಟೆ ಹುಳು ಎಂದು ಮಂಡ್ಯ ಜಿಲ್ಲೆಯಲ್ಲಿ ಕರೆಯುವುದುಂಟು; Whitish soft bodied ant-like social insect that feeds on wood(termite);
- ನವಿಲು, ಕೋಳಿ ಮೊದಲಾದ ಪಕ್ಷಿಗಳ ತಲೆಯ ಮೇಲಿರುವ ಜುಟ್ಟು; Crest on the heads of peacock, hens and other birds;
- ಶಕುನದ ಹಕ್ಕಿ; A kind of omen bird;
- ಅಕ್ಷರಗಳ ತಲೆಕಟ್ಟು; A crest or sign added to the top of alphabet(for short Kannada vowel);
- ಒಂದು ಬಗೆಯ ವಾದ್ಯ; ತಮಟೆ, ಹರೆ; A kind of musical instrument;
- —***ಕೊಟ್ಟುಕ*** : ತಲೆಯ ಮೇಲೆ ಜುಟ್ಟುಳ್ಳ ಒಂದು ಪಕ್ಷಿ; A kind of bird with crest on the head;
- —***ಕೊಟ್ಟುಮಣೆ*** : ಒಂದು ಬಗೆಯ ವಿಶಿಷ್ಟ ಮರಗೆಲಸದ ಮಣೆ(ದ.ಕ.); A kind of low wooden seat uses in carpentry work;
- ಹಿಡಿ ಇರುವ ಉರುಟು ಮಣೆ(ಕಾ.ಗೋ)
- —***ಕೊಟ್ಟುದ ಕಡೆ*** : ಹಾರೆಯ ಹಿಡಿ(ದ.ಕ.), (ಕೃ.ಪ.ಕೋ.). Handle of a crowbar.

ಕೊಟ್ಟುಗೊರ್ಕೆ ಸೊಪ್ಪು koṭṭugorke soppu:

- ಒಂದು ಬಗೆಯ ಸೊಪ್ಪು; ಅಡುಗೆಗೆ ಬಳಕೆ (ಚಿತ್ರ.ಜಿ./ತು.ಜಿ.); A kind of leafy vegetable(leaves), uses in sambar and curry;
- ಈ ಸೊಪ್ಪಿನಿಂದ ಸಾರು ಮತ್ತು ಪಲ್ಯ ಮಾಡುತ್ತಾರೆ.

ಕೊಟ್ಟು ತರು koṭṭu taru :

- ಕೊಟ್ಟು ತರುವ ವೈವಾಹಿಕ ಸಂಬಂಧ; Give and take; a mutual marital relationship;
- ಎರಡೂ ಕಡೆಯಿಂದ ಪರಸ್ಪರ ವಧುವನ್ನು ಕೊಟ್ಟು, ತಂದುಕೊಳ್ಳುವ ಪದ್ಧತಿ;
- ಎರಡೂ ಮನೆಗಳವರಲ್ಲಿ ಮದುವೆಗೆ ಬಂದ ಗಂಡು, ಹೆಣ್ಣುಗಳಿದ್ದರೆ, ಸಂಬಂಧವನ್ನು ಮಾಡುವ ಸಂದರ್ಭದಲ್ಲಿ ಎರಡು ಮನೆಯವರಿಗೂ ಅನುಕೂಲವಾಗುವ ದೃಷ್ಟಿಯಿಂದ ಆ ಮನೆಯ ಹೆಣ್ಣನ್ನು ತಮ್ಮ ಮಗನಿಗೆ ತಂದುಕೊಂಡು, ತಮ್ಮ ಮನೆಯ ಹೆಣ್ಣನ್ನು ಆ ಮನೆಯ ಮಗನಿಗೆ ಕೊಟ್ಟು ಮದುವೆ ಮಾಡುವುದು; ಇದರಿಂದ ಆ ಕುಟುಂಬಗಳ ನಡುವಣ ಸಂಬಂಧ ಮತ್ತಷ್ಟು ಬಲಗೊಂಡಂತಾಗುತ್ತದೆ; Giving a girl in marriage to a member of another family and at the same time taking a girl from the same family to a member; this system advocates stronger relationships between both the families(bride's and bridegroom's);
- ಈ ಪದ್ಧತಿ ಬಹಳ ಹಿಂದಿನಿಂದಲೂ ರೂಢಿಯಲ್ಲಿದೆ; ಇದನ್ನು 'ಕೊಡುಕೊಳ್ಳುವ' ಪದ್ಧತಿಯೆಂದೂ ಕರೆಯುವುದುಂಟು; ಕೊಟ್ಟು ಪಡೆಯುವುದು; ಕೊಡುವ ಮತ್ತು ಪಡೆಯುವ ಸಮಾನ ಮನಸ್ಥಿತಿ;
- ವಧೂವರರಿಗೆ ಪರಸ್ಪರ ನೀಡುವ ಒಡವೆ ವಸ್ತ್ರಗಳು(ಬೆ.ಜಿ.).

ಕೊಟ್ಟುಬದುಕು koṭṭubaduku :

- ನಾಲ್ಕು ಜನರಿಗೆ ಸಹಾಯ ಮಾಡಿ ಜೀವನ ಮಾಡುವುದು; ನೆರವಾಗುವುದು; *ಪ್ರ:* '*ಅವನು ಊರಿಗೇ ಕೊಟ್ಟು ಬದುಕಿದವ*'(ಜ.ನು.ಕೋ.); Help, donate, helping hand, contribute, blood

donation, live and help other to live; an idiom in Kannada language;
- ದಾನ ಮಾಡುವುದರ ಮೂಲಕ ಇತರರು ಬದುಕಲು ಅನುಕೂಲ ಮಾಡಿಕೊಟ್ಟು ಇದರಿಂದಾಗಿಯೇ ತಾನು ಆಚಂದ್ರಾರ್ಕವಾಗಿ ಬದುಕುವುದು; ಕೀರ್ತಿವಂತನಾಗುವುದು;
- ರಕ್ತದಾನವೂ ಕೂಡ ಮುಖ್ಯವಾದುದು; ತನ್ನ ದೇಹದ ರಕ್ತ ನೀಡಿ ಬೇರೊಂದು ಜೀವವನ್ನು ಉಳಿಸುವುದು, ತಾನೂ ಆರೋಗ್ಯವಾಗಿ ಬದುಕುವುದು;
- ಇದು ನುಡಿಗಟ್ಟಾಗಿದೆ; ಸಮಾಜದ ಸ್ವಾಸ್ಥ್ಯಕ್ಕಾಗಿ 'ಕೊಟ್ಟು ಬದುಕು' ಎಂಬುದು ಒಂದು ಮಂತ್ರವಾಗಿದೆ; *ಪ್ರ: 'ಕರ್ಣನಂತೆ ಕೊಟ್ಟು ಬದುಕಿದವನೇ ಧನ್ಯ'.*

ಕೊಟ್ಟುಬುಡು/ಕೊಟ್ಬುಡು
koṭṭubuḍu/koṭbuḍu :
- ಇದು ಕುಡು/ಕೊಡು ಧಾತುವಿನಿಂದ ನಿಷ್ಪನ್ನವಾದ ಪದ; 'ಕುಡು' ರೂಪವೇ ಮೂಲ; 'ಕೊಡು' ಆಮೇಲೆ; ಕೊಟ್ಟು + ಬಿಡು = ಕೊಟ್ಟುಬಿಡು > ಕೊಟ್ಟುಬುಡು > ಕೊಟ್ಬುಡು; ('ಬಿಡು' ಮೂಲ ರೂಪ; 'ಬುಡು' ಉಚ್ಚಾರಣೆಯ ರೂಪ; 'ಬಿ'ನ 'ಇ' > 'ಬು'ನ 'ಉ' ಆಗಿದೆ;
- ಇನ್ನೊಬ್ಬರದನ್ನು ಏನನ್ನೂ ಇಟ್ಟುಕೊಳ್ಳದೆ ಕೊಡು ಎಂದು ಸೂಚಿಸುವುದಾಗಿದೆ;
- ಯಾರಾದರೂ ತಾವು ಕೊಟ್ಟ ಹಣ, ವಸ್ತು ಇತ್ಯಾದಿಯನ್ನು ಈ ಕ್ಷಣದಲ್ಲೇ ಕೊಡು ಎಂದು ಹೇಳುವಲ್ಲಿ 'ಈಗಲೇ ಕೊಟ್ಬುಡು' ಎಂದೆನ್ನುವ ಖಂಡಿತವಾದ ಮಾತು; Share, partition, give immediately sacrifice, give generously;
- ಅಪ್ಪ, ಮಕ್ಕಳ ನಡುವೆ ಸಂಬಂಧ ಕೆಟ್ಟಾಗ ಮಗ ಅಪ್ಪನಿಗೆ ತನಗೆ ಬರಬೇಕಾದ ಆಸ್ತಿಯ ಭಾಗವನ್ನು ಕೊಡುವಂತೆ ಹಕ್ಕೊತ್ತಾಯ ಮಾಡುವಾಗಿನ ಮಾತೂ ಕೂಡ ಆಗಿದೆ; *ಪ್ರ: 'ನನ್ನ ಪಾಲ್ನ ಈಗಲೇ ಕೊಟ್ಬುಡು, ಇನ್ನೊಂದು ಕ್ಷಣ ಈ ಮನೇಲಿ ನಾನಿರೋದಿಲ್ಲ'!*
- —*ಕೊಟ್ಟೇಬುಡ್ತಾ* : ಕೊಟ್ಟೇ ಬಿಡುವಾ(ಮಂಡ್ಯ.ಜಿ.); Giving away without hesitation;
- ಕುಡು/ಕೊಡು ಧಾತುವಿನಿಂದ ರೂಪುಗೊಂಡ ಪದ;
- ಪದೇ ಪದೇ ಕೇಳಿಸಿಕೊಳ್ಳದಂತೆ ಕೊಡಬೇಕಾದುದಲ್ಲವನ್ನೂ ಕೊಟ್ಟೇ ಬಿಡೋಣ ಎಂಬ ನಿರ್ಧಾರದ ಮಾತು; 'ಕೊಡು' ಮತ್ತು 'ಬಿಡು' ಎಂಬ ಎರಡು ಧಾತುಗಳಿಂದಾದ ಕ್ರಿಯಾರೂಪ;
- ಕೊಟ್ಟೇ + ಬಿಡುವಾ = ಕೊಟ್ಟೇಬಿಡುವಾ > ಕೊಟ್ಟೇಬುಡುವಾ > ಕೊಟ್ಟೇಬುಡ್ಮಾ; ಅಂತ್ಯದ 'ವ'ಕಾರಕ್ಕೆ 'ಮ'ಕಾರ ಪ್ರಯೋಗವಾಗಿರುವುದು ಸಹಜವಾದುದಾಗಿದೆ(ವ್>ಮ್); 'ವ್' ಅನುನಾಸಿಕ ಆಗಿರುವುದು ಇದಕ್ಕೆ ಕಾರಣ.

ಕೊಟ್ಟು ಹಿಡಿದುಕೊಳ್ಳು koṭṭu hiḍidukoḷḷu :
- ನೆರವು ನೀಡಿ ತನ್ನ ಕಡೆಗೆ ಮಾಡಿಕೊಳ್ಳುವುದು (ಚಿ.ಪ.ಕೋ); Intentional help;
- ಸಹಾಯ ಮಾಡಿದ ನೆಪದಲ್ಲಿ ತಮ್ಮ ಗುಂಪಿಗೆ ಸೆಳೆದುಕೊಳ್ಳುವುದು; ತಮಗೆ ನಿಷ್ಠರಾಗಿರುವಂತೆ ಮಾಡಿಕೊಳ್ಳುವುದು. Help to gain his favour/loyalty.

ಕೊಟ್ಟೂರ ಗಟ್ಟಿ koṭṭūra gaṭṭi :
- ಕೊಟ್ಟೂರಿನ+ಗಟ್ಟಿ(<ಘಟ್ಟಿ)=ಕೊಟ್ಟೂರಗಟ್ಟಿ;
- ಘಟ್ಟಿ(ಸಂ)>ಗಟ್ಟಿ=ಹೆಪ್ಪುಗಟ್ಟಿದುದು, ಘನ ರೂಪವಾದುದು, ಬಿರುಸಾದುದು, ಫೆಡಸಾದುದು ಎಂಬ ಅರ್ಥಗಳಿವೆ; Hard, a soild;
- ಕೊಟ್ಟೂರಿನಲ್ಲಿ ತಯಾರಾಗುವ ಪ್ರಸಿದ್ಧ ವಿಭೂತಿ ಗಟ್ಟಿ(ಚಿ.ಪ.ಕೋ); Cake of ash which is made of burnt; dried wood in Hindu rituals; Kotturu is a place in village where this 'Vibhuthi'(Holy ash cake) manufactures;
- ಇಳಕಲ್ ಸೀರೆ, ಮೈಸೂರು ಪೇಟ ಇದ್ದ ಹಾಗೆ ಕೊಟ್ಟೂರ ಗಟ್ಟಿ ಸ್ಥಳನಾಮದೊಡನೆ ಸೇರಿಕೊಂಡಿದೆ;
- ತಯಾರಾದ ವಸ್ತು ತಯಾರಿಸಿದ ಸ್ಥಳ ಅಥವಾ ಊರಿನೊಡನೆ ಸೇರಿಕೊಂಡು ಪ್ರಸಿದ್ಧಿ ಪಡೆಯುವ ಪದಸಂಸ್ಕೃತಿ ವಿಧಾನ ಇದಾಗಿದೆ;
- ಕೊಟ್ಟೂರಲ್ಲಿ ದೊರೆಯುವ ವಿಶೇಷವಾದ ಮಣ್ಣನ್ನು ಕಲೆಸಿ ವಿವಿಧ ಆಕಾರದ ಘಟ್ಟಿಗಳಾಗಿ ಅಚ್ಚು ಹಾಕಿ, ಒಣಗಿಸಿ ನಂತರ ಅವುಗಳನ್ನು ಒಂದು ಹದದಲ್ಲಿ ಸುಡುತ್ತಾರೆ; ಹೀಗೆ ಸುಟ್ಟ ಘಟ್ಟಿಗಳು ವಿಭೂತಿ ಹಚ್ಚಿಕೊಳ್ಳುವುದಕ್ಕೆ ಬಳಕೆಯಾಗುತ್ತವೆ; ಕೊಟ್ಟೂರಿನಲ್ಲಿ

ತಯಾರಾದ ವಿಭೂತಿ ಘಟ್ಟಿ ಕೊಟ್ಟೂರಘಟ್ಟಿಯಾಗಿ ನಂತರ ಕೊಟ್ಟೂರಗಟ್ಟಿಯಾಗಿದೆ; Vibhuthi(holy ash) is very dear to the lord Shiva in Karnataka.

- ಜೇಡಿಮಣ್ಣು, ಸುಣ್ಣ, ಸೆಗಣಿಯ ಬೆರಣಿ ಈ ಮೂರನ್ನೂ ಸುಟ್ಟು ಬಂದ ಬೂದಿಯ ಮಿಶ್ರಣವನ್ನು ನೀರಿನಲ್ಲಿ ಕಲಸಿ ಅಚ್ಚು ಹಾಕಿ ಗಟ್ಟಿ ತಯಾರಿಸುವುದೂ ಉಂಟು;
- ವಿಭೂತಿಗಟ್ಟಿಗೆ ಧಾರ್ಮಿಕ ಹಿನ್ನೆಲೆಯಲ್ಲಿ ಪಾವಿತ್ರ್ಯ, ಪ್ರಾಮುಖ್ಯತೆ ಬಂದಿದೆ; ಶಿವನಿಗೆ, ಮಾದೇಶ್ವರನಿಗೆ ಪ್ರಿಯವಾದ ವಸ್ತು ಇದಾಗಿದ್ದು, ಭಕ್ತರಿಗೂ ಇದು ಪ್ರಿಯವೆನಿಸಿದೆ.

ಕೊಟ್ಟೂರಿ ಮನೆ koṭṭūri mane :

- ಬಚ್ಚಲು ಮನೆ(ಕ.ಜಾನಿ.); Bathroom;
- ಇದು ಮನೆಯಲ್ಲಿನ ಒಂದು ಮುಖ್ಯವಾದ ಭಾಗ; ಅಡುಗೆ ಮನೆ, ದೇವರಮನೆ, ನಡುಮನೆ, ಹಜಾರ ಮುಂತಾದ ಭಾಗಗಳಿರುವಂತೆ ಬಚ್ಚಲು ಮನೆ (ಸ್ನಾನದ ಮನೆ)ಯೂ ಕೂಡ ಒಂದು; An integral part of every houses for daily ablutions;
- ಮುಖ ತೊಳೆಯಲು, ಸ್ನಾನ ಮಾಡಲು, ಪಾತ್ರೆ ತೊಳೆಯಲು ಈ ಮನೆ ಬಳಕೆಯಾಗುತ್ತದೆ; ಪ್ರತಿಯೊಂದು ಮನೆಯಲ್ಲೂ ಬಚಲುಮನೆ/ಸ್ನಾನದ ಮನೆ ಅವಿಭಾಜ್ಯ ಅಂಗವಾಗಿ ಇದ್ದೇ ಇರುವುದು.

ಕೊಟ್ಟೂರುಸೀಮೆ koṭṭūrusīme :

- ಬಳ್ಳಾರಿ ಜಿಲ್ಲೆ ಕೂಡ್ಲಗಿ ತಾಲ್ಲೋಕಿನ ಕ್ರಿ.ಶ.೧೫೪೮ರ ೧೧ನೇ ಶಸನದಲ್ಲಿ ಇದರ ಉಲ್ಲೇಖವಿದೆ; A place in Bellari district found in 11th inscription of 1548A.D;
- ವಿಜಯನಗರ ಸದಾಶಿವರಾಯನ ಆಳ್ವಿಕೆಗೆ ಸಂಬಂಧಿಸಿದ್ದು;
- ಮಹಾಮಂಡಲೇಶ್ವರ ರಾಮರಾಜ ಕೊಟ್ಟೂರು ಸೀಮೆಯ ನಾಯಿಂದರಿಗೆ ವಿವಿಧ ತೆರಿಗೆ ಬಿಟ್ಟ ವಿಚಾರವಿದೆ;
- 'ಕೊಟ್ಟೂರು' ಒಂದು ಆಡಳಿತ ಘಟಕವಾಗಿತ್ತೆಂದು ತಿಳಿದು ಬರುತ್ತದೆ;
- ಕೊಟ್ಟೂರು-ಹನ್ನೆರಡು ಎಂದೂ ಈ ಊರನ್ನೂ ಶಾಸನಗಳು ಉಲ್ಲೇಖಿಸಿವೆ;
- 'ಕೊಟ್ಟ' ಪದಕ್ಕೆ 'ಕೋಟೆ'(?) ಎಂಬ ಅರ್ಥವೂ ಇರುವುದರಿಂದ 'ಕೋಟೆಯೂರು' ಆಗಿ ಅದೇ 'ಕೊಟ್ಟೂರು' ಆಗಿದೆ ಎಂದು ಹೇಳಬಹುದು; ಅದು ಆಡಳಿತದ ಕೇಂದ್ರವಾಗಿರುವುದರಿಂದ ಅದರ ಎಲ್ಲೆಯನ್ನು ಗುರುತಿಸುವ ಸಲುವಾಗಿ 'ಸೀಮೆ' ಪದ ಆಮೇಲೆ ಸೇರಿಕೊಂಡಿರುವ ಸಾಧ್ಯತೆ ಇದೆ; It seems to be an administrative unit; `Kottu' means fort, `Sime' means boundary line;
- ಅಥವಾ ದಾನದ ಹಿನ್ನೆಲೆಯಲ್ಲಿ ಕೊಟ್ಟ(ಟ್ಟು)+ಊರು>'ಕೊಟ್ಟೂರು' ಆಗಿರಬಹುದು; ಕೊಡು>ಕೊಟ್ಟು(ಡ>ಟ/ಟ>ಡ) ಆಗುವುದು ಸಹಜ ಕ್ರಿಯೆ.

(ಕ.ವಿ.ವಿ.ಶಾ.ಸಂ.೧; ಬ.ಜಿ.)

ಕೊಟ್ಟೆ/ಕೊಟ್ಟಾ koṭṭe/koṭṭā :

- ದೊನ್ನೆ(ಉ.ಕ.ಜಿ.); ಬಾಳೆ ಎಲೆ, ಮುತ್ತುಗದೆಲೆ, ಕೆಸುವಿನ ಎಲೆ ಅಥವಾ ಅಡಕೆ ಪಟ್ಟೆಯಿಂದ ಮಾಡಿದ ಬಟ್ಟಲು; ಮದುವೆ ಮೊದಲಾದ ಸಂಭ್ರಮಾಚರಣೆಯ ಭೋಜನ ಕೂಟದಲ್ಲಿ ವಿಶೇಷ ಬಳಕೆ(ಚಿಕ್ಕ.ಜಿ.); Disposable plates, cups, tumbler made from dried areca leaf, banana leaf and Muttuga tree leaf; these are very essential in the ceremonies like wedding and in other banquets to serve the vegetarian and non-vegetarian food(items);
- ಊಟದೆಲೆಯ ಮೇಲೆ ಮುದ್ದೆ ಬಡಿಸಿದಾಗ ಸಾರಿಗೆ ದೊನ್ನೆ ಬೇಕೇಬೇಕು; ಬೀಗರೂಟ/ಕರೆನೆರೆಯಲ್ಲಿ ಮಾಂಸ ತುಂಬಿಟ್ಟು ಬಡಿಸಲು ಉಪಯೋಗ; ಬೂಂದಿ, ಪಾಯಸವನ್ನು ಕಲಸಿ ತಿನ್ನಲು ಉಪಯೋಗವಾಗುವಂತೆ ದೊನ್ನೆಯಲ್ಲಿ ಬಡಿಸುತ್ತಾರೆ;
- ಅಡಕೆ ಗೊನೆಗಳಿಗೆ ಕೊಳೆರೋಗ ತಾಕದಂತೆ ಕಟ್ಟುವ ಹಾಳೆಯ ಮುಸುಕು;
- ಅಡಕೆ ಹಾಳೆಯ ಟೋಪಿ;

- ಈಜು ಬುರುಡೆಯಾಗಿ ಬಳಸುವ ಒಣಗಿದ ತೆಂಗಿನಕಾಯಿ/ತಳ್ಳು?; A kind of plant; a seasoned coconut;
- ಒಂದು ಬಗೆಯ ಸಸ್ಯ; ಕವಟೆ;
- ಗರ್ವ, ಜಂಬ, ದರ್ಪ; Ego, arrogance, pride;
- ಹಣ್ಣು/ಕಾಯಿಯೊಳಗಿನ ಬೀಜ; ಗೊರಟೆ (ಕೊಟ್ಟೆ>ಗೊರಟೆ?);
- ಕೊಟ್ಟೆ, ಕೊಟ್ಟಾ– ಇವು 'ಕೊಡು' ಧಾತುವಿನಿಂದ ನಿಷ್ಪನ್ನಗೊಂಡ ಕ್ರಿಯಾರೂಪಗಳಾಗಿವೆ; ('ಕೊಡು' ಮೂಲದಲ್ಲಿ 'ಕುಡು' ಇದ್ದೇ ಇರುವುದು); *ಪ್ರ: 'ನೀನ್ ಅವಂಗೆ ದುಡ್ಡ್ ಕೊಟ್ಟಾ?'(ಕೊಡ.ಜಿ.);*
- ಕೊಟ್ಟೆ(ಕ್ರಿ); ಕೊಟ್ಟಿದ್ದೇನೆ, ಕೊಟ್ಟಾಯಿತು; Gave, given/paid;
- ಕೊಟ್ಟಾ(ಕ್ರಿ); ಕೊಟ್ಟೆಯಾ?; ಕೊಟ್ಟಾಯಿತೇ?;
- ಒಂದು ಜಾತಿಯ ಔಷಧೀಯ ಮುಳ್ಳು ಸಸ್ಯ(ದ.ಕ.);
- ಮೀನು ಶಿಕಾರಿಗಾಗಿ ಅಡಕೆ ತೊಟ್ಟಿಲು ಅಥವಾ ಬಾಳೆ ತೊಟ್ಟಿಲಿನಿಂದ ಸಿದ್ಧಪಡಿಸಿದ ಕೈಚೀಲದಂತಿರುವ ಸಾಧನ(ಶಿ.ಜಿ.);
- ಕಾಗದದ ಪೊಟ್ಟಣ(ಚಿಕ್ಕ.ಜಿ.); Paper packet;
- ಇರುವೆಯ ಗೂಡು; ಹೊಂಗೆ ಮರದ ಎಲೆ, ಮಾವಿನ ಮರದ ಎಲೆ, ತೆಂಗಿನ ಗರಿಗಳಲ್ಲಿ ನಿರ್ಮಿಸಿಕೊಂಡ ಕೆಂಜಗ/ಕೆಂಜಿಗಗಳ ಗೂಡು; Ant hill, nest made of leaves; an eyrie of ant like insect in coconut and beech tree;
- **—*ಕೊಟ್ಟೆಕಟ್ಟೋದು*** : ಅಡಕೆ ಗೊನೆಗಳಿಗೆ ಹಾಕುವ ರಕ್ಷಣಾ ಕವಚ; ಈಗಾಗಲೇ ಸಿದ್ಧಪಡಿಸಿದ ಕೊಟ್ಟೆಗಳನ್ನು ಅಡಿಕೆ ಗೊನೆಗಳಿಗೆ ಕೊಟ್ಟೆ ಕಟ್ಟುವವನಿಂದ ಹೊದಿಕೆಯಾಗುವಂತೆ ಕಟ್ಟಿಸುವುದು; Binding protective shield/cover around arecanut bunch;
- **—*ಕೊಟ್ಟೆಕಡುಬು*** : ಒಂದು ರೀತಿಯ ಕಡುಬು; ಹಲಸಿನ ಹಣ್ಣು, ಅಕ್ಕಿಗಳನ್ನು ಅರೆದು ಕೊಟ್ಟೆಯಲ್ಲಿಟ್ಟು ಹಬೆಯಲ್ಲಿ ಬೇಯಿಸಿದ ಕಡುಬು(ಕ.ಜಾ.ಕೋ); A dish made of rice batter and jackfruit in steam;
- ಬಾಳೆ ಎಲೆಯ ಕೊಟ್ಟೆಯಲ್ಲಿ ಅಕ್ಕಿಹಿಟ್ಟು, ಬೆಲ್ಲ, ಹಣ್ಣು ಮಿಶ್ರಮಾಡಿ ಆವಿಯಲ್ಲಿ ಬೇಯಿಸಿ ಮಾಡುವ ತಿಂಡಿ(ಶಿ.ಜಿ.);
- ಬೆಳಗಿನ ಉಪಾಹಾರಕ್ಕೆ ಬಳಸುವ ಒಂದು ಬಗೆಯ ತಿಂಡಿ; ಅಕ್ಕಿ, ಉದ್ದು, ಕೆಸುವನ್ನು ಚೆನ್ನಾಗಿ ತಿರುವಿ, ಬಾಳೆ ಎಲೆಯ ಕೊಟ್ಟೆಯಿಂದ ಬೇಯಿಸಿ ಮಾಡಿದ ಕಡುಬು(ಶಿ.ಜಿ.);
- ಎಲೆಯ ಪೊಟ್ಟಣದೊಳಗೆ ಬೇಯಿಸಿದ ಇಡ್ಲಿ;
- **—*ಕೊಟ್ಟೆ ಕೊಯ್ಯುವುದು*** : ಅಡಿಕೆ ಹಾಳೆಯನ್ನು ಕತ್ತರಿಸಿ ಕೊಟ್ಟೆ ಸಿದ್ಧಪಡಿಸುವುದು;
- **—*ಕೊಟ್ಟೆ ಶಿಡಿಯೋದು*** : ಕೊಟ್ಟೆಕಡ್ಡಿಯಿಂದ ಕೊಟ್ಟೆಯನ್ನು ಬಿಗಿಗೊಳಿಸುವುದು; ಎರಡು ಹಾಳೆ ಉದ್ದವಾಗಿಯೂ ಒಂದನ್ನು ಅಡ್ಡವಾಗಿಯೂ ವಿಮಾನಾಕೃತಿಯಲ್ಲಿ ಜೋಡಿಸಿ ನಂತರ ಅಂಗಿಯ ಕೊರಳ ಪಟ್ಟಿಯ ಹಾಗೇ ಬಿಗಿಗೊಳಿಸುವುದು;
- **—*ಕೊಟ್ಟೆನೇರೋದು*** : ಕೊಟ್ಟೆಯ ಕಟ್ಟನ್ನು ಸಾಮಾನ್ಯವಾಗಿ ಒಂದು ನೆರೆ ಹಗ್ಗದ ಮೂಲಕ ಮರದ ಮೇಲಕ್ಕೆ ಕೊಟ್ಟೆ ಕಟ್ಟುವವನಿಗೆ ಕಳುಹಿಸುವುದು;
- **—*ಕೊಟ್ಟೆಸೂಡು*** : ಅಡಕೆ ಮರಕ್ಕೆ ಅಡಿಕೆ ಹಾಳೆಯನ್ನು ಸುತ್ತುವುದು;
- ಕ್ರಿಯಾರೂಪದಲ್ಲಿ ಈ ಪದಗಳನ್ನು ಇಡುವುದಾದರೆ, 'ಕೊಟ್ಟಾ' ಮೂಲರೂಪವಾಗಿರಬಹುದು, 'ಕೊಟ್ಟೆ' ಆಮೇಲಿನದು; ಅಷ್ಟೇ ಅಲ್ಲ 'ಕೊಟ್ಟಾ' ಪ್ರಶ್ನೆ ರೂಪದ್ದು, 'ಕೊಟ್ಟೆ' ಉತ್ತರದ ರೂಪದ್ದು; ಸಂಭಾಷಣೆಯ ಪ್ರಯೋಗ;

  ಪ್ರಶ್ನೆ : 'ಅವನಿಗೆ ಹಣ ಕೊಟ್ಟಾ'

  ಉತ್ತರ : 'ಕೊಟ್ಟೆ'

  = ಸಂವಾದದಲ್ಲಿ ಪದಗಳ 'ಬಳಕೆ' ಬೇರೆಯಾಗಿರುವುದು; ಅದರಿಂದ ಕ್ರಿಯೆ 'ಕಾಲ'ಗಳನ್ನೂ ಕಂಡು ಹಿಡಿಯಬಹುದು; ಭಾಷೆಯ ಪ್ರಕ್ರಿಯಾ ರೂಪವಿದು.

ಕೊಟ್ಟೆ ಒಕ್ಕಲಿಗರು kotte okkaligaru :

- ಒಕ್ಕಲಿಗ ಸಮುದಾಯದ ಉಪ ಪಂಗಡ; A sub-group in Vokkaliga community;
- ಇವರು ಉತ್ತರ ಕನ್ನಡ ಜಿಲ್ಲೆ ಹಾಗೂ ದಕ್ಷಿಣ ಕನ್ನಡ ಪ್ರದೇಶದಲ್ಲಿ ಕಂಡು ಬರುತ್ತಾರೆ. They are in the districts of Uttar kannada and South Kannada; Vokkaligas are farmers solely depending on agriculture.

ಕೊಟ್ಟೆಗದ್ದೆ koṭṭegadde :

- ಗದ್ದೆಯ ಒಂದು ವಿಧ; An agricultural land;
- ದನದ ಕೊಟ್ಟಿಗೆಗೆ ಹತ್ತಿರವಿರುವ/ದನದ ಕೊಟ್ಟಿಗೆ ಇರುವ ಗದ್ದೆ ಎಂದಿರಬಹುದು;
- ಕೊಟ್ಟಿಗೆ ಗೊಬ್ಬರ ಹಾಕಿ ಫಸಲು ತೆಗೆಯುವ ಗದ್ದೆ ಎಂದಾಗುತ್ತದೆಯೆ?(ಕೊಡ.ಜಿ.)(ಕೃ.ಪ.ಕೋ).

ಕೊಟ್ಟೆತನ koṭṭetana :

- < ಕೊಟ್ಟಿತನ; ಕೆಟ್ಟಗುಣ;
- ಕೊಟ್ಟೆ(<ಕೊಟ್ಟಿ) + ತನ = ಕೊಟ್ಟೆತನ; ಕೆಟ್ಟ ವ್ಯಕ್ತಿ; ನಾಚಿಕೆಗೇಡಿ; ಕೊಲೆ, ಹಿಂಸೆ; ill/bad natured, crafty man, wily man;
- ಮೋಸ, ವಂಚನೆಯ ಗುಣ–ಸ್ವಭಾವಗಳನ್ನುಳ್ಳ ವ್ಯಕ್ತಿಯನ್ನು ಈ ಪದ ಸಾಂಕೇತಿಸುತ್ತದೆ.

ಕೊಟ್ಟೆಪಣ್ಣ್ koṭṭepaṇṇ :

- ಕೊಟ್ಟೆ ಹಣ್ಣು; ಒಂದು ಬಗೆಯ ಕಾಡುಹಣ್ಣು; ಕೊಟ್ಟೆಪಣ್ಣ್>ಕೊಟ್ಟೆಹಣ್ಣು(ಉ.ಕ.ಜಿ./ಕೊ.ಜಿ.); A kind of wild-fruit;
- *ಪ್ರ: 'ಕುಂದ್‌ಲ್ ಕೊಟ್ಟೆಪಣ್ಣ್ ಉಂಡೆ'*(ಗೌ.ಕ./ಕೊಡವ);
- 'ಪಣ್>ಪಣ್ಣು' ಹಳಗನ್ನಡ ರೂಪವಾಗಿದೆ; 'ಪ'ಕಾರಕ್ಕೆ 'ಹ'ಕಾರ ಬಂದು 'ಪಣ್' ಎಂಬುದು 'ಹಣ್' ಎಂದಾಗಿ ನಂತರ ವ್ಯಂಜನಾಂತ 'ಣ್'ಕಾರ ಸ್ವರಾಂತ್ಯ ಪಡೆದು ಸಜಾತೀಯ ದ್ವಿತ್ವ ಹೊಂದಿ 'ಹಣ್ಣು' ಎಂಬ ರೂಪ ಪಡೆಯುತ್ತದೆ.
- ವ್ಯರೂ : ಕೊಟ್ಟೆಹಣ್ಣ್.

ಕೊಟ್ಟೆಮಣೆ koṭṭemaṇe :

- ಒಂದು ಬಗೆಯ ವಿಶಿಷ್ಟ ಮರಗೆಲಸದ ಮಣೆ(ದ.ಕ.); A kind of low wooden pedestal used in carpentry work;
- ಹಿಡಿ ಇರುವ ಉರುಟು ಮಣೆ(ಕಾಸರಗೋಡು ಕನ್ನಡ); A device to climb areca nut tree to harvest the areca bunches;
- ಮರಹತ್ತಲು ಉಪಯೋಗಿಸುವ ಮಣೆ;
- ಅಡಕೆ ಮರಗಳಿಗೆ ಹತ್ತಿ ತುದಿಯಲ್ಲಿ ಈ ಮಣೆಯ ಸಹಾಯದಿಂದ ಕುಳಿತು ಅಡಕೆ ಗೊನೆಗೆ ಕೊಳೆರೋಗ ಬರದಂತೆ ಕೊಟ್ಟೆ(ಅಡಕೆ ಸೋಗೆಯ ಪಟ್ಟೆ) ಕಟ್ಟುತ್ತಾರೆ; ಅಡಕೆ ಗೊನೆ ಕಟಾವು ಮಾಡುತ್ತಾರೆ.

ಕೊಟ್ಟೆಮುಳ್ಳು koṭṭemuḷḷu :

- ಕೊಟ್ಟ; ಕೊಕೋಸಿನ ಮುಳ್ಳು; ಕೊಡಚಿ (Ziziphus xylopyrus), ಇದರ ಹಣ್ಣನ್ನು ತಿನ್ನಲು ಬಳಸುತ್ತಾರೆ; ಬೀಜವನ್ನು ಹುರಿದು ತಿನ್ನುತ್ತಾರೆ; A kind of wild spiny shrubs; it is known as Ghoti and Ghotika in Ayurveda;
- ಕಾಂಡದ ಸಿಪ್ಪೆಯ ತಲೆ ತೊಳೆಯಲು ಮತ್ತು ಬಾಯಿ ಹುಣ್ಣಿಗೆ ಔಷಧಿಯಾಗಿ ಉಪಯುಕ್ತ;
- ಇತರ ನಾಮಗಳು: ಕೊಡಂಚಿಗಿಡ, ಕೊಡಚಿಗಿಡ, ಗೊಡಚಿಗಿಡ; ತ: ಕೊಟ್ಟೈ, ಕೊಂಡ್ಯೈ; ಮ: ಕೊಟ್ಟ; ತುಳು: ಕೊಟ್ಟೆಮುಳ್ಳು; ತೆಲು: ಗೊಟ್ಟಿ, ಗೊಟ್ಟಿಕೆ; (ದ್ರಾ.ಭಾ.ಜ್ಞಾ.ಪ.ಕೋ); ತೆಲುಗಿನಲ್ಲಿ ಘೋಷವರ್ಣವೆ ಇದೆ; ಬಹಳ ಸಂದರ್ಭದಲ್ಲಿ ಹೀಗೆ ಆಗಿದೆ.

ಕೊಟ್ಟೆಮ್ಮೆ koṭṭemme :

- ತವರು ಮನೆಯವರು ಮಗಳಿಗೆ ಉಡುಗೊರೆಯಾಗಿ ಕೊಟ್ಟ ಎಮ್ಮೆ; ಕೊಟ್ಟ+ಎಮ್ಮೆ=ಕೊಟ್ಟೆಮ್ಮೆ; In rural areas the villagers present a buffalo to their daughters after their delivery; According to them the milk of the buffalo is proteinuria and also symbol of wealth; because in agararian society the cattle are the symbol of wealth;
- ತವರು ಮನೆಯಲ್ಲಿ ಬಾಣಂತನವನ್ನು ಮುಗಿಸಿ, ಹಸುಗೂಸನ್ನು ಎತ್ತಿಕೊಂಡು, ತೊಟ್ಟಿಲನ್ನು ತೆಗೆದುಕೊಂಡು ಗಂಡನ ಮನೆಗೆ ಹೊರಟು ನಿಂತ ಮಗಳಿಗೆ ತವರಿನವರು ಬಳುವಳಿಯಾಗಿ ಕೊಡುವ ವಸ್ತುಗಳಲ್ಲಿ ಕರೆಯುವ ಎಮ್ಮೆಯೂ ಕೂಡ ಒಂದು;
- ಎಮ್ಮೆ ಗೋವಿನ ಹಾಗೆ ಸಂಪತ್ತಿನ(ಗೋಸಂಪತ್ತು) ಅಂಗವಾಗದಿದ್ದರೂ ಬಳಕೆಯ ದೃಷ್ಟಿಯಿಂದ ಗ್ರಾಮ ಸಂಸ್ಕೃತಿಯಲ್ಲಿ ಮುಖ್ಯವಾದದ್ದು; ತಾಯಿ ಮತ್ತು ಮಗುವಿಗೆ ಎಮ್ಮೆ ಕೊಡುವ ಹಾಲು ಅದೇ ಪೌಷ್ಟಿಕ ಆಹಾರ; ಹೆಣ್ಣು ಮಕ್ಕಳಿಗೆ ಎಮ್ಮೆ ತವರಿನ ಪ್ರೀತಿ ವಾತ್ಸಲ್ಯಗಳ ಪ್ರತೀಕ;
- ಬಾಂಧವ್ಯದ ಸಂಕೇತವಾಗಿ ಕೂಡ 'ಎಮ್ಮೆ' ಇದೆ; ಆ ಕಾಲದಲ್ಲಿ ಎಮ್ಮೆ ಸಾಕಣಿಕೆ ಸಂಖ್ಯೆ ಹೆಚ್ಚಿರಬಹುದು;
- *ಪ್ರ: 'ತೊಟ್ಟೀಲ ಹೊತ್ಕೊಂಡು ತೌರ್ಬಣ್ಣ ಉಟ್ಕೊಂಡು*

ಅಪ್ಪ ಕೊಟ್ಟೆಮ್ಮೆ ಹೊಡ್ಕೊಂಡು/ ತೌರೂರ
ತಿಟ್ಟತ್ತಿ ತಿರುಗಿ ನೋಡ್ಯಾಳೊ.

ಕೊಟ್ಯಾಡುವುದು koṭyāḍuvudu :

- ಕೊಟ್ಟು + ಆಡುವುದು = ಕೊಟ್ಟಾಡುವುದು > ಕೊಟ್ಯಾಡುವುದು;
- ಕೊಟ್ಟಂತೆ ಈಸಿಕೊಂಡಂತೆ ನಡೆದುಕೊಳ್ಳುವುದು;
- ಧಾರೆ ಎರೆದ ನಂತರ ಹೆಣ್ಣು ಗಂಡನ್ನು ಬೀಗರು ಪರಸ್ಪರ ಕೊಟ್ಟುಕೊಳ್ಳುವ ಶಾಸ್ತ್ರ; Give and take business, giving away the bride(getting married the girl);
- ಕೊಟ್ಟು ತೆಗೆದಕೊಂಡು(ಹಾಸ.ಜಿ.);
- ಕೊಟ್ಟು ತೆಗೆದುಕೊಳ್ಳುವ, ಕೊಡುವ ಪಡೆಯುವ ವ್ಯವಹಾರ ಮಾಡಿಕೊಂಡು(ಜ.ನಿ.);
- —***ಕೊಟ್ಟುಕೊಂಡು*** : ಕೊಟ್ಕೊಂಡು–ಹಿಡಿದುಕೊಂಡು (ಶಿ.ಜಿ.).

ಕೊಟ್ರುಞ koṭruŋ :

- ಒಂದು ದೈವದ ಹೆಸರು(ಮಂ.ಜಿ.); Name of a deity;
- ಕೊಟ್ರುಞ; ಒಂದು ಜಾತಿಯ ಹಕ್ಕಿ; ಮರಕುಟಿಗ(ತು.ನಿ.). A kind of bird, woodpecker.

ಕೊಟ್ನೂರು koṭnūru :

- ಅನಂತಪುರ ಜಿಲ್ಲೆ ಹಿಂದೂಪುರ ತಾಲ್ಲೋಕಿನ ಕ್ರಿ.ಶ.೧೫೫೦ರ ೬ನೇ ಶಾಸನದಲ್ಲಿ ಇದರ ಪ್ರಸ್ತಾಪವಿದೆ; A place in Ananthpur district and Andhrapradesh referred in the 6th inscription of 1550AD;
- ವಿಜಯನಗರದ ಸದಾಶಿವ ಮಹಾರಾಯನ ಆಳ್ವಿಕೆ ಇದ್ದಾಗ;
- ಊರಿನ ಚೌಡೇಶ್ವರಿ ದೇವರಿಗೆ ನೀಡಿದ ದಾನದ ವಿಚಾರ;
- ಸದಾಶಿವರಾಯರ ದಳವಾಯಿ ಕೃಷ್ಣನಾಯ್ಕನಿಗೆ ಪುಣ್ಯವಾಗಲೆಂದು ಗುಂಡಮರಸನು, ಊರಿನ ಜೇಡ ಒಕ್ಕಲುಗಳು ಕೋಟೆಗೆ ನೀಡಬೇಕಾದ ತೆರಿಗೆಯನ್ನು ದೇವರಿಗೆ ಸರ್ವಮಾನ್ಯವಾಗಿ ನೀಡಿದನಂತೆ;
- 'ಕೊಟ್ನೂರು' – ಶಾಸನದಲ್ಲಿ 'ಕೊಟನೂರು' ಎಂದಿದೆ; ಪದರೂಪದ ಮಧ್ಯದಲ್ಲಿ 'ನ್'ಕಾರವಿರುವುದರಿಂದ ವ್ಯಕ್ತಿಯೊಬ್ಬನ ಕಾರಣದಿಂದ (ಕೊಟನ+ಊರು) ಇದಕ್ಕೆ ಈ ಹೆಸರು ಬಂದಿರಬಹುದೆ?
- ಇಲ್ಲದಿದ್ದರೆ ದಾನ ನೀಡಿದ್ದನ್ನು ಆಧಾರ ಮಾಡಿಕೊಂಡು ಊರಿನ ನಿಷ್ಪತ್ತಿ ಹೇಳಬೇಕಾಗುತ್ತದೆ; ಆಗ 'ನ'ಕಾರ ಮಧ್ಯ ಪ್ರವೇಶಕ್ಕೆ ಕಾರಣ ಹೇಳುವುದು ಕಷ್ಟವಾಗುತ್ತದೆ.

(ಆ.ಪ್ರ.ಕ.ಶಾ.ಭಾ.೧)

ಕೊಟ್ರೆ೧ koṭre[1] :

- ವಡ್ಡರಾಗಿ ಹಿಟ್ಟಿನಿಂದ ಮಾಡಿದ ಅಂಬಲಿ(ಮೈ.ಜಿ./ ಚಾ.ಜಿ./ತು.ಜಿ.); Gruel/ porridge made from ragi(cereal);
- 'ಕೊಡು' ಧಾತುವಿನಿಂದ ನಿಷ್ಪನ್ನವಾದ ಕ್ರಿಯಾರೂಪ; ಕೊಟ್ಟರೆ>ಕೊಟ್ರೆ.

ಕೊಟ್ರೆ/ಕೊಟ್ಟ್ರೆ೨ koṭre/koṭṭre[2] :

- 'ಕೊಟ್ಟರೆ' ಎಂಬ ಶಿಷ್ಟರೂಪದಿಂದ ಬಂದ ಆಡುನುಡಿ; ಕೊಟ್ಟರೆ>ಕೊಟ್ಟ್ರೆ/ಕೊಟ್ರೆ; Slang form of the word give;
- ಮುಟ್ಟಿಸಿದರೆ, ನೀಡಿದರೆ, ತಲುಪಿಸಿದರೆ;
- 'ಕೊಡು' ಧಾತುವಿನಿಂದ ನಿಷ್ಪನ್ನಗೊಂಡಿದೆ; ಇದಕ್ಕೂ ಮೂಲ 'ಕುಡು' ರೂಪವೇ ಇದೆ; *ಪ್ರ: 'ಅಂವ ನಿಮ್ಮ ಕೂಡ ರೊಕ್ಕ ಕೊಟ್ರ ನಮ್ಗೆ ಹೇಳ್ರಿ*(ಬೆಂ.ಜಿ.).

ಕೊಟ್ರೆಗೆರೆ koṭregere :

- ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೋಕಿನ ಕ್ರಿ.ಶ.೧೧೭೬ರ ೩೯ನೇ ಶಾಸನದಲ್ಲಿ ಉಲ್ಲೇಖ; A place in Chikkamagaluru district referred in 39th inscription of 1176AD;
- ಸಂಕಮದೇವನೊಡನೆ ಮಡವಳ್ಳಿಯ ಕಾಳಗದಂದು ಬಿಪ್ಪರದ ಬಿಮ್ಮಣ್ಣ ಹೋರಾಡಿ ಸುರಲೋಕ ಪ್ರಾಪ್ತನಾದ ಬಗ್ಗೆ ಇರುವ ವೀರಗಲ್ಲು ಇದು;
- ಕೊಟ್ರೆ+ಕೆರೆ>ಕೊಟ್ರೆಗೆರೆ(ಕ>ಗ) ಎಂದು ಸುಲಭವಾಗಿ ಬಿಡಿಸಬಹುದಾದರೂ, 'ಕೊಟ್ರೆ' ಎಂದರೇನೆಂದು ತಿಳಿಯುವುದು ಕಷ್ಟ;
- 'ಕೊಟ್ಟರಗೆರೆ'ಯಿಂದ ಕೊಟ್ರೆಗೆರೆ ಬಂದಿರಬಹುದು; 'ಕೊಟ್ಟ' ಎಂದರೆ ಸಹಜವಾಗಿ ಒಂದು ಸ್ಥಳ, ಬೀಡು; ನೆಲಮನೆ, ರಾಜ್ಯದ ಒಂದು ಸಣ್ಣಭಾಗ(ಕ.ನಿ.); ಕೊಟ್ಟರ>ಕೊಟ್ರ>ಕೊಟ್ರೆ=?;

- ಇಷ್ಟಾದರೂ ಖಚಿತವಾದ ಅರ್ಥ ಹೇಳುವುದು ಕಷ್ಟ. (E.C- ೧೧; ಚಿಕ್ಕ.ಜಿ.)

ಕೊಟ್ಲಿ/ಕೊಟ್ಲೆ koṭli/koṭle :

- ಹೆರಿಗೆ ನೋವು(ಉ.ಕ.ಜಿ.); Labour pain;
- 'ಕೋಟಲೆ' ಎಂಬ ಪದದಿಂದ ಬಂದಿರುವ ಸಾಧ್ಯತೆ ಇದೆ; ಕೋಟಲೆ ಎಂದರೆ ತೊಂದರೆ, ಕಾಟ, ಕಷ್ಟ, ನೋವು ಎಂಬ ಅರ್ಥಗಳಿವೆ; ಹೆರಿಗೆಯ ಸಂದರ್ಭದಲ್ಲಿ ಬರುವ ಬೇನೆಯನ್ನು ಸೂಚಿಸುವಲ್ಲಿ ಪದ ಬಳಕೆಯಾಗಿದೆ;
- ಕೋಟಲೆ>ಕೋಟ್ಲೆ>ಕೊಟ್ಲೆ>ಕೊಟ್ಲಿ;
- ಒಂದು ಬಗೆಯ ಸಿಡುಬು; ಸಿತಾಳ(ತು.ಜಿ.). A kind of small pox.

ಕೊಡ koḍa :

- ಮಣ್ಣು ಅಥವಾ ಲೋಹದಿಂದ ಮಾಡಿದ ಬಾಯಿ ಕಿರಿದಾದ ಪಾತ್ರೆ; ಗಡಿಗೆ; ಕುಂಭ; ಕೊಡಪಾನ/ಕೊಡಪಣಾ; ತಕ್ಕಡಿಯ ಪರಡಿ, ಬಟ್ಟಲು(ಕ.ನಿ.); Metal or soil pot or pitcher;
- ಜೇನುಗೂಡು(ದ್ರಾ.ಭಾ.ಜ್ಞಾಪ.ಕೋ); ಎಳೆಯ, ಕಿರಿಯ; ಹಿರಿಯ ಮಗ; ಉದಾ: ಕೊಡಗೂಸು; *'ಕೊಡಮಗನ ನುಡಿ ಕೇಳು'(ಗಾ.)*; Hive, elder or younger son, infant baby;
- ಬಿಂದಿಗೆ; ಬಾವಿಯಿಂದ ನೀರು ಸೇದಲು ಬಳಸುವ ಸಾಧನ; ಬಾವಿ, ಕೆರೆ, ಕಾಲುವೆಗಳಿಂದ ನೀರನ್ನು ತುಂಬಿಕೊಂಡು ಸೊಂಟದ ಮೇಲೆ, ಹೆಗಲ ಮೇಲೆ, ತಲೆಯ ಮೇಲೆ ಹೊತ್ತು ತರುವ ಇಲ್ಲವೆ ಎರಡೂ ಕೈಗಳಲ್ಲಿ ಒಂದೊಂದು ಹಿಡಿದು ತರಲು ಅನುಕೂಲವಾದ ಸಾಧನ;
- ನೀರು ತರಲು ಬಳಸುವ ಗಡಿಗೆ, ಬಿಂದಿಗೆಯನ್ನು ಕೊಡಪಾನ(ತುಳು) ಎಂದು ಕೂಡ ಕರೆಯುತ್ತಾರೆ; ಇದರ ಒಡಲು ದೊಡ್ಡದಾಗಿರುತ್ತದೆ; ತಳಭಾಗದ ಅಗಲ ಸ್ವಲ್ಪ ಕಡಿಮೆ ಇರುತ್ತದೆ; ಚಿಕ್ಕದಾದ ಕಂಠವುಳ್ಳ ಬಾಯಿ ಇರುತ್ತದೆ; ಗ್ರಾಮೀಣ ಪ್ರದೇಶದಲ್ಲಿ ಹೊಳೆ, ಹಳ್ಳಗಳಿಂದ ನೀರನ್ನು ತರಲು ಈಗಲೂ ಬಳಸುತ್ತಾರೆ; ಎಲ್ಲಮ್ಮನ ಕೊಡ, ಜೂಜಿನ ಕೊಡ ಎಂಬ ಪ್ರಯೋಗವಿದೆ; *ಪ್ರ: 'ತುಂಬಿದ ಕೊಡ ತುಳುಕುವುದಿಲ್ಲ'*(ಗಾ.);
- ಮಣ್ಣಿನ ಕೊಡಕ್ಕೆ ಗಡಿಗೆ, ಹರವಿ/ಹರಬಿ ಎಂದು ಕರೆಯುತ್ತಾರೆ; ತಾಮ್ರ, ಹಿತ್ತಾಳೆ, ಸ್ಟೀಲ್ ಲೋಹಗಳಿಂದ ಮಾಡಿದ ಕೊಡಗಳನ್ನು ಆಯಾ ಲೋಹದ ಹೆಸರನ್ನು ಸೇರಿಸಿ ತಾಮ್ರದ ಬಿಂದಿಗೆ, ಹಿತ್ತಾಳೆ ಬಿಂದಿಗೆ, ಸ್ಟೀಲ್ ಬಿಂದಿಗೆ ಎಂದು ಕರೆಯುವುದು ವಾಡಿಕೆ; ಇವುಗಳ ಜೊತೆಗೆ ಪ್ಲಾಸ್ಟಿಕ್ ಬಿಂದಿಗೆ ಕೂಡ ಬಳಕೆಯಲ್ಲಿದೆ;
- ಗ್ರಾಮೀಣ ಪ್ರದೇಶಗಳಲ್ಲಿ ಹಬ್ಬ ಹರಿದಿನಗಳಲ್ಲಿ, ಶುಭಕಾರ್ಯಗಳಲ್ಲಿ ಹೊಸನೀರು/ಮೀಸಲು ನೀರು ತರಲು, ದೇವರು ತರಲು ಹಿತ್ತಾಳೆ, ತಾಮ್ರ, ಸ್ಟೀಲ್ ಬಿಂದಿಗೆಗಳನ್ನು ಹೆಚ್ಚಾಗಿ ಬಳಸಲಾಗುವುದು;
- ಕೋಣೆಯಲ್ಲಿ ತುಂಬಿದ ಬಿಂದಿಗೆ ಇಡುವುದು ಸಂಪ್ರದಾಯ; ಮುಸ್ಸಂಜೆಯ ನಂತರ ತುಂಬಿದ ಬಿಂದಿಗೆಯನ್ನು ಹೊರಗೆ ಕೊಡಬಾರದೆಂಬ ನಂಬಿಕೆಯಿದೆ; In rural areas the ritual pot filled with water, is placed in the kitchen as a tradition;
- ತ,ಮ: ಕುಡಮ್; ತು: ಕುಡ್ಯ(ಕ.ನಿ.); ಕನ್ನಡದಲ್ಲಿಯೂ 'ಕುಡ' ಮೂಲ ಇರಬಹುದು; (ಇದು ಸ್ವರ ವ್ಯತ್ಯಯದ ಫಲ);
- ವ್ಯರೂ: ಚವಲ್ಗೆ, ಚೌರಿಗೆ/ಚೌರ್ಗೆ(ಮಂಡ್ಯ.ಜಿ.);
- ಕೊಡ(ಕ್ರಿ): ಕೊಡನು, ಕೊಡುವುದಿಲ್ಲ, ಕೊಡಲಾರ ಎಂಬ ನಿಷೇಧಾರ್ಥದಲ್ಲಿ ಪ್ರಯೋಗವಾಗುತ್ತದೆ; ಕೊಡು(<ಕುಡು)+ಅನು=ಕೊಡನು>ಕೊಡ; ಧಾತುವಿಗೆ ನೇರವಾಗಿ ಆಖ್ಯಾತ ಪ್ರತ್ಯಯ 'ಅನು' ಸೇರಿ 'ಕೊಡನು' ಎಂಬ ನಿಷೇಧಾರ್ಥದ ಪ್ರಯೋಗ ಉಂಟಾಗುತ್ತದೆ; ನಂತರ ಗ್ರಾಮೀಣರ ಉಚ್ಚಾರಣೆಯಲ್ಲಿ 'ನು' ಬಿಟ್ಟು ಹೋಗಿ 'ಕೊಡ' ಎಂಬ ಸಂಕ್ಷೇಪರೂಪ ಉಳಿದುಕೊಂಡಿದೆ; *ಪ್ರ: 'ಜೀನ ಕೊಡ, ಕೋಮಟಿ ಬಿಡ'*(ಗಾ.);
- ***—ಕೊಡದ ಕುಣಿತ*** : ಕೊಡ ಅಥವಾ ಬಿಂದಿಗೆಯನ್ನು ಊದುತ್ತಾ ಕುಣಿಯುವುದರಿಂದ ಇದನ್ನು 'ಕೊಡದ ಕುಣಿತ' ಎನ್ನುತ್ತಾರೆ; It is a kind of folk art;
- ಕೊಡದ ಕುಣಿತ ಒಂದು ಜನಪದ ಕಲೆ; ಮೀನುಗಾರ ಹೆಂಗಸರು, ಸಿದ್ಧಿಹೆಂಗಸರು, ಎಲ್ಲಮ್ಮನ ಜೋಗತಿಯರು, ಮದುವೆಗೆ ಗಂಗೆ ತರುವಾಗ ಕೊಡವರು ಇಂತಹ ನೃತ್ಯವನ್ನು ಮಾಡುತ್ತಾರೆ; ಈ ನೃತ್ಯದಲ್ಲಿ ತಂಡದ ನಾಯಕ ಕೃಷ್ಣನಾಗಿ ಕೊಳಲನ್ನು

ನುಡಿಸುತ್ತಾ ನಿಲ್ಲುತ್ತಾನೆ; ಉಳಿದ ಸ್ತ್ರೀಯರು ಗೋಪಿಕಾಸ್ತ್ರೀಯರೆಂಬ ಭಾವನೆ ತಳೆದು, ಕೊಡವನ್ನು ಉರುತ್ತಾ ಕುಣಿಯುತ್ತಾರೆ.

- ತುಂಬಿದ ಕೊಡ ಅಥವಾ ಬಿಂದಿಗೆಯನ್ನು ತಲೆಯ ಮೇಲೆ ಇಲ್ಲವೆ ಹೆಗಲ ಮೇಲೆ ಭುಜ ಭಾಗಗಳಲ್ಲಿ ಇಟ್ಟುಕೊಂಡು ತಾಳಕ್ಕೆ ತಕ್ಕಂತೆ ಕುಣಿಯುವುದು (ಬೆ.ಜಿ.); ಈ ಕಲೆ ಮರಾಠಿಗರಲ್ಲೂ ಪ್ರಚಲಿತವಿದೆ;

  The women folk dance placing the water filled ritual pot on their heads during the occasions of marriage and other religious ceremonies;
- ***—ಕೊಡದ ಪೂಜೆ*** : ಎಲ್ಲಮ್ಮ ದೇವರ ಸಂಪ್ರದಾಯದಲ್ಲಿ ತುಂಬಿದ ಕೊಡವನ್ನಿಟ್ಟು ಪೂಜಿಸುವುದು ಕಂಡುಬರುತ್ತದೆ; Worshipping goddess Ellamma by a number of devotees with water filled pots before the idol of Ellamma devi; Ellamma devi also known as `Renuka', she is the avtar of goddess Parvathi/Durga; Renuka is also called `Renu' which means `Atom/mother of universe'; Ellammadevi/Renuka is a Hindu goddess worshipped mainly in the states of South India;
- ***—ಕೊಡ ಹೊರಿಸೊ ಶಾಸ್ತ್ರ*** : ಮದುವೆಯ ಮುಖ್ಯ ಆಚರಣೆಗಳಲ್ಲಿ ಒಂದು;
- ಮಾಂಗಲ್ಯ ಧಾರಣೆಯ ಮರುದಿನ ನವವಿವಾಹಿತೆ ಹೊಸ ಕೊಡದಲ್ಲಿ ತಂದ ನೀರನ್ನು ಮದುವಣಿಗ ಪೂಜಿಸಿ ಇಳಿಸಿಕೊಳ್ಳುವ ಆಚರಣೆ(ಚಿ.ಪ.ಕೋ);
- ***—ಕೊಡದ ಸೇವೆ*** : ಎಲ್ಲಮ್ಮನ ಮುಖವಿರುವ ಕೊಡವನ್ನು ತಲೆಯ ಮೇಲೆ ಹೊತ್ತು ಗುಡಿ ಪ್ರದಕ್ಷಿಣೆ ಮಾಡುವ ಭಕ್ತರ ಸೇವೆ;
- ***—ಕೊಡಾನ*** : ಕೊಡವನ್ನು; ಕೊಡ+ಅನ್ನು ಕೊಡವನ್ನು>ಕೊಡವನ್ನ>ಕೊಡಾನ; *ಪ್ರ: 'ತುಂಬಿರುವ ಕೊಡಾನ ಒಳಗೆ ತಂದಿಡು*!
- ಕೊಡೋಣ>ಕೊಡಾಣ>ಕೊಡಾನ ಎಂದು ಆಗುವುದುಂಟು;
- ಕೊಟ್ಟರೆ ಆಯ್ತು, ನಿಧಾನವಾಗಿ ಕೊಡೋಣ ಎಂಬ ಅರ್ಥದಲ್ಲಿಯೂ 'ಕೊಡಾನ' ಬಳಕೆಯಾಗುತ್ತದೆ.

ಕೊಡಂಗಿ kodangi :

- ಇದು ತೋಡೆ(ತೋಡ)ಯನ್ನು ಹೋಲುವ ತೋಳಿನ ಆಭರಣ; ತೆಗೆಯಲು ಹಾಕಲು ಬರುವಂತೆ ಕತ್ರಿ ರಚನೆಯ ಕೊಂಡಿ ವ್ಯವಸ್ಥೆ ಇದ್ದು ಜಗ್ಗಿದಾಗ ಹಿಗ್ಗುವುದು; ತೋಳಿನೊಳಗೆ ಹಾಕಿ ಒತ್ತಿದಾಗ ಬಿಗಿಯಾಗಿ ತೋಳನ್ನಪ್ಪಿಕೊಳ್ಳುವುದು;

  cf: **ನೋಡಿ:** ಕೊಡಗೆ. A kind of hook and eye ornament, usually adorn the arm.

ಕೊಡಂಗೆ kodange :

- ಗಂಡಸರ ಕಿವಿಯ ಆಭರಣ(ದ.ಕ.); Men's earrings in crescent shape;
- ಇದು ಗಂಡಸರು ಕಿವಿಯ ಮೇಲ್ತುದಿಗೆ ಧರಿಸುವ ಚಂದ್ರಾಕಾರದ ವಿಶೇಷ ಆಭರಣ(ದ್ರಾ.ಜ್ಞಾ.ಪ.ಕೋ);
- 'ಕೊಡಂಕೆ' ಪದವೂ ಇದೆ(ಕಿಟ್ಟೆಲ್); ಕೊಡಂಕೆ> ಕೊಡಂಗೆ ಆಗಿರಬಹುದು;

  cf: **ನೋಡಿ:** ಕೊಡಗೆ.

ಕೊಡಂಬೆ/ಕೊಡಬೆ/ಕೊಡಮೆ kodambe/ kodabe/kodame :

- ಕೊಡಂಬೆ>ಕೊಡಬೆ; 'ಕೊಡಂಬೆ' ಮಧ್ಯದ ಬಿಂದು ಲೋಪವಾಗಿ 'ಕೊಡಬೆ' ಎಂದಾಗುತ್ತದೆ; 'ಕೊಡಬೆ'ಯ ಅಂತ್ಯ 'ಬ'ಕಾರಕ್ಕೆ ಉಚ್ಚಾರಣೆಯಲ್ಲಿ 'ಮ'ಕಾರ ಬಂದು 'ಕೊಡಮೆ' ಎಂದಾಗುವುದೂ ಉಂಟು; ಕೊಡಂಬೆ>ಕೊಡಬೆ>ಕೊಡಮೆ;
- ಕೊಡಬೆ, ಕೊಡಬ, ಕೊಡಬು, ಕ್ವಡ್ಬೆ, ಕ್ವಡ್ಬಾ, ಕೊಡಮಿ, ಕೊಡಮೆ, ಕೊಡ್ಮೆ ಎಂಬಿತ್ಯಾದಿ ರೂಪಗಳು ಬಳಕೆಯಲ್ಲಿವೆ;
- ಕೊಡಂಬೆ; ಮೀನು ಹಿಡಿಯುವ ಒಂದು ಸಾಧನ(ಚಾ.ಜಿ.); A basket made of bamboo or frond or leaves of coconut to catch fish; Kodabe: slang of give away, handover, render;
- ಮೀನು ಹಿಡಿಯುವ ಜೋಡಿ ಬುಟ್ಟಿ(ಕ.ಜಾ.ನಿ.);
- ಸಾಮಾನ್ಯವಾಗಿ ಬಿದಿರುಕಡ್ಡಿ, ತೆಂಗಿನ ಗರಿಯ ಕಡ್ಡಿಗಳಿಂದ ಇದನ್ನು ರಚಿಸುತ್ತಾರೆ; ಕೆಲವು ಕಡೆ ಮಟ್ಟಾಳೆ, ಉತ್ತರಾಣಿಕಡ್ಡಿ ಬಳಸಿ ಕೊಡಬೆಯನ್ನು ತಯಾರಿಸುವುದುಂಟು;

- ಕೆರೆ ಕೋಡಿ ಬಿದ್ದಾಗ, ಬೇಸಿಗೆಯಲ್ಲಿ ಹೊಳೆಯಲ್ಲಿ ಹರಿವ ನೀರು ಕಡಿಮೆಯಾದಾಗ, ಮಳೆಯ ನೀರು ಕೆರೆಗೆ ಹರಿದು ಬರುವ ಹಳ್ಳಗಳಿಗೆ ಒಡ್ಡು ಕಟ್ಟಿ ನಡುವೆ ಕೊಡಬೆಯನ್ನು ಹರಿವ ನೀರಿಗೆ ಎದುರಾಗಿ ಇಡುತ್ತಾರೆ; ನೀರು ಹರಿಯುವಾಗ ಮಾತ್ರ ಕೊಡಬೆಯಿಂದ ಮೀನು ಹಿಡಿಯಲು ಸಾಧ್ಯ; ನಿಂತ ನೀರಿನಲ್ಲಿ ಕೊಡಬೆ ಹಾಕಿ ಮೀನು ಹಿಡಿಯಲಾಗುವುದಿಲ್ಲ;
- ಹೊಸ ನೀರು ಬಂದಾಗ ನಿಂತ ನೀರಿನಲ್ಲಿರುವ ಮೀನುಗಳು ಪುಳಕಗೊಂಡು ಆ ನೀರಿನ ಎದುರು ಈಜುತ್ತಾ ಹೋಗುತ್ತವೆ; ಇದಕ್ಕೆ 'ಹತ್ತು ಮೀನು' ಎನ್ನುವರು; ಹರಿವ ನೀರು ಬಿಟ್ಟು ಮತ್ತೆ ಕೆರೆಯತ್ತಲೇ ಧಾವಿಸುವ ಮೀನುಗಳಿಗೆ 'ಇಳಿಮೀನು' ಎನ್ನುವರು; ಹೀಗೆ ಹರಿಯುವ ನೀರಿನ ಜೊತೆಯಲ್ಲಿ ಸಾಗಿ ಬರುವ ಮೀನುಗಳನ್ನು ಕೊಡಬೆ ಸಹಾಯದಿಂದ ಹಿಡಿಯಲಾಗುತ್ತದೆ;
- ಬೀಳುವ ಅಥವಾ ಹರಿಯುವ ನೀರಿಗೆ ಎದುರಾಗಿ ಕೊಡಬೆಯನ್ನು ಒಡ್ಡಿ, ನೀರು ಕೊಡಬೆಯೊಳಗಿಂದ ಹಾಯ್ದು ಸಾಗುವಂತೆ ಮಾಡುತ್ತಾರೆ; ನೀರು ಸರಾಗವಾಗಿ ಹರಿದು ಹೋಗಿ ಮೀನುಗಳು ಕೊಡಬೆಯಲ್ಲಿ ಉಳಿಯುತ್ತವೆ; ಕೊಡಬೆಯಿಂದ ಹಿಂದಕ್ಕೆ ಮೀನುಗಳು ಸಾಗಿ ಹೋಗಲು ಆಗದಂತೆ ಕೊಡಬೆಯ ರಚನೆ ಇರುತ್ತದೆ; ಇದರಿಂದಾಗಿ ಕೊಡಬೆ ಒಡ್ಡಿದವರು ಬಂದು ಕೊಡಬೆಯಲ್ಲಿ ಬಿದ್ದಿರುವ ಮೀನುಗಳನ್ನು ಪಡೆಯಲು ಸಾಧ್ಯವಾಗುತ್ತದೆ; ಮೀನುಗಳ ಜೊತೆಗೆ ಸೀಗಡಿಯನ್ನು ಹಿಡಿಯಲು ಸಹ ಹೆಚ್ಚಾಗಿ ಬಳಸುತ್ತಾರೆ;
  ಪ್ರ: 'ನೆನ್ನೆ ಒಡ್ಡಿದ ಕೊಡಂಬೇಲಿ ಮೀನು ಎಷ್ಟು ಬಿದ್ದಿವೆ ನೋಡು'; 'ಹರಿಯೋ ನೀರಿಗೆ ಕೊಡಮೆ ಹಾಕೋದ್ಬಿಟ್ಟು ಹೆಡ್ಡನಂಗೆ ನೋಡ್ತಾ ನಿಂತವ್ನೆ'.

ಕೊಡಕ koḍaka :

- ಮರದ ಗಾಡಿ ಕೊರಕಲಿಗೆ ಬೀಳುವುದು(ಉ.ಕ.ಜಿ.);
  ಪ್ರ: 'ಗಾಡಿ ಉತಾರಿನಲ್ಲಿ ಕೊಡಕ ಹೊಡೀತು'.
  Falling of wooden cart especially of bullock cart into pit on the cart road;
- ಗಾಡಿ ಜಾಡಿನಲ್ಲಿ ಹೋಗುತ್ತಾ ಗುಂಡಿಗೆ(ಕೊರಕಲಿಗೆ) ಬೀಳುವುದು;
- ***—ಕೊಡಕ(ಹು)ಬೀಳು*** : ಗಾಡಿ ರಸ್ತೆ ಬದಿಗೆ/ಹಳ್ಳಕ್ಕೆ ಮೊಗಚಿಕೊಳ್ಳುವುದು;
- ***—ಕೊಡಹು*** : ಚೆಲ್ಲಾಪಿಲ್ಲಿಯಾಗಿ ಹರಡು; ಜೋರಾಗಿ ಮೇಲಿನಿಂದ ಕೆಳಕ್ಕೆ ಅಲ್ಲಾಡಿಸು; ಉದುರಿಸು (ಚಿಕ್ಕ.ಜಿ.).

ಕೊಡಕುಂಚ koḍakuñca :

- ಶ್ಯಾವಿಗೆ ಮರವೆಂದು ಕರೆಯುತ್ತಾರೆ;
- ಇದನ್ನು ಗೋಪೂಜೆಯ ದಿನ ತಯಾರಿಸುತ್ತಾರೆ;
- ಎತ್ತಿನ ಕೊಂಬಿನ ಅಲಂಕಾರದ ಒಂದು ಆಭರಣ.
  An ornament to decorate the horns of the bullock.

ಕೊಡಕುಲ್ಲ/ಕೊಡಿಕಿಲ್ಲ koḍakulla/ koḍikilla :

- ಕೊಡುವುದಿಲ್ಲ, ಕೊಡುವುದಕ್ಕಿಲ್ಲ(ತು.ಜಿ.); Slang words for donot give away;
- ಕೊಡಿಕಿಲ್ಲ; ಕೊಡೂದಿಲ್ಲ(ಮಂಡ್ಯ.ಜಿ.);
- 'ಕೊಡುವುದಿಲ್ಲ' ಎಂಬ ನಿಷೇಧಾರ್ಥಕ ಕ್ರಿಯಾರೂಪವೇ ಇನ್ನಷ್ಟು ಶಿಷ್ಟೀಕರಣಗೊಂಡು 'ಕೊಡುವುದಕ್ಕಿಲ್ಲ' ಎಂದಾಗುತ್ತದೆ; ಇದೇ ಮತ್ತೆ ಜನಪದರ ಮಾತಿನಲ್ಲಿ ಸಂಕ್ಷೇಪಗೊಂಡು ಕೊಡಿಕಿಲ್ಲ, ಕೊಡಕುಲ್ಲ, ಕೊಡೂಕಿಲ್ಲ, ಕೊಡುಕುಲ್ಲ ಎಂಬಂತಹ ರೂಪಗಳನ್ನು ತಳೆಯುತ್ತದೆ; ವ್ಯಕ್ತಿ ವಿಶಿಷ್ಟತೆ ಮತ್ತು ಪ್ರಾದೇಶಿಕ ವಿಶಿಷ್ಟತೆಯಿಂದ ಈ ವ್ಯತ್ಯಯಗಳು ಜರುಗುತ್ತವೆ.

ಕೊಡ ಕೂಲಿ koḍa kūli :

ಮನೆಯ ಬಾಡಿಗೆ, ಬಾಡಿಗೆ ಮನೆ, ತಿಂಗಳಿಗೆ ಇಂತಿಷ್ಟು ಹಣವನ್ನು ಕೊಟ್ಟು ತಾತ್ಕಾಲಿಕವಾಗಿ ಪಡೆದುಕೊಂಡು ವಾಸಿಸುವ ಮನೆ. Rent for a house, rented house.

ಕೊಡಕೊಂಡ koḍakoṇḍa :

- ಸಹಗಮನ; ಕೊಂಡಕ್ಕೆ ಹಾಯುವುದು; ಕೆಂಡಕೊಂಡ ಆಗೋದು; ಕೊಂಡ ಹಾಯೋದು; A sacred act of walking on holy bonfire or pyre, it is performed in the name of god or goddess;
- ಹಿಂದೆ ಗಂಡ ಸತ್ತಾಗ ಹೆಂಡತಿಯೂ ಗಂಡನ ಚಿತೆ ಏರಿ ಸಹಗಮನ ಮಾಡುವ ಪದ್ಧತಿ ಇತ್ತು; ಇದನ್ನು 'ಸತಿ ಸಹಗಮನ ಪದ್ಧತಿ' ಎಂದು ಕರೆಯುತ್ತಿದ್ದರು;

An evil practice where a widow immolates herself on her husband's pyre or commits suicide in another fashion shortly after her husband's death; in the name of such `Woman' or `Sati' we can see the stone slabs with pictures;

- ಗಂಡ ತೀರಿಕೊಂಡ ಮೇಲೆ ಚಿಕ್ಕ ವಯಸ್ಸಿನ ಹೆಂಡತಿ ವಿಧವೆಯಾಗಿ ಕಾಲ ಕಳೆಯುವುದು ಕಷ್ಟಕರವಾಗಿತ್ತು; ಅದಕ್ಕಾಗಿ ಕೆಲವು ಸತಿಯರು ಸ್ವ-ಇಚ್ಛೆಯಿಂದ ಚಿತೆ ಏರಿದರೆ, ಮತ್ತೆ ಕೆಲವರನ್ನು ಪದ್ಧತಿಯನ್ನು ಅನುಸರಿಸುವಂತೆ ಒತ್ತಾಯಿಸಿ ಬಲವಂತದಿಂದ ಚಿತೆಗೆ ನೂಕುತ್ತಿದ್ದುದೂ ಉಂಟು; ಹೀಗೆ ಸತಿಯಾಗುವ ಪದ್ಧತಿಗೆ ಕೆಂಡಕೊಂಡವಾಗುವುದು ಎಂದು ಕರೆಯುತ್ತಿದ್ದರು; ಇಂತಹ ಸತಿಯರನ್ನು 'ಮಹಾಸತಿ' ಎಂದು ಕರೆಯುವುದು ವಾಡಿಕೆ; 'ಮಹಾಸತಿ' ಆಡುಮಾತಿನಲ್ಲಿ 'ಮಾಸ್ತಿ' ಎಂದಾಗಿ, ಅಂತಹ ಸತಿಯರ ಹೆಸರಿನಲ್ಲಿ 'ಮಾಸ್ತಿಗುಡಿ' ನಿರ್ಮಿಸುತ್ತಿದ್ದರು; ಅಲ್ಲಿ ಬಲಗೈ ಮೇಲೆತ್ತಿ ಹಿಡಿದ ಹಸ್ತದ ಚಿತ್ರವನ್ನು ಕಲ್ಲಿನಲ್ಲಿ ಕೆತ್ತಿಸಿ ನಿಲ್ಲಿಸುತ್ತಿದ್ದರು; ಇದಕ್ಕೆ 'ಮಾಸ್ತಿಕಲ್ಲು' ಎಂದು ಹೆಸರು; ಇಂತಹ ಅನಿಷ್ಟ ಪದ್ಧತಿಯನ್ನು ರಾಜಾರಾಂ ಮೋಹನ್ ರಾಯ್ ಹೋರಾಡಿ ಸುಧಾರಣೆ ತಂದು ನಿಲ್ಲಿಸಿದರು.

ಕೊಡಗಲ kodagala :

- ಹಾಲಕ್ಕಿ ಒಕ್ಕಲಿಗರ ಒಂದು ಬಳಿ/ವಂಶ(ಉ.ಕ.ಜಿ); Family/lineage/descent of Hallakki Vokkaligas; Hallakki Vokkaliga are a caste group of Vokkaligas of Karnakata, India; they are found predominantly in Uttar Kannada districts in the foot of Western Ghats; these people are known as the `Aboriginals of Uttar Kannada'; their way of living is still ancient; the women adorn themselves with beads and necklaces, heavy nose rings and strange attire;
- ***—ಕೊಡಗಲ ಹೆಂಚು*** : ಕವಚಾಲ ಹೆಂಚು; ಮಂಗಳೂರು ಹೆಂಚು(ಹಾಸ.ಜಿ/ಶಿ.ಜಿ);
- ಹೆಂಚುಗಳನ್ನು ತಯಾರಿಸುವ ಸ್ಥಳದ ಹೆಸರನ್ನು ಆ ಹೆಂಚುಗಳ ಜೊತೆಯಲ್ಲಿ ಸೇರಿಸಿಕೊಂಡು ಹೇಳಲಾಗಿದೆಯೆಂದು ತೋರುತ್ತದೆ; ಕೆಲವು ಪ್ರದೇಶದಲ್ಲಿ ದೊರೆಯುವ ಜೇಡಿಮಣ್ಣು ಉತ್ತಮ ಗುಣಮಟ್ಟದ ಹೆಂಚು ತಯಾರಿಸಲು ಅನುಕೂಲವಾಗಿರುತಿತ್ತು; ಈ ಹಿನ್ನೆಲೆಯಲ್ಲಿ 'ಕೊಡಗಲ ಹೆಂಚು' ಪದ ಪ್ರಯೋಗ ಉಂಟಾಗಿರಬಹುದು; ಮಂಗಳೂರಿನಲ್ಲಿ ಇಂತಹ ಹೆಂಚಿನ ಕಾರ್ಖಾನೆಗಳು ಇದ್ದುದರಿಂದ ಮಂಗಳೂರು ಹೆಂಚು ಎಂದು ಪ್ರಸಿದ್ಧಿಗೆ ಬಂದಂತಾಯಿತು; ಕೋಲಾರ ಜಿಲ್ಲೆಯ ಮಾಲೂರಿನಲ್ಲಿ ಹೆಂಚಿನ ಕಾರ್ಖಾನೆಗಳಿದ್ದು ಅಲ್ಲಿ ತಯಾರಿಸುವ ಹೆಂಚುಗಳನ್ನು ಗ್ರಾಮೀಣರು ಮಂಗಳೂರು ಹೆಂಚು ಎಂದೇ ಕರೆಯುವುದು ರೂಢಿಯಲ್ಲಿದೆ;
- 'ಕೊಡಗಲ' ಎಂದರೆ 'ಪಶ್ಚಿಮ' ಎಂದು ಅರ್ಥವಿದೆ; ದಿಕ್ಕು ಮತ್ತು ಸ್ಥಳವನ್ನು ಸೂಚಿಸುವ ಪದ.

ಕೊಡಗಲಿ kodagali :

- ಇದು ಒಂದು ಬಗೆಯ ನೇಯ್ಗೆಯ ಉಪಕರಣ; A type of weaving machine/tool;
- ಮರದ ಕಟ್ಟಿಗೆ ತಂದು ನೀರಿನಲ್ಲಿ ಕೊಳೆಯಿಸಿ, ಗುದ್ದಿ ನಾರು ಮಾಡುತ್ತಿದ್ದರು; ಅದರಿಂದ ನೂಲು ತೆಗೆದು ಅದನ್ನು ಹದವಾಗಿ ಕೊಳೆಯಿಸಿ ಬಲೆ ನೇಯುತ್ತಾರೆ. ವ್ಯರೂ: ಕೊಡಗಿ, ಕೊಡ್ಗಲಿ.

ಕೊಡಗಿನ ಕೋಳಿ ಪುಟ್ಟು kodagina kōli puttu :

- ಬಾಳೆಹಣ್ಣಿನಿಂದ ತಯಾರಿಸಿದ ಒಂದು ಬಗೆಯ ಖಾದ್ಯ; A type of dish prepared in Kodagu district of Karnataka state; it is prepared with the mixture of banana fruit and rice flour; it is made by steaming the banana mixture;
- ಹಣ್ಣಾದ ಬಾಳೆಯನ್ನು ಹಿಸುಕಿ ಅದಕ್ಕೆ ಹುರಿದ ಅಕ್ಕಿಹಿಟ್ಟು, ಕಾಯಿತುರಿ ಬೆರಸಿ, ಬಾಳೆಯೆಲೆಯನ್ನು ಕೊಟ್ಟೆಯಾಗಿ ಮಾಡಿ ಅದರೊಳಗೆ ಆ ಹಿಟ್ಟನ್ನು ಹಾಕಿ ಆವಿಯಲ್ಲಿ ಬೇಯಿಸಿ ಬೆಣ್ಣೆಯೊಂದಿಗೆ ತಿನ್ನುವುದು; ಇದಕ್ಕೆ ಕೊಡಗಿನ ಕೋಳಿ ಪುಟ್ಟು ಎಂದು ಹೆಸರು;
- ತಮಿಳು ಮತ್ತು ಮಲೆಯಾಳಂಗಳಲ್ಲಿ ಕ್ರಮವಾಗಿ ಈ ಪದ 'ಪುಟ್ಟು' ಮತ್ತು 'ಪಿಟ್ಟು' ಎಂದೇ ಅರ್ಥವಿದೆ;

- ಹಬೆಯಲ್ಲಿ ಬೇಯಿಸಿದ್ದು ಎಂದು ಹೇಳಿರುವುದರಿಂದ 'ಕಡುಬಿಗೆ' ಸಮೀಪದ ತಿಂಡಿ ಇರಬಹುದೆ? 'ಹಿಟ್ಟು' ಅದನ್ನು ಸೂಚಿಸುತ್ತಿರಬಹುದು!
- 'ಕೊಡಗಿನ ಕೋಳಿ' 'ಪುಟ್ಟು'ನೆ ಅಥವಾ ಕೊಡಗಿನ 'ಕೋಳಿಪುಟ್ಟು'ನೆ ಸ್ಪಷ್ಟವಾಗದು;
- 'ಕೊಡಗಿನ' ಪದವಿರುವುದರಿಂದ 'ಕೊಡಗು' ಪ್ರದೇಶವನ್ನು ಸೂಚಿಸುತ್ತಿದೆ.

ಕೊಡಗು/ಕೊಡವ koḍagu/koḍava :

- 'ಕೊಡಗು' ಕರ್ನಾಟಕ ರಾಜ್ಯದಲ್ಲಿನ ಜಿಲ್ಲೆಗಳಲ್ಲಿ ಒಂದು; ಇದು ಬೆಟ್ಟ ಗುಡ್ಡ ಮತ್ತು ಸಸ್ಯ ಸಂಪತ್ತಿನಿಂದ ಕೂಡಿದ್ದು ಪ್ರಾಕೃತಿಕ ಸೊಬಗಿನಿಂದ ಕಣ್ಮನ ಸೂರೆಗೊಂಡ ಸುಂದರ ಜಿಲ್ಲೆ; The word Kodagu derives from the word `Kudu'; Kodagu is an administrative district in Karnataka state; it is thickly wooded grandeur on the Western Ghats and it is beautiful hill station; it occupies an area of 4.102 square kilometres(1584 sq mi); origin for many rivers like Kauveri, Lakshmana Theertha etc; another name for Kodagu is `Coorg';
- 'ಕೊಡಗು' ಪದದ ಮೂಲ ತಿಳಿಯುವುದು ಸ್ವಲ್ಪ ಕಷ್ಟದ ಸಂಗತಿ; 'ಕುಡುಮಲೆನಾಡು' ಎಂಬುದರಿಂದ ರೂಪಾಂತರಗೊಂಡು ಬಳಕೆಯಲ್ಲಿರುವ ಪದವೆಂದು ಹೇಳಲಾಗುತ್ತದೆ; ನಿದರ್ಶನವಾಗಿ ಪ್ರಾಚೀನ ತಮಿಳು ಸಾಹಿತ್ಯದಲ್ಲಿ ದೊರೆಯುವ 'ಕುಡುಮಲೆನಾಡು' ಎಂಬ ರೂಪವನ್ನು ಗಮನಿಸಬಹುದು;
- ಕೊಡಗಿನ ಐತಿಹ್ಯಗಳ ಪ್ರಕಾರ 'ಮತ್ಸ್ಯದೇಶ, ಬ್ರಹ್ಮದೇಶ, ಕ್ರೋಡದೇಶ' ಎಂಬ ಮೂರು ತೆರನಾದ ಹೆಸರುಗಳು ಪೌರಾಣಿಕವಾಗಿ ಇದ್ದುದಾಗಿ ತಿಳಿದು ಬರುತ್ತದೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ;
- ಇಲ್ಲಿನ ಭಾಷೆ ವ್ಯಾವಹಾರಿಕವಾಗಿ ಕನ್ನಡವಾಗಿದ್ದರೂ, ಇವರ ಮಾತೃಭಾಷೆ ಕನ್ನಡದ ಉಪಭಾಷೆಯಾದ 'ಕೊಡವ', ಅದನ್ನು ಮಾತನಾಡುವವರು 'ಕೊಡವ'ರು;
- 'ಕುಡು' ಮೂಲರೂಪ ಇರಬಹುದೆ? ಅಥವಾ 'ಕುಡುಗ'? ತಮಿಳು ಮತ್ತು ಮಲೆಯಾಳಂಗಳಲ್ಲಿ 'ಕುಡಗ' ರೂಪವಿದೆ;
- ಕೊಡಗು ಜಿಲ್ಲೆ ಒಟ್ಟು ೪೧೦೨ಚ.ಕಿ.ಮೀ ಭೌಗೋಳಿಕ ವಿಸ್ತೀರ್ಣ ಹೊಂದಿದೆ; ಬೆಂಗಳೂರು ನಗರ ಜಿಲ್ಲೆಯನ್ನು ಬಿಟ್ಟರೆ ಕರ್ನಾಟಕ ರಾಜ್ಯದ ಅತ್ಯಂತ ಚಿಕ್ಕ ಜಿಲ್ಲೆಯಾಗಿದೆ; ರಾಜ್ಯದ ಒಟ್ಟು ವಿಸ್ತೀರ್ಣ (೧,೯೧,೭೯೧ ಚ.ಕಿ.ಮೀ)ದಲ್ಲಿ ಕೊಡಗು ಶೇ.೨.೧೪ರಷ್ಟು ಇದೆ; ಈ ಜಿಲ್ಲೆಯಲ್ಲಿ ಮಡಿಕೇರಿ, ವಿರಾಜಪೇಟೆ, ಸೋಮವಾರಪೇಟೆ ಎಂಬ ಮೂರು ತಾಲ್ಲೂಕುಗಳಿವೆ;
- ಮಡಿಕೇರಿ ತಾಲ್ಲೋಕಿನಲ್ಲಿ ೬೭ಗ್ರಾಮಗಳು, ವಿರಾಜಪೇಟೆ ತಾಲ್ಲೂಕಿನಲ್ಲಿ ೯೪ ಗ್ರಾಮಗಳು, ಸೋಮವಾರಪೇಟೆ ತಾಲ್ಲೋಕಿನಲ್ಲಿ ೧೩೫ ಗ್ರಾಮಗಳು ಹೀಗೆ ಜಿಲ್ಲೆಯಲ್ಲಿ ಒಟ್ಟು ೨೯೬ಗ್ರಾಮಗಳಿವೆ; ಜಿಲ್ಲೆಯಲ್ಲಿ ೧೬ ಹೋಬಳಿಗಳಿದ್ದು, ಒಂದು ನಗರಸಭೆ ಮತ್ತು ೯೯ ಗ್ರಾಮ ಪಂಚಾಯಿತಿಗಳಿವೆ;
- ಜಿಲ್ಲೆಯ ಗಡಿಗೆ ಮೈಸೂರು ಜಿಲ್ಲೆ, ಹಾಸನ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳು ಹೊಂದಿಕೊಂಡಿವೆ; ಹೊರ ರಾಜ್ಯದ ಗಡಿಯಾಗಿ ಕೇರಳದ ಗಡಿ ಇದೆ;
- ಕೊಡಗು ಜಿಲ್ಲೆಯಲ್ಲಿ ಕಾವೇರಿ, ಲಕ್ಷ್ಮಣ ತೀರ್ಥ, ಬರಪೊಳೆ ಮತ್ತು ಚಕ್ಲಿಹೊಳೆಗಳು ಮುಖ್ಯ ನದಿಗಳಾಗಿವೆ; ಇವುಗಳ ಜೊತೆಗೆ ಕಿರುಹೊಳೆಗಳು ಹರಿದು ಮುಖ್ಯ ನದಿಗಳಿಗೆ ಸೇರುತ್ತವೆ;
- ಬ್ರಹ್ಮಗಿರಿ, ತಂಡಿಯಂಡಮೋಳ್, ಪುಷ್ಪಗಿರಿ ಮತ್ತು ಕೋಟೆ ಬೆಟ್ಟಗಳಿಂದ ಈ ಜಿಲ್ಲೆ ಕೂಡಿದೆ;
- ತಲಕಾವೇರಿ, ಭಾಗಮಂಡಲ, ಅಬ್ಬಿ ಜಲಪಾತ, ಇರ್ಪು ಜಲಪಾತ, ನಾಗರಹೊಳೆ, ಕಾವೇರಿ ನಿಸರ್ಗಧಾಮ, ದುಬಾರೆ, ಪುಷ್ಪಗಿರಿ, ಹಾರಂಗಿ ಅಣೆಕಟ್ಟು, ಮಡಿಕೇರಿ ಕೋಟೆ, ರಾಜಸೀಟು, ಓಂಕಾರೇಶ್ವರ ದೇವಸ್ಥಾನ ಮತ್ತು ರಾಜರ ಗೋರಿಗಳು ಕೊಡಗಿನ ಪ್ರವಾಸಿ ತಾಣಗಳಾಗಿದ್ದು ಅಲ್ಲಿನ ಗತಕಾಲದ ವೈಭವವನ್ನು ಸಾರುತ್ತಾ, ಅಲ್ಲಿನ ಸಂಸ್ಕೃತಿಯನ್ನು ನಾಡಿನ ಉದ್ದಗಲಕ್ಕೂ ಹರಡುತ್ತಿವೆ;
- ಕೊಡಗು ಗೌಡರು, ಕೊಡವರು ಇಲ್ಲಿನ ಪ್ರಮುಖ ಸಮುದಾಯವಾಗಿದ್ದು ಕೃಷಿಯನ್ನು ಪ್ರಧಾನವಾಗಿ ಅವಲಂಬಿಸಿದ್ದಾರೆ; ಮುಸಲ್ಮಾನರು, ಮಲೆಯಾಳಿಗಳು ವ್ಯಾಪಾರವನ್ನು ಮುಖ್ಯವಾಗಿರಿಸಿಕೊಂಡಿದ್ದಾರೆ; ಬ್ರಾಹ್ಮಣರು ಧಾರ್ಮಿಕ ಪೂಜಾ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ; ಚಿನ್ನದ ಕೆಲಸದ

ಆಚಾರಿಗಳು, ಮಣ್ಣಿನಿಂದ ಮಡಿಕೆ, ಕುಡಿಕೆ ತಯಾರಿಸುವ ಕುಂಬಾರರು, ಕಬ್ಬಿಣ ಕೆಲಸದ ಕಮ್ಮಾರರು, ಚರ್ಮಗಾರಿಕೆಯ ಚಮ್ಮಾರರು, ಮಡಿ ಕೆಲಸದ ಮಡಿವಾಳರು ಜಿಲ್ಲೆಯಲ್ಲಿ ನೆಲೆಸಿದ್ದಾರೆ; ಕ್ರಿಶ್ಚಿಯನ್ನರು ಮತ್ತು ಬುಡಕಟ್ಟು ಜನಾಂಗದವರಾದ ಎರವರು, ಕುರುಬರು, ಮಲೆಕುಡಿಯರು ಸಹ ನೆಲೆಸಿದ್ದಾರೆ; ಬೈನೆ ಮತ್ತು ತೆಂಗಿನ ಮರಗಳಿಂದ ಹೆಂಡವನ್ನು ಇಳಿಸುವ ಕಾರ್ಯದಲ್ಲಿ ತೊಡಗಿರುವ ಬಿಲ್ಲವರು ಹಾಗೂ ಇನ್ನಿತರ ವರ್ಗದವರಿದ್ದಾರೆ; ಇತ್ತೀಚಿನ ದಿನಗಳಲ್ಲಿ ತಮ್ಮ ಮೂಲ ಕಸುಬನ್ನು ಬಿಟ್ಟು ಜೀವನಕ್ಕಾಗಿ ಉಪಕಸುಬುಗಳನ್ನು ಬಹುತೇಕ ಅವಲಂಬಿಸಿಕೊಂಡಿದ್ದಾರೆ; ಜೊತೆಗೆ ಖಾಸಗಿ ಮತ್ತು ಸರ್ಕಾರಿ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಉದ್ಯೋಗಿಗಳು ಪಕ್ಕದ ಜಿಲ್ಲೆಗಳಿಂದ, ಬೇರೆ ರಾಜ್ಯಗಳಿಂದ ಬಂದು ನೆಲೆಯಾಗಿರುವುದೂ ಉಂಟು;

- ಬೇರೆ ಬೇರೆ ಜಾತಿ, ಧರ್ಮ, ಪಂಗಡಗಳ ಜನರು ವಾಸಿಸುವ ಕೊಡಗಿನ ಪ್ರಧಾನ ವೃತ್ತಿ ವ್ಯವಸಾಯ; ಭತ್ತ, ತೆಂಗು, ತರಕಾರಿ, ರಾಗಿ, ಜೋಳ ಇತ್ಯಾದಿ ಆಹಾರ ಬೆಳೆಗಳ ಜೊತೆಗೆ ವಾಣಿಜ್ಯ ಬೆಳೆಗಳಾದ ಕಾಫಿ, ಏಲಕ್ಕಿ, ಕರಿಮೆಣಸು, ಅಡಿಕೆ ಬೆಳೆಯಲಾಗುತ್ತದೆ; ಕೊಡಗಿನ ಕಿತ್ತಳೆ ಪ್ರಸಿದ್ಧಿ ಪಡೆದಿದೆ;
- ಇತ್ತೀಚೆಗೆ ಕೇರಳ ರಾಜ್ಯದಿಂದ ಪರಿಚಿತಗೊಂಡ 'ಶುಂಠಿ' ಬೆಳೆಯುವ ಪದ್ಧತಿ ಚಾಲ್ತಿಯಲ್ಲಿದೆ; ಹೆಚ್ಚು ಲಾಭದಾಯಕವಾದ 'ಶುಂಠಿ' ಬೇಸಾಯದ ಕಡೆಗೆ ಇಲ್ಲಿನವರು ಹೆಚ್ಚು ಆಕರ್ಷಿತರಾಗುತ್ತಿದ್ದಾರೆ(ಆಧಾರ: ಕೊ.ಗಾ.ಸ.ಸಾಂ.ಅ & ಚ.ಶೀ);
- 'ಕೊಡಗು' ಪದವು ಕೊಡ್ಗ್, ಕೊಡ್ಗು ಎಂದು ಉಚ್ಚರಿತವಾಗುವುದುಂಟು;
- ***—ಕೊಡ್ಗತಿ*** : ಕೊಡವತಿ, ಕೊಡವ್ತಿ; ಕೊಡವರ ಹೆಣ್ಣುಮಗಳು/ಹೆಂಗಸು; ಕೊಡವ ಭಾಷೆಯನ್ನಾಡುವವಳು; Girl, woman from the family of Kodavas of Kodagu or Coorg;
- *ಪ್ರ: 'ಆ ಕೊಡ್ಗತಿ ಹಕ್ಕಲೆ ಕೇಳ್'*;
- ಕೊಡವತಿ; ಕೊಡವ ಪದಕ್ಕೆ ಅಂತ್ಯದಲ್ಲಿ ಸ್ತ್ರೀಲಿಂಗ ವಾಚಕವಾಗಿ ತಿ/ಇತ್ತಿ/ಗಿತ್ತಿ ತದ್ಧಿತ ಪ್ರತ್ಯಯಗಳು ಸೇರಿ ತದ್ಧಿತಾಂತ ಪದಗಳು ಉಂಟಾಗುತ್ತವೆ; ಕೊಡವ+ತಿ(<ಇತ್ತಿ)=ಕೊಡವತಿ>ಕೊಡವ್ತಿ;
- ***—ಕೊಡವ/ಕೊಡವನ್/ಕೊಡಗನ್/ಕೊಡ್ಗನ್/ಕೊಡವರ್*** : ಕೊಡಗಿನವರು; ಕೊಡಗು ನಾಡಿನಲ್ಲಿ ವಾಸಿಸುವ ಒಂದು ಸಮುದಾಯ ಮತ್ತು ಅದಕ್ಕೆ ಸೇರಿದ ವ್ಯಕ್ತಿ; The term `Kodava' has two related usages; firstly it is the name of the Kodava language and culture followed by a number of communities from Kodagu; secondly, it describes dominant Kodava people, relating to ethno-lingual tribe from the region of Kodagu; traditionally they were land-owning agriculturists with martial costumes; their houses are surrounded with rich variety of vegetation;
- ಕೊಡವ ಭಾಷೆಯನ್ನಾಡುವವನು;
- ಕೊಡವ ಪದಕ್ಕೆ ಪುಲ್ಲಿಂಗ ವಾಚಕವಾಗಿ 'ಅನ್' ಪ್ರತ್ಯಯ ಸೇರಿ 'ಕೊಡವನ್' ಎಂದಾಗುತ್ತದೆ; ಕೊಡವ+ಅನ್=ಕೊಡವನ್;
- ಕೊಡಗನ್(ಕೊಡಗ+ಅನ್); ಕೊಡ್ಗನ್ ಎಂಬ ರೂಪಗಳು ಕೂಡ ಕೊಡವ ನಾಡಿನವನೆಂಬರ್ಥದಲ್ಲೇ ಪ್ರಯೋಗದಲ್ಲಿವೆ;
- 'ಕೊಡಗು' ಪದ ಪ್ರದೇಶವನ್ನೂ, ಭಾಷೆಯನ್ನೂ ಏಕಕಾಲದಲ್ಲಿ ಸೂಚಿಸುತ್ತದೆ;
- ಕೊಡವರು; ಕೊಡವ ಪದಕ್ಕೆ ಬಹುವಚನ ಪ್ರತ್ಯಯ 'ಅರ್' ಸೇರಿ ಉಂಟಾದ ಪದವಾಗಿದೆ; ಕೊಡವ+ಅರ್=ಕೊಡವರ್/ಕೊಡವರು;
- ಮಲೆ ಕಾಡುಗಳ ನಡುವೆ ಹುಟ್ಟಿ ಬೆಳೆದಿರುವ ಕೊಡವರು ವೃಕ್ಷಗಳ ಬಗೆಗೆ ಆದ್ಯಗಮನ ಕೊಡುತ್ತಾರೆ; ವೃಕ್ಷಗಳೆಂದರೆ ಇವರಿಗೆ ಪ್ರೀತಿ ಮತ್ತು ಭಕ್ತಿ ಹೆಚ್ಚು; ಇವರ ದೃಷ್ಟಿಯಲ್ಲಿ ಅಶ್ವತ್ಥವೃಕ್ಷ ಶಿವನ ಅಂಶವಾದರೆ, ನೆಲ್ಲಿಕಾಯಿ ಮರ ಪಾರ್ವತಿಯ ಅಂಶ; ಅದಕ್ಕಾಗಿಯೇ ಈ ಎರಡೂ ಮರಗಳನ್ನು ಒಟ್ಟಿಗೆ ಬೆಳೆಸಿ ಕಟ್ಟೆ ನಿರ್ಮಿಸಿರುತ್ತಾರೆ; ಈ ಮರಗಳಿಗೆ ಮದುವೆ ಶಾಸ್ತ್ರ ಮಾಡುತ್ತಾರೆ; ಊರಿನವರಿಗೆ ಊಟ ಹಾಕಿಸುತ್ತಾರೆ; ಮಾವು ಮತ್ತು ಹಲಸಿನ ಮರಗಳ ಬಗೆಗೆ ಇವರಲ್ಲಿ ಪವಿತ್ರ ಭಾವನೆ ಇದೆ; ಹಬ್ಬ, ಶುಭ ಸಮಾರಂಭಗಳಲ್ಲಿ ಈ ಮರಗಳ ಎಲೆಗಳನ್ನು ಬಳಸುತ್ತಾರೆ;

- ಇವರು ವಾಸಿಸುವ ಮನೆಗಳ ಸಮೀಪದಲ್ಲಿ ಗಂಧದಮರ, ಬಾಳೆಗಿಡ, ತೆಂಗು, ಅಡಿಕೆ ಮರಗಳನ್ನು ಸೊಂಪಾಗಿ ಬೆಳೆಸಿರುತ್ತಾರೆ; ಇದು ಕೊಡವರ ವಿಶೇಷತೆಯೂ ಹೌದು;
- ಮರಕಡಿಯುವುದರ ಬಗೆಗೆ ಇವರಲ್ಲಿ ಕಠಿಣವಾದ ನಿಯಮ ಪಾಲನೆ ಉಂಟು; ಸೌದೆಗೆ ಗೊತ್ತು ಪಡಿಸಿದ ಮರಗಳನ್ನು ಬಿಟ್ಟು ಬೇರೆ ಮರಗಳನ್ನು ಕಡಿಯುವಂತಿರಲಿಲ್ಲ; ರೆಂಬೆ, ಕೊಂಬೆಗಳನ್ನು ಮಾತ್ರ ಕಡಿದು ಮರ ಉಳಿಸಬೇಕಿತ್ತು; ಮರವನ್ನು ಬುಡಕ್ಕೆ ಉರುಳಿಸಬೇಕಾದ ಅನಿವಾರ್ಯತೆ ಇದ್ದರೆ ಅಂಥದೇ ಎರಡು ಗಿಡ ನೆಟ್ಟು ಬೆಳೆಸಬೇಕು; ತೇಗ, ಬೀಟೆ, ನಂದಿ, ಹೊನ್ನೆ ಮರಗಳನ್ನು ಮನೆ ಕಟ್ಟಲು ಮಾತ್ರ ಕಡಿಯಬೇಕೆ ವಿನಾ ಬೇರೆ ಕಾರಣಗಳಿಗೆ ಕಡಿಯುವಂತಿರಲಿಲ್ಲ; 'ಮರವಿದ್ದರೆ ಮಳೆ, ಮಳೆ ಬಂದರೆ ಬೆಳೆ' ಎಂಬ ಅರಿವು ಇವರದು;
- ಕೊಡವರ ಉಡುಗೆಗಳು ಇತರರಿಗಿಂತ ಭಿನ್ನವಾದುವು; ಹಬ್ಬ ಹರಿದಿನ ಸಭೆ ಸಮಾರಂಭ ಮದುವೆಗಳಲ್ಲಿ ಅವರ ಸಾಂಪ್ರದಾಯಿಕ ಉಡುಗೆಗಳನ್ನು ತೊಡುತ್ತಾರೆ; ಮಹಿಳೆಯರು ಸೀರೆಯನ್ನುಟ್ಟು, ಸೀರೆಯ ನೆರಿಗೆಯ ಸೆರಗನ್ನು ಹಿಂದಕ್ಕೆ ಇಳಿಚಿಟ್ಟು, ಉದ್ದ ತೋಳಿನ ರವಿಕೆ, ತಲೆಗೆ ಚೌಕಳಿ ವಸ್ತ್ರ ಧರಿಸುತ್ತಾರೆ; ಪುರುಷರು ಜರಿಪಂಚೆ, ಬಿಳಿಷರ್ಟು, ಮೇಲೆ ಕಪ್ಪು ಉದ್ದ-ಉದ್ದನೆಯ ಕೋಟು, ಕೆಂಪು ಜರಿಬಟ್ಟೆಯ ಸೊಂಟ ಪಟ್ಟಿ, ಬಲಗಡೆ ಬಿಳಿಕತ್ತಿಯನ್ನು ಓರೆಯಾಗಿ ಸಿಕ್ಕಿಸಿಕೊಂಡಿರುತ್ತಾರೆ;
- ಕೊಡವರಲ್ಲಿ ಪ್ರಚಲಿತವಿರುವ 'ಕೆಟ್ಪಾಟ್' ಅವರಲ್ಲಿ ಇರುವ ಧಾರ್ಮಿಕ ಬದಿಕಿನ ವಿವರ ನೀಡುತ್ತದೆ; ಅದರಲ್ಲಿ ಬರುವಂತೆ ಹೊನ್ನಿನ ಮಲೆಯಾದ ಕೊಡಗಿನಲ್ಲಿ ದೇಶಕ್ಕೆಲ್ಲಾ ಮಾತೆ ಕಾವೇರಿ, ನಾಡಿಗೆ ಮಹದೇವ, ಗ್ರಾಮಕ್ಕೆ ಭಗವತಿ, ಕೇರಿಗೆ ಅಯ್ಯಪ್ಪ, ವಾಡೆಗೆ ನಾಥ, ಓಣಿಗೆ ಪೊದೆ, ಪ್ರತಿ ಕುಟುಂಬಕ್ಕೆ ಕಾರಣನು(ಕುಟುಂಬ ಯಜಮಾನನಿಗೆ ಕಾರಣ ಎನ್ನುತ್ತಾರೆ) ಧರ್ಮದ ನೆಲೆಯಾಗಿರುವರೆಂದು ನಂಬಿದ್ದಾರೆ; ಈ ದೇವತೆಗಳಲ್ಲದೆ ದುರ್ಗಾದೇವಿ, ಗಣಪತಿ ಮೊದಲಾದ ದೇವತೆಗಳನ್ನೂ ಆರಾಧಿಸುತ್ತಾರೆ;
- ಕೊಡವರ ಹಬ್ಬಗಳಲ್ಲಿ ವಿಶೇಷವೂ, ವರ್ಣರಂಜಿತವೂ ಆದುದು ಹುತ್ತರಿ ಹಬ್ಬ; ನವಂಬರ್, ಡಿಸೆಂಬರ್ ತಿಂಗಳಲ್ಲಿ ರೋಹಿಣಿ ನಕ್ಷತ್ರ ಬರುವ ಹುಣ್ಣಿಮೆಯಂದು ಹಗಲಿನಲ್ಲಿ ಹಾಗು ರಾತ್ರಿಯಲ್ಲಿ ಕದಿರು ಕೊಯ್ಯುವುದರ ಮೂಲಕ ಹಬ್ಬದ ಆಚರಣೆ ನಡೆಯುತ್ತದೆ; ಇದು ಸುಗ್ಗಿಯ ಹಬ್ಬವಾಗಿದ್ದು ಹೊಸ ಬೆಳೆ, ಹೊಸ ಅಕ್ಕಿಯನ್ನು ಸ್ವಾಗತಿಸುವ ಸಂಭ್ರಮಾಚರಣೆಯಾಗಿದೆ; ಈ ಆಚರಣೆಯಲ್ಲಿ ಮೊದಲು ಮೂರು ಹಂತಗಳಿದ್ದವು; ಮೊದಲು ದೇವಾಲಯಕ್ಕೆ ಸೇರಿದ ಜಮೀನಿನಲ್ಲಿ ಕದಿರು ತೆಗೆಯುತ್ತಿದ್ದರು; ಎರಡನೆಯದಾಗಿ ರಾಜರಿಗೆ ಸೇರಿದ ಜಮೀನಿನಲ್ಲಿ ಬೆಳೆದ ಕದಿರು ತೆಗೆಯುತ್ತಿದ್ದರು; ನಂತರ ಮೂರನೆಯ ಹಂತದಲ್ಲಿ ಊರಿನವರ ಗದ್ದೆಗಳಲ್ಲಿ ಬೆಳೆದ ಕದಿರು ಕೊಯ್ಯುವುದು ನಡೆಯುತ್ತಿತ್ತು; ಈ ಆಚರಣೆಯನ್ನು ಕ್ರಮವಾಗಿ ದೇವಪೊಳ್ದ್, ಅರಮನೆ ಪೊಳ್ದ್ ಮತ್ತು ನಾಡ್ ಪೊಳ್ದ್ ಎಂದು ಕರೆಯುತ್ತಿದ್ದರು; ಈಗ ಮೊದಲ ಎರಡು ಪೊಳ್ದ್ ಆಚರಣೆ ಕಂಡುಬರುವುದಿಲ್ಲ; ನಾಡ್‌ಪೊಳ್ದ್ ಮಾತ್ರ 'ಹುತ್ತರಿ ಹಬ್ಬದ' ಆಚರಣೆಯಾಗಿ ಉಳಿದು ಬಂದಿದೆ;
- ಕೊಡವರ ಹಬ್ಬಗಳಲ್ಲಿ 'ಕೈಲ್‌ಪೊಳ್ದ್' ಕೂಡ ಕಂಡುಬರುತ್ತದೆ; ಇದನ್ನು ಆಯುಧಪೂಜೆ ಎನ್ನುತ್ತಾರೆ; ಸೆಪ್ಟೆಂಬರ್ ಎರಡು ಅಥವಾ ಮೂರರಂದು ಈ ಹಬ್ಬವನ್ನು ಆಚರಿಸುತ್ತಾರೆ; ವ್ಯವಸಾಯಕ್ಕೆ ಬಳಸುವ ಉಪಕರಣಗಳು, ಬೇಟೆಗೆ ಬಳಸುವ ಆಯುಧಗಳನ್ನು ಇಟ್ಟು ಪೂಜಿಸುವುದು ವಾಡಿಕೆ;
- ತಲಕಾವೇರಿಯ ಕುಂಡಿಕೆಯಲ್ಲಿ ಉಂಟಾಗುವ ತೀರ್ಥೋದ್ಭವವನ್ನು ಮೂರು ದಿನಗಳ ಹಬ್ಬದ ಸಡಗರದೊಂದಿಗೆ ಆಚರಿಸುತ್ತಾರೆ;
- ಕೊಡವರಲ್ಲಿ ಅಕ್ಕಿಗೆ ಪವಿತ್ರ ಸ್ಥಾನವಿದೆ; ದೀಪಕ್ಕೆ ವಂದಿಸುವಾಗ, ಮದುಮಕ್ಕಳನ್ನು ಹರಸುವಾಗ, ದೇವರ ವಿಗ್ರಹಗಳಿಗೆ ನಮಿಸುವಾಗ ಅಕ್ಷತೆಯನ್ನು ಹಾಕುವುದು ಇವರ ಸಂಪ್ರದಾಯವಾಗಿದೆ;
- ಮಗುವಿಗೆ ಹೆಸರಿಡುವಾಗ ಮೊದಲು ಹಾಲು ಕುಡಿಸುವುದು ಸಂಪ್ರದಾಯ; ಹಾಲು ಕುಡಿಯುವ ಮಗು ಸತ್ತು ಹೋದರೆ ಕುಡಿಕೆಯಲ್ಲಿ ತಾಯಿಯ ಎದೆಯ ಹಾಲನ್ನ ತುಂಬಿಡುವುದು, ಮೂರನೆ ದಿನ

ಹಾಲನ್ನು ಚೆಲ್ಲಿ ಶಾಂತಿಯನ್ನು ಕೋರಲಾಗುವುದು; ಸಾವಿನ ಮನೆಯಲ್ಲಿ ಸೂತಕ(ಮೈಲಿಗೆ) ಕಳೆಯುವ ತನಕ ಹಾಲು ಬಳಸುವಂತಿಲ್ಲ;

- ಮಗು ಹುಟ್ಟಿದಾಗ, ಹೆಸರಿಡುವಾಗ, ವಧುವರರು ಮನೆಗೆ ಬಂದಾಗ ಚಿನ್ನದ ನಾಣ್ಯ ಕೊಡುವ ಪದ್ಧತಿ ಇದೆ; ಇದಕ್ಕೆ 'ಪೊಂಬಣ್ಣ' ಎನ್ನುತ್ತಾರೆ;
- ಶವಸಂಸ್ಕಾರದ ಮುನ್ನ ಮೃತನ ಪತ್ನಿಯ ಕೈಯಲ್ಲಿ ನೀರು ತುಂಬಿದ ತೂತಿನ ಕೊಡ, ಮಗನ ಕೈಯಲ್ಲಿ ತೆಂಗಿನಕಾಯಿ, ಅಳಿಯ ಗಿಂಡಿ ಹಿಡಿದುಕೊಂಡು ಸತ್ತವರ ಸುತ್ತ ಮೂರು ಸುತ್ತು ಬರುತ್ತಾರೆ; ತೂತು ಕೊಡದ ಸೋರಿಕೆಯ ನೀರು ಆಯುಷ್ಯ ಸೂಚಿಸಿದರೆ, ತೆಂಗಿನಕಾಯಿ ಫಲದ ಸಂಕೇತ, ಗಿಂಡಿ ಗರ್ಭದ ಸಂಕೇತವಾಗಿದ್ದು ಗಿಂಡಿ ಹಿಡಿದ ಅಳಿಯನ ಮೂಲಕ ಮಗಳಲ್ಲಿ ಸಂತಾನ ಮುಂದುವರಿಯುವಂತೆ ಆಗುತ್ತದೆಂಬ ನಂಬಿಕೆ ಇವರದು;
- ಕೊಡವರು ದೀಪಕ್ಕೆ ಪ್ರಮುಖ ಆದ್ಯತೆ ಕೊಡುತ್ತಾರೆ; ಪ್ರತಿಯೊಬ್ಬರ ಮನೆಯಲ್ಲಿಯೂ ತೂಗುದೀಪವೊಂದು ಇದ್ದೇ ಇರುತ್ತದೆ; ಮನೆಯಲ್ಲಿ ನಡೆಯುವ ಎಲ್ಲ ಕಾರ್ಯಗಳಿಗೂ ದೀಪವೇ ಸಾಕ್ಷಿಯಾಗಿರುತ್ತದೆ;
- ತಾಂಬೂಲ ಕೊಡುವುದು, ತೆಗೆದುಕೊಳ್ಳುವುದು ಕೊಡವರಲ್ಲಿ ಗೌರವದ ಸಂಕೇತ; ಆದರೆ ಸತ್ತವರ ಮನೆಯಲ್ಲಿ ಉತ್ತರ ಕ್ರಿಯೆ ಮುಗಿಯುವವರೆಗೆ ತಾಂಬೂಲ ಕೊಡುವುದು ಪಡೆಯುವುದು ನಿಷಿದ್ಧ ಎಂಬ ನಂಬಿಕೆ ಪಾಲಿಸುತ್ತಾರೆ;
- —***ಕೊಡವರ ಕೊಡಿಯಟ್*** : ಕೊಡಗು ಜಿಲ್ಲೆಯಲ್ಲಿ ಕಂಡು ಬರುವ ಒಂದು ಜನಪದ ಕಲಾಪ್ರಕಾರ; Kodiyat is a type of folk art of kodava people;
- 'ಕೊಡಿ' ಎಂದರೆ ಕೊಡವ ಭಾಷೆಯಲ್ಲಿ ಬಾವುಟ, ಚಿಗುರು ಎಂಬ ಅರ್ಥ ಉಂಟಾಗುತ್ತದೆ;
- ಬಿದಿರಿನ ಕಡ್ಡಿ ಬಳಸಿ ತ್ರಿಕೋನಾಕಾರದ ರಚನೆ ಮಾಡುತ್ತಾರೆ; ಇದಕ್ಕೆ ಕೆಂಪು ಬಟ್ಟೆಯನ್ನು ಸುತ್ತಿ ಉದ್ದವಾದ ಬಿದಿರಿನ ಕೋಲಿನ(ಜಳೆ) ತುದಿಗೆ ಇದನ್ನು ಕಟ್ಟುತ್ತಾರೆ; ಇದೇ ಕೊಡಿ; ಇದರ ಕುಣಿತವನ್ನು ಊರಿನ ದೇವರ ಹಬ್ಬದಲ್ಲಿ ಉತ್ಸವದ ಕೊನೆಯ ದಿನ 'ಕೊಂಟ್ ಪೀಲಿಯಾಟ್' ಮೊದಲಾದ ಕುಣಿತಗಳಿಗೂ ಮೊದಲು ಪ್ರಾರಂಭದ ಕುಣಿತವಾಗಿ ಆಡಲಾಗುತ್ತದೆ; ಇನ್ನುಳಿದಂತೆ ಮತ್ತಾವುದೇ ಸಂದರ್ಭದಲ್ಲಿ 'ಕೊಡಿಯಾಟ್'ನ ಕುಣಿತ ನಿಷಿದ್ಧವಾಗಿದೆ;
- ಕೊಡಿಯಾಟ್ ಕುಣಿತ ಕೊಡಗಿನ ಜನಪದ ಕಲೆಗಳಲ್ಲಿ ವಿಶೇಷ ಸ್ಥಾನ ಪಡೆದುಕೊಂಡಿದ್ದರೂ, ಇದನ್ನು ಉತ್ತರಕೊಡಗಿನ ಕೆಲವೇ ದೇವಸ್ಥಾನಗಳ ಉತ್ಸವದಲ್ಲಿ ಕೊನೆಯ ದಿನ ಮಾತ್ರ ಆಡುವುದರಿಂದ ಕೊಡಗಿನಾದ್ಯಂತ ಹೆಚ್ಚು ಪ್ರಚಾರವನ್ನಾಗಲೀ, ಪ್ರಸಿದ್ಧಿಯನ್ನಾಗಲೀ ಪಡೆದುಕೊಂಡಿಲ್ಲ;
- —***ಕೊಡವ ತಕ್ಕ್*** : ಕೊಡವ ಭಾಷೆ(ಕೊಡ.ಜಿ); Land of `Kodava' language; the Kodava or Coorg language is called `Kodava takk' meaning `Specch of Kodavas' it is a Dravidian language;
- ಕೊಡವ ಭಾಷೆಯನ್ನಾಡುವ ಪ್ರದೇಶವನ್ನು 'ಕೊಡವು'(ಕೊಡಗು) ಎಂದೂ, ಭಾಷೆಯನ್ನು 'ಕೊಡವತಕ್ಕ್' ಎಂದೂ ಹೇಳುತ್ತಾರೆ; ಕೊಡವ ಭಾಷೆಯಿಂದ ನಾಡಿಗೆ 'ಕೊಡಗು' ಎಂದು ಬಂದಿದೆ; ಅಲ್ಲಿನ ಜನರನ್ನು 'ಕೊಡವರು' ಎನ್ನುತ್ತಾರೆ.

ಕೊಡಗುಳ koḍaguḷa :

ಕೊಡಪಾನ, ಬಿಂದಿಗೆ(ಶಿ.ಜಿ); **ನೋಡಿ:** ಕೊಡ. Pitcher, pot or metal vessel.

ಕೊಡಗೂಸು koḍagūsu :

- ಮೈನೆರೆದ ಹೆಣ್ಣು; ಮದುವೆಯಾಗದ ಹುಡುಗಿ; ಎಳೆಯ ವಯಸ್ಸಿನವಳು; ಕುಮಾರಿ, ಕನ್ಯೆ; A young unmarried woman or a girl;
- 'ಕುಡು/ಕೊಡು' ಧಾತುವಿಗೆ 'ಕೂಸು' ಸೇರಿ ಉಂಟಾದ ಸಮಾಸ ಪದ; (ಕುಡು/ಕೊಡು>) ಕೊಡ+ಕೂಸು=ಕೊಡಗೂಸು=ಮದುವೆ ವಯಸ್ಸಿಗೆ ಬಂದ ಹೆಣ್ಣು;
- ಕುಡುಗೂಸು, ಕುಡಗೂಸು, ಕೊಡುಗೂಸು, ಕೊಡಗೂಸು ಎಂಬ ರೂಪಗಳಿವೆ;
- ಕೂಸು = ಮಗು; ಹೆಣ್ಣುಮಗು;
- 'ಕೊಡ' ಎಂದರೆ 'ಎಳೆಯದಾಗಿರುವಿಕೆ, ಎಳೆಯ ವಯಸ್ಸು'(ಕ.ನಿ);
- 'ಕೊಡಗೂಸು' ಎಂದರೆ ಎಳೆಯ ವಯಸ್ಸಿನವಳು ಮದುವೆಯಾಗದ ಹುಡುಗಿ, ಕನ್ಯೆ, ಕುಮಾರಿ(ಕ.ನಿ);
- ಕನ್ನೆ, ಕೊಟ್ಟಕೂಸು(ಕಿಟ್ಟೆಲ್).

ಕೊಡತ/ಕೊಡ್ತ koḍata/koḍta :

- ಸಸ್ಯ ಕುಟ್ಟುವ ಸಾಧನ(ಮಂಡ್ಯ.ಜಿ);
- ಹಿಂಸೆ, ಕಾಟ ಒತ್ತಾಯ(ಮಂಡ್ಯ.ಜಿ); Pestle, torture, harassment;
- ಕೊಡೆತ, ತೊಂದರೆ(ಮಂ.ಜಿ);
- 'ಕೊಡು' ಎಂಬ ತಗಾದೆಯೇ ಕೊಡತ' ಆಗಿರಬಹುದೆ? *ಪ್ರ: 'ಬೆಳಗಾದರೆ ಇವನ್ದೊಂದು ಕೊಡ್ತ ನನಗೆ';*
- ಎತ್ತಿನ ಗತಿ ನಿರೋಧಕ್ಕಾಗಿ ಕಟ್ಟುವ ಬಡಿಗೆ(ಶಿ.ಜಿ);
- ಓಟಕ್ಕೆ ತಡೆಯಾಗುವಂತೆ ಪ್ರಾಣಿಗಳ ಕೊರಳಲ್ಲಿ ಕಟ್ಟುವ ದಪ್ಪನಾದ ಕೋಲು, ಬಡಿಗೆ;
- ಮ: ಕೊಟ್ಟಿ(=ಒಂದು ಬಗೆಯ ದೊಣ್ಣೆ); ತೆ: ಕೊಡತನಮು, ಕೊಣತಮು(ದ್ರಾ.ಭಾ.ಜ್ಞಾ.ಪ.ಕೋ).

ಕೊಡತಲೆ koḍatale :

- ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ತಾಲ್ಲೋಕಿನ ಕ್ರಿ.ಶ.೧೪೧೦ರ ೭೬ನೇ ಶಾಸನದಲ್ಲಿ ಉಲ್ಲೇಖ; A village in Chikkamagaluru district referred in 76th inscription of 1410AD;
- ವಿರೂಪಾಕ್ಷ ದೇವರ ಸೇವೆಗಾಗಿ ಮಯಣಚಾರ್ಯನಿಗೆ ಅರಂಗವೆಂತೆಹೆಬ್ಬಾರ ಸೀಮೆ ಗ್ರಾಮವನ್ನು ದೇವರಾಜಪುರ ಗ್ರಾಮವೆಂದು ಹೊಸ ನಾಮಕರಂ ಮಾಡಿ ದಾನಕೊಟ್ಟ ವಿವರವಿದೆ;
- ಕೊಡ+ತಲೆ>ಕೊಡತಲೆ; 'ಕೊಡ' ಎಂದರೆ ಪಶ್ಚಿಮ ಎಂದಾಗುತ್ತದೆ, ಕುಡ>ಕೊಡ ಬಂದಿರಲೂ ಬಹುದು; 'ತಲೆ' ಎಂದರೆ ಶಿಖರ, ನೆತ್ತಿ ಎಂದಾಗುತ್ತದೆ;
- ಆಗ 'ಕೊಡತಲೆ' ಎಂದರೆ ಪಶ್ಚಿಮಕ್ಕಿರುವ ಬೆಟ್ಟದ ನೆತ್ತಿಯಲ್ಲಿರುವ ಊರು ಎಂದಾಗುತ್ತದೆ;
- ಚಿಕ್ಕಮಗಳೂರು ಜಿಲ್ಲೆಯ ಪಶ್ಚಿಮಕ್ಕೆ ಸಹ್ಯಾದ್ರಿ ಪರ್ವತ ಶ್ರೇಣಿ ಇರುವುದರಿಂದ, ಆ ಪ್ರದೇಶದ ಊರೊಂದಕ್ಕೆ 'ಕೊಡತಲೆ' ಎಂದು ಹೆಸರು ಬಂದಿರುವುದು ಸಾಧ್ಯ;
- ಆದ್ದರಿಂದ ಇದು ಪ್ರಕೃತಿ ಸೂಚಕ ಸ್ಥಳನಾಮವಾಗಿದೆ.

(E.C- ೧೧; ಚಿಕ್ಕ.ಜಿ.)

ಕೊಡತಿ/ಕೊಡ್‌ತಿ/ಕೊಡ್ತಿ koḍati/koḍti :

- ಕೊಡಂತಿ>ಕೊಡತಿ; ಕೊಡತೆ, ಕೊಣಚೆ;
- ಮರದ ಸುತ್ತಿಗೆ; ಧಾನ್ಯ ಬಡಿಯುವ ಸಾಧನ; ಮಣ್ಣು ಪುಡಿ ಮಾಡುವ ಕಟ್ಟಿಗೆ ಸಾಧನ; Wooden hammer to pound clods/clay;
- ಕಾಯಿಗಳಿಂದ ಧಾನ್ಯಗಳನ್ನು ಬೇರ್ಪಡಿಸುವ ಹಿಡಿಯುಳ್ಳ ಮರದ ಸಾಧನ(ಚಿತ್ರ.ಜಿ); Beating/pounding device shaped like a stick that is used by cobblers(while repairing);
- ಬಡಿಯುವ ಸುತ್ತಿಗೆ(ಶಿ.ಜಿ);
- ಒಂದು ಕೀಟ(ತು.ಜಿ); ಕೊಡತಿಹುಳ;
- ಬಡಗಿಗ:ಉ ಮರಕ್ಕೆ ಉಳಿಯಿಂದ ಎಜ್ಜ ತೋಡುವಾಗ ಏಟು ಹೊಡೆಯಲು ಬಳಸುವ ಸಾಧನ(ಮಂಡ್ಯ.ಜಿ);
- ನಶ್ಯ ಕುಟ್ಟುವ ಸಾಧನ(ಮಂಡ್ಯ.ಜಿ); ಹೊಗೆಸೊಪ್ಪನ್ನು ನೆನೆಸಿ, ಅದಕ್ಕೆ ಬೆಣ್ಣೆ ಹಾಕಿ ಕುಟ್ಟಿ ನಶ್ಯ ತಯಾರಿಸುತ್ತಿದ್ದರು;
- ಜಜ್ಜುವ ಮರದ ಸುತ್ತಿಗೆ(ಕೊಡ.ಜಿ);
- ಕೊಡ್ತಿ; ೧.ಹುಣಿಸೆ ಮರದ ಕೆಚ್ಚಿನ ಭಾಗದಿಂದ ತಯಾರಿಸಿದ ಮರದ ಸುತ್ತಿಗೆ; ೨.ತೆನೆ ಚಚ್ಚಲು ಬಳಸುವ ಸಾಧನ(ಬೆಂ.ಜಿ/ಮೈ.ಜಿ/ಕೋ.ಜಿ/ಪಾಂ.ವ್ಯ.ಪ.ಕೋ);
- ಮೀನು, ಸೊಪ್ಪು ಅಥವಾ ಬೇರಾವುದೇ ವಸ್ತುವನ್ನು ಜಜ್ಜುವುದಕ್ಕಾಗಿ ಬಳಸುವ ಕಟ್ಟಿಗೆ ತುಂಡು;
- ಕಟ್ಟಿಗೆಯ ಸುತ್ತಿಗೆಯಾಕಾರದ ಸಾಧನ; ಹಿಂದೆ ಹಿಡಿಕೆ ಇದ್ದು ಮುಂದೆ ದಪ್ಪವಿರುವ ಕಟ್ಟಿಗೆ; ಉಳಿಯ ತಲೆಯನ್ನು ಕಟ್ಟಿಗೆಯ ಕೀಲನ್ನು ಬಡಿಯಲು ಬಳಸುತ್ತಾರೆ;
- ಚರ್ಮ ಹದ ಮಾಡುವ ಕಬ್ಬಿಣದ ಕೋಲು(ಕಲ.ಜಿ);
- ಚಪ್ಪಲಿಯನ್ನು ಹೊಲಿಯುವಾಗ ಮೇಲಿಂದ ಕುಟ್ಟಲು ಬಳಕೆ;
- ಮೂಡೆ ಬಿಗಿ ಮಾಡಲು, ನೆನೆ ಹಾಕಿದ ತೆಂಗಿನ ಮಟ್ಟೆ, ಕತ್ತಾಳೆಪಟ್ಟೆ ಬಡಿದು ನಾರು ತೆಗೆಯಲು ಮಾಡಿದ ಗಟ್ಟಿಯಾದ ಮರದ ತುಂಡು;
- —*ಕೊಡತಿಗೆ/ಕೊಡತಿಗಿ* : ಮೂಡೆ ಕಟ್ಟುವಾಗ ಧಾನ್ಯವನ್ನು ಒತ್ತಿ ತುಂಬಲು ಬಳಸುವ ಚೂಪು ತುದಿಯುಳ್ಳ ಮರದ ಒಂದು ಸಾಧನ; A sharpe edged wooden weapon to bind(stich) the sacks while filling grain or cereals;
- —*ಕೊಡತಿ ಚಿಟ್ಟೆ* : ಒಂದು ಬಗೆಯ ಚಿಟ್ಟೆ(ರಾಮ.ಜಿ); A kind of butterfly;

- ***—ಕೊಡತಿ ಮನ್ಯೆ*** : ಬಡಗಿಗಳಿಗೆ ಉಂಬಳಿ ಕೊಟ್ಟಿರುವ ಭೂಮಿ(ಪಾಂ.ವ್ಯ.ಪ.ಕೋ);
- ***—ಕೊಡತಿವಣ*** : ಕೊಡತಿ+ಪಣ(ಹಣ) = ಕೊಡತಿವಣ; ಕೊಡತಿಕೆಲಸ(ಮರಗೆಲಸ) ಮಾಡುವವರ ಮೇಲೆ ಹಾಕುವ ತೆರಿಗೆ (ಪಾಂ.ವ್ಯ.ಪ.ಕೋ);
- ***—ಕೊಡತಿಹುಳ*** : ಒಂದು ಬಗೆಯ ಹಾರುವ ಹುಳ;
- ಕೊಡತಿಯಾಕಾರದ ಕೀಟ; ಮಳೆಹುಳು(ಉ.ಕ.ಜಿ);
- ಈ ಹುಳು ಎದ್ದು ಗುಂಪಾಗಿ ಹಾರಾಡ ತೊಡಗಿದರೆ ಅದು ಮಳೆ ಬರುವ ಸೂಚನೆ ಎಂದು ಹೇಳುವರು(ತು.ಜಿ).

ಕೊಡದ ಮಾರಿ koḍada māri :

- ಜಿಪುಣ(ಚಿ.ಪ.ಕೋ); Miser, niggard;
- ಕೊಡದಿರುವ+ಮಾರಿ(<ಮೋರೆ);
- ಏನನ್ನೂ ಕೊಡದಿರುವ ವ್ಯಕ್ತಿ;
- ಜಿಪುಣತನದ ವ್ಯಕ್ತಿಯನ್ನು ಸಮಾಜದಲ್ಲಿ ತುಚ್ಛವಾಗಿ ಕಾಣುವುದುಂಟು; ಅಂತಹ ವ್ಯಕ್ತಿಯ ಬಗೆಗಿನ ಅಸಹನೆಯನ್ನು ಮೋರೆ>ಮಾರಿ ಎಂಬ ಪದ ಪ್ರತಿನಿಧಿಸುತ್ತಿದೆ; ಏನೂ ಕೊಡದಿರುವ ಅವನ ಮೋರೆ/ಮಾರಿ ನೋಡು ಎಂದು ವ್ಯಂಗ್ಯವಾಡುವುದುಂಟು; *ಪ್ರ: 'ಅದೊಂದು ಕೊಡದ ಮಾರಿ, ಏನು ಕೇಳಿದರೂ ಇಲ್ಲಾ ಅಂತಾನೆ'.*

ಕೊಡದಿನ್ಸಿ koḍadinsi :

ಎತ್ತಿನ ಕೊಂಬಿನ ಬುಡಕ್ಕೆ ಬರುವ ರೋಗ(ಶಿ.ಜಿ); **ವ್ಯರೂ:** ಕೊಡೂನ್ಸಿ. Root horn disease for cattle.

ಕೊಡದೋರು koḍadōru :

- ಸಾಲ ಕೊಡದಿರುವವರು; One who expecting nothing or giving nothing;
- ಯಾವ ಹಂಗೂ ಇಲ್ಲದವರು; ನಮ್ಮಿಂದ ಏನನ್ನೂ ತೆಗೆದುಕೊಳ್ಳದವರು;
- ಇದು ಕೊಡು/ಕುಡು ಧಾತುವಿನಿಂದ ನಿಷ್ಪನ್ನವಾಗಿದೆ; 'ಕೊಡದವರು' ಪದವು ಆಡುನುಡಿಯಲ್ಲಿ 'ಕೊಡದೋರು' ಎಂದಾಗಿದೆ; ಕೊಡದವರು > ಕೊಡದೋರು;
- 'ಕೊಡದೋರು' ಪದ 'ದಾನಶೀಲ' ಅಲ್ಲದವರನ್ನೂ ಸೂಚಿಸಲು ಬಳಕೆಯಾಗುತ್ತಿರಬಹುದು; ಅಂದರೆ ಜಿಪುಣರನ್ನು ಕುರಿತು.

ಕೊಡನಾ koḍanā :

- ಕೊಡಲೆ(ಮಂಡ್ಯ.ಜಿ); Slang of `Can/Shall I give';
- 'ಕುಡು'>'ಕೊಡು' ಧಾತುವಿನಿಂದ ನಿಷ್ಪನ್ನವಾಗಿ 'ಕೊಡುವುದೆ', 'ಕೊಡಬೇಕೆ' ಎಂಬ ಅರ್ಥದಲ್ಲಿ 'ಕೊಡಲೆ' ಎಂಬ ಪದ ಪ್ರಯೋಗವಾಗುತ್ತದೆ; ಕೊಡಲೆ ಎಂಬುದು ಆಡು ನುಡಿಯಲ್ಲಿ 'ಕೊಡಲಾ' ಎಂದಾಗುತ್ತದೆ; ಕೊಡಲಾ ಪದದ ಅಂತ್ಯ 'ಲ'ಕಾರಕ್ಕೆ 'ನ'ಕಾರ ಬಂದು 'ಕೊಡನಾ' ಎಂಬ ರೂಪ ಉಂಟಾಗುತ್ತದೆ.

ಕೊಡಪತ್ರಿ koḍapatri :

- ಒಂದು ವಿಧವಾದ ಔಷಧೀಯ ಬಳ್ಳಿ; ಕೊರಡು ಪತ್ರೆ; A type of Creeper, medicinal herbs;
- ತಿಂದರೆ ನಾಲಗೆಯ ರುಚಿ ಕೆಡುತ್ತದೆ; ಇದೊಂದು ಕಾಡುಸೊಪ್ಪು; ಇದನ್ನು ತಿಂದವರ ನಾಲಿಗೆ ಸ್ವಾದವನ್ನು ಗ್ರಹಿಸಲಾರದು.

ಕೊಡಪು koḍapu :

- ಆಭರಣಗಳಿಗೆ ಆಕಾರ ಕೊಡಲು ಬೆಂಕಿಯಲ್ಲಿ ಕಾಯಿಸಿ ಬಡಿಯುವ ಸಾಧನ; A beating tool of a Goldsmith while forging and casting;
- ಮರ ಮೊದಲಾದವುಗಳನ್ನು ಕೆತ್ತಿ ಆಕಾರ ಕೊಡುವುದು(ತು.ನಿ);
- ಕೊಡಪು ೨; ಲೋಹದ ಆಯುಧ ಸಲಕರಣೆಗಳಿಗೆ ಆಕಾರ ಕೊಡಲು ಬೆಂಕಿಯಲ್ಲಿ ಕಾಯಿಸಿ ಹೊಡೆಯುವಿಕೆ; ಸುತ್ತಿಗೆಯಿಂದ ಬಡಿಯುವಿಕೆ(ತು.ನಿ);
- ಕೊಡಪು ೩; ಪಾತ್ರೆ ಸೌಟುಗಳ ಶಬ್ದ ಮಾಡಿ ಹೆಚ್ಚು ಬಡಿಸಿದಂತೆ ನಟಿಸಿ ಸ್ವಲ್ಪ ಸ್ವಲ್ಪ ಬಡಿಸುವುದು; ಬಡಿಸುವಾಗ ಜಿಪುಣತನ ತೋರಿಸುವುದು(ತು.ನಿ);
- ಒದರು, ಜಾಡಿಸು, ಅಲ್ಲಾಡಿಸು, ಕೊಡವು; ಬಿಟ್ಟುಬಿಡು, ಕಳಚು, ಕೊಡಹು; ಕಡೆ, ಮಥಿಸು;
- ಮ: ಕುಡಯುಗ; ಕುಡಚ್ಚಲ್; ಕೊಡ: ಕೊಡ, ಕೊಡಕ್; ತುಳು: ಕುಡುಪ್ಪು, ಕುಡ್ಪು (ದ್ರಾ.ಭಾ.ಜ್ಞಾ.ಪ.ಕೋ).

ಕೊಡಬಾಸ kodabāsa :

ಎತ್ತಿನ ಕೋಡಿನ ಆಭರಣ; ಇವುಗಳನ್ನು ಹಿತ್ತಾಳೆಯಿಂದ ಮಾಡಿರುತ್ತಾರೆ; ಎತ್ತುಗಳ ಕೋಡಿನ ತುದಿಗೆ ಹಾಕಿರುತ್ತಾರೆ. (Bullocks) horn decorative jewellery/ornaments.

ಕೊಡಬೈದು kodabaidu :

- ಕೊಡಬಹುದು(ಮೈ.ಜಿ/ಚಾ.ಜಿ); May give;
- 'ಕೊಡಬಹುದು' ಎಂಬ ಪದವು ಉಚ್ಚಾರಣೆಯಲ್ಲಿ ಸುಲಭಗೊಳ್ಳುವ ಹಂತದಲ್ಲಿ 'ಕೊಡಬೈದು' ಎಂಬ ರೂಪ ಪಡೆದುಕೊಂಡಿದೆ;
- ಬಹಳ>ಬಾಳ ಆದಂತೆ ಕೊಡಬಹುದು>ಕೊಡಬೈದು, ಕೊಡಬೋದು ಎಂದು ಗ್ರಾಮೀಣರಲ್ಲಿ ಉಚ್ಚರಿತಗೊಳ್ಳುವುದುಂಟು.

ಕೊಡಮಂತಾಯ/ಕೊಡಮಣಿತ್ತಾಯ

kodamantāya/kodamanittāya :

- ಒಂದು ಭೂತದ ಹೆಸರು; Name of a deity/kola/deva; Kodamantaya is a cult, a family of wandering tribe;
- ಧರ್ಮ ಅರಸು ಎಂದು ಪ್ರಸಿದ್ಧವಾದ ತುಳುನಾಡಿನ ರಾಜನ್‌ದೈವ ಇದಾಗಿದೆ; Kodamanitaya is a deity or Kola; it is worshipped in Coastal districts of Karnataka; `Kola' means `Ghost', wandering soul; `Kola' or `Butas' are worshipped in annual ritual- festivals;
- 'ಕೊಡಮಂತಾಯ' ಎಂಬುದು ಕುಲ/ವಂಶ/ಬುಡಕಟ್ಟಿನ/ಬಳಿಯ ಹೆಸರೂ ಕೂಡ ಆಗಿದೆ(ತು.ನಿ);
- ಕರಾವಳಿ ಪ್ರಾಂತ್ಯದಲ್ಲಿ ಪ್ರಸಿದ್ಧವಾದ 'ಕೊಡಮಣಿತ್ತಾಯ' ಎಂಬ ದೈವವಿದೆ; ಈ ದೈವದ ಹೆಸರೇ ಉಚ್ಚಾರಣೆಯಲ್ಲಿ 'ಕೊಡಮಂತಾಯ' ಎಂದಾಗಿರುವ ಸಾಧ್ಯತೆ ಇರಬಹುದು; ಕೊಡಮಣಿತ್ತಾಯ > ಕೊಡಮಣ್ತಾಯ > ಕೊಡಮಂತಾಯ;
- ಕೊಡಮಣಿತ್ತಾಯ; ಒಂದು ದೈವದ/ಭೂತದ ಹೆಸರು; ದಕ್ಷಿಣಕನ್ನಡ ಪ್ರಾಂತ್ಯದ ಕರಾವಳಿ ಪ್ರದೇಶದಲ್ಲಿ ಈ ದೈವಕ್ಕೆ 'ಕೋಲ' ಕಟ್ಟುತ್ತಾರೆ; ವಿಶೇಷವಾದ ಜಾತ್ರೆಗಳೂ ನಡೆಯುತ್ತವೆ;
- ಈ ದೈವಗಳಿಗೆ 'ಕೊಡಮಂತಾಯೆ/ಕೊಡಮಣಿತ್ತಾಯೆ' ಎಂದು ಹೇಳುವುದುಂಟು.

ಕೊಡಮಕ್ಕಳು kodamakkaḷu :

- ವಯಸ್ಸಿಗೆ ಬಂದಿರದ, ಮೈನೆರೆದ ಬಾಲೆಯರು; ಕೊಡಗೂಸು(ಚಾ.ಜಿ); Young unmarried girls;
- ಮೈನೆರೆದ, ಮದುವೆಯಾಗದ ಹೆಣ್ಣು ಮಕ್ಕಳನ್ನು ಕೊಡಮಕ್ಕಳು, ಕೊಡಮಕ್ಕು, ಕೊಡಗೂಸು ಎಂದು ಕರೆಯುತ್ತಾರೆ;
- ಮದುವೆಯ ವಯಸ್ಸಿಗೆ ಬಂದಿರುವ ಹೆಣ್ಣುಮಕ್ಕಳು;
- —*ಕೊಡಮಗ* : ಹಿರಿಯ ಮಗ(ಶಿ.ಜಿ); Elder son of a family;
- ಹಿರಿಯನಾದ ಮಗ; ತಂದೆಗೆ ತಲಮಗ ಎಂದು ಕರೆಯುತ್ತಾರೆ;
- ದಾನ ಅಥವಾ ದತ್ತುವಾಗಿ ಕೊಡಲ್ಪಟ್ಟ ಮಕ್ಕಳು;
- ಮಂಟೆಸ್ವಾಮಿಯು ಸಖರಾಯ ಪಟ್ಟಣದ ರಾಜನ ಮಕ್ಕಳನ್ನು ದಾನವಾಗಿ ಪಡೆದಾಗ ಈ ಪದ ಬಳಕೆಯಿದೆ; ಕೊಡುಗೆಯಾಗಿ ಪಡೆದ ಮಂಟೆಸ್ವಾಮಿಯವರಿಗೆ ಕೊಡಾಲದಯ್ಯ ಎಂದು ಕರೆಯುತ್ತಾರೆ; *ಪ್ರ: 'ಕೊಡಮಗನ ನುಡಿ ಕೇಳು'*(ಗಾ.).

  Manteswami was a `Veerashaiva' saint and a folk hero who lived during the fifteenth century; he adopted the children of the king of `Sakharaya Patna'; therefore, he is called as `Kodaladayya' which means one who adopted or got contribution.

ಕೊಡಮಣೇ kodamaṇē :

- ಹೆಂಡತಿಯನ್ನು ಅಥವಾ ಹೆಂಗಸರನ್ನು 'ನೀರು ಕೊಡು' ಎಂದು ಕೇಳುವ ಪರಿಪಾಠವಿದು(ತು.ಜಿ); A slang word of a husband for asking his wife to get him water;
- ಹೆಂಗಸರನ್ನಾಗಲೀ ಅಥವಾ ತನ್ನ ಹೆಂಡತಿಯನ್ನಾಗಲೀ ಹೆಸರನ್ನು ಹೇಳಿ ಕರೆದು ನೀರು ಕೊಡುವಂತೆ ಕೇಳುವುದಕ್ಕೆ ಬದಲಾಗಿ 'ನೀರು ಕೊಡುಮಣೇ' ಎಂದು ಕೇಳುವ ಪದ್ಧತಿ ಚಾಲ್ತಿಯಲ್ಲಿದ್ದು, ಕ್ರಮೇಣ 'ನೀರು' ಶಬ್ದ ಕೈಬಿಟ್ಟು ಹೋಗಿ 'ಕೊಡುಮಣೇ' ಎಂಬುದಷ್ಟೇ ಉಳಿದು ಬಳಕೆಯಲ್ಲಿರುವಂತೆ ತೋರುತ್ತದೆ; (ಹೋಗಿ ಬರುತ್ತೇನೆ' ಎಂದು ಹೇಳುವ ಪದ್ಧತಿ ಕ್ರಮೇಣ

'ಹೋಗಿ' ಶಬ್ದವನ್ನು ಕೈಬಿಟ್ಟು 'ಬರುತ್ತೇನೆ/ಬರ್ತೇನೆ' ಎಂದಷ್ಟೇ ಹೇಳುವ ಹಾಗೆ);

- ಮಂಡ್ಯ ಪ್ರಾಂತ್ಯದಲ್ಲಿ ಹೆಂಗಸರನ್ನು ಉದ್ದೇಶಿಸಿ 'ಅಮ್ಮಿ' ಪದ ಬಳಕೆಯಲ್ಲಿದ್ದು, 'ನೀರು ಕೊಡಮ್ಮಿ' ಎಂಬಿತ್ಯಾದಿ ಪ್ರಯೋಗಗಳನ್ನು ಗಮನಿಸಬಹುದು.

ಕೊಡಮ್ಟಿ koḍamṭi :

- ದೊಡ್ಡ ಅಮಟೆ, ಕಾಡು ಅಮಟೆ(ಉ.ಕ.ಜಿ); Hog plum; a crisp, sour fruit;
- ಅಂಬಟೆ>ಅಮಟೆ; ಕಾಡಿನಲ್ಲಿ ಬೆಳೆಯುವ ಒಂದು ರೀತಿಯ ಹುಳಿಯಾದ ಕಾಯಿ ಬಿಡುವ ಮರ ಮತ್ತು ಅದರ ಕಾಯಿ;
- ಉಪ್ಪಿನಕಾಯಿ ಮಾಡಲು ಕೊಡಮ್ಟಿ/ಕಾಡಮ್ಟಿ ಕಾಯಿಯನ್ನು ಬಳಸುತ್ತಾರೆ;
- ಕಾಡಿನ+ಅಮಟೆ(<ಅಂಬಟೆ)=ಕಾಡಮಟೆ>ಕಾಡಮ್ಟೆ> ಕೊಡಮ್ಟೆ>ಕೊಡಮ್ಟಿ–ಎಂದಾಗಿರಬಹುದೆ?

ಕೊಡಲಿ/ಕೊಡ್ಲಿ/ಕೊಳ್ಳಿ koḍali/koḍli/ koḷḷi :

- ಕೊಡಲಿ>ಕೊಡ್ಲಿ>ಕೊಳ್ಳಿ;
- 'ಕೊಡಲಿ' ಆಡು ನುಡಿಯಲ್ಲಿ 'ಕೊಡ್ಲಿ' ಎಂದಾಗಿ ನಂತರ 'ಡ'ಕಾರಕ್ಕೆ 'ಳ'ಕಾರ ಬಂದು, ಒತ್ತಕ್ಷರವಾದ 'ಲ'ಕಾರವು 'ಳ'ಕಾರವೇ ಆಗುವುದರ ಮೂಲಕ 'ಕೊಳ್ಳಿ' ಎಂಬ ರೂಪ ಪಡೆದುಕೊಳ್ಳುತ್ತದೆ;
- ಮರವನ್ನು ಕಡಿಯಲು, ಸೌದೆಯನ್ನು ಸೀಳಲು ಬಳಸುವ ಮರದ ಕಾವನ್ನುಳ್ಳ ಕಬ್ಬಿಣದ ಸಾಧನ; Axe used to cut trees;
- ಕೊಡಲಿಯಲ್ಲಿ ಮುಖ್ಯವಾಗಿ ನೇರವಾದ ಮರದ ತುಂಡಿನಿಂದ ಒರೆದು ತಯಾರಿಸಿದ ಒಂದು ಕಾಮು/ಕಾವು ಹಾಗೂ ದಪ್ಪದಾದ ಕಬ್ಬಿಣದಿಂದ ಮಾಡಿದ ಒಂದು ಅಲಗು/ಬಾಯಿ ಇರುತ್ತದೆ; ಬಾಯಿಯ ಮುಂಭಾಗ ಚೂಪಾಗಿದ್ದು, ಹಿಂಭಾಗದಲ್ಲಿ ಕಾವು ಹಾಕಲು ವೃತ್ತಾಕಾರದ/ಬಳೆಯಾಕಾರದ ರಂಧ್ರವಿರುತ್ತದೆ;
- ಕೊಡಲಿಯಲ್ಲಿ ಕೈಕೊಡಲಿ, ಪಿಚ್ಚುಗೊಡಲಿ, ಎಡಗೊಡಲಿ, ಪರಶುರಾಮನ ಕೊಡಲಿ, ಗಂಡು ಗೊಡಲಿ, ದೊಡ್ಡ ಕೊಡಲಿ, ಅಚ್ಚುಗೊಡಲಿ, ಚಪ್ಪಗೊಡಲಿ ಮೊದಲಾದ ಬಗೆಗಳಿವೆ ಕೈ ಕೊಡಲಿ ಸಣ್ಣದಾಗಿದ್ದು ಅತಿಯಾದ ತೂಕವಿರುವುದಿಲ್ಲ; ಇದು ಮನೆಯಲ್ಲಿ ಸೌದೆ ಕಡಿಯಲು, ಮಾಂಸದಲ್ಲಿನ ಮೂಳೆ ಕತ್ತರಿಸಲು, ತೆಂಗಿನಕಾಯಿಯ ಸಿಪ್ಪೆ(ಮಟ್ಟೆ) ಸುಲಿಯಲು ಬಳಸುತ್ತಾರೆ; *ಪ್ರ: 'ಉಗುರಲ್ಲಿ ಹೋಗೋದಕ್ಕೆ ಕೊಡಲಿ ತೆಗೆದುಕೊಂಡ ಹಾಗೆ'*(ಗಾ);
- ಚಿತೆಗೆ ಸೌದೆಯನ್ನು ಕಡಿದು ಸಿದ್ಧಪಡಿಸಿದ ಮೇಲೆ ಅಗ್ನಿಸ್ಪರ್ಶ ಮಾಡಿದ ಸಂದರ್ಭದಲ್ಲಿ ಕೊಡಲಿಯನ್ನು ಚಿತೆಯ ಮೇಲೆ ಈ ಕಡೆಯಿಂದ ಆ ಕಡೆಗೆ ಮೂರು ಬಾರಿ ಎಸೆಯುತ್ತಾರೆ; ನಂತರ ಕೊಡಲಿಯನ್ನು ಕಾವಿನಿಂದ ತೆಗೆದು ಹಿಂದು ಮುಂದಾಗಿ ಕಾವಿಗೆ ಸೇರಿಸಿಕೊಂಡು ಹಿಂದಿರುಗುತ್ತಾರೆ; ಇದು ಒಂದು ಸಂಪ್ರದಾಯವಾಗಿ ಕೆಲವು ಕಡೆ ಬೆಳೆದು ಬಂದಿದೆ; ಮತ್ತೊಮ್ಮೆ ಚಿತೆಗೆ ಸೌದೆ ಸಿದ್ಧಪಡಿಸುವ ಕೆಲಸ ಕೊಡಲಿಗೆ ಬರದಿರಲಿ ಅಂದರೆ ಯಾರೂ ಸಾಯದಿರಲಿ ಎಂಬ ಆಶಯ ಈ ಆಚರಣೆಯಲ್ಲಿ ವ್ಯಕ್ತವಾಗುತ್ತದೆ;
- ಕೊಡಲಿ(ಕ್ರಿ); 'ಕೊಡು' ಧಾತುವಿಗೆ ವಿಧ್ಯರ್ಥದಲ್ಲಿ 'ಅಲಿ' ಸೇರಿ 'ಕೊಡಲಿ' ಎಂಬ ವಿಧ್ಯರ್ಥಕ ಕ್ರಿಯಾಪದ ಉಂಟಾಗುತ್ತದೆ; ನೀಡಲಿ, ಕೊಡುವಂತಾಗಲಿ ಎಂಬರ್ಥದಲ್ಲಿ ಪ್ರಯೋಗವಾಗುತ್ತದೆ; *ಪ್ರ: 'ಹಣವನ್ನು ಅವರೇ ಕೊಡಲಿ'*;
- ***—ಕೊಡಲಿ ಕಾವು*** : ಕಬ್ಬಿಣದ ಕೊಡಲಿಯ ಹಿಂದಿನ ತೂಬಿಗೆ ಸೇರಿಸಿದ ಮರದ ಸಾಧನ; ಇದನ್ನು ಹಿಡಿದು ಕೊಡಲಿಯಿಂದ ಮರಕಡಿಯಲು, ಸೌದೆ ಸೀಳಲು ಅನುಕೂಲವಾಗುತ್ತದೆ; ಕಾವು ಇಲ್ಲದಿದ್ದರೆ ಕೊಡಲಿಯ ಬಳಕೆ ಸಾಧ್ಯವಾಗುವುದಿಲ್ಲ; ಇದರಿಂದ ಕಾವಿನ ಉಪಯುಕ್ತತೆ ಮನದಟ್ಟಾಗುತ್ತದೆ; ಕಾವು ಸುಮಾರು ಒಂದೂವರೆಯಿಂದ ಎರಡು ಅಡಿ ಉದ್ದವಿರುತ್ತದೆ; *ಪ್ರ: 'ಕುಲಕ್ಕೆ ಮೃತ್ಯು ಕೊಡಲಿ ಕಾವು'(ಗಾ); 'ಕೊಡ್ಲಿಗೆ ಹೆದರದ ಮರ ಕೊಡ್ಲಿ ಕಾವಿಗೆ ಹೆದರಿತಂತೆ(ಗಾ)'*; A wooden handle at the end of iron axe;
- ***—ಕೊಡ್ಲಿಕ್ಕಳ/ಕೊಡ್ಲಿಬಾಯಿಕ್ಕಳ*** : ಕುಲುಮೆಯಲ್ಲಿ ಕೆಂಪಗೆ ಕಾಯ್ದ ಸಲಿಕೆ, ಗುದ್ದಲಿ, ಕೊಡಲಿಗಳ ತೂಬು ಹಿಡಿಯಲು ಕಮ್ಮಾರ ಬಳಸುವ ಇಕ್ಕಳ; Tongs, Pincers are used by blacksmith at forge;

- *—ಕೊಡ್ಲಿಕಜ್ಜಾಯ/ಕೊಳ್ಳಿಕಜ್ಜಾಯ* : ಮಾಂಸ (ಕ.ಜಾ.ನಿ); ಬಾಡು(ಚಿತ್ರ.ಜಿ); Meat; non-veg meal;
- ಮಾಂಸದೂಟ; ಬಾಡೂಟ;
- ಕೊಡಲಿಯಿಂದ ಮೂಳೆ ಕತ್ತರಿಸಿ ಮಾಂಸದ ಅಡುಗೆ ಮಾಡುವುದು;
- *—ಕೊಡ್ಲಿಗಾರ* : ಪರಶುರಾಮ; ಕೊಡಲಿಯನ್ನೇ ತನ್ನ ಆಯುಧವಾಗಿ ಹಿಡಿದವನು; Parashurama is one who always holding axe in hand; `Parashurama' is the sixth avator of Vishnu in Hinduism; he is a Brahmin, received his famous axe after undertaking terrible penance to please Shiva; `Parashu' means `Axe';
- *—ಕೊಡ್ಲಿಪೆಟ್ಟು* : ದೊಡ್ಡ ಹೊಡೆತ; ಹಣಕಾಸು, ಭಾವನಾತ್ಮಕತೆ ಇತ್ಯಾದಿ ಕಾರಣಗಳಿಂದಾದ ಭಾರೀ ನಷ್ಟ/ಆಘಾತ;
- ನುಡಿಗಟ್ಟಾಗಿ ಬಳಕೆ;
- *—ಕೊಡ್ಲಿಬಾಯಿಗೆ ಹೋಗು* : ಇದೊಂದು ಜನಪದ ಬೈಗುಳ/ಶಾಪ; A scolding(Folk);
- ಕೆಲವು ದುಷ್ಟ ವ್ಯಕ್ತಿಗಳು, ಊರಿಗೆ ಬೇಡವಾದವರು, ಬೇಸರವಾದವರು, ಉಡಾಲರು, ಲಫಂಗರನ್ನು ನೋಡಿ ನೋಡಿ ಸಹಿಸಲಾರದೆ ಹಿಂದಿನ ದಿನಗಳಲ್ಲಿ ಕೊಡ್ಲಿಯಿಂದ ಇಲ್ಲವೆ ಕುಡುಗೋಲಿನಿಂದ ಹೊಡೆದು ಕೊಲ್ಲುತ್ತಿದ್ದರೆಂದು ಹೇಳಲಾಗುತ್ತಿತ್ತು; ಹೀಗೆ ಸಾವಿಗೊಳಗಾಗುವುದನ್ನು 'ಕೊಡ್ಲಿಬಾಯಿಗೆ ಹೋಗು' ಎಂದು ಕರೆಯುವ ವಾಡಿಕೆ ಇದೆ; ಜನಪದರು ಅದರಲ್ಲೂ ಸ್ತ್ರೀಯರು 'ನಿನಗೆ ದುರಂತದ ಸಾವು ಬರಲಿ' ಎಂದು ಹಾರೈಸುವಾಗ ಬೈಯುವ ಸಂದರ್ಭದಲ್ಲಿ ಹೀಗೆ ಬಳಕೆ ಮಾಡುವುದು ಕಂಡುಬರುತ್ತದೆ.

ಕೊಡಲಿಕೆ kodalike :

- ಒಂದು ಬಗೆಯ ಮುಳ್ಳಿನ ಮೆಳೆ ಮತ್ತು ಅದರ ಹಣ್ಣು(ಕ.ಜಾ.ಕೋ); A kind of thorny shrub and its fruits;
- ಕೊಡಲಿಕೆ(ಕ್ರಿ); ಕೊಡುವುದಕ್ಕೆ; ಕೊಡೋಕೆ; ಕೊಡಲಿಕ್ಕೆ; To give;
- 'ಕುಡು/ಕೊಡು' ಧಾತುವಿನಿಂದ ನಿಷ್ಪನ್ನಗೊಂಡ ಪದವಾಗಿಯೂ ಬಳಸುವುದುಂಟು; ಕೊಡಲು, ಕೊಡುವುದಕ್ಕಾಗಿ ಎಂಬ ಅರ್ಥದಲ್ಲಿ 'ಕೊಡಲಿಕೆ' ಪ್ರಯೋಗವಾಗುತ್ತದೆ; ಕೊಡಲಿಕ್ಕೆ>ಕೊಡಲಿಕೆ; ಕೊಡಾಕೆ ಎಂಬ ರೂಪ ಇದೇ ಅರ್ಥದಲ್ಲಿ ಪ್ರಯೋಗವಾಗುತ್ತದೆ.

ಕೊಡಲು/ಕೊಡ್ಲು kodalu/kodlu :

- ಇಳಿಜಾರು; ತಗ್ಗು ಪ್ರದೇಶ(ದ.ಕ/ಧಾ.ಜಿ); Slope, slide;
- *ಪ್ರ: 'ಆ ಕೊಡ್ಲು ದಾಟಿ ಮುಂದೆ ಹೋದ್ರೆ ಮನೆ ಕಾಣ್ತದೆ';*
- ಕೊಡಲು(ಕ್ರಿ); ಕುಡು/ಕೊಡು ಧಾತುವಿಗೆ 'ಅಲು' ಪ್ರತ್ಯಯ ಸೇರಿ ಸಿದ್ಧಗೊಂಡ ರೂಪ; ಕೊಡುತ್ತಿರಲು, ಕೊಟ್ಟಾಗ ಎಂಬ ಅರ್ಥಗಳಲ್ಲಿ ಪ್ರಯೋಗವಾಗುತ್ತದೆ; *ಪ್ರ: 'ಕೊಡಬೇಕಾದ ಹಣವನ್ನು ಕೊಡಲು ಅಲ್ಲಿಂದ ಅವನು ಹೊರಟನು'.*

ಕೊಡವಳ್ಳ kodavalla :

- ಕೊಡಲೊಲ್ಲಳು(ಕಲ.ಜಿ); Woman one who is not willing to give;
- ಕೊಡಲು ಒಲ್ಲದವಳು>ಕೊಡಲೊಲ್ಲಳು ಎಂದಾಗಿ ಕ್ರಮೇಣ ಉಚ್ಚಾರಣೆಯಲ್ಲಿ 'ಕೊಡವಳ್ಳ' ಎಂಬ ರೂಪ ಪಡೆದಿರಬೇಕೆಂದು ತೋರುತ್ತದೆ.

ಕೊಡವಿ kodavi :

- ೧.ಗೆಳತಿ, ಕಿವಿ; ೨.ಕೊಡುಗೆ; ಕೊಡಗೂಸು; ಕನ್ಯಾ/ಕನ್ಯೆ(ಕಲ.ಜಿ); Friend(girl), contribution, unmarried(young) girl;
- ಮದುವೆಯಾಗದಿರುವ ಕನ್ಯೆ(ಮಂ.ಜಿ);
- ಅಸುಮಗಳು(ಬೆಂ.ಗ್ರಾ.ಜಿ);
- ಕೊಡಹಿ(ಕ್ರಿ); ಝಾಡಿಸಿ ಎಂಬ ಅರ್ಥದಲ್ಲಿಯೂ ಪ್ರಯೋಗವಾಗುತ್ತದೆ;
- ಕೊಡಗಿನ ಸ್ತ್ರೀ ಎಂಬರ್ಥದಲ್ಲಿ ಕೊಡವಿ, ಕೊಡವ್ತಿ ಎಂಬ ರೂಪಗಳ ಪ್ರಯೋಗವಿದೆ.

ಕೊಡವು kodavu :

- ಕೊಡಪು>ಕೊಡಹು>ಕೊಡವು;

- ಚೆಲ್ಲಾಟವಾಡು; ಝಾಡಿಸು; ಪ್ರ: 'ಪುಸ್ತಕದ ಧೂಳು ಕೊಡವ ಬೇಕು'(ಬ.ಜಿ); Sweep; dust; shake deny;
- ಧೂಳು ಹೋಗುವಂತೆ ಬಟ್ಟೆಗಳನ್ನು ಒದರುವುದು (ಚಿತ್ರ.ಜಿ);
- ಇಲ್ಲವೆನ್ನು ಎಂಬರ್ಥದಲ್ಲಿ 'ಕೈಕೊಡವು'; ನಿರಾಕರಿಸು ಎಂರ್ಥದಲ್ಲಿ 'ತಲೆಕೊಡವು' ಎಂಬ ಪದಗಳ ಬಳಕೆ ಇದೆ;
- ಕೊಡಗು; ಕೊಡವ ಭಾಷೆ ಎಂಬ ಅರ್ಥದಲ್ಲಿಯೂ ಪ್ರಯೋಗವಾಗುತ್ತದೆ;
- ***—ಕೊಡವಿ ಮಾತಾಡು*** : ಲಕ್ಷ್ಯಕ್ಕೆ ತೆಗೆದುಕೊಳ್ಳದೆ ಟೀಕಿಸುವುದು; Neglected comment or speech;
- ಕೋಪದಿಂದ ಒದರಿ ಮಾತಾಡುವುದು;
- ***—ಕೊಡವಿಕೊಂಡು ಹೋಗು/ಕೊಡವಿಕೊಂಡ್ಹೋಗು*** : ನಿರಾಕರಿಸಿ ಹೋಗುವುದು; Rejection; enragement;
- ಕೋಪೋದ್ರಿಕ್ತನಾಗಿ ಹೋಗುವುದು;
- ಕೊಡಪು>ಕೊಡಹು>ಕೊಡವು
- 'ಕೊಡವು' ಎಂದರೆ ಒದರು, ಜಾಡಿಸು, ಬಿಟ್ಟುಬಿಡು, ವಿಸರ್ಜಿಸು ಎಂಬ ಅರ್ಥಗಳಿವೆ;
- ಕೊಡವಿಕೊಂಡು + ಹೋಗು (< ಪೋಗು) = ಕೊಡವಿಕೊಂಡುಹೋಗು>ಕೊಡವಿಕೊಂಡ್ಹೋಗು> ಕೊಡವಿಕೊಂಡೋಗು ಎಂಬ ರೂಪಗಳು ಉಚ್ಚಾರಣೆಯಲ್ಲಿ ಉಂಟಾಗುತ್ತವೆ;
- ಅಭಿಪ್ರಾಯ ಭೇದದಿಂದ ಸಭೆ ಸಮಾರಂಭಗಳನ್ನು ತ್ಯಜಿಸಿ ಕೋಪೋದ್ರಿಕ್ತರಾಗಿ ಹೋಗುವುದು;
- ಕೆಲವರು ತಮ್ಮ ತಪ್ಪುಗಳನ್ನು ಒಪ್ಪಿಕೊಳ್ಳದೆ ತಮ್ಮನ್ನೇ ಸಮರ್ಥಿಸಿಕೊಳ್ಳುತ್ತಾ ಅಲ್ಲಿಂದ ಕೋಪಗೊಂಡು ಹೊರ ನಡೆಯುವುದು.

ಕೊಡಸಿಗೆ kodasige :

- ಹೊಲರ್ರೆನಾ ಆ್ಯಂಟಿಡಿಸೆಂಟರಿಕಾ;
- ಬೆಟ್ಟ-ಗುಡ್ಡಗಳಲ್ಲಿ ಸಣ್ಣ ಮರವಾಗಿ ಬೆಳೆಯುವ, ನಂದಿ ಬಟ್ಟಲಿನ ಜಾತಿಗೆ ಸೇರಿದ ಔಷಧೀಯ ಸಸ್ಯ; ಮಲ್ಲಿಗೆಯನ್ನು ಹೋಲುವ ಬಿಳಿ ಬಣ್ಣದ ಹೂಗಳನ್ನು ಬಿಡುತ್ತದೆ; A medicinal shrub/herb;
- ಕೊಡಸಿಗೆ ಹೂವು, ಬೀಜ ಮತ್ತು ತೊಗಟೆ ಔಷಧೀಯ ಗುಣವನ್ನು ಹೊಂದಿವೆ;
- ಮಾರುಕಟ್ಟೆಯಲ್ಲಿ ದೊರೆಯುವ ಕುಟಜಾರಿಷ್ಟ ಎಂಬ ಔಷಧವನ್ನು ಇದರಿಂದ ತಯಾರಿಸುತ್ತಾರೆ; ಬೇಸಿಗೆಯಲ್ಲಿ ಬಿಡುವ ಈ ಹೂಗಳನ್ನು ಕೊಯ್ದು ಒಣಗಿಸಿಟ್ಟರೆ ಒಂದು ವರ್ಷ ಕೆಡುವುದಿಲ್ಲ; ಒಣಗಿಸಿಟ್ಟ ಹೂವುಗಳಿಂದ ಚಟ್ನಿ, ತಂಬುಳಿ ಮಾಡಬಹುದು;
- ಕೊಡಸಿಗೆ ಒಂದು ಜಾತಿಯ ಹೂವಿನ ಮರ; ಬೆಟ್ಟ ಮಲ್ಲಿಗೆ; ಗಿರಿಮಲ್ಲಿಗೆ; ಇದರ ಕಾಂಡವನ್ನು ಆಟದ ಸಾಮಾನು, ಗೃಹ ಬಳಕೆಯ ವಸ್ತುಗಳನ್ನು ತಯಾರಿಸಲು ಬಳಸುತ್ತಾರೆ; ಕೊಡಸಿಗೆ ಮರ ನಯವಾದ ಕೆತ್ತನೆ ಕೆಲಸಗಳಿಗೆ ಯೋಗ್ಯವಾದುದಾಗಿದೆ; ವ್ಯರೂ: ಕೊಡಮುರು(ದಕ), ಕೊಡಗಾಸನ(ಹವ್ಯಕ);
- ಕುಟಜಕ(ಸಂ)>ಕೊಡಸಿಕೆ>ಕೊಡಸಿಗ>ಕೊಡಸಿಗೆ/ ಕೊಡಸೀಗೆ.

ಕೊಡಸಿಗೆ ಗಿಡ koḍasige giḍa :

- 'ಕೊಡಸಿಕೆ'ಯಿಂದ ಕೊಡಸಿಗೆ ಬಂದಿರಬಹುದು;
- ಸಸ್ಯಶಾಸ್ತ್ರೀಯ ಪಾರಿಭಾಷಿಕ ಪದ: `Wriqutia zeylanica';
- ತಮಿಳು ಮತ್ತು ಮಲೆಯಾಳಂಗಳಲ್ಲಿ ಕ್ರಮವಾಗಿ ವೇಪ್ಪಾಲೈ ಮತ್ತು ವೆಣ್ಪಾಲ ರೂಪಗಳಿವೆ; ಇವೆರಡೂ ಎಲ್ಲಿಂದ ಬಂದವೊ ಗೊತ್ತಿಲ್ಲ, ಕನ್ನಡದ ಪದಕ್ಕೆ ಹೋಲಿಕೆಯಿಲ್ಲ; ಆದರೆ ಮಲೆಯಾಳಂನ 'ಕೊಟಕಪ್ಪಾಲ' ರೂಪ ಮಾತ್ರ ಹೋಲಿಕೆಯಿದೆ;
- ತೆಲುಗಿನ 'ಕೊಡಿಶ ಚೆಟ್ಟು' ರೂಪ ಕೂಡ 'ಕೊಸಿಗೆ'ಗೆ ಹತ್ತಿರ ಪದವೆಂದು ಭಾವಿಸಬಹುದಾಗಿದೆ;
- ಅಜೀರ್ಣ ಮತ್ತು ಕರುಳು ಸಂಬಂಧಿ ತೊಂದರೆಗೆ ಇದು ವಿಶೇಷ ಔಷಧವೆಂದು ನಂಬಲಾಗಿದೆ; ಬೀಜ ಅತಿಸಾರ ಮತ್ತು ಮೂಲವ್ಯಾಧಿಗೆ ಬಳಕೆ; ಕಷಾಯ ಜ್ವರಕ್ಕೆ; ಬೇರು ಗಂಟಲು ಹುಣ್ಣು, ವಾತ, ಹಲ್ಲು ನೋವುಗಳಿಗೆ ಬಾಹ್ಯ ಬಳಕೆಯಾಗಿ ಕಂಡುಬರುವುದು.

(F.H.I.P)

ಕೊಡಸು kodasu :

- ಮಾಂಸದ ಕಟ್ಟು(ಬ.ಜಿ)(ಕ.ಜಾನಿ); A pack of meat, meat pack wrapped with the leaves of banana or areca tree;
- ಅಡಿಕೆ ಹಾಳೆ; ಬಾಳೆ ಎಲೆಗಳಿಂದ ಮಾಂಸವನ್ನು ಕಟ್ಟಿ ಬೇಟೆ ರಂಗನಿಗೆ ಎಡೆ ಸಲ್ಲಿಸುತ್ತಾರೆ; ಮಲೆ ನಾಡಿನ ಭಾಗದಲ್ಲಿ ಈ ಪದ್ಧತಿ ರೂಢಿಯಲ್ಲಿದೆ (ಬೇ.ಸಾಂ.ಪ.ಲೋ); In the hilly region(male nadu) of Karnataka state the peole offer a pack of meat to the tribal god `Bete Ranga'(a form of Vishnu);
- ಕೊಡಸು=ಕೊಡಚು; ಗುಗ್ಗೆ ಕಡ್ಡಿಯಿಂದ ಕಿವಿಯ ಗುಗ್ಗೆ ಹೊರ ತೆಗೆಯುವುದು(ಕಿಟ್ಟೆಲ್); Remove ear discharge or ear wax;
- ಕೊಡಸು>ಕೊಡಚು; ಪದದ ಅಂತ್ಯ 'ಸ'ಕಾರಕ್ಕೆ 'ಚ'ಕಾರ ಬರುವುದು 'ಚ'ಕಾರಕ್ಕೆ 'ಸ'ಕಾರ ಬರುವುದು ಸಾಮಾನ್ಯ;
- ಕೊಡಚು, ಕೊಡಸು; ಕಿವಿಯೊಳಗಿನ ಗುಗ್ಗೆಯನ್ನು ಬೆರಳಿನಿಂದ ಅಥವಾ ಕಡ್ಡಿಯಿಂದ ತೆಗೆ; ಪಾತ್ರೆಯ ಕೊಳೆಯನ್ನು ಉಜ್ಜಿ ಹೋಗಾಡಿಸು(ದ್ರಾ.ಭಾ.ಜ್ಞಾ.ಪ.ಕೋ);
- ***—ಕೊಡಸು ಕಟ್ಟು*** : ಮಾಂಸವನ್ನು ಕೊಟ್ಟೆ ಕಟ್ಟುವುದು(ಶಿ.ಜಿ).

ಕೊಡಿ kodi :

- ಕುಡಿ>ಕೊಡಿ ಎಂದಾಗಿದೆ; ಗ್ರಾಮೀಣರ ಉಚ್ಚಾರಣೆಯಲ್ಲಿ ಸ್ವರ ವ್ಯತ್ಯಯಗೊಂಡು(ಉ>ಒ) ಬಳಕೆಯಲ್ಲಿರುವ ಪದ; ಕುಡಿ, ತುದಿ, ಕೊನೆ; *ಪ್ರ: 'ಕೊಡಿ ಏರ್ನಗ ಕಡ್ ತಗ್ಲೊಡು'*(ತು.ನಿ);
- ಚಿಗುರು, ಕುಡಿ, ಎಳೆಯ ಬಳ್ಳಿ; ಲತೆ; ವಂಶದಕುಡಿ; ಮಗು; ಸಂತಾನ(ದ.ಕ)(ತು.ನಿ); Sapling, sprout, scion, hard, flag hoisting, broken umbrella; appointed date to begin a work;
- ಬಾವುಟ, ಪತಾಕೆ; ಧ್ವಜ; ದೇವಸ್ಥಾನದ ಮುಂದೆ ಏರಿಸುವ ಧ್ವಜ(ದ.ಕ);
- ಉತ್ಸವ, ಧಾರ್ಮಿಕ ವಿಧಿ, ಮದುವೆ ಮೊದಲಾದ ಸಂದರ್ಭಗಳಲ್ಲಿ ಮಡಿವಾಳನು ಅವು ನಡೆಯುವ ಸ್ಥಳದ ಮೇಲ್ಗಡೆ ಚಪ್ಪರಕ್ಕೆ ಬಿಡಿಸಿ ಕಟ್ಟುವ ಮಡಿ ಮಾಡಿದ ಬಿಳಿ ಬಟ್ಟೆ;
- ದೊರಗು ಬಟ್ಟೆ; ಬೆಳ್ಳಗೆ ಇರದ ಬಟ್ಟೆ, ಕೀಳುಬಟ್ಟೆ;
- ಕಾರ್ತಿಕ ಮಾಸ; *ಪ್ರ: 'ಕೊಡಿ ತಿಂಗಳಿನಿಂದ ಮುಂಗಾರು ಮಳೆ'*;
- ಕಳ್ಳತನ ಆಗದಂತೆ ಕಟ್ಟುವ ಭೂತದ ಹೆಸರಿನ ತಡೆ;
- ದೇವಸ್ಥಾನ ಹಾಗೂ ದೈವಸ್ಥಾನಗಳಲ್ಲಿ ಉತ್ಸವ ಪ್ರಾರಂಭವಾಗುವಾಗ ಧ್ವಜ ಸ್ತಂಭಕ್ಕೆ ಏರಿಸುವ ದೇವರ ದೂತ ಅಥವಾ ವಾಹನದ ಪ್ರತಿರೂಪ(ತು.ನಿ);
- ಗಟ್ಟಿತನ, ಶಕ್ತಿ; ಮೂಲೆಯ ನೆಲ, ಕೊಡಿ ಜಮೀನು; ತ.ಮ.ತು.ಕೋಡಿ(ದ್ರಾ.ಭಾ.ಜ್ಞಾ.ಪ.ಕೋ);
- ನಿಷೇಧ ಅಥವಾ ತಡೆಯ ಸಂಕೇತ ರೂಪವಾದ ಮರದ ಗೆಲ್ಲು, ಚಿಗುರು, ಸೋಗೆ ಮೊದಲಾದ ಸಾಧನಗಳು(ತು.ನಿ);
- ಕೆಲಸಕ್ಕೆ ನಿಷಿದ್ಧವಾದ ದಿನ;
- ಸ್ಥಳನಾಮ ಘಟಕ; ಉದಾ: ಕೊಡಿಪ್ಪಾಡಿ; ಕೊಡಿಬೆಟ್ಟು(ತು.ನಿ);
- ತುಂಡಾದ; ಮುರಿದ; ಜಳ್ಳು;
- ದೊಡ್ಡ ಉತ್ಸವಗಳಲ್ಲಿ ಕೆಲಸಗಾರರಿಗೆ ಕೊಡುವ ಬಟ್ಟೆ(ತು.ನಿ);
- ಕುಡು/ಕೊಡು ಧಾತುವಿನ ಮಧ್ಯಮ ಪುರುಷ ವಾಚಕದಲ್ಲಿ ಪ್ರಯೋಗವಾಗುವ ಬಹುವಚನ ಕ್ರಿಯಾರೂಪ; ಕೊಡಿರಿ; *ಪ್ರ: 'ನಿಮ್ಮ ವಂತಿಗೆಯನ್ನು ಕೊಡಿ'*;
- ಕೊಡೆ, ಛತ್ರಿ; ಪ್ರಾದೇಶಿಕ ಭೇದದಿಂದಾಗಿ ಪದದ ಕೊನೆಯ 'ಎ'ಕಾರವು 'ಇ'ಕಾರವಾಗುತ್ತದೆ; ಕೊಡೆ>ಕೊಡಿ;
- ***—ಕೊಡಿ ಅರಿವೆ*** : ಗಟ್ಟಿಯಾದ ಬಟ್ಟೆ; ಕೊಡಿ+ಅರಿವೆ (<ಅರುವೆ);
- ***—ಕೊಡಿ ಏರುನಿ/ನೆ*** : ಧ್ವಜಾರೋಹಣ; ಗರುಡನನ್ನೇರಿಸುವುದು (ದ.ಕ/ಕ.ಜಾ.ನಿ)
- ಭೂತಾರಾಧನೆಯಲ್ಲಿ ದೇವಸ್ಥಾನದ ಮುಂದಿನ ಕೊಡಿಮರದಲ್ಲಿ ಧ್ವಜಾರೋಹಣ ಮಾಡುವುದು;
- ದೈವ ದೇವರುಗಳ ಉತ್ಸವಕ್ಕಾಗಿ ಧ್ವಜ ಏರುವುದು; ಧ್ವಜಾರೋಹಣವಾಗುವುದು(ತು.ನಿ);
- ***—ಕೊಡಿ ಕಟ್ಟುವುದು*** : ತುಳುನಾಡಿನಲ್ಲಿ ಆಚರಣೆಯಲ್ಲಿರುವ ಧಾರ್ಮಿಕ ಬಂಧನ;

- ದೈವದ ಹೆಸರಿನಲ್ಲಿ ಮರಕ್ಕೆ ಗುರುತು ಕಟ್ಟುವುದು; ಇದನ್ನು ಕಟ್ಟಿದ ಬಳಿಕ ಬೇರಾರೂ ಆಮರದಿಂದ ಏನನ್ನೂ ತೆಗೆಯುವಂತಿಲ್ಲ; ಕಟ್ಟಿದವನು ಬಿಡಿಸಿದ ಬಳಿಕವಷ್ಟೇ ಆಮರದ/ಗಿಡದ ಫಲವನ್ನು ತೆಗೆಯಬಹುದು; ಕಳ್ಳಕಾಕರಿಂದ ಫಲದ ರಕ್ಷಣೆಗೆ ಈ ಪದ್ಧತಿ ಅನುಸರಿಸಲಾಗುತ್ತದೆ; In the Coastal district of Karnatka state people worship the local deity; they worship the spirit or `Bhuta' or `Wandering soul' before worshipping, they tie a mark on a tree;
- ***—ಕೊಡಿಕಟ್ಟುನಿ*** : ಬೆಳೆ, ತರಕಾರಿ, ಕಾಯಿ ಮೊದಲಾದವುಗಳನ್ನು ಒಂದು ನಿಶ್ಚಿತ ಅವಧಿಯವರೆಗೆ ಯಾರೂ ಕೀಳದಂತೆ, ಕಳ್ಳರು ಕದಿಯದಂತೆ ದೈವ ದೇವರುಗಳ ಹೆಸರಿನಲ್ಲಿ ಘೋಷಿಸಿ ಗ್ರಾಮ ದೈವಕ್ಕೆ ಅಥವಾ ಕುಟುಂಬ ದೈವಕ್ಕೆ ಪ್ರಾರ್ಥನೆ ಸಲ್ಲಿಸಿ ಸಾಂಕೇತಿಕವಾಗಿ ನಿಷೇಧವನ್ನು ಸೂಚಿಸುವ ಸೊಪ್ಪು, ಚಿಗುರು, ತೆಂಗಿನ ಗರಿ ಮೊದಲಾದವುಗಳನ್ನು ಕಟ್ಟುವುದು(ತು.ನಿ);
- ***—ಕೊಡಿಜಾವುನಿ/ಕೊಡಿಜಾಪುನಿ*** : ಉತ್ಸವಕ್ಕಾಗಿ ಏರಿಸಿದ ಧ್ವಜವನ್ನು ಉತ್ಸವ ಮುಗಿದ ಮೇಲೆ ಕೊನೆಯಲ್ಲಿ ಇಳಿಸುವುದು; ಧ್ವಜಾವರೋಹಣ;
- ***—ಕೊಡಿಬಂಡಿ*** : ಭೂತದ ಉತ್ಸವದಲ್ಲಿ ಧ್ವಜಾರೋಹಣ ಮಾಡಿದ ದಿವಸ ನಡೆಯುವ 'ಬಂಡಿ' ಎಂಬ ಉತ್ಸವ(ತು.ನಿ);
- ***—ಕೊಡಿಬಲಿ*** : ಧ್ವಜ ಏರಿಸುವುದಕ್ಕಾಗಿ ಮಾಡಿದ ಧ್ವಜ ಲಾಂಛನವನ್ನು ಹೊತ್ತುಕೊಂಡು ದೇವರ ಸುತ್ತ ಪ್ರದಕ್ಷಿಣೆ ಬರುವ ಆಚರಣೆ(ತು.ನಿ);
- ***—ಕೊಡಿಮರ*** : ದೈವ ದೇವಸ್ಥಾನಗಳ ಮುಂದೆ ಪ್ರತಿಷ್ಠಾಪಿಸಿದ ಧ್ವಜ ಸ್ತಂಭ(ತು.ನಿ); *ಪ್ರ: 'ಉತ್ಸವದ ಕೊನೆಯ ದಿನ ಊರಿನ ಮುಖ್ಯಸ್ಥ ಕೊಡಿ ಮರದ ಬಳಿ ತೆಂಗಿನಕಾಯಿ ಒಡೆದು ಪೂಜಿಸುತ್ತಾನೆ';*
- ಈ ಕೊಡಿಮರವು ಹಬ್ಬ ಮತ್ತು ಉತ್ಸವದ ಕಾರ್ಯಕ್ರಮಗಳು ಮುಗಿಯುವವರೆಗೂ ಇರಬೇಕೆಂಬುದು ನಿಯಮ;
- ***—ಕೊಡಿಮಳ್ಳು*** : ಅಸಮಾಧಾನಗೊಳ್ಳು; ಕನಲು; ಕೋಪಾವೇಶಗೊಳ್ಳು(ಚಿ.ಪ.ಕೋ);
- ***—ಕೊಡಿಯಡಿ*** : ಮಡಿವಾಳನು ಕಟ್ಟಿದ ಬಟ್ಟೆಯ ಅಡಿಭಾಗ;
- ಆಚರಣೆ ನಡೆಯುವ ಸ್ಥಳ; ಭೂತನರ್ತಕನು ಕುಣಿಯುವ ರಂಗಸ್ಥಳ;
- ಉತ್ಸವ ನಡೆಯುವ ಅಂಗಣದಲ್ಲಿ ಭೂತದ ಆಯುಧ, ಆಭರಣಗಳನ್ನು ತಂದು ಪ್ರತಿಷ್ಠಾಪಿಸುವ ಪರಿಶುದ್ಧ ಜಾಗ(ಮಂ.ಜಿ);
- ***—ಕೊಡಿಯರು*** : ಕೊಡೆಯನ್ನು ಹಿಡಿದವರು(ದ.ಕ)

ಕೊಡಿಕಟ್ಟುವುದು koḍikaṭṭuvudu :

- ವಿಶೇಷವಾಗಿ 'ಕರಗ ಸಂಪ್ರದಾಯ'ಕ್ಕೆ ಸಂಬಂಧಿಸಿದ ಪದ;
- ಕುಡಿಕಟ್ಟು; ಗುಡಿಕಟ್ಟು; ಧ್ವಜಾರೋಹಣ; ಅಂಕುರಾರ್ಪಣ; ನಾಂದಿ; Flag hoisting(religious), in beginning of an auspicious undertaking or festival, specially related to `Karaga';
- ಕರಗ ನಡೆಯುವುದನ್ನು ಸೂಚಿಸಲು ಕಟ್ಟುವ ಧ್ವಜ; ಧ್ವಜಾರೋಹಣ(ಬೆಂ.ಗ್ರಾ.ಜಿ);
- ಕರಗದಮ್ಮ ಅಥವಾ ದ್ರೌಪದಮ್ಮನಿಗೆ ಯುಗಾದಿ ಹಬ್ಬ ಆದ ಎರಡು ದಿನಕ್ಕೆ, ಕರಗ ಇನ್ನೂ ಹದಿನಾಲ್ಕು ದಿನ ಇದೆ ಎನ್ನುವಂತೆ ಕರಗ ಆಚರಣೆಯ ಆರಂಭವನ್ನು ಸೂಚಿಸಲು ಮಾಡುವ ಧ್ವಜಾರೋಹಣ; Karaga is a folk dance and folk festival of Karnataka which originated as a ritual dedicated to Draupadi as known in these parts as `Droupthamma' or `Karagadamma'; the ritual is performed on a full moon day; the priest carries ritual pot filled with water and adorned with decorations;
- ಹೊಸ ಬೊಂಬನ್ನು ಕಡಿದು ತಂದು ಪೂಜಿಸಿ; ಅದರ ತುದಿಗೆ ಹಳದಿ ಧ್ವಜವನ್ನು ಕಟ್ಟಿ ನೆಡುತ್ತಾರೆ; ಅರಿಶಿಣದ ಬಟ್ಟೆಗೆ ಅರಳಿಸೊಪ್ಪು, ದರ್ಭೆ, ನವಧಾನ್ಯ, ತೆಂಗಿನಕಾಯಿ, ಅಕ್ಕಿ ಸೇರಿಸಿ ಗಂಟನ್ನು ಕಟ್ಟಿ ಕಂಬಕ್ಕೆ ನೇತುಹಾಕುತ್ತಾರೆ; ಕರಗ ಆಚರಣೆ ಪೂರ್ಣವಾಗುವವರೆಗೂ ಅದು ಇರಬೇಕೆಂಬುದು ನಿಯಮ(ಬೆಂ.ಗ್ರಾ.ಜಿ)(ಕ.ಜ.ಸ್ತ್ರೀ.ದೈ.ಸಾಂ.ಪ.ಕೋ).

ಕೊಡಿಕಲ್ಲು/ಕೊಡೆಕಲ್ಲು koḍikallu/koḍekallu :

- ಗಟ್ಟಿಮುಟ್ಟಾದ ಕಲ್ಲು; ಕಗ್ಗಲ್ಲು; Crag, strong and rude stone;
- ಕಾಲಜ್ಞಾನ ಹೇಳುವ ಕಾಲಜ್ಞಾನಿಗಳಿರುವ ಊರಿನ ಹೆಸರು; ಸ್ಥಳನಾಮ;
- ಕೊಡೆಕಲ್ಲು ಬಸವಣ್ಣನ ಕ್ಷೇತ್ರ(ಚಾ.ಜಿ);
- ಪದದ ಪೂರ್ವಾರ್ಧ 'ಕೊಡೆ' ಉಚ್ಚಾರಣೆಯಲ್ಲಿ 'ಕೊಡಿ' ಎಂದಾಗಿ ಬಳಕೆಗೊಂಡಿದೆ;
- *—ಕೊಡಿಕಲ್ಲುಅಯ್ಯ/ಕೊಡೆಕಲ್ಲಯ್ಯ* : ಸಾರುವ ಜಂಗಮ;
- ಬಿಚ್ಚಿದ ಕೊಡೆ ಹಿಡಿದು ಕಾಲಜ್ಞಾನ ವಚನಗಳನ್ನು ಹೇಳುವವರಿಗೆ 'ಕೊಡಿಕಲ್ಲಅಯ್ಯ/ಕೊಡೆಕಲ್ಲಯ್ಯ' ಎಂದು ಕರೆಯುವುದುಂಟು; ಇವರ ಮಾತಿನಲ್ಲಿ ಗ್ರಾಮೀಣ ಜನರಿಗೆ ಅಪಾರ ನಂಬಿಕೆ, ಶ್ರದ್ಧೆ ಇದೆ; ಇವರು ಮೂಲತಃ ಕಲಬುರ್ಗಿ ಜಿಲ್ಲೆಯ 'ಕೊಡೆಕಲ್ಲು' ಎಂಬ ಊರಿನವರು ಎಂದು ಹೇಳುವುದುಂಟು; ಹೇಳಿಕೆಗಳನ್ನು ಸಾರುವುದರಿಂದ ಇವರಿಗೆ 'ಸಾರುವಯ್ಯ' ಎಂದೂ, 'ಕೊಡೆಕಲ್ಲು' ಕಡೆಯಿಂದ ಬಂದವರೆಂಬ ಕಾರಣಕ್ಕೆ 'ಕೊಡೆಕಲ್ಲ ಅಯ್ಯ' ಎಂದೂ ಕರೆಯುತ್ತಾರೆ. A place of a famous astrologer/diviner in Gulbarga district.

ಕೊಡಿಕಾಲ್ koḍikāl :

- ಕಾಲಿನ ತುದಿ(ಕೊಡ.ಜಿ); ತುದಿಗಾಲು; *ಪ್ರ: 'ಕೊಡಿಕಾಲ್‌ಗೆ ಕಲ್ಲ್ ಹೆಟ್ಟುಟು'*; Tip toe;
- ಕುಡಿ>ಕೊಡಿ ಆಗಿದೆ; ಉ>ಒ ಆಗುವ ಸ್ವರ ವ್ಯತ್ಯಯ ಸಹಜ ಕ್ರಿಯೆ;
- ಕುಡಿ/ಕೊಡಿ=ತುದಿ ಎಂಬ ಅರ್ಥ ಪಡೆದುಕೊಂಡು, ತುದಿಕಾಲು/ತುದಿಗಾಲು ಎನ್ನುವ ಅರ್ಥದಲ್ಲಿ ಪ್ರಯೋಗವಾಗುತ್ತದೆ.

ಕೊಡಿಗೆ koḍige :

- ಸಾಮಾನ್ಯವಾಗಿ ಬ್ರಾಹ್ಮಣೇತರರು ಧರಿಸುವ ಕರ್ಣಾಭರಣ; Earring, normally used by Non-Brahmin;
- ಕುಡುಕು(ಹ.ಕ); ಹೆಂಗಸರು ಕಿವಿಯ ಮೇಲ್ಭಾಗದಲ್ಲಿ ಧರಿಸುವ ಕಡ್ಡಿಯಂತಹ ಚಿನ್ನದ ಆಭರಣ; Female's earring in upper ear;
- ಕುಡ್ಕ, ಕುಡ್ಕಿ, ಕುಡುಕ; ಹೆಂಗಸರ ಕಿವಿಯ ಆಭರಣ; ತ: ಕುಟ್ಟೈ(ಕಿವಿಯಲ್ಲಿ ಧರಿಸುವ ಆಭರಣ); ಮ: ಕುಟಿ(ಅದೇ); ತು: ಕೊಡಂಗೆ(ಗಂಡಸರು ಕಿವಿಯ ಮೇಲ್ತುದಿಯಲ್ಲಿ ಧರಿಸುವ ಚಂದ್ರಾಕಾರದ ಸರಿಗೆಯ ಆಭರಣ)(ದ್ರಾ.ಭಾ.ಜ್ಞಾ.ಪ.ಕೋ).

ಕೊಡಿಗೆಪಲ್ಲಿ koḍigepalli :

- ಅನಂತಪುರ ಜಿಲ್ಲೆ ಹಿಂದೂಪುರ ತಾಲ್ಲೋಕಿನ ಕ್ರಿ.ಶ.೧೩೨೮ರ ೫ನೇ ಶಾಸನದಲ್ಲಿ ಇದರ ಉಲೇಖ; A place in Ananthpur district of Andhara Pradesh;
- ಹೊಯ್ಸಳ ೩ನೇ ಬಲ್ಲಾಳನ ಆಳ್ವಿಕೆ ಸಂದರ್ಭ;
- ಪೆನುಗೊಂಡೆಯ ಮಹಾಪ್ರಧಾನಿ ಮಾಚಿದಂಡ–ನಾಯಕನು ನಾಗೆಯಗವುಡ ಮತ್ತು ಇತರರಿಗೆ ಬೆಣಗೂರನ್ನು ಕೊಡಿಗೆಯಾಗಿ ಬಿಟ್ಟ ವಿಚಾರ;
- ಕೊಡಿಗೆ+ಪಲ್ಲಿ; 'ಪಲ್ಲಿ' ತೆಲುಗಿನ ರೂಪ, ಕನ್ನಡದಲ್ಲಿ ಹಳ್ಳಿ; ಪ>ಹ; ಲ>ಳ;
- ಕೊಡಿಗೆಯಾಗಿ ಬಂದ ಊರು ಎಂದು ಅರ್ಥ;
- ಈ ಊರಿನ ನಿಜವಾದ ಹೆಸರು 'ಬೆಣಗೂರು'; ಕೊಡಿಗೆಯಾಗಿ ಬಂದಿದ್ದರಿಂದ 'ಕೊಡಿಗೆಪಲ್ಲಿ'ಯಾಗಿ ಚಾಲ್ತಿಗೆ ಬಂದಿದೆ.

(ಆ.ಪ್ರ.ಕ.ಶಾ.ಭಾ.೧)

ಕೊಡಿಗೆಹಳ್ಳಿ koḍigeha!!i :

- ಬೆಂಗಳೂರು ಜಿಲ್ಲೆ ದೇವನಹಳ್ಳಿಯಲ್ಲಿ ದೊರೆತ ಕ್ರಿ.ಶ.೧೩೪೮ರ ೫೦ನೇ ಶಾಸನದಲ್ಲಿ ಈ ಹೆಸರು ಬಂದಿದೆ; Kodigehalli is a suburb of Bangalore; it is said that when Kempegowda built his new capital town in about 1537, he called it Benagaluru, as his mother and wife belonged to the hamlet of Hale(old) Benagaluru; it was a hamlet and it was gifted from the king to a resident(the earl) of that area;
- ಕ್ರಿ.ಶ.೧೩೪೮ರ ಹೊತ್ತಿಗೆ ಈ ಗ್ರಾಮ ಇದ್ದಂತೆ ಕಾಣುತ್ತದೆ;
- ಈ ಗ್ರಾಮ ಯಲಹಂಕ ನಾಡಿಗೆ ಸೇರಿತ್ತು;
- ಕೆಲವರ ಪ್ರಕಾರ ಈ ಪ್ರದೇಶವೇ ಹಳೇ ಬೆಂಗಳೂರು ಆಗಿತ್ತಂತೆ;
- ಕೆಂಪೇಗೌಡನ ತಾಯಿಯ ತವರು ಮನೆಯೆಂದು ಜನಪ್ರಿಯವಾಗಿತ್ತಂತೆ;

- ಕೊಡಿ(ಡು)ಗೆ+ಹಳ್ಳಿ>ಕೊಡಿಗೆಹಳ್ಳಿ; ಕೊಡುಗೆ ಕೊಟ್ಟಹಳ್ಳಿ ಎಂದು ಇದರ ಅರ್ಥ;
- ಸ್ಥಳೀಯರ ಪ್ರಕಾರ, ಅರಸನೊಬ್ಬ ಈ ಪ್ರದೇಶವನ್ನು ನಾಡಪ್ರಭುಗಳಿಗೆ ಕೊಡುಗೆಯಾಗಿ ನೀಡಿದ್ದರಿಂದ ಈ ಗ್ರಾಮಕ್ಕೆ ಈ ಹೆಸರು.

(E.C-IX; ಬಿ.ಎಲ್.ರೈಸ್; ಬೆಂ.ಜಿ.)

ಕೊಡಿದನಿ koḍidani :

- ಬೇಟೆಯ ಪ್ರಾರಂಭದಲ್ಲಿ ಮಾಡುವ ಮೊದಲ ಗದ್ದಲ(ತು.ನಿ); The music which is used by the hunters to lure or disturb the wild animals;
- ಸಾಮಾನ್ಯವಾಗಿ ಬೇಟೆಗೆ ಹೋದಾಗ ಪ್ರಾಣಿಗಳ ಸಂಚಾರವಿರುವ ಸ್ಥಳವನ್ನು ಸೂಕ್ಷ್ಮವಾಗಿ ಗಮನಿಸಿ, ಅವು ಪೊದೆಗಳಲ್ಲಿ ಅಡಗಿಕೊಂಡಿದ್ದರೆ ಹೊರಗೆ ಬರಲಿ ಎಂಬ ಉದ್ದೇಶದಿಂದ ಎತ್ತರದ ದನಿಯಲ್ಲಿ ಮಾಡುವ ಗದ್ದಲ; ಈ ಗದ್ದಲದಿಂದ ಪ್ರಾಣಿಗಳು ತಾವು ಅಡಗಿ ಕೊಂಡಿರುವ ನೆಲೆಯಿಂದ ಭಯಪಟ್ಟು ಹೊರಗೆ ಬಂದು ಓಡ ತೊಡಗಿದಾಗ ಅಟ್ಟಿಸಿಕೊಂಡು ಹೋಗಿ ಬೇಟೆಯಾಡಲು ಅನುಕೂಲವಾಗುತ್ತದೆ.

ಕೊಡಿನಮಾಸೆ/ಕೊಡಿಯಮಾಸ್ಯೆ koḍinamāse/ koḍiyamāsye :

- ಭೀಮನ ಅಮಾವಾಸ್ಯೆ(ಕ.ಜಾ.ಕೋ); Kodinamase is known as Bheemana Amavasye; Bheemana Amavasya(a new moon day) is a festival celebrated in South India; it is celebrated on the new moonday(amavasya) of the Ashadha (Ashadha is a month of Hindu calendar that corresponds to June/July) month of the Hindu calendar; married women are supposed to gift and serve their husbands on this auspicious day and henceforth; they would pray for their husband's long life, success and happiness; unmarried would seek a good virtuous husband;
- ಇದನ್ನು ಗೊಂಡರು ಹಬ್ಬವಾಗಿ ಆಚರಿಸುತ್ತಾರೆ;
- ಭೀಮನ ಅಮಾವಾಸ್ಯೆಗೆ 'ಕೊಡಿಯಮಾಸ್ಯೆ' ಎಂಬ ಅಡ್ಡ ಹೆಸರೂ ಕೂಡ ಇದೆ(ಕ.ಜಾ.ಕೋ);
- ಆಷಾಢ ಮಾಸದ ಅಂತ್ಯದಲ್ಲಿ ಬರುವ ಅಮಾವಾಸ್ಯೆ ಇದಾಗಿದೆ; ಇದು ಅತ್ಯಂತ ಶ್ರೇಷ್ಠ ದಿನವೆಂದು ಹೇಳುತ್ತಾರೆ; ಈ ಅಮಾವಾಸ್ಯೆಯಲ್ಲಿ ಹೆಣ್ಣು ತನ್ನ ಗಂಡನಿಗೆ ಪೂಜೆ ಸಲ್ಲಿಸುವ ಸಂಪ್ರದಾಯ ಬೆಳೆದು ಬಂದಿದೆ; ಭೀಮನು ದ್ರೌಪದಿಯನ್ನು ಅನೇಕ ಕಷ್ಟದ ಸಂದರ್ಭದಲ್ಲಿ ಕಾಪಾಡಿದ್ದರಿಂದ, ರಕ್ಷಿಸಿದ್ದರಿಂದ ಈ ಅಮಾವಾಸ್ಯೆಯಲ್ಲಿ ದ್ರೌಪದಿ ಭೀಮನ ಪಾದಪೂಜೆ ಮಾಡಿದಳೆಂದು ಪ್ರತೀತಿ ಇದೆ; ಅದಕ್ಕಾಗಿ ಬಲಭೀಮನಂತೆ ತನ್ನ ಗಂಡನೂ ಸದಾ ತನ್ನ ರಕ್ಷಕನಾಗಿರಲಿ ಎಂಬ ಆಶಯದಿಂದ ಗಂಡನ ಪಾದ ಪೂಜೆ ಮಾಡುವ ಪದ್ಧತಿ ಬೆಳೆದು ಬಂದಿರುವಂತೆ ತೋರುತ್ತದೆ; Mythologically, it relates the story of Bheema's act of rescue of Draupadi, his wife in many hardships; so, she seeks Bheema's blessings; the ritual is based on the story of a young girl who was married to dead prince; she accepted her faith and the day after marriage she performed the Bheema Amavasya Puje with mud lamps; impressed by her Shiva and Parvathi appeared before her and brought back the prince to life;
- ಕೊಡಾಮವಾಸ್ಯೆ; ಕೆಲವು ಕಡೆ ಕೊಡಾಮವಾಶ್ಯೆ ಎಂದು ಕರೆಯುತ್ತಾರೆ; ಈ ದಿನ ಹಿರಿಯರಿಗೆ ಎಡೆ ಸಲ್ಲಿಸುವ ಸಂಪ್ರದಾಯವಿದೆ; ಸ್ತ್ರೀಯರು ಉಪವಾಸವಿದ್ದು ಎಡೆಯ ಪದಾರ್ಥಗಳನ್ನು ತಯಾರಿಸುವರು; ಹಲಸಿನಹಣ್ಣಿನ ಕೊಟ್ಟೆ ಕಡುಬು, ವಡೆ, ಪಾಯಸ, ಗಾರಿಗೆ, ಸಪ್ಪೆ ಮೊಸರನ್ನ ಅಂದಿನ ವಿಶೇಷ; ಒಂಭತ್ತು/ಹನ್ನೊಂದು ಮಣೆಗಳನ್ನಿಟ್ಟು ಕಲಶಗಳನ್ನು ಇರಿಸಿ ಕುಡಿಬಾಳೆ ಎಲೆಗಳ ಮೇಲೆ ಭಕ್ಷ್ಯಭೋಜನವನ್ನು ಎಡೆ ಮಾಡಲಾಗುವುದು. Kadubu, Dough balls, idli, modaka and wheat balls are prepared and offer.

ಕೊಡಿ ಪರ್ಬ koḍi parba :

- ಕೊಡಿ(<ಕುಡಿ)+ಪರ್ಬ(<ಪರ್ವ)=ಕೊಡಿಪರ್ಬ;
- ದೀಪದ ಕುಡಿಯಿಂದ ನೆಳಗುವ ಹಬ್ಬ; Diwali or Deepavali is the Hindu festival of lights celebrated every year in autumn;

- ದೀಪಾವಳಿ; ದೀಪಾವಳಿ ಹಬ್ಬ; (ಪರ್ವ>ಪರ್ಬ> ಹಬ್ಬ);
- ಕೊಡಿ=ಕಾರ್ತಿಕಮಾಸ(ಕ.ನಿ); ಕಾರ್ತಿಕ ಮಾಸದಲ್ಲಿ ನಡೆಯುವ ಹಬ್ಬ; ದೀಪಾವಳಿ ಹಬ್ಬ(ಕೊಡಿಹಬ್ಬ).

ಕೊಡಿ ಪ್ರಸಾದ kodi prasāda :
- ಕೊಡಿ(ಧ್ವಜ) ಏರಿಸುವ ಮೊದಲು ಸೀಮೆಯ ಮುಖ್ಯ ದೇವಸ್ಥಾನದಿಂದ ತರುವ ಪ್ರಸಾದ(ದ.ಕ); Food or fruits distribute to the devotees; practice observes in some place before hoisting religious flag;
- ಕೆಲವು ಕಡೆ ಕಂಡುಬರುವ ಒಂದು ಆಚರಣೆ ಇದಾಗಿದೆ.

ಕೊಡಿಬಾಳೆ/ಕೊಡುಬಾಳೆ kodibāḷe/ kodubāḷe :
- ತುದಿ ಬಾಳೆಎಲೆ(ಕಾಸರಗೋಡು); Tip of banana leaf;
- ಕುಡಿಬಾಳೆ ಎಲೆ;
- ಕುಡಿ+ಬಾಳೆ+ಎಲೆ=ಕುಡಿಬಾಳೆಯೆಲೆ>ಕುಡಿಬಾಳೆಲೆ;
- ಕುಡಿ>ಕೊಡಿ; ಉಚ್ಚಾರಣೆಯಲ್ಲಿ ಆಗಿರುವ ಸ್ವರ ವ್ಯತ್ಯಯ;
- ಕುಡಿಬಾಳೆಲೆ>ಕೊಡಿಬಾಳೆಲೆ ಎಂದು ಉಚ್ಚರಿತವಾಗಿ, ಕ್ರಮೇಣ ಕೊನೆಯ 'ಎಲೆ' ಶಬ್ದ ಬಿಟ್ಟು ಹೋಗಿ 'ಕೊಡಿಬಾಳೆ' ಎಂದಾಗಿದೆ;
- ಕುಡಿಬಾಳೆಲೆ>ಕೊಡಿಬಾಳೆಲೆ>ಕೊಡಿಬಾಳೆ ಎಂದೇ ಉಚ್ಚಾರಣೆಯಲ್ಲಿ ಬಳಕೆಗೆ ನಿಂತಂತೆ ತೋರುತ್ತದೆ; ನಂತರ ಕೊಡಿ>ಕೊಡು ಎಂಬ ರೀತಿಯ ಉಚ್ಚಾರಣೆ ಪಡೆದು ಕೊಡಿಬಾಳೆ>ಕೊಡುಬಾಳೆ ಎಂಬ ರೂಪ ಪಡೆದುಕೊಂಡಿರಬಹುದು.

ಕೊಡಿಬಿಂಬ/ಕೊಡೆಬಿಂಬ kodibimba/ kodebimba :
- ಗದ್ದೆಗಳಲ್ಲಿ ಬೆಳೆಯುವ ಒಂದು ಬಗೆಯ ಕಳೆ (ಉ.ಕ.ಜಿ); A type of weed resembles mushroom;
- ಕೊಡೆಯಾಕಾರದಲ್ಲಿರುವ ಈ ಕಳೆ ಬಹು ಮೃದುತ್ವವನ್ನು ಪಡೆದಿರುತ್ತದೆ; ಒಂದು ರೀತಿಯ ಕಾಡು ಅಣಬೆ ಜಾತಿಗೆ ಸೇರಿದ ನಿರುಪಯುಕ್ತ ಕಳೆ ಸಸ್ಯ.

ಕೊಡಿಯಡಿ kodiyadi :
- ಉತ್ಸವ ನಡೆಯುವ ಅಂಗಣದಲ್ಲಿ ಭೂತದ ಆಯುಧ, ಆಭರಣಗಳನ್ನು ತಂದು ಪ್ರತಿಷ್ಠಾಪಿಸುವ ಪರಿಶುದ್ಧ ಜಾಗ; A sacred place for setting up holy weapons of Bhutha(Daiva/Kola);
- ಸಮಾರಂಭಗಳ ವೇದಿಕೆಯ ಮೇಲೆ ಹಾಕಿರುವ ಬಟ್ಟೆಯ ಛಾವಣಿ; Stage, canopy of cloth commonly used for outdoor parties, marriages, feasts etc;
- ಮಡಿವಾಳನು ಕಟ್ಟಿದ ಬಟ್ಟೆಯ ಅಡಿಭಾಗ; ಆಚರಣೆ ನಡೆಯುವ ಸ್ಥಳ; ಭೂತನರ್ತಕನು ಕುಣಿಯುವ ರಂಗಸ್ಥಳ(ತು.ನಿ).

ಕೊಡಿಯಾಲ kodiyāla :
- ಕುಡುಬಿ ಸಮುದಾಯದ ಒಂದು ಒಳಪಂಗಡ (ಕ.ಜಾ.ಕೋ); A sub-caste in Kudubi community a scheduled tribe in Karnataka Kodiyala cult speaks a dialect of Konkani language a family of Indo-Aryan languages;
- ಊರಿನ ಹೆಸರೂ ಉಂಟು(ಒಂದು ಸ್ಥಳನಾಮ);
- ಮಂಡ್ಯ ಜಿಲ್ಲೆ, ಮಂಡ್ಯ ತಾಲ್ಲೂಕಿನಲ್ಲಿರುವ ಕೊಡಿಯಾಲ ಕೈಮಗ್ಗದ ಸೀರೆ, ಬಟ್ಟೆಗಳಿಗೆ ಪ್ರಸಿದ್ಧಿಯಾಗಿದೆ; ಇಲ್ಲಿನ ಸೀರೆಗಳು 'ಕೊಡಿಯಾಲದ ಸೀರೆಗಳು' ಎಂದೇ ಖ್ಯಾತಿ ಪಡೆದಿವೆ; A village in Mandya district;
- ಕೊಡಿಯಾಲ ನಾಟಕದ 'ಸೀನರಿ'ಗಳಿಗೂ ಪ್ರಸಿದ್ಧವಾಗಿತ್ತು.

ಕೊಡಿಹಬ್ಬ kodihabba :
- ಕೆರೆತುಂಬಿ ಕೋಡಿ ಬೀಳುವಂತಾದಾಗ ನೂರ ಒಂದು ಎಡೆಯ ಮೂಲಕ ಮಾಡುವ ಪೂಜೆ; A rural/agrarian celebration; people celebrate `Kodihabba' during rainy season and perform pooja to brimming lake or reservoir/tank;
- 'ಕೋಡಿಹಬ್ಬ' ಎಂದಿರಬಹುದು; ಕೋಡಿಹಬ್ಬ ಉಚ್ಚಾರಣೆಯಲ್ಲಿ ಆದಿಯ 'ಓ'ಸ್ವರವು ಹ್ರಸ್ವಗೊಂಡು 'ಒ'ಆಗಿ 'ಕೊಡಿಹಬ್ಬ' ಎಂದಾಗಿರುವ ಸಾಧ್ಯತೆ ಇದೆ; ಕೋಡಿಹಬ್ಬ>ಕೊಡಿಹಬ್ಬ;

- ಕೆರೆ ಕೋಡಿ ಬಿದ್ದಾಗ ಕೆರೆಯಲ್ಲಿ ಸಂಗ್ರಹಗೊಂಡ ನೀರಿನ ಒತ್ತಡ ಹಾಗು ಕೋಡಿಯ ಭಾಗದಲ್ಲಿ ರಭಸವಾಗಿ ಹರಿಯುವ ನೀರಿನಿಂದಾಗಿ 'ಕೋಡಿ'ಯ ಒಡ್ಡು ಒಡೆಯದಿರಲೆಂದೂ, ಒಂದು ವೇಳೆ ಒಡೆಯುವ ಸ್ಥಿತಿ ಉಂಟಾಗುವಂತಿದ್ದರೆ ಹಬ್ಬದ ನೆಪದಲ್ಲಿ ಸೇರಿದ ಜನಸ್ತೋಮ ಕಲ್ಲು, ಮಣ್ಣು ತಂದು ಸಕಾಲದಲ್ಲಿ ಭದ್ರಪಡಿಸಲು ಸಹಾಯವಾಗುತ್ತದೆಂದೂ 'ಕೋಡಿಹಬ್ಬ' ಆಚರಣೆಗೆ ಬಂದಿರುವಂತಿದೆ; ಕೆರೆಯಲ್ಲಿ ನೀರು ಸಂಗ್ರಹವಿದ್ದರೆ ಅದರ ಆಸರೆಯ ಗದ್ದೆಗಳಲ್ಲಿ ಬೆಳೆ ತೆಗೆಯಲು ಅನುಕೂಲವಾಗುತ್ತಿತ್ತು ಅಲ್ಲದೆ ಅಂತರ್ಜಲ ಹೆಚ್ಚಿ ಊರಿನ ಬಾವಿಗಳಲ್ಲಿ ನೀರು ಸದಾ ದೊರೆಯಲು ಅನುಕೂಲವಾಗುತ್ತಿತ್ತು;
- ಕೆಲವು ಕಡೆ ಕೆರೆ ತುಂಬಿ ಕೋಡಿ ಬೀಳುವಾಗ ಕುರಿ, ಮೇಕೆಗಳ ಬಲಿ ಅರ್ಪಿಸುವ ಪದ್ಧತಿಯೂ ಉಂಟು.

ಕೊಡಿಹಾಕು koḍihāku :

- ಮಾರಿಹಬ್ಬಕ್ಕೆ ಸಿದ್ಧತೆ ಮಾಡುವುದು(ಕ.ಜಾ.ಕೋ); Preparations to celebrate `Marihabba';
- ಮಾರಿಗುಡಿ ಇಲ್ಲದ ಊರುಗಳಲ್ಲಿ ಹೆಣೆದ ತೆಂಗಿನ ಗರಿಗಳನ್ನು ಬಳಸಿ, ಪೂರ್ವದಿಕ್ಕಿಗೆ ಬಾಗಿಲು ಇರುವಂತೆ ಒಂದು ತಾತ್ಕಾಲಿಕ ಕೋಣೆಯೊಂದನ್ನು ನಿರ್ಮಿಸುವುದು; ಇದನ್ನು ಸೆಗಣಿಯಿಂದ ಸಾರಿಸಿ ಸ್ವಚ್ಛಗೊಳಿಸಿ, ಮಾರಿ ಹಬ್ಬಕ್ಕೆ ಅಗತ್ಯವಾದ ಸಕಲ ಪೂಜಾ ವಸ್ತುಗಳನ್ನು ಇಡುವುದು. A folk festival in the village to worship the local deity(goddess) of the village; it is being organised every year.

ಕೊಡು koḍu :

- ಕುಡು>ಕೊಡು; ಕನ್ನಡದ ಧಾತು ರೂಪ;
- ನೀಡು, ಸಲ್ಲಿಸು, ದಾನಮಾಡು, ಒಪ್ಪಿಸು; ಪ್ರ: 'ನೀವು ಕೊಡೋ ದಾನ ನನಗೆ ಬೇಡ'; Give, grant, permit, pay(a fine), beat, get marital relationships;
- ಮದುವೆ ಮಾಡು; ವಿವಾಹ ಸಂಬಂಧ ಬೆಳಸು;
- ಹೊರಸಿನ ನಾಲ್ಕು ಕಡೆ ಇರುವ ನಿಲುಗಡ್ಡಿಗಳು (ಯಾದ.ಜಿ);
- ದಯಪಾಲಿಸು, ಅನುಗ್ರಹಿಸು; ಫಲಿಸು, ಸಫಲವಾಗು;
- ಸಲ್ಲಿಸು, ಪಾವತಿ ಮಾಡು; ಅಪ್ಪಣೆಕೊಡು, ಅನುಮತಿಕೊಡು;
- (ಭಿಕ್ಷೆ, ಅನ್ನ, ಹಾಲು ಮೊದಲಾದವನ್ನು) ಹಾಕು, ಇಕ್ಕು;
- ಈ; ನೀಡು, ಹಡೆ ಪಡೆ;
- (ದಂಡ ಮೊದಲಾದುವನ್ನು) ತೆರು; ಕಟ್ಟು;
- ಮಾರು, ವಿಕ್ರಯಿಸು;
- (ಗಣಿತ) ಭಾಗಿಸು;
- (ಆಲಂ) ಏಟುಕೊಡು; ಪೆಟ್ಟು ಕೊಡು;
- ಹೊರಸೂಸು; ವ್ಯಕ್ತಪಡಿಸು; ಹೇಳು;
- ಕುಡು/ಕೊಡು ಧಾತು ಹಲವು ಶಬ್ದಗಳ ಜೊತೆಗೆ ಸೇರಿ ವಿಶಿಷ್ಟವಾದ ಧಾತುಗಳಾಗಿ, ವಿವಿಧವಾದ ಅರ್ಥಗಳಲ್ಲಿ ಬಳಕೆಯಾಗುತ್ತವೆ; ಉದಾ: ಅಳವಿಗೊಡು, ಒಕ್ಕೊಡು, ಓಲಗಂಗೊಡು, ಕಾಣಿಕೆಗೊಡು, ಕಾಳಗಗೊಡು, ಕಿವಿಗೊಡು, ಕೆಯ್ಗೊಡು, ಜತಿಗುಡು, ಧ್ವನಿಗೊಡು, ಬಡ್ಡಿಗುಡು, ಬೆಂಗುಡು, ಮೆಯ್ಗುಡು, ಸೂಱೆಗುಡು ಇತ್ಯಾದಿ; ಪ್ರ: *'ಕೊಡೋದು ಒನ್ದುಕಾಸು, ಕೋಣೆ ತುಮ್ಬುಹಾಸು'* (ಗಾ);
- —***ಕೊಡಾಕೆ*** : ಕೊಡಲು; ಕೊಡುವುದಕ್ಕೆ; To give;
- ಕೊಡುವುದಕ್ಕೆ>ಕೊಡೂಕೆ>ಕೊಡಾಕೆ=ಕೊಡಲು;
- 'ಕೊಡುವುದಕ್ಕೆ' ಎಂಬ ಪದ ಸಂಕ್ಷೇಪವಾಗಿ ಉಚ್ಚರಿತವಾಗುವಾಗ 'ಕೊಡೂಕೆ' ಎಂದಾಗಿ ನಂತರ 'ಕೊಡಾಕೆ' ಎಂಬ ರೂಪ ಪಡೆದಿದೆ;
- ಕೊಡಕ್ಕೆ; ನೀರಿನ ಬಿಂದಿಗೆಗೆ;
- ಕೊಡಕ್ಕೆ>ಕೊಡಾಕ್ಕೆ>ಕೊಡಾಕೆ; 'ಕೊಡಕ್ಕೆ' ಪದವು ಗ್ರಾಮೀಣರಲ್ಲಿ ಉಚ್ಚಾರಣೆಯಾಗುವಾಗ 'ಕೊಡಾಕ್ಕೆ' ಎಂದು ಮಧ್ಯದ 'ಡ'ಕಾರ ದೀರ್ಘವನ್ನು ಪಡೆದು ನಂತರ ಅಂತ್ಯದ 'ಕ್ಕೆ' ಒತ್ತಕ್ಷರವನ್ನು ಕಳೆದುಕೊಂಡು 'ಕೊಡಾಕೆ' ಎಂದಾಗಿದೆ; ಪ್ರ: *'ಕೊಡಾಕೆ ನೀರು ತುಂಬಿಸು'.*

ಕೊಡುಕೊಳ್ಳು koḍukoḷḷu :

- 'ಕುಡು' ಮತ್ತು 'ಕೊಳ್' ಎಂಬ ಧಾತುಗಳಿಂದ ನಿಷ್ಪನ್ನವಾಗಿದೆ;
- ಕೊಡು ಪಡೆ; ಸಹಾಯ ಮಾಡು; ವಿನಿಮಯ; ಪ್ರ: *'ಅವರಲ್ಲಿ ಕೊಡುಕೊಳ್ಳುವ ಮನಸ್ಸಿದೆ'*(ಬಾ.ಜಿ); Give and take, have business relations; lend and borrow;
- ಕೊಡುವುದು ಮತ್ತು ಕೊಳ್ಳುವುದು; ಕೊಟ್ಟು ಪಡೆದುಕೊಳ್ಳುವ ಮನೋಭಾವ;

- ವ್ಯವಹಾರಿಕ ಕ್ಷೇತ್ರದಲ್ಲಿ ಒಂದನ್ನು ಕೊಟ್ಟು ಮತ್ತೊಂದನ್ನು ಪಡೆಯುವ, ಪರಸ್ಪರ ವಿನಿಮಯ ಮಾಡಿಕೊಳ್ಳುವ ಪದ್ಧತಿ; ವ್ಯಕ್ತಿ ವ್ಯಕ್ತಿಗಳ ನಡುವೆ, ಕುಟುಂಬ ಕುಟುಂಬಗಳ ನಡುವೆ ಮತ್ತು ಗ್ರಾಮ, ರಾಜ್ಯ, ರಾಷ್ಟ್ರಗಳ ನಡುವೆಯೂ ಪರಸ್ಪರ ವ್ಯವಹಾರಿಕ ಸಂಬಂಧವಾಗಿ ಇಂತಹ ಪದ್ಧತಿ ಸಾಮಾನ್ಯವಾಗಿ ಇದ್ದೇ ಇರುತ್ತದೆ;
- ವಿವಾಹ ಸಂಬಂಧ ಬೆಳಸುವಲ್ಲಿ ತಮ್ಮ ಮನೆಯ ಹೆಣ್ಣನ್ನು ಇನ್ನೊಂದು ಮನೆಗೆ ಕೊಟ್ಟು, ಆ ಮನೆಯ ಹೆಣ್ಣನ್ನು ತಮ್ಮ ಮನೆಗೆ ತಂದುಕೊಳ್ಳುವುದು; ಕೊಟ್ಟು ತರುವ ವೈವಾಹಿಕ ಸಂಬಂಧ; (ನೋಡಿ: ಕೊಡುವಳಿ–ತರುವಳಿ). Marital affair, giving a girl/taking a boy in marriage in the same family(Mutual marriage relationship).

ಕೊಡುಗೆ koḍuge :

- ದಾನವಾಗಿ ಬಿಟ್ಟ ಭೂಮಿ; ಉಂಬಳಿ; ಉಂಬಳಿಯಾಗಿ ಪಡೆದ ಭೂಮಿ; ಕೊಡಂಗೆ+ ಕೆಯ್=ಕೊಡಂಗೆಗೆಯ್; ದಾನವಾಗಿ ಬಿಟ್ಟ ಹೊಲ; Lending, gift, present, contribution, subvention, donation of land;
- ಕೊಡಂಗೆಗೆಯ್ > ಕೊಡಂಗೆಯ್ > ಕೊಡಂಗೆ > ಕೊಡುಗೆ > ಕೊಡಗೆ > ಕೊಡಗಿ > ಕೊಡಿಗಿ;
- ಗ್ರಾಮದಲ್ಲಿನ ಗ್ರಾಮದೇವತೆಗಳ ದೇವಸ್ಥಾನದ ಅರ್ಚಕರ ಜೀವನೋಪಾಯಕ್ಕೆ ಗ್ರಾಮದ ವತಿಯಿಂದ ದೇವರ ಹೆಸರಿನಲ್ಲಿ ಭೂಮಿಯನ್ನು ಬಿಡುತ್ತಿದ್ದರು; ಅಂತೆಯೇ ಗ್ರಾಮದ ಸೇವೆ ಮಾಡುವ ತೋಟಿ/ಕುಳವಾಡಿಗೆ ಕೂಡ ಭೂಮಿಯನ್ನು ಉಂಬಳಿಯಾಗಿ ಬಿಡುತ್ತಿದ್ದರು; ಇಂತಹ ಭೂಮಿಯನ್ನು ಕೊಡುಗೆ ಭೂಮಿ/ಕೊಡುಗೆ ಜಮೀನು/ಕೊಡುಗೆ ಹೊಲ ಎಂದು ಕರೆಯುತ್ತಿದ್ದರು; In rural areas the priest of the local temples, carpenter one who prepares the car(chariot) for the deity used to get land as a contribution; but they cannot sell it;
- ಭೂಮಿಯನ್ನು ಉಂಬಳಿಯಾಗಿ, ದತ್ತಿಯಾಗಿ ನೀಡುವ ಪದ್ಧತಿ ಹಿಂದಿನಿಂದಲೂ ಬೆಳೆದು ಬಂದಿದೆ;
- ಅರ್ಚಕರು ಮತ್ತು ತೋಟಿ/ಕುಳವಾಡಿಗಳು ವಂಶಪಾರಂಪರ್ಯವಾಗಿ ತಮ್ಮ ವೃತ್ತಿಯನ್ನು ಮಾಡುತ್ತಾ ಕೊಡುಗೆ ಭೂಮಿಯನ್ನು ಸಹ ಅನುಭವಿಸಿಕೊಂಡು ಹೋಗಲು ಅವಕಾಶವಿರುತ್ತದೆ; ಇದು ಕೊಡುಗೆ ಇನಾಂಮ್ತಿ ಭೂಮಿಯಾಗಿರುವುದರಿಂದ ಬೇರೆಯವರಿಗೆ ಮಾರಾಟ ಮಾಡುವಂತಿಲ್ಲ;
- ದೇವಾಲಯಗಳಿಗೆ ರಥಗಳನ್ನು ಕೆತ್ತನೆ ಮಾಡಿ ಸಿದ್ಧಗೊಳಿಸುತ್ತಿದ್ದ ಬಡಗಿಗೆ ಆ ದೇವಾಲಯ ಇಲ್ಲವೆ ಗ್ರಾಮದಿಂದ ಭೂಮಿಯನ್ನು ಉಂಬಳಿಯಾಗಿ ಬಿಟ್ಟು ಕೊಡುತ್ತಿದ್ದುದು ಕಂಡುಬರುತ್ತದೆ; ಇದನ್ನು 'ಬಡಗಿ ಇನಾಂ' ಎಂದು ಕರೆಯುತ್ತಿದ್ದುದು ಉಂಟು;
- ದಾನವಾಗಿ ಕೊಟ್ಟ ಭೂಮಿ; ಉಂಬಳಿ; ಕೊಡುವಿಕೆ, ನೀಡುವಿಕೆ; ಕೊಟ್ಟ ವಸ್ತು, ಕಾಣಿಕೆ(ಸಂ.ಕ.ನಿ);
- ಕೊಡುಗೆ/ಕೊಡಿಗೆ(ಉಮ್ಮಟಿ)(ಕಿಟ್ಟೆಲ್);
- ಕೊಡುಗೆ; ಹಿಂದೆ ರಾಜರು, ಪಾಳೆಯಗಾರರು ತಮಗೆ ಮೆಚ್ಚಿಗೆ ಬಂದ ಪರಾಕ್ರಮಿಗಳು, ವಿದ್ವಾಂಸರು, ಸಂಗೀತಗಾರರು ಮುಂತಾದವರಿಗೆ ಬಹುಮಾನವಾಗಿ ಕೊಡುತ್ತಿದ್ದ ಗ್ರಾಮ, ಜಮೀನು ಮುಂತಾದವು; ಈ ಪದ 'ಕೊಡಗೆ' ಎಂಬ ರೂಪದಲ್ಲಿಯೂ ಪ್ರಯೋಗದಲ್ಲಿದೆ(ಇ.ಕ.ಸಾ.ನಿ); 'ಕೊಡಗೆ ಜಮೀನು' ಇತ್ಯಾದಿ;
- ಕೊಡುಗೆ>ಕೊಡಗೆ>ಕೊಡ್ಗೆ ಎಂಬ ರೂಪಗಳು ಆಡು ನುಡಿಯಲ್ಲಿವೆ;
- 'ಕೊಡುಗೆ'=ಗರ್ಭಿಣಿ ಹೆಂಗಸಿನ ಬಯಕೆ; ಆಕೆಯು ಬಯಸಿದುದನ್ನು ಕೊಡುವ ಸಂಪ್ರದಾಯ; ಅವಳಿಗೆ ಬೇಕಾದ ಊಟೋಪಚಾರಗಳಿಂದ ತೃಪ್ತಿ ಪಡಿಸುವ ಆಚರಣೆ;
- ***—ಕೊಡಿಗಿ ಇನಾಂ*** : ಕೆರೆಯ ಉಸ್ತುವಾರಿಗೆಂದು ಉಂಬಳಿಯಾಗಿ ಕೊಟ್ಟ ಭೂಮಿ(ಕ.ನಿ);
- ***—ಕೊಡಿಗೆ ಮಾನ್ಯ*** : ಕೊಡುಗೆ ಬಿಟ್ಟ ಜಮೀನಿಗೆ ಬಾಡಿಗೆ ಅಥವಾ ಕಂದಾಯ ಕಟ್ಟುವಂತಿರಲಿಲ್ಲ; ಇದಕ್ಕೆ 'ಕೊಡಿಗೆ ಮಾನ್ಯ' ಎಂದು ಕರೆಯುತ್ತಿದ್ದರು;
- ***—ಕೊಡಗಹಳ್ಳಿ*** : ಕೊಡುಗೆಹಳ್ಳಿ; ಕೊಡುಗೆಹಳ್ಳಿ> ಕೊಡಗಹಳ್ಳಿ>ಕೊಡ್ಗಹಳ್ಳಿ>ಕೊಡ್ಗಳ್ಳಿ ಎಂಬ ಊರುಗಳ ಹೆಸರು; ಸ್ಥಳನಾಮ;
- ಯಾರಿಗಾದರೂ ಕೊಡುಗೆಯಾಗಿ/ಇನಾಂತಿಯಾಗಿ ನೀಡಿದ ಒಂದು ಹಳ್ಳಿಯಾಗಿರಬಹುದು;

- ಕೊಡುಗೆಹಳ್ಳಿ/ಕೊಡಗೆಹಳ್ಳಿ ಗ್ರಾಮೀಣರ ಉಚ್ಚಾರಣೆಯಲ್ಲಿ ಕೊಡ್ಗೆಹಳ್ಳಿ/ಕೊಡ್ಗಳ್ಳಿ ಎಂದಾಗುತ್ತದೆ.

ಕೊಡುಗೈ koḍugai :

- ಕುಡು/ಕೊಡು ಧಾತುವಿನಿಂದ ನಿಷ್ಪನ್ನವಾಗಿದೆ; ಕುಡುವ/ಕೊಡುವ+ಕೈ(<ಕೆಯ್)=ಕುಡುಗೈ/ಕೊಡುಗೈ;
- ಉದಾರವಾಗಿ ದಾನ ಮಾಡುವ ಕೈ; ಧಾರಾಳವಾಗಿ ದಾನ ನೀಡುವವರು; ಪ್ರ: 'ಆತನದು ಕೊಡುಗೈ'; 'ತನ್ನ ಜೀವನದುದ್ದಕ್ಕೂ ಕೊಡುಗೈ ದೊರೆಯಾಗಿ ಬಾಳಿದ'; Liberal hand, generosity, generous person, munificent man;
- ***—ಕೊಡುಗೈಒಕ್ಕಲು*** : ದಾನಿಗಳ ಮನೆತನ/ಮನೆತನದವರು;
- ವಂಶಪಾರಂಪರ್ಯವಾಗಿ ದಾನ ನೀಡುತ್ತಾ ಬಂದ ಕುಟುಂಬ/ವಂಶಸ್ಥರು;
- ***—ಕೊಡುಗೈತನ*** : ಧಾರಾಳತನ;
- ಕುಡುವ/ಕೊಡುವ+ಕೈ(ಕೆಯ್)+ತನ=ಕೊಡುಗೈತನ; *ಪ್ರ: 'ಕಲಿತನದಲ್ಲಾಗಲಿ ಕೊಡುಗೈತನದಲ್ಲಾಗಲಿ ಕರ್ಣನಲ್ಲದೆ ಮತ್ತಾರು'*(ಕ.ನಿ);
- ***—ಕೊಡುಗೈವೀರ*** : ದಾನಶೂರ; ಕುಡುವ/ಕೊಡುವ+ಕೈ(<ಕೆಯ್)+ವೀರ=ಕೊಡುಗೈವೀರ; *ಪ್ರ: 'ದೀನದಲಿತರಿಗೆ ಕೊಡುಗೈವೀರನಾಗಿ ವಿಶ್ವಾನುಕಂಪ ತೋರಿರುವ'*(ಕ.ನಿ).

ಕೊಡುಪರ್ತಿ koḍuparti :

- ಬಿಳಿ ಬೂರುಗದ ಮರ; A herbal plant;
- ಇದರ ಕಾಯಿ ಉಳಕಡ್ಡಿ, ಬಿಳಿಚಿಪ್‌ಗೆ(ಚರ್ಮರೋಗ) ಔಷಧಿಯಾಗಿ ಬಳಕೆಯಾಗುತ್ತದೆ.

ಕೊಡುಬಲ್ಲಿ koḍuballi :

- ಕೊಡು ಬನ್ನಿ; ಬನ್ನಿ>ಬಲ್ಲಿ; Handover, give away;
- ಏನನ್ನಾದರೂ ತೆಗೆದುಕೊಳ್ಳಲು ಬಂದಾಗ ಬಳಸುವ ಮಾತಾಗಿದೆ; ಹಾಸನ ಪ್ರದೇಶದಲ್ಲಿ ಕಂಡು ಬರುವ ಒಂದು ಉಪಭಾಷಾ ರೂಪ ಇದಾಗಿದೆ(ಹಾಸ.ಜಿ/ಮಂಡ್ಯ.ಜಿ);
- ಕೊಡಬನ್ನಿ>ಕೊಡುಬನ್ನಿ>ಕೊಡುಬಲ್ಲಿ, ಪ್ರಾದೇಶಿಕ ಭಿನ್ನತೆ ಕಂಡು ಬರುತ್ತದೆ;
- 'ಬಲ್ಲಿ'ಯಲ್ಲಿ 'ಲ್ಲಿ' 'ಬನ್ನಿ'ಯಲ್ಲಿನ 'ನ್ನಿ' ಆಗುವುದಕ್ಕೆ ಅವೆರಡರಲ್ಲಿನ 'ಅನುನಾಸಿಕ' ಧ್ವನಿಸಾಮ್ಯ ಕಾರಣವಿರಬಹುದು.

ಕೊಡುಮ/ಕೊಡಮ/ಕೊಡ್ಮ koḍuma/koḍama/koḍma :

- ಕುಡು/ಕೊಡು ಧಾತುವಿನಿಂದ ನಿಷ್ಪನ್ನವಾಗಿದೆ;
- ೧.ಕೊಡೋಣ; ೨.ಬದುಕು(ತು.ಜಿ)(ಕ.ಜಾ.ನಿ);
- ಕೊಡೋಣ, ಕೊಟ್ಟರಾಯಿತು ಎಂಬ ಅರ್ಥದ ಪ್ರಯೋಗ; Give, render, give away;
- 'ಕೊಡೋಣ' ಎಂಬ ಗ್ರಾಂಥಿಕ ರೂಪ ಗ್ರಾಮ್ಯ ರೂಪವಾಗಿ ಬಳಕೆಯಾಗುವಾಗ 'ಕೊಡಾನ, ಕೊಡುವ, ಕೊಡುಮ, ಕೊಡಮ, ಕೊಡ್ಮ' ಎಂದಾಗಿ ಪ್ರಯೋಗವಾನುತ್ತದೆ; (ಕೊಡೋಣ>ಕೊಡಾನ>ಕೊಡುವ>ಕೊಡುಮ>ಕೊಡಮ>ಕೊಡ್ಮ);
- ಮಂಡ್ಯ ಪ್ರದೇಶದಲ್ಲಿ 'ಕೊಡ್ಮ' ರೂಪ ಪ್ರಯೋಗದಲ್ಲಿದೆ; ಇದನ್ನು ಪ್ರಾದೇಶಿಕ ಭಿನ್ನರೂಪ/ವಿಶಿಷ್ಟ ರೂಪ ಎನ್ನಬಹುದು; ಇದೇ ರೀತಿ ಹೋಗ್ಮ, ನೋಡ್ಮ, ಬಿಡ್ಮ, ತಿನ್ಮ(ಹೋಗೋಣ, ನೋಡೋಣ, ಬಿಡೋಣ, ಇನ್ನೋಣ ಎಂಬ ಅರ್ಥದಲ್ಲಿ) ಪ್ರಯೋಗಗಳು ಕಂಡು ಬರುತ್ತವೆ;
- 'ಕೊಡ್ಮ' ಎಂಬ ಪ್ರಯೋಗದಲ್ಲಿ ಕೊಟ್ಟರೆ ಆಯಿತು, ಕೊಡದಿದ್ದರೂ ಆಯಿತು ಎಂಬ ಉದಾಸೀನತೆಯ ಜೊತೆಗೆ ವ್ಯಂಗ್ಯದ ಧಾಟಿಯೂ ವ್ಯಕ್ತವಾಗುವುದುಂಟು; *ಪ್ರ: 'ಓಹೋ! ಈಗಲೇ ಬೇಕಂತೊ! ಆಯ್ತು ಕೊಡ್ಮ'.*

ಕೊಡುಮಾಯಿ koḍumāyi :

- ಬೇಸಿಗೆಯಲ್ಲಿ ಗುಂಪು ಗುಂಪಾಗಿ ಕೆರೆಗೆ ಬಂದು ಸಂತಾನವೃದ್ಧಿ ಮಾಡಿಕೊಳ್ಳುವ ಒಂದು ಜಾತಿಯ ಮೀನು(ತು.ನಿ); A kind of fish belongs to Kodutala family;
- ಕೊಡುವಾಯ್; ಕುಡುತಲ ಜಾತಿಯ ಮೀನಿಗಿಂತ ದೊಡ್ಡದಾದ ಮೀನು.

ಕೊಡುಮ್ಗಿ koḍumgi :

- ಕೊಣಮ್ಗಿ; ರೊಟ್ಟಿ ತಗಾರಿ;
- ರೊಟ್ಟಿ ಮಾಡುವಾಗ ಹಿಟ್ಟನ್ನು ನಾದಲು, ಬಡಿಯಲು ಉಪಯೋಗಿಸುವ ಅಗಲವಾದ ಮರದ ಹರಿವಾಣ; Flat piece of wood to pound dough(to prepare roti);

- ಕೊಣಬಿಗೆ, ಕೊಣಮಿಗೆ, ಕೊಣವಿಗೆ; ಕಣಕವನ್ನು ನಾದುವುದಕ್ಕಾಗಿ ಬಳಸುವ ಅಗಲವಾದ ಮರದ ಮರಿಗೆ; ಹರಿವಾಣ(ಕ.ನಿ).

ಕೊಡುವಳಿ koḍuvaḷi :

- ಒಂದು ಮನೆತನದ ಹೆಣ್ಣನ್ನು ಇನ್ನೊಂದು ಮನೆತನದ ವರನಿಗೆ ಕೊಟ್ಟು ಮದುವೆ ಮಾಡಿಕೊಡುವುದು(ವೈವಾಹಿಕ ಸಂಬಂಧ ಬೆಳೆಸುವುದು); Giving a girl/boy in marriage to a member of another family;
- ಇಂತಹ ವ್ಯವಸ್ಥೆ ಏರ್ಪಡಲು ಸಾಧ್ಯವಿರುವುದನ್ನು 'ಸಾಲಾವಳಿ' ಎಂದು ಹೇಳುವುದುಂಟು; ಸಾಲಾವಳಿ ಇಲ್ಲದ ಕುಟುಂಬಗಳ ನಡುವೆ ಹೆಣ್ಣು ಕೊಟ್ಟು ವೈವಾಹಿಕ ಸಂಬಂಧ ಮಾಡುವುದಿಲ್ಲ;
- ***—ಕೊಡುವಳಿ ತರುವಳಿ*** : ಎರಡು ಕುಟುಂಬಗಳ ನಡುವೆ ಸಾಲಾವಳಿ ಇದ್ದು ಪರಸ್ಪರ ಹೆಣ್ಣು ಕೊಡುವ ಮತ್ತು ಹೆಣ್ಣು ತರುವ ಮೂಲಕ ವೈವಾಹಿಕ ಸಂಬಂಧ ಬೆಳೆಸುವುದು;
- ಹೆಣ್ಣನ್ನು ಕೊಟ್ಟು ತರುವ ವೈವಾಹಿಕ ಸಂಬಂಧ(ಹಾಸ.ಜಿ);
- ವಧುವಿಗೆ ವರನನ್ನು, ವರನಿಗೆ ವಧುವನ್ನು ಹುಡುಕುವುದು ಶ್ರಮದಾಯಕ ಕಾರ್ಯ; ಅದಕ್ಕಾಗಿ ಗ್ರಾಮೀಣರು 'ಹಲವು ಜೊತೆ ಚಪ್ಪಲಿಗಳೇ ಸವೆದು ಹೋಗುತ್ತಿದ್ದವು' ಎಂದು ಹೇಳುವುದುಂಟು; ಒಂದು ಕುಟುಂಬದಲ್ಲಿ ಮದುವೆಗೆ ಬಂದಿರುವ ಅಣ್ಣ–ತಂಗಿಯರಿದ್ದು, ಸಾಲಾವಳಿ ಇರುವ ಇನ್ನೊಂದು ಕುಟುಂಬದಲ್ಲಿ ಕೂಡ ಮದುವೆಗೆ ಬಂದಿರುವ ಅಣ್ಣತಂಗಿಯರಿದ್ದರೆ ಆಗ ಆ ಕುಟುಂಬದ ಅಣ್ಣನಿಗೆ ಈ ಕುಟುಂಬದ ತಂಗಿಯನ್ನೂ, ಈ ಕುಟುಂಬದ ಅಣ್ಣನಿಗೆ ಆ ಕುಟುಂಬದ ತಂಗಿಯನ್ನು ಪರಸ್ಪರ ಕೊಡುವ ಮತ್ತು ತರುವ ಪದ್ಧತಿಯಲ್ಲಿ ವಿವಾಹ ಸಂಬಂಧವನ್ನು ಏರ್ಪಡಿಸುತ್ತಿದ್ದರು; ಈ ಪದ್ಧತಿಯನ್ನು 'ಕೊಡುವಳಿ ತರುವಳಿ' ಎಂದು ಕರೆಯುವುದು ವಾಡಿಕೆ; ಇದರಿಂದ ಎರಡೂ ಕುಟುಂಬಗಳು ಸಂಬಂಧದ ನೆಲೆಯಲ್ಲಿ ತುಂಬಾ ಹತ್ತಿರವಾಗುತ್ತವೆ; ವಧು ಹುಡುಕುವ ಶ್ರಮ ತಪ್ಪುತ್ತದೆ; ಜೊತೆಗೆ ಒಂದೇ ಖರ್ಚಿನಲ್ಲಿ ಪ್ರತಿ ಕುಟುಂಬದ ಇಬ್ಬರ ಮದುವೆ ನಡೆದು ಎರಡೂ ಕುಟುಂಬಗಳಿಗೂ ಆರ್ಥಿಕ ಹೊರೆ ಕಡಿಮೆಯಾಗುತ್ತದೆ; ಹಿಂದಿನಿಂದಲೂ ಗ್ರಾಮೀಣರು , ಇಂತಹ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿರುವುದು ಕಂಡು ಬರುತ್ತದೆ;
- ಕೊಡುವುದು, ಕೊಳ್ಳುವುದು(ತರುವುದು) ಎಂಬ ಅರ್ಥದಲ್ಲಿ 'ಕೊಡು–ಕೊಳ್ಳು' ಎಂದು ಹೇಳುವುದೂ ಉಂಟು.

ಕೊಡುವಳಿಕೆ koḍuvaḷike :

- ಕೊಟ್ಟು ಕಳುಹಿಸುವಂಥ ವಸ್ತು; ಕೊಡಬೇಕಾದದ್ದು (ಕ.ಜಾ.ಕೋ); *ಪ್ರ: 'ನೀನು ಕೊಡುವಳಿಕೆಯನ್ನು ಕೂಡಲೆ ಕೊಟ್ಟು ಕಳುಹಿಸು*'; The thing ought to give away;
- ಕೊಡುವಳಿ+ಇಕೆ/ಕೆ=ಕೊಡುವಳಿಕೆ.

ಕೊಡುವಾರೆ koḍuvāre :

- ಕೊಡಲು; ಕೊಡಬೇಕೆಂದರೆ(ಧಾ.ಜಿ); Ready to give;
- ಕೊಡುವುದಾದರೆ>ಕೊಡುವಾದರೆ>ಕೊಡುವಾರೆ(?) ಎಂಬ ರೀತಿಯಲ್ಲಿ ಸಿದ್ಧಗೊಂಡಿರಬಹುದೆಂದು ತೋರುತ್ತದೆ.

ಕೊಡೆ^೧ koḍe[1] :

- ಮೊನೆಚಾದ ಆಯುಧದಿಂದ ಚುಚ್ಚಿ ಗುಳಿಮಾಡು; ಕೊರೆ; ತೆಂಗಿನೊಳಗಣ ಕೊಬ್ಬರಿಯಂತೆ ಹೆರೆದು ತೆಗೆ(ದ್ರಾ.ಭಾ.ಜ್ಞಾ.ಪ.ಕೋ); Umbrella, kings of ancient time used (white)umbrella as a symbol of status;
- ಮಳೆ, ಬಿಸಿಲುಗಳಿಗೆ ಮರೆಯಾಗುವಂತೆ ಹಿಡಿದುಕೊಳ್ಳುವ ಒಂದು ಸಾಧನ, ಸತ್ತಿಗೆ, ಛತ್ರಿ, ಆಪಪತ್ರ(ಕ.ನಿ);
- ಬಿಸಿಲು ಮತ್ತು ಮಳೆಯಿಂದ ರಕ್ಷಣೆ ಪಡೆಯಲು ತಲೆಯ ಮೇಲೆ ಹಿಡಿದುಕೊಳ್ಳುವ ಸಾಧನ, ಛತ್ರಿ(ಚಿಕ್ಕ.ಜಿ); *ಪ್ರ: 'ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧರಾತ್ರೀಲಿ ಕೊಡೆ ಹಿಡಿಸಿದ್ನಂತೆ*'(ಗಾ);
- ಛತ್ರಿ, ಚತ್ರಿ; *ಪ್ರ: 'ಮಳೆ ಬಂದಂಡುಂಡ್ ಕೊಡೆ ಎಡ್ತ್'* (ಕೊಡ.ಜಿ);
- ಕೊಡುವಿಕೆ, ಕೊಡುಗೆ, ಕೊಳುಕೊಡೆ(ಕ.ನಿ);
- ಕುಡಲು/ಕೊಡಲು, ಕೊಡುತ್ತಿರಲು;

- (ಕುಡು/ಕೊಡು ಧಾತುವಿಗೆ ಸ್ತ್ರೀವಾಚಕ ಪ್ರತ್ಯಯವಾಗಿ 'ಎ' ಬಳಕೆ; ಕೊಡು+ಎ=ಕೊಡೆ) ಸಂಬೋಧನಾ ನುಡಿ;
- ಕೊಡೆ=ಕೊಡೆನು, ಕೊಡುವುದಿಲ್ಲ ಎಂಬರ್ಥದಲ್ಲಿ ಪ್ರತಿಷೇಧಾರ್ಥದ ಪ್ರಯೋಗ; ಕುಡು/ಕೊಡು ಎಂಬ ಧಾತುವಿಗೆ ಉತ್ತಮ ಪುರುಷದಲ್ಲಿ ನಿಷೇಧಾರ್ಥಕ ಪ್ರತ್ಯಯ ಎಂ, ಎನ್, ಎನು ಸೇರಿ ಕುಡೆಂ/ಕೊಡೆಂ, ಕುಡೆನ್/ಕೊಡೆನ್, ಕುಡೆನು/ಕೊಡೆನು ಎಂಬ ರೂಪಗಳು ಉಂಟಾಗುತ್ತವೆ; ನಂತರ ಅಂತ್ಯದ ಂ, ನ್, ನು ಉಚ್ಚಾರಣೆಯಲ್ಲಿ ಸಹಜವಾಗಿ ಬಿಟ್ಟುಹೋಗಿ ನಿಷೇಧಾರ್ಥದಲ್ಲಿ ಕುಡೆ/ಕೊಡೆ ಎಂಬ ರೂಪ ಪ್ರಯೋಗವಾಗುತ್ತದೆ; *ಪ್ರ: 'ಏನಾದರಾಗಲಿ ನಾನು, ಏನನ್ನೂ ಕೊಡೆ';*
- ತ: ಕುಡೈ; ಮ:ಕುಡ; ತು: ಕೊಡೆ, ಕೊಡ, ಕೊಡ್ಯೈ; ತೆ: ಗೊಡಗು(ದ್ರಾ.ಭಾ.ಜ್ಞಾ.ಪ.ಕೋ);
- ***—ಕೊಡೆ ಕೋಲಿನ ಬಳೆ*** : ಕಬ್ಬಿಣದ ಬಳೆ; ಗ್ರಾಮೋಕ್ಕಲರು ಗಂಡು ಮಗುವಿಗೆ ತೊಡಿಸುವ ಬಳೆ;
- ಹಾಲಕ್ಕಿ ಒಕ್ಕಲಿಗರಲ್ಲಿ ಒಂದು ಮಗು ಹುಟ್ಟಿದ ನಂತರ ತಾಯಿ ಮುಟ್ಟಾಗದೆ ಗರ್ಭಧರಿಸಿ ಇನ್ನೊಂದು ಮಗುವಿಗೆ ಜನ್ಮ ಕೊಟ್ಟರೆ ಆ ಮಗುವನ್ನು ಮೂಲದಲ್ಲಿ ಹುಟ್ಟಿದ್ದೆಂದು, ಅಶಕ್ತವಾಗಿರುತ್ತದೆಂದು, ಗುಡುಗು ಸಿಡಿಲುಗಳಿಗೆ ಹೆದರುತ್ತದೆಂದು ಕೊಡೆಯ ಸರಿಗೆಯನ್ನು ಸೂಸಗಾರನಿಗೆ ಕೊಟ್ಟು ಕಬ್ಬಿಣದ ಬಳೆ ಮಾಡಿಸಿ ತೊಡಿಸುತ್ತಾರೆ;
- ***—ಕೊಡೆಯ ಭೋಗ*** : ದೇವಸ್ಥಾನದಲ್ಲಿ ನಡೆಯುವ ಒಂದು ಸೇವೆ; ಛತ್ರಿ ಸೇವೆ(?)(ಕ.ನಿ).

ಕೊಡೆ೨ koḍe² :

- ಎಲ್ಲರೂ ಬಳಕೆ ಮಾಡುವ ಒಂದು ಉಪಯುಕ್ತ ವಸ್ತು; ಮಳೆ ಅಥವಾ ಬಿಸಿಲಿಗೆ ರಕ್ಷಣೆಗಾಗಿ ಹಿಡಿದುಕೊಳ್ಳುವ ಕಮಾನಿನ ಅಥವಾ ಗೋಪುರದ ಆಕಾರವಿರುವ ಸಾಧನ; ನೀರು ಇಳಿಯದ ಕಪ್ಪು ಬಟ್ಟೆಯ ಹೊದಿಕೆಯಿಂದ ಮಾಡಿರುತ್ತದೆ; ಇತ್ತೀಚೆಗೆ ಹೆಂಗಸರ ಕೊಡೆಗಳು ಬಣ್ಣಬಣ್ಣವಾಗಿರುತ್ತವೆ;
- ಕನ್ನಡದ 'ಕೊಡೆ' ಪದಕ್ಕೆ ದ್ರಾವಿಡ ಭಾಷೆಯ ಸೋದರ ಭಾಷೆಗಳಿಂದ ಸಂವಾದಿ ಪದಗಳಿವೆ: ತಮಿಳು: ಕುಡೈ; ಮಲೆಯಾಳಂ: ಕುಡೆ; ತುಳು: ಕೊಡೆ; ತೆಲುಗು: *ಗೊಡಗು/ಗೊಡುವು*; ಉಲ್ಲೇಖಿತ 'ಕುಡೆ' 'ಕೊಡೆ' ರೂಪದ ಮೂಲರೂಪವಾಗಿರಬಹುದು; ಕುಡೆ>ಕೊಡೆ ಆಗಿರುವುದು ಸ್ಪಷ್ಟ; ಇಲ್ಲಿ ಉ>ಒ ಆಗಿದೆ; 'Vowel Mutation' ಇದಕ್ಕೆ ಕಾರಣ; ತೆಲುಗಿನ 'ಗೊಡಗು' ರೂಪ ಕನ್ನಡದ ಗೊರಗು/ಗೊರಬು ರೂಪಗಳನ್ನು ಹೋಲುತ್ತದೆ, ಇಲ್ಲಿ ಮಳೆಯಿಂದ ರಕ್ಷಿಸಲು ಎಲೆ/ಹುಲ್ಲಿನಿಂದ ಇದನ್ನು ಮಾಡಲಾಗಿರುತ್ತದೆ; ಇಲ್ಲವೆ ಕನ್ನಡ ಪದದ ಆದಿಯಲ್ಲಿರುವ 'ಕ' ತೆಲುಗಿನಲ್ಲಿ ಸಾಂದರ್ಭಿಕ ಕಾರಣದಿಂದ 'ಗ' ಆಗಿರಬಹುದು;
- 'ಕೊಡೆ' ಪದದಷ್ಟೇ ಕನ್ನಡದಲ್ಲಿ 'ಛತ್ರಿ' ಪದವಿದೆ; ಶಿಷ್ಟರು ಮೊದಲು ಇದನ್ನು ಬಳಸುತ್ತಿದ್ದು, ಆಮೇಲೆ ಹಳ್ಳಿಗೂ ಹಬ್ಬಿರಬಹುದು; 'ಛತ್ರಿ' ಕನ್ನಡ ಪದವಲ್ಲ, ಸಂಸ್ಕೃತದ 'ಛತ್ರಾ/ಛತ್ರ' ಪದದಿಂದ ಬಂದುದು; ದ್ರಾವಿಡ ಭಾಷೆಯ ಪದಗಳು ಮಹಾಪ್ರಾಣದಿಂದ ಆರಂಭವಾಗುವುದಿಲ್ಲ; ಜೊತೆಗೆ ದ್ರಾವಿಡ ಭಾಷೆಗಳಲ್ಲಿ 'ಕೊಡೆ' ಸಮಾನವಾಗಿ ಕಾಣಸಿಗುತ್ತದೆ; ಈ ಪದವನ್ನು ಬಿಟ್ಟರೆ ದ್ರಾವಿಡ ಭಾಷೆಗಳಲ್ಲಿ ಬೇರೆ ಪದಗಳಿಲ್ಲ; ಛತ್ರಿಯನ್ನು ಬಿಟ್ಟರೆ ಸಂಸ್ಕೃತದಲ್ಲಿ ಬೇರೆ ಪದಗಳಿಲ್ಲ; ಆದ್ದರಿಂದ 'ಕೊಡೆ' ದ್ರಾವಿಡ ಭಾಷೆಯದು, ಕನ್ನಡ ಭಾಷೆಯದು;
- ಈಗ 'ಛತ್ರಿ' ತನ್ನ ಮೂಲಾರ್ಥವನ್ನು ಕಳೆದುಕೊಂಡು ಹೀನಾರ್ಥ ಪಡೆದಿದೆ; 'ಛತ್ರಿಗಳು' ಎಂದರೆ ಕುತಂತ್ರಿಗಳು, ಕರಿದ ಬಿಳಿದು ಮಾಡುವಂಥವರು ಎಂಬೆಲ್ಲ ಅರ್ಥಗಳಿವೆ; ಚೇಲಗಳು;
- ಹಿಂದೆ ರಾಜಮಹಾರಾಜರು ತಮ್ಮ ಅಧಿಕಾರದ ಲಾಂಛನವಾಗಿ 'ಬೆಳ್ಗೊಡೆ'ಯನ್ನು ಬಳಸುತ್ತಿದ್ದರು; ಸಂಸ್ಕೃತದಲ್ಲಿ ಇದನ್ನು 'ಶ್ವೇತಛತ್ರಿ' ಎಂದು ಕರೆಯಲಾಗುತ್ತಿತ್ತು; ಬೆಳ್+ಕೊಡೆ>ಬೆಳ್ಗೊಡೆ (ಬೆಳ್=ಬಿಳಿದು);
- ಮದುವೆಯ ದಿಬ್ಬಣದಲ್ಲಿ ಗಂಡಿಗೆ 'ಕೊಡೆ' ಹಿಡಿದು ಧಾರೆಗೆ ಕರೆದುಕೊಂಡು ಬರುವ ಸಂಪ್ರದಾಯವಿದೆ;
- ಮೊಗವೀರರ ಮದುವೆಗೆ ಸಂಬಂಧಿಸಿದಂತೆ ಒಂದು ಆಚರಣೆ ಇದೆ; ಹುಡುಗಿಯ ತಲೆಮೇಲೆ ಕೊಡೆಹಿಡಿದು, ಅದರ ಮೇಲೆ ಅಭಿಷೇಕ ಮಾಡುವುದು (ತು.ನಿ. ಸಂ.೩);
- ಕೊಡೆಗೆ ಸುಪ್ರಸಿದ್ಧ ಅರ್ಥಬಿಟ್ಟು ಬೇರೆಯ ಅರ್ಥಗಳೂ ಇವೆ; ಕೊರೆ, ಚುಚ್ಚಿತೆಗೆ, ಹೆರೆ, ಉಜ್ಜಿತೆಗೆ

(ಪಾತ್ರೆಯನ್ನು) ಬಡವಾಗು/ಕೃಶವಾಗು; ನೋವು/ಚುಚ್ಚು; ಕೊಡು= 'ಕೊಳುಕೊಡೆ' (ವಿನಿಮಯ ಅರ್ಥದಲ್ಲಿ); ಕೊಡುವುದಿಲ್ಲ, 'ಕೊಡು' ಪದದ ನಿಷೇಧಾರ್ಥಕ ಕ್ರಿಯೆ. The word `Kode' is having more numbers of other meanings such as drilling, rubbing(the vessels), becoming weak, pain/prick/ pierce.

ಕೊಡೆಂಜಿ kod̤enji :

- ಕೊಡೆಂಜಿ/ಕೊಡಂಜೆ/ಕುಡೆಂಜಿ/ಕುಡಂಜಿ;
- ಬಾಯಂಗುಳ; ಕೆನ್ನೆಯ ಒಳಭಾಗದ ತೆರಪುಳ್ಳ ಜಾಗ; Thin layer of chin inside the mouth; innerside of the mouth;
- ಮಂಗನ ಕೆನ್ನೆ ಮತ್ತು ಗಂಟಲಿನ ನಡುವೆ ಇರುವ ತಾತ್ಕಾಲಿಕವಾಗಿ ತುತ್ತನಿಟ್ಟುಕೊಳ್ಳಲು ಉಪಯೋಗಿಸುವ ಚೀಲದಂತಹ ರಚನೆ(ತು.ನಿ).

ಕೊಡೆತ kod̤eta :

- ಕೆಂಬಟ್ಟೆ ಹೊಲೆಯರು ಕೊಡೆಗೆ ಬಿದಿರು ಕಡಿಯುವುದು; Cutting bamboo for the preparation of umbrella; Presenting bamboo sticks to Oracle by socially downtrodden community called `Kembatte Holeyaru';
- ದೈವೀ ಆವೇಶ ಬರುವವರು ಅಕ್ಕಿಯನ್ನು ತೆಗೆದುಕೊಂಡು ಅಂಗೈಗಳಿಂದ ಉಜ್ಜಿ, ಅದರಲ್ಲಿ ವಿಷಮ ಸಂಖ್ಯೆ ಕಾಳುಗಳು ಬಂದರೆ ಕೆಲಸ ಸುಗಮ ಎಂದು ಸೂಚಿಸುವರು;
- ನಂತರ ಮೂರು ಅಥವಾ ಐದು ಜನಸೇರಿ ಹದಿನೈದು ಇಲ್ಲವೆ ಹದಿನೆಂಟು ಅಡಿ(ಕೆಲವೊಮ್ಮೆ ಹದಿನೈದು ಅಥವಾ ಹದಿನೆಂಟು ಗಿಣ್ಣುಗಳಿರುವ) ಉದ್ದದ ಬಿದಿರು ಕೋಲು(ಗಳು) ಕಡಿದು ತಂದು ಕಣಿಯವನಿಗೆ ಕೊಡುವ ಸಂಪ್ರದಾಯ.

ಕೊಡೆ ಮೇಲ್ಕೊಡೆ kod̤e mēlkod̤e :

- ದನ-ಕರುಗಳ ಹಣೆಯ ಮೇಲಿನ ಮಚ್ಚೆ(ಚಾ.ಜಿ); Spots or fleck/marks on the head or on face of the cattle;
- ದನ-ಕರುಗಳನ್ನು ಕೊಳ್ಳುವಾಗ ಅವುಗಳ ಮೈಮೇಲೆ ಇರುವ ಮಚ್ಚೆ ಮತ್ತು ಸುಳಿಗಳನ್ನು ಪರೀಕ್ಷಿಸುತ್ತಾರೆ;
- ಮಚ್ಚೆ ಅಥವಾ ಸುಳಿ ಶರೀರದ ಯಾವ ಯಾವ ಭಾಗಗಳಲ್ಲಿದ್ದರೆ ಶುಭ(ಒಳಿತು), ಅಶುಭ ಎಂಬ ನಿರ್ಣಯದ ಮೇಲೆ ಅವುಗಳನ್ನು ಕೊಳ್ಳುವುದುಂಟು. The agrarian community in rural area purchases the cattle on the basis of spots on the body or on head of the cattle as bad omen and good omen.

ಕೊಡೆಯನಹಳ್ಳಿ kod̤eyanahal̤l̤i :

- ಮೈಸೂರು ಜಿಲ್ಲೆ ಚಾಮರಾಜನಗರ ತಾಲ್ಲೋಕಿನ ಕ್ರಿ.ಶ.೧೧೧೬ರ ೨ನೇ ಶಾಸನದಲ್ಲಿ ಇದರ ಉಲ್ಲೇಖ;
- ಕೊಡೆಯ(ನ)+ಹಳ್ಳಿ=ಕೊಡೆಯನಹಳ್ಳಿ; 'ಕೊಡೆಯ' ಎಂಬ ವ್ಯಕ್ತಿಯ ಹೆಸರಿನಿಂದ ಈ ಹಳ್ಳಿಗೆ ಈ ಹೆಸರು ಬಂದಿರಬಹುದು;
- 'ಕೊಡೆ' ಎಂಬುದಕ್ಕೆ 'ಛತ್ರಿ' ಎಂಬ ಅರ್ಥವೂ ಇದೆ; ರಾಜ ಲಾಂಛನದಲ್ಲಿ 'ಶ್ವೇತಛತ್ರಿ'(ಕೊಡೆ)ಯೂ ಒಂದು; ರಾಜನಿಗೆ ಸಂಬಂಧಿಸಿದಂತೆ 'ಕೊಡೆಯ ಭೋಗ' ಅಥವಾ 'ಕೊಡೆಯ ಸೇವೆ' ಎಂಬ ಮಾತುಗಳೂ ಇವೆ; ಈ ಸೇವೆಯ ಹಿನ್ನೆಲೆಯಲ್ಲಿ ಈ ಹೆಸರೂ ಬಂದಿರುವ ಸಾಧ್ಯತೆ ಇದೆ;
- ಹೊಯ್ಸಳ ದೊರೆ ವಿಷ್ಣುವರ್ಧನನು ಗಂಗವಾಡಿ ೯೬೦೦೦ವನ್ನು ಆಳುತ್ತಿದ್ದಾಗ, ಪುಣಿಸರಾಜ ದಂಡಾಧಿಪನು ಅರಕೊಟಾರದಲ್ಲಿ ತ್ರಿಕೂಟ ಬಸದಿಯನ್ನು ನಿರ್ಮಿಸಿದಾಗ, ಅದಕ್ಕೆ ಕೆಲವು ಗ್ರಾಮಗಳನ್ನು ಬಿಟ್ಟನಂತೆ; ಅವುಗಳಲ್ಲಿ 'ಕೊಡೆಯನಹಳ್ಳಿ'ಯೂ ಒಂದಾಗಿತ್ತು.

(E.C- ೪; ಮೈ.ಜಿ.)

ಕೊಡೆಸೇಡಿ kod̤esēd̤i :

ಕೊಡೆ ಆಕಾರದ ವಿನ್ಯಾಸವುಳ್ಳ ರಂಗೋಲಿ(?); ಗ್ರಾಮೊಕ್ಕಲಿಗರು ಮದುವೆ ಸಂದರ್ಭದಲ್ಲಿ ಮದುಮಗಳಿಗೆ ಕೊಡುವ ಕೊಡೆಯ ಸಂಕೇತವಾಗಿ ಗೋಡೆ ಮೇಲೆ ಮೂಡಿಸುವ ಕೊಡೆಯ ವಿನ್ಯಾಸದ ರಂಗೋಲಿ(ಮಂ.ಜಿ). Umbrella shaped (designed) Rangoli; Rangoli is an art form native to Nepal, India and Bangladesh in which patterns are created on the floor in living rooms or courtyards using materials such as colored rice, dry flour, colored sand; designs are passed from one generation to the next; the purpose of rangoli is decoration and it is thought to

bring good luck; Vokkaligas present umbrells with rangoli design.

ಕೊಡೆಹಿಡಿ/ಕೊಡಿಹಿಡಿ koḍehiḍi/koḍihiḍi :

- ೧.ಹೊತ್ತಿಗೆ ತಕ್ಕಂತೆ ವರ್ತಿಸುವುದು; *ಪ್ರ: 'ಹೊತ್ತು ನೋಡಿ ಕೊಡಿ ಹಿಡಿ'*(ಗಾ); ೨.ಯಾರಿಂದ ಕೆಲಸವಾಗಬೇಕಾಗಿರುವುದೋ ಅವರಿಗೆ ವಿನಯ ತೋರಿಸುವುದು(ಚಿ.ಪ.ಕೋ); Hanger on, henchman, stooge;
- ನುಡಿಗಟ್ಟಾಗಿ ಬಳಕೆ; ಇನ್ನೊಬ್ಬರ ಸೇವೆ ಮಾಡಿಕೊಂಡಿರುವುದು; 'ಚಮಚಾಗಿರಿ' ಮಾಡುವುದು ಎಂಬ ಅರ್ಥದಲ್ಲಿಯೂ ಬಳಕೆ;
- ಕೊಡೆ>ಕೊಡಿ ಆಗುವುದು ಪ್ರಾದೇಶಿಕ ಭೇದ;
- ತಮ್ಮ ಅನುಕೂಲಕ್ಕೆ ತಕ್ಕಂತೆ ನಡೆಯುವುದನ್ನು ಈ ನುಡಿಗಟ್ಟು ಹೇಳುತ್ತಿದೆ.

ಕೊಡೊಲೆ/ಕೊಡೋಲೆ koḍole/koḍōle :

- ಒಲೆಯ ಎರಡೂ ಪಕ್ಕಗಳಲ್ಲಿ ಜ್ವಾಲೆ ಬರುವಂತೆ ಮಾಡಿರುವ ಚಿಕ್ಕ ಒಲೆ(ಮಂಡ್ಯ.ಜಿ/ಚಿಕ್ಕ.ಜಿ/ತು.ಜಿ); Hearth, traditional oven uses wood as fuel;
- ನಡುವಿನ ಒಲೆಗೆ ಕೂಡಿಕೊಂಡಂತೆ ಎಡ ಮತ್ತು ಬಲಕ್ಕೆ ಇರುವ ಕಿರು ಒಲೆಗಳು;
- ಅಡುಗೆ ಮಾಡುವಾಗ ಮುಖ್ಯ ಒಲೆಯಿಂದ ಅಕ್ಕ ಪಕ್ಕದ ಚಿಕ್ಕ ಒಲೆಗೆ ಬೆಂಕಿಯ ಉರಿ ಹಾಯುವಂತೆ ಮಾಡಲಾಗಿರುತ್ತದೆ; ಇದರಿಂದ ಬೆಂಕಿಯ ಉರಿಯು ಅಕ್ಕ ಪಕ್ಕದಲ್ಲಿ ವ್ಯರ್ಥವಾಗದಂತೆ ಇತರ ಪದಾರ್ಥಗಳನ್ನು ಬೇಯಿಸಲು ಅನುಕೂಲವಾಗುತ್ತದೆ; ಸಣ್ಣ ಉರಿಯಲ್ಲಿ ನೀರು ಕಾಯಿಸುವುದು, ಹಾಲು ಬಿಸಿ ಮಾಡುವುದು ಇತ್ಯಾದಿ ಏಕ ಕಾಲದಲ್ಲಿ ಸಾಗುವುದರಿಂದ ಅಡುಗೆ ಕೆಲಸ ಬೇಗ ಪೂರೈಸುತ್ತದೆ; ಎಲ್ಲಕ್ಕಿಂತ ಮುಖ್ಯವಾಗಿ ಉರುವಲು ಹೆಚ್ಚು ನಷ್ಟವಾಗದಂತೆ ಎಚ್ಚರ ವಹಿಸುವ ಜ್ಞಾನವೂ ವ್ಯಕ್ತವಾಗುತ್ತದೆ; A small sized hearth with three parts; it is used for cooking and to warm the water and milk;
- ಪ್ರಧಾನ ಒಲೆಗೆ ಅಕ್ಕಪಕ್ಕದ ಚಿಕ್ಕ ಒಲೆಗಳು ಕೂಡಿಕೊಂಡಿರುವುದರಿಂದ 'ಕೂಡೊಲೆ' ಇರಬಹುದು; **ವ್ಯರೂ:** ವಾಗೊಲೆ(ಮಂಡ್ಯ.ಜಿ), ಮಾರೊಲೆ, ಕೋಡೊಲೆ(ಬೆಂ.ಗ್ರಾ.ಜಿ). The smaller parts of the oven are called Kodole/Vagole.

ಕೊಡ್ಕಿಮುರ/ಕೊಡ್ಕೆಮುರ koḍkimura/koḍkemura :

- ಕಿವಿಯ ಮೇಲ್ಭಾಗ(ಮೇಲ್ಗಿವಿ)ದಲ್ಲಿ ಧರಿಸುವ ಒಂಟಿ ಎಂಬ ಆಭರಣ(ಉ.ಕ.ಜಿ); A kind of earring, normally in upper ear; it may be of gold or silver; it is designed by bending the metal string to adorn the ear or nose;
- ಕೊಡಕಿಮುರ; ಸತ್ತಾಗ ಅವರ ಕಿವಿಯಿಂದ ಈ ಮುರ ತೆಗೆದು ಹೆಣದ ಬಾಯಿಗೆ ನೀರು ಬಿಡುತ್ತಾರೆ; Kodimura/earring will be removed from the dead and pour water into the mouth;
- ಈ ಮುರಕ್ಕೆ ಸ್ವರ್ಗದ ಒಂಟಿ ಎಂದೂ ಹೇಳುತ್ತಾರೆ(ಉ.ಕ.ಜಿ); ಮುರ=ಲೋಹದ(ಚಿನ್ನದ ಅಥವಾ ಬೆಳ್ಳಿಯದೂ ಆಗಬಹುದು) ತಂತಿಯನ್ನು ಬಾಗಿಸಿ ಮಾಡಿರುವ ಕಿವಿ ಅಥವಾ ಮೂಗಿಗೆ ಹಾಕಿಕೊಳ್ಳುವ ಒಂದು ಬಗೆಯ ಒಡವೆ;
- ಕೊಡ್ಕೆಮುರ; ಗಂಡಸರ ಕಿವಿಯ ಆಭರಣ; ಉ.ಕ ಜಿಲ್ಲೆಯಲ್ಲಿನ ನಾಡವರ ಸಂಸ್ಕೃತಿಯಲ್ಲಿ ಕಂಡು ಬರುವ ಕಿವಿಯ ಒಂದು ವಿಶಿಷ್ಟ ಆಭರಣ; An earring, generally used by males; especially Nadava or Nadavaru of Uttar kannada district uses this earrings; Nadavaru is a term or title in Kannada meaning countrymen; it has been used in reference to three Indian castes from Karnataka; they are Bunts, Nador or Nadavaru of Uttarkannada or Vokkaligas;
- ಕೊಡ್ಕಿಮುರ ಉಚ್ಚಾರಣೆಯಲ್ಲಿ ಕೊಡ್ಕೆಮುರ ಎಂದಾಗಿರುವ ಸಾಧ್ಯತೆ ಇದೆ; ಈ ಎರಡೂ ಕೂಡ ಕಿವಿಯ ಆಭರಣಗಳೇ ಆಗಿವೆ; 'ಕೊಡ್ಕಿಮುರ' ಸ್ತ್ರೀಯರು ಕಿವಿಗೆ ಧರಿಸುವ ಆಭರಣವಾಗಿ ಗುರುತಿಸಿಕೊಂಡಿದ್ದರೆ 'ಕೊಡ್ಕೆಮುರ' ಗಂಡಸರು ಕಿವಿಗೆ ಧರಿಸುವ ಆಭರಣವಾಗಿ ಗುರುತಿಸಿಕೊಂಡಂತೆ ತೋರುತ್ತದೆ.

ಕೊಡ್ಕೆ koḍke :

- ಕೊಡಕ್ಕೆ; ಬಿಂದಿಗೆಗೆ; Pitcher, pot vessel;

- ಅಂಕೋಲೆಯಲ್ಲಿರುವ ನಾಡವರ ಸಮುದಾಯದವರು ಆಡುವ ಭಾಷೆಯಲ್ಲಿ ಇದು ಕಂಡುಬರುತ್ತದೆ; *ಪ್ರ: 'ಕೊಡ್ಕೆ ನೀರ್ತುಂಬು'.* Kodke means pitcher, is used by the Nadava community of Ankola of Uttar kannada district.

ಕೊಡ್ಚಿ koḍci :

- ಹಣೆಯಲ್ಲಿ ಬಿಳಿಮಚ್ಚೆ ಇರುವ ದನ; Cattle /ox with white spot on the forehead; A hammer type tool used by carpenter to make a groove with chisel in the wood;
- ಬಡಗಿಗಳು ಮರಕ್ಕೆ ಎಜ್ಜ ತೆಗೆಯುವಾಗ ಉಳಿಗೆ ಹೊಡೆಯಲು ಬಳಸುವ ಸಾಧನ; ಇದನ್ನು ಬಾಗೆಮರ, ಗೊಬ್ಬಳಿ ಮರ, ಕಾರಜ್ಜಿನ ಮರದಿಂದ ಮಾಡಿರುತ್ತಾರೆ; *ಪ್ರ: 'ಕೊಡ್ಚೀಲಿ ಹೊಡಿವಾಗ ಜ್ವಾಕೆ, ಕೈಗೆ ಹಾಕಂದೀಯೆ'*;
- ದೇವದಾಸಿ; *ಪ್ರ: 'ಕೊಡ್‌ಚಿಯ ಚಲುವಿಗೆ ಮರುಳಾದ'*(ಕ.ಜಾ.ಕೋ);
- ೧.ಹಣೆಯಲ್ಲಿ ಬೊಟ್ಟಿನಂತೆ ಬಿಳಿ ರೋಮಗಳಿರುವ ದನ ಅಥವಾ ಹೆಣ್ಣು ಕರು; ೨.ಹೆಂಗುಸನ್ನು ಬೈಯುವ ಒಂದು ಬೈಗುಳ ಶಬ್ದ(ತು.ನಿ).

ಕೊಡ್ಡ/ಕೊಡ್ಡಾ koḍḍa/koḍḍā :

- ಮರದ ಒಣಗಿದ ಕೊರಡು(ಕಲ.ಜಿ); Log, block of wood, stump of wood;
- ಕೊಡ್ಡು/ಕೊಡ್ಡಾ; ದಪ್ಪಗಿನ ಕಟ್ಟಿಗೆಯ ತುಂಡು; ಕೊರಡು(ಧಾ.ಜಿ); Wooden plant or flat piece of wood uses to level the ground;
- ಹರಟಿಯ ಕಾವನ್ನು ಉಜ್ಜಲು ಬಳಸುವ ಮರದ ತುಂಡು; ಕೊರಡು(ನೇ.ಪ.ಕೋ);
- ಕೊರಡು, ಕೊಡ್ಡ ಕೊರೆದು ಕುರ್ಚಿ ಇತರ ಸಾಮಾನು ಮಾಡುತ್ತಾರೆ(ಬಾ.ಜಿ);
- ಅಡೆಮರ(ವ್ಯ.ಪ.ಕೋ);
- ತಗ್ಗು, ದಿಣ್ಣೆ ಇರುವ ನೆಲವನ್ನು ಸಮ ಮಾಡಲು ಬಳಸುವ ಹಲಗೆ(ಉ.ಕ.ಜಿ/ಕೃ.ಪ.ಕೋ)
- ಎಡಗೈ ಹೆಚ್ಚು ಬಳಸುವವನು, ಎಡಚ(ತು.ಜಿ); Left-handed man, one given to sinistrality;
- ಮಳೆಬಿಲ್ಲು, ಕಾಮನಬಿಲ್ಲು; ಕೊಡ್ಡ ಮೂಡಿತು (ಕಿಟ್ಟೆಲ್); Rainbow;
- *ಪ್ರ: 'ಮಳೆಯಾಗುವಾಗ ಕೊಡ್ಡ ಮೂಡಿದರೆ ಮಳೆ ಕಡಿಮೆ'*;
- ಮಂದ, ದಡ್ಡ, ಮೂರ್ಖ, ಹೆಡ್ಡನಾದವನು(ಕಲ.ಜಿ); Stupid, blockhead, foolish;
- ***—ಕೊಡ್ಡಬಾಯಿ*** : ನಾಲಿಗೆಯಲ್ಲಿ ರುಚಿ ತಿಳಿಯದಿರುವುದು; ರುಚಿ ಇಲ್ಲದ ಬಾಯಿ(ಬಾ.ಜಿ). Tasteless tongue.

ಕೊಡ್ಡಿಮೀಸ koḍḍimīsa :

- ತುಳುನಾಡಿನ ಬಂದರುಗಳಲ್ಲಿ ಸಾಮಾನುಗಳಿಗೆ ವಸೂಲು ಮಾಡುತ್ತಿದ್ದ ಸುಂಕ(ತು.ನಿ); A tax, custom; duty, levy, cess lay down in the harbour or port;
- ಕಡಲಿನ ಮಾರ್ಗದಲ್ಲಿ ತರುವ ವಸ್ತುಗಳಿಗೆ ವಿಧಿಸುತ್ತಿದ್ದ ಸ್ಥಳೀಯ ಸುಂಕ/ತೆರಿಗೆ ಇದಾಗಿದೆ.

ಕೊಡ್ದುಲೆ koḍdule :

- ಕೊಡುವುದಿಲ್ಲ(ಗೌ.ಕ.–ಕೊಡ.ಜಿ); Won't give/donot give;
- ಕುಡು/ಕೊಡು ಧಾತುವಿನಿಂದ ನಿಷ್ಪನ್ನಗೊಂಡ ಪದ;
- ಕೊಡುವುದಿಲ್ಲ, ಕೊಡೂದಿಲ್ಲ, ಕೊಡೂದಿಲ್ಲೆ ರೂಪಗಳಿವೆ; ಜನಪದರು ಸಂಕ್ಷೇಪಗೊಳಿಸಿ ಉಚ್ಚರಿಸುವಾಗ 'ಕೊಡ್ದುಲೆ' ಎಂದಾಗಿರಬಹುದು; *ಪ್ರ: 'ದುಡ್ಡ್ ಕೊಡ್ದುಲೆ ಗಡ'*;
- 'ಕೊಡ್ದುಲೆ'ಯೇ ಮೂಲಕ್ಕೆ ಹತ್ತಿರವಿದ್ದು ಅದರಿಂದ ಇತರ ರೂಪಗಳು ವಿಕಸಿತವಾಗಿರಲೂಬಹುದೆಂದು ತೋರುತ್ತದೆ; 'ಗಡ' ಪ್ರಾಚೀನ ಕಾವ್ಯದಲ್ಲಿ ಮಾತ್ರ ಕಂಡು ಬರುತ್ತಿದ್ದು ಈಗ ಬಳಕೆ ತಪ್ಪಿಹೋಗಿದೆ; ಆದರೂ ಮೇಲಿನ ಪ್ರಯೋಗದಲ್ಲಿನ ಬಳಕೆ ವಿಶೇಷ; ಆದುದರಿಂದ ಕೊಡವ, ಅರೆ ಭಾಷೆ ಕನ್ನಡಗಳು ದ್ರಾವಿಡ ಮೂಲ ಭಾಷೆಯ ಅರಿವಿಗೆ ಹೆಚ್ಚಿನ ಸಹಾಯ ಮಾಡುವಂತೆ ಕಾಣುತ್ತದೆ.

ಕೊಡ್ನಾರಿ koḍnāri :

- ಕೊಡಲಾರೆ; ಕೊಡುವಷ್ಟು ಆರ್ಥಿಕ ಸ್ಥಿತಿ ಇಲ್ಲದ; Can't give, unable to give;
- ಕುಡು/ಕೊಡು ಧಾತುವಿನಿಂದ ಸಿದ್ಧಗೊಂಡ ಪದ;
- ಕೊಡಲಾರೆ>ಕೊಡ್ಲಾರೆ/ಕೊಡ್ಲಾರಿ>ಕೊಡ್ನಾರೆ/ಕೊಡ್ನಾರಿ;

- ಕೊಡಲಾರೆ ಎಂಬ ರೂಪವು ಆಡುನುಡಿಯಲ್ಲಿ 'ಕೊಡ್ಲಾರೆ' ಎಂದಾಗಿ ನಂತರ 'ಲ' ಒತ್ತಕ್ಷರಕ್ಕೆ 'ನ'ಒತ್ತಕ್ಷರ(ಲ>ನ) ಬಂದು 'ಕೊಡ್ನಾರೆ' ಎಂದಾಗಿದೆ; ಪ್ರಾದೇಶಿಕ ಭೇದದಿಂದಾಗಿ ಕೊಡ್ನಾರೆ>ಕೊಡ್ನಾರಿ ಎಂದಾಗುತ್ತದೆ; ಸುಗಂಧ ಭರಿತ ಕಳೆ(ಬೆಂ.ಗ್ರಾ.ಜಿ);
- 'ಲ' ಮತ್ತು 'ನ'ಗಳು ದಂತ್ಯಗಳಾಗಿದ್ದು ಏಕಸ್ಥಾನಿಗಳ ವಿನಿಮಯ ಸಹಜವಾಗಿಯೇ ಆಗಿದೆ; ಅಂತ್ಯ ಸ್ವರದ ಎ>ಇ ವ್ಯತ್ಯಯ ಪ್ರಾದೇಶಿಕ ಭಿನ್ನತೆಯ ಪರಿಣಾಮ;
- ಕೊಡಲು ಸಾಧ್ಯವಿಲ್ಲ; ಕೊಡುವ ಶಕ್ತಿಯಿಲ್ಲ ಎಂಭ ಭಾವ(ಮೈ.ಜಿ/ಚಾ.ಜಿ/ಮಂಡ್ಯ.ಜಿ);
- ಕಳೆಹುಲ್ಲು; ಸುಗಂಧ ಭರಿತ ಕಳೆ(ಬೆಂ.ಗ್ರಾ.ಜಿ); Weed with good fragrance;
- ಕೊನ್ನಾರಿ(ಮಂಡ್ಯ.ಜಿ); ಹೊಲಗದ್ದೆಗಳ ಬದುಗಳಲ್ಲಿ, ಪಾಳು ನೆಲದಲ್ಲಿ ಬೆಳೆದುಕೊಳ್ಳುವ ಒಂದು ಕಳೆಹುಲ್ಲು, ಸಸ್ಯ ಜಾತಿ; ಬೆಳೆಯ ನಡುವೆಯೂ ಬೆಳೆದುಕೊಳ್ಳುತ್ತದೆ; ಇದನ್ನು ಕಳೆಯೆಂದು ಕಿತ್ತು ಹಾಕಲಾಗುತ್ತದೆ; 'ಕೊಡ್ನಾರಿ' ಉಚ್ಚಾರಣೆಯಲ್ಲಿ ಕೊನ್ನಾರಿ/ಕೊನ್ನಾರೆ ಎಂಬ ಸಜಾತೀಯ ಒತ್ತಕ್ಷರವಾಗಿ ರೂಪ ಪಡೆಯುವ ಸಾಧ್ಯತೆ ಇದೆ. A type of weed grows in uncultivated land or grows on the sides of raised bank in fields or agricultural land(especially in Mandya district).

ಕೊಡ್ಪು koḍpu :

ಭತ್ತ ಹಾಗೂ ಅಕ್ಕಿಯನ್ನು ದಾಸ್ತಾನು ಮಾಡಲು ಬಳಸುವ ಸಾಧನ(ಕೃ.ಪ.ಕೋ). A container to store paddy and rice.

ಕೊಡ್ಬಡ koḍbaḍa :

- ಕೊಡಬೇಡ; ಕೊಡುವುದು ಬೇಡ(ಗೌ.ಕ–ಕೊಡ.ಜಿ); Don't give;
- ಕೊಡಬೇಡ>ಕೊಡ್ಬೇಡ>ಕೊಡ್ಬಡ ಆಗಿರಬಹುದೆ?
- ಕೊಡಬೇಡ ಎಂಬುದು ಗೌಡ ಕನ್ನಡದಲ್ಲಿ ಕೊಡ್ಬಡ ಎಂಬ ರೂಪದಲ್ಲಿ ಪ್ರಯೋಗವಾಗಿರುವ ಸಾಧ್ಯತೆ ಇದೆ; ಗ್ರಾಮೀಣ ಪ್ರದೇಶದಲ್ಲಿ ಕೂಡ ಕೊಡ್ಬೇಡ, ಕೊಡ್ಬ್ಯಾಡ, ಕೊಡ್ಬಡ ಎಂಬ ರೂಪಗಳು ಪ್ರಯೋಗದಲ್ಲಿ ಕಂಡು ಬರುತ್ತವೆ; *ಪ್ರ: 'ಅದನ್ ಅವಂಗೆ ಕೊಡ್ಬಡ'.*

ಕೊಡ್ಮಜ್ಮ koḍmaŋma :

- ಮದುವೆಯಾಗದ ಯುವಕ; ಕುಮಾರ(ಚಾ.ಜಿ); ಕೊಡಮಗ ಇರಬಹುದೆ? Bachelor, young man;
- 'ಕೊಡಗೂಸು'(ಕನ್ಯೆ) ರೂಪದ ಸಂವಾದಿ ರೂಪ ಇದಾಗಿರಬಹುದು; ಹೆಣ್ಣು ಮಕ್ಕಳಿಗೆ 'ಕೂಸು' ರೂಪ ಈ ಪ್ರದೇಶದಲ್ಲಿ ಸಾಮಾನ್ಯ; ಮಾತ್ರ ಪ್ರಧಾನ ಕುಟುಂಬ ವ್ಯವಸ್ಥೆಯ ಕಡೆ ಈ ಪದ ಬೆರಳು ಮಾಡುತ್ತಿದೆ; A word for unmarried young man in the patriarchal family system;
- 'ಕೊಡಮಗ'ದ 'ಮ'ಕಾರದ ಅನುನಾಸಿಕತ್ವದ ಪ್ರಭಾವದಿಂದ ಅಂತ್ಯ 'ಗ'ಕಾರವೂ ಅನುನಾಸಿಕೀಕರಣಗೊಂಡು 'ಕೊಡ್ಮಙ್ಗ' ಆಗಿ, ಅರ್ಥದ ಸಂದಿಗ್ಧತೆ ಅಥವಾ ಅರ್ಥಾಂತರದ ಅಪಾಯದಿಂದ ಪಾರಾಗಲು ಮತ್ತೊಂದು 'ಮ'ಕಾರ ಸೇರಿ ಕೊಡ್ಮಜ್ಮ' ಆದಂತೆ ಕಾಣುತ್ತದೆ.

ಕೊಡ್ಯ koḍya :

- ಜಾನುವಾರುಗಳ ಹಣೆಯಲ್ಲಿರುವ ಬಿಳಿ ರೋಮ ಮಂಜ; ಬಿಳಿ ಚುಕ್ಕೆ(ತು.ನಿ); White spots(completely with trichome) on the foreheads of cattle;
- ದನಗಳ ಹಣೆಯಲ್ಲಿ ಇಂತಹ ಬಿಳಿ ರೋಮದ ಚುಕ್ಕೆ ಇದ್ದರೆ ದನಗಳಿಗೆ ಬಿಳಿಯ ಬೊಟ್ಟು ಇಟ್ಟಂತೆ ಕಾಣುವುದರಿಂದ ಶುಭ ಲಕ್ಷಣವೆಂಬ ನಂಬಿಕೆ ಇದೆ. White mark on the forehead of th cattle implies good omen(in agrarian community).

ಕೊಡ್ಯಣ್/ಕೊಡ್ಯಾನ್ koḍyaṇ/koḍyān :

- ತಲೆಯಲ್ಲಿ ಬಿಳಿ ಚುಕ್ಕೆ ಇರುವ ಒಂದು ಜಾತಿಯ ಚಿಕ್ಕ ಮೀನು(ತು.ನಿ); A type of fish with white mark on the head;
- ಇದಕ್ಕೆ ಕೊಡ್ಯಣೆ, ಕೊಡ್ಯಣತರು ಎಂದೂ ಕರೆಯುವುದುಂಟು;
- ಈ ಮೀನು ತನ್ನ ಬಿಳಿ ಚುಕ್ಕೆಯನ್ನು ಇತರರು ನೋಡಲೆಂದು ಮೇಲೆ ಮೇಲೆ ತೇಲಿಕೊಂಡು ಇರುತ್ತದೆಂದು ಹೇಳುವುದುಂಟು; *ಪ್ರ: 'ಕೂರಿಡಿತ್ತಿ ಕೊಡ್ಯಣ್‌ಗ್ ದಾನೆ ಗೊತ್ತು?'*(ತುಳು); [ಕೂರಿಯಲ್ಲಿರುವ 'ಕೊಡ್ಯಣ್' ಮೀನಿಗೆ(ತಾನು ಮೋಸ ಹೋಗಿದ್ದೇನೆಂದು) ಏನು ಗೊತ್ತು?](ತು.ನಿ).

ಕೊಡ್ಯಮೆ koḍyame :

- ಮೀನಿನ ಒಂದು ಜಾತಿ(ಮಂ.ಜಿ); ಒಂದು ಬಗೆಯ ಮೀನು; *ಪ್ರ: 'ಈ ಸಲ ಬಲೆಗೆ ಕೊಡ್ಯಮೆ ತುಂಬಾ ಬಿದ್ದೇತಿ'.* A type of fish.

ಕೊಡ್ಲಿ kodli :

- ಮರ ಕಡಿಯಲು, ಮುಳ್ಳುಕಂಟಿ ಸವರಲು, ಕಟ್ಟಿಗೆ ಕತ್ತರಿಸಲು ಬಳಸುವ ಒಂದು ಜನಪ್ರಿಯ ಸಾಧನ; An axe uses to cut wood and to harvest timber and to shape, to split;
- 'ಕೊಡ್ಲಿ' ಎಂದ ಕೂಡಲೆ ಪೌರಾಣಿಕ 'ಪರಶುರಾಮ' ನೆನಪಾಗುತ್ತಾನೆ; 'ಪರಶು' ಎಂದರೆ ಸಂಸ್ಕೃತದಲ್ಲಿ 'ಕೊಡ್ಲಿ' ಎಂದೇ ಅರ್ಥ; Axe reminds us about 'Parashurama' a mythological hero with axe in hand; the people and mythology say he is the avtar of Lord Vishnu;
- 'ಕೊಡಲಿ' ರೂಪವೇ ಗ್ರಾಮೀಣರ ಆಡುಭಾಷೆಯಲ್ಲಿ 'ಕೊಡ್ಲಿ' ಆಗಿದೆ;
- ತಮಿಳು ಮತ್ತು ಮಲೆಯಾಳಂಗಳಲ್ಲಿ 'ಕೋಡಾಲಿ' (ದ್ರಾ.ಭಾ.ಜ್ಞಾ.ಪ.ಕೋ) ಮತ್ತು ಕೊಡಲಿ ರೂಪಗಳಿವೆ; ತುಳುವಿನಲ್ಲಿ ಕೊಡರಿ/ಕುಡರಿ ರೂಪಗಳಿವೆ(ಅದೇ), ತೆಲುಗಿನಲ್ಲಿ 'ಗೊಡ್ಡಲಿ' ಪದವಿದೆ; ತೆಲುಗಿನಲ್ಲಿ ಪದಾದಿಯ 'ಕ'ಕಾರಕ್ಕೆ 'ಗ'ಕಾರ ಬಂದಿರುವುದು ಒಂದು ಸಾಮಾನ್ಯ ಪ್ರಕ್ರಿಯೆ ಮತ್ತು ಪದ ಮಧ್ಯೆದಲ್ಲಿ ದ್ವಿತ್ವ(ಡ) ಬಂದಿರುವುದು ಅಂತಹ ಸಮಸ್ಯೆಯೇನೂ ಅಲ್ಲ; ತಮಿಳು ಮತ್ತು ಮಲೆಯಾಳಂಗಳಲ್ಲಿ ಪದಾದಿ ಅಕ್ಷರ ದೀರ್ಘವಾಗಿರುವುದು ತೆಲುಗಿನ 'ಗೊಡ್ಡಲಿ'ಯ ಸಂಪರ್ಕದಿಂದ ಅಥವಾ ತದ್ವಿರುದ್ಧ; ಏಕೆಂದರೆ ಒತ್ತಕ್ಷರ ಹೊರಟುಹೋದಾಗ ಅದರ ಹಿಂದಿನ ಅಕ್ಷರ ದೀರ್ಘವಾಗುವುದು ಒಂದು ಕ್ರಮ; ಇನ್ನು ತುಳುವಿನ 'ಕುಡರಿ' ರೂಪ ಆಕರ್ಷಕವಾದುದು, ಅದೇ ಮೂಲರೂಪವಾಗಿದ್ದು ಆಮೇಲೆ ಕೊಡರಿ, ಕೊಡಲಿ ರೂಪಗಳು ಬಂದಿರಲು ಸಾಧ್ಯ-ಸ್ವರವ್ಯತ್ಯಯ ನಿಯಮದ ಪ್ರಕಾರ;
- 'ಕೊಡಲಿ' ಪದ 'ಕುಠಾರ'(ಸಂಸ್ಕೃತ) ತದ್ಭವ ಎಂದು ಹೇಳಾಗಿದೆ; ದ್ರಾವಿಡ ಸೋದರ ಭಾಷೆಗಳಲ್ಲಿ ಈ ಪದದ ಸಂವಾದಿ ರೂಪಗಳೇ ಇರುವುದರಿಂದ ದ್ರಾವಿಡ ಮೂಲವೆಂದೇ ತೋರುವುದು; ಸಂಸ್ಕೃತದಲ್ಲಿ ಕುಠಾರ, ಪರಶು ಎಂಬ ಪರ್ಯಾಯನಾಮಗಳಿರುವುದು, ಕನ್ನಡದಲ್ಲಿ ಅದನ್ನು ಬಿಟ್ಟರೆ ಬೇರೆ ಪದಗಳು ಇಲ್ಲದಿರುವುದು ಒಂದು ಹೊಸ ಅನ್ವೇಷಣೆಯೇ ಸರಿ;
- ಅಂಗೈಯಷ್ಟು ಅಗಲ, ಒಂದು ಇಂಚಿನಷ್ಟು ದಪ್ಪವಿರುವಂಥದು; ಕಾವನ್ನು ಹಾಕಲು ವೃತ್ತಾಕಾರಾದ ಕೊಳವೆಯಂತೆ ಇರುತ್ತದೆ; ಕಬ್ಬಿಣದಿಂದ ಇದನ್ನು ತಯಾರಿಸಿರುವರು; ಮುಂದಿನ ತುದಿ ಚೂಪಾಗಿರುತ್ತದೆ; Axes are usually composed of a head and a handle;
- ಬಹು ಉಪಯೋಗಿ ಆಗಿರುವ 'ಕೊಡಲಿ', ಸಂಸ್ಕೃತಿಯಲ್ಲಿ ಒಂದು 'ಪದವಲಯ'ವನ್ನು ನಿರ್ಮಿಸಿಕೊಂಡಿದೆ.

ಕೊಣ್‌ಕತ್ತಿ/ಕೊಣಕತ್ತಿ koṇkatti/koṇakatti :

- ಕೊಣ್/ಕೊಣ+ಕತ್ತಿ=ಕೊಣ್‌ಕತ್ತಿ/ಕೊಣಕತ್ತಿ>ಕೊಣಗತ್ತಿ;
- ಕೊಣಗತ್ತಿ; ಮಚ್ಚು(ತು.ಜ); Hatchet, small-short handled axe;
- 'ಕೊಣಕೋಲ್' ಎಂಬುದಕ್ಕೆ 'ಬಗ್ಗಿದ ಕೋಲ್', 'ವಕ್ರವಾದ ಕೋಲು' ಎಂಬ ಅರ್ಥವಿದೆ(ಕ.ನಿ); ಈ ಹಿನ್ನೆಲೆಯಲ್ಲಿ 'ಕೊಣ್‌ಕತ್ತಿ/ಕೊಣಕತ್ತಿ'ಯನ್ನು ಬಾಗಿದ ಕತ್ತಿ ಎಂದು ಹೇಳಬಹುದು; ಗಿಡ, ಗೆಂಟೆ, ಬೇಲಿ ಇತ್ಯಾದಿಗಳನ್ನು ಕೊಚ್ಚುವ ಕತ್ತಿಯನ್ನು ತುದಿಯಲ್ಲಿ ಸ್ವಲ್ಪ ಬಾಗಿಸಿ ತಯಾರಿಸುವುದು ಸಾಮಾನ್ಯ;
- 'ಕೊಣಮಕ್ಕಳು'[ಚಿಕ್ಕಮಕ್ಕಳು(ಕ.ಜಾ.ನಿ)] ಇದ್ದಂತೆ ಕೊಣಕತ್ತಿ/ಕೊಣಗತ್ತಿಯನ್ನು 'ಚಿಕ್ಕಕತ್ತಿ' ಎಂದು ಹೇಳಲೂ ಬಹುದು;
- ಕತ್ತಿಗೆ ಕೊಣ್/ಕೊಣ ವಿಶೇಷಣವಾಗಿ ಇಲ್ಲವೆ ಉಪಸರ್ಗವಾಗಿ ಸೇರಿದೆ; ಕೊಣ್/ಕೊಣ ಅನುಕರಣ ವಾಚಕ ಶಬ್ದ; ಕೊಣ್‌ಕೊಣ್/ಕೊಣಕೊಣ ಎಂಬ ಅನುಕರಣ ವಾಚಕವಾಗಿ ಪ್ರಯೋಗವುಂಟು; ಕತ್ತಿ ಲೋಹ(ಕಬ್ಬಿಣ)ದ್ದಾದರಿಂದ ಕೊಣಗುಡುವುದು ಸಾಮಾನ್ಯ; ಕೊಣ ಗುಡುವ ಕತ್ತಿ ಕೊಣ್‌ಕ(ಗ)ತ್ತಿ, ಕೊಣಕ(ಗ)ತ್ತಿ ಆಗಿರಬಹುದು.

ಕೊಣಗು/ಕೊಳಗು koṇagu/koḷagu :

- ೧.ಕೊಂಡು ಹೋಗು; ಒಯ್ಯು; ೨.ಗೊರಸು; ಕುದುರೆ ಮತ್ತು ದನಕರು ಮೊದಲಾದ ಪ್ರಾಣಿಗಳ ಖುರ/ಕಾಲಿನ ಗೊರಸು(ಉ.ಕ.ಜಿ); Take away, hoof of horse or cattle;
- ಕಾಲಿನ ಗೊರಸಿಗೆ ಕಬ್ಬಿಣದ ಹಲ್ಲೆ(ಲಾಳ) ಅಳವಡಿಸಿದ ದನಕರುಗಳನ್ನು ಗಾಡಿ ಎಳೆಯಲು, ಉಳುಮೆಗೆ ಹಾಗು ವ್ಯವಸಾಯ ಸಂಬಂಧಿಯಾದ ಕೆಲಸಗಳಿಗೆ ಬಳಸುತ್ತಾರೆ; ಕುದುರೆಗಳನ್ನು ಬಂಡಿ, ರಥಗಳನ್ನು ಎಳೆಯಲು, ಸವಾರಿ ಮಾಡಲು ಬಳಸುತ್ತಾರೆ; Cattle and horse with iron shoe

are used to plough the land and to pull the cart or carriage to transport;

- ಕೊಳಗು, ಕಬಳಬು, ಕೊಳ್ಬು ಎಂದೂ ಸಹ ಕರೆಯುವುದುಂಟು;
- ಕೊಳಗು, ಕೊಣಗು, ಕೊಳಗ; ಪಶುಗಳ ಕಾಲಿನ ಗೊರಸು, ಖುರಪುಟ; ಹ.ಕ: ಕೊಳಗು, ಕೊಳಚು; ತ.ಮ: ಕುಳಂಬು; ತುಳು: ಕೊಲೆಜಿ(ದ್ರಾ.ಭಾ. ಜ್ಞಾಪ.ಕೋ); *ಪ್ರ: 'ದನಗಳ ಕೊಳಗು ಸವೆಯದಂತೆ ಲಾಳ ಕಟ್ಟಿಸಬೇಕು'*;
- ದ್ರಾವಿಡ ಭಾಷೆಗಳಲ್ಲಿ 'ಣ' ಮತ್ತು 'ಳ'ಗಳ ವಿನಿಮಯ ಸಾಮಾನ್ಯವಾದ್ದರಿಂದ, ಕೊಣಗು/ ಕೊಳಗು ಆಗಿರಬಹುದು.

ಕೊಣಗಿ(ಗೆ) koṇagi(ge) :

- ರೊಟ್ಟಿ ಮಾಡಲು ಬಳಸುವ ಕಟ್ಟಿಗೆ ಅಥವಾ ಕಲ್ಲಿನ ಹರಿವಾಣ(ಚಿ.ಪ.ಕೋ); A wooden pan/tray to prepare Roti;
- ಕೊಣಗೆ, ಕೊಣಿಗೆ; ಹಿಟ್ಟು ಕಲಸಲು ಮತ್ತು ರೊಟ್ಟಿ ತಟ್ಟಲು ಬಳಸುವ ದುಂಡನೆಯ ಮರದ ಹರಿವಾಣ(ಕ.ಜಾ.ಕೋ); A wooden pan to prepare roti(specially to mix the dough);
- ಕೊಣಗೆ; ರೊಟ್ಟಿ ತಯಾರಿಸಲು ಉಪಯೋಗಿಸುವ ಪಾತ್ರೆ(ಶಿ.ಜಿ);
- ಹಿಟ್ಟನ್ನು ನಾದಲು ಮಾಡಿದ ಮರದ ಸಾಧನ(ಚಿಕ್ಕ.ಜಿ)/(ಕ.ಜಾ.ನಿ); **ವ್ಯರೂ:** ಕೊಣಬಿಗೆ; ಕೊಣಮಿಗೆ.

ಕೊಣಜು koṇaju :

- ಮರಗಳ ಮೇಲೆ ಗೂಡು ಕಟ್ಟಿ ವಾಸಿಸುವ ಚಿಕ್ಕ ಇರುವೆ; An ant resides on the tree in a nest(of leaves);
- ಗಾತ್ರದಲ್ಲಿ ಸಣ್ಣವಾಗಿದ್ದು, ತುಂಬಾ ಚುರುಕಾಗಿರುತ್ತವೆ; ಇವು ಕಚ್ಚಿದರೆ ನವೆ, ಉರಿತ ಹೆಚ್ಚಾಗಿರುತ್ತದೆ. A small ant but very active also; its bite is very burning.

ಕೊಣತ koṇata :

- (>ಕೊಂತ?); ಅಭ್ಯಾಸಕ್ಕಾಗಿ ಕೈಯಲ್ಲಿ ಆಡಿಸುವ ಮರದ ಇಲ್ಲವೆ ಕಬ್ಬಿಣದ ಬಡಿಗೆ; Hammer shaped wooden or iron made huge, short sledge hammer uses to exercise;
- ವ್ಯಾಯಾಮಕ್ಕಾಗಿ ಕೈಯಿಂದ ತಿರುಗಿಸುವ ಮುದ್ಗರ/ಗದೆಯಂತಹ ಸಾಧನ; ಲೋಡು(ಕ.ನಿ); A wooden or iron club uses in traditional gymnasium to perform exercise;
- ೧.ಬತ್ತದ ಗದ್ದೆಯ ಪಾತಿ; ೨.ಸಿಮೆಂಟಿನಿಂದ ಮಾಡಿದ ನೀರಿನ ತೊಟ್ಟಿ(ಚಿ.ಪ.ಕೋ); Water tank made with bricks and cement, seed bed, specially of paddy;
- ಕಬ್ಬಿಣದ ಬಡಿಗೆ(ಮಂ.ಜಿ);
- ಬಡಿ/ಬಾರಿಸು ಅರ್ಥದ ಕುಡು/ಕೊಡು ಧಾತುವಿನಿಂದ 'ಕೊಣತ'ದ ನಿಷ್ಪನ್ನ ಹೇಳಲು ಸಾಧ್ಯ; ಇದು ಬಡಿಯುವ, ಬಾರಿಸುವ ಸಾಧನ ಎಂಬ ಅರ್ಥದಲ್ಲಿ ಪ್ರಯೋಗವಾಗುತ್ತದೆ.

ಕೊಣನೂರು[೧] koṇanūru[1] :

- ಕ್ರಿ.ಶ.೧೭೧೭ರ ೧೪೯ನೇ ಶಾಸನದಲ್ಲಿ ಈ ಊರಿನ ಪ್ರಸ್ತಾಪವಿದೆ; A place referred in 149th inscription of 1717AD;
- ಕೊಣನ+ಊರು=ಕೊಣನೂರು ಆಗಿದೆ;
- 'ಕೊಣ' ಎಂದರೆ ಸರೋವರ, ಕೆರೆ, ಸ್ನಾನದ ತೊಟ್ಟಿ ಎಂಬೆಲ್ಲ ಅರ್ಥಗಳಿವೆ; ಪ್ರಕೃತಿವಾಚಿ ಸ್ಥಳನಾಮವಿದು; `Kona' means a lake, tank, pond;
- ಅದರಿಂದ ಕೆರೆಯ ಸಮೀಪದಲ್ಲಿರುವ ಊರು ಎಂಬ ಅರ್ಥದಲ್ಲಿ 'ಕೊಣನೂರು' ಹೆಸರು ಬಂದಿರಬಹುದು;
- 'ಕೊಣ' ಪದಕ್ಕೆ 'ಕೊಳ' ಎಂಬ ರೂಪವೂ ಇದೆ; ಇಲ್ಲಿ ಣ>ಳ ಆಗಿರುವುದು ಸ್ಪಷ್ಟ; ಸಾಮಾನ್ಯ.

(E.C- ೯)

ಕೊಣನೂರು[೨] koṇanūru[2] :

- ಹಾಸನ ಜಿಲ್ಲೆಯಲ್ಲಿರುವ ಬಸವಾಪಟ್ಟಣ ಗ್ರಾಮದ ಕ್ರಿ.ಶ.೧೫೭೯ರ ೯೧ನೇ ಶಾಸನದಲ್ಲಿ ಈ ಊರಿನ ಉಲ್ಲೇಖ; A place in Hassan district of Karnataka state referred in 91th inscription of 1579AD;
- ಕೊಣನ ಊರು ಬಿಡಿಸಿ ಬರೆದಿರುವುದೂ ಶಾಸನದಲ್ಲಿದೆ;
- 'ಕೊಣ' ಎಂದರೆ 'ಕೊಳ'; ಣ>ಳ ಆಗಿದೆ; ಈ ಹಿನ್ನೆಲೆಯಲ್ಲಿ ಅಂದರೆ 'ಕೊಳ' ಇರುವ ದೃಷ್ಟಿಯಲ್ಲಿ ಇದಕ್ಕೆ ಕೊಣನೂರು/ಕೊಳನೂರು ಎಂದು ಹೆಸರು ಬಂದಿದೆ;
- ಬಸವಾಪಟ್ಟಣದ ಈ ಶಾಸನದಲ್ಲಿ ಮಹಾಮಂಡಲೇಶ್ವರ ರಾಮರಾಜಯ್ಯದೇವ ಮಹಾ ಅರಸು ಎಂಬುವರು ತಮ್ಮ ಮಕ್ಕಳ ಮದುವೆಯ

ಪ್ರಯುಕ್ತ ಪಲ್ಲಕ್ಕಿ ಉಂಬಳಿಯಾಗಿ ಕೊಟ್ಟಂತಹ ಮಾಹಿತಿ ಇದರಲ್ಲಿದೆ. We can see the contribution of Palanquin/sedan by a local ruler on the occasion of his children's wedding ceremony.

(E.C- ೮; ಹಾ.ಜಿ.)

ಕೊಣಪಿ koṇapi :

- ಒಕ್ಕಣೆಯ ಸಂದರ್ಭದಲ್ಲಿ ತೆನೆಯಿಂದ/ತಳ್ಳಿನಿಂದ ಕಾಳುಗಳನ್ನು ಉದುರಿಸಲು ಬಳಸುವ ಬಡಿಗೋಲು; A cane/stick/staff uses to separate grains/cereals during threshing;
- ಕಾಳನ್ನು ಉದುರಿಸುವ ಬಡಿಗೋಲು; ತುಳು: ಕೊಣ್ಪಾ, ಕೊಣ್ಪೊ; ತೆ: ಗುನಪಮು (ದ್ರಾ.ಭಾ.ಜ್ಞಾ.ಪ.ಕೋ);
- ಡೋಲು ಬಡಿಯುವ ಕೋಲು; ಕುಡುಪು(ಶಿ.ಜಿ); Stick or staff uses to beat drum;
- 'ಕುಡು/ಕೊಡು' ಧಾತುವಿನಿಂದ ನಿಷ್ಪನ್ನಗೊಂಡಿರುವ ಸಾಧ್ಯತೆ ಇದೆ; ಕುಡುಪು/ಕೊಡುಪು ಎಂಬುದು 'ಕೊಡಪು' ಆಗಿ, ಉಚ್ಚಾರಣೆಯಲ್ಲಿ 'ಡ'ಕಾರಕ್ಕೆ 'ಣ'ಕಾರ ಬಂದು 'ಕೊಣಪು' ಎಂದಾಗಿ ನಂತರ 'ಕೊಣಪಿ' ಆಗಿರುವಂತಿದೆ; ತುಳುವಿನಲ್ಲಿ ಬಳಕೆಯಲ್ಲಿರುವ 'ಕೊಣ್ಪಾ, ಕೊಣ್ಪೊ ಪದಗಳು ಇದಕ್ಕೆ ನಿದರ್ಶನವಾಗಿವೆ; ಏಟು ಕೊಡುವ ಬಡಿಯುವ, ಬಾರಿಸುವ ಸಾಧನ ಎಂಬ ಅರ್ಥದ ಕೊಡಪು>ಕೊಡ್ಪಾ>ಕೊಣ್ಪಾ ಎಂದು ತುಳುವಿನಲ್ಲಿ ಪ್ರಯೋಗವಾಗಿರುವ ಸಂಭವವಿದೆ; ಇದನ್ನು ಗಮನಿಸಿದಾಗ ಕೊಡುಪು > ಕೊಡಪು > ಕೊಣಪು > ಕೊಣಪಿ ಆಗಿರುವಂತೆ ತೋರುತ್ತದೆ(ಡ>ಣ).

ಕೊಣಬ koṇaba :

- ಒನಪುಗಾರ; ಬೆಡಗುಗಾರ(ಕ.ಜಾ.ಕೋ); A man with demureness, overmodest or coy, dandy;
- ಕೊಣಬಿಗ; ಕೊಣಬು(<ಕೊನಬು)+ಇಗ=ಕೊಣಬಿಗ; ಬೆಡಗುಳ್ಳವನು; ಒನಪುಗಾರ; ಸೊಗಸುಗಾರ(ಕ.ನಿ);
- ಕೊಣವ; 'ಕೊಣಬ' ಪದದ 'ಬ'ಕಾರವು 'ವ'ಕಾರವಾಗಿರಬಹುದು; ಇಲ್ಲವೆ 'ವ'ಕಾರವೇ 'ಬ'ಕಾರವಾಗಿರಬಹುಹದು; ವ>ಬ ಆಗುವುದು, ಬ>ವ ಆಗುವುದು ಸಹಜ;
- —***ಕೊಣಬನ*** : ಏತಕ್ಕೂ ಬಾರದವ; ನಿಷ್ಪ್ರಯೋಜಕ (ಮಂಡ್ಯ.ಜಿ); Useless fellow;
- 'ಕೊನ್ನ' ಎಂಬ ಪದ ಬಳಕೆಯಲ್ಲಿದೆ; ಅಂದರೆ, ಪಾಪಿಷ್ಠ, ಪಾಪಿ ಎಂಬ ಅರ್ಥಗಳಿವೆ; ತಮಿಳಿನಲ್ಲಿ 'ಕೊನ್ನಾಳನ್' ಪದಕ್ಕೆ ನಿಷ್ಪ್ರಯೋಜಕ ವ್ಯಕ್ತಿ ಎಂಬರ್ಥವಿದೆ; 'ಕೊನ್ನ' ಪದದಿಂದ ಕೊಣಬ/ಕೊಣಬನ ಬಂದಿರುವ ಸಾಧ್ಯತೆಯಿದೆ; ಕೊನ್ನ> ಕೊಣಬ/ಕೊಣಬನ.

ಕೊಣಬಿಗೆ/ಕೊಣಮಿಗೆ/ಕೊಣಿಗೆ koṇabige/koṇamige/koṇige :

- ರೊಟ್ಟಿ ಸುಡುವಾಗ ಹಿಟ್ಟು ನಾದಲು ಬಳಸುವ ಮರದಲ್ಲಿ ಮಾಡಿದ ಅಗಲವಾದ ತಟ್ಟೆ(ಚಿತ್ರ.ಜಿ/ಚಿಕ್ಕ.ಜಿ); A widen wooden plank to mix the dough to bake roti;
- ೧.ಕೊಣಬಗಿ ಎಂಬ ರೂಪವಿದ್ದು ತಾಟು(?) ಎಂಬ ಅರ್ಥವಿದೆ; ೨.ಕೊಣಮಿಗೆ; ರೊಟ್ಟಿ ಮಾಡುವ ಮಣ್ಣಿನ ಪರಾತ; ಬಡವರು ಇದನ್ನು ಹೆಚ್ಚಾಗಿ ಬಳಸುತ್ತಾರೆ(ಕುಂ.ವ್ಯ.ಪ.ಕೋ);
- ಕೊಣಬಗಿ; ರೊಟ್ಟಿ ಮಾಡುವ ಮಣ್ಣಿನ ಅಗಲವಾದ ತಾಟು(ಶಿ.ಜಿ); 'ಕೊಣಬಿಗೆ' ಪದವು ಉಚ್ಚಾರಣೆಯಲ್ಲಿ ವರ್ಣಪಲ್ಲಟದಿಂದಾಗಿ 'ಕೊಣಬಗಿ' ಎಂದಾಗಿರುವ ಸಾಧ್ಯತೆ ಇದೆ;
- ಕೊಣಮಗಿ; ರೊಟ್ಟಿ ಬಡಿಯುವ ಸಾಧನ(ಬ.ಜಿ);
- ರೊಟ್ಟಿ ಹಿಟ್ಟು ಕಲೆಸಲು, ನಾದಲು, ಹದಗೊಳಿಸಲು, ರೊಟ್ಟಿ ಬಡಿಯಲು ಅಡುಗೆ ಮನೆಯಲ್ಲಿ ಉಪಯೋಗಿಸುವ ಮರದ ಸಾಧನ; ಇದನ್ನು ಹಲಸು, ಬೀಟೆ, ನಂದಿ ಮರದಿಂದ ಬಡಗಿಗಳು ತಯಾರಿಸುತ್ತಾರೆ; ಇದಕ್ಕೆ 'ಪರಾತ' ಎನ್ನುವ ಹೆಸರಿದೆ; ಉತ್ತರ ಕರ್ನಾಟಕದಲ್ಲಿ 'ಕೊಣಮಿಗೆ' ಎಂದರೆ ಮೈಸೂರು ಭಾಗದಲ್ಲಿ 'ಮರಿಗೆ' ಎನ್ನುತ್ತಾರೆ; ಮುದ್ದೆ ಕಟ್ಟಲೂ ಬಳಸುತ್ತಾರೆ;
- ಇವುಗಳನ್ನು ಗಂಗಾಳದಂತೆ ದುಂಡನೆಯ ಆಕಾರದಲ್ಲಿ ನೀಳವಾಗಿ ಅಂಡಾಕಾರದಲ್ಲಿಯೂ, ಕೆಲವೊಮ್ಮೆ ಚೌಕಾಕಾರದಲ್ಲಿಯೂ ಮಾಡಲಾಗಿರುತ್ತದೆ; ಇವುಗಳ ಕೆಳಭಾಗ ತಗ್ಗಾಗಿದ್ದು ಅಂಚಿನಲ್ಲಿ ಕೊಂಚ ಮೇಲಕ್ಕೆ ಬಾಗಿ ಇಲ್ಲವೆ ನೇರವಾಗಿರುತ್ತದೆ; ಇವುಗಳಿಗೆ ಎರಡೂ ಕಡೆ ಹಿಡಿಗಳಿರುತ್ತವೆ;
- 'ಕೊಣಬಿಗೆ' ಪದದ ಉಚ್ಚಾರಣೆಯಲ್ಲಿ 'ಬ'ಕಾರದ ಅನುನಾಸಿಕರಣದಿಂದ 'ಕೊಣಮಿಗೆ/ಕೊಣವಿಗೆ' ರೂಪಗಳಾಗಿರುವಂತೆ ತೋರುತ್ತದೆ; Vessel uses to bake or prepare roti;

- ಕೊಣಗೆ/ಕೊಣಿಗೆ/ಕೊಣಗಿ ಪದಗಳಿಗೆ ರೊಟ್ಟಿ ಸುಡುವ, ರೊಟ್ಟಿ ತಯಾರಿಸಲು ಉಪಯೋಗಿಸುವ ಪಾತ್ರೆ ಎಂಬ ವಿವರಗಳಿವೆ;
- ಬ, ಮ, ವ ಕಾರಗಳು ಓಷ್ಠ್ಯ ಧ್ವನಿಮಾಗಳಾಗಿದ್ದು, ಇವುಗಳು ಪರಸ್ಪರ ವ್ಯತ್ಯಯಗೊಳ್ಳುವುದು ಸಾಮಾನ್ಯ; ಕೊಣಬಿಗೆ/ಕೊಣಮಿಗೆ/ಕೊಣವಿಗೆ ಎಂಬುದು ಉಚ್ಚಾರಣೆಯಲ್ಲಿ ಕೊಣಗಿ/ಕೋಣಿಗೆ ಆಗುವಲ್ಲಿ ಪದದ ನಡುವಣ ಅನುನಾಸಿಕತ್ವ('ವ'ಕಾರ ಅನುನಾಸಿಕವೂ ಹೌದು) ಲೋಪ ಆಗಿದೆ ಎನ್ನಬಹುದು; ಕೊಣಬಿಗೆ, ಕೊಣಮಿಗೆ, ಕೊಣವಿಗೆ, ಕೊಣಗೆ, ಕೊಣಗಿ, ಕೋಣಿಗೆ ಎಂಬೆಲ್ಲಾ ಪದಗಳು ಸೂಚಿಸುವ ಅರ್ಥ ಒಂದೇ ಆಗಿದೆ;
- 'ಕೊಮ್ಮಣಿಗೆ' ಎಂಬ ರೂಪವೂ ಇದೆ(ಕ.ಜಾ.ಕೋ); 'ಕೊಣಮಿಗೆ' ಪದದ ನಡುವಣ ಅಕ್ಷರಗಳು ಉಚ್ಚಾರಣೆಯಲ್ಲಿ ಪರಸ್ಪರ ಅದಲು ಬದಲು ಆಗಿ 'ಕೊಮಣಿಗೆ' ಎಂದಾಗಿದೆ; ನಂತರದಲ್ಲಿ 'ಮ'ಕಾರಕ್ಕೆ ಸಜಾತೀಯ ಒತ್ತಕ್ಷರ ಬಂದು 'ಕೊಮ್ಮಣಿಗೆ' ಎಂಬ ರೂಪ ಸಿದ್ಧಗೊಂಡಿದೆ; ಇದು ಕೊಣಮಿಗೆ, ಕೊಣಬಿಗೆ ಅರ್ಥದಲ್ಲಿಯೇ ಬಳಕೆಯಲ್ಲಿದೆ.

ಕೊಣಬು koṇabu :

- ಒಣಗಿದ, ಸೊರಗಿದ(ದ.ಕ)(ಕ.ಜಾ.ನಿ); Declined, withered, shrunken;
- ಕಾಯಿ ಪಲ್ಯ ಬೆರೆಸಿ ಮಾಡಿದ ಹುಳಿ; ಒಂದು ಬಗೆಯ ಸಾಂಬಾರು(ಕ.ನಿ/ದ್ರಾ.ಭಾ.ಜ್ಞಾ.ಪ.ಕೋ); A type of curry made with vegetables;
- ಅವ್ಯವಸ್ಥೆ, ಗೊಂದಲ;
- ತಮಿಳಿನಲ್ಲಿ 'ಕುಟಂಬು' ಎಂಬ ಪದ ಪ್ರಯೋಗದಲ್ಲಿದ್ದು ಮಿಶ್ರಣಗೊಳ್ಳು; ತೊಳಸಿ ಹೋಗು; ತೊಂದರೆಯಾಗು; ಗೊಂದಲಕ್ಕೊಳಗಾಗು; ಕ್ಷೋಭೆಗೊಳ್ಳು ಎಂಬ ಅರ್ಥಗಳಿವೆ; ಆದುದರಿಂದ ಮಿಶ್ರ ತರಕಾರಿಗಳಿಂದ ಮಾಡಿದ ಹುಳಿ, ಗೊಂದಲ, ಕ್ಷೋಭೆ ಎಂಬ ಅರ್ಥಗಳನ್ನೂ ಗಮನಿಸಬಹುದು; Confusion, chaos, disorder;
- ತ: ಕುಟಂಬು, ಕುಟಪ್ಪು, ಕುಟಪ್ಪಮ್, ಕುಟ್ಟೈ; ಮ: ಕುಟಂಬು, ಕುಟಪ್ಪಮ್, ಕುಟಕ್ಕು, ಕುಟಂಬುಗ, ಕುಟೆಕ್ಕ(ದ್ರಾ.ಭಾ.ಜ್ಞಾ.ಪ.ಕೋ).

ಕೊಣಬೆ koṇabe :

- ಬಣಬೆ; ಮೆದೆ(ಕ.ನಿ)(ಜ.ನಿ); Hay stack;
- ಬಣವೆ(ಮಂಡ್ಯ.ಜಿ);
- ಹುಲ್ಲನ್ನು ಒಂದೆಡೆ ಸಂಗ್ರಹಿಸಿ, ಮಳೆಗೆ ನೆನೆದು ಹಾಳಾಗದಂತೆ ಮೆದೆ ಹಾಕುವುದುಂಟು; ಇಂತಹ ಹುಲ್ಲಿನ ಮೆದೆಯನ್ನು ಕೊಣಬೆ, ಬಣಬೆ, ಬಣವೆ ಎಂದೆಲ್ಲಾ ಕರೆಯಲಾಗುತ್ತದೆ; Hay stack in a pyramid shape to preserve hay for cattle for a long period and to protect from raining;
- ಮೇಲಿನ ನೆತ್ತಿಯ ಭಾಗವನ್ನು ಕೂಡಿಕೊಂಡಂತೆ ಕಿರಿದಾಗಿ ಮಾಡಿ, ಮೇಲಿನಿಂದ ಕೆಳಭಾಗಕ್ಕೆ ಅಗಲವಾಗುತ್ತಾ ಎರಡೂ ಕಡೆ ಇಳಿಜಾರು ಆಗುವಂತೆ ಮಾಡುತ್ತಾರೆ; ಅಗತ್ಯಕ್ಕೆ ಬೇಕಾದಷ್ಟು ಉದ್ದದವರೆಗೆ ಒಣಗಿದ ಹುಲ್ಲನ್ನು ಜೋಡಿಸಿ ಮೆದೆ ಹಾಕಲಾಗುತ್ತದೆ; ಬಿದ್ದ ಮಳೆ ನೀರು ಒಳಗೆ ಇಳಿಯದೆ ಇಳಿಜಾರಿನಲ್ಲಿ ಜಾರಿ ಕೆಳಕ್ಕೆ ಬೀಳುವುದರಿಂದ ಒಳಭಾಗದ ಒಣಹುಲ್ಲಿಗೆ ನೀರು ಇಳಿಯುವುದಿಲ್ಲ; ಇದರಿಂದ ಬಹಳ ಕಾಲದವರೆಗೆ ಸಂಗ್ರಹಿಸಿದ ಹುಲ್ಲನ್ನು ದನಕರುಗಳಿಗೆ ಬಳಸಲು ಅನುಕೂಲವಾಗುತ್ತದೆ.

ಕೊಣಬೇವು koṇabēvu :

- ಒಂದು ಬಗೆಯ ಮರ(ಬೆಂ.ಜಿ); A type of tree belongs to Neem family;
- ಬೇವಿನ ಜಾತಿಗೆ ಸೇರಿದ್ದು; ಕಿರುಬೇವು;
- ಚಿಕ್ಕದಾದ, ಕಿರಿದಾದ ಎಲೆಗಳನ್ನುಳ್ಳ, ಗಿಡ್ಡವಾದ, ಗಂಟುಗಂಟುಗಳುಳ್ಳ ಕಾಂಡ, ರೆಂಬೆಗಳುಳ್ಳ, ಎತ್ತರಕ್ಕೆ ಬೆಳೆಯದ ಬೇವು; The leaves of this tree belongs to neem family has small sized leaves, but with good growth and height;
- ಹೆಬ್ಬೇವು, ಸಾಮಾನ್ಯವಾದ ನಾಟಿ ಬೇವಿಗಿಂತ ಚಿಕ್ಕದಾಗಿರುವುದರಿಂದ 'ಕೊಣಬೇವು' ಎಂದು ಕರೆದಿರುವಂತಿದೆ;
- —***ಕೊಣಬೇವಿನ ಪತ್ರೆ*** : ಬೇವಿನ ಸೊಪ್ಪನ್ನು ಜನಪದರು ಶಕ್ತಿದೇವತೆಗಳ ಪೂಜೆಗೆ ಬಳಸುತ್ತಾರೆ; ಆದುದರಿಂದ ಬೇವಿನ ಸೊಪ್ಪಿಗೆ ಕೂಡ ಪತ್ರೆ(ಬಿಲ್ವ ಪತ್ರೆ ಇದ್ದಂತೆ) ಎಂಬ ಶಿಷ್ಟ ಸಂಸ್ಕೃತಿಯ ಪದ ಪ್ರಯೋಗವಾಗಿದೆ; ಪತ್ರೆಯಾಗಿ ಬಳಸುವ ಬೇವಿನ ಸೊಪ್ಪು ಹೆಬ್ಬೇವಿನ ಸೊಪ್ಪು ಆಗಿರುವುದಿಲ್ಲ; ಸಾಮಾನ್ಯ ಬೇವು ಇಲ್ಲವೆ ಕೊಣಬೇವಿನ ಸೊಪ್ಪನ್ನು ಪತ್ರೆಯಾಗಿ ಬಳಸುವುದುಂಟು.

ಕೊಣಮಾವು koṇamāvu :

- ಕೊಣ್ಣಮಾವು/ಕೊಂಡಮಾವು>ಕೊಡಮಾವು> ಕೊಣಮಾವು; A type of tree usually uses in the auspicious occasions such as to decorate the idols of Gods and Goddesses

and to perform puja along with other flowers in the temple;

- ಕೊಣ್ಣಮಾವು ಉಚ್ಚಾರಣೆಯಲ್ಲಿ 'ಡ' ಒತ್ತು ಬಿಟ್ಟು ಹೋಗಿ 'ಕೊಣಮಾವು' ಆಗಿರುವ ಸಾಧ್ಯತೆ ಇದೆ; ಇಲ್ಲವೆ ಕೊಣ್ಡಮಾವು/ಕೊಂಡಮಾವು>ಕೊಡಮಾವು ಆಗಿ ನಂತರ 'ಡ'ಕಾರಕ್ಕೆ ಅದೇ ವರ್ಗದ ಅನುನಾಸಿಕೀಕರಣದಿಂದಾಗಿ 'ಣ'ಕಾರ ಬಂದು 'ಕೊಣಮಾವು' ಎಂದಾಗಿರುವುದು ಸಹಜವಾಗಿದೆ; ಇದು 'ಕೊಣ್ಮಾವು' ಎಂದೂ ಉಚ್ಚಾರಣೆಯಲ್ಲಿದೆ; A kind of supportive tree to sustain jasmine creeper(usually in the backyard of the houses);
- ಪೂಜೆಗೆ ಬಳಸುವ ಪತ್ರೆಯ ಒಂದು ಮರ(ಮೈ.ಜಿ);
- ದೇವಾಲಯಗಳಲ್ಲಿ ನಡೆಯುವ ಪೂಜೆಗಾಗಿ ಮಲ್ಲಿಗೆ ಹೂವು ಮತ್ತು ಕೊಣಮಾವಿನ ಪತ್ರೆ ದೊರೆಯುವಂತೆ ದೇವಾಲಯಗಳ ಮುಂದೆ ಅಥವಾ ಪಕ್ಕದಲ್ಲಿ ಕೊಣಮಾವಿನ ಮರ ಬೆಳೆಸಿ, ಅದಕ್ಕೆ ಮಲ್ಲಿಗೆ ಹಂಬನ್ನು ಹಬ್ಬಿಸುತ್ತಿದ್ದುದು ಸಾಮಾನ್ಯ; ಮಲ್ಲಿಗೆ ಹೂವಿನ ಜೊತೆಯಲ್ಲಿ ಪತ್ರೆಯಾಗಿ ಕೊಣಮಾವಿನ ಸೊಪ್ಪು ಬಳಕೆ ಬೆಳೆದು ಬಂದಿದೆ; The leaves of this are used as fodder for sheep and goats;
- ಮನೆಗಳ ಮುಂದೆ ಇಲ್ಲವೆ ಹಿತ್ತಲಲ್ಲಿ ಕೊಣಮಾವಿನ ಮರ ಬೆಳೆಸಿ ಮಲ್ಲಿಗೆಯ ಬಳ್ಳಿ ಹಬ್ಬಿಸಿಕೊಳ್ಳುವುದು ವಾಡಿಕೆ;
- ಕೊಣಮಾವಿನ ಕಡ್ಡಿಗಳನ್ನು ಬೇಲಿಗೆ ಸಾಲಾಗಿ ನೆಡುತ್ತಾರೆ; ಕಡ್ಡಿಗಳು ಚಿಗುರಿ ಉತ್ತಮ ಹಸಿರು ಬೇಲಿಯಾಗಿ ನಿರ್ಮಾಣವಾಗುತ್ತದೆ; ಕಡ್ಡಿಗಳು ಬೆಳೆಯುತ್ತಾ ಹೆಣೆದುಕೊಂಡಂತಾಗಿ ದನಕರು, ಪ್ರಾಣಿಗಳು ಮತ್ತು ಮನುಷ್ಯರು ಬೇಲಿಯಲ್ಲಿ ನುಸುಳಿ ಒಳ ಹೋಗಲು ಸಾಧ್ಯವಾಗುವುದಿಲ್ಲ;
- ಕೊಣಮಾವಿನ ಸೊಪ್ಪು ಆಡು, ಕುರಿಗಳಿಗೆ ಉತ್ತಮ ಆಹಾರ; ಸೊಪ್ಪಿನ ಸಮೇತ ಸಣ್ಣ ಸಣ್ಣ ರೆಂಬೆಗಳನ್ನು ಕತ್ತರಿಸಿ ತಂದು ಆಡು, ಕುರಿಗಳಿರುವ ಕೊಪ್ಪಲಿನಲ್ಲಿ ಹಗ್ಗದಿಂದ ನೇತು ಹಾಕಿ ಕಟ್ಟುತ್ತಾರೆ; ಇದರ ಸುತ್ತಲೂ ನಿಂತ ಆಡು, ಕುರಿಗಳು ಕೊಣಮಾವಿನ ಸೊಪ್ಪನ್ನು ತಿನ್ನುವುದು ಸಾಮಾನು ದೃಶ್ಯವಾಗಿದೆ; A herbal medicine for knee joint pain;
- ಇದರ ಸೊಪ್ಪನ್ನು ಬೇಯಿಸಿ ಮಂಡಿನೋವಿಗೆ ಶಾಖ ಕೊಡುವುದರಿಂದ ಮಂಡಿನೋವು ಉಪಶಮನವಾಗುತ್ತದೆಂದು ಹೇಳುತ್ತಾರೆ.

ಕೊಣಮಿಣಿ koṇamiṇi :

- ಕುಣಮಿಣಿ/ಕುಣಿಮಿಣಿ>ಕೊಣಮಿಣಿ; Useless, a word of mockery;
- ಒಂದು ಜನಪದ ವಾದ್ಯ ವಿಶೇಷ(ಬೆಂ.ಗ್ರಾ.ಜಿ/ಜಾ.ನಿ); A folk musical instrument;
- ಕೆಲಸಕ್ಕೆ ಬಾರದ(ಮಂಡ್ಯ.ಜಿ);
- ಒಂದು ಅಣಕು ಶಬ್ದ; ಎದುರಾಳಿಯನ್ನು ಅಣಕಿಸಲು ತೋರ ಬೆರಳು ಕುಣಿಸಿ ಹೇಳುವ ಮಾತು (ಮಂಡ್ಯ.ಜಿ). Mock/ridicule somebody by pointing index finger.

ಕೊಣಲೂದಿ koṇalūdi :

- ಕೊಳಲನ್ನು ಊದಿ; ಕೊಳಲನ್ನು+ಊದಿ= ಕೊಳಲೂದಿ; ಕೊಳಲೂದಿ>ಕೊಣಲೂದಿ ಎಂದಾಗಿದೆ; Playing a flute;
- ಉಚ್ಚಾರಣೆಯಲ್ಲಿ ಳ>ಣ ಮತ್ತು ಣ>ಳ ಆಗುವುದು ಸಾಮಾನ್ಯ; ಉದಾ: ಕೊಳ>ಕೊಣ ಗಮನಿಸಬಹುದು;
- ಕೊಳಲು > ಕೊಣಲು; 'ಳ' ಕಾರದ ಅನುನಾಸಿಕೀಕರಣದಿಂದ ಉಂಟಾಗಿದೆ.

ಕೊಣಲೆ koṇale :

ಬತ್ತದ ಗದ್ದೆಯಲ್ಲಿ ಬೆಳೆದ ಒಂದು ಬಗೆಯ ಕಳೆಹುಲ್ಲು(ಕ.ಜಾ.ನಿ). A kind of weed grows in paddy field.

ಕೊಣವೆ ನೇಗಿಲು koṇave nēgilu :

- ಉಳುಮೆ ಮಾಡುತ್ತಾ ಸವೆದು ಮೋಟಾಗಿರುವ(ಮೊಂಡಾದ) ನೇಗಿಲು; ಕೊಣೆ ನೇಗಿಲು; ಕೊಣವೆ ಬುರುಡೆ; ಕೊಣೆ ಬುಂಡೆ; A wornout plough, an instrument for furrowing and turning up the soil;
- 'ಕೊಣವೆ' ಎಂಬುದಕ್ಕೆ ಸವೆದು ಮೋಟಾದ, ಮೊಂಡಾದ ಎಂಬ ಅರ್ಥವಿದೆ; ಉಳುಮೆ ಮಾಡುತ್ತಾ ಸವೆದು ಮೋಟಾದ ನೇಗಿಲನ್ನು ಕೊಣವೆ ನೇಗಿಲು ಎಂದು ಕರೆಯಲಾಗುತ್ತದೆ; (ಕೊಣವೆ+ನೇಗಿಲು);
- ಗಟ್ಟಿಯಾದ ಗೊಬ್ಬಳಿ ಮರ(ಜಾಲಿಮರ)ದ ತುಂಡನ್ನು ಕೈಬಾಚಿಯಿಂದ ಕೆತ್ತಿ ನೇಗಿಲು ಮಾಡುತ್ತಾರೆ; ಇದಕ್ಕೆ 'ನೇಗಿಲು ಇಕ್ಕುವುದು' ಎಂದು ಕೂಡ ಕರೆಯುವುದುಂಟು;
- ಹೊಸದಾಗಿ ಇಕ್ಕಿದ ನೇಗಿಲು ಹಿಂಬದಿಯಲ್ಲಿ ದಪ್ಪನಾಗಿದ್ದು ನೆಲ ಸೀಳುವ ಮುಂಭಾಗಕ್ಕೆ ಬಂದಂತೆ ಸಣ್ಣದಾಗುತ್ತಾ ಬಂದು ತುದಿಯಲ್ಲಿ ಚೂಪಾಗಿಯೂ

ಇರುತ್ತದೆ; ತಳದಲ್ಲಿ ಇಳಿಜಾರಾಗಿದ್ದು, ಮೇಲೆ ಮಟ್ಟಸವಾಗಿರುತ್ತದೆ; ಉಳುವಾಗ ಮರದ ನೇಗಿಲು ಬೇಗ ಸವೆಯದಂತೆ ಕಬ್ಬಿಣದ ದಬ್ಬೆಯಿಂದ ಮಾಡಿದ ಸುಮಾರು ಒಂದೂವರೆ ಅಡಿ ಉದ್ದದ ಗುಳವನ್ನು ನೇಗಿಲಿನ ಮೇಲ್ಭಾಗದಲ್ಲಿನ ಚೂಪಾದ ಭಾಗಕ್ಕೆ ಅಳವಡಿಸಿರುತ್ತಾರೆ; ಉಳುಮೆ ಮಾಡುವಾಗ ಗುಳದಿಂದ ಭೂಮಿ ಸೀಳುತ್ತಾ, ಸೀಳಿದ ಮಣ್ಣನ್ನು ನೇಗಿಲಿನ ಹಿಂಬದಿಯ ದಪ್ಪ ಭಾಗದಿಂದ ಅಕ್ಕಪಕ್ಕಕ್ಕೆ ತಳ್ಳಿ ಆಳವಾದ ಗೆರೆ ಮೂಡಿಸುತ್ತಾ ಉಳುಮೆ ಸಾಗುತ್ತದೆ; ಕ್ರಮೇಣ ಗುಳ ಮತ್ತು ನೇಗಿಲು ಸವೆಯ ತೊಡಗುತ್ತವೆ; ಮತ್ತೆ ಉಳುಮೆ ಮಾಡಲು ಸಾಧ್ಯವಾಗದ ಸ್ಥಿತಿಗೆ ಸವೆದು ಮೋಟಾದ ನೇಗಿಲನ್ನು ಕೊಣವೆ ನೇಗಿಲು ಎಂದು ಕರೆಯುತ್ತಾರೆ; ಕೆಲವು ಕಡೆ ಕೊಣೆ ಬುಂಡೆ, ಕೊಣೆನೇಗಿಲು ಎನ್ನುವುದೂ ಉಂಟು(ಕೊಣವೆ ಬುರುಡೆ>ಕೊಣೆ ಬುಂಡೆ*); ಪ್ರ: 'ಕೊಣವೆ ನೇಗಿಲಲ್ಲಿ ಉತ್ತರೆ ಭೂಮಿ ಸರಿಯಾಗಿ ಕೀಳುವುದಿಲ್ಲ*'; A large farming implement with one or more blades fixed in a frame, drawn over soil to turn it over and cut furrows in preparation for the planting of seeds; long time use of the plough will make its blade blunt; the blades are joined to a wooden frame;

- ಕೊಣವೆ ನೇಗಿಲು>ಕೊಣ್ವೆ ನೇಗಿಲು ಆಗಿ ಬಳಕೆಯಲ್ಲಿದೆ;
- ಕೊಣ್ವೆನೇಗ್ಲು; ಗಟ್ಟಿಯಾದ ನೆಲವನ್ನು ಉಳಲು ಬಳಸುವ ನೇಗಿಲು(ಕೃ.ಪ.ಕೋ);
- ಹೊಸದಾಗಿ ಕರುಗಳಿಗೆ ಉಳುವುದನ್ನು ಅಭ್ಯಾಸ ಮಾಡಿಸುವಾಗ ಭೂಮಿ ಮೇಲೆ ಮೇಲೆ ಕೀಳುವಂತೆ ಕೊಣವೆ ನೇಗಿಲು ಕಟ್ಟುವುದುಂಟು;
- ರಾಗಿ ಪೈರು ನಾಟಿ ಮಾಡಲು ಗದ್ದೆಯಲ್ಲಿ ಸಾಲಾಗಿ ಪಟ ಸೀಳುವಾಗ(ತೆರೆ/ಗೆರೆ ಹೊಡೆಯಲು) ಕೊಣವೆ ನೇಗಿಲನ್ನೇ ಬಳಸುತ್ತಾರೆ; ಇದರಿಂದ ಪಟಗಳು ಆಳವಾಗಿ ಇಳಿಯದೆ ರಾಗಿ ಪೈರು ನೆಡಲು ಅನುಕೂಲವಾಗಿರುತ್ತದೆ;
- ಕೊಣವೆ ನೇಗಿಲಿನ ಚೂಪಾದ ಭಾಗವನ್ನು ಮೇಲೆ ನೇರವಾಗಿ ಇರುವಂತೆ, ತಳಭಾಗವನ್ನು ಭೂಮಿಯಲ್ಲಿ ಸ್ವಲ್ಪ ತಗ್ಗು ತೋಡಿ ಭದ್ರವಾಗಿ ನಿಲ್ಲಿಸಿ, ಚೂಪಾದ ಗುಳದ ಭಾಗದ ಮೇಲೆ ತೆಂಗಿನಕಾಇಯನ್ನು ಒತ್ತಿ ಸಿಪ್ಪೆ ಸುಲಿಯಲು ಬಳಸುತತಾರೆ;
- ಗುಳವನ್ನು ತೆಗೆದು ಹಾಕಿ, ಕೊಣವೆ ಬುರುಡೆಯನ್ನು ಸೀಳಿ ಸೌದೆಯಾಗಿ ಬಳಸುವುದೂ ಉಂಟು; **ವ್ಯರೂ:** ಕೊಣ್ವೆ ಬುಂಡೆ;
- *—ಕೊಣವೆಗುಳ/ಕೊಣ್ವೆಗುಳ* : ಉಳುಮೆ ಮಾಡಿ ಸವೆದ ಗುಳ; ಇದನ್ನು ಕೊಬ್ಬರಿ ಒಡೆಯಲು ಬಳಸುವರು(ಕ.ಜಾ.ಕೋ); A wornout or blunted blade of plough;
- ನೇಗಿಲಿನ ಸವೆದ ಗುಳ; ಇದನ್ನು ಕೊಣವೆ ಬುಂಡೆಯಿಂದ ಬೇರ್ಪಡಿಸಿ ಕೊಬ್ಬರಿ ಸೀಳಲು ಬಳಸುತ್ತಾರೆ.

ಕೊಣವೇಗೌಡ koṇavēgauḍa :

- ಒಂದು ಜನಪದ ಕಥನಗೀತೆ; ಆ ಕಥನಗೀತೆಯ ನಾಯಕ ಪಾತ್ರ; 'ಕುಲದಲ್ಲಿ ಕುರುಬಗೌಡ, ಜಾತಿಯಲ್ಲಿ ಹೆಗ್ಗಡೆಗೌಡ'; A protagonist in a folk verse tale; he belongs to Kuruba Gowda(community) but in caste he is a `Heggade Gowda';
- ಸಿರಿವಂತನಾದರೂ ಶ್ರಮವನ್ನು ಬಿಡದವನು; ತನ್ನ ಶ್ರಮದ ಫಲವನ್ನು ಯಾರೊಡನೆಯೂ ಹಂಚಿಕೊಳ್ಳದ, ತಾನೂ ಅನುಭವಿಸದ, ಯಾಚಕರಿಗೂ ದಾನ ಮಾಡದ ಜಿಗುಟು ಸ್ವಭಾವದ ಜಿಪುಣಾಗ್ರೇಸರ; ಹಟಮಾರಿ ಸ್ವಭಾವದವ; Rich but hard worker, a miser, an obstinate;
- ಕೊಣವೇಗೌಡನ ಈ ಅಂಟುಗುಣಕ್ಕೆ ರೋಸಿ ಹೋದ ಶಿವ ಕೊನೆಗೆ "ಪ್ರಪಂಚದಲ್ಲಿ ನೀನಿರಬ್ಯಾಡ! ನಿನ್ನ ನಡತೆಯ ಕಲಿಯುತ್ತಾರೆ! ಮೂರು ದಿವಸದ ಮಧ್ಯಾನಕ್ಕೆ ಕೈಲಾಸಕ್ಕೆ ಬಾರೊ ಗೌಡ" ಎಂದು ಕರೆಸಿಕೊಳ್ಳುತ್ತಾನೆ;
- ಸಾಲಿಗೆ ಸಾವಿರ ಕಂಬಗಳಿರುವ, ಮುನ್ನೂರು ತೊಟ್ಟಿ ಪಡಸಾಲೆಗಳಿರುವ, ಬಚ್ಚಲ 'ಕಲ್ಲೆ'ಗೆ ಬೆಳ್ಳಿ ಬಂಗಾರ ಹಾಕಿಸಿದ ದೊಡ್ಡ ಮನೆ ಕೊಣವೇಗೌಡನದು; ಅದು ಸಾಲದು ಎಂದು 'ಮಾಡಿ' ಕಟ್ಟಿಸಿ ಕಳಸ ಹಾಕಿಸಿದ್ದ; ಮನೆಯೊಳಗೆ ರಾಮ ಲಕ್ಷ್ಮಣ ಅನ್ನೋ ಕಣಜಗಳು; ಕಣಜಗಳಲ್ಲಿ ಹಣ, ಬಂಗಾರದ ಒಡವೆ ಪಾತ್ರೆ ಪಗಡೆ; ಬಳಸಿದರೆ ಸವೆದು ಹೋಗುತ್ತವೆ, ಖರ್ಚಾಗಿ ಹೋಗುತ್ತದೆ ಅನ್ನೋ ಬುದ್ಧಿ;
- ಒಣಗಲು ಹಾಕಿದರೆ ಕೋಳಿ ಕೊಕ್ಕ ಮೇದುಕೊಳ್ಳುತ್ತವೆಂದು ಮೂರು ಪಡಿ ಮುಗ್ಗಲು ಜೋಳವನ್ನು ಹಾಗೆಯೇ ಬೀಸಿ ಗಂಜಿ ಕಾಯಿಸಲು ಹೆಂಡತಿಗೆ ಆದೇಶ ಮಾಡುತ್ತಾನೆ; ಊರ ಮುಂದಿನ ಹೊಲಕ್ಕೆ ಹೋಗಿ ಮೂರು ಮಂಕ್ರಿ ಮುದಿ ಅಣ್ಣೇಸೊಪ್ಪು ತಂದು ಸೋಸದೆ, ಉಪ್ಪು ಹಾಕದೆ ಬೇಯಿಸಿ ತಿನ್ನಲು ಕೊಡಬೇಕೆಂದು ಸೂಚಿಸುತ್ತಾನೆ;

- ಕೊಣವೇಗೌಡನ ಸತ್ಯ ನೋಡಬೇಕೆಂದು ಮಾಯದ ಆರಂಭ ಕೊಟ್ಟ, ಹುಚ್ಚು ಬೆಳೆಯ ಕೊಟ್ಟ ಪರಮೇಶ್ವರ; ಕೂತುಕೊಂಡು ಅಂಬಲಿ ಕುಡಿದರೆ ಚರಕ–ಪರಕ ಅಂತ ಸದ್ದಾಗುತ್ತದೆ, ಕೇಳಿದ ನೆರೆಹೊರೆಯವರು ಬಂದು ನನಗೂ ಕೊಡು ಅಂತಾರೆ ಎಂದುಕೊಂಡು ಕೊಟ್ಟಿಗೆಯಿಂದ ಮೂರು ಮಂಕರಿ ಸೆಗಣಿ ತರಿಸಿ ನಡುಮನೆಯಲ್ಲಿ ಕಟ್ಟೆ ಕಟ್ಟಿಸಿ ಗುಡಾಣದ ಅಂಬಲಿ ಬಿಡಿಸಿಕೊಂಡು, ಕತ್ತೆ ತಿಂದಹಾಗೆ ಅಣ್ಣೇಸೊಪ್ಪು ತಿಂದು, ಮಕಾಡೆ ಬಿದ್ದುಕೊಂಡು ನಾಯಿ ನೆಕ್ಕಿದ ಹಾಗೆ ಅಂಬಲಿ ಕುಡಿದ ಆಸಾಮಿ ಕೊಣವೇಗೌಡ; ಅಂಬಲಿ ಕಟ್ಟೆಗೆ ನೊಣ ಬಿದ್ದರೆ ಅಂಬಲಿ ಕುಡಿದುಕೊಂಡಿತೆಂದು ನೊಣವನ್ನೇ ಸೀಪಿ ಬಿಸಾಡಿದ ಭೂಪ;

  Konavegowda was a miser; according to the verse even the Lord Shiva himself disgusted by the way of his life style and stingy behaviours; then, he had summoned him to his `Kailasa'; `Kailasa' is an abode of Lord Shiva and Parvathi; his, intention was not make his behaviours an ideal for others on the earth; the story tells about Konavegowda's trickery to escape from charity and at the same time tells the importance of `Shaiva consciousness'; Shaivas are the followers or worshippers of `Lord Shiva'; the sages are staunch followers of Lord Shiva are called `Jangamas' they are wandering religious monks; Jangamas are disciples of Lord Shiva; Konavegowda, a hero of this folk verse tale refuses to help a Jangama with a dole;
- ಊರ ಮುಂದಲ ಹೊಲದಲ್ಲಿ ಬೇಸಾಯ ಮಾಡಿದರೆ ಕಂದಾಯ, ಕಾಣಿಕೆ, ಹಡದೆ, ಮಿರಾಸು, ಹಿಟ್ಟಿ, ಬಿಟ್ಟಿ ಕೊಡಬೇಕಾಗುತ್ತದೆಂದು ಏಳು ಬೆಟ್ಟದ ಸೊಂಪಲಿಗೆ ಹೋಗಿ ಹನ್ನೆರಡು ಏರು ಕಟ್ಟಿ ಉಳುತ್ತಾನೆ; ಮೂರು ಕಂಡುಗ ಬಿತ್ತಬೇಕಾದ ಕಡೆ ಮೂರು ಪಡಿ ಜೋಳ ಬಿತ್ತುತ್ತಾನೆ; ಮಾರಿಗೊಂದು ಕಾಳು ಚೆಲ್ಲಿದ್ದರೂ ಅದೂ ದಟ್ಟವಾಯಿತೆಂದು ಸ್ವಲ್ಪ ಆಯ್ದುಕೊಳ್ಳುತ್ತಾನೆ;
- ಬೇಸಿಗೆ ಬಿಸಿಲಿನಲ್ಲಿ ಶಿವರಾತ್ರಿ ಕಾಲದಲ್ಲಿ ಹಾಳಾದ ಹೊಲಕ್ಕೆ ಜ್ವಾಳ ಬಿತ್ತಿದೆ, ಆದದೊ ಕಾಣೆ ಹೋದದೋ ಕಾಣೆ ಎಂದು ಪರಿತಪಿಸುತ್ತಾನೆ; ಕೇಳೊ ಪರಮೇಶ್ವರ, ನಾಡಿಗಿಲ್ಲದ ಮಳೆಯ ನನ್ನ ಹೊಲಕ್ಕೆ ಹುಯ್ಯಿಸೊ, ಸೀಮೆಗಿಲ್ಲದ ಬೆಳೆಯ ಕೊಡಿಸೊ, ಅರ್ಧ ಕಾಸಿನ ಹರಿಸಾವೆ ಮಾಡುವೆ, 'ಕೀಲು ಕಾಸಿ'ನ ಮುಡಿಪು ಕಟ್ಟುವೆ, ಒಂದು ಕಾಸಿನ ಅಕ್ಕಿ ತರಿಸಿ ಹನ್ನೆರಡು ಜನ ಗಣಂಗಳಿಗೆ ಸಂತರ್ಪಣೆ ಮಾಡಿಸುವೆ ಎಂದು ಹರಕೆ ಕಟ್ಟಿಕೊಳ್ಳುತ್ತಾನೆ;
- ಹೊಲದ ಬೆಳೆ ನೋಡಿ ಹಕ್ಕಿಗಳು ತಿಂದುಕೊಳ್ಳುತ್ತವೆಂದು ಒಂದೊಂದು ತೆನೆಗೂ ಕುಲಾವಿ ಹೊಲಿಸಿ ಕಟ್ಟಿದ; ಸಾಲದೇ ಹೋದುದಕ್ಕೆ ಗುಮ್ಚಿ ಮುಳ್ಳು ತರಿಸಿ ಮೂರಾಳುದ್ದ ಬೇಲಿ ಹಾಕಿಸಿದ; ಹೊಲದ ಸುತ್ತ ಮೂರಾಳುದ್ದ ಕಂದಕ ತೆಗೆಸಿ ಬೆಂಕಿಕೆಂಡ ತುಂಬಿ ಇರುವೆ ಗಿರುವೆ ಹುಲ್ಲೆ ಸಾರಗ ಬರದ ಹಾಗೆ 'ಸಂಕಾಲೆ' ಹಾಕಿದ; ಎಂಟಾಳುದ್ದ ಅಟ್ಣೆ ಹಾಕಿ ಅದರ ಮೇಲೆ ಕೂತು ಕವಣೇಕಲ್ಲು ಬೀರಿ ಹದ್ದು ಕಾಗೆ ಅಟ್ಟತೊಡಗಿದ;
- ಮಾಯದ ಆರಂಭ ಕೊಟ್ಟ ಮಾಯದ್ದೋರೆ ಶಿವ ಮುದಿ ಜಂಗಮನ ವೇಷ ಹಾಕಿಕೊಂಡು ಗೌಡನ ಸತ್ಯ ನೋಡಬೇಕೆಂದು ಬಂದ; ಹನ್ನೆರಡು ದಿವಸದಿಂದ ಅನ್ನ ಆಹಾರ ಇಲ್ಲ ಅಂತ ಜೋಳಿಗೆ ಒಡ್ಡಿ 'ಒಂದು ತ್ಯನೆ ಕೊಡಪ್ಪ ಮಗನೆ' ಅಂದ; ಹೋಗೋ ಹೋಗೋ ಹುಚ್ಚು ಜಂಗಮ, ಹೊಲದ ಗೌಡ ಊರಿಗೋಗವ್ನೆ, ನಾನು ಜೀತದಾಳು, ನಾನೇ ಗೌಡನಾಗಿದ್ದರೆ ಹತ್ತು ತೆನೆ ಬೇಕಾದರೂ ಕೋಡುತ್ತಿದ್ದೆ, ಊರಿಗೆ ಹೋಗು, ನನ್ನ ಹೆಂಡತಿ ಮನೇಲವಳೆ, ಊಟ ಮಾಡಿಕೊಂಡು ಹೋಗು' ಅಂತ ಸಾಗಹಾಕಿದ ಗೌಡ;
- ಬತ್ತ ಕುಟ್ಟಿ ಹೊಟ್ಟು ಮುಕ್ಕುತ್ತಾ ಗೌಡನ ಹೆಂಡತಿ ನಾಯಿಯ ಹಾಗೆ ನರಳಾಡುತ್ತಿದ್ದ, ಕೋಳಿಯ ಹಾಗೆ ಕೊರಗುಡುತಿದ್ದ ಸಮಯಕ್ಕೆ ಜಂಗಮಯ್ಯ ಗೌಡನ ಮನೆಗೆ ಬಂದ; 'ಮನೆಯ ಗರತಿ ಸಂತೆಗೆ ಹೋಗವಳೆ, ನಾನು ಸಂಬಳದ ಆಳು, ನಮ್ಮಪ್ಪನಾಣೆಗೂ ದೇವರಾಣೆಗೂ ನಾನು ಮನೆಯವಳಲ್ಲ, ಹೊಲಕ್ಕೆ ಹೋಗಪ್ಪ, ಅಲ್ಲಿ ನಮ್ಮೆಜಮಾನ್ರು ಊಟಕ್ಕೆ ಒಂದು ತೆನೆಯನಾದ್ರು ಕೊಡುತ್ತಾರೆ' ಎಂದು ಹಿಂದಿರುಗಿ ಕಳುಹಿಸಿದಳು, ಗೌಡನಿಗೆ ತಕ್ಕ ಮಡದಿ;
- ಮತ್ತೆ ಹೊಲದ ಕಡೆಗೆ ಬರುತ್ತಿದ್ದ ಜಂಗಮನನ್ನು ನೋಡಿದ ಕೊಣವೇಗೌಡ ಅಟ್ಟಣೆಯಿಂದ ನೆಗೆದು, ಎಂಟಾಳುದ್ದ ಕಂದಕ ಹಾರಿ ಊರ ಕಡೆಗೆ ಓಡತೊಡಗಿದ; ಬಿಡದೆ ಹಿಂಬಾಲಿಸಿದ ಜಂಗಮನನ್ನು ತಡೆದು, ನಾನು ಮೊದಲು ಮನೆಗೆ ಹೋಗಿ ಊಟ ಮಾಡುತ್ತಾ ಕೂತಿರುವ ವೇಳೆಗೆ ನೀನು ಬಾ, ಊಟ ಹಾಕಿಸ್ತೀನಿ, ಒಟ್ಟಿಗೇ ಹೋದರೆ ಇಬ್ಬರಿಗೂ ಊಟವಿಲ್ಲದಂತಾಗುತ್ತದೆಂದು ಹೇಳಿ ಹೋದವನು, ಜಂಗಮನ ಕಾಟದಿಂದ ತಪ್ಪಿಸಿಕೊಳ್ಳುವ ಉಪಾಯ ಹೇಳಿದ ಹೆಂಡತಿಗೆ: 'ನಾನು ಸತ್ತವನ ಹಾಗೆ

ಬಿದ್ದುಕೊಂತೀನಿ, ಸ್ಯಾಪೇಲಿ ಸುತ್ತಿ ಕೊಟ್ಟಿಗೆಗೆ ಹಾಕು, ಬೆಲ್ಲದ ನೀರು ಚಿಮುಕಿಸು, ನೊಣ ಮುತ್ತಿಕೊಳ್ತವೆ, ಕಣ್ಣಿಗೆ ಕಾರದಪುಡಿ ಹಾಕಿಕೊಂಡು ಗಂಡ–ಮಕ್ಕಳು ಸತ್ತು ಬಿದ್ದವರೆ ಅಂತ ಬಾಯಿ ಬಡಕೊಳ್ಳಮ್ಮಿ';

- ಮನೆಗೆ ಬಂದ ಜಂಗಮ ಗೌಡನ ಹೆಂಡತಿಯ ಗೋಳು ಕೇಳಿ ಮೂರು ಮಂಕ್ರಿ ಬೆರಣಿ ತರಿಸಿ, ನಡುಮನೆಯಲ್ಲಿ ಬೆಂಕಿ ಹಾಕಿಸಿ, ಮೂರು 'ಬರಗೂಳ' ಕೆಂಪಗೆ ಕಾಯಿಸಿ ಗೌಡನ ಮೈಮೇಲೆ ಜನಿವಾರದ ಬರೆ ತೆಗೆದ; ಗೌಡ ಮಾತಾಡಲಿಲ್ಲ; 'ಕಾಮ ಗುದ್ದಲಿ' ಕೆಂಪಗೆ ಕಾಯಿಸಿ ಮೂಗಿನ ಮೇಲೆ ಇಟ್ಟ, ತೃಣದಷ್ಟು ಇಲ್ಲವಾಯಿತು ಮೂಗು; ಗೌಡ ಮಾತಾಡಲಿಲ್ಲ; ಆನೆ ಕಾಲಿಗೆ ಜುಟ್ಟು ಕಟ್ಟಿಸಿ, ಊರ ಸುತ್ತ ಮೂರು ಸುತ್ತು ಎಳೆಸಿದ; ಮುಳ್ಳಿಗಷ್ಟು ಕಂಡ, ಕಲ್ಲಿಗಿಷ್ಟು ರಕ್ತ ಕಿತ್ತುಕೊಂಡಿತು; ಗೌಡ ಅದಕ್ಕೂ ಮಾತಾಡಲಿಲ್ಲ; ಕಡೆಗೆ ಜಂಗಮ 'ಮಟ್ಪಾದುದ್ದ' ಗುಂಡಿ ತೆಗೆಸಿ, ಗುಂಡಿ ಒಳಕ್ಕೆ ಗೌಡನ್ನ ನಿಲ್ಲಿಸಿ ಎತ್ತಲಾರದ 'ಪಾರೆಕಲ್ಲು' ಎತ್ತಿ ತಲೆಮೇಲೆ ಇಟ್ಟುಕೊಂಡು "ಮಾತಾಡಿಯೋ ತಲೆ ಮೇಲೆ ಹಾಕಲೋ" ಅಂದ; ಜೀವಭಯದಿಂದ ಕಣ್ಣು ಬಿಟ್ಟ ಗೌಡ "ಜ್ವಾಳದ ತೆನೆ ಕೇಳದೆ ಹೋದರೆ ಮಾತಾಡುತ್ತೀನಿ" ಅಂದ; The wife of Konavegowda was a faithful to her husband; her character shows that she had accepted patriarchy without a second thought;
- ಜ್ವಾಳದ ತೆನೆ ಹಾಳಾಗಿ ಹೋಗ, ಕೈಲಾಸಕ್ಕೆ ಬಾ ಅಂತ ಕರೆಸಿಕೊಂಡುಬಿಟ್ಟ ಶಿವ; ಇದು 'ಕೋಣವೇಗೌಡ' ಕಥನಕವನದ ಕಥೆ(ನ.ನೀ.ತಂ);
- ಮಾಂತ್ರಿಕ ಸಂಖ್ಯೆ 'ಮೂರು' ಕಥೆಯುದ್ದಕ್ಕೂ ಅನುರಣಿಸುತ್ತಿರುವುದನ್ನು ಗಮನಿಸಬೇಕು; ಈ ಲೋಕದ ಮೇಲಿನ ಮೂರು ದಿವಸದ ಬದುಕಿಗೆ ಹಂಚಿ ಉಣ್ಣದ ಬುದ್ಧಿ ಯಾಕೆ ಬೇಕು? ಎಂಬ ನೀತಿ ಇಲ್ಲಿರುವಂತಿದೆ; ಆದರೆ ತನ್ನ ಜಿಪುಣತನದ ಮರೆಯಲ್ಲಿ ಗೌಡ ಮೆರೆಯುವ ಜೀವನಪ್ರೀತಿ ಅನನ್ಯವಾದದ್ದು; 'ಇಷ್ಟೊಂದು ಸಂಪತ್ತುಂಟಲ ರಾಣಿ। ಸರೀಕರಂಗೆ ಬದುಕಲಿಬೇಕು। ಸಮದೋರಂಗೆ ಬಾಳಲಿಬೇಕು। ಬಾಳದಿದ್ದರೆ ಆಡಿಕೊಂತಾರೆ। ಅದಕೊಂದು ಬುದ್ಧಿ ಹೇಳೇನು ಕೇಳು' –ಇದು ಗೌಡನ ಧೋರಣೆ;
- ಲಿಂಗ ಜಂಗಮ ಸೇವೆಯ ಮಹತ್ವವನ್ನು ಹೇಳುವ ಶೈವಪ್ರಜ್ಞೆ ಕಥನಗೀತೆಯಲ್ಲಿ ಕೆಲಸ ಮಾಡಿರುವಂತೆ ಕಾಣುತ್ತದೆ; ಆದರೆ ಅವನು 'ಕೋಣವೇಗೌಡ'; (ಕೋಣವೆ=ಮೊಂಡು ನೇಗಿಲು); ಮಣ್ಣಿಗೆ ಅಂಟಿದ ಬದುಕು ಅವನದು;
- ಕೋಣಪಿ(=ತೆನೆ ಬಡಿದು ಕಾಳು ಉದುರಿಸುವ ಬಡಿಗೆಕೋಲು)+ಗೌಡ=ಕೋಣಪೀಗೌಡ>ಕೋಣವೇಗೌಡ ಆಗಿರಬಹುದು; ಪವರ್ಗದ ವ್ಯಂಜನಗಳು ತಮ್ಮ ಅನುನಾಸಿಕತ್ವದಿಂದ ವಕಾರಕ್ಕೆ ವ್ಯತ್ಯಯಗೊಳ್ಳುವುದು ಸಹಜ; ಹೆಸರಿನ ಈ ನಿಷ್ಪತ್ತಿ ಕೂಡ ವ್ಯವಸಾಯ ಮೂಲವನ್ನೇ ಪ್ರತಿನಿಧಿಸುತ್ತದೆ; ತುಳುವಿನಲ್ಲಿ 'ಕೋಣ್ಪು', 'ಕೋಣ್ಪೋ' ರೂಪಗಳಿವೆ; ಹರಿತವಾದ ವಸ್ತುವನ್ನು ತಾಗಿಸಿ ಗಾಯ ಮಾಡುವುದು ಎಂದರ್ಥ (ದ್ರಾ.ಭಾ.ಜ್ಞಾ.ಪ.ಕೋ); ಕೋಣ್ಪೇಗೌಡ>ಕೋಣವೇಗೌಡ ಆಗಿದ್ದರೆ, ಜಂಗಮಯ್ಯ ಕೋಣವೇಗೌಡನ ಮೈಮೇಲೆ ಉಂಟು ಮಾಡಿದ ಗಾಯಗಳ ಸೂಚಕ ಆಗುತ್ತದೆ! **ವ್ಯರೂ:** ಕೋಣಮೇಗೌಡ;
- 'ಮಾರೇಗೌಡ' ಎಂದು ಅವನ ಇನ್ನೊಂದು ಹೆಸರನ್ನು ಗೀತೆ ಹೇಳುತ್ತದೆ;
- ಕೋಣವೇಗೌಡನ ಹೆಂಡತಿ ಗಂಡನಿಗೆ ತಕ್ಕಂಥವಳು; ಪುರುಷಪ್ರಧಾನ ಕೌಟುಂಬಿಕತೆಯನ್ನು ಕಣ್ಣುಮುಚ್ಚಿ ಒಪ್ಪಿಕೊಂಡವಳು ಎಂದೂ ಹೇಳಬಹುದು.

ಕೋಣಸನಗರ konasanagara :

- ಕ್ರಿ.ಶ.೧೫೪೪ರ ೧೯ನೇ ಶಾಸನದಲ್ಲಿ ಈ ಹೆಸರಿನ ಉಲ್ಲೇಖ; A place referred in 19th inscription of 1544AD;
- 'ಕೋಣಸು' ಮೂಲ ರೂಪವಾಗಿದ್ದು, ಅದಕ್ಕೆ 'ನಗರ' ಸೇರಿದ್ದರಿಂದ 'ಕೋಣಸನಗರ' ಎಂದಾಗಿದೆ; Konasu means Fawns; the area mentioned in this inscription might be an abode for more number of deers;
- 'ಕೋಣಸು' ಎಂದರೆ ಜಿಂಕೆಯ ಮರಿ ಎಂದು ಅರ್ಥ; ಜಿಂಕೆಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬಂದಿದ್ದರಿಂದ ಈ ಸ್ಥಳಕ್ಕೆ ಈ ಹೆಸರು ಬಂದಿರಬಹುದು;
- ಹೀಗಾಗಿ ಪ್ರಾಣಿವಾಚಿ ಸ್ಥಳನಾಮ ಇದಾಗಿದೆ.

(E.C- ೧)

ಕೋಣಿ koni :

- ಕುಣಿ; 'ಕುಣಿ' ಧಾತು ಮೂಲ ರೂಪವಾಗಿದೆ; ಇದರಿಂದ 'ಕೋಣಿ' ಆಡುನುಡಿಯ ರೂಪವಾಗಿ ಬಂದಿದೆ; `kuni; kuni' is the original form; `kuni' form change as `koni' in colloquial language;

- ಕುಣಿ>ಕೊಣಿ; ಉ>ಒ ಆಗಿದೆ;
- ಪದಾದಿಯ 'ಉ'ಸ್ವರ 'ಒ'ಆಗುವುದು ಸಾಮಾನ್ಯ ಕ್ರಿಯೆ; ಇದನ್ನು ಸ್ವರ ವ್ಯತ್ಯಯ ಎಂದು ಕರೆಯುತ್ತಾರೆ;
- 'ಕುಣಿ' ಧಾತುವಿಗೆ 'ತ'ಪ್ರತ್ಯಯ ಸೇರಿ 'ಕುಣಿತ'(ಕುಣಿ+ತ) ಎಂಬ ರೂಪ ಉಂಟಾಗುತ್ತದೆ; ಇದು ಸ್ವರ ವ್ಯತ್ಯಯದಿಂದಾಗಿ 'ಕೊಣಿತ' ಎಂಬ ರೂಪ ಪಡೆಯುತ್ತದೆ(ಕುಣಿತ>ಕೊಣಿತ>ಕೊಣತ);
- 'ಕುಣಿ' ಧಾತುವಿಗೆ 'ಇಸು' ಪ್ರತ್ಯಯ ಸೇರಿದಾಗ ಕುಣಿ+ಇಸು=ಕುಣಿಸು ಎಂದಾಗುತ್ತದೆ; ನಂತರ ಕುಣಿಸು>ಕೊಣಿಸು ಆಗುತ್ತದೆ; ಕುಣಿಯುವಂತೆ ಮಾಡುವುದು;
- ***—ಕೊಣಿಕ್ಕ*** : ಕುಣಿತ(ಮಂ.ಜಿ); Dance; *ಪ್ರ: 'ಕೊಣಿಕ್ಕಾಡದಿದ್ದವನ್ ರಂಗಸ್ಥಳ ವಾರ್‍ಯಂಬ್ರ*'(ದ,ಕ);
- ***—ಕೊಣ್ತ*** : (<ಕುಣಿತ); 'ಕುಣಿ' ಧಾತುವಿನ ವಿಶೇಷಣನಾಮ(?) ರೂಪ, ಕುಣಿತ>ಕುಣ್ತ> ಕೊಣ್ತ(ಉ.ಕ.ಜಿ);
- ಕೊಣ್ದ(<ಕುಣಿದ) ಭೂತಕಾಲದ ಕ್ರಿಯಾರೂಪ; ಕೊಣ್ದಾರ(<ಕುಣಿದರು) ಭೂತಕಾಲದ ಬಹುವಚನ ರೂಪ; ಕೊಣ್ದಿತು(<ಕುಣಿದಿತು/ಕುಣಿಯಿತು) ಭೂತಕಾಲದ ಏಕವಚನ ರೂಪಗಳು ಉಂಟಾಗುತ್ತವೆ; Konda is the Verb form of past tense; Kondara is the plural form of past; Kunditu is the singular verb form of past tense;
- ***—ಕೊಣ್ಸತ್ತಾ*** : ಕುಣಿಸುತ್ತದಾ/ಕುಣಿಸುತ್ತದೆಯೆ(?); (ಪ್ರಶ್ನಿಸುವ ರೀತಿಯಲ್ಲಿ ಇದರ ಪ್ರಯೋಗ); Kunisuttada/Kunisuttadeya is question like expression;
- ಮಕ್ಕಳನ್ನು ಗದರಿಸುವಾಗ ಹೀಗೆ ಬಳಸುವುದುಂಟು; ಉದಾ.ಗೆ 'ಅಲ್ಲ್ ಎಂತ ಕೊಣ್ಸ್ತಾ ನಿಂಗೆ'(ಉ.ಕ.ಜಿ) ಎಂಬ ಪ್ರಯೋಗ ಗಮನಿಸಬಹುದು. Used while fear up the children.

ಕೊಣಿಕೆ koṇike :

- ಕುಣಿಕೆ; ಕೊಂಡಿ(ಶಿ.ಜಿ); Noose, hook;
- ಕುಣಿಕೆ>ಕೊಣಿಕೆ ಆಗಿದೆ; ಹಗ್ಗವನ್ನು ಇನ್ನೊಂದು ಹಗ್ಗಕ್ಕೆ ಅಥವಾ ಇನ್ನಾವುದೇ ಸಾಧನಕ್ಕೆ ಕೂಡಿಸಲು ಅನುಕೂಲವಾಗುವಂತೆ ತುದಿಯಲ್ಲಿ ಕೊಂಡಿಯಂತೆ ಹೆಣೆದು ಮಾಡಿದ ಭಾಗ; ವ್ಯರೂ: ಕುಣ್ಕೆ(ಮಂಡ್ಯ.ಜಿ); A part of the rope made a noose to join another rope or anything; in Mandya district used as `Kunke';
- 'ಕುಣಿಕೆ ಹಾಸು' ಎಂದು ಹೇಳುವುದು ರೂಢಿ; ಇಕ್ಕಟ್ಟಿಗೆ ಸಿಕ್ಕಿಸು; ವ್ಯಂಗ್ಯ ರೂಪಕವಾಗಿಯೂ ಬಳಸಬಹುದು. `Kunike hasu' is in usage; fix in stalemate; use in sarcastically.

ಕೊಣಿಗನಹಳ್ಳಿ koṇiganahaḷḷi :

- ಕ್ರಿ.ಶ.೧೬೯೩ರ ೨೮ನೇ ಶಾಸನದಲ್ಲಿ ಈ ಹಳ್ಳಿಯ ಹೆಸರಿದೆ; In 28th inscription of 1693AD this village name is noted;
- ಕೊಣಿಗನ+ಹಳ್ಳಿ=ಕೊಣಿಗನಹಳ್ಳಿ; 'ಕೊಣಿಗ' ಪದ ವ್ಯಕ್ತಿಯೊಬ್ಬನ ಹೆಸರನ್ನು ಸೂಚಿಸುತ್ತಿರಬಹುದು; The word `Koniga' noticed a person name;
- 'ಕೊಣಿಗ' ಎಂಬ ವ್ಯಕ್ತಿಯೇ ಮೂಲ ಪುರುಷನಾಗಿದ್ದು, ಈ ಹಳ್ಳಿಯ ನಿರ್ಮಾಣಕ್ಕೆ ಕಾರಣನಾಗಿರಬಹುದು; ಕ್ರಮೇಣ ಆ ಊರಿಗೆ ಇವನ ಹೆಸರೇ ಉಳಿದು ಬಂದಿರಬಹುದು; `Koniga' a person was may be the originer of this village; so the name remain after him;
- ಅದರಿಂದ ಇದೊಂದು ವ್ಯಕ್ತಿವಾಚಿ ಸ್ಥಳನಾಮ ಎಂದು ಗುರುತಿಸಬಹುದು. So, it is identified as on the name of a person.

(E.C- ೧)

ಕೊಣಿಯ, ಕೊಣ್ಚಿ koṇiya, koṇci :

- ನಿಂತಲ್ಲಿ ನಿಲ್ಲದೆ ಅತಿ ಚಟುವಟಿಕೆ ತೋರಿಸುವವರು (ಕೊಡ.ಜಿ); 'ಕುಣಿ' ಧಾತುವಿನಿಂದ ಬಂದಿವೆ; *ಪ್ರ: 'ಅಂವ ಕೊಣಿಯ, ಅವ್ಳ್ ಕೊಣ್ಚಿ'*; A person shows excessive activity;
- ಕುಣಿತಕ್ಕೂ ಕೊಣಿಯ(ಪುಂ), ಕೊಣ್ಚಿ(ಸ್ತ್ರೀ)ಗೂ ಭಾವದ ನೆಲೆಯಲ್ಲಿ ಸಂಬಂಧವಿದೆಯೇ?– ಇದೆ ಎನಿಸುತ್ತದೆ('ಕುಣಿ' ಉಚ್ಚಾರಣಾ ವ್ಯತ್ಯಯದಲ್ಲಿ 'ಕೊಣಿ' ಆಗುವುದುಂಟು); ಕುಣಿಯುವವರೂ ನಿಂತ ಕಡೆ ನಿಲ್ಲುವುದಿಲ್ಲ; ಆದುದರಿಂದ 'ಕುಣಿ' ಧಾತುವಿನಿಂದ 'ಇಸು' ಪ್ರತ್ಯಯಾಂತ ಕ್ರಿಯಾರೂಪ (ಕುಣಿ+ಇಸು) ಉಂಟಾದಂತೆ, 'ಕುಣಿ' ಧಾತುವಿನಿಂದಲೇ ಪುಲ್ಲಿಂಗ ರೂಪವಾಗಿ 'ಕೊಣಿಯ', ಸ್ತ್ರೀಲಿಂಗ ರೂಪವಾಗಿ 'ಕೊಣ್ಚಿ' ಸಿದ್ಧವಾಗಿವೆ;
- 'ಕೊಣಿಯ', 'ಕೊಣ್ಚಿ'ಗಳು ವಿಶೇಷಣ ಹಾಗೂ ಅನ್ವರ್ಥಕ ರೂಪಗಳು.

ಕೊಣ್ಣಿನ ಕೊಟ್ಟೆ koṇṇina koṭṭe :

- ಒಂದು ಬಗೆಯ ಇರುವೆಯ ಗೂಡು(ಶಿ.ಜಿ); A kind of ant-hill;
- ಕೊಣ್ಣಿ/ಕೊಣ್ಣಿನ ಎಂದರೆ ಇರುವೆ/ಇರುವೆಯ ಎಂದು ಅರ್ಥೈಸಿಕೊಳ್ಳಬೇಕಾಗುತ್ತದೆ; Konni/Konnina means ant;
- 'ಕೊಟ್ಟೆ' ಎಂದರೆ ಗೂಡು; ಅಡಕೆ ಹಾಳೆಯಿಂದ ಮಾಡಿದ ದೊನ್ನೆ; `Kotte' means recess; made of areca nut leaves;
- 'ಕುನ್ನ' ಪದಕ್ಕೆ ಸಣ್ಣ ಕ್ರಿಮಿ/ಕೀಟ, ಪರೋಪಜೀವಿ (ವಿಶೇಷವಾಗಿ ಹೇನು) ಎಂಬ ಅರ್ಥವಿದೆ; 'ಕುನ್ನ' ಉಚ್ಚಾರಣೆಯಲ್ಲಿ 'ಕೊಣ್ಣ' ಆಗಿ, 'ಇನ' ಸೇರಿ 'ಕೊಣ್ಣಿನ' ಆಗಿರಬಹುದು; The word `Kunna' means small insect; the word `Kunna' becomes `Konna' while pronunciation, add suffix `ina' `Konna' may be `Konnina' form in use;
- ಕೊಣ್ಣಿನ ಕೊಟ್ಟೆ ಎಂದರೆ ಸಣ್ಣ ಜಾತಿಯ ಇರುವೆಯ ಗೂಡು ಎಂದು ಅರ್ಥಮಾಡಿಕೊಳ್ಳಬಹುದು. `Konna kotte' means a kind of little ant hill.

ಕೊಣ್ಣೂರು koṇṇūru :

- ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೋಕಿನ ಕ್ರಿ.ಶ.೧೧೮೫ರ ೭ನೇ ಶಾಸನದಲ್ಲಿ ಇದರ ಉಲ್ಲೇಖ; The name referred in the 7th inscription of 1185th AD, Bagalkote district, Jamakhandi taluk;
- ಚಾಳುಕ್ಯ ವೀರಸೋಮೇಶ್ವರನ ಆಳ್ವಿಕೆ; Under the rule of VeeraSomeshwara of Chalukyas;
- ಕೋಣಿಗನೂರಿನ ದೇವಾಲಯದ ಪೂಜೆಗೆಂದು ಅಯ್ಯಾವೊಳೆ ೫೦೦ ಸಂಘದವರು ದಾನ ಮಾಡಿದ ಉಲ್ಲೇಖ; The Ayyavole 500 association donated to Koniganūru temple for worship;
- 'ಕೋಣಿಗನೂರು' ಎಂದು ಶಾಸನದಲ್ಲಿ ಪ್ರಸ್ತಾಪ; Koniganūru was referred in the inscription;
- ಕೋಣಿಗನ+ಊರು>ಕೋಣಿಗನೂರು ಆಗಿರಬಹುದು; Konagana + ūru becomes Koniganūru;
- 'ಕೋಣಿಗನೂರು' ಉಚ್ಚಾರಣಾ ರೀತಿಯಲ್ಲಿ 'ಕೊಣ್ಣೂರು' ಆಗಿರಬಹುದು; In pronunciation Koniganūru becomes `Konnūr' in later days;
- ಕೋಣಿಗ(ನ)+ಊರು=ಕೋಣ್(ಣ)+ಇಗ+ಊರು> 'ಕೋಣಿಗನೂರು' ಆಗಿರುವಂತಿದೆ;
- ಪ್ರಸ್ತುತ ಸ್ಥಳನಾಮ ವ್ಯಕ್ತಿವಾಚಿ ಎಂಬುದು ಸ್ಪಷ್ಟವೇ ಇದೆ. It is clear that the name related to a person.

(ಕ.ವಿ.ವಿ.ಶಾ.ಸಂ.೯; ಹಂಪಿ)

ಕೊತಕೊತ ಕುದಿ kotakota kudi :

- ಅನ್ನ, ಬೇಳೆ, ಹುಗ್ಗಿ ಇತ್ಯಾದಿ ಆಹಾರ ಪದಾರ್ಥಗಳನ್ನು ಒಲೆಯ ಮೇಲೆ ಬೇಯಿಸುವಾಗ ಅವು ಶಬ್ದ ಮಾಡುತ್ತಾ ಕುದಿಯುವುದನ್ನು 'ಕೊತಕೊತ ಕುದಿ' ಎನ್ನುವರು; The rice, pulse etc food items boiling on the oven making sound is called `Kota Kota Kudi';
- ಕುದಿಯುವ ಕ್ರಿಯೆಯನ್ನು 'ಕೊತಕೊತ' ಪದ ಹಿಡಿದಿರಿಸಿದೆ; ಇದು ಹೇಳಿ ಕೇಳಿ ಅನುಕರಣ ಪದ; ಅದರ ಮೂಲಕ ಸಂಬಂಧಪಟ್ಟ ವಸ್ತು ಅಥವಾ ವ್ಯಕ್ತಿಯ ಪ್ರತಿಕ್ರಿಯೆಯನ್ನು ದಾಖಲಿಸುವಂತಾಗಿದೆ; The word `Kota Kota' hold the action boiling; it is an imitating word; through this identified the reaction of a person or thing;
- ಅನುಕರಣ ಶಬ್ದಗಳು ಕೂಡ ವ್ಯತ್ಯಾಸವಾಗಬಹುದು; ಆ ಪ್ರಕಾರ 'ಕೊತಕೊತ' ಪದಕ್ಕೆ 'ಕುತಕುತ' ಮೂಲವಾಗಿರಬಹುದು; So, the word `Kuta Kuta' is the origin of the word `Kota Kota';
- ಕೊತಕೊತ ಅಥವಾ ಕುತಕುತ ಯಾವುದೇ ಆಗಿರಲಿ, ಪದ ಪುನರಾವರ್ತನೆಯನ್ನು ಕಾಣುತ್ತೇವೆ; ಪದದ ಜಾಯಮಾನವೇ ಹಾಗೆ ಇರುತ್ತದೆ, ಉಚ್ಚಾರಣೆಯಲ್ಲಿ ಪದದ್ವಂದ್ವಕ್ಕಿರುವ ಲಯ, ಒಂದೇ ಒಂದನ್ನು ಉಚ್ಚರಿಸಿದರೆ ಇರುವುದಿಲ್ಲ; ಆದಕಾರಣ ಇಂತಹ ಎಲ್ಲ ಸಂದರ್ಭಗಳಲ್ಲೂ ಎರಡು ರೂಪಗಳೇ ಒಂದು ಪದವೆನ್ನುವಂತೆ ಕಾಣಿಸಿಕೊಳ್ಳುತ್ತವೆ; We find repetition of the word; the born character is like that; The rhythm of the word conflict cannot be the same while

pronounce in single; So, we found two forms are a single word in all situations;

- ಈ ಪದವನ್ನು ರೂಪಕವಾಗಿಯೊ ಪ್ರತಿಮೆಯಾಗಿಯೊ ತೆಗೆದುಕೊಳ್ಳಲು ಸಾಧ್ಯವಿದೆ; ಅತಿಯಾದ ಸಿಟ್ಟಿನಿಂದ ನಡೆದುಕೊಳ್ಳುವವರನ್ನು ಕುರಿತು ಈ ಪದ ಬಳಕೆಯಾಗುವುದಿದೆ; ಉದಾಹರಣೆಗೆ, ವ್ಯಕ್ತಿಯ ಮುಖ ಸಿಟ್ಟಿನಿಂದ ಉಗ್ರವಾಗಿದ್ದರೆ, 'ಎಷ್ಟರ ಕೊತಕೊತ ಕುದಿತಿದ್ದೀತು ನೋಡ ಯವ್ವಾ ಅವನ ಮುಖ' ಎಂದು ಹೇಳುವರು; ಸಂದರ್ಭಕ್ಕೆ ಅನುಗುಣವಾಗಿ ಇಂತಹ ಪದಗಳು ಸಾಂಕೇತಿಕ ವರ್ತನೆಗಳಾಗಿ ಕಾಣಿಸಿಕೊಳ್ಳುತ್ತವೆ; This word taken as figure of speech, image; this word used to a person has too much of angry; these words are found as symbols according to the situation and sequences;
- ನೀರು ಅಥವಾ ಸಾರು ಮೊದಲಾದ ದ್ರವಗಳು ಕುದಿಯುವಾಗ ಉಂಟಾಗುವ ಶಬ್ದ 'ಕುತಕುತ' ಎಂಬಂತಿರುತ್ತದೆ; The sound `Kuta Kuta' happens at the time of boiling water or soup liquids;
- 'ಕುತಕುತ' ಎಂಬುದು ಅನುಕರಣ ವಾಚಕವಾಗಿದೆ; It is an imitative expression;
- 'ಕುತ' ಪದಾದಿಯ 'ಉ' ಸ್ವರ ಉಚ್ಚಾರಣೆಯಲ್ಲಿ 'ಒ' ಆಗಿ ಸ್ವರ ವ್ಯತ್ಯಯಗೊಂಡು 'ಕೊತ' ಆಗುವುದು ಸಹಜ(ಉ>ಒ);
- 'ಕೊತಕೊತ ಕುದಿ' ಕುದಿತದ ತೀವ್ರತೆ ಹೇಳುವ ಜೊತೆಗೆ ನುಡಿಗಟ್ಟಾಗಿ ಬಳಕೆಯಾಗುತ್ತದೆ; ವ್ಯಕ್ತಿಯ ಕೋಪದ ತೀವ್ರತೆಯನ್ನು ಹೇಳುತ್ತದೆ. Tells the severity of boiling and used as an idiom; tells the severity of a person's angry.

ಕೊತರಾರಿ kotarāri :

ತೊಟ್ಟಿಲಲ್ಲಿ ಮಕ್ಕಳಿಗೆ ಹಾಸುವ ಪುಟ್ಟ ಹಾಸಿಗೆ ತೊಟ್ಟಿಲ ಕೌದಿ(ಉ.ಕ.ಜಿ/ಕ.ಜಾ.ಕೋ); *ಪ್ರ: 'ತೊಟ್ಲುಗೆ ತಕ್ಕದಾದ ಕೊತರಾರಿ ಹಾಸಿ'.* A little bed to children, spread in the cradle.

ಕೊತವಾಲ/ಕೊತ್ವಾಲ kotavāla/kotvāla:

- ಕೋಟೆಯನ್ನು ಕಾಯುವವನು; ಕಾವಲುಗಾರ; Watchman or sentinel of the fort;
- ಕೊತ್ತವಾಲ; ಕೊತ್ವಾಲ; (ಕೋಟೆಯ) ಕಾವಲುಗಾರ (ಕ.ಜಾ.ಕೋ); Kotttavala; Kotvala, Kavalugara (watchman);
- ಕೋತವಾಲ(ಕಿಟ್ಟೆಲ್);
- ಕೊಟ್ಟವಳ, ಕೊತ್ತವಾಲ, ಕೊತ್ವಾಲ್; ಕೊತ್ವಾಲ; ಕೋಟೆಯ ಕಾವಲುಗಾರ; ದುರ್ಗ ರಕ್ಷಕ; ಪ್ರವಾಸಿ ಮಂದಿರದ ಮೇಲ್ವಿಚಾರಣೆ ಮಾಡುವ ಅಧಿಕಾರಿ (ಕ.ನಿ); Kottavala, Kottavala, Kotval, Kotvala; Watchman of the fort; watchman of the hill fort; incharge or supervising officer of the travelers bungalow;
- ಕೊತ್ವಾಲ; ಪೋಲೀಸ್, ಸೈನ್ಯ, ಹಣಕಾಸು, ನ್ಯಾಯಾಂಗಗಳ ಉಸ್ತುವಾರಿ ನೋಡಿಕೊಳ್ಳುವ ಅಧಿಕಾರಿ(ಶಿ.ಜಿ); Kotvala; Police; army; an officer overseeing the finance, judiciary;
- ಸಂಸ್ಕೃತದ 'ಕೋಷ್ಠಪಾಲ'ದಿಂದ 'ಕೊಟ್ಟಪಾಲ(ಪ್ರಾ) ಬಂದು ನಂತರ ಕೊಟ್ಟವಳ>ಕೊತವಾಲ>ಕೊತ್ವಾಲ ಬಂದಿರುವ ಸಾಧ್ಯತೆ ಇದೆ; ಕೋಷ್ಠಪಾಲ(ಸಂ)> ಕೊಟ್ಟಪಾಲ(ಪ್ರಾ)>ಕೊಟ್ಟವಳ>ಕೊತವಾಲ>ಕೊತ್ವಾಲ; The word Kotvala from the Sanskrit word `Kosthapala' is possible;
- ಇಲ್ಲವೆ 'ಕೊತ್ವಾಲ್' ಎಂಬ ಪಾರಸಿ ಪದದಿಂದ ಕೊತವಾಲ, ಕೊತ್ವಾಲ ಬಂದಿರುವಂತೆ ತೋರುತ್ತದೆ; ಕೊತ್ವಾಲ್(ಪಾರ)>ಕೊತವಾಲ>ಕೊತ್ವಾಲ; [ಪ್ರಾ. ಕೊಟ್ಟಪಾಲ<(ಸಂ).ಕೋಷ್ಠಪಾಲ/ಪಾರ.ಕೊತ್ವಾಲ್] (ಕ.ನಿ). Otherwise it may comes from the Parsi word `Kotval'.
- ವ್ಯರೂ: ಕೋತ್ವಾಲ.

ಕೊತ್ಗ/ಗೊಡ್ಡು kotga/goḍḍu :

ಸಾರಿನ ಒಂದು ಬಗೆ; ಪ್ರತಿದಿನ ಮನೆಯಲ್ಲಿ ಉಳಿದ ಸಾರನ್ನು ಓಗೋಲೆಯಲ್ಲಿ ಮಡಿಕೆಯನ್ನಿಟ್ಟು ಅಲ್ಲಿಗೆ ಹಾಕುತ್ತಿದ್ದರು; ಅದು ಕುದಿದು ಕುದಿದು ಸಾರಿನ ರುಚಿಯನ್ನು ಹೆಚ್ಚಿಸುತ್ತದೆ; ಇದಕ್ಕೆ ಕೊತ್ಗ ಅಥವಾ ಗೊಡ್ಡು ಸಾರು ಎಂದು ಕರೆಯುತ್ತಾರೆ. A kind of soup; the remaining soup of everyday kept in an earthern pot; the pot put on the side oven, it is boiled every time and the taste increases it is called `Kothga/Goddu' saru or soup.

ಕೊತ್ಗಯಿ/ಕೊತ್ಗಾಯಿ kotgayi/kotgāyi :

- ಎಳೆಗಾಯಿಯೂ ಅಲ್ಲದ, ಬಲಿತದ್ದೂ ಅಲ್ಲದ ಮಧ್ಯದ ಹಂತದಲ್ಲಿರುವ ತೆಂಗಿನಕಾಯಿಗೆ 'ಕೊತ್ಗಯಿ'

ಎಂದು ಕರೆಯುತ್ತಾರೆ(ತು.ಜಿ),(ಕ.ಜಾ.ನಿ); A coconut neither ripe nor unripe is called `Kothgai';

- ಎಡಗಾಯಿ; ಕರಟದಿಂದ ಎಡೆಯಲು ಬರುವಷ್ಟು ಮಂದಗಟ್ಟಿದ ಕಾಯಿ; ದೋಸ್ಗಾಯಿ; ಇದು ಬಲಿತದ್ದು ಅಲ್ಲವಾದರೂ ದೋಸೆಯ ಮಂದಕ್ಕೆ ಇದ್ದು ಎಡೆದು ತಿನ್ನಲು ಬರುವುದರಿಂದ ದೋಸ್ಗಾಯಿ ಎಂದು ಕರೆಯುವುದೂ ಉಂಟು; ಎಡಗಾಯಿ/ದೋಸ್ಗಾಯಿಯನ್ನು ಅಡುಗೆಗೆ ಬಳಸುವುದಿಲ್ಲ(ಮಂಡ್ಯ.ಜಿ). `Yedagai' some how peel up from the nutcell; it is not fully ripen very taste to eat; it cannot be use to cook.

ಕೊತ್ತಂಬರಿ kottambari :

- ಇದು ಅಂಬೆಲಿಫೆರೇ ಕುಟುಂಬಕ್ಕೆ ಸೇರಿದ ಸಸ್ಯ ಮತ್ತು ಅದರ ಬೀಜ; ಇದರ ವೈಜ್ಞಾನಿಕ ಹೆಸರು 'ಕೊರಿಯಂಡ್ರಮ್ ಸಟಿವಮ್'(coriandrum sativam); It is belongs to Ambeliferi family plant; the scientific name is Coriandam sativam;
- ಕುಸ್ತುಂಬರೀ/ಕುಸ್ತುಂಬುರು(ಸಂ)>ಕೊತ್ತುಂಬರಿ; ಇದು ಸಂಸ್ಕೃತ ಮೂಲ 'ಕುಸ್ತುಂಬರೀ'ಯಿಂದ ತದ್ಭವಗೊಂಡ ಪದವಾಗಿದೆ; ಕೊತ್ತುಂಬರಿ, ಕೊತಂಬರಿ, ಕೊತಮರಿ, ಕೊತುಂಬರಿ, ಕೊತ್ತಂಬರಿ, ಕೊತ್ತುಂಬುರಿ, ಕೊತ್ತುಮರಿ, ಕೊತ್ತುಮಿರಿ, ಕೋತಂಬರಿ, ಕೊತಿಂಬ್ರಿ, ಕೊತ್ಮಿರಿ ಎಂಬಿತ್ಯಾದಿ ನಾಮರೂಪಗಳಲ್ಲಿ ಉಚ್ಚರಿಸುವುದುಂಟು; ಇದರ ಬೀಜವನ್ನು ಸಂಬಾರದ ಬೀಜ, ಧನಿಯ, ಹವೀಜ, ಕೊತ್ತುಂಬರಿ ಬೀಜ ಎಂದೆಲ್ಲಾ ಕರೆಯಲಾಗುತ್ತದೆ (ಆಧಾರ: ಕ.ನಿ); Kustumbari/Kustumbaru the word originally from Sanskrit; it is called in several names like Kottumbari, Kothambari, Kotamari etc; the seeds are called Sambara beeja(spice seed) or corriandam seed etc;
- ಕೊತ್ತಂಬೆರಿ; ಒಂದು ಬಗೆಯ ಜೀನಸು(ತು.ನಿ); Kotambari is a kind of corn;
- ಕೊತ್ತಂಬರಿ, ಕೊತ್ತಮಲ್ಲಿ, ಕೊತ್ತುಂಬರಿ, ಕೊತ್ತುಮರಿ, ಕೊತಂಬರಿ, ಕೊತ್ತುಮಿರಿ; ಸಂಬಾರಕ್ಕಾಗಿ ಬಳಸುವ ಸಸ್ಯ ಹಾಗೂ ಅದರ ಬೀಜ; ಧನಿಯ; ತ.ಮ: ಕೊತ್ತಮಲ್ಲಿ; ತುಳು: ಕೊತ್ತಂಬರಿ; ತೆ: ಕೊತ್ತುಮರಿ, ಕೊತ್ತಿಮಿರಿ(ದ್ರಾ.ಭಾ.ಜ್ಞಾ.ಪ.ಕೋ); Coriandam plant and seed used in preparation of vegetable and nonvegetable soup; it has other form of words Kothambari, Kothamalli, Kothumbari, Kothumuri, Kothambari, Kothumiri etc; In Tamilnadu, it is called as Kottamalli; In Tulu Kothambari, in Telugu Kothumari, Kothimiri;
- ವಾಣಿಜ್ಯ/ಬೆಳೆಯಾಗಿದೆ; ಸಂಬಾರ ಪದಾರ್ಥವಾಗಿ ಬಳಕೆ ಮಾಡಲಾಗುತ್ತದೆ; ಕೊತ್ತಂಬರಿ ಬೀಜವನ್ನು ಕಾರದಪುಡಿ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ; ಕೊತ್ತಂಬರಿಸೊಪ್ಪು ಪ್ರತಿದಿನ ಅಡುಗೆ ತಯಾರಿಕೆಯಲ್ಲಿ ಬಳಕೆಯಾಗುತ್ತದೆ; ಸಸ್ಯಾಹಾರ ಮತ್ತು ಮಾಂಸಾಹಾರ ಎರಡೂ ರೀತಿಯ ಅಡುಗೆಗೂ ಉಪಯೋಗವಾಗುತ್ತದೆ; ಅಡುಗೆಗೆ ಸುವಾಸನೆ, ಸ್ವಾದ ನೀಡುತ್ತದೆ; ಸಾರು ಮತ್ತು ಚಟ್ನಿಗೆ ಬಳಕೆ; It is a commercial crop, used to powder mix to prepare soup; the leaves use for everyday veg and nonveg cooking;
- ಇದರಲ್ಲಿ ಔಷಧೀಯ ಗುಣವಿದೆ; ಅತಿಸಾರ, ಅಜೀರ್ಣವಾದಾಗ ಧನಿಯಾ ಕಾಳು ಮತ್ತು ಒಣಶುಂಠಿಯನ್ನು ಅರೆದು ಕಷಾಯ ಮಾಡಿ ಕುಡಿಯುತ್ತಾರೆ; ಜ್ವರದ ನಿವಾರಣೆಗೆ ಕೊತ್ತಂಬರಿ ಕಾಳಿನ ಪಾಯಸ ಮಾಡಿ ಕುಡಿಯುವುದುಂಟು; ಅಧಿಕ ರಕ್ತದೊತ್ತಡಕ್ಕೆ ಕೊತ್ತಂಬರಿ ಬೀಜದ ಪುಡಿ, ಗಂಧದ ಬೇರಿನ ತೊಗಟೆಯ ಒಣಚೂರ್ಣ ಮತ್ತು ಕಲ್ಲುಸಕ್ಕರೆಯನ್ನು ಸೇರಿಸಿ ಕಷಾಯ ತಯಾರಿಸಿ ಸೇವಿಸುವುದರಿಂದ ರಕ್ತದೊತ್ತಡ ಕಡಿಮೆಯಾಗುತ್ತದೆ; ಕೆಮ್ಮು, ಕಫ, ವಾಕರಿಕೆ, ಅತಿಸ್ರಾವ, ಬೆನ್ನುನೋವು, ತುರಿಕೆ, ಕಜ್ಜಿ, ಕೊಲೆಸ್ಟ್ರಾಲ್(ಕೊಬ್ಬಿನ ಅಂಶ), ಕಣ್ಣಿನ ಸೋಂಕುಗಳ ನಿವಾರಣೆಗೆ ಧನಿಯಪುಡಿ ಮತ್ತು ಸೊಪ್ಪಿನ ರಸವನ್ನು ಸೇವಿಸುತ್ತಾರೆ; ಪಿತ್ತ, ಬಾಯಿಹುಣ್ಣು, ಮೂಗಿನ ರಕ್ತಸ್ರಾವ, ತಲೆಸುತ್ತು, ಅಜೀರ್ಣ, ವಾಂತಿ, ಬಿಕ್ಕಳಿಕೆ, ಬಾಯಿ ಕಹಿಯಾಗುವುದು, ರಕ್ತಹೀನತೆ ಇವೇ ಮೊದಲಾದ ಸಂದರ್ಭಗಳಲ್ಲಿ ಔಷಧಿಯಾಗಿ ಬಳಕೆಯಾಗುತ್ತದೆ; It has medicinal qualities; at the time of dysentry, indigestion coriandam grain and ginger paste boiled decoction to drink; to cure fever use Kottambari pudding; the decoction of coriandum seed sandal root bark and stone sugar used to control blood pressure; for cough, bleeding, back pain, itchs etc;
- ಕೊತ್ತಂಬರಿ ಬೀಜ ಮತ್ತು ಕುಸುಬಲಕ್ಕಿಯನ್ನು ಉರಿದು ಪುಡಿಮಾಡಿ ಬೆಲ್ಲದ ಜೊತೆ ಪಾಯಸ ಮಾಡಿ ಕುಡಿದರೆ ತಲೆಸುತ್ತು ಕಡಿಮೆಯಾಗುತ್ತದೆ

ಎಂಬ ನಂಬಿಕೆ; To control giddiness used fried boiled rice with jaggary and coriandam seed pudding;

- **—*ಕೊತ್ತಂಬರಿ ಗುಂಡು*** : ಮಹಿಳೆಯರ ಒಂದು ಆಭರಣ; ಮಾಂಗಲ್ಯದ ಜೊತೆ ಕರಿಮಣಿ, ಕೊತ್ತಂಬರಿ ಗುಂಡು, ಸಕ್ಕರೆ ಮಣಿಗಳನ್ನು ಪೋಣಿಸಿ ಹಾಕಿಕೊಳ್ಳುತ್ತಾರೆ; An ornament of woman; this is used with Mangalya as necklace;
- **—*ಕೊತ್ತಂಬರಿ ಸರ*** : ಕೊತ್ತಂಬರಿ ಬೀಜದ ರಚನೆಯುಳ್ಳ ಸರ; ಇದು ಮದುಮಗನಿಗೆ ತೊಡಿಸುವ ಒಂದು ಆಭರಣ; The ornament structured like Kottambari seed is called Kottambari sara; it is wear to bridegroom;
- **—*ಕೊತ್ತಂಬರಿ ಖಾಡೆ*** : ಕೊತ್ತಂಬರಿ ಬೀಜದಿಂದ ಮಾಡಿದ ಕಷಾಯ; A decoction made of coriandum seed;
- ಕೊತ್ತಂಬರಿ ಬೀಜವನ್ನು ತಿಕ್ಕಿ ಬೇಳೆಯನ್ನಾಗಿ ಮಾಡಿ, ಅದಕ್ಕೆ ನೀರು ಸೇರಿಸಿ ಚೆನ್ನಾಗಿ ಕುದಿಸಿ, ಅದಕ್ಕೆ ಬೆಲ್ಲ ಅಥವಾ ಸಕ್ಕರೆ ಸೇರಿಸಿ ಕಷಾಯ ಮಾಡಿ ಕುಡಿಯುವುದರಿಂದ ದಮ್ಮು, ಕೆಮ್ಮು ನಿವಾರಣೆಯಾಗುತ್ತದೆಂದು ಹೇಳಲಾಗುತ್ತದೆ. The coriandum seed made into puls and boil it with jaggary or sugar, by drinking this decoction the caugh, astama will be cured.

ಕೊತ್ತಗಲ kottagala :

- ಮೈಸೂರು ಜಿಲ್ಲೆ ತಿ.ನರಸೀಪುರ ತಾಲ್ಲೋಕಿನ ಕ್ರಿ.ಶ.೧೭೪೯ರ ೧೬ನೇ ಶಾಸನದಲ್ಲಿ ಈ ಊರಿನ ಉಲ್ಲೇಖವಿದೆ; It is a name of a place, it is refered in the 16th inscription of 1749th AD of Mysore district T.Narasipura taluk;
- ಕೊತ್ತಳ ಅಥವಾ ಕೊತವಾಲ ಎಂಬ ಪದದಿಂದ ಈ ಹೆಸರು ಬಂದಿರಬಹುದು; May be this name coming from `Kottala' or `Kotavala';
- 'ಕೊತ್ತಳ(ಕೊತ್ತ)' ಎಂದರೆ ಕೋಟೆ(ಬರುಜು); 'ಕೊತವಾಲ' ಎಂದರೆ ಕೋಟೆಯನ್ನು ಕಾಯುವ ಕಾವಲುಗಾರ; `Kottala' means fort; Kotavala means watchman of the fort;
- ಮೈಸೂರು ಅರಸರ ಇಮ್ಮಡಿ ಕೃಷ್ಣರಾಜ ಒಡೆಯರ ದಳಪತಿಯಾದ ದೇವರಾಜನು ರಾಮಚಂದ್ರಪುರ ಅಗ್ರಹಾರಕ್ಕೆ ಭೂಮಿ ದಾನ ನೀಡಿದನು; ಈ ತಾಮ್ರ ಶಾಸನದಲ್ಲಿ ೧೦೮ ಮಹಾಜನರ ಪ್ರಸ್ತಾಪವಿದೆ; ಅದರಲ್ಲಿ 'ಕೊತ್ತಾಗಾಲ'ದ ವೆಂಕಟಾಚಾರ್ಯರು' ಒಬ್ಬರು. The commander of the king of Mysore Krishnaraja Vodeyar Devaraja donated the land to 108 people of Ramchandrapura Agrahara referred in the copper inscription; in that inscription the name of Venkatacharya of Kottagala also one among them.

(E.C- ೫; ಮೈ.ಜಿ.)

ಕೊತ್ತತ್ತಿ kottatti :

- ಮಂಡ್ಯ ಜಿಲ್ಲೆ ಮಂಡ್ಯ ತಾಲ್ಲೋಕಿನ ಕ್ರಿ.ಶ.೯೭೭ರ ೮೧ನೇ ಶಾಸನದಲ್ಲಿ ಇದರ ಉಲ್ಲೇಖ; The village Kottatti refered in the 81st inscription of 977AD of Mandya district Mandya taluk;
- ಪೆರೂರು ಯುದ್ಧದಲ್ಲಿ ಪಲ್ಲವರ ವಿರುದ್ಧ ಹೋರಾಡಿ ಸತ್ತ ಈಸರಗಣ್ಣನ ನೆನಪಾಗಿ, ಕಲ್ನಾಡ 'ಕೊತ್ತತ್ತಿ'ಯ ಗುಡಿಯ ಹಿಂದೆ ನಿಲ್ಲಿಸಿರುವ ವೀರಗಲ್ಲು; Esaraganna was fought against Pallava's in Peruru war and died, in memory of him erected a Veeragallu behind the temple of `Kalnadu' Kottatti;
- ಪದರೂಪವನ್ನು ಕೊತ್ತ+ಹತ್ತಿ ಎಂದು ಬಿಡಿಸಿಕೊಳ್ಳಬಹುದಾಗಿದೆ; 'ಕೊತ್ತ' ರೂಪ 'ಕೊತ್ತಲ' ರೂಪದಿಂದ ಬಂದಿರಬಹುದು ಎಂದು ಇಟ್ಟುಕೊಂಡರೆ, ಆಗ ಅದರ ಅರ್ಥ 'ಕೋಟೆ' ಎಂದಾಗುತ್ತದೆ; 'ಕೋಟೆಕೊತ್ತಲ' ಎಂಬ ಸಂಯುಕ್ತ ರೂಪವೂ ಇದೆ;
- ಕೋಟೆಯನ್ನು ಹತ್ತಿ ನಡೆದಿರಬಹುದಾದ ಘಟನೆಯೊಂದನ್ನು ಹೆಸರು ಸೂಚಿಸುತ್ತಿರಬಹುದು; ಆದರೆ ಸದ್ಯಕ್ಕೆ ಅದಾವುದನ್ನೂ ಊಹಿಸಲು ಅಸಾಧ್ಯವಾಗಿದೆ. May be an incident happened on the fort is noticed by this name, so nothing of it has not been imagined now.

(E.C- ೭; ಮಂಡ್ಯ.ಜಿ.)

ಕೊತ್ತನೂರು kottanūru :

- ಬೆಂಗಳೂರು ಜಿಲ್ಲೆಯ ಕ್ರಿ.ಶ.೧೭೦೫ರ ೧೧೮ನೇ ಶಾಸನದಲ್ಲಿ ಇದರ ಉಲ್ಲೇಖ; This place referred in the 118th inscription of 1705 AD of Bangalore district;
- ಶಾಸನದಲ್ಲಿ 'ಬೆಂಗಳೂರು ಕೋಟೆಗೆ ಸೇರುವ ಗೊಟ್ಟಿಗೆರೆ ವಳಿತವಾದಂಥ ಕೊತ್ತನೂರು' ಗ್ರಾಮ ಎಂದಿದೆ; This village Kottanur belongs to Bangalore fort Gottigere;
- ಚಿಕದೇವರಾಜ ಒಡೆಯರು ಕಟ್ಟಿಸಿದ ವೆಂಕಟೇಶ್ವರ ದೇವಾಲಯದ ದೀಪಾರಾಧನೆಗೆ ಎಂದು, ಅವರ ಮಗ ನರಸಿಂಹರಾಜ ಒಡೆಯರು ಬೆಂಗಳೂರು ಕೋಟೆಗೆ ಸೇರುವ ಗೊಟ್ಟಿಗೆರೆ ವಳಿತವಾದ ಕೊತನೂರು ಗ್ರಾಮವನ್ನು ದೇವಾಲಯಕ್ಕೆ ನೀಡಿದನಂತೆ; 'ವಳಿತ' ಎಂದರೆ ಪ್ರದೇಶ, ಎಲ್ಲೆ ಎಂದು ಅರ್ಥ, ಅಂದರೆ 'ಕೊತ್ತನೂರು' ಗೊಟ್ಟಿಗೆರೆ ಎಲ್ಲೆಗೆ ಸೇರಿದ್ದೆಂದು ಅರ್ಥ; This village donated by the Narasimha raja Vodeyar, son of Chikkadevaraya Vodeyar, to the Venkateshwara temple built by his father; it belongs to Bangalore fort Gottigere limit; `Valitha' means territory limit; it means `Kottanur' belongs to Gottigere limit;
- ಹಾಗಾಗಿ ಈ ಪ್ರದೇಶ ನರಸರಾಜ ಪಡೆಯರ ಅಧೀನಕ್ಕೆ ಒಳಪಟ್ಟಿತ್ತು; So, this area is under the rule of Narasimha raja Vodeyar;
- 'ಕೊತ್ತನ+ಊರು' ಆಗಿದ್ದು, ಕೊತ್ತನ ವ್ಯಕ್ತಿಯ ಹೆಸರಾಗಿರಬಹುದೆ? `Kottana' village is called `Kottanur'. may be the name of a person `Kottan';

(E.C-IX; ಬಿ.ಎಲ್.ರೈಸ್; ಬೆಂ.ಜಿ.)

ಕೊತ್ತಪಲ್ಲಿ kottapalli :

- ಕರ್ನೂಲು ಜಿಲ್ಲೆ ನಂದಿಕೊಟ್ಕೂರ್ ತಾಲ್ಲೋಕು ಕ್ರಿ.ಶ.೧೦೫೭ರ ೩೩೮ನೇ ಶಾಸನದಲ್ಲಿ ಇದರ ಉಲ್ಲೇಖ; The village refered in the 338th inscription of 1057AD Karnool district Nandikotkur taluk;
- ಚಾಲುಕ್ಯ ದೊರೆ ತ್ರೈಲೋಕ್ಯಮಲ್ಲ ದೇವರ ರಾಜ್ಯಭಾರ ಸಂದರ್ಭ; The ruling period of Chalukya king Thrilokyamalla devaru;
- ಕೊತ್ತಪಲ್ಲಿ=ಕೊತ್ತ+ಪಲ್ಲಿ; ಪಲ್ಲಿ=ಹಳ್ಳಿ; ಕೊತ್ತ=ಹೊಸ; ಅಂದರೆ 'ಹೊಸಹಳ್ಳಿ' ಎಂಬ ಅರ್ಥ ಬರುತ್ತದೆ; `Kottapalli' means new village;
- ಹಲವು ಕಾರಣಗಳಿಂದ ಜನರು ತಾವು ನೆಲೆಸಿರುವ ಜಾಗ ಬಿಟ್ಟು ಹೊಸ ಸ್ಥಳಕ್ಕೆ ವಲಸೆ ಹೋದಾಗ, ಅವರು ನೆಲೆ ನಿಲ್ಲುವ ಹೊಸ ಪ್ರದೇಶವನ್ನು 'ಹೊಸಹಳ್ಳಿ' ಎಂದು ಕರೆಯುವುದು ವಾಡಿಕೆ. Due to some reasons people leave their habitat and settled in a new place is called `Hosahalli' in practice.

(ಆ.ಪ್ರ.ಕ.ಶಾ.ಭಾ.೧)

ಕೊತ್ತಲ/ಕೊತ್ತಳ kottala/kottaḷa :

- ಕೋಟೆಯ ಬುರುಜು; Bastian of fort;
- ಕೋಟೆಯ ಗೋಡೆಯ ಮೇಲೆ ಅಡಗಿಕೊಂಡು ಶತ್ರುಗಳನ್ನು ಹೊಡೆಯವುದಕ್ಕಾಗಿ ಕಟ್ಟಿದಂತಹ ಮರೆ; An obstacle built to fight on the fort wall against enemies;
- ಕೊತ್ತಣ, ಕೊತ್ತಲು, ಕೊತ್ತಲ, ಕೊತ್ತಳ, ಕೊತ್ಲ, ಕೊತ್ಲು(ಕೋಟೆ ಕೊತ್ಲು) ಎಂಬಿತ್ಯಾದಿ ಹೆಸರುಗಳಿಂದ ಕರೆಯುವುದುಂಟು; Different kinds of words is in use like Kottana, Kottalu, Kottaḷa, Kotla, Kotlu etc;
- ಕೊತಳ; ಕೋಟೆಯ ನಾಲ್ಕೂ ಕಡೆಗಳಲ್ಲಿರುವ ಗೋಪುರ(ಮೈ.ಜಿ); ಸೈನಿಕರು ನಿಂತು ಕಾದುವ ಎತ್ತರದ ಪ್ರದೇಶ(ತು.ಜಿ); ಕೋಟೆಯ ಬುರುಜು ಆಯುಧಾಗಾರ(ಧಾ.ಜಿ)(ಕ.ಜಾ.ನಿ); Kotala means tower of the fort in all the four sides; the high fighting place of soldiers, Armoury;
- ಕೊತ್ತಲ, ಕೊತ್ತಳ, ಕೊತ್ತಡ, ಕೊಮ್ಮೈ, ಕುಮ್ಬೆ–ಎಂಬ ರೂಪಗಳನ್ನು ಕಿಟ್ಟೆಲ್ ನೀಡಿದ್ದಾರೆ;
- ಕೊತ್ತಣ; ಕೊತ್ತಲ; ಕೊತ್ತಳ ಎಂಬ ರೂಪಗಳಲ್ಲಿನ ಕೊನೆಯ ಅಕ್ಷರದಲ್ಲಿ ಉಚ್ಚಾರಣೆಯ ವ್ಯತ್ಯಯ ಉಂಟಾಗಿದೆ; 'ಣ'ಕಾರಕ್ಕೆ 'ಳ'ಕಾರ ಬಂದು ನಂತರ ಳ>ಲ ಆಗಿರುವ ಸಾಧ್ಯತೆ ಇರುವಂತಿದೆ; ಇಲ್ಲವೆ ಕೊತ್ತಲ>ಕೊತ್ತಳ ಆಗಿ ಕ್ರಮೇಣ ಆಡುನುಡಿಯಲ್ಲಿ 'ಳ'ಕಾರಕ್ಕೆ 'ಣ'ಕಾರ ಬಂದು ಕೊತ್ತಣ ಆಗಿರಲೂ ಬಹುದು; ಕೋಟೆಕೊತ್ತಲ/ಕೋಟೆಕೊತ್ತಳ/ ಕೋಟೆಕೊತ್ತಣ ಎಂಬಂತೆ ಪ್ರಯೋಗಗಳಿರುವುದನ್ನು

ಗಮನಿಸಬಹುದು; The pronunciation changes in the forms of Kottana; Kottala; Kottaḷa; the ending sound of the words from `na' sound to 'la' sound may be possible, in later stage `Kottala' may change to `Kottana' in colloquial language; the usages like Kotekottala/ Kotekottaḷa/Kotekottana forms are found;

- ತ: ಕೊತ್ತಳಮ್; ಮ: ಕೊತ್ತಳಮ್, ಕೊಂದಳಮ್; ತುಳು: ಕೊತ್ತಳ, ಕೊತ್ತಲ; ತೆಲು: ಕೊತ್ತಳಮು, ಕ್ರೊತ್ತಡಮು, ಕೊತ್ತಡಮು(ದ್ರಾ.ಭಾ.ಜ್ಞಾ.ಪ.ಕೋ). In Tamil Kottalam; Malayalam Kottalam, Kondalam; in Tulu Kottaḷa, Kottala; in Telugu Kottalamu, Kottadamu, Krottadamu.

ಕೊತ್ತಲಿಗೆ/ಕೊತ್ತಳಿಗೆ kottalige/ kottaḷige :

- ಕೊತ್ತಳಿಗೆ, ಕೊತ್ತಳಿಕೆ; (ಕರಾ)ಗರಿಗಳನ್ನೆಲ್ಲ ಸವರಿ ಉಳಿದ ತೆಂಗು ಅಥವಾ ಅಡಕೆಯ ದಿಂಡು; ಗೊದಮೊಟ್ಟೆ; ತುಳು: ಕೊತ್ತಳಿಗೆ, ಕೊತ್ತಳಿಂಗೆ (ದ್ರಾ.ಭಾ.ಜ್ಞಾ.ಪ.ಕೋ); It is the stalk of the coconut or arecanut leaves;
- ಗೊದಮೊಟ್ಟೆ; ತೆಂಗಿನ ಗರಿಗಳನ್ನು ಸವರಿದ ಮೇಲೆ ಉಳಿಯುವ ದಿಂಡು(ತು.ನಿ); After proning the feather of the coconut palm; the remaining hard part is called Godamotte;
- ತೆಂಗಿನ ಮಡಲಿನ ಬುಡ; ಗರಿಗಳನ್ನೆಲ್ಲಾ ಸವರಿದ ಮೇಲೆ ಉಳಿದ ತೆಂಗಿನ ಅಥವಾ ಅಡಕೆಯ ಸೋಗಿನ ದಿಂಡು(ಉ.ಕ.ಜಿ/ಕ.ಜಾ.ನಿ/ಕ.ಜಾ.ಕೋ); Stem of the coconut or arecanut frond;
- ಗರಿಗಳನ್ನು ಸವರಿ ತೆಗೆದ ಮೇಲೆ ಉಳಿಯುವ ತೆಂಗಿನ ಮರದ ಗೊದಮೊಟ್ಟೆಯನ್ನು ಸೀಳಿ, ತುಂಡರಿಸಿ ಒಣಗಿದ ಮೇಲೆ ಸೌದೆಯಾಗಿ ಬಳಸುವುದುಂಟು; ಚೆನ್ನಾಗಿ ಒಣಗಿದ ಗೊದಮೊಟ್ಟೆಯ ಸೀಳುಗಳನ್ನು ಮಳೆಗೆ ನೆನೆಯದ ಹಾಗೆ ಅಡ್ಡವಾಗಿ ಮತ್ತು ಉದ್ದವಾಗಿ ಒಂದೊಂದು ವರಕೆ ಜೋಡಿಸಿ ಮೆದೆಯಂತೆ ಪೇರಿಸಿ ಇಡುತ್ತಾರೆ; ಇಲ್ಲವೆ ಸೌದೆಯ ಅಟ್ಟಗಳಲ್ಲಿ ಜೋಡಿಸಿ ಇಟ್ಟುಕೊಳ್ಳುತ್ತಾರೆ. The frond leaves are pruned from the stem and cut into pices, pile up at a place to use for fire in the rainy seasons.

ಕೊತ್ತವಳಿ kottavaḷi :

- ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೋಕಿನ ಕ್ರಿ.ಶ.೧೫೮೬ರ ೭೧ನೇ ಶಾಸನದಲ್ಲಿ ಈ ಊರಿನ ಪ್ರಸ್ತಾಪ; The name of the place referred in the 71st inscription of 1586AD Mysore district Piriyapattana taluk;
- ಕೊತ್ತಲ+ವಳಿ(ಟಿ)>ಕೊತ್ತಲವಳಿ>ಕೊತ್ತವಳಿ; ವಳಿ(ಟಿ)ಗೆ 'ಬಟಿ' ಎಂಬ ಪರ್ಯಾಯ ಪದವೂ ಇದೆ (ದ್ರಾ.ಭಾ.ಜ್ಞಾ.ಪ.ಕೋ); The equivalent word to `Kottavali' is `Kottabaḷḷi';
- 'ಕೊತ್ತ(ಲ)' ಎಂದರೆ ಕೋಟೆ(ಕೋಟೆ ಮೇಲಿನ ಬುರುಜು) ಎಂದು ಅರ್ಥವಿದೆ; 'ವಳಿ' ಎಂದರೆ ದಾರಿ; ಹೀಗಾಗಿ ಕೋಟೆಯ ದಾರಿಯಲ್ಲಿದ್ದ ಊರಾಗಿರಬಹುದು; Kottala means fort, `vaḷi' means way; so, the village is on the way to the fort;
- ಚಂಗಾಳ್ವರ ಪ್ರಧಾನ ಪೆರಿರಾಜೆಯ ದೇವನು ಅನ್ನದಾನಿ ಮಲ್ಲಿಕಾರ್ಜುನ ದೇವರಿಗೆ ಮೂವತ್ತುಮೂರು ಹಳ್ಳಿಗಳನ್ನು ದಾನ ನೀಡಿದನು; ಅವುಗಳಲ್ಲಿ ನಂಜರಾಯಪಟ್ಟಣದ 'ಕೊತ್ತವಳಿ' ಗ್ರಾಮವೂ ಒಂದಾಗಿತ್ತು. The chief of Changalva, Perirajeya deva donated thirty three villages to the god Mallikarjuna among those villages Nanjarajapattana's Kottavaḷi is one.

(E.C- ೪; ಮೈ.ಜಿ.)

ಕೊತ್ತ ಸಿವರಂ kotta sivaram :

- ಅನಂತಪುರ ಜಿಲ್ಲೆ ಮಡಕಸಿರಾ ತಾಲ್ಲೋಕಿನ ಕ್ರಿ.ಶ.೧೩೬೫ರ ೬೯ನೇ ಶಾಸನದಲ್ಲಿ ಇದರ ಉಲ್ಲೇಖವಿದೆ; This village referred in 69th inscription of 1365AD Ananthpura district Madakasira taluk;
- ವಿಜಯನಗರ ವೀರಬುಕ್ಕಣ್ಣ ಒಡೆಯನ ಆಳ್ವಿಕೆ ಸಂದರ್ಭ; At the time of Veera Bukkanna Vodeyar ruler of Vijayanagar empire;
- ನಿಡುಗಲ್ಲು ರಾಜ್ಯದಲ್ಲಿ ಸಿವರದ ಪಟ್ಟಣ (ಕೊತ್ತಂಸಿವರ) ಮುಖ್ಯವಾಗಿದ್ದು, ಇವನ್ನು ಆಳುತ್ತಿದ್ದವನು ಬೊಚೆಯನಾಯಕ; The city

Sivara is the main in Nidagallu state; it was ruled by Bocheya Nayaka;

- ಗ್ರಾಮದಲ್ಲಿ ಒಂದು ಶಿವ ದೇವಾಲಯವಿದ್ದು, ಶಾಸನದಲ್ಲಿ ಈ ದೇವಾಲಯದ 'ಸಿವದಾಸಿ'ಗಳ ಉಲ್ಲೇಖವಿದೆ; A temple of lord Shiva is in this village; Shivadasi's of this temple referred in this inscription;
- ಇದೊಂದು ಧಾರ್ಮಿಕ ವಾಚಿ ಸ್ಥಳನಾಮವಾಗಿದೆ; Literally it is a name of religious place;
- ಶಿವ>ಸಿವ; ತೆಲುಗಿನಲ್ಲಿ 'ಸಿವ' ಎಂದು ಉಚ್ಚಾರಣೆ; ಕೊತ್ತಂ+ಸಿವರ=ಹೊಸ ಶಿವರ;
- ಶಿವನ ಆರಾಧಕರು ಈ ಗ್ರಾಮದಲ್ಲಿ ಹೆಚ್ಚಿದ್ದಕ್ಕಾಗಿ ಸಿವರದ ಪಟ್ಟಣ ಎಂದು ಕರೆದು, ನಂತರ ಅದು 'ಕೊತ್ತಂಸಿವರ' ಎಂದು ತೆಲುಗಿನಲ್ಲಿ ರೂಪ ಪಡೆದಿದೆ; The worshippers of Shiva are more in this village; so, it is called as `Sivara patna' later it has the name `Kotham Sivara' in Telugu;
- ಗ್ರಾಮದಲ್ಲಿ ಶಿವ ದೇವಾಲಯ ಇರುವುದು ಇದಕ್ಕೆ ಪುಷ್ಟಿ ನೀಡುತ್ತದೆ. The temple of Shiva is in the village gives support to the name.

(ಆ.ಪ್ರ.ಕ.ಶಾ.ಭಾ.೧)

ಕೊತ್ತಳಿ kottaḷi :

- ಕಾಗೆಗಳ ಸಮೂಹ; ಗುಂಪು; The crowd of crows;
- ಇವು ಅಡ್ಡಾದಿಡ್ಡಿ ಹಾರಿ ಕೂಗಿದರೆ ಅಂದು ಬೇಟೆಗೆ ಹೋಗುವುದಿಲ್ಲ; They fly hapazardously, they won't go for hunt on that day;
- ಇವುಗಳ ಕೂಗು ಅಪಶಕುನವೆಂಬ ನಂಬಿಕೆ ಇದೆ; Cry of crow is bad augury is a belief;
- ಸಂಸ್ಕೃತಿಯಲ್ಲಿ ಇಂತಹ ನಂಬಿಕೆಗಳು ಸಮಾಧಾನಕ್ಕೊ, ವಿರಾಮಕ್ಕೊ ಬಂದಿರುಲು ಸಾಧ್ಯ; ಇಂಥವು ಮನೋವರ್ತನೆಗೆ ಸಂಬಂಧಿಸಿದವು. These beliefs are for satisfy or for a leisure adopted in the culture is possible; these are related to change the mind or mood.

ಕೊತ್ತಿ kotti :

- ಬೆಕ್ಕು; ಮಾರ್ಜಾಲ; ಬಿಡಾಲ; ಸಸ್ತನಿ ವರ್ಗಕ್ಕೆ ಸೇರಿದ, ನಾಲ್ಕು ಕಾಲಿನ, ಬಾಲ ಇರುವ ಒಂದು ಪ್ರಾಣಿ; ಮಾಂಸಾಹಾರಿ; ಹುಲಿ, ಚಿರತೆ ಜಾತಿಗೆ ಸೇರಿದ್ದು; ಸಾಕುಪ್ರಾಣಿಗಳಲ್ಲಿ ಒಂದು; ಹಾಲು ಪ್ರಿಯವಾದ ಆಹಾರ; ಅನ್ನ ಮೊದಲಾದ ಕೆಲವು ಬೇಯಿಸಿದ ಆಹಾರ ಪದಾರ್ಥಗಳನ್ನೂ ತಿನ್ನುತ್ತದೆ; ಇಲಿ, ಹೆಗ್ಗಣ ಮುಖ್ಯ ಬೇಟೆ; ಹಲ್ಲಿ, ಜಿರಲೆಗಳನ್ನೂ ಹಿಡಿದು ತಿನ್ನುತ್ತದೆ; cat; it is belongs to mammol category has tail; non-vegeterian; belongs to tiger cheetah category; cat likes milk, eat rice and other cooked food; rat, bandicoot are the prime hunt; cockroach, lizard etc are the other;
- ಕಪ್ಪು, ಕಂದು, ಬಿಳಿ ಇವುಗಳ ಮಿಶ್ರಣ ಬಣ್ಣ ಕೊತ್ತಿಗೆ ಸಾಮಾನ್ಯ; ನಯವಾದ ತುಪ್ಪಳು ಇದರ ಮುಖ್ಯ ಆಕರ್ಷಣೆ; ಮನೆಯ ಸಾಕುಪ್ರಾಣಿಗಳಲ್ಲಿ ಮಕ್ಕಳಿಗೆ ತುಂಬಾ ಪ್ರಿಯವಾದದ್ದು; ಮನುಷ್ಯರಿಗೆ ಬೇಗನೆ ಒಗ್ಗಿಕೊಳ್ಳುತದೆ; ಬೆಕ್ಕಿನ ಮರಿಗಳ ಸರಸದಾಟ ನೋಡಲು ಅಷ್ಟೇ ಸೊಗಸಾಗಿರುತ್ತದೆ; ಇಲಿಯನ್ನು ಅರೆಜೀವ ಮಾಡಿ ಅದರೊಡನೆ ಸರಸವಾಡಲೆಳಸುತ್ತವೆ; ಈ 'ಹಿನ್ನೆಲೆಯಲ್ಲೇ ಹುಟ್ಟಿಕೊಂಡದ್ದಿರಬೇಕು 'ಕೊತ್ತಿಗೆ ಚಲ್ಲಾಟ, ಇಲಿಗೆ ಪ್ರಾಣ ಸಂಕಟ' ಎಂಬ ಗಾದೆ; ಬೇರೆಯವರ ಸಂಕಟದಲ್ಲಿ ಸುಖ ಕಾಣುವ, ಸಹಜೀವಿಗಳನ್ನು ಕೋಟಲೆ ಮಾಡಲೆಳಸುವ ಮಾನವ ಪ್ರವೃತ್ತಿಗೆ ಈ ಮಾತು ಪ್ರತೀಕವಾಗಿದೆ; Black brown white etc are the major colour of cats is common; has nice woolen, the main attraction is children like very much, cats accustomed to man soon; playfully play is beautiful;
- ಮನೆಯಲ್ಲಿ ಸಂಗ್ರಹಿಸಿ ಇಡುವ ಆಹಾರ ಧಾನ್ಯಗಳು ಇಲಿ ಹೆಗ್ಗಣಗಳಿಗೆ ಆಹಾರವಾಗುವುದನ್ನು ತಡೆಯಲು ಪ್ರತ್ಯುಪಾಯವಾಗಿ ಕೊತ್ತಿಯನ್ನು ಸಾಕುತ್ತಾರೆ; ಆದರೆ ಹಾಲು ಮೊಸರು ಮೊದಲಾದ ವಸ್ತುಗಳ ಮೇಲೆ ಕೊತ್ತಿ ಮಾಡುವ ಧಾಳಿಯಿಂದಾಗಿ ಉಂಟಾಗುವ ಉಪಟಳ ಕೆಲವೊಮ್ಮೆ ಬೇಸರವನ್ನು ತರುತ್ತದೆ; 'ಕೊತ್ತಿ ಬಲ್ಲುದೆ ಹಾಲು ಮೀಸಲೆಂಬುದನು?', 'ಕೊತ್ತಿ ಮೀಸಲ ಹಾಲ ಮತ್ತೆ ತಾ ಬಿಡುವುದೇ(ಸರ್ವಜ್ಞ) ಎಂಬಂತಹ ಮಾತುಗಳೇ ಇವೆ; To control the rats from destroy and damage the food grains cats are reared in the house; cats are attack on the curd, milk and other household things is very much intolerable;
- ಕೊತ್ತಿಯ ನಿಕಟವರ್ತಿತನ ಮನುಷ್ಯನಿಗೆ ಬಹಳವಾಗಿ ಇರುವುದರಿಂದಲೇ ಇರಬೇಕು ಈ ಸಂಬಂಧವಾಗಿ ಅನೇಕ ಅಭಿಪ್ರಾಯಗಳನ್ನು ಬೆಳೆಸಿಕೊಂಡಿದ್ದಾನೆ;

ಇವುಗಳಲ್ಲಿ ಅವೈಜ್ಞಾನಿಕವಾದುವೂ ಕೆಲವಿವೆ; ಯಾವುದಾದರೂ ಶುಭಕಾರ್ಯದ ಮೇಲೆ, ಮಹತ್ವದ ಕೆಲಸದ ಮೇಲೆ ಹೊರಟಾಗ; ವಾಹನಗಳನ್ನು ಓಡಿಸುತ್ತಿರುವಾಗ ಕೊತ್ತಿ ಅಡ್ಡ ಬಂದರೆ ಅಶುಭ ಸೂಚಕವೆಂದು ನಂಬುತ್ತಾರೆ; ಪ್ರಯಾಣವನ್ನು ಅಲ್ಲಿಗೇ ನಿಲ್ಲಿಸಿ ವಾಪಸಾಗುತ್ತಾರೆ; ವಾಹನಗಳನ್ನು ಸ್ವಲ್ಪ ಹೊತ್ತು ನಿಲ್ಲಿಸಿ ಆಮೇಲೆ ಮುಂದಕ್ಕೆ ಚಾಲೂ ಮಾಡುವುದುಂಟು; ಮುಂಗಾಲನ್ನು ನಾಲಗೆಯಿಂದ ಒದ್ದೆ ಮಾಡಿಕೊಂಡು ಮುಖ ಉಜ್ಜಿಕೊಳ್ಳುವುದು ಕೊತ್ತಿಯ ಸ್ವಭಾವಗಳಲ್ಲೊಂದು; ಇದನ್ನು ನೋಡಿ 'ಕೊತ್ತಿ ಮುಖ ತೊಳಿದರೆ ನೆಂಟರು ಬರುವುದು ಗ್ಯಾರಂಟಿ' ಎಂದು ನಂಬುತ್ತಾರೆ; Man has close relation with cat so he has some feeling with cat; in those feelings some are unscientific; the cat came across the way is inauspicious journey to good occations; i.e., driving vehicles; stop the journey at the same time and move later is a blind belief; the cat licking its front leg and rubbing its face is a natural habit, people belive that the guests will arrive the house;

- 'ಕೊತ್ತೀಗ್ ಕೊಂಬ್ ಹುಟ್ಸಿ, ನುಚ್ಚಕ್ಕೀಗೆ ಮೊಳೆ ಬರುಸ್ತಾಳೆ'(ಗಾ) ಎಂಬ ಮಾತು ಸಲ್ಲದ ಕೆಲಸ ಮಾಡುವ ಇಲ್ಲವೇ ಸೋಮಾರಿ ಸ್ವಭಾವದ ಸೊಗಸುಗಾತಿ ಸೊಸೆಯ ಬಗೆಗೆ ಅತ್ತೆ ಹೇಳಿದ ಮಾತಾಗಿರಬಹುದು; ಹಾಗೆಯೇ ಅತ್ತೆಯ ಮೇಲಿನ ಸಿಟ್ಟು ಅಸಮಾಧಾನವನ್ನು ಅನ್ಯರ ಮೇಲೆ, ಅನ್ಯ ವಿಷಯಗಳ ಮೇಲೆ ತೋರಿಸಿದ್ದನ್ನು ನೋಡಿ ಹೇಳಿದ್ದಿರಬೇಕು 'ಅತ್ತೆ ಮೇಲಿನ ಕ್ವಾಪ ಕೊತ್ತೀ ಮೇಲೆ' ಎಂಬ ಮಾತು; ನಯ ನಾಜೂಕಿನ ಮಾತುಗಳಿಗೆ ಸೂಕ್ಷ್ಮ ಸ್ವಭಾವದ ವರ್ತನೆಗಳಿಗೆ ಪ್ರತೀಕವಾಗುತ್ತದೆ 'ಕೊತ್ತಿಗೆ ಜ್ವರ ಬಂದಂಗೆ' ಎಂಬ ನಾಣ್ಣುಡಿ; ಮನೆಯ ವಸ್ತುಗಳನ್ನು ಕದಿಯುವ ಮನೆಯೊಳಗಿನ ಹಾಗೂ ಹೊರಗಿನ ಜನರಿಗೆ ಪ್ರತೀಕ ಮಾಡಿ ಹೇಳುತ್ತಾರೆ 'ಕೊತ್ತಿ ಕಣ್ಮುಚ್ಕಂದ್ ಹಾಲ್‌ಕುಡುದ್ರೆ ನೋಡೋರಿಗೆ ಗೊತ್ತಾಗುದಿಲ್ವೆ' ಎಂದು; ಒಳಗೊಳಗೇ ತಂತ್ರ ಮಾಡಿ ಬಗ್ಗು ಬಡಿಯಲೆಳಸುವ ಹಿತಶತ್ರುಗಳಿಗೆ ಹೇಳಿದ ಮಾತು 'ಅತ್ತೀ ಹೂವು ಕೊತ್ತೀ ಮಾಸು ಕಂಡೋರಿಲ್ಲ' ಎಂಬುದು; 'Kotting komba hutsi, nuchakig mole barustale' is a proverb; it means a daughter-in-law who have done the unwanted work and showy, so the mother-in-law say sarcastically; in vice-versa daughter-in-law show her angry on her mother-in-law, on other things and person; people say `Atte Melina kopa Kotti mele; for smooth delicacy speech, soft behaviours are sarcastically used this idiom `Kottig jwara bandange'; the thieves who are in and out of the house making thievery is known by all, so the proverb used `Kotti kanmuchkand hal kudidare nodorige gottagudilve'; those who plan internally to suppress the close one; they used this proverb `Atti hoovu Kotti masu kandorilla';
- ಕೊತ್ತಿ ಕಚ್ಚುವುದಾಗಲಿ, ತಾನಾಗಿ ಮೇಲೆ ಬಿದ್ದು ಆಕ್ರಮಣ ಮಾಡುವುದಾಗಲಿ, ಇಲ್ಲವೇ ಇಲ್ಲ ಎನ್ನುವಷ್ಟು ಅಪರೂಪ; 'ಗುರ್ರ್....' ಎಂದು ಮುಖ ಗಿಂಜಿ ಹಲ್ಲು ತೋರಿಸಿ ಹೆದರಿಸುತ್ತದೆ, ತನಗೆ ಭಯವುಂಟಾದರೆ ಮರೆಗೆ ಅವಿತುಕೊಂಡು 'ಬಸ್....' ಎಂದು ಉಸಿರು ಬಿಡುತ್ತದೆ; ಕೊತ್ತಿಯ ಈ ಸಾಧುತನಕ್ಕೆ, ಒಗ್ಗಿಕೊಂಡ ಒಡನಾಟಕ್ಕೆ ಸೋತು ಹೇಳಿದ ಮಾತೇ ಇರಬೇಕು 'ಕೊತ್ತಿ ಕೊಂದ ಪಾಪ ತಿತ್ತಿ(ತಿರುಪತಿ ಪದವೇ ತತ್ತಿ ಆಗಿ ರೂಪಾಂತರಗೊಂಡಿದೆ) ಹೊಕ್ಕರೂ ಬಿಡದು' ಎಂಬ ಮಾತು; 'ಕೊತ್ತಿಯ ಪಾರುಪತ್ಯ ಒಲೆಯ ಮುಂದೆ' ಎಂಬ ಮಾತು ಇದರ ಅಂಜುಬುರುಕ ಸ್ವಭಾವವನ್ನೇ ಹೇಳುತ್ತಿರುವಂತಿದೆ; They cannot bite or fight itself on the man and very rare; only fears by showing teeth and making sound; if it fear ran to hide and make hissing sound; because of this the saying i.e., `Kotti konda papa titti hokkaru bidadu'; `Kottiya parupattya oleya munde'; it shows the fearing behavior of the cat;
- ಕೊತ್ತಿ ಒಂದು ಸಲಕ್ಕೆ ನಾಲ್ಕಾರು ಮರಿಗಳನ್ನು ಹಾಕುತ್ತದೆ; ತನ್ನ ಮರಿಗಳನ್ನು ತಾನೇ ತಿನ್ನುತ್ತದೆಂದು ಹೇಳುವುದುಂಟು; ಮೊದಲು ಹಾಕಿದ ಮರಿಯನ್ನು ತಿಂದು ಉಳಿದ ಮರಿಗಳನ್ನು ಸಾಕುತ್ತದೆಂದೂ ಅಭಿಪ್ರಾಯವಿದೆ; ಈ ಅಭಿಪ್ರಾಯ ಅಥವಾ ಬೆಕ್ಕಿನ ಈ ವರ್ತನೆ(?) ಸ್ವಜನ ದ್ವೇಷಿ ಮನುಷ್ಯರಿಗೆ ರೂಪಕವಾಗುತ್ತದೆ; cat deliver four to six kits at a time; a belief is the cat eat the first delivered kit and feed the other kits; this behavior of the cat refers to who are hate their own people;
- ತನ್ನ ಮರಿಗಳ ಕುತ್ತಿಗೆಯನ್ನು ಮೃದುವಾಗಿ ಬಾಯಲ್ಲಿ ಕಚ್ಚಿಕೊಂಡು ಒಂದೊಂದನ್ನೇ ಒಂದು ಕಡೆಯಿಂದ

ಇನ್ನೊಂದು ಕಡೆಗೆ ಸಾಗಿಸಿ, ಜಾಗ ಬದಲಿಸಿ, ಸಾಕುವುದು ಕೊತ್ತಿಯ ಇನ್ನೊಂದು ಸ್ವಭಾವ; ಇದು 'ಮಾರ್ಜಾಲ ನ್ಯಾಯ'; ತನ್ನ ಮಕ್ಕಳ ಬಗೆಗೆ, ಇತರರ ಕುಶಲಕ್ಷೇಮದ ಬಗೆಗೆ ಸ್ವತಃ ಜಾಗರೂಕತೆ ವಹಿಸುವ ಮಾನವ ಗುಣಕ್ಕೆ ಇದು ರೂಪಕ; The cat carries its kits from one place to another by biting lightly on the neck; changing the place of the kit to protect is the habit of the cat; it is called the `cat justice' (Marjala Nyaya); it is a human resemblance who take care on his own children or others children by himself;

- 'ಕೊತ್ತಿ ಗೊರ್‍......' ಎಂದು ಹಲ್ಲು ಗಿಂಜುವ ಭಯಾನಕತೆಯನ್ನು ನೋಡಿಯೇ ಇರಬೇಕು ಅದನ್ನು 'ಕೊಜ್ಜಿನ್'(=ಗಂಡು ಬೆಕ್ಕು–ಮ.), 'ಕೊಜ್ಚಿ'(=ಹೆಣ್ಣು ಬೆಕ್ಕು–ಮ.)ಎಂದು ಕರೆದಿರುವಂತೆ ತೋರುತ್ತದೆ; 'ಕೊಜ್ಚಿ>ಕೊತ್ತಿ ಆಗುವುದು ಸಹಜ ಬೆಳವಣಿಗೆ; 'ಕೊತ್ತಿ' ಕಾಲಾನಂತರದಲ್ಲಿ ಸಾಮಾನ್ಯ ಲಿಂಗಿಯಾಗಿ ಹೆಣ್ಣುಬೆಕ್ಕು ಗಂಡುಬೆಕ್ಕು ಎರಡನ್ನೂ ಸೂಚಿಸುವ ಪದವಾಗಿರಬಹುದು; ದೇಶ್ಯ ಪದ; The action showing teeth and making sound creating fear shows that the male or female cat; in course of time the word cat notices both male and female;
- ಕೊತ್ತಿಗಳಲ್ಲಿ 'ಕಾಡುಕೊತ್ತಿ', 'ಊರುಕೊತ್ತಿ' ಎಂಬ ಎರಡು ಬಗೆಗಳಿವೆ; ಕಾಡುಕೊತ್ತಿ ಊರುಕೊತ್ತಿಗಿಂತ ಸ್ವಲ್ಪ ದೊಡ್ಡದಿರುತ್ತದೆ; ಕೊರವರು, ಹಕ್ಕಿಪಿಕ್ಕಿಯರು ಕಾಡುಕೊತ್ತಿಯನ್ನು ಬೇಟೆಯಾಡಿ ತಿನ್ನುತ್ತಾರೆ; ಊರುಕೊತ್ತಿಯನ್ನೂ ಉರುಳು ಹಾಕಿ ಹಿಡಿದು ತಿನ್ನುವುದುಂಟು; ಬಾಣಂತಿಯರಿಗೆ ಊರುಕೊತ್ತಿಯ ಮಾಂಸ ತಿನ್ನಿಸುವುದು ಕೆಲವು ಕಡೆ ಕಂಡು ಬರುತ್ತದೆ; ಇದರ ಮಾಂಸ ಉಷ್ಣಾಂಶದಿಂದ ಕೂಡಿದೆ ಎಂಬುದೇ ಇದಕ್ಕೆ ಕಾರಣವಿದ್ದು ಬಾಣಂತಿಯರ ಮೈಯ ನೀರು ಕರಗಲೆಂಬ ಉದ್ದೇಶವಿರಬಹುದು; Cats are divided in two groups wild cat and homely cat; wild cats bigger than home cats; Koravas, Hakkipikki (trible) people hunt the wild cat for meat to eat; home cats are also caught by nets; cat meat given to the newly give birth woman to eat; the meat is very heat, so this is provide to thin the body;
- ***—ಕೊತ್ತಿಕಣ್ಣು*** : ಕೊತ್ತಿಯ ಕಣ್ಣಿನಂತಿರುವ ಕಣ್ಣು; ಜನಾಂಗೀಯ ಸಂಕರದಿಂದ ಕಪ್ಪು ಕಣ್ಣುಗುಡ್ಡೆಯ ಜನರಲ್ಲಿ (ದ್ರಾವಿಡ, ನೀಗ್ರೊ, ಮಂಗೋಲಿಯ ಇತ್ಯಾದಿ) ಕಣ್ಣುಗುಡ್ಡೆ ಸ್ವಲ್ಪ ಕಂದು ಬಣ್ಣಕ್ಕೂ ದೃಷ್ಟಿಬಿಂದು ಗುಂಡಗಿರುವ ಬದಲು ಲಂಬವಾಗಿಯೂ ಇದ್ದರೆ ಇದನ್ನು 'ಕೊತ್ತಿಕಣ್ಣು' ಎಂದು ಕರೆಯುತ್ತಾರೆ; ಐರೋಪ್ಯರ ವಸಾಹತುಶಾಹಿತ್ವಕ್ಕೆ ಒಳಗಾದ ಭಾರತದಲ್ಲಿ ಈ ಬಗೆಯ ಕಣ್ಣು ಕೆಲವರಲ್ಲಿ ಕಂಡುಬರುತ್ತದೆ; ಜನಪದ ಕಥೆ–ಕಾವ್ಯಗಳಲ್ಲಿ ಕೊತ್ತಿಕಣ್ಣು/ಬೆಕ್ಕಿನಕಣ್ಣು ಒಂದು ಆಶಯವಾಗಿ ಕಾಣಿಸಿಕೊಳ್ಳುತ್ತದೆ; A persons eyes are like cat eyes; Inter mix of race black eyeballs turn brownish colour lightly the eyepoint is in straight instead of round they are called cat eyes; because of colonization in India in some people found this type of eyes;
- ***—ಕೊತ್ತಿಕಣ್ಣಿ/–ಕೊತ್ತಗ್ಣಿ*** : ಕೊತ್ತಿಯ ಕಣ್ಣಿನಂತೆ ಕಣ್ಣುಳ್ಳವಳು; ಕೊತ್ತಿಯ ಕಣ್ಣಿನಂತೆ ಕಣ್ಣು ಇರುವವಳು; ಕೆಂಚು ಕಣ್ಣಿನ ಹೆಂಗಸು; ಅಸಹಜ ರೂಪವಾದುದರಿಂದ ಇಂತಹ ಕಣ್ಣುಳ್ಳವರ ಬಗೆಗೆ ಅಸೂಯೆ, ದ್ವೇಷ, ಮಾತ್ಸರ್ಯ ಗುಣಗಳನ್ನು ಆರೋಪಿಸಿ ಪೂರ್ವಾಗ್ರಹ ಪೀಡಿತ ಮನೋಭಾವದಿಂದ ಅವರನ್ನು ನೋಡುವ ಪರಿಪಾಠ ಬೆಳೆದಿದೆ; ಕೊತ್ತಿ+ಕಣ್ಣು+–ಇ=ಕೊತ್ತಿಕಣ್ಣಿ/ಕೊತ್ತಗ್ಣಿ; *ಪ್ರ: "ಕೊತ್ತಗ್ಣಿಯಿಂದ ನನ್ ಮನೆ ಹೊತ್ಕಂದ್ ಉರೀತು*"; A woman who have eyes like cat eyes is called `Kotganni'; this is uncommon feature, so they are jealoused, hate, envy by others; they have preoccupied mind on them;
- ***—ಕೊತ್ತಿಗಿಡ*** : ಒಂದು ಬಗೆಯ ಕಾಡುಗಿಡ; ಔಷಧಿಗೆ ಬಳಕೆ; A kind of wild plant used as medicine;
- ***—ಕೊತ್ತಿಜ್ವರ*** : ಬೆಕ್ಕಿಗೆ ಬರುವ ಜ್ವರ; ಬೆಕ್ಕಿಗೆ ಬರುವ ಜ್ವರದಷ್ಟು ತಾಪ; ಒಂದು ನುಡಿಗಟ್ಟು; ಗಾದೆಯಂತೆ ಬಳಕೆಯಾಗುವುದೂ ಉಂಟು; ಕೊತ್ತಿ ಜ್ವರದ ತಾಪದಿಂದ ನರಳುವುದು ಅದರ ಪೋಷಕರ ಗಮನಕ್ಕೆ ಬರುವುದೇ ಇಲ್ಲವೆಂಬಷ್ಟು ಅಪರೂಪವಿರಬೇಕು; ಬೆಕ್ಕಿನ ಮೈ ಸದಾ ಉಷ್ಣತೆ ಹೊಂದಿದ್ದು ಬಿಸಿಯಾಗಿಯೇ ಇರುತ್ತದೆ; ಇದಕ್ಕೆ ಬೇರೆಯಾಗಿ ಜ್ವರ ಬರುವ ಮಾತೇ ಇಲ್ಲ; ಈ ಸಂಗತಿಯನ್ನು ಅತಿ ನಾಜೂಕಿನ; ಆಡಂಬರದ ನಡವಳಿಕೆಯ ವ್ಯಕ್ತಿಗಳಿಗೆ ರೂಪಕ ಮಾಡಿ 'ಕೊತ್ತೀಗ್ ಜ್ವರ ಬಂದಂಗಾಡ್ತನೆ/ಳೆ' ಎನ್ನುತ್ತಾರೆ; Fever to cat; the heat of the fever upto the mark of the heat to cat fever; this is an idiom used as a

proverb; the body of the cat is always in heat condition; no way to suffer from fever; this proverb is like fragility and Ostentation;

- —*ಕೊತ್ತಿತಪ್ಪಲೆ* : ಬೆಟ್ಟದ ತಪ್ಪಲೆ(?); ನೀರು ತುಂಬುವ ಪಾತ್ರೆ; Bettada tappale?; water filling vessels;
- —*ಕೊತ್ತಿತಲೆ ಬದನೆ* : ಕೊತ್ತಿಯ ತಲೆಯಂತೆ, ಅಷ್ಟೇ ಗಾತ್ರಕ್ಕೆ ಗುಂಡಗೆ ಕಾಯಿ ಬಿಡುವ ಬದನೆ ಗಿಡ ಮತ್ತು ಕಾಯಿ; ಬಯಲು ಸೀಮೆಯ ತರಕಾರಿಗಳಲ್ಲೊಂದು; ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ; ವರ್ಷಪೂರ್ತಿ ಫಸಲು ಬಿಡುತ್ತದೆ; A brinjal plant bear the fruit like cat head and size; it is a vegetable of plain land area; it is grown in Bengaluru and Ramanagara area; it gives yield throughtout year;
- —*ಕೊತ್ತಿನಾರ* : ಒಂದು ಆಟ; ಅಣ್ಣೆಕಲ್ಲಾಟದ ಒಂದು ಪ್ರಭೇದ; ಕೆಂಬಟ್ಟೆ ಹೊಲೆಯ ಸಮುದಾಯದಲ್ಲಿ ಪ್ರಚಲಿತ. A play; it is a kind of stone play; it is familiar in Kembatte holeya community.

ಕೊತ್ತು kottu :

- ಒಂದು ವ್ಯವಸಾಯದ ಉಪಕರಣ; A kind of agriculture instrument;
- ಮಣ್ಣನ್ನು ಸಡಿಲ ಮಾಡುವ/ನೆಲವನ್ನು ಕೆದಕುವ ಸಾಧನ(ತು.ಜಿ); An instrument to loosen or dig the ground;
- ಕೋವಿಯ ಕುದುರೆ(ತು.ನಿ); Horse of rifle;
- ಯಾವುದೇ ಪದಾರ್ಥವನ್ನು ಹಿಂಡಿ/ಸೋಸಿ ತೆಗೆದಾಗ ಉಳಿಯುವ ಮಡ್ಡಿ ಅಥವಾ ಹಿಂಡಿ(ದ.ಕ); Filter of anything, the remaining sediment;
- —*ಕೊತ್ತುಮಣೆ* : ಈಳಿಗೆ ಮಣೆ; ಅಡಿಕೆಕಾಯಿ ಸುಲಿಯಲು ಬಳಕೆ. A flank use to peel off arecanut.

ಕೊತ್ತುಗೆರೆ kottugere :

- ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೋಕಿನ ೨೧ ಮತ್ತು ೪೩ನೇ ಶಾಸನಗಳಲ್ಲಿ ಈ ಊರಿನ ಪ್ರಸ್ತಾಪವಿದೆ; Name of this place referred in the 43rd inscription of Tumkuru district Kunigal taluk;
- ಕೊತ್ತಗೆರೆಯಲ್ಲಿ ದೊರೆತ ಕ್ರಿ.ಶ.೧೦೭೯ರ ಶಾಸನದಲ್ಲಿ (೨೧) ಇದನ್ನು 'ಕೊತ್ತುಗೆರೆ' ಎಂದು ಕರೆಯಲಾಗಿದೆ; 21st inscription found in 1079AD it is called as `Kottugere';
- ಅದೇ ತಾಲ್ಲೋಕಿನ ಜಾಣಗೆರೆಯಲ್ಲಿ ದೊರೆತ ಕ್ರಿ.ಶ.೧೬೭೦ರ ಶಾಸನದಲ್ಲಿ(೪೩) 'ಕೊತ್ತಂಗೆರೆ'ಯ ಉಲ್ಲೇಖವಿದ್ದು, ಕುಣಿಗಲ ಹೋಬಳಿಗೆ ಸೇರುತ್ತದೆ ಎಂಬ ವಿಷಯ ತಿಳಿಯುತ್ತದೆ; In the 1670thAD 43rd inscription of the same taluk the name `Kottamgere' referred, it is belongs to Kunigal hobli;
- ಉಲ್ಲೇಖಿತ ರೀತಿಯಲ್ಲಿ ಈ ಊರಿನ ಹೆಸರಿಗೆ ಕೊತ್ತುಗೆರೆ, ಕೊತ್ತಗೆರೆ, ಕೊತ್ತಂಗೆರೆ ಎಂಬ ರೂಪಗಳು ಸಿಗುತ್ತವೆ; 'ಕೊತ್ತಂಗೆರೆ'ಯ ಅನುನಾಸಿಕಕ್ಕೆ ಕಾರಣ ತಿಳಿಯದು. ಅದೇ ಮೂಲ ರೂಪವಾಗಿದ್ದರೆ, ಆಮೇಲೆ ಅನುನಾಸಿಕ ಕಳೆದುಕೊಂಡು ಬಳಕೆಯಾಗುವುದು ಸಹಜ; As in reference this village has the forms found Kottugere, Kottagere, Kottamgere;
- ಕೊತ್ತು+ಕೆರೆ>ಕೊತ್ತುಕೆರೆ>ಕೊತ್ತುಗೆರೆ ಆಗಿದೆ(ಕ>ಗ); 'ಕೊತ್ತು'ವಿನ ಮೂಲ ರೂಪ 'ಕುತ್ತು' ಇರಬಹುದು, ಆಗ ಕುತ್ತು>ಕೊತ್ತು ಆಗುವುದು ಸಹಜ(ಉ>ಒ–ಸ್ವರವ್ಯತ್ಯಯ Vowel mutation); 'ಕುತ್ತು' ಪದದ ಮೂಲವನ್ನು ಒಪ್ಪಿಕೊಂಡರೆ, ಅದರ ಅರ್ಥ 'ಊರು' ಎಂದಾಗುವುದು; ಕೆರೆಯ ಪಕ್ಕದಲ್ಲಿರುವ ಊರು ಅಥವಾ ಕೆರೆಯೂರು/ಊರುಕೆರೆ ಎಂದಾಗುವುದರಲ್ಲಿ ಸಂಶಯವಿಲ್ಲ.

(E.C- ೨೪; ತು.ಜಿ.)

ಕೊತ್ತುವಳೆ kottuvaḷe :

- ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲ್ಲೋಕಿನ ಕ್ರಿ.ಶ.೧೫೮೬ರ ೧೧೦ನೇ ಶಾಸನದಲ್ಲಿ ಈ ಊರಿನ ಪ್ರಸ್ತಾಪವಿದೆ; The name of the place referred in the 110th inscription of 1586AD Mysore district Periyapattana taluk;
- ಕೊತ್ತುವಳೆ=ಕೊತ್ತಲ(ಳ)+ಪೊಳೆ(ಟ್)>ಕೊತ್ತಳ ಹೊಳೆ/ಕೊತ್ತಳ ವೊಳೆ(ಪ>ವ/ಹ); ತಮಿಳು ಮತ್ತು ಮಲೆಯಾಳಂಗಳಲ್ಲಿ 'ಕೊತ್ತಳ' ರೂಪವೇ ಇದೆ, ತೆಲುಗಿನಲ್ಲಿ 'ಕೊತ್ತಳ'ದ ಜೊತೆಗೆ 'ಕೊತ್ತಡ' (ಡ>ಳ)

ರೂಪವೂ ಇದೆ; In Tamil and Malayalam the form `Kottaḷa'; in Telugu along with `Kottaḷa', Kottaḍa also;

- 'ಕೊತ್ತಳ' ಎಂದರೆ ಕೋಟೆಯ ಮೇಲಿನ 'ಬುರುಜು'; 'ಕೊಟೆ ಕೊತ್ತಲು' ಎಂಬ ಸಂಯುಕ್ತ ರೂಪವೂ ಚಾಲ್ತಿಯಲ್ಲಿದೆ; `Kottaḷa' means space on the fort; the compound form `Kote kottalu' is in practice;
- ವಳೆ/ಹೊಳೆ; ಕೋಟೆಯ ಸಮೀಪದಲ್ಲಿ ಹರಿಯುತ್ತಿದ್ದ ಹೊಳೆ, ಅದು ಕಾರಣದಿಂದ ಈ ಸ್ಥಳನಾಮ; Vale/Hole; the river flow near the fort is the name existed;
- ಚಂಗಾಳ್ವ ಮನೆತನದ ಪಿರಿಯರಾಜದೇವನು ಶ್ರೀಗಿರಿಯ ಮಲ್ಲಿಕಾರ್ಜುನ ದೇವರಿಗೆ ಭೂಮಿ ದಾನ ನೀಡಿದನು; ದಾನ ನೀಡಿದ ಗ್ರಾಮಗಳು ತುಂಗಾ ಸ್ಥಳದ ವೀರನಂಜರಾಯ ಪಟ್ಟಣ ಸೀಮೆಯ ಗ್ರಾಮಗಳು; ಆ ಗ್ರಾಮಗಳಲ್ಲಿ 'ಕೊತ್ತುವಳೆ' ಗ್ರಾಮವೂ ಒಂದು. Periyarajadeva of Chengalva dynasty donated the land to Srigiri Mallikarjuna god; the donated villages belongs to Veera Nanjaraya pattana, among these villages `Kottuvale' is one.

(E.C- ೪; ಮೈ.ಜಿ.)

ಕೊತ್ರು kotru :

- ೧.ಮಕ್ಕಳನ್ನು ಮುದ್ದಿನಿಂದ ಕರೆಯುವಾಗ ಬಳಸುವ ಶಬ್ದ; *ಪ್ರ: 'ಇಲ್ಲಿ ಬಾ ಕೊತ್ರು';* ೨.ತೆಂಗಿನ ಹೆಡೆಯ (ಗೊದಮೊಟ್ಟೆಯ) ಬುಡ(ಮಂ.ಜಿ). A sound or word used to call the children affectionately; the bottom of the palm of the coconut.

ಕೊತ್ಲಾ kotlā :

ದವಸ ಧಾನ್ಯಗಳನ್ನು ತುಂಬುವುದಕ್ಕೆ ಹಾಗೂ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸುವುದಕ್ಕೆ ಬಳಕೆ ಮಾಡುವ ಚೀಲಗಳು; ಗೋಣಿಚೀಲ (ಉ.ಕ.ಜಿ). Bags use to fill the grains and carry from one place to another; gunny bags.

ಕೊರ್ತಿ ಆಟ korti āṭa :

- ಕೊಡವರ ಒಂದು ಆಟ(ಕೊಡ.ಜಿ); ತಮಿಳುನಾಡಿನಿಂದ ಕೊಡಗು ಸೀಮೆಗೆ ಬಂದದ್ದು; ವೇಷ ಹಾಕಿ ಕುಣಿಯುವ ಆಟ/ಕಲೆ; A play of Kodavas; it is from Tamilnadu to Kodagu; a dance form with costume;
- ಕೊಡವರ ತೋಟಗಳಲ್ಲಿ ದುಡಿಯಲು ಬಂದ ತಮಿಳುನಾಡಿನ ಶ್ರಮಿಕ ಸಮುದಾಯಗಳ ಜನ ತಮ್ಮ ನಾಡಿನಿಂದ ಈ ಆಟವನ್ನೂ ಕರೆತಂದರು; The people from Tamilnadu for work brought this art along with them;
- ಐದಾರು ಮಂದಿ ಕೂಡಿ ಆಡುವ ಆಟ; ಖಾಲಿ ಡಬ್ಬಗಳನ್ನೇ ವಾದ್ಯದಂತೆ ಹಿಡಿದು ನುಡಿಸುತ್ತಾರೆ; ಇನ್ನಿಬ್ಬರು ಮುಖಕ್ಕೆ ಕೆಂಪು ಕಪ್ಪು ಬಣ್ಣ ಹಚ್ಚಿಕೊಳ್ಳುತ್ತಾರೆ; ಮತ್ತಿಬ್ಬರು ಹಕ್ಕಿಪಿಕ್ಕಿ ಮಹಿಳೆಯರ ವೇಷ ಧರಿಸುತ್ತಾರೆ; A play with five to six people empty boxes are play like musical instruments; two person decorated with black and red dress like Hakkipikki women;
- ಈ ವೇಷಧಾರಿಗಳು ಮತ್ತು ವಾದಕರು ಮನೆಮನೆಗೆ ಹೋಗಿ ಅಂಗಳದಲ್ಲಿ ಕುಣಿದು ಕುಪ್ಪಳಿಸಿ ಸಂಭಾವನೆ ರೂಪದಲ್ಲಿ ದವಸ ಧಾನ್ಯಗಳನ್ನು ಪಡೆಯುತ್ತಾರೆ. These costumed dancers on every front yard of the house along with musician and collect the grains in the form of grains;

ಕೊದಂಟಿ kodaṇṭi :

- ಕೊದಂಟಿ, ಕೊದಂಟಿಗೆ, ಕೊದಂಟೆ, ಕುದಂಟೆ, ಕುದಂಟಿ(ಸುತ್ತಿಗೆಯಂತೆ ಉಪಯೋಗಿಸಬಹುದಾದ) ಮರದ ಚಿಕ್ಕತುಂಡು; ಕೊರಡು; ಮರದ ಸುತ್ತಿಗೆ; ಅಕ್ಕಿ ಮುಡಿಕಟ್ಟುವಾಗ ಹಗ್ಗಕ್ಕೆ ಹೊಡೆಯಲು ಉಪಯೋಗಿಸುವ ಮರದ ಸಾಧನ(ತು.ನಿ); Kodanti, Kodantige, Kodante, Kudante are the different word forms(used as hammer) a piece of wood, wooden hammer;
- ಕೋದಂಟಿ; ೧.(ಕರಾ) ದನಕರುಗಳು ಓಡಿ ಹೋಗದಂತೆ ಮುಂಗಾಲುಗಳ ನಡುವೆ ನೇತುಬೀಳುವಂತೆ ಕೊರಳಿಗೆ ಕಟ್ಟಿದ ಮರದ ತುಂಡು; ಕೊಂಡಿಗೆ; ಗುದ್ದಿಗೆ; ೨.ಕೊಡತಿ; ಮುಡಿಕಟ್ಟುವಾಗ ಬಳಸುವ ಸಾಧನ; [ತುಳು: ಕುದಂಟಿ, ಕೊದಂಟಿ](ಕ.ನಿ); A wooden piece tie to the

cattle in between the two legs to avoid them to runaway;
- ಬಡಿಯುವ ಸಕರಣೆ; ಬಡಿಗೆ, ಕೊದಂಟಿ ಕೋಲು (ಹ.ಕ); An instrument to hit; a stick;
- ಬೃಹತ್ ಗಾತ್ರದ ಸುತ್ತಿಗೆ; ಭೀಮ ಕೊದಂಟಿ(ಜ.ನಿ); A huge hammer; i.e. called Bhima kodanti;
- ಒಂದು ಸ್ಥಳನಾಮ(?)(ಮಂ.ಜಿ); A name of a place;
- ವ್ಯರೂ: ಕೋದಂಟಿ, ಕುದಂಟಿ(ತು); ಕುಟ್ಟೆ(ಕೊಡವ);
- ದನಕರುಗಳನ್ನು ಮೇಯಲು ಬಿಟ್ಟಾಗ ಮುಂದಾಗಿ ಓಡಿಹೋಗುವ, ತಪ್ಪಿಸಿಕೊಳ್ಳುವ ಇಲ್ಲವೆ ಹೊಲಗದ್ದೆಗಳಿಗೆ ನುಗ್ಗಿ ಬೆಳೆ ನಾಶ ಮಾಡುವ ಕಾಟಕೊಡದೆ ಇರಲಿ ಎಂದು ಅವು ಮುಂಗಾಲಿನ ನಡಿಗೆಗೆ ತೊಡರು ಒಡ್ಡುವಂತೆ ಮೊಣಕಾಲು ಗಾತ್ರದ, ಸುಮಾರು ಅರ್ಧಮಾರು ಉದ್ದದ ಬಡಿಗೆಯನ್ನು ತೊಂಡು ದನಗಳ ಕೊರಳಿಗೆ ಕಟ್ಟಿ ನೇತುಬಿಡುತ್ತಾರೆ; ಗೋವಳಿಗ ತನದ ಒಂದು ಉಪಾಯ/ತಂತ್ರವಾಗಿ ಇದನ್ನು ಪರಿಗಣಿಸಬಹುದು; ಗ್ರಾಮ ಸಂಸ್ಕೃತಿಯ, ಬುಡಕಟ್ಟು ಸ್ಥಿತಿಯ ಪ್ರಾಚೀನತೆ ಕುರುಹು ಎಂದೂ ತಿಳಿಯಬಹುದು. Cattles to out for graze any of them go out quickly and move to the cropping land stealthily to eat or destroy, such cattles are tie a wooden piece in the neck between the front legs to check them run; it is the plan of the cattle drower.

ಕೊದಲು/ಕೊದ್ಲು kodalu/kodlu :
- ಮಾತನಾಡುವಾಗ ಬಿಕ್ಕುವುದು; ತೊದಲು; ಉಗ್ಗು; Stammer while talking;
- ಬಿಕ್ಕಲು; ಬಿಕ್ಲು ಎಂದು ಹೇಳುವುದುಂಟು; Stammering, Stuttering impediment in speech;
- ೧.ಮಾತನಾಡುವಾಗ ತಡವರಿಸುವಿಕೆ; ತೊದಲುವಿಕೆ, ತೊದಲು ಮಾತು; ತೊದಳ್; ತೊದಲ್; ಉಗ್ಗು; ೨.ಮೃದುವಾದ ಮಾತು; ಮಂಜುಳವಾದ ನುಡಿ (ಕ.ನಿ); Stroke gently in speech; soft spoken, melodious, dulcat;
- ಕೊದಲು, ಕೊದಳ್; ಮಾತನಾಡುವಾಗ ತಡವರಿಸು; ಉಗ್ಗು, ತೊದಲುವಿಕೆ; ತ: ಕುದಲ್ಯೆ; ಕೊಡ: ಗೊಜಳೆ; ತುಳು: ಕೊದ್ದೆ, ಗೊದ್ದೆ; ತೆಲು: ಕೊತುಕು, ಕೊದುಕು (ದ್ರಾ.ಭಾ.ಜ್ಞಾಪ.ಕೋ);
- ಕೊದಳ್/ಕೊದಲ್ ರೂಪಗಳಿವೆ; ಪದದ ಅಂತ್ಯ 'ಳ'ಕಾರ ಉಚ್ಚಾರಣೆಯಲ್ಲಿ 'ಲ'ಕಾರ ಆಗಿರಬಹುದು;
- ಕೊದಲ್>ಕೊದಲು>ಕೊದ್ಲು ಎಂದು ಆಡುನುಡಿಯಲ್ಲಿ ಉಚ್ಚಾರಗೊಳ್ಳುತ್ತದೆ;
- ಕೊದಲು/ಕೊದ್ಲು>ತೊದಲು/ತೊದ್ಲು ಆಗಿರುವ ಸಾಧ್ಯತೆ ಇದೆ(ಕ>ತ); 'ಕ'ಕಾರದ ಉಚ್ಚಾರದಲ್ಲಿ ಕೆಲವೊಮ್ಮೆ 'ತ'ಕಾರದ ಪ್ರಯೋಗ ಯಾದೃಚ್ಛಿಕವಾಗಿ ಆಗುವುದುಂಟು; ಉದಾ.ಗೆ ಕಾಗೆ>ತಾಗೆ ಇತ್ಯಾದಿ ಗಮನಿಸಬಹುದು; ಈ ಹಿನ್ನೆಲೆಯಲ್ಲಿ ಆಡುನುಡಿಯ (ಗ್ರಾಮ್ಯ) ಕೊದಲು/ಕೊದ್ಲು ಮೂಲರೂಪವಾಗಿದ್ದು ನಂತರ ಶಿಷ್ಟವೆನಿಸಿಕೊಳ್ಳುವ ತೊದಲು/ತೊದ್ಲು ಉಚ್ಚಾರಣೆಯಲ್ಲಿ ಬಂದಿರುವಂತಿದೆ;
- —***ಕೊದಲ/ಕೊದ್ಲ*** : ೧.ತೊದಲು ಮಾತನಾಡುವವನು; ಬಿಕ್ಕಲ; ೨.ತಳವಾರ (ಮಂಡ್ಯ.ಜಿ)(ಕ.ಜಾ.ನಿ); 1. A person speak stammerly; 2. Village policeman;
- ತೊದಲ/ತೊದ್ಲ; ಬಿಕ್ಕಲ; *ಪ್ರ: 'ಅವನೊಬ್ಬ ಕೊದ್ಲ'* (ಕ.ಜಾ.ಕೋ);
- ಉಗ್ಗ; ಮೂರ್ಖ(ಮೈ.ಜಿ); Idiot; *ಪ್ರ: 'ಕೊದ್ಲುನೋ ಪದ್ಲುನೋ ಎಂತೋನೊ ಒಂದು ಗಂಡ್ ಬತ್ತಿ ಹುಟ್ಟಲ್ಲ ಬುಡು ಅತ್ಲಾಗೆ'*;
- ಬಿಕ್ಕಲ, ಮಾತನಾಡುವಾಗ ಬಿಕ್ಕುವವ(ಜ.ನಿ);
- ಕೊದಲ್>ಕೊದಲು+ಅ=ಕೊದಲ/ಕೊದ್ಲ;
- —***ಕೊದಲಿ/ಕೊದ್ಲಿ*** : ತೊದಲು ಮಾತನಾಡುವವಳು; ಮಾತನಾಡುವಾಗ ಬಿಕ್ಕುವವಳು; A woman speak stammerly;
- ಕೊದಲ್>ಕೊದಲು+ಇ(<ಇತಿ)=ಕೊದಲಿ/ಕೊದ್ಲಿ;
- 'ಕೊದಲು' ಪದಕ್ಕೆ ಸ್ತ್ರೀವಾಚಕವಾಗಿ 'ಇ'(<ಇತಿ) ಸೇರಿ ಕೊದಲಿ/ಕೊದ್ಲಿ ಎಂದಾಗಿದೆ; The word `Kodalu' joins with feminine expression, Kodali;
- 'ಬಿಕ್ಕಲಿ' ಎಂಬ ಪ್ರಯೋಗವೂ ಉಂಟು; The expression `Bikkali' also in practice;
- —***ಕೊದಲಿಸು/ಕೊದ್ಲಿಸು*** : ಕೊದಲ್/ಕೊದಲು ಪದಕ್ಕೆ 'ಇಸು' ಪ್ರತ್ಯಯ ಸೇರಿ ಕೊದಲಿಸು/ಕೊದ್ಲಿಸು ಉಂಟಾಗಿದೆ; (ಕೊದಲ್>)ಕೊದಲು+ಇಸು= ಕೊದಲಿಸು;
- ಬಿಕ್ಕಲಿಸು; ತೊದಲಿಸು.

ಕೊದವೆ kodave :

ಕಡಿಮೆ; ನೋಡಿಕೊಳ್ಳುವಲ್ಲಿ ನಿರ್ಲಕ್ಷ್ಯ ತೋರುವುದು; *ಪ್ರ: 'ನಿನಕೇನು ಕೊದವೆ ಮಾಡಿವ್ನಿ ಅಂತ ಇಂಗೆ*

ಎಗರಾಡ್ತಿ(ಮಂ.ಜಿ). Deficiency; want; lack; show disinterest in care.

ಕೊದಾರಿ kodāri :

- ಕೊದ/ಕೊದೆ ಪದದಿಂದ ಬಂದ ಸಮಾಸ ಪದ; ಕೊದೆ=ಬೆದೆ, ಬೆದೆಗೆ ಬಂದಿರುವ, ನಸೆ; It is from the word Koda/Kode;
- ಕೊದ/ಕೊದೆ+ಹೋರಿ=ಕೊದೆಹೋರಿ>ಕೊದ್ಹೋರಿ> ಕೊದೋರಿ>ಕೊದಾರಿ; ಆಗಿರುವ ಸಾಧ್ಯತೆ ಇದೆ; ಉಚ್ಚಾರಣೆಯಲ್ಲಿ ಗ್ರಾಮ್ಯದ ಆಡುನುಡಿಯಲ್ಲಿ 'ಕೊದೆಹೋರಿ' ಮೇಲಿನಂತೆ 'ಕೊದಾರಿ'ಯಾಗಿ ಬಳಕೆಯಲ್ಲಿದೆ; Kode=bede means any animals are in the heated condition means mating time; the word Kodori becomes possible Kodari; in folk pronunciation `Kɔde hori' becomes Kodari;
- ಇದು ಪ್ರಾಯಕ್ಕೆ ಬಂದ ಹೋರಿ, ಕುರಿ, ಆಡು ಮೊದಲಾದ ಪ್ರಾಣಿಗಳಿಗೂ, ವ್ಯಂಗ್ಯ ಹಾಗು ರೂಪಕವಾಗಿ ಮನುಷ್ಯರಿಗೂ ಅನ್ವಯ; This is the word apply to bull, goat etc animals and it is to man sarcastically;
- ೧.ಪ್ರಾಯಕ್ಕೆ ಬಂದ ಆದರೆ ಇನ್ನೂ ಫಲವಾಗದ ಹೆಣ್ಣು ಕುರಿ; ೨.ದಪ್ಪವಾದ, ಬಲಿಷ್ಠವಾದ (ಕ.ಜಾ.ಕೋ); A youth she sheep which cannot be pregnant; 2.stout, strong;
- ೧.ಕಾಮ ಪೀಡಿತ, ಮದವೇರಿದವ, ತೀವ್ರ ಲೈಂಗಿಕ ತುಡಿತವುಳ್ಳವ; ೨.ಕೊಬ್ಬಿದ ಪ್ರಾಣಿ; ಬೆದೆಗೆ ಬಂದ ಹಸು; ಕೊಬ್ಬಿದ ಆದರೆ ಇನ್ನೂ ಗರ್ಭಕಟ್ಟದ, ಮರಿ ಹಾಕದಿರುವ ಕುರಿ(ಮಂಡ್ಯ.ಜಿ)(ಕ.ಜಾ.ನಿ); lustful; intoxicate; inebriate; very much eager of lust; fatty animal;
- ಬೆದೆಗೆ ಬಂದ ಹಸು(ಜಾ.ಕೋ); a cow at the mood of heat;
- ಕೊದ=ಕೊದರಿ; ಪ್ರಾಯದ್ದು, ಹರೆಯದ್ದು; ಪ್ರಾಯದ ಕುರಿ, ಆಡು ಎಂಬ ಅರ್ಥಗಳ ಜೊತೆಗೆ ಬೈಗುಳವಾಗಿ ಕೂಡ ಬಳಕೆಯಾಗುತ್ತದೆ; *ಪ್ರ: 'ಒಳ್ಳೆ ಕೊದಾರಿ ಆಡ್ದಾಂಗೆ ಆಡ್ತಾನೆ'*; A youthful sheep or goat; it also use as scold to man;
- ಕೊಬ್ಬಿದ ಮಣಕು; ದಷ್ಟಪುಷ್ಟವಾದ; ಪ್ರ: 'ತಿಂದು, ತಿಂದು ಕೊದಾರಿ ಕುಚ್ಚೆ ಆಗವ್ನೆ'; (ಕುಚ್ಚೆ=ಒಂದು ಬಗೆಯ ಮೀನು)(ಮೈ.ಜಿ); A fatty young cow, sheep, goat etc;
- ಪ್ರೌಢಾವಸ್ಥೆಯ ಹೆಣ್ಣು ಕುರಿಯನ್ನು ಹೀಗೆ ಕರೆಯುತ್ತಾರೆ(ಮಂಡ್ಯ.ಜಿ); A youthful she sheep is called Kodari;
- ಕುದಿ; ಸಮಯ, ಕಾಳ, ಗಡು; ಕಂತು; ವಾಯಿದೆ; ಶುಭದಿನ, ಮುಹೂರ್ತ; ಋತುಸ್ರಾವದ ಅವಧಿ; ನಿರ್ಧಾರಿತ, ನಿಯಮಿತ, ನಿಯೋಜಿತ(ತು.ನಿ); Kudi; time, kaḷa, limit; instalment limited time; goodday; auspicious time; time of menstruation; fixed; limited, appointed;
- ಕುದಿ(ತುಳು)=ಹಾರು, ಕಾಲಿನಿಂದ ಮೆಟ್ಟು, ಜೋರಾಗಿ ಓಡಿಸು; ಕುಲುಕಾಡು; ಋತುಸ್ರಾವದ ಅವಧಿ; ಕೊದಿ(ತಮಿಳು)=ಆಸೆಯಿಂದ ಕೆರಳು; ಬಯಕೆಯಿಂದ ಕುದಿ; ಈ ಅರ್ಥಗಳು ಕುರಿ, ಆಡು, ದನ ಮೊದಲಾದ ಪ್ರಾಣಿಗಳ ಲೈಂಗಿಕತೆಗೆ ಪ್ರತೀಕಗಳಾಗುತ್ತವೆ; Kudi(Tulu) throw; suppress by leg; drive away fast; shake; flare up with desire; these are the reflection of animal like sheep, goat, cattle sexual activities;
- 'ಕೊದಾರಿ' ಪದ ಪ್ರಾಯಕ್ಕೆ ಬಂದ ಕುರಿಗೆ ಹೆಚ್ಚು ಬಳಕೆಯಾಗುವುದರಿಂದ ಕೊದ+ಕುರಿ=ಕೊದಗುರಿ> ಕೊದಾರಿ ಆಗಿರುವ ಸಾಧ್ಯತೆಯೂ ಇದೆ; 'ಗ'ಕಾರ ಸ್ಪರ್ಶವರ್ಣವಾಗಿದ್ದು ಉಚ್ಚಾರಣೆಯಲ್ಲಿ ಲೋಪವಾಗುವುದು ಸಹಜ; ಪ್ರತೀಕಾರ್ಥದಲ್ಲಿ ಇತರ ಪ್ರಾಣಿಗಳಿಗೂ ಅನ್ವಯವಾಗುವುದಲ್ಲದೆ ಹೆಣ್ಣು, ಗಂಡು ಭೇದವಿಲ್ಲದೆ ಮನುಷ್ಯ ಜೀವಿಗೂ ಇದು ಪ್ರಯೋಗವಾಗುವುದುಂಟು; ಹೀಗೆ ಇದು ಅರ್ಥ ವ್ಯಾಪ್ತಿ ಪಡೆದುಕೊಂಡಿದೆ. The word Kodari used to youthful sheep, Koda+kuri= Kodaguri may be possible become kodari; some lapse are possible in pronunciation; in reflective meaning it is apply to all animals and without any discrimination of male or female of human being apply this; so the word kodari has its vastness.

ಕೊದಿ kodi :

- ಕುದಿ; ಕುದಿಯುವಿಕೆ; ಕುದಿತ, ಅತಿಬಿಸಿ; ಕೆಟ್ಟದೃಷ್ಟಿ; *ಪ್ರ: 'ಮಗುವಿಗೆ ಕೊದಿ ಬಿದ್ದಿದೆ'*(ಮಂ.ಜಿ); Boil thing; very hot; bad sight; bad eye on the baby;
- ದೊಡ್ಡ ಗಾತ್ರದ ಇಟ್ಟಿಗೆ; A big size brick;

- ಉತ್ಕಟ ಆಸೆ; ತಿನ್ನಬೇಕೆಂಬ ಹೆಬ್ಬಯಕೆ, ತಿನ್ನುವ ಆಸೆ(ದ.ಕ); Excessive desire; over desire of eating;
- ***—ಕೊದಿ ತೆಗೆಯುವುದು*** : ದೃಷ್ಟಿ ನಿವಾಳಿಸುವುದು; ಒಬ್ಬ ತಿನ್ನುತ್ತಿರುವುದನ್ನು ನೋಡಿ ಇನ್ನೊಬ್ಬ ಆಸೆಪಟ್ಟು ಕಣ್ಣು ಹಾಕುವುದರಿಂದ ಅವನಿಗೆ ಹೊಟ್ಟೆ ನೋವು ಕಾಣಿಸಿಕೊಳ್ಳುವುದು; ಅದಕ್ಕೆ ವಿಶಿಷ್ಟ ಕ್ರಿಯೆಗಳ ಮೂಲಕ ದೃಷ್ಟಿ ನಿವಾಳಿಸುವುದು; ಇದರಿಂದ ದೃಷ್ಟಿ ತಾಗಿದ ದೋಷ ಕಳೆಯುತ್ತದೆಂಬ ನಂಬಿಕೆ; To waves something around the face or body; a belief in folk, a person eating something, other watching his eating with desirously;
- ಹೊಟ್ಟೆನೋವು ನಿವಾರಣೆಗೆ ಶಾಸ್ತ್ರ ಮಾಡುವಿಕೆ; ಕಾಲುರಂಜು ಹಾಕುವುದು(ಕ.ಜಾ.ಕೋ); (ನೋಡಿ: ಕಾಲುರಂಜು/ಕಾರ್ಲಂಜು); So the person have any problem like stomach pain that is relieved by wavering the fire or something is called Dristi nivalisu; A practice believed to remove the stomach pain;
- ***—ಕೊದ್ದದೆ*** : ಕುದಿಯುತ್ತಿದೆ; *ಪ್ರ: 'ಸಾರ್ ಕೊದ್ದದೆ'* (ಕೊಡ.ಜಿ); It means boiling;
- ***—ಕೊದಿ ನೀರ್*** : ಒಬ್ಬರು ತಿನ್ನುವುದನ್ನು ಇನ್ನೊಬ್ಬರು ನೋಡುವಾಗ ಆಸೆಯಾಗಿ ಬಾಯಿಯಲ್ಲಿ ಬರುವ ಜೊಲ್ಲು ರಸ(ದ.ಕ),(ತು.ನಿ). A person watching while other eating desirously mouth watering is called Kodineer.

ಕೊದಿಲ kodila :

- ದೊಡ್ಡ ಸಭೆ, ಸಮಾರಾಧನೆಯಲ್ಲಿ ಮಾಡುವ ತೆಳ್ಳಗಿನ ಸಾರು, ತಿಳಿಸಾರು; Soup prepared in ceremonial occation;
- ***—ಕೊದಿಲು*** : ಹುಳಿ; ಅನ್ನಕ್ಕೆ ಬೆರಸಿ ತಿನ್ನುವ ಹುಳಿ/ ಸಾರು; *ಪ್ರ: 'ಕೊದಿಲಿಗೆ ಏನು ತರಕಾರಿ'.* Sour tamarind sour or mix, mix with rice to eat as food.

ಕೊದೆ kode :

- ಮರದ ದೊಡ್ಡ ತುಂಡು; ಕವೆ; ಕವೆಗೋಲು; ಮರದ ಕೊರಡು; ದಿಮ್ಮಿ; A big piece of wood; forked stick; log; block of wood;
- ಕೊಬ್ಬು; ಸೊಕ್ಕು; ಅಹಂಕಾರ; ಮದ; ನೆಣ; ಚರ್ಬಿ; ಜಂಬ; fat; vanity; pride; intoxicate; grease; hautiness; sowing; ripeness;
- ಬೆದೆ; ನಶೆ; Sexual excitements heat; rutting;
- ಮುಂಭಾಗ ಎರಡು ಕವಲಿರುವ ಕೋಲು (ನೋಡಿ: ಕವೆ); *ಪ್ರ: 'ಕೊದೆ ಹೆಚ್ಚಿ ಕೊರಮನನ್ನು ತಳ್ಳಿದಳು'* (ಗಾ). Two branches of a stick in the tip;

ಕೊನಕೊ konako :

- ಕೊಂಡುಕೊ; ತೆಗೆದುಕೊ; ಪಡೆದುಕೊ; ಖರೀದಿಸು (ಕಲ.ಜಿ); Purchase; take; received; buy;
- 'ಕೊಂಡುಕೊ' ಪದ 'ಕೊನ್' ಮೂಲ ಧಾತುವಿನಿಂದ ನಿಷ್ಪನ್ನಗೊಂಡದ್ದು; 'ಕೊನ್'ಡುಕೊ' ಉಚ್ಚಾರಣೆಯ ಸರಳೀಕರಣದ ದೃಷ್ಟಿಯಿಂದ 'ಕೊನಕೊ' ಆಗಿರಬಹುದು; ಇದು ಗ್ರಾಮೀಣ ರೂಪವಿರಬಹುದು; ಗ್ರಾಮೀಣರ ಉಚ್ಚಾರಣೆಯಲ್ಲಿ ಇಂತಹ ವ್ಯತ್ಯಯಗಳಾಗುವುದಿದೆ; *ಪ್ರ: 'ಅದೇನ್ ಕೊನ್‌ಕೊತಾಳೋ ಮಾರಾಯ್ತಿ ಒಂದೆ ಸಮನೆ ನೋಡ್ತಾ ಕುಂತವ್ಳೆ'.*

ಕೊನಕೊಂಡ್ಲ konakoṇḍla :

- ಅನಂತಪುರ ಜಿಲ್ಲೆ ಗುತ್ತಿ ತಾಲ್ಲೋಕಿನ ೧೧೭ನೇ ಶಾಸನದಲ್ಲಿ ಉಲ್ಲೇಖ; This place referred in 117th inscription of Ananthpur district Gutti taluk;
- ಕೊನಕೊಂಡ್ಲ ಗ್ರಾಮದಲ್ಲಿನ, ಅತ್ಯಂತ ಪ್ರಾಚೀನ ಶಾಸನ ಕ್ರಿ.ಶ.೭ನೇ ಶತಮಾನದ್ದಾಗಿದೆ; ಇದು ರಸಸಿದ್ಧರ ಗುಡ್ಡದ ಮೇಲಿನ ಬಂಡೆಯ ಮೇಲಿದ್ದು, 'ಶ್ರೀ ಉರಿಗಪಸಿಂದಿ' ಎಂದಿದೆ; The inscription of Konakondla village is very ancient, of 7th AD; it is on the stone of Rasasiddara moor;
- ಕ್ರಿ.ಶ.೧೦ನೇ ಶ.ದ ಶಾಸನವು ಮತ್ತೊಂದು ಬಂಡೆಗಲ್ಲಿನ ಮೇಲಿದ್ದು, ಶ್ರೀ ನಾಗ್‌ಸೇನದೇವನ ನಿಸಿದಿ' ಎಂದಿದೆ; The inscription of 10th AD is on the other stone, it is carved as `Sri Nagasenadevana nisidi';
- ಈ ಶಾಸನಾಧಾರಗಳಿಂದ ಪ್ರಸ್ತುತ ಗ್ರಾಮವು ಪ್ರಸಿದ್ಧ ಜೈನ ಕ್ಷೇತ್ರವಾಗಿತ್ತೆಂದು ತಿಳಿದು ಬರುತ್ತದೆ; By all

these inscription this place was consider as famous Jainism centre;

- ನಂತರ ಕ್ರಿ.ಶ.೧೦೭೮ನೇ ಚಾಲುಕ್ಯ ದೊರೆ ತ್ರಿಭುವನಮಲ್ಲನ ಆಳ್ವಿಕೆಯ ಶಾಸನದಲ್ಲಿ 'ಕೊಣ್ಡಕುನ್ದೆ' ಎಂದು ಉಲ್ಲೇಖವಿದ್ದು, ಇದೇ ಈ ಗ್ರಾಮದ ಅತ್ಯಂತ ಪ್ರಾಚೀನ ಉಲ್ಲೇಖ; ಚಾಳುಕ್ಯರ ಹಲವು ಶಾಸನಗಳಲ್ಲಿ 'ಕೊಣ್ಡಕುನ್ದೆ' ಉಲ್ಲೇಖವಾಗಿದೆ; Later in 1078AD under the rule of Chalukya king Thribuvanamalla's inscription refers as `Kondakunde' referred in many inscriptions of Chalukyas;
- ಜೈನರಲ್ಲಿ 'ಕೊಂಡಕುಂದಾನ್ವಯ' ಎಂದು ಬಳಕೆಯಲ್ಲಿದ್ದು, ಕುಂದಕುಂದಾಚಾರ್ಯರು ದಿಗಂಬರ ಪಂಥದ ಪ್ರಮುಖರಾಗಿದ್ದಾರೆ; Jaina's used as `Kodakundanvaya', Kundakundacharya was the main of Digambara Pantha;
- 'ಕೊನಕೊಂಡ್ಲ'=ಇದು 'ಕೊಣ್ಡಕುನ್ದೆ'ಯ ತೆಲುಗು ರೂಪಾಂತರ; `Konakondla' is the transfiguration of Telugu `Kondakunde';
- ಹೀಗಾಗಿ ಪ್ರಸ್ತುತ ಕೊನಕೊಂಡ್ಲವು ಪ್ರಾಚೀನ ದಿಗಂಬರ ಪಂಥದ ಜೈನ ಕ್ಷೇತ್ರವಾಗಿತ್ತೆಂದು ಗುರುತಿಸಬಹುದು. So, at present Konakondla was the holy place of Jaina's `Digambara pantha';

(ಆ.ಪ್ರ.ಕ.ಶಾ.ಭಾ.೧)

ಕೊನಗಂಟೆ ಸೊಪ್ಪು konagaṇṭe soppu :

- ಕೊನಗಂಟಾಕು; ಹೊನಗೊನೆ ಸೊಪ್ಪು ಎಂಬ ಸಂವಾದಿ ರೂಪಗಳ ಬಳಕೆ ಇದೆ; ಹೊನ್‌ಗಾಲ ಸೊಪ್ಪು, ವನ್ಗಲಸೊಪ್ಪು, ಹೊನ್ಗಲಸೊಪ್ಪು ಮೊದಲಾದ ಗ್ರಾಮ್ಯರೂಪಗಳು ರೂಢಿಯಲ್ಲಿವೆ; Konagantaku; Honagone leaves are the related forms in use; Hongala soppu, Vangala soppu are the rural forms in practice;
- ಒಂದು ಬಗೆಯ ಸೊಪ್ಪು; ನೆಲದಲ್ಲೆ ಹಬ್ಬಿ ಬೆಳೆಯುವ ಸ್ವಭಾವ ಹೊಂದಿದೆ; ಕೆರೆ–ಕಟ್ಟೆ ಹಾಗೂ ಇತರೆ ಸಾಗುವಳಿಗೊಳಪಡದ ಜಮೀನುಗಳಲ್ಲಿ ಸ್ವಾಭಾವಿಕವಾಗಿ ಬೆಳೆಯಬಲ್ಲ ಸಸ್ಯ ವಿಶೇಷ; A kind of leaf; it grows spread on the ground is the nature; Naturally grows in tanks and uncultivated land;
- ಬಸ್ಸಾರು, ಉಪ್ಸಾರು ಮಾಡಲು ಉಪಯೋಗ; ಹಿಂದೆ ಎಲ್ಲೆಂದರಲ್ಲಿ ಯತೇಚ್ಚವಾಗಿ ಸಿಗುತ್ತಿದ್ದ ಈ ಸೊಪ್ಪು ಇತ್ತೀಚಿನ ದಿವಸಗಳಲ್ಲಿ ಸ್ವಲ್ಪ ಮಟ್ಟಿಗೆ ನಶಿಸಿ ಹೋಗುವತ್ತ ಸಾಗಿದೆ; Uses to prepare soup or sambar like Upsaru, Bassaru; it grows every where but now-a-days it is become extincting;
- ಔಷಧೀಯ ಗುಣ ಹೊಂದಿರುವ ಈ ಸೊಪ್ಪಿನಲ್ಲಿ ಜೀವಸತ್ವ 'ಎ' ಅಂಶ ಇದೆ ಎಂಬುದು ವೈದ್ಯಕೀಯ ವಿಧಾನದಿಂದ ದೃಢಪಟ್ಟಿದೆ; ಕಣ್ಣಿನ ದೃಷ್ಟಿ ಹೆಚ್ಚಿಸುತ್ತದೆ ಎಂಬುದು ವೈಜ್ಞಾನಿಕ ನಂಬಿಕೆ; *ಪ್ರ: 'ಹೋದ ಕಣ್ಣನ್ನು ಕೊನಗಂಟೆ ಸೊಪ್ಪು ಬರಿಸ್ತಂತೆ'.* It has medicinal qualities, it has vitamin A component; revealed and confirmed it by the medical experts; it improves the vision is the scientific belief.

ಕೊನಗೋಲು konagōlu :

- 'ಕೊನೆಗೋಲು' ಉಚ್ಚಾರಣೆಯಲ್ಲಿ ಕೊನಗೋಲು ಆಗಿರಬಹುದು; ಕೊನೆ>ಕೊನ; 'ಎ'ಕಾರಕ್ಕೆ 'ಅ'ಕಾರ ಬಂದಿರುವುದು; ಕೊನೆ+ಕೋಲು>ಕೊನೆಗೋಲು> ಕೊನಗೋಲು ಆಗಿದೆ; ಬಳಕೆಯಲ್ಲಿ 'ಕ'ಕಾರಕ್ಕೆ 'ಗ'ಕಾರ ಬರುವುದು ದ್ರಾವಿಡ ಭಾಷಾ ಲಕ್ಷಣ; `Konekolu' may be `Konagolu' in pronunciation;
- ನೇಗಿಲು ನೊಗದ ಒಂದು ಪ್ರಕಾರ(ಬೀ.ಜಿ); A kind of plough and Yoke;
- ನೇಗಿಲನ್ನು ನೊಗಕ್ಕೆ ಕಟ್ಟಲು ಸಹಾಯಕವಾಗಿ ನೇಗಿಲಿಗೆ ಅಳವಡಿಸುವ ಜಂತೆಗಾತ್ರದ ನೇರ ಮರದ ತುಂಡು; ಸುಮಾರು ಆರೇಳು ಅಡಿಗಳಷ್ಟು ಉದ್ದವಿರಬಹುದು; ಆಲ, ಬೇವು, ಗೊಬ್ಬಳಿ ಮರದ ಗಟ್ಟಿ ಕಾಂಡದಿಂದ ಅಥವಾ ನೇರವಾದ ರೆಂಬೆಯ ತುಂಡಿನಿಂದ ಆಯಕಟ್ಟಾಗಿ ಕೆತ್ತಿಸಿ ಸಿದ್ಧಪಡಿಸಿಕೊಳ್ಳುವರು; A straight wooden piece to help to tie the plough to the yoke, it is six to eight feet length; it is made of Banian, Neem or Gobbali wooden pieces;

- ಮರದ ಕೊನೆಯಿಂದ ಮಾಡಿಸಿದ ಕೋಲು ಕೊನಗೋಲು ಅಥವಾ ಕೊನೆಗೋಲು ಆಗಿರಬಹುದು; May be a stick made of wood is Konagolu or Konegolu;
- ಕೆಲವೊಮ್ಮೆ ಈ ಮರದ ಸಾಧನವನ್ನು ಎರಡು ತುಂಡುಗಳಾಗಿ ಜೋಡಿಸಿರುತ್ತಾರೆ; ತಳಭಾಗ ಜಂತೆಗಾತ್ರದ್ದು ಆಯತಾಕಾರದಲ್ಲಿರುತ್ತದೆ; ಅದರ ಮುಂದಿನ ಭಾಗ ತಳಭಾಗಕ್ಕಿಂತ ತುಂಡಾಗಿಯೂ, ಸಣ್ಣದಾಗಿಯೂ, ಗುಂಡಾಗಿ, ಉರುಟಾಗಿರುತ್ತದೆ; ಇದು ನೇಗಿಲಿನ ತುದಿ ಅಥವಾ ಕೊನೆ; ಹಾಗಾಗಿ ಇದನ್ನು 'ಕೊನಗೋಲು' ಎಂದಿರಬಹುದು; Sometime this wooden instrument joined in two pieces; the bottom piece is in square shape; the next part is short, little, round and rough; it is the tip or edge of the plough;
- ಕೊನೆ ಅಳವಡಿಸಿದ ವಸ್ತು (adopted object) ಎಂದು ಕಿಟ್ಟೆಲ್ ಹೇಳುತ್ತಾರೆ; ನೇಗಿಲಿಗೆ ಅಳವಡಿಸಿದ ಕೋಲು ಎಂಬರ್ಥದಲ್ಲಿಯೂ 'ಕೊನಗೋಲು' ಎಂದಾಗಿರಬಹುದು; *ಪ್ರ: 'ನೇಗಿಲಿನ ಕೊನಗೋಲು ಮುರಿದು ಹೋಯಿತೆ?'.* So, may be it is `Konagolu'; it means an object fix a piece of wooden stick; fixed a stick is may be Konagolu.

ಕೊನಬು konabu :

- ಬೆಡಗು; ಒನಪು; ಸುಂದರ(ರಾಯ.ಜಿ); Beauty, grace, demureness;
- ತುಂಟತನ; ಲಂಡತನ; ಒಲಪು; ವಯ್ಯಾರ; ನಾಜೂಕಾಗಿ ಶೃಂಗರಿಸಿಕೊಳ್ಳುವಿಕೆ; *ಪ್ರ: 'ನರೆ ಬಂದ್ಮೇಲೆ ಕೊನಬ್ಯಾಕೊ ಮಾರಾಯ'.* Mischief, harm, coquetry; dressed eleganty.

ಕೊನರು konaru :

- ಚಿಗುರುವುದು; ಕವಲೊಡೆಯುವುದು; ಅಂಕುರಗೊಳ್ಳುವುದು; ಮರ, ಗಿಡ, ಬಳ್ಳಿ ಚಿಗುರು ಬಿಡುವುದಕ್ಕೆ ಈ ಪದ ಬಳಕೆ; To sprout; turn into branch; use thisword for tree plant creepers sprouts;
- ಇದರ ಮೂಲರೂಪ ಕೊನರ್; ಕನ್ನಡ ಭಾಷಾ ಇತಿಹಾಸದಲ್ಲಿ ಪದಗಳ ಚರಿತ್ರೆ ಬಹಳ ಮುಖ್ಯ; ಇದರಲ್ಲಿ ವ್ಯಂಜನಾಂತ ಪದಗಳು ಸ್ವರಾಂತವಾಗುವುದು ಸಾಮಾನ್ಯ; ಪ್ರಾಚೀನ ಕನ್ನಡದಿಂದ ಹೊಸಗನ್ನಡಕ್ಕೆ ಬಂದಾಗ ಅನೇಕ ಪದಗಳು 'ಉ'ಕಾರಾಂತವಾಗುವುದು ಸಹಜ; ಹಾಗೆಯೇ ಕೊನರ್>ಕೊನರು ಆಗಿದೆ; The original form is `Konar';
- ತುಳುವಿನಲ್ಲಿ 'ಕೊನರ್' ರೂಪವಲ್ಲದೆ, ಕನ, ಕಣ, ಕನರ್ ರೂಪಗಳೂ ಇವೆ(ತು.ನಿ); ಹಾಗೆಯೇ ಕೊಣ, ಕೊಣರ್ ರೂಪಗಳೂ ಕೂಡ(ತು.ನಿ); ಬೇರೆ ಅರ್ಥಗಳೂ ಈ ರೂಪಗಳಿಗೆ ಇವೆ(ತು.ನಿ); ಇಲ್ಲಿ 'ಕ'ಕಾರಕ್ಕೆ 'ಕೊ' ಬರುವುದನ್ನು, 'ನ' ಮತ್ತು 'ಣ'ಗಳು ವಿನಿಮಯಗೊಳ್ಳುವುದನ್ನು ಒಪ್ಪಿಕೊಳ್ಳುವುದು ಕಷ್ಟವಲ್ಲ; ಆದರೆ ಅವಕ್ಕಿರುವ ವಿಭಿನ್ನ ಅರ್ಥಗಳದೇ ಸಮಸ್ಯೆ; In Tulu the word `Konar' has another forms are Kana, Konar; in the same Kona, Konar forms are other meanings to these forms;
- 'ಕೊನರ್' ಪದದೊಡನೆ ಹಳಗನ್ನಡದಲ್ಲಿ 'ಕೊನರ್ತು' ಪದವೂ ಇದೆ; ಕೊನರ್+ತು>ಕೊನರ್ತು ಆಗಿದೆ; ನಡೆದ ಕ್ರಿಯೆಯನ್ನು ಸೂಚಿಸುತ್ತದೆ; ಅಂದರೆ ಭೂತಕಾಲ ಸೂಚಕ; ಭೂತರೂಪಕ್ಕೆ ಅನುಗುಣವಾಗಿ 'ಕೊನರಿ' ಪದವೂ ಇದೆ; In old kannada the word `Konarthu' is with `Konar', it indicates the action of the incident of the past; the word `konar' is also in past form;
- ಸಂಸ್ಕೃತದಲ್ಲಿ 'ಕೊನರು' ಕ್ರಿಯೆಯನ್ನು ಸೂಚಿಸಲು 'ಪಲ್ಲವ' ಮತ್ತು 'ಅಂಕುರ' ಪದಗಳೆರಡನ್ನೂ ಸೇರಿಸಬೇಕಾಗುತ್ತದೆ; ಅದರಿಂದ ಪಲ್ಲವ+ಅಂಕುರ> ಪಲ್ಲವಾಂಕುರ ಆಗುತ್ತದೆ; ಇಲ್ಲಿ 'ಪಲ್ಲವ' ಎಂದರೆ ಚಿಗುರು; 'ಅಂಕುರ' ಎಂದರೆ ಮೊಳಕೆಯೊಡೆಯುವುದು, ಚಿಗುರುವುದು; ಕ್ರಿಯೆಯನ್ನು ಸೂಚಿಸುವುದು; To indicate the action of `Konaru' in Sanskrit include the words `Pallava' and `Ankura'; pallava means `sprout', `Ankura' means `seedling';

- ಜನಪದ ಸಂಸ್ಕೃತಿಯಲ್ಲಿ 'ಚಿಗುರುಕೊಂಡನು' ಅಥವಾ 'ಚಿಗಿತುಕೊಂಡನು' ಎಂಬ ನುಡಿಗಳು ಬಳಕೆಯಲ್ಲಿವೆ; ಅತಿವರ್ತನೆಯನ್ನು, ಕೆಲವೊಮ್ಮೆ ಧೂರ್ತ ವರ್ತನೆಯನ್ನು ಈ ಮಾತುಗಳು ಹೇಳುತ್ತವೆ; ತುಂಬ ತೊಂದರೆಯಲ್ಲಿದ್ದ ವ್ಯಕ್ತಿ ಸ್ವಲ್ಪಮಟ್ಟಿಗೆ ಆರ್ಥಿಕ ಪ್ರಗತಿ ಹೊಂದಿದರೆ ಅಂಥವನನ್ನು ಕೆಲವೊಮ್ಮೆ ಹೀಗೆ ಕರೆಯುವುದುಂಟು; 'ಚಿಗುರು' ಮತ್ತು 'ಚಿಗಿತು' ಪದಗಳು 'ಕೊನರು' ಪದಕ್ಕೆ ಸಂವಾದಿಯಾದರೂ, ಉಲ್ಲೇಖಿತ ನುಡಿಗಟ್ಟಿಗೆ ಸಮಾನವಾಗಿ 'ಕೊನರಿಕೊಂಡ' ಎಂದು ಹೇಳುವುದು ಎಲ್ಲಿಯೂ ದೊರೆಯುವುದಿಲ್ಲ; ಜನಸಾಮಾನ್ಯರಿಗೆ 'ಕೊನರು' ಪದಕ್ಕಿಂತ 'ಚಿಗುರು', 'ಚಿಗಿತು' ರೂಪಗಳೇ ಹೆಚ್ಚು ಜನಪ್ರಿಯವಾಗಿರುವಂತೆ ಕಾಣುತ್ತದೆ; In folk culture `Chiguru Kondanu' or `Chigitu Kondanu' words are in practice; these words tell overacting, sometime wicked action; A person who was in trouble later he is improving economically he is called as `Chigitu kondanu'; `Chiguru' and `Chigitu' words equivalent to the word `Konaru'; but no where say `Konarikonda' even it is a equivalent word; the words `Chiguru', `Chigitu' are more familiar than the word `konaru';
- ಆಧ್ಯಾತ್ಮಿಕವಾಗಿ ಬಸವಣ್ಣನವರ "ನೀನೊಲಿದರೆ ಕೊರಡು ಕೊನರುವುದಯ್ಯ"(ಬ.ವ.ಸಂ.ಸಂ.೪೫); ಕೂಡಲಸಂಗಮ ದೇವನ ಒಲವಿನ ಮಹತ್ವವನ್ನು ಹೇಳಲು ಬಂದಿರುವ ಮಾತಿದು. Spiritually Basavanna says `Neenolidare koradu konaruvudaiah'; this word tells the importance of love of Koodala Sangamadeva.

ಕೊನಲಿ konali :

- 'ಕಳೆಗತ್ತಿ' Kalegatti ಎಂಬರ್ಥದಲ್ಲಿ ಪದಬಳಕೆ (ಬೆಂ.ಗ್ರಾ.ಜಿ); 'ಕಳಾರಿ', 'ಉಜ್ಜೋರಿ' ಎಂಬ ಸಂವಾದಿ ರೂಪಗಳ ಬಳಕೆ ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲಿ ಕಂಡುಬಂದಿದೆ; Used in the meaning of weed pecker; `Kalari'; `Ujjari' words are equivalent to `Konali'; these words used in Mandya, Mysore, Chamarajanagar districts;
- ಬೆಳೆದ ಬೆಳೆಗಳ ನಡುವೆ ಬೆಳೆಯುವ ಕಳೆ ತೆಗೆಯಲು ಉಪಯೋಗ; ಕಬ್ಬಿಣದ ತುಂಡಿನ 'ಅಲಗು' ಮತ್ತು ಮರದ ತುಂಡಿನ 'ಹಿಡಿಕೆ' ಇರುತ್ತದೆ; ಅಲಗಿನ ಮುಂಭಾಗ ಮತ್ತು ಒಳಭಾಗ ಮೊನಚಾಗಿದ್ದು ಕಳೆಯನ್ನು ಕೀಳಲು ಸಹಕಾರಿ; ಇಂಗ್ಲಿಷ್ ಅಕ್ಷರ `L' ಆಕೃತಿಯಲ್ಲಿರುತ್ತದೆ; *ಪ್ರ: 'ಕಳೆ ಕೀಳೋಕೆ ಕೊನಲಿ ತರಬೇಕಿತ್ತು ತಾನೆ'.* These instruments used to weed out between the plants of the crop; A sharp edge iron piece and wooden handle; the front of the blade and inner part is sharp, it is helpful to pluck the weed.

ಕೊನಳ್ಳಿ/ಕೊನಾಳಿ/ಕೊನಾಳೆ konaḷḷi/ konāḷi/konāḷe :

- ತೆಂಗಿನ ಗೊನೆ ಅಥವಾ ಹೂ ಹೊಂಬಾಳೆಯ ಮೇಲ್ಭಾಗದ ದಪ್ಪದಾದ, ಮಂದವಾದ, ಸಣ್ಣ ತೊಗಟೆಯಂತಹ ಹೊದಿಕೆ ಅಥವಾ ಕವಚ; ತೆಂಗಿನ ಹೂವಿನ ಹೊರಹಾಳೆ; 'ಕುರೊಂಬಾಳೆ' ಎಂಬ ಹೆಸರಿನಿಂದಲೂ ಕರೆಯುವರು (ಮಂಡ್ಯ, ಮೈ, ಚಾಮ.ಜಿ); A thick cover of the coconut young bunch before bloom; thick small bark like cover; it is called `Kurombale' in Mandya, Mysore, Chamarajanagar district;
- ತೆಂಗಿನ ಗೊನೆ ಕಡೆದು ಇಂತಿಷ್ಟು ದಿವಸಗಳಲ್ಲಿ ಗೊನೆ ಹೊಡೆದು ಎರಡು ಹೋಳಾಗಿ ಒಳಭಾಗದ ಹೂವು ಹರಡಿಕೊಂಡು ಅದರಲ್ಲಿಯೇ ಎಳನೀರು, ಕಾಯಿ ನಂತರ ಗಿಟಗಿ ಅಥವಾ ಕೊಬ್ಬರಿ ಸಿಗುವುದು; After comeout of the coconut bunch it is open and spread flowers;
- ಹೊಡೆದ ಮೇಲ್ಭಾಗದ ಈ ಹಾಳೆ ಮಂದವಾಗಿದ್ದು ಚೆನ್ನಾಗಿ ಒಣಗಿದ ನಂತರ ಉರುವಲಿಗೆ ಬಳಸುವರು; The out part opened sheet is thick; the dried konalli used as firewood;

- ಹಸಿ ಹೊಂಬಾಳೆಯಾದರೆ 'ಬುತ್ತಿ' ಕಟ್ಟಲು ಬಳಸುವರು; The young one used to pack food;
- ತೆಂಗಿನಮರದ ಪ್ರತಿಯೊಂದು ಭಾಗವೂ ಒಂದಿಲ್ಲೊಂದು ಕಾರಣವಾಗಿ ಉಪಯೋಗಕ್ಕೆ ಬರುವಂಥದೇ; ಏನಿಲ್ಲವೆಂದರೂ ಅಂತಿಮವಾಗಿ ಕಟ್ಟಿಗೆಗೆ ಬಳಸುವುದಂತೂ ಖಚಿತ. Every part of coconut is useful one way or the other, finally it is used as firewood.

ಕೊನಾಪಗೇಡಿ konāpagēḍi :

ಒಂದು ಬೈಗುಳ ಪದ(ಕಲ.ಜಿ). A kind of abuse.

ಕೊನೆ/ಕೊನಿ kone/koni :

- ತುದಿ; ಕಡೆ; ಅಂತಿಮ; ಅಂತ್ಯ; ಮುಕ್ತಾಯ; ಕರೆ; ದಡ; ದಂಡೆ; ಕೊನೆ=ಗೊನೆ ಎಂಬರ್ಥದಲ್ಲಿ ಪದಬಳಕೆ; ಕೊನೆ=ಕೊನ; Used in the meaning of tip; edge; final; end; conclusion; bank; coast; beach etc;
- ಮೊನೆ; ಕುಡಿ; ಚಿಗುರು; ರೆಂಬೆ–ಕೊಂಬೆಗಳ ಅಗ್ರಭಾಗ; ಟೊಂಗೆ; ಮರದ ಗೆಲ್ಲು; ಕೊಂಬೆಯ ತುದಿ; Tip, pointed end; sprout; prime part of twigs;
- ಗೊಂಚಲು; ಅಡಕೆ, ತೆಂಗು, ಬಾಳೆ, ತರಕಾರಿಗಳ ಗೊಂಚಲು; Bunch of coconut, areca, banana and vegetables;
- ಗೆಡ್ಡೆ; ಗೆಂಡೆ; ಅರಿಶಿಣದ ತುಂಡು; ತುಣುಕು; lump; mass; turmeric piece; piece;
- ಹೂವು–ತೊಟ್ಟು ಸೇರಿದ ಭಾಗ; ಬೇರು; ಬೇರಿನ ತುಣುಕು; ಚೂಪಾದ ಬಿಂದು; ಭತ್ತದ ಬುಡದಿಂದ ತುದಿಯ ತೆನೆವರೆಗಿನ ಭಾಗ; ತೆಂಡೆ; A part join the foot stalk of flower, fruit, root, piece of root; sharp point; a part from tip to bottom;
- ಮಗು; ವಂಶದ ಕುಡಿ; ವಂಶೋದ್ಧಾರಕ; ಗಂಡು–ಹೆಣ್ಣು ಒಂದೇ ಮಗುವಿದ್ದಾಗ ಈ ಪದದ ಬಳಕೆ ಇದೆ; ವ್ಯಂಗ್ಯವಾಗಿ 'ಭಾಗ್ಯಜ್ಯೋತಿ' ಎಂಬುದಾಗಿಯೂ ಹೇಳುವುದಿದೆ; ಇದು ವಿದ್ಯುತ್‌ಗೆ ಸಂಬಂಧಿಸಿದ ಸರ್ಕಾರದ ಒಂದು ಯೋಜನೆಯಾಗಿದ್ದು ಇಲ್ಲಿ 'ಒಂದು ಮನೆಗೆ ಒಂದೇ ಬಲ್ಬ್' ಎಂಬ ನಿಯಮ ಜಾರಿಯಲ್ಲಿರುವುದು; child; successor of family; the word used while only one male or female child of the family; sarcastically called as `Bhagyajyothi'; it is a plan of Government of Karnatka; `A house has a bulb' programme;
- ಮುಂಗಾರಿನ ಕಾರುಣ್ಣಿಮೆಯ ಮುಂಚಿನ ದಿವಸಗಳು(ಚಿ.ಪ.ಕೋ); The days of before the first rain or Karunnime;
- 'ಆದಿ' ಪದಕ್ಕೆ ವಿರುದ್ಧ ರೂಪ 'ಅಂತ್ಯ' ಅಥವಾ ಕೊನೆ ಇದೆ; ಆದಿ, ಅಂತ್ಯ ಸೃಷ್ಟಿಯ ಎಲ್ಲಾ ಜೀವರಾಶಿಗಳಿಗೂ ಅನ್ವಯವಾಗುವಂಥದು; ಆದರೆ 'ಪರಮಾತ್ಮ' ಇವೆರಡನ್ನೂ ಮೀರಿದವನು ಎಂಬುದು ಪುರಾಣದ ಸೃಷ್ಟಿ; opposite of the word `Adi'(begin), `Antya'(end); `adi' and `antya' apply to every living being puranas created that the God or Paramathma cross these two;
- ನಿಗದಿತ ಒಂದು ಸಮಯ, ಗಳಿಗೆ, ಕಾಲ ಆದಿ ಅಥವಾ ಆರಂಭಕ್ಕಿರುತ್ತದೆ; ಆದರೆ ಅಂತ್ಯ ಅಥವಾ ಕೊನೆಗೆ ಇರುವುದಿಲ್ಲ; Adi or begin have the time but end have no time;
- ತಮಿಳಿನಲ್ಲಿ 'ಕೊನ್ನೈ', ತೆಲುಗಿನಲ್ಲಿ 'ಕುನ', ತುಳುವಿನಲ್ಲಿ 'ಕೊನೆ' ಮತ್ತು ಕೊಡವ ಭಾಷೆಯಲ್ಲಿ 'ಕೊತ್ತ್' ಪದಗಳ ಬಳಕೆ ಇದೆ(ದ್ರಾ.ಭಾ.ಜ್ಞಾ ಪ.ಕೋ); In Tamil `Konai', Telugu `Kuna'; Tulu `Kone'; Kodava `Koth' words are in usage;
- ***—ಕೊನೆಯೂರು*** : ಕೊನೆ+ಊರು>ಕೊನೆಯೂರು; ಕಡೆಯ ಗ್ರಾಮ; ನೆಲೆನಿಲ್ಲು; ನೆಲೆಸು; ಒಕ್ಕಲಾಗು; ಬೇರುಬಿಡು; ಒಂದು ಕಡೆ ವಾಸಮಾಡು; *ಪ್ರ: 'ಎಲ್ಲಾದ್ರು ಒಂದ್ ಕಡೆ ಕೊನೆಯೂರಿದ್ರೆ ತಾನೆ ಬದ್ಕು'*; The last village; habitant at a place; habitat; resident root; live at a place; live or establish anyone of the place;
- ***—ಕೊನೆಗಾಣಿಸು/ಕೊನೆಗಾಣು*** : ಮುಕ್ತಾಯ ಮಾಡು; ಅವನ ಆಟಕ್ಕೆ ತೆರೆ ಎಳೆ; ಅಂತ್ಯ ಆಡು; ಅಂತಿಮ ತೀರ್ಮಾನ ನೀಡಿ ಕಡೆಗಾಣಿಸು; Put an end; put an

end to his play; give final judgement and disclose;

- ***—ಕೊನೆಯುಸಿರು*** : ಕೊನೆಯ+ಉಸಿರು> ಕೊನೆಯುಸಿರು; ಕಾಲವಾಗುವ ಸಂದರ್ಭ; ನಿಧನ ಅಥವಾ ಸಾಯುವ ಸನ್ನಿವೇಶ; ಉಸಿರು ನಿಂತಾಗ ದೇಹದ ಚಲನೆಯು ನಿಂತುಹೋಗುತ್ತದೆ; ಅಂತಿಮ ಕ್ಷಣ; ಅಂತಿಮ ಕಾಲ; ಅಂತಿಮ ಗಳಿಗೆ; *ಪ್ರ: 'ನನ್ ಕೊನೆ ಉಸ್ರಿರೋವರ್ಗು ನಿನ್ ಮುಖ ನೋಡಲ್ಲ'*;
  The sequence of dieing; the movement of the body stop while breath end; last movement; endtime; short while; I cannot see your face till my last breath;
- ***—ಕೊನೆಮಟ್ಟ/ಕೊನೆತನಕ*** : ಸಾಯುವ ತನಕ; ಉಸಿರು ನಿಲ್ಲುವವರೆಗೂ; ಬದುಕಿರುವವರೆವಿಗೂ ನಿನ್ನ ಜೊತೆ ಇರುತ್ತೇನೆ ಎಂಬರ್ಥದಲ್ಲಿ; Till death; till last breath; till the life of you/I will be with you;
- ***—ಕೊನೆ ಜಂಗು*** : ಸಲಡು; ತೆಂಗಿನಕಾಯಿ ಅಥವಾ ಕೌಂಗಿನ ಜಂಗು; Coir of coconut;
- ***—ಕೊನೆಕುತ್ರಿ*** : ಕೊನೆಗಳ ಅಥವಾ ಗೊನೆ, ಗೊಂಚಲುಗಳ ರಾಶಿ ಎಂಬರ್ಥದಲ್ಲಿ ಪದಬಳಕೆ; ತೋಟದಿಂದ ಹೊತ್ತು ತಂದ ಅಡಕೆ ಗೊನೆಗಳನ್ನು ಒಂದೆಡೆ ಹಾಕಿ ಕಾಯಿಕೊನೆ ಮತ್ತು ಹಣ್ಣುಕೊನೆ ಎಂಬುದಾಗಿ ವಿಂಗಡಿಸುವಿಕೆ; ಒಂದೊಂದು ಕಡೆ ಗುಪ್ಪೆ ಅಥವಾ ಗುಡ್ಡೆ ಹಾಕುವುದು; Bunch; used in the meaning of heap; the areca bunches put together in a heap;
- ***—ಕೊನೆಕೊಕ್ಕೆ*** : ಅಡಕೆ ಕೊಯ್ಯುವಾಗ ಕೊನೆಗೌಡ ಬಳಸುವ ಕೊಕ್ಕೆ(ಉ.ಕ.ಜಿ); A hook used by the climber on the areca tree to cut the bunch or separate from the tree;
- ***—ಕೊನೆಗತ್ತಿ*** : ಕುಡುಗೋಲು; ಉದ್ದವಾದ, ತೆಳುವಾದ, ಹರಿತವಾದ ಉಕ್ಕಿನಿಂದ ತಯಾರಿಸಿರುವಂಥದು; ಗಳದ ತುದಿಗೆ ಕಟ್ಟಿ ತೆಂಗಿನಕಾಯಿ ಕೆಡವಲು ಬಳಕೆ; ಮೇಕೆಗಳಿಗೆ ಸೊಪ್ಪು ಕೀಳಲೂ ಉಪಯೋಗ; 'ಕೊನ್ಕತ್ತಿ' ಎನ್ನುವುದಿದೆ; ಕೊನೆ+ಕತ್ತಿ>ಕೊನ್‌ಕತ್ತಿ>ಕೊನ್ಕತ್ತಿ; Sickle; a long thin, sharp sickle made of steel; it is to fix to a long bambo stick to pluck the coconut or leaf from the tree for goats; it is called as `Konkatti';
- ***—ಕೊನೆಗಾರ*** : ಅಡಿಕೆಗೊನೆ ಕುಯ್ಯುವ ಹಿರಿಯ, ಅನುಭವಿ ವ್ಯಕ್ತಿ; An experienced areca bunch cutter;
- ***—ಕೊನೆಗೌಡ*** : ಅಡಿಕೆ ಮರದ ಗೊನೆಗಳಿಗೆ ಔಷಧಿ ಸಿಂಪಡಿಸುವವ; A person spray the medicine to the areca bunches;
- ***—ಕೊನೆಗೊಯ್ಲು*** : ಅಡಿಕೆ ಬೆಳೆಯ ಕೊಯ್ಲಿನ ಕಾಲ; ಸುಗ್ಗಿ; ಮರದ ಮೇಲಿರುವ ಗೊನೆಗಳನ್ನು ಕೆಳಗಿಳಿಸಿ, ಸುಲಿದು, ಬೇಯಿಸಿ, ಒಣಗಿಸಿ ಮಾರಾಟ ಮಾಡುವ ಪ್ರಕ್ರಿಯೆಗೆ ಸಂಬಂಧಿಸಿದ್ದು; Season of cutting the areca crop; harvest; it is related to put down the bunch from the tree, peel off the nut, boil, dry it and selling process;
- ***—ಕೊನೆಜಂಗು*** : ಕುರುಂಬಾಳೆ ಎನ್ನುವರು; ಬರಿದಾದ ಅಡಿಕೆಗೊನೆ; ಗೊನೆಯಲ್ಲಿರುವ ಎಲ್ಲಾ ಅಡಿಕೆಗಳು ಉದುರಿದ ಮೇಲೆ ಉಳಿಯುವ ಭಾಗ; ಒಣಗಿಸಿ ಉರುವಲಿಗೆ ಬಳಕೆ; It is called as Kurumbale; empty areca bunch; the remaining part of bunch after all the nuts fell off; used for fuel;
- ***—ಕೊನೆಚುಂಗ/ಕೊನಿಚುಂಗ*** : ರುಮಾಲಿನ ತುದಿ; Edge of the turban;
- ***—ಕೊನೆ/ಕೊನಿಬೆಂಡ*** : ಎಳೆನೀರಿನ ಗೊನೆ(ದ.ಕ); bunch of tender coconut;
- ***—ಕೊನೆ/ಕೊನಿಮುಳ್ಳು*** : ಮುಳ್ಳಿನ ಕೊನೆ; Thorn branch or bough;
- ***—ಕೊನೆ/ಕೊನಿಯೂಂಗು*** : ಅಡಿಕೆಗೊನೆಯ ಹೂವು; ಹಾಲಿನ ತೆನೆ; Flower of areca bunch; milky bunch of areca or any other crops;
- ***—ಕೊನೆ/ಕೊನಿ ಸೀರಿ*** : ಉದ್ದವಾದ ಸೆರಗು; Long end of a saree;
- ***—ಕೊನೆ/ಕೊನಿ ಹೂಗ್*** : ಹೂವಿನ ಗೊನೆ; ಅಡಿಕೆ ಹೂವು; ಹೊಂಬಾಳೆ; ಸಿಂಗಾರ ಹೂವು(ದ.ಕ); Bunch of flowers; flower of areca;

- —*ಕೊನೆ/ಕೊನಿ ಬಳ್ಳಿ* : ರಥದ ಕೊನೆ; ಅಡ್ಡೆಯ ಸುತ್ತಲೂ ಕೆತ್ತಿರುವ ಬಳ್ಳಿಯ ಹೂವು(ದ.ಕ); End of the chariot; carved creeper flowers around;
- —*ಕೊನೆ ಬಾರಿ* : ಸರತಿ ಅಥವಾ ಪಾಳಿ ಎಂಬರ್ಥದಲ್ಲಿ; ಕೊನೆಯ ಬಾರಿ ಅಡಿಕೆ ಗೊನೆ ಇಳಿಸುವ ಪ್ರಕ್ರಿಯೆ; Means shift; last; to put down the bunch from the areca tree last time;
- —*ಕೊನೆಯ ತಿಂಗಳು* : ಶೂನ್ಯಮಾಸ; ಪುಷ್ಯಮಾಸ(ಉ.ಕ.ಜಿ); Zero month;
- —*ಕೊನೆಹಗ್ಗ* : ಅಡಿಕೆಗೊ[illegible] ಕೊಯ್ಯುವಾಗ ಕೊನೆಗೌಡ ಅಥವಾ ಕೊನೆಗಾರ ಬಳಸುವ ಹಗ್ಗ; ಕೊಯ್ದು ಗೊನೆಯನ್ನು ಮರದಿಂದ ಕೆಳಗಿಳಿಸಲು ಉಪಯೋಗ; 'ಕೊನೆನೇಣು' ಎನ್ನುವರು(ಚಿಕ್ಕ.ಜಿ); A rope used by konegowda while cutting areca bunch; it is also called as `Konenenu';
- —*ಕೊನೆಹುಲ್ಲೆ* : ಕೊಯ್ಲಿನ ಅಂತಿಮ ದಿವಸ ಮಾಡುವ ಸಂತೋಷಕೂಟ ಸಮಾರಾಧನೆ; ಸಾಮೂಹಿಕ ಭೋಜನ ಕೂಟದ ವ್ಯವಸ್ಥೆ; ಅಂದು ಕೆಲಸ ಮಾಡಿದ ಆಳು-ಕಾಳು ಹಾಗೂ ಇತರೆ ಜನರುಗಳಿಗೆ ಸಿಹಿ ಅಡುಗೆ ತಯಾರಿಸಿ ಊಟ ಮಾಡಿಸುವಿಕೆ; A party arranged at the end of the harvesting day; on that day arrange sweet food to all workers and others;
- —*ಕೊನೆಮಿಣು* : ರೊಟ್ಟಿ ಮಾಡಲು ಬಳಸುವ ಹಲಗೆ(ಯಾದ.ಜಿ); A plate used to prepare `Roti'(cake or bread);
- —*ಕೊನೆವಾರು* : ನೇಗಿಲ ಕೊನೆಯ ಭಾಗ(ಮೈ.ಜಿ); The last part of the plough;
- —*ಕೊನೆ ಸೊಕ್ಕಿದವ* : ಅಹಂಕಾರಿ; ವಿಚಾರ ಹೀನ(ದಕ); Egoist; thoughtless person;
- —*ಕೊನೆಮುಹೂರ್ತ/ಕೊನೆಪೂಜೆ* : ಅಡಿಕೆ ಕೊಯ್ಲಿಗೆ ಸಂಬಂಧಿಸಿದ ಒಂದು ಆಚರಣೆ; ಮಲೆನಾಡಿನಲ್ಲಿ ರೂಢಿ; ಅಡಿಕೆ ಗೊನೆ ಕೊಯ್ಯಲು ಪ್ರಾರಂಭಿಸುವ ಮುನ್ನ ಅಡಿಕೆ ತೋಟ ಮತ್ತು ಅಡಿಕೆ ಗೊನೆಗೆ ಪೂಜೆ ಸಲ್ಲಿಸುವ ವಿಧಾನ; A practice related to harvest areca; before starting the harvest of arecanut bunch worship the areca plantation and areca bunch; they fix good time for worship;
- ಈ ಕಾರ್ಯಕ್ಕೆ ಶುಭಗಳಿಗೆ ನೋಡುವುದಿದೆ; ಅಂದು ಬೆಳಿಗ್ಗೆ ಕೊನೆಗಾರ ಅಥವಾ ಕೊನೆಗೌಡ ಪೂಜಾ ಸಾಮಗ್ರಿಗಳ ಸಮೇತ ಅಡಿಕೆ ತೋಟಕ್ಕೆ ತೆರಳಿ ಒಂದು ಅಡಿಕೆಮರದ ಬುಡಕ್ಕೆ ನೀರು ಹಾಕಿ ಅರಿಶಿಣ, ಕುಂಕುಮ ಹಚ್ಚಿ ಹೂವು ಹಾಕಿ, ತೆಂಗಿನಕಾಯಿ ಒಡೆದು ಪೂಜೆ ಸಲ್ಲಿಸುತ್ತಾನೆ; Konegar or Konegowda came to the areca plantation with the worship things, choose a areca tree, pour water to its bottom, smear turmeric and vermilian, put flower, broke coconut to worship;
- ನಂತರ ತಾನು ಪೂಜಿಸಿದ ಮರವನ್ನೇರಿ ಮೂರು ಗೊನೆಗಳನ್ನು ಕಡಿದು ಕೆಳಗಿಳಿಸಿ ಅವುಗಳನ್ನು ತುಳಸಿಕಟ್ಟೆಯ ಮುಂದಿರಿಸಿ ಸಾಂಪ್ರದಾಯಿಕವಾಗಿ ಪೂಜೆ ಸಲ್ಲಿಸಿ ನಂತರ ಮನೆಯೊಳಗೆ ಒಯ್ಯುವನು; ಆಮೇಲೆ ಅಡಿಕೆ ತೋಟದ ಎಲ್ಲ ಗೊನೆಗಳನ್ನು ಇಳಿಸುವ ಪ್ರಕ್ರಿಯೆ ಪ್ರಾರಂಭವಾಗುವುದು. After the performance of pooja he climb the tree cut three bunches down, put them around Tulsi katte after pooja to them; keep them in the house; then start to cut down the bunches.

ಕೊನ್ನ konna :

- ಪಾಪಿ; ಪಾಪಿಷ್ಟ; ಪಾಪ ಕಾರ್ಯಗಳನ್ನು ಮಾಡುವವ; ದುಷ್ಟ; ದುರಹಂಕಾರಿ; ಕೆಟ್ಟ ಮನಸ್ಸಿನ ವ್ಯಕ್ತಿ; ನಕಾರಾತ್ಮಕ ಚಿಂತನೆಗಳ ಮೂಲಕ ಇತರರಿಗೆ ತೊಂದರೆ ಕೊಡುವವ; Sinner; who has done the sinfull work; wicked; egoist; evil thought person; a person trouble others with negative thoughts;
- ಸಮಾಜಘಾತುಕ ಕೃತ್ಯಗಳಲ್ಲಿ ತೊಡಗುವವ; Person engaged in social evils;
- ನಿಷ್ಪ್ರಯೋಜಕ; ಉಡಾಫೆ ಮನುಷ್ಯ; ಉಪಯೋಗಕ್ಕೆ ಬಾರದ ಮನುಷ್ಯ; Useless person, careless;

- ತಮಿಳಿನಲ್ಲಿ 'ಕೊನ್ನಾಳನ್' ಮತ್ತು ಮಲೆಯಾಳಂನಲ್ಲಿ 'ಕೊನ್ನವನ್' ಎಂಬ ರೂಪಗಳ ಬಳಕೆ ಇದೆ (ದ್ರಾ.ಭಾ.ಜ್ಞಾ.ಪ.ಕೋ). In Tamil `Konnalan'; Malayalam `Konnavan' word forms used.

ಕೊನ್ನಾರ ಪಟ್ಟಿ konnāra paṭṭi :

- ಯಕ್ಷಗಾನ ವೇಷಾಧಾರಿಗಳಿಗೆ ವಿವಿಧ ಬಗೆಯ ಉಡುಪು ಧರಿಸಲು ಸಹಾಯಕವಾಗಿ ಬಳಕೆಯಾಗುವ ಪಟ್ಟಿ ಅಥವಾ ಹಗ್ಗ; ಕೃತಕ ಕೂದಲಿನ ತಯಾರಿಕೆಗೂ ಬಳಸುವುದಿದೆ (ಯ.ಪ.ಕೋ). A piece of cloth or rope helps to wear different types of costumes in Yakshagana; used to prepare artificial hair.

ಕೊನ್ನಾರಿ konnāri :

- ಸೈಪರೇಸೀ ಕುಟುಂಬಕ್ಕೆ ಸೇರಿದ ಇದರ ವೈಜ್ಞಾನಿಕ ಹೆಸರು ಸೈಪರಸ್ ರೊಟಂಡಸ್; ತೆಲುಗಿನಲ್ಲಿ ತುಂಗಗಡ್ಡಲು ಎಂಬ ಹೆಸರಿನಿಂದ ಕರೆಯಲ್ಪಡುವ ಇದಕ್ಕೆ ಕನ್ನಡದಲ್ಲೂ ತುಂಗೆಗೆಡ್ಡೆ, ತುಂಗೆಹುಲ್ಲು, ಕೊನ್ನಾರಿ ಹುಲ್ಲು, ಕೊನ್ನಾರಿಗೆಡ್ಡೆ ಎಂಬ ಹೆಸರುಗಳಿಂದ ಕರೆಯಲಾಗುತ್ತದೆ; ಜೇಕಿನಗೆಡ್ಡೆ, ಗೇರ್ಕಿನ ಗೆಡ್ಡೆ ಎಂಬ ಸಂವಾದಿ ರೂಪಗಳೂ ಬಳಕೆಯಲ್ಲಿರುವುದು ಕಂಡುಬಂದಿದೆ; Belongs to Cyperasi family; the scientific name is `Cyperous Rotundous'; In Telugu Tungagaddalu, in Kannada Tungegadda, Tunge hullu; Konnarigedde; found the words Jekinagadde, Gerkinagadde are the equivalent forms in use;
- ಹುಲ್ಲಿನ ಪ್ರಭೇದಕ್ಕೆ ಸೇರಿದ ಒಂದು ವಿಧದ ಕಳೆಸಸ್ಯ; ಜಾನುವಾರುಗಳಿಗೆ ಮೇವಾಗಿ ಬಳಸಲ್ಪಡುತ್ತದೆ; ವರ್ಷದ ಎಲ್ಲಾ ಕಾಲದಲ್ಲಿಯೂ ಎಲ್ಲಾ ರೀತಿಯ ಮಣ್ಣುಗಳಲ್ಲಿಯೂ ಬೆಳೆಯುವ ಗುಣ ಹೊಂದಿದೆ; ಬೇರು ಮತ್ತು ಬೀಜದ ಗೆಡ್ಡೆಯಿಂದ ಸಸ್ಯಾಭಿವೃದ್ಧಿ ಹೊಂದುವ ಇದು ವಿವಿಧ ಬೆಳೆಗಳ ನಡುವೆ ಹುಲುಸಾಗಿ ಬೆಳವಣಿಗೆ ಹೊಂದುತ್ತದೆ; A weed plant related to grass family; used to fodder for cattles; it has the quality of grow throughout the year, in all type of soil; its development by root and lumpseed; grows between other plants;
- ಆಗಿಂದಾಗ್ಗೆ ಕೀಳದೆ ಬಿಟ್ಟರೆ ಬೆಳೆಗಿಂತ ಇದೇ ಸಮೃದ್ಧಿಯಾಗಿ ಬೆಳೆದು ಬೆಳೆಗಳಲ್ಲಿನ ಬೆಳವಣಿಗೆ ಮತ್ತು ಇಳುವರಿಯನ್ನು ಕಡಿಮೆಗೊಳಿಸುತ್ತದೆ; ಉದ್ದವಾಗಿ ಬೆಳೆದ ಗಿಡಗಳಲ್ಲಿ ಗೊಂಡೆ, ಹೂವು ಬರುವುದಿದೆ; It should be pluck out often, otherwise it grows very much and cut down the yield of the crop;
- ಸುಲಭದಲ್ಲಿ ನಾಶ ಹೊಂದದ ಉಪದ್ರವಕಾರಿ ಕಳೆಯಾಗಿದೆ; ಇದನ್ನು ನಾಶಪಡಿಸಬೇಕಾದರೆ ಮಣ್ಣೊಳಗೆ ಹುಗಿದಿರುವ ಗೆಡ್ಡೆಗಳನ್ನು ಉಳುಮೆ ಮಾಡುವಾಗ ಹೆಕ್ಕಿ ತೆಗೆಯಬೇಕು; ಅಥವಾ ಬೇಸಿಗೆಯಲ್ಲಿ ಎಡೆಬಿಡದೆ ಏಳೆಂಟು ಬಾರಿ ಉಳುಮೆ ಮಾಡುತ್ತಿದ್ದರೆ ಮಣ್ಣೊಳಗಿರುವ ಬೀಜ ಅಥವಾ ಗೆಡ್ಡೆ ಮೇಲೆ ಬಂದು ಬೇಸಿಗೆಯ ಬಿಸಿಲಿಗೆ ಹುರಿದು ಹೋಗುತ್ತದೆ ಅಥವಾ ಮಣ್ಣಿನ ಕಾವಿಗೆ ಸಿಲುಕಿ ತನ್ನ ಜೀವಸತ್ವವನ್ನು ಕಳೆದುಕೊಂಡು ಮತ್ತೆ ಚಿಗುರೊಡೆಯದಂತಾಗುತ್ತದೆ; It cannot be destroy easily; the root plump pickout from the soil while ploughing; or plough the land 7 to 8 times in summer, the seeds were dried out for heat; or it losses its potence and never sprout;
- ಒಂದು ವಿಧದ ಸುವಾಸನಾಯುಕ್ತ ಗಿಡಮೂಲಿಕೆ ಎಂಬುದಾಗಿಯೂ ಹೇಳುವುದಿದೆ; 'ಭದ್ರಮುಸ್ತೆ' ಎನ್ನುವರು?(ಉ.ಕ.ಜಿ); A kind of fragrensive medicinal plant; it is called `Bhadra muste';
- ಔಷಧೀಯ ಗುಣ ಹೊಂದಿರುವ ಇದನ್ನು ಭೇದಿ, ರಕ್ತಭೇದಿ, ನವೆ, ಮೂಲವ್ಯಾಧಿ, ಕಣ್ಣಿನ ತೊಂದರೆಗಳು, ನರದೌರ್ಬಲ್ಯ, ಕೆಮ್ಮು, ದಮ್ಮು, ಮುಟ್ಟಿನ ದೋಷದಂತಹ ತೊಂದರೆಗಳಿಗೆ ಮದ್ದು ತಯಾರಿಕೆಯಲ್ಲಿ ಬಳಸುವರು; It has medicinal qualities so, it is used to prepare medicine for dysentery, blood dysentery, itching, piles, eye problems, nervous weakness, caugh etc;

- ಇದರ ಗೆಡ್ಡೆಯನ್ನು ಒಣಗಿಸಿ ಪುಡಿ ಮಾಡಿ ಸುಗಂಧ ದ್ರವ್ಯ ಮತ್ತು ಅಗರಬತ್ತಿ ತಯಾರಿಕೆಯಲ್ಲಿ ಉಪಯೋಗಿಸುವುದಿದೆ; The dried plump powder used in cosmetics and Agarbatti production;
- ಇದರಲ್ಲಿ ಕೊನ್ನಾರಿ, ಕಿರಿಕೊನ್ನಾರಿ ಎಂಬ ಎರಡು ಪ್ರಭೇದಗಳಿವೆ ಎಂಬುದೊಂದು ಹೇಳಿಕೆ(ಉ.ಕ.ಜಿ); Two types i.e., `Konnari, Kirikonnari';
- ಕೊನ್ನಾರಿಗೆ ದಟ್ಟ ನೇರಳೆ ಬಣ್ಣದ ಪರಿಮಳಭರಿತವಾದ ದಪ್ಪ ಗೆಡ್ಡೆಗಳಿರುತ್ತವೆ; ಕಿರಿಕೊನ್ನಾರಿಗೆ ಎರಡು ಜೋಡಿ ಕಡ್ಡಿಯಂತಹ ಹೂಗೊಂಚಲಿರುತ್ತದೆ; Konnari has dark purple nerale coloured, fragranced thick plumps; Kirikonnari has two pair of stick like flower;
- ಕೊನ್ನಾರಿ, ಕಿರಿಕೊನ್ನಾರಿ ಎಳೆಯದಾಗಿರುವಾಗ ಒಂದೇ ತೆರನಾಗಿದ್ದು ಇದಕ್ಕೆ ಹೂವು ಬಂದಾಗ ಮಾತ್ರ ಇವೆರಡು ಬೇರೆ ಬೇರೆ ಎಂಬುದು ಸ್ಪಷ್ಟ; These two are same in young but it clears the difference while flowers come;
- ಪ್ರಸ್ತುತ ಕೊನ್ನಾರಿ ಗಿಡದ ನಾಶಕ್ಕೆ ಕ್ರಿಮಿನಾಶಕ ಸಿಂಪಡಿಸುವುದನ್ನು ಕಾಣುತ್ತೇವೆ; ಆದರೆ ಇದು ಎಷ್ಟರಮಟ್ಟಿಗೆ ಫಲ ನೀಡಿದೆ ಎಂಬುದು ಮಾತ್ರ ಅಸ್ಪಷ್ಟ; *ಪ್ರ: 'ಹೊಲದ ತುಂಬಾ ಬರೀ ಕೊನ್ನಾರಿನೇ ಬೆಳೆದಿದೆ ಮಾರಾಯ'.* Now a days use pesticide to destroy; but there is doubt in result; the whole plot grow full of Konnari.

ಕೊನ್ನಿ konni :

- ತೆಗೆದುಕೊಳ್ಳಿ, ಪಡೆದುಕೊಳ್ಳಿ, ಈಸಿಕೊಳ್ಳಿ ಎಂಬರ್ಥದಲ್ಲಿ ಪದಬಳಕೆ; ಸಾಮಾನ್ಯವಾಗಿ ಬಯಲುಸೀಮೆಯ ಎಲ್ಲಾ ಭಾಗದ ಜನಪದರಲ್ಲೂ ರೂಢಿಯಲ್ಲಿರುವ ಬಹುವಚನ ರೂಪ; ಇದೊಂದು ಗೌರವ ಸೂಚಕ ರೂಪವೂ ಹೌದು; The word used in the meaning take, receive; generally in plain land people used this word in plural form; it indicates respect;
- 'ಕ್ವಾ'(ಕೋ) ಏಕವಚನ ರೂಪವಾದರೆ, 'ಕೊನ್ನಿ' ಬಹುವಚನ ರೂಪ ಎಂಬುದು ಸ್ಪಷ್ಟ; ತೆಗೆದುಕೊ ಶಿಷ್ಟರೂಪವಾದರೆ ಕ್ವಾ, ಕೊನ್ನಿ ಸಂಪೂರ್ಣ ಗ್ರಾಮೀಣ ಸೊಗಡಿನಿಂದ ಕೂಡಿದ ಪದ; ಇಲ್ಲಿ ಭಾಷಾ ಬಳಕೆಯ ಗಾಂಭೀರ್ಯ, ಗೌರವ, ನಾಚಿಕೆ, ಸಂಕೋಚದಂತಹ ಪರಿಕಲ್ಪನೆಗಳು ದಟ್ಟವಾಗಿವೆ; Kva is a singular form, Konni is plural form; (tegeduko) take is the decent form of usage; the words `kva', `konni' forms have rural flavour; the usage of language has heavy dignity, respect, shy, hesitation etc;
- ಅತ್ತೆ, ಮಾವ, ಅಳಿಯ, ಸೊಸೆ, ಭಾವ, ಮೈದ, ಬಾಮೈದ, ನಾದಿನಿ, ಅತ್ತಿಗೆ ಮೊದಲಾದ ಸಂಬಂಧಗಳಲ್ಲಿ ಪರಸ್ಪರ ಕೊಡು-ಕೊಳ್ಳುವಿಕೆ ವ್ಯವಹಾರ ಕಂಡುಬಂದಾಗ 'ಕೊನ್ನಿ' ಪದದ ಬಳಕೆ ಇದೆ; The word `Konni' used in between Mother-in-law, Father-in-law, Son-in-law, Daughter-in-law, Brother-in-law, Sister-in-law relations while giving something to eachothers;
- ಹಿಂದೆ ಅತ್ತೆಯಾದವಳು ಅಳಿಯನೆದುರು ನಿಂತು ಮಾತನಾಡುವುದಿರಲಿ ಎದಿರುಬದುರು ತಿರುಗಾಡುತ್ತಲೂ ಇರಲಿಲ್ಲ; ಅಂತಹ ಸಂದರ್ಭದಲ್ಲಿ ಅಳಿಯನಿಗೆ ಏನಾದರೂ ಕೊಡಲೇಬೇಕಾದ ಸನ್ನಿವೇಶ ಸೃಷ್ಟಿಯಾದಾಗ ಮೈತುಂಬಾ ಸೆರಗು ಹಾಕಿ, ತಲೆ ತಗ್ಗಿಸಿ, ನಾಚಿಕೆಯಿಂದಲೇ ಸ್ವಲ್ಪ ದೂರ ನಿಂತು ಅವರ ಕಡೆ ತಿರುಗಿಯೂ ನೋಡದೆ 'ಕೊನ್ನಿ' ಎಂಬುದಾಗಿ ಮೆಲ್ಲನೆ ಹೇಳಿ ಪಕ್ಕದಲ್ಲಿಟ್ಟು ಹೊರಡುತ್ತಿದ್ದ ಸನ್ನಿವೇಶಗಳು ಸಾಮಾನ್ಯವಾಗಿ ಕಂಡುಬರುತ್ತಿದ್ದವು; *ಪ್ರ: 'ಮಗಾ ಹೊಲ್ದಲಯ್ತೆ ಕೊನ್ನಿ ಊಟ ಕೊಟ್‌ಬುಡಿ'*(ಚಾ.ಜಿ). Previous days Mother-in-law never stand to talk face to face; never walk before her son-in-law; if any such situation, she covers her body with sari bow the head with shy, stand at a distance and cannot look at him say `Konni' and keep the thing and go away is the common scene.

ಕೊನ್ನುಗ್ಲು konnuglu :

ಮಂಗಲ(ಳ)ಸೂತ್ರ(ಉ.ಕ.ಜಿ); ಸಾಮಾನ್ಯವಾಗಿ 'ತಾಳಿ', 'ತಾಲಿ' ಎಂಬ ರೂಪಗಳ ಬಳಕೆ ಇದೆ; ಹೆಣ್ಣಿನ ಮುತ್ತೈದೆಯ ಸಂಕೇತ (ನೋಡಿ: ತಾಳಿ

ಅಥವಾ ತಾಳಿ). An auspicious ornament of Hindu woman generally it is called `Tali', it is the symbol of the married women till her husband's death of her.

ಕೊಪಾಕುಳಿ kopākuḷi :

- ತಲೆಯ ಒಂದು ಭಾಗ; ನೆತ್ತಿಯ ನಡುವಿನ ಶಿರೋ ಭಾಗ; ತಲೆಯ ಮೇಲ್ಭಾಗದಲ್ಲಿರುವಂಥದು; A part of the head; it is the part middle tip of the head;
- 'ನತ್‌ಬಾಯಿ' ಎಂಬುದಾಗಿರಬಹುದೆ?; ಕೊಪಾ+ ಕುಳಿ; ಕುಳಿ=ತಗ್ಗಾದ, ಸ್ವಲ್ಪ ಹಳ್ಳದಂತಿರುವ ಭಾಗ;
- ನೆತ್ತಿಯು ತಲೆಯ ಮುಂಭಾಗ ಮತ್ತು ಹಿಂಭಾಗಕ್ಕೆ ಹೋಲಿಸಿ ನೋಡಿದಾಗ ಸ್ವಲ್ಪ ತಗ್ಗಾಗಿರುವಂತೆ ಕಾಣುವುದಿದೆ; The tip is low to compare the back and front part of the head;
- ಮಕ್ಕಳಿಗೆ ಈ ಭಾಗ ಸೂಕ್ಷ್ಮ ಸಂವೇದನೆಯಿಂದ ಕೂಡಿರುವಂಥದು; ಹಾಗಾಗಿ ಮಗುವಿಗೆ ಮೂರ್‍ನಾಲ್ಕು ವರ್ಷಗಳಾಗುವವರೆಗೆ ಆ ಭಾಗಕ್ಕೆ ಏಟು ಬೀಳದಂತೆ ಎಚ್ಚರ ವಹಿಸುವರು; This part is very sensitive to children, so take care to avoid any force on that part upto 3 to 4 years;
- ಮುಂಜಾನೆ ಮಗುವಿಗೆ ಸ್ನಾನ ಮಾಡಿಸಿದ ಮೇಲೆ ಸ್ವಲ್ಪ ಸಮಯ ಬಿಸಿಲಿಗೆ ನೆತ್ತಿ ಕಾಯಿಸುವುದು ವಾಡಿಕೆ; *ಪ್ರ: 'ಮಗುವಿನ ಕೊಪಾಕುಳಿ ಮ್ಯಾಗ ಕೈ ಇಕ್ಬ್ಯಾಡೋ ಮಂಗ್ಯಾ'.* After the bath in the morning the childs head tip warm up by the sun rays is a practice.

ಕೊಪ್ಪ[೧] koppa[1] :

- ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೋಕಿನ ಕ್ರಿ.ಶ.೧೪೧೧ರ ೨೭೨ನೇ ಶಾಸನದಲ್ಲಿ ಇದರ ಉಲ್ಲೇಖ; This place referred in the inscription 272nd of 1411thAD Mysore district Nanjangudu taluk;
- ಕನ್ನಡದ 'ಕೊಪ್ಪ'ಕ್ಕೆ ಸಂವಾದಿಯಾಗಿ ತಮಿಳಿನಲ್ಲಿ 'ಕುಪ್ಪ' ರೂಪವಿದೆ; ಕನ್ನಡದಲ್ಲಿಯೂ ಮೊದಲು 'ಕುಪ್ಪ'ವೇ ಇರಬೇಕು; ಏಕೆಂದರೆ 'ಕುಪ್ಪ'ವೇ ಮೂಲ ರೂಪ, ತದನಂತರದ ಬೆಳವಣಿಗೆ 'ಕೊಪ್ಪ', ಇದು ಸಾಮಾನ್ಯ ಪ್ರಕ್ರಿಯೆ; ಇದನ್ನೇ ನಾವು 'ಸ್ವರವ್ಯತ್ಯಯ'(ಉ>ಒ) ಎಂದು ಕರೆಯುವುದು; Kannada word `Koppa' is equivalent to the word `Kuppa' in Tamil; initially the word `Kuppa' also in Kannada, the later development it is called `Koppa' is a general process; it is called as vowel mutation;
- 'ಕೊಪ್ಪ' ಎನ್ನುವ ಪದಕ್ಕೆ 'ಕೊಪ್ಪಲ್'(ಲು) ಎನ್ನುವ ರೂಪವೂ ಇದೆ; The word `Koppa' has another form `Koppal'; To make reach the remote area may be near;
- ಸ್ವಲ್ಪ ಎಟುಕಿಸಿಕೊಂಡರೆ 'ಕೊಂಪೆ'ಗೆ ಹತ್ತಿರವಾದುದು ಆಗಬಹುದು;
- 'ಕೊಪ್ಪ' ಎಂದರೆ 'ಚಿಕ್ಕಹಳ್ಳಿ' ಎಂದು ಅರ್ಥವಿದೆ; ಈ ಹಿನ್ನೆಲೆಯಲ್ಲಿಯೇ ಈ ಸ್ಥಳನಾಮ ಬಂದಿದೆ; `Koppa' means a small village; on this background this name came;
- 'ಕೊಪ್ಪ' ಊರಿನ ಹೆಸರು ಇನ್ನು ಹಲವು ಕಡೆ ಬಂದಿದೆ; ಉದಾಹರಣೆಗೆ ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೋಕಿನಲ್ಲಿದೆ, ಹಾಗೆಯೇ ಚಿಕ್ಕಮಗಳೂರು ಜಿಲ್ಲೆಯಲ್ಲೊಂದಿದೆ; The name `Koppa' is in many places; example they are in Mandya district Maddur taluk, Chikkamagaluru district;
- ಶ್ರೀ ಅಳಗಂಜಿಯ ಮಹಾಲಿಂಗೇಶ್ವರ ದೇವರಿಗೆ ಪ್ರಭುದೇವರು ಕೆಲವು ದತ್ತಿ ಮಾಡಿದರು; ದೇವಾಲಯದ ವಿವಿಧ ಸೇವೆಯನ್ನು ಸಲ್ಲಿಸುವ ವೃತ್ತಿ ವರ್ಗದವರಿಗೆ ಈ ದತ್ತಿಯ ಪಾಲಿತ್ತು; ಅದರಲ್ಲಿ ಕೊಪ್ಪ ಊಳಿಗದವರಿಗೆ ದೇವರಿಗೆ ನಿತ್ಯ ಹೂವನ್ನು ತರುವಂತೆ ದತ್ತಿ ಹಂಚಿದುದು ಉಲ್ಲೇಖವಿದೆ; Sri Alaganji Mahalingeshwara devarige prabhudeva has given some donation; in this donation the workers who serve the temple has a share, the workers of Koppa bring flowers to the god;
- ಮೈಸೂರು ಜಿಲ್ಲೆ ತಿ.ನರಸೀಪುರ ತಾಲ್ಲೋಕಿನ ಕ್ರಿ.ಶ.೧೧ನೇ ಶತಮಾನದ ೨೫೧ನೇ ಶಾಸನದಲ್ಲಿ ಒಂದು 'ಕೊಪ್ಪ'ದ ಉಲ್ಲೇಖವಿದೆ; A place Koppa referred in the 251st inscription of 11th AD Mysore district T.Narasipura taluk.

(E.C- ೩; ಮೈ.ಜಿ.)

ಕೊಪ್ಪ/ಕೊಪ್ಪ್ ^2^ koppa/kopp[2] :

- ಕಿವಿಯ ಆಭರಣ; ಓಲೆ; ಕಿವಿಯ ಮೇಲ್ಭಾಗದ ಗುಚ್ಛದಂಥ ಒಡವೆ(ನೋಡಿ: ಕೊಪ್ಪು); An ear ornament, a bunch like ornament of upper ear;
- ಕೊಪ್ಪ=ಕೊಪ್ಪಲ್; A small village(ಕಿಟ್ಟೆಲ್);
- ತಮಿಳಿನಲ್ಲಿ 'ಕುಪ್ಪ', 'ಕುಪ್ಪಲ್' ಪದಗಳ ಬಳಕೆಯಿದ್ದರೆ ತುಳುವಿನಲ್ಲಿ ಯಥಾಪ್ರಕಾರವಾಗಿ 'ಕೊಪ್ಪ' ಪದವೇ ಬಳಕೆಯಲ್ಲಿರುವುದು ವಿಶೇಷ; `Kuppa', `Kuppal' words are in use in Tamil, the word `Koppa' itself use in Tulu;
- ಸ್ಥಳನಾಮ ಘಟಕವೂ ಹೌದು; ಉದಾಹರಣೆಗೆ ಗೋಣಿಕೊಪ್ಪ, ಶುಂಠಿಕೊಪ್ಪ ಮೊದಲಾದವು; ಸ್ಥಳನಾಮದ ಪದಾಂತ್ಯದಲ್ಲಿ ಸೇರ್ಪಡೆಯಾಗುವ ರೂಪ;
- ಪರಿಶಿಷ್ಟ ವರ್ಗದ ಮನ್ಸ ಸಮುದಾಯದ ಜನವಸತಿ; ಗುಡಿಸಲು; ಬೀದಿ; ಕೇರಿ; It is the habitat of Mansa community of Scheduled tribe;
- ಕೊರಗ ಬುಡಕಟ್ಟು ಸಮುದಾಯದವರ ವಾಸಸ್ಥಳ; ಗುಡಿಸಲು ಅಥವಾ ಮನೆಗಳಿಂದ ಕೂಡಿದ ಬೀದಿ(ಶಿ.ಜಿ; ಉ.ಕ.ಜಿ); The tribal of Koraga community habitant with hut or houses;
- ಹಳ್ಳಿಗಳಲ್ಲಿ ಪ್ರತ್ಯೇಕವಾಗಿ ವಾಸವಿರುವ ಒಂದು ಕೇರಿ/ಬೀದಿ; A street of a community people living separately;
- ಮನೆಯಿಂದ ದೂರವಿರುವ ಜಮೀನು; *ಪ್ರ: 'ಅವು ಕೊಪ್ಪತ್ ಉಳ್ಳ'(ಕೊಡ.ಜಿ.); ಪ್ರ: 'ನಾ ಕೊಪ್ಪದಾಗ ಇರಾ ಮನುಷ್ಯ ಅದಾನ್ರೀ'*; A land away from the house;
- 'ಮುಂಡಾಲ' ಆದಿವಾಸಿ ಸಮುದಾಯದವರ ಮನೆ/ಗುಡಿಸಲು(ದ.ಕ); The house/hut of Mundala/Adivasi community;
- ನೊಗದಲ್ಲಿ ಹಗ್ಗ ತೂರಿಸಲು ಕೊರೆದಿರುವ ರಂಧ್ರಗಳು(ಚಿಕ್ಕ.ಜಿ.); Holes to push the rope into yoke;
- ಗೊರಗು; ಮಳೆಗಾಲದಲ್ಲಿ ತಲೆಗೆ ಮರೆ ಮಾಡಿಕೊಳ್ಳುವ ಕಂಬಳಿ ಅಥವಾ ಗೋಣಿಚೀಲ, ತೆಂಗಿನಗರಿ, ಈಚಲು ಗರಿಯಿಂದ ಹೆಣೆದ ಗೊಪ್ಪೆ(ನೋಡಿ: ಕೊಪ್ಪೆ); Goragu is a woollen blanket or gunny bag to hide the head in rainy season;
- ಹೆಂಗಸರು ತಲೆಗೆ ಧರಿಸುವ ತುರುಬು (ತಲೆತುರುಬು). A hair knot to wear by women.

ಕೊಪ್ಪದ ವೀಳ್ಯ koppada vīḷya :

- ವೀಳ್ಯದೆಲೆಯಲ್ಲಿ ಕಂಡುಬರುವ ಒಂದು ಬಗೆ(ದ.ಕ); A kind of betel leaves;
- 'ಕೊಪ್ಪ' ಎಂಬ ಊರಿನಲ್ಲಿ ಬೆಳೆದಿರುವ ವೀಳ್ಯೆದೆಲೆ ಇರಬಹುದೆ?; May be betel leaves grown in the village `Koppa';
- ಏಕೆಂದರೆ 'ಕೊಪ್ಪ'ದ ಎಲೆ ಇರುವಂತೆ 'ಮೈಸೂರು ವೀಳ್ಯೆದೆಲೆ' ಎಂಬ ಒಂದು ಬಗೆಯನ್ನು ಗುರುತಿಸಬಹುದಾಗಿದೆ; 'ಮಲ್ನಾಡಡ್ಕೆ ಮೈಸೂರು ವೀಳ್ಯದೆಲೆ' ಎಂಬುದೊಂದು ನಾಣ್ಣುಡಿ ಪ್ರಚಲಿತ; We find betel leaves of Koppa, Mysuru betel leaves are also a kind; a famous proverb is `Mysuru Veeleyadele Malnad adke';
- ಅಂದರೆ ವೀಳ್ಯದೆಲೆಯಲ್ಲಿ ಮೈಸೂರು ಎಲೆ ಶ್ರೇಷ್ಠ, ಬಹುಬೇಡಿಕೆಯುಳ್ಳದ್ದು ಎಂಬರ್ಥದಲ್ಲಿ (ನೋಡಿ: ಎಲೆ); It means in the case of betel leaves, Mysuru betel leaves are good and has good demand;
- ಎಲೆಯಲ್ಲಿ ನಾಟಿಎಲೆ, ಚೋಳೆಲೆ, ಕರಿಎಲೆ, ಬಿಳಿಎಲೆ, ನಾಗವಲ್ಲಿ ಎಲೆ, ಅಂಬಾಡಿ ಎಲೆ, ಮದ್ರಾಸು ಎಲೆ ಎಂಬ ಹಲವು ಬಗೆಗಳಿವೆ; *ಪ್ರ: 'ಕೊಪ್ಪದ್ ಎಲೆ ತಂದಾಕು ಹೋಗು ಮಾರಾಯ'.* In leaves different kinds are there Natiele, Cholele, Kariele, Biliele, Nagavalli ele, Ambadi ele, Madras ele etc.

ಕೊಪ್ಪರ koppara :

- ಒಂದು ಸೀಮೆಯ ಹೆಸರು; A name of an area, region;
- ಕೊಪ್ಪಲು; *ಪ್ರ: 'ಏಳು ಕೊಪ್ಪರ ಕುರಿಯಲ್ಲಿ ಹಾಲನ್ನೆ ಕರೆದಿನ್ನು ನಾಯಿಮರಿಗಳಿಗೆ ಉಣಲಿಕ್ಕೆ'* (ಮೈ.ಲಿಂ.ಕಾವ್ಯ);

- ಕುರಿಗಳನ್ನು ಕೂಡುವ 'ಕೊಪ್ಪಲು' ಎಂಬರ್ಥದಲ್ಲಿ ಪದಬಳಕೆ ಇರಬಹುದು; The word used in the meaning assemble the sheep in a place is called `Koppalu';
- ಕೊಬ್ಬರಿ; ಕೊಪ್ಪರ>ಕೊಪ್ಪರಿ>ಕೊಬ್ಬರಿ ಆಗಿರಬಹುದು (ಪ>ಬ); Koppari becomes Kobbari;
- ಮೊಳ ಕೈ, ಮೊಳ ಕಾಲು; Hand, ankle;
- ದುಷ್ಟ; ದೂರ್ತ(ಕ.ನಿ); Cruel;
- ಮಲ್ಲಯುದ್ಧದಲ್ಲಿ ಒಂದು ವರಸೆ(ಸಂ.ಕ.ನಿ); A hold in wrestling;
- ಕೊಪ್ಪರ=ಕಪ್ಪರ; the shoulder blade; ತೆಲುಗಿನಲ್ಲಿ 'ಭುಜಶಿರಸ್' ಎಂಬ ರೂಪವಿರುವುದನ್ನು ಕಿಟ್ಟೆಲ್ ಗುರುತಿಸುತ್ತಾರೆ(ಕಿಟ್ಟೆಲ್); Kittel find the form in Telugu `Bhujashiras';
- ತಮಿಳಿನಲ್ಲಿ 'ಕೊಪ್ಪರಿ', 'ಕೊಪ್ಪರಾಯಿ'; ತೆಲುಗಿನಲ್ಲಿ 'ಕೊಬ್ಬರಿ', 'ಕೊಬ್ಬೆರ'; ಮಲೆಯಾಳಂನಲ್ಲಿ 'ಕೊಪ್ಪರ' ಪದವೇ ಯಥಾಪ್ರಕಾರವಾಗಿ ಬಳಕೆಗೊಂಡಿದೆ (ತು.ನಿ.); In Tamil `Koppari', `Kopparai'; Telugu `Kobbari', `Kobbera'; in Malayalam `Koppara';
- 'ಖೊಪ್ಪರ'ದಿಂದ 'ಕೊಪ್ಪರ' ಬಂದಿರಬಹುದು; ಖ>ಕ. May be the word `Koppara' from `Khoppara'.

ಕೊಪ್ಪರ ಗಡಿಗೆ koppara gaḍige :

- ಉತ್ತರ ಕನ್ನಡ ಜಿಲ್ಲೆಯಲ್ಲಿ ರೂಢಿಯಲ್ಲಿರುವ ಒಂದು ವಿಧದ ಜನಪದ ಆಟ; ಸಾಮಾನ್ಯವಾಗಿ ಈ ಆಟವನ್ನು ಹೆಣ್ಣುಮಕ್ಕಳು ಆಡುತ್ತಾರಾದರೂ ಕೆಲವೊಮ್ಮೆ ಗಂಡು-ಹೆಣ್ಣುಮಕ್ಕಳಿಬ್ಬರೂ ಕೂಡಿ ಆಡುವುದಿದೆ; A folk play in Uttarakannada; women play this generally; sometime both men and women play jointly;
- ಆಟದ ನಿಯಮದಂತೆ ನಿಗದಿತ ಆಟಗಾರರೆಲ್ಲರೂ ತಮ್ಮ ತಮ್ಮ ಕೈಗಳನ್ನು ಹಿಡಿದುಕೊಂಡು ವೃತ್ತಾಕಾರವಾಗಿ ನಿಲ್ಲುವರು; ಅದರಲ್ಲಿ ವೃತ್ತದ ಒಳಗೆ ಮತ್ತು ವೃತ್ತದ ಹೊರಗೆ ಒಬ್ಬೊಬ್ಬ ಆಟಗಾರ್ತಿಯರು ನಿಂತುಕೊಂಡು ಅವರು ತಮ್ಮ ತಮ್ಮ ಎಡಗೈಯನ್ನು ಮೇಲೆತ್ತಿ ತೋರಣದಂತೆ ಜೋಡಿಸಿಕೊಂಡು ಹಿಡಿದುಕೊಳ್ಳುವರು; According to the rules of the play all the players hold the hands and stand in a round or circle; in and out of the circle a women hold their left hand as flags;
- ಆಟದಲ್ಲಿ ಇವರಿಬ್ಬರದ್ದೇ ಪ್ರಧಾನ ಪಾತ್ರವಾಗಿದ್ದು ಕೈಯೆತ್ತಿ ಹಿಡಿದುಕೊಂಡವರಲ್ಲಿ ವೃತ್ತದ ಹೊರಗಿನವಳು ತನ್ನ ಬಲಗೈಯಿಂದ ವೃತ್ತಾಕಾರವಾಗಿ ನಿಂತವರ ತಲೆಯ ಮೇಲೆ ತಾವಾಡುವ ಹಾಡಿನ ಪ್ರತಿ ಶಬ್ದಕ್ಕೆ ಒಂದು ಬಡಿತದಂತೆ ಬಡಿಯುತ್ತಾ ಮುಂದೆ ಸಾಗುವರು; These two have a major role in the play; women who is out of the circle touch the head of the women in circle according to the rhythm of the song and move;
- ಹಾಡಿನ ಸಾಹಿತ್ಯದಲ್ಲಿ 'ಹಾಕಲಾರೆ' ಎಂಬುದು ಕೊನೆಯ ಪದ; ಈ ಪದ ಯಾವ ವ್ಯಕ್ತಿಯ ತಲೆಗೆ ಕೊನೆಯಾಗುತ್ತದೋ ಅವರು ಆಟದ ವೃತ್ತದಿಂದ ಹೊರಹೋಗಬೇಕಾಗುತ್ತದೆ; In the literature of the song the last word is `Hakalare'; the word end with a person should come out of the circle; like wise all are out of the play who remain in the end is the winner; it is the way of the play;
- ಹೀಗೆ ಆಟ ಮುಂದುವರಿಯುತ್ತಿದ್ದಂತೆ ಒಬ್ಬೊಬ್ಬರಾಗಿ ಎಲ್ಲರೂ ಔಟಾಗುತ್ತಾ ಅಂತಿಮವಾಗಿ ಉಳಿದ ಒಬ್ಬಾಕೆ ಆಟ ಗೆದ್ದಂತೆ ಎಂಬುದು ಈ ಆಟದ ವಿಧಾನ;
- ಇದು ಮಕ್ಕಳಿಗೆ ಮನರಂಜನೆಯ ಆಟವಾಗಿದ್ದು ಬಿಡುವಿನ ಸಮಯದಲ್ಲಿ ಮನೆಯಂಗಳ ಅಥವಾ ಶಾಲೆಯ ಆವರಣದಲ್ಲಿ ಆಡುವರು; It is a recreative play to the children played in the yard of the house or in front of the school ground;
- ಮಕ್ಕಳ ಆಟದಲ್ಲಿ ಮನರಂಜನೆಯ ಜೊತೆಗೆ ಹುಸಿಕೋಪ, ತಾಪ, ಮೋಸ, ವಂಚನೆಗಳು ಸಾಮಾನ್ಯವಾಗಿ ಕಂಡುಬರುವುದು ಸಹಜ; ಕೊನೆಗೆ 'ಕೋಳಿ ಜಗಳ' ಕಾಯುವುದು ಮತ್ತೆ ಒಂದಾಗುವುದು ಇವು ಕೂಡ ಸಕಾರಾತ್ಮಕವಾಗಿ ನೋಡುವವರಿಗೆ ಮನರಂಜನೆಯಾಗಿಯೇ ಕಾಣುತ್ತದೆ; ಅಂತಹ ಒಂದು ಬೆಳವಣಿಗೆಗೆ 'ಕೊಪ್ಪರ ಗಡಿಗೆ' ಎಂಬ ಈ ಆಟವೂ ಹೊರತಾಗಿಲ್ಲ; In the play of children

light, angry, cheat etc are common so, they quarrel each other and forget it and join again to play; such developments are in this `Koppara gadige' play;

- ಹಾಡು: "ಕೋಪ್ಪರ ಗಡಿಗೆ ಮಡಚಲಾರೆ; ನಾಯಿಗೆ ಅನ್ನ ಹಾಕಲಾರೆ; ಗಿಣಿಗೆ ನುಚ್ಚು ಹಾಕಲಾರೆ";
- ಇಲ್ಲಿ ಮೊದಲೆ ತಿಳಿಸಿದಂತೆ 'ಹಾಕಲಾರೆ' ಎಂಬುದು ಪದ್ಯದ ಕೊನೆಯ ಪದ; ಇದು ಆಟಗಾರರನ್ನೆಲ್ಲ ಒಬ್ಬೊಬ್ಬರನ್ನಾಗಿ ಹೊರಗೆ ಹಾಕಲಾಗುವ ಶಬ್ದವೂ ಹೌದೆಂದರೆ ತಪ್ಪಲ್ಲ; *ಪ್ರ: 'ಕೊಪ್ಪರ ಗಡಿಗೆ ಆಟವನ್ನ ನೀನೇಕೆ ಅಷ್ಟು ಗಂಭೀರವಾಗಿ ತೆಗೆದುಕೊಂಡೆ'.* The word `Hakalare' is the last word of the song; the sound or word put out every player one by one.

ಕೊಪ್ಪರಿಕೆ kopparike :

- ಕೊಪ್ಪರಿಕೆ, ಕೊಪ್ಪುರ್ಕೆ, ಕೊಪ್ರಕೆ, ಕೊಪ್ರಿಕೆ, ಕೊಪ್ಪರಿಗೆ, ಕೊಪ್ಪುರಿಗೆ, ಕೊಪ್ಪುರ್ಗೆ ಎಂಬ ವಿವಿಧ ಪ್ರಕಾರದ ಸಂವಾದಿ ರೂಪಗಳ ಬಳಕೆ ಇದೆ; Kopparike, Koppurke, Koprake, Koprike, Kopparige, Koppurge are the forms used;
- ಕೊಪ್ಪರಿಕೆ>ಕೊಪ್ಪರಿಗೆ; ಉಚ್ಚಾರಣಾ ಸೌಲಭ್ಯದಿಂದಾಗಿ ಪದಾಂತ್ಯದ 'ಕ'ಕಾರಕ್ಕೆ 'ಗ'ಕಾರ ಬಂದಿರುವುದು; ಇದು ದ್ರಾವಿಡ ಭಾಷಾ ಲಕ್ಷಣವೂ ಹೌದು;
- ದ್ರಾವಿಡ ಭಾಷೆಗಳಾದ ತಮಿಳಿನಲ್ಲಿ 'ಕೊಪ್ಪರೈ', ತೆಲುಗಿನಲ್ಲಿ 'ಕೊಪ್ಪೆರ', ಮಲೆಯಾಳಂನಲ್ಲಿ 'ಕೊಪ್ಪರ' ಮತ್ತು ತುಳುವಿನಲ್ಲಿ 'ಕೊಪ್ಪರಿಗೆ' ಪದಗಳ ಬಳಕೆ ಕಂಡುಬಂದಿದೆ(ದ್ರಾ.ಭಾ.ಜ್ಞಾ.ಪ.ಕೋ); In Dravidian languages the word used as `Kopparai' in Tamil, `Koppera' in Telugu, `Koppara' in Malayalam, `Kopparige' in Tulu;
- ಆಲೆಮನೆಗಳಲ್ಲಿ ಬೆಲ್ಲ ತಯಾರಿಸಲು, ಸಾಮೂಹಿಕ ಭೋಜನ ಕೂಟಕ್ಕೆ ಊರೊಟ್ಟಿನ ಅಡುಗೆ ಮಾಡಲು, ನೀರು ತುಂಬಿಡಲು, ಹಬ್ಬದ ಸಂದರ್ಭದಲ್ಲಿ ಬಣ್ಣದ ನೀರು ಕಲಸಿ ಓಕುಳಿ ಆಡಲು ಬಳಕೆಯಾಗುವ ತಾಮ್ರದಿಂದ ತಯಾರಿಸಿದ ವೃತ್ತಾಕಾರವಾದ ಅಗಲ ಬಾಯಿಯುಳ್ಳ ಸಾಧನ; An instrument made of copper has a round shape mouth, used in Jaggery industry to prepare Jaggery; to prepare food in community assembly to store water, in the occation of festival to make colour water to play `Okuli';
- ಸುತ್ತಲೂ ನಾಲ್ಕು ಕಡೆ ಎಡ-ಬಲದ ಸಮಸ್ಥಿತಿಗೆ ಹೊಂದಿಕೊಂಡಂತೆ ಮಂದವಾದ ಕಬ್ಬಿಣದಿಂದ ತಯಾರಿಸಿದ ಉಂಗುರಾಕೃತಿಯ ಬಳೆಯನ್ನು ಹಿಡಿಕೆಗಾಗಿ ಅಳವಡಿಸಿರುತ್ತಾರೆ; ಈ ಬಳೆಗಳ ಒಳಗೆ ಮರದ ನೇರ ತುಂಡು ಅಥವಾ ಗಟ್ಟಿ ಬಿದಿರಿನ ಗಳುವನ್ನು ತೂರಿಸಿ ನಾಲ್ಕೂ ಕಡೆ ನಾಲ್ಕಾರು ವ್ಯಕ್ತಿಗಳು ಹಿಡಿದುಕೊಂಡು ಒಂಡೆಡೆಯಿಂದ ಮತ್ತೊಂದೆಡೆಗೆ ತೆಗೆದಿಡುವರು; Four sides of the Kopparike fix four rings to carry this form one place to another, by fixing the strong wooden club or bamboo pieces into these rings;
- ಕಬ್ಬಿಣದ ದೊಡ್ಡ ಪಾತ್ರೆ; ಅಗಲವಾದ ಬಾಯಿಯುಳ್ಳ ಹಂಡೆ ಅಥವಾ ಕಡಾಯಿ; A big iron vessel has big mouth called as `Hande' or `Kadayi';
- ಸಿದ್ಧಪ್ಪಾಜಿ ಮೆರೆದ ಏಳು ಪವಾಡಗಳಲ್ಲಿ ಕಾಯಿಸಿದ ಎಣ್ಣೆಯ ಕೊಪ್ಪರಿಗೆಯೊಳಗೆ ಮುಳುಗೇಳುವುದು ಒಂದೆಂಬುದು ಪ್ರತೀತಿ; Among the seven miracles of Siddappaji dip in a boiling oil vessel is one;
- ಜನಪದ ಕಥೆಗಳಲ್ಲೂ ಕೊಪ್ಪರಿಗೆ ಬಹಳವಾಗಿ ಪ್ರಸ್ತಾಪಗೊಂಡಿದೆ; Kopparige commented in folk stories in several occasions;
- ನೆಲದಲ್ಲಿ ಹೂತಿಟ್ಟ ನಿಧಿ; ಸಂಗ್ರಹಿತ ಹಣವನ್ನು ಕೊಪ್ಪರಿಕೆಯಲ್ಲಿ ತುಂಬಿ ತಮ್ಮ ಮನೆ ಅಥವಾ ತಮಗೆ ಸೇರಿದ ಹತ್ತಿರದ ಜಾಗದಲ್ಲಿ ಕೊಪ್ಪರಿಕೆಯಗಲ ಗುಂಡಿ ತೆಗೆದು ಅದರೊಳಗೆ ಹಣ ತುಂಬಿದ ಕೊಪ್ಪರಿಕೆಯನ್ನಿಟ್ಟು ಮಣ್ಣು ಮುಚ್ಚಿ ಅವಿಸಿಡುವುದು ಒಂದು ಪ್ರಾಚೀನ ಪದ್ಧತಿ(ತು.ನಿ.); The hidden wealth in ground; take away in a `Kopparige' to their home or to some place belong to them and hide in the same size pit is the ancient custom;
- ಮೈನೆರೆದ ಹೆಣ್ಣುಮಕ್ಕಳಿಗೆ ಮನೆಯ ಹೊರಗೆ ಗೂಡು ಹಾಕಲು ಮೇಲ್ಛಾವಣಿಗಾಗಿ ಬಳಸಲಾಗುತ್ತಿದ್ದ ದೊಡ್ಡ ಬಾಂಡಲಿ; 'ನಗರ್ತ' ಬುಡಕಟ್ಟು

ಸಮುದಾಯದವರಲ್ಲಿ ಋತುಮತಿಯಾದ ಹೆಣ್ಣುಮಕ್ಕಳನ್ನು ಇಂತಿಷ್ಟು ದಿವಸಗಳವರೆಗೆ ಮನೆಯ ಹೊರಭಾಗದಲ್ಲಿ ಗುಡ್ಲು ಹಾಕಿ ಕೂರಿಸುವ ಪದ್ಧತಿ ರೂಢಿಯಲ್ಲಿದೆ(ಕೃ.ಗೊ.ಕ.ಕಾವ್ಯ); A tenement made cover with big vessel for roof outside the house, for menstrual girls; in Nagartha tribal community have a tradition to keep the menstrual girls outside the house for certain days, they kept them in this kind of hut ment outside the house;

- ಮರದ ತುಂಡು, ತೆಂಗಿನ ಗರಿಗಳಿಂದ ಗುಡ್ಲು ಹಾಕಿ ಅದರ ಮೇಲ್ಛಾವಣಿಗೆ ಇಂತಹ ದೊಡ್ಡ ಬಾಂಡಲಿಯನ್ನು ಹೊದಿಸುವರು; ಮಳೆ, ಬಿಸಿಲಿನಿಂದ ರಕ್ಷಣೆ ಪಡೆಯಲಿ ಎಂಬ ಆಶಯವಿದೆ; A shed prepare with wooden piece and coconut palms, cover the roof with the big vessel to avoid or protect from rain and sun;
- ಯುಗಾದಿ ಹಬ್ಬದ ಮರುದಿವಸ ಊರಿನ ಜನರೆಲ್ಲ ಸೇರಿ ಕೊಪ್ಪರಿಕೆಗಳಲ್ಲಿ ಬಣ್ಣದ ನೀರು ಕಲಸಿ ಸಾಮೂಹಿಕವಾಗಿ ಓಕುಳಿಯಾಟ ಆಡುವ ಪದ್ಧತಿ ರೂಢಿಯಲ್ಲಿದೆ(ಕಮಲಾಪುರ); 'ಕೂತುಣ್ಣೋನ್ಗೆ ಕೊಪ್ಪರ್ಕೆ ಹಣ ಸಾಲದು'(ಗಾ.); *ಪ್ರ: 'ಕೊಪ್ಪರ್ಕೇಲ್ ಬೆಂದ್ರೇನ ಬೆಲ್ಲ ಅನ್ನುಸ್ಕೊಳೋದು*; The next day of the Ugadi festival people of the village prepare colour water in the Kopparike(a big vessel) to play `Okuli';
- ಹಿಂದೆ ವಿಶೇಷ ಸಂದರ್ಭಗಳಲ್ಲಿ ತಾಮ್ರದ ಕೊಪ್ಪರಿಕೆ, ಕಂಚಿನ ಬಳೆ ಕಡಾಯ, ದೀಕ್ಷೆಯಂತಹ ಸಾಧನಗಳು ಬಳಕೆಯಲ್ಲಿದ್ದವು; ಇಂದಿನ ಆಧುನಿಕ ಸಾಧನ ಸಲಕರಣೆಗಳ ಭರಾಟೆಯಲ್ಲಿ ಇವು ತೆರೆಮರೆಗೆ ಸರಿದಿರುವುದಂತೂ ಒಪ್ಪಲೇಬೇಕಾದ ಸಂಗತಿ; ಆದರೆ ಆಲೆಮನೆಗಳಲ್ಲಿ ಬೆಲ್ಲದ ತಯಾರಿಕೆಗೆ ಮಾತ್ರ ಕೊಪ್ಪರಿಕೆಯೇ ಬಳಕೆಯಲ್ಲಿರುವುದು ಸಮಾಧಾನದ ವಿಚಾರ; In special occasions these vessels like copper vessel, brass ringed vessel are used; now-a-days the modern equipments are go behind the curtain; but in Jaggery industry the `Kopparike' is used even today;
- ***—ಕೊಪ್ಪರಿಕೆ ಒಲೆ*** : ಕೊಪ್ಪರಿಕೆಯನ್ನಿಟ್ಟು ಕಬ್ಬಿನ ಹಾಲನ್ನು ಹಾಕಿ ಕುದಿಸಿ ಪಾಕ ತೆಗೆಯುವ ದೊಡ್ಡದಾದ, ಅಗಲವಾದ, ವೃತ್ತಾಕಾರವಾದ ಒಲೆ; ಒಲೆಯ ಮುಂಭಾಗದಲ್ಲಿ ಉರುವಲು(ಕಟ್ಟಿಗೆ) ಹಾಕಲು ಅಗಲವಾದ ಬಾಯಿಯಿದ್ದು ಹಿಂಭಾಗದಲ್ಲಿ ಹೊಗೆ ಹೊರ ಹೋಗಲು ಅನುಕೂಲವಾಗುವಂತೆ ಒಂದು ಗೂಡು ನಿರ್ಮಿಸಿರುವರು; An hearth to keep the vessel to boil the sugarcane juice it is round in shape, a hole or space is in front part to feed fuel and a hole to exit the smoke out the vessel kept on the mouth of the hearth;
- ಒಲೆಗೆ ವೃತ್ತಾಕಾರವಾದ ಗುಂಡಿ ತೆಗೆದು ಸುತ್ತಲೂ ಇಟ್ಟಿಗೆ, ಕೆಮ್ಮಣ್ಣಿನಿಂದ ಗೋಡೆ ಕಟ್ಟುವರು; ಇಲ್ಲಿಗೆ ಕಬ್ಬಿಣದ ಸರಳುಗಳನ್ನು ಅಳವಡಿಸುವರು; ಕೊಪ್ಪರಿಕೆ ಕುಸಿಯದಿರಲಿ, ಕಾವು ಬರಲಿ ಎಂಬ ಆಶಯದೊಂದಿಗೆ; Dig a round shaped pit built a wall around with bricks and red soil, fix some iron rod to avoid the vessel sink into the hearth and to get good heat;
- ಕೊಪ್ಪರಿಕೆ ಒಲೆಗೆ ಕಬ್ಬಿನ ಸಿಪ್ಪೆಯಿಂದ ತಯಾರಾದ ರಚ್ಚು, ತೆಂಗಿನ ಗರಿ, ಮಟ್ಟೆ ಮೊದಲಾದವುಗಳ ಬಳಸುವರು; The fuel used to heat the hearth are husk of sugarcane, palm leaves and coconut cells;
- ಸಾಮೂಹಿಕ ಭೋಜನ ಕೂಟಗಳಲ್ಲಿ ಅಡುಗೆ ಮಾಡಲು ಬಳಸುವ ಕೊಪ್ಪರಿಕೆಗೆ ತಯಾರಿಸುವ ಒಲೆ ವಿಭಿನ್ನವಾಗಿರುತ್ತದೆ; ಇಂತಿಷ್ಟು ಅಗಲಕ್ಕೆ ನೇರ ಗುಂಡಿ ತೆಗೆದು ಅದರ ಮೇಲೆ ಅಡ್ಡಲಾಗಿ ಉದ್ದವಾದ ಕಬ್ಬಿಣದ ಸರಳುಗಳನ್ನಿಡುವರು; ನಂತರ ಅದರ ಮೇಲ್ಭಾಗದಲ್ಲಿ ಕೊಪ್ಪರಿಕೆಯನ್ನಿಟ್ಟು ಗುಂಡಿಯ ಹಿಂಭಾಗ ಮತ್ತು ಮುಂಭಾಗದಲ್ಲಿ ಸೌದೆಗಳನ್ನಿಟ್ಟು ಉರಿ ಹಾಕಿ ಅಡುಗೆ ತಯಾರಿಸುವರು; The oven is different for this vessel(kopparike) to prepare community lunch; dig a trench or pit, put iron rod across, kept the `kopparige' or vessel on it; feed the wood from the sides;

- *—ಕೊಪ್ಪರಿಕೆ ಕಯ್(ಕೈ)* : ಪಾಕ ತೆಗೆದ ಕೊಪ್ಪರಿಕೆಯನ್ನು ಒಂದೆಡೆಯಿಂದ ಮತ್ತೊಂದೆಡೆಗೆ ತೆಗೆದಿಡಲು ಉಪಯೋಗವಾಗುವ ಮಂದವಾಗಿ ಕಬ್ಬಿಣದಿಂದ ತಯಾರಿಸಿದ ಉಂಗುರಾಕೃತಿಯ ಬಳೆ ಅಥವಾ ಹಿಡಿಕೆ; Rings fixed to the vessel to handle the vessel from one place to another;
- *—ಕೊಪ್ಪರಿಗೆಪ್ಪ* : ಗಣಪತಿಗೆ ಸಲ್ಲಿಕೆಯಾಗುವ ಒಂದು ಹರಕೆ ಸೇವೆ; ಒಂದು ಮುಡಿ ಅಕ್ಕಿ, ಅಗತ್ಯಕ್ಕೆ ತಕ್ಕಷ್ಟು ಬೆಲ್ಲ, ಕಾಯಿ ಮೊದಲಾದವುಗಳನ್ನು ಹಾಕಿ ಕೊಪ್ಪರಿಕೆಯಲ್ಲಿಟ್ಟು ನೈವೇದ್ಯ ಸಲ್ಲಿಸುವುದು; A religious vow offer to god or Ganapathi; a handful of rice, jaggery, coconut etc put in the vessel to offer the deity;
- ಇದೊಂದು ಆಚರಣಾತ್ಮಕ ಜಾನಪದಕ್ಕೆ ಸಂಬಂಧಿಸಿದ್ದು ಸಾಂಪ್ರದಾಯಿಕ ಹಿನ್ನೆಲೆಯುಳ್ಳ ಪದ್ಧತಿಯಾಗಿ ರೂಢಿಯಲ್ಲಿರುವಂಥದು; This practice is related to the custom of folk background;
- ಈ ಆಚರಣೆ ಎಲ್ಲಾ ಭಾಗಗಳಲ್ಲೂ ಕಂಡುಬರುವಂಥದ್ದಲ್ಲ; ಕೆಲವು ಕಡೆ ಅಂದರೆ ಬಹುಶಃ ಉತ್ತರಕರ್ನಾಟಕ ಭಾಗದಲ್ಲಿ ಪ್ರಚಲಿತದಲ್ಲಿದ್ದಿರಬಹುದು. This practice cannot be in all over but in few places of Uttarakarnataka.

ಕೊಪ್ಪಲು೧ koppalu[1] :

- ಹಾಸನ ಜಿಲ್ಲೆಯ ಶ್ರವಣಬೆಳಗೊಳ ತಾಲ್ಲೋಕಿನ ಕ್ರಿ.ಶ.೧೭೨೩ರ ೩೫೧ನೇ ಶಾಸನದಲ್ಲಿ ಇದರ ಪ್ರಸ್ತಾಪ ಬರುತ್ತದೆ; The place referred in 351st inscription of 1723rd AD Hassan district Sharavanabelagola taluk;
- ಮೈಸೂರು ಅರಸ ದೊಡ್ಡ ಕೃಷ್ಣರಾಜ ಒಡೆಯರ ಕಾಲದ ಈ ಶಾಸನದಲ್ಲಿ ಇದರ ಉಲ್ಲೇಖ; It is referred in the inscription of the Mysore king Dodda Krishnaraja Vodeyar;
- ರಾಜನು ಜಿನಧರ್ಮಕ್ಕೆ ಬಿಟ್ಟಂತಹ ಗ್ರಾಮಾದಿಗ್ರಾಮ ಭೂಮಿಗಳಾದ ಆರ್ಹನಹಳ್ಳಿ, ಹೊಸಹಳ್ಳಿ, ಜಿನನಾಥಪುರ, ವಸ್ತಿಯ ಗ್ರಾಮ, ರಾಚನಹಳ್ಳಿ, ಉತ್ತನಹಳ್ಳಿ, ಜಿನ್ನಹಳ್ಳಿ, ಕೊಪ್ಪಲುಗಳ ಪ್ರಸ್ತಾಪವಿದೆ; The land donated to the Jainsim the villages are Ahranahalli, Hosahalli, Uttanahalli, Jinnahalli, Koppals;
- 'ಕೊಪ್ಪಲು' ಎಂದರೆ ಚಿಕ್ಕಹಳ್ಳಿ, ತೋಪು ಎಂಬ ಅರ್ಥಗಳಿವೆ; Koppalu means small village, Thopu;
- ಸಾಮಾನ್ಯವಾಗಿ 'ಕೊಪ್ಪಲು' ಪದ ಯಾವುದಾದರೂ ಊರಿನ ಹೆಸರಿನ ಕೊನೆಯಲ್ಲಿ ಸೇರಿ ಬರುವಂಥ ರೂಪ; ಆದರೆ ಇಲ್ಲಿ ಸ್ವತಂತ್ರವಾಗಿ ಬಂದಿರುವುದು ಆಶ್ಚರ್ಯ; Generally the form `Koppalu' joins in any name of the village, here it is named independently is a wonder;
- ಈ 'ಕೊಪ್ಪಲು' ಕೂಡ ಯಾವುದಾದರೂ ಊರಿನ ಜೊತೆಯಲ್ಲಿನ ರೂಪವೇ ಆಗಿರಬಹುದು; ಆದರೆ ಶಾಸನದಲ್ಲಿ 'ಪದಪೂರ್ವದ' ಹೆಸರು ಇಲ್ಲದೆ, ಇದೇ ಸ್ವತಂತ್ರ ಹೆಸರಿನಂತೆ ಬಂದಿದೆ. The name Koppalu is a joint name of any, but it is named in the inscription independently so, it is like independent name.

(E.C- ೩; ಶ್ರ.ಬೆ.)

ಕೊಪ್ಪಲು೨ koppalu[2] :

- ಕೊಪ್ಲು ಎಂಬ ರೂಪವೂ ಬಳಕೆಯಲ್ಲಿದೆ; ಕೊಪ್ಪಲು>ಕೊಪ್‌ಲು/ಕೊಪ್ಲು; ಪದಸಂಕ್ಷಿಪ್ತತೆಯ ಸೌಲಭ್ಯದಿಂದಾಗಿ ಈ ಬದಲಾವಣೆ; ಗ್ರಾಮೀಣ ರೂಪವೂ ಹೌದು; `Koplu' forms are in use; this change is word abridgement facility; it is also the form of rural too;
- ಸ್ಥಳನಾಮ ಘಟಕ; ಕೆಲವು ಸ್ಥಳನಾಮಗಳ ಪದಾಂತ್ಯದಲ್ಲಿ ಬಳಕೆಗೊಳ್ಳುವ ರೂಪ; ಉದಾಹರಣೆಗೆ ಚಂದಗಿರಿಕೊಪ್ಪಲು, ಕೆ.ಜಿ.ಕೊಪ್ಪಲು, ತುಣಚಿಕೊಪ್ಪಲು ಮೊದಲಾದವು; ಉಪಗ್ರಾಮ; ಸಣ್ಣಹಳ್ಳಿ; ಕಡಿಮೆ ಜನವಸತಿಯುಳ್ಳ ಪ್ರದೇಶ; A unit of name of a place; used in the name of some places: eg. Chindagiri koppalu, K.G.koppalu etc; subvillage; small village; less populated area;
- ಅನ್ನಛತ್ರ; ಅನ್ನದಾಸೋಹ ನಡೆಸುವ ಸ್ಥಳ; ಜಾತ್ರೆ ಅಥವಾ ಉತ್ಸವಗಳಲ್ಲಿ ಅನ್ನದಾನ ಮಾಡುವ

ಪ್ರದೇಶ; ಸಾಮೂಹಿಕ ಭೋಜನ ಕೂಟಕ್ಕೆ ಸಿದ್ಧಪಡಿಸಿದ ಜಾಗ; *ಪ್ರ: 'ಅಣ್ಣಮ್ಮನ ಕೊಪ್ಪಲ್ಲಿ ಊಟ ಹಾಕ್ತಾವ್ರೆ ಉಣ್ಣಾಕೋಗಾನಾ ಬಂದಿಯಾ'?;* A place for free common dinner party; it is arranged in fairs or processions;

- ಮೇವಿನ ಬಣವೆಗಳಿರುವ ಜಾಗ; ಹಿತ್ತಲು ಅಥವಾ ಹಿತ್ಲು; ನಿಗದಿತ ಜಾಗದ ಸುತ್ತಲೂ ಬೇಲಿ ಹಾಕಿ ಮುಂಭಾಗದಲ್ಲಿ ಬಾಗಿಲನ್ನು ಮಾಡಿಕೊಳ್ಳಲಾಗಿದ್ದು ಈ ಬಾಗಿಲಿಗೆ ಬೀಗವನ್ನು ಹಾಕುವುದಿದೆ; ಇದಕ್ಕೆ 'ಕೊಪ್ಪಲು ಬೀಗ' ಎಂದು ಕರೆಯುವರು; ಪದಾರ್ಥಗಳ ಭದ್ರತೆಯ ದೃಷ್ಟಿಯಿಂದ ಅಪರಿಚಿತರು ಒಳನುಗ್ಗುವುದು, ಕದಿಯುವುದನ್ನು ತಪ್ಪಿಸಲು ಈ ವ್ಯವಸ್ಥೆ; *ಪ್ರ: 'ಮಗಾ ಕೊಪ್ಪಲ್ಲಿ ಹುಲ್ ತರಕೋಗದೆ'!;* A place store haystock; backyard of the house; kept fence around and have a gate to enter and close with lock; to avoid the trespassters and to control the thieves;
- ದನ–ಕರು, ಕುರಿ–ಮರಿಗಳನ್ನು ಕೂಡುವ ದೊಡ್ಡಿ; ನಾಗರಿಕ ಸಮುದಾಯಗಳಲ್ಲದೆ ಬುಡಕಟ್ಟು ಸಮುದಾಯಗಳಲ್ಲೂ ದೊಡ್ಡಿ ಅಥವಾ ರೊಪ್ಪ ನಿರ್ಮಾಣ ಪದ್ಧತಿ ರೂಢಿಯಲ್ಲಿದೆ; ಸುತ್ತಲೂ ಬಿದಿರಿನ ರೆಕ್ಕೆಗಳಿಂದ ಕಟ್ಟಿದ ತಡಿಕೆಗಳನ್ನು ಹಾಕಿ ನಿರ್ಮಿಸುವರು; ಮುಂಭಾಗ ಬಾಗಿಲು ಸಾಮಾನ್ಯವಾಗಿರುತ್ತವೆ; ಕಬ್ಬಿಣದ ಬೀಗ ಹಾಕುವುದಿದೆ; 'ಕೊಟ್ಟಿಗೆ' ಎಂಬರ್ಥದಲ್ಲಿಯೂ ಪದಬಳಕೆ; A place to gather the cattle, sheep and lambs; the built of `Doddi' or `Roppa' not only in civilised but also in tribals; these are also locked with iron locks;
- ಗೊಬ್ಬರದ ತಿಪ್ಪೆಗಳಿರುವ ರಕ್ಷಿತ ಪ್ರದೇಶ; ಗಿಡಗಳ ಗುಂಪು; 'ತೋಪು' ಎಂಬರ್ಥದಲ್ಲಿಯೂ ಪದಬಳಕೆ; A protected area of dunghill; the word used in the meaning `group of plant, grove' also;
- ಸುತ್ತಲೂ ಬೇಲಿ ಹಾಕಿ ಒಣಹುಲ್ಲು, ಸೌದೆ–ಸೊಪ್ಪುಗಳನ್ನು ಸಂಗ್ರಹಿಸುವ ಸ್ಥಳ. A fenced area to store dry heystock, firewood.

ಕೊಪ್ಪಳ೧ koppaḷa[1] :

- ಕೊಪಣ>ಕೊಪಣಾಚಲ>ಕೊಪ್ಪಳ;
- ಕ್ರಿ.ಪೂ.೩ನೇ ಶ.ದ ಅಶೋಕನ ೨ ಶಾಸನಗಳಿವೆ; ಬೌದ್ಧವಿಹಾರದ ಅವಶೇಷಗಳಿವೆ; ಜೈನಧರ್ಮೀಯರ ಪವಿತ್ರ ಯಾತ್ರಾಸ್ಥಳವಾಗಿತ್ತು; Two inscription of 3rd century BC of Ashoka found here in Koppala; it has the vestige of `Buddha Viharas'; It was the auspicious place of Jain religion;
- ಕವಿರಾಜಮಾರ್ಗಕಾರ ತಿರುಳ್ಗನ್ನಡದ ಮೇರೆಯೆಂದು ಹೆಸರಿಸುವ ಸ್ಥಳಗಳಲ್ಲಿ 'ಕೊಪಣ'ವೂ ಒಂದಾಗಿತ್ತು; `Kopana' is one among named as `Thirulgannada mere' by the writer of `Kaviraja marga';
- ರನ್ನ ತನ್ನ 'ಅಜಿತಪುರಾಣ'ದಲ್ಲಿ "ನೆಗಟ್ದ ಕೊಪಣಾಚಲದಂತೆ ಪವಿತ್ರಮತ್ತಿಮಬ್ಬೆಯ ಚರಿತಂ" ಎಂದು ಅತ್ತಿಮಬ್ಬೆಯನ್ನು ವರ್ಣಿಸಿದ್ದಾನೆ;
- ಗಂಗರಾಜ ದಂಡನಾಯಕನಿಂದ ಗಂಗವಾಡಿ ಪ್ರಾಂತ್ಯವು ಕೊಪಣದಂತೆ ಶ್ರೇಷ್ಠ ಜೈನ ಕ್ಷೇತ್ರವಾಯಿತೆಂದು ೧೨ನೇ ಶತಮಾನದ ಶ್ರವಣಬೆಳಗೊಳದ ಶಾಸನ ದಾಖಲಿಸಿದೆ; Commander of Ganga king recorded in 12th century inscription of Shravanabelagola, the Ganga vadi region is a famous Jain centre like Kopana;
- ಟಾಲೆಮಿಯ ಕ್ರಿ.ಶ.೧ನೇ ಶತಮಾನದ 'ಜ್ಯಾಗ್ರಫಿ' ಪುಸ್ತಕದಲ್ಲಿ 'ಕೊಂಕಿನಪೊಲೊ' ಎಂದು ಕರೆಯುವ ಸ್ಥಳ 'ಕೊಪ್ಪಳ'ವೇ ಎಂದು ಇತಿಹಾಸಕಾರರು ಗುರುತಿಸಿದ್ದಾರೆ. Historian identified the place koppala is the place `Konkinapolo' mentioned in the book jyāgraphy of Talemi in Ist century AD.

ಕೊಪ್ಪಳ೨ koppaḷa[2] :

- ತೆಂಗಿನ ಹಿತ್ತಲು; ತೆಂಗಿನ ಮರಗಳಿಂದ ಕೂಡಿದ ತೋಟವಿರಬಹುದು; ಕೆಲವು ಪ್ರದೇಶಗಳಲ್ಲಿ 'ಹಿತ್ತಲು' ಪದಕ್ಕೆ 'ತೋಟ' ಎಂಬ ಅರ್ಥ ಬಳಕೆಯಲ್ಲಿದ್ದಿರಬಹುದೆ?; ಪ್ರಾದೇಶಿಕ ಭಾಷಾ ಭಿನ್ನತೆಯ ಆಧಾರದ ಮೇಲೆ ಹೇಳಲಾಗುತ್ತಿರುವ ಸಂವಾದಿ ರೂಪಗಳಿವು; The word `Koppala' is

the back yard of coconut; may be it is the garden of coconut; the differences of regional language, it is an equivalent forms;

- ಸ್ಥಳನಾಮ; ಊರಿನ ಹೆಸರು; ಜಿಲ್ಲಾ ಕೇಂದ್ರವೂ ಹೌದು; ೧೯೯೭ರಲ್ಲಿ ಅಸ್ತಿತ್ವಕ್ಕೆ ಬಂದದ್ದು; ವಿಜಯನಗರದ ಅರಸರ ಕಾಲದಲ್ಲಿ ಕೊಪ್ಪಳದ 'ಆನೆಗುಂದಿ' ಎಂಬ ಪ್ರದೇಶ ಮೊದಲ ರಾಜಧಾನಿಯಾಗಿ ಮೆರೆದಿತ್ತು ಎಂದು ಇತಿಹಾಸದಿಂದ ತಿಳಿಯಬಹುದಾಗಿದೆ; ಇಲ್ಲಿನ ಬೆಟ್ಟ-ಗುಡ್ಡಗಳು ಪ್ರಾಚೀನ ಶಿಲಾಯುಗಕ್ಕೆ ಸೇರಿದವು; ಇಲ್ಲಿ ಯತೇಚ್ಚವಾಗಿ ಗ್ರಾನೈಟ್ ಶಿಲೆ, ನೈಸ್ ಶಿಲೆ, ಪದರಗಲ್ಲು ಶಿಲೆ, ಬೆಣಚು ಕಲ್ಲುಗಳನ್ನು ಕಾಣಬಹುದು; It is a name of a village, a district head quarter from 1997; Anegundi of Koppala district was the capital of Vijayanagara kings period; the hills and moors belongs to ancient stone age; we find Granite stone, Nice stone, Layer stone, Marble stone here;
- ದೊಡ್ಡ ದೊಡ್ಡ ಬಂಡೆಗಳಿಂದ ಕೂಡಿದ ಪ್ರದೇಶವನ್ನು 'ಕಲ್ಚೆಟ್ಟ' ಎಂದೂ, ಕೆಸರುಮಣ್ಣಿನಿಂದ ಕೂಡಿದ ಒಂದೆರಡು ಅಡಿ ಉಬ್ಬರ ಬರುವ ಭೂಮಿಯನ್ನು 'ಕಳ್ಳಉಬ್ಬಳ' ಎಂದೂ, ಸಾಗುವಳಿಗೊಳಪಡದ ಜಮೀನನ್ನು 'ಪಡ' ಎಂದೂ, ಎತ್ತರವಾದ ಭೂಮಿಯನ್ನು 'ಬಗಡಿ' ಎಂದೂ, ಹಳ್ಳದ ದಡಕ್ಕೆ ಇರುವ ಭೂಮಿಯನ್ನು 'ಮಡೆ' ಎಂದೂ ಮತ್ತು ಸಣ್ಣ ಕಲ್ಲುಗಳಿಂದ ಕೂಡಿದ ಕಪ್ಪು ನೆಲವನ್ನು 'ಮರ್ಚೆ' ಎಂದು ಕರೆಯುವರು; The hill with big stones is called `Kalchetta'; two or three feet hight land is `Kalla Ubbala'; un cultivated land is called `Pada', high land is called `Bagadi', bank of the brooke is called `Made', land with small stones with black colour is called `Marche';
- ಬೆಳೆಗಳನ್ನು ಒಕ್ಕುವ ವಿಧಾನಕ್ಕೆ 'ಮಾಸಲು ಮಾಡು' ಎನ್ನುವರು; ಮಳೆ ನೀರಿನಿಂದ ಹೊಲದ ಮಣ್ಣು ಕೊಚ್ಚಿ ಹೋಗದಂತೆ ಹಾಕುವ ತಡೆಗಟ್ಟೆ ಅಥವಾ ಒಡ್ಡುವಿಗೆ 'ಒಳಗಟ್ಟಿ' ಎಂದು ಕರೆಯುವರು; ಕುಂಟೆ ದಿಂಡಿಗೆ ಈಚು(ಈಸು) ಜೋಡಿಸಿದಾಗ ಆ ದಿಂಡಿನ ಹಿಂಭಾಗದಲ್ಲಿ ಹೊರಬರುವ ಈಚಿಗೆ ಕಡಾಣಿಯಂತೆ ಜೋಡಿಸುವ ಕಟ್ಟಿಗೆ 'ಇಂಗ್ಲಿ' ಎಂದು ಕರೆಯುವರು; ಚಾಮರಾಜನಗರ, ಮೈಸೂರು ಭಾಗದಲ್ಲಿ ಇದಕ್ಕೆ 'ಬೆಣೆ' ಎಂದು ಕರೆಯುವುದಿದೆ. The harvesting of crop is called `Masalu madu' to avoid soil erosion created a bund is called `Olagatti'.

ಕೊಪ್ಪಿ koppi :

- ಕಸ ತೆಗೆಯಲು ಬಳಕೆಯಾಗುವ ಒಂದು ಉಪಕರಣ; 'ಹರಿಕಾಂತ' ಬುಡಕಟ್ಟು ಸಮುದಾಯದ ಜನಭಾಷೆಯಲ್ಲಿ ಪದಬಳಕೆ; An instrument used to remove the garbage; the word used in `Harikantha' tribal community language;
- ಬುಡಕಟ್ಟು ಸಮುದಾಯದವರ ನಡೆ-ನುಡಿ, ಆಚಾರ-ವಿಚಾರ, ಸಂಸ್ಕೃತಿ, ಸಂಪ್ರದಾಯ, ಆಚರಣೆಗಳು ವಿಶಿಷ್ಟವೆನಿಸಿದಂತೆ ಅವುಗಳಿಗಿರುವ ಪದಗಳೂ ಅಷ್ಟೇ ವಿಶಿಷ್ಟವಾಗಿವೆ; ಆ ಹಿನ್ನೆಲೆಯಲ್ಲಿ 'ಕೊಪ್ಪಿ' ಪದ ಬಳಕೆಗೆ ಬಂದಿರಬಹುದು. The tribal community have special in their attitude, practice, culture, customs etc; so, the usage of words are also special; so on this background the word `Koppi' is in practice.

ಕೊಪ್ಪು koppu :

- ಆಭರಣ ವಿಶೇಷ; ಹೆಂಗಸರು ಮತ್ತು ಯಕ್ಷಗಾನದ ಸ್ತ್ರೀವೇಷಾಧಾರಿಗಳು ಕಿವಿಯ ಮೇಲ್ಭಾಗದಲ್ಲಿ ಧರಿಸುವಂಥದು; ಉದ್ದದ ಕಡ್ಡಿಯಾಕೃತಿಯಲ್ಲಿ ವಿನ್ಯಾಸಗೊಳಿಸಲಾಗಿರುವುದು; ಕಿವಿಯಲ್ಲಿ ತೊಡುವ ಉಂಗುರದಂತಹ ಒಡವೆ; An ornament weared Yakshagana woman artist on their upper part of the ear;
- ಜಡೆಯಲ್ಲಿ ಧರಿಸುವ ಆಭರಣ; 'ಜಡೆಬಿಲ್ಲೆ' ಎನ್ನುವರು; An ornament weared on the plaited hair is called `Jadebille';
- ಸುರುಳಿಯಾಕೃತಿಯಲ್ಲಿ ಎತ್ತಿಕಟ್ಟಿದ ತಲೆತುರುಬು; ಮುಡಿಗಂಟು, ತಲೆಗಂಟು ಎನ್ನುವರು; ಸುರುಳಿಯಾದ ತಲೆಕೂದಲು; Hair tie up in

scroll shape is called `mudigantu', `Talegantu'; curly hair;

- ಕಂಠಾಭರಣ ವಿಶೇಷ;
- ಬಿಲ್ಲಿನ ತುದಿ; ಗೊಲೆ; ಮೊನೆ; ಅಗ್ರಭಾಗ; ಅಂದ–ಚಂದ(ಕ.ನಿ.); Tip of the bow; steep; centre point;
- ಮನೆಯ ಮಾಡಿನ ತುದಿ; ಶಿಖರ; Top of the house;
- ನೊಗದ ತುದಿ; ಕೊನೆ; ನೊಗದ ಎಡಬಲದಲ್ಲಿರುವ ರಂಧ್ರಗಳು(ಚಿಕ್ಕ.ಜಿ); Tip of the yoke; holes of the yoke in left and right to tie the rope;
- ದನಗಳ ಹೆಗಲ ಮೇಲಿರಿಸಿದ ನೊಗ ನುಣುಚಿಕೊಳ್ಳದಿರಲಿ ಅಥವಾ ದನಗಳೇ ತಮ್ಮ ಹೆಗಲ ಮೇಲಿರುವ ನೊಗವನ್ನು ಕೆಡವದಿರಲಿ ಎಂಬ ಆಶಯದೊಂದಿಗೆ ವ್ಯಕ್ತಿಯೊಬ್ಬ ಗಾಡಿಯ ಮೂಕಿಯ ಮೇಲೆ ಕಟ್ಟಿರುವ ನೊಗದ ಮೇಲ್ಭಾಗದಲ್ಲಿ ಕುಳಿತು ಸಾಗುವ ಕ್ರಿಯೆ(ಹಾವೇ.ಜಿ); The yoke kept on the back shoulder of the cattle not to slip out of the shoulder;
- ಕೊಳ್ಪು, ಕೋಮ ಎಂಬ ವ್ಯತ್ಯಯ ರೂಪಗಳಿವೆ; ಕೊಳ್ಪು > ಕೊಳ್ಮ > ಕೊಪ್ಪು?; ವಿಜಾತೀಯ ದ್ವಿತ್ವ > ಸಜಾತೀಯ ದ್ವಿತ್ವ ಆಗಿದೆ; `Kolpu', `Koppu' forms are;
- ದ್ರಾವಿಡ ಭಾಷಾ ರೂಪಗಳಾದ ತಮಿಳಿನಲ್ಲಿ 'ಕೊಪ್ಪು'; ತೆಲುಗಿನಲ್ಲಿ 'ಕೊಪ್ಪು' ಪದದ ಜೊತೆಗೆ 'ಕೋಮ', 'ಕುಪ್ಪೆ', ತುಳುವಿನಲ್ಲಿ 'ಕೊಪ್ಪು' ಮಲೆಯಾಳಂನಲ್ಲಿ 'ಕೊಪ್ಪು' ಜೊತೆಗೆ 'ಕೊಪ್ಪ' ಮತ್ತು ಕೊಡವ ಭಾಷೆಯಲ್ಲಿ 'ಕೊಪ್ಪುಂಬ್' ಪದಗಳ ಬಳಕೆ ಕಂಡುಬಂದಿದೆ; ಇಲ್ಲಿ ಸಾಮಾನ್ಯವಾಗಿ 'ಕೊಪ್ಪು' ಪದ ಎಲ್ಲಾ ಭಾಷೆಗಳಲ್ಲಿಯೂ ಪ್ರಚಲಿತದಲ್ಲಿರುವುದು ವಿಶೇಷ; ಅಂತೆಯೇ ಕನ್ನಡದಲ್ಲಿಯೂ ಕೊಪ್ಪ, ಕೊಪ್ಪು ಪದಗಳ ಬಳಕೆ ಯಥಾಪ್ರಕಾರದಲ್ಲಿದೆ (ದ್ರಾ.ಭಾ.ಜ್ಞಾ.ಪ.ಕೋ); In the Dravidian languages the forms are in Tamil `Koppu', Telugu `Koppu', Malayalam `Koppu', Kodava `Koppund' words are in use;
- ***—ಕೊಪ್ಪು ಕೊರಳಯ್ಯ*** : ಗರಳಕಂಠ; ಈಶ್ವರ(ಬೆಟ್ಟದ ಚಾಮುಂಡಿ); Garala kanta; Eswara;
- ಕಪ್ಪು+ಕೊರಳಯ್ಯ>ಕೊಪ್ಪು ಕೊರಳಯ್ಯ>ಕೊಪ್ಪು ಗೊರಳಯ್ಯ(ಕ>ಗ); 'ಕಪ್ಪುಕೊರಳು' ರೂಪವೇ ಸರಿ; ಆದರೆ ಕಲಾವಿದ ಮುಂದಿನ 'ಕೊರಳು' ಪದದಲ್ಲಿನ 'ಕೊ'ಸಾದೃಶ್ಯದಿಂದ 'ಕಪ್ಪು' ಪದದಲ್ಲಿನ 'ಕ'ವನ್ನು 'ಕೊ' ಮಾಡಿಕೊಂಡಿರಬಹುದು;
- ಸಮುದ್ರ ಮಂಥನ ಪ್ರಕ್ರಿಯೆಯಲ್ಲಿ ಮೊದಲು ಬಂದ ವಿಷವನ್ನು ಪರಮೇಶ್ವರ ಕುಡಿದಾಗ ಅದು ಗಂಟಲಲ್ಲೇ ನಿಂತದ್ದರಿಂದ ಶಿವನಿಗೆ ಶ್ರೀಕಂಠ, ನೀಲಕಂಠ, ವಿಷಕಂಠ, ನಂಜುಂಡ ಎಂಬ ಹೆಸರುಗಳಿದ್ದು ಅದರಲ್ಲಿ 'ವಿಷಕಂಠ' ರೂಪವೇ 'ಕಪ್ಪು ಕೊರಳು' ಎಂದಾಗಿರಬಹುದೆ; While churning the sea first got poision that was drunk by lord Shiva that was stopped in the throat; so, he is called Vishakanta, Srikanta, Neelakanta, Nanjunda; among them Vishakanta form became `Kappu koralu';
- ***—ಕೊಪ್ಪು ಗೆಂಡಿ*** : ಒಂದು ಮೊಳುದ್ದದ ಕೋಲು; 'ಗೊಂಡರು' ಬುಡಕಟ್ಟು ಸಮುದಾಯದವರಲ್ಲಿ ಪದಬಳಕೆ. A cubit long stick; this word used in Gonda tribal community.

ಕೊಪ್ಪೆ koppe :

- ಕೊಪ್ಪಾಳಿ(ಚಿತ್ರ.ಜಿ); ಗೊಪ್ಪೆ, ಗೊರಗು, ಗೊರಬು, ಗೊಬ್ಬೆ ಎಂಬ ವಿವಿಧ ಬಗೆಯ ಸಂವಾದಿ ರೂಪಗಳಿವೆ; The equivalent word to `Koppe' is `Goppe, Goragu, Gorabu, Gobbe' forms;
- ಕೊಪ್ಪೆ=ಗೊಪ್ಪೆ; ಕ>ಗ;
- ಗವುಸು; ಕೊಂಪಿ(ಉ.ಕ.ಜಿ);
- ಮಳೆಯಿಂದ ತಲೆ, ಮೈ–ಕಯ್ ತೋಯದಿರಲಿ, ಬಿಸಿಲಿನಿಂದ ಒಣಗದಿರಲಿ ಎಂಬ ಆಶಯದೊಂದಿಗೆ ತಲೆಗೆ ಹಾಕಿಕೊಳ್ಳುತ್ತಿದ್ದ ಮೇಲುಹೊದಿಕೆ; ಕಂಬಳಿ, ಗೋಣಿಚೀಲ, ಪ್ಲಾಸ್ಟಿಕ್ ಚೀಲಗಳಿಂದ ತಯಾರಿಸುತ್ತಿದ್ದ ಒಂದು ವಿಧದ ಸಾಧನ; An instrument made of gunny, plastic etc wear on head to avoid head wet by rain;
- ಅರ್ಧ ಮಡಚಿ 'ಕೊಂಗೆ'ಯಂತೆ ಮಾಡಿಕೊಳ್ಳುವರು; Made as `Konge' by folding half;

- ಉತ್ತರಕರ್ನಾಟಕ ಮತ್ತು ಕೊಡಗು ಭಾಗದಲ್ಲಿ ಯತೇಚ್ಚವಾಗಿ ಬಳಕೆಯಲ್ಲಿರುವಂಥದು; Used in Uttarakannada and Kodagu region;
- ಬಯಲುಸೀಮೆಯ ರೈತರೂ ಮಳೆಗಾಲದ ಸಂದರ್ಭದಲ್ಲಿ ಹೊಲ-ಗದ್ದೆಗಳಿಗೆ ತೆರಳುವಾಗ, ದನಕರುಗಳನ್ನು ಮೇಯಿಸಲು ಹೋಗುವಾಗ ಜೊತೆಯಲ್ಲಿ ಕೊಂಡೊಯ್ಯುವುದನ್ನು ಕಾಣಬಹುದು; It is used in plain land region too at the time of moving to farm land, to graze cattle;
- ತೆಂಗು, ಈಚಲು ಗರಿಗಳಿಂದಲೂ ಹೆಣೆದು ತಯಾರಿಸಿಕೊಳ್ಳುವುದಿದೆ; Prepared or plait by coconut or wild date palms;
- ಚೌಕಾಕಾರದ ಚೀಲದ ತಳಭಾಗದ ಒಂದು ತುದಿಯನ್ನು ಮತ್ತೊಂದು ತುದಿಯ ಒಳಭಾಗಕ್ಕೆ ಸೇರಿಸಿ ಅರ್ಧ ಭಾಗವಾಗುವಂತೆ ದೋಣಿಯಾಕೃತಿಯಲ್ಲಿ ಮಡಚಿ ತಲೆಗೆ ಹಾಕಿಕೊಳ್ಳುವ ಸಾಧನ; A square shape bag inserted half inside made it into boat shape and put on the head;
- ಇದನ್ನು ತಲೆಯ ಮೇಲೆ ಹಾಕಿಕೊಂಡರೆ ತಲೆಯೂ ಸೇರಿದಂತೆ ಬೆನ್ನಿನ ಹಿಂಭಾಗವನ್ನು ಪೂರ್ಣವಾಗಿ ಮುಚ್ಚಿಕೊಳ್ಳುವುದಿದೆ; ದೇಹದ ಮುಂಭಾಗವನ್ನು ಹೊರತುಪಡಿಸಿ; It covers the head and back of the body;
- ಮಳೆ, ಬಿಸಿಲಿನಿಂದ ರಕ್ಷಣೆ ಪಡೆಯುವ ರಕ್ಷಾಕವಚ; ಮೇಲುಹೊದಿಕೆ; It is a protector from rain and sun;
- ಮಂಕ್ರಿ ಅಥವಾ ಮಕ್ರಿಯಲ್ಲಿ ತುಂಬಿದ ಕಸವನ್ನು ತಲೆಯ ಮೇಲೆ ಹೊತ್ತುಕೊಂಡು ಹೋಗುವಾಗ ತಲೆಗೆ ಕೊಪ್ಪೆ ಹಾಕಿಕೊಳ್ಳುವುದಿದೆ; ಕಾರಣ ತೊಪ್ಪೆ ಅಥವಾ ಸಗಣಿಯ ರಸ ಅಥವಾ ಗಂಜಲ ಮಂಕ್ರಿಯಿಂದ ಜಿನುಗಿ ಅಥವಾ ಸೋರಿ ತಲೆ, ಮೈಗೆ ಬೀಳದಿರಲಿ ಎಂಬುದು; ಮಂಕ್ರಿಯ ಕಡ್ಡಿ ಅಥವಾ ಅಚ್ಚೆಗಳು ತಲೆಗೆ ಒತ್ತದಿರಲಿ, ಕೊಪ್ಪೆ ತಲೆಗೆ ದಿಂಬಿನಂತೆ ಮಂದವಾಗಿರಲಿ ಎಂಬ ಆಶಯವೂ ಇದೆ; Use this to avoid the cowdung and urine soaking on the head while carrying cowdung in the basket;
- ಅಡಕೆ ಹಾಳೆಗಳಿಂದ ತಯಾರಿಸಿದ ಸಾಧನ; ಅಡಕೆ ಮರ ಅಥವಾ ಗೊನೆಗಳಿಗೆ ತಗುಲುವ ಅಡಕೆ ಕೊಳೆ ರೋಗದ ತಡೆಗಟ್ಟುವಿಕೆಗಾಗಿ ಪ್ರತಿಯೊಂದು ಮರದ ಕೊನೆ(ಗೊನೆ) ಮುಚ್ಚಲು ಉಪಯೋಗ; An instrument made of areca sheet used to avoid the disease to areca bunches;
- ಮಳೆಗಾಲದಲ್ಲಿ ತಲೆಯನ್ನು ಮರೆಮಾಡಿಕೊಳ್ಳಲು ಬಳಸುವ ಕಂಬಳಿ ಮೊದಲಾದವುಗಳಿಂದ ಮಾಡಿದ ಕುಂಚಿಗೆ;
- ಬೇಟೆಯ ಸಂದರ್ಭದಲ್ಲಿ ಬಳಕೆಯಾಗುವ ಮೇಲು ಹೊದಿಕೆ(ಬೇ.ಸಾಂ.ಪ.ಕೋ); While hunting used to cover the body;
- ಕಂಬಳಿಯನ್ನು ಮಡಚಿ ತಲೆಯಲ್ಲಿ ಹಾಕಿಕೊಳ್ಳುವ ವಿಧಾನ(ಶಿ.ಜಿ); A kind to fold the woollen blanket and kept on the head;
- ನೆನೆದ ಕೊಪ್ಪೆಯನ್ನು ಒಣಗಿಸುವ ಕ್ರಿಯೆಗೆ 'ಕೊಪ್ಪೆ ಕಾಸುವುದು' ಎನ್ನುವರು(ತು.ಜಿ); Dry the wet cap or hood is called `Koppe';
- ಹಿಂದೆ ಬಹಳವಾಗಿ ಉಪಯೋಗದಲ್ಲಿದ್ದ ಕೊಪ್ಪೆ ಪ್ರಸ್ತುತದ ಕೊಡೆಯ ಬಳಕೆಯಿಂದಾಗಿ ಅಳಿವಿನಂಚಿಗೆ ಸರಿದಿದೆ ಎಂದು ಹೇಳಬಹುದು; ಇಂದಿನ ಆಧುನಿಕ ತಂತ್ರಜ್ಞಾನಗಳ ಪ್ರಭಾವ ನಗರ ಪ್ರದೇಶವನ್ನೇ ಅಲ್ಲದೆ ಗ್ರಾಮೀಣ ಪ್ರದೇಶದಲ್ಲೂ ತನ್ನ ಛಾಪು ಮೂಡಿಸಿದೆ ಎಂಬುದರಲ್ಲಿ ಸಂಶಯವಿಲ್ಲ; *ಪ್ರ: 'ದೇವಾಲಯ ತಲುಪಲು ಪೂಜಾರಿ ಕೊಪ್ಪೆ ಹುಡುಕಿದನಂತೆ'*; The hoods are useful in olden days; now the umbrellas replace them; the present modern technic influence not only cities but also rural too;
- ***—ಕೊಪ್ಪೆ ಸೂಡು ಬಿಡು*** : ಕಂಬಳಿ ಕೊಪ್ಪೆಯನ್ನು ತೆಗೆಯುವುದು ಎಂಬರ್ಥದಲ್ಲಿ ಪದಬಳಕೆ; ಸಾಮಾನ್ಯವಾಗಿ ಹೊಲ-ಗದ್ದೆಗಳಿಗೆ ಹೊರಡುವಾಗ ಕಂಬಳಿಯನ್ನು ಕೊಪ್ಪೆಯಂತೆ ಮಾಡಿಕೊಂಡು ತಲೆಯ ಮೇಲಿಟ್ಟುಕೊಂಡು ಹೋಗುವುದಿದೆ; ಅಲ್ಲಿಂದ ಮರಳಿದ ನಂತರ ಅದನ್ನು ತಲೆಯಿಂದ ತೆಗೆಯುವ ಕ್ರಿಯೆಗೆ ಸಂಬಂಧಿಸಿದಂತೆ ಪದಬಳಕೆ (ತು.ಜಿ); *ಪ್ರ: 'ಕೊಪ್ಪೆ ಸೂಡು ಬಿಡದೆ ಮತ್ತೆಲ್ಲಿ ಹೋಗಿದ್ಯೋ ಮಂಗ್ಯಾ'*. The word used in the

meaning remove the cap or hood; generally hood kept on the head while moving to field is common; after returning it will be remove is called `Koppe Soodu bidu'.

ಕೊಬ್ಬರಿ/ಕೊಬ್ರಿ kobbari/kobri :

- ಕೊಪರಿ, ಕೊಪ್ಪರಿ, ಕೊಪ್ರಿ, ಕೊಬರಿ, ಕೊಂಬ್ರಿ, ಕೊಮರಿ, ಗಿಟಕಿ, ಗಿಟುಕಿ, ಗಿಟ್ಕಿ, ಗಿಟ್ಗಿ, ಗಿಟಗಿ ಎಂಬ ವಿವಿಧ ಬಗೆಯ ಸಂವಾದಿ ರೂಪಗಳು ಪ್ರಚಲಿತವಿವೆ; ಕೊಬ್ಬರಿ>ಕೊಬ್'ರಿ>ಕೊಬ್ರಿ; ಕೊಮರಿ>ಕೊಮ್'ರಿ> ಕೊಮ್ರಿ>ಕೊಂಬ್ರಿ?; Kernel of the coconut has equivalent words like Kopari, Koppari, Kopri, Kobari, Kombri, Komari, Gituki, Gitki, Gitgi, Gitagi;
- ದ್ರಾವಿಡ ಭಾಷೆಗಳಾದ ತಮಿಳಿನಲ್ಲಿ 'ಕೊಪ್ಪರೈ', 'ಕೊಪ್ಪರಿ'; ತೆಲುಗಿನಲ್ಲಿ 'ಕೊಬ್ಬೆರಿ', 'ಕೊಬ್ಬೆರ'; ತುಳುವಿನಲ್ಲಿ 'ಕೊಪ್ಪರ', 'ಕೊಪ್ಪರೆ', 'ಕೊಬರಿ'; ಮಲೆಯಾಳಂನಲ್ಲಿ 'ಕೊಪ್ಪರ', 'ಕೊಪ್ರ' ಮತ್ತು ಕೊಡವ ಭಾಷೆಯಲ್ಲಿ 'ಕೊಪ್ಪರಿ' ರೂಪಗಳ ಬಳಕೆ ಇದೆ; ಪ್ರಾದೇಶಿಕ ಭಿನ್ನತೆಯಲ್ಲಿ ಕೆಲವೊಂದು ಪದಗಳಲ್ಲಿ ಪ>ಬ, ಬ>ಪ ಬಂದಿರುವುದು ಉಂಟು; ಇಂತಹ ಬದಲಾವಣೆ ದ್ರಾವಿಡ ಭಾಷಾ ಲಕ್ಷಣವೂ ಹೌದು ಎಂಬುದು ಗಮನಾರ್ಹ ಸಂಗತಿ; Among the Dravidian languages: in Tamil `Kopparai', `Koppari'; in Telugu `Kobberi', `Kobbera'; in Tulu `Koppara', `Koppare', `Kobari'; in Malayalam `Koppara', `Kopra' and in Kodava `Koppari' forms used;
- ಎಳೆನೀರು ಇಂಗಿ ಹೋದ ತೆಂಗಿನಕಾಯಿಯ ಕರಟ ಬಿಟ್ಟ ತೆಂಗಿನ ಒಳತಿರುಳು; ತೆಂಗಿನಕಾಯಿಯ ಒಳಭಾಗದಲ್ಲಿ ಗಟ್ಟಿಗೊಂಡ ಕಾಯಿ; ಒಣಗಿರುವಂಥದು; Water obsorbed coconut kernel;
- ಮರದಲ್ಲೇ ಬಲಿತು ಹಣ್ಣಾಗಿ ಮರದಿಂದ ಕೆಳಗೆ ಬಿದ್ದ ಅಥವಾ ಕಿತ್ತ ತೆಂಗಿನಕಾಯಿಯನ್ನು ಸುಲಿಯದೆ ಮಟ್ಟೆ ಸಮೇತ ಹಾಗೆಯೇ ನಾಲ್ಕೈದು ತಿಂಗಳುಗಳ ಕಾಲ ಅಟ್ಟದಲ್ಲಿಟ್ಟರೆ ಕ್ರಮೇಣ ಕಾಯಿಯ ಒಳಭಾಗದಲ್ಲಿರುವ ಎಳೆನೀರೆಲ್ಲ ಸುಂಡಿಹೋಗಿ ಕಾಯಿ ಉಂಡೆಯಾಗಿ ಕರಟದಿಂದ ಬೇರ್ಪಡುತ್ತದೆ; ಇದನ್ನು ತೆಗೆದು ಅಳ್ಳಾಡಿಸಿದರೆ ಒಳಭಾಗದಿಂದ 'ಗಳಗಳ' ಶಬ್ದ ಹೊರಹೊಮ್ಮುವುದು; ಈ ಸ್ಥಿತಿ ತಲುಪಿದ ತೆಂಗಿನಕಾಯಿಯೇ ಕೊಬ್ಬರಿ/ಕೊಬ್ರಿ; ಗಿಟಗಿ, ಗಿಟಕಿ, ಗಿಟ್ಗಿ ಎಂಬ ಹೆಸರುಗಳಿಂದಲೂ ಕರೆಯುವುದು ಕಂಡುಬಂದಿದೆ; The ripened coconuts are collect and kept in a heap; after 4 to 5 months the water dried; the dried inside kernel is called `Kobbari';
- ಮರಕ್ಕೆ ರೋಗ ತಗುಲಿದ ತೆಂಗಿನಕಾಯಿಗಳನ್ನು ಕೊಬ್ಬರಿ ತಯಾರಿಕೆಗೆ ಬಳಸಿಕೊಳ್ಳಲಾಗುವುದಿಲ್ಲ; The diseased tree nuts are not used for kernel or Kobbari;
- ಒಣಗಿದ ಕೊಬ್ಬರಿಯಿಂದ ಎಣ್ಣೆ ತೆಗೆಯುವರು; ಇದಕ್ಕೆ 'ಕೊಬ್ಬರಿ/ಕೊಬ್ರಿ ಎಣ್ಣೆ' ಎಂಬ ಜನಪ್ರಿಯ ಹೆಸರು ಪ್ರಚಲಿತದಲ್ಲಿದೆ; ಇದನ್ನು ಸ್ತ್ರೀ-ಪುರುಷರಿಬ್ಬರೂ ತಲೆಯ ಕೂದಲಿಗೆ ಸವರಲು ಬಳಸುತ್ತಾರೆ; ಇದರಿಂದ ದೇಹ ತಂಪಾಗುತ್ತದೆ; ಕೂದಲು ಉದುರುವುದಿಲ್ಲ; ಹುಲುಸಾಗಿ ಬೆಳೆಯುತ್ತವೆ ಎಂಬ ನಂಬಿಕೆಗಳಿವೆ; Coconut oil produce from dried kernels; coconut oil used as hair oil both male and female; it support the hair growth and cool the body is a belief;
- ಎಣ್ಣೆ ತೆಗೆದ ಕೊಬ್ಬರಿಕಾಯಿಯ ಹಿಂಡಿ ಕೊಬ್ಬರಿ ಮಿಠಾಯಿ ತಯಾರಿಕೆಯಲ್ಲಿ ಬಳಸಿಕೊಳ್ಳುವರು; The dried kernels used to prepare coconut sweet cake;
- ಕೊಬ್ಬರಿಯಲ್ಲಿ ಎಣ್ಣೆಯ ಅಂಶವಿರುವುದರಿಂದ ಅತಿಯಾಗಿ ತಿಂದು ಜೀರ್ಣಿಸಿಕೊಳ್ಳುವುದು ತ್ರಾಸದಾಯಕ; ಅನಾರೋಗ್ಯ ಪೀಡಿತರು, ವಯಸ್ಸಾದವರಿಗಂತೂ ಮತ್ತೂ ತೊಂದರೆ; Kernel has heavy oil content, so aged and patients face problem, it cannot be digest easily;
- ಆದರೆ ತಾರುಣ್ಯದ ಯುವಕ-ಯುವತಿಯರು, ಮೈನೆರೆದ ಹೆಣ್ಣುಮಕ್ಕಳು, ಬಸುರಿ-ಬಾಣಂತಿಯರಿಗೆ ಕಲ್ಲುಸಕ್ಕರೆ ಅಥವಾ ಬೆಲ್ಲದ ಜೊತೆಗೆ ತಿನ್ನಿಸುವುದಿದೆ; ದೇಹದ ದಷ್ಟ-ಪುಷ್ಟತೆಗೆ, ಚರ್ಮದ ಕಾಂತಿಗೆ, ಆರೋಗ್ಯಪೂರ್ಣತೆಗೆ ಸಹಕಾರಿಯಾದುದು ಎಂಬ ನಂಬಿಕೆಯ ಹಿನ್ನೆಲೆಯಲ್ಲಿ; Male and female

ಕೊಬ್ಬರಿ

youth use with jaggery or with sugarcandy; it support the body health and skin shine is a belief;

- ಇನ್ನು ತುರಿದ ಕೊಬ್ಬರಿಯನ್ನು ಸಾಂಬಾರು ತಯಾರಿಕೆಗೆ, ದೇವಸ್ಥಾನಗಳಲ್ಲಿ ನೈವೇದ್ಯಕ್ಕೆ, ಕರ್ಜಿಕಾಯಿ, ರವೆಉಂಡೆಯಂತಹ ಸಿಹಿತಿಂಡಿಗಳ ತಯಾರಿಕೆಯಲ್ಲಿ ಬಳಸುವುದು ಇದ್ದೇ ಇದೆ; The kernel pieces used to prepare soup and sweet;
- ಕೇರಳದಂತಹ ನೆರೆ ರಾಜ್ಯಗಳಲ್ಲಿ ಅಡುಗೆ, ತಿಂಡಿ, ತಿನಿಸುಗಳ ತಯಾರಿಕೆಯಲ್ಲಿ ಕೊಬ್ಬರಿ ಎಣ್ಣೆಯನ್ನು ಪ್ರಧಾನವಾಗಿ ಬಳಸುವುದು ಕಂಡುಬಂದಿದೆ; Coconut and its oil mainly used in Kerala and other states for cooking;
- ಕೊಬ್ಬರಿಕಾಯಿಯನ್ನು ದನಗಳ ದೈಹಿಕ ಸದೃಢತೆಗಾಗಿ ತಿನ್ನಿಸುವುದು ವಾಡಿಕೆ; Coconut is given to the cattle to improve their physic;
- ವಿವಿಧ ಶಾಸ್ತ್ರ-ಸಂಪ್ರದಾಯಗಳಲ್ಲಿ ತಟ್ಟೆಗೆ ತುಂಬಿಡಲು ಬಳಕೆ; ಹೆಣ್ಣುಮಕ್ಕಳಿಗೆ 'ಉಡಿ' ತುಂಬುವಾಗ ಕೊಬ್ಬರಿಯನ್ನು ಹಾಕುವುದಿದೆ; Used in different traditional practices;
- ***—ಕೊಪ್‌ರಿ ತೆಂಗೆ*** : ಕೊಪ್‌ರಿ+ತೆಂಗೆ; ಕೊಪ್‌ರಿ>ಕೊಪ್ರಿ>ಕೊಬ್ರಿ>ಕೊಬ್ಬರಿ; ಕೊಪ್‌ರಿ=ಕೊಬ್ಬರಿ; ತೆಂಗೆ= ತೆಂಗು; ತೆಂಗಿನಕಾಯಿ; ಕೊಬ್ಬರಿ ಬಲಿತ ತೆಂಗಿನಕಾಯಿಂದ ತಯಾರಿಸಿದ್ದು; *ಪ್ರ: 'ದಂಡ್ ಕೊಪ್‌ರಿ ತೆಂಗೆ ಉಂಡ್'*(ಕೊಡವ); Prepared by riped coconut;
- ***—ಕೊಬ್ಬರಿ ಕಾರ*** : ಒಂದು ಬಗೆಯ ತಿನಿಸು; ಬಾಣಂತಿಗೆ ಕೊಡಲು ತಯಾರಿಸಿದ ನಾಟಿಮದ್ದು (ಔಷಧ) ಎಂದರೆ ತಪ್ಪಿಲ್ಲ; ಉತ್ತರ ಕರ್ನಾಟಕ ಮತ್ತು ಮಧ್ಯ ಕರ್ನಾಟಕದಲ್ಲಿ ಪ್ರಚಲಿತ; A Kind of eatable; a homeopathic medicine for newly delivered mother in Uttarakarnataka and Madhyakarnataka;
- ತುರಿದ ಒಣಕೊಬ್ಬರಿಗೆ ಬೆಲ್ಲ, ಶುಂಠಿಪುಡಿ, ಉತ್ತತ್ತಿ, ಏಲಕ್ಕಿ ಪುಡಿ, ಕಂಪಿನ ವಸ್ತುಗಳನ್ನು ಹಾಕಿ ಮಾಡಿದ ಪುಡಿ; The kernel pieces of coconut mixed with jaggory, ginger, dates, cardamom; out of that mixed powder ready for use;
- ಕುಂಬಾರ ಸಮುದಾಯದವರು ಹೆಣ್ಣುಮಕ್ಕಳಿಗೆ ಚೊಚ್ಚಲು ಹೆರಿಗೆಯಾದ ಸಂದರ್ಭದಲ್ಲಿ ಸ್ನಾನ ಮಾಡಿಸಿದ ನಂತರ ಪೌಷ್ಟಿಕ ಆಹಾರವಾಗಿ ತಿನ್ನಲು ಕೊಬ್ಬರಿ ಕಾರ ಕೊಡುವುದಿದೆ; ತುಪ್ಪದ ಜೊತೆಗೆ ತಿನ್ನಿಸುವುದುಂಟು; The coconut pungency is given to the first time delivered women as nourished food to eat with ghee after the bath;
- ***—ಕೊಬ್ಬರಿ ಚಟ್ನಿ*** : ಕೊಬ್ಬರಿ, ಒಣ ಮೆಣಸಿನಕಾಯಿ, ಬೆಳ್ಳುಳ್ಳಿ, ಹುಣಸೆಹಣ್ಣು, ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಕುಟ್ಟಿದರೆ ಅಥವಾ ರುಬ್ಬಿದರೆ ಕೊಬ್ಬರಿ ಚಟ್ನಿ ಸವಿಯಲು ಸಿದ್ಧ; ರೊಟ್ಟಿ, ದೋಸೆ, ಇಡ್ಲಿಯಂತಹ ತಿಂಡಿಗಳ ಜೊತೆಗೆ ತಿನ್ನಲು ಬಳಕೆ; Grind the kernel with red chilli, garlic, tamarind, salt, i.e. called kobbari chatni ready to eat with idli, dosa, rotti;
- ***—ಕೊಬ್ಬರಿ ಬಿಂಗರಿ*** : ಕೊಬ್ಬರಿ ಬಟ್ಟಲಲ್ಲಿ ಕತ್ತರಿ ಆಕಾರಕ್ಕೆ ತೊಗರಿಕಡ್ಡಿ ಚುಚ್ಚಿ ಅದಕ್ಕೆ ದಾರ ಕಟ್ಟುವುದು; ನಂತರ ಎರಡು ಕೈಬೆರಳುಗಳ ಸಹಾಯದಿಂದ ದಾರವನ್ನು ಹಿಡಿದು ತಿರುವಿ ಮತ್ತೆ ಕೂಡಿಸಿದರೆ ಹುರಿಯಾಗುವುದು;
- ಕೈ ಅಗಲ ಮಾಡಿದರೆ ಹುರಿ ಬಿಚ್ಚುವುದು; ಹೀಗೆ ಹುರಿಯಾದಾಗ, ಹುರಿ ಬಿಚ್ಚಿದಾಗ ಕೊಬ್ಬರಿ ಬಟ್ಟಲು ಜೋರಾಗಿ ತಿರುಗುವುದುಂಟು;
- ಇದು ಒಂದು ವಿಧದ ಜನಪದ ಆಟವಿರಬಹುದು;
- ***—ಕೊಬ್ಬರಿ ಹಿಂಡಿ*** : ಒಂದು ಪ್ರಕಾರದ ತಿನಿಸು; ಒಣಕೊಬ್ಬರಿ, ಕರಿಬೇವು, ಕೊತ್ತಂಬರಿ, ಬೆಳ್ಳುಳ್ಳಿ, ಉಪ್ಪು, ಕಾರ, ಬೆಲ್ಲ ಹಾಕಿ ತಯಾರಿಸುವಂಥದು; ದೇಹದ ಸದೃಢತೆಗೆ ಸಹಕಾರಿಯಾದುದು ಎಂಬ ನಂಬಿಕೆ ಇದೆ; A kind of eatable; a mix of kernel, black neem, coriander leave, garlic, salt, punjent, jaggory; it is helpful to the healthy body;
- ***—ಕೊಬ್ಬರಿ ಹೋಳಿಗೆ/ಕಡುಬು/ಗಡಬು*** : ತುರಿದ ಕೊಬ್ಬರಿ ಕಾಯಿಯಿಂದ ಮಾಡಲಾಗುವ ಸಿಹಿ ತಿಂಡಿ;
- ಕಾಯಿ ಕಡುಬು ಅಥವಾ ಕಾಯಿ ಒಬ್ಬಟ್ಟು ಅಥವಾ ಹೋಳಿಗೆ ಇರಬಹುದು; A sweet made of kernel; i.e. called as Obbattu or Holige;

- ಹೋಳಿಗೆ ಹಿಟ್ಟಿನ ಹೊದಿಕೆಗೆ ಕೊಬ್ಬರಿ, ಬೆಲ್ಲ ಮತ್ತು ಏಲಕ್ಕಿಪುಡಿಯಿಂದ ತಯಾರಿಸಿದ ಹೂರಣವನ್ನು ಹಾಕಿ ಮಡಚಿ ಅಗಲವಾಗಿ ಲಟ್ಟಿಸಿ ನಂತರ ಅದನ್ನು ಬಿಸಿಯಾಗಿ ಕಾದ ಕಾವಲಿಯಲ್ಲಿ ಹಾಕಿ ಹದವಾಗಿ ಎಣ್ಣೆ ಸವರಿ ಬೇಯಿಸುವುದು; Dry coconut, jaggory and cardamom mix kept in the holige; fold and rollout wide, then fry on the heated sheet with oil;
- ಕೆಲವು ಕಡೆ ಇದನ್ನು ಕುದಿಯುವ ಎಣ್ಣೆಯಲ್ಲಿ ಹಾಕಿ ಕರಿಯುವುದು ಕಂಡುಬಂದಿದೆ; ಹಬ್ಬ–ಹರಿದಿನ ಹಾಗೂ ಇತರೆ ವಿಶೇಷ ಸಂದರ್ಭಗಳಲ್ಲಿ ಮಾಡುವುದುಂಟು; ಕೆಲವು ಕಡೆ ಹೆಣ್ಣುಮಕ್ಕಳಿಗೆ ತವರಿನವರು ಕೊಬ್ಬರಿ ಕಡುಬಿನ ಬುತ್ತಿ ಕಳುಹಿಸಿಕೊಡುವುದಿದೆ; In some places this is fry in the boiling oil; it is prepared on festival and other occasions;
- ಇದಕ್ಕೆ ತುಪ್ಪ ಸವರಿ ತಿಂದರೆ ಬಲು ರುಚಿಕರವಾಗಿರುತ್ತದೆ ಎಂದು ಹೇಳುವುದಿದೆ; ಕಡುಬು>ಕಡುಬ>ಕಡಬ>ಗಡಬ(ಕ>ಗ); *ಪ್ರ: 'ಮಗಾ ಕೊಬ್ರಿ ಕಡ್ಬು ಬವ್ಸೊಂಡೈತಂತೆ ಕಾಣ್ ಕೂಸೆ'*; It is very tasty to eat with ghee;
- ***—ಕೊಬ್ಬರಿ ಎಣ್ಣೆ*** : ಚೆನ್ನಾಗಿ ಬಲಿತ ಕೊಬ್ಬರಿ ಕಾಯಿಯನ್ನು ಗಾಣದಲ್ಲಿ ಹಾಕಿ ತಯಾರಿಸುವ ಎಣ್ಣೆ; ತಲೆ ಕೂದಲಿಗೆ ಸವರಲು, ಮಯ್‌ಗೆ ಸವರಿ ಮಸಾಜ್ ಮಾಡಿಸಲು ಉಪಯೋಗ; ಪ್ರ: 'ನಮ್ ಕಾಲ್ದಲಿ ಕೊಬ್ರಿ ಎಣ್ಣೆ ಎಲ್ಲಿಂದ್ ಬಂತು ಕಯ್ಯಣ್ಣನೇ ಸವ್ರ್‌ತಿದ್ವಿ'; The ripen dry coconut grind in the mill and get oil; this is used as hair oil and for massage;
- ***—ಕೊಬ್ಬರಿ ತಿಳಲು*** : ಎಳನೀರು ತೆಗೆದ ನಂತರ ಕಾಯಿಯಲ್ಲಿರುವ ಎಳೆಯದಾದ ತಿರುಳು; ತಿನ್ನಲು ಬಲು ರುಚಿಕರವಾದುದು; The kernel of the tender coconut; very tasty to eat;
- ***—ಕೊಬ್ಬರಿ ಮಿಠಾಯಿ*** : ಒಂದು ಬಗೆಯ ಸಿಹಿ ತಿನಿಸು; ತುರಿದ ಕೊಬ್ಬರಿ ಕಾಯಿ ಅಥವಾ ಎಣ್ಣೆ ಹಿಂಡಿದ ಕೊಬ್ಬರಿಯ ಸಿಪ್ಪೆಯಿಂದ ತಯಾರಿಸಿರುವಂಥದು; ಸಕ್ಕರೆ, ಹುರಿದ ಕಡಲೆ ಬೀಜದ ಪಾಕಕ್ಕೆ ಏಲಕ್ಕಿ ಪುಡಿ ಮತ್ತು ಕೊಬ್ಬರಿ ಚೂರುಗಳನ್ನು ಹಾಕಿ ಹದವಾಗಿ ಸಿದ್ಧಪಡಿಸಿ ಅಚ್ಚಿನ ಮಣೆಯಲ್ಲಿ ಸುರಿದು ಚಕ್ಕೆಯಿಂದ ಸವರಿ ಚೆನ್ನಾಗಿ ಆರಿದ ನಂತರ ಅದನ್ನು ಮಣೆಯಿಂದ ಬೇರ್ಪಡಿಸಿದರೆ ಕೊಬ್ರಿ ಮಿಠಾಯಿ ಸವಿಯಲು ಸಿದ್ಧ; A kind of eatable; it is prepared with dry coconut powder, sugar or jaggory, pups of groundnut, cardamom powder put in the sweet semiliquid; pour in to a plate, after cool down, it is ready to eat;
- ಮಕ್ಕಳು ಪ್ರೀತಿಯಿಂದ ಇಷ್ಟಪಟ್ಟು ತಿನ್ನುವ ಜನಪ್ರಿಯ ತಿನಿಸು; ಹಿಂದೆ ಸಂತೆ, ಜಾತ್ರೆಗಳಂತಹ ಜನಸಮೂಹವಿರುವ ಸ್ಥಳಗಳಲ್ಲಿ ಮಾರಾಟ ಮಾಡುತ್ತಿದ್ದರು; ಇದು ಕೆಲವರಿಗೆ ವೃತ್ತಿಯಾಗಿತ್ತು ಕೂಡ; ಆದರೆ ಇಂದಿನ ಬೇಕರಿ ತಿಂಡಿ–ತಿನಿಸುಗಳ ಸವಿಯಲ್ಲಿ ಕೊಬ್ರಿ ಮಿಠಾಯಿ ಸಾದ್ಯಂತವಾಗಿ ಅಳಿವಿನತ್ತ ಸಾಗುತ್ತಿದೆ ಎನ್ನಬಹುದು; It is a famous food to children; it was selling in fairs; it is also an occupation to some people; in the place of bakery stuffs it is disappearing;
- ***—ಕೊಬ್ಬರಿ ವಡೆ*** : ಕೊಬ್ಬರಿ ತುರಿ, ಬೆಲ್ಲ ಅಥವಾ ಸಕ್ಕರೆ ಪಾಕದಿಂದ ತಯಾರಿಸುವಂತಹ ಸಿಹಿ ತಿನಿಸು; ತಿನ್ನಲು ಬಲು ರುಚಿಕರವಾದುದು; It is prepared with dry coconut, jaggory or sugar semi liquid; it is very tasty stuff;
- ***—ಕೊಬ್ಬರಿ ಚಿನ್ನು*** : ಹುರಿಗಡಲೆ ಹಿಟ್ಟಿನಿಂದ ತಯಾರಿಸಿದ ಹಲ್ವ(ಚಿಕ್ಕ.ಜಿ); ಸಕ್ಕರೆ ಅಥವಾ ಬೆಲ್ಲದ ಪಾಕದಲ್ಲಿ ಹುರಿಗಡಲೆ ಹಿಟ್ಟಿನ ಉಂಡೆಯನ್ನು ಹಾಕಿ ಹದಕ್ಕೆ ಬಂದ ಮೇಲೆ ತಟ್ಟೆಯಲ್ಲಿ ಸುರಿದು ಅದರ ಮೇಲ್ಭಾಗಕ್ಕೆ ಕೊಬ್ಬರಿ ಪುಡಿಯನ್ನು ಹಾಕಿ ಅದು ತಣ್ಣಗಾದ ಮೇಲೆ ಬೇಕಾದ ಆಕಾರಕ್ಕೆ ಕತ್ತರಿಸುವುದು; It is prepared with the fried Bengal gram powder, jaggory, coconut powder;
- ***—ಕೊಬ್ಬರಿ ಮಾವಿನ ಕಾಯಿ*** : ಒಂದು ವಿಧವಾದ ಸಿಹಿಮಾವಿನ ತಳಿಗೆ ಸೇರಿರುವಂಥದು; ತಿನ್ನಲು ತುಂಬಾ ರುಚಿಕರವಾದುದು; ಇದರ ಆಕೃತಿ ಉಂಡೆ ಕೊಬ್ಬರಿಯನ್ನು ಹೋಲುವುದರಿಂದ ಈ ಹೆಸರು ಬಂದಿರಬಹುದು; A sweet mango breed very

tasty to eat; the shape of this mango like kobbari;

- —*ಕೊಬ್ಬರಿ ತಿರುವ ರಾಟೆ* : ಕೊಬ್ಬರಿ ಎಣ್ಣೆ ತಯಾರಿಕೆಯಲ್ಲಿ ಬಳಕೆಯಾಗುವ ಒಂದು ವಿಧದ ಸಾಧನ; ಹಸಿ ಕೊಬ್ಬರಿಯನ್ನು ತಿರುವಲಿಕ್ಕೆ ಈ ರಾಟೆಯ ಉಪಯೋಗ; *ಪ್ರ: 'ನಾನೇ ಸ್ವ-ಇಚ್ಛೆಯಿಂದ ತಂದಿದ್ದ ಕೊಬ್ಬರಿ ತಿರುವ ರಾಟೆ ಇಂದು ಮೂಲೆ ಗುಂಪಾಗಿ ಹೋಯಿತು'*; A kind of instrument to produce coconut oil;
- —*ಕೊಬ್ಬರಿ ಸುಡುವ ಶಾಸ್ತ್ರ* : ಇದೊಂದು ಸಾಂಪ್ರದಾಯಿಕ ನಲೆಗಟ್ಟುಳ್ಳ ಆಚರಣಾತ್ಮಕ ಜಾನಪದದ ಹಿನ್ನೆಲೆಯಲ್ಲಿ ಹುಟ್ಟಿಕೊಂಡದ್ದು; ಇಲ್ಲಿ ಕೊಬ್ಬರಿಯನ್ನೇ ಪ್ರಧಾನವಾಗಿ ಬಳಸುವುದರಿಂದ ಇದಕ್ಕೆ ಈ ಹೆಸರು ಬಂದಿದೆ; It is a folk based practice; in this practice mainly used `Kobbari' so the name is existed;
- ನಾಯಕನ ಹಟ್ಟಿಯ ತಿಪ್ಪೇಸ್ವಾಮಿ ಜಾತ್ರೆಯ ದಿವಸ ರೂಢಿಯಲ್ಲಿರುವಂಥದು; ಅಂದು ಒಳಮಠದ ಎದುರಲ್ಲಿರುವ ದೊಡ್ಡ ಅಗ್ಗಿಷ್ಟಿಕೆಗೆ ರಾಶಿಗಟ್ಟಲೆ ಒಣಕೊಬ್ಬರಿಯನ್ನು ಸುರಿದು ಬೆಂಕಿ ಹೊತ್ತಿಸಿ ಸುಡುವ ಒಂದು ವಿಧದ ಸಂಪ್ರದಾಯವಿದೆ; A custom is practiced in Nayakana hatti Thippeswamy fair; on that day put a heap of nut kernel in the hearth of `Olamata' and fire it;
- ಅಂದು ರಾತ್ರಿ ತಿಪ್ಪೇಸ್ವಾಮಿ ದೇವರನ್ನು ರಾಯದುರ್ಗದಿಂದ ನಾಯಕನಹಟ್ಟಿಗೆ ಮೆರವಣಿಗೆ ಮೂಲಕ ಕರೆತರುವುದು ಒಂದು ಪದ್ಧತಿ; ಆ ರಾತ್ರಿಯಲ್ಲಿ ಕತ್ತಲು ಆವರಿಸಿರುವುದರಿಂದ ಬೆಳಕಿಗಾಗಿ ಒಂದೊಂದು ಬಿದಿರಿನ ಕೋಲಿಗೆ ಒಂದೊಂದು ಒಣಕೊಬ್ಬರಿಯನ್ನು ಸೇರಿಸಿ ಅದಕ್ಕೆ ಬೆಂಕಿ ಹೊತ್ತಿಸಿ ಅದರ ಬೆಳಕಿನ ಮೂಲಕ ದೇವರನ್ನು ಕರೆತರುವುದು ರೂಢಿ; *ಪ್ರ: 'ಕೊಬ್ಬರಿ ಸುಡುವ ಶಾಸ್ತ್ರದಲ್ಲಿ ಜನಸಾಗರವೇ ಹರಿದು ಬಂದಂತಿತ್ತು'*; The god Thippeswamy brought to Nayakana hatti from Rayadurga in a procession on the night; that night is full of dark; so people fix kernel to the bamboo stick and lit it for light; in that light they brought the god is a practice;
- —*ಕೊಬ್ಬರಿ ದೋಸೆ* : ಕೊಬ್ಬರಿ ತುರಿಯನ್ನು ನುಣ್ಣಗೆ ಅರೆದು ಅದನ್ನು ಅಕ್ಕಿಹಿಟ್ಟಿನೊಂದಿಗೆ(ಸಂಮಿಶ್ರ) ಮಿಶ್ರಣ ಮಾಡಿ ಕಾವಲಿಯಲ್ಲಿ ಹುಯ್ದು ಬೇಯಿಸಿ ತಯಾರಿಸುವಂಥದು; ಇದನ್ನು ಕೊಬ್ಬರಿ ಚಟ್ನಿ ಜೊತೆಗೆ ತಿನ್ನಲು ಬಳಸುವರು; The grinded kobbari mix with rice powder and boiled on the oven; it is tasty to eat with `chatni';
- —*ಕೊಬ್ಬರಿ ಬಟ್ಟಲು* : ಚಿಪ್ಪು, ಕರಟ, ಕಂಟ ಎಂಬರ್ಥದಲ್ಲಿ ಪದಬಳಕೆ; ಒಡೆದ ತೆಂಗಿನಕಾಯಿಯ ಹೋಳು; ಒಣಗಿದ ಕೊಬ್ಬರಿಯ ಎರಡು ಭಾಗ; The shell of the coconut used in the meaning of Chippu, Karata/Kanta; two separated part of the shell;

∴ ಜನಪದ ಆಹಾರ ಸಂಸ್ಕೃತಿಯಲ್ಲಿ ಜನಪ್ರಿಯ ಆಹಾರ ಸಾಧನ 'ಕೊಬ್ಬರಿ'. In the folk food culture kobbari is the famous food.

ಕೊಬ್ಬಾಸ/ಕೊಬ್ಬಾಸ್ ನೇಗಿಲು kobbāsa/ kobbās nēgilu :

- ನೇಗಿಲಿನ ಒಂದು ಪ್ರಕಾರಕ್ಕೆ ಸೇರಿದ್ದು; ಚಿಕ್ಕ ಗುಳ, ತಾಳುಗಳಿಂದ ತಯಾರಿಸಿದ್ದು; ಈಚು ಮಾತ್ರ ಸಾಮಾನ್ಯ ನೇಗಿಲಿನಷ್ಟೇ ಉದ್ದವಿರುವುದು; Belongs to a kind of plough;
- ಒಂದೆರಡು ಬಾರಿ ದೊಡ್ಡ ನೇಗಿಲಿನಿಂದ ಉಳುಮೆ ಮಾಡಿದ ನಂತರ ಸಣ್ಣ ಸಣ್ಣ ಸಾಲುಗಳನ್ನು ಹೊಡೆಯಲು ಈ ನೇಗಿಲಿನ ಬಳಕೆ; ಇದರ ತಯಾರಿಕೆಯಲ್ಲಿ ಹದವಾದ ಮರದ ತುಂಡು ಮತ್ತು ಮಂದವಾದ ಕಬ್ಬಿಣವನ್ನು ಬಳಸುವರು(ಕೃ.ಪ.ಕೋ); A plough used once or twice, later used to make small line;
- ಹಿಂದೆ ಗ್ರಾಮೀಣ ರೈತರು ಮರದ ನೇಗಿಲನ್ನೇ ಯತೇಚ್ಚವಾಗಿ ಉಪಯೋಗಿಸುತ್ತಿದ್ದರು; ಇದರಲ್ಲಿ ಉಳುಮೆ, ಬಿತ್ತನೆ, ಸಾಲು ಹೊಡೆಯಲು ಬೇರೆ ಬೇರೆ ವಿನ್ಯಾಸದ ನೇಗಿಲುಗಳಿದ್ದವು; The wooden plough used by the farmers in olden days;
- ನೇಗಿಲಿನಲ್ಲಿ ಚಿಕ್ಕ ಮತ್ತು ದೊಡ್ಡ ನೇಗಿಲುಗಳೆಂಬ ಎರಡು ಪ್ರಭೇದಗಳನ್ನು ಗುರುತಿಸಬಹುದು; ಇವು

ಕ್ರಮವಾಗಿ ಬಿತ್ತನೆ ಮತ್ತು ಉಳುಮೆಗೆ ಬಳಕೆಯಾಗುತ್ತಿದ್ದವು; ಇನ್ನು ಸಾಲು ಹೊಡೆಯಲು 'ಕುಂಟೆ' ನೇಗಿಲು ಬಳಸುತ್ತಿದ್ದರು; Two kinds of plough; small and big; they used to cultivate and sow;

- ಇಂದಿನ ಕಬ್ಬಿಣದ ನೇಗಿಲಿನಿಂದಾಗಿ ಮರದ ನೇಗಿಲುಗಳು ನೇಪಥ್ಯಕ್ಕೆ ಸರಿದಿವೆ; Now-a-days the wooden ploughs are disappearing in place of them iron ploughs are occupying;
- ಕೊಬ್ಬಾಸ್ ನೇಗಿಲು ಉತ್ತರಕರ್ನಾಟಕ ಭಾಗದಲ್ಲಿ ಬಳಕೆಯಲ್ಲಿರುವಂಥದು; *ಪ್ರ: 'ನೆನ್ನೆ ಕೊಬ್ಬಾಸ್ ನೇಗುಲ್ ತಕ್ಕಂದ್ವಾದ್ವಲ್ಲ ತಂದ್ಕೊಟ್ನೆ'.* `Kobbas' ploughs used in Northkarnataka.

ಕೊಬ್ಬಾರ kobbāra :

- ಒಂದು ಸಮುದಾಯ ಸೂಚಕ ಹೆಸರು; 'ಕಬ್ಬಾರ', 'ಕಬ್ಬಿಲ' ಎಂಬುದಿರಬಹುದೇ?(ಮೈ.ಜಿ); 'ಮುದ್ದಾಗಿ ಮಗುಳ್ನ ಸಾಕೋವೊತ್ಗೆ ಕೊಬ್ಬಾರ್ನ ಕಟ್ಕೊಂಡ್ ಎದ್ಲಂತೆ'(ಗಾ.). It notices the name of a community; the name `Kabbara' may be `Kabbila'.

ಕೊಬ್ಬು kobbu :

- 'ಕೊರ್ವು' ಮೂಲದಿಂದ ಬಂದಿರಬಹುದೆ?; ಕೊರ್ವು>ಕೊರ್ಬು>ಕೊಬ್ಬು ಆಗಿರಲು ಸಾಧ್ಯ; The word `Kobbu' may be from the origin `Korvu';
- ಅಹಂಕಾರ; ಸೊಕ್ಕು; ಮದ; ದರ್ಪ; ಗರ್ವ; ನೆಣ; ಚರ್ಬಿ; ಬೊಜ್ಜು; ಅಂಕೆ-ಸಂಕೆ ಇಲ್ಲದವ; ಗಡಸು, ಒರಟುತನದಿಂದ ಕೂಡಿದ ವ್ಯಕ್ತಿತ್ವ; ಗುರು-ಹಿರಿಯರಲ್ಲಿ ಗೌರವ, ವಿಧೇಯತೆಯಿಲ್ಲದ ಸ್ವಭಾವ; ಜಂಬದಿಂದ ವರ್ತಿಸುವಿಕೆ; ವ್ಯಕ್ತಿಯ ವ್ಯಕ್ತಿತ್ವ ಪರಿಚಯದ ಮತ್ತೊಂದು ಮುಖ; ನಾನತ್ವದ ಗುಣವನ್ನು ಮೈಗೂಡಿಸಿಕೊಂಡಿರುವಿಕೆ; ವ್ಯಕ್ತಿಯ ಮಾನಸಿಕ ಹಾಗೂ ದೈಹಿಕ ಕ್ರಿಯೆ ಮತ್ತು ಆರ್ಥಿಕ ಬಲವರ್ಧನೆಗೆ ಸಂಬಂಧಿಸಿದ ಹಾಗೆ ಬಳಕೆ ರೂಪ; Egoism; arrogance, insolences haughtiness, fat; grease; obesity etc;
- ನುಡಿಗಟ್ಟಾಗಿ, ವ್ಯಂಗ್ಯೋಕ್ತಿಯಾಗಿ ಪದಬಳಕೆ; ಅನ್ವರ್ಥನಾಮವಾಗಿ, ವ್ಯಕ್ತಿಯ ವ್ಯಕ್ತಿತ್ವವನ್ನು ಅಭಿವ್ಯಕ್ತಿಸಲು ಬಳಕೆಯ ರೂಪ; 'ಅವನಿಗೆ ಅಧಿಕಾರ ಮತ್ತು ದುಡ್ಡಿನ ಮದ(ಕೊಬ್ಬು) ನೆತ್ತಿಗೇರಿದೆ' ಎಂಬುದೊಂದು ಹೇಳಿಕೆ ನಡತೆಯನ್ನು ಕುರಿತದ್ದು; The word used as an idiom, sarcastic; to express the personality of a person; he has an arrogance of power and money;
- ದಪ್ಪವಾಗುವಿಕೆ; ಬಲಿಯುವಿಕೆ; ಮಂದವಾಗಿರುವುದು; ಕಟುವಾಗಿ, ನಿರ್ದಾಕ್ಷಿಣ್ಯವಾಗಿ ನಡೆದುಕೊಳ್ಳುವುದು; Fatigue, ripeness, sluggish; hardness behave straight farward;
- ಉಬ್ಬು; ಉತ್ಸಾಹಗೊಳ್ಳು; ಹೆಮ್ಮೆಪಡು; enthusiasm; vanity; proud;
- ಮರದ ನೇಗಿಲಿಗೆ ಹಾಕಲಾಗುವ ಕಬ್ಬಿಣದ ಸಾಧನ (ಕೃ.ಪ.ಕೋ); An iron instrument to fix the wooden plough;
- ಕಬ್ಬು ಎಂಬರ್ಥದಲ್ಲಿ ಪದಬಳಕೆ; 'ಕಬ್ಬು ಬೆಳೆಯೋನ್ಗೆ ಕೊಬ್ಬು ಇರ್ಬೇಕು', 'ಕಬ್ನ ಕೊಬ್ಬಾಗೇ ಬೆಳೆದವ್ನೆ'; The word used in the meaning of sugarcane; the sugarcane grower should have grease;
- ದ್ರಾವಿಡ ಭಾಷಾ ರೂಪಗಳಾದ ತಮಿಳು ಮತ್ತು ಮಲೆಯಾಳಂಗಳಲ್ಲಿ ಕ್ರಮವಾಗಿ 'ಕೊಙು' ಪದದ ಬಳಕೆ ಇದ್ದರೆ ತೆಲುಗಿನಲ್ಲಿ 'ಕೊವ್ವು' ಮತ್ತು 'ಕ್ರೊವ್ವು' ಪದಗಳ ಬಳಕೆ ಇದೆ; ಆದರೆ ತುಳುವಿನಲ್ಲಿ ಮಾತ್ರ ಕನ್ನಡದ 'ಕೊಬ್ಬು' ಪದವೇ ಯಥಾಪ್ರಕಾರವಾಗಿ ಬಳಕೆಗೊಂಡಿರುವುದು ವಿಶೇಷ(ದ್ರಾ.ಭಾ.ಜ್ಞಾ.ಪ.ಕೋ); In Tamil and Malayalam the word `Kolu' used; in Telugu `Kovvu' and `Krovvu'; In Tulu the kannada word `Kobbu' used as usually;
- 'ಕೂಡಲ ಸಂಗನ ಶರಣರು ಬಂದರೆ ಉಬ್ಬಿ, ಕೊಬ್ಬಿ ಹರುಷದಲೋಲಾಡುವೆ' ಎಂಬುದೊಂದು ಬಸವಣ್ಣನವರ ವಚನ; ಇದು ಸೊಕ್ಕು, ಅಹಂ, ಮದ, ದರ್ಪದ ತತ್ವಗಳಿಗೆ ಒಳಪಟ್ಟುದಲ್ಲ; ಮೇಲಾಗಿ ಭಕ್ತಿ-ಭಾವಗಳಿಗೆ ಸಂಬಂಧಿಸಿದ್ದು; ಕೂಡಲಸಂಗನಲ್ಲಿ ಅವರಿಗಿರುವ ಗೌರವಾದರಗಳನ್ನು ಸೂಚಿಸುವಂಥದು; 'ಉಬ್ಬಿ-ಕೊಬ್ಬಿ' ಎಂಬುದು ಸಂತೋಷ, ಹೆಮ್ಮೆ, ಧೈರ್ಯ, ನಿಸ್ವಾರ್ಥ, ವಿಶ್ವಾಸಾರ್ಹತೆಯ ಕಲ್ಪನೆಯನ್ನು ಧ್ವನಿಸುವಂಥದು; 'If the devotees of lord Shiva came I enjoy in very proud and

happy'- is in the vachana of Basavanna(Koodala sangana Sharanaru bandre ubbi kobbi harushadaloladuve); it cannot be the philosophy of ego, vanity, arrogance, it is belongs to devotional feelings; it shows the respectful affection in Koodala sangana by them;

- 'ಕುರಿ ಕೊಬ್ಬಿದಷ್ಟು ಕಟುಕನಿಗೆ ಲಾಭ' ಎಂಬುದೊಂದು ಗಾದೆಮಾತು; 'ಮನುಷ್ಯ ಕೊಬ್ಬಿದಷ್ಟು ಅದು ಅವನ ಅಧಃಪತನಕ್ಕೆ ನಾಂದಿ' ಎಂಬುದು ಅನುಭವದ ನುಡಿಯಾದರೂ ವ್ಯಂಗ್ಯೋಕ್ತಿಯೂ ಹೌದು. The sheep gets fatty that is gain to the butcher is a proverb; the arrogance of man is the beginning of downfall; these words are not only the expression of experience but also sarcastic too.

ಕೊಬ್ಬೆಣ್ಣೆ ಕುಳ್ಳಿ kobbeṇṇi kuḷḷi :

- ಕೊಂಬಿನ ಗಿಂಡಿ; ಎಣ್ಣೆಯನ್ನು ಇಳಿಸಲು ಇರುವ ಬಾಗಿದ ನಳಿಕೆಯಂತಹ ಗಿಂಡಿ(ಉ.ಕ.ಜಿ). A vessel with snout to fill the oil.

ಕೊಮ koma :

- ಆಗದ್ದನ್ನು ಮಾಡುವ ವಿಫಲ ಪ್ರಯತ್ನಕ್ಕೆ ಪದ ಬಳಕೆ; The word used to try the work is not possible;
- ದಿಬ್ಬ; ಪ್ರದೇಶ; ವೃತ್ತತೆ; ಸೌಂದರ್ಯ; Eminance; area; circleness; beauty;
- ತಮಿಳಿನಲ್ಲಿ 'ಕೊಮ್ಮೈ' ಮತ್ತು ಮಲೆಯಾಳಂನಲ್ಲಿ 'ಕೊಮ್ಮ' ಪದಗಳ ಬಳಕೆ ಇದೆ (ದ್ರಾ.ಭಾ.ಜ್ಞಾ.ಪ.ಕೋ). In Tamil `Kommai', Malayalam `Komma' words used.

ಕೊಮಟಿಗ/ಕೋಮಟಿಗ komaṭiga/ kōmaṭiga :

- ಕೋಮಟಿ, ಕೊಮಟಿ, ಕ್ವಾಮಟಿ, ಕ್ವಾಮ್‌ಟಿ, ಕ್ವಾಮಟಿಗ ಎಂಬ ವಿವಿಧ ರೂಪದ ಪ್ರಕಾರಗಳಿವೆ; Different form manners are Komati, Kvamati, Kvamnti, Kvamtiga;
- ಕೋಮಟಿಗ>ಕ್ವಾಮಟಿಗ; ಪದಾದಿಯ 'ಕೋ'ಕಾರ 'ಕ್ವಾ'ಕಾರವಾಗಿ ಮಾರ್ಪಟ್ಟಿದೆ; ಇಲ್ಲಿ 'ಒ' ಉಚ್ಚಾರಣೆಗೆ 'ವ' ಉಚ್ಚಾರಣೆ ಬಂದಿದೆ;
- ಒಂದು ಸಮುದಾಯಕ್ಕೆ ಸೇರಿದ ಜನವರ್ಗ; ಆರ್ಯವೈಶ್ಯ ಸಮಾಜದಲ್ಲಿ ಗುರುತಿಸಿಕೊಂಡವರು; 'ತೆಲುಗು' ಸಾಮಾನ್ಯವಾಗಿ ಇವರು ಮಾತನಾಡುವ ಭಾಷೆ; ಆಂಧ್ರದ ಮೂಲದವರಿರಬಹುದೆಂದು ಹೇಳಲಾಗುತ್ತದೆ; ವ್ಯಾಪಾರಕ್ಕೆಂದು ವಲಸೆ ಬಂದವರಿರಬಹುದು; ಕಾರಣ ಇವರ ಮೂಲ ಕಸುಬು ವ್ಯಾಪಾರವೇ ಆಗಿರುವಂಥದು; A class of people belongs to a community; they are identify in the society of Aryavysya; they generally speak Telugu language; they may be belongs to Andhra origin; emigrate for business; because originally their occupation is business;
- ಶೆಟ್ಟಿ, ಶೆಟ್ಟರು ಎಂಬ ಹೆಸರಿನಿಂದಲೂ ಕರೆಯುವುದಿದೆ; 'ಕ್ವಾಮ್‌ಟಿಶೆಟ್ಟಿ' ಈ ಸಮುದಾಯದ ಪೂರ್ಣ ಹೆಸರು; They are called as `Shetty' or `Shettaru'; the complete name of this community is `Kvamti shetty';
- ವ್ಯಾಪಾರವೇ ಪ್ರಧಾನ ಕಸುಬನ್ನಾಗಿ ಮಾಡಿಕೊಂಡ ಇವರನ್ನು ಜಿಪುಣ, ಜೀಣ ಎಂದು ಹೇಳುವುದು ಉಂಟು; ಕ್ವಾಮಟಿ ಜೀಣ ಆದ್ದರಿಂದ 'ಕ್ವಾಮ್‌ಟಿ ಬುಡ ಜೀಣ(ಜಿಪುಣ) ಕೊಡ' ಎಂಬ ಗಾದೆ ಮಾತು ಹುಟ್ಟಿಕೊಂಡಿದೆ; The main occupation is business; so they are stingy; misers; so the word `Kvamati' generate, liberation is not good in business; it is the symbol of destruction; so, business man are transact miserly; it is also an action of precaution;
- ವ್ಯಾಪಾರದಲ್ಲಿ ಧಾರಾಳತನ ಒಳ್ಳೆಯದಲ್ಲ; ಅದು ಅಳಿವಿನ ಸಂಕೇತ ಎಂಬುದೊಂದು ಹೇಳಿಕೆ; ಹಾಗಾಗಿ ವ್ಯಾಪಾರಸ್ಥರು ಜಿಪುಣರಾಗಿ ವ್ಯವಹರಿಸುತ್ತಾರೆ; ಇದು ಮುಂಜಾಗ್ರತಾ ಕ್ರಮವೂ ಹೌದು; ಬದುಕಿನಲ್ಲಿ ಏಳಿಗೆ ಹೊಂದಬೇಕಾದರೆ ಈ ವಿಧಾನ ಅನಿವಾರ್ಯ ಹಾಗೂ ಅಗತ್ಯ ಎಂಬುದು ಅನುಭವದ ಮಾತು; ಆದರೆ ಅತಿಯಾದ ಜಿಪುಣತನ ಒಳ್ಳೆಯದಲ್ಲ ಎಂಬುದೂ ಒಪ್ಪತಕ್ಕ

ವಿಚಾರ; This method is inevitable and essential; but too much of miser or stingy is not good;

- ತಂತ್ರಗಾರ; ಕಪಟಿ; ನಯವಂಚಕ, ಚಂಡಿ ಹಿಡಿದ ಸಾಲಗಾರ ಎಂಬರ್ಥದಲ್ಲಿಯೂ ಪದಬಳಕೆ; The words used in the meaning of interguer, decepter; hypocrate; stubborned creditor;
- ಬೀದರ್ ಕಡೆ ರಾತ್ರಿ ವೇಳೆ 'ಉಪ್ಪು'ಗೆ 'ಕೊಮ್ಟಗ್ಯಾ' ಎಂದು ಹೇಳುವುದಿದೆ. In Bidar region the word `Komatgya' used for salt in the night.

ಕೊಮಣೆ komaṇe :

- ಕೊಮಣಿ, ಕೊಮ್ಮಣ್ಣಿ, ಕೊಮ್ಮಣಗಿರ್ತಿ, ಕೊಮ್ಣಿ, ಕೊಮ್ಣೆ ಎಂಬ ವಿವಿಧ ಸಂವಾದಿ ರೂಪಗಳ ಬಳಕೆ ಇದೆ; Different kinds of equivalent word forms are komani, kommanni, kommanagirthi, komni, konme;
- ಕೊಮಣೆ > ಕೊಮ್ಣ್ ಣೆ > ಕೊಮ್ಣೆ; ಕೊಮಣಿ > ಕೊಮ್ಣ್ ಣಿ > ಕೊಮ್ಣಿ; ಪದಾಂತ್ಯದ 'ಣ'ಕಾರ 'ಮ'ಕಾರದಲ್ಲಿ ಸೇರ್ಪಡೆಯಾಗಿ ದ್ವಿತ್ವವಾಗಿ ಮಾರ್ಪಟ್ಟು ಕೊಮ್ಣೆ, ಕೊಮ್ಣಿ ರೂಪಗಳಾಗಿವೆ; ಪದಸಂಕ್ಷಿಪ್ತತೆಯ ಸೌಲಭ್ಯದಿಂದಾಗಿ ಈ ಬದಲಾವಣೆ;
- ವಯ್ಯಾರ; ಬಿಂಕ; ಸೊಗಸುಗಾತಿ; ಪ್ರಣಯ ಚೇಷ್ಟೆ ಮೊದಲಾದ ಅರ್ಥಗಳಲ್ಲಿ ಪದಬಳಕೆ; The word used in the meaning of the coquetry, vanity; showy etc;
- ಗಂಡ–ಹೆಂಡತಿ, ಪ್ರೇಮಿಗಳ ನಡುವಿನ ಪರಸ್ಪರ ಮೋಜಿನ ಮಾತುಕತೆಗಳ ಸಂದರ್ಭ ಅಥವಾ ಸನ್ನಿವೇಶಕ್ಕೆ 'ಕೊಮಣೆ' ಎನ್ನುವುದಿದೆ. Entertainment conversation between husband and wife sequence is called `Komane'.

ಕೊಮರ್ ಬೆಲ್ಲ komar bella :

- 'ಕುಮರ ಬೆಲ್ಲ' ಎಂದೂ ಕರೆಯುವರು; ಎಳೆಪಾಕದಿಂದ ತೆಗೆದ ಬೆಲ್ಲ; ಪಾಕದಲ್ಲಿ ಎಳೆಪಾಕ, ಕಡುಪಾಕ ಮತ್ತು ಹದವಾದ ಪಾಕ ಎಂಬ ಮೂರು ಭಾಗಗಳುಂಟು; The jaggory is sticky like thread, this is called `Yele paka', made of jaggory is called `Kumara bella'; the preparation of jaggory is in three stages i.e., Yelepaka, Kadu paka and Hadavada paka;
- 'ಎಳೆಪಾಕ' ಎಂದರೆ ಪಾಕ ಬರುವ ಹಂತದಲ್ಲಿರುವ ಸಂದರ್ಭ; ಇದು ಒಂದು ರೀತಿಯಲ್ಲಿ ಹದ ಪಾಕವೂ ಇರಬಹುದು?; Yelepaka means if we touch with fingers it comes like thread;
- ಈ ಬೆಲ್ಲವನ್ನು ರೊಟ್ಟಿ, ದೋಸೆ, ಇಡ್ಲಿ(ಕಡುಬು)ಯ ಜೊತೆಗೆ ತಿನ್ನುವುದಿದೆ; 'ಜೋನಿ ಬೆಲ್ಲ' ಎಂಬ ಹೆಸರೂ ಇದೆ. It is used as sides with Rotti, Dosa, Idli; it is named as `Joni bella' or Kakambi.

ಕೊಮರಙ್ಗುಣ್ಡು komaraŋguṇḍu :

- ಬೆಂಗಳೂರು ಜಿಲ್ಲೆ ಕ್ರಿ.ಶ.೮೯೦ರ ೮೩ನೇ ಶಾಸನದಲ್ಲಿ ಇದರ ಉಲ್ಲೇಖ; This place referred in the 83rd inscription of Bengaluru district;
- 'ಕೊಮರಙ್ಗುಣ್ಡು'='ಕೋರಮಂಗಲ' ಆಗಿದೆ ಎಂದು ಅಭಿಪ್ರಾಯ; Komaranguṇḍu may be became Koramangala;
- ಕೋರಮಂಗಲ ಪ್ರದೇಶವು ಬೆಂಗಳೂರಿನ ದಕ್ಷಿಣ ಆಗ್ನೇಯ ಭಾಗದಲ್ಲಿದೆ; ಇಂದು ಬೆಂಗಳೂರಿನ ದೊಡ್ಡ ಪ್ರದೇಶಗಳಲ್ಲಿ ಒಂದು, ವಾಣಿಜ್ಯ ಕೇಂದ್ರ; The area of Koramangala is in the south east part of Bengaluru; it is a big business centre of Bengaluru;
- ಈ ಪ್ರದೇಶವನ್ನು ಶಾಸನವು 'ಕೊಮರಙ್ಗುಣ್ಡು' ಎಂದು ಹೆಸರಿಸಿದೆ; 'ಕೊಮರ' ಪದ 'ಕೊವರ' ಆಗಿ 'ಕುಮಾರ' ಎಂದು ಅರ್ಥ ಬಂದಿರಬಹುದು; ಇನ್ನು 'ಗುಣ್ಡ'(ಣ್ಡು) ಎನ್ನುವ ಪದ 'ಗುಂದ' ರೂಪವನ್ನು ಪಡೆದಿರಬಹುದು; 'ಗುಣ್ಡ' ಅಥವಾ 'ಗುಂದ', ಎರಡರ ಅರ್ಥವೂ 'ಬೆಟ್ಟ' ಎಂದಿದೆ; ಹೀಗಾಗಿ 'ಕುಮಾರಬೆಟ್ಟ' ಎಂಬ ಹೆಸರು 'ಕೊವರುಗುಂದ' ಎಂದಾಗಿರಬಹುದು; This area named as `Komaranguṇḍu' in the inscription the word `Komara' may be means `Kumara'; the word gunḍa became `gunda', both words have the meaning hill(betta); so,

the name `Kumara betta' may be Kovarugunda;

- ನಮಗಿರುವ ಸಮಸ್ಯೆಯೆಂದರೆ ಇದು 'ಕೋರಮಂಗಲ' ಹೇಗಾಯಿತೆಂಬುದು; 'ಕೊಮರ' ಪದವನ್ನು 'ಕೋರ' ಎಂದು ಮಾಡಿಕೊಂಡರೂ, 'ಮಂಗಲ' ಪದಕ್ಕೆ ಏನು ಮಾಡುವುದು? The problem is how this become Koramangala; Komara become `Kora', but what about `Mangala' is the question.

(E.C-IX; ಬಿ.ಎಲ್.ರೈಸ್; ಬೆಂ.ಜಿ.)

ಕೊಮರಿಕೆ komarike :

Averrhoa cavambola; ಮರ ವಿಶೇಷ; ರಕ್ತ ಮೂಲವ್ಯಾಧಿ, ಜ್ವರ, ದಾಹ, ವಾಂತಿ, ಭೇದಿಗಳ ಉಪಶಮನಕ್ಕೆ ಔಷಧ ತಯಾರಿಕೆಯಲ್ಲಿ ಉಪಯೋಗ. A tree species, used to control blood piles, fever, thirst, vomit, dysentery, as medicine; production and medicine.

ಕೊಮರುಮಾಲು komarumālu :

- ಜರಿ ನೂಲಿನ ಪಂಚೆ; ಶಲ್ಯ; ಮದುವೆ ಸಂದರ್ಭದಲ್ಲಿ ಮದುಮಗನಿಗೆ ಉಡಿಸಲು ಉಪಯೋಗ; Silk threaded piece of cloth used to wear the groom at the time of marriage;
- ರೇಷ್ಮೆ ನೂಲಿನಿಂದ ತಯಾರಿಸಿದ್ದಿರಬಹುದು; ರೇಷ್ಮೆ ಪಂಚೆ, ಅಂಗಿ, ವಲ್ಲಿ(ಶಲ್ಯ), ರೇಷ್ಮೆಸೀರೆ ಮೊದಲಾದವು ಹಿಂದಿನಿಂದಲೂ ಬಳಕೆಯಲ್ಲಿರುವಂಥವು; ರೇಷ್ಮೆಸೀರೆಯನ್ನು 'ಜರಿಸೀರೆ' ಎಂದು ಹೇಳುವುದಿದೆ; May be made of silk thread; silk dhoti, shirt, valli, saree etc are in use since olden days; the silk saree is called as `Jari saree' or `Seere';
- ರುಮಾಲು ಎಂದರೆ ಶಲ್ಯ, ವಲ್ಲಿ, ಕರವಸ್ತ್ರ, ತಲೆಗೆ ಸುತ್ತಿಕೊಳ್ಳುವ ಟವಲ್ ಎಂಬ ಅರ್ಥಗಳಿವೆ; ಟರ್ಬನ್ ಎಂಬ ಅರ್ಥ ಕೂಡ ಇದೆ; *ಪ್ರ: 'ಕೊಮರುಮಾಲಿನ ಅಂಚು ನಾಜೂಕಿನಿಂದ ವಿನ್ಯಾಸಗೊಂಡಿದೆ'.* 'Rumalu' means Shalya, valli, hand-kerchief, towel and turban.

ಕೊಮಲ komala :

- ಗಳೆ ಹೊಡೆಯುವ ಸ್ಥಳ; ಕುಂಟೆಯಿಂದ ಹೊಲವನ್ನು ಹರಗುವಾಗ ಅಂದರೆ ಉಳುಮೆ ಮಾಡುವಾಗ ಎತ್ತುಗಳು ಹೆಜ್ಜೆ ಹಾಕಿ ನಡೆದಾಡುವ ಕ್ರಿಯೆಗೆ ಸಂಬಂಧಿಸಿರುವಂಥದು;
- ಗಳೆ ಹೊಡೆಯುವಾಗ ಎರಡು ಬದಿಗೆ ಹೊಂದಿಕೊಂಡಂತೆ ಸಾಲು ನೇರವಾಗಿರಬೇಕು; ಇಲ್ಲದಿದ್ದರೆ ಹರಗುವ ಕೆಲಸ ಅಸ್ತವ್ಯಸ್ತ ಅಥವಾ ಅಸಮತೋಲನಕ್ಕೆ ಒಳಪಡುತ್ತದೆ; ಇದು ಕೆಲಸವನ್ನು ಹಾಳು ಮಾಡಿದಂತೆಯೇ ಸರಿ; ಹಾಗಾಗಿ ಮತ್ತೊಮ್ಮೆ ಆ ಕೆಲಸವನ್ನು ಸಮರ್ಪಕವಾಗಿ ಮಾಡಬೇಕಾಗಬಹುದು;
- ಗಳೆ ಹೊಡೆಯುವಾಗ ಎತ್ತುಗಳ ಹಿಂದೆ ನೇಗಿಲು ಅಥವಾ ಕುಂಟೆಯ ಮೇಳಿ ಹಿಡಿದು ಬರುವ ವ್ಯಕ್ತಿ ಹಿರಿಯ, ಅನುಭವಸ್ಥನಾಗಿರಬೇಕು; ಮೇಲಾಗಿ ತಾಳ್ಮೆಯಿಂದ ಕಾರ್ಯ ನಿರ್ವಹಿಸಬೇಕು; ತಾಳ್ಮೆಗೆಟ್ಟರೆ, ಗದರಿಸಿದರೆ ಅಥವಾ ಹೊಡೆದು-ಬಡಿದು ಮಾಡಿದರೆ ಎತ್ತುಗಳು ಸಾಲು ಬಿಟ್ಟು ದಿಕ್ಕಾಪಾಲಾಗಿ ನುಗ್ಗಿ ಕೆಲಸ ಅಸ್ತವ್ಯಸ್ತವಾಗುವುದು.

ಕೊಮಾರ komāra :

- ಇಪ್ಪಾರು ಮನೆಯ ಮೇಲ್ಛಾವಣಿಯ ತೊಲೆ ಮತ್ತು ತೀರಿನ ನಡುವೆ ಆಸರೆಯಾಗಿ ಕೊಡಲಾಗುವ ಮರದ ಸಾಧನ; ಮನೆಯ ಸೂರಿಗೆ ಆಧಾರವಾಗಿ ತೊಲೆಗಳ ಮೇಲೆ ನಿಲ್ಲಿಸಿದ ಮರದ ಗುಜ್ಜು;
- ಇಪ್ಪಾರು ಮನೆ ನಿರ್ಮಾಣದಲ್ಲಿ ಮಳೆ ನೀರು ಸರಾಗವಾಗಿ ಹರಿದು ಹೋಗುವ ದೃಷ್ಟಿಯಿಂದ ಮೇಲ್ಛಾವಣಿಯನ್ನು ಇಳಿಜಾರಿನಂತೆ ಎಡ-ಬಲಕ್ಕೆ ಹಾರು ಬೀಸಿ ಸಿದ್ಧಪಡಿಸಬೇಕಾಗುವುದು; ಆಗ ಮೇಲ್ಛಾವಣಿ ಭದ್ರವಾಗಿ ನಿಲ್ಲಲು ಒಳಭಾಗದಲ್ಲಿ ಗೋಡೆ ಅಥವಾ ಕಂಬದ ಮೇಲೆ ತೊಲೆ ಕೂರಿಸಿ ಅದರ ಮೇಲೆ ಕೊಮಾರದ ಮರ ಅಳವಡಿಸಿ ಅದರ ಮೇಲ್ಭಾಗದಲ್ಲಿ ಛಾವಣಿಗೆ ಹೊಂದಿಕೊಂಡಂತೆ ಒಂದು ತೀರನ್ನು ಕೂರಿಸುವರು; ಮನೆ ನಿರ್ಮಾಣದಲ್ಲಿ ಈ ಪ್ರತಿಯೊಂದು ಸಾಧನಗಳೂ ಪ್ರಧಾನವಾದುವೇ;
- ಇದರ ಉದ್ದ-ಗಾತ್ರ ತೊಲೆ ಮತ್ತು ತೀರಿನ ನಡುವಿನ ಅಂತರವನ್ನು ಅವಲಂಬಿಸಿರುವುದು; ಸಾಮಾನ್ಯವಾಗಿ

ನಾಲ್ಕು ಅಡಿ ಉದ್ದವಿರುತ್ತದೆ; ದಪ್ಪ ಮೂರ್‍ನಾಲ್ಕು ಇಂಚು ಇರಬಹುದು; ಆದರೆ ಅಗಲ ಮಾತ್ರ ಸುಮಾರು ಅರ್ಧ ಅಡಿಗಳಷ್ಟಿರುತ್ತದೆ;

- ಹೆಂಚಿನ ಮನೆ, ತೊಟ್ಟಿ ಮನೆ, ಸೀಮೆ ಹೆಂಚಿನ ಮನೆಗಳ ನಿರ್ಮಾಣದಲ್ಲಿ ಈ ವಿಧಾನದ ಅಳವಡಿಕೆ;
- ಹಿಂದಲ, ಮುಂದಲ, ಹಾರುಮನೆ ನಿರ್ಮಾಣದಲ್ಲಿ ಮೇಲ್ಛಾವಣಿಗೆ ಆಧಾರವಾಗಿ ಕೊಡಲಾಗುವ ಮರದ ತುಂಡು;
- ಕುಮಾರ; ಚಿಕ್ಕ ಮಕ್ಕಳ ಕರೆಯುವುದಕ್ಕೆ ಪದಬಳಕೆ; ವ್ಯಕ್ತಿನಾಮವು ಹೌದು; `Kumara' is a word used to call small children; it is also a name of a person;
- —***ಕೊಮಾರದ ಬತ್ತಿ*** : ಶೋಕಿಗಾಗಿ ಬಳಸಲಾಗುವ ಅಥವಾ ಬಂಗಿಯಂತೆ ಸೇದುವ, ಮತ್ತು ಬರಿಸುವ ಬತ್ತಿ; Used to smoke like bangi creates inebriates.

ಕೊಮಾರಕೋಟೆ komārakōṭe :

- ಚಿಕ್ಕಮಗಳೂರು ಜಿಲ್ಲೆ ಕಸಬಾ ತಾಲ್ಲೋಕು ಪ್ರದೇಶದ 'ಕೋಟೆವೂರು' ಗ್ರಾಮದ ಬಳಿಯಿರುವ ಕ್ರಿ.ಶ.೧೧–೧೨ನೇ ಶ.ದ ವೀರಗಲ್ಲಿನಲ್ಲಿ 'ಕೊಮಾರಕೋಟೆ' ಎಂಬ ಸ್ಥಳನಾಮದ ಉಲ್ಲೇಖವಿದೆ; The place is named in the 11-12th century `Veeragallu' of Chikkamagaluru district, Kasaba hobli;
- ಈ 'ಕೋಮಾರಕೋಟೆ' ಎಂಬುದು ವ್ಯಕ್ತಿವಾಚಕ ಸ್ಥಳನಾಮವಾಗಿದ್ದು, ಇದೇ ಸಂಪುಟದಲ್ಲಿ ಬರುವ ಕೊಮಾರಸ್ವಾಮಿ, ಕೋಮಾರಯ, ಕೊಮಾರದೇವ, ಕೊಮಾರಗೌಡ ಎಂಬ ಹೆಸರಿನ ವ್ಯಕ್ತಿ ಅಧಿಕಾರಿಯಾಗಿ, ವ್ಯಕ್ತಿಯಾಗಿ, ಹಲವಾರು ರೀತಿಯಲ್ಲಿ ಉಲ್ಲೇಖಗೊಂಡಿದ್ದಾನೆ; The word `Komara Kote' tells a name of a person; the names Komaraswamy, Komaraya, Komaradeva, Komaragowda are mentioned as an officer, a person etc referred in the same edition;
- ಈ ವ್ಯಕ್ತಿಯ ಹೆಸರಿನಲ್ಲಿ 'ಕೊಮಾರಕೋಟೆ' ಎಂಬ ಸ್ಥಳನಾಮ ನಿಷ್ಪತ್ತಿಯಾಗಿದೆ; The name of this place Komarakote born with this person;
- ಈ 'ಕೊಮಾರಕೋಟೆ' ಎಂಬುದು ಪ್ರಸಕ್ತ 'ಕೋಟೆವೂರು' ಎಂದು ಬಳಕೆಯಲ್ಲಿದೆ. Now-a-days this `Komarakote' called as `Kotevooru'.

(E.C- ೧೧; ಚಿಕ್ಕ.ಜಿ.)

ಕೊಮಾರ ಪಂತ komāra panta :

- ಮೀನುಗಾರ ಸಮುದಾಯಕ್ಕೆ ಸೇರಿದ ಜನ ಸಮೂಹ; ಉತ್ತರಕನ್ನಡ ಜಿಲ್ಲೆಯ ಅಂಕೋಲ, ಕಾರವಾರ, ಕುಮಟಾ ಮೊದಲಾದ ಭಾಗಗಳಲ್ಲಿ ಕಂಡುಬರುತ್ತಾರೆ; 'Komara pantha' belongs to fishermans community; they are found in Ankola, Karwara, Kumuta of Uttarakannada district;
- ಮೀನುಗಾರಿಕೆ ಇವರ ಜೀವನಾವಶ್ಯಕ ಕಸುಬು; ಮೀನುಗಳನ್ನು ಹಿಡಿಯುವುದು, ವರ್ತನೆ ಮನೆಗಳಿಗೆ ಹಾಕುವುದು, ಮಾರಾಟ ಮಾಡುವುದು ಇವರ ಕಾಯಕ; Fishery is the life bearing occupation; fish hunting, selling and supply to regular customers house is the main work;
- ಸಾಂಸ್ಕೃತಿಕವಾಗಿ ಹಲವು ಆಚರಣೆಗಳನ್ನು ರೂಢಿಸಿಕೊಂಡಿರುವಂತೆ ಆಟ–ಪಾಠ, ಕುಣಿತಗಳಲ್ಲಿ ಭಾಗವಹಿಸುವುದಿದೆ; ಅದರ ಭಾಗವಾಗಿ ಈ ಸಮುದಾಯದ ಹೆಂಗಳೆಯರು ಕುಣಿಯುವ 'ಪುಗುಡಿ' ನೃತ್ಯ ಜನಪ್ರಿಯವಾದುದು ಮತ್ತು ಮನರಂಜನೆಯೂ ಕೂಡ ಆಗಿದೆ. They adopted some cultural practice and participated in some plays, dances etc; `Pugudi' is famous dance of woman and entertainment also.

ಕೊಮಾರಮ್ಮ komāramma :

- ಮಲೆನಾಡಿನಲ್ಲಿ ಆರಾಧನೆಗೊಳ್ಳುವ ಗ್ರಾಮದೇವತೆ; ಶಕ್ತಿದೇವತೆ ಎಂದೂ ಹೇಳುವುದಿದೆ; The village goddess worshipped in Malnad area; she is also power goddess;
- ಶಕ್ತಿ ಎಂದರೆ ಆದಿಶಕ್ತಿ; ಈ ರೂಪ ಧರಿಸಿರುವವಳು ಪಾರ್ವತಿ; ಹಾಗಾಗಿ ಕೊಮಾರಮ್ಮ ಪಾರ್ವತಿ ದೇವಿಯ ಮತ್ತೊಂದು ಅವತಾರವಿರಬಹುದು ಎಂದು ಹೇಳಲಾಗುತ್ತದೆ; Shakti means

Adhishakti Parvathi is in the guise of Komaramma is a belief;

- ಆದಿಶಕ್ತಿ ಜಗತ್ ರಕ್ಷಕಿ; ಜಗತ್ತಿನ ಪ್ರತಿಯೊಂದು ಸಜೀವ ನಿರ್ಜೀವ ವಸ್ತುಗಳನ್ನು ಕಾಪಾಡುವ ಜವಾಬ್ದಾರಿಯನ್ನು ಹೊತ್ತವಳು; 'ಸಕಲ-ಸರ್ವ ಪಾಲಕಿ' ಎಂಬುದೊಂದು ನಂಬಿಕೆ ಇದೆ; Adhishakti is the protector of the world; she has the responsibility to protect the living beings and non living things is a belief of the people;
- ಹಾಗಾಗಿ ಈ ದೇವತೆಗೆ ಮಲೆನಾಡಿನ ಗ್ರಾಮೀಣ ಪ್ರದೇಶಗಳಲ್ಲಿ ವರ್ಷಕ್ಕೊಮ್ಮೆ ವಿಶೇಷ ಪೂಜೆ ಸಲ್ಲಿಸುವುದು, ಹಬ್ಬ-ಜಾತ್ರೆ ಮಾಡುವುದು ಅಲ್ಲದೆ ಹಾಲಿನ ನೈವೇದ್ಯ ಸಮರ್ಪಿಸುವುದುಂಟು; So, the people of Malnad rural area worshipped her once in a year;
- ಎಲ್ಲವೂ ಶಕ್ತಿದೇವತೆಯ ಮನ ತಣಿಸುವುದಕ್ಕಾಗಿ, ಸಂತುಷ್ಟತೆಗಾಗಿ ಹಾಗೂ ಜನ-ಜಾನುವಾರು, ರೈತರ ಸಂಪತ್ತಿನ ರಕ್ಷಣೆಗಾಗಿ; ಪ್ರ: *'ಕೊಮಾರಮ್ಮನ ಹಬ್ಬಕ್ಕೆ ಸಪ್ತ ವಿಘ್ನಗಳು, ಊರಿಗೇನ್ ಗತಿ ಕಾದಿದೆಯೋ ನಾ ಕಾಣೆ'.* All these to satisfy the goddess to protect the people, cattle and their wealth.

ಕೊಮಾರರು komāraru :

- ಹಾಸನ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಆರಾಧನೆಗೊಳ್ಳುವ ದೇವತೆ; ಕೊಮಾರರು 'ವೀರರು' ಎಂದು ಹೇಳುವುದಿದೆ; The goddess worshipped in rural Hassana district; they are called as `Veeraru'(heros);
- ಹಬ್ಬದ ಸಂದರ್ಭದಲ್ಲಿ ಕುದುರೆ ಮೇಲೆ ಕುಳ್ಳಿರಿಸಿ ಮೆರವಣಿಗೆ ಹೊರಡುವ ಮೂರ್ತಿ ಅಥವಾ ವಿಗ್ರಹಗಳನ್ನು 'ಕೊಮಾರರು', 'ಕೊಮಾರ ಮಕ್ಕಳು' ಎಂದು ಕರೆಯುವರು; The idols are seated on the back of the horse; at the time of procession these idols are called `Komararu', `Komara children';
- ಅಲ್ಲಿನ ಗ್ರಾಮದೇವತೆಗಳ ಜೊತೆಗೆ ಈ ಮೂರ್ತಿಗಳನ್ನು ಪೂಜಿಸುವುದು ಸಾಂಪ್ರದಾಯಿಕ ವಿಧಾನ; ಇದು ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಪದ್ಧತಿಯೂ ಇರಬಹುದು; ಪ್ರ: *'ಅಶ್ವದಳದ ಮೇಲೆ ಕುಳಿತು ಬರುವ ಕೊಮಾರರನ್ನು ನೋಡಲೆರಡು ಕಣ್ಣು ಸಾಲದು'*; These idols are worshipped along with goddesses of the village is a practice since oldendays;
- ***—ಕೊಮಾರೇಶ್ವರ ಜಾತ್ರೆ*** : ಸಕಲೇಶಪುರ ತಾಲೂಕಿನ ಹೆತ್ತೂರಿನಲ್ಲಿ ವರ್ಷಕ್ಕೊಮ್ಮೆ ನಡೆಯುವ ಜಾತ್ರೆ, Komareswara Jatre is a fair celebrated every year in Hettur of Sakaleshpura taluk.

ಕೊಮೆ kome :

- ಸುಡು; ಹೊಗೆಯಾಡು; ಅತಿಯಾಗಿ ಬೇಯು ಅಥವಾ ಬೇಯಿಸು; ಬಿಸಿಯಾಗು; ಬಿಸಿಮಾಡು; ಉರಿಯುವಿಕೆ; ಬೆಂದು ಮೆತ್ತಗಾಗುವಿಕೆ; Burn, smoke, cook too much; warms up; soft by cook;
- ಧೈರ್ಯ, ಪರಾಕ್ರಮ, ಚಾಣಾಕ್ಷತೆ, ಬುದ್ಧಿವಂತಿಕೆ, ಎದೆಗಾರಿಕೆಯನ್ನು ಎದುರಾಳಿಯ ಎದುರು ಪ್ರದರ್ಶಿಸುವುದು ಎಂಬರ್ಥದಲ್ಲಿ ಪದಬಳಕೆ; Brave; valour; prudent; wisdom are the meanings in usage; it means mockery, while talking about cowards the word used;
- ವ್ಯಂಗ್ಯಾರ್ಥ ಸೂಚಕವೂ ಹೌದು; ಕೈಲಾಗದವರು, ಅಸಮರ್ಥರನ್ನು ಕುರಿತು ಮಾತನಾಡುವಾಗ ಪದಬಳಕೆ;
- 'ಮಾತಿನಲ್ಲಿ ಮುಂದು ಕೆಲಸದಲ್ಲಿ ಹಿಂದು' ಎಂಬ ವ್ಯಕ್ತಿಗಳಿಗೆ ಅನ್ವಯವಾದಂತೆ; 'ಬರೀ ಮಾತಾಡ್ತಾನೆ ಅಷ್ಟೆ ಆವಾಗ್ಲಿಂದ ಏನೂ ಕೊಮಿಲಿಲ್ಲ' ಎಂಬುದೊಂದು ಸಂವಾದಿ ಹೇಳಿಕೆ; Persons who speak to everything, but not in action; he speaks only;
- ಕೈಗೆಟುಕದ್ದನ್ನು ಪಡೆದೇ ತೀರಬೇಕೆಂಬ ಕ್ರಿಯೆಯಲ್ಲಿ ವಿಫಲ ಯತ್ನ; Who tries to do an impossible work;
- ಮರದ ತುಂಡು; ಕೊಂಬೆ; ತುದಿ; ರೆಕ್ಕೆಗಳಿಂದ ಕೂಡಿದ ಗಟ್ಟಿಮರ; ಟೊಂಗೆ; ಟೊಂಕೆ; ಮುಂಭಾಗ ಎರಡು ಕವಲಿರುವ ನೇರ ಮರದ ಸರುಬು ಅಥವಾ ತುಂಡು(ನೋಡಿ: ಕವೆ); ಪ್ರ: *'ನೇರಳೆ ಮರದ*

ಕೊಮೆ ತಂದು ಛತ್ರಿ ಹಿಡುದ್ರಂತೆ!; Piece of wood; twig; tip; edge; a hard wood or tree with boughs;

- ದ್ರಾವಿಡ ಭಾಷಾ ರೂಪಗಳಾದ ತಮಿಳಿನಲ್ಲಿ 'ಕುಮೈ', ತುಳುವಿನಲ್ಲಿ 'ಗುಮೆಲು' ಮತ್ತು ಮಲೆಯಾಳಂನಲ್ಲಿ 'ಕುಮಯುಗ' ಎಂಬ ಹೆಸರುಗಳು ಬಳಕೆಯಲ್ಲಿದೆ (ದ್ರಾ.ಭಾ.ಜ್ಞಾ.ಪ.ಕೋ); ತಮಿಳಿನ ಪದ ತೆಲುಗಿನ ಸಂಪರ್ಕದಿಂದ ಬಂದಿರಲು ಸಾಧ್ಯವಿದೆ. In Dravidian language forms `Kumai' in Tamil; `Gumelu' in Tulu; `Kumayuga' in Malayalam names are used; the Tamil word may be from Telugu contact.

ಕೊಮ್ಬಾಳೆ kombāḷe :

- ಹಾಸನ ಜಿಲ್ಲೆಯ ಮುತ್ತಿಗೆ ಗ್ರಾಮದಲ್ಲಿ ದೊರೆತ ಕ್ರಿ.ಶ.೧೦ನೇ ಶತಮಾನದ ೨೪ನೇ ಶಾಸನದಲ್ಲಿ ಈ ಊರಿನ ಹೆಸರಿದೆ; 'Muttige'- this village found in 24th inscription of 10th century of Hassan district;
- ಗಂಗರಸ ರಾಚಮಲ್ಲ ಪೆರ್ಮಾಡಿ(೧೦ನೇ ಶತಮಾನ) ಎಂಬುವನು ಕೊಮ್ಬಾಳೆಯಲ್ಲಿ ಸ್ವರ್ಗಸ್ಥನಾದಂತಹ ವಿವರವನ್ನು ಈ ಶಾಸನ ತಿಳಿಸುತ್ತದೆ; The Gangarasa Rachamalla perumadi was died in `Kombale'; this particulars are in this inscription;
- ಇದರಿಂದ 'ಕೊಮ್ಬಾಳೆ' ಗ್ರಾಮ ಕ್ರಿ.ಶ.೧೦ನೇ ಶತಮಾನದಷ್ಟು ಹಿಂದಿನದು ಎಂಬುದು ಸ್ಪಷ್ಟವಾಗುತ್ತದೆ; So, the village `Kombale' is clearly shows that it was before the 10th AD;
- ಯುದ್ಧ ಸನ್ನಿವೇಶವನ್ನೇನಾದರೂ ಈ ಹೆಸರು ಹೇಳುತ್ತದೆಯೆ? Is this name tells the situation of war time?;
- ಕೊಂಬುಕಹಳೆ>ಕೊಂಬುಗಹಳೆ>ಕೊಂಬುಗಾಳೆ> ಕೊಂಬಾಳೆ ಆಗಿರಬಹುದೆ? ಇದೊಂದು ಊಹೆ ಅಷ್ಟೆ; ಇದಕ್ಕೂ ಭಿನ್ನವಾದ ಮೂಲದಿಂದ ಈ ಪದ ಬಂದಿರಬಹುದು. May be kombale is only guess;

(E.C- ೮; ಹಾ.ಜಿ.)

ಕೊಮ್ಮಕ್ಕಳು kommakkaḷu :

- ಮೊಮ್ಮಕ್ಕಳಿಂದ ಹುಟ್ಟಿದ ಮಕ್ಕಳು; 'ಮರಿಮಕ್ಕಳು' ಎನ್ನುವರು; ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು/ ಕೊಮ್ಮಕ್ಕಳು ಇವು ಮನುಷ್ಯನ ತಲೆಮಾರುಗಳ ಲೆಕ್ಕಾಚಾರದ ಪರಿಕಲ್ಪನೆ; The children of grandsons or daughters; they are called Mari makkalu or Great grand childrens; this is the calculation of generation; bread;
- ಮಕ್ಕಳಲ್ಲಿ ಹಿರಿಮಗ, ಕಿರಿಮಗ, ನಡ್ಕುಲ್ ಮಗ ಎಂದು ಗುರುತಿಸುವುದು ಒಂದು ಬಗೆ; Find the children as elder son, younger son; in between elder and younger son;
- ಬಾಲ್ಯವಿವಾಹ ಜಾರಿಯಲ್ಲಿದ್ದ ಸಂದರ್ಭದಲ್ಲಿ ವ್ಯಕ್ತಿಗಳು ಬೇಗನೆ ಮದುವೆಯಾಗುವ ಅವಕಾಶಗಳಿದ್ದವು; ಆಗ ಮಕ್ಕಳು, ಮೊಮ್ಮಕ್ಕಳು, ಕೊಮ್ಮಕ್ಕಳಾಗುವ ತನಕ ಬದುಕಿರುತ್ತಿದುದುಂಟು; ಹಾಗಾಗಿ ಕೊಮ್ಮಕ್ಕಳನ್ನು ನೋಡುವ, ಅವರ ಜೊತೆಗೆ ಆಟವಾಡುವ, ಅವರಿಗೆ ಕೈತುತ್ತು ನೀಡುವ, ಮುದ್ದು ಮಾಡಿ ಸಾಕಿ-ಸಲಹುವ ಅವಕಾಶಗಳಿದ್ದವು; ಏಕೆಂದರೆ ಅಂದಿನ ಮನುಷ್ಯನ ವಯೋಮಾನದ ಸರಾಸರಿ ನೂರು ವರ್ಷಗಳಿಗೂ ಮೀರಿದ್ದಾಗಿತ್ತು; People are marry in early age, so they got children, grand children, great grand children; they live upto that extent play with them and love them and therefore the average age of man was more than 100 years;
- ಕೊಮ್ಮಕ್ಕಳು ಇವರನ್ನು ಮುತ್ತಾತ, ಮುತ್ತಜ್ಜಿ ಎಂದು ಕರೆಯುತ್ತಿದ್ದರು; ಇವರಿಗೆ ಕೊಮ್ಮಕ್ಕಳ ಮೇಲೆ ವಿಶೇಷವಾದ ಪ್ರೀತಿ, ವಾತ್ಸಲ್ಯವಿತ್ತು; ಕಣ್ಣಲ್ಲಿ ಕಣ್ಣಿಟ್ಟು ನೋಡಿಕೊಳ್ಳುತ್ತಿದ್ದರೂ ಕೂಡ; ಕೆಲವರು ತಮ್ಮ ಜೀವಿತದ ಕೊನೆಗಾಲದಲ್ಲಿ ತಮ್ಮಲಿರುವ ಹಣ, ಆಸ್ತಿ, ಒಡವೆ, ವಸ್ತ್ರಗಳನ್ನೆಲ್ಲಾ ಪ್ರೀತಿಯಿಂದ ಕೊಮ್ಮಕ್ಕಳಿಗೇ ಕೊಡುತ್ತಿದ್ದುದುಂಟು; The great grand children call them as great grand father/mother;
- ಕೊಂ+ಮಕ್ಕಳು>ಕೊಮ್ಮಕ್ಕಳು; 'ಕೊಂ' ಎಂಬುದು ಇಲ್ಲಿ ಸಹಾಯಾರ್ಥಕ ರೂಪವಾಗಿ ಬಳಕೆಗೊಂಡಿದೆ;

ಏಕೆಂದರೆ 'ಕೋಂ/ಕೊಂ' ಎಂಬುದಕ್ಕೆ ಇಂಥವನ ಹೆಂಡತಿ, ವಿಧವೆ ಎಂಬ ಅರ್ಥಗಳಿವೆ; ಇಲ್ಲಿ ಮಕ್ಕಳು, ಮೊಮ್ಮಕ್ಕಳ ಮುಂದಿನ ಪೀಳಿಗೆಯೇ ಕೊಮ್ಮಕ್ಕಳು ಆಗಿರುವುದರಿಂದ 'ಕೊಂ' ರೂಪ 'ಮಕ್ಕಳು' ಪದಕ್ಕೆ ಸಹಾಯಾರ್ಥವಾಗಿ ಬಳಕೆಗೊಂಡಿರುವುದು ಸ್ಪಷ್ಟ?; *ಪ್ರ: 'ನನ್ನ ಪುಣ್ಯ ಕೊಮ್ಮಕ್ಕಳನ್ನು ನೋಡುವ ಭಾಗ್ಯ ನನಗೆ ಲಭಿಸಿತೆಂದು ತೃಪ್ತಿ ಪಡಬೇಕಷ್ಟೆ.'*

ಕೊಮ್ಮಣಗಿ kommaṇagi :

- ಕೊಣಮಿಗಿ, ಕೊಣಮಿಗೆ ಎಂಬ ಹೆಸರಿನಿಂದಲೂ ಕರೆಯುವುದಿದೆ; It is calling in the name as Konamigi, Konamige;
- ರೊಟ್ಟಿ ತಯಾರಿಕೆಗೆ ಬಳಕೆಯಾಗುವ ಕಟ್ಟಿಗೆಯ ಸಾಧನ; ಊಟೋಪಚಾರದ ಸಂದರ್ಭದಲ್ಲಿ ಬಳಕೆ ರೂಪ; A wooden instrument used to prepare rotti(bread) at the time of dinner;
- ರೊಟ್ಟಿ ಮಾಡುವ ಫಳಿ ಅಥವಾ ಹಲಗೆ(ಬಾಗ.ಜಿ); A flank used to prepare rotti or bread; **ನೋಡಿ: ಕೊಣಮಿಗೆ.**

ಕೊಮ್ಮಿನ ಜ್ವಾಳ kommina jwāḷa :

- ಕೊಂಬಿನ ಜೋಳ, ಕಮ್ಮಿನ ಜೋಳ ಇರಬಹುದೆ?; 'ಕಮ್ಮು' ಜೋಳದ ತಳಿಗಳಲ್ಲಿ ಒಂದು ಬಗೆ; 'Kombina jwala' or maize; may be kammina jola; `Kammu' is a kind of maize breed;
- ಜೋಳದ ಒಂದು ವಿಧದ ತಳಿ; ದನಗಳ ಮೇವಿಗಾಗಿ ವಿಶೇಷವಾಗಿ ಬೆಳೆಯಲಾಗುವುದು; 'ಕೇಸ್ರಿ ಜ್ವಾಳ' ಎಂದು ಕರೆಯುವುದಿದೆ; Grow mainly for cattle feed or fodder; it is called as `Kesri Jwala';
- ಜೋಳದಲ್ಲಿ ಬಿಳಿ ಜೋಳ, ಕೆಂಪಿನ ಜೋಳ, ಮೆಕ್ಕೆ ಜೋಳ, ಕಮ್ಮುವಿನ ಜೋಳ, ಮುಸುಕಿನ ಜೋಳ (ಹಲ್ಲಿನ ಜೋಳ) ಮೊದಲಾದ ತಳಿಗಳಿರುವಂತೆ ಕೊಮ್ಮಿನ ಜೋಳವೂ ಒಂದು ತಳಿ ಇರಬಹುದೆ?; different kinds of maizes they are White, Red jola; Mekke jola; Kammuvina jola; Musukina jola etc; among them Kommina jola is one;
- ಈ ತಳಿ ಉತ್ತರಕರ್ನಾಟಕದ ಮಲೆನಾಡು, ಕರಾವಳಿ ಪ್ರದೇಶಗಳಲ್ಲಿ ಕಂಡುಬಂದಿರಬಹುದು; ಆದರೆ ಬಯಲುಸೀಮೆಯಲ್ಲಿ ಗುರುತಿಸಲಾಗಿಲ್ಲ. It is found in Malnadu of Uttarakarnataka and Coastal area.

ಕೊಮ್ಮುಸುತ್ತಿ kommusutti :

- ಕೊಮ್ಮು+ಸುತ್ತಿ; ಕೊಮ್ಮು=ಕೊಂಬು; ಸುತ್ತಿ=ಸುತ್ತಿಗೆ; ದನ, ಎಮ್ಮೆಗಳ ಕೊಂಬಿನಿಂದ ತಯಾರಿಸಿದ ಸುತ್ತಿಗೆ; ಹೆಚ್ಚು ಭಾರದಿಂದ ಕೂಡಿರುವಂಥದ್ದಲ್ಲ; A hammer made of baffalo's horn; it is not heavy;
- ಅಕ್ಕಸಾಲಿಗ ತಯಾರಿಸುವಂತಹ ಆಭರಣಗಳಲ್ಲಿ ಕಚ್ಚು ಬೀಳದಂತೆ ತಟ್ಟಲು ಅಥವಾ ಬಡಿಯಲು ಬಳಸುವನು; It is used by Goldsmiths;
- ಆಭರಣ ತಯಾರಿಕೆಯಲ್ಲಿ ಇಕ್ಕಳ, ತಿದಿ, ಸುತ್ತಿಗೆ, ಇದ್ದಿಲು, ಭತ್ತದ ಹೊಟ್ಟು ಮೊದಲಾದ ಸಾಮಗ್ರಿಗಳನ್ನು ಬಳಸುವುದಿದೆ; *ಪ್ರ: 'ಏನೇ ಹೇಳಣ್ಣ ಕೊಮ್ಮು ಸುತ್ತಿ ಇಲ್ದೆ ಕೆಲ್ಸ ಮಾಡೋದಾದ್ರು ಹೆಂಗೆ'?.*

ಕೊಮ್ಮೆ komme :

೧. ಪಟ್ಟೆ, ಪೆಂಟೆ, ಸುಣಗಲು, ಕಣಜ, ವಾಡೆ, ಗೂಡೆ, ತೊಂಬೆ, ಗುಡಾಣ, ಗಳಗೆ, ಮಡಕೆ, ಬುಟ್ಟಿ ಮೊದಲಾದ ವಿವಿಧ ಹೆಸರುಗಳಿವೆ; It has different names; they are Patte, Pente, Sunagalu, Kanaja, Vaade, Goode, Thombe, Gudana, Galage, Madake, Butti etc;

- ಬಿದಿರಿನಿಂದ ಹೆಣೆದು ತಯಾರಿಸಿದ ಒಂದು ವಿಧದ ಸಾಧನ; ಬಿದಿರಿನ ಹಚ್ಚೆಯಿಂದ ಹೆಣೆದ ಚಾಪೆಯ ಹೊರ ಮತ್ತು ಒಳಭಾಗವನ್ನು ಸಗಣಿಯಿಂದ ತಾರಿಸಿ ಬಿಸಿಲಿನಲ್ಲಿ ಒಣಗಿಸುವುದು; ನಂತರ ಅದನ್ನು ಉರುಳೆಯಾಕೃತಿಯಲ್ಲಿ ಸುತ್ತಿ ತಳಭಾಗವನ್ನು ಬಿದಿರಿನ ಹಚ್ಚೆಗಳಿಂದ ಮುಚ್ಚಿ ಮನೆಯ ಹಜಾರದ ಮೂಲೆ ಅಥವಾ ಪಡಸಾಲೆ/ಜಗಲಿಯ ಭಾಗದಲ್ಲಿ ನಿಲ್ಲಿಸುವುದು; ತೊಂಬೆ ಅಥವಾ ವಾಡೆಯಂತಿರುತ್ತದೆ; An instrument woven by bmboo; the bamboo mat is pasted with cowdung in and outside; it is scrolled and closed the bottom with bamboo pieces; kept in the hall of the house fill the grains in it and

cover the top with gunny bag, paste the red soil on it;

- ಆಳೆತ್ತರದಲ್ಲಿರುವ ಇದರ ತಳಭಾಗ ಮುಚ್ಚಿರುವುದರಿಂದ ಮೇಲ್ಭಾಗ ತೆರೆದಿದ್ದು ಒಳಭಾಗ ಗೋಳಾಕೃತಿಯಲ್ಲಿರುತ್ತದೆ; ಇದರೊಳಗೆ ವಿವಿಧ ದವಸ-ಧಾನ್ಯಗಳನ್ನು ತುಂಬಿ ಅದರ ಮೇಲ್ಭಾಗಕ್ಕೆ ಒಂದು ಗೋಣಿಚೀಲ ಹಾಸಿ ಅದರ ಮೇಲೆ ಕೆಮ್ಮಣ್ಣು ಸವರಿ ಇಡುವರು; It is in man's height the bottom closed and the top is open; different kinds of grains filled and cover the top with gunny and stitch it, paste with red soil;
- ಹೀಗೆ ಮಾಡಿಟ್ಟ ದವಸ-ಧಾನ್ಯಗಳನ್ನು ಸುಮಾರು ಮೂರ್‍ನಾಲ್ಕು ವರ್ಷಗಳವರೆಗೆ ಸಂರಕ್ಷಣೆ ಮಾಡಬಹುದು; ಮುಂದಿನ ಬಿತ್ತನೆಗೆ, ಊಟಕ್ಕೆ ಬಳಕೆ ಮಾಡಿಕೊಳ್ಳುವುದಿದೆ; ಈ ಧಾನ್ಯ ಕೆಡದೆ, ಹುಡುಕು ಹುಳ, ಚಿಟ್ಟೆ ಕಾಣಿಸಿಕೊಳ್ಳದೆ ಸುರಕ್ಷಿತವಾಗಿರುತ್ತದೆ; The groceries are kept in it upto three to four years without any damage by insects or worms;
- ವಿವಿಧ ದವಸ-ಧಾನ್ಯ ತುಂಬಿಡುವ ಬಿದಿರಿನಿಂದ ತಯಾರಿಸಿದ ದಪ್ಪದಾದ ಸಾಧನ; ಪಟ್ಟೆಗಿಂತ ಚಿಕ್ಕದಾಗಿದ್ದು ಮೂರ್‍ನಾಲ್ಕು ಪಲ್ಲ ಧಾನ್ಯ ತುಂಬಿ ಸಂರಕ್ಷಣೆ ಮಾಡಬಹುದು; Made of bamboo store in it groceries or corns it is smaller than Patta, store only three to four hundred kg of corns;
- ಭತ್ತ, ರಾಗಿ, ಜೋಳ, ದ್ವಿದಳ ಧಾನ್ಯಗಳು, ಕೊತ್ತಂಬರಿ, ಅಕ್ಕಿ, ಗೋಧಿ ಮೊದಲಾದವನ್ನು ತುಂಬಿಡುವುದು ರೂಢಿ; ಹಿಂದೆ ಗ್ರಾಮೀಣ ಪ್ರದೇಶಗಳಲ್ಲಿ ಯತೇಚ್ಚವಾಗಿ ಬಳಕೆಯಲ್ಲಿದ್ದ ಸಾಧನ; This is used in rural area to keep or store paddy, ragi, jowar, corns, rice, wheat etc;
- ಮಣ್ಣಿನಿಂದಲೂ ಗೂಡೆಯಾಕೃತಿಯಲ್ಲಿ ತಯಾರಿಸುವ ಗುಡಾಣ ಅಥವಾ ಗಳಗೆ ಅಥವಾ ಅಳಗೆ; ಇದರ ಹೊಟ್ಟೆಭಾಗ ದಪ್ಪದಾಗಿದ್ದು ಮೇಲ್ಭಾಗ ಕಿರಿದಾಗಿರುತ್ತದೆ; ತಳಭಾಗದಲ್ಲಿ ಒಂದು ಸಣ್ಣ ರಂಧ್ರವಿದ್ದು ಧಾನ್ಯವನ್ನು ಹೊರ ತೆಗೆಯಲು ಉಪಯೋಗ; ನಂತರ ಅದನ್ನು ಬಟ್ಟೆಯಿಂದ ಮುಚ್ಚುವುದಿದೆ; ಮನೆಯ ಒಂದು ಮೂಲೆಯಲ್ಲಿ ಸಿಂಬಿಯನ್ನಿಟ್ಟು ಅದರ ಮೇಲೆ ಗುಡಾಣ ಇಡುವುದು ವಾಡಿಕೆ; The big earthern pots are used to store the corns; the round middle part is big in size, it has a hole in top to fill the grain, it has hole in the bottom to takeout the corn;
- ಬಿದಿರಿನಿಂದ ತಯಾರಿಸಿದ ಆಳೆತ್ತರದ ತೊಂಬೆ; ಗುಂಡಗಿನ ದೊಡ್ಡ ಬಿದಿರಿನ ಬುಟ್ಟಿ; ಬಟ್ಟೆ-ಬರೆಗಳನ್ನು ತುಂಬಿಡಲು ಉಪಯೋಗ; The bamboo big baskets used to keep the cloths;
- ಹಿಂದೆ ಇವತ್ತಿನಂತೆ ಆಧುನಿಕ ಪೀಠೋಪಕರಣಗಳ ಪರಿಚಯವಿರಲಿಲ್ಲ; ಹಾಗಾಗಿ ಬಿದಿರಿನ ಬುಟ್ಟಿ, ಮಣ್ಣಿನ ಮಡಕೆ ಮೊದಲಾದವು ದಿನನಿತ್ಯದ ಬಳಕೆ ಸಾಮಗ್ರಿಗಳಾಗಿದ್ದವು; ದವಸ-ಧಾನ್ಯ ತುಂಬಲು, ಬಟ್ಟೆ-ಬರೆ ತುಂಬಿಡಲು, ಊಟ-ತಿಂಡಿ ಸಾಮಗ್ರಿಗಳನ್ನು ಹೊತ್ತೊಯ್ಯಲು ಪ್ರಧಾನವಾಗಿ ಬಿದಿರಿನ ಬುಟ್ಟಿಯನ್ನೇ ಬಳಸುತ್ತಿದ್ದುದು ಉಂಟು; In olden days have no furniture like today, only bamboo basket and earthern pots are the day today useful materials; to kept the corns, cloths, to carry food to the field etc; mainly bamboo baskets used;
- ಹುಲ್ಲು-ಬಟ್ಟೆಗಳಿಂದ ಮಾಡಿದ ಚಿಕ್ಕ ಚೀಲ; 'ಕೈಚೀಲ' ಎನ್ನುವರು; A hand bag made of grass and cloth;
- ಬುರುಜು; ಚರ್ಬಿ; ಹೊಟ್ಟೆ; ಕೊಬ್ಬು; ಬೊಜ್ಜು (ಮಂ.ಜಿ); Bastion; fat; fatness;
- ಸೊಂಟದ ಎರಡು ಪಕ್ಕಗಳಲ್ಲಿ ಜೋತುಬಿದ್ದಿರುವ ಬೊಜ್ಜು(ತು.ನಿ); Fatness hanging around the waist;
- ಹೆಚ್ಚು ಬೆಳವಣಿಗೆಯಾಗದೆ ದೇಹ ದಪ್ಪಗಿರುವ ಕುಳ್ಳ ಮನುಷ್ಯನನ್ನು 'ಕೊಮ್ಮೆ ಕಾಳ', ಹೆಂಗಸಾದರೆ 'ಕೊಮ್ಮೆ ಕಾಳಿ' ಎಂದು ಹೇಳುವುದಿದೆ; A fatty dwarf man is called `Kommekala', woman is `Kommekali';
- ದ್ರಾವಿಡ ಭಾಷಾ ರೂಪಗಳಾದ ತಮಿಳಿನಲ್ಲಿ 'ಕೊಮ್ಮೈ', ತೆಲುಗಿನಲ್ಲಿ 'ಕುಮ್ಮಿ' ಅಥವಾ 'ಗುಮ್ಮಿ', ಮಲೆಯಾಳಂನಲ್ಲಿ 'ಕೊಮ್ಮ' ಮತ್ತು ಕೊಡವ

ಭಾಷೆಯಲ್ಲಿ ಯಥಾಪ್ರಕಾರವಾಗಿ 'ಕೊಮ್ಮೆ' ಪದವೇ ಬಳಕೆಯಲ್ಲಿರುವುದು ಕಂಡುಬಂದಿದೆ; 'ಹೆಮ್ಮೆ ನೋಡುದ್ರೆ ಕೊಮ್ಮೆ ಗಾತ್ರ ಕೊಮ್ಮೇಲ್ ನೋಡುದ್ರೆ ಒಕ್ಕುಳ್ ರಾಗಿ ಇಲ್ಲ'(ಗಾ); In Tamil `Kommai', in Telugu `Kummi' or `Gummi', in Malayalam `Komma', in Kodava as usual `Komme' word used;

೨. ಸಸ್ಯ ವಿಶೇಷ; ನೆಲದಲ್ಲಿ ಹಬ್ಬಿ ಬೆಳೆಯುವುದು ಇದರ ಸ್ವಭಾವ; ಅಭಿಮುಖ ಜೋಡಣೆಯಿಂದಿರುವ ಎಲೆಗಳಲ್ಲಿ ಒಂದು ಚಿಕ್ಕದು ಮತ್ತೊಂದು ಅಗಲವಿರುವುದು; ನೆಲದಲ್ಲೇ ಹಬ್ಬಿ ಬೆಳೆಯುವುದರಿಂದ ಕುಣಿಕೆ ಕುಣಿಕೆಗಳಲ್ಲೂ ಬೇರುಗಳಿರುವುದು ಸಹಜ; A plant grows spread on the ground; the leaves are join opposite direction one leaf is big another small; every knot or joint has root on the ground;

- ಈ ಸಸ್ಯದಿಂದ ತಯಾರಿಸಿದ ಕಷಾಯ ಜನಪದ ಮದ್ದಾಗಿ ಬಹಳ ಉಪಯೋಗದಲ್ಲಿರುವಂಥದು; ಹುಳ ನಿವಾರಣೆಗೆ, ಸಂಧಿವಾತ, ಯಕೃತ್, ಮೂತ್ರ ಜನಕಾಂಗ ಮತ್ತು ದೇಹದ ಊತದ ಉಪಶಮನಕ್ಕೆ ಕುಡಿಸುವುದಿದೆ; Folk medicine prepared by this plant use this medicine to prevent worms, joint pain, Jaundice, penis and swelling of body;
- ಕೊಮ್ಮೆಸೊಪ್ಪನ್ನು 'ಪಸಲೆ ಸೊಪ್ಪು' ಎಂದು ಕರೆಯುವರು; ಈ ಸೊಪ್ಪಿನ ಬೇರನ್ನು ಎಣ್ಣೆಯಲ್ಲಿ ನೆನೆಸಿ ಶೀತವಾದ ಮಕ್ಕಳ ಹೊಟ್ಟೆಯ ಒಕ್ಕಳ ಭಾಗಕ್ಕೆ ಲೇಪಿಸಿದರೆ ಶೀತ ಉಪಶಮನವಾಗುವುದೆಂಬ ನಂಬಿಕೆ ಬಲವಾಗಿದೆ; Komme leaf is called as `Pasale soppu'; the oiled leaf pasted on the novel the cold effect to children comes to normal is a belief;
- ಇದರ ಬೇರನ್ನು ಜಜ್ಜಿ ಬೇಯಿಸಿ ಅದಕ್ಕೆ ಸ್ವಲ್ಪ ಹಾಲು, ಸಕ್ಕರೆ ಸೇರಿಸಿ ಕಷಾಯ ಮಾಡಿ ನಾಯಿಕೆಮ್ಮಿಗೆ ಔಷಧಿಯಾಗಿ ಕುಡಿಸುವುದಿದೆ; The juice from the crushed root of this plant boiled with milk and take it as medicine for severe caugh(Nayi kemmu);
- ಕೊಮ್ಮೆ ಬೇರು ಅಥವಾ ಸೊಪ್ಪು(ಸಸ್ಯ) ಗದ್ದೆಯ ತೆವರಿನ ಮೇಲೆ, ಹುತ್ತದ ಬಳಿ ಬೆಳೆಯುತ್ತದೆ; ಇದು ಸ್ವಾಭಾವಿಕವಾಗಿ ಬೆಳೆಯುವ ಸಸ್ಯ ಪ್ರಭೇದ; 'ಹಮ್ಮುಗಾರ ಕೊಮ್ಮೆಸೊಪ್ಪೆ ಸುಮ್ಮಗೆ ಬೇಯಿ ಒಲೆಮ್ಯಾಗೆ ಅಂತ'(ಗಾ); *ಪ್ರ: 'ಹಮ್ಮು–ಬಿಮ್ಮು ಬಿಟ್ಟು ಕೊಮ್ಮೆಸೊಪ್ಪು ತಿಂದೋಳೆ ಜಾಣೆ'.* The root and leaf of `Komme' found or grows on the bund of the field and near anthills naturally.

ಕೊಮ್ಮೆರಗಾಲಿ/ಕೊಮರಿಗಾಲಿ kommeragāli/ komarigāli :

- ಕೊಮ್ಮೆರ+ಗಾಲಿ; ಗಾಲಿ=ಬಾವಿಯಲ್ಲಿ ನೀರು ಸೇದುವ ಸಾಧನ; ರಾಟೆ ಅಥವಾ ಗಡಗಡೆ ಇರಬಹುದೆ ಎಂಬುದೊಂದು ಅನುಮಾನ; An instrument to lift water from the well; may be wheel like;
- ಬಾವಿಯ ಪಕ್ಕದಲ್ಲಿ ಹಂದರದಂತೆ ನಿಲ್ಲಿಸಿದ ಕಮಾನು ಕಟ್ಟಿಗೆ; An arch beside the well like roof;
- ಕಪಿಲೆ ಚಕ್ರದ ರಾಟೆ; ಮರದಿಂದ ತಯಾರಿಸಿದ್ದು; ಬಾವಿಯಿಂದ ನೀರೆತ್ತಲು ಬಳಸುವ ಚಕ್ರ; ಬಿಂದಿಗೆ ಕಟ್ಟಿದ ಹಗ್ಗವನ್ನು ಈ ತಿರುಗಣೆಯ ಮೇಲೆ ಹಾಕಿ ಅದು ತಿರುಗಿ ನೀರಿನ ಭಾಗಕ್ಕೆ ಬೀಳುವುದು; ನಂತರ ನೀರು ತುಂಬಿಸಿ ತಿರುಗಣೆಯಲ್ಲಿರುವ ಹಗ್ಗವನ್ನು ಹಿಡಿದು ಎಳೆದರೆ ಬಿಂದಿಗೆ ಮೇಲೆ ಬರುತ್ತದೆ; Kapile wheel; made of wood; used to lift the water from the well;
- 'ಕಮ್ಮರಗಾಲಿ' ರೂಪ ಇರಬಹುದೆ; ಕಮ್ಮರ+ಗಾಲಿ; 'ಕಮ್ಮರ' ಎಂದರೆ 'ಮರವೊಂದರ ಹೆಸರು'(ಕಿಟ್ಟೆಲ್); ಆ ಮರದಿಂದ ತಯಾರಿಸಿದ 'ರಾಟೆ' ಎಂದು ಅರ್ಥ ಮಾಡಬಹುದೆ?. `Kammara' is a name of a tree; so the wheel made of `Kammara' may be the `Kammara gali'.

ಕೊಯ್/ಕೊಯಿ/ಕೊಯು koy/koyi/ koyu :

- ಕುಯ್, ಕುಯ್ಯಿ, ಕುಯ್ಯು, ಕುಯ್ದಾಕು, ಕುಯ್ಲು, ಕೂದಾಕು ಮೊದಲಾದವು ಗ್ರಾಮೀಣರಿಗೆ ಸುಲಭದಲ್ಲಿ ದಕ್ಕುವ ಉಚ್ಚಾರಣಾ ರೂಪಗಳು; ಕೊಯ್, ಕೊಯ್ಯಿ ಮತ್ತು ಕುಯ್, ಕುಯ್ಯಿ ರೂಪಗಳ ಉಚ್ಚಾರಣೆಯಲ್ಲಿ

ವ್ಯತ್ಯಾಸ ಕಂಡರೂ ಅರ್ಥಸಾಮ್ಯಾತೆ ಮಾತ್ರ ಒಂದೇ ಆಗಿದೆ; ಇಲ್ಲಿ ಪ್ರಾದೇಶಿಕ ಭಿನ್ನತೆಯನ್ನು ಮನಗಾಣಬಹುದು; ಹಾಗಾಗಿಯೇ ಈ ಎರಡೂ ಬಗೆಯ ರೂಪಗಳೂ ಒಂದಲ್ಲಾ ಒಂದು ಭಾಗದಲ್ಲಿ ಪ್ರಚಲಿತದಲ್ಲಿವೆ; 'ಕುಯ್' ಮೂಲರೂಪ; ಅದೇ 'ಕೊಯ್' ಆಗಿದೆ; ಕ್+ಉ>ಕ್+ಒ; ಉ>ಒ(ಸ್ವರ ವ್ಯತ್ಯಯ); Kuy, Kuyyi, Kuyyu, Kuydaku, kuylu, Koodaku etc forms are easily pronounced; they have difference in pronunciation but they have similarity in meaning;

- ಕೊಯ್, ಕುಯ್ ಎಂಬುದು ಕ್ರಿಯಾತ್ಮಕ ಹಿನ್ನೆಲೆಯುಳ್ಳ ಪದ; ಒಂದು ವಸ್ತುವನ್ನು ಕಡಿ ಅಥವಾ ಕತ್ತರಿಸು ಎಂಬ ಅರ್ಥವನ್ನು ಅಭಿವ್ಯಕ್ತಿಸಲು ಈ ರೂಪದ ಬಳಕೆ ಇದೆ; ಕೊಯ್ ಪದ ಯಾವುದೇ ಒಂದು ವಸ್ತು ಅಥವಾ ಒಂದು ಪರಿಕಲ್ಪನೆಯನ್ನು ಆಧಾರವಾಗಿಟ್ಟುಕೊಂಡು ಹೇಳಲು ಬರುವುದಿಲ್ಲ; ಇದರ ಅರ್ಥಸಾಮ್ಯತೆ ವಿಶಾಲವಾದುದು; ವ್ಯಕ್ತಿಯ ಬದುಕಿನಲ್ಲಿ ಪ್ರತಿನಿತ್ಯ ಒಂದಲ್ಲಾ ಒಂದು ವಿಧದಲ್ಲಿ ಪ್ರಚಲಿತದಲ್ಲಿರುವಂಥದು; Koy, kuy words have the actioning background; this form is used to cut a thing or anything; the word `koy' cannot say on the basis of a thing or a concept; the power of meaning is very vast, it is existed in the life of a person in one way or the other;
- ಮರ, ಗಿಡ, ಬಳ್ಳಿಗಳನ್ನು ಕಡಿ; ಹೂವು, ಹಣ್ಣು, ತರಕಾರಿ, ಕಾಯಿ, ಸೊಪ್ಪು, ಸೆದೆಗಳನ್ನು ಕೀಳು ಅಥವಾ ಕೊಯ್ದಾಕು; ಸೊಪ್ಪು, ತರಕಾರಿಗಳನ್ನು ಸಾಂಬಾರಿಗೆ ತಕ್ಕಂತೆ ಹೆಚ್ಚು ಅಥವಾ ಕತ್ತರಿಸು; ಬೆಳೆದು ನಿಂತ ಬೆಳೆಗಳನ್ನು ಕೊಯ್ಯಿ ಹೀಗೆ ಇದರ ವಿಶಾಲತೆಯ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ; Chop the tree, plant, creepers; pluck the flower, fruit, vegetable, leaves, cut the vegetables in right size to soup; harvest crop; like this the vastness of the meaning of the word extended;
- ಜಗಳದಲ್ಲಿ ಎದುರಾಳಿಯನ್ನು ಕೋಪಾವೇಷದಿಂದ 'ಕೊಯ್ದಾಕ್ ಬುಡ್ತೀನಿ ಮಗ್ನೆ' ಎಂದು ಗರ್ಜಿಸುವುದಿದೆ; ಆದರೆ ಇದು ಬರೀ ಮಾತಾದ್ದರಿಂದ ಕ್ರಿಯೆಗೆ ಇಳಿಯುವುದಿಲ್ಲ; ಎದುರಾಳಿಯನ್ನು ಹೆದರಿಸುವ, ಭಯ ಹುಟ್ಟಿಸುವ ಹುನ್ನಾರವಂತೂ ಇದ್ದೇ ಇದೆ; ಒಟ್ಟಿನಲ್ಲಿ 'ಕೊಯ್' ಪದ ಧನಾತ್ಮಕ ಮತ್ತು ಋಣಾತ್ಮಕ ಎರಡೂ ಪರಿಕಲ್ಪನೆಗಳನ್ನು ಒಳಗೊಂಡಿರುವುದಂತೂ ಸತ್ಯ; The word some time only speech, it cannot harm; it is only the expression to create fear to the opponent; the word has two concepts positive and negative i.e., true;
- ಕುಯ್ಯಿ; ಕುಯ್ದಾಕು; ಕಡಿ; ಕತ್ತರಿಸು; ತುಂಡಾಕು; ತುಂಡರಿಸು; ಕಟಾವು ಮಾಡು; ಕೀಳು; ಸೀಳು; ಬಿಡಿಸು; ಬೇರ್ಪಡಿಸು; ಕೊಯ್ಲು; ಆಯ್ದುಕೊಳ್ಳು; ಬೋಳಿಸು; ಅರ್ಧ ಮಾಡು; ಹೋಳು ಮಾಡು; Cut; cut off; bite; cut short; harvest; pluck; slice; remove; separate; harvesting; pickup; swindle; make half; make split;
- ಗಿಡದಿಂದ ಹೂವು, ಹಣ್ಣು, ತರಕಾರಿ, ಕಾಯಿ, ಸೊಪ್ಪುಗಳನ್ನು ಬೇರ್ಪಡಿಸು; ಸುಗ್ಗಿಯ ಸಂದರ್ಭದಲ್ಲಿ ಭತ್ತದ ಕೊಯ್ಲಿಗೆ ಸಂಬಂಧಿಸಿದಂತೆ ಪದಬಳಕೆ; Use this word to separate the flowers, fruit, vegetables, leaf from the plant;
- ಒಬ್ಬ ವ್ಯಕ್ತಿ(ಆಳು) ಒಂದು ದಿವಸ ಕಟಾವು ಮಾಡುವಷ್ಟು ವಿಸ್ತೀರ್ಣದ ಜಮೀನು; ಸುಮಾರು ೧೦ ಸೇಂಟ್ಸ್ ನೆಲ ಅಥವಾ ಭೂಮಿ;
- ಕುರಿ, ಮರಿ, ಕೋಳಿ ಮೊದಲಾದ ಪ್ರಾಣಿಗಳನ್ನು ಕಡಿಯಬೇಕಾದಾಗ ಕೊಯ್, ಕೊಯ್ಯಿ, ಕುಯ್ಯಿ ಪದಗಳ ಬಳಕೆ ಪ್ರಚಲಿತದಲ್ಲಿದೆ; ಸೊಪ್ಪು–ತರಕಾರಿಗಳನ್ನು ಸಾಂಬಾರು ತಯಾರಿಕೆಗೆ ತಕ್ಕಷ್ಟು ಪ್ರಮಾಣದಲ್ಲಿ ಕುಯ್ದಾಕುವುದು ಒಂದು ವಿಧಾನ; The words Koy, Koyyi, Kuyyi used while cutting the sheep, hen etc;
- ಹೆಚ್ಚು ಮಾತನಾಡುವವರನ್ನು ಕುರಿತು ವ್ಯಂಗ್ಯೋಕ್ತಿಯಾಗಿ ಪದಬಳಕೆ; 'ಅದೇನ್ ಪಿಟೀಲ್ ಕುಯ್ತಾನೋ ಮಾರಾಯ' ಎಂದು ಹೇಳುವುದಿದೆ; ಕೆಲವರು ಹಾಗೆಯೇ ಬಿಟ್ಟರೆ ಮಾತನಾಡುತ್ತಲೇ ಇರುತ್ತಾರೆ; ಅರ್ಥವಿಲ್ಲದ್ದು, ವ್ಯರ್ಥವಾದದ್ದು

ಎಂಬುದರ ಅರಿವಿರುವುದಿಲ್ಲ; ಒಳಿತು, ಕೆಡುಕುಗಳ ಬಗೆಗೆ ಚಿಂತಿಸುವುದಿಲ್ಲ; ಎದುರಿರುವವರ ಕಿವಿ ತೂತು ಬೀಳುವಷ್ಟು ಮಾತನಾಡುವವರಿದ್ದಾರೆ; ಅವರಿಗೆ ಈ ಪದದ ಬಳಕೆ ಉಚಿತವೇ ಸರಿ; 'ಹದ ಕಂಡು ಕೊಯ್ಲಿಲ್ಲ ಬೆದೆ ಕಂಡು ಬಿತ್ತಿಲ್ಲ'(ಗಾ); The word used as mockery, who has speak more; without any meaning in their speech they don't think about good and bad of the conversation;

- ದ್ರಾವಿಡ ಭಾಷಾ ರೂಪಗಳಾದ ತಮಿಳು ಹಾಗೂ ಕೊಡವ ಭಾಷೆಗಳಲ್ಲಿ ಯಥಾಪ್ರಕಾರವಾಗಿ 'ಕೊಯ್' ಪದವೇ ಬಳಕೆಗೊಂಡಿದೆ; ಹಾಗೆಯೇ ತುಳುವಿನಲ್ಲಿ 'ಕೊಯಿ', ತೆಲುಗಿನಲ್ಲಿ 'ಕೋಯು' ಮತ್ತು ಮಲೆಯಾಳಂನಲ್ಲಿ 'ಕೊಯ್ಗ' ರೂಪಗಳ ಬಳಕೆ ಇದೆ; ಇಲ್ಲಿ ಉಲ್ಲೇಖಿಗೊಂಡಿರುವ ತುಳುವಿನ 'ಕೊಯಿ', ತೆಲುಗಿನ 'ಕೋಯು' ರೂಪಗಳು ಕನ್ನಡದಲ್ಲೂ ಪ್ರಚಲಿತವಿರುವ ಶಬ್ದಗಳೇ ಆಗಿವೆ; ಒಟ್ಟಾರೆ ಕನ್ನಡದ ಕೊಯ್, ಕೊಯಿ, ಕೊಯು ರೂಪಗಳೇ ಅಲ್ಪ-ಸ್ವಲ್ಪ ಬದಲಾವಣೆಯೊಂದಿಗೆ ಎಲ್ಲಾ ದ್ರಾವಿಡ ಭಾಷೆಗಳಲ್ಲಿಯೂ ಬಳಕೆಗೆ ಬಂದಿರುವುದು ವಿಶೇಷ (ದ್ರಾ.ಭಾ.ಜ್ಞಾ.ಪ.ಕೋ); In the Dravidian language forms like Tamil and Kodava the word `Koy' used as usually; In Tulu `Koyi', Telugu `Koyu', Malayalam `Koyga', the kannada words are used in Dravidian languages with a little bit of change;
- *ಪ್ರ: 'ಕೊಯ್ತೀನಿ ಅಂತಿದ್ದೋರೆಲ್ಲಾ ಕೊಯ್ಮತ್ತೂರ್ನಲ್ಲೋಗ್ ಬಿದ್ದವ್ರಂತೆ'; 'ಕೊಯ್ದ್ ಕಾಲ್ನ ನಾಯ್ ತಿಂದ್ರೇನು ನರಿ ತಿಂದ್ರೇನು'(ಗಾ); ಪ್ರ: 'ಹೌದು ಯಾವಾಗ್ಲೂ ಕುಯ್ಯೋದು ಕೊರೆಯೋದು ಅನ್ನೋ ಮಾತ್ನೇ ಆಡ್ತಿರ್ತಿಯಲ್ಲಾ ಏನ್ ನಿನ್ನ್ ಕತೆ ಅಂತೀನಿ*!
- ***—ಕೊಯ್ಗುರಿ/ಕುಯ್ಗುರಿ*** : ಕುಯ್ಯಲು ಅಥವಾ ಕಡಿಯಲೆಂದೇ ತಂದ ಕುರಿ; ಬಲಿ ಕೊಡಲಾಗುವ ಕುರಿ; ಮೈತುಂಬಿ ದಪ್ಪಗಿರುವ ಕೊಬ್ಬಾದ ಕುರಿ; ಮಾಂಸಾಹಾರಕ್ಕಾಗಿ ಸಾಕಿರುವಂಥದು; The sheep only bought to cut;
- ಹಬ್ಬದ ದಿವಸ ಮುಂದಿನ ವರ್ಷದ ಹಬ್ಬಕ್ಕಾಗಿ ಬಿಡಲಾಗುವ ಹರಕೆಯ ಕುರಿಗೂ ಪದಬಳಕೆ; The same word used to fix the sheep for next year feast;
- ಕೊಯ್+ಕುರಿ>ಕೊಯ್‌ಕುರಿ>ಕೊಯ್ಕುರಿ> ಕೊಯ್ಗುರಿ; ಉಚ್ಚಾರಣೆಯಲ್ಲಿ 'ಕ'ಕಾರಕ್ಕೆ 'ಗ'ಕಾರ ಬಂದಿರುವುದು; ಪ್ರ: 'ಕೊಯ್ಗುರಿ ತಂದು ಕೊಟ್ಗೇಲ್ ಕಟ್ಟವ್ನೆ ಅಂದ್ರೆ ಹಿತ್ಲಲ್ ನೋಡ್ತಿದ್ರಂತೆ';
- ***—ಕೊಯ್ಗತ್ತಿ*** : ಕುಯ್ಗತ್ತಿ; ಬೆಳೆ ಕುಯ್ಯಲು ಮತ್ತು ಮರಿ, ಕೋಳಿ, ಕುರಿಗಳನ್ನು ಕತ್ತರಿಸಲು/ಕಡಿಯಲು ಬಳಸುವ ಕತ್ತಿ; ಕಬ್ಬಿಣದಿಂದ ತಯಾರಿಸಿರುವಂಥದು. A sword or knife or sickle used to cut the hen, sheep and the crop; it is made of iron.

ಕೊಯ್‌ಟಿ koyṭi :

- ಕೊರಟಿ; ಹಿಡಿ ಇರುವ ಮರದ ತುಂಡು; ಬಟ್ಟೆ ಒಗೆಯುವಾಗ ಬಡಿಯುವ ಮರದ ಕೊರಡು. It is a piece of wood with handle while washing the cloths use to hit.

ಕೊಯಙ್ ಕಟ್ಟೆಮರ koyaŋ kaṭṭemara :

- 'ಕೊಯಙಗಟ್ಟಿ ಅಥವಾ ಕುಯಙಗಟ್ಟಿ' ಮರ ಎಂಬ ಹೆಸರು ಬಯಲುಸೀಮೆಯ ಕೆಲವು ಭಾಗದಲ್ಲಿ ರೂಢಿಯಲ್ಲಿದೆ; 'ಯ'ಕಾರವೂ ಅನುನಾಸಿಕತ್ವ ಪಡೆಯುವುದರಿಂದ ಅದರ ಮುಂದೆ 'ಕ್'ವರ್ಗದ 'ಙ' ಅನುನಾಸಿಕ ಇರುವುದರಿಂದ ಉಚ್ಚಾರಣೆ 'ಙ್'ದ ಮೇಲೆ ಬಿತ್ತು; A name `Koyaŋgatte' or `Kuyaŋgatte' wood is in practice in some parts of plain land area;
- ಕೊಯಙ್‌ಕಟ್ಟೆ>ಕೊಯ್ಙ್‌ಕಟ್ಟೆ>ಕೊಯಙಕಟ್ಟೆ> ಕೊಯಙ್‌ಗಟ್ಟೆ; ಪದಾಂತ್ಯದ 'ಟ'ಕಾರ 'ಎ'ಕಾರಕ್ಕೆ 'ಇ'ಕಾರವಾಗಿ ಬದಲಾಗಿದೆ; ಇದು ಪ್ರಾದೇಶಿಕ ಭಿನ್ನತೆಯ ರೂಪ; ಉತ್ತರಕರ್ನಾಟಕ ಜನತೆಯ ಭಾಷಾ ಉಚ್ಚಾರಣೆಯಲ್ಲಿ ಇಂತಹ ವ್ಯತ್ಯಯ ಸಾಮಾನ್ಯ; The differences are found in Uttarakarnataka people; in their language that type of pronunciation is common;
- ಗಾಡಿಯ ಮುಂಭಾಗದಲ್ಲಿರುವ ಮೂಕಿಯ ಮೇಲೆ ಕೂರಿಸಲಾಗುವ ನೊಗವು ಹಿಂದೆ-ಮುಂದೆ ಜರುಗದಂತೆ ಅಳವಡಿಸುವ ತಡೆಮರ; A break wood fixed on the front part of the taper

pole of the carriages; by this yoke cannot be move back and front;

- ಈ ಮರವನ್ನು ಜಾಲಿಮರದಿಂದ ತಯಾರಿಸಬೇಕೆಂಬುದು ಅನುಭವಿ ಹಿರಿಯರ ಅಭಿಪ್ರಾಯ; ಇದು ಗಾಡಿಯ ಪ್ರಧಾನ ಅಂಗ; ಗಾಡಿಯ ಭದ್ರತೆಯೂ ಹೌದು; This should be made by Jali wood is the opinion of the experienced elders; it is a major part and a safty part of the carriage too;
- ಗಾಡಿಗೆ ಅಳವಡಿಸುವ ಹಲವು ಬಿಡಿಭಾಗಗಳಲ್ಲಿ ಇದೂ ಸಹ ಒಂದು; ಗಾಡಿ ಹಲವು ಬಿಡಿಭಾಗಗಳನ್ನು ಕೂಡಿಸಿ, ಜೋಡಿಸಿರುವಂಥದು ಎಂಬುದು ಗಮನಿಸಬೇಕಾದ ಅಂಶ; ಇದು ಕ್ರಿಯೆಯೂ ಹೌದು, ಕಲೆಯೂ ಹೌದು; ಈ ಕೆಲಸವನ್ನು ಮರಗೆಲಸದ ಬಡಗಿಗಳು ಮಾಡುವುದಿದೆ; It is also a spare part of the carriage; making of the carriage is an activity and an art also; it is an occupation of the carpenters;
- ರೈತರಿಗೆ ಗಾಡಿಯನ್ನು ಮಾಡಿಕೊಟ್ಟು ಅವರಿಂದ ದವಸ-ಧಾನ್ಯ, ಹಣ ಹಾಗೂ ಇತರೆ ಉಡುಗೊರೆಗಳನ್ನು ಬಳುವಳಿಯಾಗಿ ಪಡೆಯುವುದಿದೆ; They prepare carts for farmers and receive the corns, money and other gifts by them;
- ಗಾಡಿಯ ಆಯಕ್ಕನುಗುಣವಾಗಿ ಕೊಯಜ್‌ಕಟ್ಟೆ ಮರವನ್ನು ಸಿದ್ಧಪಡಿಸಿ ಅಳವಡಿಸುವರು; ಇದು ಅಳತೆಗನುಗುಣವಾಗಿಲ್ಲದಿದ್ದರೆ ಗಾಡಿಯು ಏರುಪೇರಾಗಿ ಆಯ ತಪ್ಪುವುದಿದೆ(ನೋಡಿ: ಗಾಡಿ); *ಪ್ರ: 'ಈ ಗಾಡಿಗೆ ಕೊಯಜ್‌ಕಟ್ಟೆ ಮರ ತುಂಡಾಯಿತಲ್ಲವೆ'?*. According to the plan of the cart the Koyaŋkatte wood is prepared and fixed, otherwise the cart will be imbalance.

ಕೊಯತೂರು koyatūru :

- ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೋಕಿನಲ್ಲಿ ದೊರೆತ ಕೆಲವು ಶಾಸನಗಳಲ್ಲಿ ಈ ಊರಿನ ಪ್ರಸ್ತಾಪವಿದೆ; ಆದರೆ ವಿವರಣೆ ಸಿಕ್ಕುವುದಿಲ್ಲ; This village name referred in the inscription found in Tumkuru district Gubbi taluk;
- ಯಿಡಗೂರಿನಲ್ಲಿ ದೊರೆತ ಕ್ರಿ.ಶ.೧೧೫೨ರ ಶಾಸನ ಕೊಯತೂರನ್ನು 'ಕ್ಕೊಯತೂರ್ಗೊಂದವಾಡಿ' ಎಂದು ಉಲ್ಲೇಖಿಸಿದೆ(೭೯); The inscription found in Yidagooru in 1152nd AD the village referred as `Kkoyathorgondavadi';
- ಸುಮಾರು ೧೨ನೇ ಶತಮಾನದ ಚಿಕ್ಕನಾಯಕನಹಳ್ಳಿಯ ನಿರುವಗಲ್ಲು ಶಾಸನದಲ್ಲಿ 'ಕೋಯತೂರು' ಎಂಬ ಉಲ್ಲೇಖವಿದೆ(೪೧); In the 12th century Niruvagallu inscription of Chikkanayakanahalli, the village Koyathooru referred;
- ಅದೇ ತಾಲ್ಲೋಕಿನ ಮುದ್ದೇನಹಳ್ಳಿಯಲ್ಲಿ ದೊರೆತ ಕ್ರಿ.ಶ.೧೩೬೨-೬೩ರ ಶಾಸನದಲ್ಲಿ 'ಕೊಯತೂರ್ತುಂಗ' ಎಂಬ ಉಲ್ಲೇಖವಿದೆ(೭೬); In 1362-63AD inscription of the same taluk found in Muddenahalli referred as `Koyathhothuranga';
- 'ಕೊಯತೂರು' ಪದ 'ಕುಯತೂರು' ಪದದಿಂದ ಬಂದಿರಬಹುದು; ಹಳಗನ್ನಡದಿಂದ ಆ ಮುಂದಿನ ಕನ್ನಡಕ್ಕೆ ಸ್ಥಿತ್ಯಂತರ ಹೊಂದುವಾಗ ಕು>ಕೊ(ಉ>ಒ) ಆಗುವುದು ಸಹಜ. ಸ್ವರ ವ್ಯತ್ಯಯದ ಲಕ್ಷಣವಿದು;
- ಕುಯತೂರು/ಕೊಯತೂರು=ಕುಯತ್+ಊರು/ ಕೊಯತ್+ಊರು; ಸರಿಯೇ; ಆದರೆ ಕುಯತ್ ಅಥವಾ ಕೊಯತ್‌ಗೆ ಅರ್ಥವೇನು ತಿಳಿಯದು.

(E.C- ೨೪; ತು.ಜಿ.)

ಕೊಯಮುತ್ತೂರು ಮಗ್ಗ koyamuttūru magga :

- ಮಗ್ಗದ ಎರಡು ಕಡೆಯ ಲಾಳಿಗಳು ನಿಲ್ಲುವ ಜಾಗದಲ್ಲಿ ಗಡಿ ಹೊಡೆಯುವಂತಹ ಮಾದರಿ (ನೇ.ವೃ.ಪ.ಕೋ).

ಕೊಯಾಮಂಜರಿಕೆ koyāmanjarike :

- 'ಕುರೊಂಬಾಳೆ' ಎಂಬ ಹೆಸರು ಬಯಲುಸೀಮೆಯ ಕೆಲವು ಕಡೆಗಳಲ್ಲಿ ಪ್ರಚಲಿತ; ತೆಂಗಿನ ಮರದಲ್ಲಿ ಹೊರಹೊಮ್ಮುವ ಹೊಂಬಾಳೆಯ ಹೂಗೊಂಚಲು; ಇದರ ಒಣಗಿದ ಹೂಗೊಂಚಲಿಗೆ ಉತ್ತರಕನ್ನಡ

ಜಿಲ್ಲೆಯಲ್ಲಿ 'ಕೊಯಾಮಂಜರಿಕೆ' ಎಂದು ಕರೆಯಲಾಗುತ್ತದೆ; The name `Kurombale' is in practice in plain land area; the flower bunch of coconut tree; the dried bunch is called Koyamanjarike in Uttarakannada district;

- ಇದು ಉರುವಲಿಗೆ ಬಳಕೆಯಾಗುವುದು; ಹೊಂಬಾಳೆಯ ಹಿಂಭಾಗದ ಗಟ್ಟಿಯಾದ ಭಾಗವನ್ನು ಗೋಡೆಗಳಿಗೆ ಸುಣ್ಣ ಬಳಿಯಲು ಗುಂಜಾಗಿ ಬಳಸುವುದಿದೆ; It is used for fuel; the back part of the `Hombale' used as brush to white wash on the wall;
- ತೆಂಗಿನ ಮರದ ಪ್ರತಿಯೊಂದು ಭಾಗವೂ ಒಂದಲ್ಲ ಒಂದು ವಿಧದಲ್ಲಿ ಉಪಯೋಗಕ್ಕೆ ಬರುವ ಪದಾರ್ಥಗಳು; ಅದರಲ್ಲಿ ಹೆಚ್ಚಾಗಿ ಕಟ್ಟಿಗೆಗೆ-ಉರುವಲಿಗೆ ಉಪಯೋಗಿಸುವುದು ಕಂಡುಬಂದಿದೆ; Every part of the coconut tree is useful in one way or the other; mainly used as fuel;
- ಗ್ರಾಮೀಣ ಭಾಗದಲ್ಲಿ ಮಳೆಗಾಲದಲ್ಲಿ ಸಾಮಾನ್ಯವಾಗಿ ತೆಂಗಿನಮರದ ಬಿಡಿಭಾಗಗಳನ್ನೇ ಉರುವಲಿಗೆ ಬಳಸುವುದಿದೆ; ಕುರೊಂಬಾಳೆ, ಮಟ್ಟೆ, ತೆಂಗಿನಗರಿ, ಗೊದ್ಮ ಮೊದಲಾದವು ಬೇಸಿಗೆಯಲ್ಲಿ ಒಣಗಿ ಬೀಳುತ್ತವೆ; ಅದನ್ನು ಕಾಣುವ ರೈತ ಎಲ್ಲವನ್ನು ತೆಗೆದು ಒಂದೆಡೆ ಸಂರಕ್ಷಿಸಿ ಅಗತ್ಯ ಸಂದರ್ಭಗಳಲ್ಲಿ ಬಳಸಿಕೊಳ್ಳುತ್ತಾನೆ; In rural area the coconut parts used as fuel in rainy season when the dried coconut tree parts felt down, they are collect and store at a place to use whenever it is necessary;
- ಕೆಲವೊಮ್ಮೆ ಮರಕ್ಕೆ ಸುಳಿರೋಗ, ಸಣ್ಣ ಸಣ್ಣ ಕಾಯಿಗಳೇ 'ಸೂತಿಯಾಗಿ'(ಚಾ.ಜಿ) ಕೆಳಗೆ ಬೀಳುವಾಗ ಹೊಂಬಾಳೆ ತನ್ನಿಂತಾನೆ ಒಣಗುವುದು, ಕೆಳಗೆ ಬೀಳುವುದಿದೆ; The Coconut tree affected by disease to the tender leaf they fall down, the small nut and the bunch also dried and felldown;
- ಕುರೊಂಬಾಳೆಗೂ ಮುಂಚಿನ ಆಗತಾನೆ ದಸಿ ಕಡೆದ ಹೊಂಬಾಳೆಯ ಮೂತಿಯನ್ನು ಸವರಿ ನಾರಿನಿಂದ ಬಿಗಿದು ನೀರಾ ಇಳಿಸುವ ವಿಧಾನ ಎಲ್ಲೆಡೆ ಜಾರಿಯಲ್ಲಿತ್ತು; *ಪ್ರ: 'ಹೊಲದಲ್ಲಿ ಕೊಯಾಮಂಜರಿಕೆ ಕದ್ದನೆಂದು ಪಂಚಾಯ್ತಿ ಸೇರಿಸುವುದೆ'.* The early stage of `Kurombale' used to collect toddy, by cutting the tip and bind with the thread and the drops of Neera collected in a pot.

ಕೊಯಿಲತ್ತ koyilatta :

- ಕಟಾವಿನ ಭತ್ಯೆ; ಕಟಾವು ಮಾಡಿದ ಕೆಲಸಗಾರರಿಗೆ ದವಸ-ಧಾನ್ಯದ ರೂಪದಲ್ಲಿ ಕೊಡಲಾಗುವ ಕೂಲಿ(ದ.ಕ); Wages paid to the workers after harvest in the way of corns;
- ಹಣಕಾಸಿನ ವ್ಯವಹಾರ ಪರಿಣಾಮಕಾರಿಯಾಗಿ ಜಾರಿಯಲ್ಲಿಲ್ಲದ ಹಿಂದಿನ ಕಾಲದ ಸಂದರ್ಭದಲ್ಲಿ ಇಂತಹ ವ್ಯವಸ್ಥೆ ರೂಢಿಯಲ್ಲಿತ್ತು; In olden days the money circulation was improper so, this system was in practice;
- ಅಂದು ಒಂದಾಣಿ, ಎರಡಾಣಿ, ತೂತ್ಕಾಸು, ತಾಮ್ರದ ಕಾಸು ನಂತರ ಬೆಳ್ಳಿ ಕಾಸುಗಳು ಅಸ್ತಿತ್ವದಲ್ಲಿದ್ದವು; ಬಡಜನರು ಸಿರಿವಂತರ ಮನೆಯಲ್ಲಿ ದುಡಿದು ಅವರಿಂದ ದುಡಿತಕ್ಕೆ ಪ್ರತಿಫಲವಾಗಿ ಹಣದ ಬದಲು ದವಸ-ಧಾನ್ಯ ಪಡೆಯುತ್ತಿದ್ದರು; ಅಂದಿನ ಮಟ್ಟಿಗೆ ಇದು ಒಂದು ವಿಧದಲ್ಲಿ 'ಜೀತಪದ್ಧತಿ' ಆಗಿತ್ತು; On those days the coins are in transaction they are made of copper or silver, the poor workers got corns instead of money;
- ಸಾಮಾನ್ಯ ಕೂಲಿಕಾರ್ಮಿಕರಿಗೆ ದವಸ ಕೊಟ್ಟರೆ ಜನಪದ ಆಯಗಾರರಿಗೆ ಇಂತಿಷ್ಟು ಜಮೀನನ್ನು 'ಹಡದೆ' ರೂಪದಲ್ಲಿ ಬಿಡುತ್ತಿದ್ದುದು ಉಂಟು; Common works are paid in the form of corn;
- ಕೊಯಿಲ್+ಅತ್ತ>ಕೊಯಿಲತ್ತ ಆಗಿರಬಹುದೆ? 'ಕೊಯಿಲ್' ಎಂದರೆ ಕಟಾವು, 'ಅತ್ತ' ಎಂದರೆ ಆದಮೇಲೆ; ಕಟಾವು ಆದ ಮೇಲೆ ಕೂಲಿಕಾರರಿಗೆ ಕೊಡುತ್ತಿದ್ದ ಕೂಲಿ;
- 'ಕೊಯಿಲಾಳು' ಎಂಬ ರೂಪವೂ ಇದೆ; ಕೊಯಿಲ್+ಆಳು>ಕೊಯಿಲಾಳು; ಕಟಾವು ಮಾಡುವ ಕೂಲಿಕಾರರು ಎಂದು ಅರ್ಥ.

ಕೊಯಿಲು/ಕೊಯ್ಲು koyilu/koylu :

- ಕೊಯಿಲು>ಕೊಯ್‌ಲು>ಕೊಯ್ಲು; 'ಕೊಯಿಲು' ಪದಾಂತ್ಯದ 'ಲ'ಕಾರ 'ಯ'ಕಾರದಲ್ಲಿ ಸೇರಿ 'ಕೊಯ್ಲು' ರೂಪವಾಗಿದೆ; ಉಚ್ಚಾರಣೆಯಲ್ಲಿ ಸಂಕ್ಷಿಪ್ತ ಪದ ಸೌಲಭ್ಯದಿಂದಾಗಿ ಈ ಬದಲಾವಣೆ;
- ಹದವರಿತ ಬೆಳೆಯನ್ನು ಕಟಾವು ಮಾಡುವ ಪ್ರಕ್ರಿಯೆಗೆ 'ಕೊಯ್ಲು' ಎನ್ನುವರು; ಇದು ಹಿಂದಿನಿಂದಲೂ ಗ್ರಾಮೀಣ ಜನಪದರಿಗೆ ಒಂದು ಆಚರಣಾತ್ಮಕ ನೆಲೆಗಟ್ಟಿನಲ್ಲಿ ಉಳಿದು ಬೆಳೆದು ಬಂದಿರುವಂಥದು; Harvest of the riped crop is called 'Koylu'; this practice is remain from ancient days;
- ಸಂಭ್ರಮ, ಸಡಗರವನ್ನು ಉಂಟು ಮಾಡುವ, ಅಧಿಕ ಶ್ರಮವನ್ನು ಮರೆಮಾಚುವ ಅಭೀಪ್ಸೆ ಈ ಪರಿಕಲ್ಪನೆಗಿದೆ; ಇದು ವ್ಯಕ್ತಿ–ವ್ಯಕ್ತಿಗಳ ನಡುವಿನ ಸಾಮರಸ್ಯದ ಮನೋಧರ್ಮವೂ ಹೌದೆಂದರೆ ತಪ್ಪಿಲ್ಲ; ಏಕೆಂದರೆ ಇಲ್ಲಿ ಪ್ರೀತಿ, ವಿಶ್ವಾಸ, ನಂಬಿಕೆ, ಸಹಕಾರ, ಸಂಬಂಧಗಳ ಬೆಸೆಯುವಿಕೆ ಮತ್ತು ಮಾನವೀಯ ಮೌಲ್ಯಗಳಿಗೆ ಹೆಚ್ಚು ಮಹತ್ವವಿದೆ; This concept has to hide the too much hard work to excitement of desire; it is the harmony between persons; love, trust, belief, co-operation, to co-ordinate the relationship and human values have more importance;
- ಕೊಯ್ಲಿಗೆ ಮೊದಲು ಭೂತಾಯಿ ಮತ್ತು ಬೆಳೆಗೆ ಕೃತಜ್ಞತಾಪೂರ್ವಕವಾಗಿ ಪೂಜೆ–ಪುನಸ್ಕಾರ ಸಲ್ಲಿಸುವುದು, ಚರಗ ಚೆಲ್ಲುವುದು, ಅಲ್ಲೇ ನಾಲ್ಕಾರು ಜನಕ್ಕೆ ಅನ್ನಸಂತರ್ಪಣ ಮಾಡುವ ವಿಧಾನವಿದೆ; ನಂತರ ಕೊಯ್ಲಿನ ದಿವಸವನ್ನು ನಿಗದಿ ಮಾಡುವರು; ಈ ಕ್ರಿಯೆಯ ಪ್ರಾರಂಭಕ್ಕೆ ಸೋಮವಾರ, ಶುಕ್ರವಾರ ಪ್ರಶಸ್ತ ದಿವಸವೆಂಬುದು ಬಲವಾದ ನಂಬಿಕೆ; Before the first reaping of the year show gratitude to the mother earth by offering worship and serve dinner to few people is the practice; next the date of reap fixed; for this activity begins on Monday or Friday is an auspicious;
- ಮೋಡ, ಮಳೆ, ಬಿಸಿಲಿನ ವಾತಾವರಣ ನೋಡಿ ಕೊಯ್ಲು ಮಾಡುವುದು ಒಂದು ವಿಧಾನ; ಹಾಗಾಗಿ ಡಿಸೆಂಬರ್‌ನಿಂದ ಮಾರ್ಚ್–ಏಪ್ರಿಲ್ ತಿಂಗಳನ್ನು ಆಯ್ದುಕೊಳ್ಳುವರು; ಇದು ಚಳಿಗಾಲವಾದ್ದರಿಂದ ಮೋಡ, ಮಳೆ ಬರುವ ಸಂಭವವಿರುವುದಿಲ್ಲ; ಹಾಗಾಗಿ ನಮ್ಮ ರೈತರು ಈ ಅವಧಿಯನ್ನು 'ಕೊಯ್ಲಿನ ಕಾಲ' ಅಥವಾ 'ಸುಗ್ಗಿ ಕಾಲ' ಎಂದು ಪರಿಗಣಿಸುವರು; Choose the rainless days to reap, probably December to March-April months are precious; the farmers called these months are harvesting or reaping time or season;
- ಕೊಯ್ಲಿನ ಪ್ರಾರಂಭ ಪೂರ್ವ ದಿಕ್ಕಿನಿಂದಲೇ ಆಗಬೇಕು; ಕುಯ್ದು ಬೆಳೆಯನ್ನು ಹೇಗೆಂದರೆ ಹಾಗೆ ಬಿಸಾಡದೆ ಹರಿ/ಅರಿ ಮಾಡಿ ಇಡಬೇಕು; ನಂತರ ಕಂತೆ ಕಟ್ಟಿ ಒಂದೆಡೆ ರಾಶಿ ಹಾಕಬೇಕು; ಮುಂದೆ ಕಣಕ್ಕೆ ಹೊಯ್ದು ಒಕ್ಕಣೆ ಮಾಡುವುದು ಇದ್ದೇ ಇರುತ್ತದೆ; Reaping start from east direction; reaped crop should be keep in discipline and carry to reaping yard to thrash;
- ಕೊಯ್ಲಿನ ಉಪಕರಣಗಳ ಬಳಕೆಯಲ್ಲಿ ಭಿನ್ನತೆ ಇದೆ; ಹರಿತವಾದ ಕುಡುಗೋಲು, ಉಜ್ಜೋರಿ, ಕಳಾರಿ, ಗುದ್ದಲಿ, ಮಚ್ಚು ಮೊದಲಾದವುಗಳ ಬಳಕೆ ಬೆಳೆಗಳ ಆಧಾರದ ಮೇಲೆ ನಿಗದಿ; ಕೊಯ್ಲಿಗೆ ಒಬ್ಬ ವ್ಯಕ್ತಿ ಹಿಡಿದುಕೊಳ್ಳುವ ಸಾಲನ್ನು 'ಮುಂಬು' ಎಂದು ಕರೆಯುತ್ತಾರೆ; ಕೊಯ್ಲಿನಲ್ಲಿ ಗುತ್ತಿಗೆ ಮತ್ತು ದಿನಗೂಲಿ ಎಂಬ ಎರಡು ಪ್ರಕಾರಗಳನ್ನು ಗುರುತಿಸಬಹುದು; Reaping instruments are different according to the nature of the crop they are sharp sickle, spade, hatchet etc; the reapers are two kind, contract and daily wage reapers;
- ಕೊಯ್ಲಿನ ದಿವಸದಿಂದ ಅಂತಿಮದವರೆಗೆ ಸಿಹಿ ಹಾಗೂ ಮಾಂಸಾಹಾರದ ಅಡುಗೆ ಸಿದ್ಧಪಡಿಸಿ ಕೂಲಿಕಾರ್ಮಿಕರಿಗೆ ಊಟ ಹಾಕಿಸುವ ವ್ಯವಸ್ಥೆ ಹಿಂದಿನಿಂದಲೂ ರೂಢಿಯಲ್ಲಿರುವಂಥದು; ಹಾಗೆಯೇ ಕಾಫಿ, ಟೀ, ಬ್ರೆಡ್, ಕಡ್ಲೆಮರಿ, ಬೀಡಿ, ಬೆಂಕಿಪೊಟ್ಟಣ, ಸಂಜೆ ಮದ್ಯಪಾನ ಸೇವನೆ ಮೊದಲಾದ ಸೌಕರ್ಯಗಳಿರುತ್ತದೆ; ಇದು ಜಮೀನಿನ ಒಡೆಯರ ಮನೋಧರ್ಮಕ್ಕೆ ಬಿಟ್ಟ ವಿಚಾರ; ಈ ಎಲ್ಲ ಸೌಲಭ್ಯವನ್ನು ಒದಗಿಸಿ ಕೊಡಲೇಬೇಕೆಂಬ ನಿಯಮ

ಅಥವಾ ಪದ್ಧತಿಯಿಲ್ಲ; The land lord provide veg and non-veg food to the workers i.e., in practice; they provide coffee or tea, beedies to them; this is left to the disposition of the owner; no restriction or rule provide all these to the workers;

- ಕೊಯ್ಲು ಕೂದು ಬಿಟ್ಟ ಗದ್ದೆಗೆ 'ಅಕ್ಕಲು ಅಥವಾ ಕೂಳೆ' ಗದ್ದೆ ಎಂದು ಕರೆಯಲಾಗುವುದು; ಕೆಲವರು ಈ ಕೂಳೆಗಳನ್ನು ನೆಲಮಟ್ಟಕ್ಕೆ ಕತ್ತರಿಸಿ ಅಲ್ಲೇ ಕಣ ಮಾಡಿ ಒಕ್ಕಣೆ ಕೆಲಸಕ್ಕೆ ಅಣಿ ಮಾಡುವುದುಂಟು; ಕೊಯ್ದ ಗದ್ದೆಯಲ್ಲಿ ಅಕ್ಕಲು ಹಾಯುವ ಪ್ರಕ್ರಿಯೆ ಇಂದು ನೆನ್ನೆಯದ್ದಲ್ಲ; ಕೊಯ್ಲು ಮತ್ತು ಒಕ್ಕಣೆ ಇವೆರಡೂ ಒಂದೇ ಪರಿಕಲ್ಪಯನ್ನು ಹೊಂದಿರುವಂತಹ ಪ್ರಕ್ರಿಯೆಗಳು; ಒಂದಾದ ನಂತರ ಮತ್ತೊಂದರ ಕೆಲಸ ತುರ್ತಾಗಿರುತ್ತದೆ; ಹಾಗಾಗಿ ಈ ಎರಡೂ ಪರಿಕಲ್ಪನೆಯ ಕಾಲಕ್ಕೆ 'ಸುಗ್ಗಿಕಾಲ' ಎಂದು ನಮ್ಮ ರೈತರು ಸಂಭ್ರಮದಿಂದಲೇ ಹೇಳಿಕೊಳ್ಳುತ್ತಾರೆ; After reap the field is called stubble field; the stubbies are clear to base level to make threshing floor; the remaining of the crop takeout of the land is called `Akkalu'; the reap and harvest have the same concept of actions; they are performing one after another very rapidly; this period is called harvesting time or season;
- ಹಿಂದೆ ಇಂತಹ ಸುಗ್ಗಿಕಾಲ ತಿಂಗಳಾನುಗಟ್ಟಲೆ ನಡೆಯುತ್ತಿತ್ತು; ಅಂದಿನ ರೈತರಿಗೆ ಈ ದಿವಸಗಳು ಮುಗಿಯುವವರೆಗೆ ಕಾಡೇ ನಾಡಾಗಿತ್ತು; ಅವರ ಊಟೋಪಚಾರ, ವಾಸದ ಪ್ರಕ್ರಿಯೆಗಳು ಅಲ್ಲೇ ಆಗಿರುತ್ತಿತ್ತು; ಅಚ್ಚರಿ ಎಂದರೆ ಸುಗ್ಗಿಕಾಲ ಮುಗಿಯುವವರೆಗೆ ಕೆಲವರು ಸ್ನಾನವನ್ನೇ ಮಾಡುತ್ತಿರಲಿಲ್ಲ ಎಂಬುದು; ಕಾರಣ ನಮ್ಮ ರೈತರಿಗೆ ಈ ದಿವಸಗಳು ತುಂಬಾ ಮಹತ್ವದ ದಿವಸಗಳಾಗಿರುತ್ತಿದ್ದವು; ಒಂದು ದಿವಸದ ಕೆಲಸಕ್ಕೆ ವರ್ಷದ ಕೂಳು ಕಳೆದುಕೊಳ್ಳಲು ಇಷ್ಟ ಪಡುತ್ತಿರಲಿಲ್ಲ; ಏಕೆಂದರೆ ಅವರಿಗೆ ಸ್ನಾನ ಮಾಡಲು ಹೆಚ್ಚು ಕಡಿಮೆ ಒಂದು ಮಧ್ಯಾಹ್ನವೇ ಬೇಕಾಗಿತ್ತು; ನಂತರ ಊಟ ತಿಂದು ಸಂಪೂರ್ಣವಾಗಿ ನಿದ್ರೆ ಮಾಡುವುದು ರೂಢಿ; Previous days reaping and harvesting process takes months long; in these days the field is the home to the farmers; the farmers have no bath in those days; because they are the important days to them; they are not ready to lose the year long food for a day; farmers takes time to bath half a day, and have rest after dinner; so, they lost a day;
- ಇಂದಿನ ಯಾಂತ್ರಿಕ ಯುಗ ಕೊಯ್ಲಿಗೆ ಹೊಸ ಹೊಸ ತಂತ್ರಜ್ಞಾನವನ್ನು ಆವಿಷ್ಕಾರಗೊಳಿಸಿ ದುಡಿಯುವ ರೈತರಿಗೆ ಕೆಲಸವಿಲ್ಲದಂತೆ ಮಾಡಿದೆ; ಹತ್ತಾರು ಜನರು ಮಾಡಬೇಕಾದ ಕೆಲಸವನ್ನು ಒಂದು ತಂತ್ರಜ್ಞಾನ ಮಾಡುತ್ತಿರುವುದರಿಂದ ಗ್ರಾಮೀಣ ರೈತರೂ ನಿರುದ್ಯೋಗಿಗಳಾಗಿದ್ದಾರೆ; today's mechanical age gives a new touch to the reap and harvest; in this technology clear the work of ten and odd workers within short duration, the rural farmers and workers remain jobless;
- ಕೊಯ್ಲು ಮುಗಿದ ನಂತರ ಅಂತಿಮ ದಿವಸ ಸಿಹಿ ಅಥವಾ ಮಾಂಸಾಹಾರದ ಭೋಜನ ತಯಾರಿಸಿ ಎಲ್ಲರೊಡಗೂಡಿ ಸಂತೋಷ ಕೂಟ ಏರ್ಪಡಿಸುವ ಪದ್ಧತಿ ಇದೆ; ಇದು ಇಂದು ನೆನ್ನೆಯದಲ್ಲ; The last day of harvest arrange veg-nonveg dinner party with all participents as a mark of joy is a culture since olden days;
- 'ಕೊಯ್ಲು' ಪದದ ಮೂಲರೂಪ 'ಕುಯ್ಲು'; ಇದೇ ಬಳಕೆಯಲ್ಲಿ 'ಕೊಯ್ಲು' ಆಗಿರಬಹುದು; ಪದಾದಿಯ ಕು>ಕೊ ಆಗಿದೆ, ಅಂದರೆ ಉ>ಒ ಆಗುವುದು– 'ಸ್ವರವ್ಯತ್ಯಯ'ಕ್ಕೊಂದು ಚೆನ್ನಾದ ವಿವರಣೆ; ಆದ್ದರಿಂದ ಕುಯ್ಲು ಮತ್ತು ಕೊಯ್ಲು ಎರಡೂ ರೂಪಗಳು ಚಾಲ್ತಿಯಲ್ಲಿವೆ. The origin form of `Koylu' word may be `Kuylu' but these two words are in usage.

ಕೊಯ್ಕ koyka :

- ಕತ್ತರಿಸುವವನು; ಸೀಳುವವನು; Cutter, slicer;
- ಒಂದು ಬಗೆಯ ಪಕ್ಷಿ ಪ್ರಭೇದ; A kind of bird species;

- ಕಪಟಿ; ಮೋಸಗಾರ; ವಂಚಕ; ನಯವಂಚಕ; ದ್ರೋಹಿ; ನಂಬಲರ್ಹವಲ್ಲದ ವ್ಯಕ್ತಿ; ದಗಲಬಾಜಿತನದ ಸ್ವಭಾವವುಳ್ಳವ; Decepter; cheater; fraud, traitor; betrayer;
- 'ಕೊಯ್ಕ' ಎಂಬುದು ತಮಾಷೆಯಾಗಿ ಬಳಸುವ ರೂಪ; ಮಕ್ಕಳ ಜೊತೆ ಮಗುವಿನಂತೆ ಆಟವಾಡುವಾಗ ಈ ಪದದ ಬಳಕೆ ಇದೆ; The word form `Koyka' used as fun; while playing with children this word used;
- 'ಕೊಯ್ಕ' ಎಂಬುದು ಅನುಕರಣಾವ್ಯಯ; ಭಾಷಿಕ ಜಾನಪದದ ನೆಲೆಗಟ್ಟಿನಲ್ಲಿ ಒಂದು ಕೂಗು ಅಥವಾ ಶಬ್ದ ಎಂದು ಹೇಳಬಹುದು; ಕೆಲವೊಮ್ಮೆ ಕೋಳಿಯಿಂದ ಇಂತಹ ಒಂದು ಧ್ವನಿ ಹೊರ ಹೊಮ್ಮಲಿದೆ; `Koyka' is an imitable folk call sound; sometimes this kind of sound by hen;
- 'ಕೊಯ್ಕ' ಎಂಬುದಕ್ಕೆ 'ಮುಗಿಸಿಬಿಡು' ಎಂಬರ್ಥವೂ ಇದೆ; 'ಒಂದೇ ಏಟ್ಗೆ ಕೊಯ್ಕ ಅನ್ನುಸ್ಬುಡು' ಎಂಬುದು ಸಂವಾದಿ ರೂಪ; *ಪ್ರ:'ನಾನ್ ಹೇಳ್ದಂಗ್ ಕೇಳಿದ್ರೆ ಇಷ್ಟೊತ್ಗೆ ಅವ ಕೊಯ್ಕ ಅಂದಿರೋನು'.* The word `Koyka' has the meaning `to end off' or `kill'.

ಕೊಯ್ತ/ಕೊಯ್ತಿ koyta/koyti :

- ಉದ್ದಕೋಲುಳ್ಳ ಅರ್ಧಚಂದ್ರಾಕಾರದ ಕತ್ತಿ; ಕುಡುಗೋಲಿನಂತಿರುವ ಸಾಧನ; ಕಬ್ಬಿಣದಿಂದ ತಯಾರಿಸಿದ್ದು; ಬೆಳೆದು ನಿಂತ ಬೆಳೆಗಳನ್ನು ಕತ್ತರಿಸಲು ಉಪಯೋಗ(ಕಲ.ಜಿ.); A knife has long sticked half or semicircled moon like; it is like sickle; made of iron; used to cut the crop;
- ಹಿಂದೆ ಮರ ಅಥವಾ ಕಬ್ಬಿಣದ ಹಿಡಿಕೆಯಿದ್ದು ಮಧ್ಯಭಾಗ ಸುಮಾರು ಒಂದೆರಡು ಅಡಿಗಳಷ್ಟು ಉದ್ದವಿರುವುದು; ಮುಂಭಾಗವನ್ನು ಮಾತ್ರ ಅರ್ಧಚಂದ್ರಾಕೃತಿಯಲ್ಲಿ ಬಾಗಿಸಿ ಒಳಭಾಗವನ್ನು ಹರಿತವಾಗುವಂತೆ ಹದವಾಗಿ ತಟ್ಟಿರುತ್ತಾರೆ; ಈ ಕೆಲಸವನ್ನು ಕಬ್ಬಿಣದ ಸಾಮಗ್ರಿ ದುರಸ್ಥಿ ಮಾಡುವ 'ಕಮ್ಮಾರ' ನಡೆಸುವನು; It has wood or iron handle, one or two feet long in the middle, the tip or front portion bend like semi moon like bending this part is very sharp; it is made by the blacksmith;
- ಕಮ್ಮಾರನಿಗೂ ರೈತನಿಗೂ ಅವಿನಾಭಾವ ಸಂಬಂಧ; ರೈತನ ಪ್ರತಿಯೊಂದು ಕಬ್ಬಿಣದ ಸಾಮಗ್ರಿಗಳನ್ನು ಇವನೇ ದುರಸ್ಥಿ ಮಾಡಬೇಕು; ಹಾಗಾಗಿ ರೈತರು ಇವರಿಗೆ ಜಮೀನನ್ನು ಹಡದೆ ಬಿಟ್ಟು ದವಸ-ಧಾನ್ಯವನ್ನು ಆಯ ಕೊಡುವುದಿದೆ. Blacksmith and farmers have good relationship; the farmers instruments are made by him and repair them; so farmers gave him corns and land instead.

ಕೊಯ್ಯಾರ koyyāra :

- ಕೊಯ್ಯುವ ಅಥವಾ ಕತ್ತರಿಸುವ ಹರಿತವಾದ ದಾರ; ನಾರಿನಿಂದ ತಯಾರಿಸಿದ್ದಿರಬಹುದು; A thread to cut or saw, may be prepared by strand;
- ತೆರೆಯಂತೆ ಪೇರಿಸಿದ ಮಣ್ಣನ್ನು ನಿಗದಿತ ಅಳತೆಗೆ ಕತ್ತರಿಸಲು ಬಳಕೆ; Used to cut the mounded soil to a fixed limit;
- ಕೊಯ್+ದಾರ>ಕೊಯ್‌ದಾರ>ಕೊಯ್ದಾರ> ಕೊಯ್ಯಾರ?; ಉಚ್ಚಾರಣೆಯಲ್ಲಿ 'ದ'ಕಾರ ಲೋಪವಾಗಿ 'ಯ'ಕಾರವೇ ಒತ್ತಕ್ಷರವಾಗಿ ಬಂದಿದೆ?.

ಕೊಯ್ಯಾರಸೊಪ್ಪು koyyārasoppu :

- 'ಅರಿವೆಸೊಪ್ಪು' ಎಂಬ ಜನಪ್ರಿಯ ಹೆಸರು ಪ್ರಚಲಿತದಲ್ಲಿದೆ; ದೊಡ್ಡ ಕೊಯ್ಯಾರ ಸೊಪ್ಪು, ಸಣ್ಣ ಕೊಯ್ಯಾರ ಸೊಪ್ಪು ಎಂಬ ಎರಡು ವಿಧಾನಗಳಿವೆ; It is famous as `Arive soppu'; it has two kind big and small `Koyyara soppu';
- ಸಾಂಬಾರು ತಯಾರಿಕೆಯಲ್ಲಿ ಬಳಕೆ; ಮಸ್ಸೊಪ್ಸಾರು, ಉಪ್ಪೆಸರು ಮೊದಲಾದ ಸಾಂಬಾರನ್ನು ತಯಾರಿಸುವರು. Used to prepare variety of soup as `Massop saru'.

ಕೊಯ್ರಿಪತ್ತ koyripatta :

- ಮುಸಲ್ಮಾನ ಮಹಿಳೆಯರು ತಾಳಿಯ ರೀತಿಯಲ್ಲಿ ಧರಿಸುವ ಒಂದು ವಿಧದ ಆಭರಣ; ಇವರು ಧರಿಸುವ ಆಭರಣಗಳು ಹಿಂದೂ ಮಹಿಳೆಯರು ತೊಡುವ ಆಭರಣಗಳಿಗಿಂತ ವಿಶಿಷ್ಟ ಹಾಗೂ ವಿಭಿನ್ನವಾಗಿರುತ್ತವೆ. An ornament bear as

`Tali' by the Muslim woman; the ornaments of Muslim woman is different than the Hindu woman.

ಕೊಯ್ಲು ಮಣಸು koylu maṇasu :

- ಮಗು ಅಥವಾ ಕರುವಾದ ನಂತರ ಗರ್ಭಕೋಶದಿಂದ ಹೊರಬಿದ್ದ ಮಾಸನ್ನು ಒಂದು ಕುಡಿಕೆಯಲ್ಲಿ ತುಂಬಿ ಗುಂಡಿ ತೆಗೆದ ನೆಲದಲ್ಲಿ ಹಾಕಿ ಮಣ್ಣು ಮುಚ್ಚುವ ಪ್ರಕ್ರಿಯೆ; After the delivery of woman or cattle placenta can be filled in a pot and bury in the ground is called `Koyla manasu';
- ಉದ್ದೇಶ ಅದನ್ನು ನಾಯಿ–ನರಿಗಳಂತಹ ಪ್ರಾಣಿಗಳು ಮೂಸದಿರಲಿ, ತಿನ್ನದಿರಲಿ ಎಂಬುದಾಗಿದೆ; ಹಾಗೆ ಮಾಡಿದರೆ ತಾಯಿ–ಮಗು ಅಥವಾ ಹಸು–ಕರುವಿಗೆ ತೊಂದರೆಯಾಗುತ್ತದೆಂಬುದು ನಂಬಿಕೆ; ಇದು ಹಿಂದಿನಿಂದಲೂ ರೂಢಿಸಿಕೊಂಡು ಬಂದಿರುವಂಥದು; The intention is to avoid the dogs and other animals to eat; because if they eat, the mother and the baby will face the trouble is the belief;
- ***—ಕೊಯ್ಲು ಮಾಸು*** : ಹಸು ಅಥವಾ ಎಮ್ಮೆಗಳ ಜನನೇಂದ್ರಿಯದಿಂದ ಒಸರುವ ಜಿಗುಟು ದ್ರವ; ಇದು ಕರು ಹಾಕುವ ದಿವಸಗಳು ಹತ್ತಿರವಿದೆ ಎಂಬುದರ ಸೂಚಕ; ಅನುಭವಿ ರೈತರು ಅಥವಾ ಜನಪದ ವೈದ್ಯರು ಇದರ ಕುರಿತು ಲೆಕ್ಕಾಚಾರದಲ್ಲಿ ತೊಡಗುವುದಿದೆ (ಬೀ.ಜಿ). The sticky liquid from the genital of cow and buffalo; it is the sign of the delivery within fewdays; the experienced farmers or folk doctors calculate about this.

ಕೊಯ್ಮೂಲೆ koymūle :

- ದೂರದ ಪ್ರದೇಶ; ಅಸ್ತವ್ಯಸ್ತದಿಂದ ಕೂಡಿರುವಂತಹ ಮೂಲೆ; ಕ್ರಮಬದ್ಧತೆಯಿಂದ ಮಾಡಿರದ ಸ್ಥಿತಿಗೆ ಸಂಬಂಧಪಟ್ಟಂತೆ; A distant area; a corner with haphazardly; condition which related to disorder;
- ಮೂಲೆಯೆಂದು ಹೇಳಲಾಗದ ರೀತಿಯಲ್ಲಿರುವ ಮೂಲೆಯಂಥ ಜಾಗ(ಮಂ.ಜಿ). A place which cannot be say corner but like corner.

ಕೊಯ್ಯೊಲು koyyolu :

- ಮೀನಿನ ಪ್ರಭೇದಕ್ಕೆ ಸೇರಿದ್ದು; 'ಚಿಪ್ಪುಮೀನು' ಎನ್ನಲಾಗುತ್ತದೆ; ಇದರ ಎರಡು ಕಡೆ ಚಿಪ್ಪುಗಳಿರುವುದರಿಂದ ಈ ಹೆಸರು ಬಂದಿರಬಹುದು(ದ.ಕ). Belongs to fish species; it has two side shells; so it has the name `Koyyolu'.

ಕೊರ/ಕೊರಕೊರ kora/korakora :

- ಗಂಟಲಿನಿಂದ ಹೊರಹೊಮ್ಮುವ ಒಂದು ಬಗೆಯ ಧ್ವನಿ; ಶ್ವಾಸಕೋಶದಲ್ಲಿ ಕಫ ಕಟ್ಟಿದಾಗ ಗಂಟಲಿನಿಂದ ಈ ಶಬ್ದ ಹೊರಬರುವುದಿದೆ; ಇದು ಉಸಿರಿನ ಮೂಲಕ ಹೊರಬರುವುದರಿಂದ ಉಸಿರಾಟಕ್ಕೆ ತೊಂದರೆಯಾಗುವುದುಂಟು; A kind of sound from the throat; when phlegm stored in the lungs this sound comeout through breath; so it is difficult to breath;
- ಅನುಕರಣ ವಾಚಕವೂ ಹೌದು; 'ಕ್ಷಯ'ದಂತಹ ತೊಂದರೆಯಿಂದ ಬಳಲುತ್ತಿರುವವರಿಗೆ ಉಸಿರಾಟದಲ್ಲಿ 'ಕೊರಕೊರ' ಶಬ್ದ ಬರುವುದು ಸಾಮಾನ್ಯವಾಗಿರುತ್ತದೆ; ಇಂಥವರಿಗೆ 'ಗೂರಲ' ಎಂಬ ಅಡ್ಡ ಹೆಸರನ್ನು ಇಟ್ಟಿರುವುದು; It is imitating action; the `kora kora' from the patient suffering by Tuberculosis; they have neck name `Goorala';
- ಮಕ್ಕಳಿಗೆ ಹೀಗೆ ಆದರೆ ವೈದ್ಯರ ಬಳಿ ಪರೀಕ್ಷಿಸಿ ಔಷಧಿ ಕೊಡಿಸುವರು; ಆದರೆ ದೊಡ್ಡವರಿಗಾದರೆ 'ಕಷಾಯ' ಕುಡಿಸುವುದಿದೆ; ಇದರಿಂದ ಪ್ರಾಣಾಪಾಯವಿರುವುದೂ ಹೌದು; *ಪ್ರ:* *'ಮಗು ಯಾಕೋ ಕೊರಕೊರ ಅಂತಿತ್ತು'*; The children suffering by this disease treatment given by the doctor; but elders drink decoction; so by this they face danger of death too;
- ಅರ್ಧ ಪ್ರಮಾಣದ್ದು; ಪೂರ್ಣವಲ್ಲದ್ದು; ಅಪೂರ್ಣತೆಯಿಂದ ಕೂಡಿರುವಂಥದು; ಒಂದು ಅಕ್ಕಿ, ರಾಗಿ, ಭತ್ತ, ಜೋಳದ ಮೂಟೆಗೆ 'ಕೊರ'

ಎಂದು ಹೇಳಲಾಗುತ್ತದೆ; ಅರ್ಧ ಚೀಲ ತುಂಬಿರುವ ದವಸ–ಧಾನ್ಯ; Corns fill half of the bag is called `kora';
- ಹೆಚ್ಚು ಮಾತನಾಡುವವರನ್ನು ಕುರಿತು ಸಂಬೋಧಿಸಿ ಹೇಳುವ ರೂಪ; 'ಏನ್ ಕೊರತನಪ್ಪ ಈ ಮನ್ಸ ಪುರುಷೊತ್ತೇ ಇಲ್ದಂಗೆ' ಎಂದು ವ್ಯಂಗ್ಯವಾಗಿ ಹೇಳುವುದಿದೆ; ಕೊರೆ, ಕೊರಿ ಎಂಬ ಸಂವಾದಿ ರೂಪಗಳುಂಟು; The form used to talkative;
- ಮರಕ್ಕೆ ರಂಧ್ರ ಮಾಡುವುದನ್ನು ಕುರಿತು ಹೇಳುವಾಗ ಪದಬಳಕೆ; 'ಆ ಮರನ ಹಾಗೇ ಕೊರ್ದ್‌ಬಟ್ಟ' ಎಂಬುದೊಂದು ಹೇಳಿಕೆ; The word used while make a hole to wood;
- ಒಂದು ಬಗೆಯ ಸಸ್ಯ ವಿಶೇಷ(ಕ.ನಿ); A kind of plant species;
- ಕೆತ್ತೋದು, ಕೊರೆಯೋದು ಬಡಗಿಯ ಕೆಲಸವಲ್ಲವೇ ಎಂಬುದೊಂದು ನಾಣ್ಣುಡಿ ಪ್ರಚಲಿತ. A proverb says drilling and engrave is the work of the carpenter.

ಕೊರಂಗೆ korange :
- ಬೈನೆ ಮರದಿಂದ ತಯಾರಿಸಿದ ನೀರು ಹಾಯಿಸಲು ಬಳಸುವ ಸಾಧನ; ಮೀನು ಬೇಟೆಯಲ್ಲಿ ಬಳಕೆ; An instrument made of baine tree used to flow water through it;
- ಮೀನು ಹಿಡಿಯುವಾಗ ನೀರನ್ನು ಈ ಸಾಧನದ(ಕೂಣಿ) ಬಾಯಿಗೆ ಹಾಯಿಸುವುದು ಒಂದು ವಿಧಾನ; ಆ ಸಂದರ್ಭದಲ್ಲಿ ಇದರ ಉಪಯೋಗವಿದೆ. A method used to catch fish; to flow water through the mouth of this instrument(Kooni).

ಕೊರಂಬು/ಕೊರಂಬೆ korambu/korambe :
- ಗೊರಬೆ; ಎಲೆಗಳಿಂದ ತಯಾರಿಸಿದ ಗೊರಬು; ಹಕ್ಕಿಯ ಗೂಡು; Prepared by the leaves is called `Gorabu'; nest of the bird;
- ಹೆಣ್ಣುಹಂದಿ ಮರಿ ಹಾಕಲು ಆಯ್ದುಕೊಂಡ ಜಾಗ; A place selected by the swine to deliver;
- ಮಳೆಗಾಲದಲ್ಲಿ ಮಳೆ ಬೀಳುವ ಸಂದರ್ಭದಲ್ಲಿ ಹೊಲ–ಗದ್ದೆಗಳಲ್ಲಿ ಕೆಲಸ ಮಾಡುವ ರೈತಾಪಿಗಳು ಮೈ ಒದ್ದೆಯಾಗದಂತೆ ತಡೆಯಲು ಮೈಗೆ ಹಾಕಿಕೊಳ್ಳುವ ರಕ್ಷಾಕವಚ; 'ಮೈಗವಚ' ಎನ್ನುವರು; An armour to cover the body while raining, the farmer used to avoid rain and cold;
- ಮೈ+ಕವಚ>ಮೈಗವಚ(ಕ>ಗ)(ದಕ);
- ದ್ರಾವಿಡ ಭಾಷಾ ರೂಪಗಳಾದ ತಮಿಳಿನಲ್ಲಿ 'ಕುರಂಬೈ', ತುಳುವಿನಲ್ಲಿ 'ಕೊರಂಬು', 'ಕುರಂಬು', ಮಲೆಯಾಳಂನಲ್ಲಿ 'ಕುರಂಬು' ರೂಪಗಳಿದ್ದು ಕೊಡವ ಭಾಷೆಯಲ್ಲಿ 'ಕೊರ್ಂಬೆ' ರೂಪದ ಬಳಕೆ ಕಂಡುಬಂದಿದೆ(ದ್ರಾ.ಭಾ.ಜ್ಞಾ.ಪ.ಕೋ); In Dravidian languages the forms used in Tamil `Kurumbai', `Kurumbu', in Malayalam `Kurambu', in Kodava language `Korambe';
- ಕನ್ನಡದ 'ಕೊರಂಬು ಪದಕ್ಕೆ 'ಕುರಂಬು' ಮೂಲವಾಗಿರಬೇಕು; ತಮಿಳು ಮತ್ತು ಮಲೆಯಾಳಂ ಭಾಷೆಗಳ ಪದಗಳು ಇದಕ್ಕೆ ಬೆಂಬಲವಾಗಿ ನಿಲ್ಲುತ್ತವೆ; ಸಾಮಾನ್ಯವಾಗಿ ದ್ರಾವಿಡ ಭಾಷೆಗಳಲ್ಲಿ ಕಂಡುಬರುವ `Vowel mutation' ಇದಕ್ಕೆ ಕಾರಣ; ಇಲ್ಲಿ ಉ>ಒ ಆಗಿದೆ; ಕುರಂಬು>ಕೊರಂಬು. The origin of the kannada word `Korambu' is `Kurumbu'; Tamil and Malayalam languages supported to this.

ಕೊರಕ/ಕೊರ್ಕ koraka/korka :
- ಒರಟು; ಉರುಟಾದದ್ದು; ಒಂದು ಬಗೆಯ ಸಾಧನ; ಮರವನ್ನು ರಂಧ್ರ ಮಾಡಲು ಉಪಯೋಗ; Rough, coarse; a kind of instrument used to make hole in the wood;
- ವ್ಯಕ್ತಿಯ ಮೂಗಿನ ಮಧ್ಯದ ಭಾಗ ತುಂಡಗಿರುವವರನ್ನು ಕುರಿತು ಸಂಬೋಧಿಸುವ ಅಡ್ಡ ಹೆಸರು; 'ಕೊರ್ಕ್ ಮೂಗ' ಎಂದು ಕರೆಯಲಾಗುತ್ತದೆ; Nickname to a person have short nose;
- ಕೊರಕ/ಕೊರ್ಕ ಪುಲ್ಲಿಂಗಾರ್ಥದಲ್ಲಿ ಬಳಕೆಗೊಂಡರೆ; ಕೊರಕಿ/ಕೊರ್ಕಿ ಸ್ತ್ರೀಲಿಂಗಾರ್ಥದಲ್ಲಿ ಬಳಕೆಗೊಂಡಿದೆ;
- ಅನ್ವರ್ಥನಾಮವಾಗಿ ಪದಬಳಕೆ; ಮೂಗಿನ ಸೌಂದರ್ಯ ಹೆಣ್ಣು–ಗಂಡುಗಳ ಮುಖಲಕ್ಷಣವನ್ನು ಅವಲಂಬಿಸಿದೆ; 'ಮೂಗು' ಪಂಚೇಂದ್ರಿಯಗಳಲ್ಲಿ ಒಂದು; Word used as appropriate name; the beauty of the nose related to facial feature of the

male or female; nose is one among the five sense organs;

- ಮೂಗಿನಲ್ಲಿ ಕೋಲ್‌ಮೂಗು, ಕೊರ್ಕ್‌ಮೂಗು ಅಥವಾ ಕಪರ್‌ಮೂಗು, ಸೊಟ್‌ಮೂಗು ಎಂಬ ಹಲವು ಪ್ರಕಾರಗಳಿವೆ(ನೋಡಿ: ಮೂಗು); *ಪ್ರ: 'ಕೊರ್ಕ್ ಮೂಗ್ನೋನ್‌ಗೊಂದ್ ಕೊರ್ಕ್ ಮೂಗಿನೋಳ ತಂದು ಕಟ್ಟುದ್ರಂತೆ'.* Different kinds of names given to nose according to their shape; they are stick nose; flat nose; bend nose etc.

ಕೊರಕಲು koraklu :

- ಕೊರಕ್ಲು, ಕೊರ್ಕ್ಲು, ಕೊರುಕ್ಲು ಎಂಬ ಗ್ರಾಮ್ಯರೂಪದ ಪದಗಳ ಬಳಕೆ ಇದೆ; 'ಕೊರಕಲು' ಪದದ ಸಂಕ್ಷಿಪ್ತ ರೂಪ 'ಕೊರ್‌ಕ್ಲು'; 'ಕೊರಕಲ' ರೂಪವೂ ಇದೆ; ಇದು ಉಚ್ಚಾರಣಾ ಸೌಲಭ್ಯದಿಂದಾಗಿ ಉಂಟಾಗುವ ಬದಲಾವಣೆ; ಭಾಷಾ ಬಳಕೆಯಲ್ಲಿ ಪದಗಳು ಸಂಕ್ಷಿಪ್ತ ರೂಪ ಪಡೆಯುವುದು ಇಂದು ನೆನ್ನೆಯದಲ್ಲ; ಇದು ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಲಕ್ಷಣ; The rural form of words usage Koraklu, Koruklu etc; these changes are by pronunciation convenience; in usage of language words are abridged since the olden days practice;
- ನೀರಿನ 'ಕೊರೆತ'ದಿಂದ ಉಂಟಾದ ಜಾಗ, ಸ್ಥಿತಿ; ನೀರು ಒಂದೇ ಜಾಗದಲ್ಲಿ ರಭಸವಾಗಿ ಹರಿಯುತ್ತಿದ್ದರೆ ಆ ಸ್ಥಳದ ಕಲ್ಲು-ಮಣ್ಣುಗಳು ನೀರಿನ ಜೊತೆ ಕೊಚ್ಚಿಕೊಂಡು ಹೋಗುತ್ತವೆ; ಹಾಗಾಗಿ ಆ ಜಾಗ ಹಳ್ಳ ಅಥವಾ ತಗ್ಗು ಬಿದ್ದು ಕೊರಕಲಾಗಿಬಿಡುತ್ತದೆ; ಜಮೀನುಗಳಲ್ಲಿ ಹೀಗೆ ಆದರೆ ಮಣ್ಣಿನ ಸವಕಳಿ ಉಂಟಾಗುತ್ತದೆ; ಇದರಿಂದ ಜಮೀನು ಫಲವತ್ತತೆ ಕಳೆದುಕೊಂಡು ಬಿತ್ತಿದ ಬೆಳೆ ಸೊಂಪಾಗಿ, ಹುಲುಸಾಗಿ ಬೆಳೆಯುವುದಿಲ್ಲ; The place eroded by the force of water, so that place happened to be a pit; this is happened in the field and the land; because of soil erosion the land lost its fertility and the crop cannot grow healthy;
- ಜಮೀನಿನ ಕೊರಕಲು ತಪ್ಪಿಸಲು ರೈತರು ಸುತ್ತಲೂ ಒಂದಡಿ ಅಗಲ ಒಂದೂವರೆ ಅಡಿ ಉದ್ದದ ಬದು ಅಥವಾ ಕಟ್ಟೆ ನಿರ್ಮಿಸಿ ಬಿದ್ದ ಮಳೆ ನೀರು ಹೊರ ಹೋಗದಂತೆ ತಡೆಯುತ್ತಾರೆ; ಇದರಿಂದ ಕೊರಕಲು ತಪ್ಪಿಸುವುದರ ಜೊತೆಗೆ ಮಣ್ಣಿನ ಫಲವತ್ತತೆ, ಅಂತರ್ಜಲ ಮಟ್ಟವನ್ನು ಕಾಪಾಡಿಕೊಳ್ಳಬಹುದು; To avoid this soil erosion, farmers build bunds across one or two feet height and size; by this improve the fertility and ground water level;
- ಗಿಡ, ಮರ, ಬಳ್ಳಿ, ಪೊದೆಗಳ ಸಹಿತವಾದ ಸಣ್ಣ ಸಣ್ಣ ಹಳ್ಳದಿಂದ ಕೂಡಿದ ಹಾದಿ ಅಥವಾ ದಾರಿ; 'ಕಾಲ್ದಾರಿ' ಎನ್ನುವರು; ಹೊಲದ ನಡುವೆ ಇಂತಹ ದಾರಿಗಳು ಸಾಮಾನ್ಯವಾಗಿರುತ್ತವೆ; ಇವು ಆಡು, ಕುರಿ, ಎಮ್ಮೆ, ದನ, ಹಸು ಕಾಯುವವರಿಗೆ ಸಹಕಾರಿಯಾದುದು; The ways have small pits and plants, tree, creeper, bushes etc these are commonly in the crop feilds to take cattles, goat, sheep etc they are called pathways;
- ಪ್ರವಾಹದಿಂದ, ಗಾಡಿಯ ಬಂಡಿ ಹರಿದು ಹೋದ ಕಡೆಯೂ ಕೊರಕಲು ಉಂಟಾಗುವುದು; ತಗ್ಗು ಅಥವಾ ಹಳ್ಳ ಬೀಳುವುದು; The erosion happened by floods and carts movements;
- ಚಂಡಮಾರುತದಂತಹ ಸಂದರ್ಭದಲ್ಲಿ ಬೀಳುವ ಮಳೆಯಿಂದಾಗಿ ಪ್ರವಾಹ ಉಂಟಾಗಿ ನೀರು ಹರಿದ ಕಡೆ ಹಳ್ಳದ ಜೊತೆಗೆ ಭೂಮಿ ಬಿರುಕು ಬಿಡುವುದಿದೆ; ಹಳ್ಳದ ತಳ; ಕವಲುಗಾಲುವೆ; At the time of cyclone, flood water, the land cracks happened and the rills are divided;
- ಮಳೆ ನೀರು ಕೆರೆ-ಕಟ್ಟೆಗಳಿಗೆ ಹರಿಯುವಾಗ ಆ ಜಾಗದಲ್ಲಿ ತಗ್ಗು ಉಂಟಾಗುವುದು; ಇದರಲ್ಲಿ ನೀರು ನಿಲ್ಲುವುದಿಲ್ಲ; ಎಲ್ಲವೂ ಬಸಿದು ಹೋಗಿ ಸ್ವಚ್ಛಂದವಾಗಿರುತ್ತದೆ; ಮಳೆಗಾಲದಲ್ಲಿ ಇಂತಹ ಕೊರಕಲು ಎಲ್ಲೆಡೆ ಸಾಮಾನ್ಯವಾಗಿ ಕಂಡುಬರುವುದು; While raining water flows towards low areas like tanks, the water flowed area eroded and become pit, such pits are common everywhere;

- ನಡೆದಾಡುವ ಜಾಗದಲ್ಲಿ ಕೊರಕಲುಂಟಾದಾಗ ಅವನ್ನು ತಕ್ಷಣ ಮಣ್ಣಿನಿಂದ ಮುಚ್ಚುವುದಿದೆ; ಕೊರಕಲು ಬಿದ್ದ ಜಾಗದಲ್ಲಿ ಮಕ್ಕಳು ಖುಷಿಯಿಂದ ಓಡಾಡುವುದು ಉಂಟು; The places of path ways eroded, so the pits are closed by filling soil;
- ಸಣ್ಣ ನೀರಿನ ತೊರೆ; ನಿರಂತರವಾಗಿ ನೀರು ಹರಿದು ಕೊರೆದು ಹೋದ ಭೂಭಾಗ; A small brook; the land scape of the water flowed pit;
- ತಮಿಳಿನಲ್ಲಿ 'ಕುಱಂಗು' ಪದದ ಬಳಕೆ ಇದೆ(ದ್ರಾ.ಭಾ.ಜ್ಞಾ.ಪ.ಕೋ); *ಪ್ರ: 'ನಾನು ಮೊದಲೇ ಹೇಳಿದೆ ಕೊರಕಲು ಬಿದ್ದ ಜಾಗಕ್ಕೆ ಹೋಗಬೇಡ ಎಂದು'.* The word `Kuṟaŋgu' used in Tamil.

ಕೊರಕಿ/ಕೊರ್ಕಿ korаki/korki :

- ಮಣ್ಣಿನ ಪಾತ್ರೆ; ಊಟ ಮಾಡುವ ತಟ್ಟೆಗಿಂತ ದುಂಡಗಿನ ಆಕೃತಿಯಲ್ಲಿರುತ್ತದೆ; ಮಡಕೆ, ಅರುವೆ ಅಥವಾ ಮುಚ್ಚಳ ಇರಬಹುದು?; ಮಡಕೆ ಅಥವಾ ಅರುವೆಯ ಹೊಟ್ಟೆಯ ಭಾಗ ದುಂಡಗಿರುವುದು; ಹಾಗೆಯೇ ಮುಚ್ಚಳವೂ ಸಹ ತಳಭಾಗದಲ್ಲಿ ದುಂಡಗಿದ್ದು ಸುತ್ತಲೂ 'ಒಟ್ಟೆ' ಇರುತ್ತದೆ; ಒಳಭಾಗವೂ ದುಂಡಗೆ ಅಗಲವಾಗಿರುತ್ತದೆ; ಇದನ್ನು ಮಡಕೆಗಳಿಗೆ ಮುಚ್ಚಲು ಬಳಸುವರು; Earthern pot; a plate rounded than the dinner plate; may be pot, lid, cover; it is used to cover the mouth of the big rounded pots;
- ಮತ್ತೊಂದು ಮಣ್ಣಿನ ತಟ್ಟೆ ಅಥವಾ ಬಟ್ಟಲು ಮುಚ್ಚಳಿನ ಆಕೃತಿಯಲ್ಲೇ ಇದ್ದು ದೇವರ ಗುಡ್ಡರು ಪ್ರಸಾದ ಸ್ವೀಕರಿಸಲು ಬಳಸುವರು; ಇದನ್ನು ಅವರಲ್ಲದೆ ಬೇರೆ ಯಾರೂ ತೆಗೆದುಕೊಳ್ಳುವಂತಿಲ್ಲ; ಅವರಿಗಾಗಿಯೇ ಮೀಸಲಾದ ತಟ್ಟೆ; Another earthern plate shaped as lid, the priests of god only used to receive the Alms; other than the priest cannot be used this;
- ಮೂಗಿನ ಮಧ್ಯದ ಭಾಗ ತುಂಡಾಗಿರುವ ಹೆಂಗಸಿಗೆ ಸಂಬೋಧಿಸಿ ಹೇಳುವ ರೂಪ; ಸ್ತ್ರೀಲಿಂಗಾರ್ಥದಲ್ಲಿ ಪದಬಳಕೆ; ಅನ್ವರ್ಥನಾಮವೂ ಹೌದು; ವ್ಯಂಗ್ಯೋಕ್ತಿಯೂ ಹೌದು ಹಾಗೆಯೇ ಅಡ್ಡಹೆಸರಾಗಿ ಬಳಕೆಯುಳ್ಳ ಶಬ್ದ; A nose short in the middle part woman called `Koraki', used in the meaning of feminine gender, as nickname, as mockery too;
- ***—ಕೊರ್ಕೆ/ಕೊರ್ಕೆ*** : ಬಟ್ಟಲಿನಾಕೃತಿಯಲ್ಲಿರುವ ಮಣ್ಣಿನ ಪಾತ್ರೆ; 'ಅಗೇರ' ಬುಡಕಟ್ಟು ಸಮುದಾಯದವರಲ್ಲಿ ಬಳಕೆಯಲ್ಲಿರುವ ಪದ. `Korke' is like a bowel shape used by Agera tribal community.

ಕೊರಕೆಗಳು korakegaḷu :

- ಗಣ; ರಾಜಿ ಫಾರ್ಮ್ಸ್(Raji forms) ಅಥವಾ ಹೈಪೊಟ್ರೆ ಮೇಟ (Hypotre mata);
- ಒಂದು ವಿಧದ ಮೀನಿನ ಪ್ರಕಾರಕ್ಕೆ ಸೇರಿದ್ದು; ಬಾಲಂಗೋಚಿ ಇರುವ ಪಟಗಳಂತೆ ಕಾಣುವುದು; ಇವುಗಳ ರೆಕ್ಕೆ ವಿಶಾಲವಾಗಿದ್ದು ನೀರಿನಲ್ಲಿ ಈಜಲು ಅನುಕೂಲವಾಗಿರುತ್ತದೆ; A kind of fish family, it looks like tailed kite; it has big wings help to swim;
- ಇವುಗಳ ದೇಹ ಅಗಲ ಹಾಗೂ ಚಪ್ಪಟೆಯಾಕಾರದಲ್ಲಿದ್ದು ಕಡುಬಿನಂತಿರುತ್ತದೆ; ತೆಳುವಾದ ಬಾಲ ಉದ್ದವಾಗಿ ಕಂಡುಬಂದಿದೆ; ಬಾಲದ ಈಜುರೆಕ್ಕೆ ಚಿಕ್ಕದು; ಕಡಲತಳದಲ್ಲಿ ವಾಸವಿರುವ ಮೀನು; The body of them is vast and flat shape like idli with lean tail; the swim wing is small, lives under the sea;
- ಕಣ್ಣುಗಳು ತಲೆಯ ಮೇಲ್ಭಾಗದಲ್ಲಿದ್ದು ಕಿವಿಯ ರಂಧ್ರಗಳು ಮತ್ತು ಬಾಯಿ ತಲೆಯ ತಳಭಾಗದಲ್ಲಿವೆ; ದವಡೆ ಹಲ್ಲುಗಳು ಚಪ್ಪಟೆಯಾಕಾರದಲ್ಲಿದ್ದು ಆಹಾರವನ್ನು ಜಗಿಯಲು ಸಹಕಾರಿ; Eyes are on the top of the head; the ear holes and mouth under the head; jaw teeth are flat, helps to crush the food;
- ಚಿಪ್ಪು ಮೃದ್ವಸ್ಥಿಗಳು, ಸಂದಿಪದಿ, ಕಠಿಣ ಚರ್ಮಿಗಳು ಮತ್ತು ಅಪರೂಪವಾಗಿ ಮೀನುಗಳೂ ಕೂಡ ಇವುಗಳ ಆಹಾರ. Shells are soft bony, hard skinned fishes used for food.

ಕೊರಗ koraga :

- ಆದಿವಾಸಿ ಬುಡಕಟ್ಟು ಜನಸಮೂಹ; ಕರ್ನಾಟಕದ ಉಡುಪಿ, ದಕ್ಷಿಣಕನ್ನಡ ಭಾಗದಲ್ಲಿ ವಾಸ; ಮೂಲತಃ

ಬೆಟ್ಟ-ಗುಡ್ಡಗಳು, ಕಾಡು-ಮೇಡುಗಳ ಗುಂಪಾದ ಮರದ ತಳಭಾಗದಲ್ಲಿ ನೆಲೆ; 'ಪರಿಶಿಷ್ಟರ ಒಂದು ಪಂಗಡ(ಕ.ನಿ); ಪರಿಶಿಷ್ಟ ಸಮುದಾಯವೊಂದರ ಹೆಸರು; ತುಳುನಾಡಿನ ಮೂಲ ನಿವಾಸಿಗಳೆಂದು ನಂಬಲಾಗಿದೆ(ತು.ನಿ); ಪರಿಶಿಷ್ಟರಲ್ಲ(ಜಾ.ವಿ.ಕೋ); ಶ್ರೇಣೀಕೃತ ಸಮಾಜದಲ್ಲಿ ಅತ್ಯಂತ ಕೆಳಗಿನವರೆಂಬ ಭಾವನೆ; ತುಳು ಭಾಷೆಯ ಜೊತೆಗೆ ತಮ್ಮದೇ ಆದ ಲಿಪಿಯಿಲ್ಲದ ವಿಶಿಷ್ಟ ಆಡುನುಡಿಯನ್ನು ರೂಢಿಸಿಕೊಂಡಿರುವವರು; Adivasi tribal community; they are living in Udupi, Dakshina kaṇnada district of Karnataka; originally they lived under the trees of hills, moors and forests; it is the name of a tribal community; they are the origins of Tulunadu is a belief; they speaks a letterless language along with Tulu;

- ಕೊರಗರಲ್ಲಿ ಪ್ರಾದೇಶಿಕವಾಗಿ ಎರಡು ಪಂಗಡಗಳನ್ನು ಗುರುತಿಸಲಾಗುವುದು; ಒಂದು 'ತೆಂಕನ್ ಕೊರಗ' ಮತ್ತೊಂದು 'ಬಡಗನ್ ಕೊರಗ' ಎಂಬುದಾಗಿ; ಅಲ್ಲದೆ ಇವುಗಳಲ್ಲಿ ಮತ್ತೆ ಐದು ಒಳಪ್ರಭೇದಗಳಿರುವುದು ಕಂಡುಬಂದಿದೆ; ಅವುಗಳೆಂದರೆ ೧.ಅಂಡೆಕೊರಗ ೨.ಸೊಪ್ಪುಕೊರಗ ೩.ತಿಪ್ಪಿಕೊರಗ ೪.ಒಂಟಿಕೊರಗ ೫.ಕಪಡಕೊರಗ ಎಂಬುವು; Regionally they are classified into two groups: `Tenkan koraga' and `Badagan koraga'; further they divide into five; they are 1.Andekoraga 2.Soppukoraga 3.Tippikoraga 4.Onti-koraga 5.Kapadakoraga;
- ಉಗುಳುವುದಕ್ಕಾಗಿ ಕೊರಳಿಗೆ ಬಿದಿರಿನ ಅಂಡೆ ಅಥವಾ ತೆಂಗಿನ ಕರಟ ಕಟ್ಟಿಕೊಳ್ಳುತ್ತಿದ್ದ ಜನವರ್ಗವೇ ಮುಂದೆ 'ಅಂಡೆಕೊರಗ'ರೆಂದು ಗುರುತಿಸಲ್ಪಟ್ಟರು; ನೆರ್ಕೆ ಹುಲ್ಲನ್ನು ಹೆಣೆದು ಮೈಗೆ ಕಟ್ಟಿಕೊಂಡವರು 'ಸೊಪ್ಪುಕೊರಗ'ರಾದರು; ತೆಂಗಿನ ಕರಟದಿಂದ ತಯಾರಿಸಿದ ಬಳೆ, ಸರ ಮೊದಲಾದ ಒಡವೆಗಳನ್ನು ತೊಟ್ಟವರು 'ತಿಪ್ಪಿಕೊರಗ'ರಾದರು; ಕಿವಿಗಳಿಗೆ ಚಕ್ಕುಲಿಯಾಕಾರದ ಬಳೆಯನ್ನು ಧರಿಸಿಕೊಂಡವರು 'ಒಂಟಿಕೊರಗ'ರಾದರು ಮತ್ತು ಮೈಗೆ ಹೆಣದ ಮೇಲುಬಟ್ಟೆ ಉಟ್ಟವರು 'ಕಪಡ ಕೊರಗ'ರೆಂದು ಕರೆಯಲ್ಪಟ್ಟರು; ಏಕೆಂದರೆ ಅವರು ಹೊಸ ಬಟ್ಟೆ ಧರಿಸುವಂತಿರಲಿಲ್ಲ; ಸಾರ್ವಜನಿಕ ಸ್ಥಳಗಳಲ್ಲಿ ಉಗುಳುವಂತಿರಲಿಲ್ಲ; ಹಾಗೆಯೇ ಸಮಾಜದ ಮುಖ್ಯವಾಹಿನಿಯ ಜನರೆದುರು ತಿರುಗಾಡುವಂತಿರಲಿಲ್ಲ; People hang on the neck Ande or Coconut shell to spit they are called `Ande koraga'; those who cover the body with fodder they are called `Soppu koraga'; those who wear the ornaments made of coconut shells they are called Tippikoragas; those who wear the earrings are called `Ontikoragas'; those who wear cloth which is on the dead body they are called `Kapada koragas'; because they don't wear new dress, don't spit in the public places, they don't walk before the people the main stream of the society;
- ಒಡೆದ ಮಡಕೆಗಳಲ್ಲಿ ಅಡುಗೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಕಂಡುಬಂದಿತ್ತು; ಮೇಲುವರ್ಗದವರ ಕಣ್ಣಿಗೆ ಬಿದ್ದರೆ ಅಶುಭವೆಂಬ ಭಾವನೆ ಇತ್ತು; They cook in the broken pot; if they are found in the eyes of upper caste is a bad omen;
- ಕೊರಗರು ವಾಸ ಮಾಡಲು ಕಟ್ಟಿಕೊಂಡ ಗುಡಿಸಲಿಗೆ 'ಕೊಪ್ಪ' ಎಂಬುದಾಗಿ ಕರೆಯಲಾಗುತ್ತಿತ್ತು; ಸಮುದಾಯದ ಕೇಂದ್ರಗಳನ್ನು 'ಕಾಲನಿ'ಗಳೆಂದು ಹೇಳಲಾಗುತ್ತಿತ್ತು; ಗುಂಪು ವಾಸಿಗಳು; ಅವಿಭಕ್ತ ಕುಟುಂಬ ಪದ್ಧತಿ ಜಾರಿಯಲ್ಲಿತ್ತು; ಈಗ ವಿಭಕ್ತ ಕುಟುಂಬ ಪದ್ಧತಿಗೆ ಬದಲಾಗಿದೆ; ಇವರ ತಾತ್ಕಾಲಿಕ ಜೋಪಡಿಗೆ ಸುತ್ತಲೂ ಗೋಡೆಗಳಿರುತ್ತಿರಲಿಲ್ಲ; ಬದಲಾಗಿ ಬಿದಿರಿನ ಅಚ್ಚೆಗಳಿಂದ ಹೆಣೆದ ತಡಿಕೆ ಕಟ್ಟಿ ಕಾಡುಸೊಪ್ಪಿನಿಂದ ಮರೆಮಾಡುತ್ತಿದ್ದರು; ಹುಲ್ಲಿನ ಛಾವಣಿ, ಮಾಡಿನ ಮನೆಗಳ ನಿರ್ಮಾಣ ನಿಷೇಧವಿತ್ತು; The koragas built sheds are called `Koppa'; the community centres are called colonies; they live together, undivided family system axisted in the community, built temporary shed without wall instead of mud walls they fix bamboo

ಕೊರಗ

mat cover with wild leaves; prohibited the storied houses;

- ಬಿದಿರಿನ ಬುಟ್ಟಿ ಮೊರಗಳನ್ನು ಹೆಣೆದು ಮಾರಾಟ ಮಾಡುವುದು, ಊರ ಜಾತ್ರೆ, ಮಾರಿಹಬ್ಬ, ಕಂಬಳದ ಹಬ್ಬಗಳಲ್ಲಿ ಡೋಲು ಬಡಿಯುವುದು, ಬಾಂಟರ ಗುತ್ತಿನ ಮನೆಯವರು ಸತ್ತಾಗಲೂ ಮರಣ ಸೂಚಕ ಡೋಲು ಬಾರಿಸುವುದು ಇವರ ಕಾಯಕ; ಅದಕ್ಕಾಗಿ ದವಸ-ಧಾನ್ಯಗಳನ್ನು ಪಡೆಯುತ್ತಿದ್ದರು; ಇವರಲ್ಲಿ ಬಹುವಚನ ಸಂಬೋಧನಾ ಸಂಪ್ರದಾಯವಿರಲಿಲ್ಲ; ಹಿರಿಯ-ಕಿರಿಯರೆನ್ನದೆ ಎಲ್ಲರೊಂದಿಗೂ ಏಕವಚನದ ಮಾತುಗಾರಿಕೆಯೇ ಇತ್ತು; They prepare bamboo baskets and sell them; they play drums in village fairs and festivals and death ceremony of `Bāntaragutti'; they have no plural conversation, only singular to elders and youngers;
- ಆಮೆ ಬೇಟೆಯಲ್ಲಿ ಪರಿಣಿತರು; ಆಮೆಯನ್ನು ಬೇಯಿಸಿ ತಿನ್ನುವುದು ಕ್ಷಯರೋಗಕ್ಕೆ ಔಷಧವೆಂಬ ನಂಬಿಕೆ ಇತ್ತು; ದನದ ಮಾಂಸ, ಉಡ, ಹೆಬ್ಬಾವಿನ ಮಾಂಸ ತಿನ್ನವುದು ಇವರ ಆಹಾರ ಪದ್ಧತಿ; ಸತ್ತ ದನವನ್ನು ಕೊಂಡೊಯ್ಯುವ ಕೆಲಸಕ್ಕೆ 'ಒಯ್ಪು' ಎಂದು ಕರೆಯುತ್ತಿದ್ದರು; They are experts in Tortoise hunting; they belive that the boiled tortoise is medicine for Tuberculosis; their food system is to eat cattle meat, Iguana meat, python meat;
- ಬಾಣಂತಿ ಸೂತಕವನ್ನು ಮೈಲಿಗೆ ಎಂದು ಭಾವಿಸಿ ಐದು ದಿವಸ ಆಕೆಯನ್ನು ಅನುಭವಿ ಹೆಂಗಸೊಬ್ಬಳ ವಶಕ್ಕೆ ಬಿಟ್ಟು ಮನೆ-ಮಂದಿಯೆಲ್ಲ ಕೊಪ್ಪ ತ್ಯಜಿಸಿ ಬಂಧುಗಳ ಮನೆ ಸೇರುತ್ತಿದ್ದರು; ಆರನೇ ದಿವಸ ತಮ್ಮ ಬಂಧುಗಳೊಂದಿಗೆ ಆಕೆಗೆ ಸ್ನಾನ ಮಾಡಿಸುವುದರ ಮೂಲಕ ಸೂತಕ ಕಳೆಯಿತೆಂದು ಭಾವಿಸಲಾಗುತ್ತಿತ್ತು; ಬಂಧುಗಳು ಅಕ್ಕಿ, ತೆಂಗಿನಕಾಯಿ, ತೆಂಗಿನ ಎಣ್ಣೆ ತರುವುದು ಸಂಪ್ರದಾಯ; ಕುಲದೈವ ಪಂಜುರ್ಲಿ ದೇವಿಗೆ ಕಾಣಿಕೆಯನ್ನಿಟ್ಟು ಎಡೆ ನೈವೇದ್ಯ ಸಲ್ಲಿಸುತ್ತಿದ್ದರು; ಮಗುವಿನ ಸೊಂಟಕ್ಕೆ ಕಪ್ಪು ನೂಲು ಕಟ್ಟಿ ಹುಟ್ಟಿದ ವಾರದ ಹೆಸರಿನ ಆಧಾರದ ಮೇಲೆ ನಾಮಕರಣ ನಡೆಸುತ್ತಿದ್ದರು; ಸೋಮವಾರವಾದರೆ 'ಚೋಮ', ಮಂಗಳವಾರವಾದರೆ 'ಅಂಗಾರ', ಬುಧವಾರವಾದರೆ 'ಬೂದಿ', ಶುಕ್ರವಾರವಾದರೆ 'ತುಕ್ರಿ' ಎಂಬ ಹೆಸರುಗಳನ್ನಿಡುತ್ತಿದ್ದರು; They feel puerperal is impurity; so, all the members of the house left the shed except puerperal and an experienced woman for five days and stay in the relatives houses, the sixth day they came back to the `Koppa' along with their relatives, cleaned the puerperal with bath and make pure; the relatives bring rice, coconut, coconut oil is a tradition; offer contribution to family deity; on the basis of the birthday celebrate naming ceremony; babies born on Monday named as `Choma', Tuesday as `Angara', Wednesday as `Boodi', Friday as `Tukri';
- ಮದುವೆಗೆ ಆದಿತ್ಯವಾರವೇ ಪ್ರಶಸ್ತ ಎಂಬ ಭಾವನೆ ಮನೆ ಮಾಡಿತ್ತು; ಒಳಬಾಂಧವ್ಯ, ಬಾಲ್ಯವಿವಾಹ ಪದ್ಧತಿಗಳು ರೂಢಿಯಲ್ಲಿದ್ದವು; ಒಂದೇ ಗೋತ್ರದವರಿಗೆ ವಿವಾಹದ ನಿಷೇಧವಿತ್ತು; ಗಂಡು ಹೆಣ್ಣಿಗೆ 'ತೆರ' ಕೊಡುವ ಪದ್ಧತಿ ಇಂದೂ ಇದೆಯಂತೆ; Sunday is precious for marriages; internal and child marriages are in practice; same linage marriages are prohibited; even today the dowry paying system for maid or bride existed;
- ಮದುವೆಯ ದಿವಸ ಗಂಡು-ಹೆಣ್ಣನ್ನು ಬಾವಿಕಟ್ಟೆಯ ಬಳಿ ಕೂರಿಸಿ ಸ್ನಾನ ಮಾಡಿಸಲಾಗುತ್ತಿತ್ತು; ಗಂಡನ್ನು ಬತ್ತದ ಮುಡಿಯ ಮೇಲೂ, ಹೆಣ್ಣನ್ನು ಬೋರಲಾಗಿಟ್ಟ ಹೆಡಿಗೆಯ ಮೇಲೂ ಕುಳ್ಳಿರಿಸುತ್ತಿದ್ದುದು ಸಂಪ್ರದಾಯ; On the day of marriage bride and groom sit on big basket and paddy respectively near the platform of the well is a tradition;
- ಮದುವೆಗೆ ಮಾಂಸಾಹಾರದ ಊಟದ ಜೊತೆಗೆ ಕಳ್ಳಿನ ವ್ಯವಸ್ಥೆಯೂ ಇರುತ್ತಿತ್ತು; ಬಂದ ಬಂಧುಗಳಿಗೆ ಗಂಜಿ ತಿಳಿನೀರಿನ ಆತಿಥ್ಯ ಕಡ್ಡಾಯವಾಗಿತ್ತು; ಮೊದಲಿಗೆ ಯಜಮಾನರು ವಧು-ವರರ ತಲೆ ಮೇಲೆ ಅಕ್ಕಿಕಾಳು ಹಾಕಿ ಸೂರ್ಯದೇವನಲ್ಲಿ ಒಳಿತಾಗಲೆಂದು ಪ್ರಾರ್ಥಿಸುತ್ತಿದ್ದರು; Non-

vegetarian dinner and toddy drinks arranged for marriage, gruel limpid water is must to the relatives; the elders put rice on the head of groom and bride, pray sun god to bless good to the couple;

- ಸತ್ತವರನ್ನು ಹೂಳುವ ಪದ್ಧತಿ ಇತ್ತು; ಹೆಣವನ್ನು ಒಂಟಿ ಬಿದಿರು ಅಥವಾ ಒನಕೆಯ ಅಡ್ಡಕ್ಕೆ ಕಂಬಳಿಯಿಂದ ಸುತ್ತಿ ಸಮಾಧಿ ಬಳಿ ಹೊಯ್ಯುತ್ತಿದ್ದರು; ಸತ್ತ ಮೂರು, ಹದಿಮೂರು ಮತ್ತು ಹದಿನಾರನೇ ದಿವಸದಂದು ಶ್ರಾದ್ಧ ಕಾರ್ಯ ಮಾಡುತ್ತಿದ್ದರು; ಸೀಯಾಳ, ಮೀನು, ಕಳ್ಳು, ಅನ್ನ ಮೊದಲಾದವನ್ನು ಎಡೆ ಹಾಕುತ್ತಿದ್ದುದು ಪದ್ಧತಿಯಾಗಿತ್ತು; They buried the dead; they carry the body with a single bamboo or pestle cover with woollen blanket to the burial place; thirteenth and sixteenth day celebrate funeral ceremony; on that day kept Siyala(tender coconut), fish, toddy, on the burial place is a tradition;
- ಇವರ ಉಡುಗೆ-ತೊಡುಗೆ ವಿಶಿಷ್ಟವಾದುವು; ಪುರುಷರು ಕಪ್ಪುಬಣ್ಣದ ಬಟ್ಟೆಯ ತುಂಡನ್ನು ಮಂಡಿಯ ತನಕ ಸೊಂಟಕ್ಕೆ ಸುತ್ತಿಕೊಂಡು ಕಿವಿಗೆ ಹಿತ್ತಾಳೆಯ ಒಂಟಿ, ಕೈಗೆ ಕಬ್ಬಿಣದ ಬಳೆ ತೊಡುತ್ತಿದ್ದರು; ಗೂಬೆ ಮತ್ತು ಹದ್ದಿನ ಕಾಲಿನ ಎಲುಬುಗಳಿಂದ ತಯಾರಿಸಿದ ಸೊಂಟಪಟ್ಟಿಯನ್ನು ಧರಿಸುತ್ತಿದ್ದರು; ತಲೆಗೆ ಅಡಕೆ ಹಾಳೆಯಿಂದ ಮಾಡಿದ ಟೊಪ್ಪಿಗೆಯನ್ನು ಹಾಕುತ್ತಿದ್ದರು; ಬಿಸಿಲು, ಮಳೆಯ ರಕ್ಷಣೆಗಾಗಿ; Their dress is distinctive; men wear a piece of black cloth till knee level; brass ornament to ear, iron bangle to hand; a belt wear around the waist made of owl and vulture leg bones; wear areca sheet cap for the protection by sun burn and rain;
- ಹೆಂಗಸರು ನೆರಿಗೆಯಿಲ್ಲದ 'ತುಂಡೆ'ಯನ್ನು ಉಡುತ್ತಿದ್ದರು; ಬಿಳಿರವಿಕೆ ಧರಿಸುತ್ತಿದ್ದರು; ಸೆರಗು ಹಾಕಿಕೊಳ್ಳುವ ಸಂಪ್ರದಾಯವಿರಲಿಲ್ಲ; ಕೊರಳಿಗೆ ವಿವಿಧ ಬಣ್ಣದ ಮಣಿಸರಗಳನ್ನು ಹಾಕುತ್ತಿದ್ದರು; ಇವು ಸಾಮಾನ್ಯವಾಗಿ ಪ್ರಾಣಿಗಳ ಎಲುಬುಗಳಿಂದ ತಯಾರಿಸಿದವು; ತಲೆಗೆ 'ಕಿಸ್ಕಾರ' ಹೂವಿನ ದಂಡೆ ಮುಡಿಯುತ್ತಿದ್ದರು; Women wear a saree piece without any folding and white jacket; multicoloured bead necklace are worn to neck, generally they are made of animals bone;
- ಕೊರಗರು ಸೂರ್ಯನ ಆರಾಧಕರು; ರಾವು, ಜುಮಾದಿ, ಪಂಜುರ್ಲಿ, ಕಲ್ಲುರ್ಟಿ ಮೊದಲಾದ ದೈವಗಳನ್ನು ಪೂಜಿಸುತ್ತಿದ್ದರು; ಇವು ಅವರ ಕುಲದೈವವೂ ಹೌದು; Koragas mainly worshipped sun god; the other worshipping gods are Ravu, Jumadi, Panjurli, Kallurti etc; they are their family deity also;
- 'ಕೊರಗತನಿಯ' ಇವರ ಆರಾಧ್ಯ ದೈವ; ಆತನನ್ನು 'ನೀಚ' ಎಂದು ಕರೆಯಲಾಗುತ್ತಿತ್ತು; ಕುಲದ ಆದ್ಯ ಪುರುಷ; ಸಾಂಸ್ಕೃತಿಕ ವೀರ; ಈ ನೀಚನಿಗೆ ಕುಟುಂಬದ ಮೂಲಮನೆಯಲ್ಲಿ ಮನೆಯ ಹಿರಿಯ ಕೋಲದ ರೂಪದಲ್ಲಿ ಆರಾಧನೆ ಸಲ್ಲಿಸುತ್ತಿದ್ದನು; Koragathaniya is the adorable deity; he is called as scoundrel; the first man of the lineage; for this scoundrel worship in the corner of the house by the elder of the house as `Kola';
- 'ಚೌತಿ' ಜನಪ್ರಿಯ ಸಂಭ್ರಮದ ಹಬ್ಬ; ಹಿಂದಿನ ರಾತ್ರಿಯಿಂದಲೇ ಮನೆಮಂದಿಯೆಲ್ಲಾ ಉಪವಾಸವಿರುವರು; ಆದರೆ ಈ ದಿವಸ ಮಾಂಸಾಹಾರ, ಕಳ್ಳು ನಿಷೇಧವಿದೆ; ಅಂದು ಅವಿವಾಹಿತ ಕನ್ಯೆಯಿಂದ ದೇವರಿಗೆ ಪೂಜೆ ಸಲ್ಲುತ್ತದೆ; The famous festival is `Chauti', all the members of the family is in fasting from the previous night; but on this day toddy and non-veg prohibited; the maiden perform pooja to the god;
- ಬಿಳಲುಗಳಿಂದ ವಿವಿಧ ಗಾತ್ರದ ಬುಟ್ಟಿಗಳು, ಮೀನು ಹಿಡಿಯುವ ಕುತ್ತರಿ, ಭತ್ತ ತುಂಬಿಸುವ ಕದಿಕೆ, ಜಾನುವಾರುಗಳನ್ನು ತೊಳೆಯುವ ಕಪಾಯಿ ಎಂಬ ಉಜ್ಜುಕುಚ್ಚು, ಬಿದಿರಿನ ಅಚ್ಚೆಗಳಿಂದ ಮೊರ, ಕಳಸಿಗೆ, ಪೆಟಾರಿ, ತೊಟ್ಟಿಲು ಮೊದಲಾದವುಗಳನ್ನು ತಯಾರಿಸುವುದು ಇವರ ಕಸುಬು; Their main occupation is to prepare different size

baskets to catch fish, kadike for store paddy; to clean or wash cattle kapayi used as brush; the main occupation is to prepare cradle baskets by bamboo;

- ಪ್ರಾಣಿಗಳ ಎಲುಬು, ಕೊಂಬು, ಚರ್ಮ ಮೊದಲಾದವುಗಳನ್ನು ಮಾರಾಟ ಮಾಡುವುದು, ಕಾಡಿನಿಂದ ಬೇರುಗಳನ್ನು ತಂದು ಔಷಧಿ ತಯಾರಿಸುವುದು ಮತ್ತು ಮಾರಾಟ ಮಾಡುವುದರಲ್ಲಿ ನಿಪುಣರು; They sell animals bone, horn, skin etc; they collect medicinal roots and leaves, prepare medicine and sell in the market;
- ಕಾಯಿಲೆ ಬಿದ್ದಾಗ ಮಣ್ಣಿನ ಪಾತ್ರೆಯೊಂದಕ್ಕೆ ತೆಂಗಿನ ಎಣ್ಣೆ ಹಾಕಿ ಅದರಲ್ಲಿ ರೋಗಿ ತನ್ನ ಮುಖ ನೋಡಿ ನಂತರ ಆ ಎಣ್ಣೆಗೆ ತನ್ನ ತಲೆಯ ಒಂದು ಕೂದಲು ಮತ್ತು ಕಾಲಿನ ಒಂದು ಉಗುರು ತುಂಡನ್ನು ಹಾಕಿ ಬೇರೊಬ್ಬ ಕೊರಗನಿಗೆ ದಾನ ಮಾಡಿದರೆ ತೊಂದರೆ ಉಪಶಮನವಾಗುವುದೆಂಬ ನಂಬಿಕೆ ಇದೆ; While they are suffering from disease, put some coconut oil in a earthern pot, they saw his face and put a hair of his head and nail peice of his leg and gave it as charity to another `Koraga' the disease will be calmdown;
- —*ಕೊರಗರ ಕುಣಿತ* : ನವರಾತ್ರಿಯ ಸಂದರ್ಭದಲ್ಲಿ ಪ್ರದರ್ಶಿಸಲ್ಪಡುವ ಜನಪದ ಕಲೆ; ಎಂಟ್ಹತ್ತು ಆಟಗಾರರು ಮೈಗೆಲ್ಲಾ ಮಸಿ ಬಳಿದುಕೊಂಡು ಕೈಯಲ್ಲಿ ಕೊಳಲು ಹಿಡಿದುಕೊಂಡು ಡೋಲು, ತಾಸೆ, ತೆಂಬರೆ ವಾದ್ಯಗಳ ಗತ್ತಿಗೆ ತಕ್ಕಂತೆ ಪಾಡ್ದನಗಳನ್ನು ಹಾಡುತ್ತಾ ಕುಣಿಯುವುದು; ಊರಿನ ಪ್ರತಿಯೊಂದು ಮನೆಯ ಅಂಗಳದಲ್ಲಿಯೂ ಕುಣಿಯುತ್ತಾ ಅವರಿಂದ ಹಣ, ದವಸ-ಧಾನ್ಯ ಪಡೆಯುವುದಿದೆ; The art exhibit on the Navarathri situation; eight to ten players smear black on body, hold flute in hand and dance according to the beat of Drum, Thase, Thembare; on the every front yard of the house; receive the corn, money by the house owner;
- —*ಕೊರಗ ಕೋಲ* : ಕಾಡ್ಯಾನಾಟದಲ್ಲಿನ ಒಂದು ಕೋಲ; ಕೋಲದಲ್ಲಿ ಮೂರು ವ್ಯಕ್ತಿಗಳ ಸಹಭಾಗಿತ್ವವಿದೆ; ಕೊರವ, ಕೊರತಿ ಮತ್ತು ಡೋಲುವಾದಕ; Three members combination to play; `Korava', `Korati' and drum beater;
- ತಲೆಗೆ ಅಡಕೆ ಹಾಳೆಯ ಟೊಪ್ಪಿ, ಸೊಂಟದಿಂದ ಮೊಣಕಾಲವರೆಗೆ ಕಪ್ಪುಬಟ್ಟೆ, ಕೈಗೊಂದು ಊರುಗೋಲು ಇವು ಕೊರಗನ ವೇಷ; Areca sheet cap on the head waist to ankle wear black cloth and a stick in the hand to support is the costume of Koraga;
- ಹರಕಲು ಸೀರೆಯುಟ್ಟು ತಲೆಯ ಮೇಲೊಂದು ಬಿದಿರಿನ ಬುಟ್ಟಿ ಇಟ್ಟುಕೊಂಡು ಬೇಡುವ ಅನುಕರಣೆ ಮಾಡುವವಳು ಕೊರತಿ; Wear torn saree, bamboo basket on the head, imitate begging; is the costume of Korathi;
- ತುಂಡುಬಟ್ಟೆ ಉಟ್ಟುಕೊಂಡು ತಲೆಯ ಮೇಲೊಂದು ಟೊಪ್ಪಿಗೆ ಹಾಕಿಕೊಂಡು ಕುತ್ತಿಗೆಗೆ ಡೋಲು ನೇತು ಹಾಕಿಕೊಂಡು ಅದನ್ನು ಬಾರಿಸುತ್ತಾ ನೆರೆದ ಪ್ರೇಕ್ಷಕರಿಂದ ಭಿಕ್ಷೆ ಬೇಡುವುದು ಕೊರತಿ ಮತ್ತು ಡೋಲುವಾದಕರದು; ಈ ಪ್ರಕ್ರಿಯೆಗೆ 'ಕೊರಗ ಕೋಲ' ಎನ್ನುವರು; The drum beaters wear a peice of cloth, put a cap on head, hang the drum on the neck and beating it, collect the alm from the audience;
- —*ಕೊರಗದಾನ/ಕೊರಗ ಬಿಡುವುದು* : ಇತರೆ ಸಮುದಾಯದ ಮಗು ರೋಗಪೀಡಿತವಾದಾಗ ಆ ಮಗುವನ್ನು ಕೊರಗರ ಹೆಂಗಸಿಗೆ ಕೊಟ್ಟು ಮತ್ತೆ ಹಿಂಪಡೆಯುವುದರಿಂದ ಉಪಶಮನವಾಗುತ್ತದೆಂಬ ನಂಬಿಕೆ ಇದೆ; The other community child suffering from disease it is donated to Koraga woman and take back, by this, they believe the baby is relieved from the disease;
- ನಿಗದಿತ ದಿವಸ ಕೊರಗರ ಹೆಂಗಸನ್ನು ರೋಗಪೀಡಿತ ಮಗುವಿನ ಮನೆಗೆ ಕರೆಯಿಸಿ ಆಕೆಗೆ ಹೊಟ್ಟೆ ತುಂಬ ಊಟ ಹಾಕಿ, ತಲೆಗೆ ಎಣ್ಣೆ ಎರೆದು ಮಗುವನ್ನು ಆಕೆಯ ಕೈಗೆ ನೀಡುವುದು; ಮಗುವನ್ನು ಪಡೆದ ಆ ಹೆಂಗಸು ಮಗುವಿಗೆ ತನ್ನ ಎದೆಹಾಲು ಕುಡಿಸಿ ಕೊರಗ ಸಮುದಾಯಕ್ಕೆ ಸೇರಿದ ಒಂದು

ಹೆಸರನ್ನಿಡುವಳು; ಗಂಡಾದರೆ 'ಕೊರಗ' ಎಂದು ಹೆಣ್ಣಾದರೆ 'ಕೊರತಿ' ಎಂಬುದು; ನಂತರ ಆಕೆಗೆ ಮಗುವಿನ ತಾಯಿ ಒಂದು ಮೊರದಲ್ಲಿ ಅಕ್ಕಿ, ತೆಂಗಿನಕಾಯಿ, ಸೀರೆ, ಹಣವನ್ನು ಹಾಕಿ ದಾನ ನೀಡಿ ಮಗುವನ್ನು ಹಿಂಪಡೆಯುವುದು; ಇದನ್ನು ಅಮವಾಸ್ಯೆ ದಿವಸದಂದು ಮಾಡುವುದು ಪದ್ಧತಿ. On a fixed day the Koraga woman invited to the diseased childs house, she is treated with full meals and smear oil on head, then the baby will handed over to her she feed her breast milk named as `Koraga' or `Korati'; later the parents of the baby donate rice, coconut, saree, money and get back the baby; this is done on new moon days is a tradition.

ಕೊರಗಜ್ಜ koragajja :

- ಒಂದು ದೈವದ ಹೆಸರು; ಮರದ ಬುಡದಲ್ಲಿ ಒಂದು ಕಲ್ಲನ್ನು ಪ್ರತಿಷ್ಠಾಪಿಸಿ ಆರಾಧಿಸುವ ದೇವತೆ; It is a name of a deity; install a stone near the stem of a tree and devote;
- ಈ ದೈವಕ್ಕೆ ಮಡಕೆಯಲ್ಲಿ ಕಳ್ಳನ್ನು ನೈವೇದ್ಯವಾಗಿ ಅರ್ಪಿಸುವುದು ಒಂದು ಆಚರಣೆ; ಜಾನುವಾರುಗಳು ತಪ್ಪಿಸಿಕೊಂಡಾಗ, ವಸ್ತುಗಳು ಕಣ್ಮರೆಯಾದಾಗ ಜನರು ಈ ದೈವಕ್ಕೆ ಹರಕೆ ಒಪ್ಪಿಕೊಂಡು ತಮ್ಮ ಕಾರ್ಯ ಸಫಲವಾದಾಗ ಹರಕೆ ತೀರಿಸುವ ಪದ್ಧತಿ ಇದೆ; ಈ ಆಚರಣೆಗೆ 'ಕೊರಗಜ್ಜಗ್ ಮಲ್ಪಕಿ' ಎಂದು ಕರೆಯುವರು(ದ.ಕ); 'ಕೊರತಿ' ದೈವಕ್ಕೆ ಮಾಡಲಾಗುವ ಆರಾಧನೆ; Offering toddy to this deity is a practice; while missing the cattle, things are disappear people made a religious vow to this deity if they success in it they fulfil the vow; this practice is called `Koragajjag malpaki', `Korati' is the adoration of the deity;
- ಕೊರಗ ಸಮುದಾಯದ ಅತಿಮಾನುಷ ವ್ಯಕ್ತಿ. Koraga is the super human of the community.

ಕೊರಗತನಿಯ koragataniya :

- ಒಂದು ಭೂತದ ಹೆಸರು; ದೈವತ್ವವನ್ನು ಪಡೆದ ತುಳುನಾಡಿನ ಸಾಂಸ್ಕೃತಿಕ ವೀರ ಪುರುಷ(ದ.ಕ); The name of a evil spirit; A cultural hero of Tulunadu become godly state;
- ದಕ್ಷಿಣ ಕನ್ನಡ ಭಾಗದಲ್ಲಿ 'ನಲಿಕೆ' ಸಮುದಾಯದವರು ಪ್ರದರ್ಶಿಸುವ ಒಂದು ವಿಧದ ಕುಣಿತ ಅಥವಾ ನೃತ್ಯ; ಗ್ರಾಮೀಣ ಜನಪದರಿಂದ ಪ್ರದರ್ಶಿಸಲ್ಪಡುವ ಪ್ರದರ್ಶನಾತ್ಮಕ ಕಲೆಯೂ ಹೌದು; A dance performed by Nalike community;
- ಉಳ್ಳವರಿಂದ ಪೋಷಿಸಲ್ಪಟ್ಟು ಕಾರಣಾಂತರಗಳಿಂದ ದೈವತ್ವಕ್ಕೇರಿದ ನಲಿಕೆ ಸಮುದಾಯದ ಹುಡುಗನಿಂದ ಈ ಕುಣಿತದ ಪ್ರದರ್ಶನ; A show exhibited by rural folk art; this dance performed by a boy of `Nalike' community;
- ಕುಣಿಯುವಾಗ ತಲೆಗೆ ಮುಟ್ಟಾಳೆ, ಕುತ್ತಿಗೆಗೆ ಹೂವಿನ ಹಾರ, ಮೈಗೆ ಕಪ್ಪು ಬಟ್ಟೆ, ಕಾಲಿಗೆ ಗಗ್ಗರ ಕಟ್ಟಿಕೊಂಡು ಕೈಯಲ್ಲೊಂದು ಬಿದಿರಿನ ಬೆತ್ತ ಹಿಡಿದುಕೊಂಡು ಕುಣಿಯುವುದು ಸಂಪ್ರದಾಯ; While dancing areca sheet cap flower garland on neck, black cloth on body, hallow ornament in the leg bamboo stick in the hand, is a tradition;
- 'ಕೊರಗ' ಸಮುದಾಯದ ಮೂಲ ಪುರುಷ ಮತ್ತು ಅವರು ಪ್ರದರ್ಶಿಸಲ್ಪಡುವ ಒಂದು ಪ್ರದರ್ಶನಾತ್ಮಕ ಕಲೆ; ವರ್ಷಕ್ಕೊಮ್ಮೆ ಕೊರಗ ಕುಟುಂಬದ ಮೂಲಮನೆಯಲ್ಲಿ ಯಜಮಾನ ಅಥವಾ ಹಿರಿಯ ವ್ಯಕ್ತಿ ಕೊರಗತನಿಯನಿಗೆ ಕೋಲದ ರೂಪದಲ್ಲಿ ಆರಾಧನೆ ಸಲ್ಲಿಸಲಾಗುತ್ತದೆ; `Koraga' is an art of Koraga community and the founder exhibit; every year the family of Koraga worshipped by the head in the origin house to the `Koraga taniya';
- ಬೆಳದಿಂಗಳ ಬೆಳಕಿನಲ್ಲಿ ನಡೆಯುವ ಈ ಆಟದಲ್ಲಿ ಹೆಂಗಸರು ಭಾಗವಹಿಸುವಂತಿಲ್ಲ; ಹಿಮ್ಮೇಳಕ್ಕೆ ತೆಂಬರೆ ಬಾರಿಸುವುದು, ಹಾಡುವುದು, ತಾಳಕ್ಕೆ ತಕ್ಕಂತೆ ಮನೆ ಮನೆಗಳ ಮುಂದೆ ಹೋಗಿ ಕುಣಿಯುವುದು ವಾಡಿಕೆ. In this play woman cannot participate.

ಕೊರಗತ್ತಿ koragatti :

- ಅಡಕೆಕಾಯಿಯನ್ನು ಸುಲಿಯಲು ಬಳಸುವ ಒಂದು ವಿಧದ ಉಪಕರಣ; An instrument used to cut areca nut;
- ಮರದಲ್ಲಿ ಬಲಿತು ಹಣ್ಣಾದ ಕಾಯಿಯನ್ನು ಗೊನೆಯ ಸಹಿತ ಕೆಳಗಿಳಿಸಿ ನಂತರ ಕಾಯಿಗಳನ್ನು ಬಿಡಿಸಿಕೊಂಡು ಸುಲಿಯುವುದಿದೆ; ಆ ಸಂದರ್ಭದಲ್ಲಿ ಉಪಯೋಗಿಸುವ ಈ ಉಪಕರಣವನ್ನು ಕಬ್ಬಿಣ ಅಥವಾ ತಾಮ್ರದಿಂದ ತಯಾರಿಸಲಾಗುತ್ತದೆ. It is made of Iron or Copper.

ಕೊರಗು koragu :

- ಸೊರಗು; ಬಡವಾಗು; ಕ್ಷೀಣಿಸು; ವ್ಯಥೆಪಡು; ಚಿಂತೆ; ಕಳವಳ; ದುಃಖ ಪಡುವಿಕೆ; ಮುದುಡುವಿಕೆ; ಕುಗ್ಗುವುದು; ಬೆಳವಣಿಗೆಯಲ್ಲಿ ಕುಂಠಿತಗೊಳ್ಳುವುದು; ಮಾನಸಿಕ ವೇದನೆ ಅನುಭವಿಸುವುದು; ಕುಂದಿ ಹೋಗು; ಬಾಡುವಿಕೆ; ಬಡವಾಗುವಿಕೆ; ನಗುಮೊಗ, ಹಸನ್ಮುಖಿ, ಮಂದಹಾಸವನ್ನು ಮರೆಸುವುದು; ಮುಖವನ್ನು ಯಾವಾಗಲೂ ಸಪ್ಪಗೆ ಮಾಡಿಕೊಂಡು ಕುಳಿತಿರುವುದು; ಪರಿತಪಿಸು; ಬತ್ತು; ಸವೆ; ಪರಿತಾಪ; Enduring, pine away, languish, grieve, grief, sorrow, shrug etc; mentally experience the pain etc;
- ಯಾತನೆ, ದುಃಖ, ಯೋಚನೆ, ಚಿಂತೆಯಿಂದ ಕೊರಗುವುದು ಹಾಗೆಯೇ ಅಸೂಯೆ, ಹೊಟ್ಟೆಕಿಚ್ಚಿನಿಂದ ಕೊರಗುವುದೂ ಇದೆ; ಮತ್ತೊಬ್ಬರ ಏಳಿಗೆಯನ್ನು ಕಂಡು ಸಹಿಸಲಾರದವರು ಈ ಗುಂಪಿಗೆ ಸೇರುತ್ತಾರೆ; ವ್ಯಂಗ್ಯಾರ್ಥ ಸೂಚಕವೂ ಹೌದು;
- ದ್ರಾವಿಡ ಭಾಷಾ ರೂಪಗಳಾದ ತುಳುವಿನಲ್ಲಿ 'ಕುರುಂಟ್', 'ಕುರುಂಟು' ಮತ್ತು ತೆಲುಗಿನಲ್ಲಿ 'ಕ್ರುಯ್ಯು' ಎಂಬ ರೂಪಗಳ ಬಳಕೆ ಇದೆ (ದ್ರಾ.ಭಾ.ಜ್ಞಾ.ಪ.ಕೋ); In Tulu `Kurunt', `Kuruntu'; in Telugu `Kruyyu' forms used;
- ಮಕ್ಕಳ ನಿರ್ಲಕ್ಷ್ಯ, ಕೆಟ್ಟ ನಡೆ–ನುಡಿಗಳಿಂದಾಗಿ ತಂದೆ–ತಾಯಿಗಳು ಕೊರಗುವಂತಾಗುವುದು; ಹದ ಮಳೆ, ಬೆದೆ ಬೆಳೆಯಿಲ್ಲದ ಕಾರಣ ರೈತ ಕೊರಗುವಂತಾಗುವುದು; ಸಂಸಾರದ ಜಂಜಾಟಗಳಿಂದಾಗಿ ವ್ಯಕ್ತಿ ಕೊರಗಿ ಸೊರಗಿ ಹೋಗುವುದು; ಹೀಗೆ ವ್ಯಕ್ತಿಯ ಕೊರಗುತನಕ್ಕೆ ಹಲವು ಪರಿಕಲ್ಪನೆಗಳಿರುತ್ತವೆ; ಇವೆಲ್ಲವನ್ನು ಮೆಟ್ಟಿ ನಿಂತ ವ್ಯಕ್ತಿ ಕೊರಗಿನಿಂದ ದೂರ ಉಳಿಯುತ್ತಾನೆ; *ಪ್ರ: 'ಅವ್ನೋನೀಡು ಪಾಪ ಕೊರ್ಗಿ ಕೊರ್ಗಿ ಸತ್ತೊದ ಯಾವ್ ವಿಷಯ ಅಂತ ಗೊತ್ತಾಗ್ಲಿಲ್ಲ'.* The negligence and bad activities of the children made the parents to be sorrowfull; person languish by the family hardship; a man over look the difficulties he is comeout of the hardship and haunting grief.

ಕೊರಗೋಜಿ koragōji :

- ಮಂಗನನ್ನು ಕುಣಿಸುವವ; ಒಂದು ಬುಡಕಟ್ಟು ಸಮುದಾಯಕ್ಕೆ ಸೇರಿದವರಿರಬಹುದು; 'ಕೋತಿ ಕುಣಿಸುವವ', 'ಕೋತಿ ಆಡಿಸುವವ' ಎಂದು ಕರೆಯುವುದಿದೆ; ಮಂಗ, ಕೋತಿ, ಕಪಿ ಎಲ್ಲವೂ ಸಂವಾದಿ ರೂಪಗಳು; ಈ ಆಟದಲ್ಲಿ ಇವರು ನಿಪುಣರು; A person dances the monkey; they belongs to a tribal community, they are called as `Monkey player'; Manga, Koti, Kapi are the equivalent forms; they are experts in this play;
- ಕಾಡಿನಲ್ಲಿರುವ ಮಂಗನನ್ನು ಹಿಡಿದು ತಂದು ಅದಕ್ಕೆ ಮೂಕಾಭಿನಯದ ಮೂಲಕ ಆಟ, ಪಾಠ, ನೀತಿ–ಅನೀತಿಗಳ ಬಗೆಗೆ ತರಬೇತಿ ನೀಡಿ ಸಿದ್ಧಗೊಳಿಸುವುದು; ತಾನು ಹೇಳಿದಂತೆ ಕೇಳುವ ರೀತಿಯಲ್ಲಿ ಮಾಡಿಕೊಂಡು ಅದರ ಜೊತೆಗೆ ಊರೂರು ತಿರುಗಿ ಕೋತಿ ಆಟ, ಮಾಯ, ಮಂತ್ರ, ಯಂತ್ರ ಮಾಡುವುದರ ಮೂಲಕ ಹಣ, ದವಸ–ಧಾನ್ಯ ಪಡೆದು ಜೀವನ ನಡೆಸುವುದು ಇವನ ಕಾಯಕ; They caught monkey in the forest, brought it to city or town train it to act as he wish and play in town, villages collect money, corns and other things for life;
- ಹಾಗೆಯೇ ಗಿಳಿ, ಕರಡಿ, ಹಸು, ಎತ್ತು, ಕುದುರೆ, ಕತ್ತೆಗಳಂತಹ ಪ್ರಾಣಿ–ಪಕ್ಷಿಗಳನ್ನು ಬಳಸಿ ಬದುಕು ನಡೆಸುವವರಿದ್ದಾರೆ; ಇವರೆಲ್ಲ ಆದಿವಾಸಿ ಅಲೆಮಾರಿ ಸಮುದಾಯಕ್ಕೆ ಸೇರಿದವರು; ಕಾಡಿನಿಂದ ಬಂದು ನಾಡಿನ ಜನತೆಯನ್ನು ಮರಳು ಮಾಡಿ ಅವರಿಂದ

ಹಣ, ದವಸ–ಧಾನ್ಯ ಪಡೆದು ಜೀವನ ಸಾಗಿಸುವುದು ಇವರ ಕಲಾ ನೈಪುಣ್ಯತೆಗೆ ಹಿಡಿದ ಕನ್ನಡಿ; *ಪ್ರ: 'ಕೊರಗೋಜಿ ಬಂದವ್ನೆ ಕೋತಿ ಆಟ ಆಡ್ತವ್ನೆ ಜನ ಎಲ್ಲ ಕಣ್ಣು, ಬಾಯಿ ಬಿಟ್ಕಂಡು ನೋಡ್ತವ್ರೆ'.* In the same way Parrot, Beer, Cow, Ox, Horse, Donkey used to play; these people belongs to aboriginal wonderer community; they are from forest to city mesmarise the people, collect the money and grain to lead the life; it is the mirror to the art of them.

ಕೊರಚ koraca :

- ಗುಡ್ಡಗಾಡು ಜನಸಮುದಾಯ; ಆದಿವಾಸಿ ಬುಡಕಟ್ಟು ವರ್ಗಕ್ಕೆ ಸೇರಿದವರು; ಅಲೆಮಾರಿ ಪ್ರವೃತ್ತಿಯುಳ್ಳವರು; 'ಕೊರವ' ಬುಡಕಟ್ಟು ಸಮುದಾಯದವರೇ ಕೊರಚರು ಎಂದು ಹೇಳುವುದಿದೆ; ಕೊರವರನ್ನು ಕೊರಚರೆಂಬ ಹೆಸರಿನಿಂದಲೂ ಕರೆಯಲಾಗುತ್ತದೆಯಂತೆ; Tribal community belongs to aboriginal tribal group; wandering nature; a saying `Korachas' also belongs to `Korava' community;
- ಇವರು ಬಿದಿರಿನಿಂದ ತಯಾರಿಸಿದ ಮೊರ, ಬುಟ್ಟಿ, ಬಾಚಣಿಗೆ, ಬೀಸಣಿಗೆ, ಚಾಪೆ ಮೊದಲಾದ ಸಾಮಗ್ರಿಗಳನ್ನು ಮಾರಾಟ ಮಾಡುವರು; ಸಂತೆ, ಮಾರುಕಟ್ಟೆ, ಜನಸಮೂಹದಿಂದ ಕೂಡಿದ ಹಬ್ಬ–ಜಾತ್ರೆಗಳ ಸಂದರ್ಭದಲ್ಲಿ ಅಲ್ಲಿಗೆ ತೆರಳಿ ಮಾರಾಟ ಮಾಡುವರು; They prepare many things from bamboo; like basket, comb, mat etc; carry all these to festivals and fairs markets to sale;
- ಹಗ್ಗ ಹೊಸೆಯುವುದು, ಮಾರಾಟ ಮಾಡುವುದು, ಈಚಲು ಕಡ್ಡಿಗಳಿಂದ ನೊಸೆಕುಕ್ಕೆ ಹೆಣೆದು ಮಾರಾಟ ಮಡುವುದು ಒಂದು ವೃತ್ತಿ; They prepare ropes, basket by wild date sticks and sell in the market is the occupation of them;
- ಕೊರವಂಜಿಗಳೆಂದು ಕರೆಯುವ ಇವರಿಗೆ ಕಣಿ ಹೇಳುವ, ಹಚ್ಚೆ ಬಿಡಿಸುವ ಕಲೆ ವಂಶಪಾರಂಪರ್ಯವಾಗಿ ಬಂದಿರುವಂಥದು (ಕ.ಜಾ.ಕೋ); They are called as `Koravanji'; they have an art from their ancestors, foretelling and draw tattoo;
- ಕೊರ್ಚ, ಕೊರ್ಚ ಎಂಬ ಸಂಕ್ಷಿಪ್ತ ರೂಪಗಳ ಬಳಕೆ ಇದೆ; ಗ್ರಾಮೀಣರ ಉಚ್ಚಾರಣಾ ಶಬ್ದಗಳು; Korcha is the short form pronunce in rural areas;
- ಕೊರ್ಚ ಎಂಬ ಪದಕ್ಕೆ ಜಗಳಗಂಟಿ, ಹಠವಾದಿ, ಹಠಮಾರಿ, ಕಳ್ಳತನದ ವ್ಯಕ್ತಿ, ಸುಳ್ಳು ಹೇಳುವವ, ಮೋಸ, ವಂಚನೆ ಮಾಡುವವ, ಚಂಡಿ ಹಿಡಿದು ಅಳುವ ಮಗು, ಬೇಡವೆಂದ ಕೆಲವನ್ನೇ ಮಾಡುವವ ಎಂಬ ಹಲವಾರು ಅರ್ಥಗಳಿವೆ; The word has different meanings like quarrelsome, adamant person; thief, lier, cheat etc;
- *ಪ್ರ: 'ಮಗು ಕೊರ್ಚ ಹಿಡ್ಕಬುಟ್ಟದ'; 'ಎಷ್ಟೇಳುದ್ರೂ ಅವ್ನ ಕೊರ್ಚ ಬುದ್ಧಿ ಬಿಡೋನಲ್ಲ ನಿನ್ನಗ'; 'ಕೊರ್ಚ ನನ್ನಗ ಅವ್‌ನೊಂದ್ಗೇನ್ ಮಾತು ಬುಡು ತಾಯಿ'* (ನೋಡಿ: ಕೊರಮ/ಕೊರವ).

ಕೊರಜಿ koraji :

Flacourtia Jangomas;

- ಕರಿನೆಲ್ಲಿ ಎಂಬ ಹೆಸರಿನಿಂದಲೂ ಕರೆಯುವರು; ಸಸ್ಯ ವಿಶೇಷ; ಇದರ ಕೆತ್ತೆಯನ್ನು ಬಾಣಂತಿ ಕಷಾಯ ತಯಾರಿಕೆ ಹಾಗೂ ಇತರೆ ಔಷಧ ತಯಾರಿಕೆಯಲ್ಲಿ ಬಳಸಲಾಗುತ್ತದೆ; It is called as `Karinelli' plant; the chip of wood used to prepare puepher decoction and other medicine;
- ಮೋಸಗಾರ(ದ.ಕ); ಪ್ರ: 'ಎಲ್ಲಿ ಕೊರಜಿ ಮಾರಾಯ ನೀನು; Cheater; you are a cheat;
- 'ಕೊರವಂಜಿ' ಜನಸಮುದಾಯಕ್ಕೆ ಸೇರಿದವರು; ಹಾವಾಡಿಗ ಮತ್ತು ಕೋತಿ ಕುಣಿಸುವುದು ಇವರ ಕಾಯಕ(ತು.ನಿ). Belongs to `Koravanji' community; snake and monkey players.

ಕೊರಟು koraṭu :

- ಚಪ್ಪಟೆಯಾಕಾರದಲ್ಲಿ ಕೆತ್ತಿ ಹದಗೊಳಿಸಿದ ಮರದ ತುಂಡು; ಅಡಕೆಯನ್ನು ಸುಲಿದು ಬಿಸಿಲಿಗೆ ಒಣಗಲು ಹರಡಿದಾಗ ಅದನ್ನು ರಾಶಿ ಮಾಡಲು ಬಳಕೆಯಾಗುವ ಉಪಕರಣ; ಮರದ ಕಟ್ಟಿಗೆಯ ತುಂಡಿನಿಂದ ತಯಾರಿಕೆ; A piece of wood temper in flat shape by carving; an

instrument used to heap the arecanut; made of wood;

- ಅಡಕೆ ಮರದ ಬೆಳವಣಿಗೆಯ ಪ್ರತಿಯೊಂದು ಹಂತದ ಪ್ರತಿಯೊಂದು ಕೆಲಸಕ್ಕೂ ಒಂದೊಂದು ಉಪಕರಣಗಳಿವೆ; ಅವುಗಳಲ್ಲಿ ಕೊರಟು ಸಹ ಒಂದು; ಅಡಕೆ ಬೆಳೆಗಾರರಲ್ಲಿ ಕಂಡುಬರುವ ಸಾಧನ; In the process of areca tree growth every stage has an instrument for work; among them Koratu is one;
- ಒಣಗಿದ ಮರದ ತುಂಡು; ಒಣಗಿ ಉರುಟಾದದ್ದು. Dry wooden piece; coarse by dry.

ಕೊರಡ koraḍa :

- ಚಾಟಿ; ಚಾವಟಿ; ಬಾರುಕೋಲು; ಜಡೆಯಂತೆ ಹೆಣೆದಿರುವ ಹುರಿಯ ಚಾಟಿ; ಬಾಗಿದ ಕಡ್ಡಿಗೆ ಕೊರಡನ್ನು ಕತ್ತರಿಸಿ ತುಂಡು ಮಾಡುವುದು (ವಿಜ.ಜಿ.); ಕುದುರೆ ಹೊಡೆಯಲು ಬಳಸುವ ಬಾರುಕೋಲು; Whip; used to hit the horse or ox and other animals, to fear them at work;
- ಹಾಸ್ಯಗಾರನ ಕಯ್ಯಲ್ಲಿರುವ ಮರದ ಕೋಲು (ಉ.ಕ.ಜಿ); ಪೊಲೀಸರ ಕಯ್ಯಲ್ಲಿರುವ ಚಾವಟಿ (ಯ.ಪ.ಕೋ); A wooden stick in the hand of humarist; a whip in the hand of police;
- ಬಿದಿರಿನ ಕೋಲಿಗೆ ಹಗ್ಗದಿಂದ ಹೊಸೆದಿರುವ ಚಾಟಿಯನ್ನು ಕಟ್ಟಿ ಅದರ ಮೇಲ್ಭಾಗದಲ್ಲಿ ಕೆಂಪು ದಾರಗಳನ್ನು ಅಳವಡಿಸಿ ತುದಿಯನ್ನು ಚೂಪಾಗಿ ಬಿಟ್ಟಿರುವರು; ಎತ್ತಿನಗಾಡಿ ಹೊಡೆಯುವಾಗ, ಉಳುಮೆ ಮಾಡುವಾಗ ದನಗಳನ್ನು ಅದ್ದರಿಸಲು ಬಳಸುವರು; A twisted rope or thread tie to a bamboo stick; use to fear the oxen at the time of ploughing or to fear the cattle;
- ಗ್ರಾಮೀಣರಲ್ಲಿ ರೂಡಿಯಲ್ಲಿರುವ ಹಬ್ಬ-ಜಾತ್ರೆಗಳ ಸಂದರ್ಭದಲ್ಲಿ ದೇವರಿಗೆ ಹರಕೆ ಹೊತ್ತವರು ತಮ್ಮ ಮಯ್‌ಗೆ ಹೊಡೆದುಕೊಳ್ಳಲು ಉಪಯೋಗ; The people offer vow to god in festivals and fairs, hit by this whip;
- ಬೂರುಮಾರಮ್ಮನ ಹೊತ್ತುಕೊಂಡು ಮನೆ ಮನೆ ಭಿಕ್ಷೆಬೇಡುವ ಆದಿವಾಸಿಗಳು ಈ ಚಾಟಿಯಿಂದ ಮೈಗೆ ಹೊಡೆದುಕೊಳ್ಳುವುದಿದೆ; *ಪ್ರ: 'ಅಪ್ಪ ಕೊರಡ ತಕ್ಕಂಡ್ರೆ ಮಗ ಬಾಯಿ ಬಿಡ್ತಾನೆ'.* The Adivasi beggars carring Boorumaramma hit by whip to their body to request the alm.

ಕೊರಡು koraḍu :

- ಕೊರಡ, ಕೊರ್ಡು, ಕೊಲ್ಡು ಎಂಬ ಸಂವಾದಿ ರೂಪಗಳ ಬಳಕೆ ಇದೆ; ಕೊರಡು>ಕೊರ್‌ಡು> ಕೊಲ್‌ಡು>ಕೊಲ್ಡು(ರ>ಲ); The equivalent word forms are in use as Korda, Kordu, Koldu;
- ಒಣಗಿದ ಮರದ ತುಂಡು ಅಥವಾ ದಿಮ್ಮಿ; ಮೋಟುಮರ; ಹೊಲ-ಗದ್ದೆಗಳಲ್ಲಿ ಮಣ್ಣಿನ ಹೆಂಟೆಗಳನ್ನು ಪುಡಿ ಮಾಡಲು ಬಳಸುವ ಬೇಸಾಯದ ಉಪಕರಣ; ಹಲುಬೆ; ಹಲಗೆ; ಆಸನವಾಗಿ ಬಳಕೆಯಾಗುವ ಮರದ ಹಲಗೆ; ರೆಂಬೆ ಕಡಿದ ಮರದ ಕಾಂಡ(ದ್ರಾ.ಭಾ.ಜ್ಞಾ.ಪ.ಕೋ); A dry peice of wood; log; stump tree; a peice of wood used to break the lump; agricultural instrument; a stem of the chopped tree;
- 'ಮೇದರು' ಬಳಸುವ ಒಂದು ವಿಧವಾದ ಆಯುಧ; ಬಾವುಟ; ಮಾಂಸ ಕತ್ತರಿಸುವ ಅಡಿಮರ; ಉಕ್ಕಿ ಚಾಟಿ ಅಥವಾ ಚಾವಟಿ(ಮೈ.ಜಿ); ಬಾರುಕೋಲು (ಉ.ಕ.ಜಿ); A weapon used by Meda community; Flag; a support to cut the meat; whip;
- ನೀರಿಲ್ಲದೆ ಒಣಗಿದ ಹೊಲ-ಗದ್ದೆಗಳನ್ನು ಉಳುಮೆ ಮಾಡುವಾಗ ಏಳುವ ಹೆಂಟೆಗಳನ್ನು ಪುಡಿ ಮಾಡಲು ಬಳಸುವ ಉಪಕರಣ; ಗಟ್ಟಿಮುಟ್ಟಾದ, ದಪ್ಪದಾದ ಬಗನಿ ಮರದ ತುಂಡು ಅಥವಾ ಹಲಗೆಯನ್ನು ಅರ್ಧಗೋಲಾಕಾರದಲ್ಲಿ ಜೋಡಿಸಿ ನಿರ್ಮಿಸಿರುವರು; An instrument to powder the lumps in the field; a hard thick bagini tree piece or flank; prepared as semicircle;
- ಮರದ ತುಂಡು ಎರಡರಿಂದ ಮೂರು ಮೀಟರ್ ಉದ್ದವಿರಬೇಕು; ಇದನ್ನು ಎತ್ತುಗಳಿಗೆ ಕಟ್ಟಿ ಎಳೆಸುವುದು ವಿಧಾನ; ಹೆಂಟೆಗಳು ಅರ್ಧಗೋಲಾಕಾರದ ನಡುವೆ ಸಿಲುಕಿ ಅದರ ತಿಕ್ಕಾಟದಿಂದ ಪುಡಿ ಪುಡಿಯಾಗುವುದು; The

wooden piece should be two to three metre long; it is drawn by the oxen;
- ಬಿತ್ತನೆ ಸಾಲುಗಳನ್ನು ಮುಚ್ಚಲು, ಹೊಲದ ಉಳುಮೆಯ ಸಾಲುಗಳನ್ನು ಸಮನಾಗಿ ಮಾಡಲು, ಹೆಂಟೆಗಳನ್ನು ಹೊಡೆಯಲು ಉಪಯೋಗ; Used to close the sowed lines, to make level the ploughed lines and to broke the lumps;
- ದಪ್ಪನೆಯ ಮರದ ತುಂಡನ್ನು ಹದವಾಗಿ ಕೆತ್ತಿ ಮಧ್ಯ ಸ್ವಲ್ಪ ಟೊಳ್ಳು ಮಾಡಿ ಹಿಂದೆ–ಮುಂದೆ ಎರಡು ಅಂಗುಲ ದಪ್ಪ ಬಿಟ್ಟಿರುವರು; A big log intricate in the middle to hallow, the front and back leave in two inches thick;
- ಕೊರಡಿನ ಕಯ್‌ಗೆ ಕಟ್ಟಿರುವ ಹಗ್ಗಗಳನ್ನು ಎತ್ತುಗಳ ಕೊರಳಿನ ನೊಗಕ್ಕೆ ಜೋಡಿಸಲಾಗುತ್ತದೆ; ಕೊರಡಿನ ಮಧ್ಯಭಾಗಕ್ಕೆ ಸಿಲುಕಿದ ಮಣ್ಣಿನ ಹೆಂಟೆಗಳು ಹೊಡೆದುಕೊಳ್ಳುತ್ತವೆ; 'ಮಣೆ ಹೊಡೆಯುವುದು' ಎನ್ನುವರು; The wooden log or `Maṇe' fix to the yoke by rope, the oxen draw this on the ground; the lumps on the ground broke into powder; that is called `Maṇe' hodeyuvudu;
- ತೆಂಗು ಅಥವಾ ಈಚಲು ಮರದಿಂದಲೂ ಈ ಸಾಧನವನ್ನು ಮಾಡುವರು; 'ಕೊಡತಿ' ಎಂದೂ ಕರೆಯುವುದಿದೆ; The `Koradu' made of coconut or wild date trees also; it is called as `Kodathi';
- ನೆಟ್ಟಗಿರುವ ಕಾಮನಬಿಲ್ಲು; ಮೋಡಗಳಲ್ಲಿ ಕಾಣಿಸಿಕೊಳ್ಳುವ ಕೆಂಪು ರೇಖೆ; Straight rainbow; appear in between clouds; a red line;
- ನೊಗ, ನೇಗಿಲಿಗೆ ಹೂಡುವ ಹಗ್ಗ ಸವೆಯದಿರಲೆಂದು ಹಗ್ಗಕ್ಕೆ ಹಾಕುವ U ಆಕಾರದ ರಂಧ್ರವುಳ್ಳ ಮರದ ತುಂಡು; ಇದು ದೋಣಿ ಆಕಾರದಲ್ಲಿಯೂ ಇರುವುದುಂಟು; A peice of wood with hole, fix the rope in to, it cannot be wane; the peice of wood carved like boat shape;
- ಉಳುಮೆ ಸಂದರ್ಭದಲ್ಲಿ ನೊಗ, ನೇಗಿಲಿನ ಈಚು ಎರಡನ್ನೂ ಬಿಗಿಯಾಗಿ ಬಂಧಿಸಲು ಮರದ ಬಾಗಿದ ಈ ಕೊರಡನ್ನು ಬಳಸುವರು; ಎರಡು ಬದಿಯಲ್ಲೂ ಎರಡು ರಂಧ್ರಗಳಿರುತ್ತವೆ; ಈ ರಂಧ್ರದೊಳಗೆ ಉಳುಮೆ ಹಗ್ಗವನ್ನು ತೂರಿಸಿ ಅದನ್ನು ನೇಗಿಲಿನ ಈಚು ಮತ್ತು ನೊಗಕ್ಕೆ ಸೇರಿಸಿ ಬಿಗಿದು ಮೇಳಿಯ ಬಳಿ ಕಟ್ಟುವರು; ಎತ್ತುಗಳನ್ನು ಎಡ–ಬಲಕ್ಕೆ ತಿರುಗಿಸಲು ಈ ಹಗ್ಗ ಉಪಯೋಗ; To hold the plough and yoke use this and tie with rope along with the plough tail;
- ಕುಂದಾಪುರ ಭಾಗದ ದೈವ ಪಾತ್ರಗಳ ದರ್ಶನ(ದಕ); To see the godly character in the Kundapura;
- ದ್ರಾವಿಡ ಭಾಷಾ ರೂಪಗಳಾದ ತಮಿಳಿನಲ್ಲಿ 'ಕುಱುಡು', ತೆಲುಗಿನಲ್ಲಿ 'ಕೊಱಡು', ತುಳುವಿನಲ್ಲಿ 'ಕುರಡ್', 'ಕೊರಡ್' ಮತ್ತು ಮಲೆಯಾಳಂನಲ್ಲಿ 'ಕುರಡು', 'ಕುಱಡು' ಎಂಬ ರೂಪಗಳ ಬಳಕೆ ಇದೆ(ದ್ರಾ.ಭಾ.ಜ್ಞಾ.ಪ.ಕೋ); In Dravidian language forms of Tamil `Kuṟudu', Telugu `Koṟadu', Tulu `Kurud', `Korad' and Malayalam `Kuradu', `Kuṟadu' forms used;
- 'ಕೊಱಡು ಸುರತರುವಾಯ್ತು, ಬಱಡು ನೆರೆ ಹಯನಾಯ್ತು' (ಸರ್ವಜ್ಞನ ತ್ರಿಪದಿ);
- 'ನೀನೊಲಿದರೆ ಕೊರಡು ಕೊನರುವುದಯ್ಯ'(ವಚನ); *ಪ್ರ: 'ಕೊರಡಿಲ್ಲದೆ ನೇಗಿಲು ಹೂಡಲಾದೀತೆ'.*
- ಕೊರಡು– ಒಂದು ಮರದ ತುಂಡಿಗೆ ಈ ಹೆಸರು; ಕೊಂಟು, ಕೊರಂಟು, ಕೊರಟು ಪರ್ಯಾಯ ರೂಪಗಳಿವೆ; The word `Koradu' is a peice of wood; the equivalent word forms are `Kontu', `Korantu', `Koratu';
- ಅಚ್ಚಗನ್ನಡ ರೂಪ; ದ್ರಾವಿಡಪದ; ದ್ರಾವಿಡ ಭಾಷಾ ಸಂವಾದಿ ಪದಗಳೂ ಇದನ್ನೇ ಹೇಳುತ್ತವೆ; Pure Kannada word form; Dravidian equivalent words also tell the same;
- 'ಕೊರಡು' ಮತ್ತು 'ಕೊಂಟು' ಪದಗಳ ಸಂಬಂಧ ಹೇಗೆ? ಮೂಲಪದ 'ಕೊರಟು' ಇರಬೇಕು, ತೆಲುಗಿನಲ್ಲಿ ಇದೇ ರೂಪವಿರುವುದು (ಜೊತೆಗೆ 'ಕೊರಡು' ಕೂಡ) ಗಮನಾರ್ಹ; 'ಕೊರಡು'ವಿನ 'ಡ'ಕಾರ 'ಕೊಂಟು' ಪದದಲ್ಲಿನ 'ಟ'ಕಾರದಿಂದ ಪಡೆದ ಧ್ವನಿಮಾವ್ಯತ್ಯಾಸ ಮಾತ್ರ(ಟ>ಡ)= ಅಘೋಷ>ಘೋಷ ಧ್ವನಿಯಾಗಿ ಮಾರ್ಪಾಡು;

ದ್ರಾವಿಡ ಭಾಷೆಗಳಲ್ಲಿ ಇದು ಸಾಮಾನ್ಯ; ಕೊರಟು>ಕೊಂಟು ಆಗುವುದು ಸುಲಭ, ಕೊಣ್ಬು = ಕೊಂಟು; ಕನ್ನಡದ 'ರ' ಧ್ವನಿಮಾ ವ್ಯಾಕರಣದ ನಿಯಮದ ಪ್ರಕಾರ ಅನುನಾಸಿಕವೂ ಅನನುನಾಸಿಕವೂ ಆಗುವುದು; ಆಗ 'ರ'ಕಾರದ ಜಾಗದಲ್ಲಿ 'ಣ' ('ಟ' ವರ್ಗದ ಕೊನೆಯ ಅಕ್ಷರ) ಬಂದು 'ಕೊಣ್ಬು' ಆಗಿ ಆಮೇಲೆ ಉಚ್ಚಾರಣಾ ಸೌಲಭ್ಯಕ್ಕಾಗಿ 'ಕೊಂಟು' ಆಗುತ್ತದೆ (ಬರೆವಣಿಗೆಯ ದೃಷ್ಟಿಯಿಂದ ಕೂಡ);

- ಕೊರಟು, ಕೊರಡು, ಕೊಂಟು ಇವು ಮೂರೂ ಒಂದೇ ಪದದ ಭಿನ್ನ ಧ್ವನಿರೂಪಗಳು; ತಮಿಳು ಮತ್ತು ಮಲೆಯಾಳಂಗಳ 'ಕುಱ(ರ)ಡು' ರೂಪ 'ಕೊರಡು' ರೂಪದ ಮೂಲವೆಂದು ಪರಿಗಣಿಸಬಹುದು; ಏಕೆಂದರೆ ಹಳಗನ್ನಡದ 'ಕು' ಆಮೇಲೆ 'ಕೊ' ಆಗಿ ಪರಿಣಾಮ ಪಡೆದಿರಬಹುದು; ಉ>ಒ ಆಗುವುದು ದ್ರಾವಿಡ ಭಾಷೆಯ 'ಸ್ವರವ್ಯತ್ಯಯ'ದ ಒಂದು ಲಕ್ಷಣ; ಕುಡು>ಕೊಡು ಆದಂತೆ; The words Kortu, Koradu, Kontu are the different sound forms of a single word; the root form of `Koradu' is from Tamil and Malayalam `Kuradu' form; may be the `Ku' of old Kannada becomes `Ko';
- 'ಕೊರಡು' ಪದಕ್ಕೆ ಕಾಮನಬಿಲ್ಲಿನ ಒಂದು ವಿಧವೆಂದು ಹೇಳಲಾಗಿದೆ; ಅಂದರೆ 'ನೇರರೂಪ'ದಲ್ಲಿ ಕಾಮನಬಿಲ್ಲು ಕಾಣಿಸಿಕೊಂಡಾಗ ಈ ಪದವನ್ನು ಬಳಸುತ್ತಾರೆ, 'ಕೊರಡು' ಪದವನ್ನು ಸಾಂಕೇತಿಕವಾಗಿ ಬಳಸುವುದು ಜನಪದ ಸಂಸ್ಕೃತಿಯಲ್ಲಿದೆ; ಏನೂ ಕೆಲಸ ಮಾಡದೆ ಯಾವಾಗಲೂ ಬಿದ್ದುಕೊಂಡಿದ್ದರೆ ಅಂಥವನನ್ನು 'ಕೊರಡು ಬಿದ್ದಂಗೆ' ಎಂದು ವ್ಯಂಗ್ಯ ಮಾಡುವುದುಂಟು– ಸೋಮಾರಿ, ನಿರುಪಯುಕ್ತ, ಕೆಲಸಕ್ಕೆ ಬಾರದವ, ದೇಹ ಬೆಳೆಸಿಕೊಂಡಿರುವವ, ಇತ್ಯಾದಿ ಅರ್ಥಗಳು ಇದಕ್ಕಿವೆ. The word `Koradu' is a kind of rainbow; is an expression; it means the rainbow appear in straight form this word used; the word `Koradu' used as a symbol is in folk culture; a person lieing without doing any work such persons as called `Koradu biddange'; it means sarcastically saying lazy, useless etc.

ಕೊರಣೆ korane :

- ಒಂದು ವಿಧವಾದ ಧಾನ್ಯ; ನವಣೆ ಅಕ್ಕಿಯನ್ನು ಹೋಲುವಂಥದು; ಆಹಾರ ಪದಾರ್ಥವಾಗಿ ಉಪಯೋಗ; A kind of corn; similar to Navane rice; used as food item.
- ಷಷ್ಠಿ ಮತ್ತು ಮಾರ್ಲಾಮಿ ಹಬ್ಬದ ಸಂದರ್ಭದಲ್ಲಿ 'ಕಿಚಡಿ' ಮಾಡಲು ಬಳಕೆ; ಕಾಯಾಲು, ನಾಟಿಕೋಳಿ ಸಾಂಬಾರಿನ ಜೊತೆಗೆ ತಿನ್ನಲು ರುಚಿಕರವಾದುದು; Used to prepare `Kichadi' in Shasti and Marlami festival; it is tasty to eat with native hen soup and coconut milk;
- ಔಷಧೀಯ ಗುಣ ಹೊಂದಿರುವ ವಿಶೇಷ ಧಾನ್ಯ. It has medicinal quality;

ಕೊರನಾಡು ಸೀರೆ koranādu sīre :

- ಒಂದು ಬಗೆಯ ಸೀರೆ; ಹದಿನಾರು ಮೊಳ ಉದ್ದ ಇರುತ್ತದೆ; ಹಿಂದೆ ಹದಿನಾರು ಮೊಳುದ್ದದ ಸೀರೆ ಉಡುತ್ತಿದ್ದರು; ವಿವಿಧ ಶೈಲಿಯಲ್ಲಿ ವಿನ್ಯಾಸಗೊಳಿಸಿರುವರು; ಹಳದಿ, ಕಪ್ಪುಬಣ್ಣದ ಚೌಕುಳಿಗಳಿರುವ ಸೀರೆ; ಯಕ್ಷಗಾನ ಸ್ತ್ರೀ ವೇಷಾಧಾರಿಗಳು ಧರಿಸುವರು; A kind of saree; it is sixteen feet length; it was worn by the woman; it has in different designed in different styles; used as disguise by female characters in Yakshagana plays;
- ಕೊರನಾಡು-? = ಕೊರ+ನಾಡು+ಸೀರೆ?.

ಕೊರನಾರಿಗೆಡ್ಡೆ koranārigedde :

- ಕೊರ+ನಾರಿ+ಗೆಡ್ಡೆ>ಕೊರ್‌ನಾರಿಗೆಡ್ಡೆ>ಕೊನ್ನಾರಿಗೆಡ್ಡೆ;
- ಒಂದು ವಿಧದ ಕಳೆಸಸ್ಯ; ಇದರ ಬೀಜ ಅಥವಾ ಗೆಡ್ಡೆಯಿಂದ ಸಸ್ಯಾಭಿವೃದ್ಧಿ; ಕಡಲೆಕಾಳು ಗಾತ್ರವಿರುವ ಗೆಡ್ಡೆ; ಒಂದು ಗೆಡ್ಡೆಯಿಂದ ನಾಲ್ಕೈದು ಗಿಡಗಳು ಮೊಳಕೆ ಹೊಡೆಯುತ್ತವೆ; ಗರಿಕೆ ಪತ್ರೆಯಂತೆ ಚಿಕ್ಕ ಚಿಕ್ಕ ನಾಲ್ಕೈದು ಗರಿಗಳಿದ್ದು ಗಿಡ ಬಲಿತಂತೆ ಬುಡದ ನಡುವೆ ಒಂದು ಗೊಂಡೆ ಬರುತ್ತದೆ; ಅದರಲ್ಲಿ ಹೂವು ಇರುವುದುಂಟು; A kind of weed plant; the plant development by its seed or

lump; the lump is in Bengalgram size; a lump has get sprouted four to five; it has small four to five leaves like garike; when the plants grows the flower comeout from the middle;

- ಉತ್ತ ಹೊಲ-ಗದ್ದೆಗಳಲ್ಲಿ, ಬೆಳೆಗಳ ನಡುವೆ ಎಲ್ಲೆಂದರಲ್ಲಿ ವರ್ಷದ ಎಲ್ಲ ಕಾಲದಲ್ಲಿಯೂ ಬೆಳೆಯುವಂಥದು; ಆಡು, ಕುರಿ, ದನ, ಎಮ್ಮೆ, ಹಸುಗಳಿಗೆ ಮೇವಾಗಿ ಉಪಯೋಗ; It grows in dry and wet land; ploughed field; goat, sheep, cattle, buffalo used to graze;
- ಒಂದು ಬಾರಿ ಹತ್ತಿದರೆ ನಾಶಮಾಡುವುದು ಕಷ್ಟ; ಬೇಸಿಗೆಯ ಬಿರುಬಿಸಿಲಿನಲ್ಲಿ ಹೊಲವನ್ನು ನಾಲ್ಕೈದು ಬಾರಿ ಚೆನ್ನಾಗಿ ಉಳುಮೆ ಮಾಡಿದರೆ ಬಿಸಿಲಿನ ತಾಪಕ್ಕೆ ಒಣಗಿ ಉರಿದು ಹೋಗುತ್ತದೆ; ಅಲ್ಲದೆ ಮಣ್ಣು ಹಿಡಿದು ನಾಶವಾಗುತ್ತದೆ(ನೋಡಿ: ಕೊನ್ನಾರಿ); It is difficult to destroy once its comes into the agricultural land; it dried out by ploughing 3 to 4 times in the summer;
- ತಮಿಳಿನಲ್ಲಿ 'ಕೋರೈ' ಮತ್ತು ಮಲೆಯಾಳಂನಲ್ಲಿ 'ಕೋರ' ಎಂಬ ರೂಪಗಳ ಬಳಕೆ ಇದೆ (ದ್ರಾ.ಭಾ.ಜ್ಞಾ.ಪ.ಕೋ); *ಪ್ರ: 'ಕೊರನಾರಿಗೆಡ್ಡೆ ಹೊಲವನ್ನೆಲ್ಲ ಆವರಿಸಿತು'.* In Tamil `Korai'; Malayalam `Kora' forms are in use.
- ಕೊರ+ನಾರಿ+ಗಡ್ಡೆ>ಕೊರನಾರಿಗಡ್ಡೆ; 'ಕೊರನಾರಿ' ರೂಪಕ್ಕೆ 'ಕೊಡನಾರಿ' ಮತ್ತು 'ಕೊನ್ನಾರಿ' ಸಂವಾದಿ ರೂಪಗಳಾಗಿವೆ; 'ರ' ಮತ್ತು 'ಡ' ಧ್ವನಿಮಾಗಳ ವಿನಿಮಯ ಅಪೇಕ್ಷಣೀಯ; 'ಕೊನ್ನಾರಿ' ರೂಪ ಮೊದಲಿನ 'ಕೊರನಾರಿ' ರೂಪದ 'ರ' ಕಳೆದುಕೊಂಡ 'ಕೊನಾರಿ' ರೂಪವೇ ಆಗಿದೆ;
- ಗೇಕಿನಗಡ್ಡೆ, ಅಬ್ದಹುಲ್ಲು ಮತ್ತು ತುಂಗೆಹುಲ್ಲು ರೂಪಗಳೂ ಇದರೊಡನೆ ಇವೆ;
- ಈ ನಾಲ್ಕೂ ರೂಪಗಳಿಗೂ ಹೋಲುವಂತೆ ತಮಿಳು, ತೆಲುಗು ಮತ್ತು ಮಲೆಯಾಳಂ ರೂಪಗಳಿವೆ:

  ೧. ಕೋರೈಕಿಳಙ್ಗು(ತ) = ಕೊರನಾರಿಗಡ್ಡೆ(ಕ)
  ೨. ಅಂಭುದಮ್(ತ) = ಅಬ್ದಹುಲ್ಲು(ಕ)
  ೩. ತೂಲಮ್(ತ) = ತುಂಗೆಹುಲ್ಲು(ಕ)
  ೪. ತುಂಗಮುಸ್ತೆ(ತೆ) = ತುಂಗೆಹುಲ್ಲು(ಕ)
  ೫. ಕರಿಮುತ್ತಜ(ಮ) = ಕೊರನಾರಿಗಡ್ಡೆ(ಕ–?)

- ಸಸ್ಯಶಾಸ್ತ್ರೀಯ ಪಾರಿಭಾಷಿಕ ಪದ: `Cyperus rotundus';
- ಉಪಯೋಗ ಔಷಧಿಯಾಗಿ: ಗಡ್ಡೆ ಅತಿಸಾರ, ಅಜೀರ್ಣ, ಜ್ವರ, ಕೆಮ್ಮಿಗೆ; ಗಡ್ಡೆ ಪರಿಮಳಯುಕ್ತ; ಹುಲ್ಲು ದನಗಳಿಗೆ ಆಹಾರ. Used as medicine for dysentery, indigestion, fever, caugh; the lump has fragrance, the fodder used to cattle for food.

(F.H.I.P)

ಕೊರಪ korapa :

- 'ಗೊರಪ' ಎಂಬ ಸಂವಾದಿ ರೂಪವೂ ಬಳಕೆ ಇದೆ; The equivalent word `Gorapa' form also used;
- ಕುದುರೆಯ ಮೈಯ್ಯುಜ್ಜಲು ಬಳಸುವ ಹಣಿಗೆ; Used to rub the body of horse;
- ಹತ್ತಿ; ಮರವನ್ನು ನಯಗೊಳಿಸಲು ಬಳಸುವ ಒಂದು ಉಪಕರಣ; an instrument; Used to soften the tree; a plane;
- ದನಗಳ ಮೈತುರಿಸಲೂ ಉಪಯೋಗ(ಉ.ಕ.ಜಿ); Used to scrach the cattle body;
- 'ಬಾಚಿ'ಯನ್ನು ನಯಗೊಳಿಸುವ, ಮೊನಚು ಮಾಡಲು ಬಳಸುವ ಸಾಧನ(ಶಿ.ಜಿ);
- ದ್ರಾವಿಡ ಭಾಷಾ ರೂಪಗಳಾದ ತಮಿಳಿನಲ್ಲಿ 'ಕುರಪ್ಪಮ್', ತೆಲುಗಿನಲ್ಲಿ 'ಕೊರಪಮು', 'ಗೋಜಿಪಮು' ಮತ್ತು ಮಲೆಯಾಳಂನಲ್ಲಿ 'ಕುರಪ್ಪು', 'ಕುರಪ್ಪನ್', 'ಕುರಪ್ಪಮ್' ಪದಗಳ ಬಳಕೆ ಇದೆ (ದ್ರಾ.ಭಾ.ಜ್ಞಾ.ಪ.ಕೋ); In Dravidian language forms Tamil `Kuruppam' Telugu `Korapam' Malayalam `Kurappu', `Kurappan', `Kurappam' words used;
- ಇದನ್ನು ತೆಂಗಿನ ಹುರಿಯಿಂದ ಹೆಣೆದು ಸಿದ್ಧಗೊಳಿಸಿರುತ್ತಾರೆ. It is made of coconut coir.

ಕೊರಪೋಲು korapōlu :

- ಮೆದಕ್ ಜಿಲ್ಲೆಯ ಮೆದಕ್ ತಾಲ್ಲೋಕಿನ ಕ್ರಿ.ಶ.೯೭೩ರ ೫೯೫ನೇ ಶಾಸನದಲ್ಲಿ ಇದರ ಉಲ್ಲೇಖ; This place is referred in 595th inscription of 973rd AD Medak district and taluk;

- ಚಾಲುಕ್ಯ ದೊರೆ ಆಹವಮಲ್ಲನ ಮತ್ತು ಮಹಾಮಂಡಲೇಶ್ವರ ಸೋಮಪೆರ್ಮಾಟಿಯ ಆಳ್ವಿಕೆಯ ಸಂದರ್ಭ; It was the rule of the king Ahavamalla and Mahamandaleshwara Somapermati;
- ಸೋಮಪೆರ್ಮಾಡಿಯು ತನ್ನ ಹೆಂಡತಿ ಲಕ್ಷೆಬ್ಬರಸಿಯ ಜೊತೆ ಕಾಸುವಳೆ-೭೦ರ 'ಕೊಱಪಾಱ'ವನ್ನು ಆಳುತ್ತಿದ್ದ ಸಂದರ್ಭದಲ್ಲಿ, ಇಬ್ಬರೂ ಸೇರಿ, ಸೋಮನ ತಂದೆ ಬಿಬ್ಬರಸ ನಿರ್ಮಿಸಿದ್ದ ಬಿಬ್ಬೇಶ್ವರ ದೇವಾಲಯದ ದೇವರ ಪ್ರತಿಷ್ಠೆಯ ಕಾಲದಲ್ಲಿ ದೇವರ ಸೇವೆಗೆ ದೇವಭೋಗವಾಗಿ ವಲಿಕೊಳ ಮತ್ತು ಭೂಮಿ ದತ್ತಿ ಕೊಟ್ಟ ವಿಚಾರದ ವಿವರ; At the time of ruling Kasuvale-70 `Koṛapaḷa' by Somapermadi with his wife Lakshebbarasi; both of them donated, Valikola and land description is in this inscription; while install the god in the Bibbeshwara temple, which was built by the father of Soma;
- 'ಕೊಱಪಾಱ' ಈ ಊರಿನ ಮೂಲ ಹೆಸರು; `Koṛapaḷa' is the original name of this place;
- ಇದು ಕಾಸುವಳೆ ೭೦ರ ಆಡಳಿತ ಘಟಕಕ್ಕೆ ಸೇರಿತ್ತು; It belongs to Kasuvele 70 Administration;
- 'ಕೊಱಪಾಱ' ರೂಪವೇ ಕ್ರಮೇಣ 'ಕೊರಪೋಲು' ರೂಪವಾಗಿ ಬದಲಾಗಿದೆ; ಱ>ರ ಆಗುವುದು ಸಹಜ; ಹಾಗೆಯೇ ಱ>ಲ ಆಗುವುದು ಕೂಡ; ಆದರೆ ಪಾಱ>ಪೋಲು ಹೇಗೆ ಆಗುತ್ತದೆ ಎಂಬುದು ಗೊತ್ತಾಗದು. The form `Koṛapaḷa' became `Korapolu' in later days.

(ಆ.ಪ್ರ.ಕ.ಶಾ.ಭಾ.೨)

ಕೊರಬಾಡು/ಕೊರ್ಬಾಡು korabāḍu/ korbāḍu :

- ಒಣಬಾಡು; ಒಣಗಿದ ಮಾಂಸ; ಕತ್ತರಿಸಿದ ಹಸಿ ಮಾಂಸವನ್ನು ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸುವುದು; ಆಡು, ಕುರಿ, ದನಗಳ ಹಸಿ ಮಾಂಸದಿಂದ ಸಿದ್ಧಪಡಿಸಿರುವಂಥದು; ಸಾಂಬಾರು ಮಾಡಲು ಬಳಕೆ; Dry meat; dry flesh; the chopped peice of meat dry in the sun; it is prepare by the goat, sheep, cattle, meat; used to prepare soup;
- ಉಪ್ಪು, ಕಾರ ಸವರಿ ಬೆಂಕಿಯಲ್ಲಿ ಸುಟ್ಟುಕೊಂಡು ತಿನ್ನುವುದಿದೆ; ಊಟಕ್ಕೆ ನೆಂಚಿಕೆಯಾಗಿ ಉಪಯೋಗ; *ಪ್ರ: 'ಆಕೆ ಆಸೆಪಟ್ಟ ಕೊರಬಾಡು ಕೊನೆಗೂ ಸಿಗಲೇ ಇಲ್ಲ'.* It is paste with salt and spices fry in the fire and used to eat as sides in the dinner.

ಕೊರಮ/ಕೊರವ korama/korava :

೧. ಕೊರಚ, ಕೊರ್ಚ, ಕೊರಮಶೆಟ್ಟಿ, ಕುಂಚಿ ಕೊರಮರು, ಯರಕುಲ ಅಥವಾ ಯರುಕುಲ, ಕುರುವನ್, ಕೆಪ್‌ಮಾರಿ, ಭಜಂತ್ರಿ, ವಾಜಂತ್ರಿ ಎಂಬ ವಿಭಿನ್ನ ಹೆಸರುಗಳಿಂದ ಕರೆಯುವುದಿದೆ; ಪ್ರಾದೇಶಿಕ ಭಿನ್ನತೆಯೂ ಕಂಡುಬಂದಿದೆ; ಮಲೆನಾಡು, ಕರಾವಳಿ ಭಾಗದಲ್ಲಿ 'ಕೊರಚ' ಎಂಬುದಾಗಿಯೂ, ಬಯಲುಸೀಮೆಯ ಭಾಗದಲ್ಲಿ 'ಕೊರಮ' ಅಥವಾ 'ಕೊರವ' ಎಂಬ ಹೆಸರಿನಿಂದಲೂ ಸಂಬೋಧಿಸುವುದಿದೆ; ಕೊರಮರ ಹೆಂಗಸರನ್ನು ಕೊರಮಿ, ಕೊರವಿ, ಕೊರವಗಿತ್ತಿ, ಕುಕ್ಕೆ ಕೊರಮಗಿತ್ತಿ, ಕೊರವಂಜಿ ಎಂಬುದಾಗಿ ಕರೆಯುವರು; ಇವರು ಕಣಿ ಹೇಳುವುದರಲ್ಲಿ ನಿಪುಣರು; ಈ ಕೆಲಸಕ್ಕೆ ಚಿತ್ರಗಳಿಂದ ವಿನ್ಯಾಸಗೊಳಿಸಿದ ಬಿದಿರಿನ ಬುಟ್ಟಿಯನ್ನು ತಲೆ ಅಥವಾ ಕಂಕುಳಲ್ಲಿ ಇಟ್ಟುಕೊಂಡು ಹೋಗುವುದರಿಂದ ಇವರಿಗೆ ಕುಕ್ಕೆ ಕೊರವಂಜಿ ಅಥವಾ ಕುಕ್ಕೆ ಕೊರವ(ಮ)ಗಿತ್ತಿಯರು ಎಂದು ಕರೆಯುತ್ತಾರೆ; ಪುರುಷರು ಕರಿಕೋಟು, ಒಂದು ಛತ್ರಿ, ಬಿದಿರಿನ ಕೋಲು ಅಥವಾ ದಂಡ, ಹೆಗಲಿನಲ್ಲಿ ಒಂದು ಚೀಲ ಅಥವಾ ಜೋಳಿಗೆ ನೇತು ಹಾಕಿಕೊಂಡು ಕಣಿ ಹೇಳಲು ಹೊರಡುವರು; ಹಣೆಗೆ ವಿಭೂತಿ, ತಲೆಗೆ ಪೇಟ, ಬಾಯಿಯಲ್ಲಿ ತಾಂಬೂಲ ಜಗಿಯುತ್ತಾ ಬೀದಿ ಬೀದಿ ಅಲೆಯುವರು; Korach, Korcha, Korama Shetty, Kunchi Koramaru, Yarakula or Yarukula, Kuruvan, Kepmari, Bhajantri, Vajantri are the different names, they are regionally difference; Malnad and Karavali they called as `Koracha', in plain land `Korama' or `Korava'; women are called as `Korami', Koravi, Koravagitti, Kukke

Koramagitti, Koravangi; they are expert in foretelling; they carry a decorated basket on head or in armpit so they are called as Kukke koravagitti or Kukke Koravanji; men wear black coat, an umbrella, bamboo stick, a bag on the shoulder, when they are going on to say foretell; smear sacred ash on the forehead, turban on the head, chewing pan supari, wandering on street to street;

- ಆದಿವಾಸಿ ಬುಡಕಟ್ಟು ಜನಸಮೂಹ; ಅಲೆಮಾರಿ ಪ್ರವೃತ್ತಿಯುಳ್ಳವರು; ಗುಡ್ಡಗಾಡು, ನಿರ್ಜನ ಪ್ರದೇಶ, ಕಾಡು–ಮೇಡುಗಳು ಮತ್ತು ದೊಡ್ಡ ಮರಗಳ ತಳಭಾಗದಲ್ಲಿ ವಾಸ; They are aboriginal community, they have an habit of wandering; lived in hill region, uninhabited, under the tree, forest and moor;
- ಕಪ್ಪು ಮಿಶ್ರಿತ ಕಂದು ಬಣ್ಣ, ಅಗಲವಾದ ಮುಖ, ಕಿರಿದಾದ ಹಣೆ, ಮೈ ತುಂಬ ಕಪ್ಪು ಕೂದಲು, ಗಡುಸಾದ ದೇಹ ಮೊದಲಾದವು ಇವರ ಶಾರೀರಿಕ ಲಕ್ಷಣ; ಕರ್ನಾಟಕದ ಎಲ್ಲಾ ಕಡೆ ಕಂಡುಬರುವರು; blackish brown colour, wide face, small forehead, the whole body is full of black hair, hard body structure are the body featurers;
- ಕೊರವರಲ್ಲಿ ಉಪ್ಪುಕೊರವರು, ದಬ್ಬೆ ಅಥವಾ ತುಬ್ಬೆ ಅಥವಾ ವಬ್ಬಾಕೊರವರು, ಎತ್ತಿನ ಕೊರಚರು, ಕುಂಚಿ ಕೊರವರು, ಸನಾದಿ ಕೊರವರು, ಪಾಮುಲ ಕೊರವರು, ಬಲಿಜ ಕೊರವರು, ಶುಂಬು ಅಥವಾ ಶುಂಬೆಲ ಕೊರವರು ಮತ್ತು ಕೋತಿ ಕೊರವರು ಎಂಬ ಹಲವು ಬಗೆಯ ವರ್ಗಗಳಿವೆ; Korávas are UppuKorava, Dabbe or Tubbe Korava, Yetina Koracha, Kunchi Korava, Sanadi Koravaru, Shumbu or shumbela Korava and Koti Korava;
- ಕೊರಮರ ವಾಸಸ್ಥಾನವನ್ನು 'ಕೊರವರ ಕೇರಿ'ಗಳೆಂದು, ಮನೆಗಳಿಗೆ 'ಬಿಡಾರ' ಎಂದು ಕರೆಯುವರು; ಗುಡಾರಕ್ಕೆ ಬಿದಿರಿನ ಗಳುಗಳು, ಈಚಲು ಚಾಪೆ, ಹಳೆಯ ಕೌದಿ, ಹಗ್ಗಗಳ ಬಳಕೆ ಮಾಡುವರು; The habitats of Koravas is called Koravara keri, houses are `Bidara', Gudaras made of bamboo, wild date mat old rags and rope;
- ಕೊರಮರಲ್ಲಿ ಸಾತಪಾಡಿ, ಮಾನಪಾಡಿ, ಕಾವಾಡಿ ಮತ್ತು ಮೇನ್ರಗುತ್ತಿ ಎಂಬ ನಾಲ್ಕು ಪ್ರಧಾನ ಕುಲ ಅಥವಾ ಬೆಡಗುಗಳಿವೆ; ಸಜಾತಿ ಬೆಡಗಿನವರ ನಡುವೆ ಮದುವೆ ಕಾರ್ಯ ನಿಷೇಧವಿದೆ; ಈ ಮದುವೆ ಕಾರ್ಯ ನಡೆಸಿಕೊಡುವವ ಕುಲದ ಮುಖ್ಯಸ್ಥ; ಇವನನ್ನು 'ಓಕಾಳಿ' ಎನ್ನುವರು; ಮುಖ್ಯಸ್ಥಳನ್ನು 'ಓಕಾಳ್ತಿ' ಎನ್ನುವುದಿದೆ; ಇವರ ಮದುವೆಗಳಲ್ಲೂ ಸೋದರ ಮಾವನದ್ದೇ ಪ್ರಧಾನ ಪಾತ್ರ; Among Koramas four lineages are Satapadi, Manpadi, Kavadi and Menragutti, No marital relationship within the lineage; head of the lineage performed marital celeberation, he is called as `Okali', the woman head is called `Okalti'; the main role in marriages is by the maternal and paternal-in-laws;
- 'ತೆರ' ಕೊಡುವ ಪದ್ಧತಿ ಇದೆ; ಮದುವೆ ಶಾಸ್ತ್ರೋಕ್ತವಾಗಿ ಗಂಡಿನ ಮನೆಯಲ್ಲಿ ನಡೆಯುತ್ತದೆ; ಹೆಣ್ಣಿನ ಮನೆಯವರು ಕತ್ತೆಗಳ ಮೇಲೆ ಸವಾರಿ ಹೊರಟು ಗಂಡಿನ ಮನೆಗೆ ಬರುತ್ತಿದ್ದುದುಂಟು; ಮದುವೆ ಸಂದರ್ಭದಲ್ಲಿ ವಧು–ವರರಿಗೆ ಮಾಡಲಾಗುವ ಶಾಸ್ತ್ರಗಳನ್ನು 'ಚಾಜಾ' ಎನ್ನುವರು; Dowry system existed, to bride; marriage arranged in grooms house according to the rituals; the relations and the bride family came on the donkey to grooms house; all ritualistic ceremonies to bride and groom is called `Chaaja';
- ಮದುವೆ ಐದು ದಿವಸ ನಡೆಯುತ್ತದೆ; ಮೊದಲೆರಡು ದಿವಸ ವಧು–ವರರಿಗೆ ಎಣ್ಣೆ, ಸೀಗೆಕಾಯಿ, ಅರಿಶಿಣ ಹಚ್ಚಿ 'ಮದುವಣಿಗ ಶಾಸ್ತ್ರ' ಮಾಡುವರು; ಮೂರನೇ ದಿವಸ 'ಧಾರೆ' ಕಾರ್ಯಕ್ರಮವಿರುತ್ತದೆ; ನಾಲ್ಕನೇ ದಿವಸ 'ನಾಗೋಳಿ ಶಾಸ್ತ್ರ' ನಡೆದರೆ ಐದನೇ ದಿವಸ 'ಹೆಣ್ಣು ಕಳಿಸುವ ಶಾಸ್ತ್ರ' ಮಾಡಿ ಮದುವೆ ಕಾರ್ಯವನ್ನು ಪೂರ್ಣಗೊಳಿಸುವರು; Arrange five days marriage, first two days perform oil bath

rituals, means `Maduvaniga shastra'; third day `Dhare'; fourth day `Nagoli'; Fifth day the bride send to her parents house; that is end of the marriage occation;

- ಹೆಣ್ಣುಮಕ್ಕಳ ಮರುಮದುವೆಗೆ 'ಸೀರುಡಿಕೆ ಅಥವಾ ಉಡಿಕೆ' ಎನ್ನುವರು; ಯಾವ ವಿಧವಾದ ಶಾಸ್ತ್ರಗಳಿಗೂ ಅವಕಾಶವಿರುವುದಿಲ್ಲ; The second marriage for women is called `Seerudike' or `Udike'; no formal rituals for this;
- ಬಸುರಿಯಾದ ಹೆಣ್ಣುಮಗಳಿಗೆ ತವರಿನಿಂದ 'ಬಯಕೆ ಬುತ್ತಿ' ಕೊಂಡೊಯ್ಯುವುದಿದೆ; ಮಗು ಜನಿಸಿದ ನಂತರ ಬೀಳುವ ಮಾಸು/ಸತ್ತೆಯನ್ನು ಮಡಕೆಯಲ್ಲಿ ಹಾಕಿ ಒಂದು ಗುಂಡಿಯಲ್ಲಿ ಹೂಳುವರು; ಮಗು ಹುಟ್ಟಿದ ಮೂರನೇ ದಿವಸಕ್ಕೆ ಇರಲು ಪೂಜೆ ಮಾಡುವರು; ಈ ಪೂಜೆಗೆ ಕೋಳಿ ಕೊಯ್ದು ಮೀಸಲು ಅಡುಗೆ ತಯಾರಿಸಿ ಹೂತಿಟ್ಟ ಸತ್ತೆಗೆ ಎಡೆ ಹಾಕುವರು; The desiral food pack carry to the pregnant women from their parents; after the birth the placenta kept in a pot and buried in a pit; on the third day of the baby birth, the buried placenta pot will be worshipped;
- ಬುಧವಾರ, ಗುರುವಾರ ಅಶುಭದ ದಿವಸಗಳೆಂಬ ನಂಬಿಕೆ ಇದೆ; ಉಳಿದ ದಿವಸಗಳನ್ನು ದೈವದ ದಿವಸಗಳೆಂದು ಭಾವಿಸಿ ಪೂಜೆ-ಪುನಸ್ಕಾರ ಮಾಡುವರು; ಕೆಲವರು ಮಾಂಸದಡುಗೆ ಮಾಡುವುದಿಲ್ಲ; ಮಾಂಸದಡುಗೆಗೆ ಇವರು 'ಕುಕಡಿ ಬ್ಯಾಟಿ' ಎಂದು ಕರೆಯುವರು; Believe Wednesday, Thursdays are bad omen; the remaining days are good and the days of god; so perform poojas; some don't prepare non-veg food; the non-veg preparation is called `Kukadi byati';
- ಹೆಣ್ಣು ಮೈ ನೆರೆದಾಗ ಕೊಳೆಯಾದಳೆಂಬ ನಂಬಿಕೆ ಇದೆ; ಮನೆಯೊಳಗೆ ಪ್ರವೇಶವಿಲ್ಲ; ಮನೆಯ ಹೊರಗೆ ಸೊಪ್ಪಿನ ಗುಡಾರ ಹಾಕಿ ಐದು, ಏಳು, ಒಂಬತ್ತು ಅಥವಾ ಹನ್ನೊಂದು ದಿವಸ ಕೂರಿಸುವರು; They believe that the first menstruation is called filthy; never allow them into the house; kept her out of the house from 5 days to 11 days;
- ಸತ್ತವರನ್ನು ಹೂಳುವ ಮತ್ತು ಸುಡುವ ಎರಡೂ ಪದ್ಧತಿಗಳಿವೆ; ಶವವನ್ನು ತಾಯಿಯ ಅಣ್ಣ ಅಥವಾ ಹೆಂಡತಿಯ ಸಹೋದರರೇ ಹೊರಬೇಕೆಂಬುದು ನಿಯಮ; 'ಹೊರೆ ಹೊರುವವರು' ಎಂದು ಕರೆಯುವರು; Two customs are followed the dead, burry and cremate; the dead body should be carry by the brother of the mother or the brothers of the wife; they are called `Hore Horuvavaru' or `luggage carriers'
- ಪಂಚಕದಲ್ಲಿ ಸತ್ತರೆ ಅಶುಭ ಎಂಬ ನಂಬಿಕೆ ಇದೆ; ಅಂತಹವರ ಶವದ ಜೊತೆಗೆ ಒಂದು ಕೋಳಿಮರಿ, ಗೋಧಿ ಹಿಟ್ಟಿನಿಂದ ತಯಾರಿಸಿದ ಗೊಂಬೆಯನ್ನು ಹೂಳುವರು; ಕಾರಣ ಅವರ ಜೊತೆಗೆ ಮತ್ತೆರಡು ಬಲಿ ತೆಗೆದುಕೊಳ್ಳುವರೆಂಬ ಭಾವನೆ ಇದೆ; A man died on `Panchaka' (means a set of five stars, they are Dhanista, Shathabhisha, poorva bhadra, Uttarabhadra and Ravati) is a bad omen; so at the time of burial or cremation a chick will be buried or creamate along with the dead;
- ಬೀಗರು ಸತ್ತವನ ಗಂಡು ಮಕ್ಕಳಿಗೆ 'ಇಸಬಾಯಿ' ತೊಳೆಸುವ ಪದ್ಧತಿ ಇದೆ; ಚಾ, ಬೆಲ್ಲವನ್ನು ಬಾಯಿಗೆ ಹಾಕಿಸಿ ಅಗಿದು ಉಗಿದು ನೀರು ಮುಕ್ಕಳಿಸಿ ಉಗಿಯುವುದು; ನಂತರ ಹನ್ನೊಂದನೇ ದಿವಸಕ್ಕೆ ಶ್ರಾದ್ಧ ಮಾಡುವ ಪದ್ಧತಿ ಇದೆ; ಇದಕ್ಕೆ 'ಮುಖ ಮಾಡಿಸುವ ಪದ್ಧತಿ' ಎನ್ನುವರು; The male children of the dead clean the mouth by the father or mother of his wife or the father or mother-in-laws of the children(Beegaru) i.e., called `Ishabai'; it means to put jaggory into mouth and split out; then perform the funeral on the eleventh day;
- ಪೋಲೇರಮ್ಮ, ಸತವು ದೇವತೆ, ಮಾರುತಿ, ಭವಾನಿ, ವಿಷ್ಣು, ತಿಮ್ಮಪ್ಪ, ಮೂದೇವಿ, ಕೊಲ್ಹಾಪುರಿಯಮ್ಮ, ಪೆರುಮಾಳಸ್ವಾಮಿ, ಮುನಿಸ್ವಾಮಿ, ಹುಲಿಗೆವ್ವ, ಸಂಕಲಮ್ಮ ಮೊದಲಾದ ದೇವತೆಗಳ ಆರಾಧಕರು;

They worship Poleramma, Sathavu devathe, Maruthi, Bhavani, Vishnu, Thimmappa, Moodevi, Kollapuriamma, Perumalaswamy, Muniswamy, Huligevva, Sankalamma etc;

- ಮನೆತನದ ಹಿರಿಯರಿಗೆ ಹಾಕಲಾಗುವ ಎಡೆಯನ್ನು 'ಪೆದ್ಲೆಡೆ ಅಥವಾ 'ದೊಡ್ಡೆಡೆ' ಎನ್ನುವರು; ಶುಭ–ಶಕುನಗಳಲ್ಲೂ ನಂಬಿಕೆಗಳಿವೆ; The offerings to the elders of the lineage is called `Pedlede' or `Doddede'; believe good omens;
- ನ್ಯಾಯ ಪಂಚಾಯ್ತಿಗೆ ಕುಲಂ, ಕುಲಸಬೆ, ಕುಲಪಂಚಾಯ್ತಿ ಎನ್ನುವರು; ಕುಲಪತಿಯ ಆಡಳಿತಕ್ಕೆ ಒಳಪಟ್ಟದ್ದು; ಇದರ ಮುಖ್ಯಸ್ಥನಿಗೆ ಪೆರು, ಬೆರು ಅಥವಾ ಬರಿಯ ಮನುಷ್ಯನ್, ಕಟ್ಟೆ ಯಜಮಾನ ಎನ್ನುವರು; ಕೆಲಹಂತದಲ್ಲಿ ಕೋಲಕಾರ ಅಥವಾ ತಳವಾರರಿರುವರು; Court of justice is called Kulam, Kulasabe or Kula panchayti i.e., the head of the lineage; the head is called Peru, Beru or Bariya Manusyan, Katte Yajamana; (Judge) in low level Kolakara or Talavara etc;
- 'ಸನಾಯಿ' ವಾದನ ಇವರ ವಂಶಪಾರಂಪರ್ಯದ ವೃತ್ತಿ; ಬೇಟೆಗಾರಿಕೆಯಲ್ಲಿ ನಿಪುಣರು; ಬಿದಿರು ಬುಟ್ಟಿ ಎಣೆಯುವುದು, ಹಂದಿ ಸಾಕಾಣಿಕೆ, ಕಣಿ ಹೇಳುವುದು, ಹಾವು, ಕೋತಿ ಆಡಿಸುವುದು, ಉಪ್ಪು ಮಾರುವುದು, ಹಚ್ಚೆ ಹುಯ್ಯುವುದು, ನುಸೆ ಹುಲ್ಲಿನಿಂದ ಪೊರಕೆ ಕಟ್ಟುವುದು, ಕಂಬಳಿ ನೇಯುವುದು ಮೊದಲಾದವು ಇವರ ಪ್ರಧಾನ ವೃತ್ತಿಗಳು; Sahanai playing is a family occupation; expert in hunting; make bamboo basket; piggery; foretelling; snake, monkey playing, prepare mops, weaving woollen blankets etc main occupations;
- ಇವರದ್ದು ಕನ್ನಡ, ತಮಿಳು, ತೆಲುಗು, ತುಳು ಮಿಶ್ರಣ ಭಾಷೆಗಳು; ಲಿಪಿರಹಿತ 'ಕುಳಿರ್ ಅಥವಾ ಕುಳುವ' ಭಾಷೆಯೂ ಪ್ರಚಲಿತ; Their language is mix of Kannada, Tamil, Telugu, Tulu; letterless `Kulir' or `Kuluva' language is existed;

೨. ಮೀನಿನ ಒಂದು ಪ್ರಕಾರ; 'ಕೊರವ ಅಥವಾ ಕೊರ್ವ' ಮೀನು ಎನ್ನುವರು; ಆಹಾರಯೋಗ್ಯವಾದ ಮೀನು; ತಿನ್ನಲು ಉಪಯೋಗ; ಮೂರು ಬೆರಳು ಗಾತ್ರದ ಕಪ್ಪುಬಣ್ಣದ ಮೀನು; ನೀರಿನ ಕಲ್ಲಿನ ಪೊಟರೆಗಳಲ್ಲಿ ವಾಸ; `Korava' or `Korva' is a kind of fish, healthy food used to eat; lives in the hollow place of the stone or between the two stones in the water; black in colour;

೩. ವೈನಾಡಿನ ಒಂದು ಜನಸಮುದಾಯ; ಚಿಕ್ಕಪುಟ್ಟ ಪಾಳೆಯಗಾರರು; ಕುರುಬ ಸಮುದಾಯದವ; A community of Vynad, petty chieftans; belongs to Kuruba community;

೪. ಕೆಡುಕ; ಘಾಟಿ; ಆಷಾಢಭೂತಿ; ತಿಳಿದೂ ತಿಳಿಯದಂತಿರುವ ಮೌನಿ; ಒಳಗುಟ್ಟು ಮಾಡುವವ; ನಯವಂಚಕ; ಮೋಸಗಾರ; ವಂಚಕ; evil doar; crafty man, hypocritic; act as a silent; a person maintain secrecy, humbug; deceiver; crook;

೫. *ಪ್ರ: 'ಕಳ್ಳನ್ ನಂಬುದ್ರು ಕೊರ್‌ಮನ್ ನಂಬಾರ್ದು'(ಗಾ); 'ಕೊರಮನಿಗೊಂದು ಊರಲ್ಲ ಕೊಕ್ಕರೆಗೊಂದು ಕೆರೆಯಲ್ಲ'(ಗಾ); 'ಇಬ್ಬರೆಂಡರನಾದ ಏಡಿಯ ಮುಳ್ಳಾದ ಕೋಡಗನಾದ ಕೊರಮಾದ' ಎಂಬುದೊಂದು ತ್ರಿಪದಿ(ಗ.ಹಾ–೭೬);*

- ದ್ರಾವಿಡ ಭಾಷಾ ರೂಪಗಳಾದ ತಮಿಳಿನಲ್ಲಿ 'ಕುಱವನ್', ತೆಲುಗಿನಲ್ಲಿ 'ಕೊಱವ', ತುಳುವಿನಲ್ಲಿ 'ಕೊರಗೆ', 'ಕೊರಗ್ಗೆ', 'ಕೊರವೆ', ಮಲೆಯಾಳಂನಲ್ಲಿ 'ಕುಱವನ್' ಮತ್ತು ಕೊಡವ ಭಾಷೆಯಲ್ಲಿ 'ಕುರುಬ್' ಪದಗಳ ಬಳಕೆ ಇದೆ; ತಮಿಳು ಮತ್ತು ಮಲೆಯಾಳಂ ಭಾಷೆಗಳಲ್ಲಿ 'ಕುಱವನ್' ರೂಪವೇ ಯಥಾಪ್ರಕಾರವಾಗಿ ಬಳಕೆಗೊಂಡಿರುವುದು ವಿಶೇಷ; ತೆಲುಗಿನಲ್ಲಿ 'ಕೊಱವ' ರೂಪವಿದ್ದು ಕನ್ನಡದ 'ಕೊರವ' ರೂಪಕ್ಕೆ ಇದರ ಪ್ರಭಾವವಿರಬಹುದು? (ದ್ರಾ.ಭಾ.ಜ್ಞಾ.ಪ.ಕೋ); ತಮಿಳು ಮತ್ತು ಮಲೆಯಾಳಂಗಳಲ್ಲಿನ 'ಕುರಮ್' ರೂಪವೇ ಮೂಲ; ಕನ್ನಡದ 'ಕೊರವ' ಆಮೇಲಿನದು; ಕನ್ನಡದಲ್ಲಿಯೂ 'ಕುರವ' ಇರಬೇಕು; In dravidian Language forms like Tamil `Kuṟavan', Telugu `Koṟava', Tulu `Korage', `Koragge',

`Korave'; Malayalam `Kuṟavan'; Kodava `Kurub' words used;

- —*ಕೊರಮರವ* : ಬೆತ್ತದ ಸಾಮಾನುಗಳನ್ನು ತಂದು ಕೊಡುವವ; ಮದುವೆ ಸಂದರ್ಭದಲ್ಲಿ ಮೆಟ್ಟಕ್ಕಿ, ಸಿಬ್ಬಲ, ಬೆತ್ತದ ಸಾಮಗ್ರಿ, ಸಾಲಾವಳಿ ಕುಕ್ಕೆ, ಅನ್ನದ ಹೆಡಿಗೆ ಮೊದಲಾದವನ್ನು ತಂದುಕೊಡುವುದು ಇವನ ಕಾಯಕ. A supplier of cane goods; at the time of marriage he brings Mettakki, Sibbala, Cane articles, basket of Salavali, rice basket etc is his duty.

ಕೊರಮುಟ್ಟು koramuṭṭu :

- ಕೊರ+ಮುಟ್ಟು; ಕೊರ=ಕೊರಕಲು; ಕೊರೆಯಲು ಬಳಸುವ ಸಾಧನ; ಅತಿಯಾಗಿ ಕೆಲಸದಲ್ಲಿ ತೊಡಗಿಸಿಕೊಳ್ಳುವಿಕೆ ಮತ್ತು ಹೆಚ್ಚು ಮಾತನಾಡುವವರನ್ನು ಕುರಿತು ಪದಬಳಕೆ; An instrument used to bore, a person speak too much and stick on to work too much;
- ಮುಟ್ಟು=ವ್ಯವಸಾಯ ಹಾಗೂ ಇತರೆ ಕ್ರಿಯೆಗಳಲ್ಲಿ ಬಳಕೆಯಾಗುವ ಸಾಧನ–ಸಲಕರಣೆಗಳು; ಉಪಕರಣಗಳು; Muttu is used in agricultural activities; agricultural instruments;
- ಕೃಷಿ, ಮರಗೆಲಸ, ಕಬ್ಬಿಣದ ಕೆಲಸ ಹಾಗೂ ಇತರೆ ಕೆಲಸ–ಕಾರ್ಯಗಳಲ್ಲಿ ಉಪಯೋಗವಾಗುವ ಉಪಕರಣಗಳು; ಮರಗೆಲಸದ ಉಳಿ, ಬಾಚಿ ಮೊದಲಾದ ಸಾಮಗ್ರಿಗಳು; Instruments useful in agriculture carpentary, blacksmith;
- ಉಪಯೋಗ; ಲಾಭಕರವಾದುದು ಎಂಬರ್ಥದಲ್ಲಿಯೂ ಪದಬಳಕೆ; *ಪ್ರ: 'ಕೊರಮುಟ್ಟುಗಳನ್ನೆಲ್ಲ ಮೂಲೇಲಿ ಬಿಸಾಡಿದ್ದಾರೆ'.*

ಕೊರಲೆ/ಕೊರ್ಲೆ korale/korle :

- ಧಾನ್ಯ ವಿಶೇಷ; ಸಾಮೆಯನ್ನು ಹೋಲುವಂಥದು; ಸಾಮೆಯ ಪ್ರಕಾರಕ್ಕೆ ಸೇರಿದ್ದಿರಬಹುದು; ಈ ಧಾನ್ಯ ಬಯಲುಸೀಮೆಯಲ್ಲಿ ಕಂಡುಬಂದಿರುವುದು ವಿರಳ; ಉತ್ತರಕರ್ನಾಟಕ ಭಾಗದಲ್ಲಿ ಪ್ರಚಲಿತದಲ್ಲಿದ್ದಿರಬಹುದು; A corn, similar as same millet; this corn cannot be found in plain land area, may be in Uttara Karnataka area;
- ದ್ರಾವಿಡ ಭಾಷಾ ರೂಪಗಳಾದ ತಮಿಳಿನಲ್ಲಿ 'ಕುರಲ್' ಮತ್ತು ತೆಲುಗಿನಲ್ಲಿ 'ಕೊಱ್ಱಲು' ಎಂಬ ರೂಪಗಳು ಬಳಕೆಯಲ್ಲಿವೆ(ದ್ರಾ.ಭಾ.ಜ್ಞಾ.ಪ.ಕೋ); ತಮಿಳಿನ ರೂಪವೇ ಮೂಲವಿದ್ದಿರಬಹುದು, ಕನ್ನಡದ 'ಕೊರಲೆ' ಆಮೇಲಿನದು, ಇಲ್ಲಿಯೂ 'ಕುರಲ್' ಇದ್ದು 'ಕೊರಲ್' ಆಗಿರುವ ಸಾಧ್ಯತೆ ಇದೆ; ಹೇಗೂ ಸ್ವರವ್ಯತ್ಯಯ ನಿಯಮ–ಉ>ಒ–ಇದ್ದೇ ಇದೆ; *ಪ್ರ: 'ಕೊರ್ಲೆ ಕಾಳು ತಂದುಕೊಡಬಾರದಿತ್ತೆ'.* In Tamil `Kural', in Telugu `Koṟṟalu' forms are in use.

ಕೊರವಂಜಿ koravanji :

- 'ಕೊರವ' ಸಮುದಾಯದ ಮಹಿಳೆಯರು; ಕಣಿ ಅಥವಾ ಭವಿಷ್ಯವಾಣಿ ನುಡಿಯುವುದರಲ್ಲಿ ನಿಪುಣರು; ಕಣಿ ಹೇಳುವ ಈ ಕೊರತಿಯರಿಗೆ 'ಕೊರವಂಜಿ' ಎಂದು ಕರೆಯುವರು; ಕಣಿ ಹೇಳಲು ತಲೆ ಅಥವಾ ಕಂಕುಳಲ್ಲಿ ಬಣ್ಣದ ಚಿತ್ತಾರಗಳಿಂದ ಶೃಂಗರಿಸಿದ ಕುಕ್ಕೆಯನ್ನು ಇರಿಸಿಕೊಂಡು ಹೋಗುವುದರಿಂದ ಇವರಿಗೆ 'ಕುಕ್ಕೆ ಕೊರವಂಜಿ', 'ಕುಕ್ಕೆ ಕೊರಮಗಿತ್ತಿ' ಎಂಬ ಹೆಸರುಗಳು ಪ್ರಚಲಿತ; ಕಣಿ ಹೇಳಿ ಅದರಿಂದ ಸಿಗುವ ಆದಾಯ ಇವರ ಜೀವನ ನಿರ್ವಹಣೆಗೆ ಅನುಕೂಲವಾದುದು; The Korava community women are expert in foretelling; these women are called `Koravanji'; they carry a basket in the armpit or on the head so, they are called `Koravanji' or `Kukke Koravanji' or `Kukke Koramagitti'; they earn money by this to maintain family;
- ಊರೂರು ತಿರುಗಿ ಬೀದಿ ಬೀದಿಗಳಲ್ಲಿ ಕಣಿ, ಭವಿಷ್ಯವಾಣಿ ನುಡಿಯುವ ಇವರನ್ನು ಶಿವ, ವಿಷ್ಣು, ಮನ್ಮಥ ಕೊರವಂಜಿಯರೆಂದು ಕರೆಯುವರು; ಇವರ ಆರಾಧ್ಯ ದೈವ ಜಕ್ಕವ್ವ ಅಥವಾ ಜಕ್ಕಮ್ಮ; ಬಯಲಾಟಗಳಲ್ಲಿ ಇಂತಹ ವೇಷಾಧಾರಿಗಳುಂಟು; The Koravanji's wandering from village to village, street to street for foretelling they are called Shiva, Vishnu, Manmatha as Koravanji; their worshipped deity Jakkavva or Jakkamma; this kind of folk

dramatic dress wear by them in the folk play;

- ವಿಶಿಷ್ಟ ವಿನ್ಯಾಸದಿಂದ ಸಿಂಗರಿಸಿದ ಸೀರೆ, ಒಂದು ಕಡೆಗೆ ಓರೆಯಾಗಿ ಕಟ್ಟಿದ ತುರುಬು, ಕಾಲಿಗೆ ಕಡಗ, ಮೂಗಿಗೆ ಮುಕರ, ಕೈಯಲ್ಲಿ ದಂಡ, ಕಣ್ಣಿಗೆ ಕಾಡಿಗೆ, ಹಣೆ, ಕೆನ್ನೆ, ಗಡ್ಡದ ಮುಂಭಾಗಕ್ಕೂ ಕಾಡಿಗೆ ಚುಕ್ಕಿಗಳು, ಕಚ್ಚೆಯಂತೆ ಉಡುವ ಸೀರೆ, ಕಂಕುಳಲ್ಲಿ ಒಂದು ಬುಟ್ಟಿ, ಅದರೊಳಗೆ ಕಣಿಗೆ ಬೇಕಾದ ಸಾಮಗ್ರಿಗಳು ಮೊದಲಾದವು ಕೊರವಂಜಿಯರ ವೇಷಭೂಷಣ ಹಾಗೂ ಅವರು ಬಳಸುವ ಪರಿಕರಗಳು; Specially decorated saree, a hair knot on one side, bracelet in the ankle, nose ring, stick in the hand smear black in the eye; black dots on forehead, cheek, chin also, a basket in the armpit; some needed things for foretelling costume of them;
- ಮುಖಚರ್ಯೆ, ಹಸ್ತ, ಮನೆಯ ಲಕ್ಷಣಗಳನ್ನು ನೋಡಿ ಭವಿಷ್ಯ ಹೇಳುವುದನ್ನು ರೂಢಿಸಿಕೊಂಡಿರುವರು; ಮಾಟ-ಮಂತ್ರ ಮಾಡುವುದರಲ್ಲೂ ನಿಸ್ಸೀಮರು; ಇಂತಹ ಕೆಟ್ಟ ಕ್ರಿಯೆಗಳಿಂದ ಗ್ರಾಮೀಣ ಮುಗ್ಧ ಜನರಿಗೆ ಮೋಸ ಮಾಡುವವರೂ ಇದ್ದಾರೆ; ಸಾಮಾನ್ಯವಾಗಿ ಕರ್ನಾಟಕದ ಎಲ್ಲ ಕಡೆ ಕಂಡುಬರುವರು; They have practice foretelling by observing the facial feature, palm and the feature of the house; experts in balck magic; by these activity they cheat the rural people; they are found in all parts of Karnataka;
- ಮಕ್ಕಳಿಗೆ ಭೇದಿ, ಜ್ವರ, ಬಾಲಗ್ರಹ ಹಿಡಿದರೆ ಅದರ ನಿವಾರಣೆಗೆ ಕೊರವಂಜಿಯರಿಂದ ಪೂಜೆ ಮಾಡಿಸುವುದಿದೆ; ಮನೆಯಂಗಳ ತಾರಿಸಿ, ಸಗಣಿಯಿಂದ ಮಾಡಿದ ಗಣಪನನ್ನು ಕೂರಿಸಿ, ಅರಿಶಿಣ, ಕುಂಕುಮ ಹಚ್ಚುವರು; ಐದು ಗಿಡಮೂಲಿಕೆ ಕಟ್ಟಿದ ಅರಿಶಿಣ ಬಟ್ಟೆಯನ್ನು ಅದರ ಮುಂದಿಡುವರು; ಎದುರಿಗೆ ಮಗುವನ್ನು ಕೂರಿಸಿ 'ಅನ್ನ ಕಾಣದ ಮುಕ್ಕ ಮೂಗು ಕೊಯ್ದೇನು, ಜನಿವಾರ ಕೊಯ್ದೇನು, ಅಂದ ನೋಡಿ ಬಂದ, ಚಂದ ನೋಡಿ ಬಂದ ನಾಲಿಗೆ ಕೊಯ್ದು ನಾರಾಯಣನ ಪಾದಕ್ಕೊಪ್ಪಿಸುವೆನು' ಎಂದು ಹೇಳುತ್ತಾ ರತ್ನೀರು, ಅಕ್ಕಿ, ಅಸಿಟ್ಟು, ಬೆಳ್ಳುಳ್ಳಿ, ಮೆಣಸಿನಕಾಯಿಯನ್ನು ನೀವಳಿಸಿ ಮೂರು ಕೂಡಿದ ದಾರಿಗೆ ಎರಚುವಂತೆ ಹೇಳುವರು; ನಂತರ ಮಗುವಿಗೆ ಔಷಧ ಕೊಟ್ಟು, ಕುತ್ತಿಗೆಗೆ ಅರಿಶಿಣದ ದಾರ ಕಟ್ಟಿ ಅದನ್ನು ಆಗಾಗ ಚೀಪುತ್ತಿದ್ದರೆ ತೊಂದರೆ ನಿವಾರಣೆಯಾಗುತ್ತದೆಂದು ಹೇಳುವರು; Children suffering from Dysentery, Fever, Balagraha people call Koravanji to perform pooja for relief; clean the front Yard with cowdung, made Ganapa with cowdung and grass, put turmeric and vermilian to it, tie five kinds of medicinal herbals, put before the child; they perform the pooja along with manthras finally give some medicine and tie the thread of yellow cloth to the neck the baby chew the yellow thread knot all the trouble will disappear is the belief;
- ಹಚ್ಚೆ ಬಿಡಿಸುವುದು ಇವರ ಮತ್ತೊಂದು ಪ್ರಧಾನ ವೃತ್ತಿ; ಧಾರ್ಮಿಕ ಭಾವನೆ, ದೇಹ ಸೌಂದರ್ಯ ಹೆಚ್ಚಿಸಲು ಹಚ್ಚೆ ಸಹಕಾರಿ ಎಂಬುದಿದೆ; ಇದಕ್ಕೆ ಸೂಜಿ, ವಿವಿಧ ಬಗೆಯ ಸೊಪ್ಪಿನ ರಸ, ಅರಿಶಿಣ, ಮಸಿ ತುಂಬಲು ಮಣ್ಣಿನ ಕುಡಿಕೆ, ಬಿದಿರಿನ ಕೊಳವೆ/ನಳಿಕೆಗಳು, ಚಿತ್ರಪಟದ ಪುಸ್ತಕ ಮತ್ತು ಇದನ್ನೆಲ್ಲ ತುಂಬಿದ ಒಂದು ಕೈಚೀಲ ಬಳಸುವರು; Their another occupation is to draw the tattoo; tattoos improves the beauty of the body and religious feelings; they use to draw tattoo a needle, the juice of different kinds of leaves; turmeric, an earthern pot to keep the black in it; bamboo pipes, a book of sketches, a bag to carry all these;
- ಜಕ್ಕವ್ವ ನುಡಿತಾಳ, ಜಕ್ಕವ್ವ ನುಡಿತಾಳ, ಈ ಮನಿಗೊಂದು ಕಂಟಕ ಕಾದಾಯ್ತಿ ಮೂಗ್ಗಟ್ಟಿನಾಕಿ ಬಂದು ಮನಿ ಮುರಿತಾಳ, ಒಗ್ಗಟ್ಟು ಕೆಡುಸ್ತಾಳ ಅದಕಾಗಿ ನಾನು ಕಣಿ ನುಡಿತೀನಿ, ಹೋಮ, ಹವನ, ಬ್ಯಾಡ, ಒಂದು ಶಾಂತಿ ಮಾಡತೀನಿ, ಆನೆಯಾಗಿ ಬಂದದ್ದು ಇಲಿಯಾಗಿ ಹೋಗತಾದ, ಬೆಟ್ಟದಾಗ

ಬಂದದ್ದು ಮಂಜಿನಾಗ ಕರಗೋಯ್ತದ ಅದಕಾಗಿ ನಾ ಕಣೀ ಹೇಳತೀನಿ ಕೇಳ್ರವ್ವ ಕಣೀ;

- 'ಮಣಿ, ಮಂತ್ರವ ಬಲ್ಲ ಕೊರವಂಜಿ ನಾನು, ಮದ್ದು-ಮಾಟವ ಮಾಡಲು ಬಲ್ಲೆ, ಬಿದ್ದ ಬೀಳನು ಎತ್ತಲು ಬಲ್ಲೆ, ಕದ್ದೋಡೋ ಕಳ್ಳನ ಹಿಡಿದುಕೊಡ ಬಲ್ಲೆ, ಒದ್ದೋಡೋ ಗಂಡನ ಕರೆದು ಕೂಡಿಸಲು ಬಲ್ಲೆ, ಎಲ್ಲವ ಬಲ್ಲ ದೇವಲೋಕದ ಕೊರವಿ ನಾನವ್ವ' ಎಂದು ಹೇಳಿಕೊಂಡು ಬೀದಿ ಬೀದಿ ತಿರುಗುವರು;
- —***ಕೊರವಂಜಿ ಕೋಲಾಟ*** : ಕೋಲಾಟದ ಒಂದು ಬಗೆ; ಚಂಡಿ ಎನಿಸಿದ ಸತ್ಯಭಾಮಳನ್ನು ಪ್ರಧಾನ ಪಾತ್ರವಾಗಿರಿಸಿಕೊಂಡು ಅವಳಿಗಾಗಿ ಕೃಷ್ಣ ಬೇಸ್ತುಬೀಳುವ ಪರಿಯನ್ನು ಆಧಾರವಾಗಿಟ್ಟು ತಮ್ಮದೇ ಆದ ಶೈಲಿಯಲ್ಲಿ ನಿರೂಪಿಸುವ ಹಾಡನ್ನು ಈ ಕೋಲಾಟದಲ್ಲಿ ಬಳಸಿಕೊಳ್ಳುವರು; ಉತ್ತರ ಕರ್ನಾಟಕದಲ್ಲಿ ಕಂಡುಬರುವ ಒಂದು ಪ್ರದರ್ಶನಾತ್ಮಕ ಕಲೆ; It is a kind of the play; an art perform in Uttarakarnataka region; a song has the theme of Krishna and Sathyabhama in main role, how Krishna decepted by obstinate Sathyabhama;
- ಈ ಕೋಲಾಟಕ್ಕೆ ಎಂಟರಿಂದ ಹತ್ತು ಮಂದಿ ಇರಬೇಕು; ಅವರಲ್ಲೊಬ್ಬ ಕೊರವಂಜಿ ವೇಷ ಧರಿಸಿದರೆ ಮತ್ತೊಬ್ಬ ರುಕ್ಮಿಣಿ ವೇಷ ಧರಿಸುವರು; ಇವರಿಬ್ಬರೂ ಎಡ-ಬಲದಲ್ಲಿ ನಿಂತು ಹಾಡಿನ ಅರ್ಥ ಮತ್ತು ತಾಳಕ್ಕನುಗುಣವಾಗಿ ಅಭಿನಯಿಸುತ್ತಾರೆ; For this play 8 to 10 members needed; among them, a person wear the disguise of Koravanji; another in the disguise of Rukmini; these two acting according to the rhythm of the song;
- ಇಲ್ಲಿ ಕೊರವಂಜಿ ರುಕ್ಮಿಣಿಯನ್ನು ಅಟ್ಟಾಡಿಸುವುದು, ಗೋಳೂಯ್ದುಕೊಳ್ಳುವುದು ಹಾಸ್ಯಮಯವಾಗಿರುತ್ತದೆ; ಇಲ್ಲಿನ ಕೊರವಂಜಿಯ ಪಾತ್ರ ಮತ್ತು ಈ ಆಟಕ್ಕೆ ಬಳಸಿಕೊಳ್ಳುವ ಹಾಡು ಕೊರವಂಜಿಯನ್ನೇ ಹೋಲುವುದರಿಂದ ಇದಕ್ಕೆ 'ಕೊರವಂಜಿ ಕೋಲಾಟ' ಎಂಬ ಹೆಸರು ಬಂದಿರಬಹುದು; Here Koravanji chasing and harassing Rukmini and very humourous; the play and songs are similar to Koravanji so it is called Koravanji play;
- —***ಕೊರವಂಜಿ ನೃತ್ಯ*** : ಒಂದು ಬಗೆಯ ನಾಟ್ಯ; ದಕ್ಷಿಣದಲ್ಲಿ ಮೂರು ಬಗೆಯ ಶಾಸ್ತ್ರೀಯ ಸಂಪ್ರದಾಯಗಳಿದ್ದವು; ಅವುಗಳಲ್ಲಿ ಸದಿರ್, ಭಾಗವತ ಮೇಳ ಮತ್ತು ಕೊರವಂಜಿ ನೃತ್ಯ; A kind of dance form; in South has three kinds of traditional customs, they are Sadir, Bhagavatha mela and Koravanji dance;
- ಕೊರವಂಜಿಯರಲ್ಲಿ ರೂಢಿಯಲ್ಲಿರುವ ನೃತ್ಯ ಪ್ರಕಾರ; ಏಳು ಸುತ್ತಿನ ಕೋಟೆಯಿಂದ ದೇವಿಯನ್ನು ಆಹ್ವಾನಿಸಲು ನಡೆಸುವ ಆಚರಣೆ; ಅವಳಿಗಾಗಿ ಹಸಿಕರಗ ಹೊತ್ತು ಏಳುಸುತ್ತಿನ ಕೋಟೆಯನ್ನು ಒಂಬತ್ತು ಸುತ್ತು ಬರುವಾಗ ಹೆಜ್ಜೆ ವರಸೆ ಹಾಕಿ ದೇವಿಯನ್ನು ವಿಧಿವತ್ತಾಗಿ ಸ್ತುತಿಸಿ ದೇವಾಲಯಕ್ಕೆ ಆಹ್ವಾನಿಸುವುದು ಇದರ ಉದ್ದೇಶ(ಬೆಂ.ಗ್ರಾ.ಜಿ); The dance form of Koravanji is in practice; to invite the deity from seven forts; for her carry `Hasi Karaga' and round nine rounds around the forts, dance according to the rhythm of the song; invite the deity into the temple is the motive.

ಕೊರಸಂಡಿ/ಕೊರಸಾಂಡಿ korasaṇḍi/ korasāṇḍi :

- ನೆಲಗಡಲೆ ಅಥವಾ ಶೇಂಗಾ ಎಂಬರ್ಥದಲ್ಲಿ ಪದಬಳಕೆ; 'ಶೇಂಗಾ' ಪದಕ್ಕೆ ಉತ್ತರ ಕರ್ನಾಟಕ ಭಾಗದಲ್ಲಿ 'ಕೊರಸಂಡಿ' ಎಂದು ಕರೆಯುವರು; The word used in the meaning of ground nut; in UttaraKarnataka region it is called as `Korasandi';
- ನೆಲಗಡಲೆಯನ್ನು ಗಾಣದಲ್ಲಿ ಹಾಕಿ ಎಣ್ಣೆ ತೆಗೆಯುವುದಿದೆ; ಸಿಹಿ ತಿಂಡಿ-ತಿನಿಸು, ಅಡುಗೆ ತಯಾರಿಕೆಗೆ ಬಳಕೆ; The groundnuts are grind in the wheel for oil, the oil is used for cook and sweets;
- ಜಿಡ್ಡಿನ ಅಂಶವಿರುವ ಪದಾರ್ಥ; ಕೊರಸಂಡಿಯ ಹಸಿಕಾಳನ್ನು ತಿನ್ನುವುದು ವಿರಳ; ಹುರಿದುಕೊಂಡು ತಿನ್ನುವರು; ಕೊರಸಂಡಿ ಕಾಳನ್ನು ಹುರಿದು ಅದಕ್ಕೆ ಮಸಾಲ ಕಾರ ಮಿಶ್ರಣ ಮಾಡಿ ಮಾರಾಟ

ಮಾಡುವುದಿದೆ; ಆಹಾರ ಪದಾರ್ಥವಾಗಿ ತಿನ್ನಲು ಉಪಯೋಗ; Groundnuts have viscocity; the dried nuts are used to eat; the masala mixed dried nuts are sell as stuff to eat;

- ಚಿತ್ರ ಅನ್ನ, ಕಾರಸಾವಿಗೆ, ತಂಬಿಟ್ಟು, ಫಲ್ಯ ಮಾಡಲು ಕೊರಸಂಡಿ ಕಾಳು ಬಳಕೆ. Korasandi grain used for Figure rice, Karasavige, Tambittu, Palya.

ಕೊರಸಿ/ಕೊರ್ಸಗಾಯ korasi/korsagāya:

- ಕೊರಸಿ+ಕಾಯ>ಕೊರಸಿಗಾಯ>ಕೊರಸಗಾಯ> ಕೊರ್‌ಸಗಾಯ>ಕೊರ್ಸಗಾಯ(ಕ>ಗ); 'ಕೊರಸಿಕಾಯಿ' ಎಂಬುದು ಮೂಲರೂಪ; ಉಚ್ಚಾರಣೆಯಲ್ಲಿ ಪದ ಸಂಕ್ಷಿಪ್ತತೆಯ ಸೌಲಭ್ಯದಿಂದಾಗಿ ಇಂತಹ ಬದಲಾವಣೆಗಳಾಗುವುದು ಸಾಮಾನ್ಯ; ಪ್ರಾದೇಶಿಕ ಭಾಷಾ ಭಿನ್ನತೆಯನ್ನು ಗುರುತಿಸಬಹುದು; `Korasikai' is the original form; generally it is quite common of the concise the word in pronunciation; by this find the regional difference;
- ಕೊರಸಿ=ಕುದಿಸುವಿಕೆ ಎಂಬರ್ಥದಲ್ಲಿ ಪದಬಳಕೆ; ಮಾವಿನಕಾಯಿಯಂತಹ ಇತರೆ ಕಾಯಿಗಳನ್ನು ಕುದಿಸುವ ಪದ್ಧತಿ; Korasi means boil; the unripe fruits like Mango boiling is in practice;
- ಮಾವಿನಕಾಯಿಯನ್ನು ನೀರು, ಉಪ್ಪಿನೊಂದಿಗೆ ಬೇಯಿಸಿ ನಂತರ ಅದರಿಂದ 'ಮಾವಿನಕಾಯಿ ಚಟ್ನಿ' ತಯಾರಿಸಲಾಗುವುದು; ಇದನ್ನು ಊಟದೊಂದಿಗೆ ಬಳಸುವುದಿದೆ; The unripe Mango boiled with water and salt to prepare `Mavinakayi chatny'; it is used with dinner as sides;
- ಮಾವಿನಕಾಯಿ ಉಪ್ಪಿನಕಾಯಿಯು ಹಾಗೆ ತಿನ್ನಲು ಉಪಯೋಗವಾಗುವ ಪದಾರ್ಥ; ಸಾಮಾನ್ಯವಾಗಿ ಉತ್ತರಕರ್ನಾಟಕ ಭಾಗದಲ್ಲಿ ರೂಢಿಯಲ್ಲಿರುವಂಥದು. Mango pickle is useful to eat, it is practiced in North Karnataka.

ಕೊರಸಿಗನ ಮರ korasigana mara :

- ಪೊದೆಯಂತೆ ಬೆಳೆಯುವ ಮರ ವಿಶೇಷ; ಆಲಂಕಾರಿಕ ಸಸ್ಯವಾಗಿಯೂ ಬೆಳೆಸುವುದಿದೆ; ಕಾಡು-ಮೇಡು, ಬೆಟ್ಟ-ಗುಡ್ಡಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುವ ಮರ; A tree species grow like bush; grow as decorate plant; it grows hills forest and moors;
- ಇದರಲ್ಲಿ ಬಿಡುವ ಸುವಾಸನಾಭರಿತ ಹೂವಿನಿಂದಾಗಿ ಮನೆಯಂಗಳ, ಉದ್ಯಾನವನ, ದೇವಸ್ಥಾನ, ಶಾಲಾ-ಕಾಲೇಜುಗಳ ಮುಂಭಾಗದಲ್ಲಿ ಬೆಳೆಸಲಾಗುತ್ತದೆ; The flowers of this plant very fragransive so it is planted in and around the house, garden, temple, schools and colleges;
- ಉರುವಲಿಗೆ ಉಪಯೋಗವಾಗುವ ಇದು ಔಷಧೀಯ ಗುಣವನ್ನೂ ಹೊಂದಿದೆ; ಇದರ ತೊಗಟೆಯಲ್ಲಿ ಕ್ಷಾರಯುಕ್ತ ಅಂಶವಿರುವುದರಿಂದ ಅಜೀರ್ಣ, ಮೂಲವ್ಯಾಧಿ, ಚರ್ಮ ಮತ್ತು ಗುಲ್ಮ ರೋಗಗಳಿಗೆ ಔಷಧಿ ತಯಾರಿಸಲಾಗುತ್ತದೆ; It has medicinal qualities used to fire wood and indigestion, piles and skin diseases;
- ತೊಗಟೆಯಲ್ಲಿ ಒಸರುವ ಅಂಟು ಆಮಶಂಕೆ ನಿವಾರಣೆಗೆ ಬಳಕೆ; The gum of the bark used to cure dysentery;
- ಈ ಮರದ ಕಾಂಡವನ್ನು ಬಾಚಣಿಗೆ, ಪೆಟ್ಟಿಗೆ, ಚಿತ್ರಗಳ ಕಟ್ಟು, ಆಟದ ಸಾಮಗ್ರಿಗಳು, ಊರುಗೋಲು, ನೇಗಿಲು, ಮಣೆ ಮೊದಲಾದ ಉಪಕರಣಗಳ ತಯಾರಿಕೆಯಲ್ಲಿ ಬಳಸುವರು; *ಪ್ರ: 'ಕೊರಸಿಗನ ಮರದಿಂದ ಉದ್ಯಾನವನದ ಅಲಂಕಾರ ಶೋಭಿಸುತ್ತಿತ್ತು'.* The stem of the tree used to manufacture of combs, boxes, frames to portraits, playthings, hand-stick, plough, flank etc.

ಕೊರಳು koraḷu :

- ಕೊರಳ್, ಕೊರ್‌ಳು, ಕೊರ್ಳು, ಕೊಳ್ಳು, ಕೊರಲ್, ಕೊರಲು, ಕೊರ್ಲು ಎಂಬ ವಿಭಿನ್ನ ಬಗೆಯ ಸಂವಾದಿ ರೂಪಗಳ ಬಳಕೆ ಕಂಡುಬಂದಿದೆ; ಕೊರಳು> ಕೊರ್‌ಳು>ಕೊರ್ಳು>ಕೊಳ್ಳು; ಉಚ್ಚಾರಣೆಯಲ್ಲಿ 'ರ'ಕಾರ ಲೋಪವಾಗಿರುವುದು ಸ್ಪಷ್ಟ (ವಿಜಾತೀಯವಾದದ್ದು

ಸಜಾತೀಯವಾಗುವುದು); Used as equivalent form words like `Koral', `Koralu', `Korlu', `Koralu';

- ಮನುಷ್ಯನ ದೇಹದ ಒಂದು ಪ್ರಧಾನ ಅಂಗ; ಕತ್ತು, ಕುತ್ತಿಗೆ, ಗಂಟಲು ಮೊದಲಾದ ಅರ್ಥಗಳಲ್ಲಿ ಪದಬಳಕೆ; ಹೆಂಗಸರು ಕೊರಳಿಗೆ ಅಡ್ಡಿಗೆ, ದೊಡ್ಡಗುಂಡು, ಕಾಸಿನಸರ, ಚೈನು, ತಾಳಿ, ತಾಳಿಗುಂಡು ಮೊದಲಾದವುಗಳನ್ನು ಧರಿಸುವುದಿದೆ; ಇದು ಅವರ ಆಲಂಕಾರಿಕವೂ ಹೌದು, ಸೌಂದರ್ಯವರ್ಧಕವೂ ಹೌದು; ಅಲ್ಲದೆ ಕೆಲವರು ತಾತಿ, ಯಂತ್ರ ಅಥವಾ ಅಂತ್ರ ಮೊದಲಾದವನ್ನೂ ಕೊರಳಿಗೆ ಧರಿಸುವರು; It is a main part of the human body; used in the meaning neck, throat etc; Woman weared different ornaments to the neck for decoration and for beautification; tie some talisman amulet;
- ಕಂಠ; ಧ್ವನಿ, ಸ್ವರ, ಶಬ್ದ, ಆಲಾಪನೆಗಳು ಕೊರಳಿನಿಂದಲೇ ಹೊರ ಹೊಮ್ಮುವುದು; ಸುಮಧುರವಾದ, ಕರ್ಕಶವಾದ ಧ್ವನಿ ಹೊರಡುವುದೂ ಕೊರಳಿನಿಂದಲೇ; Neck; melody and harsh tone or sound coming out of it;
- ಕಾಳಿನ ತೆನೆ; ಗೊಂಚಲು; ಶ್ವಾಸನಾಳ; ತಾಳೆ ಮರದ ಗೊನೆ ಬಿಡುವ ಜಾಗ; ದೂರದ ಕರೆಗೆ ಓಗೊಡುವಿಕೆ; ಕಂಠಪಾಟ ಮಾಡು; ಚಿಲಿಪಿಲಿಗುಡು; ಉತ್ಸವದ ದಿವಸಗಳಲ್ಲಿ ಪುರುಷ, ಮಹಿಳೆಯರು ಸಾಮೂಹಿಕವಾಗಿ ಹಾಕಲಾಗುವ ಕೀರಲು ಧ್ವನಿ; ಶಬ್ದ; ಬೀಸುವ ಕಲ್ಲಿನಲ್ಲಿ ಧಾನ್ಯ ಹಾಕುವ ಕಂಡಿ ಅಥವಾ ರಂಧ್ರ; Bunch of corn; bunch; breath vein; by-heart; twittering, chirruping; a screaming sound of men and woman in the procession; a hole in the grain grinding stone;
- ದ್ರಾವಿಡ ಭಾಷಾ ರೂಪಗಳಾದ ತಮಿಳಿನಲ್ಲಿ 'ಕುರಲ್'; ತೆಲುಗಿನಲ್ಲಿ 'ಕ್ರೋಲುಚು', ತುಳುವಿನಲ್ಲಿ 'ಕುರಲ್', 'ಕೊರಲ್', ಮಲೆಯಾಳಂನಲ್ಲಿ 'ಕುರಲ್', 'ಕುರಳ್' ಮತ್ತು ಕೊಡವ ಭಾಷೆಯಲ್ಲಿ 'ಕೊರ' ರೂಪಗಳ ಬಳಕೆ ಇದೆ; ತಮಿಳು, ತುಳು, ಮಲೆಯಾಳಂ ಭಾಷೆಗಳಲ್ಲಿ 'ಕುರಲ್' ರೂಪ ಯಥಾಪ್ರಕಾರವಾಗಿ ಬಳಕೆಗೊಂಡಿರುವುದು ಸ್ಪಷ್ಟ (ದ್ರಾ.ಭಾ.ಜ್ಞಾ.ಪ.ಕೋ); ಕನ್ನಡದಲ್ಲಿಯೂ ಮೊದಲು 'ಕುರಲ್(ಳ್)' ರೂಪವೇ ಇದ್ದಿರಬಹುದು; In Tamil `Kural', in Telugu `Kroluchu', in Tulu `Kural', in Malayalam `Kural' and in Kodava `Kora' is used;
- ***—ಕೊರಳ ಅಡ್ಡಿಗೆ*** : ಸಣ್ಣ ಪ್ರಮಾಣದ ಮರದ ಹತ್ತು ತುಂಡುಗಳನ್ನು ಸೇರಿಸಿ ಅದರ ಮೇಲ್ಭಾಗಕ್ಕೆ ಬಂಗಾರ ಬಣ್ಣದ ಸುವೇರಿ ಬ್ಯಾಗಡಿಗಳನ್ನು ಅಂಟಿಸಿ ತಯಾರಿಸಿರುವುದು; ಮರದ ತುಂಡುಗಳನ್ನು ದಾರಕ್ಕೆ ಕಟ್ಟಿರುವುದರಿಂದ ಸರದಂತೆ ಕಂಡುಬಂದು ದಪ್ಪ ಹಲ್ಲುಗಳ ಸಾಲಿನಂತಿರುತ್ತದೆ; ಕೊರಳಿಗೆ ಒತ್ತದಂತೆ ಹಾಲಕ್ಕಿ ಒಕ್ಕಲಿಗರ ಹೆಂಗಸರು ಕಟ್ಟಿಕೊಳ್ಳುವುದು ರೂಢಿ; small wooden pieces joined together and pasted `Suveri byagadi' on it; the wooden piece tie in a thread so it is like line of teeth; it is tried by the Halakki women to the neck is a practice, it cannot be press the neck;
- ಒಂದು ಪಟ್ಟಿಗೆ ಉಂಗುರದಂತಿರುವ ಹರಳುಗಳನ್ನು ಹಾಕಿದರೆ ಮತ್ತೊಂದು ಪಟ್ಟಿಗೆ ಎಂಟು ಕಿರು ಸರಪಳಿಗಳನ್ನು ಅಳವಡಿಸಿರುತ್ತಾರೆ; ಈ ಎರಡೂ ಪಟ್ಟಿಗಳ ಅಕ್ಕಪಕ್ಕದಲ್ಲಿ ಎರಡೆರಡು ಗೆಜ್ಜೆಗುಂಡಿನ ಸರಪಳಿಗಳನ್ನು ಜೋಡಿಸಿ ತಯಾರಿಸಿರುವರು; ಅಡ್ಡಿಗೆಯ ತಳಭಾಗದಲ್ಲಿ ಎರಡು ಗುಗ್ಗೆ ಕಡ್ಡಿ ಮತ್ತು ಎರಡು ಹಲ್ಲುಕಡ್ಡಿಗಳನ್ನು ಸೇರಿಸಿಕೊಂಡಿರುವರು; A band fix the ring like crystal, chains side by side of this band two-two round bell chains joined; bottom of the `Addige' two wax sticks and a tooth stick fixed;
- ಕೊರಳ ಅಡ್ಡಿಗೆಯನ್ನು ಹಾಲಕ್ಕಿ ಒಕ್ಕಲಿಗರ ಹೆಂಗಸರೇ ಅಲ್ಲದ ಇತರೆ ಸಮುದಾಯದ ಹೆಂಗಸರುಗಳೂ ಧರಿಸುವುದಿದೆ; ಇದು ಚಿನ್ನ, ಬೆಳ್ಳಿ, ಬಂಗಾರದಿಂದ ಮಾಡಿಸಿರುವಂಥದು; ಅವರವರ ಆರ್ಥಿಕ ಅನುಕೂಲತೆಗೆ ತಕ್ಕಂತೆ ಮಾಡಿಸಿಕೊಂಡಿರುವರು; Other than Halakki women, also weared this `Addige'; it is prepared and weared on their economic condition or status;
- ಜಾನುವಾರುಗಳ ಕೊರಳಪಟ್ಟಿಗೆ ಹಾಕಲಾಗುವ ಚಿಲಕ; ಕಬ್ಬಿಣದಿಂದ ತಯಾರಿಸಿದ್ದು; ಜಾನುವಾರುಗಳು

ನಿಂತಲ್ಲೆ ಸುತ್ತುತ್ತಿದ್ದರೆ ಕೊರಳ ಚಿಲಕವೂ ತಿರುಗುತ್ತದೆ; ಇದರಿಂದ ಹಗ್ಗ ಕೊರಳು ಬಿಗಿದು ಪ್ರಾಣಾಪಾಯವಾಗುವುದನ್ನು ತಪ್ಪಿಸಬಹುದು; The bolt weared to cattle made of iron if the cattle rounded up in a place the bolt also rounded up; it is to avoid the cattle from danger of death;

- —***ಕೊರಳ ಚೈನು*** : ಕೊರಳಿಗೆ ಧರಿಸುವ ಚಿನ್ನ, ಬೆಳ್ಳಿ, ಬಂಗಾರದಿಂದ ತಯಾರಿಸಿದ ಒಂದು ವಿಧದ ಆಭರಣ; ಒಂದೆಳೆ, ಎರಡೆಳೆ ಚೈನು ಎಂಬ ಪ್ರಕಾರಗಳುಂಟು; ಇದರಲ್ಲಿ ಸಾದಾ ಚೈನು, ಉರಿ ಚೈನು, ಸೈಕಲ್ ಚೈನು, ಅವಲಕ್ಕಿ, ಅಂಜಲಿ ಕಟಿಂಗ್ ಎಂಬ ಹಲವು ವಿನ್ಯಾಸದ ಚೈನುಗಳಿರುತ್ತವೆ; ಪುರುಷ-ಮಹಿಳೆ, ಮಕ್ಕಳೆಲ್ಲರೂ ಹಾಕಿಕೊಳ್ಳುವುದು ರೂಢಿ; A kind of ornament, made of gold, silver, wear around neck is called necklace; different varieties are: two thread chain, single thread chain, simple chain, uri chain, cycle chain, Avalakki, Anjali cutting, these are the different design chains; weared by men, women and children is in practice;
- ಚೈನಿನ ಮಧ್ಯಭಾಗದಲ್ಲಿ ಮುತ್ತಿನ ಹರಳು ಇಲ್ಲವೆ ದೇವರ ಮೂರ್ತಿಗಳನ್ನು ಅಳವಡಿಸಿಕೊಂಡು ಧರಿಸುವುದಿದೆ; ಅವರವರ ಆರ್ಥಿಕ ಅನುಕೂಲತೆಗೆ ತಕ್ಕಂತೆ; In the middle of the chain pearls or the idols of the gods fixed and weared, according to their economic position;
- —***ಕೊರಳಪಟ್ಟಿ*** : ಯಕ್ಷಗಾನ ಹಾಗೂ ರಂಗಭೂಮಿ ವೇಷಧಾರಿಗಳು ಕೊರಳಿಗೆ ಕಟ್ಟಿಕೊಳ್ಳುವ ಪಟ್ಟಿಕೆ; ಕೊರಳಿಗೆ ತಾಗಿ ನಿಲ್ಲುವಂತೆ ಕಟ್ಟಿಕೊಳ್ಳುವುದು ವಾಡಿಕೆ; A piece of cloth or metal piece tie around the neck by the Yakshagana and drama characters is in practice;
- —***ಕೊರಳ ಪದಕ*** : ಬಂಗಾರ ಬಣ್ಣದಂತೆ ಹೊಳೆಯುವ ಪ್ಲಾಸ್ಟಿಕ್ ಪಟ್ಟಿಗಳು; ಅಂಚಿನ ಭಾಗದಲ್ಲಿ ಬಿಳಿ, ಕೆಂಪು, ಹಸಿರು ಬಣ್ಣದ ಮಣಿಗಳನ್ನು ಸಾಲಾಗಿ ಜೋಡಿಸಲಾಗಿರುತ್ತದೆ; A piece of plastic, shine like gold; which arrange their white, red, green coloured small balls in a line;
- ಅರ್ಧಚಂದ್ರಾಕಾರದಂತಿರುವ ಇದರ ನಡುವೆ ವಿವಿಧ ಮಣಿಗಳಿಂದ ಚಕ್ರಕಾರವಾಗಿ ವಿನ್ಯಾಸಗೊಳಿಸಲಾಗಿದ್ದು ಕನ್ನಡಿ ತುಂಡುಗಳನ್ನೂ ಅಳವಡಿಸಿರುವರು; ಇದರ ತಳಭಾಗದಲ್ಲಿ ಮಣಿಗಳಿಂದ ಅಲಂಕರಿಸಿದ ಎಂಟು ಗಾಜಿನ ಕೊಳವೆಗಳನ್ನು ಜೋಡಿಸಿರುವರು; It is in halfmoon shape in between the balls squared mirrors are fixed, under this eight decorated glass pipes fixed;
- —***ಕೊರಳ ಹಾರ*** : ಯಕ್ಷಗಾನ ಪಾತ್ರಧಾರಿಗಳು ಕೊರಳಿಗೆ ಧರಿಸುವ ಹಾರ; ಮರದ ತುಣುಕುಗಳು, ಬಣ್ಣ ಬಣ್ಣದ ಮಣಿಗಳು, ಸುವೇರಿ ಬ್ಯಾಗಡಿಗಳಿಂದ ತಯಾರಿಸಿರುವಂಥದು; ವಿದ್ಯುತ್ ಬೆಳಕಿಗೆ ಮಿರಮಿರನೆ ಮಿಂಚುತ್ತಿರುತ್ತದೆ; The Yakshagana actors wear this necklace; it is prepared with wood pieces, different colour balls and suveri byagadi; it is glitter by electric light;
- —***ಕೊರಳು/ಕತ್ತಿನ ದಾರ*** : ಜಾನುವಾರುಗಳ ಕತ್ತಿನ ಭಾಗಕ್ಕೆ ಕಟ್ಟುವ ದಾರ/ಹಗ್ಗ; ತೆಂಗಿನ ನಾರು, ಕುರಿ ಉಣ್ಣೆ, ಪ್ಲಾಸ್ಟಿಕ್ ದಾರಗಳಿಂದ ಹೊಸೆದಿರುವಂಥದು; ಗೂಟದ ಹಗ್ಗವನ್ನು ದನಗಳ ಮೂಗುದಾರ ಮತ್ತು ಕತ್ತಿನ ದಾರಕ್ಕೆ ಸೇರಿಸಿ ಕಟ್ಟುವುದರಿಂದ ಅವುಗಳ ನಿಯಂತ್ರಣ ಸಾಧ್ಯ; 'ಕಯ್ ಹಗ್ಗ, ಕತ್ತಿನ ಪಟ್ಟಿ' ಎಂದೂ ಕರೆಯುವುದಿದೆ; A rope or thread tie around the neck of cattle; it is prepared by coir, wool and plastic; stake rope tie through nostril and neck thread to control the cattle; it is called as `kai hagga'(hand made rope) `Kathina patti' (neck rope piece);
- —***ಕೊರಳ ಚಿಲಕ*** : ಮೂಗುದಾರ ಮತ್ತು ಕತ್ತಿನ ದಾರಗಳಿಗೆ ಸೇರಿಸಿ ಕಟ್ಟಲಾಗುವ ಚಿಲಕ; ಬಾಗಿಲಿನ ಚಿಲಕದಂತಿರುತ್ತದೆ; ಕಬ್ಬಿಣದಿಂದ ತಯಾರಿಸಿರುವಂಥದು; ಇಲ್ಲಿ ಹಗ್ಗಕ್ಕೆ ಸೇರಿಸಲು ಕೊಂಡಿ ಇರುತ್ತದೆ; A hatch to tie the nostril thread and neck thread of the cattle; it is

like door bolt; prepared by iron; A hook is fix to the rope;

- ***—ಕೊರಳು ಹೊಡೆ*** : ಧ್ವನಿ ಗಡುಸಾಗುವಿಕೆ; ಮಕ್ಕಳು ಬಾಲ್ಯಾವಸ್ಥೆಯಿಂದ ತಾರುಣ್ಯಾವಸ್ಥೆಗೆ ಬರುತ್ತಿದ್ದಂತೆ ಧ್ವನಿಯಲ್ಲಿ ಗಡಸುತನ ಕಂಡುಬರುತ್ತದೆ; ದೇಹದ ವಿವಿಧ ಅಂಗಗಳು ಬದಲಾದಂತೆ ಧ್ವನಿಯೂ ಸಹ ವ್ಯತ್ಯಯಗೊಳ್ಳುವುದಿದೆ; Voice turn hard; the children voice turn to hard while they are turning to youth; like change in the parts of the body, the tone or voice also change;
- ***—ಕೊರಳು ಕಟ್ಟಿಕೊಳ್ಳು*** : ಧ್ವನಿ ಅಥವಾ ಕಂಠ ಕಟ್ಟಿಕೊಳ್ಳುವಿಕೆ; ಗದ್ಗದಿತವಾಗುವುದು; ಭಾಷೆಯ ಸ್ವರೋಚ್ಚಾರಣೆಯಲ್ಲಿ ಉಂಟಾಗುವ ಏರಿಳಿತ; Voice suffocation; ups and downs in the language;
- ***—ಕೊರಳು ಹೂಡು*** : ಬಂಡಿ ಅಥವಾ ನೇಗಿಲಿಗೆ ಎತ್ತುಗಳನ್ನು ಹೂಡು; ಉಳುಮೆಗೆ ಅಣಿಯಾಗು; ಎತ್ತುಗಳ ಕೊರಳಿಗೆ ನೊಗವನ್ನಿಟ್ಟು ಅದಕ್ಕೆ ನೇಗಿಲನ್ನು ಕಟ್ಟುವಿಕೆ; To fix bullocks to cart or plough; to prepare for plough; to kept the yoke on the neck of bullock to fix the plough to it;
- ***—ಕೊರಳುಬ್ಬಿ*** : ತುಂಬಿ ಬಂದ ಭಾವನೆಗಳು; ಹುಮ್ಮಳಿಸಿ ಬರುವ ದುಃಖ, ಗದ್ಗದಿತವಾಗುವಿಕೆ; ಅತಿಯಾದ ದುಃಖ, ಅತಿಯಾದ ಸಂತೋಷವಾದಾಗ ಕೊರಳುಬ್ಬಿ ಬರುವುದಿದೆ; ಮನಸ್ಸು ತುಂಬಿ ಬರುವುದು; *ಪ್ರ: 'ಅವರ ಸತ್ಕಾರದಿಂದ ನನ್ನ ಕೊರಳುಬ್ಬಿ ಬಂದು ಮಾತೇ ಹೊರಡದಂತಾಯಿತು'*; Brimming feelings; brimmingout of sorrow; chocked while extreme sorrow, extreme joy; the mindful happiness; "i have no words to say, my throat brim, to their warm hospitality";
- ***—ಕೊರಳುಲ್ಲು*** : ಸಸ್ಯ ವಿಶೇಷ; ರಾಗಿ ಫಸಲಿನ ನಡುವೆ ರಾಗಿಹುಲ್ಲಿನಂತೆಯೇ ಬೆಳೆಯುತ್ತದೆ; ದುಂಡಾಗಿರುವ ಸಸ್ಯ; ಕೊರಳ್+ಹುಲ್ಲು>ಕೊರಳ್+ಹ್+ಉಲ್ಲು>ಕೊರಳ್+Ø+ಉಲ್ಲು>ಕೊರಳುಲ್ಲು; A plant grow between ragi like ragi plant, millet plant; a round plant;
- ***—ಕೊರಳಸುತ್ತ*** : ಸಂಕಷ್ಟಗಳು; ತೊಂದರೆಗಳು; ಹಲವು ಅಪಾಯಗಳಲ್ಲಿ ಸಿಲುಕಿಕೊಳ್ಳುವಿಕೆ; *ಪ್ರ: 'ಅವನ ಕೊರಳ ಸುತ್ತ ಬರೀ ಸಂಕಷ್ಟಗಳೇ ಸುಳಿದಾಡುತ್ತಿವೆ'*; Problems; difficulties incur in many dangers; many problems are swirling around his neck;
- ***—ಕೊಳ್ಗಣ್ಣಿ/ಕೊಳಕಣ್ಣಿ*** : ಕೊರಳು+ಕಣ್ಣಿ>ಕೊರ್‌ಳ್‌ಕಣ್ಣಿ>ಕೊಳ್‌ಕಣ್ಣಿ>ಕೊಳ್ಗಣ್ಣಿ; ಕೊರಳು=ಕತ್ತು; ಕುತ್ತಿಗೆ; ಕಣ್ಣಿ=ಹಗ್ಗ;
- ನೊಗಕ್ಕೆ ಎತ್ತುಗಳನ್ನು ಕಟ್ಟಲು ಕೊರಳಿಗೆ ಹಾಕಲಾಗುವ ಹಗ್ಗ; ಎತ್ತುಗಳನ್ನು ಗಾಡಿ ಅಥವಾ ಉಳುಮೆಗೆ ಕಟ್ಟುವಾಗ ನೊಗದ ರಂಧ್ರ ಅಥವಾ ಕಡೆಗೂಟಕ್ಕೆ ಸೇರಿಸುವ ಹಗ್ಗ; To tie the bullocks to the yoke a rope is used around the neck; and fix it to the yoke hole or the stock;
- ಉಳುಮೆ ಅಥವಾ ಗಾಡಿಗೆ ಎತ್ತುಗಳನ್ನು ಕಟ್ಟುವಾಗ ಎತ್ತಿನ ಹೆಗಲ ಮೇಲೆ ನೊಗವನ್ನಿಟ್ಟು ನೊಗದ ರಂಧ್ರ ಅಥವಾ ಕಡೆಗೂಟಕ್ಕೆ ಅಳವಡಿಸಿರುವ ಹಗ್ಗವನ್ನು ತೆಗೆದು ಎತ್ತಿನ ಕೊರಳ ಸುತ್ತ ಸುತ್ತಿ ನೊಗದ ಮತ್ತೊಂದು ಪಾರ್ಶ್ವದಲ್ಲಿರುವ ರಂಧ್ರ ಅಥವಾ ಕಡೆಗೂಟಕ್ಕೆ ತೂರಿಸಿ ಗಂಟು ಹಾಕುವುದು ಇದರ ವಿಧಾನ; While plough or to cart to tie the oxen lay the yoke on the neck of the bullock the rope is tie to the stalk which is fixed in the edge of the yoke i.e. the method to fix the oxen to the plough or cart;
- ಹೀಗೆ ಮಾಡುವುದರಿಂದ ಎತ್ತು ಗಾಡಿ ಹೊಡೆಯುವಾಗ ಅಥವಾ ಉಳುಮೆ ಮಾಡುವಾಗ ನೊಗದಿಂದ ಬಿಡಿಸಿಕೊಳ್ಳಲಾಗುವುದಿಲ್ಲ; ಇದು ಎತ್ತಿನ ಕೊರಳಿಂದ ನೊಗ ಜಾರದಂತೆ ಬಂಧಿಸಿರುತ್ತದೆ; ಇದರಿಂದ ಎತ್ತುಗಳು ಗಾಡಿ ಅಥವಾ ನೇಗಿಲನ್ನು ಸರಾಗವಾಗಿ ಎಳೆದೊಯ್ಯಲು ಸಹಕಾರಿ; By this method bullocks are not skip out of the yoke, so it helps the oxen to draw cart or plough easily;
- ***—ಕೊಳ್ಗುದ್ದಿ*** : ಕೊರಳ+ಗುದ್ದಿ>ಕೊರ್‌ಳಗುದ್ದಿ>ಕೊಳ್ಗುದ್ದಿ; ದನಗಳ ಕೊರಳಲ್ಲಿ ಕಟ್ಟಲಾಗುವ ಮರದ

ಸಣ್ಣ ತುಂಡು; ಕೊರಳ ತಳಭಾಗದಲ್ಲಿ ಕಟ್ಟಿ ಮುಂಭಾಗದ ಎರಡು ಕಾಲುಗಳ ನಡುವೆ ಈ ತುಂಡನ್ನು ಬಿಡಲಾಗುತ್ತದೆ; ಇದರಿಂದ ಕಳ್ಳದನಗಳು ಅಥವಾ ಎಮ್ಮೆಗಳು ಎಲ್ಲೆಂದರಲ್ಲಿ ಓಡಾಡಲಾಗದೆ ನಿಯಂತ್ರಣದಲ್ಲಿರುತ್ತವೆ; ಇದು ಇಂತಹ ದನಗಳ ನಿಯಂತ್ರಣಕ್ಕೆ ಸಹಕಾರಿಯಾದ ವಿಧಾನ; A small piece of wood tie to the neck and it is in between the two legs of the cattle; it helps to control the thief cattle, to go wherever they want;

- ***—ಕೊಳ್ಳಕೀಲು*** : ಎತ್ತುಗಳ ಹೆಗಲ ನೊಗದ ಇಕ್ಕೆಲಗಳಲ್ಲಿರುವ ಕೀಲು; ಇವು ಎತ್ತುಗಳ ಸಮಾನಾಂತರ ಕಾಪಾಡಲು ಉಪಯೋಗ;It is fixed on both the side of the yoke this control the oxen to move equally;
- ***—ಕೊಳ್ಪಾರು*** : ಕೊರಳು+ಪಾರು>ಕೊರ್‌ಳ್‌ಪಾರು> ಕೊಳ್‌ಪಾರು>ಕೊಳ್ಪಾರು; ಗಳೇವುಬಾರು, ಕೊಳಬಾರು, ಕಳೇಬಾರು, ಕಳೇವುದಬಾರು ಎಂಬ ಹೆಸರುಗಳಿಂದ ಕರೆಯುವರು; It is also called as Galevubaru, Kolabaru, Kalebaru, Kalevubaru;
- ನೊಗಕ್ಕೆ ಅಳವಡಿಸಿ ಕೋಲು ಮತ್ತು ಎತ್ತಿನ ಕೊರಳಿಗೆ ಬಿಗಿದು ಕಟ್ಟಲಾಗುವ ತೊಗಲಿನ ಹಗ್ಗ; A leather rope to tie the oxen neck and the yoke;
- ***—ಕೊಳ್ಳರಿಯುವುದು*** : ಕೊರಳು+ಹರಿಯುವುದು> ಕೊರ್‌ಳ್ಹರಿಯುವುದು>ಕೊಳ್‌ಹರಿಯುವುದು>ಕೊಳ್ಳರಿ ಯುವುದು; ಎತ್ತಿನ ಕೊರಳಲ್ಲಿ ಹೂಡಿರುವ ನೊಗ, ಹಗ್ಗ, ನೇಗಿಲನ್ನು ಬಿಚ್ಚುವುದು ಎಂಬರ್ಥದಲ್ಲಿ ಪದಬಳಕೆ; Used to mean, to untie the yoke, rope and plough;
- ಗಾಡಿ ಅಥವಾ ನೇಗಿಲಿನ ನೊಗಕ್ಕೆ ಜತ್ರಿಗಿ ಬಾರಿನಿಂದ ಕಟ್ಟಿದ ಎತ್ತಿನ ಕೊರಳನ್ನು ಬಿಚ್ಚುವುದು; ಗಳೆ ಹೊಡೆಯುವುದು, ಗಾಡಿ ಹೊಡೆಯುವುದು; To untie the bullocks neck from leather rope from the yoke of the cart or plough;
- ಉಳುಮೆ ಮಾಡುವುದನ್ನು ನಿಲ್ಲಿಸುವುದು; ಹೆಗಲು ದಣಿವಾರಿಸಿಕೊಳ್ಳಲು, ನೀರು ಕುಡಿಯಲು, ಮೇವು ಮೇಯಲು ಅಥವಾ ಮಧ್ಯಾಹ್ನದ ವಿಶ್ರಾಂತಿಗಾಗಿ ಹೀಗೆ ಮಾಡುವುದಿದೆ; To stop plough; to let free the back of the neck of the bullocks while drinking water, to graze and afternoon rest;
- ಕಣ್ಣಿ ಕಳಚಿ ಬಿಡುವ ವಿಧಾನ(ತು.ಜಿ); A method of relief the bullocks from the work;
- ***—ಕೊಳ್ಳುರಿ*** : ಕೊರಳಿನ ಹುರಿ; ಹುರಿ=ಹಗ್ಗ; ದಾರ; ಜಾನುವಾರುಗಳು ಹಾಗೂ ಆಡು, ಕುರಿಗಳ ಕುತ್ತಿಗೆಗೆ ಕಟ್ಟಲಾಗುವ ಹಗ್ಗ; ಕೊಟ್ಟಿಗೆ ಅಥವಾ ರೊಪ್ಪದಲ್ಲಿ ಕಟ್ಟಿಹಾಕಲು, ಮೇಯಲು ಬಿಟ್ಟಾಗ ನಿಯಂತ್ರಣದಲ್ಲಿಡಲು ಉಪಯೋಗ; A thread of neck; a rope to tie the neck of goat or sheep; it helps to control while grazing;
- ***—ಕೊಳ್ಪಟ್ಟಿ*** : ಕೊರಳು+ಪಟ್ಟಿ>ಕೊರ್‌ಳ್‌ಪಟ್ಟಿ> ಕೊಳ್‌ಪಟ್ಟಿ>ಕೊಳ್ಪಟ್ಟಿ; ಕುತ್ತಿಗೆ ಪಟ್ಟಿ; ಕಾಲರ್‌ಪಟ್ಟಿ; ಎದೆಪಟ್ಟಿ ಎಂತಲೂ ಕರೆಯುವುದಿದೆ; ವ್ಯಕ್ತಿ ತೊಡುವ ಅಂಗಿಯ ಕುತ್ತಿಗೆ ಅಥವಾ ಕತ್ತಿನ ಸುತ್ತಲಿರುವುದು; 'ಕತ್ತುನ್ ಪಟ್ಟಿ' ಎನ್ನುವರು; ಜಗಳದ ಸಂದರ್ಭದಲ್ಲಿ ಎದುರಾಳಿ ಇದನ್ನು ಕಯ್ಯಿಂದ ಹಿಡಿದುಕೊಳ್ಳುವುದಿದೆ; ದನಗಳ ಕೊರಳಿಗೆ ಕಟ್ಟುವ ತೊಗಲಿನ ಪಟ್ಟಿ. A piece of cloth around the neck called as `Edepatti'; it is a part of a shirt to wear around the neck; so it is called as `Kattinapatti'; while quarrelling people use to hold and twisting; the leather piece to tie around the neck of called `Togalina patti'.

ಕೊರಾಯಿ korāyi :

- ಒಂದು ವಿಧದ ಮೀನಿನ ಪ್ರಕಾರಕ್ಕೆ ಸೇರಿದ್ದು; ಮಲೆನಾಡು ಭಾಗದ ನದಿತಡಿಗಳಲ್ಲಿ ವಾಸ; ಬಲೆ ಹಾಗೂ ಇತರೆ ವಿಧಾನಗಳ ಮೂಲಕ ಹಿಡಿಯುವುದು ರೂಢಿ; ತಿನ್ನಲು ಯೋಗ್ಯವಾದ ಮೀನು ಇರಬಹುದು. Related to a kind of fish family; lives in the bank of Malnad rivers; it is hunt through net and other ways; its fit to eat.

ಕೊರಿ[೧] kori[1] :

- ಒಂದೇ ವಿಷಯವನ್ನು ಹೇಳು; Tell a matter;

- ಗುಂಡಿ ಬೀಳುವಂತೆ ಸುತ್ತ ತಿರುಗಿಸು(ತು.ಜಿ). To turn around to dig a pit.

ಕೊರಿ/ಕೊರೆ² kori/kore[2] :

- ಕತ್ತರಿಸು; ಕುಯ್ದಾಕು; ಆಳಕ್ಕೆ ರಂಧ್ರ ಮಾಡು; ಕೊಯ್ಯು; ಛೇದಿಸು; ತೂತು ಮಾಡು; ಕೆತ್ತು; ತುಂಡರಿಸು; ಕಂಡಾಕು; ಚೂರು ಮಾಡು; ಎರಡು ಭಾಗ ಮಾಡು; ಕೊಚ್ಚು; Cut; make a deep hole; sunder; intersect, engrave, hack; make into piece; make two parts; chop;
- ಕೊರೆ>ಕೊರಿ(ಎ>ಇ); ಉಚ್ಚಾರಣೆಯಲ್ಲಿ 'ಎ'ಕಾರಕ್ಕೆ 'ಇ'ಕಾರ ಪ್ರಾಪ್ತಿ; ಪ್ರಾದೇಶಿಕ ಉಚ್ಚಾರಣಾ ಭಿನ್ನತೆಯಿಂದ ಈ ವ್ಯತ್ಯಯ; ಕೊರೆ ಅಥವಾ ಕೊರಿ ಎಂಬುದು ಕ್ರಿಯಾತ್ಮಕ ಹಿನ್ನೆಲೆಯುಳ್ಳ ಶಬ್ದ; ಇಲ್ಲಿನ ಕ್ರಿಯೆ ಚಲನಾತ್ಮಕವಾದುದು; 'ಕೊರೆ' ಶಬ್ದವು ನಾನಾರ್ಥಗಳನ್ನು ಒಳಗೊಂಡಿರುವಂತಹ ವಿಶಾಲಾರ್ಥದಲ್ಲಿ ಬಳಕೆಯಲ್ಲಿರುವ ರೂಪ; ಗ್ರಾಮೀಣ ಜನರ ದಿನನಿತ್ಯದ ಬಳಕೆಯಲ್ಲಿ ಇದೂ ಸಹ ಒಂದು ಪದ;
- ಸೊಪ್ಪು ಕತ್ತರಿಸು; ಅಲಂಕಾರ ಕಣ್ಣು ಕೊರೆಯುವಂತಿತ್ತು; ಊಟದಲ್ಲಿ ನನಗೇನೂ ಕೊರೆಯಾಗಲಿಲ್ಲ; ಮರವನ್ನು ಅಳತೆಗೆ ಸರಿಯಾಗಿ ಕೊರೆದು ಹಾಕು; ಚಳಿಗೆ ಮಯ್ಯೆಲ್ಲಾ ಕೊರೆಯುತಿದೆ; ಒಂದು ಕೊರೆ ಅಕ್ಕಿ ತಂದುಬಿಡು; ಕೊರೆಯಾದ ಚೀಲವನ್ನು ತುಂಬಿಸಿಬಿಡು; ಕೊರೆಯನ್ನಾದರೂ ಕೊಡಬಹುದಿತ್ತಲ್ಲ(ಹಣ); ಅವನ ಕೊರಳನ್ನು ಕತ್ತಿಯಿಂದಲೇ ಕೊರೆದು ಬಿಟ್ಟ ಮೊದಲಾದ ನಾನಾರ್ಥಗಳುಳ್ಳ ಸಂವಾದಿ ರೂಪಗಳನ್ನು ಗುರುತಿಸಬಹುದಾಗಿದೆ; Cut the leaves; the decoration like bore the eye; no short in my dinner; cut the wood to right size; the body is cutting by the chill; bring half-a-quintal of rice; fill the short or less filled bag; pay a part of the amount; his neck holed by the knife; like this many meanings and forms are found;
- ಅತಿಯಾದ ಮಾತುಗಾರಿಕೆಯವರನ್ನು ಕುರಿತು ಪದಬಳಕೆ; ವ್ಯಂಗ್ಯರೂಪಕವೂ ಹೌದು; 'ಅದೇನ್ ಕೊರಿತನ ಆ ಮಾರಾಯ' ಎಂದು ಹೇಳುವುದಿದೆ; ಬೇಸರಿಸುವಂತೆ ಒಂದೇ ಸಮನೆ ಮಾತನಾಡುವಿಕೆ; ನೀರಸವಾದ ಮತ್ತು ದೀರ್ಘವಾದ ಮಾತಿನಿಂದಾಗುವ ತೊಂದರೆ ಅಥವಾ ಹಿಂಸೆ; This word used to excessive verbalism or talkative; it is sarcastic usage; his speech is bore; how he is boring;
- ಕಡಿಮೆ; ಕೊರತೆ; ನ್ಯೂನತೆ; ಕುಗ್ಗು; *ಪ್ರ: 'ಅವ್ನ್‌ಗೆನ್ ಕೊರೆಯಾಯ್ತು ಅಂತ ರೇಗಾಡ್ದ'; 'ಕೆನ್ನೆ ಮೇಲೆ ಒಂದ್ ಬೊಟ್ಟು ಕೊರೆಯಾಯ್ತು ಅನ್ನುಸ್ತಿತ್ತು';* Short or less; flaw; deficiency; shrink; he is very angry for shortage; feel a spot on the cheek is less;
- ಕುಕ್ಕು; ಕೊರೈಸು; ಕಣ್ಣು ಕೊರೆ; peck; dazzle; dazzle the eye;
- ಅರ್ಧ; ಪೂರ್ಣವಲ್ಲದ್ದು; ಅಪೂರ್ಣತೆಯಿಂದ ಕೂಡಿರುವಂಥದು; ಉಳಿದದ್ದು; ಮಿಕ್ಕದ್ದು; ಬಾಕಿ; ಭರ್ತಿ ಕಡಿಮೆಯಾಗಿರುವ ಚೀಲ; ಆಹಾರ ಕಡಿಮೆಯಾಗಿರುವ ಹೊಟ್ಟೆ; *ಪ್ರ: 'ಕೊರೆಯಾದದ್ದು ಪೂರ್ಣವಾಗಲಿಲ್ಲವೆ?';* Half; not complete, remaining; not fulfilled bag; food is not fully filled stomach; short filled has not complete?
- ಇಬ್ಬನಿ ಸಹಿತ ಚಳಿಯಾಗುವ ಸಂದರ್ಭ; ಕೊರೆಯುವ ಚಳಿ; ಹಿಮಪಾತದಲ್ಲಿ ಸಿಲುಕಿಕೊಂಡಾಗ ಉಂಟಾಗುವ ಅನುಭವ; ತೀರಾ ತಣ್ಣಗಿರುವ ಪದಾರ್ಥ ಅಥವಾ ದೇಹ; ತಣ್ಣನೆಯ ಹನಿ; ಹಿಮ, ಮಂಜು, ಇಬ್ಬನಿಗೂ 'ಕೊರೆ' ಎಂಬ ಅರ್ಥವಿದೆ; 'ಇಬ್ಬನಿ ಬೀಳ್ತಿದೆ' ಎಂಬುದಕ್ಕೆ 'ಕೊರೆ ಬೀಳ್ತಿದೆ' ಎಂದು ಹೇಳುವುದಿದೆ; The chillnese along with mist, situation; pierce cold; the experience at the time of snowfall; very cold item or body; cold drop, ice, fog, dew are have the meaning 'Kore'; dewfall; means 'Kore beelthade';
- ಮರದ ಸಣ್ಣ ಸಣ್ಣ ತುಂಡುಗಳು; ಮರ, ಕಬ್ಬಿಣ ಮೊದಲಾದ ಸಾಮಗ್ರಿಗಳನ್ನು ತುಂಡರಿಸುವಿಕೆ; ವಿವಿಧ ಬಗೆಯ ಉಪಕರಣಗಳು, ಪೀಠೋಪಕರಣಗಳ ತಯಾರಿಕೆಗೆ ಬೇಕಾದ ಅಳತೆಗೆ ಕತ್ತರಿಸುವುದು; ಗರಗಸದಿಂದ ಕುಯ್ಯುವಿಕೆ; ಬೈರಿಗೆಯಿಂದ ರಂಧ್ರ ಅಥವಾ ತೂತು ಮಾಡುವಿಕೆ; small pieces of

wood; wood, iron things are cut into pieces for different instruments according to their size; cut by saw blade make a hole by screwer;
- ಆಸ್ತಿಯ ಒಂದು ಭಾಗ(ಉ.ಕ.ಜಿ); A part of an asset;
- ವಿವಿಧ ತಂತ್ರಜ್ಞಾನದಿಂದ ಭೂಮಿಯನ್ನು ರಂಧ್ರ ಮಾಡು ಎಂಬರ್ಥದಲ್ಲಿಯೂ ಪದಬಳಕೆ; The word used in the meaning of to drill a hole in the land by using different technology;
- ತುಟಿಸಿಕೊಂಡು ಭಕ್ತರಾದರೆಮ್ಮವರು ಕೊಟಿಯಿಸಿಕೊಂಡು ಭಕ್ತರಾದರೆಮ್ಮವರು' (ಬಸವಣ್ಣನವರ ವಚನ); 'ಜರಿವ ಜಲ ತಡೆದಿರ್ದ ಗಿರಿಯನೇ ಕೊಟಿಯಿತ್ತು'(ತ್ರಿಪದಿ);
- ದ್ರಾವಿಡ ಭಾಷಾ ರೂಪಗಳಾದ ತಮಿಳಿನಲ್ಲಿ 'ಕುಱೈ', ಮಲೆಯಾಳಂನಲ್ಲಿ 'ಕುಱಿಕ್ಕ' ಮತ್ತು ತುಳುವಿನಲ್ಲಿ ಯಥಾಪ್ರಕಾರವಾಗಿ 'ಕೊರೆ' ರೂಪವೇ ಬಳಕೆಗೊಂಡಿದೆ(ದ್ರಾ.ಭಾ.ಜ್ಞಾ.ಪ.ಕೋ); In Tamil `Kuṟai', in Malayalam `Kuṟikka' and in Tulu `Kore' forms are used;
- ಒಂದೇ ಕಡೆ ನೀರು ಹರಿದು ಕೊರೆ ಬಿದ್ದ ಜಾಗ; Water flows towards a direction on a place that causes soil erosion is called `Kore';
- ***—ಕೊರೆದಾರ*** : ಕುಂಬಾರಿಕೆಯಲ್ಲಿ ಬಳಸಲಾಗುವ ದಾರ; ಒಂದೂವರೆಯಿಂದ ಎರಡು ಅಡಿಗಳಷ್ಟು ಉದ್ದವಿರುತ್ತದೆ; ತೆಂಗು, ಕತ್ತಾಳೆ, ಮಂಜಿನ ನಾರುಗಳಿಂದ ತಯಾರಿಸಿದ ಸಣ್ಣ ದಾರ;
- ತಿಗರಿಯ ಮೇಲೆ ವಿನ್ಯಾಸಗೊಳಿಸಿದ ಹಸಿ ಮಣ್ಣಿನ ಮಡಕೆಯನ್ನು ತಿಗರಿಯಿಂದ ಬೇರ್ಪಡಿಸಲು ಉಪಯೋಗ(ಚಿ.ಪ.ಕೋ); A thread used in pottery; it has the length of one and a half to two feet; the pot designed on the wheel separated by this thread;
- ***—ಕೊರೆಬೀಳು*** : ಬೆಂಕಿ ನಂದಿ ಹೋಗುವಿಕೆ; 'ಬೀಡಿ ಸೇದುತ್ತಾ ಸೇದುತ್ತಾ ಕೊರೆಬಿದ್ದಿತು' ಎಂದು ಹೇಳುವರು; The fire turns off; while smoking the beedi will turns off;
- ***—ಕೊರೆದ ಬಾವಿ*** : ಕೊಳವೆ ಬಾಯಿಯನ್ನು ಕೊರೆದ ಬಾವಿ ಎನ್ನುವರು; ಕೊಳವೆ ಕೊರೆದು ಮಾಡಿದುದಾದ್ದರಿಂದ ಈ ಹೆಸರು ಬಂದಿರಬಹುದು; The bore well is called as Koreda bavi; made of to bore the tube well, so, it is called as `Kolave bavi';
- ಕಠಿಣವಾದ ಭೂಭಾಗವನ್ನು ಉಕ್ಕಿನ ಕಾಂಡದ ಸಹಾಯದಿಂದ ಸುತ್ತಿಗೆಯಂತೆ ಬಡಿದು ಒಳಗಿನ ಶಿಲಾ ಪದರವನ್ನು ಪುಡಿ ಮಾಡಿ ನೀರು ಹೊರತೆಗೆಯುವಿಕೆ; By drilling the land and stone with hard steel and get the water from the ground;
- ಹೀಗೆ ಬಂಡೆಗಲ್ಲನ್ನು ಹೊಡೆದು ಹೊರ ತೆಗೆದ ನೀರು ಸಮೃದ್ಧಿಯಾಗಿದ್ದು ಅದರ ಅಂತರ್ಜಲ ಮಟ್ಟ ಸುಮಾರು ಹತ್ತಿಪ್ಪತ್ತು ವರ್ಷಗಳವರೆಗೆ ಹಾಗೆಯೇ ಇರುತ್ತದೆಂಬುದು ನಂಬಿಕೆ. This kind of water is rich in the under ground it will be for twenty years is belief;

ಕೊರಿಸಿಗಿನ ಗಿಡ korisigina giḍa :
- ಕೊಡಸಿಗು = ಕೊಡಸಿಗೆ; ಕೊಡಸಿಗೆ = ಕೊರಿಸಿಗೆ; ಕೊಡಿಸೆ = ಕೊರಿಸೆ;
- ತೆಲುಗಿನ 'ಕಾಕಕೊಡಿಸೆ' ಮಾತ್ರ ಕನ್ನಡದ ರೂಪವನ್ನು ಚೆನ್ನಾಗಿ ಹೋಲುತ್ತದೆ; The Telugu form `Kaka kodise' is similar to Kannada form;
- ಸಸ್ಯಶಾಸ್ತ್ರೀಯ ಪಾರಿಭಾಷಿಕ ಪದ: Holarrhena antidysenterica';
- ಔಷಧಿಯಾಗಿ ಉಪಯೋಗ: ಚೆಕ್ಕೆ ಅಜೀರ್ಣಕ್ಕೆ ವಿಶೇಷವಾಗಿ ಬಳಕೆ; ಸನ್ನಿ ಮತ್ತು ವಾಂತಿಗೂ ಬಳಕೆ; ದನಗಳ ಔಷಧವಾಗಿಯೂ ಉಪಯೋಗ. Used as medicine; The bark used for indigestion and vomit-sensation used as medicine to cattle.

(F.H.I.P)

ಕೊರುಂಗು ಬೊಳ್ಳೆ koruŋgu boḷḷe :

ಕೊಕ್ಕರೆ; ಬಿಳಿ ಬಣ್ಣದಲ್ಲಿರುವ ಅಂಕದ ಕೋಳಿ. A crane; a white coloured hen.

ಕೊರೆನೋರು korenōru :

- ಕುರುಬ ಸಮುದಾಯಕ್ಕೆ ಸೇರಿದ ಬೆಡಗು ಅಥವಾ ಕುಲ; ಈ ಬೆಡಗಿಗೆ ಸೇರಿದ ವ್ಯಕ್ತಿ ಅಥವಾ ಜನ ಸಮೂಹ; ಒಂದೇ ಬೆಡಗಿನವರು ಸೋದರ ಸಂಬಂಧಿಗಳಾಗುವರು; ಪರಸ್ಪರ ವಿವಾಹ ಸಂಬಂಧಗಳು ಕುದುರುವುದಿಲ್ಲ; A caste of Kuruba community; A person belongs to this caste; persons belongs to this caste becomes brothers and sisters so, no marital relationship among them;
- ಕುಲ ಅಥವಾ ಬೆಡಗುಗಳು ಬುಡಕಟ್ಟುಗಳೂ ಸೇರಿದಂತೆ ಇತರೆ ನಾಗರಿಕ ಸಮುದಾಯಗಳಲ್ಲೂ ಕಂಡುಬಂದಿದೆ; ಇದು ಮನುಷ್ಯ ಸಂಬಂಧದ ಸೋದರ ಹಾಗೂ ಸಾಲಾವಳಿ ಪರಿಕಲ್ಪನೆಗಳ ಸೂಚಕಗಳಾಗಿ ಗುರುತಿಸಿಕೊಂಡಿರುವುದು ತಿಳಿಯದ ವಿಚಾರವೇನಲ್ಲ. The castes are found in other communities too; this is the brothern relationship of man and the line of the family and community.

ಕೊರ್ಬಂತು/ಕೋರ್ಬಂತು korbantu/ kōrbantu :

- ಉಕ್ಬಂತು, ಒಕ್ಬಂತು, ಉಗ್ಬಂತು ಎಂಬ ಸಂವಾದಿ ರೂಪಗಳ ಬಳಕೆ ಇದೆ; ಉಕ್ಕಿ ಹೊರಬಂತು, ಚೆಲ್ಲಿತು ಎಂಬರ್ಥದಲ್ಲಿ; The words Ukbantu, Okbantu, Ugbantu are the forms used in the meaning of come out of, pourout of;
- ಒಲೆಯ ಮೇಲಿಟ್ಟ ಹಾಲು, ಸಾಂಬಾರು, ಅನ್ನ ಮೊದಲಾದವುಗಳ ಕುದಿತ ಜಾಸ್ತಿಯಾಗುತ್ತಿದ್ದಂತೆ ಅದರ ಮೇಲಿನ ಅವಿ ಅಥವಾ ನೊರೆ ದ್ರವದ ರೂಪದಲ್ಲಿ ಉಕ್ಕಿ ಹೊರಬಂದು ಚೆಲ್ಲುವುದು; ಇದಕ್ಕೆ ಉತ್ತರಕರ್ನಾಟಕ ಭಾಗದಲ್ಲಿ 'ಕೋರ್ಬಂತು' ಎಂದು ಹೇಳಲಾಗುತ್ತದೆ; Milk, soup, rice etc kept on the oven boil and the water or foam swellout of the vessel; it is called in North karnataka `Korbanthu';
- ಕೋರ್+ಬಂತು>ಕೋರ್‌ಬಂತು>ಕೋರ್ಬಂತು; ಇದು ಕ್ರಿಯೆಯನ್ನು ಸೂಚಿಸುವ ಪದ; ಇಲ್ಲಿನ ಕ್ರಿಯೆ ಚಲನೆಯಲ್ಲಿರುತ್ತದೆ; This word denotes the action; this action is in movement;
- ಕೋರಿ+ಬಂತು>ಕೋರ್‌ಬಂತು>ಕೋರ್ಬಂತು ಆಗಿರಲೂಬಹುದು; ತಾರುಣ್ಯದ ಯುವಕ, ಯುವತಿಯರನ್ನು ಕೋರಿ/ಪೋರಿ, ಪೋರ ಎಂಬುದಾಗಿ ಕರೆಯುವುದಿದೆ; ಯೌವ್ವನಾವಸ್ಥೆಗೆ ಬಂದುದನ್ನು ಸೂಚಿಸುವ ಪದವೂ ಇರಬಹುದು?. The young male/female youth are called Kori/Pora; this word symbolises the male/female entering into youth stage.

ಕೊರ್ಲ korla :

- ಬಾರುಕೋಲು; ಕೊರಡ; ಕಸಬರಿಕೆ ಅಥವಾ ಕಸಬರಿಗೆ; ಗುಡಿಸಿ ಸವೆದು ಹೋದ ಕಸಬರಿಗೆಯನ್ನು 'ಕೊರ್ಲಹಿಡಿ' ಎಂದು ಕರೆಯುವರು; Whip of leather straps; to get worn; mope; a old worn mope is called `Korlahidi';
- ಗಿಡ್ಡ, ಸವೆದು, ಮೋಟಾಗು, ಸವಕಲು ಎಂಬರ್ಥದಲ್ಲಿ 'ಕೊರಲು' ಪದದ ಬಳಕೆ ಕಂಡುಬಂದಿದೆ; dwarp; worn; shortened; smoothing, wornout are the meanings used; *ಪ್ರ: 'ಕೊರ್ಲಹಿಡಿದ ಕಸಬರಿಕೆ ತೆಗೆದು ಹೊರಗೆ ಬಿಸಾಡಿದ'*;

∴ ಕೊರಲ=ಕೊರಡ(ಲ>ಡ; ಡ>ಲ).

ಕೊರ್ಲು/ಕೊರ್ಲು korlu :

- ಸಣ್ಣ ಪುಟ್ಟ ಕಡ್ಡಿ–ಪುರಲೆಗಳಿಂದಾದ ಸೌದೆ ಅಥವಾ ಉರುವಲಿನ ರಾಶಿ ಅಥವಾ ಗುಡ್ಡೆ; ಅರ್ಧ ಕಡಿದ ಮರ, ಗಿಡ ಅಥವಾ ಪೊದೆಗಳ ರೆಂಬೆ–ಕೊಂಬೆಗಳನ್ನು ಬೇರ್ಪಡಿಸಿ ಒಂದೆಡೆ ರಾಶಿ ಹಾಕುವಿಕೆ; ಮಳೆಗಾಲಕ್ಕೆ ಉರುವಲಿಗೆ ಉಪಯೋಗವಾಗಲೆಂಬ ಆಶಯದೊಂದಿಗೆ ಹೀಗೆ ಮಾಡುವುದಿದೆ(ಶಿ.ಜಿ); A heap of little sticks and strife firewood cut the branches of tree plant or bush at a place; an ambition to make use the fire wood at the rainy season;
- ಕುರು(ಮಂ.ಜಿ); 'ಕೊರಳು' ಎಂಬರ್ಥವೂ ಇದೆ (ನೋಡಿ: ಕೊರಳು); Kuru; koralu meanings are existed;

- ದನಗಳ ಮೇವಿಗೆ ಬಳಕೆಯಾಗುವ ಹುಲ್ಲು, ಸೊಪ್ಪು, ಸೆದೆ ಮೊದಲಾದವು; ವಿವಿಧ ಧಾನ್ಯಗಳನ್ನು ಒಕ್ಕಣೆ ಮಾಡಿದ ನಂತರ ಅದರಲ್ಲಿ ಸಿಗುವ ಹುಲ್ಲನ್ನು ದನಗಳ ಮೇವಿಗಾಗಿ ಹೊಲ-ಗದ್ದೆ, ಹಿತ್ತಲುಗಳಲ್ಲಿ ಮೆದೆ ಹಾಕಿಡುವುದು ಹಿಂದಿನಿಂದಲೂ ರೂಢಿಸಿಕೊಂಡು ಬಂದಿರುವ ಪದ್ಧತಿ; grass, leaves etc the waste fodder after harvesting stock at a place for cattle in the land and backyard of the house; this system is in practice since so many years;
- ಬೇಸಿಗೆಯಲ್ಲಿ ದನಗಳ ಮೇವಿಗೆ ಬರ ಬರುವ ಕಾರಣ ಹೀಗೆ ಮಾಡುವುದಿದೆ; ಚಂಡಮಾರುತದ ಸಂದರ್ಭದಲ್ಲೂ ಇದೇ ರೀತಿ ಆಗುವ ಸಂಭವವಿರುವುದುಂಟು; *ಪ್ರ: 'ಕೊರ್ಲನ್ನು ಗುಡಿಸಿ ಒಂದೆಡೆ ಗುಡ್ಡೆ ಹಾಕಿಡು'*; Shortage of fodder in the summer season; cyclone period so this fodder kept in a place to make use in this period;
- ಕಷ್ಟ; ತೊಂದರೆ; ಕುತ್ತು; ಒತ್ತಡ; *ಪ್ರ: 'ನಾನು ಎಷ್ಟು ಕೊರ್ಲು ಹಿಡಿದರೂ ಅವನು ಮಾತ್ರ ಬಾಕಿ ಕೊಡ್ತಾನೇ ಇಲ್ಲ'*; Difficult; hindrance; danger; pressure; "i was pressured on him but he was not pay the balance";
- ಒಡಕು ಅಥವಾ ಕಿರುಚು, ಕೀರಲು, ಕರ್ಕಶ ಧ್ವನಿಗೆ 'ಕೊರ್ಲುದನಿ' ಎಂದು ಹೇಳುವುದಿದೆ(ಚಿ.ಪ.ಕೋ). Broken or hard or shrill or Cracked tone is called `Korludani'.

ಕೊರ್ಲೆ korle :

- ಒಂದು ವಿಧದ ಧಾನ್ಯ; ಸಿರಿಧಾನ್ಯಗಳಲ್ಲಿ ಒಂದು (ತು.ಜಿ). A kind of cereals, one among the millets.

ಕೊರ್ಚಿ ಬಿಲ್ಲಿ korci billi :

- ಬಿಲ್ಲಿ, ಬಿಲ್ಲೆ ಎಂಬುದು ಒಡೆದ ಹೆಂಚಿನ ಚೂರು ಅಥವಾ ಬಗರೆ/ಬಗ್ರೆ; ಚಪ್ಪಟೆಯಾಕಾರದ ಸಣ್ಣ ಕಲ್ಲನ್ನು ಹೀಗೆ ಕರೆಯುವರು; ವೃತ್ತಾಕಾರವಾಗಿರುತ್ತದೆ; ಮಕ್ಕಳ ಒಳಾಂಗಣ ಅಥವಾ ಹೊರಾಂಗಣ ಆಟದಲ್ಲಿ ಉಪಯೋಗ; Billi or Bille is a broken piece of tiles; a small flat shaped stone is called like this, round in shape; children used this in indoor and outdoor game;
- ಕುಂಟೆಬಿಲ್ಲೆ, ಟಿಕ್ಕಿ ಮೊದಲಾದ ಗ್ರಾಮೀಣ ಜನಪದ ಆಟಗಳಲ್ಲಿ ಬಳಕೆ; This is used in rural plays like `Kunte bille' `Tikki' etc;
- ಕಲ್ಲಿನ ಬಿಲ್ಲೆ ಬಳಸಿ ಗಂಡುಮಕ್ಕಳು ಆಡುವ ಹೊರಾಂಗಣ ಆಟ(ಚಿಕ್ಕ.ಜಿ). This stone plate used to the outdoor game of the male children.

ಕೊಲ್‌ಗುದ್ಲಿ kolgudli :

- ಮಣ್ಣನ್ನು ಬಗೆಯುವ ಸಾಧನ; ಭೂಮಿಯ ಮೇಲ್ಪದರದ ಮಣ್ಣನ್ನು ಬಗೆದು ಸಡಿಲಗೊಳಿಸಲು ಬಳಕೆ; ಕಳಾರಿಗಿಂತ ದೊಡ್ಡದಿದ್ದು ಪಿಕಾಸಿಗಿಂತ ಚಿಕ್ಕದಿರುತ್ತದೆ; A soil diging instrument; it loosen the external layer of the earth soil;
- ತಿಪ್ಪೆಗೊಬ್ಬರ ಬಗೆಯಲು, ಬಂಡಿಯಿಂದ ಗೊಬ್ಬರ ಇಳಿಸಲು ಉಪಯೋಗ; Useful to dig the compost and to unload the compost from the cart;
- 'ಕೋಲ್‌ಗುದ್ಲಿ' ಎಂಬ ರೂಪವೂ ಇದೆ; 'ಕೊಲ್‌ಗುದ್ಲಿ' ಮೂಲರೂಪವೇ ಇದ್ದಿರಬಹುದು; ಆದರೆ ಉಚ್ಚಾರಣೆಯ ಸುಭಗತೆಯಲ್ಲಿ 'ಕೋಲ್‌ಗುದ್ಲಿ' ಜನಪ್ರಿಯ ಬಳಕೆಯಲ್ಲಿರುವಂಥದು; ಕೊಲ್‌ಗುದ್ಲಿ>ಕೋಲ್‌ಗುದ್ಲಿ ಅಥವಾ ತದ್ವಿರುದ್ಧವೂ ಆಗಿರಬಹುದು.

ಕೊಲಗಲ ಗ್ರಾಮ kolagala grāma :

- ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲ್ಲೋಕಿನ ಕ್ರಿ.ಶ.೯೬೭ರ ೫೪ನೇ ಶಾಸನದಲ್ಲಿ ಈ ಊರಿನ ಉಲ್ಲೇಖ; This village name referred in the 54th inscription of 967AD Bellari taluk and district;
- ಬ್ರಹ್ಮಚಾರಿ ಗದಾಧರನು, ಕೊಳಗಲ್ಲಿನಲ್ಲಿ ಕಾರ್ತಿಕೇಯ ಮತ್ತು ಇತರ ದೇವತೆಗಳನ್ನು ಪ್ರತಿಷ್ಠೆ ಮಾಡಿಸಿದ ವಿಚಾರವಿದೆ; ಗದಾಧರನ ವಂಶಾವಳಿಯ ವಿವರ ಕೂಡ ಇದೆ; Bachelor Gadadhara installed Karthikeya and other goddesses in Kolagala village and the lineage of Gadadhara also inscripted on this;

- 'ಕೊಲಗಾಲ' ಎಂದು ಶಾಸನದಲ್ಲಿ ಉಲ್ಲೇಖ;
- ಬಹುಶಃ ಇಲ್ಲಿ ಯಾವುದೋ 'ಕೆರೆ/ಸಮುದ್ರ' ವಿದ್ದು 'ಕೊಳಗಾಲ' ಎಂದಾಗಿ, ನಂತರ 'ಕೊಳಗಲ್ಲು' ರೂಪ ಬಂದಿರಲು ಸಾಧ್ಯ; May be a tank as in this place, that named as `Kolagala' later it will be formed as `Kolagallu';
- ಕೊಲಗಾಲ>ಕೊಳಗಾಲ=ಕೊಲಗಲ>ಕೊಳಗಲ;
- ಗಲ=ಗಡ ಆಗುವುದರಿಂದ, 'ಕೋಟೆ' ಅಥವಾ ದುರ್ಗ ಎಂಬ ಅರ್ಥ ಬಂದಿರಬಹುದು. The suffix Gala and Gada may be means `Kote' or `Durga' it means fort in English.

(ಕ.ವಿ.ವಿ.ಶಾ.ಸಂ.೧; ಬ.ಜಿ.)

ಕೊಲನುಪಾಕ kolanupāka :
- ನಲ್ಗೊಂಡ ಜಿಲ್ಲೆ ಭುವನಗಿರಿ ತಾಲ್ಲೋಕಿನ ಕ್ರಿ.ಶ.೧೦೪೬-೧೧೧೧ರ ೫೪೪-೫೮೦ನೇ ಶಾಸನಗಳಲ್ಲಿ ಉಲ್ಲೇಖ; The name Kolanupaka is referred in the 544-580th inscription of 1046-1111th AD of Bhuvanagiri taluk Nalgonda district;
- ಈ ಊರಿನಲ್ಲಿ ದೊರೆಯುವ ೩೫ಕ್ಕೂ ಅಧಿಕ ಶಾಸನಗಳು ಕಲ್ಯಾಣ ಚಾಲುಕ್ಯ ದೊರೆ ತ್ರಿಭುವನಮಲ್ಲದೇವನ ಆಳ್ವಿಕೆಯನ್ನು ವಿವರಿಸುತ್ತವೆ; About 35 inscriptions are found in this village; they explains the rule of the king Thribhuvanamalla of Chalukyas;
- ಶಾಸನಗಳಲ್ಲಿ ಈ ಊರನ್ನು ಕೊಲ್ಲಿ ಪಾಕೆ(ಕೊಳ್ಗಿಪಾಕೆ) ೭೦೦೦ ಎಂದು ಗುರುತಿಸಲಾಗಿದ್ದು, ಇದನ್ನು ರಾಜಧಾನಿ ಎಂದು ಕರೆದಿವೆ; In inscription this village identified as Kollipake(Kolgipake) 7000 called as kingdom;
- ಅನೇಕ ಪ್ರಧಾನಿಗಳು, ಮಹಾಮಂಡಲೇಶ್ವರರು ಈ ಊರಿನಲ್ಲಿ ಆಳ್ವಿಕೆ ಮಾಡಿದ್ದಾರೆ; Many prime ministers and rulers rule this village;
- ಕ್ರಿ.ಶ.೧೧೧೧ರ ೫೬೧ನೇ ಶಾಸನ, ತ್ರಿಭುವನಮಲ್ಲನ ಮಗ ಮಹಾಮಂಡಲೇಶ್ವರ ಸೋಮೇಶ್ವರ ಇಲ್ಲಿ ಆಳ್ವಿಕೆ ನಡೆಸಿದ್ದನ್ನು ಉಲ್ಲೇಖಿಸುತ್ತದೆ; In 561st inscription of 1111th AD the son of Thribuvanamalla Mahamandaleswara Someswara's rule referred here;
- ಇಲ್ಲಿನ ಬಹುತೇಕ ಶಾಸನಗಳು ಕೊಳ್ಳಿಪಾಕೆ, ಕೊಳ್ಗಿಪಾಕೆ ಹೆಸರುಗಳ ಜೊತೆಗೆ 'ಕೊಲಿಪಾಕಪುರ' ಎಂಬ ಹೆಸರನ್ನೂ ಉಲ್ಲೇಖಿಸಿವೆ; Many inscriptions referred the village as `Kollipake', `Kolgipake', `Kolipakapura';
- ಕಲ್ಯಾಣ ಚಾಲುಕ್ಯರ ಉಪರಾಜಧಾನಿಯಾಗಿ ಈ 'ಕೊಳ್ಳಿಪಾಕೆ'-೭೦೦೦ ಇದ್ದಿರಬಹುದು; May be `Kollipake' 7000 was the sub-capital of Kalyana Chalukyas;
- ಕಾಲಾನಂತರದಲ್ಲಿ ಈ ಕೊಳ್ಳಿಪಾಕೆ>ಕೊಲಿಪಾಕವೇ 'ಕೊಲನುಪಾಕ' ಎಂದು ಬದಲಾಗಿದೆ; ಉಚ್ಚಾರಣೆಯೇ ಇದಕ್ಕೆ ಕಾರಣವಾಗಿರಬೇಕು. Later years this Kollipake, Kolipake changes to Kolanupake; may be this change of pronunciation.

(ಆ.ಪ್ರ.ಕ.ಶಾ.ಭಾ.೨)

ಕೊಲಾರಿ೧ kolāri1 :
- 'ಕೊಲ್ಲಾರಿ' ರೂಪವೂ ಇದೆ; ಕೊಲ್ಲಾರಿ> ಕೊಲಾರಿ(ಬೆ.ಜಿ) ಆಗಿರಬಹುದು; ದ್ವಿತ್ವಾಕ್ಷರ ಸರಳವಾಗುವುದು ಭಾಷೆಯ ಒಂದು ಲಕ್ಷಣ; `Kollari' form also existed;
- ಚಕ್ಕಡಿಯ ಡೊಂಬರಿಗೆಗೆ ಕಟ್ಟಿರುವ ಕಮಾನಿನಾಕಾರದ ಬೆತ್ತಗಳು; the canes tie to the cart as arch;
- ನಾಲ್ಕೈದು ಕೊಲಾರಿ ಕಟ್ಟಿ, ಮೇಲೆ ಗುಡಾರದ ಹೊದಿಕೆ ಮಾಡಿರುತ್ತಾರೆ; Four or five canes tie like arch cover with cloth or straw as roof;
- ಚಕ್ಕಡಿಯಲ್ಲಿ ಕುಳಿತು ಹೋಗುವವರಿಗೆ ಬಿಸಿಲು/ಮಳೆ ಬಾಧೆ ಆಗದಿರಲೆಂದು ಹೀಗೆ ಮಾಡಿರುತ್ತಾರೆ; This is to avoid the rain or sunrays to the cart travellers;
- ಜಾತ್ರೆ, ಮದುವೆಗೆ ಹೋಗುವಾಗ ಕೊಲಾರಿ ಚಕ್ಕಡಿಗಳನ್ನು(ಕಮಾನಿನಗಾಡಿಗಳನ್ನು) ಹೂಡಿದುಕೊಂಡು ಹೋಗುವುದು ವಾಡಿಕೆ; In olden days this `Kolari' carts are make use for travelling to marriage or other occations;

- *ಪ್ರ: 'ಅಲ್ಯೊಂದ ಹೊಂಟೈತಿ ಕೊಲಾರಿ ಬಂಡಿ*
  ಅದರಾಗ ಕೂತಾಳ ಕೆಂಪನಮಿಂಡಿ'

  –ಒಂದು ಜನಪದ ಪದ

ಕೊಲಾರಿ/ಕೊಲ್ಲಾರಿ² kolāri/kollāri² :

- ಹಬ್ಬ, ಹರಿದಿನ, ಜಾತ್ರೆ, ಮದುವೆಯಂತಹ ಕಾರ್ಯಗಳಿಗೆ ತೆರಳಲು ಹಿಂದೆ ಕೊಲಾರಿ ಬಂಡಿಗಳನ್ನು ಬಳಸುತ್ತಿದ್ದುದುಂಟು; The Kolari carts are used to travel for festivals, fairs and marriage occasions;
- —***ಕೊಲ್ಲಾರಿ ಬಂಡಿ*** : ತೆಂಗಿನ ಗರಿ ಅಥವಾ ಹಸಿರು ತೋರಣಗಳಿಂದ ಆಲಂಕರಿಸಿದ ಬಂಡಿ; ಜಾತ್ರೆ ಅಥವಾ ಉತ್ಸವದ ಸಂದರ್ಭದಲ್ಲಿ ಇದರಲ್ಲಿ ಬೆಲ್ಲದ ಪಾನಕದ ಹಂಡೆಗಳನ್ನಿಟ್ಟುಕೊಂಡು ಮೆರವಣಿಗೆಯೊಂದಿಗೆ ದೇವಸ್ಥಾನದ ಬಳಿ ತೆರಳುತ್ತಿದ್ದರು; ಅಲ್ಲಿ ನೆರೆದ ಪರಿಷೆಗೆ ಬೆಲ್ಲದ ಪಾನಕ ಹಂಚುವುದಕ್ಕಾಗಿ; Kolari bandis decorated with coconut palms or other green leaves; In festivals and fairs the jaggory juice was carried by this decorated cart to share the juice to the peole;
- 'ಬೆಲ್ಲದ ಬಂಡಿ' ಎಂಬ ಹೆಸರಿನಿಂದಲೂ ಕರೆಯುವುದಿದೆ. Kolari cart called as `Bellada bandi'.

ಕೊಲಿಮಿ kolimi :

- ಅಕ್ಕಸಾಲಿ ಅಥವಾ ಕಮ್ಮಾರನ ಒಲೆ; ಚರ್ಮದ ತಿದಿಯಿಂದ ಗಾಳಿ ಒತ್ತಿ ಇದ್ದಿಲಿನಿಂದ ಬೆಂಕಿ ಹೊತ್ತಿಸುವುದು; Hearth of Goldsmith or blacksmith; to fire the charcoal by airing the leather bellow;
- ನಂತರ . ಕಬ್ಬಿಣದ ಉಪಕರಣಗಳನ್ನು ಆ ಬೆಂಕಿಯಲ್ಲಿಟ್ಟು ಕೆಂಪಗೆ ಕಾಯಿಸಿ ಅಡಿಗಲ್ಲಿನ ಮೇಲಿಟ್ಟು ಸುತ್ತಿಗೆಯಿಂದ ಬಡಿದು ಹರಿತಗೊಳಿಸುವುದು(ಕೋ.ಜಿ); The iron or gold instruments heated up in the fire make sharp with hammer; **ನೋಡಿ:** ಕುಲುಮೆ.

ಕೊಲೆ/ಕೊಲಿ : kole/koli :

- ಸತ್ತು ದೇವರಾದವರು(ಉ.ಕ.ಜಿ); ಕಷ್ಟ; ತೊಂದರೆ; ಹಿಂಸೆ; Who become god after death; difficult; violent; torture;
- ಭೂತ; ಪ್ರೇತ; ಪೀಡೆ; ಪಿಶಾಚಿ; ದೆವ್ವ; ಗಾಳಿ; ಹೆಣ; ಸದ್ಗತಿಯಾಗದ ಮೃತನ ಆತ್ಮ; ರಾಕ್ಷಸ; Devil, demon, ghost;
- ಇತರರ ಮೂಲಕ ಸಾಯಿಸುವುದು; ಹತ್ಯೆ ಮಾಡಿಸುವಿಕೆ; ಜೀವತೆಗೆಯುವುದು; ಉಸಿರು ನಿಲ್ಲಿಸುವುದು; Kill by others; kill,murder, stop the breath;
- ಮನೆಯ ಒಂದು ಭಾಗ; A part of the house;
- ತಮಿಳು: ಕೂಳಿ, ಕೊಲೈ; ಮಲೆಯಾಳಂ: ಕೂಳಿ, ಕೊಲ್ಲ; ತುಳು: ಕುಲೆ(ದ್ರಾ.ಭಾ.ಜ್ಞಾ.ಪ.ಕೋ); In Tamil Kooli, Kolai; in Malayalam Kooli, kolla; in Tulu Kule;
- —***ಕೊಲೆಕುಡಿಕೆ*** : ಸತ್ತವರಿಗೆ ಎಡೆ ಹಾಕಲು ಬಳಸುವ ಕುಡಿಕೆ; Offering pot to the dead;
- —***ಕೊಲೆಗಡುಕ*** : ದ್ವೇಷದಿಂದ ಹಿಂಸೆಯ ಮೂಲಕ ವಿರೋಧಿಯ ಜೀವ ತೆಗೆಯುವವ; A person kill another or enemy or opponent through violence;
- —***ಕೊಲೆಕೂಳ್*** : ಭೂತ, ಪ್ರೇತಗಳಿಗೆ ಮೀಸಲಿಟ್ಟ ಆಹಾರ; Reserve food for devils and demon;
- —***ಕೊಲೆಯ*** : ಮಲೆನಾಡಿನ ಜನರು ಹಿಂಸೆ, ತೊಂದರೆಯ ಮೂಲಕ ಜಾತ್ರೆಯ ಸಂದರ್ಭದಲ್ಲಿ ದೇವರಿಗೆ ಎಡೆ ಹಾಕುವ ನೈವೇದ್ಯ; In a fair, people of Malnad gives offering in a violent way;
- —***ಕೊಲೆಗಿಡುವುದು*** : ಸತ್ತವರಿಗೆ ಎಡೆ ಇಡುವುದು ಎಂಬರ್ಥದಲ್ಲಿ; ಮಹಾಲಯ ಅಮಾವಾಸ್ಯೆಯಂದು ಮಾಡಲಾಗುವ ಒಂದು ಆಚರಣೆ; ಅಂದು ಐದು ಮಣೆಗಳಲ್ಲಿ ಎಡೆಇಟ್ಟು ಒಂದೊಂದು ಮಣೆಗೆ ಒಂದೊಂದು ಲೋಟ ನೀರು, ಒಂದೊಂದು ಹಣತೆ, ಎಲೆ, ಅಡಕೆ ಇಡುವುದು; ನಂತರ ಪೂಜೆ ಮುಗಿಸಿ ಒಂದು ಎಡೆಯನ್ನು ಮನೆಯ ಹೊರಗೆ ಲಕ್ಕಿಗಿಡದ

ಬುಡದಲ್ಲಿಡುವರು; ಅಕಾಲ ಮರಣ ಹೊಂದಿದವರಿಗೆ ಈ ಸಂದರ್ಭದಲ್ಲಿ ಎಡೆ ಹಾಕುವುದಿದೆ; In the meaning of respectful offering; it is a practice in `Mahalaya Amavasya'; on that day five low wooden seats placed, offerings are kept on them, a glass of water, a oil lamp, betelnut are kept beside them; then first worship; after the worship a offering taken out of the house and kept under a bush or lakki plant at this time gives offerings to the untimely dead person;

- ಗೌಡ ಸಮುದಾಯದವರಲ್ಲಿ ಅಡುಗೆ ಮನೆಯಲ್ಲಿ ಹದಿನಾರು ಬಾಳೆಎಲೆಯನ್ನು ಹಾಕಿ ಅದಕ್ಕೆ ರೊಟ್ಟಿ, ಕೋಳಿಮಾಂಸ ಬಡಿಸಿ ಪೂಜೆ ಸಲ್ಲಿಸಿ ಕೈಮುಗಿದು ಮೃತನ ಆತ್ಮವನ್ನು ಕರೆದು ಎಡೆ ಸ್ವೀಕರಿಸುವಂತೆ ಕೇಳಿಕೊಳ್ಳುವ ಪದ್ಧತಿ ಇದೆ; A practice in Gowda community, they kept sixteen plantain leaf in the kitchen serve roṭti, Chicken, mutton in it, call the dead person soul and worship him/them; request him to accept the offer;
- ***—ಕೊಲೆ ಮದುವೆ*** : ಮದುವೆಯಾಗದೆ ತಾರುಣ್ಯವಸ್ಥೆಯಲ್ಲಿದ್ದಾಗಲೇ ಅಕಾಲ ಮರಣಕ್ಕೆ ತುತ್ತಾದರೆ ಅಂತಹವರು ಕೊಲೆ(ದೆವ್ವ)ಯಾಗಿ ಕುಟುಂಬದವರಿಗೆ ಕಾಟ ಕೊಡುವುದಿದೆ; ಅಂತಹವರಿಗೆ 'ಕೊಲೆ ಮದುವೆ' ಮಾಡಿಸುವುದೊಂದು ಪದ್ಧತಿ; ಹೀಗೆ ಅಕಾಲ ಮರಣಕ್ಕೆ ತುತ್ತಾಗಿದ್ದ ಗಂಡು–ಹೆಣ್ಣು ಕೊಲೆಗಳನ್ನು ಕರೆದು ಅವರಿಗೆ ಮದುವೆ ಮಾಡಿಸುವುದು; Persons who died without marriage in their youthful days. they will became devil and give trouble to the family; to such people arrange marriage i.e., called `Kole maduve' or the devil marriage system;
- ಮನುಷ್ಯ ಬದುಕಿನಲ್ಲಿ ಸಂತೃಪ್ತನಾಗಿ ಅಂದರೆ ತನ್ನ ಮನದ ಬಯಕೆಗಳನ್ನೆಲ್ಲ ಈಡೇರಿಸಿಕೊಂಡು ಸತ್ತರೆ ಆತ ಕೊಲೆಯಾಗುವುದಿಲ್ಲ; ಒಂದು ವೇಳೆ ಹೀಗೆ ಅಕಾಲ ಮರಣಕ್ಕೆ ತುತ್ತಾದರೆ ಕೊಲೆಯಾಗುತ್ತಾನೆಂಬ ನಂಬಿಕೆ ಇದೆ; The man who fulfill all his desire in his life time he cannot be devil; but he/she dies untimely they will became devil is a belief;
- ***—ಕೊಲೆಕೊಡು*** : ತೊಂದರೆ, ಹಿಂಸೆ ಕೊಡು ಎಂಬರ್ಥದಲ್ಲಿ ಪದಬಳಕೆ. This word used in the meaning of give trouble, give torture.

ಕೊಲ್ಟ್ koḷṭ :

ಮಗ್ಗದ ಸಲಕರಣೆ; ನೂಲು ತೆಗೆಯುವಾಗ ಬಳಕೆ (ನೇ.ವ್ಯ.ಪ.ಕೋ). An instrument of weave; used to spin the thread.

ಕೊಲ್ಟಗಾಡಿ koḷṭagāḍi :

ಅರೆಕೋಲು, ಪಾರುಗಳಿಲ್ಲದ ಚಿಕ್ಕ ಗಾಡಿ; ಮಣ್ಣು ಸಾಗಿಸಲು, ಡ್ರಮ್‌ಗಳಲ್ಲಿ ನೀರು ಹೇರಲು ಉಪಯೋಗ. A small cart without spokes, used to carry soil, water in the drum.

ಕೊಲ್ಚಿ kolci :

ಜಾನುವಾರುಗಳ ಕಾಲಿನ ಹಿಂಭಾಗದಲ್ಲಿರುವ ಕಿರುಬೆರಳಿನಂತಹ ಒಂದು ರಚನೆ(ದ.ಕ). A structure like small finger in the cattles back of the leg.

ಕೊಲ್ಡಿಗೆ kolḍige :

ಗಾಡಿಗೆ ಏರಿದ ಸಾಮಗ್ರಿಗಳನ್ನು ಬಿಗಿಗೊಳಿಸಲು ಹಗ್ಗಕ್ಕೆ ಪೋಣಿಸಿದ ಮೂರು ರಂಧ್ರಗಳಿರುವ ಮರದ ಸಾಧನ. A three holed instrument string in the rope, use to tie the loaded goods in the cart.

ಕೊಲ್ಲಗೌಂಡನಪುರ kollagowṇḍanapura:

- ಮೈಸೂರು ಜಿಲ್ಲೆಯ ಚಾಮರಾಜನಗರ ತಾಲ್ಲೋಕಿನ ಕ್ರಿ.ಶ.೧೫೮೯ರ ೧೦೨ನೇ ಶಾಸನದಲ್ಲಿ ಈ ಗ್ರಾಮದ ಉಲ್ಲೇಖ; The village name referred in 102nd inscription of 1589AD of Chamarajanagara taluk;
- 'ಕೊಲ್ಲಗೌಂಡ' ಹೆಸರು 'ಗೊಲ್ಲಗೌಂಡ' ಇರಬಹುದು; ಈ ಸ್ಥಳನಾಮ ಈ ವ್ಯಕ್ತಿಯ ಹಿನ್ನೆಲೆಯಲ್ಲಿ ಬಂದುದಾಗಿದೆ; 'ಕೊಲ್ಲಗೌಂಡ' ಈ ಸ್ಥಳದ ಜನಪ್ರಿಯ ವ್ಯಕ್ತಿಯಾಗಿರಬೇಕು; May be the name `Kollagounda' is `Gollagounda'; the name of the place is came on the ground

of this person; `Kollagounda' was may be a famous person on those days;

- ಇದು ಉಮ್ಮತ್ತೂರು ಗ್ರಾಮಕ್ಕೆ ಸೇರಿದ 'ಕಾಲುವಳಿಪುರ'; ಅಂದರೆ ಕಾಲುಪೊಳೆ> ಕಾಲುಹೊಳೆ/ಕಾಲುವೊಳೆ>ಕಾಲುವಳೆ>ಕಾಲವಳಿ; ಅಂದರೆ ದಾಟಿಬರಬಹುದಾದ ಹೊಳೆ; It belongs to the Ummattur village `Kaluvalipura';
- ವಿಜಯನಗರದ ದೊರೆ ವೆಂಕಟಪತಿರಾಯನ ಆಳ್ವಿಕೆಯಲ್ಲಿ ಆತನ ಸಾಮಂತನಾಗಿದ್ದ 'ಕಾಲಾಂತ್ತಕ ವೊಡೆಯರು' ಉಮ್ಮತ್ತೂರಿನ ಭುಜಂಗೇಶ್ವರ ದೇವರಿಗೆ 'ಕೊಲ್ಲಗೌಂಡನಪುರ'ದ ತೆರಿಗೆಯನ್ನು ಸಲ್ಲುವಂತೆ ಮಾಡಿದ್ದರು. Under the rule of the king Venkatapathiraya of Vijayanagara his feudal Kalanthaka Vodeyar order to submit the `Kollagoundanapura' Tax to the temple of Ummattur Bhujangeswara god.

(E.C- ೪; ಮೈ.ಜಿ.)

ಕೊಲ್ಲಯಿ/ಕೊಲ್ಲಾಯಿ/ಕೊಳ್ಳಾಯಿ kollayi/ kollāyi/koḷḷāyi :

- ಕೊಕ್ಕೆ; Hook;
- ಲಂಗರು; Anchor;
- ಮೀನು ಹಿಡಿಯಲು ಬಳಸುವ ಸಾಧನ(ದ.ಕ); An instrument used to catch fish;
- 'ಕೊಳಾಯಿ' ಇದು ಜನಪದದ ಜನಪ್ರಿಯ ರೂಪ; `Kolai' is a famous form in folk language;
- 'ಕೊಲ್ಲಾಯಿ' ಪದವೇ ಮೂಲವಾಗಿದ್ದು, ಲ>ಳ ಆಗುವ ಮೂಲಕ 'ಕೊಳಾಯಿ' ಪದ ಸಿದ್ಧಿಸಿದೆ. Kollai is the original form.

ಕೊಲ್ಲಿ kolli :

- ಕೋಣೆ; ಕುದುರೆ ಲಾಯ; ಹಳ್ಳದ ನೀರು ಕೆರೆ ಅಥವಾ ನದಿಗೆ ಸೇರುವ ಜಾಗ; ಚಿಕ್ಕ ಪ್ರವಾಹ; ಗಿಡದ ಗೊಂಚಲು(ಕಲ.ಜಿ); Room; horse stable; a place where the water joins to the tank or river; small flood; bunch of the bush or plant;
- ವಕ್ರವಾದದ್ದು; ಕೊಂಕು; ಹಳ್ಳ; ಬುವಿಯೊಳಗೆ ನುಗ್ಗಿದ ಸಮುದ್ರ ಭಾಗ; ಕಲ್ಲು ನೆಲದ ಮೇಲೆ ಹರಿಯುವ ಚಿಕ್ಕಹಳ್ಳ; ಮೂಲೆ; ತುದಿ; ಅಖಾಡ; ಅಡಗು; ಬುವಿಯೊಳಗೆ ನುಗ್ಗಿದ ನೀರಿನ ಚಾಚು ಭಾಗ; ತುಂಟ ಹಸು(ಮೈ.ಜಿ); Perverse; Brook, Corrie, Ditch Brooklet, Bay; a small brooklet flows on the ground corner; edge; Arena, water enter into a part of the landscape; naughty cow;
- ಪಾಡ್ದನಗಳಲ್ಲಿ ವರ್ಣಿತವಾದ ಒಂದು ಸಮುದ್ರದ ಹೆಸರು(ದಕ); A name of the sea explained in the Pad-dana's;
- ಒಣ ಎಲೆಗಳನ್ನು ತುಂಬಿ ತರಲು ಬಳಸುವ ಚೀಲ(ಕೃ.ಪ.ಕೋ); 'ಕಳ್ಳಿ ಕರ ಚೆಂದ ಕೊಲ್ಲಿ ಮೈ ಚೆಂದ'(ಗಾ); A bag used to bring dry leaves;
- ಮಲೆಯಾಳಂ, ತುಳು ಮತ್ತು ಕೊಡವ ಭಾಷೆಗಳಲ್ಲೂ 'ಕೊಲ್ಲಿ' ಪದವೇ ಬಳಕೆಗೊಂಡಿದೆ (ದ್ರಾ.ಭಾ.ಜ್ಞಾ.ಪ.ಕೋ); The word `Kolli'-used in Malayalam, Tulu and Kodava languages;
- ***—ಕೊಲ್ಲಿ ಆಟ*** : ಗೇರುಬೀಜಗಳನ್ನು ಒಟ್ಟುಗೂಡಿಸಿ ಅದಕ್ಕೆ ಹೊಡೆಯುವ ವಿಧಾನದಲ್ಲಿ ಆಡಲಾಗುವ ಒಂದು ಜನಪದ ಆಟ(ದ.ಕ); Collect the Acajou as a kind of folk play;
- ***—ಕೊಲ್ಲಿ ನೋಟ*** : ಓರೆ ನೋಟ; ಕಡೆಗಣ್ಣಿನ ನೋಟ; Leer;
- ***—ಕೊಲ್ಲಿಗದ್ದೆ*** : ಕೋಡಿ ಬಿದ್ದು ನೀರು ಹರಿಯುವ ಸ್ಥಳದ ಹೊಲ; A place the water go out of the tank;
- ***—ಕೊಲ್ಲಿ ಬಲೆ*** : ಎಲ್ಲಾ ಪ್ರಕಾರದ ಮೀನುಗಳನ್ನು ಹಿಡಿಯಲು ಬಳಕೆಯಾಗುವ ಬಲೆ; A kind of net to use to catch all kind of fishes;
- ***—ಕೊಲ್ಲಿ ಪಕ್ಕಿ*** : ಪಕ್ಷಿ ವಿಶೇಷ; ತನ್ನ ಕೊಕ್ಕಿನಿಂದ ಕಲ್ಲಿಗೆ ಬಡಿಯುವುದು ಇದರ ಸ್ವಭಾವ. Species of bird; peck hard on stone is the nature of this bird.

ಕೊಲ್ಕೆ kolke :

- ಹಳೆಯ ಕಾಲದ ಹೆಂಗಸರು ಸೀರೆ ಉಡುವಾಗ ಹಾಕುತ್ತಿದ್ದ ಸೆರಗಿನ ಒಂದು ಬಗೆಯ ಶೈಲಿ;

'ಮೋಟು ಸೆರಗು' ಎನ್ನುವುದು; Sari wearing style in olden days; it is called `Motu seragu';
- ಈ ಸೆರಗಿನಿಂದ ಸಿಂಬಿ ಮಾಡಿಕೊಂಡು ತಲೆಯ ಮೇಲಿಟ್ಟು ಯಾವುದಾದರೊಂದು ಹೊರೆ ಹೊರುತ್ತಿದ್ದುದುಂಟು; By this sari edge make a coil and kept on the head to carry head load as a support;
- ***—ಕೊಲ್ಕೆ ಮೇದಲ್*** : ಸೆರಗಿಗೆ ಧರಿಸಲಾಗುತ್ತಿದ್ದ ಒಂದು ಬಗೆಯ ಆಭರಣ; ಹಿಂದಿನ ಹೆಂಗಸರು ಉಡುತ್ತಿದ್ದ ಸೀರೆಗೆ ಧರಿಸುತ್ತಿದ್ದರು. It is an ornament wear in the edge of the sari.

ಕೊಲ್ಚು kolcu :
- ಹಲ್ಲು ಚುಮುಗುಟ್ಟುವಿಕೆ; ಹುಳಿ ಅಥವಾ ಕ್ಷಾರಯುಕ್ತ ಪದಾರ್ಥ ತಿನ್ನುವಾಗ ಉಂಟಾಗುವ ಒಂದು ಬಗೆಯ ಸಂವೇದನೆ; A kind of pain in the teeth; feel while eating sour food;
- ಸರಪಣಿ; ತೋಳು ಅಥವಾ ಕಾಲಿನಲ್ಲಿ ಧರಿಸುವ ಚಿನ್ನ ಅಥವಾ ಬೆಳ್ಳಿಯ ಚೈನು; ಕಾಲಿನ ಬಳೆ; ಕಾಲ್ಕಡಗ; Chain; wear in the arm or leg; made of gold or silver; leg bracelet;
- ಭೂಮಿ ಅಳತೆ ಮಾಡಲು ಬಳಸುವ ೨೨ಗಜ ಉದ್ದದ ಕಬ್ಬಿಣದ ಸರಪಣಿ; Iron chain, use to measure the land;
- ಬ್ರಾಹ್ಮಣ ಹೆಣ್ಣುಮಕ್ಕಳು ಮಣಿಕಟ್ಟಿನಲ್ಲಿ ಧರಿಸುವ ಆಭರಣ; The ornament used by the Brahmin girls in the wrist;
- ದೋಣಿಗೆ ಹಾಕಲಾಗುವ ಕಬ್ಬಿಣದ ಸರಪಣಿ; ನಾಯಿ ಮೊದಲಾದವುಗಳನ್ನು ಕಟ್ಟುವ ಸರಪಳಿ; Iron chain to use to boat; chain use to tie the dog;
- ತಮಿಳು: ಕೊಲುಚು, ಕೊಲುಸು; ಮಲೆಯಾಳಂ: ಕೊಲುಸ್ಸು; ತುಳು: ಕೊಲಚ, ಕೊಳಚ; ತೆಲುಗು: ಗೊಲುಸು(ದ್ರಾ.ಭಾ.ಜ್ಞಾ.ಪ.ಕೋ). In Tamil Koluchu, Kolasu; in Malayalam Kolussu; in Tulu Kolacha; in Telugu Golusu.

ಕೊಲ್ಲು kollu :
- 'ಕೊಲ್' ಧಾತುವಿನಿಂದ ನಿಷ್ಪನ್ನಗೊಂಡ ಕ್ರಿಯಾರೂಪ;
- ಸಾಯಿಸು; ಹತ್ಯೆಮಾಡು; ವಧೆಮಾಡು; ಜೀವತೆಗೆ; ಉಸಿರು ನಿಲ್ಲಿಸು; ಹೊಡೆದು-ಬಡಿದು, ಮಾನಸಿಕ, ದೈಹಿಕ ಹಿಂಸೆಯ ಮೂಲಕ ಸಾಯಿಸುವಿಕೆ; Kill, murder; put to death; put off life; stop breath; kill by violence mentally and physically;
- ಕಾಡಿಸು; ಪೀಡಿಸು; ಹಿಂಸೆ ಕೊಡು; ತೊಂದರೆ ಉಂಟುಮಾಡು; ದುಃಖ ಕೊಡುವಿಕೆ; ಉಪಟಳ ಕೊಡು; ನೋಯಿಸು; Trouble; harass; torture; make trouble; to give sorrow etc;
- ಧರ್ಮದ ನಾಶ ಮಾಡುವಿಕೆ; ಬೀಳಿಸು; ಹಾಳು ಮಾಡುವುದು; Destroy religion; to make fall; destroy;
- ಕಳಂಕ; ದೋಷಾರೋಪ; Blame; allegation;
- ಹೆರಿಗೆಯ ಸಂದರ್ಭದಲ್ಲಿ ಹೊರಬರುವ ಮಾಸು ಅಥವಾ ಸತ್ತೆ; ಬುಡಕಟ್ಟು ಸಮುದಾಯಗಳಲ್ಲಿ 'ಕಸ' ಎಂದು ಕರೆಯುವುದಿದೆ; ಕೊಲ್ಲನ್ನು ದೊರೆಕೊಲ್ಲು ಮತ್ತು ದೊಂಗೆಕೊಲ್ಲು ಎಂಬ ಎರಡು ಬಗೆಯಲ್ಲಿ ಗುರುತಿಸಲಾಗುತ್ತದೆ; The pleacenta; tribal people call it as waste; `Kollu' is found in two ways `Dorekollu' and `Dongekollu';
- ತಮಿಳು: ಕೊಲ್; ತೆಲುಗು: ಕೊಲ್ಲು; ತುಳು: ಕೆರ್; ಮಲೆಯಾಳಂ: ಕೊಲ್ಲುಗ; ಕೊಡವ: ಕೊಲ್ಲ್ (ದ್ರಾ.ಭಾ.ಜ್ಞಾ.ಪ.ಕೋ). In Tamil `Kol'; in Telugu `Kollu'; in Tulu `Ker'; in Malayalam `Kolluga'; in Kodava `Koll'.

ಕೊಲ್ಲೂರು ಮೂಕಾಂಬಿಕೆ kollūru mūkāmbike :
- ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನಲ್ಲಿರುವ ಊರು 'ಕೊಲ್ಲೂರು'; ಇಲ್ಲಿ ನೆಲೆಗೊಂಡಿರುವ ಶಕ್ತಿದೇವತೆಯೇ ಮೂಕಾಂಬಿಕೆ; ಕೊಲ್ಲೂರು ಮೂಕಾಂಬಿಕೆ ಎಂಬ ಹೆಸರಿನಿಂದಲೇ ರಾಜ್ಯ, ನೆರೆರಾಜ್ಯಗಳಿಂದಲೂ ಅಪಾರ ಭಕ್ತಸಮೂಹಗಳನ್ನು ಹೊಂದಿರುವಾಕೆ; ಭಕ್ತರ ಕಷ್ಟ-ಕಾರ್ಪಣ್ಯಗಳನ್ನು ನಿವಾರಿಸಿ ಅವರ ಕೋರಿಕೆಯಂತೆ ಇಲ್ಲೇ ನೆಲೆಗೊಂಡ

ಸ್ತ್ರೀದೇವತೆ; Mookambike is the goddess deity of Kolluru, Kundapura taluk, Udupi district; this goddess has abundant of devotees within the state and outside; she has clear the troubles of devotees and stay here on the request of them;

- ಹಿಂದೆ ಮೂರನೇ ಮನ್ವಂತರದಲ್ಲಿ ಮಹಾತಪಸ್ವಿಯಾದ ಕೋಲ ಮಹರ್ಷಿಗಳು ಸೌಪರ್ಣಿಕಾ ನದಿ ದಂಡೆಯಲ್ಲಿ ಒಂದು ಪರ್ಣಶಾಲೆಯನ್ನು ಕಟ್ಟಿ ತಪಸ್ಸನ್ನಾಚರಿಸುತ್ತಿದ್ದರಂತೆ; In the third manvanthara the great sage kola built a leaves shed and made his tapas on the bank of Sowparnika river;
- ಮಹರ್ಷಿಗಳ ದೀರ್ಘ ತಪಸ್ಸಿಗೆ ಪ್ರಸನ್ನನಾದ ಶಿವನು ಪ್ರತ್ಯಕ್ಷನಾಗಿ ತಮ್ಮ ಅಪೇಕ್ಷೆ ಏನೆಂದು ಕೇಳಿದನಂತೆ; ಆಗ ಕೋಲಮಹರ್ಷಿ 'ನಾನು ತಪಸ್ಸನ್ನಾಚರಿಸಿದ ಈ ಸ್ಥಳ ಇನ್ನು ಮುಂದೆ ನನ್ನ ಹೆಸರಿನಲ್ಲೇ ಉಳಿಯಬೇಕೆಂದು' ಕೇಳಿಕೊಂಡರಂತೆ; ಅದಕ್ಕೆ ಶಿವನು 'ಅಸ್ತು' ಎಂದು ಹೇಳಿ ಅಸ್ತಂಗತನಾದನಂತೆ; Lord Shiva was satisfied to his Tapas and appeared before `Kola', asked him what is his expectation; the sage Kola request Lord Shiva the place where he performed Tapas will be in the name of him; Lord Shiva granted him and disappeared;
- ಅಲ್ಲಿಂದ ಮುಂದೆ ಕೋಲಮಹರ್ಷಿಯ ತಪಸ್ಸಿನ ಕುರುಹಾದ ಈ ಸ್ಥಳ 'ಕೋಲಾಪುರ' ಎಂದು ನಾಮಕರಣ ಪಡೆಯಿತಂತೆ; ಈ ಕೋಲಾಪುರವೇ ಕೊಲ್ಲಾಪುರವಾಗಿ 'ಕೊಲ್ಲೂರು' ಆಗಿರಬಹುದೆಂಬ ಒಂದು ಅಭಿಪ್ರಾಯವಿದೆ; From that day the place was name `Kolapura'; this Kolapura becomes Kollapura may be `Kolluru' is an opinion;
- ಇಂದಿನ ಕೊಲ್ಲೂರು ಕ್ಷೇತ್ರದ ಸುಮಾರು ಆರು ಕಿ.ಮೀ ವಿಸ್ತೀರ್ಣದ ಪ್ರದೇಶ ಹಿಂದೆ 'ಮಹಾರಣ್ಯಪುರ' ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆದಿತ್ತೆಂಬ ಹೇಳಿಕೆಯೊಂದಿದೆ; People say this `Kolluru' was called `Maharanyapura' in the ages;

- ಅದೇ ಸಂದರ್ಭದಲ್ಲಿ ಬಲಾಢ್ಯನಾದ ಕಂಹಾಸುರನೆಂಬ ಅಸುರನೊಬ್ಬ ಮಹರ್ಷಿಗಳನ್ನು ಕಾಡಿಸತೊಡಗಲಾರಂಭಿಸಿದ; By that time a strong demon Kamhasura was troubled the sage;
- ಇದರಿಂದ ಭಯಭೀತರಾದ ಕೋಲ ಮಹರ್ಷಿಗಳು ಇತರೆ ಋಷಿವೇಣ್ಯರೊಡಗೂಡಿ ಕಂಹಾಸುರನ ಸಂಹಾರಕ್ಕಾಗಿ ತ್ರಿಮೂರ್ತಿಗಳ ಮೊರೆ ಹೊಕ್ಕರಂತೆ; The feared sage went to Trimurtys along with his disciples to request or pray them to kill the demon;
- ಋಷಿಗಳ ಮೊರೆಗೆ ಪ್ರಸನ್ನರಾದ ತ್ರಿಮೂರ್ತಿಗಳು ತ್ರಿಪುರಭೈರವಿಯನ್ನು ಸೃಷ್ಟಿಸಿ ಕಂಹಾಸುರನ ವಧೆಗಾಗಿ ಕಳುಹಿಸಿದರಂತೆ; The trimurtys were satisfied by the prayer of sages they create `Tripurabairavi' to kill Kamhasura;
- ಈ ಕಾಳ ಭೈರವಿಯನ್ನು ಕಂಡ ಕಂಹಾಸುರ ವಧೆಗೆ ಹೆದರಿ ಋಷ್ಯ ಮೂಕಾಚಲಕ್ಕೆ ಓಡಿಹೋಗಿ ಶಿವನನ್ನು ಕುರಿತು ದೀರ್ಘ ತಪಸ್ಸನ್ನಾಚರಿಸತೊಡಗಿದನಂತೆ; Kamhasura was feared and went to Mookachala for tapas Lord Shiva;
- ಕಾಲಕ್ರಮೇಣ ಕಂಹಾಸುರನ ತಪಸ್ಸು ಸಫಲವಾಗಿ ಪರಶಿವನ ಪ್ರಸನ್ನತೆಯ ಕಾಲ ಸನ್ನಿಹಿತವಾಗುತ್ತಿದ್ದಂತೆ ಋಷಿವೇಣ್ಯರು ಕಂಗೆಟ್ಟು ಪರಾಶಕ್ತಿಯನ್ನು ಪ್ರಾರ್ಥಿಸಿ 'ಶಿವನ ದರ್ಶನದ ಸಂದರ್ಭದಲ್ಲಿ ಕಂಹಾಸುರನ ನಾಲಗೆಯಲ್ಲಿ ನೆಲೆಸಿ ಅವನನ್ನು ಮೂಕನನ್ನಾಗಿ ಮಾಡಿ ಶಿವನ ಬಳಿ ಯಾವುದೇ ವರ ಬೇಡದಂತೆ ಮಾಡಬೇಕೆಂದು' ಕೇಳಿಕೊಂಡರಂತೆ; Kamhasura satisfied the Lord Shiva with his Tapas, this was known by the sages, they pray goddess Parashakthi, while Kamhasura have darshan of the Lord Shiva she should be on the tongue of Kamhasura and make him dumb, he must not ask the lord anything;
- ಅದರಂತೆ ದೇವಿ ಪರಾಶಕ್ತಿ ಕಂಹಾಸುರ ಪರಶಿವನಲ್ಲಿ ಯಾವುದೇ ವರ ಬೇಡದಂತೆ ಮಾಡಿದಳಂತೆ;
- ಹಾಗಾಗಿ ಈ ಪರಾಶಕ್ತಿಯೇ ಮುಂದೆ 'ಮೂಕಾಂಬಿಕೆ'ಯಾಗಿ ನೆಲೆಗೊಂಡಳೆಂಬುದು

ಪ್ರತೀತಿ; So, Parashakthi becomes Mookambika is stayed here in Kolluru;

- ಮುಂದೆ ಕಂಹಾಸುರ 'ಮೂಕಾಸುರ' ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆಯುತ್ತಾನೆ; Next Kamhasura will be famous in the name of `Mookasura';
- ಇದು ಅವನ ರಾಜಗುರು ಕೊಟ್ಟಂತಹ ವರ; ಅವರ ತಪೋಬಲದ ಎಲ್ಲ ಶಕ್ತಿಯನ್ನು ಕಂಹಾಸುರನಿಗೆ ಧಾರೆ ಎರೆದು ಅವನಿಗೆ ಮಾತು ಬರುವಂತೆ ಮಾಡಿ ಮುಂದೆ ಅವರೇ ಇವನಿಗೆ ಮೂಕಾಸುರನೆಂಬ ಹೆಸರಿನಿಂದ ಪ್ರಸಿದ್ಧಿ ಪಡೆ ಎಂದು ವರ ನೀಡಿದರೆಂಬುದು ಪುರಾಣ ಸೃಷ್ಟಿ; This Rajaguru gave a boon to Kamhasura that he gave all his Tapas strength and made him to be speak, then he was named as `Mookasura' and famous, is the creation of purana.
- ಕೊನೆಗೆ ಋಷಿಗಳಿಂದಲೇ ತನಗೆ ಈ ಸ್ಥಿತಿ ಬಂದಿತೆಂಬುದನ್ನರಿತ ಕಂಹಾಸುರ ಅವರಿಗೆ ಮತ್ತಷ್ಟು ಕಾಟ ಕೊಡಲಾರಂಭಿಸಿದನಂತೆ; Kamhasura found finally that the sages made him to be dumb; then started to harass the sages;
- ಇದರಿಂದ ಕೋಪಿಷ್ಠೆಯಾದ ದೇವಿ ಮೂಕಾಂಬಿಕೆ ಬ್ರಾಹ್ಮಿ, ವೈಷ್ಣವಿ, ಶಾಂಭವಿ, ಕುಮಾರಿ, ಇಂದ್ರಾಣಿ, ವರಾಹಿ ಎಂಬ ನವದುರ್ಗೆಯರೊಡಗೂಡಿ ಒಂದೇ ದೇಹ ತಾಳಿ ಮೂಕಾಸುರನ ಸಂಹಾರ ಮಾಡಿದಳಂತೆ; By this act of Mookasura nine Durgas Brahmi, Vaishnavi, Shambhavi, Kumari, Indrani, Varahi etc came into a form as Mookambika, then she killed the demon;
- ಇಲ್ಲಿಂದ ಮುಂದೆ ಕೋಲಾಪುರದಲ್ಲಿ ನೆಲೆಗೊಂಡ ಈಕೆ ಕೊಲ್ಲೂರು ಮೂಕಾಂಬಿಕೆ ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆದಿದ್ದಾಳೆ. She settled down in Kolapura or kollapura in the name of Kolluru Mookambika.

ಕೊಲ್ಲೆ kolle :

- ಬಲೆಯ ಚೀಲ; ಮದುವೆ ಸಂದರ್ಭದಲ್ಲಿ ಮಾಡಲಾಗುವ ಹಿರಿಯರ ಪೂಜೆ(ಹಾ.ಜಿ). Bag of net; worship of elders at the time of marriage.

ಕೊವ kova :

ಧಾನ್ಯವನ್ನು ಸಂಗ್ರಹ ಮಾಡಲಾಗುವ ಮಣ್ಣಿನ ಸೊರೆ (ನೋಡಿ: ಕೊಮ್ಮೆ). A big earthern pot to store grain.

ಕೊವೆ kove :

- ಹಡಗಿನ ಮಧ್ಯಭಾಗದಲ್ಲಿರುವ ಕಂಬ; ಹಾಯಿಗಂಬ ಎನ್ನುವರು; A pillar in the middle of the ship;
- ಮಕ್ಕಳ ದಮ್ಮು(ಉ.ಕ.ಜಿ); ಚಿಕ್ಕಮಕ್ಕಳಲ್ಲಿ ಕಾಣಿಸಿಕೊಳ್ಳುವ ಶ್ವಾಸಕೋಶಕ್ಕೆ ಸಂಬಂಧಿಸಿದ ಖಾಯಿಲೆ; A disease related to lungs in Children;
- ಹುತ್ತದ ಬಾಯಿ; ಕೋಬೆ, ಕ್ವಾವೆ ಎಂಬ ಸಂವಾಧಿ ರೂಪಗಳ ಬಳಕೆ ಇದೆ; Mouth of anthill;
- ತೆಂಗಿನ ಮಡಲಿನ ದಾರದಿಂದ ಸುರಿದ ಮೀನಿನ ಸರ(ಉ.ಕ.ಜಿ). A chain of fish made of coconut thread.

ಕೊವ್ವ kovva :

- ಕೊಯ್ಯುವ(ಉ.ಕ.ಜಿ); ಕೊಯ್ವ>ಕೊವ್ವ ಎಂದಾಗಿರಬಹುದು; Koyyuva may be becomes Kovva;
- ತೆಗೆದುಕೊ; ಈಸಿಕೊ; ಪಡೆದುಕೊ; ಮಳ್ಳು(ಮಡಿಲು) ಒಡ್ಡಿ ಗೌರವದಿಂದ ಈಸಿಕೊಳ್ಳುವುದು(ಮಂಡ್ಯ/ಮೈ/ಚಾ.ಜಿ); *ಪ್ರ: 'ಕುಸೂ ಎಲ್ಲದ್ದಯಿ ಕೊವ್ವ ಮಂತ ಅಡ್ಡ ಕೇಳ್ದಿಲ್ಲ*'; Receive respectfully.

ಕೊಸಂಬರಿ kosambari :

- ಕೊಸುಂಬರಿ, ಕೋಸಂಬರಿ, ಕೋಸುಂಬರಿ; ಕುಸುಂಬರಿ/ಕುಸಂಬರಿ ರೂಪಗಳೂ ಚಾಲ್ತಿಯಲ್ಲಿವೆ; ಪದಾದಿಯ ದೀರ್ಘ ಆಮೇಲಿನ ಬೆಳವಣಿಗೆ ಇರಬಹುದು; ಕುಸಂಬರಿ/ಕುಸುಂಬರಿ ಮೂಲ ರೂಪವಾಗಿದ್ದು, ಅದೇ ಕ್ರಮೇಣ ಕೊಸಂಬರಿ/ ಕೊಸುಂಬರಿ ರೂಪಗಳನ್ನು ತಳೆದಿರಬಹುದು. ಇದು ಸ್ವರವ್ಯತ್ಯಯದ ನಿಯಮದ ಪ್ರಕಾರ ಆದ ಬದಲಾವಣೆ(ಕು>ಕೊ; ಉ>ಒ); Kosumbari,

Kosambari, Kusumbari forms are also in practice;

- ತಮಿಳು ಮತ್ತು ತುಳುಗಳಲ್ಲಿ 'ಕೋಸುಂಬರಿ' ಪದವೇ ಇದೆ(ದ್ರಾ.ಭಾ.ಜ್ಞಾ.ಪ.ಕೋ); The word `Kosumbari' remains in Tamil and Tulu;
- ಹಬ್ಬ ಹರಿದಿನಗಳಲ್ಲಿ ಸಿಹಿ ಅಡುಗೆ ಮಾಡಿದಾಗ ಊಟದ ಜೊತೆ ನಂಜಿಕೊಳ್ಳಲು ಮಾಡಲಾಗುವುದು; ಮದುವೆ ಮುಂತಾದ ಸಮಾರಂಭಗಳ ಊಟದಲ್ಲಿ ಇದು ಇದ್ದೇತೀರುವುದು; In festivals and sweet dinner kosumbari used as sides; it is must in marriage occasions;
- ಸೌತೆಕಾಯಿ, ಗಜ್ಜರಿ, ಈರುಳ್ಳಿ, ನೆನೆಸಿದ ಹೆಸರುಬೇಳೆ, ಉಪ್ಪು ಸೇರಿಸಿ ಕೊಸಂಬರಿ ಸಿದ್ಧ ಪಡಿಸುವರು; Cucumber, Onion, wet grain, green pulses, salt are mixed;
- ನೆನೆಸಿದ ಕಡಲೆಬೇಳೆಯನ್ನು ಜಜ್ಜಿ, ಈರುಳ್ಳಿ ಎಸಳನ್ನು ಸೇರಿಸಿ ಕೊಸಂಬರಿ ಮಾಡುವ ವಿಧಾನ ಇನ್ನೊಂದು; Another preparation pounded wet Bengal gram pulse, onion mix;
- ಕೆಲವು ಪ್ರದೇಶದ ದೇವಸ್ಥಾನಗಳಲ್ಲಿ ರಾಮನವಮಿ, ಹನುಮಜಯಂತಿ ದಿನಗಳಲ್ಲಿ ಕೊಸಂಬರಿ, ಪಾನಕ ಕೊಡುವ ರೂಢಿಯಿದೆ. In some parts of temples on Ramanavami and Hanuma Jayanthi days distributed `Kosambari' and `Panaka' is a practice.

ಕೊಸರು/ಕೊಸ್ರು kosaru/kosru :

- ದವಸ-ಧಾನ್ಯಗಳ ಅಳತೆಯಾದ ಮೇಲೆ ಹಾಕಲಾಗುವ ಹೆಚ್ಚಿನ ಪದಾರ್ಥ; After measuring the corns the additional corns are given that is called `Kosaru';
- ಕೊಂಡುಕೊಂಡ ಮೇಲೆ ಬಿಟ್ಟಿಯಾಗಿ ಕೇಳಿ ಪಡೆಯುವ ಪ್ರಕ್ರಿಯೆ; After purchase any corns and other things asking some part or parts free of cost;
- ಹೆಚ್ಚಿನ ಪಾಲು ಅಥವಾ ಭಾಗ; ನಿರ್ದಿಷ್ಟಪಡಿಸಿದ ಅಳತೆಗೆ ಅಧಿಕವಾಗಿ ಹಾಕಲಾಗುವುದು; Serve more than the fixed measure;
- ಹೆಚ್ಚಾಗು; ಮಿತಿಮೀರು; ಅತಿಆಸೆ ಪಡು; ಸರಕಿನ ತೂಕದ ನಂತರ ಒಂದಿಷ್ಟು ಉಚಿತವಾಗಿ ಪಡೆಯುವುದು; Excess, cross the limit; over desire; after measure the goods get some part free;
- ಚೌಕಾಸಿ; ಕೋಪಗೊಳ್ಳುವಿಕೆ; ಹಿಡಿತದಿಂದ ಬಿಸಿಡಿಕೊಳ್ಳಲು ಹೆಣಗಾಡುವುದು; ಕೈಕ್ಕೈ ಕೊಸರಾಡುವ ಪ್ರಕ್ರಿಯೆ; ಒದ್ದಾಡು; ಜಾರಿಕೊಂಡು; Bargaining; to became angry; try to come out of the hold; struggle to free from someone; slipout off;
- ಕೊಜರು; ಗುಂಜು; ಕೀಳು; ಜಗ್ಗು; ತಳದಲ್ಲಿ ಉಳಿದ ಪದಾರ್ಥ; Pluck, draw forecefully; remaining in the bottom;
- ತಕರಾರು ಮಾಡುವುದು; ಬಿಡಿಸಿಕೊ; ಪಾರಾಗು; ಹಾರಾಡು; ಚೀರಾಡು; *ಪ್ರ: 'ಈಯಮ್ಮ ಸರಿಗೆ ತೂಗ್ತಾಳೆ ಕೊಸ್ರು ಕೇಳುದ್ರೆ ಕೊಡೋದೇ ಇಲ್ಲ'*; Make controversy; liberate; save; be furious; screaming; this woman weigh perfect but cannot give excess;
- ***—ಕೊಸರಾಡು*** : ಹಿಂದೆ-ಮುಂದೆ ತೊಯ್ದಾಡುವುದು; ಬಿಟ್ಟು ಬಿಡದಂತೆ ನಡೆಯುವ ಪ್ರಕ್ರಿಯೆ; ಕೋಪ ಮಾಡು; ಜಂಬದಿಂದ ವರ್ತಿಸು; ಎಗರಾಡು; ಹಿಡಿತದಿಂದ ತಪ್ಪಿಸಿಕೊಳ್ಳಲು ಪ್ರಯತ್ನ ಪಡುವಿಕೆ; ಅಸಮಾಧಾನ ವ್ಯಕ್ತಪಡಿಸುವುದು; ಅಸಮ್ಮತಿ ತೋರಿಸು; ಜಗ್ಗಾಡು; ಎಳೆದಾಡು; ಪಾರಾಗಲು ಯತ್ನಿಸುವುದು; ತಪ್ಪಿಸಿಕೊಳ್ಳು; *ಪ್ರ: 'ಅವ ಎಷ್ಟೇ ಕೊಸ್ರಾಡುದ್ರು ಬಿಟ್ಕೊಡೊ ಮಾತೇ ಇಲ್ಲ'*; Not willing to come to a conclusion; an action may not be happen; to make angry; behave in proud; try to comeout of the hold; express dissatisfaction; show disagreement; tug of war; pull try to escape; escape; never leave him to escape;
- ***—ಕೊಸರೆಂಡತಿ*** : ವಧುವಿನ ತಂಗಿಯನ್ನು ಕೊಸರೆಂಡತಿ ಎಂದು ಕರೆಯುವುದಿದೆ; ಮದುವೆ ಸಂದರ್ಭದಲ್ಲಿ ವರನ ಎದುರು ಕೂರಿಸಿ ಅವಳಿಗೆ ಫಲ, ತಾಂಬೂಲ, ಉಡುಗೊರೆಯನ್ನು ನೀಡುವ ಪ್ರಕ್ರಿಯೆ; ಆರ್ಯ ವೈಶ್ಯರಲ್ಲಿ ರೂಢಿಯಲ್ಲಿರುವಂಥದು. Sister of the bride is called Kosarendathi; at the time of the marriage make her to sit

before the groom, gave her fruits and other things as gift; this practice is in Arya Vysya community.

ಕೊಸಳಾತ್ kosaḷāt :

- ಲಂಬಾಣಿಗರ ಮದುವೆಯ ವಿವಿಧ ಸಂದರ್ಭಗಳಲ್ಲಿ ಮಾಡಲಾಗುವ ಶಾಸ್ತ್ರಗಳಿಗೆ ಹೊಂದಿಕೊಂಡಂತೆ ಹಾಡಲಾಗುವ ಶ್ಲೋಕಗಳು; Slokas chanting in Lambani matrimonial ceremonies for different rituals;
- ಸಂಕ್ಷಿಪ್ತ ಹಾಗೂ ವಿಶಾಲವಾದ ಅರ್ಥಗಳಿಂದ ಕೂಡಿರುವಂಥವು; ಲಂಬಾಣಿ ಸಮುದಾಯದ ಸಾಂಸ್ಕೃತಿಕ ಮಾಹಿತಿಗಳನ್ನು ನೀಡುವ ಆಕರಗಳು; ಒಟ್ಟು ಕೊಸಳಾತ್‌ಗಳನ್ನು ಆರು ವಿಭಾಗಗಳಲ್ಲಿ ವಿಂಗಡಿಸಿಕೊಳ್ಳಲಾಗಿದೆ; These slokas have brief and wide meanings; they are the sources to give cultural information of Lambani community; Kosalaths are divide into six divisions;
- ಸಗಾಯಿರ್ ಕೊಸಳಾತ್–ನಿಶ್ಚಯ ಶಾಸ್ತ್ರದ ಶ್ಲೋಕ; ಗೋಳೇರ್ ಕೊಸಳಾತ್–ವೀಳ್ಯಶಾಸ್ತ್ರದ ಶ್ಲೋಕ; ಪಾನೇರ್ ಕೊಸಳಾತ್–ವೀಳ್ಯದೆಲೆಯ ಶ್ಲೋಕ; ಹೋಕಾರ್ ಕೊಸಳಾತ್–ಹುಕ್ಕಾದ ಶ್ಲೋಕ; ಥಾಳೀರ್ ಕೊಸಳಾತ್–ಗಂಗಾಳದ ಶ್ಲೋಕ; ಘೋಟಾರ್ ಕೊಸಳಾತ್–ಪಾನಕದ ಶ್ಲೋಕ. Sagayir kosalath is the occation of marriage engagement sloka; Goler kosalath is the Vilya ritual sloka; Paner kosalath is betel ritual sloka; Hokar kosalath is Hukka ritual sloka; Thalir kosalath is Gangalada ritual sloka; Photar kosalath Panaka or Juice ritual sloka.

ಕೊಸಾರ್ನೆ/ಕೊಸಾರನೆ kosārne/kosārane:

- ತಕ್ಷಣ; ಕೂಡಲೆ; ಕೋಪದಿಂದ; ಆವೇಶದಿಂದ; ಸಿಡುಕಿನಿಂದ; ರೇಗಿನಿಂದ; ಸಿಡಾರೆಂದು; *ಪ್ರ: 'ಅತ್ತೆ ಸೊಸೆ ಮೇಲೆ ಕೊಸಾರ್ನೆ ಮೊರಕುಕ್ಕಿ ಬಿಸಾಕ್ದ'*; Sudden; at once; angrily; emotionally; peevishness; flare up; mother-in-law show angry on daughter-in-law;
- ಗ್ರಾಮೀಣ ಬದುಕಿನಲ್ಲಿ ವ್ಯಾಪಕ ಬಳಕೆಯಲ್ಲಿರುವಂಥದು; ಶಿಷ್ಟ ಪರಂಪರೆಗೆ ಅಥವಾ ಗ್ರಾಂಥಿಕ ಬರೆವಣಿಗೆಗೆ ಪ್ರವೇಶಿಸಿದಂತೆ ಕಾಣುವುದಿಲ್ಲ. Used in ritual life vastly; it cannot be enter into gentle heritage or bookish writing.

ಕೊಸಿ/ಕೊಸೆ kosi/kose :

- ಬೈಗುಳ ಸಂದರ್ಭದಲ್ಲಿ ವ್ಯಂಗ್ಯಾರ್ಥ ಸೂಚಕವುಳ್ಳ ಪದ; ಕೆಲಸ ಮಾಡು; ಅದೇನ್ ಮಾಡ್ತಯಿ ಮಾಡು ನಾನು ನೋಡ್ತಿನಿ ಎಂಬರ್ಥದಲ್ಲಿ; ಕೈಲಾಗದವರಿಗೆ, ಮೈಗಳ್ಳರಿಗೆ, ಸೋಮಾರಿಗಳಿಗೆ ಕುರಿತು ಹೇಳುವಾಗ; The word indicates sarcastic meaning at the time of abusing; do the work; do whatever you do, I will see it; this is for lazies and inefficient fellows;
- ಕೆಲಸ, ಕೇಮಿ, ಗೇಮೆ, ಗೆಯ್ಮೆ ಮಾಡು ಎಂಬರ್ಥದಲ್ಲಿ ಪದಬಳಕೆ; *ಪ್ರ: 'ನೀನ್ ಕೊಸಿಯೋದ್ನ ನಾಕಾಣ್ಣೆ'*; The word is used in the meaning of work, it has different form like, Kelasa, keme, geme, gaime etc; I know what you have to do;
- ಭೋಗಿಸು; ಸಂಭೋಗ ಮಾಡು; ಕೂಡುವಿಕೆ; ಮಿಲನ ಪ್ರಕ್ರಿಯೆಗೆ ಸಂಬಂಧಿಸಿದ್ದು. Enjoy; copulation; intercourse; related to coitus.

ಕೊಸೆ ಕಿತ್ತಾಕು kose kittāku :

- ಕ್ರಿಯಾತ್ಮಕ ಹಿನ್ನೆಲೆಯುಳ್ಳ ಪದ; ಗ್ರಾಮೀಣರಲ್ಲಿ ಬೈಗುಳ ಪದವಾಗಿ ಬಳಕೆಯಲ್ಲಿರುವಂಥದು; The word related to action; used in rural as a abusing word;
- ಹೆಚ್ಚಾಗಿ ಮಹಿಳೆಯರು ಜಗಳವಾಡುವ ಸಂದರ್ಭದಲ್ಲಿ ಪದಬಳಕೆ; *ಪ್ರ: 'ಬಲೆ ರಂಡೆ ನಿನ್ ಕೊಸೆ ಕಿತ್ತಾಕ್ತಿನಿ'*. At the time of quarrelling situation the word used by women.

ಕೊಳ್/ಕೊಳು/ಕೊಳ್ಳು koḷ/koḷu/koḷḷu :

- ಕೊಳ್/ಕೊಳ್ಳು=ಕೊಂಡುಕೊ, ತೆಗೆದುಕೊ, ಪಡೆದುಕೊ ಎಂಬರ್ಥದಲ್ಲಿ ಪದಬಳಕೆ; ಕ್ರಿಯಾವಾಚಕಗಳ ಪದಾಂತ್ಯದಲ್ಲಿ ಆತ್ಮಾರ್ಥಕವಾಗಿ ಬಳಕೆಗೊಳ್ಳುವ ರೂಪ; ಸಹಾಯಕ ಕ್ರಿಯಾರೂಪವಾಗಿ ಉಪಯೋಗ;

The word used in the meaning of purchase; get; receive;

- ಖರೀದಿಸು; ಸ್ವೀಕರಿಸು; ದೋಚುವಿಕೆ; ಹೊಗಳು; ಸ್ತುತಿಸು; ಒಳಗೊಳ್ಳು; ಅಪಹರಿಸು; ದರೋಡೆ; ಸುಲಿಗೆ; ಕಳವು; ತೊಡಗು; Purchase, buy, receive, rob, praise, round up within; abduct; robbery; loot;
- ವಿವರಿಸು; ಕಲಿಸು; ಪಂಥ; ನಿರ್ಣಯ; ಆಲೋಚಿಸುವಿಕೆ; ಪರಿಗಣಿಸು; ಹಿಡಿದುಕೊಳ್ಳು; ಅಭಿಪ್ರಾಯ; ತತ್ವ; ಯೋಜಿಸು; Explain; teach; vow; oath; decision; thought; consider; hold; opinion; philosophy; to make plan;
- ಆಸೆಬುರುಕನಂತೆ ತಿನ್ನು; ಹವ್ಯಕ ಕನ್ನಡದಲ್ಲಿ 'ಕುಡಿ ಈಂಟು' ಎಂಬ ಅರ್ಥಗಳಿವೆ; Eat greedily; `Kudi intu' in Havyaka kannada;
- ಕೊಳ್ಳು=ಕೊರಳು; ಕತ್ತು; ಕೊಳ್‌ಪಟ್ಟಿ=ಕೊರಳಪಟ್ಟಿ; ಕತ್ತಿನಪಟ್ಟಿ; ಉಚ್ಚಾರಣೆಯಲ್ಲಿ 'ರ'ಕಾರ ಬಿದ್ದುಹೋಗಿ 'ಕೊಳ್ಳು' ಆಗಿರುವುದು ಸ್ಪಷ್ಟ(**ನೋಡಿ:** ಕೊರಳು); Neck; piece of neck;
- ಕೊಳ್, ಕೊಳು=ಕೂಳ್, ಕೂಳು ಎಂಬರ್ಥದಲ್ಲಿ; ಸತ್ತವರಿಗೆ ಶ್ರಾದ್ಧ ಮಾಡುವಾಗ ಹಾಕಲಾಗುವ ಕೂಳು ಅಥವಾ ಅನ್ನ ಅಥವಾ ಆಹಾರ ಪದಾರ್ಥ; The word `Kol' is in the meaning `Kool', it is the food or rice are called `Koolu' used to serve funeral ceremony;
- ಸತ್ತವರು ಕಾಗೆಗಳಾಗಿ ರೂಪ ತಳೆದು ಬಂದು ಕೂಳನ್ನು ತಿನ್ನುತ್ತಾರೆ ಎಂಬುದೊಂದು ಸಾಮಾನ್ಯವಾದ ನಂಬಿಕೆ; ಗೊಂಡರಲ್ಲಿ ರೂಢಿ; The dead came in the form of crow to eat `Koolu' is a belief; it is practical in gonda community;
- ತಮಿಳಿನಲ್ಲಿ ಕೊಳ್; ತೆಲುಗಿನಲ್ಲಿ ಕೊನು; ತುಳುವಿನಲ್ಲಿ ಕೊಣ್ ಮತ್ತು ಮಲೆಯಾಳಂನಲ್ಲಿ ಕೊಳ್ಗ ರೂಪಗಳ ಬಳಕೆ ಇದೆ(ದ್ರಾ.ಭಾ.ಜ್ಞಾ.ಪ.ಕೋ); In Tamil `Kol'; in Telugu `Konu'; in Tulu `Koṇ'; in Malayalam `Kolga' forms used;
- ***—ಕೊಳ್ ಕಟ್ಕಂಡು*** : ಕೊರಳು ತಬ್ಬಿಕೊಂಡು; ಭಾವನಾತ್ಮಕವಾಗಿ ಪರಸ್ಪರ ಆಲಂಗಿಸುವಿಕೆ; ಪರಸ್ಪರ ಒಬ್ಬರನ್ನೊಬ್ಬರು ಬಿಟ್ಟು ಹೋಗದೆ ಜೊತೆಯಾಗಿರುವಿಕೆ; Embrace the neck; embrace to feel excitement eachother; inseperable eachother;
- ***—ಕೊಳ್‌ಗಂಟೆ*** : ದನಗಳ ಕೊರಳಿಗೆ ಕಟ್ಟು ಗೆಜ್ಜೆಯಿಂದ ಕೂಡಿದ ಗಂಟೆ; ಶಬ್ದ ಮಾಡುವಂತಿರುತ್ತದೆ; ಕರಟದ ಚಿಪ್ಪು ಅಥವಾ ಒಣಗಿದ ಟೊಳ್ಳು ಬಿದಿರಿನಿಂದ ತಯಾರಿಕೆ. A bell tie around the neck of the cattle with small bells; seems to make sound; prepared by coconut shell or dry hallow bamboo.

ಕೊಳ್ ಕಟ್ಟುವುದು koḻ kaṭṭuvudu :

- ಕೊರಳು ಕಟ್ಟುವುದು ಎಂಬರ್ಥದಲ್ಲಿ ಪದಬಳಕೆ; ಕೊಳ್=ಕೊರಳು; ಕೊರಳು ಎಂಬುದು ಇಲ್ಲಿ ಮನೆಯ ಮೇಲ್ಭಾವಣಿ ಎಂಬರ್ಥದಲ್ಲಿ ಬಳಕೆಗೊಂಡಿದೆ; The word used in the meaning of tie the neck; a place joins at four corners of the house tie with palm leaves;
- ನಾಲ್ಕು ಮೂಲೆಗಳು ಸೇರುವ ಮನೆಯ ಮೇಲ್ಭಾವಣಿಯನ್ನು ಸೋಗೆ ಗರಿಗಳಿಂದ ಕಟ್ಟುವುದು; ಕ್ರಿಯಾತ್ಮಕ ಹಿನ್ನೆಲೆಯುಳ್ಳ ಪದ; A place joins at four corners of the house tie with palm leaves;
- ನಾಲ್ಕು ಮೂಲೆಗಳು ಸೇರುವ ಎತ್ತರದ ಈ ಭಾಗ ಮನೆಯ ಪ್ರಧಾನ ಅಂಗವೂ ಹೌದು; ಮಳೆ ಸಂದರ್ಭದಲ್ಲಿ ಇದರಿಂದ ನೀರು ಸೋರಿದರೆ ಒಳಗಿನ ಪದಾರ್ಥಗಳು, ಜನರಿಗೆ ತೊಂದರೆಯಾಗುವುದು; ಹಾಗಾಗಿ ನೀರು ಸೋರದಿರಲಿ ಎಂಬ ಕಾರಣದಿಂದ ಸೋಗೆ ಗರಿಯನ್ನು ಹೊದಿಸುವುದು; A place joins four corners is a high place of the house and main part of the house also; if this part soaked at the time of rainy season it may affect to the people and things, so, to avoid soaking, this place is covered with palm leaves;
- ಇದು ಹೆಂಚು ಹೊದಿಸುವಷ್ಟೇ ಪ್ರಮಾಣದ ಕೆಲಸವನ್ನು ನಿರೀಕ್ಷಿಸುತ್ತದೆ; *ಪ್ರ: 'ಕಳ್ ರಂಗಣ್ಣನ್*

ಮಗ ಕೊಳ್ ಕಟ್ಟುಹೋಗಿ ಕಾಲ್ ಮುರ್ಕಂಡ'. this also expect the work equal to cover the tiles; `The son of Kal Ranganna broke his leg while covering the corner of the house'.

ಕೊಳ್ ಕೊಕ್ಕು kol̤ kokku :

- ನೀರು ಅಥವಾ ಕೀವು ತುಂಬಿದ ಒಂದು ವಿಧದ ಗುಳ್ಳೆಗಳು; 'ಕಜ್ಜಿ' ಎಂಬುದಾಗಿ ಕರೆಯುವುದಿರಬಹುದು; ಮಕ್ಕಳಿಗೆ ಬರುವುದಿದೆ; Water or pus filled bubbles; it is called Scabies; it comes to children;
- ಚರ್ಮದ ಮೇಲೆ ಕಾಣಿಸಿಕೊಳ್ಳುವ ಇದು ದಪ್ಪ ಹಾಗೂ ಸಣ್ಣ ಗುಳ್ಳೆಗಳಿಂದ ಕೂಡಿರುತ್ತದೆ; Appears on skin with small and big bubbles;
- ಇದಕ್ಕೆ ವೈದ್ಯರನ್ನು ಸಂಪರ್ಕಿಸಿ ಔಷಧೋಪಚಾರ ಮಾಡಿಸುವುದುಂಟು. For this disease consult the doctor and get medicine.

ಕೊಳ್ ನುಗ್ಗು kol̤ nuggu :

- 'ಕೊರಳ ನೂಲು' ಎಂಬರ್ಥದಲ್ಲಿ ಪದಬಳಕೆ; ಗೊಂಡರ ಹೆಂಗಸರು ಕೊರಳಿಗೆ ಹಾಕುವ ತೆಳ್ಳನೆಯ ದಾರ; ಕೆಂಪುಬಣ್ಣದಿಂದ ಕೂಡಿದೆ; The word used in the meaning `neck thread'; the woman of Gondas wear this thin thread around their neck; red in colour;
- ಹಿಂದೆ ಮದುವೆಯ ಸಂದರ್ಭದಲ್ಲಿ ಕೊರಳ ನೂಲು ಎಂಬ ಕೆಂಪುಬಣ್ಣದ ಈ ದಾರವನ್ನು ಕಟ್ಟಿಕೊಳ್ಳುತ್ತಿದ್ದರು ಎಂದು ಹೇಳಲಾಗುತ್ತದೆ(ಉ.ಕ.ಜಿ); In the olden days at the time of marriage `Korala noolu' the red thread was tied around the neck;
- ಸೆರಗನ್ನು ಗಂಟು ಹಾಕಲು ಕುತ್ತಿಗೆಗೆ ಕಟ್ಟಿದ ದಾರ. To tie the edge of the sari used this neck thread.

ಕೊಳ್ ಮುಳ್ಳು kol̤ mul̤l̤u :

- 'ಕೊಳದ ಮುಳ್ಳು' ಎಂಬ ಹೆಸರಿನಿಂದ ಕರೆಯಲಾಗುತ್ತದೆ; This is named as `Kolada mullu';
- ಕೊಳದಲ್ಲಿ ಬೆಳೆಯಬಲ್ಲ ಸಸಿ ಅಥವಾ ಗಿಡ ವಿಶೇಷ; ಗಿಡ ಹಾಗೂ ಹೂವಿನಲ್ಲಿ ಮುಳ್ಳುಗಳಿರುವುದರಿಂದ 'ಕೊಳ್ ಮುಳ್ಳು' ಎಂಬ ಹೆಸರು ಬಂದಿರಬಹುದು; The plant has thron in the flower and the whole so may be this `Kol mullu' name comes;
- ವಿಶಿಷ್ಟವಾದ ಹೂವು ಬಿಡುತ್ತದೆ; ನೋಡಲು ಆಕರ್ಷಕವಾದುದಾದರೂ ಮನೆಯಂಗಳದಂತಹ ಇತರೆ ಸ್ಥಳಗಳಲ್ಲಿ ಬೆಳೆಸಲಾಗುವುದಿಲ್ಲ(ಉ.ಕ.ಜಿ). It has an excellent kind of flower; it looks attractive but it cannot allow to grow in front of the house and other places.

ಕೊಳ್ ಹೂವು kol̤ hūvu :

- ಮಿಶ್ರ ಧಾನ್ಯಗಳನ್ನು ಮಣ್ಣಲ್ಲಿ ಬಿತ್ತಿ ಅದರ ಮೇಲೆ ಮಡಕೆ ಕವುಚಿ ನಾಲ್ಕಾರು ದಿವಸಗಳ ಕಾಲ ಹಾಗೆಯೇ ಬಿಟ್ಟು ನಂತರ ಕಾಣುವ ಮೊಳಕೆಯ ಚಿಗುರು ಅಥವಾ ಗಿಡ; Mixed grains are sown in the soil and cover the pot on it for some days; the sprouted plants are `Kol hoovu';
- ಉದ್ದು, ಹುರುಳಿ, ಹೆಸರುಗಳಂತಹ ಇತರೆ ಧಾನ್ಯಗಳನ್ನು ನೀರಿನಲ್ಲಿ ನೆನೆಹಾಕಿ ಮೊಳಕೆ ಕಾಣಿಸಿಕೊಂಡಾಗ ಇರುವ ಹಳದಿ ಬಣ್ಣದ ಚಿಗುರು; Blackgram, horsegram and other grains are wet in water later yellow coloured sprouts are found;
- ಸೋಣೆ ತಿಂಗಳು ಅಂದರೆ ಶ್ರಾವಣ ಮಾಸದಲ್ಲಿ ಕರಾವಳಿ ಭಾಗದ ಜನರು ತಮ್ಮ ಮನೆಯ ಹೊಸ್ತಿಲಿನಲ್ಲಿ ಬೆಳಿಗ್ಗೆ ಮತ್ತು ಸಂಜೆ ಇಂತಹ ಹೂವಿನ ವಿನ್ಯಾಸವನ್ನು ರಚನೆ ಮಾಡಿ ನಂತರ ಹೊಸ್ತಿಲಿಗೆ ಹೂವು, ದೀಪದಿಂದ ಶೃಂಗರಿಸಿ ಪೂಜಿಸುವುದು ಒಂದು ಸಂಪ್ರದಾಯ; Sone month is Shravana masa or month; the people of Karavali prepare the design of this flower on the door frame of the house and kept the lamp and flowers on it and worship;
- ಬಿತ್ತಿದ ಬಿತ್ತನೆಗೆ ಗಾಳಿ, ಬಿಸಿಲು ತಾಗದಂತೆ ಮಾಡಿ ಮೊಳಕೆ ಬರಿಸಿದ ಸಸಿ(ದ.ಕ). To sowed seed cannot be touch the wind and sun heat in such a way to get sprouted plant.

ಕೊಳ್ಂಬೆ/ಕೊಳಂಬೆ kol̤mbe/kol̤ambe :

- ಪೀಕದಾನಿ(ದ.ಕ);
- ಮರ ಅಥವಾ ಲೋಹದ ಅರ್ಧ ವೃತ್ತಾಕಾರದ ಪಾತ್ರೆ; ನೀರೆತ್ತಲು ಉಪಯೋಗ; ಏತದಲ್ಲಿ ನೀರೆತ್ತುವ ಕೆಲಸಕ್ಕೆ ಬಳಸಬಹುದು(ಕೃ.ಪ.ಕೋ); A semicircled vessel made of wood or metals used to lift the water;
- ಮದುವೆಯ ಸಂದರ್ಭದಲ್ಲಿ ಮುಸಲ್ಮಾನರು ವರನಿಗೆ ಕೊಡುವ ಉಡುಗೊರೆಯಲ್ಲಿ ಪ್ರಮುಖವಾದುದು; Muslims give as a prime gift to the bridegroom at the time of marriage;
- ತಾಮ್ರ, ಹಿತ್ತಾಳೆ, ಸ್ಟೀಲ್ ಮೊದಲಾದ ಲೋಹಗಳಿಂದ ತಯಾರಿಸಲಾಗಿರುವುದು; ಊಟಕ್ಕೆ ಮೊದಲು ಕೈತೊಳೆಯಲು ಮತ್ತು ಊಟ ಮುಗಿದ ಮೇಲೆ ಎಲೆ, ಅಡಕೆ ಹಾಕಿಕೊಂಡಾಗ ತಂಬುಲ ಉಗಿಯಲು ಬಳಕೆ; *ಪ್ರ: 'ಕೊಳಂಬೆಯನ್ನು ಮಂಚದಡಿಯಲ್ಲಿ ಇಡು'.* It is made of Copper, Brass, Steel metals used to wash hand before dinner, to split the betel and arecanut; put the `Kol̤ambe' under the cot.

ಕೊಳ/ಕೊಣ kol̤a/koṇa :

- 'ಕೊಣ' ಎಂಬ ಸಂವಾದಿ ರೂಪದ ಬಳಕೆಯೂ ಕಂಡುಬಂದಿದೆ; ಕೊಳ=ಕೊಣ(ಳ>ಣ); Kol̤a is the equivalent form of word `Koṇa' found in usage;
- ನೀರು ತುಂಬಿದ ತೊಟ್ಟಿ ಅಥವಾ ಪಾತ್ರೆ; ನೀರು ಸಂಗ್ರಹಿಸಲು ಮಾಡಿಕೊಂಡಿರುವ ಚೌಕಾಕಾರದ ಹೊಂಡ; ತಳಭಾಗದ ಅಗಲ ಕಿರಿದಾಗಿದ್ದು ಬರುಬರುತ್ತಾ ಮೇಲ್ಭಾಗದ ಅಗಲ ದೊಡ್ಡದಾಗಿರುತ್ತದೆ; ದೇವಸ್ಥಾನದ ಅಕ್ಕಪಕ್ಕದಲ್ಲಿ ದೇವಾಲಯ ಹಾಗೂ ಭಕ್ತರ ಮೂಲಭೂತ ಸೌಲಭ್ಯಗಳಿಗೆ ಸಹಕಾರಿಯಾಗುವಂತೆ ಕಟ್ಟಿಸಿರುತ್ತಾರೆ; Water filled tank or vessel; A squared pond to fill water; the size of the pond is little and the upper part become wide; it is built around the temple to help the devotees for their primary facilities;
- ಒಳಭಾಗದ ನಾಲ್ಕುದಿಕ್ಕಿನ ಸುತ್ತಲೂ ಕಲ್ಲಿನ ಚಪ್ಪಡಿ ಅಥವಾ ಮರಳು, ಸಿಮೆಂಟು, ಇಟ್ಟಿಗೆ ಅಥವಾ ಕಲ್ಲಿನ ದಿಂಡುಗಳಿಂದ ಮೆಟ್ಟಿಲುಗಳನ್ನು ನಿರ್ಮಿಸಿರುತ್ತಾರೆ; ಇವು ನೂರಾ ಒಂದು, ಸಾವಿರದ ಒಂದು ಎಂಬ ಲೆಕ್ಕಾಚಾರದಲ್ಲಿರಬೇಕೆಂಬ ನಿಯಮವಿದೆ; ವರ್ಷದ ಎಲ್ಲಾ ಕಾಲದಲ್ಲಿಯೂ ಕೊಳದಲ್ಲಿ ನೀರು ತುಂಬಿರಬೇಕೆಂಬುದೊಂದು ಹೇಳಿಕೆ; Steps are built in four directions by stone slabs or sand, cement, bricks or stone boulders; these steps should be in hundred and one, thousand and one, it is the rule; the pond should be full of water in all the season;
- ದೇವಾಲಯದ ಕೆಲಸ-ಕಾರ್ಯಗಳಿಗೆ, ತೊಳೆದು ಶುಚಿ ಮಾಡಲು, ಪೂಜೆ-ಪುನಸ್ಕಾರ, ನೈವೇದ್ಯ, ದಾಸೋಹಗಳಿಗೆ, ಭಕ್ತರ ಸ್ನಾನ, ಮಡಿ, ಮುಡಿಸೇವೆ, ಉರುಳುಸೇವೆ ಮಾಡಿಸಿದವರ ಸ್ನಾನಕ್ಕೆ, ಪರ ಮಾಡಲು ಮತ್ತು ವಿಶೇಷ ಸಂದರ್ಭದಲ್ಲಿ ದೇವರ ತೆಪ್ಪೋತ್ಸವ ನಡೆಸಲು ಅನುಕೂಲವಾದುದು; ಮುತ್ತೈದೆಯರು ಗಂಗೆ ಪೂಜೆ ಮಾಡಲು, ಹಬ್ಬ-ಹರಿದಿನಗಳಲ್ಲಿ ಮೀಸಲು ನೀರು ತರಲು, ದೇವರ ಗಡಿಗೆ ನೀರು ತರಲೂ ಉಪಯೋಗ; The water is used to the temple work, to clean, for worship, for offerings, food, bath of devotèes etc; in special occasion for Teppotsava offering pooja. for Ganga; water for festivals etc;
- ಚಿಕ್ಕ ಹೊಂಡ; ಸ್ನಾನದ ತೊಟ್ಟಿ; ಸರೋವರ; ಜಲಾಶಯ; ಕೆರೆಯ ತೂಬಿನ ಹೊರಭಾಗದಲ್ಲಿ ಆಳವಾಗಿ ತೆಗೆದಿರುವ ಹೊಂಡ; Small pond; Bathing tank; Sarovara; Dam; A deap pond outlet of the tank;
- ತಮಿಳು ಮತ್ತು ಮಲೆಯಾಳಂಗಳಲ್ಲಿ 'ಕುಳಮ್', ತುಳುವಿನಲ್ಲಿ 'ಕೊಳ' ಅಥವಾ 'ಕುಳ', ತೆಲುಗಿನಲ್ಲಿ 'ಕೊಲನು', 'ಕೊಲಂಕು', ರೂಪಗಳ ಬಳಕೆ ಕಂಡುಬಂದಿದೆ(ದ್ರಾ.ಭಾ.ಜ್ಞಾ.ಪ.ಕೋ); ಕುಳ>ಕೊಳ ಆಗಿರಬಹುದು. In Tamil and Malayalam `Kal̤am'; in Tulu `Kol̤a' or `Kul̤a'; in Telugu `Kolanu', `Kolanka' forms are used;
- ನೀರು ತುಂಬುವ ಜಾಗ; ಸ್ವಲ್ಪ ಆಳ ಜಾಗದಲ್ಲಿ ನೀರು ನಿಲ್ಲುವ/ನಿಲ್ಲುವಂತೆ ಮಾಡಿದ ಹೊಂಡ; A place to fill the water; In a deep place made to store water;

- ಚಿಕ್ಕ ಸರೋವರ; ಕುಣಿ; ತೊಟ್ಟಿ; ಕೊಳ/ಕೊಣ(ಶಿ.ಜಿ); Small lake; pit; font;
- ೧.ಕಲ್ಯಾಣಿ; ಪುಷ್ಕರಣಿ; ೨.ನೀರು ತುಂಬಿದ ತೊಟ್ಟಿ (ಕ.ಜಾ.ಕೋ); Pond, tank to fill water;
- ಕುಳ; ಕೊಳ; ತಗ್ಗು ಪ್ರದೇಶ; ಜವುಗು ಪ್ರದೇಶ (ತು.ನಿ); Kuḷa; Koḷa; down area; swamp area;
- ಕೊಣ; ೧.ಸರೋವರ; ಕೆರೆ; ೨.ಸ್ನಾನದ ತೊಟ್ಟಿ; ಸ್ನಾನ ಘಟ್ಟ(ಕ.ನಿ); Pond; lake; a tank for bath; public place for bath;
- ನೆಲದಲ್ಲಿ ತೋಡಿ ಮಾಡಿದ ಸ್ನಾನದ ತೊಟ್ಟಿ; ಮನೆಯ ಅಂಗಳದಲ್ಲಿ ತಾರಸಿ/ಆರ್.ಸಿ.ಸಿ ಮನೆಗಳ ಮೇಲ್ಚಾವಣಿಯಲ್ಲಿ, ತೋಟ, ಉದ್ಯಾನ ಮೊದಲಾದ ವಿಹಾರ ಸ್ಥಳಗಳಲ್ಲಿ ಸ್ನಾನಕ್ಕೆ, ನಿರಾಟಕ್ಕೆ(ಈಜು ಇತ್ಯಾದಿ) ಗಾರೆಯಿಂದ ಗೋಡೆಗಳನ್ನು ಕಟ್ಟಿ ಕೊಳಗಳನ್ನು ನಿರ್ಮಿಸಿಕೊಳ್ಳುವುದುಂಟು; A tank built in underground in the yard, on the Rec of the house, in garden etc for play in the water;
- ಪ್ರತಿ ಗ್ರಾಮಗಳ ಹೊರಹೊಲಯದಲ್ಲಿ ನೀರಿನ ಆಸರೆಗಾಗಿ ನಿರ್ಮಿಸುತ್ತಿದ್ದ ವಿಶಾಲವಾದ, ಆಳವಾದ ನೀರು ನಿಲ್ಲುವ ನೆಲೆ; ಇದರಲ್ಲಿ ಮಳೆಯ ನೀರು ಸಂಗ್ರಹವಾಗಿ ಕ್ರಮೇಣ ಭೂಮಿಯಲ್ಲಿ ಇಂಗಿ, ಭೂಮಿಯ ಅಂತರ್ಜಲ ಹೆಚ್ಚಲು ಕಾರಣವಾಗುತ್ತದೆ; ಇದರಿಂದ ಗ್ರಾಮಗಳ ಬಾವಿಗಳಲ್ಲಿ ನೀರಿನ ಮಟ್ಟ ಯಾವಾಗಲೂ ಹೆಚ್ಚಿರುತ್ತಿತ್ತು; ಇತ್ತೀಚಿನ ದಿನಗಳಲ್ಲಿ ಇಂತಹ ಕೊಳಗಳನ್ನು ಮುಚ್ಚುತ್ತಿರುವುದರಿಂದ ಅಂತರ್ಜಲ ಮಟ್ಟ ಕುಸಿಯುತ್ತಿದೆ; Every village built bunds and ponds to store rain water source; this water sucked into the earth, it improves the underground water level; so the water level of the open wells in the village comeup always; Now a days this bunds and ponds are closing the underground water level felldown deep;
- ದೇವಾಲಯಗಳ ಸನಿಹದಲ್ಲಿ ಬಂದ ಭಕ್ತರು ಪವಿತ್ರ ಸ್ನಾನ ಮಾಡಲು ಅನುಕೂಲವಾಗುವಂತೆ ಸೋಪಾನಗಳನ್ನು ಕಟ್ಟಿ ನಿರ್ಮಿಸಿದ ಹೊಂಡಗಳನ್ನು ಕೊಳ/ಕೊಣ, ಕಲ್ಯಾಣಿ, ಪುಷ್ಕರಣಿ ಎಂದು ಕರೆಯಲಾಗುತ್ತದೆ; The ponds built near the temples to help the devotees to have sacred bath; they are called `Kalyani', `Pushkarani';
- 'ಕೊಳ' ಪದದ ಅಂತ್ಯ 'ಳ'ಕಾರಕ್ಕೆ ಉಚ್ಚಾರಣೆಯಲ್ಲಿ 'ಣ'ಕಾರ ಬಂದಿದೆ; ಳ>ಣ ಆಗುವುದು ಮತ್ತು 'ಣ>ಳ' ಆಗಿ ಉಚ್ಚರಿಸುವುದು ಸಾಮಾನ್ಯವಾದ ಸಂಗತಿಯಾಗಿದೆ; (ಉದಾ: ಕೊತ್ತಳ>ಕೊತ್ತಣ; ಮದುವಣಗಿತ್ತಿ>ಮದುವಳಗಿತ್ತಿ); The word `Koḷa' change into `Koṇa' by pronunciation of the locality of area is the general aspect;
- 'ಳ'ಕಾರದ ಅನುನಾಸೀಕರಣದಿಂದ 'ಣ'ಕಾರ ಉಚ್ಚರಿತಗೊಳ್ಳುವುದರಿಂದ ಅನುಕರಣ ಶಬ್ದವಾಗಿಯೂ ಪ್ರಯೋಗವಾಗುತ್ತದೆ; ಕಬ್ಬಿಣ ಮೊದಲಾದ ಲೋಹದಿಂದ ಮಾಡಿದ ವಸ್ತುಗಳು ಒಂದಕ್ಕೊಂದು ತಾಕಿದಾಗ, ಇಲ್ಲವೆ ನೆಲದ ಮೇಲೆ ಬಿದ್ದಾಗ ಆಗುವ ಶಬ್ದದ ಅನುಕರಣೆಯನ್ನು 'ಕೊಣ್ ಕೊಣ್', 'ಕೊಣಕೊಣ' ಎಂದು ಹೇಳುವುದುಂಟು; (ಕೊಳ>ಕೊಣ);
- ಕೊಳ; ನಾಲ್ಕು ಬಳ್ಳಗಳ ಒಂದು ಅಳತೆ; ಕೊಳಗ; ಕೊಳತಿ; ಗೊತ್ತಾದ ಸ್ಥಳ; ಸಂಕೇತ ಸ್ಥಾನ(ಕ.ನಿ); Koḷa; a measure of four baḷlas; Koḷaga; Koḷathi; a fixed place; a symbolic place;
- ***—ಕೊಳಗಟ್ಟು/ಕೊಣಗಟ್ಟು*** : ಕೊಳ+ಕಟ್ಟು= ಕೊಳಂಗಟ್ಟು>ಕೊಳಗಟ್ಟು/ಕೊಣಗಟ್ಟು;
- ಮಡುಗಟ್ಟು; ದಟ್ಟೈಸು; ಸಂದಣಿಸು; *ಪ್ರ: 'ಒಡೆದ ಪೈಪಿನಿಂದ ಹರಿದ ನೀರು ಕೊಣಗಟ್ಟಿ ನಿಂತಿತ್ತು'*: Deepness; grow dense; crowd; water from the broken pipe stored in deep.

ಕೊಳಂಚಿ koḷanci :

- Tephrosia purpurea; ಕೊಗ್ಗಿಗಿಡ, ವಜ್ರನೀಲಿ, ಫಣಿಕೆ, ಶರಪುಂಬ ಎಂಬ ಹೆಸರುಗಳಿಂದ ಗುರುತಿಸುವರು; Koggigida; Diamond blue; Phaṇike, Sharapumba are the names to identify;
- ಪೊದೆಯಂತೆ ಬೆಳೆಯುವ ಸಸ್ಯ ವಿಶೇಷ; ಈ ಗಿಡಗಳು ಹಸಿರು ಗೊಬ್ಬರ ತಯಾರಿಕೆಯಲ್ಲಿ ಬಳಕೆ; Grow like bush; this plant used for manure manufacture;
- ಎಲೆಯಿಂದ ತಯಾರಿಸಿದ ಪುಡಿ ಅಥವಾ ಹುಡಿಯನ್ನು ಹೊಗೆಸೊಪ್ಪಿನ ಹಾಗೆ ಸೇದುವುದಿದೆ; ಇದರ ಬೀಜ ತಿನ್ನಲು ಬಳಕೆ; The powder of the leaves used as tobacco to smoke; the seeds use to eat;

- ಎಲೆಗಳನ್ನು ಬಣ್ಣ ಕೊಡಲು ಉಪಯೋಗಿಸುವುದುಂಟು; ಬೇರು ಮೀನಿನ ವಿಷಕ್ಕೆ ಔಷಧಿಯಾಗಿ ಬಳಕೆ. Leaves used to colouring, the roots used as medicine to fish poision.

ಕೊಳಂಜಿ koḷanji :

- ಸಸ್ಯ ವಿಶೇಷ; ಗೊಬ್ಬರಕ್ಕಾಗಿ ಬಳಕೆ; ಕೊಯ್ಲಾದ ಭತ್ತದ ಗದ್ದೆಯನ್ನು ಚೆನ್ನಾಗಿ ಉಳುಮೆ ಮಾಡಿ ನಂತರ ಕೊಳಂಜಿ ಬೀಜಗಳನ್ನು ಹಾಕಿ ಸಸ್ಯಗಳನ್ನು ಬೆಳೆಸಿ ನಂತರ ಅದನ್ನು ಕಡಿದು ಅಲ್ಲೇ ಮಣ್ಣಿನಲ್ಲಿ ಹೂತುಬಿಡುವರು; ಮಣ್ಣು, ನೀರು ಎಲ್ಲರೊಂದಿಗೆ ಚೆನ್ನಾಗಿ ಕೊಳೆತು ಗೊಬ್ಬರವಾಗುತ್ತದೆ; Plant species used for manure; after reaping the paddy field plough it and sow the Koḷanji seeds the grown plants are cutoff and mix with soil to decay, it turns to be good manure;
- ಇದರಿಂದ ಉತ್ತಮ ಬೆಳೆ ತೆಗೆಯಬಹುದು ಎಂಬ ನಂಬಿಕೆ(ದಕ); This helps to get good crop is a belief;
- ಸುಗ್ಗಿ ಪೈರು ಕೊಯಿದಾದ ಕೂಡಲೇ ಗೊಬ್ಬರಕ್ಕಾಗಿ ಗದ್ದೆಯಲ್ಲಿ ಬೆಳೆಸುವ ಗಿಡ(ತು.ನಿ); After harvest it is grow in the field;
- ಗೊಬ್ಬರದ ಗಿಡ; ಇದರ ಸೊಪ್ಪನ್ನು ಉಳುಮೆ ಮಾಡಿ ಭೂಮಿಗೆ ಸೇರಿಸುತ್ತಾರೆ; ಸೊಪ್ಪು ಕೊಳೆತು ಮಣ್ಣಿನಲ್ಲಿ ಬೆರೆತು ಉತ್ತಮ ಹಸಿರೆಲೆ ಗೊಬ್ಬರ ಉಂಟಾಗಿ ಫಸಲಿಗೆ ಉತ್ತಮ ಪೋಷಾಕಾಂಶ ಒದಗಿಸುತ್ತದೆ; ಇದರಿಂದ ಉತ್ತಮ ಬೆಳೆ ಬರಲು ಸಾಧ್ಯವಾಗುತ್ತದೆ; Manure plant; the leaves mixed in the soil; so it turns to to good green manure and helps to grow good crop;
- —*ಕೊಳಂಜಿ ಬಿತ್ತ್* : ಗೊಬ್ಬರದ ಗಿಡದ ಬೀಜ(ತು.ನಿ). Seed of manure plant.

ಕೊಳಂದಿ koḷandi :

- ಎತ್ತುಗಳನ್ನು ಕಟ್ಟಿಹಾಕಲು ಬಳಸುವ ಉರುಳು; ಎತ್ತುಗಳ ನಿಯಂತ್ರಣಕ್ಕೆ ಸಹಕಾರಿಯಾದುದು; Noose use to tie oxen; it helps to control oxen;
- ಲೋಹದಿಂದ ತಯಾರಿಸಿದ ಬಳೆ; ವೃತ್ತಾಕಾರವಾಗಿರುತ್ತದೆ. A ring made of metal; it is in circle shape.

ಕೊಳಕ koḷaka :

- ಕೊಳಕಾಗಿರುವವ; ಕೊಳೆಯಾಗಿರುವವ; ಹೊಲಸು ಮನುಷ್ಯ; ವಾರಕ್ಕೋ, ಹದಿನೈದು ದಿವಸಕ್ಕೋ ಸ್ನಾನ, ಮಡಿ ಮಾಡುವವ; ಎಷ್ಟು ಕೊಳೆಯಾದರೂ ಒಗೆಯದೆ ಅದೇ ಬಟ್ಟೆಯನ್ನು ಹಾಕಿಕೊಳ್ಳುವವ; Filthy man; dirty man; have bath in a week or fifteen days; wear the same dirty cloth again and again;
- ಕೊಳಕು ವಾಸನೆ ಬರುವವ; ಅವಾಚ್ಯ ಅಥವಾ ಕೆಟ್ಟ ಶಬ್ದ ಪುಂಜಗಳಿಂದ ಬೈಯ್ಯುವವ; ಅನುಚಿತವಾಗಿ ವರ್ತಿಸುವವ; ಅಸಭ್ಯತನದಿಂದ ಕೂಡಿದ ವ್ಯಕ್ತಿ; ಸಭ್ಯತೆ ಇಲ್ಲದವ; ಉತ್ತಮ ಗುಣ, ನಡತೆ, ವ್ಯಕ್ತಿತ್ವವನ್ನು ಬೆಳೆಸಿಕೊಳ್ಳದ ಮನುಷ್ಯ; ಕೆಟ್ಟ ಆಲೋಚನೆಗಳ ಮಾಡುವ ನಾಗರಿಕತೆಯಿಲ್ಲದ ವ್ಯಕ್ತಿ; A man with dirty smell; a man accuse or abuse with filthy words; a misbehaved man; a man behave improperly, a man do not have good character or conduct; a man have bad thoughts and uncivilized;
- ಕೊಳಕ ಪುಲ್ಲಿಂಗಾರ್ಥದಲ್ಲಿ ಬಳಕೆಗೊಂಡರೆ ಕೊಳಕಿ ಸ್ತ್ರೀಲಿಂಗಾರ್ಥದಲ್ಲಿ ಬಳಕೆಯಲ್ಲಿರುವಂಥದು; `Kolaka' and `Kolaki' used to notice male and female gender;
- ಅವಾಚ್ಯ ಶಬ್ದಗಳಿಂದ ನಿಂದಿಸುವವನನ್ನು ಕುರಿತು ಕೊಳಕು ಮಾತನಾಡುತ್ತಾನೆಂದು ಜರಿಯುವುದಿದೆ; *ಪ್ರ: 'ಕೊಳುಕ್ ನನ್ಮಗ ಎಲ್ಲೇಕಾದ್ರೂ ಬಿದ್ಕಂದ್ ಸಾಯ್ತನೆ'*; 'A dirty fellow who lies anywhere'; used to scold as unparlimentary words.

ಕೊಳಕು koḷaku :

- ಹೊಲಸು; ಮಲಿನತೆ; ಗಲೀಜಿನಿಂದ ಕೂಡಿದ ಸ್ಥಳ; ತಾಜ್ಯ ವಸ್ತು, ಪದಾರ್ಥಗಳ ಸಂಗ್ರಹಿತ ಪ್ರದೇಶ; ಶುದ್ಧತೆ ಇಲ್ಲದ್ದು; ಅಶುದ್ಧತೆಯಿಂದ ಕೂಡಿರುವಂಥದು; ಕೊಳೆತು ನಾರುತ್ತಿರುವ ಜಾಗ; Dirt; filth; Squalor place; a place to dump

remaining or waste not pure, impure; a place of rotten smell;

- ***—ಕೊಳಕು ಹಣ್ಣು*** : ಹೆಚ್ಚಿಗೆ ಹಣ್ಣಾಗಿ ತಿನ್ನಲು ಉಪಯೋಗಕ್ಕೆ ಬಾರದೆ ಅನುಪಯುಕ್ತ ಹಣ್ಣು; ಕಾಯಿಗೆ ಪೆಟ್ಟಾದಾಗ ಆ ಜಾಗ ಹಣ್ಣಿನ ಸಂದರ್ಭದಲ್ಲಿ ಕೊಳೆತು ಹೋಗುವ ಸಂಭವವಿರುತ್ತದೆ; Over ripen fruit not fit to eat; useless; unripe fruit may have damage that place may be rott while ripening;
- ಕಾಯಿಗೆ ಯಾವುದಾದರೂ ರೋಗ, ಹುಳು ಬಿದ್ದಾಗಲೂ ಹಣ್ಣು ಕೊಳೆತು ರಸ ಸೋರುವುದಿದೆ; Any disease to unripe fruit that also be rot and the juice soaking from it;
- ಹಣ್ಣುಗಳನ್ನು ತಿನ್ನದೆ, ಮಾರಾಟ ಮಾಡದೆ ಅಧಿಕ ದಿವಸ ಹಾಗೆಯೇ ಇಟ್ಟರೆ ಕೊಳೆತು ಹೋಗುವ ಸಂಭವವೇ ಹೆಚ್ಚು; ಇಂತಹ ಹಣ್ಣನ್ನು ತಿಂದರೆ ಆರೋಗ್ಯ ಕೆಡುವುದು; ವಾಂತಿಯಾಗುವುದು ಕಂಡುಬಂದಿದೆ; ದೇಹಕ್ಕೆ ಒಗ್ಗದ ಆಹಾರ ಪದಾರ್ಥ; *ಪ್ರ: 'ಕೊಳೆತ ಹಣ್ಣನ್ನು ತಿಪ್ಪೆಗುಂಡಿಗೆ ಹಾಕು'.* For a long time without use it make rot; these fruits may use it affects on the health; causes to vomit; it is not suitable to the body.

ಕೊಳಕು ಮಂಡಲ koḷaku manḍala :

- ಮಂಡಲ ಹಾವಿನ ಪ್ರಭೇದಕ್ಕೆ ಸೇರಿದ್ದು; ಹಾವಿನಲ್ಲಿ ನಾಗರಹಾವು, ಕೇರೆಹಾವು, ನೀರೊಳ ಹಾವು, ಮಂಡಲ ಹಾವು ಎಂಬ ಹಲವು ಬಗೆಯ ಪ್ರಕಾರಗಳಿವೆ; ಈ ಎಲ್ಲ ಹಾವುಗಳಲ್ಲಿಯೂ ಬೇರೆ ಬೇರೆ ಪ್ರಕಾರಗಳಿರುವಂತೆ ಮಂಡಲ ಹಾವಿನಲ್ಲೂ ಕೊಳಕುಮಂಡಲ, ಉಳುಕು ಮಂಡಲ ಎಂಬ ವಿವಿಧ ಬಗೆಗಳಿವೆ; It is the species related to Mandala snake; the different species like cobra; `Kerehavu', water snake etc; different species in Mandala snake, they are Kolakumandala, Ulukumandala, Urimandala etc;
- ಹಾವಿನಲ್ಲೇ ಅತ್ಯಂತ ಅಪಾಯಕಾರಿಯಾದುದು; ಕಟ್ಟಿಗೆಯ ರಾಶಿ, ಕಸ-ಕಡ್ಡಿಯಿಂದ ಕೂಡಿದ ಸ್ಥಳ, ತ್ಯಾಜ್ಯ ಪದಾರ್ಥಗಳ ರಾಶಿಯಲ್ಲಿ ಸೇರಿಕೊಳ್ಳುವುದಿದೆ; It is very dangerous in the family of snakes; it lives in the heap of firewood; and the heap of waste stalks;
- ಇದು ಕಡಿದಿದೆ ಎಂದು ತಿಳಿದ ತಕ್ಷಣ ನಾಟಿ ವೈದ್ಯರಿಂದ ಮದ್ದು ಮಾಡಿಸಬೇಕು; ನಿರ್ಲಕ್ಷ್ಯ ಮಾಡಿದರೆ ಕಡಿದ ಭಾಗದಿಂದ ನಿಧಾನವಾಗಿ ಕೊಳೆಯಲಾರಂಭಿಸುತ್ತದೆ; ನಂತರ ಆ ಜಾಗವನ್ನೆ ತೆಗೆಯಬೇಕಾದ ಪರಿಸ್ಥಿತಿ ಬಂದರೂ ಆಶ್ಚರ್ಯವಿಲ್ಲ; Whenever we found the snake bite suddenly take the person to the local doctor for treatment, otherwise it start to rot the place; if any negligence the place will be remove;
- ಈ ಹಾವನ್ನು ಹಾಗೆ ಬೆಂಕಿಯಲ್ಲಿ ಸುಟ್ಟು ಬೂದಿ ಮಾಡಬೇಕು; The snake should be burn to ash;
- ಇಲ್ಲದಿದ್ದರೆ ಉಳಿದ ಅವಶೇಷದಿಂದ ಮತ್ತೆ ಮರಿಯ ರೂಪ ತಳೆಯುತ್ತದೆ ಎಂಬುದೊಂದು ನಂಬಿಕೆ; ಹಾಗೆಯೇ ಅದರ ಮೂಳೆ, ಮುಳ್ಳು ಯಾರಿಗಾದರೂ ಚುಚ್ಚಿದರೆ ಅದರಿಂದ ತೊಂದರೆ ತಪ್ಪಿದ್ದಲ್ಲ ಎಂಬುದಾಗಿ ಅನುಭವಿ ಹಿರಿಯರು ಹೇಳುವರು; *ಪ್ರ: 'ಮನೆಗೆ ಹೇಗೆ ಬಂದು ಸೇರಿತು ಈ ಕೊಳಕು ಮಂಡಲ ಹಾವು'*; otherwise the remaining part will be in a form of the baby snake is a belief; the bone may prick to any it may affect to them; it is the saying of the experienced elders;
- ***—ಕೊಳ ನಾಗ*** : ನಾಗರ ಹಾವಿನ ಪ್ರಭೇದಕ್ಕೆ ಸೇರಿದ್ದು; ಅತ್ಯಂತ ವಿಷಪೂರಿತ ಹಾವು; ಕಚ್ಚಿಸಿಕೊಂಡ ಮನುಷ್ಯ ಬದುಕುಳಿಯುವುದು ಅಸಾಧ್ಯ; ಕಚ್ಚಿದ ತಕ್ಷಣ ವಿಷ ಮೈಯಲ್ಲಿ ಪಸರಿಸಿ ಸಾಯುತ್ತಾನೆ. Koḷa naga is related to cobra family; a very poisonous snake; who has bitten by this snake diffidult to comeout of death; because the poison spread allover after the bite.

ಕೊಳಕೆ kolake :

- ಕೊಳಕಿ, ಕೊಳ್ಕಿ, ಕೊಳ್ಕೆ ಎಂಬ ಸಂವಾದಿ ರೂಪಗಳಿವೆ; It has other related word forms like Kolaki, Kolki, Kolke ect;
- ಮೊದಲನೆಯ ಬೆಳೆಯ ನಂತರದ ಕೂಳೆ ಬೆಳೆ; ವರ್ಷದಲ್ಲಿ ಭತ್ತದ ಮೂರನೇ ಬೆಳೆ; ಮೂರು ಬೆಳೆಯನ್ನು ಬೆಳೆಯುವ ಗದ್ದೆ; ಅತ್ಯಂತ ಜಲಸಮೃದ್ಧವಾದ ಬೇಸಿಗೆಯ ಭತ್ತದ ಬೆಳೆ; After the first crop reaping have another crop from the same root is called `Koole bele'; three crop in a year; three crop growing field; sufficient water in the field in summer seasoned paddy crop;
- ಕೀಲು; ಸಿಕ್ಕಿಸುವ ಡೊಂಕಾದ ಭಾಗ; A part to fix the peg;
- ಸರವನ್ನು ಸೇರಿಸುವ ಕೊಂಡಿ; ತಿರುಗುಣಿ(ಉ.ಕ.ಜಿ); A hook to fix the chain; curve;
- ಒಂದು ವಿಧದ ಗ್ರಾಮೀಣ ಜನಪದ ಆಟ; ಹುಡುಗರು ಆಡುವ ಹೊರಾಂಗಣ ಆಟ; ಹುಲಿ-ದನ ಆಟ ಎಂದು ಕರೆಯುವುದಿದೆ; ಈ ಆಟದಲ್ಲಿ ಆಟಗಾರರು ಒಬ್ಬರ ಕಯ್ ಮತ್ತೊಬ್ಬರು ಹಿಡಿದು ವೃತ್ತಾಕಾರವಾಗಿ ನಿಂತು ಆಡುವುದು ಆಟದ ನಿಯಮ; A kind of rural folk play; it is a outdoor play of boys; it is called as the tiger and cattle play; the procedure of the play is to hold the hand eachother in a circle;
- 'ಕೊಳಕೆ' ಎಂಬುದು ಒಂದು ವಿಶಿಷ್ಟ ಪದ; ನೀರಾಡುವ ಜಾಗದಲ್ಲಿ, ಅಂದರೆ ಕೆರೆಯ ಅಂಚಿನಲ್ಲಿ, ಕರಲು ಗದ್ದೆಗಳ ತೇವಾಂಶ ಸ್ಥಳದಲ್ಲಿ ಬೆಳೆಯುವ ಒಂದು ಮುಳ್ಳಿನ ಗಿಡ; ಇದು ಯಾವುದಕ್ಕೂ ಬಳಕೆಯಾಗುವುದಿಲ್ಲ; ಮುಳ್ಳು ಸಾಕಷ್ಟು ದಪ್ಪವಿದ್ದು ಕಾಲುಗಳಿಗೆ ಚುಚ್ಚಿಕೊಳ್ಳುವುದು. Kolake is a special word; a thorny plant grows in the edge of the tank, saline earth; it cannot be used for anything.

ಕೊಳ kolaga :

- ಒಂದು ಅಳತೆಯ ಸಾಧನ; ಕಣ(ಳ)ದಲ್ಲಿ ಭತ್ತ, ರಾಗಿಯನ್ನು ಅಳೆಯಲು ನಿರಂತರವಾಗಿ ಬಳಸಿಕೊಂಡು ಬಂದುದು; ಪ್ರಾದೇಶಿಕವಾಗಿ ಕೊಳಗದ ಅಳತೆಯ ಪ್ರಮಾಣದಲ್ಲಿ ವ್ಯತ್ಯಾಸಗಳಿವೆ; *ಪ್ರ: 'ಕೊಂಗುನಲ್ಲಿ ತೂರೋರು, ಕೊಳಗದಲ್ಲಿ ಅಳೆಯೋರು* (ನ.ಗಾ.); ಇಲ್ಲಿ 'ಕೊಂಗು' ಎಂದರೆ 'ಮೊರ'; ಅಂದರೆ ಮೊರದಲ್ಲಿ ತೂರಿ, ಕೊಳಗದಲ್ಲಿ ಅಳೆಯುವಂಥದು ಎಂದು ಅರ್ಥ; A measure equipment in the threshing field; it is used to measure paddy, ragi; `Kolaga' measure is difference from region to region;
- ಬಸವಣ್ಣನವರು ನಿಜವಲ್ಲದ ಭಕ್ತನ ಸ್ವರೂಪವನ್ನು ಹೇಳುತ್ತಾ, "ಅಳೆಯುತ್ತ ಅಳೆಯುತ್ತ ಬಳಲುವರಲ್ಲದೆ ಕೊಳಗ ಬಳಲುವುದೆ"(ಬ.ವ.ಸಂ.ಸಂ.೭೪) ಎನ್ನುತ್ತಾರೆ; Basavanna says about the unreal devotee "measuring measuring the measure, the measuring equipment `Kolaga' cannot be tired";
- 'ಕೊಳಗ' ಒಂದು ಪ್ರಮಾಣವಾದರೂ, ಏಕ ರೀತಿಯಲ್ಲಿ ಇಲ್ಲ; ಕೊಳಗ: ಐದುಸೇರು, ಬಳ್ಳ ೨ ೧/೨ ಸೇರು; ಹತ್ತು ಸೇರಿನ ಕೊಳಗವೂ ಇದೆ; ಎಂಟು ಸೇರಿನ ಕೊಳಗವೂ ಇದೆ; ಹದಿನಾರು ಸೇರಿನ ಕೊಳಗ ಕೂಡ;
- ಒಂದು ಅಳತೆಮಾನ; ನಾಲ್ಕು ಸೇರು, ಐದು ಸೇರು, ಹತ್ತು ಸೇರು, ನಾಲ್ಕು ಬಳ್ಳ ಮೊದಲಾದ ಅಳತೆಗೆ ಒಂದು ಕೊಳಗ ಎಂಬುದು ಗ್ರಾಮೀಣರ ಲೆಕ್ಕಾಚಾರ; ಅಳತೆ ಪ್ರಮಾಣದಲ್ಲಿನ ಈ ಬದಲಾವಣೆಗಳು ಪ್ರಾದೇಶಿಕ ಭಿನ್ನತೆಯಿಂದ ಕೂಡಿವೆ; A measuring level; four, five, ten seru four balla etc; a kolaga is a calculation of rural folk;
- 'ಕೊಳಗ'ದ ಸಂವಾದಿ ರೂಪಗಳು: ತಮಿಳು: ಕುಳ(ಟ)ಕ್ಕಮ್/ಕುಳಗಮ್; ಮಲೆಯಾಳಂ: ಕುಟ(ಳ) ಕ್ಕಮ್/ಕೊಳಗಮ್; ತೆಲುಗು: ಕೊಲ/ಕೊಲತ/ ಕೊಳಗಮು; ತುಳು: ಕೊಳಗ/ಕೊಳಗೊ; ತೆಲುಗಿನಲ್ಲಿ ಳ=ಲ ಆಗಿರುವುದನ್ನು ಕಾಣಬಹುದು; There are different kinds of kolaga according to the measuring quantity; the form of `Kolaga' in Tamil `Kulakkam', `Kulagam'; in Malayalam also; in Telugu `Kola', `Kolatha', `Kolagamu';

- 'ಕೊಳಗ'ದ ಮೂಲರೂಪ 'ಕುಳ'(ಕುಡು>ಕೊಡು ಇದ್ದಂತೆ); ಅಂದರೆ ಕುಳ>ಕೊಳ>ಕೊಳಗ ಆಗಿರಬಹುದು; ಉ>ಒ (ಸ್ವರ ವ್ಯತ್ಯಯ); ಕನ್ನಡ, ತಮಿಳು, ಮಲೆಯಾಳಂ, ತುಳುಗಳ ಅಂತ್ಯದ 'ಗ' ಮತ್ತು ತೆಲುಗಿನ 'ತ' ಆಮೇಲೆ ಸೇರ್ಪಡೆಯಾಗಿರುವಂಥವು; ಈ ಪ್ರತ್ಯಯಗಳಿಲ್ಲದೆ ಬಂದಿರುವ ತೆಲುಗಿನ 'ಕೊಲ' ಮೂಲರೂಪದ 'ಕುಳ'ವನ್ನು ನೆನಪಿಗೆ ತರುತ್ತದೆ; ಇಲ್ಲಿ 'ಳ'ಕಾರಕ್ಕೆ 'ಲ' ಇದೆ; ಕುಲ>ಕೊಲ ಆಗಿದ್ದ ಸಂದರ್ಭದಲ್ಲಿಯೇ ಕುಳ>ಕೊಳ ಆಗಿರಬೇಕು; ತಮಿಳಿನಲ್ಲಿ 'ಕುಳಗಮ್' ಪದವಿರುವುದರಿಂದ, ಮೂಲ ರೂಪ ಅದೇ ಆಗಿರುವುದನ್ನು ದೃಢಪಡಿಸುವುದು; ಮೂಲರೂಪ ಮತ್ತು ತಮಿಳು ರೂಪ ಒಂದೇ ಆಗಿರುವುದು ವಿಶೇಷ, ಮೂಲರೂಪವನ್ನು ಅನೇಕ ಸರ್ತಿ ತಮಿಳು ಉಳಿಸಿಕೊಂಡು ಬಂದಿದೆ;
- ರೈತರು ಕಣ(ಳ)ದಲ್ಲಿ ರಾಶಿಯಿಂದ ಅಳೆಯುವಾಗ 'ಕೊಳಗ'ವನ್ನು ಬಳಸುತ್ತಾರೆ; ಅಳೆಯುವಾಗ 'ಕೊಳಗ'ವನ್ನು 'ಸಣ್ಮಾಡಿ' ಅಳೆಯುವರು; ಅಳೆದ ಮೇಲೆ ಅಥವಾ ಮಧ್ಯಂತರದಲ್ಲಿ ನಿಲ್ಲಿಸಿದರೆ 'ಕೊಳಗ'ವನ್ನು 'ಖಾಲಿ' ಬಿಡದೆ, 'ಮೂರ್‍ಕಾಳು' ರಾಗಿ/ಭತ್ತ ಹಾಕಿ ಇಡುವುದು ವಾಡಿಕೆ; Farmers measuring from. the grain heap use `Koḷaga'; the measured salute the `Koḷaga' before and after the measure is a practice, after and later of the measure leaves some grains in the koḷaga is a practice;
- ಕೊಳಗವನ್ನು ಮಳೆಯ ಪ್ರಮಾಣವನ್ನು ಅಳೆಯುವ ಸಾಧನವಾಗಿಯೂ ಬಳಸುತ್ತಾರೆ; Koḷaga is used to measure the rain also;
- ತಾಮ್ರ ಅಥವಾ ಕಬ್ಬಿಣದ ಲೋಹದಿಂದ ತಯಾರಿಸಿದ್ದು; ಕೊಳವೆಯಾಕಾರದಲ್ಲಿದ್ದು ಸಾಮಾನ್ಯವಾಗಿ ಕಪ್ಪುಬಣ್ಣದಿಂದ ಕೂಡಿದೆ; ರಚನೆ ವಿಶಿಷ್ಟ ಶೈಲಿಯನ್ನು ಒಳಗೊಂಡಿದೆ; `Koḷaga' is made of copper or iron metal; it is pipe like in shape, black in colour; it has a special style;
- ತೂಕವಿಲ್ಲದ ಕಟ್ಟಿಗೆಯ ತುಂಡಿನಿಂದಲೂ ಹಿಂದೆ ಕೊಳಗವನ್ನು ತಯಾರಿಸುತ್ತಿದ್ದರು; ಅಗಲ ಬಾಯಿಯುಳ್ಳ ಟೊಳ್ಳು ಬಿದಿರಿನಿಂದ ತಯಾರಿಸಿದ ಕೊಳಗ ಲೋಹಗಳ ಪರಿಚಯವಿಲ್ಲದ ದಿವಸಗಳಲ್ಲಿ ಪ್ರಚಲಿತವಿತ್ತೆಂದು ಹೇಳಲಾಗುತ್ತದೆ; it was prepare in weightless wood also; the hallow bambo instruments also use before the invention of metal;
- ಹತ್ತು ಸೇರು ಹಿಡಿಯುವ ಕೊಳಗ ದವಸ-ಧಾನ್ಯಗಳ ಅಳೆಯಲು ಬಳಕೆ(ಹಾಸ.ಜಿ); The Koḷaga bearing `ten seru' used to measure the grains;
- ದವಸ-ಧಾನ್ಯ, ಸಾಂಬಾರ ಪದಾರ್ಥ, ಎಣ್ಣೆ, ಬೆಣ್ಣೆ, ತುಪ್ಪದಂತಹ ದ್ರವ ಪದಾರ್ಥಗಳನ್ನು ಅಳೆಯಲು ಹಿಂದಿನಿಂದಲೂ ಬಳಕೆಯಲ್ಲಿರುವ ಸಾಧನ; `Koḷaga' an instrument used to measure grains, speices, oil, butter, ghee oil products since olden days;
- ಲೋಹದ ದೊಡ್ಡ ಪಾತ್ರೆ; ಎಂಟು ಸೇರು ಅಳತೆಯುಳ್ಳದ್ದು; ವೈಯನಾಡಿನಲ್ಲಿ ಐವತ್ತು ಇಡಂಗಾಯಿ ಅಳತೆಯುಳ್ಳ ಒಂದು ಪರಿಮಾಣ ಎಂಬ ಲೆಕ್ಕಾಚಾರವಿತ್ತು; ಹತ್ತು ಸೇರು ಅಳತೆಯುಳ್ಳ ಮಣ್ಣಿನ ಗಡಿಗೆ; A big metal vessel; `eight seru' measured vessel; `fifty idangayi' measure quantity account in vynadu; An earthern pot of `ten seru' measure;
- ಗೊರಸು; ದನಗಳ ಪಾದದ ದಪ್ಪಗಿರುವ ಭಾಗ; ಕಲ್ಲು, ಮುಳ್ಳು, ಹೆಂಟೆಗಳಲ್ಲಿ ನಡೆದಾಡಲು ಸಾಧ್ಯವಾಗುವಂಥದು; 'Gorasu' hoof of cattle; useful to walk along stone, thorn and lumps;
- ಲಿಂಗದ ಮೇಲೆ ಮುಚ್ಚಲು ಬಳಸುವ ಲೋಹದ ಮುಖವಾಡ ಅಥವಾ ಮುಖಕವಚ; A metal mask used to cover the `Linga';
- ***—ಕೊಳಗದ ಗೂಡೆ*** : ಬುಟ್ಟಿಯಂತಿರುವ ಬಿದಿರಿನ ಸಾಧನ; ಕಣಜದಲ್ಲಿರುವ ದವಸ-ಧಾನ್ಯವನ್ನು ತುಂಬಿ ಮೇಲೆತ್ತಿಕೊಳ್ಳಲು ಉಪಯೋಗಿಸುತ್ತಿದ್ದರು; An instrument like bamboo basket; used to lift up the grains from the granary;
- ***—ಕೊಳಗು*** : ಕುದುರೆ ಅಥವಾ ದನಕರುಗಳ ಕಾಲಿನ ಗೊರಸು; ಗೊರಸು ಸವೆಯದಂತೆ ಕಾಲುಗಳಿಗೆ

'ಲಾಳ' ಕಟ್ಟಿಸುವುದುಂಟು; `Kolagu' is hoof of horse or cattle; `Lala'; to avoid emaciation fix a iron piece to the hoop; i.e., called `Kolagu';

- —***ಕೊಳಗಾಕಟ್ಟು*** : ದನ ಅಥವಾ ಕುದುರೆಗಳ ಕಾಲಿನ ಗೊರಸಿಗೆ ನಾಟು ಬಡಿಸುವುದು; Fix a iron piece to the hoof of the horse or cattle is called `Natu' or `Kolaga';
- —***ಕೊಳಗ ಧರಿಸು*** : ಲಿಂಗಕ್ಕೆ ಚಿನ್ನದಿಂದ ಮಾಡಿದ ಕೊಳಗದಾಕಾರದ ಸಾಧನವನ್ನು ತೊಡಿಸುವುದು; ಸೋಲಿಗರಲ್ಲಿ ರೂಢಿ; An instrument like `Kolaga' shape made of gold wear the `Linga';
- —**ಕೊಳಗದ ಶಾಸ್ತ್ರ** : ಮದುವೆ ಸಂದರ್ಭದಲ್ಲಿ ನಡೆಯುವ ಒಂದು ಆಚರಣೆ; It is a practice at the time of marriage;
- ವಧುವನ್ನು ಹಸೆಮಣೆ ಮೇಲೆ ಕೂರಿಸುವರು; ಫಲ–ತಾಂಬೂಲ ಅಂದರೆ ಎಲೆ, ಅಡಕೆ, ಹೂವು, ಅರಿಶಿಣ, ಕುಂಕುಮ ಮತ್ತು ಸಿಹಿತಿಂಡಿ ತುಂಬಿದ ಒಂದು ತಟ್ಟೆಯನ್ನು ವಧುವಿನ ಕೈಯಲ್ಲಿಡಿಸುವರು; The bride sit on the sacred flank; she was kept the betel leaf, betel nut, flower, turmeric and sweet filled plate kept in the hand of bride;
- ಸಿಂಗರಿಸಿದ ಒಂದು ಕೊಳಗಕ್ಕೆ ಅರಿಶಿಣ, ಕುಂಕುಮ ಹಚ್ಚಿ, ಕಂಕಣ ಕಟ್ಟಿ, ಹೂವಿನ ಹಾರ ಹಾಕಿ ಅದರೊಳಗೆ ಒಂದು ಜ್ಯೋತಿಯನ್ನು ಬೆಳಗಿಸಿ ಅದನ್ನು ವಧುವಿನ ಸೋದರಮಾವನ ಕೈಯಲ್ಲಿಡಿಸುವರು; A kolaga decorated with turmeric vermilion and tie a sacred thread and garland to it; kept an oil lamp in it, then it was hold by the maternal uncle;
- ನಂತರ ಅವನಿಗೊಂದು ಕರಿ ಕಂಬಳಿ ಹೊದಿಸಿ ವಧುವಿನ ಪಕ್ಕದಲ್ಲಿ ಕೂರಿಸಿ ಅವನ ಕೈಯಿಂದ ವಧುವಿನ ಹಣೆಗೆ ಅರಿಶಿಣ–ಕುಂಕುಮ ಹಚ್ಚಿಸುವರು; He is covered in black woollen blanket he sit beside the bride and put the sacred vermilian and turmeric to the bride's forehead;
- ಆಗ ವಧು ಸೋದರಮಾವನಿಗೊಂದು ಉಡುಗೊರೆಯನ್ನು ನೀಡುವಳು; ಇದು ಕೊಳಗ ಶಾಸ್ತ್ರದ ವಿಧಾನ; The bride gave a gift to her maternal uncle; this is the ritual of Kolaga shasthra;
- —***ಕೊಳಗದಾಲಿ*** : ತಾಮ್ರ, ಹಿತ್ತಾಳೆಗಳಿಂದ ತಯಾರಿಸಿದ ಪಾತ್ರೆ(ಪಾಂ.ವ್ಯ.ಪ.ಕೋ); A vessel made of copper or brass;
- —***ಕೊಳಗಬಯ್ಲು*** : ಮುಕ್ಕಾಲು ಗುಂಟೆಯ ಭೂಪ್ರಮಾಣ(ಕೃ.ಪ.ಕೋ). 3/4 of a acre.

ಕೊಳಗು koḷagu :

- ದನಗಳ ಕಾಲಿನ ಗೊರಸು; Hoof of cattle's leg;
- ಕೊಣಗು, ಕೊಳಚು ಎಂಬ ರೂಪಗಳೂ ಇವೆ; Konagu, Kolachu forms are in practice;
- ಮೀನಿನ ಒಂದು ಪ್ರಕಾರ; ಹಲಗೆ ಪ್ರಭೇದಕ್ಕೆ ಸೇರಿದ ಮೀನು; A kind of fish; it is related to `Halage' species;
- ತಮಿಳಿನಲ್ಲಿ 'ಕುಳಂಬು', ತುಳುವಿನಲ್ಲಿ 'ಕೊಲೆಜಿ' ಮತ್ತು ಮಲೆಯಾಳಂನಲ್ಲಿ 'ಕುಳಂಬು' ಪದವೇ ಬಳಕೆಗೊಂಡಿದೆ(ದ್ರಾ.ಭಾ.ಜ್ಞಾ.ಪ.ಕೋ). In Tamil `Kulambu'; in Tulu `Koleji'; in Malayalam `Kulambu' is in usage.

ಕೊಳಚ/ಕೊಲಚ koḷaca/kolaca :

- ಒಂದು ಸರಪಳಿ; ದೋಣಿಗೆ ಅಳವಡಿಸಲಿಕ್ಕಾಗಿ ಉಪಯೋಗ; ಈ ಸರಪಳಿ ಹಾಕಲಿಕ್ಕಾಗಿ ದೋಣಿಯಲ್ಲಿ ಒಂದು ರಂಧ್ರ ಅಥವಾ ತೂತು ಕೊರೆದಿರುತ್ತಾರೆ; ಇದು ದೋಣಿಯ ಚಲನೆಯನ್ನು ನಿಯಂತ್ರಿಸಲು ಬಳಕೆಯಿದ್ದಿರಬಹುದು; A chain used to fix boat; to fix this chain made a hole in the boat; may be it is used to controle the boat;
- ಹಗ್ಗವನ್ನು ಸೆಣಬು ಅಥವಾ ತೆಂಗಿನ ಮಟ್ಟೆಯ ನಾರುಗಳಿಂದ ದಪ್ಪದಾಗಿ ಹೊಸೆದಿರುವರು; ಕೆಲವು ಕಡೆ ಕಬ್ಬಿಣದ ಸರಪಳಿಯ ಬಳಕೆಯೂ ಕಂಡುಬಂದಿದೆ; This rope is made of coconut

coir or by gunny thread in big size; in some places iron chain is used;

- ಕಬ್ಬಿಣದ ತುಂಡುಗಳನ್ನು ಚಿಕ್ಕದಾಗಿ ಚೌಕಾಕಾರವಾಗಿ ಮಡಚಿ ಒಂದರ ಪಕ್ಕ ಒಂದರಂತೆ ಅಳವಡಿಸುತ್ತಾ ಹೋಗುವುದು; ಉದ್ದದ ಅಳತೆಯ ಅಗತ್ಯವಿರುವಷ್ಟು ತುಂಡುಗಳನ್ನು ಜೋಡಿಸಿ ಸಿದ್ಧಪಡಿಸುವರು; This chain is an arrangement of iron pieces, bend them in small square kept side byside how much of length is needed and fix them to eachother;
- ಸರಪಳಿಯನ್ನು ಕೊಟ್ಟಿಗೆಯಲ್ಲಿ ದನಕರುಗಳ ಕಟ್ಟಲು, ಉಳುಮೆಗೆ ನೊಗ, ನೇಗಿಲನ್ನು ಸಿದ್ಧಪಡಿಸಲು, ಗಾಡಿ ಹಂಚಲು, ನಾಯಿಗಳ ಕುತ್ತಿಗೆಗೆ ಕಟ್ಟಲು, ಮತಿಭ್ರಮಣೆಯಾದವರ ಕಾಲುಗಳಿಗೆ ಕೋಳ ಹಾಕಲು ಉಪಯೋಗಿಸುವರು; ಏತದ ಕೆಲಸಕ್ಕೂ ಕಬ್ಬಿಣದ ಸರಪಳಿಯ ಬಳಕೆ ಕಂಡುಬಂದಿದೆ. This chain used to tie the cattle in the shed, to plough, to carting, to tie around the dog neck; for lifting water.

ಕೊಳಚು koḷacu :

- ಗಾಡಿಮೆಟ್ಟು; ಸೀಳು ಗೊರಸು(ಹವ್ಯ.ಶೋ); ದನಕರುಗಳ ಅಟ್ಟೆಯ ತುದಿಭಾಗ; ಗೋವಿನ ಪಾದ(ಉ.ಕ.ಜಿ); Gadimettu; bisected hoop; edge of the cattle hoof; foot of the cow;
- ಕದಡು; ಕಲಕು; ಅಲ್ಲಾಡಿಸು; ಶುದ್ಧವಾದ ನೀರನ್ನು ಕದಡಿ ಮಲಿನವಾಗಿಸು; ಕೊಳಚೆಯ ನೀರನ್ನು ದನಗಳೂ ಕುಡಿಯುವುದಿಲ್ಲ; cf: ತೊಳಸು/ತೊಳ್ಸು; Disturb; shake; make the clean water unclean by disturbing or shaking; disturbed filthy water cannot be drink by the cattle;
- ತಯಾರಿಸಿದ ಸಾಂಬಾರು, ಪಾಯಸ, ಕಡ್ಲೆಹುಳಿ, ಸಾಗು ಮೊದಲಾದ ದ್ರವ ರೂಪದ ಪದಾರ್ಥಗಳನ್ನು ಮತ್ತೆ ಮತ್ತೆ ಸೌಟಿನಿಂದಲೋ, ಕೈಯಿಂದಲೋ ತೊಳಸುತ್ತಿದ್ದರೆ ಅಥವಾ ಕೊಳಚುತ್ತಿದ್ದರೆ ಕ್ರಮೇಣ ಅದು ಹುಳಿ ಬರುವುದೆಂಬ ನಂಬಿಕೆ ಇದೆ; ಇದು ನಿಜ ಕೂಡ; *ಪ್ರ: 'ಕುಡಿಯುವ ನೀರಿಗೆ ಕೈ ಹಾಕಿ ಕೊಳಚಬೇಡ'.* The food items like Soup, Payasa, Kadlehuli disturb again and again by hand or anything it will turn sour is a belief.

ಕೊಳಚುಂಗಿ koḷacungi :

ಒಂದು ಬಗೆಯ ಕಳೆ ಸಸ್ಯ(ದಕ); ಜಾನುವಾರುಗಳಿಗೆ ಮೇವಾಗಿ ಉಪಯೋಗಿಸಲಾಗುತ್ತದೆ. A kind of weed plant used for food to cattle.

ಕೊಳಚೆ koḷace :

- ಕೊಳಕು; ಮಲಿನವಾದುದು; ಅನುಪಯುಕ್ತವಾದುದು; ಕಸಮುಗ್ಗಲಿನಿಂದ ತುಂಬಿ ಗಬ್ಬುನಾರುವ ಪ್ರದೇಶ; ಅಶುದ್ಧ, ಅಶುಚಿತ್ವದಿಂದ ಕೂಡಿದ ಜಾಗ; ಅನೈರ್ಮಲ್ಯದ ಸ್ಥಳ; ಇಂತಹ ಪ್ರದೇಶದಲ್ಲಿ ವಾಸ ಮಾಡುವ ಸಮುದಾಯದ ಸಮೂಹಕ್ಕೆ 'ಕೊಳಗೇರಿ' ಎಂದು ಕರೆಯುವರು; Filth; dirty; useless; a place filled with waste and smell; impure place; unclean place; where the people living in such places are called `Kolegeri';
- ಮೂಲಭೂತ ಸೌಕರ್ಯಗಳಿಂದ ವಂಚಿತ ಪ್ರದೇಶ; ಸುಧಾರಣೆಗಳಿಲ್ಲದ ನೆಲ; ತ್ಯಾಜ್ಯವಸ್ತುಗಳ ಸಂಗ್ರಹ ಸ್ಥಳ; *ಪ್ರ: 'ಕೊಳಚೆ ಪ್ರದೇಶದಲ್ಲಿ ವಾಸಿಸುವವರ ಸಭೆ ಕರೆದು ಸಂಕಷ್ಟ ಆಲಿಸಿದರು'; 'ಕೊಳಚೆ ಮೇಲೆ ಹೆಂಟೆ ಹಾಕಿ ಮೋರೆ ಮೇಲೆ ಸಿಡಿಸ್ಕೊಂಡಂಗೆ'*(ಗಾ); A place left over by the primary facilities of the civil society; unreformed earth; a place store or dump waste materials; call a meeting to hear the grivences of the slum people;
- ಕೊಳಚೆ>ಕೊಳ್ಚೆ>ಕೊಚ್ಚೆ ಆಗಿ ಮಾರ್ಪಡುವುದಿದೆ; ಉಚ್ಚಾರಣೆಯಲ್ಲಿ ಆಗುವ ಬದಲಾವಣೆ ಇದು.

ಕೊಳದಂಡ koḷadaṇḍa :

- ಕೊಳ+ದಂಡ; ಕೊಳ=ಹೊಂಡ; ತಗ್ಗಾದ ಪ್ರದೇಶ; ದಂಡ=ಶಿಕ್ಷೆ; low land; low area;
- ಹಿಂದೆ ಶಿಕ್ಷಕರು ವಿದ್ಯಾರ್ಥಿಗಳಿಗೆ ವಿಧಿಸುತ್ತಿದ್ದ ಶಿಕ್ಷೆಯ ಒಂದು ವಿಧಾನ; ಇದರ ಪ್ರಕಾರ ವಿದ್ಯಾರ್ಥಿಗಳನ್ನು ನೆಲದಿಂದ ಸ್ವಲ್ಪ ಮೇಲ್ಭಾಗದಲ್ಲಿ ಎರಡು ಕರ್ಯಗಳನ್ನು ಮೇಲೆತ್ತಿ ಹಗ್ಗದಿಂದ ಕಟ್ಟಿ ಜೋತು ಬಿಡುವುದು; A kind of punishment given by the teacher to the students once; students hands tied with rope, hang on some distance from the ground;

- ತಳಭಾಗದಲ್ಲಿ ವಿದ್ಯಾರ್ಥಿ ಜೋತಾಡುತ್ತಿರುವುದಕ್ಕೆ ಅನುಗುಣವಾಗಿ ಸಣ್ಣ–ಪುಟ್ಟ ಮುಳ್ಳುಗಳನ್ನು ಹರಡುತ್ತಿದ್ದರು; ಜೋತಾಡುವ ಹುಡುಗ ಕಯ್ ಬಿಟ್ಟರೆ ತಳಭಾಗದ ಮುಳ್ಳಿನ ಮೇಲೆ ಬೀಳಬೇಕಾದ ಸಂಭವವಿರುತ್ತಿತ್ತು; ಹಾಗಾಗಿ ಶಿಕ್ಷೆಯ ಸಮಯ ಮುಗಿಯುವವರೆಗೂ ಹಾಗೆಯೇ ಜೋತಾಡುವುದು ಅನಿವಾರ್ಯವಾಗಿತ್ತು(ಚಿ.ಪ.ಕೋ); while students hanging, thorns spread on the ground; if the students hands slip, he will fall on the thorn, so he must be hang till the time of punishment finish;
- ಇದೊಂದು ಅಸಾಂವಿಧಾನಿಕ, ಅಮಾನವೀಯ ಶಿಕ್ಷೆಯ ವಿಧಾನ; ಇಂತಹ ಒಂದು ಶಿಕ್ಷೆಯನ್ನು ವಿದ್ಯಾರ್ಥಿಗಳಿಗೆ ವಿಧಿಸುತ್ತಿದ್ದರೆಂದರೆ ನಂಬಲು ಅಸಾಧ್ಯ; ಇಂದಿಗಿಂತಲೂ ಅಂದು ಕರುಣೆ, ಪ್ರೀತಿ, ವಿಶ್ವಾಸ ಮಾನವೀಯ ಮೌಲ್ಯಗಳು ಮನುಷ್ಯ–ಮನುಷ್ಯರ ನಡುವೆ ಹಾಸುಹೊಕ್ಕಾಗಿತ್ತು ಎಂಬುದು ನಮ್ಮ ಪೂರ್ವಜರ ನಡೆ–ನುಡಿಗಳಿಂದ, ಅವರ ಗುಣ, ವ್ಯಕ್ತಿತ್ವದಿಂದ ತಿಳಿದುಬರುತ್ತಿತ್ತು; ಹಾಗಾಗಿ ಇಂತಹ ಶಿಕ್ಷೆ ಅದೂ ಮಕ್ಕಳಿಗೆ ಇದ್ದಿತೆಂಬುದೇ ಆಶ್ಚರ್ಯ; It is an unconsititutional and inhuman way of punishment; this kind of punishment was imposing is unbelievable; kind, love, trust, human values are found between man and man that was known by the behaviour, character and personality of our ancesters; it is a wonder, the punishment like this was to the children;
- ದನಗಳ ಕೊರಳಿಗೆ ಕಟ್ಟಲಾಗುವ ಕೊರಳ ಹಗ್ಗ; ಇವುಗಳ ನಿಯಂತ್ರಣಕ್ಕಾಗಿ ಸಹಕಾರಿ. A rope to tie around the neck of the cattle; it helps to controle them.

ಕೊಳದಪ್ಪಲೆ koḷadappale :

- ಕೊಳ+ತಪ್ಪಲೆ>ಕೊಳದಪ್ಪಲೆ; 'ಕೊಳ್‌ದಪ್ಲೆ' ಎಂಬ ರೂಪವೂ ಬಳಕೆಯಲ್ಲಿರುವ ಗ್ರಾಮ್ಯರೂಪ; ಕೊಳತಪ್ಪಲೆ>ಕೊಳ್‌ದಪ್ಪಲೆ>ಕೊಳ್‌ದಪ್ಲೆ(ಕೊಳ್ದಪ್ಲೆ); ಉಚ್ಚಾರಣೆಯಲ್ಲಿ 'ತ'ಕಾರಕ್ಕೆ 'ದ'ಕಾರ ಬಂದಿರುವುದು; ಬಳಕೆಯಲ್ಲಿ ಸಂಕ್ಷಿಪ್ತ ಪದ ಸೌಲಭ್ಯದಿಂದಾಗಿ 'ಕೊಳ್ದಪ್ಲೆ' ಆಗಿರುವುದು ಸ್ಪಷ್ಟ; ಗ್ರಾಮೀಣರ ಉಚ್ಚಾರಣೆಯಲ್ಲಿ ಇಂತಹ ವ್ಯತ್ಯಯ ಸಹಜ; ತಪ್ಪಲೆ ಅಥವಾ ತಪ್ಲೆ ಎಂಬುದಕ್ಕೆ ಚೊಂಬು ಅಥವಾ ಚೆಂಬು ಎಂಬರ್ಥವೂ ಇದೆ;
- ಒಳಭಾಗ ಕೊಳದ ಆಕೃತಿಯಲ್ಲಿರುವ ತಪ್ಪಲೆಯೇ ಕೊಳದಪ್ಪಲೆ; ಅಡುಗೆ ಮನೆಯಲ್ಲಿ ನೀರಿನ ಅಳತೆಗೆ ಸಹಕಾರಿಯಾಗಿ ಬಳಕೆ; ಸ್ನಾನದ ಮನೆ ಹಾಗೂ ಇತರೆ ಸ್ಥಳಗಳಲ್ಲಿ ಕೈಕಾಲು ತೊಳೆಯಲು, ಸ್ನಾನ ಮಾಡಲು ಉಪಯೋಗ; ಬಕೆಟ್ಟು, ಕೊಳ್ದಪ್ಲೆ ಎಂಬಿವು ಗ್ರಾಮೀಣರ ಜನಪ್ರಿಯ ಸಾಧನಗಳು; ದನಕರುಗಳನ್ನು ತೊಳೆಯಲು ಬಳಕೆ; A vessel has the shape like pond is called Koḷadappale; used in the kitchen to measure water; used in bathroom to wash hands and legs, used to bath; bucket and Koḷadappale are the famous instruments of rural folk to wash cattle;
- ಕಂಚು, ತಾಮ್ರ, ಕಬ್ಬಿಣ, ಸಿಲ್ವರ್, ಸ್ಟೀಲ್ ಮೊದಲಾದ ಲೋಹಗಳಿಂದ ತಯಾರಿಸಿರುವಂಥದು; ಹೆಚ್ಚು ಕಡಿಮೆ ಕೊಳಗದಾಕೃತಿಯನ್ನ ಹೋಲುತ್ತದೆ; ಆದರೆ ಅದರಷ್ಟು ಅಗಲ, ದೊಡ್ಡದಿರುವುದಿಲ್ಲ ಎಂಬುದು ಗಮನಿಸತಕ್ಕ ಅಂಶ; This vessel is made of brass, copper, iron, steel, aluminium, metal; It is like `Koḷaga' shape; but it is not as wide as `Koḷaga';
- ಅನ್ನ, ಸಾಂಬಾರು, ಮುದ್ದೆ ಮಾಡುವಾಗ ಮನೆಯಲ್ಲಿರುವ ಜನಸಂಖ್ಯೆಯ ಆಧಾರದ ಮೇಲೆ ಇಷ್ಟು ಕೊಳದಪ್ಪಲೆ ನೀರು ಹಾಕಬೇಕೆಂದು ನಿರ್ಧರಿಸುತ್ತಿದ್ದ ಕಾಲವೊಂದಿತ್ತು; ಒಂದು ಸೇರು ಅಕ್ಕಿಗೆ ಇಷ್ಟೇ ಕೊಳ್ದಪ್ಲೆ ನೀರು ಹಾಕಬೇಕೆಂದು ಹೇಳುತ್ತಿದ್ದರು; *ಪ್ರ: 'ಮೂರ್ ಕೊಳ್ದಪ್ಲ ನೀರಾಕಿ ಸಾರ್ ಮಾಡಿದ್ದಿ ಕರೆಟ್ಟಾಗಾಯ್ತು ಉಳ್ಕಳ್ಳಿಲ್ಲ'.* It is a measuring instrument to measure water while preparing rice, soup, ragi ball etc proportionally.

ಕೊಳದ ಬಕ koḷada baka :

- Ardeoca graAyii; ಸ್ಥಳೀಯ ಪಕ್ಷಿ ವಿಶೇಷ; ಭತ್ತದ ಗದ್ದೆ, ನದಿ, ಕೊಳ, ಕೆರೆ–ಕಟ್ಟೆಗಳಲ್ಲಿ ವಾಸ. A bird

species lives in river, paddy field, pond and tanks.

ಕೊಳದ ಮರ kolada mara :

- ಮರದಿಂದ ತಯಾರಿಸಿದ ಒಂದು ವಿಧದ ಸಾಧನ; ಕಳ್ಳ-ಕಾಕರನ್ನು ಬಂಧಿಸಲು ಬಳಕೆ; An instrument made of wood used to arrest thief;
- ಹಿಂದೆ ಕಾಡುಗಳ್ಳರು, ಊರುಗಳ್ಳರ ಸಂಖ್ಯೆ ಯತೇಚ್ಛವಾಗಿತ್ತು; ಕಾಡುಗಳಲ್ಲಿ ಬೆಳೆದು ನಿಂತ ಫಸಲುಗಳನ್ನೇ ಕುಯ್ದು ಸಾಗಿಸುತ್ತಿದ್ದಂತಹ ದೊಡ್ಡ ಕಳ್ಳರು; Olden days thiefs are too much in and out of the society; they are theft away the crops of the forest;
- ಇನ್ನು ಊರೊಳಗೆ ಮಧ್ಯರಾತ್ರಿ ಸಂದರ್ಭದಲ್ಲಿ ಮನೆಯ ಯಾವುದಾದರೊಂದು ಮೂಲೆಯ ಗೋಡೆಗಳಲ್ಲಿ ರಂಧ್ರ ಕೊರೆದು ಒಳ ನುಸುಳಿ ಚಿನ್ನಾಭರಣ, ಹಣಕಾಸು, ದವಸ-ಧಾನ್ಯ, ಪಾತ್ರೆ, ಪಗಡೆಗಳನ್ನು ಕದ್ದೊಯ್ಯುತ್ತಿದ್ದರು; In the villages or cities they make a hole in the corner of the house and taken away the jewels money, groceries, vessels etc;
- ಹಾಗಾಗಿ ಇವರ ಈ ಹಾವಳಿಯನ್ನು ತಪ್ಪಿಸಲೋಸುಗವಾಗಿ ಕೊಳದ ಮರ ಬಳಸಿ ಅವರನ್ನು ಬಂಧಿಸುವ ಉಪಾಯ ಮಾಡಿದ್ದರೆಂದು ಕಾಣುತ್ತದೆ; So, to control their havoc plan to use the `Kolada mara' to arrest them;
- ಇದು 'ಕೋಳದ ಮರ' ಇರಬಹುದು; ಕಳ್ಳರನ್ನು ಬಂಧಿಸಲು 'ಕೋಳ'ವಾಗಿ ಮರದ ತುಂಡನ್ನು ಬಳಸುತ್ತಿದ್ದುದು ಹಿಂದೆ ರೂಢಿಯಲ್ಲಿತ್ತು; The wood piece used as handcuff to arrest the thieves was in practice in olden days; it may be `Kolada mara';
- ಯಾವುದೋ ಒಂದು ಹಂತದಲ್ಲಿ 'ಕೋಳ'ದ ದೀರ್ಘ>ಹ್ರಸ್ವವಾಗಿ 'ಕೊಳ' ರೂಪವಾಗಿ ಬಳಕೆಗೆ ಬಂದಿರಬಹುದು; ಅದಕ್ಕೆ 'ಮರ' ಪದ ಸೇರ್ಪಡೆಯಾಗಿ 'ಕೊಳದ ಮರ' ಆಗಿರುವುದು ಸಾಧ್ಯ.

ಕೊಳನೂಗ್ಲಿ kolanūgli :

- ಸೀರೆಯನ್ನು ಉಡುವ ಒಂದು ವಿಧಾನ; ಕುಪ್ಪಸ ತೊಡದೆ ಸೀರೆಯಿಂದಲೇ ದೇಹದ ಎಲ್ಲಾ ಅಂಗಗಳು ಮರೆಯಾಗುವಂತೆ ಉಡುವುದು ಇದರ ವಿಶೇಷತೆ; ಸೆರಗಿನಿಂದಲೇ ಎದೆಯ ಭಾಗವನ್ನು ಮುಚ್ಚಿಕೊಳ್ಳುವುದು; A procedure to wear the saree; without wearing the blouse cover all parts of the body by the saree is its special; cover the breast part by the saree edge;
- ಇದು ಆದಿವಾಸಿ ಬುಡಕಟ್ಟು ಮಹಿಳೆಯರಲ್ಲಿ ರೂಢಿಯಲ್ಲಿರುವಂಥ ಶೈಲಿ; ಇವರು ಉಡುವ ಈ ಶೈಲಿಗೆ ಹದಿನಾರು ಮೊಳದ ಸೀರೆಯನ್ನು ಬಳಸುತ್ತಿದ್ದರು; This style is in practice in tribal women; for this method needed sixteen mola long saree;
- ಸಾಮಾನ್ಯವಾಗಿ ಹಿಂದೆ ಆದಿವಾಸಿಗಳೇ ಅಲ್ಲದೆ ಇತರೆ ಸಮುದಾಯದ ವಯಸ್ಸಾದ ಹೆಂಗಸರು ಈ ಬಗೆಯ ಸೀರೆ ಉಡುತ್ತಿದ್ದುದು ಕಂಡುಬಂದಿದೆ. In olden days this type of saree worn not only by tribal; the other community age old woman's too.

ಕೊಳ(ಞ)ನೆ(ನ)ಲ್ಲೂರು

kola(l)ne(na)llūru :

- ಮೈಸೂರು ಜಿಲ್ಲೆ ಗುಂಡ್ಲುಪೇಟೆ ತಾಲ್ಲೋಕಿನ ೧೦೦೯ರ ೬೨ನೇ ಶಾಸನದಲ್ಲಿ ಈ ಊರಿನ ಉಲ್ಲೇಖವಿದೆ; The name of this place referred in 62nd inscription 1009 of Gundlupete taluk Mysore district;
- ಮುಖ್ಯವಾಗಿ ಇದು ಹಳೆಯ ಹೆಸರು; ಭಾಷೆಯಲ್ಲಿ 'ಞ' ಇರುವುದೇ ಇದಕ್ಕೆ ಸಾಕ್ಷಿ; ಆಮೇಲೆ ಞ>ಳ ಆಗಿರುವುದು ಸ್ಪಷ್ಟ; Mainly it is an old name; a witness i.e., 'ಞ' in the language; it is clear that become `ಳ' later;
- 'ನಲ್ಲೂರು' ಕ್ರಮೇಣ 'ನೆಲ್ಲೂರು' ಆಗಿರುವುದು ಅಂತಹ ವಿಶೇಷವೇನಲ್ಲ; ನಲ್ಲು(ನೆಲ್ಲು)+ಊರು; ನಲ್ಲು ಮತ್ತು ನೆಲ್ಲು ಉಚ್ಚಾರಣೆಯ ಪ್ರಾದೇಶಿಕತೆಯನ್ನು ಹೊಂದಿರುವಂತೆ ಕಾಣುತ್ತದೆ;

`Nalluru' become `Nelluru' gradually; the pronunciation of `Nallu' and `Nellu' have the reginal influence;

- ಊರಿನ ಹೆಸರು ಕೊಳನೆಲ್ಲೂರು=ಕೊಳ+ನೆಲ್ಲು+ ಊರು ಎಂದಾಗಿರುವುದು ಸ್ಪಷ್ಟ; 'ಕೊಳ' ಎಂದರೆ 'ಕೆರೆ' ಎಂಬ ಅರ್ಥದಲ್ಲಿ ಚಿಕ್ಕಕೆರೆ ಎಂದಿಟ್ಟುಕೊಳ್ಳಬಹುದು; ಹಾಗೆಯೇ 'ನೆಲ್ಲು' ಬತ್ತ ಎಂದು ಅರ್ಥ ಪಡೆದಿದೆ; ಅಂದರೆ ಬತ್ತ ಬೆಳೆವ ಹಿನ್ನೆಲೆಯಲ್ಲಿ 'ನೆಲ್ಲೂರು' ಹೆಸರು ಬಂದಿದೆ; ಇನ್ನೊಂದು ಹೆಸರು ಇದೇ ರೀತಿ ಇದ್ದ ಕಾರಣದಿಂದಲೊ ಏನೋ ಈ ಊರಿನ ಗುರುತಿಗೆ 'ಕೊಳನೆಲ್ಲೂರು'(ಕೊಳ ಇದ್ದುದರಿಂದ) ಎಂದು ಕರೆದುಕೊಂಡಿರಬಹುದು; so the name of the village become `Koḷa Nelluru'; like `Koḷa' means `Kere', `Nellu' means `Batta'(paddy); in this place paddy was growing; so, it is called Nelluru, but another village was in the same name; it was near the Tank or Koḷa; it is called as Koḷanelluru;
- ನಿಟ್ಟೆಯ ಆದಿತ್ಯ ದೇವಾಲಯಕ್ಕೆ ಪೆಮ್ಮಗಾವುಂಡನು ಕೆಲವು ದತ್ತಿ ಮಾಡಿದನು; ದಾನ ಪ್ರತಿಗ್ರಾಹಿ ಮಾದಯ್ಯ; ಈತ ಕೊಳ ನೆಲ್ಲೂರಿನ ನರಸಿಂಗಯ್ಯನ ಮಗ ಎಂದು ಶಾಸನ ಉಲ್ಲೇಖಿಸಿದೆ. Pemmagavunda was donated some thing to Nitte Adithya temple; Madaiah the son of Koḷanelluru Narasingaiah received the charity is noted in the inscription.

(E.C- ೩; ಮೈ.ಜಿ.)

ಕೊಳಪ kol̤apa :

- ಬಿದಿರು ಅಥವಾ ಇತರೆ ಕಟ್ಟಿಗೆಯಿಂದ ತಯಾರಿಸಿದ ಒಂದು ವಿಧದ ಕೋಲು; 'ದಿಮ್ಮಿ' ಎಂಬ ಚರ್ಮವಾದ್ಯವನ್ನು ನುಡಿಸಲು ಬಳಕೆ; A kind of flute made of bamboo or other wood; it is used to play a leather instrument `Dimmy';
- ಕೆಲವು ಚರ್ಮವಾದ್ಯಗಳನ್ನು ಕೈಯಿಂದ ನುಡಿಸಿದರೆ ಮತ್ತೆ ಕೆಲವನ್ನು ಕೋಲಿನಿಂದ ನುಡಿಸುವುದು ಕಂಡುಬಂದಿದೆ; Some leather instruments played by hand, some are by stick;
- ತಬಲ ಕೈಯ್ಯಿಂದ ನುಡಿಸುವ ಚರ್ಮವಾದ್ಯ; ಹಾಗೆಯೇ ತಮಟೆ, ಹೆಬ್ಬರೆ, ದಿಮ್ಮಿ ಮೊದಲಾದುವನ್ನು ಕೋಲಿನಿಂದ ನುಡಿಸುವುದು ರೂಢಿ; ಆದರೆ 'ಡೋಲು' ಎಂಬ ಚರ್ಮವಾದ್ಯವನ್ನು ಕೋಲು ಮತ್ತು ಕೈಬೆರಳುಗಳೆರಡರಿಂದಲೂ ನುಡಿಸುವುದು ವಿಶೇಷ; Tabala is played by hand, but Tamate, `Hebbare', Dimmy etc are by stick is in practice; but `dolu' leather instrument is played by hand and stick;
- ಚರ್ಮವಾದ್ಯವನ್ನು ಹಾಗಾಗ ಬೆಂಕಿಯಿಂದ ಕಾಯಿಸುತ್ತಿದ್ದರೆ ಕೇಳುಗರಿಗೆ ಇಂಪಾಗುವಂತೆ ಕಣಿ ಕಣಿ ಎಂಬ ಶಬ್ದ ಹೊರಹೊಮ್ಮುತ್ತದೆ; ಇಲ್ಲಿ ನುಡಿಸಲು ಕೋಲು ಎಷ್ಟು ಮುಖ್ಯವೋ ನುಡಿಸುವ ವಾದ್ಯ ಮತ್ತು ವ್ಯಕ್ತಿಗಳೂ ಅಷ್ಟೇ ಮುಖ್ಯ. Leather instruments are warm up by fire, it will be hard and made a good sound to hear; here the stick is important to play the instruments as well as the instrument and the player also important.

ಕೊಳಪಾಟಿ kol̤apāṭi :

- ಲಟ್ಟಣಿಗೆ, ಲತ್ತೋಡು, ಹಪ್ಪಳ ಅಥವಾ ಚಪಾತಿ ಗುಂಡು ಎಂಬ ಇತರೆ ಸಂವಾದಿ ರೂಪಗಳ ಬಳಕೆ ಕಂಡುಬಂದಿದೆ; `Koḷapaṭi' has the equivalent forms are used, they are laṭṭaṇige, lattoḍu, happaḷa or chapati guṇḍu etc;
- ಚಪಾತಿ, ರೋಟಿ, ಹಪ್ಪಳ ಮಾಡುವಾಗ ಹಿಟ್ಟನ್ನು ಲಟ್ಟಿಸಲು ಬಳಸುವ ಸಾಧನ(ಬಾಗ.ಜಿ);
- *ಪ್ರ: 'ಆಕಿ ಕೊಳಪಾಟಿಯಲ್ಲಿ ಚಪಾತಿ ಹಿಟ್ಟನ್ನು ಚೆನ್ನಾಗಿಯೇ ಲಟ್ಟಿಸುತ್ತಿದ್ದಾಳೆ'.*

ಕೊಳಬು/ಕೊಳ್ಬು kol̤abu/kol̤bu :

- ಜಾನುವಾರುಗಳ ಪಾದದ ಉಗುರು ಅಥವಾ ಗೊರಸಿನ ತುದಿ; Tip of the nail or hoof of cattle;
- ಹುಟ್ಟಿದ ತಕ್ಷಣ ಕರುವಿನ ಕಾಲಿನ ಕೊಳಬನ್ನ ಮುರಿಯಬೇಕು; ಹಾಗೆ ಮಾಡಿದರೆ ಪಾದ

ಶುದ್ಧವಾಗಿ ಬೆಳವಣಿಗೆ ಹೊಂದಲು ಸಾಧ್ಯ; ಇಲ್ಲದಿದ್ದರೆ ಕೊಳಬು ಉದ್ದವಾಗಿ ಬೆಳೆಯುತ್ತದೆ; ಇದು ಪಾದದ ಅಂದವನ್ನು ಕೆಡಿಸುತ್ತದೆ; ಮುಂದೆ ಇದರಿಂದ ಸರಾಗವಾಗಿ ನಡೆಯಲಾಗದೆ ಸಿಡುಗಾಲಾಗುವ ಸಂಭವವಿರುತ್ತದೆ ಎಂದು ಹಿರಿಯ ಅನುಭವಿಗಳು ಹೇಳುವರು; After birth of calf the tip of the hoof would be cut, by this the foot will grow properly; otherwise it will grow improperly, it shows ugly to look and walk improperly, it is the experience saying of elders;

- ಹಸು, ಎಮ್ಮೆಗಳಿಗಿದ್ದರೆ ಪರವಾಗಿಲ್ಲ; ಎತ್ತು, ದನಗಳಿಗೆ ಈ ರೀತಿಯಾದರೆ ಕೊಡು-ಕೊಳ್ಳುವಿಕೆ ವ್ಯವಹಾರದಲ್ಲಿ ನಿರೀಕ್ಷಿತ ಪ್ರಮಾಣದ ಗಳಿಕೆ ಸಿಗುವುದಿಲ್ಲ; ಹಾಗಾಗಿ ಎತ್ತು, ದನಗಳಿಗೆ 'ಲಾಳ' ಕಟ್ಟಿಸುವಾಗ ಕೊಳಬನ್ನು ಶುದ್ಧವಾಗಿ ಕತ್ತರಿಸಿ ನಂತರ ಕಟ್ಟಿಸುವುದಿದೆ; Cow and buffalos are exempted, but in the case of oxen it affects on the buy and sale business; so at the time of fixing the `Laḷa' or iron plate to the hoof, this Koḷabu will cut in proper shape first;
- ಜಾನುವಾರುಗಳನ್ನು ಖರೀದಿಸುವಾಗ ಬಣ್ಣ, ಮುಖ, ಕೊಂಬಿನ ಶುದ್ಧತೆ, ಸುಳಿಶುದ್ಧತೆ, ಕಾಲಿನ ಶ್ರದ್ಧತೆಯ ಜೊತೆಗೆ ಕೊಳಬನ್ನೂ ಪರೀಕ್ಷಿಸುವುದಿದೆ; ಅದಕ್ಕಾಗಿ ದಲ್ಲಾಳಿಗಳ ಮೊರೆ ಹೋಗುವವರೂ ಇದ್ದಾರೆ; *ಪ್ರ: 'ಕರು ಇದ್ದಾಗ ಕೊಳಬು ಮುರಿಯದಿರುವುದೇ ಈ ಸಿಡುಗಾಲಿಗೆ ಕಾರಣ'.* At the time of purchasing the oxen or cattle examine correctness of horn and leg etc; for examination they take support of experienced middleman before purchase.

ಕೊಳಮಲಿ/ಕೊಳ್ಮಲಿ koḷamali/koḷmali:

- ಆಡು, ಕುರಿಗಳ ಕೊರಳಿನ ತಳಭಾಗದ ಚರ್ಮದಲ್ಲಿ ಜೋತಾಡುವ ಎರಡು ಪೀಣಿಗಳು; ಆಡಿನ ಕೊರಳಲ್ಲಿರುವ ಮಲಿ; Two tubes under the neck skin of goat; sheep;
- ಇದು ಎಲ್ಲಾ ಆಡು, ಕುರಿಗಳಿಗೂ ಇರಬೇಕು ಎಂದೇನಿಲ್ಲ; ಕೆಲವಕ್ಕೆ ಮಾತ್ರ ಹುಟ್ಟುತ್ತಲೇ ಚಿಕ್ಕದಾಗಿ ಬಂದಿರುತ್ತದೆ; ಬೆಳೆಯುತ್ತಾ ದೊಡ್ಡದಾದರೂ ಒಂದಿಂಚು ಮೀರುವುದಿಲ್ಲ; No condition, it should be to all goat and sheep; specially few have this kind of tube; very little in young kids but later they grow big;
- ಇದು ಕೆಲವು ಆಡು-ಕುರಿಗಳ ಆಕರ್ಷಣೆಯೂ ಹೌದು; ಇವು ಒಂದು ಬಗೆಯ ತಳಿಯೂ ಇರಬಹುದು; *ಪ್ರ: 'ಈ ಆಡಿಗೆ ಯಾಕೆ ಕೊಳಮಲಿ ಬಂದಿಲ್ಲಲ್ಲ'.* It is an attraction to some sheep and goat; it is also a kind of breed.

ಕೊಳಮಳಿಗೆ koḷamaḷige :

- ದೊಡ್ಡದಾದ ಪಾತ್ರೆ; ಅಡುಗೆ ತಯಾರಿಸಲು, ನೀರು ತುಂಬಿಡಲು ಬಳಕೆ; ಇದನ್ನು 'ಕೊಳಮುಳ್ಳು' ಎಂಬುದಾಗಿಯೂ ಕರೆಯುವುದಿದೆ; A big vessel used to cook, to collect water; it is also called as `Koḷamuḷḷu';
- ವಿವಿಧ ಲೋಹಗಳು ಅಥವಾ ಮಣ್ಣಿನಿಂದ ತಯಾರಿಸಿದ್ದಿರಬಹುದು; ಹಬ್ಬ-ಹರಿದಿನ, ಮದುವೆ, ತಿಥಿ ಹಾಗೂ ಇನ್ನಿತರ ಶುಭ-ಅಶುಭ ಸಮಾರಂಭಗಳ ಭೋಜನ ಸಿದ್ಧಪಡಿಸುವಿಕೆಯಲ್ಲಿ ಉಪಯೋಗ. It is may be made of different metals and soil; it is used to prepare food in auspicious and inauspicious occasions.

ಕೊಳಮಿ koḷami :

ಅಗತ್ಯ; ಆವಶ್ಯಕತೆ; ಒಪ್ಪಿಗೆ, ಅನುಮತಿ; ಉಪಯೋಗ; *ಪ್ರ: 'ನಿನ್ನ ಬಗೆಗೆ ತಿಳಿದುಕೊಳ್ಳಬೇಕಾದ ಕೊಳಮಿ ನನಗಿನ್ನೂ ಬಂದಿಲ್ಲ'* (ಗೋಕಾಕ್). Need, necessity; acceptance; permission; use; No necessity to me to know about you.

ಕೊಳಲು koḷalu :

- ಹಳಗನ್ನಡದ 'ಕೊಟಲ್' ಮೂಲರೂಪದಿಂದ ನಿಷ್ಪನ್ನಗೊಂಡ ಪದ; 'ಕೊಟಲ್' ಕ್ರಮೇಣ 'ಕೊಳಲು' ಆಗಿರುವುದು; ಒಂದು ಸಂಗೀತ ವಾದ್ಯ; The original form 'ಕೊಟಲ್'(Koḷal) from ancient kannada;
- ಕೊಳಲು ಹಿಂದಿನಿಂದಲೂ ಜನಪ್ರಿಯತೆ ಪಡೆದ ವಾದ್ಯ; ಹಲವು ಸಂಗೀತ ಪ್ರಿಯರು ಕೊಳಲು ನುಡಿಸುವುದನ್ನು ಒಂದು ಕಲೆಯಾಗಿ ಕಲಿತು

ಕೊಳಲು

ಉಳಿಸಿಕೊಂಡು ಬಂದಿರುವುದು ತಿಳಿದ ಸಂಗತಿ; ಅನೇಕ ಕಡೆ 'ಕೊಳಲು ವಾದನ' ಎಂಬ ಸಂಗೀತ ಕಾರ್ಯಕ್ರಮ ಹಮ್ಮಿಕೊಳ್ಳುವುದನ್ನು ಕಂಡಿದ್ದೇವೆ; `Kolalu' is famous instrument since times; some people learn the flute as an art; In some places arrange `flute' playing concert;

- ದ್ವಾಪರಾಯುಗದಲ್ಲಿ ಕೃಷ್ಣ ಕೊಳಲು ನುಡಿಸುವುದರ ಮೂಲಕ ತನ್ನ ಗೋವುಗಳನ್ನು ಬರಮಾಡಿಕೊಳ್ಳತ್ತಿದ್ದನು ಎಂಬುದು ಪುರಾಣ ಸೃಷ್ಟಿ; ಗೊಲ್ಲರು ಕೊಳಲು ನುಡಿಸುವುದರಲ್ಲಿ ನಿಪುಣರು ಎಂಬುದು ಗೋವಿನ ಹಾಡು ಎಂಬ ಒಂದು ಕವಿತೆಯಲ್ಲಿ ಸ್ಪಷ್ಟಗೊಳ್ಳುತ್ತದೆ; ‘ಳೆಯ ಮಾವಿನ ಮರದ ಕೆಳಗೆ ಕೊಳಲನೂದುತ ಗೊಲ್ಲಗೌಡನು' ಎಂಬುದು ಅಲ್ಲಿನ ಉದ್ಘೋಷ; In Dwapara Yuga Krishna was calling the cows by playing flute; it is created in Purana; the Gollas are welversed in flute playing; it is clear in the poem `Govina hadu';
- ಟೊಳ್ಳಾದ ಬಿದಿರಿನ ಕೊಳವೆಯಿಂದ ತಯಾರಿಸಿದ್ದು; ಪಿಳ್ಳಂಗೋವಿ, ಊದುವ ವಾದ್ಯ, ಉಸಿರುವಾದ್ಯ, ಮುರಳಿ, ವಂಶಿ, ವೇಣು, ಬಾನ್ಸೂರಿ ಎಂಬ ಹೆಸರುಗಳಿಂದ ಕರೆಯುವುದಿದೆ; ವಾಲಗದಂತೆ ಊದಲು ಪೀಪಿ ಇರುವುದಿಲ್ಲ; ಕೃಷ್ಣನ ಪ್ರೀತಿಯ ವಾದ್ಯ;It is prepared by hallow bamboo pipe; it has named as Piḷḷangovi, piping instrument; wind blow instrument; Murali, Vamsi, Venu, Bansuri etc; it is not like musical pipe; it is dear instrument to Lord Krishna;
- ಕೊಳಲು ಒಂದೇ ವಸ್ತುವಿನಿಂದ ವಿನ್ಯಾಸಗೊಳಿಸಿದ ಸರಳ ರಚನೆ; ಸಾಮಾನ್ಯವಾಗಿ ಒಂದರಿಂದ ಒಂದೂವರೆ ಅಡಿ ಉದ್ದದ ಟೊಳ್ಳು 'ಬಿದಿರಿನ ತುಂಡಿನಿಂದ ತಯಾರಿಸಿದ್ದು' ಒಕ್ಕಡೆ ಗಿಣ್ಣು ಅಥವಾ ಕಣ್ಣು ಮುಚ್ಚಿದಂತಿರುತ್ತದೆ; ಕೊಳಲಿನ ಗಿಣ್ಣಿನ ಹತ್ತಿರ ಒಂದು ಮುಖರಂಧ್ರವಿದ್ದು ಪಕ್ಕದಲ್ಲಿ ಏಳೆಂಟು ಸ್ವರರಂಧ್ರಗಳಿರುತ್ತವೆ; Koḷalu is designed by a single thing and simple make; it has made of one or one and half feet length bamboo piece;
- ಮುಖರಂಧ್ರದ ಹತ್ತಿರ ತುಟಿಯನ್ನಿಟ್ಟು ಉಸಿರಿನಿಂದ ಊದಿದರೆ ಧ್ವನಿ ಅಥವಾ ಸ್ವರ ಹೊರಹೊಮ್ಮುತ್ತದೆ; ಎರಡು ಹೆಬ್ಬೆರಳುಗಳು ಕೊಳಲನ್ನು ಹಿಡಿಯಲು ಸಹಕಾರಿಯಾದರೆ ಉಳಿದ ಎಂಟು ಬೆರಳುಗಳು ಸ್ವರ ರಂಧ್ರಗಳನ್ನು ನಿಯಂತ್ರಿಸಿ ರಾಗಕ್ಕೆ ತಕ್ಕ ನಾದವನ್ನು ಸೃಷ್ಟಿಸುತ್ತವೆ; Put lip near the main hole, breath through it, it makes `Sound' or `Swara'; two fingers help to hold the instrument, remaining eight play on `Swara' hole to controle them to create the sound according to `Raga';
- ಓಲಗದಂತೆ ನೇರವಾಗಿ ಹಿಡಿದು ತುಟಿಯ ಮೇಲಿಟ್ಟು ಊದಬಹುದಾದ ಕೊಳಲು ಒಂದು ಬಗೆಯದ್ದಾದರೆ, ಅಡ್ಡಲಾಗಿ ಹಿಡಿದು ಮುಖರಂಧ್ರವನ್ನು ತುಟಿಯ ಮೇಲಿಟ್ಟು ನುಡಿಸುವುದು ಮತ್ತೊಂದು ಬಗೆಯ ಕೊಳಲು; Flute play like musical pipe kept on the lip is a kind; another kind of flute play kept the first hole on the lip;
- ಗೊರವರ ಕೊಳಲಿನ ರಚನೆ ತುಂಬಾ ಸರಳವಾದುದು; ಮುಖರಂಧ್ರ ಮತ್ತು ಸ್ವರರಂಧ್ರ ಸೇರಿ ಒಟ್ಟು ನಾಲ್ಕು ರಂಧ್ರಗಳಿಂದ ರಚನೆಯಾದುದು; ಓಲಗದಂತೆ ನೇರವಾಗಿ ಕಯ್ಯಲ್ಲಿ ಹಿಡಿದು ಎರಡು ತುಟಿಗಳ ನಡುವೆ ಇಟ್ಟು ಊದುವುದು; Structure of `Goravas flute' is very simple; It play like the musical pipe;
- ಕೊಳಲು ನುಡಿಸುವುದು ಒಂದು ಕಾಲದಲ್ಲಿ ಆದಿವಾಸಿ ಬುಡಕಟ್ಟು ಸಮುದಾಯದವರ ಪಾರಂಪರಿಕ ವೃತ್ತಿಯಾಗಿತ್ತು; ಆದರೆ ಕಾಲಕ್ರಮೇಣ ಇದು ಸಂಗೀತ ವಾದ್ಯಗಳಲ್ಲಿ ಒಂದು ವಾದ್ಯವೆನಿಸಿತು; ಸಂಗೀತದ ಇತರೆ ವಾದ್ಯ ಪರಿಕರಗಳಲ್ಲಿ ಕೊಳಲೂ ಒಂದೆನಿಸಿರುವುದು ಸ್ಪಷ್ಟ; Flute play is the heritorial profession of the tribal community; in course of time it is also one among the musical instruments;
- ಇಂದಿಗೂ ಸಹ ಇದೇ ಆದಿವಾಸಿ ಬುಡಕಟ್ಟು ಜನರು ಕೊಳಲುಗಳನ್ನು ತಯಾರಿಸಿಕೊಂಡು ಜಾತ್ರೆ, ಸಂತೆಯಂತಹ ಜನಸಮೂಹದ ಪ್ರದೇಶಗಳಲ್ಲಿ ಮಾರಾಟ ಮಾಡುವುದನ್ನು ನಾವು ಕಾಣುತ್ತೇವೆ; Even today tribal people prepare the flute

and sell them in the fairs and the community gatherings;

- ಭಕ್ತಿಗೀತೆ, ಭಾವಗೀತೆ, ಜನಪದಗೀತೆ ಮತ್ತು ಚಲನಚಿತ್ರ ಗೀತೆಗಳಲ್ಲಿ ಅಂದಿನಿಂದಲೂ ಒಂದು ಸಂಗೀತ ವಾದ್ಯವಾಗಿ ಬಳಕೆಗೊಂಡಿರುವುದು ತಿಳಿದುಬಂದಿರುವ ಸಂಗತಿ; Flutes are used as one among the musical instruments in devotional, lyrical, folk and film songs;
- ಶಿಷ್ಟ ಮತ್ತು ಜನಪದಗಳೆರಡಲ್ಲೂ ಪ್ರಧಾನವಾಗಿ ಬಳಕೆಗೊಂಡಿರುವ ಕೊಳಲಿಗೆ ಪ್ರಾಚೀನ ಕಾಲದ ಇತಿಹಾಸವಿದೆ ಎಂದರೆ ತಪ್ಪಲ್ಲ; ದ್ವಾಪರಾಯುಗದಿಂದ ಇಂದಿನವರೆವಿಗೂ ಸಂಗೀತಗಾರರ ಮನಸೂರೆಗೊಂಡಿರುವುದರಲ್ಲಿ ಕೊಳಲೂ ಒಂದೆನಿಸಿದರೆ ಅತಿಶಯವಲ್ಲ; Flute has its own history since ancient days, from Dwapara to till today; it won the heart of musician; it is used in folk and cultural music mainly;
- ಪೊಳ್ಳಾದ ಉದ್ದನೆಯ ನಾಳ ಅಥವಾ ನಳಿಕೆ; ಒಂದು ಅಳತೆಯ ಪ್ರಮಾಣ; ಕೊಡಲಿಯಂತಹ ಸಾಧನಗಳ ಬುಡದಲ್ಲಿರುವ ಉಂಗುರದಂತಹ ಭಾಗ (ದ್ರಾ.ಭಾ.ಜ್ಞಾ.ಪ.ಕೋ); A hallow long pipe; a measuring ; a ring like part in the axe like instruments;
- ತಮಿಳಿನಲ್ಲಿ 'ಕುಟಿಲ್', ಮಲೆಯಾಳಂನಲ್ಲೂ 'ಕುಟಿಲ್', ತುಳುವಿನಲ್ಲಿ 'ಕೊಳಲ್' ಮತ್ತು ತೆಲುಗಿನಲ್ಲಿ 'ಕ್ರೋವಿ' ಪದಗಳ ಬಳಕೆ ಇದೆ; ಕೊಡವ ಭಾಷೆಯಲ್ಲಿ 'ಕೊಳ' ಎಂಬುದು ಪ್ರಚಲಿತ ರೂಪ (ದ್ರಾ.ಭಾ.ಜ್ಞಾ.ಪ.ಕೋ); In Tamil and Malayalam `Kuḷal'; in Tulu `Koḷal; in Telugu `Krovi', in Kodava language `Koḷa' words are used;
- ತಮಿಳು ಮತ್ತು ಮಲೆಯಾಳಂಗಳಲ್ಲಿ 'ಕುಟಿಲ್' ರೂಪವೇ ಇರುವುದನ್ನು ನೋಡಿದರೆ, ದ್ರಾವಿಡದ ಮೂಲರೂಪವಾಗಿ 'ಕುಟಿಲ್' ಇದ್ದಿರಬಹುದು; ಅದು ಕನ್ನಡ ಮುಂತಾದ ಭಾಷೆಗಳಲ್ಲಿ 'ಕೊಳಲ್' ಆಗಿ ರೂಪುಗೊಂಡಿರಬಹುದು; `vowel mutation' `ಸ್ವರನಿಯಮ' ಕಾರಣ ಇರುವಂತೆ ಕಾಣುತ್ತದೆ. In Tamil and Malayalam has `Kuḷal' form, so it may be the original form of Dravidian language; that may formed into `Koḷ al' in Kannada and other languages.

ಕೊಳವಂಕ/ಕೊಳವಂಕಿ/ಕೊಳವಂಕೆ koḷavaŋka/ koḷavaŋki/ koḷavanke :

- ಒಂದು ಮುಳ್ಳಿನ ಗಿಡ(ಬೆಂ.ಗ್ರಾ.ಜಿ); ಇದರ ಸೊಪ್ಪು ಆಹಾರವಾಗಿ ಉಪಯೋಗ; ಬಸ್ಸಾರು, ಸೊಪ್ಸಾರು ತಯಾರಿಕೆಯಲ್ಲಿ ಬಳಕೆ; ಇದರ ಸೊಪ್ಪು ಬಾಣಂತಿಯರ ತೊಂದರೆಗಳಿಗೆ ಔಷಧವಾಗಿ ಬಳಸಲಾಗುತ್ತದೆ ಎಂದು ಹೇಳುವರು; A thorny plant; the leaves used as food; it also used as medicine to puerperal woman;
- ನೀರಿನ ಪ್ರದೇಶಗಳಲ್ಲಿ ಬೆಳೆಯುವ ಗುಣ ಹೊಂದಿದೆ; ಇದರ ಮುಳ್ಳಿಗೆ 'ಕೊಳವಂಕಿ ಮುಳ್ಳು' ಎನ್ನುವರು (ತು.ಜಿ). It grows in marsh area; the thorn of it is called `Koḷavanki muḷḷu'.

ಕೊಳವಳಿಕೆ koḷavaḷike :

- Hygrophila auriculata; ಕೋಣಿಲಾಕ್ಷ, ಗೋಕಂಟಕ, ನೀರುಪ್ಪಿಗಿಡ ಎಂಬ ವಿವಿಧ ಹೆಸರುಗಳಿಂದ ಕರೆಯುವರು; It is called as `Koṇilaksha', `gokanṭaka', `Neeruppi giḍa';
- ಸಸ್ಯ ವಿಶೇಷ; ಎತ್ತರವಾಗಿ ಬೆಳೆಯಬಲ್ಲ ಚಿಕ್ಕ ಚಿಕ್ಕ ಮುಳ್ಳುಗಳಿಂದ ಕೂಡಿರುವಂಥದು; ಜೌಗು ಮಣ್ಣಿನ ಪ್ರದೇಶದಲ್ಲಿ ಯತ್ತೇಚ್ಛವಾಗಿ ಬೆಳೆಯುತ್ತದೆ; ಸ್ವಾಭಾವಿಕವಾಗಿ ಬೆಳೆಯುವ ಸಸ್ಯ; A plant species; it grows high with little thorns; naturally grows in marsh area;
- ಕಾಂಡದ ಪ್ರತಿ ಗಿಣ್ಣು ಆರು ಮುಳ್ಳುಗಳಿಂದ ಕೂಡಿದೆ; ಕಂದು ಮಿಶ್ರಿತ ಹಳದಿ ಬಣ್ಣದ ಸರಳ ಎಲೆಗಳಲ್ಲಿ ತೊಟ್ಟು ಇರುವುದಿಲ್ಲ; ಅಭಿಮುಖವಾಗಿ ಜೋಡಣೆಯಾಗಿರುತ್ತವೆ; ವಿಶೇಷವಾಗಿ ಔಷಧಿ ಗುಣವುಳ್ಳ ಸಸ್ಯ ಪ್ರಭೇದ; Every knot of the stem has six thorns, brown mix yellow coloured simple leaves have no foot stalk;
- ಸಸ್ಯದ ಬಸ್ಮ ಪಾಂಡುರೋಗ ನಿವಾರಣೆಗೆ ಉಪಯೋಗ; ಅಂಗುಲಿವಾತಕ್ಕೆ ಇದರ ಎಲೆಯಿಂದ ತಯಾರಿಸಿದ ಕಷಾಯ ಕುಡಿಸುವರು; ಈ ಸಸ್ಯದ ಕಷಾಯ ಹೊಟ್ಟೆನೋವು ನಿವಾರಣೆ ಮಾಡುತ್ತದೆ;

ಇದರ ಬೀಜಗಳು ಆಮಶಂಕೆಗೆ ಔಷಧವಾಗಿ ಬಳಕೆ. The ash of the plant used to white patches; the juice of its leaves used to drink for `Angulivatha' and stomach pain; its seeds for dysentery as medicine.

ಕೊಳವೆ/ಕೊಳವಿ kol̤ave/kol̤avi :

- ಪ್ರಾದೇಶಿಕ ಭಿನ್ನತೆಯಿಂದಾಗಿ ಕೊಳವೆ>ಕೊಳವಿ (ಎ>ಇ)ಕಾರ ಬಂದಿರುವುದು;
- ಊದು ಕೊಳವೆ, ಕೊಳಪೆ, ಬೂರಣಿಗೆ ಎಂಬ ಇತರೆ ಸಂವಾದಿ ರೂಪಗಳ ಬಳಕೆಯೂ ಉಂಟು; ಯಂತ್ರದಿಂದ ಕೊರೆದ ರಂಧ್ರ ಅಥವಾ ಕೊಳವೆ;
- ಸೌದೆ ಒಲೆಯಲ್ಲಿ ಬೆಂಕಿ ಅಥವಾ ಉರಿಯನ್ನು ಹೊತ್ತಿಸಲು ಊದಲಾಗುವ ಕಬ್ಬಿಣ ಅಥವಾ ತಾಮ್ರದ ಲೋಹಗಳಿಂದ ತಯಾರಿಸಿದ ಸಾಧನ; ಸುಮಾರು ಒಂದರಿಂದ ಎರಡು ಅಡಿಗಳಷ್ಟು ಉದ್ದವಿರುತ್ತದೆ; ಮಧ್ಯಭಾಗ ಕೊಳವೆಯಂತಿದ್ದು ಬಾಯಿಯಿಂದ ಊದಿದರೆ ಗಾಳಿ ಅಥವಾ ಉಸಿರು ಹೊರಬಂದು ಹಿಡಿದಿರುವ ಸ್ಥಳಕ್ಕೆ ನೇರವಾಗಿ ತಲುಪುತ್ತದೆ; ಕೆಂಡ ಕವಿದು ಉರಿ ಹೊತ್ತಿಕೊಳ್ಳುತ್ತದೆ; An instrument to blow the wind to fire: made of iron or copper metal; it has the length of 1 to 2 feet long; the centre is like pipe, it helps to blow air to lit the fire;
- ಕೊಳವೆಯನ್ನು ಬಂಗಾರ, ಚಿನ್ನ ಕಾಯಿಸುವ ಅಕ್ಕಸಾಲಿ ಅಗ್ಗಿಷ್ಟಿಕೆಗೆ ಊದಿ ಕೆಂಡ ಮಾಡಲು ಬಳಸುತ್ತಾನೆ; ಇದ್ದಿಲನ್ನು ಕೆಂಡ ಮಾಡಲು ಉಪಯೋಗ; The Goldsmiths used to lit the charcoal to burn;
- ಟೊಳ್ಳಾದ ನಾಳ; ಟೊಳ್ಳು ಬಿದಿರಿನಿಂದ ತಯಾರಿಸಿದ ಕೊಳಪೆ; A hallow tube; a tube made of bamboo;
- ಕೊಳಲು, ಶಹನಾಯಿ ಎಂಬರ್ಥದಲ್ಲಿಯೂ ಪದಬಳಕೆ ಇದೆ; The word used in the meaning `Kol̤alu', `Shahanai';
- ನೂಲಿನ ಕಂಡಿಕೆ; ಕಂಬಳಿ ನೇಯ್ಗೆಯಲ್ಲಿ ಬಳಸುವ ಲಾಳಿ(ಬ.ಜಿ); A spindle used in weaving blankets or cloth;
- ನೀರಿನ ನಲ್ಲಿ; ಒಂದು ಅಳತೆಯ ಪ್ರಮಾಣ; ಚಟಾಕು; Water tap; a measuring instrument `Chaṭaku';
- ಬಂಡಿಯ ಎಣ್ಣೆ ಅಂದರೆ ಎರಂಡೆ ಅಥವಾ ಎರೆಎಣ್ಣೆ ಸಂಗ್ರಹಿಸಿಡಲು ಬಳಸುವ ಸಾಧನ; ಮರದ ತುಂಡಿನಿಂದ ಅಥವಾ ಟೊಳ್ಳು ಬಿದಿರು ಅಥವಾ ಎತ್ತು, ಎಮ್ಮೆಗಳ ಕೊಂಬಿನಿಂದ ತಯಾರಿಸಿದ ಕೊಳವೆ; An instrument to collect the cart oil; it is made of wood or hallow bamboo, horn of ox or buffloes;
- ಕೂರಣಿಗೆ(ನೇ.ವ್ಯ.ಪ.ಕೋ); ಹಸುವಿನ ಪಾದದ ಗೊರಸು; hoof of cow;
- ಗಾಂಜಾ ಸೇದಲು ಬಳಸುವ ಸಾಧನ(ಕಲ.ಜಿ); An instrument to smoke Ganja;
- **—*ಕೊಳವಿಕ್ಕಳ*** : ಕೊಳವೆ+ಇಕ್ಕಳ; ಕೊಳವೆ ಆಕಾರದ ವಸ್ತುಗಳನ್ನು ಹಿಡಿಯಲು ಬಳಸುವ ಇಕ್ಕಳ; ಅಕ್ಕಸಾಲಿ, ಕಮ್ಮಾರರಿಗೆ ಉಪಯೋಗ; Pipe shaped things used to hold tongs; useful to Blacksmith, Goldsmith;
- **—*ಕೊಳವೆ ಮಚ್ಚು*** : ಕೊಳವೆಯಾಕೃತಿಯ ಹಿಡಿಕೆಯುಳ್ಳ ಮಚ್ಚು; ಕಟ್ಟಿಗೆ, ಗಿಡ-ಮರಗಳ ರೆಂಬೆ ಕಡಿಯಲು ಬಳಕೆ. Pipe shaped hatchet with handle; used to cut wood, plant tree branches.

ಕೊಳವೆ ಬಾವಿ kol̤ave bāvi :

- ಕೆರೆ, ಕಾಲುವೆ, ನದಿ, ಹೊಳೆ, ಏತ ನೀರಾವರಿ ಯೋಜನೆಗಳಂತೆ ಕೊಳವೆ ಬಾವಿಯು ಒಂದು ನೀರಾವರಿ ಯೋಜನೆ; ಜನರ ಮೂಲಭೂತ ಸೌಕರ್ಯಕ್ಕೆ ನೀರೊದಗಿಸಲು, ಹೊಲ-ಗದ್ದೆಗಳಲ್ಲಿ ಬೆಳೆ ಬೆಳೆಯಲು ಕೊಳವೆ ಬಾವಿ ಸಹಕಾರಿ; ಯಂತ್ರಗಳು ಮತ್ತು ಯಾಂತ್ರಿಕ ಸಲಕರಣೆಗಳ ಪರಿಚಯವಿಲ್ಲದ ಕಾಲದಲ್ಲಿ ಕೊಳವೆ ಬಾವಿಗಳು ಇರಲಿಲ್ಲ; ಬಾವಿ ಕೊರೆಸಿ ಅದರಿಂದ ನಾಡಿನ ಜನರಿಗೆ ನೀರೊದಗಿಸುತ್ತಿದ್ದುದು, ಮಳೆಗಾಲದಲ್ಲಿ ಕೆರೆ-ಕಟ್ಟೆಗಳಿಗೆ ನೀರು ತುಂಬಿಸಿ ಸಾಕುಪ್ರಾಣಿಗಳು ಹಾಗೂ ಮನುಷ್ಯನ ಮೂಲಭೂತ ಸೌಲಭ್ಯಕ್ಕೆ ಬಳಸಿಕೊಳ್ಳುತ್ತಿದ್ದುದು ಕಂಡುಬಂದಿತು; ಕಾಲ

ಕ್ರಮೇಣ ಯಾಂತ್ರಿಕ ಯುಗದ ಪರಿಚಯದ ನಂತರ ಕೊಳವೆ ಬಾವಿ ವ್ಯವಸ್ಥೆ ಜಾರಿಗೆ ಬಂತು; Tube well is also a plan like tank, canal, river, rivulet, lift irrigation plan; tube wells are useful to arrange fundamental water facility to people; to grow crops in the field; No tube wells are existed when machines and machinical equipments are not introduced; only open wells and open tanks are fulfil the need of water;

- ಯಂತ್ರದಿಂದ ಬುವಿಯನ್ನು ಕೊರೆಸಿ ಯಾಂತ್ರಿಕ ಸಲಕರಣೆಗಳನ್ನು ಅಳವಡಿಸಿ ಅವುಗಳ ಮೂಲಕ ನೀರೊದಗಿಸುವ ವಿಧಾನವೇ ಕೊಳವೆ ಬಾವಿ; ಕೊರೆದ ಬಾವಿ, ಬೋರೆವೆಲ್, ಪಂಪ್‌ಸೆಟ್ ಎಂಬ ಹೆಸರುಗಳಿಂದಲೂ ಕರೆಯುವುದುಂಟು; The land bore by the machine in tube shape fix the motor in it, pump the water for drinking as well as agriculture it is called as `Koreda bavi', `Koḷave bavi', `Borewell', `Pumpset' etc;
- ಕೊಳವೆ ಬಾವಿಯ ಆಳದ ಅಂತರ ಅಂತರ್ಜಲದ ಮಟ್ಟವನ್ನು ಅವಲಂಬಿಸಿದೆ; ಹಿಂದೆ ೮೦ರಿಂದ ೧೦೦ಅಡಿಗಳನ್ನು ಕೊರೆಸುವಷ್ಟರಲ್ಲಿ ನೀರು ಸಿಗುತ್ತಿತ್ತು; ಇಂದು ೮೦೦ರಿಂದ ೧೦೦೦ಅಡಿಗಳಷ್ಟು ಅಂತರ ಅಂತರ್ಜಲದ ಮಟ್ಟ ತಲುಪಿದೆ; ಕಾರಣ ಇಳಿಮುಖದತ್ತ ಸಾಗಿರುವ ಮಳೆಯ ಪ್ರಮಾಣ ಮತ್ತು ಏರುಮುಖದತ್ತ ತಿರುಗಿರುವ ಜನಸಂಖ್ಯೆಯ ಮಟ್ಟ; The tubewell depth level depending on the underground water level; early days water found in 80 to 100 feet of depth; Nowadays it sink to 800 to 1000 feet depth; because of the diminishing of underground water level and rainfall; increase in the population;
- ಕೊಳವೆ ಬಾವಿಯಲ್ಲಿ ಎರಡು ಬಗೆ; ಒಂದು ಒತ್ತುವ ನಲ್ಲಿ ಅಂದರೆ ಕಯ್‌ನಿಂದ ಒತ್ತಿ ನೀರು ಬರಿಸುವ ವಿಧಾನ; ಮತ್ತೊಂದು ಬಟನ್ ಒತ್ತಿ ನೀರು ತೆಗೆಯುವ ವಿಧಾನ; ಮೋಟರ್, ಪಂಪ್, ಪೈಪು, ಸ್ಟಾರ್ಟರ್‌ಪೆಟ್ಟಿಗೆ, ಕೇಬಲ್ ವೈರ್‌ಗಳನ್ನು ಅಳವಡಿಸುವರು. Two kinds of tube wells: hand pump and machine lifted pump well.

ಕೊಳವೆ ಮೀನು koḷave mīnu :

- ಸಿಂಗ್ನಾತಿಫಾರ್ಮಿಸ್ ಗಣಕ್ಕೆ ಸೇರಿದ್ದು; ಸಿಂಗ್ನಾತಿಡೀ ಕುಟುಂಬ ವರ್ಗದ ಈ ಮೀನಿನ ಶಾಸ್ತ್ರೀಯ ನಾಮ ಫಿಸ್ಟುಲೇರಿಯ ವಿಲ್ಲೋರ; Belongs to sigmatti formed group;
- ಕಡಲು ದಂಡೆ ಅಥವಾ ತೀರದಲ್ಲಿ ದೊರಕುವ ಈ ಮೀನಿಗೆ 'ಕೊಳಲು ಮೀನು' ಎಂತಲೂ ಕರೆಯುವುದಿದೆ; ಹತ್ತರಿಂದ ಹದಿನೈದು ಅಂಗುಲ ಉದ್ದವಿದ್ದು ಜಲ ಸೂಕ್ಷ್ಮಜೀವಿಗಳು ಮತ್ತು ತೇಲು ಜೀವಿಗಳು ಇದರ ಆಹಾರ; It is found in the sea shore; it is called `Koḷave Meenu'; It is 10 to 15 inch long floating beings and micro beings are the food to them;
- ವಿಕಾರ ಸ್ವರೂಪದ ಮೀನು; ಹಾವುಮೀನಿನಂತೆ ತೆಳುವಾದ ದೇಹವನ್ನು ಹೊಂದಿದೆ; ಇದರ ಮೂತಿ ಉದ್ದ ಕೊಳವೆಯಂತೆ ಮುಂಭಾಗ ಚಾಚಿಕೊಂಡಿದೆ; ಚರ್ಮದ ಮೇಲೆ ಹುರುಪೆಗಳಿಲ್ಲದ ಈ ಮೀನಿನದು ಪುಟ್ಟ ಬಾಯಿ; ಸೂಕ್ಷ್ಮಾಕಾರದ ಹಲ್ಲುಗಳು; ಬಾಲದಲ್ಲಿ ಈಜುರೆಕ್ಕೆ ಉಂಟು; ಮಧ್ಯಭಾಗದಲ್ಲಿರುವ ಈಜುರೆಕ್ಕೆ ಕಡ್ಡಿಗಳು ನೀಳವಾಗಿ ಕಾಣುತ್ತವೆ; ದೇಹದೊಳಗೆ ವಾಯುಕೋಶವಿರುವ ಈ ಮೀನು ಪ್ರಾಣಿಗಳಿಗೆ ಉಪಯುಕ್ತವೋ, ಇಲ್ಲವೋ ತಿಳಿಯದು. A fish of ugly form; has slender physical form like snake fish; the face is long like extended tube it has no shells on the skin; it has little mouth; very micro teeth; swimming wing in the tail; the centre swim wing sticks; looks very neat; it has air cell in the body.

ಕೊಳಾಕನ ಸೊಪ್ಪು koḷākana soppu :

- ಸಾಂಬಾರು, ಪಲ್ಯ ಮಾಡಲು ಉಪಯೋಗವಾಗುವ ಒಂದು ವಿಧದ ಸೊಪ್ಪು; ಮಲೆನಾಡಿನಲ್ಲಿ ಸ್ವಾಭಾವಿಕವಾಗಿ ಬೆಳೆಯಬಲ್ಲದು; ಮಳೆಗಾಲದಲ್ಲಿ ಯತೇಚ್ಚವಾಗಿ ಬೆಳೆಯುವ ಸೊಪ್ಪು; A kind of leaf used to make curry; it grows naturally in Malnad area in rainy season;

- ಇದರ ಕುಡಿಗಳನ್ನು ಕತ್ತರಿಸಿ ಅಥವಾ ಉಗುರಿನಿಂದ ಚಿವುಟಿಕೊಂಡು ಚೆನ್ನಾಗಿ ತೊಳೆದು ಹೆಸರುಬೇಳೆಯ ಜೊತೆಗೆ ಹಾಕಿ ಮಾಸಾಲೆ ಸಾಂಬಾರು ತಯಾರಿಸುವರು; ತಿನ್ನಲು ರುಚಿಕರವಾದುದು; The sprouts of this used to make curry with green gramdal; very tasty to eat;
- ಗಿಡವಾಗಿ ಬೆಳೆಯುವ ಅಥವಾ ನೆಲದಲ್ಲಿ ಹಬ್ಬುವ ಬಳ್ಳಿಗಳಿಗೆ ಕುಡಿ ಚಿವುಟಿದರೆ ಅವುಗಳ ಕಂಕುಳಲ್ಲಿ ಕವಲು ಹೊಡೆದು ಗಿಡ ಅಥವಾ ಬಳ್ಳಿ ಸೊಂಪಾಗಿ ಬೆಳೆಯುತ್ತದೆ; ಇದರಿಂದ ಮುಂದೆ ಉತ್ತಮ ಇಳುವರಿ ಸಿಗುವುದುಂಟು; It grows as plant or spread on the ground, cut the sprout it grows by sprouts on the sides of the creaper; so it grows very thick and gives yield;
- ಬಯಲುಸೀಮೆಯಲ್ಲಿ ಕುಂಬಳಬಳ್ಳಿ, ಹಸಿಕಡ್ಲೆ ಗಿಡಗಳಿಗೆ ಕುಡಿ ಕೀಳುವುದು ಅಥವಾ ಚಿವುಟುವುದಿದೆ; ಇವೂ ಕೂಡ ಸಾಂಬಾರು ಅಥವಾ ಪಲ್ಯ ತಯಾರಿಕೆಗೆ ಉಪಯೋಗ; ಇವು ವರ್ಷಕ್ಕೊಮ್ಮೆ ಸಿಗುವ ಅಪರೂಪದ ಆಹಾರ ಪದಾರ್ಥವೂ ಹೌದು; ಬಸುರಿ–ಬಾಣಂತಿಯರು ಇಷ್ಟಪಟ್ಟು ತಿನ್ನುವುದಿದೆ; In plainland the sprouts of pumpkin creeper and Bengalgram plant cut to prepare curry; it likes by the pregnant woman;
- ಮಲೆನಾಡಿನಲ್ಲಿ ಸಿಗುವ ಕೊಳಾಕನ ಸೊಪ್ಪು ಬಯಲುಸೀಮೆಯಲ್ಲಿ ಸಿಗುವ ಇಂಥದ್ದೇ ಒಂದು ವಿಧದ ಸೊಪ್ಪು ಆಗಿರಲು ಸಾಧ್ಯವಿರಬಹುದು?. May be it is found in Malnad, plainland are the same.

ಕೊಳಾಯಿ koḷāyi :

- ನಳ ಎಂಬ ಸಂವಾದಿ ರೂಪವು ರಾಯಚೂರು ಭಾಗದಲ್ಲಿ ಕಂಡುಬಂದಿದೆ; It has another form in raichur region; Nala;
- 'ನಲ್ಲಿ' ಎಂಬರ್ಥದಲ್ಲಿ ಪದಬಳಕೆ; ದೊಡ್ಡ ಕೊಳಗ (ಬೆಂ.ಗ್ರಾ.ಜಿ); *ಪ್ರ: 'ಕೊಳಾಯಿಯಿಂದ ನೀರ್ ತರಕೋಗ್ಯಾನ'*; Used in the meaning nalli(tap);
- 'ಕೊಳಾಯಿ'ಯನ್ನು 'ಕೊಳವಿ' ಪದಕ್ಕೆ ಸಮನಾದುದೆಂದು ಹೇಳಲಾಗಿದೆ. Koḷai is equal word to Koḷavi(tube).

ಕೊಳಿಕೆ koḷike :

- ರವಿಕೆಯ ಗುಂಡಿ ಅಥವಾ ಕೊಂಡಿ, ಗುಬ್ಬಿ(ಬಟನ್); ಮುಂಭಾಗ ಅಥವಾ ಹಿಂಭಾಗ ಅಳವಡಿಸಿರುತ್ತಾರೆ; Button of Jacket; it is fixed in front or back part of the Jacket or blouse;
- ***—ಕೊಳಿಕೆ ಮೇದಲೆ*** : ಸೀರೆ ಉಡುವ ಒಂದು ವಿಧಾನ; ಸೆರಗನ್ನು ಕುತ್ತಿಗೆಯ ತಳಭಾಗದಲ್ಲಿ ಗಂಟು ಹಾಕಿಕೊಂಡು ತೊಡುವ ಶೈಲಿ; It is a kind of wearing saree; It is a style to wear the edge of the saree tie around the neck;
- ಸೆರಗು ಎದೆಯ ಮುಂಭಾಗ ಬರುವಂತೆ ಉಡುವುದು; ಹಿಂಭಾಗ ಬೆನ್ನ ಮೇಲೆ ಬೀಳುವಂತೆ ಉಡುವುದು ಮೊದಲಾದ ಶೈಲಿಗಳಿವೆ; The edge of the saree will come on the breast or back of the body; is a style;
- ಆಧುನಿಕತೆ, ನಾಗರಿಕತೆಯ ಮಡಿಲಲ್ಲಿರುವ ಇಂದಿನ ಸಂದರ್ಭದಲ್ಲಿ ಅವರವರ ಅಭಿರುಚಿಗೆ ತಕ್ಕಂತೆ ಸೀರೆ ಉಡುವ ಕಲೆಯನ್ನು ರೂಢಿಸಿಕೊಂಡಿರುವುದು ಕಂಡುಬಂದಿದೆ; In modern culture the people wear the saree according to their taste;
- ಕೊರಗರು ಆಭರಣ ಮತ್ತು ಕುಪ್ಪಸದ ಬದಲು ಉತ್ತರೀ ಅಂತ ಬಟ್ಟೆಯೊಂದನ್ನು ಬಲಗಡೆಯಿಂದ ಎಡಗಡೆಗೆ ತಂದು ಭುಜದ ಮೇಲೆ ಗಂಟಾಕಿಕೊಳ್ಳುವುದು. The Koraga community people wear the upper garment from right to left and put a knot on the shoulder instead of wear the ornaments.

ಕೊಳಿಮಿ koḷimi :

- ತಡೆಯೊಡ್ಡುವಿಕೆ; ಅಡಚಣೆ ಉಂಟು ಮಾಡುವುದು; ವಿಘ್ನ; 'ಆಗೋ ಕೆಲಸಕ್ಕೆ ಕಲ್ಲಾಕ್ದ' ಎಂಬರ್ಥದಲ್ಲಿ ಪದಬಳಕೆ; Stop; Hinder;
- ಅಡಚಣೆ; Hinder; ಮಾಡುವ ಕೆಲಸಕ್ಕೆ ತಡೆ (ಬಾ.ಜಿ). Stop the work.

ಕೊಳಿವಿ ಕರಿಣಿ koḷivi kariṇi :

- 'ಕೊಳವೆ ಕರಣಿ' ಎಂಬುದು ಜನಪ್ರಿಯ ಹೆಸರು; ಕರಣಿಯ ಒಂದು ಬಗೆ; ಇದರ ಮಧ್ಯಭಾಗ ಕೊಳವೆಯಾಕೃತಿಯಲ್ಲಿ ವಿನ್ಯಾಸಗೊಂಡಿರುವುದರಿಂದ ಈ ಹೆಸರು ಬಂದಿರಬಹುದು; `Koḷavi karaṇi' is a famous name; it is a kind among `karṇis'; the centre of this instrument is in tube shape; so it is called `Koḷavi Karaṇi';
- ಸಾಮಾನ್ಯವಾಗಿ ಕರಣಿಯ ರಚನೆ ಚಪ್ಪಟೆಯಾಕಾರದ್ದು; ಹಿಡಿಕೆ ಹಿಂಭಾಗದಲ್ಲಿದ್ದು ಮಧ್ಯಭಾಗ ಬಾಗಿರುತ್ತದೆ; ಗಾರೆ ಕೆಲಸದವರು ಬಳಸುವ ಉಪಕರಣ; ಗಾರೆ ಬಡಿಯಲು, ತೀಡಲು, ಸಮಗೊಳಿಸಲು, ನುಣುಪುಗೊಳಿಸಲು ಉಪಯೋಗ; ಆದರೆ ಎರಡು ಗೋಡೆಯ ಮೂಲೆಯನ್ನು ನಯಗೊಳಿಸಲು ಇದರಿಂದ ಸಾಧ್ಯವಾಗದು; ಅದಕ್ಕಾಗಿಯೇ ಇಂತಹ ಒಂದು ಕರಣಿಯ ತಯಾರಿಕೆಯಾಗಿರುವುದು; Structure of `karaṇi' is in flat shape, handle fixed in the back, the middle part is in bending shape; this is used by the masoners;
- ಕರಣಿಯ ಚಪ್ಪಟೆಯಾಕಾರದ ಮಧ್ಯದ ಭಾಗವನ್ನು ಗೋಡೆಯ ಮೂಲೆಗೆ ಹೊಂದಿಕೆಯಾಗುವಂತೆ ಬಾಗಿಸಿ ಸಿದ್ಧಪಡಿಸುವರು; ಇದನ್ನು ಗೋಡೆಯ ಮೂಲೆಗೆ ಹಿಡಿದರೆ ಎರಡು ಭಾಗಕ್ಕೂ ಸಮನಾಗಿರುತ್ತದೆ; ಇದರಿಂದ ತೀಡಿದರೆ ಗೋಡೆಯ ಮೂಲೆಯೂ ನಯಗೊಳ್ಳುತ್ತದೆ; ಹೀಗೆ ಕರಣಿಗಳಲ್ಲಿ ಹಲವು ಪ್ರಕಾರಗಳಿರುವುದನ್ನು ಗುರುತಿಸಲಾಗುತ್ತದೆ; The middle part of flat karani bended to adjust the corner wall; by this instrument both the corner of the wall will be make nice and level; used to fix the concret, level, nice, the floor; but it cannot make the corner nice, another instrument used for that;
- ಕೊಳವೆ ಕರಣಿ>ಕೊಳಿವಿ ಕರಿಣಿ; ಇಲ್ಲಿನ 'ಅ'ಕಾರ 'ಎ'ಕಾರಗಳಿಗೆ 'ಇ'ಕಾರ ಪ್ರಾಪ್ತವಾಗಿರುವುದು ಪ್ರಾದೇಶಿಕ ಭಾಷಾ ಭಿನ್ನತೆಯಿಂದ ಎಂಬುದು ಗಮನಿಸಬೇಕಾದ ಅಂಶ; ಇದು ಉತ್ತರಕರ್ನಾಟಕ, ದಕ್ಷಿಣಕರ್ನಾಟಕದ ಜನರ ಭಾಷಾ ಉಚ್ಚಾರಣೆಯಲ್ಲಿ ಕಂಡುಬರುವ ವ್ಯತ್ಯಯ; ಇದೊಂದು ಸಹಜ ಪ್ರಕ್ರಿಯೆ.

ಕೊಳು(ಳು)ಗಾಲ koḷu(ḷu)gāla :

- ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲ್ಲೋಕಿನ ಕ್ರಿ.ಶ.೧೫೦೧ರ ೩೩ನೇ ಶಾಸನದಲ್ಲಿ ಇದರ ಉಲ್ಲೇಖ ಬರುತ್ತದೆ; The name Koḷugala referred in the inscription 33rd of 1501 Heggadadevana kote taluk Mysore district;
- 'ಕೊಳುಗಾಲ'ಕ್ಕೆ 'ಕೊಳ್' ಮೂಲವಿರುವಂತೆ ತೋರುತ್ತದೆ; 'ಕೊಳಿ(ಟಿ)ಗಾಲ' ರೂಪವೂ ದೊರೆಯುತ್ತದೆ, ಕೊಟಿಗಾಲ=ಒಂದು ಊರು(ಕ.ನಿ);
- 'ಕೊಳಗಾಲ' ರೂಪವೂ ಇದ್ದಿರಬಹುದು; ಕೊಳ+ಗಾಲ; 'ಕೊಳ' ಎಂದರೆ ಸರೋವರ, ನೀರು ತುಂಬಿರುವ ಕಟ್ಟೆ; 'ಗಾಲ' ಎಂದರೆ ಹರಿಯುವುದು ಎಂದು ಅರ್ಥ; ನೀರು ಹೊಮ್ಮಿ ಪ್ರವಹಿಸುವುದು ಎಂದು ಆಗುತ್ತದೆ; ಅಂದರೆ ನೀರಿನ ಸೆಲೆ ಇದ್ದ ಹಿನ್ನೆಲೆಯಲ್ಲಿ ಈ ಸ್ಥಳನಾಮ ಬಂದಿರಬಹುದು; `Koḷ' is the origin of `Koḷugala'; May be the `Koḷagala' is in practice;
- 'ಕೊಳಗಾಲ'ದ ರಾಮಲಿಂಗ ದೇವರಿಗೆ ಅಂಗಭೋಗರಂಗಭೋಗಕ್ಕೆ ದತ್ತಿ ಮಾಡಿದ್ದು ಶಾಸನದಲ್ಲಿ ಉಲ್ಲೇಖವಿದೆ. It is endowed to Angabhograngabhoga of `Koḷagala Ramalinga' god

(E.C- ೩; ಮೈ.ಜಿ.)

ಕೊಳೆ koḷe :

- ದ್ರಾವಿಡ ಭಾಷೆಗಳಲ್ಲಿ ಬಹಳ ಕಡೆ 'ಕು'ಯಿಂದ ಆರಂಭವಾಗುವ ಪದಗಳೇ ಸಿಕ್ಕುವುದರಿಂದ ಮೂಲರೂಪ 'ಕುಟ್'/ಕುಟ್ಟೈ' ಆಗಿದ್ದಿತು; ಆಮೇಲೆ 'ಕೊಳೆ' ರೂಪ ಕಾಣಿಸಿಕೊಂಡಿರಲು ಸಾಧ್ಯ; In Dravidian languages the words found begins by `Ku', so the original form `Kuḷai' later changes to `Koḷe';
- ಅಶುದ್ಧವಾದುದು; ಅಶುಚಿತ್ವದಿಂದ ಕೂಡಿರುವಂಥದು; ಮಲಿನವಾದುದು; ಮಡಿಯಿಲ್ಲದ್ದು; ದುಂಬು-ದೂಳುಗಳಿಂದ ಕೂಡಿರುವಂಥದು; ಮನುಷ್ಯನ ಬಟ್ಟೆ, ಮೈ, ಕೈ

ಕೊಳೆಯಾಗುವುದು; ಕೆಟ್ಟು ನಾರುವುದು; ಹೊಲಸು; ಅಸಹ್ಯವಾದುದು; ಹಳಸಲು ಅಥವಾ ಗಬ್ಬು ನಾರುವ ವಾಸನೆಯುಳ್ಳದ್ದು; ಬಾಡು; ಮೆತ್ತಗೆ ಮಾಡು; ರಾಡಿ; ಬೇರು, ಹುಲ್ಲು ಮೊದಲಾದ ಕಸ; Impure, unclean, dirty; with dust cloth, body, hands are dirty; stink smell etc;

- ಪ್ರಗತಿ ಇಲ್ಲದೆ ಇದ್ದ ಸ್ಥಾನದಲ್ಲಿಯೇ ಇರುವುದು; ಅಭಿವೃದ್ಧಿರಹಿತ ಪರಿಕಲ್ಪನೆ; Stay at a place without development; undevelopment imagination;
- ಸೇವೆಯಿಂದ ವರ್ಗಾವಣೆ ಇಲ್ಲದೆ ಸುಮಾರು ವರ್ಷಗಳ ಕಾಲ ಇದ್ದ ಸ್ಥಳದಲ್ಲಿಯೇ ಇರುವುದು; Work in the same place for a long time without transfer;
- ರಹಸ್ಯ ಸ್ಥಳದಲ್ಲಿ ಅಗತ್ಯವಿರುವವರನ್ನು ಸುಮಾರು ದಿವಸಗಳವರೆಗೆ ಇರಿಸುವುದು; *ಪ್ರ: 'ಅವನನ್ನ ಗೌಪ್ಯ ಜಾಗದಲ್ಲಿ ಕೊಳೆ ಹಾಕಿದ್ದರು'*; Kept a person in a place for long time; keep him in a secret place for a long time;
- ತಿಪ್ಪೆಯಲ್ಲಿ ಕೊಳೆತು ಹದಸ್ಥಿತಿಗೆ ಬರುವ ಗೊಬ್ಬರ; ಅನುಪಯುಕ್ತ ತ್ಯಾಜ್ಯ ಪದಾರ್ಥಗಳನ್ನು ಒಂದೆಡೆ ಹಾಕಿ ಸುಮಾರು ದಿವಸಗಳವರೆಗೆ ಹಾಗೆಯೇ ಬಿಟ್ಟರೆ ಕೊಳೆತು ನಾರುವ ಸ್ಥಿತಿಗೆ ತಲುಪುವುದು; ಕೊಳೆತ ಪದಾರ್ಥ ಕಪ್ಪುಬಣ್ಣಕ್ಕೆ ತಿರುಗುವುದಿದೆ; The manure rot in dump till tempered state; waste things dump for some days turns to rot;
- ಸತ್ತ ವ್ಯಕ್ತಿ, ಅತಿಯಾಗಿ ಹಣ್ಣಾದ ಪದಾರ್ಥಗಳನ್ನು ಹೆಚ್ಚಿನ ದಿವಸ ಹಾಗೆಯೇ ಇಟ್ಟರೆ ಕೊಳೆಯುವುದಿದೆ; Dead person, ripened fruits are kept for a long time; they will rot;
- ಕೊಳಚೆ ನೀರು ಸಂಗ್ರಹವಾಗುವ ಜಾಗ; Sewage water stored in a place;
- ಬುಡಕಟ್ಟು ಸಮುದಾಯಗಳಲ್ಲಿ ಮೈನೆರೆದ ಹುಡುಗಿಗೆ ಕೊಳೆಯಾದಳೆಂದು, ಹುಟ್ಟು-ಸಾವಿನ ಸೂತಕಕ್ಕೆ ಕೊಳೆಯಾಯಿತೆಂದು ಕರೆಯುವುದಿದೆ; Matured girl/menses women consider to be dirt(Koḷe)/impure in tribal community;
- ಸರಾಯಿ ತಯಾರಿಸಲು ಕೊಳೆಯಿಸಿದ ಬೆಲ್ಲ-ಹಣ್ಣುಗಳ ಮಿಶ್ರಣ; A mix of rotten jaggory and fruit for preparation of liquor;
- ಕೊಡವರ ಒಂದು ಪ್ರಕಾರದ ತಿಂಡಿ; ನೆನೆಸಿದ ಅಕ್ಕಿಯೊಂದಿಗೆ ಹಲಸಿನ ಹಣ್ಣಿನ ತೊಳೆಯನ್ನು ಹಾಕಿ ಚೆನ್ನಾಗಿ ರುಬ್ಬಿಕೊಳ್ಳುವುದು; ನಂತರ ಹುರಿದ ಎಳ್ಳಿನೊಂದಿಗೆ ಸಕ್ಕರೆ, ಏಲಕ್ಕಿ ಪುಡಿ, ತೆಂಗಿನತುರಿಯನ್ನು ಮಿಶ್ರಣ ಮಾಡಿ ಇದನ್ನು ರುಬ್ಬಿದ ಹಿಟ್ಟಿ(ಸಂಪಣ)ನೊಂದಿಗೆ ಸೇರಿಸಿ ಕಲಸಿ ಒಂದೊಂದೇ ಎಲೆಯಲ್ಲಿ ಇಟ್ಟು ಮಡಚಿ ಬಿಸಿನೀರಿನ ಹಬೆಯ ಮೇಲಿಟ್ಟು ಬೇಯಿಸುವುದು; ಇದು ತಿನ್ನಲು ಉಪಯೋಗ; A kind of stuff of Kodavas; grind the wet rice with jackfruit; later mix the fried sesame, sugar, cardamom powder, coconut pieces; then cover in the leaf, boil in steam, it is ready to eat;
- 'ಒಕ್ಕಲಿಲ್ಲದ ಊರು ಕೊಳೆತು ನಾರುವ ನೀರು' ಎಂಬುದು ಸಂತಕವಿ ಕನಕದಾಸರ ಉದ್ಘೋಷ (ಕ.ನಿ); 'A village without habitants, filthy water are the same'- is the statement of Kanakadasa;
- 'ಕ್ವಾಣೆ ಕೂಸು ಕೊಳೀತು ಓಣಿ ಕೂಸು ಬೆಳೀತು'(ಗಾ); *ಪ್ರ: 'ಬೇಸಿಗೆಯ ಧೂಳಿನಿಂದಾಗಿ ಬಟ್ಟೆಯೆಲ್ಲ ಕೊಳೆಯಾಯಿತು'*;
- ತಮಿಳಿನಲ್ಲಿ 'ಕುೞೈ', ಮಲೆಯಾಳಂನಲ್ಲಿ 'ಕೞಯು', ತುಳುವಿನಲ್ಲಿ 'ಕುರಿ', 'ಕುಳಿ', 'ಕುಲಿ' ಮತ್ತು ತೆಲುಗಿನಲ್ಲಿ 'ಕುಳ್ಳು', 'ಕ್ರುಳ್ಳು' ಎಂಬ ರೂಪಗಳ ಬಳಕೆ ಇದೆ(ದ್ರಾ.ಭಾ.ಜ್ಞಾ.ಪ.ಕೋ); In Tamil `Kuḷai'; in Malayalam `Kaḷayu'; in Tulu `Kuri',`Kuli'; in Telugu `Kuḷḷu', `Kruḷḷu' forms are existed;
- **—ಕೊಳೆಹಾಕು** : ಮರ, ಕಟ್ಟಿಗೆಯ ತುಂಡುಗಳನ್ನು ಕೊಳೆ ಹಾಕುವುದು; ತೆಂಗಿನ ಮಟ್ಟೆ, ಸೆಣಬು, ಕತ್ತಾಳೆಯನ್ನು ನೀರಿನಲ್ಲಿ ಕೊಳೆ ಹಾಕಿ ನಾರು ತೆಗೆದು ಹಗ್ಗ ಹೊಸೆಯುವುದು; Wooden pieces are kept in water to rot; fibrous coat of coconut, gunny etc kept in water to rot to get thread to prepare rope;

- ***—ಕೊಳೆರೋಗ*** : ಗಿಡ–ಗೆಂಡೆ, ವಿವಿಧ ದವಸ–ಧಾನ್ಯಗಳ ಬೆಳೆಗಳಿಗೆ ತಗುಲುವ ಒಂದು ಪ್ರಕಾರದ ರೋಗ; ಬೂದು ಬಣ್ಣಕ್ಕೆ ತಿರುಗುವುದಿದೆ; A kind of disease to plants and trees; turns into ash colour;
- ***—ಕೊಳೆಅಡಿಕೆ*** : ಅಡಕೆ ಬೆಳೆಗೆ ಮಳೆಗಾಲದಲ್ಲಿ ತಗಲುವ ಶಿಲೀಂಧ್ರ ಸಂಬಂಧಿ ರೋಗ; ಕೊಳೆರೋಗದಿಂದ ಉದುರಿ ಬಿದ್ದ ಅಡಕೆಗೆ 'ಕೊಳೆಯಡಿಕೆ' ಎನ್ನುವರು; Boost or mushroom disease to arecanut tree; arecanut fell down by this disease is called `Koḷeyadike';
- ***—ಕೊಳೆಮದ್ದು*** : ಅಡಕೆ ಕೊಳೆರೋಗದ ನಿಯಂತ್ರಣಕ್ಕೆ ಔಷಧ; It is the medicine to control the disease;
- ***—ಕೊಳೆಪಂಪು*** : ಅಡಿಕೆ ಗೊನೆಗೆ ಕೊಳೆಮದ್ದು ಸಿಂಪಡಿಸುವ ಸಾಧನ; An instrument to spray the medicine to arcanut bunch;
- ***—ಕೊಳೆ ಹಪ್ಪಟ್ಟೆ*** : ಇದು ಕಚ್ಚಿದ ಭಾಗ ಕೊಳೆಯುತ್ತ ಹೋಗುತ್ತದೆ; ಒಂದು ಬಗೆಯ ಜಂತು. It is a kind of creature, if it bites that part will become rotting.

ಕೊಳೆಯಾ ಕೊರಾಯೆರ್ koḷeyā korāyer:

- ಮದುವೆ ಸಂದರ್ಭದಲ್ಲಿ ರೂಢಿಯಲ್ಲಿರುವ ಒಂದು ಆಚರಣೆ; ಮದುಮಕ್ಕಳ ಎಂಜಲು ತಾಂಬೂಲವನ್ನು ಪರಸ್ಪರರಿಗೆ ತಿನ್ನಿಸುವುದು ಇಲ್ಲಿನ ವಿಧಾನ; 'ಲಂಬಾಣಿ' ಬುಡಕಟ್ಟು ಸಮುದಾಯದವರಲ್ಲಿ ರೂಢಿ; A kind of traditional practice at the time of marriage; share the same Tamboola by the bride and groom at each other is the tradition in `Lambani' tribal community;
- ಮದುಮಗ ತನ್ನ ಬಾಯಿಯಿಂದ ಚೆನ್ನಾಗಿ ಜಗಿದ ತಾಂಬೂಲವನ್ನು ಮದುಮಗಳಿಗೂ ಹಾಗೆಯೇ ಮದುಮಗಳು ಅವಳ ಬಾಯಿಯಿಂದ ಚೆನ್ನಾಗಿ ಜಗಿದ ತಾಂಬೂಲವನ್ನು ಮದುಮಗನಿಗೂ ತಿನ್ನಿಸುವುದು ಇದರ ಪದ್ಧತಿ; Tambula or betel leaf and arecanut chewed by bride and groom shared it each other is a custom of `Lambani' tribals;
- ಇಬ್ಬರೂ ನಗುನಗುತ್ತಾ, ಸಂತೋಷದಿಂದ ತಿಂದರೆ ಅವರ ಮುಂದಿನ ದಾಂಪತ್ಯ ಜೀವನ ಸುಖಮಯವಾಗಿ, ಹೊಂದಾಣಿಕೆಯಿಂದ ಕೂಡಿರುತ್ತದೆ ಎಂದೂ, ಒಂದು ವೇಳೆ ಸಂಕೋಚ ಅಥವಾ ಜಿಗುಪ್ಸೆ, ಮುಜುಗರದಿಂದ ತಿಂದರೆ ಅವರ ದಾಂಪತ್ಯ ಬದುಕು ಸುಗಮವಾಗಿರುವುದಿಲ್ಲವೆಂದು ನಂಬುತ್ತಾರೆ; If they share happily, their married life will be happy and understanding or if they have any hesitation the life will not be happy is the belief of them;
- ಇವು ಮೂಢನಂಬಿಕೆಗಳಾದರೂ ಬುಡಕಟ್ಟು ಸಮುದಾಯಗಳಲ್ಲಿ ಇಂಥವು ಹಾಸುಹೊಕ್ಕಾಗಿವೆ ಎಂದು ಹೇಳಬಹುದು. These are all blind belief, but they are all part and parcel of the life of tribal community.

ಕೊಳೆಸಡಿ koḷesaḍi :

- ಒಂದು ಬಗೆಯ ಏಡಿಯ ಪ್ರಕಾರಕ್ಕೆ ಸೇರಿದ್ದು; ಗಾತ್ರದಲ್ಲಿ ಚಿಕ್ಕದಾಗಿದ್ದು ಸಾಂಬಾರು ತಯಾರಿಸಲು, ತಿನ್ನಲು ಉಪಯೋಗ; ಎಸಡಿ, ಏಡಿ, ನಳ್ಳಿ ಎಂಬ ಸಂವಾದಿ ರೂಪಗಳ ಬಳಕೆ ಇದೆ; Belongs to a kind of crab species; small in size, used to prepare curry to eat; other forms are Esaḍi, Eḍi, Naḷḷi;
- ಕೊಳ್ + ಎಸಡಿ > ಕೊಳೆಸಡಿ; ಎಸಡಿ=ನಳ್ಳಿ; ಕೊಳ್='ಚಿಕ್ಕ' ಎಂದು ಅರ್ಥ ಇರಬಹುದೆ?.

ಕೊಳೆಹೊಯ್ koḷehoy :

- ಕಟ್ಟಿದ ಗುಡಿಸಲಿನ ಮೇಲ್ಛಾವಣಿಗೆ ಬೊದೆಹುಲ್ಲನ್ನು ಹೊದಿಸುವ ಕ್ರಮ, ಹಿಂದೆ ಗ್ರಾಮೀಣರಲ್ಲಿ ರೂಢಿಯಲ್ಲಿತ್ತು; ಹೀಗೆ ಹುಲ್ಲು ಹೊದಿಸಿದ ನಂತರ ಅದರ ಮೇಲೆ ಒಂದು ಬಿದಿರಿನ ಹಚ್ಚೆ ಹಾಕಿ ಒಳಭಾಗದ ಬಿದಿರಿನ ಗಳುವೂ ಸೇರಿದಂತೆ ಒಂದು ನಾರು ಹಾಕಿ ಬಿಗಿಯುತ್ತಿದ್ದರು; ಈ ಕ್ರಿಯೆಯಲ್ಲಿ ನಾರು ತೂರಿಸಲು ಬಿದಿರಿನ ಹಚ್ಚೆಗೆ ಮಾಡುತ್ತಿದ್ದ ರಂಧ್ರಕ್ಕೆ 'ಕೊಳೆಹೊಯ್' ಎಂದು ಕರೆಯುವರು; To cover the haystalk on the roof of the hut;

it was in practice in olden days; It has used as needle to wrap the roof with thread or any other rope;

- ಮೇಲ್ಛಾವಣಿಯ ಹುಲ್ಲು ಗಾಳಿಗೆ ಹಾರದಿರಲಿ, ಮಳೆ ನೀರು ಹರಿದು ಹೋಗುವಂತೆ ಬಿಗಿಯಾಗಿರಲಿ ಎಂಬ ಉದ್ದೇಶದಿಂದ ಹುಲ್ಲು ಹೊದಿಸುತ್ತಿದ್ದರು. The main intension is to avoid the roof to flow away by the wind at the time of rainy season and it made water to flow out easily.

ಕೊಳ್ಳ koḷḷa :

- ಕೊರಳು, ಕುತ್ತಿಗೆ ಎಂಬರ್ಥದಲ್ಲಿಯೂ ಪದಬಳಕೆ; *ಪ್ರ: 'ದನಗಳ ಕೊಳ್ಳ ಹರಿ ಬಿಚ್ಚು*; Used in the meaning of neck, throat;
- ಸಣ್ಣ ಹಳ್ಳ ಅಥವಾ ಹೊಂಡ; ಸಮುದ್ರದ ಅಂಚಿನಲ್ಲಿರುವ ತಗ್ಗಾದ ಪ್ರದೇಶ; ಅರಲುಮಣ್ಣು ಸಂಚಿತ ಈ ನೆಲದಲ್ಲಿ ಸದಾಕಾಲ ನೀರು ನಿಂತಿರುತ್ತದೆ(ದ.ಕ); Small branch or put a low space on the edge of the sea; water is always in this place;
- ಕಂದರ; ತುಂಬಾ ಆಳವಾದ ಹೊಂಡ; Trench, very deep pit;
- 'ಹಳ್ಳ–ಕೊಳ್ಳ' ನುಡಿಗಟ್ಟಾಗಿ ಬಳಕೆ ರೂಪ; `Halla-Kolla' is used as an idiom;
- ತುಳುವಿನಲ್ಲಿ 'ಕೊಲವೆ' ಎಂಬ ರೂಪದ ಬಳಕೆ ಇದೆ(ದ್ರಾ.ಭಾ.ಜ್ಞಾ.ಪ.ಕೋ); *ಪ್ರ: 'ಎಲ್ಲಾದ್ರು ಹಳ್ಳ–ಕೊಳ್‌ದಲ್ ಬಿದ್ದಿರ್ಬೇಕು ನೋಡ್ರಿ*'; In Tulu the form `Kolave' used;
- ಉರಿಯುವ ಸೌದೆಯ ಕಟ್ಟಿಗೆ; Burning wood;
- —***ಕೊಳ್ಳಕೆ*** : ಹೊಲದಲ್ಲಿರುವ ತಗ್ಗಾದ ಪ್ರದೇಶ; ನೀರು ನಿಲ್ಲುವ ಸ್ಥಳ(ರಾಮ.ಜಿ). Low/corn place in the field; a place water stored.

ಕೊಳ್ಳಗೆರೆ koḷḷagree :

- ಮೈಸೂರು ಜಿಲ್ಲೆ ಕೊಳ್ಳೇಗಾಲ ಕ್ರಿ.ಶ.೯ನೇ ಶ.ದ ೩೮ನೇ ಶಾಸನದಲ್ಲಿ ಈ ಪದದ ಪ್ರಸ್ತಾಪವಿದೆ; This word referred in 38th inscription of 9th century AD Kollegala taluk Mysore district;
- ಕೊಳ್ಳ+ಕೆರೆ>ಕೊಳ್ಳಕೆರೆ>ಕೊಳ್ಳಗೆರೆ(ಕ>ಗ ಆಗಿದೆ);
- 'ಕೊಳ್ಳ' ಎಂದರೆ ತಗ್ಗಾಗಿರುವ ಪ್ರದೇಶ; ಗೆರೆ=ಕೆರೆ; ತಗ್ಗು ಪ್ರದೇಶದಲ್ಲಿರುವ ಕೆರೆ ಇರುವ ಊರಾಗಿರಬಹುದು; ಭೌತಿಕ ಹಿನ್ನೆಲೆಯಲ್ಲಿ ಬಂದ ಸ್ಥಳನಾಮ; ನಿಸರ್ಗವಾಚಿ ಸ್ಥಳನಾಮವೆಂದರೂ ಆದೀತು; `Koḷla' means low lying area; may be it is the village where the tank is;
- 'ಹಳ್ಳಕೊಳ್ಳ' ಎಂಬ ರೂಪವೇ ಇದೆ; `duplication' ಆದರೂ ತುಂಬ ಆಳವಾಗಿರುವ ಪ್ರದೇಶ ಎಂದು ಅರ್ಥ ಮಾಡಬಹುದು; This name on the basis of physical features;
- 'ಕೊಳ್ಳಗೆರೆ'ಯ ಆದಿತ್ಯ ಗೃಹ (ಬಹುಶಃ ಸೂರ್ಯ ದೇವಾಲಯ ಇರಬೇಕು) ನಂದಾದೀಪಕ್ಕೆ ಕಾಮಯ್ಯ, ಸಮ್ಪಯನು ದಾನ ಮಾಡಿದ ವಿಚಾರವಿದೆ. The matter about the donation given by Kamaiah, Sampaiah to Adityagriha Nandadeepa.

(E.C- ೪; ಮೈ.ಜಿ.)

ಕೊಳ್ಳಿ koḷḷi :

- ಕೊಂಡುಕೊಳ್ಳಿ, ಪಡೆದುಕೊಳ್ಳಿ, ತೆಗೆದುಕೊಳ್ಳಿ, ಹಿಡಿದುಕೊಳ್ಳಿ, ಕಳೆದುಕೊಳ್ಳಿ, ತಂದುಕೊಳ್ಳಿ ಎಂಬರ್ಥದಲ್ಲಿ ಪದಬಳಕೆ ಇದೆ; The word use in the meaning of purchase, receive, take, caught, lost, bring etc;
- ಕೊಳ್ಳಿ=ಕೊಡಲಿ; 'ಕೊಡಲಿ' ಪದದ 'ಡ'ಕಾರ ಲೋಪವಾಗಿ 'ಕೊಳ್ಳಿ' ಆಗಿರುವುದು; 'ಕೊಡ್ಲಿ' ಎಂಬ ರೂಪವೂ ಬಳಕೆಯಲ್ಲಿದೆ; ಕೊಡಲಿ>ಕೊಡ್‌ಲಿ> ಕೊಡ್ಲಿ ಆಗಿದೆ; ಪದ ಬಳಕೆಯ ಸರಳೀಕರಣದ ದೃಷ್ಟಿಯಿಂದ ಈ ವ್ಯತ್ಯಯ; `Koḷli' means Kodali(axe), here the letter `D'(ಡ) omitted and pronounce as `Koḷli' in day to day conversation;
- ಮರದ ತುಂಡು, ಕಟ್ಟಿಗೆಯನ್ನು ಸೀಳುವ, ತುಂಡರಿಸುವ ಸಾಧನ; ಇದನ್ನು ಮಂದವಾದ ಕಬ್ಬಿಣದ ತುಣುಕು ಹಾಗೂ ಮರದ ಸಣ್ಣ ತುಂಡಿನಿಂದ ತಯಾರಿಸಲಾಗುತ್ತದೆ; 'ಕೊಡಲಿ ಕಾವು/ಕಾಮು' ಎನ್ನುವರು; ಬೇವು ಅಥವಾ ಗೊಬ್ಬಳಿ ಮರದ ತುಂಡಿನಿಂದ ತಯಾರಿಸಿರುವಂಥದು; It is

an instrument to cut the wood or bysect the wooden log; it is made of thick iron piece; fix a wooden piece as handle;

- ಕೊಡಲಿಯಲ್ಲಿ ಪ್ಲೇಟ್‌ಕೊಳ್ಳಿ, ಕೈಕೊಳ್ಳಿ, ದೊಡ್ಕೊಳ್ಳಿ, ಪರಶುರಾಮನ ಕೊಳ್ಳಿ ಎಂಬ ನಾನಾ ಬಗೆಗಳಿವೆ; ಇದು ಸಂಪೂರ್ಣ ಗ್ರಾಮ್ಯ ರೂಪ; The axe has different names; rural folk call it as `Platekolli', `Kaikolli', `Doddakolli';
- ಉರಿಯುವ ಕಟ್ಟಿಗೆ; ಅರ್ಧಂಬರ್ಧ ಉರಿದಿರುವ ಕಟ್ಟಿಗೆಯ ತುಂಡು; 'ಕಡಕೊಳ್ಳಿ/ಕಡ್ಕೊಳ್ಳಿ' ಎನ್ನುವರು; ಮಕ್ಕಳು ಇಂತಹ ಕಡ್ಕೊಳ್ಳಿಯನ್ನು ಹಿಡಿದುಕೊಂಡು ತಿರುಗಾಡಿದರೆ, ಆಟವಾಡಿದರೆ ರಾತ್ರಿ ಮಲಗಿದ ಮಗ್ಗುಲಲ್ಲೇ ಮೂತ್ರ(ಉಚ್ಚೆ) ಮಾಡಿಕೊಳ್ಳುವರು ಎಂಬ ನಂಬಿಕೆ ಇದೆ; A piece of burning wood; half burned wood; is called `Kadakolli'; childrens may play with this `Kadakolli'; they will be wet at night in sleep;
- ಕೊಳ್ಳಿ=ಬೆಂಕಿ, ಪಂಜು; ಬೆಳಕಿಗಾಗಿ ಕಟ್ಟಿಗೆಯ ತುಂಡನ್ನು ಹೊತ್ತಿಸಿಡುವುದು; ರಾತ್ರಿ ವೇಳೆಯ ಪ್ರಯಾಣದಲ್ಲಿ ಹೀಗೆ ಹೊತ್ತಿಸಿದ ಕಟ್ಟಿಗೆಯ ತುಂಡನ್ನು ಕಯ್ಯಲ್ಲಿಡಿದುಕೊಂಡು ತೆರಳುತ್ತಿದ್ದ ಕ್ರಮ ಹಿಂದೆ ರೂಢಿಯಲ್ಲಿತ್ತು; ಅದು ವಿದ್ಯುತ್ ಬೆಳಕಿನ ಪರಿಚಯವಿಲ್ಲದ ಕಾಲವಾಗಿತ್ತು; Lit a piece of wood at night for light; this lighted piece kept in the hand for light in the night;
- ಕಪ್ಪುಬಣ್ಣ; ಹರಿತ ನಾಲಿಗೆಯುಳ್ಳ ವ್ಯಕ್ತಿ; ಬೆಂಕಿ ಹಚ್ಚು; ಉರಿಸು; ಜ್ವಲಿಸು;
- ಒಂದು ಬಗೆಯ ಕಳೆಹುಲ್ಲು(ಬ.ಜಿ); ಕಡಲೆ ಗಿಡಕ್ಕೆ ಬರುವ ಒಂದು ವಿಧದ ರೋಗ(ಬೆಂ.ಗ್ರಾ.ಜಿ); ಲೂಟಿ(ಕೊಪ್ಪ.ಜಿ); A kind of weed grains; a kind of disease to Bengalgram;
- ಕೊಳ್ಳಿಗೆ ದೆವ್ವ ಎಂಬ ಅರ್ಥವೂ ಇದ್ದು 'ಕೊಳ್ಳಿದೆವ್ವ' ಎಂದು ಹೇಳುವರು(ನೋಡಿ: ಕೊಳ್ಳಿದೆವ್ವ);
- 'ಹಾವಿನ ಹೆಡೆಗಳ ಕೊಂಡು ಕೆನ್ನೆಯ ತುಱಿಸುವಂತೆ, ಉರಿವ ಕೊಳ್ಳಿಯ ಕೊಂಡು ಮಂಡೆಯ ಸಿಕ್ಕ ಬಿಡಿಸುವಂತೆ' ಎಂಬುದೊಂದು ಬಸವಣ್ಣನವರ ವಚನ(ಕ.ನಿ); 'ಹಳ್ಳಿ ದೇವರಿಗೆ ಕೊಳ್ಳಿ ದೀಪ'(ಗಾ);
- ತಮಿಳು, ಮಲೆಯಾಳಂ ಮತ್ತು ಕೊಡವ ಭಾಷೆಗಳಲ್ಲಿ 'ಕೊಳ್ಳಿ' ಪದವೇ ರೂಢಿಯಲ್ಲಿದ್ದು ತುಳುವಿನಲ್ಲಿ ಮಾತ್ರ 'ಕೊಳ್ಳಿ' ಪದದ ಜೊತೆಗೆ 'ಕೊಲ್ಲಿ' ರೂಪವೂ ಬಳಕೆಯಲ್ಲಿದೆ(ದ್ರಾ.ಭಾ. ಜ್ಞಾಪ.ಕೋ); In Tamil, Malayalam and Kodava languages the word `Kolli' is in practice;
- ***—ಕೊಳ್ಳಿ ಹಾಯುವುದು*** : ಸಿಡಿ ಹಾಯುವುದು ಎಂಬರ್ಥದಲ್ಲಿ ಪದಬಳಕೆ; Cross the fire;
- ***—ಕೊಳ್ಳಿ ಇಡು*** : ಕೊಳ್ಳಿಗೆ ಬೆಂಕಿ ಎಂಬ ಅರ್ಥವಿರುವುದರಿಂದ ಬೆಂಕಿ ಇಡು, ಬೆಂಕಿ ಹಚ್ಚು ಎಂಬ ಅರ್ಥಗಳ ಪ್ರಾಪ್ತಿಯಿದೆ; ಮತ್ತೊಬ್ಬರ ಬದುಕನ್ನು ನಾಶಪಡಿಸು ಎಂಬ ಅರ್ಥದಲ್ಲಿ ಬಳಕೆ ರೂಪ; The word kolli has the meaning fire; so put fire, lit fire meanings also used; It has the meaning to destroy the life of another form in use;
- ಸತ್ತ ತಂದೆ-ತಾಯಿ ಹಾಗೂ ಇತರೆ ವ್ಯಕ್ತಿಗಳ ಚಿತೆಗೆ ಬೆಂಕಿ ಹಚ್ಚುವ ಪ್ರಕ್ರಿಯೆಗೆ ಸಂಬಂಧಿಸಿದ ರೂಪ; ತಂದೆಗೆ ಹಿರಿಯ ಮಗ ಮತ್ತು ತಾಯಿಗೆ ಕಿರಿಯ ಮಗ ಕೊಳ್ಳಿ ಇಡಬೇಕೆಂಬುದು ಪದ್ಧತಿ; ಮಕ್ಕಳೇ ಮೊದಲು ಕಾಲವಾದರೆ ತಂದೆಯೇ ಅವರ ಚಿತೆಗೆ ಕೊಳ್ಳಿ ಇಡಬೇಕಾದ ಸಂದರ್ಭವೂ ಉಂಟು; In Hindu tradition to lit fire to the other person's pyre; i.e., elder son to father, younger son to mother is the traditional practice to put fire to the pyre; If the son dies first, father put fire to the son's pyre;
- ಸತ್ತ ವ್ಯಕ್ತಿಗಳಿಗೆ ಕೊಳ್ಳಿ ಇಡುವವರು ಗಂಡಸರೇ ಹೊರತು ಹೆಂಗಸರಲ್ಲ; ಈ ಕ್ರಿಯೆಯಲ್ಲಿ ಹೆಂಗಸರಿಗೆ ನಿಷೇಧವಿದೆ; Only male put fire to the pyre not female or women;
- ***—ಕಡಕೊಳ್ಳಿ/ಕಡ್ಕೊಳ್ಳಿ*** : 'ತಲೆಕೊಳ್ಳಿ' ಎಂಬ ಹೆಸರಿನಿಂದಲೂ ಕರೆಯುವರು; ಬೆಂಕಿ ಹೊತ್ತಿಸಿ ಅರ್ಧಂಬರ್ಧ ಉರಿದ ಸೌದೆಯ ಸೀಳು; ಇದನ್ನು ಶವಸಂಸ್ಕಾರದ ಸಂದರ್ಭದಲ್ಲಿ ತಂದೆಗೆ ಹಿರಿಯ ಮಗ ತಾಯಿಗೆ ಕಿರಿಯ ಮಗ ಶವದ ಮುಂದೆ ಹಿಡಿದು ಕೊಂಡೊಯ್ಯುವುದು ಕ್ರಮ; ಶವಸಂಸ್ಕಾರ ಮುಗಿದ ನಂತರ ಈ ಕೊಳ್ಳಿಯನ್ನು ಸಮಾಧಿಯ

ಮೇಲೆ ಶವದ ಕಾಲ್ದೆಸೆಯಲ್ಲಿ ಹಿಡುವುದು ಪದ್ಧತಿ; ಇದಕ್ಕೆ ಧೂಪ ಹಾಕಿ ಕೈಮುಗಿಯುವುದುಂಟು; It is called as `Tale kol̤li' too; the half burning firewood piece carry by the elderson for father and younger son for mother infront of the deads bier is the formality; this fire kept at the feet of the grave; is the custom;

- **—ಕೊಳ್ಳಿಹಾಕು** : ಸತ್ತ ವ್ಯಕ್ತಿಯ ಮನೆಯ ಮುಂಭಾಗ ಬೆಂಕಿ ಹಾಕುವುದು; ಇದು ಮನೆಯಲ್ಲಿ ಸಾವಿನ ಸೂಚನೆಯನ್ನು ನೀಡುವಂಥದು; ಬೆಂಕಿ ಹಚ್ಚು, 'ಬೆಂಕಿ ಹಾಕು' ಎಂಬರ್ಥದಲ್ಲಿ ಪದಬಳಕೆ; Lit fire infront of the house of the dead; it is the indication of the death of a person;
- **—ಕೊಳ್ಳಿ ಕೊಡುವುದು** : ಹೆಣ ಸುಟ್ಟ ಮರುದಿವಸ ಮೃತನ ಕುಟುಂಬದವರು ಮಾಡಲಾಗುವ ಒಂದು ಪ್ರಕ್ರಿಯೆ; ಸುಟ್ಟ ಹೆಣದ ಉಳಿದ ಅವಶೇಷಗಳು ಪೂರ್ಣ ಉರಿಯದೆ ಉಳಿದ ಸೌದೆಯ ತುಣುಕುಗಳನ್ನು ಒಟ್ಟಿಗೆ ಸೇರಿಸಿ ತಂಬಿಗೆ ಹಾಲು, ಗಿಂಡಿ ತುಪ್ಪವನ್ನು ಸುರಿದು ಪುನಃ ಬೆಂಕಿ ಹಚ್ಚಿ ಪೂರ್ಣವಾಗಿ ಸುಟ್ಟು ಬೂದಿ ಮಾಡುವ ಕ್ರಿಯೆ; ಇದು ದಕ್ಷಿಣಕನ್ನಡ ಜಿಲ್ಲೆಯ ಗೌಡ ಸಮುದಾಯದವರಲ್ಲಿ ರೂಢಿ; It is an action after the cremation of the body next day; the remainings of the dead body and wood pieces gathered, then pour milk and ghee to it, fire it to burn again completely; this practice in Gowda community of Dakshina Kannada district;
- **—ಕೊಳ್ಳಿ ಕಜ್ಜಾಯ** : ಮಾಂಸಾಹಾರದ ಊಟ (ಚಿ.ಪ.ಕೋ); ಕೆಲವು ಕಡೆ ವ್ಯಕ್ತಿ ಸತ್ತ ದಿವಸ ಅಥವಾ ಶ್ರಾದ್ಧದ ದಿವಸ ಮಾಂಸಾಹಾರದ ಅಡುಗೆ ತಯಾರಿಸುವುದಿದೆ; ದಾಸರ ಕುಲಕ್ಕೆ ಸೇರಿದವರು ವ್ಯಕ್ತಿ ಸತ್ತ ದಿವಸ ಶವ ಸಂಸ್ಕಾರದ ವೇಳೆಯಲ್ಲಿ ತುತ್ತು ಪಡಿಸುವುದಕ್ಕಾಗಿ ಮಾಂಸಾಹಾರದ ಊಟ ಮಾಡಿಸುವುದಿದೆ; ಅವನು ದಾಸಯ್ಯನಾಗಿದ್ದರೆ ಈ ಕ್ರಮ ಉಂಟು; Non-veg dinner; In some places it is arranged on the day of death or on the day of funeral ceremony; the person belongs to Dasa community the non-veg denner arranged on the day of death;
- **—ಕೊಳ್ಳಿ ಆಟ** : ಉರಿಯುತ್ತಿರುವ ಬೆಂಕಿಯ ತುಂಡು ಹಿಡಿದುಕೊಂಡು ಆಡಲಾಗುವ ಒಂದು ವಿಧದ ಆಟ(ದ.ಕ); ದಸರೆಯ ಸಂದರ್ಭದಲ್ಲಿ 'ಪಂಜಿನ ಕವಾಯಿತು' ಮಾಡುವ ಹಾಗಿರಬಹುದು?; A play playing to hold the burning fire stick in the hand; may be it is like fire Parade;
- **—ಕೊಳ್ಳಿದೀಪ** : ಪಂಜು; ದೀವಟಿಗೆ; ಉರಿಯುವ ಕಟ್ಟಿಗೆಯಿಂದ ಮಾಡಿಕೊಂಡ ಬೆಳಕು; ರಾತ್ರಿ ವೇಳೆಯ ಪ್ರಯಾಣ, ಉತ್ಸವ, ಮೆರವಣಿಗೆಗಳ ಸಂದರ್ಭದಲ್ಲಿ ಬೆಳಕಿಗಾಗಿ ಮಾಡಿಕೊಂಡ ದೀಪ; Torch; light; light made of burning wood piece; used in night journey, processions;
- **—ಕೊಳ್ಳಿ ಕಳ್ಳ/ಪಂಜುಕಳ್ಳ** : ಕೊಳ್ಳಿ ಹಿಡಿದುಕೊಂಡು ಕಳ್ಳತನ ಮಾಡುವವ; ಉರಿಯುವ ಕಟ್ಟಿಗೆಯ ತುಂಡನ್ನು ಬೆಳಕಿಗಾಗಿ ಹಿಡಿದುಕೊಂಡು ಮನೆ, ಹೊಲ, ಗದ್ದೆಗಳು, ಕಣದಲ್ಲಿ ಕಳ್ಳತನ ಮಾಡುವ ಪ್ರಕ್ರಿಯೆ ಹಿಂದೆ ರೂಢಿಯಲ್ಲಿತ್ತೆಂದು ಕಾಣುತ್ತದೆ; A person made theft hold with torch in house, agricultural fields;
- **—ಕೊಳ್ಳಿಕೊಡು** : ಒತ್ತೆಕೋಲಕ್ಕೆ ಕಟ್ಟಿಗೆಯ ರೂಪದಲ್ಲಿ ನೀಡಲಾಗುವ ಕಾಣಿಕೆ(ದ.ಕ); In the form of offers to `Ottekola';
- **—ಕೊಳ್ಳಿದೆವ್ವ** : ದೆವ್ವಗಳಲ್ಲಿ ಒಂದು ರೂಪ; ದೆವ್ವಗಳಲ್ಲಿ ಹಲವು ಬಗೆಯ ಸೃಷ್ಟಿಯಿದೆ; ಇದು ವ್ಯಕ್ತಿಯ ಸಾವಿನ ವಯಸ್ಸು ಮತ್ತು ಸ್ಥಿತಿಯ ಆಧಾರದ ಮೇಲೆ ನಿರ್ಧಾರವಾಗುತ್ತವೆ; A kind of devil; different kinds of devils; they are identified on the basis of age and condition;
- ಭೂತ, ಪ್ರೇತ, ಪೀಡೆ, ಪಿಶಾಚಿ, ಮೋಹಿನಿ, ರಣ, ಈರ, ಕಾತ, ಜಟಿಗ, ಚೌಡಿ, ಗಾಳಿ, ಬ್ರಹ್ಮರಾಕ್ಷಸ ಹಾಗೂ ಕೊಳ್ಳಿದೆವ್ವ ಎಂಬಿವು ಈ ದೆವ್ವಗಳ ಸೃಷ್ಟಿಯ ಪ್ರಪಂಚ(ನೋಡಿ: ದೆವ್ವ); ದೆವ್ವಗಣ್ಣು ಇರುವವರಿಗೆ ಮಾತ್ರ ಈ ದೆವ್ವಗಳು ಕಾಣಿಸಿಕೊಳ್ಳುತ್ತವೆ

ಎಂಬುದೊಂದು ನಂಬಿಕೆ ಇದೆ; Bootha, Pretha, Peede, Pishachi, Mohini, Rana, Eera, Katha, Jatiga, Chowdi, Gali, Brahma rakshasa and Kolli devva etc are the creations of devils world; those who have the devil eyes, these devils are to be visible is a belief;

- ಮಗು ಸತ್ತರೆ ಪೀಡೆಯಾಗಿ, ಮದುವೆಯಾಗದ ಹುಡುಗಿ ಸತ್ತರೆ ಮೋಹಿನಿಯಾಗಿ, ಗರ್ಭಿಣಿ ಸತ್ತರೆ ಗಾಳಿಯಾಗಿ, ಬೆಂಕಿಗೆ ಬಿದ್ದು ಸತ್ತರೆ ಭೂತವಾಗಿ ಹೀಗೆ ಅತೃಪ್ತ ದೇಹಗಳ ಸೃಷ್ಟಿ ವಿವಿಧ ರೂಪಗಳಲ್ಲಿರುತ್ತದೆ; If the child dies it will become evil spirit; the unmarried girl, pregnant woman and who commit sucide by fire are become devils; these are the dissatisfied souls;
- ಕೊಳ್ಳಿದೆವ್ವ ಸಾತ್ವಿಕ ಸ್ವಭಾವವುಳ್ಳದ್ದು ಎಂದು ಹೇಳಲಾಗುತ್ತದೆ; ರಾತ್ರಿ ವೇಳೆ ಕಾಡಿನಲ್ಲಿ ಬೆಂಕಿಕಂಡರೆ ಕೊಳ್ಳಿದೆವ್ವ ಬಂದಿದೆ ಎಂದು ಹೇಳುವುದಿದೆ; ಆದರೆ ರಂಜಕದ ಅಂಶಕ್ಕೆ ಬೆಂಕಿ ತಗುಲಿದಾಗ ಬೆಂಕಿ ತನ್ನಷ್ಟಕ್ಕೆ ತಾನೆ ಹೊತ್ತಿಕೊಳ್ಳುತ್ತದೆ ಎಂಬುದು ವೈಜ್ಞಾನಿಕ ಸತ್ಯ; ಇಂತಹ ಸನ್ನಿವೇಶ ಬೇಸಿಗೆಯ ಸಂದರ್ಭದಲ್ಲಿ ಉಂಟಾಗಲಿದೆ; The ignis fatuus is a soft natured; at night found fire in the forest is called ignis fatuus; the pospherous component particles are lit themselves by touch of fingers heat is the scienticfic truth;
- ರಾತ್ರಿ ವೇಳೆ ಉರಿಯುವ ಕೊಳ್ಳಿಯನ್ನು ಹಿಡಿದುಕೊಂಡು ತಿರುಗುವುದೇ ಕೊಳ್ಳಿದೆವ್ವ ಎಂಬುದಾಗಿ ಭಾವಿಸಲಾಗಿದೆ; ಉರಿಯುವ ಕೊಳ್ಳಿ ಹಿಡಿದು ರಾತ್ರಿ ವೇಳೆ ಸ್ಮಶಾನದಲ್ಲಿ ಕುಣಿಯುವ ದೆವ್ವಗಳು; ವಿಶೇಷವಾಗಿ ಅಮವಾಸ್ಯೆಯ ದಿವಸದಂದು ರಾತ್ರಿ ವೇಳೆಯಲ್ಲಿ ಹೀಗೆ ಕಾಣಿಸಿಕೊಳ್ಳವುದುಂಟು; At night people wandering with burning fire stick also assume as kolli devva; the kollidevva appear on the new moonday night in the burial yard;
- 'ಮುನೇಶ್ವರ' ಕೊಳ್ಳಿದೆವ್ವಗಳ ಒಡೆಯ; ಈ ಕೊಳ್ಳಿ ದೆವ್ವಗಳು ಮುನೇಶ್ವರನ ಸೇವಕರು; ರಾತ್ರಿಯಲ್ಲಿ ಮುನೇಶ್ವರನನ್ನು ಪಲ್ಲಕ್ಕಿಯಲ್ಲಿ ಕೂರಿಸಿಕೊಂಡು ಎಲ್ಲ ದೆವ್ವಗಳು ಪಲ್ಲಕ್ಕಿಯನ್ನು ಹೊತ್ತುಕೊಂಡು ಉರಿಯುವ ಕೊಳ್ಳಿಯ ಬೆಳಕಿನೊಂದಿಗೆ ಕುಣಿಯುತ್ತ ಮೆರವಣಿಗೆ ಹೊರಡುತ್ತವೆ ಎಂಬ ಒಂದು ಬಲವಾದ ನಂಬಿಕೆ ಗ್ರಾಮೀಣರಲ್ಲಿದೆ; ಈ ಮೆರವಣಿಗೆಯನ್ನು ನೋಡಿದವರು ರಕ್ತ ಕಕ್ಕಿ ಸಾಯುತ್ತಾರೆ ಎಂಬ ಭಾವನೆ ಇದೆ; `Muneshwara' is the master of Kollidevva; these are the servants of him; they carry Muneshwara on the Pallakki with fire torch and dance, is a belief in rural folk;
- ಮೆರವಣಿಗೆ ಸಂದರ್ಭದಲ್ಲಿ 'ಹಳ್ಳ-ಕೊಳ್ಳ ಸೈ ಸೈ, ಗುಡ್ಡ-ಏರಿ ಸೈ ಸೈ, ಕೊಳ್ಳಿದೆವ್ವ ಬಂದೈತೆ' ಎಂಬುದಾಗಿ ಹಾಡು ಹೇಳುತ್ತಾ ಕುಣಿಯುತ್ತವಂತೆ. At the time of procession they are singing and dancing of their own song `Halla-Kolla' sai, sai etc.

ಕೊಳ್ಳಿ ಕಲ್ಲು kolli kallu :

- ಮರದಿಂದ ತಯಾರಿಸಿದ ಒಂದು ವಿಧದ ಸಾಧನ; ಬೀಸುವ ಕಲ್ಲಿನ ಆಕೃತಿಯಲ್ಲಿರುವಂಥದು; ಭತ್ತದಿಂದ ಅಕ್ಕಿ ತಯಾರಿಸಲು ಉಪಯೋಗ; An instrument made of wood; it is in the shape of hulling stone; used to make rice from the paddy;
- ಇದೊಂದು ಸುಲಭದ ವಿಧಾನವೆಂದು ಕಾಣುತ್ತದೆ; ಕಲ್ಲಿನ ಒರಳಿನಲ್ಲಿ ಭತ್ತ ಹಾಕಿ ಒರಳಿನ ಬಾಯಿಗೆ ಹೊಂದಿಕೊಂಡಂತೆ ಕುಂದಣಿ ಇಟ್ಟು ಒನಕೆಯಿಂದ ಕುಟ್ಟಿ ಅಕ್ಕಿ ತಯಾರಿಸುವುದು ಒಂದು ವಿಧನವಾದರೆ ಇದು ಮತ್ತೊಂದು ವಿಧಾನವಿರಬಹುದು;It is an easy method; put the paddy in the stone mortar and pound by the wooden pestle to make rice is one method;
- ಮರದ ಈ ಸಾಧನ ಹಗುರವಾಗಿದ್ದು ಇದರಲ್ಲಿ ಭತ್ತ ಹಾಕಿ ಬೀಸಿದರೆ ಭತ್ತ ಮಧ್ಯಭಾಗಕ್ಕೆ ಸಿಲುಕಿ ಸಿಪ್ಪೆ ಸುಲಿದು ಅಕ್ಕಿ ಕಾಳು ಹೊರಬರುತ್ತಿತ್ತೆಂದು ಕಾಣುತ್ತದೆ; ಇದು ಹಿಂದೆ ಬಳಕೆಯಲ್ಲಿತ್ತೆಂದು ಹೇಳಲು ಸಾಕ್ಷ್ಯಾಧಾರಗಳ ಕೊರತೆಯಿದೆ; ಹಾಗೆಯೇ

ರೂಢಿಯಲ್ಲಿದ್ದದ್ದೇ ಆದರೆ ಯಾವ ಕಡೆ ಬಳಕೆಯಲ್ಲಿತ್ತೆಂದೂ ಸ್ಪಷ್ಟವಾಗಿ ತಿಳಿಯದು; Kollikallu is very light, the paddy fill in it and grind the husk will out of rice; it was in practice but no evidence to prove;

- ಪದದ ಮೂಲಾರ್ಥದ ಹಿನ್ನೆಲೆಯಲ್ಲಿ ಈ ವಿವರಣೆಯನ್ನು ಕೊಡಲಾಗಿದೆ; ಇದೊಂದು ಕಲ್ಪನೆಯಷ್ಟೆ?. The explanation given here on the basis of original meaning of the word; but it is only imagination.

ಕೊಳ್ಳಿ ಕೋರ kolli kōra :

- 'ಕೊಳ್ಳಿ ಕೊಕ್ಕು' ಎಂಬ ಸಂವಾದಿ ರೂಪದ ಬಳಕೆ ಇದೆ; ಕಜ್ಜಿಯಂತಹ ಸಣ್ಣ ಸಣ್ಣ ಬೊಕ್ಕೆ ಅಥವಾ ಗುಳ್ಳೆಗಳು; ಮೈಮೇಲಿನ ಚರ್ಮದ ಮೇಲೆ ಕಾಣಿಸಿಕೊಳ್ಳುತ್ತವೆ; 'Kolli Kokku' is the equal word to 'Kolli-Kora'; it is like small scabies or bubbles; it is found on the skin;
- ಕಜ್ಜಿಯಲ್ಲಿ ತುರ್ಗಜ್ಜಿ, ಹೆಗ್ಗಜ್ಜಿ ಎಂಬ ಎರಡು ಪ್ರಕಾರಗಳುಂಟು; ಆದರೆ ಕೊಳ್ಳಿಕೋರ ಯಾವ ಪ್ರಕಾರಕ್ಕೆ ಸೇರಿದ್ದೆಂದು ತಿಳಿಯದು; Two kinds of scabies is Turgajji, Heggajji;
- ಚರ್ಮದ ಮೇಲೆ ಕಾಣಿಸಿಕೊಳ್ಳುವ ಬೊಕ್ಕೆ ಅಥವಾ ಗುಳ್ಳೆಗಳು ಹಲವು ಪ್ರಕಾರದ್ದಾಗಿರುತ್ತವೆ; ಅವುಗಳಲ್ಲಿ ಮೊಡವೆಗಳಿರಬಹುದು, ದೇಹದಲ್ಲಿ ಉಷ್ಣಾಂಶ ಜಾಸ್ತಿಯಾದಾಗ ಏಳುವ ಸಣ್ಣ ಸಣ್ಣ ಚುಕ್ಕೆಗಳಿರಬಹುದು, ಕುರದಂತಹ ಗುಳ್ಳೆ ಇರಬಹುದು ಅಥವಾ ಈ ಕಜ್ಜಿ ಗುಳ್ಳೆಗಳೂ ಇರಬಹುದು. Many kinds of bubbles are found on the skin may be they are small scars and scabies.

ಕೊಳ್ಳಿ ಹೊಕ್ಕ ಮನೆಯಂತೆ kolli hokka maneyante :

- ಬೆಂಕಿ ಬಿದ್ದ ಮನೆಯಲ್ಲಿ ಏನೂ ಉಳಿಯದು ಎಂಬ ಅರ್ಥದಲ್ಲಿ ಈ ನುಡಿಗಟ್ಟು ಬಂದಿರುವಂತೆ ಕಾಣುತ್ತದೆ; ಈಗ ಬೆಂಕಿ ಬೀಳಬೇಕಾಗಿಲ್ಲ; ನಾಶವಾಗು, ಭಸ್ಮವಾಗು ಎಂದು ಬಳಸಲಾಗುತ್ತದೆ; ಆಗ ನುಡಿಗಟ್ಟನ್ನು 'ಕೊಳ್ಳಿ ಹೊಕ್ಕ ಮನೆಯ ಹಾಗೆ' ಎಂದು ಹೇಳಿದರೆ ಸಾಕು; This idiom used in the meaning of nothing will remain after fire a house; now-a-day it is used in the meaning of destroyed, burn into ash;
- 'ಕೊಳ್ಳಿ' ಪದ ಬೆಂಕಿ ಹೊತ್ತಿಕೊಂಡ ಸೌದೆ/ಸೌದೆಯ ತುಂಡು/ಕಟ್ಟಿಗೆ ಎಂದಾಗುತ್ತದೆ; ಇದನ್ನು ಧ್ವನೀಕರಿಸಲು 'ಕಳ್ಳ ಹೊಕ್ಕ ಮನೇಲಿ ಏನಾದರೂ ಸಿಕ್ತದೆ, ಕೊಳ್ಳಿ ಹೊಕ್ಕ ಮನೇಲಿ ಏನು ಸಿಕ್ತದೆ'?(ಜ.ನು.ಕೋ) ಎಂದೇ ಬಳಕೆಯಾಗಿದೆ; 'ಕೊಳ್ಳಿ' ಪದಕ್ಕೆ 'ಕೊಳ್ಳೆ'ಯನ್ನು ಸಮಾನ ಪದವೆಂದು ಕಿಟ್ಟೆಲ್ ಕೊಡುತ್ತಾರೆ; ಆದರೆ 'ಕೊಳ್ಳೆ' ಪದ ಈ ಅರ್ಥದಲ್ಲಿ ಎಲ್ಲಿ ಬಳಕೆಯಾಗಿದೆಯೊ ತಿಳಿಯದು;
- ಸಂವಾದಿ ರೂಪವಾಗಿ ತಮಿಳು ಮತ್ತು ಮಲೆಯಾಳಂಗಳಲ್ಲಿ 'ಕೊಳ್ಳಿ', ತೆಲುಗಿನಲ್ಲಿ 'ಕೊರಲು/ಕ್ರೋಲು', ತುಳುವಿನಲ್ಲಿ 'ಕೊಲ್ಲಿ' ರೂಪಗಳಿವೆ; ತೆಲುಗಿನ ರೂಪಗಳು ಈ ಅರ್ಥದಲ್ಲಿ ಬಳಕೆಯಾಗಿರುವುದು ಅನುಮಾನ!; The equivalent form in Tamil and Malayalam 'Kolli', in Telugu 'Koralu', 'Krolu'; a doubt that Telugu forms are use in this meaning;
- 'ಕೊಳ್ಳಿ ಹೊಕ್ಕ ಮನೆ' ಒಂದು ಉಪಮೆಯಷ್ಟೆ, 'ಅಂತೆ' ಎನ್ನುವುದು ಇದನ್ನು ದೃಢಪಡಿಸುತ್ತದೆ; ಬೆಂಕಿ ಬಿದ್ದಾಗ ಹೇಗೆ ಏನೂ ಉಳಿಯುವುದಿಲ್ಲವೊ ಹಾಗೆ ವ್ಯಕ್ತಿಯ ಬರಿದಾದ ಸ್ಥಿತಿಯನ್ನು ಅರುಹುತ್ತದೆ; ಎಲ್ಲವನ್ನೂ ಕಳೆದುಕೊಂಡ ನಿರ್ಗತಿಕ/ದೀನನ ಚಿತ್ರ ನಮ್ಮ ಮುಂದೆ ಬರುತ್ತದೆ; It is a simile; it tells the condition of a person lost everything i.e., like burned house; the picture of a insolvent person;
- ತುಂಬ ಶಕ್ತಿಯುತ/ತೀವ್ರ ಸಂವೇದನಾತ್ಮಕ ನುಡಿಗಟ್ಟು ಇದು; ಅಪಾಯದ ಘಟನೆ ಅಥವಾ ಸಂದರ್ಭವನ್ನು ನುಡಿಗಟ್ಟು ತನ್ನ ಉದರದಲ್ಲಿ ಇರಿಸಿಕೊಂಡಂತಿದೆ; ಬಹಳ ಹಳೆಯ ನುಡಿಗಟ್ಟಿನಂತೆ ತೋರುತ್ತದೆ; It is a very strong idiom; it kept the dangerous situation in it; it is a very old idiom;
- ಸಾಮಾನ್ಯವಾಗಿ ನುಡಿಗಟ್ಟುಗಳು ಆಲಂಕಾರಿಕ ಅಭಿವ್ಯಕ್ತಿಗಳು; ಒಂದನ್ನು ತಿಳಿಸಿ ಇನ್ನೊಂದಕ್ಕೆ ಕೈತೋರುವಂಥವು; ಹೋಲಿಕೆಗಳೂ ಅಧ್ಯಯನಕ್ಕೆ ಯೋಗ್ಯವಾದಂಥವು; ಇನ್ನೊಂದು ಮುಖ್ಯ ವಿಚಾರ: ನುಡಿಗಟ್ಟಿನ ಹಿನ್ನೆಲೆಯಲ್ಲಿ ಕೆಲವಕ್ಕಾದರೂ ನಡೆದ

ಘಟನೆಗಳ ಸಂಭವನೀಯತೆ ಇರಬಹುದು; ಅದಕ್ಕೆ ಉದಾಹರಣೆಯಾಗಿ ಪ್ರಸ್ತುತ ನುಡಿಗಟ್ಟಿದೆ; ಮುಂದುವರಿದಂತೆ ನಡೆದ ಘಟನೆ ಬಿದ್ದುಹೋಗಿ, ಮರೆತು ಹೋಗಿ, ಆಮೇಲೆ ಅದರ ಪರಿಣಾಮ ಮಾತ್ರ ನುಡಿಗಟ್ಟಾಗಿ ರೂಪುಗೊಂಡು ಬಳಕೆಯಾಗುತ್ತಾ ಬಂದಿರಬೇಕು. Generally idioms are the figure of speech expression they communicate one thing and shows another; the comparisions are fit to study.

ಕೊಳ್ಳು೧ kol̤l̤u[1] :

- ಕೊಂಡುಕೊ, ಪಡೆದುಕೊ, ತೆಗೆದುಕೊ, ಸ್ವೀಕರಿಸು, ಅಂಗೀಕರಿಸು, ಖರೀದಿಸು, ಕ್ರಯಕ್ಕೆ ಪಡೆದುಕೊ, ತನ್ನದಾಗಿಸಿಕೊಳ್ಳು, ತನ್ನ ವಶ ಮಾಡಿಕೊಳ್ಳು, ಹಣ ಕೊಟ್ಟು ಖರೀದಿಸು ಎಂಬರ್ಥದಲ್ಲಿ ಪದಬಳಕೆ; Purchase, receive, take, accept, take on sale; make of it oneself; take once custody; purchase on cash;
- ಕೊಳ್ಳು ಪದ ಮತ್ತೊಬ್ಬರಿಂದ ಪಡೆದುಕೊಳ್ಳುವ ಪರಿಕಲ್ಪನೆಯಲ್ಲಿ ಸೃಷ್ಟಿಯಾಗಿರುವಂಥದು; ಕ್ರಿಯಾತ್ಮಕ ಹಿನ್ನೆಲೆಯುಳ್ಳ ರೂಪ; The word `Kol̤lu' created on the concept of received by someone;
- ಕೊಳ್ಳು ಪದಕ್ಕೆ 'ಕೊಂಡು' ಎಂಬ ಸಂವಾದಿ ರೂಪದ ಬಳಕೆ ಇದೆ; The word `Kol̤lu' has the equivalent word from `Koṇḍu';
- ಆಸೆಬಡುಕನಂತೆ ತಿನ್ನು; ಒಂದು ಬಗೆಯ ದ್ವಿದಳ ಧಾನ್ಯ(ದ್ರಾ.ಭಾ.ಜ್ಞಾ.ಪ.ಕೋ); Eat as a avaricious person; A kind of pulse;
- ವ್ಯಕ್ತಿಯ ಬದುಕಿನಲ್ಲಿ ಕೊಡು–ಕೊಳ್ಳುವಿಕೆಯ ವ್ಯವಹಾರ ಪ್ರತಿನಿತ್ಯ ನಡೆಯುತ್ತಿರುವಂಥದೇ; ಇದಕ್ಕೆ 'ವಿನಿಮಯ ಪ್ರಕ್ರಿಯೆ' ಎನ್ನುವರು; ಈ ವ್ಯವಹಾರ ತಟಸ್ಥವಾದರೆ ವಿನಿಮಯ ಪ್ರಕ್ರಿಯಯೇ ತಟಸ್ಥವಾದಂತೆ; ಇದು ಸಮಾಜದ ಅಸಮತೋಲನಕ್ಕೂ ಕಾರಣವಾಗಬಹುದು; Purchase is the day to day activity of a person; it is called barter activity; this is called exchange activity; if this business stopped, the exchange process become stopped; it also affect on the unequality;
- ತಮಿಳಿನಲ್ಲಿ 'ಕೊಳ್', ತೆಲುಗಿನಲ್ಲಿ 'ಕ್ರೋಲು', ತುಳುವಿನಲ್ಲಿ 'ಕುಡು' ಮತ್ತು ಮಲೆಯಾಳಂನಲ್ಲಿ 'ಕೊಳ್' ಪದದ ಜೊತೆಗೆ 'ಕೊಳ್ಳು' ರೂಪವೂ ಯಥಾಪ್ರಕಾರವಾಗಿ ಬಳಕೆಗೊಂಡಿರುವುದು ಸ್ಪಷ್ಟ (ದ್ರಾ.ಭಾ.ಜ್ಞಾ.ಪ.ಕೋ); ***ನೋಡಿ:*** ಕೊಳ್ ಮತ್ತು ಕೊರಳು; ಪ್ರ: *'ಕೊಡೋನಿರೋತನಕ ಕೊಳ್ಳೋನಿದ್ದೇ ಇರುತ್ತಾನೆ'*; `Kol' in Tamil, `Krolu' in Telugu, `Kuḍu' in Tulu and `Kol' in Malayalam forms usage is clear;
- 'ಕೊಳ್ಳು' ಪದಕ್ಕೆ 'ಕೊಳ್' ಮೂಲರೂಪ ಇರಬಹುದು; 'ಕೊಂಡು' ಎಂಬುದು ಭೂತ ಕೃದಂತ. The original form of `Kol̤lu' may be `Kol'; `Koṇḍu' is the past participle of `Kol̤lu'.

ಕೊಳ್ಳು/ಕೊಂಡು೨ kol̤l̤u/koṇḍu[2] :

- ವ್ಯವಹಾರ ಜಗತ್ತಿಗೆ ಸಂಬಂಧಿಸಿದ ಪದ; ಮಾರುಕಟ್ಟೆಯ ಸಂಸ್ಕೃತಿಯದು; ಜನಪದರು ಇದರೊಡನೆ ಸದಾ ಇದ್ದಾರೆ; ಜನಪದರು ಒಂದಲ್ಲ ಒಂದು ರೀತಿಯಲ್ಲಿ ಕೊಳ್ಳುವ ಕ್ರಿಯೆಯಲ್ಲಿ ಭಾಗಿಯಾಗುವುದರಿಂದ, ಈ ಪದದ ಬಳಕೆಯ ಸಂದರ್ಭಗಳು ಹೆಚ್ಚಿವೆ; The word related to business world; belongs to marketing world; folks are always with it; folks are with this world one way or the other; or in the process of purchase;
- ಆವರಿಸು, ತೆಗೆದುಕೊ, ಲಾಭಕಾಣು, ಸ್ವೀಕರಿಸು, ವಿಶದಪಡಿಸು, ಹೊಂದಿರು; ಏನನ್ನಾದರೂ ವ್ಯಾಪಾರ ಮಾಡಿಕೊಳ್ಳುವ/ಖರೀದಿಸುವ ಸಂದರ್ಭದಲ್ಲಿ ಬಳಕೆಯಾಗುವ ಪದವಿದು; ಪ್ರ: 'ಕೊಂಡೋರಿಗೆ ಕೊಟ್ಟೋರಿಗೆ ಕೋಟಿ ಲಾಭವೆಂಬಂತೆ'(ಕಿ.ಕೋ.ಗಾ.); The words spread, cover, take, found profit, receive, clarify, to have are use at the time of business;
- ಹಿಂದೆ ಜನ ತಮಗೆ ಬೇಕಾದ್ದನ್ನು ತಾವೇ ಬೆಳೆದುಕೊಳ್ಳುತ್ತಿದ್ದರು; ಕೊಳ್ಳುವುದರ ಅಗತ್ಯ ತೀರ ಕಡಿಮೆಯಾಗಿತ್ತು; ಈಗ ತಮಗೆ ಬೇಕಾದ್ದನ್ನೆಲ್ಲ ಬೆಳೆದುಕೊಳ್ಳುತ್ತಿಲ್ಲ; ಫಲವಾಗಿ 'ಕೊಳ್ಳುವುದು' ಅತಿಯಾಯಿತು; People grown whatever they want, purchase is very less in olden days;

nowadays they won't grow whatever they want; so, the purchase is increase;

- 'ಕೊಳ್ಳುಬಾಕ' ಸಂಸ್ಕೃತಿಯ ಈ ಕಾಲದಲ್ಲಂತೂ ಕೊಳ್ಳುವ ಕ್ರಿಯೆಗೆ ಅಪರಿಮಿತ ಜನಪ್ರಿಯತೆ ಇದೆ; ವಹಿವಾಟು ಅಥವಾ ನಿರ್ವಹಣೆ ಇದರ ಮೂಲ ಗುರಿ; ಅದಕ್ಕಾಗಿ ಕೊಳ್ಳುವ ಸಡಗರ; Nowadays the purchasing activity is very famous; transaction or maintenance is the prime aim;
- ಕೊಳ್ಳುವ ಪದಾರ್ಥಗಳಿಗೆ ಬೆಲೆ ಹೆಚ್ಚಿತೆಂಬುದು ನಿಜ; ಪದಾರ್ಥಗಳ ಗುಣಮಟ್ಟ ಕೂಡ ಒಂದೇ ರೀತಿಯಲ್ಲಿ ಇಲ್ಲ; ಹಿಂದೆ ನಮ್ಮ ಜನಪದ ಕವಿ ಹಾಡಿದ್ದು: "ಬಾರಯ್ಯ ಬೆಳುದಿಂಗಳೆ, ನಮ್ಮೂರ ಹಾಲಿನಂಥ ಬೆಳುದಿಂಗಳೆ" ಎಂದು; ನಮ್ಮೂರಿನ ಹಾಲನ್ನು ಈಗ ಬೆಳುದಿಂಗಳಿಗೆ ಹೋಲಿಸಲಾಗದು; ಆಗಿನ 'ಶುದ್ಧಹಾಲು' ಈಗೆಲ್ಲಿ; ಈಗ ಮಾಲಿಗಿಂತ ಮಾಲೀಕ ಮುಖ್ಯನಾಗುತ್ತಿದ್ದಾನೆ; ಸರಳ ವಿನಿಮಯ ಹೋಗಿ, ಕೇಂದ್ರೀಕರಣ ಕ್ರಿಯೆ ಪ್ರಬಲವಾಗುತ್ತಿದೆ; The price of the commodity is high but the quality is not same; the quality is not important now a days but quantity commodity is not important but the owner; the simple exchange vanished, centralisation activity is strong;
- ಅಲ್ಲಮಪ್ರಭು ತನ್ನೊಂದು ವಚನದಲ್ಲಿ "ಅರಗಿನಪುತ್ಥಳಿಯನುರಿಕೊಂಡಡೆ ಉದಕ ಬಾಯಾಚಿ ಬಳಲುತ್ತಿದೆ"(ಅ.ವ.೧೫೫); ಇಲ್ಲಿ 'ಉರಿ ಕೊಂಡಡೆ' ಎಂದರೆ ಉರಿ ಆವರಿಸಿದರೆ, ಉರಿ ತನ್ನ ಹಿಡಿತಕ್ಕೆ ತೆಗೆದುಕೊಂಡರೆ ಎಂದಾಗುತ್ತದೆ;
- 'ಕೊಂಡು' ರೂಪ 'ಕೊಳ್ಳು' ಪದದ ಭೂತ ರೂಪ, ಕೊಳ್ಳು'ಪದದ ಮೂಲ ರೂಪ 'ಕೊಳ್'; ಈ ಕೊಳ್/ಕೊಳ್ಳು ರೂಪವೇ ಮುಂದೆ ಕೊಂಡು/ಕೊಣ್ಡು ಆಗಿದೆ; ಇಲ್ಲಿನ ಅನುನಾಸಿಕ ಎಲ್ಲಿಯದು? ಪ್ರಾಯೋಗಿಕ ಬದಲಾವಣೆಯಲ್ಲಿ ಹೇಳುವುದಾದರೆ, 'ಕೊಳ್' ರೂಪದಲ್ಲಿನ 'ಳ್'ಗೆ ಅನುನಾಸಿಕತ್ವ ಲಭ್ಯವಾಗಿದೆ; ಹೇಗೆ? 'ಳ್'ನ್ನು 'ಲ'ಕಾರವಾಗಿ ಪರಿಗಣಿಸದರೆ(ಲ=ಳ), ಆಗ'ಲ'ಕಾರಕ್ಕೆ ಲಭ್ಯವಾಗುವ ಅನುನಾಸಿಕತ್ವದಿಂದಾಗಿ (ಯ,ರ,ಲ,ವ ಗಳು ಅನುನಾಸಿಕಗಳೂ ನಿರನುನಾಸಿಕಗಳೂ ಆಗಿರುತ್ತವೆ ಎಂಬ ವ್ಯಾಕರಣ ನಿಯಮದಿಂದಾಗಿ) 'ಳ' ಕಾರಕ್ಕೆ ಅನುನಾಸಿಕತೆ ಅಳವಡುತ್ತದೆ; ಆಗ ಕೊಳ್>ಕೊಂಡ ಆಗುವುದು ಕಷ್ಟವಾಗುವುದಿಲ್ಲ;
- 'ಕೊಂಡು' ರೂಪಕ್ಕೆ 'ಕೊಣ್' ಧಾತುವಿನ ಮೂಲವಿರುವುದನ್ನು ಕೆಲವರು ಹೇಳುತಿದ್ದಾರೆ(ತು.ನಿ); ಇದಕ್ಕೆ `bring', `take away' ಅರ್ಥವನ್ನು ಕೊಡಲಾಗಿದೆ(ಅಲ್ಲೇ); ಇದೇ ಅರ್ಥವನ್ನು ಹೊಂದಿರುವ 'ಕೊಳ್' ಧಾತುವೇ ಮೂಲ ರೂಪ, ಅದಕ್ಕೆ 'ಕೊಣ್' ಬರುವುದು ಆಶ್ಚರ್ಯವಲ್ಲ; ಏಕೆಂದರೆ 'ಳ' ಮತ್ತು 'ಣ' ವಿನಿಮಯಗೊಳ್ಳುವುದು ಸಾಮಾನ್ಯ; ಒಮ್ಮೆ ಅನುನಾಸಿಕತ್ವ ಪ್ರಾಪ್ತವಾಯಿತೆಂದರೆ, ಆ ವರ್ಗದ 'ಡ' ಕಾರ ಬರುವುದು ಸಲೀಸು(ಕೊಣ್ಡ);
- 'ಉ'ಕಾರದ ಉಚ್ಚಾರಣಾ ಸೌಲಭ್ಯದಿಂದಾಗಿ, 'ಕೊಳ್', 'ಕೊಣ್ಡ' ರೂಪಗಳು 'ಕೊಳ್ಳು' ಮತ್ತು ಕೊಣ್ಡು/ಕೊಂಡು ರೂಪಗಳಾಗಿ ಬದಲಾಗುವುದು ಸಹಜ;
- ತಮಿಳು ಮತ್ತು ಮಲೆಯಾಳಂಗಳಲ್ಲಿ ಕೊಳ್/ಕೊಳ್ಳು, ತೆಲುಗಿನಲ್ಲಿ 'ಕೊನು' ರೂಪಗಳಿವೆ; ಕನ್ನಡದ ರೂಪಗಳನ್ನೇ ತಮಿಳು, ಮಲೆಯಾಳಂ ರೂಪಗಳು ಹೋಲುತ್ತವೆ; ತೆಲುಗಿನ ರೂಪದ ಕೊನೆಯ ಧ್ವನಿಮಾ 'ನ್' ನೇರವಾಗಿ 'ಳ್'ಕಾರಕ್ಕೆ ಸಂಬಂಧಿಸಿಲ್ಲದಿದ್ದರೂ, 'ಕೊಳ್' ಧಾತು ನಿರ್ಮಾಣ ಮಾಡಿದ 'ಕೊಣ್ಡು' ರೂಪದಲ್ಲಿನ ಅನುನಾಸಿಕಕ್ಕೆ ಸಂಬಂಧ ಪಡುತ್ತದೆ;
- ಕೊಂಬ/ಕೊಮ್ಬು ಎಂಬ ಪದವೂ ಇದೆ; ಕಾವ್ಯಗಳಲ್ಲಿ ಹೆಚ್ಚಾಗಿ ಬಳಕೆ ಇದರದು; 'ಕೊಂಬುದು' ಪದವಿದ್ದು; 'ಕೊಳ್ಳುವುದು' ಎಂದೇ ಅರ್ಥವಿದೆ;
- 'ಕೊಂಡುಕೊಂಡು' ಎಂಬ ದ್ವಿರುಕ್ತಿ ಬರುತ್ತದೆ; 'ಕೊಂಡು' ಪದವೇ ಸಾಕಾಗಿತ್ತು, ಅದರ ಪುನರಾವರ್ತನೆ ಅಗತ್ಯವಿರಲಿಲ್ಲ; ಭಾಷಾ ಬೆಳವಣಿಗೆಯಲ್ಲಿ ಪದ ಪುನರಾವರ್ತನೆ ರೂಢಿಯಲ್ಲಿದೆ; ಎರಡೂ ಪದಗಳು ಭೂತಕ್ರಿಯೆಯಲ್ಲೇ ಇವೆ, ಒಟ್ಟಿಗೆ ಬಂದಿದ್ದರಿಂದ ಅದರ ಮೇಲಿನ ಒತ್ತು ಜಾಸ್ತಿಯಾಯಿತು; ಕ್ರಿಯೆ ನಡೆದು ಹೋಗಿದೆ ಎಂಬುದನ್ನು ಮನದಟ್ಟು ಮಾಡಲು ಹೊರಟಿದೆ; 'ಕೊಂಡು ಕೊಳ್ಳು' ರೂಪವೂ ಇರುವುದನ್ನು ಗಮನಿಸಬೇಕು;
- 'ಕೊಂಡಾಟ', 'ಕೊಂಡಾಡು' ಪದಗಳು 'ಕೊಳ್ಳುವ ಆಟ'ವನ್ನೆ ಹೇಳುತ್ತಿವೆಯಾದರೂ, ಹೊಗಳಿಕೆಯ ಕಡೆ ಈ ಪದಗಳು ವಾಲುತ್ತಿವೆ ಎಂದೇ ತಿಳಿಯಬೇಕು; `Koṇḍaṭa', `Koṇḍaḍu', words telling the

meaning purchase, but the words turns towards the meaning of the word `Praise';

- 'ಕೊಂಡುಹೋಗು' ಸಂಯುಕ್ತ ಪದವೂ ಇದೆ; 'ಕೊಳ್ಳು' ಮೂಲವಾದ ಪ್ರಕ್ರಿಯೆ, ಪದಾರ್ಥವನ್ನು ತೆಗೆದುಕೊಂಡು ಹೋಗು ಎನ್ನುವುದು ಅರ್ಥ; ಕೊಳ್ಳುವ ಕ್ರಿಯೆಯಲ್ಲದೆ, ಆಮೇಲಿನ ಚಲನೆಯೂ ಇಲ್ಲದೆ; ಇದರ ಇನ್ನೊಂದು ರೂಪ 'ಕೊಂಡೊಯ್'; *ಪ್ರ: 'ಉಂಡೂ ಹೋದ, ಕೊಂಡೂ ಹೋದ'*(ನ.ಗಾ); `Koṇḍu hogu' is a compound word; the main action is `Koḷḷu'; the meaning is to purchase the commodity and take away; there is purchasing action and the movement also, another form `Koṇḍoy';
- 'ಕೊಳು ಕೊಡೆ' ರೂಪವೂ ಇದೆ; ಕೊಡುವ ಮತ್ತು ತೆಗೆದುಕೊಂಡು ಹೋಗುವ ಕ್ರಿಯೆಗೆ ಸಂಬಂಧಿಸಿದ್ದು; ವಿನಿಮಯ; ಪದದ್ವಂದ್ವ; ನುಡಿಗಟ್ಟಿನ ವರ್ತನೆ ಕೂಡ. `Koḷu koḍe' form is in use; relate to give and take action.

ಕೊಳ್ಳುಬಾಕ/ಕೊಳಬಕ್ಕ koḷḷubāka/ koḷabakka :

- ತಿಂಡಿ ಪೋತ; ಹೆಚ್ಚು ಊಟ–ತಿಂಡಿ ಮಾಡುವವ; 'ಹೊಟ್ಟೆಬಾಕ' ಎಂದು ಕರೆಯುವುದಿದೆ; `Thiṇḍi potha' a person eat too much dinner and frequently eat stuffs;
- ಕೊಳ್ಳುಬಾಕರು ಹಸಿವು ಸಹಿಸಲಾರದವರು; ತಿನ್ನುವ ಪದಾರ್ಥ ಎಲ್ಲಿ ಏನೇ ಸಿಕ್ಕರು ತಿಂದುಬಿಡುವ ಗುಣ ಹೊಂದಿರುತ್ತಾರೆ; ರುಚಿ–ಶುಚಿಯ ಬಗೆಗೆ ಚಿಂತಿಸುವವರಲ್ಲ; *ಪ್ರ: 'ಅವನೊಬ್ಬ ಕೊಳ್ಳುಬಾಕ ಅವನನ್ನೇಕೆ ಕರೆತಂದೆ'!* He is called as aggressive eater, they don't tolerate hungry; don't think of taste and highgene;
- 'ಕೊಳ್ಳುಬಾಕ' ಎಂಬ ಪದವನ್ನು ಇವೊತ್ತು ಜಾಗತೀಕರಣದ ಹಿನ್ನೆಲೆಯಲ್ಲಿ 'ಕೊಳ್ಳುಬಾಕ ಸಂಸ್ಕೃತಿ' ಎಂಬುದಾಗಿ ಬಳಸಲಾಗುತ್ತಿದೆ; ಒಂದು ರೀತಿಯಲ್ಲಿ 'ಸಾಂಸ್ಕೃತಿಕ ವಸಾಹತು' ಕಲ್ಪನೆಯದು; The word `Koḷḷu baka' used in global background; a kind of `cultural colony' concept;
- ನಮ್ಮಲ್ಲಿ 'ಹೊಟ್ಟೆಬಾಕ' ಎಂಬ ಪದ ಆಗಲೇ ಇದೆ; ಇದರ ಇನ್ನೊಂದು ರೂಪವೇ 'ಕೊಳ್ಳುಬಾಕ'. We have the word `hottebaka'(glutton) another form of this is `Koḷḷu baka'.

ಕೊಳ್ಳೆ koḷḷe :

- ಸೂರೆ; ಸುಲಿಗೆ; ದರೋಡೆ; ದೋಚುವುದು; ಕದಿಯುವುದು; ಲೂಟಿ ಮಾಡುವಿಕೆ; looting; plundering; burglaring; theft etc;
- ಹಣ, ಚಿನ್ನ, ಬೆಳ್ಳಿ, ಬಂಗಾರ ವಿವಿಧ ಬಗೆಯ ನೈಸರ್ಗಿಕ ಸಂಪನ್ಮೂಲಗಳು, ಮನೆಬಳಕೆ ಪದಾರ್ಥಗಳು, ವಿವಿಧ ಬಗೆಯ ಪೀಠೋಪಕರಣಗಳು, ಬಟ್ಟೆ, ಬರೆ, ದವಸ–ಧಾನ್ಯ ಸೇರಿದಂತೆ ಬೆಲೆ ಬಾಳುವ ವಸ್ತುಗಳನ್ನು ದೋಚಿಕೊಂಡು ಹೋಗುವುದು; ಸಿಕ್ಕ ಪದಾರ್ಥಗಳನ್ನು ಹೇಳದೆ ಕೇಳದೆ ಕದಿಯುವುದು; Money, gold, silver etc natural sources, household commodities, different kinds of furnitures, clothes, valuables are looted taken away or theft the things without permission;
- ವ್ಯಾಪಾರಕ್ಕೆಂದು ಬಂದ ಬ್ರಿಟಿಷರು ಇಲ್ಲಿನ ಸಂಪತ್ತನ್ನೆಲ್ಲ ಲೂಟಿ ಮಾಡಿಕೊಂಡು ಹೋದರು; ಹಾಗೆಯೇ ಮಹಮ್ಮದ್ ಘಸ್ನಿ ಇಲ್ಲಿನ ಸಂಪತ್ತನೆಲ್ಲ ದೋಚುವುದಕ್ಕಾಗಿಯೇ ಹದಿನೇಳು ಬಾರಿ ದಂಡ ಯಾತ್ರೆ ಮಾಡಿದನೆಂಬುದು ಇತಿಹಾಸದ ಉಲ್ಲೇಖ; Britishers came to India for business but they looted the source of India; Ghajni military expedition on India 17 times to loot the sources;
- ತಮಿಳಿನಲ್ಲಿ 'ಕೊಳ್ಳೈ', ತೆಲುಗಿನಲ್ಲಿ 'ಕೊಲ್ಲ' ಮತ್ತು ಮಲೆಯಾಳಂನಲ್ಲಿ 'ಕೊಳ್ಳ' ಪದಗಳ ಬಳಕೆ ಇದೆ; The words used `Koḷḷai' in Tamil, `Kolla' in Telugu, `Koḷḷa' in Malayalam;
- 'ಊರೆಲ್ಲಾ ಕೊಳ್ಳೆ ಹೊಡುದ್ಮೇಲೆ ಕೋಟೆ ಬಾಗ್ಲಾಕ್ದಂಗೆ'(ಗಾ); *ಪ್ರ: 'ಅವರು ಇಲ್ಲಿನ ಸಂಪತ್ತನ್ನು ಕೊಳ್ಳೆ ಹೊಡೆಯಲೆಂದೇ ಬಂದಂತೆ ಕಾಣುತ್ತಿತ್ತು'.* `The gate closed after loot the village'.

ಕೋಂಗೀಲ್ kōngīl :

- ಮಾವಿನ ವಾಟೆ(ಬೀಜ)ಯ ಒಳಗಿನ ತಿರುಳು (ತು.?; ಮಂ.ಜಿ); Core of the mango seed shell;

- ಹೊಟ್ಟೆ ನೋವು ಆಮಶಂಕೆಗೆ ಔಷಧಿಯಾಗಿ ಬಳಕೆ; ಔಷಧಿ ಸ್ವಲ್ಪ ಒಗರಾಗಿ ಕಹಿಕಹಿಯಾಗಿ ಇರುತ್ತದಂತೆ; ಆದರೆ ಒಳ್ಳೆಯ ಔಷಧಿ ಎನ್ನಲಾಗಿದೆ; Used as medicine for stomach pain dysentery; medicine is bitter and astringent; but it is a good medicine;
- ಹೊಟ್ಟೆಯಲ್ಲಿ ಕ್ರಿಮಿಗಳ ಬಾಧೆ ಇರುವವರು ಈ 'ಕೋಂಗೀಲ'ನ್ನು ಸುಟ್ಟುಕೊಂಡು ತಿನ್ನುತ್ತಾರೆ; Those who have trouble of worm eat the burned `Kongila';
- **ವ್ಯರೂ:** ಕೋಕಿಲ್; ಕೋಗಿಲ್; ಕೋಗಿಲು(ಕ);
- **ನೋಡಿ:** ಕೋಗಿಲೆ.

ಕೋಂಟು kōnṭu :

- ಮೂಲೆ? Corner.

ಕೋಂಡವಾಡಿ kōnḍavāḍi :

- ದೊಡ್ಡಿ; ತುಡುಗು ದನಗಳನ್ನು ಕೂಡಿ ಹಾಕುವ ಸಾರ್ವಜನಿಕ ಸ್ಥಳ; ಕೊಂಡವಾಡ(ಡಿ); Cow-pen; cow-shed; cattle pound; a public place to assemble cattle;
- **ನೋಡಿ:** ಕೊಂಡವಾಡ;
- ಕೊಂಡುವಾಡ(ಡಿ)>ಕೋಂಡವಾಡಿ(ತು?) ಆಗಿರುವಂತೆ ತೋರುತ್ತದೆ; ಉಚ್ಚಾರಣಾ ವ್ಯತ್ಯಯ; ಕನ್ನಡದಲ್ಲಿ 'ಕೋಂಡವಾಡ' ಇಲ್ಲ; ಇದ್ದರೂ ಕೊಡಗು ಹಾಗೂ ತುಳುನಾಡಿನಲ್ಲಿ; ಅಲ್ಲಿನ ಭಾಷೆಗಳ(ತುಳು/ಕೊಡವ) ಉಚ್ಚಾರಣೆಯ ಪ್ರಭಾವದಿಂದ ಹೀಗಾಗಿರಬಹುದು. Konḍavaḍa becomes Konḍavaḍi; pronunciation difference; Konḍavaḍa word is not available in Kannada; it is in Kodagu and Tulunadu, by the influence of pronunciation of these language it may happens.

ಕೋಂಡ್ಲೆ ಒಲೆ kōnḍle ole :

- ಒಂಟಿ ವಾಗೊಲೆ ಇರುವ ಒಲೆ; A oven has single smoking oven;
- ಮುಖ್ಯ ಒಲೆಯ ಎಡಭಾಗಕ್ಕೆ ಒಂಟಿ ವಾಗೊಲೆ ಇರುವುದು ಸಾಮಾನ್ಯ; A single smoking oven is in the left side of the main hearth is common;
- ಮುಖ್ಯ ಒಲೆಯಿಂದ ಉರಿ ವಾಗೊಲೆಗೆ ಹಾಯ್ದು ಹೋಗಲು ಸುರಂಗದಂತಹ ಬಾಯಿ ಒಳಗಡೆಯೇ ಇರುತ್ತದೆ; ಮುಖ್ಯ ಒಲೆಗೆ ಒಟ್ಟಿದ ಸೌದೆಯನ್ನು ವಾಗೊಲೆ ಕಡೆಗೆ ಸ್ವಲ್ಪ ತಿರುಗಿಸಿದರೆ ಸಾಕು; A mouth within the main oven to pass the fire flame to side smoke oven; the fire wood turns towards smoke oven by the main hearth;
- ಕೊಂಡಿಲು>ಕೊಂಡ್ಲು>ಕೊಂಡ್ಲೆ>ಕೋಂಡ್ಲೆ ಆಗಿರಬಹುದೆ? ಉಚ್ಚಾರಣಾ ವ್ಯತ್ಯಯದ ಪರಿಗಣನೆಯಲ್ಲಿ ಈ ಸಾಧ್ಯತೆಯನ್ನು ಚಿಂತಿಸಬಹುದು; Konḍilu may be Konḍlu, Konḍle; the pronunciation differences may happen to be like this;
- ಕೊಂಡಿ=ಕೊಕ್ಕೆ, ಹೆಚ್ಚುವರಿ ಸೇರ್ಪಡೆ (ಉದಾ: ಕೊಂಡಿ ಗದ್ದೆ), ಕವಲು; ವಾಗೊಲೆ ಮುಖ್ಯ ಒಲೆಯ ಕವಲಾದುದರಿಂದ ಕೊಂಡಿ ಒಲೆ>ಕೊಂಡ್ಲೊಲೆ/ ಕೋಂಡ್ಲೊಲೆ ಸಾಧ್ಯ;
- ವಾಗೊಲೆಗೆ ಪರ್ಯಾಯ ರೂಪವಾಗಿ 'ಕೋಡೊಲೆ' (ಕಜಾಕೋ) ಇದೆ; ಕೋಡೊಲೆ>ಕೋಂಡ್ಲೊಲೆ> ಕೋಂಡ್ಲೆ ಒಲೆ ಆಗಿರುವ ಸಾಧ್ಯತೆಯೂ ಇದೆ. `Koḍole' is an alternative to `Vagole' form; Koḍole becomes Konḍle is possible.

ಕೋಂಬರೆ kōmbare :

- ಮಲಗುವ ಕೋಣೆ(ತು.?). Bedroom or sleeping room.

ಕೋಕ kōka :

೧. ಕೋಳಿ; ಕುಕ್ಕುಟ; ಕೊಕ್ಕ; 'ಕೋಳಿ ಕೊಕ್ಕ' ಎಂಬ ಮಾತಿದೆ; Koḷi; kukkuṭa; kokka; `Koḷi kokka' is a common usage in folk;

- ಉಚ್ಚಾರಣಾ ವ್ಯತ್ಯಯದಿಂದ ಕೋಕ>ಕೊಕ್ಕ ಆಗಿರಬಹುದು; ಆದಿ ದೀರ್ಘ ಹ್ರಸ್ವವಾಗಿರುವುದು ಅದರ ಮುಂದಿನ ಅಕ್ಷರದ ದ್ವಿತ್ವಕ್ಕೆ ಕಾರಣವಾಗಿದೆ; Koka > may be kokka by the difference of pronunciation;

- 'ಕೊಕ್ಕ'ದ ಪದಾಂತ್ಯ ದ್ವಿತ್ವವು ಉಚ್ಚಾರಣೆಯ ಕ್ಲೇಶವನ್ನು ನಿವಾರಿಸಿಕೊಳ್ಳುವುದಕ್ಕಾಗಿ ಲೋಪವಾಗಿ ಆದಿದೀರ್ಘಕ್ಕೆ ಕಾರಣವಾಗಿರಬಹುದು; ಕೊಕ್ಕ> ಕೋಕ(?); ಸಂಸ್ಕೃತದಲ್ಲಿ ಇದರ ಸಾಮ್ಯರೂಪ 'ಕೋಕ'(=ಚಕ್ರವಾಕ)ದ ಪ್ರೇರಣೆಯೂ ಇರಬಹುದು;

೨. ಕೆಳದರ್ಜೆಯ ಒಂದು ಬಗೆಯ ಅಡಕೆ; ಸಿಪ್ಪೆಯೊಳಗಿನ ತೆಳುಪದರ ಅಂಟಿಕೊಂಡಿರುವ ಅಡಕೆ; A kind of low graded areca; a thin layer stick within the husk of areca;

- ಸಿಪ್ಪೆ ಸುಲಿದ ಮೇಲೂ ಒಳಪದರದ ನಾರು ಅಂಟಿಕೊಂಡಿರುವ ಒಣ ಅಡಕೆ(ತು.ನಿ); *ಪ್ರ: 'ಗೋಟಡಕೆಗೆ ಸಿಗೋ ಬೆಲೆಯೂ ಕೋಕಕ್ಕೆ ಸಿಗೋದಿಲ್ಲ*'; The inner layer thread stick on the dry areca after skinout;
- ಕೋಕ ಒಳ್ಳೆಯ ಅಡಿಕೆಯಷ್ಟು ಗಟ್ಟಿ ಇರುವುದಿಲ್ಲ; ಕಪ್ಪಗಿದ್ದು ಹಸನಾಗಿಯೂ ಕಾಣುವುದಿಲ್ಲ; ಕಾಯಿಯ ಗರ್ಭದೊಳಗೇ ಪೌಷ್ಟಿಕಾಂಶಗಳ ಕೊರತೆಯಿಂದ ಮುರುಟಿಕೊಂಡಿದ್ದು ಸಿಪ್ಪೆಯನ್ನು ಪೂರ್ಣವಾಗಿ ಬಿಡಿಸಲು ಕಷ್ಟವಾಗುತ್ತದೆ; Koka is not hard as good areca; it has sinked within the unripe stage by lack of nutrition; so it is difficult to peelout the skin;
- ವ್ಯರೂ: ಕೋಕಾ;

೩. ಎಸೆಯುವಿಕೆ; ಬಿಸಾಡುವಿಕೆ; ಮರೆಮಾಚುವಿಕೆ (ತು.ನಿ). To through; to fling; to conceal.

ಕೋಕಂ kōkam :

- ಒಂದು ಜಾತಿಯ ಮರ; ಮುರಗಲ ಮರ; ಅದರ ಹಣ್ಣು; ಮುರಗಲ ಹಣ್ಣಿನ ಸಿಪ್ಪೆ; A kind of tree; muragala tree; its fruit; skin of muragala fruit;
- ಮುರಗಲ ಹಣ್ಣಿನ ಸಿಪ್ಪೆಯ ರಸದಿಂದ ಪಾನಕ ತಯಾರಿಸುತ್ತಾರೆ; ಈ ಸಿಪ್ಪೆಯ ರಸವನ್ನು ಸಕ್ಕರೆಯೊಡನೆ ಬೆರಸಿ ಏಳು ದಿವಸಗಳವರೆಗೆ ಬಿಸಿಲಿನಲ್ಲಿ ಕಾಯಿಸಿ ಪಾತ್ರೆಗಳಲ್ಲಿ ಸಂಗ್ರಹಿಸಿ ಇಟ್ಟುಕೊಳ್ಳುತ್ತಾರೆ; ಹೀಗೆ ತಯಾರಿಸಿದ ಪಾನಕ ಬಹುದಿವಸಗಳವರೆಗೆ ಬಳಕೆಗೊಳ್ಳುತ್ತದೆ; Prepare juice by the muragala fruit skin; the juice of this fruit skin mix with sugar and heat up in the sun rays for seven days in a vessel for storage; this kind of juice stored many days;
- ನೆಲ್ಲಿ, ಮಾವು, ಲಿಂಬೆ ಮೊದಲಾದ ಹುಳಿ ಅಂಶವಿರುವ ರಸದ ಹಣ್ಣುಗಳಿಂದಲೂ ಹೀಗೆ ಪಾನಕ ತಯಾರಿಸಿ ಬಳಸುವುದುಂಟು; Nelli, mango, lemon fruit juices have sour quality use to prepare juice;
- ಕೋಕ(ಸಂ)=ಖರ್ಜೂರದ ಮರ(ಕನಿ). Koka means Date tree.

ಕೋಕಿಲಗೌರಿ ವ್ರತ kōkilagauri vrata:

- ಒಂದು ಬಗೆಯ ಗೌರಿವ್ರತ; ಬ್ರಾಹ್ಮಣ ಹೆಂಗಸರು ಆಚರಿಸುತ್ತಾರೆ; A kind of ritual observance; this is practiced by Brahmin women;
- ಕೋಕಿಲಗೌರಿ ಎಂದರೆ ಪಾರ್ವತಿ; ಕೋಕಿಲಬಳ್ಳಿ(?)ಯನ್ನು ಪೂಜಿಸಿ ಆಚರಿಸುವ ವ್ರತ ಇದು; ಕೋಕಿಲ ಬಳ್ಳಿಯನ್ನು ಗೌರಿ/ಪಾರ್ವತಿಗೆ ಸಂಕೇತವಾಗಿ ತಿಳಿದಿರುವಂತೆ ಕಾಣುತ್ತದೆ; Kokilagowri means Parvathi; a practice of worship the Kokila creeper known as the symbol of Gowri/Parvathi;
- ಆಷಾಢ ಪೂರ್ಣಿಮೆಯಿಂದ ಶ್ರಾವಣ ಪೂರ್ಣಿಮೆಯವರೆಗೆ ಈ ವ್ರತದ ಆಚರಣೆ ನಡೆಯುತ್ತದೆ; ವ್ರತದ ದಿವಸಗಳಲ್ಲಿ ಹಗಲೆಲ್ಲಾ ಉಪವಾಸವಿದ್ದು ಸಾಯಂಕಾಲ ಊಟ ಮಾಡುತ್ತಾರೆ; ಸೂರ್ಯೋದಯ ಆಗುವುದರೊಳಗೆ ಈ ವ್ರತವನ್ನು ಆಚರಿಸಬೇಕೆಂಬ ನಿಯಮವೂ ಇದೆ; This ritual observance is from Ashaḍa fullmoon day to Shravana fullmoon day; on these days women are fasting in the day and have dinner in the evening; a rule to practice before the sunrise;
- ಮೂರು ವರ್ಷಗಳವರೆಗೆ ಆಚರಿಸಿ ಅನಂತರ ಉದ್ಯಾಪನೆ(ಸಮಾರೋಪ–ಮುಕ್ತಾಯ) ಮಾಡುತ್ತಾರೆ; This is practiced till three years and ended after three years;
- 'ಕೋಕಿಲ ವ್ರತ' ಎಂದು ಹೇಳುವುದೂ ಉಂಟು. This is called as `Kokila Vratha'.

ಕೋಕೋ kōkō :

- ಒಂದು ಬಗೆಯ ಸಣ್ಣ ಗಿಡ; Theobroma cacao; Koko is a kind of small plant;
- ಕೋಕೋ ಗಿಡದ ಬೀಜಗಳಿಂದ ತಯಾರಿಸಿದ ಪಾನೀಯ; `Koko' is a juice prepared by the seeds of koko;
- ಚಾಕೋಲೇಟ್, ಪಾನೀಯ ಹಾಗೂ ಸುಗಂಧ ದ್ರವ್ಯಗಳ ತಯಾರಿಕೆಯಲ್ಲಿ ಬಳಕೆ; ಇದರ ಬೀಜಗಳನ್ನು ಪಾನೀಯ ತಯಾರಿಕೆಯಲ್ಲಿ ಬಳಸುತ್ತಾರೆ. This is used in preparation of chocolate, soft drinks and aromatic products.

ಕೋಕ್ಯಾಡು kōkyāḍu :

- ಕೋಕಿ ಆಡು; ಅಡಗುವ ಆಟವಾಡು(ಹ.ಶೋ); Play Koki; play hide and seek;
- ಅವಿತುಗುಮ್ಮನ ಆಟ ಎಂದು ಮಕ್ಕಳು ಆಡುವ ಆಟವೊಂದಿದೆ; ಶೋಬಾನೆ ಹಾಡುಗಳಲ್ಲಿ ಪ್ರಯೋಗವಾದ ಪದವಾದುದರಿಂದ ಮದುವೆ ಸಂದರ್ಭದಲ್ಲಿ ವಧುವರರಿಂದ ಆಡಿಸುವ ಆಟವನ್ನೇನಾದರೂ ಹೇಳುತ್ತಿರಬಹುದೆ? ಆಟದ ಸ್ವರೂಪ-ವಿವರಗಳು ಅಲಭ್ಯ; A play played by children hide and seek; may be this play played by bride and groom, the word `Kokyaḍu' in the songs of `Shobane padagaḷu'; the features of the play cannot be available;
- ಕೋಗಿಲೆಯಂತೆ ಅವಿತಾಡು ಎಂದಿರಬಹುದೆ? ಮರದ ಮೇಲೆ ಎಲೆಗಳ ನಡುವೆ ಹುದುಗಿದ್ದುಕೊಂಡು ಕೂಗುವುದು ಕೋಗಿಲೆಯ ಸಾಮಾನ್ಯ ಗುಣ. May be hide like cuckoo; the general quality of cuckoo is to hide in between the leaves of the tree and sing.

ಕೋಗಲು kōgalu :

- ಒಂದು ಬಗೆಯ ಹುಲ್ಲು; ಜೊಂಡು ಹುಲ್ಲು (ಮಂ.ಜಿ); A kind of grass; weed grass;
- ಗದ್ದೆ ತೆವರಿ(ಬದು)ಗಳ ಮೇಲೆ ಬೆಳೆಯುತ್ತದೆ; ಸಾಕಷ್ಟು ಗಟ್ಟಿ ಇರುತ್ತದೆ; Grows on the mound of the paddy field; somehow it is hard;
- ಒಂದು ಬಗೆಯ ಬಳ್ಳಿ; ಕೂಗಲ ಬಳ್ಳಿ. A kind of creeper; kogala creeper.

ಕೋಗಳಿ(ಟಿ)ಐನೂರು

kōgaḷi(ḷi)ainūru:

- ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲ್ಲೋಕಿನ ಕ್ರಿ.ಶ.೧೦೫೩ರ ೪೧ನೇ ಶಾಸನದಲ್ಲಿ ಉಲ್ಲೇಖವಿದೆ; The name of the village referred in the 41st inscription of 1053rd AD of Bellari district, Hagaribommanahalli taluk;
- ಚಾಳುಕ್ಯ ರಾಜ ತ್ರೈಲೋಕ್ಯಮಲ್ಲನ ಆಳ್ವಿಕೆಯ ಕಾಲ; It is the period of the king Trilokyamalla of Chalukyas;
- ಈತನ ಸಾಮಂತ ತ್ರೈಲೋಕ್ಯಮಲ್ಲನೊಳಂಬ ಪೆರ್ಮಾನಡಿ ಆಳ್ವಿಕೆ ನಡೆಸುತ್ತಿದ್ದ ಪ್ರಮುಖ ಪ್ರದೇಶಗಳಲ್ಲಿ ಕೋಗಳಿ-೫೦೦, ಬಲ್ಲಕುಂದೆ-೩೦೦, ಕದಂಬಳಿಗೆ-೧೦೦೦ ಮುಖ್ಯವಾದವು; ಇವು ಆಡಳಿತ ಘಟಕಗಳು; This place was ruled by the feudatory of Trilokyamalla nolamba permanadi; the main places are Kogaḷi-500, Ballakunde-300, Kadambaḷige-1000; these are the units of his Administration;
- ಕೋಗಳ-೫೦೦ ಬಹುತೇಕ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಸ್ಥಳ; The place Kogaḷa-500 referred in many inscriptions;
- ಕೋಗಳಿ, ಕೋಗಳಿ ಅಯ್ನೂಱು, ಕೋಗಳಿಐನೂರು, ಕೋಗಳಿನಾಡು, ಕೋಗಳಿಯ ವೇಂಠೆ ಎಂದು ಮುಂತಾಗಿ ಶಾಸನಗಳಲ್ಲಿ ಭಿನ್ನ ರೂಪಗಳಿವೆ; Kogaḷi, kogaḷi Ainoṟu, Kogaḷiinoru, Kogaḷinaḍu, Kogaḷiya venṭhe are the different forms in the inscription;
- 'ಕೋಗಳಿ' ಒಂದು ಎಲ್ಲೆಯನ್ನು ಅಥವಾ ಒಂದು ಸೀಮೆಯನ್ನು ಸೂಚಿಸುವ ಪದ. The word `Kogaḷi' notices border or an area.

(ಕ.ವಿ.ವಿ.ಶಾ.ಸಂ.೧; ಬ.ಜಿ.)

ಕೋಗಿರು/ಕೋಗೀರು kōgiru/kōgīru :

- ಜೀನು; ಥಡಿ; ದಟ್ಟವಾದ ಮೆತ್ತನೆಯ ತಡಿ; Saddle; a thick soft saddle;
- ಸವಾರಿ ಮಾಡುವಾಗ ಕುದುರೆಯ ಬೆನ್ನಿಗೆ ಹಾಕುತ್ತಾರೆ; While riding it was fixed on the back of the horse;
- ಸವಾರಿ ಮಾಡುವುದು; ಅಧಿಕಾರ ನಡೆಸುವುದು (ಕ.ನಿ); Ride on; run on the power;
- ಅನ್ಯದೇಶ್ಯ; ಮರಾ./ಹಿಂ: ಖೋಗೀರು. Foreign.

ಕೋಗಿಲೂರು kōgilūru :

- ಕ್ರಿ.ಶ.೧೨೮೦ರ ೨೩೪ರ ಶಾಸನದಲ್ಲಿ ಇದರ ಉಲ್ಲೇಖ; It is reffered in the 234th inscription of 1280AD;
- ಕೋಗಿಲೆ+ಊರು>ಕೋಗಿಲೆಯೂರು>ಕೋಗಿಲೂರು ಆಗಿರಬಹುದು; Kogile+ūru=may be Kogilūr;
- ಪಕ್ಷಿವಾಚಿ ಸ್ಥಳನಾಮವೆಂದು ಇದನ್ನು ಇಟ್ಟುಕೊಳ್ಳಬಹುದು; This may be in the name of bird;
- ಆ ಪ್ರಕಾರ ಕೋಗಿಲೆಗಳು ಹೆಚ್ಚು ಇದ್ದ ಕಾರಣ ಕೋಗಿಲೆಯ ಊರು>ಕೋಗಿಲೂರು ಎಂದಾಗಿರಲು ಸಾಧ್ಯ; May be the cackoos lived in this place is called Kogiluru;
- ಆದರೆ 'ಕೋಗಿಲೆ ಗಿಡ' ಎಂಬ ಸಸ್ಯವೊಂದು ಇರುವುದರಿಂದ ಅದರಿಂದಲೂ ಈ ಹೆಸರು ಬಂದಿರಬಹುದು; "A plant of which the leaves are used instead of plates"(ಕಿಟ್ಟೆಲ್). A plant `Kogila-giḍa' that may be the name of this place.

(E.C- ೯)

ಕೋಗಿಲೆ kōgile :

- ಮಧುರ ಕಂಠಕ್ಕೆ ಹೆಸರುವಾಸಿಯಾದ ಒಂದು ಪಕ್ಷಿ; ಪಿಕ; ಪರಪುಟ್ಟ; ಯೂಡೈನಮಿಸ್ ಸ್ಕೋಲಪೇಸಿಯ; A bird is famous for its melodious tone; Pika, Paraputta; cackoo;
- <ಕೋಕಿಲ(ಸಂ); ಅನ್ಯದೇಶ್ಯ ಪದ; It is a foreign word;
- ವಸಂತ ಋತುವಿನಲ್ಲಿ, ಅದರಲ್ಲೂ ಚೈತ್ರಮಾಸದಲ್ಲಿ ಕೋಗಿಲೆಯ ಮಧುರ ಕೂಜನ ಕೇಳಿಬರುತ್ತದೆ; ಉಳಿದ ಕಾಲಧಲ್ಲಿ ಕೋಗಿಲೆ ಮೌನವಾಗಿರುವುದೇ ಹೆಚ್ಚು; ಕಾಡಿನ ಮರಗಳಲ್ಲಿ, ಮಾವಿನ ತೋಪುಗಳಲ್ಲಿ, ತೋಟಗಳಲ್ಲಿ ವಾಸಿಸುತ್ತದೆ; ಹಣ್ಣು, ಕಂಬಳಿಹುಳು ಮೊದಲಾದ ಕೀಟಗಳನ್ನು ತಿನ್ನುತ್ತದೆ; The melodious call of this bird in the spring season i.e. Vasantha rithu; in the remaining seasons it is mostly silent; it lives in the trees of the forest, mango groves and gardens; it eats fruits and worms as food;
- ಕೋಗಿಲೆಗೆ ಮಾವಿನ ಚಿಗುರು ವಿಶೇಷ ಆಹಾರ ಎನ್ನುತ್ತಾರೆ; ಚಿಗುರಿದ ಮಾವಿನ ಮರದಲ್ಲೇ ಅದರ ವಾಸ್ತವ್ಯ ಎಂಬ ಅಭಿಪ್ರಾಯವೂ ಇದೆ; ಕೋಗಿಲೆಯ ಧ್ವನಿ ಅಧಿಕವಾಗಿ ಕೇಳಿಸುವುದೂ ಆಗಲೇ; ಈ ಕಾರಣದಿಂದ ಮಾವಿನ ಮರಕ್ಕೂ ಕೋಗಿಲೆಗೂ ವಿಶೇಷ ನಂಟು; People say cackoo eats mango shoot as special food; it lives in the mango tree, among newly born leaves in the month of spring or `Vasantha'; the sound of cackoo is more; so, for this reason cackoo and mango trees have a special relationship;
- ಮಾವಿನವಾಟೆಯ ಒಳತಿರುಳಿಗೆ 'ಕೋಂಗೀಲ್'(ತು) ಎನ್ನುತ್ತಾರೆ; ಈ ರೂಪಕ್ಕೆ ಕೋಗಿಲ್, ಕೋಗಿಲು, ಕೋಕಿಲ್ ಎಂದು ವ್ಯತ್ಯಯ ರೂಪಗಳಿವೆ; ಕೋಕಿಲ್/ಕೋಗಿಲ್ ದೇಶೀರೂಪವೇ ಆಗಿದ್ದು 'ಕೋಗಿಲೆ' ಇದರ ಸ್ವರಾಂತ ರೂಪ ಯಾಕಾಗಿರಬಾರದು? The inner core of mango seed shell is called `Kongil, kogilu, kokil';
- 'ಪರಪುಟ್ಟ' ಕೋಗಿಲೆಯ ಪರಾಶ್ರಯ ಗುಣವನ್ನು ಹೇಳುತ್ತದೆ; ಕೋಗಿಲೆ ಕೆಂಪು ಕಣ್ಣಿನ ಹೊರತಾಗಿ ಬಣ್ಣದಲ್ಲೂ ಆಕೃತಿಯಲ್ಲೂ ಹೆಚ್ಚೂ ಕಡಿಮೆ ಕಾಗೆಯಂತೆಯೇ ಇದೆ; ತನ್ನ ಮೊಟ್ಟೆಗಳ ಮೇಲೆ ಕಾವು ಕೂತು ಮರಿ ಮಾಡುವ ಸ್ವಭಾವ ಕೋಗಿಲೆಯದಲ್ಲವೆಂದೂ ಕಾಗೆಯ ಗೂಡಿನಲ್ಲಿ ಅದರ ಮೊಟ್ಟೆಗಳ ಜೊತೆಗೆ ತಾನೂ ಮೊಟ್ಟೆ ಇಟ್ಟು

ಕಾಗೆಯಿಂದ ಮರಿ ಮಾಡಿಸಿಕೊಳ್ಳುವ ಮರೆಮಾಚು ಸ್ವಭಾವದ್ದೆಂದೂ ಕೋಗಿಲೆಯ ಬಗೆಗೆ ಹೇಳಲಾಗುತ್ತದೆ; ಈ ಕಾರಣದಿಂದ ಇದಕ್ಕೆ 'ಪರಪುಟ್ಟ' ಹೆಸರು; `Paraputta' the word tells the meaning depend on others; cuckoo has similarity with crow, other than reddish; the colour and size more or less same; the cuckoo can not hatch of its own; so it kept eggs in crows nest, crow hatch eggs of cuckoo along with its eggs; so its hiding nature is called as `paraputta';

- 'ಪಿಕ' ಸಂಸ್ಕೃತ ರೂಪ; `Pika' is the form of Sanskrit;
- ರೂಪ ಮತ್ತು ಬಣ್ಣದಲ್ಲಿ ಕಾಗೆ ಕೋಗಿಲೆಯ ಹಾಗಿದ್ದರೂ ಕಂಠದಲ್ಲಿ ತದ್ವಿರುದ್ಧ; ಕಾಗೆಯ ಧ್ವನಿ ರೂಕ್ಷವಾದದ್ದು; ಈ ಸಾಮ್ಯ ವೈಷಮ್ಯದಿಂದ ಹುಟ್ಟಿಕೊಂಡಿವೆ ಈ ನಾಣ್ಣುಡಿಗಳು: ಕಾಗೆ ಕರಿದಾದರೆ ಕೋಗಿಲೆ ಆದೀತೆ; ಕಾಗೆ ಕೋಗಿಲೆಯ ಹಾಗಿದ್ದರೂ ರಾಗದಲ್ಲಿ ಭೇದವಿಲ್ಲವೆ?; ಕೋಗಿಲೆಯ ಸುತ್ತಲೂ ಕಾಗೆಗಳು ಕೂಡಿದ ಹಾಗೆ; ಕೋಗಿಲೆ ಹಾಡಿದರೆ ಕಾಗೆ ಪುಕ್ಕ ತರಕಂಡಂಗೆ; Cackoo is similar in colour and beauty, but it is quite opposite in tone; the sound of the crow is harsh;
- 'ಕುಹೂ ಕುಹೂ......' ಅಥವಾ 'ಕುವ್ವೂ ಕ್ವೂ....' ಎಂದು ಕೂಗುವ ಕೋಗಿಲೆಯ ಧ್ವನಿ ಮನುಷ್ಯನ ಕಿವಿಗೆ 'ಚಿಕ್ಕವ್ವೋ ಚಿಕ್ಕವ್ವೋ.....' ಎಂದೇ ಕೇಳಿಸುತ್ತದೆ; The tone of cuckoo `Kuhoo kuhoo...' or `kuvvoo kuvvoo...' heard as `Chikkavvo chikkavvo' to the ear of man;
- ಅದರ ಧ್ವನಿಯನ್ನು ಹೀಗೆ ಅನುಕರಿಸಿ ಹೇಳಿ ಮಕ್ಕಳನ್ನು ರಂಜಿಸುತ್ತಾರೆ; 'ಚಿಕವೂ ಚಿಕವೂ....' ಎಂದೂ ಅನುಕರಿಸುವುದುಂಟು; ಇಂಪಿನ ಜೊತೆಗೆ ಒಂದು ಬಗೆಯ ಹಂಬಲವನ್ನೂ ಕೋಗಿಲೆಯ ಧ್ವನಿಯಲ್ಲಿ ಮನುಷ್ಯ ಗುರುತಿಸಿಕೊಳ್ಳುತ್ತಾನೆ; To entertain the children imitate cuckoo tone as `Chikavoo chikavoo'; man identified with cuckoo along with melody and a kind of yearning also;
- ಕವಿಗಳು, ಚಿತ್ರಕಲಾವಿದರು ಮೊದಲಾದ ಭಾವಜೀವಿಗಳಿಗೆ ಕೋಗಿಲೆಯ ಆಕರ್ಷಣೆ ವಿಶೇಷ; ಕನ್ನಡದ ಆದಿಕವಿ ಪಂಪನ 'ಮರಿದುಂಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್.....' ಎಂಬ ತವರು ನೆಲದ ವರ್ಣನೆಯ ಪದ್ಯ ಪ್ರಸಿದ್ಧವಾಗಿದೆ; 'ಎತ್ತಣ ಮಾಮರ ಎತ್ತಣ ಕೋಗಿಲೆ ಎತ್ತಣಿಂದೆತ್ತ ಸಂಬಂಧವಯ್ಯ' ಎಂಬ ಪ್ರಭುದೇವರ(ಅಲ್ಲಮ) ವಚನವೂ ಅಷ್ಟೇ ಪ್ರಸಿದ್ಧ ಮತ್ತು ಜೀವಾತ್ಮ ಪರಮಾತ್ಮ ಸಂಬಂಧದ ದ್ಯೋತಕ; Cackoo is a special attraction to imaginative persons like poets and painters; Adikavi Pampa says about the native land is very famous; i.e. `mari dumbiyagi mēṇ kogileyagi puttuvudu nandanadol Banavasi desadol..'; the vachana of Allama prabhu is also famous as the words of Pampa and an instance of the relation between jeevathma and paramathma;
- ಮಾವಿನ ಮಿಡಿಯ ಒಳಗಿರುವ ಎಳೆಯ ಬೀಜ; ಮಾವಿನ ವಾಟೆಯೊಳಗಿನ ತಿರುಳು; ನೋಡಿ: ಕೋಂಗೀಲ್; A seed in the young mango fruit; a core in the shell of mango seed;
- ಒಂದು ಜಾತಿಯ ಹುಳು; A kind of worm;
- ಜಾನುವಾರುಗಳಿಗೆ ಬರುವ ಒಂದು ಬಗೆಯ ರೋಗ; A kind of disease to the cattles;
- 'ಕೋಗಿಲೆ' ರೂಪದ ಇಂತಹ ಅತಿಬಳಕೆ ಕಾರಣವಾಗಿಯೋ ಏನೊ ಕೋಗಿಲ, ಕೋಗುಲ, ಕೋಗೂಲೆ, ಕೋಗಾಲ, ಕೋಗಲ ಮೊದಲಾದ ವ್ಯತ್ಯಯ ರೂಪಗಳು ಕಾಣಿಸಿಕೊಳ್ಳುತ್ತವೆ; Different forms are found by excessive using of the word `Kogile'; they are like kogila, kogula, kogole, kogala etc;
- ***—ಕೋಗಿಲೆಗಿಡ*** : ಕೋಗಿಲೆ ಬಾಳೆ; ಬಾಳೆಯ ಗಿಡವನ್ನು ಹೋಲುವ, ಪುಟ್ಟದಾಗಿ ಬೆಳೆಯುವ ಒಂದು ಗಿಡ; ಬಣ್ಣಬಣ್ಣದ ಹೂಗಳನ್ನು ಬಿಡುತ್ತದೆ; ಅಲಂಕಾರಕ್ಕಾಗಿ ಹೂದೋಟ ಮೊದಲಾದ ಕಡೆ ಬೆಳೆಸುತ್ತಾರೆ; ವ್ಯರೂ: ಕಾಬಾಳೆ(ಉ.ಕ.ಜಿ); Kogile bale; similar to banana plant; grow as little plant with colourful flowers; it is grown in flower gardens for decoration;

- *—ಕೋಗೂಲಕ್ಕಿ* : ಕೋಗೂಲ+ಹಕ್ಕಿ(<ಪಕ್ಕಿ); ಹ್–Ø; ಕೋಗಿಲೆ ಎಂಬ ಪಕ್ಷಿ/ಹಕ್ಕಿ.

ಕೋಗ್ತಿಕಟ್ಟೆ/ಕೋಗ್ತಿಕೆರೆ kōgtikaṭṭe/ kōgtikere :

- ಕೊಗ್ತಿ ದೇವಸ್ಥಾನದ ಎದುರಿಗೆ ಇರುವ ಒಂದು ಕೆರೆ(ಉ.ಕ.ಜಿ); ಈಗ ಇದನ್ನು 'ಕೋಗ್ತಿ ಕೆರೆ' ಎನ್ನುತ್ತಾರೆ; ಪೂರ್ವದ ಹೆಸರು 'ಕೋಗ್ತಿಕಟ್ಟೆ'; A tank infront of Kogti temple; now it is called as `Kogti kere'; previous name was `Kogti kaṭṭe';
- ಕೋಗ್ತಿಕಟ್ಟೆಯ ಸ್ಥಾಪನೆ ಕುರಿತು ಐತಿಹ್ಯ: ಕೋಗ್ತಿ ದೇವಸ್ಥಾನದಲ್ಲಿ ಮಾಸ್ತಿ, ಜಟ್ಟಿಗ ಎಂದು ಎರಡು ಮೂರ್ತಿಗಳಿವೆ; ಇವು ಇಲ್ಲಿ ಸ್ಥಾಪನೆಗೊಳ್ಳುವುದಕ್ಕೆ ಮೊದಲು ಭಟ್ಕಳ ನಗರದಿಂದ ಬಂದರಿಗೆ ಹೋಗುವ ದಾರಿಯ ಬದಿಯಲ್ಲಿ ಗಿಡದ ಅಡಿಯಲ್ಲಿ ಇದ್ದವಂತೆ; ಬಂದರಿನಿಂದ ಮೀನಿನ ಬುಟ್ಟಿಗಳನ್ನು ಹೊತ್ತುಕೊಂಡು ಇದೇ ದಾರಿಯಲ್ಲಿ ಮೊಗವೀರರ ಹೆಂಗಸರು ಮಾರಲು ಭಟ್ಕಳಕ್ಕೆ ಬರುತ್ತಿದ್ದರಂತೆ; ಮೀನಿನ ವಾಸನೆಯನ್ನು ಸಹಿಸದ ಮೂರ್ತಿಗಳು/ ದೇವರುಗಳು ಪೂಜಾರಿಯ ಮೈಮೇಲೆ ಬಂದು ನಮ್ಮನ್ನು ಬೇರೆ ಜಾಗಕ್ಕೆ ಒಯ್ದು ಇರಿಸಿ ಎಂದು ಹೇಳಿದುವಂತೆ; ಎಲ್ಲಿಗೆ ಎಂಬ ಪ್ರಶ್ನೆ ಬಂದಾಗ ಇಲ್ಲಿಂದ ಸ್ವಲ್ಪ ದೂರದಲ್ಲಿ ಒಂದು ಅರೆಬಂಡೆ ಇದೆ, ಅದರ ಮೇಲೊಂದು ಕೆರೆ ಇದೆ, ಅಲ್ಲಿ ಪೂರ್ವಕ್ಕೆ ಮುಖ ಮಾಡಿ ಸ್ಥಾಪಿಸಿ ಎಂದು ಕೇಳಿಕೊಂಡವಂತೆ; ಈ ಕೋಗ್ತಿ ದೇವರುಗಳನ್ನು ಅಲ್ಲಿಗೆ ಒಯ್ದು ಸ್ಥಾಪಿಸಿದ ಮೇಲೆ ಅಲ್ಲಿ ಕಟ್ಟಿದ ದೇವಸ್ಥಾನ 'ಕೋಗ್ತಿ ದೇವಸ್ಥಾನ' ಆಯಿತು, ಅಲ್ಲಿದ್ದ ಕೆರೆ 'ಕೋಗ್ತಿಕಟ್ಟೆ/ ಕೋಗ್ತಿಕೆರೆ' ಎಂದಾಯಿತು ಎಂದು ಹೇಳುತ್ತಾರೆ; The myth of the kogtikaṭṭe like this: there are two idols in kogti temple masti, jaṭtiga; before establishing here these two idols are under a tree on the way the Mogaveera women carrying fishes to Bhatkala to sell; the gods are invocation on the priest of the temple and told to establish them in another place; the question arised where to establish, they advise to establish on the rock; turn the face to the east; after establish these gods a temple was built to them, that temple become the kogti temple; the tank become `kogti kaṭte', `kogti kere';
- 'ಕೋಗತಿ' ಅಥವಾ 'ಕೋಗ್ತಿ' ಒಂದು ಸ್ಥಳದ ಅಥವಾ ಪ್ರದೇಶದ ಹೆಸರಾಗಿದ್ದಿರಬಹುದು; ಕೋಗಳಿನಾಡು/ಕೋಗಳಿಸೀಮೆ/ಕೋಗಳಿ/ಕೊಂಗಳಿ ಎಂಬ ಉಲ್ಲೇಖಗಳು ಸಿಕ್ಕುತ್ತವೆ(ಬ.ಜಿ); ಈ ಸಾಮ್ಯದ ಮೇಲೆ ಕೋಗತಿ/ಕೋಗ್ತಿಯ ಅಸ್ತಿತ್ವ ಸಾಧ್ಯ ಇರಬಹುದೆ? `kogati' or `kogti' may be the name of a place or area; kogaḷinaḍu/kogaḷiseeme/kogaḷi/kongaḷi references are found; on similarity kogati/kogti may be existed;
- ಕೋಗ್ತಿ ಎಂಬ ಸ್ಥಳದಲ್ಲಿದ್ದ ಮೂರ್ತಿ/ದೇವರು/ ದೇವಸ್ಥಾನ ಎಂಬ ಅರ್ಥದಲ್ಲಿ ಕೋಗ್ತಿದೇವರು/ ಕೋಗ್ತಿದೇವಸ್ಥಾನ ಎಂಬ ಸಂಯುಕ್ತ ರೂಪಗಳು ಚಾಲ್ತಿಗೆ ಬಂದಿರಬಹುದು; ಕೋಗ್ತಿ ದೇವರು ಗೊಂಡ ಸಮುದಾಯದವರ ಆರಾಧ್ಯ ದೇವರು; The idols/gods/temple in the place of kogti, it means kogtidevaru/kogti devastana compound word forms are in practice; kogti god is the adorable god of Gonda community;
- ಕೋಗ್ತಿ=?

ಕೋಗ್ತಿದೇವಿ kōgtidēvi :

- 'ಗೊಂಡ' ಎಂಬ ಆದಿವಾಸಿ ಸಮುದಾಯದ ಜನ ಆರಾಧಿಸುವ, ಅವರ ಏಕೈಕ ಕುಲದೇವತೆ; ಈಕೆಯನ್ನು 'ಕೋಗ್ತಿದೇವಿ' ಎಂದು ಏಕೆ ಕರೆಯುತ್ತಾರೆ ಎಂಬುದಾಗಲಿ, 'ಕೋಗ್ತಿ' ಎಂದರೆ ಏನೆಂಬುದಾಗಲಿ ತಿಳಿದು ಬರುವುದಿಲ್ಲ; ಗೊಂಡರೂ ಈ ಬಗೆಗೆ ನಿರುತ್ತರರಾಗುತ್ತಾರೆ; The only clan deity of aboriginal Gonda community is `Kogtidevi'; why this goddess is called `kogtidevi' or what is the meaning of `kogti' is unknown, even to Gondas too;
- ಉತ್ತರಕನ್ನಡ ಜಿಲ್ಲೆ ಭಟ್ಕಳ ನಗರದ ಬಳಿ ಗೊಂಡರ ಕೇರಿ ಇದೆ; ಇಲ್ಲಿಗೆ ಸ್ವಲ್ಪ ದೂರದಲ್ಲಿ ಕೋಗ್ತಿಕಟ್ಟೆ

ಇದೆ; ಈ 'ಕೋಗ್ತಿಕಟ್ಟೆ' ಎಂಬ ಕೆರೆಯ ಬಳಿಯಲ್ಲೇ ಕೋಗ್ತಿದೇವಿಯ ದೇವಸ್ಥಾನ(ಕೋಗ್ತಿದೇವಸ್ಥಾನ) ಇದೆ; In the city of Bhatkala (Uttarakannada district) there is a street of Gondas; near to this street a tank `kogti katte' found; the temple of `kogtidevi' is found;

- ವಾಸ್ತವದಲ್ಲಿ ಇದು ಮಾಸ್ತಿ ಗುಡಿ ಇರಬಹುದು; ಏಕೆಂದರೆ ಈ ದೇವಸ್ಥಾನದ ಒಳಗೆ ಮಾಸ್ತಿಯ ಮತ್ತು ಜಟ್ಟಿಗನ ಮೂರ್ತಿಗಳಿವೆ; ನೋಡಿ: ಕೋಗ್ತಿಕಟ್ಟೆ; Infact this may be the temple of masti; because in this temple the idols of masti and jaṭṭiga are seen; see- kogtikaṭṭe;
- ಕೋಗ್ತಿ ದೇವಿಗೆ ವರ್ಷಕ್ಕೊಮ್ಮೆ ವೈಭವದ ಜಾತ್ರೆ ನಡೆಯುತ್ತದೆ; ಇದು 'ಕೋಗ್ತಿ ಜಾತ್ರೆ'(ನೋಡಿ) ಎಂದೇ ಪ್ರಸಿದ್ಧ; Every year a grand fair celebrated for kogti devi; it is famous as `kogti jatre' or `kogti fair';
- ಕೋಗ್ತಿ ದೇವಿಯ ದೇವಾಲಯವನ್ನು 'ಕೋಗ್ತಿ ದೇವಸ್ಥಾನ' ಎಂದೂ 'ಮಾಸ್ತಿ ದೇವಾಲಯ' ಎಂದೂ ಕರೆಯುತ್ತಾರೆ.

ಕೋಗ್ತಿ ಜಾತ್ರೆ kōgti jātre :

- ಕೋಗ್ತಿ(<ಕೋಗತಿ=?) ದೇವಿಯ ಜಾತ್ರೆ; ಗೊಂಡರ ಕುಲದೇವತೆಯಾದ ಕೋಗ್ತಿದೇವಿಯ ದೇವಾಲಯದ ಬಳಿ ವರ್ಷದಲ್ಲಿ ಒಮ್ಮೆ ನಡೆಯುವ ಧಾರ್ಮಿಕ ಉತ್ಸವ; ಗೊಂಡರು ಇದನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ(ಉ.ಕ.ಜಿ); This is a religious fair, celebrated by gondas grandeurly once in a year near the temple;
- ಉತ್ತರಕನ್ನಡ ಜಿಲ್ಲೆಯ ಭಟ್ಕಳ ನಗರದ ಸ್ವಲ್ಪ ದೂರಕ್ಕೆ ಕೋಗ್ತಿ ದೇವಸ್ಥಾನ ಮತ್ತು ಕೋಗ್ತಿಕೆರೆ ಇದೆ; ಇಲ್ಲಿ ಕೋಗ್ತಿದೇವಿಯ ಮತ್ತು ಮಾಸ್ತಿ, ಜಟ್ಟಿಗ ಮೊದಲಾದ ಮೂರ್ತಿಗಳನ್ನು ಮೆರೆಸಿ ಉತ್ಸವ ಆಚರಿಸುತ್ತಾರೆ;
- ಕೋಗ್ತಿ ದೇವಿಯೇ ಮಾಸ್ತಿ ಇರಬಹುದು; ಕೋಗ್ತಿ ದೇವಾಲಯವನ್ನು 'ಮಾಸ್ತಿ ದೇವಾಲಯ' ಎಂದು ಕರೆಯುವುದೂ ರೂಢಿಯಲ್ಲಿದೆ; May be kogtidevi is masti; kogti temple is called as `masti devalaya' or `masti temple';
- ಜಟ್ಟಿಗ ಮೂರ್ತಿಯ ಜೊತೆಗೆ ಇತರ ನಾಲ್ಕು ತಲೆಗಳ ಬಿಂಬಗಳನ್ನು ಮೆರೆಸುವುದು ಈ ಜಾತ್ರೆಯ ವಿಶೇಷ; ಇದಕ್ಕೆ ಸಂಬಂಧಿಸಿದಂತೆ ದೀರ್ಘ ಐತಿಹ್ಯವೊಂದಿದೆ; ಅದರ ಸಾರ ಹೀಗಿದೆ: Along with jaṭti idol other four idols also parade in the procession is a special attract; it has a legend, the gist of it given here:
- ಭಟ್ಕಳದಿಂದ ಬಂದರಿಗೆ ಹೋಗುವ ದಾರಿಯಲ್ಲಿ ಎಡಬದಿಗೆ ಸಿಗುವ ಗುಡ್ಡವೊಂದರ ಮೇಲೆ ಕುಂಟಜಟ್ಟಿಗನ ದೇವಸ್ಥಾನವಿದೆ; ಅಲ್ಲೆ ಸಮುದ್ರದ ನಡುಗಡ್ಡೆಯ ಮೇಲೆ ನೇತ್ರಾಣಿ ಜಟ್ಟಿಗನ ನೆಲೆ; ನೇತ್ರಾಣಿ ಜಟ್ಟಿಗನೆ ಹಿರಿಯ; ಇವನ ಆಜ್ಞೆಯಂತೆ ಕುಂಟಜಟ್ಟಿಗ ನಡೆದುಕೊಳ್ಳುತ್ತಿದ್ದ; On the way from Bhaṭkaḷa to port Kunṭajaṭṭiga's temple on the left side of the road on a hill; on the island of the sea Netraṇi jaṭṭiga is shelter; Netraṇi jattiga is elder than kuntajattiga; so kunṭa jaṭṭiga follow the orders of netraṇi jaṭṭiga;
- ಕುಂಟ ಜಟ್ಟಿಗನ ಗುಡಿಯ ಬದಿಯಲ್ಲಿ ಚಿನ್ನ ವಜ್ರ ವೈಢೂರ್ಯದಿಂದ ತುಂಬಿದ ಕೊಪ್ಪರಿಗೆಯಿತ್ತು; ಆ ಗುಡಿಯ ಭಟ್ಟ ಅದನ್ನು ತಾನು ಪಡೆದುಕೊಳ್ಳುವ ಯೋಚನೆ ಮಾಡಿದ; ಒಬ್ಬ ನಾಪಿತನನ್ನು ಕರೆದು ಗುಟ್ಟಾಗಿ ವಿಷಯ ತಿಳಿಸಿ, ಸಂಬಂಧಪಟ್ಟ ಅಧಿಕಾರಿ (ಸಾಹೇಬ)ಯನ್ನು ಕರೆತರುವಂತೆ ಹೇಳಿದ; ಸಾಹೇಬನನ್ನು ಕರೆತರಲು ಹೇಳಿದ ವಿಷಯವನ್ನು ಮಂತ್ರವಾದಿಯೊಬ್ಬ ಕೇಳಿಸಿಕೊಂಡುಬಿಟ್ಟ; ಕಡೆಗೆ ಭಟ್ಟ, ನಾಪಿತ, ಸಾಹೇಬ, ಮಂತ್ರವಾದಿ ನಾಲ್ಕೂ ಜನ ಒಟ್ಟಿಗೆ ಕೂಡಿ ಒಪ್ಪಂದ ಮಾಡಿಕೊಂಡು ಕೊಪ್ಪರಿಗೆಯನ್ನು ಭೂಮಿಯಿಂದ ಹೊರತೆಗೆಯುವ ಪ್ರಯತ್ನ ಮಾಡಿದರು; A vessel with gold, diamond was by the side of kunṭajaṭṭiga temple; so, the priest(Bhaṭṭa) wanted to taken away the wealth; he told the barber secretly to bring the officer; this secret was overheard by a conjurer; finally Bhaṭṭa, Napitha, officer and conjurer come to an agreement that is to take out of the wealth vessel from the earth;

- ಕುಂಟ ಜಟ್ಟಿಗನಿಗೆ ಇವರು ಮಾಡುತ್ತಿದ್ದ ಮೋಸದ ಅರಿವಾಯಿತು; ಅಣ್ಣ ನೇತ್ರಾಣಿ ಜಟ್ಟಿಗನಿಗೆ ದೂರು ಹೇಳಿದ; 'ನೀನೇನೂ ಹೆದರಬೇಡ, ನೀನು ನಿಂತಿರುವಲ್ಲಿಂದಲೇ ಇದನ್ನು ಅವರ ಮೇಲಕ್ಕೆ ಎಸಿ, ಅವರ ರುಂಡಗಳನ್ನೆಲ್ಲ ಕತ್ತರಿಸಿ ಹಾಕುತ್ತದೆ' ಎಂದು ಹೇಳಿ ಒಂದು 'ಶಕ್ತಿ'ಯನ್ನು ಕೊಟ್ಟ; ಕುಂಟಜಟ್ಟಿಗ ಹಾಗೇ ಮಾಡಿದ; ರುಂಡ–ಮುಂಡಗಳು ಕತ್ತರಿಸಲ್ಪಟ್ಟವು; Kuṇtajaṭṭiga understand the fraud of the four; this was complained to his brother Netraṇijaṭṭiga; Netraṇi jaṭṭiga advised to Kuṇtajaṭṭiga and supported him, gave him a powerful weapon to him, throw this power on them, their heads will be half; Kuṇta jaṭṭiga do the same, the four heads fall off;
- ರುಂಡ ಕತ್ತರಿಸಿಕೊಂಡ ನಾಲ್ಕೂ ಮುಂಡಗಳು ನೇತ್ರಾಣಿ ಜಟ್ಟಿಗನಿಗೆ ಮೊರೆಯಿಟ್ಟು ಜೀವದಾನಕ್ಕೆ ಬೇಡಿದವು; 'ನೀವು ಮಾಡಲು ಹೋದ ಮೋಸಕ್ಕೆ ಕ್ಷಮೆ ಇಲ್ಲ; ನಿಮ್ಮ ನಾಲ್ಕೂ ಜನದ ತಲೆಗಳನ್ನು ಕೋಗ್ತಿ ಜಾತ್ರೆಯ ದಿವಸ ನನ್ನ ತಮ್ಮನ ಗುಡಿಯಿಂದ ತಂದು ಕೋಗ್ತಿಕಟ್ಟೆಯಲ್ಲಿ ಇಡುವಂತಾಗಲಿ' ಎಂದು ಹೇಳಿ ಕಳುಹಿಸಿದ; ಆಗಿನಿಂದ ಈ ನಾಲ್ಕೂ ಜನದ ತಲೆಗಳು ಕುಂಟಜಟ್ಟಿಗನ ಗುಡಿಯಲ್ಲಿ ಇರತೊಡಗಿದವು; The bodies of the four pray Netraṇi jaṭṭiga for pardon; but he was not excused them, instead of excuse their heads kept in the Kuṇtajaṭṭiga temple, on the day of the fair they will bring to the fair from the temple and kept in the `kogti kaṭṭe'; from that day all the four heads kept in the kuṇtajaṭṭiga temple;
- ಕೋಗ್ತಿ ಜಾತ್ರೆಯಲ್ಲಿ ತಲೆಗಳನ್ನು ಮೆರೆಸುವ ಪದ್ಧತಿ ಹೀಗೆ ಆರಂಭವಾಯಿತು; ಇವು ಮರದ ರುಂಡಗಳಾಗಿದ್ದು ಅಲಂಕಾರಗೊಂಡಿರುತ್ತವೆ; The heads are carry on the procession started in the fair; these are decorated wooden heads;
- ಗೊಂಡರು ಕಾಡುಗಳಲ್ಲಿ ವಾಸಿಸುತ್ತಿದ್ದರೆಂದೂ, ಅವರು ತಮ್ಮ ಆರಾಧನಾ ಮೂರ್ತಿಗಳನ್ನು ಮರದ ತುಂಡುಗಳಿಂದ ಮಾಡಿಕೊಳ್ಳುತ್ತಿದ್ದರೆಂದೂ ಅಭಿಪ್ರಾಯವಿದೆ; ಮಾಸ್ತಿ ಮತ್ತು ಕುಂಟಜಟ್ಟಿಗನ ಮೂರ್ತಿಗಳು ಮೊದಲಿಗೆ ಮರದವಾಗಿದ್ದು ದಾರಿ ಬದಿಯಲ್ಲಿ ಮರವೊಂದರ ಬುಡದಲ್ಲಿದ್ದುವು ಎಂಬುದು ಈ ಅಭಿಪ್ರಾಯಕ್ಕೆ ತಾಳೆಯಾಗುತ್ತದೆ; In an opinion Gondas lived in the forests; they are preparing adoring idole from the wood pieces; masti and kuṇtajaṭṭiga idols are wooden made initially they are under the tree of a road side; this opinion is tally with that;
- ಐತಿಹ್ಯಗಳ ಹಿನ್ನೆಲೆ ಇರುವುದರಿಂದಲೋ ಏನೋ ಕೋಗ್ತಿ ಜಾತ್ರೆ ಬಹಳ ವಿಜೃಂಭಣೆಯಿಂದ ಜರುಗುತ್ತದೆ; ಜಾತ್ರೆಯಲ್ಲಿ ಸಿಡಿ ಆಚರಿಸಲಾಗುತ್ತದೆ; ಐತಿಹ್ಯದಲ್ಲಿ ಬಲಿಯ ಕಥೆ ಇರುವುದು ಇದಕ್ಕೆ ಕಾರಣವಿರಬಹುದು; ಈ ಸಿಡಿಗಂಬ(ಗೊಂಡರು 'ಸೇಡಿಕಂಬ' ಎನ್ನುತ್ತಾರೆ) ವಾಸ್ತವವಾಗಿ ಕಲ್ಲುಕಂಬಕ್ಕೆ ಅಳವಡಿಸಿದ, ಮರದಿಂದ ಮಾಡಿದ ತಿರುಗಣಿ ಕಂಬ; Because of mythical background the kogti fair celebrated grandeurly; in the mythic it has the story of Bali; `siḍigamba'-swinging pillar has the wheel made of wood, fixed to the stone pillar; it is called `siḍigamba'; Gondas call it as `seḍikamba';
- ಗೊಂಡರ ಈ 'ಸೇಡಿಕಂಬ' ಒಂದು ಕಾಲಕ್ಕೆ ಬಹಳ ಜೋರಾಗಿ ತಿರುಗುತ್ತಿತ್ತಂತೆ; ಈ ಶಕ್ತಿಯನ್ನು ಗೊಂಡನೊಬ್ಬ ಮಾಟದ ಮೂಲಕ ಹೆಗ್ಗದ್ದೆ ಎಂಬ ಊರಿನ 'ಸೇಡಿಬಾರೆ'ಯ ಸಿಡಿಯಿಂದ ತಮ್ಮ 'ಸೇಡಿಕಂಬ'ಕ್ಕೆ ತಿರುಗಿಸಿಕೊಂಡನೆಂದು ಪ್ರತೀತಿ; ಕಾಲಾನಂತರದಲ್ಲಿ ಮೊಗೇರರು ಮತ್ತು ನಾಯಕರು ಮಾಟ ಮಾಡಿ ತಮ್ಮ ಸಿಡಿಗಂಬದ ಕಡೆ ತಿರುಗಿಸಿಕೊಂಡರೆಂದೂ, ಈ ಕಾರಣದಿಂದ ತಮ್ಮ 'ಸೇಡಿಕಂಬ' ತನ್ನ ವೇಗವನ್ನೂ ಮಹಿಮೆಯನ್ನೂ ಕಳೆದುಕೊಂಡು ಈಗ ನಿಂತುಹೋಗಿದೆಯೆಂದೂ ಹೇಳುತ್ತಾರೆ; ಕಾಲಾಂತರದ ಬೆಳವಣಿಗೆಗಳಿಗೆ ಸಮುದಾಯ ದ್ವೇಷದ ನೆಪ ಕಟ್ಟಿಕೊಳ್ಳುವ ಪ್ರವೃತ್ತಿಯೊಂದು ಇಲ್ಲಿ ಕೆಲಸ ಮಾಡಿರುವುದನ್ನು ಗಮನಿಸಬಹುದು; The seḍikamba of Gondas rotating very fast once upon a time; this

power was transferred from the Heggadde village `seḍibare' by black magic is a popular belief; in later stages this power was turns up towards their `seḍigamba' by Mogeras and Nayakas; for this reason the `seḍigamba' lost its speed and stopped; the later stages enimity developed between the communities is noted;

- ಕಷ್ಟಗಳಿಗೆ ಸಿಕ್ಕಿಕೊಂಡ ಗೊಂಡರು ಹರಕೆ ಹೊತ್ತುಕೊಂಡು ಜಾತ್ರೆಯಲ್ಲಿ ಸಿಡಿ ಏರುವ ಸಂಪ್ರದಾಯ ಆಚರಿಸುತ್ತಾರೆ; The problem affected Gondas made religious vow, to climb the sidi in the fair is traditionally practice continued;
- ಕೋಗ್ತಿ ಜಾತ್ರೆಯ ಸಂದರ್ಭದ ಕೆಲವು ಮುಖ್ಯ ಆಚರಣೆಗಳು: At the time of Kogti fairs some important practice are:

೧. **ಮೂರ್ತಿಗಳನ್ನು ಮೆರೆಸುವುದು** : ಜಾತ್ರೆಯ ದಿವಸ ಸಂಜೆ ಹೊತ್ತಿಗೆ ಗುಡಿಜಟ್ಟನ ದೇವಸ್ಥಾನದ ಹತ್ತಿರ ಬಂದು ಪೂಜಾರಿ ಮಾಸ್ತಿಯ ಮೂರ್ತಿಗೆ ಸೀರೆ ಉಡಿಸಿ ಆಭರಣ, ಹೂವುಗಳಿಂದ ಸಿಂಗರಿಸುತ್ತಾನೆ; ಹಿಂದಿನ ವರ್ಷ ಕೋಗ್ತಿ ದೇವಸ್ಥಾನದಲ್ಲಿ ಇಟ್ಟಿದ್ದ ನಾಲ್ಕು ತಲೆಗಳನ್ನು(ತಲೆಗಳ ಮರದ ಬಿಂಬ– ಪೂಜಾರಿ, ನಾಪಿತ, ಸಾಹೇಬ, ಮಾಂತ್ರಿಕರದ್ದು) ಬುಟ್ಟಿಯಲ್ಲಿಟ್ಟು ಒಬ್ಬಾತ ಅಲ್ಲಿಗೆ ತರುತ್ತಾನೆ; ಜಟ್ಕ ಮತ್ತು ಮಾಸ್ತಿಯ ಕಾಲ ಬಳಿ ಇರಿಸಿದ ಅವಕ್ಕೂ ಪೂಜೆ ಸಲ್ಲುತ್ತದೆ; ಹರಕೆ ಹೊತ್ತ ಜನ ಮಾಸ್ತಿಯ ಚಿಕ್ಕ ಚಿಕ್ಕ ಮೂರ್ತಿಗಳನ್ನು ತಂದು ಒಪ್ಪಿಸುತ್ತಾರೆ; ಪೂಜಾರಿ ಅವುಗಳನ್ನು ತೆಗೆದುಕೊಂಡು ಮುಖ್ಯ ಮೂರ್ತಿಯ ಮುಂದೆ ನಿಲ್ಲಿಸುತ್ತಾನೆ; ಪೂಜೆ ಮುಗಿದ ಮೇಲೆ ಪೂಜಾರಿ ಬಲಗೈಯಲ್ಲಿ 'ಧೂಪದ ಗಿಂಡಿ' ಹಿಡಿದು, ಎಡಗೈಯಲ್ಲಿ ನಾಗಬೆತ್ತ, ಹೀಲಿಕುಂಚ, ಸಿಂಗಾರದ ಕೊನೆ ಹಿಡಿದು ಜಟ್ಟಿಗರ, ಮಾಸ್ತಿಗಳ, ತಿರುಪತಿ ತಿಮ್ಮಪ್ಪನ, ಧರ್ಮಸ್ಥಳದ ಮಂಜುನಾಥನ ಹೆಸರುಗಳನ್ನು ಹೇಳಿ ಉಗ್ಗಡಿಸುತ್ತಾ ಆವೇಶಗೊಳ್ಳುತ್ತಾನೆ; 'ದೆವ್ವ' ಬಂತೆಂದು ಮೂರ್ತಿಯ ಕೈಗಳಲ್ಲಿದ್ದ ಹಾರಗಳನ್ನು ಪೂಜಾರಿಗೆ ಹಾಕಿ ಜನ ಪ್ರಶ್ನೆ ಕೇಳುವುದು, ಭವಿಷ್ಯ ತಿಳಿಯುವುದು, 'ದೆವ್ವದ ಕಾಟ' ಇತ್ಯಾದಿಗಳಿಗೆ ಪರಿಹಾರ ಪಡೆಯುವುದು ಇತ್ಯಾದಿಗಳನ್ನು ಮಾಡುತ್ತಾರೆ; carry the idols in procession; in the evening of the fair the priest came to the temple to decorate masti idol with sari, ornaments and flowers; the four images of the four heads kept in the kogti temple last year(wooden head images, poojari, napitha, saheba, mantrika) brought them by a man; they are put in the feet of Jatka and masti offered pooja to them also; those who have religious vow bought small idols of masti to offer; the priest take them and put them infront of the main idol; after the pooja the priest had incense vessel in the right hand Nagabetha, heelikuncha, singarada kone in the left hand; spelling the names of jaṭtigas, mastis, Thirupati Thimmappa, Manjunatha of Dharmasthala proclaimed;

೨. **ದೆವ್ವ ಕರೆಯುವುದು/ದೆವ್ವ ಕರೆಯುವ ಹಾಡುಗಳನ್ನು ಹಾಡುವುದು** : ಪೂಜಾರಿಯ ಮೈಮೇಲೆ ಬಂದಿದ್ದ ದೆವ್ವ ಇಳಿದ ಅನಂತರ ದೇವಾಲಯದಲ್ಲಿದ್ದ ಮೂರ್ತಿಗಳಿಗೆ ಮತ್ತೆ ಪೂಜೆ ನಡೆಯುತ್ತದೆ; ಇದು ಮುಗಿದ ಮೇಲೆ ಢಕ್ಕೆಯನ್ನು ಬಾರಿಸುತ್ತ ದೆವ್ವ ಕರೆಯುವ ಹಾಡುಗಳನ್ನು ಹಾಡುತ್ತಾರೆ; ಢಕ್ಕೆ ಬಾರಿಸುವವರು ಪೂಜಾರಿ ಕೊಟ್ಟ ವೀಳ್ಯವನ್ನು ಪಡೆದು ಹಾಡು ಹಾಡಲು ಬರುತ್ತಾರೆ; ಮತಿಯಮ್ಮ, ದೇವಿಯಮ್ಮ ಮೊದಲಾದ ಮಾಸ್ತಿಗಳ ಉಲ್ಲೇಖ ಈ ಹಾಡುಗಳಲ್ಲಿದೆ; ಅವರೆಲ್ಲ ಸತ್ಯವಂತರೆಂದೂ ಮೇಲುವರ್ಗದವರೆಂದೂ ನಮ್ಮನ್ನು ಕಾಪಾಡಲು ಮೊರೆ, ಈ ಹಾಡು ಎಂದೂ ಭಾವ ಉಂಟಾಗುವಂತೆ ಹಾಡುತ್ತಾರೆ; People know the devil came on him, so they garland him, question him on future, find solutions for devil problems etc.; call the devil/sing the songs to call the devil; after the devil went off, the worship or pooja to the idols of the temple, then drumming and call the devils with singing songs; drummers receives the betelnuts or veelya to sing

the songs; these songs referred Matiyamma Deviyamma, masti's, these are truthful and upper category, they will come to protect them from the difficulties;

೩. **ದೊಂದಿ ಮೆರೆಸುವುದು** : ಹಚ್ಚಿದ ದೊಂದಿ(ಪಂಜು)ಗಳನ್ನು ಹಿಡಿದುಕೊಂಡು ಕೋಗ್ತಿ ದೇವಸ್ಥಾನವನ್ನು ಪ್ರದಕ್ಷಿಣೆ ಹಾಕುತ್ತೇವೆಂದು ಹರಕೆ ಹೊತ್ತಿರುವವರು ದೊಂದಿಗಳನ್ನು ಹಚ್ಚಿಕೊಂಡು, ಪೂಜಾರಿಗೆ ಕಾಯುತ್ತ ನಿಂತಿರುತ್ತಾರೆ; ದೆವ್ವ ಬಂದ ಪೂಜಾರಿ ನಾಲ್ಕು ತಲೆಗಳೊಡನೆ ಅಲ್ಲಿಗೆ ಬರುತ್ತಾನೆ; ದೊಂದಿ ಹಚ್ಚಿ; ಹಿಡಿದುಕೊಂಡಿದ್ದ ಹೆಣ್ಣುಮಕ್ಕಳು ಅವನೊಡನೆ ನಡೆಯುತ್ತಾರೆ; ಅವರ ಕೈಗಳನ್ನು ಅವರ ಅಜ್ಜಿ ತಮ್ಮಂದಿರು ಹಿಡಿದಿರುತ್ತಾರೆ; ಢಕ್ಕೆಯವರೊಡನೆ ದೇವಸ್ಥಾನಕ್ಕೆ ಐದು ಪ್ರದಕ್ಷಿಣೆ ಆಗುತ್ತದೆ; ಎಂತಹ ಗಾಳಿ ಬಂದರೂ ದೊಂದಿಗಳು ಆರಿಹೋಗದಿರಲೆಂದು ದೊಂದಿಗಳನ್ನು ಚನ್ನಾಗಿ ಎಣ್ಣೆಯಲ್ಲಿ ನೆನೆಸಿರುತ್ತಾರೆ; ಅವು ಈ ಸಂದರ್ಭದಲ್ಲಿ ಜೋರಾಗಿ ಉರಿಯುತ್ತಿರುತ್ತವೆ; ದೊಂದಿ ಹಚ್ಚಿಕೊಂಡು ಹೆಣ್ಣುಮಕ್ಕಳು ಪ್ರದಕ್ಷಿಣೆ ಹಾಕುವುದು ಬೇರೆಲ್ಲೂ ಕಂಡುಬರುವುದಿಲ್ಲ, ಇದು ಗೊಂಡರ ವಿಶಿಷ್ಟ ಆಚರಣೆ ಎಂದು ಹೇಳಲಾಗಿದೆ;

Procession of Dondi or fire lights; lighted fire torch hold by the religious vowers to go around the kogti temple for the priest waiting lighted fire torch; the priest ivited devil on him came with four heads; the fire torch hold women also walk with him; the women's hands are hold by their grand mother or brothers; go around the temple five times with the drum beaters; the fire torches are wetted well in the oil; because they cannot be put off by the wind, so the torches are burning well; the circumambulation of women around the temple with torches cannot be found anywhere; so it is the distinct practice of Gondas;

೪. **ಮಂಡಲ ಹಾಡುವುದು** : ಒಂದು ರೀತಿಯ ಆಶು ಪದ್ಯಗಳ ಹಾಡುಗಾರಿಕೆ ಇದು; ಈ ಹಾಡಿನ ಸಾಲುಗಳು ಅರ್ಥಪೂರ್ಣವಾಗಿದ್ದು ಒಂದಕ್ಕೊಂದು ಹೊಂದಿಕೆಯಾಗಬೇಕೆಂದೇನೂ ಇಲ್ಲ; ಆ ಸಂದರ್ಭಕ್ಕೆ ತಮಗೆ ತೋಚಿದ್ದನ್ನು ಹಾಡಾಗಿ ಹಾಡುತ್ತಾರೆ; ಕೆಲವೊಮ್ಮೆ ಈ ಹಾಡುಗಳು ಉತ್ತಮ ಸಾಹಿತ್ಯಿಕ ಅಂಶಗಳಿಂದ ಕೂಡಿದ್ದು ಗೊಂಡರ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಲಕ್ಷಣಗಳನ್ನು ಬಿಂಬಿಸುತ್ತಿರುತ್ತವೆ; ಕುಣಿತದೊಡನೆ ಹಾಡುವ ಹಾಡುಗಾರಿಕೆ ಇದಾಗಿದೆ; ಗುಂಪು ಗುಂಪಾಗಿ ಗೊಂಡರು ಇದರಲ್ಲಿ ಭಾಗಿಯಾಗುತ್ತಾರೆ; 'ಮಂಡಲ ಕುಣಿತ' ಎಂದೂ ಹೇಳುತ್ತಾರೆ; It is a kind of extempore poem singing; the lines of song are be in meaning or there is no rule, they are be in cogency, they sing the songs what they feel or know; some times these songs are with good literature and reflect the social, cultural, religious features of the Gondas; it is singing along with dance; Gonda's participate in dance with singing group by group; it is also called as 'Manḍala kuṇitha';

ಕೋಗ್ತಿ ಜಾತ್ರೆ ಒಂದೇ ದಿವಸ ನಡೆದರೂ ಗೊಂಡ ಬುಡಕಟ್ಟಿನ ಸಮುದಾಯ ಬಹುತೇಕ ಇದರಲ್ಲಿ ಭಾಗಿಯಾಗುತ್ತದೆ; ಇತರ ಸಮುದಾಯಗಳವರೂ ಕೋಗ್ತಿದೇವಿಗೆ ನಡೆದುಕೊಳ್ಳುವುದುಂಟು; Even the kogti fair celebrates one day only but most of the Gonda tribal community participated; other community people also worshipped kogtidevi;

೫. **ಚರು ಹಾಕುವುದು** : ಕೋಗ್ತಿ ಜಾತ್ರೆ ಆದ ನಾಲ್ಕನೆಯ ದಿವಸ ರಾತ್ರಿ ಚರು ಹಾಕುವ ಮತ್ತು ಸಿಡಿಮರ ಇಳಿಸುವ ಕಾರ್ಯ ನಡೆಯುತ್ತದೆ; ಚರು ಹಾಕುವುದೆಂದರೆ ಭೂತ ಪಿಶಾಚಿಗಳಿಗೆ ಭೋಜನ ನೀಡುವುದು; ಅರ್ಧ ಬೇಯಿಸಿದ ಅನ್ನಕ್ಕೆ ಕೆಂಪು ಬಣ್ಣ ಹಾಕಿ, ಬಾಳೆದಿಂಡಿನ ಚೂರು, ಅಕ್ಕಿ ದೋಸೆಯ ಚೂರುಗಳನ್ನು ಬೆರಸಿ ಕಲಸುತ್ತಾರೆ; ಮೈಮೇಲೆ ದೆವ್ವ ಬಂದ ಪೂಜಾರಿ 'ಓಹೋ....' ಎಂದು ಕೂಗುತ್ತ ದೇವಸ್ಥಾನದಿಂದ ಹೊರಗೆ ಓಡಿ ಬರುತ್ತಾನೆ; ಬುಟ್ಟಿಯಲ್ಲಿ ಚರುವನ್ನು ತುಂಬಿ ಹಿಡಿದುಕೊಂಡ ಗೊಂಡರೂ ಅವನೋಡನೆ ಓಡಿ ಹೋಗುತ್ತ ಬಯಲಲ್ಲಿ ಚರುವನ್ನು ಎರಚುತ್ತಾರೆ; ಕೆಲವೆಡೆ ಬಾಳೆ

ಎಲೆಯಲ್ಲಿ ಚರುವನ್ನು ಇಟ್ಟು ಅಲ್ಲಿ ಹೊತ್ತಿಸಿದ ದೊಂದಿಯನ್ನು ನಾಟುತ್ತಾರೆ; ಬೆಳಕಿನಲ್ಲಿ ಭೂತಗಳು ಭೋಜನ ಮಾಡಲಿ ಎಂದು ಆಶಯ; 'ದೀಪಸೇವೆ' ಎಂದೂ ಕರೆದಿದ್ದಾರೆ; On the fourth day night kogti fair step down the siḍi wood; charu means to feed the dinner to the devils and demaon; half boiled rice coloured in red, mix the pieces of banana plant stem inner core, pieces of rice dosa; the devil invocation priest runout of the temple with cry o, ho....; the Gondas who hold the charu basket also run with him and throw the charu in the field; in some places charu is kept on the plantain leaf; a fire torch fix beside it; the devils have dinner in the light is the ambition of the Gondas; it is called as `Deepa seve';
ಗೊಂಡರಲ್ಲಿ ಇಂತಹುದಕ್ಕೆಲ್ಲ ಪ್ರಾಣಿಬಲಿ ನಿಷಿದ್ಧ; ಬ್ರಾಹ್ಮಣ ಪೂಜಾರಿ ಇರುವುದು ಕಾರಣವಾಗಿರಬಹುದು; ಒಂದು ಕಾಲದಲ್ಲಿ ಸಿಡಿ ಏರಿಸಿದಾಗಿನಿಂದ ಇಳಿಸುವವರೆಗೆ ಜಾತ್ರೆ ಎಂಟು ದಿವಸ ನಡೆಯುತ್ತಿತ್ತಂತೆ. No animals sacrification for all these in Gondas; because, may be the priest is Brahmin; once this fair celebrate eight days from the day of rise the `sidi' to step down.

ಕೋಚ kōca :

- ಸಂಕೋಚಗೊಳ್ಳುವಿಕೆ; ಕುಗ್ಗುವಿಕೆ; ಕಿರಿದಾಗುವುದು; ಇಂಗುವುದು; ಶುಷ್ಕವಾಗುವುದು; ಒಣಗುವುದು; ಸಂಕೋಚನ(ಸಂ); ವಕ್ರವಾಗುವಿಕೆ; ಬಗ್ಗುವಿಕೆ; ಮುದುರಿಕೊಳ್ಳುವಿಕೆ; Shrivelling; contract; shorten; evaporate; dryness; dry up; shrinking; crooked; bending; crumple up;
- ನೀರಿನ ಅಂಶ ಹೆಚ್ಚಾಗಿ ಇರುವ ಮರದ ತುಂಡು, ದ್ರವ ಪದಾರ್ಥ, ಬಟ್ಟೆ ಮೊದಲಾದುವು ಬಿಸಿಲಿಗೆ, ಶಾಖಕ್ಕೆ ಒಣಗಿ ಶುಷ್ಕವಾದಂತೆ ಅವುಗಳ ನೀರಿನ ಅಂಶ ಕಡಿಮೆಯಾಗುವುದರಿಂದ, ಕ್ರಮೇಣ ಇಲ್ಲವಾಗುವುದರಿಂದ ಗಾತ್ರದಲ್ಲಿ ಕಿರಿದಾಗುವುದು, ಆಕಾರ ವಿಕೃತಗೊಳ್ಳುವುದು, ವಕ್ರವಾಗುವುದು, ಒರಟಾಗುವುದು ಸಾಮಾನ್ಯ; A wooden piece have more water content liquid thing, cloth etc dry in the sun heat their water content lessen and slowly evaporate and something short; to become ugly in size; to become curved; to be hard is common;
- ಓರೆ; ಮೂಲೆ; ಕೊಂಕುತನ; =ಕೋಸು(ಕನಿ); Slope; corner; indirect reference;
- ದೇಶಿಪದ(?); Native word;
- ಓರೆಕೋರೆಯಾದ ಚೌಕ(ಅನುಕೋ); Curved square;
- ಕೋಸು; ಒಂದು ಹರದಾರಿ; ಮೂರುನಾಲ್ಕು ಮೈಲಿಗಳ ದೂರ; ಕ್ರೋಶ; A short piece; or corner; a distance of three to four miles;
- ಕ್ರೋಶ(ಸಂ)>ಕೋಚ ಆಗಿ ತದ್ಭಗೊಂಡಿರಬಹುದು; ಹೀಗಾಗುವಾಗ ಒತ್ತಕ್ಷರ ಬಿಟ್ಟುಹೋಗುವುದು, ಶ/ಸ>ಚ ಆಗುವುದು ಸಾಮಾನ್ಯ;
- ಬಡಾಯಿ; ಜಂಬ(ತು); Boast, pride;
- ತುಳುವಿನಲ್ಲಿ ಪುರುಷ ಅಂಕಿತನಾಮವಾಗಿ 'ಕೋಚಣ್ಣೆ' ಸ್ತ್ರೀ ಅಂಕಿತನಾಮವಾಗಿ 'ಕೋಚಪ್ಪ್/ಪ್ಪೆ' ರೂಪಗಳಿವೆ; ಜಂಬಗಾರ, ಜಂಬಗಾರ್ತಿ ಎಂಬ ಅರ್ಥದಲ್ಲಿ ಅನ್ವರ್ಥಕವಾಗಿದ್ದು ಆಮೇಲೆ ಅಂಕಿತವೇ ಆಗಿ ರೂಢಿಗೊಂಡಿರಬಹುದು; ಕೋಚ+ಅಣ್ಣೆ, ಕೋಚ+ಅಪ್ಪ್/ಪ್ಪೆ(ಅಂಬೆ, ಅಬ್ಬೆ?); `Kochanne' is the proper noun of male; `Kochappe' is the proper noun of female forms are in Tulu; these forms are in the meaning of vain fellow; later the same will be apt name is in practice;
- ಕೊಂಕು ಸ್ವಭಾವದ, ವಕ್ರಬುದ್ಧಿಯ, ಸಿನಿಕತನದ ವ್ಯಕ್ತಿಯನ್ನು 'ಕ್ವಾಚ' ಎನ್ನುತ್ತಾರೆ; ಕೋಚ>ಕ್ವಾಚ ಆಗುವುದು ಅಸಂಭವವಲ್ಲ; ಓ>ವ ಓಷ್ಠ್ಯ ಸ್ವರ-ವ್ಯಂಜನ ವ್ಯತ್ಯಯ; *ಪ್ರ: 'ಒಂತರ ಕ್ವಾಚ್‌ಮನ್ಸ ಅವ್ನು, ಅವ್ನ್ ಸಹ್ವಾಸ ಒಳ್ಳೇದಲ್ಲ';* A person have the crooked character, wicked minded cynics are called `Kvacha';
- ನಪುಂಸಕ ಎಂಬ ಅರ್ಥದಲ್ಲಿ 'ಕೋಜ' ಪದ ಬಳಕೆಯಿದೆ; ಓರೆಕೋರೆ, ಅರೆಕೊರೆ(=ಕೋಸು), ಕುಂದುಕೊರತೆ ಎಂಬ ಭಾವವೇ ಇಲ್ಲಿಯೂ

ಇರಬಹುದು, ಪುರುಷತ್ವದ ಕೊರತೆ ಇರುವುದರಿಂದ; ಆದರೆ ಕೋಜದೇವ, ಕೋಜಯ್ಯ ಎಂಬ ರೂಪಗಳು ಅಂಕಿತನಾಮಗಳಾಗಿ ಬಳಕೆಯಾಗುತ್ತಿದ್ದುದು ಶಾಸನ ಮೊದಲಾದೆಡೆಗಳಿಂದ ತಿಳಿದುಬರುತ್ತದೆ; 'ಕೋಚವೇ' 'ಕೋಜ' ಆಗಿ ಪರಿಣಮಿಸಿರಬಹುದೆ?; The word `Koja' used in the meaning of eunuch; may be the feeling like imperfection incompleteness; cause to lower; paucity of manhood; but in the inscription and other documents the forms `Kojadeva';`Kojaiah' used as personal nouns; may be the word `Kocha' become `Koja' is possible;

- ಅಂತೂ ಕೋಚ, ಕೋಜ, ಕೋಸು ರೂಪಗಳು ಅರ್ಥವ್ಯಾಪ್ತಿ, ನಿಷ್ಪತ್ತಿ ದೃಷ್ಟಿಯಿಂದ ಚರ್ಚಾಸ್ಪದವಾಗಿವೆ. The words `Kocha', `Koja', `Kosa' forms are in debate for their origin and meaning.

ಕೋಚಿ/ಕೋಚಿಪಂಜಿ Kōci/Kōcipanji:

- ೧. ಕಚ್ಚೆಪವುಡೆ; ಕೌಪೀನ; ಕಚ್ಚೆಪಂಚೆ; ಸಣ್ಣಪಂಚೆ; ಲಂಗೋಟಿ;
- 'ಕೋಚ' ಪ್ರಾದೇಶಿಕ ವ್ಯತ್ಯಯದಿಂದ 'ಕೋಚಿ' ಆಗಿರಬಹುದು; ಸಂಕೋಚಗೊಂಡದ್ದು, ಸಂಕುಚಿತ ರೂಪದ್ದು; ಚಿಕ್ಕದು ಎಂದು ಅರ್ಥ ಮಾಡಿಕೊಳ್ಳಬಹುದು; The word `Kocha' becomes `Kochi' by the regional differences it may understand as shrinked narrow form; small;
- 'ಪಂಚೆ'ಯ ವ್ಯತ್ಯಯರೂಪ 'ಪಂಜೆ/ಪಂಜಿ' ಎಂದು ತಿಳಿಯಲು ಅವಕಾಶವಿದೆ; ಚ>ಜ ವ್ಯತ್ಯಯ ಸಹಜ; ವ್ಯಂಜನಗಳ ತೃತೀಯತ್ವ; ಪಂಚೆ/ಪಂಜಿ=ವಸ್ತ್ರ, ಸೊಂಟದ ಉಡಿಗೆ; The differentiation form of `Panche' is understand as `panje/panji' is possible;
- ಕಚ್ಚೆ ಪುರುಷರು ಮರ್ಮಾಂಗ ಮುಚ್ಚಲು ಬಳಸುವ ಕಿರುವಸ್ತ್ರವಾದುದರಿಂದ, ಕುಣಕಾಲಿನ ವರೆಗೆ ಉಡುವ ಪಂಚೆಯಷ್ಟು ದೊಡ್ಡದಲ್ಲದುದರಿಂದ ಅದಕ್ಕೆ 'ಕೋಚಿ' ಅಥವಾ 'ಕೋಚಿಪಂಜಿ' ಪರ್ಯಾಯ ರೂಪವಾಗಿ ಬಳಕೆಗೆ ಬಂದಿರಬಹುದು; `kachche' is a small piece of cloth use to cover the personal part of male; it is little than the cloth piece wear around the waist till the knee, so the `kochi' or kochi panji' forms are used as alternate;
- ಮಡಿಲು; ಉಡಿ(ಕನಿ); ಸೀರೆ ಮೊದಲಾದ ಉಡಿಗೆಯ ಅಂಚು; ಬಳುವಳಿಯಾಗಿ ಬಂದ ದವಸಧಾನ್ಯ ಇತ್ಯದಿಗಳು ಈಸಿಕೊಳ್ಳುವಾಗ ಚಾಚುವ ಸೆರಗು;
- ೨. ಹರಿತವಾದ ಚೂರಿ; A sharp knife;
- ೩. ಒಂದು ಬಗೆಯ ಮುಖವಾಡ(ತು.); ಯಕ್ಷಗಾನ ಬಯಲಾಟ ಮೊದಲಾದವುಗಳಲ್ಲಿ ವೇಷಧಾರಿಗಳು ಮುಖಕ್ಕೆ ಧರಿಸುವ ಸಾಧನ; A kind of mask; an insrtrument used to wear to face by the artist of Yakshagana;
- —***ಕೋಚಿಕಟ್ಟುನಿ*** : ಮುಖವಾಡ ಕಟ್ಟಿಕೊ; ಮುಖವಾಡದ ವೇಷ ಹಾಕಿಕೊ(ತು.); Tie the mask; wear the mask or disguise;
- —***ಕೋಚಿವೇಷ*** : ಮುಖವಾಡ ಧರಿಸುವ ವೇಷ(ತು.); Mask wearing costume;
- ೪. ಕುಟಿಲ ಸ್ವಭಾವದವನು; ಕುಹಕಿ; ಕಪಟಿ; ವಂಚಕ; ಮೋಸಗಾರ; ಕೋಸು>ಕೋಚು+–ಇ? Deception; humbug; guile; deceiver; cheat;
- —***ಕೋಚಿಮಾಡು*** : ತುಂಡುಮಾಡು; ಕತ್ತರಿಸು; ವ್ಯರೂ: ಕೋಚುಮಾಡು. Cut into pieces; to cut.

ಕೋಚು Kōcu:

- ಮೂಲೆ; ಓರೆ; ಮನೆಜಾಗ, ಹೊಲ, ಗದ್ದೆ ಮೊದಲಾದವುಗಳ ಓರೆಕೋರೆಯ ಭೂಮಿ; ಅಂತಹ ಭೂಮಿಯ ಸಣ್ಣಭಾಗ; Angle; curved; slope site; field wetland etc; small corner of the land;
- ವಕ್ರಸ್ವಭಾವ; ಕೋಚುತನ; ಅರೆಕೋರೆಯ/ ಓರೆಕೋರೆಯ ಬುದ್ಧಿ; ಸರಳ–ನೇರ ನಡೆನುಡಿ ಇಲ್ಲದ ವ್ಯಕ್ತಿ; ಕ್ವಾಚ; ಕೋಚ; *ಪ್ರ: 'ಓದಿ ಓದಿ ಮರುಳಾದ ಕೋಚುಭಟ್ಟ'*; ಕೂಚುಭಟ್ಟ, ಕೂಚಿಭಟ್ಟ, ಕೂಚಂಭಟ್ಟ, ಕೂಸಂಭಟ್ಟ ಮೊದಲಾದ ರೂಪಗಳಿವೆ; Narrow mind character;

- ಕದ; ಬಾಗಿಲಿನ ರೆಕ್ಕೆ(ಕನಿ); Door wing;
- ತುದಿ; ತಾರಕ; ಎತ್ತರದ ದನಿ; ಏರುದನಿ; ದೊಡ್ಡಾಟದಲ್ಲಿ ಹಿಮ್ಮೇಳದವರು ದೊಡ್ಡ ಧ್ವನಿ ಎತ್ತಿ ಕೋಚು ಹೊಡೆಯುವುದು; Peak; high; high note; the chorus sing in high tone;
- ಅಪ್ಪಿಕೊಳ್ಳು; ಆಲಂಗಿಸು; ಓರೆಕೋರೆಯಿಂದ ಉಂಟಾಗುವ ಹಾಸ್ಯ; ಅರೆಮರುಳುತನ Embrace; hug; a humour from imperfections;
- ದೇಶಿಪದ(?); ಕೋಸು>ಕೋಚು; ಸ>ಚ ಧ್ವನಿವ್ಯತ್ಯಯ ದ್ರಾವಿಡ ಭಾಷೆಗಳಲ್ಲಿ ಸಾಮಾನ್ಯ; Chonological change is common in Dravidian languages;
- ನಾಲ್ಕು ಗಾಲಿಯ ಕುದುರೆಗಾಡಿ; ಸಾರೋಟು; ಕೋಚ್<Coach(ಇಂ.); Four wheeled horse coach; coach;
- ***—ಕೋಚುಬಂಡೆ*** : ಅಂಕುಡೊಂಕಾಗಿ ಹರಡಿಕೊಂಡಿರುವ/ಮುನ್‌ಚಾಚಿಕೊಂಡಿರುವ ಬಂಡೆ; ವಕ್ರಶಿಲೆ; *ಪ್ರ: 'ಕೋಚುಬಂಡೆಗಳು ನದಿಗಳಲ್ಲಿ ಚಾಚಿಕೊಂಡು ಸಂಚಾರಕ್ಕೆ ಅಡ್ಡಿಪಡಿಸುತ್ತವೆ'*; A rock spread curved forward;
- ***—ಕೋಚುಭಟ್ಟ*** : ಅರೆಮರುಳ; ಬುದ್ಧಿಗೇಡಿ; ಔಚಿತ್ಯ ಅರಿಯದ ಅತಿ ಬುದ್ಧಿತೋರುವವನು; ಅವಿವೇಕಿ; A half minded man; a person shows too much intelligence without knowing the sequence; innocent;
- ***—ಕೋಚುಮಾಡು*** : ತುಂಡುಮಾಡು; ಕೋಸುಗಳಾಗಿ ಕತ್ತರಿಸು; **ವ್ಯರೂ:** ಕೋಚಿಮಾಡು; Cut into pieces;
- ***—ಕೋಚೆತ್ತು*** : ಕೋಚು+ಎತ್ತು; ಧ್ವನಿ ಎತ್ತರಿಸಿ ಕೂಗು; ಗಟ್ಟಿಯಾಗಿ ಮಾತನಾಡು; ಹಿಮ್ಮೇಳದವರ ಎತ್ತರಧ್ವನಿಯ ಕೂಗು. Cry in high tone; speak loudly; high sound of the chorus.

ಕೋಜ್ಜ್ಯಾ kōjjyā :

- ಇದು ಬೈಗುಳ ಪದವಾಗಿದೆ; It is a abusing word;
- ಹೆಂಗಸರು ರಸ್ತೆಯ ಬದಿ ನಿಂತು ಯಾರ ಜೊತೆಯಾದರೂ ಜಗಳ ಮಾಡುತಾ ಜೋರಾಗಿ ಬಾಯಿ ಮಾಡುತಿದ್ದರೆ ಅಂತಹವರನ್ನು ಕೋಜ್ಜ್ಯಾ ಎನ್ನುವರು; Woman who are quarrelling with anyone in high voice are called `Kojya';
- ಗ್ರಾಮೀಣ ಜನಪದರು ಈ ಪದವನ್ನು ಹಲವು ಕಡೆಗಳಲ್ಲಿ ಬಳಸುವರು; ಕೆಲವು ಸಾರಿ ಮಕ್ಕಳು ತಪ್ಪು ಮಾಡಿದಾಗ ಅವರನ್ನು ಸಹ ಈ ಪದದಿಂದ ಬೈಯುವುದನ್ನು ಕಾಣಬಹುದು; *ಪ್ರ: 'ಅಡ್ಯಾಡಿ ಎನ್ ಕೋಜ್ಜ್ಯಾ ಇದ್ದಂಗ ಅದಿಯೆ'.* The word `Kojya' used in many sequence; sometime children made any mistake they are scold by this word.

ಕೋಟ್‌ಆಟ Kōṭāṭa :

- ೧. ಮಕ್ಕಳು ಆಡುವ ಒಂದು ಬಗೆಯ ಆಟ (ಮಂ.ಜಿ.,ಉ.ಜಿ.); ಕೋಟಾಟ; A kind of play played by the children;
- ದಕ್ಷಿಣ ಕರಾವಳಿ ಪ್ರಾಂತ್ಯದಲ್ಲಿ ಮಕ್ಕಳು ಕೈಕೈ ಹಿಡಿದುಕೊಂಡು ಹುಲಿ–ದನದ ಆಟ ಆಡುತ್ತಾರೆ; ದೇಶೀಮೂಲದ ನಾಮರೂಪ ಇರಬಹುದೆ?; In south canara region children hold their hand in others hand, that is the tiger-cattle play; may be the noun form of local origin;
- ಇಸ್ಪೀಟು ಆಟದಲ್ಲಿ ಒಂದು ಬಗೆ; ಪಕ್ಷ ಕಟ್ಟಿಕೊಂಡು ಇಸ್ಪೀಟು ಆಡುವಾಗ ಒಂದು ಪಕ್ಷದವನು ತನ್ನ ಎದುರು ಪಕ್ಷದವರಿಂದ ಎಲ್ಲಾ ಎಲೆಗಳನ್ನೂ ಗೆದ್ದುಕೊಳ್ಳುವುದು; ಹಾಗೆ ಗೆದ್ದವರು 'ಕೋಟ್' ಎಂದು ಕೂಗಿ ತಮ್ಮ ಗೆಲುವನ್ನು ಪ್ರಕಟಿಸಿಕೊಳ್ಳುತ್ತಾರೆ; ಅದು ಎದುರು ಪಕ್ಷದವರ ಸೋಲಿನ ಸೂಚಿಕವೂ ಆಗುತ್ತದೆ; <Quote–ಇಂ. It is a kind in playcard play; while playing playcards to win all the cards of the opponent; the winner declare his win as Quote; it is the symbol of the loss the play of opponent.

ಕೋಟ೧ kōṭa[1] :

- ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೋಕಿನ ಕ್ರಿ.ಶ.೧೪೨೩೮ ೧೧೫ನೇ ಶಾಸನದಲ್ಲಿ ಇದರ ಉಲ್ಲೇಖವಿದೆ; The place referred in the

115th inscription of 1423AD of Mysore district, Periyapattana taluk;

- 'ಕೋಟ' ಎಂದರೆ ಬ್ರಾಹ್ಮಣರ ಒಂದು ಪಂಗಡ; ಇವರು ನೆಲೆಸಿದ ಹಿನ್ನೆಲೆಯಲ್ಲಿ ಈ ಸ್ಥಳನಾಮ ಬಂದಿರಬೇಕು; `Koṭa' means a group of Brahmins; where they settle down, the name may be in practice;
- 'ಕೋಟ' ಎಂದರೆ ಒಂದು ಊರಿನ ಹೆಸರು ಕೂಡ; `Koṭa' is also a name of a village too;
- ಇದಲ್ಲದೆ 'ಕೋಟೆ' ಇದ್ದ ಹಿನ್ನೆಲೆಯಲ್ಲಿ ಪ್ರಸ್ತುತ ಸ್ಥಳನಾಮ ಬಂದಿರುವ ಸಾಧ್ಯತೆಯೂ ಇದೆ; Other than this there was fort in that place that also possible to be the name koṭe;
- 'ಕೋಟದ ತಿಪ್ಪಸೆಟ್ಟರು' ತಮ್ಮ ತಂದೆ ತಾಯಿಗೆ ಒಳಿತಾಗಲೆಂದು ಚಿಕ್ಕ ಹೊನ್ನೂರ ಮೂಡಲ ಭಾಗದಲ್ಲಿ ತಟಾಕವನ್ನು ನಿರ್ಮಾಣ ಮಾಡಿಸಿದನು; ಈತನಿಗೆ ಶಾಸನದಲ್ಲಿ 'ವಿಜಯನಗರದ ಕೋಟದ ತಿಪ್ಪಸೆಟ್ಟಿ' ಎಂದು ಉಲ್ಲೇಖಿಸಲಾಗಿದೆ. 'Koṭada Thippaseṭṭaru' built a pond in the east of Chikka honnuru to the convenient of his parents; it was referred in the inscription as Thippaseṭṭi of kota(Vijayanagara).

(E.C- ೪; ಮೈ.ಜಿ.)

ಕೋಟ² Kōṭa²:

- ೧. ಚಳಿ; ಕಡು ತಂಪು; ಶೀತದ ವಾತಾವರಣ/ಹವೆ; (ಕೊಡ.ಜಿ.,ಮಂ.ಜಿ.,ಉ.ಜಿ.); Cold, chill, cold temperature/weather;
- ವ್ಯರೂ: ಕ್ವಾಟ; Variant form: Kvata; *ಪ್ರ: 'ಇಂದ್ ಕ್ವಾಟ ಜೋರುಟ್ಟು'*(ಗೌಕ);
- ಕೋಟ> ಕ್ವಾಟ ಆಗಿರುವುದು ಸಂಭವನೀಯ; ಒ>ವ; ಓಷ್ಠ್ಯ ವರ್ಣಗಳ ವಿನಿಮಯ ದ್ರಾವಿಡ ವರ್ಗದ ಭಾಷೆಗಳಲ್ಲಿ ಉಂಟು; Koṭa becomes kvaṭa is possible;
- ಅಥವಾ 'ಕ್ವಾಟ'ವೇ ಮೂಲರೂಪವಾಗಿದ್ದು ಶಿಷ್ಟೀಕರಣ ಮತ್ತು ಉಚ್ಚಾರಣಾ ಸುಲಭೀಕರಣದಿಂದ 'ಕೋಟ' ಆಗಿರುವ ಸಾಧ್ಯತೆಯೂ ಇದೆ; Cf. ಕ್ವಾಪ> ಕೋಪ; May be `kvaṭa' is a original form, becomes koṭa for etiquette and to make easy pronunciation;
- ಕೊಡವ ಗೌಡ ಸಮುದಾಯದಲ್ಲಿ ಚಳಿ ಎಂಬ ಅರ್ಥದಲ್ಲಿ ಕ್ವಾಟ/ಕೋಟ ಬಳಕೆ; The word kvaṭa/koṭa used in the means of cold in Kodava Gowda community;
- ೨. ಒಂದು ಸಮುದಾಯದ ಹೆಸರು; ಬ್ರಾಹ್ಮಣರಲ್ಲಿ ಒಂದು ಪಂಗಡ; ಕೋಟಬ್ರಾಹ್ಮಣರು; ಆ ಸಮುದಾಯಕ್ಕೆ ಸೇರಿದ ವ್ಯಕ್ತಿ; ಕೋಟ ಬ್ರಾಹ್ಮಣ; ಶಂಕರಾಚಾರ್ಯರ ಶಿಷ್ಯ ಸಮೂಹದವರು ಕೋಟ ಬ್ರಾಹ್ಮಣರು ಎಂದು ಹೇಳಲಾಗಿದೆ; ವ್ಯರೂ: ಕೋಟಾ; A name of a community; a group in Brahmins; a person belongs to that community; Koṭa Brahmins, community is the deciples of Shankaracharya;
- ವ್ಯಕ್ತಿನಾಮದೊಡನೆ ಮನೆತನದ ಸೂಚಕ (ಸರ್‌ನೇಮ್)ವಾಗಿ ಸೇರಿಸಿಕೊಳ್ಳುವ ರೂಢಿ ಇದೆ; ಉದಾ: ಕೋಟ ಶಿವರಾಮ ಕಾರಂತ; The word koṭa used as person name and surname;
- ೩. ಊರಿನ ಹೆಸರು; ಸ್ಥಳನಾಮ; ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಒಂದು ಊರು/ಪಟ್ಟಣ; ಕೋಟ ಬ್ರಾಹ್ಮಣರು ಮೂಲತಃ ಈ ಊರಿನವರು ಎನ್ನಲಾಗಿದೆ; Name of a village; place; a village of Kundapura taluk Udupi district; Koṭa Brahmins are originally belongs to this village;
- ೪. ರೋಗ; ಅಸೌಖ್ಯ; ಅಸ್ವಸ್ಥತೆ; ಆಪತ್ತು; Disease; ಕಾಟ(ತು.); Unhealthy;
- *ಪ್ರ: 'ಭೂಮಿಪುತ್ರ ಬಲಿಯೇಂದ್ರಗ್ ಬತ್ತಿಂಚಿ ಕೋಟ'* (ಭೂಮಿಪುತ್ರ ಬಲೀಂದ್ರನಿಗೆ ಬಂದ ಆಪತ್ತು–ತು.ನಿ.);
- ೫. ಪಾಲು; ಹಿಸ್ಸೆ; ಸಲ್ಲಬೇಕಾದ ಭಾಗ; ಒಟ್ಟು ಮೊತ್ತದಲ್ಲಿ ಒಬ್ಬ ವ್ಯಕ್ತಿಗೆ, ಒಂದು ಸಂಸ್ಥೆಗೆ, ಇನ್ನಾವುದೇ ಹಕ್ಕುದಾರಿಕೆಗೆ ಒದಗಿಸಬೇಕಾದ ಅಂಶ; ಪಡೆಯಲು ಹಕ್ಕುಳ್ಳಪಾಲು; *ಪ್ರ: 'ಇಲ್ಲಿಗೆ ನಿನ್ನ ಕೋಟ ಮುಗೀತು, ಹೋಗು'*! Partion; a portion belongs to; in a total part; a portion or part goes to a person, an organisation or any rightful one to be have the partion;

- ೬. ಕೂಟ; ಸಭೆ;(ಕ.ಜಾ.ನಿ.); Meeting, assembly;
- ೭. ಕೋಟೆ; ಖಿಲ್ಲೆ(ಕನಿ); ಸಂಸ್ಕೃತ ಮೂಲದಿಂದ ಈ ಅರ್ಥ ಇರಬಹುದು? Kote; khille; has the meaning from the origin of Sanskrit;
- *—ಕೋಟಗಾಮುಂಡ* : ಒಬ್ಬಾತನ ಹೆಸರು; ಶಾಸನಗಳಲ್ಲಿ ಈ ಹೆಸರು ಉಲ್ಲೇಖವಾಗಿದೆ; ಕೋಟ+ಗಾಮುಂಡ; Name of a person; this name was referred in the inscription;
- *—ಕೋಟಗಾರ(<ಅ)* : ಕೋಟೆ ಕಾಯುವವನು; ದುರ್ಗಪಾಲಕ; ಕೋಟ+–ಕಾರ(ಅ). Sentinel of fort.

ಕೋಟಕಲ್ಲು kōṭakallu :
- ಕರ್ನೂಲು ಜಿಲ್ಲೆ ಆದೋನಿ ತಾಲ್ಲೋಕಿನ ಕ್ರಿ.ಶ.೧೫೪೨ರ ೨೮೨ನೇ ಶಾಸನದಲ್ಲಿ ಇದರ ಉಲ್ಲೇಖ; This place referred in the 282nd inscription of 1542AD Adoni taluk, Karnool district;
- ಸದಾಶಿವ ದೇವ ಮಹಾರಾಯನ ಆಳ್ವಿಕೆ; In the rule of Sadashiva Maharaya;
- ಮಹಾಮಂಡಲೇಶ್ವರ ರಾಮರಾಜ ಕೋನೇಟಿ ತಿಮ್ಮಯ ದೇವರು ಕೋಟೆಯ ಕಲ್ಲಿನ ಹನುಮಂತ ದೇವರ ಸೇವೆಗೆ ನೀಡಿದ ೧೨ವರಹದ ಉಲ್ಲೇಖ; The donation 12 varaha referred in this inscription by Mahamandaleshwara Ramaraja Koneṭi Thimmaya devaru for the service of Koṭe Kallina Hanumantha devaru;
- ಈ ಕೋಟೆಯ ಕಲ್ಲು ಮೂಡನಾಡಿನ ಹಸ್ತಿನಾವತಿಯ ಭಾಗ; ಇದು ಆದವಾನಿ ವಳಿತ (ಎಲ್ಲೆಕಟ್ಟು/ಆಶ್ರಯ)ದಲ್ಲಿದ್ದು, ತಿಮ್ಮಯ ದೇವರಿಗೆ ದೊರೆ ನಾಯಕತನಕ್ಕೆ ಇದನ್ನು ನೀಡಿದ್ದ ಮಾಹಿತಿಯಿದೆ; This koṭekallu is the part of east Hastinavati; it is in the protection of Adavani; it was given to Thimmaya devaru for his kingly leadership;
- 'ಕೋಟೆಕಲ್ಲು' ಎಂದರೆ ಕಲ್ಲಿನಿಂದ ಕೂಡಿದ ಕೋಟೆ ಎಂದು ಅರ್ಥ; ಕೋಟೆಯ ಕಲ್ಲು>ಕೋಟಕಲ್ಲು ಆಗಿರುವಂತೆ ತೋರುತ್ತದೆ. Koṭekallu means the fort with stone or stone built.
(ಆ.ಪ್ರ.ಕ.ಶಾ.ಭಾ.೧)

ಕೋಟರ Kōṭara :
- ಪೊಟರೆ; ಗೊಟರು?; ಬಿಲ; ದೊಗರು; ಟೊಳ್ಳು; A hole in a tree;
- ಮರಕ್ಕೆ ವಯಸ್ಸಾದುದರಿಂದಲೋ, ಒಣಗಿ ಹೋದುದರಿಂದಲೋ, ಗೆದ್ದಲು ಹಿಡಿದು, ನೀರು ಹರಿದು ಕೆಟ್ಟುಹೋದುದರಿಂದಲೋ ಮರದ ಯಾವುದಾದರೂ ಭಾಗದ ಒಳಮೈ ಟೊಳ್ಳಾಗಿರುವುದು; ಪೊಟರೆ/ದೊಗರು ಬಿದ್ದ ಜಾಗ; Inner part of the tree hallow for dryness by the anthills or by observing water it will became lost its strength;
- ದವಸಧಾನ್ಯಗಳನ್ನು ಒಕ್ಕಣೆ ಮಾಡುವ ಸ್ಥಳ; (ಬೇ.ಸಾಂ.ಪ.ಕೋ.) ದವಸಧಾನ್ಯಗಳನ್ನು ಸಂಗ್ರಹಿಸಿ ಇಡುವ ಕೊಠಡಿ; ಕೋಷ್ಠಾಗಾರ(ಸಂ.); ಕೊಟಾರ (ನೋಡಿ); ಕಣಜ; ಉಗ್ರಾಣ; A place harvesting the corns; a room store the grains and corns;
- ಕೋಷ್ಠಾಗಾರ(ಕೋಷ್ಠ+ಆಗರ)>ಕೊಟ್ಟಾರ>ಕೊಟಾರ/ ಕೋಟರ ಆಗಿರುವುದು ಸಾಧ್ಯ; ಅನ್ಯದೇಶ್ಯ; ಸಂಸ್ಕೃತ ಮೂಲದ್ದು.

ಕೋಟಲೆ Kōṭale:
- ಸಂಕಟ; ತೊಂದರೆ; ಚಿಂತೆ; ಕಾಟ; ಪೀಡನೆ; sorrow; grief; woe; trouble; worry; vexation;
- ಅಮ್ಮನ ಕಾಟ; ದಡಾರ(ಮಂ.ಜಿ.,ಉ.ಜಿ.); Pest of amma; measles;
ಪ್ರ: 'ಕೀಟಲೆ ಮಲ್ಲಯನ ಕೋಟಲೆ ಬಹಳ'(ಗಾ);
'ಮಗೂಗೆ ದಡಾರ ಆಗಿ ಜ್ವರ ಬಂದ್ಬುಟ್ಟದೆ'
- **ವ್ಯರೂ:** ಕೋಟ್ಲೆ; ಕ್ವಾಟ್ಲೆ; *ಪ್ರ: 'ಈ ಕ್ವಾಟ್ಲೆ ಸಾಕಪ್ಪ'*;
- ಕ್ವಾಟ್ಲೆ>ಕೋಟ್ಲೆ>ಕೋಟಲೆ ಆಗಿರುವ ಸಂಭವವಿದೆ; Kotle, Kvaṭle are become Koṭale is possible;
- ಕೋಟ+–ಅಲ್+–ಎ=ಕೋಟಲೆಯ ಸಾಧ್ಯತೆಯನ್ನೂ ಚಿಂತಿಸಬಹುದು; ಕೋಟ(ನೋಡಿ) = ವಕ್ರತೆ; ಕುಟಿಲತೆ.

- ಜ್ಞಾಭಾ.ರೂ: ತ: ಕೋಟ್ಟಾಲ್ಯೈ; ತೆ: ಕೋಡಾಡು (ಕೋಟಲೆ+ಆಡು–?) =ಬಾಧೆಪಡು; ಕಷ್ಟಪಡು; ತು: ಕೋಟಲೆ.

ಕೋಟಿ Kōṭi :

- ಒಂದು ಸಂಖ್ಯಾ ಮೊತ್ತ; ಒಂದು ನೂರು ಲಕ್ಷ; ಹತ್ತು ಮಿಲಿಯನ್; *ಪ್ರ: 'ಈರೊಂಬತ್ತು ಕೋಟಿ ಜೀವರಾಶಿಗಳನ್ನೂ ಸಲಹುವವನೊಬ್ಬನುಂಟು';* A statistical or numerical amount; An hundred lakhs; ten million;
- ಅಸಂಖ್ಯಾತ; ಲೆಕ್ಕವಿಲ್ಲದ; ಅಪರಿಮಿತವಾದ; innumerable; countless; limitless;
- *ಪ್ರ: 'ಕೋಟಿಭಾಗ್ಯ ಇದ್ದವನಾದರೂ ಕಡೆಗೆ ಅಡವಿಯಲ್ಲೇ ಇರಿಸುತ್ತಾರೆ'* (ಗಾ);
- 'ಕೋಟಿ ವರಹ ಕೊಟ್ಟರೂ ಕೋಮಟಿಯ ಸಾಕ್ಷಿ ನಂಬಕೂಡದು'(ಗಾ); If pay a crore don't believe the witness of Komaṭi;
- ವರ್ಗ; ಜಾತಿ; ಸಮೂಹ; ವಿಭಾಗ; ದರ್ಜೆ; ತರಗತಿ; *ಪ್ರ: 'ಅವನು ಮನುಷ್ಯಕೋಟಿಗೆ ಸೇರಿದವನೇ ಅಲ್ಲ';* Class, caste, mass piece, level, class;
- ಕೋಟಿಪೂಂಜೆ; ಒಂದು ಭೂತ; ಆ ಭೂತದ ಹೆಸರು(ತು.); Koṭi ponje; a devil; name of that devil;
- ಗುಡ್ಡದ ಕಾವಲು; ಗುಡ್ಡದ ಕೆಳಭಾಗ(ಉ.ಕ.ಜಿ.); The base of the hillock;
- ಧಾನ್ಯ ಮೊದಲಾದ ವಸ್ತುಗಳನ್ನು ಕೂಡಿ ಇಡುವ ಸ್ಥಳ; ಕಳ್ಳಿನ ಕೋಟಿ; ಕಳ್ಳು ಸಂಗ್ರಹಿಸಿ ಮಾರುವ ಸ್ಥಳ; ಉಗ್ರಾಣ; ಧಾನ್ಯಾಗಾರ; <ಕೋಠಿ–ಸಂ.; A place store corn and other things; storage of toddy; a place to sell and store of toddy; warehouse; granary;
- ಕೊನೆ; ತುದಿ; ಅಗ್ರ; ಕೋಡು(ಕನಿ); ಕೋಡಿ(ತದ್ಭವ); Cf. 'ಕೆರೆ ತುಂಬಿ ಕೋಡಿ ಹರಿಯಿತು'; ಕೋಡುಗಲ್ಲು; ದನದ ಕೋಡು; End; edge; summit; pinnacle; sluice;
- ಮೂಲೆ; ಕೋನ; ಸಮಕೋನ; ತ್ರಿಕೋನದ ಲಂಬಭುಜ; Corner; angle; equal angle; triangle; straight angle;
- ಆಕ್ಷೇಪಣೆ; ಮೂದಲಿಕೆ; Cf ಕೋಟಿ ಇದ್ದರೇನಂತೆ ಮೇಟಿ ಇಲ್ಲದಿದ್ದರೆ; ಕೋಟಿಯೇರಿಸು(ಮೂದಲಿಸು); Objection; taunt;
- ಕಣ್ಣಿನ ತುದಿ; ಕಣ್ಣಿನ ಕೊನೆ(ಕನಿ); Eyetip; edge of eye;
- ಬಿಲ್ಲಿನ ತುದಿ; ಕೊಪ್ಪು; ಕತ್ತಿಯ ಮೊನೆ; ಅಲಗು; Tip of the bow; edge of the sword; sharp edge, blade;
- ಒಡವೆ; ಅಲಂಕಾರ; ಕೈಯ ಬಳೆ; ಕಡಗ; Ornament; decorate; bangle; bracelet;
- ಮರದ ಪೊಟರೆ; ಬಿಲ; ಕೋಟರ(ನೋಡಿ); A hole inside the tree stem; hole;
- ಸಮರ; ಯುದ್ಧ; ಕೋಟೆ; ಪ್ರಾಧಾನ್ಯ; ಶ್ರೇಷ್ಠತೆ; Battle, war; fort; importance; excellence;
- ವ್ಯಕ್ತಿನಾಮ; ನಾಮವಾಚಕ; ಅಂಕಿತನಾಮ; Cf. ಕೋಟಿಚನ್ನಯ(ನೋಡಿ); ಕೋಟಿಗಾವುಂಡ; Person name; personification, proper noun;
- ***—ಕೋಟಿಜಗಳ*** : ಮಹಭಾರತ ಯುದ್ಧದ ಆಚರಣೆ/ಅನುಕರಣೆ; ಆನೇಕಲ್‌ನ ಹಸಿಕರಗ ನಡೆದ ಎರಡನೆಯ ದಿವಸ ಮಹಾಭಾರತ ಯುದ್ಧವನ್ನು ನೆನಪಿಸಿ ಈ ಅನುಕರಣ ಕಲೆ ಜರುಗುತ್ತದೆ (ಬೆಂ.ಗ್ರಾ.ಜಿ.); Celebration of Mahabharatha war/imitation; this imitative art happened on the second day of 'Hasi karaga' of Anekal in remembrance of Mahabharatha war;
- 'ಕೋಟ್ಯಾಧೀಶ', 'ಕೋಟ್ಯಾಧಿಪತಿ', 'ಕೋಟೀಗೊಂದ್‌ರೂಪಾಯಿ ಕಮ್ಮಿ', 'ಸಾವಿರಕೋಟಿ ಸರದಾರ' ಇತ್ಯಾದಿ ಮಾತುಗಳು ಶ್ರೀಮಂತಿಕೆಯನ್ನೊ, ಶ್ರೀಮಂತನಂತೆ ಆಡುವವರನ್ನೋ ಕುರಿತು ಪ್ರಯೋಗವಾಗುತ್ತವೆ; ಒಟ್ಟಿನಲ್ಲಿ ಸಂಖ್ಯಾಸೂಚಕ ಪದ 'ಕೋಟಿ' ಹಣ, ಐಶ್ವರ್ಯದ ಲೆಕ್ಕದಲ್ಲಿ ಪ್ರಯೋಗವಾಗುವುದೇ ಹೆಚ್ಚು; ಅದುಬಿಟ್ಟರೆ ಭೂಮಿಯ ಮೇಲಿನ ಜೀವರಾಶಿಗಳ ಬಹುತ್ವವನ್ನು, ಬಹುಜಾತಿಯನ್ನು ಹೇಳುವಾಗ ಜನಸಾಮಾನ್ಯರ ಮಾತಿನಲ್ಲಿ, ಅವರ ಸೃಷ್ಟಿ ಕಲ್ಪನೆಯ, ಅಧ್ಯಾತ್ಮಭಾವದ ಒಂದು ಸೂಚನಾಂಶವಾಗಿ ಪ್ರಯೋಗವಾಗುತ್ತದೆ; ಇದು ಬಿಟ್ಟರೆ ಮಧ್ಯಮ, ಕೆಳಮಧ್ಯಮವರ್ಗದ,

ಅದಕ್ಕೂ ಕೆಳವರ್ಗದ ಬಹುಸಂಖ್ಯೆಯ ಜನಪದದಲ್ಲಿ 'ಕೋಟಿ' ಬರೀ ಕನಸಿನ ಮಾತು. Koṭyadhisha: a holder of crore rupees; Koṭyadhipathi: a master of crore; `shortage of a rupee for a crore'; `Chieftain of a crore rupees'; these words speak about the richness or a person enact as a rich; this word notices the number; the word crore or koṭi refer in account of richness; this word used to tell the living beings plurality; in common man used to tell the many casts and their assumption, it is a mythical sign; otherwise this(crore) is only dream in middle class, lower middle class people.

ಕೋಟಿ-ಚೆನ್ನಯ Kōṭicennaya:

- ದುರ್ಮರಣಕ್ಕೆ ಈಡಾಗಿ ದೈವೀಕರಣಗೊಂಡ ತುಳುನಾಡಿನ ಅವಳಿ ವ್ಯಕ್ತಿಗಳು; ತಮ್ಮ ಸಾಹಸಮಯ ವ್ಯಕ್ತಿತ್ವದಿಂದಾಗಿ ಗರಡಿ ಮನೆಗಳಲ್ಲಿ ಆರಾಧನೆಗೊಳ್ಳುವ ಅವಳಿ ವೀರರು; ದೇಯಿ ಬೈದ್ಯೆದಿಯ ಮಕ್ಕಳು; ಕೋಟಿ ಮತ್ತು ಅವನ ತಮ್ಮ ಚೆನ್ನಯ; ಬೈದೇರ್ಲ ಅಥವಾ ಬೈದ್ಯೇರ್ಲ ಎಂಬ ಹೆಸರಿನಲ್ಲೂ ಪ್ರಸಿದ್ಧರಾಗಿರುವ ಸಾಂಸ್ಕೃತಿಕ ವೀರರು; 'ಕೋಟ್ಯೆನ್ನಯೆರ್'(ತು.) ಎಂದೂ ಕರೆಯುತ್ತಾರೆ; Twin persons of Tulunadu met an unnatural death has became godly acceptance by the people; these twin heroes worshipped in the wrestling house for their adventurous personality; children of Dyeyi bydyeya; Koṭi and Chennaya are brothers; these cultural heroes are famous in the name Byderla or Bydyerla; called as `Koṭyannayer';
- ಕೋಟೇಶ್ವರ ಮತ್ತು ಚೆನ್ನಿಗ ದೇವರ ಹೆಸರಿನಲ್ಲಿ ಕೋಟಿ ಮತ್ತು ಚೆನ್ನಯ್ಯ ಎಂದು ಹೆಸರಿಸಿಕೊಂಡ ಅವಳಿಮಕ್ಕಳು 'ಕೋಟಿ-ಚೆನ್ನಯ' ಎಂದೇ ಪ್ರಸಿದ್ಧರಾದರು; `Koṭi-Channaya' twins are named in the name of Koṭeshwara and Chenniga; they are famed as `Koṭi-Channaya';
- ಒಂದು ಪಾಡ್ದನ ಕಥನಗೀತೆ; ಕರಾವಳಿ ಸೀಮೆಯ ತುಳು ಪಾಡ್ದನದಂತಹ ಮೌಖಿಕ ಕಾವ್ಯಪರಂಪೆಯಲ್ಲಿ 'ಕೋಟಿಚೆನ್ನಯ' ಕೂಡ ಒಂದು ಕಥನಗೀತೆಯಾಗಿ ಉಳಿದುಬಂದಿದೆ; ಈ ಕಥನಗೀತೆ ಈ ಅವಳಿವೀರರ ಕಥೆಯನ್ನು ಹೇಳುತ್ತದೆ; ಜನಪದ ಮಹಾಕಾವ್ಯ ಎಂಬ ಮನ್ನಣೆ ಈ ಕಥನಗೀತೆಗಿದೆ; ಕೋಟಿ ಮತ್ತು ಚೆನ್ನಯರ ಹೋರಾಟ, ತ್ಯಾಗ, ಬಲಿದಾನದ ಕಥೆ ಇದರಲ್ಲಿದೆ; ಲೌಕಿಕ-ಅಲೌಕಿಕ ಸಂಗತಿಗಳು ಪುರಾಣ-ಐತಿಹ್ಯಗಳ ಮಾದರಿಯಲ್ಲಿ ನಿರೂಪಿತವಾಗಿರುವ ಜನಪ್ರಿಯ ಗೀತೆ ಇದು; ಪುರಾಣಕಾವ್ಯವೆಂದೂ ಪರಿಗಣಿತವಾಗಿದೆ; Koṭi channaya is one among the paḍdhana verse-tale in Tulu region; this verse-tale tells the story of these two heroes; this verse tale honoured as folk epic; this tale has the struggle, scarification martyrdom of Koṭi and Channaya; wordly matters presented like puranas and legends; it is famous song consider as puranic verse;
- ಕೋಟಿ-ಚೆನ್ನಯರ ತಾಯಿ ಬಿಲ್ಲವರ ಕುಲಕ್ಕೆ ಸೇರಿದ ಬೈದಿಲೆ; ಪಡುಮಲೆಯ(ಮಂ.ಜಿ.) ರಾಜ ಪೆರುಮಾಳ್ ಬಲ್ಲಾಳ ಒಮ್ಮೆ ಬೇಟೆಗೆ ಹೋಗಿದ್ದಾಗ ಅವನ ಕಾಲಿಗೆ ಮುಳ್ಳು ಚುಚ್ಚಿ ದೇಹಕ್ಕೆ ನಂಜು ಏರಿತು; ಬೈದಿಲೆ ಮುಳ್ಳು ತೆಗೆದು ನಂಜು ಇಳಿಸಿದಳು; 'ನಾನು ಗರ್ಭಿಣಿ, ನಾನು ಸತ್ತರೆ ನನ್ನ ಮಕ್ಕಳಿಗೆ ಆಶ್ರಯ ನೀಡಬೇಕೆ'ಂದು ಬಹುಮಾನಾರ್ಥ ಬೇಡಿದಳು; ಕೋಟಿ-ಚೆನ್ನಯರು ಆಳರಸರ ಆಶ್ರಯಕ್ಕೆ ಬೀಳಲು ಇದು ಕಾರಣವಾಯಿತು; The mother of Koṭi Channaya Bydile belongs to billava community; once rajaperumal ballala went for hunting, a thron was pierce into his leg that causes to become poison to the body, Bydile remove the thorn and cool down the poison of the body; she has requested the king, a reward, that she is pregnant, if she dies her children to be grow under the protection of the king; this is the reason Koṭi and channaya are came under the protection of the king;

ಕೋಟಿ–ಚೆನ್ನಯ

- ಕಂಬಳಗದ್ದೆಯಲ್ಲಿ ಪ್ರಸವ ವೇದನೆ ಅನುಭವಿಸುತ್ತ ಕುಳಿತಿರಲು, ಬಲ್ಲಾಳನ ಮಂತ್ರಿ ಮಲ್ಲಯ್ಯ ಬುದ್ಧಿವಂತ ಅಲ್ಲಿಗೆ ಬಂದ; 'ನಾನು ಬಂದರೂ ಕುಳಿತಿರುವೆ, ನಿನಗೆಷ್ಟು ಸೊಕ್ಕು ಎಂದ; 'ನನಗೆ ಸೊಕ್ಕಾದರೆ ಅದರ ಫಲವನ್ನು ನಾನು ಕಾಣುವೆ, ನೀನು ಅಹಂಕಾರದಿಂದ ನುಡಿದಿದ್ದರೆ ನನ್ನ ಮಕ್ಕಳು ಉತ್ತರ ಕೊಡುತ್ತಾರೆ' ಎಂದಳು ಬೈದಿಲೆ; Bydile was sitting in Kambaḷagadde, she was suffering from delivery pain; the minister of Ballaḷa, Mallaiah Buddivantha came there; `he told her that how you have vanity, even I came here'; if I have vanity I will face the result, suppose if `you are in arrogance my children will give a right answer' told Bydile;
- ಮಕ್ಕಳನ್ನು ಹಡೆದು ವಿಧಿವಶಳಾಗುವಂದು ತನ್ನ ಕುಲದ ಸಾಯಿನ ಬೈದನನ್ನು ಕರೆದು ಮಕ್ಕಳನ್ನು ಸಲಹುವಂತೆ ಕೇಳಿದಳು; ಆಟಪಾಠದಲ್ಲಿ ಯಾರೂ ಮೀರಿಸಲಾಗದಂತೆ ಮಕ್ಕಳು ಬೆಳೆದರು; ಮಲ್ಲಯ್ಯ ಬುದ್ಧಿವಂತನ ಮಕ್ಕಳೊಂದಿಗೆ ಚಂಡಾಟ ಆಡುವಾಗ ಗೆದ್ದುಕೊಂಡ ಚೆಂಡನ್ನು ಅವರಿಂದ ಕಸಿದುಕೊಂಡರು; ವಿಷಯ ತಿಳಿದ ಬುದ್ಧಿವಂತ ಅವರಿಗೆ ಹೊಡೆದು ಚೆಂಡನ್ನು ಕಿತ್ತುಕೊಂಡ; 'ಈ ಸಣ್ಣ ಕೈಗಳಿಂದ ಕಿತ್ತುಕೊಂಡ ಚೆಂಡನ್ನು ಇದೇ ದೊಡ್ಡ ಕೈಗಳಿಂದ ಸೆಳೆದುಕೊಳ್ಳುತ್ತೇವೆ' ಎಂದರು ಮಕ್ಕಳು; On the day gave birth to the babies before her death, she called Saina Bydana of her community request him to take care of her children; the children grown no one cross them in play and study; once they play with Mallaya Buddivantha's children; these two won the ball, but Mallaiah beat them and snatch the ball; the children told him we will take back the ball in future;
- ಕೋಟಿ–ಚೆನ್ನಯರ ಗದ್ದೆಯ ಕೆಳಗೆ ಮಲ್ಲಯ್ಯ ಬುದ್ಧಿವಂತನ ಗದ್ದೆ ಇತ್ತು; 'ನಿಮ್ಮ ಗದ್ದೆ ನೀರನ್ನು ನಮ್ಮ ಗದ್ದೆಗೆ ಬಿಡಬಾರದು, ಬೇಕಾದರೆ ತಲೆಮೇಲೆ ಹೊತ್ತುಕೊಂಡು ಹೋಗಿ ಆಚೆಗೆ ಸುರಿಯಿರಿ' ಎಂದ ಬುದ್ಧಿವಂತ; ಕೋಟಿ–ಚೆನ್ನಯರು ಕೋಪದಿಂದ ಅವನನ್ನು ಎತ್ತಿಕುಕ್ಕಿ, ಕತ್ತಿಯಿಂದ ಇರಿದು ಚಿಕ್ಕವರಿದ್ದಾಗ ಕಿತ್ತುಕೊಂಡಿದ್ದ ಚೆಂಡನ್ನು ಕಸಿದುಕೊಂಡರು; ಪೆರುಮಾಳ್ ಬಲ್ಲಾಳ ಇವರನ್ನು ಸೆರೆಗೆ ಹಾಕಲು ನೋಡಿದ; ಇವರ ತಾಯಿಗೆ ಕೊಟ್ಟ ಮಾತಿನಿಂದಾಗಿ ಅದು ಸಾಧ್ಯವಾಗಲಿಲ್ಲ; ಹೇಗಾದರೂ ಇವರಿಂದ ಕೇಡು ತಪ್ಪಿದ್ದಲ್ಲವೆಂದು ಬಗೆದು ನಾಶಮಾಡಬೇಕೆಂದು ನಿರ್ಧರಿಸಿದ; ಅವರ ಸಾಕುತಂದೆಯನ್ನು ಸೆರೆಹಿಡಿದ; ಅವನ ಮನೆಗೆ ಬೆಂಕಿ ಹಾಕಿಸಿದ; Koṭi-channaya has wet land, next to them Mallaiah Buddivantha's land in the lower level; Mallaiah put a condition that is Koṭi-Channaya donot flow the water on Mallaiah's land and they should carry on their head; Koṭi-channaya were very angry over Mallaiah Buddivantha put him down and stab with sword; they have taken back the ball which was snatched by them in the early days; the king Perumaḷ Ballaḷa wanted to put them into jail, but it was not possible, because he was promised to their mother; the king thought that he never missed the evil by them, so he wished to finish them, he was arrested his foster father; and fired to his house;
- ಕೋಟಿಚೆನ್ನಯರು ಕೇಮರ ಬಲ್ಲಾಳನ ಆಶ್ರಯ ಪಡೆದು ಪೆರುಮಾಳ್ ಬಲ್ಲಾಳನ ಸೆರೆಯಲ್ಲಿರುವ ಸಾಕುತಂದೆಯನ್ನು ಬಿಡಿಸಲು ಯತ್ನಿಸಿದರು; 'ಕೋಟಿ–ಚೆನ್ನಯರನ್ನು ತಂದು ನನಗೆ ಒಪ್ಪಿಸಿ, ಇಲ್ಲದಿದ್ದರೆ ನೀವೇ ಕೊಲ್ಲಿ' ಎಂದು ಪೆರುಮಾಳ್ ಬಲ್ಲಾಳ ಕೇಮರ ಬಲ್ಲಾಳನಿಗೆ ಪತ್ರ ಬರೆದ; ಕೇಮರ ಬಲ್ಲಾಳ ತನ್ನ ಮಂತ್ರಿ ಚೆಂದುಗಿಡಿಯನ ಕೈಯಲ್ಲಿ ಅವರನ್ನು ಸೆರೆಹಿಡಿಸಿದ; ಕೋಟಿ–ಚೆನ್ನಯರು ಅವನ ಸೆರೆಮನೆಯಿಂದ ತಪ್ಪಿಸಿಕೊಂಡರು; ಇತ್ತ ಇವರ ಸಾಕು ತಂದೆಯ ಹೆಂಡತಿ ಪೆರುಮಾಳ್ ಬಲ್ಲಾಳನ ಮನೆಗೆ ಬೆಂಕಿ ಹಾಕಿದ್ದಳು; Koṭichannaiah got shelter in Kemara Ballaḷa and try to release their foster father who is in the Perumaḷ Ballaḷa's jail; Perumaḷ Ballaḷa wrote a letter to Kemara Ballaḷa, to kill

Koṭi-Channaya or surrender them to him; Kemara ballaḷa was arrested them by his minister Chandugiḍiya; but Koti-channaya escaped from the jail; the foster mother of these two was lit fire to Perumaḷ Ballaḷa's house;

- ಎಣ್ಮೂರ ದೊರೆ ದೇವ ಬಲ್ಲಾಳ; ಈತನ ನಾಡು ಮತ್ತು ಕೇಮರ ಬಲ್ಲಾಳನ ನಾಡಿನ ನಡುವೆ ಗಡಿ ವಿವಾದ ಇತ್ತು; ದೇವಬಲ್ಲಾಳ ಕೋಟಿ–ಚನ್ನಯರ ನೆರವು ಕೇಳಿದ; ಚೆನ್ನಯ ಗಡಿಕಲ್ಲು ಕಿತ್ತು, ವಿವಾದಿತ ಪ್ರದೇಶದಲ್ಲಿ ಹಂದಿಯೊಂದನ್ನು ಕೊಂದು ಹಂದಿ ನಮ್ಮ ನಾಡಿನಲ್ಲಿ ಬಿದ್ದದೆ ಎಂದು ದೇವ ಬಲ್ಲಾಳನ ಬಳಿಗೆ ಎಳೆದು ತಂದ, ತನ್ನ ಉಡಿದಾರಕ್ಕೆ ಕಟ್ಟಿಕೊಂಡು; ದೇವ ಬಲ್ಲಾಳ ಮತ್ತು ಕೇಮರ ಬಲ್ಲಾಳನ ನಡುವೆ ಯುದ್ಧ ನಡೆಯಿತು; ಯುದ್ಧದಲ್ಲಿ ಕೋಟಿ ಗಾಯಗೊಂಡ; ಚಂದುಗಿಡಿಯನ್ನು ಚೆನ್ನಯ ಕೊಂದ, ಎಣ್ಮೂರನಿಗೆ ಜಯವಾಯಿತು; There was border dispute between the king Devaballaḷa of Eṇmoora and Kemara Ballaḷa, Devaballaḷa asked the help of Koṭi-Channaya; Channaya remove the border stone, and killed a pig in the disputed border area; he brought the pig before Devaballaḷa, it was layed in their border area; there was war between Devaballaḷa and Kemaraballaḷa; Koṭi was wounded in the war; channaya killed Chandugiḍi; Eṇmoora won the war;
- ತನ್ನ ಕಡೆಯವರಿಗೆ ಸೋಲಾದುದರಿಂದ ಪೆರುಮಾಳ್ ಬಲ್ಲಾಳನಿಗೆ ಜ್ಞಾನೋದಯವಾಯಿತೆಂದು ತೋರುತ್ತದೆ; ತಾನು ಸಾಕಿದ ಹುಲಿಮರಿಗಳ ಮೇಲೆ ತಾನೇ ಕೈಮಾಡಿದೆಂದು ಬಗೆದು ಗಾಯಗೊಂಡಿದ್ದ ಕೋಟಿಯ ಮುಂದೆ ಬಂದು ಅಳುತ್ತಾ ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾದ; ಅದನ್ನು ತಡೆದ ಕೋಟಿ ಇಬ್ಬರು ಬಲ್ಲಾಳರೂ ಸ್ನೇಹದಿಂದ ಬಾಳಿ, ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಪೂಜೆ ಮಾಡಿಸಿ ಜಾತ್ರೆ ನಡೆಸಿ, ಪಡುಮಲೆಯಲ್ಲಿ ಅರವಟ್ಟಿಗೆ ಇಟ್ಟಿರುವ ಬ್ರಾಹ್ಮಣನಿಂದ ಪೂಜೆಮಾಡಿಸಿ ತೀರ್ಥ ತಂದು ನನ್ನ ಬಾಯಿಗೆ ಹಾಕಿ; ನಾನು ದೇವರ ಸನ್ನಿಧಿ ಸೇರುತ್ತೇನೆ ಎಂದ; ಅಣ್ಣ ಸತ್ತುದನ್ನು ನೋಡಿ ಚೆನ್ನಯ ಕಲ್ಲಿಗೆ ತಲೆ ಹೊಡೆದುಕೊಂಡು ಅಣ್ಣನನ್ನು ಹಿಂಬಾಲಿಸಿದ; ತನ್ನ ವಿಜಯಕ್ಕೆ ಕಾರಣರಾದ ಕೋಟಿ–ಚೆನ್ನಯರನ್ನು ಪಲ್ಲಕ್ಕಿಯಲ್ಲಿ ಹೊರಿಸಿ ತಂದ ದೇವ ಬಲ್ಲಾಳ ಪಡುಮಲೆಯ ಪೆರುಮಾಳ್ ಬಲ್ಲಾಳನ ಕಂಬಳ ಗದ್ದೆಯ ಬಳಿ ಶವ ಸಂಸ್ಕಾರ ಮಾಡಿಸಿ ಅಲ್ಲಿ ಗುಡಿಗಳನ್ನು ಕಟ್ಟಿಸಿ ವಿಗ್ರಹಗಳನ್ನು ಪ್ರತಿಷ್ಠಾಪನೆ ಮಾಡಿಸಿದ; Perumaḷ ballaḷa was realised by the loss of war to his side; it was the mistake of him to fight on his own nourished tiger cubs; he came before Koṭi with cry and told him that he wanted to sucide; but Koṭi avoid Perumaḷ; advice to both ballaḷa's to be friendly and live long; he told them to worship the Lord Subramanya temple by the priest who is running the Aravaṭtige in padumale and give the sacred water to me to drink, I wanted to reach the aegis of god; Channaya follows his brother he was hit the head to stone when he saw of his brother; and died; Devaballaḷa brought Koṭi-Channaya in a palanquin and pay last rites to the bodies near padumale; Perumaḷ ballaḷa's Kambaḷada gadde built temple and erect idols of Koṭi-channaya;
- ಇದು ಕೋಟಿ–ಚೆನ್ನಯರ ಸಾಹಸಗಾಥೆ, ದೇವರಾದ ಬಗೆ; ಅಮಾಯಕ ಬಿಲ್ಲವರ ಸಮುದಾಯಕ್ಕೆ ಸೇರಿದವರಾದರೂ ಯೋಧ ಸಂಸ್ಕೃತಿ ಮತ್ತು ಕೃಷಿ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಹೋರಾಟದ ಬದುಕು ನಡೆಸಿದ ಸಹೋದರರು ಇವರು; ಗರಡಿ ಮನೆಗಳಲ್ಲಿ ಪಡೆದ ತರಬೇತಿಗೆ ಅರಸಾಳ್ವಿಕೆಯಲ್ಲಿ ರಾಜಕೀಯ ಸ್ಥಾನಮಾನ ಲಭ್ಯವಾಗುವುದಕ್ಕೂ ಇವರ ಸಾಹಸ ಪ್ರವೃತ್ತಿಯೇ ಕಾರಣ; This is the adventurous story of Koṭi-channaya; these two brothers are belongs to innocent Billava community; but they have develop warrior and agriculture culture; and live the life of struggle; the training has got in gymnasium to get political status in the kings rule; their adventure nature is the cause;

- ಇವರ ಸಾಹಸದ ಕಥೆಯನ್ನು ಹೇಳುವ ಕಥನಗೀತೆ ತುಳುನಾಡಿನ ಸಾಮಾಜಿಕ ಧಾರ್ಮಿಕ ಸಂಪ್ರದಾಯಗಳ ಆರಾಧನಾ ಪರಿಕಲ್ಪನೆಗಳನ್ನೊಳಗೊಂಡಿದ್ದು ತುಳು ಸಂಸ್ಕೃತಿಯ ಅಧ್ಯಯನಕ್ಕೆ ಆಕರವೆನಿಸಿದೆ; ಕೋಟಿ–ಚೆನ್ನಯರ ಹುಟ್ಟು, ಬೆಳವಣಿಗೆ, ಸಾವಿನ ವರೆಗಿನ ಕಥೆ ಹೇಳುವುದರ ಜೊತೆಗೆ ಜೀವನ ಸ್ಥಿತ್ಯಂತರಗಳು, ದೈವಿಕತೆಯ ಪಲ್ಲಟಗಳು, ಕನಸುಗಾರಿಕೆ, ಪವಾಡ, ಮಾಂತ್ರಿಕತೆ ಮೊದಲಾದ ಅಂಶಗಳಿಂದ ಕೂಡಿ ಒಂದು ಜನಪ್ರಿಯ/ಜನಪದ ಪುರಾಣಕಾವ್ಯದ ಮಾದರಿ ಎನಿಸಿದೆ; The adventurous story-telling songs includes the religious customs, worshipping concept of Tulunadu; and the study materials of Tulu culture; it tells the life and death of Koṭi-Channaya and the life differences, changes of divinity; dreams, miracle, magic etc are included in the famous epic verse;
- ವೀರತ್ವದ ನಿರೂಪಣೆ ಮತ್ತು ಕುಣಿತ ಪ್ರಧಾನವಾದ ಈ ಕಥನಗೀತೆಯನ್ನು 'ಬೈದರ್ಲೆಕೋಲ' ಎಂಬ ಭೂತಾರಾಧನೆಯ ಸಂದರ್ಭದಲ್ಲಿ ಹಾಡಿ ಕುಣಿಯುತ್ತಾರೆ; ರಾತ್ರಿಯಿಡೀ ನಡೆಯುವ ಈ ಉತ್ಸವದಲ್ಲಿ ಬಗೆಬಗೆಯ ಕುಣಿತಗಳಿವೆ; ಕೋಟಿ ಚೆನ್ನಯರು ಮಾತ್ರವಲ್ಲದೆ ಇತರ ಕೆಲವು ದೈವಿಕ ವ್ಯಕ್ತಿಗಳೂ ಪೂಜೆಗೊಳ್ಳುವುದು ಈ ಉತ್ಸವದ ವಿಶೇಷ; ಇಲ್ಲಿ ಆರಾಧನೆಗೊಳ್ಳುವ ಕುಜುಂಬ, ಕಾಜ ಎಂಬ ದೈವಗಳು ಕೋಟಿ–ಚೆನ್ನಯರ ಭಾವಂದಿರೆಂದೂ, ಮಾನಿಬಾಲೆ ಅಕ್ಕನೆಂದೂ ಹೇಳುತ್ತಾರೆ; ಇಲ್ಲಿನ ಕಥೆ ಕ್ರಿ.ಶ.ಸು. ಹದಿನಾರನೆಯ ಶತಮಾನದ ಉತ್ತರಾರ್ಧದ ಕಾಲಘಟ್ಟಕ್ಕೆ ಸೇರಿದ್ದೆಂದು ಪ್ರತೀತಿ; ಪಾಳೆಯಗಾರರು ಮತ್ತು ಮೇಲುವರ್ಗದವರ ದಬ್ಬಾಳಿಕೆಯ ವಿರುದ್ಧ ಬಂಡೆದ್ದು ಹೋರಾಡಿ ದುರಂತವನ್ನು ಕಂಡ ಕಥೆ 'ಕೋಟಿ–ಚೆನ್ನಯ'. The detailed exposition and dance is main in this story telling song; it is sung and dance at the time of `Byderla kola' devil worship; it has different dance forms, performered throughout night; the other godly persons also worshipped other than Koṭi- channaya is a special; kujumba, kaja are the brother-in-laws, Manibale is elder sister of Koṭi-channaya; this story is probably belongs to later part of sixteenth century; the story of Koṭi-channaya turn against the despotism of paleyagaras and upper class.

ಕೋಟಿಪುರ kōṭipura :

- ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೋಕಿನಲ್ಲಿ ದೊರೆತ ಶಾಸನದಲ್ಲಿ ಈ ಊರಿನ ಉಲ್ಲೇಖ; This place is referred in the inscription of Shimoga district, Soraba taluk;
- ಮಹಾವಿಷ್ಣು ಮಧು–ಕೈಟಭರಲ್ಲಿ ಕೈಟಭನನ್ನು ಈ ಊರಿನಲ್ಲಿ ಸಂಹಾರ ಮಾಡಿ ಪಾಪ ಪರಿಹಾರಾರ್ಥವಾಗಿ ಕೈಟಭೇಶ್ವರ ಎಂಬ ಶಿವ ದೇವಾಲಯವನ್ನು ನಿರ್ಮಿಸಿದ ಸ್ಥಳಪುರಾಣವಿದೆ; Madu-Kyṭaba; among these two, Kyṭaba was killed by Maha Vishnu; the redressal of sin Kyṭabeswara Shiva temple was built; this is in the local legend;
- ಈ ಊರಿನಲ್ಲಿ ಕ್ರಿ.ಶ.ಸು.೧೦ನೆಯ ಶತಮಾನದ ಕೈಟಭೇಶ್ವರ ದೇವಾಲಯವಿದೆ; Kyṭabeswara temple of 10th AD is in this village;
- ಇದು ಕಾಳಾಮುಖರ ನೆಲೆಯಾಗಿತ್ತು; ಎಕ್ಕೋಟಿ ಮುನೀಂದ್ರರು ಇಲ್ಲಿದ್ದರೆಂಬ ಐತಿಹ್ಯಗಳಿವೆ; It was the settlement of Kaḷamukha; a historical legend tells Ekkoṭi Munindra was lived here;
- ಅಂದರೆ ಕಾಳಾಮುಖ ಸನ್ಯಾಸಿಗಳು ಇಲ್ಲಿದ್ದರಿಂದಲೇ ಕೋಟಿಪುರ ಹೆಸರು ಬಂದಿದೆ. It means Kaḷa-mukha sages lived in this place, so the place was named Koṭipura.

(E.C VIII- ರೈಸ್ ಸಂಪುಟ; ಶಿ.ಜಿ.)

ಕೋಟಿಹಳ್ಳಿ kōṭihaḷḷi :

- ಚಿಕ್ಕಮಗಳೂರು ಜಿಲ್ಲೆಯ ಕೋಡವಳ್ಳಿ ಪ್ರದೇಶದಲ್ಲಿ ದೊರೆತ ಕ್ರಿ.ಶ.೧೨೫೯ರ ೧೫೯ನೇ ಹೊಯ್ಸಳ ವೀರಬಲ್ಲಾಳನ ಶಾಸನದಲ್ಲಿ 'ಕೋಟಿಹಳ್ಳಿ' ಸ್ಥಳನಾಮದ ಉಲ್ಲೇಖವಿದೆ; Koṭihaḷḷi name

referred in the 139th inscription of 1229AD; it was found in Koḍavaḷḷi area of Chikkamagaluru district;

- 'ಕೋಟಿಹಳ್ಳಿ' ಎಂಬುದು ವ್ಯಕ್ತಿವಾಚಕ ಸ್ಥಳನಾಮಾಗಿದ್ದು, ಇದೇ ಸಂಪುಟದಲ್ಲಿ ಬರುವ ಕೋಟಿನಾಥ, ಕೋಟಿಯಾ, ಕೋಟಿಯಪ ಸೇನಬೋವ, ಕೋಟಿಗವುಂಡ ಮೊದಲಾದ ವ್ಯಕ್ತಿಗಳ ಉಲ್ಲೇಖಗಳಿವೆ;
- ಈ ವ್ಯಕ್ತಿಯ ಹೆಸರಿನಿಂದ ಈ ಸ್ಥಳನಾಮ ನಿಷ್ಪತ್ತಿಯಾಗಿರುವಂತೆ ತೋರುತ್ತದೆ.

(E.C- ೧೧; ಚಿಕ್ಕ.ಜಿ.)

ಕೋಟು Kōṭu:

- ಪುರುಷರು ಧರಿಸುವ ಒಂದು ಮೇಲು ಉಡುಪು; Coat(ಇಂ); Male wearing dress;
- ಸರ್ಕಾರ, ಸಹಕಾರ ಹಾಗೂ ಖಾಸಗೀವಲಯದ ಪ್ರತಿಷ್ಠಿತ ಹುದ್ದೆಯಲ್ಲಿರುವ ನೌಕರರು-ಅಧಿಕಾರಿಗಳು, ಉದ್ದಿಮೆದಾರರು, ಸಿರಿವಂತರು ಧರಿಸುವ ವಿಶೇಷ ಉಡುಪು; This dress i.e. worn by the officials of Government, co-operative and private prestigious positions and business man, rich people;
- ಸಾಮಾನ್ಯ ಉಡುಪಿಗಿಂತ ಮಂದ ಬಟ್ಟೆಯ, ದುಬಾರಿ ಬೆಲೆಯ, ದುಬಾರಿ ಹೊಲಿಗೆಯ ಉಡುಪು; ಹತ್ತಿ, ಟೆರಿಕಾಟ್, ಟೆರಿಲಿನ್ ನೂಲಿನಿಂದ ತಯಾರಿಸಿದ ಬಟ್ಟೆಯನ್ನು ಕೊಟು ಹೊಲಿಯಲು ಬಳಸುವುದು ಸಾಮಾನ್ಯ; ಹೊಲಿಗೆಯ ರೀತಿ, ಒಳಹೊರ ಜೇಬುಗಳ ಅಳವಡಿಕೆ, ಕೊರಳ ಪಟ್ಟಿ ಎಲ್ಲವೂ ವಿಶೇಷವಾಗಿಯೇ ಇರುತ್ತವೆ; ಒಳಮೈಗೆ ನುಣ್ಣನೆಯ ರೇಷ್ಮೆ ಬಟ್ಟೆಯನ್ನು ಕೋಟಿನಗಲಕ್ಕೂ ಹೊಂದಿಸಿ ಹೊಲಿದಿರುತ್ತಾರೆ; ತುಂಬುದೋಳಿನ ಗಂಭೀರ ಆಕರ್ಷಣೆಯ ಪೋಷಾಕು; ಸ್ವಲ್ಪ ಅಗಲವೇ ಎನ್ನಿಸುವ ದಪ್ಪ ಗಾತ್ರದ ಗುಂಡಿಗಳನ್ನು ಹಾಕಿರುತ್ತಾರೆ; It is thicker than the common cloth, costly, costly stitch; to stitch coat use cotton, terricot, terilin cloth is common; style of stitch, pockets, collar is stitched specially in special places; the silky soft cloth use to inner part of the coat; it is an attractive full arm dress; the buttons are some how big to look;
- ಇಸ್ತ್ರಿ ಮಾಡಿಸಿಯೇ ಕೊಟನ್ನು ಧರಿಸುವುದು ಸಾಮಾನ್ಯ; ಆದುದರಿಂದ ಒಂದು ನಾಜೂಕಿನ ಹೊಳಪು ಕೋಟಿಗೆ ಇರುತ್ತದೆ; ಸುಗಂಧದ್ರವ್ಯಗಳ ಪ್ರೋಕ್ಷಣೆಯಾದರಂತೂ ಕೋಟಿನ ಆಕರ್ಷಣೆಗೊಂದು ಗರಿ ಮೂಡಿದಂತೆಯೇ; ಪ್ರತಿಷ್ಠೆ, ಅಧಿಕಾರ, ಸಿರಿವಂತಿಕೆ, ಸ್ಥಾನ-ಮಾನದ ಸೂಚಕವಾದಂತೆ 'ಕೋಟು' ಒಂದು ಬಗೆಯ ದಿಮಾಕಿನ, ಡಂಬಾಚಾರದ, ದೌಲತ್ತಿನ ಸೂಚಕವಾಗುವುದೂ ಉಂಟು; Coat should be iron before wear is common; so it has a special shine to coat; if it spray the perfume it has a special attraction; it is a sign of pride, power, richness and the dignity of the place; it has a kind of hautiness ostentation, opulence;
- ನಿಕ್ಕರು ಬನಿಯನ್ನು ಮೊದಲಾದ ಒಳ ಉಡುಪು ಧರಿಸಿ, ಅಂಗಿತೊಟ್ಟು, ಸೊಂಟದಿಂದ ಕೆಳಕ್ಕೆ ಪ್ಯಾಂಟನ್ನೊ, ಪಂಚೆಯನ್ನೋ, ಪೈಜಾಮವನ್ನೋ ಉಟ್ಟು-ತೊಟ್ಟು ಇಷ್ಟರ ಮೇಲೆ ಮೇಲು ಉಡುಪಾಗಿ ಕೋಟು ತೊಡುವುದು ರೂಢಿ; ಆಮೇಲೆ ತಲೆಗೆ ಪೇಟ ಇಟ್ಟು, ಕೈಯಲ್ಲಿ ಛತ್ರಿ ಹಿಡಿದು, ಕಣ್ಣಿಗೆ ಚಾಳೀಸು ಏರಿಸಿ, ಕಾಲಿಗೆ ಬೂಟನ್ನೋ ಗಿರ್ಕಿ ಚಪ್ಪಲಿಯನ್ನೊ ಮೆಟ್ಟಿ ಹೊರಟರೆಂದರೆ, ಯಾರೋ ದೊಡ್ಡ ಸಾಹೇಬರು/ಸಾಹುಕಾರರು ದೊಡ್ಡ ಕಚೇರಿಗೆ, ಮದುವೆ ಮೊದಲಾದ ಉತ್ಸವಕ್ಕೆ, ಏನಿಲ್ಲವೆಂದರೂ ತಮ್ಮ ಲೇವಾದೇವಿ ವ್ಯವಹಾರಕ್ಕೆ ಹೋಗುತ್ತಿದ್ದಾರೆಂದೇ ಭಾವನೆ; Wear nikkar, banian as inner cloth; a shirt on it; a pant or pyjama around the waist, as a lower dress, upon these wear coat as a upper dress is a practice;
- ವಿದ್ಯಾವಂತರಿದ್ದು ದೊಡ್ಡ ಹುದ್ದೆಯಲ್ಲಿರುವವರು, ಸಾಹುಕಾರರು, ಪ್ರತಿಷ್ಠಿತ ಸ್ಥಾನಮಾನದಲ್ಲಿ ಇರುವವರು ಕೋಟು ಧರಿಸುವ ವಾಡಿಕೆ ಇದೆ; ಸಾಮಾನ್ಯ ಜನ ಕೋಟು ಧರಿಸುವ ತಂಟೆಗೆ ಹೋಗದಿರುವುದೇ ಹೆಚ್ಚು; ಆದರೂ ಇಂಥವರು ಕೆಲವರ ಮನೆಯಲ್ಲಿರುವ ಹಳೆಯ ಪೆಟ್ಟಿಗೆ ಅಥವಾ

ಸಂದೂಕ ಅಥವಾ ಟ್ರಂಕನ್ನು ತೆಗೆದರೆ ಮಡಿಸಿ ಇಟ್ಟ ಒಂದು ಕೋಟು ಸಿಕ್ಕೀತು; ಮದುವೆಯಲ್ಲಿ ಮಾವ (ಹೆಂಡತಿಯ ತಂದೆ) ಹೊಲಿಸಿಕೊಟ್ಟಿದ್ದು; ಮದುವೆಯ ದಿಬ್ಬಣದ ಉಡುಗೊರೆಯಾಗಿ ಅಳಿಯನಿಗೆ ಕೋಟನ್ನು ಹೊಲಿಸಿಕೊಡುವ ಪದ್ಧತಿ ಇತ್ತು; Educated officers in high positions, rich, people in prestigious places wear coat is a habit or practice; common people cannot wear coats generally; but, some people have coat, it was stitched at the time of marriage by the father-in-laws or of their own; it was for the marriage procession; those coats kept in the trunk or almirah's without wearing for a long time;

- ಸಾಮಾನ್ಯರಿಗೆ ಕೋಟು ಧರಿಸುವ ವಿಶೇಷ ಸಂದರ್ಭಗಳು ಒದಗುವುದು ವಿರಳ; ಸಿಕ್ಕ ಸಂದರ್ಭದಲ್ಲೂ ಯಾವಾಗಲೋ ಒಮ್ಮೆ ಕೋಟು ಧರಿಸಿ ಆಡಂಬರ ಮೆರೆಯಲು ಅವರಿಗೆ ನಾಚಿಕೆ, ಸಂಕೋಚ, ಒಂದು ಬಗೆಯ ಇರುಸುಮುರುಸು; ವರ್ಗ ವೈಷಮ್ಯದ ಸಮಾಜ ಕೊಟ್ಟ ಕೀಳರಿಮೆಯ ಕಾಟ ಅವರಿಗೆ; ನಿತ್ಯ ಕೋಟು ಧರಿಸುವ ಟಾಕುಟೀಕಿನವರೂ ಮೇಲರಿಮೆಯ ತೋರಿಕೆಯವರೂ ಇದ್ದಾರೆ; Common man has rare circumstance to wear coat; if they are in that circumstance they are shy to show-off ostentation; class enimity, social inferiority made them to be shy and irritative to wear the coats; the people wear coat everyday feel as it is a mark of superiority and also showy;
- ಕೋಟು ಮೂಲತಃ ವಿದೇಶಿ ಉಡುಪು; ಪಾಶ್ಚಾತ್ಯ ಸಂಸ್ಕೃತಿಯ ಆಗಮನ, ತೋರಿದ ಆಕರ್ಷಣೆ, ಬೀರಿದ ಪ್ರಭಾವದ ಫಲ; ಅನ್ಯ ಸಂಸ್ಕೃತಿಯ ಪ್ರಭಾವಕ್ಕೆ ಒಳಪಟ್ಟು ಅಲ್ಲಿನ ವಸ್ತುಗಳನ್ನು ಸ್ವೀಕರಿಸಿದ್ದಾದರೆ ಆ ವಸ್ತುಗಳನ್ನು ಹೆಸರಿಸುವ ಪದಗಳೂ ಕೆಲವೊಮ್ಮೆ ಸ್ವೀಕರಣಗೊಳ್ಳುತ್ತವೆ; ಹಾಗೆ ಸ್ವೀಕರಣಗೊಂಡ ಇಂಗ್ಲಿಷ್‌ನ Coat(ಕೋಟ್) ಪದ ಕನ್ನಡಕ್ಕೆ ಹೊಂದಿಕೊಳ್ಳುವಾಗ ಸ್ವರಾಂತವಾಗಿ 'ಕೋಟು' ಆಗಿದೆ; ಕೋಟ್>ಕೋಟು; Coat is originally foreign dress; through this the western culture appear in india; because of its attraction, people accepted the things and names, the names are to be in the form of local dialect; the word coat became `cotu or kotu';
- ಇಸ್ಪೀಟು ಆಟದ ಒಂದು ಬಗೆ; ಕೋಟ್‌ಆಟ (ನೋಡಿ); A kind of play in play cards;
- ***—ಕೋಟುಗಸ್ತಿ*** : ಗುಪ್ತವಾಗಿ ಗಸ್ತು ತಿರುಗುವುದು; ವೇಷ ಬದಲಿಸಿಕೊಂಡು ರಾತ್ರಿಹೊತ್ತಿನಲ್ಲಿ ಗುಟ್ಟಾಗಿ ತಿರುಗಾಡುವುದು; ಗುಪ್ತವಾಗಿ ಸಂಚರಿಸುವದು; Secret patrol; patrolling in the night in a guise; travel secretly;
- ***—ವೇಸ್ಟ್‌ಕೋಟು*** : ಕೋಟು ಎಂಬ ಮೇಲಂಗಿಯ ಒಳಗೆ ಧರಿಸುವ ಇನ್ನೊಂದು ಮೇಲಂಗಿ; ತೋಳಿಲ್ಲದ ಸ್ವೆಟರಿನಂತೆ ಅಥವಾ ನೆಟ್ ಬನಿಯನ್ನಿನಂತೆ ಇರುತ್ತದೆ; ಮುಂಬದಿಯಲ್ಲಿ ಕೋಟಿನ ಬಣ್ಣದ್ದೆ ತೆಳು ಬಟ್ಟೆ ಹಾಗೂ ಹಿಂಬದಿಗೆ ಅದರ ಲೈಟ್‌ಕಲ್ಲರ್‌ನ ರೇಷ್ಮೆ ಬಟ್ಟೆ ಕೂಡಿಸಿ ಹೊಲೆದಿರುತ್ತಾರೆ; ಬೆಲೆಬಾಳುವ ಬಟ್ಟೆ; ಹೊಳಪುಳ್ಳ ಆಕರ್ಷಣೆ; ತೊಟ್ಟ ಸಾಹೇಬರು/ಸಿರಿವಂತರು ಕೋಟು ತೆಗೆದು ಗುಟಕ್ಕೆ ತಗುಲಿಸಿ ವೇಸ್ಟ್‌ಕೋಟಿನಲ್ಲಿ ತಮ್ಮ ಟಾಕು ಟೀಕನ್ನು ಪ್ರದರ್ಶಿಸುತ್ತಾರೆ; A sleeveless inner coat wear like sweater and banian; the front part is a colour of coat cloth and back portion is stitched with light coloured silk cloth; it is costly and shining; the officers and wealthy persons put-off the coat and hang to a nail, and exhibit their spruceness in the waist coat;
- ***—ವ್ಯಾಸಕೋಟು*** : ಮೋಡಿಕಾರರು ಧರಿಸುವ ಒಂದು ಬಗೆಯ ಕೋಟು; ತಲೆಗೆ ಪೇಟ ಸುತ್ತಿ, ಮೈಗೆ 'ವ್ಯಾಸಕೋಟು' ತೊಟ್ಟು, ನಡುಕಟ್ಟು ಕಟ್ಟುತ್ತಾರೆ; ಕಾಲಿಗೆ ಗಗ್ಗರ ಧರಿಸಿ ಅದರ ಕರ್ಕಶ ಧ್ವನಿಯೊಡನೆ ಕುಣಿಯುತ್ತ ವೀರಾವೇಶದಿಂದ ಎದುರಾಳಿಯನ್ನು ಪಂಥಕ್ಕೆ ಆಹ್ವಾನಿಸಿ ತಮ್ಮ ಮೋಡಿವಿದ್ಯೆಯನ್ನು ಪ್ರದರ್ಶಿಸುವ ಇವರು, ಜನರಲ್ಲಿ ಬೆರಗು ಮೂಡಿಸುವಲ್ಲಿ ನಿಷ್ಣಾತರಾಗಿರುತ್ತಾರೆ;

ಕೋಟೆ

ಇವರನ್ನು 'ಮೋಡಿವೀರ'ರು ಎಂತಲೂ ಎನ್ನುತ್ತಾರೆ(ಕ.ವಿ.ವಿ., ಜಾ.ಸಂ.) ಈ 'ವ್ಯಾಸಕೋಟು' 'ವೇಸ್ಟ್‌ಕೋಟ್'ನ ರೂಪಾಂತರ ಇರಬಹುದೆ? A kind of coat worn by the magicians; wear waist coat; tie the waist; put on the `gaggara' to foot; dancing with harsh sound invite the opponent, exhibit their magic knowledge; they are experts in create astonish in the people; they are called as `Modiveera'; may be this `Vyasakotu' is change form of waist coat.

ಕೋಟೆ Kōṭe:

- ಊರು, ಅರಮನೆ, ಪಟ್ಟಣದ ರಕ್ಷಣೆಗೆ ಅವುಗಳ ಸುತ್ತಲೂ ಕಟ್ಟುವ ಎತ್ತರವಾದ ಮತ್ತು ಬಲಿಷ್ಠವಾದ ಗೋಡೆ; ಕಲ್ಲು ಮಣ್ಣು ಇಟ್ಟಿಗೆ ಮತ್ತು ಗಾರೆ ಬಳಸಿ ಕಟ್ಟಿದ ದಪ್ಪ ಮತ್ತು ಎತ್ತರದ ಗೋಡೆ; A wall around the village, palace, town; it is in height and strong, built with stone, soil, bricks and concret;
- ಸುತ್ತುವರಿದ ಭದ್ರ ಗೋಡೆಯ ಆವರಣ; ಕಿಲ್ಲೆ; ದುರ್ಗ; ಪುರ ಪ್ರಾಕಾರ; Surrounded strong wall campus; fort; fort on a hill; surrounding wall of a village or town;
- ಸೇನೆಯ ರಕ್ಷಣೆ; ಸಂಪತ್ತಿನ ರಕ್ಷಣೆ; ಅಧಿಕಾರದ ರಕ್ಷಣೆ; ರಾಜ, ಅವನ ಕುಟುಂಬ ಮತ್ತು ಪರಿವಾರದ ರಕ್ಷಣೆ ಕೋಟೆಯ ಉದ್ದೇಶ; ಕೋಟೆ, ಕೋಟೆಯೊಳಗಿನ ಜನ, ಸಂಪತ್ತು, ಜೀವನ ಕ್ರಮ ಜನಪದರಿಗೆ ಅಸಾಮಾನ್ಯವಾಗಿ ಕಾಣುವುದರಲ್ಲಿ ಆಶ್ಚರ್ಯವಿಲ್ಲ; ಅಂತಲೆ ಅವರು ಹೇಳುವ ಕಥನಗೀತೆ, ಕಥೆ, ಗಾದೆ, ಒಗಟು ಮೊದಲಾದವುಗಳಲ್ಲಿ ಕೋಟೆ ಒಂದು ಆಶಯವಾಗಿ, ಐತಿಹ್ಯವಾಗಿ ಪ್ರಸ್ತಾಪಗೊಳ್ಳುತ್ತದೆ; The intention of the fort is to protect the army, wealth, power, king, his family and the relation; the fort and its people, wealth, lifestyle are generally extra ordinary and no wonder to the folk people; so, their story telling songs, story, proverb, riddle etc; fort is referred as an intents and legend in folk romantic stories;
- ಏಳು ಸಮುದ್ರ, ಅದರ ನಡುವೆ ಏಳು ಸುತ್ತಿನ ಕೋಟೆ, ಕೋಟೆಯೊಳಗೆ ಚಿನ್ನದ ಗೋಪುರದ ಅರಮನೆ, ಅರಮನೆಯೊಳಗೆ ರಾಜಕುಮಾರಿ, ಆ ರಾಜಕುಮಾರಿಯನ್ನು ಹುಡುಕಿಕೊಂಡು ಹಾರುವ ಕುದುರೆ ಏರಿಕೊಂಡು ಹೋಗುವ ರಾಜಕುಮಾರ ಅಥವಾ ಕಥಾನಾಯಕ–ಜನಪದ ರಮ್ಯಕಥೆಗಳಲ್ಲಿ ಇಂತಹ ಚಿತ್ರ ಬಹು ಸಾಮಾನ್ಯ; Seven seas; in the middle of it seven round fort, in the fort golden towered palace, a princes in the palace, in search of this princess a prince or hero of the story riding on a magic horse are all very common;
- ಕೋಟೆಯ ಪ್ರಾಕಾರದ ಮೇಲೆ ಗಸ್ತು ತಿರುಗುವ, ಅಲ್ಲಲ್ಲಿ ನಿರ್ಮಿಸಿದ ಬುರುಜುಗಳಲ್ಲಿ ನಿಂತು ಸುತ್ತಲೂ ವೀಕ್ಷಿಸುವ ಕಾವಲು ಸೈನಿಕರು, ರಾತ್ರಿ ಹೊತ್ತು ಆಯಕಟ್ಟಿನ ಜಾಗದಲ್ಲಿ ಉರಿಸುವ ದೊಡ್ಡ ಪಂಜುಗಳು/ದೊಂದಿಗಳು, ಶತ್ರುವಿನ ಆಗಮನ ಕಾಲದಲ್ಲಿ ಅಥವಾ ಯುದ್ಧ ಘೋಷಣೆಯ ಸಂದರ್ಭದಲ್ಲಿ ಸೈನಿಕರ ಸಿದ್ಧತೆಗೆ, ಜಾಗರೂಕತೆಗೆ, ಅಪಾಯದ ಸೂಚನೆಗೆ, ಊದುವ ಕೊಂಬು, ಕಹಳೆ, ಬಾರಿಸುವ ನಗಾರಿ, ಕೋಟೆಯ ಸುತ್ತ ಹೊರಬದಿಯಲ್ಲಿ ತೋಡಿರುವ ಕಂದಕ, ಅದರೊಳಗಿನ ನೀರು, ನೀರಿನಲ್ಲಿ ಸಾಕುವ ಮೊಸಳೆ ಹಾವು ಮೊದಲಾದ ವಿಷಕಾರಿ ಜಂತುಗಳು, ಕೋಟೆಯನ್ನು ಭೇದಿಸಲು ಹೂಡುವ ಉಪಾಯಗಳು, ಕೋಟೆಯೊಳಗಿನ ರಾಜಬೀದಿ–ಸೋಮಬೀದಿಯ ಪರಿಕಲ್ಪನೆಗೆ ಅನುಗುಣವಾಗಿ ಕೋಟೆಗೆ ಇಡುವ ದೊಡ್ಡ ಪ್ರವೇಶದ್ವಾರಗಳು, ಅವುಗಳಿಗೆ ಅಳವಡಿಸುವ ಮರದ/ಕಂಚಿನ ದೊಡ್ಡ ಬಾಗಿಲುಗಳು, ಆ ಬಾಗಿಲುಗಳನ್ನು ತೆರೆಯುವ ಮುಚ್ಚುವ ಸಮಯ, ವಿಧಾನ–ಇವೆಲ್ಲವೂ ಕೋಟೆಯ ಆಕರ್ಷಣೆಗೆ ಕೋಟೆಯ ಬಗೆಗಿನ ಕಲ್ಪಕತೆಗೆ ಪ್ರೇರಣೆಯ ಸಂಗತಿಗಳೇ ಆಗಿವೆ; The following are the inspiration to the image of fort; in regarding the attraction of it they are;
- ಪರ ಊರಿಗೆ ಮದುವೆಯಾಗಿ ಹೋದ ಹೆಣ್ಣುಮಗಳು ತನ್ನ ತವರೂರಿನ ಕೋಟೆ ಬಾಗಿಲನ್ನು ಮುಚ್ಚುವಾಗ ತೆಗೆಯುವಾಗ ಉಂಟಾಗುವ ಧಣೀರ್

ಧಣೀರ್ ಶಬ್ದ ಕೇಳಿ ದಿನವೂ 'ನಮ್ಮಪ್ಪನೂರಿನ ಕೋಟೆ ಬಾಗಿಲು ತೆಗೀತು/ನಮ್ಮಪ್ಪನೂರಿನ ಕೋಟೆ ಬಾಗಿಲು ಮುಚ್ಚಿತು ಎನ್ನುತ್ತಿದ್ದಳಂತೆ; ಅದನ್ನು ಕೇಳಿ ಕೇಳಿ ರೋಸಿಹೋದ ಗಂಡನ ಮನೆಯವರು 'ದಿನಾ ಹಿಂಗಂತೀಲ, ಅದೇನು ನಿಮ್ಮಪ್ಪನೂರಿನವರು ಅಷ್ಟು ದೊಡ್ಡೋರೊ' ಎಂದು ಕೆಣಕುತ್ತಾರೆ; ಆಗ ಆ ಹೆಣ್ಣುಮಗಳು ಸಿಕ್ಕಿದ್ದೇ ಸಮಯವೆಂದು ತನ್ನ ತೌರೂರಿನ ಹೆಚ್ಚುಗಾರಿಕೆಯನ್ನು ಆಡಿ ಹೊಗಳುತ್ತಾಳೆ; ಅದನ್ನು ಕೇಳಿದ ಗಂಡನ ಮನೆಯವರು, ಅವನೂರಿನವರು ಆ ಹೆಣ್ಣುಮಗಳ ತೌರಿನವರ ಮೇಲೆ ಸ್ಪರ್ಧೆಗೆ ಇಳಿಯುತ್ತಾರೆ(ಸ್ಪರ್ಧೆ–ಬಾಯಿಲ್ಲದ/ ಎಲುಬಿನ ಕುಡುಗೋಲಿನಲ್ಲಿ ರಾಗಿಯ/ಜೋಳದ ಹೊಲ ಕೊಯ್ಯುವುದು ಮೊದಲಾದುವು); ಸ್ಪರ್ಧೆಯಲ್ಲಿ ಗಂಡನ ಊರಿನವರಿಗೇ ಸೋಲಾಗುತ್ತದೆ; ಸೋಲಿನಿಂದ ಅವಮಾನಿತರಾದವರು 'ಇನ್ನು ಮುಂದೆ ನಮ್ಮೂರಿಗೂ ನಿಮ್ಮೂರಿಗೂ ತರುವುದು ಕೊಡುವುದು ಇಲ್ಲ' ಎಂದು ಶಪಥ ಮಾಡುತ್ತಾರೆ– ಇಂಥವೇ ಕತೆಗಳು, ಐತಿಹ್ಯಗಳು ಕೋಟೆ ಸಂಬಂಧವಾಗಿ ಜನಪದರಲ್ಲಿವೆ; ಇಲ್ಲಿ 'ಕೋಟೆ' ಮನುಷ್ಯ ಸಂಬಂಧದ ಮಮಕಾರಕ್ಕೆ ಪ್ರತೀಕವಾಗುವಂತೆ, ದ್ವೇಷ ಹಾಗೂ ಮಾತ್ಸರ್ಯಕ್ಕೆ ಕಾರಣವಾಗುವುದು ವೇದ್ಯವಾಗುತ್ತದೆ; The women married to other villages heard the sound of fort door, while opening and closing; they are telling the door of her father's village fort open, the door of her father village fort closed; the disgusted people of her husband's village provoke her ` Is your father's villagers are such a big people'; she make use the opportunity and say the speciality of her parents village; when heard the appreciation of her village they started to comepite; in the compitation the husbands side defeated; the defeated ashamed and made a vow that no marital giving and bringing of bride and grooms between the two villages; so such folk stories and legends are related to fort is available in folklore; the fort is the symbol of love and affection and also for enimity and hatred is understood here;

- ಕೋಟೆ ಅರಸೊತ್ತಿಗೆಯ/ಸಾಮ್ರಾಜ್ಯಶಾಹಿಯ, ಬಂಡವಾಳ ಶಾಹಿಯ ಪ್ರತೀಕ; ಊಳಿಗಮಾನ್ಯ ಅಥವಾ ಗುಲಾಮೀ ಪದ್ಧತಿಯ ಸೂಚಕವೂ ಹೌದು; ಕೋಟೆಯೊಳಗೆ ಸರ್ವಾಧಿಕಾರದ, ವರ್ತಕ ಶಾಹಿಯ, ಸಂಪತ್ತಿನ ಕೇಂದ್ರೀಕರಣವಿರುತ್ತದೆ; ಕೋಟೆಯ ನಿರ್ಮಾಣದಲ್ಲಿ ಒತ್ತೆಯಾಳುಗಳ ಶ್ರಮ ಬೆರೆತಿರುತ್ತದೆ; The fort is the reflection of kingship/monarchy, capitalist; it is the mark of feudal or slave system also; despotism, business manship, centralisation of wealth is in the fort; the labour of hostages is mixed infornt of building;
- ಕೋಟೆಯ ನಿರ್ಮಾಣಕ್ಕೆ ಸ್ವಾರ್ಥ, ಸ್ವಹಿತಾಸಕ್ತಿ, ಸ್ವಜನ ಹಾಗೂ ಸ್ವಪ್ರಾಣ ರಕ್ಷಣೆಯೇ ಮುಖ್ಯ ಪ್ರೇರಣೆ; ಇದಕ್ಕೆ ಧಕ್ಕೆ ಉಂಟುಮಾಡುವ ಪರಶಕ್ತಿಗಳ ಬಗೆಗಿನ ಎಚ್ಚರ ಅಥವಾ ಭಯ ಕಾರಣ; ಈ ಮಾನಸಿಕ ಶೈಥಿಲ್ಯ ಕೋಟೆಯ ನಿರ್ಮಾಣದಲ್ಲಿ ಕೆಲಸ ಮಾಡುವುದರಿಂದ ಕೋಟೆಯ ರಚನೆ/ ನಿರ್ಮಾಣ ಹಾಗೂ ಅದರ ರಕ್ಷಣೆಗೆ ಸಂಬಂಧಿಸಿದಂತೆ ಹಲವು ಮೌಢ್ಯ ಹಾಗೂ ಆಚರಣೆಗಳು ಹುಟ್ಟಿಕೊಂಡಿವೆ; ಕೋಟೆಯ ನಿರ್ಮಾಣದ ಸಂದರ್ಭದಲ್ಲಿ ನರಬಲಿ ಹಾಗೂ ಪ್ರಾಣಿಬಲಿ ಕೊಡುವುದು, ನರಬಲಿಗೆ ಗುರಿಯಾದ ಹೆಣ್ಣು/ಗಂಡಿನ ದೇಹವನ್ನು ಕೋಟೆಯೊಳಕ್ಕೆ ಸೇರಿಸುವುದು, 'ಕೋಟೆ ಮಾರಮ್ಮ' ಮೊದಲಾದ ದೇವಾಲಯಗಳನ್ನು ಬಲಿಯಾದವರ ಮರಣೋತ್ತರ ಶಕ್ತಿಯ ಕಲ್ಪನೆಯ ಭಯದಲ್ಲಿ ನಿರ್ಮಿಸಿ ವರ್ಷಂಪ್ರತಿ ಆಚರಣೆಗಳನ್ನು ಹುಟ್ಟುಹಾಕುವುದು ಇಂಥವೇ ವಿದ್ಯಮಾನಗಳೂ 'ಕೋಟೆ' ಸಂಬಂಧವಾಗಿ ನಡೆದಿವೆ; Selfish, self-centredness, kinsman and self life protection is the prime inspiration to build fort; external forces damage; the reason is the fear and care about the damage by the external forces; this psychological weakness works to the structure/creation of fort and to protect it some foolishness and practices are

started; human sacrifice animal sacrifice at the time of fort construction; the sacrificial bodies of male/female put into the fort construction; built a temple in the name of them, because of posthumous fear of the sacrificed, arrange yearly celebration; eg: Koṭemaramma like such happenings are in related to fort;

- ವಿಪತ್ತಿನ ಕಾಲದಲ್ಲಿ ಕೋಟೆ ಬಾಗಿಲುಗಳನ್ನು ಭದ್ರಪಡಿಸಿ ಒಳಗೆ ಸೇರಿಕೊಂಡಾಗ ನಿತ್ಯ ಬಳಕೆಯ ವಸ್ತುಗಳನ್ನು ಒಳಗೆ ತರಿಸಿಕೊಳ್ಳಲು, ಕೋಟೆಯೂ ರಕ್ಷಿಸದಾದಾಗ ತಪ್ಪಿಸಿಕೊಂಡು ಹೊರಹೋಗಲು ಕೋಟೆಗೆ ರಹಸ್ಯ ಬಾಗಿಲುಗಳನ್ನು, ಕಿಂಡಿಗಳನ್ನು, ಸುರಂಗ ಮಾರ್ಗಗಳನ್ನು ಇಟ್ಟುಕೊಳ್ಳುತ್ತಿದ್ದುದುಂಟು; ಈ ಗುಪ್ತ ದ್ವಾರಗಳು/ಮಾರ್ಗಗಳು ಗುಪ್ತ ಸಂಚಾರಕ್ಕೆ ಸಾಧನಾವಾದಂತೆ, ರಹಸ್ಯವನ್ನು ತಿಳಿದುಕೊಂಡ ಸಮಯ ಸಾಧಕರಿಗೆ ಶತ್ರುಗಳಿಗೆ 'ಕಳ್ಳಗಿಂಡಿ'ಗಳಾಗಿಯೂ ಬಳಕೆಯಾಗುತ್ತಿದ್ದವು; ಚಿತ್ರದುರ್ಗದ ಕೋಟೆಯ ಇಂತಹ ಕಿಂಡಿ ಕಾವಲುಗಾರ ಸೈನಿಕನ ಮಡದಿ ಓಬವ್ವನ ಸಾಹಸಕ್ಕೆ ಕಾರಣವಾಗಿ ಅವಳು 'ಒನಕೆ ಓಬವ್ವ'ಳಾದುದು, ಆ ಕಿಂಡಿ 'ಓಬ್ಬವ್ವನ ಕಿಂಡಿ'ಯಾದುದು ಇತಿಹಾಸದ ಒಂದು ವಿಶೇಷ; ರಹಸ್ಯ ಬಳಕೆಗೆ ಬಿಟ್ಟುಕೊಂಡ ಈ ಕಿಂಡಿ ಮೊಸರಿನವಳೊಬ್ಬಳ ಲೋಭದಿಂದ ಶತ್ರುಗಳಿಗೆ ತಿಳಿದು, ಒಳನುಸುಳಲು ಅವಕಾಶಕೊಟ್ಟು 'ಚಿತ್ರದುರ್ಗ' ಪಾಳೆಯಪಟ್ಟಿನ ವಿನಾಶಕ್ಕೆ ಕಾರಣವಾದುದು ಇತಿಹಾಸದ ವಿಪರ್ಯಾಸವೂ ಆಗಿದೆ;

  At the time of danger close the fort doors and settled inside the fort, to get daily needed things into the fort, if the fort has not given the protection to escape from the fort, the fort has secret doors, holes, tunnels are made; these secret ways are the aids to secret journey; these holes, doors are known by the enimies used as secret ways to enter into fort; a secret hole of Chitradurga fort is cause for the adventure of a soldier's wife `Onake Obavva' that hole is called `Obavvana Kinḍi' in the history; the secret of this hole exposed by a curd seller woman to the enimies; because of her greed; given an opportunity to enter into the fort of Chitradurga is cause for the distruction of the kingdom is an antipodes of the history;

- ಕೋಟೆ ಕುರಿತ ಕೆಲವು ಗಾದೆಗಳು:
  ೧. 'ಕೋಟೆಬಾಗಿಲು ತೀಟೆ ಪುಟ್ಟಿ';
  ೨. 'ಕೋಟೆಯ ದೇವರಿಗೆ ಓಟೆಯ ದೀಪ';
  ೩. 'ಕೋಟೆ ಹೋದ ಮೇಲೆ ಪಹರೆ ಕಾದರು';

ಒಂದು ಒಗಟು:

'ಕುಳ್ಳ ಕೋಟೆ ಒಳುಗ್ ಕೂತ್ಕಂದು
ಬಂದೋರ್ ಜೊತೇಲೆಲ್ಲ ಜಂಬ
ಹೊಡೀತಿದ್ನಂತೆ' (ಉತ್ತರ: ನಾಲಗೆ);

- 'ಊರೆಲ್ಲಾ ಕೊಳ್ಳೇ ಹೊದ್ಮೇಲೆ ಕೋಟೆ ಬಾಗ್ಲು ಮುಚ್ದಂಗೆ' ಎಂಬ ನಾಣ್ಣುಡಿ ಸಮಯ ಪ್ರಜ್ಞೆ ಇಲ್ಲದ ವರ್ತನೆಗಳಿಗೆ, ಕೃತ್ಯಗಳಿಗೆ ರೂಪಕವಾಗಿ ಪ್ರಚಲಿತವಿದೆ; `Oorella koḷḷe hodmale koṭe baglu muchdange' is a proverb; this is familiar in the mouth of folks, it means conciouslless behaviour and work;
- ಕೃಷ್ಣನ ಒಡ್ಡೋಲಗ(ಯ.ಪ.ಕೋ); Royal court of Krishna;
- ಸತ್ತವನನ್ನು ಸುಟ್ಟ ಬೂದಿಯ ಗುಡ್ಡೆ(ಸಮಾಧಿ/ದೂಪೆ)ಯ ಸುತ್ತ ಆತನ ಕುಟುಂಬಸ್ಥರು ಕಟ್ಟುವ ಬಿದಿರಿನ ಬೇಲಿ; ಗೌಡ ಸಮುದಾಯದಲ್ಲಿ ಈ ಕ್ರಮ ಇದೆ ಎಂದು ಹೇಳಲಾಗುತ್ತದೆ; A fence of bamboo made by the family members around the heap of ash which is burn of a dead person; this process is existed in Gowda community;
- ಒಂದು ಸೀಮೆಯ ಹೆಸರು(ಕನಿ); ಕೋಟೆಸೀಮೆ? It is the name of a region;
- ವ್ಯರೂ: ಕೋಂಟೆ; ಕ್ವಾಟೆ; ಕೋಟ್ಟೆ; ಕೊಟ್ಟ; ಕೋಟ್ಟ;
- ಜ್ಞಾಭಾ.ರೂ: ತ: ಕೋಟ್ಟೈ; ಕೋಟ್ಟ; ತೆ: ಕೋಟ; ಮ: ಕೋಟ್ಟ; ಕೋಟೆ; ತು: ಕೋಟೆ; ಕೊಡ; ಕೋಟೆ;
- *—ಆಳ್ಗೋಟೆಮಾರಿ* : ಹಾಳು ಕೋಟೆ ಮಾರಿ; ಕೋಟೆ ಕಾಲಾಂತರದಲ್ಲಿ ಪಾಳು ಬಿದ್ದರೂ ಕೋಟೆಮಾರಿಯ ಪೂಜೆ ಮುಂದುವರಿಯುತ್ತದೆ; ಮಾರಿ ಜನರ/ಜನಪದರ ದೇವತೆ; ಹಾಳುಕೋಟೆ>

ಹಾಳ್ಕೋಟೆ>ಆಳ್ಗೋಟೆ; ಹ್=Ø, ಕ್>ಗ್ ಪ್ರಕ್ರಿಯೆಗಳು ನಡೆದಿವೆ; Destroyed fort `mari'; even the fort destroyed the worship continues to koṭemari; Mari is the goddess of folk;

- ***—ಕೋಟೆ ಆಂಜನೇಯ*** : ಕೋಟೆಯ ಮುಖ್ಯ ದ್ವಾರದ ಎದುರು/ಬದಿಯಲ್ಲಿ ಸ್ಥಾಪಿಸಿರುವ ಆಂಜನೇಯ(=ಹನುಮಂತ) ದೇವರು; ಗರಡಿ ಮನೆಯ ಅಧಿದೈವವಾಗಿ, ಕೋಟೆಕೊತ್ತಲಗಳಲ್ಲಿ ಪೂಜಿಸುವ ದೈವವಾಗಿ ಸ್ಥಾಪಿಸಿದ ಹನುಮಂತರಾಯ/ಆಂಜನೇಯ ದೇವರು; ಆಂಜನೇಯನನ್ನು ಬ್ರಹ್ಮಚರ್ಯಕ್ಕೆ, ಚಾಂಚಲ್ಯ ನಿರೋಧಕ್ಕೆ, ಶೌರ್ಯ ಸಾಹಸಗಳಿಗೆ ಅಧಿದೈವವಾಗಿ ಕಲ್ಪಿಸಿ ಆರಾಧಿಸುವ ಸಾಂಪ್ರದಾಯಿಕ ಕ್ರಮಗಳಿವೆ; ಈ ಸಾಂಪ್ರದಾಯಿಕ ಆರಾಧನೆಗಾಗಿ ಕೋಟೆಯ ಸಮ್ಮುಖದಲ್ಲಿ ಸ್ಥಾಪಿಸಿಕೊಂಡ ಆಂಜನೇಯನೇ 'ಕೋಟೆ ಆಂಜನೇಯ'; The god Anjaneya erected before the main gate of the fort; he is the supreme god of wrestling house; worshipping god of forts is Hanumantharaya/Anjaneya god; some traditional formalities follow while worshipping Anjaneya imagined as the spiritual god for self control restraint of senses; for this traditional worship established Anjaneya infront of the fort is called `Koṭe Anjaneya';
- ***—ಕೋಟೆಕಾಳಗ*** : ಕೋಟೆ+ಕಾಳಗ; ಕೋಟೆಯ ಒಳಗೆ ಅಥವಾ ಕೋಟೆಯ ಹೊರಬದಿಯ ಸಮೀಪದಲ್ಲಿಯೇ ನಡೆಸುವ ಕಾಳಗ/ಯುದ್ಧ; ವ್ಯರೂ: ಕೋಟೆಗಾಳಗ(<ಕೋಟೆ+ಕಾಳಗ); ಕ>ಗ ವ್ಯತ್ಯಯ; War with in the fort or near the outside of the fort;
- ***—ಕೋಟೆಕೊತ್ತಲ*** : ಕೋಟೆ ಮತ್ತು ಕೋಟೆಯ ಮೇಲೆ ಅಲ್ಲಲ್ಲಿ ನಿರ್ಮ್ಮಿಸಿರುವ ಬುರುಜುಗಳು; ಕೊತ್ತಲ=ಬುರುಜು; The bastins built on the fort;
- ***—ಕೋಟೆಗಲ್ಲು*** : ಕೋಟೆ+ಕಲ್ಲು; ಕ>ಗ ವ್ಯತ್ಯಯ; ಕೋಟೆಯ ನಿರ್ಮಾಣಕ್ಕೆ ಬಳಸುವ ಕಲ್ಲು; ಕೋಟೆಗೋಡೆಯ ಕಲ್ಲು; The stones used to build fort; stones of fort wall;
- ***—ಕೋಟೆಗಸ್ತಿ*** : ಕೋಟೆಯ ಮೇಲೆ ತಿರುಗುವ ಕಾವಲಿನ ಗಸ್ತು; ಕೋಟೆಯ ಮೇಲೆ ಕಾವಲಿನ ಸೈನಿಕರು ಗಸ್ತು ತಿರುಗುವುದು; ಗಸ್ತು=ಕಾವಲು; ಪಹರೆ; Patrol on the fort; the soldiers patrolling on the fort to watch;
- ***—ಕೋಟೆಗಾವಲು*** : ಕೋಟೆ+ಕಾವಲು; ಕ>ಗ ವ್ಯತ್ಯಯ; ಕೋಟೆಯ ಮೇಲೂ, ಸುತ್ತಲೂ ನಡೆಸುವ ಕಾವಲು; The fort guarded on and around;
- ***—ಕೋಟೆಜಟ್ಟಿಗೆ*** : ತುಳುನಾಡಿನ ಭೂತಾರಾಧನೆಗೆ ಸಂಬಂಧಿಸಿದ ಒಂದು ದೈವ; ಭಟ್ಕಳದ ಹೊರವಲಯದಲ್ಲಿ ಇತ್ತೆಂದು ಹೇಳಲಾದ ಕೋಟೆಯನ್ನು ಜಟ್ಟಿಗನೆಂಬ ಭೂತದೈವ ರಕ್ಷಿಸುತ್ತಿದ್ದನೆಂದು ಪ್ರತೀತಿ; ಕೋಟೆಯನ್ನು ರಕ್ಷಿಸುತ್ತಿದ್ದ ಜಟ್ಟಿಗನಾದುದರಿಂದ 'ಕೋಟೆಜಟ್ಟಿಗೆ' (ತು); ಕೋಟೆ ಜಟ್ಟಿಗನನ್ನು ಪೂಜಿಸಿ ನಡೆದುಕೊಳ್ಳುವ ಭಕ್ತರಿದ್ದಾರೆ; **ನೋಡಿ:** ಕೋಗ್ತಿಜಾತ್ರೆ; A god related to Bootharadhane in Tulunadu; the fort was on the outskirt of Bhatkal, it was protected by Jaṭtiga boothadaiva; the worshippers of Koṭe Jaṭtiga are existed;
- ***—ಕೋಟೆತೆನೆ/–ಕೋಟೆದೆನೆ*** : ಕೋಟೆ+ತೆನೆ; ತ>ದ ವ್ಯತ್ಯಯ; ಕೋಟೆಯ ನೆತ್ತಿಯಲ್ಲಿ ರಚಿಸುವ ಒಂದು ಶಿಲ್ಪ ಮಾದರಿ; ಬುಗುರಿ/ತೆನೆ ಆಕಾರದಲ್ಲಿರುತ್ತದೆ; ವೀಕ್ಷಣೆಗೆ ಕಿಂಡಿ ಇರುತ್ತದೆ; A model of stone built on the tip of the fort; it is in the shape of top/ear of corn has a watch hole;
- ***—ಕೋಟೆಬಾಗಿಲು*** : ಕೋಟೆಗೆ ಅಳವಡಿಸಿದ ಬಾಗಿಲು; A fixed door to fort;
- ***—ಕೋಟೆಮನೆ*** : ಕೋಟೆಯಿಂದ ಸುತ್ತುವರಿದಿರುವ ಮನೆ; A house surrounded by the fort;
- ***—ಕೋಟೆಮಾನ್ಯ*** : ಕೋಟೆಯನ್ನು ರಕ್ಷಿಸುವವರಿಗೆ ಉಂಬಳಿ ಬಿಟ್ಟ ಭೂಮಿ; Land given as gift to the fort protector or watchman;
- ***—ಕೋಟೆಮಾರಮ್ಮ*** : ಕೋಟೆಯನ್ನು ರಕ್ಷಿಸುವ ಒಂದು ದೇವತೆ; ಮೈಸೂರು ಅರಮನೆಯ

ಕೋಟೆಯ ನೈರುತ್ಯ ಮೂಲೆಯಲ್ಲಿ ಕೋಟೆ ಮಾರಮ್ಮನ ದೇವಾಲಯವಿದೆ; ಕೋಟೆಯನ್ನು ಕಾಯುವ ದೇವತೆ ಎಂದು ನಂಬಲಾಗಿದೆ; ಮಂಗಳವಾರ, ಗುರುವಾರ ಪೂಜೆ ನಡೆಯುತ್ತದೆ; ಅಮ್ಮ(ಸಿಡುಬು/ಮೈಲಿ) ಆದವರು ಎಳನೀರು, ಬೇವಿನಸೊಪ್ಪು, ಮೊಸರನ್ನದ ತಳಿಗೆ ಮಾಡಿ ತಂಪು ತೋರಿಸುತ್ತಾರೆ; ಒಂದು ಶಕ್ತಿದೇವತೆ ಎನ್ನಬಹುದು; A goddess who protect the fort; the temple of Koṭemaramma is in the southwest of Mysore palace; believe that goddess watch the fort; offering poojas on Tuesday and Thursday; those who are suffering by smallpox offer tender coconut, neem leaves, curd rice etc for pooja to the goddess; it is called as power goddess;

- —***ಕೋಟೆಯಮ್ಮ*** : ಒಬ್ಬಾತನ ಹೆಸರು; ಕೋಟೆ+ಅಮ್ಮ (=ಅಪ್ಪ, ಒಡೆಯ); ಹಳಗನ್ನಡ ಮತ್ತು ಪೂರ್ವದ ಹಳಗನ್ನಡದಲ್ಲಿ 'ಅಮ್ಮ' ಪದ ಅಪ್ಪ/ತಂದೆ ಎಂಬ ಅರ್ಥದಲ್ಲಿ ಪುರುಷವಾಚಕವಾಗಿ ಬಳಕೆಯಾಗುತ್ತಿತ್ತು; ಉದಾ: 'ನಿನಗಮ್ಮನ್ ಅಹರ್ಪತಿ'(ಪಂ.ಭಾ); Name of a person; the word `Amma' used in the meaning of Appa/Tande(father) literally;
- —***ಕೋಟೆಯಾಟ*** : ಒಂದು ಆಚರಣೆ; ದೀಪಾವಳಿಯ ಶುದ್ಧ ಪಾಡ್ಯದಿಂದ ಏಳು ದಿವಸಗಳವರೆಗೆ ಆಚರಿಸುತಾರೆ; ಏಳುಸುತ್ತಿನ ಕೋಟೆಯನ್ನು ಮಣ್ಣಿನಿಂದ ರಚಿಸಿ ಅಂಗಡಿ ಬೀದಿ, ಅರಮನೆ, ಉದ್ಯಾನ ಮೊದಲಾದವುಗಳನ್ನು ನಿರ್ಮಿಸಿ ಅಲಂಕರಿಸಿ ಮದುವೆ ಆಟ ಆಡುತ್ತಾರೆ; ಮದುವೆಯ ಎಲ್ಲಾ ಶಾಸ್ತ್ರಗಳು ಇಲ್ಲಿಯೂ ಜರುಗುತ್ತವೆ; ಅನುಕರಣ ವಿಧಾನದ ವಿಶಿಷ್ಟ ಆಚರಣೆ ಇದು; ಇದರ ಪಳೆಯುಳಿಕೆ ಅಥವಾ ಮಕ್ಕಳ ಅನುಕರಣೆ ಎಂಬಂತೆ ಕೋಟೆಯಾಕಾರದ ಮುಂಗೈ ಗಾತ್ರದ ಸಣ್ಣ ಮಣ್ಣಿನ ದಿಬ್ಬ ರಚಿಸಿ ಅದರೊಳಗೆ ಚಿಕ್ಕ ಹುಡುಗ ಹುಡುಗಿಯನ್ನೇ ಹೆಣ್ಣು ಗಂಡಾಗಿ ಕೂರಿಸಿ ಅಥವಾ ಎರಡು ಕಲ್ಲುಗಳನ್ನು ಹೆಣ್ಣು ಗಂಡಿನ(ವಧು ವರರ) ಸಂಕೇತ ಮಾಡಿ ಮಕ್ಕಳೂ 'ಮದುವೆಯಾಟ' ಆಡುವುದು ಕಂಡುಬರುತ್ತದೆ; A celebration; it is celebrated on shuddha Paḍya for seven days of Diwali; built seven rounded fort market street, place, garden etc in mud and decorated them play, marriage play; all the rituals of the marriage celebrate here; this is an imitative way of special celebration; As fossil of it or the imitation of the children build a small mound of soil, small boy and girl sit in it as bride and groom or kept two small stones as a symbol of bride and groom, children play the marriage play is found;
- —***ಕೋಟೆರಾಯ*** : ಒಂದು ಹೆಸರು; ಕೋಟೆಯ ಒಡೆಯ, ಕೋಟೆ ಕಾಯುವ ವೀರ/ನಾಯಕ ಎಂದಾಗಬಹುದು; ಕೋಟೆ ದೇವರು, ಕೋಟೆ ಆಂಜನೇಯ ಎಂದೂ ಅರ್ಥೈಸಿಕೊಳ್ಳಬಹುದು; ಆಂಜನೇಯನಿಗೆ ಹನುಮಂತರಾಯ, ರಾಯ ಎಂಬ ಪ್ರಯೋಗಗಳಿವೆ; ಮಂಗಳೂರು, ಉಡುಪಿ ಜಿಲ್ಲೆಗಳಲ್ಲಿ ಪೂಜೆಗೊಳ್ಳುವ ಒಂದು ದೈವ (ಜ.ಆ.ರಂ); It is a name; the owner of the fort; may be the hero who watch the fort; god of fort; may be understood Koṭe Anjaneya; Anjaneya has the usages of Hanumantharaya, Raya; a god worshipped in Mangaluru, Udupi districts;
- —***ಕೋಟೇಶ್ವರ*** : ಕೋಟೆ+ಈಶ್ವರ; ಒಂದು ಊರಿನ ಹೆಸರು; ಬ್ರಾಹ್ಮಣರ ಒಂದು ಪಂಗಡ; ಆ ಪಂಗಡಕ್ಕೆ ಸೇರಿದ ವ್ಯಕ್ತಿ(ಕನಿ); Name of a village; a group of Brahmin; a person belongs to that group;
- —***ಕೋಟ್ಟವಳ*** : ಕೋಟ್ಟ(=ಕೋಟೆ)+–ವಳ; ಕೋಟೆಯವನು; ಕೋಟೆ ಕಾಯುವವನು; ಕೋಟೆ ಕಾವಲು ಕಾಯುವವನು; ಕೋಟ್ಟವಳ>ಕೊತವಾಲ ಆಗಿದೆಯೆ? ಕೋಟ್ಟವಳ > ಕೊತ್ತವಾಲ> ಕೊತ್ವಾಲ (ಕನಿ); ಕೋಟ್ಟಪಾಲ(ಪ್ರಾ)>ಕೋತ್ತಪಾಲ>ಕೊತವಾಲ ಆಗಿರುವ ಸಾಧ್ಯತೆಯೂ ಇದೆ; ಕೋಷ್ಠಪಾಲ(ಸಂ); Belongs to fort; watchman of the fort; a fort watching guard;
- 'ಕೋಟೆ' ಪದ ದೇಶೀಯವೋ ಅನ್ಯದೇಶ್ಯವೋ? ನಿರ್ಧಾರ ಸಂದಿಗ್ಧ; ಕೋಷ್ಠ(ಸಂ)>ಕೋಟ್ಟ(ಪ್ರಾ)>

ಕೋಟೆ(ಕ) ಎಂದು ನಿರೂಪಿಸಬಹುದಾದ ಸಾಧ್ಯತೆಯೂ ಇದೆ; ಕಿಟ್ಟೆಲ್ ಅನ್ಯದೇಶ್ಯದ ಗುಂಪಿಗೇ ಸೇರಿಸಿದ್ದಾರೆ. The word `koṭe' related as native or as foreign; the decision is complex; kittel decided and kept in foreign group.

ಕೋಟೆ kōṭe :

- ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೋಕಿನ ಕ್ರಿ.ಶ.೧೨೯೬ರ ೧೧ನೇ ಶಾಸನದಲ್ಲಿ ಇದರ ಉಲ್ಲೇಖ; It was referred in the inscription 11th of 1296AD, Shimogga district, Hosanagara taluk;
- ಹೊಯ್ಸಳ ಬಲ್ಲಾಳದೇವರಾಯನ ದಳವಾಯಿ ಮಾಯಿದೇವನ ಜೊತೆ ಮುತ್ತೂರಲ್ಲಿ ದೇವರಸನು ಕಾಳಗ ಮಾಡುವಾಗ ವೀರ ಬೇಲನು ಸ್ವರ್ಗಸ್ಥನಾದ ವಿಚಾರವನ್ನು ತಿಳಿಸುವ ವೀರಗಲ್ಲು ಇದು; This is the stone or inscription stone; while Devarasa was fought with the commander general of Hoysala Ballaḷa devaraya in Mutthooru, the hero Bela was martyred, the memory of his martyrdom shows on this stone;
- 'ಕೋಟೆ' ಎಂದರೆ ಸುತ್ತುಗೋಡೆಯಿರುವ ಎತ್ತರವಾದ ರಕ್ಷಣಾ ಆವರಣ; ಕಿಲ್ಲೆ; ದುರ್ಗ; 'ಸೀಮೆ' ಎಂಬ ಅರ್ಥವೂ ಇದೆ; `Koṭe' means a high place of enclosure for protection; the other meanings are Kille, Durga, Seeme;
- 'ಕೋಟೆ' ಇರುವ ಅನೇಕ ಊರುಗಳಿವೆ; ಪೂರ್ವಪದವಾಗಿ ಬೇರೇನೊ ಇರುವ ಸಾಧ್ಯತೆ ಇರುತ್ತದೆ; ಅದರೊಡನೆ 'ಕೋಟೆ' ಪದ ಸೇರಿಕೊಂಡು ಬಂದಿರುತ್ತದೆ; Many villages have fort; may be some other word join koṭe as prefix;
- ಆದರೆ ಇಲ್ಲಿ 'ಕೋಟೆ' ಎಂದೇ ಊರಿನ ಹೆಸರಿರುವುದು ವಿಶೇಷ; ಇಲ್ಲಿಯೂ ಬಳಕೆಯಲ್ಲಿದ್ದ ಪೂರ್ವಪದ ಬಿದ್ದು ಹೋಗಿರಬಹುದು. But have the name of the village is koṭe is special; may be the prefix which as in use or practice leftout.

(E.C- ೧೫; ಶಿ.ಜಿ.)

ಕೋಟೆಪುರ kōṭepura :

- ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೋಕಿನ ೧೬ನೇ ಶ.ದ ೩೯ನೇ ಶಾಸನದಲ್ಲಿ ಇದರ ಉಲ್ಲೇಖ; This is referred in 39th inscription of 16th AD, Shimogga district, Sagara taluk;
- ಕೆಳದಿಯ ಮಹತ್ತಿನ ಮಠಕ್ಕೆ ಕೊಟ್ಟಿರುವ ಕೊಡಿಗೆಯ ವಿವರವಿರುವ ಶಾಸನ; In this inscription this place was donated to Keladi Mahattina Maṭa, that description is in it;
- ಸಾಮಾನ್ಯವಾಗಿ ಯಾವುದಾದರೂ ಹೆಸರಿಗೆ 'ಕೋಟೆ' ಉತ್ತರ ಪದವಾಗಿ ಬರುವುದು ಸಾಮಾನ್ಯ; ಆದರೆ ಇಲ್ಲಿ 'ಕೋಟೆ'ಯೇ ಪ್ರಧಾನವಾಗಿ, ಅದಕ್ಕೆ 'ಪುರ' ಸೇರಿಕೊಂಡಿರುವುದು ವಿಶೇಷ; Generally the word `koṭe' fixed as suffix to any place or village but her the word 'koṭe' remained as main; the word `pura' join to it as suffix is special;
- 'ಕೋಟೆ' ಎಂಬುದಕ್ಕೆ ಎಲ್ಲೆ, ಗಡಿ, ಕೊನೆ ಎಂಬೆಲ್ಲ ಅರ್ಥಗಳಿವೆ; ಗಡಿಯ ಕಡೆಯಲ್ಲಿರುವ ಒಂದು ಹಳ್ಳಿ(ಪುರ) ಎಂಬುದಾಗಿ ಈ ಹೆಸರನ್ನು ತೆಗೆದುಕೊಳ್ಳಬಹುದು; The fort has other meanings such as boundary, border; a village in the border also consider;
- ಅಥವಾ ಸರಳವಾಗಿ 'ಕೋಟೆ'ಯಿರುವ 'ಪುರ' (ಊರು) ಎಂದು ತಿಳಿಯಬಹುದು. Simply it is called as `pura' or village.

(E.C- ೧೫; ಶಿ.ಜಿ.)

ಕೋಟೆಯ ಹಾಳು kōṭeya hāḷu :

- ಅರಸೀಕೆರೆಯಲ್ಲಿ ದೊರೆತಿರುವ ಕ್ರಿ.ಶ.೧೨೨೩ರ ಕಾಲಕ್ಕೆ ಸೇರಿದ ೪೬ನೇ ಶಾಸನದಲ್ಲಿ 'ಕೋಟೆ ಹಾಳು' ಪ್ರದೇಶದ ಉಲ್ಲೇಖವಿದೆ; The area Koṭehaḷu refered in 46th inscription of 1223AD in Arasikere;
- 'ಕೋಟೆಹಾಳು' ಎಂಬುದು ಶಾಸನದಲ್ಲಿ ಇರುವ ರೂಪ; ಬಳಕೆಯಲ್ಲಿ 'ಯ'ಕಾರ ತಂದು 'ಕೋಟೆಯ ಹಾಳು' ಎಂದು ಮಾಡಲಾಗಿದೆ;

- ಕೋಟೆಯಿಂದ ಸುತ್ತುವರಿದ ಪ್ರದೇಶವೆಂದು ಇದನ್ನು ಅರ್ಥೈಸಬಹುದೇನೊ. May be mean as an area surrounded by fort.

(E.C- ೧೦; ಹಾ.ಜಿ.)

ಕೋಟ್ರಿ ಉಂಡಿ kōṭri uṇḍi :

- ಒಂದು ತಿನಿಸು; ತಿನಿಸು/ತಿಂಡಿಗಾಗಿ ತಯಾರಿಸಿದ ಒಂದು ಬಗೆಯ ಉಂಡೆ; An eatable; a kind of spherical eatable;
- ಉಂಡೆ>ಉಂಡಿ; ಎ>ಇ ಸ್ವರ ವ್ಯತ್ಯಯ; ಪ್ರಾದೇಶಿಕ ಭಿನ್ನತೆ; 'ಉಂಡೆ' ದಕ್ಷಿಣ ಕರ್ನಾಟಕ; 'ಉಂಡಿ' ಉತ್ತರ ಕರ್ನಾಟಕದ ಬಳಕೆಯ ರೂಪ;
- ಬಾಬುರಿ ಕೊಬ್ಬರಿ ಹೆರೆದು(=ತುರಿದು), ಸಕ್ಕರೆ ಕರಗಿಸಿ ಎರಪಾಕ ತೆಗೆದು ಗೋಡಂಬಿ, ದೀಪದ್ರಾಕ್ಷಿ, ಏಲಕ್ಕಿಮಡಿ ಹಾಕಿ ಕಟ್ಟಿದ ಒಂದು ವಿಶೇಷ ತಿಂಡಿ (ಉ.ಕ.ಜಿ). A kind of special eatable made with grated coconut; diluted sugar ripeness, cashewnut, grape, cardamom, mix.

ಕೋಠಿ kōṭhi :

- ದೊಡ್ಡ ಹಾಯಿ ಹಡಗು; A big ship;
- ಪ್ರಶ್ನೆ; ಸವಾಲು; Question; challenge;
- ವಸ್ತುಗಳನ್ನು ಕೂಡಿಸಿ ಇಡುವ ಸ್ಥಳ; ಉಗ್ರಾಣ; *ಪ್ರ: 'ದೇವರ ಅಲಂಕಾರಕ್ಕೆ ಬೇಕಾದ ವಸ್ತುಗಳೆಲ್ಲವೂ ಕೋಠಿಯಲ್ಲಿವೆ'*; A place of gather the things; go down; storehouse;
- ರೇಷ್ಮೆಕೋಠಿ, ಬಿತ್ತನೆಕೋಠಿ ಮೊದಲಾದ ಪ್ರಯೋಗಗಳು ಕೃಷಿವಿಜ್ಞಾನ ಕ್ಷೇತ್ರದಲ್ಲಿ ಬಳಕೆಯಲ್ಲಿವೆ; ರೇಷ್ಮೆತಳೀ/ರೇಷ್ಮೆ ಮೊಟ್ಟೆ ಸಂಸ್ಕರಣಾ ಕೇಂದ್ರ ರೇಷ್ಮೆಕೋಠಿ, ಬಿತ್ತನೆ ಬೀಜಗಳ ಸಂಸ್ಕರಣಾ ಕೇಂದ್ರ ಬಿತ್ತನೆಕೋಠಿ; ಈ ಕೇಂದ್ರಗಳು ಆಯಾ ವಸ್ತುಗಳ ಮಾರಾಟ ಕೇಂದ್ರಗಳಾಗಿಯೂ ಕೆಲಸ ಮಾಡುತ್ತವೆ. In the agriculture science field the words Reshmekoṭi, Bittanekoṭi is in usage; silkbreed/silkeggs processing centre is called Reshmekoṭi; sowing seed processing centre is called Bittanekoṭi; these centres are working as selling centres of the products.

ಕೋಡ್‌ತೊರ್ಕೆ kōḍtorke :

- ಒಂದು ಜಾತಿಯ ಮೀನು; ಚಪ್ಪಟೆಯಾಗಿದ್ದು ಕೋಡು ಇರುವ ಮೀನು. A kind of fish; it is flat in shape and has horn.

ಕೋಡ kōḍa :

೧. ಕೋತಿ; ಕಪಿ; ಕೋಡಗ(ನೋಡಿ); Monkey;

೨. ಕೊಂಕು; ಬಾಗು; ವಕ್ರ; ಕೋಡು; Twist; bend crookedness; horn;

೩. ಬೇಸಗೆಯಲ್ಲಿ ಬೆಳೆಯುವ ಒಂದು ಧಾನ್ಯ; ಕಂಬು(ಕಲ.ಜಿ.,ಕೋ.ಜಿ); A corn; grows in summer season;

- ಕೊಂಬು/ಕೊಂಬಿನ ಜೋಳ/ಕೊಮ್ಮುನ್ ಜ್ವಾಳ ಎಂದು ಒಂದು ಬಗೆಯ ಜೋಳದ ಬೆಳಸು ಉಂಟು(ಮಂಡ್ಯ.ಜಿ); ಜೋಳ ಮೊದಲಾದ ಕೆಲವು ಕಾಳುಗಳ ಮೇಲೆ ಸಿಪ್ಪೆ ಅವರಿಸಿಕೊಂಡಿದ್ದು ಆ ಸಿಪ್ಪೆಯ ತುದಿ ಸ್ವಲ್ಪ ಉದ್ದಕ್ಕೆ ಮೊನಚಾಗಿ ಕೊಂಬಿನಂತೆ ಇರುತ್ತದೆ; 'ಕೊಂಬಿ'ಗೆ ಕೋಡು/ಕೋಡ ಎಂದು ಪರ್ಯಾಯ ನಾಮವಿದ್ದು ಈ ಹಿನ್ನೆಲೆಯಲ್ಲಿ 'ಕಂಬು' ಎಂಬ ಬೆಳೆಗೆ ಪರ್ಯಾಯ ನಾಮವಾಗಿ 'ಕೋಡ' ಬಳಕೆಗೆ ಬಂದಿರಬಹುದು; **ನೋಡಿ:** ಕೋಡು; Horn millet is a kind of millet crop; for some corns like millet have skin covered on them that skin has sharp horn like needle;

೪. ಕಾಡು ಹಂದಿ; ಸೂಕರ; <ಕ್ರೋಡ(ಸಂ); ಕೋರೆ ಅಥವಾ ಕೋಡು(ಕೋರೆ ಹಲ್ಲು) ಉಳ್ಳದ್ದು ಎಂಬ ಅರ್ಥದಲ್ಲಿರಬಹುದು; Wild pig; may be in the meaning of a pig has horn;

೫. ಕೊಂಬು; ದನ ಮೊದಲಾದ ಪ್ರಾಣಿಗಳಿಗೆ ತಲೆಯ ಮೇಲೆ ಬೆಳೆಯುವ ಕೋಡು; **ನೋಡಿ:** ಕೊಂಬು೧; Horn; horn grows on the head of cattle and other animals;

- ***—ಕೋಡಬಳ್ಳಿ*** : ಔಷಧೀಯ ಗುಣವುಳ್ಳ ಒಂದು ಬಗೆಯ ಸಸ್ಯ; A kind of medicinal plant;

- —*ಕೋಡಕುಳಿ* : ವ್ಯವಸಾಯದ ಒಂದು ಉಪಕರಣ; ಬಡಗ ಸಮುದಾಯದವರು ಬಳಸುತ್ತಾರೆ(ಬೆಂ.ಗ್ರಾ.ಜಿ); An instrument of agriculture; used by the community;
- —*ಕೋಡಗಲ್ಲು* : ಬೆಟ್ಟದ ನೆತ್ತಿಯ ಎತ್ತರವಾದ ಬಾಗಿದ ಬಂಡೆ; ಕೋಡುಗಲ್ಲು (ನೋಡಿ: ಕೋಡು); ಕೋಡ+ಕಲ್ಲು; A bended rock block on the top of the hill;
- —*ಕೋಡಣಸು* : ದನದ ಕೋಡುಗಳಿಗೆ ಶೃಂಗಾರಕ್ಕಾಗಿ ಹಾಕುವ ಒಂದು ಆಭರಣ; ಕಳಸದ ಆಕಾರದಲ್ಲಿರುತ್ತದೆ; ಹಿತ್ತಾಳೆ, ಕಂಚು, ಬೆಳ್ಳಿ ಮೊದಲಾದ ಲೋಹದಿಂದ ಮಾಡಿಸುತ್ತಾರೆ; ಕೊಂಬಣಸು(ನೋಡಿ: ಕೊಂಬು); ಕೋಡ+ಅಜಿಸು; An ornament to wore on the horns of the cattle for decoration; it is in the shape of Kalasa; it is made of brass, bronze, silver etc metals;
- —*ಕೋಡತೊರ್ಕೆ* : ಕೋಡು ಇರುವ ತೊರ್ಕೆ ಮೀನು; ಕೋಡ್‌ತೊರ್ಕೆ(ನೋಡಿ); ಎದುರಿಗೆ ಸಿಕ್ಕರೆ ಅಪಶಕುನ ಎಂದು ನಂಬಿಕೆ ಇದೆ; Torke fish with horn; believe that it is on the way to travellers is a bad omen;
- —*ಕೋಡ ಮುರುಕ* : ಒಂದು ಬಗೆಯ ಮರ; Holarrhena antidysentrica; ಅಲಂಕಾರಕ್ಕಾಗಿ ಉದ್ಯಾನವನಗಳಲ್ಲಿ ಬೆಳೆಸುತ್ತಾರೆ; ಪೀಠೋಪಕರಣ ತಯಾರಿಕೆಗೂ ಬಳಕೆ; ಮರದಲ್ಲಿ ಔಷಧೀಯ ಗುಣವಿದೆ; ಜ್ವರ, ಭೇದಿ, ಮೂಲವ್ಯಾಧಿ, ಆಸ್ತಮ, ಕಾಮಾಲೆ ರೋಗಗಳಿಗೆ ಔಷಧಿಯಾಗಿ ಉಪಯೋಗ; A kind of tree; it is grown in the parks for decoration; it has medicinal qualities used as medicine for fever, dysentery, piles, astama, jaundice;
- ಒಂದು ಬಗೆಯ ಜೋಳ; ಮಳೆ ಆಶ್ರಿತ ಬೇಸಾಯದಲ್ಲಿ ಬೆಳೆಯುತ್ತದೆ; ಉಬ್ಬೆ ಮಳೆಯಲ್ಲಿ ಬಿತ್ತುತ್ತಾರೆ; ಜೋಳದ ಕಾಳಿನ ಮೇಲಿನ ಸಿಪ್ಪೆಯ ತುದಿಯ ಕೋಡು ಗೋಣು(=ಕುತ್ತಿಗೆ) ಮುರಿದಂತೆ ಇರುವುದರಿಂದ ಇದು ಕೋಡಮುರುಕ; A kind of millet; it grows in monsoon based agriculture; it is sowing in the `Ubbe' rainy season; this millet's skin has horn, looks like broken; so it is called as Koḍa muruka;
- —*ಕೋಡರಸಿ/ಕೋರೆ/ಗದಹಲೆ* : Securinega viresa; ಒಂದು ಪೊದೇ ಸಸ್ಯ; ಹೊಲ ಗದ್ದೆ ತೋಟಗಳಲ್ಲಿ ಬೇಲಿಗಾಗಿ ಬೆಳೆಸುತ್ತಾರೆ; ಇದರ ಹಣ್ಣು ತಿನ್ನಲು ಬರುತ್ತದೆ. A shrub plant; grows for fence around the field and groves; the fruits of it used to eat.

ಕೋಡಂಗಿ/ಕೋಡಂಗಿವೇಷ/ಕೋಡಂಗಿಪಾರ್ಟು

kōḍangi/kōḍangivēṣa/kōḍangi pārṭu :

- ವಿಚಿತ್ರ ವೇಷ ಮತ್ತು ನಟನೆಯ ಒಂದು ಹಾಸ್ಯಪಾತ್ರ; ಯಕ್ಷಗಾನ, ಬಯಲಾಟ, ಸರ್ಕಸ್ಸು ಹಾಗೂ ಕೆಲವು ಆಚರಣಾತ್ಮಕ ಕಲಾ ಪ್ರದರ್ಶನಗಳಲ್ಲಿ ಕಾಣಿಸಿಕೊಳ್ಳುತ್ತದೆ; ಮೂಲತಃ ಯಕ್ಷಗಾನ ಪೂರ್ವರಂಗದ ವೇಷ ಇದ್ದಿರಬಹುದು; ಜಾತ್ರೆ, ಉತ್ಸವ, ಹಬ್ಬ ಹರಿದಿನದಂತಹ ಧಾರ್ಮಿಕ ಸಮಾರಂಭಗಳಲ್ಲೂ ಕೋಡಂಗಿ ವೇಷದವರು ಕಾಣಿಸಿಕೊಳ್ಳುತ್ತಾರೆ; A comic character with strange or queer disguise; this appear in Yakshagana, folk play; circus and some celebrational art; may be it is the disguise of preplay of Yakshagana; the disguisers are appear in fairs, processions, festivals and religious functions;
- 'ಕೋಡಂಗಿ' ರೂಪ 'ಕೋಡಗ'(=ಕೋತಿ)ದಿಂದ ಬಂದುದಾಗಿರಬೇಕು; 'ಕೋಡಗ'ಕ್ಕೆ ಸಂವಾದಿಯಾಗಿ 'ಕುರಂಗು'(ತ), ಕೊಡಂಜಿ(ತೆ), ಕೊಡಂಗ್(ತು) ರೂಪಗಳಿವೆ; ಕೋಡಗದಂತೆ ಆಡುವುದು ಎಂಬ ಅರ್ಥದಲ್ಲಿ ಕೋಡಂಗಿ ರೂಪವನ್ನು ಬಳಕೆಗೆ ತಂದುಕೊಂಡಿರಬಹುದು; ಕೋಡಂಗಿ ಪಾತ್ರದ ವೇಷಭೂಷಣ ಅಭಿನಯ ಬಹುತೇಕ ಇದಕ್ಕೆ ಅನುಗುಣವಾಗಿಯೇ ಇರುತ್ತದೆ; ವಿಚಿತ್ರ ವೇಷ ಧರಿಸಿ, ವಿಚಿತ್ರದ ಮಾತುಗಳನ್ನಾಡುತ್ತ, ವಿಚಿತ್ರದ ಅಭಿನಯ ತೋರುವುದರಿಂದ ಒಂದು ರೀತಿಯಲ್ಲಿ ಕೋಡಂಗಿಯದು ಕೋತಿ ಆಟವೇ; The form

Koḍangi from `Koḍaga'; the equivalent forms for `Koḍaga' are `Kurangu', `Koḍanji', `Koḍang'; may be enacting like Koḍaga meaning, the form Koḍangi may be used;

- 'ಕೊಂಗ' ರೂಪಕ್ಕೆ ಕೋತಿ, ಹಾಸ್ಯಗಾರ, ವಿನೋದ ಪ್ರವೃತ್ತಿಯವನು, ಹಗುರವಾಗಿ ವರ್ತಿಸುವವನು, Sillyman, Bafoon ಎಂಬ ಅರ್ಥಗಳಿಗೆ; ಇಂಥವರ ವರ್ತನೆಯನ್ನು ಕೊಂಗಾಟ, Crooked ಎನ್ನಲಾಗುತ್ತದೆ; 'ಕೊಂಗಾಟ'ವೂ ಮಂಗಾಟ/ ಕೋಡಂಗಿ ಆಟದಂತೆಯೇ ಗ್ರಹಿಕೆಯಾಗುವುದರಿಂದ 'ಕೊಂಗ'ದಿಂದ 'ಕೋಡಂಗಿ'ಯನ್ನು ಪರಿಕಲ್ಪಿಸಿಕೊಳ್ಳುವುದೂ ಸಾಧ್ಯ; ಆದರೆ ರೂಪ ನಿಷ್ಪತ್ತಿಯಲ್ಲಿ 'ಕೋಡಗ'/'ಕುರಂಗು'ದಿಂದ 'ಕೊಂಗ' ಎನ್ನುವುದೇ ಸಾಧುವೆನಿಸುತ್ತದೆ; The role or part dress mostly according to the role strange dress, speech and act is like monkey;
- ಪ್ರೇಕ್ಷಕರಲ್ಲಿ ನಗೆ ಉಕ್ಕಿಸಿ ಹಾಸ್ಯಮಯ ಮನರಂಜನೆ ನೀಡುವುದಕ್ಕೆ ಪೂರಕವಾಗಿ ಕೋಡಂಗಿ ಪಾತ್ರದವನ ವೇಷ ಹೇಗೆಬೇಕಾದರೂ ಇರಬಹುದು; ವೇಷಕ್ಕೆ ಬಳಸುವ ಸಾಮಗ್ರಿಗಳೂ ಇಂಥವೇ ಇರಬೇಕೆಂಬ ನಿಯಮ/ರೂಢಿಯೇನೂ ಇದ್ದಂತಿಲ್ಲ; ನಗೆ ಉಕ್ಕಿಸುವಂತಿದ್ದರೆ ಸಾಕು. ಗಾಢ ಬಣ್ಣದ ಚಿತ್ರ ವಿಚಿತ್ರವಾದ ಬಟ್ಟೆ ತೊಟ್ಟು, ವಿಚಿತ್ರವಾದ ಉದ್ದನೆಯ ಟೋಪಿ ಧರಿಸಿ, ಮೂಗಿನ ತುದಿಗೆ ಸುಣ್ಣ/ಬಿಳಿಯ ಬಣ್ಣ ಬಳಿದುಕೊಳ್ಳುವುದು ಸಾಮಾನ್ಯ; ನಾಮ ಹಾಕಿಕೊಳ್ಳುವುದು, ಗಂಧ ಬಳಿದುಕೊಳ್ಳುವುದನ್ನು ನೋಡಿದರೆ ವೈಷ್ಣವ, ಮಾಧ್ವ ಪರಂಪರೆಯವರು ಕೋಡಂಗಿ ಕಲೆಯನ್ನು ತನ್ನ ಪ್ರಭಾವದ ತೆಕ್ಕೆಗೆ ತೆಗೆದುಕೊಳ್ಳಲು ಪ್ರಯತ್ನಿಸಿದಂತೆ ಕಾಣುತ್ತದೆ; ವೈಷ್ಣವ ಸಂಪ್ರದಾಯದ ದೊಂಬಿದಾಸರು ಕೋಡಂಗಿ ವೇಷ ಹಾಕುವುದು ಹೆಚ್ಚು ಕಂಡುಬರುತ್ತದೆ; To create laughter and give entertainment in the spectators or audience the dress of Koḍangi; may be any kind; no rules for dress it create laugh is enough; wear strange dark coloured dress; wear a long cap, lime/white colour smear on the tip of the nose is common; vermillion on the forehead; smear sandal paste, Dombidasas of vaishnava tradition wear this Koḍangi disguised found more;
- ವೃತ್ತಿ ಕಲಾವಿದರು ಕೆಲವರು ಮತ್ತೆ ಮತ್ತೆ ಕೋಡಂಗಿ ವೇಷದಲ್ಲಿ ಕಾಣಿಸಿಕೊಳ್ಳುವುದರಿಂದ, ಈ ಕಲೆ ಹೆಚ್ಚು ಜನಜನಿತವಾಗಿ ಪಾತ್ರಧಾರಿ ವ್ಯಕ್ತಿಯ ನಿಜವಾದ ಹೆಸರು ಹಿನ್ನೆಲೆಗೆ ಸರಿದು ಕೋಡಂಗಿ, ಕೋಡಂಗಯ್ಯ ಎಂದೇ ಅವರು ಪ್ರಸಿದ್ಧರಾಗುವುದು, ದಾಖಲಾತಿಗಳಿಗೂ ಸೇರುವ ಅತಿರೇಕಕ್ಕೆ ಹೋಗುವುದು ನಡೆದಿದೆ; Professional artists wear this Koḍangi dress, so this art is very famous more and more, so the real name of the actor kept aside and they will be familiar in the name as Koḍangi, Koḍangaiah; the same will be recorded in the records;
- ಸಂಸ್ಕೃತ ನಾಟಕಗಳಲ್ಲಿ ವಿದೂಷಕ(ವಿನೋದಗಾರ, ಹಾಸ್ಯಗಾರ) ಇದ್ದ ಹಾಗೆ ಜನಪದ ಪ್ರದರ್ಶನಗಳಲ್ಲಿ ಕೋಡಂಗಿ; ಮನರಂಜನೆಗಾಗಿ ಜನಪದರು ಕಂಡುಕೊಂಡ ಒಂದು ವಿಶಿಷ್ಟ ಕಲೆ ಇದು; ಹೆಸರೇ ಸೂಚಿಸುವಂತೆ ವಿಚಿತ್ರ ವೇಷಭೂಷಣ ಧರಿಸಿ, ವಕ್ರವಕ್ರವಾಗಿ ನಡೆದುಕೊಳ್ಳುತ್ತಾರೆ ಕೋಡಂಗಿ ವೇಷಧಾರಿಗಳು; ಗಂಡು ಹೆಣ್ಣುಗಳು ವೇಷ ಧರಿಸಿ ಬೆರಗುಗೊಳಿಸುವಂತಹ ಕೆಲವು ಆಶ್ಚರ್ಯಕರ ವಸ್ತುಗಳನ್ನು ಮೈಮೇಲೆ ಹಾಕಿಕೊಂಡು, ಎದ್ದು ಕಾಣುವ ಬಣ್ಣಗಳಿಂದ ನೋಡುಗರಿಗೆ ಆಶ್ಚರ್ಯವೆನಿಸುವ ಅಲಂಕಾರ ಮಾಡಿಕೊಂಡು ಹಾಸ್ಯ ಪ್ರಸಂಗಗಳನ್ನು ನಡೆಸಿಕೊಡುತ್ತಾರೆ; The Vidhooshaka in Sanskrit plays Koḍangi is in folk show; it is an extra ordinary art invent by folk for entertainment; as the name indicate the player wear the strange dress and enact strangely; they wear amazing dress(male and female) and put some wonderful things on the body, decorated with attractive colours, it wonders the spectators, in such a way they carry the comedy sequences;
- ಕೋಡಂಗಿ ಪಾತ್ರದವನು ರಂಗಪ್ರವೇಶ ಮಾಡುತ್ತಿದ್ದಂತೆಯೇ 'ಆಟಕ್ಕೆ ಮೊದಲು ಕೋಡಂಗಿ,

ತೋಟಕ್ಕೆ ಮೊದಲು ಮೂಲಂಗಿ, ಹರೇ ರಮಣ ಗೋವಿಂದ, ರಮಾರಮಣ ಗೋವಿಂದ.....' ಎಂದು ಹಾಡಿ ಪ್ರೇಕ್ಷಕರನ್ನು ನಗೆಗಡಲಿನಲ್ಲಿ ಮುಳುಗಿಸುತ್ತಾನೆ; ಹಾಸ್ಯಪೂರಿತ ಅಭಿನಯಕ್ಕಾಗಿ ಅಂಗಾಂಗಗಳನ್ನು ವಕ್ರವಕ್ರವಾಗಿ ತಿರುಗಿಸುವುದು, ಬಾಯಿಗೆ ಬಂದದ್ದನ್ನು ಮಾತನಾಡುವುದು, ಮೂಗಿನಿಂದ ವೀಣೆ ನುಡಿಸುವುದು, ಅಂಗ್ಯೆಯ ಮುಂಗ್ಯೆ ಮಾಡ್ತೇನೆ ಮುಂಗ್ಯೆಯ ಅಂಗ್ಯೆ ಮಾಡ್ತೇನೆ ಅಂತ ಕೈಗಳನ್ನು ಹಿಂದಕ್ಕೂ ಮುಂದಕ್ಕೂ ತಿರುಗಿಸುವುದು ಮೊದಲಾದ ಅಸಹಜ ಅಂಗಾಭಿನಯದಿಂದ ಪ್ರೇಕ್ಷಕರ ಬೇಸರಿಕೆಯನ್ನು ಕಳೆಯುತ್ತಾನೆ; ಇವರ ಹಾಸ್ಯ ಅಪಹಾಸ್ಯವಾಗಿ, ಅಭಿನಯ ಅತಿರೇಕಕ್ಕೆ ಹೋಗಿ ಚೇಷ್ಟೆಯ ಮಟ್ಟಕ್ಕೆ ಇಳಿದು ಬಿಡುವುದುಂಟು; ಆಗ ಇವರ ಅಭಿನಯ 'ಕೋಡಂಗಿ ಕುಣಿತ' ಎನಿಸಿಕೊಳ್ಳುತ್ತದೆ; ಇವರು 'ಕೋಡಂಗಿಗಳು/ಕಾಡಂಗಿಗಳು' ಎನಿಸಿಕೊಂಡು ಲೇವಡಿಗೆ ಗುರಿಯಾಗುತ್ತದೆ; While the Koḍangi actor entering on the stage he sings as "Koḍangi is first for play, `Moolangi' is first for garden(thota), Hare Ramaṇa govinda, Ramaramaṇa govinda..."; it makes the audience fell in the ocean of laugh; for the comedy role of enactment, twisted his body parts speak whatever it comes to the mouth; play veena in the nose, turn the hands to and fro, back and front; by telling to turn the palm into front and back; in such a unreal body movement or action, he turns the boredom of the audience; their comedy turn into derision, mischief; then their action is called `Koḍangi kuṇitha';

- ಹಾಗಂತ ಕೋಡಂಗಿಯದು ತೀರಾ ನಗಣ್ಯ ಪಾತ್ರವೇನಲ್ಲ; ಯಕ್ಷಗಾನದಲ್ಲಿ ಭಾಗವತನನ್ನು ಬಿಟ್ಟರೆ ಈ ಪಾತ್ರ ಸೂತ್ರಧಾರನಂತೆ ಕೆಲಸ ಮಾಡುತ್ತದೆ; ರಂಗದ ಮೇಲೆ ನಿರ್ದಿಷ್ಟ ಜಾಗದಲ್ಲಿ ನಿಂತು ಪ್ರತಿ ಪಾತ್ರಕ್ಕೆ ರಂಗಪ್ರವೇಶ ಮಾಡಿಸುವುದು, ಮೊದಲ ಬಾರಿಗೆ ರಂಗಪ್ರವೇಶ ಮಾಡಿದ ಪಾತ್ರವನ್ನು ಪ್ರೇಕ್ಷಕರಿಗೆ ಪರಿಚಯ ಮಾಡಿಕೊಡುವುದು ಅಥವಾ 'ತಾವು ಧಾರು ಪೇಳ್ಯೆ' ಎಂದು ಪಾತ್ರ ತನ್ನನ್ನು ತಾನೇ ಪರಿಚಯ ಮಾಡಿಕೊಳ್ಳುವಂತೆ ಅವಕಾಶ ಕಲ್ಪಿಸುವುದು, ಇತರ ಪಾತ್ರಗಳ ಮಾತಿನ ಮಧ್ಯೆ ಬಾಯಿ ಹಾಕಿ ಅಲ್ಲವೆ, ಹೌದು, ಆಹಾ, ಮತ್ತೂ ಎಂದೆಲ್ಲಾ ಹೇಳಿ ಕಥೆ ಮುಂದುವರಿಯುವಂತೆ ಮಾಡುವುದು ಮುಂತಾಗಿ ತಾಂತ್ರಿಕ ಅಗತ್ಯವನ್ನು ನಾಟಕ ಸಂವಿಧಾನದ ಅವಿಭಾಜ್ಯ ಅಂಗ ಎಂಬಂತೆ ನಿರ್ವಹಿಸುತ್ತದೆ; ಆಟದ ಮಧ್ಯೆ ಪ್ರೇಕ್ಷಕರು ನಿದ್ರೆಗೆ ಜಾರದಂತೆ ತನ್ನ ವಿಚಿತ್ರ ಅಭಿನಯ ಮತ್ತು ಮಾತುಗಳಿಂದ ತಡೆದು ನಗೆ ಉಕ್ಕಿಸುವುದರ ಜೊತೆಗೆ ಕುತೂಹಲ ಭರಿತರಂತೆ ಮಾಡುವ ಕಾರ್ಯವೂ ಕೋಡಂಗಿಯದಾಗಿರುತ್ತದೆ; ಇಂತಹ ಸಂದರ್ಭಗಳಲ್ಲಿ ಕೋಡಂಗಿ ಪಾತ್ರ ರಂಜನೆಯ ಜೊತೆಗೆ ತನ್ನ ಪ್ರಾಮುಖ್ಯತೆಯನ್ನೂ ಸ್ಥಾಪಿಸಿಕೊಳ್ಳುತ್ತದೆ; The part of Koḍangi is not negligible one; in Yakshagana this character is next to Bhagavatha, works as narrator or director; on the stage stand in a particular place and make entry to every character on the stage, he introduce the new character to the audience or say `Thavu dharai peḷai', it means to allow the character introduces itself to the audience; in between the conversation of the characters the Koḍangi intervened and say, is it so? `yes, Aha, then' etc. and it make the drama to continue, it is an inseperable part of the drama consititution; in between the play the comedian made the spectators are not slip onto the sleep by his strange acting, speech; made them to laugh; and create curiosity is also the work of the Koḍangi character; in these situation the Koḍangi character create entertainment and establish the importance of his character;
- ಅವಿವೇಕಿ, ಮೂರ್ಖ, ಕುರೂಪಿ ಎಂಬ ರೂಪಕಾರ್ಥಗಳೂ ಇವೆ; Fool, idiot, ugly; these are imaginary forms to Koḍangi;

- ಬಾಣಲೆ ಎಂಬ ಅರ್ಥವೂ ಉಂಟು(?); *ಪ್ರ: 'ಕೋಡಂಗೀನಿಟ್ಟಾರ ಕೊಡ ಎಣ್ಣೆ ಸುರುವ್ಯಾರ'* (ದುಂ.ಮ); As the meaning frying pan;
- ವ್ಯರೂ: ಕೋಡಗಿ, ಕೋಡಿಂಗ, ಕೋಡಿಗ; ಕ್ವಾಡಂಗಿ; ಕೋಣಂಗಿ; ಡ>ಣ ವ್ಯತ್ಯಯ; ಮೂರ್ಧನ್ಯಾಕ್ಷರಗಳ ವಿನಿಮಯ; ಪ್ರ: 'ಕೋಟ್ಟವ್ನು ಕ್ವಾಡಂಗಿ, ಈಸ್ಕಂಡವ್ನು ಈರ್ಭದ್ರ(ಗಾ);
- ಜ್ಞಾ.ಭಾ.ರೂ: ತ: ಕೋಣಂಗಿ; ಮ: ಕೋಡಂಗಿ; ತೆ: ಕೋಣಂಗಿ, ಕೋಡಿಗ; ತು: ಕೊಡಂಗ್ಯೆ;
- ದೇಶೀಪದ;
- ***—ಕೋಡಂಗಿ ಕುಣಿತ*** : ಕೋಡಂಗಿ ವೇಷದವರ ಹಾಸ್ಯಮಯ ತಾರಕಾಭಿನಯ; ಕೋಡಂಗಿಗಳ ಕುಣಿತ; The high pitch comedy dance of Koḍangi dress; dance of Koḍangis;
- ***—ಕೋಡಂಗಿಯಾಟ*** : ಕೋಡಂಗಿಯ ಆಟ; ಕೋಡಂಗಿ ವೇಷದವರ/ಹಾಸ್ಯಗಾರರ ಅಭಿನಯ; ವಕ್ರಚೇಷ್ಟೆ; ಕೋತಿಯಾಟ; *ಪ್ರ: 'ಕೋಡಂಗಿಯಾಟವನಾಡಿದ ಭಕ್ತಂಗೆ ಬೇಡಿತ್ತನೀವ ನಮ್ಮ ಕೂಡಲಸಂಗಮದೇವ'*(ಬ.ವ); Play of Koḍangi; Koḍangi dresses/comedians act, crooked activity; monkey play;
- ***—ಕ್ವಾಡಂಗಿ ಮುಕ್ಕ*** : ಒಂದು ಬೈಗುಳ; ಕೋಡಂಗಿ>ಕ್ವಾಡಂಗಿ; ಓ>ವ– ಓಷ್ಠ್ಯ ಧ್ವನಿಮಾ ವ್ಯತ್ಯಯ; ಮೂರ್ಖ ಅರ್ಥದ ಎರಡು ಪದಗಳು ಸೇರಿ ಆದ ಸಂಯುಕ್ತ ಪದ; ಕೋಡಂಗಿ=ಮೂರ್ಖ, ರೂಪಕಾರ್ಥ; ಮುಕ್ಕ<ಮೂರ್ಖ, ತದ್ಭವ; *ಪ್ರ: 'ಅದೊಂದು ಕ್ವಾಡಂಗಿ ಮುಕ್ಕ, ಯಂಗ್ಬೇಕಂಗೇ ಮಾತಾಡ್ತೂದೆ'.* An abuse.

ಕೋಡಂಚಿ/ಕೊಡಂಚಿರ್ kōḍanci/ koḍancir :

- ಒಂದು ಜಾತಿಯ ಕಾಡು ಮರ; ಔಷಧೀಯ ಸಸ್ಯ; ಕೊಡಸಿಗೆ; A kind of forest tree; medicinal plant;
- Holarrhena antidysenterica; wrightia antidysenterica(ತು.ನಿ);
- ವ್ಯರೂ: ಕೊಡಂಜೆ; ಕೊಡೆಂಚಿ; ಕೊಡೆಂಜಿ; ಕಂಜ; ಅ>ಎ; ಚ>ಜ ಗಳು ವ್ಯತ್ಯಯ ರೂಪಗಳಲ್ಲಿ ಕಂಡುಬರುತ್ತವೆ;
- **ನೋಡಿ**: ಕೊಡಸಿಗೆ.

ಕೋಡಂಬಳ್ಳಿ kōḍamba!!i :

- ಬೆಂಗಳೂರು ಜಿಲ್ಲೆ ಚನ್ನಪಟ್ಟಣದ ೧೬೨, ೫೨ ಮತ್ತು ೫೩ನೇ ಶಾಸನಗಳಲ್ಲಿ ಈ ಊರಿನ ಹೆಸರಿನ ಉಲ್ಲೇಖವಿದೆ; The name of this place refered in the 162, 52 and 53rd inscription, Bangalore district, Channapaṭṭana;
- ಬೆಟ್ಟಗುಡ್ಡಗಳ ತಪ್ಪಲಿನಲ್ಲಿರುವ ಗ್ರಾಮ ಇದಾಗಿದೆ; ಬೆಟ್ಟದ 'ಕೋಡು' ಎಂದರೆ, ಬೆಟ್ಟದ ತುದಿ ಎಂದು ಅರ್ಥ; ಬೆಟ್ಟದ ಕೋಡಿನಲ್ಲಿರುವ ಹಳ್ಳಿ ಎಂಬ ಅರ್ಥದಲ್ಲಿ ಪ್ರಕೃತಿವಾಚಿಯಾಗಿ ಈ ಗ್ರಾಮಕ್ಕೆ 'ಕೋಡಂಬಳ್ಳಿ' ಎಂಬ ಹೆಸರು ಬಂದಿದೆ; It is in the slope of the hill or moor; bettada `Koḍu' means the top of the hill; it is in the meaning of the village is on the top of the hill; so it has the name Koḍamballi;
- 'ಬಳ್ಳಿ' ಎಂಬ ಪದ 'ಪಳ್ಳಿ' ಎಂಬುದರಿಂದ ಬಂದುದು; 'ಪಳ್ಳಿ'–ಹಳ್ಳಿ ಎಂಬರ್ಥದಲ್ಲಿಯೂ ಚಾಲ್ತಿಗೆ ಬಂದಿದೆ; ಅಂದರೆ ಪ>ಬ ಮತ್ತು ಪ>ಹ ಎರಡೂ ಬದಲಾವಣೆಗಳ ಮೂಲಕ ಇದನ್ನು ನೋಡಬಹುದು; The word `balli' from `palli'; `palli' is also in practice as `halli';
- ಈ ಗ್ರಾಮದ ಶಾಸನವೊಂದರಲ್ಲಿ 'ಕೋಡಂಬಳ್ಳಿ' ಎಂಬ ಪದವಿದೆ; In a inscription of this village the word `Koḍamballi' is noted;
- 'ಕೋಡಂಬಳ್ಳಿ' ಗ್ರಾಮವನ್ನು ಕ್ರಿ.ಶ.೧೪೯೯ರ ವಿಜಯನಗರದ ದೊರೆ ಇಮ್ಮಡಿ ನರಸಿಂಹನ ಶಾಸನವೊಂದರಲ್ಲಿ 'ಪೊಯಿಸಣ ನಾಡ ಚನ್ನಪಟ್ಟಣದ ಕೋಡಂಬಳ್ಳಿ ಸೀಮೆ' ಎಂದು ಗುರುತಿಸಲಾಗಿದೆ; `Koḍamballi' village was mentioned in the inscription of the king Immaḍi Narasimha in 1499AD as `Poisaṇa naḍa Channapaṭṭanada Koḍamballi seeme';

- ಕ್ರಿ.ಶ.೧೫೩೪ರ ಅಚ್ಯುತರಾಯನ ಕಾಲದ ಶಾಸನದಲ್ಲಿ 'ಭಂಡಾರ ತಿಮ್ಮಪ್ಪಯ್ಯನವರ ನಾಯಕತನಕ್ಕೆ ಸಲ್ಲುವ ಚನ್ನಪಟ್ಟಣ ರಾಜ್ಯದ ಕೋಡಂಬಳ್ಳಿ ಸೀಮೆ' ಎಂದು ಉಲ್ಲೇಖವಿದೆ; In the inscription of Achutharaya 1534AD the reference was `Banḍara Thimmappaiahna Nayakathanakke salluva Channapaṭṭana rajyada Koḍambaḷḷi seeme';
- ಐತಿಹ್ಯವೊಂದರ ಪ್ರಕಾರ ಪ್ರಾಚೀನ ಕಾಲದಲ್ಲಿ ಮಣ್ಣಿನ ಕೊಡಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದರಿಂದ ಈ ಗ್ರಾಮಕ್ಕೆ ಕೊಡಗಳು ದೊರೆಯುವ ಹಳ್ಳಿ ಎಂಬರ್ಥದಲ್ಲಿ 'ಕೊಡಂಬಳ್ಳಿ' ಪದವಿದೆ. According to legends the pitchers are manufacture here and sell them in the ancient time, so the village where the pitchers available, so the word `Koḍambaḷḷi' existed.

(E.C-IX; ಬಿ.ಎಲ್.ರೈಸ್; ಬೆಂ.ಜಿ.)

ಕೋಡವಳ್ಳಿ kōḍavaḷḷi :

- ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೋಕಿನ ಕ್ರಿ.ಶ.೧೧೧೭ರ ೧೪೦ನೇ ಶಾಸನದಲ್ಲಿ ಈ ಊರಿನ ಉಲ್ಲೇಖ; This village refered in the 140th inscription of 1117AD Chikkamagaluru district, Chikkamagaluru taluk;
- ಉದಯಾದಿತ್ಯನ ಮಗಳು ಏಚಲದೇವಿ ಮರಣ ಹೊಂದಲು ಆಕೆಯ ವೆಳೆವಾಳಿಯೂ ಮರಣ ಹೊಂದುವ ವಿವರವಿದೆ; ಆತ 'ಕೋಡವಳ್ಳಿ'ಯ ಮಾದೆಯ ವೇಳೆವಾಳಿಯಾಗಿರುತ್ತಾನೆ; It has the particulars of Echaladevi daughter of Udayaditya died, her bodyguard Veḷevaḷi also dies; he was the Veḷevaḷi of `Koḍavaḷḷi' Madeya;
- 'ಕೋಡವಳ್ಳಿ' ಪದದಲ್ಲಿನ 'ವಳ್ಳಿ' 'ಪಳ್ಳಿ'ಯಿಂದ ಬಂದುದು, ಪ>ವ ಆಗಿದೆ; ಹಾಗೆಯೇ ಅದು 'ಕೋಡಹಳ್ಳಿ'ಯಾದರೆ, ಆಗಲೂ 'ಪಳ್ಳಿ'ಯಿಂದ ಬಂದುದಾಗಿರುತ್ತದೆ, ಏಕೆಂದರೆ ಪ>ಹ ಆಗುವುದು ಸಹಜ; In the Koḍavaḷḷi the word `vaḷḷi' from `paḷḷi'; if it is Koḍahaḷḷi, then also it is from `paḷḷi';
- ಇಲ್ಲಿ ಮುಖ್ಯವಾಗಿ ಗಮನಿಸಬೇಕಾದುದು 'ಕೋಡ' ರೂಪ; ಒಂದು ಅರ್ಥದಲ್ಲಿ ಅದು ಕೋತಿ ಅಥವಾ ಕಾಡುಹಂದಿಯಾಗಿರುತ್ತದೆ; ಆದರೆ ಇದು ಹೊಂದುವುದಿಲ್ಲ; Here mainly pay attention on the form `Koḍa'; Koḍa means monkey or wild pig, but it cannot tally;
- 'ಕೋಡ' ರೂಪ 'ಕೋಟ'ದಿಂದ ಬಂದಿದೆ ಎಂದು ಹೇಳುವುದಾದರೆ, ಆಗ ಅದರ ಅರ್ಥ ಕೊಂಕು ಅಥವಾ ಬಾಗು ಎಂದಾಗುತ್ತದೆ; ಅಂದರೆ ಬೆಟ್ಟಗುಡ್ಡಗಳ 'ಕಿಬ್ಬರಿ'ಯಲ್ಲಿ ಆ ಊರು ಇರಬೇಕಾಗುತ್ತದೆ; The `Koḍa' form from `Koṭa' the meaning i.e. twist or bend; so that village is in the shape of hills and moors;
- 'ಕೋಡ' ಪದಕ್ಕೆ 'ಕೋಡು' ಎಂದೂ ಅರ್ಥೈಸಬಹುದಾದ್ದರಿಂದ, ಬೆಟ್ಟಗುಡ್ಡಗಳ ತುದಿಯಲ್ಲಿ ಊರು ಇತ್ತೆಂದು ನಿಷ್ಪತ್ತಿ ಹೊರಡಿಸಬೇಕಾಗುತ್ತದೆ; The word `Koḍa' may be mean as `Koḍu'; so the village is on the tip of the hills and moors;
- ಕೋಡ>ಕೋಡಿ ಎಂದು ಭಾವಿಸಲೂ ಅವಕಾಶವಿದೆ; 'ಕೋಡಿಹಳ್ಳಿ' ಹೆಸರಿನ ಉಲ್ಲೇಖಗಳು ಹಲವಾರು ಕಡೆ ಸಿಗುತ್ತವೆ; 'ಕೋಡಿಹಳ್ಳಿ'ಯನ್ನು ಒಪ್ಪಿದರೆ, ಕೆರೆಯ ಪರಿಸರದ ಊರು ಎಂಬುದಾಗಿ ಹೇಳಬೇಕಾಗುತ್ತದೆ; The names of `Koḍihaḷḷi' referred in may places; if agree the `Koḍihaḷḷi'; it is to say that is the surrounding village of the tank;
- ಏನೇ ಇರಲಿ 'ಕೋಡವಳ್ಳಿ'ಯ ಅರ್ಥ ಕಡೆಗೂ ಸಂದಿಗ್ಧವಾಗಿಯೇ ಉಳಿಯುತ್ತದೆ. Anyhow the meaning of `Koḍavaḷḷi' remains uncertain.

(E.C- ೧೧; ಚಿಕ್ಕ.ಜಿ.)

ಕೋಡಿ೧ kōḍi[1] :

- ಕನ್ನಡದ 'ಕೋಡಿ' ಪದ 'ಖೋಡಿ'ಯಿಂದ ಬಂದುದು; ಮರಾಟಿಯ 'ಖೋಡ್' ರೂಪ ಇದರ ಮೂಲದಲ್ಲಿದೆ; The kannada word `koḍi' from `khoḍi'; the original form is in Marati `khoḍ';

- ಇದಕ್ಕೆ ದುಷ್ಟ, ಕೆಟ್ಟ ಎಂಬೆಲ್ಲ ಅರ್ಥಗಳಿವೆ– 'ಏನ ಕೋಡಿ ಅದಿ ನೀನು'; ಸಂಸ್ಕೃತದ ಮಹಾಪ್ರಾಣವಿರುವ ಅನೇಕ ಪದಗಳು ಕನ್ನಡದಲ್ಲಿ ಅಲ್ಪಪ್ರಾಣಗಳಾಗಿ ಬದಲಾಗಿವೆ; ಖೋಡಿ>ಕೋಡಿ ಪದವೂ ಅದರಲ್ಲಿ ಸೇರಿದೆ; It has the meaning cruel, bad etc;

ಕೋಡಿ೨ kōḍi² :

೧. ಕೆರೆ ತುಂಬಿದ ಮೇಲೆ ಹೆಚ್ಚಿನ ನೀರು ಹರಿದು ಹೋಗುವ ಜಾಗ/ಸ್ಥಳ; ಕೆರೆಯ ಕೋಡಿ; ನೀರಬಟ್ಟೆ; ಜಲೋಚ್ಛ್ವಾಸ; ಪರಿವಾಹ; After the tank fill full water, the place or space is to over flow the water from the tank is `Kerekoḍi';

- ಕೆರೆ ತುಂಬಿದ ಮೇಲೆ ಕೆರೆಯಿಂದ ಆಚೆಗೆ ಹರಿದುಹೋಗುವ ಹೆಚ್ಚುವರಿ ನೀರು; ಉಕ್ಕಿ ಹರಿಯುವ ನೀರು; ಪ್ರವಾಹ; Excess water flow out of the tank after full level; flood;
- ಕೆರೆಯಿಂದ ಹೆಚ್ಚಿನ ನೀರನ್ನು ಬಿಡುವ ಕಣ; ಇರ್ಕೋಡಿ ಕೋಡಿವರಿ(ಅ.ನು.ಕೋ);
- ಕಾಲುವೆ(ಉ.ಕ.ಜಿ); ಕೆರೇಕೋಡಿ(ಮೈ.ಜಿ., ಮಂಡ್ಯ.ಜಿ); ತುಂಬಿದ ಕೆರೆ–ಕಟ್ಟೆಗಳಲ್ಲಿ ಹೆಚ್ಚಿನ ನೀರು ಹರಿದು ಹೋಗುವುದು; ತುಂಬು ಹೊಳೆಯಾಗಿ ಹರಿದುಹೋಗುವ ನೀರು; Canal; kerekoḍi; water filled in the tanks and bunds the excess water flow out as river;
- ಕೆರೆ ಕಟ್ಟೆಗಳಲ್ಲಿ ಅದರ ಸಾಮರ್ಥ್ಯಕ್ಕನುಗುಣವಾಗಿ ನೀರು ಸಂಗ್ರಹದ ಗರಿಷ್ಠ ಮಟ್ಟವನ್ನು ನಿಗದಿಪಡಿಸಿ, ಅದಕ್ಕಿಂತ ಹೆಚ್ಚಿನದಾಗಿ ಜಲಾನಯನದಿಂದ ಹರಿದು ಬರುವ ನೀರು ಕೆರೆಯಿಂದ ಹೋರಗಿನ ಹಳ್ಳದ ಗುಂಟ ಹರಿದು ಹೋಗುವಂತೆ ಕೆರೆ ಏರಿಯ ಒಂದು ಮೂಲೆಯಲ್ಲಿ, ಹಳ್ಳ ಇರುವ ಕಡೆಗೆ, ಏರಿಯ ಮೇಲ್ಮೈಗೆ ಚಪ್ಪಟೆ ಕಲ್ಲುಗಳನ್ನು ಅಥವಾ ಚಪ್ಪಡಿಗಳನ್ನು ಹದ್ದಿ ಜಾಗ ಮಾಡಿರುತ್ತಾರೆ; ಇದು ಕೋಡಿ; ಕೆರೆಯ ಕೋಡಿ; ಕೆರೇಕೋಡಿ; water stored in according to the capacity of the tank, it crosses the maximum level, the inflow water of the tank flow out at a corner of the tank bund;

೨. ತುದಿ; ನೆತ್ತಿ; ಕೊನೆ; ಕುಡಿ; ಅಗ್ರಭಾಗ; Tip, top, edge, pointed end, center point;

೩. ಮೂಲೆ; ಕೆರೆಯ ಏರಿಯ ಒಂದು ಕೊನೆ; ಕೊನೆಯ ಭಾಗ; ಅಂಚು; ಕರೆ; Corner, an edge of the tank bund; last part; edge;

- ಕೆರೆಕಟ್ಟೆಗಳಲ್ಲಿ ನೀರು ಸಂಗ್ರಹಿಸುವ ಗರಿಷ್ಠ ಮಟ್ಟವನ್ನು ನಿಗದಿಪಡಿಸಿದ ಮೇಲೆ ಏರಿಯ ಆ ಮಟ್ಟದ ಮೇಲ್ತುದಿಯಲ್ಲಿ, ಒಂದು ಮೂಲೆಗೆ/ ಅಂಚಿನಲ್ಲಿ, ಕೆರೆ ನಿರ್ಮಾಣಕ್ಕೆ ಮೊದಲು ನೀರು ಹರಿದುಹೋಗುತ್ತಿದ್ದ ಹಳ್ಳಕ್ಕೆ ಹೊಂದಿಕೊಂಡಂತೆ ಕೋಡಿ ರಚಿಸುವುದು ಸಾಮಾನ್ಯ; ಕೆರೆಯ ನೆತ್ತಿ/ಮೂಲೆ; ಏರಿಯ ಕೊನೆ/ಮೂಲೆ/ಅಂಚು ಎಂಬ ಅರ್ಥದಲ್ಲಿ 'ಕೋಡಿ' ರೂಢಿಗೆ ಬಂದಂತೆ ಕಾಣುತ್ತದೆ; After fixing the maximum level of water storage in the tank, generally construct the sluice in the corner of the bund where the water was flown out, over flow water to out of the tank;
- ದಪ್ಪ ಕಲ್ಲು ಮತ್ತು ಮಣ್ಣನ್ನು ಬಳಸಿ ಏರಿಯನ್ನು ನಿರ್ಮಿಸಲಾಗುತ್ತಿತ್ತು; ಜಲಾನಯನ ಪ್ರದೇಶದಲ್ಲಿ ಅಧಿಕ ಪ್ರಮಾಣದ ಮಳೆ ಬಿದ್ದು, ಸಾಮಾನ್ಯಕ್ಕಿಂತ ಹೆಚ್ಚು ಒತ್ತಡದಲ್ಲಿ ಪ್ರವಾಹದೋಪಾದಿಯಲ್ಲಿ ನೀರು ಹರಿದು ಬಂದರೆ ಕೆರೆಯ ಏರಿ ಒಡೆಯುವ ಸಾಧ್ಯತೆ ಇರುತ್ತದೆ; ಹೀಗಾಗಬಾರದೆಂದು, ಏರಿಯ ರಕ್ಷಣೆಗಾಗಿ ಕೋಡಿ ರಚಿಸುವುದು ಅವಶ್ಯ; ಕೋಡಿ ಇದ್ದರೂ, ಏರಿ ಹಳೆಯದಾದುದರಿಂದಲೋ, ಏರಿಯ ಸಾಮರ್ಥ್ಯಕ್ಕೆ ಮಿತಿಮೀರಿದ ನೀರಿನ ಒತ್ತಡ ನಿರ್ಮಾಣವಾಗುವುದರಿಂದಲೋ, ಇನ್ನಾವ ಕಾರಣಕ್ಕೋ ಏರಿ ಒಡೆದು ಅನಾಹುತಗಳು ಸಂಭವಿಸುವುದು, ನೀರು ಸಂಗ್ರವಾಗದೆ ಹೋಗುವುದು ಆಗುತ್ತಿರುತ್ತದೆ; ಈ ಅನಾಹುತದಿಂದ ಪಾರುಗಾಣುವಲ್ಲಿ ಅಸಹಾಯಕನಾದ ಮನುಷ್ಯ ಕೆರೆಗೆ ಪ್ರಾಣಿ ಬಲಿ, ನರಬಲಿ ಅರ್ಪಿಸುವ ಸಂಪ್ರದಾಯಗಳನ್ನು ಹುಟ್ಟುಹಾಕಿದ್ದೂ ಇದೆ; ಕಟ್ಟಿಸಿದ ಕೆರೆಗೆ ನೀರು ಬರದೆ ಇದ್ದಾಗ ನರಬಲಿ ಅರ್ಪಿಸುತ್ತಿದ್ದ ರೂಢಿ ಇದ್ದುದನ್ನು 'ಕೆರೆಗೆ ಹಾರ' ಮೊದಲಾದ ಕಥನಗೀತೆಗಳು ಹೇಳುತ್ತವೆ; The tank bund was construct using big boulders and soil; if heavy rain pour in the catchment area

ಕೋಡಿ

rain water flow into the tank like flood, that may cause to breach the bund of the tanks; so the sluice is built in the corner of the bund to flow the water out into the rivulet; sluice is must to protect the earthern dam; the dam or bunds breached for other reasons like old bunds, the excessive pressure of the flood and it causes damage that is why the water cannot be stored; by this incident man was helpless, to come out of it, he sacrifice animal, human, as tradition was came into practice; A newly built tank was not filled, human sacrifice was in practice; was told by the legend like `Kerege hara' and other stories;

- ಮಳೆಗಾಲದಲ್ಲಿ ಕೆರೆ ತುಂಬಿ ಕೋಡಿಯಲ್ಲಿ ಹರಿಯುವ ಕೆನ್ನೀರಿನಲ್ಲಿ ತೇಲಿ ಬರುವ ಮೀನುಗಳನ್ನು ಕಡಿಯಲು, ಹಿಡಿಯಲು ಕುಡುಗೋಲು, ಕೊಡಲಿ, ಬಲೆ ಮುಂತಾದ ಸಾಧನ ಹಿಡಿದು ಜನ ಕೋಡಿಯ ಮೇಲೆ ನಿಂತು ಬೇಟೆ ಆಡುವ ದೃಶ್ಯ ರೋಚಕವಾದುದು;
- ಕೆರೆ ತುಂಬಿ ಕೋಡಿ ಹರಿಯುವಾಗ ಪೂಜಾ ವಿಧಿಗಳನ್ನು ನೆರವೇರಿಸುವ, ಬಾಗಿನ ಅರ್ಪಿಸುವ ವಾಡಿಕೆ ಇದೆ; ಇದು ಗಂಗಾಪೂಜೆ; The tank filled and flow through sluice people worship it or offer pooja and bagina; it is called Ganga pooja;

೪. ನೀರು ತುಂಬಿರುವ ಚಿಕ್ಕ ಮಡುವು;

೫. ಸಮುದ್ರದ ಬದಿ; ತೀರ; ಸಾಗರ ತೀರ; Seashore; shore; shore of ocean;

೬. ಹೊಳೆಯ ನಡುವಿನ ಊರು; River surrounded village; island;

೭. ಹೊರಸೂಸುವಿಕೆ, ಹೊರಹೊಮ್ಮುವಿಕೆ ಎಂದು ರೂಪಕಾರ್ಥ; *ಪ್ರ: 'ಎಷ್ಟೋ ವರ್ಷಗಳ ನಂತರ ಸಿಕ್ಕ ಅವನನ್ನು ನೋಡಿ ಆನಂದದ ಕೋಡಿ ತುಂಬಿ ಹರಿಯಿತು'!*

೮. ಹರಿಜನರು ಆರಾಧಿಸುವ ಒಂದು ದೈವ/ಭೂತ; A diety worshipped by scheduled caste;

೯. ದೇವಾಲಯದ ಎದುರಿಗೆ ಇರುವ ಧ್ವಜಸ್ತಂಭ (ಗರುಡಗಂಬ?)ಕ್ಕೆ ಏರಿಸುವ ಗರುಡಪಟ(ಕನಿ); Flag pole before the temple to rise the Garuḍa paṭa;

೧೦. ಕಡಲಿನ ಅಳ್ವೆಯ ಬದಿ;

೧೧. ಹನ್ನೆರಡು ಅಂಗುಲ ಹರಗಪ್ಪದ ೧೨೦ ಕೋಲಿನ ಘನ ಮರ;

೧೨. ದೊಡ್ಡ ಹಡಗು; A big ship;

೧೩. ಒಂದು ಅಳತೆ; ಮರಗೆಲಸಕ್ಕೆ ಬಳಸುವ ಮರದ ದಿಮ್ಮಿಯ ಒಂದು ಅಳತೆ; ಖಂಡಿ; ಒಂದು ಕೊಟ್ಟ ಬತ್ತವನ್ನು ಬಿತ್ತಲು ಬೇಕಾಗುವ ಭೂಮಿ (ದ್ರಾ.ಭಾ.ಜ್ಞಾ.ಪ.ಕೋ); A measure; used to measure a log for carpentary work; land to sow a `koṭta' paddy;

೧೪. ಕಡೆಯುವ ಕಲ್ಲು ಹಾಗೂ ಮರವನ್ನು ಅಳೆಯುವ ಒಂದು ಮಾನದಂಡ; Used to measure the stone and wood;

೧೫. ಒಂದು ಜನಪದ ಆಟ; 'ಗೌಡಲು' ಸಮುದಾಯದವರು ಆಡುತ್ತಾರೆ; ಚೆಂಡಾಟದಲ್ಲಿ ಚೆಂಡನ್ನು ಗುರಿ ಮುಟ್ಟಿಸುವುದಕ್ಕೆ ಕೋಡಿ ಎಂದು ಹೆಸರು; ಚೆಂಡು ತುದಿ ಮುಟ್ಟಿದಾಗ ನಗಾರಿಯನ್ನೂ ಜಾಗಟೆಯನ್ನೂ ಬಾರಿಸುತ್ತಾರೆ; ಸುಗ್ಗಿಯ ಸಮಯದಲ್ಲಿ ನಾಲ್ಕಾರು ದಿವಸಗಳ ಕಾಲ ಈ ಆಟವನ್ನು ಆಡುತ್ತಾರೆ; A kind of folk play; it is played by `Gowḍalu' community; to reach the ball to the aim i.e. koḍi when the ball reach the aim beat the drum and gong; this play was playing some days in the harvest season;

೧೬. ಸೀಮಂತ; ಚೊಚ್ಚಲು ಬಸುರಿಯರಿಗೆ ಐದು ಅಥವಾ ಏಳನೆಯ ತಿಂಗಳು ಗಂಡನ ಮನೆಯಲ್ಲಿ ಮಾಡುವ ಒಂದು ಆಚರಣೆ;

೧೭. ದುಷ್ಟ; ಕಿಡಿಗೇಡಿ; ಹೀನ; ದುರುಳ; ಕೆಟ್ಟ; ಹಾನಿ; ಕೊರತೆ; ಕಳಂಕ; ದರಿದ್ರ; ಕುತ್ಸಿಕ; ಕೆಡುಕ; ಕೇಡ; <ಖೋಡಿ(ಸಂ); Cruel; troublemonger; wicked; deceiver; bad; losser; shortage; black mark; impecunious; slander; rouge;

- ಜ್ಞಾಬ್ಜಾರೂ: ತ: ಕೋಡಿ; ಕೋಡು; ಕುಟಿಮಿ; ತೆ: ಕೋಡು, ಕೋಟಿ, ಖಂಡಿ; ಮ: ಕೋಟ್ಟ; ತು: ಕೋಡಿ; ಇಭಾರೂ:ಸಂ:ಕೋಟಿ; ಖೋಡಿ;
- ದೇಶಿಪದ; ಖೋಡಿ>ಕೋಡಿ/ಕೋಟಿ(ಸಂ.ತದ್ಭವ);
- ***—ಕೋಡಿ ಆಟ*** : ಚೆನ್ನೆಮಣೆ ಆಟದ ಒಂದು ವಿಧ; A kind of `Channemane' game;
- ***—ಕೋಡಿಕಂಟಿ*** : ಕೆರೆಕೋಡಿಯ ಪಕ್ಕದ ದಿಬ್ಬ; ಹತ್ತುಮೀನು ಹಿಡಿಯುವವರು ಇದರ ಮೇಲೆ ನಿಂತು ಮೀನನ್ನು ಬೇಟೆ ಆಡುತ್ತಾರೆ(ಬೆಂ.ಗ್ರಾ.ಜಿ); Mound beside the tank sluice; fisherman stand on this to hunt the fish;
- ***—ಕೋಡಿಕಳೆ/–ಕೋಡಿಗಳೆ*** : ಕೀಳಾಗಿ ಕಾಣು; ನಿಂದಿಸು; ಅಲ್ಲಗಳೆ; ಹಗುರಗೊಳಿಸು; ಕೋಡಿ (<ಖೋಡಿ)+ಕಳೆ; Look low; abuse, deny; make light;
- ***—ಕೋಡಿಕೊಂಪೆ*** : ಮೂಲೆಗುಂಪಾದ ಊರು; ಕುಗ್ರಾಮ; The village become useless; a tiny hamlet;
- ***—ಕೋಡಿಗಟ್ಟು*** : ತುಂಬಿ ಹರಿ; ಉಕ್ಕು; ತುಳುಕು; ಕೋಡಿಬೀಳು; ಕೋಡಿ+ಕಟ್ಟು; *ಪ್ರ: 'ಕಣ್ಣೀರು ಕೋಡಿಗಟ್ಟಿ ಹರಿಯಿತು'*; Brimful flow; swell; spill over; water outlet from the tank;
- ***—ಕೋಡಿಗಾಣು*** : ಕೊರತೆಯನ್ನು ಕಾಣು/ಎಣಿಸು; ತಪ್ಪನ್ನು ಗುರುತಿಸು; ಕೋಡಿ(<ಖೋಡಿ)+ಕಾಣು; Find deficit; find fault;
- ***—ಕೋಡಿದೇವ್ರು*** : ಕೋಡಿ ದೇವರಿಗೆ ಅರ್ಪಿಸುವ ಒಂದು ಬಲಿ ಆಚರಣೆ; ಕೆರೆ ತುಂಬಿ ಕೋಡಿ ಹರಿಯುವಾಗ ಅದರ ಶಾಂತಿಗಾಗಿ ಕೋಣನನ್ನು ಕಡಿದು ಮಾಡುವ ಪೂಜೆ(ಕೃ.ಪ.ಕೋ); A scarification practice to koḍidevaru; when a tank flowing brimful; sacrifice a baffulo as a mark of worship;
- ***—ಕೋಡಿನೀರು*** : ಕೆರೆ ತುಂಬಿ ಕೋಡಿಬಿದ್ದು ಹೊರಕ್ಕೆ ಹರಿಯುವ ನೀರು; Overflow of water from the tank through sluice;
- ***—ಕೋಡಿಬೀಳು*** : ತುಂಬಿದ ಕೆರೆಯಲ್ಲಿ ಹೆಚ್ಚಿನ ನೀರು ಕೋಡಿಯಲ್ಲಿ ಹರಿದು ಹೋಗುವುದು; See Koḍiniru;
- ***—ಕೋಡಿಮನ*** : ಹೀನ/ನೀಚ ಮನಸ್ಸು; ಕೆಟ್ಟ ಮನಸ್ಸು ಕೋಡಿ<ಖೋಡಿ; Wicked mind;
- ***—ಕೋಡಿಮಾರಮ್ಮ*** : ಕೋಡಿಯನ್ನು ಕಾಯುವ ಮಾರಿ ದೇವತೆ; A goddess watch the sluice of the tank;
- ***—ಕೋಡಿಮೂಲೆ*** : ಮೂಲೆಗುಂಪು; ಅಭೇದ್ಯ ಸ್ಥಳ; ಕತ್ತಲ ಮೂಲೆ; ಕೋಡಿ=ಮೂಲೆ; ದ್ವಿರುಕ್ತಿ; ಅರ್ಥದ ತೀವ್ರತೆ; Become useless; be driven into a corner; impregnable place; dark corner;
- ***—ಕೋಡಿಹಬ್ಬ*** : ಗೊಂಡ ಎಂಬ ಗುಡ್ಡಗಾಡು ಜನ ಆಚರಿಸುವ ಒಂದು ಹಬ್ಬ; ತುಳಸಿ ಹಬ್ಬವೆಂದೂ ಕರೆಯುತ್ತಾರೆ; ಕಡುಬು ಈ ಹಬ್ಬದ ವಿಶೇಷ ಆಹಾರ; ಕಾಯಿಹಾಲಿ(ಕಾಯಾಲು)ನ ಜೊತೆ ಕಡುಬು ತಿನ್ನುತ್ತಾರೆ; ಹಬ್ಬದ ಮಾರನೆಯ ದಿವಸ ಮೀನಿನ ಊಟವನ್ನೇ ಮಾಡುವುದು ವಿಶೇಷ (ಉ.ಕ.ಜಿ); A festival celebrated by Gonda trible people; it is called as Tuḷasi festival; the special food for this festival is Kaḍabu; eat Kaḍabu along with coconut milk; the next day of the festival they have fish for dinner is special;
- ***—ಕೋಡಿಹರಿ/–ಕೋಡಿವರಿ*** : ಕೆರೆ ತುಂಬಿ ಮೀರಿ ಹರಿಯುವ ನೀರು; ಅಧಿಕ ದುಃಖ; ಹೆಚ್ಚಿನ ಭಾವೋದ್ವೇಗ; ಕೋಡಿಬೀಳು; ಕೋಡಿ+ಹರಿ; The water flow after brimful of the tank; excessive sorrow; emotional feeling;
- ***—ಕೋಡಿಹುಳ*** : ಮಳೆಗಾಲದಲ್ಲಿ ಹೆಚ್ಚಾಗಿ ಕಂಡುಬರುವ ಒಂದು ಬಗೆಯ ಹುಳು. A kind of worm found in rainy season.

ಕೋಡಿಮರಹುಲ್ಲು/ಜರಿಹುಲ್ಲು/ನೊಸೆಹುಲ್ಲು

`kōḍimarahullu/jarihullu/nosehullu :`

- ಒಂದು ಬಗೆಯ ಹುಲ್ಲು; Eragrostis bifaria; ಗುಂಪುಗುಂಪಾಗಿ ಪೊದೆಯೋಪಾದಿಯಲ್ಲಿ

ಬೆಳೆಯುತ್ತದೆ; ಅನೇಕ ವರ್ಷಗಳವರೆಗೆ ಗಡ್ಡೆ ಸಾಯುವುದಿಲ್ಲ. ಹಸುರಾಗಿ ಇರುತ್ತದೆ; A kind of grass; grows like bush; the root cannot be die for many years; it is greenish;
- ಹುಲ್ಲಿನ ನಾರು ಗಟ್ಟಿ ಇರುವುದರಿಂದ ತಟ್ಟೆ, ಮೂಡೆ, ಸಿಂಬಿ ಹಾಗೂ ಬುಟ್ಟಿಯನ್ನು ಹೆಣೆಯಲು ಬಳಸುತ್ತಾರೆ; The strand is very hard, so it is uses to plait, basket and other things;
- **ವ್ಯರೂ:** ನೊದೆಹುಲ್ಲು(ಮಂಡ್ಯ.ಜಿ); ನೊಜೆ (ಕ.ಜ.ಕೋ). A kind of grass.

ಕೋಡಿಯಡಿ kōḍiyaḍi :
- ಭೂತಭಂಡಾರದ ತಾತ್ಕಾಲಿಕ ಕೋಣೆ/ಕೊಠಡಿ/ಗುಡಿ; A temporary room of devil storage;
- ದೇವಾಲಯದ ಹೊರಬದಿಯಲ್ಲಿ, ಮನೆಯ ಅಂಗಳದಲ್ಲಿ, ಬಯಲು ಹಾಗೂ ಗದ್ದೆಗಳಲ್ಲಿ ಭೂತಭಂಡಾರದ ತಾತ್ಕಾಲಿಕ ವ್ಯವಸ್ಥೆಗಾಗಿ ಮಾಡಿದ ಸಣ್ಣ ಕೋಣೆ; A small room made temporarily in the out side of the temple in the yard, field, wet land as devil store;
- ಬಿದಿರಿನ ಕಂಬ, ತೆಂಗಿನಗರಿಯನ್ನು ಬಳಸಿ ತ್ರಿಕೋನಾಕಾರದಲ್ಲಿ ನಿರ್ಮಿಸಿದ ಗುಡಿಸಲು; ಒಂದು ಕಡೆ ಪ್ರವೇಶದ್ವಾರ ಇರುತ್ತದೆ; Bamboo piller; a hut built in triangle by using coconut palms; it has entrance one side; village hall of devil;
- ಬೂತೊದ ಚಾವಡಿ(ತು.ನಿ); ಮನೆಗಳಲ್ಲಿ ಭೂತದ ಪ್ರತೀಕ(ಭಂಡಾರ)ವನ್ನು ಇಟ್ಟಿರುವ ಚಾವಡಿ ಅಥವಾ ಕೋಣೆ(ಅದೇ); **'ಕೋಡಿಯಡಿ'** ಎಂಬುದೂ ಇದೇ ಇರಬೇಕು; A room or platform where the devil spirit store kept; may be `Koḍiyaḍi' store is also this;
- **'ಕೋಡಿ'** ಪದಕ್ಕೆ ಗದ್ದೆ, ಪಕ್ಕ, ಜಾಗ, ದಿಕ್ಕು, ಮೂಲೆ ಮೊದಲಾದ ಅರ್ಥಗಳೂ ಇವೆ(ತು.ನಿ; ಕ.ನಿ); ಗದ್ದೆಯ ಅಥವಾ ಯಾವುದಾದರೊಂದು ಪ್ರದೇಶದ ಒಂದು ಎಡೆ, ಸ್ಥಳ, ಒಂದು ತಾತ್ಕಾಲಿಕ ವ್ಯವಸ್ಥೆ ಎಂಬ ಅರ್ಥದಲ್ಲಿ **'ಕೋಡಿಯೆಡೆ'** ರೂಪ ಹುಟ್ಟಿಕೊಂಡು ಕ್ರಮೇಣ ಉಚ್ಚಾರಣಾ ವ್ಯತ್ಯಯದಿಂದ **'ಕೋಡಿಯಡಿ'** ಆಗಿರಬಹುದು; ಭೂತಾರಾಧನೆಗೆ ಸಂಬಂಧಿಸಿದಂತೆ ತುಳುನಾಡಿನಲ್ಲಿ **'ಕೋಡದಬ್ಬು/ಕೋಡ್ದಬ್ಬು'** ಮೊದಲಾದ ರೂಪಗಳಿವೆ. The word `Koḍi' has the meaning wet field; beside, place, direction, corner etc; wet land or any area of a space, place, a temporary arrangement meaning are created in the form `Koḍiyeḍe', in later stages by the pronunciation difference, it will become `Koḍiyaḍi'; in Tulu nadu the words `Koḍadabbu'/Koḍdabbu forms are in related to devil worship.

ಕೋಡಿಲ್ kōḍil :
- ಚನ್ನೆ ಮಣೆಯ ಕೋಡಿಲ್ ಕಟ್ಟೆ ಆಟದಲ್ಲಿ ನಾಲ್ಕು ತುದಿಗಳು ನಾಲ್ಕು ಕೋಣೆ(ಕಟ್ಟೆಮನೆ)ಗಳು; In the game `Channamaṇe koḍilkaṭṭe'; has four rooms in four corner;
- ಕೋಡು+ಇಲ್=ಕೋಡಿಲ್+ಕಟ್ಟೆ=ಕೋಡಿಲ್ ಕಟ್ಟೆ ಕೋಡು=ತುದಿ; ಬೆಟ್ಟ; ಇಲ್=ಮನೆ; ಕೋಣೆ ಎಂದೂ ಆಗಬಹುದು; ಬೆಟ್ಟದ ತುದಿಯಲ್ಲಿ ಇರುವ ಮನೆ, ಬೆಟ್ಟಗುಡ್ಡಗಳ ನಡುವೆ ಇರುವ ಪ್ರದೇಶ ಅಥವಾ ಊರು ಎಂದು ಅರ್ಥವಿರಬಹುದೆ? A house on the hill top;
- ತಮಿಳು ಮೂಲದಿಂದ ಬಂದ ಪದವಾಗಿರಬಹುದು; The word may from Tamil origin;
- ***—ಕೋಡಿಲ್ಲ ಕಟ್ಟ*** : ಚನ್ನೇ ಮಣೆ ಆಟದ ಒಂದು ವಿಧ; ಕೋಡಿಲ್ ಕಟ್ಟೆ(ಮನೆ) ಆಟ; ಕಟ್ಟೆ>ಕಟ್ಟ; ಎ>ಅ ವ್ಯತ್ಯಯ; ಪ್ರಾದೇಶಿಕ ಭಿನ್ನತೆ ಕಾರಣ. A kind of play in `Channemaṇe'.

ಕೋಡಿಸಾಮಾನು kōḍisāmānu :
- ಶವಸಂಸ್ಕಾರಕ್ಕೆ ಬಳಸುವ ಸಾಮಾನು; ಕಪ್ಪೆಹೊಲೆಯರ(ನೋಡಿ) ಸಂಸ್ಕೃತಿಯಲ್ಲಿ ಶವಸಂಸ್ಕಾರಕ್ಕೆ ತರುವ ಪೂಜೆ ಸಾಮಾನು, ಬಟ್ಟೆ ಮುಂತಾದುವು; Things used for funeral; things bring for funeral in Kappeholeya culture for worship;
- ಇಪ್ಪತ್ತರಿಂದ ಐವತ್ತು ಮಂದಿ ಕಪ್ಪೆಹೊಲೆಯರು ತಲಾ ಒಂದೊಂದು ಅಲ್ಯೂಮಿನಿಯಂ ತಟ್ಟೆ ಮತ್ತು ಲೋಟ ಹಿಡಿದು ಸಾವು ಸಂಭವಿಸಿದವರ ಮನೆಯ ಮುಂದೆ

ಬಂದು ಸೇರುತ್ತಾರೆ; Twenty to fifty members of Kappeholeyas gather in front of the dead's house with a glass and plate of aluminium in the hand;

- ಎಲ್ಲರೂ ಒಟ್ಟಾಗಿ ಅಂಗಡಿಗಳಿಗೆ ಹೋಗಿ, ಬಟ್ಟೆ, ಅರಿಶಿಣ, ಕುಂಕುಮ, ಸೀಗೆಪುಡಿ, ಹೂವು, ಗಂಧದಕಡ್ಡಿ ಮುಂತಾದ ವಸ್ತುಗಳನ್ನು ತೆಗೆದುಕೊಂಡು ಒಂದೆಡೆ ಸೇರುತ್ತಾರೆ; All are went to the shop purchase cloth, turmeric, vermilian, soapnut powder, flowers, aromatic sticks etc and gather at a place;
- ವಾದ್ಯಗಳೊಡನೆ 'ಉಪ್ಪಾರಿಪಾಟ್ಟು'(ಸತ್ತಾಗ ಹಾಡುವ ಹಾಡು) ಹಾಡುತ್ತಾ ಅಲ್ಲಿಂದ ಮೃತ ವ್ಯಕ್ತಿಯ ಶವ ಇರುವ ಮನೆಯ ಮುಂದಕ್ಕೆ ಮತ್ತೆ ಬಂದು ಸೇರುತ್ತಾರೆ; Singing the `Upparipaṭṭu'(a song sang at the time of death) came to where the house the dead body kept;
- ಒಡ ಹುಟ್ಟಿದವರು ಶವಕ್ಕೆ ಸ್ನಾನ ಮಾಡಿಸಿದ ಬಳಿಕ ಈ ಕೋಡಿಸಾಮಾನುಗಳನ್ನು ತೊಡಿಸಿ ಪೂಜೆ ಮಾಡುತ್ತಾರೆ; Be born with the dead give bath to the body and wear the `Koḍi' things to it; perform the pooja;
- ಉಳಿದವರು ಉಳಿದ ಕೋಡಿ ಸಾಮಾನುಗಳನ್ನು ತಲೆಯ ಮೇಲೆ ಹೊತ್ತು ಸಮಾಧಿ ಸ್ಥಳದವರೆಗೆ ತೆಗೆದುಕೊಂಡು ಹೋಗಿ ಅವುಗಳನ್ನು ಪಾಟಪ್ಪ(ಶವಸಂಸ್ಕಾರ ಕ್ರಿಯೆಯಲ್ಲಿ ಭಾಗವಹಿಸುವ, ಅವರದೇ ಸಮುದಾಯದ ಅಗಸ)ನಿಗೆ ಮತ್ತು ವಾದ್ಯದವರಿಗೆ ಕೊಡುತ್ತಾರೆ; The remaining members carry the remaining Koḍi things to the graveyard; gave them to the musical instrument players and paṭappa (paṭappa means a washerman of the same community who is participate in the funeral);
- 'ಕೋಡಿ' ಪದಕ್ಕೆ ಕೊನೆ ಎಂಬ ಅರ್ಥವಿದ್ದು ವ್ಯಕ್ತಿಯ ಜೀವಿತದ ಕೊನೆಯಲ್ಲಿ ಬಳಸುವ ಪದಾರ್ಥಗಳು ಎಂಬ ಅರ್ಥದಲ್ಲಿ 'ಕೋಡಿಸಾಮಾನು' ರೂಪ ಬಳಕೆಗೆ ಬಂದಿರಬಹುದು. The word `Koḍi' means end; the word `Koḍi samanu' form used in the meaning of a person uses the things in the end of his life.

ಕೋಡಿಹಳ್ಳಿ೧ kōḍihaḷḷi[1] :

- ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೋಕಿನ ಕ್ರಿ.ಶ.೧೦ನೇ ಶತಮಾನದ ೨೪ನೇ ಶಾಸನದಲ್ಲಿ ಇದರ ಉಲ್ಲೇಖ;The name referred in the 24th inscription of 10thAD Nagamangala taluk, Mandya district;
- ಮಾಯಮ್ಮನ ಗುಡಿಗೆ ಎತ್ತರದಲ್ಲಿ ನಿಂತಿರುವ ಶಾಸನ; This inscription was installed on the high of Mayamma temple;
- ಯುದ್ಧದಲ್ಲಿ ಮಡಿದ ತಂದೆಯೊಬ್ಬನ ಮಗಳಾದ ಬಿಡಕ್ಕ ಸನ್ಯಾಸನ ದೀಕ್ಷೆ ಪಡೆದಾಗ ನಿಲ್ಲಿಸಿರುವ ಶಾಸನ; This inscription was installed when a father martyred in the war, the daughter Biḍakka got religious observance;
- 'ಕೋಡಿ' ಎಂದರೆ ಕೆರೆಯ ನೀರು ತುಂಬಿದಾಗ ಹೆಚ್ಚಿನ ನೀರು ಹರಿಯಲು ಮಾಡಿರುವ ದಾರಿ; The way or sluice of the tank to be released when the tank is full;
- ಕೋಡಿ+ಹಳ್ಳಿ=ಕೋಡಿಹಳ್ಳಿ(ಪಳ್ಳಿ>ಹಳ್ಳಿ);
- ತೆಲುಗಿನಲ್ಲಿ ಸಂವಾದಿ ಪದವಾಗಿ 'ಕೋಡು' ಎಂದಿದ್ದರೂ ಅದಕ್ಕೆ 'ಕಾಲುವೆ' ಎಂಬ ಅರ್ಥ ಇರುವಂತೆ ತೋರುತ್ತದೆ(DED); The equivalent word `Koḍu' existed in Telugu; but it may be have the meaning `canal';
- ಕೆರೆಯ ಕೆಳಗಿನ ಕೋಡಿಯ ಕಾರಣಕ್ಕೆ ಬಂದಿರುವ ಹೆಸರು; ಕೆರೆಯಿರುವ ಊರು; ಕೋಡಿ ಬಳಿ ಇರುವ ಹಳ್ಳಿ ಎಂದೆಲ್ಲ ಅರ್ಥ ಮಾಡಬಹುದು; A name to a village near the sluice or koḍi or in the low of the tank;
- 'ಕೋಡಿಹಳ್ಳಿ' ಎಂಬ ಹೆಸರುಗಳು ಅನೇಕ ಕಡೆ ಕಂಡು ಬಂದಿವೆ; ಇವು ಪುನರಾವರ್ತನೆಯಂತೆ ಕಾಣುತ್ತವೆ; ವ್ಯಕ್ತಿಯ ಹೆಸರುಗಳಲ್ಲಿ ಕಾಣುವ ಸಾದೃಶ್ಯ ಮೂಲ ಹೆಸರುಗಳಂತೆ ಹಳ್ಳಿಯ ಹೆಸರುಗಳೂ ಮೈದೋರಿವೆ; ಒಂದು ಹಳ್ಳಿಯ ಹೆಸರನ್ನು ನೋಡಿ ಇತರ ಕಡೆಯಲ್ಲೂ ಹಾಗೆಯೇ ಬಂದಿರುವ ಸಾಧ್ಯತೆ

ಇದೆ. The names of `Kodihalli' use in many places; this seems to be repeat.

(E.C- ೭; ಮಂಡ್ಯ.ಜಿ.)

ಕೋಡಿಹಳ್ಳಿ೨ kōḍihaḷḷi² :

- ಮೈಸೂರು ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೋಕಿನ ಕ್ರಿ.ಶ.೧೫೨೧ರ ೧೫೬ನೇ ಶಾಸನದಲ್ಲಿ ಇದರ ಪ್ರಸ್ತಾಪ; In the 156th inscription of 1521AD Mysore district, Gunḍlupeṭe taluk, this name was refered;
- ಕೋಡಿ+ಹಳ್ಳಿ; 'ಕೋಡಿ'ಗೆ ಸಂವಾದಿಯಾಗಿ 'ಕೋಟೆ'(ಳ) ರೂಪವೂ ಇದೆ, ಟ>ಳ, ಟ>ಡ, ಡ>ಟ ಆಗುವುದಿದೆ; ತಮಿಳಿನಲ್ಲಿ 'ಕೋಡಿ' ಪದವೇ ಇದೆ; ತೆಲುಗಿನಲ್ಲಿ 'ಕೋಡು' ಪದವೇ ಬಂದಿದೆ;
- 'ಕೋಡಿ' ಎಂದರೆ ಕೆರೆಯ ಹೆಚ್ಚಿನ ನೀರು ಹರಿದು ಹೋಗುವಂತೆ ಮಾಡಿರುವ(ಏರಿಯಲ್ಲಿ) ಬಾಗಿಲು ಅಥವಾ ತೂಬು; 'ಉರುಳು ಅಣೆ' ಕೂಡ ಇರುತ್ತದೆ; Koḍi means a gate, door, way, sluice to flow out the excess water of the tank;
- ಊರಿನ ಸಮೀಪ 'ಕೋಡಿ' ಇದ್ದ ಹಿನ್ನೆಲೆಯಲ್ಲಿ ಈ ಹೆಸರು ಬಂದಿರಬಹುದು; `Koḍi' or sluice near the village, so the name may come;
- ಇದು ಕೊಡಗು ನಾಡ ತೆರಕಣಾಂಬೆ ಸ್ಥಳದ ಸಮೀಪ ಗ್ರಾಮ; This village is near the Koḍagu nadu Terakaṇambe;
- ವಿಜಯನಗರದ ಅರಸು ಶ್ರೀಕೃಷ್ಣದೇವರಾಯನು 'ಕೋಡಿಹಳ್ಳಿ'ಯ ಕೆಲವು ವೃತ್ತಿ ತೆರಿಗೆಯನ್ನು ಮಾನ್ಯ ಮಾಡಿದ್ದನಂತೆ. The king of Vijayanagara empire honoured the taxes of `Koḍihaḷḷi'.

(E.C- ೩; ಮೈ.ಜಿ.)

ಕೋಡಿಯಹಳ್ಳಿ kōḍiya haḷḷi :

- ಅರಸೀಕೆರೆ ತಾಲ್ಲೋಕಿನ ತಳಲು ತೊರೆ ಪ್ರದೇಶದಲ್ಲಿ ದೊರೆತ ಕ್ರಿ.ಶ.೧೩-೧೪ನೇ ಶ.ದ ವೀರಗಲ್ಲಿನಲ್ಲಿ ಈ ಊರಿನ ಪ್ರಸ್ತಾಪ; This place name refered on the `Veeragallu' of 13-14th century Arasikere taluk, Taḷalu thore area;
- ಕೆರೆಯ ಕೋಡಿಯ ಸಮೀಪದಲ್ಲಿರುವ ಗ್ರಾಮ ಎಂದು ಅರ್ಥೈಸಬಹುದು; ಆ ಕಾರಣ ಅದು ಜಲವಾಚಿ; May be mean the village is near the sluice of the tank;
- ಕೆಲವರು 'ಕೋಡಿಹಬ್ಬ' ಮಾಡುತ್ತಾರೆ; ಹಬ್ಬದ ಕೇಂದ್ರದಲ್ಲಿರುವಂಥದು 'ಕೋಡಿ' ದೇವತೆ(ಕೆಲವು 'ದೆವ್ವ' ಕೂಡ); ಇದರ ಹಿನ್ನೆಲೆಯಲ್ಲಿ ಈ ಹೆಸರು ಬಂದಿರಲು ಸಾಧ್ಯವಿದೆ; ಆ ಕಾರಣ ಅದು ದೈವವಾಚಿ ಸ್ಥಳನಾಮವಾಗಿದೆ. Some celebrate `Koḍi habba'; the centre theme of the festival is `Koḍi' goddess; on the basis of this the name may in practice.

(E.C- ೧೦; ಹಾ.ಜಿ.)

ಕೋಡು೧ kōḍu¹ :

- ತುದಿ; ಕೊನೆ; ನೆತ್ತಿ; ಕೊಂಬು; ಸಾರಂಗ, ಎತ್ತು, ಎಮ್ಮೆ ಮೊದಲಾದ ಕೆಲವು ಪ್ರಾಣಿಗಳ ತಲೆಯ ಮೇಲೆ ಬೆಳೆಯುವ ಗಟ್ಟಿಯಾದ, ಉರುಟು ಮತ್ತು ಮೊನಚಾದ ಜೋಡಿ ಅಂಗ; ದನದ ಕೋಡು; ಎಮ್ಮೆಯ ಕೋಡು ಇತ್ಯಾದಿ; *ಪ್ರ: 'ಕೋಣಗಳೆರಡೂ ಕೋಡುಗುಟ್ಟಿದವು'*; Tip, top, horn, a sharp hard two parts on the head of deer, ox, buffalo etc; cattle horn; buffalo horn etc;
- ಕೋರೆ; ಕೋರೆ ಹಲ್ಲು; ದಂತ; ಆನೆ, ಕಾಡು ಹಂದಿ ಮೊದಲಾದ ಕೆಲವು ಪ್ರಾಣಿಗಳಲ್ಲಿ ಕಟಬಾಯ ಎರಡೂ ಬದಿಯಲ್ಲಿ ಬೆಳೆದುಕೊಳ್ಳುವ ಕೋರೆಹಲ್ಲು/ ಉದ್ದನೆಯ ಜೋಡಿ ಹಲ್ಲು; ಆನೆಯ ಕೋಡು; *ಪ್ರ: 'ಆನೆಯ ಕೋಡು ಬಾಗದೆಮ್ಮನ್ತೆ'*(ಉಲ್ಲೇಖ: ಕಿಟ್ಟೆಲ್); Curve, curved teath; ivory etc; grows in the jaws of boar, elephant etc; curved teeth/ivory;
- ಕಾಳುಗಳಿರುವ ಸಿಪ್ಪೆಯ ಮುಚ್ಚಿದ ತುದಿಯಲ್ಲಿರುವ ಉದ್ದನೆಯ ಮತ್ತು ಚೂಪಾದ ಆಕಾರ; ಅಲಸಂಡಿ ಕೋಡು, ಬೆಂಡೆ ಕೋಡು, ಗುಲಗಂಜಿ ಕೋಡು ಇತ್ಯಾದಿ; ಕಾಳುಗಳಿಂದ ಕೂಡಿದ ಸಿಪ್ಪೆ, ಸಿಂಬೆ; ಧಾನ್ಯಗಳ ಬೀಜಕೋಶ(ತು.ನಿ); ವ್ಯರೂ: ಕೊಮ್ಮು; ಉದಾ: ಕೊಮ್ಮಿನ ಜೋಳ; A sharp needle like structure on the skin of the corn;
- ಬೆಟ್ಟದ ತುದಿ; ಶಿಖರ; ಗಿರಿಶೃಂಗ; ಬೆಟ್ಟದ ನೆತ್ತಿಯ ಮೇಲಿನ ಬಂಡೆ; ಕೋಡುಗಲ್ಲು; *ಪ್ರ: 'ಕೋಡುಗಲ್ಲಿನ ಮೇಲೆ ಮಾಡುವ ತಪವು ಒಂದು ದಿನದ*

ಗುರುಸೇವೆಗೆ ಸಮನಲ್ಲ' (ಉಲ್ಲೇಖ: ಕಿಟ್ಟೆಲ್); Tip of the hill; peak, mountain peak; stone on the hill top;

- ಏಡಿ, ನಳ್ಳಿ, ಚೇಳು; ಮೊದಲಾದ ಕೆಲವು ಸಂದೀಪದಿಗಳ ಕುಟುಕುವ ಅಥವಾ ಕಚ್ಚುವ ಕೊಂಡಿ; *ಪ್ರ: 'ಏಡಿ ಕಾಲ್ನಾಗೆ ಎರ್ಡೆರ್ಡ್ ಕೋಡವೈ'*(ಚಾ.ಜಿ); Hook of crab; lobster; scorpion etc; prick or bite;
- ತಿವಿ; ಚುಚ್ಚು; ನಾಟು; Stab; pierce; planting;
- ಟಿಸಿಲು; ಮರದ ಕೊಂಬೆ; ರೆಂಬೆ; ಕವಲು; Shoot; branch of a tree; bough; branch;
- ಕೆರೆಯ ಹೆಚ್ಚಿನ ನೀರು ಹೊರಕ್ಕೆ ಹರಿಯುವ ಜಾಗ; ಕೋಡಿ; The place excess water of the tank go out of it;
- ತಮಿಳಿನಲ್ಲಿ 'ಕವಡು' ರೂಪ ಇದೆ; ಕವಲು/ಕವಡು ಮೂಲ ರೂಪವಾಗಿದ್ದು ಕವಡು>ಕೋಡು ಆಗಿರುವ ಸಾಧ್ಯತೆ ಇದೆ; ದೇಶೀಪದ: `Kavaḍu' form is in Tamil; kavalu/kavaḍu is original form; so, the word `kavaḍu' become `koḍu' is possible;
- 'ಕೋಡು'ಗೆ ಕೂಟ, joined, both-hands(ಕಿಟ್ಟೆಲ್) ಅರ್ಥಗಳಿವೆ; ಉದಾ: ಕೋಡುಗವಣೆ(=ಜೋಡಿ ಕವಣೆ); ಕೋಡುಳ್ಳ ಪ್ರಾಣಿಗಳಲ್ಲಿ ಕೋಡುಗಳು ಜೋಡಿಯಲ್ಲಿ ಇರುತ್ತವೆ; ಸಾರಂಗದಲ್ಲಿ ಕವಲೊಡೆದ ಜೋಡಿ ಕೋಡುಗಳೇ ಇವೆ; Couple of horns in animals; deer has branched couple of horns;
- ಆನೆಯ ಕೋಡು(ದಂತ) ಕೋಡುಗಳಲ್ಲೆಲ್ಲಾ ಅತ್ಯಂತ ಬೆಲೆ ಬಾಳುವಂತಹುದು; 'ಆನೆ ಸತ್ತರೂ ಸಾವಿರ ಇದ್ದರೂ ಸಾವಿರ' ಎಂಬ ನಾಣ್ಣುಡಿ ಒಂದು ಕಾಲಕ್ಕೆ (ಸಾವಿರದ ಮೌಲ್ಯ ಆಧಿಕ್ಯವನ್ನು ಹೊಂದಿದ್ದ ಕಾಲಕ್ಕೆ) ತುಂಬಾ ಪ್ರಚಲಿತವಿತ್ತು; ದಂತಕ್ಕಾಗಿ ಆನೆಗಳನ್ನು ಹತ್ಯೆಗೈಯುವುದು ನಡೆದೇಯಿದೆ; ಆನೆಯ ಕೋಡು ಅಲಂಕಾರ ಸಾಧನ; ಕಲಾಕೃತಿಗಳ ರಚನೆಗೆ ಬಳಕೆ; ದುಬಾರಿ ವಸ್ತುವಾದ್ದರಿಂದ ಶ್ರೀಮಂತಿಕೆಯ, ರಾಜಗಾಂಭೀರ್ಯದ ಸೂಚಕ; Elephants(ivory) horn is valuble than any other horns; `Elephant has value of thousand even dead or in life' is a proverb; it was very famous; (when the value of thousand was considerable) so the poaching of elephant is continuing; the ivory of elephant is an instrument of decoration; used to work of art; it is very expensive thing so it is the symbol of rich, kingly status;
- ದನದ ಕೊಂಬು ಕಹಳೆ ತಯಾರಿಕೆಯಲ್ಲಿ ಒಂದು ಕಾಲಕ್ಕೆ ಬಳಕೆಯಾಗುತ್ತಿತ್ತು; ಸಾಕುವ ದನಗಳಲ್ಲಿ ಕೋಡು ನೇರವಾಗಿ, ದಷ್ಟಪುಷ್ಟವಾಗಿ, ಹೊಳಪುಳ್ಳ ತೆಳು ಕಂದು/ಕಪ್ಪು ಬಣ್ಣದ್ದಾಗಿ ಇದ್ದರೆ ಹೆಚ್ಚು ಆಕರ್ಷಕ; ಅಂತಹ ಕೋಡು ಇರುವ ದನಗಳಿಗೆ ಬೆಲೆಯೂ ಒಂದಿಷ್ಟು ಹೆಚ್ಚು ಇರುತ್ತದೆ; ದನ ಎಮ್ಮೆ ಮೊದಲಾದ ಸಾಕುಪ್ರಾಣಿಗಳನ್ನು ಕೊಳ್ಳುವಾಗ ಕೋಡಿನ ಲಕ್ಷಣವೂ ಪರಿಗಣನೆಗೊಳ್ಳುತ್ತದೆ; The horns of cattle used to prepare trumpet; the horns are very attractive; if they are straight, healthy, light brown or black colour with shining; such horned cattles are costly; while buying the cattle, buffalo consider the nature of the horn also;
- ದನದ ಕೋಡುಗಳನ್ನು ಒರೆದು ನಯವಾಗಿ ಇಟ್ಟುಕೊಳ್ಳುವುದು, ಎಣ್ಣೆ ಹಚ್ಚಿ, ನುಣುಪು ಬರುವಂತೆ ಮಾಡುವುದು, ಮಖೆ ಹಬ್ಬ ಸಂಕ್ರಾಂತಿ ಮೊದಲಾದ ವ್ಯವಸಾಯ ಸಂಬಂಧಿ ಆಚರಣೆಗಳಲ್ಲಿ ಕೋಡುಗಳನ್ನು ಸಿಂಗರಿಸುವುದು ಸಾಕುವವರಿಗೊಂದು ಹವ್ಯಾಸ(ನೋಡಿ: ಕೊಂಬು); ಎಮ್ಮೆ, ಕೋಣ, ಆಡು, ಟಗರುಗಳ ಕೋಡಿಗೂ ಒಂದು ಮಿತಿಯ ಅಲಂಕಾರ ಉಂಟು; The cattle horns are kept nice by plaining; the cattle horns are decorated at the time of `Makhe, Sankranthi' festivals, it is an habit to cattle rearers; a limited decoration is also to buffalo, bison, goat, ram horns too;
- ಎಮ್ಮೆ ಕೋಣ ಆಡು ಟಗರುಗಳ ಕೋಡಿಗೆ ಹೆಚ್ಚಿನ ಕಿಮ್ಮತ್ತು ಸದ್ಯದಲ್ಲಿ ಇಲ್ಲ; ಕೋಣವನ್ನು ದೈವದ ಪ್ರತೀಕವಾಗಿ ಆರಾಧಿಸುವ ಆದಿವಾಸಿ ಬುಡಕಟ್ಟುಗಳಿದ್ದವು; ಕೋಣಗಳ ಕೋಡನ್ನು ತಲೆಯ ಮೇಲೆ ಆಲಂಕಾರಿಕವಾಗಿ ಧರಿಸುವ ಆದಿವಾಸಿ ಪಂಗಡಗಳೂ ಇದ್ದವು; No value for the

horns of buffalo, goat and ram now a days; the tribals consider buffalo as the symbol of their deity and worship it;; some of the tribal communities wear the buffalo horns on the head as decoration;

- ಜಿಂಕೆ ಹಾಗೂ ಸಾರಂಗದ ಕೋಡುಗಳು ಅಲಂಕಾರದ ಸಾಮಗ್ರಿಯಾಗಿ ಬಳಕೆಯಾಗುತ್ತವೆ; ಜನಪದರ ಕೆಲವು ಧಾರ್ಮಿಕ ಆಚರಣೆಗಳ ಸಂದರ್ಭದಲ್ಲಿ ಜಿಂಕೆಯ ಕೊಂಬು ಊದುವ ಸಾಧನವಾಗಿ ಸಿಂಗನಾದ ಬಳಕೆ; ಶೈವ ವೈಷ್ಣವ ಸಂಪ್ರದಾಯ ಭಿಕ್ಷಾಟನೆಯ ಸಂದರ್ಭದಲ್ಲಿ ಗೃಹಸ್ಥರ ಮನೆಯ ಮುಂದೆ ನಿಂತು ಜಿಂಕೆಯ ಕೊಂಬನ್ನು ಊದಿ ಗಮನ ಸೆಳೆಯುವುದನ್ನು ಹೇಳುತ್ತದೆ; The horns of deer and antelope used as the decoration material; the deer horn used to blow in certain festivals as `Singanada'; In Shiva, Vaishnava tradition blow the deer horn infront of the house to attract the household for alms;
- ಅಲಂಕಾರಿಕ ಭಾಷೆಯಲ್ಲಿ 'ಕೋಡು' ಪದ ಹೆಮ್ಮೆ, ಹೆಚ್ಚುಗಾರಿಕೆ, ಏಳಿಗೆ, ಶ್ರೇಯಸ್ಸು, ಕೀರ್ತಿ, ಗರ್ವ, ಅಹಂಕಾರ, ಸೊಮ್ಮು ಮೊದಲಾದ ವಿಶೇಷ ಅರ್ಥಗಳನ್ನು ಪಡೆದುಕೊಳ್ಳುತ್ತದೆ; ಈ ಅರ್ಥಗಳಲ್ಲಿ 'ಕೋಡು' ಪದ ದೈನಂದಿನ ಆಡುಮಾತಿನಲ್ಲೂ, ಕಾವ್ಯಭಾಷೆಯಲ್ಲೂ ಬಳಕೆಯಾಗುವುದು ಸಾಮಾನ್ಯ; 'ಆತನ ಸಂತೋಷಕ್ಕೆ ಕೋಡು ಮೂಡಿದಂತಾಯಿತು' (ಉಲ್ಲೇಖ: ಕ.ನಿ), 'ನಿನ್ನ ಕೋಡ ಕೊಱಿಯದೆ ಬಱಿದೆ ಬಿಟ್ಟಪೆನೆ'(ಅದೇ); 'ಕೋಟಲೆಗೆ ಕೋಡು ಮೂಡಿದ ತೆಱದಿಂ'(ಅದೇ) ಎಂಬಂತಹ ಪ್ರಯೋಗಗಳು ಶಿಷ್ಟ ಕಾವ್ಯಗಳಲ್ಲಿವೆ; 'ಒಂದು ಕೋಡಿನ ಎತ್ತು ಊರ ಜ್ವಾಳಾನೆಲ್ಲ ಮುಕ್ಕುತೈತೆ' ಎಂಬುದು ಒಂದು ಒಗಟು; ಇಲ್ಲಿ 'ಒಂದು ಕೋಡಿನ ಎತ್ತು' ಬೀಸೋಕಲ್ಲಿಗೆ ರೂಪಕ; 'ಕೋಡುಗಲ್ಲ ಮ್ಯಾಲೆ ಗವಿಸಿದ್ದ ಕೂತುಗಂಡು ಚೇಳೂರಿಗೆ ವಾಲೆ ಬರದಾನೆ' —ಇದು ಕಥನಗೀತೆಯೊಂದರ ಒಂದು ಸಾಲು; ಗವಿಸಿದ್ದನ ಸಾಧನೆಯ ಎತ್ತರಕ್ಕೆ ಸಂಕೇತ 'ಕೋಡುಗಲ್ಲು'; 'ಅಷ್ಟಕ್ಕೇ ಕೋಡು ಮೂಡ್ಡೋನಂಗಾಡ್ತನೆ' ಇತ್ಯಾದಿ ಮಾತಿನ ರೂಢಿಗಳಿವೆ; In the literary language the word `Koḍu' has the meaning respect, vanity, prosperity, fame, conceit; egoism, haughtiness etc; in these meaning the word `koḍu' generally used in spoken language and literary language;
- 'ಕೋಡು' ರೋಷ, ತಂಟೆ ತಕರಾರಿನ ಕಾಲು ಕೆರೆತಕ್ಕೆ ಸಂಕೇತವಾಗುವುದೂ ಉಂಟು; ಕೊಬ್ಬಿದ ಗೂಳಿ, ಕೋಣ, ಕಡವೆ ಮೊದಲಾದ ಪ್ರಾಣಿಗಳು ಶತ್ರು ಪ್ರಾಣಿಗಳ ಮೇಲೆ ಆಕ್ರಮಣ ಮಾಡುವಾಗ, ಶತ್ರುಗಳಿಂದ ರಕ್ಷಣೆ ಪಡೆಯುವಾಗ ಕೋಡನ್ನು ಪ್ರಮುಖ ಸಾಧನವಾಗಿ ಬಳಸಿಕೊಳ್ಳುತ್ತವೆ; ಕಾಡುಪ್ರಾಣಿಗಳು ಕೋಡುಕುಟ್ಟಿ ಜಗಳಕ್ಕೆ ನಿಲ್ಲುವ ದೃಶ್ಯ ತುಂಬಾ ರೋಚಕ; ಕೋಡಿನಲ್ಲಿ ನವೆ ಕಾಣಿಸಿಕೊಂಡಾಗ ನೆಲಕ್ಕೆ, ದಿಬ್ಬಗಳಲ್ಲಿ ಕೋಡನ್ನು ಚುಚ್ಚುವುದು, ಉಜ್ಜಿಕೊಳ್ಳುವುದು ಕೋಡುಳ್ಳ ಪ್ರಾಣಿಗಳ ಒಂದು ಹವ್ಯಾಸ; ದೇಹದ ಸೊಕ್ಕು ಕಾಮೋದ್ರೇಕ ಹೆಚ್ಚಾದಗಲೂ ಪ್ರಾಣಿಗಳು ಇಂತಹ ವರ್ತನೆ ತೋರುತ್ತವೆ; The word `Koḍu' used to the symbol of anger, mischief, controversy; the horn is mainly used to fight against the enemy by the bull, buffalo, deer etc; the wild animals fighting scenary is very restorative; if any itching found in horns, they rub the horn to the earth, to mounds and pierce into it, it is an hobby of the animal too; if they have lust excitement show this kind of attitude;
- ದೇಶೀಪದ;
- ವ್ಯರೂ: ಕೋಡ; ಕೋಳು; ಕೋಟ್(ಹ.ಗ); ಜ್ಞಾಬಾರೂ: ತ: ಕೊಡಗು; ಕೋಟ್ಟೈ; ಕುವಡು, ಕೋಟ್ಟು; ತೆ: ಕೋಡು, ಕೋಡಾಡು; ಮ: ಕೋವಿ, ಕೋಡ, ಕೋಡ್, ಕೋಡು; ತು: ಕೋಡ್, ಕೋಡ, ಕೋಡು;
- ***—ಕೋಡಕಾಳೆ*** : ಕೋಡಿನ(ಕೋಡು+–ಇನ)+ಕಹಳೆ/ಕೋಡು+ಅ+ಕಹಳೆ; ಕಹಳೆ>ಕಾಳೆ; ಹ್–Ø; 'ಹ'ಕಾರ ಲೋಪಗೊಂಡು 'ಕ' ದೀರ್ಘ ಆಗಿದೆ; ಕೋಡಿನಿಂದ ಮಾಡಿದ ಕಹಳೆ; ಕೋಡಿನ ಕಹಳೆ;
- ***—ಕೋಡಕೊರೆ*** : ಕೋಡನ್ನು ಕತ್ತರಿಸು; ಕೊಂಬನ್ನು ಕೊಯ್ಯು; ಕೋಡು ಇಳಿಸು; ಅಲಂಕಾರಿಕ

ಭಾಷೆಯಲ್ಲಿ ಗರ್ವಭಂಗ ಮಾಡು, ಭಂಗಪಡಿಸು; ಅವಮಾನಗೊಳಿಸು; ಕೊರೆ=ಕತ್ತರಿಸು; ಕೊಯ್ಯಿ; ರಂಧ್ರ ಮಾಡು; Cut the horn; hack the horn; shorten the horn; in literary language puldown the vanity; insult; dishonour;

- ***—ಕೋಡು ಅಣಸ/–ಕೋಡಾನಸ/–ಕೊಂಬುಕಳಸ*** : ಜಾನುವಾರುಗಳ, ವಿಶೇಷವಾಗಿ ದನಗಳ, ಕೋಡಿನ ತುದಿಗೆ ಸಿಕ್ಕಿಸುವ ಕಂಚು/ಹಿತ್ತಾಳೆ/ತಾಮ್ರ/ಬೆಳ್ಳಿ ಲೋಹದಿಂದ ತಯಾರಿಸಿದ ಒಂದು ಆಭರಣ; ಕಳಸ; ಇದರ ತುದಿಗೆ ಗೆಜ್ಜೆ ಅಳವಡಿಸುವುದೂ ಉಂಟು; ಕೋಡಣಸು; ಕೋಡು ಸೀಳದ ಹಾಗೆ ರಕ್ಷಾ ಕವಚವಾಗಿಯೂ ಈ ಅಲಂಕಾರ ಸಾಮಗ್ರಿ ಕೆಲಸ ಮಾಡುತ್ತದೆ; ಕೊಂಬಿನ ತುದಿಗೆ ಅಳವಡಿಸುವುದರಿಂದ ಎತ್ತು ತಿವಿಯುವುದನ್ನು ಅಥವಾ ತಿವಿತದಿಂದಾಗುವ ಅಪಾಯವನ್ನು ತಡೆಗಟ್ಟಬಹುದು; ಕೆಂಡದಿಂದ ಕಾಯಿಸಿದ ಅಣಸನ್ನು ಅಳವಡಿಸಿದರೆ ಕೊಂಬಿಗೆ ಬಿಗಿಯಾಗಿ ಕಚ್ಚಿಕೊಳ್ಳುತ್ತದೆ, ಶಾಶ್ವತವಾಗಿರುತ್ತದೆ ಎನ್ನುತ್ತಾರೆ; ಕೋಡು+ಅನಸ/ಅಣಸ; **ನೋಡಿ:** ಕೊಂಬು; –ಕೊಂಬಣಸು; **ವ್ಯರೂ:** ಕೋಡ್ಯಾನಸ; An ornament made of bronze/brass/ copper/silver metals for live stock; specially for cattles; tiny bells are fixed to the tip; this decorative work as a protector to the horns, to avoid the split of horns; it has fixed to the horn, it avoids the problems of stab by the oxen;
- ***—ಕೋಡುಕಂಚು*** : ದನಗಳ ಕೋಡಿನ ತುದಿಗೆ ಸಿಕ್ಕಿಸುವ ಕೊಳವೆಯಾಕಾರದ ಆಭರಣ; ಕಂಚು ಮೊದಲಾದ ಲೋಹದಿಂದ ಮಾಡಿದ್ದು; ಕೋಡಣಸು; *ಪ್ರ: 'ಕೋಡುಗಳ ತುದಿಯಲ್ಲಿ ಹೊಳೆಯುತ್ತಿದ್ದ ಹಿತ್ತಾಳೆಯ ಕೋಡುಕಂಚುಗಳು'* (ಮ.ಮ); A tube shape ornament fixed to the cattle horn; made by the bronze metal etc;
- ***—ಕೋಡುಕಟ್ಟು*** : ಎತ್ತಿನ ಕೋಡಿಗೆ ಹಾಕುವ ಬಳೆ ಆಕಾರದ ಆಭರಣ; ಅಲಂಕಾರದ ಜೊತೆಗೆ ದನಗಳ ಕೋಡು ಸಿವುರು ಏಳದಂತೆ ತಡೆಯುತ್ತದೆ; ಆದುದರಿಂದ ಕಟ್ಟು, ಬಂಧನ; ಕೋಡಣಸಿಗಿಂತ ಭಿನ್ನ; ಕೋಡ ಬಳೆ; **ವ್ಯರೂ:** ಕೋಡುಗಟ್ಟು; A ring shape ornament to fix the horn of the ox; along with avoiding the horns slice of the cattle;
- ***—ಕೋಡುಕವಣೆ*** : ಕೋಡು+ಕವಣೆ= ಕೋಡುಕವಣೆ>ಕೋಡುಗವಣೆ; ಜೋಡುಕವಣೆ(?);
- ***—ಕೋಡುಕಳ್ಳಿ/–ಕೋಡುಗಳ್ಳಿ*** : ಕಳ್ಳಿ ಗಿಡದಲ್ಲಿ ಒಂದು ಬಗೆ; ಕೋಲುಗಳ್ಳಿಯೇ ಇರಬಹುದು; ಕೋಡು+ಕಳ್ಳಿ; ಕ>ಗ ವ್ಯತ್ಯಯ; A kind of cactus; may be Koḍugalli;
- ***—ಕೋಡುಕುಂಚ/–ಕೋಡುಗೊಂಡೇವು*** : ಎತ್ತಿನ ಕೋಡಣಸಿನ ತುದಿಗೆ ಕಟ್ಟುವ ಬಣ್ಣದ ಎಳೆಗಳ ಕುಚ್ಚು; ಒಂದು ಅಲಂಕಾರ ಸಾಮಗ್ರಿ; ಗೊಂಡೆ (=ಗೊಂಚಲು/ಕುಚ್ಚ/ಗುಚ್ಚ)+–ಏವು= ಗೊಂಡೇವು; ಉಚ್ಚಾರಣಾ ವ್ಯತ್ಯಯ; A coloured thread bunch to tie the tip of the horn ornament; a kind of decoration thing;
- ***—ಕೋಡುಗಗ್ಗರ*** : ಎತ್ತಿನ ಕೋಡಣಸಿನ ಕೆಳಭಾಗಕ್ಕೆ, ಕೋಡಣಸನ್ನು ಹಾಕುವುದಕ್ಕೆ ಮೊದಲೇ ಅಳವಡಿಸುವ, ಒಂದು ತೊಡವು; ಬಳೆಯಾಕಾರದ ನಳಿಕೆ ಇದಾಗಿದ್ದು ಒಳಗೆ ಸಣ್ಣ ಗುಂಡುಗಳಿರುವುದರಿಂದ ಗಿಲಿಗಿಲಿ ಶಬ್ದ ಮಾಡುತ್ತದೆ; ಹಿತ್ತಾಳೆಯಿಂದ ತಯಾರಿಸುತ್ತಾರೆ (ಬ.ಜಿ); ಗಗ್ಗರ=ಗೆಜ್ಜೆ; ಕಿರುಗೆಜ್ಜೆಗಳುಳ್ಳ ಆಭರಣ; Ornamented silver ring; small balls are in this ring, to make sound; it is made of brass or silver metal;
- ***—ಕೋಡುಗಲ್ಲು/–ಕೋಡ್ಗಲ್ಲು*** : ಬೆಟ್ಟದ ತುದಿಯಲ್ಲಿರುವ ಕಲ್ಲು/ಬಂಡೆ; ಪರ್ವತದ ಶಿಖರದ ಮೇಲಿರುವ ಕಲ್ಲು; ಶಿಖರ; ಕೋಡು+ಕಲ್ಲು; *ಪ್ರ: 'ಕೋಡುಗಲ್ಲಿನ ಮ್ಯಾಗೆ ಕುಂತವರೆ ಮಾದೇವ';* A rock on the top of the mountain or hill;
- ***—ಕೋಡುಗೆಜ್ಜೆ*** : ಎತ್ತುಗಳ ಕೋಡಿಗೆ ಅಳವಡಿಸಿದ ಗೆಜ್ಜೆ; ಕೋಡುಗಳ ತುದಿಗೆ ರಂಧ್ರ ಕೊರೆದು, ಆ ರಂಧ್ರಕ್ಕೆ ತಂತಿ ಪೋಣಿಸಿ ಪ್ರತಿ ಕೋಡಿಗೆ ಮೂರ್‍ನಾಲ್ಕು ಕಿರುಗೆಜ್ಜೆಗಳನ್ನು ಕಟ್ಟುತ್ತಾರೆ; ಎತ್ತುಗಳನ್ನು ಊಡಿದ ಗಾಡಿಯನ್ನು ನಡೆಸುವಾಗ ಅಥವಾ ನೇಗಿಲಿನಿಂದ ಉಳುಮೆ ಮಾಡುವಾಗ

ದನಗಳ ಹೆಜ್ಜೆಗೆ ತಕ್ಕ ಲಯದಲ್ಲಿ ಗಿಲಿಗಿಲಿ ಶಬ್ದ ಮಾಡುವ ಗೆಜ್ಜೆನಾದ ಎತ್ತುಗಳಿಗೆ ಮುನ್ನಡೆಯಲು ಹುರುಪು/ಭಯ ತುಂಬುತ್ತದೆ; ಕೆಲಸದ ಬೇಸರ/ಆಯಾಸವನ್ನು ಗೆಜ್ಜೆನಾದ ನಿವಾರಿಸುತ್ತದೆ; ಕಾಡುದಾರಿಗಳಲ್ಲಿ ಒಂಟಿಗಾಡಿಯಲ್ಲಿ ಪ್ರಯಾಣಿಸುವಾಗ ಗೆಜ್ಜೆನಾದ ಹೆಚ್ಚು ಉಪಯೋಗಕಾರಿ; ಕಾಡುಮೃಗಗಳ ಆಕ್ರಮಣದಿಂದ ತಪ್ಪಿಸಿಕೊಳ್ಳುವ ಉಪಾಯವೂ ಹೌದು; ಕಾಡಿನಲ್ಲಿ ಅಲೆದು ಬಸವಳಿದವರಿಗೆ ಗಾಡಿಯೊಂದರ ನೆರವು ಸಿಕ್ಕುವ ಸೂಚನೆಯೂ ಇದಾಗಬಹುದು; Bells fixed to horn of the oxens; make hole to the tip of the horse fix four to five bells with wire; these bells make sound according to the rhythm of the steps; while carting and ploughing this made fear/inspiration to the oxen; the sound of the bells clears the unhappy of the work or tiredness; the sound of the bells useful while travelling in the wild paths; it is a plan to escape from the wild animals attack; it may sign to the people who tired in wandering in the forest to get a cart or cattle;

- ***—ಕೋಡುಗೈ/—ಕೋಡಕೈ*** : ಮರದ ಕೊಂಬೆ; ಕೋಡು/ಕೋಡ+ಕೈ; ಕೈ=ಕವಲು; ಶಾಖೆ; Branch of a tree;
- ***—ಕೋಡುಗೊಣಸು*** : ಕಂಬಳದ ಕೋಣಗಳ ಕೋಡಿಗೆ ಧರಿಸುವ ಒಂದು ಆಲಂಕಾರಿಕ ಆಭರಣ; ಕೋಣಗಳ ಕೋಡಣಸು; ಕೋಡಣಸು ಎತ್ತುಗಳ ಕೋಡಿಗೆ ಧರಿಸುವ ಆಭರಣ; ಕೋಣಗಳ ಕೋಡಿಗೆ ಧರಿಸುವ ಅಂತಹುದೇ ಆಭರಣವನ್ನು/ಅಲಂಕಾರ ಸಾಮಗ್ರಿಯನ್ನು ವ್ಯತ್ಯಾಸಕ್ಕೋಸ್ಕರ ಕೋಡುಗೊಣಸು/ಕೋಡಗೊಣಸು ಎಂದು ಕರೆದಿರುವ ಸಾಧ್ಯತೆ ಇದೆ; ಗೊಣಸು=ಕೊಂಡಿ, ಕುಣಿಕೆ, ಕುಣಿಕೆಯಂತಹ ಒಂದು ಆಭರಣ; ಗೊಲಸು; ವ್ಯದೂ: ಕೋಡ್ಮಿಟ್ಟೆ; ಕೋಡುಕುಂಚ?(ಚಿಕ್ಕ.ಜಿ); An ornament to wear the buffalos of Kambala;
- ***—ಕೋಡುಣ್ಣು*** : ದನ ಎಮ್ಮೆ ಮೊದಲಾದ ಪ್ರಾಣಿಗಳ ಕೋಡಿನಲ್ಲಿ ಅಪರೂಪಕ್ಕೆ ಉಂಟಾಗುವ ಒಂದು ಬಗೆಯ ಹುಣ್ಣು; ಕೋಡು ಹುಣ್ಣು; ದನಗಳ ಕೋಡಿಗೆ ತಗಲುವ ಅರ್ಬುದ(ಕ್ಯಾನ್ಸರ್)ರೋಗ (ಚಿ.ಪ.ಕೋ); ಈ ರೋಗ ಹತೋಟಿಗೆ ಬರದೇ ಹೋದಾಗ ಕೋಡು ಉದುರಿಹೋಗುವುದುಂಟು; ಖಾಯಿಲೆ ಮಿದುಳಿಗೆ ಹರಡಿ ದನಗಳಿಗೆ ಸಾವು ಸಂಭವಿಸುವುದೂ ಉಂಟು; ಕೋಡು+ಹುಣ್ಣು; ಹ್–Ø; A sore rarely happened in the horns of cattle, buffalo etc. animals; a kind of sore; cancer to the horns of cattle; this disease cannot be control the horn felldown; the disease spread to the brain that causes to death;
- ***—ಕೋಡುಮಳೆ*** : ಬೆಟ್ಟ ತುದಿಯಲ್ಲಿ ಸುರಿಯುವ ಮಳೆ; Rain pouring on the top of the hill;
- ***—ಕೋಡುಮೂಡು*** : ದನ ಕರುಗಳಲ್ಲಿ ಕೊಂಬು ಮೊಳಕೆ ತೋರುವುದು; ಮರದ ಶಾಖೆಗಳ ಹುಟ್ಟು/ಮೊಳಕೆ; ಆಲಂಕಾರಿಕ ಭಾಷೆಯಲ್ಲಿ: ಅತಿಶಯಗೊಳ್ಳು; ಹೆಮ್ಮೆ ಉಂಟಾಗು; ವೃದ್ಧಿ/ಏಳಿಗೆ ಹೊಂದು; ಹೆಚ್ಚಾಗು(ಕೀರ್ತಿ, ಪ್ರತಿಷ್ಠೆ ಇತ್ಯಾದಿ); *ಪ್ರ: 'ಮಗ ವಿದ್ಯಾವಂತನಾಗಿ ಅಪ್ಪನಿಗೆ ಕೋಡು ಮೂಡಿದಂತಾಯಿತು'*; The horn sprouted in the calfs of cattle; birth of branches of trees; in literary language excessive, pride, develop etc.;
- ***—ಕೋಡೆತ್ತು*** : ಕೋಡು ಇರುವ ಎತ್ತು; ಕೋಡನ್ನು ಮೇಲಕ್ಕೆ ಎತ್ತು; ಕೋಡು+ಎತ್ತು; **ವ್ಯರೂ:** ಕೋಡೆಬಿಗು(ಹ.ಗ); ಎಬಿಗು>ಎತ್ತು(ಕ.ನಿ); Horned oxen;
- ***—ಕೋಡೇರು*** : ದನ–ಜಾನುವಾರುಗಳ ಕೋಡಿನ, ಆನೆ–ಹಂದಿ ಮೊದಲಾದವುಗಳ ಕೋರೆಯ ತಿವಿತದಿಂದ ಉಂಟಾಗುವ ಗಾಯ; ಕೋಡು+ಏರು (<ಏಱು); ಏರು=ಗಾಯ; Wound by stabbing of oxen or elephant or boar;
- ***—ಕೋಡೊಡೆ*** : ಕಾಳಿರುವ ಸಿಪ್ಪೆ ಒಣಗಿ ಬಿರಿಯುವುದು; ಧಾನ್ಯಗಳ ಕವಚದ ಕೋಡು ಒಡೆಯುವುದು; ಕೋಡು+ಒಡೆ; ಒಡೆ=ಬಿರಿ; ಸೀಳು; ಹೋಳಾಗು; The dried corn husk rive; husk or cover of the husk broken or split;

- **—ಕೋಡೊಲೆ** : ಒಲೆಯ ಎರಡೂ ಬದಿ (ಕೊನೆ)ಯಲ್ಲಿ ಮಾಡುವ ಸಣ್ಣ ಒಲೆ; ವಾಗೊಲೆ; ಕೋಡು+ಒಲೆ. Small ovens in both sides of the hearth.

ಕೋಡು² kōḍu²

- ತಣ್ಣಗಾಗು; ತಂಪಾಗು; ಚಳಿಯಾಗು; ತಣ್ಣಗಿರುವಿಕೆ; ತಂಪು; ಶೈತ್ಯ; To become cool; being cool; cold; be chill;
- ಚಳಿಯಿಂದ ನಡುಗು/ಮುದುಡು/ಸಂಕುಚಿತಗೊಳ್ಳು; Shiver by cold; shrink; contracted;
- ಭಯಪಡು; ಬೆದರು; ಭಯದಿಂದ ಕುಗ್ಗು; ಸಂಕೋಚವಾಗು; ಸೆಡೆ; ಹಿಂಜರಿ; ಹೆದರಿಕೆ; ಅಂಜಿಕೆ; ಭಯ; Feared; be startled; hesitation, resent, vacillate, fear, fright, panic;
- **—ಕುಳಿರ್ಕೋಡು** : ನಡುಗಿಸುವ/ಕೊರೆಯುವ ಚಳಿ; ಕುಳಿರ್=ಚಳಿ, ತಂಪು, ಹಿಮ, ಮಂಜು; ದ್ವಿರುಕ್ತಿ; ಒಂದೇ ಅರ್ಥದ ಎರಡು ಪದಗಳ ಜೋಡಣೆ; 'ಕೋಡು' ಪದಕ್ಕೆ ಕೋಂಬು, ದಂತ ಎಂಬ ಪ್ರಸಿದ್ಧಾರ್ಥ ಹೊಮ್ಮುವುದಿಂದ ಶೈತ್ಯದ ಅಭಿವ್ಯಕ್ತಿಯ ಸ್ಪಷ್ಟತೆಗಾಗಿ 'ಕುಳಿರ್' ಸೇರಿದೆ; ಕುಳಿರ್+ಕೋಡು; Make one tremble; shivering cold; cool; ice; mist; saying twice; join the two words of same meaning; the word `koḍu' has the famous meaning `kombu' ivory;
- **—ಕೋಡಿ** : ಕೋಡು+-ಇ; ಚಳಿಗಾಲದಲ್ಲಿ ಬೀಸುವ ತಂಪಾದ ಗಾಳಿ; ಶೀತಗಾಳಿ; The cool air blow in the winter season; cold wind;
- **—ಕೋಡುಗುಟ್ಟು** : ಚಳಿಹಿಡಿ; ಚಳಿಯ ಕೊರೆತ; ಕಟುಶೈತ್ಯ; ದವಡೆ ನಡುಗಿ ಹಲ್ಲು ಕಟುಗಟ್ಟುವಂತಹ ಚಳಿ; ಕೋಡು+ಕುಟ್ಟು; ಕ>ಗ ವ್ಯತ್ಯಯ; Cold affect; cold irritation; hard cold;
- **—ಕೋಡೆಗದ್ದೆ** : ಚಳಿಗಾಲದ ಬೆಳೆ ಬೆಳೆಯುವ ಗದ್ದೆ. A field grow crop in the winter season.

ಕೋಡು³ kōḍu³ :

- ಕ್ರೋಡೀಕರಿಸಿದ ನ್ಯಾಯಸೂತ್ರ; ಪೀನಲ್ ಕೋಡು, ಸಿವಿಲ್ ಕೋಡು ಇತ್ಯಾದಿ; Consolidated judicial law; penal code; civil code etc;
- ಗುಪ್ತ ಸಂಕೇತ/ಸಂಖ್ಯಾ ಸೂಚಿ; ಸೀಕ್ರೆಟ್‌ಕೋಡು, ಕೋಡ್‌ನಂಬರ್ರು, ಕೋಡ್‌ವರ್ಡು ಇತ್ಯಾದಿ; Secret code; stastical index; code number; code word etc;
- ಅಂಚೆವಿನ್ಯಾಸದ ಸಂಕೇತ ಸಂಖ್ಯೆ; ಪಿನ್‌ಕೋಡು; Index number or code number of postal design; pincode;
- ಅನ್ಯದೇಶ್ಯ ಪದ; ಇಂಗ್ಲಿಷ್ ಮೂಲ; <code(ಕೋಡ್–ಇಂ). Foreign word; English origin.

ಕೋಡುಬಳೆ/ಕೋಡ್ಬಳೆ kōḍubaḷe/ kōḍbaḷe :

- ಒಂದು ದೇಶೀ ಖಾದ್ಯ ಪದಾರ್ಥ; ಎಣ್ಣೆಯಲ್ಲಿ ಕರಿದ ಒಂದು ಬಗೆಯ ತಿಂಡಿ; A native eatable; a kind of eatable fried in oil;
- ಅಕ್ಕಿ, ಉರಿಗಡಲೆ, ಉದ್ದಿನ ಕಾಳು, ಒಣ ಮೆಣಸಿನಕಾಯಿಯ ಮಿಶ್ರಣವನ್ನು ಕಾವಲಿಯಲ್ಲಿ ಹಾಕಿ ಉರಿದು, ಆಮೇಲೆ ಬೀಸಿ ಹಿಟ್ಟು ಮಾಡಿಕೊಳ್ಳುತ್ತಾರೆ; ತಕ್ಕ ಪ್ರಮಾಣದ ನೀರಿನಲ್ಲಿ ರುಚಿಗೆ ತಕ್ಕಷ್ಟು ಉಪ್ಪು ಕರಗಿಸಿ ಮಸಾಲೆ ಬೆರಸಿದ ಹಿಟ್ಟನ್ನು ಗಟ್ಟಿಯಾಗಿ ಕಲಸಿ ಚನ್ನಾಗಿ ಮಿದ್ದುತ್ತಾರೆ; ಹಿಟ್ಟಿಗೆ ಬಿಳಿ ಎಳ್ಳು ಬೆರಸುವುದುಂಟು; Rice, fried Bengal gram, black gram, dry chilli mix, fried in the oven; floor it; mix water proportionately, add salt upto taste; spice mixed floor added white sesame seed; blend it some how hard;
- ಮಿದ್ದಿದ ಹಿಟ್ಟನ್ನು ಮುಂಗೈ ಗಾತ್ರಕ್ಕೆ ಉದ್ದನೆಯ ಸರಿಯಂತೆ ನಾದಿಕೊಂಡು ಸಣ್ಣ ಸಣ್ಣ ಉಂಡೆ ತಯಾರಿಸಿಕೊಳ್ಳುತ್ತಾರೆ; The blended flour make thread like the size of frontal hand; this is cut into small pieces and made balls with it;
- ಆ ಉಂಡೆಗಳಲ್ಲಿ ತಕ್ಕಷ್ಟು ಹಿಟ್ಟನ್ನು ಕಿತ್ತುಕೊಂಡು ಕಿರುಬೆರಳು ಅಥವಾ ತೋರುಬೆರಳಿನ ಗಾತ್ರದ ಗೇಣುದ್ದದ ಸರಿಯನ್ನು ಮಾಡಿಕೊಳ್ಳುತ್ತಾರೆ; ಆ ಸರಿಯನ್ನು ವೃತ್ತಾಕಾರಕ್ಕೆ ಬಳೆಯಂತೆ ಬಾಗಿಸಿ ಎರಡೂ ತುದಿಗಳನ್ನು ಕೂಡಿಸಿ ಅದುಮುತ್ತಾರೆ; These small balls are made into the size of

small finger or fore finger thread(flour) ring; these threads(flour) join both ends in round shape like ring;
- ಸಣ್ಣ ಕೋಡಿನಂತೆ ಉದ್ದಕ್ಕಿದ್ದ ಹಿಟ್ಟು ಈಗ ಬಳೆಯಂತೆ ರೂಪ ತಳೆಯುತ್ತದೆ; ಈ ಬಳೆಯನ್ನು ಬಾಣಲೆಯಲ್ಲಿ ಕಾಯುತ್ತಿರುವ ಎಣ್ಣೆಗೆ ಹಾಕಿ ಕರಿದರೆ 'ಕೋಡುಬಳೆ' ಸಿದ್ಧವಾಗುತ್ತದೆ; The flour is like small horn now turn into ring form; this ring is kept in the boiling edible oil to fry then the crispy `Koḍubale' is ready;
- ಸ್ವಲ್ಪ ಖಾರವಾಗಿಯೇ ಇರುವ ಈ ತಿಂಡಿ ಮಳೆಗಾಲ ಹಾಗೂ ಚಳಿಗಾಲಕ್ಕೆ ಬೆಚ್ಚನೆಯ ಸುಖಕರ ಅನುಭವ ಕೊಡುವ ತಿಂಡಿ; This eatable or stuff is some how pungent, it give tasty and warm feeling in rainy and winter season;
- ಹಿಟ್ಟಿನ ಕೋಡನ್ನು ಬಳೆಯಂತೆ/ಉಂಗುರಾಕಾರದಲ್ಲಿ ಬಾಗಿಸಿ ತಯಾರಿಸಿದ ಚಳಿಗಾಲದ ತಿಂಡಿಯಾದುದರಿಂದ 'ಕೋಡುಬಳೆ' ಎಂದು ಕರೆದಿರಬಹುದು; ಕಿಟ್ಟೆಲ್ ಇದನ್ನು `A kind of salted cake' ಎಂದು ಹೇಳಿದ್ದಾನೆ; ಇಲ್ಲಿನ `salted cake'ಎನ್ನುವುದು ಸರಿಯಲ್ಲ, ಮೂಲ ಪದರೂಪ 'ಕೋಡು' ಜೊತೆಗೆ 'ಕೋಡ' ಕೂಡ; The flour prepare like bangle/ring shape it is called `Koḍubale'; the original word form is `koḍu' along with `koḍa' also;
- ಪಿತೃಪಕ್ಷ, ಉಪವಾಸ ಮೊದಲಾದ ಹಬ್ಬಗಳಲ್ಲಿ, ಸೊಸೆಯನ್ನೊ ಮಗಳನ್ನೋ ಕಳಿಸುವ ಕರೆಯುವ ನಡಾವಳಿಯಲ್ಲಿ, ನೆಂಟಸ್ತಿಕೆಯ ಬವಣೆಯಲ್ಲಿ ಇತರ ದೇಸೀ ತಿಂಡಿಗಳೊಡನೆ 'ಕೋಡುಬಳೆ'ಗೂ ಮುಖ್ಯ ಸ್ಥಾನ ಉಂಟೇಉಂಟು. This stuff `Koḍubale' has its importance while celebrating `Pitri paksha', `Upavasa' festivals; to send the daughter-in-law, daughter to their parents or mother-in-laws house, a native practice to send some kind of stuffs along with them is a practice; among these stuffs `Koḍubale' is one.

ಕೋಡುಮಡಿ kōḍumaḍi :
- ತೋಟದ ಬೆಳೆಗೆ ನೀರು ಹಾಯಿಸಲು ಮಾಡಿದ ಮಡಿಗಳ ಸಾಲು(ಚಿ.ಪ.ಕೋ); A line to water the crops of the plantation;
- ಮಡಿ(ನಾ)=ಪಾತಿ; ನೀರು ತುಂಬಿಸಲು ಅಥವಾ ಮೆಣಸಿಗೆ, ಟೊಮ್ಯಾಟೊ, ಬದನೆ ಮೊದಲಾದ ತರಕಾರಿ ಗಿಡದ ಸಸಿಗಳನ್ನು ಬೆಳೆಸಲು ಮಾಡಿದ ಕನಿಷ್ಠ ಮೂರ್‍ನಾಲ್ಕು ಅಡಿ ಚೌಕಾಕಾರ ವಿಸ್ತೀರ್ಣದ ಪಾತಿ/ಒಟ್ಲು ಪಾತಿ; Seed bed; a seed bed to grow the chilli, tomato, brinjal etc plant; in this seed bed water will be poured, it is in the minimum size 3 to 4 feet square;
- 'ಮಡಿ'ಗೆ ಪೂರ್ವದಲ್ಲಿ 'ಕೋಡು' ಸೇರಿದ್ದರ ಔಚಿತ್ಯ ಅರ್ಥವಾಗದು; The word `maḍi' has the prefix `koḍu' has not a good meaning;
- ಕೋಡು=ತಣ್ಣಗಾಗು; ತಂಪಾಗು; ಶೈತ್ಯ; ಚಳಿ; ಕೋಡೆ=ಚಳಿಗಾಲದಲ್ಲಿ ಬೀಸುವ ತಂಗಾಳಿ ಉಷ್ಣಕಾಲ; ಬೇಸಗೆ; ತ:ಕೋಡ್ಯೈ; ಮ: ಕೋಡ; ಕೋಡ್ಯೈ+ಮಡಿ=ಕೋಡ್ಯೈಮಡಿ>ಕೋಡುಮಡಿ/ಕೋಡ ಮಡಿ ಆಗಬಹುದು; ಬೇಸಗೆಯಲ್ಲಿ ಅಥವಾ ಬಿಸಿಲ ತಾಪದಲ್ಲಿ ಬಾಡಿದ ಸಸಿಗೆ ಅಥವಾ ಬೆಳೆಗೆ ತಂಪೆರೆಯಲು ನೀರು ಹಾಯಿಸುವ ಮಡಿ ಎಂದು ಗ್ರಹಿಸಿಕೊಳ್ಳಬಹುದು;
- 'ಕೋಡು' ಪದಕ್ಕೆ 'ಬೆಟ್ಟ' ಎಂದೂ ಅರ್ಥವಿರುವುದರಿಂದ, ಕಾಡು ಪ್ರದೇಶಗಳಲ್ಲಿ ಬೆಟ್ಟಗುಡ್ಡಗಳ ನಡುವೆ ತಗ್ಗು ಪ್ರದೇಶದಲ್ಲಿ ಮಾಡಿಕೊಂಡಿರುವ 'ಮಡಿ' ಎಂದು ಹೇಳಿ, 'ಕೋಡುಮಡಿ'ಗೆ ಹೀಗೂ ಅರ್ಥೈಸಬಹುದು. The word `koḍu' has the meaning hill(betta) too; so, in between the hill and valley the space is called seed bed(maḍi) may be it also mean the word `Koḍumaḍi'.

ಕೋಡುಮರ kōḍumara :
- ಕತ್ತಿಕಾಯಿ ಮರ; Delonix regida;
- ಮಡಗಾಸ್ಕರ್ ಮೂಲದ ಈ ಮರವನ್ನು ಪೋರ್ಚುಗೀಸರು ಭಾರತಕ್ಕೆ ತಂದರು; The origin

ಕೋಡುಮರ

of this tree is Meḍagaskar; Portugees brought this to India;

- ಎರಡು–ಮೂರು ಇಂಚು ಅಗಲದ, ಕಾಲಿಂಚು ದಪ್ಪದ ಒಂದು–ಒಂದೂವರೆ ಅಡಿ ಉದ್ದದ, ಹತ್ತು–ಹನ್ನೆರಡು ಬೀಜಗಳಿರುವ ಕಾಯಿ ಬಿಡುತ್ತದೆ; It gives the nut of two to three inch width, quarter inch thick, one and a half feet length with ten to twelve seeds;
- ಸಸಿ ಅಭಿವೃದ್ಧಿಗೆ ಬಿಟ್ಟರೆ ಬೇರೆ ಏನೂ, ಮರದಿಂದಾಗಲೀ ಕಾಯಿಯಿಂದಾಗಲೀ ಉಪಯೋಗವಿಲ್ಲ; ಮರವನ್ನು ಸೌದೆಗೆ ಉಪಯೋಗಿಸಬಹುದು; ಚಳಿಗಾಲದಲ್ಲಿ ಪೂರ್ಣವಾಗಿ ಎಲೆಗಳನ್ನು ಉದುರಿಸಿಕೊಳ್ಳುವ ಈ ಮರ ಬೇಸಿಗೆಯಲ್ಲಿ ಒಂದಿಷ್ಟು ನೆರಳು ಕೊಡುತ್ತದೆ; To use the plant development; the tree is only to use for fire wood, the leaves withered in winter and it gives shade in summer;
- ಕೆಂಪನೆಯ ಹೂವಿನ ಗೊಂಚಲನ್ನು ಬಿಟ್ಟುಕೊಂಡು ಇಡೀಮರ ಕೆಂಪುಹೂವುಗಳಿಂದ ಆಕರ್ಷಕವಾಗಿ ಕಾಣುತ್ತದೆ; ಮದುವೆ, ಹಬ್ಬ–ಹರಿದಿನ ಮೊದಲಾದ ಉತ್ಸವಗಳಲ್ಲಿ ಚಪ್ಪರದ ಒಳಗೆ ಅಲ್ಲಲ್ಲಿ ಈ ಹೂವಿನ ಗೊಂಚಲನ್ನು ನೇತುಹಾಕಿ ಅಲಂಕಾರ ಮಾಡಿಕೊಳ್ಳುತ್ತಿದ್ದರು; ಖರ್ಚಿಲ್ಲದ ಅಲಂಕಾರ ಇದಾಗಿತ್ತು; It is very attractive by its red flower bunch; these flower bunches hang in the pendals of marriage or festival occasions as decorations;
- ಕತ್ತಿಹೂವು ಮೊಗ್ಗಿನಲ್ಲಿ ಹೆಬ್ಬೆರಳಿನ ಗಾತ್ರಕ್ಕೆ ಒಂದು–ಒಂದೂವರೆ ಇಂಚು ಉದ್ದಕ್ಕೆ ಇರುತ್ತದೆ; ಒಳಗಡೆ ತುದಿಯಲ್ಲಿ ಮೀನಿನ ಗಾಳದಂತಹ ಗುಂಡನೆಯ ಕೊಕ್ಕೆಯುಳ್ಳ ಪರಾಗರೇಣುವಿನ ಶಲಾಕೆಗಳಿರುತ್ತವೆ; ಈ ಕೊಕ್ಕೆಗಳು ಒಂದೊಂದನ್ನೇ ಹಿಡಿದು ಒಂದಕ್ಕೊಂದನ್ನು ಸಿಕ್ಕಿಸಿ ಎಳೆದಾಡಿ 'ಕೋಳಿಜಗಳ' ಆಡುವುದು ಮಕ್ಕಳ ಒಂದು ಖುಷಿಯ ಆಟ; ಯಾರ ಕೈಲಿರುವ ಶಲಾಕೆಯ ಕೊಕ್ಕೆ ಕಿತ್ತುಬರುತ್ತದೋ ಅವರು ಆಟದಲ್ಲಿ ಸೋತಂತೆ; ಸೋತವರು ತನ್ನ ಕೈಲಿರುವ ಹೂಗೊಂಡೆಯ ಒಂದು ಶಲಾಕೆಯನ್ನು ಕಿತ್ತು ಗೆದ್ದವನಿಗೆ ಪಣವಾಗಿ ತೆರಬೇಕು; ಹೀಗೆ ಆಟ ಸಾಕೆನ್ನುವ ತನಕ ಮುಂದುವರಿಯುತ್ತದೆ; Delonix regida(katti hoovu) buds. are in size of thumb, one and a half inch long, inside the buds the pollen rods have the round fishing hook; these hooks are fixed to each other by the children for fun play; this is called cock fight or `koḷi jagaḷa'; this play is very joyous to the children; the hook of the rod fell down, whose hook was fell down he is defeated; the defeated gave a bud to the winner from his flower bunch as a mark of betting; this play continue till they decided to finish;
- ಕತ್ತಿಕಾಯಿ ಮರವನ್ನು ನಾಲೆಗಳ ಏರಿಗಳ ಮೇಲೆ, ರಸ್ತೆ ಬದಿಗಳಲ್ಲಿ, ಶಾಲೆ ಕಾಲೇಜು ಕಚೇರಿ ಮೊದಲಾದ ಸಾರ್ವಜನಿಕ ಸ್ಥಳಗಳ ಆವರಣದಲ್ಲಿ ನೆಟ್ಟು ಬೆಳೆಸಲಾಗುತ್ತದೆ; ಅರಣ್ಯ ಅಭಿವೃದ್ಧಿ ದೃಷ್ಟಿಯಿಂದ ಸಂಬಂಧಪಟ್ಟ ಇಲಾಖೆ ಈ ಮರವನ್ನು ನೆಡುವುದು ಬಿಟ್ಟರೆ ವ್ಯವಸಾಯಗಾರರೇ ಮೊದಲಾದ ಜನಪದರು ಈ ಮರವನ್ನು ನೆಟ್ಟು ಬೆಳೆಸುವುದಿಲ್ಲ; ಇದರಿಂದ ಅವರಿಗೆ ಯಾವ ಉಪಯೋಗವೂ ಇಲ್ಲ; ಸೌದೆಗೆ ದೇಶೀ ತಳಿಯ ಮರಗಳೇ ಬೇಕಾದಷ್ಟಿವೆ; This tree planted on the bund of the canal, by the sides of the road, school, college and office premises; this tree planted by the forest department in view of the development of forest; but the agriculturists and other folks have no interest in planting this tree; because no use from this tree, they have many local breed for fire wood trees;
- ಕತ್ತಿಕಾಯಿ ತುದಿಯಲ್ಲಿ ಮೊನಚಾಗಿದ್ದು, ಕಾಯಿಯ ಅರ್ಧಭಾಗದಿಂದ ಮುಂದಕ್ಕೆ ಕೋಡಿನಂತೆ ಬಾಗಿರುತ್ತದೆ; ಈ ಕಾರಣದಿಂದ ಇದನ್ನು 'ಕೋಡುಮರ' ಎಂದಿರಬಹುದು; ಕೋಡಿನಂತೆ ಕಾಯಿಬಿಡುವ ಮರ ಎಂದು ವಿವರಣಾರ್ಥ; ಕಾಯಿ ಚಪ್ಪಟೆಯಾಗಿ ಖಡ್ಗದಂತೆ ಕಾಣುವುದರಿಂದ 'ಕತ್ತಿಮರ' ಎಂಬ ಹೆಸರೂ ಅನ್ವರ್ಥವಾಗುತ್ತದೆ. This nut is sharp in the tip; half part of the nut bend like horns; may be for this reason it is called as `Koḍumara'; it is

explained this it gives the nut as horn; it is like sword and flat, so it has nickname `Kattimara'.

ಕೋಡುಮುರುಕ ಬಳ್ಳಿ kōḍumuruka baḷḷi:

- ಒಂದು ಜಾತಿಯ ಬಳ್ಳಿ; A kind of creeper;
- ಈ ಬಳ್ಳಿ ಬಿಡುವ ಕಾಳಿನ ಕವಚಕ್ಕೆ ತುದಿಯಲ್ಲಿ ಕೋಡು ಇದ್ದು, ಆ ಕೋಡು ಬಾಗಿದ/ ಮುರಿದುಕೊಂಡ ಹಾಗೆ ಇದ್ದರೆ ಆಗ ಕೋಡುಮುರುಕ ಬಳ್ಳಿ; ಅನ್ವರ್ಥ; The tip of the corn husk has the horn of this creeper; if the horn is in bend/broke like, that is `Koḍumuruka baḷḷi';
- ಕಿಟ್ಟೆಲ್ ಅವರು ಈ ಬಳ್ಳಿಯನ್ನು `The creeper Cynanchum pauci florum' ಎಂದಿದ್ದಾರೆ.

ಕೋಡೂರು kōḍūru :

- ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೋಕಿನ ಕ್ರಿ.ಶ.೧೩೬೭ರ ೧೨ನೇ ಶಾಸನದಲ್ಲಿ ಉಲ್ಲೇಖವಿದೆ; This place refered in the 12th inscription of 1367th AD;
- ತಳನಾಡ ಮಾದರಸನು ಶಂಕರ ದೇವರಿಗೆ, ಬಂಡಿಗಣಲಿ, ಹಿತ್ತಲಕೊಪ್ಪ ಗ್ರಾಮದ ಆದಾಯವನ್ನು, ಗ್ರಾಮವನ್ನು ಸೇನಬೋವ ಮಾಚಯನಾಯ್ಕನಿಗೆ ದೇವರ ಸೇವೆಗೆ ದಾನಕೊಟ್ಟ ವಿವರವಿದೆ; In this inscription Talanaḍa Madarasa donated to Shankara devaru; Banḍiganali, Hittalakoppa village income and the village to Senabova Machaiah nayaka for the service of god;
- 'ಕೋಡೂರು' ಉಲ್ಲೇಖವಿದ್ದರೂ, 'ಕೊಡೂರು' (ಕೊಡು+ಊರು) ಆಗಿರಬಹುದು; 'ಕೊಡು' ಎಂದರೆ 'ದಾನ' ಎಂದು ಅರ್ಥ ಬರುವುದರಿಂದ, ದಾನಕೊಟ್ಟ ಊರು ಇದಾಗಿರಬಹುದು; Even the reference of `Kōḍūru'; it becomes `Koḍuru'; `Koḍu' means donate, that may be donated village;
- 'ಕೋಡೂರು' ಎಂಬುದರಲ್ಲಿನ 'ಕೋಡು' ಪದವನ್ನು ಉಳಿಸಿಕೊಂಡರೆ, 'ಕೋಡು' ಎಂಬುದಕ್ಕೆ 'ಬೆಟ್ಟದ ತುದಿ' ಎಂದು ಅರ್ಥಮಾಡಬಹುದು; ಅಂದರೆ ಬೆಟ್ಟದ ತುದಿ ಅಥವಾ ಕಿಬ್ಬರಿಯಲ್ಲಿನ ಊರು ಎಂಬುದಾಗಿ ಅರ್ಥಮಾಡಬಹುದು; The word `kōḍu' may be remains, `kōḍu' means top of the hill, the village is on the top of the hill or in the hillock;
- 'ಕೋಡು' ಎಂಬುದಕ್ಕೆ 'ಕೋಡಿ' ಎಂದು ಅರ್ಥಮಾಡಿಕೊಂಡರೆ, ಕೆರೆಯ ಹಿನ್ನೆಲೆಯಲ್ಲಿ ಈ ಹೆಸರು ಬಂದಿರಬಹುದೆ? The word `kōḍu' understand as `Kōḍi', this name came in the background of the tank or kere;
- ಒಟ್ಟಾರೆ ಕೊಡು(ದಾನ), ಕೋಡು, ಕೋಡಿ ಇಷ್ಟು ಪದಗಳ ಹಿನ್ನೆಲೆಯಲ್ಲಿ ಇದರ ಅರ್ಥವನ್ನು ಊಹಿಸಬೇಕಾಗುತ್ತದೆ. The background of the words koḍu, kōḍu, kōḍi the meaning is imagined;

(E.C- ೧೫; ಶಿ.ಜಿ.)

ಕೋಡೆ kōḍe :

- ಪಡುವಣ ಗಾಳಿ; ಪಶ್ಚಿಮ ದಿಕ್ಕಿನಿಂದ ಬೀಸುವ ಗಾಳಿ; ಚಳಿಗಾಲದ ತಂಗಾಳಿ; ತಂಪುಗಾಳಿ; ತಣ್ಣನೆಯ ಗಾಳಿ; ಕರ್ನಾಟಕ, ತೆಲುಗು, ತಮಿಳು ದೇಶಗಳಿಗೆ ಬಿರುಬೇಸಗೆಯ ಬಿಸಿಗಾಳಿ(ಕಿಟ್ಟೆಲ್); Westren wind; wind blows from western direction; cool air of winter season; hot wind wave of summer in Karnataka, Telugu, Tamil region;
- ಬೇಸಗೆಯ ಬಿಸಿಲು; ಬೇಸಗೆ; ಉಷ್ಣಕಾಲ; ಮಾರ್ಚಿಯಿಂದ ಮೇ ವರೆಗಿನ ಕಾಲ; Summer sunshine; summer; hot or heat season;
- ಸುಗ್ಗಿಯ ಕಾಲ(ಅ.ನು.ಕೋ); Season from March to May; harvest season;
- ಹತ್ತಿರ(?); Near;
- ಕೆಟ್ಟವಳು(?); Bad woman;
- ಕೊಡೆ; ಛತ್ರಿ(?); ಉಚ್ಚಾರಣಾ ಸ್ಖಾಲಿತ್ಯದಿಂದ ಕೊಡೆ>ಕೋಡೆ ಆಗಿರಬಹುದು; Umbrella;
- ದೇಶೀಪದ; Native word;
- ಜ್ಞಾತಿಪದಗಳು: ತ: ಕೋಡೈ; ಮ: ಕೋಡ;

- ***—ಕೋಡೆಗದ್ದೆ*** : ಬೇಸಗೆಯಲ್ಲಿ ಬತ್ತದ ಬೆಳೆ ಬೆಳೆಯುವ ತರೀ ಭೂಮಿ; ಸುಗ್ಗಿ ಬೆಳೆ ಬೆಳೆಯುವ ಗದ್ದೆ(ಅ.ನು.ಕೋ); Wet land which grows paddy crop in summer season;
- ***—ಕೋಡೆತಿರುನಾಳು*** : ಬೇಸಗೆ ಕಾಲದಲ್ಲಿ ಆಚರಿಸುವ ಹಬ್ಬ ಹರಿದಿನ ಉತ್ಸವ; ತಿರುನಾಳ್= ಪರ್ವದಿನ; ಹಬ್ಬದ ದಿವಸ; A festival procession of summer season;
- ***—ಕೋಡೆಬೆಳೆ*** : ಬೇಸಗೆಯಲ್ಲಿ ಬೆಳೆಯುವ ಬೆಳೆ; A crop grows in summer season;
- ***—ಕೋಡೆಮಳೆ*** : ಬೇಸಗೆಯಲ್ಲಿ ಬರುವ ಮಳೆ; ಅಕಾಲವರ್ಷ; ಅಡ್ಡಮಳೆ. Rain in the summer season; untimely rain; cross rain.

ಕೋಡೆಂಚಿ kōḍenci :

- ಒಂದು ಬಗೆಯ ಮೀನು(ತು., ಮಂ.ಜಿ); ಸಮುದ್ರದಲ್ಲಿ ಸಿಗುತ್ತದೆ; A kind of fish found in the sea;
- ಈ ಮೀನಿನ ಎಣ್ಣೆಗೂ ಈಜುರೆಕ್ಕೆಗೂ ಹೆಚ್ಚು ಬೇಡಿಕೆ ಇದೆ. The swimming wing and oil of this fish has much demand.

ಕೋಡ್ದಬ್ಬು/ಕೋಡದಬ್ಬು kōḍdabbu/ kōḍadabbu :

- ತುಳುನಾಡಿನ ಒಂದು ಪ್ರಭಾವಶಾಲಿ ಭೂತ; ಮುಂಡಾಲ ಸಮುದಾಯದವರ ಕುಲದೈವ (ಮಂ.ಜಿ); ಎಲ್ಲ ಸಮುದಾಯದವರಿಂದಲೂ ಆರಾಧನೆಗೊಳ್ಳುವುದುಂಟು; ಧರ್ಮದೈವವೆಂದೇ ಹೆಸರುವಾಸಿಯಾಗಿದೆ; An influenced devil of Tamilnadu; it is the deity of Munḍala community; it is worshipped by all the community; it is famous as the moral law deity;
- ಒಂದು ಜನಪದ ಆರಾಧನೆ ಮತ್ತು ರಂಗಕಲೆ (ಮಂ.ಜಿ); A worship of folk and folk art;
- ಕೋಡ್ದಬ್ಬು ಭೂತ ಅಥವಾ ದೈವವಾದ ಬಗೆಗೆ ಒಂದು ಐತಿಹ್ಯವಿದೆ: ಬಬ್ಬು ಎಂಬಾತ ದಲಿತ ಸಮುದಾಯವೊಂದಕ್ಕೆ ಸೇರಿದ ವ್ಯಕ್ತಿ; ಸತ್ಯ, ನ್ಯಾಯ, ಧರ್ಮ, ನಿಷ್ಠೆಗಳಿಗೆ ಪ್ರಸಿದ್ಧನಾಗಿ ಪವಾಡ ಸದೃಶ ವ್ಯಕ್ತಿತ್ವ ಗಳಿಸಿದ್ದ; ಈಗಾಗಲೇ ಪ್ರಸಿದ್ಧರಾಗಿದ್ದ ಕೆಲವು ಗಣ್ಯ ವ್ಯಕ್ತಿಗಳು ಇವನ ಪ್ರಸಿದ್ಧಿಗೆ ಅಸೂಯೆಪಟ್ಟು ಇವನನ್ನು ಬಾವಿಗೆ ತಳ್ಳಿದರು/ದಬ್ಬಿದರು; ತನಿಮಾನಿಗ ಎಂಬ ಸಾಧ್ವಿಯೊಬ್ಬಳ ಸಹಾಯದಿಂದ ಬಬ್ಬು ಬಾವಿಯಿಂದ ಮೇಲಕ್ಕೆ ಬಂದ; ಈ ಇಬ್ಬರೂ ಅಣ್ಣ-ತಂಗಿಯರಾಗಿ ಬಾಳಿ ಮುಂಡಾಲ ಸಮುದಾಯದವರ ಕುಲದೈವಗಳಾಗಿ ಪರಿಣಾಮಿಸುತ್ತಾರೆ; A legend about the Koḍdabbu devil became deity; Babbu is belongs to dalit community; he was famous for truth, justice, moral law, loyalty; some famous persons of the society jealous over him for his familiarity; they push him to a well; he came up from the well by a chaste woman Tanimaniga; these two live as brother and sister, they will become the family deity of Munḍala community;
- ಬಬ್ಬು ತಳಸಮುದಾಯವೊಂದಕ್ಕೆ ಸೇರಿದವನೆಂಬುದೂ, ತನಿಮಾನಿಗಯೊಡನೆ ಇವನನ್ನು ಆರಾಧ್ಯ ದೈವವಾಗಿ ಸ್ವೀಕರಿಸಿದ ಮುಂಡಾಲವೂ ತಳಸಮುದಾಯಗಳಲ್ಲಿ ಒಂದೆಂಬುದೂ ಸ್ಪಷ್ಟ; ತನಿಮಾನಿಗ ಎಂಬ 'ಸಾಧ್ವಿ' ಯಾವ ಸಮುದಾಯಕ್ಕೆ ಸೇರಿದವಳೆಂಬುದನ್ನು ಈ ಐತಿಹ್ಯ ಸ್ಪಷ್ಟಪಡಿಸುವುದಿಲ್ಲ; ಅವಳೂ ತಳಸಮುದಾಯ ಒಂದಕ್ಕೆ ಸೇರಿದವಳಿರಬೇಕು; It is clear that Babbu belongs to lower community; he is also became alone with Tanimaniga as their adorable deity; Munḍala is one among the lower community; the chaste woman Tanimaniga's community is unknown; may be one among the lower communities;
- 'ಕೋರ್ದಬ್ಬು' ಎಂಬ ವ್ಯರೂ ಇದೆ(ತು.ನಿ); ಕೋರ್+ದಬ್ಬುವೇ ಕೋಡ್+ದಬ್ಬುವೇ ಎಂಬುದು ಇಲ್ಲಿನ ಇನ್ನೊಂದು ಅಸ್ಪಷ್ಟ ವಿಚಾರ; ಕೋರ್=ಗೋರು; ಬಾಚು; ಮಟ್ಟಸ ಮಾಡು; ಕೋಡ್/ಕೋಡು=ಕೊನೆ; ತುದಿ; ಕೊಂಬು ಇತ್ಯಾದಿ;

ದಬ್ಬು=ಹೊರಕ್ಕೆ ತಳ್ಳು, ಹೊರದೂಡು; ಬಲಪ್ರಯೋಗ ಮಾಡಿ ಹೊರಹಾಕು;

- ಕೋರ್‌ದಬ್ಬು/ಕೋಡ್‌ದಬ್ಬು(ರ>ಡ)=ಹೊರಕ್ಕೆ ಹಾಕಲ್ಪಟ್ಟಿದ್ದು; ಕೊನೆಗೆ ತಳ್ಳಿದುದು; ಕಡೆಗಣಿಸಿದುದು; ಕೆಳ/ಕೊನೆಯ ಜಾತಿ/ಸಮುದಾಯ ಎಂದಾಗಬಹುದು; ಬಾವಿಗೆ ತಳ್ಳಿದುದು ದಮನಕಾರಿ ಕ್ರಿಯೆಯನ್ನೇ ಹೇಳುತ್ತಿದೆ; Kordabbu = pushout; push to end; neglected lower caste/ community; the action to push into the well tells suppress;
- ಹೊರದಬ್ಬಲ್ಪಟ್ಟರೂ ತಮ್ಮ ನಡವಳಿಕೆಯಿಂದ ದೈವವೇ ಆದರು ಎಂಬುದು ಗಮನಿಸಬೇಕಾದ ವಿಚಾರ. Even though they pushout, they became the deity by their behaviour is a noted subject.

ಕೋಡ್ಲಿ kōḍli :

- ಒಲೆಯ ಹಿಂಭಾಗದ ತೂತು; A hole behind the oven;
- ಕೋಡು+ಒಲಿ(<ಒಲೆ, ಪ್ರಾವ್ಯ.)=ಕೋಡೊಲಿ>ಕೋಡ್ಲಿ ಆಗಿರಬಹುದೆ?

ಕೋಣ[1]/ಕ್ವಾಣ kōṇa[1]/kvāṇa :

- ಒಂದು ಸಾಕುಪ್ರಾಣಿ; ಗಂಡು ಎಮ್ಮೆ; ಎಮ್ಮೆ ಕೋಣ/ಎಮ್ಮೆಕ್ವಾಣ; ಎಮ್ಮೆ ಜಾತಿಯಲ್ಲಿ ಗಂಡುಪ್ರಾಣಿ; A reared animal; he buffalo; male animal;
- ಅರ್ಧಚಂದ್ರಾಕಾರದ ಜೋಡಿ ಕೋಡುಗಳಿರುವ, ನಾಲ್ಕು ಕಾಲಿನ, ಕಾಲುಗಳಲ್ಲಿ ಗೊರಸು ಇರುವ ಕಪ್ಪು/ಕಂದು ಬಣ್ಣದ ಪ್ರಾಣಿ; ತುದಿಯಲ್ಲಿ ಕುಚ್ಚಿನಂತೆ ಕೂದಲುಳ್ಳ ಮೊಳದುದ್ದ ಬಾಲ ಇರುತ್ತದೆ; A pair of half moon circled horn, Quadruped hoops in the legs black/brown coloured animal; it has a tail with bunch of hair;
- ಕಶೇರುಕ, ಸಸ್ತನಿ ವರ್ಗಕ್ಕೆ ಸೇರಿದ ಸಸ್ಯಾಹಾರಿ; ಬಲಿಷ್ಠವಾದರೂ ಸಾಮಾನ್ಯವಾಗಿ ಅಂಜುಬುರುಕ ಸ್ವಭಾವ; ಅನಿವಾರ್ಯವಾದಾಗ ಮಾತ್ರ ಆಕ್ರಮಣ ಮಾಡುತ್ತದೆ; ಅಪರೂಪಕ್ಕೆ ಕಾಲು ಕೆರೆದುಕೊಂಡು ಜಗಳಕ್ಕೆ ಇಳಿಯುತ್ತದೆ; ಮನುಷ್ಯರಿಗೂ ಇತರ ಪ್ರಾಣಿಗಳಿಗೂ ಕೋಡುಗಳಿಂದ ತಿವಿಯುವುದು ಸಾಮಾನ್ಯ ಸ್ವಭಾವ; Has back-bone; belongs to mammal family; vegetarian; even though very strong but very fearful nature; rarely it started to quarrel by scratching the legs on the floor; it stab to human and other animals is its common habit;
- ಊರುಕೋಣ, ಕಾಡುಕೋಣ ಎಂದು ಎರಡು ಬಗೆ; ಮನುಷ್ಯ ತನ್ನ ಉಪಯೋಗಕ್ಕಾಗಿ ಸಾಕುವ ಕೋಣ ಊರುಕೋಣ; ಊರನ್ನು ಪ್ರವೇಶಿಸದೆ ಕಾಡಿನಲ್ಲೇ ಉಳಿದ, ಊರುಕೋಣಕ್ಕಿಂತ ಬಲಿಷ್ಠದ್ದೂ, ಗಾತ್ರದ್ದೂ, ದಟ್ಟ ಕಪ್ಪು ಬಣ್ಣದ್ದೂ ಆದ ಕೋಣ ಕಾಡುಕೋಣ; ಎಮ್ಮೆ ಹಾಗೂ ಕೋಣಗಳಿಗೆ ನಾಲ್ಕೂ ಕಾಲುಗಳಲ್ಲಿ ಮಂಡಿಯಿಂದ ಕೆಳಕ್ಕೆ ಅಂದರೆ ಕುಣಕಾಲಿನಲ್ಲಿ ಬಿಳಿ ರೋಮಗಳಿರುವುದು ಒಂದು ಲಕ್ಷಣ; ಕಾಡುಕೋಣಗಳಲ್ಲಿ ಬಿಳಿ ರೋಮಗಳ ದಟ್ಟಣೆ ಹೆಚ್ಚು; Two kinds of he-buffalo, reared buffalo, wild buffalo; man reared the buffalo for his use i.e. called village buffalo, a buffalo lives in forest is called wild buffalo; it is mightier and big the faty black coloured buffalo is wild buffalo; these he-buffalo and she-buffalo has white hair in the ankle of the four legs, it is the feature of the wild buffaloes;
- ಕೋಣ ಕೋಣಗಳ ಕಾಳಗ ಬಲು ರೋಚಕ; ಕೋಡುಗಳನ್ನು ಹೆಣೆದುಕೊಂಡು ಘರ್ಷಣೆಗೆ ನಿಂತುವೆಂದರೆ ಬಿಡಿಸುವುದು ಬಲು ಕಷ್ಟ; ಯಾವುದಾದರೊಂದು ಸೋತು ಓಡಿ ಹೋದಾಗಲೇ ಕಾಳಗಕ್ಕೆ ಅಂತ್ಯ; 'ಕೋಣನೆರಡುಂ ಹೋರೆ ಗಿಡುವಿಂಗೆ ಮಿತ್ತು'(ಹರಿಶ್ಚಂದ್ರ ಕಾವ್ಯ) ಪ್ರಸಿದ್ಧ ನಾಣ್ಣುಡಿ; ದೊಡ್ಡವರ ಘರ್ಷಣೆ ಅಮಾಯಕರ ಕಷ್ಟಕ್ಕೆ ಕಾರಣವಾಗುವುದನ್ನು ಇಲ್ಲಿ ಪ್ರತಿಮಿಸಲಾಗಿದೆ; The buffalo fight is very excited; it is difficult to separate when they neted the horn at the time of fighting; when a buffalo defeated and ran away then only the fight end;
- ಉಳುಮೆ ಮಾಡುವುದು, ಗಾಡಿ ಎಳೆಸುವುದು, ಎಮ್ಮೆ ಜಾತಿಯ ಸಂತಾನ ಬೆಳೆಸುವುದು, ಸೆಗಣಿ ಹಾಗೂ ಗಂಜಲದಿಂದ ವ್ಯವಸಾಯದ ಭೂಮಿಗೆ ಗೊಬ್ಬರ ಮಾಡಿಕೊಳ್ಳುವುದು ಮೊದಲಾದ ಉದ್ದೇಶಗಳಿಗೆ

ಮನುಷ್ಯ ಕೋಣಗಳನ್ನು ಸಾಕುತ್ತಾನೆ; Man rearing buffalo for plough, carting, to improve the lineage of buffalo; produce manure by the urine and dung etc;

- ಕೊಡಗು ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಕೋಣಗಳನ್ನು ಉಳುಮೆಗೆ ಬಳಸುವುದು ಹೆಚ್ಚು; ದಕ್ಷಿಣೋತ್ತರ ಬಯಲು ಸೀಮೆಯಲ್ಲಿ ಸಂತಾನಾಭಿವೃದ್ಧಿಯ ಹೊರತು ಬಳಕೆ ವಿರಳ; The buffaloes used to plough in Kodagu and Karavaḷi districts; in North and South plain land used to breed;
- ಕೋಣದ ಮಾಂಸ ಮನುಷ್ಯನಿಗೆ ಆಹಾರವೂ ಹೌದು; ಚರ್ಮ ತಮಟೆ, ಭೇರಿ ಮೊದಲಾದ ವಾದ್ಯಗಳ ತಯಾರಿಕೆಯಲ್ಲಿ, ಪಾದರಕ್ಷೆ, ತೈಲಿ, ಚೀಲ, ಪೆಟ್ಟಿಗೆ ಮೊದಲಾದ ಸಾಧನಗಳ ತಯಾರಿಯಲ್ಲಿ ಬಳಕೆ; ಬೆನ್ನ ಮೇಲಿನ ಗಟ್ಟಿ ಚರ್ಮ ಬಾರುಕೋಲಿನ ನಾರಿಗೆ ಉಪಯೋಗ; ಆದಿಮಾನವ ಹಾಗೂ ಬುಡಕಟ್ಟು ಮಾನವ ಸ್ಥಿತಿಯಲ್ಲಿ ಕೋಣ ಮೊದಲಾದ ಪ್ರಾಣಿಗಳ ಚರ್ಮ ಹಾಸು ಮತ್ತು ಹೊದಪಿಗೆ ಬಳಕೆಯಾಗುತ್ತಿದ್ದುದೂ ಉಂಟು; ಕೆಲವು ಸಮುದಾಯಗಳಲ್ಲಿ ಕೋಣನ ಕೋಡು ಅಲಂಕಾರ ಸಾಮಗ್ರಿ, ಪ್ರದರ್ಶನ ಕಲೆಗಳ ಪರಿಕರಗಳಲ್ಲಿ ಒಂದು; The buffalo used for meat; the skin for leather drums, slippers, pocket, bag, box etc production; the skin of the back of the buffalo used to make whip; the ancient humans used the skin for mat and cover the body; the horn is used for decoration;
- ಕೋಣವನ್ನು ಪೂಜಿಸುವ ಬುಡಕಟ್ಟು ಸಮುದಾಯಗಳಿವೆ; ಎಮ್ಮೆ ಅಥವಾ ಕೋಣವನ್ನು ಕುಲದ ಸಂಕೇತವಾಗುಳ್ಳ ಸಮುದಾಯಗಳೂ ಇವೆ; ಮಹಿಷಾಸುರನಿಗೆ ಕೋಣವೇ ವಾಹನ; ಯಮನ ವಾಹನ ಕೋಣ ಎಂಬ ಪುರಾಣ ಸಂಗತಿ ಅತ್ಯಂತ ಪ್ರಚಲಿತ; ಕೋಣ ಸಾವಿನ ಸಂಕೇತ; ಕನಸಿನಲ್ಲಿ ಕೋಣವನ್ನು ಕಂಡರೆ ಸಾವು ಸಂಭವಿಸುತ್ತದೆಂಬ ನಂಬಿಕೆ ಇದೆ; ಕನಕದಾಸರು ಕೋಣಗಳನ್ನು ಬಳಸಿ ಕೆರೆ ಕಟ್ಟಲು ವ್ಯಾಸರಾಯರಿಗೆ ನೆರವಾದರೆಂದು ಐತಿಹ್ಯ ಇದೆ; ಸುಪುಷ್ಟವಾದ, ತಕ್ಕ ವಯೋಮಾನದ ಕೋಣವನ್ನು/ಗಳನ್ನು ಕಡಿದು ಮಾಂಸದ ಅಡುಗೆ ಮಾಡಿ ಅತಿಥಿಗಳನ್ನು ಸತ್ಕರಿಸುವುದು ಒಂದು ಶಿಷ್ಟಾಚಾರವಾಗಿದ್ದ ಕಾಲವೂ ಇತ್ತು; *ಪ್ರ: 'ಕ್ವಾಣ ತಿನ್ನೋಣಿಗೆ ಬಾನ ಎಡೆ ಮಾಡಿದಂಗೆ'*(ಗಾ); Some tribal communities worship buffalo; buffalo is a symbol of totem; buffalo was the vehicle of Mahisasura; it is also vehicle of Yama(death god) is existed in puranas; buffalo is the symbol of death; if the people dreamt buffalo in the dream, death is must, it is the belief of people; there is a legend the saint Kanakadasa helped Vyasaraya to built tank by using buffaloes; once healthy and certain age group buffaloes are chopped for the mutton or non-veg feast to the guests; it is an etiquite by that time;
- ಸ್ವಾತಂತ್ರ್ಯಾನಂತರದಲ್ಲಿ ನಿಷೇಧಾಜ್ಞೆ ಹೊರಡಿಸುವವರೆಗೂ ಮಾರಿ ಮೊದಲಾದ ಶಕ್ತಿ ದೇವತೆಗಳಿಗೆ ಕೋಣವನ್ನು ಬಲಿಕೊಟ್ಟು ಆರಾಧಿಸುತ್ತಿದ್ದ ಧಾರ್ಮಿಕ ಆಚರಣೆ ಅನೇಕ ಜನಪದ ಸಮುದಾಯಗಳಲ್ಲಿತ್ತು; ಕೆರೆಕಟ್ಟೆಗಳನ್ನು ಕಟ್ಟುವಾಗ, ಕೋಟೆ ಕೊತ್ತಲಗಳನ್ನು ನಿರ್ಮಿಸುವಾಗ ಅವು ಭದ್ರವಾಗಿ ನಿಲ್ಲಲಿ, ಅನಾಹುತಗಳು ಸಂಭವಿಸದಿರಲಿ ಎಂಬ ಆಶಯದಿಂದ ಕೋಣಗಳನ್ನು ಬಲಿ ಅರ್ಪಿಸಲಾಗುತ್ತಿತ್ತು; *ಪ್ರ: 'ಎಮ್ಮವ್ವನ ಮಗ ಕ್ವಾಣಣ್ಣ ಬಂದರೆ ಮಾರಿ ನಿನ್ನ ಹಬ್ಬ ಐಭೋಗ'*; Some folk communities celebrates worship by sacrifice buffaloes to the power goddesses before independence till the date of abolition of animal sacrifice; animals are sacrificed while building tank and forts in the ambition of the fort and tank stood firm for long time buffaloes are sacrificed;
- ಕೋಣಗಳ ವ್ಯಾಪಾರ ಇತ್ತೀಚಿನವರೆಗೂ ವಾಣಿಜ್ಯ ವಹಿವಾಟಿನ ಒಂದಂಗವಾಗಿತ್ತು; ಬೆಳುವಲದ ನಾಡಿನಿಂದ ಕೋಣಗಳನ್ನು ಖರೀದಿಸಿ ಒಯ್ದು ಮಡಿಕೇರಿ ಮಂಗಳೂರು ಸೀಮೆಗಳಲ್ಲಿ ಮಾರಿ ಹಣಸಂಪಾದಿಸಿ ಬದುಕುತ್ತಿದ್ದ ಎಷ್ಟೋ ಕುಳಗಳಿದ್ದವು; 'ಕೋಣನ ವ್ಯಾಪಾರಿ' ಎಂದು ಪ್ರಸಿದ್ಧರಾದವರೂ

ಇದ್ದರು; The business of buffalo is one among the business in early days; the buffaloes are purchased from the Beḷuvalada naḍu and sold them in Maḍikeri and Mangaluru area; these business man are famous as `Koṇana Vyapari';

- ಕೋಣ ಚುರುಕು ಸ್ವಭಾವದ ಪ್ರಾಣಿಯಲ್ಲ; ಮಂದಗಾಮಿತ್ವಕ್ಕೆ, ತಿಳಿಗೇಡಿತನಕ್ಕೆ, ದಡ್ಡತನ ಅಥವಾ ಮೂರ್ಖತೆಗೆ ಕೋಣ ಸಂಕೇತ; ಆಲಂಕಾರಿಕ ಭಾಷೆಯಲ್ಲಿ ಕೋಣ ಎಂದರೆ ದಡ್ಡ, ಮೂರ್ಖ, ಒರಟ, ಸೂಕ್ಷ್ಮಗಳನ್ನರಿಯದ ಸಂವೇದನ ಹೀನ ಎಂದೇ ಅರ್ಥ; 'ಅದೊಂದು ಕ್ವಾಣ್‌ಮುಕ್ಕ' ಎಂದು ಒಂದು ಬೈಗುಳ; ಕತ್ತೆಯನ್ನು ಬಿಟ್ಟರೆ ಬೈಗುಳದ ಭಾಷೆಯಲ್ಲಿ ಹೆಚ್ಚು ಬಳಕೆಯ ಪದ 'ಕೋಣ'; 'ಕೋಣನ ಮುಂದೆ ಕಿನ್ನರಿ ಬಾರಿಸಿದ ಹಾಗೆ', 'ಜಾಣನಿಗೆ ಮಾತಿನ ಪೆಟ್ಟು ಕೋಣನಿಗೆ ದೊಣ್ಣೆಯ ಪೆಟ್ಟು', 'ಎತ್ತು ಏರಿಗೆ ಎಳೆದರೆ ಕೋಣ ನೀರಿಗೆ ಎಳೆಯಿತು' ಮೊದಲಾದ ಗಾದೆಗಳಿವೆ; ರಸ್ತೆಯಲ್ಲಿ ಎಮ್ಮೆ ಕೋಣಗಳು ಹೋಗುತ್ತಿವೆ ಎಂದರೆ ವಾಹನಗಳಿಗೆ ನಿಲುಗಡೆಯೇ ಗತಿ; 'ಬ್ರೇಕ್ ಇನ್ಸ್‌ಪೆಕ್ಟರ್' ಎಂದು ಎಮ್ಮೆ ಮತ್ತು ಕೋಣಕ್ಕೆ ಅನ್ವರ್ಥ ನಾಮ; Buffalo is not an active animal; it is the symbol of inactiveness, innocency, idiocy or foolishness; in literary language buffalo means innocent, idiot lout, one who never knows the sensitivity;
- 'ಕೋಣನ ನೋವು ಕಾಗೆಗೆ ಏನು ಗೊತ್ತು?', 'ಗೋಣನ ಬೇನ್ ಕಕ್ಕೆಗ್ ಎಂಚ ಗೊಂತು?' ಎಂಬುದು ತುಳು ಗಾದೆ; ಕೋಣನ ಬೆನ್ನ ಮೇಲೆ ಕಾಗೆ ಮೊದಲಾದ ಪ್ರಾಣಿಗಳು ಕೂತು ಚರ್ಮ ಕೀಳುವುದನ್ನು ಕೇಳಿದ್ದಿರಬಹುದು; ಬೆನ್ನು ಫಣಿ ಆದಾಗ ಗಾಯದ ಜಾಗವನ್ನು ಕಿತ್ತು ತಿನ್ನುವ ದೃಶ್ಯ ಸಾಮಾನ್ಯ; ಚರ್ಮದ ಹುಣ್ಣುಗಳು, ಕಾಲುಬಾವು, ನಾಗೇರು, ದೊಡ್ಡರೋಗ ಮೊದಲಾದ ಜಾನುವಾರುಗಳಿಗೆ ಬರುವ ರೋಗಗಳು ಕೋಣಗಳಲ್ಲೂ ಕಾಣಿಸಿಕೊಳ್ಳುತ್ತವೆ; ಜಾನುವಾರುಗಳಿಗೆ ನಾಟಿ ವೈದ್ಯವೇ ಸಾಮಾನ್ಯ ಚಿಕಿತ್ಸೆ; ಪಶುವೈದ್ಯ ಶಾಲೆಯ ಚಿಕಿತ್ಸಾ ವಿಧಾನಗಳು ಈಚೆಗಷ್ಟೇ ಪ್ರಚಲಿತ; `Koṇana novu kagege engottu?' is a Tulu proverb; crow cannot understand the pain of buffalo; crow and other birds sat on the back of animals and pluck the skin is referred here; the wound of cancer pluck by crow to eat is common scene; skin cancer, leg sour, nageru, doḍḍaroga etc diseases are found in buffalo also; native treatment is common; now-a-days animal husbandry hospital treatment methods are in practice;
- ಉಗುರುಸುತ್ತು ಆದ ಬೆರಳನ್ನು ಕೋಣದ ಮೂಗಿನಲ್ಲಿ ಇಟ್ಟರೆ ಹುಣ್ಣು ವಾಸಿಯಾಗುತ್ತದೆ ಎಂಬ ನಂಬಿಕೆ ಇದೆ; There is a belief that the ulcered finger kept in the nostril of buffalo to be cured;
- ಕುಲದೇವತೆಗಳಿಗೆ (ಸಾಮಾನ್ಯವಾಗಿ ಹೆಣ್ಣು ದೇವತೆಗಳು) ಕೋಣವನ್ನು ಬಲಿ ಕೊಡುವುದಾಗಿ ಹರಕೆ ಹೊರುತ್ತಿದ್ದುದುಂಟು; ಹಬ್ಬ, ಜಾತ್ರೆ, ಉತ್ಸವಗಳಲ್ಲಿ ಈ ಬಲಿಸಮರ್ಪಣೆ ನಡೆಯುತ್ತಿತ್ತು; ಹರಕೆಯ ಕೋಣಗಳ ಕೊರಳಿಗೆ ಹಾರ ಹಾಕಿ ಪೂಜೆ ಸಲ್ಲಿಸಿ ಕುಲದೇವತೆಯ ಗುಡಿ ಇರುವ ದಿಕ್ಕು ತೋರಿ ಬಿಟ್ಟುಬಿಟ್ಟರೆ ಗುಡಿಯ ಮುಂದಕ್ಕೆ ಕೋಣಗಳು ಹೋಗಿ ನಿಂತುಬಿಡುತ್ತಿದ್ದವು ಎಂದು ಹೇಳುತ್ತಾರೆ; ನಗಾರಿ, ಕರಡೆ ಮೊದಲಾದ ಚರ್ಮವಾದ್ಯಗಳ ನಾದಕ್ಕೆ ಕೋಣಗಳು ಕಿವಿಗೊಟ್ಟು ನಿಲ್ಲುವುದು, ನಾದ ಕೇಳಿಬರುವ ಕಡೆಗೆ ಧಾವಿಸಿ, ವಾದ್ಯ ಬಾರಿಸುವ ಜಾಗಕ್ಕೆ ಹೋಗಿ ನಿಲ್ಲುವುದು ಕಂಡುಬರುತ್ತದೆ; ಶಕ್ತಿದೇವತೆಗಳ ಹಬ್ಬ-ಉತ್ಸವಗಳಲ್ಲಿ ಬಾರಿಸುವ ಹೆಬ್ಬಾರೆ, ನಗಾರಿ, ತಮಟೆ ಮೊದಲಾದವುಗಳಿಂದ ಹೊಮ್ಮುವ ನಾದ ಹರಕೆಯ ಕೋಣಗಳನ್ನು ಸೆಳೆಯುತ್ತಿತ್ತೆಂದು ತೋರುತ್ತದೆ; ಆದರೆ ಜನಪದರು ಇದನ್ನು ತಮ್ಮ ಕುಲದೇವತೆಯ ಮಹಿಮೆ ಎಂದು ಬಣ್ಣಿಸುತ್ತಾರೆ; Sacrifice he-buffaloes to the family deities is a religious vow by the people in festivals; these buffaloes decorated with garlands offer pooja and leave them in the direction of the family diety temple they went to the front yard

of the temple and stand there; it attracts the sound of the leather drum beating and went to the place and stop there; the musical instrument like Hebbare, Nagari, Tamaṭe may be attract the buffaloes; but the folk, praises this is the influence of their family deity;

- ಕೋಣ ಹಾಗೂ ಎಮ್ಮೆ ಶ್ರಮಸಂಸ್ಕೃತಿಯ ಪ್ರತೀಕವಾಗುವುದೂ ಉಂಟು; 'ಕೋಣ' ಪದಕ್ಕೆ 'ಹುಚ್ಚು ಕೆಲಸ ಮಾಡುವವನು'(ಅ.ನು.ಕೋ) ಎಂಬ ಅರ್ಥವೂ ಇದೆ; ಲಾಭಾಲಾಭದ ವಿವೇಕವಿಲ್ಲದೆ, ಒಳಿತು ಕೆಡುಕಿನ ಔಚಿತ್ಯವನ್ನೂ ಕಾಣದೆ ಮನಸ್ಸಿಗೆ ಬಂದದ್ದನ್ನು ಮಾಡುವವನು ಎಂದಾಗುತ್ತದೆ; ಭಾರಿ ಭಾರಿ ಕೆಲಸ ಮಾಡುವ ಮುಗ್ಧರನ್ನು ಕುರಿತು 'ಕ್ವಾಣ ಗೇದಂಗ್ ಗೆಯ್ಯೊದೊಂದ್ ಗೊತ್ತು ಅವ್ನ್‌ಗೆ' ಎನ್ನುತ್ತಾರೆ; *ಪ್ರ: 'ಹಸಿವು ಇಲ್ಲದ ಕೋಣ ಕೊಸರಿಕೊಂಡು ಓಡಿತು*(ಗಾ); He-buffalo and she-buffalo is the reflection of labour culture; the word `Koṇa' has the meaning who has to do work madly it means who has no knowledge of profit or loss, wheather it is good or bad of propriety; discharge the duty what he wish; it is refer to the person who works hard;
- ಕೋಣ ಶೂದ್ರತ್ವದ, ಇತರ ತಳಸಮುದಾಯಗಳ ಸಂಕೇತವೂ ಹೌದು; 'ಕೋಣ ಗದ್ದೆ ಉತ್ತರೆ ಮೊಸರೋಗರಾ ಇಕ್ಕೋರೋ?', 'ಕೋಣ ಬೆಳೆದರೆ ಆನೆ ಆದೀತೇ?', 'ಕೋಣ ಬಲ್ಲುದೆ ವೇದವನ್ನೋದಿ ಪಠಿಸಲಿಕೆ?' ಮೊದಲಾದ ನಾಣ್ನುಡಿಗಳು ಇದನ್ನೇ ಪ್ರತಿಮಿಸುತ್ತವೆ; ಕನಕದಾಸರು ದಾಸತ್ವದ ಮಂತ್ರದೀಕ್ಷೆ ಬೇಡಿ ವ್ಯಾಸರಾಜ ಮಠಕ್ಕೆ ಹೋದಾಗ, 'ಶೂದ್ರನಿಗೆಂಥಾ ಮಂತ್ರ ಕೋಣನ ಮಂತ್ರ' ಎಂದರಂತೆ; ಕನಕದಾಸರು 'ಕೋಣ' ಪದವನ್ನೇ ಮಂತ್ರವೆಂದು ಭಾವಿಸಿ 'ಕೋಣ ಕೋಣ.......' ಎಂದು ಜಪಿಸಿ ಯಮನ ಕೋಣವನ್ನೇ ಪ್ರತ್ಯಕ್ಷ ಮಾಡಿಕೊಂಡರಂತೆ; ಕನಕದಾಸರ ಶಕ್ತಿಯನ್ನು ಅರಿತ ವ್ಯಾಸರಾಯರು, ಅವರಿಗೆ ಮಂತ್ರದೀಕ್ಷೆ ಕೊಟ್ಟು, ಪ್ರತ್ಯಕ್ಷವಾದ ಕೋಣದಿಂದ ತಾವು ಕಟ್ಟಿಸುತ್ತಿದ್ದ ಕೆರೆಗೆ ಅಡ್ಡವಾಗಿದ್ದ ಬಂಡೆಯನ್ನು ತೆಗೆಸಿದರೆಂದು ಐತಿಹ್ಯ; `Koṇa' is the symbol of `Sudra' and the condition of lower community; Kanakadasa went to Vyasaraja matt for religious vow of vedic verse; they say `Sudranigentha mantra koṇana mantra'; Kanakadasa feel that word `Koṇa' itself is the mantra, he started to recite the word `Koṇa, koṇa...' the real vehicle of Yama `Koṇa'(buffalo) appeared before him; then Vyasaraja understand the power of Kanakadasa gave the religious vedic verse vow to him; thus Vyasaraja saint used the power of the appeared buffalo of Yama broke the rock which was across the building tank; it tells in the legend;
- ಆತುರ ಸ್ವಭಾವದ ತಿಳಿಗೇಡಿಗಳಿಗೆ, ವಿವೇಕ ಹೀನರಿಗೆ 'ಎತ್ತು ಈಯಿತು ಎಂದರೆ ಕೊಟ್ಟಿಗೆಗೆ ಕಟ್ಟು ಅಂದಂಗೆ' ಎನ್ನುವುದುಂಟು; 'ಕೋಣ ಈದಂಗೆ' (ದೊಡ್ಡ ಮಣಕೆಮ್ಮೆ ಕೋಣನೀದಂಗೆ–ಕ.ಜಾ.ಕೋ) ಎಂಬ ಮಾತೂ ಇದೆ; ಇದೇ ಅರ್ಥ ಇರಬಹುದು;
- ಕೊಡಗು, ಮಂಗಳೂರು, ಉಡುಪಿ ಪ್ರದೇಶಗಳಲ್ಲಿ ಕಂಡುಬರುವ 'ಕಂಬಳ' ಉತ್ಸವದಲ್ಲಿ ಕೋಣಗಳ ಕೆಸರುಗದ್ದೇ ಓಟ ಪ್ರಸಿದ್ಧವಾದದ್ದು; ಈ ಓಟದ ಸ್ಪರ್ಧೆಗಾಗಿ ಅಲ್ಲಿ ದುಬಾರಿ ವೆಚ್ಚದಲ್ಲಿ ಕೋಣಗಳನ್ನು ಸಾಕುತ್ತಾರೆ; ಈ ಉತ್ಸವದ ಸಂದರ್ಭದಲ್ಲಿ ಕೋಣಗಳಿಗೆ ಬಗೆಬಗೆಯ ಅಲಂಕಾರ ಮಾಡುವುದು, ಓಟದ ಕೋಣಗಳ ಮೇಲೆ ಪಂಥ ಕಟ್ಟುವುದು ನಡೆಯುತ್ತದೆ; ನೋಡಿ: ಕಂಬಳ;
- ದೇಶೀಪದ;
- ಜ್ಞಾಭಾರೂ: ಮ: ಕೂಳ, ಕೂಳನ್; ತೆ: ಗೋಣೆ, ಗೋಣಿ; ತು: ಗೋಣ, ಗೋಣೆ; ಹ.ಕ: ಕೋಣ; ಗೋಣ;
- ವ್ಯರೂ: ಕ್ವಾಣ; ಕೋಣ>ಕ್ವಾಣ(ಮೂಲರೂಪ 'ಕ್ವಾಣ' ವೇ ಆಗಿದ್ದು 'ಕೋಣ' ಅದರ ಶಿಷ್ಟರೂಪ ಆಗಿರುವ ಸಾಧ್ಯತೆಯೂ ಇದೆ); ಓ>ವಾ/ವಾ>ಓ ವ್ಯತ್ಯಯ; 'ಓ' ಆಗಲಿ 'ಓ'ದಲ್ಲಿರುವ 'ಉ' ಆಗಲಿ(ಉ+ಅ=ಓ, ಸಂಧ್ಯಕ್ಷರ) ಓಷ್ಠ್ಯ ಆಗಿದ್ದು 'ವ'ಕಾರವೂ ಓಷ್ಠ್ಯ ಆಗಿದೆ; ಇಲ್ಲಿ ಓಷ್ಠ ಧ್ವನಿಮಾಗಳ ವ್ಯತ್ಯಯ ನಡೆದಿದೆ;
- *—ಕಂಬಳದ ಕೋಣ* : 'ಕಂಬಳ' ಎಂಬ ಕೆಸರುಗದ್ದೆ ಓಟದ ಸ್ಪರ್ಧೆಗೆ ಸಾಕಿ ಬೆಳೆಸಿದ ಕೋಣ; **ನೋಡಿ:**

ಕಂಬಳ; Buffaloes are rear for the `Kambaḷa' sports;

- —**ಕೋಣಏರು** : ಕೋಣಗಳಿಗೆ ಕಟ್ಟಿದ ಏರು/ ನೇಗಿಲು; ಕೋಣಗಳಿಗೆ ನೇಗಿಲು ಹೂಡಿ ಹೊಲಗದ್ದೆಗಳ ಉಳುಮೆ ಮಾಡುವ ಬೇಸಾಯ ಪದ್ಧತಿ ಹಿಂದಿನಿಂದಲೂ ಇದೆ; ಕೊಡಗು ಜಿಲ್ಲೆ ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಈಗಲೂ ಈ ಪದ್ಧತಿ ಇದೆ; 'ಕೋಣೇರು' ಆಗುವುದು ಸಾಧ್ಯ; To fix the plough to buffalo; he ploughing custom is existed from the ancient days; this custom is in Kodagu and Karavali districts even today;
- —**ಕೋಣಗರ/-ಕ್ವಾಣ್ಗರ** : ಎಮ್ಮೆ ಈಯುವ ಗಂಡು ಕರು; ಗಂಡು ಎಮ್ಮೆಕರು; ಕೋಣ/ಕ್ವಾಣ+ ಕರ(<ಕರು)=ಕೋಣಗರ/ಕ್ವಾಣ್ಗರ; ಕ>ಗ ವ್ಯತ್ಯಯ; ವರ್ಗೀಯಗಳ ತೃತೀಯತ್ವ; ಅಂತ್ಯ ಸ್ವರ 'ಉ'ಕಾರ > 'ಅ'ಕಾರವಾಗಿದೆ; ಈ ಸ್ವರ-ವ್ಯಂಜನ ವ್ಯತ್ಯಯಗಳೆರಡೂ ದ್ರಾವಿಡ ಭಾಷೆಗಳಲ್ಲಿ ಸಾಮಾನ್ಯ; He-calf of buffalo;
- —**ಕೋಣದ ಗಾಡಿ** : ಕೋಣಗಳನ್ನು ಕಟ್ಟಿದ ಅಥವಾ ಕೋಣಗಳಿಂದ ಎಳೆಸುವ ಗಾಡಿ(ಬಂಡಿ/ ಚಕ್ಕಡಿ); ಎತ್ತುಗಳನ್ನು ಹೂಡಿದ ಗಾಡಿ 'ಎತ್ತಿನ ಗಾಡಿ' ಆದ ಹಾಗೆ ಕೋಣಗಳನ್ನು ಹೂಡಿದ ಗಾಡಿ 'ಕೋಣದ ಗಾಡಿ'; ಕೋಣಗಳಿಗೆ ಗಾಡಿ ಕಟ್ಟಿ ಓಡಿಸುವ ಸ್ಪರ್ಧೆಯೂ ನಡೆಯುತ್ತದೆ(ಕೊಡ.ಜಿ./ ಬಾ.ಜಿ); The cart drawn by the buffaloes; the cart drawn by the oxen is called `Yettina gaḍi';
- —**ಕೋಣದ ಬಕ್ಕರಿ/-ಕೋಣದ ಬಳ್ಳಿ** : ಪೊದರು ಪೊದರಾಗಿ ಬೆಳೆಯುವ, ಎಲೆ ಇಲ್ಲದ ಒಂದು ಜಾತಿಯ ಬಳ್ಳಿ; A creeper grow like bush; a creeper has no leaves;
- —**ಕೋಣನ ಓಟ** : ಕೋಣಗಳ ಓಟದ ಸ್ಪರ್ಧೆ (ತು.ಜಿ); Buffaloes's running race;
- —**ಕೋಣನ ಕಟ್ಟೆ** : ಒಂದು ಜಾತಿಯ ಕಬ್ಬು; ಹೆಚ್ಚು ಮೃದುವಾದ ಮತ್ತು ತೆಳುವಾದ ಸಿಪ್ಪೆ, ಹೆಚ್ಚು ಸಿಹಿಯ ಹಾಲು/ರಸ ಇರುವ ತಿರುಳು ಇದರ ವಿಶೇಷ; ಸೂಲಂಗಿ ಇಲ್ಲದ್ದು ಇನ್ನೊಂದು ವಿಶೇಷ; A kind of sugarcane has thin skin; too much soft and thin skin, the core has more juice is the quality of this; has no flower;
- —**ಕೋಣನ ಕುಣಿತ** : ಒಂದು ಬಗೆಯ ನೃತ್ಯ ಕಲೆ; ದೊಡ್ಡಾಡಿಸುವುದು, ದೊಡ್ಡ ಕುಣಿತ ಎಂದೂ ಕರೆಯುತ್ತಾರೆ; ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನಲ್ಲಿ ವಿಶೇಷವಾಗಿ ಕಂಡುಬರುತ್ತದೆ; ಮೈಸೂರು ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲೂ ಕಾಣಬರುವುದುಂಟು; ಮಾರಮ್ಮನ ಹಬ್ಬದಲ್ಲಿ ಪ್ರದರ್ಶನಗೊಳ್ಳುವ ಕುಣಿತ ಇದು; ಪರಿಶಿಷ್ಟ ಸಮುದಾಯದ ಜನ ಈ ಕುಣಿತದಲ್ಲಿ ಭಾಗವಹಿಸುತ್ತಾರೆ; ಕಾಡೆಮ್ಮೆ ದೊಡ್ಡಿನ ಕುಣಿತ(ಚಾ.ಜಿ); A kind of dance art called as Doḍḍaḍisuvudu; Doḍḍa kuṇita; specially found in Chamarajanagara district, Koḷḷegala taluk and also in Mysuru and Bengaluru rural district; it is demonstrated in Maramma festival; schedule caste community participated in this dance; `Kaḍemme doḍḍina kuṇita';
- ಹತ್ತು ಅಡಿ ಅಗಲ ಐದು ಅಡಿ ಉದ್ದಕ್ಕೆ ಬಿದಿರಿನ ಅಚ್ಚೆಗಳಿಂದ ಕಮಾನಿನ ಆಕಾರದಲ್ಲಿ ಬೋರಲಾದ ದೊಡ್ಡ ಬುಟ್ಟಿಯ ಆಕಾರವನ್ನು ಹೆಣೆಯುತ್ತಾರೆ; ಮುಂಬದಿಗೆ ಮರದಿಂದ ಮಾಡಿದ ಕೋಣದ ಮುಖವಾಡವನ್ನು ಜೋಡಿಸುತ್ತಾರೆ; ಹಿಂಬದಿಗೆ ಬಾಲದಂತೆ ಹಗ್ಗವನ್ನು ಇಳಿ ಬಿಡುತ್ತಾರೆ; ಕಪ್ಪು ಬಟ್ಟೆ ಹೊದಿಸಿ ಕೋಣದ ಆಕೃತಿಯಲ್ಲಿ ಕಾಣುವಂತೆ ಮಾಡುತ್ತಾರೆ; ಈ ಆಕೃತಿಯ ಒಳಕ್ಕೆ ಹಿಂದೆ ಒಬ್ಬರು ಮುಂದೆ ಒಬ್ಬರು ಸೇರಿಕೊಂಡು ನಾಲಗೆ, ಬಾಲ ಅಲ್ಲಾಡಿಸುತ್ತ ಕೋಣದಾಕೃತಿಯ ಇಡೀ ಶರೀರ ಕುಣಿಯುತ್ತಿರುವಂತೆ ಮಾಡಿ ನಟಿಸುತ್ತಾರೆ; ರಾತ್ರಿ ವೇಳೆ ಈ ಕುಣಿತ ನಡೆಯುವುದರಿಂದ ಪ್ರೇಕ್ಷಕರಿಗೆ ಕೋಣವೇ ಕುಣಿಯುತ್ತಿರುವಂತೆ ಕಾಣುತ್ತದೆ; In arch shape big basket like upside down is plaited ten feet width, five feet long with split of bamboo; fix the face mask to the front part of it; hang the rope in the back as tail; cover the black cloth and make it

to looks like buffalo; to this shape two persons enter into the front and back portion of the shape, they shake the tongue and tail and make the whole shape of the buffaloes's body is dancing; this dance performance is in night so the spectators feel the real buffalo is dancing;

- ಕೋಣನ ಕುಣಿತ ಬೇಟೆಯ ಆಶಯವನ್ನು ವ್ಯಕ್ತಪಡಿಸುತ್ತದೆ; The buffalo dancing is express the intention of hunting;
- ***—ಕೋಣನ ಕೊಂಬುಮರ*** : ಔಷಧೀಯ ಗುಣವುಳ್ಳ ಒಂದು ಬಗೆಯ ಮರ; A kind of medicinal tree;
- ***—ಕೊಣನತಲೆಹುಲ್ಲು/-ಕ್ವಾಣುನ್‌ತಲೆಹುಲ್ಲು*** : ಒಂದು ಸಸ್ಯ; ಒಂದು ಬಗೆಯ ಹುಲ್ಲು; ಹೊಲ ಗದ್ದೆಗಳಲ್ಲಿ(ಕಳೆಯಾಗಿ), ಬದುಗಳಲ್ಲಿ, ಪಾಳು ಭೂಮಿಯಲ್ಲಿ ಬೆಳೆದುಕೊಳ್ಳುತ್ತದೆ; ರಾಗಿ ಇಲಕಿನಂತೆ ಉದ್ದನೆಯ ಒಂಟಿ ದಳದ ತೆನೆ ಬಿಡುತ್ತದೆ; ಬುಡದಲ್ಲಿ ವೃತ್ತಾಕಾರಕ್ಕೆ ಟಿಸಿಲುಗಳು ಹರಡಿಕೊಂಡು ಬೆಳೆಯುವುದರಿಂದ ಸುಪುಷ್ಟವಾಗಿದ್ದಾಗ ಒಂದು ಹಿಡಿಗೂ ದಕ್ಕದಷ್ಟು ಹುಲ್ಲಿನ ದಳಗಳಿರುತ್ತವೆ; ಬೆಳೆಯಲು ಬಿಟ್ಟರೆ ನಿಯಂತ್ರಣ ಕಷ್ಟ; ಎಳೆಯದರಲ್ಲೇ ಕಿತ್ತುಹಾಕಬೇಕು; ಕೋಣದ ತಲೆಯ ಹಣೆಯ ಭಾಗದಲ್ಲಿ ಸುಳಿಯಾಕಾರದಲ್ಲಿ ರೋಮ ಹರಡಿಕೊಂಡಿರುವಂತೆ ಈ ಹುಲ್ಲಿನ ತೆಂಡೆ ಕಾಣುವುದರಿಂದ ಈ ಹೆಸರು ಬಂದಿರಬೇಕು; ಜಾನುವಾರುಗಳಿಗೆ ಒಳ್ಳೆಯ ಮೇವು; A plant; a kind of grass; grows in dry and wet field like weed; it also grows in waste land; this has the spike with single petal like ragi petals; it grows with branches in the bottom around; a healthy growth has the branches more than a handful of grass; it is difficult to control, if it leaves to grow; it should be pluck out in the early growth; may be the name has given to this in shape of the spiral on the head of the buffalo; it is a good food to cattles;
- ***—ಕೋಣನ ಬಿಡುವುದು*** : ದೇವರ ಹೆಸರಿನಲ್ಲಿ ಕೋಣವನ್ನು ಮೀಸಲು ಬಿಡುವುದು; ಧಾರ್ಮಿಕ ವಿಧಿವಿಧಾನಗಳಿಗನುಗುಣವಾಗಿ ಕೋಣಗಳನ್ನು ಮೀಸಲು ಬಿಡುತ್ತಿದ್ದ ಪದ್ಧತಿಯನ್ನು ಇದು ಹೇಳುತ್ತದೆ; ಹೋರಿಗರುಗಳನ್ನು 'ಬಸವನನ್ನು ಬಿಡುವುದು' ಒಂದು ಸಂಪ್ರದಾಯ; ಇದರ ಸಮಾನ ಸಂಸ್ಕೃತಿ 'ಕೋಣನ ಬಿಡುವುದು'; ತಳ ಸಮುದಾಯಗಳ ಹೆಣ್ಣುಮಕ್ಕಳನ್ನು 'ಬಸವೀ ಬಿಡುವ' ಪದ್ಧತಿಯೂ ಉಂಟಷ್ಟೆ! The buffalo has reserved in the name of god; this tells the reserve the buffaloes is according to the religious order; the equivalent of this he calfs are i.e. `Basavana biḍuvudu';
- ಮಾರಿದೇವತೆಗೆ ಸಂಬಂಧಿಸಿದ ಐತಿಹ್ಯಗಳಲ್ಲಿ ಕೋಣನಿಗೆ ವಿಶೇಷ ಸ್ಥಾನವಿದೆ; ಬ್ರಾಹ್ಮಣನೆಂದು ಸುಳ್ಳು ಹೇಳಿ ತನ್ನನ್ನು ಮದುವೆಯಾದ ಅಸ್ಪೃಶ್ಯ ಕುಲದ ಹುಡುಗನಿಗೆ ಕೋಣನಾಗಿ ಹುಟ್ಟು ಎಂದು ಬ್ರಾಹ್ಮಣ ಹೆಣ್ಣುಮಗಳು ಶಾಪ ಕೊಟ್ಟ ಕಥೆಯಿದೆ; ಆ ಹೆಣ್ಣುಮಗಳೇ ಮಾರಮ್ಮನಾದಳು ಎಂದೂ ಕಥೆ ಹೇಳುತ್ತದೆ; ತಾನು ಮೋಸ ಹೋದುದರ ಸೇಡಿಗಾಗಿ ಮಾರಮ್ಮ ಕೋಣಗಳನ್ನು ಬಲಿ ತೆಗೆದುಕೊಳ್ಳುತ್ತಾಳೆ ಎಂದೂ ಹೇಳುತ್ತಾರೆ; In related to the legends of `Mari devatha', buffalo has a special status; a story tells that a boy has married a girl by lieing that he belongs to Brahmin community; then the girl curse him to born as buffalo; because of cheated by him, she will become `Maramma' to take revenge; Maramma take scarification of buffaloes;
- ಮಾರಮ್ಮನಿಗೆ ಹರಕೆ ಹೊತ್ತು ಕುರಿ, ಕೋಳಿ, ಕೋಣಗಳನ್ನು ಬಲಿಗಾಗಿ ಮೀಸಲು ಬಿಡುವ ಪದ್ಧತಿ ಇದೆ; ಬಲಿ ಕೊಡುವ ಹಿಂದಿನ ವರ್ಷ ಮೀಸಲು ಬಿಡುವುದು ಸಾಮಾನ್ಯ; ಮಾರಿ ಹಬ್ಬದ ಒಂಬತ್ತನೆಯ ದಿವಸ ಮಂಗಳವಾರ ಪೂಜೆ ಮಾಡಿ ಕೋಣನನ್ನು ಬಲಿ ಕೊಡುತ್ತಾರೆ; The buffaloes, chicken, goat, sheep are reserved in the previous year for scarification and it is common; On the festival of Mari festival, the ninth day Tuesday made pooja and sacrifice buffalo;

- ಧಾರ್ಮಿಕ ನಂಬಿಕೆಯಂತೆ ಮಾರಿ ಮೊದಲಾದ ದೇವರುಗಳ ಹೆಸರಿನಲ್ಲಿ ಕೋಣಗರುವನ್ನು ಕಿವಿ ಕೊಯ್ದು ಗುರುತು ಮಾಡಿ ದೇವಸ್ಥಾನದ ಮುಂದೆ ನಿಲ್ಲಿಸಿ ಹೂವಿನ ಹಾರ ಹಾಕಿ, ಅರಿಶಿಣ ಕುಂಕುಮ ಹಚ್ಚಿ, ಕಂಕಣ ಕಟ್ಟಿ ಬಿಡುತ್ತಾರೆ; ಹೀಗೆ ಬಿಟ್ಟ ಕೋಣ ಯಾರ ಹೊಲದಲ್ಲಾದರೂ ಮೇಯಬಹುದು; 'ದೇವರ ಕೋಣ' ಎಂಬ ಮಾನ್ಯತೆ ಅದಕ್ಕುಂಟು; As religious belief the buffaloes reserved by cutting the ear as mark and put vermilion on the forehead garlanded, tie `Kankaṇa' to the leg infront of the temple before pronounce as `Devara Koṇa'; so, this kona or buffalo graze anywhere or anyones field; an exception to this, because it is `Devara koṇa';
- —***ಕೋಣನೋರು*** : ಕಾಡುಗೊಲ್ಲರ ಒಂದು ಪಂಗಡ; A community of `Kaḍu gollas';
- —***ಕೋಣಬಯಲು*** : ಒಂದು ಪ್ರದೇಶದ ಹೆಸರು; ಶಾಸನಗಳಲ್ಲಿ ಉಲ್ಲೇಖ; 'ಆ ಪುರದ ನೈರುತ್ಯದ ಸರಡೆಯ ಕೋಣಬಯಲ ಗದ್ದೆ ಕತ್ಸವಿಯ ಫಳೆಯೊಳು ಮತ್ತರು ಪನೆರಡುಮನ್' (ಎ.ಕ.VII, ಶಿಕಾರಿ.೧೨೫-೨೮; ೧೧೧೯; ಉಲ್ಲೇಖ:ಕನಿ); 'ಗೋಮಾಳ' ಎಂದು ಪ್ರತಿ ಹಳ್ಳಿಯಲ್ಲೂ ಊರ ದನಕರುಗಳು ಮೇಯಲು ಸಾಮೂಹಿಕ ಹುಲ್ಲುಗಾವಲಿನ ವ್ಯವಸ್ಥೆ ಇರುತ್ತಿತ್ತು; 'ಕೋಣಬಯಲು' ಅಂತಹುದೇ ವ್ಯವಸ್ಥೆಯನ್ನು ಹೇಳುತ್ತಿರುವಂತಿದೆ; ದೇವರ ಹೆಸರಿನಲ್ಲಿ ಬಿಟ್ಟ ಕೋಣಗಳು ಮೇಯಲು 'ಕೋಣಬಯಲು' ಬಳಕೆಯಾಗುತ್ತಿತ್ತೆಂದು ತೋರುತ್ತದೆ; 'ಕೋಣಬಯಲು' ಆರ್ಯೀಕರಣಗೊಂಡು 'ಗೋಮಾಳ' ಆಗಿದೆಯೆ? ವಿಚಾರ ಮಾಡಬೇಕಾಗಿದೆ; A name of a region; it is refered in the inscription; in every village a place was reserved to graze the cattle of the village; it is called community pasture arrangements; the word `Koṇabayalu' also tells the same arrangement;
- —***ಕೋಣಾಸುರ*** : ಎಲ್ಲಮ್ಮನ ಚೌಡಿಕೆ ಸಂಪ್ರದಾಯದ ಕಾವ್ಯಗಳಲ್ಲಿ ಕಂಡುಬರುವ ಒಬ್ಬ ರಾಕ್ಷಸ; ಕೋಣ+ಅಸುರ(=ರಾಕ್ಷಸ); A demon in the story of Yellamma chouḍike tradition and its verse;
- —***ಕ್ವಾಣನ್ ಕೊಡ್ಸೋದು*** : <ಕೋಣನ ಕೊಡಿಸುವುದು; ಬೆದೆಗೆ ಬಂದ ಎಮ್ಮೆಗೆ ಕೋಣವನ್ನು ಹತ್ತಿಸುವುದು; ಎಮ್ಮೆಗಳ ಸಂತಾನಾಭಿವೃದ್ಧಿಗಾಗಿ ಗರ್ಭಧಾರಣಾ ಕ್ರಿಯೆಗೆ ಗಂಡು-ಹೆಣ್ಣು ಎಮ್ಮೆಗಳನ್ನು ಒಟ್ಟುಗೂಡಿಸುವುದು; ಇದು ಮೂಲತಃ 'ಕೋಣನ್ನ ಕೂಡಿಸುವುದು' ಎಂದೇ ಇರಬಹುದು. Shebuffalo is in sexual excitement, in such a time brought it to hebuffalo for intercourse.

ಕೋಣ² kōṇa² :

- ದೊಣ್ಣೆ; ಕೋಲು: ಬಡಿಗೆ; Club; stick, staff;
- ತಮಟೆ, ನಗಾರಿ ಮೊದಲಾದ ಚರ್ಮವಾದ್ಯಗಳನ್ನು ಬಾರಿಸಲು ಬಳಸುವ ಕೋಲು/ತುದಿಯಲ್ಲಿ ಬಾಗಿಸಿದ ಕೋಲು: ಕುಡುಹು; ಕುಡ(?); A stick played Tammaṭe, Nagari; a kind of leather musical instruments;
- ವೀಣೆ ಮೊದಲಾದ ತಂತಿ ವಾದ್ಯಗಳನ್ನು ಬಾಜಿಸಲು ಬಳಸುವ ಲೋಹದ ಸಾಧನ; A metal instrument played veena and other wire musical instrument;
- ಕತ್ತಿ ಅಥವಾ ಖಡ್ಗದ ಹರಿತವಾದ ಮಗ್ಗುಲು; ಕತ್ತಿಯ ಬಾಯಿ; A sharp edge or side of knife or sword;
- ಮೂಲೆ; ಕೊನೆ; ಕೋನಾಕೃತಿಗೆ ಬಾಗಿದ ವಸ್ತುವೊಂದರ ಭಾಗ; Corner; edge; angle shape; a part of bended thing;
- ಸಮರೇಖೆಗಳು ಅಥವಾ ಸಮಕ್ಷೇತ್ರಗಳು ಒಂದನ್ನೊಂದು ಕೂಡುವ ಜಾಗ; ಕೈವಾರದ ಮಧ್ಯ ಬಿಂದು; ಕೋನ; Equal lines or equal area join at a point each other; central point of the compass;
- ಲಂಗೋಟಿ(ಹ.ಕ); ಕಚ್ಚೆ; ಕಾಚ; <ಕೋವಣ/ ಕೋಮಣ(ಸಂ.); A small piece of cloth;
- ಅನ್ಯದೇಶ್ಯ; ಕೋನ>ಕೋಣ(ಸಂ.) ನ>ಣ ವ್ಯತ್ಯಯ; ಅನುನಾಸಿಕ ವರ್ಣಗಳ ವಿನಿಮಯ ನಡೆದಿದೆ; ತದ್ಭವ ರೂಪ;

- —*ಕೋಣಮಾಪಿ* : <ಕೋನಮಾಪಿ(ಸಂ.); ವೃತ್ತದ ಕೇಂದ್ರ ಬಿಂದುವಿನಿಂದ ಹೊರಡುವ ತ್ರಿಜ್ಯದ ಮೂಲೆಗಳನ್ನು ಅಳೆಯುವ ಒಂದು ಸಾಧನ; ಬಾಗುಮೂಲೆಗಳ ಪ್ರಮಾಣವನ್ನು ಅಳೆಯುವ ಮಾಪನ. An instrument to measure the corner of the radious which starts from the centre of the circle; a measurement of the bending quantity.

ಕೋಣನಕಲ್ಲು kōṇanakallu :
- ಅರಸೀಕೆರೆ ತಾಲ್ಲೋಕಿನ ಕ್ರಿ.ಶ.೧೨೦೪ರ ೨೬ನೇ ಶಾಸನದಲ್ಲಿ ಇದರ ಉಲ್ಲೇಖ; This name refered in the 26th inscription of 1204th AD of Arasikere taluk;
- ಪದಾಂತ್ಯದಲ್ಲಿ 'ಕಲ್ಲು' ಪದವನ್ನು ಹೊಂದಿರುವುದರಿಂದ ಆ ಹಿನ್ನೆಲೆಯಲ್ಲಿ ಈ ಊರಿಗೆ ಈ ಹೆಸರು; The name has the suffix `Kaḷḷu', so the name may be to this village;
- ಸಾಮಾನ್ಯ ಸ್ಥಳನಾಮ ಅಂತ್ಯದಲ್ಲಿ 'ಕಲ್ಲು' ಪದವನ್ನು ಹೊಂದ್ದಿದರೆ ಇದು ಇತಿಹಾಸ ಪೂರ್ವಕಾಲದಿಂದಲೂ ಅಸ್ತಿತ್ವದಲ್ಲಿದ್ದಂಥದು ಎಂದು ಹೇಳಲಾಗಿದೆ; ಆ ಕಾರಣ 'ಕೋಣನಕಲ್ಲು' ಒಂದು ಪ್ರಾಚೀನತಮ ಸ್ಥಳನಾಮವಾಗಿದೆ; Common name of the place has the word `Kaḷḷu'; this is existed since ancient time; so the name `Koṇanakaḷḷu' is an ancient one;
- ಕೋಣನ ಆಕಾರದಲಿರುವ ಕಲ್ಲು ಎಂದು ಇದನ್ನು ಅರ್ಥಮಾಡಬಹುದೆ? ಅಥವಾ ಇದಕ್ಕೆ ಪ್ರತ್ಯೇಕ ದಂತಕಥೆಯೇನಾದರೂ ಇದ್ದಿರಬಹುದೆ? ವಿಚಾರಿಸಿ ನೋಡಬೇಕಾಗುತ್ತದೆ. May be this rock is in the shape of buffalo or may be it has a legend story.

(E.C- ೧೦; ಹಾ.ಜಿ.)

ಕೋಣಿಜೋಗಿ kōṇijōgi :
- ಗೊಂದಲಿಗರ ಕುಲಭೇದಗಳಲ್ಲಿ ಒಂದು; It is a racial difference of Gondaligas;
- ಕೋಣಿಜೋಗಿ, ಕಿನ್ನರಿಜೋಗಿ, ಹಂದಿಜೋಗಿ, ಟಗರುಜೋಗಿ, ಗೊಂದಲಿಜೋಗಿ ಎಂದು ಗೊಂದಲಿಗರಲ್ಲಿ ಕುಲಭೇದಗಳಿವೆ; ಗೊಂದಲಿಗರ ವೃತ್ತಿ ಹಾಗೂ ಜೀವನೋಪಾಯ ವಿಧಾನವನ್ನು ಅನುಸರಿಸಿ ಕಲ್ಪಿಸಿದ ಕುಲಭೇದಗಳು ಇವಾಗಿರಬಹುದು; Koṇijogi, Kinnarijogi, handijogi, ṭagarujogi, gondalijogi are the racial differences; these racial differences are on the basis of their occupation and livelihood;
- ವಂಶ ಅಥವಾ ಪೀಳಿಗೆಯನ್ನು ಗುರುತಿಸುವ ಬೆಡಗು ಪದ್ಧತಿಯೊಂದು ಗೊಂದಲಿಗರಲ್ಲಿದೆ; **ನೋಡಿ:** ಗೊಂದಲಿಗರು; Gondaligas has a custom to fixed the lineage or progeny; if we agree the form;
- 'ಗೋಣಿ' 'ಕೋಣಿ'ಯ ವ್ಯತ್ಯಯ ರೂಪ ಎಂದು ಒಪ್ಪುವುದಾದರೆ, ಗೋಣಿ ಎಂಬ ಒರಟಾದ ಬಟ್ಟೆ ಅಥವಾ ರಗ್ಗನ್ನು ಹೊದ್ದುಕೊಂಡು ಅಲೆಯುವ ಅಥವಾ ಭಿಕ್ಷೆ ಬೇಡಿ ಜೀವನ ಸಾಗಿಸುವ ಒಂದು ಉಪಸಮುದಾಯ ಎಂದು 'ಕೋಣಿಜೋಗಿ'ಗೆ ಅರ್ಥ ಕಲ್ಪಿಸಬಹುದೆಂದು ತೋರುತ್ತದೆ. `Goṇi' is the differentiate form of `koṇi'; in the same way create the meaning to `Koṇijogi' who are cover the rough cloth goṇi, wandering to request the alm for livelihood.

ಕೋಣೆ/ಕ್ವಾಣೆ kōṇe/kvāṇe :
- ಕೊಠಡಿ; ರೂಮು; ಖೋಲಿ; ವಾಸದ ಮನೆಯೊಳಗೆ ಬೇರೆಬೇರೆ ಬಳಕೆಗೆ ಗೋಡೆ ಕಟ್ಟಿ ಮಾಡಿಕೊಂಡ ಚಿಕ್ಕಚಿಕ್ಕ ವಸತಿ ವ್ಯವಸ್ಥೆ; ಕಿರುಮನೆ; ಓವರಿ; Room; `roomu'; kholi; in a residential house arrange small rooms or spaces by building walls inbetween for different purposes;
- ಅಡುಗೆ ಮನೆ; ಅಡುವ ಮನೆ; ಪಾಕಶಾಲೆ; ಮನೆಯ ಕೋಣೆ(ಅ.ನು.ಕೋ);
- 'ಮಲಗುವ ಕೋಣೆ, ಅಭ್ಯಾಸದ ಕೋಣೆ, ಅಡಿಗೆ ಕೋಣೆ' ಎಂದು ಮುಂತಾಗಿ ಹೇಳುವಾಗ ಲೋಕಾಪುರ ಅವರು 'ಕೋಣೆ' ಪದವನ್ನು ಬಳಸಿಕೊಂಡಿರುವುದು ಗಮನಾರ್ಹ (ಹ.ನು.ಮ.ಪು.೧೮೧); Bed room, study room, kitchen etc while telling all these use the word is remarkable(Lokapura);

- ದಾಸ್ತಾನ್ ಕೋಣ್, ದೇವರ್ ಕೋಣ್, ಪೆದ್ಮೆದಿ ಕೋಣ್ (ಪೆದ್ಮೆದಿ=ಬಾಣಂತಿ, A woman during the period of convalescence after child birth; a lying-in-woman), ಸಂಸಾರ್ ಕೋಣ್ (ತು.ನಿ) ಎಂದು ತುಳುನಾಡಿನ ಬಳಕೆ; Store room;
- ಬಯಲು ಸೀಮೆಯಲ್ಲಿ ಅಡುಗೆಮನೆ, ನೀರುಮನೆ, ಕಿರುಮನೆ, ಜಗಲಿಮನೆ, ಕಣಜದಮನೆ, ಮೂಲೆಮನೆ, ಕಕ್ಕಸ್‌ಮನೆ..... ಎಂದೇ ಹೇಳುತ್ತಾರೆ; ಈಚೆಗೆ ಕಣ್ಣುದ್ ರೂಮು, ಜಗ್ಲಿರೂಮು, ಸ್ನಾನುದ್ ರೂಮು, ಕಕ್ಕಸ್‌ರೂಮು....ಗಳು ಬಂದಿವೆ (ಮಂಡ್ಯ.ಜಿ); ರೂಮು<ರೂಮ್/Room(ಇಂ.); In plain land, kitchen, bathroom, `kiru mane, jagali mane, kaṇajada mane moole mane, kakkas mane' forms are used;
- ಗೊಂಡರು ಮಲಗುವ ಕೋಣೆಯನ್ನು 'ಕೋನೆ' ಎನ್ನುತ್ತಾರೆ(ಉ.ಕ.ಜಿ); ಊಟದ ಸಮಯದಲ್ಲಿ , ಮಲಗುವ ಸಮಯದಲ್ಲಿ ಶಯನಕ್ಕೂ ಬಳಸುತ್ತಾರೆ; ಇದು ಬಯಲುಸೀಮೆಯಲ್ಲಿ ಬಹುತೇಕ 'ಕಿರುಮನೆ' (ಮಂಡ್ಯ.ಜಿ); ವಿಶೇಷ ನೆಂಟರಿಗೆ ಅದರಲ್ಲೂ, ಅಳಿಯನಿಗೆ 'ಕಿರುಮನೆ'ಯಲ್ಲಿ ಊಟಕ್ಕೆ ಬಡಿಸುವುದು ರೂಢಿ; *ಪ್ರ: 'ಇಕ್ಕುವವಳು ನಮ್ಮವಳಾದರೆ, ಉಣ್ಣಾಕೆ ಕೋಣಾದ್ರೇನು, ಮನೆಯಾದ್ರೇನು?'* (ಗಾ); Goṇḍas called the bedroom as `koṇe'; this is used for dinner, sleep and rest times, but it is kirumane in plain land area; this is used to serve dinner in this room to the son-in-laws is a practice;
- ರಂಗೋಲಿ ಬಿಡುವಾಗ ಏರ್ಪಡುವ ನಾಲ್ಕು ಮೂಲೆಗಳ ಚೌಕಾಕಾರದ ರಚನೆ; ಚೌಕಿ ಮನೆ; ಕಟ್ಟೆಮನೆ ಇತ್ಯಾದಿ
- ಸೆರೆಮನೆ; ಜೈಲು; ಜೈಲುಕೋಣೆ; ಬಂದೀಕಾನೆ(ತು); Prision; jail, jail room, gaol;
- ಕೋಣ(ನ); ಮೂಲೆ; ಸಂಧಿ; ಎರಡು ದಿಕ್ಕುಗಳು/ ಎರಡು ರೇಖೆಗಳು/ಎರಡು ವಸ್ತುಗಳು ಸೇರುವ ಸ್ಥಳ; ತೆಂಕಣ ಪಡುವಣ ಕೋಣೊಳ್..... (ವಡ್ಡಾರಾ); ಸಂಧಿಸ್ಥಾನ; ಮೂಲೆಯಲ್ಲಿರುವ ಚಚ್ಚೌಕದ ಸ್ಥಳ; Koṇa(na) moole; corner, narrow; two directions; two lines; two things joining place;
- ಈಶಾನ್ಯ ದಿಕ್ಕು; North-east direction;
- ಸುಡುಗಾಡು(ಮಂ.ಜಿ.,ಉ.ಕ.ಜಿ.,ಉ.ಜಿ); Burial ground; Cremation ground;
- ಗುಡಾಣ(ಕಿಟ್ಟೆಲ್); ಗಡಿಗೆ(ಅ.ನು.ಕೋ); ಕಳಂತಿಗೆ (ಕ.ನಿ); ಮಣ್ಣಿನ ಪಾತ್ರೆ; ಹೂಜಿ; earthern pot;
- ಚೆನ್ನೆ ಮಣೆಯ ಹೊಂಡ;
- ವಂಶವೊಂದರ ಹೆಸರು; ಕೋಣೆಯ ವಂಶ, ಕೋಣೆಯಾನ್ವಯ, ಕೋಣೆಯ ಸಂತತಿ(ಕ.ನಿ) ಪ್ರಯೋಗಗಳಿವೆ; Name of a lineage; `Koṇe' lineage expressions are existed;
- ಜ್ಞಾಭಾರೂ: ತ: ಕೋಣ್, ಕೋಣು, ಕೋಣಮ್, ಕುಣಗು; ತೆ: ಕೋಣ, ಕೋನ, ಕೋಣಮು; ಮ: ಕೋಣ್, ಕೋಣುಗ, ಕೋಣಮ್, ಕೋಣಿ; ತು: ಕೋಣ, ಕೋಣೆ;
- ದೇಶೀಪದ; Native word;
- ಹಿಂದಿ, ಮರಾಠಿ, ಸಂಸ್ಕೃತದಲ್ಲೂ 'ಕೋಣ' ರೂಪ ಇದೆ; ಇದು 'ಕೋನ'ಕ್ಕೆ ಸಂವಾದಿ ಇರಬಹುದು; ಕನ್ನಡದ 'ಕೋಣೆ/ಕೋಣಿ', ಕೋನ, ಕೊಠಡಿ ಎರಡೂ ಅರ್ಥದಲ್ಲಿ ಬಳಕೆಯಾಗುತ್ತಿರುವುದು ಗಮನಾರ್ಹ; ದೇಸಿಯ 'ಕೋಣ'ವನ್ನೂ ಇಲ್ಲಿ ವಿವೇಚಿಸಬೇಕಾದ ಅಗತ್ಯವಿದೆ; **ನೋಡಿ:** ಕೋಣ; The word `Koṇa' form is in Hindi, Marati, Sanskrit languages also; may be it is equivalent to the word `Koṇa'; the kannada word koṇe, koṇa used in both meaning is considerable;
- ಜನಪದರಲ್ಲಿ 'ಕೋಣೆ' ಎಂದರೆ ಬಹುತೇಕ ಅಡುಗೆ ಮನೆ ಎಂದೇ ಅರ್ಥ; ಅದು ಬಿಟ್ಟರೆ ಮನೆಯಲ್ಲಿರುವ ಇನ್ನೊಂದು 'ಕೋಣೆ' ಕಿರುಮನೆ; ಅಪರೂಪಕ್ಕೆ 'ಈಚೆಕ್ವಾಣೆ'(ಈ ಕಡೆಯ ಕೋಣೆ; ಅಡುಗೆ ಮನೆಗಿಂತ ಬೇರೆಯಾದ ಕೋಣೆ) ಎನ್ನುವುದು ರೂಢಿ; ಆಲಂಕಾರಿಕ ಭಾಷೆಯಲ್ಲಿ 'ಕೋಣೆ' ಎಂದರೆ ಸ್ತ್ರೀಸಾಮ್ರಾಜ್ಯ, ಸೀಮಿತ ವಲಯ, ತುಂಬಾ ಪರಿಮಿತವಾದ ಎಂದಾಗುತ್ತದೆ; *ಪ್ರ: 'ನಮ್ಮೆಣ್ಣು ವತ್ತಾರೆ ಕ್ವಾಣೆ ಒಕ್ಕಂದುದ್ದು, ಇನ್ನೂ ಈಚ್ಗೇ ಬರ್ಲಿಲ್ಲ'; 'ಹೆಂಗಸರು ಎಂದರೆ ಕೋಣೆ ಕೆಲ್ಸಕ್ಕೇ ಲಾಯಕ್ಕು*

ಎಂಬಂತೆ ನಡೆಸಿಕೊಳ್ಳಲಾಗುತ್ತದೆ; 'ಕ್ವಾಣೆ ಬುಟ್ರೆ ಹೊರ್ಗುನ್ ಪರ್ಪಂಚಾನೇ ತೋರ್ಸಿಲ್ಲ ಅಂತೀನಿ; The word 'koṇe' is totally kitchen;

- ವಾಸದ ಮನೆಯಲ್ಲಿ ಕೋಣೆ(=ಅಡುಗೆ ಮನೆ) ಬಹಳ ಮುಖ್ಯವಾದ ಭಾಗ; ಪವಿತ್ರ ಸ್ಥಳ ಕೂಡ; ಅಡುವುದಕ್ಕೆ ಬೇಕಾದ ಒಲೆ, ಅಡುಗೆ ಪಾತ್ರೆಗಳು, ಕಾರ ಅರೆಯುವುದಕ್ಕೆ ಬೇಕಾದ ಅಸೀಕಲ್ಲು/ ಒರಳುಕಲ್ಲು, ನೀರಿನ ಬಿಂದಿಗೆ ಹಂಡೆ ಮೊದಲಾದುವನ್ನು ಇಟ್ಟುಕೊಳ್ಳಲು ಕಾಲುಮಣೆ/ ಕಲ್ಲಿನ ಬೇಂಚು, ಮೊಸರಿನ ಗಡಿಗೆ–ನೆಲ, ಸಣ್ಣಪುಟ್ಟ ಪರಿಕರಗಳನ್ನು ಇಟ್ಟುಕೊಳ್ಳುವ ಚಿಕ್ಕ ಬೀರು(ಗೋಡೆಗೆ ಅಳವಡಿಸುದ್ದು), ಪಾತ್ರೆಗಳನ್ನು ಇಡಲು ಎತ್ತರದಲ್ಲಿ ಬೆಸುಗೆ(shelf); ಸೌದೆ ಇಟ್ಟುಕೊಳ್ಳಲು ಒಂದು ಮೂಲೆ, ತಕ್ಷಣಕ್ಕೆ ಅಲ್ಲೆ ಪಾತ್ರೆ ಪಗಡೆ ತೊಳೆದುಕೊಳ್ಳಲು ಚಿಕ್ಕ ಬಚ್ಚಲು ಇರುವುದು ಸಾಮಾನ್ಯ; ಇವುಗಳ ಜೊತೆಗೆ ಹರಳೆಣ್ಣೆ ದೀಪ ಹೊತ್ತಿಸಿ ಇಡಲು, ಗೋಡೆಗೆ ತೂಗು ಹಾಕಿದ, ಪೂರ್ವಕ್ಕೆ ಮುಖ ಮಾಡಿದ ದೀಪದ ಚಕ್ಕೆ ಅಥವಾ ಗೋಡೆಯಲ್ಲೇ ಮಾಡಿದ ತ್ರಿಕೋನಾಕೃತಿಯ ಇಲ್ಲವೇ ಕಮಾನು ರೀತಿಯ ದೀಪದ ಗೂಡು ಇರಲೇ ಬೇಕು; ವೈದಿಕ ಫಲಜ್ಯೋತಿಷ್ಯ ಹಾಗೂ ವಾಸ್ತುಶಾಸ್ತ್ರದ ಪ್ರಕಾರ ಮನೆಯ ಆಗ್ನೇಯ ಮೂಲೆಯಲ್ಲಿ ಅಡುಗೆ ಮನೆ ಇರಿಸುವುದು ಸಾಮಾನ್ಯ; ಪೂರ್ವಕ್ಕೆ ಮುಖ ಮಾಡಿ ಕುಳಿತು ಉರಿ ಹಾಕುವಂತೆ ಒಲೆ ಕಟ್ಟಿಸಿಕೊಂಡಿರುತ್ತಾರೆ; ಹೊಗೆ ಗೂಡು ಇರಬಹುದು;

  In living house the kitchen is an important part of the house; a sacred place too; the kitchen has a oven to cook; utensils; a grinding stone, legged flank to keep the water vessels/stone bench; a network rope to keep curd pot; an almirah to keep little bit of things; a shelf to store utensils; a corner to keep the firewood; a little sink to clean the vessels; along with these a caster oil lamp stand fixed on the wall or a vaidika architecture; the kitchen should be in the south-east is common; the oven should be fire faced towards east; it may be have the smoke pipe or space;

- ಮುಂಜಾವ ಮತ್ತು ಮುಸ್ಸಂಜೆ ಹೊತ್ತಿನಲ್ಲಿ ಮನೆಯ ಹೆಂಗಸು/ಹೆಣ್ಣುಮಗಳು ಮುಖ ಕೈಕಾಲು ತೊಳೆದು, ಹಣೆಗೆ ತಿಲಕ ಇಟ್ಟು, ಚಕ್ಕೆ/ಗೂಡಿನಲ್ಲಿರುವ ದೀಪದ ತಳಕ್ಕೆ ನೀರು ಚಿಮುಕಿಸಿ ಪವಿತ್ರೀಕರಿಸಿದ ಸೆಗಣಿ ಉಂಡೆ ಇಟ್ಟು, ದೀಪ ಹೊತ್ತಿಸಿ, ಜೋತಮ್ಮನಿಗೆ ಕೈಮುಗಿದೇ ಅಡುಗೆ ಮನೆಯ ಕೆಲಸ ಪ್ರಾರಂಭಿಸುತ್ತಾಳೆ; ತಪ್ಪಿದರೆ ಅಡುಗೆ ಕೆಲಸವೆಲ್ಲಾ ಆದ ಮೇಲೆ ಊಟಕ್ಕೆ ಬಡಿಸುವ ಮೊದಲಿಗಾದರೂ ಈ ಕೆಲಸ ಆಗಲೇಬೇಕು; ಗುಡ್ಡರ ಮನೆಯಾದರೆ ಕೋಣೆಯಲ್ಲೇ ಗದ್ದುಗೆ ನಿರ್ಮಿಸಿಕೊಂಡಿರುತ್ತಾರೆ; ಈಗೆಲ್ಲಾ ದೇವರಮನೆ ಎಂದು ಬೇರೆ ಇರುತ್ತದೆ;

  The housewife wash her face and legs, hands every morning and evening put vermilion on the forehead lit the oil lamp which is in the niche; pray the light god with folded hands, then started her household work; otherwise any miss in this, they should clear it before meals;

- ಅಡುಗೆ ಮನೆಗೆ ಯಾವ ಬಗೆಯ ಮುಟ್ಟು–ಚಿಟ್ಟೂ ಆಗಬಾರದು; ಮಡಿ–ಮೈಲಿಗೆ ಕಡ್ಡಾಯ; ಅಂದರೆ, ಬೇರೆ ಜಾತಿಯವರು, ಸೂತಕದ ಮನೆಯವರು, ಮೈನೆರೆದ ಹೆಣ್ಣುಮಕ್ಕಳು, ಹೊರಗಾದ ಹೆಂಗಸರು, ಕೈಕಾಲು ಚೆನ್ನಾಗಿ ತೊಳೆಯದವರು ಕೋಣೆಯನ್ನು ಪ್ರವೇಶಿಸುವಂತಿಲ್ಲ; ಅಡುಗೆ ಮನೆಯಲ್ಲೇ ಕುಳಿತು ಊಟ ಮಾಡಕೂಡದು; ಎಂಜಲು ಕೈಯಲ್ಲಿ ಕೋಣೆ ಪ್ರವೇಶಿಸುವಂತಿಲ್ಲ; ಎಂಜಲು ತಟ್ಟೆ ಮೊದಲಾದುವನ್ನು ಕೋಣೆಯೊಳಕ್ಕೆ ತರಕೂಡದು; ಇಂತಹ ಕಟ್ಟುಪಾಡುಗಳು ಹಲವಾರು ಇವೆ; ಶುಚಿತ್ವವನ್ನು ಕಾಪಾಡಿಕೊಳ್ಳುವುದರ ಜೊತೆಗೆ, ಅದಕ್ಕಿಂತಲೂ ಹೆಚ್ಚಾಗಿ, ಮನೆಯ ಮನೆತನದ ಘನತೆ–ಪಾವಿತ್ರ್ಯವನ್ನು ಕಾಪಾಡಿಕೊಳ್ಳು–ವುದಕ್ಕಾಗಿಯೂ ಈ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ; 'ಕ್ವಾಣೆ ನೊಡ್ದುರ್ ಸಾಕು, ಮನೆ ಎಂತೇದು ಆ ಮನೆ ಹೆಣ್ಮಗ್ಳೆಂತೇಳು ಅಂತ ಗೊತ್ತಾಗೊಯ್ತುದೆ' ಅನ್ನುವುದುಂಟು, ಈ ಮಾತು ಮನೆಯನ್ನು ನಡೆಸಲು ಹೆಣ್ಣು ಹೊಂದಿರುವ ಜವಾಬ್ದಾರಿ, ಶ್ರಮ, ಶ್ರದ್ಧೆಯನ್ನು ಹೇಳುವುದರ ಜೊತೆಗೆ, ಅಡುಗೆ ಮನೆಯಲ್ಲಿರುವ ಪದಾರ್ಥ ಪರಿಕರಗಳು ಮನೆಯ ಸ್ಥಿತಿ–ಗತಿಯನ್ನೂ

ತಿಳಿಸಬಲ್ಲವು; 'ಹೆಣ್ ನೋಡೂಕಿಂತ ಮೊದ್ಲು ಅವ್ರ್ ಅಡ್ಗೆಮನೆ/ಕ್ವಾಣೆ ನೋಡು' ಎನ್ನುವುದೂ ಉಂಟು; *ಪ್ರ: 'ಸೂತಕ ಆದ ಮೂರು ದಿನ ಕ್ವಾಣೆ ಹೊಕ್ಕಬಾರ್ದು* (ನಂ); 'ದೂರದ ಬೆಟ್ಟ ನುಣ್ಣಗೆ, ಕೋಣೆ ಮಜ್ಜಿಗೆ ಬೆಳ್ಳಗೆ'(ಗಾ); First of all they give importance to cleanliness; for this reason they never allow people of other caste, matured girls into the kitchen mensus women who cannot clean their hands and legs; never have meals in the kitchen; while having meals and other things; such persons should allow into the kitchen without wash hands; and the dinner plates also never allowing into; it is not only maintain the cleanliness but also protect the dignity and sacredness of the lineage; this strict limitations are practiced;

- 'ಕೋಣೆ' ಹೆಂಗಸರ ಸಾಮ್ರಾಜ್ಯ, ಸೀಮಿತ ವಲಯ ಅಂದಮಾತ್ರಕ್ಕೆ ಅದು ಅಷ್ಟು ಸರಳ ಎಂದೇನೂ ಜನಪದರು ಅಂದುಕೊಂಡಿಲ್ಲ; ಕೋಣೆಯಲ್ಲಿ ಬೆಂಕಿ ಉರಿಯುವುದು ಮನೆಯ ಬಾಳಾಟದ ಸೂಚಕ; ಹೆಂಗಸರ ಮನಸ್ಸನ್ನು ಗೆಲ್ಲುವುದು ಅಥವಾ ನಿಯಂತ್ರಣದಲ್ಲಿಟ್ಟುಕೊಳ್ಳುವುದೂ ಸುಲಭವಲ್ಲ; ಅಡುಗೆ ಮನೆಯ ಕಾರಸ್ಥಾನ ಇಡೀ ಮನೆಯ ಏಳುಬೀಳಿನ ಮೇಲೆ ಪರಿಣಾಮಿಸುವುದು; ಅದಕ್ಕೆಂದೇ 'ಕೋಣೆ ಗೆದ್ರೊ ಕೋಟೆ ಗೆದ್ರೊ', 'ಕೋಣನಂತಹ ಮಗಳ ಕೋಣೇಲಿ ಕೂರ್ಸಿ ಅತ್ತೆ ಬಂದ್ಲು ಅಳಿಯನಿಗೆ ಮುತ್ತು ಕೊಡೋಕೆ' ಎಂಬಂತಹ ಗಾದೆಗಳು ಹುಟ್ಟಿಕೊಂಡಿವೆ; ಸ್ತ್ರೀಕುರಿತ ಬೈಗುಳ ರೂಪದ ಒಂದು ಗಾದೆ ಇಲ್ಲಿದೆ: 'ಕೊಳಕು ಮಜ್ಜಿಗೆ ಕೋಣೇಲಿ ಮಡೀಕಂಡು ಕೋಣೆ ತಾರ್ಸು ಕೊಳಬಡ್ಡಿ'; Kitchen is the domain of woman; it is a limited area but not simple is the opinion of folks; firing in the kitchen is the symbol of the family; it is not-easy to win the mind or control, the whole stratagem of the kitchen affect on the house;
- 'ಕೋಣೆ'ಗೆ ಜನಪದರಲ್ಲಿ ಅರ್ಥದ ಮತ್ತೊಂದು ಪ್ರಮುಖ ಆಯಾಮವಿದೆ; ಅದು ಸ್ತ್ರೀಯ ಜನನಾಂಗ, ಯೋನಿ ಎಂಬ ಅರ್ಥದ್ದು; ಇತರರನ್ನು ನಿಂದನೆಯ ಮಾತುಗಳಿಂದ ಹೀಗಳೆಯುವಾಗ, ಬೈಯುವಾಗ ಈ ಅರ್ಥದಲ್ಲಿ 'ಕೋಣೆ' ಬಳಕೆಯಾಗುವುದು ಹೆಚ್ಚು; ಪ್ರ: 'ಕಾಣ್ನಾ ನಿನ್ ಕ್ವಾಣೆಯ, ಸುಮ್ಮುನ್ ಕುಂತ್ಕಣೆ/ಕುಂತ್ಕಲ ಸಾಕು'; 'ಉಡ್ಡಾ ತಂದ್ಕೊಂಡ್ತಿನಿ ಕ್ವಾಣೆಯ, ಕಾಯ್ಕಂದಿರು' ಇತ್ಯಾದಿ; ಇದು ಆಲಂಕಾರಿಕ ಅರ್ಥ ಎಂದಷ್ಟೇ ಹೇಳುವಂತಿಲ್ಲ; 'ಕೋಣೆ'ಗೆ ಮೂಲೆ, ಕೋನ, ಎರಡು ರೇಖೆಗಳು ಸೇರುವ ಸ್ಥಾನ ಎಂಬ ಅರ್ಥ ಇಲ್ಲಿ ಕೆಲಸ ಮಾಡುತ್ತಿರುವಂತೆ ತೋರುತ್ತದೆ; ಎರಡೂ ತೊಡೆಗಳು ಸೇರುವ ಸ್ಥಾನ, ಸಂಧಿಸ್ಥಾನ ಎಂಬ ಗ್ರಹಿಕೆ ವಾಚ್ಯದ ನೆಲೆಯಲ್ಲೇ ಇಲ್ಲಿ ಪ್ರವೃತ್ತವಾಗುತ್ತದೆ; ಪುರುಷಪ್ರಧಾನ ವ್ಯವಸ್ಥೆ ಸ್ತ್ರೀಗೆ, ಸ್ತ್ರೀಸಂಬಂಧಿಯಾದ ಜೈವಿಕತೆಗೆ ಕೊಡುವ ಸ್ಥಾನ-ಮಾನ ಯಾವ ಬಗೆಯದು ಎಂಬುದೂ ಇಲ್ಲಿ ತನಗೆ ತಾನೆ ವ್ಯಕ್ತವಾಗುತ್ತದೆ; ಈ ಪದವನ್ನು ಈ ಅರ್ಥದಲ್ಲಿಯೇ ಬಳಸಿ ಇತರರನ್ನು ನಿಂದಿಸುವುದರಲ್ಲಿ, ಬೈಯುವುದರಲ್ಲಿ ಜನಪದ ಸ್ತ್ರೀಯರೂ ಹಿಂದೆ ಬಿದ್ದಿಲ್ಲ ಎಂಬುದೂ ಮುಖ್ಯವಾದ ಮಾತು; The word `Koṇe' has other dimensional meaning in folks, i.e. genital of the women, ogina, cunt; the word `koṇe' used in the meaning while abuse or insult; it is not only literal meaning; `koṇe' has the meaning corner, angle, a place join at a place or point; that works here; joining place of two thigh; assumed pronounce is meeting point is workout here; the male dominated system gives what kind of place to the woman and woman related biological events; the folk woman also not far behind to use these words to abuse or scold others;
- 'ಕೋಣೆ' ಪದಕ್ಕೆ ಮೂಲತಃ ಬಸದಿ ಹಾಗೂ ದೇವಸ್ಥಾನಗಳ ಪ್ರಾಕಾರದ ಗೋಡೆಗಳಲ್ಲಿ ಭಕ್ತರಿಗಾಗಿಯೂ ಅರ್ಚಕರಿಗಾಗಿಯೂ ಆಸರೆಗೆಂದು ಹುಟ್ಟುಹಾಕಿದ ಕೋಣೆಗಳು ಎಂದು ಅರ್ಥವಿದ್ದಂತೆ ತೋರುತ್ತದೆ; ದೇವರನ್ನು ಕೂರಿಸುವ ಗರ್ಭಗುಡಿಗೂ

'ಕೋಣೆ' ಎಂದೇ ಕರೆಯಲಾಗುತ್ತಿತ್ತು; 'ನಡುಮನೆ ನಂಜನಗೂಡು ಕೋಣಪರ್ವತ'(ಗಾ–?) ಎಂಬ ಪ್ರಯೋಗವಿದೆ(ಹಮಮ.ಪು.೧೮೭);'ಬಸದಿಯೊಳೊನ್ದು ಕೋಣೆಯೊಳೀ ಎಡೆಯೊಳ್ ನೀಮೊನ್ದು ಕೆಲದೊಳ್ ಮಗುಬಿದೆ'(ಕಿಟ್ಟೆಲ್) ಎಂಬ ಪ್ರಯೋಗವೂ ಇದೆ; The word room or `koṇe' has the meaning to make or provide space the devotees or priests to live in the compound wall of the Basadi's and temples; where the idole has been installed sanctuary is also called `koṇe';

- ***—ಕೋಣೆ ಕೂಡ್ಲಾವುನಿ*** : ಕೋಣೆಯಲ್ಲಿ ಕೂಡಿಹಾಕುವುದು; ಸೆರೆಮನೆಗೆ ಸೇರಿಸುವುದು (ಮಂ.ಜಿ.,ಉ.ಜಿ.); Store in a room or kept in the room; sent to jail or prison;
- ***—ಕೋಣೆಕೊತ್ತಿ*** : ಸೋಮಾರಿ; ಮಳ್ಳ(ಮರುಳ); ಮನೆಯಲ್ಲೇ ಕೂತು ಕಾಲ ಕಳೆಯುವವನಿಗೆ ಹೇಳುವ ಮಾತು; Lazy; a person who spend time in the house as idle;
- ***—ಕೋಣೆದಪ್ಪ*** : ಒಂದು ಹೆಣ್ಣು ಭೂತದ ಹೆಸರು(ಮಂ.ಜಿ.,ಉ.ಜಿ.);
- ***—ಕೋಣೆಪಾಡುನೆ*** : ವಧು–ವರರನ್ನು ಪ್ರಥಮ ರಾತ್ರಿಯಂದು ಪ್ರಸ್ತಕ್ಕೆ ಒಂದೇ ಕೋಳೆಯೊಳಕ್ಕೆ ಸೇರಿಸುವಾಗ ಮಾಡುವ ಆಚರಣೆ(ಮಂ.ಜಿ.,ಉ.ಜಿ.); A celebration on the first night of bride and groom in a room;
- ***—ಕೋಣೆಮನೆ*** : ಮನೆಯ ಜಗುಲಿ ದಾಟಿದ ಮೇಲೆ ಸಿಗುವ ಒಳಕೋಣೆ(ಉ.ಕ.ಜಿ); ಒಡವೆ ವಸ್ತ್ರಗಳನ್ನು ಇಟ್ಟುಕೊಳ್ಳುವ ಸಣ್ಣ ಮಹಡಿಮನೆ (ಬಾ.ಜಿ); ವ್ಯರೂ: ಕೋಣಿಮನಿ; Next to the dias of the house inner room; a first floor rooms or house to keep the ornaments;
- ***—ಕೋಣೆವುಗಿಸು*** : ಕೊಠಡಿಯನ್ನು ಪ್ರವೇಶಿಸುವಂತೆ ಮಾಡು; ಒಳಮನೆಯನ್ನು ಹೊಗಿಸು; ಕೋಣೆ+ಪುಗಿಸು/ಪೊಗಿಸು; ಪ>ಹ>ವ ವ್ಯತ್ಯಯ; Make to enter into the room; make to enter into the inner part of the house;
- ***—ಕೋಣೆ ಶ್ರವಣ ತಿಂಗಳು*** : ಗೊಂಡರ ತಿಂಗಳು; Month of Goṇḍas;
- ***—ಕೋಣ್ಕಲ್*** : ಮೂಲೆಕಲ್ಲು(ತು); ಮೂಲೆಯಲ್ಲಿ ಇರುವ/ನೆಟ್ಟ ಕಲ್ಲು; ಮೂಲೆಗಳು(=ಏಣು/ಅಂಚು) ಇರುವ ಕಲ್ಲು? ಕೋಣ(<ಕೋನ=ಮೂಲೆ)+ಕಲ್ಲು. Corner stone; a stone fixed in the corner; cornered stone.

ಕೋಣ್ದಾರ kōṇdāra :

- ಸುಗ್ಗಿಮಕ್ಕಳು(?) ಕುಣಿಯುವ ಒಂದು ಬಗೆಯ ಕುಣಿತ; A kind of dance form performed by Suggi makkaḷu;
- ಕಣಿದಿದ್ದಾರೆ/ಕುಣಿಯುತ್ತಿದ್ದಾರೆ ಎಂದೂ ಆಗುತ್ತದೆ; ಕುಣಿದು+ಇದ್ದಾರೆ(ಇದಾರ–ಪ್ರಾಪ್ಯ); ಭೂತಕಾಲದ ಕ್ರಿಯೆ ಅಥವಾ ವರ್ತಮಾನದ ಮುಂದುವರಿಕೆ; It may be danced/dancing it is past action present continuous;
- ಸುಗ್ಗಿಮಕ್ಕಳು 'ಕೋಣ್ದಾರ' ಪದ ಬಳಸುತ್ತಾರೆಂದು ಮಾಹಿತಿ ಇದೆ(ಉ.ಕ.ಜಿ). An information that the Suggi makkaḷu use `Koṇdara' word.

ಕೋತ kōta :

- ದ್ರಾವಿಡ ಜನಾಂಗಕ್ಕೆ ಸೇರಿದ ಒಂದು ಆದಿವಾಸಿ ಸಮುದಾಯ; ನೀಲಗಿರಿಯಲ್ಲಿ ವಾಸಿಸುತ್ತಿದ್ದಾರೆ; ನೀಲಗಿರಿಯಲ್ಲಿರುವ, ಹಿಂದುಳಿದಿರುವ ಒಂದು ಕೀಟ್ಬಿಂಗಡ(ಅ.ನು.ಕೋ); A community belongs to Dravidian race; lived in Nilgiris; a lower class backward tribe in Neelagiri;
- ದ್ರಾವಿಡ ಭಾಷಾ ವರ್ಗಕ್ಕೆ ಸೇರಿದ ಒಂದು ಭಾಷೆ; ಕೋತ ಎಂಬ ಆದಿವಾಸಿ ಸಮುದಾಯದವರು ಆಡುವ ಭಾಷೆ; A language belongs to Dravidian language group; this is spoken by Kotha Adivasi community;
- ಕೊಳುತ, ಕೊಳ್ಳುತ(ಅ.ನು.ಕೋ); Koḷutha, Koḷḷutha;
- <ಖೋತ(ಹಿಂ., ಅರಾ); ಕೊರತೆ; ಕಡಿತ; ಭಂಗ; ಕಡಿಮೆ; ಕಡಿಮೆ ಮಾಡುವುದು; ಕಡಿತಗೊಳಿಸುವುದು; ಕೊರತೆ ಬೀಳುವಂತೆ ಮಾಡುವುದು; ಪ್ರ: 'ಮಳೆ

ಬರದ್ದಕ್ಕೆ ಈ ವರ್ಷದ ಬೆಳೆಯಲ್ಲಿ ತುಂಬಾ ಕೋತಾ ಆಯಿತು! Shortage; cut off; breaking; short; less; to make short; to cut short; to make shortage;

- ಕಂದಾಯ ವಸೂಲಿ ಮೊದಲಾದವುಗಳ ಒಟ್ಟು ಗುತ್ತಿಗೆ ಪಡೆಯುವವನು, ಸರ್ಕಾರದಿಂದ; ಗ್ರಾಮದ ಅಧಿಕಾರಿ; ಮರಾ: ಖೋತ; A contractor to collect tax etc; a man who get total contract of the government, an officer of the village;
- <ಕುವ್ವತ್/ಕುವತ್(ಅರಾ); ತಾಕತ್ತು; ಶಕ್ತಿ, ಸಾಮರ್ಥ್ಯ; ತ್ರಾಣ; ಶಕ್ತಿಯುಳ್ಳವನು; ಬಲಶಾಲಿ; Strength; power; energy; might; powerful, strong person;
- ದ್ರಾವಿಡ ಭಾಷಾ ವರ್ಗ ಮತ್ತು ಜನಾಂಗದ ಕುಲವನ್ನು ಹೇಳುವಾಗ 'ಕೋತ' ಪದ ದ್ರಾವಿಡ ಮೂಲದ್ದು, ದ್ರಾವಿಡ ಭಾಷಾ ವರ್ಗಕ್ಕೆ ಸೇರಿದುದು; While saying Dravidian language class and racial family, the word `Kotha' belongs to Dravidian origin; and Dravidian language class;
- 'ಖೋತ' ಮತ್ತು 'ಕುವತ್' ಗಳ ತದ್ಭವ ರೂಪವಾಗಿ ಅರ್ಯಾಬಿಕ್ ಮೂಲದ್ದು.

ಕೋತಂಬರಿ kōtambari :

- ಕೊತ್ತಂಬರಿ; ಕೊತ್ಮಿರಿ; ಈ ಹೆಸರಿನ ಸೊಪ್ಪು ಮತ್ತು ಬೀಜ; ಒಂದು ಸಾಂಬಾರ ಪದಾರ್ಥ; ಕಪ್ಪು ಮಣ್ಣಿನ ಹೊಲ ಗದ್ದೆಗಳಲ್ಲಿ ಬೆಳೆಯುತ್ತಾರೆ; coriander; the leaves and seeds are in this name; a spice; grows in black soiled dry and wet land;
- < ಕುಸ್ತುಂಬರೀ/ಕುಸ್ತುಂಬುರು(ಸಂ); ತದ್ಭವ ರೂಪ; ಅನ್ಯದೇಶ್ಯ ಪದ; A foreign word;
- **ನೋಡಿ:** ಕೊತ್ತಂಬರಿ[೧], ಕೊತ್ತಂಬರಿ[೨];
- ***—ಕೋತಂಬರಿ ಕಾಳ*** : 'ಕೊತ್ತಂಬರಿ ಕಾಳು' ರೂಪದ ವ್ಯತ್ಯಯ; ಪ್ರಾದೇಶಿಕ ವ್ಯತ್ಯಯ; ಉತ್ತರ ಕರ್ನಾಟಕದ ಬಳಕೆ; ಕೊತ್ತಂಬರಿ ಬೀಜ; ಕೊತ್ತಂಬರಿಯ ಉಂಡೆಕಾಳು; ಒಂದು ಸಾಂಬಾರ ಪದಾರ್ಥವಾಗಿ ಇತರ ಸಾಂಬಾರ ಪದಾರ್ಥದೊಡನೆ ಬಳಸುವಾಗ ಸಾಮಾನ್ಯವಾಗಿ ಉಂಡೆಕಾಳನ್ನೇ ಬಳಸುತ್ತಾರೆ; ಬೀಸುವ/ಕುಟ್ಟುವ/ ಆಡಿಸುವ ಕ್ರಿಯೆಗೆ ಒಳಪಡುವಾಗ ಹಿಟ್ಟು/ಪುಡಿ ಆಗಿ ಮಾರ್ಪಡುತ್ತದೆ; `Coriander seed or corn'; form difference; used in North Karnataka; it is used with other spices for cook and make powder;
- ***—ಕೋತಂಬರಿ ಖಾಡೆ*** : ಕೊತ್ತಂಬರಿ ಕಾಳಿನಿಂದ ತಯಾರಿಸಿದ ಒಂದು ಕಷಾಯ; ಕೊತ್ತಂಬರಿ ಕಾಳನ್ನು ತಿಕ್ಕಿ ಬೇಳೆ ಮಾಡಿ ಅದನ್ನು ಕುದಿಸಿ ಖಾಡೆ/ಕಷಾಯ ತಯಾರಿಸುತ್ತಾರೆ; ಅದಕ್ಕೆ ಬೆಲ್ಲ/ ಸಕ್ಕರೆ ಬೆರಸಿ ರುಚಿ ಬರುವಂತೆ ಮಾಡಿಕೊಂಡು ಕುಡಿಯುತ್ತಾರೆ; ಕೆಮ್ಮು ದಮ್ಮು ಇದ್ದರೆ ವಾಸಿಯಾಗುತ್ತದೆ; ಇದು ಆರೋಗ್ಯಕ್ಕೆ ಉತ್ತಮ ಕಷಾಯ ಎನ್ನುತ್ತಾರೆ; A decoction made of `kotambari' seeds; coriander corns rub into pulses and boil in the water i.e. coriander decoction it is mix with sugar/jaggory to taste, and drink it cures cough and asthama; so, it is a good decoction for health;
- ***—ಕೋತಂಬರಿ ಬೀಜ*** : ಕೊತ್ತಂಬರಿ ಬೀಜ; ಕೊತ್ತಂಬರಿಯ ಉಂಡೆ ಕಾಳನ್ನು ಕೈ/ಕಾಲು/ಮರದ ಮಣೆಯಿಂದ ಉಜ್ಜಿ ಹೋಳು ಮಾಡಿ ಬಿತ್ತನೆ ಇತ್ಯಾದಿಗೆ ಬಳಸುತ್ತಾರೆ; Coriander seed; the corns are make into pulse rubbing by hand/leg/wooden plank;
- ***—ಕೋತಂಬರಿ ಸಿವುಡ*** : ಕೊತ್ತಂಬರಿ ಸೊಪ್ಪಿನ ಕಂತೆ; ಎಳೆಯದಾದ, ಇನ್ನೂ ಹೂ ಬಿಡದ ಕೊತ್ತಂಬರಿ ಸೊಪ್ಪನ್ನು ಬೇರು ಸಹಿತ ಕಿತ್ತು, ತೊಳೆದು, ಸೋಸಿ ಸಣ್ಣ ಸಣ್ಣ ಕಂತೆಗಳಾಗಿ ಕಟ್ಟಿ ಪಾವಲಿ/ಎಂಟಾಣೆ/ರೂಪಾಯಿಗೆ ಮಾರುತ್ತಾರೆ; ಈಗೆಲ್ಲಾ ಇದರ ಬೆಲೆ ಐದು/ಹತ್ತು ರೂಪಾಯಿ; ಸಾಂಬಾರ ಪದಾರ್ಥವಾಗಿ ಅಡುಗೆಗೆ ಬಳಕೆ; ಔಷಧಿಯಾಗಿ ಕಷಾಯಕ್ಕೆ ಬಳಸುತ್ತಾರೆ. Bunch of coriander leaves; a young, not yet flowered leaves of coriander pluck with root, wash it, tie into small bunch and sell them in the market; used to prepare soup as spice and for medicine to disease.

ಕೋತಲ/ಕೋತಳೆ kōtala/kōtaḷa :

- ಲಂಬಾಣಿ ಮಹಿಳೆಯರು ಸೊಂಟಕ್ಕೆ ಸಿಕ್ಕಿಸಿಕೊಳ್ಳುವ ಚೀಲ; ಎಲೆ ಅಡಿಕೆಯ ಸಂಚಿ; A little pocket like bag, the Lambani women hook it to a waist; a sachet for betel leaf and nut;
- ವಿವಿಧ ಬಗೆಯ ಕಸೂತಿ ಬಿಡಿಸಿಕೊಂಡಿರುತ್ತಾರೆ; Decorated with different kinds of embroidery work;
- ಬಣ್ಣದ ಬಟ್ಟೆಯ ಮೇಲೆ ಬಗೆಬಗೆಯ ಕಸೂತಿ ಕೆಲಸ ಮಾಡಿ ಸೊಂಟದಲ್ಲಿ ಸಿಕ್ಕಿಸಿಕೊಳ್ಳುವ ಎಲೆ ಅಡಿಕೆಯ ಚೀಲ/ಸಂಚಿ; Decorated on a colour cloth with different embroidery arted bag to kept betel leave nut, hook it on the waist;
- ಲಂಬಾಣಿಗರು ದೇವರನ್ನು ಇಡಲು ಬಳಸುವ ಕಸೂತಿ ಚೀಲ; The embroidered bag is used to put the god idol by Lambani's;
- ಒಂದು ಪ್ರಮಾಣದ ತೂಕ; ಆರು ಮಣದ ತೂಕ(ಒಂದು ಮಣ=ಹತ್ತು ಕಿಲೋ);
- ವ್ಯರೂ: ಕೋತಲಿ; ಕೋತಳಿ;
- ಅನ್ಯದೇಶ್ಯ ಪದ; ಮರಾ: ಕೋಥಳೀ. Foreign word.

ಕೋತಲು kōtalu :

- ಮೀಸಲು ಕುದುರೆ; ಮೇಲಧಿಕಾರಿಗಳ ಬಳಕೆಗಾಗಿಯೇ ಇರುವ ಕುದುರೆ; A reserved horse; for higher officers use;
- ಉತ್ಸವಕ್ಕಾಗಿ ಸಜ್ಜುಗೊಂಡ ಕುದುರೆ; An horse ready for procession;
- ಹೆಚ್ಚುವರಿ ವಸ್ತು; ಅಗತ್ಯವಾಗಿ ಬೇಕಾದುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿರುವ ವಸ್ತು; Addition; a thing is addition than whatever we need;
- ಉಳಿಕೆ; ಉಳಿತಾಯ; ನೌಕರರ ಸಂಬಳದಲ್ಲಿ ಒಂದಷ್ಟು ಕೋತಲು ಉಳಿಸುವುದು; Remain; savings; a savings from the salary of an employee;
- *ಪ್ರ: 'ಸುಖವಾಗಿದ್ದಾಗ ಒಂದಿಷ್ಟು ಕೋತಲು ಮಾಡಿದರೆ ಕಷ್ಟ ಕಾಲಕ್ಕೆ ಬೇಕಾಗುತ್ತದೆ';*
- ತುರ್ಕಿ: ಕೋತಲ್; ಹಿಂ.ಮರಾ: ಕೋತಲ; ಅನ್ಯದೇಶ್ಯ ಪದ; A foreign word;
- ***—ಕೋತಲು ಮುತ್ಸದ್ದಿ*** : ಹೆಚ್ಚುವರಿ ಗುಮಾಸ್ತ; An extra clerk(ಕಿಟ್ಟೆಲ್);
- ***—ಕೋತಲು ಸಪ್ಪಳ*** : ಹೆಚ್ಚುವರಿ ಸಂಬಳ; extra pay(ಅದೇ).

ಕೋತಲೆ/ಕೋತಲ್ kōtale/kōtal :

- ಮೀನು ಹಿಡಿಯುವ ಒಂದು ಬಗೆಯ ಬಲೆ; ಮೀನು ಹಿಡಿಯುವ ಬಲೆ; A kind of fishing net; fishing net;
- ನೇರ/ನೆಟ್ಟಗೆ ಬೆಳೆಯುವ ಮರ; a straight grown tree(ತು.ನಿ).

ಕೋತವಾಲ kōtavāla :

- ಪುರವನ್ನು ಕಾಯುವವ; ಪುರದ ಮುಖ್ಯಾಧಿಕಾರಿ; ಕೋಟೆ ಕಾಯುವವ; ಕೋಟೆಯ ಮುಖ್ಯಸ್ಥ; ರಕ್ಷಣಾಧಿಕಾರಿ; Watchmans of the town/city, chief officer of the town/city; chief of the fort; gaurd of the town;
- ಕೊತವಾಲ, ಕೊತ್ತವಾಲ, ಕೊತ್ವಾಲ, ಕೊಟ್ಟವಳ ಮುಂತಾದ ಸಂವಾದಿ ರೂಪಗಳಿವೆ; Kothavala, kottavala, kotvala, kottavaḷa etc are equivalent forms;
- ಪಾರಸಿ ಮೂಲವಿರಬೇಕು, ಅಲ್ಲಿ ಕೋತ್ವಾಲ್ ರೂಪವಿದೆ; ಸಂಸ್ಕೃತದ 'ಕೋಷ್ಠಪಾಲ' ಪ್ರಾಕೃತದಲ್ಲಿ 'ಕೋಟ್ಟಪಾಲ' ಆಗಿದೆ; ಹಿಂದೂಸ್ತಾನಿ/ ಮರಾಠಿಗಳಲ್ಲಿ 'ಕೋತವಾಲ' ರೂಪವೇ ಇದೆ; The origin of this word is may be Parasi; in Parasi `Kotval'; in Sanskrit `Koṣṭapala'; in prakritha `Koṭṭapala' form; in Hindustani/Marathi `Kotavala' forms are existed;
- ಪಾರಸಿಯಿಂದ ನೇರವಾಗಿ ಬಂದಿರಬೇಕು, ಇಲ್ಲವೆ ಸಂಸ್ಕೃತದ ಮೂಲಕ ಬದಲಾವಣೆಗೊಂಡು ಬಂದಿರಬಹುದು; ಬರುವಾಗ ಮರಾಟಿ ಮೂಲಕವೇ ಕನ್ನಡಕ್ಕೆ ಬಂದಿರಲು ಸಾಧ್ಯ; It may directly from Parasi, otherwise from Sanskrit with certain changes; it may come through Marathi to Kannada is possible;

- ಕೋಟೆ ಅಥವಾ ದುರ್ಗದ ರಕ್ಷಕ ಎಂಬುದು ಸ್ಪಷ್ಟವಾದ ಅರ್ಥ. The clear meaning is the guard of the fort.

ಕೋತಿ/ಕೋಡಗ/ಕ್ವಾಡಗ kōti/kōḍaga/ kvāḍaga:

- ಸಂವಾದಿ ರೂಪಗಳಾಗಿ ಕಪಿ, ಮಂಗ, ಕೋಡಗ ಪ್ರಚಾರದಲ್ಲಿವೆ; 'ಕೋತಿ' ಜನಪದರಲ್ಲಿ ಹೆಚ್ಚು ಪ್ರಚಲಿತ; 'ಕಪಿ' ಸಂಸ್ಕೃತದ ಪದವಾದರೂ ಸಾಮಾನ್ಯರಲ್ಲೂ ಬಳಕೆಯಲ್ಲಿದೆ; 'ಮಂಗ' ಸ್ವಲ್ಪ ಶಿಷ್ಟರೂಪ ಮತ್ತು ನಿರ್ಬಂಧಿತ ವಲಯದಲ್ಲಿ ಬಳಕೆ; 'ಕೋಡಗ' ಪದ ಸಾಹಿತ್ಯದಲ್ಲಿ; ವಚನಕಾರರು ಮತ್ತು ಶರೀಫರ ಪದಗಳಲ್ಲಿ ಬಳಕೆ, ಶರೀಫರ 'ಕೋಡಗನ ಕೋಳಿ ನುಂಗಿತ್ತಾ' ಪ್ರಸಿದ್ಧವಾಗಿಯೇ ಇದೆ; 'ಕೋತಿ' ಮತ್ತು 'ಕಪಿ' ಪದಗಳು ಬಹಳ ಜನಪ್ರಿಯವಾಗಿರುವಂತೆ ತೋರುತ್ತವೆ, ಕರ್ನಾಟಕದ ಎಲ್ಲ ಕಡೆ ಬಳಕೆಯಲ್ಲಿವೆ; 'ಕೋಡಗ' ಪದ ಅದರ ಸಾಹಿತ್ಯಾಧಾರವನ್ನು ಆಧಾರವಾಗಿಟ್ಟುಕೊಂಡು ಉತ್ತರ ಕರ್ನಾಟಕದಲ್ಲಿ ಹೆಚ್ಚು ಪ್ರಚಲಿತವೆಂದು ಹೇಳಬಹುದು; The words `Kapi, Manga, Koḍaga'(monkey) are the equivalent to the word `Koti'(monkey); the word `Koti' is in practice by the folk; `Kapi' is the Sanskrit word but used by common people; `Manga' used in standard form and in restricted area; the word `Koḍaga' used in verse form of literature, vachanakaras and shariff's verses used the word `Koḍaga'; the words `Koti' and `Kapi' are familiar in all over Karnataka; `Koḍaga' is familiar in North Karnataka on the basis of literature;
- 'ಕೋತಿ' ದ್ರಾವಿಡ ಭಾಷೆಯ ಪದವಿರಬಹುದು; ತಮಿಳಿನಲ್ಲಿ 'ಕೋಂದಿ', ತೆಲುಗಿನಲ್ಲಿ ಕ್ರೋತಿ/ಕೋತಿ ಪದಗಳಿವೆ, ತೆಲುಗಿನ ರೇಫೆ ಸಹಿತ ಪದಕ್ಕೆ ಅನ್ಯಪದಗಳ ಪ್ರಭಾವ ಕಾರಣವಿರಬಹುದು; ತಮಿಳಿನ 'ದ' ಕಾರಕ್ಕೆ 'ತ' ಬರೆದು 'ದ' ಓದುವ ಪ್ರಕ್ರಿಯೆ ಕಾರಣವಿರುವಂತಿದೆ, ತುಳು ಕನ್ನಡವನ್ನೇ ಅನುಸರಿಸಿದೆ, ಅದು ಕನ್ನಡದ ಉಪಭಾಷೆಯಲ್ಲವೆ? May be the word `Koti' Dravidian; in Tamil `Kondi', in Telugu `Kroti/koti words are;
- ಸಂಸ್ಕೃತದಲ್ಲಿ ಕಪಿ, ಮರ್ಕಟ ಮತ್ತು ವಾನರ ಪದಗಳಿವೆ; 'ಕಪಿ'ಅಂತೂ ಕನ್ನಡಕ್ಕೆ ಬಂದು ಜನಪದರಲ್ಲಿಯೂ ಬಳಕೆಯ ಸ್ಥಾನವನ್ನು ಗಿಟ್ಟಿಸಿಕೊಂಡಿದೆ; ಮರ್ಕಟ ಮತ್ತು ವಾನರ ಪದಗಳು ಸಾಹಿತ್ಯಿಕ ಮತ್ತು ಪೌರಾಣಿಕ ಅಭಿವ್ಯಕ್ತಿಗಳಾಗಿರುವಂತೆ ತೋರುವುದು ಸಹಜ; ಸಂಸ್ಕೃತದ ಈ ಯಾವ ಪದಗಳಿಂದಲೂ 'ಕೋತಿ' ಪದ ಬಂದಿಲ್ಲವೆನ್ನುವುದು– ಅಕ್ಷರ/ಪದಸಾಮ್ಯವಿಲ್ಲದೆ – ಸ್ಪಷ್ಟವಾಗುವುದು; In Sanskrit the words like `kapi', `markaṭa' and `vanara' are existed; the word `kapi' enter into kannada have a place in folks; vanara and markaṭa are the literary and legendary expression is natural; by any of these three words, the word `koti' originated is cleared;
- 'ಕೋತಿ' ಪದ ಸಾಹಿತ್ಯ ವಲಯದಲ್ಲಿಯೂ ಅಪಾರ ಪ್ರಮಾಣದಲ್ಲಿಯೇ ಕಾಣಿಸಿಕೊಂಡಿದೆ; 'ಕಪಿ' ಪದ ಕೂಡ; ಇವೆರಡನ್ನೂ ಮನುಷ್ಯ ಸ್ವಭಾವಕ್ಕೆ ರೂಪಕವಾಗಿ/ಪ್ರತಿಮೆಯಾಗಿ ಬಳಸಿಕೊಂಡಿರುವುದುಂಟು; ಉದಾಹರಣೆಗೆ, 'ಕೋತಿಯ ಕೈಯಲ್ಲಿ ಮಾಣಿಕ್ಯ', 'ಕಪಿ ಚೇಷ್ಟೆ' ಹೇಳಿಕೆಗಳು– ಇಲ್ಲಿ ಕೋತಿ/ಕಪಿಯ ಚೇಷ್ಟೆ, ಚಂಚಲತೆ, ಅಸ್ಥಿರತೆ, ವಿಷಯ/ವಸ್ತುವಿನ ಅಗ್ರಾಹ್ಯತೆಗಳು ಹಾಗೆ ವರ್ತಿಸುವ ಮನುಷ್ಯನ ನಡವಳಿಕೆಗಳನ್ನು ಪ್ರತಿಮಿಸುತ್ತವೆ/ಪ್ರತಿನಿಧಿಸುತ್ತವೆ; The word `koti' appeared more in the field of literature and the word `kapi' too; these two words used as figures of speech; these words represents the monkey(koti/kapi) gesture, fickleness; caprice; graspableness of subject/thing etc. of man's behaviours images represent here;
- 'ಹುಲ್ಲು ಮುಚ್ಚಿದ ಕೋತಿಯ' ವಿಷಯವನ್ನು ಬಸವಣ್ಣನವರು ತರುತ್ತಾರೆ; ಎಲ್ಲಿಯವರೆಗೆ ಕೋತಿ ಹುಲ್ಲಿನ ಮರೆಯಲ್ಲಿ ಇರುವುದು ಸಾಧ್ಯ, ಸ್ವಲ್ಪದರಲ್ಲಿಯೇ ತನ್ನ ಚಂಚಲತೆಯನ್ನು ಪ್ರದರ್ಶಿಸುತ್ತದೆ, ಹುಲ್ಲು ಸರಿಸಿ ಮೂತಿ ಇಣುಕುತ್ತದೆ;

ಹಾಗೆಯೇ ಮನುಷ್ಯ, ಎಂತಹ ವೇಷವೇ ಮುಚ್ಚಿಕೊಂಡರೂ, ಒಂದಲ್ಲಾ ಒಂದು ಕಾಲಕ್ಕೆ ಅದು ಅನಾವರಣವಾಗುತ್ತದೆ ಎಂಬ ನಂಬಿಕೆ.

Basavanna brought the matter of `Hullu muchchida koti'(grass covered monkey) at what extent the monkey stand behind the grass, with few second it shows its fickleness; move aside the grass and show its visage and peep; man is also like monkey, he has to cover or indisguise one day or the other it will be appear is a belief.

- ಒಂದು ಸಸ್ಯಾಹಾರಿ ಪ್ರಾಣಿ; ಸಣ್ಣ ಪುಟ್ಟ ಪ್ರಾಣಿಗಳನ್ನು ಕೊಂದು ತಿನ್ನುವ ಮಾಂಸಾಹಾರಿ ಕೋಡಗಜಾತಿಗಳೂ ಇವೆ; A vegetarian animal; but some monkeys eat meat by killing small animals;
- ಎಲ್ಲ ಜಾತಿಯ ಕೋತಿ/ಕೋಡಗಗಳೂ ಅರಣ್ಯವಾಸಿಗಳು; ಕಾಡುಮೇಡುಗಳಲ್ಲಿ ಸಿಗುವ ಹಣ್ಣುಹಂಪಲನ್ನು ತಿಂದು ಜೀವಿಸುತ್ತವೆ; ಎತ್ತರವಾದ ಮರಗಳೇ ಇವುಗಳ ವಾಸಸ್ಥಾನಗಳು; All kind monkeys lives in forest; they live on the fruits and roots available in the forest; tall trees are the settlements of these;
- ಸಸ್ತನಿಗಳಾದ ಇವು ಒಂದು, ಅಪರೂಪಕ್ಕೆ ಎರಡು ಮರಿ ಹಾಕುತ್ತವೆ; ಎದೆ ಹಾಲು ಕುಡಿಸಿ ಮರಿಗಳನ್ನು ಪೋಷಿಸುತ್ತವೆ; ಚೆನ್ನಾಗಿ ಓಡಾಡುವುದನ್ನು ಕಲಿತು ತನ್ನ ಆಹಾರವನ್ನು ತಾನೆ ಪಡೆದುಕೊಳ್ಳುವವರೆಗೆ ಮರಿ ತಾಯಿ ಕೋತಿಯನ್ನೇ ಹೆಚ್ಚು ಆಶ್ರಯಿಸಿರುತ್ತದೆ; ನಾಲ್ಕೂ ಕಾಲುಗಳಿಂದ ತಾಯಿಕೋತಿಯ ಎದೆ ಮತ್ತು ಹೊಟ್ಟೆಗೆ ಕಚ್ಚಿಕೊಂಡು/ಅಪ್ಪಿಕೊಂಡು ತಾಯಿಕೋತಿ ಹೋದಲ್ಲೆಲ್ಲಾ ಮರಿಯೂ ಪ್ರಯಾಣ ಬೆಳೆಸುತ್ತದೆ; These are mammals; rarely give birth to two kids, they protect the kids by breast feeding; the kids depend the mothers till they live by earning their livelihood; the kid travel with mother by embracing to stomach with all four legs;
- ಗುಂಪಿನಲ್ಲಿ ವಾಸಿಸುವುದು, ಸಂಚರಿಸುವುದು ಕೋತಿ/ಕೋಡಗಗಳ ಹುಟ್ಟು ಗುಣ; ಗುಂಪಿನಿಂದ ಸಿಡಿದು ಒಂಟಿಯಾದ ಕೋಡಗ ಮತ್ತೆ ತನ್ನ ಗುಂಪು ಸೇರಿಕೊಳ್ಳುವವರೆಗೆ ಅತ್ಯಂತ ಭಯ ಮತ್ತು ದಿಗಿಲುಗೊಳ್ಳುತ್ತದೆ; ಚೀರಾಡುತ್ತ ಸಿಕ್ಕ ಕಡೆಗೆ ಓಡಾಡುತ್ತದೆ; The born nature of monkeys to live in group; if a monkeys slipped out of the group, it is very fearful till it joins the group, till that time wandering by crying towards no definite direction;
- ತೋಟ ತುಡಿಕೆಗಳಿಗೆ ಗುಂಪಿನಲ್ಲಿ ಲಗ್ಗೆ ಹಾಕುತ್ತವೆ; ಬಂಬಲುಗಾಯಿ, ಎಳನೀರಿನ ತೆಂಗು, ಸೀಬೆ, ಮಾವು, ತರಕಾರಿಗಳನ್ನು ತಿಂದು ಲೂಟಿ ಮಾಡುತ್ತವೆ; ಊರುಗಳಿಗೂ ನುಗ್ಗಿ ನಾಡುಹೆಂಚಿನ ಮಾಳಿಗೆಯನ್ನು ಕಿತ್ತು ದಾಂದಲೆ ಎಬ್ಬಿಸುವುದೂ ಉಂಟು; ಯಾರೂ ಇಲ್ಲದ್ದನ್ನು ನೋಡಿಕೊಂಡು ಮನೆಯೊಳಕ್ಕೆ ನುಗ್ಗುವುದೂ ಉಂಟು; They attack on the gardens in troup; they ate up the tender coconut, pomegranate, mango and vegetables; if they enter into the village, no one in the house, they harm the houses by smashing native tiles of the roof and enter into the house also;
- ಹನುಮಂತ ಅಥವಾ ಆಂಜನೇಯನ ರೂಪವೆಂಬ ನಂಬಿಕೆಯಿದೆ; ಕೋತಿಗಳಿಂದ ಎಷ್ಟೇ ತೊಂದರೆಯಾದರೂ ಕೊಲ್ಲುವುದಿಲ್ಲ; ಕೊಂದರೆ ಪಾಪ ಬರುತ್ತದೆಂಬ ಅತೀವ ಪಾಪಭೀತಿ ಜನರಲ್ಲಿದೆ; ಕೊಂದ/ಆಕಸ್ಮಿಕ ಅಥವಾ ಸಹಜ ಸಾವಿನಿಂದ ಸತ್ತ ಕೋತಿಗಳು ಸಿಕ್ಕರೆ ಶವಸಂಸ್ಕಾರ ಮಾಡಿ, ಚಂದಾ ಸಂಗ್ರಹಿಸಿ ಉತ್ತರಾದಿ ಕ್ರಿಯೆಯನ್ನೂ ಮಾಡುತ್ತಾರೆ; ಸ್ಮಾರಕ ಅಥವಾ ದೇವಸ್ಥಾನ ನಿರ್ಮಿಸುವ ಅಪರೂಪದ ಘಟನೆಗಳೂ ಜರುಗುತ್ತವೆ; ಫ್ಲೆಕ್ಸ್‌ಗಳನ್ನು ಹಾಕುವ ವಿದ್ಯಮಾನ ಇತ್ತೀಚಿನ ಬೆಳವಣಿಗೆಯಾಗಿದೆ; People believe they are the visage of Hanumantha or Anjaneya; any problems happened by the monkeys people never kill them; if they kill it is sinful, such a sinfull alertness in the mind of the people; any such killed/naturally dead/accidentally dead monkeys found anywhere they were burry/cremated; and celebrate the funeral by collecting

funds; other than this built temple or monument in memory of them are the rare incidents, now-a-days display the flex boards;

- ಅಲೆಮಾರಿತನ ಹಾಗೂ ಚಂಚಲತೆ ಕೋತಿಗಳ ಸಹಜ ಸ್ವಭಾವ; ಕಾಡಿನಿಂದ ಕಾಡಿಗೆ ಮರದಿಂದ ಮರಕ್ಕೆ ತಮ್ಮ ವಸತಿಯನ್ನು ಮೇಲಿಂದ ಮೇಲೆ ಬದಲಿಸುತ್ತಾ ಓಡಾಡುತ್ತಿರುತ್ತವೆ; ಸ್ಥಿರಬುದ್ಧಿ ಇಲ್ಲದ, ನಿಂತಕಡೆ ನಿಲ್ಲದ, ನಿಲುವುಗಳಿಗೆ ಅಂಟಿಕೊಳ್ಳದ ಮನುಷ್ಯರಿಗೆ ಕೋಡಗವನ್ನು ಪ್ರತೀಕ ಅಥವಾ ಸಂಕೇತ ಮಾಡುವ ಸಾಮಾನ್ಯ ಪ್ರವೃತ್ತಿ ಇದೆ; 'ಕಪಿಸ್ವಭಾವ' 'ಕೋತಿಬುದ್ಧಿ' ಇತ್ಯಾದಿ ಮಾತುಗಳಿವೆ; *ಪ್ರ: 'ಊರಿಗೆಲ್ಲಾ ಒಂದೇ ಬಟ್ಟೆ, ಕೋಡಗನಿಗೆ ಬೇರೆ ಬಟ್ಟೆ'*(ಗಾ); *'ಮರನನೇರಿದ ಮರ್ಕಟನಂತೆ ಎನ್ನ ಚಿತ್ತ ಕಂಡಯ್ಯ'*(ಬ.ವ); Wandering and fickleness is the nature of monkeys; they are changing their camp from tree to tree, forest to forest again and again; who has no firm mind, do not stay at a place, donot stick on a firm decision such man is called as the replica of monkey or koḍaga, is the general nature; such words are `kapi swabhava'(monkey temper, koti buddi, mind of monkey);
- ಕೋತಿಯ ಮುಖ ಸಾಮಾನ್ಯವಾಗಿ ಕೆಂಪು ಅಥವಾ ತೆಳುಗೆಂಪು; ಕಪ್ಪು ಮೂತಿಯ ಕೋಡಗಗಳೂ ಇವೆ; ಮೂತಿ ಉಬ್ಬಿಕೊಂಡಿದ್ದು ಮುಂದಕ್ಕೆ ಚಾಚಿದಂತಿರುವುದರಿಂದ ನೋಡಲು ಸಹ್ಯವೇನೂ ಅಲ್ಲ; ವಿಕಾರವೆಂದು ಭಾವಿಸಲಾಗುತ್ತದೆ; ಅಷ್ಟೇನೂ ಸುಂದರವಲ್ಲದ, ವಿಕಾರವಾದ ಮೋರೆಯವರನ್ನು ಕಪಿಮೋರೆ, ಕೋತಿಮುಖ ಇತ್ಯಾದಿಯಾಗಿ ಆಡಿಕೊಳ್ಳುತ್ತಾರೆ; *ಪ್ರ: 'ಹೆತ್ತವರಿಗೆ ಹೆಗ್ಗಣ ಮುದ್ದು, ಕೂಡಿದವರಿಗೆ ಕೋಡಗ ಮುದ್ದು'*(ಗಾ); *'ಕೋಡಗದ ಮೊಗಸಿರಿಗೆ ಕಾವಲಿಯೋಡು ಕನ್ನಡಿಯಾಯ್ತು'* (ಕುವ್ಯಾಭಾ); *'ನಮ ಬೀಗ ಕೋಡಗನಂತೋರ ಕರತಂದ'*; The face of the monkey generally red or light red colour; but black faced monkeys also found; the face or visage raise or enhance farword; and cannot looks nice; looks ugly; such ugly visage person is teased as `Kapimore'(monkey face);
- ಕೋತಿ/ಕೋಡಗ ಕಶೇರುಕದ ಗುಂಪಿಗೂ ಸೇರುತ್ತದೆ; ನಾಲ್ಕೂ ಕಾಲನ್ನು ಬಳಸಿ ನಡೆಯುವುದು ಸಾಮಾನ್ಯ; ಒಂದು ಮಿತಿಯಲ್ಲಿ ಎರಡು ಕಾಲಿನಲ್ಲಿ ನಿಲ್ಲುವ, ನಡೆಯುವ, ಮುಂಗಾಲುಗಳನ್ನು ಕೈನಂತೆ ಬಳಸುವ ಪ್ರವೃತ್ತಿಯನ್ನು ತೋರುತ್ತದೆ; ಅಂಡಿನ ಮೇಲೆ ದೇಹ ಊರಿ ಕೂರುವುದೂ ಉಂಟು; ಇವೆಲ್ಲ ಮಾನವ ಪ್ರಕೃತಿಗೆ ಹತ್ತಿರವಾದ ವರ್ತನೆಗಳು; ವಿಕಾಸ ವಾದದ ಪ್ರಕಾರ ಮಾನವನ ಪೂರ್ವಜ ಕುಲ ಕೋತಿ/ಕೋಡಗ ಕುಲಕ್ಕೆ ಹತ್ತಿರವಾದದ್ದು; 'ಮಂಗನಿಂದ ಮಾನವ' ಎಂಬ ಮಾತು ರೂಢಿಯಲ್ಲಿದೆ; ಇದಕ್ಕೆ ವಿಕಾಸ ವಾದದ ಸಮರ್ಥನೆಯನ್ನೂ ಕೊಡಲಾಗುತ್ತದೆ; ರಾಮಾಯಣದ ಹನುಮಂತ ಜಾಂಬವಂತ ಮೊದಲಾದವರು ಕಪಿಕುಲದವರು, ವಾನರರು ಎನ್ನಲಾಗಿದೆ; ಕೊಡಗಗಳಿಗಿರುವಂತೆ ಮೈತುಂಬ ರೋಮ ಸಮೃದ್ಧಿ ಉಳ್ಳವರು, ಉಬ್ಬು ಮೂತಿಯವರು ಎಂದೂ ಬಣ್ಣಿಸಲಾಗಿದೆ; ಕಪಿಕುಲ, ಜಾಂಬವಂತ ಎಂಬಂತಹ ಮಾತುಗಳು ಮಾನವ ಜನಾಂಗ(Human Race) ವೊಂದನ್ನು ಸೂಚಿಸುತ್ತಿರಬಹುದು; ಒಟ್ಟಿನಲ್ಲಿ ಕೋಡಗ ಸಂಕುಲ ಭಾರತೀಯ ಜಾನಪದವನ್ನು, ಪುರಾಣ ಪರಿಕಲ್ಪನೆಗಳನ್ನು ವಿಸ್ತರಿಸುವಲ್ಲಿ ತನ್ನದೇ ಪಾತ್ರವನ್ನು ನಿರ್ವಹಿಸಿದೆ; Koti/koḍaga belongs to vertebrate group; while walking their four legs are turn around is common; they stand on two legs in a limit and walk; used their front legs as hand is in practice; they sit on their buttock; these are near to human nature; according to evolution theory the ancients of human race is near to monkey(koti/kodaga); the word `monkey to man is in practice'; for this they give justification through evolution theory; Hanumantha, Jambuvantha of Ramayana are belongs to monkey race; they are described as full of hairy body raised visage monkey race; totally the koḍaga race enhance the

Indian folklore and legends of its own role;

- ಕೋಡಗ ಆಕೃತಿ ಮತ್ತು ವರ್ತನೆಯಿಂದ ಹಾಸ್ಯಕ್ಕೆ ಲೇವಡಿಗೆ ರೂಪಕ; 'ಕೋಡಗ'ಕ್ಕೆ ಹಾಸ, ನಕಲಿ, ತಮಾಷೆ(ಕನಿ) ಎಂಬ ಅರ್ಥಗಳೇ ಇವೆ; ಯಕ್ಷಗಾನ ಬಯಲಾಟ ಮೊದಲಾದವುಗಳಲ್ಲಿ ಕೋಡಗ ವೇಷ ಹಾಕಿಕೊಂಡು ಅಭಿನಯಿಸುವ, ಕುಣಿಯುವ ಪ್ರವೃತ್ತಿಯೊಂದಿದೆ; ಕೋಡಗ ವೇಷ, ಕೋಡಂಗಿ, ಕೋಡಂಗಿ ಪಾರ್ಟು ಎಂದೆ ಕರೆಯಲಾಗುತ್ತದೆ; 'ಕೋಡಗಮೊಗ' ಎಂಬ ಮಾತೂ ಇದೆ; ಹೆಚ್ಚಾಗಿ ಮಕ್ಕಳಿಗೆ, ವಯೋಮಾನದ ಅಂತರವಿಲ್ಲದೆ ಎಲ್ಲರಿಗೆ ಕೋಡಗ ಹಾಸ್ಯದ ಸಾಧನವಾಗಿದೆ; Monkeys are the livestock for humour and ridicule by their structure and behaviour; monkey has the meaning humour, imitation (nakali) fun; the disguise of koḍaga in Yakshagana and folk plays is a habit, to dance and act in it; these are called as `Koḍaga vesha', `Koḍangi', `Koḍangi partu'; koḍaga is the stock of humour to children to age old without difference of age;
- 'ಕೋತಿ ಮೊಸರನ್ನ ತಿಂದು ಮೇಕೆ ಮೂತಿಗೆ ಒರಸಿತು' ಎಂಬ ಲೋಕೋಕ್ತಿ ಇದ್ದು ಕೋಡಗಗಳ ಅಥವಾ ಕೋಡಗ ಸ್ವಭಾವದವರ ವಂಚಕ ಪ್ರವೃತ್ತಿಯನ್ನು ಹೇಳುತ್ತದೆ; ನಂಬಿಕೆದ್ರೋಹಕ್ಕೂ ಕೋಡಗ ಪ್ರತೀಕವಾಗುತ್ತದೆ; *ಪ್ರ: 'ಕೋಟ್ಟಾವ ಕ್ವಾಡಗ, ತಿಂದಾವ ಹನುಮಪ್ಪ'(ಗಾ); 'ಕೋಟೋನು ಕೋಡಂಗಿ ಈಸ್ಕಂಡೋನು ಈರ್ಬದ್ರ'(ಗಾ);* `Koti mosaranna thindu meke mootige orasitu' is a proverb; this tells who have monkey nature and fraudulent nature;
- ಏರು ಕಟ್ಟುವಾಗ ಈಚ(ಈಸು)ನ್ನು ನೊಗಕ್ಕೆ ಸೇರಿಸಿ ಕಟ್ಟುವ ಜಾಗದಲ್ಲಿ ಮಿಣಿ(=ಹಗ್ಗ)ಯನ್ನು ತೂರಿಸುವ ಒಂದು ಸಾಧನ, ಬಾಗಿದ ಮರದ ತುಂಡು; ಈ ತುಂಡು ಅಂಗೈ ಅಗಲಕ್ಕೆ ಸು.ಒಂದು ಅಡಿ ಉದ್ದವಿದ್ದು ಎರಡೂ ತುದಿಯಲ್ಲಿ ಮಿಣಿಯನ್ನು ತೂರಿಸಲು ರಂಧ್ರ ಮಾಡಿರುತ್ತಾರೆ;
- 'ಕೋಡಗ' ರೂಪದ ಜಾಗದಲ್ಲಿ 'ಕೋತಿ', 'ಕಪಿ' ರೂಪಗಳೇ ಹೆಚ್ಚು ಪ್ರಚಲಿತ; 'ಕೋಡಗ' ದೇಶೀ ರೂಪ ಎನ್ನಲಾಗಿದೆ(ಕನಿ); ಕೋಡ=ಕೊಂಕು; ಬಾಗು; ವಕ್ರ; ಕೋತಿ/ಕಪಿ; ವಾನರ ಸಂಕುಲದಲ್ಲಿ ವಕ್ರಬುದ್ಧಿ, ಕೊಂಕು ನಡವಳಿಕೆಯನ್ನೇ ಗುರುತಿಸಿಕೊಂಡ ಮನುಷ್ಯ ಅವನ್ನು 'ಕೋಡ', 'ಕೋಡಗ' ಎಂದು ಕರೆದಂತೆ ತೋರುತ್ತದೆ; 'ಕೋಡುಗ' ರೂಪವೂ ಇದ್ದು ಕೊಂಕಾದ, ಬಾಗಿದ, ವಕ್ರವಾದ ಎಂಬರ್ಥದ 'ಕೋಡು', 'ಕೋಡುಗ'ಕ್ಕೆ ಕಾರಣವಾಗಿರಬಹುದು; 'ಕೋಡುಗ'ವೇ ಕ್ರಮೇಣ 'ಕೋಡಗ' ಆಗಿರಬಹುದು; 'ಕೋಟ(ಸಂ)ಕ್ಕೆ ವಕ್ರತೆ, ಕುಟಿಲತನ ಎಂಬ ಅರ್ಥ ಇದ್ದು ಕೋಟ>ಕೋಡ> ಕೋಡಗ ಆಗಿರುವ ಸಾಧ್ಯತೆಯೂ ಇದೆ; In the place of `koḍaga' word, the `koti', `kapi' forms are existed more; `koḍaga' form is said to be a native word; `koḍa' means konku; the word konku gives the meaning bend; curve; koti/kapi in vanara community crooked or fickle mind; the man found the crooked character of monkeys called them `koḍa', `koḍaga' is possible; gradually may be `koḍuga' became `koḍaga';
- ವ್ಯರೂ: ಕೋಡ; ಕೋಡುಗ; ಕ್ವಾಡಗ;
- ಜ್ಞಾಭಾ.ರೂ: ತ: ಕೋಡರ, ಕೋಟರ, ಕೋಗುಲ, ಕುರಂಗು; ತು: ಕೊಡಂಗು, ಕೊಡಂಗೆ, ಕೊಡಂಜಿ, ಕೊಡಂಜು, ಕೋಡಕೆ, ಕೋಡಾಕೆ; In Tamil koḍara, koṭare, kogula, kurangu; in Tulu koḍangu, koḍange, koḍanji, koḍanju, koḍake, kaḍāke;
- **—ಕೋಡಗ ಕೆಮ್ಮು** : ಒಂದು ಬಗೆಯ ಕೆಮ್ಮು; ನಾಯಿ ಕೆಮ್ಮು; **ವ್ಯರೂ:** ಕೋಡಗಗೆಮ್ಮು; ಕ್ವಾಡುಗ್ಗೆಮ್ಮು; ಕೋಡಗ+ಕೆಮ್ಮು; A kind of cough; dog cough;
- **—ಕೋಡಗಗಟ್ಟು** : ಎರಡೂ ಕೈಗಳನ್ನು ಕೂಡಿಸಿ ಕಟ್ಟುವ ಬಿಗಿಯಾದ ಕಟ್ಟು; ಹೆಡಮುರಿಕಟ್ಟು; ಹೆಡಮುರಿಗೆ; ಸೆರೆಸಿಕ್ಕವರನ್ನು ಬಂಧಿಸುವ ಒಂದು ವಿಧಾನ; ಕೋಡಗ+ಕಟ್ಟು=ಕೋಡಗಕಟ್ಟು> ಕೋಡಗಗಟ್ಟು; ಕ>ಗ ವ್ಯತ್ಯಯ; ಅಘೋಷವರ್ಣ ಘೋಷ ವರ್ಣವಾಗುವ ಬಗೆ; ವರ್ಗೀಯ ವ್ಯಂಜನಗಳಲ್ಲಿ ಪ್ರಥಮಾಕ್ಷರಕ್ಕೆ ತೃತೀಯಾಕ್ಷರದ

ಆದೇಶ; Two hands are tie jointly very tight is called koḍaga kaṭṭu; heḍemuri kaṭṭu; heḍemurige; is a kind of arrest those who are captured;

- ***—ಕೋಡಗವಾಡು*** : ಕೋತಿಯಂತೆ ಆಡು; ಮಂಗಚೇಷ್ಟೆ ಮಾಡು; ಕೋಡಗಗಳಿಗೆ ಕೆಲವು ಚಮತ್ಕಾರದ ಆಟ ಕಲಿಸಿ ಆಡಿಸಿ ಭಿಕ್ಷಾಟನೆ ಮಾಡಿ ಬದುಕುವ ಜನರಿದ್ದಾರೆ; ಕೋಡಗಗಳನ್ನು ಆಡಿಸುವುದು ಒಂದು ಕಲೆ, ಒಂದು ಜೀವನ ವಿಧಾನ; ಆಟದ ಕೋಡಗಗಳಿಗೆ ಅಂಗಿ ನಿಕ್ಕರು ಅಥವಾ ಲಂಗ ತೊಡಿಸಿ, ಕೊರಳಿಗೆ ಗೆಜ್ಜೆ ಕಟ್ಟಿ ಅಲಂಕಾರ ಮಾಡಲಾಗುತ್ತದೆ; ಡಮರುಗ ಬಾರಿಸಿ, ಕೊಳಲು ಊದಿ ಕೋಡಗಗಳನ್ನು ಆಡಿಸುವವರೂ ಇದ್ದಾರೆ; Act like monkey; make monkey gesture; people trained some tricky play to monkeys and play for alms or beggary; monkey playing is an art, it is a way of life too; the players wear shirt, pants or skirt, tie bells around neck as decoration; beating ḍamaruga blowing flute to play monkeys;
- 'ಕೋತಿ' ಪದ ಪ್ರಯೋಗದ ವಿಶೇಷಗಳನ್ನೀಗ ನೋಡಬಹುದು:
- ಕೋತಿಯ ವಿನಾಶಕಾರಿ ವರ್ತನೆ; ಅವಿವೇಕ ಹಾಗೂ ಚಂಚಲತೆಯನ್ನು ಬಿಂಬಿಸುವ ಅನೇಕ ನುಡಿಗಟ್ಟುಗಳು, ಗಾದೆಗಳಿವೆ; ಉದಾ: 'ಕೋತಿಗೆ ಭಂಗೀ ಇಕ್ದಂಗೆ'; 'ಕೋತಿ ಕೈಯಲ್ಲಿ ಹೂಮಾಲೆ/ ಮಾಣಿಕ್ಯ ಕೊಟ ಹಾಗೆ'; 'ಕೋತಿಗೆ ಹೆಂಡ ಕುಡಿಸಿದ ಹಾಗೆ'; 'ಕೋತಿಗೆ ಗುಣವಿಲ್ಲ, ಮಾತಿಗೆ ಕೊನೆಯಿಲ್ಲ'(ತು.ಗಾ); *ಪ್ರ: 'ಮೊದ್ಲೇ ಕೋತಿ, ಹೆಂಡ ಕುಡ್ಸುದ್ರಂತೂ ಮುಗೀತು'*;
- ಆಲಂಕಾರಿಕ ಅರ್ಥದಲ್ಲಿ: ಅಂದಗೇಡಿ; ಕುರೂಪಿ; ಖಚಿತ ನಿಲುವು, ಬದ್ಧತೆ, ನಿಷ್ಠೆ ಇಲ್ಲದವನು; ಅವಿವೇಕಿ; ಮಂದಬುದ್ಧಿಯವ; *ಪ್ರ: 'ಆ ಕೋತಿಗೆ ಯಾರು ಹೆಣ್ಣು ಕೊಟ್ಟಾರು?'*; ಕೋತಿ ಮುಖ, ಕೋತಿ ಮುಸುಡಿ ಮೊದಲಾದ ಮಾತುಗಳಿವೆ;
- ನಿಂದನೆ/ಬೈಗುಳದ ಮಾತು; *ಪ್ರ: 'ಅದೊಂದು ಕೋತಿ ಮುಕ್ಕ'; 'ಕೋತಿ ಮುಂಡೇದ್ಕೆ ಏನ್ ಮಾಡ್ತಾಯಿವ್ನಿ ಅನ್ನೂ ಜ್ಞಾನ್ವೇ ಇಲ್ಲ'*;
- ದೇಶೀಪದ;
- ***—ಕೋತಿ ಆಟ*** : ಮಕ್ಕಳ ಒಂದು ಆಟ; ಚೆಂಡು ಈ ಆಟದ ಆಟಿಕೆ; ಐವರು ಮಕ್ಕಳು ಕೂಡಿ ಆಡುತ್ತಾರೆ; ಚಪ್ಪಾಳೆ ತಟ್ಟುವ ಕ್ರಮದ ಮೂಲಕ ತಮ್ಮಲ್ಲೇ ಒಬ್ಬ 'ಕಳ್ಳ'ನನ್ನು ಆಯ್ಕೆ ಮಾಡಿಕೊಳ್ಳುತ್ತಾರೆ; ಕಳ್ಳನನ್ನು ಮಧ್ಯೆ ನಿಲ್ಲಿಸಿ ಉಳಿದವರು ಅವನ ಸುತ್ತಾ ನಿಲ್ಲುತ್ತಾರೆ; ನಾಲ್ವರೂ ಒಬ್ಬರಿಂದ ಒಬ್ಬರಿಗೆ ಚೆಂಡು ಎಸೆದು ಸುತ್ತು ಹಾಕಿಸುತ್ತಾರೆ; 'ಕಳ್ಳ' ಚೆಂಡು ಹೋದೆಡೆಗೆಲ್ಲಾ ಸುತ್ತಾಡಿ ಹಿಡಿಯಬೇಕು; ಚೆಂಡು ಹಿಡಿದ ಮೇಲೆ ಅವನು ನಾಲ್ವರಲ್ಲಿ ಒಬ್ಬನಾಗುತ್ತಾನೆ; ಕಳ್ಳನಿಂದ ಹಿಡಿಯಲ್ಪಟ್ಟಾಗ ಚೆಂಡು ಎಸೆದವನು 'ಕಳ್ಳ'ನಾಗುತ್ತಾನೆ; ಹೀಗೆ ಆಟ ಮುಂದುವರಿಯುತ್ತದೆ; It is a kind of play for children; ball is the play thing to this play; five children play this game; by clapping select a player as thief; the thief stand in the centre, others are stand around him; the other four members throw the ball one to other around; the thief follow the ball and try to catch; after catch the ball he is one among the four but the thrower of the ball became the thief; like this the play continues;
- ***—ಕೋತಿ ಆಡಿಸುವ ಆಟ*** : ಒಂದು ಮನರಂಜನಾ ಕಲೆ ಅಥವಾ ವಿದ್ಯೆ; ಅಲೆಮಾರಿ ಸಮುದಾಯದವರ ಜೀವನಯಾಪನಾ ವೃತ್ತಿ; ಕೋತಿಗೆ ತರಬೇತಿ ನೀಡಿ/ಪಳಗಿಸಿ, ಅದರಿಂದ ವಿವಿಧ ಆಟಗಳನ್ನು ಆಡಿಸಿ ಮನೆಮನೆಯವರು ಕೊಟ್ಟ ಭೀಕ್ಷೆಯನ್ನು ಪಡೆದು ಜೀವನ ಸಾಗಿಸುವ ಜನರೇ ಇದ್ದಾರೆ; ನಿಂತಕಡೆ ನಿಲ್ಲದೆ ಊರೂರು ಅಲೆಯುತ್ತಾರೆ; ತಮ್ಮ ಆಟದ ಕೋತಿಗೆ ಅಂಗಿ/ಲಂಗ ಇಕ್ಕಿಸುವುದು, ಸರ ತೊಡಿಸುವುದು, ಬಳೆ ಹಾಕುವುದು, ಗೆಜ್ಜೆ ಕಟ್ಟುವುದು ಮೊದಲಾದ ಅಲಂಕಾರ ಮಾಡುತ್ತಾರೆ; ಎರಡು ಕಾಲುಗಳ ಮೇಲೆ ನಡೆಸುವುದು, ಪಲ್ಟಿ/ಲಾಗ ಹೊಡೆಸುವುದು, ತಾಯಿ ಮನೆಗೆ ಹೋಗುತ್ತೀಯ ಎಂದರೆ ಗಂಟು ಹೊತ್ತುಕೊಂಡು ಹೊರಡುವುದು, ಗಂಡನ ಮನೆಗೆ ಹೋಗುತ್ತೀಯ ಎಂದರೆ ಒಲ್ಲೆ ಎಂದು ತಲೆ ಆಡಿಸುವುದು ಮೊದಲಾದ ಆಟಗಳನ್ನು ಕೋತಿಯಿಂದ ಆಡಿಸುತ್ತಾರೆ; ಆಟ ಮುಗಿದ ಮೇಲೆ

ಬೀದಿಯಲ್ಲಿ ನೆರೆದಿರುವ ಗುಂಪಿನಿಂದ ಅಥವಾ ಮನೆಯ ಒಡತಿಯಿಂದ ಅವರು ಕೊಡುವ ಕಾಸನ್ನೋ ದವಸವನ್ನೋ ತಟ್ಟೆಗೆ ಹಾಕಿಸಿಕೊಂಡು ತಂದು ತನ್ನ ಒಡೆಯನಿಗೆ ಕೊಡುವ ಕೆಲಸವನ್ನೂ ಆಟದ ಕೋತಿ ಮಾಡುತ್ತದೆ; ಕಾಸು/ಭಿಕ್ಷೆ ಕೊಟ್ಟವರಿಗೆ ಕೈ ಜೋಡಿಸಿ ನಮಸ್ಕರಿಸುತ್ತದೆ; It is an entertaining art or education; this is earning source of livelihood to wander community; they train monkeys to play different activities and they move to every house to get the alms, they don't stay in a place; the monkey players dress the monkey with shirt/skirt, necklace, rings/bangles, tie balls are decorated to it; make monkey to walk on two legs, to make it summerset; ask it to go to mothers house, it moves carry with things; advice to go to husbands house but nod its head as a mark of rejection etc; plays are performs by the ring master; after the play collect money or corns by the gatherers or by the house wife of the family or the head of the family; the monkey collected these things and gave it to the master; it salute to the doner;

- —***ಕೋತಿಕಾಯಿ*** : ಅಂಕುಡೊಂಕಾದ/ವಕ್ರವಾದ ಹುಣಸೇಕಾಯಿ; ಕೊಂಗಕಾಯಿ; Tamarind nut;
- —***ಕೋತಿಕೊಂಬಾಟ/–ಕೋತಿಕೊಮ್ಮ ಆಟ*** : ಮಕ್ಕಳ ಒಂದು ಬಗೆಯ ಆಟ; ಮರಕೋತಿ ಆಟ(ನೋಡಿ); ಕೋತಿ+ಕೊಂಬೆ/ಕೊಮ್ಮು+ಆಟ; ಕೊಂಬೆ>ಕೊಮ್ಮೆ/ಕೊಮ್ಮ; ಮರದ ಕೊಂಬೆಗಳನ್ನು ಏರಿ ಮಕ್ಕಳು (=ಕೋತಿ–ಆಲಂ.) ಆಡುವ ಆಟವಾದುದರಿಂದ ಈ ಹೆಸರು; Is a kind of children's play; the name came to this play is, the children climb the tree branches and play like monkeys; monkey gesture is a playful activities of monkeys;
- —***ಕೋತಿಚೇಷ್ಟೆ*** : ಕೋತಿಗಳು ನಡೆಸುವ ತುಂಟಾಟ; ಕೋತಿಗಳ ವಿನಾಶಕಾರಿ ಚಟುವಟಿಕೆ; ಮಕ್ಕಳ/ದೊಡ್ಡವರ ಕುಚೋದ್ಯ, ತುಂಟತನ, ಕೀಟಲೆ, ವಿನಾಶಕಾರಿ ಕೆಲಸ/ಕೃತ್ಯ; ವ್ಯರೂ: ಕಪಿಚೇಷ್ಟೆ; A dangerous activity of monkeys; derision of children/elders; mischief; rascality; dangerous work;
- —***ಕೋತಿಬುದ್ಧಿ*** : ಔಚಿತ್ಯ ಅರಿಯದ ನಡವಳಿಕೆ; ಅವಿವೇಕದ ಮನಸ್ಸು; ಅಸ್ಥಿರಬುದ್ಧಿ; ವಿವೇಚನೆಯಿಲ್ಲದ ಚಿತ್ತ; ವ್ಯರೂ: ಮಂಗಬುದ್ಧಿ; It means the behaviour does not understand properly; foolish mind; fickle mind;
- —***ಕೋತಿಇರ್ಬು*** : ಕೆಂಪಗಿರುವ ದೊಡ್ಡ ಇರುವೆ; ಇತರ ಜಾತಿಯ ಇರುವೆಗಳ ಹಾಗೆಯೇ ಸಾಲಾಗಿ ಚಲಿಸುತ್ತವೆ, ಗುಂಪಾಗಿ ಜೀವಿಸುತ್ತವೆ; ಇವು ಕಚ್ಚಿದರೆ ದೊಡ್ಡ ದೊಡ್ಡ ಬೊಬ್ಬೆಗಳು ಬರುತ್ತವೆ; ಕೋತಿ+ಇರ್ಬು; ಇರ್ಬು=ಇರುವೆ; ಇರುಂಪೆ>ಇರುವೆ>ಇರ್ಬು; ಪ>ಬ/ವ ವ್ಯತ್ಯಯ; ಓಷ್ಠ್ಯ ಧ್ವನಿಮಾಗಳು ವಿನಿಮಯಗೊಳ್ಳುವುದು ಸಹಜ; Big red ant; moves in line like other family of ants; lives in group; if they bite, created big bubbles;
- —***ಕೋತಿಮಣೆ*** : ಏರ್ಗಲ್(?) ಮುಂದೆ ಮಾಡಿದ ಕಟ್ಟಿಗೆಯ ಮಣೆ; A firewood or wooden plank;
- —***ಕೋತಿಮರಿ*** : ಕೋತಿಯ ಶಿಶು; ಮರಿಕೋತಿ; 'ಕೋತಿ'ಯಂತೆ 'ಕೋತಿಮರಿ' ಸಾಮಾನ್ಯ ರೂಪವಾಗಿಯೂ ಬಳಕೆ; ಪ್ರ: *'ನೇಯಿಗೆಯವನಿಗೇಕೆ ಕೋತಿಮರಿ'*; A kid of monkey; the word 'kotimari' generally used like koti; baby monkey; monkey kid is not bigger than human baby;
- —***ಕೋತಿಮುಖ/–ಕೋರಿಮುಸುಡಿ*** : ಇದೊಂದು ರೂಪಕ; ಸಂಯುಕ್ತ ಪದ ಅಥವಾ ನುಡಿಗಟ್ಟು; ಅಂದವಿಲ್ಲದ ಮುಖ; ವಿಕಾರ ರೂಪು; ಕುರೂಪು; It is a figure of speech; compound word; or an idiom; ugly face;
- —***ಕೋತಿರೋಗ*** : ದನಗಳಿಗೆ ಬರುವ ಒಂದು ರೋಗ; ಬಾಲದ ಕೂದಲು ಉದುರುತ್ತಾ

ಹೋಗುವುದು, ನಿಶ್ಶಕ್ತವಾಗುವುದು ಇದರ ಲಕ್ಷಣ(ಚಿ.ಪ.ಕೋ); ಒಂದು ಬಗೆಯ Fungus; ಈರುಳ್ಳಿ ಬೆಳೆಗೆ ಬರುವ ಒಂದು ರೋಗ(ಬ.ಜಿ); A kind of disease to cattle; the hair of the tail withering out; the nature is to be weak;

- ***—ಕೋತಿ ಸಬತ್ತಿ ಹುಲ್ಲು/ಪತ್ರಿಕೆ ಹುಲ್ಲು*** : Eragrostis tenella; ಎತ್ತರ ಬೆಳೆಯುವ ಕಳೆಹುಲ್ಲು; A weed grass grows high;
- ***—ಕೋತ್ಮಾರಿ*** : ಒಂದು ಬಗೆಯ ಕೋತಿ; ದೊಡ್ಡ ಕೋತಿ/ಮಾರಿ ಕೋತಿ ಎಂಬ ಅರ್ಥದಲ್ಲಿ ಇರಬಹುದು; ಬೃಹದಾಕಾರದ, ದೊಡ್ಡ ಗಾತ್ರದ ಎಂಬ ಅರ್ಥದಲ್ಲಿ 'ಮಾರಿ' ಪದವನ್ನು ಬಳಸುವುದಿದೆ; ಕೋತಿ+ಮಾರಿ(?); A kind of monkey; it may be means big monkey/very big monkey; the word `mari' used in the meaning very big in size;
- ***—ಮರಕೋತಿ ಆಟ*** : ಮಕ್ಕಳ ಒಂದು ಆಟ; ಹಲವು ಜನ ಮಕ್ಕಳು ಸೇರಿ, ಅವರಲ್ಲೊಬ್ಬನನ್ನು ಕೋತಿ ಮಾಡಿ, ಉಳಿದವರು ಮರ ಏರಿ, ಕೋತಿಯಾಗಿದ್ದವನು ಮರವೇರಿ ಈಗಾಗಲೇ ಏರಿರುವವರಲ್ಲೊಬ್ಬನನ್ನು ಹಿಡಿದು ಕೋತಿ ಮಾಡಿ ಆಡುವ ಆಟ; ಆಟ ಆಡುವವರೆಲ್ಲಾ ಒಂದು ಮರದ ಬಳಿ ಸೇರಿ ವೃತ್ತಾಕಾರವಾಗಿ ನಿಂತು ಒಬ್ಬೊಬ್ಬರೂ ತಮ್ಮ ಎಡ ಅಂಗೈ ಮೇಲೆ ಬಲ ಅಂಗೈನಿಂದ ಒಮ್ಮೆ ಅಡಿಗೈನಿಂದ ಇನ್ನೊಮ್ಮೆ ತಾಳ ಹಾಕುತ್ತಾರೆ; ಎಲ್ಲರದೂ ಒಂದು ರೀತಿ ಬಿದ್ದು ಯಾವನಾದರೊಬ್ಬನದು ಇನ್ನೊಂದು ರೀತಿ ಬಿದ್ದರೆ ಆ ಭಿನ್ನ ರೀತಿಯಲ್ಲಿ ತಾಳ ಹಾಕಿದವನು ಕೋತಿಯಾದಂತೆ ಅರ್ಥ; ಉಳಿದವರಲ್ಲಿ ಒಬ್ಬ ಒಂದು ಕೋಲಿನಿಂದ ಮರದ ಸುತ್ತಾ ಒಂದು ವೃತ್ತ ರಚಿಸಿ, ವೃತ್ತದೊಳಗೆ ನಿಂತು ಕೋಲನ್ನು ದೂರ ಎಸೆಯುತ್ತಾನೆ; ಕೋತಿಯಾದವನು ಆ ಕೋಲನ್ನು ತಂದು ವೃತ್ತದೊಳಕ್ಕೆ ಇಡುವ ಹೊತ್ತಿಗೆ ಇವರೆಲ್ಲಾ ಮರ ಏರಿರುತ್ತಾರೆ; ಕೋತಿಯಾದವನು ಮರ ಏರಿ ಅವರಲ್ಲಿ ಒಬ್ಬನನ್ನು ಹಿಡಿದು ಕೋತಿ ಮಾಡಬೇಕು; ಇವನು ಮುಟ್ಟುವ ವೇಳೆಗೆ ಅವರು ಮರ ಇಳಿದು ವೃತ್ತದೊಳಗೆ ಬಂದು ನಿಂತಿದ್ದರೆ ಇನ್ನೊಮ್ಮೆಗೆ ಇವನೇ ಕೋತಿಯಾಗಿ ಮುಂದುವರಿಯಬೇಕು; ಹೀಗೆ ಆಟ ಸಾಗುತ್ತದೆ; ಮರಕೋತಿ ಆಟ ಬಹಳ ಪ್ರಾಚೀನವಾದುದು; ಮಹಾಭಾರತದಲ್ಲಿ ಭೀಮ ಕೋತಿಯಾಗಿ ಕೌರವರೆಲ್ಲ ಮರ ಏರಿ ಮರಕೋತಿ ಆಟ ಆಡಿದರು; ಭೀಮ ಮರದ ಬುಡ ಹಿಡಿದು ಇಡೀ ಮರವನ್ನೇ ಅಲುಗಿಸಿದ್ದರಿಂದ ಅವರೆಲ್ಲಾ ಮರದಿಂದ ಬಿದ್ದು ಗಾಯ ಮಾಡಿಕೊಂಡ ಪ್ರಸಂಗ ನಿರೂಪಿತವಾಗಿದೆ (ಜ.ಆ). A kind of play of children; this play played with many children; they made a boy among them a monkey, others climb the tree; the monkey boy climb the tree to catch one boy or child to make him monkey; next he play the role of monkey; the players gather near the tree in a circle clap by left hand once, right hand once, all are clap in the same, but one or two in different style finally who is the different type clapper, he is defeated, he is become play the monkey role; among the winners a boy made a circle by a stick and stand in the middle of the circle throw the stick far away; the boy played monkey role bring the stick and kept it in the circle, then he start to climb the tree to catch other boys; in the meanwhile the other players climb the tree after throw the stick; when he claim the tree to catch the other player others step down from the tree and stand in the circle; all the children are in the circle; once again he is the monkey and start to play again; in this way the play is continuing; the monkey play is very ancient play; in the epic Mahabharatha Pandavas and Kouravas play monkey play, Bhima was monkey in that play while all the Kouravas on the tree the mighty Bhima shake the tree and all the Kouravas fell down from the tree and wounded; it is explained in that part of the story.

ಕೋತು kōtu :

- ಒಕ್ಕಲುತನ; ಬೇಸಾಯ; ಉಳುಮೆ; Farming; agriculture; plough;
- ಒಪ್ಪಂದ; ಕರಾರು; Agreement; contract;
- ವ್ಯವಸಾಯದ ಭೂಮಿ, ವಾಸದ ಮನೆ ಮುಂತಾದುವನ್ನು ಗುತ್ತಿಗೆಗೆ/ಬಾಡಿಗೆಗೆ ಕೊಡುವುದು/ ತೆಗೆದುಕೊಳ್ಳುವುದು; ಅಂತಹ ಸಂದರ್ಭದಲ್ಲಿ ಮಾಡಿಕೊಳ್ಳುವ ಒಪ್ಪಂದ; The agricultural land, living house etc giving on contract for hire/getting an agreement on such situations;
- ಅನ್ಯದೇಶ್ಯ ಇರಬಹುದು; ಅರಾಬಿಕ್‌ನಲ್ಲಿ 'ಕುವ್ವತ್' ರೂಪ ಇದೆ(ಕನಿ); ಆದರೆ ಅರ್ಥ ಬೇರೆ: ತಾಕತ್ತು; ಸಾಮರ್ಥ್ಯ; ತ್ರಾಣ; ಬಲಶಾಲಿ; ಬೇಸಾಯ ಶ್ರಮದ ಕೆಲಸವಾದುದರಿಂದ ಅರ್ಥ ಸಂಬಂಧ ಕಲ್ಪಿಸಬಹುದೆಂದು ತೋರುತ್ತದೆ; May be foreign word; the word `Kuvvath' form in Arabic language; but meaning is different; strength; power; energy; peasant man; so,. it may be relates the meaning labour;
- 'ಕುವ್ವತ್' ಕನ್ನಡದಲ್ಲಿ 'ಕುವ್ವತ್ತು', 'ಕೂವತ್ತು', 'ಕೋತ್ತು' ಎಂದು ತದ್ಭವಗೊಳ್ಳುತ್ತದೆ; ಕೋತ್ತು> ಕೋತು ಆಗಿರಬಹುದು.

ಕೋದಂಡ[೧] kōdaṇḍa[1] :

- ತೂಗುದಂಡಿಗೆ(ಉ.ಕ.ಜಿ); ಐಗಳ ಕೂಲಿ ಮಠದಲ್ಲಿ ತಪ್ಪಿತಸ್ಥ ವಿದ್ಯಾರ್ಥಿಗಳಿಗೆ ಶಿಕ್ಷೆ ಕೊಡಲು ಬಳಸುತ್ತಿದ್ದ ಹಗ್ಗ; `Toogudandige' rope is used in `Igaḷa kooli maṭa' to punish the offender student;
- ತೂಗುದಂಡಿಗೆ ಎಂಬ ಹಗ್ಗವನ್ನು ಬಳಸಿ ವಿದ್ಯಾರ್ಥಿಗಳಿಗೆ ಕೊಡುತ್ತಿದ್ದ ಒಂದು ಬಗೆಯ ಶಿಕ್ಷೆ; A rope Toogudanḍige was used to punish the students; Toogudanḍige is a kind of punishment;
- ಐಗಳು ಕೂಲಿ ಮಠಗಳಲ್ಲೂ ಉಪಾಧ್ಯಾಯರು ಶಾಲೆಗಳಲ್ಲೂ ತಪ್ಪು ಮಾಡಿದ ವಿದ್ಯಾರ್ಥಿಗಳಿಗೆ, ಪೊಲೀಸರು ಸೆರೆಮನೆಯಲ್ಲಿ ಅಪರಾಧಿಗಳಿಗೆ ಶಿಕ್ಷೆ ಕೊಡಲು ಬಳಸುತ್ತಿದ್ದ ಹಗ್ಗ ಹಾಗೂ ಸರಪಳಿ; ಅದನ್ನು ಬಳಸಿ ಕೊಡುವ ಶಿಕ್ಷೆ; A rope used to punish in schools; teacher in maṭas to punish the students and offenders; in police station policeman;
- ಹಗ್ಗ ಅಥವಾ ಸರಪಳಿಯನ್ನು ಮಾಳಿಗೆಯ ಜಂತಿ ಅಥವಾ ತೊಲೆಗೆ ಕಟ್ಟಿ ಒಂದು ತುದಿಯನ್ನು ಜೋತು ಬಿಟ್ಟಿರುತ್ತಾರೆ; ಜೋತು ಬಿಟ್ಟ ತುದಿಯಿಂದ ತಪ್ಪು ಮಾಡಿದವರ ಕೈಗಳನ್ನು ಬಿಗಿಯಾಗಿ ಕಟ್ಟಿ ವ್ಯಕ್ತಿ ನೇತಾಡುವಂತೆ ಮಾಡುತ್ತಾರೆ; ಕೋದಂಡಕ್ಕೆ ಏರಿಸುವುದು, ಕೋದಂಡಕ್ಕೆ ಹಾಕುವುದು, 'ವಿಮಾನ ಏರಿಸುವುದು'/'ಏರೋಪ್ಲೇನ್ ಹತ್ತಿಸೋದು' ಎಂದೂ ಹೇಳುತ್ತಾರೆ; ಕೈಗಳನ್ನು ಹಗ್ಗಕ್ಕೆ ಹಿಂಬದಿಯಲ್ಲಿ ಕಟ್ಟಿ ನೇತಾಡಿಸುವ ಬಗೆಯೂ ಉಂಟು; The rope tie to beam or girder of the roof and hang it oneside; the offenders hands tie to the rope to dangle; it is called `kodanḍa yerisuvudu', `kodanḍakke hakuvudu', `vimana yerisuvudu' etc;
- ಕೋದಂಡಕ್ಕೆ ಹಾಕುವುದು, ಕುರ್ಚಿ ಕೂರಿಸುವುದು, ಕೈಯನ್ನು ಮುಷ್ಟಿ ಹಿಡಿಸಿ ರೂಲುದೊಣ್ಣೆಯಿಂದಲೋ ಕಲ್ಲುಹಲಗೆ(ಸ್ಲೇಟು)ಯಿಂದಲೋ ಹೊಡೆಯುವುದು ಮೊದಲಾದ ಶಿಕ್ಷೆಗಳನ್ನು ವಿದ್ಯಾರ್ಥಿಗಳಿಗೆ ವಿಧಿಸುವುದು ಶಾಲೆಗಳಲ್ಲಿ ಸಾಮಾನ್ಯವಾಗಿತ್ತು; ಕೋಲಿನಿಂದ ಹೊಡೆಯುವುದೂ ಸೇರಿದಂತೆ ಇಂತಹ ಶಿಕ್ಷೆಗಳು ದೈಹಿಕ ಹಾಗೂ ಮಾನಸಿಕ ಹಿಂಸೆ ಎಂದು ಪರಿಗಣಿಸಿ ವಿದ್ಯಾರ್ಥಿಗಳನ್ನು ಶಿಕ್ಷಿಸುವುದನ್ನು ನಿಷೇಧಿಸಲಾಗಿದೆ; Kodanḍakke hakuvudu, kurchi koorisuvudu; hit the clenched hands by ruler, stone plank or slate etc are punishments given to the students in schools is common; the physical or mental torture is a symbol of cruelty so this kind of punishments banned;
- ಜ್ಞಾಭಾ.ರೂ: ತ: ಕೋದಾಣ್ಡ, ಕೋದಂಡಮ್; ತೆ: ಕೋದಾಂಡ, ಕೋದಂಡಮು; ಮ: ಕೋದಾಣ್ಡ, ಕೋದಾಂಡಮ್; ತು: ಕೋದಂಡ;
- ದೇಶೀಪದ.

ಕೋದಂಡ[2] kōdaṇḍa[2] :

- ಒಂದು ಅಸ್ತ್ರ/ಆಯುಧ; ಬಿಲ್ಲು; ಧನುಸ್ಸು; ಕಾರ್ಮುಕ(ಸಂ); An arm, weapon, bow etc;
- ಪ್ರಾಚೀನ ಕಾವ್ಯ, ಕಥೆ, ಪುರಾಣಗಳ ಬೇಟೆ ಹಾಗೂ ಯುದ್ಧ ಪ್ರಸಂಗಗಳಲ್ಲಿ ಚಿತ್ರಿತವಾಗುವ ಪ್ರಮುಖ ಆಯುಧಗಳಲ್ಲಿ ಕೋದಂಡ/ಬಿಲ್ಲೂ ಒಂದು; ಇತಿಹಾಸ ಕಾಲದಲ್ಲಿಯೂ ಬಿಲ್ಲು ಬಳಕೆಯಾಗುತ್ತಿದ್ದ ಬಗೆಗೆ ಉಲ್ಲೇಖಗಳಿವೆ; In an ancient verse, story and legends, these are mainly picturise in war sequences; the bow and arrows are used at the time of historical references;
- ಮೂಲತಃ ಬಿಲ್ಲು ಬೇಟೆಗಾಗಿ ಅನ್ವೇಷಣೆಗೊಂಡ ಆಯುಧಗಳಲ್ಲಿ ಒಂದು; ದೂರದಲ್ಲಿ ನಿಂತು ಪ್ರಾಣಿಗಳನ್ನು, ಅದರಲ್ಲೂ ಕ್ರೂರ ಮೃಗಗಳನ್ನು ಬೇಟೆಯಾಡುವುದಕ್ಕೆ ಮನುಷ್ಯ ಕಂಡುಕೊಂಡ ಉಪಾಯ ಇದು; ಆಮೇಲೆ ಶತ್ರುಗಳ ಉಪಶಮನಕ್ಕೂ ಆತ್ಮರಕ್ಷಣೆಗೂ ಬಳಕೆ; The bow is one among the weapons originally invented for hunting; this is an idea to hunt cruel animal by a distance; in later stages used to control enemies and self protection;
- ಪುರಾಣ ಕಾವ್ಯ–ಕಥೆಗಳಲ್ಲಿ ಬರುವ ನಾಯಕ–ಪ್ರತಿನಾಯಕ ಪಾತ್ರಗಳು, ದೇವಾನುದೇವತೆಗಳು ಅನೇಕರು ಕೋದಂಡ/ಬಿಲ್ಲನ್ನು ಆಯುಧವಾಗಿ ಉಳ್ಳವರು; The heroes and villains of the legend verses and stories used Kodaṇḍa/ Billu as weapon;
- ರಾಮನನ್ನು 'ಕೋದಂಡರಾಮ' ಎಂದೇ ಕರೆಯುತ್ತಾರೆ; ಧನುರ್ಧಾರಿಗಳಲ್ಲಿ ಪ್ರಸಿದ್ಧವಾದ ಇನ್ನೊಂದು ಪಾತ್ರ ಅರ್ಜುನ; ಅರ್ಜುನನ ಬಿಲ್ಲು 'ಗಾಂಡೀವ' ಎಂದೇ ಪ್ರಸಿದ್ಧವಾಗಿದೆ; 'ಗಾಂಡೀವ'ವನ್ನು ಆಯುಧವಾಗಿ ಉಳ್ಳವನಾದುದುರಿಂದ ಅರ್ಜುನ 'ಗಾಂಡೀವಿ'ಯಾದ; ಕೈಯಲ್ಲಿ ಸದಾ ಬಿಲ್ಲನ್ನು ಹಿಡಿದವನಂತೆ ಚಿತ್ರಿತನಾದುದರಿಂದ ರಾಮ 'ಕೋದಂಡಪಾಣಿ' ಎಂದೂ ಕರೆಸಿಕೊಂಡ; ಶಿವ ತನ್ನ ರೌದ್ರವತಾರದಲ್ಲಿ ಕೋದಂಡವನ್ನೂ ಹಿಡಿದುದರಿಂದ 'ಕೋದಂಡ ರುದ್ರ' ಎನಿಸಿಕೊಂಡ; Rama is called as `Kodaṇḍa rama'; a famous bow holder is Arjuna, his bow is famous as `Gaṇḍeeva';
- ಒಟ್ಟಿನಲ್ಲಿ ಕೋದಂಡ/ಬಿಲ್ಲು ನಾಯಕ ಲಕ್ಷಣಗಳಲ್ಲಿ ಒಂದಾಗಿ ಪೌರುಷಕ್ಕೆ, ಪುರುಷಾಕಾರಕ್ಕೆ ಸಂಕೇತವಾಗಿ ತನ್ನ ಪ್ರಾಮುಖ್ಯತೆಯನ್ನು ಸ್ಥಾಪಿಸಿಕೊಂಡಿದೆ; The word Kodaṇḍa/Billu is one of the hero character; it is a symbol of manliness and establish its prominence.

ಕೋದಾಳ kōdāḷa :

- ಮೂರು ತಾಳ, ಒಂಬತ್ತು ಅಂಗುಲ ಅಂತರದ ಬಿತ್ತನೆ ಕೂರಿಗೆಗೆ 'ಕೋದಾಳ' ಎನ್ನುವರು; Nine inches distanced sowing instrument is called `Kodāḷa';
- ಇದನ್ನು ಅಂತರ್ ಉಳುಮೆ ಮಾಡೋಕೆ ಉಪಯೋಗಿಸುವರು; It is used to distanced plough;
- ಮೂರು ತಾಳಿನ ಕೂರಿಗೆ ಎಂತಲೂ ಕರೆಯುತ್ತಾರೆ; It is called as `three thaḷina koorige';
- 'ತಾಳ' ರೂಪ('ದಾಳ' ಆಗಿದೆ) 'ತಾಲ'ದಿಂದ ಬಂದಿರಬಹುದು; ತಾಲ ಅಥವಾ ತಾಳ ಎಂದರೆ ಹೆಬ್ಬೆರಳು ಮತ್ತು ಮಧ್ಯೆಬೆರಳಿನ ನಡುವಿನ ಅಂತರ ಅಥವಾ ಜಾಗ ಎಂದು ಅರ್ಥ;
- ವ್ಯವಸಾಯಕ್ಕೆ ಸಂಬಂಧಿಸಿದ ಪದ; ಬೇಸಾಯ ಜಾನಪದದ ಅಥವಾ ಉಪಕರಣ ಜಾನಪದಕ್ಕೆ ಹೊಂದಿಕೊಂಡು ಬರುವಂಥದು. The word related to agriculture; agriculture folklore or instrumental folklore attached to agriculture.

ಕೋನಾಪುರ kōnāpura :

- ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೋಕಿನ ಕ್ರಿ.ಶ.೧೫೨೪ರ ೨೯ನೇ ಶಾಸನದಲ್ಲಿ ಇದರ ಪ್ರಸ್ತಾಪ; This village refered in the 29th inscription of 1524th AD, Ballari district, Hosapeṭe taluk;

- ವಿಜಯನಗರ ಕೃಷ್ಣರಾಯನ ಆಳ್ವಿಕೆ ಸಂದರ್ಭ; At the time of Krishnadevaraya rule of Vijayanagara empire;
- ರಾಜನು ಅನಂತದೇವರನ್ನು ತಿರುಮಲ ದೇವಿಪಟ್ಟಣದ ಉತ್ತರಕ್ಕೆ ಪ್ರತಿಷ್ಠಾಪಿಸಿ, ದೇವತಾಕಾರ್ಯಗಳಿಗೆ ಮತ್ತು ದೇವಾಲಯದ ನಿರ್ವಹಣೆಗೆ ೧೦,೦೦೦ ವರಮಾನದ ಭೂಮಿಯನ್ನು ದಾನ ನೀಡಿದ್ದರ ಉಲ್ಲೇಖ(ಅಂದರೆ ಗ್ರಾಮಗಳನ್ನು); The king built Anantha devaru temple in the North of Devipaṭṭaṇa; he donated a land earning Rs.10,000/- income every year, for the management of the temple;
- 'ಕೋನಾಪುರ'ವು ಈ ಗ್ರಾಮಗಳಲ್ಲಿ ಒಂದಾಗಿದೆ; Among the villages `Konapura' is one;
- ಕೋನಾ+ಪುರ=ಕೋನಾಪುರ; 'ಪುರ'ದ ಅರ್ಥ ಸ್ಪಷ್ಟವಿದೆ– ಗ್ರಾಮ/ಹಳ್ಳಿ/ಪಟ್ಟಣ; ಆದರೆ 'ಕೋನಾ' ಎಂಬುದಕ್ಕೆ ಅರ್ಥ ತಿಳಿದು ಬಂದಿಲ್ಲ;
- 'ಕೋನಾ' ರೂಪ 'ಕೋಣ' ರೂಪದಿಂದ ಬಂದಿರುವ ಸಾಧ್ಯತೆ ಇರುವುದರಿಂದ, ಕೋಣಾಪುರ> ಕೋನಾಪುರ ನಿಷ್ಪನ್ನಗೊಂಡಿರಬಹುದು; ಅಂದರೆ ಪ್ರಾಣಿವಾಚಿ ಸ್ಥಳನಾಮ ಆಗಿರಬಹುದೆ? The word `Kona' form from the `Koṇa' form is possible.

(ಕ.ವಿ.ವಿ.ಶಾ.ಸಂ.೧; ಬ.ಜಿ.)

ಕೋನೇರಿ kōnēri :

- ಚೌಕಾಕಾರದ, ನಾಲ್ಕೂ ಬದಿಗಳಲ್ಲಿ ಸೋಪಾದಕಟ್ಟೆ/ ಕಲ್ಲಿನ ಮೆಟ್ಟಿಲು ಇರುವ ಕೆರೆ/ಕೊಳ; ಕಲ್ಯಾಣಿ; Squared shape; a platform has sharp edge in all four sides; stone stepped tank/pond;
- ಕುಂಟೆ; ಬಾನಿ; ಕೊಳ(ಕೋ.ಜಿ); Tank, pond;
- ದೇವಸ್ಥಾನದ ಎದುರಿಗೆ ಇರುವ ಸ್ನಾನಘಟ್ಟ(ಅದೇ); A bathing steps or space infront of the temple;
- ಒಂದು ತೀರ್ಥಕ್ಷೇತ್ರ; 'ಅಂಗಜನಯ್ಯ ಕೋನೇರಿ ತಿಮ್ಮ ರಂಗ ಬಾರೋ' ಎಂದು ವಾದಿರಾಜರ ಕೀರ್ತನೆ; ಕೃಷ್ಣ/ವಿಷ್ಣುವಿನ ಆರಾಧನೆಯ ವೈಷ್ಣವ ಕ್ಷೇತ್ರ ಎಂಬುದು ವೇದ್ಯ; A sacred place;
- ಜ್ಞಾಬ್ಬಾರೂ: ತೆ: ಕೋನೇಱು, ಕೋನೆಱು;
- ದೇಶೀಪದ; ವ್ಯರೂ: ಕೋನೇರು;
- ಕೋನ+ಏರಿ=ಕೋನೇರಿ; ಕೋನ/ಕೋಣ<ಕೋಣ್= ಮೂಲೆ; ಎರಡು ದಿಕ್ಕುಗಳು ಸೇರುವ ಸ್ಥಳ; ನಾಲ್ಕು ಬದಿಗಳನ್ನು ಕೂಡಿಸಿ, ನಾಲ್ಕು ಮೂಲೆಗಳು ಏರ್ಪಡುವ ಹಾಗೆ ಅಡಿಗಲ್ಲು(ಕೋನಶಿಲೆ= ಮೂಲೆಗಳಿರುವ ಕಲ್ಲು, ಸೈಜುಗಲ್ಲು ಎಂದಾಗಬಹುದು)ಗಳನ್ನು ಜೋಡಿಸಿ ಕಟ್ಟಿದ ಕೆರೆ/ ಕೊಳ ಎಂಬ ಅರ್ಥದಲ್ಲಿ 'ಕೋನೇರಿ' ನಿಷ್ಪನ್ನವಾಗಿರಬೇಕು; ಏರಿ=ಕೆರೆ ಕಟ್ಟೆಗಳಿಗೆ ಹಾಕುವ ಕಲ್ಲು–ಮಣ್ಣಿನ ದಿಣ್ಣೆ/ದಿಬ್ಬ. Corner; a joining place of two directions.

ಕೋಪ/ಕ್ವಾಪ kōpa/kvāpa :

- ಸಿಟ್ಟು; ಸಿಡುಕು; ರೋಷ; ಕಿಸುರು; ಮುನಿಸು; ಕನಲಿಕೆ; Anger; peevishness; fury; hatred; resentments;
- ಚಿತ್ತಸಮತೆಯನ್ನು ಕಳೆದುಕೊಂಡಾಗ ಉಂಟಾಗುವ ಒಂದು ಮನೋವಿಕಾರ; ಒಂದು ಚಿತ್ತ/ ಮನೋವಿಕೃತಿ; While lost the control over mind, the mental imbalance;
- ಅನ್ಯರ ಮೇಲಿನ, ಅನ್ಯ ಸಂಗತಿ ಬಗೆಗಿನ ಅಸಮಾಧಾನವನ್ನು/ಅನಿಚ್ಛೆಯನ್ನು ವ್ಯಕ್ತಪಡಿಸುವ ಒಂದು ಮನಸ್ಥಿತಿ; A mental condition to express dissatisfaction over others or others matter;
- ಕೋಪಗೊಂಡಾಗ ಕಣ್ಣು ಕೆಂಪಾಗುವುದು (ಕೋಪಾರುಣ/ಕೋಪಾರಕ್ತ ನೇತ್ರ), ಮನಸ್ಸು ಉದ್ವೇಗ/ಉದ್ರೇಕಕ್ಕೆ ಒಳಗಾಗಿರುವುದರಿಂದ ಉಸಿರಾಟದ ಎದೆಬಡಿತದ ವೇಗ ಹೆಚ್ಚಾಗುವುದು, ಬೆವರುವುದು, ಮೈಕೈಗಳಲ್ಲಿ ಕಂಪನ ಕಾಣಿಸಿಕೊಳ್ಳುವುದು ಸಾಮಾನ್ಯ; ಮೈಗೆ ವಿಶೇಷ ಶಕ್ತಿ ಪ್ರಾಪ್ತಿಯಾದಂತೆ ಮುನ್ನುಗ್ಗುವುದು ಇಲ್ಲವೇ ಆಕ್ರಮಣಕಾರಿಯಂತೆ ವರ್ತಿಸುವುದು ಕಂಡುಬರುತ್ತದೆ; ಇದೆಲ್ಲಾ ಭಾವೋದ್ರೇಕದಿಂದ ವ್ಯಕ್ತಿ ತನ್ನ ಮೇಲಿನ ಹಿಡಿತವನ್ನು ತಾನೇ ಕಳೆದುಕೊಂಡುದರ ಕುರುಹು; ರಕ್ತದ ಒತ್ತಡ ಏರುವ ಇಳಿಯುವ ಖಾಯಿಲೆ ಇರುವವರು ಬಹುಬೇಗ ಚಿತ್ತಸ್ಥಿಮಿತತೆ ಕಳೆದುಕೊಂಡು ಕೋಪಗೊಳ್ಳುತ್ತಾರೆ;

Eyes turn reddish while in anger; it is common while excitement, the breathing speed increases, sweting, shake in the body; a special power enters into the body behave like attacker; these are all the symptoms of a person lost his temper himself; those who have blood pressure they lost control very soon and become angry;

- ಚಿತ್ತಸ್ವಾಸ್ಥ್ಯ ಅಥವಾ ಸಾವಧಾನ ಚಿತ್ತ ಸಾಧನೆಯೇ ಕೋಪವೆಂಬ ಮನೋವಿಕಾರಕ್ಕೆ ಒಳಗಾಗುವುದನ್ನು ತಡೆಯಲು ಇರುವ ಉತ್ತಮ ಮಾರ್ಗ; ಧ್ಯಾನಯೋಗ ಸಾವಧಾನ ಚಿತ್ತ ಸಾಧನೆಗೆ ಇರುವ ಉಪಾಯ; 'ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು' ಎಂದು ಅಕ್ಕ ಹೇಳುತ್ತಾಳೆ; 'ಕೋಪ ಬಂದಾಗ ನೂರೊಂದು ಎಣಿಸು'(ಗಾ) ಎಂಬ ಮಾತು ಪ್ರಸಂಗಾಂತರದ ಅಥವಾ ವಿಷಯಾಂತರದ ಉಪಾಯವನ್ನು ಹೇಳುತ್ತದೆ; ಇದು ಅಂತಿಮವಾಗಿ ಮೌನ ಅಥವಾ ಧ್ಯಾನದ ಮಾರ್ಗವೇ ಆಗಿದೆ; A good way to control short temper is mental health or being deliberate; Dhyana, yoga is one to win over mind control; do not be angry in the mind, be calm; whenever you be angry count hundred and one; these words sequential plan to change the subject; this also the way of Dhyana;
- ಕೋಪದ ಪರಿಣಾಮವಾಗಿ ಸಂಭವಿಸುವ ಅಪಾಯ ಹಾಗೂ ಬಿಕ್ಕಟ್ಟುಗಳನ್ನು ಈ ಕೆಲವು ಗಾದೆಗಳು ಹೇಳುತ್ತವೆ: 'ಬೆಂಕಿ ಮನೇ ಸುಟ್ಟರೆ, ಕೋಪ ತನ್ನನ್ನೇ ಸುಡುತ್ತದೆ'; 'ಕೊಲ್ಲು ಅಂದ್ರೆ ಕಪ್ಪೆಗೆ ಕ್ವಾಪ, ಬಿಡು ಅಂದ್ರೆ ಹಾವಿಗೆ ಕ್ವಾಪ'; 'ಅತ್ತೇ ಮೇಲಿನ ಕೋಪ ಕೊತ್ತೀ ಮೇಲೆ'; The happening difficulties and dangers by the anger expressed through some proverbs;
- ಕೋಪ ಮತ್ತು ಕ್ರೋಧ ಹೆಚ್ಚೂ ಕಡಿಮೆ ಸಮಾನಾರ್ಥಕ ರೂಪಗಳು; ರೌದ್ರರಸದ ಸ್ಥಾಯೀಭಾವ ಕ್ರೋಧ ಅರ್ಥಾತ್ ಕೋಪ; ಶಿಷ್ಟ ಹಾಗೂ ಜನಪದ ಸಾಹಿತ್ಯದಲ್ಲಿ ಅದರಲ್ಲೂ ಕಥಾನಕಗಳಲ್ಲಿ ಚಿತ್ರಿತವಾಗುವ ಯುದ್ಧ ಅಥವಾ ಜಗಳದ ಸನ್ನಿವೇಶಗಳಲ್ಲಿ ಈ ಭಾವದ ಚಿತ್ರಣ ಬರುತ್ತದೆ; ರೌದ್ರರಸಕ್ಕೆ ಸಂವಾದಿಯಾಗಿ 'ಕೋಪರಸ' ಮಾತನ್ನೂ ಬಳಸಲಾಗಿದೆ; Both anger and wrath are the forms of same meaning; the root of anger or wrath feeling is `Roudra rasa'; especially in legendary stories quarrel or war picturises the sequences of those feelings; the word `Roudra rasa' used as equivalent to `Kopa rasa';
- ಪುರಾಣಗಳು ಹೇಳುವ ಪ್ರಕಾರ ದೂರ್ವಾಸಾದಿ ಮುನಿಗಳು ತಮಗೆ ಅಹಿತಕರ ಸನ್ನಿವೇಶಗಳು ಎದುರಾದಾಗ ಕೋಪಗೊಳ್ಳುವುದು, ಶಾಪ ನೀಡುವುದು ಸಾಮಾನ್ಯ; ಇದೂ ಒಂದು ರೀತಿಯಲ್ಲಿ ಕ್ರೋಧ ಭಾವವೇ; According to puranas Doorvasa and other sages are angry and curse is common whenever any untoward incidents happened; it is also a kind of wrath or indignation;
- ಕೋಪದ ತೀವ್ರತೆಯ ಪ್ರಮಾಣವನ್ನೋ ಭಂಗಿ/ ಬಗೆಯನ್ನೋ ಹೇಳುವುದಕ್ಕಾಗಿ ಇರಬೇಕು ಉರಿಗೋಪ, ಕಡುಗೋಪ, ಮುಂಗೋಪ, ರಣಗೋಪ, ರುದ್ರಕೋಪ ಮುಂತಾದ ಪದಗಳು ರೂಢಿಗೊಂಡಿವೆ; ಕೋಪಾಗ್ನಿ ಮೊದಲಾದ ಮಾತುಗಳೂ ಇವೆ; To express the severity of anger or the level of anger the words are: burning anger, sever anger, short temper, quarrelsome or warlike temper; anger of Rudra etc;
- ಅನ್ಯದೇಶ್ಯ ಪದ; ಸಂಸ್ಕೃತದಿಂದ ಬಂದದ್ದು; Foriegn word, from Sanskrit;
- —***ಕೋಪಗೃಹ*** : ಕೋಪ ಬಂದಾಗ ಸೇರಿಕೊಳ್ಳುವ/ ಮಲಗಿಕೊಳ್ಳುವ ಕೋಣೆ ಮನೆ; ರಾಣೀ ವಾಸದವರು ರಾಜನ ಮೇಲಿನ, ಅರಮನೆಯ ವಿದ್ಯಮಾನಗಳ ಬಗೆಗಿನ, ಸವತಿ–ಸವತಿ ಮಕ್ಕಳ ಬಗೆಗಿನ ಕೋಪ/ಅಸಮಾಧಾನಾದಿಗಳನ್ನು ವ್ಯಕ್ತಪಡಿಸಲು ಕೋಪಗೃಹಕ್ಕೆ ಹೋಗುತ್ತಿದ್ದ ಪ್ರಸಂಗಗಳನ್ನು ಶಿಷ್ಟಕಾವ್ಯಗಳು, ಜನಪದ ಕಾವ್ಯ–ಕಥೆಗಳು ನಿರೂಪಿಸುತ್ತವೆ; ಉದಾ: ರಾಮನ ಪಟ್ಟಾಭಿಷೇಕ ಸಂದರ್ಭದಲ್ಲಿ ಕೈಕೆ ದಶರಥನ ಬಗೆಗೆ

ಕೋಪಗೊಂಡದ್ದು; A house of anger; whenever the anger comes they enter into a room/bedroom or house; the queen to express anger over the king on the activities of the palace, on co-wife's children go to the anger house; such incidents expressed in classic verses and folk songs; example: `Kaikeyi anger over Dhasaratha on the issue of Rama's coronation';

- ***—ಕೋಪಾಟೋಪ*** : ಅತಿಶಯ ಕೋಪ; ಹೆಚ್ಚಳಗೊಂಡ ಸಿಟ್ಟು; ರೌದ್ರಾವೇಶ; ಕೋಪದ ಆಡಂಬರ; *ಪ್ರ: 'ಕೋಪಾಟೋಪದಿಂದ ಬೆಂಕಿ ಉಂಡೆಗಳನ್ನು ಕಾರುತ್ತ ಭೂತವೊಂದು ಎದುರಾಯಿತು'.* Excessive anger; over anger; wrath of Rudra; ostentation of anger;

ಕೋಪಾಳರು kōpāḷaru :

- ಬೈಲ ಬಾಕುಡರ(ಬೈಲ ಬಾಕುಡೆ=ಒಂದು ಜನವರ್ಗ, Name of a community - ತು.ನಿ.) ಸರ್ಪಕೋಲವನ್ನು ನಡೆಸಿಕೊಡುವ ಒಂದು ಸಮುದಾಯ; A community perform the `Sarpakola';
- ತುಳುವಿನಲ್ಲಿ 'ಕೋಪಾಲೆ(ಳೆ)' (=ಭೂತನರ್ತನ ಮಾಡುವ ಸಮುದಾಯದಲ್ಲಿ ಒಂದು ವರ್ಗ, 'ಕೋಪಾಳ' ಸಮುದಾಯಕ್ಕೆ ಸೇರಿದ ಗಂಡಸು), 'ಕೋಪಾಲ್ತಿ(ಳ್ತಿ)' (='ಕೋಪಾಳ' ವರ್ಗದ ಹೆಂಗಸು) ಎಂಬ ರೂಪಗಳಿವೆ(ತು.ನಿ); In Tulu `kopale ( ḷe)' a community perform the devil dance; `kopaḷa' a male belongs to the community; `kopaḷthi' a woman;
- 'ಕೋಪಾಳ' ವೃತ್ತಿಯೊಂದನ್ನೂ, ಆ ವೃತ್ತಿಯನ್ನವಲಂಬಿಸಿದ ಸಮುದಾಯವನ್ನೂ ಸೂಚಿಸುತ್ತಿರುವಂತಿದೆ; ತುಳುವಿನಲ್ಲಿಯೇ ಕೋಪು, ಕೋಪಾ, ಗೋಪಾ ರೂಪಗಳಿವೆ; ಪೋಣಿಸು, ದಾರ ಸಪುರವಾದಿ ಕಡ್ಡಿ ಮೊದಲಾದವುಗಳಿಗೆ ಸಿಕ್ಕಿಸು(ಅದೇ) ಎಂದು ಅರ್ಥ; ತುಳುನಾಡು ಅಥವಾ ಕರಾವಳಿ ಸೀಮೆಯ ಪ್ರಾತಿನಿಧ್ಯ ಇಲ್ಲಿರುವುದರಿಂದ ಸಾಗರದ ಉತ್ಪನ್ನವಾದ ಹವಳ, ಕರಿಮಣಿ ಮೊದಲಾದುವುಗಳನ್ನು ಪೋಣಿಸಿ ಜೀವನ ನಡೆಸುವ ಸಮುದಾಯವನ್ನು ಇದು ಹೇಳುತ್ತಿರಬಹುದು; The word `kopaḷa' indicates a profession and its community; in Tulu the forms are kopu, kopa, gopa etc; compose, to compose the thread into small stick; here the influence of Tulunaḍu or Karavaḷi area; the community compose the Havaḷa and Karimaṇi, the products of the ocean; so it indicates the community;
- 'ಕೋಪ್'/'ಕೋಪೆ' ರೂಪಕ್ಕೆ ಹಣ್ಣು, ಮೀನು ಮೊದಲಾದವುಗಳನ್ನು ಪೋಣಿಸಿದ ಗೊಂಚಲು; ಬಳೆಗಳನ್ನು ಮಾರಾಟಕ್ಕಾಗಿ ಪೋಣಿಸಿ ಇಡಲಿಕ್ಕೆ ಮಾಡಿದ ಬಿದಿರು, ರಟ್ಟು ಅಥವಾ ಬಟ್ಟೆಯ ಕೊಳವೆಯಂತಹ ರಚನೆ(ತು.ನಿ) ಎಂಬ ಅರ್ಥಗಳಿವೆ; 'ಕೋಪಾಳ' ವೃತ್ತಿಸೂಚಕವೆಂಬುದನ್ನು ಈ ರೂಪಗಳು ದೃಢಪಡಿಸುತ್ತವೆ; The forms `kop/kope' has the meaning to compose fruits, fish etc in a bunch; the role of bamboo wrapper or cloth to keep the bangles for sale;
- ಕೋಪು/ಕೋಪಾ+–ಆಳ/ಆಳೆ=ಕೋಪಾಳ/ ಕೋಪಾಳೆ+–ಅರು=ಕೋಪಾಳೆಯರು>ಕೋಪಾಳರು ಎಂದು ನಿಷ್ಪತ್ತಿ ಸಾಧಿಸಬಹುದೆಂದು ತೋರುತ್ತದೆ. The word form confirms `Kopaḷa' is an indication of occupation.

ಕೋಪು kōpu :

- ನಾಟಕ ಹಾಗೂ ನೃತ್ಯಗಳಲ್ಲಿ ಬರುವ ಒಂದು ಬಗೆಯ ಭಾವಾಭಿನಯ ಹಾಗೂ ನೃತ್ಯಾಭಿನಯ; ಮೂವತ್ತಾರು ಬಗೆಯಲ್ಲಿ ದೃಷ್ಟಿಯನ್ನು, ಅರವತ್ನಾಲ್ಕು ಬಗೆಯಲ್ಲಿ ಕೈಗಳನ್ನೂ ವಿಸ್ತರಿಸಿ ಮಾಡುವ ಅಭಿನಯವೇ ಕೋಪು(ಛತ್ತೀಸ ದೃಷ್ಟಿ ಚೌಷಷ್ಟಿ ಹಸ್ತಂಗಳಂ ಬಿತ್ತರಿಸುವದು ಕೋಪೆನಿಕ್ಕುಂ) ಎಂಬುದು ಒಂದು ವ್ಯಾಖ್ಯಾನ; A kind of sensual acting and dance performance; extend the eye in thirtysix kind and the hands in sixty four ways action is kopu;
- ಓರಣ; ಕ್ರಮ; ಕ್ರಮಬದ್ಧ ಜೋಡಣೆ; ವ್ಯೂಹ; ಸೈನ್ಯದ ಒಡ್ಡು; Neatness; procedure; joint or

assemble the procedure; battalion disposition of the army form the forces or army;

- ಜೋಡಿಸು; ಆಲಿಂಗಿಸು; ಹೊಂದಾಣಿಕೆ/ಸಾಮರಸ್ಯ ಸಾಧಿಸು(ತು.ನಿ); Assemble; hug; consistence/achieve harmony;
- ಹೊಲಕ್ಕೆ ಒಡ್ಡು ಹಾಕಲು ಮಣ್ಣು ಅಗೆದಾಗ ಉಂಟಾಗುವ ಆಯತಾಕಾರದ ತಗ್ಗು(ಚಿ.ಪ.ಕೋ); A squared pit, when dig the soil to make bund to the field;
- ಒಂದು ಬಗೆಯ ಬೇಟೆ(ಕ.ನಿ); A kind of hunt;
- ಬಿಲ್ಲಿನ ತುದಿ; ಗೊಲೆ; ಕೊಪ್ಪು; 'ಬಿಲ್ಲಕೊಪ್ಪು' ಎಂಬ ಪ್ರಯೋಗವಿದೆ; Tip of the bow; has other forms like gole, koppu, `billa koppu' usages are;
- ಲಂಗೋಟಿ; ಕೌಪೀನ; ಕೌಪ; *ಪ್ರ: 'ಮಹಲು ನೋಡಿ ಮನೆ ಹೊಕ್ಕರೆ ಕೋಪು ಕಟ್ಟಿ ಒಲೆಯ ಮುಂದೆ ಕೂತಿದ್ದ*(ಗಾ); Langoṭi; koupina; koupa;
- ನರ ಅಥವಾ ಸ್ನಾಯು; ಜಾನುವಾರುಗಳ ಕಾಲಗಂಟಿನ ಹಿಂದೆ ಇರುವಂತಹುದು(ತು.ನಿ); Vein or muscle; `nerve', `sinew'; it is in the back of the leg knot;
- ಒಂದು ಬಗೆಯ ಪಾತ್ರೆ(ಅದೇ); A kind of vessel;
- ಜ್ಞಾತಿಪದ: ತ: ಕೋಪ್ಪು; ಮ: ಕೋಪ್ಪು; ತೆ: ಕೋಪು; ತು: ಕೋಪು; ಕೊಡ: ಕೊಪ್ಪ್;
- ದೇಶೀಪದ;
- ***—ಕೋಪು/ಕೋಪ್ಪು ತೆಗೆಯುವುದು*** : ಹಳ್ಳ/ಗುಂಡಿ ತೆಗೆಯುವುದು; ಹಳ್ಳಕ್ಕೆ/ಗುಂಡಿಗೆ ಬಿದ್ದ ಪ್ರಾಣಿಯನ್ನು ಕೊಂದು ತೆಗೆಯುವುದು(ತು); ಸಾಮೂಹಿಕ ಬೇಟೆಯ ಒಂದು ವಿಧಾನ; ಒಡಿಗ ಸಮುದಾಯದ ಜನ ಈ ಬಗೆಯ ಬೇಟೆ ಆಡುತ್ತಾರೆ; ಹದಿನೈದು ಇಪ್ಪತ್ತು ಮಂದಿ ಒಡಿಗರು ಸೇರಿ ಎರಡು ಮೂರು ದೊಡ್ಡ ಹಳ್ಳಗಳನ್ನು ತೋಡುತ್ತಾರೆ; ಸೊಪ್ಪುಸೆದೆ ಹುಲ್ಲುಕಡ್ಡಿಗಳಿಂದ ಮೇಲ್ಮುಚ್ಚು ಮಾಡಿ ಗುಂಡಿ ಗೊತ್ತಾಗದಂತೆ ಮುಚ್ಚುತ್ತಾರೆ; ಸೋವಿ ಪ್ರಾಣಿಗಳನ್ನು ಗುಂಡಿಗಳಿರುವ ಕಡೆಗೆ ಓಡಿಸುತ್ತಾರೆ; ಗುಂಡಿಗೆ ಬಿದ್ದ ಪ್ರಾಣಿಗಳನ್ನು ಈಟಿ, ಭರ್ಜಿಗಳಿಂದ ಚುಚ್ಚಿ ಕೊಲ್ಲುತ್ತಾರೆ; ಸತ್ತ ಪ್ರಾಣಿಗಳನ್ನು ಗುಂಡಿಯಿಂದ ಹೊರತೆಗೆದು ಸಮವಾಗಿ ಹಂಚಿಕೊಳ್ಳುತ್ತಾರೆ; ವ್ಯರೂ: ಕೋಪ್ಪ ತೆಗೆಯುವುದು. Dig a pit; the animal fell in the pit to be killed and take out of the pit; it a kind or way of hunt; this kind of hunt by the Oḍiga community; dig two or three pits by fifteen to twenty Oḍigas they cover or hide the pit with leaves, grass and sticks; the animals are run towards the pit; the animals are fell into the pit, then the oḍigas hunter kill the animals piercing with `eeṭi, bharjis'; the dead animals are take out of the pit and shared equally.

ಕೋಮ kōma :

- ಆಮೆ; ಒಂದು ಜಲಚರ ಪ್ರಾಣಿ; ಮೃದ್ವಂಗಿ; ನೆಲದ ಮೇಲೂ ಜೀವಿಸುತ್ತದಾದರೂ ನೀರನ್ನು ಹುಡುಕಿಕೊಂಡು ಹೋಗುವುದು ಇದರ ಸಹಜ ಗುಣ; Tortoise; an aquatic creature; it lives on the land also but it goes in search of water;
- ಬೆನ್ನ ಮೇಲೆ ವೃತ್ತಾಕಾರದ, ಗುರಾಣಿಯಂತಹ ಗಟ್ಟಿ ಕವಚ/ಚಿಪ್ಪು ಇರುತ್ತದೆ; ಅಪಾಯದ ಸೂಚನೆ ಸಿಕ್ಕ ತಕ್ಷಣ ಕಾಲು, ಬಾಲ ಮತ್ತು ತಲೆಯನ್ನು ಚಿಪ್ಪಿನೊಳಕ್ಕೆ ಎಳೆದುಕೊಂಡು ಒಣ ಕೊರಡಿನಂತೆ ನಿಶ್ಚಲವಾಗುವುದು ಇದರ ವಿಶೇಷ; Round shaped shield like hard shell on the back; it has the special quality to cover or sink the legs, tail and head into the shell, whenever it find danger lie like a dry wooden piece;
- ಹಳ್ಳ, ಗುಂಡಿ, ಬಾವಿಗಳಲ್ಲಿ ವಾಸಿಸುತ್ತದೆ; ಹುಳು ಉಪ್ಪಟೆಗಳನ್ನು, ನೀರಿನಲ್ಲಿರುವ ಕ್ರಿಮಿಕೀಟಗಳನ್ನು ತಿಂದು ಜೀವಿಸುತ್ತದೆ; ಇದರಿಂದ ಹೊಲಗದ್ದೆಗಳ ಬೆಳೆಗಳಿಗೆ ಬರುವ ರೋಗಗಳನ್ನು ನಿಯಂತ್ರಿಸಿದಂತಾಗುತ್ತದೆ; ರೈತನಿಗೆ ಉಪಕಾರಿ ಪ್ರಾಣಿ; **ನೋಡಿ:** ಆಮೆ; It lives in stream, pits and wells; lives on worms in the water; so, this control the disease of the crops; it is a useful animal to farmer;

- A crowd(ತು.ನಿ); ಸಂದಣಿ; ನೆರವಿ; ಜನದಟ್ಟಣೆ;
- < coma (ಇಂ); ಅಸಹಜವಾದ ಗಾಢ ನಿದ್ರೆ; ಮಂಕು; ಮೂರ್ಛೆ;
- —*ಕೋಮನ ಗೆಜ್ಜೆ* : ಚಿಕ್ಕಮಕ್ಕಳ ಕಾಲಿನ ಗೆಜ್ಜೆ ಆಭರಣ; An ornament of small children;
- —*ಕೋಮನ ಮರಿ* : ಆನೆಯ ಮರಿ(ಉ.ಕ.ಜಿ). Elephant calf.

ಕೋಮಟಿ/ಕ್ವಾಮಟಿ kōmaṭi/kvāmaṭi :

- ಒಂದು ವ್ಯಾಪಾರಿ ವರ್ಗ; ವ್ಯಾಪಾರವೇ ಕಸುಬಾಗಿರುವ ಒಂದು ಜನಸಮುದಾಯ; ಆ ಸಮುದಾಯಕ್ಕೆ ಸೇರಿದ ವ್ಯಕ್ತಿ; A business community; a community's occupation is business; a person belongs to that community;
- ವೈಶ್ಯಕುಲ; ಸೆಟ್ಟರು; ವೈಶ್ಯ; ಸೆಟ್ಟಿ;
- ಆಲಂಕಾರಿಕವಾಗಿ ವ್ಯಾಪಾರ, ಲೋಭ, ಜಿಪುಣತನ, ಕಪಟಿ, ವಂಚಕ, ಮೋಸಗಾರ ಅರ್ಥಗಳಿವೆ; In figure of speech the meanings are business, greed, miserliness, cheater, deceptive, deceiver;
- ಬಣ್ಣದ ಮಾತು; ಕಪಟದ ಮಾತು(ತು); Colourful speech; words of imposture;
- ಕೋಮಟಿಗಳೆಂಬ ವೈಶ್ಯರ ಮನೆಮಾತು ತೆಲುಗು; ವೈಷ್ಣವ ಪರಂಪರೆಗೆ ಸೇರಿದವರು; ತಿರುಮಲೈ ತಿರುಪತಿ ವೆಂಕಟರಮಣನ ಆರಾಧಕರು; The mother tongue of Komatigas or Vysya is Telugu; belongs to Vyshnava heritage; worshipers of Thirumalai Tirupathi Venkaṭaramana;
- ಹಣೆಯಲ್ಲಿ ನಾಮ, ಹಿಂದಲೆಯಲ್ಲಿ ಜುಟ್ಟು, ಕಚ್ಚೆ, ತುಂಬುದೋಳಿನ ಷರ್ಟು, ಕೊರಳಲ್ಲಿ ಮಣಿಹಾರ– ಇದು ತೆಲುಗು ವೈಶ್ಯರ/ಕೋಮಟಿಗಳ ಸಾಮಾನ್ಯ ವೇಷ/ಉಡುಪು; ನಾಟಕ ಇತ್ಯಾದಿಗಳಲ್ಲಿ ಹಾಸ್ಯಪಾತ್ರಗಳಿಗೆ ಈ ವೇಷ ಹಾಕಿ ಅರೆಬರೆ ತೆಲುಗಿನಲ್ಲಿ ಮಾತನಾಡಿಸಿ ಜನರನ್ನು ರಂಜಿಸಲಾಗುತ್ತದೆ; Vermilion on the forehead; tuft of hair on the crown of the head; full arm shirt, beads in the neck are the dress of Vysyas or Komaṭis; entertain the audience in the drama, by dressing like Vysya and stumble language of them;
- ರಾಜಾ ವಿಕ್ರಮ ಅಥವಾ ಶನಿಮಹಾತ್ಮೆ ಯಕ್ಷಗಾನ ನಾಟಕದಲ್ಲಿ ಬರುವ ತೈಲಿಶೆಟ್ಟಿ ಒಂದು ಗಂಭೀರ ಪಾತ್ರವೇ ಆದರೂ ವಿನೋದಕ್ಕೆ ಬಳಸಿಕೊಳ್ಳುವುದೂ ಉಂಟು; In the drama like `Raja Vikrama' or `Shanimahatame' Yakshagana the role of Thylisheṭty is a serious character but use for comedy also;
- ಕೋಮಟಿಗಳು ಜಿಪುಣತನಕ್ಕೂ ಪ್ರಸಿದ್ಧಿ; 'ಕೋಮಟಿ ಕೂಡ ಜೀನ ಬಿಡ' ಮೊದಲಾದ ಗಾದೆಗಳು ಈ ಜನರ ಜಿಪುಣತನವನ್ನು ಬಿಂಬಿಸುವುದಕ್ಕಾಗಿಯೇ ಹುಟ್ಟಿಕೊಂಡಿವೆ; 'ಕೋಮಟಿ ಮೋಸ ಹೋಗುವುದಿಲ್ಲ, ಮೋಸಹೋದರೆ ಹೇಳುವುದಿಲ್ಲ', 'ಕೋಟಿ ವರಹಾ ಕೊಟ್ಟರೂ ಕೋಮಟಿ ಸಾಕ್ಷಿ ನಮ್ಮ ಕೂಡದು' ಎಂಬ ಗಾದೆಗಳೂ ಇವೆ; 'ಶೆಟ್ರೆ ನಿಮ್ಮ ಮಗ ಜಾರಿ ಬಿದ್ದ ಎಂದರೆ, ಪಾಯ್ದೆ ಇಲ್ಲದೆ ಬಿದ್ದಿರಲಾರ ಅಂದನಂತೆ' ಎಂಬ ಲೋಕೋಕ್ತಿಯೂ ಇದೆ. ಇವೆಲ್ಲಾ ಪ್ರತಿಮಾರ್ಥದಲ್ಲಿ ಕೋಮಟಿಗಳ ವ್ಯವಹಾರ ನೈಪುಣ್ಯ; ಹಣಕಾಸಿನ ಲೆಕ್ಕಾಚಾರದಲ್ಲಿ ತಪ್ಪದ ಬುದ್ಧಿವಂತಿಕೆ, ಜಾಣತನ, ಜಿಪುಣತನ, ಲೋಭ, ವ್ಯಾಪಾರೀ ಮನೋಭಾವವನ್ನೇ ಬಿಂಬಿಸುತ್ತವೆ; Komaṭigas famous for stingyness; some proverbs reflect the miserly attitude of these people; i.e. `Komaṭi koḍa jeena biḍa'; Komaṭi is never be cheated by any, if they cheated by any one never say; in all the figurative meaning, shows the business tacts, never missed calculation in financial accounts; and the wisdom of it, cleverness, miserness, greed all these reflect the business temperament;
- ವ್ಯರೂ: ಕೊಮಟಿ; ಕೋವಟಿ;
- ಜ್ಞಾಭಾರೂ: ತ: ಕೊಮಟ್ಟಿ; ತೆ: ಕೋಮಟಿ, ಕೋಮಟ್ಟಿ(ಕಿಟ್ಟೆಲ್); ಮ: ಕೋಮಟ್ಟಿ; ತು: ಕೋಮಟಿ;
- ದೇಶೀಪದ;

- *—ಕೋಮಟಿಗ/-ಕ್ವಾಮಟಿಗ/-ಕ್ವಾಮ್ಟಿಗ* : ಕೋಮಟಿ ಕುಲಕ್ಕೆ ಸೇರಿದ ವ್ಯಕ್ತಿ; ವ್ಯಾಪಾರಿ, ಲೋಭಿ; ಜಿಪುಣ; ಕೋಮಟಿ+-ಇಗ; -ಇಗ ಒಂದು ಪ್ರತ್ಯಯ; is a suffix; A person belongs to Komaṭiga community; is a trader; miser, stingy etc;
- *—ಕೋಮಟಿಗಿತ್ತಿ/-ಕ್ವಾಮ್ಟಿಗಿತ್ತಿ* : ಕೋಮಟಿ ಕುಲದ ಸ್ತ್ರೀ; ವೈಶ್ಯ ಸ್ತ್ರೀ; ಕೋಮಟಿ+-ಇಗ+-ಗಿತ್ತಿ>ಕೋಮಟಗಿತ್ತಿ; -ಇತ್ತಿ ಒಂದು ಪ್ರತ್ಯಯ; is a suffix;
- *—ಕೋಮಟಿತನ/-ಕೋಮಟಿಗತನ* : ಕೋಮಟಿ ವೃತ್ತಿ; ವ್ಯಾಪಾರ ವೃತ್ತಿ; ವ್ಯಾಪಾರೀ ಮನೋಭಾವ; ಕೋಮಟಿ+-ತನ; ಕೋಮಟಿ+-ಇಗ+-ತನ; -ತನ ಒಂದು ಪ್ರತ್ಯಯ, a suffix; Occupation of Komaṭi; business, profession; business attitude;
- *—ಕೋಮಟಿದಾಯಿ(ತು)* : ಕಪಟಿ; ನಯವಂಚಕ; Deception; hypocrite;
- *—ಕೋಮಟಿ ವಿದ್ಯೆ(ತು)* : ಕಪಟ ವಿದ್ಯೆ; ವಂಚಕತನ. Process of learning deception, cheating.

ಕೋಮಲ/ಕೋಮಲಿ/ಕೋಮಲೆ kōmala/kōmali/kōmale :

- ಗುಣವಾಚಕ ನಾಮರೂಪಕ(ಸಂ); ಮೃದು; ಮೆದು; ಮೆತ್ತೆ; ಮೃದುವಾದ; ಮೆದುವಾದ; ನಯವಾದ; ನಾಜೂಕಿನ; An adjective mild, soft, gentle, softness, gentleness, tenderness, attractiveness;
- ಕೋಮಲಕಂಠ; ಕೋಮಲಕಾಯ; ಕೋಮಲ ಹೃದಯ; ಕೋಮಲ ರೂಪ ಎಂದೆಲ್ಲಾ ಪ್ರಯೋಗಗಳಿವೆ; ಪೌರಾಣಿಕ ನಾಟಕಗಳ ಸಂಭಾಷಣೆಯಲ್ಲಿ 'ಕೋಮಲೆ', 'ಕೋಮಲಾಂಗಿ' ಪ್ರಚಲಿತ ಪ್ರಯೋಗಗಳು; Melodious voice or tone; tender body; sweet heart; tender beauty; all these expressions are; the expression in legendary dramas `Komale', `Komalangi' are the existing dialogues;
- ಸುಂದರವಾದ, ರಮಣೀಯವಾದ ಎಂಬ ಅರ್ಥಛಾಯೆಯೂ ಉಂಟು; ಶೃಂಗಾರ ಸನ್ನಿವೇಶಗಳ ಪ್ರಾತಿನಿಧಿಕ ಶಬ್ದರೂಪಗಳಲ್ಲಿ ಒಂದು; The shadow of meaning beautiful, attractive also; in amorous sequences, one among the representative sound form;
- ಒಂದು ಅಂಕಿತನಾಮ; ಹೆಣ್ಣುಮಕ್ಕಳಿಗೆ ಕೋಮಲ, ಕೋಮಲಿ ಎಂದು ಹೆಸರಿಡುವುದು ರೂಢಿ; ಅಪರೂಪಕ್ಕೆ ಗಂಡುಮಕ್ಕಳಿಗೂ ಕೋಮಲ ಎಂದು ಹೆಸರಿಡುತ್ತಾರೆ; 'ಕೋಮಲ' ಹೆಣ್ಣು-ಗಂಡು ಇಬ್ಬರಿಗೂ ಸಲ್ಲುವ ಅಂಕಿತನಾಮ, ಗುಣವಾಚಕ ರೂಪ ಎನ್ನಬಹುದು; 'ಕೋಮಲೆ' ಹೆಣ್ಣಿಗೆ ಮಾತ್ರ ಅನ್ವಯ; One is proper noun; Komala, komali names to female children is practice; it is acceptable to both male and female, it is an adjective form; `komale' is applicable only to female;
- 'ಸುಮಕೋಮಲ' ಒಂದು ರೂಪಕ ಪ್ರಯೋಗ; ಹೂವಿನಂತೆ/ಹೂವಿನಷ್ಟು ಮೃದುವಾದ/ನಯವಾದ/ನಾಜೂಕಾದ ಎಂದಾಗುತ್ತದೆ; ಸೌಂದರ್ಯ ವರ್ಣನೆಯಲ್ಲಿ ಬಳಕೆ ಸಾಮಾನ್ಯ; `Suma komala' is a figure of speech in practice; like flower soft, nice, delicate; used in describing the beauty;
- ಬಯಲಾಟಗಳಲ್ಲಿ ಕಾಣಿಸಿಕೊಳ್ಳುವ ಸ್ತ್ರೀ ಹಾಸ್ಯ ಪಾತ್ರದ ಹೆಸರು 'ಕೋಮಲಿ'; *ಪ್ರ: 'ಕೋಮಲಿ ಬಂದ್ರೆ ನಗೋದೇ ಕೆಲ್ಸ'*; In drama female comedian is `Komali';
- ದೂತಿ; ಬಯಲಾಟದ ಸಾರಥಿ ಪಾತ್ರವನ್ನು ಹೋಲುವ ಒಂದು ಸ್ತ್ರೀ ಪಾತ್ರ; Dooti; a female character resembles to the character `Sarathi';
- ಬಯಲಾಟ ಪಾತ್ರಗಳ ಮಾತು ಮತ್ತು ಹಾಡುಗಳಲ್ಲಿ ಸ್ತ್ರೀ ಪಾತ್ರವನ್ನು ಕುರಿತು 'ಕೋಮಲೆ' ಪದಬಳಕೆ ಸಾಮಾನ್ಯ; ಸ್ತ್ರೀಪಾತ್ರದ ವರ್ಣನೆಯಲ್ಲಿ ಬಳಕೆಯಾಗುವುದು ಹೆಚ್ಚು; ಸಾಮಾನ್ಯ ಮಾತುಗಾರಿಕೆಯಲ್ಲೂ ಬಳಕೆ ಉಂಟು; The word `Komale' used commonly in drama characters speech and songs in female characters; the description of female

character, the word `komale' used more; and in general speech also;

- ಎಳೆಗಾಯಿ; ಮಿಡಿಗಾಯಿ; Tender nut, semi-tender nut;
- ಸಂಗೀತದ ಇಪ್ಪತ್ತೆರಡು ಶ್ರುತಿಗಳಲ್ಲಿ ಒಂದು(ಕ.ನಿ); One among the 22 rhythms;
- ಕೋಮಲಾ(ಸಂ–ಸ್ತ್ರೀವಾಚಕ)>ಕೋಮಲ/ಕೋಮಲೆ/ಕೋಮಲಿ(ಕ);
- ಅನ್ಯದೇಶ್ಯ ಪದ; Foreign word;
- ಕನ್ನಡ ಸ್ತ್ರೀಲಿಂಗ ರೂಪಗಳು ಸಾಮಾನ್ಯವಾಗಿ ಇಕಾರಾಂತವಾಗಿರುವುದರಿಂದ ಪ್ರಾದೇಶಿಕ ವ್ಯತ್ಯಯವೂ ಕಾರಣವಾಗಿ, 'ಕೋಮಲಿ' ರೂಪ ಸೃಷ್ಟಿಗೊಂಡಿರುವಂತೆ ಕಾಣುತ್ತದೆ; ಕನ್ನಡದಲ್ಲಿ 'ಕೋಮಲಿ' ಅಂಕಿತನಾಮವೇ; ಗುಣವಾಚಕವಾಗಿ ಪ್ರಯೋಗವಾದಂತೆ ಕಾಣುವುದಿಲ್ಲ; *ಪ್ರ: 'ನಮ್ಮೆಣ್ಣು ಕೋಮಲಿ ವತ್ತಾರ್‍ನಾಗ್ ವಾದ್ಲು, ಇನ್ನೂ ಬರ್‍ಲಿಲ್ಲ ಮನ್ಗ, ಎಲ್ಲಾಡ್ತಾ ಇದ್ದದೊ ಕಾಣೆ*(ಚಾ.ಜಿ).

ಕೋಯಾ kōyā :

- ತಾಳಿಸರದ ಜೊತೆಗೆ ಅಳವಡಿಸುವ ಒಂದು ವಸ್ತು; ಯಾವ ಲೋಹದಿಂದ ತಯಾರಿಸಿದ್ದು ಮತ್ತು ಅದರ ರಚನೆಯ ವಿನ್ಯಾಸದ ಬಗೆಗ ಖಚಿತ ಮಾಹಿತಿ ಲಭ್ಯವಿಲ್ಲ; ಇದು ಬಳ್ಳಾರಿ ಜಿಲ್ಲೆಯ ಭಾಗದಲ್ಲಿ ಬಳಕೆಯಲ್ಲಿರವಂಥದು; A thing fixed with `Tali sara'; no definite information about the metal; this practice is in Ballary district region;
- ಒಂದು ಸಮುದಾಯದ ಹೆಸರು ಮತ್ತು ಆ ಸಮುದಾಯಕ್ಕೆ ಸೇರಿದ ವ್ಯಕ್ತಿ; ಅವರು ಬುಡಕಟ್ಟು ಸಮುದಾಯವೋ ಅಥವಾ ಇತರ ನಾಗರಿಕ ಸಮುದಾಯಕ್ಕೆ ಸೇರಿದವರೊ ಮಾಹಿತಿ ಇಲ್ಲ(ಪಾಂ.ವ್ಯ.ಪ.ಕೋ); It is realated to a community and a person; whether they belongs to tribal community or any other cultured community that never known;
- 'ಕೋಟಾ, ಕೋಯಾ, ಕುಡಿಯರು' ಎಂಬ ಉಲ್ಲೇಖ ಎಚ್.ಎಲ್.ನಾಗೇಗೌಡರ 'ಕನ್ನಡ ಜಾನಪದ ಕೋಶ'ದಲ್ಲಿದೆ; ಇಲ್ಲಿ ಉಲ್ಲೇಖಗೊಂಡಿರುವ ಕೋಟಾ ಮತ್ತು ಕುಡಿಯರು ಬುಡಕಟ್ಟು ಸಮುದಾಯಕ್ಕೆ ಸೇರಿದವರಾದ್ದರಿಂದ 'ಕೋಯಾ' ಸಮುದಾಯವೂ ಬುಡಕಟ್ಟು ಸಮುದಾಯಕ್ಕೆ ಸೇರಿದಿರಬಹುದೆಂದು ಊಹಿಸಬಹುದು. Kota, koya, kudiyaru references are in `Kannada janapada kosa' of H.L.Nagegowda; according to this reference kota and kudiyaru belongs to tribal community; so, the koya also belongs to tribal community; it is only an imagination or assumption.

ಕೋಯಿ kōyi :

- ಇರುವೆ ಗುಂಪಿಗೆ ಸೇರಿದ ಒಂದು ಪ್ರಕಾರದ ಹುಳು ಅಥವಾ ಕ್ರಿಮಿ; Belongs to ant group; a kind of insect or worm;
- ಒಂದು ಬಗೆಯ ಸಾಂಪ್ರದಾಯಿಕ ಆಭರಣ; ಹೆಂಗಸರು ಧರಿಸುವಂಥದು; ಕರಿಮಣಿಯೊಂದಿಗೆ ಪೋಣಿಸಿದ ಒಂಟಿ ಎಳೆಯ ತಾಳಿಸರ; A kind of traditional ornament; worn by women; a single marriage string(Thali sara); string together with necklace;
- ಗೊಂದಲಿಗರು ಎಂಬ ಬುಡಕಟ್ಟು ಸಮುದಾಯದ ಮಹಿಳೆಯರು ಗೊಂದಲ ಹಾಕುವ ಸಂದರ್ಭದಲ್ಲಿ ಈ ಆಭರಣವನ್ನು ಕುತ್ತಿಗೆಗೆ ಧರಿಸುವುದಿದೆ. The Gondaliga tribal community women wear this ornament while putting Gondala.

ಕೋರ kōra :

೧. ಕೋರ=ಪೋರ; 'ಕೋರ' ಪದಕ್ಕೆ 'ಪೋರ' ಪದದ ಅರ್ಥವೇ ಇರುವುದಾದರೂ 'ಕೋರ'ದಿಂದ 'ಪೋರ'ವಾಗಲಿ ತದ್ವಿರುದ್ಧವಾಗಲಿ ಬಂದುದಲ್ಲ; The word `kora' has the meaning `pora'; but these words are not antithetical;

- 'ಪೋರ' ಜನಪ್ರಿಯ ರೂಪ; ಹದಿಹರೆಯದ ಹುಡುಗ, ಇನ್ನೂ ಮದುವೆಯಾಗದ ತರುಣ; ಯೌವ್ವನಾವಸ್ಥೆಯಲ್ಲಿರುವ ಗಂಡುಮಗನಿಗೆ ಪೋರ ಅಥವಾ ಕೋರ ಎಂದು ಕರೆಯುವರು; 'ಖೋರ' ಎಂಬ ವ್ಯತ್ಯಯ ರೂಪವೂ ಪ್ರಚಲಿತ; `pora' is a famous word form; teen ager; unmarried youngster; a youthful unmarried male son is called `pora' or `khora';

- ಸದಾ ಕ್ರಿಯಾಶೀಲತೆಯಿಂದಿರುವ, ಚಟುವಟಿಕೆಯಿಂದ ಕೆಲಸ-ಕಾರ್ಯಗಳನ್ನು ಮಾಡುವ ವ್ಯಕ್ತಿಗಳಿಗೂ ಪದಬಳಕೆ ಇದೆ; ಇಲ್ಲಿ ವಯಸ್ಸಿನ ಅಂತರವಿರುವುದಿಲ್ಲ; ಪ್ರಶಂಸೆ, ಮೆಚ್ಚುಗೆ, ಕೆಲವೊಮ್ಮೆ ವ್ಯಂಗ್ಯಾರ್ಥದದಲ್ಲಿಯೂ ಬಳಕೆಯಲ್ಲಿರುವ ರೂಪ; *ಪ್ರ: 'ಈ ಇಳಿ ವಯಸ್ಸ್ಲು ಒಳ್ಳೇ ಪೋರುನ್ ಥರ ಆಡ್ತವ್ನೆ ನೋಡ್ರಪ್ಪ!*; The persons who are active in work and celebrations they are also called or used this word pora; no age difference here; this form is used to praise, appreciation, some time it is used in the meaning of ridicule;

೨. ಕೆಂಪು ಬಣ್ಣದ ಗುಳ್ಳೆಗಳಿಂದ ಕೂಡಿದ ಒಂದು ಬಗೆಯ ಹುಣ್ಣು; ಸಿಡುಬು, ದಡಾರ ಎಂಬರ್ಥದಲ್ಲಿ; ಅಂಟುರೋಗ; 'ಗೋಣಿತಟ್ಟು' ಎನ್ನುವರು; A kind of ulcer with the red coloured bubbles; measles; small pox; meanings also in use contagious disease; `goṇitaṭṭu';

೩. ಒಂದು ವಿಧದ ದಪ್ಪಬಟ್ಟೆ; ಮಾಸಲು ಬಣ್ಣದ್ದಾಗಿರುತ್ತದೆ; 'ಖೋರಾಬಟ್ಟೆ' ಎನ್ನುವರು; 'ದೊರಗು ಬಟ್ಟೆ' ಎಂಬರ್ಥದಲ್ಲೂ ಬಳಕೆ; A kind of thick cloth; shadowy coloured; called as `Khora baṭṭe'; `Doragu baṭṭe';

೪. ಕೋರ ಜೊತೆಗೆ ಕುರಿಯ ಎಂಬ ಹೆಸರಿನಿಂದಲೂ ಪ್ರಚಲಿತದಲ್ಲಿರುವ ಒಂದು ಬಗೆಯ ಮರ ವಿಶೇಷ; ಅಲಂಕರಣಕ್ಕಾಗಿ ಬೆಳೆಸುವುದು ಕಂಡುಬಂದಿದೆ, ಮನೆಯ ಅಂಗಳ- ಉದ್ಯಾನವನಗಳಲ್ಲಿ; A kind of tree called in the name of `kora' along with `kuriya' is in existence; it grows in the front yard of the house for decoration; and in the parks also;

- Trichilia connaroides ಎಂಬುದು ಇದರ ಸಸ್ಯಶಾಸ್ತ್ರೀಯ ಹೆಸರು; ಕೋರ=ಗೋರ(ದಕ);
- 'ಕೋರ' ಪುಲ್ಲಿಂಗಾರ್ಥದಲ್ಲಿ ಬಳಕೆಗೊಂಡರೆ 'ಕೋರಿ' ಸ್ತ್ರೀಲಿಂಗಾರ್ಥದಲ್ಲಿ ಪ್ರಚಲಿತದಲ್ಲಿದೆ; ಕೋರ-ಕೋರಿಯರ ಹುಡುಗಾಟ, ತುಂಟಾಟಕ್ಕೆ 'ಕೋರಾಟ' ಎನ್ನುವರು(ನೋಡಿ: ಕೋರಿ); The word `kora' used in the meaning of masculine gender, `kori' is in the meaning of feminine gender; the playful activity or childish activity is called `korata';
- 'ಕೋರ' ಒಂದು ಪ್ರತ್ಯಯ ಕೂಡ, ಉದಾಹರಣೆಗೆ ದಗಾಕೋರ, ದಂಗೆಕೋರ, ತಂಟೆಕೋರ ಇತ್ಯಾದಿ; Kora is a suffix or grammatical suffix; eg: Dagakora, Dangekora, Taṇṭekora;
- ***—ಕೋರ ಅರಿವೆ*** : ಅರಿವೆ=ಬಟ್ಟೆ, ವಸ್ತ್ರ ಎಂಬರ್ಥದಲ್ಲಿ(ಉ.ಕ); ಅರಬಿ, ಅರಿವೆ, ಅರುವೆ, ಅರುಬೆ ರೂಪಗಳೂ ಪ್ರಚಲಿತ; ಸೂತಕ ಸಂಬಂಧದವರಿಗೆ ನೀಡಲಾಗುವ ಹೊಸ ಬಟ್ಟೆ(ವ.ಕ). 'Arive' means cloth; `arabi, arive, aruve, arube' forms are in existence; new cloth has been given to the impure(sūtaka) persons while gave birth to a child or after death etc.

ಕೋರಡಿಗೆ kōraḍige :

- ಒಂದು ಬಗೆಯ ಸಾಧನ; ಮರದ ತುಂಡಿನಿಂದ ತಯಾರಿಸಿದ್ದು; ನೇಗಿಲಿಗೆ ಕಟ್ಟುವ ಹಗ್ಗಕ್ಕೆ ಅಳವಡಿಸಲು ಉಪಯೋಗ; A type of wooden device uses to attach to the rope of plough;
- ಉಳುಮೆ ಹಗ್ಗವನ್ನು ನೇಗಿಲು, ನೊಗಕ್ಕೆ ಆಯಕ್ಕನುಗುಣವಾಗಿ ಕಟ್ಟುವಾಗ ಕೋರಡಿಗೆಯನ್ನು ನೇಗಿಲಿನ ಈಚುಗೆ ಸೇರಿಸಿ ಕಟ್ಟುವರು; ಇದರಿಂದ ನೊಗದಿಂದ ನೇಗಿಲು ಜಾರುವುದಿಲ್ಲ, ಬಿಡಿಸಿಕೊಳ್ಳುವುದಿಲ್ಲ; ಬಿಗಿಯಾಗಿ ಹಿಡಿದಿಡುತ್ತದೆ;
- ಉಳುಮೆ ಸರಾಗವಾಗಿ ಸಾಗಲು ಅನುಕೂಲ; ಈ ಪದದ ಬಳಕೆ ಉತ್ತರಕನ್ನಡ ಭಾಗದಲ್ಲಿ ಪ್ರಚಲಿತ. This makes ploughing easy, this word is in use in the parts of uttarkannada districts.

ಕೋರಣ್ಯ kōraṇya :

- ಶಿವಭಕ್ತರಾದ ಜಂಗಮರಿಗೆ, ದೇವರ ಗುಡ್ಡರಿಗೆ ಧಾನ್ಯರೂಪದಲ್ಲಿ ನೀಡುವ ಭಿಕ್ಷೆ; ಧಾರ್ಮಿಕ ಮಹತ್ವದ ಭಿಕ್ಷಾಟನೆಗೂ 'ಕೋರಣ್ಯ' ಎನ್ನಲಾಗುತ್ತದೆ; *ಪ್ರ: 'ಸ್ವಾಮ್ಗಳು ಉರೊಳಾಕೆ ಕ್ವಾರಣ್ಯಕ್ ಹೋಗವ್ರೆ!*; ಕೋರಣ್ಯ>ಕ್ವಾರಣ್ಯ; Alms given in form of corn to the Jangamas who are the devotees of

Lord Shiva, to the devotees of Malaya Mahadeshwara(Devara guḍḍaru) this alms has intense religious significance;

- ಈ ಬಗೆಯ ಭಿಕ್ಷೆಯಲ್ಲಿ ಸಂಗ್ರಹಿಸಿದ ಧಾನ್ಯ ಜಂಗಮರ ವೈಯಕ್ತಿಕ ಬಳಕೆಗೂ, ಮಠಮಾನ್ಯ ಸಂಸ್ಥೆಗಳ ಬಳಕೆಗೂ ವಿನಿಯೋಗವಾಗುತ್ತಿತ್ತು; ಈ ಕೋರಣ್ಯ ಸಂಸ್ಕೃತಿ ಬಹುತೇಕ ಈಗ ನಿಲುಗಡೆ ಹಂತ ತಲುಪುತ್ತಿದೆ; ಸಮಷ್ಟಿ ಸ್ವರೂಪ ಇಲ್ಲವಾಗಿ ವ್ಯಷ್ಟಿರೂಪವೂ ವಿರಳಗೊಂಡಿದೆ; The corn received in form sacred alms is used for Jangamas personal use and also for the use of religious institutions(abbots); but this tradition is almost stopped in the recent times;
- ಕೋರಣ್ಯಕ್ಕೆ ಮನೆಬಾಗಿಲಿಗೆ ಬರುವ ಜಂಗಮರನ್ನು ದೈವಸ್ವರೂಪಿಗಳೆಂದು ನಂಬುವುದರಿಂದ ಜಂಗಮರಿಗೆ ನೀಡಿದ ಕೋರಣ್ಯ ದೈವಕ್ಕೆ ನೀಡಿದ ಕಾಣಿಕೆ ಎಂದೇ ಜನಪದರ ಭಾವನೆ; Koranya which is given to the Jangamas is very sacred;
- ಮಲೆಯ ಮಾದೇಶ್ವರನ/ಕಂಸಾಳೆಯ ಸಂಪ್ರದಾಯದ ಗುಡ್ಡರು ಮಾದೇಶ್ವರ ಕಾವ್ಯದ 'ಸಾಲು'ಗಳನ್ನು ಹಾಡುತ್ತ ಮೇಲೆ ಉದ್ಧರಿಸಿರುವ ಪಲ್ಲವಿಯೊಡನೆ ಕಂಸಾಳೆ ಬಾರಿಸುತ್ತ ಊರೂರಿನ ಮೇಲೆ 'ಕೋರಣ್ಯ'ಕ್ಕೆ ಹೋಗುವುದು ಒಂದು ಕಾಲಕ್ಕೆ ಸಾಮಾನ್ಯ ಚಿತ್ರವಾಗಿತ್ತು; Guddas of Male Mahadeshwara; Kamsale Guddas receive alms with singing Mahadeshwara miracles;
- ಕೋರಿದ ಅನ್ನ=ಧಾರ್ಮಿಕ ಭಿಕ್ಷೆ ಎಂಬ ಅರ್ಥದ ಕೋರಾನ್ನ>ಕೋರಣ್ಯ ಆಗಿದೆ; ನ>ಣ ಆಗುವುದು, ಅ>ಯ ಸ್ವರ ವ್ಯತ್ಯಯ ಕನ್ನಡದಲ್ಲಿ ಸಾಮಾನ್ಯ; **ನೋಡಿ:** ಕ್ವಾರಣ್ಯ.

ಕೋರಪಂತಿ kōrapanti :

- ಮರ ವಿಶೇಷ; ಚರದಾಸಿ ಗಿಡ, ಪರ್ಪಾಟಕ ಎಂಬ ಹೆಸರಿನಿಂದಲೂ ಕರೆಯುವರು; A plant Charadasi plant; it is called Parapataka;
- Alinus oppositifolius ಎಂಬುದು ಇದರ ಸಸ್ಯಶಾಸ್ತ್ರೀಯ ಹೆಸರು. Alinus oppositifolius is a botanical name of this plant.

ಕೋರ ಪೇಟ kōra pēṭa :

- ಹೊಸದಾಗಿ ತಯಾರಿಸಿದ ಪೇಟ; ತಲೆಗೆ ಹಾಕಿಕೊಳ್ಳುವುದು; Newly prepared Peta, turban adorns the head;
- ಪೇಟದಲ್ಲಿ ವಿವಿಧ ವಿನ್ಯಾಸದ ರಚನೆಗಳನ್ನು ಗುರುತಿಸಬಹುದು; ಉತ್ತರಕರ್ನಾಟಕ ಭಾಗದ ಪೇಟದ ರಚನೆಯ ವಿನ್ಯಾಸವೇ ಬೇರೆ; ಹಾಗೆಯೇ ದಕ್ಷಿಣ ಕರ್ನಾಟಕ ಭಾಗದ ಪೇಟದ ರಚನೆಯ ವಿನ್ಯಾಸವೇ ಬೇರೆ ರೀತಿಯದು; Peta(turban) can be different in design; the design of the North Karnataka is different from the design of the south Karnataka;
- ಮೈಸೂರು ಭಾಗದ ಪೇಟಕ್ಕೆ 'ಮೈಸೂರು ಪೇಟ' ಎಂಬುದು ಜನಪ್ರಿಯ ಹೆಸರು; ಮದುವೆ ಸಂದರ್ಭದಲ್ಲಿ ವರನಿಗೆ ತೊಡಿಸುವುದಿದೆ; ಬಹುಮಾನ, ಸನ್ಮಾನ, ಅಭಿನಂದನೆಯ ಸಂದರ್ಭದಲ್ಲೂ ಈ ಪೇಟವನ್ನು ತಲೆಗೆ ಹಾಕುವುದುಂಟು; ಉತ್ತರಕರ್ನಾಟಕದ ಪೇಟವನ್ನು ಮದುವೆ ಹುಡುಗನಿಗಲ್ಲದೆ ಇತರೆ ಜನಪ್ರಿಯ ವ್ಯಕ್ತಿಗಳು, ಸ್ಥಿತಿವಂಥರು ಧರಿಸುವರು; ಪೇಟ ಧರಿಸುವುದು ಕೆಲವರಿಗೆ ವಂಶಪಾರಂಪರ್ಯವಾಗಿ ಬೆಳೆದು ಬಂದಿರುತ್ತದೆ(ನೋಡಿ: ಪೇಟ); The turban of the Mysore division is popularly known as `Mysore peta', during wedding ceremony the bridegroom wears, uses as a symbol of honour, heritage, compliment, and the distinguished people are honoured by the Mysore peta; in the regions of North Karnataka popular people, rich persons, wear peta; for some people wearing peta is an inherited tradition;
- ಕೋರ+ಪೇಟ; ಕೋರ=ತರುಣ, ಯುವಕ; ಪೇಟ=ತಲೆಗೆ ಧರಿಸುವ ಒಂದು ವಿಧದ ಸಾಧನ ಅಥವಾ ವಸ್ತು; ವಿವಿಧ ವಸ್ತ್ರಗಳಿಂದ ವಿನ್ಯಾಸಗೊಳಿಸಿರುವಂಥದು;

- 'ಕೋರಾ' ಬಟ್ಟೆಯಿಂದ ಸಿದ್ಧಪಡಿಸಿದ ಪೇಟ ಎಂದು ಇದನ್ನು ಅರ್ಥ ಮಾಡಬಹುದೆ? `Peta' may be made of unbleached white cloth(kora).

ಕೋರವಂಗಲ kōravangala :
- ಹಾಸನ ಜಿಲ್ಲೆಯ ಕ್ರಿ.ಶ.೧೧೬೦ರ ೧೨೯ನೇ ಶಾಸನದಲ್ಲಿ ಇದರ ಉಲ್ಲೇಖ; Referred in 129th inscription of 1160AD of Hassan district;
- ಹೊಯ್ಸಳ ಅರಸ ಒಂದನೇ ನರಸಿಂಹನ ಆಳ್ವಿಕೆಯ ಕಾಲದಲ್ಲಿ 'ಕೋರವಂಗಲ' ಬಹಳ ಪ್ರಖ್ಯಾತಿ ಹೊಂದಿತ್ತು; Koravangala was very famous during the region of Ist Narashimha of Hoysala dynasty;
- ಈ ಸಂದರ್ಭದಲ್ಲಿ ನಾಲ್ಕು ಜನ ಸೋದರರಾದ ಗೋವಿಂದ, ನಾಕಣ್ಣ, ಕಾಳಿದಾಸ, ಬೂಚಿರಾಜ ಎಂಬುವರು ಕೋರವಂಗಲದಲ್ಲಿ ಹಲವು ದೇವಾಲಯಗಳನ್ನು ನಿರ್ಮಿಸಿದ್ದರಂತೆ; The four brothers of Ist Narashimha, Govinda, Nakanna, Kalidasa, Buchiraja had built many temples in Koravanagala;
- 'ಕೋರವಂಗಲ' ಪದಕ್ಕೆ 'ಕೋರವಂಗ' ಪದ ರೂಪವೂ ಇದೆ; ಇಲ್ಲಿ 'ಮಂಗಲ' ಪದವೇ 'ವಂಗಲ'ವಾಗಿರುವುದು ಸ್ಪಷ್ಟ; ಮ>ವ ಕಾರವಾಗುವುದು ಒಂದು ಪ್ರಸಿದ್ಧ ಬದಲಾವಣೆ ಅಷ್ಟೇ;
- 'ಕೋರ' ಪದ 'ಕುವರ' ರೂಪದಿಂದ ಬಂದುದೆಂದು ಭಾವಿಸಿದರೆ, ಆಗ ಅದು 'ಕುಮಾರಮ(ವ)ಂಗಲ' ಎಂದಾಗುತ್ತದೆ; ಇಲ್ಲ ಇದೇ 'ಕೋರ' ರೂಪ ಕೊವರ/ಕುವರ(ಒ<ಉ)ದೊಡನೆ ಸಂಬಂಧ ಹೊಂದಿದ್ದು 'ಕುಂಬಾರ' ಎಂಬ ಅರ್ಥದಲ್ಲಿಯೂ ಬಳಕೆಯಲ್ಲಿದೆ; ಆಗ ಇದು 'ಕುಂಬಾರಮಂಗಲ' ಆಗುತ್ತದೆ; The word `Kora' is derived from the word `kuvara', therefore, it becomes `Kumarama(va)ngala'; the word `Kora' relates to `Kuvara' which means `Kumbara'; then, it becomes `Kumbaramangala'.

(E.C- ೮; ಹಾ.ಜಿ.)

ಕೋರಾ kōrā :
- ಆಸೆ(ಉ.ಕ.ಜಿ); ಮಡಕೆ(ದಕ); ಕಚ್ಚಾಮಾಲು; Desire, raw-materials;
- ಕಚ್ಚಾ ರೇಷ್ಮೆಯಿಂದ ನೇಯ್ದು ಸಿದ್ಧಪಡಿಸಿದ ಸಾದಾ ರೇಷ್ಮೆ ಬಟ್ಟೆ ಅಥವಾ ವಸ್ತ್ರ(ಬೆಂ.ಗ್ರಾ.ಜಿ); ಸಹಜ ರೇಷ್ಮೆ; Plain silk dress made of raw silk;
- ರೇಷ್ಮೆ ಹುಳುವಿನ ಉಕ್ಕಾರ(ಅಂಟು) ತೆಗೆಯದ ರೇಷ್ಮೆ; Unbleached silk;
- ಆಗ ತಾನೆ ತಯಾರಿಸಿದ ಹೊಸ ಬಟ್ಟೆ; ಉಬ್ಬೆಗೆ ಹಾಕದ, ಮಡಿ ಮಾಡದ ಬಟ್ಟೆ; Newly prepared dress;
- ಖಾಲಿಯದು, ಬಿಳಿದಾದ ಕಾಗದ(ಬಾ.ಜಿ). Empty, white paper.

ಕೋರಾಯಿ kōrāyi :
- ಅಗಲಬಾಯಿಂದ ಕೂಡಿದ ಪಾತ್ರೆ; ತಳಭಾಗದಲ್ಲಿ ಕಿರಿದಾಗಿದ್ದು ಸಣ್ಣ ಗಾತ್ರದ ಕಾಲುಗಳಿರುತ್ತವೆ; ನೆಲದಲ್ಲಿ ಇಡಲು ಅನುಕೂಲವಾಗಿರುತ್ತದೆ; ಪಾತ್ರೆಯ ತಳಭಾಗ ಬೇಗ ಸವೆದುಹೋಗದಿರಲಿ ಎಂಬ ಆಶಯದೊಂದಿಗೆ; ಅನ್ನ ಬಸಿಯಲು ಬಳಕೆ; Rice vessel with wide open with small pedestal to keep on the floor, uses to separate water from the boiled rice;
- ಹರಿತವಾದ ಬಾಣ(ದ.ಕ). Sharp pointed arrow.

ಕೋರಿ kōri :

೧. ಹಳೆಯ ಬಟ್ಟೆಯ 'ಚೂರು', ಚಿಂದಿ ಅಥವಾ ಹರಕು ಬಟ್ಟೆ; ಕಂಬಳಿಯ ತುಂಡು; ಹೊದ್ದುಕೊಳ್ಳುವ ವಸ್ತ್ರ; ಒಂದು ಬಗೆಯ ದೊರಗು ಬಟ್ಟೆ; ದೊರಗು ಅಥವಾ ಒರಟಾದ ಬಟ್ಟೆ; ಚಾದರ; ಹಳೆಯದಾದ ಬಟ್ಟೆ(ಶಿ.ಜಿ); Rag, tatter, small pieces of cloth, of rug, of blanket, old cloth;
- ಕಂಬಳಿ ಅಥವಾ ಹಾಸಿಗೆಯನ್ನು ತಯಾರಿಸುವ ದಪ್ಪದಾದ ದಾರ; ನೂಲಿನ ಎಳೆ; ಅತಿ ಸಣ್ಣವೂ ಅಲ್ಲದ ದಪ್ಪವೂ ಅಲ್ಲದ ದಾರ ಅಥವಾ ನೂಲು; ನೇಯ್ಗೆ ಯಂತ್ರಕ್ಕೆ ಅಳವಡಿಸಿ ಕಂಬಳಿ ಹೆಣೆಯುವ ವಿಧಾನ; A medium sized string or thread uses to stitch bed or blanket; the thread is

attached to weaving machine to weave blanket;

೨. ಕೋರಿ ರೂಪಕ್ಕೆ 'ಘೊಂಗಡಿ' ಎಂಬರ್ಥವೂ ಬಳಕೆಯಲ್ಲಿದೆ;

೩. ಕೊಯ್ದ ಅಥವಾ ಕತ್ತರಿಸಿದ ದಂಟುಗಳ ತುಂಡು; Cut piece of stem or reed;

೪. ನಿರ್ದಿಷ್ಟ ಕರಾರಿನ ಮೇಲೆ ಜಮೀನನ್ನು ಇತರರಿಗೆ ಸಾಗುವಳಿಗೆ ಕೊಡುವುದು; ವಾರ ಸಾಗುವಳಿ; Lease agricultural field to cultivate on particular contract;

೫. ಭತ್ತದ ಬೆಳೆಗೆ ಹತ್ತುವ ಒಂದು ಬಗೆಯ ಹುಳ; 'ಕೋರಿಹುಳ' ಎಂದು ಕರೆಯುವುದಿದೆ; ಭತ್ತದ ಬೆಳೆಯೇ ಅಲ್ಲದೆ ಇತರೆ ಬೆಳೆಗಳಿಗೂ ಹತ್ತುವುದಿದೆ; ಇದರಿಂದ ಬೆಳೆ ನಾಶವಾಗಿ ಇಳುವರಿಯ ಮೇಲೆ ಪರಿಣಾಮ ಬೀರುತ್ತದೆ(ನೋಡಿ: ಕೋರಿಹುಳ); *ಪ್ರ: 'ಕೋರಿಹುಳ ಹತ್ತದೆ ಅಂದ್ಮೇಲೆ ಫಸ್ಲು ಕೈಸೇರೋದುಂಟೆ'!* An insect/pest dwelling and feeding on paddy crop; this is called as `Korihulu'; this insect or pest affects other crops also; it results in the lesser yield;

೬. ಕೊಬ್ಬಿದ ಪ್ರಾಯದ ಹೆಣ್ಣು; ಋತುವತಿಯಾದ ಮೈಕೈ ತುಂಬಿಕೊಂಡ ಹುಡುಗಿ; ಮದುವೆಯಾಗದ ಕನ್ಯೆ; ಯೌವ್ವನಾವಸ್ಥೆಯ ಯುವತಿ; ಹದಿಹರೆಯದ ತರುಣಿ; Young woman, unmarried girl, damsel, young girl;

- ಸದಾ ಚಟುವಟಿಕೆಯಿಂದ, ಕ್ರಿಯಾಶೀಲತೆಯಿಂದ, ಲವಲವಿಕೆಯಿಂದ ಓಡಾಡಿಕೊಂಡಿರುವ, ಯಾವುದೇ ಕೆಲಸವನ್ನಾದರೂ ಕ್ಷಣಾರ್ಧದಲ್ಲಿ ಮಾಡಿ ಮುಗಿಸುವ ಗುಣವುಳ್ಳ ತರುಣಿ ಅಥವಾ ಹೆಂಗಸಿಗೂ ಪದ ಬಳಕೆ ಇದೆ; Very smart and active girl or woman, a girl ready to do any work very quickly;
- ಕೆಲವೊಮ್ಮೆ ಪ್ರಶಂಸೆ, ಹೆಮ್ಮೆ, ಹೊಗಳಿಕೆ ಹಾಗೂ ವ್ಯಂಗ್ಯಾರ್ಥದಲ್ಲಿಯೂ ಬಳಕೆಗೊಳ್ಳುವ ರೂಪ; ನೀತಿಗೆಟ್ಟವಳು ಎಂಬರ್ಥದಲ್ಲೂ ಪದಬಳಕೆ (ಬಾ.ಜಿ); Sometimes it means appreciation, praise, pride and other ironical words(sarcastic words); it also means immoral or wrong woman;
- ಕೋರ್ಹೆಣ್ಣು, ಕೋರುಡುಗಿ ಎಂಬುದಾಗಿ ಕರೆಯುವುದುಂಟು; ಇಂಥ ತರುಣಿಯರು ಆಡುವ ತುಂಟಾಟ, ಹುಡುಗಾಟ, ಚೆಲ್ಲಾಟಕ್ಕೆ 'ಕೋರಾಟ' ಎಂದು ಕರೆಯುವರು; ಕೋರಿ/ಕೋರು+ಹುಡುಗಿ> ಕೊರುಡುಗಿ;
- 'ಕೋರಿ' ಸ್ತ್ರೀಲಿಂಗಾರ್ಥದಲ್ಲಿ ಬಳಕೆಗೊಂಡರೆ 'ಕೋರ' ಅಥವಾ 'ಪೋರ' ಪುಲ್ಲಿಂಗಾರ್ಥದಲ್ಲಿ ಪ್ರಚಲಿತ; *ಪ್ರ: 'ಕೋರಿ ಇದ್ದಾಗ ಊರೆಲ್ಲಾ ನಂಟು'!* 'ಉಳದಿದ್ದರೆ ಹೋರಿ ಹೆರದಿದ್ದರೆ ಕೋರಿ'(ಗಾ); `Kori' stands for female, `Kora' or `pora' stands for male;

೭. ಕೋರಿ=ಗೋರಿ ಅಥವಾ ಗೋರಿಗೆ; ಅನ್ನ ಬಡಿಸಲು ಉಪಯೋಗಿಸುವ ಸಟ್ಟುಗ; ಅಗಲವಾದ ಬಾಯಿಯಿದ್ದು ಸಣ್ಣ ಸಣ್ಣ ರಂಧ್ರಗಳಿಂದ ಕೂಡಿರುತ್ತದೆ(ತು.ನಿ); 'ಕೋರಿಗೆ' ಎಂದೂ ಕರೆಯುವುದಿದೆ;

- ಧಾನ್ಯ, ಮಣ್ಣು ಮೊದಲಾದವನ್ನು ಅಗೆದು, ಬಗೆದು ಅಥವಾ ತೋಡಿ ತೆಗೆಯಲು ಅಥವಾ ಹರಡಲು ಉಪಯೋಗಿಸುವ ಒಂದು ಬಗೆಯ ಸಾಧನ; ಉದ್ದವಾದ ಹಿಡಿಕೆ ಇರುತ್ತದೆ; 'ಗೋರಿಗೆ' ಎಂದು ಕರೆಯುವರು(ದ.ಕ); A device with long handle to dig soil, grain or to spread soil or grain;
- ಅಂತಿಮ ಅಥವಾ ಕೊನೆಯ ವ್ಯವಸಾಯದ ದಿವಸ; ಭತ್ತದ ಅಗೆಯ ನಾಟಿಗೂ ಮೊದಲು ಅಥವಾ ಬೀಜ ಬಿತ್ತನೆಗೂ ಮುಂಚೆ ಮಾಡಲಾಗುವ ಅಂತಿಮ ಉಳುಮೆ; ಹಲಗೆ ಮೆಟ್ಟಿ ಆರಂಭ ಮಾಡುವ ಕ್ರಿಯೆ ರೂಢಿಯಲ್ಲಿದೆ; ಭೂಮಿಯನ್ನು ಆಳವಾಗಿ ಉಳುಮೆ ಮಾಡಬಹುದೆಂಬ ಆಶಯದೊಂದಿಗೆ; ಬೇಸಾಯದ ಅಂತಿಮ ದಿವಸದ ಕೊನೆಯ ಕೆಲಸ-ಕಾರ್ಯಗಳು; The last day of cultivation/agriculture; the last ploughing before tendering plant of rice(paddy);
- ದ್ರಾವಿಡ ಭಾಷಾರೂಪಗಳಾದ ತುಳುವಿನಲ್ಲಿ 'ಕೋರೋ' ಪದದ ಬಳಕೆ ಇದ್ದರೆ ಮಲೆಯಾಳಂನಲ್ಲಿ 'ಕೋಱ' ರೂಪದ ಬಳಕೆ ಇದೆ(ದ್ರಾ.ಭಾ.ಜ್ಞಾ.ಪ.ಕೋ);

೮. ಒಂದು ಬಗೆಯ ಸಾಧನ; ಮೀನು ಹಿಡಿಯಲು ಉಪಯೋಗ; 'ಕೆಂಬಟ್ಟೆ ಹೊಲೆಯರು' ಎಂಬ

ಬುಡಕಟ್ಟು ಸಮುದಾಯದವರು ಬಳಸುವ ಉಪಕರಣ; ಹೊಳೆ ಬತ್ತಿರುವ ಸಂದರ್ಭದಲ್ಲಿ ಗುಂಡಿಗಳಿಗೆ ಸೇರಿದ ಮೀನುಗಳನ್ನು ಈ ಸಾಧನದಿಂದ ಗೋರಿ ಹಿಡಿಯುವುದು ವಿಧಾನ; A kind of device uses to catch fish; the tribals called `Kembatte Holeyas' use this device; it is used to catch fish in the dried up river;

೯. ಕೋರಿ ಪದಕ್ಕೆ 'ಕೋಳಿ' ಎಂಬರ್ಥವೂ ಬಳಕೆಯಲ್ಲಿದೆ; ಇದು ತುಳುನಾಡಿನಲ್ಲಿ ಬಳಕೆಯಲ್ಲಿರುವ ರೂಪ; ತುಳುನಾಡಿನಲ್ಲಿ 'ಕೋರಿಕಳ/ಕೋರಿಕಟ್ಟ/ಕೋರಿದಟ್ಟ/ಕೋರ್ದಟ್ಟ' ಎಂಬ ಪದಕ್ಕೆ 'ಕೋಳಿ ಕಾಳಗದ ಅಂಕ' ಎಂಬುದಾಗಿ ಅರ್ಥೈಸಲಾಗುತ್ತದೆ; 'ಕೋರಿ ಕಟ್ಟುನಿ' ಎಂದರೆ 'ಕೋಳಿ ಅಂಕದಲ್ಲಿ ಎದುರಾಳಿ ಕೋಳಿಗಳನ್ನು ಕಾಳಗಕ್ಕೆ ಬಿಡುವುದು' ಎಂದು ಹೇಳಲಾಗುತ್ತದೆ; `Kori' means `hen' in Tulunadu; `Korikala' means fighting of hens/cock fighting;

- 'ಕೋರಿಕಿನ್ನಿ' ಎಂದರೆ 'ಕೋಳಿ ಮರಿ' ಎಂದೂ, 'ಕೋರಿ ಕಿಲೆಸ್ರ' ಎಂದರೆ 'ಕೋಳಿ ಕೂಗು' ಎಂದೂ, 'ಕೋರಿ ತಮ್ಮನ' ಎಂದರೆ 'ಕೋಳಿ ಮಾಂಸದಿಂದ ತಯಾರಿಸಿದ ಬಗೆ ಬಗೆಯ ಭಕ್ಷ್ಯದ ಔತಣ' ಎಂದೂ, 'ಕೋರಿ ಕೆತ್ತಿ' ಎಂದರೆ 'ಕೋಳಿ ಮೊಟ್ಟೆ' ಎಂದೂ, 'ಕೋರಿ ಪೇನ್' ಎಂದರೆ 'ಕೋಳಿ ಹೇನು' ಎಂದೂ, 'ಕೋರಿ ನಿದ್ರೆ' ಎಂದರೆ 'ಕೋಳಿ ನಿದ್ರೆ' ಎಂಬುದಾಗಿಯೂ ವಿವಿಧ ಬಗೆಯ ಸಂವಾದಿ ಅರ್ಥಗಳನ್ನು ಗುರುತಿಸಲಾಗಿದೆ; `Korikinni' means `chicken', `Kori thammana' means the various dishes of chicken(meat);
- ***—ಕೋರಿಗುಂಟ/ಕೋರಿಕುಂಟ*** : ಕೋಳಿಗಳನ್ನು ಕಟ್ಟಿಹಾಕಲು ನೆಲದಲ್ಲಿ ಹುಗಿದಿರುವ ಗೂಟ; ಕೋರಿ+ಕುಂಟ>ಕೋರಿಗುಂಟ(ಕ>ಗ); ಕೋರಿ= ಕೋಳಿ; ಗುಂಟ=ಗೂಟ; A peg to tie the hens or cocks;
- ಭೂತಾರಾಧನೆಯ ಆರಂಭದಲ್ಲಿ ನಿಗದಿಯಂತೆ ಕೋಳಿ ಕಾಳಗಕ್ಕಾಗಿ ಕಣ ನಿರ್ಮಾಣ ಮಾಡುವುದು ಪದ್ಧತಿ; ನಂತರ ಸಿದ್ಧಪಡಿಸಿದ ಕಣಕ್ಕೆ ಕಡಿದಾಗ ಹಾಲುಸೂಸುವ ಮರದಿಂದ ತಯಾರಿಸಿದ ಒಂದು ಗೂಟವನ್ನು ಶಾಸ್ತ್ರೋಕ್ತವಾಗಿ ಹಾಕುವ ಆಚರಣೆ ಮಾಡಲಾಗುತ್ತದೆ; During the beginning of Bhutharadhana a ground is prepared for cock's fighting; later, a peg is attached to the field(cock pit);
- ಹೀಗೆ ಕಣದ ಸುತ್ತಲೂ ೧೬ ಗೂಟಗಳನ್ನು ವೃತ್ತಾಕಾರವಾಗಿ ಹಾಕುವುದು ಸಂಪ್ರದಾಯ; ಹೀಗೆ ಗೂಟವನ್ನು ಹಾಕಿದ ನಂತರ ಭೂತಾರಾಧನೆ ಮುಗಿಯುವವರೆಗೆ ಮನೆ ಅಥವಾ ಗ್ರಾಮದಲ್ಲಿ ಯಾವುದೇ ಶುಭಕಾರ್ಯಗಳನ್ನು, ಸಾಮಾಜಿಕ ಕಾರ್ಯಗಳನ್ನು ನಡೆಸಬಾರದೆಂಬ ನಿಷೇಧವಿದೆ;
- ಪ್ರಾಣಿಗಳನ್ನು ಬಲಿಕೊಟ್ಟು ಅಥವಾ ಕೊಯ್ದು ಮಾಂಸಾಹಾರದ ಅಡುಗೆಯನ್ನು ತಯಾರಿಸುವಂತಿಲ್ಲ(ತು.ನಿ);
- ***—ಕೋರಿಪದೆಕ್ಕ*** : ಕೋಳಿ ಮಾಂಸದಿಂದ ತಯಾರಿಸಿದ ಒಂದು ಬಗೆಯ ತಿಂಡಿ; ತುಳುನಾಡಿನ ವಿಶೇಷ ತಿನಿಸು; A kind of chicken dish, a special dish in Tulunadu;
- ***—ಕೋರಿಗಡಿ*** : ಭೂತಕೋಲ ಅಥವಾ ಮಾರಿಪೂಜೆಗಳಲ್ಲಿ ಕೋಳಿಗಳನ್ನು ಬಲಿ ಕೊಡುವ ಜಾಗ ಅಥವಾ ಸ್ಥಳ; ಮೊದಲೇ ನಿಗದಿಪಡಿಸಿರುವಂಥದು; A place for sacrifice hens during Bhutakola or Maripuja;
- ***—ಕೋರಿದ ಪುಂಡಿ*** : ಒಂದು ಬಗೆಯ ತಿನಿಸು; ಅನ್ನ ಮತ್ತು ಕೋಳಿ ಮಾಂಸದಿಂದ ತಯಾರಿಸುವಂಥದು; ಬಯಲುಸೀಮೆಯಲ್ಲಿ ತಯಾರಿಸುವ ಚಿಕನ್ ಪಲಾವ್ ಅಥವಾ ಚಿಕನ್ ಬಿರಿಯಾನಿ ಆಗಿದ್ದಿರಬಹುದು(?); A kind of dish made from rice and chicken; in the parts of Southern Karnataka this dish is known as `Chicken Palav' or `Chicken Biriyani'
- ***—ಕೋರಿದ ಬಾಳ್*** : ಕೋಳಿ ಅಂಕದಲ್ಲಿ ಕಾಳಗಕ್ಕೆ ಸಿದ್ಧಗೊಂಡ ಕೋಳಿಗಳ ಕಾಲಿಗೆ ಒಂದು ಚಿಕ್ಕ ಕತ್ತಿಯನ್ನು ಕಟ್ಟುವ ವಿಧಾನಕ್ಕೆ ಪದಬಳಕೆ ಇದೆ; In a cockpit a metal or small knife or blade in attached to cock's leg; this method is called Koridabal;
- ***—ಕೋರಿ ರೊಟ್ಟಿ*** : ದಕ್ಷಿಣಕನ್ನಡ ಜಿಲ್ಲೆಯ 'ಬಂಟರು' ಸಮುದಾಯದವರು ತಯಾರಿಸುವ

ವಿಶೇಷ ತಿನಿಸು; ಹಪ್ಪಳದಂತೆ ತೆಳುವಾದ ಅಕ್ಕಿಯಿಂದ ತಯಾರಿಸಿದ ಅಕ್ಕಿರೊಟ್ಟಿ; ಇದನ್ನು ಕೋಳಿ ಮಾಂಸದಿಂದ ಸಿದ್ಧಪಡಿಸಿದ ಸಾಂಬಾರಿನ ಜೊತೆಗೆ ತಿನ್ನುವುದು ರೂಢಿ; A special dish prepared by `Bunts' community of South Kannada district; Roti, made of rice eat with chicken sambar(curry);

- *—ಕೋರಿ ನಿಶಾನಿ* : ಮೈಲಾರಲಿಂಗ ದೇವರ
- ಗುಡಿಯ ಮುಂಭಾಗದಲ್ಲಿ ಹಾರಿಸುವ ಕಂಬಳಿಯ ಧ್ವಜ(ಜಿ.ಪ.ಕೋ); A flag(of rough rug) infornt of the temple;
- *—ಕೋರಿ ಅಂಗಿ ಗ್ವಾರಪ್ಪ* : ಕಂಬಳಿಯಿಂದ ತಯಾರಿಸಿದ ಮೇಲು ಅಂಗಿಗೆ 'ಕೋರಿ ಅಂಗಿ' ಎನ್ನುವರು; ಕೊರವಿಯರು ಇದನ್ನು ಧರಿಸುವುದಿದೆ; A upper shirt(coat) made of coarse rug(Kambali); Koravis wear this upper coat;
- ಈ ಕೋರಿ ಅಂಗಿಯನ್ನು ಧರಿಸುವವನೇ 'ಗ್ವಾರಪ್ಪ'ನಿರಬಹುದು; ಹಾಗಾಗಿ ಇವನಿಗೆ 'ಕೋರಿ ಅಂಗಿ ಗ್ವಾರಪ್ಪ' ಎಂಬ ಹೆಸರು ಬಂದಿದೆ; One who wears Kori shirt(upper coat) is called `Gwarappa'; therefore, he is called `Kori Angi Gwarappa';
- ಇವನು ಕೋರಿ ಅಂಗಿ ತೊಟ್ಟು, ಕೈಯಲ್ಲಿ ಡಮರುಗ, ತ್ರಿಸೂಲ, ಡೋಣಿ ಹಿಡಿದುಕೊಂಡು ದೇವರ ಸೇವೆ ಮಾಡುವವನಿದ್ದಾನೆ; Gwarappa one who wears this Kori shirt serves god with a small drum, a bowl and with a trident(thrishul) in hand;
- ಅಂದರೆ ದೇವರ ಹಿರಿಮೆ-ಮಹಿಮೆ ಸ್ತುತಿಸುವುದು, ಕಣಿ, ಭವಿಷ್ಯ ನುಡಿಯುವುದು ಇವನ ಕಾಯಕವಾಗಿರಬಹುದು?; Gwarappa sings in the name of God; his work may devine?
- ಗೊರವಪ್ಪ ಉಚ್ಚಾರಣೆಯಲ್ಲಿ ಗ್ವಾರಪ್ಪ ಆಗಿರಲು ಸಾಧ್ಯವಿದೆ?; 'ಗೋರವಯ್ಯ' ಎಂಬುದು ಉಚ್ಚಾರಣೆಯ ಮೂಲರೂಪ; ಗೊರವಯ್ಯ> ಗೊರವಪ್ಪ>ಗ್ವಾರಪ್ಪ(?);
- *—ಕೋರಿಹುಳ* : ಕಂಬಳಿ ಹುಳ ಎಂಬರ್ಥದಲ್ಲಿ; ಮೈತುಂಬಾ ಕೂದಲಿರುವ ಒಂದು ಬಗೆಯ ಹುಳ; ಭತ್ತ, ರಾಗಿ, ಜೋಳ, ಹಿಪ್ಪನೇರಳೆ, ನುಗ್ಗೆ ಹಾಗೂ ಜಾಲಿ ಗಿಡದಲ್ಲಿ ಕಾಣಿಸಿಕೊಳ್ಳುತ್ತದೆ; Caterpillar, a kind of insect; it resides on drumstick tree mulberry, ragi, paddy or maize, a wriggling creature;
- ಗಿಡಗಳ ಎಲೆಗಳನ್ನು ಕೊರೆದು ತೂತು ಮಾಡುವುದು; ಇದು ಇದರ ಆಹಾರವೂ ಹೌದು; ಜನರ ಮೈಮೇಲೆ ಹರಿದಾಡಿದರೆ ಮೈಯಲ್ಲಿ ಉರಿ ಬರುತ್ತದೆ; ಹರಿದಾಡಿದ ಜಾಗದಲ್ಲಿ ಕೆಲವೊಮ್ಮೆ ಗಂಟುಗಳಾಗುವುದು ಉಂಟು; Caterpillar feeds on the leaves of plants; its touch creates itching sensation;
- *—ಕೋರಿದೆಚ್ಚಿ* : ಕೋಳಿಯ ಮೇಲೆ ದೈವಾವೇಷವಾಗುವುದು.

ಕೋರಿಯುಗ್ರ kōriyugra :

- ನಾಲಿಗೆಯಲ್ಲಿ ಕಾಣಿಸಿಕೊಳ್ಳುವ ಒಂದು ವಿಧದ ಗುಳ್ಳೆಗಳು; ಮುಳ್ಳಿನಾಕೃತಿಯಲ್ಲಿದ್ದೂ ಇದು ಬಂದಾಗ ನಾಲಿಗೆ ಕಪ್ಪಾಗುವುದಿದೆ; ವಿಶೇಷವಾಗಿ ಬಾಣಂತಿಯರಲ್ಲಿ ಕಾಣಿಸಿಕೊಳ್ಳುವ ತೊಂದರೆ; Canker sore on the tongue; open sores on tongue, a kind of oral herpes, especially during maternity; the sore turns the colour of the tongue into black(canker sore);
- ಈ ತೊಂದರೆ ಬಂದಾಗ ಊಟ ತಿನ್ನಲಾಗುವುದಿಲ್ಲ; ಸದಾ ನಾಲಿಗೆ ಒಣಗಿದಂತಾಗಿ ಜ್ವರ ಬಂದಂತಿರುತ್ತದೆ; This problem causes fever and one cannot have food;
- ಇದರ ನಿವಾರಣೆಗೆ ಉಪ್ಪು, ಮೆಣಸು, ಜೀರಿಗೆಯನ್ನು ಪುಡಿ ಮಾಡಿ ನಾಲಿಗೆಗೆ ಹಾಕಿ ಚೆನ್ನಾಗಿ ತಿಕ್ಕುವುದು; Canker sore can be cured by rubbing the tongue with powdered mix of salt, pepper and cumin;
- ಶರೀರದಲ್ಲಿ ಉಷ್ಣಾಂಶ ಹೆಚ್ಚಾದಾಗ ಈ ತೊಂದರೆ ಬರುವುದುಂಟು; ಸಾಮಾನ್ಯವಾಗಿ ಬೇಸಿಗೆಯಲ್ಲಿ ಕಾಣಿಸಿಕೊಳ್ಳುವುದು ವಾಡಿಕೆ. Canker sore is the result of high temperature in the body during summer season.

ಕೋರು kōru :

- ಗುತ್ತಿಗೆ ಕೊಡುವುದು; ವಾರ ಸಾಗುವಳಿ ಎಂಬರ್ಥದಲ್ಲಿ; ಸಮಭಾಗದ ಹಂಚಿಕೆ ವ್ಯವಸ್ಥೆ; ಜಮೀನನ್ನು ಇತರರಿಗೆ ಸಾಗುವಳಿಗೆ ಕೊಡುವುದು; ಭೂಮಾಲಿಕ, ರಾಜ, ಸರಕಾರದ ಪಾಲು; ಪಾಲುಗಾರ; An agricultural land given on a contract to cultivate, lease agriculture land for cultivation, land holder, lessor, king, government, share, partaker, a system of equal share;
- ಜಮೀನಿನ ಒಡೆಯ ತನ್ನ ಭೂಮಿಯನ್ನು ತಾನೇ ಉಳುಮೆ ಅಥವಾ ಸಾಗುವಳಿ ಮಾಡಲಾಗದೆ ಜಮೀನಿಲ್ಲದವರಿಗೆ ಅಥವಾ ನಂಬಿಕಸ್ಥ ವ್ಯಕ್ತಿಗಳಿಗೆ ಒಂದು ನಿರ್ದಿಷ್ಟ ಕರಾರಿನ ಮೇಲೆ ಕೊಟ್ಟು ಸಾಗುವಳಿ ಮಾಡಿಸಿ ಬಂದ ಬೆಳೆಯಲ್ಲಿ ಇಬ್ಬರೂ ಸಮವಾಗಿ ಹಂಚಿಕೊಳ್ಳುವುದು; ಈ ವ್ಯವಸ್ಥೆ ಗ್ರಾಮೀಣ ರೈತರಲ್ಲಿ ಇಂದಿಗೂ ಜಾರಿಯಲ್ಲಿರುವಂಥದು; ಇಲ್ಲಿ ಎಕರೆಗೆ ಇಂತಿಷ್ಟು ಹಣ ಅಥವಾ ದವಸ–ಧಾನ್ಯ ಕೊಡಬೇಕೆಂದು ನಿಗದಿ ಪಡಿಸಲಾಗಿರುತ್ತದೆ; ಇದನ್ನು ವಾರ್ಷಿಕವಾಗಿ ಕೊಡಬೇಕೆಂಬ ನಿಯಮವಿದೆ; ಅರ್ಧಪಾಲು, ಅರ್ಧಭಾಗ ಕೊಡುವುದು; A land owner or a lessor leases or lets an agricultural land to havenots for cultivation; they have an agreement to equally share the crop; still, it is in practice in rural areas; they share the crop equally but annually;
- ಬಾಚು; ಬಾಚಿಕೊಳ್ಳುವಿಕೆ; ಎಲ್ಲವನ್ನು ತೆಗೆದುಕೋ, ಕಸಿದುಕೋ ಅಥವಾ ಈಸಿಕೋ ಎಂಬರ್ಥದಲ್ಲಿ; Grab, sweep up, seize, loot, snatch;
- ಬೇಡು; ಬೇಡಿಕೊ; ಬೇಡಿಕೊಳ್ಳು; ಅರಿಕೆ ಮಾಡಿಕೊಳ್ಳು; ಕೇಳು; ಕೇಳಿಕೊಳ್ಳು; ಕೋರಿಕೆ; ಪ್ರಾರ್ಥಿಸು; ಹಾರೈಸು; Beg, request, implore, pray, solicit;
- ಹೆಚ್ಚಳ; ಅತಿಶಯ; ಬಯಕೆ; ಇಚ್ಚಿಸು; ಯೋಚಿಸು; ಪರಿಗಣಿಸು; ಬಯಸು; ನಿರೀಕ್ಷಿಸು; ಕೊಳ್ಳುವಾಗ ಕೇಳಿ ಹೆಚ್ಚಿಗೆ ಪಡೆಯುವಿಕೆ; ಆಧಿಕ್ಯ; ಉತ್ಕಟವಾಗು; Abundance, increase, exaggeration, desire, wish, think, reflect, consider, expect, anticipate, get excess while purchasing, strong, powerful;
- ಗೆಳೆಯ; ಯಮ; ಆಸೆಬುರುಕ; Friend, companion, greedy, covetous, Yama-god of death;
- ಪಗಡೆ, ಮುಂಡಾಸುಗಳಿಗೆ ಸುತ್ತುವ ಜರಿಲಾಡಿ (ಯ.ಪ.ಕೋ); A cloth strip to wrap dice or turban;
- ಮೀನಿನ ಒಂದು ಪ್ರಭೇದ(ದಕ); A variety of fish;
- ಒಂದು ಬಗೆಯ ಕಂಠಾಭರಣ; A type of necklace;
- ಚಿಕ್ಕ ಡಬ್ಬಿ; ಸುಣ್ಣ ತುಂಬಿಟ್ಟುಕೊಳ್ಳಲು ಉಪಯೋಗ; ಹಿಂದೆ ಎಲೆ, ಅಡಿಕೆ ಹಾಕಿಕೊಳ್ಳುವ ವಯಸ್ಸಾದ ಹಿರಿಯರು ಈ ಡಬ್ಬದಲ್ಲಿ ಸುಣ್ಣ ತುಂಬಿಕೊಂಡು ಚೀಲದಲ್ಲಿಟ್ಟುಕೊಳ್ಳುತ್ತಿದ್ದರು; Small box, uses to keep lime; in olden days people used to keep lime in this box to chew pan/betel leaves;
- ದ್ರಾವಿಡ ಭಾಷಾ ರೂಪಗಳಾದ ತಮಿಳು ಮತ್ತು ತೆಲುಗಿನಲ್ಲಿ 'ಕೋರು', ತುಳುವಿನಲ್ಲಿ 'ಕೋರು' ಜೊತೆಗೆ 'ಕೋರ್' ಮತ್ತು ಮಲೆಯಾಳಂನಲ್ಲಿ 'ಕೋರುಗ' ಪದಗಳ ಬಳಕೆ ಇದೆ (ದ್ರಾ.ಭಾ.ಜ್ಞಾ.ಭಾ.ಕೋ);
- ***—ಕೋರುಮಂಡೆ ರುಂಬಾಲು*** : ಜರೀಪೇಟ; ಪೇಟಕ್ಕೆ 'ರುಮಾಲು' ಎಂಬ ಸಂವಾದಿ ರೂಪವಿದೆ; 'ರುಮಾಲು' ಉಚ್ಚಾರಣೆಯಲ್ಲಿ 'ರುಂಬಾಲು' ಆಗಿರಬಹುದು; ಮದುವೆ ಸಂದರ್ಭದಲ್ಲಿ ವರನಿಗೆ ತೊಡಿಸುವುದಿದೆ; Silk turban, turban(peta) is called `rumalu', may be later it becomes `rumbalu', during wedding ceremony bridegroom makes to wear turban(peta);
- ***—ಕೋರು ಧಾನ್ಯ ಪದ್ಧತಿ*** : ಹೊಲ–ಗದ್ದೆಗಳಲ್ಲಿ ಬೆಳೆದ ಯಾವುದೇ ಧಾನ್ಯದ ಮೊದಲ ಬೆಳೆಯನ್ನು ದೇವರಿಗೆ ಒಪ್ಪಿಸುವ ಅಥವಾ ಸಮರ್ಪಿಸುವ ಪದ್ಧತಿ; A system of offering the first crop of the season to god;
- ***—ಕೋರು ಮುಂಡಾಸು*** : ಮುಂಡಾಸು=ರಾಜನಲ್ಲದ ವೇಷಧಾರಿಗಳ ತಲೆಗೆ ಕಟ್ಟುವ ಅರಳಿ ಎಲೆ ಆಕಾರದ

ಒಂದು ಅಲಂಕಾರ; ಯಕ್ಷಗಾನದಲ್ಲಿ 'ಕಿರಾತ' ವೇಷಧಾರಿ ಧರಿಸುವ ಪೇಟ/ರುಮಾಲು. A turban in shape of the leaf of pepul tree adorns the head of common characters excluding the king; in Yakshagana art `Kiratha' character wears turban/peta.

ಕೋರೂಟ kōrūṭa :

- ಮದುವೆ ಆದ ನಂತರ ವಧುವರರನ್ನು ಅವರ ಬಂಧು ಬಾಂಧವರ ಮನೆಗೆ ವಾದ್ಯ ಊದುತ್ತಾ ಬಾರಿಸುತ್ತಾ ಊಟಕ್ಕೆ ಕರೆದುಕೊಂಡು ಹೋಗುವ ರೂಢಿ ಇದೆ; A practice/custom after wedding ceremony, bride and bridegroom visit relatives houses along with tradition music;
- ಜನಪದ ಸಂಸ್ಕೃತಿಯಲ್ಲಿ ಇಂತಹ ರೂಢಿಗಳು ಬಹಳವಾಗಿ ಕಾಣಿಸಿಕೊಳ್ಳುತ್ತವೆ; ಪರಿಚಯ ಮತ್ತು ಬಾಂಧವ್ಯ ಬೆಸೆಯಲು ಇಂತಹ ಆಚರಣೆಗಳು ಪ್ರಚಾರದಲ್ಲಿವೆ; In folk culture this type of customs are very abundant; they are helpful to bond relations and have acquaintance;
- ಆಚರಣಾ ಜಾನಪದ ಒಂದು ದೊಡ್ಡ ವಿಭಾಗ; ಅದರಲ್ಲಿ ಇಂತಹ ನಿದರ್ಶನಗಳು ಅನೇಕ. This type of ritual practice is a big department in folklore; we can find many examples of such practices here.
- ಮೈಯೂಟ; ಮದುವೆ ನಿಶ್ಚಯವಾದ ವಧು-ವರರಿಗೆ ಅವರ ಕಡೆಯ ಕುಲಭಾಂದವರು, ನೆಂಟರಿಸ್ಟರು, ಬಂಧು-ಬಳಗದವರು ಏರ್ಪಡಿಸುವ ಸಿಹಿ ಅಥವಾ ಮಾಂಸಾಹಾರದ ಭೋಜನ ಅಥವಾ ಔತಣ ಕೂಟ; A banquet, dinner, feast(veg or non-veg) arranged for newly wedded couple by the relatives, friends;
- ಕೆಲವು ಕಡೆ ಗಂಡು-ಹೆಣ್ಣುಗಳನ್ನೇ ಅವರ ಮನೆಗೆ ಕರೆದು ಔತಣವೇರ್ಪಡಿಸಿದರೆ ಮತ್ತೆ ಕೆಲವು ಕಡೆ ನೆಂಟರಿಷ್ಟರೇ ವಧು-ವರರ ಮನೆಗೆ ಬಂದು ತಮ್ಮ ಖರ್ಚಿನಲ್ಲೇ ಅಡುಗೆ ಸಾಮಗ್ರಿಗಳನ್ನು ಕೊಂಡು ಅವರೇ ಅಡುಗೆ ತಯಾರಿಸಿ ವಧು-ವರರಿಗೆ ಶಾಸ್ತ್ರೋಕ್ತವಾಗಿ ಭೋಜನವೇರ್ಪಡಿಸುವ ಪದ್ಧತಿ ಇದೆ; In many places newly wedded couple are invited for dinner, in some places the relatives themselves arrange the dinner at the couple's house;
- ಮದುವೆ ಮುಗಿದ ಅನಂತರದ ದಿವಸಗಳಲ್ಲಿ ನವದಂಪತಿಗಳನ್ನು ಅವರ ಬಂಧುಗಳು ಒಬ್ಬರ ನಂತರ ಒಬ್ಬರಂತೆ ಅವರವರ ಮನೆಗಳಿಗೆ ಆಹ್ವಾನಿಸಿ ನೀಡಲಾಗುವ ವಿಶೇಷ ಆತಿಥ್ಯ ಅಥವಾ ಔತಣ; A kind of special dinner arranged for newly wedded couple; the couple are invited for such dinner;
- ಬಿಸಿ ಊಟ(ಕಲ.ಜಿ); Fresh meals;
- ವಿವಾಹ ನಿಶ್ಚಿತಾರ್ಥವಾದ ಹುಡುಗ-ಹುಡುಗಿಯರಿಗೆ ನೀಡುವ ಊಟ(ಹಾಸ.ಜಿ); A dinner arranged for engaged couple;
- ಕುಲಸ್ಥರು ಮದುಮಕ್ಕಳನ್ನು ಮದುವೆಯ ಹಿಂದಿನ ದಿವಸ ತಮ್ಮ ಮನೆಗೆ ಆಮಂತ್ರಿಸಿ ನೀಡಲಾಗುವ ಊಟ(ಬ.ಜಿ). A dinner arranged for the invited couple(one day before the wedding ceremony) by the kith and kins.

ಕೋರೆ kōre :

- ಕೋರಿ, ಕ್ವಾರಿ, ಕ್ವಾರೆ ಎಂಬ ಸಂವಾದಿ ರೂಪಗಳ ಬಳಕೆ ಇದೆ;
- ವಕ್ರ; ಓರೆ; ಡೊಂಕು; ಕಪ್ಪುಶಿಲೆ, ಕಲ್ಲುಬಂಡೆಗಳಿರುವ ನೆಲ ಅಥವಾ ಪ್ರದೇಶ; 'ಓರೆ-ಕೋರೆ' ಎಂಬುದೊಂದು ಜೋಡಿನುಡಿ; ಸಂಭಾಷಣೆಯಲ್ಲಿ ತನ್ನಿಂತಾನೇ ಉಚ್ಚಾರಗೊಳ್ಳುವ ರೂಪ; ಸಮವಿಲ್ಲದ್ದು, ಆಯವಿಲ್ಲದ್ದು, ವ್ಯತ್ಯಾಸದಿಂದ ಕೂಡಿರುವಂಥದು ಎಂಬರ್ಥದಲ್ಲಿ ಪದಬಳಕೆ; ಕೊನೆ; ಮೂಲೆ; Bent, curved, black stone, quarry, warped, not levelled;
- ಕೋರೆ=ಕ್+ಓ+ರ್+ಎ; ಓರೆ=Ø+ಓ+ರ್+ಎ; ಕೋರೆ>ಕ್ವಾರೆ>ಕ್ವಾರಿ(ಒ>ವ ಮತ್ತು ಎ>ಇ); ಇಲ್ಲಿ ಆರಂಭದ ವ್ಯಂಜನ ಲೋಪ;
- ಹರಿತವಾದ; ಮೊನೆಯಾದ; ಮೊನಚಾದ; ಉದ್ದವಾದ; ಮೊನಚಾದ ದವಡೆ ಹಲ್ಲು; 'ಕೋರೆ ಹಲ್ಲು' ಎಂದೇ ಪ್ರಸಿದ್ಧಿ; Sharpness,

pointedness, keenness, lengthy, sharp teeth, molar tooth, canine tooth;

- ಹರಿಯುವುದು; ಕೊಯ್ಯುವುದು; ಹರಿಯುವಿಕೆ; ಅಗೆದು ಹೊರಹಾಕು; Tear, cut, excavate, dig out;
- ಕೆರೆ; ಗೀರು; ಹೆರೆ; ತುರಿ; ತೆಂಗಿನಕಾಯಿ ತುರಿಯುವಿಕೆ; tear, grate(coconut);
- ದಾಡೆ; ಹಂದಿ ಅಥವಾ ಆನೆಯ ಹಲ್ಲು; Tusk, tooth of a pig or an elephant;
- ದ್ರಾವಿಡ ಭಾಷಾ ರೂಪಗಳಾದ ತಮಿಳಿನಲ್ಲಿ 'ಕೋಱೈ', ತೆಲುಗಿನಲ್ಲಿ 'ಕೋಱ', ತುಳುವಿನಲ್ಲಿ 'ಕೋರು', 'ಗೋರು', ಮಲೆಯಾಳಂನಲ್ಲಿ 'ಕೋಱುಗ, ಮತ್ತು ಕೊಡವ ಭಾಷೆಯಲ್ಲಿ ಯಥಾಪ್ರಕಾರವಾಗಿ 'ಕೋರೆ' ಪದವೇ ಬಳಕೆಗೊಂಡಿದೆ(ದ್ರಾ.ಭಾ.ಜ್ಞಾ.ಪ.ಕೋ);
- ***—ಕೋರೆ ಮುಂಡಾಸು*** : ಒಂದು ಕಡೆಗೆ ಓರೆಯಾಗಿರುವ ರುಮಾಲು ಅಥವಾ ಪೇಟ; 'ಕೋರೆ ರುಮಾಲು'; 'ಕೋರೆಪೇಟ'; ಬಡಗುತಿಟ್ಟು ಯಕ್ಷಗಾನದಲ್ಲಿ 'ಕಿರಾತ' ಎಂಬ ವೇಷಧಾರಿ ತಲೆಗೆ ಧರಿಸುವ ತೊಡುಗೆ; A kind of inclined turban(peta), a turban worn by `Kiratha' in Badaguthittu Yakshagana;
- ***—ಕೋರೆ ಹಲ್ಲು*** : ಬಾಯಿಯಿಂದ ಹೊರಚಾಚಿದ ಹಲ್ಲು; ಕಾಡುಹಂದಿಯಂತಹ ಮಾಂಸಾಹಾರಿ ಪ್ರಾಣಿಗಳಲ್ಲಿ ಕಂಡುಬರುತ್ತದೆ; ನೆಲ ಬಗೆದು ಗೆಡ್ಡೆಗೆಣಸು, ಸಿಹಿಯಾದ ಬೇರು, ಕ್ರಿಮಿ–ಕೀಟಗಳನ್ನು ಹೊರತೆಗೆಯಲು ಸಹಕಾರಿ; **ವ್ಯರೂ:** ಕೋರೆದಾಡೆ; A canine tooth, especially of hogs/pig/wild boars; they are helpful to digout sweet root and other earth worms for food;
- ***—ಕೋರೆಕೊಂಬು/–ಕೋರೆಗೊಂಬು*** : ಚೂಪಾದ ಕೊಂಬು/ಕೋಡು; ಮೊನಚಾದ ದಂತ; ಕೋರೆ+ಕೊಂಬು=ಕೋರೆಗೊಂಬು; ಕ>ಗ ವ್ಯತ್ಯಯ; Sharp pointed horn, tusk;
- ***—ಕೋರೆತಾಳ*** : ಯಕ್ಷಗಾನದಲ್ಲಿ ವಿಶೇಷವಾಗಿ ಬರುವ ತಾಳ; 'ತಿತ್ತಿತ್ತೈಮಟ್ಟು' ಎನ್ನುವರು; ಜನಪದ ಶೈಲಿಯ ಈ ವಿಶಿಷ್ಟ ತಾಳ ಅಥವಾ ಗತ್ತು ಮನಮೋಹಕವಾದುದು ಮತ್ತು ಪರಿಣಾಮಕಾರಿಯಾದುದು; An attractive rhythm in Yakshagana folk dance;
- ***—ಕೋರೆದಿಂಗಳು*** : ಬಾಗಿದ ಚಂದ್ರ; ಮೊನಚಾದ ಎರಡು ತುದಿಗಳನ್ನುಳ್ಳ(ಕೋಡಿನಂತೆ) ತಿಂಗಳು (=ಚಂದ್ರ); ಬಾಲಚಂದ್ರ; ಅಮಾವಾಸ್ಯೆ ಆದ ಅನಂತರದ ಎರಡು, ಮೂರು, ನಾಲ್ಕನೇ ದಿವಸಗಳಲ್ಲಿ ಕಾಣಿಸಿಕೊಳ್ಳುವ ಚಂದ್ರ ಎಂದು ಗ್ರಹಿಸಬಹುದು; ಕೋರೆ+ತಿಂಗಳು=ಕೋರೆದಿಂಗಳು; ತ>ದ ವ್ಯತ್ಯಯ; ತೃತೀಯತ್ವ; Waning crescent, waxing crescent(crescent moon);
- ***—ಕೋರೆನೋಟ*** : ಕಡೆಗಣ್ಣಿನ ಮೊನಚು ನೋಟ/ದೃಷ್ಟಿ; ಕೊಂಕು ನೋಟ; ವಕ್ರದೃಷ್ಟಿ; **ವ್ಯರೂ:** ವಾರೆನೋಟ; Sidelong glance, unfriendly look, sinister glance;
- ***—ಕೋರೆಬಂಗಾರ*** : ಅರ್ಧನಾರಿ ವೇಷ ತೊಟ್ಟ ವೈದ್ಯ ಪಾತ್ರಧಾರಿ; ಜರಿ ಮುಂಡಾಸಿನ ಮೇಲೆ ವಿಶೇಷವಾಗಿ ತೊಡುವ ಆಭರಣ (ಪಾಂ.ವ್ಯ.ಪ.ಕೋ); An ornament adorns silk turban, a doctor character in `Androgynous' role;
- ***—ಕೋರೆಮೀಸೆ*** : ತುದಿಯಲ್ಲಿ ಮೇಲೆ ಅಥವಾ ಕೆಳಕ್ಕೆ ಸೊಟ್ಟವಾಗಿ ಬಾಗಿಸಿ ಹುರಿಗೊಳಿಸಿದ ಕುಡಿಮೀಸೆ; ಕೋರೆ ಹಲ್ಲಿನಂತೆ ಕಾಣುವ ಮೀಸೆ; ಮೊನಚು ತುದಿಯುಳ್ಳ ಮೀಸೆ; ಕೊಂಕು ಮೀಸೆ; ಬಾಗಿದ ತುದಿಯುಳ್ಳ ಮೀಸೆ; **ವ್ಯರೂ:** ಕ್ವಾರೆಮೀಸೆ. Bent or upward mustache; mustache resembles sharp tooth or canine tooth.

ಕೋರೆಗಾಲ kōregāla :

- ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೋಕಿನ ಕ್ರಿ.ಶ.೧೫೪೦ರ ೧೨ನೇ ಶಾಸನದಲ್ಲಿ ಇದರ ಉಲ್ಲೇಖ; A place in Mandya district, Malavalli taluk referred in 12th inscription of 1540AD;
- ಮಂತ್ರಿ ಸಿದ್ಧರದಪ್ಪಣ್ಣ ಕೋರೆಗಾಲ ಗ್ರಾಮವನ್ನು ನರಸಿಂಹನಿಗೆ ದಾನಕೊಟ್ಟ ವಿವರವಿದೆ; Minister Siddharadappanna donated Koregala village to Narasimha;
- ಕೋರೆ+ಕಾಲ>ಕೋರೆಗಾಲ ಆಗಿರಬಹುದು; ಕ>ಗ ಆಗಿರುವುದು ಸ್ಪಷ್ಟ; ಭೌಗೋಳಿಕೆ ಹಿನ್ನೆಲೆಯ

ಸ್ಥಳನಾಮ; Kore+Kala becomes `Koregala'; it is clear that it refers the geographical background of the place;

- 'ಕೋರೆ' ಎಂದರೆ 'ಡೊಂಕು' ಎಂದು ಅರ್ಥ ಇರಿಸಿಕೊಂಡು, ಅಥವಾ 'ಮೂಲೆ ಭೂಮಿ' ಎಂದಿಸಿಕೊಂಡು ಊರಿನ ಹೆಸರಿನ ನಿಷ್ಪತ್ತಿ ಹೇಳಬಹುದು; `Kore' means bent/curved or corner land;
- 'ಕಾಲ' ಎಂದರೆ 'ಕಪ್ಪುಬಣ್ಣ' ಎಂಬ ಅರ್ಥವೂ ಇರುವುದರಿಂದ, 'ಕೋರೆಗಾಲ' 'ಕಪ್ಪು ಬಣ್ಣದ ಮೂಲೆ ಭೂಮಿ' ಎಂಬುದಾಗಿ ಅರ್ಥ ಮಾಡಬಹುದೇನೊ? Kala means `black'; therefore, Koregala may be black coloured corner land;
- ಹಳ್ಳದಿಣ್ಣೆಗಳಿಂದ ಕೂಡಿದ ಹಳ್ಳಿ ಎಂದೂ ಹೇಳಲು ಅವಕಾಶವಿದೆ. A village of crooked land, unequal land, irregular land.

(E.C- ೭; ಮಂಡ್ಯ.ಜಿ.)

ಕೋರೆಲ್ಯಾರು kōrelyāru :

ಪರಿಶಿಷ್ಟ ಪಂಗಡಗಳಲ್ಲಿ ಒಂದಾದ ಚಲವಾದಿ ಸಮುದಾಯದ ಒಂದು ಬೆಡಗು(ಚಿ.ಪ.ಕೋ). A levity/fashion in Chalavadi community of Schedule tribe.

ಕೋರ್ಕೆ kōrke :

ಮಣ್ಣಿನಿಂದ ತಯಾರಿಸಿದ ಅಗಲಬಾಯಿಯ ಪಾತ್ರೆ; ಬಟ್ಟಲಿನಾಕಾರದಲ್ಲಿರುತ್ತದೆ. Wide opened earthen vessel or pot in shape of basin.

ಕೋಲ್‌ಕೊಚ್ನೆ ಆಟ kōlkocne āṭa :

- ಉತ್ತರಕನ್ನಡ ಜಿಲ್ಲೆಯಲ್ಲಿನ ಒಂದು ಜನಪದ ಆಟ; A folk game in North Kannada district;
- ಈ ಆಟದಲ್ಲಿ ಒಬ್ಬನು ಕೋಲ್‌ಕೊಚ್ ಹುಡುಕುವವನು; ಉಳಿದವರೆಲ್ಲ ಒಂದು ಗುಂಪು; ಹುಡುಕುವವನು ತನ್ನ ಬೊಗಸೆ ತುಂಬ ಮಣ್ಣು ತುಂಬಿಕೊಂಡು ಅದರ ಮಧ್ಯಕ್ಕೆ ಎಂಜಲು ಉಗಿಯುತ್ತಾನೆ; ಎಂಜಲಲ್ಲಿ ಎರಡು ಇಂಚಿನ ಕಡ್ಡಿಯನ್ನು ಸಿಕ್ಕಿಸಿ, ಕಡ್ಡಿಯ ತುಂಡನ್ನು ಹುಡುಕುವವನಿಗೆ ಕಣ್ಣು ಕಟ್ಟಿ ಮನೆಯ ಕಾಂಪೌಂಡ್‌ನಲ್ಲಿ ಅತ್ತ ಇತ್ತ ತಿರುಗಿಸುತ್ತಾ ನಿಂತಲ್ಲೇ ಪ್ರದಕ್ಷಿಣೆ ಹಾಕಿಸಿ ದಿಕ್ಕು ತಪ್ಪುವಂತೆ ಮಾಡುತ್ತಾನೆ; ನಂತರ ಅಲ್ಲಿಂದ ಬೇರೆ ಕಡೆ ಕರೆದುಕೊಂಡು ಹೋಗಿ ಅಲ್ಲಿ ಬೊಗಸೆ ಮಣ್ಣು, ಕಡ್ಡಿ ಕೆಳಗೆ ಹಾಕಿ, ಅತ್ತ ಇತ್ತ ತಿರುಗಿಸುತ್ತ ಆಟ ಪ್ರಾರಂಭಿಸಿದ್ದ ಸ್ಥಳಕ್ಕೆ ತಂದು ಹಿಡಿಯಲು ಪ್ರಯತ್ನಿಸುತ್ತಾನೆ; ಮೂರು ಎಣಿಸುವುದರೊಳಗೆ ಹುಡುಕಿ ತರಬೇಕು; ಇಲ್ಲದಿದ್ದರೆ ಮತ್ತೆ ಇವನೇ ಕೋಲ್‌ಕೊಚ್‌ನಾಗುತ್ತಾನೆ; In this folk game, a selected man will be blind folded and his hands are filled with soil as well as a small stick in the middle; the other members of the game make him revolves and tell him to empty his hand in a particular place; later, they open his eyes and tell him to search(within three counts) the spot where he has emptied his hand; if he fails to search in the stipulated time he becomes Kolkoche again;
- ಈ ಆಟವು ಮಂಡ್ಯ ಜಿಲ್ಲೆಯ ಕೆಲವು ಕಡೆಗಳಲ್ಲಿ ಕಂಡುಬರುವ 'ಉಪೂಪೆ ಕಡ್ಡಿ ಆಟ'ವನ್ನು ಹೋಲುತ್ತದೆ; ಇದು ಇಬ್ಬರು ಆಡುವ ಆಟ; ಇಬ್ಬರ ಜೋಡಿಯಂತೆ ಮೈದಾನದಲ್ಲಿ ಎಷ್ಟು ಜೊತೆ ಬೇಕಾದರೂ ಸೇರಿ ಆಡಿಕೊಳ್ಳುವ ಜನಪದ ಆಟವಿದು; ವಿಶೇಷವಾಗಿ ಮಕ್ಕಳ ಆಟ; This game resembles `Upupe kaddi ata' a folk game of Mandya distrist; this game is specially for children;
- ಈ ಆಟಕ್ಕೆ ಮರಳಿನ ರಾಶಿ ಇದ್ದರೆ ಸೊಗಸು; ಇಲ್ಲದಿದ್ದರೆ ಮಣ್ಣುಗುಡ್ಡೆ ಮಾಡಿ ಅದರ ಮುಂದೆ ಇಬ್ಬರು ಎದುರುಬದುರಾಗಿ ಕೂರುತ್ತಾರೆ; ಇಬ್ಬರ ನಡುವೆ ಉದ್ದವಾಗಿ ಮಣ್ಣಿನ/ಮರಳಿನ ದಿಂಡು ಕಟ್ಟುತ್ತಾರೆ; ಎರಡು ಇಂಚು ಉದ್ದದ ಸಣ್ಣ ಕಡ್ಡಿಯೊಂದನ್ನು ತೆಗೆದುಕೊಳ್ಳುತ್ತಾರೆ; ಒಬ್ಬ ಕಡ್ಡಿಯನ್ನು ಮಣ್ಣು ದಿಬ್ಬದಲ್ಲಿ ಕೈಯಾಡಿಸುತ್ತಾ ಎಲ್ಲೋ ಒಂದು ಕಡೆ ಬಚ್ಚಿಡುತ್ತಾನೆ; ಇನ್ನೊಬ್ಬ ತನ್ನ ಎರಡೂ ಕೈಗಳ ಬೆರಳುಗಳನ್ನು ಸೇರಿಸಿ ಹಿಡಿದು ಆ ಬಚ್ಚಿಟ್ಟ ಕಡ್ಡಿಯು ಮಣ್ಣಿನ ಉದ್ದದ ದಿಬ್ಬದ ಯಾವ ಭಾಗದಲ್ಲಿ ಇರಬಹುದೆಂದು ಅಂದಾಜು ಮಾಡಿ, ಎರಡೂ ಹಸ್ತಗಳನ್ನು ಆ ಮಣ್ಣಿನ ದಿಬ್ಬದ ಮೇಲೆ ಒತ್ತಿ ಹಿಡಿಯುತ್ತಾನೆ; ಕಡ್ಡಿಯನ್ನು ಬಚ್ಚಿಟ್ಟವನಿಗೆ ತಾನು

ಯಾವ ಭಾಗದಲ್ಲಿ ಬಚ್ಚಿಟ್ಟಿರುವುದೆಂದು ಗೊತ್ತಿರುವುದರಿಂದ ಆತನ ಕೈಯ ಕೆಳಗೆ ಕಡ್ಡಿ ಇಲ್ಲದಿದ್ದರೆ, ಇರುವ ಕಡೆ ಮಣ್ಣು ಕೆದಕಿ ಕಡ್ಡಿ ತೆಗೆಯುತ್ತಾನೆ; ಈಗ ಕಡ್ಡಿ ಬಚ್ಚಿಟ್ಟವನಿಗೆ ಒಂದು ಪಾಯಿಂಟ್ ದೊರೆಯುತ್ತದೆ; ಮತ್ತೆ ಆತನ ಸರದಿ ಮುಂದುವರಿಯುತ್ತದೆ; ಈಗ ಇನ್ನೊಮ್ಮೆ ಕಡ್ಡಿಯನ್ನು ಮಣ್ಣಿನ ಉದ್ದದ ದಿಬ್ಬದಲ್ಲಿ ಕೈಯಾಡಿಸುತ್ತಾ ಎದುರಾಳಿಯ ಅರಿವಿಗೆ ಬರದಂತೆ ಎಲ್ಲೋ ಒಂದು ಕಡೆ ಬಚ್ಚಿಡುತ್ತಾನೆ; ಮತ್ತೆ ಎದುರಾಳಿ ಕಡ್ಡಿ ಎಲ್ಲಿರಬಹುದೆಂದು ಊಹಿಸಿ ಹಸ್ತಗಳನ್ನು ಮಣ್ಣಿನ ದಿಣ್ಣೆಯ ಮೇಲೆ ಹಾಕಿ ಹಿಡಿಯುತ್ತಾನೆ; ಒಂದು ವೇಳೆ ಆತ ಕೈ ಊರಿದ ಅಡಿಯಲ್ಲೇ ಕಡ್ಡಿ ಇದ್ದು ಆತನಿಗೆ ಸಿಕ್ಕಿದರೆ ಈಗ ಎದುರಾಳಿಗೆ ಒಂದು ಪಾಯಿಂಟ್ ದೊರೆತು, ಕಡ್ಡಿ ಬಚ್ಚಿಡುವ ಸರದಿ ಆತನದಾಗುತ್ತದೆ; This game requires a heap of sand;

- ಹೀಗೆ ಆಟ ಮುಂದುವರಿದು ಹತ್ತು ಪಾಯಿಂಟ್ ಅಥವಾ ಇಪ್ಪತ್ತು ಪಾಯಿಂಟ್ ಎಂದು ಮೊದಲು ನಿಗದಿ ಮಾಡಿಕೊಂಡ ಗರಿಷ್ಠ ಮೊತ್ತವನ್ನು ಯಾರು ಮೊದಲು ತಲುಪುತ್ತಾರೊ ಅವರು ಗೆದ್ದಂತೆ;
- ಗೆದ್ದವನು ಸೋತವನ ಬೊಗಸೆಗೆ ಮಣ್ಣು/ಮರಳು ತುಂಬಿ ಅದರ ಮೇಲೆ ಮಧ್ಯದಲ್ಲಿ ಉಗುಳು ಹಾಕಿ, ಉಗುಳಿನ ಭಾಗದಲ್ಲಿ ಆಟದಲ್ಲಿ ಬಳಸಿದ್ದ ಚಿಕ್ಕ ಕಡ್ಡಿಯನ್ನು ನೆಟ್ಟಗೆ ನಿಲ್ಲಿಸುತ್ತಾನೆ; ನಂತರ ತನ್ನ ಕೈಗಳಿಂದ ಸೋತವನ ಕಣ್ಣುಗಳನ್ನು ಮುಚ್ಚಿಕೊಂಡು ನಿಂತಲ್ಲೇ ಒಂದೆರಡು ಸುತ್ತು ಸುತ್ತಿಸಿ, ಅಲ್ಲಿಂದ ಆಕಡೆ, ಈಕಡೆ ಸ್ವಲ್ಪ ದೂರದವರೆಗೆ ಕರೆದುಕೊಂಡು ಹೋಗಿ, ಒಂದೆಡೆಯಲ್ಲಿ ಬೊಗಸೆಯ ಮಣ್ಣನ್ನು ಕಡ್ಡಿ ಸಮೇತ ಕೆಳಕ್ಕೆ ಹಾಕಿಸುತ್ತಾನೆ;
- ಆ ಸ್ಥಳದಲ್ಲೇ ಒಂದೆರಡು ಸುತ್ತು ನಿಂತಲ್ಲೇ ತಿರುಗಿಸಿ ಮತ್ತೆ ಹೋದ ಮಾರ್ಗದಲ್ಲೇ ಹಿಂದಕ್ಕೆ ಕರೆದು ತಂದು ಆಟ ಆರಂಭಿಸಿದ್ದ ಸ್ಥಳದಲ್ಲಿ ಮುಚ್ಚಿದ ಕಣ್ಣಿಂದ ಕೈಗಳನ್ನು ತೆಗೆದು, ನೂರು ಎಣಿಸುವಷ್ಟರಲ್ಲಿ ಕಡ್ಡಿಯನ್ನು ಹುಡುಕಿ ತರಲು ಹೇಳುತ್ತಾನೆ;
- ನಿಂತ ಕಡೆ ಕಣ್ಣು ಮುಚ್ಚಿ ತಿರುಗಿಸಿದ್ದ ಕಾರಣ ಆತನಿಗೆ ದಿಕ್ಕು ತಪ್ಪಿದಂತಾಗಿರುತ್ತದೆ; ಅಂದಾಜಿನ ಮೇಲೆ ಕಡ್ಡಿಯನ್ನು ಹುಡುಕಿ ತಂದರೆ ಮತ್ತೆ ಆಟ ಮುಂದುವರಿಯುತ್ತದೆ; ತರಲಾರದೆ ಸೋಲು ಒಪ್ಪಿಕೊಂಡರೆ, ಆ ಕಡ್ಡಿಯನ್ನು ಹಾಕಿದ ಸ್ಥಳದಿಂದ ಆಟ ಆರಂಭಿಸಿದ್ದ ಸ್ಥಳದವರೆಗೆ ಗೆದ್ದವನನ್ನು ಕೂಸುಮರಿ ಕಟ್ಟಿ ಹೊತ್ತುಕೊಂಡು ತರಬೇಕು; ಹೀಗೆ ಆಟ ವಿನೋದ ಪೂರ್ವಕವಾಗಿಯೂ ಮುಂದುವರಿಯುತ್ತದೆ;
- 'ಕೋಲ್‌ಕೂಚ್ನೆ' ಅಂದರೆ ಕೋಲಿನ ಚಿಕ್ಕ ತುಂಡು, ಚಿಕ್ಕ ಕೋಲು, ಕಡ್ಡಿ ಎಂದಿರಬಹುದು; ಕೋಲ್=ಕೋಲು(ತು)=ಬಡಿಗೆ, ದೊಣ್ಣೆ; 'ಕೊಚ್ನೆ' ರೂಪ ಸಂದಿಗ್ಧ; ತುಳುವಿನಲ್ಲಿ 'ಕೊಚ್ಚಿಲ್' ರೂಪ ಇದೆ; ಕೊಚ್ಚಿಲ್=ಚಿಕ್ಕದಾಗಿ ಕತ್ತರಿಸಲ್ಪಟ್ಟಿದ್ದು; ತುಂಡು ತುಂಡಾಗಿ ಕೊಚ್ಚಿದುದು(ತು.ನಿ); ಮಾವಿನಕಾಯಿ ಮೊದಲಾದುವುಗಳನ್ನು, ಸಣ್ಣದಾಗಿ ಕೊಚ್ಚಿ ಮಾಡಿದ ಉಪ್ಪಿನಕಾಯಿ(ಅದೇ); ಬಯಲುಸೀಮೆಯ 'ಉಪೂಪೆ/ಉಪ್ಪುಪ್ಪುಕಡ್ಡಿ ಆಟ'ವೂ ಚಿಕ್ಕ ಕಡ್ಡಿಯನ್ನು ಬಳಸಿ ಆಡುವ ಆಟವಾಗಿದೆ; ಕೋಲ್‌ಕೊಚ್ನೆ/ ಉಪ್ಪುಪ್ಪು ಕಡ್ಡಿ ಆಟ ಎಂದರೆ ಸಣ್ಣ ಕಡ್ಡಿಯನ್ನು ಅಥವಾ ಕೋಲಿನ ಸಣ್ಣ ತುಂಡನ್ನು ಬಳಸಿ ಆಡುವ ಆಟ ಎಂದು ಅರ್ಥೈಸಬಹುದೆಂದು ತೋರುತ್ತದೆ; `Kolkocne' means a small piece of a stick;
- 'ಕೊಚ್' ರೂಪ ತುಳುವಿನಲ್ಲಿ ಮೊರದಿಂದ ಧಾನ್ಯವನ್ನು ಕೇರಿ ಶುದ್ಧೀಕರಿಸು(ತು.ನಿ) ಎಂಬ ಅರ್ಥ ಕೊಡುತ್ತದೆ; ಮಣ್ಣಿನಲ್ಲಿ ಹುದುಗಿಸಿದ ಕಡ್ಡಿಯನ್ನು ಹೊರತೆಗೆಯುವ ಆಟ ಇದಾದುದರಿಂದ ಕೋಲ್‌ಕೊಚ್+ನೆ+ಆಟ=ಕೋಲ್‌ಕೊಚ್ನೆ ಆಟ; ಅಂದರೆ ಮಣ್ಣಿನಿಂದ ಕಡ್ಡಿಯನ್ನು ಬೇರ್ಪಡಿಸಿ/ ಹೊರತೆಗೆದು/ಪತ್ತೆಹಚ್ಚಿ, ಆಡುವ ಆಟ ಎಂದೂ ಆಗಬಹುದು.

ಕೋಲ್‌ಕೋಜ್ಯ kōlkōjya :

- ಒಂದು ಬಗೆಯ ಜೇನುಹುಳು ಮತ್ತು ಅದರ ತುಪ್ಪ; ಕೋಲುಜೇನು(ಮಂಡ್ಯ.ಜಿ); ಕೋಲ್‌ಕೊಜ್ಜ (ಉ.ಕ.ಜಿ); A type of honey bee and honey is `Kolujenu';
- ಈ ಜಾತಿಯ ಜೇನುನೊಣಗಳು ಮರದ ರೆಂಬೆಯ ಕಡ್ಡಿಗೆ, ಬೇಲಿಯ ಕಡ್ಡಿಗೆ ಗೂಡು ಕಟ್ಟಿ ತುಪ್ಪ(ಜೇನು) ಸಂಗ್ರಹಿಸಿ ಸಂತಾನಾಭಿವೃದ್ಧಿ ಮಾಡಿಕೊಳ್ಳುತ್ತವೆ; This type of honey bees build their beehive in twigs, on the hedges and they develop their progency;

- 'ಕೋಲ್‌ಕೋಜ್ಯ', 'ಕೋಲ್‌ಕೊಜ್ಜ' ತುಳು ರೂಪಗಳಿರಬಹುದು; ಕೋಲ್=ಕೋಲು; ಕಡ್ಡಿ; ಕೊಜ್ಜ=ನಪುಂಸಕ; ಖೋಜಾ– ಈ ಅರ್ಥ ಇಲ್ಲಿಗೆ ಹೊಂದುವುದಿಲ್ಲ; ತುಳುವಿನಲ್ಲಿ ಕೊಜಲ್/ಕೊಜಲೆ ರೂಪ ಇದೆ; ಅಂಟು, ಜಿಗಟು, ಅಂಟಾದ, ಜಿಗಟಾದ ಎಂದು ಅರ್ಥ; ಕೋಲಿನಲ್ಲಿ ಗೂಡು ಕಟ್ಟಿದ ಕೀಟಗಳು ಸಂಗ್ರಹಿಸಿದ ಅಂಟು ದ್ರವ, ಅಂದರೆ ತುಪ್ಪ('ಜೇನುತುಪ್ಪ' ಎಂಬ ಮಾತಿದೆ) ಎಂದು ಅರ್ಥಗ್ರಹಿಕೆ ಮಾಡಿಕೊಳ್ಳಬಹುದು;
- ಕೋಲ್+ಕೊಜಲ್=ಕೋಲ್‌ಕೊಜಲ್>ಕೋಲ್‌ಕೊಜ್ಲ್ >ಕೋಲ್‌ಕೊಜ್ಜ ಆಗಿರಬಹುದು; ಉಚ್ಚಾರಣಾ ವ್ಯತ್ಯಯದಿಂದ 'ಕೋಲ್‌ಕೋಜ್ಯ' ಆಗಿರುವುದೂ ಸಾಧ್ಯ.

ಕೋಲ್‌ಗುಮ್ಟೆ/ಕೋಲುಗುಮಟೆ kōlgumṭe/ kōlugumaṭe :

- ಒಂದು ವಾದ್ಯವಿಶೇಷ; ಚರ್ಮವಾದ್ಯ; ಗುಮ್ಟೆ/ ಗುಮಟೆ ಎಂಬುದರ ಮೂರು ವಿಧಗಳಲ್ಲಿ ಒಂದು; ಗುಮಟೆಪಾಂಗು, ಗುಮಟೆ ಇನ್ನೆರಡು ವಿಧಗಳು; A musical instrument made of leather(skin of monitor lizard);
- ಹಾಲಕ್ಕಿ ಒಕ್ಕಲಿಗರು ಕೋಲುಪದಗಳನ್ನು ಹಾಡುತ್ತ ನಡೆಸುವ ಸುಗ್ಗಿಯ ಕುಣಿತದಲ್ಲಿ ಈ ವಾದ್ಯವನ್ನು ಬಳಸುತ್ತಾರೆ; ಸುಮಾರು ಮೂರು ಅಡಿ ಉದ್ದ ಇರುತ್ತದೆ; ಮದ್ದಳೆಯಂತಿರುವ ಮಣ್ಣಿನ ಹೊಳವಿನ (ಹೊಳವು=ಕೊಳಗದ ಆಕಾರದ ನಳಿಕೆಯ ಎರಡೂ ತುದಿಗೆ ಚರ್ಮ ಬಿಗಿದು ಮಾಡುವ ಹರೆ, ದೋಣು ಮೊದಲಾದ ವಾದ್ಯಗಳು–ಉ.ಕ.ಜಿ) ಬಲಗಡೆಯ ತುದಿಗೆ ಮಾತ್ರ ಉಡದ ಚರ್ಮ ಬಿಗಿದಿರುತ್ತಾರೆ; ಎಡದ ತುದಿಯ ಬಾಯಿ ಗುಂಭದ ಬಾಯಿಯಷ್ಟು ಕಿರಿದಾಗಿದ್ದು ತೆರವಾಗಿರುತ್ತದೆ; ವಾದ್ಯ ಬಾರಿಸುವಾಗ ಎಡಗಡೆಯ ಈ ತೆರೆದ ಬಾಯಿಯನ್ನು ಕೈಯಿಂದ ಮುಚ್ಚಿ ತೆಗೆದು ಮಾಡುವುದರ ಮೂಲಕ ನಾದದಲ್ಲಿ ಏರಿಳಿತವನ್ನು ಸಾಧಿಸುತ್ತಾರೆ; ಕೋಲುಗುಮಟೆಯ ಜೊತೆ ಜಾಗಟೆ, ಕಂಸಾಳೆಗಳನ್ನು ಬಡಿಯುತ್ತಾರೆ; ಕೋಲುಗುಮಟೆಯಿಂದ ಹೊಮ್ಮುವ ನಾದ ಉಳಿದ ಗುಮಟೆ ವಾದ್ಯಗಳ ನಾದಕ್ಕಿಂತ ಬಿರುಸಾಗಿರುತ್ತದೆ (ಉ.ಕ.ಜಿ); Halakki vokkaligas use this musical instrument in their Kolupada singing; the instrument is three feet length and monitor lizard's skin is tied to the right side of the instrument; it is in tube shape which resembles Maddale; it accompanies Jagate, Kamsale and other instruments;
- ಕುಡುಬಿಯರ ಹೋಳಿ ಕುಣಿತ, ಮರಾಠಿಗರ ಗೋಂದೊಳು ಪೂಜೆ ಮೊದಲಾದ ಸಂದರ್ಭಗಳಲ್ಲಿಯೂ 'ಕೋಲ್‌ಗುಮ್ಟೆ'ಯನ್ನು ಬಾರಿಸಲಾಗುತ್ತದೆ; This instrument is used by Kudubis in `Holi dance' and Marathis `Gondolu pooje';
- ಗುಮಟೆ ಎಂಬ ವಾದ್ಯಗಳನ್ನು ಮಣ್ಣಿನಿಂದ ಮಡಕೆಯಾಕಾರದಲ್ಲಿ, ಮದ್ದಳೆಯನ್ನು ಹೋಲುವಂತೆ, ತಯಾರಿಸಲಾಗುತ್ತದೆ; ಕೋಲುಗುಮಟೆ ಉಳಿದ ಗುಮಟೆಗಳಿಗಿಂತ ಸಣ್ಣದಿದ್ದು ಕೋಲು ಅಥವಾ ಬಡಿಗೆಯಂತೆ ಉದ್ದಕ್ಕೆ ಕಾಣುವುದರಿಂದ 'ಕೋಲುಗುಮ್ಟೆ/ಕೋಲುಗುಮಟೆ' ಎಂದು ಕರೆದಿರಬಹುದು; ಕೋಲುಪದಗಳನ್ನು ಹಾಡುವ ಸಂದರ್ಭದಲ್ಲಿ ಬಾರಿಸುವ ಗುಮಟೆ ಎಂಬ ಕಾರಣಕ್ಕೂ ಹೀಗೆ ಕರೆದಿರಬಹುದು; Gumate is a pot shaped instrument of soil, it resembles Maddale in shape; it accompanies `Kolupada' songs so, it may be called `Kolugumte';
- 'ಗುಮಟೆ' ದೇಶೀ ಮೂಲದ ರೂಪ; ದ್ರಾವಿಡ ವರ್ಗದ ಭಾಷೆಗಳಲ್ಲಿ ಕುಮ್ಮಟಂ(ತ.), ಗುಮ್ಮಟೆ (ತು.), ಗುಮ್ಮೆಟ/ತ(ಮ.) ರೂಪಗಳಿವೆ;
- **ನೋಡಿ:** ಗುಮಟೆ.

ಕೋಲ್‌ಮೇಸ್ತ್ರಿ/ಕೋಲುಮೇಸ್ತ್ರಿ kōlmēstri/ kōlumēstri :

- ಅಧಿಕಾರವಿಲ್ಲದೆ ಯಜಮಾನಿಕೆ ನಡೆಸುವುದು(?); Behaving like a master or owner, possessor without power, master without power;
- ಮೇಸ್ತ್ರಿ=ಕೂಲಿ ಆಳುಗಳ/ಕೆಲಸಗಾರರ ಮುಖಂಡ; ಭೂ ಮಾಲೀಕರಿಗೆ, ಗುತ್ತಿಗೆದಾರರಿಗೆ, ಕಾಫಿತೋಟ ಮೊದಲಾದ ಪ್ಲಾಂಟೇಷನ್‌ಗಳ ಒಡೆಯರಿಗೆ,

ಕೈಗಾರಿಕೆಗಳ ಮಾಲೀಕರಿಗೆ, ಮನೆ ಕಟ್ಟುವವರಿಗೆ ಇತ್ಯಾದಿಗಳಿಗೆ ಕೆಲಸದ ಆಳುಗಳನ್ನು, ಕೂಲಿಕಾರರನ್ನು, ಕಾರ್ಮಿಕರನ್ನು ಒದಗಿಸುವ ಮಧ್ಯಸ್ತಿಕೆದಾರ/ಮುಖ್ಯಸ್ಥ; ಫೋರ್‌ಮನ್(ಇಂ); ಮೇಸ್ತರ್/ಮೇಸ್ತ್ರೆ(ಫ್ರೆಂಚ್); ಫ್ರೆಂಚ್ ಮೂಲದ ಪದ; A chief/head of workers/labourers; a kind of middle man one who supplies or arranges labourers for contractor, planters, land lords and builders(house);

- ಕೆಲಸಗಾರರ ಕೆಲಸದ ಮೇಲ್ವಿಚಾರಣೆ ಮಾಡುವವನು; One who supervises the works of labourers;
- 'ಅಧಿಕಾರವಿಲ್ಲದೆ ಯಜಮಾನಿಕೆ ನಡೆಸುವುದು' ಎಂದರೇನು? ಇಲ್ಲಿ 'ಅಧಿಕಾರ' ಎಂದರೆ ಸರ್ಕಾರಿ ಹುದ್ದೆ ತಂದುಕೊಡುವ ಅಧಿಕಾರ, ಆಫೀಸರ್‌ಗಿರಿ ಎಂದೇ ಅರ್ಥ; ಮೇಲೆ ಹೇಳಿದ ಮೇಸ್ತ್ರಿಗಾರಿಕೆ ಖಾಸಗಿ ಅಥವಾ ಖಾಸಾ ವಲಯದ್ದು; ಸರ್ಕಾರಿ ಹುದ್ದೆಯದಲ್ಲ; (ಸರ್ಕಾರಿ ಕಚೇರಿಗಳಿಗೆ, ಕಾರ್ಖಾನೆ ಮೊದಲಾದ ಸಾರ್ವಜನಿಕ ವಲಯಗಳಿಗೆ ದಿನಗೂಲಿ ನೌಕರರನ್ನೋ ಕಾರ್ಮಿಕರನ್ನೋ ಒದಗಿಸುವ ಖಾಸಗೀ ಏಜೆನ್ಸಿಗಳಿರುತ್ತವೆ); ಈ ಮೇಸ್ತ್ರಿಯೂ ಬಹುಮಟ್ಟಿಗೆ ಒಂದು ಕಾಲಕ್ಕೆ ಕೂಲಿ ಆಳಾಗಿದ್ದು ಆಮೇಲೆ ಯಜಮಾನಿಕೆ ನಡೆಸುವುದನ್ನು ಕಲಿತವನು; 'ಮೇಸ್ತ್ರಿ/ಕೋಲ್‌ಮೇಸ್ತ್ರಿ'ಯ ಈ ಪರಿಯನ್ನು ಈ ಅರ್ಥ ಬಣ್ಣಿಸುತ್ತಿದೆ ಎನಿಸುತ್ತದೆ;
- ಕೋಲ್/ಕೋಲು+ಮೇಸ್ತ್ರಿ(<ಮೇಸ್ತ್ರೆ)=ಕೋಲ್‌ಮೇಸ್ತ್ರಿ/ಕೋಲುಮೇಸ್ತ್ರಿ;
- ಮಣ್ಣು ಅಗೆಯುವುದು, ರಸ್ತೆ ಮಾಡುವುದು ಇತ್ಯಾದಿ ಕೆಲಸಗಳಲ್ಲಿ ಮಾಡಿದ ಕೆಲಸದ ಪ್ರಮಾಣವನ್ನು ಅಳೆಯಲು ಮೇಸ್ತ್ರಿ ಗಜಕಡ್ಡಿ ಅಥವಾ ನಿರ್ದಿಷ್ಟ ಅಳತೆಗೆ ಕತ್ತರಿಸಿ ಮಾಡಿದ ಅಳತೆಗೋಲನ್ನು ಹಿಡಿದುಕೊಂಡು ಓಡಾಡುವುದು ಸಾಮಾನ್ಯ; ಈ ಹಿನ್ನೆಲೆಯಲ್ಲಿ 'ಕೋಲ್‌ಮೇಸ್ತ್ರಿ/ಕೋಲುಮೇಸ್ತ್ರಿ' ರೂಪ ಚಾಲ್ತಿಗೆ ಬಂದಿರಬಹುದು; Mestri commonly carries as a measured stick to the spot where he supervise the works;
- 'ಕೋಲು' ಎಂಬ ದೇಸೀ ಪದದೊಡನೆ 'ಮೇಸ್ತ್ರಿ' ಎಂಬ ಅನ್ಯದೇಶ್ಯ ಮೂಲದ ಪದ ಸೇರಿ ಆದ ಸಂಯುಕ್ತ ರೂಪ ಇದು; Cf. ಗುಂಡುಪಿನ್ನು; **ನೋಡಿ:** ಮೇಸ್ತ್ರಿ.

ಕೋಲ kōla :

- ದಕ್ಷಿಣಕನ್ನಡ ಪ್ರದೇಶದಲ್ಲಿ ಭೂತಗಳೆಂದು ಕರೆಯಲಾಗುವ ದೈವಗಳಿಗೆ ವಾರ್ಷಿಕ ಆರಾಧನೆಯ ಅಥವಾ ಹರಕೆಯ ರೂಪದಲ್ಲಿ ನಡೆಯುವ ವೈಭವದ ಆಚರಣೆ; A glorious celebration in the form of offering or annual worshipping(adoration) bhuthas in South kannada region;
- ಭೂತಗಳಿಗೆ ಸಲ್ಲಿಸುವ ಸೇವೆ; ಭೂತಗಳ ಉತ್ಸವ; A service offering to Bhuthas; festival of Bhuthas;
- ಭೂತದ ವೇಷಧಾರಿಯು ಕುಣಿಯುವ ಕುಣಿತ; ಭೂತನರ್ತನ; ನಟನೆ, ಸೋಗು; ವೇಷ; ಒಂದು ಜನಪದ ಕುಣಿತ; ಭೂತದ ಕೋಲ; A dance step of man in the guise of Bhutha; dancing of Bhutha, act, pretend, guise; a folk dance, Kola of Bhutha;
- ಕೋಲೊ; ಕೋಳೊ; ತುಳುನಾಡಿನಲ್ಲಿ 'ಭೂತ'ಗಳಿಗೆ ವರ್ಷಾವಧಿ ಆರಾಧನೆಯ ಅಥವಾ ಹರಕೆಯ ರೂಪದಲ್ಲಿ ನಡೆಯುವ ವೈಭವೋಪೇತ ಉತ್ಸವದ ಆಚರಣೆ; ಮೊದಲು ಭೂತ ಪಾತ್ರಿಯ ಮೈಮೇಲೆ ಭೂತದ ಆವೇಶವಾಗಿ ಭೂತ ಹಾಗೂ ಭಕ್ತರ ನಡುವೆ ಸಂಭಾಷಣೆ ನಡೆಯುತ್ತದೆ; A grand festival celebrates in the form of service or offering to the Bhuthas in the parts of Tulunadu; the Bhutha observes the priest and gives a chance to have conversation with Bhutha and devotee;
- ಆಮೇಲೆ ಪರವ, ಪಂಬದ, ನಲಿಕೆ, ಕೋಪಾಳ ಮೊದಲಾದ ವರ್ಗದ ಕಲಾವಿದರು ಭೂತಕ್ಕೆ ನಿಗಧಿಯಾದ ವೇಷಭೂಷಣ, ಮುಖವರ್ಣಿಕೆ, ಶಿರೋಭೂಷಣ, ಪ್ರಭಾವಳಿಯ ರೂಪದ 'ಅಣಿ' ಮೊದಲಾದವುಗಳನ್ನು ಧರಿಸಿ, ವಿವಿಧ ನರ್ತನ ಮಾಡಿ ಭೂತವನ್ನು ಮೈಮೇಲೆ ಆವಾಹಿಸಿಕೊಳ್ಳುತ್ತಾರೆ; ದೈವ–ಮಾನವ ಸಂಭಾಷಣೆ ನಡೆದು ನರ್ತಕರು ಭಕ್ತರ ಶಾರೀರಿಕ, ಮಾನಸಿಕ,

ಸಾಮಾಜಿಕ ಸಮಸ್ಯೆ, ಅಹವಾಲುಗಳನ್ನು ವಿಚಾರಿಸಿ ಪರಿಹಾರ ಸೂಚಿಸುತ್ತಾರೆ(ತು.ನಿ);

- ಅಲಂಕಾರ, ಶೃಂಗಾರ ಮಾಡುವುದು; ರಂಗವಲ್ಲಿಯ ಸಿಂಧೂರ; ೨.ಭೂತಗಳಿಗೆ ಸಲ್ಲಿಸುವ ಸೇವೆ, –ಹರಕೆ, –ಉತ್ಸವ; ೩.ಭೂತದ ವೇಷವನ್ನು ಕಟ್ಟಿರುವವನು ಮಾಡುವ ಕುಣಿತ; ಭೂತ ನರ್ತನ; ೪.ನಟನೆ, ಸೋಗು, ವೇಷ; ೫.ಒಂದು ಬಗೆಯ ಸಾರ್ವಜನಿಕ ಮೆರವಣಿಗೆ; ೬.ವಿಚಿತ್ರವಾದ ವೇಷ; ಒಯ್ಯಾರ(ಕ.ನಿ);
- ದೈವ ಜಾತ್ರೆಯ ಪ್ರಭೇದ; ಅಲಂಕಾರ ಪ್ರರೂಪದ ಮೂಲಕ ನಡೆಸುವ ದೈವಗಳ ಸರಳ ಸ್ವರೂಪದ ಪ್ರದರ್ಶನ;
- ಭೂತ ವೇಷದ ಕಣಿಕವನ್ನು ಒಳಗೊಂಡ ಆರಾಧನೆಗೆ 'ಕೋಲ' ಎನ್ನುತ್ತಾರೆ; 'ನೇಮ' ಎಂತಲೂ ಕರೆಯುತ್ತಾರೆ(ಮಂ.ಜಿ);
- ಆಭರಣ, ಅಲಂಕಾರ; ವೇಷಧರಿಸುವುದು; ಭೂತ ನರ್ತನ; ಬೋರೆಹಣ್ಣು(ಕಿಟ್ಟೆಲ್); *ಪ್ರ: 'ಕಾಲಕ್ಕೆ ತಕ್ಕ ಕೋಲ'*(ಗಾ); A jewellery, dressing, guising, Bhutha dance, Bore Hannu (kittel);
- ಒಂದು ರೀತಿಯ ಸಸ್ಯ; A type of plant;
- ಕೋಲನ್ನು(ಮಂಡ್ಯ.ಜಿ); *ಪ್ರ: 'ಕೋಲ ತಕ್ಕೊಂಡು ಬಾರಿಸಿದ'*;
- ***—ಕೋಲಕಟ್ಟುನಿ*** : ಭೂತನರ್ತಕನು ವೇಷ, ಭೂಷಣಗಳ ಅಲಂಕಾರ ಮಾಡಿಕೊಂಡು ಭೂತದ ಆವಾಹನೆ ಮಾಡಿಕೊಳ್ಳುತ್ತಾನೆ; ನಂತರ ಅತಿರೇಕದಿಂದ ನರ್ತನ, ಕುಣಿತಗಳಿಂದ ಅಭಿನಯ ಮಾಡುವುದು; A man in bhutha guise dances with much rapture and over- excitement;
- ***—ಕೋಲಚಾರಿ*** : ಒಂದು ಬಗೆಯ ಕುಣಿತ; A kind of dance;
- ***—ಕೋಲಬಲಿ*** : ವರ್ಷಕ್ಕೊಮ್ಮೆ ಭೂತಗಳಿಗೆ ಕೊಡುವ ದೊಡ್ಡ ಭೋಗ; ಕೋಲದ ಆಚರಣೆಯಲ್ಲಿ ವರ್ಷಕ್ಕೆ ಒಮ್ಮೆ ಮಾಡುವ ಕೋಲ ಬಲಿ ಆಚರಣೆ ಮತ್ತು ನಿತ್ಯ ಮಾಡುವ ತಂಬಿಲದ ಆಚರಣೆ; An annual sacrifice for Bhutha during Kola celebration;
- ***—ಕೋಲಬಾರಿ*** : ಸೈನ್ಯದ ಸಂಘಟಕ; ಮುಖಂಡ(ದ.ಕ); An organizer of army, chief;
- ಯುದ್ಧ ವಿದ್ಯೆಯಲ್ಲಿ ಪರಿಣತ; An expert in the skills of war;
- ***—ಕೋಲಾಕಾಯಿ*** : ತೆಂಗಿನಕಾಯಿ; ದೈವ/ದೇವರ ಪೂಜೆಯಲ್ಲಿ ಬಳಕೆ; Coconut utilizes in the service of god;
- ಅಡುಗೆಗೆ ಬಳಕೆ; *ಪ್ರ: 'ಅವನು ಕೋಲಾಕಾಯಿ ಒಡೆದು ಒಂದು ಚೂರನ್ನು ನೆಲದ ಮೇಲೆ ಹಾಕಿದ'*; Coconut uses in cooking;
- ಕೋಲವೆಂಬ ದೇವರ/ಭೂತದ ಪೂಜೆಯಲ್ಲಿ ಬಳಸಿದ ಕಾಯಿ ಕೋಲಕಾಯಿ; ಉಚ್ಚಾರಣೆಯಲ್ಲಿ 'ಕೋಲಾಕಾಯಿ' ಆಗಿದೆ. A coconut used in Kola celebration.

ಕೋಲಂ kōlam :

- ಅಕ್ಕಿ ಹಿಟ್ಟಿನಿಂದ ಹಾಕುವ ರಂಗೋಲಿ; Rangoli(designed lines) pattern with rice flour on the floor;
- ತಮಿಳುನಾಡಿನಲ್ಲಿ ರಂಗೋಲಿಗೆ ಕೋಲಂ ಎನ್ನುವುದುಂಟು; In Tamilnadu Rangoli is called Kolam;
- ಅಕ್ಕಿಹಿಟ್ಟನ್ನು ನುಣ್ಣಗೆ ರುಬ್ಬಿ ಅರಿವೆ ಬತ್ತಿ ಮೂಲಕ ಬರೆಯುವ ರಂಗವಲ್ಲಿ; A kind of pattern on the floor made of grind rice flour;
- ಹೀಗೆ ಬಿಡಿಸಿದ ರಂಗೋಲಿ ತಿಂಗಳುಗಟ್ಟಲೆ ಹಾಳಾಗದೆ ಹಾಗೇ ಇರುತ್ತದೆ; This kind of Rangoli remains for months;
- **ನೋಡಿ**: ರಂಗೋಲಿ.

ಕೋಲಕ ಕೋಟೆ kōlaka kōṭe :

- ಪರ್ವತಮಯ ಪ್ರದೇಶ; Mountain region;
- ಬೆಟ್ಟ ಗುಡ್ಡಗಳಿಂದ ಕೂಡಿ ದುರ್ಗಮವಾಗಿರುವ ಪ್ರದೇಶ; A narrow hilly region;
- ಕೋಲಕ=ಒಂದು ಪರಿಮಳ ದ್ರವ್ಯ; ಆ ಪರಿಮಳ ದ್ರವ್ಯವನ್ನು ಕೊಡುವ ಗಿಡ; ತಕ್ಕೋಲದ ಗಿಡ; ಕರಿಮೆಣಸಿನ ಕಾಳು(ಕ.ನಿ); A fragranted liquid,

scent, fragrant shrub Takkola, black pepper;
- ಸಂಸ್ಕೃತ ಪದ; Sanskrit word;
- ಕೋಟೆ=ಒಂದು ಸೀಮೆಯ ಹೆಸರು(ಕ.ನಿ); ಎತ್ತರವಾದ, ಗಟ್ಟಿಯಾದ ಗೋಡೆ; ದುರ್ಗ; A name of a place, strong wall, citadel;
- 'ಕೋಟೆ' ದೇಶೀಪದ; ಕೋಟ(ಸಂ); ದ್ರಾವಿಡ ಮೂಲದಿಂದ ಸಂಸ್ಕೃತ ಪ್ರವೇಶಿಸಿದ ಪದಗಳಲ್ಲಿ ಕೋಟೆಯೂ ಒಂದಾಗಿರಬಹುದು; cf. ಕೋಣ್/ ಕೋಣ (=ಕೋನ); **ನೋಡಿ:** ಕೋಟೆ; Kote is a native word it may be derived from Dravidian origin into Sanskrit;
- 'ಕೋಲಕಕೋಟೆ' ಎಂದರೆ ತಕ್ಕೋಲದ ಗಿಡ/ಒಂದು ಬಗೆಯ ಪರಿಮಳ ದ್ರವ್ಯಯುಕ್ತ ಗಿಡ ಬೆಳೆಯುವ ಎತ್ತರದ ನಾಡು/ಪ್ರದೇಶ, ಕೋಲಕ ಬೆಳೆಯುವ ಮಲೆಸೀಮೆ ಎಂದಾಗುತ್ತದೆಯೆ?

ಕೋಲನ್ನೆ ಸೊಪ್ಪು kōlanne soppu :
- ಹೊಲಗಳಲ್ಲಿ ಕಳೆಯಂತೆ ಬೆಳೆಯುವ ಒಂದು ಜಾತಿಯ ಗಿಡ ಮತ್ತು ಅದರ ಸೊಪ್ಪು; A type of weed plant and its leaves;
- ಈ ಸೊಪ್ಪನ್ನು ಹುರುಳಿಕಾಳಿನ ಜೊತೆ ಬೆರಕೆ ಸೊಪ್ಪಿನಲ್ಲಿ ಸೇರಿಸಿ ಸಾರು, ಪಲ್ಯ ಮಾಡಲು ಬಳಸುತ್ತಾರೆ; It is used to prepare curry/ palya/sambar mixed leaves and horsegram;
- ಕೋಲಣಿ, ಕೋಲಪೊನ್ನೆ ರೂಪಗಳಿವೆ(ಕ.ನಿ); ಕೋಲ್+ಅಣಿ(<ಅಣ್ಣೆ); ಕೋಲಣ್ಣೆ ಎಂದೂ ಆಗಬಹುದು; ಕೋಲಣ್ಣೆ>ಕೋಲನ್ನೆ ಆಗುವುದು ಸಹಜ; ಣ, ನ, ಲ ಗಳ ವ್ಯತ್ಯಯ ಸಾಮಾನ್ಯ; ಏಕಸ್ಥಾನಿ/ದಂತ್ಯ ಸಮೀಪಿ ಅನುನಾಸಿಕ ವರ್ಣಗಳು;
- ಕೋಲಪೊನ್ನೆ>ಕೋಲಹೊನ್ನೆ>ಕೋಲೊನ್ನೆ/ಕೋಲನ್ನೆ ಆಗಿರುವುದೂ ಸಾಧ್ಯ; ಪ>ಹ ಆಗುವುದು, ಹ>Ø ಆಗುವುದು ಕನ್ನಡದಲ್ಲಿ ಇದ್ದೇ ಇದೆ; ಕೋಲಪೊನ್ನೆ=ನಾರಿಹೊನ್ನೆಗಿಡ; ಕೋಲಪೊನ್ನೆ/ ನಾರಿಹೊನ್ನೆಯಲ್ಲಿ ಪೃಶ್ನಿ ಪರ್ಣೀ, ಪೃಥಕ್ಪರ್ಣೀ, ಚಿತ್ರಪರ್ಣೀ, ಅಂಘ್ರಿಪರ್ಣಿಕಾ(ಸಂ) ಎಂದು ನಾಲ್ಕು ವಿಧಗಳನ್ನು ಹೇಳಲಾಗಿದೆ(ಕ.ನಿ.); ಪರ್ಣೀ ಅಥವಾ ಪರ್ಣಿಕಾ(ಸಂ) ಅಪಭ್ರಂಶವಾಗಿ ಇಲ್ಲಿ 'ಪೊನ್ನೆ' ಆಗಿದೆ ಎಂದು ತಿಳಿದರೆ ಕೋಲಪೊನ್ನೆ ಕೋಲನ್ನೆಗೆ ಸಾಂಸ್ಕೃತಿಕವಾಗಿ ದೂರಾನ್ವಯ ಎನಿಸುತ್ತದೆ;
- ಆದುದರಿಂದ ಕೋಲನ್ನೆ<ಕೋಲಣ್ಣೆ ಎಂದು ತಿಳಿಯುವುದೇ ಸರಿ; ಅಣ್ಣೇಗಿಡ ಕಡ್ಡಿಗಳನ್ನು ಜೋಡಿಸಿದಂತೆ ಉದ್ದಕ್ಕೆ ಬೆಳೆಯುವುದರಿಂದ 'ಅಣ್ಣೆ'ಯನ್ನೇ ಕೋಲಣ್ಣೆ(ಕೋಲು+ಅಣ್ಣೆ) ಎಂದು ಕರೆದಿರಬಹುದು; ಅಥವಾ ಕೋಲಣ್ಣೆ ಅಣ್ಣೇಸೊಪ್ಪಿನ ಗಿಡದಲ್ಲಿ ಒಂದು ಬಗೆ ಇರಬಹುದು.

ಕೋಲ ಪಟ್ಟೆ kōla paṭṭe :
- ಅಗಲ ಕಡಿಮೆ ಇರುವ ಉದ್ದವಾದ ಪಟ್ಟೆ ಹೊಲ; A narrow or lengthy field with less width;
- ಹೊಲ, ಗದ್ದೆಗಳ ಅಳತೆ ಬಗ್ಗೆ ಹೇಳುವಲ್ಲಿ ಬಳಕೆ; uses in measuring lands;
- ಪಟ್ಟೆ=ಸೀಳು; ಅಗಲ ಕಿರಿದಾಗಿದ್ದು ಉದ್ದುದ್ದಕ್ಕೆ ಹಿಸ್ಸೆ ಆಗಿರುವ ಅಥವಾ ರಚನೆಯಾಗಿರುವ ಹೊಲ-ಗದ್ದೆ; 'ಪಟ್ಟೇಹೊಲ/ಪಟ್ಟೇಗದ್ದೆ, ಮಾತುಗಳು ಬಳಕೆಯಲ್ಲಿವೆ;
- ಕೋಲಪಟ್ಟೆ=ಕೋಲು+ಪಟ್ಟೆ; ಕೋಲಿನಂತೆ ಉದ್ದವಾದ ಪಟ್ಟೇಭೂಮಿ. A land like a long stick.

ಕೋಲಾಂಬ್ರ kōlāmbra :
- ಸೂತ್ರದ ಬೊಂಬೆಯಾಟದ ಒಂದು ಸಾಧನ; ಬೊಂಬೆಯ ಸೂತ್ರಗಳನ್ನು ಕಟ್ಟಿದ ಹಿಡಿಕೆ; A handle or a device to tie the threads of puppet toys;
- ಗೊಂಬೆ ಕುಣಿಸಲು ಅದರ ತಲೆ, ಮಂಡಿ ಮತ್ತು ಹಸ್ತಗಳಿಗೆ ಮೂರು ಕರಿಯ ದಾರಗಳನ್ನು ಜೋಡಿಸಿ, ಅವುಗಳನ್ನು ಒಂದು ಬಿದಿರು ಕಡ್ಡಿಗೆ ಕಟ್ಟುತ್ತಾರೆ; ಸೂತ್ರದ ಬೊಂಬೆಯಾಡಿಸುವವನು ಆ ಕಡ್ಡಿಯನ್ನು ಎತ್ತಿ ಹಿಡಿದುಕೊಂಡು ಅದರ ಸೂತ್ರವನ್ನಾಡಿಸುವುದರ ಮೂಲಕ ಕೆಳಗಿನ ಗೊಂಬೆ ಆಡುವಂತೆ ಮಾಡುತ್ತಾನೆ; ಹೀಗೆ ಸೂತ್ರದ ಬೊಂಬೆಯಾಡಿಸುವ ಸೂತ್ರ ಕಟ್ಟಿದ ಕೋಲಿಗೆ ಕೋಲಾಂಬ್ರ ಎನ್ನುತ್ತಾರೆ. The puppet toys are tied to the bamboo sticks; this stick is called Kolambra.

ಕೋಲಾಟ kōlāṭa :
- ಕೋಲು(<ಕೋಲ್)+ಆಟ; Kolu+āṭa;

- ಇದು ಒಂದು ಜನಪದ ಕುಣಿತ; ಆಟಗಾರರು ಸುತ್ತುಗಟ್ಟಿ ನಿಂತು, ತಮ್ಮ ಕೈಗಳಲ್ಲಿ ಬಣ್ಣ ಬಣ್ಣದ ಚಿಕ್ಕ ಕೋಲುಗಳನ್ನು ಹಿಡಿದು ಪರಸ್ಪರ ಕೋಲು ಹೊಯ್ಯುತ್ತ, ಹಾಡುತ್ತ ಸುತ್ತು ತಿರುಗುವ ಒಂದು ಬಗೆಯ ಆಟ; ಕುಣಿತ; A type of folk dance; the folk players stand in circle with multi coloured sticks(2 for each) in hands; they touch the sticks one another along with a rhythmic song and steps;
- ಕೋಲು ಹುಯ್ಯುವಾಗ ಸುಮಾರು ಒಂದು ಅಡಿ ಉದ್ದದ ಬೈನೆ, ಕಾರೆ, ಗಂಟೆ ಗಣಿಗಲು ಮರಗಳಿಂದ ಮಾಡಿದ ಕೋಲುಗಳನ್ನು ಬಳಸುವುದು ವಾಡಿಕೆ;
- ಕಲಾವಿದರು ತಮ್ಮ ಎರಡೂ ಕೈಗಳಲ್ಲಿ ಕೋಲುಗಳನ್ನು ಹಿಡಿದು ಇನ್ನೊಬ್ಬರು ಹಿಡಿದ ಕೋಲುಗಳಿಗೆ ಹೊಯ್ಯುತ್ತಾ ಮಾಡುವ ಒಂದು ಜನಪದ ನೃತ್ಯ(ತು.ನಿ); A kind of folk dance form with coloured sticks in hand and dance; it involves both men and women dancing together;
- ೧.ಕೋಲುಗಳನ್ನು ಹೊಯ್ಯುತ್ತ ಸೇರಿ ಮಾಡುವ ಒಂದು ಬಗೆಯ ಆಟ; ಕೋಲು ಹಾಕುವ ಆಟ, – ಕುಣಿತ; ೨.ಬಾಣಗಳಿಂದ ಮಾಡುವ ಕಾದಾಟ (ಕೋಲ್+ಆಟ)(ಕ.ನಿ);
- ವಿಶೇಷವಾಗಿ ಮಕ್ಕಳು ಪರಸ್ಪರ ಕೈಗಳಲ್ಲಿ ಹಿಡಿದ ಕೋಲುಗಳಿಗೆ ಹೊಯ್ಯುತ್ತ ಒಬ್ಬರಾದ ಮೇಲೆ ಒಬ್ಬರು ನಿಧಾನವಾಗಿ ಚಲಿಸುತ್ತಾ ಆಡುವ ಒಂದು ಆಟ; Specially children perform this folk game;
- ೪ ರಿಂದ ೧೨ ಜನ ಕೋಲುಗಳನ್ನು ಒಂದಕ್ಕೆ ಒಂದು ಶಬ್ದ ಬರುವಂತೆ ತಾಗಿಸಿ, ಹಾಡಿನ ಮೂಲಕ ಸಮೂಹ ನೃತ್ಯ ಮಾಡುವ ಸಂಪ್ರದಾಯ; ಹಲವು ಪ್ರಕಾರಗಳಲ್ಲಿ ಮನರಂಜನೆ ನೀಡುವ ಕಲೆ;
- ಹುಡುಗರು ಹಾಗೂ ಹುಡುಗಿಯರ ಗುಂಪು ಎದುರಾಗಿ ನಿಂತು ನರ್ತಿಸುವ ಅಥವಾ ಹುಡುಗಿಯರು ಮಾತ್ರವೇ ನರ್ತಿಸುವ ದಕ್ಷಿಣ ಭಾರತದ ಉತ್ಸವಗಳ ಒಂದು ಕೋಲು ನೃತ್ಯ; In this folk dance there are four(4) to (12)twelve players participate in dancing and singing; usually the boys and girls dance in the group; it is an entertaining folk dance in South Indian festivities;
- ಜನಪದ ಪ್ರದರ್ಶನಾತ್ಮಕ ಕಲೆಗಳಲ್ಲಿ ಒಂದು; ೬ ರಿಂದ ೮ ಜನರು ವಿಶೇಷ ಗೆತ್ತುಗಳ ಮೂಲಕ ಕೋಲುಗಳನ್ನು ಲಯಬದ್ಧವಾಗಿ ಬಡಿಯುತ್ತಾ ಕುಣಿಯುವರು; ಚಿನಕೋಲಾಟ; A kind of folk art; 6 to 8 people dance and beat the sticks rhythmically;
- ಕನಿಷ್ಠ ೮ ರಿಂದ ೨೪ ಜನರು ಕೋಲಾಟವಾಡುವುದುಂಟು; ಹಾಡು ಹಾಡುತ್ತ ಹಲಿಗೆ ಬಾರಿಸುವ ಗತ್ತಿನಿಂದ ಎರಡೂ ಕೈಗಳಲ್ಲಿ ಸಣ್ಣ ಕೋಲುಗಳನ್ನು ಹಿಡಿದು ಕೆಳಗೆ ಮೇಲೆ ಬಡಿಯುತ್ತಾ ಎರಡು ಸಾಲಾಗಿ ಹೆಜ್ಜೆ ಹಾಕುತ್ತಾ ಆಡುವ ಆಟ; ಹೆಂಗಸರೂ ಕೂಡ ಚಿನ ಕೋಲಾಟ ಆಡುವರು, ಆದರೆ ವಿರಳ; ಪ್ರಧಾನವಾಗಿ ಇದು ಗಂಡಸರ ಆಟವಾಗಿದ್ದು ಸಮೂಹದ ಆಟವಾಗಿದೆ; 'ಚಿನಕೋಲ ಮಜಲು' ಎಂದು ಕರೆಯುವುದೂ ಉಂಟು; ಜಾತ್ರೆಗಳಲ್ಲಿ, ಅಲ್ಲದೇವರ ಡೋಲಿಗಳ ಮುಂದೆ ಚಿನಕೋಲಾಟ ಆಡುತ್ತಾರೆ;
- ಇದೊಂದು ಕ್ರೀಡಾ ಮನೋಭಾವದಿಂದ ಕೂಡಿದ ಮನರಂಜನಾತ್ಮಕ ಜನಪದ ಕಲೆ; ಕೋಲುಗಳನ್ನು ಬಳಸಿ ಆಡುವ ಆಟವಾಗುರುವುದರಿಂದ 'ಕೋಲಾಟ'ವೆಂದು ಕರೆಯುವುದು ವಾಡಿಕೆ; ಸುಗ್ಗಿಯ ಕಾಲದಲ್ಲಿ, ಹಬ್ಬಗಳಲ್ಲಿ ಹೆಚ್ಚು ಕಂಡುಬರುವ ಈ ಆಟದಲ್ಲಿ ಹಾಡು ಮತ್ತು ಕುಣಿತ(ನೃತ್ಯ)ಗಳ ಸಮ್ಮಿಲನಗೊಂಡಿದೆ; ಗ್ರಾಮೀಣರಲ್ಲಿ ಅಪಾರ ಮೆಚ್ಚುಗೆಗೆ ಪಾತ್ರವಾಗಿರುವ ಈ ಆಟವು ವಿಶೇಷ ಮನರಂಜನ ಕಲೆಯಾಗಿ ಗಮನ ಸೆಳೆಯುತ್ತದೆ; A kind of sportive and also entertaining folk art; in the rural areas during harvest season we can see `Kolata';
- ಈ ಕಲೆ ಭಾರತದಲ್ಲಿ ಕರ್ನಾಟಕ, ಕೇರಳ ಹಾಗೂ ತಮಿಳುನಾಡುಗಳ ದಕ್ಷಿಣ ಭಾಗಗಳಲ್ಲಿ ಹೆಚ್ಚಾಗಿ ರೂಢಿಯಲ್ಲಿರುವುದರಿಂದ ಇದನ್ನು 'ದ್ರಾವಿಡ ಕಲೆ' ಎಂಬುದಾಗಿ ಕರೆಯುವುದುಂಟು; This art is very popular in the southern states such as Kerala, Karnataka and Tamilnadu; so, this art is known as `Dravida art';

- ಕೋಲಾಟದಲ್ಲಿ ಕೋಲುಗೂಟಗಳು, ಗೆಜ್ಜೆ, ತಾಳ, ದಮ್ಮಡಿ, ಮರಗಾಲು, ಕೋಲಾಟದ ಆಳುಗಳು ಹಾಗೂ ಹಾಡನ್ನು ಹಾಡುವ ಹಿಮ್ಮೇಳದವರು ಪ್ರಮುಖವಾಗಿ ಇರಬೇಕಾಗುತ್ತದೆ;
- ಕೋಲಾಟಕ್ಕೆ ೮ ರಿಂದ ೨೪ ಆಳುಗಳವರೆಗೆ ಬೇಕಾಗುತ್ತದೆ; Kolata requires 8 to 24 members;
- ಕೋಲು ಕೊಡಲು ಮತ್ತು ಕುಣಿಯಲು ಅನುಕೂಲವಾಗಿರಬೇಕಾದರೆ ೮ ರಿಂದ ೧೦ ಮಂದಿ ಸಾಕು ಎಂಬ ಅಭಿಪ್ರಾಯವಿದೆ;
- ಕೋಲಾಟದ ಕೋಲುಗಳನ್ನು ಕಾರೆ, ಗಂಟೆ ಕಣಗಲು ಹಾಗೂ ಬೈನೆ ಮರಗಳಿಂದ ತಯಾರಿಸುತ್ತಾರೆ; ಈ ಮರಗಳಿಂದ ತಯಾರಿಸಿದ ಕೋಲುಗಳಿಂದ 'ಕಣಿ ಕಣಿ' ಎಂಬ ನಾದ ಹೊರಹೊಮ್ಮುತ್ತದೆ; ಗ್ರಾಮೀಣ ಪ್ರದೇಶಗಳಲ್ಲಿ ಬೈನೆ ಮರ ಸಿಗುವುದು ಅಪರೂಪವಾದ್ದರಿಂದ ಕಾರೆ ಹಾಗೂ ಗಂಟಿಕಣಿಗಲು ಮರಗಳನ್ನೇ ಕೋಲು ತಯಾರಿಕೆಗೆ ಹೆಚ್ಚಾಗಿ ಬಳಸುತ್ತಾರೆ; ಮಲೆನಾಡಿನ ಭಾಗಗಳಲ್ಲಿ ಶ್ರೀಗಂಧ(ಆದರೆ ಈಗ ಕಡಿಯುವ ಹಾಗಿಲ್ಲ), ಕೊಡಸು, ಕಾರಿ, ಬಗಿನೆ, ಅರ್ಚಟಿ, ಗೊರಬಳೆ, ಹೊನ್ನೆಮರಗಳ ಕೋಲು ಬಳಸುತ್ತಾರೆ; ಬಯಲು ಸೀಮೆಯಲ್ಲಿ ಅಂಕೋಲೆ, ಬ್ಯಾಟೆ, ಗಟ್ಟಿ ಬಿದಿರು, ಕಾರೆ(ಪೊದೆ), ಕಗ್ಗಲಿ, ಸೀಬೆ, ಹಾಲೆ, ಚಂದಳಿಕೆ, ಜಾಲಿ ಮೊದಲಾದ ಮರಗಳಿಂದ ಕಡಿದ ಕೋಲು ಬಳಸುತ್ತಾರೆ;
- ಕೋಲುಗಳು ಒಂದು ಅಂಗುಲ ದಪ್ಪ, ಒಂದು ಅಡಿ ಉದ್ದವಿರುತ್ತವೆ; ಇವುಗಳಿಗೆ ಬಣ್ಣ ಹಾಕಿ ಸಿದ್ಧಪಡಿಸುವುದೂ ಉಂಟು;
- ಕೋಲುಗಳ ಕಣಿಕಣಿ/ಖಣಿಲ್ ಖಣಿಲ್ ಶಬ್ದದ ಜೊತೆಗೆ ಕಲಾವಿದರು ತಮ್ಮ ಕಾಲುಗಳಿಗೆ ಕಟ್ಟಿಕೊಳ್ಳುವ ಗೆಜ್ಜೆಯ ಧ್ವನಿ ಕೂಡಿ ಅವರಿಗೆ ಒಂದು ರೀತಿಯ ಆವೇಶ, ಸ್ಫೂರ್ತಿಯನ್ನು ಉಂಟುಮಾಡುತ್ತವೆ; ತಾಳ ಮತ್ತು ದಮ್ಮಡಿಗಳನ್ನು ಪಕ್ಕದಲ್ಲಿ ಕುಳಿತ ಪರಿಣತರು ಹೆಜ್ಜೆಯ ಗತ್ತಿಗೆ, ಕೋಲಿನ ಶಬ್ದಕ್ಕೆ ಪೂರಕವಾಗಿ ನುಡಿಸುವುದುಂಟು; ಇದು ಆಟವನ್ನು ಮತ್ತಷ್ಟು ರಂಗೇರುವಂತೆ ಮಾಡುತ್ತದೆ;
- ಕೋಲಾಟದಲ್ಲಿ ಪ್ರಧಾನವಾಗಿ ಎರಡು ಬಗೆಗಳಿವೆ: ಅ)ನಾಡಕೋಲು; ಆ)ಕೊರಮರ ಕೋಲು; In Kolata there are two kinds (a)Nada kolu (b)Korama kolu
- ನಾಡಕೋಲು ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿರುವಂತಹದ್ದು; ಕೊರಮರ ಕೋಲು ಇತ್ತೀಚೆಗೆ ಚಲಾವಣೆಗೆ ಬಂದಿರುವಂತಹದ್ದು; ಪುರಾತನ ಕಾಲದಿಂದಲೂ ಅಸ್ತಿತ್ವದಲ್ಲಿರುವ ನಾಡಕೋಲುಗಳಲ್ಲಿ ಹಲವು ಬಗೆಗಳಿವೆ; ಅವುಗಳೆಂದರೆ– ೧.ಗೀಜಗನ ಕೋಲು, ೨.ಬಾಗ್ಗೋಲು, ೩.ಜೋಡ್ಗೋಲು(ಚಿತ್ತಾರ ಗೊಂಬೆ ಕೋಲು), ೪.ಹರೊಗೋಲು, ೫.ತೇರುಕೋಲು ೬.ಜಡೆಕೋಲು, ೭. ಸೋಬಾನೆ/ಸೋಬಾನದ ಕೋಲು, ೮.ದಂಡೆ ಕೋಲು, ೯.ಕರಿಬಂಟನ ಕೋಲು, ೧೦.ಸುತ್ಕೋಲು, ೧೧.ನಿಲ್‌ಕೋಲು/ ವಾದದ ಕೋಲು, ೧೨. ಉಯ್ಯಾಲೆ ಕೋಲು, ೧೩.ಹಾರ್‌ಗಟಕು ಕೋಲು, ೧೪. ತಾಳ್‌ಗಟಕು ಕೋಲು, ೧೫.ಮನೆಕೋಲು(ಒಂದು ಮನೆ ಕೋಲು, ಎರಡು ಮನೆ ಕೋಲು), ೧೬.ಕಾಲು ಸಂದಿನ ಕೋಲು, ೧೭.ಬೆನ್ಗೋಲು, ೧೮.ಗೀರ್ಕೋಲು, ೧೯.ಒಂಟ್ಕಡ್ಡಿ, ೨೦.ಹಾರ್ಗಡ್ಡಿ, ೨೧.ಗಣೇಶಸ್ತುತಿ ಕೋಲು, ೨೨.ಕಟ್ಟಿಗೆ ಕೋಲು, ೨೩.ಕುಕ್ಕರಗಾಲು ಕೋಲು, ೨೪.ಚಕ್ಕೆಕೋಲು, ೨೫.ಜೀರುಕೋಲು, ೨೬.ನೀರುಕೋಲು, ೨೭.ಚೆಂಡಾಡುವ ಕೋಲು, ೨೮.ಚಿತ್ತಾರದ ಕೋಲು, ೨೯.ಕೊರವಂಜಿಕೋಲು; ಇತ್ಯಾದಿ ಬಗೆಗಳು ಕೋಲಾಟದಲ್ಲಿ ಕಂಡು ಬರುತ್ತವೆ;
- ಆಟಗಾರರು ತಮ್ಮೆರಡು ಕೈಗಳಲ್ಲಿನ ಕೋಲುಗಳಿಂದ ಒಂದಕ್ಕೊಂದು ಹೊಡೆಯುತ್ತಾ ವೃತ್ತಾಕಾರವಾಗಿ ಸುತ್ತುವುದನ್ನು 'ಸುತ್ತುಕೋಲು' ಎನ್ನುತ್ತಾರೆ; ಈ ರೀತಿಯ ಕೋಲಾಟಕ್ಕೆ ವಿಶ್ರಾಂತಿ ಆಟವೆಂದು ಕರೆಯುತ್ತಾರೆ;
- ತಲೆಯ ಮೇಲೆ ಎತ್ತಿದ ತಮ್ಮ ಕೋಲುಗಳಿಂದ ಇತರರ ಕೋಲುಗಳಿಗೆ ಹೊಡೆದರೂ ಹೊಡೆಯದಿರುವಂತೆ ತೋರಿ ಹಾರುತ್ತಾ ಸುತ್ತುವುದಕ್ಕೆ 'ಹಾರ್‌ಗಟಕು' ಎಂದು ಕರೆಯುವರು; ಆಟಗಾರರಲ್ಲಿ ಅರ್ಧ ಜನ ಹಿಂದಕ್ಕೆ ಬಾಗಿ, ಉಳಿದರ್ಧ ಜನ ಅವರ ಮೇಲೆ ಬಾಗಿದಂತೆ ಇದ್ದು ಕೋಲು ಹೊಯ್ಯುವ ಪರಿ ನೋಡಲು ತೇರಿನಂತೆ

ತೋರುವುದರಿಂದ ಇದನ್ನು 'ತೇರುಗೋಲು' ಎನ್ನುತ್ತಾರೆ;

ಮನೆಕೋಲು ವಿಧಾನದಲ್ಲಿ ಆಟಗಾರರ ಮನೆಯನ್ನು ದಾಟಿ ಕೋಲು ಕೊಡುವುದಕ್ಕೆ ಒಂದು ಮನೆ ಕೋಲೆಂದು, ಇಬ್ಬರನ್ನು ದಾಟುತ್ತಾ ಕೋಲು ಕೊಡುವ ವಿಧಾನವನ್ನು ಎರಡು ಮನೆ ಕೋಲೆಂದೂ ಕರೆಯುವರು;

- ಕೋಲಾಟದಲ್ಲಿ ಒಂದು ವಿಶಿಷ್ಟ ಬಗೆಯ ಆಟವೆಂದರೆ ಜಡೆಕೋಲು; ಭಾಗವಹಿಸುವ ಆಟಗಾರರು ಸರಾಗವಾಗಿ ಸುತ್ತಾಡಲು ಅನುಕೂಲವಾಗುವಂತಹ ಜಾಗವನ್ನು ಬಿಟ್ಟು, ಎದುರು ಬದುರಾಗಿ ಎತ್ತರದ ಎರಡು ಮರಗಳ ಮೇಲೆ ಸುಮಾರು ಹನ್ನೆರಡು ಅಡಿ ಎತ್ತರದಲ್ಲಿ ಅಡ್ಡವಾಗಿ ಒಂದು ದೊಡ್ಡ ಗಳು ಅಥವಾ ಮರದ ಸರವನ್ನು ಕಟ್ಟುತ್ತಾರೆ; ಭಾಗವಹಿಸುವ ಆಟಗಾರರ ಸಂಖ್ಯೆಗನುಗುಣವಾಗಿ(ಇದು ೧೨, ೧೬ ಇಲ್ಲವೆ ೧೮ ಆಗಿರಬಹುದು) ಉದ್ದದ ಹಗ್ಗಗಳನ್ನು ತೆಗೆದುಕೊಂಡು ಒಂದು ತುದಿಯನ್ನು ಒಂದು ಹಗ್ಗದಿಂದ ಕಟ್ಟಿ ಅದನ್ನು ಮೇಲ್ಭಾಗದ ಗಳುವಿನ ಮಧ್ಯಕ್ಕೆ ಕಟ್ಟುವರು; ಇಳಿಬಿದ್ದ ಹಗ್ಗಗಳ ಮತ್ತೊಂದು ತುದಿಯನ್ನು ಪ್ರತಿಯೊಬ್ಬ ಕಲಾವಿದರೂ ಒಂದೊಂದು ಹಗ್ಗದ ತುದಿ ಹಿಡಿದು ತಮ್ಮ ಸೊಂಟಕ್ಕೆ ಕಟ್ಟಿಕೊಳ್ಳುತ್ತಾರೆ; ಕೋಲು ಹೊಯ್ಯುತ್ತಾ, ಹಾಡಿನ ಗತ್ತಿಗೆ ಹೆಜ್ಜೆ ಹಾಕುತ್ತಾ ಎಚ್ಚರಿಕೆಯಿಂದ ಆಟಗಾರರನ್ನು ದಾಟುತ್ತಾ ತಿರುಗುವ ಮೂಲಕ ಕಲಾತ್ಮಕವಾಗಿ ಮೇಲಿನಿಂದ ಹಗ್ಗಗಳು ಜಡೆಯಂತೆ ಹೆಣಿಗೆಯಾಗುತ್ತಾ ಬರುತ್ತದೆ; ಎಲ್ಲಿಯೂ ವ್ಯತ್ಯಾಸವಾಗದೆ, ಗಂಟು ಕಟ್ಟಿಕೊಳ್ಳದೆ ನಯವಾಗಿ ಒಂದು ಸುಂದರವಾದ ಜಡೆ ಉದ್ದವಾಗಿ ಹೆಣಿಗೆಯಾಗಿ ಸಿದ್ಧಗೊಳ್ಳುತ್ತದೆ; ನಂತರ ಹೆಣಿಗೆಯಾದ ಜಡೆಯನ್ನು ಬಿಡಿಸುವ ಆಟ ಆರಂಭವಾಗುತ್ತದೆ; ಮತ್ತೊಂದು ಗೀತೆಯನ್ನು ಹಾಡುತ್ತಾ, ಕೋಲು ಹೊಯ್ಯುತ್ತಾ ಹಿಮ್ಮುಖವಾಗಿ ಚಲಿಸಿ ಜಡೆ ಬಿಡಿಸತೊಡಗುತ್ತಾರೆ; ಜಡೆ ಬಿಚ್ಚುವಾಗಲೂ ಕೂಡ ತಪ್ಪು ಹೆಜ್ಜೆ ಹಾಕುವುದಿಲ್ಲ; ಹಗ್ಗದ ಜಡೆ ಸುಲಲಿತವಾಗಿ ಬಿಚ್ಚಿಕೊಳ್ಳುವ ಪರಿ ಅತ್ಯಾಕರ್ಷಕವಾದುದು; ಕಲಾವಿದರ ಕೈಯ ಕೋಲಿನ ಲಯಬದ್ಧ ಶಬ್ದದೊಡನೆ, ಎಲ್ಲಿಯೂ ಕತ್ತೆತ್ತಿ ಹಗ್ಗದ ಜಡೆ ನೋಡದೆ ತಮ್ಮ ಪಾಡಿಗೆ ತಾವು ಗತ್ತಿನಿಂದ ಹೆಜ್ಜೆ ಹಾಕುತ್ತಾ ಜಡೆ ಬಿಚ್ಚುವ ಪರಿ ಮೋಹಕವಾದುದು; ಜಡೆ ಕೋಲಾಟ ನೋಡುಗರ ಕಣ್ಣಲ್ಲಿ ಅಚ್ಚರಿ ಮೂಡಿಸುತ್ತದೆ; A special kind of Kolata is Jade Kolata which means plait kolata; people here jumble themselves holding long rope; this jumbling forms a plait; there are many types of jade kolata including fishtail';
- ಮತ್ತೊಂದು ವಿಶೇಷ ರೀತಿಯ ಆಟವೆಂದರೆ ಗೀಜುಗನ ಕೋಲು; ಇದರಲ್ಲಿ ಕಲಾವಿದರು ತಮ್ಮ ಎರಡೂ ಕೈಗಳಲ್ಲಿ ಜೋಡಿಸಿಕೊಂಡಿರುವ ಕೋಲುಗಳನ್ನು ಎಡಗಡೆಗೊಂದು ಬಾರಿ, ಬಲಗಡೆಗೊಂದು ಬಾರಿ ಕೊಟ್ಟು ಮೂರನೆಯ ಏಟಿಗೆ ಎರಡೂ ಕೈಗಳನ್ನು ಮೇಲಕ್ಕೆತ್ತಿ ಹೊಡೆದು ಎಡದಲ್ಲಿದ್ದವನು ಬಲಗಡೆಗೂ, ಬಲದಲ್ಲಿದ್ದವನು ಎಡಗಡೆಗೂ ವೃತ್ತಾಕಾರವಾಗಿ ಸುತ್ತುತ್ತಾ ಆಟ ಸಾಗುವುದು ಇದರ ವೈಶಿಷ್ಟ್ಯವಾಗಿದೆ;
- ಕಾಲುಸಂದಿನ ಕೋಲು ಒಂದು ಬಗೆಯ ವಿಚಿತ್ರ ಆಟ; ಇರುವ ಆಟಗಾರರಲ್ಲಿ ಇಬ್ಬಿಬ್ಬರು ಆಟಗಾರರು ಎದುರು ಬದುರಾಗಿ ನಿಂತುಕೊಂಡು, ಪ್ರತಿಯೊಬ್ಬನೂ ಮೊದಲು ತನ್ನ ಎಡಗಾಲನ್ನು ಮೇಲೆತ್ತಿ ಅಲ್ಲಿ ಎರಡೂ ಕೈಗಳ ಕೋಲು ಹೊಡೆಯುವನು; ಅನಂತರ ಬಲಗಾಲನ್ನು ಮೇಲೆತ್ತಿ ಅಲ್ಲಿ ಎರಡೂ ಕೈಗಳಲ್ಲಿನ ಕೋಲು ಹೊಡೆಯುವನು; ಹೀಗೆ ಹೊಡೆದ ಮೇಲೆ ಸ್ವಲ್ಪ ಮುಂದಕ್ಕೆ ನೆಗೆದು ಮತ್ತೊಬ್ಬನಿಗೆ ಕೋಲು ಕೊಡುವನು; ಈ ರೀತಿಯ ಆಟ ಪುನರಾವರ್ತನೆಗೊಂಡು ಆಟ ಮುಗಿಯುವವರೆಗೆ ಸಾಗುತ್ತದೆ; ಇದು ನೋಡುಗರಿಗೆ ಮನೋರಂಜಕವಾಗಿರುತ್ತದೆ;
- ಕೋಲಾಟದಲ್ಲಿ 'ಉಯ್ಯಾಲೆ ಕೋಲು' ಸುಂದರ ಚಲನೆಯಿಂದ ಕೂಡಿದೆ; ಇದರಲ್ಲಿ ಆಟಗಾರರು ಮೊದಲು ವೃತ್ತಾಕಾರದಲ್ಲಿ ನಿಂತು ಎಡಕ್ಕೊಮ್ಮೆ, ಬಲಕ್ಕೊಮ್ಮೆ ಕೋಲು ಕೊಡುತ್ತಿರುತ್ತಾರೆ; ಅನಂತರ ಮಧ್ಯದಲ್ಲಿ ನಾಲ್ಕು ಜನ ಎದುರೆದುರಾಗಿ, ಉಳಿದ ನಾಲ್ಕು ಜನ ಅಕ್ಕಪಕ್ಕದಲ್ಲಿ ನಿಂತು ಕೋಲು ಕೊಡುವರು; ನಂತರದಲ್ಲಿ ಅಕ್ಕಪಕ್ಕದಲ್ಲಿದ್ದವರು ಮಧ್ಯಕ್ಕೂ, ಮಧ್ಯದಲ್ಲಿದ್ದವರು ಅಕ್ಕಪಕ್ಕಕ್ಕೂ ಸರಿಯುವರು; ಹೀಗೆ ವೇಗವಾದ ಚಲನೆ

ನಿರಂತರವಾಗಿ ನಡೆಯುವಾಗ ನೋಡುವವರಿಗೆ ಉಯ್ಯಾಲೆಯ ಚಿತ್ರ ಕಣ್ಣಿಗೆ ಕಟ್ಟಿದಂತಾಗುತ್ತದೆ; `Uyyale kolata' is very beautiful; in this Kolata the players in the circle touch their sticks from left side to right; here, the players change their places in the shape of swinging;

- ಸ್ಪರ್ಧಾತ್ಮಕ ನೆಲೆಯಲ್ಲಿ ನಡೆಯುವ ಕೋಲಾಟ ವಾದದ ಕೋಲಿನ ವೈಶಿಷ್ಟ್ಯವಾಗಿದೆ; ಇದನ್ನು 'ನಿಲ್ ಕೋಲ್' ಎಂದು ಕೂಡ ಕರೆಯುತ್ತಾರೆ; ಆಟಗಾರರು ಸಮಭಾಗವಾಗಿ ನಿಂತು ಪ್ರಶ್ನಾರ್ಥಕವಾದ ಸವಾಲ್–ಜವಾಬ್ ರೀತಿಯ ಹಾಡುಗಳನ್ನು ಹಾಡುವುದರೊಂದಿಗೆ ಆಕರ್ಷಕವಾದ ಭಂಗಿಯಲ್ಲಿ ಒಬ್ಬರನ್ನೊಬ್ಬರು ಅಟ್ಟಿಸಿಕೊಂಡು ಹೋಗುವುದು ಈ ಆಟದ ವೈಖರಿ; ಈ ಆಟದಲ್ಲಿ ಕೋಲುಗಳು ಮೌನವಾಗಿದ್ದು ಹಾಡು ಮತ್ತು ನಡಿಗೆ ಮುಖ್ಯವಾಗಿರುತ್ತವೆ;
- ಕೋಲಾಟ ಮುಕ್ತಾಯವಾಗುವ ಹಂತದಲ್ಲಿ 'ಕೊರವಂಜಿ ಕೋಲು' ಆಡುತ್ತಾರೆ; ಮಂಡ್ಯ ಜಿಲ್ಲೆಯಲ್ಲಿ ವ್ಯಾಪಕವಾಗಿ ಕಂಡುಬರುವ 'ಕೊರವಂಜಿ ಕೋಲಾಟ' ವಿಶೇಷವಾದ ಆಕರ್ಷಣೆ ಹಾಗೂ ಜನಮನ್ನಣೆಗಳನ್ನು ಗಳಿಸಿಕೊಂಡಿರುವ ಕಲೆಯಾಗಿದೆ; ಜೊತೆಗೆ ಮೈಸೂರು, ಬೆಂಗಳೂರು, ಹಾಸನ, ತುಮಕೂರು, ಚಿತ್ರದುರ್ಗದ ಕೆಲವು ಭಾಗಗಳಲ್ಲಿ ಈ ಕಲೆ ಕಂಡುಬರುತ್ತದೆ; ಈ ಕಲೆಯಲ್ಲಿ ಹಾಡು ಮತ್ತು ಕುಣಿತದೊಂದಿಗೆ ಸಂಭಾಷಣೆಯೂ ಮುಪ್ಪುರಿಗೊಂಡು ನೃತ್ಯರೂಪಕದ ಹಾಗೆ ಮನರಂಜಿಸುವುದರಲ್ಲಿ ಎರಡು ಮಾತಿಲ್ಲ;
- ಕೊರವಂಜಿ ಕೋಲಾಟದಲ್ಲಿ ಶ್ರೀಕೃಷ್ಣ ಮತ್ತು ಸತ್ಯಭಾಮಾಳ ನಡುವಣ ಕಥೆಯೇ ಪ್ರಮುಖ ಆಕರ್ಷಣೆಯಾಗಿದೆ; ಸತ್ಯಭಾಮಾ ಸ್ವರ್ಗದಲ್ಲಿದ್ದ ಪಾರಿಜಾತ ಗಿಡವನ್ನು ಭೂಲೋಕಕ್ಕೆ ತರಿಸಿದ್ದು ಶ್ರೀಕೃಷ್ಣ ಕಥೆಯಲ್ಲಿ ಜನಜನಿತವಾಗಿದೆ; ಈ ಕಾರಣದಿಂದ ಚಂಡಿ ಎನಿಸಿಕೊಂಡ ಸತ್ಯಭಾಮಳನ್ನು ಮುಖ್ಯ ಭೂಮಿಕೆಯಲ್ಲಿ ಇಟ್ಟುಕೊಂಡು, ಅವಳಿಗಾಗಿ ಕೃಷ್ಣ ಬೇಸ್ತು ಬೀಳುವುದನ್ನು ತಮ್ಮ ವಿಶಿಷ್ಟ ಶೈಲಿಯಲ್ಲಿ, ಗ್ರಾಮೀಣ ಸೊಗಡಿನಲ್ಲಿ ನಿರೂಪಿಸುವ ಕಲೆಯೇ 'ಕೊರವಂಜಿ ಕೋಲಾಟ'ವಾಗಿ ಮನರಂಜಿಸುತ್ತದೆ; In `Koravanji Kolata' main attraction is SriKrishna and his beloved Sathyabhama's story;
- ಈ ನೃತ್ಯಪ್ರಕಾರದಲ್ಲಿ ಪ್ರಮುಖವಾಗಿ ಹದಿಹರೆಯದ ಕೊರಮ, ಕೊರಮಿ(ಕೊರವಂಜಿ), ಕೊರಮಿಯ ಅಪ್ಪ, ಇನ್ನೊಬ್ಬ ಬುಡುಬುಡಿಕೆಯವನು ಹೀಗೆ ನಾಲ್ಕು ಮಂದಿ ಕಲಾವಿದರಿದ್ದು, ಅವರವರ ಪಾತ್ರಗಳಿಗೆ ತಕ್ಕಂತೆ ವೇಷ ಭೂಷಣಗಳಿರುತ್ತವೆ; ಕೊರಮಿ/ಕೊರವಂಜಿಯ ವೇಷಭೂಷಣಗಳಲ್ಲಿ ಕರಿಪಟ್ಟೆಯ ರವಿಕೆ, ಮೊಣಕಾಲು ಕಾಣುವಂತೆ ಉಟ್ಟ ಕಂಬಿಸೀರೆ, ಹೊಕ್ಕಳ ಕೆಳಗೆ ಸೀರೆಯನ್ನು ಮಡಚಿ ಕಟ್ಟಿದ 'ಬಾಳೆಕಾಯಿ' ದಿಂಡು, ಇದಕ್ಕೆ ಸಿಕ್ಕಿಸಿದ ಎಲೆ ಅಡಿಕೆಯ ಪುಡಿ ಚೀಲ, ಹಣೆಯಲ್ಲಿ ಅಗಲವಾದ ಕುಂಕುಮ, ದವಡೆಯಲ್ಲಿ ಎಲೆ ಅಡಿಕೆ ತಾಂಬುಲ, ತಲೆಯ ಎಡಭಾಗಕ್ಕೆ ಏಡಿಗಂಟು, ಕಂಕುಳಲ್ಲಿ ಅಥವಾ ತಲೆಯ ಮೇಲೆ ಬೇವಿನ ಸೊಪ್ಪು ಹಾಕಿದ ಹೆಡಿಗೆ, ಹೆಡಿಗೆಯ ಮೇಲೆ ಮೂರು ನಾಮ, ಬುಟ್ಟಿಯಿಂದ ಜೋತುಬಿದ್ದಿರುವ ಕವಡೆ ಹೀಗೆ ಕಣಿ ಹೇಳುವ ಕೊರವಂಜಿಯ ಚಿತ್ರವನ್ನು ರೂಪಿಸುತ್ತಾರೆ;
- ಇನ್ನು ಕೊರಮನ ವೇಷವೆಂದರೆ ಒಂದು ನಿಲುವಂಗಿ, ಸೊಂಟಕ್ಕೆ ಕಟ್ಟಿದ ವಸ್ತ್ರ, ಏರಗಟ್ಟಿದ ಪಂಚೆ, ಹಣೆಯಲ್ಲಿ ಗೀರುನಾಮ, ತಲೆಗೆ ಸುತ್ತಿದ ಒಂದು ಮುಂಡಾಸು ಇಲ್ಲವೆ ಒಂದು ವಸ್ತ್ರ, ಕಾಲಿಗೆ ಗೆಜ್ಜೆ, ಕೈಯಲ್ಲಿ ಬಿದಿರಿನ ಒಂದು ದೊಣ್ಣೆ ಇವು ಮುಖ್ಯ ಅಲಂಕಾರವಾಗಿರುತ್ತವೆ;
- ಸುಮಾರು ಹದಿನಾರು ಅಥವಾ ಹದಿನೆಂಟು ಮಂದಿ ಆಟಗಾರರು ತಮ್ಮ ಕೈಗಳಲ್ಲಿ ಕೋಲು ಹಿಡಿದು ಅಂಗಳದಲ್ಲಿ ಎರಡು ಸಾಲಾಗಿ ಕುಳಿತುಕೊಳ್ಳುತ್ತಾರೆ; ಎರಡು ಸಾಲುಗಳ ನಡುವೆ ೧೦ ರಿಂದ ೧೨ ಅಡಿಗಳಷ್ಟು ಅಂತರವಿರುತ್ತದೆ; ಗಂಡಸರೆ ಕೊರವಂಜಿಯ ವೇಷ ಧರಿಸುವುದು ಸಾಮಾನ್ಯವಾಗಿರುತ್ತದೆ; 'ಕಣಿ ಹೇಳುವೆ ಕಣೀ.....' ಎಂದು ಸಾರುತ್ತಾ ಕೊರವಂಜಿ ಆಟಗಾರರು ಕುಳಿತ ಸಾಲಿನ ನಡುವೆ ಬರುತ್ತಾಳೆ; ಮತ್ತೊಂದು ಕಡೆಯಿಂದ ಕೊರಮ ಬರುತ್ತಾನೆ; ಅವರ ನಡುವೆ ಹಾಡಿನ ರೂಪದ ಸಂಭಾಷಣೆ ನಡೆಯುತ್ತದೆ; ತನ್ನ ಒಳಿತಿಗೆ, ತನ್ನ ಗ್ರಾಮದ ಒಳಿತಿಗೆ ಕಣಿ ಹೇಳುವಂತೆ ಕೇಳುತ್ತಾನೆ; ಈ ಸಂದರ್ಭದಲ್ಲಿ ಹಿಮ್ಮೇಳದಂತೆ

ಕುಳಿತ ಕಲಾವಿದರು ತಮ್ಮ ಕೋಲುಗಳನ್ನು ಮೃದುವಾಗಿ ಹೊಡೆಯುತ್ತಾ ಶಬ್ದ ಮಾಡುತ್ತಿರುತ್ತಾರೆ;

- ಕೊರವಂಜಿಯ ಕಣಿ ಹೇಳುವ ವೈಯಾರಕ್ಕೆ, ಬೆಡಗಿಗೆ ಮನಸೋತ ಕೊರಮ ಮದುವೆಯಾಗಲು ಬಯಸಿ ಕೈಹಿಡಿಯುತ್ತಾನೆ; ಆದರೆ ಅವನಿಂದ ತಪ್ಪಿಸಿಕೊಳ್ಳುವ ಕೊರವಂಜಿ ಕಲಾವಿದರ ನಡುವೆ ನುಸುಳಾಡುತ್ತಾ ತಪ್ಪಿಸಿಕೊಳ್ಳುತ್ತಾಳೆ; ಈತನೂ ಆಕೆಯ ಹಿಂದಿಂದೆಯೇ ಓಡಾಡಿ ಹಿಡಿಯುವ ಪ್ರಯತ್ನ ಮಾಡುತ್ತಾನೆ; ಸುತ್ತ ನೆರೆದು ನೋಡುವ ಪ್ರೇಕ್ಷಕರಿಗೆ ಮನರಂಜನೆಯೊದಗುತ್ತದೆ; ಕೊನೆಗೆ ಬೇಸ್ತುಬಿದ್ದ ಕೊರಮ ಇವಳ ಸಹವಾಸವೇ ಬೇಡವೆಂಬಂತೆ ಕೊರವಂಜಿ ಕಡೆಗೊಮ್ಮೆ, ಪ್ರೇಕ್ಷಕರ ಕಡೆಗೊಮ್ಮೆ ಎರಡೂ ಕೈಯೆತ್ತಿ ಮುಗಿಯುವುದೂ ಉಂಟು;
- ಕೊರವಂಜಿ ಕೋಲಾಟದಲ್ಲಿ ಸಾಹಿತ್ಯದ ಸ್ವರೂಪವಿದೆ; ಹಾಡು, ಕಥನಗೀತೆ, ಹೊಗಳಿಕೆ, ಬೈಗುಳ, ಒಡಪು, ವ್ಯಂಗ್ಯ ಮೊದಲಾದವೆಲ್ಲ ಹಾಸು ಹೊಕ್ಕಾಗಿದ್ದು ಮನರಂಜನೆಯೂ ಬೆರೆತಿದೆ; ಪೌರಾಣಿಕ ಪ್ರಸಂಗವೊಂದನ್ನು ತಮ್ಮ ವರ್ತಮಾನಕಾಲಕ್ಕೆ ಅಳವಡಿಸಿಕೊಂಡು, ಸಾಮರಸ್ಯವಿಲ್ಲದ ಸಂಸಾರ ಹೇಗೆ ನಗೆಪಾಟಲಿಗೀಡಾಗುತ್ತದೆಂಬುದನ್ನು ನಮ್ಮ ಜನಪದರು ಅತ್ಯಂತ ಸೊಗಸಾಗಿ ತೋರಿಸಿಕೊಡುತ್ತಾರೆ; The Koravanji Kolata is in the form of lyrics; it includes appreciation, scoldings, score, ironing and entertainment;
- ಕಲಾವಿದರ ನಡುವೆ ಕೊರವಂಜಿಬುಟ್ಟಿ, ಕೊರವಂಜಿಕೋಲು ಹಿಡಿದು ಬಾಗುತ್ತಾ, ಬಳಕುತ್ತಾ ಬರುವ ಕೊರವಂಜಿ, ಬೆನ್ನಟ್ಟಿ ಬಂದ ಕೊರಮನ ಕೈಗೆ ಸಿಗದೆ ನುಸುಳಿಕೊಂಡು ಆಡುವ ಆಟ ನೋಡಲು ಬಲು ಚಂದ; ರಾತ್ರಿಯಿಡೀ ಹೀಗೆ ನಡೆದು ಗ್ರಾಮೀಣರ ಮನಸ್ಸಿನ ಮನಃಕ್ಲೇಶವನ್ನು ದೂರ ಮಾಡುತ್ತದೆ;
- ಕೆಲವು ಕಡೆಗಳಲ್ಲಿ ಕೋಲಾಟಕ್ಕೆ ಕೋಲು ತರುವ, ಕೋಲಾಟದ ನಂತರ ನೀರಿನಲ್ಲಿ ಕೋಲುಗಳನ್ನು ಬಿಡುವ ಆಚರಣೆಗಳೂ ಉಂಟು; ಶಿವಮೊಗ್ಗ ಜಿಲ್ಲೆಯ ಹಳ್ಳಿಯೊಂದರಲ್ಲಿ ನವರಾತ್ರಿ ಆರಂಭವಾಗುವ ಮೊದಲು ಬರುವಂತಹ ಮೂಲಾ ನಕ್ಷತ್ರದ ದಿನ 'ಕೊಡಸಿನ' ಗಿಡವನ್ನು ಪೂಜಿಸಿ ಎರಡು ಕೋಲುಗಳನ್ನು ಕಡಿಯುವರು; ಮೊದಲು ಪೂಜೆ ಮಾಡಿದ ಗಿಡ/ಮರದಲ್ಲಿ ಎರಡು ಕೋಲು ಮಾತ್ರ ಕಡಿಯಲಾಗುವುದು ಈ ಕೋಲುಗಳಿಗೆ 'ಗುರುಕೋಲು' ಎಂದು ಕರೆಯುತ್ತಾರೆ; ಉಳಿದ ಕೋಲುಗಳನ್ನು ಬೇರೆ ಬೇರೆ(ಬೈನೆ, ಕಾರೆ, ಬಗನಿ, ಹೊನ್ನೆ ಇತ್ಯಾದಿ) ಮರಗಳಿಂದ ಕಡಿದುಕೊಳ್ಳುತ್ತಾರೆ; ದಶಮಿಯ ದಿನದಂದು ಕೋಲುಗಳಿಗೆ ಬಣ್ಣ ಹಚ್ಚುವುದು ಸಂಪ್ರದಾಯ; ಇದೇ ದಿನ ದೇವಸ್ಥಾನದ ಮುಂದೆ ಕೋಲಾಟದ ಕೋಲುಗಳಿಗೆ ಪೂಜಿಸಿ ಆಟ ಆರಂಭಿಸುತ್ತಾರೆ; ಮಾರನೆಯ ದಿನದಿಂದ ಉಳಿದ ಎಲ್ಲಾ ದೇವಾಲಯಗಳ ಮುಂದೆ ಕೋಲಾಟವಾಡಿ ನಂತರ ಗ್ರಾಮದ ಮುಖ್ಯಸ್ಥನ ಮನೆ ಮುಂದೆ ಆಡುತ್ತಾರೆ; ಊರಿನ ಎಲ್ಲಾ ಮನೆಗಳ ಮುಂದೆ ಪ್ರದರ್ಶನ ನೀಡಿ ಎಲ್ಲರಿಂದಲೂ ದವಸ-ಧಾನ್ಯ ಪಡೆಯುತ್ತಾರೆ; In some places bringing sticks for performances and disposal of the same sticks in the water after the performace have a special celebration; in a village in the district of Shimoga `Kodasina' tree will be worshipped one day before Navarathri and cut two sticks from the same plant; these sticks are called `Guru kolu'; the rest of the sticks are cut from various trees and dyed on Vijayadashmi; on the same day they begin their Kolata infront of temple, later before the houses of village chief and villagers; the players collect grains from the houses in return;
- ಕಾರ್ತೀಕ ಮಾಸ ಮುಗಿದ ಏಳನೆಯ ದಿನಕ್ಕೆ ಬರುವ ಸಂತೆ ಸೃಷ್ಟಿ ಮುಗಿದ ನಂತರ ಒಳ್ಳೆಯ ದಿವಸ ನೋಡಿ ಊರಿಂದ ಹೊರಗೆ ಊರೊಟ್ಟಿನ ಅಡುಗೆ ಮಾಡಿ ಸಾಮೂಹಿಕವಾಗಿ ಭೋಜನ ಮಾಡುತ್ತಾರೆ; ಮಾರನೆಯ ಬೆಳಿಗ್ಗೆ ಶರಾವತಿ ಅಣೆಯ ಹಿನ್ನೀರಿನಲ್ಲಿ ಕೋಲುಗಳನ್ನು ಬಿಟ್ಟು ಬರುವ ಪರಂಪರೆ ಬೆಳೆದು ಬಂದಿದೆ;
- ಉತ್ತರ ಕನ್ನಡದ ಮಾವಿನ ಕುರ್ವೆಯ ನಾಮಧಾರಿಗಳು ಸುಗ್ಗಿ ಹಬ್ಬವನ್ನು ಆಚರಿಸುವಾಗ ಮನೆ ಮನೆಗಳ ಮುಂದೆ ಕೋಲಾಟವಾಡುವ ವಾಡಿಕೆ ಇದೆ; ನಂತರದಲ್ಲಿ ಕಾಮನ ಹುಣ್ಣಿಮೆಗೆ ಮತ್ತೊಮ್ಮೆ

ಕೋಲು ಹೊಯ್ಯುತ್ತಾ ಹಾಡು ಹೇಳಿ, ಕಾಮನನ್ನು ಸುಡುವಾಗ ಕೋಲುಗಳನ್ನು ಅಲ್ಲೇ ಚೆಲ್ಲಾಡಿ, ಅಲ್ಲಿಂದ ಹೊರಟು ಮಾವಿನ ಕುರ್ವೆ ಹೊಳೆಯಲ್ಲಿ ಸ್ನಾನ ಮಾಡಿ ಮನೆಗೆ ಬರುತ್ತಾರೆ;

- ಕೆಲವು ಪ್ರದೇಶಗಳಲ್ಲಿ ಹೋಳಿ ಹುಣ್ಣಿಮೆಗೆ ಮೊದಲು ಕೋಲು ಕಡಿಯುವ ಸಂಪ್ರದಾಯ ಚಾಲ್ತಿಯಲ್ಲಿದೆ; ಇನ್ನು ಕೆಲವು ಪ್ರದೇಶಗಳಲ್ಲಿ ಆಶ್ವಯುಜ ಮಾಸದ ಹುಣ್ಣಿಮೆಯಂದು ಕೋಲು ಕಡಿದು ತರುವ ಪರಂಪರೆ ಬಳಕೆಯಲ್ಲಿದೆ;
- ಕೋಲಾಟದ ಕೋಲು ಕಡಿಯುವುದಕ್ಕಾಗಿಯೆ ನಿಗದಿಗೊಂಡಿರುವ ಮನೆತನಗಳು ಕೆಲವು ಊರುಗಳಲ್ಲಿವೆ; ಮೊದಲು ಮರವನ್ನು ಪೂಜಿಸಿ ಎರಡು ಕೋಲು ಕಡಿಯುವ ಪದ್ಧತಿಯನ್ನು ಈ ಮನೆತನಗಳು ರೂಢಿಸಿಕೊಂಡು ಬಂದಿವೆ; ಹೀಗೆ ಕೋಲು ಕಡಿಯುವ ಬಗೆಗಿನ ಆಚರಣೆಗಳು ಕಂಡು ಬರುತ್ತವೆ; In some villages a particular families or clans are fixed to cut or prepare sticks for Kolata; they perform pooja to a tree and cut two sticks from it; this is a kind of celebration here;
- ಕೋಲಾಟದ ಉಡುಗೆ ತೊಡುಗೆಗಳಲ್ಲಿ ಪ್ರಾದೇಶಿಕ ಭಿನ್ನತೆ ಕಂಡು ಬರುತ್ತದೆ; ದಕ್ಷಿಣಕನ್ನಡ ಮತ್ತು ಉತ್ತರಕನ್ನಡದ ಬುಡಕಟ್ಟು ಜನರಲ್ಲಿ ಕೋಲಾಟವು ಆರಾಧನೆಯ ಒಂದು ಭಾಗವಾಗಿಯೇ ಉಳಿದು ಬಂದಿದೆ; ಇದರಿಂದ ಅವರ ವೇಷಭೂಷಣಗಳಲ್ಲಿ ಸಾಂಪ್ರದಾಯಿಕತೆ ಎದ್ದು ತೋರುತ್ತದೆ; ಮುಖಕ್ಕೆ ಬಣ್ಣ, ತಲೆಗೆ ಮುಂಡಾಸು, ಇಳಿಬಿಟ್ಟ ಉದ್ದನೆಯ ಅಂಗಿ, ನಡುವಿಗೆ ಬಿಗಿದ ಕೆಂಪು ವಸ್ತ್ರ, ಕಾಲಿಗೆ ಗೆಜ್ಜೆ ಮೊದಲಾದ ಬಣ್ಣ ಬಣ್ಣದಿಂದ ಕೂಡಿದ ಶೃಂಗಾರ ಇರಲೇ ಬೇಕಾಗುತ್ತದೆ; ಕೋಲಾಟದ ಕೋಲುಗಳನ್ನು ಸಹ ಬಣ್ಣಗಳಿಂದ ಅಲಂಕರಿಸುವುದು ವಾಡಿಕೆ;
- ದಕ್ಷಿಣ ಕರ್ನಾಟಕದ ಪ್ರದೇಶಗಳಲ್ಲಿ ಕೋಲುಗಳ ಶಬ್ದವೇ ಹಾಡಿಗೆ ಮತ್ತು ಕುಣಿತಕ್ಕೆ ಪೂರಕವಾದ ತಾಳವಾಗಿ ಕಂಡುಬರುತ್ತದೆ; ಉತ್ತರ ಕರ್ನಾಟಕದ ಕಡೆ ಕೋಲಿನ ಶಬ್ದಕ್ಕೆ ಮದ್ದಳೆ, ಡಪ್ಪು, ತಬಲಾ, ಢಕ್ಕೆ ಮತ್ತು ಕಂಚಿನ ತಾಳಗಳನ್ನು ಬಳಸುವುದು ರೂಢಿಯಲ್ಲಿದೆ; ಕರಾವಳಿ ಪ್ರಾಂತ್ಯಗಳಲ್ಲಿ ಕೋಲಾಟಕ್ಕೆ ಹಿಮ್ಮೇಳವಾಗಿ ಗುಮಟೆ ಮತ್ತು ಜಾಗಟೆಯನ್ನು ಬಳಸುವುದು ಕಂಡುಬರುತ್ತದೆ; ಮೈಸೂರು ಪ್ರಾಂತ್ಯದ ಕೆಲವು ಕಡೆಗಳಲ್ಲಿ ತಮಟೆಯನ್ನು ಕೋಲಾಟಟಕ್ಕೆ ಹಿನ್ನೆಲೆ ವಾದ್ಯವಾಗಿ ನುಡಿಸುವ ಪದ್ಧತಿ ಬಳಕೆಯಲ್ಲಿದೆ.

ಕೋಲಾಟದ ಪದಗಳು kōlāṭada padagaḷu :

- ಕೋಲಾಟದಲ್ಲಿ ಉಂಟಾಗುವ ಏಕತಾನತೆ ಮತ್ತು ಶುಷ್ಕತೆಯನ್ನು ಹೋಗಲಾಡಿಸುವ ಉದ್ದೇಶದಿಂದ ಕೋಲಿನ ಲಯಕ್ಕನುಗುಣವಾಗಿ ಬಳಸುವ ಪದ(ಹಾಡು)ಗಳೂ ಮುಖ್ಯವಾಗಿರುತ್ತವೆ; A song accompanies the rhythm of the sticks in Kolata; it is helful for the removal of monotonous sound of the sticks;
- ಕೋಲಾಟಕ್ಕೆ ಸಾಹಿತ್ಯ ಮತ್ತು ಸಂಗೀತದ ಮೆರಗು ನೀಡುವುದರಿಂದ ಹಾಡು ಮತ್ತು ಕುಣಿತ(ನೃತ್ಯ) ಹೆಚ್ಚು ರಂಜನೀಯವಾಗಿ ತೋರುತ್ತದೆ; Music and lyrics enrich the dance and song; so, Kolata becomes more entertaining;
- ಆರಂಭ ಕಾಲಘಟ್ಟದಲ್ಲಿ ಕೋಲಾಟವು ಒಂದು ಆಟವಾಗಿ ಇತರ ಜನಪದ ಆಟಗಳಂತೆ ಬಳಕೆಯಲ್ಲಿದ್ದಿರಬೇಕು; ನಂತರ ಕಾಲಾನುಕ್ರಮದಲ್ಲಿ ಹಾಡು, ಕುಣಿತ(ಸಂಗೀತ, ನೃತ್ಯ) ಸೇರಿ ಈಗಿನ ಒಂದು ವಿಶಿಷ್ಟ ಕಲಾರೂಪವಾಗಿ ಬೆಳೆದಿರುವ ಸಾಧ್ಯತೆ ಹೆಚ್ಚಾಗಿದೆ;
- ಕೋಲಾಟದಲ್ಲಿ ಬಳಸುವ ಎಲ್ಲಾ ರೀತಿಯ ಪದಗಳನ್ನು ಅದಕ್ಕಾಗಿಯೇ ರಚಿಸಲಾಗಿದೆಯೆ? ಇಲ್ಲವೆ ಬೇರೆ ಬೇರೆ ಸಂದರ್ಭದ ಗೀತೆಗಳನ್ನು ಕೋಲಾಟದ ಗತ್ತಿಗೆ ಹೊಂದಿಸಿಕೊಂಡು ಬಳಸಿಕೊಳ್ಳಲಾಗಿದೆಯೇ ಎಂಬುದರ ಬಗೆಗೆ ಸಾಕಷ್ಟು ಚರ್ಚೆ ಕೂಡ ನಡೆದಿದೆ;
- ಕೋಲಾಟದಲ್ಲಿ ಬಳಸುವ ಪದಗಳನ್ನು ಭಾವಗೀತಾತ್ಮಕ ಮತ್ತು ಕಥಾತ್ಮಕ ಎಂದು ಎರಡು ವಿಧಗಳಾಗಿ ವಿಂಗಡಿಸಿಕೊಳ್ಳಬಹುದಾಗಿದೆ;
- ಕಥನಗೀತಗಳು ದೀರ್ಘವಾಗಿದ್ದಾಗ ಕೋಲಾಟದ ಗತ್ತಿಗೆ ಅವು ಹೆಚ್ಚು ಹೊಂದಿಕೊಳ್ಳಲಾರವು; ಈ ದೃಷ್ಟಿಯಲ್ಲಿ ಭಾವಗೀತಾತ್ಮಕವಾದವುಗಳು ಕೋಲಾಟದ ಗತ್ತಿಗೆ ಹೊಂದಿಕೊಳ್ಳುತ್ತವೆ; ಕೋಲಾಟಕ್ಕಾಗಿ ಕಟ್ಟಿದ ಅಥವಾ ಬರೆದ ಗೀತೆಗಳು

ಸಾಮಾನ್ಯವಾಗಿ ಚಿಕ್ಕವಾಗಿರುತ್ತವೆ; ಏಕೆಂದರೆ ಉತ್ಸಾಹ ಪ್ರಧಾನವಾಗಿರುವುದರಿಂದ ಇದಕ್ಕೆ ಭಾವಗೀತಾತ್ಮಕವಾದವುಗಳು ಹೊಂದಿಕೆಯಾಗುತ್ತವೆ; ಆದರೆ ಕಥನಗೀತಗಳು ನಿಧಾನಗತಿಯಿಂದ ಕೂಡಿ ಸಾಗುವುದರಿಂದ ಕೋಲಾಟದ ಗತ್ತಿಗೆ, ವೇಗಕ್ಕೆ ಹೆಚ್ಚು ಹೊಂದಿಕೊಳ್ಳಲಾರವೆಂದು ತೋರುತ್ತದೆ; The songs of Kolata are lyrical and narrative in form;

- ಕೋಲಾಟದಲ್ಲಿ ಕಂಡುಬರುವ ಹಲವು ವಿಧಗಳಂತೆಯೇ ಕೋಲಾಟದಲ್ಲಿ ಹಾಡುಗಳೂ ಸಹ ನಾನಾ ಬಗೆಯಲ್ಲಿ ದೊರೆಯುತ್ತವೆ; ಪುರಾಣ, ಇತಿಹಾಸ, ದೈವ, ಸಾಮಾಜಿಕ ವಿಡಂಬನೆ, ಹೆಣ್ಣು-ಗಂಡಿನ ಪ್ರೇಮ, ಅಧ್ಯಾತ್ಮ ತತ್ವ ಮೊದಲಾದವು ಕಂಡುಬರುತ್ತವೆ; ಇತ್ತೀಚೆಗೆ ಕುಟುಂಬ ಕಲ್ಯಾಣ ಮತ್ತು ಸಾಕ್ಷರತೆಗೆ ಸಂಬಂಧಿಸಿದಂತೆ ಹಾಗೂ ಸರ್ಕಾರಿ ಯೋಜನೆಗಳಿಗೆ ಸಂಬಂಧಿಸಿದಂತೆ ಹಲವಾರು ವಿಧದ ಹಾಡುಗಳು ಕೂಡ ಕೋಲಾಟದ ಪದಗಳಲ್ಲಿ ಸೇರಿಕೊಂಡಿವೆ; ಇವುಗಳಲ್ಲಿ ಕಥನಗೀತೆ, ಕಾವ್ಯ ಮುಂತಾದ ಸಂಕೀರ್ಣ ಸ್ವರೂಪಕ್ಕಿಂತ ಬಿಡಿ ಬಿಡಿ ಹಾಡುಗಳೇ ಹೆಚ್ಚಾಗಿ ಕಂಡುಬರುತ್ತವೆ; In Kolata the songs are vary in theme; they are mythological, historical, social satire, chivalry, devotional and spiritual; in the recent times family planning and literacy programmes are also joined Kolata;
- 'ಗೀಜಗನ ಕೋಲು' ಹುಯ್ಯುವಾಗ 'ಬಾರೋ ಗೀಜುಗ ಅಯ್ಯ ಮುದ್ದು ಗೀಜುಗ' ಎಂಬ ಹಾಡನ್ನು ಹಾಡುತ್ತಾರೆ; ಇದು ಕೋಲಿನ ಲಯಬದ್ಧವಾದ ಧ್ವನಿಗೆ ಕಾಲಿನ ಗೆಜ್ಜೆಯ ಧ್ವನಿ ಬೆರೆತು ಸುಶ್ರಾವ್ಯವಾಗಿ ಕೇಳಿಬರುತ್ತದೆ;
- ಪ್ರಶ್ನೋತ್ತರ ಮಾದರಿಯಲ್ಲಿ ಗಂಡು ಮತ್ತು ಹೆಣ್ಣು ಹಾಡುವ ಗೀತೆಯನ್ನು ಗಮನಿಸಬಹುದು:

ಗಂಡು: ಹಿಟ್ಟು ಮಾಡಿ ಸೊಪ್ಪು ಮಾಡೀ।
ಎಲೆ ಬಾಲೆ ಇಕ್ಕಾದೆ ಎಲ್ಲಿಗೋದೆ?॥
ಹೆಣ್ಣು: ಪ್ರಾಣಾದ ಪದ್ಮ ಪುರುಸಾ।
ಕೆರೆಯೊಳಗೆ ಬಳ್ಳೆ ಸೊಪ್ಪ ಕೊಯ್ಯಲೋದೆ॥

– ಈ ಹಾಡಿಗೆ ಕೋಲು ಹೊಯ್ಯುವಾಗ ಕೋಲಾಟದ ಕಲಾವಿದರು ತಮ್ಮಲ್ಲಿ ಎರಡು ಗುಂಪು ಮಾಡಿಕೊಂಡು, ಗಂಡಿನ ಪರವಾಗಿ ಒಂದು ಗುಂಪು ಹಾಡಿದರೆ, ಹೆಣ್ಣಿನ ಪರವಾಗಿ ಇನ್ನೊಂದು ಗುಂಪು ಹಾಡುತ್ತಾ ಮನರಂಜನೆ ನೀಡುತ್ತಾರೆ;

- ಜಡೆಕೋಲಾಟದಲ್ಲಿ ಜಡೆ ಹಾಕುವಾಗ ಕೋಲು ಹೊಯ್ಯುತ್ತಾ ಚಾಮುಂಡಿಯ ಮೇಲೆ ಹಾಡುವುದುಂಟು:

ತಂದನ್ನು ತಾನು ತಂದೇ ನಾನು ।ತಾ।
ತಂದನ್ನು ತಾನು ತಂದೇ ನಾನು ॥
ಹುಟ್ಟಿದ್ದುತ್ತರ ದೇಶ। ಬೆಳೆದಿದ್ದು ಮಲೆನಾಡು।
ಬಂದು ಸೇರ್‍ಯಾಳೆ। ಮೈಸೂರ ॥ತಂದ॥
ಬಂದು ಸೇರ್‍ಯಾಳೆ ಮೈಸೂರು ॥ಚಾಮುಂಡಿ॥

– ಇಂತಹ ಅನೇಕ ಹಾಡುಗಳಿಂದ ಮತ್ತು ಕುಣಿತದಿಂದ ಕೋಲಾಟವು ಹೆಚ್ಚು ಮನರಂಜನಾತ್ಮಕ ಗ್ರಾಮೀಣ ಕಲೆಯಾಗಿ ಗಮನ ಸೆಳೆಯುತ್ತದೆ.

ಕೋಲಾಡು kōlāḍu :

- ಕೋಲಿನ ತಾಳದೊಂದಿಗೆ ಗುಂಪಾಗಿ ಹಾಡುತ್ತಾ ಕುಣಿ(ಬೀ.ಜಿ.); Perform dance in group to the rhythm of sticks;
- ಕೋಲಾಟ ಮಾಡುವಂತೆ ಸೂಚನೆ ನೀಡುವುದು; Give command to perform Kolata;
- ಕೋಲು+ಆಡು=ಕೋಲಾಡು=ಕೋಲಾಟ ಆಡು;
- **ನೋಡಿ:** ಕೋಲಾಟ.

ಕೋಲಾಣಿ kōlāṇi :

- ಮಸಾರಿ(ಕಡಲೆ) ಹೊಲಗಳಲ್ಲಿ ಎರಡರಿಂದ ಮೂರು ಅಡಿ ಎತ್ತರಕ್ಕೆ ಬೆಳೆಯುವ, ಹೂತೆನೆ ಬಿಡುವ ಒಂದು ಕಳೆಗಿಡ; 2 to 3 feet weed in Bengal gram or Chicken pea field;
- ಕೋಲಣಿ; ಅಣ್ಣೆಸೊಪ್ಪಿನ ಗಿಡ, ಅದರ ಹೂವುತೆನೆ; Kolani, a bunch of flowers in water spinach or `annesoppu';
- ಇದರ ಸೊಪ್ಪನ್ನು ಸಾರು, ಪಲ್ಲೆಗಳಿಗೆ ಬಳಸುತ್ತಾರೆ(ಚಿ.ಪ.ಕೋ); Leaves of this plant are used in sambar and vegetable curries;
- ಕೋಲು+ಅಣ್ಣೆ=ಕೋಲಣ್ಣೆ>ಕಲಾಣೆ>ಕೋಲಣಿ; ಅಣ್ಣೆ>ಆಣೆ/ಅಣೆ; ಅಂತ್ಯ ಒತ್ತಕ್ಷರ ಲೋಪ ಆದಿದೀರ್ಘಕ್ಕೆ ಕಾರಣವಾಗಿದೆ; ಯಾದೃಚ್ಛಿಕ

ಬಳಕೆಯಿಂದಾಗಿ ಆದಿ ಹುಸ್ವವನ್ನು ಹಾಗೆಯೇ ಉಳಿಸಿಕೊಂಡಿರುವುದೂ ನಡೆದು ಕೋಲಾಣೆ, ಕೋಲಣೆ ಎರಡೂ ರೂಪಗಳು ಬಳಕೆಗೊಂಡಿವೆ; ಅಂತ್ಯ ಸ್ವರ ಎ>ಇ ಆಗಿರುವುದಕ್ಕೆ ಪ್ರಾದೇಶಿಕ ವ್ಯತ್ಯಯ ಕಾರಣ(ಉತ್ತರ ಕರ್ನಾಟಕ);
- ಕೋಲು+ಅಣ್ಣೆ=ಕೋಲನ್ನೆ ಆಗಿರುವದೂ ಉಂಟು; **ನೋಡಿ:** ಕೋಲನ್ನೆಸೊಪ್ಪು.

ಕೋಲಾಣಿ/ಕೋಲರಾಣಿ kōlāṇi/ kōlarāṇi :
- 'ಕೋಲರಾಣಿ' ಪದವೇ ಕ್ರಮೇಣ 'ಕೋಲಾಣಿ'ಯಾಗಿ ಬಳಕೆಗೊಂಡಿರುವ ಸಾಧ್ಯತೆ ಹೆಚ್ಚು;
- ಶೇಂಗಾ ಬಿತ್ತಿದ ಹೊಲದಲ್ಲಿ ಬೆಳೆಯುವಂತಹ ಕಸ; ಇದನ್ನು ಔಷಧಿಯಾಗಿ ಬಳಕೆ ಮಾಡುವರು; A weed or waste grows in groundnut field; it is used as a medicine;
- ಇದರ ಸೊಪ್ಪನ್ನು ತಿನ್ನಲು ಉಪಯೋಗಿಸುವುದುಂಟು; Leaves or spinach are consumable;
- ಅರಳಿದ ಗುಲಾಬಿ ಮಿಶ್ರಿತ ಬಿಳಿಹೂವನ್ನು ದೀಪಾವಳಿಯಲ್ಲಿ ಸಗಣಿಯಿಂದ ಮಾಡಿದ ಗುಳ್ಳವ್ವ(ಪಾಂಡವರ)ನ ಅಲಂಕಾರಕ್ಕೆ ಬಳಸುವರು. The bloomed flowers with mixed rose is used to decorate Guḷḷavva(Pandavas) made from cowdung.

ಕೋಲಾರ kōlāra :
- ದೇವತೆಗಳು ಮತ್ತು ರಾಕ್ಷಸರ ಮಧ್ಯದ ಯುದ್ಧದಲ್ಲಿ ಉಂಟಾದ 'ಕೋಲಾಹಲ'ದಿಂದ ಆ ಸ್ಥಳಕ್ಕೆ 'ಕೋಲಾಲ' ಎಂಬ ಹೆಸರು ಬಂದಿತೆನ್ನುವುದು 'false etymology' ಅಷ್ಟೆ; ಯಾವುದಾದರೂ 'ಕಾಳಗ'ವನ್ನು ಈ ಪದ ಸೂಚಿಸುತ್ತಿರಬಹುದೆ? 'Commotion or Uproar' from the war between Gods and demons; but it is a false etymology; may it refer a 'battle or fight';
- ಕೋಲಾಹಲ>ಕುವಲಾಲ>ಕೋಲಾಲ>ಕೋಲಾರ ಆಯಿತೆಂದು ಹೇಳಲಾಗಿದೆ; Kolara may be derived from Kolahala/kuvalala/kolala – Kolara;
- ಕ್ರಿ.ಶ.ಸು.೩೫೦ರ ಕಾಲದಲ್ಲಿ ಗಂಗರ ರಾಜಧಾನಿಯಾಗಿತ್ತು; About 350AD it was the capital of Ganga dynasty;
- ಕ್ರಿ.ಶ.ಸು.೫೭೫ರ ನಂತರ ತಲಕಾಡು ಗಂಗರ ರಾಜಧಾನಿಯಾಯಿತು; About 575AD 'Talakadu' was the capital of Ganga dynasty;
- 'ಕುವಲಾಲ' ಮೂಲ ರೂಪ ಆಗಿರಬಹುದು; ಇದೇ ರೂಪ ಕುವಳಾಲ, ಕೊವಳಲ, ಕೋಳಾಲ(ಕ.ನಿ); ಇಲ್ಲಿ ಮುಖ್ಯವಾಗಿ ಗಮನಿಸುವುದು ಲ>ಳ ಆಗಿರುವುದು; ಅದು ಸಹಜ; ಹಾಗೆಯೇ ಕು>ಕೊ/ಕೋ ಆಗಿರುವುದು, ಅಂದರೆ ಸ್ವರವ್ಯತ್ಯಯದ ನಿಯಮದ ಪ್ರಕಾರ ಉ>ಒ/ಓ ಆಗಿರುವುದು;
- ಕುವಲಾಲಪುರ, ಕುವಳಾಲಪುರ, ಕುವಳಾಳಪುರ, ಕೊವಳಾಲಪುರ, ಕೊವಳಾಳಪುರ, ಕೋಳಾಲಪುರ, ಕೋಳಾಳಪುರ(ಕ.ನಿ) ಎಂಬಿತ್ಯಾದಿ ಹೆಸರುಗಳು ಕೂಡ ಈ ಸಂಬಂಧ ದೊರೆಯುತ್ತವೆ; ಇಲ್ಲಿ 'ಪುರ' ಪದ ಮಾತ್ರ ಹೊಸದಾಗಿ ಸೇರ್ಪಡೆಯಾಗಿದೆ.

(E.C-X; ಬಿ.ಎಲ್.ರೈಸ್ ಸಂಪುಟ)

ಕೋಲಿ kōli :
- 'ಕೋಲಿ' ಪದ(ಬೆ.ಜಿ) 'ಕೂಳೆ'ಯಿಂದ ಬಂದಿರಬಹುದು; ದಕ್ಷಿಣ ಕರ್ನಾಟಕದ ಹಲವಾರು ಜಿಲ್ಲೆಗಳಲ್ಲಿ ಈ ಪದ ಬಳಕೆಯಲ್ಲಿದೆ; Koli may be derived from Kooḷe(stubble, stump); we can find this word in many districts of South Karnataka;
- 'ಕೋಲಿ'ಗೆ ಸಂವಾದಿಯಾಗಿ ತೆಲುಗಿನಲ್ಲಿ 'ಕೋಲೆ' ಪದರೂಪವಿದೆ;
- ಜೋಳದ ದಂಟು ಅಥವಾ ಭತ್ತದ ಹುಲ್ಲು ಕೊಯ್ದ ನಂತರ ನೆಲದಲ್ಲಿ ಉಳಿದದ್ದು; Stump, stubble the base part of maize or paddy crop that remains standing after the plant has been cut or harvested;
- ಕಬ್ಬು ಮತ್ತು ಜೋಳದ 'ಕೋಲಿ' ಚಿಗಿತು ಮತ್ತೆ ಫಸಲು ಕೊಡುತ್ತವೆ; Stump or stubble of the sugarcane and maize grows again;

- ಹಂತಿ ಪದದಲ್ಲಿ "ಆ ವರಸ ಹಂಗಾತಿ, ಈ ವರಸ ಹಿಂಗಾತಿ; ಕೋಲಿಬಡ್ಯಾಗ ಕೆಲಸಾತಿ" ಎಂದು ಹಾಡಲಾಗುತ್ತದೆ;
- 'ಕೋಲಿ ಪದಕ್ಕೆ ಒಂದು ಜಾತಿಯ ಮರ ಎಂಬ ಅರ್ಥವೂ ಇದ್ದೂ, ಈ ಪದ ಸಂಸ್ಕೃತದ 'ಕೋಲೀ' ಪದದಿಂದ ಬಂದಿರಬೇಕೆಂದು ಹೇಳಲಾಗಿದೆ. 'Koli' also means a type of wood or tree; it is derived from Sanskrit word `Kolie'.
- ೧.ಕೊರಡಿ, ಕೋಣೆ; ಖೋಲಿ>ಕೋಲಿ ಆಗಿರಬಹುದು; ೨.ಬೆಳೆಯ ಕೊಯ್ಲಿನ ತರುವಾಯ ನೆಲದಲ್ಲಿ ಉಳಿಯುವ ಭಾಗ(ಬಾ.ಜಿ./ಕೊ.ಜಿ); Room; stubble after harvest;
- —***ಕೋಲಿಗುಂಟೆ*** : ೧.ಹರಗಲು ಬಳಸುವ ಕುಂಟೆ; ೨.ಬಡಿಗೆ; ೩.ಬಿತ್ತುವಾಗ ಕಾಳುಗಳನ್ನು ಬಿಡುವ ಕೃಷಿ ಉಪಕರಣ; An agricultural implement used during sowing seeds;
- —***ಕೋಲಿ ಬಡ್ಯಾಗ ಕೆಲಸ*** : ಜೋಳದ ಮೊದಲಿನ ಬೆಳೆ ಚೆನ್ನಾಗಿ ಬರದೆ ಇದ್ದಾಗ, ಚೆನ್ನಾಗಿ ಮಳೆಯಾದರೆ ಕೊಯ್ದ ಕೋಲಿ/ಕೂಳೆ ಚಿಗಿತು ಎರಡು ಮೂರು ಕವಲು ಪೈರು ಒಡೆದು, ಹೊಡೆ ಬಂದು ಬೆಳೆ ಬರುವುದು;
- ಜೋಳ ಕೊಯ್ದ ಮೇಲೆ ಕೆಲವೊಮ್ಮೆ ಕೂಳೆಯ ಬುಡದಲ್ಲಿ ಕವಲು ಪೈರು ಚಿಗುರಿ ಬೆಳೆದು ಬೆಳೆಕೊಡುವುದುಂಟು;
- —***ಕೋಲಿ ಹರಗು*** : ಕುಂಟೆಯ ಸಹಾಯದಿಂದ ಕೋಲಿ/ಕೂಳೆಯ ಬೇರುಗಳನ್ನು ಕತ್ತರಿಸುವುದು; ನಂತರ ಭೂಮಿಯನ್ನು ಉಳುಮೆ ಮಾಡಲು ಸುಲಭವಾಗುತ್ತದೆ.
- —***ಕೋಲಿ ಹಾಯೂದ*** : ಕೊಳೆ ಕಾಲಿಗೆ ಚುಚ್ಚಿಕೊಳ್ಳುವುದು;
- ಜೋಳದ ಬೆಳೆ ಬಂದ ಮೇಲೆ ಕೊಯ್ದ ಬುಡದ ಕೂಳೆ ಚೂಪಾಗಿ ಭೂಮಿಯಲ್ಲಿ ಉಳಿದಿರುತ್ತದೆ; ಇದರ ಮೇಲೆ ಕಾಲು ಇಟ್ಟರೆ ಮೊನಚಾದ ಕೂಳೆ ಕಾಲಿಗೆ ಚುಚ್ಚಿ ಗಾಯಗೊಳಿಸುತ್ತದೆ; ಗಾಯವನ್ನು ನಿರ್ಲಕ್ಷ್ಯ ಮಾಡಿದರೆ ಸೆಪ್ಟಿಕ್ ಆಗಿ ತೊಂದರೆ ಉಂಟಾಗುತ್ತದೆ. Stubble of maize or sorghum crop is sharp and like spike; stepping on this stubble may cause wound.

ಕೋಲಿಗೆ ಹಾಕು kōlige hāku :

- ಬಣ್ಣ ಹಾಕಿದ ನೂಲನ್ನು ಒಣಗಿಸಲು ಕೋಲಿಗೆ ಹಾಕುವುದು; ಒಣಹಾಕುವುದು; Drying dyed(coloured) thread on the stick;
- ವಿವಿಧ ಬಣ್ಣದ ಬಟ್ಟೆ ನೇಯ್ಗೆ ಮಾಡಲು ಅನುಕೂಲವಾಗುವಂತೆ ತಮಗೆ ಬೇಕಾದ ಬಣ್ಣಕ್ಕೆ ನೂಲನ್ನು ಅದ್ದಿ ನಂತರ ಅದನ್ನು ಒಣಗಿಸಲು ಹಾಕುವುದು; Drying(searing) coloured thread for the purpose of weaving;
- ನೇಕಾರ ಜಾನಪದಕ್ಕೆ ಸಂಬಂಧಿಸಿದ ಪದವಿದು; ತಾಂತ್ರಿಕ ಮಾಧ್ಯಮ ಮತ್ತು ಅದಕ್ಕನುಗುಣವಾದ ಸಾಧನಗಳು ಹೆಚ್ಚುತ್ತಿರುವುದು ಇಂದಿನ ದಿನಗಳಲ್ಲಿ ಇಂತಹ ಪದಗಳು ಸಹಜವಾಗಿಯೇ ಕಣ್ಮರೆಯಾಗುತ್ತಿವೆ. This word is related to weaver's folklore; in the recent days this type of words are seldom in use.

ಕೋಲು kōlu :

- 'ಕೋಲ್' ಹಳಗನ್ನಡದ ಮೂಲ ರೂಪ; ನಡುಗನ್ನಡಕ್ಕೆ ಬಂದಾಗ ಕೋಲ್>ಕೋಲು ಆಗಿದೆ; `Kole' is the (old kannada) root word for Kolu in middle kannada;
- ಕೋಲ್; ೧.ಸಪುರವಾದ ಬಡಿಗೆ; ೨.ಊರುಗೋಲು; ೩.ದೊಣ್ಣೆ, ದಂಡ; ೪.ಸುಮಾರು ಇಪ್ಪತ್ತನಾಲ್ಕು ಅಂಗುಲ ಅಳತೆಯ ಮಾನ; ೫.ಬಾಣ, ಅಂಬು; ೬.ಯುದ್ಧ ವಿದ್ಯೆಯ ಅಭ್ಯಾಸ; ಗರಡಿ, ವ್ಯಾಯಾಮ(ಗು); ಉದ್ದವಾದ, ನೀಳವಾದ, ಸಪುರವಾದ, ಕಡ್ಡಿಯಂತಿರುವುದು(ತು.ನಿ); Stick, cane, staff, cluth, prop, yardstick/measurement of 24 inches, arrow, gymnasium, slender, fine sleek;
- ತ: ಕೋಲ್; ಮ: ಕೋಲು; ಕೊಡ–ಕೋಲ್; ತುಳು: ಕೋಲ್, ಕೋಲು; ತೆಲು: ಕೋಲ (ದ್ರಾ.ಭಾ.ಜ್ಞಾ ಪ.ಕೋ); = ದ್ರಾವಿಡ ಭಾಷೆಗಳಲ್ಲೆಲ್ಲ ಪದಾದಿಯಲ್ಲಿ 'ಕ'ಕಾರವೇ ಇರುವುದರಿಂದ, 'ಕ' ಮೂಲ ದ್ರಾವಿಡದ ಪ್ರಾತಿನಿಧಿಕ ಧ್ವನಿಮಾ ಎಂದು ಹೇಳಬಹುದು;
- ಅಧಿಕಾರ ಸೂಚಕ ದಂಡ; ಆಯುಧವಾಗಿ ಬಳಸುವ ದಂಡ; ಭರ್ಜಿ; Scepter, dagger, spear;

- ಬಣ್ಣಗಾರನ ಕುಂಚ; Brush of an artist;
- ನೇಕಾರರು ಮೇಯ್ಗೆ ಮಾಡುವಾಗ ಬಳಸುವ ಕೋಲ್; A stick used by weavers in weaving;
- ಕೋಲಾಟಕ್ಕಾಗಿ ಬಳಸುವ ಬೈನೆ ಮರದ, ಕಾರೆಗಿಡದ ಸುಮಾರು ಒಂದು ಅಡಿ ಉದ್ದದ, ಒಂದು ಇಂಚು ವ್ಯಾಸದ ಕೋಲು; Byne wood stick of one inch length/width used in Kolata;
- ಕೋಲ್೧. ದೊಣ್ಣೆ, ಬಡಿಗೆ; ದಂಡ; ಜಲ್ಲೆ; ೨.ಬಾಣ, ಅಂಬು, ಸರಳು; ೩.ಅಳತೆಗಾಗಿ ಬಳಸುವ ಕಡ್ಡಿ; ಅಳತೆಯ ಕಡ್ಡಿ; ಕೋಲ್೨(ಗು) ಉದ್ದವಾದ; ನೀಳವಾದ; ದೀರ್ಘವಾದ; ಕೋಲ್೩: ೧.ಸೇರಿಸುವಿಕೆ; ಕೂಡಿಸುವಿಕೆ; ೨.ನೀರನ್ನು ದಾಟುವ ಸಾಧನ; ತೆಪ್ಪ; ತೇಲುವೆ, ದೋಣಿ; (ಕೋಲ್>ಕೋಲು)(ಕ.ನಿ); Stick, cane, staff, arrow, shaft, dart, measurement, stick, slender, lengthy, boat, ferry raft;
- ಬೇಟೆಯಲ್ಲಿ ಸೋವುಗಾರರು ಬಳಸುವ ಒಂದು ಮರದ ಸಾಧನ; ಇದರಿಂದ ಪೊದೆಯನ್ನು ಬಡಿದು ಪ್ರಾಣಿಗಳು ಹೊರ ಬರುವಂತೆ ಮಾಡುತ್ತಾರೆ; ಹೊರಗೆ ಬಂದ ಪ್ರಾಣಿಗಳನ್ನು ಬಿಲ್ಲುಗಾರರ ಕಡೆಗೆ ಓಡಿಸುತ್ತಾರೆ; ಹೀಗೆ ಓಡಿದ ಪ್ರಾಣಿಗಳು ಸುಲಭವಾಗಿ ಬಿಲ್ಲುಗಾರರ ಬಾಣಕ್ಕೆ ತುತ್ತಾಗುತ್ತವೆ; A wooden bang stick used by the hunters in hunting; the hunters bang the bushes to make the animals(prey) to come out and become the victims for the bowmen;
- ತೋರು ಬೆರಳಿನಷ್ಟು ಗಾತ್ರವಿದ್ದು, ಸುಮಾರು ಎರಡೂವರೆ ಅಡಿಯಿಂದ ಮೂರು ಅಡಿ ಉದ್ದವಿರುವ ಬೆತ್ತ; ಯಾರಿಗಾದರೂ ಹೊಡೆಯಲು ಕೂಡ ಬಳಕೆ; Staff or cane with 2 to 3 feet length and index finger in size, it is used to beat somebody;
- ಸುಮಾರು ಮುಕ್ಕಾಲು ಇಂಚಿನಿಂದ ಒಂದು ಇಂಚು ದಪ್ಪವಿರುವ, ವಯಸ್ಸಾದವರು ಹಿಡಿದುಕೊಂಡು ಓಡಾಡಲು ಬಳಸುವ ಊರೆಗೋಲು;
- ಬಿಲ್ಲಿಗೆ ಹೂಡಿ ಹೊಡೆಯಲು ಬಳಸುವ ಬಾಣ; ಸರಳು ಎಂದೂ ಕರೆಯುವುದುಂಟು; Arrow, shaft; A stick used by the kids in Kudureyata(a toy game);
- ಕುದುರೆಯಾಟಕ್ಕೆ ಮಕ್ಕಳು ಬಳಸುವ ದೊಣ್ಣೆ(ನೋಡಿ: ಕೋಲು ಕುದುರೆ);
- ವಿಶೇಷವಾಗಿ ಬಳಕೆಯಾಗುವ ಈ ಪದ ವಿವಿಧ ಸಂದರ್ಭಗಳಲ್ಲಿ ಬೇರೆ ಬೇರೆ ಅರ್ಥಗಳಲ್ಲಿ ಉಪಯೋಗಿಸಲ್ಪಡುತ್ತದೆ; ಉದಾ: ಹಿಟ್ಟಿನಕೋಲು, ಕವೆಗೋಲು, ಮಡಿಕೋಲು ಮುಂತಾದವು;
- ಕೋಲು ಎಂಬ ಪದ ಅದೇ ಅರ್ಥದಲ್ಲಿ ಮರಾಠಿಗೆ ಹೋಗಿದೆ ಎಂದು ಲೋಕಪುರ ಹೇಳುತ್ತಾರೆ; (ಹಳಗನ್ನಡ – ಮರಾಠಿ; ಪು.೧೮೪).
  ಪ್ರ: 'ಹಗ್ಗ ಹರಿಯಲಿಲ್ಲ ಕೋಲು ಮುರಿಯಲಿಲ್ಲ'(ಗಾ).

ಕೋಲು ಕಡೆ Kōlu kaḍe :
- ಕೋಲಾಟದ ಕೋಲುಗಳನ್ನು ಸಂಪ್ರದಾಯ ಬದ್ಧವಾಗಿ ಸಿದ್ಧಪಡಿಸಿಕೊಳ್ಳುವುದು(ಕ.ಜಾ.ಕೋ); A traditional way to prepare sticks of Kolata;
- ಕೋಲು ಹೊಯ್ಯುವಾಗ ಖಣಿಲ್, ಖಣಿಲ್ ಎಂಬ ಶಬ್ದ ಬರುವಂತೆ ಕೆಲವು ನಿರ್ದಿಷ್ಟ ಮರದ ರೆಂಬೆಗಳಿಂದ ಕೋಲು ಕಡಿದು ಶಾಸ್ತ್ರೋಕ್ತವಾಗಿ ಸಿದ್ಧಪಡಿಸುವುದು. A traditional method of preparing stick of Kolata from particular tree twigs.

ಕೋಲುಕಾರ/ಕೋಲಕಾರ/ಕೋಲ್ಕಾರ kōlukāra/kōlakāra/ kōlkāra :
- ಓಲೆಕಾರ; ಸುಗ್ಗಿ ಹಬ್ಬದ ಆಚರಣೆಯ ಕುರಿತು ಸೀಮೆಯಿಂದ ಸೀಮೆಗೆ ಮೌಖಿಕವಾಗಿ ಸುದ್ದಿ ತಲುಪಿಸುವವನಿಗೆ ಕೋಲುಕಾರ/ಕೋಲ್ಕಾರ ಎಂದು ಕರೆಯಲಾಗುತ್ತದೆ; ಕೋಲ್ಕಾರಿಕೆ ಮನೆತನವು ಪರಂಪರೆಯಿಂದ ಬಂದಿರುವ ಹಕ್ಕು ಆಗಿರುತ್ತದೆ; A messenger who carries verbal message about harvest from region to region; he is called Kolukara/Kolkara; Kolkara profession is an inherited right of a lineage;
- ಕೋಲು+ಕಾರ(<ಕಾಱ)=ಕೋಲುಕಾರ>ಕೋಲಕಾರ>ಕೋಲ್ಕಾರ>ಕೋಲ್ಗಾರ;

- ಕೈಯಲ್ಲಿ ಕೋಲನ್ನು ಹಿಡಿದಿರುವವನು; ಸುಂಕ, ತೆರಿಗೆ ಮೊದಲಾದುವನ್ನು ವಸೂಲು ಮಾಡುವವನು; ಸೇವಕ; ಊಳಿಗದವನು; ಕೋಳ್+ -ಕಾಱ(ಕ.ನಿ); Tax collector, custom officer, servant, feudal, one who holds stick in hand;
- ೧.ಕುಲದ ಸಮಾಚಾರವನ್ನು ತಿಳಿಸುವವನು(ತು.ಜಿ); ೨.ದೇವಸ್ಥಾನಕ್ಕೆ ವಂತಿಗೆ ಸಲ್ಲಿಸದವರ ಮನೆಗೆ ಹೋಗಿ ವಸೂಲ್ಮಾಡಿ ತರುವ ವ್ಯಕ್ತಿ(ದ.ಕ); ಕಟ್ಟೆ ಮನೆ ಪದ್ಧತಿಯಲ್ಲಿ ಸೇವಕ; ನಾಡಗೌಡ; ಕಟ್ಟುಗೌಡ; ಕೋಲ್ಕಾರ(ಕ.ಜಾ.ನಿ); ಕೈಯಲ್ಲಿ ಕೋಲು ಹಿಡಿದು ಸುದ್ದಿಮುಟ್ಟಿಸುವ ಹರಿಕಾರ(ಕ.ಜಾ.ಕೋ);
- ಗ್ರಾಮದ ಸೇವಕ; One who communicates the news of a community or a clan; Helper(in village administration or a messenger);
- ಕೋಲಕಾರ; ೧.ಇರುಳಿಗರ ಕುಲ ಪಂಚಾಯ್ತಿಯ ಐದು ಜನರಲ್ಲಿ ಒಬ್ಬ; ಕೋಲು ಹಿಡಿದು ಓಡಾಡುವುದರಿಂದ ಈತನಿಗೆ ಕೋಲುಕಾರನೆಂಬ ಹೆಸರಿದೆ; ಈತ ಪರ ಊರುಗಳಿಗೆ ಕುಲ ಸಂಬಂಧಿ ವಿವರಗಳನ್ನು ತಿಳಿಸುವ ವಿಷಯವಾಹಕ; ೨.ಇರುಳಿಗರಲ್ಲಿ ಎಲ್ಲಾ ಗೌಡರಿಗೆ ವಿಷಯಗಳನ್ನು ಮುಟ್ಟಿಸುವ ಓಲೆಕಾರ; ನಾಡಗೌಡ ಕೊಟ್ಟ ಚೀಟಿಯನ್ನು ಬೇರೆ ಗೌಡರಿಗೆ ತಲುಪಿಸುವ ಕೆಲಸದವ; ಈತನ ಕೈಯ ಕೋಲು ಪರಮ ಪೂಜ್ಯವಾದುದು ಹಾಗೂ ರಕ್ಷಣೆಗಾಗಿಯೂ ಇರುತ್ತದೆ; ಇರುಳಿಗ ಸಮುದಾಯದ ಎಲ್ಲಾ ಶುಭಾಶುಭ ಕಾರ್ಯಗಳಿಗೆ ಮುಂದಾಳಾಗಿರುತ್ತಾನೆ; One who collects contribution or subscription owing to temple, feudatory ruler(Nada Gowda), one who communicates the news; Kolukara, one among the five members of Panchayat in Iruligas clan, he always carries a stick and communicates messages;
- ಹತ್ತಾಳು/ಚಿಕ್ಕ ಯಜಮಾನ; ತಳವಾರ; ಆಡಳಿತದ ವಿವರಗಳನ್ನು ಊರಿಗೆ ತಿಳಿಸುವವ; ದೇವಸ್ಥಾನದ ಸುತ್ತ ಕಸಗುಡಿಸುವವ; ದೇವಸ್ಥಾನದ ಸ್ವಚ್ಛತೆಗೆ ನೇಮಿಸಿದವನು; ಜಾತ್ರೆಯಲ್ಲಿ ಜನರ ರಕ್ಷಣೆಗೆ ನಿಯುಕ್ತನಾದವನು; ದೇವಸ್ಥಾನಕ್ಕೆ ವಂತಿಗೆ ಸಂಗ್ರಹಿಸುವವನು; One who appointed to deliver administrative news, to clean the temple surrounding, temple premium collector, village policeman;
- *—ಕೋಲುಕಾರ ಮಾರ್ಗದರ್ಶಿ* : ಕರಗ ಉತ್ಸವದಲ್ಲಿ ಕರಗ ಪೇಟೆಯಲ್ಲಿ ಸಂಚರಿಸಲು ಹೊರಟಾಗ ಪಂಜು ಹಿಡಿದು ಕರಗಕ್ಕೆ ದಾರಿ ತೋರಿಸುವ ಕಾರ್ಯ ಮಾಡುವ ವ್ಯಕ್ತಿ. One who clears the way for Karaga festival in the town; he carries fire-brand and shows way to the devotees.

ಕೋಲು ಕಿರೀಟ kōlu kirīṭa :

- ಯಕ್ಷಗಾನದಲ್ಲಿ ರಾಜ ವೇಷದ ಕಿರೀಟ(ತು.ನಿ); Crown of the king in Yakshagana;
- ರಾಜ ವೇಷಗಳ ಕಿರೀಟ(ಉ.ಕ.ಜಿ); Crown of the king(player);
- ಯಕ್ಷಗಾನದಲ್ಲಿ ಒಂದೊಂದು ಬಗೆಯ ಪಾತ್ರಗಳಿಗೆ ಒಂದೊಂದು ವಿಧವಾದ ಕಿರೀಟಗಳನ್ನು ಬಳಸುತ್ತಾರೆ; ರಾಜನ ವೇಷಕ್ಕೆ ಒಪ್ಪುವಂತಹ ಒಂದು ಬಗೆಯ ವಿಶೇಷವಾದ ಕಿರೀಟ ಬಳಸುವುದುಂಟು; ಇದನ್ನು 'ಕೋಲು ಕಿರೀಟ' ಎನ್ನುತ್ತಾರೆ. In Yakshagana each role adorns a particular crown; the player who plays the role of king uses a special kind of crown; that is called `Kolu kirita'.

ಕೋಲು ಕುಣಿತ kōlu kuṇita :

- ಡೊಳ್ಳಿನ ಕುಣಿತದ ಒಂದು ಪ್ರಕಾರ; A type of dance in dollu kunitha(drum);
- ಮೈಲಾರ ಲಿಂಗನ ಆರಾಧನೆಯ ಸಂದರ್ಭದಲ್ಲಿ ಡೊಳ್ಳಿನ ಶಬ್ದಕ್ಕೆ ಅನುಗುಣವಾಗಿ ಮೈಲಾರಲಿಂಗನ ಭಕ್ತರು ಮಾಡುವ ಕುಣಿತವಾಗಿದೆ; The devotees of Mylaralinga dance to the sound of dollu(drum);
- ಇದೊಂದು ಜನಪದ ಕಲೆಯಾಗಿ ಜನಪ್ರಿಯಗೊಂಡಿದೆ; It is a popular kind of folk art;
- 'ಕೋಲು' ಒಂದು ಸಾಮಾನ್ಯ ಕಟ್ಟಿಗೆ; ಇದು ವಾದ್ಯ, ಕುಣಿತ, ಭಕ್ತಿ ಮತ್ತು ಭಾವ ಸಂಪರ್ಕಕ್ಕೆ ಬಂದ ಕೂಡಲೆ, ಕಟ್ಟಿಗೆಯಾಗಿ ಉಳಿಯದೆ 'ಕಲಾಕೋಲಾ'ಗಿ

ಮಾರ್ಪಡುತ್ತದೆ; ಕಲೆ ಪ್ರತಿಯೊಂದು ವಸ್ತುವಿಗೂ ಮಾಂತ್ರಿಕತೆಯೊಂದನ್ನು ನೀಡುತ್ತದೆ ಎಂಬುದಕ್ಕೆ ಇದು ಒಂದು ನಿದರ್ಶನ. `Kolu' is a common stick; it is used as a artistic stick(musical instrument) to beat drums; it is a good example for magical power of art.

ಕೋಲು ಕುದುರೆ kōlu kudure :

- ೧.ಮಕ್ಕಳು ಕಾಲುಗಳ ನಡುವೆ ಕುದುರೆಯಂತೆ ಇಟ್ಟುಕೊಂಡು ಓಡಾಡುವ ಕೋಲು; A stick, the children use to play as horse; ೨.ಸಾಮಾನ್ಯವಾಗಿ ಅಡ್ಡಪಟ್ಟಿ ಹಾಕಿ ಜೋಡಿಯಾಗಿರುವ ಕಂಕುಳು ಕೋಲು; ಕುಂಟನ ಊರೆಗೋಲು; Clutch of a lame footed person, prop;
- ಕೋಲು(<ಕೋಲ್)+ಕುದುರೆ(ಕ.ನಿ);
- ಮಕ್ಕಳಾಟದಲ್ಲಿನ ಒಂದು ಬಗೆ; ಹಿರಿಯರ ಊರುಗೋಲನ್ನು ಅಥವಾ ಒಂದು ದೊಣ್ಣೆಯನ್ನು ಕಾಲುಗಳ ನಡುವೆ ತೂರಿ, ಒಂದು ತುದಿಯನ್ನು ಕೈಯಲ್ಲಿ ಹಿಡಿದು ಮುಂದೆ ಮುಂದೆ ಕುದುರೆಯಂತೆ ಓಡುವರು; ಹಿಂದಿನ ತುದಿ ನೆಲಕ್ಕೆ ತಾಗಿ, ಓಡುವಾಗ ನೆಲದಲ್ಲಿ ಉಜ್ಜುತ್ತಾ, ಶಬ್ದ ಮಾಡುತ್ತದೆ; ಮಕ್ಕಳು ಓಡಿ, ಓಡಿ ದಣಿಯುವವರೆಗೂ ಈ ಆಟ ಮುಂದುವರಿಯುತ್ತದೆ; ಕೋಲು ಕುದುರೆಯನ್ನು ಕುರಿತ ಪಂಜೆ ಮಂಗೇಶರಾಯರ "ಅಜ್ಜನ ಕೋಲಿದು ನನ್ನಯ ಕುದುರೆ, ಹೆಜ್ಜೆ ಹೆಜ್ಜೆಗೂ ಕುಣಿಯುವ ಕುದುರೆ, ಕಾಲಿಲ್ಲದೆಯೆ ನಡೆಯುವ ಕುದುರೆ, ಕೂಳಿಲ್ಲದೆಯೆ ಬದುಕುವ ಕುದುರೆ"; ಎಂಬ ಕವಿತೆಯ ಸಾಲುಗಳನ್ನು ಗಮನಿಸಬಹುದು. A kind of children's play, the children use the cluch or walking stick of the elders to play horse game; Panje Mangesharaya, a great Kannada poet has written a poem on horsegame(Kolu kudure).

ಕೋಲುಕೈ kōlukai :

ಮೊಣಗಂಟಿನಿಂದ ಮಣಿಗಂಟಿನವರೆಗಿನ ಕೈಯ ಭಾಗ(ದ.ಕ); ಮೊಳಕೈಯಿಂದ ಹಸ್ತದ ಮಣಿಕಟ್ಟಿನ ನಡುವಣ ಕೈಯಿನ ಭಾಗವೇ ಕೋಲುಕೈ. Middle part of hand from the elbow to wrist.

ಕೋಲುಗಂಬ kōlugamba :

- ಮನೆಯ ಮಧ್ಯಭಾಗದಲ್ಲಿರುವ ಕಂಬ; ಇದು ಕೀಲುಗಂಬಕ್ಕಿಂತಲೂ ಉದ್ದವಾಗಿರುತ್ತದೆ(ದ.ಕ)(ಕ.ಜಾ.ನಿ); A pillar in the middle of the house; it is lengthier than the Keelugamba;
- ಕೀಲುಗಂಬ/ಕೀಲ್ಗಂಬ=ಆಧಾರಸ್ತಂಭ, ಮೂಲಸ್ತಂಭ (ಕ.ನಿ). Keelugamba: base pillar(corner pillar), main pillar.

ಕೋಲು ಗಗ್ಗರ kōlu gaggara :

- ಭೂತ ಪಾತ್ರಿಗಳು ಕಾಲಿಗೆ ಕಟ್ಟುವ ಒಂದು ವಿಧದ ಉದ್ದವಾದ ಗೆಜ್ಜೆ ಕಡಗ(ತು.ನಿ); A kind of anklet bracelet adorns the legs of the players of Bhutha character;
- ಬಣ್ಣದ ವೇಷಧಾರಿಗಳು ಕಾಲಿಗೆ ಕಟ್ಟಿಕೊಳ್ಳುತ್ತಿದ್ದ ಚಿಕ್ಕ ಗಗ್ಗರ(ದ.ಕ)(ಕ.ಜಾ.ನಿ);
- ಕಿರುಗೆಜ್ಜೆಗಳುಳ್ಳ ಆಭರಣ; ಕಾಲಕಡಗ. Anklet, an ornament for the ankle.

ಕೋಲುಗತ್ತಿ kōlugatti :

- ಗುಪ್ತವಾಗಿ ಬಳಸಬಹುದಾದ ಕತ್ತಿ; ಇರಿಗತ್ತಿ; ಗುಪ್ತಿ(ಕ.ಜಾ.ನಿ); A secret scimitar, dagger(short knife);
- ರಹಸ್ಯವಾಗಿ ಮುಚ್ಚಿಟ್ಟುಕೊಂಡು ಸಮಯ ನೋಡಿ ಇನ್ನೊಬ್ಬರನ್ನು ಇರಿಯಲು ಬಳಸುವ ಸಣ್ಣಕತ್ತಿ. A secretive dagger or scimitar uses to stab.

ಕೋಲುಗದ್ದೆ kōlugadde :

- ಚಿಕ್ಕಮಗಳೂರು ಜಿಲ್ಲೆ ಮೂಡಗೆರೆ ತಾಲ್ಲೋಕಿನ ಕ್ರಿ.ಶ.೧೩ನೇ ಶತಮಾನದ ೮೬ನೇ ಶಾಸನದಲ್ಲಿ ಉಲ್ಲೇಖ; It is referred in the 86th inscription of Chikkamaguluru district, Mudigere taluk in 13th century AD.
- ಕಳಸದ ಕಳಸನಾಥನಿಗೆ ಕೊಟ್ಟ ದಾನದ ವಿವರವಿದೆ; Referred regarding the contribution to the Kalasanatha of Kalasa;
- ಕೋಲು+ಗದ್ದೆ=ಕೋಲುಗದ್ದೆ; 'ಕೋಲು' ಎಂದರೆ 'ದೊಡ್ಡ' ಎಂಬ ಅರ್ಥವೂ ಇರುವುದರಿಂದ, 'ದೊಡ್ಡಗದ್ದೆ' ಎಂದು ಕರೆಯ ಬಹುದೆ?

Kolu+gadde=Kolugadde, `Kolu means big, therefore it means Doddagadde(big field);
- ವ್ಯವಸಾಯಕ್ಕೆ ಬಳಸುವ ಭೂಮಿ ಎಂದೂ ಅರ್ಥೈಸಬಹುದೇನೊ? May be referred as an agricultural land;
- ಅಳತೆಗೆ ಬಳಸುವ ಸಾಧನವಾಗಿಯೂ ಅರ್ಥ ಹೇಳಲು ಸಾಧ್ಯವಾಗಬಹುದು? May be referred as an instrument for measurement.

(E.C- ೧೧; ಚಿಕ್ಕ.ಜಿ.)

ಕೋಲುಗಲ್ಲಿ kōlugalli :
- ದೊಣ್ಣೆಯ ತುದಿಗೆ ಸಿಕ್ಕಿಸಿಕೊಂಡ ಕಲ್ಲಿಚೀಲ; ಕೋಲು (<ಕೋಲ್)+ಕಲ್ಲಿ)(ಕ.ನಿ); A net attached on the end of a stick;
- ಮರದಲ್ಲಿನ ಮಾವಿನಕಾಯಿ, ಸೀಬೆಕಾಯಿ ಇತ್ಯಾದಿಗಳು ಹಣ್ಣಿಗೆ ಬರುವಾಗ ನೆಲಕ್ಕೆ ಬಿದ್ದು ಹಾಳಾಗದಂತೆ ಕೋಲುಗಲ್ಲಿಯಿಂದ ಕೀಳುತ್ತಾರೆ; A net to pluck fruits from the trees(mango, guava etc) fruit-plucker;
- ಕೋಲಿನ ತುದಿಯಲ್ಲಿ ವೃತ್ತಾಕಾರದ ಕಬ್ಬಿಣದ ಬಳೆ ಇದ್ದು ಅದಕ್ಕೆ ಕಲ್ಲಿ ಚೀಲವನ್ನು ಕಟ್ಟಿರುತ್ತಾರೆ; ಕೀಳಬೇಕಾದ ಹಣ್ಣುಗಳ ತೊಟ್ಟಿನ ಭಾಗಕ್ಕೆ ಕಬ್ಬಿಣದ ಬಳೆಯನ್ನು ಸೇರಿಸಿ, ಹಣ್ಣು ಕಲ್ಲಿಯೊಳಗೆ ಬೀಳುವಂತೆ ಎಳೆಯುತ್ತಾರೆ; ಇದರಿಂದ ಹಣ್ಣುಗಳು ಕಲ್ಲಿ ಚೀಲದೊಳಗೆ ಬೀಳುತ್ತವೆ; ಅವುಗಳನ್ನು ಸುರಕ್ಷಿತವಾಗಿ ತೆಗೆದು ರಾಶಿ ಮಾಡಿಕೊಳ್ಳುತಾರೆ; A net is attached on the end of the stick; the catching net or bags(sacks) used as a basket to avoid damage to the fruits(from falling down);
- ಕಲ್ಲಿ ಬಳಸದಿದ್ದರೆ ಹಣ್ಣು ಕೆಳಗೆ ಬಿದ್ದು ಗಾಯಗೊಳ್ಳುತ್ತದೆ; ಹೀಗೆ ಬಿದ್ದು ಗಾಯಗೊಂಡ ಕಾಯಿ ಹಣ್ಣಾಗುವಾಗ ಕೊಳೆತು ಹಾಳಾಗುತ್ತದೆ; ಆದ್ದರಿಂದ ಮರದಿಂದ ಹಣ್ಣಿಗೆ ಬಂದ ಕಾಯಿಗಳನ್ನು ಸುರಕ್ಷಿತವಾಗಿ ಕೀಳಲು ಈ 'ಕೋಲುಗಲ್ಲಿ' ಅಗತ್ಯ;
- 'ಕಲ್ಲಿ' ಬಲೆಯ ರೀತಿಯ ಹೆಣಿಗೆಯನ್ನು ಹೊಂದಿರುವುದೂ ಉಂಟು. Net or bag sack is in fornt of woven.

ಕೋಲುಗಳ್ಳಿ/ಕೋಡುಗಳ್ಳಿ kōlugaḷḷi/ kōḍugaḷḷi :
- Euphorbia tirucalli; ಕಳ್ಳಿಯ ಒಂದು ಬಗೆ; Euphorbia tirucalli, a kind of tirucalli(pencil cactus)
- ಕೋಲಕಳ್ಳಿ/ಕೋಲುಕಳ್ಳಿ; ಒಂದು ಜಾತಿಯ ನೆಟ್ಟಗೆ ಬೆಳೆಯುವ ಕಳ್ಳಿಗಿಡ(ತು.ನಿ); A type of straight grow tirucalli plant;
- ಕೋಲುಗಳ್ಳಿ/ಕೋಲ್ಗಳ್ಳಿ; ಒಂದು ಬಗೆಯ ಕಳ್ಳಿಗಿಡ(ಮಂಡ್ಯ.ಜಿ); Firestick plants, pencil tree, a kind of tirucalli plant;
- ಕೋಲುಗಳ್ಳಿ, ಎಲೆಗಳಿಲ್ಲದೆ ಎತ್ತರವಾಗಿ ಮತ್ತು ಪೊದೆಯಾಗಿ ಬೆಳೆಯುವ ಒಂದು ಕಳ್ಳಿಯ ಜಾತಿ; ಕೋಲುಕಳ್ಳಿ(ಕೋಲು(<ಕೋಲ್)+ಕಳ್ಳಿ)(ಕ.ನಿ); A bush like plant without leaves;
- ಕೋಲು+ಕಳ್ಳಿ=ಕೋಲುಗಳ್ಳಿ>ಕೋಲ್ಗಳ್ಳಿ; ಇದು ಕೋಲಿನಂತೆ ಬೆಳೆಯುತ್ತಾ, ಗಿಣ್ಣು ಗಿಣ್ಣುಗಳಾಗಿ ಕವಲೊಡೆದು ಬೆಳೆಯುವ ಮುಳ್ಳಿಲ್ಲದ ಕಳ್ಳಿ ಜಾತಿಯ ಗಿಡ; Kolu+calli=Kolgalli; it grows like a stick; it has a bush like branch masses that are a noticeable feature of the plant;
- 'ಕೋಲುಗಳ್ಳಿ' ಕ್ರಮೇಣ 'ಕೋಳುಗಳ್ಳಿ'ಯಾಗಿ, 'ಕೋಳು' ಪದದ 'ಳ'ಕಾರಕ್ಕೆ ಉಚ್ಚಾರಣೆಯಲ್ಲಿ 'ಡ'ಕಾರ ಬಂದು 'ಕೋಡುಗಳ್ಳಿ' ಎಂದಾಗಿರಬಹುದೆಂದು ತೋರುತ್ತದೆ[ಕೋಲುಗಳ್ಳಿ> ಕೋಳುಗಳ್ಳಿ>ಕೋಡುಗಳ್ಳಿ];
  = ಆದರೆ 'ಕೋಡುಗಳ್ಳಿ'ಯೇ ಮೊದಲಿದ್ದು, ಆಮೇಲೆ 'ಕೋಳುಗಳ್ಳಿ' (ಡ>ಳ) ಆಗಿರಲೂಬಹುದು;
- ಉದ್ಯಾನಗಳಲ್ಲಿ, ಹಿತ್ತಲು, ಹೊಲಗಳಲ್ಲಿ ಬೇಲಿಗಾಗಿ ಇದನ್ನು ಬೆಳೆಸುತ್ತಾರೆ; It grows in the garden, backyard, agricultural lands as a fencing(hedges);
- ಕಾಂಡದ ಹಾಲು ಹಲ್ಲು ನೋವು; ಅಸ್ತಮಾ, ಸಂಧಿವಾತಗಳಿಗೆ ಔಷಧಿಯಾಗಿ ಬಳಕೆ; The milk in its stem or stalk is useful for toothache, asthama, arthritis;
- ಇದರ ರಸ ಔಷಧಿಯ ಗುಣವುಳ್ಳದ್ದು; ಕಿವಿನೋವು ಉಂಟಾದಾಗ ಹಳದಿ ಬಣ್ಣಕ್ಕೆ ತಿರುಗಿದ ಕೋಲ್ಗಳ್ಳಿಯ

ಕಡ್ಡಿಯನ್ನು ಕೈಯೆಣ್ಣೆ ದೀಪದ ಕುಡಿಯಲ್ಲಿ ನಸು ಬೆಚ್ಚಗೆ ಮಾಡಿ, ಅದರ ರಸವನ್ನು ಒಂದೆರಡು ತೊಟ್ಟು ಕಿವಿಯೊಳಗೆ ಹಿಂಡಿದರೆ ನೋವು ಶಮನವಾಗುತ್ತದೆಂದು ಹೇಳುತ್ತಾರೆ;

- ಹಬ್ಬಿ ಬೆಳೆದು ಚಿನ್ನದ ಬಣ್ಣದ ನೂಲಿನಂತೆ ಕಾಣುವ ಇದರ ಬಳ್ಳಿಯನ್ನು ಜ್ವರ ಬಂದ ಮಕ್ಕಳ ಕೊರಳಿಗೆ ಸುತ್ತಿದರೆ ಜ್ವರ ಕಡಿಮೆಯಾಗುತ್ತದೆಂಬ ನಂಬಿಕೆ ಇದೆ;
- ಇದರ ಬೇರುಗಳನ್ನು ಮೀನು ಮತ್ತು ಹಕ್ಕಿಗಳಿಗೆ ವಿಷವಾಗಿ ಬಳಕೆ ಮಾಡುತ್ತಾರೆ; Root of this plant is poisonous for fish and birds;
- ಇದರಲ್ಲಿ ಎಲೆಗಳು ಸಣ್ಣ ಸಣ್ಣ ಹಸಿಯ ಕಡ್ಡಿಗಳಂತಿರುತ್ತವೆ; ಮನೆಯಲ್ಲಿ ಇದರ ಸಣ್ಣ ಸಣ್ಣ ಟೊಂಗೆಗಳನ್ನು ಕಟ್ಟಿದರೆ ಕಣ್ಣಿಗೆ ಮುತ್ತುವ ಗುಂಗುರು/ನೊರಜು ಕಡಿಮೆಯಾಗುತ್ತದೆಂಬ ನಂಬಿಕೆ;
- ಮದುವೆಯಲ್ಲಿ ಮುಹೂರ್ತಕ್ಕೆ ಬಳಕೆ; ಮೂರು/ಐದು ಕವಲುಗಳಿರುವ ಕೋಲುಗಳ್ಳಿಯನ್ನು ಕತ್ತರಿಸಿ ತಂದು, ಅದಕ್ಕೆ ಅರಿಶಿಣ, ಕುಂಕುಮ, ಅಕ್ಷತೆ ಹಚ್ಚಿ, ಐಧಾನ್ಯದ ಗಂಟನ್ನು ಕಟ್ಟಿ, ಐದು ಜನ ಮುತ್ತೈದೆಯರು ಮುಟ್ಟಿ ಪೂಜಿಸಿ 'ಹಸೆಕಂಬ'ವಾಗಿ ತಂದು ಚಪ್ಪರದ ಮನೆಯಲ್ಲಿ ಶಾಸ್ತ್ರೋಕ್ತವಾಗಿ ನಿಲ್ಲಿಸುತ್ತಾರೆ; On the occasion of wedding ceremony(in Hindus) Tirucalli: with five branches is used to worship on the previous day of wedding ceremony;
- ಕೆಲವು ಕಡೆ ಶವ ಸಂಸ್ಕಾರದಲ್ಲಿ ಚಟ್ಟ/ಕುರ್ಜು ಕಟ್ಟುವಾಗ ಕೆಳಗೆ ಹಾಸುವ ಕೋಲುಗಳಲ್ಲಿ ಮುಂದಿನ ಒಂದು ಕೋಲು ಕೋಲುಗಳ್ಳಿಯದೇ ಆಗಿರಬೇಕೆಂಬ ಪದ್ಧತಿ ಅನುಸರಿಸಲಾಗುತ್ತದೆ; In some places people use a stick of Kolukalli in wooden hearse(bier);
- ಹೀಗೆ ಜನಪದರಲ್ಲಿ ಕೋಲುಗಳ್ಳಿ/ಕೋಲ್ಗಳ್ಳಿ ಔಷಧಿಯಾಗಿ ಶಾಸ್ತ್ರೋಕ್ತ ಆಚರಣೆಯ ಪದ್ಧತಿಯಾಗಿ ಬಳಕೆಯಲ್ಲಿದೆ. ವ್ಯರೂ: ಕೋಲಕಳ್ಳಿ/ ಕೋಲಗಳ್ಳಿ, Tirucalli(firestick) is having medicinal as well as traditional values in folk culture.

ಕೋಲು ಗುದ್ದಲಿ kōlu guddali :

- ಮಣ್ಣು ಕೆದಕುವ ಕಬ್ಬಿಣದ ಸಾಧನ(ಬೆಂ.ಗ್ರಾ.ಜಿ)/ ಮಂಡ್ಯ.ಜಿ/ಚಾ.ಜಿ); Spade, hoe;
- ಸುಮಾರು ಮೂರು ಇಂಚು ಅಗಲವಿದ್ದು, ಒಂದರಿಂದ ಒಂದೂಕಾಲು ಅಡಿ ಉದ್ದವಿರುವ, ಗುದ್ದಲಿಯಂತೆ ಭೂಮಿಯನ್ನು ಅಗೆಯಲು ಬಳಸುವ ಕಬ್ಬಿಣದ ಸಾಧನ; ತಲೆ ಭಾಗದಲ್ಲಿ ತೂಬು ಇದ್ದು ಮರದ ಕಾವು/ಕಾಮು ಸೇರಿಸಲಾಗಿರುತ್ತದೆ; A tool with a flat blade of two to three inches width, one to two feet height attached at right angle to a long handle(wooden); it is used to dig the soil(earth);
- ಕೋಲು ಸಲಿಕೆ; ಬಾಗಿದ ಕೋಲಿನಂತಿರುವ ಕಬ್ಬಿಣದ ತೂಬುವುಳ್ಳ ತುಂಡಿಗೆ ಮರದ ಕಾಮನ್ನು ಸೇರಿಸಿ ಭೂಮಿಯನ್ನು ಅಗತೆ ಮಾಡುವ ಸಾಧನವಾಗಿ ಬಳಸುತ್ತಾರೆ; A hoe with iron blade and wooden handle to dig or hoeing the land;
- ಉಳುಮೆ ಮಾಡುವಾಗ ಪಾತಿಗಳ ತೆವರುಗಳ(ಬದುಗಳ) ಮೂಲೆಗಳನ್ನು ಉಳಲು ಸಾಧ್ಯವಾಗುವುದಿಲ್ಲ; ಅಂತಹ ಮೂಲೆಯನ್ನು ಅಗತೆ ಮಾಡಲು, ಕೈದೋಟದಲ್ಲಿ ಅಗತೆ ಮಾಡಲು ಬಳಸುತ್ತಾರೆ; It is very useful to hollow out the corners of the seed beds; hoe is used in kitchen garden;
- ರಾಗಿ ಪೈರಿನ ಸಾಲುಗಳ ನಡುವೆ ಬೆಳೆದ ಕಳೆ ತೆಗೆಯಲು, ಕಬ್ಬಿನ ಪೈರುಗಳ ಪಟದ ನಡುವೆ ಅಗತೆ ಮಾಡಿ ಬೇರು ಸಹಿತ ಕಳೆ ತೆಗೆಯಲು, ಭೂಮಿಯನ್ನು ಸಡಿಲಗೊಳಿಸಲು ಬಳಕೆಯಾಗುತ್ತದೆ; It is useful to remove the weed in the middle of furrows(of paddy, ragi, sugarcane);
- ಇದು ಗುದ್ದಲಿಯಂತಿದ್ದು, ಅಗಲ ಕಡಿಮೆಯಾಗಿ ಉದ್ದವಾಗಿರುವುದರಿಂದ 'ಕೋಲು ಗುದ್ದಲಿ' ಎಂಬ ಹೆಸರು ಬಂದಿರುವಂತೆ ತೋರುತ್ತದೆ; (ಕೋಲು+ ಗುದ್ದಲಿ=ಕೋಲುಗುದ್ದಲಿ); ಇದು ಬೇಸಾಯಕ್ಕೆ ಬೇಕಾದ ಉಪಕರಣಗಳಲ್ಲಿ ಒಂದಾಗಿದೆ.

ಕೋಲು ಚಿಮ್ಮಾಟ kōlu cimmāṭa :

- ಇದನ್ನು 'ಕೋಲು ಎಸೆಯುವ ಆಟ' ಎಂದೂ ಕರೆಯಲಾಗುತ್ತದೆ; It is known as stick throwing game or 'Kolu eseyuva āṭa';

- ಇದು ಹುಡುಗರು ಆಡುವ ಒಂದು ಆಟ; ಕೋಲು+ ಚಿಮ್ಮುವ + ಆಟ = ಕೋಲು ಚಿಮ್ಮುವಾಟ > ಕೋಲು ಚಿಮ್ಮಾಟ; ಕೋಲು+ಚಿಮ್ಮು+ಆಟ> ಕೋಲು ಚಿಮ್ಮುಆಟ > ಕೋಲು ಚಿಮ್ಮಾಟ ಆಗಿರಬಹುದು; ಚಿಕ್ಕ ಕೋಲನ್ನು ಇನ್ನೊಂದು ಉದ್ದವಾದ ಕೋಲಿನಿಂದ ಚಿಮ್ಮಿಸಿ, ದೂರಕ್ಕೆ ಹೊಡೆಯುವ ಆಟವಾಗಿರುವ ಸಾಧ್ಯತೆ ಇದೆ; ಇದು ಚಿಣ್ಣಿ–ದಾಂಡಿನ ಆಟದ ಬೇರೊಂದು ರೂಪ ಇರಬಹುದೆ? In this folk game the players toss a short stick to the distance with the help of a long stick; it may be another form of `Chinni-dandu', a folk game;
- ಹುಡುಗರು ಕೋಲು ಬಳಸಿ ಆಡುವ ಆಟಗಳಲ್ಲಿ ಒಂದು; ಕಲ್ಲು ಕುಟಿ ಕುಟಿ ಆಟ; A type of folk game played by the boys;
- ಹತ್ತಾರು ಹುಡುಗರು ಗುಂಪು ಸೇರಿ ಕೈಗಳನ್ನು ಹೊಯುತ್ತಾ ಪಾಸು–ಫೇಲು ಹಾಕುವುದು; ಅದರಲ್ಲಿ ಕೊನೆಗೆ ಸೋತವನು ತನ್ನ ಕೋಲನ್ನು ನಿರ್ದಿಷ್ಟ ಆಟದ ಸ್ಥಳದಲ್ಲಿ ಇಡುತ್ತಾನೆ; A group of boys in this game select a boy who fails to be same in the selection to bring the tossed stick to the particular spot;
- ಉಳಿದವರು ಆ ಕೋಲನ್ನು ತಮ್ಮ ಕೋಲುಗಳಿಂದ ಚಿಮ್ಮಿಸುತ್ತಾ ದೂರ ದೂರಕ್ಕೆ ಎಸೆದು ಮುಂದುವರಿಯುತ್ತಾರೆ; ಈ ಸಮಯದಲ್ಲಿ ಸೋತವನು ತನ್ನ ಕೋಲನ್ನು ಚಿಮ್ಮುತ್ತಾ ದೂರಕ್ಕೆ ಹೊಡೆಯುವವರ ಕೋಲು ಮುಟ್ಟಲು ಓಡಾಡುತ್ತಾನೆ; ಆತನಿಗೆ ತಮ್ಮ ಕೋಲನ್ನು ಮುಟ್ಟಲು ಬಿಟ್ಟುಕೊಡದೆ ಕಲ್ಲಿನ ಮೇಲೆ ತಕ್ಷಣ ತಮ್ಮ ಕೋಲನ್ನು ಇಟ್ಟುಕೊಳ್ಳುತ್ತಾರೆ; ಹೀಗೆ ಕಲ್ಲಿನ ಮೇಲೆ ಕೋಲು ಇಟ್ಟುಕೊಂಡಾಗ ಅವರ ಕೋಲು ಮುಟ್ಟುವಂತಿಲ್ಲ; ಒಂದು ವೇಳೆ ಮುಟ್ಟಿದರೂ ಅವರು ಔಟ್(ಹೊರ ಹೋಗುವುದು) ಆಗುವುದಿಲ್ಲ;
- ಕೋಲು ಚಿಮ್ಮುವಾಗ ಅಥವಾ ಕೋಲು ಚಿಮ್ಮಿಸಿದ ನಂತರ ತಮ್ಮ ಕೋಲನ್ನು ಕಲ್ಲಿನ ಮೇಲೆ ಇಟ್ಟುಕೊಳ್ಳಲು ಆಗದಿದ್ದಾಗ ಸೋತವನು ಕೋಲು ಮುಟ್ಟಿದ್ದಾದರೆ ಆಗ ಆ ವ್ಯಕ್ತಿ ಔಟ್ ಆಗುತ್ತಾನೆ;
- ಇನ್ನೊಬ್ಬನನ್ನು ಔಟ್ ಮಾಡಿದ ಸ್ಥಳದಿಂದ ಈ ಮೊದಲು ಸೋತಿದ್ದ ವ್ಯಕ್ತಿ ತನ್ನ ಕೋಲನ್ನು ತೆಗೆದುಕೊಂಡು ಎಲ್ಲಿಯೂ ಕಾಲು ಬಿಡದೆ ಒಂಟಿಕಾಲಲ್ಲಿ ಕುಂಟುತ್ತಾ ಆಟ ಆರಂಭಗೊಂಡ ನಿರ್ದಿಷ್ಟ ಸ್ಥಳಕ್ಕೆ ತಲುಪಬೇಕು; ಒಂದು ವೇಳೆ ಮಧ್ಯೆ ಕಾಲು ಬಿಟ್ಟರೆ ಮತ್ತೆ ಹಿಂದಿನ ಸ್ಥಳಕ್ಕೆ ಹೋಗಿ ಪುನಃ ಕುಂಟುತ್ತಾ ಬರಬೇಕು; ನಿರ್ದಿಷ್ಟ ಸ್ಥಳ ತಲುಪಿದಾಗ ಅಲ್ಲಿಗೆ ಅವನ ಸರದಿ ಮುಗಿಯುತ್ತದೆ;
- ಹೊಸದಾಗಿ ಔಟಾದವನ ಕೋಲನ್ನು ನಿರ್ದಿಷ್ಟ ಸ್ಥಳದಲ್ಲಿಟ್ಟು ಚಿಮ್ಮಿಸುತ್ತಾ ಮುಂದೆ ಮುಂದೆ ಸಾಗುವ ಆಟ ಮುಂದುವರಿಯುತ್ತದೆ; ಕೆಲವೊಮ್ಮೆ ಸೋತವನು ಒಂದೆರಡು ಕಿಲೋ ಮೀಟರ್‌ಗಳಿಂದ ಕುಂಟಿ ಬರಬೇಕಾದ ಪರಿಸ್ಥಿತಿ ಬರುವುದುಂಟು;
- ಹೀಗೆ ಕೋಲು ಚಿಮ್ಮುವ ಆಟದ ವಿಧಾನ ಕೆಲವು ಪ್ರದೇಶಗಳಲ್ಲಿ ಕಂಡುಬರುತ್ತದೆ; ಇದೊಂದು ಗ್ರಾಮೀಣ ಮಕ್ಕಳ ಮನೋರಂಜಕ ಆಟವಾಗಿದೆ.

ಕೋಲುಜೇನು/ಕೋಲ್ಜೇನು kōlujēnu/ kōljēnu :

- ಒಂದು ಬಗೆಯ ಜೇನು; ಕೋಲಿನಲ್ಲಿ ಕಟ್ಟುವ ಜೇನು (ಕ.ಜಾ.ಕೋ); A type of beehive(Apis florea); this type of bees build on the branches of trees;
- ಮರದ ಪುಟ್ಟ ಕೊಂಬೆಯಲ್ಲಿ ಕಟ್ಟುವ ಜೇನು [ಕೋಲು(<ಕೋಲ್)+ಜೇನು(<ಜೇನ್)](ಕ.ನಿ); Beehive build on the branches of trees;
- ಮರ–ಗಿಡಗಳ ರೆಂಬೆ/ಟಿಸಿಲುಗಳಿಗೆ ಸಣ್ಣ ರಟ್ಟು ಕಟ್ಟಿ ತುಪ್ಪ ಮಾಡುವಸಣ್ಣ ಜೇನು; ಕೋಲುಜೇನು ಔಷಧಿಯ ಗುಣ ಹೊಂದಿದ್ದು ಕೆಮ್ಮು, ದಮ್ಮು ಇತ್ಯಾದಿಗೆ ಮನೆಮದ್ದಾಗಿ ಬಳಕೆಯಾಗುತ್ತದೆ; Beehive on the branches of tree, twigs of plants are having medicinal values; it is used for coughing, wheezing;
- ಬೇಟೆಗಾರರು ಕೋಲು ಜೇನು ಕಟ್ಟಿದ ಮರದ ರೆಂಬೆಯ ಕಡ್ಡಿಯನ್ನು ಕತ್ತರಿಸಿ ಮನೆಗೆ ತಂದು ಇಟ್ಟುಕೊಳ್ಳುವುದುಂಟು; ದನಕರುಗಳಿಗೆ ಬಾವು ಕಂಡುಬಂದಾಗ ಜೇನು ಕಟ್ಟಿದ್ದ ಕೋಲನ್ನು ಬಾವು ಆಗಿರುವ ಜಾಗಕ್ಕೆ ತಾಗಿಸಿದರೆ ಬಾವು ಗುಣವಾಗುತ್ತದೆಂಬ ನಂಬಿಕೆ ಇದೆ. The hunters carry the twigs or branches on which

beehive built to home; it is used to treat the swelling of the cattle.

ಕೋಲು ದೊಂದಿ kōlu dondi :

ಮರದ ಕೋಲಿಗೆ ಅಥವಾ ಬಿದಿರನ ಸಲಾಕೆಗೆ ಬಟ್ಟೆ ಸುತ್ತಿ ಎಣ್ಣೆ ಸುರಿದು ಮಾಡಿದ ಪಂಜು(ಭೂತದ ಕೋಲ, 'ಅಗೆಲು' ಬಡಿಸುವುದು, ದೀಪಾವಳಿಯ ಬಲೀಂದ್ರ ಪೂಜೆ ಮಾಡುವುದು ಮೊದಲಾದ ಸಂದರ್ಭಗಳಲ್ಲಿ ಬಡಿಸಿದ ನೈವೇದ್ಯಕ್ಕೆ ಈ ದೊಂದಿಯನ್ನು ಹಚ್ಚಿ ಇಡುತ್ತಾರೆ)(ತು.ನಿ). Fire-brand, made of wooden or bamboo stick along with oiled cloth wrapping; this type of fire-brand is used during the festivities of Bhuthkola, Diwali(Balindra puja).

ಕೋಲು ನುರ್ಗೆ kōlu nurge :

- ನುಗ್ಗೆಕಾಯಿಯ ಕೋಡು; ನುಗ್ಗೆ ಮರದ ಕೊಂಬೆ; ಟೊಂಗೆ; 'ನುಗ್ಗೆ' ಕೂಡ ಕೋಲಿನಂತಿರುವುದನ್ನು ಈ ಪದ ಹೇಳುತ್ತಿರಬಹುದು; Bough or branch of drumstick tree, drumstick;
- ನುಗ್ಗೆ ಮರದ ಒಂದು ರೆಂಬೆಯನ್ನು ಸುಮಾರು ಮೂರು ಅಡಿ ಉದ್ದದಷ್ಟು ಕಡಿದು ಅದನ್ನು ಬೇರೊಂದು ಕಡೆ ನೆಟ್ಟು ನೀರು, ಗೊಬ್ಬರ ಹಾಕಿದರೆ ಅದು ಚಿಗುರೊಡೆದು ಮರವಾಗಿ ಬೆಳೆಯುತ್ತದೆ; A stem, stalk or branch about three feet height can be planted;
- ಇಲ್ಲಿ 'ನುರ್ಗೆ' ಒಂದು ಪ್ರಾಚೀನ ರೂಪ; ಅದರ ಇತ್ತೀಚಿನ ರೂಪ 'ನುಗ್ಗೆ'(ವಿಜಾತೀಯ ವ್ಯಂಜನ ದ್ವಿತ್ವ> ಸಜಾತೀಯ ವ್ಯಂಜನ ದ್ವಿತ್ವವಾಗಿ); ಪ್ರಾಚೀನ ರೂಪ ಇಲ್ಲಿ ಉಳಿದುಕೊಂಡು ಬಂದಿರುವುದು ಒಂದು ವಿಶೇಷ. Here `Nurge' is an archaic form; in recent times it is called `Nugge' in usage.

ಕೋಲು ನೆಣೆ kōlu neṇe :

- ಎಣ್ಣೆಗೆ ಅದ್ದಿದ ಬಟ್ಟೆಯನ್ನು ಕಟ್ಟಿದ ಕೋಲು; ದೃಷ್ಟಿ, ಭೂತದ ಉಪದ್ರ ಇತ್ಯಾದಿಗಳಾದರೆ ಸುಣ್ಣ, ಅರಿಶಿಣ ಬೆರೆಸಿ ಓಕುಳಿ ನೀರು ಮಾಡಿ ಅಡಕೆ ಹಾಳೆಯಲ್ಲಿ ಹಾಕಿ, ಬಟ್ಟೆ ಕಟ್ಟಿದ ಕೋಲುನೆಣೆಯ ದೀಪವನ್ನಿಟ್ಟು ಮೂರು ಬಾರಿ ನಿವಾಳಿಸಿ ಮೂರು ದಾರಿ ಸೇರುವಲ್ಲಿ ಇಟ್ಟು ಬರುತ್ತಾರೆ; ಬರುವಾಗ ಹಿಂದೆ ತಿರುಗಿ ನೋಡಬಾರದೆಂಬ ನಿಯಮವಿದೆ; Fire brand with oiled cloth wrapping; it is used to remove evil eye;
- 'ಕೋಲುನೆಣೆ'ಯ ಸರಿಯಾದ ರೂಪ 'ಕೋಲ್ನಿನೆ', 'ಕೋಲ್ನಿಣೆ'(ತು.ನಿ) ಎಂದು ತೋರುತ್ತದೆ; ಬಳಕೆಯ ಆಡುಮಾತಿನಲ್ಲಿ 'ಕೋಲುನೆಣೆ' ಆಗಿರಬಹುದು?.

ಕೋಲು ಬಲ್ಬು/ಕೋಲುದೀಪ kōlu balbu/ kōludīpa :

- ಇಂಗ್ಲಿಷ್‌ನ 'ಟ್ಯೂಬ್ ಲೈಟ್'(Tubelight) ಎಂಬುದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಬಳಕೆಗೊಳ್ಳುತ್ತಿರುವ ಪದ; ಇದೊಂದು ವರ್ಣಕ ಪದ (ಕೋಲಿನಂತಿರುವ+ಬಲ್ಬು); An equivalent word for Tubelight in Kannada;
- ಕೋಲಿನಂತೆ ಉದ್ದವಾಗಿ ಬೆಳಕು ಕೊಡುವ ದೀಪ; ಕೊಳವೆ ಬಲ್ಬು/ಕೊಳವೆ ಲೈಟು/ಕೊಳವೆ ದೀಪ ಎಂದು ಕೂಡ ಕರೆಯುತ್ತಾರೆ; A tube like light(lamp);
- ದೊಣ್ಣೆಯಂತೆ ಉದ್ದವಿದ್ದು ಉರಿಯುವ ದೀಪವಾಗಿರುವುದರಿಂದ ದೊಣ್ಣೆಲೈಟು/ದೊಣ್ಣೆದೀಪ ಎನ್ನುವುದೂ ಉಂಟು. It is a long lamp like a stick; so, this is called as stick lamp or cane lamp.

ಕೋಲು ಬಾಯಿ ಮುದ್ದೆ/ಕೋಲ್ ಬಾಯಿ ಹಿಟ್ಟು kōlu bāyi mudde/kōl bāyi hiṭṭu :

- ಮಡಕೆಯಲ್ಲಿ ಹಿಟ್ಟನ್ನು ಓನಿಸುವಾಗ ಕೋಲಿಗೆ ಅಂಟಿಕೊಂಡ ಹಿಟ್ಟು(ಶಿ.ಜಿ/ಮಂಡ್ಯ.ಜಿ); Baked flour of ragi covered(smeared) to the stirring wooden stick;
- ಈಗಾಗಲೇ ಮುದ್ದೆ ಕಟ್ಟಿ ಮಡಕೆಯಲ್ಲಿ ಹಾಕಿಟ್ಟ ಹಿಟ್ಟು ಅಷ್ಟು ಬಿಸಿಯಾಗಿರುವುದಿಲ್ಲ; ಆಗ ತಾನೆ ಹಿಟ್ಟನ್ನು ಓನಿಸುತ್ತಾ ಓನಿಸುತ್ತಾ, ಓನಿಸುವ ಕೋಲಿಗೆ ಅಂಟಿದ ಹಿಟ್ಟನ್ನು ಹಾಗೇ ಕೈಯಿಂದ ಊರಿ/ಕಿತ್ತು ತೆಗೆದು ಬಿಸಿ ಬಿಸಿಯಾದ ಹೊಗೆಯಾಡುವ ಹಿಟ್ಟು/ಹೊಗೆಯಾಡುವ ಹಿಟ್ಟನ್ನು ಕಟ್ಟಿದ ಮುದ್ದೆ; *ಪ್ರ: 'ಕೋಲು ಬಾಯಿ*

ಹಿಟ್ಟು; ನಾಟಿಕೋಳಿ ಸಾರು ಬಾಯಿ ಚಪ್ಪರಿಸುವಂತಿರ್ತದೆ';

- ಕೋಲ್ ಮೇಲಿನ ಹಿಟ್ಟು ಬಿಸಿಯಿದ್ದು ಇನ್ನೂ ಆರಿರದ ಕಾರಣ ಮೃದುವಾಗಿರುತ್ತದೆ; ಇದನ್ನು ಬಾಣಂತಿಯರಿಗೆ ಮೃದುವಾಗಿದೆ ಎಂಬ ಕಾರಣಕ್ಕೆ ತೆಗೆದು ಊಟಕ್ಕೆ ಕೊಡುವುದುಂಟು; Ragi food on the stirring wooden stick is very hot and soft; mothers(new born baby's) eat this food for its softness; it is good with chicken sambar;
- ಗಟ್ಟಿಯಾದ ಮುದ್ದೆಯನ್ನು ಮಿದ್ದಿಸಿಕೊಂಡು ನುಂಗಲು ಆಗದವರು ಕೋಲು ಬಾಯಿ ಮುದ್ದೆ ಮೆದುವಾಗಿ, ಬಿಸಿಯಾಗಿರುತ್ತದೆಂಬ ಕಾರಣದಿಂದ ಹೆಚ್ಚು ಬಯಸುತ್ತಾರೆ.

ಕೋಲು ಬೆಲ್ಲ kōlu bella :

- ಕಬ್ಬಿನ ಹಾಲು ಕೊಪ್ಪರಿಗೆಯಲ್ಲಿ ಚೆನ್ನಾಗಿ ಕುದಿದು ಬೆಲ್ಲದ ಪಾಕವಾದಾಗ ಅದರಲ್ಲಿ ಕಬ್ಬಿನ ಕೋಲು ಅದ್ದಿ ಅಂಟಿಸಿಕೊಂಡ ಬೆಲ್ಲ; ಇದನ್ನು ತಿನ್ನುವುದು ಒಂದು ಮೋಜು; Liquid jaggory rolled in sugar cane or sugarcane dipped in liquid jaggory(sugarcane juice being boiled); it is very tasty;
- ಆಗತಾನೆ ತಿನ್ನಲು ಬಳಸಿದ್ದು ಇದು; ಆಮೇಲಲ್ಲ. Needed to eat immediately, not later.

ಕೋಲು ಬೇಟೆ kōlu bēṭe :

- ಮೊರಸು ಒಕ್ಕಲಿಗರು ಕೋಲಿನಿಂದ ಮಾಡುವ ಬೇಟೆಯ ಒಂದು ವಿಧ; 'ಕೋಲು' ಪದಕ್ಕೆ ದೊಣ್ಣೆ, ಬಡಿಗೆ, ದಂಡ, ಬಾಣ, ಸರಳು ಎಂಬಿತ್ಯಾದಿ ಅರ್ಥಗಳಿವೆ; A kind of hunting by Morasu vokkaligas; `Kolu' means cane, stick, arrow, shaft rod etc;
- ಹತ್ತಾರು ಊರುಗಳ ಮೊರಸು ಒಕ್ಕಲಿಗ ಜನ ಕಾಡಿನಲ್ಲಿ ಒಂದೆಡೆ ಸೇರಿ ಮಾಡುವ ಸಾಮೂಹಿಕ ಬೇಟೆ; ವಿಶೇಷವಾಗಿ ಮೊಲದ ಬೇಟೆಗೆ ಕೋಲು ಬೇಟೆಯ ವಿಧಾನವನ್ನು ಅನುಸರಿಸುವುದು ರೂಢಿ; A collective hunting activities of Morasu vokkaligas of several villages; under this process they hunt rabbit;
- ಈ ಬೇಟೆಯಲ್ಲಿ ಬಳಸುವ ಕೋಲಿಗೆ 'ರುಡ್ಡುಗೋಲು' ಎಂದು ಕರೆಯುತ್ತಾರೆ; ರುಡ್ಡುಗೋಲು ಎಂದರೆ ತಳಭಾಗ ಬೊಡ್ಡೆಯಂತಿದ್ದು, ಮೇಲ್ಭಾಗ ಹಿಡಿದುಕೊಳ್ಳಲು ಅನುಕೂಲವಾಗುವಂತೆ ಸಣ್ಣಗಿರುವ ಕೋಲು; ಇದನ್ನು ಹಿಡಿದು ಬೀಸಿ ಮೊಲಕ್ಕೆ ಹೊಡೆದು ಉರುಳಿಸಲು ಸಾಧ್ಯವಾಗುವಂತೆ ಸಿದ್ಧಗೊಳಿಸಲಾಗಿರುತ್ತದೆ; The stick used in this hunting is called `ruddugolu';
- 'ಕೋಲುಬೇಟೆ' ಯಾಡುವಾಗ ನೆರೆದ ಜನರು ಊರಿನಿಂದ ಕಾಡಿಗೆ ಹೋಗುವ ಮಾರ್ಗದಲ್ಲಿ ಸಿಗುವ ಗುಡಿಗಳಲ್ಲಿ ಬೇಟೆ ಸಿಗಲೆಂದು ಪೂಜೆ ಸಲ್ಲಿಸುವುದು ವಾಡಿಕೆ; Before venture for hunting, the hunters worship in the temples(on their way);
- ರುಡ್ಡುಗೋಲನ್ನು ಕೈಯಲ್ಲಿ ಹಿಡಿದು ಪೊದೆಗಳನ್ನು ಬಡಿಯುತ್ತಾ ಮುಂದೆ ಮುಂದೆ ಸಾಗುತ್ತಾರೆ; ಯಾವುದಾದರೂ ಗಿಡ/ಪೊದೆಗಳಲ್ಲಿ ಅಡಗಿರುವ ಮೊಲಗಳು ಸದ್ದಿಗೆ ಹೆದರಿ ಬಿರುಸಾಗಿ ಓಡತೊಡಗುತ್ತವೆ; ಬೇಟೆಗಾರರು ಕೂಗು, ಕೇಕೆ ಹಾಕಿಕೊಂಡು, ಓಡುತ್ತಿರುವ ಮೊಲಗಳನ್ನು ಬೆನ್ನತ್ತಿ ರುಡ್ಡುಗೋಲಿನಿಂದ ಬಡಿದು ಕೊಲ್ಲುತ್ತಾರೆ; ಬೇಟೆಗಾರರು ಬೇಟೆ ದೊರೆಯುವ ಸುಳಿವು ಹಿಡಿದು ಸುತ್ತುವರಿದು ಬಂದಾಗ ಮೊಲಗಳು ಎತ್ತ ಓಡಲೂ ಆಗದೆ ದಿಕ್ಕೆಟ್ಟು, ಕಂಗಾಲಾಗಿ ರುಡ್ಡುಗೋಲಿನ ಬಡಿತಕ್ಕೆ ತುತ್ತಾಗಿ ಬೀಳುತ್ತವೆ; ಹೀಗೆ ದೊರೆತ ಬೇಟೆಯನ್ನು ಮೆರವಣಿಗೆಯಲ್ಲಿ ತಂದು, ಊರನ್ನು ಪೂರ್ವ ದಿಕ್ಕಿನಿಂದ ಪ್ರವೇಶಿಸಿ ಗುಡಿಯ ಮುಂದೆ ಸೇರುತ್ತಾರೆ; ಸ್ವಲ್ಪ ಹೊತ್ತಿನ ನಂತರ ಅಲ್ಲಿಂದ ಚದುರಿ ಬೇಟೆಯಾಡಿದ ಮೊಲದ ಮಾಂಸವನ್ನು ಬೇಟೆಗೆ ಸೇರಿದ್ದ ಎಲ್ಲ ಊರಿನವರು ಸಮಾನವಾಗಿ ಹಂಚಿಕೊಳ್ಳುವುದು ಪದ್ಧತಿ; The hunters beat the bushes with this `ruddugolu' and kill the preys who leap out of the bush;
- ವರ್ಷದಲ್ಲಿ ನಾಲ್ಕೈದು ಬಾರಿಯಾದರೂ ಕೋಲು ಬೇಟೆಗೆ ಹೋಗುವುದು ಮೊರಸು ಒಕ್ಕಲಿಗರಲ್ಲಿ ರೂಢಿಯಾಗಿ ಬೆಳೆದು ಬಂದಿದೆ. Morasu vokkaligas go on Kolubete(hunting) for four to five times in a year.

ಕೋಲು ಬೇಣೆ kōlu bēṇe :

- ಒಂದು ಬಗೆಯ ವಾದ್ಯ; ಕಂಬಳವನ್ನು ಸಾರುವಾಗ ಬಡಿಯುವ ವಾದ್ಯ(ಕರಾ/ದ.ಕ)(ಕ.ಜಾ.ಕೋ). A type of musical instrument; it is playing during the time of Kambala announcement.

ಕೋಲು ಬೇಲಿ kōlu bēli :

- ಕೋಲುಗಳಿಂದ ಮಾಡಿದ ಬೇಲಿ(ತು.ನಿ); A fence/hedge made of sticks or canes;
- ಹಿತ್ತಲಿನಲ್ಲಿ ಬೆಳೆದ ತರಕಾರಿ, ಹೂವಿನ ಗಿಡಗಳ ರಕ್ಷಣೆಗಾಗಿ ಕೋಲುಗಳನ್ನು ಕಟ್ಟಿ ಸಿದ್ಧಗೊಳಿಸಿದ ಬೇಲಿ; A fence to guard the vegetable plants in the kitchen garden.

ಕೋಲು ಮಕ kōlu maka :

- ಕೋಲು(<ಕೋಲ್)+ಮಕ(<ಮೊಕ)=ಕೋಲು ಮಕ;
- ಉದ್ದನೆಯ ಮುಖ(ಚಿ.ಪ.ಕೋ);
- ಕೋಲ್ಮುಖ; ಉದ್ದವಾದ ಮುಖ(ತು.ಜಿ); Long face shape(oblong);
- ಮುಖಗಳ ಬಗೆಗೆ ಹೇಳುವಾಗ ದುಂಡು ಮುಖ, ಕೋಲು ಮುಖ ಎಂಬ ಎರಡು ರೂಪಗಳನ್ನು ಗುರುತಿಸುತ್ತಾರೆ; ವೃತ್ತಾಕಾರವಾಗಿ ಗುಂಡಗಿರುವ ಮುಖವು ದುಂಡು ಮುಖ; ಸ್ವಲ್ಪ ಉದ್ದವಾಗಿರುವಂತೆ ತೋರುವ ಮುಖ ಕೋಲು ಮುಖ ಎನಿಸಿಕೊಳ್ಳುತ್ತದೆ; Regarding the shape of face we can see round square, long, heart, diamond or oval face shapes;
- ಕೋಲು ಮುಖ ಉಳ್ಳವರೂ ಕೂಡ ಸುಂದರವಾಗಿಯೆ ಇರುತ್ತಾರೆ. The people with long face are also look beautiful.

ಕೋಲು ವರಸೆ kōlu varase :

- ದೊಣ್ಣೆ ವರೆಸೆ; ದೊಣ್ಣೆಯನ್ನು ವಿವಿಧ ರೀತಿಯಲ್ಲಿ ತಿರುಗಿಸುವ ಒಂದು ಬಗೆಯ ಗತ್ತು, –ಕಸರತ್ತು (ಕ.ನಿ); A kind of martial art with sticks as weapons(bamboo staffs); fencers rotate the sticks(staffs);
- ಸುಮಾರು ೫ ಅಥವಾ ೬ ಅಡಿ ಉದ್ದ, ಒಂದು ಇಂಚು ವ್ಯಾಸವುಳ್ಳ ಕೋಲು/ದೊಣ್ಣೆಯನ್ನು ಮಧ್ಯಭಾಗದಲ್ಲಿ ಹಿಡಿದು, ಮುಂಗೈ ಚಳಕದಿಂದ ಹಿಂದಕ್ಕೂ ಮುಂದಕ್ಕೂ ವೇಗವಾಗಿ ಮತ್ತು ನಿರಂತರವಾಗಿ ತಿರುಗಿಸುವ ಒಂದು ಕಲೆ; ಇದನ್ನು ಆತ್ಮರಕ್ಷಣೆಗಾಗಿ ಕಲಿಯುವುದುಂಟು; ಆಕ್ರಮಣ ಶೀಲರಾದ ಎದುರಾಳಿಗಳನ್ನು ಅಪ್ರತಿಭರನ್ನಾಗಿಸಿ ಹಿಮ್ಮೆಟ್ಟುವಂತೆ ಮಾಡುವ ಒಂದು ಕಲೆ ಕೂಡ ಹೌದು; The staff(stick) is about 5 to 6 feet length and 01 inch diameter in measurement; the fighters or players of this art must be flexible, kinaesthetic balanced speed, muscular endurance and they need to be strong in foot work; it is a kind of art to defeat the opponents with the power of attack; the staff is held at one end, right hand close to the back and the left hand little away;
- ಕೋಲಿನ/ದೊಣ್ಣೆಯ ಎರಡೂ ತುದಿಗಳಿಗೆ ಸೀಮೆ ಎಣ್ಣೆಯಲ್ಲಿ ಅದ್ದಿದ ಬಟ್ಟೆಯನ್ನು ಕಟ್ಟಿ, ಬೆಂಕಿ ಹೊತ್ತಿಸಿ, ಉರಿಯುವ ದೊಣ್ಣೆ ಹಿಡಿದು ತಮ್ಮ ಕೈಚಳಕದ ಕಸರತ್ತು ಮೆರೆದು ಪ್ರೇಕ್ಷಕರಿಗೆ ಮನರಂಜನೆ ನೀಡಬಲ್ಲ ಕಲೆಯೂ ಆಗಿದೆ. The fighters in this art display various entertaining skills with fire, burning cloth and kerosene sprinkling(from mouth).

ಕೋಲು ಹೊಯ್ಯು/ಕೋಲು ಹೊಯ್ಯುವುದು kōlu hoyyu/kōlu hoyyuvudu :

- ಕೋಲಿನಿಂದ ಕೋಲನ್ನು ಹೊಡಿ; ಹಾಡಿನ ತಾಳಕ್ಕೆ ಅನುಗುಣವಾಗಿ ಕೋಲು ಬಡಿ; ಕೋಲು ಹಾಕು(ಕ.ನಿ); A rhythmic touch of coloured sticks;
- ಕೋಲು ಹಾಕು; ಕೋಲಾಟ ಆಡುವಾಗ ಗೀತೆಯ ಲಯಕ್ಕೆ ತಕ್ಕಂತೆ ಖಣಿಲ್, ಖಣಿಲನೆ ಕೋಲುಗಳಿಂದ ಹೊಡೆಯುತ್ತಾ ಹೆಜ್ಜೆ ಹಾಕುತ್ತಾ ಕುಣಿತ ಮಾಡುವುದುಂಟು; Dances to the rhythm of a song and to the sound of sticks in Kolata;
- ಕೊರಗ ಹೆಂಗಸರು ಜನಪದ ಹಾಡಿನೊಂದಿಗೆ ಕೋಲಾಟವಾಡುತ್ತಾ ಮನೆಮನೆಗೆ ಕಂಬಳದ ಹೇಳಿಕೆ

ಕೊಡುವುದುಂಟು; ಕುಂದಾಪುರದ ಭಾಗದಲ್ಲಿ ಈ ಪದ್ಧತಿ ಕಂಡುಬರುತ್ತದೆ(ದ.ಕ); Women of Koraga community play Kolata and give Kambala statement; in the parts of Kundapura we can see this practice;
- (ಕೋಲು<ಕೋಲ್+ಹೊಯ್<ಪೊಯ್) **ನೋಡಿ:** ಕೋಲಾಟ.

ಕೋಲೆ kōle :
- ಕಪಿಲೆ>ಕವಿಲೆ>ಕೌಲೆ>ಕೋಲೆ;
- ಕವಿಲೆ; ಹಸು; ಕಪಿಲೆಯೆಂದು ಕರೆಯುವ ಹಸು; Cow; a cow called Kapile;
- ಕವಿಲೆ ಎತ್ತು(ಬೆಂ.ಗ್ರಾ.ಜಿ) Kavile bull(ox);
- ದೇವರ ಹೆಸರಿನಲ್ಲಿ, ಮರಣ ಹೊಂದಿದವರ ಹೆಸರಲ್ಲಿ ಬಿಡುವ ಹೆಣ್ಣು ಕರು; ಬೀದಿಯಲ್ಲಿ ತಿರುಗುತ್ತಾ, ತನಗೆ ಮನದಂತೆ ಮೇಯುತ್ತಾ ಹಸುವಾಗಿ ಬೆಳೆದದ್ದು; ಕೌಲೆ>ಕೋಲೆಯಾಗಿ ಉಚ್ಚಾರಗೊಂಡು 'ಬಸವ'ನ ಜೊತೆ ಸೇರಿ 'ಕೋಲೆಬಸವ' ಎಂದಾಗಿ ಕೋಲೆಬಸವನಾಟ ಆಡಿಸುವವರ ಬಳಿ ಸೇರಿ, ಸೀತಾರಾಮ ಕಲ್ಯಾಣದ ಆಟದಲ್ಲಿ ಸೀತೆಯಾಗಿ ಗುರುತಿಸಿಕೊಳ್ಳುವುದು; **ನೋಡಿ:** ಕೋಲೆ ಬಸವ. A female calf named in the name of deity, or dead person; Kaule has become Kole and joins Basava, becomes `Kole Basava'; in the pair of `Kolebasava' female cow named as `Sitha', in `Sitha Rama' wedding(a folk art).

ಕೋಲೆ ಬಸವ kōle basava :
- ಕವಿಲೆ(<ಕಪಿಲೆ) + ಬಸವ = ಕವಿಲೆಬಸವ > ಕವಲೆ ಬಸವ>ಕೌಲೆಬಸವ>ಕೋಲೆಬಸವ;

  Kavile+Basava=Kavilebasava; Kavalebasava>Koulebasava>Kolebasava;
- ಜನಪದ ವಿನೋದ ಕ್ರೀಡೆಯೊಂದರಲ್ಲಿ ಬಳಸುವ ಎತ್ತು; ಹಸು, ಕರುಗಳನ್ನು ಬಳಸವುದೂ ಉಂಟು; A trained bull of entertaining folkart; in this art bull, cow and calf are used;
- ಕೋಲೆಬಸವ, ಕವಲೆತ್ತು, ಕೌಲೆತ್ತು, ಗಂಗೆತ್ತು ಎಂದೆಲ್ಲಾ ಕರೆಯಲಾಗುವುದು; Kolebasava, Kovalettu, Kowletthu, Gangetthu;
- ಕವಲೆ(<ಕಪಿಲೆ)+ಎತ್ತು(<ಎಟ್ಟು) = ಕವಲೆತ್ತು > ಕೌವಲೆತ್ತು>ಕೌಲೆತ್ತು ಎಂಬ ರೂಪ ಪಡೆಯುತ್ತದೆ;
- ಕೆಲವು ಸನ್ನೆಗಳಿಗೆ ಅನುಸಾರವಾಗಿ ಆಡುವಂತೆ ಕಲಿಸಿ ಬೀದಿ ಬೀದಿಯಲ್ಲಿ ಆಟವಾಡಿಸುವ ಅಲಂಕರಿಸಿದ ಎತ್ತು; ಕೌಲೆತ್ತು; ಗಂಗೆತ್ತು; ಬುರು ಬುರು ಬಸವಣ್ಣ (ಉ.ಕ.ಜಿ)(ಕ.ಜಾ.ಕೋ); A bull is trained to entertain with gestures and symbols; the bull is decorated well to perform game;
- ಕರಡಿಗೊಲ್ಲರು ಮನರಂಜನೆಗಾಗಿ ಆಡಿಸುವ ಬಸವ; ಕೌಲೆ ಬಸವ; Karadigollas entertain the people with a bull;
- ಕೋಲೆಬಸವಣ್ಣ(ಆಲಂ) ಹೇಳಿದ್ದಕ್ಕೆಲ್ಲಾ ತಲೆ ಹಾಕುವವನು; One who nods for everything;
- ಕೋಲೆಬಸವನಂತೆ ತಿರುಗಾಡಿ ತಿನ್ನುವವ; ಹೇಳಿದ್ದಕ್ಕೆ ತಲೆ ಬಾಗಿಸುವವನು(ತು.ನಿ); One who bends for everything and strolls;
- 'ಕಪಿಲೆ' ಎಂದರೆ ಬೂದು ಬಣ್ಣದ ಆಕಳು; 'ಬಸವ' ಎಂದರೆ ದೇವರಿಗೆ ಬಿಟ್ಟ ಅಥವಾ ವಿನೋದ ಕ್ರೀಡೆಗಾಗಿಯೆ ಸಾಕಿ, ಆಟ ಕಲಿಸಿದ ಹೋರಿ ಅಥವಾ ಎತ್ತು; ಉಳುಮೆ ಮೊದಲಾದ ಶ್ರಮದ ಕೆಲಸಗಳಿಗಾಗಿ ಒಗ್ಗಿಸಿಲ್ಲದ, ಹೊಲಗದ್ದೆಗಳಲ್ಲಿ ಮೇವು ತಿಂದುಕೊಂಡು ಮನಸೋ ಇಚ್ಛೆ ಓಡಾಡಿಕೊಂಡಿರುವ ದನಗಳನ್ನು ಬಸವ ಎನ್ನುತ್ತಾರೆ; Kapile means gray coloured cow; `Basava' means a bull in the name of God or to entertain or trained ox; it is free from agricultural works such as ploughing, furrowing, transporting; they just stroll on the streets of village;
- ಊರುಗಳಲ್ಲಿ ದೇವರ ಹೆಸರಿನಲ್ಲಿ ಬಿಟ್ಟಿರುವ ಕಪಿಲೆ, ಬಸವಗಳನ್ನು ತಂದು, ಅವುಗಳನ್ನು ಜೋಡಿ ಮಾಡಿಕೊಂಡು, ಕೆಲವೊಮ್ಮೆ ಇವುಗಳ ಜೊತೆಗೆ ಒಂದು ಕರುವನ್ನೂ ಕೂಡಿಸಿಕೊಂಡು ತರಬೇತಿ ನೀಡಿ ಆಟವಾಡಿಸುತ್ತಾ ಹೊಟ್ಟೆ ತುಂಬಿಸಿಕೊಳ್ಳುವ ಜನಪದ ವೃತ್ತಿಕಾರರನ್ನು ಕೋಲೆಬಸವರು ಕೋಲೆ ಬಸವನಾಡಿಸುವವರೆಂದು ಕರೆಯುವುದು ವಾಡಿಕೆ;
- ಈ ಆಟವನ್ನು ಕರ್ನಾಟಕ, ಅಂಧ್ರಪ್ರದೇಶ, ಮಹಾರಾಷ್ಟ್ರಗಳಲ್ಲಿ ಕಾಣಬಹುದು; ಕರ್ನಾಟಕದಲ್ಲಿ ಬೆಳಗಾವಿ, ಕಲಬುರ್ಗಿ, ವಿಜಯಪುರ, ಬೀದರ್,

ರಾಯಚೂರು, ಧಾರವಾಡ, ಶಿವಮೊಗ್ಗ, ಮೈಸೂರು, ಮಂಡ್ಯ, ತುಮಕೂರು, ಕೋಲಾರ ಮೊದಲಾದ ಜಿಲ್ಲೆಗಳಲ್ಲಿ ಈ ಮನರಂಜಕ ಆಟ ಕಂಡುಬರುತ್ತದೆ; The people who train and play the bulls are popular in the states of Karnataka, Belagavi, Kulburgi, Vijayapura, Bidar, Raichur, Dharwad, Shimoga, Mysore, Mandya, Tumkur and other places;

- ಕೋಲೆ ಬಸವನಾಟಕ್ಕೆ ಒಂದು ಪುರಾಣದ ಕಥೆಯನ್ನು ಹೇಳಲಾಗುತ್ತದೆ; ರಾಕ್ಷಸನೊಬ್ಬನನ್ನು ಸಂಹಾರ ಮಾಡಲು ನಂದಿಯು ಬಸವನಾಗಿ, ಶಿವ ವಾಲಗ ಊದುವವನಾಗಿ, ವಿಷ್ಣು ಕೋಲೆಬಸವನನ್ನಾಡಿಸುವವನಾಗಿ, ಸುದರ್ಶನ ಚಕ್ರ ಬಸವನ ಕೊರಳಿನ ಗಂಟೆಯಾಗಿ ವೇಷಧರಿಸಿಕೊಂಡು ಬರುತ್ತಾರೆ; ರಾಕ್ಷಸನ ಅರಮನೆಯ ಮುಂದೆ ಕೋಲೆ ಬಸವನಾಟವಾಡಿ ಮನರಂಜಿಸುತ್ತಾರೆ; ಇದರಿಂದ ರಾಕ್ಷಸನು ಸಂತೃಪ್ತಗೊಂಡು ಏನು ಬೇಕೆಂದು ಕೇಳಿದಾಗ ವರವಾಗಿ ರಾಕ್ಷಸನ ಸಿಂಹಾಸನವನ್ನು ಬೇಡುತ್ತಾರೆ; ಇದರಿಂದ ಕೋಪಗೊಂಡ ರಾಕ್ಷಸನು ಬಸವನನ್ನು ಇಡಿಯಾಗಿ ನುಂಗಿಬಿಡುತ್ತಾನೆ; ರಾಕ್ಷಸನ ಹೊಟ್ಟೆ ಸೇರಿದ ಬಸವ ತನ್ನ ದೇಹ, ಹೊಟ್ಟೆಯನ್ನು ಹಿಗ್ಗಿಸಿಕೊಂಡು ಬೆಳೆದು, ಗಂಟೆಯ ಸಹಾಯದಿಂದ ರಾಕ್ಷಸನ ಹೊಟ್ಟೆಯನ್ನು ಸೀಳಿ, ಆತನ ಕರುಳನ್ನು ಮಾಲೆಯಾಗಿ ಧರಿಸಿ ಹೊರಕ್ಕೆ ಬರುತ್ತದೆ; ರಾಕ್ಷಸನ ಸಂಹಾರವಾಗುತ್ತದೆ; ಆ ಕಾರಣಕ್ಕಾಗಿಯೇ ಕೋಲೆಬಸವನ ಕೊರಳಲ್ಲಿ ಹಾರಗಳೂ, ಅದರ ಹೆಗಲು ಮತ್ತು ಬೆನ್ನ ಮೇಲೆ ಬಟ್ಟೆಯನ್ನು ಕಟ್ಟಿ ಅಲಂಕರಿಸುವುದೂ ವಾಡಿಕೆಯಾಗಿ ಬಂದಿದೆ ಎಂದು ಹೇಳುತ್ತಾರೆ(ನೋಡಿ: ಕನ್ನಡ ವಿಷಯ ವಿಶ್ವಕೋಶ– ಜಾನಪದ: ಪುಟ.೬೦೬ಎ); Kolebasava game links to mythological story of a demon and Lord Shiva; Basava is sacred bull, Nandi and the piper is lord shiva, Vishnu is one who plays the bull and the bell in the neck of bull, is the wheel(Sudarshana chakra) of Lod Vishnu; they beg the demon to grant them a thrown, but the dmon becomes angry and swallows the bull; the bull enters the stomach of the demon and cuts him; it comes out with his intestine in its neck; then the Basava(bull) is decorated with garlands and decorative clothes;
- ಕೋಲೆ ಬಸವನಾಟದಲ್ಲಿ ಎರಡು ವಿಧಗಳಿವೆ; ಒಂಟಿ ಬಸವನನ್ನು ಪಳಗಿಸಿ ವಿವಿಧ ಕಸರತ್ತು ನಡೆಸುವುದು ಒಂದು ಬಗೆಯಾದರೆ, ಕಪಿಲೆ(ಹಸು), ಬಸವ ಮತ್ತು ಕರುಗಳನ್ನು ಜೊತೆ ಮಾಡಿಕೊಂಡು ತರಬೇತಿ ನೀಡಿ ಸೀತಾರಾಮ ಕಲ್ಯಾಣದಂತಹ ಅನೇಕ ಪ್ರಸಂಗಗಳನ್ನು ಕೋಲೆಬಸವನಾಟಕ್ಕೆ ಅಳವಡಿಸಿಕೊಂಡು ಆಡಿಸುವುದು ಇನ್ನೊಂದು ಬಗೆಯಾಗಿದೆ; ಈ ಆಟಗಳು ಬೀದಿ ನಾಟಕದ ಮಾದರಿಯಲ್ಲಿ ವಿನೋದ ಪ್ರಧಾನವಾಗಿ ಪ್ರದರ್ಶನಗೊಳ್ಳುತ್ತವೆ; ಒಂದು ರೀತಿಯಲ್ಲಿ ಈ ಆಟಗಳನ್ನು ಬೀದಿ ನಾಟಕಗಳ ಮೊದಲ ಘಟ್ಟವೆಂದೇ ಗುರುತಿಸಬಹುದೆಂದು ತೋರುತ್ತದೆ;
- ಕೋಲೆ ಬಸವನನ್ನಾಡಿಸುವವನನ್ನು 'ಸೂತ್ರಧಾರ' ಎಂದು ಕರೆಯಬಹುದು; ಇವನು ಕಥಾ ಪ್ರಸಂಗವನ್ನು ಶಹನಾಯ್, ಶೃತಿ, ತಾಳಗಳ ಹಿನ್ನೆಲೆಯಲ್ಲಿ ಸ್ವಾರಸ್ಯಕರವಾದ ಮಾತುಗಳಲ್ಲಿ ಮತ್ತು ಹಾಡುಗಳಲ್ಲಿ ಹೇಳತೊಡಗುತ್ತಾನೆ; ಶಹನಾಯ್ ನಾದಕ್ಕೆ ಅಥವಾ ಆಡಿಸುವವನು ಉಗ್ಗಡಿಸುವ ಕೂಗಿಗೆ ತಕ್ಕಂತೆ ಪ್ರತಿಕ್ರಿಯಿಸುವುದನ್ನು ಬಸವಗಳಿಗೆ ಕಲಿಸಿ, ಅವುಗಳನ್ನು ರಾಮ, ಲಕ್ಷ್ಮಣ, ಸೀತೆ ಎಂಬ ಪಾತ್ರ ನಾಮಗಳಿಂದ ಕರೆದು ಆಟವಾಡಿಸುವುದು ಸ್ವಾರಸ್ಯಕರ ಸಂಗತಿ;
- ಕೋಲೆಬಸವನ ಜೋಡಿ ನೋಡಲು ಸುಂದರವಾಗಿರುತ್ತದೆ; ಬಣ್ಣ ಬಣ್ಣದ ಬಟ್ಟೆ, ಕುಚ್ಚು, ಹಿತ್ತಾಳೆ, ಗುಬ್ಬಿ, ಗೆಜ್ಜೆ, ಗೆಜ್ಜೆಸರ, ಗಂಟೆ, ಅಲಂಕಾರಿತ ಕೌದಿ, ಅಂಗಿ, ಸೀರೆ, ವಸ್ತ್ರ ಮೊದಲಾದ ಉಡಿಗೆಗಳಿಂದ ಕೋಲೆಬಸವಗಳನ್ನು ಸಿಂಗರಿಸುವುದು ಕೋಲೆಬಸವನ ಆಟಗಳಲ್ಲಿ ಗಮನಿಸಬೇಕಾದ ಅಂಶಗಳು; A decorative couple of the Kole basava look beautiful;
- ಅವುಗಳ ಭುಜದ ಭಾಗ ಎದ್ದು ಕಾಣುವಂತೆ ಬಟ್ಟೆಯಿಂದ ಅಲಂಕರಿಸುತ್ತಾರೆ; ಕೊಂಬುಗಳು ಚಿಕ್ಕದಾಗಿದ್ದರೆ ಬಟ್ಟೆಯನ್ನು ಎತ್ತರಕ್ಕೆ ಸುತ್ತಿ ನೀಳವಾದ ಕೊಂಬುಗಳೆಂಬಂತೆ ಸಿಂಗರಿಸುತ್ತಾರೆ;

- ಆಟ ಆಡಿಸುವಲ್ಲಿ ನಾಲ್ಕು ಜನರಿದ್ದು ಅವರಲ್ಲಿ ಒಬ್ಬ ಮುಖವೀಣೆ, ಇನ್ನೊಬ್ಬ ಡೋಲು ನುಡಿಸುತ್ತಾರೆ; ಉಳಿದಿಬ್ಬರು ಸಂಭಾಷಣೆಗಳನ್ನು ಹೇಳುತ್ತಾ ಬಸವನಾಡಿಸುತ್ತಾರೆ; ಇವರೆಲ್ಲರೂ ಕಪ್ಪುಕೋಟು, ಬಿಳಿಕಚ್ಚೆಪಂಚೆ, ತಲೆಗೆ ರುಮಾಲು ಸುತ್ತಿದ ಉಡುಪು ಧರಿಸಿರುತ್ತಾರೆ;
- ಆಡಿಸುವವನು ತನ್ನ ಕಾಲುಗಳನ್ನು ಮಡಿಸಿಕೊಂಡು ಮಲಗಿ, ಮಡಿಸಿದ ತೊಡೆಗಳ ಮೇಲೆ ಕೋಲೆ ಬಸವ ತನ್ನ ನಾಲ್ಕೂ ಕಾಲುಗಳನ್ನು ಒಂದೆಡೆ ಊರಿ ನಿಲ್ಲುವಂತಹ ಆಟವೇ ಮೊದಲಾಗಿ ಅನೇಕ ಚಮತ್ಕಾರದ ಆಟಗಳನ್ನು ನೋಡುವವರಿಗೆ ಮೈನವಿರೇಳುವಂತೆ ಪ್ರದರ್ಶಿಸುವುದುಂಟು;
- ಮನೆಮನೆಗಳ ಮುಂದೆ, ಬೀದಿಯಲ್ಲಿನ ವಿಶಾಲವಾದ ಆಯಕಟ್ಟಿನ ಸ್ಥಳದಲ್ಲಿ ಕೋಲೆಬಸವನಾಟಕ್ಕೆ ತೆರೆ ಏಳುತ್ತದೆ; ಸೂತ್ರಧಾರನ ಆಟ ಪ್ರಾರಂಭಿಸೋಣವೆ ಎಂಬ ಮಾತಿಗೆ ತಲೆಯಾಡಿಸಿ ಬಸವ ತನ್ನ ಒಪ್ಪಿಗೆಯನ್ನೂ ಸೂಚಿಸುತ್ತದೆ; ದಾನ ಧರ್ಮ ಮಾಡುವ ಯಜಮಾನರಿಗೆ, ದಾನಿಗಳಿಗೆ ನಮಸ್ಕರಿಸುವಂತೆ ಹೇಳಿದಾಗ ಬಸವ ತನ್ನ ಮುಂದಿನ ಕಾಲನ್ನು ಸ್ವಲ್ಪ ಹಿಂಭಾಗಕ್ಕೆ ಬಾಗಿಸಿ, ತಲೆಬಾಗಿ ನಮಸ್ಕರಿಸುತ್ತದೆ;
- ಸಾಮಾನ್ಯವಾಗಿ ಆಟದ ಮುಖ್ಯವಸ್ತು ರಾಮಾಯಣದ 'ಸೀತಾರಾಮರ ಕಲ್ಯಾಣ'; ಕಪಿಲೆ(ಹಸು) ಸೀತೆಯೆಂತಲೂ, ಬಸವ ರಾಮನೆಂದೂ, ಕರುವಿಗೆ ಲಕ್ಷ್ಮಣನೆಂದು ಹೆಸರಿಟ್ಟು, ಆಯಾ ಹೆಸರುಗಳನ್ನು ಕರೆದು ಮುಂದೆ ಬರುವಂತೆ ಹೇಳಿದರೆ ಆಯಾ ಹೆಸರಿನ ಕಪಿಲೆ, ಬಸವ, ಕರುಗಳು ಬಂದು ನಿಲ್ಲುತ್ತವೆ; ಸೀತೆ ಮತ್ತು ರಾಮರ ಕಡೆ ಒಬ್ಬೊಬ್ಬರು ನಿಂತು ಲಗ್ನ ಮಾಡಿಸುವಾಗ ಅವರಲ್ಲಿ ನಡೆಯುವ ಸಂಭಾಷಣೆ, ಸನ್ನಿವೇಶಗಳು ತುಂಬಾ ಮನೋರಂಜಕವಾಗಿರುತ್ತವೆ;
- ಸೀತೆಯೊಡನೆ ರಾಮನ ಲಗ್ನ ಬಾಜಾಬಜಂತ್ರಿಯೊಡನೆ ಮಾಡಿಸುವ ರೀತಿ ತುಂಬಾ ಆಕರ್ಷಕವಾದುದು; ಮದುವೆಯಾಗುವಾಗ ಗಂಡು, ಹೆಣ್ಣುಗಳ ಮುನಿಸು, ಬೇಡಿಕೆಗಳು, ಮಧ್ಯಸ್ಥಗಾರನ ಸಮಾಧಾನ ಮಾಡುವ ರೀತಿ ಸೊಗಸಾಗಿರುತ್ತದೆ; ಕಪಿಲೆ, ಬಸವ, ಕರುಗಳು ಪ್ರದರ್ಶಿಸುವ ಸೀತೆ, ರಾಮ, ಲಕ್ಷ್ಮಣರ ಪಾತ್ರಗಳಿಗೆ ಪ್ರೇಕ್ಷಕರು ಚಪ್ಪಾಳೆ ತಟ್ಟಿ ಆನಂದಿಸುತ್ತಾರೆ;
- ಆಟ ಮುಗಿದ ಬಳಿಕ ಮನೆ ಮನೆಯವರು ದವಸ–ಧಾನ್ಯ, ಬಟ್ಟೆಗಳನ್ನು ಕೊಡುತ್ತಾರೆ; ಕೋಲೆ ಬಸವನಾಡಿಸುವವರು ಊರುಗಳಲ್ಲಿ ಮನೆ ಮನೆಗಳ ಮುಂದೆ ಪ್ರದರ್ಶನ ನೀಡಿ ಭಿಕ್ಷಾಟನೆ ಮಾಡುವುದಲ್ಲದೆ ಹಬ್ಬ, ಜಾತ್ರೆ, ಸಂತೆಗಳಲ್ಲಿಯೂ ಪ್ರದರ್ಶನ ನೀಡುತ್ತಾ ನೆರೆದ ಜನರಿಂದಲೂ ಮೆಚ್ಚುಗೆ ಗಿಟ್ಟಿಸಿ, ಹಣವನ್ನೂ ಬೇಡಿ ಪಡೆಯುವುದು ಕಂಡುಬರುತ್ತದೆ;
- 'ದೊಂಬಿದಾಸ' ಎಂಬ ಅಲೆಮಾರಿ ಸಮುದಾಯದವರು ಇಂತಹ ವೃತ್ತಿ ವಿನೋದದಲ್ಲಿ ತೊಡಗಿಕೊಳ್ಳುವುದು ಕಂಡುಬರುತ್ತದೆ; ಇವರು ಕಡು ಬಡವರಾಗಿದ್ದು ವಂಶ ಪಾರಂಪರ್ಯವಾಗಿ ಈ ಕಸುಬನ್ನು ಮುಂದುವರಿಸಿಕೊಂಡು ಬಂದಿದ್ದಾರೆ; ಮನೆ, ಅಲ್ಪ ಸ್ವಲ್ಪ ಜಮೀನು ಇವರಿಗಿದ್ದರೂ ಎಲ್ಲಿಯೂ ತಳವೂರಿ ನಿಲ್ಲದೆ ಭಿಕ್ಷಾವೃತ್ತಿಯ ಮೂಲಕವೇ ಜೀವನ ಸಾಗಿಸುತ್ತಾರೆ; ಪೌರಾಣಿಕ ಪ್ರಜ್ಞೆಯನ್ನು ಜನರಲ್ಲಿ ಬೆಳೆಸಿ ಆದರ್ಶಗಳನ್ನು ಹುಟ್ಟುಹಾಕುವುದರಲ್ಲಿ ಇವರ ಪರಿಶ್ರಮ ಕಂಡುಬರುತ್ತದೆ. A wandering community called `Dombidasa' is involved in this entertaining profession.

ಕೋಲೆಬಸವನಂತೆ ತಲೆಯಾಡಿಸು kōle basavanante taleyāḍisu :

- ಬಳಕೆಯ ಅರ್ಥ ಏನೂ ತಿಳಿಯದವನಂತೆ, ಗಿಳಿಪಾಠ ಒಪ್ಪಿಸುವಂತೆ ನಡೆದುಕೊಳ್ಳುವುದು; ನಟನೆ ಇದ್ದರೂ ಇರಬಹುದು– ಕೇಳಿಲ್ಲವೆ: "ನಿದ್ದೆ ಹೋದವನ ಎಬ್ಬಿಸಬಹುದು, ನಿದ್ದೆ ಹೋದವನಂತೆ ನಟಿಸಿದರೆ ಏನು ಮಾಡುವುದು"– ಆ ಪರಿಸ್ಥಿತಿ ಇದು; One who behaves like knowing nothing; behaves like a trained parrot, may be a pretence;
- ಈ ನುಡಿಗಟ್ಟಿನ ಹುಟ್ಟಿಗೆ ಕೋಲೆ ಬಸವನನ್ನು ಆಟವಾಡಿಸುವ ಅಲೆಮಾರಿ ಜನರ ಉದರ ಪೋಷಣೆಯ ಒಂದು ವೃತ್ತಿ ಕಾರಣವಿರಬಹುದು; ಬಸವನಿಗೆ ಕೆಲವು ಸೂಚನೆಗಳನ್ನು ಕೊಟ್ಟು ಅದಕ್ಕೆ ಅನುಸಾರವಾಗಿ 'ತಲೆಯಾಡಿಸುವ' ಪಾಠವನ್ನು

ಕಲಿಸಿಕೊಟ್ಟಿರುತ್ತಾರೆ; ಬಸವನನ್ನು ಕೆಲವು ವಿಲಕ್ಷಣ ಬಟ್ಟೆಗಳಿಂದ– ಕೌದಿ– ಸಿಂಗರಿಸಿರುತ್ತಾರೆ; ಊರಿನ ಬೀದಿ–ಬೀದಿಯಲ್ಲಿ ಆಟವಾಡಿಸಿ ದವಸಧಾನ್ಯ, ಕಾಸನ್ನು ಸಂಗ್ರಹಿಸುವ ವಿಧಾನವಿದು; ಈ ಆಟದಲ್ಲಿ ಜನಪ್ರಿಯವಾದುದು ರಾಮ–ಸೀತೆಯರ ವಿವಾಹ ಪ್ರಸಂಗ; ಇದು ಮನರಂಜನೆಗಾಗಿ ಮಾಡಿಕೊಂಡ ವ್ಯವಸ್ಥೆ; The people who play Kolebasava do this folkart to earn their livelihood; they train the bulls, give gestures to act accordingly; they take decorated Kolebasava on to the streets of villages and receive money and grains;

- ಈ ಕೋಲೆಬಸವನ ರಂಜನೀಯ ಆಟವೇ ಕೊನೆಗೆ ಎಲ್ಲದಕ್ಕೂ 'ತಲೆ ತೂಗಿಸುವ' ಜನರ ಪ್ರವೃತ್ತಿಯನ್ನು ಹೇಳಲು ನುಡಿಗಟ್ಟಿನ ರೂಪದಲ್ಲಿ ಬಳಸಲಾಯಿತು; ತಲೆಮಾರುಗಳಲ್ಲಿ ಸಾಗಿದಂತೆ ಮನುಷ್ಯ ಸ್ವಭಾವವನ್ನು ಚಿತ್ರಿಸಲು ಈ 'ಕೋಲೆ ಬಸವನ' 'ತಲೆಯಾಡಿಸುವ' ನಟನೆಯನ್ನು ಪ್ರತೀಕಗೊಳಿಸಲಾಯಿತು;
- 'ಕೋಲೆ' ಪದ ಕವಿಲೆ/ಕಪಿಲೆ ಪದದಿಂದ ಬಂದುದು; ಇದಕ್ಕೆ ಬಸವ, ಎತ್ತು, ಗೂಳಿ ಎಂಬೆಲ್ಲ ಅರ್ಥಗಳಿವೆ; ಮುಖ್ಯ ಮಾತೆಂದರೆ, ಇದನ್ನು ಪುರುಷರ ಸ್ವಭಾವವನ್ನು ಹೇಳಲಿಕ್ಕೆ ಮಾತ್ರ ಬಳಕೆ, ಸ್ತ್ರೀಸ್ವಭಾವವವನ್ನು ಹೇಳಲು ಬಳಸಿದಂತಿಲ್ಲ; 'ಕವಿಲೆ/ಕವಲೆ' 'ಕಪಿಲೆ'ಯ ತದ್ಭವವೆಂದು ಕಿಟ್ಟೆಲ್ ಹೇಳುತ್ತಾರೆ; ಹಾಗೆಯೇ 'ಕವಲೆತ್ತು' ಪದವಿದೆ; 'ಕವಲೆತ್ತು=ಕಪಿಲೆ ಬಸವ(ಕಿಟ್ಟೆಲ್)'; 'ಕಪಿಲೆ' ಪದಕ್ಕೆ ಹಸು, ಎತ್ತು ಎರಡೂ ಅರ್ಥಗಳಿವೆ; 'ಕಪಿಲೆ ಬಸವ' ಎಂದಾಗ 'ಬಸವ'ಪದ ಅಲೆಯಲಿಕ್ಕಾಗಿ ಬಿಟ್ಟ ಹೋರಿ ಎಂದಾಗುತ್ತದೆ; Kole word may be derived from Kavile/Kapile; it means bull, ox, bullock etc; this word is referred to indicate the manliness or nature of males; Kapile means cow and bullock; kapile Basava means a bull roams freely;
- ಕೋಲೆ(=ಕಪಿಲೆ/ಕವಿಲೆ/ಕವಲೆ) ಬಸವ ದ್ವಿರುಕ್ತಿಯಾಗುವುದಿಲ್ಲವೆ? ಮೊದಲು 'ಕೋಲೆ' ಇದ್ದು ಆಮೇಲೆ 'ಬಸವ' ಸೇರಿರಬೇಕು ಅರ್ಥಾತ್ ಅಲೆಯಲು ಬಿಟ್ಟ ಕಪಿಲೆ ಎಂದು; ಆಮೇಲೆ ಕಪಿಲೆ ಬಸವ>ಕೋಲೆ ಬಸವ ಆಗಿರಬೇಕು.

ಕೋಲ್ಕಡಗ kōlkaḍaga :

- ಒಂದು ಬಗೆಯ ಕಡಗ; ದೀವರ ಹೆಂಗಸರು ಕೈಗೆ ತೊಡುವ ಒಂದು ಆಭರಣ ವಿಶೇಷ; ಇದನ್ನು ಹೆಚ್ಚಾಗಿ ಬೆಳ್ಳಿಯಿಂದ ಮಾಡುತ್ತಾರೆ. A kind of bracelet, bangle adorns the hand of Deewar females; it is made of silver.

ಕೋಲ್ಚೆಂಡು kōlcenḍu :

- ಚೆಂಡಾಟದಲ್ಲಿ ಒಂದು ವಿಧ; ಹಾಕಿ ಆಟ(ಕ.ಜಾ.ಕೋ); A type of game with ball, hockey game;
- ಹಾಕಿ ಆಟ ಆಡುವ ಕೋಲು ಸುಮಾರು ಅರ್ಧಮಾರು ಉದ್ದವಿದ್ದು, ತಳಭಾಗವು 'ಎಲ್' ರೂಪದಲ್ಲಿ ಬಾಗಿದ್ದು ಸ್ವಲ್ಪ ದಪ್ಪನಾಗಿರುತ್ತದೆ; ಕೈಯಲ್ಲಿ ಹಿಡಿಯುವ ಭಾಗವು ಸಣ್ಣದಾಗಿರುತ್ತದೆ; ಕೈಯಲ್ಲಿ ಭದ್ರವಾಗಿ ಕೋಲನ್ನು ಹಿಡಿದು ನೆಲದ ಅಂಗಳದಲ್ಲಿರುವ ಚೆಂಡನ್ನು ಎದುರಾಳಿಗಳಿಗೆ ಸಿಗದಂತೆ ಕೋಲಿನಿಂದ ತಳ್ಳಿಕೊಂಡು ಹೋಗಿ ಎದುರಾಳಿಯ ಗೋಲಿನೊಳಗೆ ತೂರಿಸುವುದರ ಮೂಲಕ ತಮ್ಮ ಗೆಲುವಿಗೆ ಬೇಕಾದ 'ಗೋಲ್ ಪಾಯಿಂಟ್' ಪಡೆಯುತ್ತಾರೆ; A hockey stick is a piece of equipment; it is about 2 feet long and lower part is in `L'shape; the players of hockey move or pluck the ball using the hockey stick into the net to get goal;
- ಕಾಲಿನಿಂದ ಒದೆದು ಆಡುವುದರಿಂದ 'ಫುಟ್‌ಬಾಲ್' ಅನ್ನು 'ಕಾಲ್ಚೆಂಡು' ಎಂದು ಕರೆಯುವಂತೆ, ಹಾಕಿಯು ಹಾಕಿಕೋಲಿನಿಂದ ಆಡುವ ಆಟವಾದ್ದರಿಂದ 'ಕೋಲ್ಚೆಂಡು' ಎಂದು ಕರೆದಿರುವಂತೆ ತೋರುತ್ತದೆ. Football is played using legs; therefore, it is called Kalcendu(foot ball); hockey is played using sticks; therefore, it is Kolcendu(stick game).

ಕೋಲ್ಟು kōlṭu :

- ಕೋರ್ಟ್(court) ಎಂಬ ಇಂಗ್ಲಿಷ್ ಪದದ ಗ್ರಾಮೀಣ ರೂಪ; ನ್ಯಾಯಾಲಯ; A rustic word for English word `Court', Judicature, Tribunal;

- 'ಕೋರ್ಟ್' ಪದದ ರೇಫಕ್ಕೆ 'ಲ'ಕಾರ ಪ್ರಯೋಗವಾಗಿದೆ(ರ>ಲ); ಕೋರ್ಟ್>ಕೋಲ್ಟ್> ಕೋಲ್ಟು;

ಕೋಲ್ಡ್ ಪೇಪರ್/ಖಾಕಿ ಕಾಗದ kōlḍ pēpar/khāki kāgada :
- ರೇಷ್ಮೆ ಹುಳು ಸಾಕಾಣಿಕೆಯಲ್ಲಿ ಚಾಕಿ ತಂದ ಪ್ರಾರಂಭದ ದಿನಗಳಲ್ಲಿ ಹುಳುಗಳಿಗೆ ಕೆಳಗಡೆ ಹಾಕುವ ಖಾಕಿ ಬಣ್ಣದ ಕಾಗದ; Silkworm eggs are kept on brown paper;
- ಇದು ಚಾಕಿ ಹುಳುಗಳಿಗೆ ಬೇಕಾದ ಒಂದೇ ಸಮನಾದ ಉಷ್ಣತೆಯನ್ನು ಕಾಪಾಡುತ್ತದೆ; This paper provides balanced temperature to the chawki worms;
- ಆದ್ದರಿಂದ ಪ್ರಾರಂಭದ ಏಳೆಂಟು ದಿನಗಳವರೆಗೆ ರೇಷ್ಮೆ ಹುಳುಗಳನ್ನು ಇದರ ಮೇಲೆ ಹರಡುತ್ತಾರೆ. There the silkworms are scattered on this paper for seven to eight days.

ಕೋಲ್ತಿರಿ/ಕೋಲ್ನಿನೆ kōltiri/kōlnine :
- ಕೋಲುತಿರಿ>ಕೋಲ್ತಿರಿ;
- ಬಿದಿರು ಕಡ್ಡಿ ಇಲ್ಲವೆ ಒಣಗಿದ ತೆಂಗಿನ ಗರಿಯನ್ನು ನಿರ್ದಿಷ್ಟ ಉದ್ದಕ್ಕೆ ಕತ್ತರಿಸಿ ಅದಕ್ಕೆ ಬಟ್ಟೆಸುತ್ತಿ ಎಣ್ಣೆಯಲ್ಲಿ ಅದ್ದಿ ದೈವಾರಾಧನೆಯಲ್ಲಿ ಬಳಸುವ ಬತ್ತಿ(ದ.ಕ); A wick made of bamboo or coconut leaves, wrapped with oiled cloth to worship the deity;
- ಕೋಲಿಗೆ ಬಟ್ಟೆ ಸುತ್ತಿ ಎಣ್ಣೆಯಲ್ಲಿ ಮುಳುಗಿಸಿ ಉರಿಸಲು ಬಳಸುವ ಕೋಲು ಪಂಜು; ಕೋಲು ಬತ್ತಿ (ಯ.ಪ.ಕೋ); A stick fire-brand with cloth wrapped and dipped in the oil;
- ಕೋಲ್ತ್ರಿ; ಕೋಲ್ನಿನೆ; ತೆಂಗಿನ ಗರಿಯ ಕಡ್ಡಿ, ಬಿದಿರಿನ ಸಪುರವಾದ ದಬ್ಬೆ(ಕೋಲು) ಮೊದಲಾದವುಗಳಿಗೆ ಬಟ್ಟೆ ಸುತ್ತಿ ಎಣ್ಣೆಯಲ್ಲಿ ಅದ್ದಿ ಸಿದ್ಧಪಡಿಸಿದ (ಸಾಮಾನ್ಯವಾಗಿ ಭೂತ, ನಾಗರ ಆರಾಧನೆಯಲ್ಲಿ ಬಳಸುವ) ವಿಶಿಷ್ಟವಾದ ಬತ್ತಿ(ತು.ನಿ);
- ಸಾಮಾನ್ಯವಾಗಿ ಭಕ್ತರು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಪಂಜಿನ ಸೇವೆ ಮಾಡುವುದಾಗಿ ಹರಕೆ ಹೊರುವುದುಂಟು; ತಮ್ಮ ಹರಕೆಯ ಪೂರೈಕೆಗಾಗಿ ಒಂದು ಅಡಿ ಉದ್ದದ ಬಿದಿರು ಕೋಲು ಇಲ್ಲವೆ ತೆಂಗಿನ ಗರಿಯ ಕಡ್ಡಿಗೆ ಬಟ್ಟೆಯನ್ನು ಪಂಜಿನಂತೆ ಸುತ್ತಿ, ಅದಕ್ಕೆ ಎಣ್ಣೆ ಹಾಕಿ, ಉರಿಸುತ್ತಾ ದೇವಾಲಯದ ಸುತ್ತಾ ಪ್ರದಕ್ಷಿಣೆ ಮಾಡಿ ಪಂಜಿನ ಸೇವೆ ಸಲ್ಲಿಸುವುದು ಪದ್ಧತಿ; ಇದೊಂದು ದೇವರ ಪೂಜೆಯ ವಿಶಿಷ್ಟ ಆಚರಣೆಯಾಗಿದೆ; ಈ ಪದ್ಧತಿಯನ್ನು ಕೋಲ್ತಿರಿ, ಕೋಲ್ನಿನೆ ಎಂದು ಕರೆಯುತ್ತಾರೆ[ಕೋಲು(<ಕೋಲ್)+ತಿರಿ=ಕೋಲುತಿರಿ> ಕೋಲ್ತಿರಿ]. The devotees perform/worship deity with fire-brands some offer fire-brand worship as a vow; it is a special kind of celebration or practice; this practice is known as Kolthiri or Kolinne.

ಕೋಲ್ತೊಟ್ಟಿ kōltoṭṭi :

ಕೋಲುಗಳಿಂದ ಮಾಡಿದ ಹಗುರವಾದ ತೆರೆದ ತೊಟ್ಟಿ; ಕಟ್ಟಡ ಕಟ್ಟುವಾಗ ಗಾರೆ ಮೊದಲಾದುವನ್ನು ಮೇಲೆತ್ತಿ ಕೊಡಲು ಬಳಕೆ(ಉ.ಕ.ಜ). Light weighted sticks or poles to support concrete or roofing; a open tank made of sticks or light wighted canes.

ಕೋಲ್ದಂಡ್ kōldanḍ :
- ಬಿದಿರಿನ ಗಳೆ ಅಥವಾ ಕೋಲು; ಭಾರವಾದ ವಸ್ತುಗಳನ್ನು ಕಟ್ಟಿ ಎರಡು ತುದಿಗಳನ್ನು ಇಬ್ಬರು ಭುಜದ ಮೇಲಿಟ್ಟುಕೊಂಡು ಸಾಗಿಸಬಹುದಾದ ಕೋಲು(ತು.ನಿ); Bamboo pole or cane, pole to carry heavy things on shoulders(two persons);
- ಭಾರವಾದ ವಸ್ತುಗಳನ್ನು ಸಾಗಿಸುವಾಗ ಇಂತಹ ಪದ್ಧತಿ ರೂಢಿಯಲ್ಲಿದೆ; ಗಳೆಯ ಮಧ್ಯಭಾಗದಲ್ಲಿ ಭಾರವಾದ ವಸ್ತುಗಳನ್ನು ಕಟ್ಟಿ/ತೂಗುಹಾಕಿ, ಗಳೆಯ ಒಂದೊಂದು ತುದಿಗೆ ಒಬ್ಬೊಬ್ಬರು ಹೆಗಲು ಕೊಟ್ಟು ಹೊತ್ತು ಸಾಗಿಸುವುದಕ್ಕೆ ಬಳಕೆ; ಇದರಿಂದ ಹೊರುವ ಇಬ್ಬರಿಗೆ ಅತಿ ಭಾರವೆನಿಸದೆ ಸುಲಭವಾಗಿ ವಸ್ತುಗಳನ್ನು ಸಾಗಿಸಲು ಅನುಕೂಲ; It is used during transporting heavy things on the shoulders; heavy things are tied to the middle part of the pole, both ends of the

pole are on the shoulders of two persons; this process makes transportation easy.
ವ್ಯರೂ: ಅಡ್ಡ, ಅಡ್ಡೆ(ಮಂಡ್ಯ.ಜಿ).

ಕೋಲ್ಮಿಂಚು kōlmincu :

- ಕೋಲಿನ ಆಕಾರದಲ್ಲಿ ಫಳೀರೆಂದು ಹೊಳೆಯುವ ಮಿಂಚು; ಸೆಳೆಮಿಂಚು(ಕೋಲ್+ಮಿಂಚು); Rod like lightening, forked-lightening;
- ಮಳೆಯ ಮೋಡಗಳ ನಡುವೆ ಬಳ್ಳಿಯಂತೆ ತೀಕ್ಷ್ಣ ಪ್ರಕಾಶದಿಂದ ಸುಳಿಯುವ ಮಿಂಚು; ಬಳ್ಳಿಮಿಂಚು; ಸೀಳು ಮಿಂಚು; A form of lightening that moves rapidly in a zigzag path with one end divided, chain lightening;
- ಮಳೆ ಮೋಡಗಳ ಎರಡೂ ತುದಿಗಳಲ್ಲಿ ವಿದ್ಯುತ್ ಕಾಂತ ಶಕ್ತಿಯ ಧನಾತ್ಮಕ(+)ಗುಣ ಮತ್ತು ಋಣಾತ್ಮಕ(–) ಗುಣಗಳಿರುತ್ತವೆ; ಧನಾತ್ಮಕ(+) ಗುಣದ ಎರಡು ತುದಿಗಳು ಪರಸ್ಪರ ಸಂಧಿಸಿದಾಗ, ವಿದ್ಯುತ್‌ನ 'ಷಾರ್ಟ್ ಸರ್ಕ್ಯೂಟ್‌ನಿಂದಾಗಿ ಅಗಾಧ ಶಬ್ದದೊಡನೆ ಕಣ್ಣು ಕೋರೈಸುವ ಬೆಳಕೂ ಉಂಟಾಗುತ್ತದೆ; ನಮಗೆ ಮೊದಲು ಕೋಲಿನಂತೆ, ಬಳ್ಳಿಯಂತೆ ಹಬ್ಬಿದ ಬೆಳಕು ಗೋಚರಿಸುವುದೇ ಕೋಲುಮಿಂಚು/ಕೋಲ್ಮಿಂಚು; A zigzag form of lightening; lightening is a sudden electrostatic discharge both positive(+) and negative(-) during a thunderstorm; this discharge occurs between electrically charged regions of a cloud;
- ಕೋಲ್ಮಿಂಚು ಅನುಸರಿಸಿ ಒಡನೆಯೇ ಚಟ್, ಚಟಾರ್ ಎಂಬ ಶಬ್ದ ಕೇಳಿಬರುತ್ತದೆ; ಇದೇ ಸಿಡಿಲು; ಆ ಕ್ಷಣಕ್ಕೆ ಹರಿದ ವಿದ್ಯುತ್ ಭಾರೀ ಸಪ್ಪಳದೊಂದಿಗೆ ಭೂಮಿಗೆ ಅಪ್ಪಳಿಸುತ್ತದೆ; ಅಂತಹ ಸ್ಥಳದಲ್ಲಿ ಏನೇ ವಸ್ತುಗಳಿದ್ದರೂ ಅವು ಸುಟ್ಟು ಹೋಗುತ್ತವೆ; ಪ್ರಾಣಿ, ಪಕ್ಷಿ, ಮನುಷ್ಯರು ವಿದ್ಯುತ್‌ನ ಆಘಾತದಿಂದ ಸಾವನ್ನಪ್ಪುತ್ತಾರೆ; ಮುಂಗಾರು ಮಳೆಯ ಕಾಲದಲ್ಲಿ ಕೋಲ್ಮಿಂಚು–ಸಿಡಿಲಿನ ಅಬ್ಬರ ಹೆಚ್ಚು. Lightening may be seen and not heard when it occurs at a distance too great for the sound to carry as far as the light from the strike or flash; the lightening stroke may burn human beings, bird, animals, trees; during mansoon raining lightening and thunder effect is very high.

ಕೋವ kōva :

- ಮಡಿಕೆ ಮಾಡುವ ವೃತ್ತಿಯವನು; ಕುಂಬಾರ ತ: ಕುಯಮ್, ಕುಯವನ್(ಪು), ಕುಯತ್ತಿ(ಸ್ತ್ರೀ); ಮ: ಕುಯವನ್, ಕುಶವನ್(ಪು), ಕುಯವಿ, ಕುಶವಿ(ಸ್ತ್ರೀ); ಕೊಡ: ಕೋಯವ; ತು: ಕುಸವೆ, ಕುಶವೆ (ದ್ರಾ.ಭಾ.ಜ್ಞಾ.ಪ.ಕೋ); Potter;
- ***—ಕೋವರ ಚಕ್ರ*** : ಕುಂಬಾರನ ಚಕ್ರ; ತಿಗುರಿ; ಮಡಿಕೆ, ಕುಡಿಕೆ ಮೊದಲಾದವುಗಳನ್ನು ಮಾಡಲು ಕುಂಬಾರರು ಬಳಸುವ ಚಕ್ರ, Potter's wheel, it is a machine used in shaping of round ceramic ware, pot, small pot.

ಕೋವಾ kōvā :

- ಹಾಲನ್ನು ಕಾಯಿಸಿ ಹಿಂಗಿಸಿ ತೆಗೆದ ಖಾದ್ಯ (ಕೋ.ಜಿ); Kova is a dairy product; it is made of either dried whole milk or milk thickened by heating;
- ಹಾಲಿನಲ್ಲಿ ಮಾಡುವ ಒಂದು ಬಗೆಯ ಖಾದ್ಯ; ಎಲ್ಲಾ ಬಗೆಯ ಸಿಹಿ ತಿಂಡಿಗಳ ತಯಾರಿಕೆಯಲ್ಲಿ ಇದು ಬಳಕೆಯಾಗುತ್ತದೆ. It is a dairy product and is used in various types of sweets.

ಕೋವಿ[1] kōvi[1] :

- ಮರದಿಂದ ಸಿದ್ಧಪಡಿಸಿದ ಒಂದು ಬಗೆಯ ಸಾಧನ; ತುಪಾಕಿ, ಬಂದೂಕು; ಕಳ್ಳ ಕಾಕರಿಂದ ರಕ್ಷಿಸಿಕೊಳ್ಳಲು, ಕಾಡು ಮೃಗಗಳಿಂದ ಬೆಳೆಯನ್ನು ಸಂರಕ್ಷಿಸಿಕೊಳ್ಳಲು, ಯುದ್ಧರಂಗದಲ್ಲಿ ಎದುರಾಳಿಯ ಜೊತೆ ಯುದ್ಧ ಮಾಡಲು ಬಳಕೆ; A wooden device; gun, musked used to protect from robbers, animals and enemies in the battle field;
- ಗುಂಡು ಹಾರಿಸುವ ಸಾಧನ; ಬಂದೂಕು (ಕ.ಜಾ.ಕೋ); Gun, musket;
- ಕೊಬವಿ(ಕಿಟ್ಟೆಲ್); *ಪ್ರ: 'ಕೋವೀ ನೋಡಿ ಹೆದಱುವವ ಫಿರಂಗಿಗೆ ಬೆಂಕಿ ಕೊಟ್ಟಾನೇ'* (ಕಿ.ಕೋ.ಗಾ);

- ಗೋವಿ; ೧.ಕೊಳವೆ; ಪಿಚಕಾರಿ; ಜೀರ್ಕೊಳವೆ; ೨.ಕೊಳಲು, ವೇಣು; ಪಿಳ್ಳಂಗೋವಿ; ೩.ಊದುಗೊಳವಿ; ೪.ಸರ ಮುಂತಾದ ಆಭರಣಗಳಲ್ಲಿ ಅಳವಡಿಸುವ ಚಿನ್ನದ ಕೊಳವಿ; ೫.ಗುಂಡು ಹಾರಿಸುವ ಸಾಧನ; ತುಬಾಕಿ(ಕ.ನಿ); Flute, fluting, fife, a tube attached to the golden chain;
- ಕೇಪಿನ ಕೋವಿ; ಒಂಟಿ ನಳಿಗೆ ಕೋವಿ; ಜೋಡಿ ನಳಿಗೆ ಕೋವಿ; ತೋಟಾ ಕೋವಿ ಇತ್ಯಾದಿ ಕೋವಿಯ ವಿಧಗಳಿವೆ;
- ಮಂಗಳ ಸೂತ್ರದಲ್ಲಿ ಪೋಣಿಸುವ ಬಂಗಾರದ ಪುಟ್ಟ ಕೊಳವೆಗಳು(ಚಿ.ಪ.ಕೋ); Tube shaped golden beads attached to mangasutra;
- ***—ಕೋವಿ ಕಟ್ಟು*** : ಕೋವಿಕಟ್ಟುವುದು; ಶಿಕಾರಿ ವಿಧಾನಗಳಲ್ಲಿ ಒಂದು(ಶಿ.ಜಿ/ಹಾಸ.ಜಿ./ಬ.ಜಿ); A type of hunting;
- ಕಾಡುಪ್ರಾಣಿಗಳು ಪ್ರತಿನಿತ್ಯ ಓಡಾಡುವ ದಾರಿಯಲ್ಲಿ ಕೋವಿಯನ್ನು ಗೂಟಗಳಿಗೆ ಕಟ್ಟಿ ಪ್ರಾಣಿಗಳನ್ನು ಬೇಟೆಯಾಡುವ ಒಂದು ಪದ್ಧತಿ; 'ತಿಸ್ತು ಕಟ್ಟುವುದು ಎಂದೂ ಹೇಳುತ್ತಾರೆ';
- ***—ಕೋವಿಕಾರ*** : (<ಕೋವಿಕಾಱ); ಕೋವಿಗಾರ; ಬಂದೂಕನ್ನು ಆಯುಧವಾಗಿ ಉಳ್ಳವನು(ಕೋವಿ+ಕಾಱ)(ಕ.ನಿ); One who uses gun as a weapon;
- ***—ಕೋವಿ ಕೋಲು*** : ಪ್ರಾಣಿಗಳು ತಿರುಗಾಡುವ ದಾರಿಯಲ್ಲಿ ಕೋವಿ ಕಟ್ಟುವಾಗ ಕೋವಿಗೆ ಆಧಾರವಾಗಿರುವ ಟಿಸಿಲುಗಳು/ರೆಂಬೆಗಳು; ಇವುಗಳಿಗೆ ಕೋವಿ ಕೋಲು ಎನ್ನುತ್ತಾರೆ.
- ***—ಕೋವಿಗಂಡಿ/ಕೋವಿಕಂಡಿ*** : ಕೋಟೆಯ ಮೇಲೆ ಪಹರೆ ಮಾಡುವ ಸೈನಿಕರು ಹೊರಗೆ ಶತ್ರುಗಳ ಚಲನ-ವಲನ ನೋಡಲು, ಶತ್ರುಗಳ ಮೇಲೆ ಬಂದೂಕಿನಿಂದ ಗುಂಡು ಹಾರಿಸಲು ಅನುಕೂಲವಾಗುವಂತೆ ಕೋಟೆಯ ಮೇಲಿನ ಕೈಪಿಡಿ ಗೋಡೆಯಲ್ಲಿ ಅಲ್ಲಲ್ಲಿ ಬಿಟ್ಟಿರುವ ಕಂಡಿ; Holes in the fort for firing;
- ***—ಕೋವಿಗೊಳವಿ*** : ಬಂದೂಕಿನ ಕೊಳವೆ, -ನಳಿಗೆ; ಕೋವಿ+ಕೊಳವಿ(<ಕೊಱವಿ),(ಕ.ನಿ);
- ***—ಕೋವಿ ಚೀಲ*** : ಶಿಕಾರಿಗಾರರು ಕೋವಿಯ ಉಪಯೋಗಕ್ಕೆ ಅಗತ್ಯವಾದ ಚರೆ, ಮಸಿ, ಸಿಡಿಮದ್ದು, ಗುಂಡು ಮೊದಲಾದವುಗಳನ್ನು ತುಂಬಿಟ್ಟುಕೊಳ್ಳಲು ಬಳಸುವ ಬಟ್ಟೆ ಅಥವಾ ಚರ್ಮದಿಂದ ಮಾಡಿದ ಚೀಲ(ಶಿ.ಜಿ); ವ್ಯರೂ: ಮಸಿಚೀಲ; A sack or leather bag used to carry bullets, ammunitions by the hunters;
- ***—ಕೋವಿ ಪಾಲು*** : ಬೇರೆಯವರ ಕೋವಿ ಪಡೆದು ಶಿಕಾರಿ ಮಾಡಿದಾಗ, ಆ ಪ್ರಾಣಿಯ ಮಾಂಸದಲ್ಲಿ ಕೋವಿಯ ಯಜಮಾನನಿಗೂ ನೀಡುವ ಒಂದು ಪಾಲು(ಬೆಂ.ಗ್ರಾ.ಜಿ); A share in a game/prey for the owner of the gun;
- ***—ಕೋವಿ ಪೂಜೆ*** : ಕೊಡಗಿನವರು ಕೋವಿ ತುಂಬಾ ಪವಿತ್ರ ಎಂದು ಭಾವಿಸಿ ಪೂಜಿಸುತ್ತಾರೆ; ಕೋವಿಯನ್ನು ಹೆಂಗಸರು ಮುಟ್ಟಬಾರದೆಂಬ ನಂಬಿಕೆ ಇದೆ; ಸಾಮಾನ್ಯವಾಗಿ ವಿಶೇಷವಾದ ಪ್ರಾಣಿ ಬೇಟೆಯಾಡಿದ ದಿನ ಪ್ರಾಣಿಯ ಮಾಂಸದಡುಗೆ ಮಾಡಿ, ಕೋವಿಯನ್ನು ಮಣೆಯ ಮೇಲಿಟ್ಟು ರೊಟ್ಟಿ, ಮಾಂಸ ಎಡೆ ಹಾಕಿ ಗಂಡಸರೆಲ್ಲ ಸೇರಿ ಪೂಜೆ ಸಲ್ಲಿಸಿ ನಂತರ ಎಡೆ ತೆಗೆದು ಪ್ರಸಾದವೆಂದು ಎಲ್ಲರೂ ಸ್ವೀಕರಿಸುತ್ತಾರೆ; Kodagas clean and worship gun(weapon) to express their gratitude and devotion; they believe that female touch wouid pollute them; Kodavas worship the gun on the day which they hunt a special animal; feasting and drinking follow on that day;
- ***—ಕೋವಿ ಪೆಟ್ಟಿಗೆ*** : ಕೋವಿಗಳನ್ನು ಸುರಕ್ಷಿತವಾಗಿ ಇಡುವುದಕ್ಕೋಸ್ಕರ ಮಾಡಿಸಿದ ಮರದ ಪೆಟ್ಟಿಗೆ; A wooden box to preserve gun;
- ***—ಕೋವಿ ಪೇಟೆ ದುರ್ಗಮ್ಮನ ಜಾತ್ರೆ*** : ಹಾಸನ ಜಿಲ್ಲೆಯ ಬೇಲೂರಿನ ಗ್ರಾಮ ದೇವತೆಯ ಜಾತ್ರೆ; ಈ ಜಾತ್ರೆಯು ಕೊಂಡ, ಸಿಡಿಯೊಂದಿಗೆ ನಡೆಯುತ್ತದೆ; A fair in the name of goddess of Belur village of Hassan district;
- ***—ಕೋವಿ ಬೇಟೆ*** : ಕೋವಿಯನ್ನು ಬಳಸಿ ಮಾಡಿದ ಬೇಟೆ; ಕೋವಿ ಬೇಟೆಯಲ್ಲಿ 'ಬಾರ್' ಮಾಡೋ

ಬೇಟೆ, 'ಸೂಸ್ತ್ರ' ಕಟ್ಟೋ ಬೇಟೆ ಎಂದು ಎರಡು ವಿಧಗಳಿವೆ;

- ***—ಕೋವಿ ಮಣಿ*** : ಸ್ತ್ರೀಯರು ಧರಿಸುವ ಕೊರಳಿನ ಒಂದು ಆಭರಣ(ಬ.ಜಿ); Women's ornament(necklace);
- ***—ಕೋವಿ ಮರ*** : ಹತ್ತೆ; ಕೋವಿಯ ಹಿಂಭಾಗದ ಮರ; ಕೋವಿಯ ಅಂಡು; ಪ್ರಾಣಿಗಳಿಗೆ ಗುರಿ ಇಡುವಾಗ ಈ ಹತ್ತೆಯನ್ನು ಹೆಗಲಿಗೆ ಆನಿಸಿಕೊಂಡು ಗುಂಡು ಹಾರಿಸುತ್ತಾರೆ; A wooden back of a gun;
- ***—ಕೋವಿ ಮಸಿ*** : ಬಂದೂಕಿಗೆ ತುಂಬುವ ಮದ್ದು; ಇದು ಕಪ್ಪು ಬಣ್ಣದಿಂದ ಕೂಡಿರುತ್ತದೆ; Black coloured ammunition(bullet) loaded to gun;
- ***—ಕೋವಿಯ ಮುಷ್ಟ*** : ಕೋವಿಗೆ ಹಿಡಿದ ಅಥವಾ ತಾಗಿದ ದೃಷ್ಟಿ; ಇಂತಹ ಕೋವಿಗಳನ್ನು ಮಂತ್ರವಾದಿಗಳ ಬಳಿಗೆ ತೆಗೆದುಕೊಂಡು ಹೋಗಿ ದೃಷ್ಟಿ ನಿವಾಳಿಸುವುದುಂಟು(ಬೇ.ಸಾಂ.ಪ.ಕೋ).

ಕೋವಿ² kōvi² :

- ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೋಕಿನ ೧೮೯ನೇ ಶಾಸನದಲ್ಲಿ ಇದರ ಉಲ್ಲೇಖ; A place referred in 189th inscription Sagara taluk of Shimoga district;
- ಆನಂದಪುರದ ಮಹತ್ತಿನ ಮಠಕ್ಕೆ ಕೆಳದಿಯ ಯಾದವ ಮುರಾರಿ, ಕೋಟೆ ಕೋಲಾಹಲರು ಧರ್ಮಕ್ಕೆ ಬಿಟ್ಟಿರುವ ದಾನದ ವಿವರವಿದೆ; A reference of contribution by Yadava murari and others to the Anandpur math(monastery);
- 'ಕೋಟೆಕೋಲಾಹಲ' ಎಂಬ ಮಾತಿಗೆ ಕೋಲಾಹಲ ಎಬ್ಬಿಸುವವನು, ಶತ್ರುಸೈನ್ಯವನ್ನು ಸದೆಬಡಿಯುವವನು ಎಂದು ಅರ್ಥ; ಇದು ಒಂದು ಬಿರುದು ಕೂಡ;
- "ಕಂಠೀರವ ನರಸರಾಜೇಂದ್ರನ ಸೈನ್ಯದಲ್ಲಿದ್ದ ಒಂದು ಕೋವಿಯ ಹೆಸರು"(ಕ.ನಿ.); 'ಕಂಠೀರವನರಸರಾಜ ವಿಜಯ'ದಲ್ಲಿ ಇದರ ಉಲ್ಲೇಖವಿದೆ; Name of a gun in the army of Kantirava Narasa Rajendra;
- ಆ ತೆರನಾದ ಒಂದು ವಿಶೇಷ ಕೋವಿ(ಆಯುಧ)ಯಿಂದಾಗಿ ಗ್ರಾಮಕ್ಕೆ ಹೆಸರು ಬಂದಿರುವುದು ವಿರಳ, ವಿಶಿಷ್ಟ ಎನ್ನಿಸುತ್ತದೆ;
- 'ಕೋವಿ' ಎಂದರೆ 'ತುಪಾಕಿ' ಎಂದು ಅರ್ಥ; ಇಂತಹ ಆಯುಧ ತಯಾರಿಕೆಯ ಕೇಂದ್ರವಾಗಿಯೂ ಈ ಹೆಸರು ಕಾಣಿಸಿಕೊಂಡಿರಬಹುದು. Kovi means fire arm, musket, gun; may be a centre of weapons manufacturing.

(E.C- ೧೫; ಶಿ.ಜಿ.)

ಕೋವಿಲ್ kōvil :

- ಹಾಸನ ಜಿಲ್ಲೆ ಶ್ರವಣಬೆಳಗೊಳ ತಾಲ್ಲೋಕಿನ ೪೭೫ನೇ ಶಾಸನದಲ್ಲಿ 'ಕೋವಿಲ್' ಪ್ರಸ್ತಾಪವಿದೆ; It is referred in 475th inscription Shravanabelagola taluk of Hassan district;
- ವಿಜಯನಗರದ ರಾಜ ಬುಕ್ಕರಾಯನ ಕಾಲದಲ್ಲಿ ಜೈನರಿಗೂ ವೈಷ್ಣವರಿಗೂ ನಡೆದ ಸಂಘರ್ಷವನ್ನು ತಿಳಿಸುವ ಶಾಸನವೊಂದು ಭಂಡಾರ ಬಸದಿಯೊಳಗೆ ದೊರಕಿದೆ; ಈ ಶಾಸನದಲ್ಲಿ 'ಕೋವಿಲ್'ನ ಉಲ್ಲೇಖವಿದೆ;
- 'ಕೋವಿಲ್' ರೂಪಕ್ಕೆ 'ಕೋಯಿಲ್' ಸಂವಾದಿ ರೂಪವಿದೆ; ಇದರ ಅರ್ಥ ದೇವಾಲಯ ಎಂದು; ಊರಿನ ಹೆಸರಿಗೆ ಅರ್ಥ? ದೇವಾಲಯಗಳ ಊರು ಎಂದೆ? ಅಥವಾ ಈ ಪದ ಊರಿನ ಹೆಸರನ್ನು ಸೂಚಿಸುತ್ತಿಲ್ಲವೆ? Kovil may be a Tamil word `Koyil' means temple;
- ತಮಿಳು ಮತ್ತು ಮಲೆಯಾಳಂಗಳಲ್ಲಿ ಕೋಯಿಲ್, ಕೋವಿಲ್ ಎಂಬೆರಡೂ ರೂಪಗಳಿವೆ; ತಮಿಳಿನಿಂದ ಈ ಪದ ಬಂದಿರುವ ಸಾಧ್ಯತೆಯಿದೆ; ಹಾಗೆಯೇ ವೈಷ್ಣವ ಸಂಸ್ಕೃತಿ ಕೂಡ. In Tamil and Malayalam we can find two words like Koyil, Kovil; this word may be derived from Tamil word; at the same time Vyshnava culture also.

(E.C- ೨; ಶ್ರ.ಬೆ.)

ಕೋವು kōvu :

- ಕೆರೆಯ ನೀರು ನಿಲ್ಲುವ ಭಾಗ; ಕೊಲ್ಲಿ; ನೀರು ನಿಲ್ಲುವಂಥ ಕಣಿವೆ(ಬ.ಜಿ/ತು.ಜಿ)(ಕ.ಜಾ.ನಿ); Bay, gulf, a part of water stagnant;

- ೧.ಮೂಲೆ, ಸಂದು; ೨.ಹಳ್ಳ ಕೊಳ್ಳ(ಕ.ಜಾ.ಕೋ); Alley, cleavage;
- ಹೊಳೆಗಳು ತುಂಬಿ ಹರಿಯುವಾಗ ಅಕ್ಕ ಪಕ್ಕದಲ್ಲಿ ನೀರು ಹರಿದು ಕೊರೆತದಿಂದ ಉಂಟಾದ ನೀರು ನಿಂತ ನೆಲೆ. Water pits around the flooded channels or rivers.

ಕೋವೆ kōve :

- ಹುತ್ತದ ಕೊಳವೆಯಾಕಾರದ ರಂಧ್ರ; Tube shaped hole in anthill(hollow);
- ಹುತ್ತದಲ್ಲಿನ ರಂಧ್ರಗಳು; ಕ್ವಾವಿ; ಕ್ವಾವೆ; ಕೋಬೆ; ಕ್ವಾಬೆ; ಹುತ್ತದ ಬಾಯಿ; ಕೋವೆ(ರಂಧ್ರ) ಇಲ್ಲದ ಹುತ್ತವು ಮೂಗುತ್ತ ಎನಿಸಿಕೊಳ್ಳುತ್ತದೆ; ಆಗತಾನೆ ಕರು ಹಾಕಿದ ಮೇಲೆ ಬೀಳುವ ಹಸುವಿನ ಸತ್ತೆ(ಮಾಸು)ಯನ್ನು ಯಾರೂ ತುಳಿಯಬಾರದೆಂದು ನಾಯಿಗಳು ಕಿತ್ತು ತಿನ್ನಬಾರದೆಂದು ಹುತ್ತದ ರಂಧ್ರದೊಳಗೆ ಹಾಕಿ ಮುಚ್ಚುವುದುಂಟು; Hole or opens of anthill;
- ಲೋಹಗಳನ್ನು ಕರಗಿಸುವ ಮೂಸೆ(ಬ.ಜಿ); Crucible to melt metals;
- ೧.ಚಿನ್ನವನ್ನು ಕರಗಿಸಲು ಬಳಸುವ ಮಣ್ಣಿನ ಮೂಸೆ; ಕೋವೆ; ೨.ಭಂಗಿ ಪುಡಿ ಹಾಕಿ ಬೆಂಕಿ ಉರಿಸುವ ಮೂಸೆ(ತು.ನಿ); Earthern crucible to melt gold;
- ಒಡವೆ, ಬಾಗಿಲವಾಡ ಮೊದಲಾದ ವಿಶಿಷ್ಟ ನಮೂನೆಗಳನ್ನು ಮಾಡಲು ಅಕ್ಕಸಾಲಿಗರು ಬಳಸುವ ಅಚ್ಚಿನ ಸಾಧನ; Goldsmiths use this mouldings mould and to prepare ornament designs;
- ಕೋವಿ; ಲೋಹಗಳನ್ನು ಕರಗಿಸಲು ಬಳಸುವ ಮೂಸೆ; ರಂಧ್ರ, ತೂತು; ಬಿಲ; (ಉಗುರುಗಳ) ತುದಿ ಕೋವಿರಂಧ್ರ(ದ್ರಾ.ಭಾ.ಜ್ಞಾ.ಪ.ಕೋ); Crucible to melt metals, hole, burrow, hollow;
- ಅನುಕ್ರಮ; ಅನುಪೂರ್ವಿ; ಪರಿವಿಡಿ; Sequence, content, menu;
- ಹಬ್ಬಿ ಬೆಳೆದು ಅಂದವಾದ ಕೆಂಪುಹಣ್ಣು ಬಿಡುವ ಒಂದು ಜಾತಿಯ ಬಳ್ಳಿ; A creeper with beautiful red fruit;
- ಒಂದು ಬಗೆಯ ರೋಗ; ವ್ಯಾಧಿ; ಅಗ್ನಿಮಾಂದ್ಯ; ಕೆಮ್ಮು: ನಾಯಿಕೆಮ್ಮು, ಕೋಡಗ ಕೆಮ್ಮು ಇತ್ಯಾದಿ; ಮಕ್ಕಳ ತಲೆಯ ಮೇಲೆ ಏಳುವ ಗುಳ್ಳೆ, ಕುರು; A kind of disease, illness, cough, whooping cough, sore or boil on the head of the children;
- ಹಳ್ಳ ಕೊಳ್ಳಗಳಲ್ಲಿ ನೀರು ನಿಂತಿರುವ ಕುಳಿ; ರಂಧ್ರ; ಕೊಲ್ಲಿ; Water pit;
- ಕೆರೆಯಲ್ಲಿನ ಮೂಲೆ-ಮೂಲೆಗಳಲ್ಲಿ ನಿಂತ ನೀರಿನ ನೆಲೆ; ಇಲ್ಲಿ ನೀರು ಚಲಿಸದೆ ನಿಂತಿರುತ್ತದೆ; ಕೆರೆಯಲ್ಲಿನ ನೀರು ನಿಂತ ಈ ಭಾಗದಲ್ಲಿ ಕೊಡಬೆ/ಕೊಡಮೆ ಹಾಕಿ ಮೀನು ಹಿಡಿಯಲು ಸಾಧ್ಯವಾಗುವುದಿಲ್ಲ; *ಪ್ರ: 'ಕೋವೆ ನೀರಿಗೆ ಕೊಡಮೆ ಹಾಕ್ದಂಗೆ'*(ಗಾ);
- ತ: ಕುವ್ವೆ, ಕುಗ್ಗೆ; ಮ: ಕುವ; ಕೊಡ: ಕೋವೆ; ತು: ಕೋವೆ(ದ್ರಾ.ಭಾ.ಜ್ಞಾ.ಪ.ಕೋ);
- ***—ಕೋವೆ ಗೆಣಸು*** : ಗೆಣಸಿನ ಒಂದು ವಿಧ; A kind of sweet potato, yam;
- ***—ಕೋವೆ ತೆಮ್ಮ*** : ಎಡೆಬಿಡದೆ ಬರುವ ಒಂದು ಬಗೆಯ ಕೆಮ್ಮು; Continuous coughing, whooping cough;
- ***—ಕೋವೆದಾರ*** : ಹಿಡಿದ ಮೀನುಗಳನ್ನು ಪೋಣಿಸುವ ದಾರ(ಶಿ.ಜಿ); A string or thread to fix the fish;
- ***—ಕೋವೆ ಮುಳ್ಳು*** : (Barleria longiflora) ಮುಳ್ಳಂಕೋಲ್; ನೀರುಪ್ಪಿಗಿಡ;
- ***—ಕೋವೆರೋಗ*** : ಮಕ್ಕಳಿಗೆ ಬರುವ ಒಂದು ಬಗೆಯ ರೋಗ; ಈ ರೋಗ ಬಂದ ಮಕ್ಕಳ ಹೊಟ್ಟೆ ದಪ್ಪವಾಗಿ, ಕೈಕಾಲು ಸಣ್ಣದಾಗುತ್ತವೆ; ಇದಕ್ಕೆ ದಪ್ಪ ಸೂಜಿ ಕಾಯಿಸಿ ರೋಗಿಯ ಎದೆ, ಹೊಟ್ಟೆಯ ಮೇಲೆ ಇಟ್ಟು ಚಿಟಕಿ ಹಾಕುವ ಮೂಲಕ ಚಿಕಿತ್ಸೆ ಮಾಡುತ್ತಾರೆ; A kind of disease for children; features of this disease are big belly, sleek limbs, people treat this with hot needle and keep it on the chest and stomach;
- ***—ಕೋವೆ ಹಲ್ಲು*** : ದನಗಳ ದೋಷಯುಕ್ತವಾದ ದವಡೆ ಹಲ್ಲು; ದನಗಳು ಮೇಲುಕು ಹಾಕುವಾಗ ಈ ಹಲ್ಲಿನಿಂದ ತೊಂದರೆಯಾಗುತ್ತದೆ(ಬೆಂ.ಜಿ).

Damaged molar teeth of cattle; it troubles the cattle while chewing the cud.

ಕೋಷ್ಠ kōṣṭha :

- ದೀಪದ ಗೂಡು(ಚಿತ್ರ.ಜಿ); Niche for lamp;
- ದೀಪ ಇಡಲು ಗೋಡೆಯಲ್ಲಿ ಮಾಡಿದ ಗೂಡು; ಗೂಡಿನಲ್ಲಿ ದೀಪವಿಟ್ಟು ಹಚ್ಚುವುದರಿಂದ ಗಾಳಿಯ ಹೊಡೆತಕ್ಕೆ ನಂದಿ ಹೋಗದೆ ಉರಿಯುತ್ತದೆ; A hole, niche to keep oil lamp, to avoid from the wind;
- ಗ್ರಾಮೀಣರು ತಮ್ಮ ಅಡುಗೆ ಮನೆಗೆ ಹೊಂದಿಕೊಂಡ ಕೋಣೆಯ ಗೋಡೆಯ ಗೂಡಿನಲ್ಲಿ ದೀಪವಿಟ್ಟು, ಕೈಯೆಣ್ಣೆ(ಹರಳೆಣ್ಣೆ) ಹಾಕಿ ಸದಾ ದೀಪ ಹಚ್ಚುವುದುಂಟು; ಈ ದೀಪವನ್ನು 'ಕೈಯೆಣ್ಣೆ ದೀಪ' ಎಂದೇ ಕರೆಯುತ್ತಾರೆ; The villagers light the oil lamps permanently with castor oil; these lamps are called `Castor lamp' or `Kaiyanne' deepa';
- ಈ ದೀಪದ ಬಗೆಗೆ ಪವಿತ್ರ ಭಾವನೆ ಇರುತ್ತದೆ. This oil lamps have sacred feeling.

ಕೋಸಂಬರಿ kōsambari :

- ಕೋಸಂಬರಿ, ಕೋಸಂಬ್ರಿ, ಕೋಸುಂಬರಿ, ಕುಸುಂಬರಿ ಎಂದೆಲ್ಲಾ ಕರೆಯುವುದುಂಟು;
- ಕಡಲೆಬೇಳೆ ಅಥವಾ ಹೆಸರುಬೇಳೆಯನ್ನು ನೀರಲ್ಲಿ ನೆನಸಿ, ಸೌತೆಕಾಯಿ, ತೆಂಗಿನ ತುರಿ, ಹಸಿರು ಮೆಣಸಿನಕಾಯಿ, ಕೊತ್ತಂಬರಿ ಸೊಪ್ಪು, ನಿಂಬೆಹಣ್ಣಿನ ರಸ, ಉಪ್ಪು ಇತ್ಯಾದಿಗಳನ್ನು ಕೂಡಿಸಿ ಒಗ್ಗರಣೆ ಹಾಕಿ ತಯಾರಿಸುವ ಒಂದು ಬಗೆಯ ತಿನಿಸು; A mixture of chanadal or green gram, cucumber slices, coconut pieces, gree chilly, coriander leaves, lemon juice, salt etc; it is a kind of tempering(spices) edible dish;
- ಕುಸುಂಬರಿ; ಹವಾಗುಣಕ್ಕೆ ಕೆಟ್ಟು ಹೋಗದಂತೆ ಜೋಪಾನ ಮಾಡಿದ ಹಣ್ಣು ಮೊದಲಾದ್ದು; A preserved fruit.
- ಕೋಸಂಬರಿ; ಕೋಸು, ಚಪ್ಪರ ಬದನೆ, ಸೌತೆ, ಬಾಳೆಕಾಯಿ ಮೊದಲಾದ ಕೆಲವು ಹಸಿ ತರಕಾರಿಗಳನ್ನು ಸಣ್ಣಗೆ ಹಚ್ಚಿ, ಉಪ್ಪು ಮೊದಲಾದವನ್ನು ರುಚಿಗೆ ತಕ್ಕಂತೆ ಸೇರಿಸಿ ಒಗ್ಗರಿಸಿದ ಗೊಜ್ಜು, ಪಚ್ಚಡಿ; ವ್ಯಂಜನ(ಕ.ನಿ);
- ಕೋಸುಮ್ಬರಿ, ಕೋಸುಮರಿ, ಕುಸುಮ್ಬರಿ(ಕಿಟ್ಟೆಲ್);
- ನೆನಸಿದ ಕಾಳು(ಕಡ್ಲೆಕಾಳು?) ಸೌತೆಕಾಯಿ ಹೋಳು, ಮೊಸರು, ಉಪ್ಪು, ಜೀರಿಗೆ ಮೊದಲಾದವನ್ನು ಸೇರಿಸಿದ ಪಲ್ಲೆ(ಕಲ.ಜಿ); A curry with sliced cucumber and grains;
- ಹಬ್ಬ, ಉತ್ಸವ, ಮದುವೆ ಮೊದಲಾದ ಸಮಾರಂಭಗಳಲ್ಲಿ ತಯಾರಿಸುವ ವಿಶೇಷವಾದ ವ್ಯಂಜನ; ತಿನಿಸು; ನೆನೆದ ಹಸಿ ಕಡಲೆಬೇಳೆ ಅಥವಾ ಹಸಿ ಹೆಸರುಬೇಳೆಯ ಜೊತೆಗೆ ಹಸಿಯಾದ ಸೌತೆಕಾಯಿ, ಕಾಯಿತುರಿ, ಹಸಿರು ಮೆಣಸಿನಕಾಯಿ, ಕೊತ್ತಂಬರಿ ಸೊಪ್ಪು, ಮೆಣಸಿನ ಪುಡಿ, ಉಪ್ಪು, ನಿಂಬೆರಸಗಳನ್ನು ಸೇರಿಸುವುದರಿಂದ ಒಂದು ವಿಶಿಷ್ಟ ಸ್ವಾದ ನೀಡುತ್ತದೆ; ಈ ಎಲ್ಲ ಪರಿಕರಗಳಲ್ಲಿ ಔಷಧೀಯ ಗುಣವೂ ಇರುವುದಿಂದ ದೇಹಕ್ಕೆ ಆರೋಗ್ಯಕರವಾಗಿರುತ್ತದೆ; ಚೆನ್ನಾಗಿ ಜೀರ್ಣಿಸುವ ಶಕ್ತಿ ವೃದ್ಧಿಗೊಳ್ಳುತ್ತದೆ; ಆದುದರಿಂದ ಎಲ್ಲರಿಗೂ ತಿನ್ನುವುದಕ್ಕಾಗಿಯೇ ಮನೆಯಲ್ಲಿ ಮಾಡಿಕೊಳ್ಳಲು ಅನುಕೂಲವಾದುದು; ದಾಹ ಕಡಿಮೆಯಾಗುತ್ತದೆ;
- ಶ್ರೀರಾಮನವಮಿ ಆಚರಿಸುವಾಗ ಕೋಸುಂಬರಿ, ಪಾನಕ, ನೀರುಮಜ್ಜಿಗೆ ವಿತರಣೆ ಸಾಮಾನ್ಯವಾಗಿರುತ್ತದೆ;
- ಹೆಚ್ಚಾಗಿ ಹೆಸರುಬೇಳೆ ಹಾಕಿ ಕೋಸುಂಬರಿ ತಯಾರಿಸುವುದರಿಂದ ಇದಕ್ಕೆ 'ಹೆಸರುಬೇಳೆ' ಎಂದೂ ಕರೆಯುವುದು ವಾಡಿಕೆಯಲ್ಲಿದೆ;
- 'ಕುಸುಮ್ಬರಿ' ಮೂಲರೂಪವಿರುವ ಸಾಧ್ಯತೆ ಇದೆ; ಉಚ್ಚಾರಣೆಯಲ್ಲಿ ಕೋಸುಮ್ಬರಿ>ಕೋಸುಂಬರಿ> ಕೋಸಂಬರಿ>ಕೋಸಂಬ್ರಿ ಎಂಬ ರೂಪಗಳು ಉಂಟಾಗಿರುವಂತೆ ತೋರುತ್ತದೆ;
- ತ: ಕೋಸುಂಬರಿ; ತುಳು: ಕೋಸುಂಬರಿ, ಕೋಸಂಬ್ರಿ (ದ್ರಾ.ಭಾ.ಜ್ಞಾ.ಪ.ಕೋ).

ಕೋಸು kōsu :

- ಓರೆ, ಮೂಲೆ(ದ.ಕ); Incline, corner, curved, slant, bend, a small piece;

- ಕೋಸ್/ಕೋಸು; ಓರೆಯಾದ, ವಕ್ರ; ಓರೆಯಾದುದು; ವಕ್ರವಾದುದು; ಸೊಟ್ಟಗಾದುದು (ತು.ನಿ); Inclined, curved, slant, warp;
- ನೇರವಾಗಿ ಸಾಗುತ್ತಿರುವ ಜಮೀನಿನ ಯಾವುದೋ ಒಂದು ಭಾಗ ಹೊರಕ್ಕೆ ಚಾಚಿಕೊಂಡಿದ್ದು ಅಲ್ಲಿಂದ ಮತ್ತೆ ನೇರವಾಗಿರುವ ಭಾಗಕ್ಕೆ ಕೂಡಿಕೊಳ್ಳುವಾಗ ಹೊರಚಾಚಿದ್ದ ಭಾಗ(ಮೈ.ಜಿ);
- ಕೋಸು, ಕೊಚ, ಕೊಚಿ, ಕೂಚು, ಕೋಚ, ಕೋಚಿ, ಕೋಚು, ಕೋಚೆ; ಓರೆ; ಮೂಲೆ; ವಕ್ರಸ್ವಭಾವ; (ವಿ)ವಕ್ರಸ್ವಭಾವದ; ಮಡಿಲು, ಉಡಿ, ಕೋಚು, ಅಂಚು, ತುದಿ, ಕೊನೆ(ತು: ಕೋಸು, ಕೋಸ್) (ದ್ರಾ.ಭಾ.ಜ್ಞಾ.ಪ.ಕೋ);
- ಕೊಂಕುತನ; ಕೂಚಂಭಟ್ಟ(ಕ.ನಿ); Crooked, scoff, sneerer, scorner;
- ಮೂರು ಅಥವಾ ನಾಲ್ಕು ಮೈಲಿಗಳ ದೂರ; ಒಂದು ಹರಿದಾರಿ; ಕ್ರೋಶ(ಕ.ನಿ);
- ಸಾಮಾನ್ಯವಾಗಿ ಭೂಪ್ರದೇಶ ಚೌಕಾಕಾರವಿಲ್ಲದೆ ಯಾವುದಾದರೂ ಒಂದು ಮೂಲೆ ಸ್ವಲ್ಪ ಓರೆಯಾಗಿದ್ದುದಾದರೆ, ಅಂತಹ ಭಾಗವನ್ನು ಕೋಸು ಬಂದ ಭೂಭಾಗ ಎಂದು ಹೇಳುತ್ತಾರೆ; *ಪ್ರ: 'ನಮ್ಮ ಜಮೀನಿನ ನಕಾಸೆ ಸ್ವಲ್ಪ ಕೋಸಾಗಿದೆ'*;
- ದೂರ ಅಳೆಯಲು 'ಕೋಸು' ಪದ ಬಳಕೆಯಲ್ಲಿದೆ; ಮೂರು, ನಾಲ್ಕು ಮೈಲುಗಳ ದೂರವನ್ನು ಒಂದು ಕೋಸು ಎಂದು ಹೇಳಲಾಗುತ್ತದೆ; ಒಂದು ಹರಿದಾರಿ ಎಂಬ ಅರ್ಥದಲ್ಲಿಯೂ ಬಳಕೆಯಲ್ಲಿದೆ;
- ಇದು ಒಂದು ತರಕಾರಿಯು ಹೌದು; ಕೋಸಿನಲ್ಲಿ ಮೂರು ಬಗೆ ಇದೆ; ಗೆಡ್ಡೆಕೋಸು, ಎಲೆಕೋಸು ಮತ್ತು ಹೂಕೋಸು; *ಪ್ರ: 'ಕೋಸು ಬೆಳೆ ಮರಳು ಮಿಶ್ರಿತವಾದ ಕೆಬ್ಬೆ ಭೂಮಿಯಲ್ಲಿ ಚೆನ್ನಾಗಿ ಬೆಳೆಯುತ್ತದೆ'*; It is a kind of vegetable called cabbage; the cabbage is in three kinds, turnip, cabbage(leaf) and cauliflower;
- ***—ಕೋಸುಕಣ್ಣು/ಕೋಸ್‌ಕಣ್*** : ಮೆಳ್ಳಗಣ್ಣು (ಕೊಡ.ಜಿ/ದ.ಕ); Squint eye;
- ಕೋಸುಗಣ್ಣು; ಓರೆನೋಟದ ಕಣ್ಣು[ಹ.ಕ.ಕೋಚು (ಉದ್ದವಾಗಿ) ಓರೆಯಾಗಿರುವಿಕೆ]; ಕೋಸ್‌ಕಣ್ಣ್; ಮಾಲುಗಣ್ಣು, ಮೆಳ್ಳಗಣ್ಣು(ದ್ರಾ.ಭಾ.ಜ್ಞಾ.ಪ.ಕೋ);
- ಎರಡೂ ಕಣ್ಣಿನ ಆಲಿಗಳು ಕಣ್ಣುಗುಡ್ಡೆಯ ಮಧ್ಯಕ್ಕೆ ಸರಿಯಾಗಿದ್ದರೆ ಆ ಕಣ್ಣುಗಳು ನೇರವಾಗಿ ನೋಟವನ್ನು ಗ್ರಹಿಸುತ್ತವೆ; ಕಣ್ಣಾಲಿಗಳಲ್ಲಿ ಸ್ವಲ್ಪ ವ್ಯತ್ಯಾಸವಿದ್ದರೆ ನೋಡುವ ನೋಟದಲ್ಲಿ ಓರೆ, ಕೋರೆ ಉಂಟಾಗುತ್ತದೆ; ನೇರವಾಗಿ ದೃಷ್ಟಿಸಿ ನೋಡುವಂತೆ ತೋರಿದರೂ ಅವರ ಕಣ್ಣುಗಳು ಬೇರೆಯದರ ಕಡೆಯ ದೃಶ್ಯವನ್ನು ಕಾಣುತ್ತಿರುತ್ತವೆ; ಅದಕ್ಕಾಗಿ ಇಂತಹ ಕಣ್ಣುಗಳನ್ನು ಮಾಲುಗಣ್ಣು, ಮೆಳ್ಳಗಣ್ಣು ಎಂದು ಕರೆಯಲಾಗುತ್ತದೆ.

ಕೋಸಿದಂಗೆ kōsidange :

- ಕೊಯ್ಸಿದಂತೆ; ಕೊಚ್ಚಿದಂತೆ; Look like chopped;
- ಕೊಯ್ಸಿದ+ಹಾಗೆ=ಕೊಯ್ಸಿದ್ಹಾಗೆ>ಕೊಯ್ಸಿದಂಗೆ>ಕೋಸಿದಂಗೆ ಆಗಿರುವ ಸಾಧ್ಯತೆ ಇದೆ; 'ಕೊಯ್ಸಿ' ಎಂಬ ಪದ ಕೊನೆಯ 'ಯ್'ಕಾರವನ್ನು ಕಳೆದುಕೊಂಡು 'ಸಿ' ಉಳಿದುಕೊಂಡಾಗ ಹಿಂದಿನ ಹ್ರಸ್ವ 'ಕೊ' ಅಕ್ಷರವು ದೀರ್ಘ 'ಕೋ' ಆಗಿ 'ಕೋಸಿ' ಎಂದಾಗುತ್ತದೆ; ಹಾಗೆ >ಹಂಗೆ>ಹ್+ಅಂಗೆ>Ø+ ಅಂಗೆ ಪದವು ಸೇರಿ 'ಕೋಸಿದಂಗೆ' ಆಗಿದೆ;
- ಕೊಯ್+ಇಸು+ಹಂಗೆ ಎಂಬುದಾಗಿ ಈ ಪದವನ್ನು ಬಿಡಿಸಿಕೊಳ್ಳಬಹುದು; ಇದು 'ಕೊಯ್ಸಿದಂಗೆ' ಪದವಾಗಿ ರೂಪುಗೊಂಡಿರಬಹುದು.

ಕೋಹಳೆ kōhaḷe :

- ಜಾನುವಾರುಗಳ ಕೊಂಬು ಮತ್ತು ಗೊರಸುಗಳಿಗೆ ಅಲಂಕಾರಕ್ಕಾಗಿ ತೊಡಿಸುವ ಲೋಹದ ಕಟ್ಟು; ಅಣಸು; ಒಂದು ಬಗೆಯ ಹೊದಿಕೆ; A decorative metal or cover which adorns cattle horn or hoof;
- ಕೋಹಳೆ, ಕೋಹಾಳೆ, ಕೋಳೆ, ಕೋಹಳಿಕೆ;
- ಅಲಂಕಾರಕ್ಕಾಗಿ ತೊಡಿಸುವ ಚಿನ್ನ, ಬೆಳ್ಳಿ ಇತ್ಯಾದಿ ಲೋಹಗಳಿಂದ ಮಾಡಿದ ಅಣಸು, ಒಡವೆ–ಆವರಣದ ತೊಡವು; An ornamental gold jewellery;
- ಒಂದು ಬಗೆಯ ಹೊದಿಕೆ(ತೆಲು: ಕೋಹಳಿ) (ದ್ರಾ.ಭಾ.ಜ್ಞಾ.ಪ.ಕೋ). A kind of covering.

ಕೋಳ್ kōḷ :

- ಕೋಳು; ಹೊಡೆತ, ಪೆಟ್ಟು, ಏಟು, ತಿವಿತ; Beatings, striking, blow, stroke, stab;
- ಸೂರೆಗೈವುದು; ಲೂಟಿ; ಕೊಳ್ಳೆ ಹೊಡೆಯುವುದು; Rob, fleece, loot, plunder;
- ಬಂಧನ; ಕೈಸೆರೆ; Arrest, captive;
- ಬೇಟೆಯಾಡುವ ದುಷ್ಟಪ್ರಾಣಿಗಳಿಗೆ ಆಹಾರವಾಗುವ ಪ್ರಾಣಿ; A game or a prey for wild animals
- ಕಚ್ಚು, ಕಡಿಯುವುದು; bite, chomp;
- ತುಡುಕು; ವಶಪಡಿಸು; ಹಿಡಿತ ಸಾಧಿಸುವುದು; Control, occupy, check;
- ಆಕರ್ಷಣೆ; ಕಂಗೊಳಿಸುವುದು; attraction, impress, gleaming;
- ಸಂಯಮ ಹೊಂದುವುದು', ಹತೋಟಿ ಹೊಂದುವುದು; Restraint, check;
- ***—ಕೋಳ್ ಎಳೆ*** : ಮೂಲೆಯ ತೀರು ಅಥವಾ ಜಂತಿಗಳನ್ನು ಹೇರಲು ಇರುವ ದಪ್ಪನೆಯ ಮರದ ಪಟ್ಟಿ; 'ಹೊನಾಲು' ಜಾತಿಯ ಮರದ ಪಟ್ಟಿ; Huge beam to support small and cross beams;
- ಜಂತಿಗಳ ಭಾರವನ್ನು ಹೊರುವಲ್ಲಿ ಆಧಾರವಾಗಿರುವ ಪಟ್ಟಿ; Supporting wooden beam;
- ***—ಕೋಳ್ ಗಂಬ*** : ಉತ್ತರ ಕನ್ನಡ ಜಿಲ್ಲೆಯ ಒಂದು ಜನಪದ ಆಟ; ಹರಳು ಆಟದ ಒಂದು ಪ್ರಕಾರ; A kind of folk game in UttarKannada district;
- ***—ಕೋಳ್‌ಮಾಲೆ*** : ಕೊರಳಿನ ಮಾಲೆ; ಮದುವೆಯ ಸಂದರ್ಭದಲ್ಲಿ ನಡೆಯುವ ಒಂದು ಆಚರಣೆ; ನಾಮಧಾರಿ ಸಮುದಾಯದವರು ಮದುವೆಯಲ್ಲಿ ವಧು–ವರರಿಗೆ ಹಾಕುವ ಬೆಂಡಿನ ಸಂಬಂಧದ ಮಾಲೆ; Garland, in Namdhari community bride and bridegroom wear this;
- ***—ಕೋಳ್ ಮುಹೂರ್ತ*** : ಮನೆಯ ಕೋಳ ಎಳೆಯನ್ನು ಏರಿಸುವಾಗಿನ ಮುಹೂರ್ತ; ಈ ಎಳೆಯು ಹೊನಾಲು(ಕಿಂದಾಳ) ಜಾತಿಯದೇ ಆಗಿರಬೇಕು ಎಂದು ಶಾಸ್ತ್ರ ಹೇಳುತ್ತದೆಂಬ ನಂಬಿಕೆ ಬೇರೆ; ಈ ಎಳೆಯನ್ನು ಕೂಡಾ ಏರಿಸಬಹುದೇ ವಿನಾ ಇಳಿಸ ಕೂಡದು; ಇಳಿಸಿದರೆ ಏಳ್ಗತಿಯಿಲ್ಲ ಎಂಬ ನಂಬಿಕೆ ಕೂಡ ಇದೆ; ಅಲ್ಲದೆ ಸೂರ್ಯ ಕೋಳದ ಎಳೆಯನ್ನು ದಾಟಬಾರದೆಂಬ ನಂಬಿಕೆಯೂ ಕಂಡು ಬರುತ್ತದೆ;
- ***—ಕೋಳ್ ಸಿಬ್*** : ಕೊಳೆಯುವ ಒಂದು ರೀತಿಯ ಚರ್ಮರೋಗ; A kind of decayed skin disease;
- ***—ಕೋಳ್ ಹೋಗು*** : ಗಲಾಟೆಗೆ ಅವಕಾಶ ಮಾಡಿಕೊಡುವುದು; ಮೋಸ ಹೋಗುವುದು. Make a way for turmoil, noise, up roar; cheated.

ಕೋಳ kōḷa :

- ಕೈಗೆ ಅಥವಾ ಕಾಲಿಗೆ ತೊಡಿಸುವ ಬೇಡಿ; ಸಂಕೋಲೆ; ಕಾಲನ್ನು ತೂತಿಗೆ ಸಿಕ್ಕಿಸಿ ಕೀಲು ಜಡಿದು ಬಂಧಿಸುವ ಮರದ ಒಂದು ಉಪಕರಣ(ಕೊಡ: ಕೋಳ; ತುಳು: ಕೋಳ, ಕೋಳೊ) (ದ್ರಾ.ಭಾ.ಜ್ಞಾ.ಪ.ಕೋ); `Shackle or hand-cuffs';
- ಇದೊಂದು 'ಮಡಿಕಂಬ'; ಗೊಂಡರ ಸಮುದಾಯದ ಮನೆಯ ಮೇಲ್ಛಾವಣಿಯನ್ನು ಹೊತ್ತಿರುವ ಅಡ್ಡತೊಲೆ; ಇದು ಮನೆಯ ವಾಸ್ತು ಕಂಬ ಎನ್ನುವ ವಿಶೇಷ ಗೌರವಕ್ಕೆ ಪಾತ್ರವಾಗಿದೆ; ಇಡೀ ಮನೆಯ ಮೇಲ್ಛಾವಣಿಯ ಭಾರವನ್ನೆಲ್ಲಾ ಈ ತೊಲೆ ಹಿಡಿದಿರುತ್ತದೆ; A crossed beam in the house of Gonda community; it is a symbol of vastu and supportive beam; this is a sacred beam or pillar;
- 'ಕೋಳ' ಎಂದರೆ ಹಿಡಿಯುವುದು ಎಂಬ ಅರ್ಥ ಕೂಡ ಇದೆ; ಅದಕ್ಕಾಗಿಯೇ ಈ ತೊಲೆಗೆ(ವಾಸ್ತು ಕಂಬ) 'ಕೋಳ' ಎಂಬ ಹೆಸರು ಬಂದಿರುವಂತಿದೆ; `Kola' means support, hold;
- ಮನೆಯ ತುದಿ; ಬೇಡಿ; ದ್ವಾರ(ಉ.ಕ.ಜಿ); End of the house, entrance;
- ತೊಂದರೆಗೀಡಾಗು, ದಾಳಿ, ಗ್ರಹಣ(ಜ.ನು.ಕೋ); Troubled, attack, eclipse;
- ನಿರ್ಬಂಧ, ತಡೆ; *ಪ್ರ: 'ಉಮ್ಬುವುದಕ್ಕೆ ಉಡುವುದಕ್ಕೆ ಅಕ್ಕನ ಕರೆ; ಕೋಳಕ್ಕೆ ಹಾಕುವುದಕ್ಕೆ ಬಾವನ ಕರೆ'.* (ಕಿ.ಕೋ.ಗಾ); Banishment, stay;

- *—ಕೋಳ ಕಂಬ* : ಮಾಡನ್ನು ಆಧರಿಸಿದ ಮುಖ್ಯ ಕಂಬ; Main pillar to support the roof;
- *—ಕೋಳ ದಂಡ* : ಕೋದಂಡ; ತುಂಟ ಹುಡುಗರಿಗೆ ನೀಡುವ ಒಂದು ಶಿಕ್ಷೆಯ ವಿಧಾನ; A kind of punishment for mischevious boys;
- ಒಂದು ಹಗ್ಗಕ್ಕೆ ಕೈಬಿಗಿದು ತೂಗುವಂತೆ ಮೇಲೆತ್ತಿ ಮಾಡುವ ಶಿಕ್ಷೆ; A kind of hanging punishment;
- *—ಕೋಳವ* : ದುಮ್ಮಾಲಿ ಮೇಳದಲ್ಲಿ ಬಳಕೆಯಾಗುವ ದಿಮ್ಮಿ ವಾದ್ಯವನ್ನು ತಾಡಿಸುವ ಕಡ್ಡಿ;
- *—ಕೋಳಾಂಬಿ* : ಉಗುಳು ಪಾತ್ರೆ; Spit bowl;
- ಕೋಳಂಬಿ; ಪೀಕದಾನಿ(ತು.ನಿ);
- *—ಕೋಳಾಗು* : ಕೈಸೆರೆಯಾಗು; ಬಂಧಿಯಾಗು; Arrest, captivity;
- *—ಕೋಳಹಾಕು* : ಬೇಡಿ ಹಾಕು; ಬಂಧಿಸು; ಕೈಸೆರೆ; ಹಿಡಿಸು; ಬಂಧನದಲ್ಲಿರಿಸು. Captive, arrest, imprisoned, shackled.

ಕೋಳಾಲಮ್ಮ kō̤ḷālamma :

- ವಿಷಜಂತುಗಳ ದೇವತೆ(ಬೆಂ.ಜಿ); Goddess of poisonous beings(reptiles);
- ನಿಗರ್ತ ಸಮುದಾಯದ ಶಕ್ತಿ ದೇವತೆ; ಯುಗಾದಿ ಹಬ್ಬವಾದ ಮಾರನೆಯ ದಿನ ಈ ಸಮುದಾಯದವರೆಲ್ಲ ದೇವಾಲಯದಲ್ಲಿ ಸೇರಿ ತಮ್ಮ ಮನೆಗೆ ಯಾವ ವಿಷ ಜಂತು(ಹಾವು, ಚೇಳು ಇತ್ಯಾದಿ) ಬರದಿರಲೆಂದು ಕೋಳಾಲಮ್ಮನಿಗೆ ಪೂಜೆ ಮಾಡಿಸಿ ಬರುತ್ತಾರೆ. Nigartha community observes and worships this goddess on the next day of Yugadi festivals.

ಕೋಳಿ kōḷi :

- ಕೋೞಿ>ಕೋಳಿ; ಒಂದು ಬಗೆಯ ಪಕ್ಷಿ; ಕುಕ್ಕುಟ; ಹೇಂಟೆ; ತ: ಕೋೞಿ; ಮ: ಕೋೞಿ; ಕೊಡ: ಕೋಳಿ; ತುಳು: ಕೋರಿ; ತೆಲು: ಕೋಡಿ (ದ್ರಾ.ಭಾ.ಜ್ಞಾ.ಪ.ಕೋ); Hen, a kind of bird, chicken;
- ಕೋಳಿ ಪಕ್ಷಿಸಂಕುಲಕ್ಕೆ ಸೇರಿದ ಸಾಕು ಪ್ರಾಣಿಗಳಲ್ಲಿ ಒಂದು; ಆಡು, ಕುರಿ, ಕೋಳಿ, ಕೊತ್ತಿ, ನಾಯಿ, ಹಸು, ಎಮ್ಮೆ ಮೊದಲಾದವು ಗ್ರಾಮೀಣರ ಬದುಕಿನಲ್ಲಿ ಪಶುಪಾಲನಾ ವೃತ್ತಿಗೆ ಸೇರಿದ ಪ್ರಮುಖ ಆರ್ಥಿಕ ಸಂಪನ್ಮೂಲವಾಗಿ ಗುರುತಿಸಿಕೊಂಡಿವೆ; Hen, a domastic bird; it is a source of income for agrarian community;
- ಗ್ರಾಮೀಣರು ಆಡು, ಕುರಿ, ಕೋಳಿ, ಹಂದಿಗಳನ್ನು ಮಾಂಸಾಹಾರಕ್ಕಾಗಿಯೇ ಸಾಕಿಕೊಂಡು ಬಂದಿದ್ದರೂ, ಬಡಕುಟುಂಬಗಳಿಗೆ ಆರ್ಥಿಕ ಶಕ್ತಿಯಾಗಿ ಆಸರೆಯಾಗಿವೆ ಎಂದರೆ ತಪ್ಪಿಲ್ಲ;
- ಕೋಳಿಗಳಲ್ಲಿ ಕಾಡುಕೋಳಿ, ನಾಟಿಕೋಳಿ(ಊರು ಕೋಳಿ), ಬ್ರಾಯ್ಲರ್ ಕೋಳಿ, ಗಿರಿರಾಜಕೋಳಿ ಮೊದಲಾದ ಪ್ರಭೇದಗಳಿವೆ; ನಾಟಿಕೋಳಿ, ಹಿಂದಿನಿಂದಲೂ ಬಳಕೆಯಲ್ಲಿದ್ದು, ಬ್ರಾಯ್ಲರ್ ಕೋಳಿ, ಗಿರಿರಾಜಕೋಳಿ ಮೊದಲಾದವು ಇತ್ತೀಚೆಗೆ ಚಾಲ್ತಿಗೆ ಬಂದಿವೆ;
- ಕೋಳಿಯಲ್ಲಿ ಹೇಟೆ/ಹ್ಯಾಟೆ, ಹುಂಜ ಎಂಬ ಎರಡು ಬಗೆಗಳಿವೆ; In hen family we can find biddy and rooster, cock; ಹೇಟೆ/ಹ್ಯಾಟೆಯು(ಹೇಂಟೆ>ಹೇಟೆ>ಹ್ಯಾಟೆ) ಹೆಣ್ಣು ಕೋಳಿಯಾದರೆ, ಹುಂಜವು ಗಂಡು ಕೋಳಿ; ಹ್ಯಾಟೆ ಮೊಟ್ಟೆ ಇಟ್ಟು, ಕಾವುಕೊಟ್ಟು ಮರಿ ಮಾಡುತ್ತದೆ; ಇದು ಹುಂಜಕ್ಕಿಂತ ಸ್ವಲ್ಪ ಚಿಕ್ಕದಿದ್ದು ತಲೆಯ ಮೇಲೆ ಚಿಕ್ಕ ಜುಟ್ಟನ್ನು ಹೊಂದಿರುತ್ತದೆ; ಮೂರು ತಿಂಗಳೊಳಗೆ ಮೊಟ್ಟೆಗೆ ಬರುತ್ತದೆ; ಹುಂಜವು ಹೇಟೆ/ಹ್ಯಾಟೆಗಿಂತ ಸ್ವಲ್ಪ ಎತ್ತರವಾಗಿದ್ದು ಉದ್ದರೆಕ್ಕೆಗಳನ್ನು ಹಾಗೂ ಪುಕ್ಕದಲ್ಲಿ ಉದ್ದವಾದ ಗರಿಗಳನ್ನು ಹೊಂದಿದೆ; ತಲೆಯ ಮೇಲೆ ಕಿರೀಟದಂತೆ ಉದ್ದ ಜುಟ್ಟನ್ನು ಹೊಂದಿರುತ್ತದೆ; ಮುಂಜಾನೆ ಎತ್ತರದ ಧ್ವನಿಯಲ್ಲಿ ಕೂಗುವ ಗುಣ ಹುಂಜದ್ದಾಗಿದೆ;
- ಕೋಳಿಗಳು ಗಟ್ಟಿಯಾದ ಬಾಗಿರುವ ಕೊಕ್ಕನ್ನು ಹೊಂದಿದ್ದು ಆಹಾರವನ್ನು ಹೆಕ್ಕಿ ತಿನ್ನಲು ಅನುಕೂಲವಾಗಿದೆ; ಕಾಲಿನ ಉಗುರುಗಳಿಂದ ತಿಪ್ಪೆಯನ್ನು ಕೆದರಿ ಹುಳು, ಹುಪ್ಪಟೆಗಳನ್ನು ಕುಕ್ಕಿ ತಿನ್ನುತ್ತವೆ; Hens have strong bent beak and sharp nails to catch hold the insects and worms; the male hens or roosters have fleshy crest on the head;

- ಹುಂಜವನ್ನು ದೇವರ ಹೆಸರಲ್ಲಿ ಹರಕೆಗೆ ಬಿಡುವುದುಂಟು; ಮಾರಿದೇವತೆಯ ಮುಂದೆ ಬಲಿಕೊಡುವುದುಂಟು; ಮಾರಾಟಕ್ಕೆ, ಕೋಳಿ ಅಂಕದಲ್ಲಿ ತೊಡಗಿಸಲು ಬಳಸಿಕೊಳ್ಳುತ್ತಾರೆ;
- ನಾಟಿ ಕೋಳಿಯು(ಹೇಟೆ ಮತ್ತು ಹುಂಜ) ಉತ್ತಮ ಮಾಂಸಾಹಾರವಾಗಿದೆ; *ಪ್ರ: 'ನಾಟಿಕೋಳಿ ಸಾರು ಕೋಲುಬಾಯಿ ಹಿಟ್ಟು';* Country chicken or hens are very tasty;
- ಕೋಳಿಗಳು ಮರಿಯಿಂದ ಮೊದಲ್ಗೊಂಡು ಬೆಳೆಯುತ್ತಾ ಹಲವು ಹಂತಗಳನ್ನು ಪಡೆಯುತ್ತವೆ; ಅವುಗಳೆಂದರೆ ಹೂಕೋಳಿ, ಪಾವುಕೋಳಿ, ಮೊಟ್ಟೆಕೋಳಿ, ಅಡವೆಕೋಳಿ(ಕಾವು ಕೋಳಿ), ಮರಿಕೋಳಿ ಅಥವಾ ಬಾಣಂತಿಕೋಳಿ; Hens cross many phases such as layer(egg), hatch, mother with chicks;
- ಹೂಕೋಳಿ: ಆಗತಾನೆ ಮೊಟ್ಟೆಯೊಡೆದು ಹೊರ ಬಂದು ಅಡವೆಯಿಂದ ತೆಗೆದ ಕೋಳಿ ಮರಿಗಳು; ಇವು ಮುಟ್ಟಲು ಹೂವಿನಷ್ಟೇ ಮೃದುವಾಗಿರುತ್ತವೆ; ಅದಕ್ಕಾಗಿ ಇವುಗಳನ್ನು 'ಹೂಕೋಳಿ' ಎಂದು ಕರೆಯುತ್ತಾರೆ;
- ಪಾವು+ಕೋಳಿ(<ಕೋಟಿ): ಪಾವುಗೋಳಿ; ಇದು ಹೂಗೋಳಿಗಿಂತ ದೊಡ್ಡದು, ಮೊಟ್ಟೆಕೋಳಿಗಿಂತ ಚಿಕ್ಕದು; ಈ ಎರಡರ ಮಧ್ಯವಿರುವ ಕೋಳಿ; ಇಂತಹ ಕೋಳಿಯನ್ನು ಬಾಣಂತಿಯರಿಗೆ ಮಾತ್ರ ಮಾಂಸದ ಆಹಾರವನ್ನಾಗಿ ಕೊಡಲು ಬಳಕೆ ಮಾಡುತ್ತಾರೆ;
- ಮೊಟ್ಟೆಕೋಳಿ: ಪಾವುಕೋಳಿಗಿಂತ ಸ್ವಲ್ಪ ದೊಡ್ಡದಾಗಿ ಬೆಳೆದ ಹೇಟೆ; ಮೊಟ್ಟೆಗೆ ಬಂದ ಪ್ರಾಯದ ಕೋಳಿ; ಹುಂಜದೊಡನೆ ಬೆರೆತು ದಿನಕ್ಕೆ ಒಂದರಂತೆ ಸುಮಾರು ಹದಿನೈದರಿಂದ ಇಪ್ಪತ್ತು ದಿನಗಳ ಕಾಲ ಮೊಟ್ಟೆಯಿಡುತ್ತದೆ; ಕೆಲವು ಕೋಳಿಗಳು ಅದಕ್ಕಿಂತಲೂ ಹೆಚ್ಚು ಮೊಟ್ಟೆ ಇಡುವುದುಂಟು; ಮೊಟ್ಟೆ ಕೋಳಿ ಸಾರು ತುಂಬಾ ರುಚಿಯಾಗಿರುತ್ತದೆ;
- ಅಡವೆ ಕೋಳಿ/ಕಾವುಕೋಳಿ: ಮೊಟ್ಟೆ ಇಡುವುದು ನಿಂತ ಮೇಲೆ ಕೊರಗುಡುತ್ತಾ ಕಾವು ಕೂರುವ ಸೂಚನೆ ನೀಡುತ್ತದೆ; ಒಂದು ಗೊತ್ತಾದ ದಿನ ಅಡವೆಯಲ್ಲಿ ಮೊಟ್ಟೆಗಳನ್ನು ಜೋಡಿಸಿ ಅವುಗಳ ಮೇಲೆ ಕೋಳಿಯನ್ನು ಕಾವುಕೊಡಲು ಕೂರಿಸುತ್ತಾರೆ; ಅದಕ್ಕಾಗಿಯೇ ಕಾವುಗೋಳಿ ಎಂದು ಕರೆಯುವುದು; ಸುಮಾರು ೨೦-೨೧ ದಿನಗಳು ಕಾವುಕೊಟ್ಟು ನಂತರ ಮೊಟ್ಟೆಯ ಮೇಲ್ಪದರವನ್ನು ಮೃದುವಾಗಿ ಕೊಕ್ಕಿನಲ್ಲಿ ಕುಕ್ಕಿ ಮರಿಯು ಹೊರಬರುವಂತೆ ಮಾಡುತ್ತದೆ;
- ತಾಯಿ ಕೋಳಿ; ಮರಿಕೋಳಿ; ಇದನ್ನು ಬಾಣಂತಿ ಕೋಳಿ ಎಂದು ಕರೆಯುವುದೂ ಉಂಟು; ಅಡವೆಗೆ ಕೂತು ಮರಿ ಮಾಡಿದ ಕೋಳಿ ಇದು; ತಾಯಿಕೋಳಿ ಮರಿಗಳನ್ನು ಕೂಡಿಕೊಂಡು ಆಹಾರವನ್ನು ಕೊಕ್ಕಿನಲ್ಲಿ ಕುಕ್ಕಿ ತಿನ್ನುವುದನ್ನು ಕಲಿಸಿಕೊಡುತ್ತದೆ; ಹೂಮರಿಗಳನ್ನು ಹದ್ದು ಎತ್ತಿಕೊಂಡು ತಿನ್ನುವುದುಂಟು; ಅದಕ್ಕಾಗಿ ಅಂತಹ ಸಮಯದಲ್ಲಿ ಹದ್ದಿಗೆ ಸಿಗದಂತೆ ತನ್ನ ರೆಕ್ಕೆಗಳೊಳಗೆ ಬಚ್ಚಿಟ್ಟು ಮರಿಗಳನ್ನು ರಕ್ಷಿಸುತ್ತದೆ;
- ಮನೆಯಲ್ಲಿಯೇ ಸಿಗುವ ರಾಗಿ, ಭತ್ತ, ಜೋಳ, ಅಕ್ಕಿ, ಅನ್ನ, ಮುದ್ದೆ, ತಿಪ್ಪೆ ಮತ್ತು ಬೇಲಿಯ ಪೊದೆಗಳಲ್ಲಿ ಸಿಗುವ ಹುಳು, ಉಪ್ಪಟೆ, ಸಣ್ಣ ಕೀಟಗಳನ್ನು ಆಹಾರವನ್ನಾಗಿ ತಿನ್ನುತ್ತವೆ; ಅಡವೆಯಿಂದ ತೆಗೆದ ಹೂಮರಿಗಳಿಗೆ ಮಾತ್ರ ಒಂದು ತಟ್ಟೆಗೆ ನೀರು ಹಾಕಿ ಹುಣಿಸೆಹಣ್ಣು ಕಿವುಚಿ ಕುಡಿಸುತ್ತಾರೆ; ಹೇಟೆ/ಹ್ಯಾಟೆಗಳು ಬೇಗ ಮೊಟ್ಟೆಗೆ ಬರಲಿ ಎಂದು ಹೆಚ್ಚಾಗಿ ಭತ್ತವನ್ನು ತಿನ್ನಲು ಹಾಕುತ್ತಾರೆ; ಹುಂಜಗಳಿಗೆ ಅವುಗಳ ಮಾಂಸಖಂಡ ಗಟ್ಟಿಯಾಗಲಿ ಎಂದು ಹೆಚ್ಚಾಗಿ ಮುದ್ದೆಯನ್ನು ಚೂರು ಚೂರಾಗಿ ಕಿತ್ತು ತಿನ್ನಲು ಹಾಕುತ್ತಾರೆ;
- ಕೋಳಿಯ ಬಗೆಗೆ ಹಲವಾರು ನಂಬಿಕೆಗಳಿವೆ;
- ಕೋಳಿಯು ಆಯುತ್ವಾರ(ಭಾನುವಾರ) ಮತ್ತು ಬೇಸ್ತ್ವಾರ(ಗುರುವಾರ) ಮೊದಲು ಮೊಟ್ಟೆ ಹಾಕಿದರೆ ಒಳ್ಳೆಯದಲ್ಲವೆಂದು, ಏನಾದರೂ ತೊಂದರೆಯಾಗುತ್ತದೆಂಬ ನಂಬಿಕೆಯಿಂದ ಆ ಕೋಳಿಯನ್ನು ಕೊಯ್ದು ಮಾಂಸದ ಅಡುಗೆ ಮಾಡಿಕೊಳ್ಳುತ್ತಾರೆ; ಇಲ್ಲವೆ ಮಾರಿಬಿಡುವುದುಂಟು;
- ಕ್ಯಾಲ್ಸಿಯಂ ಕೊರತೆಯಿಂದ ಮೊಟ್ಟೆಯ ಮೇಲ್ಪದರವಿಲ್ಲದೆ ಮೊಟ್ಟೆ ಹಾಕಿದರೆ ಆ ಮೊಟ್ಟೆಯನ್ನು ತೊಗಲು ಮೊಟ್ಟೆ ಅಥವಾ ಮಣ್ಣು ಮೊಟ್ಟೆ ಎಂದು ಕರೆಯುತ್ತಾರೆ; ಇದು ಮುಟ್ಟಿದರೆ ಮೆತ್ತಗಿರುತ್ತದೆ; ಮಣ್ಣು ಮೊಟ್ಟೆ ಹಾಕಿದ ಕೋಳಿಯನ್ನು ಗಂಡಸರು ನೋಡಬಾರದೆಂದೂ, ನೋಡಿದರೆ ತೊಂದರೆಯಾಗುತ್ತದೆಂಬ ನಂಬಿಕೆಯಿದೆ;

ಆದ್ದರಿಂದ ಆ ಕೋಳಿಯನ್ನು ಕೊಯ್ದು ಮಾಂಸದಡುಗೆ ಮಾಡುತ್ತಾರೆ;

- ಕೋಳಿ ಮರಿಗಳಲ್ಲಿ ಹುಂಜನಾದರೆ ಸ್ವಲ್ಪ ಜುಟ್ಟು ಕತ್ತರಿಸಿ ದೇವರ ಹೆಸರು ಹೇಳಿ ದೇವರಿಗೆ ಬಿಡುತ್ತಾರೆ; ಮನೆಗೆ ಯಾರೇ ನೆಂಟರಿಸ್ಟರು ಬಂದರೂ ಆ ಹುಂಜವನ್ನು ಕೊಯ್ಯುವುದಿಲ್ಲ; ಒಂದು ವೇಳೆ ಕೊಯ್ದು ಮಾಂಸದಡುಗೆ ಮಾಡಿದರೆ ಕೇಡಾಗುತ್ತದೆಂಬ ನಂಬಿಕೆ ಇದೆ;
- ಕರಿ ಕೋಳಿಯನ್ನು 'ಕಾಳಕೋಳಿ' ಎಂದು ಕರೆಯುತ್ತಾರೆ; ಇದನ್ನು ಮಾಟ ಮಂತ್ರ ಮಾಡಿ ಬಲಿಕೊಡಲು ಬಳಸುತ್ತಾರೆ;
- ಶವ ಸಂಸ್ಕಾರದಲ್ಲಿ ಬೆಂಕಿ ಹತ್ತಿಸಿದ ಚಿತೆಯ ಮೇಲಿಂದ ಕೋಳಿ ಮರಿಯನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಎಸೆಯುವ ಪದ್ಧತಿ ಇದೆ; ಹೀಗೆ ಎಸೆದ ಕೋಳಿ ಮರಿಯನ್ನು ತೋಟಿ, ತಳವಾರರು ಹಿಡಿದುಕೊಂಡು ಸಾಕುವ ಪದ್ಧತಿ ಇದೆ;
- ಸಾಮಾನ್ಯವಾಗಿ ಬೇಸ್ತ್ವಾರ/ಬೇಯಿಸ್ತ್ವಾರ(ಗುರುವಾರ) ಯಾರಾದರು ಸತ್ತರೆ ಬೆನ್ನ ಹಿಂದೆ ಹೆಣ ಎಂಬ ನಂಬಿಕೆ ಇದೆ; ಆದ್ದರಿಂದ ಜೀವಂತವಾದುದನ್ನು ಶವ ಸಂಸ್ಕಾರ ಮಾಡುವಾಗ ಗುಂಡಿಗೆ ಹಾಕಿದರೆ ಮತ್ತೊಂದು ಬೆನ್ನ ಹಿಂದೆ ಹೆಣ ಬೀಳುವುದು ತಪ್ಪುತ್ತದೆಂದು ನಂಬುತ್ತಾರೆ. ಅದಕ್ಕಾಗಿ ಜೀವಂತ ಕೋಳಿಯನ್ನು ಹೆಣದ ಜೊತೆ ಗುಂಡಿಯಲ್ಲಿ ಹಾಕಿ ಸಮಾಧಿ ಮಾಡುವುದುಂಟು;
- ಹಾವು ಕಚ್ಚಿದವರಿಗೆ ವಿಷ ತೆಗೆಯಲು ಕೋಳಿ ಬಳಸುತ್ತಾರೆ; ಹಾವು ಕಚ್ಚಿದ ಜಾಗಕ್ಕೆ ಕೋಳಿಯ ಗುದದ್ವಾರವನ್ನು ಒತ್ತಿ ಹಿಡಿದರೆ ವಿಷ ಹೀರಲ್ಪಟ್ಟು ಕೋಳಿ ನಂಜೇರಿ ಸಾಯುತ್ತದೆ; ಇದರಿಂದ ವಿಷ ಇದೆಯೆಂಬುದು ಖಾತ್ರಿಯಾಗಿ ಮತ್ತೆ ಮತ್ತೆ ಕೋಳಿಯ ಗುದದ್ವಾರವನ್ನು ಗಾಯಕ್ಕೆ ಒತ್ತಿ ಹಿಡಿದು ಇರಬಹುದಾದ ವಿಷ ತೆಗೆಯುವ ಪ್ರಯತ್ನ ಮಾಡುತ್ತಾರೆ; ಇದರಿಂದ ಹಾವು ಕಚ್ಚಿದವರು ವಿಷದ ಪರಿಣಾಮದಿಂದ ಪಾರಾಗುವ ಸಾಧ್ಯತೆ ಇರುತ್ತದೆ; Hens anus part is used to suck venom of a snake bite; the used hen dies of venom;
- ಕೋಳಿ ಮಾಂಸದ ಅಡುಗೆ ಮಾಡಿದಾಗ ಕೋಳಿಯ ತಲೆ, ಕಾಲು, ಪುಕ್ಕವನ್ನು ಗಂಡಸರಿಗೆ ಬಡಿಸುವುದಿಲ್ಲ; ಗಂಡಸರು ತಲೆ ತಿಂದರೆ ಅವರ ತಲೆ ನಡುಗುತ್ತದೆಂದೂ, ಕಾಲು ತಿಂದರೆ ಅವರ ಕಾಲಿಗೆ ನಡುಕ ಉಂಟಾಗುತ್ತದೆಂದು, ಪುಕ್ಕ ತಿಂದರೆ ಹೆದರುವ ಪುಕ್ಕಲರಾಗುತ್ತಾರೆಂದೂ ನಂಬಿಕೆಗಳಿವೆ;
- ಹಿಂದೆ ತುಂಬಿದ ಕುಟುಂಬಗಳಿದ್ದುದರಿಂದ ಗಂಡಸರು, ಮಕ್ಕಳಿಗೆ ಬಡಿಸಿದ ಮೇಲೆ ಹೆಂಗಸರಿಗೆ ಸಾಮಾನ್ಯವಾಗಿ ಮಾಂಸ ಉಳಿದಿರುತ್ತಿರಲಿಲ್ಲ; ಆದುದರಿಂದ ಅವರಿಗೆ ಕೋಳಿಯ ತಲೆ, ಕಾಲು, ಪುಕ್ಕಗಳಾದರೂ ಉಳಿದಿರಲಿ ಎಂಬ ಉದ್ದೇಶದಿಂದ ಈ ತಂತ್ರ ಬಳಕೆಗೆ ಬಂದಿತೆಂದು ತೋರುತ್ತದೆ; ಕೋಳಿ ಪುಕ್ಕವು ಮೃದುವಾಗಿದ್ದು ಹೆಚ್ಚು ಕೊಬ್ಬಿನ ಅಂಶವಿರುತ್ತದೆ; ಕೊಬ್ಬು ರಕ್ತದಲ್ಲಿ ಕೊಲೆಸ್ಟ್ರಾಲ್ ಹೆಚ್ಚಿಸುತ್ತದೆ. ಗಂಡಸರು ಹೊರಗೆ ದುಡಿದು ಮನೆಯವರನ್ನು ಸಾಕಬೇಕು, ಅವರು ಆರೋಗ್ಯವಾಗಿರಲಿ ಎಂಬ ಉದ್ದೇಶ ಮನೆಯ ಹೆಂಗಸರಿಗಿರುವಂತಿದೆ, ಆದ್ದರಿಂದಲೇ ಪುಕ್ಕವನ್ನು ಗಂಡಸರಿಗೆ ಬಡಿಸದಿರಬಹುದು; ಕಾಲು, ತಲೆ ಬಿಡಿಸಿ ತಿನ್ನಲು ಸಮಯ, ತಾಳ್ಮೆ ಬೇಕು; ಅದಕ್ಕಾಗಿ ಹೆಂಗಸರು ಇವುಗಳನ್ನು ಗಂಡಸರಿಗೆ ಬಡಿಸದಿರಬಹುದು; ಇಲ್ಲಿ ಮನೆಯವರ ಬಗೆಗೆ ಹೆಂಗಸರಿಗಿರುವ ಕಾಳಜಿ ವ್ಯಕ್ತವಾಗುತ್ತದೆ;
- ಕೋಳಿ ಸಂಬಂಧವಾದ ಕೆಲವು ಗಾದೆಗಳು: ಕೋಳಿ ಕೇಳಿ ಮೆಣಸು ಅರಿತಾರ; ಕೋಳಿ ನುಂಗಿದ ಕಲ್ಲಿನ ಹಾಗೆ; ಕೋಳಿ ಕಣ್ಣಿಗೆ ಜೋಳ ಪರಂಜ್ಯೋತಿ; ಕೋಳಿ ಕಾಲಿಗೆ ಗೆಜ್ಜೆ ಕಟ್ಟಿದರೆ ತಿಪ್ಪೇ ಕೆರೆಯದೆ ಇರುವುದೋ; ಹಾಗದ ಕೋಳಿ ಮುಪ್ಪಾಗದ ಮೇವು ತಿನ್ತು;
- —***ಕೋಳಿ ಅಣಬು*** : ಮಲೆನಾಡಿನಲ್ಲಿ ದೊರೆಯುವ ಒಂದು ಬಗೆಯ ಅಣಬೆ(ಶಿ.ಜಿ); A kind of Malnad mushroom;
- —***ಕೋಳಿ ಆಸಿ*** : ನಾಡವರ ಸಮುದಾಯದವರು ಮಾಡುವ ಕೋಳಿ ಮಾಂಸದ ಅಡುಗೆ; ಬಂಡಿ ಹಬ್ಬ ಅಥವಾ ವಿಶೇಷ ಸಂದರ್ಭದಲ್ಲಿ 'ಕೋಳಿ ಆಸಿ' ಎಂದು ಕರೆಯಲಾಗುವ ಪಳದಿ(ಪಳದ್ಯ; ಒಂದು ರೀತಿಯ ಮೇಲೋಗರ)ಯನ್ನು ತಯಾರಿಸಲಾಗುತ್ತದೆ; A kind of chicken dish prepared in Nadava community;

- ***—ಕೋಳಿ ಒಡ್ಡು/ಕೋಳಿಯೊಡ್ಡಿ*** : ಕೋಳಿ ಗೂಡು; ಕೋಳಿಗಳನ್ನು ವಿಶೇಷವಾಗಿ ನಾಟಿಕೋಳಿಗಳನ್ನು ಕೂಡಿ ಹಾಕಲು ನಿರ್ಮಿಸಿದ ಗೂಡು; ಗ್ರಾಮೀಣ ಪ್ರದೇಶದಲ್ಲಿ ಕೋಳಿಗಳು ಹಗಲು ಹೊತ್ತು ಹೊರಗೆ ಮೇಯುತ್ತಿದ್ದು ಮೊಟ್ಟೆಯಿಡಲು ಮತ್ತು ರಾತ್ರಿಯ ಸಮಯ ಮಾತ್ರ ಮನೆಗೆ ಹಿಂದಿರುಗಿ ಗೂಡು ಸೇರುತ್ತವೆ; ಕೋಳಿಗಳನ್ನು ರಾತ್ರಿ ಹೊತ್ತಿನಲ್ಲಿ ಕೂಡಿಹಾಕುವ ಗೂಡು; **ವ್ಯರೂ:** ಕೋಳಿಗೂಡು; Chicken coop or sty; a house to protect hens during night;
- ***—ಕೋಳಿ ಕಜ್ಜಾಯ*** : ದೀವರು ಸಮುದಾಯದವರು ಮಾಡುವ ಕೋಳಿ ಸಾರು ಮತ್ತು ಕಜ್ಜಾಯದಂತಹ ತಿನಿಸು(ಶಿ.ಜಿ); A kind of chicken sambar prepared by Deewar community;
- ಕೋಳಿ ಸಾರಿನ ಜೊತೆ ತಿನ್ನಲು ದೀವರು ಸಮುದಾಯದವರು ಮಾಡುವ ಕೋಡುಬಳೆಯಂತೆ ವೃತ್ತಾಕಾರವಾಗಿ ಕಜ್ಜಾಯದ ರೀತಿಯಲ್ಲಿರುವ ತಿನಿಸು; ಕೋಳಿಸಾರಿನ ಜೊತೆಯಲ್ಲಿ ತಿನ್ನುವ ಇದು ಬಲು ರುಚಿಕರವಾಗಿರುತ್ತದೆ;
- ***—ಕೋಳಿ ಕಜ್ಜಿ*** : ಕೋಳಿಯ ಕಣ್ಣಿನ ಸುತ್ತ, ಕೊಕ್ಕಿನ ಸುತ್ತ ಬರುವ ಕಪ್ಪು ಗುಳ್ಳೆಗಳು; ಇವನ್ನು 'ಗ್ವಾರ' ಎಂತಲೂ ಕರೆಯುತ್ತಾರೆ; ಇವು ಬಂದರೆ ಕೋಳಿಯು ಮಂಕಾಗಿ ಆಹಾರವನ್ನು ತಿನ್ನುವುದಿಲ್ಲ; ಕೊಬ್ಬರಿ ಎಣ್ಣೆಯನ್ನು ಉಗುರು ಬೆಚ್ಚಗೆ ಮಾಡಿ, ಇದರಲ್ಲಿ ಅರಿಶಿಣದ ಪುಡಿ ಸೇರಿಸಿ ಕಲಸಿ ಕಪ್ಪು ಗುಳ್ಳೆಗಳಿಗೆ ಔಷಧಿಯಾಗಿ ಹಚ್ಚುವುದರಿಂದ ಗುಣವಾಗುತ್ತದೆಂದು ಹೇಳಲಾಗುತ್ತದೆ; Black boils around the eyes of hens; this is called `Gwara';
- ***—ಕೋಳಿ ಕಟ್ಟೆ*** : ಕೋಳಿ ಅಂಕ; ಕೋಳಿಯ ಕಾಳಗ(ದ.ಕ); **ನೋಡಿ:** ಕೋಳಿ ಅಂಕ; Cockpit;
- ***—ಕೋಳಿ ಕಡಿಯುವುದು*** : ದೇವಿ ಮಹಾತ್ಮೆ ಪ್ರಸಂಗದಲ್ಲಿ ಜರುಗುತ್ತಿದ್ದ ಒಂದು ಆಚರಣೆ(ದ.ಕ); A practice in `Devi mahathme' festival in Dakshina Kannada;
- ದಕ್ಷಿಣಕನ್ನಡ ಪ್ರದೇಶದಲ್ಲಿ 'ದೇವಿಮಹಾತ್ಮೆ' ಎಂಬ ಯಕ್ಷಗಾನ ನಡೆಯುತ್ತಿದ್ದಾಗ ಕೋಳಿ ಕಡಿಯುವ ಪದ್ಧತಿ ಇದ್ದಿತೆಂದು ತೋರುತ್ತದೆ;
- ***—ಕೋಳಿ ಕಣ್*** : ಕೆಂಗಣ್ಣು, ಕೆಂಪಾದ ಕಣ್ಣು; ಇದನ್ನು ಗುಣಪಡಿಸಲು ಕೆಸ್ಗಾರ್ ಹೂವನ್ನು ಎದೆಹಾಲಿನಿಂದ ತೇದು ಕಣ್ಣಿಗೆ ಹಾಕಿ ಸ್ವಲ್ಪ ಸಮಯದ ನಂತರ ನೀರಿನಿಂದ ಕಣ್ಣನ್ನು ತೊಳೆಯುತ್ತಾರೆ; Red eye;
- ***—ಕೋಳಿ ಕತ್ತಿ*** : ಕೋಳಿ ಕಾಳಗದಲ್ಲಿ ಕೋಳಿ ಕಾಲಿಗೆ ಕಟ್ಟುವ ಕತ್ತಿ; ಉಕ್ಕಿನಿಂದ ಮಾಡಿದ ಹರಿತವಾದ ಕಿರುಗತ್ತಿ; ಕೋಳಿಗಳ ಹೋರಾಟದಲ್ಲಿ ಎದುರಾಳಿ ಹುಂಜವನ್ನು ಕೊಲ್ಲಬಲ್ಲುದು ಅಥವಾ ಗಾಯಗೊಳಿಸಬಲ್ಲುದು; ಏನೆಯಾದರೂ ಸೋಲು–ಗೆಲುವಿನ ನಿರ್ಣಯದಲ್ಲಿ ಈ ಕತ್ತಿಯ ಪಾತ್ರ ತುಂಬಾ ಪ್ರಮುಖವಾದುದು; A small sharp blade like knife attached to the gamecocks;
- ***—ಕೋಳಿ ಕಸ/ಕೋಳಿ ಪಿಕ್ಕ*** : ಕೋಳಿಯ ಮಲ; ಕೋಳಿಗಳು ಹಾಕುವ ಹೇಸಿಗೆ; ಕೋಳಿಹಿಕ್ಕೆ (ಪಿಕ್ಕೆ>ಹಿಕ್ಕೆ); Droppings of hen;
- ***—ಕೋಳಿ ಕಾಲು/ಕಾಲ್*** : ಸಣ್ಣನೆಯ ಉದ್ದವಾದ ಕಾಲು; ಕಡ್ಡಿಯಂತಿರುವ ಕಾಲು; ಸಣಕಲ ವ್ಯಕ್ತಿಗೆ ಇರುವ ಸಣ್ಣದಾದ, ಉದ್ದವಾದ ಕಡ್ಡಿಯಂತಹ ಕಾಲುಗಳನ್ನು 'ಕೋಳಿ ಕಾಲು' ಎಂದು ಹೇಳುವುದುಂಟು; Sleek leg, a person with slender or sleek legs;
- ಅಡುಗೆಗೆ ಬಳಸುವ ಒಂದು ಬಗೆಯ ಸೊಪ್ಪು(ತು.ಜಿ); ಕಾಲಿನ ಮೀನಖಂಡದ ಭಾಗ ಸಣಕಲಾಗಿರುವುದು(ರಾಮ.ಜಿ); ಒಂದು ಬಗೆಯ ಹುಲ್ಲು(ಕ.ಜಾ.ನಿ);
- ***—ಕೋಳಿಕಾಲಿನ ಗಿಡ*** : (Cleoma monophylla) ರಾಗಿ ಹೊಲದಲ್ಲಿ ಕೋಳಿ ಕಾಲಿನಂತೆ ಉದ್ದಕ್ಕೆ ಬೆಳೆದು ತುದಿಯಲ್ಲಿ ನಾಲ್ಕಾರು ಎಲೆಗಳಿರುವ ಗಿಡ; ಮೂರ್ಛೆ, ಕಿವಿನೋವಿಗೆ ಔಷಧಿಯಾಗಿ ಬಳಕೆಯಾಗುತ್ತದೆ;
- ***—ಕೋಳಿಕಾಲಿನ ಸೊಪ್ಪು*** : ಹೊಲಗಳಲ್ಲಿ ರಾಗಿ, ಜೋಳದ ಮಧ್ಯೆ ಬೆಳೆಯುವ ಒಂದು ಬಗೆಯ ಸಸ್ಯ; ಇದು ಔಷಧಿಯ ಗುಣವನ್ನು ಹೊಂದಿದೆ; ಒತ್ತಲೆ ನೋವಿಗೆ ಉತ್ತಮ ಔಷಧವಾಗಿದೆ; ಮೆಣಸು, ಬೆಳ್ಳುಳ್ಳಿ, ಉಪ್ಪು ಹಾಕಿ, ಈ ಗಿಡದ ಸೊಪ್ಪಿನೊಂದಿಗೆ ಚೆನ್ನಾಗಿ ಹಿಸುಕಿ, ರಸವನ್ನು ಕಿವಿಗೆ ಬಿಟ್ಟರೆ ಒತ್ತಲೆ

ನೋವು ನಿವಾರಣೆಯಾಗುತ್ತದೆಂಬ ನಂಬಿಕೆಯಿದೆ; ಪಿತ್ತಕ್ಕೂ ಒಳ್ಳೆಯ ಔಷಧಿಯಾಗಿ ಬಳಕೆ; ಕಾಲು ಸಂದುಗಳು ನೋವಾಗಿದ್ದರೆ ಈ ಸೊಪ್ಪನ್ನು ಮಸೊಪ್ಪು ಸಾಂಬಾರು ಮಾಡಿ ಊಟ ಮಾಡಿದರೆ ಗುಣವಾಗುತ್ತದೆಂಬ ನಂಬಿಕೆ ಇದೆ;

- ***—ಕೋಳಿ ಕಾಳಗ*** : ಕೋಳಿ ಅಂಕ; ಹುಂಜಗಳ ಕಾದಾಟದ ಸ್ಪರ್ಧೆ; **ನೋಡಿ:** ಕೋಳಿ ಅಂಕ; Cock fight competition, cocks fight;
- ***—ಕೋಳಿ ಕುಕ್ಕೆ*** : (Baccaurea courtallensis) ನಿತ್ಯ ಹಸಿರಿನಿಂದ ಕೂಡಿರುವ ಒಂದು ಬಗೆಯ ಸಸ್ಯ; A kind of greenish plant;
- ಕೋಳಿಯನ್ನು ಕವುಚಿ ಹಾಕಲು ಬಳಸುವ ಕುಕ್ಕೆ ಅಥವಾ ಪಂಜರ; ಇದನ್ನು ಬಿದಿರಿನ ಹಚ್ಚೆಗಳಿಂದ ಮಾಡಲಾಗುತ್ತದೆ; ಹೂವು ಮರಿಗಳನ್ನು ಕವುಚಿ ಹಾಕಲು ಹೆಚ್ಚಾಗಿ ಬಳಸುತ್ತಾರೆ; ಹದ್ದು, ಕಾಗೆ, ನಾಯಿ, ಕೊತ್ತಿ ಮುಂತಾದವು ಹೂಮರಿಗಳನ್ನು ಹಿಡಿದು ತಿನ್ನದಿರಲೆಂದು ರಕ್ಷಣೆಗಾಗಿ ಕವುಚಿ ಹಾಕಲು ಬಳಸಲಾಗುವುದು; A basket or a cage(bamboo sticks) to preserve hens;
- ***—ಕೋಳಿ ಕುಟಿಕೆ*** : ಒಂದು ಬಗೆಯ ಆಟ(ಚಿಕ್ಕ.ಜಿ); A kind of game;
- ***—ಕೋಳಿ ಕುಟುಮ*** : ಒಂದು ಬಗೆಯ ಗಿಡ; ಅಗ್ನಿಶಿಖೆ; ಕೋಟಿಕುಟುಮ;
- ***—ಕೋಳಿ ಕುಟ್ಟಿ/ಕುಟ್ಟೆ*** : ಒಂದು ಬಗೆಯ ಸೊಪ್ಪು; ಹೊಲಗಳಲ್ಲಿ ನೈಸರ್ಗಿಕವಾಗಿ ಬೆಳೆಯುವ ಹರಿಗೆ ಸೊಪ್ಪು; ಈ ಸೊಪ್ಪನ್ನು ಅಡಿಗೆಯಲ್ಲಿ ಬಳಸಲಾಗುವುದು; A kind of natural leafy plant used in cooking;
- ***—ಕೋಳಿ ಕೂಗುವ ಹೊತ್ತು*** : ಮುಂಜಾನೆ; ನಸುಕು ಹರಿಯುವ ಹೊತ್ತು; ಬೆಳಗಿನ ಜಾವ; ಬೆಳಕು ಹರಿಯುವ ಸಮಯ; ಬ್ರಾಹ್ಮೀ ಮುಹೂರ್ತದ ಕಾಲ; *ಪ್ರ: 'ನನ್ನ ಕೋಳಿ ಕೂಗುದ್ರೇನೆ ಬೆಳಕಾಗೋದು ಅಂತ, ಅಜ್ಜಿ ತನ್ನ ಕೋಳಿ ತಕ್ಕಂಡು ಬೆಟ್ಟದ ಮೇಲೆ ಕುಂತ್ಕಂಡ್ಲಂತೆ'*; Early morning, dawn, Brahmi muhurtha;
- ಬೆಳಗಾಗುವ ಮುಂಚೆ ಸುಮಾರು ಬೆಳಗಿನ ನಾಲ್ಕು, ಐದು ಗಂಟೆಯ ಸಮಯ(ಮಂಡ್ಯ.ಜಿ); Before sunrise about 4 to 5 o'clock morning;
- ಕೂಗುವ ಕೋಳಿ ಗಂಡೇ(ಹುಂಜ) ಆದರೂ ಎಲ್ಲಿಯೂ ಹುಂಜ ಕೂಗಿತು ಎನ್ನುವುದಿಲ್ಲ; ಕೋಳಿ ಕೂಗಿತು ಎಂದೇ ಹೇಳುವುದು ವಾಡಿಕೆ; ಇಲ್ಲಿ ಹೆಣ್ಣಿಗೂ ಪ್ರಾಧಾನ್ಯ ದೊರೆಯಲಿ ಎಂಬ ಉದ್ದೇಶದಿಂದಲೇ ಕೋಳಿ ಕೂಗಿತು, ಕೂಳಿ ಕೂಗುವ ಹೊತ್ತು ಎಂದು ಪ್ರಯೋಗ ಮಾಡುತ್ತಿರುವಂತೆ ತೋರುತ್ತದೆ;
- ***—ಕೋಳಿ ಕೂಡ್ಸು*** : ಕೋಳಿಯಂತೆ ಬಾಗಿಸಿ ನಿಲ್ಲಿಸಿ ಶಿಕ್ಷಕರು ಮಕ್ಕಳಿಗೆ ಕೊಡುವ ಶಿಕ್ಷೆ(ಬೀ.ಜಿ); A kind of punishment given to children by the teachers;
- ಮೊಟ್ಟೆ ಇಡುವ ಅವಧಿ ಮುಗಿದ ಕೂಡಲೆ ಕೋಳಿಯು ಕಾವು ಕೂರಲು ತವಕಿಸುತ್ತದೆ; ಒಂದು ನಿರ್ದಿಷ್ಟ ದಿನದಲ್ಲಿ ಒಲೆಯ ಬೂದಿ, ಬತ್ತದ 'ಹೊಟ್ಟು/ಜಳ್ಳು' ಹಾಕಿದ ಒಂದು ಒಡೆದ ಮಡಕೆಗೆ ಮೊಟ್ಟೆಗಳನ್ನು ಜೋಡಿಸಿ ಕಾವು ಕೊಡಲು ಕೋಳಿ ಕೂರಿಸುತ್ತಾರೆ; ೨೦–೨೧ ದಿನಗಳವರೆಗೆ ಕೋಳಿ ಕಾವುಕೊಟ್ಟು ಮೊಟ್ಟೆಯಿಂದ ಮರಿ ತೆಗೆಯುತ್ತದೆ;
- ***—ಕೋಳಿ ಕೊಕ್ಕರೆ*** : ಒಂದು ಬಗೆಯ ಪಕ್ಷಿ ವಿಶೇಷ (ಬೇ.ಸಾ.ಪ.ಕೋ); A kind of unique bird;
- *ಪ್ರ: 'ಹಳ್ಳೀಲಿ ಮನೆ ಅಂದ್ಮೇಲೆ ಕೋಳಿ ಕೊಕ್ಕ ಇದ್ದೇ ಇರ್ತವೆ'*;
- ದನ–ಕರ ಎಂದು ಹೇಳುವಂತೆ ಕೋಳಿ–ಕೊಕ್ಕರೆ ಎಂದು ಹೇಳುವುದುಂಟು;
- ***—ಕೋಳಿ ಕ್ಯಾಕರಿಸುವುದು*** : ಪಾವು ಕೋಳಿ ಹಂತದಿಂದ ಬೆಳೆದು ಮೊಟ್ಟೆ ಹಾಕುವ ಹಂತಕ್ಕೆ ಬಂದ ಕೋಳಿ ಮೊಟ್ಟೆ ಹಾಕುವ ಮುನ್ನ ಮೊಟ್ಟೆ ಇಡುವ ಬಗೆಗೆ ಧ್ವನಿ ಮಾಡಿ ಸೂಚಿಸುವುದು;
- ಹೇಟೆ ಕೋಳಿಯ ಕೂಗುವಿಕೆ; ಪ್ರಣಯಕ್ಕೆ ಹುಂಜವನ್ನು ಕರೆಯುವ ಕೂಗು(ಬೇ.ಸಾಂ.ಪ.ಕೋ);
- ***—ಕೋಳಿ ಖೆಡ್ಡಾ*** : ಕೋಳಿ ಹಿಡಿಯುವ ಒಂದು ಬಗೆಯ ಸಾಧನ; ಮಲೆನಾಡಿನಲ್ಲಿ ಕಾಡು ಕೋಳಿಗಳನ್ನು ಹಿಡಿಯಲು ಅಲ್ಲಿನ ಜನರು ಬಳಸುವ

ಕೋಲು ಉರುಳು; A kind of device to catch hens used in Malnad area;

- **—ಕೋಳಿ ಗಂಟಲು ಬೇನೆ** : ಕೋಳಿಗೆ ಬರುವ ಒಂದು ಬಗೆಯ ಕಾಯಿಲೆ; ಕೋಳಿಯ ಕುತ್ತಿಗೆಯಲ್ಲಿ ಗೆಡ್ಡೆ ಕಾಣಿಸಿಕೊಳ್ಳುವಂತಹದ್ದು; ಇದಕ್ಕೆ 'ಅಂಗಗೆಡ್ಡೆ ಅಥವಾ ಅಮ್ಮಾಬೀಸ್ಗೆ' ಎಂತಲೂ ಕರೆಯುತ್ತಾರೆ; ಇದಕ್ಕೆ ಔಷಧಿಯಾಗಿ ಜೀರಿಗೆ ಮೆಣಸಿನಕಾಯಿಯನ್ನು ಬಳಸುತ್ತಾರೆ; A kind of throat disease for hens;
- **—ಕೋಳಿಗರಿ** : ಕೋಳಿ ರೆಕ್ಕೆಯಲ್ಲಿ ಹಾಗೂ ಪುಕ್ಕದಲ್ಲಿರುವ ಉದ್ದವಾದ ತುಪ್ಪಳ; ರೇಷ್ಮೆ ಹುಳುವಿನ ಚಾಕಿಕಟ್ಟುವಾಗ ಸಣ್ಣ ಮರಿಗಳನ್ನು ರೇಷ್ಮೆ ಮೊಟ್ಟೆಯ ಕಾಗದದಿಂದ ಚಾಕಿ ತಟ್ಟೆಗೆ ಉದುರಿಸಿಕೊಳ್ಳುವಾಗ ಹದ್ದಿನ ಗರಿ ಇಲ್ಲವೆ ಕೋಳಿಯ ಗರಿಯನ್ನು ಬಳಸುತ್ತಾರೆ; ಕೋಳಿ ಗರಿಯಲ್ಲಿನ ಕೂದಲನ್ನು ಕಿತ್ತು, ತುದಿಯಲ್ಲಿ ಅರ್ಧ ಇಂಚಿನಷ್ಟು ಉಳಿಸಿ, ಅದನ್ನು ಕಿವಿ ಗುರು ಗುರು ಎನ್ನುವಾಗ ಕಿವಿಗೆ ಹಾಕಿ ತಿರುಗಲು ಬಳಸುವುದುಂಟು; Feather of hens used to clean ears;
- **—ಕೋಳಿ ಗೂಡು** : ೧.ಕೋಳಿಗಳನ್ನು ಕೂಡಿ ಹಾಕುವ ಜಾಗ; ೨.ಉತ್ತರಕನ್ನಡ ಜಿಲ್ಲೆಯ ಒಂದು ಜನಪದ ಆಟ; ಹರಳಾಟದ ಒಂದು ಪ್ರಭೇದ; ಎಡಗೈಯನ್ನು ಡಬ್ಬು ಹಿಡಿದು ತೋರು ಬೆರಳನ್ನು ಎತ್ತಿ ಬಾಗಿಲಿನಂತೆ ಮಾಡಿ ಚೆಲ್ಲಿದ ಹರಳುಗಳನ್ನು ಒಂದೊಂದಾಗಿ ಗೂಡಿಗೆ ಸೇರಿಸುವ ಆಟ; Chicken coop or sty; a folk game in Uttarkannada district;
- **—ಕೋಳಿ ಜಗಳ** : ನುಡಿಗಟ್ಟಾಗಿ ಬಳಕೆ; ಜಗಳವಾಡಿದ ಮರುಕ್ಷಣವೇ ರಾಜಿಯಾಗುವುದು; ಸಾಮಾನ್ಯವಾಗಿ ಮಕ್ಕಳಲ್ಲಿ ಹೆಚ್ಚಾಗಿ ಈ ಜಗಳ ಕಂಡು ಬರುತ್ತದೆ; An idiom, compromise immediately, especially the children;
- ಜೋರಾದ ಹೊಡೆದಾಟ ಮಾಡದೆ, ಬೈದಾಡುತ್ತಾ ತಳ್ಳಾಟ ಮಾಡುತ್ತಾ ಮಾಡುವ ಜಗಳಕ್ಕೆ ಹೇಳುವ ಮಾತು ಇದಾಗಿದೆ;
- **—ಕೋಳಿ ಜಾಣ** : ಒಂದು ಬಗೆಯ ಮಾಂಸಾಹಾರ ಪಕ್ಷಿ(ಬೇ.ಸಾ.ಪ.ಕೋ); A kind of non-vegetarian(carnivorous) bird;
- **—ಕೋಳಿ ಜುಟ್ಟು** : ಕೋಳಿಯ ಕೊಕ್ಕಿನ ಕೆಳಗೆ ಮತ್ತು ಮೇಲುಗಡೆ ಇರುವ ಕೆಂಪು ಬಣ್ಣದ ಜುಟ್ಟು; ಹುಂಜನಿಗೆ ದಪ್ಪನಾಗಿರುತ್ತದೆ; ಹೇಟೆಗೆ ಹುಂಜನಿಗಿಂತ ಚಿಕ್ಕದಾಗಿರುತ್ತದೆ; A red coloured crest below the beak and top of the head for both hen and cock;
- **—ಕೋಳಿ ಜುಟ್ಟು ಗೆಡ್ಡೆ** : (Oplismenus composites) ಒಂದು ಬಗೆಯ ಸಸ್ಯ; ಇದರ ಎಲೆ ಕೋಳಿಯ ಮೊಟ್ಟೆಯಾಕಾರದಲ್ಲಿರುತ್ತದೆ; ಇದು ಔಷಧಿಯ ಗುಣ ಹೊಂದಿದೆ;
- **—ಕೋಳಿ ಜುಟ್ಟಿನ ಸೊಪ್ಪು** : ಒಂದು ಬಗೆಯ ಸಸ್ಯ; ಜನ ಸಾಮಾನ್ಯರು ಸೊಪ್ಪನ್ನು ಸಾರು ಮತ್ತು ಪಲ್ಯಕ್ಕೆ ಬಳಸುವರು; ಇದು ಸಿದ್ಧರ ಬೆಟ್ಟದ ವಿಶೇಷ ಸಸ್ಯ;
- **—ಕೋಳಿ ಜ್ವರ/ಹಕ್ಕಿ ಜ್ವರ** : ಕೋಳಿಗೆ ಬರುವ ಒಂದು ಬಗೆಯ ಜ್ವರ; ಆಹಾರ ತಿನ್ನದೆ, ಓಡಾಡದೆ ಒಂದು ಕಡೆ ವಾತರಿಸಿಕೊಂಡು ಕುಳಿತಿರುತ್ತದೆ; ಇದಕ್ಕೆ ಔಷಧಿಯಾಗಿ ಈರುಳ್ಳಿ ರಸಕ್ಕೆ ಬೆಲ್ಲದ ರಸ ಸೇರಿಸಿ ಜ್ವರ ಬಂದ ಕೋಳಿಗೆ ಕುಡಿಸುತ್ತಾರೆ; ಇದು ಹಕ್ಕಿ ಜ್ವರವೆಂದು ಪ್ರಸಿದ್ಧವಾಗಿದೆ; ಈ ಜ್ವರ ಬಂದಿತೆಂದರೆ ಕೋಳಿಗಳು ಮೂರ್ಛೆ ಹೋಗಿ ಸತ್ತು ಹೋಗುತ್ತವೆ; Birds flu; a kind of disease for poultry; this is known as `Hakki Jwara';
- **—ಕೋಳಿ ತಾಳ್ದ** : ಕೋಳಿ ಮಾಂಸಕ್ಕಿಂತ ಸ್ವಲ್ಪ ಹೆಚ್ಚಾಗಿ ತೆಂಗಿನಕಾಯಿ ತುರಿಯನ್ನು ತೆಗೆದುಕೊಂಡು ಚೆನ್ನಾಗಿ ರುಬ್ಬಿ, ಅದರ ರಸವನ್ನು ಕೋಳಿ ಮಾಂಸದ ಜೊತೆಗೆ ಸೇರಿಸಿ ಬೇಯಿಸಿದ ಸಾರು(ದ.ಕ);
- **—ಕೋಳಿ ತತ್ತಿ/ಕೋಳಿ ಮೊಟ್ಟೆ** : ಕೋಳಿ ಮೊಟ್ಟೆ ನಸು ಹಳದಿ ಮಿಶ್ರಿತ ಬಿಳಿ ಬಣ್ಣದಿಂದ ಕೂಡಿರುತ್ತದೆ; ಕೋಳಿ ಮೊಟ್ಟೆ ಅತಿ ಹೆಚ್ಚು ಪ್ರೋಟೀನ್ ಅಂಶವುಳ್ಳ ಉತ್ತಮ ಆಹಾರ; ದಿನ ನಿತ್ಯ ಒಂದು ಮೊಟ್ಟೆ ಸೇವಿಸುವುದರಿಂದ ದೇಹಾರೋಗ್ಯ ಉತ್ತಮವಾಗಿರುತ್ತದೆ; Chicken's egg, mixture of light yellow and white; it is highly

proteinic; an egg per a day is good for health;

- ಒಂದು ಅವಧಿಯಲ್ಲಿ ಮೊಟ್ಟೆಗಳನಿಟ್ಟ ಕೋಳಿ ಕಾವು ಕೂರುತ್ತದೆ; ತನ್ನ ರೆಕ್ಕೆಯೊಳಗೆ ಮೊಟ್ಟೆಗಳನ್ನಿಟ್ಟುಕೊಂಡು ಕಾವುಕೊಟ್ಟು ಮರಿ ಮಾಡುತ್ತದೆ; ಸರಿಯಾದ ಪ್ರಮಾಣದಲ್ಲಿ ಕಾವು ಪಡೆಯದ ಮೊಟ್ಟೆ ಲೋಳೆ ಮೊಟ್ಟೆಯಾಗುತ್ತದೆ; ಮರಿ ಇಳಿಸುವಾಗ ಇದನ್ನು ಹೊರಹಾಕುತ್ತಾರೆ;
- ***—ಕೋಳಿ ತುಪ್ಪ*** : ಕೊಬ್ಬಿದ ಕೋಳಿಯಿಂದ ತೆಗೆದ ನೆಣವನ್ನು ಕಾಯಿಸಿ ಮಾಡಿದ ತುಪ್ಪ; ಇದನ್ನು ಔಷಧಿಯಾಗಿ ಬಳಸುತ್ತಾರೆ; ಎತ್ತಿಗೆ 'ಹೆಗಲು' ಬಂದಾಗ ಅದಕ್ಕೆ ಔಷಧಿಯಾಗಿ ಬಳಕೆ ಮಾಡುತ್ತಾರೆ;

  A ghee or fat taken out of fatty chicken meat(fat); it has medicinal values and used to rub on bullock's shoulder;
- ***—ಕೋಳಿ ದ್ಯಾವರು*** : ಕೋಳಿ ಬಲಿಕೊಟ್ಟು ಮಾಡುವ ದೇವರ ಪೂಜೆ; ಕುಟುಂಬದ ಅತಿ ಹಿರಿಯ ಮಹಿಳೆ ಜಲಪೂಜೆ ಮಾಡಿ, ಸೆಗಣಿ ಕಟ್ಟಿ ದೀಪ ಉರಿಸಿ ದ್ಯಾವರ ಬಂಡೆ ಬಳಿ ಕೋಳಿ ಬಲಿಕೊಟ್ಟು ಪೂಜೆ ಮಾಡುತ್ತಾಳೆ(ಬೆಂ.ಗ್ರಾ.ಜಿ);
- ***—ಕೋಳಿ ನಿದ್ದೆ*** : ಅಲ್ಪಾವಧಿ ನಿದ್ರೆ; ಹಗಲು ಹೊತ್ತಿನ ನಿದ್ರೆ(ಚಿ.ಪ.ಕೋ); Nap; day time sleep;
- ಕಿರುನಿದ್ದೆ(ಬ.ಜಿ/ದ.ಕ); Nap;
- ಕೆಲವೇ ಕೆಲವು ಕ್ಷಣ ಮಾತ್ರ ಮಾಡುವ ನಿದ್ದೆ; *ಪ್ರ: 'ಮಗು ಕೋಳಿ ನಿದ್ದೆ ಮಾಡಿ ಎದ್ದು ಬಿಡ್ತು'!*
- ***—ಕೋಳಿ ನೆಗಡಿ*** : ಮನುಷ್ಯರಿಗೆ ಬರುವಂತೆ ಕೋಳಿಗೂ ನೆಗಡಿ ಬರುತ್ತದೆ; ಈ ರೋಗ ವಾತಾವರಣವನ್ನು ಅವಲಂಬಿಸಿರುತ್ತದೆ; ಕೋಳಿಯ ಕಣ್ಣು ಮತ್ತು ಮೂಗಿನಿಂದ ನೀರು ಸೋರುವುದು; ತಲೆ ಊದಿಕೊಳ್ಳುವುದು ಇದರ ಲಕ್ಷಣ;
- ***—ಕೋಳಿ ಪಂಜರ*** : ಕೋಳಿಗಳನ್ನು ಕವುಚಿ ಹಾಕುವ ಬಿದಿರಿನಿಂದ ಮಾಡಿದ ಒಂದು ಸಾಧನ; ಗ್ರಾಮೀಣ ಪ್ರದೇಶಗಳಲ್ಲಿ ಕೋಳಿಗಳಿಗೆ ಆಶ್ರಯ ನೀಡಲು ಮನೆಗಳಲ್ಲಿ ಪಂಜರಗಳನ್ನು ಬಳಸುತ್ತಾರೆ; ಮೊದಲು ನೆಲಕ್ಕೆ ಗೋಣಿ ಚೀಲ ಹಾಸಿ ಅದರ ಮೇಲೆ ಮರಳು ಮಿಶ್ರಿತ ಮಣ್ಣು ಅಥವಾ ಭತ್ತದ ಹೊಟ್ಟನ್ನು ಹಾಕಿ, ಅದರ ಮೇಲೆ ಕೋಳಿಗಳನ್ನು ಕವುಚಿ ಹಾಕಲಾಗುವುದು;
- ಕೋಳಿಗಳು ಪಂಜರದ ಆವರಣದಿಂದ ಹೊರಗೆ ಹೋಗದಂತೆ ಮುಚ್ಚಿ, ಭಾರವಾದ ವಸ್ತುವನ್ನಿಡುತ್ತಾರೆ; ಈ ಪಂಜರವನ್ನು ಬಿದಿರಿನ ಹಚ್ಚೆ, ಸಿಂದೆ ಮರ, ಈಚಲು ಮರ ಇಲ್ಲವೆ ಲಕ್ಕಿಮರದ ಬಡಿಗೆಗಳಿಂದ ಮಾಡಲಾಗಿರುತ್ತದೆ; ವಿವಿಧ ಗಾತ್ರದ ಪಂಜರಗಳಿರುತ್ತವೆ; ಕೋಳಿಗಳ ಗಾತ್ರಕ್ಕನುಗುಣವಾಗಿ ಪಂಜರಗಳನ್ನು ಬಳಸುತ್ತಾರೆ;
- ***—ಕೋಳಿ ಪಡೆ/ಪಡಿ*** : ಕೋರಿ ಕಟ್ಟ, ಕೋರಿದ ಕಟ್ಟ(ತುಳು);
- ***—ಕೋಳಿ ಅಂಕ*** : ಕೋಳಿಗಳ ಕಾದಾಟ; ಇದೊಂದು ಜನಪದ ಕ್ರೀಡೆ; ಉಡುಪಿ ಜಿಲ್ಲೆ, ಮಂಗಳೂರು ಜಿಲ್ಲೆಗಳಲ್ಲಿ ದೀಪಾವಳಿ, ಹೊಸ್ತು, ಭೂತದ ಕೋಲ, ನೇಮ, ಮಾರಿಜಾತ್ರೆ, ಕಂಬಳ ಮೊದಲಾದ ಆಚರಣೆಗಳಲ್ಲಿ ಕೋಳಿ ಪಡೆಯನ್ನು ನಿರ್ದಿಷ್ಟ ಸ್ಥಳದಲ್ಲಿ ನಡೆಸಲಾಗುವುದು; ಆಚರಣೆಗಳ ಅಂಗವಾಗಿದ್ದ ಕೋಳಿ ಪಡೆಯು ಒಂದು ಶರಾಬು ಅಂಗಡಿಯ ಪಕ್ಕದಲ್ಲಿ ನಡೆಯುವ ಜೂಜಾಟವಾಗಿದ್ದು ಕಾನೂನು ಬಾಹಿರವಾಗಿದೆ (ನೋಡಿ: ಕೋಳಿ ಅಂಕ);

  Cockpit; a kind of folk game, a sport game cocks in the areas of Mangaluru, udupi district during Diwali, Kambala, Kola and etc; it is a kind of illegal gambling;
- ***—ಕೋಳಿಗೆ ಪಾರ್ಶ್ವವಾಯು*** : ಕೋಳಿಗೆ ಬರುವ ಒಂದು ಕಾಯಿಲೆ; ಇದು ಹೆಚ್ಚಾಗಿ ಕುತ್ತಿಗೆ ಮತ್ತು ಕಾಲುಗಳಿಗೆ ಬರುತ್ತದೆ; ಈ ಕಾಯಿಲೆ ಬಂದಾಗ ನಿಲ್ಲಲು ಆಗದೆ ಒಂದೆಡೆ ವಾಲುತ್ತದೆ ಇಲ್ಲವೆ ಬೀಳುತ್ತದೆ; A kind of paralysis for hen's neck and legs;
- ***—ಕೋಳಿ ಪೀಟ*** : ಬಂಡಿ ಚಕ್ರದಲ್ಲಿ ಎರಡು ಚಕ್ರಗಳನ್ನು ಕೂಡಿಸುವ ಮರದ ಸಾಧನ ಹಾಗೂ ಬಂಡಿಯ ಒಟ್ಟು ಭಾಗ ಕೋಳಿ ಪೀಟದ ಮೇಲೆ ಇರುತ್ತದೆ (ತು.ಜಿ)(ಕ.ಜಾ.ನಿ); An axle, a type of joiner of two wheels of a cart;
- ***—ಕೋಳಿ ಪೀಚೆ/ಪಿಚ್ಚೆ ಮಣ್ಣು*** : ಸಾವಯವ ಅಂಶ ಕಡಿಮೆ ಇರುವ ಮಣ್ಣು(ಕೃ.ಪ.ಕೋ); Less fertilized earth or soil;

- ಕೋಳಿ ಪಿಚ್ಚೆ, ಕೋಳಿ ಪಿಕ್ಕ ಎರಡೂ ರೂಪಗಳು ಒಂದೇ ಇರಬಹುದು; ಆದರೆ ಅರ್ಥ ಬೇರೆ; ಕ>ಚ ಸಹಜ, ಹಾಗೆಯೇ ಚ>ಕ ಆಗಲೂ ಬಹುದು;
- —***ಕೋಳಿ ಪುಕ್ಕ*** : ಕೋಳಿಯ ಗುದದ್ವಾರದ ಭಾಗ; ಇದನ್ನು ತಿನ್ನಬಾರದು ಎಂದು ಹೇಳುತ್ತಾರೆ; ಯಾರಾದರೂ ತಿಂದರೆ ಕೋಳಿ ಪುಕ್ಕ ತಿಂದೋನು ಎಂದು ಗೇಲಿಗೆ ಒಳಗಾಗುವುದುಂಟು; Anus of hen;
- ಮನೆಗಳಲ್ಲಿ ಕೋಳಿಯ ತಲೆ, ಕಾಲುಗಳ ಜೊತೆಗೆ ಪುಕ್ಕವನ್ನೂ, ಹೆಂಗಸರು ತಮಗಾಗಿ ಉಳಿಸಿಕೊಳ್ಳುವುದುಂಟು; ಗಂಡಸರಿಗೆ ಇವನ್ನು ಬಡಿಸುವುದಿಲ್ಲ; ಗಂಡಸರು ತಿಂದರೆ ಹೆದರು ಪುಕ್ಕಲರಾಗುತ್ತಾರೆ ಎಂಬ ನಂಬಿಕೆ ಇದೆ;
- —***ಕೋಳಿ ಬಿಡುವುದು*** : ಸೀಮಂತದಲ್ಲಿ ಮೊದಲು ಮಾಡುವ ಒಂದು ಆಚರಣೆ; ತಾಯಿ ಮನೆಯವರು ತಂದ ಕೋಳಿಮರಿಯನ್ನು ಅತ್ತೆಯು ಗರ್ಭಿಣಿ ಸೊಸೆಗೆ ನಿವಾಳಿಸಿ, ಅದಕ್ಕೆ ಆಹಾರ ತಿನ್ನಿಸಿ ನಂತರ ಬಿಡುವ ಆಚರಣೆಯಾಗಿದೆ;
- —***ಕೋಳಿ ಮೊಟ್ಟೆ(ಮಟ್ಟೆ)ಸಾರು/ಹೆಸ್ರು*** : ಕೋಳಿ ಮೊಟ್ಟೆ ಬಳಸಿ ಮಾಡುವ ಸಾರು;
- ಈರುಳ್ಳಿ, ಬೆಳ್ಳುಳ್ಳಿ, ಟೊಮಾಟೊ ಹೆಚ್ಚಿಕೊಂಡು ಒಗ್ಗರಣೆಯಲ್ಲಿ ಬಾಡಿಸಿ ಕಾರದ ಪುಡಿ, ನೀರು, ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಕುದಿಸುತ್ತಾರೆ; ಕುದಿಯುವಾಗ ಬೇಯಿಸಿದ ಕೋಳಿ ಮೊಟ್ಟೆಗಳನ್ನು ನಾಲ್ಕು ನಾಲ್ಕು ತುಂಡು ಮಾಡಿ ಹಾಕಿ ಸ್ವಲ್ಪ ಕುದಿಸಿ ಕೊತ್ತಂಬರಿ ಸೊಪ್ಪು ಹಾಕಿ ಕೆಳಗಿಳಿಸುತ್ತಾರೆ; ಕೋಳಿ ಮೊಟ್ಟೆ ಸಾರು ಸವಿಯಲು ಸಿದ್ಧವಾಗಿರುತ್ತದೆ;
- ಮೊಟ್ಟೆಯಿಂದ ಮಾಡುವ ಸಾರು; ಮಾಂಸದ ಸಾರಿನಪುಡಿ, ಮಸಾಲೆ ಸೇರಿಸಿ ಚೆನ್ನಾಗಿ ಕುದಿಸುವುದು; ಇದಕ್ಕೆ ಹಸಿ ಮೊಟ್ಟೆಗಳನ್ನು ಅಗತ್ಯಕ್ಕೆ ತಕ್ಕಷ್ಟು ತೆಗೆದುಕೊಂಡು ಅವುಗಳನ್ನು ಕುಟುಕಿ, ಬಂಡಾರದ ಸಮೇತ ಕುದಿಯುವ ಸಾರಿಗೆ ಹಾಕುತ್ತಾರೆ; ಒಂದೊಂದು ಮೊಟ್ಟೆಯೂ ಒಡೆದು ಕಲಸಿಹೋಗದ ಹಾಗೆ ಮೆಲ್ಲಗೆ ತಿರುವಿ, ಕಡಿಮೆ ಉರಿಯಲ್ಲಿ ಸ್ವಲ್ಪ ಕುದಿಸಿ, ಕೊತ್ತಂಬರಿ ಸೊಪ್ಪು ಹಾಕಿ ಇಳಿಸಿದರೆ ಮೊಟ್ಟೆಯ ಸಾರು ಸಿದ್ಧವಾಗಿರುತ್ತದೆ; ಈ ರೀತಿ ಎರಡೂ ವಿಧಾನಗಳಲ್ಲಿ ಮೊಟ್ಟೆಸಾರು ಮಾಡುತ್ತಾರೆ;
- —***ಕೋಳಿಯೊಡ್ಡಿ*** : ಕೋಳಿಗೂಡು; ಕೋಳಿಗಳನ್ನು ವಿಶೇಷವಾಗಿ ನಾಟಿಕೋಳಿಗಳನ್ನು ಕೂಡಿ ಹಾಕಲು ನಿರ್ಮಿಸುವ ಗೂಡು; ಗ್ರಾಮೀಣ ಪ್ರದೇಶದಲ್ಲಿ ಇವು ಹಗಲು ಹೊತ್ತು ಹೊರಗೆ ಮೇಯುತ್ತಿದ್ದು ಮೊಟ್ಟೆಯಿಡಲು ಹಾಗು ರಾತ್ರಿಯ ಸಮಯ ಮನೆಗೆ ಹಿಂದಿರುಗಿ ಗೂಡು ಸೇರುತ್ತವೆ; ರಾತ್ರಿ ಹೊತ್ತಿನಲ್ಲಿ ಕೋಳಿಗಳನ್ನು ಕೂಡಿ ಹಾಕುವ ಗೂಡು (ಸಾಂ.ಪ.ಕೋ);
- —***ಕೋಳಿ ರೋಗ*** : ಕೋಳಿಗಳಿಗೆ ಬರುವ ಒಂದು ಬಗೆಯ ರೋಗ; ಈ ರೋಗದಿಂದ ಕೋಳಿಯು ಬೆಳ್ಳಗೆ ಉಚ್ಚಿಕೊಳ್ಳುತ್ತದೆ; ಮೇವು ತಿನ್ನದೆ ಜೂಗಡಿಸುತ್ತ ಒಂದು ಕಡೆ ನಿಂತಿರುತ್ತದೆ ಅಥವಾ ಕುಳಿತಿರುತ್ತದೆ; ಇದಕ್ಕೆ ರಾಗಿ ಮುದ್ದೆಯೊಳಗೆ ಅರಗಿನ ಚೂರು ಇಟ್ಟು ನುಂಗಿಸುತ್ತಾರೆ; ಹಂದಿ ಮಾಂಸದ ಸಾರಿನಲ್ಲಿ ಉಂಡ ತಟ್ಟೆಯ ನೀರನ್ನು ಕುಡಿಸುತ್ತಾರೆ; ಮಜ್ಜಿಗೆ ಕುಡಿಸುತ್ತಾರೆ; ಬೆಳ್ಳುಳ್ಳಿಯನ್ನು ನುಂಗಿಸುತ್ತಾರೆ; ಈ ರೋಗ ಬಂದರೆ ಕೋಳಿಗಳು ಉಳಿಯುವುದು ಕಷ್ಟ; ಒಂದು ವೇಳೆ ಈ ರೋಗದ ಕೋಳಿಗಳು ಗುಣವಾಗಿ ಬದುಕಿ ಉಳಿದರೆ ಅವುಗಳ ಜೀವನ ಪರ್ಯಂತ ಮತ್ತೆ ಈ ರೋಗ ಬರುವುದಿಲ್ಲವೆಂದು ಹೇಳುತ್ತಾರೆ; A kind of disease to the hens;
- —***ಮೊಳೆ ರೋಗ*** : ಕೋಳಿಗಳಿಗೆ ಬರುವ ಒಂದು ಬಗೆಯ ರೋಗ; ಈ ರೋಗ ಬಂದರೆ ಕೋಳಿಯ ಗುದದ್ವಾರ ಊದಿಕೊಳ್ಳುತ್ತದೆ; ಇದಕ್ಕೆ ಔಷಧಿಯಾಗಿ ಅರಿಶಿಣದ ಕೊನೆಯನ್ನು ಬೆಂಕಿಯಲ್ಲಿ ಕಾಯಿಸಿ ಗುದದ್ವಾರವನ್ನು ಸುಡುತ್ತಾರೆ; ಬೆಳ್ಳುಳ್ಳಿಯನ್ನು ಕೋಳಿಗೆ ನುಂಗಿಸುತ್ತಾರೆ;
- —***ಕೊಕ್ಕರೆ ರೋಗ*** : ಕೋಳಿಗೆ ಬರುವ ರೋಗಗಳಲ್ಲಿ ಒಂದು; ಕೋಳಿಯು ಯಾವಾಗಲೂ ನಿಂತು ಅಥವಾ ಕುಳಿತು ತೂಕಡಿಸುತ್ತಿರುತ್ತದೆ; ಮುಖದ ಕಳೆ ಕುಂದಿರುತ್ತದೆ; ಉಸಿರಾಡುವಾಗ ಸಣ್ಣದಾದ ಸದ್ದು ಹೊಮ್ಮುತ್ತಿರುತ್ತದೆ; ಕೆಟ್ಟ ವಾಸನೆಯಿಂದ ಕೂಡಿದ ಭೇದಿ ಮಾಡಿಕೊಳ್ಳುತ್ತದೆ; ಈ ರೋಗದಿಂದಾಗಿ ಕೋಳಿಗಳು ಸಾಯುವುದುಂಟು;

- —*ಕೋಳಿ ಸಾರು* : ನಾಟಿ ಕೋಳಿ ಸಾರು ವಿಶೇಷವಾದ ಸ್ವಾದವನ್ನೊಳಗೊಂಡಿದೆ; ಮೊದಲು ಈರುಳ್ಳಿ ಒಗ್ಗರಣೆ ಹಾಕಿ ಬಾಡಿಸಿದ ನಂತರ ಕೋಳಿ ಮಾಂಸವನ್ನು ಹಾಕಿ ಬಾಡಿಸುವಾಗ ಸ್ವಲ್ಪ ಅರಿಶಿಣದ ಪುಡಿ, ಉಪ್ಪು ಹಾಕಿ ಚೆನ್ನಾಗಿ ತಿರುವಿ ಹಾಕುತ್ತಾರೆ; Chicken sambaru with spicy masala;
- ಇದೇ ಸಮಯದಲ್ಲಿ ತೆಂಗಿನಕಾಯಿ, ಈರುಳ್ಳಿ, ಚೆಕ್ಕೆ, ಲವಂಗ, ಗಸಗಸೆ, ಹಸಿಶುಂಠಿ, ಕೊತ್ತಂಬರಿ ಸೊಪ್ಪು, ಟೊಮಾಟೊ, ಖಾರದಮಡಿ ಹಾಕಿ ರುಬ್ಬಿಕೊಂಡ ಮಾಸಾಲೆಯನ್ನು ಬಾಡಿಸಿದ ಕೋಳಿ ಮಾಂಸಕ್ಕೆ ಹಾಕಿ ಕುದಿಸುತ್ತಾರೆ; ಹುಚ್ಚೆಳ್ಳನ್ನು ಆಡಿಸಿ ಹಿಂಡಿದ ರಸವನ್ನು ಸಾರಿಗೆ ಬಿಟ್ಟು ಸ್ವಲ್ಪ ಹೊತ್ತು ಕುದಿಸುತ್ತಾರೆ; ಮಾಂಸವು ಬೆಂದಿದೆ ಎಂದಾಗ ಇಳಿಸಿಕೊಳ್ಳುತ್ತಾರೆ; ಹುಚ್ಚೆಳ್ಳು ರಸವು ನಾಟಿಕೋಳಿ ಸಾರಿಗೆ ಹೆಚ್ಚಿನ ರುಚಿ ಒದಗಿಸುತ್ತದೆ;
- ಕೆಲವರು ಸಾರಿನಿಂದ ಮಾಂಸವನ್ನು ತೆಗೆದು ಮಸಾಲೆ ಹಾಕಿ ಹುರಿಯುವುದುಂಟು; ಆದರೆ ಮಾಂಸ ಸಾರಿನಲ್ಲೇ ಇದ್ದರೆ ಅದರ ರುಚಿ ಹೆಚ್ಚು; ನಾಟಿಕೋಳಿ ಮಾಂಸದ ಸಾರನ್ನು ಊಟಕ್ಕೆ ಮೊದಲು ಕುಡಿಯಲು ಕೊಡುವುದುಂಟು; ಸಾರು ಆರೋಗ್ಯದ ದೃಷ್ಟಿಯಿಂದಲೂ ಹಿತಕರವಾದುದು; ನಾಟಿಕೋಳಿ ಸಾರು ಮತ್ತು ಬಿಸಿ ಬಿಸಿ ರಾಗಿ ಮುದ್ದೆ ಊಟಕ್ಕೆ ಬೇರೆ ಯಾವ ಊಟವೂ ಸಾಟಿಯಾಗಲಾರದು; *ಪ್ರ: 'ಕೋಳಿ ತಿಂದವನು ಹೋಳಿಗೆ ಮುಟ್ಟುವನೆ'*(ನ.ಗಾ);
- —*ಕೋಳಿಹಣ್ಣು* : ಹಿಪ್ಪುನೇರಳೆ ಗಿಡದಲ್ಲಿ ಬಿಡುವ ಒಂದು ರೀತಿಯ ಹಣ್ಣು; ಕಪ್ಪು ಮಿಶ್ರಿತ ಕೆಂಪು ಬಣ್ಣದಿಂದ ಕೂಡಿರುತ್ತದೆ; ಕಡ್ಡಿ ಸಮೇತ ಹಿಪ್ಪುನೇರಳೆ ಸೊಪ್ಪನ್ನು ರೇಶ್ಮೆ ಹುಳುಗಳಿಗೆ ಹಾಕಲು ಮನೆಗೆ ತಂದಾಗ, ಅದರಲ್ಲಿನ ಹಣ್ಣುಗಳನ್ನು ಕುಕ್ಕಿ ಕೋಳಿಗಳು ತಿನ್ನುತ್ತವೆ; Usually dark purple fruit of mulberry plant or tree;
- —*ಕೋಳಿ ಹುಂಜನ್‌ಗಡ್ಡೆ* : ಔಷಧಿಗೆ ಬಳಸುವ ಒಂದು ಬಗೆಯ ಗಿಡದ ಗಡ್ಡೆ(ತು.ಜಿ); A medicinal root of a plant;
- —*ಕೋಳಿ ಹೇನು* : ಕೋಳಿಗೆ ಬರುವ ಹೇನು; ಒಂದು ರೀತಿಯ ಅತಿ ಸಣ್ಣದಾದ ಸೂಕ್ಷ್ಮ ಜೀವಿ; Hen's louse, wingless blood-sucking parasite insect;
- ಕೋಳಿಗಳಿಗೆ ಆಹಾರ ಕಡಿಮೆಯಾದಾಗ, ಗೂಡನ್ನು ಸ್ವಚ್ಛವಾಗಿ ಇಡದೆ ಇರುವಾಗ ಕೋಳಿ ಹೇನುಗಳು ಕಾಣಿಸಿಕೊಳ್ಳುತ್ತವೆ;
- ಇವು ತುಂಬಾ ಕಾಟಕೊಡುತ್ತವೆ;
- ಇವು ಕೋಳಿಯಲ್ಲಿ ಮಾತ್ರ ಇರದೆ ಮನುಷ್ಯರಿಗೂ ಸೇರಿಕೊಂಡು ತೊಂದರೆ ಕೊಡುತ್ತವೆ; ಇವು ಕಡಿಯುವುದರಿಂದ ಮೈಯೆಲ್ಲಾ ನವೆ ಉಂಟಾಗುತ್ತದೆ;
- ಕೋಳಿ ಹೇನನ್ನು ಹೋಗಲಾಡಿಸಲು ಕ್ರಿಮಿನಾಶಕ ಬಳಸಬಹುದಾದರೂ ಅದರಿಂದ ಕೋಳಿಗಳಿಗೆ ತೊಂದರೆಯುಂಟಾಗುತ್ತದೆ; ಆದ್ದರಿಂದ ಬೇರೆ ಉಪಾಯಗಳನ್ನು ಗ್ರಾಮೀಣರು ಕಂಡುಕೊಂಡಿದ್ದಾರೆ;
- ಒಣ ಹುಲ್ಲಿನ ದೊಂದಿ ಮಾಡಿಕೊಂಡು ಬೆಂಕಿ ಹಚ್ಚಿ ಅದರಿಂದ ಕೋಳಿ ಗೂಡಿನ ಮೂಲೆ ಮೂಲೆಗಳನ್ನು ಬಿಡದೆ ಒಳಭಾಗದಲ್ಲಿ ಸೀಯುತ್ತಾರೆ; ಮಾಂಸ ತೊಳೆದ ನೀರನ್ನು ಕೋಳಿ ಗೂಡಿಗೆ ಚುಮುಕಿಸುತ್ತಾರೆ; ಕರಮೀನು ತೊಳೆದ ನೀರನ್ನು ಗೂಡಿಗೆ ಸಿಂಪಡಿಸುವುದೂ ಉಂಟು; ಈ ರೀತಿ ವಾರಗಟ್ಟಲೆ ಮಾಡಿದರೆ ಗೂಡಿನಲ್ಲಿರುವ ಕೋಳಿ ಹೇನುಗಳು ನಾಶವಾಗುತ್ತವೆ; ಇದೇ ಸಂದರ್ಭದಲ್ಲಿ ದಿನನಿತ್ಯ ಹೇನು ತುಂಬಿರುವ ಕೋಳಿಗಳನ್ನು ಬೆಳಿಗ್ಗೆ ತಣ್ಣೀರಿನ ತೊಟ್ಟಿಯಲ್ಲಿ ಅದ್ದಿ ಬಿಡಬೇಕು; ದಿನ ನಿತ್ಯ ಹೀಗೆ ಮಾಡಿದರೆ ಹೇನಿನ ಮೊಟ್ಟೆ, ಮರಿಗಳು ನಾಶವಾಗಿ ಕ್ರಮೇಣ ಹೇನುಗಳು ಸಾಯುತ್ತವೆ;
- ಕೋಳಿ ಬಿಟ್ಟ ಮೇಲೆ ಗೂಡಿಗೆ ಬಿಸಿ ಬೂದಿಯನ್ನು ಎರಚುವುದರಿಂದ ಕೂಡ ಕೋಳಿ ಹೇನನ್ನು ನಿಯಂತ್ರಿಸಬಹುದಾಗಿದೆ;
- —*ಅರೆಗತ್ತಿನ ಕೋಳಿ* : ಸಾಮಾನ್ಯವಾಗಿ ನಾಟಿಕೋಳಿಗಳಲ್ಲಿ ಮೈತುಂಬ ತುಪ್ಪಳವಿರುತ್ತದೆ; ಕೆಲವು ನಾಟಿಕೋಳಿಗಳಲ್ಲಿ ಕತ್ತಿನ ಭಾಗ ತುಪ್ಪಳವಿಲ್ಲದೆ ಚರ್ಮವೆ ಎದ್ದು ಕಾಣುತ್ತದೆ; ಇಂತಹ ಕೋಳಿಗಳನ್ನು ಗ್ರಾಮೀಣರು ಅರೆಗತ್ತಿನ ಕೋಳಿ ಎಂದು ಕರೆಯುತ್ತಾರೆ; ಇದರ ಸಂತತಿ ಹೀಗೇ ಮುಂದುವರಿಯುತ್ತದೆ;
- —*ಕನ್ನಗೋಳಿ* : ಪಾವುಗೋಳಿ ಹಂತ ದಾಟಿ ಮೊದಲ ಬಾರಿಗೆ ಮೊಟ್ಟೆ ಇಡುವ ಕೋಳಿಗಳಿಗೆ ಕನ್ನಗೋಳಿ ಎನ್ನುತ್ತಾರೆ; ಈ ಕೋಳಿಗಳು ಇಟ್ಟ ಮೊಟ್ಟೆಗಳನ್ನು ಕನ್ನಗೋಳಿ ಮೊಟ್ಟೆ ಎಂದು ಕರೆಯುತ್ತಾರೆ;

- ಕನ್ನಗೋಳಿ ಮೊಟ್ಟೆ ಗಾತ್ರದಲ್ಲಿ ಸಣ್ಣದಾಗಿರುತ್ತದೆ; ಇವುಗಳನ್ನು ಮರಿ ಮಾಡಿಸಲು ಕೂರಿಸುವುದಿಲ್ಲ; ಎರಡನೇ ಸೂಲಿನ ಮೊಟ್ಟೆಗಳನ್ನು ಕೂರಿಸುತ್ತಾರೆ;
- ಕನ್ನಗೋಳಿ ಮೊಟ್ಟೆಗಳನ್ನು ಇಟ್ಟ ಮೇಲೆ ತಾನು ಕಾವು ಕೂರಲು ಮೂಲೆಯಲ್ಲಿ ಕುಳಿತ ಕನ್ನಗೋಳಿಯನ್ನು ನೀರಿನಲ್ಲಿ ಅದ್ದಿ ಹೊರಕ್ಕೆ ಬಿಡುತ್ತಾರೆ; ಒಂದೆರಡು ದಿನ ಹೀಗೆ ಮಾಡುವುದರಿಂದ ಕನ್ನಗೋಳಿ ಕಾವು ಕೂರದೆ ಹೊರಗೆ ಮೇಯ ತೊಡಗಿ ಬೇಗದಲ್ಲಿ ಮತ್ತೆ ಮೊಟ್ಟೆ ಇಡಲು ಸಿದ್ಧವಾಗುತ್ತದೆ;
- ***—ನೀರುಗೋಳಿ*** : ನೀರಿನಲ್ಲಿರುವ+ಕೋಳಿ;
- ಕೆರೆ, ಕಟ್ಟೆಗಳ ನೀರಿನಲ್ಲಿ ತೇಲಾಡುತ್ತಾ ಮೀನುಗಳನ್ನು ಹೆಕ್ಕಿ ತಿನ್ನುವ ಒಂದು ರೀತಿಯ ಕಪ್ಪುಕೋಳಿ; ಇದು ನಾಟಿಕೋಳಿಯಂತೆಯೇ ಕಾಣುವುದರ ಜೊತೆಗೆ ನೀರಿನಲ್ಲಿರುವುದರಿಂದ 'ನೀರುಗೋಳಿ' ಎಂಬ ಹೆಸರು ಬಂದಿದೆ;
- ***—ಕೋಳ್ಮುರುಕಿ*** : ಕೋಳಿ+ಮುರಕಿ; ಕೋಳಿ ಕದಿಯುವವಳು(ಶಿ.ಜಿ);
- ಕೋಳಿಯನ್ನು ಕದ್ದು ಹಿಡಿದುಕೊಂಡು ಅದು ಕೂಗಿಕೊಳ್ಳದಂತೆ ಅದರ ಕತ್ತು ಮುರಿದುಕೊಂದು, ಮನೆಗೆ ತೆಗೆದುಕೊಂಡು ಹೋಗಿ ಕೋಳಿ ಮಾಂಸದ ಅಡುಗೆ ಮಾಡಿಕೊಳ್ಳುವವಳು.

ಕೋಳಿ ಅಂಕ kōḷi anka :

- ಕೋಳಿ ಕಾಳಗ; ಕೋಳಿ ಕಟ್ಟ(ಕರಾ); ಕೋಳಿಗಳ ಕಾಲಿಗೆ ಚೂರಿಯನ್ನು ಕಟ್ಟಿ ಜಗಳಕ್ಕೆ ಬಿಡುವುದು (ಕ.ಜಾ.ಕೋ); Cock fight, cocks fighting with blades in the legs;
- [ಕೋಳಿ(<ಕೋಟಿ)+ಅಂಕ]; ಕೋಳಿ ಜೂಜು(ಕ.ನಿ); Cocks fight gambling;
- ಹುಂಜಗಳ ಕದಾಟದ ಸ್ಪರ್ಧೆ;
- ಮಂಗಳೂರು ಉಡುಪಿ ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿ ಪ್ರಚಲಿತವಾಗಿರುವ ಮನರಂಜನೆಯ ಜನಪದ ಆಟಗಳಲ್ಲಿ ಒಂದು; ಇದು ಹಬ್ಬ, ಜಾತ್ರೆ, ಭೂತಾರಾಧನೆಗಳಲ್ಲಿ ಒಂದು ಆರಾಧನೆಯ ಆಚರಣೆಯೂ ಆಗಿದೆ; ಈ ಆಟವು ಮೂರುದಿನ ಇಲ್ಲವೆ ಐದು ದಿನಗಳವರೆಗೆ ನಡೆಯುವುದು ವಾಡಿಕೆ; ಪಂದ್ಯವು ಮಧ್ಯಾಹ್ನದಿಂದ ಆರಂಭಗೊಂಡು ಮಧ್ಯರಾತ್ರಿಯವರೆಗೆ ನಡೆಯುವುದುಂಟು; A popular entertaining sport and folk game in the areas of Mangaluru, Udupi and Uttarkannada district;
- ಭೂತರಾಧನೆಯಲ್ಲಿ ನಡೆಯುವ ಕೋಳಿ ಅಂಕದಲ್ಲಿ ಒಂದು ವಿಶೇಷ ಆಚರಣೆ ಇದೆ; ಮೂರು ಮೂರು ಗೂಟಗಳನ್ನು ಸಾಲಾಗಿ ಎದುರು ಬದುರಾಗಿ ನೆಟ್ಟು ಅದಕ್ಕೆ ಸ್ಪರ್ಧೆಯ ಹುಂಜಗಳನ್ನು ಕಟ್ಟುತ್ತಾರೆ; ಭೂತದ ಗುಡಿಯಲ್ಲಿ ಹರಿತವಾದ ಚೂರಿಯನ್ನು ಇಟ್ಟು, ಭೂತಕ್ಕೆ ನಮಸ್ಕರಿಸಿ ಈ ಆಚರಣೆ ತೊಂದರೆಗಳಲ್ಲದೆ ನೆರವೇರಲೆಂದು ಬೇಡಿಕೊಳ್ಳುತ್ತಾರೆ; ನಂತರ ಹರಿತವಾದ ಚಿಕ್ಕ ಚೂರಿಗಳನ್ನು ಹುಂಜಗಳ ಕಾಲಿಗೆ ಕಟ್ಟುತ್ತಾರೆ;
- ಕುಮಟಾ ತಾಲ್ಲೂಕಿನ ಹಾಲಕ್ಕಿ ಹಾಗೂ ನಾಮಧಾರಿ ಸಮುದಾಯಗಳು ಕೋಳಿ ಅಂಕ ಎಂದು ಕರೆಯುವ ಕೋಳಿ ಹುಂಜಗಳ ಸ್ಪರ್ಧೆಯನ್ನು ಬೇಸಿಗೆಯ ದಿನಗಳಲ್ಲಿ ಮನರಂಜನೆಗಾಗಿ ನಡೆಸುತ್ತಾರೆ;
- ಕೋಳಿ ಅಂಕದಲ್ಲಿ ಭಾಗವಹಿಸುವ ಹುಂಜಗಳ ಆಯ್ಕೆಯ ಪ್ರಕ್ರಿಯೆ ಬಹಳ ಮುಖ್ಯವಾದುದು; ಆಯ್ಕೆಯಲ್ಲಿ ಹುಂಜಗಳ ಬಣ್ಣ, ಗರಿಗಳ ವಿನ್ಯಾಸ, ಅವುಗಳ ಆಕಾರಗಳನ್ನು ಪರಿಗಣಿಸಲಾಗುತ್ತದೆ;
- ಕೋಳಿ ಅಂಕ ನಡೆಸಲು ಸಾಮಾನ್ಯವಾಗಿ ವಿಶಾಲವಾದ ಬಯಲು ಇಲ್ಲವೆ ಬೆಳೆ ಕೊಯ್ಲು ಮಾಡಿದ ಗದ್ದೆಯನ್ನು ಆಯ್ದುಕೊಳ್ಳಲಾಗುತ್ತದೆ; ಕೆಲವೊಮ್ಮೆ ವಿಶೇಷ ಸ್ಥಳಗಳನ್ನು ಅಲ್ಲಲ್ಲಿ ಕಾಯ್ದಿರಿಸಲಾಗಿದೆ; ಹಿಂದೆ ಕಾಳಗ ನಡೆದು ರಕ್ತಸಿಕ್ತವಾದ ಸ್ಥಳಗಳು ಕೋಳಿಯಂಕದ ಪ್ರದೇಶಗಳಾಗಿ ನಿರ್ಧರಿಸಲ್ಪಟ್ಟು ಬಳಕೆಯಲ್ಲಿವೆಯೆಂದು ಕೆಲವರು ಅಭಿಪ್ರಾಯ ಪಡುತ್ತಾರೆ; ಅಂತಹ ಸ್ಥಳಗಳಲ್ಲಿ ಪ್ರತಿ ವರ್ಷ ರಕ್ತ ಬಲಿಯಾಗದಿದ್ದರೆ ಅಂಕದೇವತೆ ಅಸಂತೃಪ್ತಿಗೊಂಡು ಜನ, ಜಾನುವಾರುಗಳಿಗೆ ತೊಂದರೆ(ಪೀಡೆ) ಕೊಡುವುದಾಗಿ ನಂಬಿಕೆಯಿದೆ; ಆದ್ದರಿಂದ ಹಿಂದೆ ಕೋಳಿಯಂಕವಾಡಿದ ಮನೆತನದವರು ವರ್ಷಕ್ಕೆ ಒಮ್ಮೆಯಾದರೂ ಕೋಳಿ ಅಂಕವಾಡಿ, ಕೋಳಿ ರಕ್ತದ ಬಲಿಯರ್ಪಿಸಿ ಅಂಕದೇವತೆಯನ್ನು ತೃಪ್ತಿ ಪಡಿಸುವ ಸಂಪ್ರದಾಯವನ್ನು ಉಳಿಸಿಕೊಂಡು ಬಂದಿದ್ದಾರೆ;
- ಕೋಳಿ ಅಂಕದ ಹುಂಜಗಳ ಕಾಲಿಗೆ ಹರಿತವಾದ ಚಿಕ್ಕ ಕತ್ತಿಯನ್ನು ಕಟ್ಟುತ್ತಾರೆ; ಈ ಕತ್ತಿಯು ಹುಂಜದ

ಗಾತ್ರಕ್ಕೆ ಅನುಸಾರವಾಗಿ ವ್ಯತ್ಯಾಸ ಹೊಂದಿರುತ್ತದೆ; ಜೊತೆಗೆ ಕತ್ತಿಗಳ ಆಕಾರವೂ ಭಿನ್ನವಾಗಿರುತ್ತವೆ; ಈ ಕತ್ತಿಗಳಲ್ಲಿ ಮುಖ್ಯವಾಗಿ ಬಡೆಕ್ಕಾಯಿ ಬಾಳ್(ಉತ್ತರದ ಬಾಳು) ಮತ್ತು ತೆಕ್ಕಾಯಿ ಬಾಳ್(ದಕ್ಷಿಣದ ಬಾಳು) ಎಂದು ಎರಡು ವಿಧಗಳಿವೆ; ಈ ಬಾಳುಗಳನ್ನು 'ಬಾಳಸೂಡಿ'(ಬಾಳಗಳನ್ನಿಡುವ ಚೀಲ)ಯಲ್ಲಿ ಜೋಪಾನವಾಗಿಟ್ಟಿರುತ್ತಾರೆ; ಹುಂಜವನ್ನು ಅಂಕಕ್ಕೆ ಸಿದ್ಧಪಡಿಸುವಾಗ ಅದರ ಬಲಗಾಲಿನ ಹೆಬ್ಬೆರಳಿನ ಬಳಿ ಹಿಮ್ಮುಖವಾಗಿ ಬಾಳನ್ನು ಕಟ್ಟುವುದು ಸಾಮಾನ್ಯ;

- ಕೋಳಿ ಪಂದ್ಯದಲ್ಲಿ ಸಮ ಜೋಡಿಯಾದ ಹುಂಜಗಳನ್ನೇ ಆಯ್ಕೆ ಮಾಡಿ ಸ್ಪರ್ಧೆಗಿಳಿಸುತ್ತಾರೆ; ಸ್ಪರ್ಧಿಸುವ ಹುಂಜಗಳ ಬಲಗಾಲಿಗೆ ಮೇಲೆ ತಿಳಿಸಿದಂತೆ ಕಿರುಗತ್ತಿಯನ್ನು ಕಟ್ಟುತ್ತಾರೆ; ಹುರಿದುಂಬಿಸಿ ಕಾಳಗಕ್ಕೆ ಬಿಡುವ ಹುಂಜಗಳು ಬಹಳ ಹುಮ್ಮಸ್ಸಿನಿಂದ ಕಾದಾಡುತ್ತವೆ; ಒಂದು ಕೋಳಿ ತನ್ನ ಬಲಗಾಲಿಗೆ ಹಿಮ್ಮುಖವಾಗಿ ಕಟ್ಟಿದ ಬಾಳಿನಿಂದ ಎದುರಾಳಿ ಕೋಳಿಯನ್ನು ಇರಿಯುತ್ತದೆ; ಎದುರಾಳಿಯೂ ಕೂಡ ತನಗೆ ಇರಿದ ಕೋಳಿಗೆ ತಾನೂ ಇರಿದು ಗಾಯಗೊಳಿಸುತ್ತದೆ; ಗಾಯಗೊಂಡ ಕೋಳಿಗಳಿಗೆ ಗಾಯಕ್ಕೆ ಹೊಲಿಗೆ ಹಾಕಿ ಶುಶ್ರೂಷೆ ಮಾಡಿ ಮತ್ತೆ ಕಾಳಗಕ್ಕೆ ತೊಡಗಿಸುತ್ತಾರೆ; ಸಾಧಾರಣವಾದ ಗಾಯಗಳ ನೋವಿನಿಂದ ವಿಚಲಿತವಾಗದ ಹುಂಜಗಳು ವೀರಾವೇಶದಿಂದ ಹೋರಾಡುತ್ತವೆ; A cockfight is a blood sport between two strong cocks or gamecocks held in a ring called a cockpit; both the game cocks are attached a small knife to their legs;
- ಕೋಳಿ ಅಂಕದಲ್ಲಿ 'ಸಮ' ಮತ್ತು 'ಓಡಿ' ಎಂಬ ಎರಡು ವಿಧಗಳಿವೆ; ಕಾಳಗದ ಹುಂಜ ಕಾದಾಡಿ ಸತ್ತರೆ ಅಥವಾ ಸೋತು ಓಡಿಹೋದರೆ ಅದು ಪಂದ್ಯದಲ್ಲಿ ಸೋತಂತೆ ಲೆಕ್ಕ; ಹೀಗೆ ಸೋತ ಹುಂಜ ಗೆದ್ದ ಹುಂಜದ ಒಡೆಯನ ಪಾಲಾಗುತ್ತದೆ; ಇದಕ್ಕೆ 'ಸಮ' ಎಂದು ಕರೆಯುತ್ತಾರೆ; ಓಡಿ ಎಂಬ ವಿಧದಲ್ಲಿ ಸತ್ತ ಹುಂಜ ಮಾತ್ರ ಗೆದ್ದ ಹುಂಜದ ಯಜಮಾನನಿಗೆ ದೊರೆಯುತ್ತದೆಯೇ ಹೊರತು, ಓಡಿ ಹೋದ ಹುಂಜ ದೊರೆಯುವುದಿಲ್ಲ; ಸತ್ತ ಅಥವಾ ಓಡಿಹೋದ ಹುಂಜವನ್ನು 'ಒಟ್ಟೆ' ಎಂದೂ, ಗೆದ್ದ ಹುಂಜವನ್ನು 'ಬಂಟಿ' ಎಂದೂ ಕರೆಯುವರು; ಕೋಳಿ ಕಾಳಗವನ್ನು ಸ್ಪರ್ಧಾ ಮನೋಭಾವದಿಂದ ಪಾರಂಪರಿಕವಾಗಿ ನಡೆಸುವುದರಿಂದ ಗೆದ್ದ ಹುಂಜಗಳಿಗೆ ಬಹುಮಾನ ನೀಡುವುದುಂಟು; ಕೋಳಿ ಅಂಕದಲ್ಲಿ ಭಾಗವಹಿಸುವ ಹುಂಜಗಳ ಲಕ್ಷಣಗಳನ್ನು ತಿಳಿಸುವ ಶಾಸ್ತ್ರ/ಪಂಚಾಗವೇ ಇದೆ; ಇದಕ್ಕೆ 'ಕುಕ್ಕುಟ ಪಂಚಾಂಗ'ವೆಂದು ಕರೆಯುತ್ತಾರೆ; ಇದು ಅಂಕದ ಸ್ಪರ್ಧೆಯಲ್ಲಿ ತೊಡಗುವವರಿಗೆ ಕೈಪಿಡಿಯಂತೆ ಉಪಯುಕ್ತ ಮಾಹಿತಿ ನೀಡುತ್ತದೆ;
- ಕೋಳಿ ಅಂಕ ಯಾವುದೇ ಒಂದು ಸಮುದಾಯಕ್ಕೆ ಸೀಮಿತವಾದುದಲ್ಲ; ಹಾಲಕ್ಕಿಯವರಂತೆ ಇನ್ನಿತರ ಸಮುದಾಯಗಳಿಗೆ ಸೇರಿದವರೂ ಭಾಗವಹಿಸುತ್ತಾರೆ; ಕೋಳಿ ಅಂಕಕ್ಕೆ ನಿಗದಿ ಪಡಿಸಿದ ಹಬ್ಬದಲ್ಲಿ ವಿಶೇಷ ಆಸಕ್ತಿ ಹೊಂದಿದ ಹಾಲಕ್ಕಿಯವರು ಕೋಳಿ ಅಂಕಕ್ಕಾಗಿಯೇ ತರಬೇತಿ ನೀಡಿರುವ ಹುಂಜದೊಡನೆ ಬಂದು ಗುಂಪುಗೂಡುತ್ತಾರೆ; ಅವರಲ್ಲಿ ಇಬ್ಬಿಬ್ಬರು ಒಂದೊಂದು ಜೋಡಿಯಾಗಿ ನಿಂತು, ತಮ್ಮ ಹುಂಜಗಳ ಕಾಲಿಗೆ ಹರಿತವಾದ ಕತ್ತಿಯನ್ನು ಕಟ್ಟಿ, ಕೋಳಿಗಳನ್ನು ಹುರಿದುಂಬಿಸಿ ಅಂಕದಲ್ಲಿ ತೊಡಗಿಸುತ್ತಾರೆ; ಅಂಕದ ಕಳದ ಸುತ್ತ ನಿಂತ ಜನರು ಕೋಳಿ ಕಾಳಗವನ್ನು ನೋಡಿ ಆನಂದಿಸುತ್ತಾ, ಕಾದಾಡುವ ಹುಂಜಗಳ ಮೇಲೆ ಬಾಜಿಕಟ್ಟುತ್ತಾರೆ; ಎದುರಾಳಿ ಹುಂಜದ ಕಾಲಿಗೆ ಕಟ್ಟಿದ ಕತ್ತಿಯಿಂದ ಸೀಳಿದ ಗಾಯಕ್ಕೆ ಹೊಲಿಗೆ ಹಾಕಿ, ಗಾಯಕ್ಕೆ ಮುಲಾಮು ಹಚ್ಚಿ ಉಪಚರಿಸಿ ಮತ್ತೆ ಕಾಳಗಕ್ಕೆ ಅಣಿಮಾಡುವಷ್ಟು ಸಮಯವನ್ನು ನೀಡಲಾಗುತ್ತದೆ; ಕಾದಾಡುತ್ತ ಹುಂಜ ಸತ್ತು ಹೋದರೆ ಅಥವಾ ಓಡಿಹೋದರೆ ಆ ಹುಂಜ ಸೋತಿತೆಂದು ನಿರ್ಧರಿಸಿ, ಗೆದ್ದ ಹುಂಜದ ಮೇಲೆ ಬಾಜಿ ಕಟ್ಟಿದವರಿಗೆ ಸೋತ ಹುಂಜದ ಮೇಲೆ ಬಾಜಿ ಕಟ್ಟಿದ್ದವರು ಕಟ್ಟಿದ ಹಣವನ್ನು ನೀಡುತ್ತಾರೆ; ಆಚರಣೆ, ಸ್ಪರ್ಧೆ, ಮನರಂಜನಾ ಕ್ರೀಡೆಯಾಗಿ ಬಳಕೆಯಲ್ಲಿದ್ದ ಕೋಳಿ ಅಂಕ ಇತ್ತೀಚೆಗೆ ಜೂಜು ಆಗಿ ಪರಿವರ್ತನೆಗೊಳ್ಳ ತೊಡಗಿರುವುದು ಕಂಡುಬರುತ್ತದೆ;
- ಕೆಲವೊಮ್ಮೆ ಕೋಳಿ ಅಂಕದ ಕಾರಣವಾಗಿ ಜನರು ವಾದವಿವಾದಕ್ಕೆ ಇಳಿದು, ಕ್ರಮೇಣ ಮಾರಾಮಾರಿ ಜಗಳವಾಗುವುದೂ ಉಂಟು; ಆದ್ದರಿಂದಲೇ ಸರ್ಕಾರ

ಕೋಳಿಯ ಅಂಕವನ್ನು ನಿಷೇಧಿಸಿದೆ; ಹೀಗೆ ನಿಷೇಧ ಇದ್ದರೂ ಹಾಲಕ್ಕಿಯವರು ಅಧಿಕಾರಿಗಳ ಕಣ್ಣು ತಪ್ಪಿಸಿ ಕೋಳಿ ಅಂಕ ಆಡುವುದುಂಟು;

ಕೋಳಿ ಕುಟುಮ koḷi kuṭuma :

- ಇದೊಂದು ಬಳ್ಳಿ, ಗಿಡ; ಔಷಧಿ ಗಿಡ; A kind of medicinal plant or herb;
- ಸಂವಾದಿ ರೂಪಗಳಾಗಿ ನಾಂಗುಲಿಕ, ಶಿವಶಕ್ತಿ, ತೊಟಿಲ್, ಶಿವರಕ್ತಿ ಬಳ್ಳಿ, ಕರಡಿ ಕಣ್ಣಿನ ಗಡ್ಡೆ ಎಂದೆಲ್ಲ ಕಾಣಿಸಿಕೊಂಡಿವೆ;
- ಕೋಲು ಕುಟುಕನ ಗಿಡ, ಕೋಳಿ(ಟಿ)ಕುಟುಂಬ ಎಂತಲೂ ರೂಪಗಳಿವೆ;
- ತಮಿಳಿನಲ್ಲಿ ಕಾಂದಲ್, ಅಕ್ಕಿ ನಿಚ್ಚಲಷ್; ತೆಲುಗಿನಲ್ಲಿ ಅಗ್ನಿಶಿಖ, ಲಾಂಗಲಿ ರೂಪಗಳಿವೆ; ಮಲೆಯಾಳಂನಲ್ಲಿ ಮೇತ್ತೋನ್ನಿ, ಕಾಂದಳ್‌ಗಳಿವೆ; ತುಳುವಿನಲ್ಲಿ ಬಲಿಪಮೂ ರೂಪವಿದೆ; ಈ ಎಲ್ಲ ರೂಪಗಳೂ ಕನ್ನಡ ಪದಗಳೊಡನೆ ಅಲ್ಪ ಸಾದೃಶ್ಯವನ್ನು ಹೊಂದಿವೆ; ವ್ಯತ್ಯಾಸಗಳೇ ಬಹಳ;
- ಆಲಂಕಾರಿಕ ಹೂ ಬಿಡುವ ಇದರ ಗಡ್ಡೆಯನ್ನು ಕುರುಗಳಿಗೆ ಲೇಪನಕ್ಕಾಗಿ ಮಾತ್ರ ಬಳಕೆ; ತಿನ್ನಲು ಸಲ್ಲ;
- ಸಸ್ಯಶಾಸ್ತ್ರೀಯ ಪಾರಿಭಾಷಿಕ ಪದ: 'Gloriosa superba'. Botanical name is 'Gloriosa Superba'.

(F.H.I.P)

ಕೋಳಿ ಕೆದಕಿದಂತೆ koḷi kedakidante :

- ಪ್ರಾಣಿಜಾನಪದಕ್ಕೆ ಸೇರಿದ ನುಡಿಗಟ್ಟು; ಕೋಳಿ ಸಾಕುವವರ ಮಧ್ಯೆ ಇದರ ಪ್ರಾಚುರ್ಯ ಹೆಚ್ಚು; ಹಳ್ಳಿಗಳಲ್ಲಿ ಅಥವಾ ಹಳ್ಳಿಯಿಂದ ವಲಸೆ ಬಂದ ನಗರವಾಸಿಗಳಲ್ಲಿ ಇದರ ಪ್ರಯೋಗವಿದೆ; ಮಾಂಸಾಹಾರಿಗಳಲ್ಲದವರಲ್ಲಿ ಇದರ ಪ್ರಯೋಗವಿಲ್ಲವೆಂದೇ ಹೇಳಬೇಕು; Related to animal folklore;
- ಕೋಳಿಯ ಸ್ವಭಾವಕ್ಕೆ ಹಿಡಿದ ಕನ್ನಡಿ ಈ ನುಡಿಗಟ್ಟು; ಕೋಳಿ ತನ್ನ ಮರಿಗಳ ಜೊತೆಯಲ್ಲಿ ಆಹಾರಕ್ಕಾಗಿ ತಿಪ್ಪೆಯಲ್ಲಿ, ಕಸಕಡ್ಡಿ ಶೇಖರಣೆಯ ಜಾಗದಲ್ಲಿ, ಸಡಿಲ ಮಣ್ಣಿನ ಜಾಗದಲ್ಲಿ ಹುಳುಹುಪ್ಪಟೆ ಹಿಡಿಯಲು ಕೆದಕುವುದುಂಟು; ಕೋಳಿಯ ಕಾಲಿನ ಪಂಜರ ಈ ಕೆದುಕುವುದಕ್ಕೆ ಅನುಕೂಲ; 'ಕೋಳಿ ಕಾಲಿಗೆ ಗೆಜ್ಜೆ ಕಟ್ಟಿದರೆ ತಿಪ್ಪೆ ಕೆರೆಯದೆ ಇದ್ದೀತೆ'(ಕಿ.ಕೋ.ಗಾ.) ಎಂಬ ಗಾದೆ ಅದರ ಸ್ವಭಾವವನ್ನು ಚೆನ್ನಾಗಿ ಹಿಡಿದಿಟ್ಟಿದೆ; It mirrors the nature of hens; the hens along with chicks scatter or dig up, stir up or loosen the earth to get their fodder;
- ಸಂವಾದಿ ಪದಗಳಾಗಿ ತಮಿಳು ಮತ್ತು ಮಲೆಯಾಳಂಗಳಲ್ಲಿ 'ಕೋಟಿ', ತೆಲುಗಿನಲ್ಲಿ 'ಕೋರಿ', ತುಳುವಿನಲ್ಲಿ 'ಕೋರಿ/ಕೋಲಿ' ರೂಪಗಳಿವೆ; 'ಳ', 'ಲ' ಮತ್ತು 'ರ' ವಿನಿಮಯಕ್ಕೆ ಒಳಪಡುತ್ತದೆ; 'ಕೆದಕು' ಪದದ ಸಂವಾದಿಯಾಗಿ ತೆಲುಗಿನಲ್ಲಿ 'ಕೆಲುಕು' ರೂಪವಿದೆ; ತುಳುವಿನಲ್ಲಿ ಕೆದಂಕ್/ಕೆದಕು ರೂಪಗಳಿವೆ; ತೆಲುಗಿನ ಪದಮಧ್ಯದ 'ಲ' ಕಾರ 'ದ'ಕಾರಕ್ಕೆ ಹೇಗೆ ಬಂತು ತಿಳಿಯದು;
- 'ಕೆದಕು' ಪದಕ್ಕೆ ಕೆರೆ, ಅಗೆ, ಸಡಿಲ ಮಾಡು, ಬೆದಕು ಮುಂತಾದ ಅರ್ಥಗಳಿವೆ; ಮುಖ್ಯವಾಗಿ ಕೋಳಿ ತನ್ನ ಕಾಲಿನ ಬೆರಳುಗಳಿಂದ ಕಸಗಡ್ಡಿ/ಮಣ್ಣನ್ನು ಸಡಿಲಗೊಳಿಸಿ, ಬೇರ್ಪಡಿಸಿ ನೋಡುವ ಪ್ರಕ್ರಿಯೆ ಇದು;
- ಕೋಳಿಯ ಸ್ವಭಾವವನ್ನು ಚಿತ್ರಿಸುವ ಈ ನುಡಿಗಟ್ಟು ಅಲ್ಲಿಗೆ ನಿಲ್ಲದೆ, ಮಾನವ ಸ್ವಭಾವವನ್ನು ಹೇಳಲು ಹೊರಟಿದೆ; ಆದ ಕಾರಣ ಕೋಳಿಯ ಕ್ರಿಯೆಗಾಗಿ ರೂಪುಗೊಂಡುದಲ್ಲ ಈ ನುಡಿಗಟ್ಟು, ಮನುಷ್ಯ ಗುಣವನ್ನು ಹೇಳಲು ಬಂದದ್ದು; ಮನುಷ್ಯ ತನ್ನ ಕೆಲಸವನ್ನು ಅಚ್ಚುಕಟ್ಟಾಗಿ ಮಾಡದೆ, ಅಲ್ಲೊಂದಿಷ್ಟು ಇಲ್ಲೊಂದಿಷ್ಟು ಕಾಟಾಚಾರಕ್ಕೆ ಮಾಡಿದಾಗ ಹೀಗೆ ಹೇಳುವುದಿದೆ; ಅಂದರೆ ಮನುಷ್ಯನ ಸೋಮಾರಿತನಕ್ಕೆ/ಉದಾಸೀನಪ್ರವೃತ್ತಿಗೆ/ಮೈಗಳ್ಳತನಕ್ಕೆ ಈ ನುಡಿಗಟ್ಟು ಬಳಕೆ; ಅಂತಿಮವಾಗಿ 'ಕೋಳಿ ಕೆದಕಿದಂತೆ' ಮಾಡುವ ಮನುಷ್ಯನ ಕೆಲಸಕ್ಕೆ ಈ ನುಡಿಗಟ್ಟು ಅನ್ವಯ; This is an idiom means an act for name sake in form of laziness, for indifferent work, for work grudgingly done, perfunctory work;
- ಈ ನುಡಿಗಟ್ಟು ಮೂಲಾರ್ಥವನ್ನು ನಿರಾಕರಿಸಿಲ್ಲ; ವಿಸ್ತರಿಸಿದೆ; ಧ್ವನಿಪೂರ್ಣಗೊಳಿಸಿದೆ; ಏಕಾಗ್ರತೆಗೆ, ಶ್ರದ್ಧೆಗೆ, 'working culture' ಗೆ ಈ ನುಡಿಗಟ್ಟು

ಒಂದು ಸಂದೇಶವಾಗಿದೆ. This idiom indicates `working culture'.

ಕೋಳಿಕೆರೆ kōḷikere :

- ತರೀಕೆರೆ ತಾಲ್ಲೋಕಿನ ಮುದಿಗೆರೆ ಎಂಬ ಪ್ರದೇಶದಲ್ಲಿ ದೊರೆತ ಕ್ರಿ.ಶ.೧೨೧೦ರ ಹೊಯ್ಸಳ ವೀರಬಲ್ಲಾಳನ ೭೯ನೇ ಶಾಸನದಲ್ಲಿ ಈ ಸ್ಥಳನಾಮದ ಉಲ್ಲೇಖವಿದೆ; Referred in 79th inscription of Hoysala VeeraBallala at Mudigere of Tarikere taluk in 1210A.D;
- 'ಕೆರೆ' ಎಂಬುದೇನೊ 'ಜಲಾಶಯ' ಎಂಬ ಸುಪ್ರಸಿದ್ಧ ಅರ್ಥವನ್ನೆ ಹೊಂದಿದೆ; `Kere' means reservoir;
- ಆದರೆ 'ಕೋಳಿ' ಎಂಬುದಕ್ಕಿರುವ ಹಲವಾರು ಅರ್ಥಗಳಲ್ಲಿ ಹೊಂದಾಣಿಕೆ ಸಾಧಿಸುವುದು ಕಷ್ಟ;
- 'ಕೋಳಿ' ಪದಕ್ಕೆ ಬೆಸ್ತರಲ್ಲಿನ ಒಂದು ಪ್ರಭೇದ ಎಂಬ ಉಲ್ಲೇಖವಿದೆ; ಇದರ ಅನ್ವಯ 'ಬೆಸ್ತರಕೆರೆ' ಎಂದು ಹೇಳಬೇಕಾಗುತ್ತದೆ;
- 'ಕೋಳಿ' ಎನ್ನುವುದಕ್ಕೆ 'ಕೋಡು' ಎನ್ನುವ ಅರ್ಥವೂ ಇದೆ; ಡ>ಳ ಆಗಿರುವುದು ಸ್ಪಷ್ಟ; ಇದರ ನೆರವಿನಿಂದ ಬೆಟ್ಟಗುಡ್ಡ ಪ್ರದೇಶದಲ್ಲಿನ ಕೆರೆಯ ಸಮೀಪದಲ್ಲಿರುವ ಊರು ಎಂಬ ನಿಷ್ಪತ್ತಿ ಹೇಳಬೇಕಾಗುತ್ತದೆ; But `Koli' word has several meaning; `Koli' means `Kodu'; it tells about a village on hilly region;
- 'ಕೋಳಿ' ಎನ್ನುವುದಕ್ಕೆ 'ಕೋಡಿ' ಎಂಬ ಇನ್ನೊಂದು ಅರ್ಥವೂ ಇದೆ; ಡ>ಳ ಆಗಿದೆ; ಹೆಚ್ಚಿನ ನೀರು ಹೊರ ಹರಿಯುವುದಕ್ಕೆ ಮಾಡಿರುವ ಜಾಗ; 'ಕೆರೆ'ಗೂ 'ಕೋಡಿ'ಗೂ ಸಾವಯವ ಸಂಬಂಧವಿರುವುದರಿಂದ ಊರಿನ ಹೆಸರಿಗೆ ಈ ನಿಷ್ಪತ್ತಿಯೇ ಸರಿಯಿರಬಹುದು. Koli also means `Kodi' outlet of an excessive water from tank or reservoir.
  (E.C- ೧೨; ಚಿಕ್ಕ.ಜಿ.)

ಕೋಳು kōḷu :

- ಹಲವು ಮನೆಗಳು ಸೇರಿದಂತಿರುವ ಬೀದಿ; A street looks like joining of several houses;
- ಎಲ್ಲ ಮನೆಗಳನ್ನು ಸೇರಿಸಿದಂತಿರುವ ಒಂದೇ ಕೋಳು, ಒಂದೇ ಜಗಲಿ; *ಪ್ರ: 'ಹಾಳಿ ಕೂಡಿದ ಗದ್ದೆ, ಕೋಳು ಕೂಡಿದ ಮನೆ'*; (ಹಾಳಿ=ದಿಬ್ಬ, ಅಂಚು, ಹೊಲಗದ್ದೆಗಳ ಭೂಮಿಯ ಸೀಳು) (ಹವ್ಯಹಾ);
- ೧.ಶಿಖರ(ಉ.ಕ.ಜಿ); ೨.ಕೈಸೆರೆ; ೩.ಬಂಧನ; ೪.ಕೊಳ್ಳೆ, ಸೂರೆ; ೫.ತೊಂದರೆಗೀಡಾಗು(ಚಿತ್ರ.ಜಿ); ೬.ದಾಳಿ(ರಾಮ.ಜಿ); ೭.ಗ್ರಹಣ(ರಾಮ.ಜಿ); ೮.ತುದಿ, ಮನೆಯ ತುದಿ(ಕ.ಜಾ.ನಿ). Peak, captivity, captive, plunder, arrest, rob, loot, seize, attack, end part of a house, eclipse.

ಕೋಳುಕಂಬ/ಕೋಳ್ಕಂಬ/ಕೋಳ್ಗಂಬ kōḷukamba/kōḷkamba/ kōḷgamba :

- ಕೋಳು+ಕಂಬ=ಕೋಳುಕಂಬ>ಕೋಳ್ಕಂಬ> ಕೋಳ್ಗಂಬ;
- ಮನೆಯ ಮಧ್ಯಭಾಗದಲ್ಲಿ ಇರುತ್ತಿದ್ದು ಮನೆಯ ಕೊರಳು ತುದಿಯ ಶಿಖರ ಭಾಗವನ್ನು ಹೊತ್ತುಕೊಳ್ಳುವ ಕಂಬ; A supporting pillar in the middle of the house;
- ಕಟ್ಟುವ ಕಂಬ; ಹಸಲರ ಸಮುದಾಯದಲ್ಲಿ ಮದುವೆಯಲ್ಲಿ ವಧು-ವರರಿಗೆ ಕಟ್ಟಿದ ಬಾಸಿಂಗಗಳನ್ನು ಬಿಚ್ಚಿ, ತೊಂಡಿಲುಗಳನ್ನು(ತಲೆಗೆ ಧರಿಸುವ ಆಭರಣ) ಪೋಣಿಸಿ ಮನೆಯ ಕೋಳು ಕಂಬಕ್ಕೆ ಕಟ್ಟುವುದು ಸಂಪ್ರದಾಯ.

ಕೋಳು ಕೂಡಿದ ಮನೆ kōḷu kūḍida mane:

- ಪಕ್ಕದ ಮನೆಯ ಗೋಡೆಯನ್ನು ಸೇರಿಸಿಕೊಂಡು ಕಟ್ಟಿದ ಮನೆ(ದ.ಕ/ತು.ಜಿ); Adjoining house;
- ಅಕ್ಕ ಪಕ್ಕದಲ್ಲಿ ಮನೆಕಟ್ಟುವಾಗ ಗ್ರಾಮೀಣರು ಆ ಮನೆಗಳ ಗೋಡೆಯನ್ನು ತಮ್ಮ ಮನೆಗೆ ಸೇರಿಸಿಕೊಂಡು ಕಟ್ಟುತ್ತಿದ್ದುದು ಉಂಟು; ಇದರಿಂದಾಗಿ ಒಂದು ಮನೆಗೆ ಇನ್ನೊಂದು ಮನೆ ಜಂಟಿಸಿ ಕಟ್ಟಿದ ಹಾಗೆ ಇರುತ್ತಿತ್ತು; ಗ್ರಾಮೀಣರು ಅಕ್ಕಪಕ್ಕದಲ್ಲಿ ವಾಸಿಸುವಾಗ ಅವರಲ್ಲಿದ್ದ ಸೌಹಾರ್ದ ಗುಣಕ್ಕೆ ಇದು ಸಾಕ್ಷಿಯಾಗುತ್ತದೆ. In the rural areas the houses are built adjoining the walls of the neighbouring house; this represents their generosity, harmonious life style.

ಕೋಳೂರು kōḷūru :

- ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೋಕಿನ ಕ್ರಿ.ಶ.೧೨ನೇ ಶ.ದ ೮೨ನೇ ಶಾಸನದಲ್ಲಿ ಇದರ ಉಲ್ಲೇಖ; A place refered in 82nd inscription of Sagara taluk, Shimoga district in 12th Century;
- ಕೋಳೂರನು ಅಧಿಕಾರಿ ಗೋಪಣ್ಣಿಗೆ ಕೊಟ್ಟಿರುವ ದಾನ ಶಾಸನ ಇದು;
- ಕೋಳು+ಊರು=ಕೋಳೂರು;
- ಕೋಳೂರು 'ಕನ್ನೂರು ನಾಡ ರಾಜಧಾನಿ'ಯಾಗಿದ್ದ ವಿಚಾರವಿದೆ(ಉದ್ಧೃತ: ಕ.ನಿ.);
- 'ಕೋಳೂರು' ಪ್ರಾಚೀನವಾದ ಊರಾಗಿದ್ದರಿಂದ ಇದರ ಮೂಲರೂಪ 'ಕೋಟೂರ್' ಆಗಿರಬಹುದು; ಬಿಡಿಸಿದರೆ ಕೋಟ್+ಊರ್ ಎಂದಾಗುತ್ತದೆ; 'ಕೋಟ್'(ಕೋಳ್) ಎಂದರೆ ಬೆಟ್ಟದ ತುದಿ, ಕೆರೆಯ ಕೋಡಿ ಎಂಬ ಅರ್ಥಸಿಗುತ್ತದೆ; ಅಂದರೆ ಬೆಟ್ಟದ ತಪ್ಪಲಿನಲ್ಲಿ, ಕೆರೆಯ ಸಮೀಪ ಇದ್ದ ಊರು ಎಂದಾಗುವುದು ಸಹಜ;
- 'ಕೋಳೂರು' ಎಂಬುದಕ್ಕೆ 'ಸೂರೆಯಾದ ಊರು' ಎಂದೂ ಅರ್ಥ ಮಾಡಬಹುದು; ಆದರೆ ಈ ಹೆಸರು ಸೂರೆಯಾದ ಮೇಲೆ ಬಂದದ್ದೆ ಅಥವಾ ಸೂರೆಗೆ ಮೊದಲೇ ಇತ್ತೆ ಎಂಬ ವಿಚಾರ ಸ್ಪಷ್ಟವಾಗುವುದಿಲ್ಲ;
- ಬಹಳ ಸಂದರ್ಭಗಳಲ್ಲಿ ಊರಿನ ಹೆಸರುಗಳ ಸಮಸ್ಯೆ ಇದೇ ಬಗೆಯವಾಗಿರುತ್ತವೆ.

(E.C- ೧೫; ಶಿ.ಜ.)

ಕೋಳುಹೋಗು/ಕೋಳುವೋಗು/ಕೋಳ್ವೋಗು kōḷuhōgu/kōḷuvōgu/ kōḷvōgu :

- ಕೋಳುಪೋಗು>ಕೋಳುಹೋಗು>ಕೋಳುವೋಗು> ಕೋಳ್ವೋಗು(ಪ>ಹ; ಪ>ವ);
- ಲೂಟಿಯಾಗುವುದು; ಸೂರೆ ಹೋಗುವುದು; Looting, robbing;
- ವಶವಾಗುವುದು; ಅಧೀನಕ್ಕೊಳಗಾಗುವುದು; Occupy, subordinate, subservient;
- ನಾಶವಾಗುವುದು; ಸಂಪೂರ್ಣ ಹಾಳಾಗುವುದು; Destroyed, destructed, completely destroyed;
- ತುತ್ತಾಗು; ಬಲಿಯಾಗು; Victimized, become a prey;
- ೧.ಕೋಳ್ಹೋಗು; ಗಲಾಟೆಗೆ ಅವಕಾಶ ಮಾಡಿಕೊಡು; ೨.ದುಃಖಕ್ಕೆ ಈಡಾಗು; ೩.ಮೋಸ ಹೋಗು (ಹಾಸ.ಜಿ). Cheated, become sad, mourn.

ಕೋಳ್ಗುದಿ kōḷgudi :

- ಕೋಳ್+ಕುದಿ=ಕೋಳ್ಗುದಿ;
- ಅತಿಶಯವಾದ ದುಃಖ; ಮಿತಿಮೀರಿದ ದುಃಖ; ಅತಿಯಾದ ಸಂತಾಪ; An extreme sadness, anguish, misery, melancholy;
- ಉದ್ರೇಕದ ಸ್ಥಿತಿ; ಅತಿರೇಕದ ಸ್ಥಿತಿ ಹೊಂದಿರುವುದು. Excess condition, intense or extreme condition, bizarre condition, turbulence.

ಕೋಳ್ಮಿಗ kōḷmiga :

- ಆಹಾರಕ್ಕಾಗಿ ಪ್ರಾಣಿಗಳನ್ನು ಬೇಟೆಯಾಡಿ ಬದುಕುವ ಕ್ರೂರ ಮೃಗ; A wild beast survives on hunting;
- ಕೋಳ್+ಮೃಗ; ಮೃಗ>ಮಿಗ.

ಕೋಳ್ವಿಡಿ kōḷviḍi :

- ಕೋಳ್+ಪಿಡಿ=ಕೊಳ್ಪಿಡಿ>ಕೋಳ್ವಿಡಿ;
- ಸೆರೆಹಿಡಿ; ಬಂಧಿಸು, ಬಂಧನಕ್ಕೊಳಪಡಿಸು. Arrest, captive, take into custody, seize.

ಕೋಳ್ಸಾ/ಕೋಳ್ಸಿ kōḷsā/kōḷsi :

- ಇದ್ದಲಿ; ಇದ್ದಲು; ಕಟ್ಟಿಗೆ ಸುಟ್ಟು ಆರಿಸಿ ಇಟ್ಟ ಉರುವಲು; Charcoal;
- ಕಮ್ಮಾರರ ಕುಲುಮೆಗಳಲ್ಲಿ ಇದ್ದಿಲು ಉರುವಲಾಗಿ ಬಳಕೆಯಾಗುತ್ತದೆ; Blacksmith uses charcoal as fuel for his forge or furnace;
- —*ಕೋಳ್ಸಿ ಒಲಿ* : ಇದ್ದಲಿನಿಂದ ಉರಿಸುವ ಒಲೆ; ಅಡಿಗೆ ಮಾಡಲು ಇದರ ಬಳಕೆ; An oven used charcoal as fuel;
- —*ಕೋಳ್ಸಿಗಾಡಿ* : ರೈಲು ಎಂಜಿನ್ನಿನಂತೆ ಇದ್ದಿಲನ್ನು ಉರಿಸಿ, ಉಗಿ ಶಕ್ತಿಯಿಂದ ನಡೆಸುತ್ತಿದ್ದ ಬಂಡಿ; ರಾಜರ ಕಾಲದಲ್ಲಿ ವಾಹನ ನಡೆಸಲು ಇದ್ದಲನ್ನು ಉರಿಸಿ, ಉಗಿ ಶಕ್ತಿಯಿಂದ ಓಡಿಸುತಿದ್ದ ಗಾಡಿ; A carriage or vehicle runs like train(steam engine) using charcoal as fuel; during the

reign of kings carriages or vehicles were running with steam of charcoal;

- *—ಕೋಲ್ಲಿಭಟ್ಟಿ* : ಸೌದೆಯನ್ನು ಭಟ್ಟಿಯಲ್ಲಿ ಸುಟ್ಟು ಆರಿಸಿ ಇದ್ದಲನ್ನು ತಯಾರಿಸುವ ಕಾರ್ಖಾನೆ. A factory to manufacture charcoal from burning the firewood.

ಕೌಂಗು Kauŋgu:

- ಮಲೆನಾಡಿನ ಪ್ರದೇಶದಲ್ಲಿ ಅಡಿಕೆ ಮರಕ್ಕೆ ಈ ಪದ ಬಳಕೆ; ಕವುಂಗು, ಕಂಗು ರೂಪಗಳು ಕನ್ನಡದಲ್ಲಿ ಪ್ರಚಾರದಲ್ಲಿವೆ; 'ಕವುಂಗು' ಮೂಲ ರೂಪ; 'ಕೌ' ಅನುಕೂಲಕ್ಕಾಗಿ ಬರೆವಣಿಗೆಯಲ್ಲಿ ಬಳಕೆ ಮಾಡಿದ ಅಕ್ಷರ; ಹಾಗಾಗಿ 'ಕೌ' ಮೂಲ ರೂಪ ಅಲ್ಲ; ಇನ್ನೂ ಹೇಳುವುದಾದರೆ, ಕವ/ಕವು ಮೂಲರೂಪ ಆಗಿರುವಂತಿದೆ; Kaungu is a word for areca tree in the region of `Malenadu' of Karnataka state;
- ಕೌವುಂಗು>ಕ್+ಅಉಜಗು>ಕವುಜಗು('ಉ'ನ ಜಾಗದಲ್ಲಿ 'ವ'ಕಾರ ಆಗಮನ), >ಕಙ್ಗು (ಕಂಗು) ಬಂದಿರಬಹುದು; ಇಲ್ಲವೆ 'ಕಂಗ್' ಮೂಲ ರೂಪವೇ ಆಗಿರಬಹುದು,
- ಗೌಡ. ಕನ್ನಡದಲ್ಲಿ 'ಕಮ್ಮು' ಬಳಕೆ; ತಮಿಳು ಮತ್ತು ಮಲೆಯಾಳಂಗಳಲ್ಲಿ 'ಕಮುಗು' ಇದೆ; ತುಳುವಿನಲ್ಲಿ 'ಕಂಗ್' ಇದೆ;
- ಇದೆಲ್ಲಕ್ಕೂ ಸಂಸ್ಕೃತದ 'ಕ್ರಮುಕ' ಮೂಲ ರೂಪವೆಂದು ಹೇಳಲಾಗಿದೆ; ತಮಿಳು ಮತ್ತು ಮಲೆಯಾಳಂಗಳಲ್ಲಿ 'ಕಮುಗು'('ಕ'ದಲ್ಲಿನ 'ರ' ಒತ್ತಕ್ಷರ ಕಳೆದಿದೆ) ಇರುವುದನ್ನು ನೋಡಿದರೆ, ಸಂಸ್ಕೃತದಿಂದ ದ್ರಾವಿಡ ಭಾಷೆಗಳಿಗೆ ಬಂದಿರುವಂತೆ ಕಾಣುವುದು; ತಮಿಳು ಕೂಡ ಇದನ್ನು ಸ್ವೀಕರಿಸಿರುವುದು ಆಶ್ಚರ್ಯ; ಆದರೆ ತುಳುವಿನ 'ಕಂಗ್' ಎಲ್ಲಿಯದು?

ಕೌಂಟ್ಲಾ Kaunṭla:

- ಉತ್ತರ ಕನ್ನಡ ಜಿಲ್ಲೆಯಲ್ಲಿ ಬಳಕೆಯಾಗಿರುವ 'ಕೌಟ್ಲಾ' ಪದ ಬಯಲು ಸೀಮೆಯಲ್ಲಿ (ಮಂಡ್ಯ.ಜಿ; ಮೈ.ಜಿ) 'ಕವಟೆ' ಆಗಿರುವಂತಿದೆ; Cheek, Jaw, Chin; `Kauntla' is a word for `Cheek' in Uttar Kannada district of Karnataka state; in the district of Mandya of Karnataka state the people use the word `Kavate' for cheek;
- ಎಲ್ಲ ಕಡೆ ಈ ಪದಕ್ಕೆ 'ಕೆನ್ನೆ' ಎಂದೇ ಅರ್ಥವಿದೆ; (ನೋಡಿ: 'ಕವಟೆ')
  ಪ್ರ: 'ಅವನ ಕೌಂಟ್ಲಾ(ಕವಟೆ) ಮೇಲೆ ತಿವಿ'!
- ಇಲ್ಲಿಯೇ 'ಕೌಳ' ಪದವನ್ನೂ ಗಮನಿಸಬಹುದು; ಕೌಂಟ್ಲಾ>ಕೌಟ್ಲಾ>ಕೌಳ್ ಆಗಿರುವಂತಿದೆ; ಬಿಂದು ಕಳೆದುಕೊಂಡು, ಲ<ಳ ಆಗಿ 'ಕೌಳ್' ಪದ ರೂಪಗೊಂಡಿರುವಂತೆ ತೋರುವುದು(ಟ>ಳ ಆಗಿರುವುದೂ ಉಂಟು);
- ಇಲ್ಲಿನ ಅರ್ಥ ಸ್ವಲ್ಪ ಬದಲಾವಣೆಗೊಂಡಿದೆ; ಕೆನ್ನೆಯ ಕೆಳಭಾಗ; ಗಲ್ಲ.

ಕೌಂತೇಯ Kauntēya:

- ಕೌನ್ತೇಯ>ಕೌಂತೇಯ; ಕುಂತಿಗೆ ಸಂಬಂಧಿಸಿದ; ಕುಂತಿಯಮಗ/ಮಕ್ಕಳು; 'ಪಾಂಡವ' ಪರ್ಯಾಯ ನಾಮ; ಮೂಲ 'ಕುಂತಿ' ಪದ; ಕುಂತಿಭೋಜನ ಮಗಳು; Kaunteya generally means son/children of Kunti;
- 'ಕುಂತಿಯ ಮಕ್ಕಳು' ಎಂಬ ಅರ್ಥದಲ್ಲಿ ತೆಗೆದು ಕೊಳ್ಳುವುದಾದರೆ, ಧರ್ಮರಾಯ, ಭೀಮ ಮತ್ತು ಅರ್ಜುನರನ್ನಷ್ಟೇ ಪರಿಗಣಿಸಬೇಕಾಗುತ್ತದೆ;
- 'ಕೌಂತೇಯ' ಎಂಬ ಪದ ಪಾಂಡವ ಪರ್ಯಾಯ ನಾಮ ಪಡೆದರೆ, ಆಗ ಅದು ನಕುಲ ಸಹದೇವರಿಗೂ ಅನ್ವಯಸುತ್ತದೆ;
- ಮಾದ್ರಿಯ ಮಕ್ಕಳು ನಕುಲ ಸಹದೇವರಾದ್ದರಿಂದ ಅವರಿಗೆ ಈ ಅನ್ವಯ ಕಷ್ಟವಾದರೂ, ಮಾದ್ರಿ ಪಾಂಡುರಾಜನ ಜತೆ ಚಿತೆಯೇರಿದ್ದರಿಂದ, ಮುಂದೆ ಅವರ ಸಾಕುತಾಯಿಯಾಗಿ ಕುಂತಿ ಮುಂದುವರಿಯುತ್ತಾಳೆ; ಸಹಜವಾಗಿ 'ಕೌಂತೇಯ' ಪದ ಅನ್ವಯ ಅವರಿಗೂ; In the great Indian epic(mythological) `Mahabharatha', Kunti is a wife of king Pandava of Hasthinapur; he had 05 sons Dharmaraya, Bheema, Arjuna and Nakula Sahadeva; but Nakula and Sahadeva are the sons of his second wife Mādri; generally, all the five sons are called Pandavs as well as sons of Kunti

- 'ಕೌಂತೇಯ' ಪದದ ಬಳಕೆ ಎಲ್ಲರಿಗೂ ಅನ್ವಯಿಸುತ್ತದೆ ಎನ್ನುವುದಕ್ಕೆ ಇನ್ನೊಂದು ಆಧಾರ–ವರಗಳನ್ನೆಲ್ಲ ಪಡೆದವಳು ಕುಂತಿಯೆ; ಎರಡುವರಗಳನ್ನು ಮಾದ್ರಿಗೆ ವರ್ಗಾಯಿಸಿರುತ್ತಾಳೆ;
- ಆದ್ದರಿಂಗ 'ಕೌಂತೇಯ' ಪದ ಪಾಂಡವರೆಲ್ಲರಿಗೂ ಅನ್ವಯಿಸಿ ಬಳಕೆಯಾಗುತ್ತಿದೆ; 'ಕೌಂತೇಯರು' ಎಂದೇ ಅವರೆಲ್ಲರನ್ನೂ ಕರೆಯುವುದಿದೆ; ಎಲ್ಲಿಯೂ 'ಮಾದ್ರೇಯರು' ಎಂಬ ಪದ ಬಳಕೆಯಲ್ಲಿಲ್ಲ.

ಕೌಗು Kaugu:

ಕಪ್ಪು ಬಣ್ಣದ ಬಟ್ಟೆ('ಮಳಲಿ ಗಿಡ್ಡಮ್ಮ'); ಬೇರೆಲ್ಲೂ ಉಲ್ಲೇಖವಿಲ್ಲ. Black coloured cloth.

ಕೌಂಚಗೆರೆ kauñcagere :

- ಬಳ್ಳಾರಿ ಜಿಲ್ಲೆಯ ಸಿರಿಗುಪ್ಪ ತಾಲ್ಲೋಕಿನ ಕ್ರಿ.ಶ.೧೧೨೦ರ ೪೧ನೇ ಶಾಸನದಲ್ಲಿ 'ಕೌಂಚಗೆರೆ'ಯ ಉಲ್ಲೇಖ; A place in Siriguppa taluk of Bellary district; referred in 41st inscription of 1120A.D;
- ಚಾಲುಕ್ಯ ವಿಕ್ರಮಾದಿತ್ಯನು ಜಯನ್ತೀಪುರದ ನೆಲೆವೀಡಿನಲ್ಲಿದ್ದಾಗ, ಆತನ ಸಾಮಂತ ಸಿಂಧವ ವಂಶದ ಭೀಮನ ಮಗ ಸೋವಿದೇವ 'ಬಲ್ಲಕುಂದೆ–೩೦೦'ರೊಳಗಿನ 'ಕೌಂಚಗೆರೆ'ಯ ಕಲಿದೇವರಿಗೆ ನೈವೇದ್ಯ, ನಂದಾದೀವಿಗೆಗೆ ದೇವಸ್ಥಾನದ ಆಚಾರ್ಯ ದೇವರಾಸಿ ಪಂಡಿತರಿಗೆ ಭೂದಾನ ಮಾಡಿದನಂತೆ;
- 'ಕೌಂಚಗೆರೆ' ಬಲ್ಲಕುಂದೆ–೩೦೦ರ ಆಡಳಿತ ಘಟಕಕ್ಕೆ ಸೇರಿತ್ತು;
- 'ಕೌಂಚ' ರೂಪ 'ಕೌಂಚು' ರೂಪದಿಂದ ಬಂದಿದ್ದು, ಅದೇ ಕೌಚು, ಕವಚು, ಕವಿಚು ರೂಪಗಳಿಗೆ ಕಾರಣವಾಗಿರಬಹುದು; ಆವರಿಸು, ಹೊಂದಿಕೆಯಾಗು ಅರ್ಥಗಳನ್ನು ಇದು ಹೊಂದಿರುವುದರಿಂದ, 'ಕೆರೆ'(=ಗೆರೆ)ಯ ಆವರಣದಲ್ಲಿರುವ ಊರು ಎಂದು ಅರ್ಥಮಾಡಬಹುದು;
- ಅಥವಾ 'ಕೌಂಚ' ಪದ ಸಂಸ್ಕೃತದ 'ಕ್ರೌಂಚ'ದಿಂದ ಬಂದಿದೆ ಎಂದು ಹೇಳುವುದರ ಆಧಾರದ ಮೇಲೆ ಕ್ರೌಂಚ ಪಕ್ಷಿಗಳಿರುವ, ಅಂದರೆ 'ಕೊಂಚೆ'ಗಳಿರುವ ಕೆರೆ ಎಂದು ನಿಷ್ಪನ್ನ ಮಾಡಬಹುದಾದ ಒಂದು ಸಾಧ್ಯತೆಯನ್ನೂ ತೆಗೆದುಹಾಕುವಂತಿಲ್ಲ; `Kaunca' word is derived from the Sanskrit word `Kraunca' means `Krauncha' bird (Demoiselle crane) mention in the `Ramayana', the great Indian epic written by sage Valmiki;
- ಇಲ್ಲವೆ 'ಕೊಂಚೆ'ಗೆ (ಕ್ರೌಂಚ=ಕೌಂಚ=ಕೊಂಚೆ) ಕೋಟೆ ಗೋಡೆ(ಕ.ನಿ) ಎಂಬ ಅರ್ಥವೂ ಇರುವುದರಿಂದಾಗಿ, ಕೆರೆಯ ಆವರಣದಲ್ಲಿರುವ ಕೋಟೆ(ಕೋಟೆಕೆರೆ?) ಎಂದು ಅರ್ಥಮಾಡಬಹುದೆ?;
- ಒಟ್ಟಾರೆ ಜಲ/ಪ್ರಾಣಿ/ಭೂವಾಚಿ ಸ್ಥಳನಾಮವೆಂದು ಹೇಳಬಹುದಾಗಿದೆ.

(ಕ.ವಿ.ವಿ.ಶಾ.ಸಂ.೧; ಬ.ಜಿ)

ಕೌಚಕೊಳ್ಳು Kaucakoḷḷu:

- 'ಕೌವುಚುಗೊಳ್ಳು' ಎಂದೂ ಇದನ್ನು ಹೇಳಬಹುದು; ಹಾಗಾಗಿ ಕ>ಗ ಆಗುವುದರಿಂದ, ಕೌಚಗೊಳ್ಳು/ಕೌಚುಗೊಳ್ಳು ಎಂದೂ ಆಗಬಹುದು;
- ಕೌಚ್ ಅಥವಾ ಕೌಚು ಮೂಲವಿರುವಂತೆ ತೋರುವುದು;
- ಸಿಟ್ಟಿಗೇಳು, ಕೋಪಗೊಳ್ಳು ಎಂಬುದು ಅರ್ಥ; Enrage, anger, wrath, rage, vanity, conceit, empty boast;
  ಪ್ರ: 'ಅವನು ಹೇಳಿದ್ದು ಮಾಡದಿದ್ದರೆ ಕೌಚ ಕೊಳ್ಳುವನು'; **ನೋಡಿ:** ಕವುಚು.

ಕೌಚುಕ Kaucuka:

- 'ಕೌಚುಕ' ಪದ ವಿಶೇಷವಾಗಿರುವಂತೆ ತೋರುತ್ತದೆ (ಬಾ.ಜಿ.);
  ಪ್ರ: 'ಅವನ ಕೌಚುಕ ಹೆಚ್ಚಾಗಿದೆ';
- ಬಿಣಜಂಭ; ತೋರಿಕೆ ಅರ್ಥಗಳು;
- 'ಕೌಚು' ಮೂಲ ರೂಪಕ್ಕೆ 'ಕ' ಪ್ರತ್ಯಯ ಸೇರಿಕೊಂಡಂತೆ ತೋರಿದರೆ, 'ಕೌಚು' ಪದದ ಇತರ ಅರ್ಥಗಳೊಡನೆ ಇದರ ಸಂಬಂಧ ಇದೆಯೆ ಎಂಬುದನ್ನು ಖಚಿತಪಡಿಸಲಾಗದು;
- 'ಕೌಚು' ರೂಪ 'ಕವುಚು' ರೂಪಕ್ಕೆ ಸಂಬಂದಿಸಿಯೆ ಬಂದಿದೆ; ಎಲ್ಲಿ ಬೇರೆಯಾಯಿತು ಎಂದು ಹೇಳಲು ಸಾಧ್ಯವಾಗುವುದಿಲ್ಲ; ಅರ್ಥದ ಕಾರಣವಂತೂ ಒಂದು ಇದ್ದೇಇದೆ.

ಕೌಜಗ Kaujaga:

- ಒಂದು ಬಗೆಯ ಕಾಡು ಪ್ರಾಣಿ ಅಥವಾ ಪಕ್ಷಿ; ಕೌಜಗ/ಗೌಜಲಿ(ಇಂ.ಕ.ನಿ); Partridge(bird);

- ಅನ್ಯದೇಶ್ಯ ಪದವೆಂದು ಕಾಣುತ್ತದೆ; ಕವಿಂಜ/ ಕವಿಂಜಲು ಎಂದೂ ಕರೆಯುವುದಿದೆ;
- ಗೊಂದಲಿಗ ಸಮುದಾಯದ ಜನ ಬೇಟೆಯಾಡುವ ಪ್ರಾಣಿ/ಪಕ್ಷಿ ಜಾತಿಯಲ್ಲಿ ಒಂದು; Gondaliga community hunts Partridge bird for their food;
- ಕೌಜಗ, ಅಡವಿಕೋಳಿ, ಮೊಲ, ಮೀನುಗಳನ್ನು ಬಲೆಹಾಕಿ ಹಿಡಿಯುತ್ತಾರೆ(ಗೋಂಧಳಿ, ಕ.ಪು.ಪ್ರಾ.)
- ಕೌಜಲಕ್ಕಿ ಮಾಂಸವನ್ನು ಈರುಳ್ಳಿ, ಬೆಳ್ಳುಳ್ಳಿ, ಶುಂಠಿಯಿಂದ ಮಾಡಿದ ಒಗ್ಗರಣೆಯಲ್ಲಿ ಬೇಯಿಸಿ, ರುಬ್ಬಿದ ಮಸಾಲೆಯನ್ನು ಹಾಕಿ ಕುದಿಸಿ ಸಾರು ಮಾಡುತ್ತಾರೆ; The meat of Partridge bird is used as a dish with the mixture of spice;
- ಕಾಡಿನ ಪಾರಿವಾಳ(?).

ಕೌಟೆಕಾಯಿ/ಕೌಂಟೆಕಾಯಿ Kauṭekāyi/ Kaunṭekāyi:

- ಈ ಎರಡೂ ಪದಗಳು ಭಿನ್ನ ರೂಪಗಳಲ್ಲ; 'ಕೌಂಟೆ' ಕಾಯಿಯಿಂದ ಕೌಟೆಕಾಯಿ ಬಂದಿರಬಹುದು; ಬಿಂದುಗಳನ್ನು ಕಳೆದುಕೊಂಡು ಬಳಕೆಯಾಗಿರುವ ಎಷ್ಟೋ ಪದಗಳಲ್ಲಿ ಇದೂ ಒಂದು;
- ಹಿತ್ತಲು, ತಿಪ್ಪೆ ಮುಂತಾದ ಕಡೆ ಬಳ್ಳಿಯಂತಹ ಸಸ್ಯದಲ್ಲಿ ಬಿಡುವ ಒಂದು ಜಾತಿಯ ಕಾಯಿ; ಕಹಿಯಾಗಿರುತ್ತದೆ; A gourd, usually in a vine which grows on dunghill or dump
- ಮಿಡಿ ಸೌತೆಕಾಯಿ ಆಕಾರ; ಕಾಫಿ ತೋಟದಲ್ಲಿಯೂ ಇದರ ಬಳ್ಳಿ ಮತ್ತು ಕಾಯಿಯನ್ನು ನೋಡಬಹುದು;
- 'ಕೌಂಟೆಕಾಯಿ' ರೂಪವನ್ನು ತುಮುಕೂರು ಜಿಲ್ಲೆ ಮುಂತಾದ ಕಡೆಗಳಲ್ಲಿ ಕಾಣಬಹುದು.

ಕೌಡ್ ಬಳಿ Kauḍ bali:

- ಒಂದು ಕುಲದ ಹೆಸರು; 'ಬಳಿ' ಎಂದರೆ ವಂಶವೆಂದೇ ಅರ್ಥವಿದೆ; Name of a clan, dynasty, community;
- ಮಲೆನಾಡಿನ ನಾಮಧಾರಿ ಒಕ್ಕಲಿಗರ ಒಂದು ಗುಂಪಿನ (ಕುಲದ) ಹೆಸರು 'ಕೌಡ್ ಬಳಿ'; Name of Namadhari Vokkaliga group found mainly in the 'Malnad' region of Karnataka state; Namadhari Vokkaligas are one of the sub-groups within Vokkaliga fold;
  ಪ್ರ: 'ಅವರು ಕೌಡ್ ಬಳಿ ಕುಲಕ್ಕೆ ಸೇರಿದವರು';
- ಕೌಡ್>ಗೌಡ್ ಅಥವಾ ಗೌಡ್>ಕೌಡ್ ಆಗಿರಬಹುದೆ?

ಕೌಡಿ(ಡೆ) Kauḍi(ḍe):

- ಕೆಟ್ಟಸುದ್ದಿ; ಸಾವಿನ ಸಮಾಚಾರ; ಕವಡೆ; Bad news, death news, cowrie shell;
- ಸಾವು, ನೋವು ಮುಂತಾದ ಕೆಟ್ಟ ಸುದ್ದಿಗಳಿಗೆ ಈ ಪದ ಬಳಕೆ; ಕುಳವಾಡಿ ಈ ಸುದ್ದಿಯನ್ನು ಊರೂರಿಗೆ ಮುಟ್ಟಿಸಿ ಬರುತ್ತಿದ್ದ ಪದ್ಧತಿ;
  ಪ್ರ: 'ಊರಿಗೆ ಕೌಡಿ ಕಳಿಸಬೇಕಿತ್ತು'.
- ಕವಡ್ಗೆ>ಕವುಡೆ>ಕೌಡಿ(ಡೆ)ಆಗಿರಬಹುದು; ಒಂದು ಜಾತಿಯ ಗಿಡ; ಇದರ ಕಾಯಿಯನ್ನು ತರಕಾರಿಯಾಗಿ ಬಳಸುವುದು; ಕವಡೆ ಬಿಟ್ಟು 'ಗಿಳಿಶಾಸ್ತ್ರ' ಹೇಳುವುದು; A type of plant;
- ***—ಕೌಡ್ಗಿ(ಡೆ)ಕಿಮ್ಮತ್ತು*** : ಕವಡೆ ಕಿಮ್ಮತ್ತು, ಅಲ್ಪಬೆಲೆ, ಉದಾಸೀನ, ಗೌರವ ತೋರಿಸದಿರುವುದು; ನಂಬಿಕೆ ಇಲ್ಲದಿರುವುದು; ಪ್ರ: 'ಅವನ ಮಾತಿಗೆ ಕೌಡಿ ಕಿಮ್ಮತ್ತು ಬೆಲೆಯಿಲ್ಲ'; ನುಡಿಗಟ್ಟಾಗಿಯೂ ಬಳಕೆ; Less price, indifferent, don't have faith, not showing faith or respect;
- ಒಬ್ಬಾತ ವ್ಯಕ್ತಿತ್ವವನ್ನು ಕಳೆದುಕೊಂಡರೆ, ಅವನ ಬಗ್ಗೆ ಜನರು ಲಘುವಾಗಿ ಪರಿಗಣಿಸುವುದು ವಾಡಿಕೆ; ಅವನಿಗೆ 'ಕಿಮ್ಮತ್ತು ಬೆಲೆಯಿಲ್ಲ' ಎಂದು ಹೇಳುವುದು ರೂಢಿ; 'ಕಿಮ್ಮತ್ತು' ಎಂದರೆ ಗೌರವ, ಮರ್ಯಾದೆ, ಬೆಲೆ ಎಂಬೆಲ್ಲ ಅರ್ಥಗಳಿವೆ; 'ಕಿಮ್ಮತ್ತು' ಅರ್ಥ ಗೊತ್ತಾಗದೆ ಅದಕ್ಕೆ ಬೆಲೆ ಸೇರಿಸಿಕೊಂಡು ಹೇಳಲು ತೊಡಗಿದರು; 'ಕಿಮ್ಮತ್ತಿಲ್ಲ' ಎಂದು ಹೇಳಿದ್ದರೂ ಸಾಕಾಗಿತ್ತು. When a person loses faith no one gives him consideration/respect for his words.

ಕೌಡ್ಲೆ kavdle :

- ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೋಕಿನ ಕ್ರಿ.ಶ.೧೬೬೩ರ ೩೪ನೇ ಶಾಸನದಲ್ಲಿ ಇದರ ಉಲ್ಲೇಖ; A place in Mandya district referred in the 34th inscriptions of 1663A.D;

- ಶ್ರೀರಂಗಪಟ್ಟಣದ ರಂಗನಾಥನಿಗೆ ಚಾಮರಾಜ ಒಡೆಯರು ಕೆಳದಿ ನಾಡಾದ ಮದ್ದೂರಿನ ಹಲವಾರು ಗ್ರಾಮಗಳನ್ನು ದಾನ ಕೊಟ್ಟಿದ್ದರೆಂದು ಹೇಳಲಾಗಿದೆ; It is referred that Kaudle village was gifted by Chamaraja wodeyar of Mysore to the temple of Sri Ranganatha, Srirangapattana of Karnataka state;
- ಪುರಾಣದಲ್ಲಿ ಕೌಂಡಿನ್ಯ ಮಹರ್ಷಿ ತಪಗೈದ ಭೂಮಿ ಇದೆನ್ನುತ್ತಾರೆ; Mythological reference relates the story of sage Kaundinya's rigorous penance;
- ಕೂಡಲು>ಕೂಡ್ಲು ಆಗಿ 'ಕೌಡ್ಲೆ' ರೂಪ ಬೆಳವಣಿಗೆ ಹೊಂದಿರಬಹುದು; 'ಕೂಡಲ್(ಲು)' ಪದ ಸಂಗಮ, ಸೇರು ಎಂಬ ಅರ್ಥಗಳನ್ನು ಹೊಂದಿರುವುದು ಸ್ಪಷ್ಟ;
- 'ಕೂಡಲಿ' ಒಬ್ಬನ ಹೆಸರು(ಕ.ನಿ.); 'ಕೂಡಲೆ' ಒಂದು ಊರಿನ ಹೆಸರು(ಕ.ನಿ.) ಎಂಬ ರೂಪ ಮತ್ತು ಅರ್ಥಗಳಿವೆ;
- ಇದರಿಂದ 'ಕೌಡ್ಲೆ' ರೂಪ 'ಕೂಡಲು' ರೂಪದಿಂದಲೇ ನಿಷ್ಪನ್ನಗೊಂಡಿರಬೇಕೆಂದು ಹೇಳಬಹುದಾಗಿದೆ.

(E.C- ೭; ಮಂಡ್ಯ.ಜಿ.)

ಕೌತಕ/ಕವುತಕ/ಕೌತಕಿ Kautaka/ Kavutaka/kautaki:

- 'ಕೌತಕ'ದ ಪರ್ಯಾಯ ಪದಗಳೇ 'ಕವುತಕ' ಮತ್ತು 'ಕೌತಕಿ';
- ಇಷ್ಟು ಪದಗಳು ಸ್ತುತಿರೂಪವನ್ನು ತಿಳಿಸಲು ಹೊರಟವು;
- ಯಕ್ಷಗಾನದಲ್ಲಿ ಗಣಪತಿ ಸ್ತುತಿ, ನರ್ತನವಿಧಿಗಳನ್ನು 'ಗಣಪತಿ ಕೌತಕ' ಎನ್ನುವುದು(ಯ.ಪ.ದೇ.)

ಕೌತಾಳಂ kautāḷam :

- ಕರ್ನೂಲು ಜಿಲ್ಲೆ ಆದೋನಿ ತಾಲ್ಲೋಕಿನ ಕ್ರಿ.ಶ.೧೫೩೩ರ ೨೮೧ನೇ ಶಾಸನದಲ್ಲಿ ಇದರ ಪ್ರಸ್ತಾಪವಿದೆ; A place referred in 281 inscription of 1533A.D belongs to Karnool district of Adoni taluk of Andhrapradesh state;
- ಅಚ್ಯುತರಾಯ ಮಹಾರಾಯನ ಆಳ್ವಿಕೆ; The reign of king Achyutaraya of Vijayanagara empire of South India;
- ಶಾಸನದಲ್ಲಿ 'ಕವುತಾಳ' ಎಂದು ಉಲ್ಲೇಖವಿದೆ;
- ಅರಮನೆಯವರು ಅನ್ಯಾಯ ಮಾಡಿದಾಗ, ಕವುತಾಳದ ಸೀಮೆಯಿಂದ ಮಾಸವೆಯ ಸೀಮೆಗೆ ವಲಸೆ ಹೋದ ಪ್ರಜೆಗಳಿಗೆ, ಮಹಾಮಂಡಲೇಶ್ವರ ಸಲಕಯದೇವ ಚಿಕ್ಕತಿರುಮಲದೇವರು ಸವಲತ್ತುಗಳನ್ನು ನೀಡಿ ಮತ್ತೆ ಕವುತಾಳಕ್ಕೆ ಕರೆ ನೀಡಿದ್ದನ್ನು ದಾಖಲಿಸುತ್ತದೆ;
- 'ಕವುತಾಳ' ರೂಪವೇ ಕ್ರಮೇಣ 'ಕೌತಾಳ' ಆದಂತಿದೆ;
- ಕೌತಾಳ=ಕ್+ಔ+ತಾಳಂ=ಕ್+ಅಉ+ತಾಳಂ>ಕ್+ ಅವ್+ತಾಳಂ('ಉ' ಸ್ವರಕ್ಕೆ ಉಚ್ಚಾರಣೆಯಲ್ಲಿ 'ವ್' ವ್ಯಂಜನವಾಗಿ ಬದಲಾವಣೆ)=ಕವುತಾಳಂ ಆಗುವುದು;
- ಕವುತಾಳ>ಕೌತಾಳ ಆಗಿ ಬದಲಾಗುವುದು ಒಂದು ತಾಂತ್ರಿಕ ವಿಷಯ; ಬರವಣಿಗೆಯ ಸೌಕರ್ಯಕ್ಕಾಗಿ ಬಂದುದು;
- ಆದ್ದರಿಂದ 'ಕವುತಾಳ'/ಕೌತಾಳ ಎರಡೂ ರೂಪಗಳು ಬಳಕೆಗೆ ಅರ್ಹವಾಗಿವೆ.

(ಆ.ಪ್ರ.ಕ.ಶಾ.ಭಾ.೧)

ಕೌದಿ Kaudi:

- ಕವುಂದಿ>ಕವುದಿ>ಕೌದಿ ಆಗಿರಬಹುದು; ಕವದಿ, ಕವಿದಿ ರೂಪಗಳೂ ಇವೆ; 'ಎತ್ತು ಹಾರುವುದಕ್ಕಿಂತ ಮುಂಚೆ ಕವುದಿ ಹಾರಿತು'(ಕಿ.ಕೋ.ಗಾ.)ಎಂಬ ಗಾದೆಯೂ ಈ ಬಗ್ಗೆ ಇದೆ;
- ಹಳೆಯ ಬಟ್ಟೆಗಳಿಂದ ಸಿದ್ಧಪಡಿಸಿದ ಹೊದಿಕೆ; ತುಂಡು ಬಟ್ಟೆಗಳಿಂದ ಹೊಲಿದ ಹೊಂದಿಕೆ ಬಟ್ಟೆ; ವಿಶೇಷವಾಗಿ ಮಹಿಳೆಯರು ಈ ಬಟ್ಟೆಯನ್ನು ಸಿದ್ಧಪಡಿಸುತ್ತಾರೆ; A type of garment stitched by joining rags;
- ಉತ್ತರ ಕರ್ನಾಟಕದ ವಿಶಿಷ್ಟ ಕಸೂತಿಕಲೆ; ಇದಕ್ಕೆ ಪರ್ಯಾಯ ಹೆಸರು 'ಬೊಂತೆ' ಎಂದು; An art of embroidery, especially in the parts of North Karnataka;
- ಅಲೆಮಾರಿ ಸಮುದಾಯಗಳು ಹಳೇ ಬಟ್ಟೆ ಚೂರುಗಳನ್ನು ಸೇರಿಸಿ ಕೌದಿ ಹೊಲಿಯುವರು; ಹಾಸಿಗೆಯಷ್ಟು ದಪ್ಪ ಅಲ್ಲ; ಆದರೆ ಉದ್ದ, ಅಗಲ

ಇರುವುದು; Nomads, clothing made out of ragged cloth;

- ಹಿರಿಯರ ಆಶೀರ್ವಾದ ತಮ್ಮ ಮೇಲಿರಲಿ ಎಂಬ ಭಾವಾನಾತ್ಮಕತೆ ಬೇರೆ; Wishing to get the blessings of elders;
- ಆರು ಅಡಿ ಉದ್ದ, ಮೂರು ಅಡಿ ಅಗಲವಿರುವ ಕೌದಿ ಹಾಸಲೂ, ಹೊದಿಯಲೂ ಅನುಕೂಲ; ಹಳೆಯ ಬಣ್ಣಬಣ್ಣದ ಬಟ್ಟೆಗಳನ್ನು ಕೂಡಿಸಿ ಹೊಲಿಯಲಾಗುವುದು;
- ಮಳೆ-ಚಳಿಗಾಲದ ರಕ್ಷಣೆಗೆ ಕೌದಿ ಬಳಕೆ; ಕೌದಿ ಆಕರ್ಷಕ, ಆಲಂಕಾರಿಕ; ಬೆಚ್ಚನೆಯ ಅನುಭವ ಕೊಡುವ ಸಾಧನ;
- ಮನೆಗಳಿಗೆ ಅತಿಥಿಗಳು ಬಂದಾಗ ನೆಲದ ಮೇಲೆ ಹಾಸಿ ಕುಳ್ಳಿರಿಸುತ್ತಾರೆ; ಸಾಗಾಣಿಕೆಗೆ ಅನುಕೂಲ.
- ***—ಕೌದಿದಾರ* : ದಪ್ಪನೆಯ ಗಟ್ಟಿದಾರ; ಹೂಮಾಲೆ** ಕಟ್ಟಲು, ಕೌದಿ ಹೊಲಿಯಲು ಬಳಕೆ; ಖಾದಿದಾರ ಎಂದೂ ಕಳೆಯುವರು;
- ***—ಕೌದಿಪೂಜೆ*** : ಹಾನಗಲ್ ತಾಲ್ಲೋಕಿನ ಶೇಖಗಿರಿ ಗ್ರಾಮದಲ್ಲಿ ಪ್ರತಿವರ್ಷ ಕಬ್ಬೇರ ಮನೆತನದವರು ಮಾಡುವ ಪೂಜೆ; ೨೦೦ ವರ್ಷಗಳ ಹಳೆಯ ಕೌದಿಯನ್ನು ಪೂಜಿಸುವರು; ಸಿದ್ಧಾರೂಢ ಮಠದಲ್ಲಿ ಪ್ರತಿವರ್ಷವೂ ಶಿವರಾತ್ರಿ ಹಿಂದಿನದಿನ ಹೊಸ ಕೌದಿಯನ್ನು ಸಿದ್ಧಾರೂಢ ಗದ್ದಿಗೆಗೆ ಅರ್ಪಿಸಿ ಪೂಜೆ ಸಲ್ಲಿಸುವರು; A pooja performed by a lineage called `Kabbera' of `Shekhagiri' village of Hanagal taluk; Siddharudha Math of Hubballi performs before `Mahashivarathri' festival; during this pooja only simple blanket and Bilvapatri (bilvapatra) are used to perform pooja at Samadi Mandir(Gaddige);
- ***—ಕೌದಿಕಲೆ*** : ಹಗೇವುಗಳಲ್ಲಿ ಕೌದಿ ತುಕಡಿಗಳನ್ನು ಕೆಳಗೆ ಹಾಕುವುದರಿಂದ ಹೆಚ್ಚು ತಂಪಾಗಿದ್ದು ಧಾನ್ಯಗಳು ಹೆಚ್ಚು ಕಾಲ ಕೆಡದಂತೆ ರಕ್ಷಿಸಬಹುದು.
- ***—ಕೌದಿಗೆ ಹತ್ತಿದ ಕೊಳೆ*** : ಒಮ್ಮೆ ತಪ್ಪು ಮಾಡಿದರೆ ಅದು ಬದುಕಿನುದ್ದಕ್ಕೂ ನೆನಪಾಗಿ ಕಾಡುವುದು; ಹಾಗೆಯೇ ಕೌದಿಗಂಟಿದ ಕಲೆ ಬಟ್ಟೆ ಇರುವವರೆಗೂ ಹೋಗದು; ಕೌದಿ ಬಣ್ಣದ ಬಟ್ಟೆಗಳಿಂದ ಹೊಲಿದ ಸಂಕೀರ್ಣ ಬಟ್ಟೆಯಾದುದ್ದರಿಂದ ಕಲೆ ಅದರ ಮೇಲೆ ಕುಂತರೂ ಕಾಣುವುದಿಲ್ಲವೆಂದೂ ಹೇಳುವುದು ಸಾಮಾನ್ಯ; ನುಡಿಗಟ್ಟಾಗಿ ಇದರ ಬಳಕೆಯನ್ನು ಕುರಿತಂತೆಯೂ ಉಲ್ಲೇಖಿಸಬಹುದು.
- ಕೌದೆ ಮೂಲಭೂತವಾಗಿ ಒಂದು ಕಲೆ; ಅಲೆಮಾರಿ ಸಮುದಾಯಗಳ ಪ್ರತಿಭೆ; ಹಳೆಯ ವಸ್ತುಗಳನ್ನು ಬಳಸಿಕೊಳ್ಳುವುದರಲ್ಲಿನ ಉಪಯುಕ್ತತೆಯೂ ಸರ್ವಮಾನ್ಯವಾದುದು.

ಕೌದೆ Kaude:

- ಉತ್ತರ ಕರ್ನಾಟಕದಲ್ಲಿ ಹಸುವನ್ನು 'ಕೌದೆ' ಎನ್ನುವರು; ಕಂದು ಬಣ್ಣದ ಹಸು; Cow is called Kaude in Utta kannada district of Karnataka state; the cow usually brown in colour is called Kaude;
- ಕಪಿಲೆ>ಕವಿಲೆ>ಕೌಲೆ>ಕೌದೆ ಎಂದು ನಿಷ್ಪತ್ತಿ ಹೇಳುವುದಕ್ಕಿಂತ; "'ಕೌದಿ' ಹೊದೆದ ಹಸು" ಎಂಬುದರಿಂದ ತರಬಹುದೆ?, "ಸಕಲಾತಿ ಹೊದ್ದಹಸು" ಎಂದು ಇರಬಹುದೆ?
- ಹೇಗೂ 'ಲ' ಕಾರಕ್ಕು 'ದ' ಕಾರಕ್ಕು ಸಂಬಂಧ ಕಲ್ಪಿಸುವುದು ಕಷ್ಟವಾದ್ದರಿಂದ ಬೇರೊಂದು ಮೂಲದ ಅನ್ವೇಷಣೆಯಲ್ಲಿ ತೊಡಗುವುದು ಸೂಕ್ತ.

ಕೌದುಂಬೆ Kaudumbe:

- ಅಧೋಮುಖೀ ಬೇರು: ಕತ್ತೆತುಂಬೆ ಸೊಪ್ಪು; Trichodesma indicum; ಒಂದು ಸಸ್ಯಜಾತಿ; Root or stalk of Trichodesma indicum family;
- ಕತ್ತೆ+ತುಂಬೆ>ಕತ್ತೆತುಂಬೆ ಎಂಬುದೇನೊ ಸರಿ, ಆದರೆ 'ಕತ್ತೆತುಂಬೆ>ಕೌದುಂಬೆ ಆಗಿರಬಹುದೆ, ಇದು ಪ್ರಶ್ನೆ.

ಕೌನೆಳ್ಳು Kaune!!u:

- ಕೌನೆರಳು>ಕೌನೆಳಲು; 'ರ' ಮತ್ತು 'ಳ' ಪಲ್ಲಟವಾಗಿವೆ; =ಕವಿನೆರಳು>ಕವಿನೆಳಲು>ಕೌನೆರಳು/ಕೌನೆಳಲು; ಕವಿದುಬರುತ್ತಿರುವ ನೆರಳು/ನೆಳಲು;
- ಮಬ್ಬುಗತ್ತಲೆ; ಸಂಜೆ ಸಮಯದ ನೆರಳು; ಮೋಡಗಟ್ಟಿದ ಸಮಯ; Dusk, twilight hour, light or darkness of evening, cloudy light;
- *ಪ್ರ: 'ಕೌನೆಳ್ಳಾಗ ಹಳ್ಳ ಆರಿಸಬ್ಯಾಡ*(ಬಾ.ಜಿ);
- ಕ್+ಅಉ+ನೆಳ್ಳು>ಕ್+ಔ+ನೆಳ್ಳು>ಕೌನೆಳ್ಳು.

ಕೌಮೋರೆ Kaumōre:

- ಜೋಲುಮೋರೆ; ಸಂತೋಷವಿಲ್ಲದ ಮುಖಭಾವ; ದುಃಖದಿಂದ ಕವಿದ ಮುಖ; Dull face, gloomy face, withered countenance;
- ಕವಿ+ಮೋರೆ; ಕವಿದಮೋರೆ; ಮುಸುಕು, ಆವರಿಸು; ಮರೆಯಾದಂತೆ.
- ತಮಿಳು, ಮಲೆಯಾಳಂ ಮತ್ತು ತೆಲುಗುಗಳಲ್ಲಿ 'ಕವಿ', ತುಳುವಿನಲ್ಲಿ ಕಬಿ; 'ಮೋರೆ' ಪದಕ್ಕೆ ತೆಲುಗಿನಲ್ಲಿ 'ಮೋಮು' ಮತ್ತು 'ಮೋರೆ' ಪದಗಳಿವೆ; ಮಲೆಯಾಳಂನಲ್ಲಿ 'ಮೋರ್' ಪದವಿದೆ;
- 'ಮೋರೆ' ಬಹುತೇಕ ಜನಪದರ ಆಡು ನುಡಿಯಲ್ಲಿದೆ; ಶಿಷ್ಟರೂಪ 'ಮುಖ' ಪದವಿದೆ; ಮುಖ> ಮೊಗರೂಪ ತಳೆಯುವುದೂ ಇದೆ.

ಕೌರವ Kaurava:

- 'ಕೌರವ' ಪದ 'ಕುರು' ಪದದಿಂದ ನಿಷ್ಪನ್ನಗೊಂಡುದು; ಕುರುವಂಶದವ, ಕುರುವಂಶದ ಧೃತರಾಷ್ಟ್ರನ ಮಗ ಎಂಬ ಅರ್ಥದಲ್ಲಿ; Kaurava is a Sanskrit term that refers to the descendants of Kuru, a legendary king who is the ancestor of many of the characters of the `Mahabharatha'; the word `Kaurava' restricts to the children of king `Dhritarashtra';
- 'ಕೌರವ' ದುರ್ಯೋಧನನಿಗೆ ಕೊಡಮಾಡಿದ ಒಂದು ಪರ್ಯಾಯ ಹೆಸರು; 'ಕುರು' ವಂಶದ ರಾಜರು ಇನ್ನೂ ಬೇರೆ ಇದ್ದರೂ, ಬಳಕೆಯಲ್ಲಿ ದುರ್ಯೋಧನನಿಗೆ ಅದು ಸೀಮಿತ; ಹಳ್ಳಿಗಳಲ್ಲಿ 'ಕೌರವ' ಎಂಬ ಹೆಸರೇ ಹೆಚ್ಚು ಪ್ರಚಲಿತ; ಉಚ್ಚಾರಣೆಗೆ ಸುಲಭ ಕೂಡ; The term `Kaurava' refers `Duryodhana' particularly;
- 'ಕೌರವರು', 'ಪಾಂಡವರು' ಎಂಬ ಪದಗಳು ಭಾರತಕಥಾ ಪರಂಪರೆಯಲ್ಲಿ ಸಾಮಾನ್ಯ ಬಳಕೆಯಲ್ಲಿವೆ; 'ಪಾಂಡವರು' ಪದಕ್ಕೆ ಪಾಂಡುರಾಜನ ಮಕ್ಕಳು ಎಂದು ಅರ್ಥ; ಇದೇರೀತಿ 'ಕೌರವರು' ಪದವನ್ನು ನಿಷ್ಪನ್ನ ಮಾಡಲಾಗದು; ಆ ಪ್ರಕಾರ ಧಾರ್ತರಾಷ್ಟ್ರನ ಮಕ್ಕಳು ಎನ್ನಬಹುದೇ ಹೊರತು, ಕೌರವನ ಮಕ್ಕಳು ಎಂದು ಕರೆಯಲಾಗದು; ಏಕೆಂದರೆ ಧೃತರಾಷ್ಟ್ರನಿಗೆ 'ಕೌರವ' ಎಂಬ ಹೆಸರು ಇದ್ದಂತಿಲ್ಲ; The wider meaning is used to represent all the descendants of `Kuru'; the sons of king `Pandu' the younger brother of Dhritarashtra are `Pandavas'; the epic `Mahabharatha' in the earlier parts of popular renditions uses the terms `Kauvravas' and `Pandavas';
- ಈ ದೃಷ್ಟಿಯಿಂದ ಕೌರವ, ಕೌರವರು ಪದ ಬಳಕೆ ವಿಶೇಷ ಸಂದರ್ಭದ್ದು; ದುರ್ಯೋಧನನನ್ನೂ ಅವನ ಸೋದರರನ್ನೂ ಸೂಚಿಸುವಂಥದ್ದು;
- 'ಕೌರವ' ಪದ ಉಚ್ಚಾರಣೆಗೆ ಸುಲಭವಾದ್ದರಿಂದ, ಕುರುವಂಶವನ್ನು ಸೂಚಿಸುತ್ತಿದ್ದುದರಿಂದ ಮತ್ತು ದುರ್ಯೋಧನನೇ ಕುರುಪೀಳಿಗೆಯಲ್ಲಿ ಪ್ರಖ್ಯಾತನಾದ್ದರಿಂದ, ಇದು ಅವನಿಗೆ ಅನ್ವಯಿಸಿ ಬಳಕೆಯಾಯಿತು; ಭಾರತ ಕಥಾಪರಂಪರೆ ಒಂದು ಸಂಸ್ಕೃತಿಯ ಅಂಗವಾಗಿಯೇ ಹರಿದಿದ್ದರಿಂದ 'ಕೌರವ' ಪದ ಒಂದು ಸಾಂಸ್ಕೃತಿಕ ವೈಶಿಷ್ಟ್ಯವನ್ನು ಪಡೆದುಕೊಂಡಂತೆ ತೋರಿತು.

ಕೌರಾಕು Kaurāku:

- ಬೂದಿ ಮುಚ್ಚಿದ ಕೆಂಡವನ್ನು ಮತ್ತೆ ಉರಿಗೊಳಿಸುವುದು/ಬೆಂಕಿ ಮಾಡುವುದು; Blow the fire which is covered with ashes;
- ಬೆಂಕಿ ದೊಡ್ಡದು ಮಾಡಲು, ಕೆಂಡದಮೇಲೆ ಕಡ್ಡಿ/ ಪುಳ್ಳೆಗಳನ್ನು ಹಾಕಿ ಬೆಂಕಿ ಹೆಚ್ಚುವಂತೆ ಮಾಡುವುದು;
- ಕೌರು+ಹಾಕು>ಕೌರ್(ರು)+ಹ್+ಆಕು>ಕೌರ್(ರು)+Ø +ಆಕು>ಕೌರಾಕು;
- 'ಕೌರ್ ಅಥವಾ ಕೌರು' ಪದ ಕವರ್/ಕವರು ಪದದಿಂದ ಬಂದಿರುವಂಥದು; ಕ್+ಅಉ ('ವ'ಆಗಮ)+ರ್> ಕ್+ಔ+ರು>ಕೌರು;
- *ಪ್ರ: 'ಕೆಂಡಕ್ಕೆ ಕೌರಾಕು ಬೆಂಕಿ ದೊಡ್ಡದಾಗುತ್ತದೆ'*;
- 'ಕೌರಾಕು' ಪದವನ್ನು ನುಡಿಗಟ್ಟಾಗಿಯೂ ಬಳಕೆಮಾಡಬಹುದು; ಆಗ ಅದು ಸಾಂಕೇತಿಕ ಅಭಿವ್ಯಕ್ತಿಯಾಗುವುದು; ಮರೆಯುತ್ತಿರುವ ಕೆಲವು ವಿಷಯಗಳನ್ನು ಕೆದಕಿ ಮರುಜೀವ ಕೊಡುವಂತೆ ಮಾಡುವ ಸಂದರ್ಭದಲ್ಲಿ ಬಳಕೆ; ಅಡಗಿಹೋಗುತ್ತಿರುವ ಸಂಗತಿಗಳನ್ನು ಮತ್ತೆ ಮೇಲ್ಪದರಕ್ಕೆ ತಂದು ಹೊಗೆಯಾಡುವಂತೆ ಮಾಡುವುದು ಈ ಪದದ ಒಂದು ಅರ್ಥವಿಶೇಷ;

- ಕೌಟುಂಬಿಕ ಅಥವಾ ಸಾಮಾಜಿಕ ಸಂದರ್ಭಗಳಲ್ಲಿ ಮರೆತುಹೋದ ಎಷ್ಟೋ ವರ್ಷಗಳ ಮಾತುಗಳನ್ನು ಸನ್ನಿವೇಶಗಳ ಅನುಗುಣವಾಗಿ ಚಾಲ್ತಿಗೆ ಬರುವುದನ್ನು 'ಕೌರು' ಪದ ಧ್ವನಿಸುತ್ತದೆ;
- 'ಕೌರು' ಎನ್ನುವುದಕ್ಕೆ ಕೆಟ್ಟವಾಸನೆ, ಸುಟ್ಟವಾಸನೆ ಎಂದೂ ಅರ್ಥವಿದೆ; ಆಗ ಅದು 'ಕಮರು ಪದದಿಂದ ಬಂದುದಾಗುತ್ತದೆ. Stench, stink, malodour, scorch, burning smell.

ಕೌಲಕೊಟುಗಿ Kaulakoṭagi:

- ಹಸುವಿನ ಕೊಟ್ಟಿಗೆ; ಹಸುಗಳನ್ನು ಕೂಡಿಹಾಕುವ ಸ್ಥಳ(ಕೊಟ್ಟಿಗೆ); ಹಿಂದಿನ ದಿನಗಳಲ್ಲಿ ಹಸುಗಳನ್ನು ಪ್ರತ್ಯೇಕ ಗೊಂತು(ಗೊತ್ತು) ಗಳಲ್ಲಿ ಕಟ್ಟಿಹಾಕುತ್ತಿದ್ದರೂ, ಒಟ್ಟಿಗೆ ಕೂಡಿಹಾಕುವ ವ್ಯವಸ್ಥೆಯೂ ಇತ್ತು; ಹಾಲುಕೊಡುವ ಹಸುಗಳು ಮತ್ತು ಉಳುಮೆಗೆ ಬಳಸುವ ಎತ್ತುಗಳು ಎಂಬ ವಿಭಜನೆ ಇದ್ದಂತೆ ತೋರುವುದು; Cow-shed, cattle-shed, cowshed or cattle-shed is placed inside the house; the shed is separated between dairy cattle and cattle use for ploughing or cultivation;
- ಕೌಲ+ಕೊಟುಗಿ=ಕೌಲೆ+ಕೊಟ್ಟುಗೆ=ಕೌಲೆಕೊಟ್ಟುಗೆ; ಕಪಿಲೆ>ಕವಿಲೆ>ಕೌಲೆ>ಕೌಲ; ಕಪಿಲೆ ಕೊಟ್ಟಿಗೆ>ಕವಿಲೆ ಕೊಟ್ಟಿಗೆ>ಕೌಲೆ ಕೊಟ್ಟುಗೆ>ಕೌಲ ಕೊಟುಗಿ, 'ಕಪಿಲೆ' ಕಂದುಬಣ್ಣದ ಹಸು; ಕೊಟ್ಟಿಗೆ/ಕೊಟ್ಟುಗೆ/ಕೊಟ್ಟಗೆ/ಕೊಟ್ಟಗಿ = ದನಗಳನ್ನು/ಹಸುಗಳನ್ನು ಕಟ್ಟಿಹಾಕುತ್ತಿದ್ದ ಜಾಗ/ಸ್ಥಳ; ಮನೆಯ ಒಳಗೆ ಈ ವ್ಯವಸ್ಥೆ ಇರುತ್ತಿತ್ತು; ಕೆಲವೊಮ್ಮೆ ಮನೆಗೆ ಸೇರಿದಂತೆ ಒಪ್ಪಾರ್ಲು ಅಥವಾ ತೀರು ಇಳಿಸಿ ಇಂಥ ಜಾಗದ ವ್ಯವಸ್ಥೆ ಮಾಡಲಾಗುತ್ತಿತ್ತು.

ಕೌಲಕೊಪ್ಪ kaulakoppa :

- ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ತಾಲ್ಲೋಕಿನ ಕ್ರಿ.ಶ.೧೭೨೯ರ ೩೮ನೇ ಶಾಸನದಲ್ಲಿ ಇದರ ಉಲ್ಲೇಖ; A place in Chikkamagaluru district of Shringeri taluk teferred in 38th inscription of 1729A.D;
- ಲಕ್ಕವಳ್ಳಿಯ ಚೆನ್ನಣ್ಣನು ಅವಿಮುಕ್ತೇಶ್ವರ ದೇವರಿಗೆ ಕೊಟ್ಟ ದಾನದ ವಿವರವಿದೆ;
- ಕೌಲ+ಕೊಪ್ಪ; 'ಕೌಲ' ಎಂದರೆ ಒಪ್ಪಂದದ ಕರಾರು ಎಂಬ ಅರ್ಥವಿದೆ; 'ಕೌಲ'ಕ್ಕೆ ಕೌಲು, ಕವುಲು, ಕವುಲು ಕರಾರು ಎಂಬ ಬಳಕೆಯ ರೂಪಗಳಿವೆ; Kaula means agreement, contract;
- 'ಕೊಪ್ಪ' ಎಂದರೆ 'ಚಿಕ್ಕಹಳ್ಳಿ' ಎಂಬ ಅರ್ಥವಿದೆ, ಯಾವುದೋ ಕರಾರಿನ ಮೇಲೆ ನಿರ್ಮಿತವಾದಂತಹ ಸ್ಥಳನಾಮ ಇದಾಗಿರಬಹುದು;
- ಒಡಂಬಡಿಕೆಗೆ ಒಳಪಟ್ಟ ಊರು ಎಂಬುದಾಗಿ ಅರ್ಥಮಾಡಬಹುದೆ? A village which is conditioned by an agreement.

(E.C- ೧೧; ಚಿಕ್ಕ.ಜಿ.)

ಕೌಲಿಹೊಲ Kaulihola:

- ದನಗಳ ಮೇವಿಗಾಗಿ ಪ್ರತ್ಯೇಕ ಬಿಟ್ಟ ಹೊಲ; ಗೋಮಾಳ, ಹುಲ್ಲುಗಾವಲು; Village common meadow; grassland which is common property;
- ಕೌಲೆ+ಹೊಲ=ಕಪಿಲೆ>ಕವಿಲೆ>ಕೌಲೆ+ಹೊಲ> ಕೌಲಿಹೊಲ; ಕೌಲೆ<ಕಪಿಲೆ=ಹಸು(ಬ.ಜಿ.);
- ಗೋಮಾಳಗಳು ಮೇವಿಗಾಗಿ ಮೀಸಲಾಗಿದ್ದು, ಸಾರ್ವತ್ರಿಕವಾಗಿ ಎಲ್ಲರ ದನಗಳಿಗೂ ಬಳಕೆಯಾದುದು;
- ಪ್ರತಿ ಹಳ್ಳಿಯಲ್ಲಿಯೂ ಇಂಥ ಸಾರ್ವಜನಿಕ ಪ್ರದೇಶ ಇರುತ್ತಿತ್ತು;
- ಇಂದಿನ ದಿನಗಳಲ್ಲಿ ಒತ್ತುವರಿಯಿಂದ ಕಾಣೆಯಾಗುತ್ತಿದೆ; ಫಲವಾಗಿ ಹಸು, ಎತ್ತುಗಳ ಸಾಕಾಣಿಕೆ ಕೂಡ ಕಡಿಮೆಯಾಗುತ್ತಿದೆ.

ಕೌಲು kaulu :

- ಒಪ್ಪಂದ; ಮಾತುಕೊಡುವುದು; ಕರಾರು; Agreement, treaty, contract, promising;
- ಅರಬ್ಬಿ ಪದ; ಕಬಲ, ಕವಲ, ಕವಲು ಸಂವಾದಿ ರೂಪಗಳು;
- ಹಿಂದೂಸ್ತಾನಿ/ಮರಾಟಿಗಳಲ್ಲಿ 'ಕೌಲ' ಪದ ರೂಪವಿದೆ; 'ಕೌಲುಕರಾರು' ಎಂಬ ರೂಪವೂ ಸಿಗುತ್ತದೆ;
- ಅರಬ್ಬಿಯಿಂದ ಮರಾಟಿ ಭಾಷೆಯ ಮೂಲಕ ಕನ್ನಡಕ್ಕೆ ಈ ಪದ ಬಂದಿರಬೇಕು;
- ಒಂದು ರಾಗದ ಹೆಸರು, ಅಮೀರ್ ಖುಸ್ರೋ ಇದರ ಜನಕ; A tune which was composed by

Amir khusro, an Indian sufi musician, poet and scholar;
- 'ಪ್ರಮಾಣ' ಎಂಬ ಅರ್ಥದಲ್ಲಿಯೂ ಬಳಕೆಯಾಗಿದೆ.

ಕೌಲು Kaulu:
- ತೆಂಗಿನ ಚಿಪ್ಪಿನಿಂದ(ಕಂಟ/ಕರಟ) ಮಾಡಿದ ಸೌಟು; ಇದಕ್ಕೆ 'ಸಟಗ' ಎಂತಲೇ ಕರೆಯಲಾಗುತ್ತಿತ್ತು; ಲೋಹ ಬಳಕೆಗೆ ಮೊದಲು ಊಟ ಬಡಿಸುವ ಪ್ರಮುಖ ಸಾಧನವಾಗಿ ಬಳಸಲಾಗುತ್ತಿತ್ತು; ಗ್ರಾಮೀಣರಿಗೆ ಸುಲಭವಾಗಿ ದೊರೆಯದ ವಸ್ತು ಕೂಡ; Spoon or ladle made of coconut shell, agreement;
  ಪ್ರ: 'ಕೌಲು ತೆಗೆದು ಕೊಂಡು ಸಾರುಬಡಿಸು';
- ಒಪ್ಪಂದದ ಅರ್ಥದಲ್ಲಿ ಬಳಕೆ; ಪರಸ್ಪರ ವ್ಯಕ್ತಿ ಮತ್ತು ಸಂಸ್ಥೆಗಳ ನಡುವೆ ನಡೆಯುವ ಒಪ್ಪಂದ;
  ಪ್ರ: 'ಆಸ್ತಿ ವಿಷಯದಲ್ಲಿ ಅವರ ನಮ್ಮ ನಡುವೆ ಕೌಲು ಆಗಿದೆ';
- 'ಕಂದು ಬಣ್ಣದ ಹಸು' ಎಂಬ ಅರ್ಥದಲ್ಲಿ; ಕೌಲೆ/ಕೌಲು ಎಂಬ ಪ್ರಯೋಗದಲ್ಲಿ; Brown coloured cow;
- ಕಪಿಲೆ>ಕವಿಲೆ>ಕೌಲೆ>ಕೌಲು;
- ಮರಾಟಿ/ಹಿಂದೂಸ್ತಾನಿಯಲ್ಲಿ 'ಕೌಲ್' ಅಥವಾ 'ಕೌಲ' ಎಂದಿದೆ; ಅಲ್ಲಿಂದ ಬಂದಿರಬಹುದು;
- 'ಕೌಲು ಕರಾರು' ಎಂಬ ಪ್ರಯೋಗವೂ ಇದೆ; ಒಂದೇ ಅರ್ಥದ ಎರಡು ಪದಗಳು; ದ್ವಿರುಕ್ತಿ; duplication; 'ಕರಾರು' ಪದವೂ ಮರಾಟಿಯ 'ಖರಾರಾ' ಪದದಿಂದ ಬಂದಿರುವ ಸಾಧ್ಯತೆ ಇದೆ.

ಕೌಲು ಮರ Kaulu mara
- ಒಂದು ಬಗೆಯ ಮರ; Careya arborea; ಎತ್ತರವಾಗಿ ಬೆಳೆಯುವ ಮರ; A kind of tree, careya arborea;
- ಔಷಧಿಯಾಗಿ ಬಳಕೆ; ನೆಗಡಿ, ಕೆಮ್ಮು, ಜ್ವರ, ಸಿಡುಬು, ವಾಂತಿ, ಭೇದಿಗಳಿಗೆ ಕಷಾಯವಾಗಿ ಉಪಯುಕ್ತ; It is used in coughs, cold, fever, vomitation;
- ಬೀಜಗಳು ವಿಷಯುಕ್ತವಾದುದರಿಂದ ಸೇವಿಸಲು ಯೋಗ್ಯವಲ್ಲ;
- ಮಲೆನಾಡಿನಲ್ಲಿ ಬೆಳೆಯುವ ಮರ. A tree which grows in the region of Malnad.

ಕೌಲೆತ್ತು Kaulettu:
- ಕೋಲೆ ಬಸವ; ವೇಷ ತೊಡಿಸಿ ಆಟವಾಡಿಸಲು ಬಳಸುವ ಎತ್ತುಗಳು; It is a bull which is trained to entertain, people call it Kole Basava;
- ದನಗಳಿಗೆ ತಿಳಿವಳಿಕೆ ಕಲಿಸಿ, ತಮ್ಮ ಸೂಚನೆಯಂತೆ ಅವು ವರ್ತಿಸುವುದು;
- ಕೋಲೆ ಬಸವಗಳಿಗೆ ಅಲಂಕಾರ ಮಾಡಿ ಮನೆಮನೆಗೆ ಕರೆದೊಯ್ದು ಭಿಕ್ಷೆ ಎತ್ತುವುದು; The bulls of the local Indian breed are decorated and trained to entertain the people; this is accompanied by his master and he makes his living;
- ಮನುಷ್ಯ ಮೂಕಪ್ರಾಣಿಗಳನ್ನೂ ಸ್ವಾರ್ಥಕ್ಕೆ ಬಳಸಿಕೊಳ್ಳುವ ಬಗೆ;
- ಗೋವುಗಳ ಬಗೆಗೆ ಜನರಲ್ಲಿರುವ ಭಾವನಾತ್ಮಕ ಸಂಬಂಧ;
- 'ಹೌದಪ್ಪ' ಗಳಿಗೆ ಸಾಂಕೇತಿಕವಾಗಿ ಬಳಕೆಯಾಗುವ ಪದ;
- ಕೌಲೆ+ಎತ್ತು>ಕೌಲೆತ್ತು(<ಕೌಲ್+ಎತ್ತು);ಕಪಿಲೆ+ಎತ್ತು>ಕಪಿಲೆತ್ತು>ಕವಿಲೆತ್ತು>ಕೌಲೆತ್ತು;(ಕಪಿಲೆ=ಕಂದು ಬಣ್ಣದಹಸು);
- ನೀರೆತ್ತುವ (ಕಪಿಲೆ) ಹಸುವಿಗೂ ಇದು ಅನ್ವಯ; Ox uses to lift water;
- 'ಕೋಲೆ ಬಸವ' ಅಥವಾ 'ಕೌಲೆತ್ತು' ಗಳನ್ನು ಆಡಿಸಿಕೊಂಡು ಬರುವ ಕಲಾಕಾರರನ್ನು 'ಕೌಲೆತ್ತಿನವರು' ಎಂದು ಹೇಳುವುದೂ ಉಂಟು.

ಕೌಸ Kausa:
- ಕೊಳಕ(ತು.ಜಿ.); Filthy, an insulting approach or language;
- ಬೈಗುಳದಲ್ಲಿ 'ಕೌಸ'ವನ್ನು ಗಡ್ಡೆ ಎಂಬರ್ಥದಲ್ಲಿ ಬಳಕೆ.

ಕೌಸಲ್ಯೆ kousalye :
- ದಶರಥನ ಹೆಂಡತಿ; ರಾಮನ ತಾಯಿ; 'ಕೋಸಲ' ದೇಶದ ರಾಣಿಯಾದ್ದರಿಂದ, ಆ ಮೂಲಕ 'ಕೌಸಲ್ಯೆ' ಹೆಸರು ಬಂದಿರಬೇಕು; 'ಕೌಸಲೇಯ' ಎಂಬ ಪದವೂ ಇದೆ, ಕೌಸಲ್ಯಾಳ ಮಗ ರಾಮ ಎಂದು ಅರ್ಥ; 'ಕೌಸಲ್ಯಾ' ಎಂಬ ರೂಪವೇ 'ಕೌಸಲ್ಯೆ' ಆಗಿದೆ; ಸಂಸ್ಕೃತದ ಪದಗಳೆಲ್ಲ ಕನ್ನಡದಲ್ಲಿ

ಬಳಕೆಯಾದಾಗ ಅ>ಎ ಆಗುವುದು ಸಹಜ; Kausalye is the one among the three wives of king Dasharatha of Ayodhya; Kausalya was mother of Rama, therefore the word 'Kausaleya' means Rama;

- ರಾಮಾಯಣದ ಪಾತ್ರಗಳ ಹೆಸರುಗಳು ಜನಸಾಮಾನ್ಯರ ಮೇಲೆ ಪ್ರಭಾವ ಬೀರಿರುವುದು ನಿಜ, ಅಂತಹ ಹೆಸರುಗಳಲ್ಲಿ 'ಕೌಸಲ್ಯೆ' ಒಂದು; 'higher culture' ವಲಯದಲ್ಲಿ ಈ ಹೆಸರು ಹೆಚ್ಚು ಪ್ರಚಲಿತ; 'lower culture' ನಲ್ಲಿ ವಿರಳ; ಜನಸಾಮಾನ್ಯ ವರ್ಗದಲ್ಲಿಯೂ ಅಪರೂಪವೆನ್ನುವಂತೆ ಈ ಹೆಸರಿನ ವ್ಯಕ್ತಿಗಳು ಸಿಗುತ್ತಾರೆ; The story of Kausalye's in the Ramayana epic is very well familiar to higher culture, but very rare in lower culture;
- ಜನಸಾಮಾನ್ಯರಿಗೆ 'ಕೌಸಲ್ಯೆ'ಯ ವಿಚಾರ ಗೊತ್ತಿದೆ; ಒಳ್ಳೆಯ ರೀತಿಯಲ್ಲಿಯೇ ಆಕೆಯನ್ನು ಕುರಿತು ಪರಿಭಾವಿಸಲಾಗಿದೆ; ಅಯೋಧ್ಯೆಯ ರಾಜಕೀಯ ಸುಳಿಯಲ್ಲಿ 'ಕೌಸಲ್ಯೆ'ಯೂ ಸಿಕ್ಕಿಕೊಂಡ ಬಗ್ಗೆ ಅವರಿಗೇನೂ ತಿಳಿದಿಲ್ಲ;
- ಜನಸಾಮಾನ್ಯರಿಗೆ ಕೌಸಲ್ಯೆಯ ವಿಚಾರ ಬಯಲಾಟಗಳ ಮೂಲಕ; ಹರಿಕಥೆ, ಗಮಕ ವಾಚನದಂತಹ ಆ ಕಾಲದ ಸಾರ್ವಜನಿಕ ಸಂಪರ್ಕ ವಿಧಾನಗಳಿಂದ ತಿಳಿದಿರಬಹುದು, ಎಲ್ಲಕ್ಕಿಂತ ಹೆಚ್ಚಾಗಿ ಪಾರಂಪರಿಕ ಮೌಖಿಕ ಕಥಾಪ್ರಸಾರ ಮುಖ್ಯ ಕಾರಣವಾಗಿದೆ; ರಾಮಾಯಣದ ಪ್ರಸಂಗಗಳಲ್ಲಿ ನಮ್ಮ ಹಾಡುಗಾರರು ಸೀತೆ, ರಾಮ, ಲಕ್ಷ್ಮಣ, ಭರತ, ಕೈಕೆ, ರಾವಣ, ಲವ-ಕುಶ ಮುಂತಾದ ಪಾತ್ರಗಳ ಮೇಲೆ ತಮ್ಮ ಕಥಾನಕಗಳನ್ನು ನಡೆಸಸಿರುವ ಹಾಗೆ ಕಾಣುತ್ತದೆ; ಸಮಸ್ಯೆಯ ಕೇಂದ್ರ ವಲಯಕ್ಕೆ ಬರದ 'ಕೌಸಲ್ಯೆ'ಯಂತಹ ಪಾತ್ರದ ಮೇಲೆ ಗಾಯಕರು ಗಮನ ಹರಿಸಲು ಯಾವ ಕಾರಣವೂ ಇದ್ದಂತಿಲ್ಲ; The common folk witness the story of the Ramayana and its characters through Harikatha and musical rendering of poetry;
- ಪರೋಕ್ಷವಾಗಿ 'ಕೌಸಲ್ಯೆ'ಯ ಪಾತ್ರದ ಪ್ರಸ್ತಾಪ ಆಗಿರಬಹುದು; "ಹೆಂಡತಿ ಮಟ್ಟೆ ನೋಡುತ್ತಾಳೆ, ತಾಯಿ ಹೊಟ್ಟೆ ನೋಡುತ್ತಾಳೆ" ಎಂಬೊಂದು ಗಾದೆಯಿದೆ; ಇಲ್ಲಿ 'ಮಟ್ಟೆ' ಎಂದರೆ ಗಂಟು, ಸಂಪತ್ತು, ಹೊರೆ ಎಂದು, ಹೆಂಡತಿಯ ದೃಷ್ಟಿ ಆ ಕಡೆಗೆ; ಆದರೆ ತಾಯಿ ತನ್ನ ಮಗನ ಹಸಿವನ್ನು ನೋಡುತ್ತಾಳೆನ್ನುವುದು ಅರ್ಥ; ಕೌಸಲ್ಯೆಗೆ ಸಂಬಂಧಿಸಿದ ಹಾಗೆ ಒಂದು ಉಲ್ಲೇಖ ಇದೆ: ಪಟ್ಟಾಭಿಷೇಕ ಸಂದರ್ಭ, ತಂದೆಯ ಕರೆಯ ಮೇಲೆ ರಾಮ ಹೋಗಿರುವನು, ಮಂಗಳ ವಾದ್ಯಗಳು ಕೇಳಿಸುತ್ತಿವೆ, ಇದ್ದಕ್ಕಿದಂತೆ ಮಂಗಳವಾದ್ಯಗಳು ನಿಲ್ಲುತ್ತವೆ; ರಾಮ ಏನೂ ಆಗಿಲ್ಲವೆಂಬಂತೆ ಹಿಂದಿರುಗುತ್ತಾನೆ, ಕೌಸಲ್ಯೆ ಕೂಡ ಗೊಂದಲಕ್ಕೆ ಒಳಗಾಗಿದ್ದಾಳೆ, ತೋರಗೊಡದೆ "ಮೊದಲು ಊಟಕ್ಕೇಳು, ಆಮೇಲೆ ಉಳಿದದ್ದು" ಎಂದು ಹೇಳಿದಳಂತೆ; ಇದರಿಂದ ಕೌಸಲ್ಯೆ ಮೊದಲು ತಾಯಿ, ಆಮೇಲೆ ರಾಣಿಯಂತೆ ವರ್ತಿಸಿದ್ದಾಳೆ; ಕೌಸಲ್ಯೆಯ 'ವಾತ್ಸಲ್ಯ' ಗುಣವನ್ನು ಈ ಪ್ರಕರಣ ಅತ್ಯಪೂರ್ವ ರೀತಿಯಲ್ಲಿ ದಾಖಲಿಸುತ್ತದೆ. Kausalye evokes maternal instinct even at the time of Rama's unsuccessful coronation ceremony; she always shows kindness and the best interest in mind.
- 'ಕೌಸಲ್ಯೆ' ಪದ 'ಕೌಸಲ್ಯಾ' ಪದದಿಂದ ಬಂದಿದೆ; 'ಕೌಸಲ್ಯಾದೇವಿ' ಎಂದೂ ಪರಂಪರೆಯಲ್ಲಿ ಕರೆಯಲಾಗಿದೆ;
- 'ಕೌಸಲ್ಯೆ' ದಶರಥನ ಹಿರಿಯ ಹೆಂಡತಿ; The first(the eldest) wife of king Dasharatha; she belongs to Kosala kingdom;
- 'ಕೌಸಲ್ಯೆ' ಪದವನ್ನು 'ಕೋಸಲ' ಪದದೊಡನೆ ಕೂಡ ತಳಕು ಹಾಕಿಕೊಂಡಂತೆ ಕಾಣುತ್ತದೆ; 'ಕೋಸಲ' ಒಂದು ದೇಶದ ಹೆಸರು, ದಶರಥ ಅದನ್ನು ಆಳುತ್ತಿದ್ದ; ಇದರಿಂದ 'ಕೋಸಲ'ದಿಂದ 'ಕೌಸಲ್ಯೆ' ಪದವನ್ನು ನಿಷ್ಪನ್ನಗೊಳಿಸಿದರೆ, ಆಗ ಕೋಸಲ ದೇಶದ ರಾಣಿ ಎಂಬ ಅರ್ಥದೊಡನೆ ಪದ ಸಂಲಗ್ನವಾಗುತ್ತದೆ;
- ಆದರೆ "ಕೋಸಲ ದೇಶದ ಅರಸನಾದ ಭಾನುಮಂತನೆಂಬ ರಾಜನ ಮಗಳು" (ಪು.ನಾ.ಚೂ.) ಎಂದಿರುವುದರಿಂದ 'ಕೌಸಲ್ಯೆ' ಪದವನ್ನು ತನ್ನ ತಂದೆಯ ದೇಶವಾದ 'ಕೋಸಲ'ದಿಂದ ನಿಷ್ಪನ್ನಗೊಳಿಸಬೇಕಾಗುತ್ತದೆ;

- ದಶರಥ "ಆಗ್ನೇಯ ಕೋಸಲವನ್ನು ಪಾಲಿಸುತ್ತಿದ್ದ" ವಿಚಾರವಿದೆ(ಪು.ನಾ.ಚೂ.); ಅಂದರೆ 'ಕೋಸಲ' ಎರಡಾಗಿ ಒಡೆದಿತ್ತೆ? ಸಂಶಯ; ಏನಾದರೂ ಇರಲಿ 'ಕೌಸಲ್ಯೆ'ಯ ಹೆಸರಂತೂ 'ಕೋಸಲ' ರಾಜ್ಯದ ಹೆಸರಿಗೆ ಅಂಟಿಕೊಂಡಿರುವುದಂತೂ ನಿಜ(ತಂದೆಯ ಅಥವಾ ಪತಿಯ ರಾಜ್ಯದೊಡನೆ).

ಕೌಸಲ್ಯೆ ಮುಡಿ Kousalye muḍi:

- ಯಕ್ಷಗಾನ ಸ್ತ್ರೀಪಾತ್ರಧಾರಿಯ ವೇಷ; Costume of woman character in Yakshagana;
- 'ಚಕ್ರಮುಡಿ' ಎನ್ನುವರು. This is called `Chakra mudi'.

ಕೌಸಾಮ್ರ Kausāmra:

- ಮಾಂಸದ ಸಾರು; ಕೌಸು+ಆಮ್ರ>ಕೌಸಾಮ್ರ; 'ಆಮ್ರ' ಎಂದರೆ ಹುಳಿ, ಸಾರು; 'ಕೌಸು' ಎಂದರೆ ಮಾಂಸ; ಮಾಂಸದ ಹುಳಿ/ಮಾಂಸದ ಸಾರು; Dish of meat and chicken cooked with curry powder(soup);
- ಮಾಂಸ ಬೇಯಿಸಿ ಮಾಡಿದ ಸಾಂಬಾರು; *ಪ್ರ: 'ಕೋಳಿಕೂದು ಕೌಸಾಮ್ರ ಮಾಡಿದೆ'.*

ಕೌಳ Kauḷa:

- ತಲೆತಿರುಗು; ಒಂದು ಜನಸಮೂಹ; ತಾಂಬೂಲ; ಕತ್ತುಲು; Giddyness, crowd, pan supari, pan beeda, mouthful of betel leaf;
- ಕೌಲ=ಕೌಳ; ಕಾವಳ=ಕತ್ತಲು; 'ಕೌಳ' ಪದ 'ಕಾವಳ'ದಿಂದ ಬಂದಿರಬಹುದೆ?
- 'ಕೌಳ'ಕ್ಕೆ ಚಾಮರಾಜ ನಗರ ಜಿಲ್ಲೆಯಲ್ಲಿ ಕತ್ತಲು ಎಂಬ ಅರ್ಥ; 'ಶೈವ ವಾಮಾಚಾರ ಪದ್ಧತಿಯ ಒಂದು ಪಂಗಡ'(ಕ.ನಿ.); ಕಾಪಾಲಿಕರನ್ನು ಹೋಲುವ ಮತ್ತೊಂದು ಪಂಗಡ ಎಂಬ ಅಭಿಪ್ರಾಯವೂ ಇದೆ. `Kauḷa' stands for `Darkness' in the district of Chamarajanagar district of Karnataka; a community which practices black magic or necromancy; a group which resembles ascetics.

ಕೌಳಗಿ Kauḷagi:

- ಕೃಷಿ ಉಪಕರಣದ ಒಂದು ಭಾಗ; A part of an agricultural instrument;
- ನೇಗಿಲಿಗೆ ಹಾಕಿರುವ ಬೆಣೆಗಳು;
- ನೆಲವನ್ನು ಆಳವಾಗಿ ಅಥವಾ ಮೇಲ್ಮಟ್ಟದಲ್ಲಿ ಉಳಲು ಸಹಾಯಕವಾಗುವಂತೆ ನೇಗಿಲ ಮೇಲೆ ಮತ್ತು ಕೆಳರಂಧ್ರಗಳಲ್ಲಿ ಎರಡು ಗೆಣೆ(ಬೆಣೆ)ಗಳನ್ನು ಜೋಡಿಸಲು ಇರುವ ವ್ಯವಸ್ಥೆ; Peg, wedges in plough(an agricultural implement);
- ಹಾಲಕ್ಕಿ ಜನಸಮುದಾಯದಲ್ಲಿ ಬಳಸುವ ನೇಗಿಲು. A plough uses in `Halakki' community.

ಕೌಳಿಗೆ Kauḷige:

- ದೊಡ್ಡ ತಟ್ಟೆ; ಲೋಟ; ತೆರಿಗೆ; ಬಾಳೆಎಲೆ ಅಥವಾ ವೀಳ್ಯೆದೆಲೆಯ ಕವಳಿಗೆ>ಕೌಳಿಗೆ-ಲೆಕ್ಕ; Large plate, tumbler, tax, a bunch or bundle of banana leaves or betel leaves;
- ಹಿತ್ತಾಳೆ, ಕಂಚು ಮತ್ತು ತಾಮ್ರದಲ್ಲಿ ಮಾಡಿದ, ಸಂಧ್ಯಾ ವಂದನೆಗೆ ಅಗತ್ಯವಾಗಿ ಬಳಸುವ ವಸ್ತುಗಳು; ನೀರನ್ನು ಇಡುವ ಪಾತ್ರೆ(ಚಿಕ್ಕ.ಜಿ.); Brass or bronze, copper utensils use to keep water to perform Sandhyavandhana, a religious ritual;
- ಜನರ ಮೇಲೆ ಹಾಕುವ ತೆರಿಗೆಗೆ ಕೂಡ ಪದ ಬಳಕೆ; A tax levied on people or citizens; *ಪ್ರ: 'ಸರ್ಕಾರಕ್ಕೆ ಕೌಳಿಗೆ ಕಟ್ಟಾಗಿದೆ'*;
- ನಿರ್ದಿಷ್ಟ ಅಳತೆಯ ಬಾಳೆಎಲೆ/ವೀಳ್ಯೆದೆಲೆಗೆ 'ಕೌಳಿಗೆ' ಪದ ಬಳಕೆ; ಕವಳಿಗೆ>ಕೌಳಿಗೆ ಎಂಬ ನಿಷ್ಪತ್ತಿಯಲ್ಲಿ; ಒಂದು ಕವಳಿಗೆ(ಕೌಳಿಗೆ)ಗೆ ೨೦ಎಲೆಗಳಂತೆ ಲೆಕ್ಕವಿದೆ;
- ಉಪಕರಣ ಸಂಸ್ಕೃತಿಯ ಭಾಗವಾಗಿ ಪ್ರಚಲಿತ.

ಕೌಳು Kauḷu:

- ಕೆನ್ನೆಯ ಕೆಳಭಾಗ; Lower part of chin;
- **—ಕೌಳು ಕತ್ತಿಹುಣ್ಣು** : ಕೆನ್ನೆಹುಣ್ಣು; ಕೆನ್ನೆಯ ಮೇಲೆ ಏಳುವ ಹುಣ್ಣು; ಪಂಚಲೋಹದ ಕಡ್ಡಿಯನ್ನು ಚೆನ್ನಾಗಿ ಕಾಯಿಸಿ, ಹುಣ್ಣಿರುವ ಜಾಗಕ್ಕೆ ಇಡಲಾಗುವುದು; ಸುಟ್ಟ ಹುಣ್ಣು ವಾಸಿಮಾಡಲು ಗಿಡಮೂಲಿಕೆ ರಸಹಚ್ಚಿ, ಹೊಟ್ಟೆಗೂ ಕುಡಿಯಲು ಕೊಡುವರು; Sore, boil on the cheek;
- ತಮಿಳು ಮತ್ತು ಮಲೆಯಾಳಂಗಳಲ್ಲಿ ಕ್ರಮವಾಗಿ 'ಕವುಳ್' ಮತ್ತು 'ಕವಿಳ್' ರೂಪಗಳಿವೆ.

ಖಂಕಡಿ ಗಿಡ್ khaŋkaḍi giḍ :

- ಒಂದು ಪ್ರಕಾರದ ಸಾಧನ–ಸಲಕರಣೆ; ನೀಲಗಿರಿ ಮರದ ತುಂಡಿನಿಂದ ತಯಾರಿಸಿದ್ದು; ರಚನೆಯ ವಿನ್ಯಾಸದ ಬಗೆಗೆ ಮಾಹಿತಿ ದೊರಕಿಲ್ಲವಾದರೂ ಬಟ್ಟೆ ನೇಯುವ ಯಂತ್ರಕ್ಕೆ ಅಳವಡಿಸುವಂಥದು; ಬಟ್ಟೆ ನೇಯುವಾಗ ಉಪಯೋಗಕ್ಕೆ ಬರುತ್ತದೆ; A tool which is adjusted to weaving machine; (made from eucalyptus tree);
- ನೇಯ್ಗೆ ಯಂತ್ರ ಹಲವು ಬಿಡಿ ಉಪಕರಣಗಳಿಂದ ಕೂಡಿಸಿ ಸಿದ್ಧಪಡಿಸುವಂಥದು; ಅಂತಹ ಉಪಕರಣಗಳಲ್ಲಿ 'ಖಂಕಡಿ ಗಿಡ್' ಸಹ ಒಂದು (ಚಿಕ್ಕ.ಜಿ).

ಖಂಕ್ರೊಟ್ಟಿ khaŋkroṭṭi :

- ಖಡಕ್ ರೊಟ್ಟಿ, ಖಟರೊಟ್ಟಿ ಎಂಬ ಇತರೆ ಸಂವಾದಿ ರೂಪಗಳೂ ಬಳಕೆಯಲ್ಲಿವೆ; ಖಟ+ ರೊಟ್ಟಿ>ಖಟರೊಟ್ಟಿ; ಖಟ=ಒಣಗಿದ; ಖಂಕ+ ರೊಟ್ಟಿ>ಖಂಕ್‌ರೊಟ್ಟಿ>ಖಂಕ್ರೊಟ್ಟಿ; Roti which is made from stoneground maize flour, traditionally known as atta; it is very good for sound health and sound body;
- ರೊಟ್ಟಿಯಲ್ಲಿ ಹಲವು ಪ್ರಕಾರಗಳಿದ್ದು ಅವುಗಳಲ್ಲಿ ಖಂಕ್ರೊಟ್ಟಿಯೂ ಸಹ ಒಂದು; ಇದು ರಾಗಿ, ಗೋಧಿ, ಅಕ್ಕಿಯಿಂದ ತಯಾರಿಸಿದ್ದಲ್ಲ; ಜೋಳ ಅಥವಾ ಮುಸುಕಿನ ಜೋಳದ ಹಿಟ್ಟಿನಿಂದ ತಯಾರಿಸಿದ್ದು;
- ತಯಾರಿಸಿದ ರೊಟ್ಟಿಯನ್ನು ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ ಸಂಸ್ಕರಿಸಿದ ಗಟ್ಟಿ ಅಥವಾ ಮಂದವಾದ ರೊಟ್ಟಿ; ತಿನ್ನಲು ಯೋಗ್ಯವಾದ ಆಹಾರಪದಾರ್ಥ; ಉತ್ತರಕರ್ನಾಟಕ ಭಾಗದಲ್ಲಿ ಯತೇಚ್ಚವಾಗಿ ರೂಢಿಯಲ್ಲಿರುವಂಥದು;
- ಹತ್ತಾರು ದಿವಸಗಳವರೆಗೆ ಸಂರಕ್ಷಿಸಿ ಇಟ್ಟುಕೊಂಡು ತಿನ್ನಬಹುದಾದ ತಿನಿಸು; ಪ್ರವಾಸದ ವೇಳೆ ಬುತ್ತಿಯಾಗಿ ಕೊಂಡೊಯ್ಯಲು ಉಪಯೋಗ; ಈ ರೊಟ್ಟಿಯನ್ನು ಚಟ್ನಿಪುಡಿ, ಮೊಸರು, ಸಾಂಬಾರು, ಹಸಿಮೆಣಸಿನಕಾಯಿ ಅಥವಾ ಇತರೆ ಗೊಜ್ಜುಗಳ ಜೊತೆಗೆ ತಿನ್ನಬಹುದು; ಮೊಸರು ಅಥವಾ ಸಾಂಬಾರಿನಲ್ಲಿ ನೆನೆಸಿ ತಿಂದರೆ ಬಲು ರುಚಿಕರವಾದುದು; Roti is a flat bread made from maize/sorghum(jowar) flour; this is very good with curds, curry; roti can be storred for many days;
- ವ್ಯಕ್ತಿಯು ದೈಹಿಕವಾಗಿ ಬಲಶಾಲಿಯಾಗಿರಲು ಸಹಕಾರಿಯಾದುದು; ಜೋಳದ ಹಿಟ್ಟಿನೊಂದಿಗೆ ಇತರೆ ಪದಾರ್ಥಗಳನ್ನು ನೀರಿನಲ್ಲಿ ಹಾಕಿ ಚೆನ್ನಾಗಿ ಕಲಸಿ ಗಟ್ಟಿಯಾಗಿ ಉಂಡೆ ಕಟ್ಟುವುದು; ನಂತರ ಒಂದೊಂದೇ ಉಂಡೆಗಳನ್ನು ಲಟ್ಟಣಿಗೆಯಲ್ಲಿ ಹಾಕಿ ಅಗಲವಾಗಿ, ವೃತ್ತಾಕಾರವಾಗಿ ಲಟ್ಟಿಸಿ ಬಿಸಿಲಿನಲ್ಲಿಟ್ಟು ಚೆನ್ನಾಗಿ ಒಣಗಿಸಿಡುವುದು.

ಖಂಗ khaŋga :

- ಕುಣಿಸು; ಕುನುಸು; ಜಿಪುಣ(ಬೀ.ದಾ.ಜಿ); Dance, miser, niggard;
- 'ಖಂಗ್ರಾಸ್', 'ಕಂಜೂಸ' ಎಂಬ ರೂಪಗಳು 'ಜಿಪುಣ' ಎಂಬ ಪದಕ್ಕೆ ಸಂವಾದಿ ರೂಪಗಳಾಗಿ ಕಲಬುರ್ಗಿ ಜಿಲ್ಲೆಯಲ್ಲಿ ಬಳಕೆಯಲ್ಲಿವೆ;
- ಬೀದರ್ ಭಾಗದಲ್ಲಿ 'ಅಕೋ ಹಾಗೆ' ಎಂಬರ್ಥದಲ್ಲಿ ಬಳಕೆಯಲ್ಲಿರುವ ರೂಪ; *ಪ್ರ: 'ಮೊದ್ಲೆ ಅವ್ನೊಬ್ಬ ಖಂಗ ಅವ್ನತ್ರ ಏನ್ ಕೇಳ್ತಿಯಪ್ಪ?'*;
- ವಿವಿಧ ಜನಪದ ಗೀತ ಪ್ರಕಾರಗಳಲ್ಲಿ ಬೇರೆ ಬೇರೆ ಅರ್ಥಗಳಲ್ಲಿ ಪದಬಳಕೆ ಇದೆ; ಗೀಗೀ ಪದಗಳಲ್ಲಿ 'ಖಡ್ಗ', 'ಸೈನಿಕ' ಎಂಬ ಅರ್ಥಗಳಲ್ಲಿ ಗುರುತಿಸಿದರೆ, ಹಬ್ಬದ ಹಾಡುಗಳಲ್ಲಿ 'ಕುಣಿಸು' ಎಂಬ ಅರ್ಥಗಳನ್ನು ಕೊಡಲಾಗಿದೆ; In folksong this word is referred as sword, solider;
- ಉತ್ತರಕರ್ನಾಟಕ ಭಾಗದಲ್ಲಿ ಮರಾಠಿ ಭಾಷೆಯ ಪ್ರಭಾವವಿರುವುದರಿಂದ ಅಲ್ಪಪ್ರಾಣಾಕ್ಷರಗಳಿಗೆ ಮಹಾಪ್ರಾಣಾಕ್ಷರಗಳ ಉಚ್ಚಾರಣೆ ದಟ್ಟವಾಗಿ ಕಂಡುಬಂದಿದೆ; ಇದು ಅಲ್ಲಿನ ಭಾಷಾ ಬಳಕೆಯ ವೈಶಿಷ್ಟ್ಯವೂ ಹೌದು?.

ಖಂಜರಿ khañjari :

- ಕಂಜರ, ಕಂಜರಿ, ಕಂಜ್ರ ಎಂಬ ಸಂವಾದಿ ರೂಪಗಳ ಬಳಕೆ ಇದೆ; Tabor, small drum;
- ಒಂದು ಬಗೆಯ ಚರ್ಮವಾದ್ಯದ ಪ್ರಕಾರಕ್ಕೆ ಸೇರಿದ್ದು; ವೃತ್ತಾಕಾರವಾಗಿ ಸಿದ್ಧಪಡಿಸಿದ ಮರದ ಬಳೆಗೆ ಉಡದ ಚರ್ಮವನ್ನು ಅಂಟಿಸಿ ತಯಾರಿಸುವರು; ವಾದ್ಯದ ಅಂಚಿನಲ್ಲಿ ಮೂರು ಅಥವಾ ನಾಲ್ಕು ಕಡೆ ಝುಣಝುಣಿಸುವ ಲೋಹದ ಬಿಲ್ಲೆಗಳನ್ನು

ಕಟ್ಟಿರುವರು; ಬಡಿದಾಗ ಈ ಬಿಲ್ಲೆಗಳಿಂದ ವಿಶೇಷ ನಾದ ಹೊರಹೊಮ್ಮಿ ಕೇಳುಗರಿಗೆ ಇಂಪಾಗಿರುತ್ತದೆ; Small drum is a musical instrument of tambourine family; as a folk and bhajan instrument, it has been used for many centuries; it is made with a frame drum of monitor lizard skin and with a single pair of jingles;

- ಬಾಬಯ್ಯನ ಕುಣಿತದಲ್ಲಿ ಹಾಡುವ ವೀರಗೀತೆಗಳ ರಾಗಕ್ಕೆ ಹೊಂದಿಕೊಂಡಂತೆ ತಾಳ ಹಾಕಲು ಅಥವಾ ಬಡಿಯಲು ಉಪಯೋಗ(ನೋಡಿ: ಕಂಜರ). Leather musical instrument uses in Babaih dance and singing.

ಖಂಟಾ khaṇṭā :

- 'ತಲೆಕೂದಲು' ಎಂಬರ್ಥದಲ್ಲಿ ಪದಬಳಕೆ; ಬಹುಶಃ ಉತ್ತರಕರ್ನಾಟಕ ಭಾಗದಲ್ಲಿ ಈ ಪದದ ಬಳಕೆ ಇರಬಹುದು; Hair;
- ತಲೆಕೂದಲನ್ನು ಉದುರಿಸು ಅಥವಾ ಕತ್ತರಿಸು ಅಥವಾ ತೆಗೆ ಎಂಬುದಕ್ಕೆ 'ಖಂಟಹಾರ್ಸು' ಎಂದು ಕರೆಯುವುದಿದೆ; ಈ ಅರ್ಥಕ್ಕೆ 'ಕ್ಷೌರ', 'ಕಷ್ಟ' ಎಂಬ ರೂಪಗಳ ಬಳಕೆಯೂ ಉಂಟು;
- ಈ ಪದಗಳ ಉಚ್ಚಾರಣೆಯಲ್ಲಿ ಪ್ರಧಾನವಾಗಿ ಪ್ರಾದೇಶಿಕ ಭಿನ್ನತೆಯನ್ನು ಗುರುತಿಸಬಹುದು.

ಖಂಡ್ khaṇḍ :

- ಹುಗ್ಗಿಯ ಉಂಡೆ; 'ಲಂಬಾಣಿಗರು' ಬುಡಕಟ್ಟು ಸಮುದಾಯದವರಲ್ಲಿ ತಯಾರಿಸುವಂತಹ ವಿಶೇಷ ತಿನಿಸು; ಗಂಡು ಮಗುವಿನ ಜನನವಾದ ನಂತರ 'ಏಕಳೋಪೊಯೇರೊ' ಎಂಬ ಒಂದು ಶಾಸ್ತ್ರ ಮಾಡುವುದು ಇವರಲ್ಲಿ ರೂಢಿ; ಆ ಸಂದರ್ಭದಲ್ಲಿ ಹುಗ್ಗಿಯ ಉಂಡೆ ಅಥವಾ ಖಂಡ್ ತಯಾರಿಸುವುದು ಒಂದು ಪದ್ಧತಿ; Pap, a kind of spherical eatable or it is a kind of gruel or payasam or pongal(sweet and Khara); it is prepared during birth ceremony(boy baby) in 'Lambani' community; 'Lambani' are nomadic people, spread out allover India; they are called 'Banjara' community;
- ನಿಗದಿತ ದಿವಸದಂದು ತಮ್ಮವರು ಮತ್ತು ನೆರೆಹೊರೆಯವರನ್ನೆಲ್ಲ ಆಹ್ವಾನಿಸಿ ಶಾಸ್ತ್ರ ಮುಗಿಸಿದ ಮೇಲೆ ಮಕ್ಕಳಿಲ್ಲದ ಇಬ್ಬರು ಮುತ್ತೈದೆಯರ ಮಡಿಲಿಗೆ ಈ ಉಂಡೆಗಳನ್ನು ಹಾಕುವರು; ಹೀಗೆ ಮಾಡುವುದರಿಂದ ಮುಂದಿನ ದಿವಸದಲ್ಲಿ ಅವರಿಗೂ ಮಕ್ಕಳಾಗುತ್ತವೆ ಎಂಬ ನಂಬಿಕೆ ಇದೆ;
- ನಂತರ ನೆರೆದ ಎಲ್ಲರಿಗೂ ಖಂಡ್ ಉಂಡೆ ಹಂಚುವರು; ಇದೊಂದು ಧಾರ್ಮಿಕ ಕಾರ್ಯವೂ ಹೌದು; ಎಲ್ಲಾ ಸಮುದಾಯದಲ್ಲೂ ಆಚರಣೆಯಲ್ಲಿರುವಂತೆ ಬುಡಕಟ್ಟು ಸಮುದಾಯಗಳು ಇಂತಹ ಹತ್ತಾರು ವಿಶೇಷ ಕಾರ್ಯಕ್ರಮಗಳನ್ನು ರೂಢಿಸಿಕೊಂಡು ಬಂದಿರುವುದನ್ನು ಕಾಣುತ್ತೇವೆ;
- ಧಾರ್ಮಿಕ ಕಾರ್ಯಗಳಿಲ್ಲದ ಧರ್ಮ ಅಥವಾ ಸಂಸ್ಕೃತಿ ಇರಲಿಕ್ಕಿಲ್ಲ; ಇತರೆ ಸಮುದಾಯಗಳಿಗಿಂತಲೂ ಬುಡಕಟ್ಟು ಸಮುದಾಯದಲ್ಲಿರುವ ಸಂಪ್ರದಾಯ, ನಂಬಿಕೆ, ಆಚರಣೆಗಳು ವಿಶೇಷ; ಬಹುಶಃ ಎಲ್ಲಾ ಆಚರಣೆಗಳಿಗೂ ಬುಡಕಟ್ಟು ಸಮುದಾಯಗಳೇ ಮೂಲ ಇರಬಹುದು ಎಂದೆನಿಸುತ್ತದೆ; ಕಾರಣ 'ಮಂಗನಿಂದ ಮಾನವ' ಎಂಬುದೊಂದು ಉಕ್ತಿ ಪ್ರಚಲಿತ.

ಖಂಡ khaṇḍa :

- 'ಖಂಡ' ಪದ ಹಲವು ವಿಶೇಷಾರ್ಥಗಳಿಂದ ಕೂಡಿರುವಂಥದು; ವಿಸ್ತಾರವಾದ ಅರ್ಥಗಳಿಂದ ಕೂಡಿದ ಹತ್ತಾರು ಪದಗಳಲ್ಲಿ ಇದೂ ಸಹ ಒಂದು;
- ತಿನ್ನಲು ಯೋಗ್ಯವಾದ ಮೂಳೆ ಇಲ್ಲದ ಮಾಂಸದ ಭಾಗಕ್ಕೆ 'ಖಂಡ' ಎಂಬ ರೂಪದ ಬಳಕೆ ಇದೆ; ಇದು ನಗರ ಹಾಗೂ ಗ್ರಾಮೀಣ ಪ್ರದೇಶಗಳ ಜನಪದರ ಜನಪ್ರಿಯ ಅರ್ಥವೂ ಹೌದು;
- ಆಡು, ಕುರಿ, ಕೋಳಿ, ಮೇಕೆ, ದನ, ಹಂದಿಯಂತಹ ಇತರೆ ಸಾಕುಪ್ರಾಣಿ ಮತ್ತು ಕಾಡುಪ್ರಾಣಿ, ಪಕ್ಷಿಗಳ ದೇಹದ ವಿವಿಧ ಭಾಗಗಳಲ್ಲಿ ಸಿಗುವ ಮಾಂಸದ ತುಣುಕು; ಕತ್ತರಿಸಿದ ಪ್ರಾಣಿ, ಪಕ್ಷಿಗಳ ಒಳಗಿನ ತ್ಯಾಜ್ಯವನ್ನು ತೆಗೆದು, ತೊಳೆದು ಶುಚಿ ಮಾಡಿ ಮೂಳೆ ಮಾಂಸ, ಖಂಡದ ಮಾಂಸ ಎಂಬುದಾಗಿ ವಿಂಗಡಿಸಿ ತುಂಡರಿಸುವುದಿದೆ; ಪ್ರಾಣಿ, ಪಕ್ಷಿಗಳ ದೇಹದಲ್ಲಿ ಸಿಗುವ ಹಲವು ಭಾಗಗಳಲ್ಲಿ ಖಂಡವೂ ಸಹ ಒಂದು; ಕೊಡು-ಕೊಳ್ಳುವಿಕೆಯ ವ್ಯವಹಾರದಲ್ಲಿ ಇವುಗಳ ದೇಹದಲ್ಲಿರುವ ಖಂಡವನ್ನಾಧರಿಸಿ ಬೆಲೆ

ನಿಗದಿಪಡಿಸುವುದಿದೆ; A piece of chicken, meat, pork, bird;

- ದೇಹದಲ್ಲಿ ಮಾಂಸಖಂಡವಿಲ್ಲದ ವ್ಯಕಿಗಳನ್ನು ಸಣಕ್ಲ, ಒಣಖಕ್ಲ, ಪ್ಯಾರ ಎಂಬುದಾಗಿ ವ್ಯಂಗ್ಯವಾಗಿ ಕರೆಯುವುದುಂಟು; *ಪ್ರ: 'ಕೂದ್ರೆ ಕೊರುದ್ರೆ ಮುಕ್ಳ್ ಖಂಡ ಇಲ್ಲ ಮಾತ್ ಮಾತ್ರ ಬಲ್ ಜೋರು'*;
- ಗ್ರಂಥದ ಅಧ್ಯಾಯ; ಆಶ್ವಾಸ; ವಿಭಾಗ; ಗುಂಪು; ಸಮೂಹ; ಅಡಗು; ಭಾಗ; ಅಂಶ; ಅಂಗ; Fragment, bit, slice, portion, segment, continent chapter, clause;
- ಅರ್ಧಚಂದ್ರ; ತಾಳದ ಐದು ಪ್ರಕಾರಗಳಲ್ಲಿ ಒಂದು; ತ್ರಿಶ್ರ, ಚತುರಶ್ರ, ಖಂಡ, ವಿಶ್ರ, ಸಂಕೀರ್ಣ ಎಂಬ ಐದು ಪ್ರಕಾರಗಳನ್ನು ಗುರುತಿಸಲಾಗಿದೆ(ಕ.ನಿ);
- ನೃತ್ಯದ ಚಲನೆಯಲ್ಲಿ ಒಂದು ವಿಧ; ಮೂರು ಕರಣಗಳ ಜೋಡಣೆಗೆ 'ಖಂಡ' ಎನ್ನುವರು; Dancing movement or gesture in dance;
- ಅನೇಕ ದೇಶಗಳನ್ನೊಳಗೊಂಡ ಒಂದು ದೊಡ್ಡ ಭೂಭಾಗ; ಅದರಂತೆ ವಿಶ್ವದಲ್ಲಿ ಏಳು ಖಂಡಗಳನ್ನು ಗುರುತಿಸಲಾಗಿದೆ; ಅದರಲ್ಲಿ ಭರತಖಂಡವೂ ಸಹ ಒಂದು; ಭೂಖಂಡ;
- ಅಳತೆಯ ಒಂದು ಸಾಧನ(ದ.ಕ); ರೈತ ಜಮೀನಿನ ಯಜಮಾನನಿಗೆ ಹಣ ಅಥವಾ ವಸ್ತುವಿನ ರೂಪದಲ್ಲಿ ಕೊಡಲಾಗುವ ವಾರ್ಷಿಕ ಆದಾಯ ಅಥವಾ ಮೊತ್ತ(ಬೆಂ.ಗ್ರಾ.ಜಿ); Measuring equipment, annual payment which is paid by the farmer to the land owner;
- 'ಖಂಡತುಂಡು' ಎಂಬ ಪದದ ಬಳಕೆಯೂ ಇದೆ; 'ಖಂಡ' ಎಂಬ ಸಂಸ್ಕೃತ ಪದಕ್ಕೆ 'ತುಂಡು' ಎಂಬ ಕನ್ನಡ ರೂಪ ಸೇರಿ ಆಗಿರುವುದು;
- ಖಂಡಿತ, ನಿರ್ಣಯ, ನಿರ್ಧಾರ, ಅಂತಿಮ ಹೇಳಿಕೆ, ಗಟ್ಟಿ ಅಭಿಪ್ರಾಯ ಎಂಬ ಅರ್ಥಗಳಲ್ಲಿ 'ಖಂಡತುಂಡು' ಪದವನ್ನು ಬಳಸುವುದಿದೆ; Certain, sure, definite, undoubted, categorical, candour, bluntness, curtness;
- 'ಖಂಡ' ಎನ್ನುವುದೇ ಒಂದು ತುಂಡು, ಮತ್ತೆ ತುಂಡು ಪದದ ಬಳಕೆಯಿಂದ ಅದು ಅಧಿಕೃತವಾಗಿದೆ; *ಪ್ರ: 'ನೀ ಏನೇ ಹೇಳು ಖಂಡತುಂಡಾಗ್ ಮಾತಾಡ್ದ ಕಣಯ್ಯ ಅವ'*;
- ನಿರ್ದಿಷ್ಟಪಡಿಸಿದ ಹಣಕ್ಕೆ ಜಮೀನು ಅಥವಾ ಭೂಮಿಯನ್ನು ತಾನೇ ಉಪಯೋಗಿಸಿಕೊಳ್ಳುವ ಪ್ರಕ್ರಿಯೆಗೆ 'ಖಂಡಮೂಸ್ತಿ ಹಾಕ್ಕೊಳೋದು' ಎಂಬುದಾಗಿ ಹೇಳುವರು.

ಖಂಡನೆ khandane :

- ವಾದ, ಅಭಿಪ್ರಾಯ, ಹೇಳಿಕೆ, ಅನಿಸಿಕೆ ಮೊದಲಾದವುಗಳನ್ನು ಒಪ್ಪಿಕೊಳ್ಳದೆ ಖಂಡಿಸುವುದು; ಅಂತಿಮ ತೀರ್ಮಾನವನ್ನು ಗೌರವಿಸದೆ ಅದರ ವಿರುದ್ಧವಾಗಿ ಮಾತನಾಡುತ್ತಾ ಹೊರನಡೆಯುವುದು; ಒಪ್ಪಿಗೆಯಿಲ್ಲದ ತಿರ್ಮಾನ; ಅಗೌರವದಿಂದ ನಡೆದುಕೊಳ್ಳುವಿಕೆ; ವ್ಯಕ್ತಿಯ ವ್ಯಕ್ತಿತ್ವ, ನಡೆ, ನುಡಿಗೆ ಸಂಬಂಧಿಸಿದ್ದು; *ಪ್ರ: 'ನಿಮ್ಮ ತೀರ್ಪು ನನಗೆ ಸಮ್ಮತಿಯಿಲ್ಲ, ನಾನು ಇದನ್ನು ಖಂಡಿಸುತ್ತೇನೆ'*; Refutation, condemnation, denunciation, contradiction, argument, opinion, indifference, biased;
- ಮಾತು–ಕತೆ, ಇತರೆ ವ್ಯವಹಾರದಿಂದ ಸಂಬಂಧಿಸಿದ ವ್ಯಕ್ತಿಗಳನ್ನು ದೂರ ಇಡುವಿಕೆ; ವ್ಯಕ್ತಿ–ವ್ಯಕ್ತಿಗಳ ನಡುವೆ ನಿರ್ಲಕ್ಷ್ಯ, ಭೇದ–ಭಾವ ತೋರುವುದು; *ಪ್ರ: 'ಈ ವಿಚಾರದಿಂದ ನನ್ನನ್ನು ಖಂಡನೆ ಮಾಡಿರುವುದು ಸರಿಯಲ್ಲ'*;
- ತುಂಡರಿಸುವಿಕೆ; ಭಾಗ ಮಾಡುವುದು; ಒಡೆಯುವಿಕೆ; *ಪ್ರ: 'ನಾನು ಕೈಹಚ್ಚಿದ ಮೇಲೆ ಖಂಡನೆ ಮಾಡಿಯೇ ತೀರುತ್ತೇನೆ.'* Partition, cutting; cut, sever, hack, sunder.

ಖಂಡಪೀಠ khandapītha :

- ಒಂದು ವಿಧದ ನ್ಯಾಯಪೀಠ; ನ್ಯಾಯಾಂಗ ವ್ಯವಸ್ಥೆಯಲ್ಲಿ ಕಂಡುಬರುವ ಒಂದು ಪ್ರಕಾರ; 'ಕಂಜರಭಾಟ' ಬುಡಕಟ್ಟು ಸಮುದಾಯದವರಲ್ಲಿ ರೂಢಿ; ಇದು ರಾಜ್ಯ, ಅಂತರರಾಜ್ಯ ವ್ಯಾಪ್ತಿಯುಳ್ಳದ್ದು; ಕಾರಣ ಈ ಸಮುದಾಯದ ಜನರು ದೇಶದೆಲ್ಲೆಡೆ ವಿವಿಧ ರಾಜ್ಯಗಳಲ್ಲಿ ನೆಲೆಸಿರುವುದರಿಂದ ಎಲ್ಲರ ಬದುಕಿನ ಭದ್ರತೆಗೆ, ಸುಗಮ ಸಂಚಾರಕ್ಕೆ, ಸಮುದಾಯದವರ ನಡುವಣ ಬಾಂಧವ್ಯದ ವೃದ್ಧಿಗೆ ಸಂಪರ್ಕ ಸೇತುವೆಯಾಗಿ ಈ 'ಖಂಡಪೀಠ' ವ್ಯವಸ್ಥೆ ಕಾರ್ಯ ನಿರ್ವಹಿಸುತ್ತದೆ; A court, in Kanjara community, a traditionally spread in states; any kind of

differences, disputes among this community members will be solved by local judiciary; it is a kind of local judicial system in that community;

- ನ್ಯಾಯ ತೀರ್ಮಾನ ಬಂದಾಗ ಎಲ್ಲರೂ ಒಂದೇ ಎಂಬ ಭಾವನೆ ಇವರಲ್ಲಿದೆ; ಸಮುದಾಯದೊಳಗೆ ಮೂಡುವ ಭಿನ್ನಾಭಿಪ್ರಾಯಗಳು, ಅಪಸ್ವರಗಳು, ಗಲಾಟೆ, ಜಗಳದಂತಹ ಸನ್ನಿವೇಶಗಳು ಹಾಗೂ ಇನ್ನಿತರ ಸಣ್ಣ-ಪುಟ್ಟ ಅಥವಾ ದೊಡ್ಡ ದೊಡ್ಡ ವಿವಾದಗಳನ್ನು ಅವರೇ ತೀರ್ಮಾನ ಮಾಡಿಕೊಳ್ಳುವ, ಅಂತಿಮ ತೀರ್ಪು ನೀಡುವ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ;
- ಈ ಒಳಾಡಳಿತ ವ್ಯವಸ್ಥೆಯನ್ನು ನಾಲ್ಕು ಹಂತಗಳಲ್ಲಿ ಗುರುತಿಸಿಕೊಂಡಿದ್ದು ಅವುಗಳಲ್ಲಿ ಊರ ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ, ರಾಜ್ಯ ಪಂಚಾಯ್ತಿ ಮತ್ತು ಅಂತರರಾಜ್ಯ ಪಂಚಾಯ್ತಿ ಎಂಬಿವು ಪ್ರಧಾನವಾದುವು; ಇದರಲ್ಲಿ ನಾಲ್ಕನೇ ಹಂತವಾದ ಅಂತರರಾಜ್ಯ ಪಂಚಾಯ್ತಿಗೆ 'ಖಂಡಪೀಠ' ಎಂದು ಕರೆಯುವರು; It is a kind of judicial court which resolves disputes; it is a interstate judicial board to resolve disputes;
- ಇವರ ನ್ಯಾಯಾಂಗ ವ್ಯವಸ್ಥೆಯಲ್ಲಿ 'ಖಂಡಪೀಠ' ನೀಡುವ ತೀರ್ಮಾನವೇ ಅಂತಿಮ ತೀರ್ಪು; ಇದಕ್ಕೆ ಎಲ್ಲರೂ ತಲೆಬಾಗಲೇಬೇಕು;
- ಸ್ಥಳೀಯ ವಿವಾದಗಳನ್ನು ಊರು, ಜಿಲ್ಲಾ, ರಾಜ್ಯ ಪಂಚಾಯ್ತಿಗಳಲ್ಲೇ ಬಗೆಹರಿಸಿಕೊಳ್ಳಲು ಪ್ರಯತ್ನಿಸುವರು; ಒಂದು ವೇಳೆ ಈ ಮೂರೂ ಹಂತಗಳಲ್ಲಿ ಸಮಸ್ಯೆ ಬಗೆಹರಿಯದಿದ್ದರೆ ಖಂಡಪೀಠಕ್ಕೆ ಹೋಗುವರು;
- ಒಂದು ಹಂತದಿಂದ ಮತ್ತೊಂದು ಹಂತಕ್ಕೆ ಹೋಗಬೇಕಾದರೆ ನಿಗದಿತ ಶುಲ್ಕ ಪಾವತಿಸಬೇಕಾಗುತ್ತದೆ; ಇದು ಪಿರ್ಯಾದುದಾರರು ಅನುಸರಿಸಬೇಕಾದ ನಿಯಮ;
- ಎಲ್ಲಾ ಹಂತಗಳಲ್ಲೂ ವಿವಿಧ ಪಂಚರನ್ನು ನೇಮಿಸಿದ್ದು ಇವರೇ ನ್ಯಾಯ ತೀರ್ಮಾನ ಮಾಡುವುದು, ಅಂತಿಮ ತೀರ್ಪು ನೀಡುವ ಅಧಿಕಾರ ಹೊಂದಿರುತ್ತಾರೆ;
- ಅಲೆಮಾರಿ, ಗುಡ್ಡಗಾಡು, ಬುಡಕಟ್ಟು ಸಮುದಾಯದ ಪ್ರಾಚೀನ ನ್ಯಾಯಾಂಗ ವ್ಯವಸ್ಥೆಗೂ ಇಂದಿನ ಆಧುನಿಕ, ಸಂವಿಧಾನಬದ್ಧ ನ್ಯಾಯಾಂಗ ವ್ಯವಸ್ಥೆಗೂ ನಡುವಣ ದಿಕ್ಸೂಚಿಯಂತೆ ಕಾಣುತ್ತದೆ;
- ಇಂತಹ ಒಳಾಡಳಿತ ನ್ಯಾಯಾಂಗ ವ್ಯವಸ್ಥೆ ಪ್ರಾಚೀನ ಕಾಲದಿಂದ ಇಂದಿನವರೆವಿಗೂ ಬುಡಕಟ್ಟು ಸಮುದಾಯಗಳಲ್ಲೇ ಅಲ್ಲದೆ ಇತರೆ ನಾಗರಿಕ ಸಮುದಾಯಗಳಲ್ಲೂ ಕಂಡುಬಂದಿದೆ; ಇದು ಆಯಾಯ ಸಮುದಾಯಗಳ ಸಾಂಸ್ಕೃತಿಕ ಆಯಾಮವೂ ಹೌದು.

ಖಂಡಬಾಳೆ khaṇḍabāḷe :

- ಬಾಳೆಎಲೆಯ ಒಂದು ಪ್ರಕಾರಕ್ಕೆ ಸೇರಿದ್ದು; ಕುಡಿಎಲೆ, ಕಂದುಎಲೆ (Sprout, brown leaf of banana); ಕೀತುಎಲೆ ಎಂಬ ಬಗೆಗಳಿರುವಂತೆ ಖಂಡಬಾಳೆಯೂ ಸಹ ಒಂದು;
- ಬಾಳೆಎಲೆಯ ನಡುವೆ ದಿಂಡಿರುವುದು ವಾಸ್ತವ; ಮಧ್ಯ ಇಂತಹ ದಿಂಡು ಇದ್ದು ಎರಡೂ ಕಡೆ ಎಲೆ ಇರುತ್ತದೆ; ಇದಕ್ಕೆ 'ಖಂಡಬಾಳೆ' ಎಂದು ಕರೆಯುವರು; Midrib of banana leaf;
- ದೊಡ್ಡದಾದ ಅಥವಾ ಉದ್ದವಾದ ಎಲೆಯನ್ನು ಅಳತೆಗನುಗುಣವಾಗಿ . ಕತ್ತರಿಸುವರು; ಅಗಲವಾದ ಎಲೆಯ ದಿಂಡಿನ ಭಾಗವನ್ನು ಸೀಳಿ ಎರಡು ಮಾಡಿ ಎಡೆ ಹಾಕಲು, ಊಟಕ್ಕೆ ಹಾಗೂ ಇನ್ನಿತರ ಕೆಲಸಗಳಿಗೆ ಉಪಯೋಗಿಸುವರು; ಇದಕ್ಕೆ ತುಂಡೆಲೆ, ಸೀಳೆಲೆ ಎಂದೂ ಕರೆಯುವುದಿದೆ; Banana leaves are usually used for decorative and symbolic purpose in Hindu and Buddhist ceremonies; they are used like plates to serve food;
- ಎಲೆಯ ನಡುವೆ ದಿಂಡಿರುವುದರಿಂದ ಇದಕ್ಕೆ 'ಖಂಡಬಾಳೆ' ಎಂಬ ಹೆಸರು ಬಂದಿರಬಹುದು; ಖಂಡ=ದಿಂಡು ಎಂಬರ್ಥದಲ್ಲಿ ಬಳಕೆಯಾಗಿರಬಹುದು.

ಖಂಡವೃಷ್ಟಿ khaṇḍavruṣṭi :

- ಜನಪದರ ಪ್ರಕಾರ ಅತೀವೃಷ್ಟಿ, ಅನಾವೃಷ್ಟಿ ಇರುವಂತೆ ಖಂಡವೃಷ್ಟಿಯೂ ಸಹ ಒಂದು; Scattered showers or raining, rain depends on floating rainy clouds, partial raining;

- ಅತಿಯಾಗಿ ಮಳೆಯಾದರೆ ಅತೀವೃಷ್ಟಿ ಎಂದೂ ಮಳೆಯೇ ಬಾರದಿದ್ದರೆ ಅನಾವೃಷ್ಟಿ ಎಂದು ಕರೆಯುವಂತೆ, ಎಲ್ಲಿ ಬೇಕೆಂದರಲ್ಲಿ ಬೀಳುವ ಮಳೆ ಅಥವಾ ಒಂದು ಕಡೆ ಮಳೆಯಾಗಿ ಮತ್ತೊಂದು ಕಡೆ ಮಳೆಯಾಗದಿದ್ದ ಸನ್ನಿವೇಶಕ್ಕೆ 'ಖಂಡವೃಷ್ಟಿ' ಎಂದು ಕರೆಯುವರು;
- ಹಿಂದೆ ಮಳೆ ಸಾಮಾನ್ಯವಾಗಿ ಎಲ್ಲಾ ಕಡೆಗೂ ಬೀಳುತ್ತಿತ್ತು; ಆದರೆ ಪ್ರಸ್ತುತ ಖಂಡವೃಷ್ಟಿ ಆಗಿಬಿಟ್ಟಿದೆ; ಮೋಡ ಕಟ್ಟಿದ ಸಂದರ್ಭದಲ್ಲಿ ಗಾಳಿಬಡಿತ ಜಾಸ್ತಿಯಾದರೆ ಮಳೆ ಒಂದು ಕಡೆ ಬೀಳುವುದಿಲ್ಲ; ಗಾಳಿ ಬೀಸಿದ ಕಡೆ ಮೋಡ ಚಲಿಸಿ ಅಲ್ಲಲ್ಲಿ ಒಂದಷ್ಟು ಮಳೆ ಬಿದ್ದು ಮುಂದೆ ಮುಂದೆ ಸಾಗುತ್ತಿರುತ್ತದೆ; ಈ ಸನ್ನಿವೇಶವೂ ಸಹ ಖಂಡವೃಷ್ಟಿಯನ್ನೇ ಹೇಳುತ್ತದೆ; 'ಈ ಬಾರಿಯ ಮಳೆಗಾಲ ಖಂಡವೃಷ್ಟಿ ಆಗೊಯ್ತು ಕಣಯ್ಯ' ಎಂದು ಜನರು ಹೇಳುವುದನ್ನು ಕೇಳಿದ್ದೇವೆ.

ಖಂಡಸಕ್ಕರೆ khaṇḍasakkare :
- ಮರಾಠಿಯಲ್ಲಿ 'ಖಾಂಡ್' ಪದಕ್ಕೆ 'ಸಕ್ಕರೆ' ಎಂಬ ಅರ್ಥವಿದೆ; ಉತ್ತರಕರ್ನಾಟಕ ಭಾಗದಲ್ಲಿ ಈ ಪದದ ಬಳಕೆಯಿರಬಹುದು; ಕಾರಣ ಆ ಭಾಗದ ಜನತೆಗೆ ಮರಾಠಿ ಭಾಷೆಯ ಪ್ರಭಾವವಿರುವುದರಿಂದ ಅಲ್ಪಪ್ರಾಣಾಕ್ಷರಗಳು ಮಹಾಪ್ರಾಣಾಕ್ಷರಗಳಾಗಿ ಬಳಕೆಯಾಗುವುದಿದೆ; Sugar candy;
- ಖಂಡಸಕ್ಕರೆಗೆ 'ಕಲ್ಲುಸಕ್ಕರೆ' ಎಂಬ ಅರ್ಥವನ್ನು ಕೊಡಲಾಗಿದೆ; ಕಂಡಸಕ್ಕರೆ > ಖಂಡಸಕ್ಕರೆ ಆಗಿರಬಹುದು?;
- ಇದೊಂದು ದ್ವಿರುಕ್ತಿ ಪದವೂ ಹೌದು(ಕ.ಜಾ.ನಿ).

ಖಂಡಾಪಟ್ಟಿ khaṇḍāpaṭṭi :
- ಅಧಿಕ, ಹೆಚ್ಚಳ, ಜಾಸ್ತಿ, ಯತೇಚ್ಚವಾಗಿ ಎಂಬರ್ಥದಲ್ಲಿ ಉತ್ತರಕರ್ನಾಟಕ ಭಾಗದಲ್ಲಿ ಬಳಕೆಯಲ್ಲಿರುವ ಪದ; Excess, high, ample, abundant, plentiful;
- ಸಿಕ್ಕಾಪಟ್ಟೆ ಎಂಬ ಪದವೂ ಇದೇ ಅರ್ಥದಲ್ಲಿ ಬಳಕೆಯಲ್ಲಿರುವುದು; ಇದು ಬಯಲುಸೀಮೆ ಜನಪದರ ಜನಪ್ರಿಯ ರೂಪ; *ಪ್ರ: 'ಏನಿಲ್ಲಿ! ಖಂಡಾಪಟ್ಟೆ ಮಂದಿ ನಿಂತವ್‌ರಲ್ಲ'?.*

ಖಂಡಾಯ khaṇḍāya :
- ಇದರ ಮೂಲರೂಪ 'ಕಂಡಾಯ'; 'ಕಂಡಾಯ' ಉಚ್ಚಾರಣೆಯಲ್ಲಿ ಕೆಲವೊಮ್ಮೆ 'ಖಂಡಾಯ' ಆಗಲೂಬಹುದು; ಕಾರಣ ಭಾಷಾ ಬಳಕೆಯಲ್ಲಿ ಅಲ್ಪಪ್ರಾಣಾಕ್ಷರಗಳು ಮತ್ತು ಮಹಾಪ್ರಾಣಾಕ್ಷರಗಳು ಪರಸ್ಪರ ಬದಲಾವಣೆ ಹೊಂದುತ್ತಿರುತ್ತವೆ; ಇದು ನಾಲಗೆಯ ಹೊರಳುವಿಕೆಯ ಆಧಾರದ ಮೇಲೆ ನಿರ್ಧಾರಿತ; ಉದಾ: ಅವನು>ಅವಣು, ಅವಳು > ಅವಲು, ಅಣ್ಣ > ಅನ್ನ ಹೀಗೆ ವ್ಯತ್ಯಯವಾಗುವುದು;
- 'ಖಂಡಾಯ' ನೀಲಗಾರ ಸಂಪ್ರದಾಯಕ್ಕೆ ಸೇರಿದ ಮಂಟೇಸ್ವಾಮಿ ಭಕ್ತರ ಒಂದು ಬಗೆಯ ಖಡ್ಗ ಅಥವಾ ಆಯುಧ ವಿಶೇಷ ಅಥವಾ ಪೂಜೆಗೊಳ್ಳುವ ದೇವರ ವಿಗ್ರಹ; A rod or a weapon or sword which is in use to worship `Manteswami' belongs to Neelagara tradition; they are the professional singers; moreover manteswami is a legendary folk hero;
- ಸಿಲುಬೆಯಂತಿರುತ್ತದೆ; ಕಬ್ಬಿಣದ ತುಂಡು, ಮರದ ತುಂಡು, ಚಿನ್ನ, ಬೆಳ್ಳಿ, ಬಂಗಾರದ ಲೋಹಗಳಿಂದ ತಯಾರಿಸಿರುವಂಥದು; ಮಂಟೇಸ್ವಾಮಿ, ಧರೆಗೆ ದೊಡ್ಡವರ ಬಿರುದು;
- ಹಿಂದೆ ಧರೆಗೆದೊಡ್ಡವರು ಮಠಮನೆ, ಕಂಡಾಯ, ಭಕ್ತರ ಸಂಪಾದನೆಗೆ ಹಲವಾರು ಪವಾಡಗಳನ್ನು ಮೆರೆದಿದ್ದಾರೆ ಎಂಬುದು ಪ್ರತೀತಿ; ಅದರ ಫಲವಾಗಿ ಇಂದು ಪ್ರತಿಯೊಂದು ಗ್ರಾಮಗಳಲ್ಲೂ ಮಂಟೇಸ್ವಾಮಿ ಗದ್ದಿಗೆ ನಿರ್ಮಿಸಿ 'ಕಂಡಾಯ' ಮಾಡಿಸಿ ಸೋಮವಾರ, ಶುಕ್ರವಾರ ಪೂಜೆ, ಮೆರವಣಿಗೆ ಮಾಡುವುದಿದೆ(ನೋಡಿ: ಕಂಡಾಯ);
- —***ಖಂಡೇರಾಯ*** : ಕಂಡಾಯ ಎಂಬ *ಖಡ್ಗ*/ಕತ್ತಿ ಹಿಡಿಯುವ ದೇವರು; ಮೈಲಾರಲಿಂಗ ದೇವರ ಉತ್ಸವಮೂರ್ತಿ; ಶಿವನ ಅವತಾರ; ಮಲ್ಲಾರಿದೇವರು; ಮರಾಠಿಗರ ಉತ್ಸವ ಮೂರ್ತಿಯೂ ಹೌದು(ಬ.ಜಿ). The legendary god or deity with rod or sword in hand, celebration idol of Mylaralinga; an incarnation of Lord Shiva.

ಖಂಡಿ khandi :

- ಅಡಿಕೆ ಅಳೆಯುವ ಮಾಪನ; ಅಳತೆ ಮಾಡಲು ಬಳಸುವ ಬುಟ್ಟಿ; ೨೬೦ ಕಿಲೋ ತೂಕಕ್ಕೆ ಒಂದು 'ಖಂಡಿ' ಎಂಬುದು ಲೆಕ್ಕಾಚಾರ; A measuring instrument to measure betelnut; 260kg equals to one Khandi;
- ಅಳತೆಯಲ್ಲಿ ಪ್ರಾದೇಶಿಕ ಭಿನ್ನತೆ ಕಂಡುಬಂದಿದೆ; ೧೦,೦೦೦ ಚದುರ ತರಿಭೂಮಿ; ೭೫ ಎಕರೆ ಕಬ್ಬು ಬೆಳೆಯುವ ಜಮೀನು; ೨೬೦ ಕಿಲೋ ಅಳತೆಮಾನ; ೨೦ ಮಣ ೨೫೦ ಕಿಲೋಗೆ ಸಮ;
- ಒಂದು ಖಂಡಿಯಷ್ಟು ಬೀಜವರಿಯುಳ್ಳ ಭೂಮಿ;
- ದ್ರಾವಿಡ ಭಾಷಾ ರೂಪಗಳಾದ ತಮಿಳು ಮತ್ತು ಕೊಡವ ಭಾಷೆಗಳಲ್ಲಿ 'ಕಂಡಿ', ತುಳುವಿನಲ್ಲಿ 'ಕಂಡಿ' ಜೊತೆಗೆ 'ಖಂಡಿ' ಪದದ ಬಳಕೆ ಇದೆ; ತೆಲುಗಿನಲ್ಲಿ 'ಖಂಡಿ', ಮಲೆಯಾಳಂನಲ್ಲಿ 'ಕಂಡಿಸು' ಮತ್ತು ಮರಾಠಿಯಲ್ಲಿ 'ಖಂಡೀ' ರೂಪಗಳ ಬಳಕೆ ಕಂಡುಬಂದಿದೆ(ದ್ರಾ.ಭಾ.ಜ್ಞಾ.ಪ.ಕೋ).

ಖಂಡಿಕಿ khandiki :

- 'ಕಂಡಿಕೆ' ಮೂಲರೂಪ ಉಚ್ಚಾರಣೆಯಲ್ಲಿ 'ಖಂಡಿಕಿ' ಆಗಿರುವುದು; ನೂಲಿನ ಉಂಡೆ ಎಂಬರ್ಥದಲ್ಲಿ ಪದಬಳಕೆ; ನೇಯ್ಗೆ ಯಂತ್ರಕ್ಕೆ ಅಳವಡಿಸುವ ಸಾಧನ; ಲಾಳಿಯಲ್ಲಿ ಸೇರಿಸುವುದು; An instrument adjusted to weaving machine;
- ಓದುವಾಗ, ಊಟ ಮಾಡುವಾಗ ನೇರವಾಗಿ ಕುಳಿತುಕೊ ಎಂಬರ್ಥದಲ್ಲಿಯೂ ಬಳಕೆಗೊಂಡಿರುವ ರೂಪ(ಬೀ.ಜಿ); Sitting straight while studying, reading or having food;
- ಜನಪದ ಕಥೆಗಳಲ್ಲಿ 'ಕಿಡಕಿ' ಎಂಬರ್ಥದಲ್ಲಿ ಪದಬಳಕೆ ಇದೆ;
- ಖಂಡಿಕಿ=ಕುಕ್ಕುಡಿ; 'ನೂಲಿನ ಕುಕ್ಕುಡಿ' ಎಂಬುದಾಗಿಯೂ ಅರ್ಥೈಸಲಾಗುತ್ತಿದೆ (ನೋಡಿ: ಕಂಡಿಕೆ);
- 'ಖಂಡ್ಕಿ' ರೂಪದ ಬಳಕೆಯೂ ಇದೆ; ಖಂಡಿಕೆ>ಖಂಡಿಕಿ>ಖಂಡ್‌ಕಿ>ಖಂಡ್ಕಿ ಆಗಿರಬಹುದು;
- ಕಬ್ಬಿನ ಗಣಿಕೆ ತುಂಡು; ಕೈ ಬೆರಳಿನ ಮಡಚುವ ಭಾಗ. Growth ring of sugarcane; folding joint of a finger(middle segment, middle phalanx).

ಖಂಡಿತ khandita :

೧. ನಿಶ್ಚಯ, ನಿಶ್ಚಿತ, ಖಚಿತ, ನಿಖರ ಎಂಬರ್ಥದಲ್ಲಿ ಪದಬಳಕೆ; ತಪ್ಪದೇ ಬರುವೆನು, ತಪ್ಪದೇ ಮಾಡುವೆನು, ಕೊಟ್ಟ ಮಾತಿಗೆ ತಪ್ಪಿ ನಡೆಯುವುದಿಲ್ಲ ಎಂಬ ಹಲವು ಖಚಿತ ವ್ಯಕ್ತಿತ್ವಗಳಿಗೆ ಸಂಬಂಧಿಸಿದ ಹಾಗೆ ಬಳಕೆಯಾಗುವ ರೂಪ; *ಪ್ರ: 'ನಾಳೆ ನಾನು ಖಂಡಿತ ಬರುತ್ತೇನೆಂದು ಪ್ರಮಾಣ ಮಾಡಲೆ'?*; Certain, sure, definite, undoubted, categorical, without fail;

೨. ಪಾದಪೂಜೆ ಮಾಡುವ ಅಂತಿಮ ವಿಧಿ-ವಿಧಾನಕ್ಕೆ ಸಂಬಂಧಿಸಿದಂತೆ ಪದಬಳಕೆ; ವೀರಶೈವರು ಸೇರಿದಂತೆ ಇತರೆ ಸಮುದಾಯಗಳಲ್ಲಿ ರೂಢಿ; It is related to Paad pooja, an ancient Indian ritual of welcoming a guest by washing his feet with water and flowers, in Veerashiva community;

- ವಿಶೇಷ ಸಂದರ್ಭಗಳಲ್ಲಿ ತಮ್ಮ ಮನೆಗೆ ಅಥವಾ ಗ್ರಾಮಕ್ಕೆ ಜಂಗಮರನ್ನು ಆಹ್ವಾನಿಸಿ ಸಾಂಪ್ರದಾಯಿಕವಾಗಿ ಅವರ ಪಾದಪೂಜೆ ಮಾಡುವುದು ಇತ್ತೀಚೆಗೆ ಎಲ್ಲೆಡೆ ಕಂಡುಬಂದಿದೆ;
- ಪಾದಪೂಜೆ ಮಾಡುವವರು ಮನೆಯ ಹಿರಿಯರು, ಮುತ್ತೈದೆ ದಂಪತಿಗಳು ಅಥವಾ ಗ್ರಾಮದ ಹಿರಿಯರು, ಯಜಮಾನರುಗಳು; ಪಾದಪೂಜೆ ಮುಗಿದ ಬಳಿಕ ಇಂತಿಷ್ಟು ಕಾಣಿಕೆ ಸಲ್ಲಿಸುವುದು, ದವಸ-ಧಾನ್ಯಗಳನ್ನು ನೀಡುವುದು ಉಂಟು;

೩. ಮುಗಿಸು, ಪೂರ್ಣಮಾಡು, ಎಲ್ಲವನ್ನು ತೀರಿಸು ಎಂಬರ್ಥದಲ್ಲಿಯೂ ಪದಬಳಕೆ ಇದೆ; ಊಟದ ತಟ್ಟೆಯಲ್ಲಿರುವ ಪ್ರಸಾದವನ್ನು ಸ್ವಲ್ಪವೂ ಬಿಡದೆ ಪೂರ್ತಿಯಾಗಿ ತಿಂದುಬಿಡುವ ಪ್ರಕ್ರಿಯೆಗೆ 'ಖಂಡಿತ ಮಾಡು' ಎನ್ನುವರು(ಬೆಂ.ಗ್ರಾ.ಜಿ);

- ಇದ್ದುದನ್ನು ಇದ್ದಹಾಗೆ ಹೇಳುವವನ್ನು, ಕೊಟ್ಟ ಮಾತಿನಂತೆ ನಡೆಯುವವನನ್ನು 'ಖಂಡಿತವಾದಿ' ಎಂದು ಕರೆಯುವರು;
- ***—ಖಡಾಖಂಡಿತ*** : ನಿರ್ಧಾಕ್ಷಿಣ್ಯವಾಗಿ; ನಿಸ್ಸಂಶಯವಾಗಿ; ನಿಸ್ಸಂದೇಹವಾಗಿ; ಅಂತಿಮವಾಗಿ; ಕೊನೆಯದಾಗಿ; ಕಡೆಯ ತೀರ್ಮಾನ ತಿಳಿಸುವ ಸಂದರ್ಭಕ್ಕೆ ಸಂಬಂಧಿಸಿದ ಹಾಗೆ; Certainly, surely, definitely, undoubtedly, finally;

- ದ್ವಿರುಕ್ತಿ ರೂಪ; ಕ್ರಿಯೆಯ ತೀವ್ರತೆ ಅಭಿವ್ಯಕ್ತಿಸಲು ಪದಬಳಕೆ; ಖಂಡಿತ ಪದದಲ್ಲೇ ಸ್ಪಷ್ಟತೆ ಇದ್ದರೂ ಖಡಾಖಂಡಿತ ಪದದ ಬಳಕೆ ಕೆಲವೊಮ್ಮೆ ಅನಿವಾರ್ಯ, ಅಗತ್ಯವೂ ಹೌದು; ಸಮಯ, ಸಂದರ್ಭ, ಸನ್ನಿವೇಶಕ್ಕೆ ಅನುಗುಣವಾಗಿ ಇದರ ಬಳಕೆ ಉಂಟು; *ಪ್ರ: 'ನಾನು ಅಲ್ಲಿಗೆ ಬರುವುದಿಲ್ಲವೆಂದು ಖಡಾಖಂಡಿತವಾಗಿ ಹೇಳುತ್ತೇನೆ'.*

ಖಂಡುಗ khaṇḍuga :

- ಅಳತೆ ಪ್ರಮಾಣಕ್ಕೆ ಸಂಬಂಧಿಸಿದಂತೆ ಬಳಕೆಯಲ್ಲಿರುವ ರೂಪ; ಕಿಲೋ ಲೆಕ್ಕಾಚಾರಗಳು ಪ್ರಚಲಿತಕ್ಕೆ ಬರುವ ಮುಂಚೆ ರೂಢಿಗೆ ಬಂದಿರುವಂಥದು; ಪ್ರಸ್ತುತ ಸಹ ಖಂಡುಗದ ಲೆಕ್ಕಾಚಾರಗಳು ಗ್ರಾಮೀಣ ಭಾಗದಲ್ಲಿ ಬಳಕೆಯಲ್ಲಿರುವುದನ್ನು ಕಾಣಬಹುದು; ದವಸ-ಧಾನ್ಯಗಳನ್ನು ಅಳತೆ ಮಾಡುವಾಗ ಅಥವಾ ಅಳೆಯುವಾಗ ಪದಬಳಕೆ; A measuring container with a specific units;
- ಖಂಡುಗದ ಲೆಕ್ಕಾಚಾರದಲ್ಲಿ ಪ್ರಾದೇಶಿಕ ಭಿನ್ನತೆಯನ್ನು ಗುರುತಿಸಬಹುದು; ಒಂದು ಖಂಡುಗಕ್ಕೆ ಇಂತಿಷ್ಟು ಕಿಲೋ, ಸೇರುಗಳಿರಬೇಕು ಎಂಬ ಖಚಿತ ನಿಯಮವೇನಿಲ್ಲ; ಆ ಭಾಗದ ಲೆಕ್ಕಾಚಾರದನ್ವಯ ಹೇಳಲಾಗುತ್ತದೆ; Khanduga was a unit of measurement for irrigated or dry land;
- ೨೦ ಕೊಳಗದ ಪರಿಮಾಣ ಅಥವಾ ಮುಡಿಗೆ ಒಂದು ಖಂಡುಗ ಎಂಬ ಲೆಕ್ಕಾಚಾರವಿದೆ; ಹಾಗೆಯೇ ೨೧/೨ ಕ್ವಿಂಟಾಲ್ ತೂಕದ ಅಳತೆಮಾನಕ್ಕೆ ಒಂದು ಖಂಡುಗ ಎಂಬ ಲೆಕ್ಕಾಚಾರವಿರುವಂತೆ ೩೦೦ ಸೇರು ಅಳತೆಗೆ ಒಂದು ಖಂಡುಗ ಎಂಬ ಲೆಕ್ಕಾಚಾರವೂ ಇದೆ;
- ೧೬ ಮಣಕ್ಕೆ ಒಂದು ಖಂಡುಗ(ಕೃ.ಪ.ಕೋ); ೧೦ ಪಲ್ಲಕ್ಕೆ ಒಂದು ಖಂಡುಗ(ವಿಜ.ಜಿ); ೨೦ ಒಕ್ಕಳ, ೨೦ ಮಣ, ೨೦ ಚೀಲಗಳ ಅಳತೆಗೆ ಒಂದು ಖಂಡುಗ; ೨೦ ಸೇರು(ಹೈ.ಕ); ೨೦೦ ಸೇರು ಅಳತೆ(ಹಾ.ಜಿ); ೨೦ ಕೊಳಗದ ಪ್ರಮಾಣ(ಕುಮಟಾ); ೨೪ ಗೂಡೆಗಳ ಪರಿಮಾಣ; ೨೫೦ ಸೇರುಗಳ ಲೆಕ್ಕಾಚಾರ(ಬೆಂ.ಗ್ರಾ.ಜಿ); ೪೦ ಸೇರಿನ ಪ್ರಮಾಣ(ಚಿಕ್ಕ.ಜಿ); ೧೦೦ ಸೇರಿನ ಅಳತೆ(ಚಿತ್ರ.ಜಿ); ೨ ಪಲ್ಲಕ್ಕೆ ಒಂದು ಖಂಡುಗ(ಹಾವೇ.ಜಿ);
- 'ನಾಯಿ ಮೊಲೇಲಿ ನಾಗಂಡುಗ(ನಾಲ್ಕು ಖಂಡುಗ) ಹಾಲಿದ್ದಂಗೆ'(ಗಾ);
- ಅಧಿಕ, ಅತಿಶಯ, ಬಲಿಷ್ಠ ಎಂಬರ್ಥದಲ್ಲಿಯೂ ಪದಬಳಕೆ. Ample, excessive, exaggerative, strong.

ಖಂಡುದಾಣಿ khaṇḍudāṇi :

- ಖಂಡು+ದಾಣಿ; ಖಂಡು ಎಂಬುದು ತೂತು, ರಂಧ್ರ, 'ಹುಳು' ಕೊರೆದು ತೂತು ಬಿದ್ದದ್ದು ಎಂಬರ್ಥದಲ್ಲಿಯೂ, 'ದಾಣಿ' ಎಂಬುದು ಧಾನ್ಯ ಅಥವಾ ಕಾಳು ಎಂಬರ್ಥದಲ್ಲಿಯೂ ಬಳಕೆಯಲ್ಲಿದ್ದಿರಬಹುದು; Worm-eaten state or whole in; (cereal, grian);
- ಹಾಗಾಗಿ 'ಖಂಡುದಾಣಿ' ಎಂಬ ಪದಕ್ಕೆ 'ಹುಳು ಕೊರೆದ ಅನುಪಯುಕ್ತ ಧಾನ್ಯ ಅಥವಾ ಕಾಳು' ಎಂಬ ಅರ್ಥ ಪ್ರಾಪ್ತವಾಗಿದೆ; Cereals, being worm eaten(useless grain or cereals);
- ಈ ಪದದ ಬಳಕೆ ಯಾವ ಭಾಗದ್ದು ಎಂಬುದರ ಬಗೆಗೆ ಖಚಿತ ಮಾಹಿತಿ ಇಲ್ಲ; ಬಹುಶಃ ಉತ್ತರಕರ್ನಾಟಕದ ಭಾಗದಲ್ಲಿದ್ದಿರಬಹುದು; ಆದರೆ ಬಯಲುಸೀಮೆಯಲ್ಲಿದ್ದಂತೆ ಕಂಡುಬಂದಿಲ್ಲ; *ಪ್ರ: 'ಖಂಡುದಾಣಿ ತಂದು ಎಂತ ಮಾಡಕತೀ ಮಗ್ಗಾ'.*

ಖಂಡೆ khaṇḍe :

- ಖಡ್ಗ; ನೇರವಾದ ಅಲಗುಳ್ಳ ಕಿರುಗತ್ತಿ; *ಪ್ರ: 'ಕನ್ನೇಯ ನೋಡಿ ಸಲುವಯ್ಯ ಹೀಂಗಂದ್ರ ಖಂಡೇದ ಕೈಯ ನಿಲಹಿಡಿದ ಸುವ್ವಿ'*; Sword;
- *—ಖಂಡೇಪೂಜೆ* : ವಿಜಯದಶಮಿ ಅಥವಾ ಆಯುಧಪೂಜೆಯ ಹಿಂದಿನ ದಿವಸ ಮನೆ ಹಾಗೂ ಕೃಷಿ ಕೆಲಸದಲ್ಲಿ ಉಪಯೋಗಿಸುವ ಎಲ್ಲಾ ಕಬ್ಬಿಣದ ಸಾಧನ-ಸಲಕರಣೆಗಳನ್ನು ಪೂಜೆಗೈಯ್ಯುವ ಪರಿಕಲ್ಪನೆಗೆ ಪದಬಳಕೆ; On the ninth day of Dasara festival or Ayudha pooja house, agricultural tools, weapons, inscription writing like Karani or Lekhani(metal stylus) are worshipped; Ayudhapuje is an integral part of Navratri festival; Navratri festival is also called `Ayudha pooja'

means `Worship of Implements'; navratri festival is to celebrate the triumph of goddess(good) Kali over the demon king `Mahishasura';

- ಕುಡ, ರೆಂಟೆ, ಕುಳ, ತಾಳು, ಕೊಡಲಿ, ಕುಡುಗೋಲು, ಒನಕೆ, ಹಾರೆ, ಗುದ್ದಲಿ, ಸಲಿಕೆ, ಈಳಿಗೆ ಮಣೆ, ನೇಗಿಲು, ನೊಗ, ಗಾಡಿ, ಎತ್ತುಗಳು ಹೀಗೆ ಪ್ರತಿಯೊಂದು ಸಾಮಗ್ರಿಗಳನ್ನು ತೊಳೆದು ಕೆಂಪುಮಣ್ಣು ಮತ್ತು ಸುಣ್ಣದಿಂದ ಮೂರು ಪಟ್ಟೆ ಬಳಿದು, ದಂಡಿ ಚೆಂಡುಹೂವು ಮುಡಿಸಿ ಪೂಜೆ ಸಾಮಗ್ರಿಗಳಿಂದ ಪೂಜೆ ಮಾಡುವುದು, ನಂತರ ನೈವೇದ್ಯ ಅರ್ಪಿಸುವುದಿದೆ; ಸಿಂಗರಿಸಿದ ಆಯುಧಗಳ ಮೇಲ್ಭಾಗದಲ್ಲಿ ಐದು ದಂಟುಗಳನ್ನು ಗೋಪುರಾಕಾರದಲ್ಲಿ ಕಟ್ಟುವುದುಂಟು;
- ಕೆಲವು ಕಡೆ ತಲೆಬಾಗಿಲಿಗೆ ಪೂಜೆ ಮಾಡಿ ಕುಂಬಳಕಾಯಿ ಹೊಡೆಯುವುದು ಕಂಡುಬಂದಿದೆ;
- 'ಖಂಡೆಪೂಜೆ' ಎಂಬ ರೂಪ ವ್ಯಂಗ್ಯೋಕ್ತಿಯಾಗಿಯೂ ಬಳಕೆಯಲ್ಲಿದೆ; ಏಟು ಅಥವಾ ಹೊಡೆತ ತಿನ್ನು ಎಂಬರ್ಥದಲ್ಲಿ; 'ಏನು ಈ ದಿವಸ ಖಂಡೆಪೂಜೆ ಬಲು ಜೋರಾಗಿಯೇ ನಡೆದಂತೆ ಕಾಣುತ್ತದೆ' ಎಂಬುದೊಂದು ವ್ಯಂಗ್ಯೋಂಕ್ತಿ;
- ***—ಖಂಡೆಮಡಿಗೆ*** : ತೊಲೆಯಿಂದ ತೊಲೆಗೆ ಜೋಡಿಸಲಾಗುವ ಹಲಗೆ; ಇದಕ್ಕೆ 'ನಾಗೊಂದಿ' ಇರುವುದಿಲ್ಲ; Wooden planks joined between beam, girdler(wooden);
- ***—ಖಂಡೆನವಮಿ*** : ನವರಾತ್ರಿ ಸಂದರ್ಭದಲ್ಲಿ ಮೈಲಾರಲಿಂಗ ದೇವರಿಗೆ ಸಲ್ಲಿಸಲಾಗುವ ವಿಶೇಷ ಪೂಜೆ–ಮನಸ್ಕಾರ(ಚಿ.ಪ.ಕೋ). A special pooja(worshipping) at Mylaralinga during Navaratri festival.

ಖಂತಿ ಅಂಗಿ khanti aŋgi :

- 'ಗೊಂಡರು' ಬುಡಕಟ್ಟು ಸಮುದಾಯದಲ್ಲಿ ವಯಸ್ಸಾದ ಹಿರಿಯರು ಧರಿಸುವ ಖಾಕಿ ಬಣ್ಣದ ಕೋಟಿಗೆ ಪದಬಳಕೆ; ಕೋಟಿನ ಹೊರಭಾಗ ನಿಲುವಂಗಿಯಂತೆ ವಿನ್ಯಾಸಗೊಂಡಿರುತ್ತದೆ(ಉ.ಕ.ಜಿ); A drab coloured outer coat usually worn by the elders of `Gonda' community; `Gonda' people are a tribal community;
- ಬುಡಕಟ್ಟು ಸಮುದಾಯದವಳ ಉಡುಗೆ–ತೊಡುಗೆ, ಆಭರಣ ವಿಶೇಷಗಳು, ಊಟೋಪಚಾರಗಳು, ವಿಧಿ–ವಿಧಾನಗಳು ಮತ್ತು ಅವುಗಳಿಗೆ ಕರೆದಿರುವ ಹೆಸರುಗಳೆಲ್ಲವೂ ವಿಶೇಷ ಹಾಗೂ ವಿಶಿಷ್ಟ; ಆ ಹಿನ್ನೆಲೆಯಲ್ಲಿ ಈ ರೂಪದ ಬಳಕೆಗೊಂಡಿರಬಹುದು;
- ಊರೂರು ತಿರುಗಿ ಶಾಸ್ತ್ರ, ಭವಿಷ್ಯ ನುಡಿಯುವ ಆದಿವಾಸಿಗಳೂ ಇಂಥದೇ ಕೋಟು ಧರಿಸುವರು; ಆದರೆ ಅದು ಖಾಕಿ ಬಣ್ಣದ್ದಲ್ಲ, ಕಪ್ಪುಬಣ್ಣದಿಂದ ಕೂಡಿರುವಂಥದು.

ಖಂಭೀರ/ಖಂಬೀರ khambhīra/khambīra :

- 'ಗಂಭೀರ' ಎಂಬರ್ಥದಲ್ಲೂ ಬಳಕೆಯಲ್ಲಿರುವ ರೂಪ; ಬಹುದ್ದೂರ, ವೀರ, ಸಾಹಸಿ, ಧೈರ್ಯಶಾಲಿ, ಶಕ್ತಿವಂತ, ದಿಟ್ಟತನದಿಂದ ಕೂಡಿದವ, ಮುಂದಾಳು ಎಂಬ ಹಲವು ಪ್ರಕಾರದ ಅರ್ಥಗಳನ್ನು ಕೊಡಲಾಗಿದೆ; Brave, adventurer, courageous, powerful, leader;
- ಈ ಪದದ ಬಳಕೆ ಯಾವ ಭಾಗದ್ದು ಎಂಬುದರ ಬಗೆಗೆ ಖಚಿತ ಮಾಹಿತಿ ಇಲ್ಲ; *ಪ್ರ: 'ಇಂತಾ ಖಂಭೀರ ಮಗಾ ಹುಟ್ಟಿದನಲ್ಲ ಅಂತಾ ಸಂತೋಸಾಗೇತಿ'.*

ಖಂವುಟಿಕಾಯಿ khamvuṭikāyi :

- 'ಕವೀಟಕಾಯಿ' ಎಂಬ ಹೆಸರೂ ಪ್ರಚಲಿತ; ಒಂದು ಪ್ರಕಾರದ ಕಾಯಿ; A kind of nut(wild fruit);
- ಬಿಲ್ವಪತ್ರೆ ಕಾಯಿಯಂತೆ ಕಂಡುಬರುವ ಕಾಡುಜಾತಿಗೆ ಸೇರಿದ ಫಲ; A wild-fruit resembles Bilvapatra;
- ಒಳಭಾಗದಲ್ಲಿ ತಿರುಳಿದ್ದು ಹೊರಭಾಗದಲ್ಲಿ ಗಟ್ಟಿಯಾದ ಕವಚ ಹೊಂದಿದೆ.

ಖಗ್‌ಕಾಯಿ/ಖಗ್ಗ khagkāyi/khagga :

- 'ಖಗ್ಗಾಯಿ' ಎಂಬ ರೂಪವೂ ಪ್ರಚಲಿತ; ಕಸುಕು, ಹಣ್ಣಾಗದ, ಕಸುಗಾಯಿ, ಹಣ್ಣಾಗಿರದ ಬಲಿತ ಕಾಯಿ ಎಂಬರ್ಥದಲ್ಲಿ ಪದಬಳಕೆ; Unripe fruit;

- ಖಗಟ್‌ಕಾಯಿ ಅಥವಾ ಕಗಟ್‌ಕಾಯಿ ಎಂಬ ರೂಪ ಬಯಲುಸೀಮೆಯಲ್ಲಿ ಪ್ರಚಲಿತ; *ಪ್ರ: 'ಖಗ್‌ಕಾಯಿ ತಂದು ಏನ್ ಮಾಡಾಕೊರ್ಟಿದ್ದಿ ನೀನು'.*

ಖಗ khaga :
- ಒಂದು ಬಗೆಯ ಹಕ್ಕಿ ಅಥವಾ ಪಕ್ಷಿ; ಗಾಳಿಯಲ್ಲಿ ಹಾರಾಡುವಂಥದು; **Wanderer of the skies(bird);**
- ಅಂಬು, ಬಾಣ, ದೇವತೆ, ಖೇಚರ ಎಂಬರ್ಥದಲ್ಲಿ ಬಳಕೆಯುಳ್ಳ ರೂಪ; **Arrow, dart, angel;**
- ಮನೆ, ಗೃಹ, ಗಗನ, ಆಕಾಶ, ನೇಸರು, ಸೂರ್ಯ ಎಂಬ ಮೊದಲಾದ ಅರ್ಥಗಳಲ್ಲಿ ಗುರುತಿಸಲಾಗಿದೆ (ಕ.ನಿ); **House, home, sky, sun;**
- 'ಖಗ' ರೂಪವನ್ನು ಎರಡು ಪದಗಳ ಸಂಕ್ಷಿಪ್ತ ರೂಪ ಎಂದರೂ ಆದೀತು; 'ಖ' ಆಕಾಶದಲ್ಲಿ (ಖ=ಆಕಾಶ), 'ಗ' ಗಮಿಸುವಂಥದು ಎಂದು ಅರ್ಥ;
- ಸಾಮಾನ್ಯವಾಗಿ 'ಧ್ವನಿಮಾ'ಕ್ಕೆ ಅರ್ಥವಿರುವುದಿಲ್ಲ; 'ಆಕೃತಿಮಾ'ಕ್ಕೆ ಅರ್ಥವಿರುತ್ತದೆ; 'ಖ' ಇದರ ಅನ್ವಯ 'ಧ್ವನಿಮಾ'ವೂ ಅಹುದು, ಅದೇ ವೇಳೆ 'ಆಕೃತಿಮಾ'ವೂ ಅಹುದು.

ಖಚಿತ khacita :
- ಖಂಡಿತ; ನಿಶ್ಚಿತ; ನಿಖರ; ಸ್ಪಷ್ಟಗೊಳಿಸು; ನಿರ್ಧರಿಸು; ದೃಢೀಕರಿಸು; ಖಾತ್ರಿಮಾಡು; ನಿಸ್ಸಂದೇಹವಾಗಿ ಮಾತುಕೊಡು; **Certain, definite, sure, doubtless, confirm;**
- ಕೂಡಿಸಿದ; ಕೆಚ್ಚಿದ; ಕುಂದಣಿಸಿದ; ಮೆಟ್ಟಿದ(ಕ.ನಿ); **Embedded, carved;**
- ಹೆಣೆದ; ಪೋಣಿಸಿದ; ಜೋಡಿಸಿದ(ತು.ನಿ); **Weave, plait;**
- ಅಂತಿಮ ನಿರ್ಧಾರ ಮಾಡು; ನಿಶ್ಚಯ; ನಿರ್ಣಯ ಮಾಡು; ಕೊಟ್ಟ ಮಾತಿನಂತೆ ನಡೆದುಕೊಳ್ಳು; **Final decision, resolution, follow words;** *ಪ್ರ: 'ಕೊಡುತ್ತೇನೆಂದು ಹೇಳಿದ ಮೇಲೆ ಅದು ಖಚಿತವೆಂದೇ ತಿಳಿ'; ಪ್ರ: 'ಖಚಿತವಾಗಿ ಕೊಡುವೆನಾದರೂ ಉಚಿತವೆಂದು ಭಾವಿಸಬೇಡ'.*

ಖರ್ಚಿಗೆ ಕೊಡು kharcige koḍu :
- ಈ ನುಡಿಗಟ್ಟು ಬಹಳ ಪ್ರಾಚೀನವೇನಲ್ಲ; ಗ್ರಾಮೀಣ ಪ್ರದೇಶಗಳಲ್ಲಿ ವಿರಳವಾಗಿ ಬಳಕೆಯಲ್ಲಿದೆ; ಪಟ್ಟಣವಾಸಿಗಳಲ್ಲಿ ಹೆಚ್ಚಿರುವಂತೆ ಕಾಣುತ್ತದೆ; ಇದರ ಗಂಭೀರ ಉಪಯೋಗ ಕಡಿಮೆ; ತಮಾಷೆ ಮಾಡಲು ಬಳಸಿದಂತೆ ತೋರುತ್ತದೆ; ಹೊಸ ಜಾನಪದದ ಸೃಷ್ಟಿ ಎಂದರೂ ಆದೀತು; **'Recent development'** ಎನ್ನುವ ಅರ್ಥದಲ್ಲಿ; ಹೆಚ್ಚಿದ್ದಂತೆ ಭಾಸವಾಗುವುದು; **A proverb which is used to mock or fun at(giving beatings);**
- 'ಖರ್ಚು' ಎನ್ನುವ ಪದ ಎಲ್ಲರಿಗೂ ಗೊತ್ತಿರುವಂತೆ ವೆಚ್ಚ, ವ್ಯಯ, ವಿಲೇವಾರಿ ಎನ್ನುವ ಅರ್ಥವಿದೆ; ಇದು ಸಂಸ್ಕೃತದಿಂದ ಕನ್ನಡಕ್ಕೆ ನೇರವಾಗಿ ಬಂದುದು; ಇನ್ನು 'ಕೊಡು' ಪದ 'ಕುಡು' ಎಂಬ ಹಳೆಯ ರೂಪದಿಂದ ಬಂದುದೆಂದು ಹೇಳಬೇಕು, ಕೆಲವೊಮ್ಮೆ ಇಂದೂ 'ಕುಡು' ಬಳಕೆ ಉಂಟು ವಿರಳವಾಗಿ; 'ಕೊಡು' ಎನ್ನುವುದಕ್ಕೆ ನೀಡು, ತೆರು ಅರ್ಥಗಳಿವೆ; ತಮಿಳಿನಲ್ಲಿ ಕೊಡು/ಕೊಡೈ, ಮಲೆಯಾಳಂನಲ್ಲಿ ಕೊಡುಕ್ಕ/ಕೊಡ/ಕೊಡ್, ತುಳುವಿನಲ್ಲಿ ಕೊರ್/ಕೊರು ರೂಪಗಳಿವೆ; **Expense, expenditure, outlay;**
- ನುಡಿಗಟ್ಟಿನ ಪ್ರಾಮುಖ್ಯ ಇರುವುದು ಅದರ ನೇರ ಬಳಕೆಯಲ್ಲಿ ಅಲ್ಲ; ಅದರ ಪ್ರಕಾರಾಂತ ಉಪಯೋಗದಲ್ಲಿ; ಆ ಅರ್ಥದ ದೃಷ್ಟಿಯಿಂದ 'ದುಡ್ಡು ಕೊಡು'ವುದು ನುಡಿಗಟ್ಟಿನ ಉದ್ದೇಶವಲ್ಲ; ಏಟು ಕೊಡು, ಒದೆಕೊಡು ಎನ್ನುವ ಅರ್ಥ ಮುಖ್ಯವಾದುದು; ಅದರಿಂದ 'ಖರ್ಚಿಗೆ ಕೊಡು' ಎನ್ನುವುದು ಒಂದು ರೂಪಕ; ವ್ಯವಹಾರ ಸಂಬಂಧಿಯಲ್ಲ, ಅದಕ್ಕೆ ವಿರುದ್ಧವಾದುದು ಅಥವಾ ಅದರ ನಿಯಂತ್ರಣಕ್ಕೆ ಬಂದುದು;
- ಪ್ರಾಯಃ ಮಕ್ಕಳು ತಮ್ಮ ತಂದೆ ತಾಯಿಗಳನ್ನೊ, ಸಂಬಂಧಿಕರನ್ನೊ 'ದುಡ್ಡಿ'ಗಾಗಿ ಗೋಗರೆದು ಪೀಡಿಸುತ್ತಿದ್ದಾಗ, "ದುಡ್ಡು ಬೇಕಾ ಬಾ ಕೊಡ್ತೀನಿ" ಎಂದು ತಮಾಷೆಗಾಗಿ ಹೇಳಿ, ಏಟು ಕೊಟ್ಟಿರಬೇಕು; ಆ ಮೂಲಕ 'ದುಡ್ಡು' ಎಂದರೆ 'ಏಟು' ಎಂಬ ಅರ್ಥವನ್ನು ಮಕ್ಕಳೂ ಕಲ್ಪಿಸಿಕೊಂಡಿರಬೇಕು; ದೊಡ್ಡವರೂ ಆ ಭಾವನೆಯನ್ನೆ ಮುಂದುವರಿಸಿರಬೇಕು; ಹೀಗಾಗಿ 'ಖರ್ಚಿಗೆ ಕೊಡು'

ಎನ್ನುವುದು 'ಏಟುಕೊಡು' ಎಂಬ ಪೂರ್ಣಾರ್ಥ ಪಡೆದಿರಬಹುದು; ಈಗಲೂ ತಮಾಷೆಗಾಗಿ ಮಕ್ಕಳಿಗೆ "ಕೈ ನೀಡು, ಪೈಸೆ ಕೊಡ್ತೀನಿ" ಎಂದು ಹೇಳಿ, ಅವರು ಕೈನೀಡಿದಾಗ, 'ತಕೋ ಖರ್ಜಿಗೆ' ಎಂದು ಹೇಳಿ ಬರಿಗೈಲಿ ಅವರಿಗೆ ಬಾರಿಸುವುದುಂಟು;

- ಈ ನುಡಿಗಟ್ಟನ್ನು 'ಮಕ್ಕಳ ಜಾನಪದ'ದಲ್ಲಿ ಗುರುತಿಸುವುದು ಸೂಕ್ತ.

ಖಜಾನೆ khajāne :

- ಬೊಕ್ಕಸ; ತಿಜೋರಿ; ಭಂಡಾರ; ಕೋಶಾಗಾರ; ನಗದು ಹಣ; ಬಂಡವಾಳ(ಕ.ನಿ); Treaure, cash, capital, an officer of treasure is called treasurer;
- ಅನ್ಯದೇಶ್ಯ ಪದ; ಮರಾಠಿ, ಹಿಂದಿಗಳಲ್ಲಿ ಖಜಾನಾ, ಖಜೀನಾ ರೂಪಗಳ ಬಳಕೆ ಇದೆ; 'ಖಜಾನಾ' ಪದದಲ್ಲಿನ 'ನಾ'ಕಾರ 'ಎ'ಕಾರಾಂತದಲ್ಲಿ ವ್ಯತ್ಯಯಗೊಂಡು ಕನ್ನಡದಲ್ಲಿ 'ಖಜಾನೆ' ರೂಪ ಪಡೆದುಕೊಂಡಿದೆ;
- ಇಂಗ್ಲಿಷಿನ 'ಟ್ರೆಷರಿ' ಪದದ ಸಮಾನಾರ್ಥಕ ರೂಪವೇ ಕನ್ನಡದ 'ಖಜಾನೆ';
- 'ಖಜಾನೆ ಲೂಟಿ ಮಾಡಿದರು ಅಥವಾ ಮಾಡುತ್ತಿದ್ದಾರೆ' ಎಂಬುದು ಇತ್ತೀಚಿನ ದಿವಸಗಳಲ್ಲಿ ಬಳಕೆಯಲ್ಲಿರುವ ವ್ಯಾಖ್ಯೆ; ರಾಜಕಾರಣಿಗಳ ಪರಸ್ಪರ ಆರೋಪ, ಪ್ರತ್ಯಾರೋಪಗಳ ಸಂದರ್ಭದಲ್ಲಿ; *ಪ್ರ: 'ನನ್ನ ಖಜಾನೆಯನ್ನು ತೆರೆಯುವ ಅಧಿಕಾರ ನಿನಗೆ ಕೊಟ್ಟವರಾರು'!*
- 'ಖಜಾನೆಯ ಅಧಿಕಾರಿಗೆ' 'ಖಜಾಂಚಿ' ಎಂದು ಕರೆಯುವರು; ಭಂಡಾರಿ, ಸಂಸ್ಕೃತದಲ್ಲಿ ಕೋಶಾಧ್ಯಕ್ಷ ಎಂಬರ್ಥದಲ್ಲಿಯೂ ಹೇಳುವುದಿದೆ;
- ಪಾರಸಿಯಲ್ಲಿ 'ಖಜಾನ್ಹ್' ಮತ್ತು ಅರಬ್ಬಿಯಲ್ಲಿ 'ಖಜಾನ', 'ಖಜಾನಾ' ಎಂಬ ಪದಬಳಕೆ ಕಂಡುಬಂದಿದೆ(ಇಗೋ ಕನ್ನಡ).

ಖಜಿಲ್/ಖಜೀಲ khajil/khajīla :

- ಖಿನ್ನತೆ; ನಾಚಿಕೆ; ತನ್ನತನವನ್ನು ಅರಿಯದೆ ನಡೆದುಕೊಂಡ ರೀತಿಯಿಂದಾಗುವ ಮುಜುಗರ; Shyness, embarrass, depression;
- ಅಸಹ್ಯ; ಅಪಮಾನ; ತನ್ನ ತಪ್ಪಿನಿಂದಾಗುವ ಮುಖಭಂಗ(ಬೀ.ಜಿ); *ಪ್ರ: 'ನಜೀರನ ಮಾರಿ ನಾಚಿಕೆಯಿಂದ ಲಾಲ್‌ಲಾಲ್(ಕೆಂಪಾಗಿ) ಆಗಿ ಖಜೀಲಾಯಿತು ಪಾಪ'(ಬದುಕು).* Heinous, disgust; Shame, insult, disgrace;

ಖಟ್‌ಮಂಡಿಗೆ khaṭmaṇḍige :

- ಒಂದು ಬಗೆಯ ವಿಶೇಷ ಸಿಹಿ ತಿಂಡಿ–ತಿನಿಸು; ತುಳುನಾಡಿನ ಜೈನರು ತಯಾರಿಸುವುದು ಕಂಡುಬಂದಿದೆ; A sweet dish prepared by the Jain community of Tulu(a language) speaking parts of South kannada district of Karnataka state;
- ವಿಶೇಷ ಸಂದರ್ಭಗಳಲ್ಲಿ ಮಾಡಲಾಗುವ ಈ ತಿಂಡಿಯನ್ನು ತಿನ್ನಲು ಉಪಯೋಗಿಸುವರು. In this area this sweet dish is prepared on special occasions.

ಖಟಕಾರ khaṭakāra :

- 'ದಬ್ಬಳ' ಎಂಬರ್ಥದಲ್ಲಿ ಪದಬಳಕೆ; ಸೂಜಿ, ದಬ್ಬಳ ಇವು ಬಟ್ಟೆ, ಚೀಲ, ಟಾರ್ಪಲ್‌ಗಳಂತಹ ಪದಾರ್ಥಗಳು ಹರಿದು ಹೋದಾಗ ಹೊಲಿಯಲು ಉಪಯೋಗಿಸುವರು; A needle like sharp pointed sting(little bigger than needle) used to stitch the cloth or sack;
- ಯಾಂತ್ರಿಕ ಬದುಕಿಗೆ ಕಾಲಿಡುವ ಮುನ್ನ ಈ ಸಾಧನಗಳ ಉಪಯೋಗದಿಂದ ಹರಿದ ವಸ್ತುಗಳನ್ನು ಕೈಯಿಂದ ಹೊಲಿಯುತ್ತಿದ್ದರು; ಇದಕ್ಕೆ ದಾರ ಅಥವಾ ನೂಲು ಪೋಣಿಸುತ್ತಿದ್ದುದು ಕಡ್ಡಾಯವಾಗಿತ್ತು;
- ದಬ್ಬಳದ ಮುಂಭಾಗ ಮೊನಚಾಗಿದ್ದು ಹಿಂಭಾಗದಲ್ಲಿ ದಾರ ತೂರಿಸಲು ಸಣ್ಣ ರಂಧ್ರವಿರುತ್ತಿತ್ತು; ಇದನ್ನು ತಾಮ್ರ, ಕಬ್ಬಿಣದಂತಹ ಇತರೆ ಲೋಹಗಳಿಂದ ತಯಾರಿಸುವರು (ನೋಡಿ: ದಬ್ಬಳ).

ಖಟಕು/ಖಟ್ಕು khaṭaku/khaṭku :

- ಕಠಿಣ ನೆಲ; ಗಟ್ಟಿಯಾದ ಭೂಮಿ; ಕಲ್ಲಿನಿಂದ ಕೂಡಿದ ಪ್ರದೇಶ; ಖಟಕು=ಕಠಿಣ ಆಗಿರಬಹುದೆ?; ಕಲ್ಲುಮಿಶ್ರಿತ ಗಟ್ಟಿಯಾದ ಭೂಮಿಗೆ ಪದಬಳಕೆ; 'ಕಲ್‌ಜೆರುಬು' ಎಂಬ ಹೆಸರಿನಿಂದಲೂ ಕರೆಯುವುದಿದೆ; Hard soil, dryland, barren;
- ಸಾಗುವಳಿಗೆ ಯೋಗ್ಯವಲ್ಲದ ಭೂಮಿ; ಇಲ್ಲಿ ಯಾವುದೇ ಬೆಳೆ ಬೆಳೆಯಲಾಗುವುದಿಲ್ಲ; ಉಳುಮೆ ಮಾಡಲು ಕಷ್ಟಕರ; ಹಾಗಾಗಿ ಇದೊಂದು

ಅನುಪಯುಕ್ತ ನೆಲ; *ಪ್ರ: 'ಖಟ್ಕ್‌ನೆಲ ತಕ್ಕಂಡು ವ್ಯವ್‌ಸಾಯ ಮಾಡಕಾದದೆ'?.*

ಖಟಬಾಕಿ khaṭabāki :
- ಸಾಲದ ಬಾಕಿ(ಬ.ಜಿ); ಹಳೇ ಸಾಲ; ತೀರಿಸಲಾಗದ ಸಾಲದ ಬಾಕಿ ಹಣ; ಮರುಪಾವತಿ ಮಾಡಲಾಗದ್ದು; ವಸೂಲಾಗದ ಹಣ; *ಪ್ರ 'ಮೊದ್ಲು ಖಟಬಾಕಿ ಕೊಟ್ಟು ಆಮ್ಯಾಲ್ ಮುಂದುಕ್ ಕೇಳು'.* Bad debt, unreturned loan, irretrievable loan.

ಖಟ್ಲ khaṭla :
- ಖಟ್ಪಳೆ, ಖಟ್ಲೆ, ಕಟ್ಲೆ ಎಂಬ ಸಂವಾದಿ ರೂಪಗಳ ಬಳಕೆಯೂ ಇದೆ;
- ಕುಟುಂಬ, ಮನೆಮಂದಿ ಅಥವಾ ಮನೆಯ ಒಟ್ಟಾರೆ ಸಾಮಗ್ರಿಗಳ ಮೊತ್ತ ಎಂಬರ್ಥದಲ್ಲಿ ಬಳಕೆಗೊಳ್ಳುವ ರೂಪ; Family, members of a family, total number of household things;
- ಸತ್ತ ವ್ಯಕ್ತಿಗೆ ಹನ್ನೊಂದನೇ ದಿವಸಕ್ಕೆ ಮಾಡಲಾಗುವ ಉತ್ತರ ಕ್ರಿಯಾದಿ ಕಾರ್ಯಕ್ರಮ ಅಥವಾ ಶ್ರಾದ್ಧಕ್ಕೆ ಸಂಬಂಧಿಸಿದಂತೆ ಪದಬಳಕೆ ಇದೆ; Obituary, obit, eleventh day death ceremony;
- 'ಖಟ್ಪಲೆ' ಉಚ್ಚಾರಣೆಯಲ್ಲಿ ಖಟ್ಲ, ಕಟ್ಲ, ಕಟ್ಲೆ, ಕಟ್ಟ ಆಗಿದೆ; ಭಾಷಾ ಬಳಕೆಯ ಸರಳೀಕರಣದ ಸೌಲಭ್ಯದಿಂದಾಗಿ ಈ ವ್ಯತ್ಯಯ; *ಪ್ರ: 'ನಾಳೆ ಖಟ್ಲ ಅದೆ ವತಾರ್ಲೆ ಬಂದ್ಬುಡಿ ತಾಯಿ'.*

ಖಟ್ಟಾಜ್ಞೆ khaṭṭāgne :
- ಒಂದು ಬಗೆಯ ವಿಶೇಷ ಪೂಜೆ–ಪುನಸ್ಕಾರಕ್ಕೆ ಸಂಬಂಧಿಸಿದಂತೆ ಪದಬಳಕೆ; ವೀರಶೈವ ಸಮುದಾಯದವರಲ್ಲಿ ರೂಢಿ; A word related to special kind of pooja or worship in 'Veerashaiva' community;
- ನಿಗದಿತ ದಿವಸದಂದು ಮೀಸಲು ಅಡುಗೆ ತಯಾರಿಸಿ ಮನೆಯ ಹೊರಗೆ ಅಥವಾ ಹೊಲ–ಗದ್ದೆಗಳಿಗೆ ಕೊಂಡೊಯ್ದು ಮನೆಯವರೆಲ್ಲ ಒಟ್ಟಾಗಿ ಸೇರಿ ಸಾಮೂಹಿಕ ಭೋಜನ ಮಾಡುವುದು ಒಂದು ಪದ್ಧತಿ; A common dining outside the house in fields with the members of a family or a cult;
- ಎಲ್ಲವೂ ಸಿದ್ಧಗೊಂಡು ಹೊಲಗದ್ದೆಗಳಿಗೆ ತೆರಳಿದ ಮೇಲೆ ಸಾಮೂಹಿಕ ಭೋಜನ ಸ್ವೀಕಾರಕ್ಕೂ ಮೊದಲು ಕರಡಿಕೆಯ ಮೇಲ್ಭಾಗಕ್ಕೆ ಪೂಜೆ ಸಲ್ಲಿಸಿ ನೈವೇದ್ಯ ಮಾಡುವ ವಿಧಾನವಿದೆ; ಇದೊಂದು ಸಾಂಪ್ರದಾಯಿಕ ವಿದಿಯೂ ಹೌದು; ಈ ಪದ್ಧತಿ ಮುಗಿಸಿದ ನಂತರ ಎಲ್ಲರೂ ಊಟ ಸೇವಿಸಬಹುದು;
- ಗ್ರಾಮೀಣರ ಹಬ್ಬ–ಹರಿದಿನಗಳ ಸಂದರ್ಭದಲ್ಲಿ ಇಂತಹ ಹಲವಾರು ಸಾಂಪ್ರದಾಯಿಕ ಆಚರಣೆಗಳನ್ನು ಹಿಂದಿನಿಂದಲೂ ರೂಢಿಸಿಕೊಂಡು ಬಂದಿರಲಾಗಿದೆ; ಇವು ಜನ–ಜಾನುವಾರುಗಳು, ಹೊಲ, ಗದ್ದೆಗಳ ಶ್ರೇಯಸ್ಸು, ಒಳಿತಿಗಾಗಿ ಮಾಡಲಾಗುವಂಥದು; ಏಳಿಗೆ ಅಥವಾ ಅಭಿವೃದ್ಧಿ ಹೊಂದಲಿ ಎಂಬ ಸದುದ್ದೇಶವೂ ಕಾಣಬರುತ್ತದೆ;
- ದೇವತೆಗಳು, ಭೂತಾಯಿ ಹಾಗೂ ತನ್ನ ಸುತ್ತ ತಾನೇ ಹೆಣೆದುಕೊಂಡಿರುವ ಗೌರವ, ಭಕ್ತಿ–ಭಾವನೆಗಳು, ನಂಬಿಕೆ–ಮೂಢನಂಬಿಕೆಗಳ ಪರಮಾವಧಿಯೇ ಈ ಆಚರಣೆಗಳ ಸೃಷ್ಟಿಗೆ ಕಾರಣ; ಇವು ಮನುಷ್ಯನ ಮನಸ್ಸನ್ನು ಸದೃಢಗೊಳಿಸುತ್ತವೆ ಎಂಬ ಉದ್ದೇಶವಂತೂ ಇದ್ದೇ ಇದೆ;
- ಬಲವಾದ; ಗಟ್ಟಿಯಾದ; ನಿಷ್ಠುರವಾದ; ಕಾಳಜಿ ಇಲ್ಲದ ವ್ಯಕ್ತಿ; ಮೊಂಡ; ತುಂಟ; ಜಿಪುಣ(ಗು.ಜಿ); Strong, harsh, stern, hard, rude, stubborn, obstinate;
- ಖಟ್+ಆಜ್ಞೆ>ಖಟ್ಟಾಜ್ಞೆ; ಆಜ್ಞೆ ಎಂದರೆ ಆದೇಶ ಎಂಬರ್ಥವಿದೆ; ಅಂದರೆ ವಿಧಿಸಿದ ಆದೇಶವನ್ನು ಪಾಲಿಸಲೇಬೇಕೆಂಬ ಪರಿಕಲ್ಪನೆಯನ್ನು ಈ ಪದ ಧ್ವನಿಸುತ್ತದೆ; ಕಠಿಣವಾದ ಸಂದೇಶ;
- ಗ್ರಾಮೀಣ ಪ್ರದೇಶದಲ್ಲಿ ಇಂತಹ ಖಟ್ಟಾಜ್ಞೆಗಳು ಹಬ್ಬ–ಹರಿದಿನಗಳು, ನ್ಯಾಯ–ಪಂಚಾಯ್ತಿಗಳು ಹಾಗೂ ಇತರೆ ಸಂದರ್ಭಗಳಲ್ಲಿ ತೆಗೆದುಕೊಳ್ಳುವ ಸಾಮೂಹಿಕ ನಿರ್ಧಾರಗಳಾಗಿರುತ್ತವೆ; ಇದನ್ನು ಎಲ್ಲರೂ ಅನುಸರಿಸಲೇಬೇಕೆಂಬ ನಿಯಮವಿದೆ; ವಿರುದ್ಧವಾಗಿ ನಡೆದವರಿಗೆ ತಕ್ಕ ಶಿಕ್ಷೆ, ದಂಡ ಮೊದಲಾದವು ರೂಢಿಯಲ್ಲಿರುತ್ತವೆ; ಇವು ಕಠಿಣ ನಿರ್ಣಯಗಳಾಗಿರುವುದು ವಿಶೇಷವೇ ಸರಿ; *ಪ್ರ: 'ಹಬ್ಬ ಮುಗಿಯುವವರೆಗೂ ಊರಿನವರಾರೂ ಹೊರಗೆಲ್ಲು ಊಟ–ತಿಂಡಿ ತಿನ್ನಬಾರದೆಂದು ಪೂಜಾರಿಗಳು ಖಟ್ಟಾಜ್ಞೆ ವಿಧಿಸಿದ್ದಾರೆ'*; A common

decision taken by the villagers to follow during festivities or local panchayats;
- 'ಕಟ್ಟಾಜ್ಞೆ' ಪದ ಮೂಲರೂಪವಿರಬಹುದು; ಆದರೆ ಉಚ್ಚಾರಣೆಯಲ್ಲಿ ಅಲ್ಪಪ್ರಾಣಾಕ್ಷರ ಮಹಾಪ್ರಾಣಾಕ್ಷರವಾಗಿ ಬದಲಾವಣೆಗೊಂಡು 'ಖಟ್ಟಾಜ್ಞೆ' ಆಗಿರಲು ಸಾಧ್ಯವಿದೆ?;
- ಪ್ರಸಕ್ತ ಆರಕ್ಷಕ ಇಲಾಖೆ, ಶಿಕ್ಷಣ ಇಲಾಖೆ, ನ್ಯಾಯಾಲಯಗಳು ಕೆಲವು ಸಂದರ್ಭ-ಸನ್ನಿವೇಶಗಳಲ್ಲಿ ಜನತೆಗೆ ಅಥವಾ ಸಂಬಂಧಿಸಿದ ಪ್ರದೇಶಗಳಿಗೆ ಕಠಿಣವಾದ ಸಂದೇಶಗಳನ್ನು ನೀಡುವುದರ ಮೂಲಕ ಕಟ್ಟಾಜ್ಞೆ ವಿಧಿಸುವುದನ್ನು ಕಾಣುತ್ತೇವೆ; *ಪ್ರ: 'ಪರೀಕ್ಷೆ ನಡೆಯುವ ಸುತ್ತಮುತ್ತಲ ಪ್ರದೇಶದ ನೂರು ಮೀಟರ್ ಒಳಗೆ ಯಾರೂ ಓಡಾಡಬಾರದೆಂದು ಶಿಕ್ಷಣ ಇಲಾಖೆ ಖಟ್ಟಾಜ್ಞೆ ವಿಧಿಸಿದೆ'.*

ಖಡ/ಖಡೆ/ಖಡ್ಯಾ/ಖಡಗ khaḍa/khaḍe/khaḍyā/khaḍaga :
- ಕಡೆವು, ಕಡೆಯ, ಕಡಗ ಎಂಬ ಸಂವಾದಿ ರೂಪಗಳ ಬಳಕೆ ಇದೆ;
- ಕಾಲಕಡಗ; ಕಾಲುಬಳೆ; ದಪ್ಪದಾಗಿ ವಿನ್ಯಾಸಗೊಳಿಸಲಾಗಿರುತ್ತದೆ; *ಪ್ರ: 'ಬೆರಳಿಗುಂಗುರ ಬೇಡಿ ಬಂಗಾರದ ಖಡೆ ಬೇಡಿ*'(ಕ.ಜಾ.ಕೋ); **A big sized bangle or bracelet adorns legs, made of silver or gold;**
- ಗಂಡುಮಕ್ಕಳ ಕೈಗೆ ತೊಡಿಸುವ ಆಭರಣ(ಕಲ.ಜಿ); **An ornament made of gold or silver usually adorn male's hand(bracelet);**
- ಆಭರಣ ವಿಶೇಷ; ಸ್ಪರ್ಧೆಯಲ್ಲಿ ವಿಜೇತರಾದ ಪೈಲ್ವಾನರಿಗೆ ಗೌರವ ಸೂಚಕವಾಗಿ ಬಲಗಾಲಿಗೆ ತೊಡಿಸುವ ಬೆಳ್ಳಿಯ ಖಡಗ; ಕೆಲವರು ಕೈಗೂ ತೊಡಿಸುವುದಿದೆ; ಹೆಂಗಸರು ಸಾಂಪ್ರದಾಯಿಕ ಆಭರಣವಾಗಿ ಕೈ ಮತ್ತು ಕಾಲಿಗೆ ತೊಡುವುದು ಕಂಡುಬಂದಿದೆ; **An ornament(bangle of silver) gifted to a victorious wrestler to adorn his right leg or forehand;**
- ಪುರುಷರು ತೊಡುವ ಬಂಗಾರದ ಕಡಗ(ನೋಡಿ: ಕಡಗ); *ಪ್ರ: 'ಬಂಗಾರದ ಖಡೆ ತಂದು ಇಷ್ಟೆಲ್ಲಾ ತಂದು ಸಮಾಧಾನ್ಲೇಳೇ ಸೋಬಾನ*'(ದುಂಡು ಮಲ್ಲಿಗೆ);
- ಕಡ>ಖಡ ಆಗಿರುವುದು; ಬಾಕಿ; ಸಾಲದ ಬಾಕಿ; ಸಾಲ ಕೊಡು-ಕೊಳ್ಳುವಿಕೆಯ ವ್ಯವಹಾರದಲ್ಲಿ ಪದಬಳಕೆ; ಗ್ರಾಮೀಣರಲ್ಲಿ ಇಂದಿಗೂ ರೂಢಿಯಲ್ಲಿರುವ ಜನಪ್ರಿಯ ರೂಪ(ನೋಡಿ: ಕಡ); *ಪ್ರ: 'ವೆಂಕಣ್ಣ ಅಕ್ಕಿ ಕಡ ಕೊಡ್ತೀನಿ ಅಂದಿದ್ದ ಈಸ್ಗಂಬೋಗು*'; **Loan, debt, credit;**
- ಇಲ್ಲಿಯೂ ಮಹಾಪ್ರಾಣ ಮತ್ತು ಅಲ್ಪಪ್ರಾಣ ಧ್ವನಿಮಾಗಳ ಪರಸ್ಪರ ಪಲ್ಲಟವೇ ಇದೆ; ಮರಾಠಿ/ಉರ್ದು ಮಾತನಾಡುವ ಪ್ರದೇಶಗಳಲ್ಲಿ ಇಂತಹ ವ್ಯತ್ಯಾಸಗಳು ಸರ್ವೇಸಾಮಾನ್ಯ.

ಖಡಕು/ಖಡಕಲ ನೊಗ khaḍaku/khaḍakala noga :
- ನೊಗದ ಒಂದು ಪ್ರಕಾರಕ್ಕೆ ಸೇರಿದ್ದು; ಗಾಡಿ ಮತ್ತು ಉಳುಮೆಗೆ ಉಪಯೋಗವಾಗುವಂತಹ ವಿವಿಧ ರೀತಿಯ ಕೆತ್ತನೆಗಳ ಮೂಲಕ ವಿನ್ಯಾಸಗೊಳಿಸಲಾಗಿರುತ್ತದೆ; ಆರು ಗೇಣಿನ ಉದ್ದವಿರುವುದು ಸಾಮಾನ್ಯ; **A kind of cared yoke used in cart and ploughing;**
- ಖಡಕುನೊಗ ವಿಶೇಷವಾಗಿ ಬಳ್ಳಾರಿ ಜಿಲ್ಲೆಯ ಕೆಲ ಭಾಗಗಳಲ್ಲಿ ರೂಢಿಯಲ್ಲಿರುವಂಥದು; ಉಳುಮೆಗೆ ಉಪಯೋಗ; *ಪ್ರ: 'ಮೊದ್ಲು ಖಡಕುನೊಗ ತಂದಿಕ್ಕ ಮಗಾ ಆಮೇಲ್ ಹೋಗುವಂತೆ'.* **A kind of yoke especially found in the district of Bellari Karnataka state.**

ಖಡತರ khaḍatara :
- ಉಗ್ರವಾದ; ಕಠೋರವಾದ; ಕಠಿಣವಾದ; ಮನಸ್ಸಿಗೆ ನೋವಾಗುವಂಥ ಸನ್ನಿವೇಶ; ರೋಷ, ಕೋಪಾವೇಷದಿಂದ ಏರುಧ್ವನಿಯಲ್ಲಿ ಮನಬಂದಂತೆ ಮಾತನಾಡುವ ಪ್ರಕ್ರಿಯೆ(ದ.ಕ); *ಪ್ರ: 'ಅವನ ಖಡತರ ಮಾತುಗಳು ನನ್ನ ನಿದ್ದೆಗೆಡಿಸಿವೆ'.* **Ferocious, cruelty, violence, grimness, radical shout, angrily, painful;**

ಖಡಿ khaḍi :
- ಕಡ್ಡಿ, ಕಡ್ಡಿಯಂತೆ ಸೆಟೆದು ನಿಂತ ಎಂಬರ್ಥದಲ್ಲಿ ಪದಬಳಕೆ;

- ನೇರ, ನೆಟ್ಟಗೆ, ಎದ್ದು ನಿಲ್ಲು ಎಂಬ ವಿಭಿನ್ನ ಅರ್ಥಗಳನ್ನು ಗುರುತಿಸಲಾಗಿದೆ; Straight, no longer coiled, stand like a stick, hard, nerve;
- ಗಟ್ಟಿ, ನರ, ಉದ್ದನೆಯ ಎಂಬ ಅರ್ಥಗಳು ಕಲಬುರ್ಗಿ, ವಿಜಯಪುರ, ಚಿತ್ರದುರ್ಗ ಭಾಗದಲ್ಲಿ ಕಂಡುಬಂದಿದೆ;
- ಅರ್ಥಗಳಲ್ಲಿ ಪ್ರಾದೇಶಿಕ ಭಿನ್ನತೆ ಇರುವುದರಿಂದ ಹಲವು ಬಗೆಯಲ್ಲಿ ಅರ್ಥೈಸಲಾಗುತ್ತಿದೆ;
- ಅನ್ಯ ಭಾಷಿಕ ರೂಪವಿರಬಹುದು; ಉರ್ದುವಿನ ಪದ?;
- ಕಲ್ಲಿನ ಸಣ್ಣ ಸಣ್ಣ ಚೂರುಗಳು; ಜಲ್ಲಿಕಲ್ಲು; Gravel, pounded stones;
- ಗೋಲಿಗುಂಡು; ಚೂರು; ತುಂಡು;
- ತೀಕ್ಷ್ಣವಾದ; ಬಿರುಸಾದ(ಕ.ಜಾ.ಕೋ); Hardness, roughness, rudeness, sharpness;
- 'ಸಡಗರ ಯಾರಿಂದ ಬಡಿವಾರ ಯಾರಿಂದ। ಖಡಿ ಹೊಡದು ಆಡು ಮಗನಿಂದ। ಕಟ್ಟಕಲ್ಲ। ಜಡಿದೇರಿ ಬರುವ ಸೊಸೆಯಿಂದ'(ಗ.ಹಾ).

ಖಡಿ ಅಲುಬು khaḍi alubu :

- ಖಡಿ+ಅಲುಬು; ಖಡಿ=ಕಡ್ಡಿ; ಅಲುಬು=ಹುಲ್ಲು;
- ಸಸ್ಯ ವಿಶೇಷ; ಹುಲ್ಲಿನ ಪ್ರಕಾರಕ್ಕೆ ಸೇರಿದ್ದು; ಗಿಡದಂತೆ ಬೆಳೆಯುವ ಸ್ವಭಾವ ಹೊಂದಿದೆ; A type of plant which belongs to grass family;
- ಅಲುಬಿನಲ್ಲಿ ಖಡಿ ಅಲುಬು ಸೇರಿದಂತೆ ಬಳ್ಳಿ ಅಲುಬು, ಅಡಲುಬು, ಉದ್ದಲುಬು, ಕೋಲಲುಬು, ಬೊಟ್ಟಲುಬು, ಹುಲಿಗಣ್ಣಲುಬು ಎಂಬ ಹಲವು ಪ್ರಬೇಧಗಳಿವೆ;
- ಅಲುಬು ತಿಂದ ಹಸು ಹೆಚ್ಚು ಹಾಲು ಕೊಡುತ್ತದೆ ಎಂಬುದು ಅನುಭವಿ ಜನಪದರ ಅಭಿಮತ; A grass(plant) usually a fodder for milch cow;
- ದ್ರಾವಿಡ ಭಾಷಾ ರೂಪವಾದ ತೆಲುಗಿನಲ್ಲಿ 'ಅಲಮು' ಪದದ ಬಳಕೆ ಇದೆ; *ಪ್ರ: 'ಹಸು ಖಡಿ ಅಲುಬು ತಿಂದಿತ್ತೇನೋ ಹಾಗಾಗಿ ಹೆಚ್ಚು ಹಾಲು ಹಿಂಡಿದೆ'.*

ಖಡಿಕೆ khaḍike :

- ನೇಯ್ಗೆ ತಟ್ಟೆ ಅಥವಾ ತೊಂಬೆಯೂ ಇರಬಹುದು; ವಾಟೆ ಅಥವಾ ಟೊಳ್ಳು ಬಿದಿರಿನಿಂದ ಹೆಣೆದು ತಯಾರಿಸಿರುವಂಥದು; ನೇರವಾಗಿ ಆಳೆತ್ತರವಿರುತ್ತದೆ; ವೃತ್ತಾಕಾರ ಅಥವಾ ಚೌಕಾಕಾರವಾಗಿ ಹೆಣೆದಿರುತ್ತಾರೆ; ತಳಭಾಗ ಮುಚ್ಚಿದ್ದು ಮೇಲ್ಭಾಗ ತೆರೆದಿರುತ್ತದೆ; Weaving plate in circle or square shaped, may be a container type; it is made of bark of bamboo(peel of bamboo);
- ಭತ್ತವೂ ಸೇರಿದಂತೆ ಇತರೆ ದವಸ-ಧಾನ್ಯಗಳನ್ನು ವರ್ಷಾನುಗಟ್ಟಳೆ ಸಂಗ್ರಹಿಸಿಡಲು ಉಪಯೋಗ; A container to store paddy or other grains; usually it is made of bamboo;
- ಹಿಂದೆ ಬಿದಿರಿನಿಂದ ತಯಾರಿಸಿದ ಇಂತಹ ಹಲವು ಉಪಕರಣಗಳ ಬಳಕೆ ಇತ್ತು; ಇಂದು ಅದರಲ್ಲಿ ಕೆಲವೊಂದು ಅಳಿವಿನಂಚಿಗೆ ಸರಿದಿವೆ; ಅವುಗಳಲ್ಲಿ ಇದೂ ಒಂದು ಇರಬಹುದು; *ಪ್ರ: 'ಖಡಿಕೆ ತಂದು ಮೂಲೇಲಿಡು ಮಾರಾಯ ಹಜಾರದಲ್ಲಿ ಇಡಬೇಡ'.*

ಖಡಿವಾರ khaḍivāra :

- ನಯ-ನಾಜೂಕನ್ನು ಹೊಂದಿರುವುದು; ದೊಡ್ಡಸ್ಥಿಕೆ ತೋರಿಸುವುದು(ಮೈ.ಜಿ); *ಪ್ರ: 'ಅವನೊಬ್ಬ ಖಡಿವಾರ ಮನುಷ್ಯನಿರಬೇಕು'.* Domineering, snobbery, condescend, stylish, style.

ಖಡ್ಗ khaḍga :

- ಕತ್ತಿ; ಕರವಾಳ; ತಲವಾರ; ಹಿಂದೆ ಯುದ್ಧದ ಸಂದರ್ಭದಲ್ಲಿ ಯೋಧರು, ರಾಜ-ಮಹಾರಾಜರು, ಸೈನಿಕರು ಖಡ್ಗ ಹಿಡಿದು ಎದುರಾಳಿಗಳ ವಿರುದ್ಧ ಹೋರಾಡುತ್ತಿದ್ದರು; ಗ್ರಾಮೀಣರು ಖಡ್ಗ ಪವಾಡ ಮೆರೆಯುತ್ತಿದ್ದುದೂ ಉಂಟು; Sword, steel, brand, blade;
- ಸುಮಾರು ನಾಲ್ಕರಿಂದ ಐದು ಅಡಿಗಳಷ್ಟು ಉದ್ದವಿದ್ದು ತೆಳುವಾಗಿ ಬಳುಕುವಂತಿರುತ್ತದೆ; ಕೆಲವೊಂದು ಮಂದ, ಗಟ್ಟಿಯಾಗಿದ್ದು ಬಳುಕುವುದಿಲ್ಲ; ಕಬ್ಬಿಣ, ತಾಮ್ರದಂತಹ ಇತರೆ ಲೋಹಗಳಿಂದ ತಯಾರಿಸಲಾಗುತ್ತದೆ; ಒಂದು ಭಾಗ ಮೊನಚಾಗಿದ್ದು ಹಿಂಭಾಗದಲ್ಲಿ ಕಬ್ಬಿಣ ಅಥವಾ ಮರದ ಹಿಡಿಕೆ ಇರುತ್ತದೆ; ಇದು ಸಾಮಾನ್ಯವಾಗಿ ಎಲ್ಲರೂ ಬಳಸಬಹುದಾದ ಆಯುಧ; ತುಳುನಾಡಿನಲ್ಲಿ ದೈವ ಸಂಬಂಧೀ ಖಡ್ಗಕ್ಕೆ 'ಖಡ್ಸಲೆ' ಎಂದು ಕರೆಯುವರು; A cutting or thrusting weapon that has a long metal blade and hit with a hand

guard; it is four to five feet tall in heigh and usually made of copper or iron metal;

- ಕೊಡವರ ಹೊಡೆಗತ್ತಿ; ಇದರ ಹಿಡಿಯನ್ನು ಆನೆಯ ದಂತಗಳಿಂದ ಮಾಡಿರುತ್ತಾರೆ; ಕೊಡವರ ಮದುವೆ ಸಂದರ್ಭದಲ್ಲಿ ಬಾಳೆಕಂಬವನ್ನು ಕತ್ತರಿಸಲು ಬಳಸುವರು; Kodavas of Kodagu district use this aword with ivory handle; they use this sword to cut banana plant during wedding ceremony;
- ಎಂಟು ಮಹಾನರಕಗಳಲ್ಲಿ ಒಂದು; It is one of the eight hells;
- ವೀರಭದ್ರನ ಸ್ತೋತ್ರ; ಒಂದು ಬಗೆಯ ಪದ್ಯ; ವೀರಗಾಸೆಯವರು ಹೇಳುವ ವಚನ ಅಥವಾ ಒಡಪು; ಕೈಯಲ್ಲಿ ಖಡ್ಗ ಹಿಡಿದು ವೀರಭದ್ರ-ಬೀರೇದೇವರು, ಪಾರ್ವತಿ-ಪರಮೇಶ್ವರರನ್ನು ಸ್ತುತಿಸುವುದು ಸಂಪ್ರದಾಯ; Psalm of Veerabhadra; a kind of poem, a vachana which is sung by Veeragase singers and dancers; Veeragase is a dance form prevalent in the state of Karnataka, India; this dance is performed during festivals, wedding ceremonies and on other auspicious occasions;
- ಗ್ರಾಮೀಣರ ಮದುವೆ ಸಂದರ್ಭದಲ್ಲಿ ದೇವರು ತರುವವರ ಮುಂಭಾಗದಲ್ಲಿ ಲಿಂಗಧೀರನ ಕುಣಿತವಿರುತ್ತದೆ;
- ಇವನು ವಾದ್ಯದ ಗತಿಗೆ ತಕ್ಕಂತೆ ಕುಣಿಯುತ್ತಾ ಖಡ್ಗವನ್ನು ಝುಳುಪಿಸುತ್ತಾ ಹೆಜ್ಜೆ ಹಾಕುವನು; Veeragase dancers usually holding a sword in hand and dance according to the rhythm of the drum music;
- ಕುಣಿತ ಮುಗಿದ ನಂತರ ಎಲ್ಲರೂ ನಿಶ್ಶಬ್ದತೆಯಿಂದಿದ್ದು ಲಿಂಗಧೀರನು ಹೇಳುವ ಖಡ್ಗ ಅಥವಾ ಒಡಪನ್ನು ಆಲಿಸುವರು;
- ಹೀಗೆ ಖಡ್ಗ ಹೇಳುವಾಗ ಪ್ರತಿ ಪದದ ನಡುವೆ ಒಬ್ಬ ವ್ಯಕ್ತಿ ಉಳ್ಳತ್, ವಳತ್, ವಳೆದ್, ಒಳೆದ್ ಎಂಬುದಾಗಿ ಹೇಳುವನು; ಅಂದರೆ ಇದು ಹೌದು, ಸರಿ ಎಂಬರ್ಥದಲ್ಲಿ;
- ಇದಕ್ಕೆ ಉತ್ತರಕರ್ನಾಟಕದ ಭಾಗದಲ್ಲಿ 'ಖಡೇ ಖಡೇ' ಎಂದು ಹೇಳುವರು; ಈ ಪ್ರಕ್ರಿಯೆಗೆ 'ಖಡ್ಗ ಹೇಳುವುದು' ಎನ್ನುವರು; *ಪ್ರ: 'ಖಡ್ಗ ಹಿಡಿದು ಕುಣಿಯುವ ಅವನ ಶೈಲಿ ನನಗೆ ಬಲು ಇಷ್ಟ';*
- —*ಖಡ್ಗ ನೃತ್ಯ* : ಏಕವ್ಯಕ್ತಿ ಅಥವಾ ಗುಂಪಿನಲ್ಲಿ ಒಂದಕ್ಕಿಂತ ಹೆಚ್ಚು ಖಡ್ಗಗಳನ್ನು ಹಿಡಿದು ತಾಳಬದ್ಧವಾಗಿ ಕುಣಿಯುವ ಕುಣಿತ; ಈ ಸಂದರ್ಭದಲ್ಲಿ ಗತಿಗೆ ತಕ್ಕಹಾಗೆ ಖಡ್ಗವನ್ನು ಝುಳುಪಿಸುವುದಿದೆ; A dance holding a sword in a group or lonely; the dancing follows the rhythm of drum music;
- ಇದೊಂದು ವಿಶಿಷ್ಟ ಕಲೆಯಾಗಿದ್ದು ಮಂಡ್ಯ, ಮೈಸೂರು, ಚಾಮರಾಜನಗರದ ವಿವಿಧ ಭಾಗಗಳಲ್ಲಿ ರೂಢಿಯಲ್ಲಿದೆ; Veeragase or Khadga dance(sword dancing) is a special folk art in the regions of Mandya, Mysore and Chamarajanagar; they wear a strange king of attire, the singer;
- ಕುರುಬ ಸಮುದಾಯಕ್ಕೆ ಸೇರಿದವರು ಬೀರೇಶ್ವರ ಅಥವಾ ಬೀರೇದೇವರ ಭಕ್ತರು; ಇವರು ಬೀರೇಶ್ವರ ಮತ್ತು ಹಾಲುಮತದ ಹುಟ್ಟು, ಬೆಳವಣಿಗೆಗಳ ಬಗೆಗೆ ಖಡ್ಗ ಹೇಳುವರು; In `Kuruba' community who worship lord Beereshwara(Shiva) have this practice; the dancer narrates the story of origin and growth of Beerashwara and Halumatha; they narrate `Halumatha Kuruba purana'(myth); in this oral epic they narrate the story of Beerappa in verse and prose; during this narration the singers sing to the rhythm of a small drum;
- ಶೈವ ಸಂಪ್ರದಾಯಕ್ಕೆ ಸೇರಿದವರು ವೀರಭದ್ರನ ಭಕ್ತರು; ಇವರು ವೀರಭದ್ರನ ಜನನ, ದಕ್ಷಬ್ರಹ್ಮನ ಸೃಷ್ಟಿ ಮತ್ತು ಸಂಹಾರದ ವಿಚಾರಗಳನ್ನು ಕುರಿತು ಖಡ್ಗ ಹೇಳುವರು; ಬಯಲುಸೀಮೆಯಲ್ಲಿ ಇವರಿಗೆ 'ಲಿಂಗಧೀರ' ಎಂಬ ಹೆಸರು ಪ್ರಚಲಿತ; Shaiva's who worship Veerabhadra also narrate the story of Veerabhadra's birth; Daksha's yagna and his destruction in stylised verse and prose;

- ಇವರು ಧರಿಸುವ ಉಡುಗೆ-ತೊಡುಗೆಗಳು ವಿಶಿಷ್ಟವಾದುದು; ರಂಗಭೂಮಿಯ ವೇಷಾಧಾರಿಗಳು ಧರಿಸುವಂತೆ ಇರುವುದು; ಕೆಲವರು ಕಾಸೆ ಕಟ್ಟಿದರೆ ಮತ್ತೆ ಕೆಲವರು ಕೆಂಪುಬಣ್ಣದ ಷರಾಯಿ ಧರಿಸುವರು; ಈ ಎರಡೂ ಸಂಪ್ರದಾಯಗಳ ಭಕ್ತರ ಉಡುಗೆ-ತೊಡುಗೆಯಲ್ಲಿ ಭಿನ್ನತೆ ಕಂಡುಬಂದಿದೆ;
- *—ಖಡ್ಗ ಪವಾಡ* : ಕೈಯಲ್ಲಿ ಖಡ್ಗ ಹಿಡಿದು ಪವಾಡ ಮೆರೆಯುವ ಒಂದು ಬಗೆಯ ದೈವೀ ಸಂಬಂಧಿ ಪ್ರದರ್ಶನ; ಮೈಲಾರಲಿಂಗ ದೇವರ ಉತ್ಸವ ಅಥವಾ ಮೆರವಣಿಗೆಯ ಸಂದರ್ಭದಲ್ಲಿ ಕಂಚಾವೀರರು ಆಚರಿಸಲ್ಪಡುವ ಒಂದು ವಿಧಿ; An art of folk dance in the festivities of Mylaralinga(a deity); the dancers and singers shout slogans;
- ಕುಣಿತದ ಸಂದರ್ಭದಲ್ಲಿ ಕಂಚಾವೀರರು ಒಡಪಿನ ರೂಪದಲ್ಲಿ ಪರಾಕು ಹೇಳುತ್ತಾ ತಮ್ಮ ಅಂಗೈಗೆ ಪಂಚಾರತಿಯನ್ನು ಚುಚ್ಚಿಕೊಳ್ಳುವುದು ಈ ಪವಾಡದಲ್ಲಿ ಅನುಸರಿಸಲಾಗುವ ವಿಧಾನ; ಹೀಗೆ ದೇವರ ಪರಾಕಿನ ಒಡಪು ಹೇಳುವ ಪ್ರಕ್ರಿಯೆಗೆ 'ಪರಾಕು ಹೇಳುವುದು' ಅಥವಾ 'ಖಡ್ಗ ಹೇಳುವುದು' ಎಂದು ಕರೆಯುವರು(ಚಿ.ಪ.ಕೋ).

ಖಡ್ಡಾಗು khaḍḍāgu :
- ಅಡ್ಡಿಯಾಗು ಎಂಬರ್ಥದಲ್ಲಿ ಪದಬಳಕೆ; ಆಗಬೇಕಾದ ಕೆಲಸ-ಕಾರ್ಯಗಳಿಗೆ ತಡೆಯೊಡ್ಡುವುದು; ಮಾಡುವ ಕೆಲಸವನ್ನು ತಡೆಯುವುದು; Interruption, obstacle, obstruct;
- ಅಡ್ಡಿ ಪಡಿಸಿದ ಕೆಲಸವು ನಿಂತು ಹೋಗುವುದು; *ಪ್ರ: 'ಈ ಕೆಲಸಕ್ಕೂ ನೀನೇ ಖಡ್ಡಾದರೆ ನಿನ್ನನ್ನು ಸುಮ್ಮನೆ ಬಿಡುವುದಿಲ್ಲ'.*

ಖಣ/ಖಣಾ khaṇa/khaṇā :
- ಕಣ>ಖಣ; ಮೂಲರೂಪ 'ಕಣ' ಉಚ್ಚಾರಣೆಯಲ್ಲಿ ಅಲ್ಪಪ್ರಾಣಾಕ್ಷರ 'ಕ'ಕಾರ ಮಹಾಪ್ರಾಣಾಕ್ಷರ 'ಖ'ಕಾರವಾಗಿ ಬದಲುಗೊಂಡಿವೆ; ಉತ್ತರಕರ್ನಾಟಕ ಭಾಗದಲ್ಲಿ ರೂಢಿಯಲ್ಲಿದ್ದಿರಬಹುದು;
- ರವಿಕೆ ಅಥವಾ ಕುಪ್ಪಸ ಹೊಲಿಯಲಿಕ್ಕೆ ಅನುಗುಣವಾದ ಬಟ್ಟೆ; ತೋಳಿನಲ್ಲಿ ಅಂಚಿರುತ್ತದೆ; ಒಂದು ಕುಪ್ಪಸ ಹೊಲಿಯಲು ಅಗತ್ಯವಾದಷ್ಟು ಬಟ್ಟೆ; 'ರವಿಕೆ ಕಣ' ಎನ್ನುವರು; ಮಡಚಿಟ್ಟ ತ್ರಿಕೋನಾಕೃತಿಯ ಬಟ್ಟೆ; Blouse piece; it is folded in triangular shape;
- ಇತ್ತೀಚೆಗೆ ಸೀರೆ ನೇಯ್ಗೆಯಲ್ಲಿ ಅದರ ಜೊತೆಗೆ ರವಿಕೆ ಕಣವನ್ನು ಸೇರ್ಪಡೆ ಮಾಡಿರುತ್ತಾರೆ; ಸೀರೆ ಕೊಂಡವರು ನಂತರ ರವಿಕೆ ಕಣವನ್ನು ಬೇರ್ಪಡಿಸಿಕೊಳ್ಳುವುದಿದೆ;
- ಕುಪ್ಪಸದ ಕಣ ಅಥವಾ ರವಿಕೆ ಬಟ್ಟೆಗಳನ್ನು ಮಾರಾಟ ಮಾಡುವ ವ್ಯಾಪಾರಿಗೆ 'ಖಣಶೆಟ್ಟಿ' ಎಂದು ಕರೆಯಲಾಗುತ್ತದೆ; *ಪ್ರ: 'ಮದುವೆಯಲ್ಲಿ ಮುತ್ತೈದೆಯರಿಗೆ ಎಲೆ, ಅಡಿಕೆ, ಬಾಳೆಹಣ್ಣಿನ ಜೊತೆಗೆ ರವಿಕೆ ಖಣವನ್ನೂ ಉಡುಗೊರೆಯಾಗಿ ನೀಡಿದರು'*;
- ವಿವಿಧ ಧಾನ್ಯಗಳನ್ನು ಒಕ್ಕಣೆ ಮಾಡುವ ಸ್ಥಳ; 'ಖಣ ಅಡ್ಡಾಲಿ' ಎಂದು ಉತ್ತರಕರ್ನಾಟಕದ ಕಡೆ ಕರೆಯುವರು; Barn(field), threshing floor, silos;
- *—ಖಣಪೂಜೆ* : ರಾಶಿಪೂಜೆ; ಕಣದಲ್ಲಿ ಧಾನ್ಯಗಳನ್ನು ಶುಚಿಯಾಗಿ ಒಕ್ಕಣೆ ಮಾಡಿದ ನಂತರ ರಾಶಿ ಮಾಡಿ ಪೂಜೆ ಸಾಮಗ್ರಿಗಳಿಂದ ಪೂಜೆಗೈಯ್ಯುವುದೇ ಖಣಪೂಜೆ; A harvest festival, pooja perform on barn, worshipping harvested paddy, ragi, maize or grains on the fields(barn);
- ಸುಗ್ಗಿ ಸಂದರ್ಭದ ಸಂತಸದ ಹಬ್ಬ; ಇದೊಂದು ಭಾವನಾತ್ಮಕ ಆಚರಣೆ; ಕಠಿಣ ಶ್ರಮದ ಫಲವನ್ನು ಭಕ್ತಿ-ಭಾವಗಳಿಂದ ಕಾಣುವುದು ಈ ಪರಿಕಲ್ಪನೆಯ ಆಶಯ; ಕೃಷಿಕರ ಹಬ್ಬ (ನೋಡಿ: ಕಣ) (ಕೃ.ಪ.ಕೋ). Khanapooje is a happy celebration held in honour of hardwork and crop with much devotion in agrarian families.

ಖಣಿ khaṇi :
- ಖಣಿ=ಗಣಿ; ಕೊಳಪ; ಬಡಿಯುವ ಕೋಲು; ದಿಮ್ಮಿಯನ್ನು ಬಡಿಯಲು ಉಪಯೋಗ; Stick, cane, staff;
- ಒಂದು ಪ್ರಕಾರದ ಸಾಧನ-ಸಲಕರಣೆ; ಕಟ್ಟಿಗೆಯಿಂದ ತಯಾರಿಸಿರುವಂಥದು; ಎಣ್ಣೆಕಾಳುಗಳನ್ನು ಅರೆಯಲು ಎಣ್ಣೆಗಾಣದಲ್ಲಿ ಅಳವಡಿಕೆ(ಬೀ.ಜಿ); A

wooden tool to pound or grind grains in oil mill;
- ಕಲ್ಲಿನ ತಗ್ಗು; ಕಲ್ಲಿನ ಖಣಿಗಳಲ್ಲಿ ದೊಡ್ಡ ದೊಡ್ಡ ಕಲ್ಲುಗಳಿರುವುದು(ಬಾಗ.ಜಿ); Pit, hole, depression, descent, slope land;
- ಗುಂಡಿ; ಹೊಂಡ; ಹಳ್ಳ; ತಗ್ಗಾದ ಪ್ರದೇಶ(ಶಿ.ಜಿ);
- ಕಣಿ>ಖಣಿ; ಭವಿಷ್ಯ, ಶಕುನ ನುಡಿಯುವುದು ಎಂಬರ್ಥದಲ್ಲಿ; Oracle, foretelling;
- ***—ಖಣಿಹಲಗೆ*** : ಒಂದು ವಿಧದ ಚರ್ಮವಾದ್ಯ; A kind of musical instrument made of leather;
- ***—ಖಣಿವಾಧನ*** : ಒಂದು ವಿಧದ ಚರ್ಮವಾದ್ಯ; ತಮಟೆಗಿಂತಲೂ ಕಿರಿದಾಗಿರುತ್ತದೆ;
- ***—ಖಣಿಕುಳ್ಳಿ*** : ಮಣ್ಣಿನಿಂದ ತಯಾರಿಸಿದ ಚಿಕ್ಕ ಪಾತ್ರೆ ಅಥವಾ ಮಡಕೆ(ಬೀ.ಜಿ);
- ***—ಖಣಿಗಡಿಗೆ*** : ಒಂದು ಬಗೆಯ ಗಡಿಗೆ; ಬೀದರ್ ಜಿಲ್ಲೆಯಲ್ಲಿ ವಿಶೇಷವಾಗಿ ತಯಾರಿಸುವಂಥದು; ಈ ಗಡಿಗೆ ತಯಾರಿಕೆಯಲ್ಲಿ ಲದ್ದಿ ಉಪಯೋಗಿಸುವುದಿಲ್ಲ; ಸಾಮಾನ್ಯವಾಗಿ ಬೀದರ್ ಜಿಲ್ಲೆಯಲ್ಲಿ ಮಡಕೆ ತಯಾರಿಸುವಾಗ ಲದ್ದಿ ಬೆರೆಸುವ ಪದ್ಧತಿ ಇರಬಹುದೆಂದು ಕಾಣುತ್ತದೆ;
- ***—ಖಣಿಪೂಜೆ*** : ಬಿಸು ಸಂಕ್ರಮಣದಲ್ಲಿ ಮೊದಲ ಉಳುಮೆ ಪ್ರಾರಂಭ ಮಾಡುವುದಕ್ಕೂ ಮೊದಲು ಮಾಡಲಾಗುವ ಪೂಜೆ; ಇದಕ್ಕೆ 'ಖಣಿಪೂಜೆ' ಅಥವಾ 'ಖಣಿಗೆ ಇಡುವುದು' ಎನ್ನುವರು. During Khani parv(season) the farmers perform pooja before beginning agricultural works.

ಖಣೆ khaṇe :
- ಬಿದಿರಿನಿಂದ ಸಿದ್ಧಪಡಿಸಿದ ದಂಡ ಅಥವಾ ಕೋಲು; ಗಟ್ಟಿಯಾಗಿ, ದಪ್ಪದಾಗಿರುತ್ತದೆ; ಮರ್ಕಾಲು ಅಥವಾ ಮರದಕಾಲು ಕುಣಿತಕ್ಕೆ ಉಪಯೋಗ; A thick stick(pole), baton(from bamboo wood) wooden legs;
- ಜಾತ್ರೆ, ಮೆರವಣಿಗೆಯಂತಹ ವಿವಿಧ ಉತ್ಸವಗಳಲ್ಲಿ ಸಾಮಾನ್ಯ ಮನುಷ್ಯ ತಮ್ಮ ಕಾಲುಗಳಿಗೆ ಮರದ ಕಾಲು ಕಟ್ಟಿಕೊಂಡು ಎರಡು ಕೈಯಲ್ಲೂ ಎರಡು ಬಿದಿರಿನ ದೊಣ್ಣೆ ಹಿಡಿದುಕೊಂಡು ನಡೆಯುವುದು, ಕುಣಿಯುವುದಿದೆ; ಇವರು ಎಲ್ಲರಿಗಿಂತಲೂ ಉದ್ದವಾಗಿ ಕಾಣುವರು; During fair and other processions, the folk artists wear wooden legs to gain unusual height; it makes them to grab the attention of the people, but it is very difficult feat; moreover, it is a folk dance with many varieties;
- ಇದೊಂದು ಕಲೆಯಾಗಿದ್ದು ವಿವಿಧ ವರ್ಗದ ಜನರು ಕಲಿತು ವಿಶೇಷ ಸಂದರ್ಭಗಳಲ್ಲಿ ಪ್ರದರ್ಶಿಸುವರು;
- ಇದರಲ್ಲಿ ಕೂರ್ಗಣೆ, ಪೆರ್ಗಣೆ, ಬಲ್ಗಣೆ, ಅಲರ್ಗಣೆ ಎಂಬ ಹಲವು ಪ್ರಕಾರಗಳಿವೆ;
- ದ್ರಾವಿಡ ಭಾಷಾರೂಪಗಳಾದ ತುಳುವಿನಲ್ಲಿ 'ಕಣೆ' ಪದದ ಬಳಕೆ ಕಂಡುಬಂದಿದೆ.

ಖತನಾ ಮಾಡು khatanā māḍu :
- ಸುಂತಿ ಮಾಡು, ಸುನ್ನತ ಮಾಡು, ಮುಂಜಿ ಮಾಡು ಎಂಬ ವಿವಿಧ ಪ್ರಕಾರದ ಸಂವಾದಿ ರೂಪಗಳಿವೆ; ಇದೊಂದು ಕ್ರಿಯಾತ್ಮಕ ಹಿನ್ನೆಲೆಯುಳ್ಳ ಪದ;
- ಮುಸಲ್ಮಾನರು ನೆರವೇರಿಸುವ ಒಂದು ಧಾರ್ಮಿಕ ಆಚರಣೆ; ತರುಣ ಗಂಡುಮಕ್ಕಳಿಗೆ ಮಾಡುವುದು ಕಂಡುಬಂದಿದೆ; ಇವರು ಈ ಕಾರ್ಯವನ್ನು ನಿಗದಿತ ದಿವಸದಂದು ಶಾಸ್ತ್ರೋಕ್ತವಾಗಿ ಮಾಡುವುದು ರೂಢಿ; Circumcision, the act of surgical removal of the foreskin of males;
- ಈ ಪದ್ಧತಿಯ ಪ್ರಕಾರ ಗಂಡುಮಕ್ಕಳ ಜನನಾಂಗದ ಮುಂದೊಗಲನ್ನು ಕತ್ತರಿಸುವುದು; ಇದೊಂದು ವಿಶೇಷ ಆಚರಣೆ; ಮುಸಲ್ಮಾನರನ್ನು ಹೊರತುಪಡಿಸಿ ಉಳಿದ ಯಾವ ಧರ್ಮದಲ್ಲೂ ಇಂತಹ ಕ್ರಿಯೆ ನಡೆಯುವುದಿಲ್ಲ; A religious act in Islam religion; the act of circumcising performed on males eight days after birth as a Muslim religious rite;
- ಈ ಕ್ರಿಯೆ ಅವರ ಧಾರ್ಮಿಕ ಗ್ರಂಥ 'ಖುರಾನಿ'ನ ಪ್ರೇರಣೆಯಿಂದ ನೆರವೇರಬಹುದೆಂದು ಕಾಣುತ್ತದೆ; ಒಟ್ಟಾರೆ ಇತರೆ ಧರ್ಮಗಳಿಗಿಂತ ಇವರ ಸಂಸ್ಕೃತಿ, ಸಂಪ್ರದಾಯ, ನಂಬಿಕೆ, ಆಚರಣೆಗಳು ವಿಶಿಷ್ಟ ಹಾಗೂ ವಿಭಿನ್ನ ಎಂದರೆ ತಪ್ಪಲ್ಲ.

ಖತಂ khatam :

- ಕೊನೆಗೊಳಿಸು, ಮುಗಿಸು, ಮುಕ್ತಾಯಗೊಳಿಸು, ಅಂತ್ಯ ಆಡು, ಅಂತಿಮಗೊಳಿಸು ಎಂಬರ್ಥದಲ್ಲಿ ಪದಬಳಕೆ; ಅನ್ಯದೇಶ್ಯ ಪದವಿರಬಹುದು; *ಪ್ರ: 'ಎಲ್ಲರೂ ಸೇರಿ ನನ್ನ ಸಂಬಳವನ್ನೇ ಖತಂ ಮಾಡಿಸಿದರು'.* To end, complete, finalize, close.

ಖದರ್ khadar :

- ಒಂದು ಬಗೆಯ ತಂತಿ; ಕಬ್ಬಿಣದ ಲೋಹದಿಂದ ತಯಾರಿಸಿರುವಂಥದು; ಹಿಂಭಾಗದಲ್ಲಿ ಹಿಡಿಕೆ ಇರುತ್ತದೆ; ಬಳೆಯನ್ನು ಚಿಕ್ಕದು ಅಥವಾ ದೊಡ್ಡದು ಮಾಡಲು ಉಪಯೋಗ(ಬ.ಜಿ); A string, wire made of metal with handle in the end;
- ಖದರ್, ಖದರು ಎಂಬುದು ವ್ಯಕ್ತಿಯ ಬಾಹ್ಯ ಚಟುವಟಿಕೆಗೆ ಸಂಬಂಧಿಸಿದಂತೆಯೂ ಬಳಕೆಯಲ್ಲಿರುವ ರೂಪ; ಧೈರ್ಯವಂತ ವ್ಯಕ್ತಿ; ಇತರರನ್ನು ಗಣನೆಗೆ ತೆಗೆದುಕೊಳ್ಳದೆ ಮಹತ್ವದ ತೀರ್ಮಾನವನ್ನು ತೆಗೆದುಕೊಳ್ಳುವುದು, ಎದೆಗಾರಿಕೆಯಿಂದ ಮಾತನಾಡುವುದು ಮೊದಲಾದ ಪ್ರಕ್ರಿಯೆಗೆ ಅನುಗುಣವಾಗಿ; It relates to the person one who speaks courageously, is domineering and taking decision without consulting others;
- ಧೈರ್ಯ, ಸ್ಥೈರ್ಯ, ಎದೆಗಾರಿಕೆ, ಆತ್ಮವಿಶ್ವಾಸ, ಕ್ರಿಯಾಶೀಲತೆ, ನಾಯಕತ್ವದ ಗುಣ ಮತ್ತು ನಿಭಾಯಿಸುವ ರೀತಿ ಮೊದಲಾದ ಅರ್ಥಗಳಲ್ಲಿ ಪದಬಳಕೆ ಇದೆ; *ಪ್ರ: 'ಏನ್ ಖದರು ಮಾರಾಯ ನಿನ್ದು ಅಷ್ಟು ಜನರೆದುರು ಗುಡಗ್‌ಬುಟ್ಟಲ್ಲ'.* Courage, fortitude, self-confidence, active, leadership quality and managing nature.

ಖದಿ ಬೆಣೆ khadi beṇe :

- ಕೃಷಿ ಉಪಕರಣ; ಚಪ್ಪಟೆಯಾಕಾರದ ಚಕ್ಕೆಯಂತಿರುವ ಬೆಣೆ; ಕಟ್ಟಿಗೆ ಅಥವಾ ಮರದ ಸಣ್ಣ ತುಂಡುಗಳಿಂದ ತಯಾರಿಕೆ; ಬಿದಿರಿನ ಸೀಳಿನ ಅಚ್ಚೆಯಿಂದಲೂ ತಯಾರಿಸುವುದಿದೆ; A peg, wooden peg, stick, an agricultural tool made of the split of bamboo stick;
- ನೇಗಿಲು ಮತ್ತು ಈಚು ಅಲುಗಾಡದಂತೆ ಮಧ್ಯಭಾಗದಲ್ಲಿ ಅಳವಡಿಸಲಾಗುತ್ತದೆ; ಉಳುಮೆ ಮಾಡುವಾಗ ನೇಗಿಲು ಮತ್ತು ನೊಗ ಆಯವಾಗಿರಬೇಕು; ಹಾಗೆ ಮಾಡಿಕೊಳ್ಳಲು ಇಂತಹ ಬೆಣೆಗಳನ್ನು ಭದ್ರತೆಗಾಗಿ ಬಳಸುವರು; *ಪ್ರ: 'ನೇಗಿಲಿಗೆ ಖದಿಬೆಣೆ ಹಾಕಿದ್ದರೆ ಸರಿ ಹೋಗುತ್ತಿತ್ತೆಂದು ಕಾಣುತ್ತದೆ'?.* A wooden peg is thrusted, fasten to secure the yoke or plough.

ಖದಿರ khadira :

- ಕಾಚು, ಕಾಚಿನಮರ ಅಥವಾ ಕಗ್ಗಲಿಮರ ಎಂಬ ಸಂವಾದಿ ಹೆಸರುಗಳು ದಕ್ಷಿಣಕನ್ನಡದ ಭಾಗದಲ್ಲಿ ರೂಢಿಯಲ್ಲಿವೆ; Catechu(acacia)tree; a tree which grows in the region of South kannada district;
- ಮರ ವಿಶೇಷ; ಕಾಡು–ಮೇಡುಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುವ ಗುಣ ಹೊಂದಿದೆ; ಇದರಲ್ಲಿ ಒಂದು ಬಗೆಯ ರಸ ಅಥವಾ ಅಂಟು ದೊರಕುತ್ತದೆ; ಅದನ್ನು ತೊಡುಗೆಗಳ ಅಂಟಿಸುವಿಕೆಗೆ ಬಳಸುವರು;
- ಇದರ ಕಾಚನ್ನು ಸುಗಂಧ ವಸ್ತುವಾಗಿ ತಾಂಬೂಲದೊಡನೆ ಸೇರಿಸಲಾಗುವುದು(ನೋಡಿ: ಕದಿರು). It is (catecha) a natural tree, its extract used variously as additive, glue; as an astringent it has been used since ancient times in Ayurvedic medicine as well as in breath-freshening spice mixtures; its glue is used to paste the cloths and also dye wool, silk and cotton.

ಖದೀಮ khadīma :

- ಹಿಂದಿನವ; ಹಳಬ; ಅನುಭವಿ; ಅನುಭವವುಳ್ಳ ವ್ಯಕ್ತಿ; ಮೋಸಗಾರ; ವಂಚನೆ ಮಾಡುವವ; ಕಳ್ಳ–ಸುಳ್ಳ; ಕದಿಯುವವ; ಕಳ್ಳತನ ಮಾಡುವವ; Old hand, betrayer, experienced person, man of experience, veteran, old-timer;
- ಮಂಗ; ಒಳಗುಟ್ಟು ಮಾಡುವವ; ಮನಸ್ಸಿನಲ್ಲೇ ಲೆಕ್ಕಾಚಾರ ಹಾಕುವ ಗುಣ–ಸ್ವಭಾವ ಹೊಂದಿರುವ ಮನುಷ್ಯ; Monkey, ape, a schemer, calculative, plotter, conspirator;

- ಸಮರ್ಥ ತಿಳಿವಳಿಕೆಯುಳ್ಳವ; ಚಮತ್ಕಾರ; ನುಣುಚಿಕೊಂಡು ಹೋಗಬಲ್ಲ ಚಾಣಾಕ್ಷ ಬುದ್ಧಿಯುಳ್ಳವ; 'ಪ್ರಚಂಡ' ಎಂಬರ್ಥದಲ್ಲಿಯೂ ಪದಬಳಕೆ ಇದೆ; Smart, capable, magic, tricky, gimmick, skilled, cleverness;
- ಒಳ್ಳೆಯವನಂತೆ ನಟಿಸಿ ಮತ್ತೊಬ್ಬರ ಮನಸ್ಸನ್ನು ಗೆಲ್ಲುವವ; ಅತಿವಿನಯದಿಂದ ಕೂಡಿದ ನಯವಂಚಕ; Hypocrite, phoney, pretender, fraudulent;
- ಮರಾಠಿಯಲ್ಲಿ 'ಕದೀಮ್' ಪದವಿದೆ; ಕದೀಮ್>ಕದೀಮ>ಖದೀಮ ಆಗಿರಬಹುದು?; ಉಚ್ಚಾರಣೆಯಲ್ಲಿ ಅಲ್ಪಪ್ರಾಣಾಕ್ಷರ 'ಕ'ಕಾರ ಮಹಾಪ್ರಾಣಾಕ್ಷರ 'ಖ'ಕಾರವಾಗಿ ಬದಲುಗೊಂಡು 'ಖದೀಮ' ಆಗಿದೆ;
- ಕಳ್ಳ-ಖದೀಮ ಎಂಬುದು ಜನಪ್ರಿಯ ಜೋಡಿನುಡಿ; ಕಳ್ಳನನ್ನು ಕುರಿತು ಮಾತನಾಡುವಾಗ 'ಖದೀಮ' ಪದವೂ ತನ್ನಿಂತಾನೇ ಸೇರಿಕೊಳ್ಳುವುದಿದೆ; *ಪ್ರ: 'ಖದೀಮನಾಗಿ ನೀನೇನು ಸಾಧಿಸಿದೆ ನನ್ನಂತೆಯೇ ಇರಬಹುದಿತ್ತಲ್ಲವೆ'?.*

ಖನಕ khanaka :

- ಇಲಿ; ಹೆಗ್ಗಣ ಎಂಬರ್ಥದಲ್ಲಿ ಪದಬಳಕೆ(ತು.ಜಿ); Rat, mouse;
- 'ಕೊರೆಯುವುದು' ಎಂಬ ಅರ್ಥವೂ ಇದೆ ಎಂದು ಹೇಳಲಾಗುತ್ತದೆ; Burrow, a hole made by an animal usually for shelter;
- ಇಲಿ, ಹೆಗ್ಗಣಗಳು ನೆಲವನ್ನು ಕೊರೆದು ಬಿಲ ಮಾಡಿ ಅದರೊಳಗೆ ವಾಸಿಸುವುದು ತಿಳಿದ ವಿಚಾರ; ಹಾಗಾಗಿ ಈ ರೂಪಕ್ಕೆ ಕೊರೆಯುವಿಕೆಯ ಅರ್ಥವೂ ಪ್ರಾಪ್ತವಾಗಿರಬಹುದು;
- 'ಗಣಿಯಲ್ಲಿ ಕೆಲಸ ಮಾಡುವ ಕಾರ್ಮಿಕ' ಎಂಬ ಮತ್ತೊಂದು ಅರ್ಥ ಕಂಡುಬಂದಿದೆ; ಯಾವ ಭಾಗದ್ದು ಎಂಬುದರ ಸ್ಪಷ್ಟವಿಲ್ಲ. Miner, mine worker.

ಖನನ khanana :

- ನಿರಂತರ ಗಂಟೆ ಸದ್ದು; Perpetual or continuous sound of the bell;
- ತೋಡುವಿಕೆ; ಅಗೆತ; ಕನ್ನ ಕೊರೆಯುವ ಪ್ರಕ್ರಿಯೆ; ಹೆಣ ಹೂಳುವುದು ಅಥವಾ ಮಣ್ಣು ಮಾಡುವುದು ಎಂಬರ್ಥದಲ್ಲಿ ಪದಬಳಕೆ(ಕ.ನಿ); Digging, burglary, dig a hole in the wall(made by burglars), [cremate(particularly in the soil)], burying a dead;
- ಭೂ ಸಂಶೋಧನೆಯಲ್ಲಿ ಬಳಸುವ 'ಉತ್ಖನನ' ಪದದಲ್ಲಿ 'ಖನನ'(ಉತ್+ಖನನ) ರೂಪವಿದೆ. Excavation.

ಖನಾಡಿಸು khanāḍisu :

- ಹೊಡೆ; ಬಡಿ; ಹೊಡೆಯುವಿಕೆ; ಏಟು ಕೊಡುವುದು; ಕ್ರಿಯೆಯನ್ನು ಸೂಚಿಸುವ ಪದ(ಬಾಗ.ಜಿ); *ಪ್ರ: 'ಹೇಳಿದ್ದನ್ನು ಕೇಳದಿದ್ದರೆ ಖನಾಡಿಸುವರು'.* Beating, blow, stroke.

ಖನಿತ್ರ khanitra :

- 'ಎಡೆಕುಂಟೆ' ಎಂಬರ್ಥದಲ್ಲಿ ಪದಬಳಕೆ; ಒಂದು ಬಗೆಯ ಕೃಷಿ ಉಪಕರಣ; ಕುಂಟೆಯಲ್ಲಿ ಹೆಗ್ಗುಂಟೆ, ಎಡೆಕುಂಟೆ ಎಂಬ ಎರಡು ಪ್ರಕಾರಗಳಿವೆ; ಗಾತ್ರದ ಆಧಾರದ ಮೇಲೆ ಇವುಗಳ ಭಿನ್ನತೆಯನ್ನು ಗುರುತಿಸಲಾಗುತ್ತದೆ; A large sized agricultural instrument to level ploughed land;
- ಎಡೆ+ಕುಂಟೆ>ಎಡೆಕುಂಟೆ>ಎಡೆಗುಂಟೆ(ಕ>ಗ); ಹಿರಿದಾದ+ಕುಂಟೆ>ಹೆಗ್ಗುಂಟೆ; ಇದು ದೊಡ್ಡಕುಂಟೆ ಆದ್ದರಿಂದ ಇದಕ್ಕೆ ಹೆಗ್ಗುಂಟೆ ಎಂಬುದಾಗಿ ಕರೆಯುವರು;
- 'ಖನಿತ್ರ' ಬಳ್ಳಾರಿ ಜಿಲ್ಲೆಯ ಭಾಗದಲ್ಲಿ ಪ್ರಚಲಿತವಿರುವ ರೂಪ; *ಪ್ರ: 'ಖನಿತ್ರ ತಗೊಂಡ್ ಬರ್ರಿಇಲ್ಲೊ ಮಗಾ'.* It is very relevant in the region of Bellary district.

ಖಪ್ಪರ/ಖರ್ಪರ khappara/kharpara :

- ಕರ್ಪರ>ಖರ್ಪರ(ಖರ್ಪರ>ಕರ್ಪರ); ಭೋಕಿ, ಭಿಕ್ಷಾಪಾತ್ರೆ; ಒಡೆದ ಮಡಕೆಯ ಚೂರು; ಬಕ್ಕರ, ಬಕ್ರೆ ಅಥವಾ ಬಗ್ಗರೆ, ಬಗ್ರೆ ಎಂಬರ್ಥದಲ್ಲಿ; ಕೊಪ್ಪರಿಗೆ; ಓಡು; Pieces of broken pots, alms box(vessel); a bowl of a beggar, potsherd;
- ತಲೆ ಬುರುಡೆಯ ಚಿಪ್ಪು; ಕಪಾಲ(ಬೀ.ಜಿ); Outer covering of human head(skull), cheek;
- ಕೂರ್ಮನ ಬೆನ್ನಿನ ಕವಚ; ಆಮೆಯ ಚಿಪ್ಪು; Outer covering of tortoise(shell), cuticle;

- ಕಳ್ಳ; ನೀಚ; ದೂರ್ತ; ಚೋರ; Robber, thief, betrayer, cheater;
- ಒಂದು ಬಗೆಯ ಲೋಹ; ಸತುವು ಎಂಬರ್ಥದಲ್ಲಿ(ಕ.ನಿ); *ಪ್ರ: 'ಖಪ್ಪರ ತಗೊಂಡ್ ಬಂದ್ ತಲೆ ಮೇಲೊಡುದ್ನಂತೆ'.* A type of metal.

ಖಫರೋಳಿಗಿ/ಖಫ್ರೋಳ್ಗೆ khapharōḷigi/ khaphrōḷge :

- ಖಫರೋಳಿಗಿ > ಖಫ್ರೋಳಿಗಿ > ಖಫ್ರೋಳ್‌ಗಿ > ಖಫ್ರೋಳ್ಗೆ;
- ಮನೆಯ ಮೇಲ್ಚಾವಣಿಗೆ ಹೊದಿಸುವ ಹೆಂಚು; ಮಣ್ಣಿನಿಂದ ತಯಾರಿಸಿದ್ದು; Roof tiles, earthern tiles;
- ಮನೆಯ ಒಳಭಾಗವನ್ನು ಮಳೆ, ಗಾಳಿ, ಬಿಸಿಲಿನಿಂದ ರಕ್ಷಿಸಲು, ಅದರೊಳಗೆ ಮನೆ ಮಂದಿಯೆಲ್ಲಾ ಸುರಕ್ಷಿತವಾಗಿ ವಾಸ ಮಾಡಲು ಮೇಲ್ಚಾವಣಿಗೆ ಹೆಂಚು ಹೊದಿಸುವುದಿದೆ; Roof tiles(earthern tiles) are hung from the frame work of a roof; they are designed mainly to keep out rain, air and the sun;
- ಹೆಂಚಿನಲ್ಲಿ ನಾಡಂಚು, ಸೀಮೆ ಹೆಂಚು ಅಥವಾ ಮಂಗಳೂರು ಹೆಂಚು ಎಂಬ ಎರಡು ಪ್ರಕಾರಗಳಿವೆ; ಹಿಂದೆ ಯತೇಚ್ಚವಾಗಿ ನಾಡಂಚುಗಳನ್ನೇ ಉಪಯೋಗಿಸುತ್ತಿದ್ದರು; ಆದರೆ ಇತ್ತೀಚೆಗೆ ನಾಡಂಚಿನ ಜೊತೆಗೆ ಮಂಗಳೂರು ಹೆಂಚನ್ನು ಬಳಸುವರು; ಕಾರಣ ನಾಡಂಚಿಗಿಂತ ಸೀಮೆಹೆಂಚು ಹೆಚ್ಚು ಸುರಕ್ಷಿತ ಎಂಬರ್ಥದಲ್ಲಿ; In the roof tiles we may find traditional tiles(made of clay), Mangalore tiles(fired clay); the traditional roof tiles(made of fired clay);
- 'ಖಫ್ರೋಳ್ಗಿ' ಬೀದರ್ ಜಿಲ್ಲೆಯಲ್ಲಿ ಬಳಕೆಯಲ್ಲಿರುವ ರೂಪ (ನೋಡಿ: ಹೆಂಚು).

ಖಬಡಾ khabaḍā :

- 'ಒಕ್ಕಣೆ ಹುಲ್ಲು' ಎಂಬರ್ಥದಲ್ಲಿ ಬಳಕೆಯಲ್ಲಿರುವ ರೂಪ; ಎತ್ತುಗಳಿಂದ ತುಳಿಸಿದ ಗೋಧಿ ಹುಲ್ಲು; Threshed straw, especially wheat straw(hay);
- ಕಣದಲ್ಲಿ ಒಕ್ಕಣೆ ಮಾಡುವಾಗ ತೆನೆಸಹಿತ ಹುಲ್ಲನ್ನು ಕಣದಲ್ಲಿ ಹರಡಿ ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ ನಂತರ ಎತ್ತು, ದನ, ಹಸು-ಕರುಗಳಿಂದ ತುಳಿಸುವುದು ರೂಢಿ; Threshing may be done by beating the grain using a flail on a threshing floor; another traditional method of threshing is to make oxen walk in circle on the grain on a hard surface;
- ಕಣದ ಮಧ್ಯದಲ್ಲಿ ನೆಡುವ ಮೇಟಿಗೂಟಕ್ಕೆ ಕುಣಿಕೆ ಹಾಕಿ ಏಳೆಂಟು ಎತ್ತುಗಳನ್ನು ಒಂದರ ಪಕ್ಕ ಒಂದರಂತೆ ಸೇರಿಸಿ ಕಟ್ಟಿ ಸುತ್ತಲೂ ಸುತ್ತಿಸುವುದರ ಮೂಲಕ ಹುಲ್ಲನ್ನು ತುಳಿಸುವುದು ವಾಡಿಕೆ;
- ಕಾಳುಗಳೆಲ್ಲ ಉದುರಿದ ನಂತರ ಹುಲ್ಲನ್ನು ಚೆನ್ನಾಗಿ ಒದರಿ ಬೇರೆಡೆ ರಾಶಿ ಹಾಕುವರು; ಇದು ಬಹು ದಿವಸಗಳವರೆಗೆ ಜಾನುವಾರುಗಳಿಗೆ ಮೇವಾಗಿ ಬಳಕೆಯಾಗುವುದು; ಹೀಗೆ ಎತ್ತುಗಳಿಂದ ತುಳಿಸಿದ ಕಾಳುರಹಿತ ಹುಲ್ಲನ್ನು ಬಳ್ಳಾರಿ ಜಿಲ್ಲೆಯ ಭಾಗದಲ್ಲಿ 'ಖಬಡಾ' ಎಂದು ಕರೆಯುವರು. The threshed hay is used as fodder for the cattle.

ಖಬರ/ಖಬರು khabara/khabaru :

- ಎಚ್ಚರ; ಎಚ್ಚರಿಕೆ; ಅರಿವು; ತಿಳಿವಳಿಕೆ; ಪ್ರಜ್ಞೆ; ಜ್ಞಾನ; ಲಕ್ಷ್ಯ; ಗಮನ; ಜವಾಬ್ದಾರಿಯುಳ್ಳವ; Warning, cautious, knowledge, sense, attention, notice, responsible;
- ಸುದ್ದಿ; ಉತ್ತರ; ನೆದರು; ಖರ್ಜೂರ ಅಥವಾ ಉತ್ತುತ್ತೆ(ಕಲ, ರಾಯ, ಯಾದ, ಬೀ.ಜಿ); News, answer, date or dried date;
- ಅನ್ಯದೇಶ್ಯ ಪದವಿರಬಹುದು; ಉತ್ತರಕರ್ನಾಟಕ ಭಾಗದಲ್ಲಿ ಯತೇಚ್ಚವಾಗಿ ರೂಢಿಯಲ್ಲಿರುವಂಥದು;
- ಕಲಬುರ್ಗಿ ಭಾಗದಲ್ಲಿ 'ಕೆಟ್ಟದ್ದು' ಎಂಬರ್ಥದಲ್ಲಿಯೂ ಪದಬಳಕೆ ಇದೆ; *ಪ್ರ: 'ನಿನ್ಗೇನು ಸ್ವಲ್ಪನಾದ್ರು ಖಬರಿಲ್ಲೋ ಮಾರಾಯ'*; Bad, evil in the region of Gulbarga;
- ಎಚ್ಚರಗೇಡಿ, ತಿಳಿವಳಿಕೆ ಇಲ್ಲದವ, ಪ್ರಜ್ಞೆ ಇಲ್ಲದವನಿಗೆ 'ಕಬರುಗೇಡಿ' ಎಂದು ಕರೆಯುವರು; *ಪ್ರ: 'ಅವನೊಬ್ಬ ಕಬರುಗೇಡಿ ಅವನನ್ನೇನು ಕೇಳ್ತೀಯ ಬಿಡು ಮಾರಾಯ್ತಿ'.* Ignorant, careless, negligent, be off one's guard.

ಖಮೀಸ ಅಂಗಿ khamīsa aŋgi :

- ಅಂಗಿ ಎಂದರೆ ಷರ್ಟು, ಚೊಗ, ಜುಬ್ಬ ಎಂಬರ್ಥದಲ್ಲಿ ಪದಬಳಕೆ; 'ಖಮೀಸ' ಅಂಗಿ ಎಂದರೆ ಪುರುಷರು ಧರಿಸುವ ನಿಲುವಂಗಿ; ಮುಸಲ್ಮಾನರು ಧರಿಸುವ ಉದ್ದನೆಯ ನಿಲುವಂಗಿ; Large garment, cloak worn by muslim males;
- ಸಲ್ವರ್ ಖಮೀಸ ಎಂಬುದು ಮಹಿಳೆಯರು ತೊಡುವ ಉಡುಗೆ. Salwar kammez, a dress worn by ladies.

ಖಯಾಲಿ khayāli :

- ಹವ್ಯಾಸ; ಪ್ರವೃತ್ತಿ; ಚಟ; ಆಸೆ; ಒಲವು; ಇಷ್ಟ; ಮರ್ಜಿ; ಆಸಕ್ತಿ; ಮೋಹ; ವ್ಯಾಮೋಹ; ಹುಚ್ಚು; ಅಪೇಕ್ಷೆ; ತೆವಲು; ಗೀಳು; Hobby, desire, habit, impulse, inclination, vocation, tendency;
- ವಿಚಾರ; ಕಲ್ಪನೆ; ಯೋಚನೆ; Concept, thought, matter, reflection;
- ರಸಿಕತೆ; ವಿಲಾಸಪ್ರಿಯತೆ; Taste, virtuosity, aesthetic, sensualism, hedonism;
- ಒಂದು ಬಗೆಯ ಜನಪದ ನೃತ್ಯ ನಾಟಕ(ಕ.ನಿ); A kind of folk dance drama(ballet);
- ಖಯಾಲು, ಖೇಲು, ಖ್ಯಾಲ ಎಂಬ ಸಂವಾದಿ ರೂಪಗಳ ಬಳಕೆ ಇದೆ; *ಪ್ರ: 'ಅವನಿಗೆ ಖುಷಿಯಾದಾಗಲೆಲ್ಲ ಪದ ಹೇಳುವ ಖಯಾಲಿ ಇದೆ'.*

ಖರ khara :

- ಒರಟಾದ; ಗಟ್ಟಿಯಾದ; ಕಠಿಣ; ಮಂದವಾಗಿರುವುದು; ಮೃದುವಿಲ್ಲದ್ದು; Rough, hard, difficult, thick;
- ಹರಿತವಾದ; ಮೊನಚಾದ; ತೀಕ್ಷ್ಣವಾದ; Sharp, fierce, pointed, spiky, sharpe-edged piercing, intense;
- ಕತ್ತೆ; ಹೇಸರಗತ್ತೆ; Donkey, mule;
- ಆರು ಎಂಬ ಸಂಖ್ಯೆಯ ಸಂಕೇತ; Symbol of number `6';
- ಅರವತ್ತು ಸಂವತ್ಸರಗಳಲ್ಲಿ ಇಪ್ಪತ್ತೈದನೆಯದು(ಕ.ನಿ);
- ಒಬ್ಬ ರಾಕ್ಷಸನ ಹೆಸರು; ವಿಶ್ರವನೆಂಬ ಋಷಿಯಿಂದ ರಾಕಾ ಎಂಬ ರಾಕ್ಷಸಿಯಲ್ಲಿ ಜನಿಸಿದವ; ರಾವಣನ ಬಲತಾಯಿ ಮಗ; ದೂಷಣ, ಶೂರ್ಪಣಖಿ ಇವನ ಒಡಹುಟ್ಟಿದವರು; Khara, name of a demon; he was a man eating demon(rakshasa) in the Indian Ramayana epic; he was a younger male cousion of Ravana and the son of Kaikesi's sister Raka; he was killed by Rama, along with his brother Dushana when attacked Rama after Shurpanaka's humiliation; Khara fought against Rama and Lakshmana; during the fight he lost his life; he was the ruler of the Danda Kingdom;
- ರಾವಣ ಯುದ್ಧದ ಸಂದರ್ಭದಲ್ಲಿ ಶೂರ್ಪಣಖಿಯ ಗಂಡ ವಿದ್ಯುಜ್ಜಿಹ್ವನನ್ನು ಕೊಂದಾಗ ಶೂರ್ಪಣಖಿ ರಾವಣನನ್ನು ನಿಂದಿಸಿದಳು;
- ಆಗ ರಾವಣ ಶೂರ್ಪಣಖಿಯನ್ನು ಖರ, ದೂಷಣರ ವಶದಲ್ಲಿರುವಂತೆ ನಿಯಮಿಸಿ ಖರನಿಗೆ ದಂಡಕಾರಣ್ಯ ರಾಜ್ಯ ಮತ್ತು ೧೪೦೦೦ ಮಂದಿ ರಾಕ್ಷಸರನ್ನು ಕೊಟ್ಟು ಕಳುಹಿಸಿದ;
- ರಾಮ ಸೀತಾ, ಲಕ್ಷ್ಮಣರೊಂದಿಗೆ ವನವಾಸದಲ್ಲಿ ಪಂಚವಟಿಯಲ್ಲಿದ್ದಾಗ ಶೂರ್ಪಣಖಿ ರಾಮನನ್ನು ಮೋಹಿಸಿ ಲಕ್ಷ್ಮಣನಿಂದ ಕಿವಿ, ಮೂಗನ್ನು ಕುಯಿಸಿಕೊಂಡಳು;
- ಇದರಿಂದ ಕುಪಿತಳಾದ ಶೂರ್ಪಣಖಿ ಖರನಲ್ಲಿಗೆ ಹೋಗಿ ವಿಷಯ ಮುಟ್ಟಿಸಿದಳು; ಇದರಿಂದ ರೊಚ್ಚಿಗೆದ್ದ ಖರ ತನ್ನ ೧೪ಸಾವಿರ ರಾಕ್ಷಸ ಸೇನೆಯೊಂದಿಗೆ ರಾಮನೆದುರು ಯುದ್ಧ ಮಾಡಿ ಸೇನಾಸಮೇತನಾಗಿ ಹತನಾದ(ಮ.ನಾ.ಚೂ).

ಖರಡಿಗೆ kharaḍige :

- ಹುರುಳಿಲ್ಲದ, ಸತ್ಯಾಂಶವಿಲ್ಲದ, ಆಧಾರವಿಲ್ಲದ, ಕಾರಣವಿಲ್ಲದ, ವ್ಯರ್ಥವಾದ, ಉಪಯೋಗವಿಲ್ಲದ ಎಂಬ ಮೊದಲಾದ ಅರ್ಥಗಳಲ್ಲಿ ಬಳಕೆಯಲ್ಲಿರುವ ರೂಪ; Meaningless, silly, useless, away from truth, untruth, untrustful, without essence, minor, peripheral;
- ವಿದ್ಯಾಶಂಕರ ಅವರ 'ಹೀಗೊಬ್ಬ ಸರ್ವಜ್ಞ' ಎಂಬ ಕೃತಿಯಲ್ಲಿ ಈ ಪದದ ಉಲ್ಲೇಖವಿದೆ; *ಪ್ರ: 'ಅವನ ಮಾತೆಲ್ಲ ಬರೀ ಖರಡಿಗೆ ಹಾಗಾಗಿ ನಂಬದಿರುವುದೇ*

ಒಳ್ಳೆಯದು'. This word is referred in Vidyashankar's work `Higobba Sarvagna'.

ಖರಾಪುಲು kharāpulu :

- ಕಿವಿಗೆ ಧರಿಸುವ ನಕ್ಷತ್ರಾಕಾರದ ಆಭರಣ; ಚಿನ್ನ, ಬೆಳ್ಳಿ, ಬಂಗಾರದಂತಹ ಲೋಹಗಳಿಂದ ತಯಾರಿಸುವಂಥದು; 'ಗೊಂಡರು' ಬುಡಕಟ್ಟು ಮಹಿಳೆಯರು ಧರಿಸುವುದಿದೆ(ಉ.ಕ.ಜಿ); Star shaped earring; it is made of gold, silver and other metals; usually Gorava women wear this ornament;
- ವಿಶೇಷವಾಗಿ ಕಿವಿಯ ಮಧ್ಯಭಾಗದಲ್ಲಿ ತೊಡುವರು. An earring adorn middle of the ear(women).

ಖರಾಬು kharābu :

- ಸಾಗುವಳಿಗೆ ಯೋಗ್ಯವಲ್ಲದ, ಯಾವುದೇ ಬೆಳೆ ಬೆಳೆಯಲಾಗದ ಭೂಮಿ ಅಥವಾ ಜಮೀನು; ಬೀಳು ಭೂಮಿ; Unarable land(agricultural);
- ಹಳ್ಳ-ದಿಣ್ಣೆಗಳಿಂದ ಕೂಡಿದ ಜಮೀನು; ಸರ್ಕಾರಿ ಜಮೀನು; ಸರ್ಕಾರದ ವಶದಲ್ಲಿರುವಂಥದು; ಖಾಸಗಿಯವರ ಒಡೆತನದಿಂದ ಬೇರ್ಪಟ್ಟಿರುವುದು; ಕಂದಾಯ ಕಟ್ಟುವ ಹಾಗಿಲ್ಲ; 'ಖರಾಬು ಜಮೀನು' ಎಂಬ ಹೆಸರಿನಿಂದಲೇ ಜನಪ್ರಿಯತೆ ಪಡೆದಿರುವಂಥದು; Government land which is not assessed to the farmer; may be because it is reserved or assigned for public purpose;
- ರೈತರು ಒತ್ತುವರಿ ಮಾಡಿಕೊಳ್ಳುವಂತಿಲ್ಲ, ಹಾಗೆಯೇ ಸಾಗುವಳಿಯನ್ನೂ ಮಾಡುವಂತಿಲ್ಲ; *ಪ್ರ: 'ಬೇಸಾಯದ ಜಮೀನಿಗಿಂತ ಖರಾಬು ನೆಲವೇ ಜಾಸ್ತಿ ಇದ್ದಂತೆ ಕಾಣುತ್ತದೆ'.* Kharab area(unarable) normally forms part of the survey number which owned by a farmer, but it could not be used for agricultural purpose; therefore, it is exempted from assessment.

ಖರೀದಿ kharīdi :

- ಕೊಡು-ಕೊಳ್ಳುವಿಕೆ ವ್ಯವಹಾರದಲ್ಲಿ ಪ್ರಧಾನವಾಗಿ ಬಳಕೆಗೊಳ್ಳುವ ರೂಪ; ನಿರ್ದಿಷ್ಟ ಪದಾರ್ಥವನ್ನು ನಿಗದಿತ ಹಣ ಕೊಟ್ಟು ಕೊಂಡುಕೊಳ್ಳುವ ಪ್ರಕ್ರಿಯೆಗೆ ಸಂಬಂಧಿಸಿದ್ದು; ಕ್ರಯಕ್ಕೆ ಕೊಳ್ಳುವುದು; Purchase, buy, sale, buying;
- ತೆಗೆದುಕೊಳ್ಳುವುದು, ಪಡೆದುಕೊಳ್ಳುವುದು, ಕೊಂಡುಕೊಳ್ಳುವುದು ಎಂಬರ್ಥವನ್ನು ಧ್ವನಿಸುತ್ತದೆ; ವ್ಯಾಪಾರ, ವ್ಯವಹಾರದ ವಹಿವಾಟಿನಲ್ಲಿ; Getting, receiving, purchasing(business);
- ಹೊಲ-ಗದ್ದೆ, ದವಸ-ಧಾನ್ಯ, ಪಾತ್ರೆ-ಪಗಡೆ, ಬಟ್ಟೆ-ಬರೆ, ಪೀಠೋಪಕರಣಗಳು, ಜಾನುವಾರುಗಳು, ವಿವಿಧ ಪದಾರ್ಥಗಳು, ಕೃಷಿ ಉಪಕರಣಗಳು, ಮನೆ ಬಳಕೆಯ ವಸ್ತುಗಳು, ಚಿನ್ನ-ಬೆಳ್ಳಿ, ಬಂಗಾರ, ತಾಮ್ರ, ಹಿತ್ತಾಳೆ, ಕಬ್ಬಿಣ, ಮರ ಮೊದಲಾದ ಲೋಹಗಳಿಂದ ತಯಾರಿಸಿದ ಸಾಧನ-ಸಾಮಗ್ರಿಗಳನ್ನು ಕೊಂಡುಕೊಳ್ಳುವ ಪರಿಕಲ್ಪನೆಗೆ ಅಥವಾ ಕೊಳ್ಳಲೋಸುಗವಾಗಿ ಬೆಲೆ ನಿಗದಿಪಡಿಸುವ, ಖಚಿತ ಪಡಿಸುವ ಪ್ರಕ್ರಿಯೆಗೆ 'ಖರೀದಿ' ಪದದ ಬಳಕೆ ಇದೆ; It includes agricultural land, grain-crop; utensils, cloth, furniture, tools, cattle, gold-silver, copper, brass, bronze, iron purchasing;
- ಮರಾಠಿ, ಹಿಂದಿಯಲ್ಲಿ 'ಖರಿದೀ' ಪದವಿದೆ; 'ಖರಿದೀ' ಪದವೇ ಕನ್ನಡದ 'ಖರೀದಿ' ಪದವಿರಬಹುದೆ?; ಅನ್ಯದೇಶ್ಯ ಪದವಿರಬಹುದು;
- ಖರೀದಿ ಎಂಬುದು ಬೆಲೆ, ದರ ಎಂಬ ಅರ್ಥಗಳನ್ನು ಒಳಗೊಂಡಿದೆ; 'ಇವತ್ತಿನ ಸಂತೆಯಲ್ಲಿ ಮರಿಗಳ ಖರೀದಿ ಬಲು ಜೋರಾಗಿಯೇ ಇತ್ತು' ಎಂಬುದು ಬೆಲೆ ನಿಗದಿಗೆ ಸಂಬಂಧಿಸಿದ ಮಾತು; *ಪ್ರ: 'ಏನಣ್ಣ ಹಬ್ಬದ ಖರೀದಿ ಚೆನ್ನಾಗಾಯ್ತೋ'.*

ಖರೆ khare :

- ನಿಜ, ಸತ್ಯ ಎಂಬರ್ಥದಲ್ಲಿ ಪದಬಳಕೆ; ಉತ್ತರಕರ್ನಾಟಕ ಭಾಗದಲ್ಲಿ ಪ್ರಚಲಿತದಲ್ಲಿರುವ ರೂಪ; ದಕ್ಷಿಣ ಕರ್ನಾಟಕದ ಕಡೆಯಲ್ಲೂ ಭಾಗಶಃ ಕಂಡುಬಂದಿದೆ; True, real, correct, truth, right;
- ಅನ್ಯದೇಶ್ಯ ಪದ; ಮರಾಠಿಯಲ್ಲಿನ 'ಖರಾ' ರೂಪವೇ ಕನ್ನಡದಲ್ಲಿ 'ಖರೆ' ಆಗಿರಬೇಕು?'; ಪದಾಂತ್ಯದ 'ಅ' ಕಾರ 'ಎ'ಕಾರವಾಗಿ ಬದಲುಗೊಂಡಿದೆ; ಪ್ರ:

'ಯದುಕ್ಕಂಗಾಡಕತೀರಿ ಅವ್ನ್ ಮಾತಾಡಿದ್ದೆಲ್ಲ ಖಿರೇನೆ ಅಂತ ನೀವ್ ಹೆಂಗ್ ಹೇಳಕತೀರಿ';

- ಒಂದು ಬಗೆಯ ಹುಲ್ಲು(ಕ.ನಿ).

ಖರ್ಚು kharcu :

- ಅರಬ್ಬೀ, ಪಾರಸೀ ಮೂಲದ ಪದ(ಇಗೋ ಕನ್ನಡ); ವೆಚ್ಚ; ವ್ಯಯ ಎಂಬರ್ಥದಲ್ಲಿ ಪದಬಳಕೆ; Expense, expenditure, outlay, charge;
- ದಿನನಿತ್ಯದ ವ್ಯಾಪಾರ, ವ್ಯವಹಾರ ವಹಿವಾಟಿನಲ್ಲಿ ಹಣ, ಪದಾರ್ಥಗಳ ವೆಚ್ಚದ ಒಟ್ಟು ಮೊತ್ತಕ್ಕೆ ಸಂಬಂಧಿಸಿದ ಹಾಗೆ;
- ಮಗನ ಮದುವೇಲಿ ಎಷ್ಟು ಹಣ ಖರ್ಚಾಯಿತು, ಎಷ್ಟು ಪದಾರ್ಥ ಖರ್ಚಾಯಿತು, ಎಷ್ಟು ಉಳಿಯಿತು ಎಂಬ ಪರಿಕಲ್ಪನೆಯಲ್ಲಿ ಪದಬಳಕೆ ಇದೆ.

ಖರ್ಜಿರಂಜದ ಹಣ್ಣು kharjiranjada haṇṇu :

- 'ಖರ್ಜಿ ಹಣ್ಣು' ಎಂಬ ಸಂವಾದಿ ರೂಪದ ಬಳಕೆ ಇದೆ; ಮಲೆನಾಡಿನ ಕಾಡುಗಳಲ್ಲಿ ದೊರೆಯುವ ಹಣ್ಣು; ತಿನ್ನಲು ಉಪಯೋಗ; Very useful fruit available in the forest of Malenadu;
- ಖರ್ಜಿರಂಜದ ಗಿಡದಿಂದ ದೊರೆಯುತ್ತದೆ; ಇದು ಕಾಡು–ಮೇಡುಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುವ ಸಸ್ಯ ವಿಶೇಷ.

ಖರ್ಜೂರ kharjūra :

- ಕರ್ಜೂರ, ಕಾರಿಕ, ಕಾರೀಕ, ಖಾರಿಕ, ಖಾರಿಕ್ ಮೊದಲಾದ ಸಂವಾದಿ ರೂಪಗಳ ಬಳಕೆ ಇದೆ; ಉತರಕರ್ನಾಟಕದ ಭಾಗದಲ್ಲಿ 'ಉತ್ತುತ್ತೆ' ಎಂದು ಕರೆಯುವರು; Date, dried fruit belongs to palm tree family;
- ತಾಳೆ ಪ್ರಭೇದಕ್ಕೆ ಸೇರಿದ ಒಂದು ಪ್ರಕಾರದ ಮರ ವಿಶೇಷ; ಅತಿ ಸಿಹಿಯಾದ ಬೀಜ ಸಹಿತವಾದ ಹಣ್ಣು ಬಿಡುತ್ತದೆ; ಈ ಹಣ್ಣು ಶಕ್ತಿವರ್ಧಕವೂ ಹೌದು; ಬೀಜ ಒಳಭಾಗದಲ್ಲಿದ್ದು ಸುತ್ತಲೂ ಹಣ್ಣಿನ ಹೊದಿಕೆ ಇರುತ್ತದೆ; ಬೇಸಿಗೆಯಲ್ಲಿ ಬಲು ಬೇಡಿಕೆ ಹೊಂದಿರುವ ಹಣ್ಣು; ಬಾಯಾರಿಕೆ, ದೇಹದ ದಣಿವು ನಿವಾರಕ ಗುಣ ಹೊಂದಿದೆ;
- 'ಉತ್ತುತ್ತೆ' ಸೌದಿ ಅರೇಬಿಯಾ ಮೂಲದ್ದು; ಆ ರಾಷ್ಟ್ರದ ಲಾಂಛನದಲ್ಲೂ ಖರ್ಜೂರ ಗಿಡದ ಗುರುತಿರುವುದು ವಿಶೇಷ; ಮರುಭೂಮಿಯಲ್ಲೂ ಬೆಳೆಯುವ ಗುಣ ಹೊಂದಿದ್ದು ಇದರಿಂದ ನೆರಳು ಸಿಗುವುದೆಂದು ಹೇಳಲಾಗುತ್ತದೆ;
- ಹಣ್ಣು, ಬೀಜದಲ್ಲಿ ಔಷಧೀಯ ಗುಣ ಹಾಗೂ ಇತರೆ ಅಂಶಗಳು ಒಳಗೊಂಡಿದೆ; ಹಣ್ಣಿನಲ್ಲಿ ಜೀವಸತ್ವ 'ಸಿ', ನಾರಿನ ಅಂಶ, ಕ್ಯಾಲ್ಸಿಯಂ, ಕಬ್ಬಿಣದ ಅಂಶ, ಮಿನರಲ್ಸ್‌ಗಳು ಕಂಡುಬಂದಿವೆ;
- ಕೊಬ್ಬು, ಕೊಲೆಸ್ಟ್ರಾಲ್, ಸೋಡಿಯಾದಂತಹ ಇತರೆ ಅಂಶಗಳು ಕಂಡುಬಂದಿಲ್ಲವೆಂದು ವೈದ್ಯಕೀಯ ಮೂಲಗಳ ಸ್ಪಷ್ಟನೆ;
- ಪ್ರತಿ ದಿವಸ ಖರ್ಜೂರದ ಹಣ್ಣು ತಿನ್ನುವುದರಿಂದ ಅಜೀರ್ಣದ ತೊಂದರೆ ಕಾಣಿಸಿಕೊಳ್ಳುವುದಿಲ್ಲ; ಅಲ್ಲದೆ ರಕ್ತಹೀನತೆ, ಮಲಬದ್ಧತೆ, ಅಸಿಡಿಟಿ, ಎದೆಉರಿಯಂತಹ ತೊಂದರೆಗಳು ನಿವಾರಣೆಯಾಗುತ್ತವೆ;
- ಲಖ್ವ, ಹೃದಯ ತೊಂದರೆ, ಹೊಟ್ಟೆಯ ಕ್ಯಾನ್ಸರ್‌ನಂತಹ ರೋಗಗಳ ತಡೆಗಟ್ಟುವಿಕೆಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ; A medicinal fruit, good for heart disease, cancer and other deadly diseases; it is full of vitamin `c', fibre, calcium, iron and minerals; it is good also for pregnant and mothers;
- ಖರ್ಜೂರದಲ್ಲಿ ಒಣಖರ್ಜೂರವೇ ಜನಪ್ರಿಯ ತಿನಿಸು; ಇದನ್ನು ಬಹು ದಿವಸಗಳವರೆಗೆ ಸಂಗ್ರಹಿಸಿಡಬಹುದು;
- ಉಪವಾಸವಿದ್ದಾಗ, ಪ್ರಯಾಣದ ಸಂದರ್ಭದಲ್ಲಿ ತಿನ್ನಲು ಬಳಸುವರು; ದೇವರಿಗೆ ನೈವೇದ್ಯ ಸಿದ್ಧಪಡಿಸುವಾಗ, ಪಾಯಸ, ಒಬ್ಬಟ್ಟು, ಹಲ್ವ ತಯಾರಿಕೆಯಲ್ಲೂ ಉಪಯೋಗವಿದೆ;
- ಜಾತ್ರೆಗಳಲ್ಲಿ ನಡೆಯುವ ರಥೋತ್ಸವದಲ್ಲೂ ತೇರಿನ ಮೇಲೆ ಎಸೆಯಲು ಬಳಕೆ;
- ಬಸುರಿ–ಬಾಣಂತಿಯರು, ಋತುಮತಿಯಾದ ಹೆಣ್ಣುಮಕ್ಕಳಿಗೆ ಪೌಷ್ಟಿಕ ಆಹಾರವಾಗಿ ಉಪಯೋಗ; ಕೊಬ್ಬರಿ, ಕಲ್ಲುಸಕ್ಕರೆಯ ಜೊತೆಗೆ ಒಣದ್ರಾಕ್ಷಿ, ಖರ್ಜೂರ, ಗೋಡಂಬಿಯನ್ನು ತಿನ್ನಿಸುವರು;
- ಖರ್ಜೂರ ಗಿಡದ ಗರಿ ಅಥವಾ ಎಲೆಗಳಿಂದ ಚಾಪೆ, ಬುಟ್ಟಿ, ಪೊರಕೆ, ಪರದೆ, ಟೊಪ್ಪಿಗೆ, ಬೀಸಣಿಗೆ

ಮೊದಲಾದ ಮನೆಬಳಕೆ ಸಾಮಗ್ರಿಗಳನ್ನು ಹೆಣೆದು ಮಾರಾಟ ಮಾಡುವುದಿದೆ;

- ಖರ್ಜೂರದ ಹಸಿಕಾಯಿಯನ್ನು 'ಕ್ರಿಮಿ' ಎಂದೂ, ಕೆಂಪುಬಣ್ಣಕ್ಕೆ ತಿರುಗಿದಾಗ 'ಖಲಾಲ್' ಎಂದೂ, ಮರದಲ್ಲೇ ಹಣ್ಣಾಗಿರುವುದನ್ನು 'ರುತುಬ್' ಎಂದೂ, ಅರ್ಧ ಕಂದು ಅರ್ಧ ಹಳದಿ ಬಣ್ಣವಿರುವ ಕಾಯಿಯನ್ನು 'ಟಾಮ್' ಎಂದು ವಿವಿಧ ಹಂತಗಳಲ್ಲಿ ವಿವಿಧ ಹೆಸರುಗಳಿಂದ ಕರೆಯುವರು;
- ಖರ್ಜೂರದ ಬೀಜವನ್ನು ಉತ್ತರಾಣಿ ಬೇರಿನೊಂದಿಗೆ ಅರೆದು ಅದಕ್ಕೆ ವೀಳೆಯದೆಲೆ, ಅಡಕೆ, ಲವಂಗ, ಏಲಕ್ಕಿ, ಕಾಚು ಮೊದಲಾದುವನ್ನು ಸೇರಿಸಿ ಕಷಾಯ ತಯಾರಿಸಿ ಚಳಿ ಜ್ವರದ ಬಾಧೆಯಿರುವವರಿಗೆ ಔಷಧಿಯಾಗಿ ಕುಡಿಸುವರು;
- 'ಖರ್ಜೂರ ಹಣ್ಣಾಗುವಾಗ ಕಾಗೆ ಬಾಯಾಗ ಹುಣ್ಣು'(ಗಾ); *ಪ್ರ: 'ತೇರಿಗೆ ಬೀರಿದ್ದ ಖರ್ಜೂರ ನನ್ ಕೈಯಾಗೇ ಸಿಕ್ಕು ನೋಡೇಕ್ಕಾ*'(ಬದುಕು).

ಖರ್ಸಿ/ಖರ್ಸಿ kharsi :

- ಬಿದಿರಿನಿಂದ ಹೆಣೆದು ತಯಾರಿಸಿದ ಒಂದು ವಿಧದ ಸಾಧನ; ತೊಂಬೆಯಾಕೃತಿಯಲ್ಲಿರುತ್ತದೆ; ಆಳೆತ್ತರದಲ್ಲಿರುವ ಇದು ಚುತುರ್ಭುಜ ಅಥವಾ ವೃತ್ತಾಕಾರವಾಗಿರುತ್ತದೆ; A circle or square shaped equipment made of bamboo(container);
- ಇದರ ತಳಭಾಗವನ್ನು ಅಚ್ಚೆಯಿಂದಲೇ ಹೆಣೆದು ಮುಚ್ಚಿದ್ದು ಮೇಲ್ಭಾಗ ತೆರೆದಿರುತ್ತದೆ; ಈ ಭಾಗದ ಅಗಲ ಒಂದೇ ಪ್ರಮಾಣದಲ್ಲಿರುತ್ತದೆ; A closed container made of bamboo bark or peel to store paddy, maize, ragi, wheat etc;
- ಭತ್ತ, ರಾಗಿ, ಜೋಳ, ಗೋಧಿ, ದ್ವಿದಳ ಧಾನ್ಯದಂತಹ ಇತರೆ ಪದಾರ್ಥಗಳನ್ನು ಸಂಗ್ರಹಿಸಿ ಬಹುದಿವಸಗಳವರೆಗೆ ಸಂರಕ್ಷಣೆ ಮಾಡಬಹುದು (ತು.ಜಿ);
- ಹಿಂದೆ ಯತೇಚ್ಚವಾಗಿ ಬಳಕೆಯಲ್ಲಿದ್ದ ಈ ಸಾಧನ ಇತ್ತೀಚಿನ ಆಧುನಿಕ ಸಲಕರಣೆಗಳಿಂದಾಗಿ ಅಳಿವಿನಂಚಿಗೆ ಸರಿದಿದೆ; *ಪ್ರ: 'ಖರ್ಸಿನ ಹೆಗ್ಗಣವೇನೋ ಕೊರೆದಿರಬೇಕು ಕಾಳು ಸುರಿದಿದೆ'.*

ಖಲ khala :

- ಖಳ, ಕಣ ಎಂಬರ್ಥದಲ್ಲಿ ಬಳಕೆಗೊಳ್ಳುವ ರೂಪ; ಧಾನ್ಯವನ್ನು ಒಕ್ಕಣೆ ಮಾಡುವ ಸ್ಥಳ; Barn, threshing field, yard;
- ಎಳ್ಳಿನ ಹಿಂಡಿ; Oil cake of sesame seed;
- ಕಾಳಗ; ಕದನ; ಯುದ್ಧದ ಸಂದರ್ಭಕ್ಕೂ ಅನ್ವಯವಾಗುವಂತೆ; Fight, war, battle, skirmish;
- ಜಗಳ; ಗಲಾಟೆ; ಗಲಿಬಿಲಿ; Quarrel, confusion, fuss, muddle, mix-up;
- ನೀಚ; ದುಷ್ಟ; ಕೆಟ್ಟ ಮನಸ್ಸಿನ ವ್ಯಕ್ತಿ; wicked, wretched, rascal, miscreant, villain;
- ಕಲಬತ್ತು, ಕಲ್ಬತ್ತು; ಕಲ್ಲು ಅಥವಾ ಲೋಹದ ಸಾಧನ; ಔಷಧಿ ಸೇರಿದಂತೆ ಇತರೆ ಕಷಾಯ ಅರೆಯಲು ಬಳಕೆ(ನೋಡಿ: ಕಲಬತ್ತು ಕಲ್ಲು); 'ಅಂಗಳ' ಎಂಬ ಅರ್ಥವೂ ಇದೆ(ಕ.ನಿ). A metallic device to grind medicine or medicinal decotion or concoction.

ಖಲಿಗಲ್ಲು khaligallu :

- ಕಲಬತ್ತು, ಕಲ್ಬತ್ತು ಕಲ್ಲು ಎನ್ನುವರು; ಕಲ್ಲಿನಿಂದ ತಯಾರಿಸಿದ ಕುಟ್ಟುವ ಸಾಧನ; ಚಿಕ್ಕ ಆಕಾರದಲ್ಲಿ ಒರಳಿನಂತಿರುವ ಕಲ್ಲು; ಕಾರ ಅರೆಯಲು ಬಳಕೆ(ಕಲ.ಜಿ; ಬೀ.ಜಿ)(ನೋಡಿ: ಕಲಬತ್ತು ಕಲ್ಲು); **ವ್ಯರೂ:** ಖಲವಿ, ಖಲೂ(ಬೀ.ಜಿ). A grinding stone, a device to grind spicy mix(pungency), rolling stone to grind.

ಖಲ್ಲಿ khalli :

- ಮೂಲರೂಪ 'ಕಲ್ಲಿ' ಉಚ್ಚಾರಣೆಯಲ್ಲಿ 'ಖಲ್ಲಿ' ಆಗಿರಬಹುದು; 'ಇರುಳಿಗರು' ಬುಡಕಟ್ಟು ಸಮುದಾಯದವರಲ್ಲಿ ಬಳಕೆಯಲ್ಲಿರುವ ರೂಪ;
- ಮಾವಿನಕಾಯಿ ಕೀಳಲು ಬಳಸುವ ಸಾಧನ; ಉದ್ದವಾದ ಬಿದಿರಿನ ಗಳುವಿನ ತುದಿಗೆ ದಪ್ಪದಾದ ತಂತಿಯಿಂದ ವೃತ್ತಾಕಾರವಾಗಿ ಬುಟ್ಟಿಯಂತೆ ಹೆಣೆದ ಬಲೆಯನ್ನು ಅಳವಡಿಸಿ ಸುತ್ತಲೂ ಬಿಗಿದು ಕಟ್ಟುವರು; A device(traditional) to pluck mangoes, the device has a long handle(bamboo stick) attached to a cone shaped basket

and is topped with clutches to hook and drag and mangoes down;
- ಮಾವಿನ ಹಣ್ಣು ಸೇರಿದಂತೆ ಮರದ ಮೇಲಿನ ಇತರೆ ಹಣ್ಣುಗಳನ್ನು ಕೆಳಗೆ ಬೀಳಿಸದಂತೆ ಕೀಳಲು ಬಳಸುವರು; It prevents damage to the mangoes;
- ಮೊಲದ ಬೇಟೆಗೆ ಬಳಸಿ ಜೀವಂತ ಮೊಲವನ್ನು ಹಿಡಿಯಲು ಉಪಯೋಗವಿದೆ(ನೋಡಿ: ಕಲ್ಲಿ). It is used to hunt rabbit.

ಖವಾ khavā :
- ಒಂದು ಬಗೆಯ ತಿನಿಸು; ಹಾಲಿನಿಂದ ತಯಾರಿಸುವಂಥದು; A dish made from milk;
- 'ಹಾಲು ಖೋವಾ' ಎಂದು ಕರೆಯುವರು; ಉತ್ತರಕರ್ನಾಟಕ ಭಾಗದಲ್ಲಿ ವಿಶೇಷವಾಗಿ ರೂಢಿಯಲ್ಲಿರುವಂಥದು(ಕಲ.ಜಿ; ಬೀ.ಜಿ); *ಪ್ರ: 'ಎಂಥದೋ ಅದು ತಿನ್ನಕತೀ, ಖವಾ ಹೌದೇನ್ರಿ? ಹೌದ್ರಿಯಪ್ಪ'*. Khoa, a dairy product specially it is in practice in the worth Karnataka districts.

ಖವಾಳಿ ಪವಾಡ khavāḷi pavāḍa :
- ಒಂದು ಬಗೆಯ ವಿಶೇಷ ಧಾರ್ಮಿಕ ಆಚರಣೆ; ಖವಾಳಿ ಅಥವಾ ಸುವಾಳಿ ಎಂಬ ಸಿಹಿ ತಿಂಡಿಯನ್ನು ತಯಾರಿಸಿ ದೇವರಿಗೆ ಎಡೆ, ನೈವೇದ್ಯ ಮಾಡುವುದರ ಮೂಲಕ ಆಚರಿಸಲ್ಪಡುವ ಪದ್ಧತಿ; A special type of religious celebration; during the celebration a sweet dish named Khavali or `Suvali' is offered before the lord;
- ಹಬ್ಬ-ಹರಿದಿನಗಳಲ್ಲಿ ವಿವಿಧ ರೀತಿಯ ಪವಾಡಗಳನ್ನು ಮೆರೆಯುವುದಿದೆ; ಇದು ಹಬ್ಬಗಳಲ್ಲಿ ದೇವರಿಗೆ ಸಲ್ಲಿಸುವ ಹರಕೆಯ ವಿಧಿ-ವಿಧಾನಗಳಾದರೂ ಹಬ್ಬ-ಜಾತ್ರೆಗೆ ಒಂದು ಹೊಸ ಮೆರುಗನ್ನು ನೀಡುತ್ತವೆ;
- ಹಿಂದೆ ಪವಾಡಗಳು ದೇವರ ಹೆಸರಿನಲ್ಲಿ ಭಕ್ತಿ-ಭಾವಗಳಿಂದ ಸಲ್ಲಿಸುವ ಸೇವೆಗಳಾಗಿದ್ದವು; ಆದರೆ ಇಂದು ಕೆಲವೊಂದು ಪವಾಡಗಳು ದೇವರ ಹೆಸರಿನಲ್ಲೇ ನಡೆದರೂ ಮನರಂಜನೆ ರೂಪ ಪಡೆದುಕೊಂಡು ವಾಣಿಜ್ಯೀಕರಣಗೊಂಡಿವೆ; ಈ ಪವಾಡಗಳನ್ನು ಹಣದ ಸಂಪಾದನೆಗೆ ಬಳಸಿಕೊಳ್ಳುವುದಿದೆ; ಇಂತಹ ಒಂದು ಪದ್ಧತಿ ಬುಡಕಟ್ಟು ಸಮುದಾಯಗಳಲ್ಲಿ ಯತೇಚ್ಚವಾಗಿ ಕಂಡುಬಂದಿದೆ(ನೋಡಿ: ಪವಾಡ).

ಖವ್ಯಾ khavyā :
- ಕುಪ್ಪಸದ ಭುಜಕೀರ್ತಿ; ಯಕ್ಷಗಾನದಂತಹ ಬಯಲು ರಂಗಭೂಮಿ ವೇಷಧಾರಿಗಳು ಧರಿಸುವರು; A crest on the shoulder of a blouse; this designed blouses are worn by Yakshagana artist(a folk dance drama, ballet);
- ವಿವಿಧ ಶೈಲಿಯ ಕಸೂತಿಯಿಂದ ಸಿದ್ಧಪಡಿಸಿದ ಉಡುಗೆ; ಕುಪ್ಪಸದ ತೋಳಿನ ಮೇಲ್ಭಾಗದಲ್ಲಿ ಅಲಂಕರಣಕ್ಕಾಗಿ ವಿಭಿನ್ನ ಶೈಲಿಯ ಕಸೂತಿಯಿಂದ ಶೃಂಗರಿಸಿ ಜೋಡಿಸಿದ ಚಿಕ್ಕ ಬಟ್ಟೆ; This type of crest blouse is full of embroidery work on its arm part;
- ವಿಶೇಷವಾಗಿ ಲಂಬಾಣಿ ಮಹಿಳೆಯರು ತೊಡುವುದಿದೆ. Speacially Lambani women wear this raised(embroidery) designed blouses.

ಖಸಕಿ khasaki :
- ಕಸುಗಾಯಿ; ಮಾಗದ ಹಣ್ಣು; ಹಣ್ಣೂ ಅಲ್ಲದ ಕಾಯಿಯೂ ಅಲ್ಲದ ಸ್ಥಿತಿಯಲ್ಲಿರುವುದು; Unripe fruit, immature fruit;
- ಒಂದು ಬಗೆಯ ಕಳೆಹುಲ್ಲು; ಎತ್ತರವಾಗಿ ಬೆಳೆಯುತ್ತದೆ; ಜಾನುವಾರುಗಳಿಗೆ ಮೇವಾಗಿ ಉಪಯೋಗ(ಶಿ.ಜಿ; ಬೀ.ಜಿ). A type of weed and it is a good fooder(green grass), silage.

ಖಸಾಯಿಖಾನೆ khasāyikhāne :
- ಕೃಷಿ ಹಾಗೂ ಹೈನುಗಾರಿಕೆಗೆ ಪ್ರಯೋಜನವಾಗದ ಸಾಕುಪ್ರಾಣಿಗಳನ್ನು ಕೊಲ್ಲುವ ಸ್ಥಳ; ಮಾಂಸಕ್ಕಾಗಿ ದನ-ಕರುಗಳನ್ನು ಸಾಯಿಸುವ ಜಾಗ; Slaughter house, butchery, specially for useless, aged animals used in agricultural work and for milking(milch);
- ಮಾಂಸವನ್ನು ಆಹಾರವಾಗಿ ಬಳಸಿದರೆ ಮೂಳೆಗಳು ಗೊಬ್ಬರ ತಯಾರಿಕೆಗೆ, ಚರ್ಮ ಚರ್ಮವಾದ್ಯಗಳ

ತಯಾರಿಕೆಗೆ ಉಪಯೋಗ; Animal flesh is used as meat, the bone is for the production of manure and skin is for leather instrument;

- ಪ್ರಾಣಿಗಳು ಬದುಕಿದರೂ, ಸತ್ತ ನಂತರವೂ ಬಹುಪಯೋಗಿಗಳು;
- ಕಸಾಯಿಖಾನೆ>ಖಸಾಯಿಖಾನೆ(ಕ>ಖ/ಖ>ಕ); *ಪ್ರ: 'ಮುದಸಿನ ಖಸಾಯಿಖಾನೆಗೆ ಹಾಕ್ಬಂದೆ'.*

ಖಳ khaḷa :

- ದುಷ್ಟ, ಕೆಟ್ಟವ, ನೀಚ, ದುರಾಚಾರಿ ಮೊದಲಾದ ಅರ್ಥಗಳಲ್ಲಿ ಪದಬಳಕೆ ಇದೆ; Knave, scoundrel, wicked fellow, rascal , villain (opposed to the hero in plays and films);
- ಇತಿಹಾಸ, ಕಥೆ, ಪುರಾಣ, ನಾಟಕ ಅಷ್ಟೇ ಏಕೆ ನಿಜ ಜೀವನದಲ್ಲೂ ಖಳನಾಯಕನ ಪಾತ್ರ ಇರುತ್ತದೆ; ಇವನಿಗೆ ಪ್ರತಿನಾಯಕ ಎಂಬ ಹೆಸರೂ ಇದೆ;
- ಕಥೆಗೆ ಸಂಬಂಧಿಸಿದಂತೆ ವಿರೋಧಾತ್ಮಕ ಸನ್ನಿವೇಶಗಳನ್ನು ಸೃಷ್ಟಿಸುವಾಗ ಅಲ್ಲೊಬ್ಬ ಖಳನಾಯಕನ ಸೃಷ್ಟಿಯಾಗುತ್ತದೆ; ಬದುಕಿನ ಕೊನೆಯವರೆವಿಗೂ ಕೆಟ್ಟವನಾಗಿಯೇ ಉಳಿಯುವ ವ್ಯಕ್ತಿ;
- ಕಣ>ಖಳ(ಣ>ಳ); ಧಾನ್ಯವನ್ನು ಒಕ್ಕಣೆ ಮಾಡುವ ಜಾಗ; ಉತ್ತರಕರ್ನಾಟಕ ಭಾಗದಲ್ಲಿ ರೂಢಿ (ನೋಡಿ: ಕಳ); Barn, threshing field(in North Karnataka usage);
- *—ಖಳಗೇಡಿ* : ಬುದ್ಧಿಗೇಡಿ; ಮೂರ್ಖತನದ ವ್ಯಕ್ತಿ; *ಪ್ರ: 'ಖಳಗೇಡಿ ಕಯ್ಯಾಗ ಹಳಿ ಅಂಡೆ ಕೊಟ್ರೆ ಹಳ್ಳದಾಗ ಕೂತು ಮೊಳ ಹಾಕ್ತಿದ್ನಂತೆ'*; Foolish person, block head, stupid, senseless person;
- *—ಖಳಾಬಳಿ* : ಖಳ=ಕಣ; ಒಕ್ಕಣೆ ಸ್ಥಳ; ಬಳಿ= ಸಗಣಿಯಿಂದ ಕಣವನ್ನು ತಾರಿಸು; Clean barn or threshing field or floor by smearing or applying cow dung;
- ಕಣವನ್ನು ಸಗಣಿ ನೀರಿನಿಂದ ತಾರಿಸಿ ಅಚ್ಚುಕಟ್ಟು ಮಾಡುವುದು; ಧಾನ್ಯದ ಜೊತೆಗೆ ಕಲ್ಲು, ಮಣ್ಣು, ಕಸ–ಕಡ್ಡಿ ಸೇರದಿರಲಿ ಎಂಬ ಆಶಯದೊಂದಿಗೆ.

ಖಳಿ khaḷi :

- ಕಳಿ>ಖಳಿ(ಕ>ಖ/ಖ>ಕ); ಹಲಿಗೆಗಳಿಗೆ ನೊಗ ಕಟ್ಟಲು ಸಹಾಯಕವಾಗುವ ಬಿದಿರಿನಿಂದ ತಯಾರಿಸಿದ ಸಾಧನ; A device made of bamboo to adjust yoke to wooden planks(in cart);
- ಕಳೆ>ಕಳಿ>ಖಳಿ(ಎ>ಇ); ಕಾಂತಿ, ಸೌಂದರ್ಯ, ಲಕ್ಷಣ ಎಂಬರ್ಥದಲ್ಲಿ ಪದಬಳಕೆ; ಮುಖಲಕ್ಷಣ ಹೇಳುವಾಗ ಬಳಕೆಯಲ್ಲಿರುವ ರೂಪ(ನೋಡಿ: ಕಳೆ). Brightness, radiance, beauty, complexion(uses in describing a person's face, visage).

ಖಾಂಡ್ Khāṇḍ:

- ಖಾಂಡ, ಖಾಂಡು ರೂಪಗಳುಂಟು; 'ಖಾಂಡ್' ಪದ ಮರಾಠಿ ಮೂಲದ್ದು; ಮರಾಠಿಯಲ್ಲಿ 'ಖಾಂಡ' ಎಂಬುದಕ್ಕೆ 'ಸಕ್ಕರೆ' ಎಂಬ ಅರ್ಥವಿದೆ; Sugar(in Marathi language);
- ಒಂದು ಬಗೆಯ ಸಿಹಿ ತಿನಿಸು; ವಿಶೇಷ ಸಂದರ್ಭದಲ್ಲಿ ಮಾಡುವುದು ರೂಢಿ; A kind of sweet dish;
- ದಾಸೋಹ; ದೇವರ ಹೆಸರಿನಲ್ಲಿ ಮಾಡಲಾಗುವ ಅನ್ನದಾನ; ಸಾಮೂಹಿಕ ಭೋಜನಕೂಟ; ಅನ್ನದಾಸೋಹ ಕಾರ್ಯಕ್ರಮ; 'ಪರ' ಎಂಬ ಅರ್ಥವೂ ಇದೆ; **ವ್ಯರೂ:** ಖಂಡಸಕ್ಕರೆ. A common dinner, a common meal/food(free meal) serving which one is held in the name of god; `Dasoha' means charity or giving in the name of god.

ಖಾಂದೇಕಾರ Khāndēkāra:

- 'ಗೊಂದಲಿಗ' ಬುಡಕಟ್ಟು ಸಮುದಾಯದಲ್ಲಿ ಹೆಣ ಹೊರುವವರಿಗೆ ಇರುವ ಪದನಾಮ; ಸತ್ತ ವ್ಯಕ್ತಿಯ ಬೆಡಗಿನವರನ್ನು ಬಿಟ್ಟು ಬೇರೆ ಬೆಡಗಿನವರು ಹೆಣ ಹೊರುವ ಪದ್ಧತಿ ಇವರಲ್ಲಿ ರೂಢಿ; ಸತ್ತ ಹೆಣ ಹೊಯ್ದು ಸ್ಮಶಾನದಲ್ಲಿ ಹೂಳುವುದು ವಾಡಿಕೆ; In `Gondaliga' community(Gondaligas are oil-pressers and farmers) the people who carry hearse on their shoulders are called Khandekara; they carry the dead to bury in the burial ground;

- ಹೆಣ ಮಲಗಿಸಿದ ಚಟ್ಟ(ಸಿದಿಗೆ)ವನ್ನು ಹೆಗಲ ಮೇಲೆ ಹೊತ್ತುಕೊಂಡು ಬಿಡಾರದಿಂದ ಸ್ವಲ್ಪ ದೂರ ತೆರಳುತ್ತಿದ್ದಂತೆ ನಿಗದಿತ ಸ್ಥಳದಲ್ಲಿ ಚಟ್ಟವನ್ನು ಕೆಳಗಿಳಿಸಿ ಹಿಂದಿನವರು ಮುಂದೆ ಮತ್ತು ಮುಂದಿನವರು ಹಿಂದಕ್ಕೆ ಬಂದು ಹೆಗಲು ಬದಲಿಸಿಕೊಂಡು ಸ್ಮಶಾನಕ್ಕೆ ಹೊಯ್ಯುತ್ತಾರೆ;
- ಸತ್ತ ವ್ಯಕ್ತಿಯ ಸಂಬಂಧವಾಗಿ ಸ್ಮಶಾನದಲ್ಲಿ ಮಾಡಲಾಗುವ ಮೂರನೇ ದಿವಸದ ಕಾರ್ಯವನ್ನು ಮುಗಿಸಿ ಮನೆಗೆ ಬಂದು ಚಟ್ಟ ಹೊರಲು ಮೊದಲು ಹೆಗಲು ಕೊಟ್ಟ ನಾಲ್ಕು ಜನರಿಗೆ 'ಖಾಂದೇಕಾರನ ಭಾರ ಇಳಿಸುವ ಕಾರ್ಯ' ಮಾಡುವರು;
- ಅಂದರೆ ನಾಲ್ಕೂ ಜನರ ಹೆಗಲು ಸೇರಿಸಿ ಅವರ ಬೆನ್ನಿನ ಮೇಲೆ ಮೂರು ಕೈಬೆರಳುಗಳಿಂದ ಕೊಬ್ಬರಿ ಎಣ್ಣೆ ಸವರುವುದು ವಿಧಾನ;
- ಇದರಿಂದ ಶವ ಹೊತ್ತವರು ಋಣಮುಕ್ತರಾಗುತ್ತಾರೆ ಎಂಬ ಭಾವನೆ ಇದೆ.

ಖಾಂದೋದೇರೋ Khāndōdērō:
- 'ಹಕ್ಕಿಪಿಕ್ಕಿ' ಬುಡಕಟ್ಟು ಸಮುದಾಯದವರಲ್ಲಿ ರೂಢಿಯಲ್ಲಿರುವ ಒಂದು ಪದ್ಧತಿ; ಸತ್ತ ವ್ಯಕ್ತಿಯ ಹಿರಿಯ ಮಗ ಚಟ್ಟಕ್ಕೆ ಮೊದಲು ಹೆಗಲು ಕೊಡಬೇಕಾದುದು ನಿಯಮ; ಈ ಕ್ರಿಯೆಗೆ 'ಖಾಂದೋದೇರೋ' ಎನ್ನುವುದು ರೂಢಿ; A costum in `Hakkipikki' community; in their community, the elder son shoulders the hearse of his dead father; this act is called `Khandodero';
- ಇವರಲ್ಲಿ ಹೆಣವನ್ನು ಹೂಳುವ ಪದ್ಧತಿ ರೂಢಿಯಲ್ಲಿದ್ದು ಸುಡುವುದಿಲ್ಲ; ಒಂದು ವೇಳೆ ಸುಟ್ಟರೆ ದೇವತೆಗಳು ಸಿಟ್ಟಾಗುತ್ತಾರೆ ಎಂಬ ಭಾವನೆ ಕಂಡುಬಂದಿದೆ; `Hakkipikki' people bury the dead, but they wont incinerate(cremate);
- ಶವವನ್ನು ಮಣ್ಣು ಮಾಡಿ ಬರುವ ಹಾದಿಯಲ್ಲಿ ಪ್ರತಿಯೊಬ್ಬರೂ ಮೂರು ಗಿಡ ಅಥವಾ ಬಳ್ಳಿಗಳನ್ನು ಸುತ್ತುವರಿದು ಮನೆಗೆ ಬರುತ್ತಾರೆ;
- ಕಾರಣ ಸತ್ತ ವ್ಯಕ್ತಿ ದೆವ್ವ, ಪೀಡೆ, ಪಿಶಾಚಿಯಾಗಿ ಮನೆಗೆ ಬರುವಂತಿದ್ದರೆ, ಅದು ಬರುವ ಹಾದಿಯಲ್ಲಿ ತಾವು ಸುತ್ತಿದ ಮೂರು ಗಿಡ ಅಥವಾ ಬಳ್ಳಿಗಳನ್ನು ಸುತ್ತುವರಿದು ಬರುವ ವೇಳೆಗೆ ಬೆಳಗಾಗುತ್ತದೆ ಎಂಬ ನಂಬಿಕೆ ಇದೆ.

ಖಾಟ Khāṭa:
- ಹೊರಸು; ಹಗ್ಗ ಅಥವಾ ನೂಲಿನಿಂದ ಹೆಣೆದ ಮಂಚ; (rope)cord woven cot;
- 'ಕಂಜರಭಾಟ' ಬುಡಕಟ್ಟು ಸಮುದಾಯದವರ 'ಬಾಗಡ' ಬೆಡಗಿನವರಲ್ಲಿ ಸತ್ತ ವ್ಯಕ್ತಿಯ ಶವವನ್ನು ಖಾಟದ ಮೇಲೆ ಮಲಗಿಸಿ ಸ್ಮಶಾನಕ್ಕೆ ಹೊಯ್ಯುವ ಪದ್ಧತಿ ರೂಢಿ; In `Kanjarbat' community they carry the dead body on cord cot; `Kanjarbat' community is a traditionally nomadic ethnic group;
- ಶವ ಸಂಸ್ಕಾರದ ನಂತರ ಖಾಟದ ಹಗ್ಗ/ನೂಲನ್ನು ಕತ್ತರಿಸಿ ಮುರಿದು ಹಾಕುವುದು ಸಂಪ್ರದಾಯ;
- 'ಖಾಟ' ಅನ್ಯದೇಶ್ಯ ಪದ.

ಖಾಡಾಖಾಡಿ Khāḍākhāḍi:
- ಖಾಡಾ=ಖಡ್ಗ; ಮಲ್ಲಯುದ್ಧ; ದ್ವಂದ್ವಯುದ್ಧ; ಕೈಕೈಕಾಳಗ; Sword, wrestling(combat-wrestling);
- ಖಡಾಬಡಿ, ಖಡ್ಗಾಬಡ್ಗಿ ಎಂಬ ರೂಪಗಳೂ ಬಳಕೆಯಲ್ಲಿವೆ;
- ಅಂದರೆ 'ಖಡ್ಗ'ದ ಪುನರಾವರ್ತನೆ ಆದಂತಾಯಿತು;
- ಈ 'ದ್ವಿರುಕ್ತಿ' ಬರಲು ಮುಖ್ಯವಾದ ಕಾರಣ ಅರ್ಥದ ತೀವ್ರತೆಯನ್ನು ಪದ ಲಯದಲ್ಲಿಯೇ ಸೃಷ್ಟಿಸುವುದು;
- ಯುದ್ಧವನ್ನು ವರ್ಣಿಸುವಾಗ ಶಿಷ್ಟಸಾಹಿತ್ಯ ಸಂದರ್ಭದಲ್ಲಿ ಅಥವಾ ವಾಚಿಕ ಸಂದರ್ಭದಲ್ಲಿ ಈ ಬಗೆಯ ದ್ವಂದ್ವಲಯಗಳು ಕಾಣಿಸಿಕೊಳ್ಳುವುದುಂಟು;
- ಇಂತಹ ಪದಗಳ ಬಳಕೆಯಲ್ಲಿ ಒಂದು ಬಗೆಯ ಚತುರತೆ ಕಂಡುಬಂದಿದ್ದು, ಪಾತ್ರಗಳ ಸಂಭಾಷಣೆಗಳಲ್ಲಿ ಇವು ಎದ್ದು ತೋರುತ್ತವೆ;
- ಆಡುಮಾತಿನಲ್ಲಿ ಇಂತಹ ಪದಗಳು ಅಪರೂಪ; ಆದರೆ ಯಕ್ಷಗಾನ ಬಯಲಾಟಗಳಲ್ಲಿ ಇವುಗಳ ಬಳಕೆ ಹೆಚ್ಚು.

ಖಾತ/ಖಾತೆ Khāta/Khāte:
- ಕಿರ್ದಿ ಪುಸ್ತಕದಲ್ಲಿ ನಮೂದಾಗಿರುವ ಖರ್ಚು, ವೆಚ್ಚದ ವಿವರಣ; ಒಬ್ಬ ವ್ಯಕ್ತಿ, ಒಂದು ವಿಷಯ ಅಥವಾ ಒಂದು ಸಂಘಸಂಸ್ಥೆಗೆ ಸಂಬಂಧಿಸಿದ ಜಮಾ–ಖರ್ಚಿನ ಲೆಕ್ಕ; Account, ledger, account book, portion set apart in day book, portfolio, department;

- ಜಮೀನು ಅಥವಾ ಆಸ್ತಿ ತನ್ನ ಹೆಸರಿಗೆ ಸೇರಿದ್ದೆಂದು ಸರ್ಕಾರಿ ದಫ್ತರಿನಲ್ಲಿ ದಾಖಲಾತಿ ಮಾಡಿಸಿರುವ ದಾಖಲೆಗಳು ಅಥವಾ ಅದಕ್ಕೆ ಸಂಬಂಧಿಸಿದ ಪತ್ರಗಳು; ಇದು ಕಂದಾಯ ಇಲಾಖೆಗೆ ಒಳಪಟ್ಟ ವ್ಯವಹಾರ; ಹಕ್ಕುಪತ್ರ; Khatha is a unit of area, certificate of land record with number registered in the government record, file or register(claimat), title deed to a plot of land that establishes the ownership;
- ಸರ್ಕಾರಿ ನಿಯಮಾವಳಿಗಳ ಪ್ರಕಾರ ಮನೆ, ಜಮೀನು ಅಥವಾ ಇತರೆ ಜಾಗಗಳಿಗೆ ಸಂಬಂಧಿಸಿದ ಒಡೆತನವನ್ನು ತನ್ನ ಸ್ವಾಧೀನಕ್ಕೆ ಪಡೆದುಕೊಂಡವನೇ 'ಖಾತೇದಾರ' 'ಖಾತಾದಾರ'; ಪಟ್ಟೇದಾರ; ಸಿರಿವಂತ; ಜಮೀನ್ದಾರ; ಸರ್ಕಾರದ ದಫ್ತರಿನಲ್ಲಿ ದಾಖಲು ಮಾಡಿರುವುದು; Account holder, claimant, land owner, landlord, richman, title deed recorded in government register;
- ಹಣದ ವ್ಯವಹಾರಕ್ಕಾಗಿ ಬ್ಯಾಂಕುಗಳಲ್ಲಿ ನಿರ್ದಿಷ್ಟ ವ್ಯಕ್ತಿಯ ಹೆಸರಿನಲ್ಲಿ ತೆರೆಯುವ ಲೆಕ್ಕದ ಪಟ್ಟಿ;
- ಲೆಕ್ಕ ಬರೆದಿರುವ ಪುಸ್ತಕ; ಜಮೀನು ಒಡೆತನದ ದಾಖಲೆ;
- ಶ್ಯಾನುಭೋಗರು ಇಟ್ಟುಕೊಳ್ಳುವ ಕಂದಾಯದ ಜಮಾ-ಖರ್ಚಿನ ಪುಸ್ತಕ;
- ವ್ಯಂಗ್ಯ ರೂಪಕವಾಗಿಯೂ ಬಳಕೆ ಉಂಟು;
- ***—ಖಾತಾಕಿರ್ದಿ*** : ಲೆಕ್ಕಪತ್ರ; ಹಕ್ಕು ಬಾಧ್ಯತೆಗಳು ಅಥವಾ ಇತರೆ ವ್ಯವಹಾರಗಳಿಗೆ ಸಂಬಂಧಿಸಿದ್ದು; 'ಖಾತಾಪುಸ್ತಕ' ಎನ್ನುವರು. Account book, title deed, balance sheet, financial records, accounts.

ಖಾತಿಲಡಿ Khātilaḍi:
- ತೆಂಗಿನ ಪುಚ್ಚದಿಂದ ಹೊಸೆದು ಸಿದ್ಧಪಡಿಸಿರುವ ಹಗ್ಗವನ್ನು ವೃತ್ತಾಕಾರವಾಗಿ ಮಡಚಿದ ಒಂದು ಅಳತೆ ಪ್ರಮಾಣ; A unit of coiled cord rope(spiral);
- ಭಾರವಾದ ವಸ್ತುಗಳನ್ನು ಬಾಣ್ಲೆ, ಬಿದಿರಿನ ಪುಟ್ಟಿ, ಮಂಕ್ರಿಯಲ್ಲಿ ತುಂಬಿಕೊಂಡು ತಲೆಯ ಮೇಲೆ ಹೊತ್ತು ಸಾಗಿಸುವಾಗ ತಲೆಗೆ ದಿಂಬಾಗಿ ಬಳಕೆ; ಇದನ್ನು ಹಾಕುವುದರಿಂದ ತಲೆಗೆ ಒತ್ತುವುದಿಲ್ಲ. Spiral, wad uses to carry the bamboo basket on the head; it sustains the carrier to avoid the pressure of the basket weight.

ಖಾತ್ರಿ Khātri:
- ಗ್ಯಾರೆಂಟಿ; ನಿಜವಾಗಿ; ನಿಶ್ಚಿತ; ಖಂಡಿತ; ಖಚಿತ; ಸ್ಪಷ್ಟ; ಮನವರಿಕೆ; ಮನದಟ್ಟು; ವಿಶ್ವಾಸ; ಭರವಸೆ; ಗರೀಬ(ಕೊಪ್ಪ.ಜಿ); ನಂಬಿಕೆ; Guarantee, truly, confirm, indeed, exactly, realize, clear, confidence, promise, hope, faith, belief, poorman, indigent man;
ಪ್ರ: 'ಖರೆ ಬಂಗಾರ ಅನ್ನಿಕ್ಕ ಖಾತ್ರಿ ಏನು?';
- ನಿಗದಿಯಾಗಿರುವುದು; ಒಪ್ಪಂದ ಮಾಡಿಕೊಳ್ಳುವುದು;
- ಹೇಳಿದ್ದನ್ನು ಅರ್ಥಮಾಡಿಕೊಳ್ಳುವ ಅಥವಾ ಮನವರಿಕೆಯಾಗುವುದಕ್ಕೆ 'ಖಾತ್ರಿ ಆತು' (ಆಯಿತು/ ಆಯ್ತು) ಎನ್ನುವರು; Fixed, stipulated, determined, convinced, perceivable, understandable, graspable, Apprehensible;
- ನಂಬಿಕೆಗೆ ಯೋಗ್ಯವಾದ ವ್ಯಕ್ತಿಗೆ 'ಖಾತ್ರಿ ಮನುಷ್ಯ' ಎಂತಲೂ, ಅಪ್ಪಟ ವಸ್ತುಗಳಿಗೆ 'ಖಾತ್ರಿ ಮಾಲು' ಎಂಬುದಾಗಿಯೂ, ಸತ್ಯಸಂಗತಿ ಅಥವಾ ಭರವಸೆಯ ಮಾತಿಗೆ 'ಖಾತ್ರಿ ಮಾತು' ಎಂದು ಹೇಳುವುದುಂಟು; Trustworthy, honest, trusty, credible person;
ಪ್ರ: 'ಅದರ ಮೇಲೆ ನಿಮಗೆ ಖಾತ್ರಿ ಅದ ಅಂದ್ರ ನೀವೇ ತಗಳಿ'.

ಖಾದಿ Khādi:
- ಕೈನೂಲಿನಿಂದ ಕೈಮಗ್ಗದಲ್ಲಿ ತಯಾರಿಸಿದ ಬಟ್ಟೆ; ಹತ್ತಿಬಟ್ಟೆ; ಉರುಟಾಗಿರುತ್ತದೆ; Handmade(woven) cloth, swadeshi cloth, rough cotton cloth;
- ಸ್ವಾತಂತ್ರ್ಯ ಸಂಗ್ರಾಮದ ಬಳುವಳಿ ಎಂದೇ ಇದನ್ನು ಕರೆಯಬಹುದು; A presentation of Indian freedom struggle, a symbol of unity, simplicity and self-reliance;
- ಗಾಂಧೀಜಿಯವರಿಂದ ಇದು ಚಾಲ್ತಿಗೆ ಬಂದುದು ಎಂಬುದು ಸ್ಪಷ್ಟವೇ ಇದೆ; 'ಚರಕ' ಇದರ ಕೇಂದ್ರದಲ್ಲಿದೆ ಎಂಬುದನ್ನು ಮರೆಯಲಾಗದು;

`Charaka' and Khadi both are inter-related, Mahatma Gandhi was a great advocate of Khadi; for him `Charaka' is symbol of peace and self-reliance;
- ಖಾದಿಬಟ್ಟೆ, ಖಾದಿಟೋಪಿ ಇವೆಲ್ಲಾ ಸತ್ಯಾಗ್ರಹದಂತಹ ಪ್ರಮುಖ ಸ್ವಾತಂತ್ರ್ಯ ಚಳುವಳಿಗಳಲ್ಲಿ ಭಾಗವಹಿಸಿದ್ದು ಉಲ್ಲೇಖನೀಯ ವಿಷಯ; Cap, cloths made of Khadi were an integral part of freedom movement;
- 'ಖಾದಿಟೋಪಿ' ಇವೊತ್ತು ಮೂಲ ಅರ್ಥವನ್ನು ಕಳೆದುಕೊಂಡಿದ್ದರೂ, 'ಖಾದಿಬಟ್ಟೆ' ಒಂದು ಜೀವನ ಶಿಸ್ತು ಅಥವಾ ಶೈಲಿಯಾಗಿ ಇಂದಿಗೂ ಉಳಿದುಕೊಂಡು ಬಂದಿದೆ;
- ಇದು ದೇಸೀಯ ಉಡುಪು ಮತ್ತು ದೇಸೀಯ ತಯಾರಿಕೆ ಎಂಬುದನ್ನು ಇಲ್ಲಿ ಪ್ರಸ್ತಾಪಿಸಬೇಕು; `Khadi' is a swadeshi cloth, more over hand made cloth;
- 'ಗುಡಿಕೈಗಾರಿಕೆ'ಯನ್ನು ಪ್ರೋತ್ಸಾಹಿಸಲು ಕೈಮಗ್ಗದ ಈ ಉಡುಪು ಕಾರಣವಾಯಿತೆಂಬುದನ್ನು ಅದಕ್ಕೆ ಮೀಸಲಿಟ್ಟ ಇತಿಹಾಸ ತಿಳಿಸುತ್ತದೆ; In order to encourage cottage industry Khadi was an inspiration; because of Khadi handloom industries are still in full swing;
- ಕೆಳವರ್ಗ, ಕೆಳಮಧ್ಯಮವರ್ಗ ಮತ್ತು ಮಧ್ಯಮವರ್ಗದವರ ಜೀವನ ನಿರ್ವಹಣೆಯ ಉದ್ದೇಶವೂ ಈ ಉದ್ಯಮದಲ್ಲಿ ಅಡಗಿರುವಂತಿದೆ;
- ಸ್ವಾಭಿಮಾನದ ಕುರುಹು ಆಗಿಯೂ ಖಾದಿ ಇದೆ ಎಂಬುದನ್ನು ಅದರ ಇತಿಹಾಸವೇ ಹೇಳುತ್ತದೆ;
- ಇಂದಿಗೂ ಇದರ ತಯಾರಿಕೆ ಮತ್ತು ಬಳಕೆ ನಿಂತಿಲ್ಲ;
- ಆರ್ಥಿಕ ವ್ಯವಸ್ಥೆ ಮತ್ತು ಪ್ರಗತಿಯಂತಹ ವಿಷಯದಲ್ಲಿಯೂ ಖಾದಿಯ ಪಾತ್ರದ ಪ್ರಸ್ತಾಪ ಇದ್ದೇ ಇರುತ್ತದೆ; Khadi is a symbol of social and economical equality; therefore, Khadi plays a major role in country's economical system as well as in development; for Gandhi `Khadi' is a symbol of unity of Indian humanity, economic freedom and equality;
- ಖಾದಿಗೆ ಒಲವು ತೋರಿರುವವರಲ್ಲಿ ಸಾಮಾನ್ಯರೂ ಇದ್ದಾರೆಂಬುದು ಗಮನಿಸುವಂತಹ ವಿಚಾರವೇ ಆಗಿದೆ.

ಖಾನ/ಖಾನಾ Khāna/Khānā:
- 'ಖಾಣೆ' ಮರಾಠಿ ಅಥವಾ ಹಿಂದುಸ್ತಾನಿ ಪದ; ಖಾಣೆ>ಖಾಣ>ಖಾನ ಆಗಿದೆ; ಉಚ್ಚಾರಣೆಯಲ್ಲಿ ಣ>ನ ಕಾರ ಬರುವುದಿದೆ;
- ಊಟ; ತಿನ್ನಲು ಸಿದ್ಧಗೊಂಡ ಆಹಾರ ಪದಾರ್ಥ; Meal, ready to eat food(fast food);
- ಸರದಾರ; ಶೂರ; ಹಮ್ಮೀರ; Hero, man of daring, valiant, intrepid person;
- ಜಗತ್ತಿಗೆ ಅನ್ನವನೀಯುವವ ಅಥವಾ ಊಟದೊಡೆಯನನ್ನು 'ಖಾನನ' ಎನ್ನುವರು; One who feeds the world(Khanana);
- ಊಟ ದೊರಕುವ ಸ್ಥಳ/ದಾಸೋಹದ ಸ್ಥಳ/ ಹೋಟೆಲ್‌ಗಳಿಗೆ 'ಖಾನಾವಳಿ' ಎನ್ನುವುದು ರೂಢಿ; Hotel;
- 'ಖಾನಪೀನ' ಎಂದು ಹೇಳುವ ಜನಪ್ರಿಯ ವಾಕ್ಯವೂ ಇದೆ; ಖಾನ=ಊಟ; ಪೀನ=ಕುಡಿಯುವುದು (ನೀರು).

ಖಾನದಾನ Khānadāna:
- ಗುಂಪು; ಪಂಗಡ; ಸಮುದಾಯವೊಂದರ ಪ್ರಧಾನ ಶಾಖೆ; Group, community, faction, party;
- 'ಕಂಜರಭಾಟ' ಬುಡಕಟ್ಟು ಸಮುದಾಯದವರಲ್ಲಿ ಮಾಲ್ಹಾ ಮತ್ತು ಬಿಡ್ಡು ಎಂಬ ಎರಡು ಪಂಗಡಗಳಿದ್ದು ಇವುಗಳನ್ನು 'ಖಾನದಾನ' ಎನ್ನುವರು; ಎರಡೂ ಖಾನದಾನಗಳಲ್ಲೂ ತಲಾ ಒಂಬತ್ತರಂತೆ ಬೆಡಗುಗಳಿವೆ; Two factions in Kanjarabāt community; `Malha' and `Biddu' are called `Khanadana';
- ಇವರ ವಿವಾಹ ಸಂದರ್ಭದಲ್ಲಿ ಖಾನದಾನ ಮತ್ತು ಬೆಡಗುಗಳಿಗೆ ಪ್ರಧಾನ ಪಾತ್ರವಿದೆ; ಒಂದೇ ಖಾನದಾನದ ಬೆಡಗುಗಳವರನ್ನು ಅಣ್ಣ-ತಂಗಿ, ಅಕ್ಕ-ತಮ್ಮಂದಿರೆಂದು ಪರಿಗಣಿಸುವುದರಿಂದ ಇವರ ನಡುವೆ ಮದುವೆ ಸಂಬಂಧಗಳು ಏರ್ಪಡುವುದಿಲ್ಲ;

- ಒಂದು ಖಾನದಾನದ ಬೆಡಗಿನವರು ಮತ್ತೊಂದು ಖಾನದಾನದ ಬೆಡಗಿನವರೊಡನೆ ಮದುವೆ ಸಂಬಂಧವೇರ್ಪಡಿಸಿಕೊಳ್ಳಬಹುದು; ಇಂತಹ ಕಟ್ಟುಕಟ್ಟಳೆಗಳು ಕಟ್ಟುನಿಟ್ಟಾಗಿ ಪಾಲನೆ;
- ಒಂದು ವೇಳೆ ಒಂದೇ ಖಾನದಾನ, ಬೆಡಗುಗಳಿಗೆ ಸೇರಿದವರ ನಡುವೆ ಇಂತಹ ಮದುವೆ ಸಂಬಂಧಗಳು ನಡೆದರೆ ಅದನ್ನು ಪಾಪಕೃತ್ಯವೆಂದು ಭಾವಿಸುವರು;
- ಅಂತಹ ವಧುವರರ ಸಂಬಂಧಿಗಳಿಗೆ 'ಸರಪಂಚರ' ತೀರ್ಮಾನದಂತೆ ದಂಡ ವಿಧಿಸಿ ಧಾರ್ಮಿಕ ವಿಧಿ-ವಿಧಾನದ ಮೂಲಕ ವರನ ಸಾಲಾವಳಿ ಬೆಡಗುಗಳಿಗೆ ಸೇರಿಸುವ ಕಾರ್ಯ ನಡೆಯುತ್ತದೆ;
- ಇವರಲ್ಲಿ ಅಕ್ಕನ ಮಗಳನ್ನು ಮದುವೆಯಾಗುವ ಪದ್ಧತಿ ನಿಷೇಧ.

ಖಾನಿ/ಖಾನೆ Khāni/Khāne:
- ಗಲ್ಲದ ಪೆಟ್ಟಿಗೆ; ಅಂಗಡಿಗಳಲ್ಲಿ ಪದಾರ್ಥಗಳನ್ನಿಟ್ಟುಕೊಳ್ಳಲು ಮರದ ಹಲಗೆಗಳಿಂದ ಚೌಕಾಕಾರವಾಗಿ ಮಾಡಿಕೊಂಡಿರುವ ಪೆಟ್ಟಿಗೆಗಳು; Cash box(wooden) in a shop, till, box-office;
- ಪೆಟ್ಟಿಗೆ, ಮೇಜು, ಕಪಾಟುಗಳಲ್ಲಿ ಮಾಡಿಕೊಂಡ ಸಣ್ಣ ಸಣ್ಣ ವಿಭಾಗಗಳು; ಪೆಟ್ಟಿಗೆಯೊಳಗಿನ ಕೋಣೆ ಅಥವಾ ಡ್ರಾಯರ್; ಮುಚ್ಚಳವಿರುವ ಪೆಟ್ಟಿಗೆ; ಭಾಗ; ವಿಭಾಗ; ಚೌಕ(ಭಾ.ಜಿ); A drawer or compartment in a table, cupboard, bureau and shelf;
- ಪೂಜಾ ಸಾಮಗ್ರಿಗಳನ್ನಿಡುವ ಸ್ಥಳ(ತು.ಜಿ); A place to keep the things of worship(pooja);
- ಗದ್ದೆ ಅಥವಾ ನೀರಾವರಿ ಪ್ರದೇಶ; ಕಟ್ಟೆಯ ತಳಭಾಗದ ನೆಲ; ಕಬ್ಬು ಅಥವಾ ಭತ್ತ ಬೆಳೆಯಬಹುದಾದ ಭೂಮಿ(ಕೋ.ಜಿ); An agricultural land to grow paddy, sugarcane; paddy field;
- ಇಟ್ಟಿಗೆ ತಯಾರಿಸುವ ಅಚ್ಚು/ಮಣೆ.

ಖಾಯಂ Khāyam:
- ಶಾಶ್ವತ; 'ಕಾಯಂ' ರೂಪವೂ ಇದೆ; permanent ಎಂಬ ಇಂಗ್ಲೀಷ್ ಪದದ ಸಂವಾದಿ ರೂಪ; Permanent;
- ಖಚಿತ; ಸ್ಥಿರ; ನೆಲೆಗೊಳಿಸು; ವ್ಯಕ್ತಿಯ ದೈನಂದಿನ ವ್ಯವಹಾರದಲ್ಲಿ ಬಳಕೆ ಪದ; ಇಲ್ಲಿ ತಾತ್ಕಾಲಿಕ ಮತ್ತು ಖಾಯಂ ಎಂಬ ಎರಡು ಬಗೆಗಳುಂಟು; Confirm, steady, settle, lasting; enduring;
- 'ತಾತ್ಕಾಲಿಕ' ಎಂಬುದು ಶಾಶ್ವತವಲ್ಲದ್ದು, ಖಚಿತವಲ್ಲದ್ದು ಎಂಬ ಅರ್ಥಗಳ ಸೂಚಕವಾದರೆ 'ಖಾಯಂ' ಎಂಬುದು ಖಚಿತತೆಯ ಸಂಕೇತವಾಗಿ ಗುರುತಿಸಿದೆ; Opposite of temporary, provisional, topicality, tentative;
- ವೃತ್ತಿ ಬದುಕಿನಿಂದ ಹಿಡಿದು ವ್ಯಾವಹಾರಿಕ ಬದುಕಿನವರೆವಿಗೂ ಈ ಎರಡೂ ಪದಗಳ ಬಳಕೆ ಉಂಟು;
- 'ಹುಟ್ಟು ಆಕಸ್ಮಿಕ ಸಾವು ಖಚಿತ' ಎಂಬ ನಾಣ್ಣುಡಿ 'ಖಾಯಂ' ಪದವನ್ನು ಧ್ವನಿಸುತ್ತದೆ; ಹಾಗೆಯೇ 'ನನ್ನ ನೌಕರಿ ಖಾಯಂ ಆಗಿಲ್ಲ'; 'ನಾನೇನು ಖಾಯಂ ಆಗಿ ತವರಲ್ಲೇ ಉಳಿಯಲು ಬಂದಿಲ್ಲ'; 'ಈ ದೇವಾಲಯದ ದಾಸೋಹ ಸುಮಾರು ಹತ್ತು ವರ್ಷಗಳಿಂದಲೂ ಖಾಯಂ ಆಗಿ ನಡೆಯುತ್ತಿದೆ'; ಹೀಗೆ ಈ ಎಲ್ಲ ಹೇಳಿಕೆಗಳೂ ಮನುಷ್ಯನ ದೈನಂದಿನ ವ್ಯಾವಹಾರಿಕ ವಾಕ್ಯಗಳು.

ಖಾಯಂಸುಳಿ Khāyam suḷi :
- ಎತ್ತಿನ ಬೆನ್ನಿನ ಮಧ್ಯಭಾಗದಲ್ಲಿರುವ ಸುಳಿ; ಭುಜದಿಂದ ಮುಕ್ಕಾಲು ಅಡಿ ಹಿಂಭಾಗದಲ್ಲಿರುವ ಈ ಸುಳಿಯನ್ನು 'ಜವಾಬ್‌ಸುಳಿ' ಎಂತಲೂ ಕರೆಯುವುದಿದೆ(ಮಂಡ್ಯ.ಜಿ); Swirl, whirl, vortex mark on the back part (hind) of ox(bullock);
- 'ಸುಳಿ'ಗಳನ್ನು ಗಮನದಲ್ಲಿರಿಸಿಕೊಂಡು 'ಒಪ್ಪುತಪ್ಪು'ಗಳ ಚರ್ಚೆ ಮಾಡುವ ಸಂಪ್ರದಾಯವೂ ಇದೆ; Swirl marks are the deciding factors in selling and purchasing bullocks;
- ಮುಖ್ಯವಾಗಿ ಎತ್ತುಗಳ ಬೆಲೆ ನಿರ್ಧರಿಸುವಲ್ಲಿ 'ಸುಳಿ'ಗಳೂ ಪ್ರಧಾನ ಪಾತ್ರ ವಹಿಸುತ್ತವೆ;

- ಸುಳಿಗಳನ್ನು ಎತ್ತುಗಳಲ್ಲಿ ಮಾತ್ರವಲ್ಲ ಮನುಷ್ಯರಲ್ಲೂ ಹುಡುಕುವುದುಂಟು.

ಖಾಯಾ/ಖಾಯ Khāyā/Khāya:
- 'ಕಾಯ' ರೂಪವೂ ಬಳಕೆ ಇದೆ; ಖಾಯ>ಕಾಯ; ಉಚ್ಚಾರಣೆಯಲ್ಲಿ ಮಹಾಪ್ರಾಣ ಅಕ್ಷರಗಳಿಗೆ ಅಲ್ಪಪ್ರಾಣ ಅಕ್ಷರಗಳ ಬಳಕೆ ಸಾಮಾನ್ಯ; 'ಖಾಯಾ' ಸಂಸ್ಕೃತ ರೂಪ;
- ಶರೀರ; ದೇಹ; ಒಡಲು; ಮೈ; ಮರದ ಕಾಂಡ; ವೀಣೆಯ ದೇಹ; ವಸತಿ; ಕಿರುಬೆರಳ ಬುಡ; *ಪ್ರ: 'ಜೀವ ಎದ್ದು ಹೋದ ಮ್ಯಾಲ ಖಾಯಾ ಯಾತುಕ ಬರ್ತಾದೆ?'.* Body, corporal, physic, stalk, stem, a part of veena instrument, home, lodge, stem of little finger.

ಖಾಯಾಸ/ಖಾಯಾಸು Khāyāsa/Khāyāsu:
- ಖಾಯಿಷ್, ಖಾಯಿಸು ರೂಪಗಳ ಬಳಕೆಯೂ ಉಂಟು; Attraction. liking, fancy;
- ಇಷ್ಟಪಡು; ಆಸೆಹೊಂದು; ಸಂತೋಷ; ಪ್ರೀತಿ; ಹವ್ಯಾಸ; ಬಯಕೆ; ಅಭಿಲಾಷೆ; ಇಚ್ಛೆ; ಅಪೇಕ್ಷೆ; Like, desirous, happiness, love, habbit, yearning, wish, expectation, want;
  ಪ್ರ: 'ಖಾಯಾಸಿಗೋಸ್ಕರ ಸಾರಾಯಿ ಕುಡಿತೀನಿ';
- ಹಿಂದಿಯಲ್ಲಿ 'ಖಾಹಿಷ್' ರೂಪದ ಬಳಕೆಯಿದ್ದರೆ, ಮರಾಠಿಯಲ್ಲಿ 'ಖಾಈಶ್' ಪದವಿದೆ.

ಖಾರ Khāra:
- ಒಂದು ಬಗೆಯ ತಿನಿಸು; ಕೊಬ್ಬರಿ, ಕೆಂಪುಕಲ್ಲುಸಕ್ಕರೆ, ಉತ್ತುತ್ತೆ, ಗೋಡಂಬಿ, ಒಣದ್ರಾಕ್ಷಿ, ತುಪ್ಪವನ್ನು ಸೇರಿಸಿ ತಯಾರಿಸಿದ್ದು; A kind of snacks/ eatables, copra, red sugar candy, date, cashew nut, raisin, hot;
- ತಾಳೆ ಅಥವಾ ತೆಂಗಿನ ಮರಗಳಿಂದ ಕಳ್ಳನ್ನು (ಹೆಂಡ) ಇಳಿಸುವಾಗ ಬಳಸುವ ಒಂದು ಬಗೆಯ ಔಷಧಿ(ಜಾನಪದ ಶೋಧ); A folk medicine;
- ಸಿಟ್ಟಿನಿಂದ ಕೂಡಿದ ಖಡಕ್ ವ್ಯಕ್ತಿ; ಭಯಂಕರ (ಬಾಗ.ಜಿ); Angry young man, horrible;
- ಒಣಮೆಣಸಿನ ಕಾಯಿಯಿಂದ ಅರೆದ ಚಟ್ನಿಗೆ 'ಖಾರಾಚಟ್ನಿ' ಎನ್ನುವರು; Chilly chutney;
- *—ಖಾರಾನುಡಿ* : ಕಠಿಣತೆಯಿಂದ ಕೂಡಿದ ನೇರನುಡಿ; ವ್ಯಂಗ್ಯ ರೂಪಕದಿಂದ ಕೂಡಿದ ಮೂದಲಿಕೆಯ ಮಾತು; ಕಟುವಾದ ಮತ್ತು ತೀಕ್ಷ್ಣತೆಯಿಂದ ನುಡಿವ ಮಾತು; Honest word, straight forward, harsh words, irony, ridicule;
  ಪ್ರ: 'ಬಂದರೆ ಬರಬಹುದು ಇಲ್ಲದಿದ್ದರೆ ಇಲ್ಲ ಎಂದು ಖಾರವಾಗಿಯೇ ಹೇಳಿದರು'.

ಖಾರಂಕಟ್ಟಿ Khāramkaṭṭi:
- 'ಹಗಲುವೇಷ' ಬುಡಕಟ್ಟು ಸಮುದಾಯದವರಲ್ಲಿ ಬಳಕೆ ಪದ; A word used in 'Hagalu vesha' tribal community;
- ಇಂಗ್ಳಾರ ಅಥವಾ ತಗ್ಗುಲಿ ಮರದ ತುಂಡಿನಿಂದ ತಯಾರಿಸಿದ ಒಂದು ಸಾಧನ; A wooden device to grind chutney;
- 'ರಾಳ್ಳುಸಿಪ್ಪ'ದಲ್ಲಿ ಖಾರ ಅಥವಾ ಚಟ್ನಿಯನ್ನು ಅರೆಯಲು ಉಪಯೋಗ.

ಖಾಲಿ Khāli:
- ವ್ಯಕ್ತಿಯ ದೈನಂದಿನ ವ್ಯಾವಹಾರಿಕ ಪದವಾದರೂ ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ ಮಾತ್ರ ಬಳಕೆಯಲ್ಲಿರುವಂಥದು;
- ಏನೂ ಇಲ್ಲದಿರುವಿಕೆ; ಮುಗಿಯಿತು; ಬರಿದಾಗು ಅಥವಾ ಬರಿದಾದದ್ದು; ಶೂನ್ಯ ಸಂವೇದನೆಯ ಸೂಚಕ; ತೆರವಾಗಿರುವುದು; ಯಾರೂ ಕಾಣದಿರುವಿಕೆ; ಅಜ್ಞಾತ ಸ್ಥಳ; Empty, having nothing, close, zero, remote place, unknown, unrecognize;
- ತೆರವಾಗಿರುವುದರ ಬಗೆಗೆ ತಿಳಿಸಿಕೊಡುವ ಒಂದು ಪ್ರಕ್ರಿಯೆ; ಮನೆ ಖಾಲಿ ಇದೆ; ಕೆಲಸ ಖಾಲಿ ಇದೆ (ಮನೆಗೆಲಸ ಅಥವಾ ಇತರೆ ತಾತ್ಕಾಲಿಕ ವೃತ್ತಿಗಳಿಗೆ ಸಂಬಂಧಿಸಿದ್ದು); Indicating the condition of vacating(a house) (to let), vacancy available;
- ಸುಳ್ಳು; ಪೊಳ್ಳು; ಉಪಯೋಗಕ್ಕೆ ಬಾರದ ನಿರರ್ಥಕ ಮಾತು; ಕಾಲಾಹರಣಕ್ಕಾಗಿ ಮಾತುಗಾರಿಕೆಗೆ ಸೇರುವ ಗುಂಪು; ಬೈಗುಳ ಪದವಾಗಿಯೂ ಬಳಕೆ; Lie,

hollowness, emptiness, useless talk, irrelevant, scolding word;

ಪ್ರ: 'ಅವ್ನ್‌ದೆಲ್ಲ ಬರೀ ಖಾಲಿ ಮಾತು ನಂಬ್‌ಬೇಡ';

- ಬರಿಗೈ, ಹಣಕಾಸು ಅಥವಾ ಯಾವುದೇ ವಸ್ತುಗಳಿಲ್ಲದ ಕೈಯನ್ನು 'ಖಾಲಿಕಯ್' ಎನ್ನುವರು.

ಖಾವಂದ/ಖಾವಿಂದ Khāvanda/ Khāvinda:

- ಕಾವಂದ, ಖಾವಿಂದ್ ರೂಪಗಳೂ ಇದೆ;
- ಯಜಮಾನ; ಒಡೆಯ; ಪ್ರಭು; ಸ್ವಾಮಿ; 'ಮೇಳದ ಯಜಮಾನ' ಪದಕ್ಕೆ ಪರ್ಯಾಯವಾಗಿ' ಖಾವಂದರು' ಎನ್ನುವರು; Lord, master, owner, chief, proprietor;
- ಹಿಂದಿಯಲ್ಲಿ 'ಖಾವಂದ್' ಮತ್ತು ಮರಾಠಿಯಲ್ಲಿ ಖಾವಂದ, ಖಾವಿಂದ ರೂಪಗಳಿವೆ; ಮೂಲತಹ 'ಖಾವಂದ' ರೂಪ ಮರಾಠಿಯಿಂದಲೇ ಬಂದಿರಬೇಕು?;

ಪ್ರ: 'ಅಪ್ಪಣೆಯ ಮೇರೆಗೆ ನಮ್ಮ ಖಾವಂದರ ಬಳಿ ತೆರಳಿ ಕ್ಷಮೆ ಕೇಳಿ ಬಂದೆವು'.

ಖಾಸಗಿ Khāsagi:

- ವೈಯಕ್ತಿಕವಾದುದು; ಸರ್ಕಾರಿ ಸ್ವಾಮ್ಯದ್ದಲ್ಲದ ಕ್ಷೇತ್ರ; ಸ್ವಕೀಯವಾದುದು; Personal, private, non-government, non-official;
- ದೇಶದಲ್ಲಿ ಕಾರ್ಯ ನಿರ್ವಹಿಸುವುದು ಎರಡೇ ಶಾಖೆ; ಒಂದು ಸರ್ಕಾರಿ ಸ್ವಾಮ್ಯದ್ದಾದರೆ ಮತ್ತೊಂದು ಖಾಸಗೀ ಕ್ಷೇತ್ರ; There are two executive branches in nation's administration; they are private sector and government sector;
- ಇತ್ತೀಚೆಗೆ ಎಲ್ಲಾ ಕ್ಷೇತ್ರಗಳಲ್ಲೂ ಸರ್ಕಾರಿ ಒಡೆತನಕ್ಕಿಂತ ಖಾಸಗಿ ಒಡೆತನಗಳೇ ಹೆಚ್ಚಾಗಿ ಕಂಡುಬಂದಿವೆ;
- ಖಾಸಗೀ ಶಿಕ್ಷಣ, ಖಾಸಗಿ ಸಾರಿಗೆ, ಖಾಸಗಿ ಹೋಟೆಲ್, ಮಾಲ್, ರೆಸ್ಟೋರೆಂಟ್‌ಗಳು, ಖಾಸಗಿ ಆಸ್ಪತ್ರೆಗಳು, ಖಾಸಗಿ ಕಾರ್ಖಾನೆಗಳು, ಖಾಸಗಿ ವೃತ್ತಿಗಳು ಅಷ್ಟೇ ಏಕೆ ದಸರಾ ವೇಳೆಯಲ್ಲಿ ಅರಮನೆಯಲ್ಲಿ ನಡೆಯುವ 'ಖಾಸಗಿ ದರ್ಬಾರ್' ಕೂಡ ಚಾಲ್ತಿಯಲ್ಲಿದೆ;
- ಇವೆಲ್ಲವೂ ಒಂದು ವಿಧದಲ್ಲಿ ಸರ್ಕಾರಿ ನೀತಿ–ನಿಯಮಗಳಿಗೆ ಒಳಪಟ್ಟರೂ ವೈಯಕ್ತಿಕವಾದ ಕಟ್ಟುಪಾಡುಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಡುತ್ತಾ ಬಂದಿವೆ;
- ಉಳ್ಳವರಿಂದ ಇಂತಿಷ್ಟು ಬಡ್ಡಿಯ ರೂಪದಲ್ಲಿ ಪಡೆಯುವ ಹಣಕ್ಕೆ 'ಖಾಸಗಿಸಾಲ' ಎನ್ನುವರು. Personal loan.

ಖಾಸಾ Khāsā:

- ತನ್ನದೆ ಆದದು; ಸ್ವಂತ; ಸ್ವಕೀಯವಾದುದು; ತನ್ನ ಅನುಭೋಗಕ್ಕೆ ಮಾತ್ರ ಸೀಮಿತವಾದುದು; Personal, private, individual, only for personal use;
- ಬಹಳ ಅಥವಾ ತುಂಬಾ ಆಪ್ತ; ಹತ್ತಿರದ ಸಂಬಂಧಿಗಳು; ರಕ್ತ ಸಂಬಂಧಿ; ಒಡಹುಟ್ಟಿದವರು; Intimate, or close relatives/friends, kith and skin, kin, sib;
- ವಿಶೇಷ(ಗು.ಜಿ); ಸ್ವಾಧೀನ; Special, possession.

ಪ್ರ: 'ಅವ ನನ್ನ ಖಾಸಾ ದೋಸ್ತಿ ಎಂದು ಹೇಳಲಾದೀತೆ'.

ಖಾಸದಾನ Khāsadāna:

- ಮಣ್ಣು ಅಥವಾ ತಾಮ್ರದಿಂದ ತಯಾರಿಸಿದ ಪಾತ್ರೆ; ಪಾನಪಟ್ಟಿ ಇಡಲು ಬಳಕೆ; ಬೇಸಿಗೆಯಲ್ಲಿ ಎಲೆಗಳು ಬೆಚ್ಚಗಾಗುತ್ತಿದ್ದರಿಂದ ಈ ಪಾತ್ರೆಗಳಲ್ಲಿ ಸಂಗ್ರಹಿಸುತ್ತಿದ್ದುದು ರೂಢಿ; Copper or earthen vessel;
- ಅಬ್ದುಲ್ ಹಲೀಮ್ ಅವರು ತಮ್ಮ ಪುರಾತನ ಲಖನೌ ಚರಿತ್ರೆಯಲ್ಲಿ ಲಖನೌದ ಮಣ್ಣಿನ ಖಾಸದಾನಗಳು ತುಂಬಾ ಸುಂದರವಾಗಿದ್ದವೆಂದು ವರ್ಣಿಸಿದ್ದಾರೆ;
- ಪಾನಪಟ್ಟಿ=ಎಲೆ, ಅಡಕೆ, ಸುಣ್ಣ ಹಾಕಿ ಸಿದ್ಧಪಡಿಸಿದ ತಾಂಬೂಲ; ಬೀಡ. Pan supari, pan, pan beeda.

ಖ್ಯಾಲ/ಖ್ಯಾಲಿ Khyāla/Khyāli:

- ಖಯಾಲ್, ಖಯಾಲ, ಖಯಾಲಿ, ಖಯಾಲು, ಖ್ಯಾಲ್ ರೂಪಗಳು ಉಂಟು;
- ಬಯಕೆ; ಇಚ್ಛೆ; ಗಮನ; ಲಕ್ಷ್ಯ; ಮನಸ್ಸು; ಆಸೆ; ಹಂಬಲ; ಪ್ರೀತಿ; ಸ್ಮರಣೆ; ಬುದ್ಧಿ; ವಿವೇಕ; ಮನಸ್ಸಿನ

ಒಲವು; ಇಷ್ಟ; ಮರ್ಜಿ; ಆಸಕ್ತಿ; ಮೋಹ; ವ್ಯಾಮೋಹ ಹುಚ್ಚು; Desire, wish, notice, mind, yearn, longing, love, knowledge, intelligence, wisdom, discretion, interest, attention, attraction, infatuation, crazy;

- ಒಂದು ಬಗೆಯ ಜನಪದ ನೃತ್ಯನಾಟಕ; A kind of folk art; opera;
- ಹಿಂದುಸ್ತಾನಿ ಹಾಡುಗಾರಿಕೆಯಲ್ಲಿ ಒಂದು ಪ್ರಕಾರ; A mode of singing in Hindustani musical art;
- 'ಚಕ್ಕಡ' ಎನ್ನುವರು; ಲಾವಣಿ ಹಾಡುಗಾರಿಕೆಯ ಅಂತಿಮ ಭಾಗ(ವಿಜ.ಜಿ);
- ಸ್ವಚ್ಛಂದ ಮನುಷ್ಯ, ಚಂಚಲ ಸ್ವಭಾವದವರನ್ನು 'ಖ್ಯಾಲದಿರಿಗಿ' ಎನ್ನುವರು; Wantonness, fickle minded fellow, brozen fellow, impudent person, brozen;
  ಪ್ರ: ಖ್ಯಾಲದಿರಿಗಿ ಮನುಶ್ಯಾ ಸಿಂದಿ ಕುಡಿಬೇಕಂತ ಅನಸದಾಗೊಮ್ಮೆ ಬಂದು ಪೂಜಾ ಮಾಡ್ತಾನ' (ಬದುಕು).

ಖಿನ್ನ Khinna:

- 'ಖಿನ್ನತೆ' ಎನ್ನುವರು; ಸಣ್ಣ ಮೋರೆಯವನಾಗು; ಚಿಂತಿತನಾಗು; ಸಪ್ಪೆಯಾಗಿರುವುದು; ನೋವು, ವಿಷಾದದಿಂದ ದುಃಖಿತ ಮನಸ್ಸು; ಖೇದ; Dejected, depressed, gloomy, melancholy, pained;
- ದಣಿವು, ಆಯಾಸದಿಂದ ಬಳಲಿರುವಿಕೆ; Tired, weary, fatigued, spent out, exhausted;
- ಯಾವುದೋ ಒಂದು ವಿಷಯವನ್ನು ಮನದಲ್ಲಿಟ್ಟುಕೊಂಡು ಪರಿತಪಿಸುವುದು; ಆಘಾತಕಾರಿ ವಿಚಾರಗಳಿಂದ ಗಾಸಿಗೊಳಗಾಗುವಿಕೆ; Grieve, pine, brood;
- 'ಅನ್ನವನು ಇಕ್ಕಿ ನೀ ಖಿನ್ನವನು ಪಡಬೇಡ ಭಿನ್ನಭೇದಗಳು ಇಲ್ಲದೆ ಶಿವ ಜಗವ ಸಲಹಿಹನು' (ಸರ್ವಜ್ಞ);

  ಪ್ರ: 'ಮಗನ ಅನಾಚಾರಗಳ ಬಗ್ಗೆ ಕೇಳಿದ ತಂದೆ–ತಾಯಿಯರು ಖಿನ್ನತೆಗೊಳಗಾದರು'.

ಖಿಲಾರಿ Khilāri:

- 'ಖಿಲಾರಿ' ಮರಾಠಿ ಪದ; ಕಿಲಾರಿ ರೂಪವೂ ಬಳಕೆಯಲ್ಲಿದೆ;
- ಜಾನುವಾರುಗಳ ಒಂದು ತಳಿ; ಖಿಲಾರಿ ಹಸು, ಖಿಲಾರಿ ಎತ್ತು ಇತ್ಯಾದಿ(ಬೆಂ.ಗ್ರಾ.ಜಿ). The Khillari is breed of cattle, khilari cow breed, khillari ox.

ಖುಂಡಿಯ Khuṇḍiya:

- ಬೆತ್ತದ ಬಡಿಗೆ; ಪಂಚಾಯಿತಿ ಸೇರಿ ನ್ಯಾಯ ತೀರ್ಮಾನ ಮಾಡುವಾಗ ಪಂಚರು ತಮ್ಮ ಕೈಯಲ್ಲಿ ಹಿಡಿದು ನೆಲಕ್ಕೆ ಬಡಿಯುವ ಡೊಂಕುಮುಖದ ಬೆತ್ತದ ಕೋಲು; Scepter, bamboo cane, a cane in the hand of panchas(five member committe);
- ಕಂಜರಭಾಟ ಅಲೆಮಾರಿ ಸಮುದಾಯದವರಲ್ಲಿ ಪಾರಂಪರಿಕ ಜಾತಿ ಪಂಚಾಯಿತಿ ವ್ಯವಸ್ಥೆ ರೂಢಿ;
- ತಾವು ನೆಲೆನಿಂತ ಪ್ರದೇಶದಲ್ಲಿ ಸುಮಾರು ಹತ್ತರಿಂದ ಇಪ್ಪತ್ತು ಕುಟುಂಬಗಳಿದ್ದು ಅವರ ಕುಟುಂಬ ಅಥವಾ ಸಮುದಾಯದೊಳಗಿನ ವಿವಾದಗಳನ್ನು ಪಂಚರಿಗೆ ಒಪ್ಪಿಸಿ ಇತ್ಯರ್ಥ ಪಡಿಸಿಕೊಡಬೇಕೆಂದು ಕೇಳುತ್ತಾರೆ;
- ಇದಕ್ಕೆ ಸಂಬಂಧಿಸಿದಂತೆ ನ್ಯಾಯ ತೀರ್ಮಾನ ಮಾಡಲು ಸಮುದಾಯದ ಪಂಚರು, ಜಾತಿ ಪಂಚಾಯಿತಿ ವ್ಯವಸ್ಥೆಯ ಸದಸ್ಯರೆಲ್ಲ ಒಟ್ಟಾಗಿ ಸೇರಿ ನಿಗದಿತ ಮರದ ಕೆಳಗೆ ವೃತ್ತಾಕಾರವಾಗಿ ಕುಳಿತು ಕೈಯಲ್ಲಿ ಈ ಡೊಂಕುಮುಖದ ಬೆತ್ತದ ಬಡಿಗೆ ಹಿಡಿದು ನೆಲಕ್ಕೆ ಬಡಿಯುವುದರ ಮೂಲಕ ನ್ಯಾಯ ಪಂಚಾಯಿತಿ ನಡೆಸುವುದು ವಾಡಿಕೆ.

ಖುದ್ದು Khuddu:

- ಸ್ವತಃ; ತಾನಾಗಿ; ಸಮಕ್ಷಮ; ಮುಖಾಮುಖಿ; ಎದುರುಬದುರು; ಪ್ರತ್ಯಕ್ಷ ದರ್ಶನ; ತಾನೇ ತೆರಳಿ ನೋಡುವಿಕೆ, ಪರಿಶೀಲಿಸುವಿಕೆ, ಮಾತನಾಡುವಿಕೆ; Own, in person, face to face, encounter, direct, examine, talking;
  ಪ್ರ: 'ರಸ್ತೆ ಕಾಮಗಾರಿಯನ್ನು ಖುದ್ದಾಗಿ ಅಧಿಕಾರಿಗಳೇ ಪರಿಶೀಲಿಸಿದರು'.

ಖುನಾಕಿಂಡಿ Khunākiṇḍi:
- ಪರಿಚಯಸ್ಥ ವ್ಯಕ್ತಿ ಹಲವು ದಿವಸಗಳ ನಂತರ ಕಾಣಿಸಿಕೊಂಡಾಗ ಅವನನ್ನು ಗುರುತಿಸುವಿಕೆ (ಬೀ.ಜಿ). Recognizing/finding a familiar person after many days.

ಖುನ್ನಾ Khunnā:
- 'ಕಂಜರಭಾಟ' ಅಲೆಮಾರಿ ಸಮುದಾಯದವರಲ್ಲಿ ಕೊಲೆ, ಹತ್ಯೆಗಳಿಗೆ ಸಂಬಂಧಿಸಿದಂತೆ ರೂಢಿಯಲ್ಲಿರುವ ನ್ಯಾಯ ಪಂಚಾಯಿತಿ; ಇದಕ್ಕೆ 'ಖುನ್ನಾ ಕಾ ಕೇಸ್' ಎನ್ನುವರು; A judicial court(local village panchayat) in Kunjarbhat community;
- ಪಂಚಾಯ್ತಿ ನಿಯಮದ ಪ್ರಕಾರ ಕೊಲೆಗಾರನಿಗೆ ಒಂದರಿಂದ ಮೂರು ಲಕ್ಷದವರೆಗೆ ದಂಡ ವಿಧಿಸಲಾಗುತ್ತದೆ;
- ಇಂತಹ ಗುರುತರ ಪ್ರಕರಣಗಳು ಮತ್ತೊಮ್ಮೆ ಸಂಭವಿಸದಿರಲಿ ಎಂಬ ಆಶಯದೊಂದಿಗೆ ಹೀಗೆ ಅಧಿಕ ಮೊತ್ತದ ದಂಡ ವಿಧಿಸಲಾಗುತ್ತದೆ ಎಂಬುದೊಂದು ಅಭಿಪ್ರಾಯ.

ಖುಬಿ Khubi:
- ಅಂದ; ಚೆಲುವು; ಸೊಗಸು; Beauty, loveliness, elegance, charm;
- ಗುಟ್ಟು; ಮರ್ಮ; ರಹಸ್ಯ; ಗೂಢ ಅರ್ಥ (ಉ.ಕ.ಜಿ);
- ತೃಪ್ತಿಯ ಸಂತಸ.

ಖುರಾಕ/ಖುರಾಕು Khurāka/Khurāku:
- ಪೌಷ್ಟಿಕ ಆಹಾರ(ಗ್ರಾಮಾಯಣ); ಅನ್ನ; ಆಹಾರ ಪದಾರ್ಥ(ಉ.ಕ.ಜಿ); ಪೌಷ್ಟಿಕವಾದ ಆಹಾರ; ಅಶಕ್ತತೆಯನ್ನು ದೂರಮಾಡಲು ಕೊಡುವ ವಿಶೇಷ ಆಹಾರ; A nutritious, nutrient, nourishing;
- ಲಂಚ. Bribe.

ಖುಲಾಯಿಸು Khulāyisu:
- ಕುದುರು; ಅದೃಷ್ಟ; ಬದಲಾಯಿಸು; ಒದಗು; ತೆರೆ; ಅರಳು; ಬಿಚ್ಚು; Stabilize, gain order, succeed, luck, secure, flourish, open; *ಪ್ರ: 'ಸೊಸೆ ಕಾಲಿಟ್ಟ ಗಳಿಗೆಯಿಂದಲೇ ಅವನ ಅದೃಷ್ಟ ಖುಲಾಯಿಸಿತು'.*

ಖುಲಾಸೆ Khulāse:
- ಬಿಡುಗಡೆ; ಮುಕ್ತಿ; ತೆರವಾಗುವಿಕೆ; ಖಾಲಿಯಾಗುವುದು; Release, liberation, deliverance;
- ನಿರ್ದೋಷಿ ಎಂದು ಕೇಸಿನಿಂದ ಮುಕ್ತಗೊಳಿಸುವಿಕೆ. Guiltless person, release as an innocent/guiltless.

ಖುಲ್ಲ Khulla:
- ಖಡಾಖಂಡಿತವಾಗಿ(ಅರಮನೆ); Certainly, surely;
- ಚಿಕ್ಕದಾದ; ಅಲ್ಪ; ಕ್ಷುದ್ರ; ಅಧಮ; ಖೂಳ; ನೀಚತನ; ತೆರೆದ(ಬ.ಜಿ); Smaller, little, petty, wretched, wickedness, open, cruel, base;
- 'ಖುಲ್ಲ ಮಾನವ ಬೇಡೆ ಕಲ್ಲು ತಾ ಕೊಡವನೇ' (ಸರ್ವಜ್ಞ);
- ಕಂಟಕ, ಗಂಡಾಂತರ ಕಳೆದುಹೋಯಿತು ಎಂಬರ್ಥದಲ್ಲಿ ಬಳಕೆ ಪದ. Impediment, peril, danger.

ಖುಶಾಲ Khuśāla:
- ಕುಶಾಲ, ಕುಶಾಲಿ, ಖುಶಾಲ್, ಖುಶಾಲು ರೂಪಗಳಿವೆ; Joy, happiness, amusement;
- ಹರ್ಷ; ಕ್ಷೇಮ; Happy, pleasure, fine, well;
- ವಿನೋದ; ತಮಾಷೆ; ಸಂತೋಷ; Amusement, entertainment;
- ಭಕ್ಷೀಸು; ಖುಷಿಗಾಗಿ ಕೊಡುವ ಹಣ; Tips;
- ಸುಮ್ಮನೆ; ಬೇಗ; *ಪ್ರ: 'ಖುಶಾಲ ಮನಿಗ ಹೋಗಿ ಮಲಕ್ಕಂಡು ಬಿಡ್ರಿ*(ಗ್ರಾಮಾಯಣ).
- ಯೋಧರು ಅಥವಾ ರಾಷ್ಟ್ರದ ಪ್ರಮುಖ ನಾಯಕರು ತೀರಿಕೊಂಡಾಗ ಅವರ ಸಂಸ್ಕಾರ ಸಂದರ್ಭದಲ್ಲಿ ಗರಿಷ್ಠ ೨೧ ಸುತ್ತು ಖುಶಾಲ ತೋಪುಗಳನ್ನ ಆರಿಸಿ ಗೌರವ ಸಲ್ಲಿಸುವುದಿದೆ;
- ಇದು ಖಾಸಗೀ ಕಾರ್ಯಕ್ರಮವಲ್ಲ, ಸರ್ಕಾರಿ ಕಾರ್ಯಕ್ರಮದ ಅಂಗವಾಗಿ ರೂಢಿಯಲ್ಲಿರುವಂಥದು.

ಖುಷಿ Khuṣi:
- ಖುಶಿ, ಖುಸಿ, ಕುಸಿ, ಕುಷಿ ರೂಪಗಳಿವೆ;

- ಸಂತೊಷ; ಆನಂದ; ಹಿಗ್ಗು; ವಿನೋದ; ಹಾಸ್ಯ; Happiness, pleasure, amusement, joke, humour;
  ಪ್ರ: 'ನಿಮ್ಮ ಖುಷಿಗೆ ಕಾರಣವೇನೆಂದು ಕೇಳಬಹುದೆ?';

ಖುಷ್ಕಿ Khuṣki:
- ನೀರಾವರಿಗೆ ಒಳಪಡದ ಸಾಗುವಳಿಗೆ ಯೋಗ್ಯವಾದ ಜಮೀನಿನಲ್ಲಿ ಮಾಡುವ ಒಣ ಬೇಸಾಯ; Wet or irrigated land;
- ವರ್ಷದಲ್ಲಿ ಮಳೆಗಾಲದಲ್ಲಿ ಮಾತ್ರ ಸಾಗುವಳಿ ಮಾಡುವುದು; Cultivate during rainy season;
- ಖುಷ್ಕಿ ಜಮೀನಿನಲ್ಲಿ ಮಾಡುವುದು ಖುಷ್ಕಿ ಬೇಸಾಯ.

ಖುಸಳಿ Khusaḷi:
- ಹುಲ್ಲಿನ ಒಂದು ತಳಿ(ಕೃ.ಪ.ಕೋ). A type of grass.

ಖೂನಿ Khūni:
- ಖೂನ್, ಖೂನ, ಖೂನು, ಕೂನ, ಕೂನಿ ರೂಪಗಳುಂಟು;
- ಕುರುಹು; ಗುರುತು; ಚಿಹ್ನೆ; ಅರಿವು; ತಿಳಿವಳಿಕೆ; ಪರಿಚಯ; ನೆನಪು; ಸ್ಮರಣೆ; Clue, hint, mark, knowledge, sense, wisdom, familiarily, rememberance, memory;
- ಖಚಿತವಾಗಿ; ನಿರ್ದಿಷ್ಟವಾಗಿ; Certainly, particularly, definitely;
- ಕೊಲೆ; ರಕ್ತ; ವ್ಯಕ್ತಿ ಸತ್ತಾಗ ಅಥವಾ ರಕ್ತ ಸುರಿಯುವಾಗ(ಬೀ.ಜಿ); ಕೊಲ್ಲುವಿಕೆ; ವದೆ; Murder, kill, butching, slaughter, assassination;
- ಅಪರಾಧ; Crime;
- ಬಿದಿರಿನ ಅಚ್ಚೆಗಳಿಂದ ಬುಟ್ಟಿಯಾಕಾರದಲ್ಲಿ ಹೆಣೆದ ಸಾಧನ; ಮೀನು ಹಿಡಿಯಲು ಬಳಕೆ; 'ಖೂನಿ, ಇರ್ಗುಣಿ' ಎನ್ನುವರು; Bamboo peel basket to catch fish;
- ಗುರುತು, ಪರಿಚಯವಿಲ್ಲದವರನ್ನು 'ಖೂನಿಲ್ಲ' ಎಂದರೆ ಕೊಲೆಗಡುಕರನ್ನು 'ಖೂನಿಕೋರ' ಎನ್ನುವರು;
  ಪ್ರ: 'ಈ ಖೂನಿಕೋರನಿಗೆ ಖಾನಾಪೀನವ ಬೇರೆ ಕೊಡಬೇಕೆ?';
- ಮರಾಠಿಯಲ್ಲಿ 'ಖೂನ್' ರೂಪವಿದೆ;
- ಮೂಲರೂಪ 'ಖೂನ್, ಖೂನ' ಆಗಿರಬಹುದಾದರೂ ಉಚ್ಚಾರಣೆಯಲ್ಲಿ 'ಕೂನ್, ಕೂನ' ರೂಪದ ಬಳಕೆ; 'ಖ' ಕಾರಕ್ಕೆ 'ಕ' ಕಾರ ಬರುವುದು ಸಾಮಾನ್ಯ;
- ನೆನಪಾಗುವಿಕೆ, ಗುರುತು ಹತ್ತು, ಸ್ಮರಣೆಯಾಗು ಮೊದಲಾದ ಅರ್ಥಗಳಿಗೆ 'ಖಾನಾಹತ್ತು' ಎನ್ನುವರು. Remembering, recollecting.

ಖೂಳ Khūḷa:
- 'ಕೂಳ' ರೂಪವೂ ಇದೆ; ಖೂಳ>ಕೂಳ(ಖ>ಕ);
- ಮೂರ್ಖ; ದುಷ್ಟ; ನೀಚ; ಎಗ್ಗ; ಅಲ್ಪ; Foolish, wicked, wretch, petty, base, rascle;
- ಒಂದು ಬೈಗುಳ ಪದ; 'ಈ ಖೂಳ್‌ನನ್ಮಗುನ್ ಸವಾಸ ಮಾಡಿ ನನ್ಗಂಡು ಹದ್ಗೆಟ್ಹೋಯ್ತು' ಎಂದು ಬೈಯುವುದು ರೂಢಿ.

ಖೆಲಾವಂತಿ Khelāvanti:
- 'ಹಕ್ಕಿಪಿಕ್ಕಿ' ಬುಡಕಟ್ಟು ಸಮುದಾಯದವರಲ್ಲಿ ರೂಢಿಯಲ್ಲಿರುವ ಒಂದು ಆಚರಣಾ ವಿಧಿ; Ceremonial rite in `Hakki pikki' (nomadic tribe) community;
- ಮದುವೆಯಾಗದ ವಧು-ವರ ಓಡಿಹೋಗಿ ಕೆಲವು ದಿವಸಗಳ ನಂತರ ಬಂದರೆ ಅವರನ್ನು ಕೀಳು ಮನೋಭಾವನೆಯಿಂದ ಕಾಣುವರು; ಈ ದೋಷ ನಿವಾರಣೆಗೆ 'ಖೆಲಾವಂತಿ' ಎಂಬ ಕಾಲ್ಪನಿಕ ಮದುವೆ ಮಾಡಿಸುತ್ತಾರೆ; A wedding ceremony(for eloped girl and boy);
- ಬಾಳೆ ಮರವನ್ನು ಹೆಣ್ಣಿನಂತೆ ಶೃಂಗರಿಸಿ ವಧು-ವರರ ತಂದೆಯವರು ಈ ಕಾರ್ಯವನ್ನು ನೆರವೇರಿಸುವರು.

ಖೇಡ Khēḍa:
- ಗ್ರಾಮ; ಹಳ್ಳಿ; ಊರು(ತು.ಜಿ); Village, country, hamlet;

- ಎತ್ತರವಾದ ಕೋಟೆಯನ್ನುಳ್ಳ ಊರು; A village with citadel(high);
- ಹೆದರುವವ; ಭಯಗ್ರಸ್ಥ; Coward, white-liver, bastard;
  ಪ್ರ: 'ಎಷ್ಟು ಖೇಡಗಳ ಕಳೆದರೂ ನಮ್ಮ ನೆಲ ಸಿಗಲಿಲ್ಲವೆಂದು ಅಳುವಂತಾಗಿತ್ತು ನಮ್ಮ ಪಾಡು'.

ಖೇಲ/ಖೇಲೆ/ಖೇಳ Khēla/khēle/khēḷa:
- ಕ್ರೀಡೆ; ಒಂದು ಬಗೆಯ ಆಟ; ಒಂದು ಜನಪದ ನೃತ್ಯಮೇಳ; A kind of game/sport, a kind of folk performance;
- 'ಹೋಳಿ' ಹಬ್ಬದಂದು 'ಗುಮ್ಮೆ' ಕೋಲಾಟದಲ್ಲಿ ಕುಣಿಯುವ ತಂಡ; ವಿಶಿಷ್ಟ ಉಡುಗೆ ಧರಿಸಿ ವ್ರತ ನಿಯಮಬದ್ಧವಾಗಿ ಕುಣಿಯುವುದು ಪದ್ಧತಿ(ದ.ಕ.).
- A group of dancers/merry makers in Holy festivaL

ಖೈಡು Kheiḍu:
- ಗಡಸು; ಚುರುಕು; ಒರಟು ಸ್ವಭಾವದವ; *ಪ್ರ: 'ಹುಡ್ಗ ಬಾಳಾ ಖೈಡಾಗವ್ನೆ'.* Rough, rude, hard.

ಖೊಡಿನಾರಿ Khoḍināri:
- ಹೇಳಿದ ಮಾತನ್ನು ಕೇಳದವರಿಗೆ ಈ ಪದದ ಬಳಕೆ; ಯಾರ ಮಾತನ್ನು ಲಕ್ಷಿಸದೆ ಇರುವವಳು(ಬೀ.ಜಿ). One who doesn't listen(girl) others.

ಖೊಟ್ಟಿ Khoṭṭi:
- ಕೊಟ್ಟಿ, ಖೊಟಿಗ, ಖೊಟ್ಟಿ ರೂಪಗಳಿವೆ;
- ಅಪಚಾರ; ಕೆಟ್ಟ ಮನಸ್ಸಿನ ವ್ಯಕ್ತಿ; ನಾಚಿಕೆಗೇಡಿ; ನೀಚ ಬುದ್ಧಿಯುಳ್ಳವ; ಹೊಟ್ಟೆಕಿಚ್ಚು; ವಂಚಕ; Offence, impropriety, wicked minded fellow, base, rascle, bastard;
- ಸುಳ್ಳು; ನಕಲಿ(ಬಾ.ಜಿ); False, lie, impostor;
- ಕೆಟ್ಟದ್ದು; ಸತ್ಯವಲ್ಲದ್ದು; ಸಲ್ಲದ್ದು; ಮೋಸ, ಕಪಟತನದಿಂದ ಕೂಡಿರುವಂಥದು; Bad, not true, cheat, deceive, betrayal;
- ಮೋಸದ ನಾಣ್ಯ ಅಥವಾ ಖೋಟಿ ನಾಣ್ಯ; Fake note or coin;
- ಒರಟು ಸ್ವಭಾವಿ; ಮೊಂಡುತನ ಮಾಡುವವ; Barbaric, uncivilized, rude, unpolished, stubborn, obstinate, insolent;
  ಪ್ರ: 'ಹುಸಾರ್ರೀ....ಆ ವ್ಯಕ್ತಿ ಬಾಳಾ ಖೊಟ್ಟಿ ಅದಾನ'.

ಖೋಟಾ Khōṭā:
- ನಕಲಿ; ಕೃತ್ರಿಮವಾದುದು; Fake, duplicate, artificial;
- ***—ಖೋಟಾ ಕಲಾಬತ್ತು*** : ಖೋಟಾಜರಿ; ಕೃತಕ ಎಳೆಯ ಮೇಲೆ ತಾಮ್ರದ ರೇಖನ್ನು ಹುರಿ ಮಾಡಿ ಚಿನ್ನದ ಬಣ್ಣದ ಮೆರುಗನ್ನು ನೀಡಿದ ಜರಿ (ಬೆಂ.ಗ್ರಾ.ಜಿ). Duplicate gold coated.

ಖೋಡ Khōḍa:
- ಕುಂಟ; ಹೆಳವ; ಮಲ್ಲಯುದ್ಧದಲ್ಲಿ ಒಂದು ವರಸೆ; Cripple, lame, a hold in wrestling;
- ಸೊಕ್ಕು; ಅಹಂಕಾರ; ಕೊಬ್ಬು. Ego, arrogance, conceit, insolence.

ಖೋಡಿ Khōḍi:
- ಕೆಟ್ಟ ಸ್ವಭಾವಿ; ಘಾಟಿ ಹೆಂಗಸು(ಬೆಳ.ಜಿ); Ill-natured, shrew;
- ನೀಚ; ದುಷ್ಟ; ದರಿದ್ರ; ಬುದ್ಧಿಗೇಡಿ; ಹೀನ ವ್ಯಕ್ತಿತ್ವ ಉಳ್ಳವ; ಕೆಡುಕ; ಹುಚ್ಚು ಸ್ವಭಾವಿ; ಪಾಪಿ; ದುರುಳ; ಕಿಡಿಗೇಡಿ; ಖೂಳ; Lunatic, wicked, wretch, bad, evil;
  ಪ್ರ: 'ಖೋಡೀನ ತಂದು ನಡುಮನ್ಯಾಗ ಇಟ್ಕೊಂಡಂಗೆ';
- ದಡ್ಡ; ಮಂದಬುದ್ಧಿಯುಳ್ಳವ; ತಿಳಿವಳಿಕೆ ಅರಿಯದವ; ಬೇಡವಾದ ಅಥವಾ ಅನುಪಯುಕ್ತ ವ್ಯಕ್ತಿ; Blockhead, stupid, idiot, useless person;
- ಒಂದು ಬೈಗುಳ ಪದ;
- ತಗ್ಗುಹಾದಿ; ನೀರು ಬೀಳುವ ಜಾಗ; Slope, shallow;
  ಪ್ರ: 'ಖೋಡಿ ಮಳಿಗ ಗಾಡಿ ಹೋದಾದೆ';
- ಅನುಕ್ಷಣ(ಮಲ್ಲಿಗೆ ದಂಡೆ);
- ಅಪರಾಧ; ಕಳಂಕ; Crime, guilt, stain, blame;

- ಒಬ್ಬಂಟಿಯನ್ನು ಕುರಿತು ಮಾತನಾಡುವಾಗ ಪದ ಬಳಕೆ;

  ಪ್ರ: 'ಈ ಖೋಡೀನ ಗೆಳೆತನ ಸಾಕಾಗಿತ್ತು';

- ಕೊರತೆ; ನ್ಯೂನತೆ; Shortage, weakness;
- ಕೆಡುಕು; ಹಾನಿ; ಕೇಡು. Loss, perish.

ಖೋಡಿಮಾರ Khōḍimāra:

- ಒಂದು ಬೆಡಗು ಅಥವಾ ವಂಶ ಅಥವಾ ಕುಲ; ಅಡವಿಚಂಚರು ಬುಡಕಟ್ಟು ಸಮುದಾಯದವರಲ್ಲಿ ರೂಢಿ. A clan, cult, lineage.

ಖೋತಾ Khōtā:

- ಕಡಿಮೆ; ನಷ್ಟ; ತೀರಿಹೋಗು; ಮುಗಿಯುವಿಕೆ; ಕಡಿತಗೊಳಿಸುವಿಕೆ; ಭಂಗ; Less, loss, close, complete, finish, reduction, violate;
- ಗ್ರಾಮದ ಅಧಿಕಾರಿ; ಕಂದಾಯ ವಸೂಲಿ ಮಾಡಿ ಸರ್ಕಾರಕ್ಕೆ ತುಂಬುವವ. Revenue officer, village accountant.

ಖೋದ್ದಾ Khōddā :

- ಒಂದು ಬಗೆಯ ಆಹಾರ ಪದಾರ್ಥ; ಗೋದಿಹಿಟ್ಟಿನಿಂದ ತಯಾರಿಸಿದ ರೊಟ್ಟಿಯನ್ನು ಮಾಂಸದ ಸಾಂಬಾರಿನ ಜೊತೆ ಹಾಕಿ ಬೇಯಿಸುವುದು; A kind of dish made of wheat flour;
- 'ಕಂಜರಭಾಟ' ಬುಡಕಟ್ಟು ಸಮುದಾಯದವರಲ್ಲಿ ರೂಢಿಯಲ್ಲಿರುವ ಜನಪ್ರಿಯ ಆಹಾರ. A popular dish in `Kanjarabhat' community.

ಖೋಲಿ Khōli:

- ಖೊಲ್ಲಿ, ಕೊಲ್ಲಿ, ಕೋಲಿ ರೂಪಗಳೂ ಬಳಕೆಯಲ್ಲಿವೆ;
- ಕೋಣೆ; ಕೊಠಡಿ; A room, chamber;

  ಪ್ರ: 'ನನಗೇನು, ಒಂದು ಖೋಲಿ ಆದರೆ ಆತು' ('ತಾಯಿ ಸಾಹೇಬ');

  ಪ್ರ: 'ಏಳು ಖೋಲಿ ಮುತ್ತಿನ ಹರಳು ತುಂಬಿವೆ' (ಗೊಂದಲಿಗರ ಕಥೆಗಳು).

ಖೋಳ್‌ಘಾಲೇರೊ Khōḷghālēro:

- 'ಲಂಬಾಣಿಗರು' ಬುಡಕಟ್ಟು ಸಮುದಾಯದವರಲ್ಲಿ ರೂಢಿಯಲ್ಲಿರುವ ಒಂದು ಆಚರಣೆ; ಮಗುವನ್ನು ಶಾಸ್ತ್ರೋಕ್ತವಾಗಿ ದತ್ತು ಪಡೆಯುವ ಪದ್ಧತಿಗೆ ಹೀಗೆ ಹೇಳುವರು; ಇದಕ್ಕೆ 'ಮಡಿಲಿಗೆ ಹಾಕುವುದು' ಎನ್ನುವರು; A tradition in `Lambani' community, adoption;
- ದತ್ತು ಸ್ವೀಕರಿಸುವ ಆಚರಣೆಯಲ್ಲಿ ಹಡೆದ ತಂದೆ–ತಾಯಿಯರು ತಮ್ಮ ಮಗುವನ್ನು ಸಾಕು ತಂದೆ–ತಾಯಿಯರ ಮಡಿಲಿಗೆ ತಾಂಡಾದ ಯಜಮಾನರು, ಹಿರಿಯರ ಸಮಕ್ಷಮದಲ್ಲಿ ಶಾಸ್ತ್ರೋಕ್ತವಾಗಿ ಹಾಕುವುದು ಸಂಪ್ರದಾಯ; ನಂತರ ದತ್ತು ಪಡೆದವರ ಸಮಸ್ತ ಚರಾಸ್ತಿ–ಸ್ಥಿರಾಸ್ತಿಗಳಿಗೆ ಅವನೇ ಒಡೆಯನಾಗುತ್ತಾನೆಂದು ಘೋಷಿಸುವುದು ಉಂಟು;

  In the process of adoption, a legal proceeding creates a parent child relation between persons not related by blood; the adopted child is entitled to all privileges belonging to a natural child of the adoptive parents(including the right to inherit);

- ಲಂಬಾಣಿಗರಲ್ಲಿ ಇತರೆ ಸಮುದಾಯದ ಮಕ್ಕಳನ್ನು ಮೊದಲು ತಮ್ಮ ಸಮುದಾಯಕ್ಕೆ ಸೇರಿಸಿಕೊಂಡು ನಂತರ ದತ್ತು ಪಡೆಯುವುದು ಪದ್ಧತಿ; ಈ ವಿಧಾನದ ಮೂಲಕ ದತ್ತು ಪಡೆದ ಮಕ್ಕಳನ್ನು ಅವರ ಭಾಷೆಯಲ್ಲಿ 'ಜಾಂಗಡ್' ಎನ್ನುವರು. In Lambani

  community adoption tradition takes a long process; first they join the child which is to be adopted to the community, later they perform the act of adoption; such adopted children(from this process) are called `Jaungad'.

ಅನುಬಂಧ

ಪದಸಂಗ್ರಾಹಕರ ಹೆಸರು

ಅಶೋಕ್‌ಆಳ್ವಾ
ಆನಂದಮೂರ್ತಿ
ಈರಯ್ಯ ಕಿಲ್ಲೇದಾರ್
ಈಶ್ವರಚಂದ್ರ ಬೆಟಗೇರಿ
ಈಶ್ವರಪ್ಪ ಎಂ.ಜಿ.
ಕನರಾಡಿ ವಾದಿರಾಜಭಟ್
ಕರೀಂ ಉದ್ದೀನ್
ಕಾವ್ಯಶ್ರೀ ಮಹಾಗಾಂವಕರ್
ಕೃಷ್ಣಪ್ಪ ಎಚ್.ಟಿ.
ಕೃಷ್ಣಯ್ಯ ಎಸ್.ಎ.
ಗೋಪಾಲ್ ಕೆ.ಆರ್.
ಚಂದ್ರು ಕಾಳೇನಹಳ್ಳಿ
ದೀಪಾ ಕೌಜಲಗಿ
ದೇಶಾಂಶ ಹುಡ್ಗಿ
ನಂದೀಶಪ್ಪ
ನಂದೀಶ್ವರ್. ಎನ್
ನಾವಲಗಿ ಸಿ.ಕೆ.
ನೇತ್ರಾವತಿ
ಪದ್ಮಪ್ರಸಾದ್ ಎಸ್.ಪಿ.
ಪಾಟೀಲ ಬಿ.ವಿ.
ಪಾರ್ಥ
ಪುಟ್ಟರಾಜು
ಪ್ರಕಾಶ ಬೊಮ್ಮಣ್ಣ ನಾಯಕ
ಬಸವರಾಜ್ ಮಸೂತಿ
ಬೀರಣ್ಣನಾಯಕ
ಭಾನುಮತಿ ವೈ.ಸಿ.
ಭಾರತಿ ಮರವಂತೆ
ಮಂಜುಳಾ ಬಾದಾಮಿ
ಮಂದಾಕಿನಿ ಪುರೋಹಿತ
ಮಹದೇವ ಶಂಕನಪುರ
ಮಹಾಲಿಂಗಪ್ಪ
ಮುದ್ದುವೀರಪ್ಪ ಕೆ.ವಿ.
ಮುರಳೀಧರ
ಮೇಕನಗದ್ದೆ ಲಕ್ಷ್ಮಣಗೌಡ
ರಂಗಸ್ವಾಮಿ ಎಂ.ಜಿ.
ರಘುನಾಥ್ ಸ.
ರಘುಶಂಖ ಭಾತಂಬ್ರಾ
ರಮಾಕಾಂತಭಟ್ಟ
ರವಿ ಅರಗೋಳ
ರಾಮಣ್ಣ ಯು.ಎಸ್.
ರಾಮುಮೂಲಗಿ
ಲಕ್ಷ್ಮಣಗೌಡ
ವಾಡೇದ ಆರ್.ಎಸ್.
ವಿಠಲಪೇರುಮನೆ
ವೆಂಕಟೇಶ್ ಕೆ.ಜಿ.
ಶಂಕರಗೌಡ
ಶಕುಂತಲಾ ನಾವಲಗಿ
ಶರಣಪ್ಪ ನಿಡಲೇಸಿ ಕೆ.
ಶಾಂತಾ ಇಮ್ರಾಪುರ
ಶಿವರುದ್ರಯ್ಯ ಡಿ.
ಶೇಖರಾಚಾರಿ
ಶೋಭಾ ಅನಂತಯ್ಯ
ಶ್ರೀಪಾದ ಬಿಚ್ಚುಗತ್ತಿ
ಸಂಕಮ್ಮ
ಸಂತೆಕಸಲಗೆರೆ ಪ್ರಕಾಶ್
ಸವಿತಾ ಕೊಟಬಾಗಿ
ಸಹನಾ ಕಾಂತಬೈಲು
ಸಾಯಿಗೀತಾ
ಹನೂರು ಚೆನ್ನಪ್ಪ

ಶಾಸನೋಕ್ತ ಸ್ಥಳನಾಮ ಸಂಗ್ರಹ ಮತ್ತು ವಿವರಣೆ

ಡಾ. ಎಂ.ಜಿ.ಮಂಜುನಾಥ್

ಡಾ. ಎಸ್.ಎಂ.ಧನರಾಜ್

ಇಂಗ್ಲಿಷ್ ಅನುವಾದ

ಎಲ್. ಹೊನ್ನೇಗೌಡ

ಎನ್.ಎಸ್.ಚಂದ್ರಣ್ಣ

ಜಿ.ಎಸ್.ದಯಾನಂದ ಸಾಗರ್

ಆಕರ ಗ್ರಂಥಸೂಚಿ

ಅಂಬಳಿಕೆ ಹಿರಿಯಣ್ಣ	ಕಚ್ಚೆಗೌಳಿಗರ ಸಂಸ್ಕೃತಿ; ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು
ಅಂಬಳಿಕೆ ಹಿರಿಯಣ್ಣ	ಜಾನಪದ ಪರಿಭಾವನ; ಸಂವಹನ ಪ್ರಕಾಶನ, ಶಿವರಾಂಪೇಟೆ, ಮೈಸೂರು – ೨೦೦೧
ಅಂಬಳಿಕೆ ಹಿರಿಯಣ್ಣ	ಜಾನಪದ ವೀಕ್ಷಣೆ; ಪ್ರಜ್ವಲ ಪ್ರಕಾಶನ, ಮೈಸೂರು – ೧೯೮೭
ಅಂಬಳಿಕೆ ಹಿರಿಯಣ್ಣ	ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು –೧೯೯೯
ಅಂಬಳಿಕೆ ಹಿರಿಯಣ್ಣ	ಕಿನ್ನರಿ ಸಂಪ್ರದಾಯದ ಕಾವ್ಯಗಳು; ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – ೧೯೭೯
ಅಕ್ಕಿ ಡಿ.ಎನ್. ಸುಮಂಗಲಾ ಡಿ ಅಕ್ಕಿ	ಶ್ರೀಮತಿ ಶ್ರೀಕಾಂತಮ್ಮ ಅಕ್ಕಿ ಅವರ ಜೈನ ಜನಪದ ಹಾಡುಗಳು; ರತ್ನತ್ರಯ ಪ್ರಕಾಶನ, ಕುವೆಂಪುನಗರ, ಮೈಸೂರು – ೧೯೯೯
ಅಪ್ಪಾಜಿ ಎಸ್. ಸಿಂಧೆ ಚಾವಡೆ ಲೋಕೇಶ್. ಕೆ	ಗೋಸಂಗಿ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೨೦೦೮
ಅಯ್ ಎಚ್. ತಿಮ್ಮಾಪುರ	ಬಯಲಾಟ ಕಥೆಗಳು: ಸಾಂಸ್ಕೃತಿಕ ಅಧ್ಯಯನ; ಸೂರ್ಯ ಪ್ರಕಾಶನ, ಚಿತ್ರದುರ್ಗ – ೨೦೦೫
ಅರವಿಂದ ಮಾಲಗತ್ತಿ	ಆಣೀಪೀಣಿ (ಅಧ್ಯಯನ ಸಂಗ್ರಹ); ಶೈಲ ಪ್ರಕಾಶನ, ಮುದ್ದೇಬಿಹಾಳ – ೧೯೮೩
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ	ಕನ್ನಡ ವಿಷಯ ವಿಶ್ವಕೋಶ : ಜಾನಪದ; ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು– ೨೦೦೬
ಅರ್ಚಕ ಬಿ. ರಂಗಸ್ವಾಮಿ	ಹುಟ್ಟಿದ ಹಳ್ಳಿ; ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು – ೧೯೬೯
ಅಶೋಕ ಆಳ್ವ ಕೆ.	ಕೊಡಗಿನ ಜನಪದ ಕುಣಿತಗಳ ಸಾಂಸ್ಕೃತಿಕ ಅಧ್ಯಯನ; ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ – ೨೦೦೩
Edgar Thurston	Casts and Tribes of Southern India; Govt press, Madras - 1909
ಇಮ್ರಾಪುರ ಎಸ್.ಜಿ	ಜಾನಪದ ಸಾಹಿತ್ಯ ದರ್ಶನ (ಭಾಗ – ೧೬); ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೧೯೯೪
Bhashal mission	Five Hundred Indian Plants; Manglore - 1908
ಈಶ್ವರಪ್ಪ ಎಂ.ಜಿ	ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ೧೯೯೫

ಈಶ್ವರಪ್ಪ ಎಂ.ಜಿ. — ಜಾನಪದ ಇಬ್ಬನಿಗಳು: ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೧೯೯೯

ಉಪಾಧ್ಯಾಯ ಯು.ಪಿ. — ತುಳು ನಿಘಂಟು, ಸಂ. ೧–೬; ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ – ೧೯೯೮

Havanur L.g, — Karnataka Backward classes Commission Report, Volume 1-3; Government of karnataka - 1975

ಕ.ರಾ.ಕೃ — ಅಂಬಿಗರ ಗಂಗ (ಒಂಬತ್ತು ಜನಪದ ಕಥನಗೀತೆಗಳು); ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು – ೧೯೬೨

ಕ.ರಾ.ಕೃ — ಜನಪದ ಹಾಸ್ಯ ಲಹರಿ; ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು –೧೯೬೫

ಕ.ರಾ.ಕೃ — ಜೇನ ಹನಿಗಳು; ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು – ೧೯೬೫

ಕ.ರಾ.ಕೃ — ಮೈಲಾರಲಿಂಗ – ಈರಬಡಪ್ಪ; ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು – ೧೯೬೩

ಕ.ರಾ.ಕೃ — ಸಂಪಿಗೆ ಅರಳಾವೆ; ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು – ೧೯೬೨

ಕ.ರಾ.ಕೃ — ಹೆಣ್ಣು ಕೊಟ್ಟೇವು; ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು – ೧೯೬೬

ಕ.ರಾ.ಕೃ — ಕಾಳಿಂಗರಾಯ – ಉಚ್ಚಂಗಿ ದುರ್ಗದ ಇಲಿಸವ್ವ ಹಾಡಿದ ಜಾನಪದ ಕಥನಗೀತ; ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು – ೧೯೬೩

ಕ.ರಾ.ಕೃ — ಗುಡ್ಡಾಗಾಡಿನ ಹಾಡ್ಗತೆಗಳು; ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು – ೧೯೬೩

ಕ.ರಾ.ಕೃ — ಮಲ್ಲಿಗೆ ನಗುತಾವೆ; ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು – ೧೯೬೫

ಕ.ರಾ.ಕೃ. — ನಾಡ ಮೇಲೆಲ್ಲಾ ಹರಿದಾವೆ(ಜನಪದ ಭಕ್ತಿಗೀತೆಗಳು); ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು – ೧೯೬೨

ಕ.ರಾ.ಕೃ. — ಶ್ರೀ ಆದಿಚುಂಚನಗಿರಿ (ಜನಪದ ಭಕ್ತಿಗೀತೆಗಳು); ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು – ೧೯೬೦

ಕರ್ನಾಟಕ ಜಾನಪದ ಅಕಾಡೆಮಿ — ಕನ್ನಡ ಜಾನಪದ ನಿಘಂಟು, ಸಂ. ೧–೨; ಬೆಂಗಳೂರು – ೨೦೧೧

ಕನ್ನಡ ಸಾಹಿತ್ಯ ಪರಿಷತ್ತು — ಕನ್ನಡ ನಿಘಂಟು, ಸಂ.೧೮; ಬೆಂಗಳೂರು – ೧೯೭೦

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ — ಕನ್ನಡ ವಿಷಯ ವಿಶ್ವಕೋಶ, ಸಂ–೨, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು– ೨೦೦೭

ಕಮಲಾಕ್ಷ ಕೆ. — ಕೇರಳದ ಜನಪದ ವೀರ ತಚ್ಚೋಳಿ ಒದೇನನ್; ವಿಸ್ತರಣೆ ಮತ್ತು ಸಲಹಾ ಕೇಂದ್ರ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ, ಶಿಗ್ಗಾವಿ, ಹಾವೇರಿ – ೨೦೧೩

ಕರೀಂಖಾನ್ ಎಸ್.ಕೆ. — ಜನಪದ ಆಟಗಳು; ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

ಕಲಬುರ್ಗಿ ಎಂ.ಎಂ. — ಉತ್ತರ ಕರ್ನಾಟಕದ ಜನಪದ ಪದ್ಯ ಸಾಹಿತ್ಯ; ಸಮಾಜ ಪುಸ್ತಕಾಲಯ, ಧಾರವಾಡ – ೧೯೭೮

ಕಲಬುರ್ಗಿ ಎಂ.ಎಂ. — ಜನಪದ ಸಾಹಿತ್ಯ ದರ್ಶನ (ಭಾಗ – ೧೧); ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೧೯೮೩

ಕಲಬುರ್ಗಿ ಎಂ.ಎಂ. — ಜಾನಪದ ಸಾಹಿತ್ಯ ದರ್ಶನ (ಭಾಗ : ೧೨); ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೧೯೯೪

ಕಾಪಸೆ ರೇವಪ್ಪನವರು ಹಲಸಂಗಿ, — ಮಲ್ಲಿಗೆ ದಂಡೆ; ಸಮಾಜ ಪುಸ್ತಕಾಲಯ, ಶಿವಾಜಿಬೀದಿ, ಧಾರವಾಡ –೨೦೦೦

ಕಾಶೀನಾಥ ಅ. ಚವ್ಹಾಣ, ಕಲ್ಲಹಂಗಾರಗಾ — ಉತ್ತರ ಕರ್ನಾಟಕದ ಕಲ್ಗಿ – ತುರಾಯಿ ಗೀಗೀ ಪದಗಳು; ಅಮೃತ ಪ್ರಕಾಶನ, ಗುಲಬರ್ಗಾ – ೧೯೯೫

ಕಾಳೇಗೌಡ ನಾಗವಾರ — ಬಯಲುಸೀಮೆಯ ಲಾವಣಿಗಳು; ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – ೧೯೭೩

ಕಾಳೇಗೌಡ ನಾಗವಾರ, ಕ್ಯಾತನಹಳ್ಳಿ ರಾಮಣ್ಣ — ನಡುನೀರ ತಂಪು; ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು – ೨೦೧೦

ಕಾಳೇಗೌಡ ನಾಗವಾರ, ಹುಚ್ಚಪ್ಪ ಮಾಸ್ತರ್ ಎನ್. — ಗಿರಿಜನ ಸಂಸ್ಕೃತಿ; ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಬೆಂಗಳೂರು – ೨೦೦೦

ಕಿಕ್ಕೇರಿ ನಾರಾಯಣ — ಜೇನುಕುರುಬ ಬುಡಕಟ್ಟು ಜನಾಂಗದ ಅವ್ಯಕ್ತ ಸಾಂಸ್ಕೃತಿಕ ಪರಂಪರೆ; ನ್ಯಾಷನಲ್ ಫೋಕ್‌ಲೋರ್ ಸಪೋರ್ಟ್ ಸೆಂಟರ್, ನುಂಗಂಬಾಕ್ಕಂ, ಚೆನ್ನೈ – ೨೦೧೧

ಕಿಟ್ಟೆಲ್ ಎಫ್. — ಕನ್ನಡ – ಇಂಗ್ಲಿಷ್ ಡಿಕ್ಷನರಿ; (Asian Educational Services) New Delhi - Chennai – 2007

ಕುಪ್ಪೆ ನಾಗರಾಜ — ಅಲೆಮಾರಿಯ ಅಂತರಂಗ; ನವಕರ್ನಾಟಕ ಪ್ರಕಾಶನ, ಬೆಂಗಳೂರು – ೨೦೧೩

ಕುಪ್ಪೆ ನಾಗರಾಜ — ದೊಂಬಿದಾಸ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೨೦೦೮

ಕುಮುದ ಜಿ.ಸುಶೀಲಮ್ಮ — ಹಕ್ಕಿಪಿಕ್ಕಿ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೨೦೦೮

ಕುಮುದ ಜಿ. ಸುಶೀಲಮ್ಮ — ಹಕ್ಕಿಪಿಕ್ಕಿಯರು; ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ - ೨೦೦೪

ಕುಲಕರ್ಣಿ ಆರ್.ಜಿ. — ಕೃಷ್ಣಪಾರಿಜಾತ; ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು - ೧೯೭೨

ಕೃಷ್ಣಭಟ್ಟ ಕುಕ್ಕಿಲ — ಪಾರ್ತಿಸುಬ್ಬನ ಯಕ್ಷಗಾನಗಳು; ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-೧೯೭೫

ಕೃಷ್ಣಮೂರ್ತಿ ಎನ್. — ಒಡಿಗ ಬುಡಕಟ್ಟು ಸಮುದಾಯ; ಪ್ರಿಯದರ್ಶಿನಿ ಪ್ರಕಾಶನ, ವಿಜಯನಗರ ೨ನೇ ಹಂತ, ಬೆಂಗಳೂರು-೨೦೦೯

ಕೃಷ್ಣಮೂರ್ತಿ ಹನೂರು — ಮ್ಯಾಸಬೇಡರ ಸಂಸ್ಕೃತಿ; ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಕೃಷ್ಣಮೂರ್ತಿ ಹನೂರು — ಮ್ಯಾಸಬೇಡರು; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು - ೨೦೦೮

ಕೃಷ್ಣಯ್ಯ ಎಸ್.ಎ. — ಜಾನಪದ ದಾಖಲಾತಿ ಸಂಗ್ರಹಾಲಯ; ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ - ೨೦೦೪

ಕೆಂಪಯ್ಯ ಜಿ.ಎಸ್ — ಉಪ್ಪಿನ ಕೊಳಗ ಒಕ್ಕಲಿಗರು ಒಂದು ಸಾಂಸ್ಕೃತಿಕ ಅಧ್ಯಯನ; ಗೋಧೂಳಿ ಪ್ರಕಾಶನ, ೩೫, ಗೋಧೂಳಿ, ೫ನೇ ಬಿ ಅಡ್ಡರಸ್ತೆ, ಸಿಂಡಿಕೇಟ್ ಬ್ಯಾಂಕ್ ಬಡಾವಣೆ, ತುಂಗಾನಗರ, ಬೆಂಗಳೂರು - ೯೧, ಮೊದಲ ಮುದ್ರಣ - ೨೦೦೯

ಕೇಶವನ್ ಪ್ರಸಾದ್ ಕೆ. — ಬುಂಡೆಬೆಸ್ತರು; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ - ೨೦೧೦

ಕೇಶವನ್ ಪ್ರಸಾದ್ ಕೆ. — ಮಲೆ ಮಾದೇಶ್ವರ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ - ೧೯೯೭

ಕೇಶವನ್ ಪ್ರಸಾದ್ ಕೆ. — ಸೋಲಿಗರು ಹಾಡಿದ ಬಿಳಿಗಿರಿ ರಂಗನ ಕಾವ್ಯ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ - ೨೦೦೫

ಕೇಶವಪ್ರಸಾದ್ — ಕಪ್ಪೆ ಹೊಲೆಯರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಕೇಶವಭಟ್ಟ ಓ. — ಹವ್ಯಕರ ಶೋಭಾನೆಗಳು; ಚಿರಸಾಹಿತ್ಯ ಪ್ರಕಾಶನ, ಬೆಂಗಳೂರು - ೧೯೮೬

ಕೇಶವಮೂರ್ತಿ ಎಚ್.ಎಲ್.
ಕೃಷ್ಣಪ್ಪಗೌಡ ಅರಕೆರೆ ಬಿ.ಎಸ್.
ಕೃಷ್ಣಪ್ರಸಾದ್
ವೆಂಕಟಕೃಷ್ಣ ತೈಲೂರು — ಬದುಕು (ಸ್ಮರಣ ಗ್ರಂಥ); ಮಂಡ್ಯ ಜಿಲ್ಲಾ ಜಾನಪದ ಪರಿಷತ್ತು, ಮಂಡ್ಯ - ೧೯೮೭

ಕೇಶವಶರ್ಮ — ತೆಂಕುತಿಟ್ಟು ಯಕ್ಷಗಾನ ಮುಖವರ್ಣಿಕೆ; ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ - ೨೦೦೪

ಕೊಳಂಬೆ ಪುಟ್ಟಣ್ಣಗೌಡರು — ಅಚ್ಚಗನ್ನಡ ನುಡಿಕೋಶ; ಪುಸ್ತಕ ಪ್ರಕಾಶನ, ಮೈಸೂರು - ೨೦೦೨

ಕೋಟಗಾನಹಳ್ಳಿ ರಾಮಯ್ಯ — ಸಿಂಧ್ ಮಾದಿಗರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು – ೧೯೯೩

ಕೋಟಿ ಎಸ್.ಜಿ — ಬಾಗಲಕೋಟೆ ಜಿಲ್ಲೆಯ ಜನಪದ ಹಾಡುಗಳು; ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬಾಗಲಕೋಟೆ – ೨೦೧೧

ಕೋರನ ಸರಸ್ವತಿ ಪ್ರಕಾಶ್ — ಕೊಡಗು ಗೌಡ ಸಮುದಾಯ; ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್, ಕೃಷ್ಣಾಪುರದೊಡ್ಡಿ – ೨೦೧೦

ಕ್ಯಾತನಹಳ್ಳಿ ರಾಮಣ್ಣ — ಕೊಂತಿಪೂಜೆ: ಒಂದು ಅಧ್ಯಯನ; ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – ೧೯೭೨

ಕ್ಯಾತನಹಳ್ಳಿ ರಾಮಣ್ಣ — ಗೊಂದಲಿಗರ ಕಥೆಗಳು; ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – ೧೯೭೨

ಕ್ಯಾತನಹಳ್ಳಿ ರಾಮಣ್ಣ — ಗೊಂದಲಿಗರು: ಒಂದು ಅಧ್ಯಯನ; ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು – ೧೯೮೨

ಕ್ಯಾತನಹಳ್ಳಿ ರಾಮಣ್ಣ — ಚೌಡಿಕೆ ಮೇಳ; ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ – ೨೦೦೪

ಕ್ಯಾತನಹಳ್ಳಿ ರಾಮಣ್ಣ — ಜನಪದ ನಿಘಂಟು; ಅಚ್ಚೆ ಹೊತ್ತಗೆ, ಕ್ಯಾತನಹಳ್ಳಿ, ಮಂಡ್ಯ ಜಿಲ್ಲೆ – ೧೯೮೭

ಕ್ಯಾತನಹಳ್ಳಿ ರಾಮಣ್ಣ — ಬೀದರ ಜಿಲ್ಲೆಯ ಜನಪದ ಗೀತೆಗಳು; ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – ೧೯೭೬

ಖಂಡೋಬ ಪಿ.ಕೆ. — ಸುಡುಗಾಡು ಸಿದ್ದರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಗಂಗಾಧರ — ದೈವಜ□ ಗೊಂದಲಿಗರು; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೨೦೧೦

ಗಂಗಾಧರ — ದೈವಜ□ ಬುಡಕಟ್ಟು ಸಮಾಜ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೨೦೦೦

ಗಂಗಾನಾಯಕ್ ಕೆ.ಎನ್. (ಪ್ರಸಂ.) — ಭಾಷಾವಿಜಾ□ –೧; ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು – ೨೦೧೧

ಗಂಗಾನಾಯಕ್ ಕೆ.ಎನ್. (ಪ್ರಸಂ.) — ಭಾಷಾವಿಜಾ□ –೨; ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು – ೨೦೧೧

ಗಂಗಾನಾಯ್ಕ — ಲಂಬಾಣಿಗರು; ಕನ್ನಡ ಭಾರತಿ, ಕನ್ನಡ ವಿಶ್ವವಿದ್ಯಾನಿಲಯ, ಶಿವಮೊಗ್ಗ – ೨೦೦೪

ಗಂಟಿ ಎಂ.ಎಸ್	ಸುಡುಗಾಡು ಸಿದ್ದ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೨೦೦೮
ಗವಿಸಿದ್ದಪ್ಪ ಹಂದ್ರಾಳ	ಬೈಗುಳಗಳಲ್ಲಿ ಮಹಿಳೆ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೨೦೧೦
ಗೀತಾ ನಾಗಭೂಷಣ	ದುರಗೆಮುರಗಿಯರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು
ಗುರುಲಿಂಗಯ್ಯ .ಎಂ ನಾಗಪ್ಪ. ವಿ	ಕಾಡುಗೊಲ್ಲ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೨೦೦೮
ಗುರುಸ್ವಾಮಿ ಗಣಾಚಾರಿ	'ಗೀತ ರಾಮಾಯಣ' ತ್ರಿಪದಿಗಳು; ಮಕ್ಕಳ ಸಾಹಿತ್ಯ ಸಮಾಗಮ, ಬಾಗಲಕೋಟೆ – ೨೦೧೩
ಗೋವಿಂದರಾಜು ಟಿ.	ಕಣ (ಜಾನಪದ ಅಧ್ಯಯನ); ಸಂವಹನ, ಶಿವರಾಂಪೇಟೆ, ಮೈಸೂರು – ೨೦೦೦
ಗೋವಿಂದರಾಜು ಟಿ.	ಗೊಂಬೆರಾಮರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು
ಗೋವಿಂದರಾಜು ಟಿ.	ಚೆನ್ನಾದೇವಿ ಅಗ್ರಹಾರ ಜಾನಪದೀಯ ಅಧ್ಯಯನ; ರಶ್ಮಿ ಮುದ್ರಣ, ಸುಧಾಮನಗರ, ಬೆಂಗಳೂರು – ೧೯೯೩
ಗೋವಿಂದರಾಜು ಟಿ.	ಜನಪದ ವೈದ್ಯ; ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಬೆಂಗಳೂರು – ೨೦೦೩
ಗೋವಿಂದರಾಜು ಟಿ.	ಹಳ್ಳೀಮನೆ (ಭೌತಿಕ ಮತ್ತು ಸಾಂಸ್ಕೃತಿಕ ಆಯಾಮಗಳ ಅಧ್ಯಯನ); ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು – ೨೦೦೬
ಚಂದ್ರಪ್ಪ ಅಜ್ಜಂಪುರ ಎಚ್.	ಕುರುಬರ ಕುರುಹುಗಳು; ವಿದ್ಯಾನಿಧಿ ಪ್ರಕಾಶನ, ಗದಗ – ೨೦೧೧
ಚಂದ್ರಪ್ಪ ಎನ್.	ಮೊಂಡರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು
ಚಂದ್ರಪ್ಪ ಎನ್.ದುಷಂತ್	ಹಂಡಿ ಜೋಗಿ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೨೦೦೮
ಚಂದ್ರಪ್ಪ ಹೆಬ್ಬಾಳಕರ ಮರಿಯಪ್ಪ ಹೊಸಮನಿ	ಬೀದರ್ ಜಿಲ್ಲೆಯ ಮೋರಮ್ ಪದಗಳು; ಗಡಿನಾಡು ಕನ್ನಡ ಸಂಘ, ಕೇಂದ್ರ ಸಮಿತಿ(ರಿ), ಬೀದರ – ೨೦೦೯
ಚಂದ್ರಬಾಬು	ಮುಳಬಾಗಿಲು ಜನಪದ ಕಾವಡಿ ಹಬ್ಬಗಳು– ಸಾಂಸ್ಕೃತಿಕ ಅಧ್ಯಯನ; ಅಂಜಲಿ ಪ್ರಕಾಶನ, ಕೋಲಾರ ಜಿಲ್ಲೆ – ೨೦೧೦
ಚಂದ್ರಶೇಖರ ಕಂಬಾರ ಜಯಪ್ರಕಾಶ್ ಬರಗೂರು	ಮುತ್ತು ಮುತ್ತು ತ್ವಾಟ; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ೧೯೮೧
ಚಂದ್ರಶೇಖರ ಪಾಟೀಲ	ಅಪ್ಪ; ಸಮಾಜ ಪುಸ್ತಕಾಲಯ, ಧಾರವಾಡ – ೧೯೮೧
ಚಂದ್ರಶೇಖರ ಪಾಟೀಲ	ಕುಂಟಾ ಕುಂಟಾ ಕುರವತ್ತಿ; ಸಮಾಜ ಪುಸ್ತಕಾಲಯ, ಧಾರವಾಡ – ೧೯೮೩

ಚಂದ್ರಶೇಖರ ಪಾಟೀಲ	ಗುರ್ತಿನವರು; ಸಮಾಜ ಪುಸ್ತಕಾಲಯ, ಧಾರವಾಡ – ೧೯೮೩
ಚಂದ್ರಶೇಖರ ಪಾಟೀಲ	ಟಿಂಗರ ಬುಡ್ಡಣ್ಣ; ಸಮಾಜ ಪುಸ್ತಕಾಲಯ, ಧಾರವಾಡ – ೧೯೮೩
ಚಂದ್ರು ಕಾಳೇನಹಳ್ಳಿ	ಸೋಲಿಗರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು – ೧೯೯೩
ಚಕ್ಕೆರೆ ಶಿವಶಂಕರ್	ಗೊರವರ ಸಂಸ್ಕೃತಿ; ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು
ಚಕ್ಕೆರೆ ಶಿವಶಂಕರ್	ಗೊರವರ ಕೆಂಚಮಲ್ಲಯ್ಯ ಹಾಡಿರುವ ಮೈಲಾರ ಮಾಳಮ್ಮ ಮತ್ತು ನೀಲವೇಣಿ; ಸಾಗರ್ ಪ್ರಕಾಶನ, ಬೆಂಗಳೂರು – ೨೦೦೭
ಚಕ್ಕೆರೆ ಶಿವಶಂಕರ್	ಜನಪದ ಆಟಗಳು; ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು – ೨೦೦೯
ಚಕ್ಕೆರೆ ಶಿವಶಂಕರ್	ಮೈಲಾರಲಿಂಗನ ಕಾವ್ಯ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು – ೧೯೮೭
ಚಕ್ಕೆರೆ ಶಿವಶಂಕರ್	ಗೊರವರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ – ೧೯೯೩
ಚದುರಂಗ	ವೈಶಾಖ; ಶಕ್ತಿ ಪ್ರಕಾಶನ, ಮೈಸೂರು – ೧೯೮೩
ಚಲವಾದಿ ಬಸವರಾಜ ಶೇಖರಸಿಂಗ್ ಎಸ್	ಸಿಕ್ಲಿಗರ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೨೦೦೮
ಚಲುವರಾಜು	ದಕ್ಕಲರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು
ಚಲುವರಾಜು	ಜುಂಜಪ್ಪ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೧೯೯೭
ಚಿಂತಾಮಣಿ	ಪಶುವೈದ್ಯ; ಶಾಬಾದಿಮಠ, ಬುಕ್ ಡಿಪೋ – ಗದಗ
ಚಿಕ್ಕಣ್ಣ ಯಣ್ಣೆಕಟ್ಟೆ	ತುಮಕೂರು ಜಿಲ್ಲಾ ಜಾತ್ರೆಗಳು; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೨೦೦೩
ಚಿಣಪ್ಪನಡಿಕೇರಿಯಂಡ	ಪಟ್ಟೋಲೆ ಪಳಮೆ; ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – ೧೯೭೫
ಚಿದಾನಂದಮೂರ್ತಿ ಎಂ.	ಚಿದಾನಂದ ಸಮಗ್ರ ಸಂಪುಟ – ೩; ಜನ– ಜನಪದ – ಜಾನಪದ, ಸಪ್ನ ಬುಕ್ ಹೌಸ್, ಬೆಂಗಳೂರು – ೨೦೦೨
ಚಿನ್ನಪ್ಪಗೌಡ ಕೆ.	ಭೂತಾರಾಧನೆ ಜಾನಪದೀಯ ಅಧ್ಯಯನ; ಮದಿಪು ಪ್ರಕಾಶನ, ಮಂಗಳಗಂಗೋತ್ರಿ – ೧೯೯೦
ಚೆನ್ನಣ್ಣ ವಾಲೀಕಾರ	ಸಮಗ್ರ ಜಾನಪದ ಸಂಪ್ರಬಂಧ ಸಂಪುಟ; ದಲಿತ ಬಂಡಾಯ ಸಾಹಿತ್ಯ ಪ್ರಕಾಶನ ಕೇಂದ್ರ, ಗುಲಬರ್ಗಾ – ೨೦೦೨
ಚೆನ್ನಪ್ಪ ಕತ್ತಿಗೆ	ಜನಪದ ವೈದ್ಯ ಬೆಣ್ಣೆಗೇರಿ ಕಡ್ಲಿಗೌಡ; ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ – ೨೦೦೪
ಚೆಲುವರಾಜು	ಹಂಪಿಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ – ೨೦೦೦
ಜಗದೀಶ ಕೆ.ಕೆ	ಡುಂಗ್ರಿ ಗರಾಸಿಯ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೨೦೦೮
ಜಯಚಂದ್ರ ಎಂ.ಎ	ಜಾನಪದ ನೀಳ್ಗತೆಗಳು; ಕೆ.ವಿ. ಮುದ್ದಪ್ಪ ಸ್ಮಾರಕ ಟ್ರಸ್ಟ್, ಕೃಷ್ಣಾಪುರದೊಡ್ಡಿ – ೨೦೦೭

ಜಯಚಂದ್ರ ಎಂ.ಎ. ಪಡಸಾಲೆಯ ಪವಾಡಗಳು, ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್, ಕೃಷ್ಣಾಪುರದೊಡ್ಡಿ – ೨೦೦೭

ಜಾನಕಲ್ ರಾಜಣ್ಣ .ಎಂ ದಕ್ಕಲರು; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೨೦೦೮

Govrnment of Karnataka Karnataka State Gazetteer Part - 1-2,

ತಲ್ವಾಡಿ ಬಿ.ಎಸ್. ದಕ್ಷಿಣ ಕರ್ನಾಟಕದ ಕ್ರೈಸ್ತ ಜನಪದ ಸಾಹಿತ್ಯ; ಭರತ್ ಪ್ರಕಾಶನ, ಬನಶಂಕರಿ, ಬೆಂಗಳೂರು – ೨೦೦೪

ತಲ್ವಾಡಿ ಬಿ.ಎಸ್. ಹೆಂಗಸರ ಹಾಡ್ಗತೆಗಳು; ಭಾವನಾ ಪ್ರಕಾಶನ, ಈಜುಕೊಳದ ರಸ್ತೆ, ಸರಸ್ವತಿಪುರಂ, ಮೈಸೂರು – ೧೯೮೫

ದ.ರಾ. ಬೇಂದ್ರೆ ಬಾ ಹತ್ತರ; ಗೀತಾ ಬುಕ್ ಹೌಸ್, ಮೈಸೂರು – ೧೯೬೯

ದ.ರಾ. ಬೇಂದ್ರೆ ವಿನಯ (ಕವನಗಳು); ಗೀತಾ ಬುಕ್ ಹೌಸ್, ಮೈಸೂರು – ೧೯೭೬

ದಾದಾಪೀರ್ ಬಿ.ಸಿ. ಪಿಂಜಾರರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ದಾಸೇಗೌಡ ಜಿ.ವಿ. ಈಡಿಗರು: ಜಾನಪದೀಯ ಅಧ್ಯಯನ; ಶ್ರೀರಾಮ ಪ್ರಕಾಶನ, ಮಂಡ್ಯ – ೨೦೧೨

ದಾಸೇಗೌಡ ಜಿ.ವಿ. ನಮ್ಮ ಜನಪದ ನಂಬಿಕೆಗಳು; ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು – ೧೯೭೩

ದಾಸೇಗೌಡ ಜಿ.ವಿ. ಈಡಿಗರ ವಿವಾಹ ಪದತಿ; ತೇಜಸ್ವಿನಿ ಪ್ರಕಾಶನ, ತುಮಕೂರು – ೧೯೮೩

ದೇವನೂರ ಪಾಂಡುರಂಗ ಭೈರರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ದೇವನೂರ ಮಹಾದೇವ ಒಡಲಾಳ; ನವ್ಯಾಲೆ ಪ್ರಕಾಶನ, ಮೈಸೂರು – ೨೦೦೩

ದೇವನೂರ ಮಹಾದೇವ ಕುಸುಮಬಾಲೆ; ಸಂಗಾತಿ ಸಹಕಾರಿ ಪ್ರಕಾಶನ, ಬೆಂಗಳೂರು, ೧೯೮೮

ದೇವನೂರ ಮಹಾದೇವ ದ್ಯಾವನೂರು; ನೆಲ–ಮನೆ ಪ್ರಕಾಶನ, ಮೈಸೂರು – ೧೯೭೩

ದೇವೇಂದ್ರಕುಮಾರ್‌ಹಕಾರಿ, ಸಂಧ್ಯಾರೆಡ್ಡಿ ಕೆ.ಆರ್. ಗ್ರಾಮೀಣ ಬೇಟೆಗಳು; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೨೦೦೦

ದೇವೇಂದ್ರಕುಮಾರ ಹಕಾರಿ ಜಾನಪದ ಸಾಹಿತ್ಯದ ದರ್ಶನ(ಭಾಗ – ೯) : ಕರ್ನಾಟನ ವಿಶ್ವವಿದ್ಯಾನಿಲಯ, ಧಾರವಾಡ – ೧೯೮೮

ದೇವೇಂದ್ರಕುಮಾರ ಹಕಾರಿ, ಸಂಧ್ಯಾರೆಡ್ಡಿ ಕೆ.ಆರ್ ಗ್ರಾಮೀಣ ಉಡುಗೆ ತೊಡುಗೆಗಳು; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೨೦೦೦

ದೇವೇಂದ್ರಕುಮಾರಹಕಾರಿ, ಸಂಧ್ಯಾರೆಡ್ಡಿ ಕೆ.ಆರ್. ಗ್ರಾಮೀಣ ಪಶುಪಾಲನೆ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೨೦೦೦

ದೇಶಾಂಶ ಹುಡಗಿ ಬೀದರ ಕನ್ನಡ ಕೋಶ; ಶಂಬುಲಿಂಗ ವಾಲದೊಡ್ಡಿ, ಬೀದರ್ – ೨೦೧೦

ದೊಡ್ಡಮುನಿ ಲೋಕರಾಜ, ಶ್ರೀನಿವಾಸ ಎಸ್.ರಾವುಲೋಳ್ ಸಿಂಧೊಳ್ಳು; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೨೦೦೮

ಕನ್ನಡ ಸಾಹಿತ್ಯ ಪರಿಷತ್ತು ದ್ರಾವಿಡ ಭಾಷಾ ಜ್ಞಾತಿ ಪದಕೋಶ; ಬೆಂಗಳೂರು – ೨೦೧೪

ನಂಜಯ್ಯ ಹೊಂಗನೂರು (ಸಂ.) ಸಮಗ್ರ ಕನ್ನಡ ಗಾದೆಗಳು, ಸಂಪುಟ – ೧ ಮತ್ತು ೨; ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – ೨೦೧೨

ನರಸಿಂಹ ಅಯ್ಯಂಗಾರ್ ಮ.ಲ. ನಮ್ಮ ಹಣ್ಣುಗಳು; ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – ೧೯೭೩

ನರಸಿಂಹೇಗೌಡ ನಾರಣಾಪುರ ಕೋಲಾರ ಜಿಲ್ಲೆಯ ಆಚರಣೆಗಳು ಮತ್ತು ಸಂಪ್ರದಾಯಗಳು; ಕಿರಣ ಕಿಶೋರ ಪ್ರಕಾಶನ, ಕೆ.ಜಿ.ಎಫ್ – ೨೦೦೫

ನಾಗಣ್ಣ ಸಿ. ಭಂಗ(ಅನುವಾದಿತ ಕೃತಿ); ಕರ್ನಾಟಕ ಸಂಘ, ಮಂಡ್ಯ – ೨೦೦೮, ಮೂಲ : ಚಿನುಅ ಅಚಿಬೆ ಅವರ ಆಫ್ರಿಕನ್ ಕಾದಂಬರಿ

ನಾಗರಾಜ ಎಂ.ಜಿ. ಕೆಂಬಟ್ಟೆ ಹೊಲೆಯರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ನಾಗರಾಜಪ್ಪ ಬಾಗೂರು ಹೊಸದುರ್ಗ ಸೀಮೆ ಜಾನಪದ; ಸಿ.ವಿ.ಜಿ. ಪಬ್ಲಿಕೇಷನ್, ಬೆಂಗಳೂರು – ೨೦೦೪

ನಾಗರಾಜಯ್ಯ ಹಂ.ಪ. ಜಾನಪದ ವಾಡೆ; ಅರ್ಕಾವತಿ ಪ್ರಕಾಶನ, ಬೆಂಗಳೂರು – ೨೦೧೨

ನಾಗರಾಜು ಎಂ.ಎಸ್ ಮೊರಸು ಒಕ್ಕಲಿಗರು: ಒಂದು ಸಾಂಸ್ಕೃತಿಕ ಅಧ್ಯಯನ; ಗೋಧೂಳಿ ಪ್ರಕಾಶನ, ಬೆಂಗಳೂರು – ೨೦೧೧

ನಾಗೇಗೌಡ ಎಚ್.ಎಲ್. ಕರ್ನಾಟಕ ಜನಪದ ಕಥೆಗಳು; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ೧೯೭೭

ನಾಗೇಗೌಡ ಎಚ್.ಎಲ್. ದುಂಡುಮಲ್ಲಿಗಿ ಹೂವ ಬುಟ್ಟಿಲಿ ಬಂದಾವ; ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು – ೧೯೯೫

ನಾಗೇಗೌಡ ಎಚ್.ಎಲ್. (ಪ್ರ.ಸಂ) ಮಹದೇವಯ್ಯ (ಸಂ) ಕನ್ನಡ ಜಾನಪದ ಕೋಶ; ಕರ್ನಾಟಕ ಜಾನಪದ ಪರಿಷತ್ತು, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು – ೧೯೯೮

ನಾಯಕ್ ಡಿ.ಬಿ. ಲಂಬಾಣಿ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ನಾಯಕ ಎನ್.ಆರ್. ಹಾಲಕ್ಕಿ ಒಕ್ಕಲಿಗರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ನಾಯಕ ಎನ್.ಆರ್. ಕರಾವಳಿ ಕರ್ನಾಟಕದ ಆಹಾರ ಪದಕ್ಷಿ; ಜಾನಪದ ಪ್ರಕಾಶನ, ಹೊನ್ನಾವರ – ಉತ್ತರ ಕನ್ನಡ ಜಿಲ್ಲೆ – ೨೦೦೯

ನಾಯಕ ಎನ್.ಆರ್. ನಾಡವರ ಒಂದು ಸಾಂಸ್ಕೃತಿಕ ಅಧ್ಯಯನ; ಗೋಧೂಳಿ ಪ್ರಕಾಶನ, ಬೆಂಗಳೂರು – ೨೦೧೨

ನಾಯಕ ಎನ್.ಆರ್. ಸುಗ್ಗಿಹಬ್ಬ; ಕರ್ನಾಟಕ ಪ್ರಾದೇಶಿಕ ರಂಗಕಲೆಗಳ ಅಧ್ಯಯನ ಕೇಂದ್ರ, ಮಹಾತ್ಮ ಗಾಂಧಿ ಮೆಮೋರಿಯಲ್ ಕಾಲೇಜು, ಉಡುಪಿ – ೧೯೯೯

ನಾಯಕ ಎನ್.ಆರ್. ಹಾಲಕ್ಕಿ ಒಕ್ಕಲಿಗರು, ಒಂದು ಸಾಂಸ್ಕೃತಿಕ ಅಧ್ಯಯನ, ಗೋಧೂಳಿ ಪ್ರಕಾಶನ, ಬೆಂಗಳೂರು – ೨೦೧೨

ನಾಯಕ ಎನ್.ಆರ್. } ಉತ್ತರ ಕನ್ನಡ ಜಿಲ್ಲೆಯ ಜನಪದ ಆಟಗಳು; ಪ್ರಸಾರಾಂಗ,
ಶಾಂತಿ ನಾಯಕ } ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೧೯೭೯

ನಾಯಕ ವಿ.ಗ. ಹರಿಕಾಂತರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ನಾರಾಯಣ ಕೆ.ವಿ. ಮತ್ತು ಇತರರು ಕೃಷಿ ಪದಕೋಶ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೧೯೯೯

ನಾರಾಯಣ ಟಿ. ಯಾನಾದಿಗರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ನಾರಾಯಣಗೌಡ ನಂ. ಚೌಡಿಕೆ ಕಾವ್ಯಗಳು; ಸಂಯುಕ್ತ ಪ್ರಕಾಶನ, ಮೈಸೂರು – ೧೯೭೪

ನಾರಾಯಣಗೌಡ ನಂ. ಮಂಡ್ಯ ಜಿಲ್ಲೆಯ ಜನಪದ ಕಥೆಗಳು; ಸಂಯುಕ್ತ ಪ್ರಕಾಶನ, ಮೈಸೂರು, ೧೯೭೬

ನಾವಡ ಎ.ವಿ ಕರ್ನಾಟಕ ಸಂಶೋಧನಾ ಜಾನಪದ; ವಿಸ್ತರಣೆ ಹಾಗೂ ಸಲಹಾ ಕೇಂದ್ರ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ – ೨೦೧೪

ನಿಂಗಣ್ಣ ಸಣ್ಣಕ್ಕಿ ಗೊಂದಲಿಗರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಪದ್ಮಪ್ರಸಾದ್ ಎಸ್.ಪಿ. ಜಾನಪದ ವರ್ಷ ೨೦೧೧, ಜಾನಪದ ವಿಸ್ತರಣೆ ಮತ್ತು ಸಲಹಾ ಕೇಂದ್ರ, ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ, ಗೋಟಗೋಡಿ, ಹಾವೇರಿ – ೨೦೧೨

ಪರಮಶಿವಯ್ಯ ಜೀ.ಶಂ ಜನಪದ ಕಾವ್ಯಕಥೆಗಳು ಮತ್ತು ಗೀತಮೇಳಗಳು; ಜನಪದ ಬರಹ ಸಂಪುಟ ೩, ಸಾಗರ್ ಪ್ರಕಾಶನ, ಬೆಂಗಳೂರು, – ೨೦೧೨

ಪರಮಶಿವಯ್ಯ ಜೀ.ಶಂ. ಕನ್ನಡ ಜನಪದ ಕಥೆಗಳು, ಜನಪದ ಕಥಾ ಸಂಪುಟ ೧; ಸಾಗರ್ ಪ್ರಕಾಶನ, ಬೆಂಗಳೂರು – ೨೦೧೨

ಪರಮಶಿವಯ್ಯ ಜೀ.ಶಂ. ದಕ್ಷಿಣ ಕರ್ನಾಟಕ ಜನಪದ ಕಥೆಗಳು, ಜನಪದ ಕಥಾಸಂಪುಟ ೨; ಸಾಗರ್ ಪ್ರಕಾಶನ, ಬೆಂಗಳೂರು, – ೨೦೧೨

ಪರಮಶಿವಯ್ಯ ಜೀ.ಶಂ. ದಕ್ಷಿಣ ಕರ್ನಾಟಕ ಜನಪದ ಕಾವ್ಯಪ್ರಕಾರಗಳು, ಜೀಶಂಪ ಜಾನಪದ ಮತ್ತು ಸೃಜನಶೀಲ ಸಾಹಿತ್ಯ ಸಂಪುಟ ೧; ಸಾಗರ್ ಪ್ರಕಾಶನ, ಬೆಂಗಳೂರು – ೨೦೧೨

ಪರಮಶಿವಯ್ಯ ಜೀ.ಶಂ. ಮಬ್ಬು ಜಾರಿದ ಕಣಿವೆಯಲ್ಲಿ, ಸೃಜನಶೀಲ ಸಾಹಿತ್ಯ ಸಂಪುಟ ೨; ಸಾಗರ್ ಪ್ರಕಾಶನ, ಬೆಂಗಳೂರು – ೨೦೧೨

ಪರಮಶಿವಯ್ಯ ಜೀ.ಶಂ. ಜಾನಪದ ಕೆಲವು ಮುಖಗಳು, ಜನಪದ ಬರಹ ಸಂಪುಟ ೧; ಸಾಗರ್ ಪ್ರಕಾಶನ, ಬೆಂಗಳೂರು – ೨೦೧೨

ಪರಮಶಿವಯ್ಯ ಜೀ.ಶಂ. ಜೀಶಂಪ ಜಾನಪದ ಬರಹಗಳು, ಜನಪದ ಬರಹ ಸಂಪುಟ ೧; ಸಾಗರ್ ಪ್ರಕಾಶನ, ಬೆಂಗಳೂರು – ೨೦೧೨

ಪರಮಶಿವಯ್ಯ ಜೀ.ಶಂ. ಪಿರಿಯಾಪಟ್ಟಣದ ಕಾಳಗ ಮತ್ತು ಇತರ ಕಥನ ಕಾವ್ಯಗಳು, ಜನಪದ ಕಾವ್ಯ ಸಂಪುಟ ೪; ಸಾಗರ್ ಪ್ರಕಾಶನ, ಬೆಂಗಳೂರು – ೨೦೧೨

ಪರಮಶಿವಯ್ಯ ಜೀ.ಶಂ ಜಾನಪದ ಖಂಡಕಾವ್ಯಗಳು; ಸಾಗರ್ ಪ್ರಕಾಶನ, ಬೆಂಗಳೂರು – ೨೦೧೨

ಪರಮಶಿವಯ್ಯ ಜೀ.ಶಂ ಕನ್ನಡ ವೃತ್ತಿಗಾಯಕ ಕಾವ್ಯಗಳು; ಸಾಗರ್ ಪ್ರಕಾಶನ, ಬೆಂಗಳೂರು – ೨೦೧೨

ಪಾಂಡುರಂಗಬಾಬು ಡಿ. ಪಾಂಚಾಳ ವೃತ್ತಿ ಪದಕೋಶ; ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪಾಟೀಲ ಬಿ.ಪಿ	ಜಾನಪದ ಸಾಹಿತ್ಯ ದರ್ಶನ (ಸಂಪುಟ – ೧೪); ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೧೯೯೨
ಪಾಟೀಲ ಬಿ.ಪಿ.	ಜಾನಪದ ಸಾಹಿತ್ಯ ದರ್ಶನ (ಭಾಗ – ೨೩); ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೧೯೯೯
ಪಾಟೀಲ ಎಸ್.ಸಿ.	ಕರ್ನಾಟಕ ಜನಪದ ಚಿತ್ರಕಲೆ; ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ – ೧೯೯೩
ಪಾಟೀಲ ಸಿ.ಡಿ. ಮತ್ತು ಇತರರು	ಸಸ್ಯ ಸಂಪುಟ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೨೦೧೧
ಪುಟ್ಟಸ್ವಾಮಿ	ಕನ್ನಡ ಜಾನಪದದಲ್ಲಿ ರಾಮಾಯಣ ಮಹಾಭಾರತ; ಮೋಹಿತ್ ಪ್ರಕಾಶನ, ಮಂಡ್ಯ – ೨೦೦೩
ಪುಟ್ಟಸ್ವಾಮಿ ಕೆ.ಬಿ.	ಮಂಡ್ಯ ಸುತ್ತಲಿನ ಗಾದೆಗಳು; ರಶ್ಮಿ ಪ್ರಕಾಶನ, ಮೈಸೂರು – ೨೦೦೨
ಪುರುಷೋತ್ತಮ ಬಿಳಿಮಲೆ	ಕರಾವಳಿ ಜಾನಪದ; ಶಾರದ ಪ್ರಕಾಶನ, ಮಂಗಳೂರು – ೧೯೯೦
ಪುರುಷೋತ್ತಮ ಬಿಳಿಮಲೆ	ಹುಲಿಗೆಮ್ಮ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೧೯೯೯
ಪುರುಷೋತ್ತಮ ಬಿಳಿಮಲೆ ಚೆಲುವರಾಜು	ಹಂಪಿ ಜಾನಪದ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೧೯೯೬
ಪೋತೆ ಎಚ್.ಟಿ.	ಜಾನಪದ ಸಿಂಗಾರ; ಕುಮಾರ ಪೂರ್ಣಿಮಾ ಪ್ರಕಾಶನ, ರಾಯಚೂರು – ೨೦೦೧
ಪೋಲೀಸ್ ಪಾಟೀಲ	ಬೂದಿ ಮತ್ತು ಕೆಂಡ (ಕಥಾಸಂಕಲನ); ಸಾಂಗತ್ಯ ಪ್ರಕಾಶನ, ವಿಶ್ವೇಶ್ವರನಗರ, ಗದಗ – ೨೦೧೦
ಪ್ರಕಾಶ್ ಕಮ್ಮರಡಿ ಟಿ.ಎನ್.	ದೇಶೀಯ ಕೃಷಿ ಹತೋಟಿ ಮತ್ತು ಸಂರಕ್ಷಣಾ ಕ್ರಮಗಳು; ವಿಸ್ತರಣೆ ಮತ್ತು ಸಲಹಾ ಕೇಂದ್ರ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ, ಶಿಗ್ಗಾವಿ, ಹಾವೇರಿ – ೨೦೧೪
ಪ್ರಭಾಕರ ಎ.ಎಸ್.	ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೨೦೦೦
ಪ್ರಭಾಕರ ಜೋಶಿ ಎಂ.	ಯಕ್ಷಗಾನ ಪದಕೋಶ; ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ – ೧೯೯೪
ಪ್ರಸಾರಾಂಗ	ಇಂಗ್ಲಿಷ್ – ಕನ್ನಡ ನಿಘಂಟು; ಮೈಸೂರು ವಿಶ್ವವಿದ್ಯಾನಿಲಯ; ಮೈಸೂರು – ೨೦೦೪
ಪ್ರಹ್ಲಾದ ಬೆಟಗೇರಿ	ಅಡವಿ ಚಂಚರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು – ೧೯೯೩
ಬಸವನಗೌಡ ಪಾಟೀಲ	ತೂಕ ಮಾಡಿ ಹೇಳತೀನಿ ನ್ಯಾಯ; ಒಕ್ಕಲ ಮಕ್ಕಳ ಪ್ರಕಾಶನ, ಯಳವತ್ತಿ – ೧೯೮೦
ಬಸವರಾಜ್ ಎಸ್.ಹಿರೇಮಠ ಅಂಜಲಿ ಸಾಳುಂಕಿ	▯ ಸಾಡಿ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೨೦೦೮
ಬಸವರಾಜ್ ಕುರುವ	ಜನಪದ ಮಹಾಕಾವ್ಯಗಳ ನಿರ್ಮಾಣ: ಪ್ರತಿಭೆಯ ನೆಲೆಗಳು; ಗೀತಾಂಜಲಿ ಪಬ್ಲಿಕೇಷನ್ಸ್, ಬೆಂಗಳೂರು – ೨೦೧೧
ಬಸವರಾಜ ಕುಂಚೂರು	ಕುಂಬಾರ ಜನಾಂಗ; ಶ್ರೀ ಚಕ್ರ ಪ್ರಕಾಶನ, ಕುಂಚೂರು, ದಾವಣಗೆರೆ – ೨೦೦೩

ಬಸವರಾಜ ಪಾಟೀಲ — ಹೈದರಾಬಾದ ಕರ್ನಾಟಕ ಜನಪದ ಸಾಹಿತ್ಯ; ಅಮರ ಪ್ರಕಾಶನ, ಗುಲಬರ್ಗಾ - ೨೦೦೧

ಬಸವರಾಜ ಮಲಶೆಟ್ಟಿ — ಉತ್ತರ ಕರ್ನಾಟಕದ ಜನಪದ ರಂಗಭೂಮಿ; ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - ೧೯೭೮

ಬಾಗಡೆ ಜೆ.ವ್ಹಿ. — ಕಂಜರಭಾಟ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು - ೨೦೦೮

ಬಾಲಗುರುಮೂರ್ತಿ, ಪ್ರತಾಪ ರಾ. ಬಹುರೂಪಿ — ಬುಡ್ಗ ಜಂಗಮ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು - ೨೦೦೮

ಬಿರಾದಾರ ಮ.ಗು. — ಹೋಳಿಯ ಹಾಡುಗಳು; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು - ೨೦೦೦

ಬೆಸಗರಹಳ್ಳಿ ರಾಮಣ್ಣ — ಕನ್ನಂಬಾಡಿ; ಪಲ್ಲವಿ ಪ್ರಕಾಶನ, ಮಂಡ್ಯ - ೧೯೮೬

ಬೋರಲಿಂಗಯ್ಯ ಹಿ.ಚಿ. — ಉಜ್ಜನಿ ಚೌಡಮ್ಮ : ಗ್ರಾಮದೇವತೆ ಅಧ್ಯಯನ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು - ೧೯೭೯

ಬೋರಲಿಂಗಯ್ಯ ಹಿ.ಚಿ. — ಕರ್ನಾಟಕ ಜಾನಪದ ಕಲೆಗಳ ಕೋಶ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ - ೧೯೯೬

ಬೋರಲಿಂಗಯ್ಯ ಹಿ.ಚಿ. — ಕುಣಬಿಯರು; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ - ೨೦೧೦

ಬೋರಲಿಂಗಯ್ಯ ಹಿ.ಚಿ. — ಬುಡಕಟ್ಟು ಅಧ್ಯಯನ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ - ೨೦೦೫

ಬೋರಲಿಂಗಯ್ಯ ಹಿ.ಚಿ. — ಬುಡಕಟ್ಟು ದೈವಾರಾಧನೆ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ - ೨೦೦೦

ಬೋರಲಿಂಗಯ್ಯ ಹಿ.ಚಿ. — ಮಂಟೇಸ್ವಾಮಿ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ - ೧೯೯೭

ಬೋರಲಿಂಗಯ್ಯ ಹಿ.ಚಿ. — ಸಿದ್ದಿಯರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಬ್ಯಾಡಗಿ ಟಿ.ಎಲ್., ಗುಂಜಾಳ ಎಸ್.ಆರ್. — ವಚನ ಪದಪ್ರಯೋಗ ಕೋಶ; ಕನ್ನಡ ವಿಶ್ವವಿದ್ಯಾಲಯ, ಧಾರವಾಡ - ೧೯೭೬

ಭಟ್ ಎಲ್.ಜಿ — ಹಾಲಕ್ಕಿ ಪಾಯಸ; ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು - ೧೯೭೪

ಭಟ್ಟ ಜಿ.ಎಸ್. — ಹಲಸರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಭಟ್ಟ ಪ.ಸು. — ಜಾರುಬಂಡೆ; ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ ನಿಯಮಿತ, ಬೆಂಗಳೂರು - ೧೯೭೫

ಭಾನುಮತಿ ವೈ.ಸಿ. — ಇಬ್ಬೀಡಿನ ಜನಪದ ಕತೆಗಳು; ಕೇಶವ ಪ್ರಕಾಶನ, ಮೈಸೂರು - ೧೯೭೯

ಭಾಮಿನಿ ರಾಘಯ್ಯ — ಕೊಡಗಿನ ಬುಡಕಟ್ಟುಗಳು; ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು - ೨೦೦೭

ಮಂಜುನಾಥ ಬೇವಿನಕಟ್ಟೆ — ಪರಿಷೆ v/s ಮಾನ್ಸೇವು; ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ - ೨೦೧೦

ಮಂಜುನಾಥ ಬೇವಿನಕಟ್ಟೆ — ಕರ್ನಾಟಕ ಜನಪದ ಸ್ತ್ರೀದೈವಗಳ ಸಾಂಸ್ಕೃತಿಕ ಪದಕೋಶ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ - ೨೦೦೯

ಮರಿಯಪ್ಪ ಭಟ್ಟ ಎಂ. ಹಾಗೂ ಇತರರು — ನಾಲ್ನುಡಿ – ನಾಣ್ನುಡಿ; ತಳುಕಿನ ವೆಂಕಣ್ಣಯ್ಯನವರ ಸ್ಮಾರಕ ಗ್ರಂಥಮಾಲೆ, ಮೈಸೂರು – ೧೯೬೨

ಮಲ್ಲಿಕಾರ್ಜುನ ಕುಂಬಾರ — ನಮ್ಮ ಪರಿಸರದ ಲಂಬಾಣಿಗರು; ವಿಸ್ತರಣೆ ಮತ್ತು ಸಲಹಾ ಕೇಂದ್ರ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ, ಶಿಗ್ಗಾವಿ, ಹಾವೇರಿ – ೨೦೧೪

ಮಲ್ಲಿಕಾರ್ಜುನ ಬಿ.ಮಾನ್ವಡೆ — ಗಂಟಿಚೋರ್; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೨೦೦೮

ಮಲ್ಲಿಕಾರ್ಜುನ ಬಿ.ಮಾನ್ವಡೆ — ಕೊರಮ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೨೦೦೮

ಮಲ್ಲಿಕಾರ್ಜುನ ಶಿ. ಲಠ್ಠೆ — ಉತ್ತರ ಕರ್ನಾಟಕದ ಜನಪದ ನಂಬಿಕೆಗಳು; ಶ್ರೀ ಕೃಷ್ಣಾಜಿರಾವ ಮಾಣಿಕರಾವ ಪಾಟೀಲ, ಲಿಂಗನವಾಡಿ – ೧೯೮೦

ಮಾನಸ — ಕೊರವರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಮುದೇನೂರು ಸಂಗಣ್ಣ — ಗೊಂದಲಿಗರ ದೇವೇಂದ್ರಪ್ಪನವರ ಆಟಗಳು; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ – ೧೯೯೩

ಮುದ್ದೇಬಿಹಾಳ ಆರ್.ಸಿ. — ಜನಪದ ಸಂಜೀವಿನಿ; ರಸಬಳ್ಳಿ ಪ್ರಕಾಶನ, ವಿಜಾಪುರ – ೧೯೮೩,

ಮೈತ್ರಿ ಕೆ.ಎಂ. — ಕೃಷ್ಣಗೊಲ್ಲರ ಕಥನ ಕಾವ್ಯಗಳು; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೨೦೦೦

ಮೈತ್ರಿ ಕೆ.ಎಂ. — ಕುಮಾರರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೧೯೯೭

ಮೋಹನ್ ಎಚ್.ಎಸ್. — ಚಂದ್ರಗುತ್ತಿ ಜಾತ್ರೆ; ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ – ೨೦೦೪

ಮೋಹನ ಎಚ್.ಎಸ್. — ದೀವರ ಮಕ್ಕಳು; ಧಾತ್ರಿ ಪುಸ್ತಕ ಮಾಲೆ – ೨೯, ಬೆಂಗಳೂರು – ೨೦೦೯

ಮೋಹನ್ ಕುಂಟಾರ್ ಎನ್. — ಯಕ್ಷಗಾನ ವಾಚಿಕಾಧ್ಯಯನ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ – ೨೦೦೦

ಮೋಹನ್‌ಕುಮಾರ್ ಎನ್. — ಕಾಡುಗೊಲ್ಲರ ಕೋಲಾಟದ ಪದಗಳು; ವಿಸ್ತರಣೆ ಮತ್ತು ಸಲಹಾ ಕೇಂದ್ರ, ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ, ಗೊಟಗೋಡಿ, ಶಿಗ್ಗಾವಿ, ಹಾವೇರಿ – ೨೦೧೩

ಮೈತ್ರಿ ಕೆ.ಎಂ, ಸುದರ್ಶನ್ ಸೆಡ್ಮಾಕಿ — ರಾಜಗೊಂಡ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೨೦೦೮

ಯರ್ರಪ್ಪ.ಡಿ — ಅಲೆಮಾರಿ ಕುಳುಬ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೨೦೦೮

ಯಳಿನಾಡು ಅಂಜನಪ್ಪ — ಹಗಲುವೇಷದವರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ರಂ.ಶ — ತಾಯಿಸಾಹೇಬ; ಮನೋಹರ ಗ್ರಂಥಮಾಲಾ, ಧಾರವಾಡ – ೧೯೭೨

ರತ್ನ ಪಿ. ನಗುವನಹಳ್ಳಿ — ಜಾನಪದ ಜೀವಾಳ; ಪ್ರಶಾಂತಿ ಪ್ರಕಾಶನ, ಯಾದವಗಿರಿ, ಮೈಸೂರು – ೧೯೯೪

ರಮೇಶ ಸ.ಚಿ. — ಬುನಾದಿ (ಜಾನಪದ ಅಧ್ಯಯನ ಲೇಖನಗಳು); ಅಂಶ ಪ್ರಕಾಶನ, ಹೊಸಪೇಟೆ – ೨೦೦೫

ರಮೇಶ ಸ.ಚಿ. ಜಾನಪದ ವಸ್ತುಕೋಶ; ವಿಸ್ತರಣೆ ಮತ್ತು ಸಲಹಾ ಕೇಂದ್ರ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೋಟಗೋಡಿ, ಹಾವೇರಿ – ೨೦೧೩

ರಮೇಶ ಸ.ಚಿ. ಬೇಟೆ ಸಾಂಸ್ಕೃತಿಕ ಪದಕೋಶ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೨೦೦೧

ರಮೇಶ ಸ.ಚಿ ದಕ್ಷಿಣ ಭಾರತೀಯ ದೇಶೀ ಕೃಷಿ ವಿಜ್ಞಾನ ಕೋಶ; ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ – ೨೦೧೪

ರಮೇಶ ಹುಲ್ಲುಕೆರೆ ಸಾಕ್ಷಿ; ದಿನಕರ ಪ್ರಕಾಶನ, ಬೆಂಗಳೂರು – ೧೯೮೫

ರಮೇಶ ಹುಲ್ಲುಕೆರೆ ಸೊಗಡು (ಕಥಾಸಂಕಲನ); ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮಂಡ್ಯ – ೨೦೦೬

ರಹಮತ್ ತರೀಕೆರೆ ಕರ್ನಾಟಕದ ನಾಥಪಂಥ; ಅಭಿನವ, ಬೆಂಗಳೂರು – ೨೦೧೩

ರಾಗೌ(ರಾಮೇಗೌಡ) ಕನ್ನಡ ಶಿಶುಪ್ರಾಸಗಳು; ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೭೨

ರಾಗೌ(ರಾಮೇಗೌಡ) ಕರ್ನಾಟಕ ಜನಪದ ಕಥೆಗಳು; ಪ್ರಸಾದ್ □ಜೆನ್ಸೀಸ್, ವಿದ್ಯಾರಣ್ಯಪುರಂ, ಮೈಸೂರು – ೨೦೦೭

ರಾಗೌ(ರಾಮೇಗೌಡ) ಕಿಟ್ಟೆಲ್ ಕೋಶದ ಗಾದೆಗಳು; ಡಿ.ವಿ.ಕೆ. ಮೂರ್ತಿ, ಮೈಸೂರು – ೨೦೦೮

ರಾಗೌ(ರಾಮೇಗೌಡ) ಜನಪದ ಮಹಾಭಾರತ ಸಮಾಲೋಚನೆ; ಸಂವಹನ, ಶಿವರಾಂಪೇಟೆ, ಮೈಸೂರು – ೨೦೦೫

ರಾಗೌ(ರಾಮೇಗೌಡ) ನಮ್ಮ ಗಾದೆಗಳು; ಡಿ.ವಿ.ಕೆ. ಮೂರ್ತಿ, ಮೈಸೂರು – ೨೦೦೭

ರಾಗೌ(ರಾಮೇಗೌಡ) ಜಾನಪದ ತತ್ವಾರ್ಥ ಪ್ರವೇಶ; ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ, ಕರ್ನಾಟಕ ಸಂಘ(ರಿ), ಗುರುಭವನದ ಹಿಂಭಾಗ, ಆರ್.ಪಿ.ರಸ್ತೆ, ಮಂಡ್ಯ – ೫೭೧೪೦೧

ರಾಗೌ(ರಾಮೇಗೌಡ) ಜನಪದ ಆಟಗಳು; ಸಂವಹನ, ಮೈಸೂರು – ೨೦೦೧

ರಾಗೌ(ರಾಮೇಗೌಡ) ಯಲಹಂಕ ಪ್ರಭುಗಳು: ಒಂದು ಅಧ್ಯಯನ; ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮಂಡ್ಯ – ೧೯೯೪

ರಾಜಪ್ಪ ಟಿ.ಎಸ್ ಕೆರೆಹೊನ್ನಮ್ಮ ಮತ್ತು ಇತರ ಲಾವಣಿಗಳು; ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – ೧೯೭೪

ರಾಜಪ್ಪ ಟಿ.ಎಸ್. ರಾಯಚೂರು ಜಿಲ್ಲೆಯ ಜನಪದ ಗೀತೆಗಳು; ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – ೧೯೭೬

ರಾಜಪ್ಪ ಟಿ.ಎಸ್ ಸಮಗ್ರ ಲಾವಣಿಗಳು; ಸಾಗರ್ ಪ್ರಕಾಶನ, ಬೆಂಗಳೂರು – ೨೦೧೨

ರಾಜಶೇಖರ ಪಿ.ಕೆ. ಕರ್ನಾಟಕ ಜನಪದ ವೃತ್ತಿಗಾಯಕರು; ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು – ೨೦೧೦

ರಾಜಶೇಖರ ಪಿ.ಕೆ. ಜನಪದ ಆರಾಧನಾ ಕಲೆಗಳು; ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು – ೨೦೧೦

ರಾಜಶೇಖರ ಪಿ.ಕೆ. ಜನಪದ ಮಹಾಭಾರತ; ಹೊನ್ನಾರು ಜನಪದ ಗಾಯಕರು, ಮಾನಸ ಗಂಗೋತ್ರಿ, ಮೈಸೂರು – ೨೦೦೪

ರಾಜಶೇಖರ ಪಿ.ಕೆ. — ಜನಪದ ಶರಣ ಕಾವ್ಯಗಳು; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೨೦೧೦

ರಾಜಶೇಖರ ಪಿ.ಕೆ. — ಜನಪದ ಸಿಂಗಾರ ಸಾಧನಗಳು; ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು – ೨೦೧೨

ರಾಜಶೇಖರ ಪಿ.ಕೆ. — ಜಾನಪದ ಸಂಭ್ರಮ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೨೦೦೩

ರಾಜಶೇಖರ ಪಿ.ಕೆ. — ಪಾರ್ಥನ ಜೋಗಿಹಾಡು; ಹೊನ್ನಾರು ಜನಪದ ಗಾಯಕರು, ಮಾನಸಗಂಗೋತ್ರಿ, ಮೈಸೂರು – ೨೦೦೪

ರಾಜಶೇಖರ ಪಿ.ಕೆ. — ಬಾರಯ್ಯ ಬೆಳದಿಂಗಳೆ; ಪರಂಪರಾವಲೋಕನ ಸಮಿತಿ, ಕರ್ನಾಟಕ ಸಂಘ, ಮಂಡ್ಯ – ೨೦೦೭

ರಾಜಶೇಖರ ಪಿ.ಕೆ. — ಮಲೆಯ ಮಾದೇಶ್ವರ (ಭಾಗ –೧) ಜನಪದ ಮಹಾಕಾವ್ಯ; ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು – ೨೦೦೬

ರಾಜಶೇಖರ ಪಿ.ಕೆ. — ಮಲೆಯ ಮಾದೇಶ್ವರ (ಭಾಗ –೨) ಜನಪದ ಮಹಾಕಾವ್ಯ; ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು – ೨೦೦೬

ರಾಜಶೇಖರ ಪಿ.ಕೆ. — ಸೋಜುಗಾದ ಸೂಜುಮಲ್ಲಿಗೆ; ರಕ್ಷಿತ್ ಪ್ರಕಾಶನ, ಹೊನ್ನಾರು ಜನಪದ ಗಾಯಕರು, ಮೈಸೂರು – ೨೦೦೬

ರಾಜಶೇಖರ ಪಿ.ಕೆ. ಮತ್ತಿತರರು — ಪದಸಂಪದ; ಮುತ್ತು ಪ್ರಕಾಶನ, ಪಿರಿಯಾಪಟ್ಟಣ – ೨೦೦೫

ರಾಜಶೇಖರ ಪಿ.ಕೆ. — ಜನಪದ ವೀರಕಾವ್ಯ : ಪಿರಿಯಾಪಟ್ಟಣದ ಕಾಳಗ; ಹೊನ್ನಾರು ಜನಪದ ಗಾಯಕರು, ಎಲ್ – ೨೫, ಮಾನಸಗಂಗೋತ್ರಿ, ಮೈಸೂರು – ೧೯೯೦

ರಾಜೇಂದ್ರ ಡಿ.ಕೆ. — ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ; ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – ೨೦೧೧

ರಾಜೇಂದ್ರ ಡಿ.ಕೆ. — ಕರಪಾಲ ಮೇಳ; ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ – ೧೯೮೫

ರಾಜೇಂದ್ರ ಡಿ.ಕೆ., ನೀ ಗಿರಿಗೌಡ — ಜಾನಪದ ಸಂಭಾವನೆ; ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಗೋಕುಲಂ, ಮೈಸೂರು – ೧೯೯೧

ರಾಜೇಗೌಡ ಹ.ಕ — ಕೆಂಪಣ್ಣಗೌಡನ ಯಕ್ಷಗಾನ ಕಾವ್ಯಗಳು; ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು – ೨೦೧೬

ರಾಜೇಗೌಡ ಹ.ಕ — ಜಾನಪದ ಶೋಧ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೨೦೦೭

ರಾಜೇಗೌಡ ಹ.ಕ., ಪರಮಶಿವಯ್ಯ ಜೀ.ಶಂ., ಕೃಷ್ಣಕುಮಾರ್ ಸಿ.ಪಿ. — ಮುತ್ತ ತುಂಬೇವು ಕಣಜಕೆ; ಎಂ.ಎಲ್. ಶ್ರೀಕಂಠೇಶಗೌಡ ಸಂಸ್ಮರಣ ಸಮಿತಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು – ೧೯೮೮

ರಾಮಕೃಷ್ಣ ಗುಂದಿ — ಅಗೇರರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ರಾಮಚಂದ್ರಾಚಾರ್ ಡಿ.ಬಿ. — ಕುಡಿಯರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು – ೧೯೯೩

ರಾಮಚಂದ್ರೇಗೌಡ ಹಿ.ಶಿ. — ಕನ್ನಡ ಜನಪದ ಕಥಾವರ್ಗಗಳು; ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – ೧೯೯೮

ರಾಮಸ್ವಾಮಿ ಎಸ್. / ನಟರಾಜ್ ಎಂ.ಬಿ. — ಹಾಡಾಕೆ ಬೈಗುಂಟೆ ಬೆಳಗುಂಟೆ; ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – ೧೯೭೭

ರಾವ್ ಬಹದ್ದೂರ್ — ಗ್ರಾಮಾಯಣ; ಉಷಾ ಸಾಹಿತ್ಯ ಮಾಲೆ, ಮೈಸೂರು – ೧೯೭೦

ಲಕ್ಕಪ್ಪಗೌಡ ಎಚ್.ಜೆ. — ಕರ್ನಾಟಕ ಬುಡಕಟ್ಟುಗಳು (ಸಂ.೩); ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು – ೨೦೦೦

ಲಕ್ಕಪ್ಪಗೌಡ ಎಚ್.ಜೆ. — ಸುವರ್ಣ ಜಾನಪದ (ಸಂಪುಟ – ೧); ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು – ೧೯೯೮

ಲಕ್ಕಪ್ಪಗೌಡ ಎಚ್.ಜೆ. — ಸುವರ್ಣ ಜಾನಪದ (ಸಂಪುಟ – ೨); ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು – ೧೯೯೮

ಬಸವರಾಜು ನೆಲ್ಲಿಸರ — ಮಲ್ಲಿಗೆ ಮೊಗ್ಗು ಸುರಿದಾವೆ; ಲಕ್ಷ್ಮಿ ಮುದ್ರಣಾಲಯ, ಚಾಮರಾಜಪೇಟೆ, ಬೆಂಗಳೂರು – ೧೯೯೩

ಲಕ್ಕಿ ಪೃಥ್ವಿರಾಜ್ / ಶಿಕಾರಿ ರಾಮು ಎಚ್. — ಪಾರ್ಧಿ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೨೦೦೮

ಲಕ್ಷ್ಮೀದೇವಿ ಎಸ್. — ಗ್ರಾಮ ಮತ್ತು ಶಿಷ್ಟ ದೇವತೆಗಳು : ತೌಲನಿಕ ಅಧ್ಯಯನ; ಚಿತ್ಕಲಾ ಪ್ರಕಾಶನ, ಕುಪ್ಪಂ – ೨೦೦೭

ಲಕ್ಷ್ಮೀಪತಿ ಕೋಲಾರ — ಮಾಸ್ತೀಕರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಲಿಂಗಪ್ಪ ಕೆ.ಆರ್. — ಮೌನಮಿ ಪದಗಳು; ಕರ್ನಾಟಕ ಪಬ್ಲಿಷಿಂಗ್ ಹೌಸ್ ಪ್ರೆಸ್, ಬೆಂಗಳೂರು – ೧೯೪೯

ಲಿಂಗಯ್ಯ ಡಿ. / ಚಕ್ಕೆರೆ ಶಿವಶಂಕರ್ — ದೆವ್ವ ಜಾನಪದ; ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು – ೨೦೦೮

ಲೋಕಾಪುರ ರಂ.ಶಾ. — ಹಳಗನ್ನಡ ಮತ್ತು ಮರಾಠಿ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೧೯೯೪

ವಸಂತಕುಮಾರ್ ಎಂ.ಸಿ. — ಮಳಲಿ ಗಿಡ್ಡಮ್ಮ; ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು – ೧೯೭೦

ವಸಂತಕುಮಾರ್ ಮಳಲಿ — ಕರ್ನಾಟಕ ಜನಪದ ವೈದ್ಯ; ಪಂಪ ಪ್ರಕಾಶನ, ಸರಸ್ವತಿಪುರಂ, ಮೈಸೂರು – ೧೯೭೯

ವಾಗೀಶ್ವರಿಶಾಸ್ತ್ರಿ — ಕರ್ನಾಟಕ ಹಬ್ಬಗಳು; ವಾಗ್ದೇವಿ ಕಲಾನಿಕೇತನ, ತ್ಯಾಗರಾಜನಗರ, ಬೆಂಗಳೂರು – ೧೯೮೬

ವಿಜಯಲಕ್ಷ್ಮಿ ಡಿ.ಎಚ್. / ಶ್ರೀನಿವಾಸಯ್ಯ — ದಕ್ಷಿಣ ಕರ್ನಾಟಕದ ವಿವಾಹ ಶಾಸ್ತ್ರಗಳು; ಸುಮುಖ ಪ್ರಕಾಶನ, ಬೆಂಗಳೂರು –೨೦೦೭

ವಿರೂಪಾಕ್ಷಿ ಪೂಜಾರಹಳ್ಳಿ — ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೨೦೦೨

ವಿರೂಪಾಕ್ಷಿ ಪೂಜಾರಹಳ್ಳಿ — ಬೇಡ ಬುಡಕಟ್ಟಿನ ಚರಿತ್ರೆ ಮತ್ತು ಸಂಸ್ಕೃತಿ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೨೦೦೮

ವಿವೇಕ ರೈ ಬಿ.ಎ. / ಯದುಪತಿಗೌಡ ಡಿ. — ಮಲೆ ಕುಡಿಯರು; ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ, ತುಳುಪೀಠ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ – ೧೯೯೬

ವಿವೇಕ ರೈ ಬಿ.ಎ. / ಯದುಪತಿಗೌಡ ರಾಜಶ್ರೀ — ಭೂತಾರಾಧನೆಯ ಬಣ್ಣಗಾರಿಕೆ; ಶ್ರೀಧರ್ಮಸ್ಥಳ ಮಂಜುನಾಥೇಶ್ವರ ತುಳುಪೀಠ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ – ೨೦೦೧

ವಿಶ್ವನಾಥ ಎಸ್.ಬೈಲಪತ್ತಾರ }
ಜಗನ್ನಾಥ ಎಂ.ಬೈಲಪತ್ತಾರ } ಬೈಲಪತ್ತಾರ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೨೦೦೮

ವೀರಣ್ಣ ರಾಜೂರ — ಜಾನಪದ ಸಾಹಿತ್ಯ ದರ್ಶನ (ಭಾಗ – ೧೯); ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೧೯೯೪

ವೀರಣ್ಣದಂಡೆ — ಸುವರ್ಣ ಜಾನಪದ ಲೇಖನಗಳು; ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು – ೨೦೦೬

ವೀರಭದ್ರಪ್ಪ ಕುಂ. — ಅರಮನೆ; ಕರ್ನಾಟಕ ಬುಕ್ ಏಜೆನ್ಸಿ, ನಂ. ೧೧೨ನೇ ಮಹಡಿ, ೩ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು – ೨೦೦೯

ವೀರೇಂದ್ರ ಸಿಂಪಿ — ಸಿಂಪಿ ಲಿಂಗಣ್ಣ ಸಮಗ್ರ ಜನಪದ ಸಂಪುಟ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೨೦೦೭

ವೃಷಬೇಂದ್ರಸ್ವಾಮಿ ಎಂ.ಎಸ್. — ಜಾನಪದ ಸಾಹಿತ್ಯ ದರ್ಶನ (ಭಾಗ – ೧೦); ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೧೯೮೭

ವೆಂಕಟಕೃಷ್ಣ ತೈಲೂರು — ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ; ಭಾನು ಪ್ರಕಾಶನ, ಮಂಡ್ಯ – ೨೦೦೪

ವೆಂಕಟರಾಜ ಪುಣಿಂಚತ್ತಾಯ — ಮೊಗವೀರರ ಸಂಸ್ಕೃತಿ; ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು

ವೆಂಕಟೇಶ ಇಂದ್ವಾಡಿ — ಮಂಟೇಸ್ವಾಮಿ ಪರಂಪರೆ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ವಿದ್ಯಾರಣ್ಯ – ೧೯೯೯

ವೆಂಕಟೇಶ ಇಂದ್ವಾಡಿ — ದೇವದಾಸಿ (ಅಲೆವ ಜನರ ಆಚರಣೆಗಳ ಮುಖೇನ); ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೨೦೦೨

ವೆಂಕಟಸುಬ್ಬಯ್ಯ .ಜಿ — ಇಗೋ ಕನ್ನಡ ಸಾಮಾಜಿಕ ನಿಘಂಟು; ನವಕರ್ನಾಟಕ ಪ್ರಕಾಶನ, ಬೆಂಗಳೂರು – ೨೦೧೩

ವೇಣಾಕ್ಷಿ ಎಸ್.ಡಿ. — ಮಲೆನಾಡ ನುಡಿಕೋಶ; ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ, ಹಾವೇರಿ ಜಿಲ್ಲೆ – ೨೦೧೪

ಶಂಕರಗೌಡ ಎಸ್.ಬಿ. — ಒಕ್ಕಣೆ; ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು – ೧೯೯೯

ಶಂಕರನಾರಾಯಣ ತೀ.ನಂ. — ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು; ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – ೧೯೮೨

ಶಂಕರನಾರಾಯಣ ತೀ.ನಂ. — ಜನಪದ ನಡೆ – ನುಡಿ; ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ ಜಿಲ್ಲೆ – ೨೦೦೪

ಶಾಂತಿ ನಾಯಕ — ಜಾನಪದ ವೈದ್ಯಕೀಯ ಅಡುಗೆಗಳು; ಜಾನಪದ ಪ್ರಕಾಶನ, ಹೊನ್ನಾವರ – ೧೯೮೮

ಶಾಲಿನಿ ರಘುನಾಥ್ — ಜಾನಪದ ಸಾಹಿತ್ಯ ದರ್ಶನ (ಭಾಗ – ೨೪); ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೨೦೦೧

ಶಾಲಿನಿ ರಘುನಾಥ್ — ಉತ್ತರ ಕನ್ನಡ ಜಿಲ್ಲೆಯ ಹವ್ಯಕರ ಹಾಡುಗಳು; ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – ೧೯೭೬

ಶಿವಕುಮಾರಸ್ವಾಮಿ ಸಿ.ಎಸ್. (ಕುಮಾರಚಲ್ಯ) — ಪ್ರಾದೇಶಿಕ ಜಾನಪದ; ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ – ೨೦೦೪

ಶಿವಣ್ಣ ಮೀರಾಸಾಬಿಹಳ್ಳಿ — ಕಾಡುಗೊಲ್ಲರ ಕಾವ್ಯಗಳು; ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – ೨೦೦೯

ಶಿವಣ್ಣ ಮೀರಾಸಾಬಿಹಳ್ಳಿ	ದುರುಗ ಜಾನಪದ ; ಅಕ್ಷಯ ಪ್ರಕಾಶನ, ಚಿತ್ರದುರ್ಗ – ೧೯೯೯
ಶಿವಣ್ಣ ಮೀರಾಸಾಬಿಹಳ್ಳಿ	ಮ್ಯಾಸ ಮಂಡಲ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೨೦೦೩
ಶಿವರಾಮ □ತಾಳ	ದಕ್ಷಿಣ ಕನ್ನಡದ ಜನಪದ ಸಾಹಿತ್ಯ; ಶಾರದಾ ಮಂದಿರ, ಮೈಸೂರು – ೧೯೭೧
ಶಿವರಾಮ ಕಾರಂತ	ಭೂತಾರಾಧನೆ; □.ಬಿ. ಎಚ್. ಪ್ರಕಾಶನ, ಬೆಂಗಳೂರು – ೧೯೭೦
ಶಿವರಾಮು ವ.ನಂ	ಜಾನಪದ ಕಾವೇರಿ (ಹನ್ನೊಂದು ತೊರೆಗಳು); ಬ್ಯಾಲದಕೆರೆ ಪ್ರಕಾಶನ, ನಾಗಮಂಗಲ, ಮಂಡ್ಯ – ೨೦೦೧
ಶಿವರಾಮು ವ.ನಂ	ಹಗೇವು ತುಂಬ್ಯಾವೊ ಹದಿನಾರು; ಮಂಡ್ಯ ಜಿಲ್ಲಾ ಜನಪದ ಕಲಾಮೇಳ, ಮಂಡ್ಯ – ೧೯೯೭
ಶಿವಳ್ಳಿ ಕೆಂಪೇಗೌಡ	ಚಮ್ಮಾವುಗೆ; ಉದಯಕಾಲ ಪ್ರಕಾಶನ, ಮಂಡ್ಯ – ೨೦೦೮
ಶಿವಾನಂದ ಗುಬ್ಬಣ್ಣವರ	ಕರ್ನಾಟಕ ಕುರುಬರು; ಅಕ್ಷಯ ಪ್ರಕಾಶನ, ಧಾರವಾಡ – ೧೯೯೩
ಶಿವಾನಂದ ಲ ಪಾಚಂಗಿ	ಗೋಂಧಳಿ; ಕನ್ನಡ ಮಸ್ತಕ ಪ್ರಾಧಿಕಾರ, ಬೆಂಗಳೂರು – ೨೦೦೮
ಶೇಖರ್ ಎಂ.ಎಸ್	ಜನಪದ ಜಾದುಗಾರ ಜೀವನ (ಸಮೀದ್ ಹುಸೇನ್‌ರ ಚರಿತ್ರೆ); ನಳಂದ ಮಂಟಪ, ಎಚ್.ಎಸ್. ಆರ್. ಬಡಾವಣೆ, ಬೆಂಗಳೂರು – ೨೦೦೨
ಶೇಷಗಿರಿರಾವ್ (ಸಂ)	ಸುಭಾಷ್ ನಿಘಂಟು; ಕನ್ನಡ – ಕನ್ನಡ – ಇಂಗ್ಲಿಷ್, ಇಂಗ್ಲಿಷ್ – ಕನ್ನಡ; ಸುಭಾಷ್ ಸ್ಟೋರ್ಸ್ ಬುಕ್ ಕಾರ್ನರ್, ಬೆಂಗಳೂರು
ಶೈಲಜ ಹಿರೇಮಠ	ಹರದೇಶಿ – ನಾಗೇಶಿ, ಕಲೆ ಮತ್ತು ಕಲಾವಿದರು: ಲಿಂಗ ಸಂಬಂಧಿ ಅಧ್ಯಯನ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೨೦೧೧
ಶ್ರೀನಿವಾಸಯ್ಯ ಜಿ	ತಣಿಗೆ (ಜಾನಪದ ಸಂಶೋಧನ ಲೇಖನಗಳು); ನಿವೇದಿತ ಪ್ರಕಾಶನ, ಬನಶಂಕರಿ, ಬೆಂಗಳೂರು – ೨೦೧೪
ಶ್ರೀಪಾದ ತಮ್ಮಯ್ಯ ಭಟ್	ಉತ್ತರ ಕನ್ನಡ ಜಿಲ್ಲೆಯ ಸಸ್ಯ ಜಾನಪದ (ಸಂಪ್ರಬಂಧ); ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – ೧೯೯೯
ಶ್ರೀರಾಮ ಇಟ್ಟಣ್ಣವರ	ಜಾನಪದ ಪಶುವೈದ್ಯ; ಬೀಳಗಿ ಸಿದ್ದಪ್ಪ, ವಿನಿ ಪ್ರಕಾಶನ, ಬೀಳಗಿ – ೧೯೯೦
ಶ್ವೇತಾ ಎಂ.ಬಿ., ಮೋಹನ್‌ಕುಮಾರ್ ಎನ್.	ಕಾಡುಗೊಲ್ಲರ ಬೆಡಗಿನ ಪದಗಳು; ವಿಸ್ತರಣೆ ಮತ್ತು ಸಲಹಾ ಕೇಂದ್ರ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ, ಶಿಗ್ಗಾವಿ, ಹಾವೇರಿ – ೨೦೧೪
ಸಂಗಣ್ಣ ಮುದೇನೂರು	ಚಿಗಟೇರಿ ಪದಕೋಶ; ಕರ್ನಾಟಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ – ೧೯೯೭
ಸಂಧ್ಯಾರೆಡ್ಡಿ ಕೆ.ಆರ್.	ಕನ್ನಡ ಜನಪದ ಕತೆಗಳು; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ೧೯೮೨
ಸಣ್ಣರಾಮ	ಲಂಬಾಣಿ ಸಂಸ್ಕೃತಿ; ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್ (ರಿ), ವಿಜಯನಗರ, ಬೆಂಗಳೂರು – ೧೯೯೯
ಸಣ್ಣವೀರಪ್ಪ ದೊಡ್ಡಮನಿ, ಮಹೇಂದರ್‌ರಾವ್ ಸಾಸ್‌ನೀಕ್	ಶಿಳ್ಳೇಕ್ಯಾತ; ಕನ್ನಡ ಮಸ್ತಕ ಪ್ರಾಧಿಕಾರ, ಬೆಂಗಳೂರು – ೨೦೦೮
ಸದಾಶಿವಪ್ಪ ಕುಂ.ಬಾ.	ಜಾನಪದ ಬೇಗೊಂಡ; ಮಾಲತೇಶ ಪ್ರಕಾಶನ, ಹರಪನಹಳ್ಳಿ – ೨೦೧೦

ಸದಾಶಿವಪ್ಪ ಕುಂ.ಬಾ. ಜಾನಪದ ಮುಕ್ತಕಗಳು; ಮಾಲತೇಶ ಪ್ರಕಾಶನ, ಹರಪನಹಳ್ಳಿ – ೨೦೧೦

ಸಯ್ಯದ್ ಜಮೀರುಲ್ಲಾ ಷರೀಫ್ ಗೊಂಡರ ಸಂಸ್ಕೃತಿ; ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಸರೋಜ ಬಿ.ಎಸ್. ಸಂಪ್ರದಾಯದ ಹಾಡುಗಳು; ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು – ೧೯೭೮

ಸವಿತಾ ನಾಯಕ ಉತ್ತರ ಕನ್ನಡ ಜಿಲ್ಲೆಯ ಕೆಲವು ಬುಡಕಟ್ಟುಗಳಲ್ಲಿ ಪ್ರಸಾದನ ಕಲೆ; ಜಾನಪದ ಪ್ರಕಾಶನ, ಹೊನ್ನಾವರ – ೨೦೦೦

ಸಿದ್ದಗಂಗಯ್ಯ ಕಂಬಾಳು ಇಲ್ಲಿಗರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಸಿದ್ದರಾಮಯ್ಯ ಎಸ್.ಜಿ. }
ಸಂಧ್ಯಾರೆಡ್ಡಿ ಕೆ.ಆರ್. } ಸುವರ್ಣ ಜನಪದ ಕಾವ್ಯ; ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು – ೨೦೦೬

ಸಿದ್ದಲಿಂಗಯ್ಯ ಗ್ರಾಮದೇವತೆಗಳು; ಮೂಲಭಾರತಿ ಪ್ರಕಾಶನ, ಬೆಂಗಳೂರು – ೧೯೯೭

ಸಿದ್ದೇಶ್ವರಿ ಎ.ಎನ್ ಬಳ್ಳಾರಿ ಜಿಲ್ಲೆಯ ಜನಪದ ಆಚರಣೆಗಳು; ಪ್ರಭುದೇವರ ಜನಕಲ್ಯಾಣ ಸಂಸ್ಥೆ, ಸೊಂಡೂರು – ೨೦೧೪

ಸುಂಕಾಪುರ ಎಂ.ಎಸ್. ಜೀವನ ಜೋಕಾಲಿ : ಜೋಗತಿ ಹಾಡು; ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೧೯೭೭

ಸುಂಕಾಪುರ ಎಂ.ಎಸ್. ಜೀವನ ಜೋಕಾಲಿ : ದುಂದುಮೆ ಪದ; ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೧೯೭೫

ಸುಂಕಾಪುರ ಎಂ.ಎಸ್. ಜೀವನ ಜೋಕಾಲಿ (ಭಾಗ – ३): ಗರತಿಯರ ಗರಿಮೆ; ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೧೯೭೨

ಸುಧಾಕರ ಜನಪದ ನುಡಿಗಟ್ಟುಗಳ ಕೋಶ ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೨೦೦೬

ಸುನಂದಮ್ಮ ಆರ್. ದಾಸ ಸಾಹಿತ್ಯದಲ್ಲಿ ಜಾನಪದ ಅಂಶಗಳು ಒಂದು ಅಧ್ಯಯನ; ಲಾವಣ್ಯ ಮುದ್ರಣ, ಬನಶಂಕರಿ, ಬೆಂಗಳೂರು – ೧೯೯೪

ಸುಬ್ಬರಾಯ ಜೆ.ಪಿ ಜಾನಪದ ಕಥೆಗಳು; ಹಾಸ್ಯ ಸಾಹಿತ್ಯ, ಬೆಂಗಳೂರು – ೧೯೭೭

ಸುಬ್ಬಲಕ್ಷ್ಮಮ್ಮ ಜಿ.ಎ. ಕರ್ನಾಟಕದ ಜನಪದ ವಾದ್ಯಗಳು; ಜ್ಞಾನೋದಯ ಪ್ರಕಾಶನ, ಬೆಂಗಳೂರು – ೨೦೦೦

ಸುಶೀಲ ಹೊನ್ನೇಗೌಡ ಜನಪದ ಆಟಗಳು; ಶರತ್ ಪ್ರಕಾಶನ, ನೆಹರುನಗರ, ಮಂಡ್ಯ

ಸುಶೀಲಾ ಪಿ. ಉಪಾಧ್ಯಾಯ ಜನಪದ ಆರಾಧನೆ ಮತ್ತು ರಂಗಕಲೆ; ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ – ೧೯೮೯

ಸೋಮಶೇಖರ ಇಮ್ರಾಪುರ ಜಾನಪದ ಸಾಹಿತ್ಯ ದರ್ಶನ (ಭಾಗ – ३६); ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೨೦೧३

ಸ್ವಾಮಿ ಬಿ.ಜಿ.ಎಲ್. ಹಸಿರು ಹೊನ್ನು; ಕಾವ್ಯಾಲಯ, ಮೈಸೂರು – ೨೦೦೭

ಹರೀಶ್ ಪಿ.ಎನ್ ಎರವರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು – ೧೯೯३

ಹರಿಲಾಲ್ ಕೆ. ಪವಾರ್ ಹೆಳವರ ಸಂಸ್ಕೃತಿ; ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಹರಿಲಾಲ ಪವಾರ ಬಂಜಾರ ಗೋತ್ರಗಳು; ಪ್ರೀತಮ್ ಪ್ರಕಾಶನ, ಧಾರವಾಡ – ೨೦೦೨

ಹರಿಶ್ಚಂದ್ರ ದಿಗ್ಸಂಗಿಕರ್ ಚಾರಿತ್ರಿಕ ಲಾವಣಿಗಳು; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೨೦೦೯

ಹಳ್ಳಿಕೇರಿ ಎಫ್.ಟಿ. ಹಾಲುಮತ ವ್ಯಾಸಂಗ – ೧; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೨೦೦೯

ಹಳ್ಳಿಕೇರಿ ಎಫ್.ಟಿ. ಹಾಲುಮತ ವ್ಯಾಸಂಗ – ೨; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೨೦೧೦

ಹಳ್ಳಿಕೇರಿ ಎಫ್.ಟಿ. ಹಾಲುಮತ ವ್ಯಾಸಂಗ – ೩; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೨೦೧೧

ಹಿರೇಮಠ ಎಸ್.ಎಸ್. ಕೊಪ್ಪಳ ಜಿಲ್ಲೆಯ ಜಾತ್ರೆಗಳು; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೨೦೦೦

ಹೂಗಾರ ಎಸ್.ಕೆ. ಕಲೆ ಮತ್ತು ಹಬ್ಬ; ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೧೯೭೭

ಹೆಗಡೆ ಎಲ್.ಆರ್. ಸುವ್ವಿ ಸುವ್ವಿ ಸುವ್ವಾಲೆ (ಜಾನಪದ ಗೀತಸಂಗ್ರಹ); ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ – ೧೯೭೧

ಹೆಗ್ಗಡೆ ಎಲ್.ಆರ್. ತಿಮ್ಮಕ್ಕನ ಪದಗಳು; ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು – ೧೯೬೯

ಹೆಳವರ್ ಎಂ.ಎಸ್ ಹೆಳವರು; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೨೦೦೮

ಹೊರೆಯಾಲ ದೊರೆಸ್ವಾಮಿ ನಾಲಿಗೆ ಅಕ್ಷರಕೆ ಒದುಗವ್ವ; ನುಡಿ ಪ್ರಕಾಶನ, ಮೈಸೂರು – ೧೯೭೪

ಹೊಸೂರು ಮುನಿಶಾಮಪ್ಪ ನಟುವರ ಸಂಸ್ಕೃತಿ ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಚಿತ್ರಗಳು



ಕುಂಕುಮ ಕರಂಡು(ಕುಂಕುಮ ಭರಣಿ)



ಕುಂಕುಮ ಕರಂಡು(ಕುಂಕುಮ ಭರಣಿ)





ಕುಂಟೆ



ಕುಂಟೆ ಕುಳ



ಕುಂದಣಿಗೆ

ಕುಂಬಾರಿಕೆ




ಕುಂಬಾರಿಕೆ






ಕುಕ್ಕೆ



ದನೀನ್ ಕುಕ್ಕೆ



ಕುಟ್ಟಾಣಿ



ಕುಡುಗೋಲು



ಕುದುಬಿನ ಸೊಳ



ಕುಲಾಯ/ಕುಲಾಯಿ/ಕುಲಾವಿ



ಕುಲುಮೆ




ಕುಲುಮೆ ತಿದಿ



ಕುರ್ಚಿಗೆ(>ಕುರ್ಜಿಗೆ)




ಕೂಪರ್ ನೇಗಿಲು



ಕೂರಿಗೆ – ಕೂರಿಗೆ ತಾಳು



ಕೂರಿಗೆ ಕೊಳವೆ




ಕೂಪರ್ ನೇಗಿಲು



ಕೂರಿಗೆ ತಲೆ/ಕೂರಿಗೆ ಬಟ್ಟಲು



ಕೂನಿ(ಕಲಗಚ್ಚು ಬಾನಿ/ಕದ್ಬಟ್ಟು ಕಲ್ಲು)



ಕೂಣೆ/ಕೂಳಿ






ಕೂಣಿ/ಕೂಳಿ




ಕೃಷ್ಣಚಕ್ರ




ಕೆತ್ತೆಉಳಿ







ಕೆತ್ತನೆ



ಕೆರಸಿ/ಕೆರಸೆ



ಕೆರೆಮಣೆ



ಕೆರೆಮಣೆ



ಕರೆಮಣೆ



ಕೆಲಸಿಪೆಟ್ಟಿಗೆ




ಕೈಕೊಡಲಿ



ಕೈಕೊಡ್ತಿ



ಕೈಗರ್ಸ(<ಕೈಗರಗಸ)






ಕೈತಕ್ಕಡಿ





ಕೈಬಟ್ಟಲು



ಕೈಮೆರೆ/ಕೊಕ್ಕೆಕೋಲು




ಕೈರಂಟಿ/ಕೈರಂಟೆ





ಕೊಂಗ




ಕೊಕ್ಕೆ ಮೆರೆದೊಣ್ಣೆ



ಕೊಟ್ಟಿಗೆ





ಕೊಡ





ಕೊಡತಿ



ಕೊಡತಿ



ಕೊಡಲಿ



ಕೊಣವೆ ನೇಗಿಲು



ಕೊರ್ಲ/ಕೊರಡ



ಕೋಡುಗೊಣಸು



ಕೋಲಾಟದ ಕೋಲು



ಕೊಟ್ಟ – ಗೊಟ್ಟ



ಕೊಳವೆ



ಕೊಳವೆ



ಖಜಾನೆ – ಮರದ ಪೆಟ್ಟಿಗೆ



ಖಜಾನೆ – ಮರದ ಪೆಟ್ಟಿಗೆ



ಖಜಾನೆ



ಕೊಳಗ



ಕೋಡು



ಖಜಾನೆ




ಖಡ್ಗ







ಕೋಲುಗಳ್ಳಿ












ಕೊಂತಮ್ಮ – ಕೊಂತಿ ಪೂಜೆ




ಕೊಂಡದಾಸ

ಕರ್ನಾಟಕ ಸಾಂಸ್ಕೃತಿಕ ವಲಯಕ್ಕೆ ಜಾನಪದ ವಿಶ್ವವಿದ್ಯಾಲಯದ ಸ್ಪಷ್ಟ ಪರಿಕಲ್ಪನೆ ಹೇಗೆ ಒಂದು ಅಭೂತಪೂರ್ವ ಸಂಗತಿಯೋ ಹಾಗೆಯೇ ಕರ್ನಾಟಕ ಜಾನಪದ ವಿಶ್ವವಿದ್ಯಾಲಯಕ್ಕೆ 'ಕನ್ನಡ ಜಾನಪದ ನಿಘಂಟು-ಪದಸಂಸ್ಕೃತಿ ಕೋಶ'ದ ಪರಿಕಲ್ಪನೆ ಒಂದು ಅಭೂತಪೂರ್ವ ಸಂಗತಿ. ವಿಶ್ವವಿದ್ಯಾಲಯ ಸ್ಥಾಪನೆಗೊಂಡ ಆರಂಭಿಕ ದಿವಸಗಳಲ್ಲಿಯೇ ಇಂತಹ ಸವಾಲಿನ ಕೆಲಸಕ್ಕೆ ಕೈಯಿಕ್ಕಿದುದು ಇನ್ನೂ ಮಹತ್ವದ ಸಂಗತಿ. ನಾಡಿನಾದ್ಯಂತ ಆಯಾ ಜಿಲ್ಲೆಗಳೊಳಗಿನ ಸಾಂಸ್ಕೃತಿಕ ವಲಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು 'ಕ್ಷೇತ್ರತಜ್ಞ'ರನ್ನು ನಿಯೋಜಿಸಿ ಜನಸಂಸ್ಕೃತಿಯ ನೆಲಮೂಲ ಸ್ಥಿತಿಗಳಿಗೂ ಸ್ಥಿತ್ಯಂತರ ಗತಿಗಳಿಗೂ ಸಾಕ್ಷ್ಯವಾಗಿ ನಿಲ್ಲುವ ಪದಗಳನ್ನೂ ಅವುಗಳ ಸಾಂಸ್ಕೃತಿಕ ಅರ್ಥ-ವಿವರಗಳನ್ನೂ ಸಂಗ್ರಹಿಸುವುದು, ಸಂಗ್ರಹಿಸಿದ ಸಾಮಗ್ರಿಯನ್ನು ಅಧ್ಯಯನ ವಿಧಾನಕ್ಕೆ ಒಳಪಡಿಸಿ ಹೆಚ್ಚಿನ ನಿಖರತೆ, ಅಧಿಕೃತತೆ, ನಿಷ್ಕೃಷ್ಟತೆಗಳನ್ನು ಪ್ರಾಪ್ತವಾಗಿಸುವುದು, ಹೀಗೆ ಸಿದ್ಧಗೊಂಡ ಸಾಮಗ್ರಿಯನ್ನು ಪದಸಂಸ್ಕೃತಿಕೋಶದ ಪರಿಕಲ್ಪನಾತ್ಮಕ ಚೌಕಟ್ಟಿಗೆ ಎರಕ ಹೊಯ್ಯುತ್ತಿರುವುದು 'ಕನ್ನಡ ಜಾನಪದ ನಿಘಂಟು' ರಚನಾ ಕಾರ್ಯದ ತ್ರಿವಿಧ ಸೋಪಾನಗಳಾಗಿವೆ. ಈ ಸ್ಪಷ್ಟ ಕಾರ್ಯಸೂಚಿಗಳನ್ವಯ ರಚನೆಯಾದ ನಿಘಂಟುವಿನ ಮೊದಲೆರಡು ಸಂಪುಟಗಳು ಈಗಾಗಲೇ ಪ್ರಕಟವಾಗಿದ್ದು ಇದೀಗ ಮೂರನೆಯ ಸಂಪುಟ ಸಂಸ್ಕೃತಿ ಅಧ್ಯಯನದಲ್ಲಿ ಆಸಕ್ತರಾದವರ ಕೈಸೇರುತ್ತಿದೆ.

ನವಜಾಗತೀಕರಣ ಬಿತ್ತಿ ಬೆಳೆಯುತ್ತಿರುವ, ಆರ್ಥಿಕ ಉದಾರ ನೀತಿಯ ಪೋಷಾಕು ತೊಟ್ಟ ವಿಶ್ವಮಾರುಕಟ್ಟೆಯ ವಾಣಿಜ್ಯ ಜಾಲ ಪುರಾಕೃತ ಸಾಂಸ್ಕೃತಿಕ ಚಹರೆಗಳನ್ನು ತನ್ನ ಜನಜೀವನದ ಒಡಲೊಳಗೆ ಕಾಪಿಟ್ಟುಕೊಂಡ ಭಾರತದಂತಹ 'ಅಭಿವೃದ್ಧಿಶೀಲ' ದೇಶಗಳನ್ನೂ ಸರಕು ಸಂಸ್ಕೃತಿಯ ಪೂರ್ವಯೋಜಿತ ವರ್ತುಲದೊಳಕ್ಕೆ ಸಿಕ್ಕಿಸುತ್ತಿದೆ. ಇದರ ಪರಿಣಾಮವಾಗಿ ನಮ್ಮ ಹಳ್ಳಿಗಳೂ ತಮ್ಮ ಮೂಲ ಸಂಸ್ಕೃತಿಯ ದೇಸೀತನವನ್ನು ಕಳೆದುಕೊಳ್ಳುತ್ತಿವೆ ಅಥವಾ ಆ ದೇಸೀತನ ಸ್ಥಿತ್ಯಂತರಗೊಳ್ಳುತ್ತಿದೆ. ಆರ್ಥಿಕ ಪ್ರಾಬಲ್ಯವುಳ್ಳ ದೇಶಗಳು ತಮ್ಮ ಪ್ರಭಾವಶೀಲತೆಯನ್ನು ವ್ಯಾಪಿಸುವುದಕ್ಕಾಗಿ ಸೃಷ್ಟಿಸಿದ ಈ ಬಿಕ್ಕಟ್ಟಿಗೆ ಪ್ರತಿಶೋಧಕ ಶಕ್ತಿಯನ್ನು ದೇಶೀ ಸಂಸ್ಕೃತಿಯ ವೈಲಕ್ಷಣ್ಯಗಳಲ್ಲಿಯೇ ಅನ್ವೇಷಿಸುವ ಕೆಲಸವನ್ನು ದೇಶೀ ಸಂಸ್ಕೃತಿತಜ್ಞರು ಮಾಡುತ್ತಿದ್ದಾರೆ. ಸಾಂಸ್ಕೃತಿಕ ಅಧ್ಯಯನ ಕ್ಷೇತ್ರದಲ್ಲಿ ಇದೊಂದು ಬಹು ಮಹತ್ವದ ಸಂಕೀರ್ಣ ಸ್ಥಿತಿ. ಇಂತಹ ಸ್ಥಿತಿಯಲ್ಲಿ ನಾಡಿನ ಹಿರಿಯ ಸಂಸ್ಕೃತಿ ಚಿಂತಕರಾದ ಡಾ.ರಾಗೌ ಅವರ ನೇತೃತ್ವದ ಸಂಪಾದಕ ಮಂಡಳಿಯಿಂದ ನಮ್ಮ ವಿಶ್ವವಿದ್ಯಾಲಯ ಮಾಡಿಸುತ್ತಿರುವ 'ಪದಸಂಸ್ಕೃತಿ ಕೋಶ'ದ ಕೆಲಸಕ್ಕೆ ಜಗತ್ತಿನಲ್ಲಿ ಒಂದು ವಿಶಿಷ್ಟ ಸ್ಥಾನ ಇದೆ ಎಂದು ನಾವು [illegible]ದಿದ್ದೇವೆ.

ಪ್ರೊ. ಡಿ. ಬಿ. ನಾಯಕ

ಕುಲಪತಿ



ISBN 978-93-83149-78-0

9 789383 149780 >

ಬೆಲೆ: ೧,೦೦೦/-

ವಿಸ್ತರಣೆ ಹಾಗೂ ಸಲಹಾ ಕೇಂದ್ರ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ಗೊಟಗೋಡಿ ೫೮೧ ೧೯೭

